REGISTERED
M 20

ವೃತ್ತಾಂತ ಪತ್ರಿಕೆ.

ಮೂ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೮ ನೇ ಇಸವಿ ಜನವರಿ ತಾರೀಖು ೨ ನೇ ಗುರುವಾರ. ಸಂಚಿಕೆ ೩೧

ಡೈರಿಗಳ ಬಹುಮಾನ!

1363

ಈ ಕೆಳಗೆ ಬರೆದ ಪ ಮಾ॥ ಬಿ ವೆಂಕಟಾಚಾರ್ಯರ ಪುಸ್ತಕ ವ್ಯಾ ಪ್ರತಿಯೊಂದು ರಗಾಯಿನ ಬೆಲೆಗೂ ಒಂದೊಂದು ರೂಪಾಯಿ ಬಹುಮಾನವು ಕೊಡಲ್ಪಡುವದು

ಕೋಹಿನೂರು ೧೨ ಆಣೆ ಅತ್ತಿಗೆ ೩ ಆಣೆ ಮಾಲತಿ ೨॥ ಆಣೆ ... ೩ ಆಣೆ ... ೩ ಆಣೆ ಬಲಿಷ್ಠನಾದ ಮನೆಯ ಅಳಿ ... ಆಣೆ ... ೧ ಆಣೆ. ಕರ್ಮಕ್ಕೆ ತಕ್ಕ ಫಲ ... ಆಣೆ ... ೩ ಆಣೆ ... ಆಣೆ ... ದರ್ಶನ ... ಉನ್ನತಿ ... ಮಾಲತಿ ... ಆಣೆ ... ೧೯೦೮ ನೆ ಇಸವಿ ಕ್ಯಾಲೆಂಡರ ... ವೆಂಕಟಾಚಾರ್ಯರವರ ... ಚಂದಾದಾರರಿಗೂ ... ಜನವರಿ ... ಚಂದಾದಾರರಾಗುವವರಿಗೂ ಸಹಾ ಒಂದು ... ಬಹುಮಾನವಾಗಿ ಕೊಡಲ್ಪಡುವದು

ನಮ್ಮ ವಿಳಾಸ — ದಿ ಜನರಲ್ ಏಜನ್ಸಿ, ಮೈಸೂರು

ಜ್ವರಹರಿ.

1189



ಇದು ಸಾಧಾರಣ ಜ್ವರ ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ... ಜ್ವರ, ವಾತಜ್ವರ, ... ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ಗುಣಮಾಡುವದು.

ಚಿತ್ರದುರ್ಗದ ... ಬಳ್ಳಕೆರೆಯಲ್ಲಿರುವ ... ಸಬ್ ಡಿವಿಜನ್ ಆಫೀಸರ್ ಎಸ್ ಟ ವೆಂಕಟಪತಿ ಅಯ್ಯರವರು—ನೀವು ಕಳಿಸಿದ ... ಕಳುಹಿಸಿಕೊಟ್ಟ ... ನ್ನು ... ಇಷ್ಟು ಸ್ವಲ್ಪ ಕಾಲದಲ್ಲೇ ... ಔಷಧದಿಂದ ... ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ... ಜನಗಳು ಕಾಂಲೇ ಕೇಳುತ್ತಿರುವ ... ದಯವಿಟ್ಟು ಇನ್ನೊಂದು ... ಸೀಸೆಗಳನ್ನು ವಿ ಪಿ ಮೂಲಕ ಕಳುಹಿಸಿಗರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ—ಸೀಸೆ ೧ ಕ್ಕೆ ೪ ಆಣೆ, ೧ ರ... ... ರೂ ... ಸೀಸೆ ತರಿಸಿಕೊಂಡರೆ ... ಮಾಫಿ ...

****

ಓಮಂ ಕರ್ಪೂರ

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ... ಹೊಟ್ಟೆ ... ವಾಂತಿಭೇದಿ, ... ತರದ ಹೊಟ್ಟೆ ನೋವುಗಳು—ಮುಂತಾದ ... ಮಹೌಷಧವಾಗಿ ಪರಿಣಮಿಸಿ, ... ಗುಣಕೊಡುವದು. ಇದು ಕೆಂಗಸರು ತಿಂಗಳಿಗೆ ಒಂದಾವರ್ತಿ ... ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ... ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

... ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ... ಕರ್ಪೂರವನ್ನು ನಾನೂ ನನ್ನ ... ಮ್ಯುನಿಸಿಪಲ್ ... ಯಲ್ಲಿ ಅನೇಕ ವರುಷಗಳಿಂದಲೂ ... ಕಾಲರಾ, ಅಜೀರ್ಣ ... ರೋಗಿಷ್ಠರಿಗೆ ಕೊಡುತ್ತೇನೆ ... ಕೊಡಲೆ ... ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧ ... ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗ... ದೊಡ್ಡ ... ಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ... ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

... ದ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

BASEL MISSION WEAVING ESTABLISHMENT,

59-11

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಟ್ಟೆ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ವಿಶ್ಯರ್) ಟ್ವೀಡ್ ಮುಂತಾದ ಕೋಟು ಇಜಾರುಗಳ ಬಟ್ಟೆ ಬಟ್ಟೆಗಳೂ, ಶಂಟಿಂಗ್ ... ಆನೆ ... ಬಟ್ಟೆಗಳೂ, ಶರ್ಟಿಂಗ್ ... ನ ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ, ... ರಗಳು ... ತಯಾರಿಸಲ್ಪಟ್ಟ ... ಯಾಗಿದ್ದಾಗಲೀ ಬಿಳುಪು ಆಗಿದ್ದಾಗಲೀ ಮಾರಾಟಕ್ಕೆ ತಯಾರಿರುತ್ತವೆ



ಒಳ್ಳೇ ಕಮಿಶ್ಯನ್.—ರೂಪಾಯಿ ೧೦೦ ರ ಮೇಲೆ ಮಾಲುಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾದೀತು ಹೆಚ್ಚಿನ ವಿವರ ಖುದ್ದಾಗಿ ಯಾ ಕಾಗದ ಮೂಲಕ ತಿಳುಕೊಳ್ಳಬಹುದು

ನಮೂನೆ ಯಾ ಮಾದರಿಗಳು :—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರ ಕೊಂಡಲ್ಲಿ ಕಳುಹಿಸಲ್ಪಡುವವು

ವಿಶೇಷ ಲಕ್ಷ್ಯಸತಕ್ಕದ್ದು :—ಈ ನಮ್ಮ ಮಾಲುಗಳಿಗೆ ಹಚ್ಚಿ ಕಾಣಿಸಿರುವ "ಟ್ರೇಡ್ ಮಾರ್ಕ್" ಎಂಬ ... ಇರುವ ಲೇಬಿಲ್ ಯಾನೆ ಚೀಟು ಹಚ್ಚಿರುತ್ತದೆ ಈ ಗುರ್ತಿನ ಚೀಟಗಳು ಇಲ್ಲದವುಗಳೆಲ್ಲಾ ಕಾಜಾ ವಿಶ್ಯರ್ ಮಾಲುಗಳಲ್ಲವೆಂದು ತಿಳಿಯ ತಕ್ಕದ್ದು.

ಶರ್ತ :—ನಗದಾಗಿ ಇಲ್ಲವೆ ಮಾಲುಗಳು ವಿ ಪಿ ಟಪ್ಪಾಲ ಮೂಲಕ ಕಳುಹಿಸಲ್ಪಡಬೇಕಾದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯ ತಕ್ಕದ್ದು —

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು "ಕೋಪಿರೈಟ್" ಪಡೆದಿರುವ ಲೇಬಿಲುಗಳನ್ನಾಗಲೀ ಇಲ್ಲವೆ ಅ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ಮಾಲುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು

ವಿಳಾಸ—BASEL MISSION WEAVING ESTABLISHMENT,
MANGALORE S CANARA

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ.

2745

ತರಿಸಿಕೊಳ್ಳಿರಿ — ತ್ವರೆಯಿರಿ—ಅಮೃತಾಂಜನ ಸರ್ವಲೋಕರಂಜನ, ಸರ್ವ ಸರ್ವ ವ್ಯಾಧಿಭಂಜನ, ಚಿಕಿತ್ಸೆ ವಳಯೊಳ್ ಕಾಂಚನ, ದೇಹಾಂಗಗಳಿಗೆ ಸಂಜೀವನ, ವಾಸನೆಯಲ್ಲಿ ಮನೋರಂಜನ, ಬೆಲೆಯಲ್ಲಿ ಅಲ್ಪ, ಯೋಗ್ಯತೆಯಲ್ಲಿ ಅದ್ಭುತ, ಔಷಧಿಯಲ್ಲಿ ದ್ವಿರಹಿತ, ಕೊಳ್ಳುವವರಲ್ಲಿ ಮಾಡಿರಿತ್ವರ್ಯ, ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ಒಂದೇ ಸಾರಿ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದಾ ಜರ್ಮನ್ ಬೆಳ್ಳಿಯ ಕಪ್ ಉಚಿತವಾಗಿ ದೊರಕುವದು.

ಸಿದ್ಧಿಂಕೆಯಾಗಿ ಭಾರತವರ್ಷದ ಔಷಧಿಗಳಿಂದ ತಯಾರಿಸಿದ ಹೊರುಪಯೋಗಕ್ಕೋಸುಗ ಮುಲಾಮು ಇದರಿಂದ ತಲೆನೋವು, ಶಿರೋವೇದನೆ, ವಾತ, ಸಂಧಿವಾತ ಪಕ್ಷವಾತ, ಗಂಟುನೋವು, ಸೊಂಟದ ನೋವು, ಗಂಟಲು ನೋವು, ಶೀತ, ಜಕಮು, ಉಳಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಿಗಳನ್ನು ತಯಾರಿಸುವರು ... ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

ಬಾಟ್ಲಿ ಒಂದಕ್ಕೆ ಕಿಮ್ಮತು ೦—೮—೦. ಪೋಸ್ಟು ಖರ್ಚು ೦—೪—೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಇದರಿಂದ ಚರ್ಮವು ಕಪ್ಪಾಗುವದಿಲ್ಲ ... ಉರಿಯುವದಿಲ್ಲ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಡಬ್ಬಿ ಒಂದಕ್ಕೆ ಕಿಮ್ಮತು ೦—೩—೦. ಪೋಸ್ಟು ಖರ್ಚು ೦—೩—.

ದಂತಮಂಜನ —ಹಲ್ಲುಗಳಿಂದ ಒಸರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಹಲ್ಲುಗಳು ಬೆಳ್ಳಗಾಗುತ್ತವೆ ಹಲ್ಲುಗಳ ನೋವನ್ನು ತೆಗೆಯುತ್ತದೆ ಡಬ್ಬಿ ಒಂದಕ್ಕೆ ೦—೨—೦ ಪೋಸ್ಟು ಖರ್ಚು ೦—೩—೦

ವಜ್ರಗುಟಿಕ —ಧಾತುಪುಷ್ಟಿ ನಿಶ್ಯಕ್ತರಿಗೆ ಶಕ್ತಿ ಕೊಡುತ್ತದೆ, ಸ್ವಪ್ನದೋಷ ಆಗುವದು ನಿಲ್ಲಿಸುತ್ತದೆ ರಕ್ತ ಶುದ್ಧಿಮಾಡಿ ದೇಹದಲ್ಲಿ ಆರೋಗ್ಯಕೊಡುತ್ತದೆ ಡಬ್ಬಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೩—೦

ಕೇಶವರ್ಧಿನಿ.—ತಲೆ ಪಡಿಳು ತಂಪುಮಾಡುವದು, ಕೂದಲುಗಳನ್ನು ಬೆಳೆಸುವದು, ಕೂದಲುಗಳನ್ನು ಕಪ್ಪುಮಾಡುವದು, ಮನಶ್ಶುದ್ಧಿ ಮಾಡುವದು. ಹಲೋ ಪರಿಮಳ ಉಳ್ಳದ್ದು. ೩ ಔನ್ಸ ಬಾಟ್ಲಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೩—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೭ ಓಕ್ ಲೇನ್, ಫೋರ್ಟ್, ಮುಂಬಯಿ.

ಟೆಲಿಗ್ರಾಫು ಅಡ್ರೆಸು—"ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ!

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ. 21

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಧಾರಣೆಯೆಲ್ಲಾ ಬಲ್ಲಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಧಾರಣೆಯೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾನೇ ನಿಂತು ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೆದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೀವು ಬರೆದು ತರಿಸಿಕೊಳ್ಳಿ. ಅಗ್ಗದ ಹಾಸ್ಟೆ ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಪಿ ಟೋಪಿಗಳು ೦ ರೂ. ೮ ಆ. ೧ ರೂ. ೩ ಆ.; ೧ ರೂ. ೬ ಆ.

ರೇಷ್ಮೆ ಜುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ.; ೧ ರೂ. ೩ ಆ.

ಉಸುಬಿನ ಟೋಪಿಗಳು ೧ ರೂ. ೮ ಆ; ೧ ರೂ. ೩ ಆ.

ಕೂಸುಗಳ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ ಇವುಗಳ ಕ್ರಯದ ಪಟ್ಟಿಯನ್ನು ಸಮ್ಮಿಕ್ಕಿ ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಆರ್ಡರ್ ಬರುತ್ತಿವೆ! ಬೇಗ ನೋಡಿ!

ಪ್ರಪಂಚವೇ ಆಶ್ಚರ್ಯಪಡುವದು.

121

ರೂ. ೩-೧೪-೦ ಗೆ ೫೨ ಬಹುಮಾನಗಳೂ, ಒಂದು ಟೇಬಲ್ ಟೈಂಪೀಸಿನೊಡನೆ ಒಂದು ಸುಂದರವಾದ ಗಡಿಯಾರವೂ.

ದೊಡ್ಡ ವ್ಯಾಪಾರ್ಯರೇ, ಹಿಂದುಸ್ಥಾನದಲ್ಲಿ ಪ್ರಕಟನೆಗಳ ಬಳಿಯಾಗಿದೆ ಕೆಲವು ಕಂಪನಿಯವರು ಮೋಸ ಮಾಡೋಣವೆಂದು ಪ್ರಕಟನೆಯನ್ನು ಕಂಡರೆ ಜನರು ಅಸಹ್ಯಪಟ್ಟು ಏನೆಯುತ್ತಾರೆ. ಕಸ್ಟಮರ ಪ್ರಕಟನೆಯನ್ನು ಕೂಡ ನಂಬುವದು ಕಷ್ಟ ... ವಿಧ ಕಂಪನಿಯು ನೋಟೀಸುಗಳನ್ನು ಸಹ ಸಕ್ಕರೆ ದಿವಧಿ ಕಟ್ಟುವ ವಕ್ತೆ ಕೊಟ್ಟುಬಿಡುವರು. ಆದರೆ ಮಹನೀಯರೇ, ನಮ್ಮ ಕಂಪನಿಯ ಯೋಗ್ಯತೆಯನ್ನು ಒಂದಾವರ್ತಿ ಪರೀಕ್ಷಿಸಿ ನೋಡಿ. ಈ ಪ್ರಕಟನೆಯು ನವೀನವಾದದ್ದು, ಆಶ್ಚರ್ಯಕರವಾದದ್ದು. ನಾವು ೩೦ ಗಂಟೆ ನಡಿಯುವ ಶಾಶ್ವತವಾದ ಐದು ವರುಷದ ಗ್ಯಾರಂಟಿ ಉಳ್ಳ ಲೀವರ್ ಗಡಿಯಾರವನ್ನು ೫೦ ಬಹುಮಾನಗಳೊಡನೆ ಕಳುಹಿಸುತ್ತೇವೆ ಇದರಲ್ಲಿ ಸತ್ಯವಾದ ಕಂಪನಿಯ ಕೀರ್ತಿ ಹೆಚ್ಚಬೇಕೆಂಬುವದೇ ನಮ್ಮ ಮುಖ್ಯ ಉದ್ದೇಶ. ಒಂದಾವರ್ತಿ ನಮಗೆ ಬರೆದು ತರಿಸಿ ನಮ್ಮ ಸತ್ಯತೆಯನ್ನು ಪರೀಕ್ಷಿಸಿರಿ. ಗಡಿಯಾರದ ಕೂಡ ನಾವು ಕಳುಹಿಸುವ ಬಹುಮಾನಗಳೇನೆಂದರೆ—ಒಂದು ಗಡಿಯಾರ, ಬಲವಾದದ್ದು, ೩೦ ಗಂಟೆ ನಡಿಯುವದು, ಹಿಂದೆ ಎರಡು ಮುಚ್ಚಳ, ಪರೀಕ್ಷೆಯಿಂದ ಸರಿ ಮಾಡಿದ್ದು, ಒಂದು ಸೊಗಸಾದ ಪೆಟ್ಟಿಗೆಯಲ್ಲಿ, ಐದು ವರುಷದ ಜಾಮಿನು ಉಳ್ಳದ್ದು ಒಂದು ಸೊಗಸಾದ ಗಡಿಯಾರದ ಸರಪಳಿ, ಅರೆ ಬೀಗದ ಕೈ ಉಳ್ಳ ಬಲವಾದ ಇಂಗ್ಲಿಷ್ ಖಜಾನೆ ಪೆಟ್ಟಿಗೆ ಒಂದು ಟೇಬಲ್ ಟೈಂಪೀಸು, ಒಂದು ದೊಡ್ಡ ಡಬ್ಬಿ, ಒಂದಾಣೆ ಎಣ್ಣೆ ಹಾಕಿದರೆ ಒಂದು ತಿಂಗಳು ಉರಿಯುವ ಹೊಸ ತರಹಾ ಲಾಂಪು, ಒಂದಾವರ್ತಿ ಗಾಯ ತುಂಬಿದರೆ ಅನೇಕ ದಿನಗಳ ತನಕ ಬರೆಯುವ ಫೌಂಟೆನ್ ಲೇಖಣಿ, ಒಂದು ಜೊತೆ ದೊಡ್ಡ ಕಾಲುಚೀಲ, ಬಲವಾದ ದಂತದ ಹಿಡಿಯುಳ್ಳ ಚಾಕು, ಒಂದು ದೊಡ್ಡ ಕತ್ತರಿ, ಒಂದು ದೊಡ್ಡ ಚರ್ಮದ ಪುಡ್ಡು ಹಾಕಿರುವ ಚೀಲ, ಒಳ್ಳೆ ಬಾಚಣಿಗೆ, ದಂತದ ಕನ್ನಡಿ, ಕೂದಲು ಬಾಚಿಕೊಳ್ಳುವ ಬ್ರಷು, ಪರ್ಟಿನ ಒಂದು ಸೆಟ್ ಗುಂಡಿಗಳು, ಒಂದು ಸೊಗಸಾದ ಕನ್ನಡಕ, ಒಂದು ಸಾಬೂನುಬಿಲ್ಲೆ, ಒಂದು ಸಾಬೂನಡಬ್ಬಿ, ಒಂದು ಕೈವಸ್ತ್ರ, ಎಂದಿಗೂ ಹೊಳೆಯುವ ಚಿನ್ನದ ಉಂಗುರ, ಒಂದು ರಬ್ಬರು, ಸುಂದರವಾದ ದೊಡ್ಡ ವಾಯಿಲೆಟ್, ಒಂದು ಪೆನಸಿಲ್, ಬರೆಯುವ ೧೨ ಲೇಖಣಿ ಕಡ್ಡಿಗಳು, ೩ ಕಪ್ಪು ಪೆನಸಿಲುಗಳು, ೧೫೦ ಲಕೋಟೆಗಳು, ೧೫೦ ಲೆಟರ್ ಪೇಪರುಗಳು, ಪೋಸ್ಟು ರೂಲಿನುಸಾರವಾದ ೧೦೦ ಪೋಸ್ಟು ಕಾರ್ಡುಗಳು, ೨ ಸ್ಟೀಲ್ ಮುಳ್ಳುಗಳು.

ಇಷ್ಟಕ್ಕೆಲ್ಲಾ ಕ್ರಯ ರೂ. ೩-೧೪-೦ ಮಾತ್ರವೇ.

ಅರ್ಧ ಹಣ ಅಡ್ವಾನ್ಸ್ ಮೊನಿಆರ್ಡರ್ ಬಂದಲ್ಲಿ ಉಳಿದ ಅರ್ಧಕ್ಕೆ ವಿ. ಪಿ. ಮಾಡುತ್ತೇವೆ. ಒಪ್ಪದಿದ್ದರೆ ಹಣವಾಪಸು ಕಳುಹಿಸುವೆವು.

ಎಂ. ಎ. ಘಟಾಲಾ ಮತ್ತು ಕಂಪನಿ.

ಚಿತ್ತೂರು, ಉತ್ತರ ಆರ್ಕಾಟು.

ಮನಿಆರ್ಡರ್ ಕೂಪನಿನಲ್ಲಿ ತಮ್ಮ ಊರಿಗೆ ಹತ್ತಿರವಾಗಿ ರೈಲ್ ಸ್ಟೇಷನ್ ಇದ್ದಲ್ಲಿ ತಿಳಿಸಬೇಕು.

CHAMBERLAIN'S COUGH REMEDY.

ಚೇಂಬರ್ಲೈನಿಯವರು ಕಂಡು ಹಿಡಿದ ಕೆಮ್ಮಿನ ಔಷಧವು.

1-1

ಗಂಟಲ ಕೆಮ್ಮು, ಗಂಟಲು ಗೊರನುವುದು, ಜಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ನೋವು ಎನಿಯಲು ಗಟ್ಟಿಯಾದ ನೆಗಡಿ ಮುಂತಾದ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಳ ಗುಣವಾಗುವುದು.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಸುರಿನಲ್ಲಿ ರಕ್ತ ಬೀಳುವ ಕ್ಷಯರೋಗಕ್ಕೆ ಅವಕಾಶವಾಗುವುದು.

ಚೇಂಬರ್ಲೈನವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಲ್ಲಿ ಶ್ಲೇಷ್ಮ ಕಟ್ಟುವುದನ್ನು ... ವುದನ್ನೂ ಬೇಗನೆ ನಿವಾರಣೆಮಾಡುತ್ತದೆ. ಉಸುರು ಹೋಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೆ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಕಫವನ್ನು ನಿಲ್ಲಿಸಿಬಿಡುತ್ತದೆ ಎನೇ ಒಳಗಿರುವಂಥ ರೋಗಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ... ನೀವು ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೈನವರು ಕಂಡುಹಿಡಿದಿರುವ ಕೆಮ್ಮಿನ ಔಷದದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿಲ್ಲ.

ಈ ಔಷದವು ಸಸ್ಯಾದಿಗಳ ತಯಾರಿ

ಸ್ಟೋರಿನಲ್ಲಿ ದೊರೆಯುತ್ತದೆ ತಯಾರಾಗಿದೆ

ಎಲ್ಲಾ ಕಡೆ ಮಾರಾಟಕ್ಕಿದೆ. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ ಅಸ್ವಸ್ಥವಾಗದಿರುವುದು ಉತ್ತಮ.

SCOTT'S EMULSION.

31-12

(ಸ್ಕಾಟ್ಸ್ ಇಮಲ್ ಷನ್)

ಕ್ಷಯ (ತವಕ್ಕೆ)ನರಗಳ ವ್ಯಾಧಿ, ಮೂಳೆರೋಗ, ವಾಂತಿಭೇದಿ ಅಥವಾ ಶರೀರದ ಕ್ಷೀಣ ರೋಗಗಳ ಬಯಕೆ ಬಳಲುವ ಆಗತ್ಯವಿಲ್ಲ.

ರೋಗದ ಬಳಿಕ ಕ್ಷೀಣರನ್ನೂ ದುರ್ಬಲರನ್ನೂ ಬೇಗನೆ ತಗಲಿ ಬಿಡುತ್ತದೆ.

ಅಸ್ವಸ್ಥವನ್ನು ದೂರ ಕೆಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಶೈನೋಳಾದೆ ತಯಾರಾದದ್ದು.

ಎಲ್ಲಾ ಔಷದ ವ್ಯಾಪಾರಿಗಳಲ್ಲಿ ಮಾರಾಟವಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ ಲಂಡನ್ ಇಂಗ್ಲೆಂಡ್

ಈ ಚಿಹ್ನೆಯನ್ನುಳ್ಳ ಔಷದ ವನ್ನೇ ಕೊಂಡುಕೊಳ್ಳಿ.

ಶ್ರೀ ವೇದಾಂತ ಪಂಚದಶಿ.

6-1

ಸಮಸ್ತ ಆಸ್ತಿಕ ಮತಾವಲಂಬಿಗಳಾದ ಮುಮುಕ್ಷುಗಳಿಗೆ.

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯರಾದ ಶ್ರೀವಿದ್ಯಾರಣ್ಯಸ್ವಾಮಿಗಳು, ಶ್ರೀ ವೇದಾಂತ ಪಂಚದಶೀಎಂಬ ಗ್ರಂಥವನ್ನು ಮುಮುಕ್ಷುಜನ ಹಿತಾರ್ಥವಾಗಿ ಪೂರ್ವಕಾಲದಲ್ಲಿ ಗೀರ್ವಾಣ ಭಾಷೆಯಿಂದ ಶ್ಲೋಕಬದ್ಧವಾಗಿ ವಿರಚಿಸಿ ಮಾಡಿದ್ದರು.

ಅದಕ್ಕೆ ತತ್ಕಾಲದ ರಾಮಕೃಷ್ಣ ಪಂಡಿತರು ಸಂಸ್ಕೃತ ಭಾಷೆಯಿಂದ ವ್ಯಾಖ್ಯಾನ ಮಾಡಿದ್ದರು. ಆದರೂ ಸಂಸ್ಕೃತಜ್ಞರುಗಳಿಗೆ ಬೋಧೆಯಾಗುವದಿಲ್ಲವೆಂದರಿತು, ಸರಳವಾದ ಹೊಸಗನ್ನಡ ಭಾಷೆಯಿಂದ, ಪ್ರತಿಶ್ಲೋಕಕ್ಕೂ ಅವತರಣಿಕೆ, ಪ್ರತಿಪದ ಟೀಕೆ, ತಾತ್ಪರ್ಯ, ಭಾವಾರ್ಥ, ಮತ್ತು ವಿಶೇಷಾರ್ಥಗಳು, ಶಂಕಾಸಮಾಧಾನಗಳು ಳಿಯದ ಪದಗಳಿಗೆ ಟಿಪ್ಪಣಿಗಳು, ವಿಷಯ ಸೂಚಕ ಕೋಶಗಳು. ಮುಂತಾದವುಗಳು ವ್ಯಾಕರಣದ ಪದ್ಧತಿ ಮೀರದೆ ಸುಂದರವಾದ ಮೂರು ಬಗೆ ಅಕ್ಷರಗಳಿಂದ, ಒಳ್ಳೆ ಕಾಗದಗಳಿಂದ, ಒಳ್ಳೆಯ ಬೈಂಡಿನಿಂದ ಯುಕ್ತವಾಗಿರುವಂತೆ ಮುದ್ರಣ ಮಾಡಿಸಿರುವದು. ಈ ಪುಸ್ತಕವು ೩೦೦ ಪೇಜುಗಳುಳ್ಳ ದೊಡ್ಡ ಸೈಜು ಉಳ್ಳದ್ದಾಗಿರುವದು.

ಮತ್ತು ಈ ಗ್ರಂಥಕ್ಕೆ ಸಮಾನವಾದ ವೇದಾಂತ ಪ್ರಕ್ರಿಯಾ ಗ್ರಂಥಗಳು ಯಾವುವೂ ಇಲ್ಲ. ಇದನ್ನು ಶ್ರದ್ಧೆಯಿಂದ ಪಠಿಸಿ ಅರ್ಥ ತಿಳಿದು ಮಾಡಿದವರಿಗೆ ಶೀಘ್ರವಾಗಿ ಸ್ವರೂಪಜ್ಞಾನೋದಯ ವಾಗುವುದು, ಇದಲ್ಲದೆ ಸಂಸ್ಕೃತ ಜ್ಞಾನವೂ ಉಂಟಾಗುವುದು.

ಆದ್ದರಿಂದ ವಿವೇಕಿಗಳಾದವರು ಶೀಘ್ರವಾಗಿ ಈ ಗ್ರಂಥದ ಶ್ರವಣ ಮನನಾದಿಗಳನ್ನು ಮಾಡಿ ಅಪರೋಕ್ಷಜ್ಞಾನವನ್ನು ಸಂಪಾದಿಸಿಕೊಂಡು ಕೈವಲ್ಯ ಸಿದ್ಧಿಯನ್ನು ಸೂರೆಗೊಳ್ಳುವುದಕ್ಕೆ ಇದು ಸಮಯವಾಗಿದೆ ಇದಕ್ಕೆ ಕೊಟ್ಟ ವಿತ್ತವು ಸತ್ಕಾರ್ಯಕ್ಕೆ ವಿನಿಯೋಗಿಸಲ್ಪಡುವುದು ಪ್ರುತವಿರಬೇಕು.

ಇದರ ಕ್ರಯ ಸ್ವಕಳಕ್ಕೆ ಮಾತ್ರ ನಾಲ್ಕುರೂಪಾಯಿ; ಪರಸ್ಥಳಕ್ಕೆ ವಿ. ಪಿ. ಛಾರ್ಜು ಪ್ರತ್ಯೇಕ.

ಇದು ದೊರೆಯುವ ಸ್ಥಳ: (೧) ಬೆಂಗಳೂರು ಸಿಟಿ ಕಲಾಸಿಪಾಳ್ಯದಲ್ಲಿರುವ ಶ್ರೀಮತ್ಸಚ್ಚಿದಾನಂದ ಸಹಜಾನಂದ ಸ್ವಾಮಿಗಳ ಬಳಿಯಲ್ಲಿ ದೊರೆಯುವುದು ಅಥವಾ, (೨) ಬೆಂಗಳೂರು ಸಿಟಿ ದೊಡ್ಡ ಪೇಟೆ ಚೌಕದ ಬಳಿ ಚಿಕ್ಕ ಪೇಟೆಗೆ ಸೇರಿದ ಬೀದಿ ಗಿರ್ಣಿ, ಸತ್ರಂ ಚಂದ್ರಶೇಖರಯ್ಯ ಸುಬ್ರಹ್ಮಣ್ಯಯ್ಯನವರಿಗೆ ಬರೆಯಬೇಕು ಅಲ್ಲದೆ, (೩) ಮೈಸೂರು ನಜರುಬಾದು ಮೊಹಲ್ಲಾದಲ್ಲಿರುವ ಜಿಲ್ಲದೇ ಅಂಗಡಿ ವೆಂಕಣ್ಣನವರಲ್ಲಿ ದೊರೆಯುವುದು.

ಬಹುಮಾನ.

1324

೭ ಅಣೆ ಪೋಸ್ಟೇಜು ಸ್ಟ್ಯಾಂಪು ಕಳುಹಿಸಿಕೊಟ್ಟಲ್ಲಿ ಶ್ರೀ ಚಿತ್ರಕಲಾಚಾತುರ್ಯದಿಂದ ರಚಿಸಲ್ಪಟ್ಟ ೯ ಛಾಯಾಪ್ರತಿಗಳು ಪ್ರತಿ ಚಿತ್ರವು ವಿಲಾಯಿತಿ ಮೊಲಿಕೆಯಿಂದಿಗೆ ೧೪×೧೦ ಸೈಜಿನ ಶ್ರೀಮನ್ ಮಹಾರಾಜರ ಫೋಟೋವನ್ನು, ಇದೇ ಸೈಜಿನ ಆಗಿನ ಇಂಗ್ಲೇಂಡ್ ಸ್ಯಾಂಡೋಗಳ ಫೋಟೋವನ್ನು, ಶ್ರೀಮನ್ ಮಹಾರಾಜ ಯುವರಾಜರುಗಳ ಛಾಯಾಪ್ರತಿಗಳ ಕೂಡಿದ ಪ್ರಸಂಗ ಕೇಳಿರ ಪಂಚಾಂಗಗಳನೆಂತವಾದ ಹೊಸ ವರುಷದ ೧೯೦೮ ನೇ ಇಸವಿ ಇಂಪೀರಿಯಲ್ ಕ್ಯಾಲೆಂಡರನ್ನು, ಮತ್ತು ಕೀರ್ತಿಶೇಷರಾದ ಶ್ರೀ ಚಾಮರಾಜೇಂದ್ರ ಒಡೆಯರವರ ಫೋಟೋವನ್ನು, ಮತ್ತು ಬೇರೆ ಫೋಟೋಗಳನ್ನೂ ಉಚಿತವಾಗಿ ಕಳುಹಿಸುತ್ತೇವೆ.

ಈ ಪತ್ರಿಕೆಯ ಪ್ರತಿಯೊಬ್ಬ ಚಂದಾದಾರರಿಗೂ ವಿಶೇಷವೇನೆಂದರೆ—"ಹನಿಗೂಡಿದರೆ ಹಳ್ಳ" ಎಂಬಂತೆ ಪ್ರತಿಯೊಬ್ಬರೂ ವಿಶ್ವಾಸದಿಂದ ಬಹುಮಾನವನ್ನು ಪಡೆದು ... ಸ್ವದೇಶೀಯರಾದ ನಮ್ಮ ಉದ್ದೇಶವನ್ನು ಸ್ವದೇಶಾಭಿಮಾನಿಗಳು ... ಅವುಗಳ ಪ್ರಾಮುಖ್ಯವನ್ನು ... ಸ್ವದೇಶಾಭಿಮಾನಿಗಳಲ್ಲಿ ಅರಿಕೆಮಾಡಿಕೊಳ್ಳುತ್ತೇವೆ.

ವಿಳಾಸ—ವೈ. ನಾಗಪ್ಪ, ಷಾಪ್ ಕೀಪರ್, ಕೋಟೆ ಮೈಸೂರು.

ವ್ಯವಹಾರನಿರ್ಣಯ.

ಕನ್ನಡದ ಲಾ ಪುಸ್ತಕವು

41

ದ್ವಿತೀಯಮುದ್ರಣ.

ಪುಟಗಳು ೫೪೬ ಕ್ರಯ ವಿ. ಪಿ. ಸೇರಿ ಸಾಧಾರಣಕ್ಕೆ ರೂ. ೧-೧೨-೦, ಉತ್ತಮಪ್ರತಿಗೆ ರೂ. ೨-೮-೦

ಈ ಮುದ್ರಣದ ಮುಖ್ಯ ಭಾಗವೆಲ್ಲವೂ ಹೊಸದಾಗಿ ಬರೆಯಲ್ಪಟ್ಟು ವಿಸ್ತರಿಸಲ್ಪಟ್ಟಿದೆ. ಹಿಂದೂ ಲಾ (ಸ್ತ್ರೀಧನಗಳ ಸಹಿತ) ಮಹಮದೀಯ ಲಾ, ಪೀನಲ್ ಕೋಡು ಇವುಗಳು ವಿಶೇಷವಾಗಿ ವಿಸ್ತರಿಸಲ್ಪಟ್ಟಿವೆ. ವೈಸೂರು, ಮದರಾಸು, ಬೊಂಬಾಯಿ ದೇಶಗಳಿಗೆ ಸಾಮಾನ್ಯವಾದ ಲಾ, ವ್ಯವಹಾರಕ್ಕೆ ಸ ನಿರ್ವಾಹ, ಆಸ್ತಿ, ಸ್ವಾಧೀನ ... ಈ ವಿಷಯಕವಾದ ಖಾನೂನುಗಳು ಹೊಸದಾಗಿ ಸೇರಿಸಲ್ಪಟ್ಟಿವೆ ೫೯ ಖಾನೂನುಗಳು, ಅನೇಕ ಇಂಗ್ಲಿಷ್ ಗ್ರಂಥಗಳು, ಹೈ ಕೋರ್ಟು, ಚೀಫ್ ಕೋರ್ಟುಗಳ ತೀರ್ಪುಗಳು ಇವುಗಳಿಂದ ಸಂಗ್ರಹ ಮಾಡಲ್ಪಟ್ಟಿದೆ. ಸಮಸ್ತ ವ್ಯವಹಾರಗಳಿಗೂ ಹೊಂದಿರುವ ೯೦ ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್, ಕ್ರಿಮಿನಲ್ ಕೋರ್ಟುಗಳಿಗೂ, ಪೋಲೀಸಿಗೂ ಬರೆಯಬೇಕಾದ ಅರ್ಜಿಗಳ ೫೯ ತರದ ನಮೂನೆಗಳೂ ಇದರಲ್ಲಡಗಿವೆ. ಕಳೆದ ವೇ ತಿಂಗಳಲ್ಲಿ ಮುದ್ರಿಸಿದ್ದ ೧,೫೦೦ ಪ್ರತಿಗಳು ೩ ತಿಂಗಳಲ್ಲಿ ಖರ್ಚಾಗಿಹೋದುದರಿಂದ ಇದರ ಉಪಯುಕ್ತತೆಯು ತಿಳಿದುಬರುವುದು. ಪ್ರೋತ್ಸಾಹ ಹುಟ್ಟಿ, ಮೇಲೆ ಕಂಡಂತೆ ಇದರ ಉಪಯುಕ್ತತೆಯನ್ನು ಮತ್ತಷ್ಟು ಹೆಚ್ಚು ಮಾಡಿದೆ. ವಿಷಯ ಪರಿಮಾಣಾಧಿಕ್ಯ, ಸ್ಪುಟಾಕ್ಷರ, ಉತ್ತಮವಾದ ಕಾಗದ, ಬಟ್ಟೆಯ ಬೈಂಡ್ ಇವುಗಳಿಂದ ಕೂಡಿ ಈ ಸಲದ ಮುದ್ರಣವು ಬಹಳ ಪ್ರಶಸ್ತವಾಗಿದ್ದರೂ ಅನುಕೂಲಸ್ಥರಲ್ಲದವರಿಗೂ ಸುಲಭಗ್ರಾಹ್ಯವಾಗಲು ಮೊದಲಿನ ಕ್ರಯಕ್ಕಿಂತಲೂ ಬೆಲೆಯಲ್ಲಿ ನಾಲ್ಕು ಆಣೆ ಮಾತ್ರ ಹೆಚ್ಚಿಸಿದೆ ಆದರೆ ಕೆಲವು ಶ್ರೀಮಂತರ ಕೋರಿಕೆ ಮೇರೆ ಅತ್ಯುತ್ತಮವಾದ ಕಾಗದದಲ್ಲಿ ಬಹಳ ಸ್ವಲ್ಪ ಪ್ರತಿಗಳನ್ನು ಮಾತ್ರ ಅಚ್ಚುಮಾಡಿಸಿ ರೂ. ೨-೮-೦ ಕ್ರಯ ಇಟ್ಟಿದೆ ಈ ಉತ್ತಮ ಕ್ರಯದ ಬುಕ್ಕಿನ ಪ್ರತಿಯನ್ನು ಕಳುಹಿಸಿ" ಎಂದು ಸ್ಪಷ್ಟವಾಗಿ ಬರೆದರೆ ಹೊರತು, ಇಲ್ಲದಿದ್ದರೆ ಸಾಧಾರಣಪ್ರತಿಯನ್ನೇ ಕಳುಹಿಸುವೆವು. ೧ನೇ ಮುದ್ರಣದ ಪ್ರತಿಗಳು ಮುಗಿದುಹೋದುದರಿಂದಲೂ ೨ ನೇ ಮುದ್ರಣವು ೫-೧೦-೦೭ ರಲ್ಲಿ ಪ್ರಾರಂಭಿಸಿದಾಗಿನಿಂದಲೂ ಈಚೆಗೆ ೨ ತಿಂಗಳುಗಳಿಂದಲೂ ಬರೆದುಕೊಳ್ಳುತ್ತಿರುವವರಿಗೆ ಪುಸ್ತಕವನ್ನು ಕಳುಹಿಸಲಾಗಿದೆ. ಪುಸ್ತಕ ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯುವುದು.

ಪುಸ್ತಕ ಅಪೇಕ್ಷಿಸುವವರು ಬರೆಯಬೇಕಾದ

ವಿಳಾಸ—ಗ್ರಂಥಕರ್ತರು, ಎಂ. ಮಲ್ಲಾರಾಧ್ಯರು.

ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು.

ವೃತ್ತಾಂತ ಪತ್ರಿಕೆ.

೧೯೦೮ ನೇ ಇಸವಿ ಜನವರಿ ತಾ॥ ೨ ನೇ ಗುರುವಾರ

ಸೂರತ್ತಿನ ಕಾಂಗ್ರೆಸ್ ಮಹಾಸಭೆಯು

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಸೂರತ್ ಪಟ್ಟಣದ ಹಿಂದುಸ್ಥಾನದ ೨೩ ನೇ ನ್ಯಾಷನಲ್ ಕಾಂಗ್ರೆಸ್ ಮಹಾಸಭೆಯು ಮಂದಿರದೊಳಗೆ ನಡೆದ ಗಲಭೆಯ ಸಾರವನ್ನು ಈ ಪತ್ರಿಕೆಯು ಇನ್ನೊಂದು ಪಾರ್ಶ್ವದಲ್ಲಿ ಓದುವವರಿಗೆ ವಿವರಿಸಿರುತ್ತೇವೆ. ಸಭೆ ನಡೆಯಬೇಕಾಗಿದ್ದ ಎರಡು ದಿನಗಳಲ್ಲೂ ಸಭಾಮಂದಿರದಲ್ಲಿ ಸೌಮ್ಯ (ಮಾಡರೇಟ್) ಪಕ್ಷದವರಿಗೂ ಅತಿರೇಕ (ಎಕ್ಸ್ಟ್ರೀಮಿಸ್ಟ್) ಪಕ್ಷದವರಿಗೂ ವಾಕ್ಕಲಹಗಳು ಹುಟ್ಟಿ, ಕಡೆಗೆ ದೊಣ್ಣೆಗಳನ್ನು ಹಿಡಿದು ಹೊಡೆದಾಟಗಳು ನಡೆದು, ಅಂತ್ಯದಲ್ಲಿ ಪೋಲೀಸಿನವರು ಬಂದು ಮಂದಿರವನ್ನು ಆಕ್ರಮಿಸಿಕೊಂಡು, ಗುಂಪುಗಳನ್ನೂ ಗುಂಪುಕಟ್ಟುಗಳನ್ನೂ ಚದುರಿಸಬೇಕಾಯಿತು.

ಸಹಜವಾದ ರೀತಿಯಲ್ಲಿ ಕಾರ್ಯಗಳನ್ನು ನಡಿಸುತ್ತಿದ್ದ ಪಕ್ಷದಲ್ಲಿ ಈ ಕಾಂಗ್ರೆಸ್ ಮಹಾಸಭೆಯಿಂದ ಹಿಂದುಸ್ಥಾನಕ್ಕೆ ತುಂಬಾ ಪ್ರಯೋಜನವಾಗುವುದಂತಲೂ, ಈ ಸಭೆಯು ಸೀಳಿಹೋಗದಿದ್ದ ಪಕ್ಷದಲ್ಲಿ ಮಾತ್ರ ಸಕಲರ ಅಭಿಲಾಷೆಯು ನೆರವೇರುವುದೆಂತಲೂ ಹೇಳುತ್ತೇವೆ. ಇದಲ್ಲದೆ ಈ ಸಲ ಸೂರತ್ತಿನಲ್ಲಿ ನಡೆದಂಥಾ ವಿದ್ಯಮಾನಗಳನ್ನು ನೋಡಿ ನಾವೇನೂ ವ್ಯಸನಪಡತಕ್ಕವರಾಗಿಲ್ಲ. ಯಾಕೆಂದರೆ ಈ ಸಂಗತಿಗಳ ದೆಸೆಯಿಂದ ಆ ಮಹಾಸಭೆಯು ಪ್ರಯೋಜನಕ್ಕೆ ತುಂಬಾ ಸಹಾಯವಾಯಿತಂತಲೇ ನಂಬುವೆವು. ಈ ಮಹಾಸಭೆಯು ಸೀಳಿಹೋಗದೆ ಸ್ಥಿರವಾಗಿ ನಡೆಯುತ್ತಾ ಬರಬೇಕಾದ ಪಕ್ಷದಲ್ಲಿ ಸಂಘದವರು ಅವರ ಅಭಿಪ್ರಾಯ, ಆದರ ಕಟ್ಟುಪಾಡು, ಅದರಲ್ಲಿ ಕಾರ್ಯ ಜರುಗುವ ವಿಧಾನ ಈ ಮೊದಲಾದ ಪ್ರಾಮುಖ್ಯ ವಿಚಾರಗಳನ್ನು ಮೊದಲು ನಿರ್ಧರಿಸಬೇಕಾದದ್ದು ಅವಶ್ಯವಾಗಿರುತ್ತದೆ.

ಎಕ್ಸ್ಟ್ರೀಮಿಸ್ಟ್ ಎಂಬ ವಿರೋಧಪಕ್ಷದ ಮ॥ ತಿಲಕರೂ ಅವರ ಹಿಂಬಾಲಕರೂ ಇಂಗ್ಲಿಷ್ ಗವರ್ನ್ಮೆಂಟನ್ನು ಈ ರಾಷ್ಟ್ರದಿಂದ ಹೊರಡಿಸಿಬಿಡಬೇಕೆಂದೂ, ಇಲ್ಲಿನ ಪ್ರಜೆಗಳೇ ಸ್ವಾತಂತ್ರರಾಗಿ ಈ ರಾಷ್ಟ್ರವನ್ನು ಆಳಿಕೊಳ್ಳಬೇಕೆಂದೂ ಹೇಳತಕ್ಕವರಾಗಿದಾರೆ. "ಸ್ವರಾಜ್ಯ" ವೆಂಬ ಪದಾರ್ಥದ ಅಭಿಪ್ರಾಯ ಇದೇ. ಈ ಉದ್ದೇಶದಿಂದ ಅವರು ಘೋರಕೃತ್ಯಗಳನ್ನು ನಡಿಸಬೇಕೆನ್ನುವರು. ಅನ್ಯದೇಶದ ಸರಕುಗಳು ಈ ರಾಷ್ಟ್ರದಲ್ಲಿ ವಿಕರಯವಾಗದಂತೆ ಬಹಿಷ್ಕಾರ ಮಾಡಿ ತಡೆಯುವರು. ಪ್ರಜೆಗಳಿಗೆ ಆಯುಧಗಳು ಸಿಕ್ಕಬೇಕೆಂದೂ ಡ್ರಿಲ್ ಮಾಡಬೇಕೆಂದೂ ಬೋಧಿಸುತ್ತಿದಾರೆ. ಇಷ್ಟೇ ಅಲ್ಲ ಅವರು ಅನ್ಯದೇಶಸ್ಥರ ಮೇಲೆ ಹಗೆ ಮಾಡುತ್ತಲೂ ದೂಷಿಸುತ್ತಲೂ ಬಂದಿದಾರೆ.

ಮಾಡರೇಟ್ ಎಂಬ ಸೌಮ್ಯಪಕ್ಷಕ್ಕೆ ಸೇರಿದ ಮ॥ ಗೋಖಲೆ, ಮ॥ ರಾಷ್ ಬಿಹಾರಿ ಘೋಷ್, ಮ॥ ಸುರೇಂದ್ರನಾಥ ಬ್ಯಾನರ್ಜಿ, ಈ ಮೊದಲಾದವರು ಕ್ಯಾನಡಾ, ಆಸ್ಟ್ರೇಲಿಯಾ, ದಕ್ಷಿಣ ಅಫ್ರಿಕಾ ಎಂಬ ಇಂಗ್ಲಿಷ್ ರಾಜ್ಯಾಂಗಗಳಲ್ಲಿರುವಂಥಾ ಗವರ್ನ್ಮೆಂಟನ್ನು ಹಿಂದುಸ್ಥಾನದಲ್ಲೂ ಸ್ಥಾಪಿಸಿಕೊಂಡರೆ ಸಾಕಾಗಿದೆ ಎಂದು ಹೇಳತಕ್ಕವರಾಗಿದಾರೆ. ಈ ರಾಷ್ಟ್ರದ ಶ್ರೇಯೋಭಿವೃದ್ಧಿಗೂ ಸಮೃದ್ಧಿ ಸಮಾಧಾನಗಳಿಗೂ ಈಗಲೂ ಇನ್ನು ಮುಂದೆ ಬಹುಕಾಲದ ವರೆಗೂ ಇಂಗ್ಲಿಷ್ ಗವರ್ನ್ಮೆಂಟಿನವರ ಸಹಾಯವಿರಬೇಕಾದದ್ದೇ ಪರಮಾವಶ್ಯವಾಗಿದೆ ಎಂಬುವುದೇ ಇವರ ಅಭಿಮತವಾಗಿದೆ. ಅದರೆ ಈ ರಾಷ್ಟ್ರದ ಅಧಿಕಾರಸ್ಥಾನಗಳು ಇನ್ನೂ ಹೆಚ್ಚಾಗಿ ದೇಶೀಯರಿಗೇ ದೊರಕಬೇಕೆಂತಲೂ, ಯೂರೋಪ್ಯಿಯನ್ ಅಧಿಕಾರಿಗಳ ಸಂಖ್ಯೆಯು ಇನ್ನು ಬಹುಮಟ್ಟಿಗೆ ಕಡಿಮೆಯಾಗಬೇಕೆಂತಲೂ ಚರ್ಚೆ ಮಾಡುವರು. "ಸ್ವರಾಜ್ಯ" ವೆಂಬ ಪದವನ್ನು ಇವರು ಈ ಅಭಿಪ್ರಾಯದಿಂದ ಪ್ರಯೋಗಿಸುತ್ತಾರೆ. ಇಂಥಾ ಸ್ವರಾಜ್ಯ ಲಭ್ಯವಾಗುವುದಕ್ಕೆ ಘೋರಕೃತ್ಯಗಳನ್ನಾಗಲಿ ಅಕ್ರಮ ಕಾರ್ಯಗಳನ್ನಾಗಲಿ ನಡಿಸಬೇಕಾದದ್ದಿಲ್ಲವೆಂತಲೂ, ಮೀಟಿಂಗುಗಳ ಮತ್ತು ಪತ್ರಿಕೆಗಳ ಮೂಲಕ ನ್ಯಾಯವಾದ ರೀತಿಯಲ್ಲಿ ಈ ರಾಷ್ಟ್ರದ ಸಹಜವಾದ ಕುಂದು ಕೊರತೆಗಳನ್ನು ಇಲ್ಲೂ ವಿಲಾಯತಿ ಪಾರ್ಲಿಮೆಂಟಿನಲ್ಲೂ ಅರಿಕೆ ಮಾಡುತ್ತಾ ಬಂದಲ್ಲಿ ತಮ್ಮ ಉದ್ದೇಶವು ಕೈಗೂಡುವುದೆಂತಲೂ ಹೇಳತಕ್ಕವರಾಗಿದಾರೆ.

ಮೇಲ್ಕಂಡ ಎರಡು ಪಕ್ಷದವರ ಉದ್ದೇಶಗಳೂ ಸಾಧನೆಗಳೂ ಪರಸ್ಪರ ವಿರೋಧವಾದವುಗಳಾಗಿರೋಣದರಿಂದ ಉಭಯರೂ ಏಕೀಭವಿಸಿ, ಈ ಮಹಾ ಸಭೆಯನ್ನು ನಡಿಸಲಾಗಲಾರದು. ಕಾಂಗ್ರೆಸ್ಸಿನವರು ಒಂದು ಪಕ್ಷವನ್ನು ಮಾತ್ರ ಹಿಡಿಯಬೇಕಾಗಿದೆ. ಸೂರತ್ ಸಭೆಯಲ್ಲಿ ನಡೆದ ದೊಂಬಿ ಕಲಹದಿಂದ, ಕಾಂಗ್ರೆಸ್ ಸಭೆಯು ಮ॥ ಕೃಷ್ಣಸ್ವಾಮಿ ಐಯ್ಯರವರು ಸೂಚಿಸಿದಂತೆ, ಸಾರ್ವಭೌಮ ಸರ್ಕಾರದವರ ಪ್ರೋತ್ಸಾಹ ಅನುಮೋದನೆಗಳನ್ನು ಪಡೆದೇ ನ್ಯಾಯವಾದ ಮಾರ್ಗದಲ್ಲಿ ಕಾರ್ಯನಡಿಸಿ ಸ್ವರಾಜ್ಯಾಧಿಕಾರಗಳನ್ನು ಸಂಪಾದಿಸಿಕೊಳ್ಳುವುದಕ್ಕೆ ಸಾಹಸಪಡಬೇಕೆಂಬುವುದು ಈ ಕಾಂಗ್ರೆಸ್ಸಿನ ಮೊದಲನೇ ಉದ್ದೇಶವಾಯಿತು.

ಅಂತು ಸಂಕ್ಷಿಪ್ತವಾದ ಮತ್ತು ಯಥಾರ್ಥವಾದ ಒಂದು ವಿಷಯವನ್ನು ಮಾತ್ರ ಸೂಚಿಸಿ ಮುಗಿಸುತ್ತೇವೆ. ಅದೇನೆಂದರೆ, ಹಿಂದುಸ್ಥಾನದ ವಿಷಯದಲ್ಲಿ ಇಂಗ್ಲಿಷ್ ಪ್ರಜೆಗಳೂ ಇಂಗ್ಲಿಷ್ ಪಾರ್ಲಿಮೆಂಟಿನವರೂ ಪ್ರೀತಿಪೂರ್ವಕವಾಗಿಯೂ ನ್ಯಾಯವಾದ ರೀತಿಯಲ್ಲೂ ನಡೆಯಬೇಕೆಂದು ಸ್ವಾಭಾವಿಕವಾದ ಅಭಿಲಾಷೆಯುಳ್ಳವರಾಗಿದಾರೆ. ಅವರ ಅಭಿಪ್ರಾಯವು ಈ ರಾಷ್ಟ್ರವನ್ನು ಅಭಿವೃದ್ಧಿಗೆ ತಂದು ಇಲ್ಲಿನ ಪ್ರಜೆಗಳನ್ನು ಸತ್ಪ್ರಜೆಗಳನ್ನಾಗಿ ಮಾಡಬೇಕೆನ್ನುವುದಲ್ಲದೆ ಅನ್ಯಥಾ ಅಲ್ಲವು. ಆದಕಾರಣ ಮೇಲ್ಕಂಡ ಸೌಮ್ಯಪಕ್ಷದವರನ್ನು ಬ್ರಿಟಿಷ್ ಗವರ್ನ್ಮೆಂಟಿನವರು ತಮ್ಮ ಅಂತರಂಗಕ್ಕೂ ಕೃಪಾಪ್ರೋತ್ಸಾಹಗಳಿಗೂ ತೆಗೆದುಕೊಂಡಾರೆನ್ನುವುದಕ್ಕೆ ಸಂದೇಹವಿಲ್ಲ. ಆದರೆ ಮ॥ ತಿಲಕರು ಸೂಚಿಸತಕ್ಕ ಮಾರ್ಗವು ಈ ರಾಷ್ಟ್ರವನ್ನು ಕಷ್ಟಕ್ಕೂ ನಷ್ಟಕ್ಕೂ ದುಃಖಕ್ಕೂ ಈಡುಮಾಡುವುದೇ ಸರಿ ಎಂದು ಅನುಮಾನವಿಲ್ಲದೆ ಹೇಳಬಹುದು.

ಒಳದೇಶದ ವೃತ್ತಾಂತಗಳು.

ಈ ವಾರದ ಪತ್ರಿಕೆಯು ಸಂಗಡ ೧೯೦೮ ನೆ ಇಸವಿಯ ಕ್ಯಾಲೆಂಡರನ್ನು ನಮ್ಮ ಚಂದಾದಾರರಿಗೆಲ್ಲಾ ಕಳುಹಿಸುತ್ತೇವೆ. ಮತ್ತು ಈ ತಿಂಗಳಲ್ಲಿ ಹೊಸ ಚಂದಾ ಕೊಟ್ಟವರಿಗೂ ಕಳುಹಿಸಲಾಗುವುದು.

✦✦✦

ರಾಜಧಾನಿಯ ದೊಡ್ಡ ಕೆರೆಯಲ್ಲಿ ಅಂತರಗಂಗೆ ಬೆಳೆದುಕೊಂಡಿರುವುದನ್ನು ನಾಶನಪಡಿಸಲು ಏರ್ಪಾಡು ಬೇಗ ತೆಗೆಸಬೇಕಾಗಿದೆ.

✦✦✦

ಶ್ರೀಮಾನ್ ಯುವರಾಜರವರ ಉಪಾಧ್ಯಾಯರಾಗಿದ್ದ ಕ್ಯಾಪ್ಟನ್ ಹಿಲ್ ರವರು ಶೀಘ್ರದಲ್ಲಿ ಡಿಸೆಂಬರಿನಲ್ಲಿ ಹಿಂದಿರುಗಿ ಬರುತ್ತಾರೆಂದು ತಿಳಿದು ಬಂದಿದೆ.

✦✦✦

ಶಿಂಗಳೀಕರು ಡಿಸೆಂಬರಿನಲ್ಲಿ ಬಾರಿ ಮಾರ್ಕೆಟಾಗಿರುವ ತುಂಬಾ ದರ್ಶನಕ್ಕಾಗಿ ಇರುವ ಗಾಯಕವಾದಕರ ಆಕರ್ಷಣೆ ನಾನಾ ಯೋಗ್ಯವಿದ್ವಾಂಸರಿಂದ ನಡೆಯಿತೆಂದು ವರ್ತಮಾನ ಬಂದಿದೆ.

✦✦✦

ಮನ್ನಾಪ್ರಾಂತ್ಯಗಳ ಡಿವಿಷನಲ್ ಕಮಿಷನರಾಗಿರುವ ಮ॥ ಸ್ಟಾರ್ಲಿ ಅಸ್ಕೆ ಎಂಬುವರನ್ನು ನಮ್ಮ ಸರ್ಕಾರದವರು ಚೀಫ್ ಜಡ್ಜರನ್ನಾಗಿ ನೇಮಿಸಿಕೊಂಡಿರುವಂತೆ ಪ್ರಕಟವಾಗಿದೆ. ಇವರ ವಯಸ್ಸು ೫೦ ಕ್ಕೆ ಕಡಿಮೆಯಾಗಿಲ್ಲ.

✦✦✦

ರಾಜಧಾನಿಯಲ್ಲಿ ಚಳಿ ಪ್ರಾರಂಭವಾಗಿದೆ. ಪ್ಲೇಗ್ ಉಪದ್ರವವು ಕಡಿಮೆಯಾಗುತ್ತಿರುವಂತೆ ಕಾಣುವುದು. ಸನ್ನಿಪಾತವಾಗಿದ್ದರೂ ಸ್ಥಳಾಂತರವಾಸಿಗಳ ಬಳಿ ಹಿಂದಿರುಗಿ ಬಂದು ಕೆಲವು ಗುಡಿಸಲುಗಳ ಬಾಡಿಗೆ ಅತಿಯಾಗಿ ೨೦ ಕ್ಕೆ ೩—೪ ಆಗಿ ಹೆಚ್ಚಿ ಕೊಟ್ಟರೂ ನೋಡಲಿಕ್ಕೆ ಸಿಕ್ಕುವುದು ಕಷ್ಟವಾಗಿದೆ.

✦✦✦

ಕಳೆದ ನವರಾತ್ರಿಯಲ್ಲಿ ರಾಜಧಾನಿಯಲ್ಲಿ ನಡೆದ ಶೃಂಗಾರಕ್ಕೆ ಮತ್ತು ವ್ಯವಸಾಯ ಕೈಗಾರಿಕೆಗಳ ಪ್ರದರ್ಶನೋತ್ಸವದಲ್ಲಿ ಉತ್ತಮವಾಗಿ ಕಂಡುಬಂದ ಪದಾರ್ಥಗಳಿಗೆ ಗವರ್ನ್ಮೆಂಟಿನವರು ಕೊಡಿಸಿರುವ ಬಹುಮಾನಗಳ ಪಟ್ಟಿಯನ್ನು ಸ್ವಲ್ಪದರಲ್ಲಿಯೇ ಕಳುಹಿಸುವರು. ಅದರಿಂದ ೬ ಚಿನ್ನದ ಪದಕಗಳು, ೨೫ ಬೆಳ್ಳಿಯ ಪದಕಗಳು, ೫೧ ಕಂಚಿನ ಪದಕಗಳು ೨೫೦೦ ರೂ. ಬಹುಮಾನಗಳು ಕೊಡಲ್ಪಟ್ಟವು ಎಂದು ಗೊತ್ತಾಗುವುದು.

✦✦✦

ಕಳೆದ ವಾರ ಕೋಲಾರ ಚಿನ್ನದ ಗಣಿಗಳಿಗೆ ಸೇರಿದ ಮೈಸೂರು ಮೈನ್ ಎಂಬಲ್ಲಿ ಕೂಲಿ ಜನರು ದಂಗೆಮಾಡಿ ಪೋಲೀಸಿನವರ ಮೇಲೆ ಕಲ್ಲು ಎಸೆದರು. ಪೋಲೀಸಿನವರು ೨೩ ಮಂದಿಯನ್ನು ದಸ್ತಗಿರಿ ಮಾಡಿ, ಮಾರಿಕುಪ್ಪದ ಸ್ಟೇಷನಿನಲ್ಲಿ ಇಟ್ಟರು. ಅಲ್ಲಿ ಒಂದು ದೊಡ್ಡ ಗುಂಪು ಸೇರಿ ಹೊಂಚುಹಾಕಿತು. ಸೈನಿಕರು ಅವರನ್ನೆಲ್ಲಾ ಚದರಿಸಿದ್ದಲ್ಲದೆ, ೧೦ ಮಂದಿ ಪುಂಡುಬಿಗಳನ್ನು ದಸ್ತಗಿರಿಮಾಡಿ, ಇವರುಗಳನ್ನೆಲ್ಲಾ ಛಾಂಪಿಯನ್ ರೀಫ್ ಗಣಿಯ ಸ್ಟೇಷನ್ ವಶಮಾಡಿ ರುಜುವಾತು ಬೆಂಗಳೂರಿನಿಂದಲೂ ಕೆಲವು ಪೋಲೀಸಿನವರನ್ನು ಕರೆಸಿಕೊಂಡಿದಾರೆ. ಬ್ರಿಟಿಷ್ ರೆಸಿಡೆಂಟರ ಅಸಿಸ್ಟೆಂಟಾದ ಮ॥ ರೆನ್ನಿಯವರೂ, ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಮಿ॥ ಕಾರ್‍ಯವರೂ ಅಲ್ಲಿ ಇದ್ದರೆಂದು ತಿಳಿಯುವುದು. ಈವರೆಗೆ ಗಲಭೆಯೇನೂ ಆಗಲಿಲ್ಲ. ಜನರು ತಮ್ಮ ತಮ್ಮ ಕೆಲಸದ ಮೇಲೆ ಹೋಗುತ್ತಿದಾರೆ.

ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆಯಾದವರೂ, ನ್ಯಾಯತಿ ಮಾಧವರಾಯರನ್ನು ಮ॥ ಎಸ್ ಕೃಷ್ಣಯ್ಯನವರ ಸ್ಥಾನದಲ್ಲಿ ಅ॥ ಕಮಿಷನರಾಗಿ ನೇಮಿಸಲಾಗಿದೆ.

✦✦✦

ಮತ್ತೊಂದು ಕೂಟುಂಬ ಕೊಡಲ್ಪಡುವ ತನಕ ಅ॥ ಕಮಿಷನರ್ ಮಿ॥ ಮಾಲಹಾವ್ ರಾಮಾಯರವರು ರಾಜಧಾನಿಗೆ ರೇಂಜಿನ ಭಾರವನ್ನು, ಪ್ರೊ॥ ಅ॥ ಕಮಿಷನರ್ ಮ॥ ಗೋವಿಂದರಾವ್ ಭಾಸ್ಕರರಾವ್ ಶೆಟ್ಟಿ ಅರ್ ಇವರು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಖಜಾನೆಯ ಭಾರವನ್ನು ವಹಿಸತಕ್ಕದ್ದೆಂದು ಹುಕುಂ ಆಗಿದೆ.

✦✦✦

ಲೋಕಲ್ ಸರ್ವಿಸ್ ರಜೆಯಲ್ಲಿರುವ ವಿಸಿಟರ್ ಮೈಸಂಗರವರು ಎರಡು ತಿಂಗಳೂ ಇಪ್ಪತ್ತೇಳು ದಿನಗಳ ವರೆಗೆ ಪರ್ಲೋರಜಾ ಪಡೆದುಕೊಂಡದ್ದರಿಂದ ಜನಾಬ್ ಸೈಯದ್ ಫಕ್ರುದ್ದೀನ್ ಯವರನ್ನು ಸಿ. ಸ್ಕ್ವೇರ್ ಅವ್ಯಾಂತರಾಗಿ ಬದಲಿ ನೋಡುವಂತೆ ನೇಮಕವಾಗಿದೆ.

✦✦✦

ಹೊಸ ವರ್ಷದ ಹುಟ್ಟುವುದರಲ್ಲಿ ನೇಮಕವಾಗಿರುವ ಸಬ್ ಅ॥ ಇಂಜಿನಿಯರ್ ಮ॥ ಶ್ರೀನಿವಾಸ ಐಯ್ಯರ್, ಇಲ್ಲಿನ ನಂಜನಗೂಡಿನ ಹಾಲ್ ಪತ್ರದಲ್ಲಿ ಇರುವಾಗ್ಗೆ, ಹೋದ ಸೋಮವಾರ ಅವರ ಕೊಠಡಿಗೆ ಕಳ್ಳರು ಬಿದ್ದು, ಸುಮಾರು ೨,೦೦೦ ರೂಪಾಯಿ ನಗನಾಣ್ಯಗಳನ್ನು ಅಪಹರಿಸಿದರು. ಈಚಿಗೆ ದೊಡ್ಡಪೇಟೆಯಲ್ಲಿ ಒಂದು ಮನೆಯ ಬೀಗ ಬಾಗಿಲನ್ನು ಕಿತ್ತುಕೊಂಡು ಹೋಗಿದಾರೆ. ರಾಜಧಾನಿಯಲ್ಲಿ ಈಗೀಗ ಕಳ್ಳತನಗಳು ಸ್ವಲ್ಪ ತಲೆಯೆತ್ತಿರುವಂತೆ ಕಾಣುತ್ತದೆ.

✦✦✦

ಕನ್ನಡ ಪಂಡಿತರಾಗಿಯೂ ಗವರ್ನ್ಮೆಂಟ್ ವಿದ್ಯಾಭ್ಯಾಸದ ಇಲಾಖೆ ಕನ್ನಡ ಟ್ರಾನ್ಸ್‌ಲೇಟರಾಗಿಯೂ ಇದ್ದ ಮ॥ ಎಸ್ ಜಿ ನರಸಿಂಹಾಚಾರ್ಯರು ಕಳೆದ ವಾರ ಬೆಂಗಳೂರಿನಲ್ಲಿ ಕಾಲವಶರಾಗಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಉಪಯೋಗಿಸುವ ಅನೇಕ ಸ್ಕೂಲ್ ಪುಸ್ತಕಗಳನ್ನು ಈ ಪಂಡಿತರು ರಚಿಸಿಯೂ ಶುದ್ಧಿ ಮಾಡಿಯೂ ಇದ್ದರು. ಇವರೂ ಆರ್ ನರಸಿಂಹಾಚಾರ್ಯರು ಏಕೀಭವಿಸಿ ಕರ್ಣಾಟಕ ಕವಿಗಳ ಚರಿತ್ರೆಯೊಂದನ್ನು ಬರೆದು ಪ್ರಕಟಿಸಿದರು. ಅವರಷ್ಟು ಸುಲಲಿತವಾಗ ಕನ್ನಡವನ್ನು ಬರೆಯತಕ್ಕವರು ಸದ್ಯ ಅಪರೂಪವೆಂದೇ ಹೇಳಬಹುದು. ಅವರಿಗೆ ಇನ್ನೂ ೫೦ ವರುಷ ತುಂಬಿರಲಿಲ್ಲ.

ಒಬ್ಬ ಕಲೆಕ್ಟರನ್ನು ಗುಂಡಿನಿಂದ ಹೊಡೆದದ್ದು.

ಹೊಡೆದವರು ಇನ್ನೂ ಸಿಕ್ಕಿ ಇಲ್ಲ

ಬೆಂಗಾಳ ಅಧಿಪತ್ಯಕ್ಕೆ ಸೇರಿದ ಢಾಕಾ ಡಿಸ್ಟ್ರಿಕ್ಟಿನ ಕಲೆಕ್ಟರಾದ ಮಿ॥ ಬಿ ಸಿ ಅಲೆನ್ ಎಂಬುವರು ರಜಾ ಪಡೆದು, ಸೀಮೆಗೆ ಹೋಗಬೇಕೆಂದು, ತಮ್ಮ ಪತ್ನಿಯನ್ನು ಮೊದಲೇ ಬೆಂಕಿಪುರದ ಸ್ಟೇಷನ್‌ನಲ್ಲಿ ಕಾದಿರುವಂತೆ ಕಳುಹಿಸಿಕೊಟ್ಟರು. ತಾವು ಮಾತ್ರ ಕಳೆದ ೨೩ ನೇ ತಾ. ಸೋಮವಾರ ರಾತ್ರಿ ಗೋಲಂದೊ ಪಟ್ಟಣದ ರೈಲ್ವೆ ಸ್ಟೇಷನ್‌ಗೆ ಹೋಗಿ ರೈಲ್ ಗಾಡಿಯೊಳಕ್ಕೆ ಹತ್ತುವಾಗ್ಗೆ ಎರಡಾವರ್ತಿ ಬಿಸಿಯಾದ ಹಾರಿಸಿದ ಶಬ್ದವುಂಟಾಗಿ, ಒಂದು ಗುಂಡು ಅವರ ಎದೆಯನ್ನು ತಾಕಿ ಹೊಕ್ಕು ಅವರನ್ನು ಕೆಡವಿಬಿಟ್ಟಿತು. ಆ ಸಮಯದಲ್ಲಿ ಅವರನ್ನು ಸಾಗಕಳುಹಿಸುವುದಕ್ಕಾಗಿ ನವಾಬ್ ಅಲಿ ಚೌಧುರಿ ಬಹದೂರ್ ಎಂಬುವರೂ, ಸಬ್ ರೆಜಿಸ್ಟ್ರಾರ್ ಮಿ॥ ಬ್ಯಾನರ್ಜಿಯವರೂ ಸ್ಟೇಷನ್ನಿನಲ್ಲಿ ಹಾಜರಾಗಿದ್ದು, ಮಿ॥ ಬ್ಯಾನರ್ಜಿಯವರು ಗುಂಡುಗಳು ಬಂದ ಕಡೆಗೆ ಹೋಗಿ ನೋಡುವಲ್ಲಿ ಯಾರೋ ಇಬ್ಬರು ಹುಡುಗರು ಓಡಿ ಹೋದಂತೆ ಕಾಣಿಸಿತಲ್ಲದೆ, ಕತ್ತಲಾಗಿದ್ದುದರಿಂದ ಅವರನ್ನು ಹಿಡಿಯುವುದು ಸಾಧ್ಯವಾಗಲಿಲ್ಲ. ಮರುದಿನ ಬೆಳಿಗ್ಗೆ ಡಾಕ್ಟರ್ ಕ್ಯಾಂಬೆಲ್ ಎಂಬುವರು ಕಲ್ಕತ್ತೆಯಿಂದ ಸ್ಪೆಷಲ್ ರೈಲಿನಲ್ಲಿ ಬಂದು, ಗಾಯಪಟ್ಟಿದ್ದ ಮಿ॥ ಅಲೆನರನ್ನು ಕಲ್ಕತ್ತೆಗೆ ಸಾಗಿಸಿಕೊಂಡು ಹೋಗಿ ಸೀಲ್ಡಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡುತ್ತಿದಾರೆ. ಅವರ ಪತ್ನಿಯವರೂ ಈ ವರ್ತಮಾನವನ್ನು ಕೇಳಿ ಆ ದಿನವೇ ಬೆಂಕಿಪುರದಿಂದ ವಾಪಸು ಸೀಲ್ಡಾ ಆಸ್ಪತ್ರೆಗೆ ಬಂದು ತಮ್ಮ ಪತಿಯ ಸಮೀಪದಲ್ಲಿರುತ್ತಾರೆ. ಮಿ॥ ಅಲೆನರವರ ದೇಹಸ್ಥಿತಿಯು ತಾ ೨೪ ನೇ ಸಾಯಂಕಾಲ ತುಂಬಾ ಗಾಬರಿಯನ್ನುಂಟುಮಾಡುತ್ತಿತ್ತು. ಮರುದಿನ ಬೆಳಿಗ್ಗೆ ಡಾಕ್ಟರುಗಳು ಅವರ ಹೊಟ್ಟೆಯೊಳಗೆ ಸೇರಿಕೊಂಡಿದ್ದ ಗೋಲಿಯನ್ನು ಹೊರಕ್ಕೆ ತೆಗೆದರು. ಆ ಗೋಲಿ ಎಂಥಾದ್ದೆಂಬುವದೇ ಮೊದಲಾದ ವಿಚಾರವನ್ನು ಪರೀಕ್ಷೆ ಮಾಡುವುದಕ್ಕೆ ನಿಪುಣರಾದ ಜನರಿಗೆ ಕೊಟ್ಟಿರುತ್ತಾರೆ. ಅವರ ದೇಹಸ್ಥಿತಿಯು ಕಷ್ಟಕರವಾಗಿದ್ದರೂ ಬದುಕಬಹುದೆಂದು ತೋರುವುದು. ಆ ಗೋಲಿಯು ದೇಹದೊಳಕ್ಕೆ ಯಾವ ಯಾವ ಕೋಶಗಳನ್ನು ಭೇದಿಸಿಕೊಂಡು ಹೋಗಿರುತ್ತೋ, ಇತರ ವಸ್ತುಗಳೇನಾದರೂ ಹೊಟ್ಟೆಯಲ್ಲಿ ಸೇರಿಕೊಂಡಿವೆಯೋ ಇನ್ನೂ ಕಂಡುಹಿಡಿಯಲು ಸಾಧ್ಯವಾಗಲಿಲ್ಲ. ಅತ್ಯಲಾಗಿ ಈ ರೀತಿ ಅವರಿಗೆ ಗುಂಡುಗಳನ್ನು ಯಾರು ಹೊಡೆದರೋ ಅವರೂ ಸಿಕ್ಕಿ ಇಲ್ಲ. ಈಚೆಗೆ ಮಿ॥ ಅಲೆನರ ದೇಹಸ್ಥಿತಿಯು ಸ್ವಲ್ಪ ಚೆನ್ನಾಗುತ್ತಿದೆ. ತಾ ೨೭ ನೆ ಬೆಳಿಗ್ಗೆ ಯೂ ಅವರು ಆರೋಗ್ಯ ಹೊಂದುತ್ತಲಿದ್ದರು. ನ್ಯಾಷನಲ್ ಕಾಂಗ್ರೆಸ್ ಮಹಾ ಸಭೆಯಲ್ಲಿ ಮೆಂಬರುಗಳು ಈ ದುಃಖಕರವಾದ ವರ್ತಮಾನವನ್ನು ಕೇಳಿ ಎಲ್ಲರೂ ವಿಷಾದ ಪಟ್ಟದ್ದಲ್ಲದೆ, ಅಂಥಾ ಕ್ರೂರಕೃತ್ಯವನ್ನು ನಡಿಸಿದ್ದು ತುಂಬಾ ಅನುಚಿತವಾದದ್ದೆಂದು ಆಗ್ರಹಯುಕ್ತವಾಗಿ ಹೇಳಿದರು. ತಾ ೨೮ ರಲ್ಲಿ ಬಂದಿರುವ ತಂತೀ ವರ್ತಮಾನವೇನೆಂದರೆ—ನೆನ್ನೆ ರಾತ್ರಿ ಮಿ॥ ಅಲೆನರಿಗೆ ಸ್ವಲ್ಪ ಜ್ವರ ಬಂದಿತು ಆದರೂ ಅವರ ದೇಹಸ್ಥಿತಿಯು ಇತರ ವಿಷಯದಲ್ಲಿ ಅನುಕೂಲವಾಗಿದೆ. ಈಚೆಗೆ ಪೂರ್ವ ಬೆಂಗಾಳಾ ಮತ್ತು ಅಸ್ಸಾಂ ಗವರ್ನ್ಮೆಂಟಿನವರು ಮಿ॥ ಅಲೆನರವರನ್ನು ಗೋಲಿಯಿಂದ ಹೊಡೆದ ದುಷ್ಟರನ್ನು ಹಿಡಿದುಕೊಡತಕ್ಕವರಿಗೆ ಪತ್ತು ಸಾವಿರ ರೂಪಾಯಿ ಬಹುಮಾನಕೊಡುತ್ತೇವೆಂದು ಇಸ್ತಿಹಾರು ಹೊರಡಿಸಿರುತ್ತಾರೆ.

೩ ನೇ ವೀರಶೈವ ಮಹಾಸಭೆಯು

ಸೊಲ್ಲಾಪುರದಲ್ಲಿ ಮೇಲ್ಕಂಡ ಸಭೆಯು ಪ್ರಾರಂಭವಾಯಿತು. ಮೊದಲನೇ ದಿನ ಅಂದರೆ, ಕಳೆದ ಡಿಸೆಂಬರ್ ತಾ ೨೭ ನೆ ಶುಕ್ರವಾರ ಸಭಾಧ್ಯಕ್ಷರಾದ ವೆ॥ ಶೆ ಪಿ ಘಟ್ಟಿಚಟ್ಟಿಯವರು ಮಾಡಿದ ಭಾಷಣದಲ್ಲಿ ಕೆಲವು ಮುಖ್ಯಾಂಶಗಳನ್ನು ಪ್ರಕಟಿಸುತ್ತೇವೆ

ವೀರಶೈವ ಮಹಾಸಭೆಯ ಉದ್ದೇಶ ಮತ್ತು ರಚನೆ

ಹಿಂದೂರಾಷ್ಟ್ರದ ಪರಿಪಾಲನೆಯನ್ನು ಒಬ್ಬನೇ ಪ್ರಭುವು ಮಾಡುವವನಾಗಿದ್ದರೂ ಪರಿಪಾಲನಾಕ್ರಮದ ಸೌಕರ್ಯಕ್ಕಾಗಿ ಬೇರೆಬೇರೆ ಭಾಗಗಳನ್ನು ಮಾಡಿಕೊಂಡು ಕಾರ್ಯನಿರ್ವಾಹ ಮಾಡುತ್ತಿರುವಂತೆ, ಹಿಂದೂ ಜನಾಂಗವೆಲ್ಲವೂ ಸುಧಾರಣೆಗೊಳ್ಳಬೇಕೆಂಬ ಉದ್ದೇಶವು ಸಾರ್ಥಕವಾಗಬೇಕಾದರೆ ಆ ಜನಾಂಗದ ಪ್ರಭೇದದವರೆಲ್ಲ ತಮ್ಮ ತಮ್ಮಲ್ಲೇ ಸಾಧ್ಯವಾದಷ್ಟು ಸುಧಾರಣೆಗಳನ್ನು ಮಾಡಿಕೊಳ್ಳುತ್ತ ಬರುವುದು ಅತ್ಯಂತ ಸವಿವೇಚನವಾದ ಉಪಾಯವಾಗಿರುವುದು. ಆದರೆ ಹಿಂದೂ ಮತಸಾಮಾನ್ಯವು ಒಂದೇ ವಿಧದ ಆಚಾರ ನಡೆ ನುಡಿಗಳುಳ್ಳದ್ದಾಗಿದ್ದರೆ ದೇಶೀಯ ವಿಭಾಗಗಳಿರುತ್ತಾ ಅಲ್ಲಿನ ಎಲ್ಲ ತರದ ಹಿಂದೂ ಪ್ರಜೆಗಳೂ ಒಟ್ಟಿಗೆ ಸೇರಿ ಅವಶ್ಯಕವಾದ ಸುಧಾರಣೆಗಳನ್ನು ಯೋಚಿಸಿಕೊಳ್ಳಬೇಕಾಗಿತ್ತು. ಅಂಥಾ ಧಾರ್ಮಿಕ ಸಾಮಾನ್ಯ ಸ್ಥಿತಿಯು ಇಲ್ಲದಿರುವ ಕಾರಣದಿಂದಲೂ, ಔದ್ಯೋಗಿಕ, ನೈತಿಕ, ಜ್ಞಾನವರ್ಧಕ ವಿಷಯಗಳ ಜತೆಗೆ ಕ್ಷೀಣತೆಯಲ್ಲಿರುವ ಧಾರ್ಮಿಕ ಸಾಮಾಜಿಕ ವಿಷಯಗಳನ್ನೂ ಕೂಡ ಸುಧಾರಿಸಿಕೊಳ್ಳಬೇಕಾಗಿರುವುದರಿಂದಲೂ, ಒಂದೊಂದು ಧರ್ಮದ ಜನರೇ ಹೀಗೆ ಬೇರೆಬೇರೆ ಸಭೆಗಳನ್ನು ಕೂಡಿಸಿಕೊಳ್ಳಬೇಕಾದ ಆವಶ್ಯಕತೆಯು ಪ್ರಾಪ್ತವಾಗಿದೆ. ಅಂಥ ಆವಶ್ಯಕತೆಗೆ ಬದ್ಧರಾಗಿಯೇ ವೀರಶೈವರು ತಮ್ಮ ಸಮಾಜದವರೆಲ್ಲರ ಶ್ರೇಯಸ್ಸಾಧನೆಯ ಉಪಾಯವನ್ನು ಕುರಿತು ಯೋಚಿಸುವುದಕ್ಕಾಗಿ ಈ ಸಭೆಯಲ್ಲಿ ಕೂಡಿರುತ್ತಾರೆ. ಸದ್ಯಃ ತೋರುವ ಪ್ರಯತ್ನದಲ್ಲಿ ಇದು ಭಿನ್ನವಾಗಿದ್ದರೂ, ಪರಿಣಾಮಫಲವನ್ನು ವಿಚಾರಮಾಡಿದರೆ ಹಿಂದೂರಾಷ್ಟ್ರಸುಧಾರಣೆಯಲ್ಲಿಯೇ ಇದೂ ಐಕ್ಯವಾಗುವದೆಂಬುದನ್ನು ಯಾರೊಬ್ಬರೂ ಮರೆಯಬಾರದು.

ಈ ಮಹಾಸಭೆಯ ಸ್ಥಾಪನದ ಉದ್ದೇಶವು ಕೈಗೂಡಬೇಕಾದರೆ ಇದು ಚಿರಕಾಲ ನಡೆದುಕೊಂಡು ಹೋಗಬೇಕೆಂದು ಮೇಲೆ ಹೇಳಿರುವೆನಷ್ಟೆ. ಅದು ಹಾಗಾಗಬೇಕೆಂದರೆ ಅದರ ರಚನಾಕ್ರಮವು ನೆಟ್ಟಗಿರಬೇಕು. ಕಳೆದ ವರ್ಷದಲ್ಲೇ ನಡೆಯಬೇಕಾದ ಈ ೩ನೆಯ ಸಭೆಯು ಕೂಡದೆ ತಪ್ಪಿಹೋದಂತೆ ಮುಂದೆ ಎಂದೂ ಆಗಗೊಡಬಾರದು. ಒಬ್ಬ ಮನುಷ್ಯನು ಹಿಡಿದ ವ್ರತವನ್ನು ಸಾಧಿಸಬೇಕೆಂಬ ಸಂಕಲ್ಪವುಳ್ಳವನಾಗಿದ್ದರೆ, ಅದು ಒಂದುಕಾಲ ಸಾಗುತ್ತಲೇ ಇರುವುದು. ಒಂದಾವೃತ್ತಿ ಅದು ತಪ್ಪಿದರೆ ಅದರಲ್ಲಿ ವಿಶ್ವಾಸವು ಕ್ಷೀಣವಾಗುತ್ತ, ಹಾಗೆ ತಪ್ಪುವಿಕೆಯು ಪದೇಪದೆ ನಡೆಯಲು ಸರಾಗವಾಗುವುದು. ಅದಕಾರಣ ವರ್ಷಕ್ಕೊಮ್ಮೆ ಈ ಮಹಾಸಭೆಯನ್ನು ನೆರವೇರಿಸಿಯೇ ತೀರಬೇಕೆಂಬ ದೃಢಸಂಕಲ್ಪವನ್ನು ಮತಸ್ಥರೆಲ್ಲರು ಮಾಡಬೇಕು. ಇಂಥ ಸಭೆಯನ್ನು ನಡೆಯಿಸುವವೆಚ್ಚಕ್ಕೆ ಬೇಕಾದ ದ್ರವ್ಯವನ್ನು ನಿರೀಕ್ಷಿಸದೆ ಇರುವುದಕ್ಕಾಗಿ ಸ್ಥಿರವಾದ ಒಂದು ಆನುಕೂಲ್ಯವನ್ನು ಕಲ್ಪಿಸಿಟ್ಟಿರಬೇಕು. ಇದಕ್ಕೆ ತಕ್ಕ ಉಪಾಯವೊಂದನ್ನು ಈ ಸಭೆಯಲ್ಲಿಯೇ ತಾವೆಲ್ಲರೂ ಗೊತ್ತುಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಈ ವಿಷಯದಲ್ಲಿ ನನಗೆ ತೋರುವುದೇನಂದರೆ—ಅನುಕೂಲವಾದ ಸಮಯದಲ್ಲಿ ನಡೆಯಿಸಬೇಕಾದ ಮಹಾಸಭೆಯ ವೆಚ್ಚಕ್ಕೆ ಉಪಯೋಗಿಸಿಕೊಳ್ಳಲು ಒಂದು ನಿಧಿಯನ್ನು ಸ್ಥಾಪಿಸಬೇಕು. ಪ್ರತಿಯೊಂದು ಮನೆಯು ಶುಭೋತ್ಸವ ಸಮಯದಲ್ಲಿ ಇಂತಿಷ್ಟು ಹಣವನ್ನು ವಿದ್ಯಾಭಿವೃದ್ಧಿ ಫಂಡಿಗೆ ತೆಗೆದಿಡಬೇಕೆಂದು ಹಿಂದೆ ನಿಬಂಧನೆಮಾಡಿರುವ ಈ ಮಹಾಸಭೆಯೇ ತನ್ನ ಕರ್ತವ್ಯದಲ್ಲೂ ಇತರರಿಗೆ ಮೇಲ್ಪಂಕ್ತಿ ಹಾಕಿ ತೋರಿಸಬೇಕು, ಎಂದರೆ, ಪ್ರತಿವರ್ಷವೂ ಒಂದೊಂದುಕಡೆ ಸಭೆಸೇರುವಾಗ ಅದರ ವೆಚ್ಚಕ್ಕಾಗಿ ಎತ್ತಿದ ಹಣದಲ್ಲಿ ಕ್ಲುಪ್ತವಾದ ಇಂತಿಷ್ಟು ಹಣವನ್ನು ಈ ನಿಧಿಗೆ ಮೊದಲು ಕೊಟ್ಟುಬಿಡುತ್ತ ಬರಬೇಕು. ಹೀಗೆ ಕೂಡಿದ ಮೂಲನಿಧಿಯ ಬಡ್ಡಿಯನ್ನು ಅವಶ್ಯಕವಾದಕಾಲದಲ್ಲಿ ಮಹಾಸಭೆಯವೆಚ್ಚಕ್ಕೆ ಉಪಯೋಗಿಸಿಕೊಳ್ಳಬೇಕು.

ಧರ್ಮವೇ ಜೀರ್ಣೋದ್ಧಾರವನ್ನು ಮಾಡಬೇಕೆಂಬ ಕುತೂಹಲವನ್ನು ಮತಸ್ಥರೆಲ್ಲರೂ ವಹಿಸಿರಬೇಕು. ಆದರೆ ಎಲ್ಲರೂ ಈ ಕಾರ್ಯಕ್ಕೆ ಯತ್ನಿಸುವದು ಅಸಾಧ್ಯವಾದುದರಿಂದ ಇದಕ್ಕೆ ಕೆಲವರನ್ನು ನಿಯಮಿಸಿಟ್ಟಿರಬೇಕು. ಮೊದಲನೆಯ ಸಭೆಯಲ್ಲಿ ಈ ಪ್ರಕಾರವಾದ ಒಂದು ನಿಬಂಧನೆಯಾಗಿದ್ದರೂ ಅದು ಅನುಷ್ಠಾನದಲ್ಲಿರುವುದಿಲ್ಲ. ಈಗಲಾದರೂ ಅದನ್ನು ಅಲ್ಪವಾಗಿ ಆರಂಭಿಸಿ ದಿನೆ ದಿನೆ ವೃದ್ಧಿಪಡಿಸಿಕೊಳ್ಳಬೇಕು. ಮತದ ಕಾರ್ಯಕ್ಕಾಗಿಯೇ ಅಸಂಖ್ಯಾತವಾದ ದ್ರವ್ಯವು ಪಾಶ್ಚಿಮಾತ್ಯರಲ್ಲಿ ಸೇರಿಸಲ್ಪಟ್ಟಿರುವಂತೆ ನಮ್ಮ ಮತದವರೂ ಕೂಡ ಇದಕ್ಕೆ ಒಂದು ಫಂಡನ್ನು ಸಾರ್ವತ್ರಿಕವಾಗಿ ಕೂಡಿಸಬೇಕು. ಇತರ ವಿಧದಲ್ಲಿ ಪುಣ್ಯಕಾರ್ಯಗಳಿಗೆ ದಾನ ಮಾಡುವುದಕ್ಕೆ ಹೆಚ್ಚು ಹಣವನ್ನು ಉಪಯೋಗಿಸುವವರೆಲ್ಲರೂ ಆಗಿಂದಾಗ್ಗೆ ಈ ಫಂಡಿಗಾಗಿ ದಾನ ಮಾಡಬೇಕೆಂಬುದನ್ನು ಮರೆಯಬಾರದು. ಮತ್ತು ಅಂತ್ಯಕಾಲದಲ್ಲಿ ಪ್ರತಿಯೊಬ್ಬರೂ ಈ ಧಾರ್ಮಿಕಫಂಡಿಗಾಗಿ ಯಥೋಚಿತ ದ್ರವ್ಯವನ್ನು ವಿನಿಯೋಗಿಸುವುದಕ್ಕೆ ಮರಣಶಾಸನವನ್ನು ಬರೆದಿಡುವ ಪದ್ಧತಿಯನ್ನು ಸ್ಥಾಪಿಸಬೇಕು. ಈ ವಿಷಯದಲ್ಲಿ ಕೈ॥ ಶ್ರೀ॥ ಸಿರಸಂಗಿ ದೇಸಾಯರವರನ್ನೇ ಮಾರ್ಗದರ್ಶಕರನ್ನಾಗಿಟ್ಟುಕೊಂಡು ಕೆಲಸ ಮಾಡಬೇಕು. ಪುತ್ರಸಂತತಿಯಿಲ್ಲದವರು ತಾವು ಹುಟ್ಟಿದ ಸಮಾಜದ ನಿತ್ಯಕಲ್ಯಾಣಕ್ಕಾಗಿ ನಿಷ್ಕಪಟಬುದ್ಧಿಯಿಂದ ತಮಗೆ ತೋರಿದಷ್ಟನ್ನು ಇಂಥ ಧಾರ್ಮಿಕಫಂಡಿಗೆ ವಹಿಸಿಕೊಟ್ಟು ಮುಕ್ತರಾಗುವುದು ಉತ್ತಮವಾದದ್ದೆಂದು ನನಗೆ ತೋರುತ್ತದೆ. ನಮ್ಮ ಮಕ್ಕಳು ಮರಿಗಳಿಗೆ ಸಣ್ಣತನದಿಂದಲೂ ಧಾರ್ಮಿಕಜ್ಞಾನವನ್ನು ಹುಟ್ಟಿಸುವುದಕ್ಕೆ ಯತ್ನಿಸುವುದರಿಂದ ಬಹಳ ಪ್ರಯೋಜನವುಂಟು. ಅದಕ್ಕಾಗಿ ಮತದ ಸಾಮಾನ್ಯತತ್ವಗಳನ್ನು ಒಳಗೊಂಡಿರುವ ಸಣ್ಣ ಪುಸ್ತಕಗಳನ್ನು ಸುಲಭವಾದ ಭಾಷೆಯಲ್ಲಿ ಬರೆಯಿಸಿ ಅದನ್ನು ಎಲ್ಲ ಪ್ರಾಂತ್ಯದ ವೀರಶೈವರೂ ತಮ್ಮ ಮನೆಗಳಲ್ಲಿ ಮಕ್ಕಳುಗಳಿಗೆ ಹೇಳಿಸಿಕೊಡುವ ಪದ್ಧತಿಯನ್ನು ಹಾಕಬೇಕು. ಹಾಗಾದರೆ ನಮ್ಮ ಮಕ್ಕಳು ಚಿಕ್ಕಂದಿನಿಂದಲೂ ಧರ್ಮಾಭಿಮಾನಿಗಳಾಗಿ ಬೆಳೆಯುವದಕ್ಕೆ ಸಹಾಯವಾಗುವುದು.

ಇನ್ನು ನಮ್ಮ ಜನಗಳ ಪುರೋಭಿವೃದ್ಧಿಗೆ ಅತ್ಯಾವಶ್ಯಕವಾಗಿ ಮಾಡಲ್ಪಡಬೇಕಾದ ವಿದ್ಯಾಸುಧಾರಣೆಯನ್ನು ಕುರಿತ ಪ್ರಸ್ತಾಪಿಸುವೆನು. ಈ ವಿಷಯದಲ್ಲಿ ಮಾಡಬೇಕೆಂಬ ಕರ್ತವ್ಯವೇನೆಂಬುದನ್ನು ಈಗ್ಗೆ ೨೦ ವರ್ಷಗಳ ಹಿಂದೆಯೇ ತಿಳಿದು ಅದಕ್ಕಾಗಿ ಅತ್ಯಂತಶ್ರಮದಿಂದ "ಲಿಂಗಾಯತ ಎಜ್ಯುಕೇಶನಲ್ ಫಂಡನ್ನು" ಸ್ಥಾಪಿಸಿ ಅದರ ಫಲವನ್ನು ಸಮಾಜಬಾಂಧವರೆಲ್ಲರೂ ಆಗಲೇ ಅನುಭವಿಸಿಯೂ ಅನುಭವಿಸುತ್ತಲೂ ಇರುವಂತೆ ಮಾಡಿಕೊಟ್ಟಿರುವ ಕೈ॥ ಗಿಲಗಂಚಿ ಗುರುಸಿದ್ಧಪ್ಪನವರ ಮತ್ತು ರಾ॥ ಬ॥ ರುದ್ರಗೌಡ ಅರಟಾಳರವರ ಪರಮೋಪಕೃತಿಯನ್ನು ಕುರಿತು ಸಮಾಜದವರೆಲ್ಲರ ಪರವಾಗಿ ಅವರುಗಳಿಗೆ ನಾನು ಧನ್ಯವಾದವನ್ನು ಮಾಡಿದಲ್ಲದೆ ಮುಂದಕ್ಕೆ ಬಾಯಿಂದಲಾದರೂ ವಿದ್ಯೆಯ ಪ್ರಯೋಜನವನ್ನು ಕುರಿತು ನಾನು ಹೆಚ್ಚಾಗಿ ಮಾತನಾಡಲು ಯತ್ನಿಸುವುದಿಲ್ಲ. ಎಲ್ಲರೂ ಅದನ್ನು ತಿಳಿದೂ ಕೇಳಿಯೂ ಇರುತ್ತೀರಿ. ಅದಕಾರಣ ನಮ್ಮ ಸಮಾಜದಲ್ಲಿ ಅದರ ಬೆಳವಣಿಗೆಗಾಗಿ ಇನ್ನೂ ಮಾಡಬೇಕಾದ ಪ್ರಯತ್ನಗಳ ವಿಷಯದಲ್ಲಿ ನನಗೆ ತೋರಿದ ಒಂದೆರಡು ಸಂಗತಿಗಳನ್ನು ಮಾತ್ರ ಇಲ್ಲಿ ಹೇಳುತ್ತೇನೆ. ನಾವು ಪ್ರತಿಯೊಂದು ಕುಟುಂಬದಲ್ಲಿಯೂ ಸಣ್ಣ ಮಕ್ಕಳಿಗೆ ತಪ್ಪದೆ ಬಾಲವಿದ್ಯಾಭ್ಯಾಸವನ್ನು ಮಾಡಿಸಿಯೇ ತೀರಬೇಕೆಂಬ ಕಟ್ಟನ್ನು ಪ್ರತಿಜ್ಞಾಪೂರ್ವಕವಾಗಿ ಮಾಡಿಕೊಳ್ಳಬೇಕು. ಬಾಲವಿದ್ಯಾಭ್ಯಾಸವು ಸಾಗಿದ ಬಳಿಕ ಅವರವರ ಉಚಿತ ಬಯಿದ್ದಂತೆ ಇಂಗ್ಲೀಷು ಭಾಷೆಯಲ್ಲಿ ಅಥವಾ ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಪ್ರೌಢವಿದ್ಯಾಭ್ಯಾಸಕ್ಕೆ ತೊಡಗಿಸಬೇಕು. ಮತಗ್ರಂಥಗಳೆಲ್ಲ ಹೆಚ್ಚಾಗಿ ಸಂಸ್ಕೃತ ಭಾಷೆಯಲ್ಲೇ ಇರುವುದರಿಂದ ಅದನ್ನು ತಿಳಿಯುವ ಇಷ್ಟವುಳ್ಳವರೆಲ್ಲರೂ ಆ ಭಾಷೆಯನ್ನನುಸರಿಸಬೇಕು. ನಮ್ಮ ಮತದ ಮಾಹೇಶ್ವರರಾದರೂ ತಪ್ಪದೆ ಸಂಸ್ಕೃತಭಾಷಾಭ್ಯಾಸವನ್ನು ಮಾಡಿ ಶಾಸ್ತ್ರಗಳನ್ನೂ ಮತಗ್ರಂಥಗಳನ್ನೂ ಜ್ಯೋತಿಷ ವೈದ್ಯ ಮೊದಲಾದವುಗಳಿಗೆ ಸಂಬಂಧಪಟ್ಟ ಇತರ ಗ್ರಂಥಗಳನ್ನೂ ಕಲಿತು ಸಮಾಜಕ್ಕೆ ಬೇಕಾದ ಪೌರೋಹಿತ್ಯ ಉಪಾಧ್ಯಾಯತನ ಮೊದಲಾದವುಗಳಿಗೆ ಸಹಾಯಕರಾಗಬೇಕು. ಕಲಾಕೌಶಲ್ಯವನ್ನು ಅರ್ಜಿಸುವುದಕ್ಕೂ ಇತರ ಲೌಕಿಕಜ್ಞಾನದಲ್ಲಿ ಪರಿಪೂರ್ಣರಾಗುವುದಕ್ಕೂ ಈಗಿನ ರಾಜಕೀಯ ಭಾಷೆಯಲ್ಲಿ ಸೌಕರ್ಯವಿರುವ ಕಾರಣ ಅನೇಕರು ಇದರಲ್ಲಿ ತೊಡಗಬೇಕು. ಉಪಪತ್ತಿಯಿರುವ ಜನರು ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕೆ ಶಕ್ತರಾಗಿರುತ್ತಾರೆ. ಬಡವರ ಮಕ್ಕಳಿಗೆ ತಕ್ಕ ಸಹಾಯವನ್ನು ಮಾಡಿ ಓದಿಸುವುದು ಮತದವರೆಲ್ಲರ ಕರ್ತವ್ಯವಾಗಿರುತ್ತದೆ. ಹಿಂದೆ ನಾನು ಉದಹರಿಸಿದ ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಫಂಡಲ್ಲದೆ ಈಚೆಗೆ ರಾ॥ ಸಾ॥ ಶ್ರೀಮಂತವಾರದ ಮಲ್ಲಪ್ಪನವರೇ ಮೊದಲಾದ ಸೊಲ್ಲಾಪುರದ ನಮ್ಮ ಸಮಾಜಬಾಂಧವರು ಕೂಡ ಒಂದು ವಿದ್ಯಾವರ್ಧಕ ಫಂಡನ್ನು ಕೂಡಿಸುವುದಕ್ಕೆ ಯತ್ನಿಸಿ ಆಗಲೇ ಸ್ವಲ್ಪ ಭಾಗವನ್ನು ಸೇರಿಸಿರುತ್ತಾರೆ. ನಮಗೆಲ್ಲ ಪ್ರತ್ಯಕ್ಷಗೋಚರವಾಗಿರುವ ಇವರುಗಳ ಮತಾಭಿಮಾನಾತಿಶಯದಿಂದ ಆ ಫಂಡು ಸ್ವಲ್ಪ ಕಾಲದಲ್ಲೇ ಲಕ್ಷಾವಧಿಯಾಗದೆ ಉಳಿಯಲಾರದೆಂದು ಯೋಚಿಸುತ್ತೇನೆ. ನಮ್ಮ ದೇಶವಲ್ಲಾದರೂ ೨ನೆಯ ಮಹಾಸಭೆಯು ಸೇರಿದ ಈಚೆಗೆ ಒಂದು ಫಂಡು ಕೂಡಿಸಲ್ಪಡುತ್ತಿದೆ. ಕೆಲವು ತೊಂದರೆಗಳಿಂದ ತಕ್ಕಷ್ಟು ದ್ರವ್ಯವು ಕಳೆದ ವರ್ಷ ಆ ಫಂಡಿಗೆ ಕೂಡಿಸಲ್ಪಡುವುದಾಗಲಿಲ್ಲ. ಇನ್ನು ಮೇಲಾದರೂ ಅದು ವೃದ್ಧಿಗೊಳ್ಳಬಹುದೆಂದು ನಿರೀಕ್ಷಿಸುತ್ತೇನೆ. ನಮ್ಮ ಜನರ ವಿದ್ಯಾಪ್ರಸಾರಕ್ಕಾಗಿ ಕೈ॥ ಸಿರಸಂಗಿ ದೇಸಾಯರು ಮಾಡಿಟ್ಟಿರುವ ಮರಣಶಾಸನದ ಮೂಲಕವಾದ ಮಹೋಪಕೃತಿಯನ್ನು ಎಂತು ವರ್ಣಿಸುವುದಕ್ಕೂ ಶಕ್ಯವಲ್ಲ. ಅವರ ಸಂಕಲ್ಪವೆಲ್ಲ ಕಾರ್ಯರೂಪವಾಗಿ ಪರಿಣಮಿಸುತ್ತ ಬಂದನಂತರ ನಮ್ಮ ಮತದ ಉದ್ಧಾರಾರ್ಥವಾಗಿ ೨೦ ನೆಯ ಶತಮಾನದಲ್ಲಿ ಅವತರಿಸಿದ್ದ ಒಬ್ಬ ಮಹಾಶಿವಶರಣರೇ ಅವರೆಂದು ಎಣಿಸಲ್ಪಡತಕ್ಕವರಾಗಿರುತ್ತಾರೆ. ಅವರ ಸ್ಮರಣೆಯು ನಮ್ಮ ಸಮಾಜದವರಿಗೆಲ್ಲ ಮತಾಭಿಮಾನವನ್ನು ಬೋಧಿಸುವ ಮೂಲಮಂತ್ರವೆಂದು ನಾನೆಣಿಸುತ್ತೇನೆ. ಮೇಲೆ ಹೇಳಿದ ಮುಖ್ಯ ಫಂಡುಗಳಲ್ಲದೆ ಬೇರೆ ಬೇರೆ ಪ್ರಾಂತ್ಯಗಳಲ್ಲೂ ಸಣ್ಣ ಪುಟ್ಟ ಫಂಡುಗಳನ್ನು ಅಲ್ಲಲ್ಲಿನ ಮುಂದಾಳುಗಳು ಸ್ಥಾಪಿಸಿ, ಇವೆಲ್ಲವುಗಳ ಸಹಾಯದಿಂದ ನಮ್ಮಲ್ಲಿನ ಅನೇಕ ತರುಣರು ವಿದ್ಯಾಭ್ಯಾಸ ಮಾಡುವಂತೆ ಆಗುವುದಕ್ಕೆ ಇನ್ನೂ ಹೆಚ್ಚು ಪ್ರೋತ್ಸಾಹವನ್ನುಂಟುಮಾಡಿಕೊಡಬೇಕು. ಮತ್ತು ಇಂಗ್ಲೀಷು ವಿದ್ಯಾಭ್ಯಾಸಕ್ಕೆ ತೊಡಗಿದ ತರುಣರೆಲ್ಲ ಸ್ವತಂತ್ರೋದ್ಯೋಗದಿಂದ ಮತದ ಸಂಪತ್ತಿಯನ್ನು ಬೆಳೆಸುವುದಕ್ಕೆ ಸಾಧಕವಾದ ಯಂತ್ರಕಲಾ, ರಸಾಯನಶಾಸ್ತ್ರ, ಶಿಲ್ಪ, ವ್ಯಾಪಾರ ಕೃಷಿ ಮೊದಲಾದವುಗಳ ಜ್ಞಾನವನ್ನು ಸಂಪಾದಿಸುವುದಕ್ಕೆ ಹೆಚ್ಚಾಗಿ ಗಮನ ಕೊಡುತ್ತ ಬರಬೇಕು. ಇವುಗಳಿಂದ ನಮ್ಮ ಸಂಪತ್ತಿಯು ಬೆಳೆಯುವಂತೆ ಬರಿಯ ಸರ್ಕಾರದ ಸಂಬಳ ಒಂದರಿಂದಲೇ ನಮ್ಮ ಸ್ಥಿತಿಯು ಸುಧಾರಿಸಲಾರದೆಂಬುದನ್ನು ಚೆನ್ನಾಗಿ ಮನಸ್ಸಿನಲ್ಲಿಡಬೇಕು. ಸಂಸ್ಕೃತ ವಿದ್ಯಾಭ್ಯಾಸಕ್ಕಂತೂ ಅಲ್ಲಲ್ಲಿಗೆ ಕೆಲವು ಪಾಠಶಾಲೆಗಳು ಧರ್ಮಾಭಿಮಾನಿಗಳಿಂದ ಸ್ಥಾಪಿಸಲ್ಪಟ್ಟು ನಡೆದು ಬರುತ್ತಿವೆ. ಅನುಕೂಲವಿದ್ದ ಕಡೆಯಲ್ಲೆಲ್ಲ ಇನ್ನೂ ಅವುಗಳು ಹೆಚ್ಚುತ್ತ ಬರಬೇಕು. ಅಂಥ ಶಾಲೆಗಳಲ್ಲಿ ಓದಿ ಪ್ರೌಢತರಗತಿಗಳಲ್ಲಿ ಉತ್ತೀರ್ಣರಾಗಿ ಬಂದವರಿಗೆ ಮಹಾಸಭೆಯಲ್ಲಿ ಬಹುಮಾನದ್ರವ್ಯವನ್ನು ಯಥೋಚಿತವಾಗಿ ಕೊಡುತ್ತ ಬಂದರೂ, ಇಂಥ ಸಂಸ್ಕೃತ ಪಂಡಿತರುಗಳನ್ನು ಶಾಲೋಪಾಧ್ಯಾಯರ ಕೆಲಸಕ್ಕೂ ಧರ್ಮಪ್ರಸಾರಕಾರ್ಯಕ್ಕೂ ಮಠಾಧಿಕಾರಗಳಿಗೂ ಪೌರೋಹಿತ್ಯಕ್ಕೂ ಉಪಯೋಗಿಸಿಕೊಳ್ಳುತ್ತ ಬಂದರೂ ಈ ಭಾಷೆಯ ಅಭ್ಯಾಸಕ್ಕೆ ನಾವು ಪ್ರೋತ್ಸಾಹವನ್ನು ಕಲ್ಪಿಸಿದಂತಾಗುವುದು. ಇದುವರೆಗೆ ನಮ್ಮ ಮತದಲ್ಲಿ ಯಾವ ಮಹನೀಯರು ಪ್ರಖ್ಯಾತವಾದ ತಮ್ಮ ಔದಾರ್ಯಗುಣದಿಂದ ಇಂಥ ಸಂಸ್ಕೃತಪಾಠಶಾಲೆಗಳನ್ನು ಸ್ಥಾಪಿಸಿ ನಡೆಯಿಸಿಕೊಂಡು ಬರುತ್ತಿದ್ದಾರೋ 'ಅವರೆಲ್ಲರನ್ನೂ ಕುರಿತು ಮಹಾಸಭೆಯವರು ಅಭಿನಂದನವನ್ನು ಪ್ರದರ್ಶಿಸಬೇಕಲ್ಲದೆ, ವರ್ಷವರ್ಷ ಆ ಪಾಠಶಾಲೆಗಳವರುಗಳಿಂದಲೂ ರಿಪೋರ್ಟುಗಳನ್ನು ಬರಮಾಡಿಕೊಂಡು ಅವುಗಳ ಅಭಿವೃದ್ಧಿಯನ್ನು ಕುರಿತು ಮಹಾಸಭೆಯವರು ಗಮನವಿಡುತ್ತ ಬರಬೇಕೆಂತಲೂ ಕೋರುತ್ತೇನೆ.'

[ಸಶೇಷ]

ಹಿಂದುಸ್ಥಾನದ ಸಾರ್ವಜನಿಕ ಸಮಾಜವು

ಗಲಭೆಯಲ್ಲಿ ಪರಿಣಾಮವಾದದ್ದು
ಬಹು ಅಪೂರ್ವವಾದ ಕಾರ್ಯಗಳು ನಡೆದಿವೆ

ಕಳೆದ ವಾರದ ಸಂಚಿಕೆಯಲ್ಲಿ ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ ಎಂಬ ರಾಷ್ಟ್ರಸಭೆಯು ೨೩ ನೇ ಸಮಾಜವು ಡಿಸೆಂಬರ್ ೨೬, ೨೭, ೨೮ ನೇ ತಾರೀಖುಗಳಲ್ಲಿ ಸೂರತ್ ನಗರದೊಳಗೆ ನಡೆಯುವುದೆಂದು ತಿಳಿಸಿದ್ದೆವಷ್ಟೆ. ಆದರೆ ಈಚೆಗೆ ಈ ಸಭೆಯ ವಿಷಯದಲ್ಲಿ ಆ ನಗರದಿಂದ ಬಂದಿರುವ ತಂತಿವರ್ತಮಾನಗಳು ಆಶ್ಚರ್ಯವನ್ನೂ ಕೆಲವರನ್ನು ಸ್ವಲ್ಪಮಟ್ಟಿಗೆ ವ್ಯಸನವನ್ನೂ ಉಂಟುಮಾಡತಕ್ಕವುಗಳಾಗಿರುತ್ತವೆ.

ಎರಡು ಪಾರ್ಟಿ(ಕಕ್ಷಿ)ಗಳು

ಹೋದ ವರುಷ ಕಲ್ಕತ್ತೆಯಲ್ಲಿ ೨೨ ನೇ ಸಭೆಯು ನಡೆದಾಗ್ಗೆ ಆ ಸಭೆಯಲ್ಲಿ ಬಿಪಿನಚಂದ್ರಪಾಲ್, ತಿಲಕ್, ಮೊದಲಾದ ಕೆಲವು ಮೆಂಬರುಗಳು ವಿರೋಧಿಗಳಾಗಿ ನಿಂತು ಸ್ವರಾಜ್ಯ, ಸ್ವದೇಶಿ, ಪರದೇಶೀ ಬಹಿಷ್ಕಾರ, ಸ್ವತಂತ್ರ ವಿದ್ಯಾನಿಲಯಗಳು, ಈ ನಾಲ್ಕು ವಿಚಾರಗಳನ್ನು ಕುರಿತ ಬಹು ಖಂಡಿತವಾದ ಉಪನ್ಯಾಸಗಳನ್ನು ಮಾಡಿ, ಆ ಸಭೆಯವರೆಲ್ಲಾ ಇವನ್ನು ಒಪ್ಪಿಕೊಳ್ಳಬೇಕೆಂದೂ ಅದರಂತೆ ರೂಢಿಗೆ ತರಬೇಕೆಂದೂ ಹಟಹಿಡಿದರು. ಈ ಕಕ್ಷಿಯವರ ಕುತೂಹಲವು ಸರ್ವಸಮ್ಮತವಾಗಿರಲಿಲ್ಲವಾದ್ದರಿಂದ ಅಲ್ಲಿ ಎರಡು ಪಾರ್ಟಿಗಳು ಏರ್ಪಟ್ಟವು. ಈ ಹೊಸ ಕಕ್ಷಿಯವರಿಗೆ ಅತಿರೇಕಿಗಳು (ಎಕ್ಸ್‌ಟ್ರೀಮಿಸ್ಟ್) ಎಂಬದಾಗಿ ನಾಮಕರಣವಾಯಿತು. ಇವರ ಮತವನ್ನು ಅಂಗೀಕರಿಸದೆ ಹೋದ ಮೆಂಬರುಗಳು ಸಮ ಶಕ್ತರುಗಳು (ಮಾಡರೇಟ್) ಎನ್ನಿಸಿಕೊಂಡಿದ್ದಾರೆ. ಅತಿರೇಕಿಗಳ ಅಭಿಪ್ರಾಯವೇನೆಂದರೆ—(೧) ಈ ರಾಷ್ಟ್ರದಲ್ಲಿ ಇಂಗ್ಲಿಷ್ ಗವರ್ನಮೆಂಟು ಇರಲೇ ಕೂಡದು, ಇಲ್ಲಿನ ಪ್ರಜೆಗಳೇ ರಾಜ್ಯಭಾರವನ್ನು ವಹಿಸಿ ನಡೆಸಿಕೊಳ್ಳುವಂತೆ ಮಾಡಿಕೊಳ್ಳಬೇಕು. (೨) ಸಮಸ್ತ ಪ್ರಜೆಗಳು ಸ್ವದೇಶೀ ವಸ್ತುಗಳನ್ನೇ ಕೊಂಡು ಉಪಯೋಗಿಸಬೇಕು, ಇದಕ್ಕಾಗಿ ಬೇಕಾಗುವ ನಾನಾ ಕಾರ್ಖಾನೆಗಳನ್ನೂ ಕಸಬುದಾರಿಗಳನ್ನೂ ಏರ್ಪಡಿಸಿಕೊಳ್ಳಬೇಕು. (೩) ಅನ್ಯದೇಶಗಳಿಂದ ಬರತಕ್ಕ ಯಾವ ಒಂದು ವಸ್ತುವನ್ನಾಗಲಿ ಎಳ್ಳಷ್ಟಾದರೂ ಯಾರೊಬ್ಬರೂ ಕೊಂಡುಕೊಳ್ಳಲೇ ಕೂಡದು, ಈ ಭಾಗದಲ್ಲಿ ಸಕಲ ಪ್ರಜೆಗಳೂ ಭಾಷೆ ತಟ್ಟಿಕೊಳ್ಳಬೇಕು. (೪) ಇಂಗ್ಲಿಷ್ ಗವರ್ನಮೆಂಟಿನವರು ಈ ರಾಷ್ಟ್ರದಲ್ಲಿ ಸ್ಥಾಪಿಸಿರುವ ಯಾವ ವಿದ್ಯಾಶಾಲೆಗಳಿಗೇ ಆಗಲಿ, ಯಾವ ಮಠಕ್ಕಾಗಲಿ ಈ ರಾಷ್ಟ್ರದ ಪ್ರಜೆಗಳು ತಮ್ಮ ಮಕ್ಕಳನ್ನು ಓದಲಿಕ್ಕೆ ಕಳುಹಿಸಲೇ ಕೂಡದು, ಇಲ್ಲಿನ ಸಕಲ ಪ್ರಜೆಗಳೂ ಏಕವಾಗಿ ತಾವು ತಾವೇ ಸ್ವದೇಶೀ ವಿದ್ಯಾಶಾಲೆಗಳನ್ನೂ ಮಠಗಳನ್ನೂ ಸ್ಥಾಪಿಸಿಕೊಂಡು, ಅವುಗಳಲ್ಲಿ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸುವಂತೆ ಶಪಥ ಮಾಡಿಕೊಳ್ಳಬೇಕಾಗಿದೆ ಎಂಬುದೇ. ಈ ರೀತಿಯಾದ ಅಭಿಪ್ರಾಯಗಳನ್ನಿಟ್ಟುಕೊಂಡಿರತಕ್ಕ ಗುಂಪಿನವರು ಮೇಲ್ಕಂಡ ರಾಷ್ಟ್ರೀಯ ಸಭೆಯ ಮೆಂಬರುಗಳಿಂದ ಪ್ರತ್ಯೇಕಿಸಲ್ಪಟ್ಟಿರುತ್ತಾರೆ. ಸಮ ಕಕ್ಷಿಯವರು ಈ ಅತಿರೇಕಿಗಳ ಅಭಿಮತವನ್ನು ಅನುಮೋದಿಸತಕ್ಕವರಾಗಿಲ್ಲ. ಅವರ ಅಭಿಪ್ರಾಯವೇನೆಂದರೆ—(೧) ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ ಎಂಬ ಸಮಾಜದ ಮೆಂಬರುಗಳು ಹಿಂದೆ ೨೨ ವರುಷಗಳಿಂದಲೂ ಯಾವ ರೀತಿಯಾಗಿ ಸಹನೆಯಿಂದಲೂ, ರಾಜಭಕ್ತಿಪೂರ್ವಕವಾಗಿಯೂ, ಈ ರಾಷ್ಟ್ರದಲ್ಲಿ ಜಾರಿಯಲ್ಲಿರತಕ್ಕ ಕಾನೂನುಗಳಿಗೆ ಸ್ವಲ್ಪವೂ ವಿರೋಧವಾಗದಿರುವಂತೆಯೂ ರಾಜ್ಯಭಾರವಿಚಾರಗಳನ್ನು ಕುರಿತು ಚರ್ಚೆ ಮಾಡಿ ಆಳತಕ್ಕವರಿಗೆ ಸಭೆಯ ತೀರ್ಮಾನಗಳನ್ನು ಅರಿಕೆ ಮಾಡಿಕೊಳ್ಳುತ್ತಾ ಬರಬೇಕು. ಆಸ್ಟ್ರೇಲಿಯಾ, ಕ್ಯಾನಡಾ ಈ ಮೊದಲಾದ ಇಂಗ್ಲಿಷ್ ರಾಜ್ಯಾಂಗಗಳಲ್ಲಿ ಯಾವತರದ ಸ್ವರಾಜ್ಯಾಧಿಕಾರವಿರುತ್ತದೆಯೋ ಹಿಂದುಸ್ಥಾನಕ್ಕೂ ಕಾಲಕ್ರಮದಲ್ಲಿ ಅಂಥಾ ಸ್ವತಂತ್ರಾಧಿಕಾರವೇ ಲಭಿಸುವಂತೆ ಈ ಮಹಾಸಭೆಯವರು ಗುರಿಯಿಟ್ಟುಕೊಂಡು ನ್ಯಾಯವಾದ ಮಾರ್ಗಗಳಲ್ಲಿ ಇಂಗ್ಲಿಷ್ ಗವರ್ನಮೆಂಟಿನವರೊಡನೆ ಚರ್ಚೆ ಮಾಡುತ್ತಾ ಬರಬೇಕು. (೨) ಈ ರಾಷ್ಟ್ರದ ಸಕಲ ಕೋಮುಗಳವರೂ ಈ ವಿಷಯದಲ್ಲಿ ಒಂದೇ ಉದ್ದೇಶವುಳ್ಳವರಾಗಿ ಒಂದೇ ಜನಾಂಗವೆಂತಾಗಬೇಕು. (೩) ಜನರು ತಮ್ಮ ಗೃಹಕೃತ್ಯವಿಷಯಕ್ಕೂ ಕುಲದೇಶಾಭ್ಯುದಯಕ್ಕೂ ಗಮನ ಕೊಡುವಂತೆ ಉತ್ಸಾಹಿಗಳಾಗಬೇಕು. (೪) ಅಜ್ಞರಾಗಿರತಕ್ಕ ಪ್ರಜಾಕೋಟಿಗಳಿಗೆ ವಿದ್ಯೆ ಬುದ್ಧಿಗಳನ್ನು ಕಲಿಸಿ, ಅವರನ್ನು ವಿವೇಕಿಗಳನ್ನಾಗಿಯೂ ನಾಗರಿಕರನ್ನಾಗಿಯೂ ಮಾಡಬೇಕು ಎಂಬುದೇ. ಈ ರೀತಿಯಾದ ಅಭಿಪ್ರಾಯಗಳನ್ನಿಟ್ಟುಕೊಂಡು, ಜಿತಮನಸ್ಸಿನಿಂದಲೂ ಉತ್ಸಾಹಪೂರ್ವಕವಾಗಿಯೂ ಸಾಗಿಸುತ್ತಾ ಬಂದ ಪಕ್ಷದಲ್ಲಿ ಗವರ್ನಮೆಂಟಿನವರು ಈ ಸಹಜಪಕ್ಷದ ಪ್ರಾರ್ಥನೆಗಳನ್ನು ಕ್ರಮಕ್ರಮವಾಗಿ ನೆರವೇರಿಸಿಕೊಡಲು ಸಾಧ್ಯವಾಗುವುದು.

ಸೂರತ್ತಿನಲ್ಲಿ ನಡೆದ ವಿದ್ಯಮಾನಗಳು

ಸೂರತ್ತಿನಲ್ಲಿ ಕಳೆದ ತಾ ೨೬ ನೇ ಗುರುವಾರ ಮಧ್ಯಾಹ್ನ ೨ ಗಂಟೆಗೆ ನವೀನಭವನದಲ್ಲಿ ರಾಷ್ಟ್ರೀಯ ಸಭೆಯು ಪ್ರಾರಂಭವಾಯಿತು. ಅಲ್ಲಿ ಸುಮಾರು ಏಳುಸಾವಿರ ಪ್ರತಿನಿಧಿಗಳೂ ಹಿಂದುಸ್ಥಾನ ದೇಶದವರೂ, ಹಿತೈಷಿಗಳೂ ಹಾಜರಾಗಿದ್ದರು. ಸಭಾನಾಯಕರಾಗುವೇಕಾಗಿ ಸ್ಥಾನವನ್ನೇರಿದ ಡಾ॥ ರಾಷ್‌ಬಿಹಾರಿಘೋಷ್‌ಯವರು ಆ ವೇದಿಕೆಗೆ ಬರುವುದಕ್ಕೆ ಮೊದಲೇ ಬಹುಜನ ಪ್ರತಿನಿಧಿಗಳು ಸಭೆಯಲ್ಲಿ ಕೂತಿದ್ದರು. ಆ ಸಮಯದಲ್ಲಿ ಮೇಲ್ಕಂಡ ವಿರೋಧಪಕ್ಷದ ಮುಖಂಡರಾದ ಮಿ॥ ತಿಲಕ್, ಮಿ॥ ಖಾರೆ ಎಂಬುವರು ಸಭಿಕರನ್ನು ಕುರಿತು ಕ

...ವನ್ನು ವಿವರಿಸಿ ಉಪನ್ಯಾಸ ಮಾಡಿದರು. ಮೇಲ್ಕಂಡ ತನ್ನ ...ವಿಷಯಗಳನ್ನು ಮಹಾಸಭೆಯವರು ಒಪ್ಪದಿದ್ದಲ್ಲಿ ಆ ದಿನದ ...ಮಂಡಲದಿಂದ ತಾವು ಅಡ್ಡಿ ಮಾಡುವುದಾಗಿ ಹೇಳಿದರು. ಈ ಮಾತ್ರ... ಕೆಲವರಿಗೆ ಹಿತವಾಗಿಯೂ, ಬಹು ಮಂದಿಗೆ ಅಹಿತವಾಗಿ ...ಕಂಡಿತು. ಡಾ॥ ರಾಷ್‌ಬಿಹಾರಿಘೋಸ್‌ಯವರು ಬಂದ... ಅವರನ್ನು ವಿಶೇಷ ಸನ್ಮಾನಪೂರ್ವಕ ಜಯಘೋಷಗಳಿಂದ ಕರೆದು ...ಕೊಂಡು ಹೋಗಿ, ಗೌರವಸ್ಥಾನದಲ್ಲಿ ಕುಳ್ಳಿರಿಸಿದರು. ಲಾಲಾ ಲಜಪ... ರಾಯರವರು ಬಂದಾಗ ಅವರನ್ನು ವಿಶೇಷವಾದ ಜಯಘೋಷ... ...ದನೆ ಎದುರುಗೊಂಡು, ಗೌರವಸ್ಥಾನದಲ್ಲಿ ಪಾರ್ಲಿಮೆಂಟ್... ...ರ್ ಡಾ॥ ರದರ್‌ಫರ್ಡ್‌ಯವರಿಗೂ ಮೆ॥ ಸುರೇಂದ್ರನಾಥ ಬ್ಯಾನ... ...ಯವರಿಗೂ ನಡುವೆ ಕೂಡಿಸಿದರು. ಅಜಿತ್ ಸಿಂಗ್‌ಯವರನ್ನೂ ...ಜಯಘೋಷದಿಂದ ಸಭಿಕರು ಎದುರುಗೊಂಡರು. ಸಭೆಯೊಳಗೆ ...ಪ್ಲಾಟ್‌ಫಾರಂ ಎಂಬ ಎತ್ತರವಾದ ಭಾಗದಲ್ಲಿ ಸರ್ ಫೆರೋಸ್ ಷಾ ಮೆಹ... ಮೆ॥ ಗೋಖಲೆ, ಸರ್ ಬಾಲಚಂದ್ರಕೃಷ್ಣ ಎಂಬೀ ಮೊದಲಾದ ...ಮಂಡರು; ಮೆ॥ ವಿಠಲ್‌ದಾಸ್ ದಾಮೋದರ ಥ್ಯಾಕರ್ಸೆ, ಮೆ॥ ...ಬಾಯಿ ನವರೋಜಿ‌ದಾಸ್, ಮೆ॥ ಇಬ್ರಾಹಿಂ ಆದಂಜಿ ಪೀರ್‌ಬಾ... ...ಎಂಬೀ ಮುಂತಾದ ಲಕ್ಷಾಧಿಕಾರಿಗಳಾದ ವರ್ತಕರೂ; ಪ್ರಜಾಪಕ್ಷ... ...ಕರಾಗೆಂಬುವ ಮೆ॥ ಸುರೇಂದ್ರನಾಥ ಬ್ಯಾನರ್ಜಿ, ಮೆ॥ ...ದ್ರನಾಥ ಬೋಸ್, ಲಾಲಾ ಹರಿಕಿಶನ್‌ಲಾಲ್, ಲಾಲಾ ಲಜಪತ್ ...ಮೆ॥ ಕೃಷ್ಣಸ್ವಾಮಿ ಐಯರ್, ದಿವಾನ್‌ಬಹದ್ದೂರ್ ಎಲ್. ಎ. ...ಗೋವಿಂದರಾಘವ ಐಯ್ಯರ್, ಮೆ॥ ಎನ್. ಸುಬ್ಬರಾವ್, ಮೆ॥ ತಿಲಕ್, ...ಖಾಪರ್ಡೆ ಎಂಬೀ ಮೊದಲಾದವರೂ ಕುಳಿತಿದ್ದರು.

ಸಭೆಯ ಆರಂಭವು

...ರೆಸೆಪ್ಷನ್ ಕಮಿಟಿಯ ಪ್ರೆಸಿಡೆಂಟ್ ಮೆ॥ ತ್ರಿಭುವನದಾಸ್ ಮಾ... ...ರವರು ಮುಂದೆ ಬಂದು, ಸಮಸ್ತ ಪ್ರತಿನಿಧಿಗಳಿಗೂ ಸುಸ್ವಾಗತವನ್ನು ...ಬಯಸಿ, ಒಂದು ಅಡ್ರೆಸ್ಸನ್ನು ಓದಿದರು. ಸೂರತ್ ಪಟ್ಟಣವು ...ಕಾಲದಲ್ಲಿ ಎಷ್ಟು ಉಚ್ಛ್ರಾಯಸ್ಥಿತಿಯಲ್ಲಿತ್ತೋ, ಈಚೆಗೆ ...ಯಾಯ ನಗರವು ಪಾಶ್ಚಾತ್ಯರಿಗೆ ಬಂದ ಮೇಲೆ ಆ ಪಟ್ಟಣವು ಹ್ಯಾಗೆ ...ಬಿದ್ದಿತೋ, ದೇಶಾಭಿವೃದ್ಧಿಯನ್ನು ಬಯಸಿ ಸ್ಥಾಪಿಸಲ್ಪಟ್ಟರು ...ಕಾಂಗ್ರೆಸ್ ಮಹಾಸಭೆಯು ೨೨ ವರುಷಗಳಿಂದಲೂ ನಡೆಸಿರುವ ...ರ್ಯಗಳು ಎಷ್ಟರಮಟ್ಟಿಗೆ ಸಾರ್ಥಕವಾಗಿರುವವೋ, ಈ ವಿಚಾರ... ...ಷ್ಟು ನಿವಿಸ್ತಾರವಾಗಿಯೂ ಸ್ವಾತಂತ್ರ್ಯವಾಗಿಯೂ ವಿವರಿಸಿ, ...ಗಳನ್ನು ಮುಂದೆ ಸ್ವರಾಜ್ಯಭಾವವೆಂದಲೂ, ತಾಳ್ಮೆಯಿಂದ ...ರಾಜಭಕ್ತಿ ಪೂರ್ವಕವಾಗಿಯೂ, ಜಿತಮನಸ್ಸಿನಿಂದಲೂ, ಏಕವಾ... ...ಕ್ಯದಿಂದಲೂ ಈ ಮಹಾಸಭೆಯು ಕಾರ್ಯಗಳನ್ನು ನಡೆಸುತ್ತಾ ...ರುವುದೆಂದು ನಿರೀಕ್ಷಿಸುತ್ತೇನೆ" ಎಂದು ಹೇಳುವಷ್ಟರಲ್ಲೇ ಸಭೆಯಲ್ಲಿ ...ಮೇಲ್ಕಂಡ ಅತಿರೇಕಪಕ್ಷದ ಎಡ ಎಡ ಕಕ್ಷಿಯವರು "ಕೂಡದು," "ಕೂಡದು" ಎಂದು ಕೂಗುತ್ತಾ ಬಂದರು.

ಸಭೆಯಲ್ಲಿ ಗಲಭೆಯುಂಟಾಯಿತು.

...ರಾಯ ದಿವಾನ್‌ಬಹದ್ದೂರ್ ಅಂಬಾಲಾಲ್ ಸಕರ್‌ಲಾಲ್ ...ದೇಸಾಯಿಯವರು ಎದ್ದು ಬಂದು, ಘನವನ್ನೈದಿದ ಡಾ॥ ರಾಷ್ ಬಿ... ...ಘೋಸ್‌ಯವರನ್ನು ಆ ಮಹಾ ಸಭೆಯ ಪ್ರೆಸಿಡೆಂಟರನ್ನಾಗಿ ...ಮಿಸಬೇಕೆಂದು ಸೂಚಿಸಿ, ಅವರ ಗುಣಕಥನವನ್ನು ಮಾಡಿದರು. ...ಕ್ಕೆ ಆ ಎದುರು ಕಕ್ಷಿಯವರು "ಕೂಡದು," "ಕೂಡದು" ...ಎಂದು ಕೂಗಿಕೊಂಡರು. ಮೆ॥ ಸುರೇಂದ್ರನಾಥ ಬ್ಯಾನರ್ಜಿಯವರು ...ಮೆ॥ ದೇಸಾಯಿಯವರ ಸೂಚನೆಯನ್ನು ಪುಷ್ಟೀಕರಿಸಿ, ಡಾ॥ ...ಘೋಸ್‌ಯವರಿಗೆ ಸಭಾನಾಯಕತ್ವವನ್ನು ವಹಿಸಬೇಕೆಂದು ಉಪನ್ಯಾ... ...ಸ ತೊಡಗಿದರು. ಇವರ ಘಂಟಾಘೋಷವಾದ ಕಂಠಸ್ವರವೂ ಆ ...ಧಾರವಾದ ಪಾರ್ಲಿಮೆಂಟ್ ಸಭೆಯಲ್ಲುಂಟಾಗಿದ್ದ ಗಲಭೆಯನ್ನು ...ಮಿಸುತ್ತವೆ ಎಂದು ಎಲ್ಲರೂ ನಿರೀಕ್ಷಿಸಿ ನೋಡುತ್ತಿರುವಲ್ಲಿ ಅವರ ...ಬಾಯಿಂದ ಒಂದೆರಡು ಮಾತುಗಳು ಹೊರಟ ಕೂಡಲೇ ಎದುರು ಕಕ್ಷಿ... ...ಯವರು ಬಹು ಘಟ್ಟಿಯಾಗಿ ಕೂಗುತ್ತಾ ಅವರನ್ನು ಮುಂದರಿಸಗೊ... ...ಡದೆ ಹೋದರು. ಮೆ॥ ಸುರೇಂದ್ರನಾಥ ಬ್ಯಾನರ್ಜಿಯವರು ನಾಲ್ಕಾವರ್ತಿ ...ಉಪನ್ಯಾಸ ಮಾಡಬೇಕೆಂದು ಪ್ರಯತ್ನಪಟ್ಟರು. ನಾಲ್ಕು ವೇಳೆಯೂ ...ಅತಿರೇಕಪಕ್ಷದವರು ಅವರಿಗೆ ಅವಕಾಶವನ್ನೇ ಕೊಡಲಿಲ್ಲ. ಮದ... ...ಸ್ ಮತ್ತು ಮಧ್ಯಪ್ರಾಂತ್ಯಗಳ ಕಡೆಯ ಪ್ರತಿನಿಧಿಗಳು ತುಂಬಾ ಗಲ... ...ಮಾಡಿ, ಆ ದಿನದ ಸಭೆಯನ್ನು ನಿಲ್ಲಿಸಬೇಕೆಂದೂ, ಆ ಸಭೆಗೆ ಡಾ॥ ...ಷ್ ಬಿಹಾರಿಘೋಸ್ ಯವರನ್ನು ನಾಯಕರನ್ನಾಗಿ ನೇಮಿಸಲೇ ...ಕೂಡದೆಂತಲೂ ಹಟ ಹಿಡಿದು ಕೂಗಾಡುತ್ತಾ ಅಡ್ಡಿ ಮಾಡಿದರು. ...ಲ್ಲದೆ ಮೆ॥ ತಿಲಕರನ್ನು, ಲಾಲಾ ಲಜಪತ್ ರಾಯರನ್ನು ಮುಂದೆ ...ಬಂದು ಉಪನ್ಯಾಸ ಮಾಡಬೇಕೆಂದೂ, ಮೆ॥ ಸುರೇಂದ್ರನಾಥರ ಉಪ... ...ನ್ಯಾಸವನ್ನು ಕೇಳುವುದೇ ಇಲ್ಲವೆಂದೂ ಕೂಗಿಕೊಂಡರು. ಹೀಗೆ ಆ ...ಕಡೆ ಕುಳಿತಿದ್ದವರೆಲ್ಲಾ ಒಟ್ಟು ಸುಮಾರು ೩೦೦ ಮಂದಿ ಇದ್ದರು. ಸಭ್ಯ ...ಪಕ್ಷ ಸಭೆ ನಡೆಯಲು ಏನು ಮಾಡಿದರೂ ಸಾಧ್ಯವಾಗಲಿಲ್ಲ. ಆಗ ...ರಿಸೆಪ್ಷನ್ ಕಮಿಟಿಯ ಪ್ರೆಸಿಡೆಂಟರು ಎದ್ದು ನಿಂತು ಮೇಲ್ಕಂಡ ...ಪಕ್ಷದವರನ್ನು ಕುರಿತು ಅವರು ಮೌನವಾಗಿಯೂ ಮಾನವಾ... ...ಗಿಯೂ ಇರದಿದ್ದರೆ ಆ ದಿನದ ಸಭೆಯನ್ನು ಅಲ್ಲಿಗೇ ಬೈದು ಮಾಡ... ...ಬೇಕಾಗುತ್ತದೆ ಎಂದು ಕೂಗಿ ಹೇಳಿದರು. ಅದರೇನು? ಅವರ ಮಾ... ...ತು ಯಾರ ಕಿವಿಗೂ ಬೀಳಲೇ ಇಲ್ಲ. ಆಗಲೂ ಮೆ॥ ಸುರೇಂದ್ರನಾಥ... ...ಯವರು ಎದ್ದು ಮಾತನಾಡಬೇಕೆಂದು ಪ್ರಯತ್ನಪಟ್ಟರು. ...ವಾಗಲಿಲ್ಲ. ಪ್ಲಾಟ್‌ಫಾರಂ ಎಂಬ ಅಗ್ರಪೀಠದ ಮೇಲೆ ಕುಳಿತಿ... ...ಕಾಂಗ್ರೆಸ್ ಸಭಾಮುಖಂಡರು ಮೆ॥ ತಿಲಕರನ್ನು, ಮೆ॥ ಖಾಪರ್... ...ಡೆಯವರನ್ನು ಕರೆದು ಅವರ ಕೂಡ ಸ್ವಲ್ಪ ಹೊತ್ತು ಮಾತನಾಡಿದ ...ರು. ಅದರಿಂದಲೂ ಏನೂ ಪ್ರಯೋಜನವಾಗಲಿಲ್ಲ. ವಿರೋಧಪಕ್ಷದ ...ಗಲಭೆಯು ಕೊನೆಗಾಣದೆ ಹೋದದ್ದನ್ನು ಮೆ॥ ತ್ರಿಭುವನದಾಸ್ ...ರವರು ನೋಡಿ, ಯತ್ನವಿಲ್ಲದೆ ಆ ದಿನದ ಸಭೆಯನ್ನು ಅಲ್ಲಿಗೇ ...ಬೈದು ಮಾಡಿದೆ ಎಂದು ಕೂಗಿ ಹೇಳಿ ಬಿಟ್ಟರು. ಆಗ ಎರಡು ಪಕ್ಷದವರೂ ಒಬ್ಬರು ಮತ್ತೊಬ್ಬರನ್ನು "ಅವಮಾನ" ಎಂದು ಕೂಗುತ್ತಾ, ಸಭಾಮಂದಿರವನ್ನು ಬಿಟ್ಟು ತೆರಳಿದರು.

ಮುಂದಿನ ಕಾರ್ಯವು.

ಅನಂತರ ಸಭಾ ಪಕ್ಷದ ಮೆಂಬರುಗಳಲ್ಲಿ ನೂರಾರು ಮಂದಿಯು ಆನಳ ಘನವನ್ನೈದಿದ ಡಾ॥ ರಾಷ್ ಬಿಹಾರಿ ಘೋಸ್ ಯವರ ಬಿಡಾರದಲ್ಲಿ ಸಭೆ ಸೇರಿ, ಸುಮಾರು ನಾಲ್ಕು ಗಂಟೆಗಳ ಹೊತ್ತು ಮುಂದಿನ ಕಾರ್ಯವನ್ನು ಕುರಿತು ಚರ್ಚೆ ಮಾಡಿದರು. ಕಡೆಗೆ ಕಾಂಗ್ರೆಸ್ ಮಹಾಸಭೆಯ ಮುಖಂಡರಾದವರ ಪೈಕಿ ಇಪ್ಪತ್ತು ಮಂದಿ ರುಜು ಮಾಡಿ, ನಾಳೆಯಾದರೂ ಸಮಾಜವನ್ನು ಸಮಾಧಾನವಾಗಿ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಒಂದು ವಿಜ್ಞಾಪನೆಯನ್ನು ಬರೆದು, ಸಮಸ್ತ ಮೆಂಬರುಗಳಿಗೂ ತಿಳಿಸಿದರು. ಇದಲ್ಲದೆ ಆ ದಿನ ಮಧ್ಯಾಹ್ನ ಅದಂತೆಯೇ ಸಭೆಗೆ ಅಡಚಣೆಯುಂಟಾಗುವ ಪಕ್ಷದಲ್ಲಿ ಈ ಪರಿಷದ ಸಮಾಜವನ್ನೇ ನಿಲ್ಲಿಸಿಬಿಡಬೇಕಾಗುತ್ತೆಂಬುವುದನ್ನೂ ಎಲ್ಲರಿಗೂ ತಿಳಿಸಿದರು.

೨ನೇ ದಿನದ ಸಮಾಜವು.

ತಾ. ೨೭ನೆ ಶುಕ್ರವಾರ ಬೆಳಿಗ್ಗೆ ಮದರಾಸ್ ಮೆಂಬರುಗಳೆಲ್ಲಾ ಮೆ॥ ಎನ್. ಸುಬ್ಬರಾಯರನ್ನು ಪ್ರೆಸಿಡೆಂಟರಾಗಿ ನೇಮಿಸಿಕೊಂಡು ಒಂದು ಸಭೆಯನ್ನು ನಡಿಸಿ, ನೆನ್ನೆ ದಿನ ಮಹಾಸಭೆಯಲ್ಲಿ ಮದರಾಸ್ ಮೆಂಬರುಗಳು ಗಲಭೆಯೆಬ್ಬಿಸಿದ ವಿಷಯದಲ್ಲಿ ತುಂಬಾ ವಿಷಾದಪಡುತ್ತೇವೆಂತಲೂ, ಈ ದಿನದ ಸಭೆಯಲ್ಲಿ ಅಂಥಾ ಅಡಚಣೆಗಳನ್ನು ಕಲ್ಪಿಸುವುದಿಲ್ಲವೆಂತಲೂ, ಗಲಭೆ ಮಾಡಿದವರನ್ನು ಸಭಾಮಂದಿರದಿಂದ ಹೊರಡಿಸಿಬಿಡುತ್ತೇವೆಂತಲೂ ಗೊತ್ತುಮಾಡಿಕೊಂಡರು. ಈ ತೀರ್ಮಾನಕ್ಕೆ ೯೦ ಮಂದಿ ಸಮ್ಮತಿ ಹಾಕಿದರು. ಒಬ್ಬ ಮೆಂಬರು ಮಧ್ಯವರ್ತಿಯಾದನು. ಮೂವರು ಮಂದಿ ವಿರೋಧಪಕ್ಷದವರು ಸಭೆಯನ್ನು ಬಿಟ್ಟು ಹೊರಟುಹೋದರು.

ಅತ್ತಲಾಗಿ ಲಾಲಾ ಲಜಪತ್ ರಾಯರು ತುಂಬಾ ಆಸಕ್ತಪಟ್ಟು, ಮೆ॥ ತಿಲಕರನ್ನು ಕಂಡು ಸಮಾಧಾನ ಪಡಿಸಬೇಕೆಂದು ಪ್ರಯತ್ನ ಮಾಡಿದರು. ಆಗ ಮೆ॥ ತಿಲಕರು ಮಹಾ ಸಭೆಯಲ್ಲಿ ಮತ್ತೆ ಗಲಭೆ ಮಾಡಿಸುವುದಿಲ್ಲವೆಂದು ಒಪ್ಪಿಕೊಂಡಂತೆ ಕಾಣುತ್ತದೆ. ಕಾಂಗ್ರೆಸ್ ಕ್ಯಾಂಪಿನಲ್ಲೆಲ್ಲಾ ಸಭ್ಯಪಕ್ಷದ ಮೆಂಬರುಗಳ ಸಂಖ್ಯೆಯೇ ಬಹಳ ಹೆಚ್ಚಾಗಿದೆ. ಇವರು ಆ ಪ್ರತಿಪಕ್ಷದ ಮೆಂಬರುಗಳನ್ನು ಬಹಳವಾಗಿ ಹೀಯಾಳಿಸುತ್ತಾ ಬಂದರು.

ಮಹಾಸಭೆಗೆ ಅಡಚಣೆ.

ಮೆ॥ ತಿಲಕರು ಮತ್ತೆ ಹಟಸಾಧಿಸುವುದು.

ಸಭ್ಯ ಮೆಂಬರುಗಳನ್ನು ಹೊಡೆಯಲಾರಂಭಿಸಿದ್ದು

ತಾ. ೨೭ನೇ ಶುಕ್ರವಾರ ಮಧ್ಯಾಹ್ನ ೧ ಘಂಟೆಗೆ ಕಾಂಗ್ರೆಸ್ ಮಹಾ ಸಭೆಯು ಸಭಾಮಂದಿರದಲ್ಲಿ ಕೂಡಿತು. ಘನವನ್ನೈದಿದ ಡಾ॥ ರಾಷ್ ಬಿಹಾರಿ ಘೋಸ್ ಯವರನ್ನು ಪ್ರೆಸಿಡೆಂಟರನ್ನಾಗಿ ಸರ್ವರೂ ಒಪ್ಪಿ ನೇಮಿಸಿಕೊಂಡರು. ಡಾ॥ ಘೋಷ್‌ಯವರು ಅಗ್ರಾಸನವನ್ನು ವಹಿಸಿ, ತಮ್ಮ ಉಪನ್ಯಾಸವನ್ನು ಪ್ರಾರಂಭಿಸಿ ಸ್ವಲ್ಪ ದೂರಮಾತನಾಡುವಷ್ಟರೊಳಗಾಗಿ ಮೆ॥ ತಿಲಕರು ಮುಂದೆ ಬಂದು ಪ್ಲಾಟ್‌ಫಾರವಿನ ಮೇಲೆ ನಿಂತುಕೊಂಡು ಮಾತನಾಡಲಪೇಕ್ಷಿಸಿದರು. ಸಭಿಕರ್‍ಯಾರೂ ಅವರ ಮಾತನ್ನು ಕೇಳಿಕ್ಕವರಾಗಿರಲಿಲ್ಲ. ಎಲ್ಲರೂ ಅವರನ್ನು ನೋಡಿ "ಅವಮಾನ" ಎಂದು ಕೂಗಿ ಹೀಯಾಳಿಸಿದರು. ಗಲಭೆಗೆ ಪ್ರಾರಂಭವಾಯಿತು. ಪಾರ್ಲಿಮೆಂಟ್ ಮೆಂಬರ್ ಡಾ॥ ರದರ್‌ಫರ್ಡ್ ಮೊದಲುಗೊಂಡು ಕಾಂಗ್ರೆಸ್ ಮುಖಂಡರೆಲ್ಲಾ ಎಷ್ಟೋ ಬಗೆಯಿಂದ ಅವರಿಗೆ ಸಮಾಧಾನ ಹೇಳಿದರೂ ಮೆ॥ ತಿಲಕರು ಲಕ್ಷ್ಯ ಮಾಡದೆ, ಪ್ಲಾಟ್‌ಫಾರಂ ಇಳಿದು ಹೋಗುವುದಿಲ್ಲವೆಂದು ನಿಂತುಕೊಂಡರು. ಡಾ॥ ರಾಷ್ ಬಿಹಾರಿಘೋಸ್ ಯವರು ತಮ್ಮ ಅಡ್ರೆಸ್ಸನ್ನು ಮುಂದರಿಸಿ ಹೇಳಲಾರಂಭಿಸಿದರು. ಮೆ॥ ತಿಲಕರಾದರೋ ತಮ್ಮ ಹಿಂಬಾಲಕರನ್ನು ಕರೆದರು. ಅವರೆಲ್ಲಾ ಉತ್ಸಾಹಶೀಲರಾಗಿ ಪ್ಲಾಟ್‌ಫಾರವಿನ ಕಡೆ ನುಗ್ಗಿ ಹೋಗಿ ಅದರ ಮೇಲೆ ಕುಳಿತಿದ್ದವರನ್ನು ದೊಣ್ಣೆಗಳಿಂದ ಹೊಡೆಯುತ್ತಾ ಬಂದರು. ಕಾಂಗ್ರೆಸ್ ಮುಖಂಡರು ಏಟು ತಪ್ಪಿಸಿಕೊಂಡು ಹಿಂದಿನ ಬಾಗಲಿನಿಂದ ಹೊರಟು ಹೋದರು. ಸಭಾಮಂದಿರದಲ್ಲಿದ್ದ ಸಭ್ಯ ಮೆಂಬರುಗಳೆಲ್ಲಾ ಮೆ॥ ತಿಲಕರನ್ನು ಅಲ್ಲಗಳೆದರು. ವಿರೋಧಪಕ್ಷದವರಾದರೋ ಮೆ॥ ತಿಲಕರನ್ನು ಪ್ಲಾಟ್‌ಫಾರವಿನಿಂದ ಇಳಿಯಗೊಡಲಿಲ್ಲ. ಮೆ॥ ತಿಲಕರು ಎದೆಯ ಮೇಲೆ ಕೈಕಟ್ಟಿಕೊಂಡು ಕಣ್ಣು ಕೆಂಪಗೆ ಮಾಡಿಕೊಂಡು ಅತ್ಯಾಗ್ರಹಯುಕ್ತರಾಗಿ ಅಲ್ಲೇ ನಿಂತು, ಉಪನ್ಯಾಸ ಮಾಡಿದಲ್ಲದೆ ಇಳಿಯುವುದಿಲ್ಲವೆಂದು ಹೇಳಿದರು. ಒಬ್ಬ ಗುಜರಾತಿ ಮೆಂಬರು ತುಂಬಾ ಕೋಪಯುಕ್ತನಾಗಿ ಮೆ॥ ತಿಲಕರನ್ನು ಹೊಡೆಯುವುದಕ್ಕೆ ಹೋದನು. ಮೆ॥ ಗೋಖಲೆಯವರೇ ಮುಂತಾದವರು ಆ ಗುಜರಾತಿಯವನ ಕೈ ಹಿಡಿದು ತಡೆದರು. ಇಷ್ಟರೊಳಗೆ ಸಭಾಮಂದಿರದಲ್ಲೆಲ್ಲಾ ಗಲಭೆಯೂ ವಾಗ್ವಾದಗಳೂ ಹೆಚ್ಚಿ ಬಹಳ ದೊಂಬಿಯಾಯಿತು. ದಖನಿ ಮರಾಟೆಯವರು ನಿಂತಿದ್ದ ದೊಣ್ಣೆಗಳನ್ನು ಎತ್ತಿ ಪಟ್ಟುವರಿಸೆ ಮಾಡಿದರು. ಡಾ॥ ರಾಷ್ ಬಿಹಾರಿಘೋಸ್ ಯವರು ಇನ್ನಾದರೂ ಈ ದೊಂಬಿ ನಿಂತೀತೇನೋ ಎಂದು ತಮ್ಮ ಅಡ್ರೆಸ್ಸನ್ನು ಮುಂದರಿಸಿ ಓದಿದರು. ಮೆ॥ ತಿಲಕರೂ ಉಪನ್ಯಾಸ ಮಾಡತೊಡಗಿದ್ದರಿಂದ ಇಬ್ಬರ ಶಬ್ದಗಳೂ ಸಭಿಕರಿಗೆ ಕೇಳಿ ಬರಲಿಲ್ಲ. ಎರಡು ಕಕ್ಷಿಗಳವರೂ ಒಬ್ಬರನ್ನೊಬ್ಬರು "ನಾಚಿಕೆ," "ನಾಚಿಕೆ" ಎಂದು ಕೂಗುತ್ತಲೂ, ಒಬ್ಬರನ್ನೊಬ್ಬರು ಹೀಯಾಳಿಸುತ್ತಾಲೂ ಬಂದರು.

ಮಹಾಸಭೆಯು ನಿಲ್ಲಿಸಲ್ಪಟ್ಟಿತು.

ಆಗ ಡಾ॥ ರಾಷ್ ಬಿಹಾರಿ ಘೋಸ್‌ಯವರು ಮುಂದಿನ ಕೆಲಸಗಳನ್ನು ನಡಿಸುವುದು ಅಸಾಧ್ಯವೆಂದು ತಿಳಿದು "ಇಲ್ಲಿಗೆ ಈ ದಿನದ ಸಭೆಯನ್ನು ಬರಖಾಸ್ತು ಮಾಡಿದೆ" ಎಂದು ಕೂಗಿ ಹೇಳಿ ನಿಲ್ಲಿಸಿಬಿಟ್ಟರು.

ಮುಖಂಡರ ಮೇಲೆ ಜೋಡು ಹಾಕಿದ್ದು

ಅದೇ ಸಮಯದಲ್ಲಿ ದಖನಿ ಮೆಂಬರುಗಳು ಕುಳಿತಿದ್ದ ಭಾಗದಿಂದ ಒಂದು ಜೋಡು ಎಸೆಯಲ್ಪಟ್ಟಿತು. ಅದು ಸರ್ ಫೆರೋಸ್‌ಷಾ ಮೆಹತಾಯವರನ್ನು ಸವರಿಕೊಂಡು ಹೋಗಿ, ಅವರ ಬಳಿ ಕುಳಿತಿದ್ದ ಮೆ॥ ಸುರೇಂದ್ರನಾಥ ಬ್ಯಾನರ್ಜಿಯವರ ಕೆನ್ನೆಯ ಮೇಲೆ ಬಿದ್ದಿತು.

ಹೊಡೆದಾಟ ಬಡಿದಾಟಗಳು.

ಇದೇ ಹೊಡೆದಾಟಕ್ಕೆ ಪ್ರಾರಂಭಸೂಚನೆಯಾಯಿತು. ಮುಖ್ಯಸ್ಥರೆಲ್ಲಾ ಹಿಮ್ಮೆಟ್ಟಿ ಹೊರಟುಹೋದರು. ಅವರು ಹೋಗುವುದನ್ನು ನೋಡಿ, ರೋಷಾವೇಶಪರವಶರಾಗಿದ್ದ ಮರಾಟೆಯವರು ಮೆ॥ ತಿಲಕರ ಸಂಗಡ ನುಗ್ಗಿ, ದೊಣ್ಣೆಗಳಿಂದ ಅವರನ್ನೆಲ್ಲಾ ಬಹು ಕಠಿಣವಾಗಿ ಹೊಡೆದರು. ಪ್ಲಾಟ್‌ಫಾರವಿನ ಮೇಲೆ ಗುಜರಾತಿಯವರಿಗೂ ಮರಾಟೆಯವರಿಗೂ ಹೊಡೆದಾಟಬಿದ್ದಿತು. ಡಾ॥ ರಾಷ್‌ಬಿಹಾರಿಘೋಸ್‌ಯವರಿಗೆ ಎಡಗೈಮೇಲೆ ಏಟುಬಿದ್ದಿತು. ಮೆ॥ ಗೋಖಲೆಯವರಿಗೆ ತಲೆಯ ಮೇಲಿದ್ದ ದೊಡ್ಡ ರುಮಾಲು ಅವರಿಗೆ ಬಿದ್ದ ಏಟನ್ನು ತಡೆದುಕೊಂಡಿತು. ಮೆ॥ ತಿಲಕರಿಗೆ ಅಪಾಯವೇನೂ ಆಗಲಿಲ್ಲ. ಅವರ ಕಡೆಯವರು ಸೇರಿ ಅವರನ್ನು ಹೊರಕ್ಕೆ ಸಾಗಿಸಿಕೊಂಡುಹೋದರು. ಆದರೂ ಪ್ಲಾಟ್‌ಫಾರವಿನ ಸುತ್ತಲೂ ಜಗಳ ಹೊಡೆದಾಟಗಳು ನಿಲ್ಲಲಿಲ್ಲ. ಸಭಾ ಮಂದಿರದಲ್ಲಾದರೋ ಮೆಂಬರುಗಳು ತಂಡ ತಂಡವಾಗಿ ನಿಂತು ಬೈದು ಸುತ್ತಲೂ ಕೈ ಕೈ ಮಿಲಾಯಿಸಿ ಜಗಳವಾಡುತ್ತಲೂ ಇದ್ದರು. ಟೈಂಸ್ ಆಫ್ ಇಂಡಿಯಾ ಎಂಬ ಬೊಂಬಾಯಿ ವರ್ತಮಾನಪತ್ರಿಕೆಯ ಬಾತ್ಮಿದಾರನಾದ ಮೆ॥ ಪಿಯರ್ಸ್ ಎಂಬಾತನನ್ನು ಕೆಡಿಸಿ ಕೆಲವು ಏಟು ಹೊಡೆದರು. ಆದರೆ ಆತನಿಗೆ ವಿಶೇಷಗಾಯಗಳೇನೂ ಆಗಲಿಲ್ಲ. ಈ ಜಗಳ ಹೊಡೆದಾಟದಲ್ಲಿ ಮೆಂಬರುಗಳು ಕುರ್ಚಿಗಳನ್ನೇ ಹಿಡಿದು ಎದುರು ಕಕ್ಷಿಯವರನ್ನು ಹೊಡೆಯುತ್ತಾ ಬಂದರು. ಸಭಾ ಮಂದಿರದ ಸಾಮಾನುಗಳು ಮುರಿದು ಚೂರಾದವು. ಪ್ಲಾಟ್‌ಫಾರಮು ಮುರಿದು ಹೋಯಿತು. ಈ ರೀತಿ ಸುಮಾರು ೨೦ ನಿಮಿಷಗಳವರೆಗೆ ಜಗಳ ಹೊಡೆದಾಟ ನಡೆಯುವಷ್ಟರಲ್ಲಿ ಪೋಲೀಸಿನವರು ಹಾಜರಾದರು.

ಪೋಲೀಸಿನವರ ಪ್ರವೇಶವು

ಇನ್ಸ್‌ಪೆಕ್ಟರ್ ರಾಯಿಸಿಂಗ್‌ಜಿಯವರು ೬೦ ಮಂದಿ ಪೋಲೀಸಿನವರನ್ನು ಕರೆದುಕೊಂಡು ಸಭಾಮಂದಿರವನ್ನು ನುಗ್ಗಿ, ದೊಂಬಿ ಮಾಡುತ್ತಿದ್ದವರನ್ನು ಚದರಿಸಿ, ಪ್ಲಾಟ್‌ಫಾರಂ ಹತ್ತಿ ನಿಂತುಕೊಂಡು "ಕಾಂಗ್ರೆಸ್ ಸಭೆಯು ಈ ದಿನ ನಡೆಯುವುದಿಲ್ಲ. ಈ ಸಭಾಮಂದಿರವು ಈಗ ಪೋಲೀಸಿನವರ ಸ್ವಾಧೀನದಲ್ಲಿರುತ್ತದೆ. ಆದ್ದರಿಂದ ಎಲ್ಲರೂ ಇನ್ನು ೩೦ ನಿಮಿಷದೊಳಗೆ ಹೊರಟು ಹೋಗಬೇಕು. ಇದ್ದದಿದ್ದರೆ ಪೋಲೀಸಿನವರ ಮೂಲಕ ಬಲಾತ್ಕಾರವಾಗಿ ತಳ್ಳಿಸಿಬಿಡುತ್ತೇವೆ" ಎಂದು ಹೇಳಿದರು. ಕೆಲವು ದಖನಿ ಮೆಂಬರುಗಳು ಪೋಲೀಸಿನವರ ಸಂಗಡ ವಾಗ್ವಾದ ಮಾಡಲಾರಂಭಿಸಿದಾಗ ಪೋಲೀಸಿನವರು ಅವರನ್ನೆಲ್ಲಾ ಹೊರಕ್ಕೆ ದೊಬ್ಬಿ ಬಿಟ್ಟರು. ಕೆಲವು ನಿಮಿಷಗಳೊಳಗೆ ಸಭಾ ಮಂದಿರವು ಬರಿದಾಯಿತು. ಆದರೆ ಹೊರಗಡೆ ಇನ್ನೂ ಜನಗಳ ಗುಂಪುಗಳು ನಡೆಯುತ್ತಲೇ ಇದ್ದವು. ಅಲ್ಲಿಗೂ ಪೋಲೀಸಿನವರು ಹೋಗಿ, ಮೆಂಬರುಗಳನ್ನೆಲ್ಲಾ ಅವರವರ ಬಿಡಾರಗಳಿಗೆ ಹೊರಟುಹೋಗುವಂತೆ ಮಾಡಿದರು.

ಮುಖಂಡರುಗಳ ವಿಚಾರವು

ಕಾಂಗ್ರೆಸ್ ಸಭೆಯ ಮುಖ್ಯಮೆಂಬರುಗಳೆಲ್ಲಾ ಹೋಗಿ ಸರ್ ಫೆರೋಸ್‌ಷಾ ಮೆಹತಾಯವರ ಬಿಡಾರದಲ್ಲಿ ಸುಮಾರು ೪ ಗಂಟೆಗೆ ಸೇರಿ ಸಭೆ ನಡಿಸಿದರು. ಆಗ ಸುಮಾರು ೩೦೦ ಮೆಂಬರುಗಳು ಹಾಜರಾಗಿದ್ದರು. ಆದರೆ ಮೆ॥ ತಿಲಕರೂ ಮೆ॥ ಖಾಪರ್ಡೆಯವರೂ ಇರಲಿಲ್ಲ. ಇವರ ಪಾರ್ಟಿಯವರ ಪೈಕಿ ಬಾಬು ಮೋತಿಲಾಲ್ ಘೋಸ್, ಬಾಬು ಅಶ್ವಿನೀಕುಮಾರದತ್ತ, ಇವರಿಬ್ಬರೂ ಹಾಜರಾಗಿದ್ದರು. ಡಾಕ್ಟರ್ ರಾಷ್ ಬಿಹಾರಿ ಘೋಸ್‌ಯವರು ಸಭಾನಾಯಕರಾಗಿ ನಿಂತರು. ಮೆ॥ ವಿ. ಕೃಷ್ಣಸ್ವಾಮಿ ಐಯರು, ಮೆ॥ ಸುರೇಂದ್ರನಾಥಬ್ಯಾನರ್ಜಿ, ಮೆ॥ ಅಲಿಮಹಮದ್ ಭೀಂಜಿ, ಮೆ॥ ಅಬ್ಬಾಸ್ ತ್ಯಾಬ್ಜಿ, ಮೆ॥ ಗೋಖಲೆ, ಮೆ॥ ನರೇಂದ್ರನಾಥಸೇನರು, ಮೆ॥ ಚೌಧರಿ, ಲಾಲಾ ಲಜಪತ್ ರಾಯ ಈ ಮೊದಲಾದವರು ಉಪನ್ಯಾಸಗಳನ್ನು ಮಾಡಿ, ಮೇಲೆ ನಾವು ಪ್ರಾರಂಭದಲ್ಲಿ ಕಾಣಿಸಿರುವಂಥಾ ಈ ಮಹಾಸಭೆಯ ಉದ್ದೇಶಗಳನ್ನು ಬರೆದು ಅದರಂತೆ ಎಲ್ಲರೂ ಒಪ್ಪಿ ರುಜು ಹಾಕಿದರು. ಮತ್ತು ನಾಳೆ ಕಾಂಗ್ರೆಸ್ ಮಹಾಸಭೆಯನ್ನು ನಡಿಸಬೇಕು. ಆ ಸಭೆಗೆ ನಮ್ಮ ಮೇಲ್ಕಂಡ ತೀರ್ಮಾನದಂತೆ ಒಪ್ಪಿ ರುಜು ಹಾಕತಕ್ಕವರನ್ನೇ ಬಿಡಬೇಕು. ಉಳಿದವರನ್ನು ಸಭಾ ಮಂದಿರದೊಳಗೆ ಬಿಡಲೇಕೂಡದು ಎಂಬೀ ಪ್ರಕಾರ ಗೊತ್ತುಮಾಡಿಕೊಂಡರು.

ಮೆ॥ ತಿಲಕರ ಏರ್ಪಾಡು.

ಪ್ರತಿಕಕ್ಷಿಗಳಾದ ಮೆ॥ ತಿಲಕರೂ ಅವರ ಹಿಂಬಾಲಕರೂ ಬಲಾತ್ಕಾರದಿಂದಲಾದರೂ ಮಹಾ ಸಭೆಯೊಳಕ್ಕೆ ಹೋಗಲೇ ಬೇಕೆಂದೂ ಗಲಭೆಯನ್ನುಂಟುಮಾಡಬೇಕೆಂದೂ ಸಂಕಲ್ಪ ಮಾಡಿಕೊಂಡಿರುವುದಾಗಿ ತಿಳಿಯುವುದು. ಆದರೆ ಸಭ್ಯ ಮೆಂಬರುಗಳು ಸಭಾಮಂದಿರದ ಬಾಗಿಲಲ್ಲಿ ಪೋಲೀಸಿನವರನ್ನು ನಿಲ್ಲಿಸುವಂತೆ ಏರ್ಪಾಡು ಮಾಡಿಕೊಂಡಿರೋದರಿಂದ ಆ ಪ್ರತಿಕಕ್ಷಿಗಳ ಸಾಹಸವೇನೂ ಕೆಂದಲಾರದೆಂದು ಹೇಳಬಹುದಾಗಿದೆ.

ಪ್ರತಿಕಕ್ಷಿಗಳ ಸಭೆಯು

ಮೆ॥ ತಿಲಕರೂ ಅವರ ಪಕ್ಷದವರೂ ಅವರ ಅಭಿಮತಕ್ಕೆ ಅನುಸಾರವಾದ ಒಂದು ಮಹಾ ಸಭೆಯನ್ನು ಅದೇ ಸೂರತ್ತಿನ ಇನ್ನೊಂದು ಭಾಗದಲ್ಲಿರುವ ಮಂದಿರದಲ್ಲಿ ಕೂಡಿ ಜರಿಸಬೇಕೆಂದು ನೋಟೀಸುಗಳನ್ನು ಕೊಟ್ಟಿರುತ್ತಾರೆ. ಈ ನೋಟೀಸಿಗೆ ಮೆ॥ ಗಳಾದ ಅರವಿಂದಘೋಸ್, ತಿಲಕ್, ಖಾಪರ್ಡೆ, ದೇಶಮುಖ್, ಇವರು ರುಜುಮಾಡಿ ಪ್ರಕಟಿಸಿರುವರು. ಈ ಪಕ್ಷದ ಅಭಿಮತವೇನೆಂಬುವುದನ್ನು ಪ್ರಾರಂಭದಲ್ಲೇ ವಿವರಿಸಿರುತ್ತೇವೆ.

ಮಹಾಸಭೆಯು ನಡೆದದ್ದು

ತಾ ೨೮ ನೇ ಶನಿವಾರ ಕಾಂಗ್ರೆಸ್ ಸಭಾಮಂಟಪದಲ್ಲಿ ೧,೦೦೦ ಪ್ರತಿನಿಧಿಗಳು ಸೇರಿ ವಿಷಯಗಳನ್ನು ನಡಿಸಿದರು. ಸಭಾಮಂಟಪದ ಮೂರು ದಿಕ್ಕುಗಳ ಬಾಗಿಲುಗಳನ್ನು ಮುಚ್ಚಿಬಿಟ್ಟು, ಪೂರ್ವದಿಕ್ಕಿನ ದೊಡ್ಡ ಬಾಗಿಲೊಂದನ್ನೇ ತೆರೆದು, ಬಾಗಿಲ ಬಳಿಯಲ್ಲೂ ರಸ್ತೆಯ ಉದ್ದಕ್ಕೂ ಅಯುಧಪಾಣಿಗಳಾದ ಪೋಲೀಸಿನವರನ್ನು ಜವಾ ಇಟ್ಟು, ಸಭ್ಯಪಕ್ಷದ ಮೆಂಬರುಗಳು ಬಂದರೇನೇ ಒಳಕ್ಕೆ ಬಿಟ್ಟುಕೊಳ್ಳುತ್ತಾ, ವಿರೋಧಪಕ್ಷದವರುಬ್ಬರನ್ನೂ ಬಿಡದಂತೆ ಬಹು ಕಟ್ಟಳೆಯ ಏರ್ಪಾಡು ಮಾಡಿದ್ದರು. ಸಭೆಗೆ ಪೇಪಲಿಸಂತೆ ಡಾ॥ ರಾಷ್ ಬಿಹಾರಿ ಘೋಷ್ ಯವರನ್ನೇ ಅಧ್ಯಕ್ಷರನ್ನಾಗಿ ನೇಮಿಸಿಕೊಂಡು, ಸುಮಾರು ೧೦೦ ಮಂದಿಯುಳ್ಳ ಒಂದು ಕಮಿಟಿಯನ್ನು ನಿರ್ಮಾಣಮಾಡಿ, ಹಳೆ ಆಕ್ಷೇಪಕ್ಕಳ ಸಭ್ಯಪಕ್ಷದ ಮೆಂಬರುಗಳೂ ಆ ಕಮಿಟಿಯಲ್ಲಿ ಪ್ರವೇಶಿಸಿದ್ದು, ಮುಂದೆ ಮಹಾಸಭೆ ನಡೆಯುವ ಭಾಗದಲ್ಲಿ ಕೆಲವು ಖಂಡಿತವಾದ ಕ್ರಮಗಳನ್ನು ಏರ್ಪಡಿಸಬೇಕೆಂದು ತೀರ್ಮಾನಿಸಿರುತ್ತಾರೆ.

ಅನಂತರ ಈ ಮಹಾಸಭೆಯು ಇದುವರೆಗೆ ಇಂಡಿಯಾ ಗವರ್ನ್‌ಮೆಂಟಿನವರು ಮಾಡಿರತಕ್ಕ ಕೆಲ ಕಾನೂನು, ಸ್ವದೇಶೀ ಪದಾರ್ಥ, ಬಹಿಷ್ಕಾರ, ಮಂತ್ರಾಲೋಚನಾ ಮೆಂಬರುಗಳ ಚುನಾವಣೆ, ಸೈನ್ಯದ ಖರ್ಚು, ಈ ಮೊದಲಾದ ರಾಜಕೀಯ ವಿಚಾರಗಳನ್ನು ಸ್ವಲ್ಪಮಟ್ಟಿಗೆ ಚರ್ಚಮಾಡಿ ತೀರ್ಮಾನಗಳನ್ನು ಮಾಡಿಕೊಂಡರು.

ಅತಿರೇಕಿಗಳ ಮಹಾ ಸಭೆಯು

ಮೆ॥ ತಿಲಕರೇ ಮೊದಲಾದ ವಿರೋಧಪಕ್ಷದವರು ಮೊದಲೇ ಏರ್ಪಾಡು ಮಾಡಿಕೊಂಡಿದ್ದಂತೆ ಬೇರೆ ಸ್ಥಳದಲ್ಲಿ ಸಭೆಯನ್ನು ನಡಿಸಿದರು. ಅವರ ಅಭಿಮತವಾದ ನಾಲ್ಕು ವಿಚಾರಗಳನ್ನು ಕುರಿತು ಉಪನ್ಯಾಸಪೂರ್ವಕವಾಗಿ ಚರ್ಚಿಸಿ ತೀರ್ಮಾನಮಾಡಿದರು. ಈ ಸಭೆಯಲ್ಲಿ ೧,೦೦೦ ಪ್ರತಿನಿಧಿಗಳು ಸೇರಿದ್ದರೆಂದು ತಿಳಿದು ಬಂದಿದೆ

ಮಹಮದೀಯ ವಿದ್ಯಾಸಮಾಜವು.

ಮೊದಲೇ ಪ್ರಕಟವಾಗಿದ್ದಂತೆ ಮಹಮ್ಮದೀಯ ವಿದ್ಯಾವರ್ಧಕ ಮಹಾಸಭೆಯು ಕಳೆದ ಡಿಸೆಂಬರ್ ತಾ ೨೬ ನೇ ಗುರುವಾರ ಸಿಂಧು ನದೀ ಪ್ರಾಂತ್ಯದಲ್ಲಿರುವ ಕರಾಚಿ ಎಂಬ ಭಾರೀ ನಗರದಲ್ಲಿ ಪ್ರಾರಂಭವಾಯಿತು. ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಮಹಮದೀಯ ದೊಡ್ಡ ಮನುಷ್ಯರೂ ಪ್ರತಿನಿಧಿಗಳೂ ಸುಮಾರು ೧,೦೦೦ ಕ್ಕಿಂತಲೂ ಹೆಚ್ಚಾಗಿಯೇ ಕೂಡಿದ್ದರು. ಸಿಂಧು ದೇಶದ ಕಮಿಷನರ್ ಮೆ॥ ಯಂಗ್‌ಹಸ್ಬೆಂಡರು ಖೈರ್‌ಪುರದ ಮಿರ್ ನವಾಬರೂ ಖೈರ್‌ಪುರದ ವಜೀರರು, ಕರಾಚಿಯ ಕಲೆಕ್ಟರ್ ಮೆ॥ ಮೋಲ್ಸ್‌ವರ್ತರು, ಇನ್ನೂ ಕೆಲವುಮಂದಿ ಯೂರೋಪ್ಯರೂ ದೊಡ್ಡ ಮನುಷ್ಯರೂ ಸಭೆಯಲ್ಲಿ ಹಾಜರಾಗಿದ್ದರು.

ಮೆ॥ ಯಂಗ್‌ಹಸ್ಬೆಂಡರ, ಮೆ॥ ಅಫ್ತಾಬ್ ಅಹಮದ್‌ಖಾನರೂ, ಮೆ॥ ಮೋಲ್ಸ್‌ವರ್ತರೂ, ಮೆ॥ ರೈಟ್‌ಯವರೂ ಮಹಮದೀಯರಲ್ಲಿ ವಿದ್ಯಾಭಿವೃದ್ಧಿಯಾಗಬೇಕಾದದು ಬಹಳ ಅವಶ್ಯವೆಂತಲೂ, ಅದಕ್ಕಾಗಿ ಸಕಲ ಮಹಮದೀಯರೂ ಬಹಳ ಸಾಹಸಪಡಬೇಕಾಗಿದೆ ಎಂತಲೂ ಪ್ರೋತ್ಸಾಹಕರವಾದ ಉಪನ್ಯಾಸಗಳನ್ನು ಮಾಡಿದರು. ಮಹಮದೀಯ ಬಾಲಕರಿಗೆ ವಿದ್ಯೆ ಕಲಿಸುವುದಕ್ಕೋಸ್ಕರ ಸಿಂಧು ದೇಶದ ಮಹಮ್ಮದೀಯ ಜಮೀನುದಾರರಿಂದಲೂ ಅವರು ಸರ್ಕಾರಕ್ಕೆ ಕೊಡತಕ್ಕ ಕಂದಾಯದ ಮೇಲೆ ರೂಪಾಯಿಗೆ ೩ ಪೈ ಮಾತ್ರ ಶೇಖರಿಸುವ ಫಂಡು ಮಾಡಬೇಕೆಂದೂ, ಸಿಂಧು ದೇಶದ ಬಡಮಹಮದೀಯ ಬಾಲಕರಿಗೋಸ್ಕರ ಒಂದು ಅನಾಥಾಲಯವನ್ನು ಸ್ಥಾಪಿಸುವುದಕ್ಕೆ ಒಂದು ಧರ್ಮಫಂಡನ್ನು ಎತ್ತಬೇಕೆಂದೂ, ಸ್ಕೂಲು ಮತ್ತು ಕಾಲೇಜುಗಳಲ್ಲಿ ಮಹಮದೀಯ ಉಪಾಧ್ಯಾಯರನ್ನು ಹೆಚ್ಚು ಕಲಿಸುವುದಕ್ಕೆ ನೇಮಿಸಬೇಕೆಂದೂ ತೀರ್ಮಾನಮಾಡಿದರು

ಕೈಗಾರಿಕೆಗಳ ಪ್ರದರ್ಶನ

ಆ ದಿನ ಸಾಯಂಕಾಲ ಮಹಮದೀಯ ಸ್ತ್ರೀಯರಿಂದಲೂ ಲೇಡಿಗಳಿಂದಲೂ ತಯಾರಾಗಲ್ಪಟ್ಟಿದ್ದ ನಾನಾ ಕೈಗಾರಿಕೆ ವಸ್ತುಗಳನ್ನು ಒಂದು ಕಡೆ ಇಟ್ಟು ಪ್ರದರ್ಶನಮಾಡಿದರು. ಅಲ್ಲಿ ಸುಮಾರಾಗಿ ೫,೦೦೦ ಚಿತ್ರಸ್ತ್ರಗಳೂ, ಕಸೂತಿ, ಜರತಾರಿ, ಮೊದಲಾದ ಕೆಲಸಗಳೂ ಇರಿಸಲ್ಪಟ್ಟಿದ್ದವು. ಈ ಪ್ರದರ್ಶನಶಾಲೆಯನ್ನು ಕಮಿಷನರಾದ ಮೆ॥ ಯಂಗ್‌ಹಸ್ಬೆಂಡರ ಪತ್ನೀರವರು ಪ್ರಾರಂಭಿಸಿದರು. ಮಹಮದೀಯ ಸ್ತ್ರೀಯರ ಕೈಕೆಲಸವನ್ನು ಕೊಂಡಾಡಿದರು

ಎರಡನೇ ದಿನದ ಸಭೆಯು

ತಾ ೨೭ ನೇ ಶುಕ್ರವಾರ ಮಹಮದೀಯ ಪ್ರತಿನಿಧಿಗಳು ಎರಡನೇ ದಿನ ಸಭೆ ಸೇರಿ, ಮಹಮದೀಯ ಪ್ರಜೆಗಳ ಪುರೋಭಿವೃದ್ಧಿಗೂ ಅವರಲ್ಲಿ ವಿದ್ಯಾಭಿವೃದ್ಧಿಯಾಗುವುದಕ್ಕೂ ಅನುಕೂಲವಾದ ತೀರ್ಮಾನಗಳನ್ನು ಮಾಡಿಕೊಂಡಿರಾರೆ

ತಾಲ್ಲೋಕು ವರ್ತಮಾನಗಳು.

ಚಿತ್ರದುರ್ಗ.—ಈಗ ವೃತ್ತಾಂತವಾಗಿ, ೧೫—೨೦ ದಿನಗಳಿಂದ ಶೀತ ಮುಚ್ಚಿಕೊಂಡು ರಾತ್ರಿ ಚಳಿಯಾಗುವದಕ್ಕೆ ಬದಲಾಗಿ ಸೆಕೆ ಯಾಗುತ್ತಾ, ಆಗಾಗ್ಗೆ ತುಂತುರುಮಳೆಗಳು ಬೀಳುತ್ತಾ ಇದ್ದದ್ದು ಕಡೆಗೆ ಕಳೆದ ವಾರ ೨—೩ ದಿನ ರಾತ್ರಿ ಚೆನ್ನಾಗಿ ನೀರು ಹರಿಯುವಷ್ಟು ಮಳೆಯಾಗಿ ಮೋಡವು ತೆಗೆದುಕೊಯಿತು. ಊರಿನಲ್ಲಿ ಅನೇಕರು ಚಳಿ, ಜ್ವರ, ಕೆಮ್ಮು, ನೆಗಡಿಗಳಿಂದ ಗಂಕಟಪಡುತ್ತಿದ್ದಲ್ಲದೆ ಕೆಲವರು ಈ ರೋಗಗಳಿಂದ ಮೃತಪಟ್ಟರು. ಈಚೆಗೆ ಬಂದ ಮಳೆಯಿಂದ ದನಕರುಗಳಿಗೆ ತಕ್ಕಷ್ಟುಗೆ ಮೇವು ಸಿಕ್ಕಿದಲ್ಲದೆ ಬೇಸಿಗೆ ಜೋಳ, ಕಡಲೆ, ಅವರೆ, ತೊಗರಿ ಮೊದಲಾದ ಆಕ್ಕಡಿ ಗಿಡಗಳಿಗೆ ಸಹ ಅನುಕೂಲವಾಯಿತು.—ದಿವಾನರವರ ಸವಾರಿಯು ಚಿತ್ರದುರ್ಗಕ್ಕೆ ತಾ ೩೦ ನೇ ಬೆಳಿಗ್ಗೆ ೯ ಗಂಟೆಗೆ ದಯಮಾಡಿಸುವದೆಂದು ತಿಳಿದು ಬಂದಿದೆ ನಮ್ಮ ಡೆಪ್ಯುಟಿಕಮಿಷನರ್ ಮೆ॥ ಚಂಗಲ್‌ರಾಯರವರೂ ಇನ್ನೂ ಕೆಲವು ಅಧಿಕಾರಿಗಳೂ ಹಿರಿಯೂರಿನವರೆಗೂ ಹೋಗಿ ಅವರನ್ನು ಎದುರುಗೊಳ್ಳುವರಲ್ಲದೆ ದಾರಿ ಊರಲ್ಲಿ ಎಲ್ಲಾ ಸರ್ಕಾರೀ ಕಟ್ಟಡಗಳು ಸುಣ್ಣ ಬಣ್ಣ ಬಳಿಸಿ ಸಿದ್ಧವಾಗಿವೆ ಅಲ್ಲಲ್ಲಿ ಚಪ್ಪರಗಳೂ ತೋರಣಗಳೂ ಸಹ ಕಟ್ಟಲ್ಪಟ್ಟು ಶೃಂಗರಿಸಲ್ಪಡುತ್ತವೆ.—ಇಲ್ಲಿ ಹನುಮಂತರಾಯರವರ ಸಂಪಾದಿಸುತ್ತಿದ್ದ ಒಕ್ಕಲಿಗರ ಮಕ್ಕಳಿಗಾಗಿ ಸ್ಥಾಪಿಸಿರುವ ಸ್ಟೂಡೆಂಟ್ಸ್ ಹೋಮಿನ ವಿಷಯದಲ್ಲಿ ಇವರು ೧೦೦—೨೦೦ ಮಂದಿ ಮೇಲೆ ಕಳ್ಳರಿಗೆ ಸುಮಾರು ವಿಸ್ತಾರವಾದ ಚಪ್ಪರವನ್ನು ಹಾಕಿಸಿ ನಮ್ಮ ದಿವಾನರವರಿಗೆ ವಿಜ್ಞಾಪನಾ ಪತ್ರಿಕೆಯನ್ನು ಸಲ್ಲಿಸುವದಾಗಿ ಹಾಗೆ ಈಗ ಕೆಲವು ದಿನಗಳಿಗೆ ಮುಂಚೆ ದಿವಾನ್ ರವರು ದೇವರಿಂದ ಪ್ರೋಟೆಸ್ಟು ಮಾಡಿಕೊಳ್ಳಲು ಪತ್ರ ಬರೆದಿದ್ದರಿಂದ ಒಪ್ಪಿಕೊಂಡಿದ್ದಾರೆ ದಿವಾನರು ಕೈ ಹಾಕಿ ಬಿದ್ದ ಪ್ಯಾಕೇಟ್ಟುಗಳ ಬಳಿ ಸೆಯಿಸಿದ್ದಾರೆಂದು ಹೇಳಿರುತ್ತಾರೆ

ಮಧುಗಿರಿ—ಜನರ ಆದ ತಾ ೧೧ ಕ್ಕೆ ಇಲ್ಲಿಗೆ ದಿವಾನರವರು ದಯಮಾಡಿ ಇದಾಗಿ ಪರ್ಯಾವರಣವಿತ್ತು ಆದಾಂತೆ ಅವರು ಒಂದು ದಿನ ಇಲ್ಲಿ ತಾ ೨೮ ರಲ್ಲಿ ಅವರು ಇಲ್ಲಿಗೆ ದಯಮಾಡಿ ನನ್ನ ಮಂಗಳ ಕ್ಕೆ ಕರೆಗಿ ಬಂದರು. ಈ ದಿವಸ ಪ್ರಾತಃಕಾಲ ಶ್ರೀರಂಗಕ್ಕೆ ದಯಮಾಡಿದರು. ಮೆ॥ ನಾಗವಾಡಯ್ಯರು ಬಿಟ್ಟು ಬೇಗನೆ ಊರನ್ನು ಚಪ್ಪರ, ತಳಿರು, ತೋರಣ, ಕದಳೀ ಸ್ತಂಭಗಳಿಂದ ಅಲಂಕರಿಸಿದ್ದರು. ಉತ್ತಮವಾದ ಫಲಪುಷ್ಪಾದಿಗಳನ್ನು ಸಿದ್ಧಪಡಿಸಿಕೊಂಡು ಇದ್ದರು. ರಾಜವರು ಕೆಲ ಪ್ರಾತಃಕಾಲ ೧೦ ಘಂಟೆಗೆ ಇಲ್ಲಿಗೆ ಪೇಟೆಯಲ್ಲಿ ಒರವಲ್ಲಿ ಸ್ಕೂಲಿನ ಚಪ್ಪರ ಎದುರಿಗೆ ಹಾಕಿದ್ದ ಚಪ್ಪರದ ಬಳಿ ಅಧಿಕಾರಿಗಳು, ಮೆಂಬರುಗಳು, ಪುರಜನರೂ, ವೈದಿಕ ಬ್ರಾಹ್ಮಣರು ಕಾದಿದ್ದು ಅವರನ್ನು ಮಹಾಶಯರ ಪ್ರಾರ್ಥನೆಗಳನ್ನು ಮಾಡಿದರು. ಅದಕ್ಕೆ ಸಂತುಷ್ಟರಾಗಿ ಅವರು ಬಂಗಲೆಗೆ ದಯಮಾಡಿದರು. ಮಧ್ಯೆ ಪೇಟೆಯಲ್ಲಿ ಮಹಾಜನರು ದಯವಿಟ್ಟು ಬಪ್ಪದ ಬಳಿಯಲ್ಲಿ ಸ್ವಲ್ಪ ನಿಂತು, ಅವರಿಂದ ಕೊಡಲ್ಪಟ್ಟ ಫಲಪುಷ್ಪ ದಿಗಳನ್ನು ಸ್ವೀಕರಿಸಿದರು. ಸಾಯಂಕಾಲ ಅವರು ೫ ಗಂಟೆಗೆ ಬಂಗಲೆಯಿಂದ ಹೊರಟು ಊರಿನ ಕೋಟೆಯಿಂದ ಮಾಡಿದ್ದ ಹೊಸ ರಸ್ತೆಯಲ್ಲಿ ಕೋರ್ಟು, ತಾಲ್ಲೂಕು ಕಚೇರಿ, ಡಿವಿಜನ್ ಕಚೇರಿ, ಎಂಜಿನಿಯರ್ ಕೋರ್ಟ್ ರಿಜಿಸ್ಟ್ರಾರ್ ಆಫೀಸು, ಎಕ್ಸೈಜ್ ಆಫೀಸುಗಳ ಕಟ್ಟಡಗಳ ಮಾರ್ಗವಾಗಿ ಸಾಗುತ್ತಾ ಪೇಟೆಯನ್ನು ಕಂಡು, ಒಂದೆರಡು ಸನ್ನಿ ಸಂಪಿಗೆಗಳನ್ನು ದಾಟಿ ಮೇಲ್ಕಂಡ ಸಬ್ಬಿಕಟ್ಟು ಚಪ್ಪರದ ಬಳಿಯಿಂದ ಆಗ್ರಹಾರದ ಬೀದಿ ಮತ್ತು ಪೇಟೆ ಮಾರ್ಗವಾಗಿ ಬಂದು ಬಂಗಲೆಗೆ ಸೇರಿದರು ನೆನ್ನೆ ಪ್ರಾತಃಕಾಲ ೬ ಗಂಟೆಗೆ ಪಾವಗಡಕ್ಕೆ ಹೋಗಿ, ೧೦ ಗಂಟೆಗೆ ಹಿಂದಿರುಗಿ ಬಂದರು. ಮಧ್ಯಾಹ್ನದ ಮೇಲೆ ೪ ಗಂಟೆ ವೇಳೆಯಲ್ಲಿ ಇಲ್ಲಿನ ಪ್ಲೀಡರುಗಳು, ಮುಂತಾದ ದೊಡ್ಡ ಮನುಷ್ಯರು ಬಂಗಲೆಗೆ ಹೋಗಿ ಕುಶಲಪ್ರಶ್ನಾದಿಗಳನ್ನು ದಿವಾನರವರ ಸನ್ನಿಧಿಯಲ್ಲಿ ಕೇಳಿ ನಮ್ರತೆಯಿಂದ ಹೊರಡಲು ಪ್ಲೀಡರ್ ಮೆ. ಅವರ ದಾನಶೀಲತೆಯ ವಿಷಯವನ್ನು ತಿಳಿಸಿದರು. ಇದಾದ ಬಳಿಕ ದಿವಾನರವರು ಪೇಟೆಯಲ್ಲಿ ಕೆರೆಯ, ಗವರ್ನಮೆಂಟ್ ಬಾಲಿಕಾ ಪಾಠಶಾಲೆಗೆ ದಯಮಾಡಿ, ಅಲ್ಲಿ ೨೦ ನಿಮಿಷಗಳು ಇದ್ದು ಸಂಗೀತಶ್ರವಣಾದಿಗಳಿಂದ ಆನಂದವನ್ನು ಹೊಂದಿ ಬಾಲಿಕೆಯರಿಗೆ ಬಹುಮಾನಗಳನ್ನು ಕೊಟ್ಟು ತಮ್ಮ ಬಿಡಾರಕ್ಕೆ ತೆರಳಿದರು. ಈ ದಿನ ಪ್ರಾತಃಕಾಲ ಆಸ್ಪತ್ರೆಗೆ ಒಂದು ತಾಕೀತಿನ ಪ್ರಾರ್ಥನೆಯನ್ನು ಸ್ವೀಕರಿಸಿ, ಶ್ರೀರಂಗಕ್ಕೆ ದಯಮಾಡಿದರು

ಪ್ರಕಟನೆಗಳು

ಆರು ಪರುಷರ ಅನುಭವ 9.18

ಅಸ್ವಸ್ಥರಾದ ಕಾಲದಲ್ಲಿ ನಮ್ಮ ನೆರೆಕರೆಯವರಲ್ಲಿ ವಿಷ್ವಾಸಾಂಬಿ ತರ್ ರೀತಿಯಲ್ಲಿ ಪ್ರಮಾಣಪಟ್ಟರುಬಹುದೆಂಬುದನ್ನು ತಿಳಿದುಕೊಳ್ಳುವದು ಆಶ್ಚರ್ಯವಲ್ಲ. ಹಾಗೆಯೇ ಅವರು ತಮ್ಮ ಸಂಕಟಗಳನ್ನು ಕ್ಕಾಗಿ ನಿವಾರಣೆಮಾಡಿಕೊಂಡರು ಎಂಬಿದನ್ನು ಸಹಾ ಅರಿತುಕೊಂಡ ಪಕ್ಷದಲ್ಲಿ ಅವರು ಸಫಲವಾಗಿ ಅನುಸರಿಸಿದ ವಿಧಾನವನ್ನು ಕೈಕೊಳ್ಳಲು ನಾವು ನಿಶ್ಚೈಸುತ್ತೇವೆ ಹೀಗಿರುವಲ್ಲಿ ಕಲ್ಕತ್ತೆಯ ಒಬ್ಬ ಪ್ರಸಿದ್ಧ ಡಾಕ್ಟರು ನಮಗೆ ಉಪಕರಿಸುವನನ್ನು ಕೊಡುವದಾಗಿ ತಿಳಿಸುವ ವಿಷಯದ ಕಾರಣ ಕೇಳಿದರು ಉತ್ತಮ ಮಂಚಾಕ್ ಕಂಪೆನಿಯ ವೈದ್ಯ ಉದ್ಯೋಗಸ್ಥರಾದ ಡಾಕ್ಟರ್ ಸಿ ಪಿ ನಿತ್ಯಾನಂದರು ಕೇಳುವದೇನೆಂದರೆ—ನಾನು ಡೋನ್ಸ್ ರ (ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಬೆನ್ನು ನೋವಿನ ಮೂತ್ರಕೋಶದ ವಿಷದ ಮಾತ್ರೆಗಳನ್ನು ನನ್ನ ವಿಲಾಯಿತಿ ರೋಗಿಯ ರೋಗಿಗಳಿಗೆ ಕಳೆದ ೬ ವರುಷಗಳಿಂದ ಕೊಟ್ಟು ಬರುತ್ತೇನೆ ಅವುಗಳು ಬ್ರಾಯಿಟ್ಸ್ ಡಿಸೀಜ್ ಎಂಬಮೂತ್ರ ವ್ಯಾಧಿ, ಕಟಿವಾತ ಮುಂತಾದ್ದಕ್ಕೆ ಅತ್ಯಂತ ಉಪಯೋಗಕರವಾದದ್ದೆಂದು ಕಂಡುಬಂದಿವೆ ಮತ್ತು ಅಂಥಾ ವ್ಯಾಧಿಗ್ರಸ್ತರಿಗೆ ಈ ವಿಷದವನ್ನು ಧೈರ್ಯದಿಂದ ಶಿಫಾರಸು ಮಾಡಬಹುದು ಇದ್ದು.

ಮೂತ್ರಕೋಶಗಳ ವ್ಯಾಧಿಯು ಅನೇಕಾವರ್ತಿ ತಿಳಿಯದೆ ವಕ್ಕರಿಸಿರುತ್ತದೆ. ಅದರ ಹೇತು ಏನೆಂದು ತಿಳಿಯುವದಿಲ್ಲ ರೋಗಿಗೆ ತಲೆ ನೋವು, ಮಾನಸಿಕ ದುರ್ಬಲತೆ, ಎದೆಗುಂದಿನೋವು, ನಿದ್ರಾಭಂಗ, ತಲೆ ತಿರುಗುವಿಕೆ, ಅನುತ್ಸಾಹ ಮುಂತಾದ್ದು ಸಾರುವಾಗುತ್ತದೆ ಇವು ಬೆನ್ನುನೋವು, ಜಲೋದರ, ಮೂತ್ರ ಯಾ ಮೂತ್ರೋಪದ್ರವಗಳು, ಬ್ರೈಟ್ಸ್ ಡಿಸೀಜ್ ಇವುಗಳ ಕಾಗಿಯೇ ಮೂತ್ರಕೋಶದ ಉಪದ್ರವದ ಚಿನ್ಹೆಗಳಾಗಿರುತ್ತವೆ

ಈ ಮಾತ್ರೆಗಳು ಅದಂ ಮೂತ್ರೋತ್ಪಾಟನೆಯನ್ನು ಮಾಡಿ ಗುಣ ಮಾಡುತ್ತವೆ

ಎಲ್ಲಾ ಔಷಧ ವರ್ತಕರಿಂದ ಲಭ್ಯವಾಗುತ್ತವೆ. ಶೀಸೆ ಒಂದಕ್ಕೆ ರೂ ೨, ಅಥವಾ ೬ ಶೀಸೆಗಳಿಗೆ ರೂ ೧೦—೧೦, ಅಥವಾ ಮುಂಬಾಯಿಯಲ್ಲಿಯ ಡೋನ್ಸ್ ರ ಔಷಧಗಳ ಕೋಠಿಯಿಂದ ಕಳುಹಿ ತರಿಸಿಕೊಳ್ಳಬಹುದು. ಪಿ ಬಿ. ಬಾಕ್ಸ್ ನಂ ೨೦, ಮುಂಬಾಯಿ

ನೂತನ ಡೈರಿಗಳು.

134

ಈ ಕೆಳಗೆ ಕಾಣಿಸಿರುವಂತೆ ನಾಲ್ಕು ವಿಧವಾದ ಡೈರಿಗಳೂ ನಮ್ಮಲ್ಲಿ ಬಹು ಸುಲಭವಾಗಿ ದೊರೆಯುವವು

೧	ಸಣ್ಣ ಸೈಜು ಸಾದಾ	೦—೩—೦	...	...
೨	„ „ ಫ್ಲೈಲೀಫ್	೦—೪—೦	...	...
೩	ದೊಡ್ಡ ಸೈಜು ಸಾದಾ	೦—೬—೦	...	...
೪	„ „ ಫ್ಲೈಲೀಫ್	೦—೮—೦	...	...

ನಮ್ಮ ವಿಳಾಸ —ಮಾಡೆಲ್ ಫ್ರಂಟ್ ಕಂಪನಿ,

ಬುಕ್ಕು ಡಿಪ್ಪೋ, ಬೆಂಗಳೂರು ಸಿಟಿ.

The Punjab Cash Bazaar—Bangalore City.

ಫಾರಿವಾಲ್ (ಪಂಜಾಬ್) ಶಾಲುಗಳು.

130

ಕೆಂಪು, ಎಣ್ಣೆ ಬಣ್ಣ, ಕೆಂಪು, ಕೇಸರಿ, ಹಸರು, ನಕ್ಷತ್ರ ಬಣ್ಣ, ಬಾದಾಮಿ, ಕಪ್ಪು, ಬಿಳುಪು, ಮುಂತಾದ ಬಣ್ಣವುಳ್ಳ ಮತ್ತು ಚೆಕ್ ನಮೂನೆ, ಪೂರ ಎರಡು ಮೊಳ ಉದ್ದ ಮೂರು ಮೊಳ ಅಗಲವುಳ್ಳವು

ಈಗತಾನೇ ವಿಲಾಯಿತಿಯಿಂದ ಬಂದಿರುವ ೫,೦೦೦ ಬೊಂಡು ಟೋಪಿಗಳ ಲಾಯಖಾದ ತರಹೆವಾರಿ ಬಲು ಮತ್ತು ಇವುಗಳಲ್ಲಿ ತಯಾರಾದ ತರಹೆವಾರಿ ಟೋಪಿಗಳು ನಮ್ಮಲ್ಲಿ ಸಿದ್ಧವಾಗಿರುತ್ತವೆ

ಇವುಗಳಲ್ಲದೆ ನೀವು ಕೇಳುವ ಯಾವ ಸಾಮಾನನ್ನಾದರೂ ಅಗಲಿ ನಂಬಿಕೆಯಿಂದ ಅಗ್ಗವಾಗಿ ಕಳುಹಿಸುವೆವು ಪರೀಕ್ಷಿಸ ಬೇಕೆಂದಿರುವವರು ತಿಳಿಯಬೇಕಾದವರು ಇವರಿಗೆ ಬರೆಯಿರಿ—

ಹೆಚ್. ಜಮಾಲ್ ಮಹಮ್ಮದ್ ಕಂಪೆನಿ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೊಸ ಬೂಟೀಸುಗಳು.

ತುಂಬಾ ಖಾತರಿ ಸಾಮಾನು ' ಬೇಗ ತರಿಸಿಕೊಳ್ಳಿ '

123

ಚಳಿಗಾಲಕ್ಕೆ ತಕ್ಕ ದಪ್ಪ ... ಉಣ್ಣೆಯ ... ಹೊಸ ಹಳ ... ಬನಾತವು ... ಬಳಿಯನ್ನು ಅಚ್ಚ ನೈಗ ಕಾಟನ್ನಿನಿಂದ ... ಸುಖವಾದ ಜೋಡು ... ಟಕ್ಕ ಅತಿರಮ್ಯ ... ಉತ್ತಮ ಬೆಲೆ ...

೪೫×೮೦(ಅಂಗುಲ)ರೂ. ೪ ...

ಮಿರಿಮಿಣಾಕು ಸೀರೆಗಳು.

ಹೊಸನಮೂನೆ! ... ಖಾತರಿಬಣ್ಣ!!

ಶ್ರೇಷ್ಠವಾದ ಕಪ್ಪು ... ಸಾಮಾನ್ಯ ... ಬಣ್ಣ ಕೆಡದು ... ಉತ್ತಮ ... ಸೆರಗು ... ಉತ್ತಮ ಮಾಟ ಮತ್ತು ... ಸಿಕ್ಕುವು ... ಉಪಯೋಗಿಸಿದವರ ... ಉತ್ಕೃಷ್ಟತೆಯು ... ಗುತ್ತೆ. ... ಬೇಕಾದವರು ... ರೂ ೧೦—೦—೦

ವಿಳಾಸ —... ಎಂಪೋರಿಯಂ, ... ಪೋಸ್ಟ್ ...

ಬ್ರಾಹ್ಮಣ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

2048

೧. ಲೋಕಾಮಯಹರ ಕಸ್ತೂರೀ ಮಾತ್ರೆ—ಈ ಮಾತ್ರೆಗಳನ್ನು ಪಚ್ಚೆ ಕರ್ಪೂರ, ಚಿನ್ನದ ರೇಕು, ಉತ್ತಮ ಕಸ್ತೂರಿ ಮೊದಲಾದ ಕೆಲವು ಬೆಲೆಯುಳ್ಳ ಪದಾರ್ಥಗಳಿಂದ ತಯಾರಿಸಿದೆ

ಚಳಿಜ್ವರ, ಜ್ವರ, ಕೆಮ್ಮು, ನೆಗಡಿ, ಸಂದುಗಳನೋವು, ವಾತ ಶೂಲೆ, ... ದಾರ, ಸೈನ್ಯ ... ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ತಲೆನೋವು, ಕೆಮ್ಮು, ದಮ್ಮು, ... ಇವುಗಳನ್ನೂ ಅನೇಕ ರೋಗಗಳನ್ನೂ ... ಗುಣಪಡಿಸುತ್ತದೆ

ತಾಂಬೂಲದೊಡನೆ ಇದನ್ನು ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ... ಎಂತಹ ಅಸಾಧಾರಣವಾದ ರೋಗಗಳಿಗೆ ಯಾದ ಬಾಯಿಯ ... ದುರ್ವಾಸನೆ, ನೀರು ... ಬದಲಾವಣೆಯನ್ನು ಸರಿಪಡಿಸಿ, ರಕ್ತವೃದ್ಧಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮೈ ಎಳೆತ, ಜ್ವರ, ಸನ್ನಿಜ್ವರ, ಕೈಕಾಲುಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಮಂದಿಯಾಗಿರುವುದಿಲ್ಲ ಸ್ತ್ರೀ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ ಅನುಪಾನಸಹಿತ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಡಬ್ಬಿಗೆ ೩ ಆಣೆ, ಅಂಚೆಕೂಲಿ ೧ ಆಣೆ ಹೆಚ್ಚು. ೧ ರಿಂದ ೧೦ ಡಬ್ಬಿ ವರೆಗೆ ಪೋಸ್ಟೇಜ್ ೩ ಆಣೆ.

ವಿಳಾಸ:—ಬ್ರಾಹ್ಮಣ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು

ಇಲ್ಲಿ ನೋಡಿ!

,1

[illegible] ವಿನ್ಸರ್ ಇಲಾಖೆಯಲ್ಲಿ ಯುರೋಪಿಯನ್ ಪ್ರಾ[illegible] ಉತ್ತಮ ತರಹದ ನಾಸಿಕದ ಟೋಪಿಗಳು ಅತಿ [illegible] ತರ್ಯಾರಾಗುತ್ತವೆ

[illegible] ಬೆಲೆ ೧ ರೂ ೧-೦ ಆಣೆಯು.

[illegible] ಟೋಪಿಗಳನ್ನು ತೆಗೆದುಕೊಳ್ಳುವವರಿಗೆ [illegible] ಡಿಸ್ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ — ಶೇಣೋಯಿರ್

[illegible] ಟೋಪಿ ಕಾರ್ಖಾನೆ, ವಿನ್ಸರ್ ಇಲಾಖೆ, [illegible]

ಸುಗಂಧ ಸಂಜೀವಿನೀ

ಶೃಂಗಾಮಲಕ ತೈಲವು.

5 1

[illegible] ಪರೀಕ್ಷಾರ್ಥ [illegible] ಕಾಲದಲ್ಲಿ [illegible] ಸ್ತೋತ್ರಮಾಡಲ್ಪಟ್ಟ ಅನೇಕ [illegible] ಶ್ರಯವಾದವು. ತಲೆಗೆ ತಂಪ ಕಣ್ಣಿಗೆ [illegible]

ಮನುಷ್ಯನಿಗೆ ಶಿರಸ್ಸು, ನೇತ್ರ, [illegible] ಪ್ರಧಾನವಾದವು. ಇವುಗಳನ್ನು ಎಷ್ಟು ಆರೋಗ್ಯವಾಗಿಯೂ ಪುಷ್ಟಿ ಮತ್ತು ತೇಜಸ್ಸು ಉಳ್ಳವಾಗಿ ಇಟ್ಟರೂ ಅಷ್ಟು ಉತ್ತಮ [illegible] ತೈಲ [illegible] ಅತ್ಯಂತ [illegible] ಸಾಧ್ಯವಿಲ್ಲ. ಆದದರಿಂದ [illegible] ಈ ತೈಲವನ್ನು ನಾವು [illegible] ಈ ತೈಲವನ್ನು ತಲೆಗೂ, [illegible] [illegible] ಪದ್ಧತಿಯಲ್ಲಿ [illegible] ತಲೆಯಲ್ಲಿ [illegible] ತಲೆನೋವು [illegible] ಕೂದಲು [illegible] ಕಣ್ಣುರಿ, [illegible] ಇವುಗಳೆಲ್ಲಾ ಪರಿಹಾರ [illegible] ರಕ್ತಶುದ್ಧಿ [illegible] ಗುಣ [illegible] ಉಪಯೋಗಿಸಿದರೆ [illegible] [illegible] ಕೇಸರಿ ಹೆಸರಿನ ತೈಲ [illegible]

ರಕ್ತಶೋಧಕ ತೈಲವು.

ಅನೇಕ [illegible] ಯೋಗ್ಯತಾಪತ್ರ [illegible]

[illegible] ಸಂಗ್ರಹಣಿ, ಜ್ವರ, [illegible] ಮಲಬದ್ಧ, ನಡುಬಿದ್ಧ, ಆನೆಕಾಲು [illegible] ಪುರಾತನ ಎಷ್ಟೊ [illegible] ಇತ್ಯಾದಿ ಮಹಾ [illegible] ರೋಗಗಳೆಲ್ಲಾ [illegible] ಆರೋಗ್ಯವಾಗುವದು. ಈ ತೈಲದ [illegible] ಉರಿಯುವದಿಲ್ಲ [illegible] ತೈಲ ಮುಂತಾದ [illegible] ಇದರಲ್ಲಿ [illegible] ತೈಲ [illegible] ಬಳಸಿ [illegible] ಆರೋಗ್ಯ [illegible] ಒಂದು ಬಾಟಲು ೧ ರೂ [illegible] ಆಣೆ.

ಯೋಗ್ಯತಾಪತ್ರ ನೋಡಿ.

[illegible] ಬೆಂಗಳೂರು,

೧-೦ನೇ ಮೇ, ೧೯೦೭

[illegible] ತೈಲದ ಗುಣದಿಂದ ಮೈಸೂರ್ ಸೆಕ್ರೆಟರಿಯೇಟ್ [illegible] ವೆಂಕಟವರದಯ್ಯಂಗಾರ್ಯರ [illegible] ಕುಟುಂಬ [illegible] ಅನೇಕ [illegible] ಈ ತೈಲವನ್ನು ಒಂದು ವಾರ [illegible] ಆರೋಗ್ಯ [illegible] ಯುರೋಪಿಯನ್ ಔಷಧ [illegible] ಆರೋಗ್ಯ [illegible] ತೈಲದಿಂದ [illegible] ಆರೋಗ್ಯದ ಲಕ್ಷಣವನ್ನು ನೋಡಿ ಆಶ್ಚರ್ಯ [illegible] ನಿಮ್ಮ ತೈಲವನ್ನೇ ಉಪಯೋಗಿಸುತ್ತಲಿರುವೆ [illegible] ಈ ತೈಲವನ್ನು [illegible] ಉಪಯೋಗಿಸಬಹುದು [illegible]

ನಿಮ್ಮ ಕ್ಷೇಮಾಪೇಕ್ಷಕ

ಎಸ್. [illegible]

ಸಿಕ್ಕುವ ಸ್ಥಳ. ಔಷಧಗಳು ದೊರೆಯುವ ಸ್ಥಳ —

ಟಿ. ಆರ್. [illegible]

೧೬೫, ಅವಿನ್ಯೂರೋಡ್, ಬೆಂಗಳೂರು ಸಿಟಿ

ಈಗಲೇ ಸೀಮೆಯಿಂದ ಬಂದಿದೆ.

117 10

೫,೦೦೦ ರೂಪಾಯಿ ಬೆಲೆ ಬಾಳುವ ಸುಪೀರಿಯರ್ ಉಲನ್ ದಾರಗಳು ಬಿಡಬೇಕಾಗಿ—ಮಾತ್ರ ಇದೆ. [illegible]

೧ ಟೋಪಿಯಾಗುವ ಉಲನ್ ದಾರಕ್ಕೆ	೦—೪—೦
೧೧ ಚೇಪಿಗಳಾಗುವ ಬಂಡಲ್ ೧ ಕ್ಕೆ	೩—೪—೦
ಕೊಕ್ಕೆ ಸೂಜಿ ೧ ಕ್ಕೆ	೦—೧—೩
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೦

ಎರಡು ಕಡೆಯಲ್ಲಿ ಬರೆಯುವ ಪೋಸ್ಟ್ ಕಾರ್ಡ್ ೧೦೦ ಕ್ಕೆ ೭ ಆ. ಒಂದಾಣೆ ಸ್ಟಾಂಪು ಕಳುಹಿಸಿ ನಮ್ಮ ಸುಂದರವಾದ ೧೯೦೮ ನೆ ಇಸವಿಯ ಕ್ಯಾಲೆಂಡರ್ ಪಡೆಯಿರಿ ವಿಳಾಸ —

ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು

ಕಾರ್ಡ್ ಸೈಜು ೪|×೩.

ಫೋಟೋ ತೆಗೆಯುವ

ಫೋ ಟೋ ಕ್ಯಾ ಮೆ ರಾ.

4 20

ಬೆಲೆ ಪತ್ರ ಮೂರು ರೂಪಾಯಿ

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂಡ ಬ್ಲಿಯೆ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೨ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೀದಿ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು ಟಪ್ಪಾಲ್ ಖರ್ಚು ೯ ಆಣೆ ಇದು ಸಿಕ್ಕತಕ್ಕ ವಿಳಾಸ —

ಭೋಟಾಲಾಲ ಭಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಇಗೋ! ಕನ್ನಡ "ಮಾಡಲ್" ಪಾಕೆಟ್ ಡೈರಿ!

122 7

ಸೊಗಸಾದ ಡೈರಿಗಳು !! ಉತ್ತಮವಾದ ಡೈರಿಗಳು !!

ಉತ್ಕೃಷ್ಟವಾದ ಡೈರಿಗಳು !!!



೧೯೦೮ ನೇ ವರುಷದ ಕನ್ನಡ ಡೈರಿಗಳು. [illegible] ರೂಲ್ ಹಾಕಿದ ಕಾಗದದ ಮೇಲೆ ನುಣ್ಣನೆಯ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡತಕ್ಕದ್ದಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ಜನಾನುರ್ಜನ ಪಟ್ಟಿ, ಹೋಟೆಲುಗಳು, ದಿನ ಸಂಬಳದ ಪಟ್ಟಿ, ವಾರ [illegible] ಗುಳಿಕ ಕಾಲ, ರಾಹುಕಾಲ, ಹಲ್ಲಿ ಬಿದ್ದ ಫಲ, ಸ್ವಪ್ನಶಾಸ್ತ್ರ, ಗೌರಿ ಪಂಚಾಂಗ, ತಿಥಿಗಳು, ಜವಿನ್ನಗಳ ಅಳತೆ, ಪೋಸ್ಟ್ ಆಫೀಸಿನ ಎಲ್ಲಾ ವಿಷಯಗಳು. ರಿಜಿಸ್ಟರ್ ಫೀಜುಗಳು, ಸ್ಟಾಂಪು ಪೋಸ್ಟ್ [illegible] ರೈಲ್ವೆ ಚಾರ್ಜ್, ರಜಾ ದಿನಗಳು, ಹಬ್ಬಗಳು, ಕ್ಯಾಲೆಂಡರು, (ಗ್ರಹಣ [illegible] ಸಹಿತ) [illegible] ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ. ಡೈರಿಗಳ ಕ್ರಯ —

ನಂ॥ ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿ ೦—೭—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ಡೈರಿಗಳ ಗಲಿಬಿಲಿಯಲ್ಲಿ ಭ್ರಾಂತಿಹೊಂದಬೇಡಿ ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ. ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟವೆ ನಮ್ಮ ವಿಳಾಸ —

ಎಸ್. ಡಿ ನಥಮಲ್ ಕಂಪೆನಿ, ದೊಡ್ಡಪೇಟೆ, ಮೈಸೂರು.

ಅಥವಾ,

ಎಲ್. ಎ ಶೋರ್‌ವಾಲ್—ಬೆಂಗಳೂರು ಸಿಟಿ.

ಅಥವಾ,

ಮ್ಯಾನೇಜರ್. ಸಿ. ಎಲ್. ಎಸ್ ಬುಕ್ ಡಿಪೊ, ಮೈಸೂರು.

ಮಹಾ ಬಾಧಾಪಹಾರಿಣಿಯು

58-12

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು

ಕ್ಲೆಮೆಂಟ್‌ಯವರ ಪೆ[illegible] ಲೇಪನವು ಸಕಲ ವಿಧವಾದ ಬಾಧೆಗಳನ್ನು ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ಪಾದ್ರಿಗಳು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಕೊಳ್ಳುತ್ತಿದ್ದಾರೆ ಈ ದಿವ್ಯೌಷಧವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಕಳತ, ಗಂಟುನೋವು, ಮಾರ್ಗ ವಾಯು ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳುಕಡಿದ ನೋವು ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಣಗಿಸಿಬಿಡುತ್ತದೆ ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು [illegible]

ಕ್ರಯ ಸೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಅದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ [illegible] ವಿಳಾಸ—

ಎಫ್ ಡಬ್ಲಿಯು ಆರ್ಕ್,

ಸಿಮೆಟ್ರಿ ರೋಡ್, ವೇಪೇರಿ, ಮದರಾಸ್

ಸನ್ ೧೯೦೮ ನೇ ಇಸವಿಯ

127 6

[illegible] ಡೈರಿ [illegible] ಡೈರಿ [illegible]

ಪಂಚಾಂಗ ಸಹಿತವಾದ ಇಂಗ್ಲೀಷು ಕನ್ನಡ ಡೈರಿ

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಬುದ್ಧಿವಂತ [illegible] ರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು — [illegible] ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪೋಸ್ಟ್ [illegible] ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜವಿನ್ನಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಸ್ವಪ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, [illegible] ದಿನ ಸಂಬಳದ ಪಟ್ಟಿ, ಘಟಿಕೆ [illegible] ನಕ್ಷತ್ರ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ [illegible] ರೂಲು ಹಾಕಿದೆ, [illegible] ಬೆಲೆ [illegible]

[illegible]

[illegible] ಡೈರಿ [illegible]

[illegible]

[illegible] ಪೋಸ್ಟ್ ಚಾರ್ಜು [illegible] ಡೈರಿ [illegible] ತರಿಸಿಕೊಳ್ಳಿ

ಟಿ. ಕೆ. ಮುತ್ತು ಎಂ. ಆರ್ ಕೃಷ್ಣಸ್ವಾಮಿ ಶೆಟ್ಟಿ

ಬಳ್ಳಾಪುರ ಪೇಟೆ, ಬೆಂಗಳೂರು ಸಿಟಿ

ರಬ್ಬರ್ ಹ್ಯಾಂಡ್ ಪ್ರೆಸ್.

111 1

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದಿದ ಈ ಭಾರತ ದೇಶದೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೫ ರಿಂದ ೧೮ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು, ಉರ್ದು, ಪರ್ಷಿಯನ್, ಅರಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೦೦ ಪ್ರತಿಗಳನ್ನು ತಯಾರು ಮಾಡಬಹುದು. ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರು, ವಕೀಲರು, ವರ್ತಕರು, ಇನಾಮದಾರರು ಮತ್ತು ಪರೀಕ್ಷಕರು ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು ಎಷ್ಟೋ ಕಾರಕೂನರ ಸಹಾಯದಿಂದ ಬಂದು ಕೆಲಸಕ್ಕೆ ಎಷ್ಟೋ ಕಾಲ ಹಿಡಿಯುವದು. ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನು ದರ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ ಆದರ ದೇಶದಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು. ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ.

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.

ಹಾಫ್ ಪುಲ್‌ಸ್ಕ್ಯಾಫ್ ಸೈಜು, ೬—೦—೦.

ಪೋಸ್ಟೇಜು ಬೇರೆ (೧೧೧೧)

ವಿಳಾಸ — ವರ್ಧಮಾನ ಏಜನ್ಸಿ,

ಪೋಸ್ಟ್ ಕಾಲಬಾದೇವಿ,

ಮುಂಬಯಿ.

ವಯೋಮಿಂಗಿನ ಪೆ-ರೂ-ನಾ ಇದು ಶೀತರೋಗ ಪರಿಹಾರಿ.

ಮಾಜಿ ಗವರ್ನರವರು ಹೊಗಳುತ್ತಾರೆ. ಇದು ಉತ್ಸಾಹೋತ್ಸವ ಮಾಡ ಬಲಕಾರಿ.



ವಯೋಮಿಂಗ್ ಸಂಸ್ಥಾನದ ದಿವ್ಯ ಸಭಾಮಂದಿರವು 38-39

ಅಧಿಕಾರಿಗಳು.

ವಿಶೇಷ ಜವಾಬ್ದಾರಿಯನ್ನು ವಹಿಸಿ ತುಂಬಾ ನಂಬಿಗಸ್ಥರಾಗಿರುವ ಅನೇಕ ದೊಡ್ಡ ಅಧಿಕಾರಿಗಳೆಲ್ಲಾ ಯಾವಾಗಲೂ ತುಂಬಾ ಕೆಲಸವುಳ್ಳವರಾಗಿದ್ದಾರೆ. ಇತರ ವಿಷಯಗಳಿಗೆ ಗಮನಕೊಡಲು ಅವರಿಗೆ ಸ್ವಲ್ಪವೂ ಅವಕಾಶವಿರುವುದಿಲ್ಲ. ಆದಕಾರಣ ಅಂಥಾ ಅಧಿಕಾರಿಗಳು ಯಾವುದಕ್ಕಾದರೂ ಶಿಫಾರಸು ಕಾಗದಗಳನ್ನು ಬರೆದುಕೊಡುವುದಕ್ಕೆ ಒಪ್ಪುವುದು ತುಂಬಾ ಅಪರೂಪವೇ ಸರಿ. ಇದಲ್ಲದೆ ಅಂಥಾವರು ಪ್ರಖ್ಯಾತವನ್ನು ಕುರಿತ ಯಾವ ವಿಷಯಕ್ಕಾಗಾದರೂ ಪಬ್ಲಿಕ್ಕಾಗಿ ಶಿಫಾರಸು ಬರೆದುಕೊಡುವದೆಂದರೆ ಬಹಳ ಕಷ್ಟ; ಮತ್ತು ಅದಕ್ಕೆ ಅವರ ಮನಸ್ಸೊಪ್ಪುವುದಿಲ್ಲ.

ಅಪರೂಪವಾದ ಶಿಫಾರಸುಗಳು.

ಈ ರೀತಿಯಾಗಿ ಪಬ್ಲಿಕ್ ಅಧಿಕಾರಿಗಳು ಅಂದರೆ, ಗವರ್ನರುಗಳು, ಸಮಾಜಗಳ ಮೆಂಬರುಗಳು, ರಾಯಭಾರಿಗಳು, ಸೆನೆಟರುಗಳು ಮುಂತಾದವರು ಔಷಧದ ಪ್ರಯೋಜನದ ವಿಷಯದಲ್ಲಿ ಬಹಿರಂಗವಾಗಿ ತಮ್ಮ ಹೆಸರು ಕಾಣಿಸಿ ಶಿಫಾರಸು ಬರೆಯುವುದು ಬಹಳ ಅಪರೂಪವಾಗಿದೆ.

ಆದಕಾರಣ ಅಂಥಾ ಬಲವಂದಿ ಅಧಿಕಾರಿಗಳು ಸ್ವಲ್ಪವೂ ಅನುಮಾನವಿಲ್ಲದ ಶಿಫಾರಸನ್ನು ಪೆರೂನಾ ವಿಷಯದಲ್ಲಿ ಬರೆದುಕೊಟ್ಟಿರುವುದು ದೊಡ್ಡ ಜಯಪ್ರದವೆಂದೇ ಹೇಳಬಹುದು. ಪನಾಂಗದಲ್ಲಿ ತುಂಬಾ ಹೆಸರುವಾಸಿಯನ್ನು ಪಡೆದಿರತಕ್ಕ ಅನೇಕ ದೊಡ್ಡಮನುಷ್ಯರೂ ಅಧಿಕಾರಿಗಳೂ ಅನೇಕ ವೇಳೆ ಬಹು ಸಂತೋಷದಿಂದ ಪೆರೂನಾ ವಿಷಯವನ್ನು ಹೊಗಳಿ ಬರೆದಿರುತ್ತಾರೆ

ಅದ್ಭುತವಾದ ಸಂಗತಿಯು.

ಪೆರೂನಾವಿನಲ್ಲಿ ಬಹು ವಿಶೇಷವೂ ಮಹಾ ಅಸಾಧಾರಣವೂ ಆದ ಗುಣವಿರುತ್ತೆಂದು ಎಲ್ಲೆಲ್ಲೂ ಹೆಸರುವಾಸಿಯನ್ನು ಪಡೆದಿರುವುದಕ್ಕೆ ಕಾರಣವನ್ನು ತಿಳಿಸಲು ಮಾರ್ಗವೇ ತೋರುವುದಿಲ್ಲ. ಆದರೂ ಎಲ್ಲಾ ತರಗತಿಗಳಲ್ಲಿರತಕ್ಕ ಜನಗಳು ಒಂದೇ ಆದ್ದರಿಂದ ಅವರೆಲ್ಲರ ಅಭಿಪ್ರಾಯವೂ ಏಕತರವಾಗಿರುತ್ತದೆ

ಸ್ವಾಭಾವಿಕವಾದ ಉತ್ಸಾಹವು.

ಒಬ್ಬ ಮನುಷ್ಯನಿಗೆ ದೀರ್ಘರೋಗವಿದ್ದು, ಇತರ ಯಾವ ಔಷಧದಿಂದಲೂ ಆ ರೋಗನಿವಾರಣೆಯಾಗದೆ, ಕಡೆಗೆ ಒಂದರಿಂದ ವಾಸಿಯಾದಲ್ಲಿ ಸಾಮಾನ್ಯವಾಗಿ ಅವನೂ ಅವನನ್ನು ನೋಡತಕ್ಕ ಜನರೂ ಸ್ವಾಭಾವಿಕವಾಗಿ ತಮ್ಮ ಉತ್ಸಾಹವನ್ನು ಪ್ರಕಟಪಡಿಸುತ್ತಾರೆ. ದೊಡ್ಡ ಉಪಕಾರವಾದದ್ದಕ್ಕೆ ಕೃತಜ್ಞತೆಯೇ ಸ್ವಭಾವವಾಗಿದೆ. ಆದಕಾರಣ ಉಪಕಾರ ಹೊಂದಿದಂಥಾ ಎಲ್ಲಾ ತರಗತಿಗಳ ಜನರೂ ತಮ್ಮ ಅನುಭವವನ್ನು ಪ್ರಕಾಶಪಡಿಸುವುದಕ್ಕಾಗಿ ಕೃತಜ್ಞತಾ ಪೂರ್ವಕವಾಗಿ ಒಪ್ಪಿಕೊಂಡಿರುವುದೇ ಮುಖ್ಯವಾದ ಮತ್ತು ವಿಶೇಷವಾದ ಕಾರ್ಯವಾಗಿದೆ.

ನಿಜವಾದ ಉಪಕಾರವು.

ಪೆರೂನಾ ಕೂಡಲೇ ಗುಣಕೊಡುತ್ತದೆ ಇದೇ ಮುಖ್ಯಕಾರಣ ಕೃತ್ಯರೋಗಗಳನ್ನು ನಿವಾರಣೆಮಾಡಿಕೊಳ್ಳುವುದು ತುಂಬಾ ಕಷ್ಟ ಅನೇಕ ಡಾಕ್ಟರುಗಳು ಅದನ್ನು ವಾಸಿಮಾಡಲಾರದೆ ಹೋಗುತ್ತಾರೆ.

ಕೃತಜ್ಞತೆಯೇ ಫಲಿಸುವುದು.

ಅನೇಕ ವರುಷಗಳಿಂದ ಅನುಭವಿಸುತ್ತಿದ್ದ ದೀರ್ಘರೋಗವನ್ನೆಲ್ಲಾ ಕೆಲವು ಬಾಟ್ಲು ಪೆರೂನಾ ಔಷಧವು ವಾಸಿಮಾಡುತ್ತದೆ ಇದರಿಂದ ಸ್ವಾಭಾವಿಕವಾಗಿ ಹುಟ್ಟುವಂಥಾ ಕೃತಜ್ಞತೆಯನ್ನು ಅಣಗಿಸಿಬಿಡುವುದು ಖಂಡಿತವಾಗಿಯೂ ಅಸಾಧ್ಯವಾಗಿರುತ್ತದೆ

ನೆತ್ತಿ ಮತ್ತು ಕೊರಳ ಶೀತವು.

ಮೆ॥ ಜೋಸೆಫ್ ರೀಸ್, ೩೬೩೭ ಎ. ೧೬ನೇ ಬೀದಿ, ಸೆಂಟ್ ಲೂಯಿಸ್, ಮೊ. ಇವರು ಬರೆಯುವುದು:—

"ನನಗೆ ನೆತ್ತಿಯಲ್ಲೂ ಗಂಟಲಲ್ಲೂ ಶೀತಹಿಡಿದು ಬಹಳ ಕಷ್ಟಪಟ್ಟೆನು ಆದರೆ ಪೆರೂನಾ ಸೇವನೆಯನ್ನು ಆರಂಭಿಸಿ ಐದು ಬಾಟ್ಲು ಮುಗಿಸಿದೆನು ಮತ್ತು ಎರಡು ಬಾಟ್ಲು ಮನಾಲಿನ್ ಉಪಯೋಗಿಸಿದೆನು. ಅಷ್ಟರೊಳಗೇ ನನಗೆ ವಾಸಿಯಾಯಿತು.

"ಪೆರೂನಾವು ತುಂಬಾ ಬಲಕಾರಿಯಾದ ಔಷಧವೆಂದು ನಾನು ಯೋಚಿಸುತ್ತೇನೆ. ಕೃತ್ಯರೋಗಗಳಿಂದ ಪೀಡಿತರಾದವರೆಲ್ಲಾ ಪೆರೂನಾವನ್ನೇ ಸೇವಿಸಲೆಂದು ಹೇಳುವೆನು."

ಶೀತದಿಂದ ಹುಟ್ಟುವ ಜ್ವರವು.

ಮಿಸೆಸ್. ಡಬ್ಲ್ಯು. ಕೆ. ಗುಡ್, ಬ್ರಾಡ್ವೇ, ವಾ. ಇವರು ಬರೆಯುವುದು:—

"ನನಗೆ ೧೫ನೇ ವಯಸ್ಸಿನಲ್ಲಿ ಶೀತಜ್ವರ ಬಂದಿತು. ಮತ್ತು ಒಂಬತ್ತು ವರುಷಗಳಿಂದಲೂ ನನ್ನ ನೆತ್ತಿಗೆ ಶೀತಹಿಡಿದು ಬಾಧೆಪಟ್ಟೆನು.

"ಅಲಕ್ಷ್ಯಮಾಡಿದ್ದರಿಂದ ಅದು ಗಂಟಲಿಗೂ ಮೂಗಿಗೂ ವ್ಯಾಪಿಸಿತು. ನಿಮ್ಮ ಬಳಿಗೆ ಬಂದು ಪರೀಕ್ಷೆ ಮಾಡಿಸಿಕೊಂಡ ಮೇಲೆ ನೀವು ಹೇಳಿದ ರೀತಿ ನಾಲ್ಕು ತಿಂಗಳ ವರೆಗೆ ಪೆರೂನಾವನ್ನು ಸೇವಿಸಿದೆನು. ಈಗ ನಾನು ಚನ್ನಾಗಿಯೂ ಆರೋಗ್ಯದಿಂದಲೂ ಇದ್ದೇನೆ.

"ನಾನು ಪೆರೂನಾವನ್ನು ಅಷ್ಟಿಷ್ಟಾಗಿ ಹೊಗಳಲಾರೆನು; ಎಷ್ಟು ಕೊಂಡಾಡಿದರೂ ಸ್ವಲ್ಪವೇ. ಅದರಿಂದ ಏನೇನು ಆಗುವುದೆಂದು ಹೇಳಲ್ಪಟ್ಟಿದೆಯೋ ಅದೆಲ್ಲಾ ಖಂಡಿತವಾಗಿ ನೆರವೇರುತ್ತದೆ."

ಪೆರೂನಾ ಶೀತವನ್ನು ನಿವಾರಣೆ ಮಾಡುತ್ತದೆ.

ಮೆ॥ ಎಲ್. ಕ್ಲಿಫರ್ಡ್ ಫ್ರಿಗ್, ಜೂ, ೨೯೨೯ ಇ. ಮಾರ್ಷಲ್ ಬೀದಿ, ಸೆಂಟ್ ರಿಚ್ಮಂಡ್, ವಾ. ಇವರು ಬರೆಯುವುದು:—

"ನನಗೆ ಶೀತವಾದ ಒಡನೆಯೇ ಪೆರೂನಾವನ್ನು ತರಿಸಿಕೊಳ್ಳುತ್ತೇನೆ. ಅದನ್ನು ಸೇವಿಸಿದ ಕೂಡಲೇ ಶೀತವು ಓಡಿಹೋಗುತ್ತದೆ.

ವಾಸಿಯಾಗದೆಂಬ ನಿರಾಶೆಯು.

"ಕೆಲವು ವಾರಗಳ ತನಕ ನಾನು ಚನ್ನಾಗಿ ಸುಖವಾಗಿರಲಿಲ್ಲ. ವಾಸಿಯಾಗುತ್ತದೋ ಇಲ್ಲವೋ ಎಂದು ನಿರಾಶೆಯುಂಟಾಗಿತ್ತು. ಯಾಕಂದರೆ ನನ್ನ ಸ್ನೇಹಿತರು ಹೇಳಿದಂಥಾ ನಾನಾ ಔಷಧಗಳನ್ನು ಸೇವನೆ ಮಾಡಿದೆನು ಎರಡು ವರುಷಗಳ ತನಕ ಔಷಧಗಳನ್ನು ಸೇವಿಸುತ್ತಾ ಬಂದಾಗ್ಯೂ ನನಗೆ ಸ್ವಲ್ಪವೂ ಗುಣತೋರಲಿಲ್ಲ.

ಕಡೇ ಪರಿಹಾರವು.

"ಕಡೆಗೆ ಪೆರೂನಾ ತರಿಸಿ ತೆಗೆದುಕೊಳ್ಳಲಾರಂಭಿಸಿದೆನು. ಸ್ವಲ್ಪ ದಿನಗಳಲ್ಲೇ ನನಗೆ ಸಂಪೂರ್ಣವಾಗಿ ವಾಸಿಯಾಯಿತೆಂದು ಬಹು ಸಂತೋಷದಿಂದ ಹೇಳುತ್ತೇನೆ

"ಈಗ ಒಂದು ವರುಷದಿಂದಲೂ ನನಗೆ ಅದರ ಬಾಧೆಯೇನೂ ಇಲ್ಲ ಪೆರೂನಾ ನನ್ನ ಅಪಾರವಾದ ಕಷ್ಟವನ್ನು ನಿವಾರಣೆ ಮಾಡಿ ಬಿಟ್ಟಿದ್ದರಿಂದ ಅದನ್ನು ಬಹು ಸಂಭ್ರಮದಿಂದ ಹೊಗಳುತ್ತೇನೆ"

ವಿಳಾಸ:—ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು; ಅಥವಾ,

(೨) ಇಂಗ್ಲಿಷ್ ಡ್ರಗ್ ಕಂಪೆನಿ, ೩೯೬ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

6—12—1907 ರಿಂದ 13—12—1907 ರ ವರೆಗೆ

ಸ್ಥಳ.	ಪ್ಲೇಗ್ ಆಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ಆಗಲಿದ್ದು.
ಬೆಂಗಳೂರು ಪಟ್ಟಣ	37	33	0
ಮೈಸೂರು ,,	28	55	0
ಬೆಂಗಳೂರು ಡಿಸ್ಟ್ರಿಕ್ಟ್	88	78	0
ಮೈಸೂರು ,,	70	44	0
ಕೋಲಾರ್ ,,	39	30	0
ಕೋಲಾರ್ ಚಿನ್ನದ ಗಣಿಗಳು	38	30	0
ತುಮಕೂರು ಡಿಸ್ಟ್ರಿಕ್ಟ್	14	12	0
ಹಾಸನ ,,	3	3	0
ಚಿತ್ರದುರ್ಗ ,,	13	11	0
ಕಡೂರ್ ,,	12	8	41
ಶಿವಮೊಗ್ಗ ,,	36	23	0
ಜುಮ್ಲಾ	378	287	41

ಶಾಲಿವಾಹನ ಶಕ ವರುಷಂಗಳು ೧೮೨೯ನೇ ಪ್ಲವಂಗನಾಮ ಸಂವತ್ಸರದ ಮಾರ್ಗಶಿರ ಬಹುಳ ತ್ರಯೋದಶಿ ಗುರುವಾರದಿಂದ ಪುಷ್ಯ ಶು ಪಂಚಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಜನವರಿ.

ತಾ.	ವಾರ.	ತಿಥಿ.	ಗಳಿಗೆ.	ನಕ್ಷತ್ರ.	ಘಳಿಗೆ.
2	ಗುರು	* ತ್ರಯೋ	2-30	[illegible]	55 15
3	ಶುಕ್ರ	‡ ಅಮಾವಾ	52-20	ಮೂಲ	25-55
4	ಶನಿ	† ಪಾಡ್ಯ	46-32	ಪೂಷಾ	22-1
5	ರವಿ	:; ಬಿದಿಗೆ	40-40	ಉತ್ತ್ರಾಷಾ	17-52
6	ಚಂದ್ರ	, ತದಿಗೆ	34-48	ಶ್ರ	13-43
7	ಕುಜ	:: ಚೌತಿ	29-12	ಧ	9-39
8	ಬುಧ	ಪಂಚಮಿ	24-5	ಶ	6-2

* ಮಹಾಶಿವರಾತ್ರಿ. ‡ ಸರ್ವತ್ರ ಅಮಾವಾಸ್ಯೆ. † ಶೂನ್ಯಮಾಸಾರಂಭ, ಕೊಥಾರೋತ್ಸವಾರಂಭ. :; ಚಂದ್ರೋದಯ. ,, ಅಮೃತಸಿದ್ಧಿಯೋಗ, ಜೆಲ್ಲೇಜ್ ಪಂ ೧ :: ಉತ್ಪಾತಯೋಗ

ಪೇಟೇ ಧಾರಣೆ.

ದಿನಸಿ	ಮೈಸೂರು.	ಬೆಂಗಳೂರು.
ಕಲ್ಲೇ ಅಕ್ಕಿ ಪಲ್ಲ ೧ಕ್ಕೆ	ರೂ. ೧೪-೦-೦	೧೪-[illegible]
ಕಂಬಸಾಲೆ ಅಕ್ಕಿ ಅವಲ್	೧೬-೬-೦	೧೩-೮
,, ಮಧ್ಯಮ	೧೩-೮-೦	೧೩-೦
ಜಾವಾಳ ಅಕ್ಕಿ	೧೩-೮-೦	೧೪-೦
ಸಣ್ಣಕ್ಕಿ ಅವಲ್	೧೪-೮-೦	೧೪-೦
,, ಮಧ್ಯಮ	೧೫-[illegible]-೦	೧೫-೦
ತೊಗರೀ ಬೇಳೆ ಪಲ್ಲ ೧ಕ್ಕೆ	೧೪-೮-೦	೧೪-೦
,, ಮಧ್ಯಮ	೧೫-೦-೦	೧೩-೮
ಕೈರ ರಾಗಿ ಪಲ್ಲ ೧ಕ್ಕೆ	೭-೬-೦	೭-೧-೦
ಕಾರಾಗಿ	೭-೦-೦	೭-೧-೦
ಜೋಳ	೭-೦-೦	೧೧-೮
ಹಲಸಂದೆ ಪಲ್ಲ ೧ಕ್ಕೆ	೧೦-೮-೦	೯-[illegible]
ಬಿಳೀ ಅವರೆ	೯-೧೪-೦	೧೦-೮
ಹೆಸರು	೧೧-೯-೦	೧೨-೦
ಉದ್ದು	೧೩-೦-೦	೧೧-೮
ಕಡಲೆ	೧೩-೮-೦	೧೨-೦
ಎಳ್ಳು ಸ ೧೨ ಕ್ಕೆ	೨೩-೮-೦	೨೨-೦
ಹುರುಳಿ	೫-೮-೦	೬-೦
ಹರಳು ೮೦ ಸೇರಿಗೆ	೧೨-೦-೦	೧೩-೦
ಸೀಗೇಕಾಯಿ ಮಣ ೧ಕ್ಕೆ	೨-೮-೦	೨-[illegible]
ಮೆಣಸಿನಕಾಯಿ	೨-೮-೦	೨-೬
,, ಮಧ್ಯಮ	೨-೪-೦	೨-೨
ಬೆಲ್ಲ ದೊಡ್ಡ ಅಚ್ಚು	೫-೪-೦	ಮ ೨-೨
ಒಳ್ಳೆಣ್ಣೆ ಮಣ ೧ಕ್ಕೆ	೬-೦-೦	೬-೦
ಹರಳೆಣ್ಣೆ ,,	೫-೪-೦	೪-೦
ಕೊತ್ತುಂಬರಿ ಪಲ್ಲ ೧ಕ್ಕೆ	೫-೦-೦	೬-೮
ಉಪ್ಪು ,,	೫-೦-೦	೫-೦
ಹುಣಸೇ ಹಣ್ಣು	೨-೦-೦	೨-[illegible]
,, ಹಳೇದು	೧-೮	೧-[illegible]
ತುಪ್ಪ ಮಣ ೧ಕ್ಕೆ	೧೪-೦-೦	೧೫-೮
ಸೀಮೆಯೆಣ್ಣೆ ಡಬ್ಬ ೧ಕ್ಕೆ	೪-೧೫-೦	೪-[illegible]
ತೆಂಗಿನಕಾಯಿ ೧೦೦ ಕ್ಕೆ	೭-೮-೦	೮-[illegible]
ಅಡಕೇಕಾಯಿ ಮಣ ೧ಕ್ಕೆ	೧-೦-೦	೧-[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	೦-೧[illegible]
ಚಿನ್ನ (ಪೌನ್) ಬೆಂಡು	೧೫-೬-೦	೧೫-[illegible]
,, ,, ಪಸಿಮೆ	೧೫-೧೦-೦	೧೫-[illegible]
,, ,, ಗಟ್ಟಿ ತೊಲ ೧ಕ್ಕೆ	೨೩-೧-೨-೦	೨೪-[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೭೫-೦-೦	೭೦-[illegible]

Printed and Published by the Rev. E. Thomson, M. A., Proprietor and Manager, Wesle[yan] Mission Press, Mysore. 2/1/1908.

REGISTERED
M 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲಡುವದು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೮ ನೇ ಇಸವಿ ಜನವರಿ ತಾರೀಖು ೯ ನೇ ಗುರುವಾರ. ಸಂಚಿಕೆ ೩೨

ಡೈರಿಗಳ ಬಹುಮಾನ!

136 1

ಈ ಕೆಳಗೆ ಬರೆದಿರುವ ಮಾ॥ ಬಿ. ವೆಂಕಟಾಚಾರ್ಯರ ಪುಸ್ತಕಗಳ್ಳ ಪ್ರತಿಯೊಂದು ರೂಪಾಯಿನ ಬೆಲೆಗೂ ಒಂದೊಂದು ಡೈರಿಯಂ ಬಹುಮಾನವು ಕೊಡಲ್ಪಡುವುದು

ಕೋಟಿಸೂರ್ಯ ೧॥ ಆಣೆ ಅತ್ತಿಗೆ ೩ ಆಣೆ ಸಾಲತಿ ॥ ಆಣೆ [illegible] ೪ ಆಣೆ ರಾಧಾರಾಣಿ ೩ ಆಣೆ ಬಲಿಷ್ಠನಾದ ಮನೆಯ ಆಳ [illegible] ೧॥ ಆಣೆ ದೊಡ್ಡಮ್ಮ ಹೇಳಿಕೆ ೧ ಆಣೆ. ಕರ್ಮಕ್ಕೆ ತಕ್ಕ ಫಲ [illegible] ಕ್ಷತ್ರಿಯ ರಮಣಿ ೩ ಆಣೆ. ವೆನಿಸದೇಶದ ವಣಿಕ ೧ ಆಣೆ [illegible] ವರ್ಷ ೬ ಕಾಸು. ಉದರದರ್ಶನ ೬ ಕಾಸು ಉನ್ನತಿ ೬ ಕಾಸು. ಮಾಲತೀ ಮಾಧವ ನಾಟಕದ ಕಥೆ ೬ ಆಣೆ. ಪ್ಲವಂಗ ಶೀಲಕ [illegible] ಪಂಚಾಂಗ ಸಹಿತ ೧೯೦೮ನೆ ಇಸವಿ ಕ್ಯಾಲೆಂಡರ ೯ ಪೈ. ಬಿ. ವೆಂಕಟಾಚಾರ್ಯರವರ ಸಹಾಯದಿಂದ ಕೊಂಡುಕೊಂಡ [illegible] ವಾರಪತ್ರಿಕೆಯ ಚಂದಾದಾರರಿಗೂ ಮತ್ತು ಜನವರಿ [illegible] ಗಾಗಿ ಹೊಸಬರಾಗಿ ಚಂದಾದಾರರಾಗುವವರಿಗೂ ಸಹಾ ಒಂದು [illegible] ಬಹುಮಾನವಾಗಿ ಕೊಡಲ್ಪಡುವುದು.

ನಮ್ಮ ವಿಳಾಸ—ದಿ ಜನರಲ್ ಏಜನ್ಸಿ, ಮೈಸೂರು.

ಜ್ವರಹರಿ.

118 10



ಇದು ಸಾಧಾರಣ ಜ್ವರ, ಚಳಿಜ್ವರ, ಮೈಕೈಜ್ವರ, ಪಿತ್ತಜ್ವರ, ಕಫಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಜೆಯ್ಲಿನಲ್ಲಿರುವ ಮಾನ್ಯರಾದ [illegible] ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯ [illegible] ಕಳುಹಿಸಿಕೊಟ್ಟ [illegible] ನಿಮ್ಮ ಔಷಧವು ಕೆಲವು ದಿವಸಗಳ ಹಿಂದೆ [illegible] ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ಈ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವ [illegible] ದಯವಿಟ್ಟು ಇನ್ನೊಂದು ೨೦ ಟೀಕಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆ [illegible]

ಕ್ರಯ:—ಸೀಸೆ ೧ ಕ್ಕೆ ೪ ಆಣೆ, ೧ ಡ. ೧—೪ ರೂ. ೩—೧೩ ಆ., ೧೧ ರೂ., ಒಂದೇ ಸಾರಿ ೧೨ ಸೀಸೆ ತರಿಸಿಕೊಂಡರೆ [illegible] ಮಾಫಿ ಬಿಡಲಾಗುವದು.

****

ಅಮೃತಕರ್ಪೂರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆ [illegible], ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ [illegible] ಮಹೌಷಧವಾಗಿ ಪರಿಣಮಿಸಿ, ಕಾಲರ ಗುಣಕೊಡು [illegible]. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ [illegible] ನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ [illegible] ಹರವು ಜ್ವರಕಳಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ [illegible] ವದು.

[illegible] ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯು [illegible] ಷಧಗಳನ್ನು ನಾನೂ ನನ್ನ ಹಾಸ್ಪೆಟಾಲ್‌ರೂ ಮ್ಯುನಿಸಿಪಲ್ [illegible] ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ [illegible] ರೋಗಿಷ್ಟರಿಗೆ ಕೊಡುತ್ತೇನೆ ಕೊಟ್ಟ ಕೂಡಲೆ [illegible] ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೆ ಔಷಧ [illegible]

[illegible] ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗ [illegible] ಮೊಕ್ಕಾ ವಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ [illegible] ವೆ. ಇಲ್ಲದಿದ್ದರೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ:—

[illegible] ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

27 46

ತರಿಸಿಕೊಳ್ಳಿರಿ:— ತ್ವರೆಗೈಯಿರಿ:— ಅಮೃತಾಂಜನ ಸರ್ವಲೋಕರಂಜನ, ಸರ್ವ ಸರ್ವವ್ಯಾಧಿಭಂಜನ, ಚಿಕಿತ್ಸಾವಳಿಯೊಳ್ ಕಾಂಚನ, ದೇಹಾಂಗಗಳಿಗೆ ಸಂಜೀವನ, ವಾಸನೆಯಲ್ಲಿ ಮನೋರಂಜನ, ಬೆಲೆಯಲ್ಲಿ ಅಲ್ಪ, ಯೋಗ್ಯತೆಯಲ್ಲಿ ಅದ್ಭುತ, ಔಷಧಿಯಲ್ಲಿ ದ್ವಿರಹಿತ, ಕೊಳ್ಳುವದರಲ್ಲಿ ಮೋಸವಿಲ್ಲ್ತರ್ಯ, ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಒಂದೇ ಸಾರಿ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಜರ್ಮನ್ ಬೆಳ್ಳಿಯ ಕಪ್ ಉಚಿತವಾಗಿ ದೊರಕುವದು.

ನಿಶ್ಶಂಕೆಯಾಗಿ ಭಾರತವರ್ಷದ ಔಷಧಿಗಳಿಂದ ತಯಾರಿಸಿದ ಹೊರುಪಯೋಗಕ್ಕೆ ಯೋಗ್ಯವಾದ ಮುಲಾಮು. ಇದರಿಂದ ತಲೆನೋವು, ಶಿರೋವೇದನೆ, ವಾತ, ಸಂಧಿವಾತ, ಪಕ್ಷವಾತ, ಗಂಟಲುನೋವು, ಸೊಂಟದ ನೋವು, ಗಂಟು ನೋವು, ಶೀತ, ಜಕಮು, ಉಳುಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಿಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

ಬಾಟ್ಲಿ ಒಂದಕ್ಕೆ ಕಿಮ್ಮತು ೦—೮—೦. ಪೋಸ್ಟು ಖರ್ಚು ೦—೪—೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಕುವದರೊಳಗೆ ಗಜಕರ್ಣವು ಹೋಗುವದು ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಡಬ್ಬಿ ಒಂದಕ್ಕೆ ಕಿಮ್ಮತು ೦—೬—೦. ಪೋಸ್ಟು ಖರ್ಚು ೦—೪—೦

ದಂತಮಂಜನ.—ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಹಲ್ಲುಗಳು ಬೆಳ್ಳಗಾಗುತ್ತವೆ ಹಲ್ಲುಗಳ ನೋವನ್ನು ತೆಗೆಯುತ್ತದೆ ಡಬ್ಬಿ ಒಂದಕ್ಕೆ ೦—೨—೦ ಪೋಸ್ಟು ಖರ್ಚು ೦—೪—೦

ವಜ್ರಗುಟಿಕ.—ಧಾತುಪುಷ್ಟಿ ವಿಧುನಾವಂತರಿಗೆ ಶಕ್ತಿ ಕೊಡುತ್ತದೆ, ಸ್ವಪ್ನಸ್ಖಲನ ಆಗುವದು ನಿಲ್ಲಿಸುತ್ತದೆ ರಕ್ತ ಶುದ್ಧಿಯಾಗಿ ದೇಹದಲ್ಲಿ ಆರೋಗ್ಯಕೊಡುತ್ತದೆ ಡಬ್ಬಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೪—೦

ಕೇಶವರ್ಧಿನಿ.—ತಲೆ ಮೇಲಿನ ತಂಪುಮಾಡುವದು, ಕೂದಲುಗಳನ್ನು ಬೆಳೆಸುವದು, ಕೂದಲುಗಳನ್ನು ಕಪ್ಪುಮಾಡುವದು, ಮನಶ್ಶುದ್ಧಿ ಮಾಡುವದು, ಚಲೋ ಪರಿಮಳ ಉಳ್ಳದ್ದು. ೩ ಔನ್ಸು ಬಾಟ್ಲಿ ಒಂದಕ್ಕೆ ೧—೦—೦. ಪೋಸ್ಟು ಖರ್ಚು ೦—೪—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೯ ಓಕ್ ಲೇನ್, ಫೋರ್ಟ, ಮುಂಬಯಿ.

ಟೆಲಿಗ್ರಾಫು ಅಡ್ರೆಸು—"ಅಮೃತಾಂಜನ," ಮುಂಬಯಿ.

ರಬ್ಬರ್ ಹ್ಯಾಂಡ್ ಪ್ರೆಸ್.

114 14

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರಿಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೬ ರಿಂದ ೧೯ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲಗು, ಉರ್ದು, ಪರ್ಷಿಯನ್, ಅರಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳಕಾಲ ಹಿಡಿಯುವದು. ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ರೀತಿಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ

ನೋಟ್ ಪೇಪರ್ ಸೈಜು, ರೂಪಾಯಿ ४—೦—೦
ಹಾಫ್ ಫುಲ್‌ಸ್ಕ್ಯಾಫ್ ಸೈಜು, ೬—೦—೦.
ಪೋಸ್ಟೇಜು ಬೇರೆ (extra)

ವಿಳಾಸ:— ವರ್ಧಮಾನ ಏಜನ್ಸಿ,
ಪೋಸ್ಟ್ ಕಾಲಬಾದೇವಿ,
ಮುಂಬಯಿ.

ಸನ್ ೧೯೦೮ ನೇ ಇಸವಿಯ

127-7

ಎ ನಂ॥ ಜಿನೀವಾ. ಬಿ ನಂ॥ ಸಿ. ನಂ॥ ಜಿನೀವಾ ಡಿ ನಂ॥

ಪಂಚಾಂಗ ಸಹಿತವಾದ ಇಂಗ್ಲಿಷು—ಕನ್ನಡ ಡೈರಿ

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಬುಕ್‌ಕೀಪರ್ ಮುಂತಾದವರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಶೇಲಕ ಸಂ॥ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿಗಳು, ರೈಲ್ ಛಾರ್ಜು, ಕೋರ್ಟ ಫೀದು, ಪ್ರೊಫೆಸನ್ ರುಸುಂ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ನಿಭಂದನೆಗಳು, ಬಡ್ಡಿಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ವೃಕ್ಷಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲೆ, ದಿನ ಸಂಬಳದ ಪಟ್ಟಿ, ಥರ್ಮಾಮೀಟರ್, ಜನಾಬಿದೆ ನಕ್ಷೆ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾ [illegible] ರಲು ಹಾಕಿದೆ, ಕೆಂಪು ಸಾವರಿನ್ ಬೈಂಡು, ಚಿನ್ನ ಬೆಳ್ಳಿ [illegible] ಕ್ರಯ—

ಎ ನಂಬರ್ ಚಿಕ್ಕಸೈಜು ೩ ಆಣೆ	ಸಿ ನಂಬರು ದೊಡ್ಡಸೈಜು ೬ ಆ.
ಬಿ ಮುಚ್ಚಳದ್ದು ४ ,,	ಡಿ ,, ಮುಚ್ಚಳದ್ದು ೮ ,,

ಹೊಸ ನಮೂನೆ ಉತ್ಕೃಷ್ಟವಾದ 'ಜಿನೀವಾ' ಡೈರಿ. ಇದು ಸರ್ಕಾರದಲ್ಲಿ ರಿಜಿಸ್ಟರಾಗಿದೆ

"ಜಿನೀವಾ" ೧ ನಂ ೪ ಆ	"ಜಿನೀವಾ" ೨ ನಂ. ೬ ಆ.

ಪೋಸ್ಟು ಛಾರ್ಜು ಬೇರೆ ಒಂದೇ ನಮೂನೆಯ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ ವಿ. ಪಿ. ಮೂಲಕವೂ ತರಿಸಬಹುದು.

ಟಿ. ಕೆ. ಮತ್ತು ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಬಳ್ಳಾಪುರ ಪೇಟೆ, ಬೆಂಗಳೂರು ಸಿಟಿ.

ಮಹಾ ಬಾಧಾಪಹಾರಿಣಿಯು.

58-3

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು

ಕ್ಲೆಮೆಂಟ್‌ಯವರ ಹೆಕ್ಲೈನ್ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸುತ್ತದೆ. ದಾಕ್ಟರುಗಳು ವರ್ತಕರು, ಶಾಪ್ಕೀಪರ್ ಮುಂತಾದ ಅನೇಕರು ಒಪ್ಪಿ ಹೇಳುತ್ತಾರೆ. ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ನಾಯುನೋವು, ಚಳಿ, ಗಂಟ್ಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂಧುಕಟ್ಟುಗಳ ನೋವು, ಚೇಳುಕಡಿದ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಆಶ್ಚರ್ಯವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಆದರ ಹುಟ್ಟನ್ನೇ ಅಡಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಚ್. ಡಬ್ಲಿಯು. ಆರ್ಚ,

ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಸುಗಂಧ ಸಂಜೀವನೀ

ಬೃಂಗಾಮಲಕ ತೈಲವು.

5-2

ಒಂದು ೧೨ ಪ ಸಾರ್ಟಿಫಿಕೇಟುಗಳು ಹೆಚ್ಚುಬ್ಯಾಡ್‌ಸುಲಭಳಿಸುಯ ಅಲ್ಪಕಾಲದಲ್ಲಿ ಗುಣ ತೋರುವಾಗ ಸ್ತೋತ್ರವಾಗಲ್ಯಾಕೆ? ಅನೇಕ ಸಾವಿರ ಸೀಸೆಗಳು ವಿಕ್ರಯವಾದವು. ತಲೆಗೆ ತಂಪು ಕಣ್ಣಿಗೆ ಹಾಯಿ

ಮನುಷ್ಯನಿಗೆ ಕಿವಿನ್ನು, ನೇತ್ರ, ಮನಸ್ಸು ಪ್ರಧಾನವಾದವು. ಇವುಗಳನ್ನು ಎಷ್ಟು ಆರೋಗ್ಯವಾಗಿಯೂ ಪುಷ್ಟಿ ಮತ್ತು ತೇಜಸ್ಸು ಉಳ್ಳವಾಗಿ ಇಟ್ಟದ್ದರೂ ಅಷ್ಟು ಉತ್ತಮ ವಾದ್ದರಿಂದ ತೈಲ ವಿನಹ ಮ ಮತ್ಯಾವ ಔಷಧಿಯಿಂದಲೂ ಸಾಧ್ಯವಲ್ಲ. ಆದದರಿಂದ ಮೂಲಿಕಾದಿಗಳಿಂದ ಈ ತೈಲವನ್ನು ಮಾಡಿ ಇದೆ. ಈ ತೈಲವನ್ನು ತಲೆಗೂ, ಮೈಗೂ ಸಹಾ ಲೇಪಿಸಿ ಅಭ್ಯಂಗನಸ್ನಾನ ಮಾಡುವದರಿಂದ ತಲೆಯಲ್ಲಿ ಸುವಾಸನೆ, ಕೂದಲು ವೃದ್ಧಿಯಾಗುವದು. ನೇತ್ರಜ್ಯೋತಿವೃದ್ಧಿಯಾಗುವದು. ತಲೆನೋವು, ಅರ್ಧತಲೆನೋವು, ತಲೆಸುತ್ತುವದು, ತಲೆಶೂಲೆ, ತಲೆಭಾರ ಮುಂತಾದ್ದು ನಿವಾರಣೆಯಾಗುತ್ತವೆ. ಕಣ್ಣುರಿ ಸುರಿಯುವದು ಕಣ್ಣಾರಿ, ಕಣ್ಣುನೋವು ಮುಂತಾದವುಗಳಿಗೆ ಅತ್ಯಂತ ಗುಣಕಾರಿ. ಮೂಗಿನಿಂದ ರಕ್ತಸ್ರಾವ, ಮೂಗು ಒಣಗುವದು ಇವುಗಳನ್ನೆಲ್ಲಾ ಪರಿಹಾರ ಮಾಡುತ್ತೆ. ಮೈ ಕೆದುರದೆ ಮತ್ತು ಉರಿ ಮುಂತಾದ್ದು ನಿರ್ಮೂಲವಾಗುತ್ತದೆ. ಉಷ್ಣಾಧಿಕ್ಯದಿಂದ ಅಂಗೈ ಅಂಗಾಲಿನ ಉರಿ, ನಿದ್ರೆ ಬಾರದೆ ಇರುವದು ಇವೇ ಮೊದಲಾದ ವ್ಯಾಧಿಗಳನ್ನು ಗುಣಮಾಡುತ್ತದೆ. ಮೆದುಳಿಗೆ ತಂಪು ನಾಡಿ ಸ್ಮರಣಶಕ್ತಿ ಹೆಚ್ಚಿಸುವದು. ವಿದ್ಯಾರ್ಥಿಗಳಿಗೂ, ವಿಶೇಷ ಯೋಚನೆಯಿಂದ ಕೆಲಸಮಾಡತಕ್ಕವರಿಗೂ ಅತ್ಯಂತ ಉಪಯುಕ್ತವಾದದ್ದು. ಕ್ರಯ ಸೀಸೆ ೧ಕ್ಕೆ ೮ ಆಣೆ. ಅಂಚೆ ಹಾಸಲು ಬೇರೆ.

ರಕ್ತಶೋಧಕ ತೈಲವು.

ಅನೇಕ ಆಫೀಸರಿಂದ ಯೋಗ್ಯತಾಪತ್ರ ಹೊಂದಿದೆ. ಕ್ರಯ ಸುಲಭ

ಕ್ರಿಮಿಗುಣಕಾರಿ. ತುರಿ, ಹುರಕಾಲು, ಬಿಳುಪು, ನಡುಬಿಚ್ಚು, ಆನೆಕಜ್ಜಿ, ಮರ್ಮಸ್ಥಾನದ ಬಿಚ್ಚು ಮುಂತಾ ವ್ರಣವೇ ಆಗಲಿ, ಪುರಾತನ ವಿಷಪುರಿ, ಇತ್ಯಾದಿ ಮಹಾ ಕಠಿಣ ರೋಗಗಳೆಲ್ಲಾ ಶೀಘ್ರ ಆರೋಗ್ಯವಾಗುವದು. ಈ ತೈಲವನ್ನು ಲೇಪಿಸಿದರೆ ಉರಿಯುವದಿಲ್ಲ. ರಸ, ಗಂಧಕ, ಪೈಲತುತ್ತ ಮುಂತಾದದ್ದು ಖಂಡಿತವಾಗಿ ಇದರಲ್ಲಿ ಸೇರಿಸಿಲ್ಲ. ವಾತ್ಸ ಕರಪಾನ, ಇತ್ಯಾದಿ ಜಾಡ್ಯಗಳನ್ನೆಲ್ಲಾ ನಿಜರೋಗ ತಪ್ಪದೆ ಆರೋಗ್ಯ ಮಾಡುತ್ತದೆ. ಕ್ರಯ ಸೀಸೆ ೧ಕ್ಕೆ ೧೨ ಆಣೆ ಅಂಚೆ ಹಾಸಲು ೪ ಆಣೆ. ನಮ್ಮಿಂದ ಎರಡು ಔಷಧಗಳು ದೊರೆಯುವ ಸ್ಥಳ.—

ಬಿ. ಆರ್. ಗೋವಿಂದರಾಜುಲು,

೧೬೯, ಅರಳೇಪೇಟೆ, ಬೆಂಗಳೂರು ಸಿಟಿ.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು



1-3

ಬೆನ್ನೆಲುಬಿನಲ್ಲಿನ ನೋವು, ಸಕ್ಕುಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಬಜ್ಜಿದ ಗಳಿಗೆಳ ನೋವು, ವಾಯುನೋವು - ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ ಯಾವುದೆಂದರೇನು?

ಕೀಲುಗಳಲ್ಲೂ ಮಾಂಸಕಟ್ಟುಗಳಲ್ಲೂ ಗಾಯವಾಗುವುದು, ಉಳುಕಿಕೊಳ್ಳುವುದು, ಕಠಿಣವಾಗಿ ಬಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು— ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು   ಸಣ್ಣ ಸೀಸೆಗೆ ೧ ರೂಪಾಯಿ   ದೊಡ್ಡ ಸೀಸೆಗೆ ೨ ರೂಪಾಯಿ

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ. ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

31-43

SCOTT'S EMULSION.

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು.

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖ ಚೆನ್ನ ತೋರಿಸುವದು.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧವಾರಾಟಗಾರರಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನು ಮನುಷ್ಯ ಇರುವ ಔಷಧ ವನ್ನೇ ಕೊಂಡುಕೊಳ್ಳಿ.

ಶ್ರೀ ವೇದಾಂತ ಪಂಚದಶೀ.

6-2

ಸಮಸ್ತ ಆಸ್ತಿಕ ಮತಾವಲಂಬಿಗಳಾದ ಮುಮುಕ್ಷುಗಳಿಗೆ.

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯರಾದ ಶ್ರೀಮದ್ವಿದ್ಯಾರಣ್ಯಸ್ವಾಮಿಗಳು, ಶ್ರೀ ವೇದಾಂತ ಪಂಚದಶೀನಾಮಕ ಗ್ರಂಥವನ್ನು, ಮುಮುಕ್ಷುಜನ ಹಿತಾರ್ಥವಾಗಿ ಪೂರ್ವಕಾಲದಲ್ಲಿ ಗೀರ್ವಾಣ ಭಾಷೆಯಿಂದ ಶ್ಲೋಕಬದ್ಧವಾಗಿ ವಿರಚಿಸಿ ಮಾಡಿದ್ದರು.

ಅದಕ್ಕೆ ತತ್ಕಾಲದ ರಾಮಕೃಷ್ಣಾಖ್ಯಪಂಡಿತರು, ಸಂಸ್ಕೃತ ಭಾಷೆಯಿಂದ ವ್ಯಾಖ್ಯಾನ ಮಾಡಿದ್ದರು. ಆದರೆ ಮುಂದಿನಜ್ಞಾನಿಗಳಿಗೆ ಬೋಧೆಯಾಗುವದಿಲ್ಲವೆಂದರಿತು, ಸಂಕಲಿತವಾದ ಹೊಸಗನ್ನಡ ಭಾಷೆಯಿಂದ, ಪ್ರತಿಶ್ಲೋಕಕ್ಕೂ ಅನ್ವಯಾರ್ಥ, ಪ್ರತಿಪದ ಟೀಕೆ, ತಾತ್ಪರ್ಯ, ಭಾವಾರ್ಥ, ಮತ್ತು ವಿಶೇಷಾರ್ಥಗಳು, ಶಂಕಾಸಮಾಧಾನಗಳು, ಶ್ರಿಯದ ಪದಗಳಿಗೆ ಟಿಪ್ಪಣಿಗಳು, ವಿಷಯ ಸೂಚಕ ಕಾರಿಕೆಗಳು, ಮುಂತಾದವುಗಳು ವ್ಯಾಕರಣದ ಪದ್ಧತಿ ಮೀರಿಗೆ ಸುಂದರವಾದ ಮುದ್ರಾಬಗೆ ಅಕ್ಷರಗಳಿಂದ, ಒಳ್ಳೆ ಕಾಗದಗಳಿಂದ, ಒಳ್ಳೆಯ ಬೈಂಡಿನಿಂದ ಯುಕ್ತವಾಗಿರುವಂತೆ ಮುದ್ರಣ ಮಾಡಿಸಿರುವುದು. ಈ ಪುಸ್ತಕವು ೭೦೦ ಪುಟಗಳುಳ್ಳ ದೊಡ್ಡ ಸೈಜು ಉಳ್ಳದ್ದಾಗಿರುವದು.

ಮತ್ತು ಈ ಗ್ರಂಥಕ್ಕೆ ಸಮಾನವಾದ ವೇದಾಂತ ಪ್ರಕ್ರಿಯಾ ಗ್ರಂಥಗಳು ಯಾವೂ ಇಲ್ಲ. ಇದನ್ನು ಶ್ರದ್ಧೆಯಿಂದ ಪಠಿಸಿ ಅರ್ಥ ವಿಚಾರ ಮಾಡಿದವರಿಗೆ ಶೀಘ್ರವಾಗಿ ಸ್ವರೂಪಜ್ಞಾನೋದಯ ವಾಗುವುದು, ಇದಲ್ಲದೆ ಸಂಸ್ಕೃತ ಶಬ್ದಜ್ಞಾನವೂ ಉಂಟಾಗುವುದು.

ಆದ್ದರಿಂದ ವಿವೇಕಿಗಳಾದವರು ಶೀಘ್ರವಾಗಿ ಈ ಗ್ರಂಥದ ಶ್ರವಣ ಮನನಾದಿಗಳನ್ನು ಮಾಡಿ ಅಪರೋಕ್ಷಜ್ಞಾನವನ್ನು ಸಂಪಾದಿಸಿಕೊಂಡು, ಕೈವಲ್ಯ ನಿಶ್ರೇಯಸವನ್ನು ಸೂರೆಗೊಳ್ಳುವುದಕ್ಕೆ ಇದು ಸಮಯವಾಗಿದೆ. ಇದಕ್ಕೆ ಕೊಟ್ಟ ವಿತ್ತವು ಸತ್ಪಾತ್ರಕ್ಕೆ ವಿನಿಯೋಗಿಸಲ್ಪಡುವುದು ಖಂಡಿತವಿರಬೇಕು.

ಇದರ ಕ್ರಯ ಸ್ಥಳಕ್ಕೆ(ಮಾತ್ರ) ನಾಲ್ಕುರೂಪಾಯಿ, ಪರಸ್ಥಳಕ್ಕೆ ವಿ. ಪಿ. ಛಾರ್ಜಿ ಪ್ರತ್ಯೇಕ.

ಇದು ದೊರೆಯತಕ್ಕ ಸ್ಥಳ (೧) ಬೆಂಗಳೂರು ಸಿಟಿ ಕಲಾಸಿಪಾಳ್ಯದಲ್ಲಿರುವ ಶ್ರೀಮನ್ಸಚ್ಚಿದಾನಂದ ಸರಸ್ವತಿ ಸ್ವಾಮಿಗಳ ಬಳಿಯಲ್ಲಿ ದೊರೆಯುವುದು. ಅಥವಾ, (೨) ಬೆಂಗಳೂರು ಸಿಟಿ ದೊಡ್ಡಪೇಟೆ ಚೌಕದ ಬಳಿ ಚಿಕ್ಕ ಪೇಟೆಗೆ ಸೇರಿದ ಬುಕ್ ಡಿಪೋ, ಸತ್ರಂ ಚಂದ್ರಶೇಖರಯ್ಯ ಸುಬ್ರಹ್ಮಣ್ಯಯ್ಯನವರಿಗೆ ಬರೆದು ಸೇಕು ಅಲ್ಲದೆ, (೩) ಮೈಸೂರು ನಗರದ ಮೊಹಲ್ಲಾದಲ್ಲಿರುವ ಚಿಲ್ಲರೆ ಅಂಗಡಿ ವೆಂಕಣ್ಣನವರಲ್ಲಿ ದೊರೆಯುವುದು.

The Pourwal Cash Bazzar—Bangalore City.

ಧಾರಿವಾಲ್ (ಪಂಜಾಬ್) ಶಾಲುಗಳು.

130 6

ಕೆಂಪು, ಎಣ್ಣೆ ಬಣ್ಣ, ಕೆಂಪು, ಕೇಸರಿ, ಹಸರು, ನಕ್ಷತ್ರ ಬಣ್ಣ, ಬಾದಾಮಿ, ಕಪ್ಪು, ಬಿಳುಪು, ಮುಂತಾದ ಬಣ್ಣದ್ದು, ಮತ್ತು ಚಕ್ ನಮೂನೆ, ಪೂರ ಆರು ಮೊಳ ಉದ್ದ ಮೂರು ಮೊಳ ಅಗಲವುಳ್ಳದ್ದು.

ಈಗತಾನೇ ವಿಲಾಯತಿಯಿಂದ ಬಂದಿರುವ ೫,೦೦೦ ಪೌಂಡು ಟೋಪಿಗೆ ಲಾಯಖಾದ ತರಹೆವಾರಿ ಉಲ್ ಮತ್ತು ಇವುಗಳಲ್ಲಿ ತಯಾರಾದ ತರಹೆವಾರಿ ಟೋಪಿಗಳು ನಮ್ಮಲ್ಲಿ ಸಿದ್ಧವಾಗಿರುತ್ತವೆ.

ಇವುಗಳಲ್ಲದೆ ನೀವು ಕೇಳುವ ಯಾವ ಸಾಮಾನೇ ಆಗಲಿ ನಂಬಿಕೆಯಿಂದ ಅಗ್ಗವಾಗಿ ಕಳುಹಿಸುವೆವು. ಪರೀದಿ ವಗೈರೆ ತಿಳಿಯಬೇಕಾದವರು ಇವರಿಗೆ ಬರೆಯಿರಿ—

ಹೆಚ್. ಜವಾರ್ ಮಲ್ ಕಂಪೆನಿ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ವ್ಯವಹಾರನಿರ್ಣಯ.

ಕನ್ನಡದ ಲಾ ಪುಸ್ತಕವು

12

ದ್ವಿತೀಯಮುದ್ರಣ.

ಪುಟಗಳು ೫೪೦ ಕ್ರಯ ವಿ. ಪಿ. ಸೇರಿ ಸಾಧಾರಣಪ್ರತಿಗೆ ರೂ. ೧-೧೨-೦, ಉತ್ತಮಪ್ರತಿಗೆ ರೂ. ೨-೮-೦

ಈ ಮುದ್ರಣದ ಮುಕ್ಕಾಲು ಭಾಗವೆಲ್ಲಾ ಹೊಸದಾಗಿ ಬರೆಯಲ್ಪಟ್ಟು ವಿಸ್ತರಿಸಲ್ಪಟ್ಟಿದೆ. ಹಿಂದೂ ಲಾ (ಸ್ಮೃತಿವಚನಗಳೊಡನೆ) ಮಹಮ್ಮದೀಯ ಲಾ, ಪೀನಲ್ ಕೋಡು ಇವುಗಳು ವಿಶೇಷವಾಗಿ ವಿಸ್ತರಿಸಲ್ಪಟ್ಟಿವೆ. ಮೈಸೂರು, ಮದರಾಸು, ಬೊಂಬಾಯಿ ಸೀಮೆಗಳಿಗೆ ಸಾಮಾನ್ಯವಾದ ಲಾ ಸ್ವತಸ್ವತ್ತಿನ ವಿಲೇವಾರಿ, ಅನಾಥರಕ್ಷಣೆ, ಸ್ತ್ರೀಸ್ವತ್ತು ವಾರಸು ಹಕ್ಕು, ಈ ವಿಷಯಕವಾದ ಖಾನೂನುಗಳು ಹೊಸದಾಗಿ ಸೇರಿಸಲ್ಪಟ್ಟಿವೆ. ೫೫ ಖಾನೂನುಗಳು, ಅನೇಕ ಇಂಗ್ಲಿಷ್ ಗ್ರಂಥಗಳು, ಹೈಕೋರ್ಟು, ಚೀಫ್ ಕೋರ್ಟುಗಳ ರಿಪೋರ್ಟುಗಳು ಇವುಗಳಿಂದ ಸಂಗ್ರಹ ಮಾಡಲ್ಪಟ್ಟಿದೆ. ಸಮಸ್ತ ವ್ಯವಹಾರಗಳಿಗೂ ಬೇಕಾಗುವ ೯೦ ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್, ಕ್ರಿಮಿನಲ್ ಕೋರ್ಟುಗಳಿಗೂ, ಪೋಲೀಸಿಗೂ ಬರೆಯಬೇಕಾದ ಅರ್ಜಿಗಳ ೬೫ ತರದ ನಮೂನೆಗಳೂ ಇದರಲ್ಲಡಗಿವೆ. ಕಳೆದ ಮೇ ತಿಂಗಳಲ್ಲಿ ಮುದ್ರಿಸಿದ್ದ ೧,೫೦೦ ಪ್ರತಿಗಳು ೩ ತಿಂಗಳಲ್ಲೇ ಖರ್ಚಾಗಿಹೋದುದರಿಂದ ಇದರ ಉಪಯುಕ್ತತೆಯು ತಿಳಿದುಬರುವುದು. ಪ್ರೋತ್ಸಾಹ ಪಡೆಸ್ಪಟ್ಟ ಮೇಲ ಕಂಡಂತೆ ಇದರ ಉಪಯುಕ್ತತೆಯನ್ನು ಮತ್ತಷ್ಟು ಹೆಚ್ಚು ಮಾಡಿದೆ. ವಿಷಯಪರಿಮಾಣಾಧಿಕ್ಯ, ಸ್ಪಷ್ಟತರ, ಉತ್ತಮವಾದ ಕಾಗದ, ಬಟ್ಟೆಯ ಬೈಂಡ್ ಇವುಗಳಿಂದ ಈ ಸಲದ ಮುದ್ರಣವು ಬಹಳ ಪ್ರಶಸ್ತವಾಗಿದ್ದರೂ ಅನುಕೂಲಿಸಿಗೆ ಸುಲಭಗ್ರಾಹ್ಯವಾಗಲು ಮೊದಲನೆಯದಕ್ಕಿಂತಲೂ ಬೆಲೆಯಲ್ಲಿ ನಾಲ್ಕಾಣೆ ಮಾತ್ರ ಹೆಚ್ಚಿಸಿದೆ. ಆದರೆ ಕೆಲವು ಶ್ರೀಮಂತರ ಸೌಕರ್ಯಕ್ಕಾಗಿ ಬೇರೆ ಅತ್ಯುತ್ತಮವಾದ ಕಾಗದದಲ್ಲಿ ಬಹಳ ಸ್ವಲ್ಪ ಪ್ರತಿಗಳನ್ನು ಮಾತ್ರ ಅಚ್ಚುಮಾಡಿಸಿ ರೂ. ೨-೮-೦ ಕ್ರಯ ಇಟ್ಟಿದೆ. "ಈ ೨-೮-೦ ಕ್ರಯದ ಬೆಲೆಯ ಪ್ರತಿಯನ್ನು ಕಳುಹಿಸಿ" ಎಂದು ಕಂಡಿತವಾಗಿ ಬರೆದರೆ ಹೊರತು, ಇಲ್ಲದಿದ್ದರೆ ಸಾಧಾರಣಪ್ರತಿಯನ್ನೇ ರವಾನಿಸುವೆವು. ೧ ನೇ ಮುದ್ರಣದ ಪ್ರತಿಗಳು ಮುಗಿದುಹೋದುದರಿಂದಲೂ, ೨ ನೇ ಮುದ್ರಣವು ೫-೧೦-೧೯೦೭ ರಲ್ಲಿ ಪೂರಯಿಸಿತಾದುದರಿಂದಲೂ ಈಗ್ಗೆ ೪ ತಿಂಗಳಿಂದಲೂ ಬರೆದುಕೊಳ್ಳುತ್ತಿರುವವರಿಗೆ ಪುಸ್ತಕವನ್ನು ಕಳುಹಿಸಲಿಲ್ಲ.

ಪುಸ್ತಕ ಅಪೇಕ್ಷಿಸುವವರು ಬರೆಯುವ ವಿಳಾಸ—ಗ್ರಂಥಕರ್ತರು, ಎಂ. ಮಲ್ಲಾರಾಧ್ಯರು,

ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು

ವೃತ್ತಾಂತ ಪತ್ರಿಕೆ.

೧೯೦೪ ನೇ ಇಸವಿ ಜನವರಿ ೮ನೇ ಗುರುವಾರ

೧೯೦೩ ನೇ ವರುಷವು

ಈಗತಾನೇ ಮುಗಿದ ೧೯೦೩ ನೇ ವರುಷದಲ್ಲಿ ಈ ರಾಷ್ಟ್ರದೊಳಗೆ ಬಹು ವಿಶೇಷವಾದ ಕಾರ್ಯಗಳು ನಡೆದುದರಿಂದ ವಿಲಾಯತಿಯ ಮತ್ತು ಪ್ರಪಂಚದ ಇತರ ಭಾಗಗಳ ದೃಷ್ಟಿಯು ಹಿಂದುಸ್ಥಾನದ ಕಡೆ ತಿರುಗಿತು. ಪಂಜಾಬ್ ಆಧಿಪತ್ಯದಲ್ಲಿ ದಂಗೆಯುಂಟಾಗಬಹುದೆಂಬದಾಗಿ ಗಾಬರಿ ಹುಟ್ಟಿ, ಗವರ್ನಮೆಂಟಿನವರು ತಮ್ಮ ದರ್ಪವನ್ನೂ ಪ್ರಜಾ ನೆಮ್ಮದಿಯನ್ನೂ ಕಾಪಾಡಿಕೊಳ್ಳುವುದಕ್ಕೆ ಮುಖಂಡರನ್ನು ಗಡೀಪಾರು ಮಾಡಿದರು; ಗಣ್ಯರಾದ ಹಲವು ಜನರನ್ನು ಹಿಡಿಸಿ ಜಪ್ತಿ ಮಾಡಿಸಿದರು. ಬಂಗಾಳಾ ಮತ್ತು ಪಂಜಾಬಿನಲ್ಲೂ ಜನರು ಮೀಟಿಂಗುಗಳನ್ನು ನಡಿಸದಂತೆಯೂ, ವಿದ್ಯಾಭ್ಯಾಸ ಮಾಡತಕ್ಕ ಬಾಲಕರ ಮನಸ್ಸು ರಾಜಕೀಯ ವಿಚಾರಗಳಿಗೆ ಬೀಳದಂತೆಯೂ ಕಾನೂನು ಮಾಡಬೇಕಾಯಿತು. ರಾಜದ್ರೋಹಕರವಾದ ವಿಚಾರಗಳನ್ನು ಕುರಿತು ಬಾತ್ಮಿಗಳನ್ನು ಪ್ರಕಟಿಸಿದರೆಂದು ಕೆಲವು ಬಂಗಾಳಾ ವರ್ತಮಾನ ಪತ್ರಿಕೆಗಳ ಎಡಿಟರುಗಳ ಮೇಲೆ ಮೊಕದ್ದಮೆ ಬಂದು, ಶಿಕ್ಷೆಯೂ ವಿಧಿಸಲ್ಪಟ್ಟಿತು. ಗವರ್ನಮೆಂಟಿನವರು ಈ ರೀತಿ ತಮ್ಮ ಶೌರ್ಯಭಾವವನ್ನು ತೋರಿಸಿದ ಮೇಲೆ ಅಲ್ಲಲ್ಲಿ ಗಲಭೆ ಮುಂತಾದದ್ದು ಕಡಮೆಯಾಯಿತೆನ್ನುವುದಕ್ಕೆ ಸಂಶಯವಿಲ್ಲ. ಆದರೂ ಪೂರ್ವ ಬಂಗಾಳಾ ಸ್ಥಿತಿ ಇನ್ನೂ ತೃಪ್ತಿಕರವಾಗಿಲ್ಲ. ಮದರಾಸ್ ಅಧಿಪತ್ಯದ ಕಾಕಿನಾಡಾ ಮತ್ತು ರಾಜಮಂಧ್ರಿಯಲ್ಲಿ ಕೂಡ ಗಲಭೆಗಳುಂಟಾಗಿ ಬೇಗನೆ ಶಮನವಾದವು.

ಇತ್ತಲಾಗಿ ಈ ರಾಷ್ಟ್ರದ ರಾಜಕೀಯ ವಿಚಾರದಲ್ಲಿ ದೇಶೀಯರಿಗೆ ತಕ್ಕಮಟ್ಟಿಗೂ ಹೆಚ್ಚು ಜವಾಬ್ದಾರಿಯನ್ನು ವಹಿಸಿಕೊಡುವುದು ಅವಶ್ಯವೆಂದು ಕಂಡುಬಂದದ್ದರಿಂದ ಇಂಗ್ಲಿಷ್ ಗವರ್ನಮೆಂಟಿನವರು ಅದಕ್ಕೆ ತಕ್ಕ ಏರ್ಪಾಡುಗಳನ್ನು ಪ್ರಾರಂಭಿಸಿದರು. ದೇಶೀಯ ರಾಜರುಗಳ ಸಭೆಯನ್ನು ಕಲ್ಪಿಸುವುದು, ಗವರ್ನರ್ ಜನರಲ್ ರವರ ಮತ್ತು ಬೇರೆ ಬೇರೆ ಅಧಿಪತ್ಯಗಳ ಮಂತ್ರಾಲೋಚನಾ ಸಭೆಗಳಿಗೆ ದೇಶೀಯರನ್ನು ಹೆಚ್ಚಾಗಿ ನೇಮಿಸಿಕೊಳ್ಳುವುದು, ಸ್ಥಳಾಧಿಕಾರಿಗಳಿಗೆ ಹೆಚ್ಚು ಜವಾಬ್ದಾರಿಯನ್ನು ವಹಿಸುವುದು, ಈ ಮೊದಲಾದುವನ್ನು ಕುರಿತು ಗವರ್ನಮೆಂಟಿನವರು ಆಲೋಚಿಸುತ್ತಿದ್ದಾರೆ. ವಿಲಾಯತಿಯಲ್ಲಿರುವ ಸ್ಟೇಟ್ ಸೆಕ್ರೆಟರಿಯವರ ಸಭೆಗೆ ಇದುವರೆಗೆ ಹಿಂದುಸ್ಥಾನದ ಮೆಂಬರುಗಳನ್ನು ನೇಮಿಸುವ ಪದ್ಧತಿಯೇ ಇರಲಿಲ್ಲ. ಕಳೆದ ವರುಷವು ಬಿಲ್‌ಗ್ರಾಮಿಯವರನ್ನೂ ಮಿ| ಗುಪ್ತರನ್ನೂ ಚುನಾಯಿಸಿ ನೇಮಿಸಿಕೊಂಡಿದ್ದಾರೆ. ಇದೆಲ್ಲಾ ಈ ರಾಷ್ಟ್ರದ ಶುಭೋದಯವೆಂದು ಹೇಳಬಹುದು. ಅದರೆ ಗವರ್ನಮೆಂಟಿನವರು ಆಫ್ರಿಕಾ, ಆಸ್ಟ್ರೇಲಿಯಾ, ಕ್ಯಾನಡಾ, ಈ ಭಾಗಗಳಿಗೆ ಹೋಗಿ ಜೀವನ ಮಾಡುತ್ತಿರುವ ಹಿಂದುಸ್ಥಾನದ ಪ್ರಜೆಗಳಿಗಿರತಕ್ಕ ಕಿರುಕುಳವನ್ನು ನಿವಾರಣೆಮಾಡಿ, ಅವರ ಕ್ಷೇಮಾಭಿವೃದ್ಧಿಯನ್ನು ಕಾಪಾಡಬೇಕಾಗಿರುತ್ತದೆ.

ಹೊಸವರುಷದ ಸಲಹೆಗಳು.

ಭೂಲೋಕ ಚರಿತ್ರೆಯಲ್ಲಿ ಇಪ್ಪತ್ತನೇ ಶತಮಾನವು ಪ್ರಸಿದ್ಧವಾದುದು. ಈ ಶತಮಾನವು ಪ್ರಾರಂಭವಾಗಿ ೮ ವರುಷಗಳಾದವು. ಇಷ್ಟು ಕಾಲದಲ್ಲಿ ಪರೋಕ್ಷ ಸಂಪರ್ಕದಿಂದ ಅಸ್ವಾಭಾವಿಕವಾಗಿ ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿಯನ್ನು ಪಡೆಯಲು ಅಸಾಧಾರಣವಾದ ಪ್ರಯತ್ನಗಳನ್ನು ಮಾಡುತ್ತಿರುವುದು ಜಪಾನ್ ದೇಶವನ್ನು ನೋಡಿದರೆ ಅದು ನಾಗರೀಕತೆಯನ್ನು ಪಡೆದಿರುವ ಬೇರೆ ದೇಶಗಳನ್ನು ಹಿಂದೆ ಹಾಕುವುದೋ ಏನೋ ಎಂಬಂತೆ ಚಟುವಟಿಕೆಯನ್ನು ತೋರಿಸುತ್ತಿರುವುದು. ಚೀನಾದೇಶವು ತನ್ನ ದೀರ್ಘವಾದ ನಿದ್ರೆಯಿಂದೆದ್ದು ತಾನು ಕಳೆದುಕೊಂಡಿರುವ ಶಕ್ತಿಯನ್ನು ಸಂಪಾದಿಸಲು ಪ್ರಯತ್ನಿಸುತ್ತಿರುವುದು. ಪರ್ಷ್ಯ ದೇಶವು ಕೂಡ ಮುಂದಕ್ಕೆ ಬರುತ್ತಿದೆ. ನಮ್ಮ ಪುರಾತನ ದೇಶವಾದ ಈ ಹಿಂದೂ ದೇಶವನ್ನು ಯೋಚಿಸಿದರೆ ಇಲ್ಲಿಯೂ ಕೂಡ ನಾವು ಅಭಿವೃದ್ಧಿಯನ್ನು ನೋಡಬಹುದು. ಜನರು ದೇಶಾಭ್ಯುದಯವನ್ನು ಮುಂದಿಟ್ಟು ಕಾರ್ಯ ಸಾಧಿಸುವರು ಸಹೋದರ ಭಾವವನ್ನು ಕುರಿತು ಅಂದರೆ ಎಲ್ಲರೂ ಸಹೋದರರೆಂಬುದನ್ನು ಸಾಧಾರಣವಾಗಿ ಒಪ್ಪಿಕೊಳ್ಳುವರು. ದೇಶದ ಸ್ತ್ರೀಯರನ್ನು ವಿದ್ಯಾವತಿಯರನ್ನಾಗಿ ಮಾಡಿದರೆ ದೇಶವು ಅಭಿವೃದ್ಧಿ ಹೊಂದುವುದೆನ್ನುವರು. ಅಲ್ಲಲ್ಲಿ ಕೆಲವರಿರುವರು. ಸ್ವದೇಶಿ ಉತ್ಸಾಹಿಗಳು ದೇಶದ ಕೈಗಾರಿಕೆಗಳನ್ನು ವೃದ್ಧಿಪಡಿಸಲು ಮಾಡುತ್ತಿರುವ ಪ್ರಯತ್ನಗಳು ಎಲ್ಲರಿಗೂ ಗೊತ್ತಾಗಿವೆ. ಕನ್ಯಾಕುಮಾರಿಯಿಂದ ಹಿಮಾಚಲದವರೆಗೂ ಜನರು ಸ್ವದೇಶಾಭಿಮಾನದಿಂದ ಕೂಡಿ ದೇಶಾಭ್ಯುದಯವನ್ನು ಬಯಸುವಲ್ಲಿ ನಾವವರಿಗೆ ಕೆಲವು ಮಾತುಗಳನ್ನು ತಿಳಿಸುವೆವು.

ಮೊದಲನೇದಾಗಿ ಸತ್ಯತೆಯು ಎಲ್ಲಾ ತರವಾದ ಅಭಿವೃದ್ಧಿಗೂ ಮೂಲಕಾರಣವು. ಇದಿಲ್ಲದೆ ಬೇರೆ ಸಹಿಯನ್ನು ಬಂದೆಯು ಮೇಲೆ ಪಟ್ಟಿಯಾಗಿ ಹಾ. ಅಸತ್ಯವಂತರಾದ ಜನರು ಅಭಿವೃದ್ಧಿಯನ್ನು ಹೊಂದುವುದಸಾಧ್ಯ. ಅವರನ್ನು ಯಾರೂ ನಂಬುವುದಿಲ್ಲವು. ಅವರೊಂದಿಗೆ ವ್ಯಾಪಾರ ನಡಿಸಲು ಪರರು ಒಡಂಬಡರು. ಅಸದ ಪಿಡುಗುಳ್ಳವನಿಗೂ ಘನತರವಾದ ಅಭಿಪ್ರಾಯವು ಇರಲಾರದು. ಭಗವಂತನ ಮೇಲಿನ ಪ್ರೀತಿಯೇ ಸತ್ಯಕ್ಕೆ ಮೂಲಾಧಾರವು. ಸತ್ಯವಂತನು ಮುಖದಾಕ್ಷಿಣ್ಯಕ್ಕೆ ಸತ್ಯವನ್ನು ಮರೆಯನು. ಪ್ರಾಣಾಪಾಯದಲ್ಲಿದ್ದರೂ ಸತ್ಯವನ್ನೆಂದಿಗೂ ತ್ಯಜಿಸನು. ತನ್ನ ದೇಶಬಾಂಧವರು ತಪ್ಪಾದ ಮಾರ್ಗವನ್ನನುಸರಿಸಿದರೆ ತಾನು ತನ್ನ ಅಭಿಪ್ರಾಯವನ್ನು ಧೈರ್ಯವಾಗಿ ತಿಳಿಸುವನು. ಪರರ ಹಿತವನ್ನು ರಾತ್ರಿ ಹಗಲು ಧ್ಯಾನಿಸುವನು. ಅವನು ಸ್ವಾರ್ಥಪರನಾಗಿರನು. ಪರೋಪಕಾರವೇ ಅವನಿಗೆ ಆಭರಣವಾಗಿರುವುದು. ದೇಶಬಾಂಧವರೇ ಸತ್ಯತೆಯೇ ದೇಶಾಭ್ಯುದಯಕ್ಕೆ ಮೂಲಕಾರಣವೆಂದರಿಯಿರಾ? ಯಾವ ತರವಾದ ಲೌಕಿಕ ಸಾಧನೆಯ ಮೂಲಕ ನಾವು ಸತ್ಯತೆಯನ್ನು ಸಂಪಾದಿಸಲಾರೆವು. ಅದು ಹಣವು ಯಾದಿಂದ ಬರತಕ್ಕದ್ದಲ್ಲ. ಹಾಗಿದ್ದ ಪಕ್ಷದಲ್ಲಿ ಅದನ್ನು ಅನೇಕ ಸಾಮ್ರಾಜ್ಯರು ಹಣಕ್ಕೆ ಕೊಳ್ಳುತ್ತಿದ್ದರು. ಅದನ್ನು ಭುಜಬಲ ಶಕ್ತಿಯಿಂದ ಸಂಪಾದಿಸಲಸಾಧ್ಯವು. ಅನೇಕ ವೀರರು ಅಸತ್ಯವಂತರೆಂದೆನಿಸಿಕೊಂಡಿರುವುದನ್ನು ನೀವು ಕೇಳಿರುವಿರಿ. ಹಾಗಾದರೆ ಸತ್ಯವನ್ನಪೇಕ್ಷಿಸಿ ಅದನ್ನು ನಿಕ್ಷೇಪದಂತಿಟ್ಟುಕೊಳ್ಳುವುದಕ್ಕೆ ಬಯಸುವ ನೀವು ಅದಕ್ಕೆ ಮೂಲ ಬುಗ್ಗೆಯಾಗಿರುವ ದೇವರ ಬಳಿಗೇನೇ ಹೋಗತಕ್ಕದ್ದಾಗಿರುತ್ತದೆ. ಆತನ ಭಕ್ತಾದಿಗಳಿಗೆ ಮಾತ್ರ ಅದು ದೊರಕತಕ್ಕ ಸಂಪದವಾಗಿರುತ್ತದೆ. "ಸುಳ್ಳು ನಾಲಿಗೆ ದೇವರಿಗೆ ಅಸಹ್ಯವಾಗಿದೆ" ಯೆಂದು ಸತ್ಯವೇದ ಗ್ರಂಥವು ತಿಳಿಸುತ್ತದೆ.

ಎರಡನೇದಾಗಿ ಪ್ರೀತಿ ಇದು ದ್ವೇಷಕ್ಕೆ ವಿರುದ್ಧವಾದ ಗುಣ. ದೇಶದ ಮೇಲಿನ ಪ್ರೀತಿಯು ಒಂದುವೇಳೆ ಪರರ ಮೇಲಿರುವ ದ್ವೇಷದಿಂದ ಹುಟ್ಟಬಹುದು. ಸ್ನೇಹಿತರ ಮೇಲಿರುವ ಪ್ರೀತಿಯು ಒಂದುವೇಳೆ ಸ್ವಾರ್ಥದಿಂದ ಕೂಡಿರಬಹುದು. ಜನಸಮುದಾಯದ ಮೇಲಿನ ಪ್ರೀತಿಯು ಒಂದುವೇಳೆ ಅವರ ಹೊಗಳಿಕೆಗೆ ಪಾತ್ರರಾಗಬೇಕೆಂಬುವ ದುರಾಶೆಯಿಂದ ಕೂಡಿರಬಹುದು. ಅರ್ಥಾಪೇಕ್ಷೆಯು ಯಾವ ವಿಧವಾದ ಪ್ರೀತಿಯನ್ನು ತಾನೇ ಹುಟ್ಟಿಸಲಾರದು. ಆದರೆ ಇವೆಲ್ಲವುಗಳಿಗಿಂತ ಅತಿಶ್ರೇಷ್ಠವಾದ ಪ್ರೀತಿಯು ಒಂದಿರುತ್ತದೆ. ಆ ಪ್ರೀತಿಯು ಇದಿರುವಲ್ಲಿ ಯಾವ ದ್ವೇಷವೂ ನಿಲ್ಲಲಾರದು. ಅದಕ್ಕೆ ಬಣ್ಣಭಾವಗಳ ಭೇದಗಳು ಕಾಣಬರುವುದಿಲ್ಲ. ಐಶ್ವರ್ಯವಂತನನ್ನು ಅಂಗೀಕರಿಸುವುದೂ ದರಿದ್ರನನ್ನು ನಿರಾಕರಿಸುವುದೂ ಅದರ ಲಕ್ಷಣಗಳಲ್ಲ. ಸ್ವಪ್ರತಿಷ್ಠೆಯು ಅದರ ಉತ್ತರ ಬರಕೂಡದು. ಅದು ಸದಾ ಶಾಂತತ್ವವನ್ನು ತಾಳಿರುವುದು. ಪರೋಪಕಾರವೇ ಅದರ ಭೂಷಣ. ಸತ್ಯವೇದಗ್ರಂಥದಲ್ಲಿ ಪ್ರೀತಿಯ ವಿಷಯ ಶ್ರೀಪೌಲನೆಂಬ ಪ್ರಸಿದ್ಧ ಪುರುಷನು ಈ ರೀತಿಯಾಗಿ ತಿಳಿಸುವನು "ನಾನು ಮನುಷ್ಯಭಾಷೆಗಳನ್ನೂ ದೇವದೂತರ ಭಾಷೆಗಳನ್ನೂ ಆಡುವವನಾದಾಗ್ಯೂ ಪ್ರೀತಿಯಿಲ್ಲದವನಾಗಿದ್ದರೆ, ಬಾರಿಸುವ ಕಂಚೂ ಗಣಗಣಿಸುವ ತಾಳವೂ ಆಗಿದ್ದೇನೆ. ನನಗೆ ಪ್ರವಾದಿಸುವ ವರವಿದ್ದರೂ, ದೇವರು ತಿಳಿಸಿರುವ ಎಲ್ಲಾ ರಹಸ್ಯಗಳೂ ಸಕಲ ವಿಧವಾದ ವಿದ್ಯೆಯೂ ತಿಳಿದರೂ ಬೆಟ್ಟಗಳನ್ನು ತೆಗೆದಿಡುವದಕ್ಕೆ ಬೇಕಾದಷ್ಟು ನಂಬಿಕೆಯಿದ್ದರೂ ನಾನು ಪ್ರೀತಿಯಿಲ್ಲದವನಾಗಿದ್ದರೆ ಏನೂ ಅಲ್ಲದವನಾಗಿದ್ದೇನೆ. ನನಗಿರುವದೆಲ್ಲವನ್ನು ಅನ್ನದಾನಮಾಡಿದರೂ ನನ್ನ ದೇಹವನ್ನು ಸುಡುವದಕ್ಕೆ ಒಪ್ಪಿಸಿದರೂ ಪ್ರೀತಿಯು ನನಗಿಲ್ಲದಿದ್ದರೆ ನನಗೇನೂ ಪ್ರಯೋಜನವಾಗುವದಿಲ್ಲ. ಪ್ರೀತಿ ಬಹು ತಾಳ್ಮೆಯುಳ್ಳದ್ದು. ಪ್ರೀತಿ ದಯೆತೋರಿಸುವುದು. ಪ್ರೀತಿಯು ಹೊಟ್ಟೆಕಿಚ್ಚು ಪಡುವದಿಲ್ಲ. ಉಬ್ಬಿಕೊಳ್ಳುವದಿಲ್ಲ. ಮರ್ಯಾದೆಗೆಟ್ಟು ನಡೆಯುವದಿಲ್ಲ. ಸ್ವಪ್ರಯೋಜನವನ್ನು ಚಿಂತಿಸುವುದಿಲ್ಲ. ಸಿಟ್ಟುಗೊಳ್ಳುವದಿಲ್ಲ. ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ. ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆ, ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ, ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ, ಎಲ್ಲವನ್ನೂ ಸಹಿಸಿಕೊಳ್ಳುತ್ತದೆ, ಪ್ರೀತಿಯು ಎಂದಿಗೂ ಬಿದ್ದುಹೋಗುವುದಿಲ್ಲ" ದೇಶಾಭಿಮಾನಿಗಳು ಮೇಲೆ ವಿವರಿಸಿದ ಉತ್ತಮತರದ ಪ್ರೀತಿಯನ್ನು ಅಭ್ಯಾಸಿಸತಕ್ಕದ್ದು.

ಮೂರನೇದಾಗಿ ಎಲ್ಲರೂ ಕೃತಜ್ಞತೆಯುಳ್ಳವರಾಗಿರಬೇಕು. ನಾವೆಲ್ಲರೂ ಮನುಷ್ಯಮಾತ್ರದವರಾಗಿದ್ದೇವೆ. ದೇವರು ನಮ್ಮನ್ನು ಸೃಷ್ಟಿಸಿದನು. ಆತನು ಚಿರಂಜೀವಿಯಾಗಿದ್ದಾನೆ. ನಾವಾದರೋ ಅಸ್ಥಿರರು. ಆತನು ಮಹಾ ಬಲಿಷ್ಠನು. ನಾವಾದರೋ ಅಬಲರು. ಆತನು ಸರ್ವಗುಣಸಂಪನ್ನನು. ನಾವಾದರೋ ಪಾಪಿಗಳಾಗಿರುತ್ತೇವೆ. ಹೀಗಿರುವಲ್ಲಿ ಆತನು ನಮಗೆ ತೋರಿಸಿರತಕ್ಕ ಉಪಕಾರಗಳನ್ನು ಸ್ಮರಿಸಿ ಆತನಿಗೆ ಕೃತಜ್ಞರಾಗಿರುವುದು ನಮ್ಮ ಕರ್ತವ್ಯವಾಗಿರುತ್ತದೆ. ಮಾತ್ರ ದೇವರಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸುವುದಲ್ಲದೆ ಮನುಷ್ಯರಿಗೂ ಅವರು ಮಾಡಿರುವ ಎಲ್ಲಾ ಉಪಕಾರಗಳಿಗಾಗಿ ನಮ್ಮ ಕೃತಜ್ಞತೆಯನ್ನು ಸಲ್ಲಿಸಬೇಕಾಗಿರುತ್ತದೆ. ನಮ್ಮ ದೇಶಕ್ಕೆ ಆಂಗ್ಲೇಯ ಪ್ರಭುತ್ವದವರು ಮಾಡಿರುವ ಉಪಕಾರಗಳನ್ನು ಅಷ್ಟಿಷ್ಟೆಂದು ವರ್ಣಿಸುವದಸಾಧ್ಯವು. ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ತಂದವರು ಅವರೇ. ನಮ್ಮ ದೇಶವನ್ನು ಅಭಿವೃದ್ಧಿಮಾಡುವುದಕ್ಕೆ ದೇಶೀಯರಿಗಿಂತಲು ಆಂಗ್ಲೇಯರೇ ಹೆಚ್ಚಾದ ಪ್ರಯತ್ನಗಳನ್ನು ಮಾಡುತ್ತಲಿರುವರು. ದೇಶಾಭ್ಯುದಯಕ್ಕೆ ಉಪಯುಕ್ತವಾದ ಕಾರ್ಯಗಳಲ್ಲಿ ಅವರೇ ಮುಂದಾಳುಗಳಾಗಿರುತ್ತಾರೆ. ಹೀಗಿರುವಲ್ಲಿ ಅವರನ್ನು ವಿರೋಧಿಸುವದು ಕೇವಲ ಕೃತಘ್ನತನವಾಗಿರುತ್ತದೆ. ಈ ಹೊಸ ವರುಷದಲ್ಲಿ ನಮ್ಮಲ್ಲಿ ಕೃತಜ್ಞತಾಭಾವವು ಹೆಚ್ಚುವಂತೆ ಪ್ರಾರ್ಥಿಸಬೇಕಾಗಿರುತ್ತದೆ.

ಅಂತೂ ದೇಶೋನ್ನತಿಗೆ ಸತ್ಯತೆಯೂ ಪ್ರೀತಿಯೂ ಉಪಕಾರಸ್ಮರಣೆಯೂ ಮೂಲಸ್ತಂಭಗಳಾಗಿವೆ.

ಒಳದೇಶದ ವೃತ್ತಾಂತಗಳು.

ಮಿ॥ ಮೆಕಾನಕಿಯವರು ಕೋಡನೇಲಿ ಶ್ರೀಮನ್ ಯುವರಾಜರವರ ಶ್ರೀಮನ್ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಗಳಾಗಬಹುದೆಂದು ವರ್ತಮಾನ ಹುಟ್ಟಿದೆ.

❖❖❖

ದಿವಾನರವರು ತುಂಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಕೆಲವು ಭಾಗಗಳಲ್ಲಿ ಸಂಚಾರ ಮಾಡಿಕೊಂಡು ಕಳೆದ ಶುಕ್ರವಾರ ಬೆಳಗ್ಗೆ ಹಿಂತಿರುಗಿ ಬೆಂಗಳೂರಿಗೆ ಬಂದರು.

❖❖❖

ಬ್ರಿಟಿಷ್ ರೆಸಿಡೆಂಟರೂ ಅವರ ಪತ್ನೀಯವರೂ ಅಸಿಸ್ಟೆಂಟ್ ರೆಸಿಡೆಂಟರೂ ಮುಂದಿನ ಮಂಗಳವಾರ ಬೆಂಗಳೂರಿಂದ ಹೊರಟು ಕೊಡಗಿನ ಕಡೆ ಒಂದು ತಿಂಗಳು ಸಂಚಾರಮಾಡಿಕೊಂಡು ಬರುವವರಾಗಿದ್ದಾರೆ.

❖❖❖

ಕೋಲಾರ್ ಚಿನ್ನದ ಗಣಿಯಲ್ಲಿ ನಡೆದ ದಂಗೇ ಮೊಕದ್ದಮೆಯಲ್ಲಿ ೧೦ ಮಂದಿ ಪಂಜಾಬಿ ಕಾವಲುಗಾರರ ಪೈಕಿ ೫ ಮಂದಿಗೆ ಸಜಾ, ಜುಲ್ಮಾನೆ ಶಿಕ್ಷೆಯಾಯಿತು. ೨೭ ಮಂದಿ ಕೂಲಿಯವರನ್ನು ದರ್ಯಾಪ್ತಿ ಮಾಡುತ್ತಿದ್ದಾರೆ.

❖❖❖

ಬೆಂಗಳೂರು ದಂಡಿನಲ್ಲೂ ಈ ತಿಂಗಳ ಪ್ರಾರಂಭದಿಂದ ರಾತ್ರಿ ಹೊತ್ತು ವಿದ್ಯುಚ್ಛಕ್ತಿಯ ದೀಪಗಳನ್ನೇ ಬೀದಿಗಳಲ್ಲಿ ಹಚ್ಚುತ್ತಿದ್ದಾರೆ. ಮನೆಗಳಿಗೆ ಆ ದೀಪವನ್ನು ಕೊಡುವುದು ಇನ್ನೂ ಸ್ವಲ್ಪ ಸಾವಕಾಶವಾದೀತೆಂದು ಕಾಣುತ್ತದೆ.

❖❖❖

ನೀಲಗಿರಿ ಬೆಟ್ಟದ ಮೇಲಿರುವ ನಮ್ಮ ಮಹಾರಾಜರವರ ಫರ್ನಹಿಲ್ ಬಂಗಲೆಗೆ ವಿದ್ಯುಚ್ಛಕ್ತಿಯ ೩೦೦ ದೀಪಗಳನ್ನು ಇಡಿಸುವುದಕ್ಕೆ ಏರ್ಪಾಡಾಗಿದೆ. ಇಂಜಿನಿಯರ್ ಮಿ॥ ಜೆಬ್ಸ್‌ಯವರು ಅಲ್ಲಿಗೆ ಹೋಗಿ ಕಾಮಗಾರಿಯನ್ನು ಪ್ರಾರಂಭಿಸಿ ವಾಪಸು ಬಂದರು.

❖❖❖

ಶ್ರೀಮನ್ ಯುವರಾಜರವರ ಉಪಾಧ್ಯಾಯರಾಗಿದ್ದು ಈಗ ಬೆಂಗಳೂರಿನಲ್ಲಿ ಕಾಯಿಲೆಯಾಗಿರುವ ಮಿ॥ ಟರ್ನರವರ ದೇಹಸ್ಥಿತಿಯನ್ನು ಡಾಕ್ಟರುಗಳು ನೋಡಿ, ಅವರು ಮೂರು ತಿಂಗಳು ಸೀಮೆಗೆ ಹೋಗಬೇಕಾಗಿದೆ ಎಂಬ ಅಭಿಪ್ರಾಯಪಟ್ಟರು.

❖❖❖

ಬೆಂಗಳೂರು ಹಲಸೂರು ಪೇಟೆಯಲ್ಲಿ ಕೃಷ್ಣಸ್ವಾಮಿ ದೇವಸ್ಥಾನದ ಬಳಿ ವೇಶ್ಯಾಸ್ತ್ರೀಯರು ಕೆಲವರಿದ್ದುದರಿಂದ ರಾತ್ರಿ ಹೊತ್ತು ಜಗಳ ಕದನಗಳು ಆಗುತ್ತಾ ಸಂಸಾರಿಕರಿಗೆ ಅವರಿಂದ ಅನಾನುಕೂಲವಾಗಿದೆ ಎಂತಲೂ, ಪೊಲೀಸಿನವರು ಅದಕ್ಕೆ ನಿಗಾ ಕೊಡದೆ ಇರುತ್ತಾರೆಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

❖❖❖

ಶಿವಸಮುದ್ರದಲ್ಲಿ ನಡೆದ ಕೊಲೆಯ ಮೊಕದ್ದಮೆಯಲ್ಲಿ ಬೆಂಗಳೂರು ಅಡ್ವೊಕೇಟರು ಮಿ॥ ಕೆ ಆರ್ ಶ್ರೀನಿವಾಸಯ್ಯಂಗಾರರು ತುಂಬಾ ಶ್ರಮಪಟ್ಟು ವಾದಿ ಮೊಕದ್ದಮೆಯನ್ನು ನಡಿಸಿದರೆಂದು ಅಲ್ಲಿನ ವಿದ್ಯುಚ್ಛಕ್ತಿಯ ಇಲಾಖಾ ನೌಕರರು ಅವರಿಗೆ ಒಂದು ಚಿನ್ನದ ಗಡಿಯಾರವನ್ನು ಸರಪಣಿ ಸಹಿತ ಬಹುಮಾನಮಾಡಿದರೆಂದು ತಿಳಿಯುವುದು.

❖❖❖

ರಾಜಧಾನಿಯ ಹೆಲ್ತ್ ಆಫೀಸರಾಗಿದ್ದ ಮಿ॥ ಎಂ ಜಗನ್ನಾಥಂಯವರನ್ನು ಇಲ್ಲಿ ಪ್ಲೇಗ್ ಕಿಡುಬು ಹಾಕುವಂತೆ ನೇಮಿಸಿದ್ದಾರೆ. ಇವರು ಟೌನ್ ಹಾಲಿನಲ್ಲಿ ಬೆಳಗ್ಗೆ ಮಧ್ಯಾಹ್ನ ಕಿಡುಬು ಹಾಕುವರು. ಬೆಂಗಳೂರು ದಂಡಿನಲ್ಲಿ ಮೂರು ಮಂದಿಯನ್ನು ಈ ಕೆಲಸಕ್ಕೆ ನೇಮಿಸಿದ್ದಾರೆ. ಇದುವರೆಗೆ ಅಲ್ಲಿ ೧೩,೦೦೦ ಜನರ ತನಕ ಕಿಡುಬು ಹಾಕಿಸಿಕೊಂಡರು.

❖❖❖

ಮಾಗಡಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಹೊಸ ಒಂದಾಣೆ ನಾಣ್ಯವನ್ನು ವ್ಯಾಪಾರಸ್ಥರು ಕೂಡ ತೆಗೆದುಕೊಳ್ಳದೆ, ಅದು ಚಲಾವಣೆಯಲ್ಲಿಲ್ಲವೆಂದು ಹೇಳಿ ವಾಪಸು ಮಾಡುತ್ತಾರೆಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ. ಅದು ಕ್ರಮವಾದ ನಾಣ್ಯವೆಂತಲೂ, ಅದನ್ನು ತೆಗೆದುಕೊಳ್ಳುವುದಿಲ್ಲವೆಂದು ಯಾರೂ ನಿರಾಕರಿಸಕೂಡದೆಂತಲೂ ತಿಳಿಸುತ್ತೇವೆ.

❖❖❖

ಶ್ರೀರಂಗಪಟ್ಟಣದ ಹತ್ತರ ಗವರ್ನಮೆಂಟಿನವರು ಒಂದು ದೊಡ್ಡ ಕೆರೆಯನ್ನು ಕಟ್ಟಿ, ಅದಕ್ಕೆ ಕಾವೇರೀ ನೀರು ಬಂದು ತುಂಬಿಕೊಳ್ಳುವಂತೆಯೂ, ಅದರಿಂದ ಸಾವಿರಾರು ಎಕರೆ ಜಮೀನು ಹರಿಭಕಲಿಗೆ ಬರುವಂತೆಯೂ, ಅಪಾರವಾಗಿ ವಿದ್ಯುಚ್ಛಕ್ತಿಯನ್ನೂ ಅಲ್ಲೇ ಉತ್ಪತ್ತಿ ಮಾಡುವಂತೆಯೂ ಆಲೋಚನೆಮಾಡುತ್ತಿದ್ದಾರೆ. ಇದಕ್ಕೆಲ್ಲಾ ಸುಮಾರು ಒಂದೂವರೆ ಕೋಟಿ ರೂಪಾಯಿ ಖರ್ಚಾಗಬಹುದೆಂದು ಅಂದಾಜಾಗಿರುವುದು.

❖❖❖

ಈ ವಾರ ನಮ್ಮಲ್ಲಿಗೆ ಬಂದಿರುವ ೧೯೦೪ ನೆ ಇಸವಿಯ ಕ್ಯಾಲೆಂಡರುಗಳಲ್ಲಿ ಜಿ ಟಿ ಎ. ಪ್ರೆಸ್ಸಿನದು ಎಂದಿನಂತೆ ಚೆನ್ನಾಗಿದೆ, ಸತ್ಯಾಲಕಂಪನಿಯವರದು ಬಹಳ ದೊಡ್ಡದಾಗಿಯೂ ಹಬ್ಬಹರಿದಿನಗಳನ್ನು ತಿಳಿಸುವದಾಗಿಯೂ ಇದೆ; ಫಾಕ್ ಕೇಪಲ್ ವೈ ನಾಗಪ್ಪನವರ ಕ್ಯಾಲೆಂಡರಿನಲ್ಲಿ ಪಂಚಾಂಗವೂ ಶ್ರೀಮನ್ ಮಹಾರಾಜರವರ ಮತ್ತು ಶ್ರೀಮನ್ ಯುವರಾಜರವರ ಸುಂದರವಾದ ಚಿತ್ರಗಳೂ ಪ್ರಿಂಟು ಮಾಡಿದೆ; ಬೀಟಸ್ ಎಂಬ ಬ್ಲೈಸಿಕಲ್ ಷಾಪಿನವರ ಕ್ಯಾಲೆಂಡರೂ ಕೂಡ ಸುಂದರವಾಗಿರುವುದು.

ಪರಸ್ಪರ ಸಹಾಯ ಸಂಘಗಳು.

ಮೈಸೂರು ಟವನ್ನಿನಲ್ಲಿ ನೇಯಿಗೆಯವರಿಗೂ ಮತ್ತು ಜವಳಿ ವ್ಯಾಪಾರದವರಿಗೂ ಅನುಕೂಲವಾಗುವಂತೆ "ಲಕ್ಷ್ಮೀಸಹಾಯನಿಧಿ" ಎಂಬ ಒಂದು ಕೋಆಪರೇಟಿವ್ ಸೊಸೈಟಿಯನ್ನು ಸ್ಥಾಪಿಸಬೇಕೆಂದು ಪ್ರಯತ್ನ ನಡೆಯುತ್ತಲಿದೆ. ಈ ನಿಧಿಯನ್ನು ಕೋಆಪರೇಟಿವ್ ಸೊಸೈಟಿಗಳ ಕಾನೂನ್ ಅನುಸರಿಸಿ ರಿಜಿಸ್ಟರುಮಾಡಿಸುವ ಉದ್ದೇಶ್ಯ ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರಲ್ಲಿಗೆ ಅರ್ಜಿಯೂ ಸಹಾ ಹೋಗಿರುತ್ತದೆ. ಇದರಿಂದ ನೇಯಿಗೆಯವರಿಗೂ ಮತ್ತು ವ್ಯಾಪಾರಸ್ಥರಿಗೂ ಅನುಕೂಲವಾಗುವದೆಂದು ನಂಬಿದ್ದೇವೆ.

ಇದೇ ಮಾಹೆ ೧೮ ರಲ್ಲಿ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರು ಮೇಲುಕೋಟೆಗೆ ಹೋಗಿದ್ದಾಗ ಅಲ್ಲಿನ ಕೋ ಆಪರೇಟಿವ್ ಸೊಸೈಟಿಯನ್ನು ತನಿಖೆಮಾಡಿದರು. ಈ ಸೊಸೈಟಿಗೆ ನೇಯಿಗೆ ಮತ್ತು ವ್ಯಾಪಾರದ ಕಸಬಿನಿಂದ ಜೀವನಮಾಡುವವರು ಅನೇಕರು ಮೆಂಬರುಗಳಾಗಿದ್ದಾರೆ. ಮೆಂಬರುಗಳಲ್ಲಿ ಕೆಲವರು ತಾವು ಮಾಡುವ ಸರಕುಗಳನ್ನು ಸೊಸೈಟಿಗೆ ತಂದುಕೊಟ್ಟು ನಗದು ಹಣ ತೆಗೆದುಕೊಂಡು ಹೋಗಿ ಪುನಃ ಸೊಸೈಟಿಯ ಮುಖಾಂತ್ರ ನೂಲು, ರೇಷ್ಮೆ ಕೊಂಡುಕೊಂಡು ಸರಕುಗಳನ್ನು ತಯಾರುಮಾಡುತ್ತಾರೆ. ಈ ಸೊಸೈಟಿಯ ಮೆಂಬರುಗಳಿಂದ ತಯಾರುಮಾಡಲ್ಪಟ್ಟ ಜವಳಿಯನ್ನು ಹೊಳೇನರಸೀಪುರ, ಮೈಸೂರು ಈ ಪ್ರಾಂತ್ಯದ ಸಾಹುಕಾರರು ಅಲ್ಲಿಗೆ ಬಂದು ೨೦೦, ೩೦೦ ರೂಪಾಯಿವರಿಗೂ ಕೊಟ್ಟು ತೆಗೆದುಕೊಂಡು ಹೋಗುತ್ತಾರೆ. ಈ ಸಂಘದ ಸೆಕ್ರೆಟರಿಯವರು ಮಿ॥ ಪಟ್ಟಘಂಟೆ ರಂಗಾಚಾರ್ರು, ಮತ್ತು ಪ್ರೆಸಿಡೆಂಟರು ಮಿ॥ ಕರಡಿ ವೆಂಕಟರಮಣಶೆಟ್ಟರು ಬಹಳ ಉತ್ಸಾಹದಿಂದ ಕೆಲಸ ನಡಸುತ್ತಾ ಸೊಸೈಟಿಯ ಲೆಕ್ಕಪತ್ರಗಳನ್ನು ಸರಿಯಾಗಿ ಇಟ್ಟಿರುತ್ತಾರೆ. ಮೇಲುಕೋಟೆಯಲ್ಲಿ ಮೊದಲು ಆಗದೇ ಇದ್ದ ಹಸನಾದ ಪಂಚೆಗಳು ಈಗ ಇವರ ಪ್ರೋತ್ಸಾಹದಿಂದ ತಯಾರುಮಾಡಲ್ಪಡುತ್ತಲಿವೆ.

ಚಿತ್ರದುರ್ಗದ ಡಿಸ್ಟ್ರಿಕ್ಟು ಹೊಳಲ್ಕೆರೆ ಟವನ್ನಿನಲ್ಲಿ ಅಲ್ಲಿನ ನೇಯಿಗೆ ವಗೈರೆ ಕಸಬುಗಳಿಂದ ಜೀವನಮಾಡುವವರ ಉಪಯೋಗಾರ್ಥವಾಗಿ "ಚಾಸರುಲ್ ಇಳ್ವಂ" ಎಂಬ ಒಂದು ಕೋಆಪರೇಟಿವ್ ಸೊಸೈಟಿಯು ಏರ್ಪಟ್ಟಿರುತ್ತೆಂದು ತಿಳಿಸಿರುತ್ತೇವಷ್ಟೆ. ಈ ಸಂಘದ ಮುಖ್ಯೋದ್ದೇಶವು ಸಂಘಕ್ಕೆ ಸೇರಿದ ನೇಯಿಗೆ ಮೆಂಬರುಗಳಿಗೆ ಒಟ್ಟಾಗಿ ರೇಷ್ಮೆ ಮತ್ತು ನೂಲನ್ನು ತರಿಸಿ ಚಿಲ್ಲರೆ ಚಿಲ್ಲರೆಯಾಗಿ ಸುಲಭಕ್ರಯಕ್ಕೆ ಒದಗಿಸಿಕೊಟ್ಟು ಸದರಿ ಕಸಬನ್ನು ಪ್ರೋತ್ಸಾಹಮಾಡಬೇಕೆಂಬುವದು. ಈ ಉದ್ದೇಶವು ಸರಿಯಾಗಿ ನೆರವೇರುತ್ತಿರುವದೆಂದು ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರು ಕಳೆದ ನವಂಬರು ತಿಂಗಳಲ್ಲಿ ಅಲ್ಲಿಗೆ ಹೋಗಿದ್ದಾಗ ಸ್ವತಃ ನೋಡಿ ರಿಪೋರ್ಟುಮಾಡಿರುತ್ತಾರೆ. ಈ ಸಂಘದಲ್ಲಿ ೬೩ ಮುಸಲ್ಮಾನ ಮೆಂಬರುಗಳೂ, ೩೦ ಮಂದಿ ಹಿಂದೂಗಳೂ ಇರುತ್ತಾರೆ. ಈಗ ರೂ ೩,೬೫೬ ಮೂಲಧನವನ್ನು ಷೇರುಮೂಲಕ ಸಂಘದವರು ಜಮಾಯಿಸಿರುತ್ತಾರೆ. ಈ ಸಂಘದ ಆಡಳಿತವು ೯ ಜನ ಡೈರೆಕ್ಟರುಗಳಿಂದ ನಿರ್ವಹಿಸಲ್ಪಡುತ್ತಿದೆ. ಈ ಸಂಘಕ್ಕೆ ಬೇಕಾದ ರೇಷ್ಮೆಯನ್ನು ಚನ್ನಪಟ್ಟಣದಲ್ಲಿರುವ ರೇಷ್ಮೆವ್ಯಾಪಾರದ ಕ್ಯಾದರ್‌ಸಾಬ್ ಮತ್ತು ಮಸ್ತಾನ್‌ಸಾಬ್ ಇವರುಗಳಿಂದಲೂ, ನೂಲನ್ನು ಷೋಲಾಪುರದಲ್ಲಿರುವ ಮುಶ್ತಾರ್ಟ ಗೋಪಾಲ್ ದಾಸ್ ಮತ್ತು ಲಕ್ಷ್ಮೀ ಕಾಟನ್ ಕಂಪೆನಿಯಿಂದಲೂ ಕಾಲಕಾಲಕ್ಕೆ ಹಣ ಒದಗಿದ ಹಾಗೆಲ್ಲಾ ತರಿಸುತ್ತಾರೆ. ಸಾಧಾರಣವಾಗಿ ಒಂದೊಂದುಸಲ ತರಿಸುವ ರೇಷ್ಮೆ ಖರೀದಿ ೬೦೦ ರೂಪಾಯಿಯೂ, ಮತ್ತು ನೂಲಿನ ಖರೀದಿಯು ೩೦೦ ರೂಪಾಯಿಯೂ ಆಗುತ್ತದೆ. ಅಲ್ಲಿನ ನೇಯಿಗೆಯವರಲ್ಲಿ ಅನೇಕ ಜನ ೨೦, ೩೦ ನೆ ನಂಬರಿನ ನೂಲನ್ನು ಅಪೇಕ್ಷಿಸುವದರಿಂದ ಸದರಿ ನಂಬರಿನ ನೂಲನ್ನು ಹೆಚ್ಚಾಗಿ ತರಿಸುತ್ತಾರೆ. ನೂಲು ಬಂದ ಹತ್ತು ದಿವಸಗಳಲ್ಲಿಯೇ ಎಲ್ಲಾ ಮೆಂಬರುಗಳಿಗೂ ಅದನ್ನು ಹಂಚುತ್ತಾರೆ. ಹೀಗೆ ಹಂಚಿದ ನೂಲಿನ ಖರೀದಿಯನ್ನು ಕೊಡುವುದಕ್ಕೆ ಮೆಂಬರುಗಳಿಗೆ ಸುಲಭವಾಗಿರುವದಕ್ಕೋಸ್ಕರ ೩ ರಿಂದ ೬ ತಿಂಗಳು ವಾಯಿದೆ ಕೊಡುತ್ತಾರೆ. ಮಾರ್ಚಿ ೧೯೦೭ ಲಾಗಾಯಿತು ನವಂಬರು ಆಖೈರುವರಿಗೆ ರೂ. ೫,೧೧೨ ಬಾಳುವ ರೇಷ್ಮೆಯನ್ನೂ, ರೂ ೧,೪೯೮ ಬಾಳುವಷ್ಟು ನೂಲನ್ನೂ ತರಿಸಿ ಮಾರಿರುತ್ತಾರೆ. ೧೯೦೭ನೆ ನವಂಬರ್ ಆಖೈರುವರೆಗೆ ಮಾಡಿದ ವ್ಯಾಪಾರದಲ್ಲಿ ಈ ಸಂಘಕ್ಕೆ ಸುಮಾರು ೫೬೧ ರೂಪಾಯಿ ನಫೆ ಬಂದಿರುತ್ತದೆ. ಈ ಸಂಘಕ್ಕೆ ಸೇರಿದ ಮೆಂಬರುಗಳೆಲ್ಲರೂ ಈ ಸಂಘದಿಂದ ತಮಗಿರುವ ಉಪಯೋಗವನ್ನೂ ಅನುಕೂಲವನ್ನೂ ಕುರಿತು ಬಹಳವಾಗಿ ತೃಪ್ತಿಹೊಂದಿರುವಹಾಗೆ ಕಾಣುತ್ತದೆ.

ಪಶುವೈದ್ಯ ವಿದ್ಯಾಶಾಲೆಯು.

ಮದರಾಸ್ ಗವರ್ನರವರ ಭಾಷಣವು.

ಪಶುರೋಗ ಚಿಕಿತ್ಸೆಯನ್ನು ಕಲಿಸಿಕೊಡುವುದಕ್ಕಾಗಿ ಮದರಾಸ್ ಗವರ್ನಮೆಂಟಿನವರು ಮದರಾಸ್ ಪಟ್ಟಣದಲ್ಲಿ ಕಳೆದ ೧೯೦೩ ನೆ ಇಸವಿಯಲ್ಲಿ ಒಂದು ವಿದ್ಯಾಶಾಲೆಯನ್ನು ಸ್ಥಾಪನೆಮಾಡಿ ನಡಿಸುತ್ತಾ ಬಂದಿದ್ದಾರೆ. ಅಲ್ಲಿ ಕಲಿಯಬೇಕೆಂದು ಅಪೇಕ್ಷಿಸುವವರು ವಿದ್ಯಾಶಾಲೆಗೆ ಫೀಜೇನೂ ಕೊಡಬೇಕಾದದ್ದಿಲ್ಲ. ಮೆಟ್ರಿಕ್ಯುಲೇಷನ್ ಎಂಬ ಇಂಗ್ಲಿಷ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೆ ಸಾಕು. ಪಶುರೋಗ ಚಿಕಿತ್ಸೆಯನ್ನೆಲ್ಲಾ ಸಂಪೂರ್ಣವಾಗಿ ಕಲಿತು ಬರಬೇಕಾದರೆ ಆ ವಿದ್ಯಾಶಾಲೆಯಲ್ಲಿ ಮೂರು ವರುಷ ಇದ್ದು ವ್ಯಾಸಂಗಮಾಡಬೇಕಾಗಿದೆ. ಅಲ್ಲಿ ವ್ಯಾಸಂಗಮಾಡತಕ್ಕ ವಿದ್ಯಾರ್ಥಿಗಳಿಗಾಗಿಯೇ ಸರ್ಕಾರದವರು ಆ ವಿದ್ಯಾಶಾಲೆಯ ಎದುರು ಭಾಗದಲ್ಲಿ ಒಂದು ವಿದ್ಯಾರ್ಥಿನಿಲಯವನ್ನು (ಸ್ಟೂಡೆಂಟ್ಸ್ ಹೋಂ) ಮಾಡಿದ್ದಾರೆ.

ಕಳೆದ ಮೂರು ವರುಷಕಾಲ ಆ ವಿದ್ಯಾಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳ ಪೈಕಿ ೨೦ ಮಂದಿ ಪರೀಕ್ಷೆಗೆ ಹಾಜರಾದರು. ಅವರಲ್ಲಿ ೧೭ ಮಂದಿ ತೇರ್ಗಡೆ ಹೊಂದಿ, ಕ್ರಮಪಾಠ ಪಶುವೈದ್ಯರೆಂಬ ಬಿರುದನ್ನು ಪಡೆದಿರುತ್ತಾರೆ. ಇವರಿಗೂ ಅದೇ ವಿದ್ಯಾಶಾಲೆಯ ಇನ್ನುಳಿದ ತರಗತಿಗಳ ವಿದ್ಯಾರ್ಥಿಗಳಿಗೂ ಕಳೆದ ಶುಕ್ರವಾರ ಸಾಯಂಕಾಲ ಬಹುಮಾನಗಳು ಕೊಡಲ್ಪಟ್ಟವು. ಮದರಾಸ್ ಆಧಿಪತ್ಯದ ಗವರ್ನರಾದ ಸರ್ ಆರ್ಥರ್ ಲಾಲಿಯವರು ಅಗ್ರಾಸನವನ್ನು ವಹಿಸಿದ್ದರು. ಮದರಾಸ್ ಪಟ್ಟಣದ ಮುಖ್ಯ ಮುಖ್ಯ ಉದ್ಯೋಗಸ್ಥರೂ ದೇಶೀಯ ದೊಡ್ಡ ಮನುಷ್ಯರೂ ಸಭಾಸದರಾಗಿದ್ದರು. ಮೇಲ್ಕಂಡ ವಿದ್ಯಾಶಾಲೆಯ ಮುಖ್ಯೋಪಾಧ್ಯಾಯರಾದ ಕರ್ನಲ್ ಗ್ರ್ ಯವರು ಮೊದಲು ಒಂದು ರಿಪೋರ್ಟನ್ನು ಓದಿ, ಆ ವಿದ್ಯಾಶಾಲೆಯ ಪೂರ್ವೋತ್ತರವನ್ನೂ, ಅದರ ಈಗಿನ ಸ್ಥಿತಿಗತಿಯನ್ನೂ, ಅಲ್ಲಿ ಪಶುವೈದ್ಯವನ್ನು ಓದಿ ಕಲಿಯತಕ್ಕವರಿಗೆ ಈಗ ಇರತಕ್ಕ ಪ್ರೋತ್ಸಾಹಗಳನ್ನೂ ವಿವರಿಸಿದರು. ಈಗ ರೋಗವನ್ನನುಭವಿಸತಕ್ಕ ಪಶ್ವಾದಿ ಮೂಗ ಪ್ರಾಣಿಗಳ ಚಿಕಿತ್ಸೆಗೋಸ್ಕರ ಸೈದಾಪೇಟೆ, ತಿರುಚನಾಪಲ್ಲಿ, ಮಧುರೆ, ವಿಜಯನಗರ, ಬಳ್ಳಾರಿ, ವೇಲೂರು, ವಿಶಾಖಪಟ್ಟಣ, ಪಿಟ್ಟಾಪುರ, ಕೊಯಮತ್ತೂರು, ಪುದುಕೋಟೆ, ಈ ಮೊದಲಾದ ಸ್ಥಳಗಳಲ್ಲಿ ಆಸ್ಪತ್ರೆಗಳನ್ನು ಸ್ಥಾಪಿಸಿರುತ್ತಾರೆ. ಅಂಟುರೋಗ ಬಾರದಂತೆ ದನಗಳಿಗೆ ಒಂದು ವಿಧವಾದ ಹಾಲನ್ನು ಪ್ರಯೋಗಿಸಿ ಚಿದುಬು ಹಾಕುವದು ಪ್ರಚಾರಕ್ಕೆ ಬಂದಿರುವುದೂ, ಅದರ ಪ್ರಯೋಜನವು ಜನಗಳಿಗೆ ದಿನೇ ದಿನೇ ಹೆಚ್ಚುಹೆಚ್ಚಾಗಿ ತಿಳಿಯುತ್ತಾ ಬಂದಿರುವುದೂ, ಅನೇಕ ಪಶುಪಾಲಕರು ತಮ್ಮ ದನಗಳಿಗೆ ಆ ಚಿದುಬನ್ನು ಹಾಕಿಸುತ್ತಾ ಬಂದಿರುವುದೂ ಎಲ್ಲರಿಗೂ ಗೊತ್ತಾಗಿದೆ. ಕಳೆದ ೧೯೦೩ ನೆ ವರುಷದಲ್ಲಿ ೩೬೭ ಪಶು ಪ್ರಾಣಿಗಳಿಗೆ ಮಾತ್ರ ಆ ಚಿದುಬನ್ನು ಹಾಕಿದರು. ಆದರೆ ೧೯೦೬ ನೆ ಇಸವಿಯಲ್ಲಿ ೩೯,೬೭೭ ಗೋಕಾಯಿಗಳು ಈ ಚಿದುಬು ಹಾಕಿಸಿಕೊಂಡು, ಅಂಟುರೋಗ ತಗಲದೆ ಬದುಕಿಕೊಂಡವು. ಹೀಗೆಯೇ ಜನರಲ್ಲಿ ಇದರ ಪ್ರಯೋಜನವು ಚನ್ನಾಗಿ ಪರಿಚಿತವಾಗಲಾರಂಭವಾಗಿದೆ. ಈ ಮೊದಲಾದ ಸಂಗತಿಗಳು ಮೇಲ್ಕಂಡ ಮುಖ್ಯೋಪಾಧ್ಯಾಯರು ಓದಿದ ರಿಪೋರ್ಟಿನಿಂದ ತಿಳಿಯುವುದು.

ಗವರ್ನರವರ ಭಾಷಣವು

ಅನಂತರ ಮದರಾಸ್ ಗವರ್ನರವರು ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ದಯಪಾಲಿಸಿ, ಪಶುವೈದ್ಯ ವಿಚಾರವನ್ನು ಕುರಿತು ಸಭಿಕರಿಗೆ ಕೆಲವು ಹಿತೋಕ್ತಿಗಳನ್ನು ಅಪ್ಪಣೆ ಕೊಡಿಸಿದರು. ಅದರ ಮುಖ್ಯಾಭಿಪ್ರಾಯವೇನೆಂದರೆ—ನಾನು ಈ ಆಧಿಪತ್ಯಕ್ಕೆ ಗವರ್ನರಾಗಿ ಬಂದ ಮೇಲೆ ಇಲ್ಲಿನ ಅನೇಕ ಡಿಸ್ಟ್ರಿಕ್ಟುಗಳಲ್ಲಿ ಸಂಚಾರಮಾಡಿರುತ್ತೇನೆ. ಇಲ್ಲಿಗೆ ಬರುವುದಕ್ಕಿಂತ ಮೊದಲು ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ವಿಲಾಯತಿ, ಈ ಭಾಗಗಳಲ್ಲಿ ಗೋಕಾಯಿಗಳ ಸ್ಥಿತಿಗತಿಯನ್ನು ನೋಡಿರುವೆನು. ನಾನಾದರೋ ಹಳ್ಳಿಗಾಡಿನಲ್ಲಿ ಬೆಳೆದವನು. ಆದ್ದರಿಂದ ಗ್ರಾಮಭೂಮಿಗಳನ್ನೂ ದನಕರುಗಳನ್ನೂ ನೋಡಿದರೆ ನನಗೆ ಬಹಳ ಸಂತೋಷ. ಈ ದೇಶದಲ್ಲಿ ಗೋಕಾಯಿಗಳಿಗೇನೂ ಕೊರತೆಯಿಲ್ಲವೆಂದು ನನಗೆ ತೋರುತ್ತಿದೆ. ಆದರೆ ಈ ಗೋಕಾಯಿಗಳ ಸ್ಥಿತಿಗತಿಗೂ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ವಿಲಾಯತಿಯ ಗೋಕಾಯಿಗಳಿಗೂ ಅರ್ಥಾರ್ಥ ಸಂಬಂಧವಿಲ್ಲ. ಇಲ್ಲಿನ ಗೋಕಾಯಿಗಳು ತುಂಬಾ ಕೃಶವಾಗಿವೆ. ಅವುಗಳ ಸಾಕಾಣಿಕೆಯೇ ಜನರಿಗೆ ತಿಳಿಯದು. ಮತ್ತು ಅವನ್ನು ಸಾಕುವುದರಲ್ಲಿ ವಿಶೇಷ ಶ್ರದ್ಧೆಯೇನೂ ತೋರಿಸುವುದಿಲ್ಲ. ಒಂದುವೇಳೆ ರೋಗಾದಿಗಳೇನಾದರೂ ಬಂದರೆ ಜನರಿಗೆ ಚಿಕಿತ್ಸೆಯೇ ತಿಳಿಯದೆ ಇರೋಣದರಿಂದಲೂ, ಅವರು ತುಂಬಾ ಅಲಕ್ಷ್ಯಭಾವವನ್ನು ತೋರಿಸೋಣದರಿಂದಲೂ ಅವು ನೂರು ಇಲ್ಲವೇ ಸಾವಿರಗಟ್ಲೆ ಸಾಯುವವು. ಆದಕಾರಣ ನಮ್ಮ ಈ ದೇಶದ ಜನರಿಗೆ ಗೋಕಾಯಿಗಳ ಸಾಕಾಣಿಕೆ, ಅವುಗಳ ಆಹಾರ, ಬೆಳವಣಿಗೆ, ರೋಗಾದಿಗಳು, ಈ ವಿಚಾರಗಳೆಲ್ಲಾ ಚನ್ನಾಗಿ ತಿಳಿದಿರುವುದು ಪರಮಾವಶ್ಯಕವಾಗಿರುತ್ತದೆಂದು ನಾನು ಹೇಳಬೇಕಾದದ್ದಿಲ್ಲ. ಈಗಲಾದರೋ ಎಲ್ಲಿ ನೋಡಿದರೂ ದನಗಳು ಕುರುಚಾಗಿವೆ, ವಿಶೇಷ ದುರ್ಬಲವಾಗಿವೆ, ಅವುಗಳಲ್ಲಿ ಚಟುವಟಿಕೆಯೇ ಕಾಣುವುದಿಲ್ಲ. ಇದರಿಂದ ಅವು ಬಹು ಜಾಗ್ರತೆಯಾಗಿ ರೋಗತಗಲಿದ ಒಡನೆಯೇ ಸಾಯಲು ಅನುಮಾನವಿಲ್ಲ. ಆದರೆ ಗೋಕಾಯಿಗಳು ಪುಷ್ಟಿಯಾಗಿಯೂ ದೊಡ್ಡ ದನಗಳಾಗಿಯೂ ಬೆಳೆಯುವಂತೆ ಸಾಕಾಣಿಕೆಯ ಕ್ರಮವನ್ನು ಈ ದೇಶದ ರೈತರೇ ಮೊದಲಾದವರು ತಿಳಿದುಕೊಳ್ಳಬೇಕು. ಒಳ್ಳೇ ದನಗಳಿದ್ದ ಪಕ್ಷದಲ್ಲಿ ಅವೇ ಒಂದು ದೊಡ್ಡ ಆಸ್ತಿಯೆಂದು ಹೇಳಲು ಅನುಮಾನವಿಲ್ಲ. ಈಗಲಾದರೋ ವರುಷಕ್ಕೆ ಈ ಮದರಾಸ್ ಆಧಿಪತ್ಯ ಒಂದರಲ್ಲೇ ರೋಗ ತಗಲಿ ಒಂದೂ ಕಾಲು ಲಕ್ಷ ದನಗಳಿಗಿಂತಲೂ ಹೆಚ್ಚಾಗಿಯೇ ಸತ್ತು ಹೋಗುತ್ತಿರುವುದನ್ನು ನೋಡಿ ತುಂಬಾ ವಿಷಾದಪಡಬೇಕಾಗಿದೆ. ಈ ರೋಗಾದಿಗಳನ್ನು ಗೋಕಾಯಿಗಳಿಗೆ ಚಿದುಬು ಹಾಕೋಣದರಿಂದ ಬಂಧಿತವಾಗಿ ನಿಲ್ಲಿಸಬಹುದು. ಈ ಮೂಲಕವಾಗಿಯೂ, ಒಳ್ಳೇ ಸಾಕಾಣಿಕೆಯ ಕ್ರಮಗಳನ್ನು ತಿಳಿದು ರೂಢಿಸುವುದರ ಮೂಲಕವಾಗಿಯೂ ಈ ದೇಶದ ಗೋಕಾಯಿಗಳನ್ನು ಒಳ್ಳೇ ಸ್ಥಿತಿಗೆ ತರಬಹುದಾಗಿದೆ. ಈ ಭಾಗದಲ್ಲಿ ಸರ್ಕಾರದವರು ಪ್ರಜೆಗಳಿಗೂ ರೈತಾಪಿ ಜನಗಳಿಗೂ ಎಷ್ಟುಮಟ್ಟಿಗೆ ಯಾವಯಾವ ರೀತಿಯಲ್ಲಿ ಸಹಾಯ ಮಾಡಬಹುದೋ ಅದನ್ನೆಲ್ಲಾ ಆಗಿಂದಾಗ್ಗೆ ತಿಳಿದು ಮಾಡುತ್ತಾ ಬಂದಿದ್ದಾರೆ. ಪ್ರಜೆಗಳು ತಿಳಿದು ಅದರ ಫಲವನ್ನು ಪಡೆಯಬೇಕಾಗಿದೆ. ಪಶುವೈದ್ಯವನ್ನು ಜನರಿಗೆ ಕಲಿಸಿಕೊಡುವುದಕ್ಕೆ ವಿದ್ಯಾಶಾಲೆಯನ್ನು ಏರ್ಪಡುಮಾಡಿಕೊಟ್ಟಿದೆ. ದನಗಳಲ್ಲಿ ಆ ಟೀಕಾದ್ಯ ಕಂಡ ಕೂಡಲೇ ಚಿದುಬು ಹಾಕಿ ಅದನ್ನು ಅಣಗಿಸುವುದಕ್ಕೆ ಯೋಗ್ಯರಾದ ವೈದ್ಯರನ್ನು ಕಳುಹಿಸಿಕೊಡುತ್ತೇವೆ. ಅಲ್ಲಲ್ಲಿ ರೋಗ ಹಿಡಿದ ಪಶುಗಳನ್ನು ತಂದಿಟ್ಟುಕೊಂಡು ಚಿಕಿತ್ಸೆ ಮಾಡುವುದಕ್ಕಾಗಿ ಪ್ರತ್ಯೇಕವಾದ ಆಸ್ಪತ್ರೆಗಳನ್ನು ಇಡಿಸಿದ್ದೇವೆ, ಮತ್ತು ಕಾಲಕ್ರಮದಲ್ಲಿ ಈ ಆಸ್ಪತ್ರೆಗಳ ಸಂಖ್ಯೆಯನ್ನೂ ಹೆಚ್ಚುಮಾಡಲಾಗುವುದು. ಈ ವೈದ್ಯ ವಿದ್ಯಾಶಾಲೆಯಿಂದಲೂ, ಆಸ್ಪತ್ರೆಗಳಿಂದಲೂ ತುಂಬಾ ಪ್ರಯೋಜನವಾದೀತೆಂದು ನಿರೀಕ್ಷಿಸುತ್ತೇನೆ.

ಈ ಅಭಿಪ್ರಾಯಗಳನ್ನುಳ್ಳ ಉಪನ್ಯಾಸವನ್ನು ಮಾಡಿದ ತರುವಾಯ ಗವರ್ನರವರು ಆಗತಾನೆ ತೇರ್ಗಡೆ ಹೊಂದಿದಂಥಾ ಪಶುವೈದ್ಯರನ್ನು ಕರೆದು ಅವರಿಗೆ ಕೆಲವು ವಿವೇಕ ವಾಕ್ಯಗಳನ್ನು ಹೇಳಿ, ಕಡೆಯಲ್ಲಿ ವಿದ್ಯಾಶಾಲೆಯ ಉಪಾಧ್ಯಾಯರುಗಳನ್ನು ವಂದಿಸಿ ಕೃತಜ್ಞತೆ ಹೇಳಿದರು. ಸಭಾನಾಯಕರಿಗೂ, ಸಭಿಕರಿಗೂ ಪುಷ್ಪ ತಾಂಬೂಲಗಳು ಹಂಚಿದ ಅನಂತರ ಸಭೆಯು ಮುಕ್ತಾಯವಾಯಿತು.

೩ ನೇ ವೀರಶೈವ ಮಹಾಸಭೆಯು.

ಸೊಲ್ಲಾಪುರದಲ್ಲಿ ಮೇಲ್ಕಂಡ ಸಭೆಯು ಪ್ರಾರಂಭವಾಯಿತು. ಮೊದಲನೇ ದಿನ ಅಂದರೆ, ಕಳೆದ ಡಿಸೆಂಬರ್ ತಾ ೨೭ ನೆ ಶುಕ್ರವಾರ ಸಭಾಧ್ಯಕ್ಷರಾದ ಮೆ॥ ಕೆ ಬಿ ಪುಟ್ಟಣ್ಣಶೆಟ್ಟಿಯವರು ಮಾಡಿದ ಭಾಷಣದಲ್ಲಿ ಕೆಳಗಿನ ಭಾಗಗಳನ್ನು ಪ್ರಕಟಿಸಿದ್ದೇವೆ.

ಸಮಾಜಸುಧಾರಣೆ

ಇದಾದ ಬಳಿಕ ನಾವು ಕಾಲೋಚಿತವಾಗಿ ಸಮಾಜಸುಧಾರಣೆಯನ್ನು ಮಾಡಿಕೊಂಡಲ್ಲದೆ ಮುಂದೆ ಬರಲಾರೆವು. ನಮ್ಮ ತರುಣರನ್ನು ಲೌಕಿಕವ್ಯವಹಾರದಲ್ಲಿ ದಕ್ಷರನ್ನಾಗಿ ಮಾಡುವುದಕ್ಕೆ ಈ ದೇಶದಲ್ಲೇ ನಾವು ಎಷ್ಟೋ ಸಾಧನಗಳನ್ನು ಮಾಡಬಹುದು. ಆದರೂ ಪರದೇಶಗಮನವನ್ನು ಮಾಡಿದಲ್ಲದೆ ಕೆಲವು ವಿಷಯಗಳಲ್ಲಿ ಅವರನ್ನು ಸುಸಂಗತರನ್ನಾಗಿ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಪರದೇಶಗಮನ ವಿಷಯದಲ್ಲಿ ಧರ್ಮದ ಕಟ್ಟುಗಳನ್ನು ಸ್ವಲ್ಪಮಾತ್ರ ಸಡಿಲಮಾಡಿಕೊಡುವುದಕ್ಕೆ ಸಮಾಜದ ಧರ್ಮಾಧಿಕಾರಿಗಳೂ ಇತರ ವೈದಿಕ ಲೌಕಿಕರೂ ಮನಸ್ಸುಮಾಡುವುದು ಅವಶ್ಯಕವಾಗಿದೆ. ಸಮುದ್ರಯಾನದ ವಿಷಯದಲ್ಲಿ ನಮಗಿಂತಲೂ ಹೆಚ್ಚಾಗಿ ನಿಷೇಧವನ್ನು ವಹಿಸಿದ್ದ ಇತರ ನಮ್ಮ ದೇಶೀಯ ಬಾಂಧವರೆಲ್ಲ ಈಗ ಅದನ್ನು ಅನುಮೋದಿಸುತ್ತಲೂ, ಪರದೇಶಗಳಿಗೆ ತಮ್ಮವರನ್ನು ಕಳುಹಿಸಿ ವಿದ್ವಾಂಸರನ್ನಾಗಿ ಮಾಡಿಸುತ್ತಲೂ ವೃದ್ಧಿಗೊಳ್ಳುತ್ತಲಿದ್ದಾರೆ. ನಾವು ಕೂಡ ಸಾಧ್ಯವಾದ ಮಟ್ಟಿಗೆ ಹೆಜ್ಜೆಗಳನ್ನು ಮುಂದಕ್ಕೆ ಇಡುತ್ತ ಬರಬೇಕಲ್ಲದೆ ಹಿಂದಾಗಬಾರದು. ಸಮುದ್ರಯಾನವನ್ನು ನಿಷಿದ್ಧಪಙ್ತಿಯಲ್ಲಿ ಸೇರಿಸುವುದಕ್ಕೆ ಮದ್ಯಾಹಾರ ದುರ್ವ್ಯಸನಗಳಿಗೆ ಗುರಿಯಾಗಬೇಕಾಗುವುದು, ನಿತ್ಯಕರ್ಮಗಳಿಗೆ ಲೋಪ ಬರುವುದು ಎಂಬ ಇವೆರಡು ಭಾವನೆಗಳೇ ಮುಖ್ಯ ಕಾರಣವಾಗಿರಬಹುದು. ಆದರೆ ಸಮುದ್ರಯಾನ ಮಾಡಲಿ, ಇನ್ನಾವ ದೇಶಕ್ಕೆ ಹೋಗಲಿ ಧಾನ್ಯಾಹಾರವನ್ನೂ ಸ್ವಯಂಪಾಕವನ್ನೂ ಮಾಡಿಕೊಂಡಿರುವುದಕ್ಕೆ ಎಲ್ಲ ಯಾನ ಕಡೆಯೂ ಆತಂಕವಿರುವುದಿಲ್ಲ. ಸಮುದ್ರಯಾನ ಮಾಡತಕ್ಕವರನ್ನು ಬಹಿಷ್ಕಾರಮಾಡದಿರುವುದಕ್ಕೆ ಬೇಕಾದ ಕಟ್ಟುಗಳನ್ನು ಮಾಡಿ ಕಳುಹಿಸಿಕೊಡಬಹುದು. ಜಲಯಾನ ಕಾಲದಲ್ಲಿ ಮಾತ್ರ ಕೆಲವು ದಿನ ನಿತ್ಯಕರ್ಮಕ್ಕೆ ಲೋಪವಾಗಬಹುದು. ಅದಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿ ಸಮಾಜದಲ್ಲಿ ಸೇರಿಸಿಕೊಳ್ಳುವಂತೆ ಮಾಡಿದರೆ ಹೆಚ್ಚು ಉಪಕಾರವಾಗುವುದು. ಈ ಮಹಾಸಭೆಯೊಳಗೆ ಸೇರಿರುವ ತಾವೆಲ್ಲರೂ ಕಾಲಯಾಪನೆ ಮಾಡದೆ ತಕ್ಕ ಆಲೋಚನೆಯನ್ನು ಮಾಡಿ, ಸಿಂಹಾಸನಾಧಿಪತಿಗಳಿಗೂ ಇದರ ವಿಷಯವನ್ನು ಬಿನ್ನೈಸಿ ಅವರ ಅನುಮತಿಯನ್ನು ಪಡೆದು ಈ ವಿಷಯವನ್ನು ಕೊನೆಮುಟ್ಟಿಸುವಿರೆಂದು ನಂಬುತ್ತೇನೆ.

ಸ್ತ್ರೀಶಿಕ್ಷಣವು.

ಈ ಸಮಾಜಸುಧಾರಣೆಯಲ್ಲಿ ಸ್ತ್ರೀಶಿಕ್ಷಣವನ್ನು ಹೆಚ್ಚಿಸುವುದು ಎರಡನೆಯದಾಗಿದೆ. ಪುರುಷನಿಗೆ ಸ್ತ್ರೀಯು ಅರ್ಧಾಂಗಿಯೆನಿಸಿಕೊಂಡಿರುವುದರಿಂದ, ಎಲ್ಲ ವಿಷಯದಲ್ಲೂ ಅವನಿಗೆ ಆಕೆಯು ಅರ್ಧ ಮಟ್ಟಿಗೆ ಸಹಾಯಕಳಾಗಿಯೇ ಇರಬೇಕು. ಹೊರಗೆ ತಿರುಗಾಡಿ ಎಷ್ಟೋ ಸಂಗತಿಯನ್ನು ಕಣ್ಣಿನಿಂದ ನೋಡಿ ತಿಳಿಯಬಲ್ಲ ಪುರುಷನೇ ವಿದ್ಯಾವಿಹೀನನಾಗಿದ್ದರೆ ಪಶುಸಮಾನನೆಂದು ಎಣಿಸಲ್ಪಡುವಾಗ, ಮನೆಯೊಳಗೆ ಕುಳಿತಿರುವ ಹೆಂಗಸರು ವಿದ್ಯೆಯನ್ನರಿಯದವರಾದರೆ, ಅವರು ಪಶುಗಳಿಗಿಂತಲೂ ಕಡೆಯಾಗಿರುವುದರಲ್ಲಿ ಆಶ್ಚರ್ಯವೇನು ? ಅವರು ವಿದ್ಯಾವತಿಯರಾಗಿ ಮನೆಯಲ್ಲಿದ್ದರೆ ಪುರುಷನ ಕಾರ್ಯಭಾರವು ಅರ್ಧಮಟ್ಟಿಗೆ ಹಗುರವಾಗುವುದು. ಮತ್ತು ಹೆಂಗಸರು ವಿದ್ಯಾವತಿಯರಾಗಿದ್ದರೆ ಎಳೆಮಕ್ಕಳನ್ನು ಆರೋಗ್ಯವಿಧಿಗನುಸಾರವಾಗಿ ಸಾಕುವುದಕ್ಕೂ, ಗುಣವಂತರನ್ನಾಗಿ ಮಾಡುವುದಕ್ಕೂ, ಬಾಲ್ಯವಿದ್ಯೆಯನ್ನು ಕಲಿಸುವುದಕ್ಕೂ, ನಡೆನುಡಿಗಳನ್ನು ತಿದ್ದುವುದಕ್ಕೂ ಬಹಳ ಸಹಾಯವಾಗುವದು. ಮತ್ತು ನಮ್ಮ ಸ್ತ್ರೀಯರನ್ನು ವಿದ್ಯಾವತಿಯರನ್ನಾಗಿ ಮಾಡಲೇಬೇಕಾದುದಕ್ಕೆ ಅವಶ್ಯಕವಾದ ಮತ್ತೊಂದು ಕಾರಣವುಂಟು. ಏನೆಂದರೆ— ಇತರ ಹೆಂಗಸರಂತೆ ನಮ್ಮ ಹೆಂಗಸರು ಕರ್ಮಹೀನೆಯರಾಗಕೂಡದು. ಪುರುಷರಂತೆ ಅವರೂ ಸಂಸ್ಕಾರವನ್ನು ಹೊಂದಿ ಲಿಂಗಧಾರಣೆಯನ್ನು ಪಡೆದು ಶಿವಾರ್ಚನೆಯನ್ನು ಮರಣಾವಧಿ ಮಾಡಬೇಕಾಗಿರುತ್ತದೆ. ಆ ಕಾಲದಲ್ಲಿ ಮಂತ್ರಾದಿಗಳನ್ನು ಉಚ್ಚರಿಸುವುದಕ್ಕೂ, ಭಕ್ತಿಯುಳ್ಳ ಪಾರಾಯಣಾದಿಗಳನ್ನೂ ಮಾಡುವುದಕ್ಕೂ ವಿದ್ಯೆಯು ಅವರಿಗೆ ಎಷ್ಟುಮಟ್ಟಿಗೆ ಅವಶ್ಯಕವಾದುದೆಂಬುದನ್ನು ಹೇಳಬೇಕಾಗಿಲ್ಲ. ಆದಕಾರಣ ನಮ್ಮವರು ಸ್ತ್ರೀಯರಿಗೆ ಪ್ರೌಢವಿದ್ಯಾಭ್ಯಾಸವನ್ನು ಮಾಡಿಸಲು ಒಂದು ವೇಳೆ ಯುಕ್ತಿಸದಿದ್ದರೂ ಗೃಹಕೃತ್ಯ ಸದಾಚಾರ ಸುನೀತಿ ಮೊದಲಾದವುಗಳನ್ನು ತಿಳಿದುಕೊಳ್ಳುವುದಕ್ಕೆ ತಕ್ಕಷ್ಟು ಸದ್ವಿದ್ಯಾಭ್ಯಾಸವನ್ನಾದರೂ ಮಾಡಿಸಬೇಕು.

ವಿವಾಹವಿಚಾರವು.

ನಮ್ಮ ಮತದಲ್ಲಿ ಪೂರ್ವದಿಂದಲೂ ಬಾಲ್ಯವಿವಾಹಕ್ಕಿಂತಲೂ ಪ್ರೌಢವಿವಾಹವೇ ಹೆಚ್ಚಾಗಿದ್ದಂತೆ ತೋರುತ್ತದೆ. ಇತ್ತೀಚೆಗೆ ಇತರರನ್ನು ನೋಡಿಯೋ ಅಥವಾ ಸಣ್ಣತನದಲ್ಲೇ ಹೆಣ್ಣುಗಳನ್ನು ಗಂಡಂದಿರ ಅಧೀನಮಾಡಿ ಅವರ ಪಾತಿವ್ರತ್ಯವನ್ನು ಕಾಪಾಡಬೇಕಾದ ಅವಶ್ಯಕತೆ ಉಂಟಾಗಿದ್ದ ಕಾಲದ ಸಂಬಂಧದಿಂದಲೋ ಬಾಲ್ಯವಿವಾಹವು ಸ್ವಲ್ಪಮಟ್ಟಿಗೆ ನಮ್ಮಲ್ಲಿ ರೂಢಿಗೆ ಬಂದಿರುತ್ತದೆ. ಸ್ತ್ರೀಯರಿಗೆ ೧೨—೧೪ ವರುಷಗಳ ವರೆಗೂ, ಪುರುಷರಿಗೆ ೨೦—೨೫ ವರ್ಷಗಳ ವರೆಗೂ ವಿವಾಹಮಾಡದೆ ಬ್ರಹ್ಮಚರ್ಯವನ್ನು ನಡೆಯಿಸಿ, ಆ ಕಾಲದಲ್ಲಿ ಅವರನ್ನು ತಕ್ಕಷ್ಟು ವಿದ್ಯಾವಂತರನ್ನಾಗಿ ಮಾಡಿಸಿ, ಬಳಿಕ ಮದುವೆ ಮಾಡುತ್ತಾ ಬಂದರೆ ಬಾಲ್ಯವಿವಾಹದ ದುಷ್ಪರಿಣಾಮಗಳೆಲ್ಲ ಬಹುಮಟ್ಟಿಗೆ ಕುಗ್ಗಿ

ನಮ್ಮ ಸಮಾಜದಲ್ಲಿ ಕೆಲವರೊಳಗೆ « ಉತಿಕೆ » ಅಥವಾ ... ಎಂಬ ಪದ್ಧತಿಯೊಂದಿರುವುದು. ಗಂಡನು ಸತ್ತ ನಂತರ ... ಮತ್ತೊಬ್ಬನನ್ನು ನಿಯಮವಾಗಿ ಗಂಡನನ್ನು ಮಾಡಿಕೊಂಡು ... ವ್ಯಭಿಚಾರ ರೂಪವಾದ ದೋಷಕ್ಕೆ ಗುರಿಯಾಗದಂತೆ ... ಈ ಪದ್ಧತಿಯು ಏರ್ಪಡಿಸಲ್ಪಟ್ಟದ್ದಾಗಿ ಕಾಣುತ್ತ ... ಸುಧಾರಕರಿಗಿಂತ ನಮ್ಮ ದೇಶೀಯರು ಬಾಲವಿಧವೆಯರ ... ನಿವಾರಿಸುವ ಕನಿಕರದಿಂದ ವಿಧವಾ ವಿವಾಹದ ಪದ್ಧತಿ ... ಬಲಪಡಿಸುತ್ತ ಸಮಾಜ ಸಂಸ್ಕಾರವನ್ನು ಮಾಡುತ್ತಲಿದ್ದರೆ ... ವನ್ನು ನಮ್ಮಲ್ಲಿ ಪೂರ್ವಿಕರೇ ಸ್ಥಾಪಿಸಿದ್ದುದು ಒಂದು ... ಅನುಕೂಲವೇ ಆಯಿತು. ಆದರೆ ವಿಧವೆಯರ ಮೇಲಣ ... ದಿಂದ ಏರ್ಪಡಿಸಿದ ಈ ಪದ್ಧತಿಯು ಈಗ ಮಿತಿಮೀರಿರುವುದ ... ಕುಟುಂಬಿಗಳಿಗೆ ಪದೇಪದೇ ಬವಣನ್ನುಂಟುಮಾಡುವ ವಿಷಯವಾಗಿ ... ಆದುಕಾರಣ ಕೇವಲಗಂಡನು ಮೃತನಾದರೆ ಅಥವಾ ... ನಾದರೆ ಇಂಥ ವಿಶೇಷ ಕಾರಣಗಳಿದ್ದರೆ ಮಾತ್ರ ಮತ್ತೊಬ್ಬ ... ನನ್ನು ಮದುವೆ ಮಾಡಿಕೊಳ್ಳಬಹುದೆಂದು ಕೆಲವು ಕಟ್ಟುಗಳ ... ಅಷ್ಟಕ್ಕೆ ಮಾತ್ರ ಅವಕಾಶ ಕೊಟ್ಟು ಅದರಿಂದಾಚೆಗೆ ತಡೆ ... ಕಲ್ಪಿಸಬೇಕು. ಮತ್ತು ಉತಿಕೆ ಕೂಡಿಕೆ ಎಂಬ ಹೆಸರಿ ... ಅಸಹ್ಯವಾಗಿ ಈ ಕೆಲಸವನ್ನು ಮಾಡಿಕೊಳ್ಳುತ್ತಿರುವವ ... ಶಾಸ್ತ್ರೋಕ್ತವಾಗಿಯೇ ವಿಧವಾವಿವಾಹ ಮಾಡುವುದನ್ನು ರೂಢಿಯು ... ಬಳ್ಳೆಯದೆಂದು ನನಗೆ ತೋರುತ್ತದೆ

ಪಂಚಾಯಿತಿ

ಮತ್ತು ನಮ್ಮಲ್ಲಿ ಧಾರ್ಮಿಕ ವ್ಯಾಜ್ಯಗಳನ್ನು ಸಮಾಜದಲ್ಲೇ ... ಕೊಳ್ಳುವ ಪದ್ಧತಿಯು ರೂಢಿಯಲ್ಲಿ ಬಂದಿರುವಂತೆ ವ್ಯಾವ ... ವ್ಯಾಜ್ಯಗಳನ್ನಾದರೂ ನಮ್ಮಲ್ಲೇ ಬಗೆಹರಿಸಿಕೊಳ್ಳುವ ಪದ್ಧ ... ನ್ನು ಸ್ಥಾಪಿಸುವುದು ಉತ್ತಮ. ವ್ಯಾವಹಾರಿಕ ವ್ಯಾಜ್ಯಗಳು ... ರದ ನ್ಯಾಯಸ್ಥಾನಗಳಿಗೆ ಹೋಗುವುದರಿಂದ ಕಕ್ಷಿಗಾರರು ಎಷ್ಟು ... ಪಡುವರೆಂಬುದನ್ನು ಎಲ್ಲರೂ ಬಲ್ಲವರಾಗಿರುತ್ತಾರೆ ಇದನ್ನು ... ಹಣವೂ ನಾವುಗಳು ಕೋರ್ಟಿಗೆ ಹತ್ತಿ ಕೆಡುವುದಕ್ಕಿಂತಲೂ, ... ಮಾನ್ಯರಾಗಿ ತೋರುವ ನಮ್ಮ ಸಮಾಜ ಬಂಧುಗಳ ಪಂಚಾ ... ಯಲ್ಲಿಯೇ ಇದನ್ನು ಬಗೆಹರಿಸಿಕೊಳ್ಳುವುದಕ್ಕೆ ಪ್ರಯತ್ನಿಸಬೇ ... ಈ ಪದ್ಧತಿಯನ್ನು ಮದ್ರಾಸು ಸರ್ಕಾರದವರೇ ಸ್ಥಾಪಿಸಿಕೊಟ್ಟಿ ... ರೆ ನಮ್ಮ ಮೈಸೂರು ಸರ್ಕಾರದವರೂ ಏರ್ಪಡಿಸಿಕೊಡುವವ ... ದರೆ ನಾವಾಗಿ ಇದನ್ನು ರೂಢಿಗೆ ತರುತ್ತ ಬಂದರೆ ಸರ್ಕಾರದವ ... ಕೂಡ ಸಂತೋಷಿಸುತ್ತಾರೆ

ಅಮಿತವಾದ ಖರ್ಚುಗಳು

ನಮ್ಮ ನಾವು ವಿವಾಹ ಮೊದಲಾದ ಶುಭಕಾರ್ಯಗಳನ್ನು ನಾ ... ಶ್ರಾದ್ಧ ಶ್ರಾವಣ ಮೊದಲಾದ ಪುಣ್ಯಕಾರ್ಯವನ್ನು ನಡೆ ... ಸುವಾಗಲೂ ಮಿತಿಮೀರಿ ವೆಚ್ಚ ಮಾಡುವ ಸಂಪ್ರದಾಯವಿಟ್ಟುಕೊಂ ... ವುದನ್ನು ಸಂಕೋಚ ಮಾಡುತ್ತ ಬರಬೇಕು. ಈ ಡಂಭದಿಂದ ... ಸ್ಥಿತಿಯು ದಿನದಿನಕ್ಕೆ ಕ್ಷೀಣಿಸಿಹೋಗುತ್ತಿದೆ ಡಂಭಕ್ಕಾಗಿ ಅನೇ ... ಸಾಲವನ್ನು ಮಾಡಿ ಕಡುತ್ತಿರುವುದನ್ನು ನೋಡಿದರೆ ವ್ಯಸನವಾ ... ತೆಯು. ಡಂಭದಿಂದ ಸಾಲಗಾರನಾಗಿ ನರಳುವವನ ಸ್ಥಿತಿಗಿಂತಲೂ, ... ಆಡಂಬರವಿಲ್ಲದೆ ಋಣವಿಲ್ಲದೆ ಬಾಳುವವನ ಸ್ಥಿತಿಯೇ ಲೇಸು ಅದು ... ನ ಆದಾಯಕ್ಕೆ ತಕ್ಕಂತೆ ಮಿತವಾಗಿ ವ್ಯಯಮಾಡುವುದನ್ನು ... ಎಲ್ಲರೂ ಅನುಸರಿಸಬೇಕು. ಧನಿಕರಾದರೂ ಶುಭೋತ್ಸವಾದಿ ... ಸಮಯದಲ್ಲಿ ೫ ದಿನದ ಉತ್ಸವ ಸಂತೋಷಕ್ಕಾಗಿ ದುಂದುವೆಚ್ಚ ... ವುದಕ್ಕೆ ಪ್ರತಿಯಾಗಿ ಆ ಹಣವನ್ನು ಮತಕ್ಕೆ ಸ್ಥಿರವಾದ ... ಯೋಜನವನ್ನುಂಟುಮಾಡುವ ವಿದ್ಯಾವರ್ಧಕ ಫಂಡು ಅಥವಾ ... ಕ ಫಂಡುಗಳಿಗೆ ಆ ಮಹೋತ್ಸವದ ಜ್ಞಾಪಕಾರ್ಥವಾಗಿ ಕೊ ... ಬಹುದು ಅದಕ್ಕೆ ಇಷ್ಟವಿಲ್ಲದೆ ಇದ್ದರೆ ತಮ್ಮ ತಮ್ಮ ... ಗೆ ಪ್ರೌಢವಿದ್ಯಾಭ್ಯಾಸವನ್ನು ಮಾಡಿಸುವುದಕ್ಕೋ ಕಲಾಕೌಶ ... ನ್ನು ಹೆಚ್ಚಿಸುವುದಕ್ಕೋ ಉಪಯೋಗಿಸಲಿ ಶ್ರೀಮಂತರು ಈ ... ವನ್ನು ತೋರಿಸಿಕೊಟ್ಟರೆ ರಿಕ್ತರೂ ಕೂಡ ದುಂದಿನ ವೆಚ್ಚದ ... ವನ್ನೇ ಬಿಟ್ಟುಬಿಡುವರು.

ಉದ್ಯೋಗ ಸುಧಾರಣೆ.

ನಮ್ಮ ಸಮಾಜದ ಧನಸಂಪತ್ತಿಯು ಬೆಳೆಯುವುದಕ್ಕೆ ಉದ್ಯೋ ... ಣೆಯು ಅತ್ಯಂತ ಮುಖ್ಯವಾದದ್ದು. ವ್ಯಾಪಾರ, ಕೃಷಿ, ಶಿಲ್ಪ ... ಪ್ರತಿಯೊಂದನ್ನು ಮಾಡತಕ್ಕವರು ನಮ್ಮಲ್ಲಿರುವರು. ... ಕಾಲೋಚಿತವಾದ ಸುಧಾರಣೆಯನ್ನು ಹೊಂದುವಂತೆ ಮಾ ... ವೃತ್ತಿಗಳನ್ನವಲಂಬಿಸಿದ ನಮ್ಮ ಸಮಾಜವೆಲ್ಲವೂ ಶ್ರೀಮಂತರಾ ... ಈ ಉದ್ಯೋಗದ ಸುಧಾರಣೆಗೆ ನಾನು ಮೇಲೆ ಹೇಳಿದಂತೆ ... ಪ್ರಯಾಣವು ಅತ್ಯಂತ ಮುಖ್ಯ ಸಾಧನವು ಪೂರ್ವದಂತೆ ... ಮುಂದಣ ಸಣ್ಣ ಅಂಗಡಿಗಳ ವ್ಯಾಪಾರವು ಈಗಿನ ಕಾಲದಲ್ಲಿ ... ಲಾಭವನ್ನು ಕೊಡಲಾರದೆಂಬುದನ್ನು ನೀವೆಲ್ಲರೂ ತಿಳಿದಿರು ... ಭರತಖಂಡವು ಆಂಗ್ಲೇಯ ಸಾಮ್ರಾಜ್ಯಕ್ಕೆ ಅಧೀನವಾದ ಬಳಿಕ ... ವ್ಯಾಪಾರವು ಪರದೇಶಗಳೊಡನೆ ಹೆಚ್ಚಾಗಿ ಸಾಗುವುದಕ್ಕಾರಂಭಿ ... ವ್ಯಾಪಾರದ ವ್ಯಾಪಕತೆಯು ಇನ್ನೂ ದಿನದಿನಕ್ಕೆ ವೃದ್ಧಿಯಾಗು ... ಹೀಗಿರುವಾಗ ವ್ಯಾಪಾರ ಒಂದು ಮುಖ್ಯೋದ್ಯೋಗವಾ ... ನಮ್ಮ ಜನರು ಅದರ ಬಗೆಗೆ ವ್ಯಾಪಕತೆಯನ್ನು ತಾವೂ ಸಂಪಾ ... ನಮ್ಮ ಉದ್ಯೋಗವನ್ನು ಕೆಲವು ಕಾಲದೊಳಗೆ ಇತರರಿಗೆ ... ಕೈ ಕಟ್ಟಿ ಕುಳಿತುಕೊಳ್ಳಬೇಕಾಗುವುದು. ಆದುಕಾ ... ನಮ್ಮ ದೇಶದ ಪಾರ್ಸಿ, ಮಾರ್ವಾಡಿ, ಗುಜರಾತಿ, ಬಂಗಾ ... ಮುಂತಾದವರ ವ್ಯಾಪಾರ ಬಂಧುಗಳನ್ನು ನೋಡಿ ಕೆಲಸ ಮಾಡು ... ಕಲಿಯಬೇಕು ಪ್ರತಿಯೊಂದು ಕಾರ್ಯಕ್ಕೂ ಮಾ ... ತೆಯೆಂಬುದು ಬೇಕಾಗಿದ್ದರೂ ವ್ಯಾಪಾರಕ್ಕೆ ಅದು ... ಹೆಚ್ಚಾಗಿ ಬೇಕು ಆಂಗ್ಲೇಯ ಜನರನ್ನು ನೋಡಿ ನಾವು ... ದಿಂದ ಕೆಲಸ ಮಾಡುವುದನ್ನು ಕಲಿಯಬೇಕು ನಮ್ಮಲ್ಲಿ ... ರಗಳು ಸಂಘವನ್ನು ಮಾಡಿಕೊಂಡು, ದೊಡ್ಡ ದೊಡ್ಡ ಸಂಸ್ಥಾನದ ಪಟ್ಟಣಗಳಲ್ಲಿ ೪-೬ ವ್ಯಾಪಾರಶಾಲೆಗಳನ್ನು ಸ್ಥಾಪಿಸಿ ವಿದೇಶಗಳೊಡನೆ ವ್ಯಾಪಾರ ಬೆಳೆಯಿಸುವುದನ್ನು ಬಲಪಡಿಸಬೇಕು ವಿದ್ಯಾವಂತರಾದ ತಮ್ಮ ತರುಣರನ್ನು ವಿದೇಶಗಳಿಗೆ ಕಳುಹಿ, ಯಂತ್ರಕಲೆಗಳಲ್ಲೂ, ಶಿಲ್ಪಕಲೆಗಳಲ್ಲೂ ಪ್ರವೀಣರಾಗಿ ಬರುವಂತೆ ಮಾಡಿ, ಹಾಗೆ ಅಂಥವರ ಸಹಾಯದಿಂದ ಕಾರ್ಖಾನೆಗಳನ್ನು ಒಂದೊಂದನ್ನಾಗಿ ಸ್ಥಾಪಿಸಿ ನಿತ್ಯದ ಉಪಯೋಗಕ್ಕೆ ಬರುವ ಕಾಗದ ಗಾಜು ಚಿತ್ರ ಪಟ್ಟಿ ಸೂಜಿ ಮೊದಲಾದ ಹಲವು ತರದ ಪದಾರ್ಥಗಳನ್ನು ಹುಟ್ಟಿಸಿ, ದೇಶಸ್ಥರಾಗಿ ಮಾರಾಟ ಮಾಡುತ್ತ ಬರಬೇಕು ಹೀಗಾದರೆ ಮಾತ್ರ ಭರತಖಂಡದಲ್ಲಿ ನಾವು ಗಣ್ಯವಾದ ಒಂದು ಪ್ರಭೇದದವರಾಗಿ ತೋರಲು ಸಮರ್ಥರಾಗುತ್ತೇವೆ ನಮ್ಮಲ್ಲಿನ ಕೃಷಿಕಾರ ಜನರಾದರೂ ತಮ್ಮ ಮಕ್ಕಳುಗಳಿಗೆ ಕಾಲೋಚಿತವಾದ ಕೃಷಿಕ ವಿದ್ಯಾಭ್ಯಾಸವನ್ನು ಮಾಡಿಸಿ, ಭೂಮಿಯ ಗುಣ, ಉಳುವ ಸಾಧನಗಳ ನವೀನ ವಿಧಾನ, ತರತರದ ಗೊಬ್ಬರಗಳ ಉಪಯೋಗ, ಮೊದಲಾದ ಸಂಗತಿಗಳನ್ನು ತಿಳಿದುಕೊಳ್ಳುವಂತೆಯೂ, ಸರ್ಕಾರದವರು ವ್ಯವಸಾಯದ ಮಾದರಿ ಹೊಲಗಳನ್ನು ಸ್ಥಾಪಿಸಿ ಪ್ರಜೆಗಳಿಗೆ ಉಂಟುಮಾಡಿಕೊಡುತ್ತಿರುವ ಜ್ಞಾನದ ಲಾಭವನ್ನು ಪಡೆದುಕೊಳ್ಳುವಂತೆಯೂ ಮಾಡಿ, ತಮ್ಮ ಉದ್ಯೋಗವನ್ನು ಸುಧಾರಣೆಗೊಳಿಸುತ್ತ ಬರಬೇಕು. ಸರ್ಕಾರದವರೂ ಇತರ ಪ್ರಜಾಪ್ರಮುಖರೂ ಆಗಾಗ್ಗೆ ಅಲ್ಲಲ್ಲಿ ನಡೆಯಿಸುತ್ತಿರುವ ವಸ್ತು ಪ್ರದರ್ಶನಗಳಿಗೆ ಹೋಗಿ ನೋಡಿ, ನವೀನ ವಿಷಯಗಳನ್ನು ಗ್ರಹಿಸಿಕೊಳ್ಳುತ್ತ ಬರಬೇಕು ಈ ವರ್ಷದ ನಮ್ಮ ಮಹಾಸಭೆಯ ಮುಂಬಾಳುಗಳಾದರೋ ನಮ್ಮ ಜನಗಳಿಂದಲೇ ತಯಾರಾದ ವಸ್ತುಗಳನ್ನು ತರಿಸಿ ಒಂದು ಸಣ್ಣ ಪ್ರದರ್ಶನವನ್ನು ನಡೆಯಿಸುವುದಕ್ಕೆ ಏರ್ಪಡಿಸಿರುವುದು ಸಂತೋಷಪ್ರದವಾಗಿದೆ ಈ ಯತ್ನವು ಅತ್ಯಂತ ಫಲಕಾರಿಯಾದುದು ಲೋಕದಲ್ಲಿ ಯಾವ ದೇಶವು ಸಂಪತ್ತಿನಲ್ಲಿ ಮುಂದಾಗಿದ್ದರೂ ಅದರ ಒಳ ತತ್ವವನ್ನು ವಿಚಾರಮಾಡಿ ನೋಡಿದರೆ ಅದರ ವೃದ್ಧಿಗೆ ಉದ್ಯೋಗಸುಧಾರಣೆಯೇ ಮುಖ್ಯ ಕಾರಣವಾಗಿ ಕಂಡುಬರುತ್ತದೆ ಉದ್ಯೋಗಪರತೆಯೂ ಮೊದಲಿಂದಲೂ ಮೈಯಲ್ಲುಂಡು ಬಂದಿರುವ ನಮ್ಮ ಜನಗಳು ಮೇಲೆ ತಿಳಿಸಿದಂತೆ ಕಾಲೋಚಿತವಾದ ಸುಧಾರಣೆಗಳನ್ನು ಮಾಡಿಕೊಳ್ಳುತ್ತ ಬಂದರೆ ನಮ್ಮಲ್ಲಿ ಕೋಟೀಶ್ವರರಾದ ವರ್ತಕ ಮಣಿಗಳನ್ನು ಕಂಡು ಸಂತೋಷಿಸುವ ಹೊತ್ತು ೧೦-೨೦ ವರ್ಷಗಳನಂತರವಾದರೂ ಬರಬಹುದು

ಅನಾಥಪಾಲನೆ

ನಮ್ಮ ಸಮಾಜದವರ ಕಲ್ಯಾಣವನ್ನು ಕುರಿತು ಇದುವರೆಗೆ ಮಾತನಾಡಿದೆನು. ನಮ್ಮಲ್ಲಿನ ಅನಾಥರ ರಕ್ಷಣೋಪಾಯವನ್ನು ಕುರಿತು ನನಗೆ ತೋರಿದ ಒಂದೆರಡು ಸೂಚನೆಯನ್ನು ಮಾಡದೆ ಈ ಭಾಷಣವನ್ನು ಮುಗಿಸಲಾರೆನು. ಸಂಸ್ಕೃತವನ್ನೇ ಆಗಲಿ ದೇಶಭಾಷೆಯನ್ನಾಗಲಿ ಇಂಗ್ಲಿಷನ್ನಾಗಲಿ ಕಲಿಯುವ ಯುವಕರಿಗೆ ನಾವು ಅಷ್ಟಿಷ್ಟು ಸಹಾಯ ಮಾಡುವುದಕ್ಕೆ ಪ್ರಯತ್ನಗಳನ್ನು ಮಾಡಿಕೊಂಡ ಬಳಿಕ, ಅಂಗವಿಹೀನರಾಗಿಯೂ, ಅನಾಥರಾಗಿಯೂ ಇರುವ ನಮ್ಮ ಸಮಾಜದ ಜನಗಳ ಗತಿಯೇನೆಂಬುವುದನ್ನು ವಿಚಾರಮಾಡದೆ ಇರುವುದು ಸರಿಯಲ್ಲ. ಇಂಥವರನ್ನು ನಾವು ಕೈ ಬಿಟ್ಟರೆ ಹಿಂಡಿನಿಂದ ತಪ್ಪಿದ ಕುರಿವು ದುಷ್ಟಮೃಗಗಳ ಬಾಯಿಗೆ ತುತ್ತಾಗುವಂತೆ, ಉದರನಿಮಿತ್ತವಾಗಿ ಆ ಜನಗಳು ವಿಧರ್ಮಿಗಳ ಮುಷ್ಟಿಗೆ ಬಿದ್ದು ಹೋಗುವರು ಅಥವಾ ಧರ್ಮಭ್ರಷ್ಟರಾಗದಿದ್ದರೂ ಉದ್ಯೋಗವಿಲ್ಲದಿದ್ದವರು ಹೊಟ್ಟೆಪಾಡಿಗಾಗಿ ಕಳ್ಳತನ ಪ್ರಾಣಹಿಂಸೆ ಮೋಸ ಮೊದಲಾದ ದುಷ್ಕೃತ್ಯಗಳಲ್ಲಿ ಬಿದ್ದು ಪಾಪಿಗಳಾಗುವರು ಇಲ್ಲವೆ ಈ ಕಾಲದಲ್ಲಿ ಅಗ್ಗವಾಗಿರುವಂತೆ ಕಾವಿಯ ಬಟ್ಟೆಯನ್ನು ಹೊದೆದು ಯಾಚನೆಗೆ ನಿಲ್ಲುವರು ಇಂಥವರ ಪರಿಪಾಲನೆಗೆ ನಾವು ಒಂದು ಉಪಾಯವನ್ನು ಮಾಡಬೇಕು ಏನೆಂದರೆ— ಪಾಸಲ್ ಮಿಷನ್ನಿನವರು ಅವರ ಮತಕ್ಕೆ ಸೇರಿದ ಅನಾಥರ ಪೋಷಣೆಗಾಗಿ ಯಾವ ಉಪಾಯವನ್ನು ಮಾಡಿರುವರೋ ಅದೇ ಪ್ರಶಸ್ತವಾಗಿರುತ್ತ, ನಮಗೂ ಅನುಕರಣೀಯವಾಗಿರುವದು. ಅವರ ಪ್ರಯತ್ನವೇನೆಂದರೆ—ನೇಗೆ ಕಬ್ಬಿಣದ ಕೆಲಸ ಮರಗೆಲಸ ಬಟ್ಟೆನೆಯ್ಯುವ ಕೆಲಸ ಮೊದಲಾದುವುಗಳನ್ನೆಲ್ಲಾ ನಡೆಯಿಸುವುದಕ್ಕೆ ಬೇರೆ ಬೇರೆ ಕಾರ್ಖಾನೆಗಳನ್ನು ಸ್ಥಾಪಿಸಿ, ಅವುಗಳಲ್ಲಿ ತಮ್ಮ ಮತದ ಅನಾಥರಾದ ಬಾಲಕರನ್ನೆಲ್ಲ ಸೇರಿಸಿಕೊಂಡು, ಕೆಲಸವನ್ನು ಕಲಿಸಿಕೊಟ್ಟು, ತಕ್ಕಷ್ಟು ವಿದ್ಯೆಯನ್ನು ಅಭ್ಯಾಸ ಮಾಡಿಸುತ್ತ, ಅವರ ಅಶನವಸನಗಳನ್ನು ತಾವೇ ಕೊಟ್ಟು, ಕಡೆಕಡೆಗೆ ಅವರಿಗೆ ಸಂಬಳವನ್ನು ಮಾಡಿಕೊಟ್ಟು, ಸಂಸಾರಿಗಳಾಗಿ ಬಾಳುವುದಕ್ಕೆ ಯೋಗ್ಯರನ್ನಾಗಿ ಮಾಡುತ್ತಲಿರುವರು. ಅಲ್ಲದೆ ಆ ಕಾರ್ಖಾನೆಗಳಲ್ಲಿ ಆಗುವ ಕೆಲಸವು ನಂಬುಗೆಗೆ ಅರ್ಹವಾದುದೂ ಬಾಳಿಕೆ ಬರುವುದೂ ಎಂಬ ಪ್ರತೀತಿಯನ್ನು ಸಂಪಾದಿಸಿರುವುದು ಇದರಿಂದ ಆ ಕಾರ್ಖಾನೆಗಳಲ್ಲಿ ಲಾಭವಾದರೂ ವಿಶೇಷವಾಗಿ ಹುಟ್ಟುತ್ತಿರುವುದು ನಾವಾದರೂ ಧಾರ್ಮಿಕ ನಿಧಿಯ ದ್ರವ್ಯ ಸಹಾಯದಿಂದ ಒಂದೆರಡು ಮುಖ್ಯಸ್ಥಳಗಳಲ್ಲಿ ಇಂಥ ಕಾರ್ಖಾನೆಗಳನ್ನು ಸ್ಥಾಪಿಸಿ, ಅವುಗಳಲ್ಲಿ ನಮ್ಮ ಮತದ ಅನಾಥ ಬಾಲರನ್ನು ಸೇರಿಸಿಕೊಂಡು ಅವರ ಸದ್ವೃತ್ತಿಯ ಕಡೆಗೆ ಮೇಲ್ವಿಚಾರಣೆ ಇಟ್ಟು, ಹೊಟ್ಟೆ ಬಟ್ಟೆಗೆ ದಾರಿ ಮಾಡಿಕೊಟ್ಟು, ಕೈಗಾರಿಕೆಯನ್ನು ಕಲಿಸಿಕೊಟ್ಟು, ಕೆಲಸ ಮಾಡಿಸಿಕೊಳ್ಳುತ್ತ ಬಂದರೆ ಅವರೂ ಉದ್ಯೋಗಸಂಪನ್ನರಾಗುವುದಲ್ಲದೆ, ನಮ್ಮ ಕಾರ್ಖಾನೆಗಳೂ ಲಾಭವನ್ನು ಪಡೆಯುವುವು ಇದನ್ನು ತಾವೆಲ್ಲರೂ ಯೋಚಿಸಿ ಈ ವಿಷಯದಲ್ಲಿ ತಕ್ಕ ನಿಬಂಧನೆಯೊಂದನ್ನು ಮಾಡಬೇಕೆಂದು ಕೋರುತ್ತೇನೆ

ಉಪಸಂಹಾರ

ಮುಖ್ಯವಾಗಿ ನಮ್ಮ ಮಹಾಸಭೆಯು ಯಾವುದೊಂದು ಪ್ರಯತ್ನವು ಕೈಗೂಡಬೇಕಾದರೂ ಚಟುವಟಿಕೆಯುಳ್ಳ ೧೨ ತಿಂಗಳು ಕೆಲಸ ಮಾಡುವ ಸ್ಟಾಂಡಿಂಗ್ ಕಮಿಟಿಯೊಂದು ಬೇಕಾಗಿರುವುದು ಅದಿಲ್ಲದಿದ್ದರೆ ಮಹಾಸಭೆಯನ್ನು ಕೂಡಿಸುವುದರ ಪ್ರಯೋಜನಗಳೆಲ್ಲ ನಿರರ್ಥಕವೇ ಆಗುವುವು ಆದುಕಾರಣ ಈ ವರ್ಷದ ಸಭೆಯಲ್ಲೇ ಅದರ ಸ್ಥಿತಿಯನ್ನು ಸುಧಾರಿಸಿ, ಸಭೆಯಾದ ಮರುದಿನದಿಂದಲೂ ಅದರ ಕೆಲಸವನ್ನು ಅದು ತಡೆಯಿಲ್ಲದೆ ನಡಸಿಕೊಂಡು ಹೋಗುವಂತೆ ಮೊದಲು ನಾವು ಮಾಡಬೇಕು

ತಾಲ್ಲೋಕು ವರ್ತಮಾನಗಳು.

ಚಿಕ್ಕಮಗಳೂರು.—ಇಲ್ಲಿ ಚಳಿ ಜಾಸ್ತಿಯಾಗಿದ್ದು ಹತ್ತಾರು ದಿನಗಳಿಂದ ಮೋಡವಾಡುತ್ತಿರುವದರಿಂದ ಸ್ವಲ್ಪ ಕಡಿಮೆಯಾಗಿರುವದು — ಈ ಊರಿನಿಂದ ಲೋವರ್ ಸೆಕಂಡರಿ ಪರೀಕ್ಷೆಗೆ ಹೋಗಿದ್ದವರ ಪೈಕಿ ಹೈ ಸ್ಕೂಲಿನಲ್ಲಿ ಹನ್ನೊಂದಕ್ಕೆ ಐದು, ಕನ್ನಡ ಸ್ಕೂಲಿನಲ್ಲಿ ಆರಕ್ಕೆ ಎರಡು, ಗವರ್ನಮೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಪರೀಕ್ಷೆಗೆ ಹಾಜರಾಗಿದ್ದುದು ಒಂದು, ಅದೂ ಆಗಲಿಲ್ಲವು ಮಿಷನ್ ಸ್ಕೂಲಿನಲ್ಲಿ ಹೋಗಿದ್ದ ಎರಡು ಬಾಲಕಿಯರಲ್ಲಿ ಎರಡೂ ತೇರ್ಗಡೆಯಾಗಿದಾರೆಂದು ಕೇಳುತ್ತೇನೆ.—ಇದೇ ತಿಂಗಳ ೧ ನೇ ತಾ ಇಲ್ಲಿನ ಗವರ್ನಮೆಂಟ್ ಕನ್ನಡಾ ಸ್ಕೂಲಿನಲ್ಲಿ ಉಪಾಧ್ಯಾಯರ ಒಂದು ಸಂಘವು ಸೇರಿತ್ತು. ಅದಕ್ಕೆ ಈ ಟವನ್ನಿನ ಮತ್ತು ಇದಕ್ಕೆ ಸೇರಿದ ಗ್ರಾಮಾಂತ್ರಗಳ ಉಪಾಧ್ಯಾಯರು ಇಪ್ಪತ್ತು ಜನರ ವರಿಗೂ ಬಂದಿದ್ದರು. ಅವರಲ್ಲಿ ಈ ಡಿಸ್ಟ್ರಿಕ್ಟಿನ ವಿದ್ಯಾಭ್ಯಾಸದ ಇನ್ಸ್ಪೆಕ್ಟರ್ ಮೆ॥ ವೆಂಕಟರಾಮಯ್ಯನವರು ಸಭಾನಾಯಕರಾಗಿದ್ದರು ಆಗ ಗ॥ ಕ॥ ಸ್ಕೂಲಿನ ಹೆಡ್ ಮಾಸ್ಟರು ಒಂದು ಉಪನ್ಯಾಸವನ್ನು ಓದಿದರು. ಇನ್ನೊಬ್ಬರು ಮಕ್ಕಳಿಗೆ ಅಕ್ಷರಗಳ ಅನುಭವವು ಉಂಟಾಗುವಂತೆ ಒಂದು ಸೊನ್ನೆಯನ್ನು ಬರೆದು ಅದಕ್ಕೆ ಬೇರೆ ಬೇರೆ ಚಿನ್ಹೆಗಳನ್ನು ಇಡುವದರಿಂದ ಇಂಥಿಂಥಾ ಅಕ್ಷರಗಳಾಗುತ್ತವೆಂದು ವಿವರಿಸಿ ಹೇಳಿದರು. ಕಡೆಯಲ್ಲಿ ಇನ್ಸ್ಪೆಕ್ಟರವರು ಹೀಗೆ ಉಪಾಧ್ಯಾಯರು ಆಗಾಗ್ಗೆ ಸಭೆ ಸೇರುವದರ ಪ್ರಯೋಜನವನ್ನು ಕುರಿತು ಕೆಲವು ಮಾತುಗಳನ್ನು ಹೇಳಿ ಸಂಘವನ್ನು ಮುಗಿಸಿದರು ಇದರ ಉದ್ದೇಶವೇನೆಂದರೆ, ಎಲ್ಲರೂ ತಿಂಗಳಿಗೆ ಒಂದಾವರ್ತಿ ಒಂದು ಸ್ಥಳದಲ್ಲಿ ಸೇರಿ ಮಕ್ಕಳಿಗೆ ಹ್ಯಾಗೆ ಪಾಠ ಹೇಳಿದರೆ ಅವರ ಮನಸ್ಸಿಗೆ ಹಿಡಿದು, ಅವರಿಗೆ ಪ್ರಯೋಜನವಾದೀತೆಂಬುವದನ್ನು ತಿಳಿದುಕೊಳ್ಳಬೇಕೆಂಬುವದೇ —ನಾಳೆ ೬ ನೇ ತಾ ಶಿವಮೊಗ್ಗೆಯಿಂದ ಸರ್ಜನ್ ಪಜ್ಞರವರು ಇಲ್ಲಿಗೆ ಬರುತ್ತಾರೆಂದು ವರ್ತಮಾನ. ಈ ಮಲೆನಾಡು ಪ್ರಾಂತ್ಯದಿಂದ ಭತ್ತವು ಬಹಳವಾಗಿ ಮದ್ರಾಸ್ ಪ್ರಾಂತ್ಯಕ್ಕೆ ಸಾಗಿಹೋಗುತ್ತಿರುವದರಿಂದ, ದಿನಸಿ ಧಾರಣೆ ತುಂಬಾ ಜಾಸ್ತಿಯಾಗುವದಕ್ಕೆ ಕಾರಣವಾಯಿತೆಂದೂ, ಹಾಗೆ ಹೊರಗೆ ಸಾಗಿಹೋಗದೆ ಇಲ್ಲಿ ಬೆಳೆದ ದಿನಸಿ ಇಲ್ಲಿಯೇ ಇದ್ದರೆ ಅಕ್ಕಿ ರೂಪಾಯಿಗೆ ೧೨—೧೫ ಸೇರಿನ ವರಿಗೂ ಮಾರಾಟವಾಗುತ್ತಿತ್ತೆಂದೂ ಹೇಳುತ್ತಾರೆ.

ಚಿಕ್ಕಬಳ್ಳಾಪುರ.—ಈಗ ಒಂದೆರಡು ದಿವಸಗಳಿಂದ ಪ್ಲೇಗ್ ಮರಣಗಳು ಇಲ್ಲ. ಈಗಿನ ವರಿವಿಗೂ ದಿನ ಒಂದಕ್ಕೆ ಸರಾಸರಿ ೨-೩ ಮರಣಗಳ ಪ್ರಕಾರವಾಗುತ್ತಿದ್ದವು. ಈಗ ಕೆಲವು ಕಾಲದಿಂದ ರಾತ್ರಿಯಲ್ಲಿಯೂ ಬೆಳಿಗ್ಗೆಯೂ ಛಳಿಯೂ ಮತ್ತು ಮಧ್ಯಾಹ್ನದಲ್ಲಿ ತಕ್ಕಮಟ್ಟಿಗೆ ಬಿಸಿಲೂ ಕಾಯುತ್ತದೆ. ದಿಸೆಂಬರ್ ತಾ ೨೩—೨೬ ರಲ್ಲಿ ಡೆಪ್ಯುಟಿ ಕಮಿಷನರೂ ಡಿಸ್ಟ್ರಿಕ್ಟ್ ಸರ್ಜನರೂ ಮುಂತಾದವರು ಇಲ್ಲಿಗೆ ದಯಮಾಡಿಸಿದ್ದರು ಡೆಪ್ಯುಟಿ ಕಮಿಷನರು ದೇಹಾಲಸ್ಯದ ಕಾರಣದಿಂದಲೋ ಏನೋ ಟವನಿನೊಳಕ್ಕೆ ದಯಮಾಡಿಸದೆ, ಮುಸಾಫರಿ ಬಂಗಲಿಯಲ್ಲಿದ್ದು, ಹಾಗೆಯೇ ಕೋಲಾರಕ್ಕೆ ದಯಮಾಡಿಸಿದರು. ಡಿಸ್ಟ್ರಿಕ್ಟ್ ಸರ್ಜನರು, ಸಬ್ ಡಿವಿಜನ್ ಸಾಹೇಬರು, ಅಮಲ್ದಾರರು ವಗೈರೆಯವರು ಊರು ಬಿಡದೆ ಇದ್ದ ಜನರಿಗೆ ಬಹಳವಾಗಿ ಬುದ್ಧಿವಾದಗಳನ್ನು ಹೇಳುತ್ತಾ ಬಂದದ್ದರಿಂದ ಬಹಳ ಜನರು ಊರನ್ನು ಬಿಟ್ಟರು ಇಷ್ಟರಲ್ಲಿಯೇ ಅಲ್ಲಲ್ಲಿ ಇಲಿಗಳು ಬೀಳುವದು ಜಾಸ್ತಿಯಾದದ್ದರಿಂದ ಈಗ ಹೆಚ್ಚುಕಡಿಮೆ ಊರೆಲ್ಲಾ ಖಾಲಿಯಾಗುತ್ತಿದೆ. ಆದರೆ ಪ್ರಯೋಜನವೇನು ? ಷೆಡ್ಡುಗಳಲ್ಲಿ ವಾಸಮಾಡುವ ಜನರು ದಿನವಹಿಯೂ ತಮ್ಮ ಮನೆಗಳಿಗೆ ಬಂದು ಬೀಗಗಳನ್ನು ತೆಗೆದು ನೋಡಿಕೊಂಡು ಹೋಗುತ್ತಾರೆ. ಮತ್ತು ಕೆಲವರು ಷೆಡ್ಡುಗಳಲ್ಲಿ ವಾಸಮಾಡುತ್ತಾ ಊರೊಳಗೆ ಅಂಗಡಿಗಳನ್ನು ಇಟ್ಟು ವ್ಯಾಪಾರ ಮಾಡುತ್ತಾರೆ ಜನರು ಹೀಗೆ ಮಾಡೋಣದರಿಂದ ಈ ಅಂಟುರೋಗವು ಜಾಗ್ರತೆಯಾಗಿ ನಿಲ್ಲುವಹಾಗಿಲ್ಲ ಹೊರಗಿನಿಂದ ದವಸ ಧಾನ್ಯಗಳು ಯಾವುದೂ ಬಾರದಿರುವದರಿಂದ ರಾಗಿ ರೂಪಾಯಿಗೆ ೧೦—೧೧ ಸೇರು, ಅಕ್ಕಿ ೬ ಸೇರಿನಂತೆಯೂ ಮಾರುತ್ತಾರೆ. ಬಡ ಜನರು ಬದುಕುವದು ಬಹಳ ಕಷ್ಟ. ಸರ್ಕಾರದವರು ಕೆಲವು ಅಂಗಡಿಗಳನ್ನು ಏರ್ಪಡಿಸಿ ನ್ಯಾಯವಾದ ಧಾರಣೆಗೆ ಜಿನಸುಗಳನ್ನು ಮಾರಿಸದೆಹೋದರೆ ಬಡ ಜನರು ದಿಕ್ಕೆಟ್ಟುಹೋಗುತ್ತಾರೆ—ದುಷ್ಟರು ಯಾರೋ ೩—೪ ಗುಡಿಸಲುಗಳಿಗೆ ಬೆಂಕಿ ಹಚ್ಚಿ ಸುಟ್ಟುಬಿಟ್ಟರು. ಆ ಜನರ ದುಃಖವನ್ನೂ ಕಷ್ಟವನ್ನೂ ಎಷ್ಟೆಂದು ಹೇಳೋಣ. ಸಂತೆ ಮಾರ್ಕೆಟ್ಟಿನ ಹಿಂದುಗಡೆಯಲ್ಲಿ ಒಂದೇ ರಾತ್ರಿಯಲ್ಲಿ ೪—೫ ಗುಡಿಸಲುಗಳಲ್ಲಿ ಕಳವಾದ್ದರಿಂದ ಗುಡಿಸಲುಗಳಲ್ಲಿ ವಾಸಮಾಡುವ ಜನರಿಗೆ ಕೇಳಬರುತ್ತದೆಂದು ಮಾತನಾಡಿಕೊಳ್ಳುತ್ತಾರೆ. ಪೋಲೀಸ್ ಸಿಬ್ಬಂದಿಯೂ ಮತ್ತು ಬಂದೋಬಸ್ತು ಸಾಲದ ಹಾಗೆ ಕಾಣುತ್ತದೆ.

ನಂಜನಗೂಡು.—ಹಿಂದಿನ ವರ್ಷದಲ್ಲಿ ಕನ್ನಡ ಸ್ಕೂಲಿನಿಂದ ೧೮ ವಿದ್ಯಾರ್ಥಿಗಳು ಲೋವರ್ ಸೆಕೆಂಡರಿ ಪರಿಕ್ಷೆಗೆ ಕಟ್ಟಿದ್ದರು ಅವರಲ್ಲಿ ೫ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದರು ಆದರೆ ಪ್ಲೇಗ್ ಗಲಾಟೆಯಿಂದ ಅನೇಕ ದಿನಗಳು ಸ್ಕೂಲ್ ಮುಚ್ಚಬೇಕಾಯಿತು ಇಲ್ಲವಾದರೆ ಇನ್ನು ಅನೇಕರು ತೇರ್ಗಡೆ ಹೊಂದುತ್ತಿದ್ದರು ಇಂಗ್ಲಿಷ್ ಮಿಡ್ಲ್ ಸ್ಕೂಲಿನಿಂದ ೬ ವಿದ್ಯಾರ್ಥಿಗಳು ಹೋಗಿದ್ದರು. ಅವರಲ್ಲಿ ೪ ಜನರು ತೇರ್ಗಡೆಯಾದರು ಹೆಡ್ ಮಾಸ್ಟರು ಪ್ಲೇಗ್ ಕಾಲದಲ್ಲಿ ಬೇರೆ ಬೇರೆ ಕಡೆಗಳಲ್ಲಿ ತಮ್ಮ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ತುಂಬಾ ಮೆಹನತ್ತು ಮಾಡಿದ್ದರಿಂದ ಒಳ್ಳೇದಾಯಿತು.—ಶನಿವಾರ ಸಾಯಂಕಾಲ ಕನ್ನಡ ಸ್ಕೂಲಿನಲ್ಲಿ ಮೈಸೂರಿಂದ ಬಂದಿದ್ದ ರಂಗಮ್ಮ ಎಂಬ ಆರ್ಯಮಹಿಳೆಯು ಸ್ತ್ರೀ ವಿದ್ಯಾಭ್ಯಾಸದ ವಿಷಯವಾಗಿ ಒಂದು ಉಪನ್ಯಾಸವನ್ನು ಓದಿದರು. ಆಗ ಅಮಲ್ದಾರ್ ಮೆ॥ ಧರ್ಮರಾಯರು ಅಗ್ರಾಸನವನ್ನು ವಹಿಸಿದ್ದರು. ಮುನ್ಸೀಫರು, ಲಾಯರುಗಳು, ತಾಲ್ಲೋಕ್ ಉದ್ಯೋಗಸ್ಥರು ಅನೇಕ ವಿದ್ಯಾರ್ಥಿನಿಯರು ಸೇರಿದ್ದರು. ಉಪನ್ಯಾಸದ ಸಾರಾಂಶ ವೇನೆಂದರೆ, ಹಿಂದೂ ಸ್ತ್ರೀಯರು ಮಹಾ

ದಿಯರ ಪ್ರವೇಶಕ್ಕೆ ಮುಂಚೆ ಉತ್ಕೃಷ್ಟವಾದ ಸ್ಥಿತಿಯಲ್ಲಿದ್ದು, ವಿದ್ಯೆಯಲ್ಲಿ ಸಂಸ್ಕಾರವನ್ನು ಹೊಂದಿದ್ದರು. ಅದಕ್ಕೆ ದೃಷ್ಟಾಂತವಾಗಿ ಕೆಲವು ಸ್ತ್ರೀಯರು ಬೇರೆ ಬೇರೆ ಗ್ರಂಥಗಳನ್ನು ರಚಿಸಿದರೆಂತಲೂ ಈಚೆಗೆ ಮಾಧ್ಯಸ್ಥಿತಿಯಲ್ಲಿ ಇರಬೇಕಾದ ಸಮಯ ಒದಗಿತು. ವಿದ್ಯೆಯೇ ಮನುಷ್ಯರನ್ನು ಉತ್ತಮ ಸ್ಥಿತಿಗೆ ತರುವಂಥಾದ್ದು. ಆದಕಾರಣ ಎಲ್ಲರನ್ನೂ ವಿದ್ಯೆ ಕಲಿಯುವಂತೆ ಪ್ರೋತ್ಸಾಹಿಸಬೇಕು. ಮತ್ತೊಂದು ವಿಷಯ—ಬ್ರಾಹ್ಮಣ ವಿತಂತುಗಳ ಅನಿಷ್ಟಸ್ಥಿತಿ. ಈಗ ವಿತಂತುಗಳಿಗೆ ನೇಮಿಸುವ ಕ್ರಮಗಳು ತುಂಬಾ ಶೋಚನೀಯವಾದವು. ಪ್ಲೇಗ್ ದೆಸೆಯಿಂದ ಅನೇಕ ವಿತಂತುಗಳು ಹೆಚ್ಚುತ್ತಿದ್ದಾರೆ. ಅವರಿಗಾಗಿ ವಿಧವಾ ನಿಲಯವು ಒಂದು ಮೈಸೂರಲ್ಲಿ ಏರ್ಪಾಡಾಗಿದೆ. ಅದರಲ್ಲಿ ಸೇರುವವರು ಉಪಾಧ್ಯಾಯಿನಿಯರಾಗಬೇಕು. ಅಂದರೆ ವಿದ್ಯೆ ಕಲಿತು ಇತರರನ್ನು ಉಪಚರಿಸುವ ಉಪಾಧ್ಯಾಯಿನಿಯರಾಗುವರು, ಮುಂತಾದವು. ಈ ಕಾರ್ಯಕ್ಕಾಗಿ ಎಲ್ಲರೂ ಸಹಾಯಕರಾಗಬೇಕು ಎಂದು ಧೈರ್ಯವಾಗಿ ಸಭೆಯಲ್ಲಿ ಉಪನ್ಯಾಸ ಮಾಡಿದರು. ಈ ರೀತಿ ವಿತಂತುಗಳು ಬಹಿರಂಗವಾಗಿ ಸಭೆಯಲ್ಲಿ ನಿಂತು ಮಾತನಾಡುವುದು ಇನ್ನು ಮೇಲೆ ಹೆಚ್ಚುವದರಲ್ಲಿ ಸಂದೇಹವಿಲ್ಲ.

ತಿಪ್ಟೂರು.—ಸುತ್ತಲೂ ಪ್ಲೇಗ್ ಆಪಾಂತ್ರವು ಹೆದರಿಸುತ್ತದೆ. ಆದರೆ ಸದ್ಯಕ್ಕೆ ಇಲ್ಲಿ ಗಲಾಟೆ ಕಾಣಿಸಲ್ಲ. ಬಹಳ ಮಕ್ಕಳು ಗೋಣಿ ತಟ್ಟು ಎಂಬ ಕೆಮ್ಮಿನಿಂದ ನರಳುತ್ತಿದ್ದಾರೆ.—ರೀಡಿಂಗ್ ರೂಮಿನ ವಾರ್ಷಿಕೋತ್ಸವವು ನಡೆಯಿತು. ಮೆಂಬರುಗಳೂ ಇತರ ದೊಡ್ಡ ಮನುಷ್ಯರೂ ಸಭೆಯನ್ನಲಂಕರಿಸಿದ್ದರು. ಸೆಕ್ರೆಟರಿಯವರು ರೂಮಿನ ವೃದ್ಧಿ ಮುಂತಾದ ವಿಷಯ ಭಾಷಣಮಾಡಿದರು. ಒಂದು ಪುಸ್ತಕ ಭಂಡಾರವು ಇದ್ದರೆ ಲೌಕಿಕ ಪಾರಮಾರ್ಥಿಕಗಳ ವಿಷಯ ತಿಳಿಯಲಿಕ್ಕಾಗುತ್ತೆಂಬ ಅಭಿಪ್ರಾಯವನ್ನು ಪ್ರಸಿದ್ಧರು ತಿಳಿಸಿದರು. ಸಂಗೀತಜ್ಞರಾದ ಮೆ॥ ಪೀತಾಂಬರಯ್ಯನವರು ಸರ್ವರನ್ನೂ ಸಂತೋಷಗೊಳಿಸುತ್ತಿದ್ದರು, ಗಂಧ ಪುಷ್ಪ ತಾಂಬೂಲಗಳು ಸರ್ವರಿಂದ ಸ್ವೀಕೃತವಾಗಿ ಸಭೆಯು ಬರಖಾಸ್ತಾಯಿತು.—ಸಾಹುಕಾರ್ ಪುಟ್ಟಕಾಮಿಶೆಟ್ಟರ ತಮ್ಮಂದಿರು ಸರಾಫ್ ನಂಜುಂಡಶೆಟ್ಟರು ಧ್ವಿವಾಧೀನವಾದರು. ಇವರು ಬಹು ಪಂಡಿತಮಾಡಿಗಳೂ ಸ್ವಲ್ಪ ಧರ್ಮಿಷ್ಠರೂ ಆಗಿದ್ದರಂತೆ. ಈ ಮೊದಲೇ ಅವರು ಕ್ಷೇತ್ರಯಾತ್ರೆಯನ್ನು ಪೂರೈಸಿದ್ದರು. ಇವರ ಶ್ರಾದ್ಧಾದಿ ಉತ್ತರಕರ್ಮಗಳಿಗೆ ಸಾವಿರಾರು ರೂಪಾಯಿ ಖರ್ಚಾಯಿತಂತೆ ಮತ್ತು ಬಹು ದೂರದಿಂದಲೂ ಬ್ರಾಹ್ಮಣರು ಬಂದು ಸಕಲ ಕಾರ್ಯಗಳನ್ನೂ ಸಾಂಗವಾಗಿ ಆಗಮಾಡಿಸಿದರಂತೆ. ಲಾಡು ಉಂಡೆ ಸಂತರ್ಪಣೆಯು ದಿವ್ಯತರವಾಗಿತ್ತೆಂದು ಹೇಳುತ್ತಿದ್ದರು.—ಗೋರಗನಹಳ್ಳಿ ನಾಟಕ ಕಂಪನಿಯವರು ಚೆನ್ನಾಗಿ ಆಟ ಆಡಿ ತೋರಿಸಿದ್ದರಿಂದ ನಾಟಕದ ಕಂಟ್ರಾಕ್ಟರು ಅಬ್ದುಲ್ಲಾ ಸಾಹೇಬ್ ಎಂಬವರು ಎರಡು ಸವರನ್ ಭಂಗಾರದ ಬಹುಮಾನ ಕೊಟ್ಟರೆಂದು ತಿಳಿಯಿತು.—ಪೋಸ್ಟ್ ಇಲಾಖೆಯಲ್ಲಿ ಕೊಂಚ ಮೊಬಲಗು ಗ್ಯಮೆಲೆ ಬಂದದ್ದರಿಂದ ತುಮಕೂರು ಮತ್ತು ಹಾಸನದ ಇನ್ಸ್‌ಪೆಕ್ಟರು ತನಿಖೆ ಮಾಡುತ್ತಿದ್ದರೆಂದು ತಿಳಿಯಿತು.—ಮಧ್ಯರಂಗ್ಯವಾಗಿಯೂ ಘನವ್ಯಾಪಾರಸ್ಥಳವಾಗಿಯೂ ಇರುವ ಈ ಊರಲ್ಲಿ ವರ್ತಕ ಮಹನೀಯರು ಒಂದು ಟೌನ್ ಹಾಲ್ ಬಂಗಲೆಯನ್ನು ಕಟ್ಟಿ ಯಾಕೆ ಕೀರ್ತಿಪಡೆಯಬಾರದು?

ಚಿತ್ರದುರ್ಗ.—ನಮ್ಮ ದಿವಾನರು ಮೆ॥ ವಿ. ಪಿ. ಮಾಧವರಾವ್, ಸಿ. ಐ. ಇ. ಯವರು ಕಳೆದ ಡಿಸೆಂಬರ್ ೩೧ನೇ ತಾ॥ ಮಧ್ಯಾಹ್ನ ಸುಮಾರು ೧೨ ಗಂಟೆಗೆ ಚಳ್ಳಕೆರೆಯ ಮಾರ್ಗವಾಗಿ ಮೋಟಾರ್ ಕಾರಿನಲ್ಲಿ ಪರಿವಾರ ಸಮೇತ ಚಿತ್ರದುರ್ಗದ ಮುಸಾಫರ್‌ಖಾನೆಯಲ್ಲಿ ಬಂದಿಳಿದರು. ಮಾರನೇ ದಿನ ಬೆಳಿಗ್ಗೆ ಊರನ್ನು ನೋಡುವುದಕ್ಕೆ ಹೊರಟು, ಮೊದಲು ಇಲ್ಲಿ ಪ್ರಸಿದ್ಧವಾಗಿರುವ ಮುರಿಗಾ ಮಠದ ಸ್ವಾಮಿಗಳಿಗೆ ಭೇಟಿಕೊಡುವದಕ್ಕಾಗಿ ಅಲ್ಲಿಗೆ ಚಿತ್ತೈಸಿದರು. ಸ್ವಾಮಿಗಳವರು ದಿವಾನರವರನ್ನು ಎದುರುಗೊಂಡು ಅವರನ್ನು ಕರೆದುಕೊಂಡು ಹೋಗಿ ತಕ್ಕ ಮರ್ಯಾದೆಗಳನ್ನು ಸಲ್ಲಿಸಿದನಂತರ ಅವರಿಂದ ಕೊಡೋಣಾದ ಅಡ್ರೆಸ್ಸನ್ನು ಸ್ವೀಕರಿಸಿ, ಅಲ್ಲಿಂದ ಪುರಪ್ರವೇಶವಂ ಮಾಡಿ ಮುಸಲ್ಮಾನರ ಅಂಜುಮನ್ ಮಂದಲ್ಲಿ ಪ್ರವೇಶಿಸಿ, ಅಲ್ಲಿ ಸೇರಿದ್ದ ಮುಸಲ್ಮಾನ ಮಹಾಜನಗಳ ವಿಶೇಷವಾದ ಸನ್ಮಾನಾದಿಗಳನ್ನು, ವಿಜ್ಞಾಪನಾಪತ್ರಿಕೆಯನ್ನೂ ಸ್ವೀಕರಿಸಿಕೊಂಡು, ಅಲ್ಲಿಂದ ಮುಂದೆ ಗವರ್ನಮೆಂಟ್ ಇಂಡಸ್ಟ್ರಿಯಲ್ ಸ್ಕೂಲಿಗೆ ದಯಮಾಡಿಸಿದರು. ಇಲ್ಲಿ ಬಹು ಅಲಂಕಾರವಾಗಿ ನಿರ್ಮಾಣವಾಗಿದ್ದ ಚಪ್ಪರ ತೋರಣ ಮುಂತಾದವುಗಳನ್ನು ನೋಡಿ ಸಂತೋಷಪಟ್ಟು, ಸ್ಕೂಲಿನ ಅಧಿಕಾರಿಗಳು ಒಪ್ಪಿಸಿದ ವಿಜ್ಞಾಪನಾಪತ್ರಿಕೆಯಲ್ಲಿ ಮುಖ್ಯಾಂಶವಾದ ಕಟ್ಟಡದ ವಿಚಾರವನ್ನು ಕಾಣಿಸಿತು.—ಈ ಕಟ್ಟಡವು ಶಿಥಿಲವಾಗಿರುವದರಿಂದ ಎ. ವಿ. ಸ್ಕೂಲಿನ ಪ್ರಾಕಾರದೊಳಗೇ ಇದಕ್ಕಾಗಿ ಒಂದು ಕಟ್ಟಡವನ್ನು ಕಟ್ಟಿಸಿ, ವಿದ್ಯಾರ್ಥಿಗಳು ಬೆಳಿಗ್ಗೆಯಿಂದ ಅಲ್ಲಿ ಕೈಗಾರಿಕೆಯನ್ನೂ, ೧೧ ಗಂಟೆಯಿಂದಾಚೆಗೆ ಅಲ್ಲೇ ವಿದ್ಯಾಭ್ಯಾಸವನ್ನೂ ಸಹಾ ಮಾಡಿಸುವಂತೆ ನಿರ್ಧರಿಸಬೇಕೆಂದು ಅಪ್ಪಣೆ ಕೊಡಿಸಿದರು. ತರುವಾಯ ದಿವಾನರು ಅಲ್ಲಿಂದ ಹೊರಟು ಪುನಃ ಊರಿನ ದೊಡ್ಡ ಬಜಾರದಲ್ಲಿ ಸವಾರಿಯು ಹೊರಟು ವರ್ತಕರಿಂದ ಅಲ್ಲಲ್ಲಿ ಒಪ್ಪಿಸಲ್ಪಟ್ಟ ಮರ್ಯಾದೆಯನ್ನೂ ಫಲಪುಷ್ಪಾದಿಗಳನ್ನೂ ಸ್ವೀಕರಿಸುತ್ತಾ, ಸ್ಕೂಲ್ ಮಾಸ್ಟರ್ ಹನುಮಂತರಾಯರವರು ಶ್ರಮಪಟ್ಟು ಜನರ ವಿದ್ಯಾಭಿವೃದ್ಧಿಗೋಸ್ಕರ ಸ್ಥಾಪಿಸಿರುವ ವಿದ್ಯಾರ್ಥಿನಿಲಯದ ಎದುರಿಗೆ ಸದರಿ ಜನಗಳು ವಿಸ್ತಾರವಾಗಿಯೂ, ನಾನಾವಿಧ ಸ್ವರೂಪಕ್ಕೆ ಫಲಪುಷ್ಪಗಳಿಂದಲೂ ಶೃಂಗರಿಸಿದ್ದ ಚಪ್ಪರಕ್ಕೆ ದಯಮಾಡಲು, ಅಲ್ಲಿನ ವಿದ್ಯಾರ್ಥಿಗಳು ಒಂದೇ ವಿಧವಾದ ಡ್ರೆಸ್ ಹಾಕಿಕೊಂಡು, ಮುಂಭಾಗದಲ್ಲಿ ನಿಂತಿದ್ದರು. ಅವರ ಬಳಿಯಲ್ಲಿ ಈ ನಿಲಯದ ಪೋಷಕರಾದ ಧರ್ಮಪರಾಯಣರಾದ ಪಟೇಲ್ ತಿಮ್ಮಯ್ಯನವರು, ಸಿದ್ದಪ್ಪನಹಳ್ಳಿ ನಾಡಿಗ ತಿಮ್ಮಣ್ಣನವರು, ಈ ಮುಂತಾದ ೧೧ ಮಂದಿ ದೊಡ್ಡ ಮನುಷ್ಯರು, ಇವರ ಸಂಗಡಕ್ಕೆ ಸೇರಿದ ೬೦—೭೦ ಜನಗಳು ನಿಂತು, ಪರಿವಾರ ಸಮೇತನಾದ ದಿವಾನರವರಿಗೆ ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸಿ, ಕಟ್ಟಡವನ್ನು ಕಟ್ಟಿಕೊಳ್ಳುವದಕ್ಕಾಗಿ ತಮಗೆ ಸರ್ಕಾರದವರು ಮುಫತಾಗಿ ಸ್ಥಳ ಕೊಡಿಸಬೇಕೆಂತಲೂ, ತಿಮ್ಮಣ್ಣನ ಸ್ಮಾರಕವಾಗಿ ಬಹಳ ಗರೀಬರಾದ ಭಟರ ಪುಂಡುಗಳಿಗೆ ಸ್ಕಾಲರ್‌ಷಿಪ್ ಮಾಫಿ ಮಾಡಬೇಕೆಂತಲೂ ಬೇಡಿಕೊಂಡರು. ದಯಾಳುಗಳಾದ ನಮ್ಮ ದಿವಾನರು—"ದೊಡ್ಡ ಮನುಷ್ಯರೇ, ನಿಮ್ಮ ಕೆಲಸ ನೀವೇ ಮಾಡಿಕೊಳ್ಳುವದಕ್ಕೆ ಪ್ರಯತ್ನಪಟ್ಟದ್ದು ತುಂಬಾ ಶ್ಲಾಘನೀಯವಾದದ್ದಾಗಿದೆ. ಈ ಪ್ರಯತ್ನವನ್ನು ಬಿಡದೆ ಶ್ರದ್ಧೆಯಿಂದ ಇದಕ್ಕೆ ಮುಂದಾಳಾಗಿ ನಿಂತಿರುವವರ ಪರೋಪಕಾರದ ವಿಷಯಗಳನ್ನು ಜನರಿಗೆ ಚೆನ್ನಾಗಿ ತಿಳಿಯಪಡಿಸಿ ಈ ದೊಡ್ಡ ಕಾರ್ಯವನ್ನು ನೆರವೇರಿಸಬಹುದೆಂದು ನಂಬಿದೇನೆ. ಇದಕ್ಕಾಗಿ ಸರ್ಕಾರದವರು ಮಾಡಬೇಕಾದ ಸಹಾಯವನ್ನು ಮಾಡಲು ಸಿದ್ಧರಾಗಿದ್ದಾರೆ. ನೀವು ಸಂಕಲ್ಪಿಸಿರುವ ಈ ದೊಡ್ಡ ಕಾರ್ಯವು ಕೈಗೂಡಿ ನಿಮ್ಮಗಳಿಗೆ ಶ್ರೇಯೋಭಿವೃದ್ಧಿಯುಂಟಾಗಲೆಂದು ಕೋರುತ್ತೇನೆ" ಎಂಬೀ ಅಭಿಪ್ರಾಯವನ್ನು ಅಪ್ಪಣೆ ಕೊಡಿಸಿ ಹೊರಟು ಬಿಡಾರವನ್ನು ಸೇರಿದರು. ಸಾಯಂಕಾಲ ವಿಶೇಷ ಆಟಪಾಟ ವಿನೋದಗಳೂ ಮದ್ದಿನ ತಮಾಷೆಯೂ ದೀಪೋತ್ಸವವೂ ಬಹಳ ಚೆನ್ನಾಗಿ ನಡೆದವು. ಮಾರನೇ ದಿನ ಅವರು ಪರಿವಾರ ಸಮೇತ ಹೊಳಲ್ಕೆರೆಗೆ ಪ್ರಯಾಣಮಾಡಿದರು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್‌ಪಾಂಡೆನ್ಸ್.

ಬಲಾತ್ಕಾರದಿಂದ ವಿದ್ಯೆ ಕಲಿಸಬೇಕು.

ಅಯ್ಯಾ,

ಒಕ್ಕಲಿಗರ ಸಂಘವು ಏರ್ಪಾಡಾಗಿ ಆರು ತಿಂಗಳಾಗುತ್ತಾ ಬಂತು. ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವ ಒಕ್ಕಲಿಗರು ಮಾತ್ರ ತಮ್ಮ ಮಕ್ಕಳನ್ನು ವಿದ್ಯಾವಂತರಾಗಿ ಮಾಡಬೇಕೆಂದು ಕಾತರಪಡುತ್ತಿದ್ದಂತೆಯೇ ನಮ್ಮ ಹಳ್ಳಿಯವರು ಪ್ರಯತ್ನವೇ ಹಿಡಿದಿಲ್ಲ. ಭಗವಂತನು ಹಳ್ಳಿಯ ಒಕ್ಕಲಿಗರ ಮೇಲೆ ಕರುಣವಿಟ್ಟು ಅವರಿಗೆ ಜ್ಞಾನವನ್ನುಂಟುಮಾಡಬೇಕಾಗಿದೆ. ಮೈಸೂರು ಸರ್ಕಾರದವರು ಸಾಧ್ಯವಾದ ಮಟ್ಟಿಗೆ ದೊಡ್ಡ ದೊಡ್ಡ ಗ್ರಾಮಗಳಲ್ಲಿ ಪಾಠಶಾಲೆಗಳನ್ನಿಡಿಸಿರುವರು. ಗುಣಾಕಾರಮಾಡದಂಥಾ ಕೆಲವರು ಹಳ್ಳಿಯವರನ್ನು ಕುರಿತು—ಸರ್ಕಾರಿ ಸ್ಕೂಲುಗಳಿಂದ ಪ್ರಯೋಜನವೇನು? ಚರಿತ್ರೆ, ಭೂಗೋಳ ಯಾತಕ್ಕೆ? ನಾವು ಮೂರು ತಿಂಗಳಲ್ಲಿ ಬುಕ್ಕೆಲ್ಲಾ ಪೂರೈಸಿ ಎರಡು ವರ್ಷದೊಳಗಾಗಿ ರಾಜಶೇಖರ, ಜೈಮಿನಿ ಓದಿಸಿ ಪೂರಾ ಕಲಿಸುತ್ತೇವೆ ಎಂದು ಅವರಿಗೆ ಬೋಧನೆಮಾಡಿ ಅವರ ದ್ರವ್ಯವನ್ನು ಅಪಹರಿಸಿ ಮಕ್ಕಳನ್ನು ಶುದ್ಧ ಮಂಕರನ್ನಾಗಿ ಮಾಡಿಬಿಡುವರು. ಈಗಲಾದರೋ ಪರೀಕ್ಷೆ ಆಗಿರುವ, ಶ್ರದ್ಧೆಯಿಂದ ಕೆಲಸಮಾಡಿ ಬಡ್ತಿ ಹೊಂದಬೇಕೆಂಬುವ ಮಾಸ್ಟರುಗಳೇ ಬಹಳವಾಗಿರುತ್ತಾರೆ. ಹೀಗಿದ್ದರೂ ಹೋಬಳಿ ಸ್ಕೂಲುಗಳಿಗೆ ದುರವಸ್ಥೆ ತಪ್ಪಲಿಲ್ಲ. ಆದಕಾರಣ ನಮ್ಮ ಮೈಸೂರು ಸರ್ಕಾರದವರು ೧೬ ವರ್ಷಕ್ಕೆ ಒಳಪಟ್ಟ ಹುಡುಗರು ಪ್ರೈಮರಿ ಪರೀಕ್ಷೆ ಪಾಸಾಗಿಯೇ ತೀರಬೇಕೆಂಬ ಆರ್ಡರು ದಯಪಾಲಿಸಿದರೆ ಒಕ್ಕಲಿಗರ ಮಕ್ಕಳೆಲ್ಲಾ ಅತ್ಯಲ್ಪಕಾಲದಲ್ಲಿಯೇ ಅಭಿವೃದ್ಧಿಯನ್ನು ಹೊಂದಿ, ಮೈಸೂರು ದೇಶವು ನಾಗರಿಕತೆಯನ್ನು ಹೊಂದುವದರಲ್ಲಿ ಸಂಶಯವಿಲ್ಲ.

ಚಂದಾದಾರ

ದೇವಸ್ಥಾನದವರ ದುಂಡಾವರ್ತಿಯು.

ಅಯ್ಯಾ,

ನಾನು ಪ್ರತಿ ವರ್ಷದಂತೆ ಈ ವರ್ಷವೂ ನಾಲಕೇಮೇ ವ್ಯಾಪಾರಕ್ಕೆ ಕಳೆದ ಡಿಸೆಂಬರ್ ತಿಂಗಳಲ್ಲಿ ಎರಡು ಗಾಡಿ ಕೊಬರಿಯನ್ನು ತುಂಬಿಕೊಂಡು, ಶ್ರೀ ಶೃಂಗೇರಿ, ಕೊಪ್ಪ ಈ ಕಡೇ ವ್ಯಾಪಾರ ಮಾಡಿಕೊಂಡು, ಕೊಬರಿ ಬಿಕರಿಗಾಗಿಯೇ ಶೃಂಗೇರಿಗೆ ಸುಮಾರು ೪ ಮೈಲು ಫಾಸ್ಲೆಯಲ್ಲಿ ಇರುವ ಕಿಗ್ಗವೆಂಬ ಗ್ರಾಮಕ್ಕೆ ಹೋದೆನು. ಈ ಕಿಗ್ಗದಲ್ಲಿ ಶಿವಾಲಯ ದೇವಸ್ಥಾನವು ಭಾರಿಯಾಗಿ ಇದ್ದದ್ದನ್ನೂ ಮತ್ತೂ ಉತ್ಸವ ಹೊರಟಿದ್ದದ್ದನ್ನೂ ನೋಡಿ, ದೇವರ ದರುಶನ ಮಾಡಿಕೊಳ್ಳಬೇಕೆಂದು ಬಸಿಟ್ಟೆನು. ಸ್ನಾನಾದಿಗಳನ್ನು ಮುಗಿಸಿಕೊಂಡು, ದೇವಸ್ಥಾನದ ಒಳಗೆ ಹೋದೆನು. ಆಗ ಶಿವಾಲಯದ ಬಾಗಿಲಲ್ಲಿ ೨—೩ ಜನ ದೇವಸ್ಥಾನಕ್ಕೆ ಸಂಬಂಧಪಟ್ಟವರು ಇದ್ದರು. ಅವರು ಕಾಣುವಂತೆ ನಾನು ದೇವಸ್ಥಾನದ ಒಳಕ್ಕೆ ಹೋದೆನು. ರುದ್ರ ಮಂಟಪದ ಬಳಿ ನಿಂತು ನೋಡುತ್ತಿದ್ದೆನು. ಆಗ ಅರ್ಚಕನು ಬಂದು, ಇಲ್ಲಿಗೆ ಬಂದ ಕಾರಣವೇನೆಂತ ಕೇಳಿ, ನನ್ನನ್ನು ಹೆದರಿಸಿ, ದೇವಸ್ಥಾನದ ಮುಖ್ಯಸ್ಥ ಒಬ್ಬ ಸ್ಯಾನಭೋಗರ ಬಳಿಗೆ ಕರತಂದನು. ಅರ್ಚಕರೂ, ಮುಖ್ಯಸ್ಥರೂ, ಪೋಲೀಸಿನವರೂ ಸೇರಿ, ದೇವಸ್ಥಾನದ ಒಳಕ್ಕೆ ಹೋದರೆ ರೂ ೨೦೦ ಕೊಡಬೇಕು, ಕೊಟ್ಟು ಹೋಗು ಎಂತ ನನಗೆ ತುಂಬಾ ತಪ್ಪು ಕೊಟ್ಟು, ಗಾಡಿಯ ಮೇಲಿದ್ದ ಮಾಲನ್ನು ಲೂಟಮಾಡಿಸುತ್ತೇವೆಂದು ಹೇಳಿ ಮಾಲು ಇಳಿಸಲು, ನಾನು ಭಯಸ್ಥನಾಗಿ ರೂ. ೨—೨—೦ ಕೊಟ್ಟು, ಆ ಕೂಡ್ಲೇ ಗಾಡೀ ಹೊಡಿಸಿ ಆ ಸ್ಥಳ ಬಿಟ್ಟೆನು.

ದೇವಸ್ಥಾನವೂ ಸುಂದರವೂ ಆತಿಶಯವೆಂತಲೂ ನಾನು ಎಷ್ಟೋ ಜನರು ದೇವಸ್ಥಾನದ ಒಳಕ್ಕೆ ಹೋಗಿ ಬರುವದನ್ನು ನೋಡಿ ನಾನೂ ಅತಿಶಯವಾದ ದೇವರನ್ನು ನೋಡಿ ಪಾಪವಿಮೋಚನೆ ಮಾಡಿಕೊಂಡು ಮುಕ್ತಿ ಹೊಂದಬೇಕೆಂಬ ಆಸೆಯಿಂದ ಸ್ನಾನಾದಿಗಳನ್ನು ಮುಗಿಸಿಕೊಂಡು, ದೇವಸ್ಥಾನದೊಳಕ್ಕೆ ದರ್ಶನಕ್ಕಾಗಿ ಹೋದರೆ, ನನಗೆ ಈ ರೀತಿ ತಪ್ಪು ಸಂಭವಿಸಿತು. ನನ್ನನ್ನು ತಪ್ಪಿಸಿದ್ದಕ್ಕೆ ಎಷ್ಟೋ ಜನ ದೊಡ್ಡವರು ನನ್ನಂತೆ ಹೇಳುವವರೇ ಇಲ್ಲ. ಯಾರು ನೋಡದರೆ ಲಂಚದ ಹಣವನ್ನು ಜಾಸ್ತಿ ಮಾಡಬೇಕೆಂತ ಮಾಡುತ್ತಿದ್ದರೇ ಹೊರತು, ಪರಸ್ಥಳದವರಿಗೆ ವೃಥಾ ತಪ್ಪು ಕೊಟ್ಟು ವ್ಯಥೆಗೆ ಕಾರಣವಾದದ್ದು ಸರಿಯೆಂತಲಾಗಲಿ, ದೇವಸ್ಥಾನವು ಸರ್ವರ ಕ್ಷೇಮಕ್ಕೆ ಪ್ರತಿ ಒಬ್ಬರ ಕಷ್ಟ ಪರಿಹಾರಕ್ಕೆ ಇರುತ್ತೆಂತಲೂ ತಿಳಿದು ಬಂದ ಪರಸ್ಥಳದ ಜನಗಳಿಗೆ ಒಂದು ಉಪಕಾರವನ್ನು, ಅನುಕೂಲವನ್ನು ಪಡಿಸತಕ್ಕವರಾಗಿಲ್ಲ. ನಾನು ಹೊರಟು ಬಂದು ಗ್ರಾಮಕ್ಕೆ ಬಂದು ನನ್ನ ವ್ಯಥೆಯನ್ನು ಹೇಳಿಕೊಳ್ಳಲು, ಕಂಡುಕೇಳಿದವರು—ಈ ರೀತಿ ಎಷ್ಟೋ ಜನರಿಗೆ ದಂಡಿಸಿರುತ್ತಾರೆ. ನಿನ್ನ ಮಾಲು ನಿನಗೆ ಉಳಿದದ್ದು ದೊಡ್ಡದಾಯಿತು ಎಂದು ಹೇಳಿದರು. ಆದ್ದರಿಂದ ಈ ದೇವಸ್ಥಾನದ ಮೇಲ್ವಿಚಾರಣೆದಾರರು ಈ ವಿಷಯಕ್ಕೆ ಗಮನಕೊಟ್ಟು ಈ ರೀತಿ ಪರಸ್ಥಳದವರನ್ನು ತಪ್ಪಿಪಡಿಸುವದನ್ನು ನಿಲ್ಲಿಸಿ, ಕೀರ್ತಿಪಡೆಯಬೇಕೆಂದು ಕೋರುತ್ತೇನೆ.

ಯಳನಡು ಗ್ರಾಮವಾಸಿ ಗಂಗಾಧರಶೆಟ್ಟಿ.

ಆಶೆಬಿಟ್ಟದ್ದು.

93-1

ಸ್ವಲ್ಪ ಮಾತ್ರ ಸಾವಕಾಶವೆಂಬದರ ಅರ್ಥವು ಮರಣವೆಂಬುದಾಗುತ್ತದೆ. ವರ್ತಮಾನಪತ್ರಿಕೆಗಳಲ್ಲಿ ಆಶ್ಚರ್ಯಕರವಾದ ಬರವಣಿಗೆಯನ್ನು ನೀವು ಎಂದೂ ಓದಲಿಲ್ಲವೋ? ಮತ್ತು ಅದು ಒಂದು ಔಷಧದ ಪ್ರಕಟಣೆಯಾಗಿರುತ್ತದಾಗಿ ತಿಳಿದು ಬರಲಿಲ್ಲವೋ? ಆ ಲೇಖನವನ್ನು ಕಂಡು ತೃಪ್ತಿಪಟ್ಟಿದ್ದೀರೋ? ಬಹುಶಃ ಪಡಲಿಲ್ಲವೆಂದು ನಾವು ತಿಳಕೊಳ್ಳುತ್ತೇವೆ. ಯಾಕಂದರೆ ಅದು ನಿಮಗೆ ಪರಿಚಯಿಲ್ಲದ ದೂರ ಪ್ರಾಂತ್ಯದಲ್ಲಿರುವ ಒಬ್ಬನ ಅನುಭವವಾಗಿದ್ದದ್ದರಿಂದ ಮಾತ್ರವಾಗಿ ಬಹುದು. ಆದರೆ ಕಲ್ಕತ್ತೆಯ ಪ್ರಸಿದ್ಧ ಡಾಕ್ಟರುಗಳಲ್ಲಿ ಒಬ್ಬರ ಹೇಳಿಕೆಯಾಗಿದ್ದರೆ ನೀವು ನಂಬುತ್ತಿದ್ದಿರಿ. "ಕಲ್ಕತ್ತೆಯ ಹ್ಯಾರಿಸನ್ ರೋಡ್ ನಂ. ೧೬೮ ಮಾರ್ವಾಡಿ ಹಿಂದು ಆಸ್ಪತ್ರೆಯ ಹೌಸ್ ಸರ್ಜನರಾದ ಡಾಕ್ಟರ್. ಪಿ. ಸಿ. ರಾಯ್ ಎಂಬವರು ಹೇಳುವದೇನೆಂದರೆ ಡೋನ್ಸ್ ಎಂಬವರ ಬೆನ್ನುನೋವು ಮೂತ್ರಕೋಶದ ಔಷಧಗಳು ಗಳು (ಡೋನ್ಸ್ ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಅತ್ಯುತ್ತಮವಾದ ಔಷಧವಾಗಿರುತ್ತದೆ. ನಾವು ಕೈ ಬಿಟ್ಟ ಒಬ್ಬ ರೋಗಿಗೆ ಜಲೋದರ ಈ ಔಷಧದಿಂದ ಚೆನ್ನಾಗಿ ಗುಣವಾಗಿತು. ಹೊಟ್ಟೆಯಲ್ಲಿ ನೀರು ತುಂಬಿ ಕೈ ಕಾಲು ಮುಖವು ಬಾತು ಬಹಳ ಸಂಕಟಪಡುತ್ತಿದ್ದ. ಹೊಟ್ಟೆಯೊಳಗೆ ಸೂಜಿ ಹಾಕಿ ಸುಮಾರು ೧೮ ಔನ್ಸ್ ನೀರು ತೆಗೆಯುತ್ತಿದ್ದರು. ಹೀಗೆಯೇ ವಾರಕ್ಕೊಮ್ಮೆ ಮೂರು ಧಪಾ ತೆಗೆಯುತ್ತಿದ್ದರೂ ರೋಗಿಗೆ ದಿನ ಒಂದಕ್ಕೆ ೬ ಔನ್ಸ್ ಮಾತ್ರ ಮೂತ್ರ ಹೋಗುತ್ತಿತ್ತು. ಆತನಿಗೆ ಡೋನ್ಸ್ ಮೇಲೆ ಹೇಳಿದ ಮಾತ್ರೆಗಳು ಕೊಟ್ಟಲೆ ದಿನ ಒಂದಕ್ಕೆ ೩೦ ಔನ್ಸ್ ಮೂತ್ರ ಹೋಗಲಿಕ್ಕೆ ಶುರುವಾಯಿತು. ಬೇಗ ಪೂರಾ ನಿಂತು ಹೋಗಿ ಆತನು ಪುನಃ ಆರೋಗ್ಯಸ್ಥಿತಿಗೆ ಬಂದನು. ಹೀಗೆಯೇ ಡೋನ್ಸ್‌ರ ಈ ಔಷಧದಿಂದ ಅನೇಕ ಜನರಿಗೆ ಗುಣ ಸಿಕ್ಕಿರುವದರಿಂದ ಇದು ಬಹಳ ಅಮೂಲ್ಯವಾದ ಔಷಧವಾಗಿರುತ್ತದೆ. ಜಲೋದರ ವ್ಯಾಧಿಯು ಇಷ್ಟು ಹೆಚ್ಚು ವಿಷಾದಕರವೆಂದು ಎಣಿಸೋಣಾಗುತ್ತದೆ. ಈ ಸಂಗತಿಯು ಮಾರ್ವಾಡಿ ಆಸ್ಪತ್ರೆಯಲ್ಲಿ ರಿಕಾರ್ಡು ಮಾಡಲ್ಪಟ್ಟಿರುವದರಿಂದ ಯಾರೂ ಸಂಶಯಪಡತಕ್ಕದ್ದಿಲ್ಲ. ಬೆನ್ನುನೋವು, ಮೂತ್ರ ಬಾಧೆ—ವಾತವು ಇವುಗಳೇ ಜಲೋದರವು ಮೂತ್ರಕೋಶದ ರೋಗ ಉಂಟಾಗುವಂಥಾದ್ದಾಗಿದೆ. ಇವುಗಳಿಗೆಲ್ಲಾ ಈ ಮಾತ್ರೆಗಳು ಉತ್ಕೃಷ್ಟವಾದ ಔಷಧವಾಗಿರುವದು.

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತವೆ. ಶೀಸೆ ಒಂದು ರೂ ೨. ಅಥವಾ ೬ ಶೀಸೆಗಳಿಗೆ ರೂ ೧೦—೮—೦. ಅಥವಾ ಮುಂಬಯಿಯಲ್ಲಿಯ ಡೋನ್ಸ್‌ರ ಔಷಧಗಳ ಕೋಠಿಯಿಂದ ನೇರಾ ಕೊಳ್ಳಬಹುದು. ಪಿ. ಒ. ಬಾಕ್ಸ್ ನಂ. ೨೦, ಮುಂಬಾಯಿ.

ಪಾಳ್ಯದ ವೇಂಕಟಾಚಲ ಪಂಡಿತರ ಸಿದ್ಧೌಷಧಗಳು

28

೧. ಲೋಕಾಮಯಹರ ಕಸ್ತೂರೀ ಮಾತ್ರೆ.

ಮಾತ್ರೆಗಳನ್ನು ಕವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆ ಕೂಲೆ, ಸಂದುಗಳು, ಮೈ ಕೈಕಾಲು ಕೊಡತ (ಭಾರ), ಮೈನ ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಬಿಂದಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯ ತ್ತು ಎಂತಹ ಆಹಾರವನ್ನಾದರೂ ಜೀರ್ಣಗೆ ಯಾವ ಬಾಧೆಗೂ ದಾರಿಕೊಡದೆ, ನೀರು ತ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಎಳವು, ಜ್ವರ, ನಷ್ಟಜ್ವರ ಕೃತ್ಯಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ. ಅನುಪಾನ(ಪತ್ರ) ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕಪ್ಪಿಗೆ ೪ ಆಣೆ; ೫ ಕಪ್ಪಿಗೆ ೧ ರೂಪಾಯಿ. ೧ ರಿಂದ ೧೨ ಕಪ್ಪು ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್ ಮೈಸೂರು

ಒಹುಮಾನ.

132 5

ಸಪ್ತೋತ್ಸವ ... ಬಸಿಕೊಟ್ಟಲ್ಲಿ ಶ್ರೀವಚ್ಚ, ... ಲಿಂದ ಬರಬೇಕಿಲ್ಲ ... ಮಹಾರಾಜರ ಫೋ... ಇದೇ ಸೈಜಿನ ... ಸ್ವಾಮಿಗಳ ಫೋಟೋ ... ಮಹಾರಾಜ ಯುವರಾಜರುಗಳ ಭಾವಚಿತ್ರಗಳಿಂದ ... ಹೊಸ ನಮೂನೆಯ ... ಕ್ಯಾಲೆಂಡರನ್ನು, ಮತ್ತು ಶ್ರೀಮನ್ನರಂ... ಗಳ ಫೋಟೋವನ್ನು, ಮತ್ತು ... ಚರಿತ್ರೆ ... ಗುರುಗಳ ಚರಿತ್ರೆಯನ್ನು ... ಪ್ರತಿಗೆ ೧೨ ಆಣೆ

ಪತ್ರಿಕೆಯು ಪ್ರಾಯಶಃ ... ವಿಜ್ಞಾಪನೆ ... ಎಂಬಂತೆ ಪ್ರತಿಯೊಬ್ಬರ ... ಬಂದವರೆ ಒಂದು ಬಂಡವಾ... ಸ್ವದೇಶಿ ಸಾಮಾನುಗಳಿಗೆ ... ಈ ಪಟ್ಟಣದಲ್ಲಿ ... ನಮ್ಮ ಉದ್ದೇಶ ... ಮಾಡಿರುತ್ತೇವೆ

ಕೆ.—ಸ್ವಾಮಿ ... ನಾಗಪ್ಪ, ಮಾರ್ಕೆಟ್, ಕೋಟೆ, ಮೈಸೂರು

ಕಾರ್ಡು ಸೈಜು ೪|×೩

ಫೋಟೋ ತಗೆಯುವ

ಫೋಟೋ ಕ್ಯಾಮರಾ.

81 21

ಬೆಲೆ ಪತ್ರ ಮೂರು ರೂಪಾಯಿ

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ಗೊತ್ತಿಲ್ಲದಂತೆ ತೆಗೆಯುವಿಕ್ಕೆ ಬರುತ್ತದೆ. ವೇಗದಿಂದ ಓಡುವ ... ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯುದು ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ... ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂಡ ... ಮಾಡಿಕೊಡುವೆವು ಎಷ್ಟೋ ಕಡೆಗೆ ಇದಕ್ಕೆ ೧೦ ... ರೂ. ಬೆಲೆ ಬೀಳುತ್ತದೆ ಆದರೆ ಇದರ ಜರೀ... ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ... ಆಣೆ ಇದು ಸಿಕ್ಕತಕ್ಕ ವಿಳಾಸ —

ಛೋಟಾಲಾಲ ಚಗನಲಾಲ ಮಹಾಜನ, ರಾಕೂರದ್ವಾರ ... ಪೋಸ್ಟ್ ಕಾಬಾದೇವಿ, ಮುಂಬಯಿ

ಓ! ಕನ್ನಡ "ಮಾಪಲ್" ಪಾಕೆಟ್ ಡೈರಿ!

122 x

ಸೊಗಸಾದ ಡೈರಿಗಳು !! ಉತ್ತಮವಾದ ಡೈರಿಗಳು !!

ಉತ್ಕೃಷ್ಟವಾದ ಡೈರಿಗಳು !!!

೧೯೦೮ ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಮಾಡಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಆನಂದವನ್ನುಂಟು ಮಾಡತಕ್ಕವುಗಳಾಗಿರುತ್ತವೆ ಇವುಗಳಲ್ಲಿ ... ಇರುವ ವಿಷಯಗಳು — ಜಮಾಖರ್ಚಿನ ಪಟ್ಟಿ ... ದಿನ ಸಂಬಳದ ಪಟ್ಟಿ, ವಾರಫಲ, ಗುಳಿಕ ಕಾಲ, ರಾಹು ... ಹಲ್ಲಿ ಬಿದ್ದ ಫಲ, ಪ್ರಶ್ನ ಶಾಸ್ತ್ರ, ಗೌರಿ ಪಂಚಾಂಗ ಕೋಷ್ಟಕಗಳು, ... ಗಳ ಅಳತೆ ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ... , ಸ್ಟಾಂಪು, ಪೋಸ್ಟ್ ರ ನಂ., ಗೌರ್ನ್ ಮೆಂಟ್ ರೈಲ್ವೆ ..., ರಜಾ ದಿನಗಳ ಪಟ್ಟಿಗಳು, ಕ್ಯಾಲೆಂಡರು, (ಗ್ರಹಣಗಳು ...) ... ಸಂ|| ಪಂಚಾಂಗ ಇವೇ ಮುಂತಾದ ಅನೇಕ ವಿಷಯಗಳು ... ತವೆ ಡೈರಿಗಳ ಕ್ರಯ —

... ಸಣ್ಣ ಸೈಜು ಪೆನಸಿಲ್ ಇಡತಕ್ಕ ಡೈರಿ ೦—೪—೦, ಹನ್ನೆರಡು ಡೈರಿಗಳಿಗೆ ೧ ಇನಾಮು

... ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು

... ದೊಡ್ಡ ಸೈಜು ಪೆನಸಿಲ್ ಇಡತಕ್ಕ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು

... ದೊಡ್ಡ ಸೈಜು ಪೆನಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦ ಹನ್ನೆರಡು ಡೈರಿಗಳಿಗೆ ೧ ಇನಾಮು

ಡೈರಿಗಳ ಗಲಿಬಿಲಿಯಲ್ಲಿ ಭ್ರಾಂತಿಗೊಂಡವರು ಉತ್ತಮವಾದವುಗಳ ... ವನ್ನು ಪ್ರಾಯ ಮಾಡಿರಿ. ನಮ್ಮ ಡೈರಿಗಳು ಬಹು ಸುಲಭ ... ಇವುಗಳು ಗೌರ್ನ್ ಮೆಂಟಿನಲ್ಲಿ ರಿಜಸ್ಟರ್ ಮಾಡಲ್ಪಟ್ಟಿವೆ ನಮ್ಮ ವಿಳಾಸ —

... ಡಿ. ನರಸಮಲ್ ಕಂಪೆನಿ, ದೊಡ್ಡಪೇಟೆ, ಮೈಸೂರು

ಅಥವಾ,

ಎಲ್ ಎ ಪ್ರೊಪ್ರೈಟರ್—ಬೆಂಗಳೂರು ಸಿಟಿ

ಅಥವಾ,

ಮ್ಯಾನೇಜರ್ ಸಿ ಎಲ್ ಎಸ್ ಬುಕ್ ಡಿಪೊ, ಮೈಸೂರು

ಮುಕ್ತ್ಯಂಗನಾಕಂಠಮಾಲೆ ಮತ್ತು ಜ್ಯೋತಿರ್ಮಯಶಾಂಭವಿ

71

ಎಂಬೀ ಕನ್ನಡ ವಚನ ಗ್ರಂಥಗಳೆರಡೂ ವೇದಾಂತ ಸಿದ್ಧಾಂತಾರ್ಥವನ್ನು ಸುಲಭವಾಗಿ ಆಬಾಲವೃದ್ಧರಿಗೂ ಬೋಧಿಸತಕ್ಕವುಗಳಾಗಿವ ಪ್ರತಿಯೊಬ್ಬರೂ ನೋಡತಕ್ಕವುಗಳು. ಅಂಚೆ ವೆಚ್ಚ ಸೇರಿ ಕ್ರಯ ೬ ಆಣೆ

ಡಿ ಆರ್ ತಿಪ್ಪಯ್ಯಶಾಸ್ತ್ರಿ, ಚಿಕ್ಕದೇವರ

ಹಳೇ ಅಗ್ರಹಾರ, ಮೈಸೂರು

ಈಗಲೇ ಶೀಮೆಯಿಂದ ಬಂದಿದೆ.

117 11

೬,೦೦೦ ಹಾಸನ ಟೋಪಿ ಹೊಲಿಯುವ ಸುಪೀರಿಯರ್ ಉಲನ್ ದಾರಗಳು ಬಿಡಬೇಡಿರಿ—ಮಾತ್ರ ಇದೆ—ಬೇಗ, ಕಮ್ಮಿ ಕ್ರಯ

೧ ಟೋಪಿಯಾಗುವ ಉಲನ್ ದಾರಕ್ಕೆ	೦—೮—೦
೧೦ ಟೋಪಿಯಾಗುವ ಬಂಡಲ್‍ಗೆ ೧ ಕ್ಕೆ	೩—೯—೦
ಕೊಕ್ಕೆ ಸೂಜಿ ೧ ಕ್ಕೆ	೦—೯—೬
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೦

ಎರಡು ಕಡೆಯಲ್ಲಿ ಬರೆಯುವ ಪೋಸ್ಟ್ ಕಾರ್ಡ್ ೧೦೦ ಕ್ಕೆ ೭ ಆ ಒಂದಾಣೆ ಸ್ಟಾಂಪು ಕಳುಹಿಸಿ ನೇತ್ರಾನಂದಕರವಾದ ೧೯೦೮ ನೆ ಇಸವಿಯ ಕ್ಯಾಲೆಂಡರ್ ಪಡೆಯಿರಿ ವಿಳಾಸ —

ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು

ಸತ್ಯವಾಗಿಯೂ ಅಗ್ಗದ ಅಂಗಡಿ

121 9

ಆಶ್ಚರ್ಯ ಸಮಯ ! ಆಶ್ಚರ್ಯ ಸಮಯ !!

ಅಗ್ಗದ ಬಿಕರಿ ಸಮಯ ಕ್ರಯ ಮೂರರಲ್ಲಿ ಒಂದೇಪಾಲು

ಗಡಿಯಾರಗಳೆಲ್ಲಾ ಅಚ್ಚ ಹಸನಾದವು ಚೆನ್ನದಂಥಾ ಸಮಯ ಇದಕ್ಕಿಂತ ಅಗ್ಗವಾಗಿ ಮತ್ತೆ ಸಿಕ್ಕಲಾರವು ನಾವಕಾಶಮಾಡಬೇಡಿ ! ಕಾಲನಿಮಾರೀತು !!

ನಂ ೯೬೦—೯೮ ಓ ಎಫ್ ಸುಂದರವಾದ ಲೋಹಗಡಿಯಾರ, ಸೆಕೆಂಡ್ ಹ್ಯಾಂಡ್ ಸಹಿತ ಸಿಲಿಂಡರ್ ಚಲನೆ, ೩೬ ಗಂಟೆ ಹೊತ್ತು ನಡಿಯುವುದು ಮೊದಲಿನ ಕ್ರಯ ರೂ ೯೩—೮—೦, ಈಗಿನ ಕ್ರಯ ರೂ ೩—೮—೦ ಐದು ವರ್ಷ ಜಾಮೀನು

ನಂ ೧೦೯ ಎ —ಕ್ರೊನೊಗ್ರಾಫ್ ವಾಚ್ ಸೆಕೆಂಡ್ ಹ್ಯಾಂಡ್ ಸಹಿತ ಮೊದಲಿನ ಕ್ರಯ ರೂ ೧೯ ಈಗ ರೂ ೫ ಐದು ವರ್ಷ ಜಾಮೀನು

ನಂ ೯೨೨ ೧೮ ಓ ಎಫ್ ಸಿಲಿಂಡರ್ ಚಲನೆ, ೩೬ ಗಂಟೆ ನಡಿಯುವುದು ಮೊದಲಿನ ಕ್ರಯ ರೂ ೯೯—೪—೦, ಈಗ ರೂ ೬—೧೨—೦ ಐದು ವರ್ಷ ಜಾಮೀನು

ನಂ ೯೧೪ —೧೮ ಓ ಎಫ್, ಡೈಸ್ಲಿ ರಗ್ಯುಲೇಟರ್ ಲೀವರ್ ವಾಚ್ ೩೩ ಗಂಟೆ ನಡಿಯುವುದು ಮೊದಲಿನ ಕ್ರಯ ರೂ ೨೨—೯೪—೬, ಈಗ ರೂ ೩—೦—೦ ಐದು ವರ್ಷ ಜಾಮೀನು

೧೦೬—ರಾಸ್ಕೋಪ್ ಲೀವರ್ ವಾಚ್ ಇದು ಬಹು ಶಾಶ್ವತವಾದದ್ದು ಹತ್ತು ವರ್ಷ ಜಾಮೀನು ಮೊದಲು ರೂ ೧೮, ಈಗ ರೂ ೫—೮—೬

೧೦೫—ಬೆಳ್ಳಿ ರಾಸ್ಕೋಪ್ ಲೀವರ್ ವಾಚ್ ರತ್ನಗಳುಳ್ಳದ್ದು ೧೨ ವರ್ಷ ಜಾಮೀನು ಮೊದಲು ರೂ ೩೦ ಈಗ ರೂ ೧೦

೧೦೩—ಬೆಳ್ಳಿ ಲೇಡಿ ಅಥವಾ ಕೈವಾಚ್ ಸಿಲಿಂಡರ್, ರತ್ನವುಳ್ಳದ್ದು ಗಿಲ್ಟ್ ಚಲನೆ ೬ ವರ್ಷ ಜಾಮೀನು ಕ್ರಯ ರೂ ೨೨ ೮ ಈಗ ರೂ ೩—೮—೦

೧೦೩—ಬೆಳ್ಳಿ ಓ ಎಫ್ ಕೈ ಸಹಿತ ಡುಪಿಪ್ ಚಲನೆ ರೂ ೨೧, ಈಗ ರೂ ೭ ಆರು ವರ್ಷ ಜಾಮೀನು

೧೦೮—ಬೆಳ್ಳಿ ಓ ಎಫ್ ಗಂಡಸರ ಲೀವರ್ ವಾಚ್ ರೂ ೩೦ ಈಗ ರೂ ೯೦ ಹತ್ತು ವರ್ಷ ಜಾಮೀನು

೯೦೮ ಎ —ಅದೇ ಹಂಟರ್ ರೂ ೩೩ ಈಗ ರೂ ೯೧,

೧೦೮ ಬಿ —ಅದೇ ಅರ್ಧ ಹಂಟರ್ ರೂ ೩೬, ಈಗ ರೂ ೧೨

೯೦೯—ಬೆಳ್ಳಿ ೮ ದಿನ ನಡಿಯುವುದು ರೂ ೪೫, ಈಗ ರೂ ೯೮ ಪಾರಕ್ಯೂವೆಸ್ಟ್ ಕೀಲಿ ಕೊಡುವುದು ಲೀವರ್ ಚಲನೆ ಹತ್ತು ವರ್ಷ ಜಾಮೀನು

೯೦೯ ಎ —೨೬ ದಿನ ನಡೆಯುವ ಚೊಕ್ಕಬೆಳ್ಳಿ ಗಡಿಯಾರ ರತ್ನಗಳುಳ್ಳದ್ದು ಸೆಕೆಂಡ್ ಹ್ಯಾಂಡ್ ೧೫ ವರ್ಷ ಜಾಮೀನು ರೂ ೧೫೦ ಈಗ ರೂ ೫೦

೯೦೯ ಬಿ —ಚೊಕ್ಕಬೆಳ್ಳಿ ಕ್ಯಾಲೆಂಡರ್ ಲೀವರ್ ವಾಚ್ ದಿನ ತಾರೀಖು, ತಿಂಗಳು, ಚಂದ್ರ, ಇನ್ನು ತೋರಿಸುತ್ತೆ ೧೨ ವರ್ಷ ಜಾಮೀನು ಕ್ರಯ ರೂ ೬೨—೮—೦ ಈಗ ರೂ ೯೩—೮—೦

೧೧೦—ಚೊಕ್ಕಬಂಗಾರ ರತ್ನಗಳುಳ್ಳದ್ದು ಕ್ರಯ ರೂ ೭೨ ಈಗ ರೂ ೨೪ ಇಪ್ಪತ್ತೈದು ವರ್ಷ ಜಾಮೀನು

೧೧೧—ಎಂಟು ದಿನಗಳ ಚಿನ್ನದ ಗಡಿಯಾರ ತುಂಬಾ ರತ್ನಗಳು ೧೨ ವರ್ಷ ಜಾಮೀನು ಕ್ರಯ ರೂ ೯೫೯ ಈಗ ರೂ ೫೩

ಒಟ್ಟಿಗೆ ತರಿಸುವವರಿಗೆ ಸ್ಪೆಷಲ್ ದರಗಳು

೩ ಗಡಿಯಾರ ಒಂದೇಸಲ ತರಿಸುವವರಿಗೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ

೬ " " ಒಂದು ಗಡಿಯಾರ ಇನಾಂ

ಕ್ರಯದಲ್ಲಿ ಕಾಲುಭಾಗ ಅಡ್ವಾನ್ಸು ಬಂದರೆ ಉಳಿದದ್ದಕ್ಕೆ ವಿ ಪಿ ಪಿ ಇಂದ ಕಳಿಸುತ್ತೇವೆ ಗಡಿಯಾರಗಳನ್ನು ಸುಂದರವಾದ ವೆಲ್ವೆಟ್ ಪೆಟ್ಟಿಗೆಯಲ್ಲಿ ಸ್ಪ್ರಿಂಗ್, ಗ್ಲಾಸ್ ಸಹಿತ ಕಳಿಸುವೆವು ಇದಲ್ಲದೆ ಪ್ರತಿ ವಾಚಿಗೂ ಸೊಗಸಾದ ಒಂದೊಂದು ಸರಪಣಿಯನ್ನು ನಾವು ಇನಾಮಾಗಿ ಕಳಿಸುತ್ತೇವೆ ನಮ್ಮ ವಿಳಾಸ —

ಎಂ. ಎ. ಘಟಿವಾಲಾ ಮತ್ತು ಕಂಪನಿ,

ಚಿತ್ಪೂರು, ಉತ್ತರ ಅರ್ಕಾಟು.

ಇಲ್ಲಿ ನೋಡಿ !

12

ತುಮಕೂರು ವಿಷ್ಣು ಇಲಾಖೆಯಲ್ಲಿ ಯಾರೋಪಿಯನ್ ಟೋಪಿ ವ್ಯಾಪಾರಿಗಳಿಂದ ಉತ್ತಮ ತರದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ

ಕ್ರಯ —೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯವರೆಗೆ

೯ ಕ್ಕಿಂತ ಹೆಚ್ಚು ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ —ಮೇನೇಜರ್

ಹಾಸನದ ಟೋಪಿ ಕಾರ್ಖಾನೆ, ವಿಷ್ಣು ಇಲಾಖೆ, ತುಮಕೂರು.

ಪುದುಚ್ಚೇರಿ ರೇಷ್ಮೆ ವಸ್ತ್ರಗಳು.

123 8

ಅಸಲ್ ಬೆಲೆ ! ಕ್ರಯ ರೂ ೪ !! ಒಂದು ತಿಂಗಳು ಮಾತ್ರ !!!

ಅಂಚುಗಳಲ್ಲಿ ಬಿಳಿಯ ರೇಷ್ಮೆ ಮಧ್ಯದಲ್ಲಿ ಕೆಂಪು ರೇಷ್ಮೆ. ಹೊಸ ಸೊಗಸಾದ ನಮೂನೆ ಹೊದ್ದು ಉಪಯೋಗಿಸಲು ಯೋಗ್ಯವಾದದ್ದು ಬಣ್ಣ ಖಂಡಿತ ಹಾರದು ಗುಣಾತಿಶಯಗಳು ಬಂದು ತರಿಸಿದರೆ ಪರೀಕ್ಷಿಸಿರಿ ಅಗಲ ಎರಡು ಮೊಳ ಮೂರು ಮೊಳ ಉದ್ದ ರೂ ೪ ನಾಲ್ಕು ಮೊಳದುದ್ದ ರೂ ೫

ಹೊಸ ಬೂಸೀರ್ಸುಗಳು.

ತುಂಬಾ ಖಾತರಿ ಸಾಮಾನು ! ಬೆಲೆ ರೂ ೬—೭ ಬೇಗ ತರಿಸಿಕೊಳ್ಳಿ !!

ಶುದ್ಧ ಹಸನ ಉಣ್ಣೆಯ ದಪ್ಪವಾದ "ಬ್ಲಾಂಕೆಟ್" ಎಂಬ ಹೊಸ ನಮೂನೆ ಬನಾತವು ಎಷ್ಟೇ ಕ್ರೂರವಾದ ಛಳಿಯನ್ನಾದರೂ ದೂರಕ್ಕೆ ಓಡಿಸಿ ಮೈಗೆ ಬೇಕಾದ ಕಾವನ್ನೀಯುತ್ತೆ ಸುಖವಾದ ಹೊದ್ದಿಕೆ ! ನೋಟಕ್ಕೆ ಅತಿರಮ್ಯ ! ಉದ್ದ ೯೦ ಅಂಗುಲ, ಅಗಲ ೬೮ ಅಂಗುಲ ರೂ ೬ ಎರಡನೆಯ ತರಹ ರೂ ೭ (ಶುದ್ಧ ಉಣ್ಣೆ)

ಪ್ರಖ್ಯಾತಿಗೊಂಡ ಮದರಾಸ್ ಸೀರೆ.

ಹೊಸ ನಮೂನೆ ! ಅತ್ಯುತ್ತಮ ತಯಾರಿ !! ಬಣ್ಣ ಖಾತರಿ !!!

ಪ್ರಸಿದ್ಧ ಬಿಳಿಯ ಅಸ್ಸಾಂ ರೇಷ್ಮೆಯ ಅಂಚುಗಳಿಂದ ಹೊಳೆಯುವ ೧೮ ಮೊಳದುದ್ದ, ಎರಡೂವರೆ ಮೊಳದಗಲ, ಎರಡು ಕಡೆಗಳಲ್ಲಿಯೂ ಒಂದೇ ವಿಧವಾದ ಎರಡು ಮೊಳದುದ್ದದ ಬಿಳಿ, ಹಳದಿ ರೇಷ್ಮೆಗಳ ಬಹು ಸೊಗಸಾದ ಸೆರಗುಗಳ ಕರಿಯ ಸೀರೆಗಳು. ಬಹು ಶ್ರೇಷ್ಠವಾದ ನೂಲಿನಿಂದ ತಯಾರಿಸಿ ದೊಡ್ಡ ಮನೆತನದವರಲ್ಲರೂ ಉಡಲು ಲಾಯಖಾಗಿದೆ ಹರಿದರೂ ಬಣ್ಣ ಕೆಡದು ಎಷ್ಟುವರ್ಷ ಒಗೆದು ಉಟ್ಟರೂ ಕರಿಯ ರೇಷ್ಮೆಯ ಸೀರೆಯಂತೆ ಮಿಂಚುತ್ತೆ ಬೆಲೆ ೭ ಅಂಗುಲ ಅಂಚಿನದು ರೂ ೯—೮—೦ ಮೂರು ಅಂಗುಲ ಅಂಚಿನದು ರೂ ೧೦—೮—೦ ಅಂಗಡಿ ಮಾರಿಗೆ ಸೀರೆ ರೂ ೬

ವಿಳಾಸ —ರಾವ್ ಎಂಪೋರಿಯಂ, ಸೈಡೆನ್‌ಹಾಂ ರೋಡ್,

ವೇಪೇರಿ, ಮದರಾಸು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

12

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಜಾಗ್ರತೆ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಹಸಿರು, ಕೆಂಪು, ಕಪ್ಪು, ಬಿಳಿಕೆ, ಕಾಫಿ ಟೋಪಿಗಳು ೧ ರೂ ೮ ಆ;

೧ ರೂ ೬ ಆ, ೧ ರೂ ೪ ಆ

ರೇಶ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ

ದಾರದ ಟೋಪಿಗಳು ೧ ರೂ. ೧೨ ಆ, ೧ ರೂ ೮ ಆ, ೧ ರೂ. ೬ ಆ.

ಗಸಿಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೂಸುಗಳ ಟೋಪಿ, ಸೂಕ್ಷ್ಮ ಮೋಜೋಡು, ಅರ್ಧ ಮೋಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ವಯೋಮಿಂಗಿನ ಪೆ-ರೂ-ನಾ ಇದು ಶೀತರೋಗ ಪರಿಹಾರಿ.

ಮಾಜಿ ಗವರ್ನರವರು ಹೊಗಳುತ್ತಾರೆ. ಇದು ಉತ್ತಮೋತ್ತಮವಾದ ಬಲಕಾರಿ.



ವಯೋಮಿಂಗ್ ಸಂಸ್ಥಾನದ ದಿವ್ಯ ಸಭಾಮಂದಿರವು 18-10

ಅಧಿಕಾರಿಗಳು.

ವಿಶೇಷ ಜವಾಬ್ದಾರಿಯನ್ನು ವಹಿಸಿ ತುಂಬಾ ನಂಬಿಗಸ್ಥರಾಗಿರುವ ದೊಡ್ಡ ದೊಡ್ಡ ಅಧಿಕಾರಿಗಳೆಲ್ಲಾ ಯಾವಾಗಲೂ ತುಂಬಾ ಕೆಲಸವುಳ್ಳವರಾಗಿದ್ದಾರೆ ಇತರ ಸಂಸ್ಥಾನಗಳಿಗೆ ಗಮನಕೊಡಲು ಅವರಿಗೆ ಸ್ವಲ್ಪವೂ ಅವಕಾಶವಿರುವುದಿಲ್ಲ. ಆದಕಾರಣ ಅಂಥಾ ಅಧಿಕಾರಿಗಳು ಯಾವುದಕ್ಕಾದರೂ ಶಿಫಾರಸು ಕಾಗದಗಳನ್ನು ಬರೆದುಕೊಡುವುದಕ್ಕೆ ಒಪ್ಪುವುದು ತುಂಬಾ ಅಪರೂಪವೇ ಸರಿ ಇದಲ್ಲದೆ ಅಂಥಾವರು ವ್ಯಾಪಾರವನ್ನು ಕುರಿತ ಯಾವ ವಿಷಯಕ್ಕಾಗಾದರೂ ಪತ್ರಿಕೆಗಾಗಿ ಶಿಫಾರಸು ಬರೆದುಕೊಡುವದೆಂದರೆ ಬಹಳ ಕಷ್ಟ, ಮತ್ತು ಅವಕ್ಕೆ ಅವರ ಮನಸ್ಸೇ ಒಪ್ಪುವುದಿಲ್ಲ.

ಅಪರೂಪವಾದ ಶಿಫಾರಸುಗಳು.

ಈ ರೀತಿಯಾಗಿ ಪಬ್ಲಿಕ್ ಅಧಿಕಾರಿಗಳು, ಅಂದರೆ, ಗವರ್ನರುಗಳು, ಸಮಾಜಗಳ ಮೆಂಬರುಗಳು, ರಾಯಭಾರಿಗಳು, ಸೆನೆಟರುಗಳು ಮುಂತಾದವರು ಔಷಧದ ಪ್ರಯೋಜನದ ವಿಷಯದಲ್ಲಿ ಬಹಿರಂಗವಾಗಿ ತಮ್ಮ ಹೆಸರು ಹಾಕಿ ಶಿಫಾರಸು ಬರೆಯುವುದು ಬಹಳ ಅಪರೂಪವಾಗಿದೆ

ಆದಕಾರಣ ಅಂಥಾ ಬಹುಮಂದಿ ಅಧಿಕಾರಿಗಳು ಸ್ವಲ್ಪವೂ ಅನುಮಾನವಿಲ್ಲದ ಶಿಫಾರಸನ್ನು ಪೆರೂನಾ ವಿಷಯದಲ್ಲಿ ಬರೆದುಕೊಟ್ಟಿರುವುದು ದೊಡ್ಡ ಜಯಪ್ರದವೆಂದೇ ಹೇಳಬಹುದು. ಜನಾಂಗದಲ್ಲಿ ತುಂಬಾ ಹೆಸರುವಾಸಿಯನ್ನು ಪಡೆದಿರತಕ್ಕ ಅನೇಕ ದೊಡ್ಡಮನುಷ್ಯರೂ ಅಧಿಕಾರಿಗಳೂ ಅನೇಕ ವೇಳೆ ಬಹು ಸಂತೋಷದಿಂದ ಪೆರೂನಾ ವಿಷಯವನ್ನು ಹೊಗಳಿ ಬರೆದಿರುತ್ತಾರೆ

ಅದ್ಭುತವಾದ ಸಂಗತಿಯು.

ಪೆರೂನಾವಿನಲ್ಲಿ ಬಹು ವಿಶೇಷವೂ ಮಹಾ ಅಸಾಧಾರಣವೂ ಆದ ಗುಣವಿರುತ್ತೆಂದು ಎಲ್ಲಾ ಲೋಕ ಹೆಸರುವಾಸಿಯನ್ನು ಪಡೆದಿರುವುದಕ್ಕೆ ಕಾರಣವನ್ನು ತಿಳಿಸಲು ಮಾರ್ಗವೇ ತೋರುವುದಿಲ್ಲ ಆದರೂ ಎಲ್ಲಾ ತರಗತಿಗಳಲ್ಲಿರತಕ್ಕ ಜನಗಳು ಒಂದೇ ಆದ್ದರಿಂದ ಅವರೆಲ್ಲರ ಅಭಿಪ್ರಾಯವೂ ಏಕತರವಾಗಿರುತ್ತದೆ

ಸ್ವಾಭಾವಿಕವಾದ ಉತ್ಸಾಹವು

ಒಬ್ಬ ಮನುಷ್ಯನಿಗೆ ದೀರ್ಘರೋಗವಿದ್ದು, ಇತರ ಯಾವ ಔಷಧದಿಂದಲೂ ಆ ರೋಗನಿವಾರಣೆಯಾಗದೆ, ಕಡೆಗೆ ಒಂದರಿಂದ ವಾಸಿಯಾದಲ್ಲಿ ಸಾಮಾನ್ಯವಾಗಿ ಅವನೂ ಅವನನ್ನು ನೋಡತಕ್ಕ ಜನರೂ ಸ್ವಾಭಾವಿಕವಾಗಿ ತಮ್ಮ ಉತ್ಸಾಹವನ್ನು ಪ್ರಕಟಪಡಿಸುತ್ತಾರೆ. ದೊಡ್ಡ ಉಪಕಾರವಾದದ್ದಕ್ಕೆ ಕೃತಜ್ಞತೆಯೇ ಸ್ವಭಾವವಾಗಿದೆ. ಆದಕಾರಣ ಉಪಕಾರ ಹೊಂದಿದಂಥಾ ಎಲ್ಲಾ ತರಗತಿಗಳ ಜನರೂ ತಮ್ಮ ಅನುಭವವನ್ನು ಪ್ರಕಾಶಪಡಿಸುವುದಕ್ಕಾಗಿ ಕೃತಜ್ಞತಾಪೂರ್ವಕವಾಗಿ ಒಪ್ಪಿಕೊಂಡಿರುವುದೇ ಮುಖ್ಯವಾದ ಮತ್ತು ವಿಶೇಷವಾದ ಕಾರ್ಯವಾಗಿದೆ

ನಿಜವಾದ ಉಪಕಾರವು

ಪೆರೂನಾ ಕೂಡಲೇ ಗುಣಕೊಡುತ್ತದೆ ಇದೇ ಮುಖ್ಯಕಾರಣ ಶೈತ್ಯರೋಗಗಳನ್ನು ನಿವಾರಣೆಮಾಡಿಕೊಳ್ಳುವುದು ತುಂಬಾ ಕಷ್ಟ ಅನೇಕ ಡಾಕ್ಟರುಗಳು ಅದನ್ನು ವಾಸಿಮಾಡಲಾರದೆ ಹೋಗುತ್ತಾರೆ

ಕೃತಜ್ಞತೆಯೇ ಫಲಿಸುವುದು.

ಅನೇಕ ವರುಷಗಳಿಂದ ಅನುಭವಿಸುತ್ತಿದ್ದ ದೀರ್ಘರೋಗವನ್ನೆಲ್ಲಾ ಕೆಲವು ಬಾಟ್ಲು ಪೆರೂನಾ ಔಷಧವು ವಾಸಿಮಾಡುತ್ತದೆ ಇದರಿಂದ ಸ್ವಾಭಾವಿಕವಾಗಿ ಹುಟ್ಟುವಂಥಾ ಕೃತಜ್ಞತೆಯನ್ನು ಅಣಗಿಸಿಬಿಡುವುದು ಖಂಡಿತವಾಗಿಯೂ ಅಸಾಧ್ಯವಾಗಿರುತ್ತದೆ

ನೆತ್ತಿ ಮತ್ತು ಕೊರಳ ಶೀತವು.

ಮಿ॥ ಜೋಸೆಫ್ ರೀಸ್, ೩೬೩೪ ಏ ೧೯ನೇ ಬೀದಿ, ಸೆಂಟ್ ಲೂಯಿಸ್, ಮೊ ಇವರು ಬರೆಯುವುದು —

"ನನಗೆ ನೆತ್ತಿಯಲ್ಲೂ ಗಂಟಲಲ್ಲೂ ಶೀತಹಿಡಿದು ಬಹಳ ಕಷ್ಟಪಟ್ಟೆನು ಆದರೆ ಪೆರೂನಾ ಸೇವನೆಯನ್ನು ಆರಂಭಿಸಿ ಐದು ಬಾಟ್ಲುಗಳಷ್ಟು ಮುಗಿಸಿದೆನು ಮತ್ತು ಎರಡು ಬಾಟ್ಲು ಮನಾಲಿನ್ ಉಪಯೋಗಿಸಿದೆನು ಅಷ್ಟರೊಳಗೇ ನನಗೆ ವಾಸಿಯಾಯಿತು.

"ಪೆರೂನಾವು ತುಂಬಾ ಬಲಕಾರಿಯಾದ ಔಷಧವೆಂದು ನಾನು ಯೋಚಿಸುತ್ತೇನೆ ಶೈತ್ಯರೋಗಗಳಿಂದ ಪೀಡಿತರಾದವರೆಲ್ಲ ಪೆರೂನಾವನ್ನೇ ಸೇವಿಸಲೆಂದು ಹೇಳುವೆನು"

ಶೀತದಿಂದ ಹುಟ್ಟುವ ಜ್ವರವು.

ಮಿಸೆಸ್ ಹಲ್ಲಿಯು. ಕೆ ಗುಡ್, ಬ್ರಾಡ್ ವೇ, ನಾ ಇವರು ಬರೆಯುವುದು:—

"ನನಗೆ ೧೫ನೇ ವಯಸ್ಸಿನಲ್ಲಿ ಶೀತಜ್ವರ ಬಂದಿತು. ನಾನು ಒಂಬತ್ತು ವರುಷಗಳಿಂದಲೂ ನನ್ನ ನೆತ್ತಿಗೆ ಶೀತಹಿಡಿದು ಬಾಧೆಪಟ್ಟೆನು

"ಅಲಕ್ಷ್ಯಮಾಡಿದ್ದರಿಂದ ಅದು ಗಂಟಲಿಗೂ ಮೂಗಿಗೂ ವ್ಯಾಪಿಸಿತು. ನಿಮ್ಮ ಬಳಿಗೆ ಬಂದು ಪರೀಕ್ಷೆ ಮಾಡಿಸಿಕೊಂಡ ಮೇಲೆ ನೀವು ಹೇಳಿದ ರೀತಿ ನಾಲ್ಕು ತಿಂಗಳ ವರೆಗೆ ಪೆರೂನಾವನ್ನು ಸೇವಿಸಿದೆನು ಈಗ ನಾನು ಚನ್ನಾಗಿಯೂ ಆರೋಗ್ಯದಿಂದಲೂ ಇದ್ದೇನೆ

"ನಾನು ಪೆರೂನಾವನ್ನು ಅಷ್ಟಿಷ್ಟಾಗಿ ಹೊಗಳಲಾರೆನು; ಎಷ್ಟು ಹೊಗಳಿದರೂ ಸ್ವಲ್ಪವೇ. ಅದರಿಂದ ಏನೇನು ಆಗುವುದೆಂದು ಹೇಳಲ್ಪಟ್ಟಿದೆಯೋ ಅದೆಲ್ಲಾ ಖಂಡಿತವಾಗಿ ನೆರವೇರುತ್ತದೆ."

ಪೆರೂನಾ ಶೀತವನ್ನು ನಿವಾರಣೆ ಮಾಡುತ್ತದೆ.

ಮಿ॥ ಎಲ್. ಕ್ಲಿಫರ್ಡ್ ಫ್ರಿಗ್, ಜರ್, ೨೯೨೯ ಇ. ಮಾರ್ಷಲ್ ಬೀದಿ, ಸೆಂಟ್ ರಿಚ್ ಮಂಡ್, ವಾ ಇವರು ಬರೆಯುವುದು —

"ನನಗೆ ಶೀತವಾದ ಒಡನೆಯೇ ಪೆರೂನಾವನ್ನು ತರಿಸಿಕೊಳ್ಳುತ್ತೇನೆ ಅದನ್ನು ಸೇವಿಸಿದ ಕೂಡಲೇ ಶೀತವು ಓಡಿಹೋಗುವುದು.

ವಾಸಿಯಾಗದೆಂಬ ನಿರಾಶೆಯು.

"ಕೆಲವು ವಾರಗಳ ತನಕ ನಾನು ಚನ್ನಾಗಿ ಸುಖವಾಗಿರಲಿಲ್ಲ ವಾಸಿಯಾಗುತ್ತೇನೋ ಇಲ್ಲವೋ ಎಂದು ನಿರಾಶೆಯುಂಟಾಗಿತ್ತು ಯಾಕಂದರೆ ನನ್ನ ಸ್ನೇಹಿತರು ಹೇಳಿದಂತೆ ನಾನಾ ಔಷಧಗಳನ್ನು ಸೇವನೆ ಮಾಡಿದೆನು ಎರಡು ವರುಷಗಳ ತನಕ ಔಷಧಗಳನ್ನು ಸೇವಿಸುತ್ತಾ ಬಂದಾಗ್ಯೂ ನನಗೆ ಸ್ವಲ್ಪವೂ ಗುಣತೋರಲಿಲ್ಲ

ಕಡೇ ಪರಿಹಾರವು

"ಕಡೆಗೆ ಪೆರೂನಾ ಆರಿಸಿ ತೆಗೆದುಕೊಳ್ಳಲಾರಂಭಿಸಿದೆನು ಸ್ವಲ್ಪ ದಿನಗಳಲ್ಲೇ ನನಗೆ ಸಂಪೂರ್ಣವಾಗಿ ವಾಸಿಯಾಯಿತೆಂದು ಬಹು ಸಂತೋಷದಿಂದ ಹೇಳುತ್ತೇನೆ

"ಈಗ ಒಂದು ವರುಷದಿಂದಲೂ ನನಗೆ ಅದರ ಬಾಧೆಯೇನೂ ಇಲ್ಲ ಪೆರೂನಾ ನನ್ನ ಅಪಾರವಾದ ಕಷ್ಟವನ್ನು ನಿವಾರಣೆ ಮಾಡಿಬಿಟ್ಟದ್ದರಿಂದ ಅದನ್ನು ಬಹು ಸಂಭ್ರಮದಿಂದ ಹೊಗಳುತ್ತೇನೆ"

ವಿಳಾಸ:—ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸೇಸ್, ಬೆಂಗಳೂರು; ಅಥವಾ,

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

20 12 1907 ರಿಂದ 27 12—1907 ರ ವರೆಗೆ

ಸ್ಥಳ.	ಪ್ಲೇಗ್ ಆಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ಆಗಲಿದ್ದು.
ಬೆಂಗಳೂರು ಪಟ್ಟಣ	50	41	0
ಮೈಸೂರು ,,	54	47	0
ಬೆಂಗಳೂರು ಡಿಸ್ಟ್ರಿಕ್ಟು	61	71	0
ಮೈಸೂರು ,,	52	60	0
ಕೋಲಾರ್ ,,	37	34	4
ಕೋಲಾರ್ ಚಿನ್ನದ ಗಣಿಗಳು	31	26	0
ತುಮಕೂರು ಡಿಸ್ಟ್ರಿಕ್ಟು	23	16	0
ಹಾಸನ ,,	12	7	0
ಚಿತ್ರದುರ್ಗ ,,	5	5	0
ಕಡೂರ್ ,,	19	19	9
ಶಿವಮೊಗ್ಗ ,,	12	13	0
ಜುಮ್ಲಾ	416	333	13

ಶಾಲಿವಾಹನ ಶಕ ವರುಷಂಗಳು ೧೮೨೯ನೇ ಪ್ಲವಂಗನಾಮ ಸಂವತ್ಸರದ ಪುಷ್ಯ ಶುದ್ಧ ಷಷ್ಠಿ ಗುರುವಾರದಿಂದ ಪುಷ್ಯ ಶುದ್ಧ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಜನವರಿ.

ತಾ.	ವಾರ		ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	
9	ಗುರು	*	ಷಷ್ಠಿ	19 38	ಪೂಭಾ	2 56	2
10	ಶುಕ್ರ		ಸಪ್ತಮಿ	15 50	ಉಭಾ	0-32	2
11	ಶನಿ		ಅಷ್ಟಮಿ	13 10	ರೇ	57-32	2
12	ರವಿ		ನವಮಿ	11-30	ಅ	59-48	2
13	ಚಂದ್ರ	,	ದಶಮಿ	11 2	ಭ	60-0	3
14	ಭೌಮ	∴	ಏಕಾದಶಿ	11-56	ಭ	1-46	1
15	ಬುಧ	‡	ದ್ವಾದಶಿ	14-14	ಕೃ	5-5	2

* ತಿಥಿದ್ವಯಂ, ತುಳಸೀಷಷ್ಠೀವ್ರತಂ.
,, ಭೋಗ್ಯೋತ್ಸವ.
∴ ಉತ್ತರಾಯಣ ಪುಣ್ಯಕಾಲ, ಕೂಷ್ಮಾಂಡದಾನ, ಶಿವಗಂಗೆ ಗಂಗೋತ್ಪತ್ತಿ ‡ ಪ್ರದೋಷ, ಕನೂಹಬ್ಬ.

ಪೇಟೆ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕಲ್ಲು ಅಕ್ಕಿ ಪಲ್ಲಾ ೧ಕ್ಕೆ	ರೂ ೧೬-೦-೦	೧೪-೮
ಕಂಬುತ ಅಕ್ಕಿ ಅವಲ್	೧೬-೦-೦	೧೩-೮
,, ೨ ಯಂ	೧೩-೮-೦	೧೩-೬
ಜಂಪಾಜ ಅಕ್ಕಿ	೧೩-೮-೦	೧೬-೪
ಸಣ್ಣಕ್ಕಿ ಅವಲ್	೧೭-೮-೦	೧೭-೦
,, ದುಯ್ಯಂ	೧೫-೮-೦	೧೫-೦
ತೊಗರಿ ಬೇಳೆ ಪಲ್ಲಾ ೧ಕ್ಕೆ	೧೭-೮-೦	೧೫-೦
,, ದುಯ್ಯಂ	೧೫-೦-೦	೧೬-೦
ಕ್ಷೇತ್ರ ರಾಗಿ ಪಲ್ಲಾ ೧ಕ್ಕೆ	೭-೬-೦	೭-೧೪
ಕಾರಾಗಿ	೭-೦-೦	೭-೮
ಜೋಳ	೭-೦-೦	೮-೦
ಹಲಸಂದೆ ಪಲ್ಲಾ ೧ಕ್ಕೆ	೧೦-೮-೦	೧೦-೧೨
ಬಿಳೀ ಅವರೆ	೯-೧೬-೦	೯-೬
ಹೆಸರು	೧೧-೧-೦	೧೨-೦
ಉದ್ದು	೧೩-೦-೦	೧೨-೬
ಕಡಲೆ	೧೩-೮-೦	೧೩-೦
ಎಳ್ಳು ಸೆ. ೧೨ಕ್ಕೆ	೨೩-೮-೦	೨೨-೮
ಹುರುಳಿ	೫-೮-೦	೬-೦
ಹರಳು ೧ ಖ ಸೇರಿಗೆ	೧೨-೦-೦	೧೨-೮
ಸೀಗೇಕಾಯಿ ಮಣ ೧ಕ್ಕೆ	೨-೮-೦	೨-೨
ಮೆಣಸಿನಕಾಯಿ	೨-೮-೦	೨-೬
ದುಯ್ಯಂ	೨-೬-೦	೨-೬
ಬೆಲ್ಲ ದೊಡ್ಡ ಅಚ್ಚು	೪-೬-೦	ಮ ೨-೨
ಒಳ್ಳೆಣ್ಣೆ ಮಣ ೧ಕ್ಕೆ	೬-೦-೦	೬-೦
ಹರಳೆಣ್ಣೆ ,,	೫-೬-೦	೬-೧೨
ಕೊತ್ತುಂಬರಿ ಪಲ್ಲಾ ೧ಕ್ಕೆ	೪-೦-೦	೬-೬
ಉಪ್ಪು ,,	೫-೦-೦	೫-೧೦
ಹುಣಸೇ ಹಣ್ಣು	೨-೦-೧	೨-೦
,, ಹಳೇದು	೧-೮	೧-೧೨
ತುಪ್ಪ ಮಣ ೧ಕ್ಕೆ	೧೬-೦-೦	೧೫-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೬-೧೫-೦	೭-೧೨
ತೆಂಗಿನಕಾಯಿ ೧೦೦ಕ್ಕೆ	೩-೮-೦	೮-೦
ಅಡಿಕೆಕಾಯಿ ಮಣ ೧ಕ್ಕೆ	೧-೦-೦	೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	೦-೧೨
ಚಿನ್ನ (ಪೌನ್) ಕೆಂಪು	೧೫-೪-೦	೧೫-೬
,, ,, ಪಸಿಮೆ	೧೫-೧೦-೦	೧೫-೪
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೬-೮
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೭೪-೦-೦	೭೧-೦

Printed and Published by the Rev. E THOMPSON, M A., Proprietor and Manager, Wesley Mission Press, Mysore. 9/1/1908.

REGISTERED
M 20

ವೃತ್ತಾಂತ ಪತ್ರಿಕೆ.

ಬಿಡಿ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು

ಸಂಪುಟ ೨೧ ಮೈಸೂರು—ಸರ್ ೧೯೦೮ ನೇ ಇಸವಿ ಜನವರಿ ತಾರೀಖು ೧೬ ನೇ ಗುರುವಾರ. ಸಂಚಿಕೆ ೩೩

ಡೈರಿಗಳ್ ಬಹುಮಾನ!

136 ೨

ಈ ಕೆಳಗೆ ಬರೆದಿರುವ ಪಾಠ ಬಿ ವೆಂಕಟಾಚಾರ್ಯರ ಪುಸ್ತಕ ಪ್ರತಿಯೊಂದು ರಘುನಾಯನ ಡೈರಿಗೂ ಒಂದೊಂದು ನ್ಯಾಯಿಯ ಬಹುಮಾನವು ಕೊಡಲ್ಪಡುವುದು.

ಕೆಂಚನೂರು ೧ ನೇ ಆಕೆ ಅಪ್ಪಿ ೩ ನೇ ಆಕೆ ನಾಲತಿ ೩ ನೇ ಆಕೆ ... ರಾಘವೇಂದ್ರ ೪ ನೇ ಆಕೆ ಒಪ್ಪಿಸ್ಪನಾದ ವನೆ ... ದೊಡ್ಡ ... ೧ ನೇ ಆಕೆ ಕರ್ನಾಟಕ ತರ್ಕ ಫಲ ... ಸ್ತ್ರೀಯ ರವಾನಿ ೩ ನೇ ... ಚಿನಿಸಪ್ಪೇಶದ ... ೧ ನೇ ಆಕೆ ... ಉದರದರ್ಶನ ... ಉನ್ನತ ... ಮಾಡುವ ... ಕಾಶದ ... ಆದ ... ೧೯೦೮ ನೇ ಇಸವಿ ಕ್ಯಾಲೆ ... ವೆಂಕಟಾಚಾರ್ಯರವರ ಸಹಾಯದಿಂದ ... ಚಂದಾದಾರರಿಗೂ ಮತ್ತು ಜನವರಿ ... ಚಂದಾದಾರರಾಗುವವರಿಗೂ ಸಹಾ ಒಂದು ... ಬಹುಮಾನವಾಗಿ ಕೊಡಲ್ಪಡುವದು.

ನಮ್ಮ ವಿಳಾಸ ಏ ವಾನರಲ್ ಏಜನ್ಸಿ ಮೈಸೂರು

ಜ್ವರಹರಿ 118 11



ಇದು ಸಾಧಾರಣ ಜ್ವರ ಛಳಿಜ್ವರ, ಘೋರಜ್ವರ, ಪಿತ್ತಜ್ವರ, ಕ್ಷಯ ವಾತಜ್ವರ ... ಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ... ಆಫೀಸರ್ ಎಸ್ ಟಿ ವೆಂಕಟರಾಮ ಅಯ್ಯ ... ನಾಲಕ್ಕು ಸೀಸೆ ... ಸ್ವಲ್ಪ ಕಾಲದಲ್ಲೇ ... ಅನೇಕ ... ಜನಗಳ ... ಸೀಸೆಯನ್ನು ... ಉಪಕಾರವಾಗಿದೆ—ಎಂದು ಬರೆ ದಿದ್ದಾರೆ.

ಕ್ರಯ —ಸೀಸೆ ೧ಕ್ಕೆ ೮ ಆಣೆ ೬ ರೂ ೧—೮ ರೂ, ... ೧೧ ರೂ ... ಪನ್ನೆರಡು ಸೀಸೆ ತರಿಸಿಕೊಂಡವ ರಿಗೆ ... ಬಿಡಲಾಗುವದು.

****

ಓಮಂ ಕರ್ಪೂರ

Omum Carpoor

ಈ ಔಷಧಿಯು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳ್ಳ ... ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ ... ಶೀಘ್ರ ಪರಿಣಾಮವನ್ನು ... ಗುಣಕೊಡು ... ಇದು ಹೆಂಗಸರು ತಿಂಗಳಿಗೆ ... ಆಗುವಾಗ್ಗೆ ... ಮುಂತಾದ ವ್ಯಾಧಿಗಳನ್ನು ... ಕೂಡ ... ಜ್ವರಕ್ಕೆ ಎಂಬ ಔಷಧದಂತೆಯೇ ಸೀಸೆಗಳಲ್ಲಿ ... ವದು.

... ಆಸಿಸ್ಟೆಂಟ್ ಸರ್ಜನ್ ಗಣಪತಿಯವರು—ಚೆನ್ನಿಯ ... "ದಾರರ ಮ್ಯೂನಿಸಿಪಲ್" ... ಅನೇಕ ವರುಷಗಳಿಂದಲೂ ... ಆಜೀರ್ಣ ... ರೋಗಿಗಳಿಗೆ ಕೊಡುತ್ತೇನೆ ... ಕೂಡಲೆ ... ಗುಣವಾಗುತ್ತಲಿದೆ ಇದು ಬಹು ಒಳ್ಳೆ ಔಷಧ ...

ಈ ಎರಡು ಔಷಧಗಳೂ ಊರೂರುಗಳಲ್ಲಿ ರುವ ವೈದ್ಯಶಾಲೆಗ ... ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ... ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

... ರ ಸ್ಟೇಟ್ ಇಂಡಿಯನ್ ಔಷಧಗಳ ಕಂಪನಿ, ಸೆಕೆಂಡ್ ಬೀಚ್ ಲೈನ್, ಮದರಾಸ್

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

27 47

ತಲೆ ಕಣ್ಣಿಗೆ ತ್ವರೆಯಾಗಿ ಅಮೃತಾಂಜನ ಸರ್ವಲೋಕರಂಜನ ಸರ್ವ ಸಾರ ... ಜನ ಚಿಕಿತ್ಸಾ ವಳಿಯೊಳ್ ಕಾಂಚನ ... ಸಂಜೀವನ ... ಯೆಮ್ಮಿಲ್ಲ ... ಯೋಗ ... ಉತ್ತಮ ಔಷಧಿಯಲ್ಲ ದ್ವಿರಚಿತ ಕಣ್ಣಿಗೆ ... ಮಾಡಿರಿಲ್ಲ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು ಒಂದು ಸಾರಿ ಎರಡು ... ತರಿಸಿಕೊಂಡವರಿಗೆ ಒಂದು ಜರ್ಮನ್ ಬೆಳ್ಳಿಯ ಕಪ ಉಚಿತವಾಗಿ ದೊರ ಕುವದು

ಸಿದ್ಧಾಂಕಯಾಗಿ ಭಾರತವರ್ಷದ ಔಷಧ ಗಳಿಂದ ತಯಾರಿಸಿದ ಪೂರುಷವನೋಗಕ್ಕೋ ಸುಗ ಮುಲಾಮು ಇದರಿಂದ ತಲೆನೋವು, ಶಿರೋಗಾವದ ವಾತ ಸಂದಿವಾತ ಪಕ್ಷವಾತ ಗಂಟ್ಲು ನೋವು ಸೊಂಟದನೋವು ಗಂಟ್ಲು ನೋವು ಶೀತ ಜಖಮು ಉಳುಕು, ಕೈಕಾ ಲುಗಳಗ ... ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ

ಈ ಕಂಪನಿಯವರು ... ನಮೂನೆಯ ಔಷಧಿಗಳನ್ನ ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

ಬಾಟ್ಲಿ ಒಂದಕ್ಕೆ ಕಿಮ್ಮತು ೦—೮—೦ ಪೋಸ್ಟು ಖರ್ಚು ೦—೪—೦

ಗಜಕರ್ಣದ ಮುಲಾಮು.

ಮೂರು ನಾಲ್ಕು ಸಾರಿ ... ಗಜಕರ್ಣವು ಹೋಗುವದು ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ ಇದ ರಿಂದ ಗುಣ ಕಾಣದೆ ಇರುವದಿಲ್ಲ ಆದರೆ ಹಣ ಹಿಂತಿರಿಗಿ ಕೊಡಲ್ಪಡುವದು ಡಬ್ಬಿ ಒಂದಕ್ಕೆ ಕಿಮ್ಮತು ೦—೩—೦ ಪೋಸ್ಟು ಖರ್ಚು ೦—೭—೦

ದಂತಮಂಜನ —ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಹಲ್ಲುಗಳು ಬೆಳ್ಳಗಾಗುತ್ತವೆ ಹಲ್ಲು ಗಳ ನೋವನ್ನ ತೆಗೆಯುತ್ತದೆ ಡಬ್ಬಿ ಒಂದಕ್ಕೆ ೦—೨—೦ ಪೋಸ್ಟು ಖರ್ಚು ೦—೭—೦

ವಜ್ರಗುಟಿಕೆ —ಧಾತು ಪುಷ್ಟಿ ನಿರ್ಬಲರಿಗೆ ಶಕ್ತಿಕೊಡುತ್ತದೆ, ಸ್ವಪ್ನದೋಷವು ಆಗುವದು ನಿಲ್ಲಿಸುತ್ತದೆ ರಕ್ತ ಶುದ್ಧಿಮಾಡಿ ದೇಹ ದಲ್ಲಿ ಆರೋಗ್ಯ ಕೊಡುತ್ತದೆ ಡಬ್ಬಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೭—೦

ಕೇಶವರ್ಧಿನಿ —ತಲೆ ... ತಂಪುಮಾಡುವದು, ಕೂದಲುಗಳನ್ನು ಬೆಳೆಸುವದು, ಕೂದಲುಗಳನ್ನ ಕಪ್ಪುಮಾಡುವದು, ಮನ ಸ್ಸಿಗೆ ... ಪರಿಮಳ ಉಳ್ಳದ್ದು ೩ ... ಬಾಟ್ಲಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೩—೦

ವಿಳಾಸ.—ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನ್, ಫೋರ್ಟ್, ಮುಂಬಯಿ.

ಟೆಲಿಗ್ರಾಫು ಅಡ್ರೆಸು—'ಅಮೃತಾಂಜನ,' ಮುಂಬಯಿ.

ರಬ್ಬರ್ ಹ್ಯಾಂಡ್ ಪ್ರೆಸ್.

114 1

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಉರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗು ತ್ತದೆ ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೬ ರಿಂದ ೧೮ ರೂಪಾಯಿ ಗಳ ವರೆಗೆ ಬೆಲೆ ಬೀಳುತ್ತಿತ್ತು ಈ ಪ್ರೆಸ್ಸಿ ನೊಳಗೆ ಕನ್ನಡ ತಮಿಳ ತೆಲುಗು, ಉರ್ದು, ಮರ್ಹಾಟಿ ಅರಬಿ ಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾ ರು ಮಾಡಿ, ಮಾಡಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು ಅದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀ ಸರರೂ, ವಕೀಲರ ವರ್ತಕರೂ ಇನಾಮುದಾರರೂ ಮತ್ತು ಪರೀಕ್ಷೆ ... ತಮ್ಮ ತಮ್ಮ ಗೃಹದಲ್ಲಿ ಅವಶ್ಯ ಇಡಬೇಕು ಎಷ್ಟೋ ಕಾರಕೂ ನರ ಸಹಾಯ ವಿಂದ ಒಂದು ಕೆಲಸಕ್ಕೆ ಬಹಳಕಾಲ ಹಿಡಿಯುವದು ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನು ದುರೂ ಸ್ವಲ್ಪ ಕಾಲ ದಲ್ಲಿಯೇ ಮಾಡುವದಕ್ಕೆ ಸಾಧ್ಯ ಇದರ ಬೆಲೆಯಿಂದ ಈ ಪ್ರೆಸ್ ಜನ ಗಳ ಪ್ರೀತಿಗೆ ಪಾತ್ರವಾಗಿರುವದು ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦

ಹಾಪ್ ಫುಲ್‌ಸ್ಕ್ಯಾಪ್ ಸೈಜು, ೬—೦—೦

ಪೋಸ್ಟೇಜು ಬೇರೆ (ಚಾ

ವಿಳಾಸ ವರ್ಧಮಾನ ಏಜನ್ಸಿ,
ಪೋಸ್ಟ್ ಕಾಲಬಾದೇವಿ,
ಮುಂಬಯಿ.

ಸರ್ ೧೯೦೮ ನೇ ಇಸವಿಯ

127 ೬



ಎ ನಂ ೧ ಜೆನೀವಾ ಬಿ ನಂ ೧ ಸಿ ನಂ ೧ ಜೆನೀವಾ ಡಿ ನಂ ೧

ಪಂಚಾಂಗ ಸಹಿತವಾದ ಇಂಗ್ಲಿಷು—ಕನ್ನಡ ಡೈರಿ

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಮುಖ್ಯವಾಗಿ ಸರ್ಕಾರಿ ನೌಕರರಿಗೂ ಉಪಯೋಗವಾಗಿ ರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ಕೆಲಕ ಸರ್ ಪಂಚಾಂಗ, ಗ್ರಹಕ ಣದಲ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟ್ಯಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟ್ ಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಪ್ರೂ ಲೆ, ದಿನ ಗಂಬಳದ ಪಟ್ಟಿ, ಥಾಟಿಬೆಲ್ಸ್, ಬಡ್ಡಿಯ ಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ... ರೂಲ ಹಾಕಿದೆ, ಕೆಂಪು ಸಾರ್ಥ ಬೈಂಡು, ಚಿನ್ನ ಬೆಳ್ಳಿ ... ಕ್ರಯ—

ಎ ನಂಬರ್ ಚಿಕ್ಕಸೈಜು ೩ ಆಣೆ | ಸಿ ನಂಬರು ದೊಡ್ಡ ಸೈಜು ೬ ಆ
ಬಿ ಮಧ್ಯಕಳದ್ದು ೪ ,, | ಡಿ ,, ಮಧ್ಯಕಳದ್ದು ೮ ,,

ಹೊಸ ನಮೂನೆ ಉತ್ಕೃಷ್ಟವಾದ 'ಜೆನೀವಾ' ಡೈರಿ. ಇದು ಸರ್ಕಾರದಲ್ಲಿ ರಿಜಿಸ್ಟರಾಗಿದೆ

'ಜೆನೀವಾ' ೧ ನಂ ೩ ಆ | 'ಜೆನೀವಾ' ೨ ನಂ ೬ ಆ

ಪೋಸ್ಟ್ ಛಾರ್ಜು ಬೇರೆ ಒಂದೇ ನಮೂನೆಯ ೧೨ ಡೈರಿ ತರಿ ಸಿಕೊಂಡರೆ ೧ ಡೈರಿ ಇನಾಮು ವಿ ಪಿ ಮೂಲಕವೂ ತರಿಸಬಹುದು

ಟಿ ಕೆ ಮತ್ತು ಎಂ ಆರ್ ಕೃಷ್ಣಸ್ವಾಮಿ ಶೆಟ್ಟಿ
ಬಳ್ಳಾಪುರ ಪೇಟೆ ಬೆಂಗಳೂರು ಸಿಟಿ

ಹಣಕ್ಕೆ ನಷ್ಟವಿಲ್ಲ! ಸುಮಾನಕ್ಕೆ ಕಡ ಕಿಲ್ಲ!!

ಈಗಲೇ ವಿಲಾಯತಿಯಿಂದ ಬಂದವೆ.

೯ ಕ್ಯಾರಟ್ ಚಿನ್ನದ ಉಂಗರಗಳು

ಇದರ ಬಣ್ಣವು, ಕೆಲಸವು ನೋಡುವುದಕ್ಕೆ ಮನೋರಂಜಕವಾಗಿರುತ್ತದೆ ಇಲ್ಲಿ ಪಡೆಯುವ



ದಾದರೆ ಕೇವಲ ಮಾತ್ರ ರೂ ೪ ಕೊಡಬೇಕು ಕೊಟ್ಟರು ಮಾಡುವದು ಕಷ್ಟ ಬೇಕಾದವರು ಒಂದು ಉಂಗರವನ್ನು ತರಿಸಿಕೊಂಡು ಪರೀಕ್ಷಿಸಲಿ ಎರಡು ತಲೆ ಹಾವಿನ ಉಂಗರ ತಲೆಗಳಲ್ಲಿ ಪೇಸ್ಟ್ ಡೈಮಂಡ್ ಇಟ್ಟಿರುವದು ಉಂಗರ ೧ಕ್ಕೆ ಕ್ರಯ ವಿ ಪಿ ಸಹಿತ ರೂ ೫—೭—೦ ಪೇಸ್ಟ್ ಡೈಮಂಡ್ ಇದಲ್ಲದೆ ಎರಡು ತಲೆ ಹಾವಿನ ಉಂಗರ ೧ಕ್ಕೆ ಕ್ರಯ ವಿ ಪಿ ಸೇರಿ ರೂ ೭ ೭ ೦ ಒಂದೇ ನಕ್ಷೆಯಲ್ಲಿ ಕಾಣಿಸುವ ನವ ರತ್ನದ ಉಂಗರ ೧ಕ್ಕೆ ಕ್ರಯ ವಿ ಪಿ ಸೇರಿ ರೂ ೭ ೪ ೦ ಉಂಗರ ಬೇಕಾದವರು ಬೆರಳಿನ ಅಳತೆ ಕಳುಹಿಸಿ [41]

ರಾಸ್ಕೋಪ ಸಿಸ್ಟಂ ವಾಚ್ — ಈ ಗಡಿಯಾರ ಬಹಳ ಒಳ್ಳೆಯದು ಬಹಳ ಬಾಳಿಕೆ ಬರುವದು ಕಾಲಕ್ಕೆ ಸರಿಯಾಗಿ ೩೦ ಘಂಟೆ ನಡೆಯುವದು ಬಂದೆ ಎರಡು ಸಾವಿರ ಪರೀಕ್ಷೆಯಿಂದ ಸರಿ ಮಾಡಿದ್ದ ಒಂದು ಸೊಗಸಾದ ಪೆಟ್ಟಿಗೆಯಲ್ಲಿಟ್ಟು ೫ ವರ್ಷದ ಗ್ಯಾರಂಟಿ ಯಿಂದ ಸಹಿತ ಕಳುಹಿಸಲ್ಪಡುವದು ೧ಕ್ಕೆ ಕ್ರಯ ವಿ ಪಿ ಸೇರಿ ರೂ ೪ ೬ ೦



ಗಡಿಯಾರದ ಸರಪಣಿಗಳು — ಅಮೇರಿಕಾ ಸಿಲ್ವರ್ ಎಂಬುವ ಉತ್ತಮ ಬೆಳ್ಳಿಯಿಂದ ಮಾಡಲ್ಪಟ್ಟವು ಎಂದಿಗೂ ಕಪ್ಪು ಆಗುವದೇ ಇಲ್ಲ ಹೊಸ ಹೊಸ ಇಂಗ್ಲೀಷು ನಮೂನೆಗಳು ನೋಡುವದಕ್ಕೆ ಮನೋರಂಜಕವಾಗಿರುತ್ತವೆ ೧ಕ್ಕೆ ಕ್ರಯ ವಿ ಪಿ ಸೇರಿ ರೂ ೧ ೦

ಚಿ — ಸುಗಂಧ ಸಾರ ದಪ್ಪತಿ ಉತ್ತಮವಾದದರಿಂದ ಸನುಷ ಸಭ್ಯರ ಸ ಪ್ರತಿ (ಗೌರವರ್ಣ) ಉಂಟಾಗಿದೆ ಈಚೆಗೆ ಇದರಲ್ಲಿ ಪ್ರಚಾರ ಮಾಡುವಂತೆ [illegible] ದೇಶೀಯರನ್ನು ಸಹ [illegible] ... ಅನೇಕ ವ್ಯಾಧಿಗಳನ್ನು ನಾಶಪಡಿಸುವದು ... [illegible]

ಬಹುಮಾನ! ಬಹುಮಾನ!! ಬಹುಮಾನ!!!

(೧) ಎರಡು ಡಜನ್ ಪೆಟ್ಟಿಗೆಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ... ಗಡಿಯಾರವನ್ನು ಬಹುಮಾನವಾಗಿ ಕಳುಹಿಸುವೆವು (೨) ಎರಡು ಡಜನ್ ಡಬ್ಬಿಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ... (೩) ... ಡಜನ್ ಡಬ್ಬಿಗಳನ್ನು ಒಂದೇಸಾರಿ ತರಿಸುವವರಿಗೆ ... ಉತ್ತಮವಾದ ಲೀವರ್ ವಾಚನ್ನು ಕಳುಹಿಸುವೆವು.

ಸೂಚನೆ — (೧) ಎರಡು ಡಜನ್ ... ಡಬ್ಬಿಗಳನ್ನು ತರಿಸಿಕೊಂಡು ಬಹುಮಾನ ಪಡೆಯ ಬಯಸುವವರು ... ಅಡ್ವಾನ್ಸು ೪ ಆಣೆ ಪೋಸ್ಟೇಜ ಸ್ಟ್ಯಾಂಪು ಕಳುಹಿಸಬೇಕು ... (೨) ನಾಲ್ಕು ಡಜನ್ ಡಬ್ಬಿಗಳನ್ನು ತರಿಸುವವರು ಒಂದು ಲೀವರ್ ವಾಚನ್ನು ಬಹುಮಾನ ಪಡೆಯ ... ಅಡ್ವಾನ್ಸು ೧ ರೂ ಕಳುಹಿಸಬೇಕು ... ಬಹುಮಾನ ಸಿಕ್ಕಲಾರದು

ವಿಳಾಸ — ಟಿ. ಸಿ. ಕನ್ಸ್ಯೂಮರ್ಸ್ ಅಂಡ್ ಸನ್,
ಜನರಲ್ ಮರ್ಚಂಟ್ ನಂ ೨೦ ಸಿಂಗಣ್ಣನ ಬೀದಿ
ಕಾಳಿಕಾದೇವಿ ಪೇಟ್ ಮದರಾಸು

CHAMBERLAIN'S COLIC, CHOLERA AND DiARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ ಭೇದಿಗಳಿಗೆ ಕಂಡುಹಿಡಿದಿರುವ ಔಷದವು 13



ಕೆಳ ಹೊಟ್ಟೆಯ ನೋವು, ಬರಿ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ ... ನೋವು ಹೊಟ್ಟೆಯ ನಾನಾ ತರದ ಶೂಲೆಗಳು — ಈ ರೋಗಗಳನ್ನೆಲ್ಲಾ ನಾಶಮಾಡುತ್ತದೆ ಈ ಪರದೇಶ ... ಔಷದವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರ ಲ್ಲವು.

ಜ್ಞಾಪಕದಲ್ಲಿಟ್ಟುಕೊಳ್ಳಿ — ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯನ್ನು ಕೂಡ ನೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲನಮಾಡಿ ನಿಲ್ಲಿಸುತ್ತದೆ ಖಂಡಿತವಾಗಿ ನಾಶಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಿಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ವ್ಯವಹಾರನಿರ್ಣಯ.

ಪುಟಗಳು	ಕನ್ನಡದ ಲಾ ಪುಸ್ತಕವು	೫೦೦ ಪಿ ಪಿ ಪಿ
೫೭೬	ದ್ವಿತೀಯಮುದ್ರಣ	ರೂ ೧ ೯ ೦

ಈ ಮುದ್ರಣದ ಮುಕ್ಕಾಲ ಭಾಗವೆಲ್ಲವೂ ಹೊಸದಾಗಿ ಬರೆಯಲ್ಪಟ್ಟು ವಿಸ್ತರಿಸಲ್ಪಟ್ಟಿದೆ ಹಿಂದೂ ಲಾ (ಸ್ತ್ರೀಧನ ಕನಾಕೃಡನೆ ...) ಮಹಮ್ಮದೀಯ ಲಾ, ಪೀನಲ್ ಕೋಡು ಇವುಗಳು ವಿಶೇಷವಾಗಿ ... ರಿಸಲ್ಪಟ್ಟಿವೆ ಮೈಸೂರು, ಮದರಾಸು ... ದೇಶಗಳಿಗೆ ಸಾಮಾನ್ಯವಾದ ಲಾ ವ್ಯವಸ್ಥೆ ... ಈ ವಿಷಯ ಕಾದ ಕಾನೂನುಗಳು ... ಸೇರಿಸಲ್ಪಟ್ಟಿವೆ ... ಅನೇಕ ... ಗ್ರಂಥಗಳು ... ಚೀಫ್ ಕೋರ್ಟುಗಳ ತೀರ್ಪುಗಳ ... ಇವುಗಳಿಂದ ಸಂಗ್ರಹ ಮಾಡಲ್ಪಟ್ಟಿದೆ ... ಸಿವಿಲ್, ಕ್ರಿಮಿನಲ್ ಕೋರ್ಟುಗಳಿಗೆ ... [illegible] ... ಈ ಸಲದ ಮುದ್ರಣವು ಬಹಳ ಪ್ರಶಸ್ತವಾಗಿದ್ದರೂ ... ಆಡಿ ಮತ್ತು ಹೆಚ್ಚಿಸಿದೆ ಪುಸ್ತಕ ಅಪೇಕ್ಷಿಸುವವರು ಬರೆಯಬೇಕಾದ

ವಿಳಾಸ ಗ್ರಂಥಕರ್ತರು ಎಂ ಮಲ್ಲಾರಾಯರು.
ಪ್ಲಸ್ಟ್ ಗ್ರೇಡ್ ಪ್ಲೀಡರ್ ಮೈಸೂರು

ಪುದುಚ್ಚೇರಿ ರೇಷ್ಮೆ ವಸ್ತ್ರಗಳು.

123

ಅಸಲ್ ಸೆಲ! ಕ್ರಯ ರೂ ೪!! ಒಂದು ತಿಂಗಳು ಮಾತ್ರ !!!

ಅಂಚುಗಳಲ್ಲಿ ಚಿಳಿಯ ರೇಷ್ಮೆ ... ಹೊಸ ಸೊಗಸಾದ ನಮೂನೆ ... ಉಪಯೋಗಿಸಲು ಯೋಗ್ಯವಾದದ್ದು ... ಪರೆ ವೇಷ್ಟಿ ... ಮೂರು ವರೆ ... ರೂ ೪ ನಾಲ್ಕು ಮೊಳದುದ್ದ ರೂ ೫

ಹೊಸ ಬೂಸಿಗಳು

ತುಂಬಾ ಬತ್ತಿ ಸಮಾನ! ಬೆಲೆ ರೂ ೬-೭ ಬೇಗ ಕಳಿಸಿಕೊಳ್ಳಿ!! ... ದಪ್ಪವಾದ ಬ್ಲ್ಯಾಂಕೆಟ್ ... ಹೊಸ ನಮೂನೆ ... ಸುಖವಾದ ಹೊದ್ದಿಕೆ! ನೋಟಕ್ಕೆ ಅತಿರಮ್ಯ! ...

ಪುದುಚ್ಚೇರಿಯಿಂದ ಮದರಾಸ್ ಸೀರೆ

ಹೊಸ ನಮೂನೆ! ಅತ್ಯುತ್ತಮ ತಯಾರು!! ಬಣ್ಣ ಬಾತರಿ!!! ಪ್ರಸಿದ್ಧ ಚಿಳಿಯ ಅಸ್ಸಾಂ ರೇಷ್ಮೆಯ ಅಂಚುಗಳುಳ್ಳ ... [illegible]

ವಿಳಾಸ — ರಾವ್ ಎಂಪೋರಿಯಂ ಸ್ಟ್ರ್ಯಾಂಡ್ ಹಾಂ ರೋಡ್
ವೇಪೇರಿ, ಮದರಾಸು

ಉಪಾಯದ ಕರುಮಗಳು

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕಾರಣಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕಾರಣ!

... ಬರುತ್ತದೆ ಅವನ್ನು ... ಅವಶ್ಯಕ

SCOTT'S EMULSION 31 II

(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷದವು ಈ ಕಾರುಣಗಳನ್ನು ಹೋಗಲಾಡಿಸುವುದಲ್ಲದೆ ... ಶ್ವಾಸಕೋಶಗಳನ್ನು ಬಲಪಡಿಸಿ ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧದ ಮಾರಾಟಗಾರರಲ್ಲಿ ದೊರಕುತ್ತವೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷದಗಳ ಕಾರ್ಖಾನೆ
ಲಂಡನ್ ಇಂಗ್ಲೆಂಡ್

ಈ ಮಾನುಷ್ಯನ ಗುರುತು ಇರುವ ಔಷದವನ್ನೇ ತೆಗೆದುಕೊಳ್ಳಿ

ಶ್ರೀ ವೇದಾಂತ ಪಂಚದಶೀ

63

ಸಮಸ್ತ ಆಸ್ತಿಕ ಮತಾವಲಂಬಿಗಳಾದ ಮುಮುಕ್ಷುಗಳಿಗೆ (ಪ್ರತಿ ...) ... ಶ್ರೀ ವಿದ್ಯಾರಣ್ಯ ... ಸ್ವಾಮಿಗಳು ... ಗ್ರಂಥವನ್ನು ... ಪೂರ್ವಕಾಲದಲ್ಲಿ ... ಯಿಂದ ... ರಚಿಸಿದರು. ... ಸಂಸ್ಕೃತ ... [illegible] ... ಆದ್ದರಿಂದ ವಿವೇಕಿಗಳಾದವರು ಶೀಘ್ರವಾಗಿ ಈ ಗ್ರಂಥವನ್ನು ... ಇದರ ಕ್ರಯ ... ವಿ ಪಿ ಖರ್ಚು ಪ್ರತ್ಯೇಕ

ಇದು ದೊರೆಯುವ ಸ್ಥಳ (೧) ಬೆಂಗಳೂರು ಸಿಟಿ ... (೨) ಬೆಂಗಳೂರು ಸಿಟಿ ... (೩) ... ಕಾಶೀ ... ನಲ್ಲಿ ದೊರೆಯುವುದು

ವೃತ್ತಾಂತ ಪತ್ರಿಕೆ.

೧೯೨೦ನೇ ಇಸವಿ ಜನವರಿ ತಾ॥ ೧ ನೇ ಗುರುವಾರ.

ಕಸಬುಗಳನ್ನು ಪ್ರೋತ್ಸಾಹಿಸುವ ಸಮಾಜವು

ಹಿಂದುಸ್ಥಾನದಲ್ಲಿ ಕಸಬುಗಳನ್ನು ಅಭಿವೃದ್ಧಿಗೆ ತರುವ ಭಾಗದಲ್ಲಿ ತರದೂದು ಮಾಡಲು ಮೂರು ವರುಷಗಳಿಂದ ಒಂದು ಸಮಾಜವು ಕೂಡುತ್ತಿದೆ. ಕಳೆದ ಡಿಸೆಂಬರ್ ತಿಂಗಳ ೩೧ ಸೂರತ್ ಪಟ್ಟಣದಲ್ಲಿ ದಿವಾನ್ ಬಹದೂರ್ ಅಂಬಾಲಾಲ್ ಸಾಕರ್ ಲಾಲ್ ಎಂಬ ಮಹನೀಯರು ಅಧ್ಯಕ್ಷರಾಗಿ ನಿಂತು ಮೂರನೇ ವರುಷದ ಸಮಾಜವನ್ನು ನಡಿಸಿದರು. ದೇಶಾಭಿವೃದ್ಧಿಗೆ ಮೂರು ವಿಷಯಗಳು ಪರಮಾವಶ್ಯವಾಗಿರುವವು. ಮೊದಲನೆಯದಾಗಿ, ಪ್ರಜೆಗಳು ಸತ್ಯಶೀಲರೂ ಸಚ್ಚರಿತ್ರರೂ ಆಗಬೇಕು; ಎರಡನೆಯದಾಗಿ, ರಾಜ್ಯಭಾರಕ್ರಮಗಳು ಪ್ರಜಾನುರಂಜಕವಾಗಿರಬೇಕು. ಮೂರನೆಯದಾಗಿ, ಕ್ರಮವಾಗಿ ಶಾಶ್ವತವಾಗಿ ನಡೆಯತಕ್ಕಂಥಾ ಕಸಬುಗಳಿರಬೇಕು. ಹಿಂದುಸ್ಥಾನದಲ್ಲಿ ಪ್ರಜೆಗಳ ಆಚಾರವ್ಯವಹಾರಗಳನ್ನೂ ಅವರ ಸತ್ಪ್ರವೃತ್ತಿ ಸದ್ಗುಣಗಳನ್ನೂ ಕ್ರಮಪಡಿಸುವ ಭಾರವನ್ನು ಸಂಘಸಂಸ್ಕಾರಕ ಸಮಾಜವು ವಹಿಸಿಕೊಂಡಿರುತ್ತದೆ. ರಾಜ್ಯಭಾರ ವಿಚಾರಗಳನ್ನು ಕ್ರಮಪಡಿಸಬೇಕೆಂಬ ಉದ್ದೇಶದಿಂದ ನ್ಯಾಷನಲ್ ಕಾಂಗ್ರೆಸ್ ಎಂಬ ಮಹಾಸಭೆಯು ಸಾಧನ ಮಾಡುತ್ತಿರುವುದು. ಕೈಗಾರಿಕೆಗಳ ಪ್ರೋತ್ಸಾಹಕ ಸಮಾಜದ ವಿಷಯ ಈ ರಾಷ್ಟ್ರದ ವ್ಯವಸಾಯ ಕಸಬುಗಳು, ವ್ಯಾಪಾರ, ಈ ಭಾಗಗಳನ್ನು ಯಾವ ರೀತಿಯಲ್ಲಿ ಅಭಿವೃದ್ಧಿ ಪಡಿಸಬಹುದು ಎಂಬುದಾಗಿ ಪರ್ಯಾಲೋಚನೆ ಮಾಡುವುದಾಗಿದೆ. ಇದು ಈ ರಾಷ್ಟ್ರದ ಐಶ್ವರ್ಯಾಭಿವೃದ್ಧಿಯಾಗತಕ್ಕ ವಿಷಯವು. ಮೊದಲಿನ ಎರಡು ಭಾಗಗಳಂತೆಯೇ ಈ ಭಾಗವೂ ದೇಶೋನ್ನತಿಗೆ ಪರಮಾವಶ್ಯವಾಗಿದೆ. ಯಾಕೆಂದರೆ ಹೊಟ್ಟೆಬಟ್ಟೆಗಳಿಗಿಲ್ಲದೆ ದರಿದ್ರನಾಗಿರತಕ್ಕವನ ಕೂಡ ಸತ್ಪ್ರವೃತ್ತಿ ಸದ್ಗುಣಗಳನ್ನು ಕುರಿತಾಗಲಿ, ರಾಜ್ಯಭಾರದ ಕ್ರಮಗಳನ್ನು ಕುರಿತಾಗಲಿ ಮಾತನಾಡುವುದರಿಂದ ಪ್ರಯೋಜನವಿಲ್ಲ.

ಮೇಲ್ಕಂಡ ಸಮಾಜದ ಅಧ್ಯಕ್ಷರು ತಿಳಿಸಿದ ಹಲವು ವಿಷಯಗಳಲ್ಲಿ ಒಂದೆರಡನ್ನು ಮಾತ್ರ ಇಲ್ಲಿ ಸೂಚಿಸುತ್ತೇವೆ. ಈ ರಾಷ್ಟ್ರದಲ್ಲಿ ಐಶ್ವರ್ಯವಂತರು ತಮ್ಮ ಹಣವನ್ನು ಗವರ್ನ್‌ಮೆಂಟ್ ನೋಟುಗಳು, ಬ್ಯಾಂಕುಗಳಲ್ಲಿ, ಸರ್ಕಾರಿ ಪತ್ರಗಳ ಮೇಲೂ ಹಾಕುತ್ತಾರೆ. ಅವರು ಆ ಹಣವನ್ನು ಕಸಬುಗಳಿಗೆ ಹಾಕಿ ಕಾರ್ಖಾನೆಗಳನ್ನು ಏರ್ಪಡಿಸಬೇಕು. ಈ ರಾಷ್ಟ್ರದ ಜನರ ಜೀವನ ಪದಾರ್ಥಗಳಲ್ಲಿ ಕಸಬುಗಳನ್ನು ಪ್ರೋತ್ಸಾಹಪಡಿಸತಕ್ಕಂಥಾ ಸಂಘಗಳು ಏರ್ಪಡಬೇಕಾದದ್ದು ಅವಶ್ಯವಾಗಿದೆ. ಮೂಲಧನವು ದೊರಕುವುದಿಲ್ಲ ಎಂದಿದ್ದರೂ ಕಸಬುಗಳು ಕ್ಷೀಣಗತಿಗೆ ಬಂದಿವೆ. ಇಲ್ಲವೇ ಹಾಳಾದವು. ಈ ಕಾರಣ ಈ ರಾಷ್ಟ್ರದ ಜನರು ಮುಂದೆ ಬಂದು ಮೂಲಧನವನ್ನು ಒದಗಿಸಿ ಕೊಡುತ್ತಾ ಬರಬೇಕಾಗಿದೆ. ಆದರೆ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಸರ್ಕಾರಿ ಪತ್ರಗಳ ಮೇಲೂ ಇಟ್ಟಿರುವ ಹಣಕ್ಕೆ ನೂರಕ್ಕೆ ೩ ಅಥವಾ ೪ ರಂತೆ ಬಡ್ಡಿ ಬರುವ ಹಾಗೆಯೇ ಅನೇಕರು ಬಯಸುತ್ತಾರೆಯಲ್ಲದೆ ಅದಕ್ಕಿಂತಲೂ ಅಧಿಕ ಲಾಭವು ಇಲ್ಲವೆಂತಲೂ, ಸಾಹುಕಾರರಾದವರು ಕಸಬುಗಳಿಗೆ ಹಣ ಹಾಕಿದರೆ ನಷ್ಟವಾಗುವುದೆಂದೂ ಭಯಪಡುವವರೂ ಬಹಳ ಜನ ಲಕ್ಷ್ಯವಿಲ್ಲದೆ ಹಿಂಜರಿಯುತ್ತಾರೆ. ಹೀಗೆ ಅಷ್ಟು ಲಾಭ ಬರುವುದು ಎಷ್ಟುಮಾತ್ರಕ್ಕೂ ಯೋಗ್ಯವಾದದ್ದಲ್ಲ. ಸ್ವದೇಶಿ ಸಿದ್ಧರಾಗಬೇಕು. ದೇಶೋನ್ನತಿಯಾಗುವ ಬಗೆ ಹೇಗೆ? ಎಂಬುದಾಗಿ ಆಲೋಚನೆ ಮಾಡಿ, ಯೋಗ್ಯವಾದದ್ದೆಂದು ಕಂಡು ಬಂದಂಥಾ ಕಸಬುಗಳಿಗೆ ಐಶ್ವರ್ಯವಂತರು ಹಣ ಹಾಕಬೇಕು. ಕೆಲವು ಸಂದರ್ಭಗಳಲ್ಲಿ ಮೂಲಧನವು ನಷ್ಟವಾಗುವುದು ಉಂಟು. ಆದರೆ ಎಲ್ಲಾ ಕೆಲಸಗಳಲ್ಲೂ ಎಂದಿಗೂ ನಷ್ಟವಾಗುವುದಿಲ್ಲ. ಅನೇಕ ಕಾರ್ಯಗಳು ಲಾಭಕರಗಳಾಗಿ ಪರಿಣಮಿಸುತ್ತವೆ. ಆದಕಾರಣ ಐಶ್ವರ್ಯವಂತರಾದ ದೇಶದ ಜನರು ಲಾಭಕ್ಕೂ ನಷ್ಟಕ್ಕೂ ಸಿದ್ಧರಾಗಿ ಮುಂದೆ ಬಂದು ತಮ್ಮ ಹಣವನ್ನು ಧಾರಾಳವಾಗಿ ವಿನಿಯೋಗಿಸಿ, ದೇಶೋನ್ನತಿ ಸಹಕಾರಿಗಳಾದ ಕಸಬುಗಳನ್ನು ಅಭಿವೃದ್ಧಿಪಡಿಸಬೇಕೆಂದು ನಾವು ಪೂರ್ವಕವಾಗಿ ಒತ್ತಿ ಹೇಳುತ್ತೇವೆ.

ಮದ್ಯವಿಸರ್ಜನೆ.

ಮದ್ಯಗಳ ಕುಡಿತವು ಈ ದೇಶದಲ್ಲಿ ಹೆಚ್ಚುತ್ತಿರುವುದು ಹಿಂದೂ ಜನರು ಸ್ವಭಾವಿಕವಾಗಿ ಮದ್ಯಪಾನಾಸಕ್ತರಲ್ಲ. ಹೆಂಡವನ್ನು ಕುಡಿಯುವುದು ಕೀಳುವರ್ಗದವರಿಗೆ ಮಾತ್ರ ಅಭ್ಯಾಸವಾಗಿದ್ದಿತು. ಆದರೆ ಈಗ್ಗೆ ಅಂದರೆ ಪಾಶ್ಚಾತ್ಯರು ಈ ದೇಶಕ್ಕೆ ಬಂದ ಮೊದಲ್ಗೊಂಡು ಉತ್ತಮ ತರದ ಮದ್ಯವನ್ನು ಕುಡಿಯುವುದು ಶ್ರೇಷ್ಠ ಜಾತಿಯವರಿಂದಲೂ ಸ್ವೀಕರಿಸಲ್ಪಟ್ಟಿರುವುದರಿಂದ ಕ್ರಮೇಣವಾಗಿ ಹರಡುತ್ತಿರುವುದು ಕೇಂದ್ರ ಸ್ಥಾನದಿಂದ ಸರ್ಕಾರಕ್ಕೆ ಆದಾಯಕರವಾದ ಹುಟ್ಟುವಳಿ ಆದೆಯೆಂದ. ಸರ್ಕಾರಿ ರಿಪೋರ್ಟುಗಳಿಂದ ಗೊತ್ತಾಗುತ್ತದೆ. ಪ್ರತಿಯೊಂದು ಊರಿನಲ್ಲಿಯೂ ಸಾರಾಯಿ, ಹೆಂಡ, ಅಫೀಮು, ಗಾಂಜಾ ಮುಂತಾದ ಅಮಲೇರುವ ಪದಾರ್ಥಗಳನ್ನು ಮಾರುವ ಅಂಗಡಿಗಳು ಅಲ್ಲಲ್ಲಿ ಹರಡಿಕೊಳ್ಳುತ್ತಿವೆ. ಜನರು ದೇಶೋನ್ನತಿಯನ್ನು ಬಯಸಿ ಕಾರ್ಯಸಾಧನೆ ಮಾಡುತ್ತಿರುವಲ್ಲಿ ಯಾರಿಗೂ ಶೀಘ್ರದಲ್ಲಿ ಗೋಚರವಾಗದಿರುವಂಥಾ ಕಂದಿ ತನಂಬ ಸರ್ಪವು ತನ್ನ ವಿಷವನ್ನು ಅವರೊಳಗೆ ನಿಧಾನವಾಗಿ ಬಿಡುತ್ತಿರುವುದು. ಒಂದು ಸೊಗಸಾದ ಕಸಿ ಮಾವಿನ ಮರದ ಬುಡವನ್ನು ಹುಳುವು ಕೊರೆದು ತಿನ್ನುತ್ತಿರುವಲ್ಲಿ ತೋಟಗಾರನು ಎಷ್ಟೇ ಪ್ರಯಾಸಪಟ್ಟು ಗೊಬ್ಬರ ನೀರು ಹಾಕಿದರೂ ಪ್ರಯೋಜನವೇನು? ರೋಗದ ದೇಹವನ್ನು ವಸ್ತ್ರಾಭರಣಗಳಿಂದಲಂಕರಿಸಿದರೆ ಅದರಿಂದಾಗುವ ಪ್ರಯೋಜನವೇನು? ಮದ್ಯಪಾನಾಭ್ಯಾಸವು ನಮ್ಮ ದೇಶದ ಕೆಲವು ಯೌವನಸ್ಥರಲ್ಲಿ ಹರಡಿಕೊಳ್ಳುತ್ತಾ ಅವರನ್ನು ನಾಶನದ ಮಾರ್ಗದ ಕಡೆಗೆ ನಡಿಸುತ್ತಿರುವುದು. ಈಚೀಚೆಗೆ ದೇಶದ ಕೆಲವು ಸ್ತ್ರೀಯರು ಕೂಡ ಕುಡಿಯುವ ಅಭ್ಯಾಸದಲ್ಲಿರುವರೆಂಬ ದುಃಖಕರವಾದ ಸಂಗತಿಯು ತಿಳಿದುಬರುತ್ತದೆ. ಹಿಂದೂ ದೇಶವು ಉತ್ತಮ ಸ್ಥಿತಿಯನ್ನು ಪಡೆಯಬೇಕಾದರೆ ಇಲ್ಲಿನ ಯೌವನಸ್ಥರು ಮದ್ಯಪಾನವನ್ನು ಸಂಪೂರ್ಣವಾಗಿ ತ್ಯಜಿಸಬೇಕಾಗಿರುವುದು. ಇದಾಗದೆ ಹೋದರೆ ಕುಂಟಿತ್ವನ್ನು ಬಂದಿಗೆ ಕೂಡಿ ಪಂಥ್ಯವನ್ನು ಬಿಟ್ಟಂತಾಗುವುದು. ದೇಶಬಾಂಧವರೇ, ನೀವೆಂದಿಗೂ ಬ್ರಾಂದಿ, ಬೀರ್, ವೈನ್ ಮೊದಲಾದ ವಿದೇಶ ಮದ್ಯಗಳನ್ನಾಗಲೀ ಹೆಂಡ ಸಾರಾಯಿ ಅಫೀಮು ಗಂಜಾ ಮೊದಲಾದ ಅಮಲೇರುವ ಸ್ವದೇಶ ಪದಾರ್ಥಗಳನ್ನಾಗಲೀ ಮುಟ್ಟದಂತೆ ಎಚ್ಚರಿಕೆಯಾಗಿರಿ. ಮದ್ಯಪಾನಾಭ್ಯಾಸವು ನಾಗರಹಾವಿನಂತಿರುವುದೆಂದು ಸತ್ಯವೇದವು ತಿಳಿಸುತ್ತದೆ. ಕುಡುಕನನ್ನು ಯಾರೂ ಸನ್ಮಾನಿಸರು. ಅಂಥವನು ಶೀಘ್ರದಲ್ಲಿ ಬಡವನಾಗುವನು. ಅವನ ಮನೆಯಲ್ಲಿ ಜಗಳಾಟವಿರುವುದು. ಅವನ ಸಂಸಾರ ಮಕ್ಕಳಿಗೆಲ್ಲಾ ದುಃಖವೂ ಅಂಕರೆಯೂ ಹೆಚ್ಚುವುದು.

ಜಿಲ್ಹೆವಾರು ವೃತ್ತಾಂತಗಳು.

ಮೈಸೂರು ಸಂಸ್ಥಾನದ ಕಂಟ್ರೋಲರ್ ಕೆಲಸಕ್ಕೆ ಇಂಡಿಯಾ ಗವರ್ನಮೆಂಟಿನ ನೌಕರಿಯಲ್ಲಿರತಕ್ಕ ಇನ್ನೊಬ್ಬ ಸಮರ್ಥರನ್ನು ಕಳಿಸಬೇಕೆಂದು ಸರ್ಕಾರದವರು ತರದೂದು ಮಾಡುತ್ತಿದ್ದಾರೆಂದು ತಿಳಿಯುವುದು.

***

ನಮ್ಮ ಸಂಸ್ಥಾನದಲ್ಲಿ ಫಲವೃಕ್ಷಗಳಿಗೂ ಪೈರುಪಚ್ಚೆಗಳಿಗೂ ಹಿಡಿಯುವಂಥಾ ಹುಳು ಹುಪ್ಪಟೆಗಳ ಪೂರ್ವೋತ್ತರವನ್ನು ತಿಳಿದು, ಅವುಗಳ ನಿವಾರಣೆಗೆ ಸಹಕಾರಿಗಳಾದ ಪರಿಶೋಧನೆಯನ್ನು ನಡಿಸಿ, ಪರಿಹಾರಗಳನ್ನು ಕಂಡುಹಿಡಿಯುವುದಕ್ಕಾಗಿ ಮೈಸೂರು ಸರ್ಕಾರದವರು ಡಾಕ್ಟರ್ ಕೋಲ್‌ಮ್ಯಾನ್ ಎಂಬವರನ್ನು ನೇಮಿಸಿ, ಬೆಂಗಳೂರಿಗೆ ಕಳಿಸಿದಾರೆ.

***

ಕೋಲಾರದ ಚಿನ್ನದ ಗಣಿಗಳಲ್ಲಿ ದೊಂಬೀ ಕಲಹ ಮಾಡಿದರೆಂದು ಪೋಲೀಸಿನವರು ಕೆಲವು ಕೂಲಿಗಳನ್ನು ದಸ್ತಗಿರಿ ಮಾಡಿದ್ದರಷ್ಟೆ. ಮ್ಯಾಜಿಸ್ಟ್ರೇಟರು ಅವರನ್ನು ದರ್ಯಾಫ್ತು ಮಾಡಿ, ೫ ಮಂದಿಗೆ ತಲಾ ಆರು ತಿಂಗಳಂತೆಯೂ, ೫ ಮಂದಿಗೆ ತಲಾ ಮೂರು ತಿಂಗಳಂತೆಯೂ ಕಠಿಣ ಸಜಾ ವಿಧಿಸಿ, ಉಳಿದವರನ್ನೆಲ್ಲಾ ಖುಲಾಸ್ ಮಾಡಿದರೆಂದು ತಿಳಿದುಬಂದಿದೆ.

***

ಬೆಂಗಳೂರು ದಂಡಿನಲ್ಲಿ ಕೆಲವು ವೈದ್ಯರು, ಪ್ಲೇಗ್ ಟೀಕೆಯನ್ನು ಯಾರೂ ಹಾಕಿಸಿಕೊಳ್ಳಬಹುದೆಂಬ ಅರ್ಥಕ್ಕೆ ನೋಟೀಸುಗಳನ್ನು ಪ್ರಕಟಿಸಿ ಹಂಚುತ್ತಿದ್ದಾರೆ. ಆದರೂ ಜನರು ಲಕ್ಷ್ಯಮಾಡದೆ ಟೀಕೆಯನ್ನು ತಂಡತಂಡವಾಗಿ ಹೋಗಿ ಹಾಕಿಸಿಕೊಳ್ಳುತ್ತಿರುವುದು ಸಂತೋಷಕರವಾಗಿದೆ. ಇದುವರೆಗೆ ಆಗಲೇ ೧೩ ಸಾವಿರ ಪ್ರಜೆಗಳು ಈ ಟೀಕೆಯನ್ನು ಹಾಕಿಸಿಕೊಂಡಿದ್ದಾರಂತೆ.

***

ಬ್ರಿಟಿಷ್ ರೆಸಿಡೆಂಟರು ಮಿ॥ ಫ್ರೇಸರ್‌ರವರು, ಅವರ ಪತ್ನಿಯವರು, ಈ ರೆಸಿಡೆಂಟರು ಕಳೆದ ಮಂಗಳವಾರ ಸಾಯಂಕಾಲ ಮೋಟಾರ್ ಗಾಡಿಯಲ್ಲಿ ಬೆಂಗಳೂರಿಂದ ರಾಜಧಾನಿಗೆ ಪಯಣಮಾಡಿ, ಗವರ್ನಮೆಂಟ್ ಹೌಸ್ ಬಂಗಲೆಯಲ್ಲಿ ರಾತ್ರಿ ಇದ್ದು, ನೆನ್ನೆ ಬೆಳಿಗ್ಗೆ ೧೧ ಗಂಟೆಗೆ ಹೊರಗಿನ ಕಡೆ ಪ್ರಯಾಣಮಾಡಿದರು. ಮಿ॥ ಕಾಂತರಾಜೇ ಅರಸಿನವರು ಅವರನ್ನು ಎದುರುಗೊಂಡು ಅವರಿಗೆ ಬೇಕಾದ ಸೌಕರ್ಯಗಳನ್ನು ಸಿದ್ಧಪಡಿಸಿದ್ದರು. ಗೌರವಾರ್ಥವಾದ ೧೩ ತೋಪುಗಳು ಎರಡು ವೇಳೆಯೂ ಕಾರಿಸಲ್ಪಟ್ಟವು.

***

ದೊಡ್ಡಬಳ್ಳಾಪುರದ ವಾತ್ಮಿದಾರರು ಬರೆಯುವುದೇನೆಂದರೆ— ಈ ಊರಿನ ಸುತ್ತುಮುತ್ತಲೂ ಹೊಸದಾಗಿ ಹಳ್ಳಿಗಳಿಗೆ ಪ್ಲೇಗ್ ವ್ಯಾಪಿಸಿದೆ. ಕೆಲವು ಊರುಗಳಲ್ಲಿ ಗಲಾಟೆ ಇಲ್ಲದಕಾರಣ, ಬಿಟ್ಟವರು ಊರು ಸೇರಿದರು. ರಾಜಗಟ್ಟದ ಕರಣಿಕ ಲಕ್ಷ್ಮಯ್ಯ ಎಂಬ ಕೆಂಗನು ನೀರಿಗೆ ಹೋಗಿ ಕಾಣದೆ ಹೋಗಿ ಬಾವಿಯಲ್ಲಿ ಮುಳುಗಿ ಸತ್ತಳು— ಜನವರಿ ೩ ನೇ ತಾ ನಿಂದ ಕ್ಯಾಂಪಿನವರು ಕವಾಯತು ಗಸ್ತು ಮುಂತಾದ ಕೆಲಸಗಳನ್ನು ನಡಿಸುತ್ತಾ ಇದ್ದಾರೆ. ಇನ್ನು ಒಂದು ತಿಂಗಳವರೆಗೆ ಈ ಕ್ಯಾಂಪು ಇಲ್ಲಿರಬಹುದು. ಈಗ ಇಲ್ಲಿನ ಮ್ಯುನಿಸಿಪಲ್ ಮುತ್ಸದ್ದಿಯು ಊರನ್ನು ಶುಚಿಯಾಗಿ ಇಡುವದಕ್ಕೆ ಬಹಳ ಪ್ರಯಾಸಪಡುತ್ತಾರೆ. ಹೀಗೆ ಪ್ರಯತ್ನ ಮಾಡುತ್ತಾ ಬಂದರೆ ಈ ಸಾರಿ ಪ್ಲೇಗು ಇಲ್ಲಿಗೆ ಬರಲಾರದು. ರಾಗಿ ರೂಪಾಯಿಗೆ ೧೩—೧೪ ಸೇರು, ಅಕ್ಕಿ ೬—೭ ಸೇರು ಮಾರುತ್ತಾರೆ. ಬಡವರ ಜೀವನ ಕಷ್ಟವಾಗಿದೆ.

***

"ಬೆಂಗಳೂರು ರಾಣಿಸಿಂಗನ ಪೇಟೆಯಲ್ಲಿರುವ ಬಾಲಪ್ಪ ಮೇಸ್ತ್ರಿಯವರ ಕುಮಾರ ಮುನಿಶಾಮಪ್ಪ ಎಂಬುವನಿಗೆ ಎರಡನೇ ಪ್ರಸ್ತವಾಗಿ ಏಳು ದಿವಸ ಮಾತ್ರವಾಗಿತ್ತು. ಕಳೆದ ಮಂಗಳವಾರ ಅನೇಸೇ ಪೇಟೆಯಲ್ಲಿರುವ ಕಸಲೀ ಕಾಯಿ ಹನುಮಪ್ಪನ ಮಗ ಮುನಿ ವೆಂಕಟ ಎಂಬುವನು, ಜಲಸೂರಿನಲ್ಲಿರುವ ಗುಂಡರಾಜು ಮತ್ತು ನಲ್ಲತಂಬಿ ಎಂಬೀ ಮೂವರು ಸೇರಿ, ಅವನನ್ನು ಜಲಸೂರಿಗೆ ತಿಂಡಿ ಮಾಡುತ್ತೇವೆಂದು ಒಂದು ದೊಡ್ಡ ಮನೆಗೆ ಕರೆದುಕೊಂಡು ಹೋಗಿ ಅವನಿಗೆ ಬ್ರಾಂದಿ ಕುಡಿಸಿ, ತರುವಾಯ ನಿಷಾ ಇಳಿಯುತ್ತೆ ಎಂಬದಾಗಿ ಹೇಳಿ, ಕ್ಲೋರೋಫಾರಮನ್ನು ಕೊಟ್ಟು ಜ್ಞಾನತಪ್ಪಿದಾಗ ಅವನ ಕತ್ತನ್ನು ಚೂರಿಯಿಂದ ಕೊಯ್ಯುತ್ತಿರುವಾಗ ಅವನು ಎಚ್ಚರವಾಗಿ ಚೂರಿಯನ್ನು ಹಿಡಿದುಕೊಂಡು ಕೂಗಿಕೊಳ್ಳಲು ಜನರು ಬಂದದ್ದರಿಂದ ಆ ಮೂವರೂ ಪರಾರಿಯಾದರು. ತುಂಬಾ ಜಖಂ ಆಗಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಗುಣಹೊಂದುತ್ತಲಿದಾನೆ. ಇಬ್ಬರು ಸಿಕ್ಕಿದಾರೆ. ನುಂದರರಾಜು ಎಂಬವನು ಮಾತ್ರ ಸಿಕ್ಕಲಿಲ್ಲ" ಎಂದು ಒಬ್ಬ ವಾತ್ಮಿದಾರರು ಬರೆಯುತ್ತಾರೆ.

***

ಪಂಜಾಬಿನ ಲೆಫ್ಟಿನೆಂಟ್ ಗವರ್ನರಾದ ಸರ್ ಡೇವಿಡ್ ಬಾರ್ಬರ್ ರವರಿಗೆ ಕಾಯಿಲೆ ಸಂಭವಿಸಿದ ದೆಸೆಯಿಂದ ಅವರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟು, ಇನ್ನೊಂದು ವಾರದಲ್ಲೇ ಸೀಮೆಗೆ ತೆರಳುವವರಾಗಿದ್ದಾರೆ. ಇವರು ನಮ್ಮ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಗಳಾದ ಮಿ॥ ನೆಲ್ಸನ್‌ರವರಿಗೆ ಬಾವ ಮೈದುನರು. ಇತ್ತಲಾಗಿ ಮೇಲ್ಕಂಡ ಲೆಫ್ಟಿನೆಂಟ್ ಗವರ್ನರ್ ಕೆಲಸವು ಈಗ ಇಂಡಿಯಾ ಗವರ್ನಮೆಂಟಿನ ಫಾರಿನ್ ಸೆಕ್ರೆಟರಿಯಾಗಿರುವ ಸರ್ ಹ್ಯಾಮಿಲ್ಟನ್ ಗ್ರಾಂಟ್‌ರವರಿಗೆ ದೊರಕುವಹಾಗಿದೆ ಎಂತಲೂ, ಆ ಫಾರಿನ್ ಸೆಕ್ರೆಟರಿ ಕೆಲಸಕ್ಕೆ ನಮ್ಮ ರೆಸಿಡೆಂಟರಾಗಿರುವ ಮಿ॥ ಫ್ರೇಸರ್‌ರವರು ನೇಮಕವಾಗಬಹುದೆಂತಲೂ ವರ್ತಮಾನವಿದೆ. ಇಲ್ಲಿ ರೆಸಿಡೆಂಟರಾಗಿ ಬರುವುದಕ್ಕಿಂತ ಮೊದಲು ಮಿ॥ ಫ್ರೇಸರ್‌ರವರು ಕೆಲವು ಕಾಲ ಆ ಫಾರಿನ್ ಸೆಕ್ರೆಟರಿ ಕೆಲಸವನ್ನು ಬದಲಿ ನೋಡಿದ್ದರಾದಕಾರಣ ಅವರಿಗೆ ಆ ಕೆಲಸದ ಅನುಭವವೂ ಉಂಟಾಗಿರುತ್ತದೆ. ಈ ರೀತಿ ನಮ್ಮ ರೆಸಿಡೆಂಟರಿಗೆ ಬಡ್ತಿ ಆಗುವುದೆಂಬ ಸುದ್ದಿಯು ಸಂಸ್ಥಾನದಲ್ಲೆಲ್ಲಾ ತುಂಬಾ ಸಂತೋಷವನ್ನುಂಟುಮಾಡೀತೆನ್ನುವುದಕ್ಕೆ ಸಂಶಯವಿಲ್ಲ.

ಕಡೂರು ಉಪಾಧ್ಯಾಯ ಸಂಘವು.

೧೯೨೦ನೇ ಇಸವಿ ಜನವರಿ ತಾ ೨೦ನೇ ಭಾನುವಾರ ಕಡೂರಿನಲ್ಲಿ ಸೇರಿದ ಉಪಾಧ್ಯಾಯ ಸಂಘದ ನಡವಳಿಕೆಗಳು:—

೧ ಕಡೂರು ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮಿ॥ ಚಿದಂಬರೈಯ್ಯನವರು ಕೋರಿದ್ದನ್ನು ಎಲ್ಲರೂ ಅನುಮೋದಿಸಿದಂತೆ ಅಜ್ಜಂಪುರದ ಟಿ ಬಿ ಸ್ಕೂಲ್ ಹೆಡ್ ಮಾಸ್ಟರ್ ಮಿ॥ ಕೆ ಶಂಕರಪ್ಪನವರು ಅಗ್ರಾಸನವನ್ನು ಸ್ವೀಕರಿಸಿದರು.

೨ ಕಡೂರು ಎ ವಿ. ಸ್ಕೂಲ್ ಅ ಮಾ ಮಿ॥ ಟಿ ಗುಂಡಪ್ಪನವರು ಅಕ್ಷರಾಭ್ಯಾಸದ ವಿಷಯವಾಗಿ ಉಪನ್ಯಾಸ ಮಾಡಿ ಕಾಳುಗಳನ್ನಿಡುವುದರ ಮೂಲಕ ಅಕ್ಷರಗಳನ್ನು ಕಲಿಸುವ ಕ್ರಮವನ್ನು ಪಾಠ ಹೇಳಿ ತೋರಿಸಿದರು. ಮಿ॥ ಚಿದಂಬರೈಯ್ಯನವರು ಸದರಿ ಉಪನ್ಯಾಸವನ್ನು ಶ್ಲಾಘಿಸಿದರು. ಆದರೆ ಬಾಲಕರು ಅಕ್ಷರಗಳ ಮೇಲೆ ಕಾಳುಗಳನ್ನಿಡುವುದು ಬಹಳ ಕಾಲ ಹಿಡಿದೀತೆಂತಲೂ ಈ ಕ್ರಮದಿಂದ ಹೆಚ್ಚು ಕಾಲಹರಣವಾಗುವುದೆಂತಲೂ, ಸಭಿಕರಿಗೆ ಮನಗಾಣಿಸಿದುದಲ್ಲದೆ, ಈ ನ್ಯೂನತೆಯನ್ನು ಹೋಗಲಾಡಿಸುವುದಕ್ಕಾಗಿ ಎಲ್ಲರೂ ಪ್ರಯತ್ನ ಮಾಡಿ, ಸುಮಾರು ೩/೪ ತುಂಡು ಕಾಗದ ಅಥವಾ ತಗಡುಗಳಿಂದ ಅಕ್ಷರ ಮತ್ತು ಅಂಕೆಗಳನ್ನು ಮಾಡುವ ಉಪಾಯಗಳನ್ನು ಕಂಡುಹಿಡಿಯಬೇಕೆಂದು ಸೂಚಿಸಿದರು.

೩. ಮಿ॥ ಚಿದಂಬರೈಯ್ಯನವರು ಉಪಾಧ್ಯಾಯರ ಯೋಗ್ಯತಾ ವಿಚಾರವಾಗಿ ಉಪನ್ಯಾಸ ಮಾಡಿದರು. ಅದನ್ನು ಯಗಟಿ ಸ್ಕೂಲ್ ಹೆ. ಮಾ. ಮಿ॥ ವೆಂಕಟರಾಮಯ್ಯನವರು ಶ್ಲಾಘಿಸಿದರು. ಈ ಅರ್ಥವನ್ನು ಅನುಮೋದಿಸಿ ಮಿ॥ ಶಂಕರಪ್ಪನವರು ಉಪನ್ಯಾಸ ಮಾಡಿದರು.

೪. ಉಪಾಧ್ಯಾಯ ಸಂಘಕ್ಕೆ ಭಾನುವಾರ ಬಂದ ಮಾಸ್ಟರುಗಳಿಗೆ ಮರುದಿನ ಕಾಲಕ್ಕೆ ಸರಿಯಾಗಿ ಸ್ಕೂಲಿಗೆ ಹೋಗಲು ಸಾಧ್ಯವಾಗುವದಿಲ್ಲವಾದುದರಿಂದ ಈ ವಿಷಯದಲ್ಲಿ ಸಂಭವಿಸುವ ಸಾವಕಾಶವನ್ನು ದಯವಿಟ್ಟು ಮನ್ನಿಸುವಂತೆ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರನ್ನು ಕೇಳಿಕೊಳ್ಳಬೇಕೆಂದು ಲಿಂಗದಹಳ್ಳಿ ಸ್ಕೂಲ್ ಹೆ ಮಾ ಮಿ॥ ರಾಮಣ್ಣನವರು ಸೂಚಿಸಿದ್ದನ್ನು ಮಿ॥ ವೆಂಕಟರಾಮಯ್ಯನವರು ಅನುಮೋದಿಸಿದರು.

೫ ಉಪಾಧ್ಯಾಯರಿಗೆ ತಿಂಗಳಿಗಟ್ಟಲೆ ಇರುವ ಚಂದಾ ದರ ೪ ಆಣೆ. ೮ ಆಣೆಯನ್ನು ಸಭ್ಯರಿಗೆ ಆಣೆ, ೨ ಆಣೆಗೆ ಇಳಿಸ ಬೇಕೆಂದು ಉತ್ತಮವೆಂದೂ ಅವಶ್ಯಬಿದ್ದಾಗ ಸಹಾಯದ್ರವ್ಯವನ್ನು ಪ್ರತ್ಯೇಕವಾಗಿ ಎತ್ತಬಹುದೆಂದೂ ಮಿ॥ ಚಿದಂಬರೈಯ್ಯನವರು ಸೂಚಿಸಿದ್ದನ್ನು ಮ॥ ವೆಂಕಟರಾಮಯ್ಯನವರು ಅನುಮೋದಿಸಿದರು. ಎಲ್ಲರೂ ಒಪ್ಪಿದರು.

ಮುಂದಿನ ಸಭೆಯು ಫೆಬ್ರವರಿ ೧೬ ನೇ ತಾ ಭಾನುವಾರ ನಡೆಯತಕ್ಕದ್ದೆಂದೂ, ಆ ದಿನ ಮ॥ ಶಂಕರಪ್ಪನವರು ಬೋಧನಾ ಪದ್ಧತಿಯ ವಿಷಯದಲ್ಲಿ ಉಪಾಧ್ಯಾಯರು ಬೇಕಾದ ಗಮನವನ್ನು ಕುರಿತು ಉಪನ್ಯಾಸವನ್ನೂ, ಬಿರೂರು ಎ ವಿ ಸ್ಕೂಲ್ ಮಿ॥ ನರಸಿಂಹಶಾಸ್ತ್ರಿಗಳು ಕನ್ನಡ ಒಂದನೇ ತರಗತಿಗೆ ಬಾಳೇ ಗಿಡದ ವಸ್ತುಪಾಠವನ್ನು ಸಭಿಕರ ಎದುರಿಗೆ ಬೋಧಿಸುವದನ್ನು ನಡಿಸತಕ್ಕದ್ದೆಂದೂ ನಿಶ್ಚಿತವಾಗಿ ಸಭೆಯು ಬರಖಾಸ್ತಾಯಿತು.

ಪ್ರತ್ಯಕ್ಷದರ್ಶಿ.

ಇಂಡಿಯಾ ದೇಶದ ವೃತ್ತಾಂತಗಳು.

ಲಾಲಾ ಲಾಜಪತರಾಯಿಯವರು ಕಳೆದ ವಾರ ಕಲ್ಕತ್ತೆಗೆ ಹೋಗಿ ಮೆ|| ಗೋಖಲೆ ಯವರ ಬಂಗಲೆಯಲ್ಲಿ ಇಳುಕೊಂಡಿದಾರೆ

❦❦❦

ಬಂಗಾಳಾ ಅಧಿಪತ್ಯದಲ್ಲಿ ಕ್ಷಾಮನಿವಾರಣೆಗೋಸ್ಕರ ಇಂಡಿಯಾ ಗವರ್ನಮೆಂಟಿನವರು ಮೊದಲು ೨೦ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದದ್ದು ಸಾಲದೆಂದು ಕಂಡುಬಂದದ್ದರಿಂದ ಈಗ ಇನ್ನೂ ೧೫ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

❦❦❦

ಹೌರಾ ಪಟ್ಟಣದಲ್ಲಿ ಕಳೆದ ವಾರ ಸುಮಾರು ೬,೦೦೦ ಹಿಂದೂಗಳೂ ಮಹಮದೀಯರೂ ಸೇರಿ ಮಾರಾಮಾರಿ ನಡಿಸಿದರು. ಬಹು ಮಂದಿಗೆ ಗಾಯಗಳಾದವು. ಸರ್ಕಾರದವರು ಈ ದಗಳೆಯನ್ನು ಅಡಗಿಸುವುದಕ್ಕೆ ಮಿಲಿಟೇರಿ ಪೋಲೀಸನ್ನು ಕಳುಹಿಸಬೇಕಾಯಿತು

❦❦❦

ಕಳೆದ ಗುರುವಾರ ಬೆಳಗಿನ ಝಾವ ೩|| ಗಂಟೆ ಹೊತ್ತಿನಲ್ಲಿ ಜಬ್ಬಲ್‌ಪುರದಿಂದ ಅಲ್ಲಹಾಬಾದಿಗೆ ಹೋಗುತ್ತಿದ್ದ ಒಂದು ರೈಲ್‌ಗಾಡಿಯೊಳಗೆ ಕುದುರೆಗಳು ಭರ್ತಿಮಾಡಲ್ಪಟ್ಟಿದ್ದ ಗಾಡಿಗೆ ಬೆಂಕಿ ಬಿದ್ದು ಉರಿದು ಹೋಯಿತು ಆರು ಭಾರೀ ದಾಳಣಿಗಳು ಬೆಂಕಿಯಲ್ಲಿ ಸಿಕ್ಕಿ ಸತ್ತವು.

❦❦❦

ರಾಜದ್ರೋಹಕರವಾದ ವಾರ್ತೆಗಳನ್ನು ಪ್ರಕಟಿಸಿದಂಥಾ ವರ್ತಮಾನ ಪತ್ರಿಕೆಗಳ ಎಡಿಟರು ಮುಂತಾದವರನ್ನು ದಸ್ತಗಿರಿ ಮಾಡ್ವಾಗ್ಗೆ ಇನ್ನು ಮೇಲೆ ಸಾಮಾನ್ಯವಾಗಿ ಅಂಥವರಿಗೆ ಕೋರ್ಟಿನಲ್ಲಿ ಕೈ ಕೋಳಗಳನ್ನು ಹಾಕಕೂಡದೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆಂದು ತಿಳಿಯಬರುತ್ತದೆ

❦❦❦

ಹೌರಾಪಟ್ಟಣದಲ್ಲಿ ನಂಕಿಸೋಟಿ ಎಂಬವನನ್ನು ಅಲ್ಲಿನ ರೈಲ್ ಸ್ಟೇಷನ್ ಯೂರೋಪ್ಯಿಯನ್ ಟಿಕೆಟ್ ಕಲೆಕ್ಟರು ಒದ್ದು ಪ್ರಾಣತೆಗೆದುಬಿಟ್ಟನೆಂದು ಹೇಳಿ, ಅವನ ಶವವನ್ನು ಸ್ಮಶಾನಘಟ್ಟದಿಂದ ಪೋಲೀಸ್ ಸ್ಟೇಷನ್ನಿಗೆ ತಂದು ಹಾಕಿರುತ್ತಾರೆಂತಲೂ, ಪೋಲೀಸಿನವರು ಅದರ ನಿಜ ಸ್ಥಿತಿಯನ್ನು ತನಿಖೆಮಾಡುತ್ತಿದಾರೆಂತಲೂ ಪ್ರಕಟವಾಗಿದೆ

❦❦❦

ಹಿಂದುಸ್ಥಾನದ ೧೯೦೭-೧೯೦೮ನೆ ಸಾಲಿನ ಬಜೆಟ್ಟನ್ನು ೧೯೦೮-೦೯ನೆ ಸಾಲಿನ ಬಜೆಟ್ ತಖ್ತೆಗಳನ್ನು ಇಂಡಿಯಾ ಗವರ್ನಮೆಂಟಿನ ಖಜಾನಾ ಮೆಂಬರುಯವರು ಮಾರ್ಚ್ ತಾ ೨೦ಕ್ಕೆ ವೈಸರಾಯಿಯವರ ಮಂತ್ರಾಲೋಚನಾ ಸಭೆಗೆ ಒಪ್ಪಿಸುವರೆಂತಲೂ, ಅದೇ ೨೭ನೇ ತಾರೀಖಿನಲ್ಲಿ ಮೆಂಬರುಗಳು ಚರ್ಚಿಸುವರೆಂತಲೂ ಪ್ರಕಟವಾಗಿದೆ

❦❦❦

ನೇಪಾಳ ಸಂಸ್ಥಾನದ ಮಂತ್ರಿಶ್ರೇಷ್ಠರಾದ ಚೀಫ್ ಷಂಷೇರ್ ಜಂಗರವರು ಮಾರ್ಚಿತಿಂಗಳಲ್ಲಿ ಬೊಂಬಾಯಿಗೆ ಬಂದು, ಅಲ್ಲಿ ಹಡಗು ಹತ್ತಿ ಯೂರೋಪ್ಯಿಯನ್ ರಾಜ್ಯಗಳ ಮೇಲೆ ಐದು ತಿಂಗಳು ಸಂಚಾರ ಮಾಡಿಕೊಂಡು ಬರುವುದಕ್ಕಾಗಿ ಪ್ರಯಾಣ ಮಾಡುವರು ಅವರ ಕೂಡ ಬಹುಶಃ ಮೇಜರ್ ಮ್ಯಾನರ್ಸ್ ಸ್ಮಿತ್ ಎಂಬ ಇಂಗ್ಲಿಷ್ ಉದ್ಯೋಗಸ್ಥರು ಹೋಗಬಹುದು

❦❦❦

ದೇವಾಸ್ ಎಂಬ ದೇಶೀಯ ಸಂಸ್ಥಾನದ ರಾಜರಾದ ತುಕೋಜಿರಾವ್ ಪವಾರ್ ಯವರು ಕಲ್ಕತ್ತೆಯಿಂದ ಪರಿವಾರ ಸಹಿತ ಕಳೆದ ವಾರ ಮದರಾಸಿಗೆ ಬಂದು ೨—೩ ದಿನ ಇದ್ದು, ಅಲ್ಲಿಂದ ದಕ್ಷಿಣ ದೇಶವನ್ನೆಲ್ಲಾ ಅಂದರೆ ತಂಜಾವೂರು, ತಿರುಚನಾಪಲ್ಲಿ, ಮಧುರೆ, ತಿನ್ನವೆಲ್ಲಿ, ಕ್ವಿಲಾನ್, ಟ್ರಿವಾಂಡ್ರಂ, ಸಿಲೋನ್, ಈ ಮೊದಲಾದ ಸ್ಥಳಗಳನ್ನು ನೋಡಿಬರುವುದಕ್ಕಾಗಿ ಪ್ರಯಾಣಮಾಡಿದಾರೆ

❦❦❦

ಬೊಂಬಾಯಿ ಪಟ್ಟಣದ ಮದನ್‌ಗಾನ್ ಎಂಬ ಮೊಹಲ್ಲೆಯಲ್ಲಿ ಮೂರು ಮಂದಿ ಪಠಾಣರು ಮೂರು ಮಾರವಾಡಿ ಅಂಗಡಿಗಳಿಗೆ ನುಗ್ಗಿ ಸುಮಾರು ೬,೦೦೦ ರೂಪಾಯಿನ ನಾಣ್ಯವನ್ನು ಅಪಹರಿಸಿದ್ದಲ್ಲದೆ ಇಬ್ಬರು ಮಾರವಾಡಿಗಳನ್ನು ಚಾಕುವಿನಿಂದ ತಿವಿದು ಘೋರಾ ಗಾಯಮಾಡಿ ಹೋದರು. ಈಗ ಪೋಲೀಸಿನವರು ಅವರನ್ನು ಹಿಡಿದು ಇರುತ್ತಾರೆ ಅವರ ಬಳಿ ಸುಮಾರು ೨,೫೦೦ ರೂಪಾಯಿ ಸಿಕ್ಕಿರುತ್ತದೆ.

❦❦❦

ಸಂಯುಕ್ತ ಅಧಿಪತ್ಯಗಳ ಲೆಫ್ಟಿನೆಂಟ್ ಗವರ್ನರವರು ಕಳೆದ ವಾರ ಆಗ್ರಾ ಪಟ್ಟಣದ ವಿದ್ಯಾಶಾಲೆಗೆ ಸಂಬಂಧಪಟ್ಟ ಹೊಸ ವಿದ್ಯಾರ್ಥಿ ನಿಲಯವನ್ನು ಪ್ರತಿಷ್ಠೆ ಮಾಡಿದರು. ಈ ಕಟ್ಟಡಕ್ಕೆ ಬಡಬಗ್ಗರೂ ಕೂಡ ಚಂದಾ ಕೊಟ್ಟಿರುವುದನ್ನು ನೋಡಿ ಲೆಫ್ಟಿನೆಂಟ್ ಗವರ್ನರವರು ತುಂಬಾ ಸಂತೋಷಪಟ್ಟು, ವಿದ್ಯಾರ್ಥಿನಿಲಯಗಳಿಂದ ಆಗತಕ್ಕ ಪ್ರಯೋಜನಾಂಶವನ್ನು ಸಕಲರೂ ತಿಳಿಯುತ್ತಾ ಬಂದಿರುವುದು ಶ್ರೇಯಸ್ಕರವಾದದ್ದೆಂದು ತಿಳಿಸಿದರು.

❦❦❦

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಸಾವಂತವಾಡಿಯಲ್ಲಿ "ಸ್ವದೇಶಿ ವಿಜಯ" ವೆಂಬ ಪತ್ರಿಕೆಯಲ್ಲಿ ಈ ಸಲ ಸೂರತಿನಲ್ಲಿ ನಡಿಯಬೇಕಾಗಿದ್ದ ಕಾಂಗ್ರೆಸ್ ಮಹಾ ಸಭೆಯ ಗಲಭೆಯಲ್ಲಿ ಪರಿಣಮವಾದದ್ದಕ್ಕೆ ಮೆ|| ತಿಲಕರೇ ಕಾರಣರೆಂದು ಅವರನ್ನು ದೂಷಿಸಿ ಒಂದು ವಾರ್ತೆಯು ಪ್ರಕಟವಾಯಿತು ಇದನ್ನು ನೋಡಿ ಅಲ್ಲಿನ ಜನರೆಲ್ಲಾ ಆ ಪತ್ರಿಕೆಯ ಮೇಲೆ ಆಗ್ರಹಪಟ್ಟು, ಯಾರೂ ಅದನ್ನು ಓದಕೂಡದೆಂದು ಕಟ್ಟು ಮಾಡಿಕೊಂಡಿದಾರೆಂದು ತಿಳಿದುಬಂದಿದೆ

❦❦❦

ಕಲ್ಕತ್ತಾ ಪಟ್ಟಣದಲ್ಲಿ ಪ್ರಕಟವಾಗುವ "ಯುಗಾಂತರ" ವೆಂಬ ವರ್ತಮಾನ ಪತ್ರಿಕೆಯಲ್ಲಿ ರಾಜದ್ರೋಹಕರವಾದ ವಾರ್ತೆಗಳನ್ನು ಬರೆದರೆಂದು ಅದನ್ನು ಪ್ರಿಂಟು ಮಾಡಿದ ವೈಕುಂಠನಾಥ ಆಚಾರ್ಯ ಎಂಬವರನ್ನು ಸರ್ಕಾರದವರು ದಸ್ತಗಿರಿ ಮಾಡಬೇಕೆಂದು ವಾರಂಟು ಕಳುಹಿಸಿದರು ಕೆಲವು ಕಾಲ ಅವರು ವಾರಂಟಿಗೆ ಸಿಕ್ಕದೆ ಇದ್ದು, ಕಳೆದ ವಾರ ತಾವಾಗಿಯೇ ಹೋಗಿ ಪೋಲೀಸಿನವರ ವಶವರ್ತಿಗಳಾದರು ಮ್ಯಾಜಿಸ್ಟ್ರೇಟರು ಅವರನ್ನು ದರ್ಯಾಪ್ತು ಮಾಡುತ್ತಿದಾರೆ

❦❦❦

ಸದ್ಯ ಹಿಂದುಸ್ಥಾನದಲ್ಲಿ ಪ್ಲೇಗ್ ಮರಣಗಳ ಸಂಖ್ಯೆಯು ಕಡಮೆಯಾಗುತ್ತಿದೆ. ಕಳೆದ ವಾರ ೨,೬೧೮ ಜನರು ಈ ಉಪದ್ರವಕ್ಕೆ ಗುರಿಯಾದರು. ಈ ಪೈಕಿ ಬೊಂಬಾಯಿ ೫೮, ಸಂಯುಕ್ತ ಅಧಿಪತ್ಯಗಳು ೫೧೧, ಬಂಗಾಳಾ ೩೫೪, ಮಧ್ಯ ಪ್ರಾಂತ್ಯಗಳು ಮತ್ತು ಬೇರಾರ್ ೨೬೨೦, ಪಂಜಾಬ್ ೨೧೧, ಮದರಾಸ್ ಅಧಿಪತ್ಯ ೧೩೮, ಬರ್ಮಾ ೧೧೬, ರಾಜಪುಟಾನಾ ೮೪, ಹೈದರಾಬಾದ್ ಸಂಸ್ಥಾನ ೬೦, ವಾಯವ್ಯ ಸರಹದ್ದಿನ ಪ್ರಾಂತ್ಯ ೧೪, ಮಧ್ಯ ಇಂಡಿಯಾ ೧೦

❦❦❦

ಬರ್ಮಾ ಅಧಿಪತ್ಯದಲ್ಲಿ ಹಿಂದಿನ ವರುಷ ೩,೬೯೦ ಜನರಿಗೆ ಪ್ಲೇಗ್ ಉಪದ್ರ ತಗಲಿತು ಹೋದ ವರುಷ ೮,೬೩೭ ಜನರಿಗೆ ತಗಲಿತು ಗವರ್ನಮೆಂಟಿನವರು ಇಲಿ ಹೆಗ್ಗಣಗಳನ್ನು ಕೊಲ್ಲುವುದಕ್ಕೆ ಎರಡೂವರೆ ಲಕ್ಷ ರೂಪಾಯಿ ಖರ್ಚುಮಾಡಿದಾಗ್ಯೂ, ಅವುಗಳ ಸಂಖ್ಯೆಯೇನೋ ಇನ್ನೂ ವಿಶೇಷವಾಗಿಯೇ ಇದೆ ಪ್ಲೇಗ್ ಉಪದ್ರವನ್ನು ತಪ್ಪಿಸುವುದಕ್ಕೆ ಮಾಡಿದ ಏರ್ಪಾಡುಗಳಿಗೆ ಹಿಂದಿನ ವರುಷ ೩ ಲಕ್ಷವೂ ೬೭ ಸಾವಿರ ರೂಪಾಯಿಯೂ, ಕಳೆದ ವರುಷ ೪ ಲಕ್ಷವೂ ೫೦ ಸಾವಿರ ರೂಪಾಯಿಯೂ ಖರ್ಚಾಗಿರುತ್ತದೆ.

❦❦❦

ಗೋಲಂಡೋ ರೈಲ್ವೆ ಸ್ಟೇಷನ್ನಲ್ಲಿ ಗುಂಡಿನೇಟು ಬಿದ್ದು ಗಾಯಪಟ್ಟು, ಕಲ್ಕತ್ತಾ ಪಟ್ಟಣದ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವ ಮೆ|| ಬಿ ಸಿ ಅಲ್ಲೆನ್ ಎಂಬ ಕಲೆಕ್ಟರವರಿಗೆ ಈಚೆಗೆ ಸ್ವಲ್ಪ ಗುಣವಾಗುತ್ತಾ ಬಂದಿದೆ ಎಂತಲೂ, ಆದರೆ ಈಗಲೂ ಸಾಯಂಕಾಲವಾಗುತ್ತಲೇ ಸ್ವಲ್ಪ ಜ್ವರ ಬರುತ್ತಿದೆ ಎಂತಲೂ ತಂತೀ ವರ್ತಮಾನ ಬಂದಿದೆ ಸರ್ಕಾರದವರು ೧೦ ಸಾವಿರ ರೂಪಾಯಿ ಬಹುಮಾನ ಕೊಡುತ್ತೇವೆಂದು ಇಷ್ತಿಹಾರು ಕೊಟ್ಟಿದ್ದರೂ, ಗುಂಡು ಹೊಡೆದವರು ಇಂಥವರೆಂದು ಇನ್ನೂ ಪತ್ತೆ ಆಗಿ ಇಲ್ಲ.

❦❦❦

ಕೊಯಮುತ್ತೂರಿನಲ್ಲಿ ಗವರ್ನಮೆಂಟಿನವರು ವ್ಯವಸಾಯಾಭಿವೃದ್ಧಿ ಮಾಡುವುದಕ್ಕೆ ಒಂದು ವಿದ್ಯಾಶಾಲೆಯನ್ನು ಕಟ್ಟಿಸಿರುತ್ತಾರೆ ವ್ಯವಸಾಯ ಶಾಸ್ತ್ರಬೋಧಕರಾದ ಮೆ|| ಕ್ಯಾರಿರ್ಸ್ ಎಂಬ ಮುಖ್ಯೋಪಾಧ್ಯಾಯರು ಅಲ್ಲಿ ವಾಸಮಾಡುತ್ತಾ, ತಮಗೆ ಅವಶ್ಯವಾದ ರೀತಿಯಲ್ಲಿ ಪಾಠಶಾಲೆಯ ಕಟ್ಟಡಗಳನ್ನು ತಯಾರ್ಮಾಡಿಸುತ್ತಿದಾರೆ. ಈ ಶಾಲೆಗೆ ೨೦೦ ಮಂದಿ ಯೌವನಸ್ಥರು ಆ ವಿದ್ಯಾಶಾಲೆಗೆ ಸೇರಬೇಕೆಂದು ಅರ್ಜಿ ಬರೆದುಕೊಂಡಿರುವಹಾಗ್ಯೂ, ಸರ್ಕಾರದವರು ಮೊದಲು ೨೦ ಮಂದಿಯನ್ನು ಮಾತ್ರ ಆರಿಸಿಕೊಳ್ಳುವರೆಂತಲೂ ತಿಳಿಯುತ್ತದೆ.

❦❦❦

ಈ ಸಲ ಸೂರತ್ತಿನಲ್ಲಿ ಕಾಂಗ್ರೆಸ್ ಮಹಾ ಸಭೆಯು ನಡಿಯುವುದಕ್ಕಾಗಿ ಅಲ್ಲಿನ ಜನರು ತುಂಬಾ ಹಣ ಖರ್ಚುಮಾಡಿ, ಅನೇಕ ಏರ್ಪಾಡುಗಳನ್ನೂ ವಸತಿಗಳನ್ನೂ ಕಲ್ಪಿಸಿದ್ದರು. ಆದರೆ ಮಹಾ ಸಭೆಯಲ್ಲಿ ದಗಳೆಗಳು ಹುಟ್ಟಿ ಕಲಹದಲ್ಲೇ ಪರಿಣಮವಾದದ್ದರಿಂದ ಮುಂದಿನ ವರುಷ ಅಂದರೆ ೧೯೦೮ನೇ ಡಿಸೆಂಬರ್ ಕಡೇ ವಾರದಲ್ಲಿ ನಡಿಯಬೇಕಾದ ಕಾಂಗ್ರೆಸ್ ಸಭೆಯನ್ನು ಮತ್ತೆ ಸೂರತ್ತಿನಲ್ಲೇ ಕೂಡಿಸಬೇಕೆಂದು ಅಲ್ಲಿನ ಪ್ರಜಾ ಮುಖಂಡರು ಅಪೇಕ್ಷಿಸುತ್ತಾರೆ ಎಂಬದಾಗಿ ಡಾಕ್ಟರ್ ರಾಷ್ ಬಿಹಾರಿ ಘೋಸ್ ಯವರು ಪ್ರಕಟಿಸಿರುವರು.

❦❦❦

ಹಿಂದೂಸ್ಥಾನದ ಕೆಲವು ಭಾಗಗಳಲ್ಲಿ ಪ್ರಜೆಗಳು ಕ್ಷಾಮ ಪೀಡಿತರಾಗಿರುವುದನ್ನು ನೋಡಿ, ಸಾಲ್ವೇಷನ್ ಆರ್ಮಿ ಎಂಬ ವಿಮುಕ್ತಿ ಸಂಘದವರು ಕ್ಷಾಮ ನಿವಾರಣೆಗೋಸ್ಕರ ಒಂದು ಫಂಡನ್ನು ಸ್ಥಾಪನೆಮಾಡಿ ಚಂದಾ ಕೂಡಿಸುತ್ತಿದಾರೆ. ಈ ಫಂಡಿನ ಹಣವನ್ನು ಅವರು ದರ್ಮ ಕೊಡುವುದಕ್ಕೆ ವಿನಿಯೋಗಿಸುವುದಿಲ್ಲ. ಆ ಹಣದಲ್ಲಿ ಧಾನ್ಯವನ್ನು ಕೊಂಡು ಅಗ್ಗವಾಗಿ ವಿಕರಿ ಮಾಡುವರು. ಬೇಕಾದವರಿಗೆ ಸಾಲ ಕೊಡುವರು ಮತ್ತು ಅಂಥಾ ಕ್ಷಾಮ ಪೀಡಿತವಾದ ಪ್ರದೇಶದಿಂದ ಜನರು ಇತರ ಕಡೆಗಳಿಗೆ ಹೋಗುವುದಕ್ಕೆ ಅವರ ಪ್ರಯಾಣದ ಖರ್ಚಿಗೂ ವಿನಿಯೋಗಿಸುವರು

❦❦❦

ಅಫ್ಘಾನಿಸ್ಥಾನದ ಅಮೀರರವರು ಒಂದೆರಡು ತಿಂಗಳೊಳಗಾಗಿ ಕಾಬೂಲಿನಿಂದ ಹೊರಟು ಕಾಂದಹಾರ್ ಪ್ರಾಂತ್ಯದಲ್ಲಿ ಸಂಚಾರ ಮಾಡಿಕೊಂಡು, ಅಲ್ಲಿಂದ ಹಾಗೇ ನೆಟ್ಟಗೆ ವಿಲಾಯತಿಗೆ ಪ್ರಯಾಣ ಮಾಡುವರೆಂತಲೂ, ಇದಕ್ಕಾಗಿ ಅವರು ಸಿದ್ಧಪಡಿಸಿಕೊಳ್ಳುತ್ತಿದಾರೆಂತಲೂ, ಅವರ ಕೂಡ ಸರ್ ಹೆನ್ರಿ ಮೆಕ್‌ಮೋಹನ್‌ರವರು ಹೋಗುತ್ತಾರೆಂತಲೂ, ಇವರು ವಾಪಸು ಬರುವ ತನಕ ಮೆ|| ವಿಲ್ಲಿಯಂಸ್ ಯವರು ಕಾಬೂಲ್ ಪಟ್ಟಣದಲ್ಲಿ ಹೋಗಿರುತ್ತಾರೆಂತಲೂ ಕೇಳಿದು ಬಂದಿದೆ. ಮೆ|| ವಿಲ್ಲಿಯಂಸ್ ಯವರು ಕೆಲವು ತಿಂಗಳ ಹಿಂದೆ ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟರಾಗಿದ್ದು, ಈಗ ನೇಪಾಳ ಸಂಸ್ಥಾನದಲ್ಲಿರುತ್ತಾರೆ

❦❦❦

ಮದರಾಸ್ ಅಧಿಪತ್ಯದ ಗವರ್ನರಾದ ಸರ್ ಆರ್ಥರ್ ಲಾಲಿ ಯವರು ಫೆಬ್ರುವರಿ ೨ಕ್ಕೆ ಮದರಾಸನ್ನು ಬಿಟ್ಟು ತಿರುಪತಿಗೆ ಹೋಗಿ, ೯. ೪ ರಲ್ಲಿ ಚಿತ್ತೂರಿನಿಂದ ಮಚಲೀಬಂದರಿಗೆ ಹಾಕಿರುವ ರೈಲ್ ರಸ್ತೆಯನ್ನು ಪ್ರತಿಷ್ಠೆಮಾಡಿ ಗಾಡಿಗಳನ್ನು ಬಿಡುವಂತೆ ಪ್ರಾರಂಭಮಾಡುವರು. ಅಲ್ಲಿಂದ ನೆಲ್ಲೂರಿಗೆ ಹೋಗಿ ಒಂದು ದಿನ ಇದ್ದು ತಾ ೭ಕ್ಕೆ ವಾಪಸು ಮದರಾಸಿಗೆ ಬರುತ್ತಾರೆ ತರುವಾಯ ಗವರ್ನರವರು ತಾ. ೧೯ ರಲ್ಲಿ ಮದರಾಸಿನಿಂದ ತಂಜಾವೂರಿಗೆ ಹೋಗಿ ಅಲ್ಲಿ ೫ ದಿನ ಇದ್ದು ಅಲ್ಲಿಂದ ೨೬ನೆ ತಾ ಒಳಗಾಗಿ ನಾಗಪಟ್ಟಣಕ್ಕೂ ಕುಂಭಕೋಣಕ್ಕೂ ಹೋಗಿ ಅಲ್ಲಿ ಎಲ್ಲವನ್ನೂ ಅವಲೋಕಿಸಿ ಮಾಡಿಕೊಂಡು, ತಾ ೨೭ರಲ್ಲಿ ಮದರಾಸಿಗೆ ವಾಪಸು ಬರುವವರಾಗಿದಾರೆಂದು ಪ್ರಕಟವಾಗಿದೆ.

❦❦❦

ಕಳೆದ ೧೯೦೭ನೇ ವರುಷಾರಂಭದಲ್ಲಿ ವಿಲಾಯತಿಯ ಚಕ್ರವರ್ತಿ ಸಾರ್ವಭೌಮರವರು ರಾಂಪುರದ ನವಾಬರವರಿಗೆ ಜಿ ಸಿ ಎಸ್ ಐ ಎಂಬ ಅತ್ಯಂತ ಘನ ಯುಕ್ತವಾದ ಬಿರುದನ್ನು ದಯಪಾಲಿಸಿದರು ಇವರು ಈ ವರುಷದ ಆರಂಭದಿಂದಲೂ ತಮ್ಮ ಸಂಸ್ಥಾನದಲ್ಲಿ ಕವಿಗಳನ್ನು ತಮ್ಮ ಆಸ್ಥಾನಕ್ಕೆ ಬರಮಾಡಿಕೊಂಡು, ಅವರಿಗೆ ವಿಶೇಷವಾದ ಬಹುಮಾನಗಳನ್ನು ಕೊಟ್ಟು ಸಂರಕ್ಷಣೆ ಮಾಡುತ್ತಿದಾರೆ ಹಿಂದುಸ್ಥಾನದ ಎಲ್ಲಾ ಕಡೆಗಳಿಂದಲೂ ಸುಮಾರು ೨೦೦ ಮಂದಿ ಕವಿಗಳು ಅಲ್ಲಿ ಹೋಗಿ ಪ್ರತಿ ದಿನವೂ ನಡಿಯುವ ದರ್ಬಾರಿನಲ್ಲಿ ತಮ್ಮ ಕವನಗಳನ್ನು ನವಾಬರವರ ಆಸ್ಥಾನದಲ್ಲಿ ಹೇಳಿ ವಿವರಿಸುತ್ತಿದಾರೆ ನವಾಬರವರೂ ಕವನ ಮಾಡುವುದರಲ್ಲಿ ಗಟ್ಟಿಗರಾದದ್ದರಿಂದ ಆಸ್ಥಾನದಲ್ಲಿ ಅವರ ಕವನಗಳೂ ಆಗಾಗ್ಗೆ ಓದಲ್ಪಡುವವು.

❦❦❦

ಎಟ್ಟಾವಾ ನಗರದ ಅಲ್ ಬಷೀರ್ ಎಂಬ ಪತ್ರಿಕೆಯು ತಿಳಿಸುವುದೇನೆಂದರೆ.—ಕೆಲವು ಕಾಲದಿಂದಲೂ ಇಲ್ಲಿನ ರಜಪೂತ್ ಮುಸಲ್ಮಾನರು ಲೇವಾದೇವಿಯಿಂದಲೇ ಜೀವಿಸುತ್ತಾ ತುಂಬಾ ಹಣಗಾರರಾಗಿದಾರೆ ಆದರೆ ಮಹಮದೀಯರ ಧರ್ಮಶಾಸ್ತ್ರವನ್ನು ನೋಡಿದಲ್ಲಿ ಆ ಜನರು ಹಣಕ್ಕೆ ಬಡ್ಡಿಯನ್ನು ವಸೂಲ್ಮಾಡಲೇ ಕೂಡದಾಗಿದೆ, ಒಬ್ಬ ನೊಬ್ಬ ಮೌಲ್ವಿ ಎಂಬ ಮುಸಲ್ಮಾನರ ಗುರುವು ಆ ಜನರಿಗೆ ಮೇಲ್ಕಂಡ ರೀತಿ ಬಡ್ಡಿ ತೆಗೆದುಕೊಂಡು ಜೀವಿಸುವುದು ತರವಲ್ಲವೆಂತಲೂ, ಆ ಜೀವನವನ್ನೇ ಬಿಟ್ಟುಬಿಡಬೇಕೆಂತಲೂ ಬೋಧನೆ ಮಾಡುತ್ತಾ ಬಂದನು ಲೇವಾದೇವಿ ಮಾಡುತ್ತಿದ್ದ ಆ ಮುಸಲ್ಮಾನರು ಆ ಕಸಬು ಬಿಟ್ಟರೆ ತಮ್ಮ ಜೀವನವೇ ಹಾಳಾಗುತ್ತದೆಂದು ಊಹಿಸಿ, ಮುಸಲ್ಮಾನ ಮತವನ್ನು ತ್ಯಜಿಸಿ ಹಿಂದೂಗಳಾಗುತ್ತಿದಾರೆ ಎಂಬುದೇ.

❦❦❦

ಆಗ್ರಾ ಪಟ್ಟಣದಲ್ಲಿ ದೇಶೀಯ ವರ್ತಕರು ಕಷ್ಟಪಡದೆ ಬಹು ಬೇಗ ಐಶ್ವರ್ಯವನ್ನು ಸಂಪಾದನೆ ಮಾಡಬೇಕೆಂದು ಧಾನ್ಯಗಳ, ಬೆಳ್ಳಿಯ, ಅಫೀಮಿನ ಬೆಲೆಯ ವಿಷಯದಲ್ಲಿ ಜೂಜಾಟವಾಡುತ್ತಾ ಬಂದಿದಾರೆ ಕೆಲವರು ಈ ಜೂಜಾಟದಲ್ಲಿ ಐಶ್ವರ್ಯ ಸಂಪಾದನೆ ಮಾಡಿದರೂ ಅದೇ ಜೂಜಾಟದಲ್ಲಿ ಕಳೆದುಕೊಂಡು ನಿರ್ಗತಿಕರಾಗಿರುತ್ತಾರೆ. ಈ ದುಷ್ಟ ಪದ್ಧತಿಯನ್ನು ಗವರ್ನಮೆಂಟಿನವರು ಕಾನೂನು ಮಾಡಿ ನಿಲ್ಲಿಸಬಾರದೇ ಎಂದು ಬಹು ಜನರು ಗೊಣಗುಡುತ್ತಿದ್ದದ್ದನ್ನು ಗವರ್ನರವರು ಕೇಳಿ ಒಂದು ಸೇತುವೆಯನ್ನು ಪ್ರತಿಷ್ಠೆ ಮಾಡುವ ಸಂದರ್ಭದಲ್ಲಿ ಕಳೆದ ವಾರ ಮೇಲ್ಕಂಡ ಜೂಜಾಟವನ್ನು ಕುರಿತು ವರ್ತಕರಿಗೆಲ್ಲಾ ನಾಚಿಕೆ ಹುಟ್ಟಿ ಆ ಪದ್ಧತಿಯನ್ನು ತ್ಯಜಿಸುವಂತೆ ಬಹು ಕಠಿಣವಾದ ಉಪನ್ಯಾಸ ಮಾಡಿದರು ಕಾನೂನು ಮಾಡುವುದು ಸರ್ಕಾರದವರಿಂದ ಆಗದ ಕಾರ್ಯವಲ್ಲ. ಆದರೆ ವರ್ತಕರು ವಿವೇಕ ತಂದುಕೊಂಡು ನ್ಯಾಯವೂ ಧರ್ಮವೂ ಆದ ಮಾರ್ಗವನ್ನು ಅವಲಂಬಿಸಿ ವ್ಯಾಪಾರ ನಡಿಸುವುದು ಅವಶ್ಯವಾಗಿದೆ ಹೀಗೆ ಮಾಡದಿದ್ದರೆ ಈ ರಾಷ್ಟ್ರದ ವ್ಯಾಪಾರವೂ ಐಶ್ವರ್ಯವೂ ತಲೆಯೆತ್ತಲಾರವೆಂದು ಖಂಡಿತವಾಗಿ ಹೇಳಬಹುದು ಎಂದು ತಿಳಿಸಿದರು

ವಿದೇಶ ವರ್ತಮಾನಗಳು.

ಅಮೇರಿಕದಲ್ಲಿರುವ ಮಿಸೆಸ್ ಎಡ್ಡೀ ಎಂಬ ಪ್ರಖ್ಯಾತಳು ೩೦ ವರ್ಷಗಳ ಒಳಗೆ ಧರ್ಮಕಾರ್ಯಗಳಿಗೆ ೭೦ ಲಕ್ಷ ರೂಪಾಯಿ ವಿನಿಯೋಗಿಸಿದ್ದಳು. ಈಗ ಮತ್ತೆ ಬಡ ಬಗ್ಗರಿಗಾಗಿಯೂ ಪ್ರಜಾಪಾಲನೆಕ್ಕೆ ಅನ್ವಯಿಸುವ ಕೆಲಸಗಳಿಗಾಗಿಯೂ ೬ ಲಕ್ಷ ರೂಪಾಯಿ ಕೊಟ್ಟಿರುತ್ತಾಳೆ

❦❦❦

ವಿಲಾಯತಿಯಲ್ಲಿ ಕಳೆದ ವಾರ ಕಾಲವಾದ ಮಿಸೆಸ್ ಬಯಸೆ ಎಂಬಾಕೆಯು ಬರೆದುಕೊಟ್ಟಿರುವ ಮರಣಶಾಸನದ ಪ್ರಕಾರ ಆಕೆ ಆಸ್ತಿಯೆಲ್ಲಾ ಅಂದರೆ ಸುಮಾರು ೬೦ ಲಕ್ಷ ರೂಪಾಯಿ ಕೇಂಬ್ರಿಜ್ ಪಟ್ಟಣದಲ್ಲಿರುವ ಟ್ರಿನಿಟಿ ಎಂಬ ವಿದ್ಯಾಶಾಲೆಯ ಮೂಲಧನ ಸೇರತಕ್ಕದ್ದಾಗಿದೆ

❦❦❦

ಚೀನಾ ಚಕ್ರಾಧಿಪತ್ಯಕ್ಕೆ ಚೇಕಿಯಾಂಗ್ ಎಂಬ ಅಧಿಪತ್ಯದೊಳಗೆ ಮಂಗೋಲಿಯರು ಕಾಷಿಂಗ್ ಎಂಬ ಪಟ್ಟಣದ ಬಳಿ ಒಂದು ಫ್ರೆಂಚ್ ಸರ್ಕಾರಿ ಬಂಗಲೆಯನ್ನೂ ಕ್ರೈಸ್ತರ ದೇವಸ್ಥಾನ ಪಾಠಶಾಲೆಗಳನ್ನೂ ಕೆಡಹಿ ಸುಟ್ಟುಬಿಟ್ಟರೆಂತಲೂ, ಆದರೆ ಪರರಾಜ್ಯಗಳವರಿಗೆ ತೊಂದರೆ ಏನೂ ಸಂಭವಿಸಲಿಲ್ಲವೆಂತಲೂ ತಂತೀವರ್ತಮಾನ ಬಂದಿದೆ

❦❦❦

ಐರ್ಲಾಂಡಿನ ಮುಖ್ಯ ಪಟ್ಟಣವಾದ ಡಬ್ಲಿನ್ ನಗರದ ಅರಮನೆಯೊಳಗೆ ಕಳೆದ ಜೂಲೈ ತಿಂಗಳಲ್ಲಿ ಕೆಲವು ಅಮೂಲ್ಯವಾದ ವಜ್ರಾಭರಣಾದಿಗಳೂ ಕಳವಾದವು ಅದನ್ನು ಪತ್ತೆಮಾಡುವುದಕ್ಕೋಸ್ಕರ ಇಂಗ್ಲಿಷ್ ಗವರ್ನಮೆಂಟಿನವರು ಕೆಲವು ದೊಡ್ಡ ಮನುಷ್ಯರನ್ನು ಕೂಡಿಸಿ, ಪಂಚಾಯಿತಿ ಕೋರ್ಟನ್ನು ಸ್ಥಾಪಿಸಿ, ತನಿಖೆ ಮಾಡಿದಾರೆ

❦❦❦

ರಷ್ಯಾ ರಾಜ್ಯದವರು ಮಧ್ಯ ಏಷ್ಯಾದಲ್ಲಿ ಹಾಕಿರುವ ರಸ್ತೆಯನ್ನು ಉದ್ದಾನಮಾಡಿ, ಹಿಂದುಸ್ಥಾನದ ತನಕ ತಂದುಬಿಡಬೇಕೆಂದು ಗೊತ್ತುಮಾಡುವುದರಲ್ಲಿದಾರೆ. ಹಿಂದುಸ್ಥಾನದ ಸರಹದ್ದಿನಲ್ಲಿರತಕ್ಕ ಹೊಸ ಚಾಮನ್ ಎಂಬ ಸ್ಟೇಷನ್ನಿಗೂ ದೇಶದ ಬೊಂಬಾಯಿನ ಆಚೆ ಇರುವ ಕರಾಚಿ ಪಟ್ಟಣಕ್ಕೂ ಆ ರೈಲು ತಂದು ಸೇರಿಸಬೇಕೆಂದಿದಾರೆ ಈ ರೈಲ್ ರಸ್ತೆಯು ಸಿದ್ಧವಾದ ಪಕ್ಷದಲ್ಲಿ ಲಂಡನ್ನಿನಿಂದ ಕಲ್ಕತ್ತೆಗೆ ಹಿಂಬತ್ತು ದಿನಗಳಲ್ಲಿ ಬಂದುಬಿಡುವಂತೆ ಆಗುವುದು ಈಗ ೧೮ ದಿನ ಹಿಡಿಯುತ್ತದೆ.

ಯುತಿಯಲ್ಲಿ ಎರಡು ಮೂರು ವಾರಗಳ ಹಿಂದೆ ಬಿಸಿಲಿನ ತಾಪ ಸೆಕೆಯೂ ಅಪಾರವಾಗಿ ಅನೇಕ ಕಷ್ಟಸಂಕಟಗಳುಂಟಾದವು ಜನರು ಬಿಸಿಲಿನ ಉಗ್ರತೆಯನ್ನು ಸಹಿಸಲಾರದೆ ಸೊರಗಿಬಿದ್ದರೆಂ ಈ ಸ್ಥಿತಿ ಪಲವರು ಹಾಗೇ ಪ್ರಾಣಬಿಟ್ಟರೆಂತಲೂ ತಂತೀ ಸಮಾಚಾರ ಬಂದಿತ್ತು. ಈವಿಗೆ ಈ ಬಿಸಿಲ ಬೇಗೆಯು ಇದ್ದಕ್ಕಿದ್ದ ಹಾಗೆ ಶೀತಗಾಳಿಯೂ, ಅಪಾರವಾದ ಮಂಜಿನೊಡನೆ ಕೂಡಿದ ಮಳೆಯೂ ಪ್ರಾಪ್ತವಾದವೆಂತಲೂ, ಇದರ ದೆಸೆಯಿಂದ ಹದಿನಾಲ್ಕು ಸಮುದ್ರತೀರಗಳೊಳಗಿದ್ದ ಹಡಗುಗಳೂ ಭಾರೀ ದೋಣಿಗಳೂ ಒಡೆದು ಹಾಳಾದವೆಂತಲೂ, ತಂತೀ ವರ್ತಮಾನಗಳು ಹೋಗಿ ಬರುವುದು ಕೂಡ ನಿಂತುಹೋಯಿತೆಂತಲೂ ತಿಳಿದು ಬಂದಿದೆ.

* * *

ಲಂಡನ್ ಪಟ್ಟಣದ ಸಳ್ಳೀ ಮಠಗಳಲ್ಲಿ ಓದತಕ್ಕ ಗಂಡು ಹೆಣ್ಣು ಮಕ್ಕಳ ಸ್ಥಿತಿ ಬಹು ಮಂದಿಗೆ ಸರಿಯಾದ ಆಹಾರ ಸಿಕ್ಕುವುದು ತುಂಬಾ ಕಷ್ಟವಾಗಿದೆ ಎಂಬ ಸಂಗತಿಯು ಅಲ್ಲಿನ ಕೆಲವು ಪ್ರಜಾವತ್ಸಲರಿಗೆ ತಿಳಿದು ಬಂದಿದೆ. ಸರ್ಕಾರದವರು ಇದಕ್ಕಾಗಿ ಒಂದು ತೆರಿಗೆಯನ್ನು ಪ್ರಜೆಗಳಿಂದ ವಸೂಲ್ಮಾಡಿಸಿ, ಅಂಥಾ ಬಡ ಮಕ್ಕಳಿಗೆ ಆಹಾರವ ಕೊಡಿಸಬೇಕೆಂದು ಯೋಚಿಸಿರುತ್ತಾರೆ. ಆದರೆ ಈ ಹೊಸ ತೆರಿಗೆ ಹಾಕುವುದಕ್ಕೆ ಪ್ರತಿಯಾಗಿ ಒಂದು ಧರ್ಮ ಫಂಡನ್ನು ಕೂಡಿಸುವುದು ಒಳ್ಳೇದಾಗುವುದು ಎಂದು ಸೆಲ್ಲಂಡ ಪ್ರಜಾವತ್ಸಲರು ಪ್ರಕಟಪಡಿಸಿರುವರು. ಈ ಫಂಡಿಗೆ ಮೂರು ಲಕ್ಷ ರೂಪಾಯಿ ಬೇಕಾಗಿರುವುದೆಂತಲೂ ಇದುವರೆಗೆ ೧,೫೦,೦೦೦ ರೂ ವಸೂಲಾಗಿದೆ ಎಂತಲೂ ತಿಳಿಸಿರುವರು.

* * *

ನಿಯಾರ್ಕಿನಲ್ಲಿರುವ ಮಿ॥ ವ್ಯಾಸ್ಕಲೀರ್ ಎಂಬ ಯಂತ್ರಿಕೆಗಾರನು ಬಹು ಆಶ್ಚರ್ಯಕರವಾದ ಆಟಗಳನ್ನು ತೋರಿಸುತ್ತಾನೆ. ಹಗ್ಗವನ್ನು ಊರ್ಧ್ವಕ್ಕೆ ಕಟ್ಟಿ, ಅದರ ಮೇಲೆ ಒಬ್ಬ ಹುಡುಗನನ್ನು ಎಲ್ಲರೂ ನೋಡುವಂತೆ ಹತ್ತಿಸಿ ನಿಲ್ಲಿಸುತ್ತಾನೆ. ಹಾಗೇ ಹುಡುಗನು ಮಾಯವಾಗುವಂತೆಯೂ ಮಾಡಬಲ್ಲನು. ಆದರೆ ಹಗ್ಗವನ್ನು ಆಕಾಶದಲ್ಲಿ ಎಸೆದು ಆಧಾರವಿಲ್ಲದೆ ಊರ್ಧ್ವಕ್ಕೆ ನಿಲ್ಲಿಸುವುದೂ, ಅಡ್ಡಲಾಗಿ ನಿಲ್ಲಿಸುವುದೂ, ಅದರ ಮೇಲೆ ಹುಡುಗನು ಹತ್ತಿಹೋಗುವಂತೆ ಮಾಡುವುದೂ, ಇವೆ ಅವನಿಗೆ ತಿಳಿಯದು. ಇಂಥಾ ಯಂತ್ರೀಕ ವಿದ್ಯೆಯು ಹಿಂದುಸ್ಥಾನದವರು ಕಲಿತು ಮಾಡುತ್ತಾರೆಂದು ಆತನಿಗೆ ತಿಳಿದಿದೆ. ಇಂಥವರನ್ನು ತನ್ನ ಜೊತೆಗೆ ಸೇರಿಸಿಕೊಳ್ಳಬೇಕೆಂದು ಯೋಚಿಸಿ, ಸಿಕ್ಕಿದರೆ ಅವರಿಗೆ ವರುಷಕ್ಕೆ ೭೫ ಸಾವಿರ ರೂಪಾಯಿನಂತೆ ಕೊಡುವೆನೆಂದು ಹೇಳಿ ಪ್ರಕಟಿಸಿ ಹುಡುಕಿಸುತ್ತಿದ್ದರೂ ಇದುವರೆಗೆ ಒಬ್ಬರೂ ಸಿಕ್ಕಿ ಇಲ್ಲ.

* * *

ಉತ್ತರ ಅಮೇರಿಕಕ್ಕೆ ಸೇರಿದ ಸೀಟಲ್ ಎಂಬ ಪಟ್ಟಣದಲ್ಲಿ ಪ್ರಕಟವಾಗುವ ಒಂದು ವರ್ತಮಾನ ಪತ್ರಿಕೆಯು ಮುಂದಿನ ಸಂಗತಿಯನ್ನು ತಿಳಿಸುವುದು — "ಜರ್ಮ ರಾಜ್ಯದ ರಾಜಧಾನಿಯಾದ ಟೋಕಿಯೋ ನಗರದಿಂದ ನಾರದ ತಾಕಯಾಮಾ ಎಂಬೊಬ್ಬ ಜಪಾನೀ ಮನುಷ್ಯನು ಇಲ್ಲಿಗೆ ಬಂದಿರುತ್ತಾನೆ. ೧೦,೦೦೦ ಅಮೇರಿಕಾ ಯುವತಿಯನ್ನು ಜಪಾನ ರಾಜ್ಯಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಅವರಿಗೆ ಜಪಾನಿ ಭಾಷೆಯನ್ನು ಕಲಿಸಿ, ಜಪಾನ ಯುವಕರನ್ನು ಮದುವೆಮಾಡಿಕೊಳ್ಳುವಂತೆ ಮಾಡಬೇಕೆಂತಲೂ, ಅವರಿಗೆಲ್ಲಾ ಜಪಾನಿಗೆ ಹೋಗತಕ್ಕ ಪ್ರಯಾಣದ ಖರ್ಚನ್ನು ಕೊಡುವುದಾಗಿಯೂ, ಇದಲ್ಲದೆ ಜಪಾನ ರಾಜ್ಯದ ಕಾರ್ಯಸಮರ್ಥರಾದ ಯೌವನಸ್ಥರನ್ನು ಅಮೇರಿಕಕ್ಕೆ ಕಳುಹಿಸಿ, ಅಲ್ಲಿನ ಯುವತಿಯರನ್ನು ಮದುವೆಮಾಡಿಕೊಳ್ಳುವಂತೆ ಏರ್ಪಾಡು ಮಾಡುವುದಾಗಿಯೂ ತಿಳಿಸಿರುತ್ತಾನೆ. ಇದಕ್ಕೋಸ್ಕರ ಜಪಾನಿನಲ್ಲಿರುವ ಕೆಲವು ಶ್ರೇಷ್ಠಮನುಷ್ಯರೂ ಪ್ರಜೆಗಳ ಮುಖಂಡರೂ ಸೇರಿ ಒಂದು ಸಂಘವನ್ನು ಮಾಡಿಕೊಂಡು, ಬಹಳವಾಗಿ ಹಣವನ್ನು ಕೂಡಿಸಿರುತ್ತಾರೆಂಬುದಾಗಿಯೂ, ಹೀಗೆ ಅಮೇರಿಕದವರಿಗೂ ಜಪಾನಿನವರಿಗೂ ಹೆಣ್ಣುಕೊಟ್ಟು ತರುವುದು ರೂಢಿಗೆ ಬಂದಪಕ್ಷದಲ್ಲಿ ಒಳ್ಳೇ ಬಲಿಷ್ಠರೂ ದೀರ್ಘಾಯುಗಳೂ ಆದ ಮಕ್ಕಳು ಹುಟ್ಟುವುದಕ್ಕೂ ಉಭಯ ರಾಜ್ಯಗಳವರೂ ಅಭಿವೃದ್ಧಿ ಹೊಂದುವುದಕ್ಕೂ ವಿಶೇಷ ಪ್ರೋತ್ಸಾಹವಾಗುವುದೆಂಬುದಾಗಿಯೂ ನಾರದ ತಾಕಯಾಮಾ ಎಂಬ ಜಪಾನ ಮನುಷ್ಯನು ತಿಳಿಸುತ್ತಾನೆ ಎಂಬುದೇ."

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊಖಾಬ್ದಾರರಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್

ಹುಣಸೂರು ಜಟ್ಕಾ ಗಾಡಿಗಳು

ಸ್ವಾಮಿ,

ಹುಣಸೂರಿಂದ ಮೈಸೂರಿಗೂ ಮೈಸೂರಿಂದ ಹುಣಸೂರಿಗೂ ಜಟ್ಕಾ ಗಾಡಿಗಳನ್ನು ಬಿಡುವ ಒಂದು ಕಂಪನಿ ಏರ್ಪಾಡಾಗಿರುತ್ತದೆ. ಇದು ಜನರಿಗೂ ತುಂಬಾ ಅನುಕೂಲವೆಂದು ಅನೇಕರು ಯೋಚಿಸಿದ್ದರು. ಕಳೆದ ತಿಂಗಳು ೩೦ ನೇ ತಾ ಆನಂದಪುರದಿಂದ ನಾಲ್ವರು ದೊಡ್ಡವರು, ಒಬ್ಬ ಚಿಕ್ಕವರು ಈ ಊರಿಗೆ ಬಂದು ಜಟ್ಕಾ ಆಫೀಸಿಗೆ ಹೋಗಿ, ಹಣಕಟ್ಟಿ ರಸೀದಿಯನ್ನು ಪಡೆದು, ಮನೆಗೆ ಬಂದು ಊಟ ತೀರಿಸಿಕೊಂಡು ಹೊತ್ತಿಗೆ ಸರಿಯಾಗಿ ಆಫೀಸ್ ಹತ್ರ ಹೋದರು, ಗಾಡಿ ಇಲ್ಲವೆಂದು ಹೇಳಿದರು. ಹಣ ತೆಗೆದು ಕೊಳ್ಳುವಾಗ್ಗೆ ಒಂದು ಜಟ್ಕಾ ಇದೆ, ಆನಂದಪುರದವರು ಹಣ ಕಟ್ಟಿ ರಸೀದಿ ಪಡೆದ ಮೇಲೆ ಬೇರೊಬ್ಬನು ಬಂದು ಹೆಚ್ಚು ಹಣ ಕೊಟ್ಟದ್ದರಿಂದ ಇದ್ದ ಒಂದು ಗಾಡಿಯನ್ನು ಅವರಿಗೆ ಕೊಟ್ಟು, ಮೈಸೂರಿಗೆ ಕಳುಹಿಸಿದರು. ಮೊದಲು ಹಣ ಕೊಟ್ಟವರು ಕಣ್ಣು ಕಣ್ಣು ಬಿಡಬೇಕಾಯಿತು. ಇಂಥಾ ಅನ್ಯಾಯ ಮಾಡ ಬಹುದೇ ?

ಪ್ರಯಾಣಿಕ

ಮೈಸೂರು ದೊಡ್ಡ ಪೇಟೆಯಲ್ಲಿ [illegible]ಸಹಾಯನಿಧಿ ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.

ಅಯ್ಯಾ,

ಈ ಸೊಸೈಟಿಯು ೧೯೦೬ ನೆ ಡಿಸೆಂಬರು ತಾ ೨೮ ರಲ್ಲಿ ಮೈಸೂರು ಸಂಸ್ಥಾನದ ಕೋ ಆಪರೇಟಿವ್ ಸೊಸೈಟಿಗಳ ರಜಿಸ್ಟ್ರಾರ ರಿಂದ ರೆಜಿಸ್ಟರು ಮಾಡಲ್ಪಟ್ಟಿರುತ್ತೆಂದು ಆ ಬಗ್ಗೆ ೩೧೨ ನೆ ನಂಬರು ಇಂಡಾರ್ಸ್‌ಮೆಂಟು ಕೊಟ್ಟಿರುತ್ತಾರೆ. ಮೈಸೂರು ಟವರ್ನಲ್ಲಿ ನೆಯಿಗೆಯುವರಿಗೂ ಮತ್ತು ಜವಳಿ ವ್ಯಾಪಾರದವರಿಗೂ ಸಹಾ ಅನುಕೂಲವಾಗುವಂತೆ ಜವಳಿ, ನೂಲು, ರೇಷ್ಮೆ, ಜಿಗ್ಗರೆ ಒದಗಿಸುವ ಉದ್ದೇಶ್ಯ ೧೯೦೮ ನೆ ಇಸವಿ ಜನವರಿ ತಾ ೧ ರ ಲಾಗಾಯ್ತು ಮುದುಮಾಡಿ ಒಬ್ಬ ಪ್ರಸಿಡೆಂಟರು, ಒಬ್ಬ ಸೆಕ್ರೆಟರಿ, ೧೦ ಜನ ಡೈರೆಕ್ಟರುಗಳಿಂದ ಈ ಸೊಸೈಟಿಯ ಆಡಳಿತವು ನಿರ್ವಹಿಸಲ್ಪಡುತ್ತಿದೆ. ಈ ಸೊಸೈಟಿಗೆ ನೆಯಿಗೆ ಮತ್ತು ಜವಳಿ ವ್ಯಾಪಾರದ ಅನೇಕರು ಮೆಂಬರುಗಳಾಗಿದ್ದಾರೆ. ಈ ಸ್ಥಿತಿ ಕೆಲವು ಮೆಂಬರುಗಳು ೧೦ ಷೇರುಗಳ ಮೇಲೆ ಪಡೆದು ಪೂರಾ ಮೊಬಲಗನ್ನು ಪಾವತಿಮಾಡಿ ನೂಲು, ರೇಷ್ಮೆಗೆ ಆರ್ಡರು ಸಹಾ ಮಾಡಿ ತರಿಸುವುದಕ್ಕೆ ಪ್ರೋತ್ಸಾಹವುಳ್ಳವರಾಗಿದ್ದಾರೆ. ಈ ಸೊಸೈಟಿಯು ಶಾಶ್ವತವಾಗಿ ನಡೆಯಬೇಕೆಂಬ ಉದ್ದೇಶದಿಂದ ಅದಕ್ಕೆ ಲಕ್ಷ್ಮೀ ಸಹಾಯನಿಧಿ ಕೋ ಆಪರೇಟಿವ್ ಸೊಸೈಟಿ ಎಂಬ ಹೆಸರನ್ನಿಟ್ಟಿದೆ. ಸಮಸ್ತ ಪ್ರಜೆಗಳನ್ನು ಸರ್ವವಿಧದಲ್ಲೂ ಅಭಿವೃದ್ಧಿಗೆ ತರಬೇಕೆಂಬ ಉದ್ದೇಶದಿಂದ ಪ್ರಜೆಗಳಿಗೆ ಮಹದುಪಕಾರಮಾಡುವ ಅಭಿಮಾನ ಕೃಪಾಪೂರ್ಣರಾದ ಶ್ರೀಮನ್ಮಹಾರಾಜರವರು ಇದುವರಿಗೆ ನಮ್ಮ ಸಂಸ್ಥಾನದಲ್ಲಿ ಯಾವಾಗಲೂ ಜಾರಿಯಲ್ಲಿ ಇಲ್ಲದ ಈ ಸೊಸೈಟಿಗಳ ರೂಲಸನ್ನು ತಮ್ಮ ದಿವ್ಯ ಆಳ್ವಿಕೆಯಲ್ಲಿ ಜಾರಿಗೆ ತಂದು ಸಮಸ್ತ ಪ್ರಜೆಗಳನ್ನು ಕಾಪಾಡುವುದಕ್ಕಾಗಿ ನಾವು ಪೂರ್ಣ ಕೃತಜ್ಞರಾಗಿದ್ದೇವೆ.

ಯಜಮಾನ್ ಪುಟ್ಟಮಲ್ಲಯ್ಯ

ಬಗ್ಗವಳ್ಳಿಯ ರೀಡಿಂಗ್‌ರೂಂ.

ಅಯ್ಯಾ,

ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ಮತ್ತು ಅವರ ಜನಾಂಗದವರ "ನ್ಯೂ ಇಯರ್ಸ್ ಡೇ" ಎಂಬ ಯುಗಾದಿ ಸಂತೋಷದ ದಿವಸ ಮಧ್ಯಾಹ್ನ ತರೀಕೆರೆ ತಾಲ್ಲೂಕು ಬಗ್ಗವಳ್ಳಿ ಗ್ರಾಮದ ಶ್ರೀ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಒಂದು ರೀಡಿಂಗ್ ರೂಂ ಸ್ಥಾಪಿಸಬೇಕೆಂಬ ಉದ್ದೇಶದಿಂದ ಸಭೆ ಸೇರಿಸಲ್ಪಟ್ಟಿತು. ಸಭಿಕರ ಅಪೇಕ್ಷೆಯನ್ನರಿತು ಸ್ಕೂಲ್ ಮಾಸ್ಟರ್ ಮೆ॥ ಡಿ ರಾಮಯ್ಯನವರ ಪ್ರಾರ್ಥನೆಯಂತೆ ಮೆ॥ ಲಕ್ಷ್ಮಣ ಶಾಸ್ತ್ರಿಗಳವರು ಸಭೆಯ ಆಸನವನ್ನು ಅಲಂಕರಿಸಿದರು. ಸ್ಕೂಲ್ ಮಾಸ್ಟರು ರೀಡಿಂಗ್ ರೂಂ ವಿಷಯವನ್ನು ಕುರಿತು ಮಾಡಿದ ಉಪನ್ಯಾಸವು ಯುಕ್ತಿ ಯುಕ್ತವಾಗಿಯೂ ಪ್ರಜೆಗಳಲ್ಲಿ ಐಕಮತ್ಯವು ದೃಢಮೂಲವಾಗಿ ನಿಲ್ಲಲು ಸಾಕಾದಷ್ಟು ಕಾರಣವುಳ್ಳದ್ದಾಗಿತ್ತು. ಅನಂತರ ಈ ಸಭೆಗೆ ಮೆ॥ ಎ. ಗುರುರಾಯರು ಅಧ್ಯಕ್ಷರಾಗಿಯೂ, ಮೆ॥ ಲಕ್ಷ್ಮಣ ಶಾಸ್ತ್ರಿಗಳವರು ಕಾರ್ಯದರ್ಶಿಗಳಾಗಿಯೂ ಇರಬೇಕೆಂದು ಮಾಜಿ ಶ್ಯಾನುಭೋಗ್ ಮೆ॥ ಕೃಷ್ಣಪ್ಪನವರು ಸೂಚಿಸಿದ್ದನ್ನು ಸರ್ವರೂ ಒಪ್ಪಿದರು. ಮೆ॥ ಡಿ. ರಾಮಯ್ಯನವರು ಮ್ಯಾನೇಜರಾಗಿ ಎಲ್ಲಾ ವಿಧವಾದ ಏರ್ಪಾಡುಗಳನ್ನೂ ಮಾಡಬೇಕೆಂದು ಶ್ಯಾನುಭೋಗ್ ಮೆ॥ ನೀಲಕಂಠಪ್ಪನವರು ಸೂಚಿಸಿ ಮಾಡಿದ್ದನ್ನು ಎಲ್ಲರೂ ಅಂಗೀಕರಿಸಿದರು. ಈ ರೀಡಿಂಗ್ ರೂಮಿಗೆ ಬಾಳೇಹೊನ್ನೂರು ನಾಡದ ಅಲಬಾದಾರ್ ಮೆ॥ ರುದ್ರಾರಾಧ್ಯರಿಂದ ವೃತ್ತಾಂತ ಪತ್ರಿಕೆ, ಇತರ ಮೆಂಬರುಗಳಿಂದ ವೃತ್ತಾಂತ ಚಿಂತಾಮಣಿ, ಮೈಸೂರ್ ಗಜೆಟ್ಟು ಮೊದಲಾದ ಏಳು ಪತ್ರಿಕೆಗಳು ಒಪ್ಪಿಸಲ್ಪಟ್ಟವು. ಇನ್ನೂ ಕೆಲವು ಉತ್ಕೃಷ್ಟವಾದ ವಾರ ಪತ್ರಿಕೆಗಳನ್ನೂ, ಮಾಸಪತ್ರಿಕೆಗಳನ್ನೂ ರೀಡಿಂಗ್ ರೂಂ ಅಧ್ಯಕ್ಷರ ಆಶ್ರಯಕ್ಕೆ ಮೆಂಬರುಗಳ ಸಹಾಯ ದ್ರವ್ಯದಿಂದ ತರಿಸಬೇಕೆಂದು ತೀರ್ಮಾನವಾಯಿತು. ಅನಂತರ ಸಭೆಯು ಸಮಾಪ್ತವಾಯಿತು. ಮೆ॥ ಎ ಗುರುರಾಯರೂ, ಮೆ॥ ಡಿ ರಾಮಯ್ಯನವರೂ ಉಪಕ್ರಮಿಸಿರುವ ಈ ಕಾರ್ಯವನ್ನು ಅವರು ಕೇವಲ ಶ್ರದ್ಧೆಯಿಂದಲೂ ಉತ್ಸಾಹದಿಂದಲೂ, ಐಕಾಗ್ರ್ಯದಿಂದಲೂ ನೆರವೇರಿಸಿ, ವಿದ್ಯಾಮೂಲಕವಾದ ಪರೋಪಕಾರವನ್ನು ಮಾಡುತ್ತಾರೆಂದು ನಂಬಿರುವ

ಪ್ರತ್ಯಕ್ಷದರ್ಶಿ.

ತಾಲ್ಲೂಕು ವರ್ತಮಾನಗಳು.

ಹುಣಸೂರು.—ಕಳೆದ ಒಂಬತ್ತು ತಿಂಗಳಿಂದ ಇಲ್ಲಿ ಪೋಲೀಸ್ ಇನ್ಸ್‌ಪೆಕ್ಟರಾಗಿದ್ದ ಮೆ॥ ರಘೋತ್ತಮರಾಯರು ಮೈಸೂರಿಗೆ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರಾಗಿ ವರ್ಗಮಾಡಲ್ಪಟ್ಟರು. ಪ್ಲೇಗ್ ಕಾಲದಲ್ಲಿ ಪೇಟೆಗಳಲ್ಲಿನೂ, ಟವರ್ನಲ್ಲಿಯೂ ಕಳ್ಳತನವಾಗುತ್ತೆಂಬ ಭಯವಿಲ್ಲದಂತೆ ರಾತ್ರಿ ಹಗಲೂ ಇವರು ತುಂಬಾ ನಿಗಾ ಕೊಟ್ಟರು. ಹಾಗೂ ಕಳ್ಳತನವಾದಾಗ್ಯೂ ಆಸಾಮಿಗಳನ್ನು ಪತ್ತೆಮಾಡಿ ಶಿಕ್ಷೆಗೆ ಗುರಿಪಡಿಸಿದರು. ಇವರು ಸರ್ವರಲ್ಲಿಯೂ ಸ್ನೇಹ ಬೆಳಸುತ್ತಾ ಇದ್ದರು. ಆದರೆ ಇವರು ಮೂರು ತಿಂಗಳಿಗೆ ಮಾತ್ರ ಹೋಗಿರುತ್ತಾರೆಂದು ವರ್ತಮಾನ ಬಂದಿದೆ. ಇಲ್ಲಿಗೇ ಬರುವರೆಂದು ನಿರೀಕ್ಷಿಸುತ್ತೇವೆ.—ಇಂಗ್ಲೀಷಿಗೆ ಸೇರಿದ ಆಂಗ್ಲೋವರ್ನಾಕ್ಯುಲರ್ ಇಲಾಖೆಯು ಹಿಡಿ ಆಯಿತಷ್ಟೆ. ಇದಕ್ಕೆ ಬದಲಾಗಿ ಅವರಿಗೆ ಬೇಕಾದ ಕೆಲವು ಕ್ಲಾಸುಗಳಲ್ಲಿ ಹೆಚ್ಚು ಬೆಳಸಿ ಬೆಂಗಳೂರಿಗೆ ರವಾನಿಸಬೇಕೆಂದು ಏರ್ಪಾಡು ಮಾಡಿದ್ದಾರೆ. ಅದರಂತೆ ಹುಲ್ಲನ್ನು ಬೆಳಸಿ, ಕೊಯಿದು ಗುಡ್ಡೆಹಾಕುತ್ತಾ ಇರುತ್ತಾರೆ. ಇದಕ್ಕಾಗಿ ಬೆಂಗಳೂರಿಂದ ಸುಮಾರು ೧೫ ಕಾಂಟ್ರಾಕ್ಟರುಗಳೂ, ಗಾಡಿಗಳೂ, ಜನರೂ ಬಂದಿರುತ್ತಾರೆ ಮತ್ತು ಒಬ್ಬ ರಿಜಿಮೆಂಟ್ ಅಸ್ಪಟಲ್ ಅಸಿಸ್ಟೆಂಟರು ಸಹ ಬಂದಿರುತ್ತಾರೆ. ಇಲ್ಲಿಂದ ಹುಲ್ಲನ್ನು ಸಾಗಿಸುವದಕ್ಕೆ ಇನ್ನೂ ಸುಮಾರು ಎರಡು ತಿಂಗಳಾಗಬಹುದೆಂದು ಕಾಣುತ್ತದೆ. ಇಲ್ಲಿನ ಮ್ಯುನಿಸಿಪಾಲಿಟಿಯು ಮೇಲ್ವಿಚಾರಣೆಯನ್ನು ಸಬ್ ರೆಜಿಸ್ಟ್ರಾರಿಗೆ ವಹಿಸಿರುವ ಹಾಗೆ ತೋರುತ್ತದೆ. ಯಾಕೆಂದರೆ ಇವರು ಮ್ಯುನಿಸಿಪಲ್ ಮಾರ್ಕೆಗಾರರೊಡನೆ ಪ್ರತಿದಿನವೂ ಟವರ್ ಗಸ್ತು ಮಾಡುತ್ತಿದ್ದಾರೆ. ಈ ರೀತಿ ನಿಗಾ ಕೊಡುವದರಿಂದ ಟವರ್ ಪಾಕೀಜಾ ಹೆಚ್ಚುವದೆಂಬುವದರಲ್ಲಿ ಯಾವ ಸಂದೇಹವೂ ಇರಲಾರದು.—ಈಗ ಸುಗ್ಗಿ ಕಾಲವಾಗಿದ್ದಾಗ್ಯೂ ರೂಪಾಯಿಗೆ ೮ ಸೇರು ಅಕ್ಕಿ, ೩ ಆಣೆಗೆ ಒಂದು ಸೇರು ತೊಗರಿಬೇಳೆ, ಈ ರೀತಿ ಮಾರುತ್ತಾರೆ. ಈಗಲೇ ಹೀಗೆ ಮಾರಿದರೆ ಮುಂದೆ ಹ್ಯಾಗಾಗುವದೋ ಯೋಚಿಸಬೇಕಾಗಿದೆ.

ಮಳವಳ್ಳಿ.—ದಿನೇದಿನೇ ಛಳಿಯೂ ಬಿಸಿಲೂ ಬಹು ಜೋರಾಗುತ್ತಾ ಬಂದದೆ ಬತ್ತದ ಪೈರೆಲ್ಲಾ ಕಟಾವಾಗುತ್ತಾ ಬಂದಿರುತ್ತೆ. ಧಾರಣೆವಾಸಿಗಳು ಕೊಂಚಮಟ್ಟಿಗೆ ಇಳಿದಿದೆ. ಬೆಲ್ಲದ ಧಾರಣೆಯು ದಿನೇದಿನೇ ಹೆಚ್ಚುತ್ತಾ ಬಂದಿದೆ. ಇಲ್ಲಿನ ಗೌರ್ನಮೆಂಟ್ ಸ್ಕೂಲಿನಲ್ಲಿ ಕಳೆದ ವರ್ಷ ಪರೀಕ್ಷೆಗೆ ಕಟ್ಟಿದ್ದವರಲ್ಲಿ ಕನ್ನಡದಲ್ಲಿ ೯ ಜನಕ್ಕೆ ೬ ಜನವೂ, ಒಬ್ಬನು ಮೊದಲನೇ ಕ್ಲಾಸಿನಲ್ಲಿಯೂ, ಇಂಗ್ಲೀಷಿನಲ್ಲಿ ಒಬ್ಬನೂ, ಮತ್ತು ಇಲ್ಲಿ ಕಳೆದ ವರ್ಷ ಸ್ಥಾಪಿತವಾದ ಪ್ರೈವೇಟ್ ಸ್ಕೂಲಿನಲ್ಲಿ ೭ ಜನಕ್ಕೆ ಇಬ್ಬರೂ ತೇರ್ಗಡೆ ಹೊಂದಿರುತ್ತಾರೆ. ಎ ವಿ. ಸ್ಕೂಲಿನಲ್ಲಿ ಬಹು ಮುತುವರ್ಜಿಯಿಂದ ಕೆಲಸಮಾಡುತ್ತಿದ್ದ ಎಂ. ರಾಮಯ್ಯನವರಿಗೆ ಮಂಡ್ಯಕ್ಕೆ ವರ್ಗವಾಗಿರುವ ವಿಷಯವು ವ್ಯಸನವನ್ನುಂಟುಮಾಡುತ್ತದೆ.—ಕಳೆದ ನವಂಬರಿನಲ್ಲಿ ಸರ್ಕಲ್ ಇನ್ಸ್‌ಪೆಕ್ಟರು ಇಲ್ಲಿಗೆ ಇನ್ಸ್‌ಪೆಕ್ಷನ್ ಬಗ್ಗೆ ದಯಮಾಡಿಸಿದ್ದ ವೇಳೆಯಲ್ಲಿ ಇಂಗ್ಲೀಷು ಸ್ಕೂಲಿಗೆ ಹೊರಭಾಗದ ಹುಡುಗರನ್ನು ಸೇರಿಸಬೇಕೆಂದು ಆರ್ಡರು ಮಾಡಿದ್ದರು. ಇದಕ್ಕೋಸ್ಕರ ಪುರ ನಿವಾಸಿಗಳು ಒಂದು ಸಭೆ ಸೇರಿಸಿ ನಮ್ಮ ಶ್ರೀಮನ್ಮಹಾರಾಜರವರಿಗೆ ಒಂದು ತಂತಿಯನ್ನೂ, ಇನ್ಸ್‌ಪೆಕ್ಟರ್ ಜನರಲ್ ಸಾಹೇಬರು ಮೆ॥ ಭಾಭಾ ಸಾಹೇಬರವರಿಗೂ ಸರ್ಕಲ್ ಇನ್ಸ್‌ಪೆಕ್ಟರಿಗೂ ಅರ್ಜಿಗಳನ್ನೂ ಬರೆದುಕೊಂಡದ್ದಕ್ಕೆ ತಹಲ್ ವರಿವಿಗೂ ಯಾವ ಪ್ರತ್ಯುತ್ತರವೂ ಬಾರದಿರುವ ಭಾಗದಲ್ಲಿ ತುಂಬಾ ವ್ಯಸನ ಪಡಬೇಕಾಗಿದೆ. ಮತ್ತು ಸರ್ಕಾರದವರು ಈ ರೀತಿ ಮಾಡಲಾರರೆಂದು ತಿಳಿಯುತ್ತೇವೆ.—ಮ್ಯುನಿಸಿಪಾಲಿಟಿಯು ಏರ್ಪಾಡು ಬಹು ಹೀನ ಸ್ಥಿತಿಯಲ್ಲಿರುವುದರಿಂದ, ಮೆಂಬರುಗಳು ಈ ವಿಷಯದಲ್ಲಿ ಮುತುವರ್ಜಿ ವಹಿಸುತ್ತಾರೆಂದು ಕೋರುತ್ತೇನೆ.—ಇಲ್ಲಿಯ ಕೆರೆಯಲ್ಲಿ ನೀರು ಬಣಿಗಿಹೋಗಿ ರುವುದರಿಂದ ಜನ ಮತ್ತು ಜಾನುವಾರುಗಳಿಗೆ ಕುಡಿಯಲು ನೀರಿಗೆ ಬಹು ಶ್ರಮವಾಗಿರುತ್ತದೆ.

ಬೌರಿಂಗ್‌ಪೇಟೆ.—ಇಲ್ಲಿ ಸೆಪ್ಟಂಬರು ತಿಂಗಳಲ್ಲಿ ಪ್ಲೇಗ್ ವ್ಯಾಧಿಯು ಪ್ರಾರಂಭವಾಗಿ ಡಿಸೆಂಬರು ೧೮ ರ ವರಿಗೆ ೧೩೩ ಜನಗಳು ಈ ದುಷ್ಟ ವ್ಯಾಧಿಗೆ ತುತ್ತಾದರು. ಆದರೆ ಈಗ ೨೫ ದಿನಗಳ ಲಾಗಾಯ್ತಿನಿಂದ ಈ ವ್ಯಾಧಿಯು ಉಪಶಮನವಾಗಿ, ಊರು ಬಿಟ್ಟು ಹೊರಗೆ ಹೋಗಿದ್ದ ಜನಗಳು ಊರೊಳಕ್ಕೆ ಬರಲು ಪ್ರಾರಂಭಿಸಿರುತ್ತಾರೆ.—ಈ ಊರಿಗೆ ಸೆಪ್ಟಂಬರು ತಿಂಗಳಲ್ಲಿ ಹೊಸದಾಗಿ ಬಂದಿರುವ ಆಸ್ಪತ್ರೆ ಅಸಿಸ್ಟೆಂಟರು ಊರಿನ ಜನಗಳ ಪ್ರೀತಿ ಪಾತ್ರರಾಗಿರುವದು ಸಂತೋಷಕರವಾಗಿದೆ.—ಈ ಊರಿನಲ್ಲಿರುವ ಮುಖ್ಯ ಹಿರಿಯರಾದ ಘನ ಜೆ. ಬಿ. ಬಟ್ಲರ್ ಸಾಹೇಬರವರ ಪತ್ನಿಯವರು ಕ್ರಿಸ್ಮಸ್ ದಿವದ ಸಾಯಂಕಾಲ ರೈಲ್ವೇ [illegible]ಂತಿನಲ್ಲಿರುವ ಮಿಷನ್ ಪಾಠಶಾಲೆಯ ೩೦ ಹುಡುಗರಿಗೂ ೧೬ ಮಂದಿ ಹುಡುಗಿಯರಿಗೂ ಮತ್ತು ಕ್ರೈಸ್ತ ಹುಡುಗ ಹುಡುಗಿಯರಿಗೂ ಸತ್ಯವೇದ ಪಾಠಗಳುಳ್ಳ ಪುಸ್ತಕಗಳು, ಗೊಂಬೆಗಳು, ಆಟಸಾಮಾನುಗಳು, ಬಟ್ಟೆಗಳು, ಮಿಠಾಯಿ ಹಣ್ಣು ಮುಂತಾದ ಫಲಾಹಾರಗಳನ್ನು ಕೊಟ್ಟು ಸಂತೋಷಪಡಿಸಿದರು. ಅಲ್ಲದೆ ಅವರಿಗೆ ಒಂದು ಫುಟ್‌ಬಾಲನ್ನೂ ಕೊಟ್ಟರು. ಅಲ್ಲದೆ ಬಾಲಕ ಬಾಲಕಿಯರು ಕ್ರಮವಾಗಿ ಪಾಠಶಾಲೆಗೆ ಬರುತ್ತಾ ಅಭಿವೃದ್ಧಿಯಾಗುವದರ ವಿಷಯದಲ್ಲಿ ಬುದ್ಧಿ ಮಾತುಗಳನ್ನು ದಯವುಳ್ಳ ಸತಿಪತಿಯರಿಬ್ಬರೂ ಹೇಳಿದ ಮೇಲೆ ಭಗವತ್ಪ್ರಾರ್ಥನೆಯಿಂದ ಕೂಟವು ಮುಕ್ತಾಯವಾಯಿತು. ಅಲ್ಲದೆ ಮೆಥೊಡಿಸ್ಟ್ ಗುಡಿಯಲ್ಲಿ ಘನ ಜೆ. ಬಿ ಬಟ್ಲರ್ ಸಾಹೇಬರಿಂದ ಏಸುಗಳನ್ನು ೮ನೇ ತಾ. ಗ್ಯಾಸ್ ಬೆಳಕಿನಿಂದ ಮ್ಯಾಜಿಕ್ ಲ್ಯಾಂಟ್ರ್ನ್ ತೋರಿಸಿ ಇಂಗ್ಲೀಷಿನಲ್ಲಿ ವಿವರಿಸಿದರು. ಈ ಗ್ಯಾಸಿನ ನಿರ್ಮಲವಾದ ಉತ್ತಮ ಬೆಳಕಿನ ಬಿಸಿಯಿಂದ ಚಿತ್ರಗಳು ನೋಡಲಿಕ್ಕೆ ಬಹಳ ರಂಜನೆಯಾಗಿದ್ದವು.—ಪ್ಲೇಗಿನ ಗಲಾಟೆ ಎಂಬದಾಗಿ ಈಗ ನಾಲ್ಕೈದು ವಾರಗಳಿಂದ ಊರಿಗಾಚೆ ಒಂದು ಮೈಲು ದಾಸಲೆಯಲ್ಲಿ ಸಂತೆಯನ್ನು ನಡಿಸುತ್ತಲಿದ್ದಾರೆ. ಸಂತೆಗೆ ಹೋಗುವ ಜನಗಳೂ ಗಾಡಿಗಳೂ ಹಳ್ಳ ಕೊರಕಲುಗಳನ್ನು ದಾಟಿ ಹೋಗುವದು ಮಹಾ ಪ್ರಯಾಸವಾಗಿದೆ. ಊರಿನಲ್ಲಿ ಪ್ಲೇಗ್ ಗಲಾಟೆ ಹೆಚ್ಚಾಗಿರುವಾಗ್ಗೆ ಯಥಾಪ್ರಕಾರ ಮಾಮೂಲ್ ಸ್ಥಳದಲ್ಲಿಯೇ ಸಂತೆ ಕೂಡುತ್ತಾ ಇತ್ತು. ಆದರೆ ಈಗ ಯಾತಕ್ಕೆ ಇಷ್ಟು ದೂರದಲ್ಲಿ ಸಂತೆ ಕೂಡಿಸುತ್ತಿದ್ದಾರೋ ತಿಳಿಯದು.—ಸರ್ಕಾರದವರು ಲೋಕಲ್ ಫಂಡು ರಸ್ತೆಗಳ ಮತ್ತು ಪೈರೋಡುಗಳ ಎರಡು ಪಾರ್ಶ್ವಗಳಲ್ಲಿಯೂ ಆಡುಬಾಜೂ ಗ್ರಾಮಗಳವರಿಂದ ಮರಗಳನ್ನು ಹಾಕಿಸಿ ದಾರಿಯಲ್ಲಿ ಪ್ರಯಾಣ ಮಾಡುವ ದಾರಿಗರಿಗೆ ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲ ಮೂರು ವೇಳೆಯೂ ನೆರಳು ಇರುವಂತೆ ಮಾಡಿರುವದು ಪ್ರಸಿದ್ಧವಾಗಿದೆ. ಕೆಲವು ವರುಷಗಳ ಹಿಂದೆ ಡೆಪ್ಟಿ ಕಮಿಷನರಾಗಿದ್ದ ಮೆ॥ ಕಾರ್ ಸಾಹೇಬರು ಕಾಲಿ ಇರುವ ಸಾಲ್ ಮರಗಳು ಒಂದಕ್ಕೊಂದು ದೂರವಾಗಿರುವದರಿಂದ ತಿರಿಗಿ ಮರಗಳಿಗೆ ಮಧ್ಯದಲ್ಲಿ ಬೇರೆ ಸಸಿಗಳನ್ನು ಹಾಕಿಸಿ ಅಭಿವೃದ್ಧಿ ಮಾಡಿದ್ದನ್ನು ಎಲ್ಲರೂ ನೋಡಬಹುದಾಗಿದೆ. ಆದರೆ ಈ ಮಧ್ಯೆ ಯಾವ ಕಾರಣದಿಂದಲೋ ಸಾಲು ಮರಗಳ ಅಡ್ಡಬಿಡಿ ಕೊಂಬೆಗಳನ್ನೆಲ್ಲಾ ಕಡಿದುಹಾಕಿಸುತ್ತಿದ್ದಾರೆ. ನೆರಳು ಹೆಚ್ಚಾಯಿತೆಂತಲೋ, ಅಥವಾ ಪ್ಲೇಗ್ ವ್ಯಾಧಿಯನ್ನು ಕಡಮೆ ಮಾಡಬೇಕೆಂತಲೋ, ಅಥವ ದಾರಿಗೆ ಹೆಚ್ಚು ಕತ್ತಲೆ ಮುಚ್ಚುತ್ತದೆ ಎಂತಲೋ, ಅಥವ ದಾರಿಗರಿಗೆ ಛಳಿಯಾಗುತ್ತದೆ ಎಂತಲೋ ತಿಳಿಯದು. ಆದರೆ ಕೈತಾಬಿಗಳು ಅಸ್ತ್ರ ರಂಪಗಳನ್ನು ಪ್ರಯೋಗಿಸಿ ಸದರೀ ಸಾಲ್ ಮರಗಳ ದೊಡ್ಡ ದೊಡ್ಡ ರೆಂಬೆಗಳನ್ನು ಕೊಯಿದು ಹಾಕುತ್ತಿರುವದು ಮಹಾ ವ್ಯಸನಕರವಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗಾ ಸಬ್ ಅ|| ಸರ್ಜನ್ ಮ|| ಎಚ್ ಕೆ ನಂಜುಂಡ ರಾಯರಿಗೆ ಆರು ತಿಂಗಳ ರಜಾ ಕೊಟ್ಟಿದೆ

ಕೋಲಾರ್ ತಾಲ್ಲೂಕಿನ ಅಮಲ್ದಾರ್ ಮ|| ಸಿ. ವಿ. ನಾರಾಯಣರಾಯರಿಗೆ ಕಳೆದ ಅಕ್ಟೋಬರ್ ೧೩ ರಿಂದ ಮೂರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ

ತುಂಕೂರು ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರ್ ಮ|| ಕೆ ಎಸ್ ಚೊಕ್ಕಸ್ವಾಮಿ ಐಯ್ಯರವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಆಗುವವರೆಗೆ ತನಕ ಮದ್ದಗಿರಿ ಸಬ್ ಡಿವಿಜನ್ ಆಫೀಸರ್ ಮ|| ಕಿ. ವೆಂಕಟರಾಯರು ಡೆಪ್ಟಿ ಕಮಿಷನರ ಆಫೀಸಿನ ಚಾಲ್ತಿ ಕೆಲಸಗಳ ಭಾರ್ಜನ್ನು ವಹಿಸಿರತಕ್ಕದ್ದು.

ಮ|| ಜಿ. ಎಚ್. ಕ್ರುಂಬೀಗಲ್‌ಯವರನ್ನು ಮೈಸೂರು ಗವರ್ನ್‌ಮೆಂಟ್ ಉದ್ಯಾನವನಗಳ ಮತ್ತು ಮ್ಯೂಜಿಯಮ್ಮಿನ ಸೂಪರಿಂಟೆಂಡೆಂಟರಾಗಿ ನೇಮಿಸಿದೆ

ಮುಂದೆ ಹೇಳುವ ಅ|| ಕಮಿಷನರ ವರ್ಗವಣಿಗೆ ಹುಕುಂ ಮಾಡಿದೆ —ಲಕ್ಷ್ಮೀನರಸಿಂಹಶಾಸ್ತ್ರಿಯವರು ಸಕಲೇಶಪುರದ ಸಬ್ ಡಿವಿಜನ್ ಭಾರ್ಜನ್ನೂ, ಮ|| ನರಸಿಂಗರಾವ್ ಪೂರ್ಣಯ್ಯನವರು ಚನ್ನರಾಯಪಟ್ಟಣದ ಸಬ್ ಡಿವಿಜನ್ ಭಾರ್ಜನ್ನೂ ವಹಿಸಿರತಕ್ಕದ್ದು

ಕೌನ್ಸಿಲ್ ಮೆಂಬರ್ ಮ|| ಕೆ ಪಿ ಪುಟ್ಟಣ್ಣಚೆಟ್ಟಿಯವರಿಗೆ ಕ್ರಿಸ್ಮಸ್ ಹಬ್ಬದ ರಜಕ್ಕೆ ಸೇರಿದಂತೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸಿವಿಲ್ ಸರ್ಜನ್ ಮಿಸ್ಟರ್ ಆರ್ ಗೋವಿಂದರಾಜುಲುಯವರಿಗೆ ಜನವರಿ ೩ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ದಾವಣಗೆರೆ ಸಬ್ ಡಿವಿಜನ್ ಭಾರ್ಜನ್ನು ವಹಿಸಿರುವ ಸೀನಿಯರ್ ಅ|| ಕಮಿಷನರ್ ಮ|| ಕೆ ಚಾಂಡಿಯವರಿಗೆ ಕ್ರಿಸ್ಮಸ್ ರಜಾಕ್ಕೆ ಸೇರಿದಂತೆ ಒಂದು ತಿಂಗಳೂ ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮ|| ಎನ್. ಮಾಧವರಾಯರನ್ನು ಕಂಟ್ರೋಲರವರ ಆಫೀಸಿನಲ್ಲಿ ಕೆಲಸ ಮಾಡುವಂತೆ ನೇಮಕಮಾಡಿದೆ

ಅ|| ಸರ್ಜನ್ ಮ|| ಜಿ. ಎಸ್. ಡೇವಿಡ್‌ಯವರನ್ನು ಬೆಂಗಳೂರು ಡಿಸ್ಟ್ರಿಕ್ಟಿನ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರಾಗಿ ನೇಮಿಸಿದೆ.

ಕೋಲಾರ್ ಡಿವಿಜನ್ ಅ|| ಇಂಜನಿಯರ್ ಮ|| ಎನ್ ರಾಮರಾಯರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಕೋಲಾರದ ಪ್ರಾಸಿಕ್ಯೂಟಿಂಗ್ ಮತ್ತು ೨ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಮ|| ಜಿ. ಶ್ರೀನಿವಾಸಯ್ಯನವರಿಗೆ ಕೈಫಿಯತ್ತನ್ನು ಇಂಗ್ಲಿಷಿನಲ್ಲಿ ಬರೆದುಕೊಳ್ಳುವ ಅಧಿಕಾರ ಕೊಟ್ಟಿದೆ

ಮೈಸೂರು ನಗರಾಭಿವೃದ್ಧಿಗೆ ಏರ್ಪಟ್ಟ ಟ್ರಸ್ಟ್ ಬೋರ್ಡಿನ ಛೇರ್ಮನ್ನರಾದ ಮ|| ಪಿ ಸೀತಾರಾಮರಾಯರಿಗೆ ಕ್ರಿಸ್ಮಸ್ ರಜದೊಂದಿಗೆ ಎರಡು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಎಗ್ಸಿಕ್ಯುಟಿವ್ ಇಂಜನಿಯರ್ ಮ|| ಜೆ. ಇ ಎ ಡಿಕ್ರೂಸ್‌ಯವರು ಟ್ರಸ್ಟ್ ಬೋರ್ಡಿನ ಚಾಲ್ತಿ ಕೆಲಸಗಳ ಭಾರ್ಜನ್ನು ವಹಿಸಿರತಕ್ಕದ್ದು

ಕೋಲಾರ್ ಪ್ರಾಸಿಕ್ಯೂಟರ್ ಮ|| ಜಿ ಶ್ರೀನಿವಾಸಯ್ಯರವರಿಗೆ ಜನವರಿ ೫ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮುನಿಸಿಪಲ್ ಪ್ರೆಸಿಡೆಂಟ್ ಮ|| ಎ ಕೆ. ಶ್ರೀನಿವಾಸರಾಘವಾಚಾರ್ರು ಕೋಲಾರದ ಪ್ರಾಸಿಕ್ಯೂಟರಾಗಿ ಕೆಲಸ ನೋಡತಕ್ಕದ್ದು

ಬೆಂಗಳೂರು ಲೋಕಲ್ ಸರ್ವಿಸ್ ಪರೀಕ್ಷೆಗಳ ಆಫೀಸ್ ಮ್ಯಾನೇಜರ್ ಮ|| ಬಿ ತಿರುಮಲಾಚಾರ್ರನ್ನು, ಮ|| ಕೆ. ರಂಗಪ್ಪನವರು ಕೆಲಸದಿಂದ ನಿವೃತ್ತಿಮಾಡಿಸಲ್ಪಟ್ಟದ್ದರಿಂದ, ಶಿವಮೊಗ್ಗಾ ಡಿಸ್ಟ್ರಿಕ್ಟಿನ ಸ್ಕೂಲ್‌ಗಳ ಡೆಪ್ಟಿ ಇನ್ಸ್‌ಪೆಕ್ಟರಾಗಿ ನೇಮಕಮಾಡಿದೆ

ಕಡೂರು ಡಿಸ್ಟ್ರಿಕ್ಟ್ ಪೊಲೀಸ್ ಅ|| ಸೂಪರಿಂಟೆಂಡೆಂಟ್ ಮ|| ಟಿ ಎಫ್ ವಿಲ್ಕಿನ್ಸನ್‌ರವರಿಗೆ ಕ್ರಿಸ್ಮಸ್ ರಜದೊಂದಿಗೆ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ರೆವಿನ್ಯೂ ಕಮಿಷನರ್ ರಾಜಕಾರ್ಯಪ್ರವೀಣ ಮ|| ಎ ರಂಗಸ್ವಾಮಯ್ಯಂಗಾರ್ರಿಗೆ ಕ್ರಿಸ್ಮಸ್ ರಜದೊಂದಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅವರ ಮೊದಲನೆ ಅಸಿಸ್ಟೆಂಟರು ಆಫೀಸಿನ ಚಾಲ್ತಿ ಕೆಲಸಗಳ ಭಾರ್ಜನ್ನು ವಹಿಸಿರತಕ್ಕದ್ದು

ಸಕಲೇಶಪುರದ ಸಬ್ ಡಿವಿಜನ್ ಆಕ್ಟಿಂಗ್ ಸೀನಿಯರ್ ಅ|| ಕಮಿಷನರ್ ಮ|| ಎಂ ಎ. ನಾರಾಯಣ ಐಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳೂ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಡಾಕ್ಟರ್ ಎಸ್ ವಿ ರಾಮಸ್ವಾಮಯ್ಯಂಗಾರ್ರಿಗೆ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿರೋಣದರಿಂದ ಮ|| ಬಿ ಎಸ್ ಅಚ್ಯುತರಾಯರು ಸೀನಿಯರ್ ಸರ್ಜನರವರ ಅಸಿಸ್ಟೆಂಟರಾಗಿಯೂ ಕೆಲಸ ಮಾಡತಕ್ಕದ್ದು.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರ್ ಮ|| ಬಿ. ದೇವರಾಜೇ ಅರಸಿನವರಿಗೆ ಜನವರಿ ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮ|| ಬಿ. ಜಿ ಕುಮಾರಸ್ವಾಮಿ ನಾಯಕರವರು ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರಾಗಿ ಬದಲಿ ನೋಡತಕ್ಕದ್ದು

ಮ|| ಡಿ ಎಂ. ಜ್ಞಾನಪ್ರಿಯಂ ಪಿಳ್ಳೆಯವರನ್ನು ೩ ನೆ ಕ್ಲಾಸ್ ಆನರರಿ ಅ|| ಸರ್ಜನರಾಗಿ ಬಡ್ತಿ ಮಾಡಿದೆ

ಮ|| ಪಿ ಎಸ್ ರಾಮಚಂದ್ರ ಐಯ್ಯರನ್ನು ಆನರರಿ ೨ ನೆ ಕ್ಲಾಸ್ ಸಬ್ ಅ|| ಸರ್ಜನರಾಗಿ ಬಡ್ತಿ ಮಾಡಿದೆ

ಗುಬ್ಬಿ ಸಬ್ ಡಿವಿಜನ್ ಭಾರ್ಜನ್ನು ವಹಿಸಿರುವ ಅ|| ಕಮಿಷನರ್ ಮ|| ಪಿ ನಾರಾಯಣರಾಯರಿಗೆ ಜನವರಿ ೩ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ತುಂಕೂರ್ ಡಿಸ್ಟ್ರಿಕ್ಟ್ ಹುಜೂರ್ ಭಾರ್ಜನ್ನು ವಹಿಸಿರುವ ಅ|| ಕಮಿಷನರ್ ಮ|| ಕೆ. ಶ್ರೀಕಂಠಯ್ಯನವರು ಗುಬ್ಬಿ ಸಬ್ ಡಿವಿಜನ್ ಭಾರ್ಜನ್ನು ವಹಿಸಿರತಕ್ಕದ್ದು.

ಮೈಸೂರು ಮಹಾರಾಣಿ ಕಾಲೇಜ್ ಸಹಾಯೋಪಾಧ್ಯಾಯಿನಿಯರಾದ ಸೌಭಾಗವತಿ ಕೆ ಡಿ ರುಕ್ಮಿಣಮ್ಮನವರು, ಮಿಸ್ ಬಿ ಎಲ್ ಮಾರ್ಗರೆಟ್‌ಯವರ ಗೈರ್ಹಾಜರಿಯಲ್ಲಿ, ಕಾಲೇಜಿನ ಲೇಡಿ ಸೂಪರಿಂಟೆಂಡೆಂಟರಾಗಿ ಬದಲಿ ನೋಡತಕ್ಕದ್ದು.

ಪ್ರೊ|| ಅ|| ಕಮಿಷನರ್ ಮ|| ಎಸ್. ಶಾಮಣ್ಣನವರು ಕಂಟ್ರೋಲರವರ ಆಫೀಸಿನಲ್ಲಿ ಕೆಲಸಮಾಡತಕ್ಕದ್ದು.

ಆರ್. ಶ್ರೀನಿವಾಸರಾಯರನ್ನು ಇನ್ಸ್‌ಪೆಕ್ಟರ್ ಜನರಲ್‌ರವರ ಆಫೀಸ್ ಮ್ಯಾನೇಜರಾಗಿ ನೇಮಿಸಿದ್ದರಿಂದ ಅದೇ ಆಫೀಸಿನ ಹೆಡ್ ಕ್ಲಾರ್ಕ್ ಸಿ ಎನ್. ಕೃಷ್ಣಮೂರ್ತಿಯವರನ್ನು ಬೆಂಗಳೂರು ಸಬ್ ರಿಜಿಸ್ಟ್ರಾರ್ ಕೆಲಸ ನೋಡುವಂತೆ ನೇಮಿಸಿ ವರ್ಗಮಾಡಿದೆ

ಅ|| ಕಮಿಷನರಾದ ಮ|| ಎಂ ಎ ನಾರಾಯಣಯ್ಯಂಗಾರ್ರನ್ನೂ ಮ|| ಡಿ. ಎಂ ನರಸಿಂಗರಾಯರನ್ನೂ ಸರ್ವೆ ಇಲಾಖೆಯ ಕೆಲಸಗಳನ್ನು ಕಲಿಯುವಂತೆ ಕಳುಹಿಸಿರೋಣದರಿಂದ ಮ|| ಎಸ್. ಟಿ. ರಾಜಗೋಪಾಲಾಚಾರ್ರು ಹಾಸನದ ಡಿಸ್ಟ್ರಿಕ್ಟ್ ಖಜಾನೆಯ ಭಾರ್ಜನ್ನೂ, ಮ|| ಡಿ ಶ್ರೀನಿವಾಸಯ್ಯಂಗಾರ್ರು ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಖಜಾನೆಯ ಭಾರ್ಜನ್ನೂ ವಹಿಸಿರತಕ್ಕದ್ದೆಂದು ಹುಕುಂ ಮಾಡಿದೆ

ಮುಂದೆ ಹೇಳುವ ಡೆಪ್ಟಿ ಕಮಿಷನರ ವರ್ಗವಣಿಗೆ ಹುಕುಂ ಮಾಡಲ್ಪಟ್ಟಿದೆ ಮ|| ಟಿ ಆರ್ ಡಬ್ಲಿಯು ಬೆಡರಾಲ್ ಯವರನ್ನು ಹಾಸನಕ್ಕೆ; ಮ|| ಕೆ. ಆರ್. ಶ್ರೀನಿವಾಸಯ್ಯಂಗಾರ್ರನ್ನು ಹಾಸನದಿಂದ ಕಡೂರಿಗೆ

ಇಂಜನಿಯರ್ ಇಲಾಖೆ

ಮುಂದೆ ಹೇಳುವ ವರ್ಗವಣೆಗಳು ಹುಕುಂ ಮಾಡಲ್ಪಟ್ಟಿವೆ — ಅ|| ಇಂಜನಿಯರ್ ಮ|| ಕೆ ಶ್ರೀನಿವಾಸ ಐಯ್ಯಂಗಾರರನ್ನು ನೀರಿನ ಸರಬರಾಯಿ ಮತ್ತು ಸ್ಟೋರ್ ಡಿವಿಜನಿಂದ ಕಾವೇರಿ ರಿಜರ್ವಾಯರ್ ಪ್ರಾಜೆಕ್ಟಿಗೆ; ಸಬ್ ಅ|| ಇಂಜನಿಯರ್ ಮ|| ಎಂ ಜಿ. ರಂಗಯ್ಯನವರನ್ನು ಶಿವಮೊಗ್ಗೆಯಿಂದ ನೀರಿನ ಸರಬರಾಯಿ ಮತ್ತು ಸ್ಟೋರ್ ಡಿವಿಜನಿಗೆ, ಅ|| ಇಂಜನಿಯರ್ ಮ|| ಟಿ ಕೆ ಅರುಣಾಚಲ ಐಯ್ಯಂಗಾರರನ್ನು ಶಿವಮೊಗ್ಗೆಗೆ ವರ್ಗಮಾಡಿದೆ

ಕೋಲಾರ್ ಡಿವಿಜನ್ ಅ ಇಂಜನಿಯರ್ ಮ|| ಎನ್ ರಾಮರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನು ಎರಡು ತಿಂಗಳಿಗೆ ಜಾಸ್ತಿಮಾಡಿದೆ

ಅ|| ಇಂಜನಿಯರ್ ಮ|| ಎಫ್ ಎ ಸ್ಟೀಲ್‌ಯವರನ್ನು ಅ|| ಎಗ್ಸಿಕ್ಯುಟಿವ್ ಇಂಜನಿಯರಾಗಿ ನೇಮಕಮಾಡಿ, ಹಾಸನ ಡಿವಿಜನ್ನಿಗೆ ವರ್ಗಮಾಡಿದೆ

ಎಗ್ಸಿಕ್ಯುಟಿವ್ ಇಂಜನಿಯರ್ ಮ|| ಕೆ. ಪ್ರಹಲ್ಲಾದರಾಯರನ್ನು ಹಾಸನದಿಂದ ತುಂಕೂರು ಡಿವಿಜನ್ನಿಗೆ ವರ್ಗಮಾಡಿದೆ

ಊರಜನರ ಹೇಳಿಕೆಮೇಲಿನ ನಂಬಿಕೆ

93 20

ಕಲ್ಕತ್ತೆಯ ಇನ್ನೊಬ್ಬ ಡಾಕ್ಟರರು ಕೊಟ್ಟ ಅಭಿಪ್ರಾಯವನ್ನು ಇದರಡಿ ತೋರಿಸಿರುತ್ತದೆ. ಇದರಿಂದ ಈ ಪತ್ರಿಕೆಯಲ್ಲಿ ಸದಾಗವಾಗಿ ಪ್ರಚುರವಾಗುವ ಅನೇಕ ಸ್ಥಳೀಯ ವೃತ್ತಾಂತಗಳಿಗೆ ಇನ್ನೂ ಒಂದು ಸೇರಿದಂತಾಗುವದು

ಇಂಥಾ ಸ್ಥಳೀಯ ಸಾಕ್ಷ್ಯದ ಯಥಾರ್ಥ್ಯವನ್ನು ನಾವು ಪರೀಕ್ಷಿಸಬಹುದಾದ್ದರಿಂದ ಸಾವಿರಾರು ಮೈಲು ದೂರದಲ್ಲಿರುವಂಥವರಿಂದ ಕೊಡಲ್ಪಡುವ ಸಾಕ್ಷ್ಯಕ್ಕಿಂತಲೂ ಇದು ಹೆಚ್ಚು ಪ್ರಯೋಜನಕರವಾಗಿರುವದು ·ಕಲ್ಕತ್ತೆಯ ಜನರಿಗೆ ಕಲ್ಕತ್ತೆಯ ಜನರ ಮಾತೇ ಶ್ರೇಷ್ಠವು. ಹ್ಯಾರಿಸನ್ ರೋಡ್ ನಂ ೭೭ ನೇ ಡಿಸ್‌ಪೆನ್ಸರಿ ಡಾಕ್ಟರ ಎಸ್ ಸಿ. ಸೇನ್, ಎಲ್ ಎಂ. ಎಸ್. ಇವರ ಹೇಳಿಕೆಗೆ ಮಿಗಿಲಾದ್ದು ಬೇರೆ ಇರಲಾರದು ಅವರು ಗವರ್ನ್‌ಮೆಂಟ್ ಮೆಡಿಕಲ್ ಆಸ್ಪತ್ರೆಗಳಲ್ಲಿ ಅನೇಕ ವರುಷ ಇದ್ದು ಅನುಭವವುಳ್ಳವರು ಪ್ರಕೃತ ಕಲ್ಕತ್ತೆಯ ಟ್ರಾಂವೇ ಕಂಪನಿಯ ವೈದ್ಯಚಿಕಿತ್ಸಕರಾಗಿರುತ್ತಾರೆ ಅವರು ಹೇಳುವದೇನೆಂದರೆ—ಡೋನ್ಸರ (ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಬೆನ್ನುನೋವಿನ— ಮೂತ್ರಕೋಶದ ಔಷಧ ಗುಳಿಗೆಗಳು ಮೂತ್ರಜನಕ ಸಂಬಂಧವಾದ ಬಾಧೆಗಳಲ್ಲಿ ಕೊಟ್ಟು ನೋಡಿದ್ದೇನೆ ಅಂಥಾ ಸಂಗತಿಗಳಲ್ಲಿ ತಕ್ಷಣವೇ ಉಪಶಮನ ಸಿಕ್ಕುವ ಬಗ್ಗೆ ಇವು ಅತ್ಯಂತ ಉಪಯೋಗಕರವಾಗಿವೆ.

ಬೆನ್ನು ನೋವು ಮೂತ್ರನಾಡಿಗಳು ದುರ್ಬಲವಾಗಿಯೂ ಅನಾರೋಗ್ಯ ಸ್ಥಿತಿಯಲ್ಲಿ ರುತ್ತವೆಂಬದಕ್ಕೆ ಒಂದು ಲಕ್ಷಣವಾಗಿರುವದು ಆ ಸಮಯದಲ್ಲಿ ಅವುಗಳಿಂದ ನಡಿಸಕೂಡುವದಕ್ಕಿಂತ ಹೆಚ್ಚು ಮೆಹನತ್ತು ಅವುಗಳ ಮೇಲೆ ಹೊರಿಸಿದರೆ ತಲೆನೋವು, ಆಯಾಸ, ಸಹನ ಇಲ್ಲದಿರುವಿಕೆ, ಮುಂಗೋಪ, ಅಂಜಿಕೆ ಮುಂತಾದ್ದು ಉಂಟಾಗುವದು. ಇವನ್ನು ಅಲಕ್ಷಿಸಿದರೆ ಜಲೋದರವ್ಯಾಧಿ, ವಾತನೋವು, ಮೂತ್ರಬಾಧೆಗಳು ಮತ್ತು ಪ್ರಾಣಹಾನಿಕರವಾದ ಇತರ ದುಃಖ್ಯಗಳು ಸಂಭವಿಸುವವು. ಈ ಮಾತ್ರೆಗಳು ಮೂತ್ರಕೋಶ, ಮುಂತಾದ್ದಕ್ಕೆ ಸಂಬಂಧಪಡುವ ವಿಶಿಷ್ಟ ಬಾಧೆಗಳಿಗೆ ಮುದುಕರಿಗೂ, ಯೌವನಸ್ಥರಿಗೂ ನಿರ್ದಿಷ್ಟವಾದ ಔಷಧವಾಗಿರುವದು. ಇದನ್ನು ಸೇವಿಸಿದ್ದರಿಂದ ಮುಂದೆ ಯಾವ ಬಾಧಕವೂ ಇರಲಾರದು

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ ಶೀಸೆ ಒಂದಕ್ಕೆ ರೂ ೨. ಅಥವಾ ೬ ಶೀಸೆಗಳಿಗೆ ರೂ ೧೦—೮—೦ ಅಥವಾ ಮುಂಬಯಿಯಲ್ಲಿಯ ಡೋನ್ಸರ ಔಷಧಗಳ ಕೋಠಿಯಿಂದ ಕ್ರಯ ತರಿಸಿಕೊಳ್ಳಬಹುದು ಪಿ ಓ ಬಾಕ್ಸ್. ನಂ ೨೦೬, ಮುಂಬಯಿ.

ಇಲ್ಲಿ ನೋಡಿ!

98

ತುಮಕೂರು ಮಿಷನ್ ಇಲಾಖೆಯಲ್ಲಿ ಯೂರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ

ಕ್ರಯ:—೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯವರೆಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ:—ಮ್ಯಾನೇಜರ್

ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು

ದಿವ್ಯ ಮಹೌಷಧಗಳು.

9-1

೧. ಖಂಡಾದ್ರಕ ರಸಾಯನ —ಇದು ಅಜೀರ್ಣ, ಅಗ್ನಿಮಾಂದ್ಯ, ವಾಯು, ವಾಕರಿಕೆ, ಹೊಟ್ಟೆಶೂಲೆ, ಸಮಸ್ತವಿಧವಾದ ಪೈತ್ಯಗಳಿಗೆ ಅತ್ಯುತ್ತಮವಾದದ್ದು ಕ್ರಯ ಸೇರು ೧ಕ್ಕೆ ೨—೮—೦ ಮಾತ್ರ

೨. ಜೀರ್ಣಕಾದಿ ರಸಾಯನ —ಇದು ಪಿತ್ತವಾತ, ಉಷ್ಣವಾತ, ಅಜೀರ್ಣವಾತ, ವಾಂತಿ, ಪಿತ್ತಶೂಲೆ, ಅರೋಚಕ, ಈ ಮೊದಲಾದ ಎಲ್ಲಾವಿಧ ಪೈತ್ಯಗಳಿಗೆ ಅತ್ಯುತ್ತಮವಾದದ್ದು ಕ್ರಯ ಸೇರು ೧ಕ್ಕೆ ರೂ ೨—೮—೦ ಮಾತ್ರ. ನಮ್ಮ ವಿಳಾಸ —

ಪಂಡಿತ ಕೆ ವೆಂಕಟೇಶಯ್ಯನವರು, ಇಂಗ್ಲಿಷ್ ಮತ್ತು ಹಿಂದೂ ವೈದ್ಯಶಾಲಾ, ಶಿವಮೊಗ್ಗಾ.

ನೂತನ ಪಂಚಾಂಗವು.

10-9

ಹರಪನಹಳ್ಳಿ ತೆಗ್ಗಿನಮಠದ ಕೀಲಕ ಸಂ|| ರದ ಹೊಸಪಂಚಾಂಗದಲ್ಲಿ ಈ ವರೆಗೂ ಯಾರೂ ಪ್ರಕಟಪಡಿಸದೆ ಇರುವ ಮತ್ತು ಪ್ರತಿ ಗೃಹಸ್ಥನಿಗೂ ಅತ್ಯವಶ್ಯವಾಗಿ ಬೇಕಾಗಿರುವ ಅನೇಕ ನೂತನ ವಿಷಯಗಳನ್ನೂ, ಸುಲಭವಾಗಿ ಮುಹೂರ್ತಗಳನ್ನು ತಿಳಿಸುವ ಶಿವಲಿಖಿತ ಚಕ್ರವನ್ನು ಬರೆಯುವದಲ್ಲದೆ ಪ್ರತಿ ತಿಂಗಳಲ್ಲಿ ಮಳೆ ಬೆಳೆ ಮಾರಾಟಗಳನ್ನು ಬಹು ಪರಿಶೋಧಿಸಿರುತ್ತೇವೆ ಕನ್ನಡ ಪಂಚಾಂಗಗಳೊಳಗೆ ಶ್ರೇಷ್ಠವೆನಿಸುವ ಈ ಪಂಚಾಂಗಗಳನ್ನು ೮ ಕ್ಕೆ ಕಡಮೆ ತರಿಸಲಾರರೆಂಬ ನಂಬಿಕೆ. ಪಂಚಾಂಗ ೧ಕ್ಕೆ ಕ್ರಯ ೨ ಆಣೆ ಈ ವಿಳಾಸಕ್ಕೆ ಬರೆಯಿರಿ-

ಬ್ರ ಶ್ರೀ. ಸಿ|| ಚನ್ನವೀರಪ್ಪಶಾಸ್ತ್ರಿಗಳು, ತೆಗ್ಗಿನಮಠದ ಧರ್ಮಶಾಲಾಧ್ಯಕ್ಷರು, ಹರಪನಹಳ್ಳಿ, ಬಳ್ಳಾರಿ ಜಿಲ್ಲಾ.

ಈಗಲೇ ಸೀಮೆಯಿಂದ ಬಂದಿದೆ.

117 12

೫೦,೦೦೦ ಹಾಸನ ಟೋಪಿ ಹೊಲಿಯುವ ಸುಪೀರಿಯರ್ ಉಲನ್ ದಾರಗಳು ಬಿಡಬೇಕಿರಿ—ಮಾತ್ರ ಇದೆ—ಬೇರೆ, ಕಮ್ಮಿ ಕ್ರಯ

೧ ಟೋಪಿಯಾಗುವ ಉಲನ್ ದಾರಕ್ಕೆ	೦—೪—೦
೧೦ ಟೋಪಿಯಾಗುವ ಬಂಡಲ್‌ಗೆ ೧ ಕ್ಕೆ	೩—೮—೦
ಹೊಕ್ಕೆ ಸೂಜಿ ೧ ಕ್ಕೆ	೦—೧—೬
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೦

ಎರಡು ಕಡೆಯಲ್ಲಿ ಬರೆಯುವ ಪೋಸ್ಟ್ ಕಾರ್ಡ್ ೧೦೦ ಕ್ಕೆ ೫ ಆ ಒಂದಾಣೆ ಸ್ಟಾಂಪು ಕಳುಹಿಸಿ ನೇತ್ರಾನಂದಕರವಾದ ೧೯೧೪ ಇಸವಿಯ ಕ್ಯಾಲೆಂಡರ್ ಪಡೆಯಿರಿ ವಿಳಾಸ·—

ಪ್ರೊಪ್ರೈಟರ. ದಿ ಉಲನ್ ಮಾರ್ಟ್ ಮಂಗಳೂರು

ಕಾರ್ಡ್ ಸೈಜು ೪ × ೩

ಫೋಟೋ ತೆಗೆಯುವ

ಫೊ ಟೊ ಕ್ಯಾ ಮೆ ರಾ.

84 22

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕಲಿತಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇವಕ್ಕೆ ೧೦ ರಿಂದ ೧೫ ರೂ. ಬೆಲೆ ಹೇಳುತ್ತಾರೆ. ಆದರೆ ಇದರ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ·—

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ. ಪೋಸ್ಟ್ ಕಾಲಬಾದೇವಿ, ಮುಂಬಯಿ

ಮಹಾ ಬಾಧಾಪಹಾರಿಣಿಯು.

58-31

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು ಸಿಮೆಂಟ್‌ಯವರ ಪೈಕ್ಷಣೀ ಲೇಪನವು ಸಕಲ ವಿಧವಾದ ಬಾಧೆ ಯನ್ನು ಪರಿಹರಿಸತಕ್ಕದ್ದೆಂದು ಡಾಕ್ಟರುಗಳು ವರ್ತಕರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಿದ್ದಾರೆ. ಕೆಲವು ಸಲ ಇದನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ಹೊಟ್ಟೆನೋವು, ಕಳತ, ಗಂಟ್ಟುನೋವು, ಪಾರ್ಶ್ವ ವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕಾಲುಗಳ ಸೆಳೆತ್ತಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ ಸಿಮೆಂಟ್‌ಯವರ ಪೈಕ್ಷಣೀಯವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವ ನ್ನು ವ್ಯಾಪಿಸಿ, ಅದರ ಮಟ್ಟನ್ನೇ ಅಣಗಿಸಿಬಿಡುತ್ತದೆ. ಬಹುಮಂದಿ ಪ್ರಾಕ್ಟರರು ಇದಕ್ಕೆ ಸರಿಯಾದ ತೈಲವು ಬೇರೊಂದಿಲ್ಲವೆಂದು ಹೊಗಳಿದ್ದಾರೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೭ ಆಣೆ. ಅದರ ಮೇಲೆ ಕಿಟ್ಟ ಬಾಟ್ಲ ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂ ಗ್ ಖರ್ಚು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟ ರಿಗೆ ೧೨ ಬಾಟ್ಲ ಒಂದೆ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂ. ಈ ತೈಲವನ್ನು ಎಲ್ಲಾ ವ್ಯಾಪಾರಿಗಳು, ವೈದ್ಯರು ಬಳಿ ಯಲ್ಲಿಯೂ ಕೊಳ್ಳಬಹುದು ಮುಖ್ಯ ಏಜಂಟರ ವಿಳಾಸ—

ಎಫ್. ಡಬ್ಲ್ಯು. ಅರ್

ಸಿಮೆಂಟ್ ರೋಡ್ ಪೇಟೆ, ಮದರಾಸ್.

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

28

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನ ದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗ ಳ ದಾರವೆಲ್ಲಾ ಬೇರೆಯದ್ದು. ಅನೇ ಹಾಸನದ ಟೋಪಿಗಳೆಂದು ಎಲ್ಲ ರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿ ಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨, ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿ ಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿ ಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದ ದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವುದಿಲ್ಲ. ಸಾದ, ಕೆಂಪು, ಕಪ್ಪು, ಬೆರಿಕೆ, ಕಾಫಿ ಟೋಪಿಗಳು ೧ ರೂ ೮ ಆ.; ೧ ರೂ. ೬ ಆ.; ೧ ರೂ. ೪ ಆ.

ರೇಶ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ ದಾರದ ಟೋಪಿಗಳು ೧ ರೂ. ೧೨ ಆ., ೧ ರೂ. ೮ ಆ.; ೧ ರೂ. ೬ ಆ, ಉಸುಕಿನ ಟೋಪಿಗಳು ೧ ರೂ ೮ ಆ. ೧ ರೂ ೬ ಆ.

ಕಸುಗಳ ಟೋಪಿ, ಸೂರ್ಯ ಪೇಟೋಡು, ಅರ್ಧ ಪೇಟೋ ಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇ ಳುವಂಥವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ

ಮುಕ್ತ್ಯಂಗನಾಕಂಠಮಾಲೆ ಮತ್ತು ಜ್ಯೋತಿರ್ಮಯಶಾಂಭವಿ

7-2

ಎಂಟೇ ಕನ್ನಡವಚನ ಗ್ರಂಥಗಳರಡೂ ವೀರಶೈವ ಸಿದ್ಧಾಂತಾರ್ಥ ವನ್ನು ಸುಲಭವಾಗಿ ಆಬಾಲವೃದ್ಧರಿಗೂ ಬೋಧಿಸತಕ್ಕವುಗಳಾಗಿವೆ. ಪ್ರತಿಯೊಬ್ಬರೂ ನೋಡತಕ್ಕವುಗಳು ಅಂಚೆ ವೆಚ್ಚ ಸೇರಿ ಕ್ರಯ ೬ ಆಣೆ.

ಡಿ. ಆರ್. ತಿಪ್ಪಯ್ಯಶಾಸ್ತ್ರಿ, ಚಪ್ಪಡಮಠ.

ಹಳೇ ಅಗ್ರಹಾರ, ಮೈಸೂರು.

The Pourwal Cash Bazzar—Bangalore City.

ಧಾರಿವಾಲ್ (ಪಂಜಾಬ್) ಶಾಹಲುಗಳು.

130-7

ಕೆಂಪು, ಎಕ್ಕಬಣ್ಣ, ಕೆಂಪು, ಕೇಸರಿ, ಹಸರು. ನಶ್ಯದ ಬಣ್ಣ, ಬಾದಾಮಿ, ಕೆಂಪು ಬಿಳುಪು, ಮುಂತಾದ ಬಣ್ಣದ್ದು. ಮತ್ತು ಚೆಕ್ ನಮೂನೆ, ಪೂರಾ ಆರು ಮೊಳ ಉದ್ದ. ಮೂರು ಮೊಳ ಅಗಲವುಳ್ಳದ್ದು.

ಈಗತಾನೇ ವಿಲಾಯತಿಯಿಂದ ಬಂದಿರುವ ೫೦೦ ಪೌಂಡು ಟೋಪಿಗೆ ಲಾಯಖ್ಖಾದ ತರಹೆವಾರಿ ಉಲ್ ಮತ್ತು ಇವುಗಳಲ್ಲಿ ತಯಾರಾದ ತರಹೆವಾರಿ ಟೋಪಿಗಳು ನಮ್ಮಲ್ಲಿ ದಸ್ತಿವಾಗಿರುತ್ತವೆ.

ಇವುಗಳಲ್ಲದೆ ನೀವು ಕೇಳುವ ಯಾವ ಸಾಮಾನೇ ಆಗಲಿ ನಂಬಿಕೆಯಿಂದ ಅಗ್ಗವಾಗಿ ಕಳುಹಿಸುವೆವು. ಖರೀದಿ ವಗೈರೆ ತಿಳಿಯಬೇಕಾದವರು ಇವರಿಗೆ ಬರೆಯಿರಿ—

ಹೆಚ್. ಜವಾರ್ ಮಲ್ ಕಂಪನಿ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುಗಂಧ ಸಂಜೀವನೀ

ಭೃಂಗಾಮಲಕ ತೈಲವು.

53

ಈ ತೈಲವನ್ನು ತಲೆಗೆ, ಮೈಗೂ ಸಹ ಲೇಪಿಸಿ ಅಭ್ಯಂಗಸ್ನಾ ನಮಾಡಿದರೆ ತಲೆಯಲ್ಲಿ ಸುವಾಸನೆ, ತಂಪು, ವೃದ್ಧಿಯಾಗುವ ನೇತ್ರ ಬಲ ... ಯಾಗ ವದು ತಲೆನೋವು ಅರ್ಧ ತಲೆ ನೋವು, ತಲೆಸುತ್ತುವದು, ತಲೆಯ ಒಳಭಾಗ ಮುಂತಾದ್ದು ನಿವಾರಣೆಯಾಗುತ್ತವೆ ಕಣ್ಣೀರು ಸುರಿಯುವದು ಕಣ್ಣುರಿ, ಕಣ್ಣಿನ ನೋವು ಮುಂತಾದವುಗಳಿಗೆ ಅತ್ಯಂತ ಗುಣಕಾರಿ ಮೂಗಿನ ರಕ್ತಸ್ರಾವ, ಮೂಗು ಒಣಗುವದು ಇವುಗಳನ್ನೆಲ್ಲಾ ... ವೈ ... ಉತ್ತಮ ... ನರಗಳು ... ಬುದ್ಧಿಶಕ್ತಿ ... ಬುದ್ಧಿವೈ ... ದನ ... ಸ್ಮರಣ ಶಕ್ತಿ ... ಗಳಿಗೂ, ವಿದ್ಯಾರ್ಥಿಗಳಿಗೆ ... ಅತ್ಯಂತ ಉಪಯುಕ್ತವಾದದ್ದು ಕ್ರಯ ಸೀಸೆ ೧ಕ್ಕೆ ೧ ಆಣೆ ... ಆಣೆ.

ಡಾಕ್ಟರ್ ಅಭಿಪ್ರಾಯ

ನೀವು ನಿಮ್ಮಲ್ಲಿ ತಯಾರಾಗುವ ಸುಗಂಧ ಸಂಜೀವನಿ ಭೃಂಗಾ ಮಲಕ ತೈಲವನ್ನು ತರಿಸಿ ಉಪಯೋಗಿಸಿದೆನು. ತೈಲಕ್ಕೆ ಉಪ ಯೋಗಿಸಿದ ಪದಾರ್ಥಗಳು ... ದೇಶೀಯ ... ಹೇಳುವದಕ್ಕೆ ಬಹಳ ಸಂತೋಷವುಳ್ಳವನಾಗಿದ್ದೇನೆ ಈ ತೈಲದಿಂದ ನಾನು ಫಲವನ್ನು ಹೊಂದಿದ್ದೇನೆ ಸಂದೇಹ ಪ್ರಕೃತಿಯುಳ್ಳ ಮನು ಷ್ಯರು ... ತಯಾರಿಸಲ್ಪಟ್ಟ ಈ ತೈಲ ... ನಾನು ದೃಢ ವಾಗಿ ಹೇಳಬಲ್ಲೆನು.

—೧೯೦೮

ಬಿ ಬಾಬುರಾವ್

ರಿಟೈರ್ಡ್ ತಹಸೀಲ್ದಾರ್, ಬೆಂಗಳೂರು

ರಕ್ತಶೋಧಕ ತೈಲವು.

ಅನೇಕ ಅಧಿಕಾರಿಗಳಿಂದ ಯೋಗ್ಯತಾಪತ್ರ ಹೊಂದಿದೆ. ಕ್ರಯ ಸುಲಭ

ಕುಷ್ಠರೋಗ, ತುರಿ, ಹುರಕಾಲು, ಬಿಳಿಚಿಷ್ಟೆ ಸಾಮಾನ್ಯ, ಅನೆಚಿಷ್ಟೆ, ... ವರ್ಣ ... ಎಂಥ ... ದ್ದ ಹಳೆ ವ್ರಣವೇ ಆಗಲಿ, ಪುರಾತನ ವಿಷ ಜ್ವರ, ಇತ್ಯಾದಿ ಮಹಾ ಕಠಿಣ ರೋಗಗ ಳಲ್ಲಾ ತೀವ್ರ ಆರೋಗ್ಯವಾಗುವದು. ಈ ತೈಲವನ್ನು ಲೇಪಿಸಿದರೆ ಉರಿಯುವ ದಿಲ್ಲ. ರಸ, ಗಂಧಕ, ಮೈಲುತುತ್ತ ಮುಂ ತಾದದ್ದು ಖಂಡಿತವಾಗಿ ಇದರಲ್ಲಿ ಸೇರಿ ಸಿಲ್ಲ. ಮತ್ತು ಕರಬಾಸ, ಇತ್ಯಾದಿ ಬಾ ಧ್ಯಗಳನ್ನೆಲ್ಲಾ ಬಹುಬೇಗ ತಪ್ಪದೆ ಆ ರೋಗ್ಯವಾಗುತ್ತದೆ. ಕ್ರಯ, ಸೀಸೆ ೧ಕ್ಕೆ ೧೨ ಆಣೆ. ಅಂಚೆ ಹಾಸಲು ಬೇರೆ. ಬೇಕಾದಂತ ಎರಡು ಔಷಧಗಳೂ ದೊರೆಯುವ ಸ್ಥಳ.—

ಬಿ. ಆರ್. ಗೋವಿಂದರಾಜುಲು,

೧೩೮, ಅರಳೇಪೇಟೆ, ಬೆಂಗಳೂರು ಸಿಟಿ.

ಅಪೂರ್ವಸಮಯ

121 10

ಇದುವರೆಗೆ ಇಷ್ಟು ಅಗ್ಗವಾಗಿ ಮಾರಲಿಲ್ಲ.

ಸ್ಟಾಕ್ ಕಾವೇರಿ ನಿಯಂ ಬಹುಮಾನ

ಮೂರು ಆಕ್ಟೇವು ನಾಲ್ಕು ತಡೆ ... ರೂ ೨೫. ನಾಲ್ಕು ಆಕ್ಟೇವು ನಾಲ್ಕು ತಡೆ ರೂ ೩ ... ಐದು ಆಕ್ಟೇವು ಐದು ತಡೆ ಮತ್ತು ಎರಡು ಸೆಟ್ ರೀಡುಗಳು. ರೂ ೬೦ ಐದು ವರುಷಗಳ ಜಾಮೀನ ಸಹಿತ ಈ ವಾದ್ಯಗಳು ಸುಲಭ ಮತ್ತು ಮಧುರ ಹಿಂದೂ ಗಾನ ಗಳನ್ನು ನುಡಿಸುವುದಕ್ಕೆ ತುಂಬಾ ಸಹಾಯ ಯುಕ್ತ ಮನೆಯಲ್ಲೂ ಇರಬೇಕಾದದ್ದು

ಈಗತಾನೇ ಬಂದಿವೆ — ... ಕ್ಯಾರೆಟ್ ಚಿನ್ನದ ಮುಳ್ಳ ರುವ ಫೌಂಟನ್ ಪೆನ್ ರೂ ... ಈಗಿನ ಕ್ರಯ ರೂ. ೫ (೨) ವಿಲ್ ಸೆಟಿನ ಸ್ಟಾಂಪ್. ಮೊದಲ ಕ್ರಯ ರೂ ೩—೧೨; ಈಗ ರೂ ೧—೬ (೩) ಬಿಸ್ಕತವಾದ ಕ್ಯಾಲೆಂಡರು ಮೊದಲ ಕ್ರಯ ರೂ ೬—೮, ಈಗ ರೂ ೧—೮ ಚೊಕ್ಕಬೆಳ್ಳಿಯದು ರೂ ೯, ಈಗಿನ ಕ್ರಯ ರೂ ೩ (೪) ಸುತ್ತಾದ ಬಿರ್ಚ್ ಬ್ಯಾಂ ಕ್ ರೂ ೧೫, ಈಗ ರೂ ೭ ೧೮ ಕ್ಯಾರೆಟ್ ಚಿನ್ನದ ಸರಪಣಿ ಹತ್ತು ವರುಷಗಳ ತನಕ ಬಣ್ಣ ಕೆಡುವದಿಲ್ಲವೆಂದು ಭರ ವಸೆ ಕೊಟ್ಟದ್ದಾರೆ. ಕ್ರಯ ರೂ ೨೫ ಈಗ ರೂ. ೮ ಇಪ್ಪತ್ತೈ ದು ವರುಷಗಳ ಜಾಮೀನ್ ಕೊಡುತ್ತೇವೆ. (೬) ೧೮ ಕ್ಯಾರೆಟ್ಟಿನ ಚಿನ್ನದ ಫುಲ್ ಸೂಟಿನ ಲಿಂಕುಗಳು ಸ್ಟಡ್ ಗುಂಡಿಗಳೂ ರೂ ೨೫, ಈಗ ರೂ ೮ ಹತ್ತು ವರುಷಗಳ ಜಾಮೀನ್. (೭) ಮನೋ ಹರವಾದ ಎರಡು ರಾಗಜಾಡುಗಳ ರಾಗವಾಲ್ ಪಟ್ಟಿಗೆ ಸೊಗಸಾಗಿ ಚಿತ್ರಕೆಲಸ ಮಾಡಿದ್ದು ಕ್ರಯ ೨೦ ೨೫, ಈಗ ರೂ ೮

ಸ್ಟೀರಿಯೋಸ್ಕೋಪುಗಳು — ಈ ಯಂತ್ರದಿಂದ ಜೀವವುಳ್ಳ ಚಿತ್ರಗಳನ್ನು ನೋಡಿದಂತೆ ... ಸುಂದರವಾದದ್ದು ತುಂಬಾ ಆದ್ಭುತವಾದದ್ದು (೧) ಪಾಪ್ಯುಲರ್ ಸ್ಟೀರಿಯೋಸ್ಕೋಪ್, ೬ ಪಟ ಗಳು ಕ್ರಯ ರೂ. ೧ (೨) ಇಂಪೀರಿಯಲ್ ಸ್ಟೀರಿಯೋಸ್ಕೋಪ್, ಚಪ್ಪಯಾಗಿ ... ಬೆಲ್ವೆಟ್ ಕಾಗದದ ೨೫ ಸೆಟ್ ತಸ್ವೀ ರುಗಳ ಸಹಿತ ಕ್ರಯ ರೂ ೨—೬

ಪ್ರಖ್ಯಾತವಾದ ಫೋನೊಗ್ರಾಫ್ — ಬಹಳ ನವೀನವಾದ ತರಹ, ಪ್ರತಿ ಮನೆಯಲ್ಲಿ ಒಂದು ಇರಬೇಕು ಈ ಕ್ರಯಕ್ಕೆ ಬಹು ಉತ್ಕೃಷ್ಟವಾದದ್ದು ... ಸೇರಿದ್ದರೆ ಎಲ್ಲರಿಗೂ ಬಹು ಸ್ಪಷ್ಟವಾಗಿ ಕೇಳಿಸುವಂಥಾದ್ದು ಬಹಳ ಅಗ್ಗ, ತುಂಬಾ ಉತ್ಕೃ ಷ್ಟವಾಗಿದೆ ಕನ್ನಡದ ಆರು ಮನೋಹರವಾದ ಹಾಡುಗಳ ಪಲಿಗೆಯು ಳ್ಳದ್ದು ಎಲ್ಲಾ ಸಾಮಾನುಗಳ ಪೂರ್ಣವಾಗಿ ಕಳುಹಿಸುತ್ತೇವೆ ಕ್ರಯ ರೂ ೧೨ ... ೧ಕ್ಕೆ ರೂ ೧ ಅಡ್ವಾನ್ಸ್ ಸಿಸಲ್ಲಿ ಅರ್ಧ ... ಕಳುಹಿಸುತ್ತೇವೆ ಉಳಿದದ್ದಕ್ಕೆ ವಿ ಪಿ ಮಾಡು ತ್ತೇವೆ ... ಕೆಳಗಿನ ವಿಳಾಸಕ್ಕೆ ಬರೆಯಿರಿ.—

ಎಂ. ಎ. ಷೇಟಾಲಾ ಮತ್ತು ಕಂಪನಿ,

ಚಿತ್ತೂರು. ಉತ್ತರ ಆರ್ಕಾಟು.

ಬಹುಮಾನ.

132-6

೮ ಆಣೆ ಪೋಸ್ಟೇಜು ಸ್ಟಾಂಪು ಕಳುಹಿಸಿಕೊಟ್ಟಲ್ಲಿ ಶ್ರೀಮಚ್ಛಂ ಕರಾಚಾರ್ಯರಿಂದ ರಚಿಸಲ್ಪಟ್ಟ ೬ ಶ್ಲೋಕವುಳ್ಳ ಪ್ರಶ್ನೋತ್ತರ ರತ್ನ ಮಾಲಿಕೆಯೊಂದಿಗೆ ೮×೧೦ ಸೈಜಿನ ಶ್ರೀಮನ್ಮಹಾರಾಜರ ಫೋ ಟೋವನ್ನು, ಇದೇ ಸೈಜಿನ ಈಗಿನ ಶೃಂಗೇರಿ ಸ್ವಾಮಿಗಳ ಫೋಟೋ ವನ್ನೂ, ಶ್ರೀಮನ್ಮಹಾರಾಜ ಯುವರಾಜರುಗಳ ಛಾಯಾಚಿತ್ರಗಳಿಂದ ಕೂಡಿದ ಪ್ಲವಂಗ ಕೀಲಕ ಸಂವತ್ಸರಸಹಿತವಾದ ಹೊಸ ನಮೂನೆಯ ೧೯೦೮ ನೇ ಇಸವಿ ಹಿಂದೂ ಕ್ಯಾಲೆಂಡರನ್ನೂ, ಮತ್ತು ಶ್ರೀಮನ್ನಿರಂ ಜನ ಶ್ರೀ ಮುರುಘರಾಜೇಂದ್ರ ಸ್ವಾಮಿಗಳ ಫೋಟೋವನ್ನೂ, ಮತ್ತೆ ರಡು ಬೇರೆ ಫೋಟೋಗಳನ್ನೂ ಬಹುಮಾನವಾಗಿ ಕಳುಹಿಸುತ್ತೇವೆ. ಶಂಕರಗುರುಗಳ ಚರಿತ್ರೆ ಪಠನರೂಪ ಗುರುಗಳ ಚರಿತ್ರೆಯನ್ನು ಸವಿ ಸ್ತಾರವಾಗಿ ವರ್ಣಿಸಲ್ಪಟ್ಟಿದೆ ಕ್ರಯ ಪ್ರತಿಗೆ ೧೨ ಆಣೆ

ಈ ಪತ್ರಿಕೆಯ ಪ್ರತಿಯೊಬ್ಬ ಚಂದಾದಾರರಿಗೂ ವಿಜ್ಞಾಪನೆ ಏ ನೆಂದರೆ— "ಹನಿಗೂಡಿದರೆ ಹಳ್ಳ" ಎಂಬಂತೆ ಪ್ರತಿಯೊಬ್ಬರೂ ಮೇ ಲ್ಕಂಡ ಬಹುಮಾನವನ್ನು ದಯವಿಟ್ಟು ಕೊಂಡಿದರೆ ಬಂದ ಬಂಡವಾ ಳವನ್ನು ಸ್ವದೇಶೀಸಾಮಾನುಗಳಿಗೆ ಉಪಯೋಗಿಸಿ, ಈ ಪಟ್ಟಣದಲ್ಲಿ ಅವುಗಳಿಗೆ ಖ್ಯಾತಿಸ್ಥ್ಯವನ್ನುಂಟುಮಾಡಬೇಕೆಂಬುದೇ ನಮ್ಮ ಉದ್ದೇಶ ವೆಂದು ಸ್ವದೇಶಾಭಿಮಾನವುಳ್ಳವರಲ್ಲಿ ಅರಿಕೆಮಾಡುತ್ತೇವೆ.

ವಿಳಾಸ —ವೈ. ನಾಗಪ್ಪ, ಫಾಟ್ ಕೇಪರ್, ಕೋಟೆ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

26-4

೧ ಲೋಕಾಮಯಹರ ಕಸ್ತೂರೀ ಮಾತ್ರೆ.— ಈ ಮಾತ್ರೆ ಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊ ದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ. ಹೊಟ್ಟೆಶೂಲೆ, ಸಂದುಗಳ ನೋ ವು, ಮೈ ಕೈಕಾಲು ಸೆಳೆತ (ವಾತ), ಮೈ ನಡುಕ, ಶೀತವಾತಗಳ ಬಾಧೆ ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮು, ಸಿಗು, ನಿಶ್ಶಕ್ತಿ, ಅಪೋಜನ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಆಹಾರ ಹಾಗೇ ಉಪಯೋ ಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರು ತ್ತದೆ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿರುಚಿಗೂ ಹಾನಿ ಕೊಡದೆ, ನೀರು ಹವೆಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಸುಸ್ತು ಕಳವು, ಜ್ವರ, ಸನ್ನಿಜ್ವರ, ಶ್ಲೇಷ್ಮಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಸಹಿತ ಔಷಧದ ಸಂಗಡಲೇ ಇರುತ್ತದೆ.

೨೦೦ ಮಾತ್ರೆಯುಳ್ಳ ಕಾಪ್ಪಿಗೆ ೪ ಆಣೆ, ೭ ಕಾಪ್ಪಿಗೆ ೧ ಕಾಪ್ಪಿ ಹೆಚ್ಚು. ೧ ರಿಂದ ೧೨ ಕಾಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್ ಆರ್ ವೈದ್ಯಶಾಲಾ.

ಲಕ್ಷ್ಮೀವಿಲಾಸ ರೋಡ್ ಮೈಸೂರು.

ವಯೋಮಿಂಗಿನ ಪೆ-ರೂ-ನಾ ಇದು ಶೀತದೋಷ ಪರಿಹಾರಿ.

ಮಾಜಿ ಗವರ್ನರ್‌ವರು ಹೊಗಳುತ್ತಾರೆ. ಇದು ಉತ್ಸಾಹೋತ್ಪಾದಕ ಬಲಕಾರಿ.



ವಯೋಮಿಂಗ್ ಸಂಸ್ಥಾನದ ದಿವ್ಯ ಸಭಾಮಂದಿರವು.

ಅಧಿಕಾರಿಗಳು.

ವಿಶೇಷ ಜವಾಬ್ದಾರಿಯನ್ನು ಹೊಂದಿ ತುಂಬಾ ಸಂಬಿಗಸ್ಥರಾಗಿರುವ ದೊಡ್ಡ ದೊಡ್ಡ ಅಧಿಕಾರಿಗಳೆಲ್ಲಾ ಯಾವಾಗಲೂ ತುಂಬಾ ಕೆಲಸವುಳ್ಳವರಾಗಿದ್ದಾರೆ ಇತರ ವ್ಯಾಸಂಗಗಳಿಗೆ ಗಮನಕೊಡಲು ಅವರಿಗೆ ಸ್ವಲ್ಪವೂ ಅವಕಾಶವಿರುವುದಿಲ್ಲ. ಆದಕಾರಣ ಅಂಥಾ ಅಧಿಕಾರಿಗಳು ಯಾವುದಕ್ಕಾದರೂ ಶಿಫಾರಸು ಕಾಗದಗಳನ್ನು ಬರೆದುಕೊಡುವುದಕ್ಕೆ ಒಪ್ಪುವುದು ತುಂಬಾ ಅಪರೂಪವೇ ಸರಿ ಇದಲ್ಲದೆ ಅಂಥಾವರು ವ್ಯಾಪಾರವನ್ನು ಕುರಿತ ಯಾವ ವಿಷಯಕ್ಕಾಗಾದರೂ ಪಬ್ಲಿಕ್ಕಾಗಿ ಶಿಫಾರಸು ಬರೆದುಕೊಡುವುದೆಂದರೆ ಬಹಳ ಕಷ್ಟ, ಮತ್ತು ಅವಕ್ಕೆ ಅವರ ಮನಸ್ಸೊಪ್ಪುವುದಿಲ್ಲ.

ಅಪರೂಪವಾದ ಶಿಫಾರಸುಗಳು.

ಈ ರೀತಿಯಾಗಿ ಪಬ್ಲಿಕ್ ಅಧಿಕಾರಿಗಳು ಅಂದರೆ, ಗವರ್ನರುಗಳು, ಸಮಾಜಗಳ ಮೆಂಬರುಗಳು, ರಾಯಭಾರಿಗಳು, ಸೆನೆಟರುಗಳು ಮುಂತಾದವರು ಔಷಧದ ಪ್ರಯೋಜನದ ವಿಷಯದಲ್ಲಿ ಬಹಿರಂಗವಾಗಿ ತಮ್ಮ ಹೆಸರು ಕಾಣಿಸಿ ಶಿಫಾರಸು ಬರೆಯುವುದು ಬಹಳ ಅಪರೂಪವಾಗಿದೆ.

ಆದಕಾರಣ ಅಂಥಾ ಬಲ್ಲವರು ಮುಂದಿ ಅಧಿಕಾರಿಗಳು ಸ್ವಲ್ಪವೂ ಅನುಮಾನವಿಲ್ಲದ ಶಿಫಾರಸನ್ನು ಪೆರೂನಾ ವಿಷಯದಲ್ಲಿ ಬರೆದುಕೊಟ್ಟಿರುವುದು ದೊಡ್ಡ ಜಯಪ್ರದವೆಂದೇ ಹೇಳಬಹುದು ಬಹಳ ಕಾಲಗಳಲ್ಲಿ ತುಂಬಾ ಹೆಸರುವಾಸಿಯನ್ನು ಪಡೆದಿರತಕ್ಕ ಅನೇಕ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಅನೇಕ ವೇಳೆ ಬಹು ಸಂತೋಷದಿಂದ ಪೆರೂನಾ ವಿಷಯವನ್ನು ಹೊಗಳಿ ಬರೆದಿರುತ್ತಾರೆ.

ಅದ್ಭುತವಾದ ಸಂಗತಿಯು.

ಪೆರೂನಾವಿನಲ್ಲಿ ಬಹು ವಿಶೇಷವೂ ಮತ್ತು ಅಸಾಧಾರಣವೂ ಆದ ಗುಣವಿರುತ್ತೆಂದು ಎಲ್ಲರೂ ಹೆಸರುವಾಸಿಯನ್ನು ಪಡೆದಿರುವುದಕ್ಕೆ ಕಾರಣವನ್ನು ತಿಳಿಸಲು ಮಾರ್ಗವೇ ತೋರುವುದಿಲ್ಲ. ಆದರೆ ಎಲ್ಲಾ ತರಗತಿಗಳಲ್ಲಿರತಕ್ಕ ಜನಗಳು ಒಂದೇ ಆದ್ದರಿಂದ ಅವರೆಲ್ಲರ ಅಭಿಪ್ರಾಯವೂ ಏಕತ್ರವಾಗಿರುತ್ತದೆ.

ಸ್ವಾಭಾವಿಕವಾದ ಉತ್ಸಾಹವು.

ಒಬ್ಬ ಮನುಷ್ಯನಿಗೆ ದೀರ್ಘರೋಗವಿದ್ದು, ಇತರ ಯಾವ ಔಷಧದಿಂದಲೂ ಆ ರೋಗವಿನಾ ರಸೆಯಾಗದೆ, ಕಡೆಗೆ ಒಂದರಿಂದ ವಾಸಿಯಾದಲ್ಲಿ ಸಾಮಾನ್ಯವಾಗಿ ಅವನೂ ಅವನನ್ನು ನೋಡತಕ್ಕ ಜನರೂ ಸ್ವಾಭಾವಿಕವಾಗಿ ತಮ್ಮ ಉತ್ಸಾಹವನ್ನು ಪ್ರಕಟಪಡಿಸುತ್ತಾರೆ ದೊಡ್ಡ ಉಪಕಾರವಾದದ್ದಕ್ಕೆ ಕೃತಜ್ಞತೆಯೇ ಸ್ವಭಾವವಾಗಿದೆ ಆದಕಾರಣ ಉಪಕಾರ ಹೊಂದಿದಂಥಾ ಎಲ್ಲಾ ತರಗತಿಗಳ ಜನರೂ ತಮ್ಮ ಅನುಭವವನ್ನು ಪ್ರಕಾಶಪಡಿಸುವುದಕ್ಕಾಗಿ ಕೃತಜ್ಞತಾ ಪೂರ್ವಕವಾಗಿ ಒಪ್ಪಿಕೊಂಡಿರುವುದೇ ಮುಖ್ಯವಾದ ಮತ್ತು ವಿಶೇಷವಾದ ಕಾರ್ಯವಾಗಿದೆ

ನಿಜವಾದ ಉಪಕಾರವು.

ಪರೂನಾ ಕೂಡಲೇ ಗುಣಕೊಡುತ್ತದೆ ಇದೇ ಮುಖ್ಯಕಾರಣ ಕೈಸ್ವರೋಗಗಳನ್ನು ನಿವಾರಣೆಮಾಡಿಕೊಳ್ಳುವುದು ತುಂಬಾ ಕಷ್ಟ ಅನೇಕ ಡಾಕ್ಟರುಗಳು ಅದನ್ನು ವಾಸಿಮಾಡಲಾರದೆ ಹೋಗುತ್ತಾರೆ

ಕೃತಜ್ಞತೆಯೇ ಫಲಿಸುವುದು

ಅನೇಕ ವರುಷಗಳಿಂದ ಅನುಭವಿಸುತ್ತಿದ್ದ ದೀರ್ಘರೋಗವನ್ನೆಲ್ಲಾ ಕೆಲವು ಬಾಟ್ಲಿ ಪರೂನಾ ಔಷಧವು ವಾಸಿಮಾಡುತ್ತದೆ ಇದರಿಂದ ಸ್ವಾಭಾವಿಕವಾಗಿ ಹುಟ್ಟುವಂಥಾ ಕೃತಜ್ಞತೆಯನ್ನು ಅಣಗಿಸಿಬಿಡುವುದು ಖಂಡಿತವಾಗಿಯೂ ಅಸಾಧ್ಯವಾಗಿರುತ್ತದೆ

ನೆತ್ತಿ ಮತ್ತು ಕೊರಳ ಶೀತವು.

ಮೆ॥ ಜೋಸೆಫ್ ರೀಸ್, ೩೩೦೭ ಎಸ್ ೧೬ನೇ ಬೀದಿ, ಸೆಂಟ್ ಲೂಯಿಸ್ ಮೋ ಇವರು ಬರೆಯುವುದು.—

"ನನಗೆ ನೆತ್ತಿಯಲ್ಲೂ ಗಂಟ್ಲಿನಲ್ಲೂ ಶೀತಹಿಡಿದು ಬಹಳ ಕಷ್ಟಪಟ್ಟೆನು ಆದರೆ ಪೆರೂನಾ ಸೇವನೆಯನ್ನು ಆರಂಭಿಸಿ ಐದು ಬಾಟ್ಲಿಯಷ್ಟು ಮುಗಿಸಿದೆನು ಮತ್ತು ಎರಡು ಬಾಟ್ಲಿ ಮನಾಲಿನ್ ಉಪಯೋಗಿಸಿದೆನು ಅಷ್ಟರೊಳಗೇ ನನಗೆ ವಾಸಿಯಾಯಿತು

"ಪರೂನಾವು ತುಂಬಾ ಬಲಕಾರಿಯಾದ ಔಷಧವೆಂದು ನಾನು ಯೋಚಿಸುತ್ತೇನೆ. ಕೈಸ್ವ ರೋಗಗಳಿಂದ ಪೀಡಿತರಾದವರೆಲ್ಲಾ ಪೆರೂನಾವನ್ನೇ ಸೇವಿಸಬೇಕೆಂದು ಹೇಳುವೆನು."

ಶೀತದಿಂದ ಹುಟ್ಟುವ ಜ್ವರವು.

ಮಿಸೆಸ್ ಡಬ್ಲ್ಯು. ಕೆ ಗುಡ್, ಬ್ರಾಡ್ವೇ, ವಾ. ಇವರು ಬರೆಯುವುದು.—

"ನನಗೆ ೧೫ನೇ ವಯಸ್ಸಿನಲ್ಲಿ ಶೀತಜ್ವರ ಬಂದಿತು. ಮತ್ತು ಒಂಬತ್ತು ವರುಷಗಳಿಂದಲೂ ನನ್ನ ನೆತ್ತಿಗೆ ಶೀತಹಿಡಿದು ಬಾಧೆಪಟ್ಟೆನು

"ಅಲಕ್ಷ್ಯಮಾಡಿದ್ದರಿಂದ ಅದು ಗಂಟ್ಲಿಗೂ ಮೂಗಿಗೂ ವ್ಯಾಪಿಸಿತು. ನಿಮ್ಮ ಬಳಿಗೆ ಬಂದು ಪರೀಕ್ಷೆ ಮಾಡಿಸಿಕೊಂಡ ಮೇರೆ ನೀವು ಹೇಳಿದ ರೀತಿ ನಾಲ್ಕು ತಿಂಗಳ ವರೆಗೆ ಪರೂನಾವನ್ನು ಸೇವಿಸಿದೆನು. ಈಗ ನಾನು ಚೆನ್ನಾಗಿಯೂ ಆರೋಗ್ಯದಿಂದಲೂ ಇದ್ದೇನೆ

"ನಾನು ಪೆರೂನಾವನ್ನು ಅಷ್ಟುಮಟ್ಟಿಗೆ ಹೊಗಳಲಾರೆನು, ಎಷ್ಟು ಕೊಂಡಾಡಿದರೂ ಸ್ವಲ್ಪವೇ. ಆದರಿಂದ ಏನೇನು ಆಗುವುದೆಂದು ಹೇಳಲ್ಪಟ್ಟಿದೆಯೋ ಅದೆಲ್ಲಾ ಖಂಡಿತವಾಗಿ ನೆರವೇರುತ್ತದೆ"

ಪೆರೂನಾ ಶೀತವನ್ನು ನಿವಾರಣೆ ಮಾಡುತ್ತದೆ

ಮೆ॥ ಎಲ್. ಕ್ಲಿಫರ್ಡ್ ಫ್ರಿಗ್, ಡಾ, ೨೯೨೯ ಇ. ಮಾರ್ಗನ್ ಬೀದಿ, ಸೆಂಟ್ ರಿಚ್ಮಂಡ್, ವಾ. ಇವರು ಬರೆಯುವುದು —

"ನನಗೆ ಶೀತವಾದ ಒಡನೆಯೇ ಪೆರೂನಾವನ್ನು ತರಿಸಿಕೊಳ್ಳುತ್ತೇನೆ ಅದನ್ನು ಸೇವಿಸಿದ ಕೂಡಲೇ ಶೀತವು ಓಡಿಹೋಗುವುದು.

ವಾಸಿಯಾಗದೆಂಬ ನಿರಾಶೆಯು.

"ಕೆಲವು ವಾರಗಳ ತನಕ ನಾನು ಚೆನ್ನಾಗಿ ಸುಖವಾಗಿರಲಿಲ್ಲ ವಾಸಿಯಾದೀತೋ ಇಲ್ಲವೋ ಎಂದು ನಿರಾಶೆಯುಂಟಾಗಿತ್ತು ಯಾಕೆಂದರೆ ನನ್ನ ಸ್ನೇಹಿತರು ಹೇಳಿದಂಥಾ ನಾನಾ ಔಷಧಗಳನ್ನು ಸೇವನೆ ಮಾಡಿದೆನು ಎರಡು ವರುಷಗಳ ತನಕ ಔಷಧಗಳನ್ನು ಸೇವಿಸುತ್ತಾ ಬಂದಾಗ್ಯೂ ನನಗೆ ಸ್ವಲ್ಪವೂ ಗುಣತೋರಲಿಲ್ಲ

ಕಡೇ ಪರಿಹಾರವು

"ಕಡೆಗೆ ಪೆರೂನಾ ತರಿಸಿ ತೆಗೆದುಕೊಳ್ಳಲಾರಂಭಿಸಿದೆನು ಸ್ವಲ್ಪ ದಿನಗಳಲ್ಲೇ ನನಗೆ ಸಂಪೂರ್ಣವಾಗಿ ವಾಸಿಯಾಯಿತೆಂದು ಬಹು ಸಂತೋಷದಿಂದ ಹೇಳುತ್ತೇನೆ

"ಈಗ ಒಂದು ವರುಷದಿಂದಲೂ ನನಗೆ ಅದರ ಬಾಧೆಯೇನೂ ಇಲ್ಲ ಪೆರೂನಾ ನನ್ನ ಅಪಾರವಾದ ಕಷ್ಟವನ್ನು ನಿವಾರಣೆ ಮಾಡಿಬಿಡುತ್ತಿದ್ದರಿಂದ ಅದನ್ನು ಬಹು ಸಂತೃಪ್ತಿಯಿಂದ ಹೊಗಳುತ್ತೇನೆ."

ವಿಳಾಸ—ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು ; ಅಥವಾ,

(೨) ಇಂಗ್ಲಿಷ್ ಡ್ರಗ್ ಕಂಪನಿ, ಕ್ಲೈವ್ ಮಿಂಟ್ ಬೀದಿ, ಮದರಾಸ್,

ಮೈಸೂರು ಸೀಮೆಯಲ್ಲಿ ಪ್ಲೇಗು, ಕಾಲರಾ ಸ್ಥಿತಿ

97—12—1907 ರಿಂದ 3—1—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಸತ್ತದ್ದು.	ಕಾಲರಾ ತಗಲಿದ್ದು.
ಬೆಂಗಳೂರು ಪಟ್ಟಣ	43	35	0
ಮೈಸೂರು ,,	44	38	0
ಬೆಂಗಳೂರು ಡಿಸ್ಟ್ರಿಕ್ಟು	97	85	0
ಮೈಸೂರು ,,	160	109	0
ಕೋಲಾರ್ ,,	58	41	4
ಕೋಲಾರ್ ಚಿನ್ನದ ಗಣಿಗಳು	27	24	0
ತುಮಕೂರು ಡಿಸ್ಟ್ರಿಕ್ಟು	10	11	0
ಹಾಸನ ,,	4	7	0
ಚಿತ್ರದುರ್ಗ ,,	13	9	0
ಕಡೂರ್ ,,	15	8	21
ಶಿವಮೊಗ್ಗ ,,	6	5	0
ಮೊತ್ತ	475	370	21

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಪ್ಲವಂಗನಾಮ ಸಂವತ್ಸರದ ಪುಷ್ಯ ಶುದ್ಧ ತ್ರಯೋದಶಿ ಗುರುವಾರದಿಂದ ಪುಷ್ಯ ಬಹುಳ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಜನವರಿ.

ತಾ	ವಾರ.	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ಧನು ಮಾಸ
16	ಗುರು	* ತ್ರಯೋ	17-42	ಮೃ	9 30	3
17	ಶುಕ್ರ	† ಚತುರ್ದಶಿ	22 20	ಆ	15 20	4
18	ಶನಿವಾ	. ಪೌರ್ಣಮಿ	27 2	ಪು	21-18	5
19	ರವಿವಾ	ಪಾಡ್ಯ	32-12	ಪು	26 10	6
20	ಚಂದ್ರ	ಬಿದಿಗೆ	37 20	ಶ್ಲೇ	33 38	7
21	ಕುಜ	ತದಿಗೆ	12 10	ಮ	10 4	8
22	ಬುಧ	‡ ಚೌತಿ	16 26	ಪು	45 20	9

* ಶೂನ್ಯತಿಥಿ ವ್ಯತಿಪಾತಯೋಗ, ಶಾಕಂಬರೀವ್ರತ.

† ಮಾಗೂರು ಕೂಡೆ, ಬನಶಂಕರೀವ್ರತ

:. ಮಾಗೂರು ಛಂದೀ ಉತ್ಸವ.

‡ ಕಾಂಭಾಯನ ಗತೋರವಿ, ಮಾಗೂರು ಬಗರು ಕಡಿಯೋ...

ಪೇಟೆ ಧಾರಣೆ

ದಿನಸಿ		ಮೈಸೂರು.	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ	೧೩ ೦-೦	೧೪-೮
ಕಂಬುತಿ ಅಕ್ಕಿ ಅವಲ್		೧೩-೮ ೦	೧೩ ೮
,, ಗುಲಾಬಿ		೧೩-೦ ೦	೧೩ [illegible]
ಜೀರಾಸಣ ಅಕ್ಕಿ		೧೬-೦ ೦	೧೪-೦
ಸಣ್ಣಕ್ಕಿ ಅವಲ್		೧೫-೮ ೦	೧೬-೦
,, ದಪ್ಪ		೧೫ ೦-೦	೧೫ ೦
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೩-೮-೦	೧೫ ೦
,, ದುಂಡು		೧೨ ೯-೦	೧೪-೦
ಹೆಸ್ರ ರಾಗಿ ಪಲ್ಲಾ ೧ಕ್ಕೆ		೩ ೬ ೩	೩ ೧೨
ಕಾಪ್ರಾಗಿ		೩ ೦ ೦	೩ ೮
ಜೋಳ		೩ ೦-೦	೮ ೦
ಹುರುಳಿ ಪಲ್ಲಾ ೧ಕ್ಕೆ		೧೦ ೮-೦	೧೦-೦೨
ಬಿಳೀ ಅವರೆ		೮-೧೪-೦	೯-೪
ಹೆಸರು		೧೦-೯ ೦	೧೨ ೦
ಉದ್ದು		೧೩-೦ ೦	೧೨ ೬
ಕಡಲೆ		೧೪-೮-೦	೧೩ ೦
ಎಳ್ಳು ಪ ೧೨೩ ಕ್ಕೆ		೨೪ ೮ ೦	೨೨ ೮
ಹುರುಳಿ		೫-೮-೦	೩ ೦
ಹರಳು ೧ ೦೩ ಸೇರಿಗೆ		೧೨-೦-೦	೧೨-೮
ಸೀಗೇಕಾಯಿ ಮಣ ೧ಕ್ಕೆ		೨-೧೯ ೦	೨ ೨
ಮೆಣಸಿನಕಾಯಿ		೨ ೮ ೦	೨ ೩
,, ದುಂಡು		೨ ೪-೦	೨ ೪
ಬೆಲ್ಲ ದೊಡ್ಡ ಅಚ್ಚು		೫ ೦ ೦	೩ ೨ ೨
ಒಳ್ಳೆಣ್ಣೆ ಮಣ ೧ಕ್ಕೆ		೩-೪ ೦	೩-೦
ಹರಳೆಣ್ಣೆ ,,		೪-೧೨-೦	೪ ೧೨
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೦-೦	೩ ೪
ಉಪ್ಪು ,,		೫ ೦-೦	೫ ೦
ಹುಣಸೇ ಹಣ್ಣು		೨ ೮-೧	೨ ೦
,, ಹಳೇದು		೧-೮	೧ ೦೨
ತುಪ್ಪ ಮಣ ೧ಕ್ಕೆ		೧೩-೦ ೦	೧೫ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೪ ೧೫ ೬	೩ ೧೨
ತೆಂಗಿನಕಾಯಿ೧೦೦ ಕ್ಕೆ		೩ ೮-೬	೮ ೦
ಅಡಿಕೇಕಾಯಿ ಮಣ ೧ಕ್ಕೆ		೧-೦-೦	೧೪
ಅಂಟುವಾಳದ ಕಾಯಿ ಮಣ ೧ಕ್ಕೆ		೦-೧೨-೦	೦ ೧೨
ಚಿನ್ನ (ಪೌನ್) ಕೆಂಪು		೧೫ ೬-೦	೧೫-೪
,, ,, ಪಸಿಮೆ		೧೫-೧೦-೦	೧೫ ೬
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೪-೮
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೩೫-೦-೦	೩೧೨

Printed and Published by the Rev E THOMPSON, M. A., Proprietor and Manager, Wesley Mission Press, Mysore. 16/1/1908.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಮುಂ ದುಡ್ಡು. | ಕ್ರಯ ೧ ದುಡ್ಡು

ಪುಸ್ತಕ ೨೧ | ಮೈಸೂರು—ಸಕ ೧೯೦೮ ನೇ ಇಸವಿ ಜನವರಿ ತಾರೀಖು ೨೩ ನೇ ಗುರುವಾರ. | ಸಂಚಿಕೆ ೩೪

ಕಾರ್ಡು ಸೈಜು ೪ × ೩

ಫೋಟೋ ತೆಗೆಯುವ

ಛಪಾ ಕ್ಯಾಮಿರಾ.

ಬೆಲೆ ಪಕ್ಕ ಮೂರು ರೂಪಾಯಿ.

[illegible]

ಭೂಪಾಲರು ಭಗವಾನ ಮಹಾಜನ ರಾಕೂಡದ್ವಾರ ನಂ. ಪೋಸ್ಟು ಕಾಲಬಾದೇವಿ ಮುಂಬಯಿ.

ಜ್ವರಹರಿ

ಇದು ಸಾಧಾರಣ ಜ್ವರ, ಚಳಿಜ್ವರ, ಪಿತ್ತಜ್ವರ, ವಿಷ್ಯಜ್ವರ, ಕಾಲಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

[illegible]

ಓಮುಂ ಕರ್ಪೂರ

Omum Carpoor

[illegible]

ಸೆಕೆಂಡ್ ಬೀಚ್ ಲೈನ್, ಮದರಾಸ್.

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷೆ— ಲೋಕಪ್ರಖ್ಯಾತ—

ಅಮೃತಾಂಜನ

27 48

ತಲೆಶೂಲೆಗೆ ತ್ವರಿತಗುಣ

[illegible]

ವಿಶೇಷವಾಗಿ ಭಾರತವರ್ಷದ ಔಷಧಗಳಿಂದ ತಯಾರಿಸಿದ ಪೂರಕ ನೋಯುಗಳಿಗೂ ಸುಗ ಮುಲಾಮು. ಇದರಿಂದ ತಲೆನೋವು, ಶಿರೋವೇದನೆ, ವಾತ, ಸಂಧಿವಾತ, ಪಕ್ಷವಾತ, ಗಂಟಲು ನೋವು, ಸೊಂಟನೋವು, ಗಂಟಲು ನೋವು, ಶೀತ ಜಕಾಮು, ... ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ.

[illegible]

ಬಾಟ್ಲಿ ಒಂದಕ್ಕೆ ಕಿಮ್ಮತು ೦—೮—೦. ಪೋಸ್ಟು ಖರ್ಚು ೦—೪—೦

ಗಜಕರ್ಣದ ಮುಲಾಮು.

[illegible]

ದಂತಮಂಜನ.—[illegible]

ವಜ್ರಗುಟಿಕ.—[illegible]

ಕೇಶವರ್ಧಿನಿ.—[illegible]

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಪೋರ್ಟು, ಮುಂಬಯಿ.

ಟೆಲಿಗ್ರಾಫು ಅಡ್ರೆಸು—"ಅಮೃತಾಂಜನ," ಮುಂಬಯಿ.

ರಬ್ಬರ್ ಹ್ಯಾಂಡ್ ಪ್ರೆಸ್.

114 16

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಅಭಿವೃದ್ಧಿ [illegible] ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತಿದೆ. [illegible]

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦

ಹಾಫ್ ಫುಲ್‌ಸ್ಕ್ಯಾಫ್ ಸೈಜು, ೬—೦—೦.

ಪೋಸ್ಟೇಜು ಬೇರೆ (ಕ್ಸ್ಟ್ರಾ)

ವಿಳಾಸ. ವರ್ಧಮಾನ ಏಜನ್ಸಿ,
ಪೋಸ್ಟು ಕಾಲಬಾದೇವಿ,
ಮುಂಬಯಿ.

ಸಕ ೧೯೦೮ ನೇ ಇಸವಿಯ

127-9



ಪಂಚಾಂಗ ಸಹಿತವಾದ ಇಂಗ್ಲಿಷು—ಕನ್ನಡ ಡೈರಿ

[illegible]

ಹೊಸ ನಮೂನೆ ಉತ್ಕೃಷ್ಟವಾದ 'ಜನೀವಾ' ಡೈರಿ. ಇದು ಸರ್ಕಾರದಲ್ಲಿ ರಿಜಿಸ್ಟರಾಗಿದೆ

[illegible]

ಟಿ. ಕೆ. ಮತ್ತು ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಬಳ್ಳಾಪುರ ಪೇಟೆ, ಬೆಂಗಳೂರು ಸಿಟಿ.

ಹಣಕ್ಕೆ ನಷ್ಟವಿಲ್ಲ ! ಮಾನಕ್ಕೆ ಕೆಡುಕಿಲ್ಲ !!!

ಈಗಲೇ ವಿಲಾಯತಿಯಿಂದ ಬಂದಿವೆ.

೯ ಕ್ಯಾರೆಟ್ ಚಿನ್ನದ ಉಂಗುರಗಳು

ಇದರ ಡಿಸೈನ್, ಕೆಲಸ ನೋಡುವುದಕ್ಕೆ ಮನೋರಂಜಕವಾಗಿರುತ್ತದೆ ಇಲ್ಲಿ ನೋಡುವುದು



ದಾವದೆ ಕೂಲಿ ಮನುಷ್ಯರ ... ಕೊಡಬೇಕು ಕೆಟ್ಟರು ಮಾಡುವದು ಕೆಟ್ಟ ... ಬೇಕಾದವರು ಒಂದು ಉಂಗುರವನ್ನು ತರಿಸಿಕೊಂಡು ಪರೀಕ್ಷಿಸಿರಿ ಎರಡುತಲೆ ಹಾವಿನ ಉಂಗುರ ತಲೆಗಳಲ್ಲಿ ಪೇಸ್ಟು ಡೈಮಂಡ್ ಇಟ್ಟಿರುವದು. ಉಂಗುರ ೧ಕ್ಕೆ ಕ್ರಯ ವಿ. ಪಿ ಸಹಿತ ರೂ ೫—೭—೦ ಪೇಸ್ಟು ಡೈಮಂಡ್ ಇದಲ್ಲದೆ ಎರಡು ತಲೆ ಹಾವಿನ ಉಂಗುರ ೧ಕ್ಕೆ ಕ್ರಯ ವಿ ಪಿ ಸೇರಿ ರೂ ೭-೭-೦ ಎನೇ ನಕ್ಷೆಯಲ್ಲಿ ಕಾಣಿಸುವ ನಮೂನೆ ಉಂಗುರ ೧ಕ್ಕೆ ಕ್ರಯ ವಿ ಪಿ ಸೇರಿ ರೂ. ೬-೬-೦ ಉಂಗುರ ಬೇಕಾದವರು ಬೆರಳಿನ ಅಳತೆ ಕಳುಹಿರಿ [8-2]

ರಾಸ್ಕೊಫನ ಸಿಸ್ಟಂ ವಾಚ್ — ಈ ಗಡಿಯಾರ ಬಹಳ ಬಲವಾದದ್ದು ಬಹಳ ಬಾಳಿಕೆ ಬರುವದು ಕಾಲಕ್ಕೆ ಸರಿಯಾಗಿ ೩೦ ಘಂಟೆ



ನಡಿಯುವದು ಹಿಂದೆ ಎರಡು ಸಾರ್ತಿ ಪರೀಕ್ಷೆಯಿಂದ ಸನ್ಮಾನಿಸಿದ್ದು ಒಂದು ಸೊಗಸಾದ ಪೆಟ್ಟಿಗೆಯಲ್ಲಿಟ್ಟು ೫ ವರ್ಷದ ಗ್ಯಾರಂಟಿ ರಸೀದು ಸಹಿತ ಕಳುಹಿಸಲ್ಪಡುವದು ೧ಕ್ಕೆ ಕ್ರಯ ವಿ ಪಿ ಸೇರಿ ರೂ ೬-೦-೦

ಗಡಿಯಾರದ ಸರಪಣಿಗಳು ಅವಶ್ಯ(ವಿ)ಲ್ಲ ... ಮಾಡಲ್ಪಟ್ಟವು ... ಆಗುವದೇ ಇಲ್ಲ ಚಿನ್ನ ಬೆಳ್ಳಿಯಂತೆಯೇ ಇರುತ್ತವೆ ಇಂಗ್ಲೀಷು ನಮೂನೆಗಳು ನೋಡ ನದಕ್ಕೆ ಮನೋರಂಜಕವಾಗಿರುತ್ತವೆ ೧ಕ್ಕೆ ಕ್ರಯ ವಿ ಪಿ ಸೇರಿ ರೂ ೧-೮-೦

ಟಿ ಸಿ ಸುಗಂಧ ಸಪ್ತಪತ್ರಿ. ಉತ್ತಮವಾದದರಿಂದ ನಮ್ಮ ಸಪ್ತೆರ ಉಪಯೋಗ ... ಈಗ ಇದರಲಿ ... ಅಭ್ಯಾಸವ ಬಿಡಿಸಿ ಆಕರ್ಷಣೆ ಮಾಡುವ ಈ ನಪ್ಯ ಉಪಯೋಗಿಸುವದರಿಂದ ಪೀನಾಸಿ, ಅರಿಕಲೆನೋವು, ತಲೆನೋವು, ನೇತ್ರವ್ಯಾಧಿ, ಜಲದೋಷ, ಶೀತವೇ ಮೊದಲಾದ ... ವ್ಯಾಧಿಗಳನ್ನು ಪರಿಹರಿಸುವದು. ಸ್ಮರಣಶಕ್ತಿ ಮೇಧಾಶಕ್ತಿಯನ್ನು ಅಭಿವೃದ್ಧಿ ಮಾಡುವದು. ಯುವಕರಿಗಲೂ ... ಮನಸ್ಸಿಗೆ ಉಲ್ಲಾಸವನ್ನೂ ಉದ್ಯೋಗದಲ್ಲಿ ಉತ್ಸಾಹಕತೆಯನ್ನೂ ಉಂಟುಮಾಡುವದು. ಅನೇಕ ವ್ಯಾಧಿಗಳನ್ನು ಧ್ವಂಸ ಮಾಡುವ ಅಮೋಘವಾದ ಔಷಧರೂಪಿತ ನಶ್ಯವನ್ನು ... ಜಗತ್ತಿನಲ್ಲಿ ... ನೋಡ ಕೇಳಿಲಾರರು. ಈ ನಶ್ಯವನ್ನು ನಿರಂತರ ... ರೋಗ ... ವ್ಯಾಧಿಗಳ ... ಕ್ಯಾ ಬರಲಾರದು ... ಗಿಸಿದ ಮಾತ್ರಕ್ಕೆ ತೃಪ್ತಿಯಾಗುವದು. ಇದರಿಂದ ತಂಗಳು ... [ಸೂಕ್ಷ್ಮ ... ಇತರ ನಶ್ಯಕ್ಕೆ ಈ ಸುಗಂಧ ನಶ್ಯದ ... ಒಂದು ... ವ್ಯಾಪಿಸುವದು. ಯೂರೋಪಿಯನ್ನರ ... ಆಂದರೆ ಚಂದ್ರ ಸೂರ್ಯ ... ಈ ನಶ್ಯವು ಹಾಕುವದರಿಂದ ಯೋಗಾಭ್ಯಾಸದ ಫಲವನ್ನು ... ಸೂಕ್ಷ್ಮ ... ಬುದ್ಧಿಯನ್ನು ಸಹ ನಾಶ ಮಾಡೀತು. ಕ್ರಯ ವಿ ಪಿ ಸೇರಿ ಡಬ್ಬಿ ೧ಕ್ಕೆ ೧ ಆಣೆ ೧೨ ಡಬ್ಬಿಗಳಿಗೆ ... ರೂ ...

ಬಹುಮಾನ ! ಬಹುಮಾನ !! ಬಹುಮಾನ !!!

(೧) ಎರಡು ಡಜ ಡಬ್ಬಿಗಳನ್ನು ಒಂದೇಸಾರಿ ತರಿಸಿಕೊಳ್ಳುವವರಿಗೆ ಒಂದು ಸೊಗಸಾದ ಟೈಂಪೀಸು ಗಡಿಯಾರವನ್ನು ಬಹುಮಾನವಾಗಿ ಕಳುಹಿಸುವೆವು (೨) ನೂರು ಡಜ ಡಬ್ಬಿಗಳನ್ನು ಒಂದೇಸಾರಿ ತರಿಸಿಕೊಳ್ಳುವವರಿಗೆ ... ನಮ್ಮ ತಯಾರಾದ ... ಬೈಸಿಕಲ್ ... ನಾಲ್ಕು ... ಡಬ್ಬಿಗಳನ್ನು ಒಂದೇಸಾರಿ ತರಿಸಿಕೊಳ್ಳುವವರಿಗೆ ಒಂದು ಉತ್ಕೃಷ್ಟವಾದ ... ವಾಚನ್ನು ಕಳುಹಿಸುವೆವು

ಸೂಚನೆ —(೧) ಎರಡು ಡಜ, ... ಡಜ ಡಬ್ಬಿಗಳನ್ನು ತರಿಸಿಕೊಂಡು ಬಹುಮಾನ ಪಡೆಯತಕ್ಕವರು ... ಆರ್ಡರು ... ಆಣೆ ಪೋಸ್ಟೇಜು ಸ್ಟಾಂಪು ಕಳುಹಿಸಬೇಕು ಇಲ್ಲದಿದ್ದರೆ ಬಹುಮಾನವು ... ಕಳುಹಿಸಲು ಆಗದು. (೨) ನಾಲ್ಕು ಡಜ ಡಬ್ಬಿಗಳನ್ನು ತರಿಸಿ ... ವಾಚನ್ನು ಬಹುಮಾನ ... ೧ ರೂ ಕಳುಹಿಸಬೇಕು ಇಲ್ಲದಿದ್ದರೆ ... ಬಹುಮಾನ ... ಕಳುಹಿಸಲ್ಪಡಲಾರದು ... ವನ್ನು ನಾವು ವಿ ಪಿ ... ಬಿಕ್ಕೀಡಿನಲ್ಲಿ ತರಿಸಿಕೊಳ್ಳ ಅಲಕ್ಷ್ಯ ಮಾಡಿದರೆ ಬಹುಮಾನ ಸಿಕ್ಕಲಾರದು

ವಿಳಾಸ:—ಟಿ. ಸಿ. ಕನ್ನಯ್ಯಶೆಟ್ಟಿ ಅಂಡ್ ಸನ್.

ಜನರಲ್ ಮರ್ಚಂಟ್, ನಂ. ೨೦, ಸಿಂಗಣ್ಣನ ಬೀದಿ

ಸಾಹುಕಾರ್‌ಪೇಟೆ. ಮದರಾಸು

CHAMBERLAIN'S COUGH REMEDY.

ಚೇಂಬರ್ಲೈನ್‌ರವರು ಕಂಡು ಹಿಡಿದ ಕೆಮ್ಮಿನ ಔಷಧವು



31-1

ಶೀತದ ಕೆಮ್ಮು, ಗಂಟಲು ... ಕೆಮ್ಮು, ... ಮೊದಲಾದ ವ್ಯಾಧಿಗಳು ಇವಕ್ಕೆಲ್ಲಾ ಈ ಔಷಧವು ... ಉಪಯೋಗಿಸಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ... ತಕ್ಷಣದಲ್ಲಿ ... ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ... ಮಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವದು.

ಚೇಂಬರ್ಲೈನರವರು ಕಂಡುಹಿಡಿದಿರುವ ಕೆಮ್ಮಿನ ಔಷಧ ... ಶ್ಲೇಷ್ಮ ... ಶ್ಲೇಷ್ಮಬಿಳಿ ... ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ... ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೈನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮು ಸೇರಿಸಲ್ಪಡಲಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

... ತಯಾರಾಗಿದೆ

ಎಲ್ಲಾ ಕಡೆ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಮುಕ್ಕ್ಯಾಂಗನಾಕಂಠಮಾಲ ಮತ್ತು ಜ್ಯೋತಿರ್ಮುಯಿಶಾಂಭವಿ

73

... ಕನ್ನಡದ ಗ್ರಂಥ ... ಜ್ಯೋತಿಷ್ಯ ... ಕ್ರಯ ... ಆಣೆ

... ಶಾಸ್ತ್ರಿ ... ಮೈಸೂರು

ಪುಮುಚ್ಚೋರಿ ರೇಷ್ಮೆ ವಸ್ತ್ರಗಳು.

113-10

ಅಸಲ್ ಬೆಲೆ ! ಕ್ರಯ ರೂ ೬ !! ಒಂದು ... !!!

ಅಂಚುಗಳಲ್ಲಿ ಬಿಳಿಯ ರೇಷ್ಮೆ ... ಕೆಂಪು ರೇಷ್ಮೆ ... ಕೊಡುವದು ... ಉಪಯೋಗಿಸಲು ... ಪಡುವದು ... ಒಂದು ... ರೂ ... ವರ್ಷ ...

ಹೊಸ ಬೀರೋಸುಗಳು

ತಂಬು ಖಾತರಿ ಸೋವಿಕಾಸು ! ಬೆಲೆ ರೂ ೩ ! ಬೇಗ ತರಿಸಿಕೊಳ್ಳಿ !!

... "ಬ್ಲಾಂಕೆಟ್" ... ಹೊಸ ನಮೂನೆ ಬನಾತವು ... ಸುಖವಾದ

ಹೊದ್ದಿಕೆ ! ನೋಟಕ್ಕೆ ಅತಿರಮ್ಯ ! ಉದ್ದ ೯೦ ಅಂಗುಲ, ಅಗಲ ೬೦ ಅಂಗುಲ. ರೂ ... (ಉದ್ದ ಉಳ್ಳ)

ಪ್ರಖ್ಯಾತಿಗೊಂಡ ಮದರಾಸ್ ... ರ

ಹೊಸ ನಮೂನೆ ! ಅತ್ಯುತ್ತಮ ತಯಾರ್ !! ಒಳ್ಳೇ ಖಾತರಿ !!!

ಪ್ರಸಿದ್ಧ ಬಿಳಿಯ ... ರೇಷ್ಮೆಯ ಅಂಚುಗಳಿಂದ ... ಶ್ರೇಷ್ಠವಾದ ನೂಲಿನಿಂದ ... ಉತ್ತರೀಯ ... ಶಾಲು ...

ವಿಳಾಸ —ರಾವ್ ... ಸ್ಟೋರ್ಸ್ ... ರೋಡ್ ...

ಪೇಟೆ ಮದರಾಸು

ಹಿಂದೂಸ್ಥಾನದಲ್ಲಿ ಮಕ್ಕಳು

"ಬಹಳ ಉಷ್ಣ ರಾಜ್ಯವಾದದ್ದರಿಂದ ನಾನಾ ರೋಗಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣ ಸಣ್ಣ ಮೂಳೆಗಳಿಗೂ ಮಾಂಸಖಂಡಗಳಿಗೂ ಸರಿಯಾಗಿ ಬಲಕೊಡಬೇಕಾದ್ದರಿಂದ ... ಬಲಕಾರಿ ಯಾದ ಸೇವನ ಔಷಧವು. ಕೊಡುವುದು ಅವಶ್ಯಕ

SCOTT'S EMULSION 31 15

(ಸ್ಕಾಟ್ ಎಮಲ್ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳಿಗೂ ಬಲ ಕೊಡ ಬೆಳೆಸುವಂಥಾ ಬಲ ಉತ್ಕೃಷ್ಟವಾದ ಗುಣಗಳಿರುತ್ತವೆ.

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು.

ಕ್ಯಾಪಿಂದ ಮುಟ್ಟಿಸಿ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿದೆ

ಮೀನುಹೊತ್ತಿರುವ ಮನುಷ್ಯ ಇರುವ ಈ ಟ್ರೇಡ್‌ಮಾರ್ಕ್ ಗುರುತು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

ವ್ಯವಹಾರನಿರ್ಣಯ.

ಹೊಸ ಕನ್ನಡದ ಪ್ರೌಢ ಪುಸ್ತಕವು ... 11 ...

ಪ್ರತಿ ... ಮುದ್ರಿತ ...

... ಬೀಗರಲ್ಲಿ ... ಬರಹ ಲೆಕ್ಕ ... ಸಿವಿಲ್, ಕ್ರಿಮಿನಲ್ ಕೋರ್ಟುಗಳಿಗೂ, ಪೋಲೀಸು ... ಸುಪ್ರಸಿದ್ಧ ... ಉಪಯುಕ್ತ ... ಗ್ರಂಥವು ... ಜನರಿಗೆ ...

ವಿಳಾಸ ಗ್ರಂಥಕರ್ತರು ಎಂ ಮಲ್ಲಾರಾಧ್ಯರು.

ಫಸ್ಟ್ ಗ್ರೇಡ್ ಪ್ಲೀಡರ್ ಮೈಸೂರು

ಶ್ರೀ ವೇದಾಂತ ಪಂಚದಶೀ.

64

ಸಮಸ್ತ ... ಮತಾವಲಂಬಿಗಳಾದ ಮುಮುಕ್ಷುಗಳಿಗೆ

ಶ್ರೀಮದ್ವಿದ್ಯಾರಣ್ಯ ... ಆಚಾರ್ಯರಿಂದ ... ಜನ ಹಿತಾರ್ಥವಾಗಿ ಪೂರ್ವ ಕಾಲದಲ್ಲಿ ... ವಿರಚಿತ ವಾಗಿದ್ದಿತು

ಅದಕ್ಕೆ ತತ್ಕಾಲದ ರಾಮಕೃಷ್ಣ ಪಂಡಿತರು ಸಂಸ್ಕೃತ ಭಾಷೆಯಿಂದ ವ್ಯಾಖ್ಯಾನ ಮಾಡಿದ್ದರು ಆದರೂ ನಾಂದಬೆಲ್ಲ ... ಬೋಧೆಯಾಗುವದಿಲ್ಲವೆಂದರಿತು, ಸರಳವಾದ ಕನ್ನಡದಲ್ಲಿ ... ಪ್ರತಿಕ್ಷ(?), ಅವತರಣಿಕೆ, ಪ್ರತಿಪದ ಟೀಕೆ, ತಾತ್ಪರ್ಯ, ... ವಿಶೇಷಾರ್ಥಗಳು, ... ಸಮಾಧಾನಗಳು ... ವೇದಾಂತ ... ವ್ಯಾಕರಣದ ಪದ್ಧತಿ ... ದೊಡ್ಡ ಸೈಜು ... ಉಳ್ಳದ್ದಾಗಿರುವದು.

ಮತ್ತು ಈ ಗ್ರಂಥಕ್ಕೆ ಸಮಾನವಾದ ವೇದಾಂತ ಪ್ರಕ್ರಿಯಾ ಗ್ರಂಥಗಳು ಯಾವುವೂ ಇಲ್ಲ ಇದನ್ನು ಹೃದಯದಿಂದ ... ಅರ್ಥ ವಿಚಾರ ಮಾಡಿದವರಿಗೆ ಶೀಘ್ರವಾಗಿ ಸ್ವರೂಪ ... ಉಂಟಾಗುವುದು

ಆದ್ದರಿಂದ ವಿವೇಕಿಗಳಾದವರು ಶೀಘ್ರವಾಗಿ ಈ ಗ್ರಂಥದ ಶ್ರವಣ ಮನನಾದಿಗಳನ್ನು ... ಸಂಪಾದಿಸಿಕೊಂಡು, ಕೈವಲ್ಯ ... ಇದು ಸಮಯವಾಗಿದೆ ...

ಇದರ ಕ್ರಯ ... ಮಾತ್ರ ನಾಲ್ಕುರೂಪಾಯಿ. ... ವಿ ಪಿ. ಛಾರ್ಜು ಪ್ರತ್ಯೇಕ

ಇದು ದೊರೆಯುವ ಸ್ಥಳ, (೧) ಬೆಂಗಳೂರು ಸಿಟಿ ... ಯಲ್ಲಿ ದೊರೆಯುವುವು. ಅಥವಾ, (೨) ಬೆಂಗಳೂರು ಸಿಟಿ ... (೩) ಮೈಸೂರು ... ವೆಂಕಣ್ಣನವರಲ್ಲಿ ದೊರೆಯುವುದು

ವೃತ್ತಾಂತ ಪತ್ರಿಕೆ

೧೯೦೮ ನೇ ಇಸವಿ ಜನವರಿ ತಾ॥ ೨೩ ನೇ [illegible]

ರಾಜಕೀಯ ವಿಷಯಗಳನ್ನು ಚರ್ಚಿಸುವ ಸಾಮರ್ಥ್ಯವು

ಪಂಜಾಬ್ ಯೂನಿವರ್ಸಿಟಿ ಎಂಬ ವಿದ್ಯಾಶಾಲೆಯ [illegible] ಯಲ್ಲಿ ಮೆ॥ ಪ್ರತಾಪಚಂದ್ರ ಛಾಟರ್ಜಿ ಎಂಬ ಪ್ರಸಿದ್ಧ [illegible] ಮನುಷ್ಯರು ಅಲ್ಲಿನ ವಿದ್ಯಾರ್ಥಿಗಳಿಗೆ ಹಿತೋಪದೇಶಮಾಡು [illegible] ಮೇಲ್ಕಂಡ ವಿಷಯವನ್ನು ಕುರಿತು ಬಹು ಸ್ವಾರಸ್ಯವೂ [illegible] ಆದ ಕೆಲವು ಸಂಗತಿಗಳನ್ನು ತಿಳಿಸಿದರು [illegible] ವಿವೇಕಪೂರ್ವಕವಾದ ಮಾತುಗಳು [illegible] ಸಮಸ್ತ ಭಾಗಗಳಿಗೂ ಅನ್ವಯಿಸತಕ್ಕವುಗಳಾಗಿವೆ. ರಾಜಕೀಯ [illegible] ಕುರಿತು [illegible] ಇತರ ದೇಶಗಳ ಪೂರ್ವ ಚರಿತ್ರೆ [illegible] ಈ ರಾಷ್ಟ್ರದ [illegible] ಸ್ಥಿತಿಗತಿಗಳನ್ನು [illegible] ತಿಳಿಯಬೇಕು [illegible] ವಿವೇಕಪೂರ್ವಕ [illegible] ತಮ್ಮ ಅಭಿಪ್ರಾಯ [illegible] ಸರ್ಕಾರದವರಿಗೂ ತಿಳಿಸುವುದ [illegible] ಬಾಲಕ [illegible] ನಾಸ್ತಿಕ [illegible] ಸೂಕ್ಷ್ಮ [illegible] ರಾಜಕೀಯ ವಿಚಾರಗಳಲ್ಲಿ [illegible] ಸಲಹೆ [illegible]

ಕ್ರಿಸ್ತರ ವಾಕ್ಯ [illegible]

[illegible] ಬೈಬಲ್ ಎಂಬ [illegible] ಕನ್ನಡದಲ್ಲಿ ಅದನ್ನು ಸತ್ಯವೇದವೆಂದ [illegible] ದೇಶೀಯ ಕ್ರೈಸ್ತರು [illegible] ಚರಿತ್ರೆಯಲ್ಲಿ ಈ ಸತ್ಯವೇದವೇ [illegible] ಸುಮಾರು [illegible] ಈ ವೇದ ಗ್ರಂಥವನ್ನು ಓದಿ [illegible] ಅರ್ಥವನ್ನು [illegible] ಕ್ರೈಸ್ತ [illegible] ಎಲ್ಲರೂ [illegible] ಕರ್ತವ್ಯವಾಗಿರಬೇಕು [illegible] ಜನರನ್ನು [illegible] ಕ್ರೈಸ್ತರು ಅದನ್ನು [illegible] ಜ್ಞಾನವನ್ನು [illegible] ತಿಳಿಸಿದರು [illegible] ಅನುಭೋಗ [illegible] ಈ ಉತ್ಕೃಷ್ಟವಾದ ಗ್ರಂಥವನ್ನು [illegible] ತಮ್ಮ ಪ್ರಾಣವನ್ನೇ ಕೊಟ್ಟಿರುತ್ತಾರೆ. ಅವರ ಜ್ಞಾನ [illegible] ಅನೇಕ ವಿದ್ವಾಂಸರು ತಮ್ಮ ಜೀವಮಾನ [illegible] ಅದನ್ನು ಭೂಲೋಕದ ಜನಗಳಿಗೆ ಸಾರಲು ಅನೇಕರು ಬಂಧುಬಾಂಧವರನ್ನು ಬಿಟ್ಟು ಸ್ವಪ್ರಯೋಜನವನ್ನು ಮರೆತು ಪರಾರ್ಥವನ್ನೇ ಬಯಸಿ ಸಾವಿರಾರು ಮೈಲು ದೂರದಲ್ಲಿರುವ ದೇಶಗಳಿಗೆ ಹೋಗಿ ಕೆಲಸ ಮಾಡುವವರಾಗಿರುತ್ತಾರೆ. ಭೂಲೋಕದಲ್ಲಿ ಪಾಪವೆಂಬುದು ಭಯಂಕರವಾದುದು. ಅದರಿಂದ ತಪ್ಪಿಸಿಕೊಂಡು ಯೋಗ್ಯರಾಗಿ ನಡೆದುಕೊಳ್ಳುವುದಕ್ಕೂ ದೇವರ ಸಂಬಂಧನೆ ಮಾಡಿಕೊಳ್ಳುವುದಕ್ಕೂ ಎಲ್ಲಾ ಜನರು ಅಪೇಕ್ಷಿಸುತ್ತಾರಲ್ಲವೆ? ಹೀಗಿರುವಲ್ಲಿ ಯಾರಾದರೂ ಸತ್ಯವೇದವನ್ನು ದೀನ ಮನಸ್ಸಿನಿಂದಲೂ ಸತ್ಯವಾದದ್ದನ್ನು ಪೂರ್ಣವಾಗಿ ಅರಿತುಕೊಳ್ಳಬೇಕೆಂಬುವ ಮನಸ್ಸಿನಿಂದಲೂ ಓದಿ ಧ್ಯಾನಿಸಿದರೆ ಅಂಥವನಿಗೆ ಅದರಲ್ಲಿ ಪಾಪೋತ್ಪತ್ತಿಯ ವಿಷಯವೂ, ಪಾಪಕ್ಕೆ ಸಿಕ್ಕಿದ ಮನುಷ್ಯರ ದುಸ್ಥಿತಿಯು ಎಂಥಾದೆಂತಲೂ, ಹಾಗೆ ಪಾಪಕ್ಕೆ ಸಿಕ್ಕಿ ನರಳುತ್ತಿರುವ ಮನುಷ್ಯರ ಮೇಲೆ ದೇವರು ತನ್ನ ಕೋಪವನ್ನು ಸಾಧಿಸದೆ ಅವರನ್ನು ಪಾಪಬಂಧನದಿಂದ ಬಿಡಿಸಿಕೊಳ್ಳುವದಕ್ಕೆ ಮಾಡಿದ ಪ್ರಯತ್ನಗಳೂ, ಕಡೆಯಲ್ಲಿ ಶ್ರೀ ಭಗವಂತನೇ ಭೂಲೋಕದಲ್ಲಿ ನರಾವತಾರವೆತ್ತಿ ಶಿಲುಬೆಯ ಮೇಲೆ ಎಲ್ಲರ ಪಾಪಕ್ಕೆ ಯಾಗಬಲಿಯಾದದ್ದೂ, ಆತನ ಪುನರುತ್ಥಾನವೂ, ಆತನ ವಿಜ್ಞಾಪನೆಯೂ, ಪರಿಷ್ಕಾರವಾಗಿ ಗೊತ್ತಾಗುವವು. ಕೆಲವರು ಮತಗ್ರಂಥಗಳನ್ನು ಓದುವುದಕ್ಕೆ ಪ್ರಾರಂಭ ಮಾಡಿದರೆ ಅದರಲ್ಲಿ ತಪ್ಪುಗಳನ್ನು ಕಂಡು ಹಿಡಿಯುವುದರಲ್ಲಿ ಆಸಕ್ತರಾಗಿರುತ್ತಾರೆ. ಇದು ಶುದ್ಧ ತಪ್ಪು. ಸತ್ಯವನ್ನು ಕಂಡು ಹಿಡಿಯುವುದೇ ಮನುಷ್ಯನ ಕಾರ್ಯವಾಗಿರಬೇಕು. ಅದು ಸಿಕ್ಕಿದರೆ ಅದನ್ನು ನಿಕ್ಷೇಪದಂತಿಟ್ಟುಕೊಂಡು ಅದನ್ನು ಎಲ್ಲರಿಗೂ ಕೊಡಬೇಕು. ಹಿಂದೂ ಮತ ಗ್ರಂಥಗಳನ್ನು ಕೀಳು ಜಾತಿಯವರು ಓದಬಾರದೆಂಬ ವಿಧಿ ಇತ್ತೆಂದು ಎಲ್ಲರೂ ತಿಳಿದಿದ್ದಾರೆ. ದೇವರ ಇದಿರಿನಲ್ಲಿ ಇವನು ಶೂದ್ರನು ಇವನು ಬ್ರಾಹ್ಮಣನು ಇವನು ಕ್ರೈಸ್ತನು ಇವನು ಶಿಸ್ತನು ಎಂಬ ಭೇದವಿಲ್ಲ. ಎಲ್ಲರೂ ಅವನವರು [illegible] ಎಲ್ಲರೂ ಮೋಕ್ಷ [illegible] ಎಲ್ಲರೂ ಒಬ್ಬರಿಗೊಬ್ಬರು ಸಹಾಯಕರಾಗಿರಬೇಕು. ಇಂಥಾ [illegible] ಕ್ರೈಸ್ತರು ತಮ್ಮ ಮತವನ್ನು ಭೂಲೋಕದ ನಾಲ್ಕು ಕಡೆಗಳಲ್ಲಿ ವಿಸ್ತರಿಸುವದಕ್ಕೆ ಅಸಾಧಾರಣವಾದ ಪ್ರಯತ್ನಗಳನ್ನು ಮಾಡುತ್ತಲಿರುವರು.

ಸ್ವದೇಶದ ವೃತ್ತಾಂತಗಳು

ದಾವಣಗೆರೆ ತಾಲ್ಲೂಕಿನಲ್ಲಿ [illegible] ಕೆರೆಯನ್ನು ಕಟ್ಟಿಸಬೇಕೆಂದು ನಮ್ಮ ಸರ್ಕಾರದವರು [illegible] ಲಕ್ಷವೂ [illegible] ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

❖❖❖

ಮೈಸೂರು ಸಂಸ್ಥಾನದಲ್ಲಿ [illegible] ಫಾರೆಸ್ಟ್ ಆಫೀಸರ್‌ಗಳ [illegible] (ಕ್ಯಾಸ್ತಾ, ಫಿಟ್ಟನ್) [illegible] ಒಂದರಂತೆ ಬೆಳೆಯಿಸುತ್ತಿದೆ ಎಂದು ಸರ್ಕಾರದವರು ತಿಳಿಸಿದ್ದಾರೆ.

❖❖❖

[illegible] ಶನಿವಾರ ಮದರಾಸಿನಿಂದ ಪರಿವಾರ ಸಹಿತ ಬೆಂಗಳೂರಿಗೆ ದಯಮಾಡಿಸುವವರಾಗಿದ್ದಾರೆ. ಅವರೆಲ್ಲಾ ರಾಜಧಾನಿಗೆ ಬರತಕ್ಕ ವಿವರ ಇನ್ನೂ ಗೊತ್ತಾಗಲಿಲ್ಲ.

❖❖❖

ಗವರ್ನಮೆಂಟ್ ಉದ್ಯಾನವನಗಳ [illegible] ಸೂಪರಿಂಟೆಂಡೆಂಟ್ [illegible] ಶ್ರೀರಂಗಪಟ್ಟಣಕ್ಕೆ ಬಂದು [illegible] ಉದ್ಯಾನವನಗಳನ್ನು ನೋಡಿಕೊಂಡು ಹೋದರು.

❖❖❖

ಎರಡನೇ ಕೌನ್ಸಿಲರ್ ಮೆ॥ ಕೆ. ಪಿ. ಪುಟ್ಟಣ್ಣಶೆಟ್ಟಿ ಯವರು [illegible] ಕಮಿಷನರ್ [illegible] ರಜದಿಂದ [illegible] ತಮ್ಮ ಕೆಲಸದ ಭಾರವನ್ನು ವಹಿಸಿಕೊಂಡಿರುತ್ತಾರೆ.

❖❖❖

ಮೈಸೂರು ಗವರ್ನಮೆಂಟಿನವರು ರೈತ ಪ್ರಜೆಗಳಿಗೆ [illegible] ಬಾವಿಗಳನ್ನು [illegible] ಕಟ್ಟುವುದಕ್ಕೆ [illegible] ರೂಪಾಯಿ ಸ್ಯಾಂಕ್ಷನ್ ಮಾಡಿ, ಈ [illegible] ಸಾಲ [illegible] ಕೊಡುತ್ತಾರೆ.

❖❖❖

[illegible] ಸಂಘಗಳಿಗೆ [illegible] ಸಂಸ್ಥಾನದಲ್ಲಿ [illegible] ಪ್ರಜೆಗಳು [illegible] ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

❖❖❖

ನಮ್ಮ ಗವರ್ನಮೆಂಟಿನಲ್ಲಿ ವ್ಯವಸಾಯ ಶಾಸ್ತ್ರ ಪರಿಶೋಧನಾ ಇಲಾಖೆಯ ಅಧ್ಯಕ್ಷರಾದ ಡಾಕ್ಟರ್ ಲೆಮನ್ [illegible] ಕೆಲಸಕ್ಕೆ [illegible] ಬರೋಡಾ ಸಂಸ್ಥಾನಕ್ಕೆ ಕಳುಹಿಸಿಕೊಡಬೇಕೆಂದು [illegible] ಸರ್ಕಾರದವರು ಕೇಳಿರುತ್ತಾರೆಂತಲೂ, ಅವರು ಇನ್ನ ರಜ [illegible] ಹೋಗಬೇಕಾಗಿಲ್ಲವೆಂದೂ ತಿಳಿಯುತ್ತದೆ.

❖❖❖

ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಸಭೆಯು ತಾ [illegible] ನೆ ಬುಧವಾರ ಬೆಂಗಳೂರಿನಲ್ಲಿ ನಡೆಯುವುದು. [illegible] ಬಿಲ್ಲು, ಕೋರ್ಟ್ ಫೀ ಆಕ್ಟಿನ ತಿದ್ದುಪಡಿ, ಈ ಎರಡು ವಿಷಯಗಳ [illegible] ಸೆಲೆಕ್ಟ್ ಕಮಿಟಿಯವರು ಚರ್ಚೆ ಮಾಡಿ ರಿಪೋರ್ಟನ್ನು ತಯಾರುಮಾಡಿದ್ದಾರೆ. ಇವೆರಡು [illegible] ಸಭೆಯಲ್ಲಿ ಒಪ್ಪಿಗೆಯನ್ನು ಪಡೆದರೆ ಕಾನೂನಾಗಿ ಜಾರಿಗೆ ತರಲ್ಪಡುವವು. ಉಳಿದ ಬಿಲ್ಲುಗಳು [illegible] ಇನ್ನೂ ಸಿದ್ಧವಾಗಿಲ್ಲವೆಂದು ಕೇಳುತ್ತೇವೆ.

[illegible] ಬಾಗೇಪಲ್ಲಿ ತಾಲ್ಲೂಕಿನಲ್ಲಿ ದನಗಳಿಗೆ ಕಾಲುಬಾಯಿ ರೋಗ ಉಂಟಾಗಿರುವುದರಿಂದ ಅದನ್ನು ಹಬ್ಬದಂತೆ [illegible] ಗೋಶಾಲೆಗಳಿಗೆ [illegible] ಸರ್ಕಾರಿ ಪಶುವೈದ್ಯರಾದ ಮೆ॥ ನರಸಿಂಹಯ್ಯಂಗಾರ್ಯರು ಆ ಪ್ರಾಂತ್ಯಕ್ಕೆ ಹೋಗಿದ್ದಾರೆ. ಅವರು ಆಗಲೇ [illegible] ದನಗಳಿಗೆ [illegible] ಹಾಕಿರುವಂತೆ ಕೇಳುತ್ತೇವೆ. ರೈತ ಪ್ರಜೆಗಳೂ ಗೋಪಾಲಕರೂ ತಮ್ಮ ದನಗಳಿಗೆ ಆ ರೋಗ ಪ್ರಾಪ್ತವಾಗದಂತೆ [illegible] ಹಾಕಿಸುವರೆಂದು ನಿರೀಕ್ಷಿಸುತ್ತೇವೆ.

❖❖❖

ತಿರುಮಕೂಡ್ಲು ನರಸೀಪುರದ ತಾಲ್ಲೂಕು [illegible] ಯಲ್ಲಿ ನಡೆಯತಕ್ಕ ಜಾತ್ರೆ ಕಾಲದಲ್ಲಿ ಅಂದರೆ ಫೆಬ್ರುವರಿ ೧೦ ರಿಂದ ೧೫ ರ ತನಕ ದನಗಳ ಪ್ರದರ್ಶನವು ಸರ್ಕಾರದಿಂದ ನಡಿಸಲ್ಪಟ್ಟು, ಉತ್ತಮ ಜಾತಿಯ ದನಗಳಿಗೆ [illegible] ರೂಪಾಯಿ ತನಕ ಇನಾಂ ಹಂಚಲ್ಪಡುತ್ತವೆ. ಇದಲ್ಲದೆ ಕೆಲವು ದೊಡ್ಡ ಮನಸ್ಯರು ಬೇರೆ ಬಹುಮಾನ ಕೊಡುವುದಕ್ಕಾಗಿ ೧೦೦ ರೂಪಾಯಿ ಧರ್ಮಾರ್ಥವಾಗಿ ಕೊಟ್ಟಿದ್ದಾರೆ. ಇತರ ಎಲ್ಲಾ ವಿಷಯಗಳನ್ನು [illegible] ನರಸೀಪುರದ ಅಮಲ್ದಾರ [illegible] ತಿಳಿಯಬಹುದಾಗಿದೆ.

❖❖❖

ಬೆಂಗಳೂರು ಚೀಫ್ ಕೋರ್ಟಿನಲ್ಲಿ ಒಂದು ಮೊಕದ್ದಮೆ ನಡೆಯುವಾಗ್ಗೆ ಸಾಕ್ಷಿ ಹೇಳುವುದಕ್ಕೆ ಬಂದಿದ್ದ [illegible] ಪೊಲೀಸಿನವರು ಹಿಂಸೆ ಮಾಡಿಸಿದರೆಂದು [illegible] ಗಾಯಗಳನ್ನು [illegible] ತೋರಿಸಿದಳು. ಡಾಕ್ಟರು ಆ ಗಾಯಗಳನ್ನು ಪರೀಕ್ಷೆಮಾಡಿ, ಅವಳನ್ನು ಹಿಂಸೆಮಾಡಿರಬೇಕೆಂತಲೂ, ಅವು ಎರಡು ಮೂರು ತಿಂಗಳ ಹಳೆ ಗಾಯಗಳೆಂತಲೂ [illegible] ಈ ವಿಚಾರವನ್ನು ತನಿಖೆ ಮಾಡಬೇಕೆಂದು [illegible] ಡೆಪ್ಯುಟಿ ಕಮಿಷನರಿಗೆ ಬರೆದಿರುತ್ತಾರೆ.

❖❖❖

"[illegible]" ಎಂಬ ಒಂದು [illegible] ಪತ್ರಿಕೆಯು ಮದರಾಸ್ [illegible] ಪ್ರಕಟವಾಗಲಾರಂಭಿಸಿದೆ. ಅದರ ಮೊದಲನೇ ಸಂಚಿಕೆಯಲ್ಲಿ "ಸ್ವರಾಜ್ಯವಿಚಾರ" ಎಂಬ ಸಂಗತಿಯನ್ನು ಕುರಿತು "ಬ್ರಿಟಿಷ್ ದಂಡೋಪಾಯವೊಂದಲ್ಲದೆ ಮತ್ತಾವ ಉಪಾಯದಿಂದ ಭಾರತೀಯರಿಗೆ ಸ್ವಾರಾಜ್ಯವು ಲಭಿಸೀತು?" ಎಂಬೀ ರೀತಿ ಬರೆದಿರೋಣದರಿಂದ ಈ ಪತ್ರಿಕೆಯ ಸಾಮಾನ್ಯ ಉದ್ದೇಶವನ್ನು ವಾಚಕರು ತಿಳಿದುಕೊಳ್ಳಬಹುದಾಗಿದೆ. ಈ ಪತ್ರಿಕೆಯ ಚಂದಾ ವರ್ಷಕ್ಕೆ ರೂ [illegible] ಎಂದೂ, ಚಂದಾದಾರರಿಗೆ [illegible] ರೂಪಾಯಿನ ಬಹುಮಾನ [illegible] ಪತ್ರಿಕಾಧಿಪತಿಗಳು ತಿಳಿಸಿರುತ್ತಾರೆ.

❖❖❖

ಮೈಸೂರು ಸಂಸ್ಥಾನದಲ್ಲಿರುವ ಮಿಷನ್ ಪಾದ್ರಿಗಳ [illegible] ರೆ॥ [illegible] ಯವರೂ, ರಾಜಧಾನಿಯ ಹಾರ್ಡ್ವಿಕ್ ವಿದ್ಯಾರ್ಥಿನಿಲಯದ ಸೂಪರಿಂಟೆಂಡೆಂಟ್ ರೆ॥ ಎಚ್. ಸ್ಪೆನ್ಸರ್ ಯವರೂ, [illegible] ಸರ್ಕಲ್ ಸೂಪರಿಂಟೆಂಡೆಂಟ್ ರೆ॥ ಎ. [illegible] ರವರೂ [illegible] ಪ್ರಯಾಣ ಮಾಡುವವರಾಗಿದ್ದಾರೆ [illegible] ರೆ॥ ಜಿ. [illegible] ರೆ॥ ಡಬ್ಲ್ಯು. ಎಚ್. [illegible] ಮೈಸೂರು ಹಾರ್ಡ್ವಿಕ್ಕಿನ ಸೂಪರಿಂಟೆಂಡೆಂಟರಾಗಿಯೂ, ರೆ॥ ಇ. ಎಸ್. [illegible] ಸರ್ಕಲ್ ಸೂಪರಿಂಟೆಂಡೆಂಟರಾಗಿಯೂ [illegible] ಸರ್ಕಲ್ ಸೂಪರಿಂಟೆಂಡೆಂಟರಾಗಿ [illegible] ನೇಮಕವಾಗಿದೆ.

❖❖❖

ಒಬ್ಬ ಪತ್ರಿಕಾಕರ್ತರು ಬರೆಯುವುದು:— ದೊಡ್ಡಬಳ್ಳಾಪುರದ ತಾ॥ ಘಾಟಿಸುಬ್ರಹ್ಮಣ್ಯಸ್ವಾಮಿ ಜಾತ್ರೆಯಲ್ಲಿ ಈ ಸಾರಿ ನಡೆದ ದನಗಳ ಪ್ರದರ್ಶನಕ್ಕೆ ಮಾಗಡಿ ತಾ॥ ಹೊಂಬಾಳಮ್ಮನ ಪೇಟೆ ಗಿಡ್ಡಗೌಡನವರು [illegible] ಚಿಕ್ಕಣ್ಣನವರು [illegible] ಹಳ್ಳೀಕಾರ್ ಜಾತಿಯ [illegible] ರೂಪಾಯಿನ ಒಂದು ಜೊತೆ ಹೋರಿಗಳನ್ನು ತೆಗೆದುಕೊಂಡು ಹೋಗಿದ್ದರು. [illegible] ನೋಡಿ [illegible] ಉತ್ತಮ ಜಾತಿ, ಲಕ್ಷಣ, ಮತ್ತು ಪೋಷಣೆಗಳನ್ನು ಮೆಚ್ಚಿಕೊಂಡು ಅವುಗಳ ಮಾಲೀಕರಿಗೆ ಬಹುಮಾನವನ್ನೂ ಯೋಗ್ಯತಾ ಪತ್ರಿಕೆಯನ್ನೂ ಕೊಟ್ಟು ಪ್ರೋತ್ಸಾಹ ಪಡಿಸಿರುತ್ತಾರೆ. ಅಲ್ಲದೆ ಈ ಹೋರಿಗಳ ಫೋಟೋವನ್ನು ಸಹಾ ತೆಗೆದುಕೊಂಡರು. ಇದರಿಂದ ಈ ಪ್ರಾಂತ್ಯದ ರೈತ ಪ್ರಜೆಗಳಿಗೆ ಉತ್ತಮವಾದ ಲಕ್ಷಣವುಳ್ಳ ಗೋಜಾತಿಗಳನ್ನು ಅಭಿವೃದ್ಧಿಪಡಿಸಿ ಚೆನ್ನಾಗಿ ಕಾಪಾಡುವಂತೆ ಪ್ರೋತ್ಸಾಹವಾಯಿತು.

❖❖❖

ಮೈಸೂರು ಪಟ್ಟಣವನ್ನು ಅಭಿವೃದ್ಧಿ ಮಾಡುವುದಕ್ಕೆ ಗವರ್ನಮೆಂಟಿನವರು ಟ್ರಸ್ಟ್ ಬೋರ್ಡ್ ಎಂಬ ಇಲಾಖೆಯನ್ನು ಏರ್ಪಡಿಸಿರುತ್ತಾರೆ. ಇದುವರೆಗೆ ಈ ಇಲಾಖೆಯಲ್ಲಿ [illegible] ಬಹಳ ವಿಳಂಬದಿಂದ ಸರ್ಕಾರದವರು ಅದನ್ನು ಬಹು ಹಿತ್ತಿಗೆ [illegible] ಮಾಡಿರುತ್ತಾರೆ. ಟ್ರಸ್ಟ್ ಬೋರ್ಡಿನ [illegible] ಮೆ॥ ವಿ. ಸೀತಾರಾಮಯ್ಯನವರನ್ನು ಇತರ ಇಲಾಖೆಗೆ ವರ್ಗಮಾಡಿ, [illegible] ಆಫೀಸಿನ [illegible] ಕೆಲವ ಭಾಗವನ್ನು [illegible] ಡೆಪ್ಯುಟಿ ಕಮಿಷನರವರೇ ಟ್ರಸ್ಟ್ [illegible] ಮ್ಯುನಿಸಿಪಲ್ ಪ್ರೆಸಿಡೆಂಟರು [illegible] ಮೆ॥ [illegible] ಮನೆಗಳನ್ನು ಒಡೆಸುವುದು, ರಸ್ತೆ ಹಾಕಿ ಚರಂಡಿ [illegible] ಕಟ್ಟಿಸುವುದು, ಈ ಕೆಲಸಗಳನ್ನು ಮಾಡಿಸುತ್ತಾರೆ. ಈ ಏರ್ಪಾಡುಗಳಿಂದ ಸರ್ಕಾರಕ್ಕೆ ಸಾಲಿಯಾನಾ [illegible] ಸಾವಿರ ರೂಪಾಯಿಗಿಂತ ಹೆಚ್ಚಾಗಿ [illegible]

ದೇವಾಂಗ ಮತಸ್ಥರ ಪುರೋಭಿವೃದ್ಧಿಯು

ನಮ್ಮ ಹಿಂದೂ ಜನಾಂಗವು ಸ್ವರಾಜ್ಯನಿರ್ವಹಕ್ಕೆ ಅರ್ಹನಾಗಿ ಐಕಮತ್ಯಕ್ಕೆ ನೆಲೆಗೊಂಡು ವೃದ್ಧಿಯನ್ನೈದಬೇಕಾದರೆ, ಆ ಜನಾಂಗದ ಪ್ರಭೇದದವರೆಲ್ಲರೂ ತಮ್ಮ ತಮ್ಮಲ್ಲೇ ಸಾಕಾದಷ್ಟು ಸುಧಾರಣೆಗಳನ್ನು ಮಾಡಿಕೊಳ್ಳಬೇಕೆಂಬುದು ಸಕಲರಿಗೂ ವಿದಿತವಾದ ಉಪಾಯವೇ ಆಗಿರುವುದು ಇದನ್ನರಿತವರಾಗಿಯೇ ವೀರಶೈವರು, ಒಕ್ಕಲಿಗರು, ವೈಶ್ಯರು, ಜೈನರು ಮೊದಲಾಗಿ ಕೆಲವರು ಭರತಖಂಡದ ನಾನಾ ಕಡೆಗಳಿಂದಲೂ ತಮ್ಮ ಜನಗಳನ್ನು ಬರಮಾಡಿಕೊಂಡು, ಸಭೆಗಳನ್ನು ಸೇರಿಸಿ ತನ್ಮೂಲಕ ತಮ್ಮ ಸಮಾಜದ ಪುರೋಭಿವೃದ್ಧ್ಯರ್ಥವಾಗಿ ಅನೇಕ ಸಾಧನಗಳನ್ನು ಮಾಡುತ್ತಲಿರುವರಷ್ಟೆ. ಆದರೆ ಎಲ್ಲ ಭಾಗಗಳಲ್ಲಿಯೂ ಹಿಂದುಳಿದಿರುವ ನಮ್ಮ ದೇವಾಂಗಮತಸ್ಥರು ತಮ್ಮ ಸಮಾಜೋನ್ನತಿಗೆ ಯಾವುದೊಂದು ಪ್ರಯತ್ನವನ್ನೂ ಮಾಡದೆ ಇನ್ನೂ ನಿದ್ರಾವಸ್ಥೆಯಲ್ಲೇ ಇರುವುದಕ್ಕಾಗಿ ತುಂಬಾ ವಿಷಾದಿಸಬೇಕಾಗಿದೆ. ಈ ಮೈಸೂರು ದೇಶದಲ್ಲಿಯೇ ಈ ಜನಾಂಗದವರ ಸಂಖ್ಯೆಯು ಸುಮಾರು ೯೩,೦೦೦ ಇರುತ್ತದೆ. ಈ ಮಂಡಲಿಯವರಲ್ಲಿ ವಿದ್ಯಾವಂತರುಗಳು ಅತಿ ವಿರಳರಾಗಿರುವರಲ್ಲದೆ, ಅನೇಕರು ತಮ್ಮ ಪ್ರಾಚೀನವಾದ ಕುಲಕಸಬಿನಿಂದ ಸಾಕಾದಷ್ಟು ಜೀವನೋಪಾಯಕ್ಕೆ ಮಾರ್ಗವಿಲ್ಲದೆ ತೊಂದರೆ ಪಡುತ್ತಾ ಅತ್ಯಂತ ಶೋಚನೀಯಾವಸ್ಥೆಯಲ್ಲಿರುವರು. ಮತ್ತು ಈ ಜನರಲ್ಲಿ ಧರ್ಮಶ್ರದ್ಧೆಯೂ ದಿನೇದಿನೇ ಕ್ಷೀಣವಾಗುತ್ತಲಿದೆ. ಇವೇ ಮೊದಲಾದ ಲೋಪಗಳನ್ನೆಲ್ಲಾ ಕ್ರಮಪಡಿಸಿ ಈ ವರ್ಗಸ್ಥರನ್ನು ಉತ್ತಮಸ್ಥಿತಿಗೆ ತರತಕ್ಕದ್ದು ಈ ಜನಾಂಗದ ಮುಂದಾಳುಗಳಿಗೆ ಸೇರಿದ್ದಲ್ಲವೇ. ಈ ಜನರಲ್ಲಿ ಮಠಾಧಿಪತಿಗಳೂ, ಉಪಪನ್ನರಾದವರೂ ಅನೇಕರು ಇರುವರು. ಇಂಥಾ ಮಠಾಧಿಪತಿಗಳಲ್ಲಿ ಅಗ್ರಗಣ್ಯರಾದ ದೊಡ್ಡಬಳ್ಳಾಪುರದ ಎ. ಪಿ. ಸಂಸ್ಥಾನ ... ಮಠದ ... ಕೋಂಗಾಡಿಯಪ್ಪನವರು ತಮ್ಮ ವರ್ಗಸ್ಥರನ್ನು ಸಾಧ್ಯವಾದ ಮಟ್ಟಿಗೂ ಉತ್ತಮಸ್ಥಿತಿಗೆ ತರಬೇಕೆಂಬುದಾಗಿ ಅನೇಕ ಪ್ರಯತ್ನಗಳನ್ನು ಮಾಡುತ್ತಾ ವರ್ಗಂಪ್ರತಿಯಲ್ಲಿ ... ಯಿಂದಿಗೆ ಕಷ್ಟ ಇಲ್ಲದೆ ಸ್ವಜಾತಿಯ ಬಾಲಕರನ್ನು ಸ್ವಗೃಹದಲ್ಲಿಯೇ ಇರಿಸಿಕೊಂಡು ಎಲ್ಲಾ ಜನಾದಿಗಳಿಗೆ ನೌಕರಿಯಾಗಳನ್ನು ... ವಿದ್ಯಾದಾನವನ್ನು ಮಾಡುತ್ತಿರುವರಲ್ಲದೆ ... ವಿದ್ಯಾರ್ಥಿಗಳಿಗೆ ... ಮೊದಲಾದ ಪಟ್ಟಣಗಳಲ್ಲಿ ತಮ್ಮ ಕೈಲಾದ ... ಕಲೆಗಳನ್ನು ಕಲ್ಪಿಸಿಕೊಟ್ಟು ಮಾದ ಸಹಾಯವನ್ನು ಮಾಡುತ್ತಲಿರುವರು. ಆದರೆ ಈ ರೀತಿಯಾಗ ಇವರ ... ನಮ್ಮ ಸಮಾಜವೆಂದವರನೆಲ್ಲಾ ಅತ್ಯಲ್ಪಕಾಲದಲ್ಲಿಯೇ ಉತ್ಕೃಷ್ಟಸ್ಥಿತಿಗೆ ತರಲು ಅಸಾಧ್ಯವಾಗಿದ್ದಾಗ್ಯೂ, ಈ ... ನವರ ಸಮಾಜಾಭಿಮಾನವೂ ಔದಾರ್ಯವೂ ಸ್ತೋತ್ರಾರ್ಹವಾಗಿವೆ. ಈ ನಮ್ಮ ಮಾಹಾಬಂಧವರನ್ನೆಲ್ಲಾ ಉತ್ತಮಸ್ಥಿತಿಗೆ ತರತಕ್ಕ ... ದಿಂದಿಗೂ ಆಗಲಾರದಾದ್ದರಿಂದ, ... ಅನೇಕರು ಸೇರಿ ದೇವಾಂಗ ಮಹಾಸಭೆ ಎಂಬ ನಾಮಾಂಕಿತದಿಂದ ಒಂದು ಸಂಘವನ್ನೇರ್ಪಡಿಸಿ, ತನ್ಮೂಲಕ ನಮ್ಮ ಸಮಾಜದವರಿಗೆ ಅವಲಂಬನೆಯನ್ನಿತ್ತು, ... ನಾಗರೀಕಾದಿ ಸಕಲ ಭಾಗಗಳಲ್ಲಿಯೂ ... ಉತ್ತಮಸ್ಥಿತಿಗೆ ಬರಲು ... ಪ್ರಾರ್ಥಿಸುತ್ತೇನೆ.

ಆರ್. ರಾಮಯ್ಯ

ಮುಸಿಬಿಲ್ ಕಳ್ಳರ ಅವಾಂತ್ರವು

ಹಿಂದಿನ ಕಾಲಸ್ಲಾಕ್ ... ಪಟ್ಟಣಕ್ಕೆ ಸುಮಾರು ೨೦ ಮೈಲಿ ದೂರದಲ್ಲಿರುವ ಮಾಗನ... ನಕೆರೆ ... ಕಳ್ಳರು ಬಂದೂಕು ಕತ್ತಿ, ಭರ್ಜಿ, ಗಂಡ ಕೊಡ್ಲಿ, ಮುಂತಾದ ಆಯುಧಪಾಣಿಗಳಾಗಿ ಈ ಮಾಸ ೮ನೇ ತಾ ಶನಿವಾರ ರಾತ್ರಿ ೧೨ ಘಂಟೆ ಸಮಯದಲ್ಲಿ ಸುಮಾರು ೩೦—೩೫ ಜನಗಳವರೆಗೂ ಪ್ರವೇಶಿಸಿ, ಚೌಕದಲ್ಲಿರುವ ಅಕ್ಕಸಾಲಿಗರ ಚಿಕ್ಕೇರೈಯನ ಮನೆಯೊಳಕ್ಕೆ ಬಾಗಿಲು ಒಡೆದು ನುಗ್ಗಿ, ಒಳಗಿದ್ದ ಮುತ್ತೈದು ಜನಗಳನ್ನು ಗಂಡುಕೊಡ್ಲಿಗಳಿಂದ ಹೊಡೆದು ತುಂಬಾ ದುಃಖ ಮಾಡಿದರು. ಅಷ್ಟರಲ್ಲೇ ಈ ಮನೆಯಲ್ಲಿ ಏನೂ ದೊರೆಯದ್ದರಿಂದ ಈ ಮನೆಗೆ ಎದುರಿನಲ್ಲಿದ್ದ ವೈಶ್ಯರ ಮ॥ ಭೋಗಶೆಟ್ಟರ ಮನೆಗೆ ಪ್ರವೇಶ ಮಾಡಲು ಯತ್ನಿಸಿ, ಅಲೆಬಾಗಿಲದವನನ್ನು ಕಲ್ಲುಗ ... ಗಳಿಂದಲೂ ಕೊಡ್ಲಿಯಿಂದಲೂ ಹೊಡೆಯುತ್ತಿರುವಾಗ್ಗೆ ಒಳಗಿದ್ದವರ ಎಚ್ಚರಗೊಂಡು ಬರುವಾಗ್ಗೆ ಇನ್ನು ಜಾಸ್ತಿಯಾಗಿ ಬಾಗಲನ್ನು ಹೊಡೆಯುತ್ತಾ ಬಂದರು. ಆ ಕದ ಸುಮಾರು ಅರ್ಧ ಅಡಿ ದಪ್ಪವುಳ್ಳದ್ದಾಗಿಯೂ ಕತ್ತೀ ಮಾದವಾಗಿಯೂ ಇದ್ದದ್ದರಿಂದ ಅದು ಕಳ್ಳರಿಗೆ ಸಾಧ್ಯವಾಗದೆ ಕೇಳದ್ದರಿಂದ ಜವಳಿ ಅಂಗಡಿಗೆ ನುಗ್ಗಲು ಅದೇ ಪ್ರಕಾರ ಅಂಗಡಿ ಕದಗಳನ್ನು ಹೊಡೆಯುತ್ತಾ ಬರುವಾಗ್ಗೆ ಒಳಗಿದ್ದ ೧೫ ವರುಷದ ಜೋಗಿಶೆಟ್ಟರ ಮಗ ಮಾಳಿಗೆಯ ಮೇಲೆ ಹೊರಟು ಜನಗಳನ್ನು ಕರೆತರಲು ಹೋದನು. ಆ ದಿನ ಭೋಗಶೆಟ್ಟರು ಊರಲ್ಲಿರಲಿಲ್ಲ. ಆತನ ತಮ್ಮ ಇನ್ನೊಬ್ಬ ಬಾಲೈಯಶೆಟ್ಟರೆಂಬವರು ಧೈರ್ಯದಿಂದ ಅಂಗಡಿ ಒಳಗಿದ್ದ ಎಲ್ಲಾ ನಗನಾಣ್ಯ ಪೆಟ್ಟಿಗೆ ವಗೈರೆಯನ್ನು ಪಡಸಾಲೆಗೆ ಸಾಗಿಸಿದರು. ಅಷ್ಟರಲ್ಲೇ ಅಂಗಡಿ ಕದ ಸ್ವಲ್ಪ ಸಂದುಬಿತ್ತು. ಆಗ್ಗೆ ಸದರಿ ಬಾಲೈಯಶೆಟ್ಟರು ಅವರೊಡನೆ ಬಹಳ ಹೊತ್ತು ಅತಿ ಸಾಹಸದಿಂದ ಇವರು ಒಂದು ಕೊಡ್ಲಿ ತೆಗೆದುಕೊಂಡು ಕದವಿನ ಸದರಿನಲ್ಲೇ ಇಟ ... ಸ್ಥಳಕ್ಕೆ ಕೊಡಲಿ ಕೊಟ್ಟು ಕೊಂಡು ಬಹಳ ಹೊತ್ತು ಹೋರಾಡುತ್ತಾ ಇರುವಲ್ಲಿ ಸದರಿ ಕಳ್ಳರು ಬಂದೂಕದಿಂದ ಸದರಿ ಕದದ ಸದರಿನಲ್ಲಿ ಒಳಕ್ಕೆ ಹೊಡೆದರು. ದೈವವಶಾತ್ ಸದರಿ ಬಾಲೈಯಶೆಟ್ಟರಿಗೆ ಬಂದೂಕದ ಏಟು ತಗಲದೆ ಕೈಗೆ ಸ್ವಲ್ಪ ಒಂದು ರವೆ ತಗಲಿದ್ದರಿಂದ ಸ್ವಾಭಾವಿಯಾಗಿ ಅಂಗಡಿ ಬಿಟ್ಟು ಇನ್ನೊಂದು ಕದ ಹಾಕಿಕೊಂಡು ಪಡಸಾಲೆ ಒಳಕ್ಕೆ ಹೋದರು. ಸದರಿ ಕಳ್ಳರು ಅಂಗಡಿ ಒಳಕ್ಕೆ ಎಲ್ಲರೂ ಪ್ರವೇಶಮಾಡಿದರು. ಅಷ್ಟರಲ್ಲೇ ಬೋಗಶೆಟ್ಟರ ಮಗನಾದ ಸಿದ್ದಾಸಂಜಪ್ಪನೆಂಬವನು ಸುಮಾರು ಇನ್ನೂರು ಜನಗಳ ವರಿಗೂ ಸೇರಿಸಿಕೊಂಡು ಬರುವಾಗ್ಗೆ ಆ ಕಳ್ಳರು ಎಲ್ಲರೂ ಕತ್ತಿ ಮುಂತಾದ ಆಯುಧಗಳಿಂದ ಪಟ್ಟಾವರಿಸೆ ತಿರಿಗಿಸುತ್ತಾ ಹೊರಟುಹೋದರು. ದೈವಾನುಗ್ರಹದಿಂದ ಯಾವದಕ್ಕೂ ಸಾಧ್ಯವಾಗದೆ ಯಾರಿಗೂ ಯಾವದೆಂದು ಅಪಾಯವೂ ಸಂಭವಿಸಲಿಲ್ಲ. ಮುಖ್ಯ ಇವರು ಪುನರ್ಜನ್ಮವೆತ್ತಿದಂತಾಯಿತು. ಅಕ್ಕಸಾಲಿಗರನ್ನು ಸೂತ್ರ ಇಲಾಖೆ ಒಗ್ಗ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಅದೇ ಕಳ್ಳರು ಅದೇ ರಲ್ಲಿ ಅದೇ ಮಾರ್ಗದಿಂದ ಇಲ್ಲಿಗೆ ಸುಮಾರು ೯ ಮೈಲಿ ದೂರದಲ್ಲಿರುವ ಹಾಗಲವಾಡಿಗೆ ರಾತ್ರಿ, ಅದೇ ಹೊತ್ತಿನಲ್ಲಿ ಪ್ರವೇಶಿಸಿ, ಅಕ್ಕಸಾಲಿಗರ ಭಟ್ಟಾಚಾರಿ ಮನೆಗೆ ಕನ್ನ ಹಾಕಿ, ಸುಮಾರು ೧,೦೦೦ ರೂಪಾಯಿ ನಗನಾಣ್ಯಗಳನ್ನು ಕದ್ದುಕೊಂಡು, ಇನ್ನೊಂದು ಮನೆ ಅಂದರೆ ಅದೇ ಊರು ನಾಗಣ್ಣನ ಮಲ್ಲೈಯನ ಮನೆಗೆ ಕನ್ನಹಾಕಿ ಸುಮಾರು ೨೫೦ ರೂಪಾಯಿ ನಗನಾಣ್ಯಗಳು ಬಟ್ಟೆಬರೆ ವಿಶಿಷ್ಟವೂ ತೆಗೆದುಕೊಂಡು ಹೋಗಿರುತ್ತಾರೆ. ೭ನೇ ತಾ ರಾತ್ರಿ ಅದೇ ಕಳ್ಳರು ಇಲ್ಲಿಗೆ ಸುಮಾರು ೨ ಮೈಲಿಯಲ್ಲಿರುವ ಜಕ್ಕಲ್ಲು ಅಕ್ಕಸಾಲೆ ತಿಮ್ಮೈಯನ ಮನೆಗೆ ಪ್ರವೇಶಮಾಡಿರುತ್ತಾರೆ. ಮಾಲೇನೂ ಹೋಗಲಿಲ್ಲವೆಂಬದಾಗಿ ಹೇಳುತ್ತಾನೆ.

ಈ ದುಷ್ಟ ಕಳ್ಳರು ಬೆಳಗಿನ ಹೊತ್ತು ತಿರುಪೆ ಮೊದಲಾದ ಆ ಕಾರಗಳಿಂದ ಬಂದು, ನೋಡಿಕೊಂಡು ರಾತ್ರಿ ಪ್ರವೇಶಮಾಡುತ್ತಾರೆ. ಆದ್ದರಿಂದ ಎಲ್ಲಾ ಗ್ರಾಮದ ಜನಗಳೂ ಎಚ್ಚರದೊಡನೆ ಇರಬೇಕು. ನಮ್ಮ ಗೌರ್ನಮೆಂಟಿನಲ್ಲಿ ಒಂದು ಕುಟುಂಬಕ್ಕೆ ಒಂದು ... ಬೇಕಾದರೆ ಎಷ್ಟೋ ಆಗಬೇಕು. ಹಾಗೂ ದೊರೆಯುವದು ದುರ್ಲಭ. ಇಷ್ಟು ನಿರ್ಬಂಧವಿದ್ದರೂ ಈ ಕಳ್ಳರಿಗೆ ಬಂದೂಕು ಮದ್ದು ಗುಂಡುಗಳು ಎಲ್ಲಿಂದ ದೊರೆಯುತ್ತವೆಯೋ ... ಗನಾಯ್ಕನಕೋಟೆಯಲ್ಲಿ ಕಳ್ಳರು ಪ್ರವೇಶಮಾಡಿದ ಕಾಲದಲ್ಲಿ ಬೋರಶೆಟ್ಟರ ಕೈಲಿ ಒಂದ ಒಂದು ... ಕೆಲವು ಸಂಧಿಯನ್ನು ಕೊಂದುಹಾಕುತ್ತಿದ್ದರು. ಈಗಲೂ ಒಂದೆಂದು ಕಾಟಬಿಟದಲ್ಲಿ ಒಂದೆಂದು ಬಂದೂಕ, ಕತ್ತಿ, ವಗೈರೆ ಆಯುಧಗಳಿಟ್ಟದ್ದರೆ ಎಷ್ಟೋ ಕ್ಷೇಮಕರ. ಈಗ ಬಂದಿರತಕ್ಕ ... ಒಂದು ಕಳ್ಳನ ಆಕಾರ ಒಂದು, ಮಳೆ ... ಒಂದು. ಹೀಗಿದ್ದರೆ ಪ್ರಜೆಗಳು ಏನುಮಾಡ್ಯಾರು. ಈಗಲು ನಮ್ಮ ಮೈಸೂರು ಸರ್ಕಾರದವರು ... ದ ಆ ಕಳ್ಳರನ್ನು ಹಿಂದ ... ಒಸ್ತು ... ಇನ್ನು ... ತಕ್ಕ ಕಾರಣವಾಗತ್ತೆ. ಈ ಕಳ್ಳರು ... (ಒಂದು ... ಆಗಿ ಕಾಣ ...)

ಈ ಗಲಾಟೆ ಆದಲಾಗು ... ಈಗ್ಗೆ ... ಪೋಲಿಸ್ ದಫೇದಾರ್ ... ವಗೈರೆಯವರೆಲ್ಲಾ ರಾತ್ರಿ ಹೊತ್ತು ... ಪ್ರಮದಿಂದ ... ನೋಡುತ್ತಾರೆ. ... ಒಳಗಿನ ... ಜನಗಳನ್ನು ಹೊಡೆಸಿಕೊಂಡ ... ಕಾಡಿನ ... ಕಳ್ಳರ ... ಈ ಮಟ್ಟಿಗೆ ಎಚ್ಚರದೊಡನೆ ಇದ್ದರೆ ಯಾವ ಅಪಾಯವೂ ಸಂಭವಿಸಲಾರದು. ಈಗ್ಗೆ ಸುಮಾರು ೮ ... ೦೦ ಅಂಗಳ ಕೆಳಗೆ ಈ ಗ್ರಾಮದ ... ಭಾಗದ ಮನಗೆ ಕಳ್ಳರು ಬಿದ್ದು ಸುಮಾರು ... ೦೦ ಸಾವಿರ ರೂಪಾಯಿ ನಗನಾಣ್ಯಗಳನ್ನು ಕದ್ದುಕೊಂಡು ಹೋದರು. ಆಗ್ಗೆ ಇಷ್ಟರಮಟ್ಟಿಗೆ ಎಚ್ಚರದಲ್ಲಿದ್ದಿದ್ದರೆ ಕಳವು ಸಾಧ್ಯವಾಗುತ್ತಿರಲಿಲ್ಲ. ಈಗಲೂ ಎಲ್ಲಾ ಎಚ್ಚರದೊಡನೆ ಇರಬೇಕು.

ಒ ಕಾ ಪಟ್ಟದ ... ಲ್ಲಿ ಒಬ್ಬ

ಹಿಂದೂಗಳ ಮುಂದುವರಿಕೆ

ಇಂಡಿಯಾದೇಶದ ಬಡತನಕ್ಕೆ ಹಲವು ಕಾರಣಗಳಿವೆಯೆಂದು ಅನೇಕರು ಹೇಳುವರು. ಅವುಗಳಲ್ಲಿ ದುಂದುವೆಚ್ಚವೂ ಒಂದಾಗಿದೆ. ಎಂದಿನಿಂದ ಇದರ ಆರಂಭವಾಯಿತೆಂದು ಊಹಿಸುವುದು ಸಾಧ್ಯವಲ್ಲ. ಹಿಂದೂದೇಶೀಯರಲ್ಲಿ ಉತ್ತಮ ವರ್ಣಜರು ಎಷ್ಟೇ ಬಡವರಾಗಿದ್ದರೂ, ಅವರು ಮಾಡುವ ವೆಚ್ಚಗಳು ಯೋಗ್ಯತೆಯನ್ನು ಮೀರಿರುವವು.

ವ ಮನೆ ಮಂಡಗಳಲ್ಲಿಯೂ ಶ್ರಾದ್ಧಾದಿಗಳಲ್ಲಿಯೂ ಹಬ್ಬಗಳಲ್ಲಿಯೂ ಸಾಮಾನ್ಯವಾಗಿ ಮಾಡತಕ್ಕ ವೆಚ್ಚಗಳನ್ನವರು ತಗ್ಗಿಸಲು ಸಾಧ್ಯವಾಗಲಿಲ್ಲ. ಸಮಾಜದಲ್ಲಿ ಐಕಮತ್ಯವಿಲ್ಲದುದರಿಂದಲೂ ನೆರೆಯವರು ಮಾಡುವಂತೆ ತಾವೂ ಮಾಡಿದರೆ ಜನರಿಂದ ಮೆಚ್ಚುಗೆಯನ್ನು ಪಡೆಯುವೆವೆಂಬ ಒಂದು ದುರಭಿಪ್ರಾಯದಿಂದಲೂ ವೆಚ್ಚಗಳಿಗಾಗಿ ತಮ್ಮ ಮನೆ ಮಾರುಗಳನ್ನು ಮಾರಿ ಶಕ್ತಿಮೀರಿ ಸಾಲಗಾರರಾಗುತ್ತಾರೆ. ಕೆಲವು ಜನಾಂಗಗಳವರು ಇಂಥಿಂತಹ ಕರ್ಮಗಳಿಗೆ ಇಷ್ಟಿಷ್ಟೇ ವೆಚ್ಚವೆಂದು ನಿರ್ಣಯಿಸಿಕೊಂಡು ಹಾಗೆಯೇ ನಡೆಯುತ್ತಾ ಸುಖವಾಗಿರುವರು. ಬ್ರಾಹ್ಮಣರಲ್ಲಿಯಾದರೋ ಅವನೆಷ್ಟು ಬಡವನೇ ಆಗಿರಲಿ ಜನನಮರಣ ಶುಭಾಶುಭಗಳಲ್ಲಿ ಪುರೋಹಿತನ ಅಪ್ಪಣೆಯೇ ಪ್ರಧಾನವಾಗಿ ಯಜಮಾನನು ತನ್ನ ಶಕ್ತಿಯನ್ನು ಮೀರಿ ದ್ರವ್ಯವ್ಯಯವನ್ನು ಮಾಡಬೇಕಾಗಿದೆ. ಈಗಿನ ಕಾಲದಲ್ಲಿ ಮಳೆಯೂ ಸರಿಯಾಗಿ ಬಾರದಿರುವುದರಿಂದ ಬೆಳೆಗಳು ಕಡಿಮೆಯಾಗುತ್ತಿರುವವು. ತಕ್ಕ ವೃತ್ತಿಗಳೂ ಉದ್ಯೋಗಗಳೂ ಇಲ್ಲದುದರಿಂದ ಪ್ರತಿಯೊಬ್ಬನೂ ತನ್ನ ಸೇರಿರುವ ಕುಟುಂಬದ ಜೀವನಕ್ಕೆ ಸಾಕಾಗುವಷ್ಟನ್ನಾದರೂ ಗಳಿಸಲು ಸಾಧ್ಯವಿಲ್ಲದಿದೆ. ಇಂತಹ ಸ್ಥಿತಿಯಲ್ಲಿಯೇ ಇವನು ಹೆಚ್ಚಾದ ವೆಚ್ಚಗಳನ್ನು ಮಾಡಬೇಕಾದರೆ ಹಣವೆಲ್ಲಿಂದ ಬರಬೇಕು? ಮಸಲಾ, ಒಬ್ಬನ ಆದಾಯವು ತಿಂಗಳಿಗೆ ಹತ್ತು ಹನ್ನೆರಡು ರೂಪಾಯಿಗಳೆಂದು ತಿಳಿಯೋಣ. ಈ ಹಣದಲ್ಲಿ ಮನೆಯ ಬಾಡಿಗೆ, ಬಟ್ಟೆಬರೆಗಳು, ಇತರ ಚಿಲ್ಲರೆಯಾದ ವೆಚ್ಚಗಳು ಇಂಥವುಗಳಿಗೇನೆ ನಾಲ್ಕಾರು ರೂಪಾಯಿಗಳವರೆಗೂ ಹಿಡಿಯುವವು. ಉಳಿದುದರಲ್ಲಿ ಗಂಡಹೆಂಡಿರಿಬ್ಬರ ಜೀವನವು ಸಾಗುವುದೇ ದುಸ್ತರವೆನ್ನುವುದು. ಅವರಿಗೆ ನಾಲ್ಕಾರು ಮಂದಿ ಮಕ್ಕಳಿದ್ದಲ್ಲಿ ಪ್ರತಿಯೊಬ್ಬರಿಗೂ ಅರೆಹೊಟ್ಟೆಗೆ ಸಾಕಾಗುವಷ್ಟು ಕೂಡ ಉಳಿಯುವುದಿಲ್ಲ. ಇಂತಹ ಸಂಸಾರಿಯು ವರ್ಷಕ್ಕೆ ೪—೫ ಶ್ರಾದ್ಧಗಳನ್ನು ಮಾಡಬೇಕಾಗಿದ್ದರೆ, ಕನಿಷ್ಠಪಕ್ಷದಲ್ಲಿ ... ೦ ರೂಪಾಯಿ ಗಳಾದರೂ ಆಗತ್ಯವಿರುವವು. ಒಂದು ಕೂಸು ಹುಟ್ಟಿತೆಂದರೆ ಅದರ ನಾಮಕರಣವೆಚ್ಚ, ಬಾಣಂತಿಯ ಪೋಷಣೆ, ಮೊದಲಾದವುಗಳಿಗಾಗಿ ೫೦ ರೂಪಾಯಿಗಳಿಗಿಂತ ಕಡಿಮೆ ಸಾಕಾಗುವುದಿಲ್ಲ. ಮನೆಯವರಾರಾದರೂ ಸತ್ತರೆ, ಅವರ ಅಪರಕರ್ಮಗಳಿಗಾಗಿ ಒಂದು ವರ್ಷದ ವರೆಗೆ ಬೇಕಾಗುವ ಖಡತನದ ವೆಚ್ಚವು ೧೦೦—೧೫೦ ರೂಪಾಯಿಗಳಿಗಿಂತ ಕಡಿಮೆಯಾಗುವುದಿಲ್ಲ. ಮದುವೆಗಳಲ್ಲಿ ಸಾಲಮಾಡಿದರೆ, ಬಡ್ಡಿಗೆ ಬಡ್ಡಿಯನ್ನು ಕೂಡಿಸಿ ಒಂದಕ್ಕೆ ನಾಲ್ಕರಂತೆ ಲೆಕ್ಕವನ್ನು ಏರಿಸಿ ಮುಳುಗಿಸುವರು.

ಇವರು ಮಾಡತಕ್ಕ ದುಂದುಗಾರಿಕೆಯ ವೆಚ್ಚಗಳು ಮಾಸಿಕವಾಗಿ ಮಾಡಲ್ಪಡಬಹುದು, ಅಥವಾ, ನಾಲ್ಕಾರು ರೂಪಾಯಿಗಳಲ್ಲಿ ಮಾಡಿ ಮುಗಿಸಬಹುದು. ಹೀಗಿದ್ದರೂ, ಒಂಥ ಜನಗಳ ನಿಂದೆಗೂ ಪುರೋಹಿತರ ಆಗ್ರಹಕ್ಕೂ ಪಾತ್ರರಾಗಬೇಕೆಂಬ ಭಯದಿಂದಲೂ, ಮೌಢ್ಯಾವಸ್ಥೆಯಲ್ಲಿರುವ ಹೆಂಗಸರ ಆಕ್ಷೇಪಣೆಗೆ ಗುರಿಯಾಗಿ, ವ್ಯಕ್ತಿಪಡುವುದಕ್ಕಿಂತ ಸಾಲಗಾರರ ನುಕ್ಕಳಾಗುವುದು ಲೇಸೆಂಬ ಅನುಭವದಿಂದಲೂ ಒಬ್ಬರನ್ನು ನೋಡಿ ಮತ್ತೊಬ್ಬರು, ಪೂರ್ವಚಾರವಂತೆ ನಡೆಯುವುದೇ ಪ್ರಶಸ್ತವೆಂದು ನಿರ್ಧರಿಸಿ, ಕರ್ಮವಶರಾಗಿ ದುಃಖಿಸುತ್ತಿರುವರು. ಒಂದೊಂದು ಸಮಾಜದವರೂ ಒಗ್ಗಟ್ಟಾಗಿ, ಪ್ರತಿಯೊಂದು ಕರ್ಮಕ್ಕೂ ಇಷ್ಟಿಷ್ಟೇ ಹಣವನ್ನು ವ್ಯಯಮಾಡತಕ್ಕದೆಂದು ನಿರ್ಣಯಿಸಿಕೊಂಡು ಹಾಗೆಯೇ ನಡೆಯುತ್ತ ಬಂದಲ್ಲಿ, ಎಲ್ಲರಿಗೂ ಮೇಲುಮಟ್ಟಾಗಿ ಸೌಖ್ಯದಿಂದಿರಬಹುದು. ನಮ್ಮವರೆಲ್ಲರಿಗೂ ಈ ಕಷ್ಟಗಳು ಅರಿವಿದ್ದರೂ, ಯಾರೂ ಮುಂದಾಳಾಗಿ ನಿಲ್ಲುವುದಿಲ್ಲ.

ಇಷ್ಟೇ ಅಲ್ಲದೆ, ಅವಿವೇಕದ ವೆಚ್ಚಗಳೂ ಹಲವು ಮಾಡಲ್ಪಡುತ್ತವೆ. ಉಬಕಾಲಗಳಲ್ಲಿ ಉಡುಗೊರೆಗಳ ಬಗೆಗಾಗಿ ಬಹಳ ಹಣ ವೆಚ್ಚವಾಗುವುದು. ಇದರಿಂದ ಯಾವ ಪ್ರಯೋಜನವೂ ದೊರೆಯುವುದಿಲ್ಲ. ವೇಶ್ಯೆಯರ ನರ್ತನಾದಿಗಳಿಗೆ ತುಂಬಾ ಹಣವನ್ನು ತೆರುವರು. ಇವರ ವೆಚ್ಚಕ್ಕೇ ಹಣ ಸಾಲದೆ, ನರ್ತಕರಲ್ಲಿ ಮಾಡುವ ... ಒಂದಕ್ಕೆ ನಾಲ್ಕಾಗಿ ... ಕೊಂಡು, ... ದನಸ್ತ್ರೀಗ ... ಪಕಾರ್ಯದ ವರೆಗೂ ಬರುವುದು. ದೇಶಕ್ಕೆ ... ನಾಲ್ಕಾರು ಆನೆಗಳನ್ನು ಕೂಡಾ ವೆಚ್ಚಮಾಡರು. ಇಂತಹ ದುರ್ಮಾರ್ಗಗಳಲ್ಲಿ ದುಂದುವೆಚ್ಚಕ್ಕಾಗಿ ದ್ರವ್ಯವನ್ನು ಹಾಳುಮಾಡುತ್ತಿರುವುದನ್ನು ನೋಡಿದರೆ ... ದುಃಖವಾಗುವುದು. ಇದಕ್ಕೆ ಪರಿಹಾರವನ್ನು ಚಿಂತಿಸುವರೇ ಇಲ್ಲ. ಸರ್ಕಾರದವರೂ ಈ ವಿಷಯದಲ್ಲಿ ಕೈಹಾಕುವಂತೆ ಇಲ್ಲ. ಅದಾಯಕ್ಕೆ ಮೀರಿದ ವ್ಯಯಮಾಡ ... ಕೆಂಬ ನಿಯಮವನ್ನು ... ಮರೆತೇ ಬಿಟ್ಟರು. ಇನ್ನೂ ಕೆಲವು ವರ್ಷಗಳು ಹೀಗೆಯೇ ನಡೆದಲ್ಲಿ, ... ಜನಾಂಗದ ಜನಗಳೆಲ್ಲರೂ ದಿವಾಳಿಯಾಗುವದರಲ್ಲಿ ಸಂದೇಹವೇನೂ ಇಲ್ಲ.

... ಸಮಾಜಿಕ ಸುಧಾರಣೆಯ ಪಕ್ಷದವರು ಇ ... ನ ಕಾರ್ಯದಲ್ಲಿ ಕೈಹಾಕಿ ಮುಂದುವರಿದ ... ರೂ ನನ್ನವರು. ಏಳಿಗೆ ಬರುವುದಿಲ್ಲ ... ಹಿಂದಿನ ... ನ್ನು ಮಾಡಿ, ಕೆಲವು ನಿರ್ಣಯಗಳು ... ಏರ್ಪಡಿಸಿದ ಮೇಲೆಯೂ ರಾಜಪುತರು ವಿತರ್ಕ್ಯಯವನ್ನು ಅನುಸರಿ ... ಕ್ಷೇಮ ... ಹೇಳುತ್ತೇನೆ. ಅಂತಹ ... ಇದುವರೆಗೆ ನಮ್ಮಲ್ಲಿ ಆಪತ್ತಿಲ್ಲ. ಒಬ್ಬೊಬ್ಬರೇ ಇಂತಹ ಕಾರ್ಯಗಳನ್ನು ಕೈಕೊಂಡರೆ ಜನರ ನಗೆಗೆ ಈಡಾಗ ... ಗಳವರೂ ತಮ್ಮವರ ಆದಾಯವ್ಯಯಗಳನ್ನು ... ವೆಚ್ಚಮಾಡತಕ್ಕ ಸುಲಭ ನಿಬಂಧನೆಯನ್ನು ತಮ್ಮ ತಮ್ಮಲ್ಲಿ ನಿರ್ಣಯ ಮಾಡಿಕೊಂಡ ಅದರಂತೆಯೇ ನಡೆಯುತ್ತ ಬಂದಲ್ಲಿ, ... ಜನಾಂಗದ ದಾರಿದ್ರ್ಯವೂ ಅಡಗಿಬಿಡುವದು. ವ್ಯವಸಾಯ, ಕೈಗಾರಿಕೆ ಮೊದಲಾದವುಗಳಲ್ಲಿ ನಾವು ಇನ್ನೂ ಹೆಚ್ಚಾಗಿ ಸಂಪಾದಿಸ ಬೇಕೆಂಬ ಬಯಸಿಯೂ ಹಿಂದೂಜನರಿಗಿಲ್ಲ. ಏಕೆಂದರೆ, ಪರದೇಶೀಯರ ... ಯಂತ್ರಬಲದಿಂದ ನಡೆಸತಕ್ಕ ಕೆಲಸವನ್ನು ನಮ್ಮವರ ಕೈಯಿಂದಲೆ ಮಾಡಿ ಮುಗಿಸುವುದು ಸಾಧ್ಯವಲ್ಲ. ಎಲ್ಲಾ ಬಗೆಯ ಆದಾಯಗಳೂ ವಿದೇಶೀಯರ ಪಾಲಾಗುತ್ತಿರುವ ... ಆದುದರಿಂದ ನಮ್ಮವರೆಲ್ಲರೂ ... ದ ... ಸಾಲಕೋಲಗಳಲ್ಲದೆ ತಮಗಿರುವ ಸಂಪಾದನೆಯಲ್ಲಿಯೇ ಜೀವನಮಾಡಿಕೊಳ್ಳುವಷ್ಟು ಬುದ್ಧಿಯುಳ್ಳವರಾಗಿದ್ದಾರೆ ಸಾಕೆಂದು ಹೇಳಬಹುದು.

... ಸ್ಟೋ

ಇಂಡಿಯಾ ದೇಶದ ವೃತ್ತಾಂತಗಳು

ಪೂನೆಗೂ ... ಯಿಗೂ ನಡುವೆ ... ಲೈನಿನಲ್ಲಿ ಎರಡು ಮೈಲ್ ಗಾಡಿಗಳು ಬಡಿದಾಡಿ ಇಬ್ಬರು ರೈಲ್ವೆ ನೌಕರರು ಮೃತರಾದರು. ಇನ್ನೆಷ್ಟು ಜನಿಗೆ ಗಾಯಗಳಾಗಿವೆ.

❀❀❀

ಸಿಲೀಗರ್ (ಲಂಡ.) ದ್ವೀಪದಲ್ಲಿ ಕಳೆದ ವಾರ ಭೂಕಂಪವುಂಟಾಗಿ ಒಂದು ದಿನ ಸುಮಾರು ಅರ್ಧ ಗಂಟೆಯ ಹೊತ್ತು ... ಗುತ್ತ. ಆದರ ಅನಾಹುತಗಳೇನೂ ಸಂಭವಿಸಲಿಲ್ಲ.

❀❀❀

ದೋಸಾಬಾದ್ ಎಂಬ ರೈಲ್ವೆ ಸ್ಟೇಷನ್ ಹೆಡ್ ಆಫೀಸಿಗೆ ೮ ಜನ ಕಳ್ಳರು ನುಗ್ಗಿ ಹಣಕಾಸನ್ನೆಲ್ಲಾ ಲೂಟಿಮಾಡಿ, ಸುಮಾರು ೨ ಲಕ್ಷದ ೧೫ ಸಾವಿರ ರೂಪಾಯನ್ನು ಅಪಹರಿಸಿಕೊಂಡು ಹೋದರು.

❀❀❀

ಬಭಾರ್ಗ ಸಂಸ್ಥಾನದ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ಪ್ರಜೆಗಳ ಮಕ್ಕಳಿಗೆ ಪ್ರೈಮರಿ ವಿದ್ಯಾಭ್ಯಾಸವನ್ನು ... ತಗೆದುಕೊಳ್ಳದೆ ಮಾಫಿಯಾಗಿ ಮಾಡಿಸಬೇಕೆಂದು ಹುಕುಂ ... ಟ್ಟಿದಾರೆ.

❀❀❀

ಸಂಯುಕ್ತ ಆಧಿಪತ್ಯಗಳಲ್ಲಿ ಕ್ಷಾಮ ಪ್ರಾಪ್ತವಾಗಿರುವದರಿಂದ ಕ್ಷಾಮನಿವಾರಣೆಯ ಧರ್ಮ ಫಂಡನ್ನು ಪ್ರಾರಂಭಿಸಿ ಚಂದಾ ಕೂಡಿಸಬೇಕೆಂದು ಗೊತ್ತಾಗಿದೆ. ಇದಕ್ಕೋಸ್ಕರ ಲೆಫ್ಟಿನೆಂಟ್ ಗವರ್ನರ್ ಸರ್ ಜಾರ್ಜ್ ಹ್ಯೂಯಟ್ ಯವರು ಲಕ್ನೋ ಪಟ್ಟಣದಲ್ಲಿ ನಾಡಿದ್ದು ಒಂದು ಮಹಾ ಸಭೆಯನ್ನು ನಡಿಸುವವರಾಗಿದಾರೆ.

ಕಳೆದ ವಾರ ಸ್ವಂದರಾಬಾದಿನಲ್ಲಿ ಅರಮನೆಯ ಒಂದು ಆನೆಯು ಸ್ತ್ರೀ ಒಂದು ಹೆಣ್ಣು ಮಗುವನ್ನು ಹಿಡಿದು ಭಯಂಕರವಾದ ರೀತಿ ಯಲ್ಲಿ ಕೊಂದುಹಾಕಿದ್ದರಿಂದ ನೈಜಾಮರವರು ಹುಕುಂಕೊಟ್ಟು ಆ ದುಷ್ಟ ಮೃಗವನ್ನು ಗೋಲಿಯಿಂದ ಸುಡಿಸಿಬಿಟ್ಟರು

❦❦❦

ಕರ್ನೂಲ್ ಡಿಸ್ಟ್ರಿಕ್ಟಿನಲ್ಲಿ ಸಿದ್ದಾಪುರ ಕೆರೆ ಎಂಬ ಭಾರಿ ತಲಾವಿ ಕಾಮಗಾರಿಯನ್ನು ಪ್ರಾರಂಭಿಸಿ ಪೂರೈಸಬೇಕೆಂದು ಇಂಡಿಯಾ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ ಈ ಕಾಮಗಾರಿಗೆ ಐದು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿಯೇ ಖರ್ಚಾಗುವುದು

❦❦❦

ಕಳೆದ ವಾರ ಹಿಂದುಸ್ಥಾನದಲ್ಲಿ ೬,೯೬೩ ಜನರು ಪ್ಲೇಗ್ ಉಪದ್ರವದಲ್ಲಿ ಕಾಲವಾದರು ಈ ಸ್ವಕಿ ಬೊಂಬಾಯಿ ಅಧಿಪತ್ಯದಲ್ಲಿ ೬೬೧, ಸಂಯುಕ್ತ ಅಧಿಪತ್ಯಗಳಲ್ಲಿ ೫೩೦, ಮೈಸೂರು ಸಂಸ್ಥಾನದಲ್ಲಿ ೬೬೨, ಬಂಗಾಳದಲ್ಲಿ ೩೩೩, ಈ ರೀತಿ ಮರಣಗಳಾಗಿವೆ

❦❦❦

ಕೂಚ್ ಬೇಹಾರಿನ ಮಹಾರಾಜರವರ ಮೂರನೇ ಕುಮಾರನಾದ ಮಿಸ್ಟರ್ ನಿತ್ಯೇಂದ್ರನಾರಾಯಣ ಎಂಬಾತನು ವಿಲಾಯತಿಯಲ್ಲಿ ಕೆಲವು ದಿನ ಇದ್ದು ಅಲ್ಲಿಂದ ಅಮೇರಿಕಕ್ಕೆ ಹೋಗಿ ವ್ಯವಸಾಯ ಶಾಸ್ತ್ರವನ್ನು ಕಲಿತು ಬರಬೇಕೆಂದು ಈ ವಾರ ಪ್ರಯಾಣಮಾಡಿರುತ್ತಾನೆ

❦❦❦

ರಾಜಾ ರವಿವರ್ಮರವರೆಂಬ ಪ್ರಸಿದ್ಧ ಚಿತ್ರಗಾರರ ಕುಮಾರರಾದ ರಾಜಾ ರಾಮವರ್ಮರವರು ಅವರ ತಂದೆಯ ಕಸಬನ್ನೇ ಮಾಡುತ್ತಿರುವರೆಂತಲೂ, ಈಗ ಇವರು ರೀವಾ ಸಂಸ್ಥಾನಕ್ಕೆ ಹೋಗಿ ಅಲ್ಲಿನ ಮಹಾರಾಜರವರ ಭಾವಚಿತ್ರವನ್ನು ಬರೆಯುತ್ತಿದಾರೆಂತಲೂ ತಿಳಿದುಬಂದಿದೆ.

❦❦❦

ಬಂಗಾಳದಲ್ಲಿ ಪ್ರಕಟವಾಗುವ "ವಂದೇ ಮಾತರಂ" ಎಂಬ ಪತ್ರಿಕೆಯ ಎಡಿಟರಾದ ಬಾಬು ಅರವಿಂದಘೋಷ್‌ರವರು ಕಳೆದ ವಾರ ಪುಣಾಪಟ್ಟಣಕ್ಕೆ ಬಂದಿದ್ದಾಗ ಸ್ವದೇಶೀ ಬಹಿಷ್ಕಾರ, ಪರದೇಶೀ ಬಹಿಷ್ಕಾರ ವೆಂಬೀ ವಿಷಯವನ್ನು ಕುರಿತು ಬಹು ಚಿಂತಿತವಾದ ಉಪನ್ಯಾಸ ಮಾಡಿದರು

❦❦❦

ಚಾಲ್ತಿ ಸಾಲಿನ ಕಡೆ ೩ ತಿಂಗಳಲ್ಲಿ ಪರದೇಶಗಳಿಂದ ೬೯ ಕೋಟಿ ರೂಪಾಯಿ ಬೆಲೆಬಾಳುವಷ್ಟು ಚಿನ್ನ ಬೆಳ್ಳಿ ಹಿಂದುಸ್ಥಾನಕ್ಕೆ ಬಂದಿರುವುದರಿಂದ ಸುಮಾರು ೧೩ ಕೋಟಿ ರೂಪಾಯಿನಷ್ಟು ಬೆಳ್ಳಿಯನ್ನು ಟಂಕಸಾಲೆಗಳಲ್ಲಿ ಹಾಕಿ, ಗವರ್ನ್‌ಮೆಂಟಿನವರು ಬೆಳ್ಳಿಯ ನಾಣ್ಯಗಳನ್ನು ಮಾಡಿ ಚಲಾವಣೆಗೆ ತಂದಿರುವರು.

❦❦❦

ಹಿಂದುಸ್ಥಾನದಲ್ಲೆಲ್ಲಾ ಈಗ ೩ ಲಕ್ಷವೂ ೧೩ ಸಾವಿರ ಪ್ರಜೆಗಳು ಕ್ಷಾಮನಿಮಿತ್ತ ಸರ್ಕಾರದವರ ರಿಲೀಫ್ ಕಾಮಗಾರಿಗಳಲ್ಲಿ ಪರ್ವತ ಕೆಲಸಗಳಲ್ಲಿ ಸೇರಿಕೊಂಡು ಹೊಟ್ಟೆ ಹೊರೆದುಕೊಳ್ಳುತ್ತಿದಾರೆ, ಆದರೆ ಹಿಂದಿನ ವಾರದ ಸಂಖ್ಯೆಗಿಂತಲೂ ಈ ವಾರ ೩೩,೦೦೦ ಜನರು ಹೆಚ್ಚಾಗಿರುತ್ತಾರೆಂದು ತಿಳಿಯುತ್ತದೆ.

❦❦❦

ಕಲ್ಕತ್ತಾ ಪಟ್ಟಣದಲ್ಲಿ ಮಹಾ ದುರ್ಭಿಕ್ಷರೆಂತಲೂ ಪ್ರಜಾಪಕ್ಷದವರೆಂತಲೂ ಕೀರ್ತಿಯನ್ನು ಪಡೆದಿದ್ದ ಮಹಾರಾಜ ಸರ್ ಜತೀಂದ್ರಮೋಹನಟಾಗೂರ್‌ರವರು ಕಳೆದ ವಾರ ಕಾಲವಾದರು ಅವರ ಸ್ಥಾನವನ್ನು ಅವರ ಕುಮಾರರಾದ ಮಹಾರಾಜ ಕುಮಾರ್ ಪ್ರದ್ಯೋತ ಕುಮಾರ್ ಟಾಗೂರ್‌ರವರು ಅಲಂಕರಿಸುವರು

❦❦❦

ಮುಂದಿನ ಮಾರ್ಚಿ ೭ ನೇ ತಾರೀಖಿನ ದಿನ ಕಲ್ಕತ್ತಾ ಪಟ್ಟಣದ ಯೂನಿವರ್ಸಿಟಿ ಎಂಬ ವಿದ್ಯಾನಿಲಯದ ವಾರ್ಷಿಕ ಪಟ್ಟಪ್ರದಾನ ಸಭೆಯು ಜರುಗುವದೆಂತಲೂ, ಆ ಸಮಾಜದಲ್ಲಿ ಮೈಸೂರಾಯ್ ಲಾರ್ಡ್ ಮಿಂಟೋ ಪ್ರಭುಗಳು ಅಗ್ರಾಸನವನ್ನು ವಹಿಸಿ, ವಿದ್ಯಾವಿಚಾರವನ್ನು ಕುರಿತು ಭಾಷಣಮಾಡುವರಾಗಿರುವರೆಂತಲೂ ಪ್ರಕಟವಾಗಿದೆ

❦❦❦

ಕಲ್ಕತ್ತಾ ಪಟ್ಟಣದಲ್ಲಿ ಲಾಲಾ ಲಾಜಪತ್‌ರಾಯಿಯವರು ಒಂದು ದೊಡ್ಡ ಸಭೆಯಲ್ಲಿ ಉಪನ್ಯಾಸಮಾಡಿ ಕ್ಷಾಮ ನಿವಾರಣೆಗೋಸ್ಕರ ಒಂದು ಧರ್ಮ ಫಂಡನ್ನು ಏರ್ಪಾಡು ಮಾಡಿದರು ವರ್ತಕರೇ ಮೊದಲಾದವರು ಚಂದಾ ಕೊಟ್ಟಿದಾರೆ ಸ್ವದೇಶೀ ಯೌವನಸ್ಥರು ಚಂದಾ ವಸೂಲ್ಮಾಡುವುದಕ್ಕಾಗಿ ಗ್ರಾಮಾಂತರಗಳ ಮೇಲೆ ಹೊರಟಿದಾರೆ

❦❦❦

ಕಲ್ಕತ್ತಾ ಪಟ್ಟಣದಲ್ಲಿ "ಯುಗಾಂತರ"ವೆಂಬ ಪತ್ರಿಕೆಯನ್ನು ಅಚ್ಚುಹಾಕಿ ಕೊಡುತ್ತಿದ್ದ ವೈಕುಂಠ ಆಚಾರ್ಯನು ಆ ಪತ್ರಿಕೆಯಲ್ಲಿ ರಾಜದ್ರೋಹಕರವಾದ ಸಂಗತಿಯನ್ನು ಅಚ್ಚುಹಾಕಿ ಕೊಟ್ಟನೆಂಬ ಅಪರಾಧಕ್ಕೆ ಗುರಿಯಾದದ್ದರಿಂದ ಮ್ಯಾಜಿಸ್ಟ್ರೇಟರು ಅವನಿಗೆ ಎರಡು ವರ್ಷ ಕಠಿಣ ಸಜಾ, ೧,೦೦೦ ರೂಪಾಯಿ ಜುಲ್ಮಾನೆ ಎಂಬೀ ಶಿಕ್ಷೆಯನ್ನು ವಿಧಿಸಿದರು.

❦❦❦

ಅಮೇರಿಕದ ಉತ್ತರಭಾಗದಲ್ಲಿರುವ ಇಂಗ್ಲೀಷರ ಸ್ವಾಸ್ಥ್ಯವಾದ ಕ್ಯಾನಡಾ ಎಂಬ ದೇಶಕ್ಕೆ ಹಿಂದುಸ್ಥಾನದ ಜನರು ಹೋಗಕೂಡದು ವಿಷಯದಲ್ಲಿ ಕ್ಯಾನಡಾ ಗವರ್ನ್‌ಮೆಂಟಿನವರು ಈಚೆಗೆ ಕೆಲವು ಕೇಸ ನಿಬಂಧನೆಗಳನ್ನು ಮಾಡಿ, ನಮ್ಮ ವೈಸ್‌ರಾಯಿಯವರಿಗೆ ತಿಳಿಸಿರುತ್ತಾರೆ ಅವರ ಮುಖ್ಯಾಭಿಪ್ರಾಯವೇನೆಂದರೆ, ಇತರ ದೇಶಗಳಿಂದ ಕೂಲಿ ಮೊದಲಾದವನ್ನು ಮಾಡುವುದಕ್ಕಾಗಿ ಕ್ಯಾನಡಾಕ್ಕೆ ಬರತಕ್ಕವರೆಲ್ಲಾ ಅವರ ಸ್ವದೇಶಗಳಿಂದಲೇ ಸೀದಾ ಟಿಕೆಟು ಪಡೆದು ಕ್ಯಾನಡಾಕ್ಕೆ ಬರಬೇಕು ಆದರೆ ಹಿಂದುಸ್ಥಾನದವರು ಆಪ್ರಿಕಾ, ಯೂರೋಪ್, ವಿಲಾಯತಿ ಮೊದಲಾದ ದೇಶಗಳ ಮೇಲೆ ಸುತ್ತಿಕೊಂಡು ಬರಕೂಡದು ಎಂಬುದೇ

ಬೊಂಬಾಯಿ ಗವರ್ನರವರು ಸೂರತ್ತಿನಲ್ಲಿ ನಡೆದ ವ್ಯಾಪಾರಿಕರ ಪ್ರೋತ್ಸಾಹಕ ಸಮಾಜದ ವಿಷಯಗಳನ್ನು ತಿಳಿದು ಸಂತೋಷಪಟ್ಟು, ಆ ಸಭೆಯ ಅಧ್ಯಕ್ಷರಿಗೆ ಒಂದು ಕಾಗದವನ್ನು ಬರೆದು, ದೇಶೀಯ ಕಸಬುಗಳನ್ನು ಪ್ರೋತ್ಸಾಹಪಡಿಸುವುದಕ್ಕೆ ಮಾಡಿದತಕ್ಕ ಪ್ರಯತ್ನಗಳು ಸ್ತೋತ್ರಾರ್ಹವಾಗಿರುತ್ತವೆಂತಲೂ, ಅವು ಸ್ಥಿರಪಟ್ಟು ನಡಿಯುವಹಾಗೆ ಗವರ್ನ್‌ಮೆಂಟಿನವರು ಬೇಕಾದಷ್ಟು ಸಹಾಯವನ್ನು ಮಾಡುವರೆಂತಲೂ ಅಪ್ಪಣೆ ಕೊಡಿಸಿದರು

❦❦❦

ಹಿಂದುಸ್ಥಾನದಲ್ಲೂ ಬರ್ಮಾ ಅಧಿಪತ್ಯದಲ್ಲೂ ಕಳೆದ ೯ ತಿಂಗಳಲ್ಲಿ ಹಿಂದಿನ ವರ್ಷದ ಅದೇ ೯ ತಿಂಗಳಿಗಿಂತಲೂ ಹೆಚ್ಚಾಗಿ ೧೭ ಲಕ್ಷವೂ ೯೧ ಸಾವಿರ ಬಂಗಾಳಿ ಮಣಗಳ ಉಪ್ಪು ಖರ್ಚಾಗಿರುತ್ತದೆ ಆದರೆ ಕಳೆದ ಏಪ್ರಿಲ್ ತಿಂಗಳಿಂದೀಚೆಗೆ ಗವರ್ನ್‌ಮೆಂಟಿನವರು ಮಣಕ್ಕೆ ೧-೯-೦ ರೂಪಾಯಿ ಬಿಟ್ಟು ೧ ರೂಪಾಯಿನಂತೆ ತೆರಿಗೆಯನ್ನು ನಿರಖು ಮಾಡಿದ್ದರಿಂದ ಒಟ್ಟು ಉತ್ಪತ್ತಿಯಲ್ಲಿ ೧೩೧ ಲಕ್ಷವೂ ೩೭ ಸಾವಿರ ರೂಪಾಯಿನಷ್ಟು ಕಡಿಮೆಯಾಗಿರುತ್ತದೆ

❦❦❦

ಬೀಹಾರ್ ಡಿಸ್ಟ್ರಿಕ್ಟಿನ ಕಲೆಕ್ಟರ್ ಮಿ॥ ಬಿ ಸಿ ಆರ್ಲೇಯವರನ್ನು ಗೋಲಂತೀ ಪಟ್ಟಣದ ರೈಲ್ ಸ್ಟೇಷನಿನಲ್ಲಿ ಕೊಲ್ಲಬೇಕೆಂದು ಯಾರೋ ಗುಂಡು ಹೊಡೆದರೆಂತಲೂ, ಆದರೆ ಅವರಿಗೆ ಗಾಯ ಮಾತ್ರ ಆಗಿ ಕಲ್ಕತ್ತೆಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದಾರೆಂತಲೂ ತಿಳಿಸಿದ್ದೆವಷ್ಟೆ ಈಗ ಇವರಿಗೆ ತಕ್ಕಮಟ್ಟಿಗೆ ವಾಸಿಯಾಗಿರುವುದರಿಂದ ಹನ್ನೆರಡು ತಿಂಗಳ ರಜಾ ಪಡೆದು ಸೀಮೆಗೆ ಪ್ರಯಾಣ ಮಾಡುವರು ಅವರನ್ನು ಗುಂಡಿನಿಂದ ಹೊಡೆದ ದುಷ್ಟರ್ಯಾರೋ ಇನ್ನೂ ಪತ್ತೆಯಾಗಲಿಲ್ಲ

❦❦❦

ಕಲ್ಕತ್ತೆಯಲ್ಲಿ ಪ್ರಕಟವಾಗುವ "ನವಶಕ್ತಿ" ಎಂಬ ವರ್ತಮಾನಪತ್ರಿಕೆಯಲ್ಲಿ ರಾಜದ್ರೋಹಕರವಾದ ವಿಷಯವನ್ನು ಪ್ರಕಟಿಸಿದುದಕ್ಕೆ ಪೋಲೀಸಿನವರು ಆ ಪತ್ರಿಕೆಯ ಆಫೀಸನ್ನು ನುಗ್ಗಿ ಅಜಮಾಯಿಷಿಮಾಡಿ ಅನೇಕ ಕಾಗದಪತ್ರಗಳನ್ನು ಜಪ್ತಿಮಾಡಿಕೊಂಡುದಲ್ಲದೆ, ಆ ಪತ್ರಿಕೆಯನ್ನು ಅಚ್ಚುಹಾಕಿಕೊಡುತ್ತಿರುವ ಮನಮೋಹನಘೋಷ್ ಎಂಬಾತನನ್ನು ಮ್ಯಾಜಿಸ್ಟ್ರೇಟರ ಮುಂದಕ್ಕೆ ಹಿಡಿದುಕೊಂಡು ಹೋಗಿ ನಿಲ್ಲಿಸಿದರು ಅವರು ೫,೦೦೦ ರೂಪಾಯಿ ಜಾಮೀನು ತೆಗೆದುಕೊಂಡು, ಆತನನ್ನು ಖುಲಾಸ್ ಮಾಡಿದಾರೆ

❦❦❦

ಬೊಂಬಾಯಿಯಲ್ಲಿರುವ ಮಿ॥ ರತನಜಿ ದಾದಾಬಾಯಿ ಟಾಟಾ ಎಂಬ ಪಾರ್ಸೀ ಸಾಹುಕಾರನ ಕೆಲವು ಕಾಲಕ್ಕೆ ಮುಂಚೆ ಫ್ರಾನ್ಸಿಗೆ ಹೋಗಿದ್ದಾಗ ಅಲ್ಲಿನ ಒಬ್ಬ ಯುವತಿಯನ್ನು ಪಾರ್ಸೀ ಮತಕ್ಕೆ ಸೇರಿಸಿಕೊಂಡು, ಅವಳನ್ನು ಮದುವೆ ಮಾಡಿಕೊಂಡು ಬಂದಿರುತ್ತಾನೆ ಬೊಂಬಾಯಿಯಲ್ಲಿ ಪಾರ್ಸೀ ಮತದ ಗುರುಹಿರಿಯರು ಆ ಹೆಂಗಸನ್ನು ಪಾರ್ಸೀ ದೇವಸ್ಥಾನದೊಳಕ್ಕೆ ಬರಕೂಡದೆಂತಲೂ ಆಕೆ ಸತ್ತರೆ ಪಾರ್ಸಿಗಳ ಸಮಾಧಿ ಸ್ಥಾನದಲ್ಲಿ ಆಕೆಯ ಶವವನ್ನು ಸಂಸ್ಕಾರಮಾಡಕೂಡದೆಂತಲೂ ತೀರ್ಮಾನ ಮಾಡಿದರು ಈಗ ಈ ವಿಷಯದಲ್ಲಿ ಆ ಪಾರ್ಸೀ ಸಾಹುಕಾರನು ತನ್ನ ಗುರುಹಿರಿಯರ ಮೇಲೆ ಹೈಕೋರ್ಟಿನಲ್ಲಿ ದಾವಾ ಮಾಡುವವನಾಗಿದಾನೆ ಈ ವಿಚಾರವು ಬೊಂಬಾಯಿನ ಪಾರ್ಸೀ ಜನರಲ್ಲಿ ಬಹಳ ಗಲಭೆಯನ್ನುಂಟುಮಾಡಿದೆ

❦❦❦

ಬರೋಡದಲ್ಲಿ ಕೈಮಗ್ಗಗಳ ಪ್ರದರ್ಶನ ನಡೆಯುತ್ತಿತ್ತು ಬೊಂಬಾಯಿನ ಟಿ ಕೆ ಗಜ್ಜರ್, ಅಕೋಲಾವಿನ ರಾವ್ ಸಾಹೇಬ್ ದೇವರಾವ್ ವಿನಾಯಕ್, ಮಧುರೆಯ ಎಲ್ ಕೆ ತುಳಸೀರಾಂ ಎಂಬೀ ಪರೀಕ್ಷಕರು ಆ ಪ್ರದರ್ಶನಶಾಲೆಗೆ ಬಂದಿದ್ದ ಸಮಸ್ತ ವಿಧವಾದ ಮಗ್ಗಗಳನ್ನೂ ಅಜಮಾಯಿಷಿ ಮಾಡಿ, ಅಕಮದ್ ನಗರದ ಮಿ ಡಿ ಸಿ ಚರ್ಚಿಲ್‌ರವರು ಪ್ರದರ್ಶನ ಮಾಡಿದ್ದ ಕಾರ್ಖಾನೆಯ ಮಗ್ಗವನ್ನೂ ಬರೋಡಾ ಸಂಸ್ಥಾನದ ಮಿ॥ ರಾವ್‌ಜಿ ಭಾಯಿ ಪಾಟೇಲ್‌ರವರು ಪ್ರದರ್ಶನಮಾಡಿದ್ದ ಕೈಮಗ್ಗವನ್ನೂ ಸರ್ವೋತ್ತಮವಾದವುಗಳೆಂದು ತೀರ್ಮಾನಿಸಿದ್ದರಿಂದ ಅವರಿಬ್ಬರಿಗೂ ತಲಾ ೧೦೦೦ ರೂಪಾಯಿನ ಬಹುಮಾನಗಳನ್ನು ಕೊಟ್ಟರು ಬರೋಡೆಯ ದೊಡ್ಡ ಮನುಷ್ಯರು ಪ್ರದರ್ಶನ ಮಾಡಿದಂಥಾ ಮಗ್ಗವು ಬಹು ಸುಲಭವಾದದ್ದು ಈಗ ನೆಯ್ಗೆಯವರು ಇಟ್ಟುಕೊಂಡಿರತಕ್ಕ ಕೈಮಗ್ಗಗಳಲ್ಲಿ ಎಷ್ಟು ನೆಯ್ಯುತ್ತಾರೋ ಅದಕ್ಕಿಂತ ಎರಡರಷ್ಟು ಹೆಚ್ಚಾಗಿ ಈ ಬರೋಡಾ ಮಗ್ಗದಲ್ಲಿ ಬಟ್ಟೆಯನ್ನು ನೆಯ್ಯಬಹುದೆಂತಲೂ ಈ ಮಗ್ಗದ ಕ್ರಯವು ೬೫-೩೦ ರೂಪಾಯಿಗಿಂತ ಹೆಚ್ಚಲ್ಲವೆಂತಲೂ, ಈ ದೇಶದ ನೆಯ್ಗೆಯನ್ನು ಅಭಿವೃದ್ಧಿಗೆ ತರಲು ಈ ಮಗ್ಗವೇ ಉತ್ತಮವಾದದ್ದೆಂತಲೂ ಮೇಲ್ಕಂಡ ಪರೀಕ್ಷಕರು ಅಭಿಪ್ರಾಯ ಪಟ್ಟಿರುತ್ತಾರೆ

❦❦❦

ಇಂಡಿಯಾ ದೇಶದಲ್ಲಿ ಬೆಳೆಯುವ ಪೈರುಗಳಿಗೆ ಸಗಣಿ ಗೊಬ್ಬರವು ತಕ್ಕ ಗೊಬ್ಬರವಾಗಿರುವುದಾಗಿ ಅಜಮಾಯಿಷಿಗಳಲ್ಲಿ ತಿಳಿದುಬಂದಿರುತ್ತದೆ ಆದರೆ ಸಗಣಿಯನ್ನು ಉರಿಸುವದಕ್ಕಾಗಿ ಬೆರಣಿ ಉಪಯೋಗಿಸುತ್ತಾರೆ ಹೀಗೆ ಸಗಣಿಯನ್ನು ಉಪಯೋಗಿಸುವುದಕ್ಕಿಂತ ಗೊಬ್ಬರವಾಗಿ ಉಪಯೋಗಿಸಿದರೆ ಹೆಚ್ಚು ಆದಾಯಕರವೆಂದು ಕಾನ್ಪುರಪಟ್ಟಣದಲ್ಲಿ ಈಚೆಗೆ ನಡೆದಿರುವ ವಿದ್ಯಮಾನಗಳಿಂದ ಹೇಳಬಹುದಾಗಿರುತ್ತದೆ ಆ ಪಟ್ಟಣದ ಸಮೀಪದಲ್ಲಿ ಕೆಲವು ಸಾಗುವಳಿದಾರರು ಅನೇಕ ವರ್ಷಗಳಿಂದ ಉರುಳಿಗಡ್ಡೆಯನ್ನು ಬಹಳ ಆದಾಯಕರವಾಗಿ ಬೆಳೆಯುತಿದಾರೆ ಈ ಪೈರಿಗೆ ಊರಿನ ಕಚ್ಚಡಾವನ್ನೇ ಗೊಬ್ಬರವನ್ನಾಗಿ ಉಪಯೋಗಿಸುತ್ತಿದ್ದರು ಈಚೆಗೆ ಆ ಪಟ್ಟಣದಲ್ಲಿ ಚರಂಡಿ ಮುಂತಾದ ಅನುಕೂಲತೆಗಳು ಏರ್ಪಾಡಾಗಿರುವದರಿಂದ ಗ್ರಾಮಸಾರವು ಒದಗುವದು ನಿಂತುಹೋಗಿರುತ್ತದೆ ಆದರೆ ಈ ಸಾಗುವಳಿದಾರರು ಈ ಅನಾನುಕೂಲತೆಗೆ ಭಯಪಡದೆ ಸಾಕಾದಷ್ಟು ಸಗಣೀ ಗೊಬ್ಬರವನ್ನು ಒದಗಿಸುವ ಏರ್ಪಾಟುಮಾಡಿಕೊಂಡು, ತಮ್ಮ ಉರುಳಿಗಡ್ಡೆ ವ್ಯವಸಾಯವನ್ನು ಎಂದಿನಂತೆಯೇ ಧೈರ್ಯವಾಗಿ ನಡೆಸುತ್ತಾರೆ ಕಾನ್ಪುರದಲ್ಲಿ ಸಾಮಾನ್ಯವಾಗಿ ದನವಿನ ಸಗಣಿಯನ್ನು ಒಣಗಿಸಿ, ಬೆರಣಿ ಉಪಯೋಗಿಸುವ ಬಗ್ಗೆ ಮಾರಾಟಕ್ಕೆ ವಿಶೇಷವಾಗಿ ತರುತ್ತಾರೆ ಇಂಥಾ ಸಂದರ್ಭದಲ್ಲಿ ಸದರಿ ಉರುಳಿಗಡ್ಡೆ ಸಾಗುವಳಿದಾರರು ಸಾಕಾದಷ್ಟು ಸಗಣಿಗೊಬ್ಬರವನ್ನು ಒದಗಿಸಿಕೊಳ್ಳಬೇಕಾಗುವದರಿಂದ ಬೆರಣಿ ಉಪಯೋಗಿಸುವುದಕ್ಕಾಗಿ ಕೊಂಡುಕೊಳ್ಳುವವರು ಕೊಡುವ ಬೆಲೆಗಿಂತ ಹೆಚ್ಚಾದ ಬೆಲೆಯನ್ನು ಕೊಟ್ಟು, ಸಗಣಿ ಗೊಬ್ಬರವನ್ನು ಕೊಂಡುಕೊಳ್ಳುತ್ತಾರೆ ಇದರಿಂದ ಸಗಣಿಯನ್ನು ಗೊಬ್ಬರವನ್ನಾಗಿ ಉಪಯೋಗಿಸಿದರೆ ಹೆಚ್ಚು ಆದಾಯಕರವೆಂದು ನಿದರ್ಶನವಾಗಿ ಹೇಳಬಹುದು ಈ ಕಾರಣಗಳಿಂದ ನಮ್ಮ ರೈತರು ಸಗಣಿಯನ್ನು ಒಣಗಿಸಿ ಬೆರಣಿ ಉಪಯೋಗಿಸುವ ಪದ್ಧತಿಯನ್ನು ಬಿಟ್ಟು, ಸೌದೆಯನ್ನಾಗಲಿ ಕೆರೋಸಿನ್ ಎಣ್ಣೆ (ಚಿಮಣಿಎಣ್ಣೆ) ದೀಪಗಳನ್ನಾಗಲಿ ಮನೆಯ ಕೆಲಸಗಳಿಗೆ ಉಪಯೋಗಿಸುವುದು ಒಳ್ಳೇದು

ತಾಲ್ಲೋಕು ವರ್ತಮಾನಗಳು

ಚಿಕ್ಕಮಗಳೂರು —ಇಲ್ಲಿ ೬-೩ ದಿವಸಗಳಿಂದ ಮೋಡವಾಡುತ್ತಾ ಇರುವದರಿಂದ ಚಳಿ ಕಮ್ಮಿಯಾಗಿದೆ ಡೆಪ್ಯುಟಿ ಕಮಿಷನರ್ ಮಿ॥ ಕುಮಾರಸ್ವಾಮಿನಾಯ್ಡುರು ಬೆಂಗಳೂರಿಗೆ ಹೊರಡುವದಕ್ಕೆ ಮೊದಲೇ ಊರಿನ ಎಲ್ಲಾ ದೊಡ್ಡ ಮನುಷ್ಯರೂ ಅವರನ್ನು ಪಾರ್ಟಿಗೆ ಬರಮಾಡಿಕೊಂಡು, ಅಲ್ಲಿ ಅವರ ಸಂಗಡ ಫಲಾಹಾರಾದಿಗಳನ್ನು ಮಾಡಿ, ಸಂಗೀತ ವಾದ್ಯ ವಿನೋದಗಳಿಂದ ಅವರನ್ನು ಸಂತೋಷಪಡಿಸಿದರೆಂದು ಕೇಳುತ್ತೇನೆ ಇವರು ದೊಡ್ಡಮನುಷ್ಯರೂ ವಿಧಾಯಿಗಳೂ ಸ್ನೇಹಪರರೂ ಆಗಿದ್ದರು. ಅವರ ಬದಲಿಗೆ ಮಿ॥ ಕೆ ಆರ್ ಶ್ರೀನಿವಾಸೈಯ್ಯಂಗಾರ್ರು ಬಂದಿದಾರೆ ಇಲ್ಲಿ ಜನರಲ್ ಅಸಿಸ್ಟೆಂಟರಾಗಿದ್ದ ಮಿ॥ ಬಿ. ಎಂ ಶ್ರೀಕಂಠರಾಯರು ಸರ್ವೆ ಇಲಾಖೆಗೆ ಹೋದ್ದರಿಂದ ಇಲ್ಲಿನ ಖಜಾನೆ ಚಾರ್ಜಿನಲ್ಲಿದ್ದ ಅಸಿಸ್ಟೆಂಟ್ ಕಮಿಷನರ್ ಮಿ॥ ಕೃಷ್ಣಸ್ವಾಮಿ ಅಯ್ಯಂಗಾರ್ರು ಜನರಲ್ ಡ್ಯೂಟಿಗೆ ವರ್ಗಾಯಿಸಲ್ಪಟ್ಟರು ಅವರ ಸ್ಥಾನಕ್ಕೆ ಹೊಸದಾಗಿ ಮಿ॥ ಡಿ ಶ್ರೀನಿವಾಸೈಯ್ಯಂಗಾರ್ರು ಬಂದಿದಾರೆ —ಶಿವಮೊಗ್ಗಾ ಸೆಷನ್ಸ್ ಜಡ್ಜ್ ಮ॥ ಪ್ಲಮರ್ ಸಾಹೇಬರು ಇದೇ ತಿಂಗಳು ೨ನೇ ತಾ ನಿಂದ ತಮ್ಮ ಕೋರ್ಟಿಗೆ ಸಂಬಂಧಪಟ್ಟ ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಣೆ ಮಾಡುತ್ತಿದಾರೆ ಅವುಗಳ ಪೈಕಿ ಕೊಪ್ಪತಾಲ್ಲೂಕು ಹರಿಹರಪುರದ ಖೂನಿ ಮೊಕದ್ದಮೆಯು ಫೈಸಲ್ ಆಗಿ ಅಪರಾಧಿಗೆ ಆರು ವರುಷ ಕಠಿಣಸಜಾ ಆಯಿತು ಈಗ ಮೂಡಗೆರೆ ತಾಲ್ಲೋಕಿನ ಖೂನಿ ಮೊಕದ್ದಮೆಯು ನಡೆಯುತ್ತಲಿದೆ —ಟವುನಿನಲ್ಲಿ ಕೆಲವು ಕಡೆ ಚರಂಡಿಗಳಲ್ಲಿ ನೀರು ನಿಂತು ಕೊಳೆಯುತ್ತಾ ಇರುವದರಿಂದ ಮ್ಯುನಿಸಿಪಲ್ ಅಧಿಕಾರಿಗಳು ಅಂಥಾ ಸ್ಥಳಗಳ ವಿಷಯದಲ್ಲಿ ನಿಗಾ ಕೊಡುವದು ಒಳ್ಳೇದಲ್ಲವೇ ಈ ಪ್ರಾಂತ್ಯ ಕೆಲವು ಗ್ರಾಮಗಳಲ್ಲಿ ಸಾಥಿರೋಗ ಉಪದ್ರವಿರುವದಾಗಿ ವರ್ತಮಾನ ಅಂಥಾ ಸ್ಥಳಗಳಿಂದ ಬಂದ ಒಬ್ಬಳು ಅದೇ ರೋಗದಿಂದ ಈ ಊರಿನಲ್ಲಿ ಮೃತಪಟ್ಟಳೆಂದು ಕೇಳುತ್ತೇನೆ —ಇಲ್ಲಿಗೆ ಸುಮಾರು ಐದು ಮೈಲಿ ದೂರದಲ್ಲಿರುವ ಮತ್ತಾವರವೆಂಬ ಗ್ರಾಮದಲ್ಲಿ ಪುಟ್ಟಯ್ಯನೆಂಬವನು ತನ್ನ ಸುಮಾರು ಹತ್ತು ವರುಷದ ಮಗನು ಏಕಾದಶಿಯ ದಿನ ಬಾಣಿಯಲ್ಲಿ ಹುಲ್ಲನ್ನು ಕೆಡಿದು ಒತ್ತವನ್ನು ಉಜ್ಜಿಕೊಳ್ಳುತ್ತಾ ಇದ್ದದ್ದನ್ನು ನೋಡಿ ಹುಡುಗನು ಕೊಂದು, ತಂದೆಗೆ ಹೇಳಲು ಅವನು ಕೋಪಗೊಂಡು ಆ ಹುಡುಗನ ಮೈಗೆಲ್ಲಾ ಕಬ್ಬಿಣದ ಸೌಟಿನ ಹಿಡಿಯಲ್ಲಿ ಬರೆಹಾಕಿ ಹಿಂಸೆಪಡಿಸಿದ್ದು ಈಗ ಕೋರ್ಟಿನಲ್ಲಿ ವಿಚಾರಣೆಗೆ ಗುರಿಯಾಗಿದೆ ಎಂದು ಕೇಳುತ್ತೇನೆ

ತಿಪಟೂರು —ಸದ್ಯ ಈ ಗ್ರಾಮದಲ್ಲಿ ಯಾವ ರೋಗಾದಿಗಳ ಅವಾಂತ್ರವೂ ಇಲ್ಲ ಪ್ಲೇಗಿನಿಂದ ಬಿಡಲ್ಪಟ್ಟ ಊರುಗಳಿಂದ ಈ ಊರಿನಲ್ಲಿ ಅರ್ಧಪಾಲು ಜನರು ತುಂಬಿರುತ್ತಾರೆ ಇಂಥಾ ಕಾಲದಲ್ಲಿ ಊರಿನ ಸಂದುಗೊಂದುಗಳಲ್ಲಿ ಇರತಕ್ಕ ಕಸದ ಕೇಸಿಗೆ ಪಾಳು ಮಾಡಿಸುವಕ್ಕೆ ಮ್ಯುನಿಸಿಪಾಲಿಟಿಯವರು ತುಂಬಾ ನಿಗಾ ಕೊಡಬೇಕಾಗಿರುತ್ತೆ ಕೆರೆ ಬಳಿ ಅಂಗಳದಲ್ಲಿ ಜನಗಳು ಕೇಸಿಗೆ ಮಾಡುವದನ್ನು ತಪ್ಪಿಸುವದು ಮ್ಯುನಿಸಿಪಾಲಿಟಿಯವರ ಕೈಲಿ ಆಗುವಂತೆ ತೋರುವದಿಲ್ಲ ನಮ್ಮ ವೈಸ್ ಪ್ರಸಿಡೆಂಟರು ಇತ್ತಕಡೆ ಕೊಂಚ ಗಮನಕೊಡಬೇಕಾಗಿರುತ್ತೆ —ಇಲ್ಲಿನ ಖಾಯಂ ಅಮಲ್ದಾರ್ ಮಿ॥ ಸಿ ಗೋಪಾಲಾಚಾರ್ರು ೩॥ ತಿಂಗಳು ವಿಶ್ರಾಂತಿಯನ್ನು ಪಡೆದು ಬೆಂಗಳೂರು ಮಾರ್ಗವಾಗಿ ಮದ್ರಾಸಿಗೆ ಪ್ರಯಾಣಮಾಡಿದರು ಇವರ ಬದ್ಲಿಗೆ ತುಂಕೂರಿಂದ ಡಿಸ್ಟ್ರಿಕ್ಟ ಸ್ಪೆಷಲ್ ಪೋಲೀಸ್ ಇನ್‌ಸ್ಪೆಕ್ಟರು ಮಿ॥ ಆರ್ ಸುಂದರರಾಯರು ದಯಮಾಡಿಸಿ ತಾಲ್ಲೂಕು ಕೆಲಸವನ್ನು ಬಹಳ ಚುರುಕಾಗಿ ಮಾಡುತ್ತಿದಾರೆ ಆಗಲೇ ತಾಲ್ಲೂಕು ರೆವಿನ್ಯೂ ನೌಕರರಿಗೆಲ್ಲಾ ೧೧ ಗಂಟೆಗೆ ಮೇಲ್ಪಟ್ಟು ಕಛೇರಿಗೆ ಬಂದದ್ದಕ್ಕಾಗಿ ಜುಲ್ಮಾನೆ ವಿಧಿಸಿದರಂತೆ ಇಂಥಾ ದುರ್ಭಿಕ್ಷಕಾಲದಲ್ಲಿ ಬಡನೌಕರರ ಮೇಲೆ ಈ ನಮ್ಮ ದಯಾಳುಗಳಾದ ಅಮಲ್ದಾರರು ಕರುಣವಿಟ್ಟು ಜುಲ್ಮಾನೆಯನ್ನು ಮಾಫ್ ಮಾಡಿಯಾರೆಂದು ನಂಬಿರುತ್ತೇನೆ —ಈ ಊರಲ್ಲಿ ವೈಶ್ಯಮಂಡಲಿಗಲ್ಲಿ ಮುಂದಾಳುಗಳಾಗಿದ್ದ ಸೌಕಾರ್ ಮಿ॥ ಗ್ರಂಥಿಗೆ ಪುಟ್ಟಸ್ವಾಮಿಶೆಟ್ರು ತಮ್ಮಂದಿರಾದ ಸಾ॥ ಗ್ರಂಥಿಗೆ ಲೇಟ್ ಕರಿಯಪ್ಪ ನಂಜುಂಡಶೆಟ್ರು ಕಾಲವಾದ ಸಂಗತಿ ಬಹುಜನರಿಗೆ ವಿಷಾದಕರವಾಗಿದೆ. ಇವರ ಅಣ್ಣತರು ಬಹಳ ದುಃಖಪಡುತ್ತಿದಾರೆ ಅರಸೀಕೆರೆ ಬಳಿ ಇರುವ ತಿರುಪತಿ ಕ್ಷೇತ್ರದಲ್ಲಿ ಬಹಳ ಹಣ ಖರ್ಚುಮಾಡಿ ರಥೋತ್ಸವಕಾಲದಲ್ಲಿ ಜನಗಳ ಅನುಕೂಲಕ್ಕಾಗಿ ಭಾರಿ ಸತ್ರವನ್ನು ಕಟ್ಟಿಸಿದಾರೆ. ಇನ್ನೂ ಅನೇಕ ಧರ್ಮಕಾರ್ಯಗಳನ್ನು ಮಾಡಿರುವರು.—ಈ ಗ್ರಾಮದಲ್ಲಿ ಈ ಊರಿಗೆ ಸಮೀಪವಾಗಿರುವ ಗೊರವಗೊಂಡನಹಳ್ಳಿ ನಾಟಕದ ಕಂಪನಿಯವರು ೩ ತಿಂಗಳಿಂದಲೂ ಆಟವನ್ನು ಆಡಿ ಈ ಟವುನಿನಲ್ಲೇ ದುಡ್ಡು ಆಗುತ್ತೆಂಬ ಆಸೆಯಿಂದ ಪುನಃ ಆಡುವದಕ್ಕೆ ಲೈಸನ್ಸು ಕೇಳಲು ಅಮಲ್ದಾರ್ರು ಕೊಡದೇ ಹೋದ್ದರಿಂದ ಈಗ ಈ ತಾಲ್ಲೂಕಿನ ಗ್ರಾಮಾಂತರಗಳ ಮೇಲೆ ಹೋಗಿ ನಾಟಕ ಆಡುತ್ತಿದಾರೆ ಇವರ ತರುವಾಯ ಪ್ರೊಫೆಸರ್

ದೇವಾಂಗ ಮತಸ್ಥರ ಪುರೋಭಿವೃದ್ಧಿಯು.

ನಮ್ಮ ಹಿಂದೂ ಜನಾಂಗವು ಸ್ವಾರಾಜ್ಯನಿರ್ವಾಹಕ್ಕೆ ಅರ್ಹವಾಗಿ ಐಕಮತ್ಯಕ್ಕೆ ನೆಲೆಗೊಂಡು ವೃದ್ಧಿಯನ್ನೈದಬೇಕಾದರೆ, ಆ ಜನಾಂಗದ ಪ್ರಭೇದದವರೆಲ್ಲರೂ ತಮ್ಮತಮ್ಮಲ್ಲೇ ಸಾಕಾದಷ್ಟು ಸುಧಾರಣೆಗಳನ್ನು ಮಾಡಿಕೊಳ್ಳಬೇಕೆಂಬುದು ಸಕಲರಿಗೂ ವಿದಿತವಾದ ಉಪಾಯವೇ ಆಗಿರುವುದು. ಇದನ್ನರಿತವರಾಗಿಯೇ ವೀರಶೈವರು, ಒಕ್ಕಲಿಗರು, ವೈಶ್ಯರು, ಜೈನರು ಮೊದಲಾಗಿ ಕೆಲವರು ಭರತಖಂಡದ ನಾನಾ ಕಡೆಗಳಿಂದಲೂ ತಮ್ಮ ಜನಗಳನ್ನು ಬರಮಾಡಿಕೊಂಡು, ಸಭೆಗಳನ್ನು ಸೇರಿಸಿ ತನ್ಮೂಲಕ ತಮ್ಮ ಸಮಾಜದ ಪುರೋಭಿವೃದ್ಧ್ಯರ್ಥವಾಗಿ ಅನೇಕ ಸಾಧನಗಳನ್ನು ಮಾಡುತ್ತಲಿರುವರಷ್ಟೆ. ಆದರೆ ಎಲ್ಲ ಭಾಗಗಳಲ್ಲಿಯೂ ಹಿಂದುಳಿದಿರುವ ನಮ್ಮ ದೇವಾಂಗಮತಸ್ಥರು ತಮ್ಮ ಸಮಾಜೋನ್ನತಿಗೆ ಯಾವುದೊಂದು ಪ್ರಯತ್ನವನ್ನೂ ಮಾಡದೆ ಇನ್ನೂ ನಿದ್ರಾವಸ್ಥೆಯಲ್ಲೇ ಇರುವುದಕ್ಕಾಗಿ ತುಂಬಾ ವಿಷಾದಿಸಬೇಕಾಗಿದೆ. ಈ ಮೈಸೂರು ದೇಶದಲ್ಲಿಯೇ ಈ ಜನಾಂಗದವರ ಸಂಖ್ಯೆಯು ಸುಮಾರು ೯೩,೦೦೦ ಇರುತ್ತದೆ. ಈ ಮಂಡಲಿಯವರಲ್ಲಿ ವಿದ್ಯಾವಂತರುಗಳು ಅತಿ ವಿರಳರಾಗಿರುವರಲ್ಲದೆ, ಅನೇಕರು ತಮ್ಮ ಪ್ರಾಚೀನವಾದ ಕುಲಕಸುಬಿನಿಂದ ಸಾಕಾದಷ್ಟು ಜೀವನೋಪಾಯಕ್ಕೆ ಮಾರ್ಗವಿಲ್ಲದೆ ತೊಂದರೆ ಪಡುತ್ತಾ ಅತ್ಯಂತ ಶೋಚನೀಯಾವಸ್ಥೆಯಲ್ಲಿರುವರು. ಮತ್ತು ಈ ಜನರಲ್ಲಿ ಧರ್ಮಶ್ರದ್ಧೆಯೂ ದಿನೇದಿನೇ ಕ್ಷೀಣವಾಗುತ್ತಲಿದೆ. ಇವೇ ಮೊದಲಾದ ಲೋಪಗಳನ್ನೆಲ್ಲಾ ಕ್ರಮಪಡಿಸಿ, ಈ ವರ್ಣಸ್ಥರನ್ನು ಉತ್ತಮಸ್ಥಿತಿಗೆ ತರತಕ್ಕದ್ದು ಈ ಜನಾಂಗದ ಮುಖಂಡರುಗಳಿಗೆ ಸೇರಿದ್ದಲ್ಲವೇ? ಈ ಜನರಲ್ಲಿ ಮತಾಭಿಮಾನಿಗಳೂ, ಉಪಪನ್ನರಾದವರೂ, ಅನೇಕರು ಇರುವರು. ಇಂಥ ಮತಾಭಿಮಾನಿಗಳಲ್ಲಿ ಅಗ್ರಗಣ್ಯರಾದ ದೊಡ್ಡಬಳ್ಳಾಪುರದ ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮ॥ ರಾ॥ ಡಿ. ಕೊಂಗಾಡಿಯಪ್ಪನವರು ತಮ್ಮ ವರ್ಣಸ್ಥರನ್ನು ಸಾಧ್ಯವಾದಷ್ಟಿಗೂ ಉತ್ತಮ ಸ್ಥಿತಿಗೆ ತರಬೇಕೆಂಬುದಾಗಿ ಅನೇಕ ಪ್ರಯತ್ನಗಳನ್ನು ಮಾಡುತ್ತಾ ವರ್ಷಂಪ್ರತಿಯಲ್ಲಿಯೂ ೨—೩ ಮಂದಿಗೆ ಕಡಿಮೆ ಇಲ್ಲದೆ ಸ್ವಜಾತಿಯ ಬಾಲಕರನ್ನು ಸ್ವಗೃಹದಲ್ಲಿಯೇ ಇರಿಸಿಕೊಂಡು ಭೋಜನಾದಿಗಳಿಗೆ ಸೌಕರ್ಯಗಳನ್ನುಂಟುಮಾಡಿ ವಿದ್ಯಾದಾನವನ್ನು ಮಾಡುತ್ತಿರುವರಲ್ಲದೆ, ಪ್ರೌಢವಿದ್ಯಾಪೇಕ್ಷಿಗಳಿಗೆ ಬೆಂಗಳೂರು ಮೊದಲಾದ ಪಟ್ಟಣಗಳಲ್ಲಿ ತಮ್ಮ ಕೈಲಾದನುಷ್ಟಿಗೂ ಅನುಕೂಲಗಳನ್ನು ಕಲ್ಪಿಸಿಕೊಟ್ಟು ಮಹೋಪಕಾರವನ್ನು ಮಾಡುತ್ತಲಿರುವರು. ಆದರೆ ಈ ರೀತಿಯಾದ ಇವರ ಪ್ರಯತ್ನವು ನಮ್ಮ ಸಮಾಜದವರನ್ನೆಲ್ಲಾ ಅತ್ಯಲ್ಪಕಾಲದಲ್ಲಿಯೇ ಉತ್ತಮ ಸ್ಥಿತಿಗೆ ತರಲು ಅಸಾಧ್ಯವಾಗಿದ್ದಾಗ್ಯೂ, ಈ ಮಹನೀಯರ ಸ್ವರ್ಗಾಭಿಮಾನವೂ(?), ಔದಾರ್ಯವೂ ಸ್ತೋತ್ರಾರ್ಹವಾಗಿವೆ. ಈ ನಮ್ಮ ಮತಬಾಂಧವರನ್ನೆಲ್ಲಾ ಉತ್ತಮ ಸ್ಥಿತಿಗೆ ತರತಕ್ಕ ಮಹತ್ಕಾರ್ಯವು ಒಬ್ಬಿಬ್ಬರಿಂದ ಎಂದಿಗೂ ಆಗಲಾರದಾದ್ದರಿಂದ, ಇಂಥ ಮಹನೀಯರುಗಳು ಅನೇಕರು ಸೇರಿ ದೇವಾಂಗ ಮಹಾಸಭೆ ಎಂಬ ನಾಮಾಂಕಿತವಿಂದ ಒಂದು ಸಂಘವನ್ನೇರ್ಪಡಿಸಿ, ತನ್ಮೂಲಕ ನಮ್ಮ ಸಮಾಜದವರಿಗೆ ಅವಲಂಬನೆಯನ್ನಿತ್ತು, ವಿದ್ಯೆ, ನಾಗರೀಕಾದಿ ಸಕಲ ಭಾಗಗಳಲ್ಲಿಯೂ ಮುಂದುವರಿದು ಉತ್ತಮ ಸ್ಥಿತಿಗೆ ಬರಲು [illegible] ನನ್ನಿಂದ ಪ್ರಯತ್ನಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಆರ್. ರಾಮಯ್ಯ

ಮಹಾ ಕಳ್ಳರ ಅವಾಂತ್ರವು

ಹೀರೂರಿನ(?) ತಾಲ್ಲೂಕು ಕಸಬಾ ಪಟ್ಟಣಕ್ಕೆ ಸುಮಾರು ೨೦ ಮೈಲಿ ದೂರದಲ್ಲಿರುವ ಮೋಗನಾಯ್ಕನಕೋಟೆ ಗ್ರಾಮಕ್ಕೆ ಪಂಜಿನ ಕಳ್ಳರು ಬಂದೂಕ, ಕತ್ತಿ, ಭರ್ಜಿ, ಗಂಡುಕೊಡ್ಲಿ, ಮುಂತಾದ ಆಯುಧಪಾಣಿಗಳಾಗಿ ಈ ಮಾಹೆ ೪ನೇ ತಾ॥ ಶನಿವಾರ ರಾತ್ರಿ ೧೨ ಘಂಟೆ ಸಮಯದಲ್ಲಿ ಸುಮಾರು ೩೦—೩೫ ಜನಗಳವರೆಗೂ ಪ್ರವೇಶಿಸಿ, ಚೌಕದಲ್ಲಿರುವ ಅಕ್ಕಸಾಲಿಗರ ಚಿಕ್ಕೀರಯ್ಯನ ಮನೆಯೊಳಕ್ಕೆ ಬಾಗಿಲು ಕೊಡೆದು ನುಗ್ಗಿ, ಒಳಗಿದ್ದ ನಾಲ್ಕೈದು ಜನಗಳನ್ನು ಗಂಡುಕೊಡ್ಲಿಗಳಿಂದ ಹೊಡೆದು ತುಂಬಾ ಜಖಂ ಮಾಡಿದರು. ಅಷ್ಟರಲ್ಲೇ ಈ ಮನೆಯಲ್ಲಿ ಏನೂ ದೊರೆಯದ್ದರಿಂದ ಈ ಮನೆಗೆ ಎದುರಿನಲ್ಲಿದ್ದ ವೈಶ್ಯರ ಮ॥ ಭೋಗಶೆಟ್ಟರ ಮನೆಗೆ ಪ್ರವೇಶ ಮಾಡಲು ಯತ್ನಿಸಿ, ತಲೆಬಾಗಿಲವನ್ನು ಕಲ್ಲು ಗುಂಡುಗಳಿಂದಲೂ ಕೋಲ್ಗಳಿಂದಲೂ ಹೊಡೆಯುತ್ತಿರುವಾಗ್ಗೆ ಒಳಗಿದ್ದವರು ಎಚ್ಚರಗೊಂಡು ಬರುವಾಗ್ಗೆ ಇನ್ನೂ ಜಾಸ್ತಿಯಾಗಿ ಬಾಗಿಲನ್ನು ಹೊಡೆಯುತ್ತಾ ಬಂದರು. ಆ ಕದ ಸುಮಾರು ಅರ್ಧ ಅಡಿ ದಪ್ಪವಾದ್ದಾಗಿಯೂ, ಶಕ್ತಿಯುತವಾಗಿಯೂ ಇದ್ದದ್ದರಿಂದ ಅದು ಕಳ್ಳರಿಗೆ ಸಾಧ್ಯವಾಗದೆ ಹೋದ್ದರಿಂದ ಬದಲಿ ಅಂಗಡಿಗೆ ನುಗ್ಗಲು ಅದೇ ಪ್ರಕಾರ ಅಂಗಡಿ ಕದಗಳನ್ನು ಹೊಡೆಯುತ್ತಾ ಬರುವಾಗ್ಗೆ ಒಳಗಿದ್ದ ೧೫ ವರುಷದ ಭೋಗಶೆಟ್ಟರ ಮಗ ಮಾಳಿಗೆಯ ಮೇಲೆ ಹೊರಟು ಜನಗಳನ್ನು ಕರೆಯಲು ಹೋದನು. ಆ ದಿನ ಭೋಗಶೆಟ್ಟರು ಊರಲ್ಲಿರಲಿಲ್ಲ. ಆತನ ತಮ್ಮ ಇನ್ನೊಬ್ಬ ಬಾಳೆಯಶೆಟ್ಟರೆಂಬುವರು ಧೈರ್ಯದಿಂದ ಅಂಗಡಿ ಒಳಗಿದ್ದ ಎಲ್ಲಾ ನಗನಾಣ್ಯ ಪೆಟ್ಟಿಗೆ ವಗೈರೆಯನ್ನು ಪಡಸಾಲೆಗೆ ಸಾಗಿಸಿದರು. ಅಷ್ಟರಲ್ಲೇ ಅಂಗಡಿ ಕದ ಸ್ವಲ್ಪ ಸಂದುಬಿತ್ತು. ಆಗ್ಗೆ ಸದರಿ ಬಾಳೆಯಶೆಟ್ಟರು ಅವರೊಡನೆ ಬಹಳ ಹೊತ್ತು ಅತಿ ಸಾಹಸದಿಂದ ಇವರು ಒಂದು ಕೊಡ್ಲಿ ತೆಗೆದುಕೊಂಡು ಕದವಿನ ಸಂದಿನಲ್ಲೇ ಏಟು ಬೀಳುವ ಸ್ಥಳಕ್ಕೆ ಕೊಡಲಿ ಕೊಟ್ಟುಕೊಂಡು ಬಹಳ ಹೊತ್ತು ಹೋರಾಡುತ್ತಾ ಇರುವಲ್ಲಿ ಸದರಿ ಕಳ್ಳರು ಬಂದೂಕದಿಂದ ಸದರಿ ಕದದ ಸಂದಿನಲ್ಲಿ ಒಳಕ್ಕೆ ಹೊಡೆದರು. ದೈವವಶಾತ್ ಸದರಿ ಬಾಳೆಯಶೆಟ್ಟರಿಗೆ ಬಂದೂಕದ ಏಟು ತಗಲದೆ ಕೈಗೆ ಸ್ವಲ್ಪ ಒಂದು ರವೆ ತಗಲಿದ್ದರಿಂದ ಗಾಬರಿಯಾಗಿ ಅಂಗಡಿ ಬಿಟ್ಟು ಇನ್ನೊಂದು ಕದ ಹಾಕಿಕೊಂಡು ಪಡಸಾಲೆ ಒಳಕ್ಕೆ ಹೋದರು. ಸದರಿ ಕಳ್ಳರು ಅಂಗಡಿ ಒಳಕ್ಕೆ ಎಲ್ಲರೂ ಪ್ರವೇಶಮಾಡಿದರು. ಅಷ್ಟರಲ್ಲೇ ಭೋಗಶೆಟ್ಟರ ಮಗನಾದ ಸಿದ್ಧನಂಜಪ್ಪನೆಂಬುವನು ಸುಮಾರು ಇನ್ನೂರು ಜನಗಳ ವರೆಗೂ ಸೇರಿಸಿಕೊಂಡು ಬರುವಾಗ್ಗೆ ಆ ಕಳ್ಳರು ಎಲ್ಲರೂ ಕತ್ತಿ ಮುಂತಾದ ಆಯುಧಗಳಿಂದ ಪಟ್ಟಾವರಸೆ ತಿರಿಗಿಸುತ್ತಾ ಹೊರಟುಹೋದರು. ದೈವಾನುಗ್ರಹದಿಂದ ಯಾವದಕ್ಕೂ ಸಾಧ್ಯವಾಗದೆ ಯಾರಿಗೂ ಯಾವದೊಂದು ಅಪಾಯವೂ ಸಂಭವಿಸಲಿಲ್ಲ. ಮುಖ್ಯ ಇವರು ಪುನರ್ಜನ್ಮವೆತ್ತಿದಂತಾಯಿತು. ಅಕ್ಕಸಾಲಿಗರನ್ನು ಮಾತ್ರ ಇಲಾಜು ಬಗ್ಗೆ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಅದೇ ಕಳ್ಳರು ತಾ॥ ೬ರಲ್ಲಿ ಅದೇ ಮಾರ್ಗದಿಂದ ಇಲ್ಲಿಗೆ ಸುಮಾರು ೯ ಮೈಲಿ ದೂರದಲ್ಲಿರುವ ಹಾಗಲ್ವಾಡಿಗೆ ರಾತ್ರಿ ಅದೇ ಹೊತ್ತಿನಲ್ಲಿ ಪ್ರವೇಶಿಸಿ, ಅಕ್ಕಸಾಲಿಗರ ಪುಟ್ಟಾಚಾರಿ ಮನೆಗೆ ಕನ್ನಾ ಹಾಕಿ, ಸುಮಾರು ೧೦೦೦ ರೂಪಾಯಿ ನಗನಾಣ್ಯಗಳನ್ನು ಕದ್ದುಕೊಂಡು, ಇನ್ನೊಂದು ಮನೆ ಅಂದರೆ ಅದೇ ಊರು ನಾಗಣ್ಣನ ಮಲ್ಲೈಯನ ಮನೆಗೆ ಕನ್ನ ಹಾಕಿ ಸುಮಾರು ೨೫೦ ರೂಪಾಯಿ ನಗನಾಣ್ಯಗಳು ಸಿಟ್ಟೆಬರೆ(?) ವಿಶಿಷ್ಟವೂ ತೆಗೆದುಕೊಂಡು ಹೋಗಿರುತ್ತಾರೆ. ೭ನೆ ತಾ॥ ರಾತ್ರಿ ಅದೇ ಕಳ್ಳರು ಇಲ್ಲಿಗೆ ಸುಮಾರು ೨ ಮೈಲಿಯಲ್ಲಿರುವ ಜಾಕಲ್ಲು ಅಕ್ಕಸಾಲೆ ತಿಮ್ಮೈಯನ ಮನೆಗೆ ಪ್ರವೇಶಮಾಡಿರುತ್ತಾರೆ. ಮಾಲೇನೂ ಹೋಗಲಿಲ್ಲವೆಂಬದಾಗಿ ಹೇಳುತ್ತಾನೆ.

ಈ ದುಷ್ಟ ಕಳ್ಳರು ಬೆಳಗಿನ ಹೊತ್ತು ತಿರುಪೆ ಮೊದಲಾದ ಆಕಾರಗಳಿಂದ ಬಂದು, ನೋಡಿಕೊಂಡು ರಾತ್ರಿ ಪ್ರವೇಶಮಾಡುತ್ತಾರೆ. ಆದ್ದರಿಂದ ಎಲ್ಲಾ ಗ್ರಾಮದ ಜನಗಳೂ ಎಚ್ಚರದೊಡನೆ ಇರಬೇಕು. ನಮ್ಮ ಗೌರ್ನಮೆಂಟಿನಲ್ಲಿ ಒಂದು ಕುಟುಂಬಕ್ಕೆ ಒಂದು ಬಂದೂಕ ಬೇಕಾದರೆ ಎಷ್ಟೋ ಆಗಬೇಕು. ಹಾಗೂ ದೊರೆಯುವುದು ದುರ್ಲಭ. ಇಷ್ಟು ನಿರ್ಬಂಧವಿದ್ದರೂ ಈ ಕಳ್ಳರಿಗೆ ಬಂದೂಕ ಮದ್ದು [illegible] ದೊರೆಯಿತೋ! ಮೋಗನಾಯ್ಕನಕೋಟೆಯಲ್ಲಿ ಕಳ್ಳರು ಪ್ರವೇಶಮಾಡಿದ ಕಾಲದಲ್ಲಿ ಬಾಳೆಶೆಟ್ಟರ ಕೈಲಿ ಒಂದು ಬಂದೂಕವಿದ್ದರೆ ಕೆಲವು ಮಂದಿಯನ್ನು ಕೊಂದುಹಾಕುತ್ತಿದ್ದರು. ಈಗಲೂ ಒಂದೊಂದು ಕುಟುಂಬದಲ್ಲಿ ಒಂದೊಂದು ಬಂದೂಕ, ಕತ್ತಿ, ವಗೈರೆ ಆಯುಧಗಳಿಟ್ಟದ್ದರೆ ಎಷ್ಟೋ ಕ್ಷೇಮಕರ. ಈಗ ಬಂದಿರತಕ್ಕ ಪ್ಲೇಗ್ ಉಪದ್ರ ಒಂದು, ಕಳ್ಳರ ಅವಾಂತ್ರ ಒಂದು, ಮಳೆ ಬೆಳೆ ಇಲ್ಲದ್ದು ಒಂದು, ಹೀಗಿದ್ದರೆ ಪ್ರಜೆಗಳು ಏನುಮಾಡುವರು? ಈಗಲು ನಮ್ಮ ಮೈಸೂರು ಸರ್ಕಾರದವರು ತುಂಬ ಮುತುವರ್ಜಿಯಿಂದ ಆ ಕಳ್ಳರನ್ನು ಹಿಡಿದು ಬಂದೋಬಸ್ತು ಮಾಡದೆ ಹೋದಲ್ಲಿ ಇನ್ನೂ ಅನೇಕ ತರಕ್ಕೆ ಕಾರಣವಾಗುತ್ತೆ. ಈ ಕಳ್ಳರು ಯಾವದೋ ಒಂದು ಗ್ಯಾಂಗು ಆಗಿ ಕಾಣುತ್ತೆ.

ಈ ಗಲಾಟೆ ಆದಲಾಗಾಯ್ತು ಈ ಗ್ರಾಮದ ಪೋಲೀಸ್ ದಫೇದಾರ್ ಲಕ್ಷ್ಮಣರಾಯರು ಪಾಟೀಲರು ವಗೈರೆಯೆಲ್ಲಾ ರಾತ್ರಿ ಹೊತ್ತು ಬಹಳ ಪ್ರಯತ್ನದಿಂದ ಗ್ರಾಮದ ಗಸ್ತು ಬಹಳ ಚನ್ನಾಗಿ ನೋಡುತ್ತಾರೆ. ಹಳ್ಳಿಗಳ ಗಸ್ತು ಜನಗಳನ್ನು ಹೆಚ್ಚಿಸಿಕೊಂಡು ಕಳ್ಳರನ್ನು ಹುಡುಕಲು ಆದಷ್ಟು ಗಿರಿ ಮಹತ್ತಾದ ಕಡೆಗಳಲ್ಲಿ ತಿರುಗುತ್ತಾರೆ. ಈ ಮಟ್ಟಿಗೆ ಎಚ್ಚರದೊಡನೆ ಇದ್ದರೆ ಯಾವ ಅಪಾಯವೂ ಸಂಭವಿಸಲಾರದು. ಈಗ್ಗೆ ಸುಮಾರು ೪—೧೦ ತಿಂಗಳ ಕೆಳಗೆ ಈ ಗ್ರಾಮದ ಶಾನುಭೋಗರ ಮನೆಗೆ ಕಳ್ಳರು ಬಿದ್ದು ಸುಮಾರು ೨,೦೦೦ ಸಾವಿರ ರೂಪಾಯಿ ನಗನಾಣ್ಯಗಳನ್ನು ಕದ್ದುಕೊಂಡು ಹೋದರು. ಆಗ್ಗೆ ಇಷ್ಟರಮಟ್ಟಿಗೆ ಎಚ್ಚರದಲ್ಲಿದ್ದಿದ್ದರೆ ಕಳುವಿಗೆ ಸಾಧ್ಯವಾಗುತ್ತಿರಲಿಲ್ಲ. ಈಗಲೂ ಎಲ್ಲಾ ಎಚ್ಚರದೊಡನೆ ಇರಬೇಕು.

ಒಕ್ಕಾ ಪಟ್ಟಿದ ವಾಚಕರಲ್ಲಿ ಒಬ್ಬ

ಹಿಂದೂಗಳ ಮದುವೆವೆಚ್ಚ

ಇಂಡಿಯಾದೇಶದ ಬಡತನಕ್ಕೆ ಕೆಲವು ಕಾರಣಗಳಿವೆಯೆಂದು ಅನೇಕರು ಹೇಳುವರು. ಅವುಗಳಲ್ಲಿ ಮದುವೆವೆಚ್ಚವೂ ಒಂದಾಗಿದೆ. ಎಂದಿನಿಂದ ಇದರ ಆರಂಭವಾಯಿತೆಂದು ಊಹಿಸುವುದು ಸಾಧ್ಯವಲ್ಲ. ಹಿಂದೂದೇಶೀಯರಲ್ಲಿ ಉತ್ತಮ ವರ್ಣದವರು ಎಷ್ಟೇ ಬಡವರಾಗಿದ್ದರೂ, ಅವರು ಮಾಡುವ ವೆಚ್ಚಗಳು ಯೋಗ್ಯತೆಯನ್ನು ಮೀರಿರುವವು.

ಮದುವೆ ಮುಂಜಿಗಳಲ್ಲಿಯೂ, ಶ್ರಾದ್ಧಾದಿಗಳಲ್ಲಿಯೂ ಹಬ್ಬಗಳಲ್ಲಿಯೂ ಸಾಮಾನ್ಯವಾಗಿ ಮಾಡತಕ್ಕ ವೆಚ್ಚಗಳ್ಯಾವುವನ್ನೂ ತಗ್ಗಿಸಲು ಸಾಧ್ಯವಾಗಲಿಲ್ಲ. ಸಮಾಜದಲ್ಲಿ ಐಕಮತ್ಯವಿಲ್ಲದುದರಿಂದಲೂ ನೆರೆಯವರು ಮಾಡುವಂತೆ ತಾವೂ ಮಾಡಿದರೆ ಜನರಿಂದ ಮೆಚ್ಚುಗೆಯನ್ನು ಪಡೆಯುವೆವೆಂಬ ಒಂದು ದುರಭಿಪ್ರಾಯದಿಂದಲೂ ವೆಚ್ಚಗಳಿಗಾಗಿ ತಮ್ಮ ಮನೆ ಮಾರುಗಳನ್ನು ಮಾರಿ ಶಕ್ತಿಮೀರಿ ಸಾಲಗಾರರಾಗುತ್ತಾರೆ. ಕೆಲವು ಜನಾಂಗಗಳವರು ಇಂಥಿಂತಹ ಕಾರ್ಯಗಳಿಗೆ ಇಷ್ಟಿಷ್ಟೇ ವೆಚ್ಚವೆಂದು ನಿರ್ಣಯಿಸಿಕೊಂಡು ಹಾಗೆಯೇ ನಡೆಯುತ್ತ ಸುಖವಾಗಿರುವರು. ಬ್ರಾಹ್ಮಣರಲ್ಲಿ ಯಾದರೋ ಅವನೆಷ್ಟು ಬಡವನೇ ಆಗಿರಲಿ ಜನನಮರಣ ಶುಭಾಶುಭಗಳಲ್ಲಿ ಪುರೋಹಿತನ ಅಪ್ಪಣೆಯೇ ಪ್ರಧಾನವಾಗಿ ಯಜಮಾನನು ತನ್ನ ಶಕ್ತಿಯನ್ನು ಮೀರಿ ದ್ರವ್ಯವ್ಯಯವನ್ನು ಮಾಡಬೇಕಾಗಿದೆ. ಈಗಿನ ಕಾಲದಲ್ಲಿ ಮಳೆಯೂ ಸರಿಯಾಗಿ ಸಡಿಸದಿರುವುದರಿಂದ ಬೆಳೆಗಳು ಕಡಿಮೆಯಾಗುತ್ತಿರುವವು. ತಕ್ಕ ವೃತ್ತಿಗಳೂ ಉದ್ಯೋಗಗಳೂ ಇಲ್ಲದುದರಿಂದ ಪ್ರತಿಯೊಬ್ಬನೂ ತನ್ನ ಹೆಂಡಿರುಮಕ್ಕಳ ಜೀವನಕ್ಕೆ ಸಾಕಾಗುವಷ್ಟನ್ನಾದರೂ ಗಳಿಸಲು ಸಾಧ್ಯವಿಲ್ಲದಿದೆ. ಇಂತಹ ಸ್ಥಿತಿಯಲ್ಲಿಯೇ ಇವನು ಹೆಚ್ಚಾದ ವೆಚ್ಚಗಳನ್ನು ಮಾಡಬೇಕಾದರೆ ಹಣವೆಲ್ಲಿಂದ ಬರಬೇಕು? ಮಸಲಾ, ಒಬ್ಬನ ಆದಾಯವು ತಿಂಗಳಿಗೆ ಹತ್ತು ಹನ್ನೆರಡು ರೂಪಾಯಿಗಳೆಂದು ತಿಳಿಯೋಣ. ಈ ಹಣದಲ್ಲಿ ಮನೆಯ ಬಾಡಿಗೆ, ಬಟ್ಟೆಬರೆಗಳು, ಇತರ ಚಿಲ್ಲರೆಯಾದ ವೆಚ್ಚಗಳು ಇಂಥವುಗಳೇ ನಾಲ್ಕಾರು ರೂಪಾಯಿಗಳ ವರೆಗೂ ಹಿಡಿಯುವವು. ಉಳಿದುದರಲ್ಲಿ ಗಂಡಹೆಂಡಿರಿಬ್ಬರ ಜೀವನವು ಸಾಗುವುದೇ ದುಸ್ತರವೆನ್ನಬಹುದು. ಅವರಿಗೆ ನಾಲ್ಕಾರುಮಂದಿ ಮಕ್ಕಳಿದ್ದಲ್ಲಿ ಪ್ರತಿಯೊಬ್ಬರಿಗೂ ಅರೆಹೊಟ್ಟೆಗೆ ಸಾಕಾಗುವಷ್ಟು ಕೂಡ ಉಳಿಯುವುದಿಲ್ಲ. ಇಂತಹ ಸಂಸಾರಿಯು ವರ್ಷಕ್ಕೆ ೪—೫ ಶ್ರಾದ್ಧಗಳನ್ನು ಮಾಡಬೇಕಾಗಿದ್ದರೆ, ಕನಿಷ್ಟಪಕ್ಷದಲ್ಲಿ ೨೦ ರೂಪಾಯಿಗಳಾದರೂ ಅಗತ್ಯವಿರುವವು. ಒಂದು ಕೂಸು ಹುಟ್ಟಿತೆಂದರೆ ಅದರ ನಾಮಕರಣವೆಚ್ಚ, ಬಾಣಂತಿಯ ಪೋಷಣೆ, ಮೊದಲಾದವುಗಳಿಗಾಗಿ ೫೦ ರೂಪಾಯಿಗಳಿಗಿಂತ ಕಡಿಮೆ ಸಾಕಾಗುವುದಿಲ್ಲ. ಮನೆಯವರಾರಾದರೂ ಸತ್ತರೆ, ಅವರ ಅಪರಕರ್ಮಗಳಿಗಾಗಿ ಒಂದು ವರ್ಷದ ವರೆಗೆ ಬೇಕಾಗುವ ಬಿಡತನದ(?) ವೆಚ್ಚವು ೧೦೦—೧೫೦ ರೂಪಾಯಿಗಳಿಗಿಂತ ಕಡಿಮೆಯಾಗುವುದಿಲ್ಲ. ಮದುವೆಗಳಲ್ಲಿ ಸಾಲಮಾಡಿದರೆ, ಬಡ್ಡಿಗೆ ಬಡ್ಡಿಯನ್ನು ಕೂಡಿಸಿ ಒಂದಕ್ಕೆ ನಾಲ್ಕರಂತೆ ಲೆಕ್ಕವನ್ನು ತೋರಿಸಿ ಮುಳುಗಿಸುವರು.

ಇವರು ಮಾಡತಕ್ಕ ದುಂದುಗಾರಿಕೆಯ ವೆಚ್ಚಗಳು [illegible]ವಾಗಿ ಮಾಡಲ್ಪಡಬಹುದು, ಅಥವಾ, ನಾಲ್ಕಾರು ರೂಪಾಯಿಗಳಲ್ಲಿ ಮಾಡಿ ಮುಗಿಸಬಹುದು. ಹೀಗಿದ್ದರೂ, ಬಂಧುಜನಗಳ ನಿಂದೆಗೂ ಪುರೋಹಿತರ ಆಗ್ರಹಕ್ಕೂ ಪಾತ್ರರಾಗಬೇಕೆಂಬ ಭಯದಿಂದಲೂ, ಮೌಢ್ಯಾವಸ್ಥೆಯಲ್ಲಿರುವ ಹೆಂಗಸರ ಆಕ್ಷೇಪಣೆಗೆ ಗುರಿಯಾಗಿ, ವ್ಯಕ್ತಿ ಪಡುವುದಕ್ಕಿಂತ ಸಾಲಗಾರರ ಮಕ್ಕಳಾಗುವುದು ಲೇಸೆಂಬ ಅನಾಯದಿಂದಲೂ ಒಬ್ಬರನ್ನು ನೋಡಿ ಮತ್ತೊಬ್ಬರು, ಪೂರ್ವಾಚಾರದಂತೆ ನಡೆಯುವುದೇ ಪ್ರಶಸ್ತವೆಂದು ನಿರ್ಧರಿಸಿ, ಕರ್ಮವಶರಾಗಿ ದುಃಖಿಸುತ್ತಿರುವರು. ಒಂದೊಂದು ಸಮಾಜದವರೂ ಒಗ್ಗಟ್ಟಾಗಿ, ಪ್ರತಿಯೊಂದು ಕರ್ಮಕ್ಕೂ ಇಷ್ಟಿಷ್ಟೇ ಹಣವನ್ನು ವ್ಯಯಮಾಡತಕ್ಕದೆಂದು ನಿರ್ಣಯಿಸಿಕೊಂಡು ಹಾಗೆಯೇ ನಡೆಯುತ್ತ ಬಂದಲ್ಲಿ, ಎಲ್ಲರಿಗೂ ಮೇಲುಟಾಗಿ(?) ಸೌಖ್ಯದಿಂದಿರಬಹುದು. ನಮ್ಮವರೆಲ್ಲರಿಗೂ ಈ ಕಷ್ಟಗಳು ತಿಳಿದಿದ್ದರೂ, ಯಾರೂ ಮುಂದಾಳಾಗಿ ನಿಲ್ಲುವುದಿಲ್ಲ.

ಇಷ್ಟೇ ಅಲ್ಲದೆ, ಅವಿವೇಕದ ವೆಚ್ಚಗಳೂ ಕೆಲವು ಮಾಡಲ್ಪಡುತ್ತಿವೆ. ಶುಭಕಾಲಗಳಲ್ಲಿ ಉಡುಗೊರೆಗಳ ಬಗೆಗಾಗಿ ಬಹಳ ಹಣ ಬೇಕಾಗುವುದು. ಇದರಿಂದ ಯಾವ ಪ್ರಯೋಜನವೂ ದೊರೆಯುವುದಿಲ್ಲ. ವೇಶ್ಯೆಯರ ನರ್ತನಾದಿಗಳಿಗೆ ತುಂಬಾ ಹಣವನ್ನು ತೆರುವರು. ಇವರ ವೆಚ್ಚಕ್ಕೇ ಹಣ ಸಾಲದೆ, ಪತ್ರಕರಲ್ಲಿ ಮಾಡುವ ಸಾಲಗಳ ಒಂದಕ್ಕೆ ನಾಲ್ಕಾಗಿ ಒಟ್ಟು ಬೆಳೆದುಕೊಂಡು, ಕತ್ತೆಂಟು ವರ್ಷಗಳಲ್ಲಿ ದ್ವಿಗುಣ, ಚತುರ್ಗುಣದ ವರೆಗೂ ಏರುವುದು. ದೇಹಸೌಖ್ಯಕ್ಕಾಗಿ ನಾಲ್ಕಾರು ಆಸೆಗಳನ್ನು ಸುದಾ ವೆಚ್ಚಮಾಡರು. ಇಂತಹ ಮದುವೆಗಳಲ್ಲಿ ದುಂದು ವೆಚ್ಚಕ್ಕಾಗಿ ದ್ರವ್ಯವನ್ನು ಹಾಳುಮಾಡುತ್ತಿರುವುದನ್ನು ನೋಡುವರೆ ಎಷ್ಟೋ ದುಃಖವಾಗುವುದು. ಇದಕ್ಕೆ ಪರಿಹಾರವನ್ನು ಚಿಂತಿಸುವವರೇ ಇಲ್ಲ. ಸರ್ಕಾರದವರೂ ಈ ವಿಷಯದಲ್ಲಿ ಕೈಹಾಕುವಂತೆ ಇಲ್ಲ. ಆದಾಯಕ್ಕೆ ಮೀರಿದ ವ್ಯಯಮಾಡಬಾರದೆಂಬ ನಿಯಮವನ್ನು ನಮ್ಮವರು ಮರೆತೇ ಬಿಟ್ಟರು. ಇನ್ನೂ ಕೆಲವೆ ವರ್ಷಗಳು ಹೀಗೆಯೇ ನಡೆದಲ್ಲಿ, ಮುಂದಿನ ಜನಾಂಗದ ಜನಗಳೆಲ್ಲರೂ ದಿವಾಳಿಯಾಗುವದರಲ್ಲಿ ಸಂದೇಹವೇನೂ ಇಲ್ಲ.

ಸಾಮಾಜಿಕ ಸುಧಾರಣೆಯ ಪಕ್ಷದವರು [illegible] ಮಹತ್ಕಾರ್ಯದಲ್ಲಿ ಕೈಹಾಕಿ ಮುಂದುವರಿದು [illegible] ಬರುವದಿಲ್ಲ. ಮೈಸೂರ್ ಸೋಷಿಯಲ್ ಕಾನ್ಫರೆನ್ಸಿನವರು ರಾಜಧಾನಿಯಲ್ಲಿ ಕಾನ್ಫರೆನ್ಸನ್ನು ಮಾಡಿ, ಕೆಲವು ನಿರ್ಣಯಗಳನ್ನೇರ್ಪಡಿಸಿ [illegible] ರಾಜಪುತ್ರರು ಮಿತವ್ಯಯವನ್ನು ಅನುಸರಿಸಿ [illegible] ಹೇಳುತ್ತೇನೆ. ಅಂತಹ [illegible] ಇದುವರೆಗೆ ನಮ್ಮಲ್ಲಿ ಅವತರಿಸಿಲ್ಲ. ಒಬ್ಬಿಬ್ಬರೇ ಇಂತಹ ಕಾರ್ಯಗಳನ್ನು ಕೈಕೊಂಡರೆ ಜನರ ನಗೆಗೆ ಈಡಾಗುವರು. ಪ್ರತಿಯೊಂದು ಸಂಘದವರೂ ತಮ್ಮವರ ಆದಾಯವ್ಯಯಗಳನ್ನು ಯೋಚಿಸಿ ವೆಚ್ಚಮಾಡತಕ್ಕ ಕೆಲವು ನಿಬಂಧನೆಯನ್ನು ತಮ್ಮತಮ್ಮಲ್ಲಿ ನಿರ್ಣಯಮಾಡಿಕೊಂಡು, ಅದರಂತೆಯೇ ನಡೆಯುತ್ತ ಬಂದಲ್ಲಿ, ಈ ಜನಾಂಗದ ದಾರಿದ್ರ್ಯವೂ ಕಡಿಮೆಯಾಗುವುದು. ವ್ಯವಸಾಯ, ಕೈಗಾರಿಕೆ ಮೊದಲಾದವುಗಳಲ್ಲಿ ನಾವು ಇನ್ನೂ ಹೆಚ್ಚಾಗಿ ಸಂಪಾದಿಸಬಹುದೆಂಬ [illegible] ಹಿಂದೂಜನರಿಗಿಲ್ಲ. ಏಕೆಂದರೆ, ಪರದೇಶೀಯರು ಯಂತ್ರಬಲದಿಂದ ನಡೆಸತಕ್ಕ ಕೆಲಸವನ್ನು ನಮ್ಮವರು ಕೈಯಿಂದಲೇ ಮಾಡಿ ಮುಗಿಸುವುದು ಸಾಧ್ಯವಲ್ಲ. ಎಲ್ಲಾ ಬಾಬಿನ ಆದಾಯಗಳೂ ವಿದೇಶೀಯರ ಪಾಲಾಗುತ್ತಿರುವವು. ಆದುದರಿಂದ ನಮ್ಮವರೆಲ್ಲರೂ [illegible]ರಾಗಿದ್ದರೆ ಸಾಲಸೋಲಗಳಿಲ್ಲದೆ, ತಮಗಿರುವ ಸಂಪಾದನೆಯಲ್ಲಿಯೇ ಜೀವನಮಾಡಿಕೊಳ್ಳುವಷ್ಟು ಬುದ್ಧಿಯುಳ್ಳವರಾಗಿದ್ದರೇ ಸಾಕೆಂದು ಹೇಳಬಹುದು.

ಶ್ರೀಕೃ. ಸೋ.

ಇಂಡಿಯಾ ದೇಶದ ವೃತ್ತಾಂತಗಳು

ಪೂನೆಗೂ ಲೋಣಾವಳಿಗೂ ನಡುವೆ ಭೋರ್ ಘಾಟ್ ಲೈನಿನಲ್ಲಿ ಎರಡು ಮೈಲ್ ಗಾಡಿಗಳು ಬಡಿದಾಡಿ ಇಬ್ಬರು ರೈಲ್ವೆ ನೌಕರರು ಮೃತರಾದರು. ಇನ್ನೊಬ್ಬನಿಗೆ ಗಾಯಗಳಾಗಿವೆ.

***

ಸಿಲೋನ್ (ಲಂಕಾ) ದ್ವೀಪದಲ್ಲಿ ಕಳೆದ ವಾರ ಭೂಕಂಪವುಂಟಾಗಿ ಒಂದು ದಿನ ಸುಮಾರು ಅರ್ಧ ಗಂಟೆಯ ಹೊತ್ತು ಭೂಮಿಯು ನಡುಗಿತು. ಆದರೆ ಅನಾಹುತಗಳೇನೂ ಸಂಭವಿಸಲಿಲ್ಲ.

***

ಫೋಣಾಬಾದ್ ಎಂಬ ರೈಲ್ವೆ ಸ್ಟೇಷನ್ ಹೆಡ್ ಆಫೀಸಿಗೆ ೪ ದಿನ ಕಳ್ಳರು ನುಗ್ಗಿ ಹಣಕಾಸನ್ನೆಲ್ಲಾ ಲೂಟಿಮಾಡಿ, ಸುಮಾರು ೨ ಲಕ್ಷದ ೧೫ ಸಾವಿರ ರೂಪಾಯಿಯನ್ನು ಅಪಹರಿಸಿಕೊಂಡು ಹೋದರು.

***

ದರ್ಭಾಂಗ ಸಂಸ್ಥಾನದ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ಪ್ರಜೆಗಳ ಮಕ್ಕಳಿಗೆ ಪ್ರೈಮರಿ ವಿದ್ಯಾಭ್ಯಾಸವನ್ನು ಏನೂ ತೆಗೆದುಕೊಳ್ಳದೆ ಮಾಫಿಯಾಗಿ ಮಾಡಿಸಬೇಕೆಂದು ಹುಕುಂ ಕೊಟ್ಟಿದ್ದಾರೆ.

***

ಸಂಯುಕ್ತ ಆಧಿಪತ್ಯಗಳಲ್ಲಿ ಕ್ಷಾಮವು ಪ್ರಾಪ್ತವಾಗಿರುವುದರಿಂದ ಕ್ಷಾಮನಿವಾರಣೆಯ ಧರ್ಮ ಫಂಡನ್ನು ಪ್ರಾರಂಭಿಸಿ ಚಂದಾ ಕೂಡಿಸಬೇಕೆಂದು ಗೊತ್ತಾಗಿದೆ. ಇದಕ್ಕೋಸ್ಕರ ಲೆಫ್ಟಿನೆಂಟ್ ಗವರ್ನರ್ ಸರ್ ಜಾನ್ ಹ್ಯೂಯೆಟ್ ಯವರು ಲಕ್ನೋ ಪಟ್ಟಣದಲ್ಲಿ ನಾಡಿದ್ದು ಒಂದು ಮಹಾ ಸಭೆಯನ್ನು ನಡಿಸುವವರಾಗಿದ್ದಾರೆ.

ಕಳೆದ ವಾರ ಹೈದರಾಬಾದಿನಲ್ಲಿ ಅರಮನೆಯ ಒಂದು ಆನೆಯು ಮಸ್ತಾಗಿ ಒಬ್ಬ ಹೆಣ್ಣು ಮಗುವನ್ನು ಹಿಡಿದು ಭಯಂಕರವಾದ ರೀತಿಯಲ್ಲಿ ಕೊಂದುಹಾಕಿದ್ದರಿಂದ ನೈಜಾಮರವರು ಹುಕುಂಕೊಟ್ಟು ಆ ದುಷ್ಟ ಮೃಗವನ್ನು ಗೋಲಿಯಿಂದ ಸುಡಿಸಿಬಿಟ್ಟರು

ಕರ್ನಲ್ ಡಿಸ್ಟ್ರಿಕ್ಟಿನಲ್ಲಿ ಸಿದ್ಧಪುರದ ಕೆರೆ ಎಂಬ ಭಾರಿ ತಲಾವಿನ ಕಾಮಗಾರಿಯನ್ನು ಪ್ರಾರಂಭಿಸಿ ಪೂರೈಸಬೇಕೆಂದು ಇಂಡಿಯಾ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ ಈ ಕಾಮಗಾರಿಗೆ ಐದು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿಯೇ ಖರ್ಚಾಗುವುದು

ಕಳೆದ ವಾರ ಹಿಂದುಸ್ಥಾನದಲ್ಲಿ ೬,೯೨೩ ಜನರು ಪ್ಲೇಗ್ ಉಪದ್ರವದಿಂದ ಕಾಲವಾದರು ಈ ಪೈಕಿ ಬೊಂಬಾಯಿ ಆಧಿಪತ್ಯದಲ್ಲಿ ೩೧೪೫, ಸಂಯುಕ್ತ ಆಧಿಪತ್ಯಗಳಲ್ಲಿ ೧೩೩೧ ಮೈಸೂರು ಸಂಸ್ಥಾನದಲ್ಲಿ ೬೮೨, ಬಂಗಾಳದಲ್ಲಿ ೩೩೬ ಈ ರೀತಿ ಮರಣಗಳಾಗಿವೆ

ಕೂಚ್ ಬೇಹಾರಿನ ಮಹಾರಾಜರವರ ಮೂರನೇ ಕುಮಾರನಾದ ವಿಕ್ಟರ್ ನಿತ್ಯೇಂದ್ರನಾರಾಯಣ ಎಂಬಾತನು ವಿಲಾಯಿತಿಯಲ್ಲಿ ಕೆಲವು ದಿನ ಇದ್ದು ಅಲ್ಲಿಂದ ಅಮೇರಿಕಕ್ಕೆ ಹೋಗಿ ವ್ಯವಸಾಯ ಶಾಸ್ತ್ರವನ್ನು ಕಲಿತು ಬರಬೇಕೆಂದು ಈ ವಾರ ಪ್ರಯಾಣಮಾಡಿರುತ್ತಾನೆ

ದಿ॥ ರವಿವರ್ಮರವರೆಂಬ ಪ್ರಸಿದ್ಧ ಚಿತ್ರಗಾರರ ಕುಮಾರರಾದ ರಾಜಾ ರಾಮವರ್ಮರವರು ಅವರ ತಂದೆಯ ಕಸುಬನ್ನೇ ಮಾಡುತ್ತಿದ್ದಾರೆಂತಲೂ, ಈಗ ಇವರು ರೇವಾ ಸಂಸ್ಥಾನಕ್ಕೆ ಹೋಗಿ ಅಲ್ಲಿನ ಮಹಾರಾಜರವರ ಛಾಯಾಚಿತ್ರವನ್ನು ಬರೆಯುತ್ತಿದ್ದಾರೆಂತಲೂ ತಿಳಿದು ಬಂದಿದೆ

ಬಂಗಾಳದಲ್ಲಿ ಪ್ರಕಟವಾಗುವ "ವಂದೇ ಮಾತರಂ" ಎಂಬ ಪತ್ರಿಕೆಯ ಎಡಿಟರಾದ ಬಾಬು ಅರವಿಂದಘೋಷ್‌ರವರು ಕಳೆದ ವಾರ ಪೂನಾ ಪಟ್ಟಣಕ್ಕೆ ಬಂದಿದ್ದಾಗ ಸ್ವದೇಶೀ ಸ್ವೀಕಾರ, ಪರದೇಶೀ ಬಹಿಷ್ಕಾರ ವೆಂಬೀ ವಿಷಯವನ್ನು ಕುರಿತು [illegible] ಬಹು ಚತುರವಾದ ಉಪನ್ಯಾಸ ಮಾಡಿದರು

ಬಲೂಚಿಸ್ಥಾನದ ಕಡೆ ೯ ತಿಂಗಳಲ್ಲಿ ಪರದೇಶಗಳಿಂದ [illegible] ಕ್ರೀಟ್ ರಫಲು [illegible] ಚಿಕ್ಕ ಪೆಟ್ಟಿ ಹಿಂದ ಸ್ಥಾನಕ್ಕೆ ಬಂದಿರುತ್ತವೆ [illegible] ಬೆಳ್ಳಿಯನ್ನು [illegible] ಗವರ್ನಮೆಂಟಿನವರು [illegible] ಮಾಡಿ [illegible]

ಹಿಂದುಸ್ಥಾನದಲ್ಲೆಲ್ಲಾ ಈಗ ೩ ಲಕ್ಷದ ೧೩ ಸಾವಿರ [illegible] ಸ್ವದೇಶೀ [illegible] ಮತ್ತು [illegible] ೬೩,೦೦೦ ಜನರು ಕೆಲಸ ಮಾಡುತ್ತಿದ್ದಾರೆಂದು ತಿಳಿಯುವುದು

ಕಲ್ಕತ್ತಾ ಪಟ್ಟಣದಲ್ಲಿ ಮಹಾ ದಾನಶೀಲರೆಂತಲೂ ಪ್ರಜಾಪಕ್ಷ ದವರೆಂತಲೂ ಕೀರ್ತಿಯನ್ನು ಪಡೆದಿದ್ದ ಮಹಾರಾಜ ಸರ್ ಜೋತೀಂದ್ರ ಮೋಹನ ಟಾಗೋರ್‌ರವರು ಕಳೆದ ವಾರ ಕಾಲವಾದರು ಅವರ ಸ್ಥಾನವನ್ನು ಅವರ ದತ್ತಪುತ್ರರಾದ ಮಹಾರಾಜ ಕುಮಾರ್ ಪ್ರದ್ಯೋತ ಕುಮಾರ್ ಟಾಗೋರ್‌ರವರು ಅಲಂಕರಿಸುವರು

ಮುಂದಿನ ಮಾರ್ಚಿ ೨ನೇ ತಾರೀಖಿನ ದಿನ ಕಲ್ಕತ್ತಾ ಪಟ್ಟಣದ ಯೂನಿವರ್ಸಿಟಿ ಎಂಬ ವಿದ್ಯಾನಿಲಯದ ವಾರ್ಷಿಕ ಉತ್ಸವದ ಸಭೆಯು ಜರುಗುವದೆಂತಲೂ, ಆ ಸಮಾಜದಲ್ಲಿ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಅಗ್ರಾಸನವನ್ನು ವಹಿಸಿ ವಿದ್ಯಾವಿಚಾರವನ್ನು ಕುರಿತು ಭಾಷಣಮಾಡ ಬಹುದಾಗಿದಾರೆಂತಲೂ ಪ್ರಕಟವಾಗಿದೆ

ಕಲ್ಕತ್ತಾ ಪಟ್ಟಣದಲ್ಲಿ ಲಾಲಾ ಲಜಪತ್ ರಾಯರವರು ಒಂದು ದೊಡ್ಡ ಸಭೆಯಲ್ಲಿ ೮ ಉಪನ್ಯಾಸಮಾಡಿ ಕ್ಷಾಮ ನಿವಾರಣೆಗೋಸ್ಕರ ಒಂದು ಫಿರ್ಮಾ ಫಂಡನ್ನು ಏರ್ಪಾಡು ಮಾಡಿದರು ಪತ್ರಕರ್ತರೇ ಮೊದಲಾದವರು ಚಂದಾ ಕೊಟ್ಟಿದಾರೆ ಸ್ವದೇಶೀ ಯೌವನಸ್ಥರು ಚಂದಾ ವಸೂಲು ಮಾಡುವುದಕ್ಕಾಗಿ ೧೫ ಸ್ಥಾನಾಂತರಗಳ ಮೇಲೆ ಹೊರಟಿದಾರೆ

ಕಲ್ಕತ್ತಾ ಪಟ್ಟಣದಲ್ಲಿ ಯುಗಾಂತರ ವೆಂಬ ಪತ್ರಿಕೆಯನ್ನು ಅಚ್ಚುಹಾಕಿ ಹೊರಡಿಸುತ್ತಿದ್ದ ವೈಕುಂಠ ಆಚಾರ್ಯನು ಆ ಪತ್ರಿಕೆಯಲ್ಲಿ ರಾಜದ್ರೋಹಕರವಾದ ಸಂಗತಿಯನ್ನು ಅಚ್ಚುಹಾಕಿ ಹೊರಡಿಸಿದನೆಂಬ ಅಪಾದನೆಗೆ ಗುರಿಯಾದದ್ದರಿಂದ ಮ್ಯಾಜಿಸ್ಟ್ರೇಟರು ಅವನಿಗೆ ಎರಡು ವರುಷ ಕಠಿಣ ಸಜಾ, ೧೦೦೦ ರೂಪಾಯಿ ಜುಲ್ಮಾನೆ ಎಂಬೀ ಶಿಕ್ಷೆಯನ್ನು ವಿಧಿಸಿದರು

ಅಮೇರಿಕದ ಉತ್ತರಭಾಗದಲ್ಲಿರುವ ಇಂಗ್ಲಿಷರ ಸ್ವಾಧೀನವಾದ ಕ್ಯಾನಡಾ ಎಂಬ ದೇಶಕ್ಕೆ ಹಿಂದುಸ್ಥಾನದ ಜನರು ಹೋಗಕೂಡದೆಂಬ ವಿಷಯದಲ್ಲಿ ಕ್ಯಾನಡಾ ಗವರ್ನಮೆಂಟಿನವರು ಈಚೆಗೆ ಕೆಲವು ಹೊಸ ನಿಬಂಧನೆಗಳನ್ನು ಮಾಡಿ ನಮ್ಮ ವೈಸ್‌ರಾಯಿಯವರಿಗೆ ತಿಳಿಸಿರುತ್ತಾರೆ ಅವರ ಮುಖ್ಯಾಭಿಪ್ರಾಯವೇನೆಂದರೆ, ಇತರ ದೇಶಗಳಿಂದ ಕೂಲಿ ಮೊದಲಾದ್ದನ್ನು ಮಾಡುವದಕ್ಕಾಗಿ ಕ್ಯಾನಡಾಕ್ಕೆ ಬರತಕ್ಕವರೆಲ್ಲಾ ಅವರ ಸ್ವದೇಶಗಳಿಂದಲೇ ಸೀದಾ ಬರಬೇಕು [illegible] ಕ್ಯಾನಡಾಕ್ಕೆ ಬರಬೇಕು ಆದರೆ ಹಿಂದುಸ್ಥಾನದವರು ಅಮೇರಿಕ ಯೂರೋಪ್, ವಿಲಾಯಿತಿ ಮೊದಲಾದ ದೇಶಗಳ ಮೇಲೆ ಸುತ್ತಿಕೊಂಡು ಬರಕೂಡದು ಎಂಬುದೇ

ಬೊಂಬಾಯಿ ಗವರ್ನರವರು ಸೂರತ್ತಿನಲ್ಲಿ ನಡೆದ ಕೈಗಾರಿಕೆಗಳ ಪ್ರೋತ್ಸಾಹಕ ಸಮಾಜದ ವಿಷಯಗಳನ್ನು ತಿಳಿದು ಸಂತೋಷಪಟ್ಟು, ಆ ಸಭೆಯ ಅಧ್ಯಕ್ಷರಿಗೆ ಒಂದು ಕಾಗದವನ್ನು ಬರೆದು, ದೇಶೀಯ ಕಸಬುಗಳನ್ನು ಪ್ರೋತ್ಸಾಹಪಡಿಸುವುದಕ್ಕೆ ಮಾಡಿರತಕ್ಕ ಪ್ರಯತ್ನ ಸ್ತೋತ್ರಾರ್ಹವಾಗಿರತ್ತವೆಂತಲೂ, ಅವು ಸ್ಥಿರಪಟ್ಟು ನಡಿಯುವಾಗ್ಗೆ ಗವರ್ನಮೆಂಟಿನವರು ಬೇಕಾದಷ್ಟು ಸಹಾಯವನ್ನು ಮಾಡುವರೆಂತಲೂ ಅಪ್ಪಣೆ ಕೊಡಿಸಿದರು

ಹಿಂದುಸ್ಥಾನದಲ್ಲೂ ಬರ್ಮಾ ಆಧಿಪತ್ಯದಲ್ಲೂ ಕಳೆದ ೯ ತಿಂಗಳಲ್ಲಿ ಹಿಂದಿನ ವರ್ಷದ ಅದೇ ೯ ತಿಂಗಳಿಗಿಂತಲೂ ಹೆಚ್ಚಾಗಿ ೧೭ ಲಕ್ಷದ ೯೯ ಸಾವಿರ ಬಂಗಾಳಿ ಮಣಗಳ ಉಪ್ಪು ಖರ್ಚಾಗಿರುತ್ತದೆ ಆದರೆ ಕಳೆದ ಏಪ್ರಿಲ್ ತಿಂಗಳಿಂದೀಚೆಗೆ ಗವರ್ನಮೆಂಟಿನವರು ಮಣಕ್ಕೆ ೧-೮-೦ ರೂಪಾಯಿ ಬಿಟ್ಟು ೧ ರೂಪಾಯಿನಂತೆ ತೆರಿಗೆಯನ್ನು ನಿರಖು ಮಾಡಿದ್ದರಿಂದ ಒಟ್ಟು ಉತ್ಪತ್ತಿಯಲ್ಲಿ ೧೩೧ ಲಕ್ಷದ ೩೫ ಸಾವಿರ ರೂಪಾಯಿನಷ್ಟು ಕಡಿಮೆಯಾಗಿರುತ್ತದೆ

ಬಿಹಾರ್ ಡಿಸ್ಟ್ರಿಕ್ಟಿನ ಕಲೆಕ್ಟರ್ ಮಿ॥ ಬಿ ಸಿ ಆಲೀಯವರನ್ನು ಗೋಲಂದೋ ಪಟ್ಟಣದ ರೈಲ್ ಸ್ಟೇಷನ್ನಿನಲ್ಲಿ ಕೊಲ್ಲಬೇಕೆಂದು ಯಾರೋ ಗುಂಡು ಹೊಡೆದರೆಂತಲೂ, ಆದರೆ ಅವರಿಗೆ ಗಾಯ ಮಾತ್ರ ಆಗಿ ಕಲ್ಕತ್ತೆಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆಂತಲೂ ತಿಳಿಸಿದ್ದೆವಷ್ಟೆ ಈಗ ಇವರಿಗೆ ತಕ್ಕಮಟ್ಟಿಗೆ ವಾಸಿಯಾಗಿರುವುದರಿಂದ [illegible] ತಿಂಗಳ ರಜಾ ಪಡೆದು ಸೀಮೆಗೆ ಪ್ರಯಾಣ ಮಾಡುವರು ಅವರನ್ನು ಗುಂಡಿನಿಂದ ಹೊಡೆದ ದುಷ್ಟದ್ರೋಹಿ ಇನ್ನೂ ಪತ್ತೆಯಾಗಲಿಲ್ಲ

ಕಲ್ಕತ್ತೆಯಲ್ಲಿ ಪ್ರಕಟವಾಗುವ 'ನವಶಕ್ತಿ' ಎಂಬ ವರ್ತಮಾನಪತ್ರಿಕೆಯಲ್ಲಿ ರಾಜದ್ರೋಹಕರವಾದ ವಿಷಯವನ್ನು ಪ್ರಕಟಿಸಿದರೆಂದು ಕೆಲ ಪೋಲೀಸಿನವರು ಆ ಪತ್ರಿಕೆಯ ಆಫೀಸನ್ನು ನುಗ್ಗಿ ಅಚ್ಚುಮೊಳೆ ಮುಂತಾದ ಅನೇಕ ಕಾಗದಪತ್ರಗಳನ್ನು ಜಫ್ತಿ ಮಾಡಿಕೊಂಡು ಹೋದುದಲ್ಲದೆ ಆ ಪತ್ರಿಕೆಯನ್ನು ಅಚ್ಚುಹಾಕಿಕೊಡುತ್ತಿದ್ದ ಮನಮೋಹನ ಘೋಷ್ ಎಂಬಾತನನ್ನು ಮ್ಯಾಜಿಸ್ಟ್ರೇಟರ ಮುಂದಕ್ಕೆ ಹಿಡಿದುಕೊಂಡು ಹೋಗಿ ನಿಲ್ಲಿಸಿದರು ಅವರು ೫೦೦೦ ರೂಪಾಯಿ ಜಾಮೀನು ತೆಗೆದುಕೊಂಡು ಆತನನ್ನು ಖುಲಾಸ್ ಮಾಡಿದಾರೆ

ಶ್ರೀ [illegible] ಮಹಾರಾಜ [illegible] ಎಂ ಬಿ ಪಾರ್ಸಿ ಸಾಹುಕಾರನು ಕೆಲವು ಕಾಲಕ್ಕೆ ಮುಂಚೆ ಪ್ಯಾರಿಸಿಗೆ ಹೋಗಿದ್ದಾಗ ಅಲ್ಲಿನ ಒಬ್ಬ ಯುವತಿಯನ್ನು ಪಾರ್ಸಿ ಮತಕ್ಕೆ ಸೇರಿಸಿಕೊಂಡು, ಆಕೆಯನ್ನು ವಿವಾಹ ಮಾಡಿಕೊಂಡು ಬಂದಿರುತ್ತಾನೆ [illegible] ಪಾರ್ಸಿ ಮತದ [illegible] ಹಿರಿಯರು ಆ ಹೆಂಗಸನ್ನು ಪಾರ್ಸಿ ದೇವಸ್ಥಾನಕ್ಕೆ ಬರಕೂಡದೆಂತಲೂ, ಆಕೆ ಸತ್ತರೆ ಪಾರ್ಸಿಗಳ ಸಮಾಧಿ ಸ್ಥಳದಲ್ಲಿ ಆಕೆಯ ಶವವನ್ನು ಸಂಸ್ಕಾರಮಾಡಕೂಡದೆಂತಲೂ ನಿರ್ಬಂಧನ ಮಾಡಿದರು ಈಗ ಈ ವಿಷಯದಲ್ಲಿ ಆ ಪಾರ್ಸಿ ಸಾಹುಕಾರನು ಆ ಗುರುಹಿರಿಯರ ಮೇಲೆ ಹೈಕೋರ್ಟಿನಲ್ಲಿ ದಾವಾ [illegible] ಈ ವಿಚಾರವು ಬೊಂಬಾಯಿಯ ಪಾರ್ಸಿ ಜನರಲ್ಲಿ ಬಹಳ ಗಲಭೆಯನ್ನುಂಟುಮಾಡಿದೆ

ಸೂರತ್ತಿನಲ್ಲಿ ಕೈಮಗ್ಗಗಳ ಪ್ರದರ್ಶನ ನಡೆಯುತ್ತಾ ಬೊಂಬಾಯಿನ ಟಿ ಕೆ ಗಜ್ಜರ್ ಅಹಮದಾಬಾದಿನ ರಾವ್ ಸಾಹೇಬ್ ದೇವರಾವ್ ವಿನಾಯಕ್, ಮುನ್ಸಿಪಲ್ ಕೆ ತುಳಸೀರಾಂ ಎಂಬೀ ಪರೀಕ್ಷಕರು ಆ ಪ್ರದರ್ಶನಕಾಲಕ್ಕೆ ಬಂದಿದ್ದ ಸಮಸ್ತ ವಿಧವಾದ ಮಗ್ಗಗಳನ್ನೂ [illegible] ನೋಡಿ, ಅಹಮದ್‌ನಗರದ ಮಿ ಡಿ ಸಿ ಚರ್ಚಿಲ್‌ಯವರು ಪ್ರದರ್ಶನ ಮಾಡಿದ್ದ ಕೈಮಗ್ಗವನ್ನೂ ಬರೋಡಾ ಸಂಸ್ಥಾನದ ಮಿ॥ ರಾವ್‌ಜಿ ಬಾಯಿ ಪಟೇಲ್‌ಯವರು ಪ್ರದರ್ಶನಮಾಡಿದ್ದ ಕೈಮಗ್ಗವನ್ನೂ ಸರ್ವೋತ್ತಮವಾದವುಗಳೆಂದು ತೀರ್ಮಾನಿಸಿದ್ದರಿಂದ ಅವರಿಬ್ಬರಿಗೂ ತಲಾ ೧೫೦ ರೂಪಾಯಿನ ಬಹುಮಾನಗಳನ್ನು ಕೊಟ್ಟರು ಬರೋಡೆಯ ದೇಶದ ಮನುಷ್ಯರು ಪ್ರದರ್ಶನ ಮಾಡಿದಂಥ ಮಗ್ಗವು ಬಹು ಸುಲಭವಾದದ್ದು ಈಗ ನೇಯ್ಗೆಯವರು ಇಟ್ಟುಕೊಂಡಿರತಕ್ಕ ಕೈಮಗ್ಗಗಳಲ್ಲಿ ಎಷ್ಟು ನೇಯುತ್ತಾರೋ ಅದಕ್ಕಿಂತ ಎರಡರಷ್ಟು ಹೆಚ್ಚಾಗಿ ಈ ಬರೋಡಾ ಮಗ್ಗದಲ್ಲಿ ಬಟ್ಟೆಯನ್ನು ನೇಯಬಹುದೆಂತಲೂ ಈ ಮಗ್ಗದ ಕ್ರಯವು ೨೫-೩೦ ರೂಪಾಯಿಗಿಂತ ಹೆಚ್ಚಿಲ್ಲವೆಂತಲೂ, ಈ ದೇಶದ ನೇಯ್ಗೆಯನ್ನು ಅಭಿವೃದ್ಧಿಗೆ ತರಲು ಈ ಮಗ್ಗವೇ ಉತ್ತಮವಾದದ್ದೆಂತಲೂ ಮೇಲ್ಕಂಡ ಪರೀಕ್ಷಕರು ಅಭಿಪ್ರಾಯಪಟ್ಟಿರುತ್ತಾರೆ

ಇಂಡಿಯಾ ದೇಶದಲ್ಲಿ ಬೆಳೆಯುವ ಪೈರುಗಳಿಗೆ ಸಗಣಿ ಗೊಬ್ಬರವೇ ತಕ್ಕ ಗೊಬ್ಬರವಾಗಿರುವುದಾಗಿ ಅಜಮಾಯಿಷಿಗಳಲ್ಲಿ ತಿಳಿದುಬಂದಿರುತ್ತದೆ ಆದರೆ ಸಗಣಿಯನ್ನು ಉರಿಸುವುದಕ್ಕಾಗಿ ಒಲೆಗೆ ಉಪಯೋಗಿಸುತ್ತಾರೆ ಹೀಗೆ ಸಗಣಿಯನ್ನು ಉಪಯೋಗಿಸುವುದಕ್ಕಿಂತ ಗೊಬ್ಬರವಾಗಿ ಉಪಯೋಗಿಸಿದರೆ ಹೆಚ್ಚು ಆದಾಯಕರವೆಂದು ಕಾನ್ಪುರಪಟ್ಟಣದಲ್ಲಿ ಈಚೆಗೆ ನಡೆದಿರುವ ವಿದ್ಯಮಾನಗಳಿಂದ ವ್ಯಕ್ತವಾಗಿರುತ್ತದೆ ಆ ಪಟ್ಟಣದ ಸಮೀಪದಲ್ಲಿ ಕೆಲವು ತೋಟಗಾರರು ಅನೇಕ ವರ್ಷಗಳಿಂದ ಉರುಳುಗಡ್ಡೆಯನ್ನು ಬಹಳ ಆದಾಯಕರವಾಗಿ ಬೆಳೆಯುತ್ತಿದ್ದು ಆ ಪೈರಿಗೆ ಊರಿನ ಕಚ್ಚಡವನ್ನೇ ಗೊಬ್ಬರವನ್ನಾಗಿ ಉಪಯೋಗಿಸುತ್ತಿದ್ದರು ಈಚೆಗೆ ಆ ಪಟ್ಟಣದಲ್ಲಿ ಚರಂಡಿ ಮುಂತಾದ ಅನುಕೂಲತೆಗಳು ಏರ್ಪಾಡಾಗಿರುವದರಿಂದ ಗ್ರಾಮ ಕಸವು ಒದಗದೆ ನಿಂತುಹೋಗಿರುತ್ತದೆ ಆದರೆ ಈ ತೋಟಗಾರರು ಈ ಅನಾನುಕೂಲತೆಗೆ ಭಯಪಡದೆ ಹಾಕುವಷ್ಟು ಸಗಣೀ ಗೊಬ್ಬರವನ್ನು ಒದಗಿಸುವ ಏರ್ಪಾಟುಗಳನ್ನು ಮಾಡಿಕೊಂಡು, ತಮ್ಮ ಉರುಳುಗಡ್ಡೆ ವ್ಯವಸಾಯವನ್ನು ಎಂದಿನಂತೆಯೇ ಧೈರ್ಯವಾಗಿ ನಡೆಸುತ್ತಾರೆ ಕಾನ್ಪುರದಲ್ಲಿ ಸಾಮಾನ್ಯವಾಗಿ ದನವಿನ ಸಗಣಿಯನ್ನು ಒಣಗಿಸಿ, ಒಲೆಗೆ ಉಪಯೋಗಿಸುವ ಬಗ್ಗೆ ಮಾರಾಟಕ್ಕೆ ವಿಶೇಷವಾಗಿ ತರುವದುಂಟು ಇಂಥಾ ಸಂದರ್ಭದಲ್ಲಿ ಸದರಿ ಉರುಳುಗಡ್ಡೆ ತೋಟಗಾರರು ಸಾಕಾದಷ್ಟು ಸಗಣಿಗೊಬ್ಬರವನ್ನು ಒದಗಿಸಿಕೊಳ್ಳಬೇಕಾಗುವದರಿಂದ ಒಲೆಗೆ ಉಪಯೋಗಿಸುವುದಕ್ಕಾಗಿ ಕೊಂಡುಕೊಳ್ಳುವವರು ಕೊಡುವ ಬೆಲೆಗಿಂತ ಹೆಚ್ಚಾದ ಬೆಲೆಯನ್ನು ಕೊಟ್ಟು, ಸಗಣಿ ಗೊಬ್ಬರವನ್ನು ಕೊಂಡುಕೊಳ್ಳುತ್ತಾರೆ ಇದರಿಂದ ಸಗಣಿಯನ್ನು ಗೊಬ್ಬರವನ್ನಾಗಿ ಉಪಯೋಗಿಸಿದರೆ ಹೆಚ್ಚು ಆದಾಯಕರವೆಂದು ನಿರ್ಧಾರವಾಗಿ ಹೇಳಬಹುದು ಈ ಕಾರಣಗಳಿಂದ ನಮ್ಮ ರೈತರು ಸಗಣಿಯನ್ನು ಒಣಗಿಸಿ ಒಲೆಗೆ ಉಪಯೋಗಿಸುವ ಪದ್ಧತಿಯನ್ನು ಬಿಟ್ಟು, ಸೌದೆಯನ್ನಾಗಲಿ ಕೆರೋಸಿನ್ ಎಣ್ಣೆ (ಚಿಮಣಿಎಣ್ಣೆ) ದೀಪಗಳನ್ನಾಗಲಿ ಮನೆಯ ಕೆಲಸಗಳಿಗೆ ಉಪಯೋಗಿಸುವುದು ಒಳ್ಳೇದು

ತಾಲ್ಲೂಕು ವರ್ತಮಾನಗಳು

ಚಿಕ್ಕಮಗಳೂರು—ಇಲ್ಲಿ ೬-೭ ದಿವಸಗಳಿಂದ [illegible] ಇರುವದರಿಂದ ಚಳಿ ಕಡಿಮೆಯಾಗಿದೆ ಡೆಪ್ಯುಟಿ ಕಮೀಷನರ್ ಮಿ॥ ಕುಮಾರಸ್ವಾಮಿನಾಯ್ಡುರವರು ಬೆಂಗಳೂರಿಗೆ [illegible] ಹೊರಡುವ ಮೊದಲೇ ಊರಿನ ಎಲ್ಲಾ ದೊಡ್ಡಮನುಷ್ಯರೂ ಅವರನ್ನು ಪಾರ್ಟಿಗೆ ಬರಮಾಡಿಕೊಂಡು, ಅಲ್ಲಿ ಅವರ ಅಂಗಕ್ಕೆ ಫಲಾಹಾರಾದಿಗಳನ್ನು ಮಾಡಿ, ಸಂಗೀತ ವಾದ್ಯ ವಿನೋದಗಳಿಂದ ಅವರನ್ನು ಸಂತೋಷಪಡಿಸಿದರೆಂದು ಕೇಳುತ್ತೇನೆ ಇವರು ದೊಡ್ಡಮನುಷ್ಯರೂ ವಿದ್ವಾಂಸರೂ ಸ್ನೇಹಪರರೂ ಆಗಿದ್ದರು ಅವರ ಬದಲಿಗೆ ಮಿ॥ ಕೆ ಆರ್ ಶ್ರೀನಿವಾಸಯ್ಯಂಗಾರರು ಬಂದಿದಾರೆ ಇಲ್ಲಿ ಜನರಲ್ ಅಸಿಸ್ಟೆಂಟರಾಗಿದ್ದ ಮಿ॥ ಡಿ ಎಂ ನರಸಿಂಗರಾಯರು ರಜಾ ತೆಗೆದುಕೊಂಡದ್ದರಿಂದ ಇಲ್ಲಿನ ಖಜಾನೆ ಚಾರ್ಜಿನಲ್ಲಿದ್ದ ಅ॥ ಕಮೀಷನರ್ ಮಿ॥ ಕೃಷ್ಣಸ್ವಾಮಿ ಅಯ್ಯಂಗಾರ್ ಜನರಲ್ ಡ್ಯೂಟಿಗೆ ವರ್ಗಾಯಿಸಲ್ಪಟ್ಟರು ಅವರ ಸ್ಥಾನಕ್ಕೆ ಹೊಸದಾಗಿ ಮಿ॥ ಡಿ ಶ್ರೀನಿವಾಸಯ್ಯಂಗಾರರು ಬಂದಿದಾರೆ—ನವವೆಂಬರ್ ಸೆಷನ್ಸ್ ಜಡ್ಜಿ ಮಿ॥ ಸ್ಟುವರ್ಟ್ ಸಾಹೇಬರು ಇದೇ ತಿಂಗಳು ೩ನೇ ತಾ॥ ನಿಂದ ತಮ್ಮ ಕೋರ್ಟಿಗೆ ಸಂಬಂಧಪಟ್ಟ ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಣೆ ಮಾಡುತ್ತಿದ್ದಾರೆ ಅವುಗಳ ಪೈಕಿ ಕೊಪ್ಪ ತಾಲ್ಲೂಕು ಹರಿಹರಪುರದ ಖೂನಿ ಮೊಕದ್ದಮೆಯು ಫೈಸಲ್ ಆಗಿ ಅಪರಾಧಿಗೆ ಆಯುಷ್ಯಪರ್ಯಂತರ ಕರಿನೀರು ಸಜಾ ಆಯಿತು ಈಗ ಮೂಡಿಗೆರೆ ತಾಲ್ಲೂಕಿನ ಖೂನಿ ಮೊಕದ್ದಮೆಯು ನಡೆಯುತ್ತಲಿದೆ—ಟವುನ್ನಿನಲ್ಲಿ ಕೆಲವು ಕಡೆ ಚರಂಡಿಗಳಲ್ಲಿ ನೀರು ನಿಂತು ಕೊಳೆಯುತ್ತಾ ಇರುವದರಿಂದ ಮ್ಯುನಿಸಿಪಲ್ ಅಧಿಕಾರಿಗಳು ಅಂಥಾ ಸ್ಥಳಗಳ ವಿಷಯದಲ್ಲಿ ನಿಗಾ ಕೊಡುವದು ಒಳ್ಳೇದಲ್ಲವೇ ಈ ಪ್ರಾಂತ್ಯ ಕೆಲವು ಗ್ರಾಮಗಳಲ್ಲಿ ಕಾಲರಾ ಉಪದ್ರವಿರುವದಾಗಿ ವರ್ತಮಾನ ಅಂಥಾ ಸ್ಥಳಗಳಿಂದ ಬಂದ ಒಬ್ಬ [illegible] ಅದೇ ರೋಗದಿಂದ ಈ ಊರಿನಲ್ಲಿ ಮೃತಪಟ್ಟರೆಂದು ಕೇಳುತ್ತೇನೆ—ಇಲ್ಲಿಗೆ ಸುಮಾರು ೩ ಮೈಲಿ ದೂರದಲ್ಲಿರುವ ಮತ್ತಾವರವೆಂಬ ಗ್ರಾಮದಲ್ಲಿ ಪುಟ್ಟಯ್ಯನೆಂಬುವನು ತನ್ನ ೫ ವರುಷ ಪ್ರಾಯದ ಮಗನನ್ನು [illegible] ಬಣಜಿಗರಲ್ಲಿ ಹುಲ್ಲನ್ನು [illegible] ಪತ್ತೆ [illegible] ಕೇಳುತ್ತಾ ಇದ್ದದ್ದನ್ನು ಬೇರೆ [illegible] ತಂದೆಗೆ ಹೇಳಲು ಅವನು ಕೋಪಗೊಂಡ ಆ ಹುಡುಗನ ಮೈಗೆಲ್ಲಾ ಕಬ್ಬಿಣದ ಸೌಟಿನ ಹಿಡಿಯಲ್ಲಿ ಬರೆಹಾಕಿ ಹಿಂಸೆಪಡಿಸಿದ್ದು ಈಗ ಕೋರ್ಟಿನಲ್ಲಿ ವಿಚಾರಣೆಗೆ ಗುರಿಯಾಗಿದೆ ಎಂದು ಕೇಳುತ್ತೇನೆ

ತಿಪ್ಪತ್ತೂರು—ಸದ್ಯ ಈ ಗ್ರಾಮದಲ್ಲಿ ಯಾವ ರೋಗಾದಿಗಳ ಉಪದ್ರವೂ ಇಲ್ಲ ಪ್ಲೇಗಿನಿಂದ ಬಿಡಲ್ಪಟ್ಟ ಊರುಗಳಿಂದ ಈ ಊರಿನಲ್ಲಿ ಅರ್ಧಪಾಲು ಜನರು ತುಂಬಿರುತ್ತಾರೆ ಇಂಥಾ ಕಾಲದಲ್ಲಿ ಊರಿನ ಸಂದುಗೊಂದುಗಳಲ್ಲಿ ಇರತಕ್ಕ ಕಚಡಾ ಹೇಸಿಗೆ ಮುಂತಾದ್ದನ್ನು ಮಾಡಿಸುವದಕ್ಕೆ ಮ್ಯುನಿಸಿಪಾಲಿಟಿಯವರು ತಾವೇ ನಿಗಾ ಕೊಡಬೇಕಾಗಿರುತ್ತೆ ಕೆರೆ ಬಳಿ ಅಂಗಳದಲ್ಲಿ ಜನಗಳು ಹೇಸಿಗೆ ಮಾಡುವದನ್ನು ತಪ್ಪಿಸುವದು ಮ್ಯುನಿಸಿಪಾಲಿಟಿಯವರ ಕೈಲಿ ಆಗುವಂತೆ ತೋರುವದಿಲ್ಲ ನಮ್ಮ ಪ್ರೆಸಿಡೆಂಟರು ಇತ್ತ ಕಡೆ ಕೊಂಚ ಗಮನಕೊಡಬೇಕಾಗಿರುತ್ತೆ—ಇಲ್ಲಿನ ಖಾಯಂ ಅಮಲ್ದಾರ್ ಮಿ॥ ಸಿ ಗೋಪಾಲಚಾರ್ರು ೨॥ ತಿಂಗಳು ವಿಶ್ರಾಂತಿಯನ್ನು ಪಡೆದು ಬೆಂಗಳೂರು ಮಾರ್ಗವಾಗಿ ಮದ್ರಾಸಿಗೆ ಪ್ರಯಾಣಮಾಡಿದರು ಇವರ ಬದಲಿಗೆ ತುಂಕೂರಿಂದ ಡಿಸ್ಟ್ರಿಕ್ಟ್ ಸ್ಪೆಷಲ್ ಪೋಲೀಸ್ ಇನ್ಸ್‌ಪೆಕ್ಟರು ಮಿ॥ ಆರ್ ಸುಂದರರಾಯರು ದಯಮಾಡಿಸಿ ತಾಲ್ಲೂಕು ಕೆಲಸವನ್ನು ಬಹಳ ಚುರುಕಾಗಿ ಮಾಡುತ್ತಿದ್ದಾರೆ ಆಗಲೇ ತಾಲ್ಲೂಕು ಕಚೇರಿ ನೌಕರರಿಗೆಲ್ಲಾ ೧೧ ಗಂಟೆಗೆ ಮೇಲ್ಪಟ್ಟು ಕಚೇರಿಗೆ ಬಂದದ್ದಕ್ಕಾಗಿ ಜುಲ್ಮಾನೆ ವಿಧಿಸಿದರಂತೆ ಇಂಥಾ ದುರ್ಭಿಕ್ಷಕಾಲದಲ್ಲಿ ಬಡನೌಕರರ ಮೇಲೆ ಈ ನಮ್ಮ ದಯಾಳುಗಳಾದ ಅಮಲ್ದಾರರು ಕರುಣವಿಟ್ಟು ಜುಲ್ಮಾನೆಯನ್ನು ಮಾಫ್ ಮಾಡಿಯಾರೆಂದು ನಂಬಿರುತ್ತೇನೆ—ಈ ಊರಲ್ಲಿ ನೃತ್ಯಮಂಡಲಿಗಳ್ಗೆ ಮುಂದಾಳುಗಳಾಗಿದ್ದ ಸಾಹುಕಾರ್ ಮಿ॥ ಗ್ರಂಧಿಗೆ ಪುಟ್ಟಸ್ವಾಮಿಶೆಟ್ರು ತಮ್ಮ ಬಂಧುವಾದ ಸಾ॥ ಗ್ರಂಧಿಗೆ ಲೇಟ್ ಸರಾಫ್ ನಂಜುಂಡಶೆಟ್ರು ಕಾಲವಾದ ಸಂಗತಿ ಬಹುಜನರಿಗೆ ವಿಷಾದಕರವಾಗಿದೆ ಇವರ ಆಪ್ತರು ಬಹಳ ದುಃಖಪಡುತ್ತಿದ್ದಾರೆ ಅರಸೀಕೆರೆ ಬಳಿ ಇರುವ ತಿರುಪತಿ ಕ್ಷೇತ್ರದಲ್ಲಿ ಬಹಳ ಹಣ ಖರ್ಚುಮಾಡಿ ರಥೋತ್ಸವಕಾಲದಲ್ಲಿ ಜನಗಳ ಅನುಕೂಲಕ್ಕಾಗಿ ಭಾರಿ ಸತ್ರವನ್ನು ಕಟ್ಟಿಸಿದಾರೆ ಇನ್ನೂ ಅನೇಕ ಧರ್ಮಕಾರ್ಯಗಳನ್ನು ಮಾಡಿರುವರು—ಈ ಗ್ರಾಮದಲ್ಲಿ ಈ ಊರಿಗೆ ಸಮೀಪವಾಗಿರುವ ಗೊರವನಹಳ್ಳಿ [illegible] ನಾಟಕದ ಕಂಪನಿಯವರು ೩ ತಿಂಗಳಿಂದಲೂ ಆಟವನ್ನು ಆಡಿ ಈ ಟವುನ್ನಿನಲ್ಲೇ ದುಡ್ಡು [illegible] ಆಸೆಯಿಂದ ಪುನಃ ಆಡುವದಕ್ಕೆ ಲೈಸನ್ಸ್ ಕೇಳಲು ಅಮಲ್ದಾರರು ಕೊಡದೆ ಹೋದ್ದರಿಂದ ಈಗ ಈ ತಾಲ್ಲೂಕಿನ ಗ್ರಾಮಾಂತರಗಳ ಮೇಲೆ ಹೋಗಿ ನಾಟಕ ಆಡುತ್ತಿದ್ದಾರೆ ಇವರ ತರುವಾಯ ಪ್ರೊಫೆಸರ್

[illegible] ವಿ ಛತ್ರೆಯವರ ಅದ್ಭುತವಾದ ಸರ್ಕಸ್ ಕಂಪನಿಯವರು ಸಹಾ ಬಂದು ಪೋಸ್ಟ್ ಆಫೀಸು ಎದುರಾಗಿರುವ ದೊಡ್ಡ ಸ್ಥಳದಲ್ಲಿ ಈ ೧೦ ರಿಂದ ೭ ಆಟಗಳನ್ನು ಆಡಿ ಬೆಂಗಳೂರಿಗೆ ಪ್ರಯಾಣಮಾಡುತ್ತಾರಂತೆ —ಈ ಊರಲ್ಲಿ ಖಾಲಿ ಇರುವ ರೀಡಿಂಗ್ ಆರೂಮನ್ನು ಇನ್ನೂ ಬಿಡುವಣಿಗೆಯಾಗಿ ಹೊಸ ಕಟ್ಟಡವನ್ನು ಕಟ್ಟಿಸಬೇಕೆಂಬುದಾಗಿ ನಮ್ಮ ಸಬ್ ರಿಜಿಸ್ಟ್ರಾರ್ ಮೆ॥ ಎಂ ಲಕ್ಷ್ಮೀಕಾಂತ ಅಯ್ಯಂಗಾರು ಪ್ರಯತ್ನ ಮಾಡಿರುತ್ತಾರೆ. ಇಂಥಾ ದೇಶೋಪಕಾರವಾದ ಪ್ರಯತ್ನಕ್ಕೆ ಈ ಊರು ನಿವಾಸಿಗಳೂ ವರ್ತಕರುಗಳೂ ಪ್ರೋತ್ಸಾಹ ಪಡಿಸುವರೆಂದು ನಂಬಿರುತ್ತೇನೆ.

ಬಸವಕಲ್ಲು — ಈ ಊರು ತಳ್ಳಪಟ್ಟಿಗೂ ಪ್ಲೇಗ್ ಉಪದ್ರವಿಂದ ಬಿಡುಗಡೆಯಾಗಿದೆ. ಆಂದರೆ ಈ ರೋಗವು ಸಂಪೂರ್ಣವಾಗಿ ಈ ಊರನ್ನು ಬಿಟ್ಟು ಹೋಗಲಿಲ್ಲ. ಒಂದೆರಡು ಕಾಯಿಲೆಗಳು ಇದ್ದೇ ಇರುತ್ತವೆ. ಈಗ್ಗೆ ೩ ದಿನಕ್ಕೆ ಮುಂಚೆ ೩ ಒಳ್ಳೆ ಮಳೆಗಳು ಆದವು. ಜನಗಳ ಕ್ರಯವು ಕಡಿಮೆಯಾಗಿಯೇ ಇರುತ್ತದೆ.—ಇಲ್ಲಿರುವ ಗೌರ್ನಮೆಂಟ್ ಕನ್ನಡ ಮತ್ತು ಲಂಡರ್ ಮಿಡ್ಲ್ ಎ ವಿ ಸ್ಕೂಲುಗಳಲ್ಲಿ ಕಳೆದ ವರುಷದ ಲೋಯರ್ ಸೆಕಂಡರಿ ಪರೀಕ್ಷೆಯಲ್ಲಿ ಬಾಲಕರು ಒಳ್ಳೇ ತೇರ್ಗಡೆಯನ್ನು ಹೊಂದಿರುತ್ತಾರೆ. ಗೌರ್ನಮೆಂಟ್ ಪಾಠಶಾಲೆಯಲ್ಲಿ ೧೦ ವಿದ್ಯಾರ್ಥಿಗಳಲ್ಲಿ ೯ ಮಂದಿಯೂ, ಮಿಡ್ಲ್ ಸ್ಕೂಲಿನಲ್ಲಿ ೭ ಕ್ಕೆ ೩ ಮಂದಿಯೂ ತೇರ್ಗಡೆ ಹೊಂದಿದರು. —ಇಲ್ಲಿ ಗಜಲೋಚರಿ ಎಂಬುವ ನಾಟಕದ ಕಂಪನಿಯು ಏರ್ಪಟ್ಟಿರುತ್ತೆ. ಇದು [illegible] ಈ ಇಸವಿಯಲ್ಲಿ ಇದೇ ಊರಿನಲ್ಲಿ ಇದ್ದ ಕಂಟ್ರಾಕ್ಟರ್ ವೆಂಕಟರಾವು ಅವರಿಂದ ಸ್ಥಾಪಿಸಲ್ಪಟ್ಟಿತು. ಕೆಲವು ಆಟಗಳಾದನಂತರ ಪ್ಲೇಗ್ ದೆಸೆಯಿಂದ ನಿಂತು ಹೋಗಿತ್ತು. ಅದರೆ ಕಳೆದ ವರುಷ ಪುನಃ ಸ್ಥಾಪನೆ ಮಾಡಬೇಕೆಂದು ವೆಂಕಟರಾವು ಅವರು ಉದ್ಯುಕ್ತರಾಗಿದ್ದರು. ಆದರೆ ಕಳೆದ ಅಕ್ಟೋಬರಿನಲ್ಲಿ ಅವರು ಪ್ಲೇಗ್ ದೆಸೆಯಿಂದ ಕಾಲವಶರಾದರು. ಇವರು ಕಂಟ್ರಾಕ್ಟ್ ಕೆಲಸವನ್ನು [illegible] ಬುದ್ಧಿಯಿಂದಲೂ ನಂಬಿಕೆಯಿಂದಲೂ ಮಾಡಿ ಅಯಾ ಇಂಜನಿಯರ್ ಆಫೀಸರುಗಳಿಂದ ಒಳ್ಳೇ ಯೋಗ್ಯತಾ ಪತ್ರಿಕೆಗಳನ್ನು ಪಡೆದಿದ್ದರು. ಮತ್ತು ಯಾವ ಪರ್ವ ಕೆಲಸದ ಚಂದಾ ಪಟ್ಟಿಗೂ ಇವರ ಹೆಸರು ಮೊದಲು ಬೀಳುತ್ತಿತ್ತು. ಅನೇಕ ಬಡಜನರು ಇವರಿಂದ ಜೀವನವನ್ನು ಹೊಂದುತ್ತಾ ಇದ್ದರು. ಇವರು ಮರಣದಿಂದ ಅನೇಕರಿಗೆ ಒಬ್ಬ ಒಳ್ಳೇ ಸ್ನೇಹಿತನನ್ನು ಕಳಕೊಂಡಿತು.

ಶಿರಾ.—ಮಳೆ ಇಲ್ಲದ ಕಾರಣ ಜೀವನ ಮಾಡತಕ್ಕದ್ದು ಬಹಳ ಕಷ್ಟಕರವಾಗಿದೆ. ಅಲ್ಪ ಸ್ವಲ್ಪ ಮಟ್ಟಿಗೆ ಆದ ಫಸಲು ಕಟಾವಾಗಿರುತ್ತೆ. ಪ್ರತಿ ಒಂದು ದಿನಸು ಬಹಳ ಪ್ರಿಯವಾಗಿದೆ. ಇಲ್ಲಿನ ತಾಲ್ಲೋಕು ಅಮಲ್ದಾರರಾದ ಮೆ॥ ಎಂ. ಎ. ಶ್ರೀನಿವಾಸಯ್ಯಂಗಾರ್ಯ ಬಡ ರೈತ ಪ್ರಜೆಗಳನ್ನು ತುಂಬಾ ಆದರದಿಂದ ಕಾಣುತ್ತಾ ಇಲ್ಲಿನ ಎಲ್ಲಾ ಜನಗಳ ಏಕರೀತಿಯಾದ ಪ್ರೀತಿಗೆ ಪಾತ್ರರಾಗಿರುತ್ತಾರೆ. ಇವರು ಇಲ್ಲಿಗೆ ಬಂದಾರಭ್ಯ ಆಗಿಂದಾಗ್ಗೆ ಇಲ್ಲಿನ ಮಹಮದೀಯರು ತಮ್ಮ ತಮ್ಮ ಮಕ್ಕಳನ್ನು ಪಾಠಶಾಲೆಗೆ ಕಳುಹಿಸಿ, ವಿದ್ಯಾವಂತರನ್ನಾಗಿ ಮಾಡಲಿಕ್ಕೆ ಪ್ರೋತ್ಸಾಹ ಪಡಿಸುತ್ತಲಿದ್ದಾರೆ. ಮತ್ತು ಇಲ್ಲಿರುವ ಹಿಂದೂಸ್ತಾನಿ ಸ್ಕೂಲಿನಲ್ಲಿ ಸುಮಾರು ೧ ವರ್ಷಗಳ ಕೆಳಗೆ ೪೯ ವಿದ್ಯಾರ್ಥಿಗಳು ಓದುತ್ತಿದ್ದರು. ಈಗ ೧೩೪ ವಿದ್ಯಾರ್ಥಿಗಳಿದ್ದಾರೆ ಮತ್ತು ಸ್ಕೂಲು ಪ್ರತಿ ಒಂದು ಬಾಬಿನಲ್ಲಿಯೂ ಅಭಿವೃದ್ಧಿಸ್ಥಿತಿಗೆ ಬರುತ್ತಲಿವೆ. ಇದಕ್ಕೆಲ್ಲಾ ನಮ್ಮ ಅಮಲ್ದಾರರು ಮಹಮ್ಮದೀಯರ ವಿದ್ಯಾಭಿವೃದ್ಧಿಗಾಗಿ ಮಾಡುವ ಸದ್ಯೋಗವೇ ಕಾರಣವಾಗಿದೆ. ಅಮಲ್ದಾರರವರು ಇಲ್ಲಿನ ಪಂಚಮರ ಸ್ಕೂಲನ್ನು ಅಭಿವೃದ್ಧಿಸ್ಥಿತಿಗೆ ತರಲು ತುಂಬಾ ಮನಃಪೂರ್ವಕ ವಹಿಸಿರುತ್ತಾರೆ —ಡಿಸೆಂಬರ್ ತಾ ೨೬ ರಲ್ಲಿ ಮಿಷನರಿಯವರ ಸವಾರಿ ಚಿತ್ತೈಸುವುದಾಗಿ ಪರಂತಿ ಇತ್ತು. ಅದರಂತೆ ಅವರು ತಾ ೨೬ ನೆ ಪ್ರಾತಃಕಾಲ ಮೋಟಾರುಕಾರಿನಲ್ಲಿ ಕುಳಿತು ಬಹಳ ಶೃಂಗಾರತರವಾಗಿ ಚಪ್ಪರ ಮಂಟಪ ತೋರಣಾದಿಗಳಿಂದ ಅಲಂಕರಿಸಲ್ಪಟ್ಟಿದ್ದ ಮೇನ್ ರೋಡ್ ಮಾರ್ಗದಲ್ಲಿ ಖಾಸಾ ಬಂಗಲೆಗೆ ದಯಮಾಡಿದರು. ಆದರೆ ಬಡ ರೈತ ಪ್ರಜೆಗಳು ಇರಿಸಿದ್ದ ಚಪ್ಪರದ ಬಳಿ ಸ್ವಲ್ಪ ಹೊತ್ತು ಮಾತ್ರ ನಿಂತು ಅನಂತರ ಬರುವುದಾಗಿ [illegible] ದಯಮಾಡಿಸಿದರು. ತಾ ೨೬ ನೆ ಪ್ರಾತಃಕಾಲ ಪರಿವಾರ ಸಹಿತ ಬರ್ಡ್ ಇನ್ಸ್‌ಪೆಕ್ಷನ್‌ಗಾಗಿ ಹೊರಟರು. ಪ್ರಥಮತಃ ಪಂಚಮರ ಸ್ಕೂಲು ವಿದ್ಯಾರ್ಥಿಗಳನ್ನು ಪರೀಕ್ಷಿಸಿ, ಅವರಿಗೆ ಭೂಗೋಳಶಾಸ್ತ್ರ ದಲ್ಲಿ ಕೆಲವು ಪ್ರಶ್ನೆಗಳಿಗೆ ತುಂಬಾ ತೃಪ್ತಿಕರವಾಗಿ ಉತ್ತರ ಕೊಟ್ಟದ್ದಕ್ಕೆ ಸಂತೋಷಪಟ್ಟು ಇನಾಮು ದಯಪಾಲಿಸಿದರು ಮತ್ತು ಸಬ್ ಡಿವಿಜನ್ ಆಫೀಸರವರಿಗೆ — "ನೀವು ಈ ವಿದ್ಯಾರ್ಥಿಗಳ ಕ್ಯಾರೆಕ್ಟರು ಅಭಿವೃದ್ಧಿವಿಷಯದಲ್ಲಿ ತುಂಬಾ ನಿಗಾ ಕೊಡುವದಾಗಿ ನಿರೀಕ್ಷಿಸುತ್ತೇನೆ" ಎಂದು ತಿಳಿಸಿದರು. ಅನಂತರ ಕನ್ನಡ ಬಾಲಿಕಾ ಪಾಠಶಾಲೆಯನ್ನು ಪರೀಕ್ಷಿಸಿ ವಿದ್ಯಾರ್ಥಿನಿಯರು ಹಾಡಿದ ಪದ್ಯಗಳನ್ನು ಲಾಲಿಸಿ ಆನಂದಪಟ್ಟು ಈ ವಿದ್ಯಾರ್ಥಿನಿಯರ ಸಂತೋಷಾರ್ಥವಾಗಿ ಬಹುಮಾನ ಕೊಡಿಸಿದರು. ಬಳಿಕ ಪೇಟೆ ಮಾರ್ಗವಾಗಿ ಹೊರಟು ಹಿಂದೂಸ್ತಾನಿ ಬಾಲಕರ ಮತ್ತು ಬಾಲಿಕಾ ಪಾಠಶಾಲೆಗಳನ್ನು ಪರೀಕ್ಷಿಸಿ, ಈ ಸ್ಕೂಲುಗಳ ಸ್ಥಿತಿಗತಿಗಳನ್ನು ಬಹಳ ಕುತೂಹಲದಿಂದ ವಿಚಾರಿಸಿದರು. ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಸಂತೋಷಾರ್ಥವಾಗಿ ಬಹುಮಾನ ಕೊಟ್ಟರು. ದಿವಾನರವರು ಇಲ್ಲಿನ ಪುರಾತನ ಕಟ್ಟಡಗಳ ಪೈಕಿ ಶೇಕ್ ಮಸೀದಿ, ಮಲ್ಲಿರಾಂಸಾಹೇಬ್ ದರ್ಗ ಎಂಬೀ ಎರಡು ಸ್ಥಳಗಳನ್ನು ಪರೀಕ್ಷಿಸಿ, ಇವುಗಳ ಪೂರ್ವಚರಿತ್ರೆಯನ್ನು ವಿಚಾರಿಸಿಕೊಂಡು, ಇಲ್ಲಿನ ಮುನಿಸಿಪಲ್ ಮೆಂಬರುಗಳು ಹಾಕಿಸಿದ್ದ ಮಂಟಪದ ಬಳಿಯೂ ಸ್ವಲ್ಪ ಸವಾರಿ ಚಿತ್ತೈಸಿತು. ಇಲ್ಲಿ ಮಹಮದೀಯರ ಪರವಾಗಿ ಖಾಜಿ ಅಬ್ದುಲ್ ಗಫೂರ್ ಸಾಹೇಬರಿಂದ ಒಪ್ಪಿಸಲ್ಪಟ್ಟ ಸಮ್ಮಾನ ಪತ್ರಿಕೆಯನ್ನು ಲಾಲಿಸಿ, ಮಧ್ಯಾಹ್ನ ತಪಾಸ್ಸರ್ವೇ ಬಂಗಲೆಗೆ ಹಿಂತಿರುಗಿದರು.

ತುಮಕೂರು.—ಬಿಸಿಲು ಚೆನ್ನಾಗಿ ಕಾಯುತ್ತಿದೆ. ಹೋದ ವಾರ ಆದ ಸ್ವಲ್ಪ ಮಳೆಯಿಂದ ಈ ಸಾರಿ ವಿಶೇಷವಾಗಿ ಫಲಿಸಿರುವ ಮಾವಿನ ಹೂವಿಗೆ ತೊಂದರೆಯಾಯಿತೆಂದು ಹೇಳುತ್ತಾರೆ. ವಾರಣಸಿಗಳು ಹೆಚ್ಚಾಗುತ್ತಿವೆಯೆಂದು ಹೇಳುವದು ಅನಾವಶ್ಯಕ. ಸಂತೆಯಲ್ಲಿ ರಾಗಿ ಯಾಗೆ ರಾಗಿ ೧೪ ಸೇರು, ಅಕ್ಕಿ ೬ ಸೇರು ಈ ರೀತಿ ಇದೆ. ಆದರಲ್ಲೂ ಕರಾರು ಸೇರುಗಳಿಗೆ ಆಜ್ಞಾತವಾದ ಒಂದಿರ ಪದರಿಂದ ಬಡ ಜನರ ಕಷ್ಟವು ಇಮ್ಮಡಿಯಾಗಿದೆ ಪೋಲೀಸಿನವರು ಈ ವಿಚಾರದಲ್ಲಿ ತುಂಬಾ ನಿಗಾ ಇಟ್ಟಿರುವದು ಅನುಕೂಲ.—ಪ್ಲೇಗ್ ರೋಗವು ಸಂಪೂರ್ಣವಾಗಿ ಶಮನವಾಯಿತೆಂದು ಇನ್ನೂ ಧೈರ್ಯದಿಂದ ಹೇಳಲಾಗದು. ಇನ್ನೂ ಇಲಿ, ಹೆಗ್ಗಣಗಳು ಸಾಯುತ್ತಲೇ ಇವೆ. ಅಲ್ಲದೆ ಅಲ್ಲಲ್ಲಿ ಒಂದೆರಡು ಮರಣವೂ ಆಗುತ್ತದೆ. ಈ ಸಂದರ್ಭದಿಂದ ಮ್ಯುನಿಸಿಪಾಲಿಟಿಯವರು ಜನರು ವಾಸಕ್ಕೆ ಸರ್ಕಾರದವರಿಂದ ಅಪ್ಪಣೆ ಚೀಟಿ ಹೊಂದದೆ ಬರಲಾಗದೆಂದು ನೋಟೀಸುಗಳನ್ನು ಮನೆಗಳ ಮುಂದೆ ಅಂಟಿಸಿದಾರೆ. ಹೊರಗಡೆ ವಾಸಿಸುವ ಜನರು ಬಹು ಆತುರದಿಂದ ಮನೆಗಳಿಗೆ ವಾಸಕ್ಕೆ ಬರಲು ಎದುರು ನೋಡುತ್ತಿದಾರೆ. ಈ ಸಂದರ್ಭದಲ್ಲಿ ಇನ್ನೂ ಕೆಲವು ಕಾಲ ಸುತ್ತ ಮುತ್ತಲೂ ರೋಗವು ಸಂಪೂರ್ಣ ಶಮನವಾಗುವವರೆಗೂ ಈ ರೀತಿಯಂತೆಯೇ ಹೊರಗಡೆ ಅನಾನುಕೂಲಗಳನ್ನು ಸಹಿಸಿಕೊಂಡಿರುವದು ಕೇವಲ ಸುಖಪ್ರದವಾಗಿರುತ್ತೆಂದು ತೋರುವದು. ಇದರಲ್ಲಿ ಕಳ್ಳತನವು ಖಾಲಿಯಿರುವ ಮನೆಗಳಲ್ಲಿ ಸಾಧಾರಣವಾಗಿ ನಡೆಯುತ್ತಿದೆ. ಮ್ಯುನಿಸಿಪಾಲಿಟಿಯವರು ಚಿಕ್ಕಪೇಟೆ ಕಾರಂಜಿ ಬಳಿ ಹೊಸದಾಗಿ ಆರೋಗ್ಯ ಸೂತ್ರಕ್ಕನುಸಾರವಾದ ಚರಂಡಿ ಕಟ್ಟಿಸುತ್ತಾ, ರಸ್ತೆಗಳನ್ನು ಮಣ್ಣಿನಿಂದ ರಿಪೇರಿಮಾಡಿಸುತ್ತಿದಾರೆ. ಇದರಂತೆಯೇ ಹೊಸ ಪೇಟೆಯಲ್ಲಿ ಬಹಳ ಗಲೀಜಾದ ಬೀದಿಗಳಲ್ಲಿ ತಕ್ಕ ಏರ್ಪಾಡು ಯಾಕೆ ಮಾಡಬಾರದೋ ತಿಳಿಯಲಿಲ್ಲ.—ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು ರಜಾ ಪಡೆದು ಬೆಂಗಳೂರಿಗೆ ದಯಮಾಡಿಸಿರುತ್ತಾರೆ —ನೆನ್ನೆ ಶನಿವಾರ ಇಲ್ಲಿನ ಮಿಷನ್ ಬಂಗಲೆ ಹೊಸ ಕಟ್ಟಡದಲ್ಲಿ ಈಗ ಎರಡು ವರುಷಗಳಿಂದಲೂ ಇಲ್ಲಿನ ಮಿಷನ್ ಅಧ್ಯಕ್ಷರಾಗಿದ್ದು ಈಗ ಶಿವಮೊಗ್ಗಕ್ಕೆ ವರ್ಗಮಾಡಲ್ಪಟ್ಟಿರುವ ರೆವ್ ರಶ್ಲಿಯು [illegible] ಟಾಂಲಿನ್ಸನ್ ದೊರೆಯವರಿಗೆ ಕ್ರೈಸ್ತರ ಪರವಾಗಿಯೂ ಹಿಂದೂ ಉಪಾಧ್ಯಾಯರ ಪರವಾಗಿಯೂ ವಂದನಾ ಪತ್ರಿಕೆಗಳು ಒಪ್ಪಿಸಲ್ಪಟ್ಟವು. ಆ ದಿನ ಸರ್ಕಾರ್ ಅಮಲ್ದಾರ್ ಮೆ॥ ಜಿ. ಚನ್ನಬಸಪ್ಪನವರು [illegible] ಆಗ್ರಾಸನವನ್ನು ವಹಿಸಿ, ಅವರಿಗೆ ಕಬ್ಬಿಕರ ವಂದನೆಗಳನ್ನು ಅರ್ಪಿಸಿದರು. ಹಿಂದೂ ಉಪಾಧ್ಯಾಯರ ಪರವಾಗಿ ಹೆಡ್ ಮಾಸ್ಟರ್ ಮೆ॥ ಟಿ. ಗುರುಚನ್ನಬಸವಯ್ಯನವರ ಮುಖಾಂತರ ವಂದನಾ ಪತ್ರಿಕೆಯು ಓದಲ್ಪಟ್ಟು ವಿಚಿತ್ರವಾಗಿ ನಕಾಸುಮಾಡಿದ ಸುಂದರವಾದ ಗಂಧದ ಕರಡಿಗೆಯಲ್ಲಿಟ್ಟು ಒಪ್ಪಿಸಲಾಯಿತು. ಕ್ರೈಸ್ತರ ಪರವಾಗಿ ಘನ ಸ್ಯಾಮ್ಯುಯಲ್ ಲಾಜರಸ್ ಯವರು ವಂದನೆಗಳನ್ನು ಸಮರ್ಪಿಸಿ, ಬೈಬಲ್ ಪುಸ್ತಕಗಳನ್ನು ಒಪ್ಪಿಸಿದರು. ಅನಂತರ ದೇವರ ಪ್ರಾರ್ಥನೆ ನಡೆದು ಸಭೆಯು ಮುಕ್ತಾಯವಾಯಿತು —ನಮ್ಮ ಡಾಕ್ಟರು [illegible] ಇರುವುದಾದರೂ ಪ್ಲೇಗ್ ರೋಗಕ್ಕೆ ಇನಾಕ್ಯುಲೇಷನ್ [illegible] ಭಯವು ಯಾರಿಗೂ ಇರುವದಿಲ್ಲವೆಂದು ಕಾಣುತ್ತದೆ. ಇನೋಕ್ಯುಲೇಷನ್ನು ಇವರು ಪ್ರಚುರಪಡಿಸಿದರೆ ಜನರಿಗೆ ಬಹಳ ಅನುಕೂಲವಾದೀತು. —ಈಗ ಎರಡು ವಾರಗಳ ಹಿಂದೆ ಇಲ್ಲಿನ ಮಿಡ್ಲ್ ಸ್ಕೂಲ್ ಉಪಾಧ್ಯಾಯರಾಗಿರುವ ನಾಗಯ್ಯನವರ ಪತ್ನಿ [illegible] ಕಾಲವಾದರೆಂದು ತಿಳಿಸಲು ವ್ಯಸನಪಡುತ್ತೇನೆ.

ದೊಡ್ಡಬಳ್ಳಾಪುರ — ಈ ಜನವರಿ ತಾ॥ ೬ ನೇ ರ ಸುಬ್ರಹ್ಮಣ್ಯ ಷಷ್ಠಿಯು ಬಹು ಆಡಂಬರವಾಗಿ ನಡೆಯಿತು. [illegible] ೩ ವರ್ಷಕ್ಕಿಂತ ಈ ವರ್ಷ ಹೆಚ್ಚು ಜನರು ಸುಮಾರು [illegible] ಎತ್ತುಗಳು ಸೇರಿದ್ದವು. ಇಂಥಾ ಜಾತ್ರೆಯಲ್ಲಿ ಯಾವ ವಿಧವಾದ ಜಗಳವೂ ಕಳ್ಳತನವೂ ನಡೆಯದ ಹಾಗೆ ಪೋಲೀಸ್ ಸುಪರಿಂಟೆಂಡೆಂಟು, ಇನ್ಸ್‌ಪೆಕ್ಟರು ಒಳ್ಳೇ ಏರ್ಪಾಡುಗಳನ್ನು ಮಾಡಿದ್ದರು. ನಮ್ಮ ಅಮಲ್ದಾರು ಈ ಜಾತ್ರೆಯಲ್ಲಿ ಬಹು ಮುತುವರ್ಜಿಯಿಂದ ಎಲ್ಲಾ ಏರ್ಪಾಡುಗಳನ್ನು ಮಾಡಿ, ಉತ್ತಮವಾದ ಎತ್ತುಗಳನ್ನು ಒಂದು ಕಡೆಯಲ್ಲಿ ಸೇರುಹಾಗೆ ಮಾಡಿಸಿದ್ದರು. ದಂಡಿನ ಕಲಿಯುಣ್ಣನ ಪಾಳೆಯದವರು ತಂದು ಇದ್ದ ಎತ್ತು ಬಹು ಉತ್ತಮವಾಗಿತ್ತು. ಇದರ ಒಂದು ಜತೆಗೆ ಎಂಟು ನೂರು ರೂಪಾಯಿ ಎಂದು ಕೇಳುತ್ತಾ ಇದ್ದರು. ಇದಕ್ಕೆ ಹೊಂದಿಕೊಂಡು ಕಳೆದವಾರ ಕಾಲಿನ ತೋಟಗಳು [illegible] ಯಿಂದ ನೀರಿಲ್ಲದೆ ಬಾಡಿದ್ದವು. ಇದಕ್ಕೆ ೨೫ ರೂಪಾಯಿ ಇನಾಮು ಬಂತೆಂದು ಕೇಳಿದೆವು. ಜಾತ್ರೆಯು ಕಡೇದಿನಗಳಲ್ಲಿ ಗುಡಿಯ ಹತ್ತಿರ ಇದ್ದ ಭಾವಿಗಳಲ್ಲಿ ನೀರು ಕೆಟ್ಟಿದ್ದರಿಂದಲೂ ೩—೪ ಜನರು ಪ್ಲೇಗ್, ಕಾಲರಾ ಜಾಡ್ಯಗಳಿಂದ ಸತ್ತರೆಂಬ ಪ್ರಕಾರ ಹುಟ್ಟಿದ್ದರಿಂದಲೂ [illegible] ಜಾತ್ರೆಯ ಜನರು ಬೇಗ್ನೆ ಹೊರಟುಹೋಗುವದಕ್ಕೆ ಕಾರಣವಾಯಿತು. ಇದರಿಂದ ವರ್ತಕರಿಗೆ ಬಹಳ ನಷ್ಟವೂ ಕಷ್ಟವೂ ಆಯಿತೆಂದು ಕೇಳುತ್ತೇವೆ. ಬರುವ ವರ್ಷ ಸೂಳೆಬಸದೆಯ ಹತ್ತಿರ ಒಂದು ಕೆರೆಯನ್ನು ತಯಾರು ಮಾಡಿಸುತ್ತೇವೆಂದು ವರ್ತಮಾನವಿದೆ. ಕೆರೆಯಾದರೆ ತುಂಬಾ ಅನುಕೂಲವಾಗುತ್ತೆ. — ೧೪—೧೫ನೇ ತಾ ಸಲ್ಲಿ ೨—೩ ವರ ಸ್ವಲ್ಪ ಸುರಿಯಿತು. ಒಂದೆರಡು ಕಡೆಗೆ ೩—೪ ಅಂಗುಲ ನೀರು ಬಂತು —ಬೇಗಲು ಶಂಕರಯ್ಯನವರು ಹಾರ್ಮೋನಿಯಂ ಎಂಬ ಒಂದು ಸಂಗೀತದ ಯಂತ್ರವನ್ನು ತಂದಿದಾರೆ. ಇದು ಬಹಳ ಚೆನ್ನಾಗಿದೆ. ಇಂಥಾ ಯಂತ್ರವನ್ನು ನಮ್ಮ ದೇಶದಲ್ಲಿ ಇದುವರೆಗೆ ಯಾರೂ ಮಾಡಿರಲಾರರು. ಆದ್ದರಿಂದ ನಮ್ಮ ದೇಶದವರು ಇವರನ್ನು ಇನ್ನೂ ಪ್ರೋತ್ಸಾಹಿಸಬೇಕು. ಅವರು ಮೈಸೂರು ಪ್ರದರ್ಶನಕ್ಕೆ ಇದನ್ನು ಕಳುಹಿಸಬೇಕೆಂದಿದ್ದರು. ಆದರೆ ಅಷ್ಟರಲ್ಲಿ ಅದು ತಯಾರಾಗಲಿಲ್ಲ. ಇದಕ್ಕೆ ಸುಮಾರು ೩೦ ರೂಪಾಯಿ ಕ್ರಯವೆಂದು ಹೇಳುತ್ತಾರೆ —ವೈಕುಂಠ ಏಕಾದಶಿ ಜನಾರ್ದನ ಸ್ವಾಮಿಯ ದೇವಸ್ಥಾನದ ಕಾಮಗಾರಿಗೆ ಅವರ ಧರ್ಮದರ್ಶಿಗಳಿಂದಲೂ ಊರ ವರ್ತಕಾದಿಗಳಿಂದಲೂ ನಡೆದಿರತಕ್ಕ ಕೆಲಸಗಳಾದಿಯು ಶಕ್ತ್ಯಾನುಸಾರವಾಗಿಯೂ ಮಹೋತ್ಸವವನ್ನು ಕಟ್ಟಿಸುವದಕ್ಕಾಗಿಯೂ ಮುಜರಾಯಿ ಮಂಡಳಿಯಿಂದ ಸರ್ಕಾರದವರು ೨೦೦ ರೂಪಾಯಿ ಗ್ರ್ಯಾಂಟ್ ಮಾಡಿದರು. ಇದರಿಂದ ಕೆಲಸವು ಚೆನ್ನಾಗಿ ನಡೆಯುತ್ತಿದೆ. ಇದಕ್ಕೆ ಧರ್ಮದರ್ಶಿಗಳ ಮುತುವರ್ಜಿಯು ತುಂಬಾ ಇರುವದರಿಂದ ಇವರುಗಳನ್ನು ಸ್ತೋತ್ರ ಮಾಡತಕ್ಕದ್ದಾಗಿದೆ.—ದೊಡ್ಡಬಳ್ಳಾಪುರದ ಪ [illegible] ಸ್ಕೂಲಿನಿಂದ [illegible] ಮಂದಿ ವಿದ್ಯಾರ್ಥಿಗಳು ಲೋಯರ್ ಸೆಕಂಡರಿ ಪರೀಕ್ಷೆಗೆ ಹೋಗಿದ್ದರು. ಇದರಲ್ಲಿ ೧೪ ಮಂದಿ ಪ್ಯಾಸಾಗಿದಾರೆ. ಉಪಾಧ್ಯಾಯರ ಮೇಲ್ವಿಚಾರಣೆ ಬಹು ಚೆನ್ನಾಗಿತ್ತು. ಈ ದೊಡ್ಡಬಳ್ಳಾಪುರಕ್ಕೆ ಸೇರಿದ ಕಸಬಾ ೧೯೦೩ ರಿಂದ ಲೋಯರ್ ಸೆಕಂಡರಿ ಕ್ಲಾಸನ್ನು ಇಟ್ಟು ಇದರೆ ಈ ಸಾರಿ ಈ ಕಸಬೆ ಸ್ಕೂಲಿನಿಂದ ಉಪಾಧ್ಯಾಯರು ೧೨ ಮಂದಿಯನ್ನು ತಯಾರು ಮಾಡಿ ಪರೀಕ್ಷೆಗೆ ಕಳುಹಿಸಿದ್ದರು. ಇದರಲ್ಲಿ ೭ ಮಂದಿ ಪ್ಯಾಸಾಗಿರುವದು. ಉಪಾಧ್ಯಾಯರ ಮುತುವರ್ಜಿಯನ್ನು ತೋರಿಸುತ್ತೆ. ಪಟೇಲ್ ಬಸಪ್ಪನವರು ಈ ಸ್ಕೂಲಿನ ಮೇಲೆ ತುಂಬಾ ಗಮನ ಇಟ್ಟು, ಇದರ ಅಭಿವೃದ್ಧಿಗಾಗಿ ಸಂತೋಷಪಡಬೇಕು.—ತಾ ೧೯ ರಲ್ಲಿ ಕಾರ್ನಸೆಲರ್ ಮೆ॥ ಟಿ ಆನಂದರಾಯರು ದೊಡ್ಡಬಳ್ಳಾಪುರಕ್ಕೆ ಬಂದು ಇಲ್ಲಿನ ಕೆಲಸಗಳನ್ನು ನೋಡುತ್ತಾ ಇದಾರೆ —ಈಗ ಕ್ಯಾಂಪು ಒಂದು ಇರುವದರಿಂದ ಇಲ್ಲಿನ ಜನರಿಗೆ ಬೇಕಾದ ಪದಾರ್ಥಗಳು ಸಿಕ್ಕುವದು ಕಷ್ಟವಾಗಿದೆ. ಹಳ್ಳಿಗಳಿಂದ ಬರತಕ್ಕ ದಿನಸು ಬಾರದೆ ನಿಂತುಹೋಗಿದೆ. ರಾಗಿ ಇಲ್ಲದೆ ಜನರು ಕಷ್ಟಪಡುತ್ತಾರೆ. ಸೌದೆ ಬೆರಣಿ ಮುಂತಾದದ್ದು ಸಹ ಬರುವದಿಲ್ಲ. ಹಳ್ಳಿಗಳ ಹೆಂಗಸರು ಪೇಟೆಗೆ ಬರುವದಕ್ಕೆ ಹೆದರುತ್ತಾರೆ. ಪೇಟೆಗೆ ಗಾಡಿಗಳು ಬಂದರೆ ಕ್ಯಾಂಪಿಗಾಗಿ ಬಿಟ್ಟೇ ಹಿಡಿಯುತ್ತಾರೆಂಬ ಭೀತಿಯು ಸಹ ಹಳ್ಳಿಯವರಲ್ಲಿ ತುಂಬಿದೆ —[ಇನ್ನೂ ಬೆಟ್ಟ ಚಾಕ್ಕರಿದಾರರು ಏನಾದರೂ ಸ್ಥಾಪನೆ] —ಈ ತಿಂಗಳು ೯ ನೆ ತಾ ಗುರುವಾರದ ದಿನ ರಾಮ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಜಾತ ರಥೋತ್ಸವ ನಡೆಯಿತು. ಈ ಜಾತ್ರೆ ೧೦ ದಿವಸಗಳು ನಡೆಯತಕ್ಕದ್ದಾಗಿ ಮೈಸೂರು ಸೀಮೆಯಲ್ಲಿ ನಡೆಯುವ ಜಾತ್ರೆಗಳಲ್ಲಿ ಮುಖ್ಯವಾದದ್ದಾಗಿರುತ್ತೆ. ಜಾತ್ರೆಯಲ್ಲಿ [illegible] ಎತ್ತುಗಳೂ ಬಹು ಗಾಡಿಗಳೂ ಅನೇಕ ವರ್ತಕರಿಂದ ವಿಜಿತ್ರಕೃತ [illegible] ಪೋಲೀಸ್ ಸುಪರಿಂಟೆಂಡೆಂಟ್ ಸಾಹೇಬರು, ಗ್ಯಾಂಗ್ ಇನ್ಸ್‌ಪೆಕ್ಟರ್ ಮತ್ತು ತಾಲ್ಲೋಕು ಅಮಲ್ದಾರರು, ಇನ್ಸ್‌ಪೆಕ್ಟರು, ಅನೇಕ ಜನ ಕಾನ್ಸ್‌ಟೆಬಲ್‌ಗಳು ಉಸ್ತುವಾರಿಗಾಗಿ ಬಂದಿದ್ದರು. ಜಾತ್ರೆಯಲ್ಲಿ ಕಳ್ಳತನವಾಗಲಿ ಜಗಳವಾಗಲಿ ನಡೆಯುವಂತೆ ಆಗಲಿ ಇಲ್ಲದ್ದು ಬಹು ಜನಗಳಿಗೆ ಸಂತೋಷವಾಯಿತು. ತಾ ೧೩ ನೆ ಸೋಮವಾರ ದಿನಗಳ ಪ್ರದರ್ಶನದ ನಡೆದು ಮೇಲಾದ ಎತ್ತುಗಳಿಗೆ ಒಟ್ಟು ೩೦೦ ರೂಪಾಯಿ ಬಹುಮಾನ ಕೊಡಲಾಯಿತು. ಇದರಿಂದ ರೈತರಿಗೆ ತುಂಬಾ ಪ್ರೋತ್ಸಾಹ ಮಾಡಿದಂತಾಗಿದೆ. ನಮ್ಮ ಅಮಲ್ದಾರರು ಮಾರ್ಕೆಟ್ ತಪ್ಪಿಸಿ ಟ್ರಾಫಿಕ್ ಪಕ್ಕದ [illegible] ಅಂಗಡಿಗಳು ಸಾಲುಸಾಲಾಗಿ ಇಡತಕ್ಕದ್ದನ್ನು ದಕ್ಷಿಣೋತ್ತರವಾಗಿ ಅಂಗಡಿಗಳನ್ನು ಇಡುವಂತೆ ಮಾಡಿದರು. ಇದರಿಂದ ವರ್ತಕರು [illegible] ಕೆಲವರು ಇದನ್ನು ಮೆಚ್ಚಿ [illegible] ಕೆಲಸ ಮಾಡಿದರು. [illegible] ಈ ಸಲ ಜಾತ್ರೆ ಜಾಸ್ತಿ [illegible] ಎತ್ತುಗಳು ಒಂದಿದ್ದವೆಂದು [illegible] ಕಲ್ಲಿನಲ್ಲಿ [illegible] ಸ್ಥಿರವಾಗಿ ಮಾಡಿದರು. ಇದರ ಮೇಲಕ್ಕೆ [illegible] ಜಾತ್ರೆ ಸಲ್ಲಿ ಸುಮಾರು ದಿನಗಳು ದೊಡ್ಡ ಮಳೆ [illegible] ಎರಡು ಅಸಡಾಯಿತು. ಜಾತ್ರೆಯಲ್ಲಿ ನೀರಿಗೆ ಅಭಾವವಾಗಿ ಒಂದು ದಿನ ನೀರು ಸಿಕ್ಕದೆಯೇ ಹೋಯಿತು. ಈ ಪ್ರಾಂತ ಕೆರೆಕಟ್ಟೆಗಳು ಅರ್ಧಮುಕ್ಕಾಲು ಪಾಲು ಒಡೆದಿವೆ.—ಊರಿಗೆ ಸಮೀಪದಲ್ಲಿ ವರ್ಷ ವರ್ಷವಂತೆ ಸೈನಿಕರ ಕ್ಯಾಂಪು ಇದೆ: ಕಾಲಕಾಲದಲ್ಲಿ [illegible] ಮಾಡುತ್ತಲಿವೆ. ಇನ್ನು [illegible] ದಿವಸಗಳೊಳಗೆ [illegible] ವರ್ಷದ ಬಡ್ಡಿಕೆಯನ್ನು [illegible] ಮಾಡುವೆಯಾದ್ದರಿಂದ ಊರಿನ ಕೆಲವರು ಅಸಮಾಧಾನಪಟ್ಟರು. — [illegible] ಗಂಗಪ್ಪನವರು ಒಪ್ಪಿ ಮುನಿಸಿಪಲ್ ಸರವನ್ನು ಹೊರಡಿಸಿ, ನೆಟ್ಟಕ್ಕೆ ಕರೆವಿದ್ದಕ್ಕಾಗಿ ಜನರು ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದು ಮಾಡಿರುತ್ತಾರೆ —೨೯ ನೇ ತಾ ಬಾಗೇಪಲ್ಲಿ ಮೆ॥ ಕೆ ಪಿ ಚಿತ್ರೆಯವರು ಆಕಸ್ಮಾತ್ತಾಗಿ ಸರ್ಕಸ್ ಆಟಗಳನ್ನು ಆಡಿ ಸರ್ಪರನ್ನು ಸಂತೋಷಪಡಿಸಿ ಇಲ್ಲಿಂದ ಹಿಂದೂಪುರಕ್ಕೆ ಪ್ರಯಾಣ ಮಾಡಿದರು.

ಡಾಕ್ಟರು ಏನು ಹೇಳುತ್ತಾರೆ?

೨೧

ನಾವು ಮಾಡಿದ ತಪ್ಪುಗಳ ಫಲವನ್ನು ಅನುಭವಿಸುತ್ತೇವೆ [illegible] ಹೇಳಿದ ಮಾತು ಅಕ್ಷರಶಃ ಸತ್ಯವೆಂದು ಪ್ರತ್ಯಕ್ಷವಾಗುವದು. ಇಂಡಿಯಾದ ಮೆಡಿಕಲ್ ಕಾಲೇಜಿನ ಎಲ್. ಎಂ. ಎಸ್. ಡಿಗ್ರಿ ಪಡೆದ ಡಾಕ್ಟರ್ [illegible] ಮುಂತಾದವರು ತಮ್ಮ ಸ್ವಂತ ಅನುಭವದಿಂದ ಖಂಡಿತವಾಗಿ ಹೇಳುವದೇನೆಂದರೆ — [illegible] ರೋಗ ಹಿಡಿದವರಿಗೂ [illegible] ಸಂಬಂಧವಾದ ಇತರ ಬಾಧೆಗಳಿಂದ ಪೀಡಿತರಾಗಿ [illegible] ಔಷಧಗಳಿಂದ ಗುಣವಾಗದೆ ಸಿಕ್ಕಿದಂಥ ಜನರು ಡಾಕ್ಟರ್ ವಿಲಿಯಮ್ಸ್ ಪಿಂಕ್ ಪಿಲ್ಸ್ ಎಂಬ ಔಷಧದ ಗುಳಿಗೆಗಳನ್ನು ಸೇವಿಸಿದ ಮೇಲೆ ಆಶ್ಚರ್ಯಕರವಾಗಿ ಗುಣಹೊಂದಿದರು. ಏಕೆಂದರೆ —ಇತರ ಔಷಧಗಳಿಂದ ಗುಣಹೊಂದದೆ ಇದ್ದವರಿಗೆ ಇವುಗಳಿಂದ ಗುಣವಾಗಿರುವದು.

ಬೆನ್ನು ನೋವಿನಲ್ಲಿಯೂ ನೋವು ಮೂತ್ರಪಿಂಡದ ಉಪದ್ರವದಿಂದಾಗಿ ಉಂಟಾಗುತ್ತದೆ. ಕಿಡ್ನಿಯಲ್ಲಿಯೂ ನೋವು ಇರುವದು. ಇತರ ಚಿಹ್ನೆಗಳು ಯಾವುವೆಂದರೆ, ತಲೆ ತಿರುಗುವಿಕೆ, ತಲೆ ನೋವು, ಸೊಂಟ ಹಿಡಿದುಕೊಳ್ಳುವದು, ದೃಷ್ಟಿ ಮಂದವಾಗುವದು ಮುಂತಾದದ್ದು. ಈ ಗುಳಿಗೆಗಳು ಮೂತ್ರ ಕೋಶಗಳನ್ನು ಸರಿಪಡಿಸಿ ಬೆನ್ನುನೋವಿನ, ಮೂತ್ರಪಿಂಡದ ಮೂತ್ರಕೋಶಗಳ ಮತ್ತು ಮೂತ್ರಸಂಬಂಧವಾದ ಇತರ ವ್ಯಾಧಿಗಳ ಹೇತುವನ್ನು ಪರಿಹರಿಸುತ್ತವೆ.

ಎಲ್ಲಾ ಔಷಧ ವರ್ತಕರಿಂದ ದೊರೆಯುತ್ತದೆ. ಶೀಸೆ ಒಂದಕ್ಕೆ ರೂ ೨—೦, ಅಥವಾ ೭ ಶೀಸೆಗಳಿಗೆ ರೂ. ೧೧—೮—೦, ಅಥವಾ ಮುಂಬಯಿಯಲ್ಲಿಯ ಡೋಸ್ಸರ್ ಔಷಧಗಳ ಕಂಪೆನಿಯಿಂದ ನೇರ ತರಿಸಿಕೊಳ್ಳಬಹುದು. ಪಿ. ಓ. ಬಾಕ್ಸ್ ನಂ. ೨೦, ಮುಂಬಯಿ

ಇಲ್ಲಿ ನೋಡಿ!

11

ತುಮಕೂರು ಪಿಂಷನ್ ಇಲಾಖೆಯಲ್ಲಿ ರುಜುವಾತು ಸರ್ಟಿಫಿಕೇಟು ಹೊಂದಿರುವ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ

ಕ್ರಯ ... ಆಣೆ ಮೊದಲ್ಗೊಂಡು ... ರವರೆಗೆ ಇರುವುದು

... ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಕೇಳಿದ ... ಡಿಸ್ಕೌಂಟ್ ಕೊಡಲ್ಪಡುವುದು

ನಮ್ಮ ವಿಳಾಸ —ಮೇನೇಜರ್

ಹಾಸನದ ಟೋಪಿ ಕಂಪೆನಿ, ಪಿಂಷನ್ ಇಲಾಖೆ, ತುಮಕೂರು

ಸುಖಾ ಬಾಧಾಪಹಾರಿಣಿಯು

38-37

ಇದನ್ನು ಕೇಳುವುದು ಪ್ರಪಂಚದಲ್ಲೇ ಇಲ್ಲವೆ

ಕ್ಷಣಮಾತ್ರದಲ್ಲಿ ಜೀವನವನ್ನು ಕಳೆವ ಸಿದ್ಧವಾದ ಬಾಧೆಗಳನ್ನು ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವೈದ್ಯರು, ಕಾಂಪೌಂಡರುಗಳು, ಈ ಮೊದಲಾದ ಅನೇಕರು ಒಪ್ಪಿ ಕೊಳ್ಳುತ್ತಾರೆ ಈ ರಸಾಯನವನ್ನು ಉಪಯೋಗಿಸಿದ ಮಾತ್ರಕ್ಕೇ ತಲೆನೋವು, ಹಲ್ಲುನೋವು, ಚಳಿ, ಗಂಟುನೋವು, ವಾತಶೂಲೆ, ನಾನಾವಿಧ ವಾಯುರೋಗಗಳು, ಶೀತರೋಗಗಳು, ... ಕೀಲುಗಳ ಸಂಧುಕಟ್ಟುಗಳ ನೋವು, ... ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ... ನೋವುಗಳು ಖಂಡಿತವಾಗಿ ನಿವಾರಣೆಯಾಗುತ್ತವೆ ... ತೈಲವು ನೋವಿರುವ ಸ್ಥಳದ ... ವ್ಯಾಪಿಸಿ, ಅದರ ಗುಣವನ್ನು ... ಉಪಕಾರಿ. ಇದಕ್ಕೆ ನೋವು ... ಗಳಿಸುತ್ತಾರೆ

ಕ್ರಯ ... ಆಣೆ ... ಆಣೆ ... ಅದರ ... ಟಪ್ಪಾಲು ಹಾಕಿ ... ತರಿಸಿಕೊಳ್ಳುವವರಿಗೆ ... ವ್ಯಾಪಾರಸ್ಥರಿಗೆ ... ತರಿಸಿಕೊಳ್ಳುವುದಾದರೆ ಡಿಸ್ಕೌಂಟು ... ಈ ತೈಲವನ್ನು ಎಲ್ಲಾ ವ್ಯಾಪಾರಿಗಳ ... ವಿಳಾಸ—

ಎಸ್. ಶಾಸ್ತ್ರಿಯು ಅಂಡ್

ಸಿಮ್ಸ್ ರೋಡ್ ಮೇನ್ ಮದ್ರಾಸ್

ಸುಗಂಧ ಸಂಜೀವನೀ
ಶೃಂಗಾರ ಮೂಲಿಕ ತೈಲವು.

ಈ ತೈಲವನ್ನು ತಲೆಗೂ, ದೇಹಕ್ಕೂ ... ಉಪಯೋಗಿಸುವುದರಿಂದ ತಲೆಯಲ್ಲಿ ಸುವಾಸನೆ, ಕೂದಲು ... ವೃದ್ಧಿಯಾಗುವುದು. ತಲೆ ... ಕರ್ತಲೆ

... ಕಳೆಯುತ್ತವೆ ... ಕೊಡುತ್ತದೆ ... ಅತ್ಯಂತ ... ಮುಂತಾದ ... ರೋಗಗಳನ್ನೆಲ್ಲಾ ಪರಿಹಾರ ಮಾಡುತ್ತದೆ ... ಸುವಾಸನೆ ... ಮಾಗುತ್ತದೆ ಬುದ್ಧಿ ಧೈರ್ಯದಿಂ ... ಉಷ್ಣ, ಪಿತ್ತ, ಚಾರಡೆ ಇರುವದು. ಇವೇ ಮೊದಲಾದ ವ್ಯಾಧಿಗಳನ್ನು ಗುಣಮಾಡುತ್ತದೆ ಮಿದುಳಿಗೆ ತಂಪು ಮಾಡಿ ಸ್ಮರಣಶಕ್ತಿ ... ವಿದ್ಯಾರ್ಥಿಗಳಿಗೂ, ವಿಶೇಷ ಯೋಚನೆಯಿಂದ ... ಅತ್ಯಂತ ಉಪಯುಕ್ತವಾದದ್ದು. ಕ್ರಯ ... ಆಣೆ ... ಆಣೆ.

ರಕ್ತಶೋಧಕ ತೈಲವು.

ಅನೇಕ ಅನುಭವದಿಂದ ಯೋಗ್ಯತೆ ಹೊಂದಿದೆ ಕ್ರಯ ಸುಲಭ

ಶೀಘ್ರಗುಣಕಾರಿ ... ಜ್ವರಶೂಲೆ, ... ಗುಳ್ಳೆ, ನಡ ... ಆನೆ ... ಮರ್ಮಸ್ಥಾನದ ಗುಳ್ಳೆ, ಎಂತಹ ... ದ್ದ ... ಪುರಾತನ ... ಇತ್ಯಾದಿ ... ರೋಗಗಳಲ್ಲಾ ... ಆರೋಗ್ಯವಾಗುವದು. ಈ ತೈಲವನ್ನು ಲೇಪಿಸಿದರೆ ... ದಿಲ್ಲ ರಸ, ಗಂಧಕ, ... ಮುಂ ತಾದದ್ದು ಖಂಡಿತವಾಗಿ ಇದರಲ್ಲಿ ಸೇರಿ ಸಿಲ್ಲ. ನಾತ್ತು ಕಾರಣ, ಇತ್ಯಾದಿ ... ವ್ಯಾಧಿಗಳನ್ನೆಲ್ಲಾ ... ಆರೋಗ್ಯವಾಗುತ್ತವೆ ಕ್ರಯ, ... ಆಣೆ ... ಕೆಳಕ್ಕೆ ಮೇಲ್ಕಂಡ ಎರಡು ಔಷಧಗಳೂ ದೊರೆಯುವ ಸ್ಥಳ —

ಪಿ. ಆರ್. ಗೋವಿಂದರಾಜುಲು,

ನಂ... ಅರಳೀಪೇಟೆ ಬೆಂಗಳೂರು ಸಿಟಿ.

ಈಗಲೇ ಸೀಮೆಯಿಂದ ಬಂದಿದೆ.

117 13

೫,೦೦೦ ಹಾಸನ ಟೋಪಿ ಹೊಲಿಯುವ ಸುಪೀರಿಯರ್ ಉಲ್ ದಾರಗಳು ಬಿಳಿ ಮೊದಲು—ಹಳದಿ ಇದೆ—ಚಾರಿ, ಕಪ್ಪು ಕ್ರಯ:

೧ ಟೋಪಿಯಾಗುವ ಉಲ್ ದಾರಕ್ಕೆ	೦—೪—೦
೧೦ ಟೋಪಿಯಾಗುವ ಬಂಡಲ್‌ಗಳಿಗೆ	೩—೮—೦
ಕೊಕ್ಕೆ ಸಾಚೆಗೆ	೦—೧—೩
೩೦ ಇಂಚಿನ ಬನೀನ್ ಗಳಿಗೆ	೦—೯—೧

ಎರಡು ಕಾಸಿನ ... ಕಳುಹಿಸುವ ಪೋಸ್ಟ್ ಕಾರ್ಡ್ ೧೦೦ಕ್ಕೆ ... ಒಂದಾಣೆ ಸ್ಟ್ಯಾಂಪು ಕಳುಹಿಸಿ ನೇತ್ರಾನಂದಕರವಾದ ೧೯೦೮ನೆ ಇಸವಿಯ ಕ್ಯಾಲೆಂಡರ್ ಪಡೆಯಿರಿ ವಿಳಾಸ .—

ಪ್ರೊಪ್ರೈಟರ್ ದಿ ಉಲ್ ಮಾರ್ಟ್ ಬೆಂಗಳೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28-49

೧ ಕ್ಷಯರೋಗಾದಿಹರ ಕಸ್ತೂರೀ ಮಾತ್ರೆ—ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು ವಾತ ... ಕೆಮ್ಮು (ಕ್ಷಯ), ... ಶೀತವಾತಗಳ ಬಾಧೆ. ಅಜೀರ್ಣ, ಅಗ್ನಿನಷ್ಟ, ತಲೆನೋವು ... ನೆಗಡಿ, ಬಿಕ್ಕಳಿಕೆ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ... ಖಂಡಿತವಾಗಿ ಗುಣಪಡಿಸುತ್ತದೆ.

... ಉಪಯೋಗಿಸುತ್ತಿದ್ದರೆ ... ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಧೆಗೂ ದಾರಿ ಕೊಡದೆ, ... ಬಲಹೀನತೆಯನ್ನು ಪರಿಹರಿಸಿ ರಕ್ತದಲ್ಲಿ ದೋಷವನ್ನು ತೆಗೆದು ... ಸ್ತ್ರೀಯರ ಋತುಶೂಲೆ, ... ಬಿಳುಪು, ಜ್ವರ ... ಕ್ಷೀಣತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ... ಪಥ್ಯ ... ಗುರಿಯಾಗುವುದಿಲ್ಲ ... ಅನುಪಾನ ... ಔಷಧದ ಸಂಗಡಲೇ ಇರುತ್ತದೆ

... ಮಾತ್ರೆಯುಳ್ಳ ಡಬ್ಬಿಗೆ ೬ ಆಣೆ, ೫ ಡಬ್ಬಿಗೆ ೧ ಡಬ್ಬಿ ಕೊಟ್ಟು ೧ ರಿಂದ ... ಡಬ್ಬಿ ವರೆಗೆ ಪೋಸ್ಟೇಜು ೬ ಆಣೆ

ವಿಳಾಸ ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ

... ರೋಡ್ ಮೈಸೂರು

ಬರ್ಗಾರ್ ಬಿರುತ್ತಿನ ... ಮೊನೋಣಿ''

ಪ್ರಪಂಚವೇ ಆಶ್ಚರ್ಯಪಡುವದು.

121 11

... ರ ... ಗೆ ... ಬಹುಮಾನಗಳೂ, ಒಂದು ಟೇಬಲ್ ಪೀಸು ... ಸುಂದರವಾದ ಗಡಿಯಾರವು

ದೊಡ್ಡ ಪ್ರಮಾಣವಿಲ್ಲದ ... ಪ್ರಕಟನೆಗಳ ... ಕೆಲವು ಕಂಪನಿಯವರು ... ಕಂಡರೆ ಜನರು ... ಸತ್ಯ ... ಕಟನೆಯನ್ನು ... ನಂಬುವದು ಕಷ್ಟ ... ಯಥಾರ್ಥ ... ಕಂಪನಿಯ ... ಗಳನ್ನು ... ಪ್ರತಿಷ್ಠೆ ... ಈ ಕ್ರಯ ... ನರ್ಮದ ... ಗ್ಯಾರಂಟಿ ಉಳ್ಳ ... ಗಡಿಯಾರವನ್ನು ... ಬಹುಮಾನವನ್ನಾಗಿ ... ಕಳುಹಿಸುತ್ತೇವೆ ಇದರಲ್ಲಿ ... ನಮ್ಮ ಮುಖ್ಯ ಉದ್ದೇಶ ಒಂದಾವರ್ತಿ ನಮಗೆ ಬರೆದು ತರಿಸಿ ನಮ್ಮ ... ಪರೀಕ್ಷೆ ಮಾಡಿ ಗಡಿಯಾರದ ... ನಾವು ಕಳುಹಿಸುವ ಬಹುಮಾನಗಳೇನೆಂದರೆ—ಒಂದು ಗಡಿಯಾರ, ಬಲವಾದದ್ದು, ... ಗಂಟೆ ನಡೆಯುವದು, ಒಂದೆ ಎರಡು ... ಪರೀಕ್ಷೆಯಿಂದ ಸರಿ ಮಾಡಿದ್ದು ಒಂದು ಸೊಗಸಾದ ಪಟ್ಟಿಗೆಯಲ್ಲಿ, ... ವರುಷದ ... ಉಳ್ಳದ್ದು ಒಂದು ಸೊಗಸಾದ ಗಡಿಯಾರದ ಸರಪಣಿ ... ಬಲವಾದ ಇಂಗ್ಲಿಷ್ ಖಜಾನೆ ಪೆಟ್ಟಿಗೆ ಒಂದು ಟೇಬಲ್ ಪೀಸು, ಒಂದು ದೊಡ್ಡ ... ಒಂದಾಣೆ ... ತಿಂಗಳು ... ಒಂದಾವರ್ತಿ ... ಒಂದು ... ದೊಡ್ಡ ... ಬಲವಾದ ... ಒಂದು ... ಕತ್ತರಿ, ಒಂದು ... ಬಾಚಣಿಗೆ ... ಸ್ಕಾರ್ಫ್ ... ಒಂದು ಸೆಟ್ ... ಒಂದು ... ಕನ್ನಡಿ, ಒಂದು ... ಒಂದು ... ಎಂದಿಗೂ ... ಒಂದು ... ಸುಂದರವಾದ ದೊಡ್ಡ ... ಒಂದು ... ಪೆನ್ಸಿಲುಗಳು, ... ಲೆಟರ್ ಪೇಪರುಗಳು, ... ಕಾರ್ಡುಗಳು, ... ಸ್ಟೀಲ್ ಮುಳ್ಳುಗಳು

ಇಷ್ಟೆಲ್ಲಾ ಕ್ರಯ ರೂ ೩ ... ಮಾತ್ರವೇ ... ಪಾ. ಅಡ್ವಾನ್ಸು ಮನಿಆರ್ಡರ್ ಬಂದಲ್ಲಿ ... ವಿ. ಪಿ. ಮಾಡುತ್ತೇವೆ ಒಪ್ಪದಿದ್ದರೆ ಹಣ ವಾಪಸು ಕಳುಹಿಸುವೆವು

... ಮತ್ತು ಕಂಪನಿ.

ಚಿತ್ರೂರು. ಉತ್ತರ ಆರ್ಕಾಟು

ಮನಿಆರ್ಡರ್ ಕೂಪನಲ್ಲಿ ನಿಮ್ಮ ... ಸ್ಟೇಷನ್ ಇದ್ದಲ್ಲಿ ಅದರ ಹೆಸರನ್ನು ತಿಳಿಸಬೇಕು

ಶ್ರೀರಂಗಪಟ್ಟಣ—ನೋಟೀಸ್

11-1

ಶ್ರೀರಂಗಪಟ್ಟಣದ ತಾಲ್ಲೂಕು ... ವಾಸಿ ... ಗೌಡನ ... ಸಕಲರಿಗೂ ತಿಳಿಸುವದೇನಂದರೆ—ನನ್ನ ತಂದೆ ಬಸವೇಗೌಡನಿಗೆ ೯೦ ವರ್ಷಕ್ಕೆ ಮೇಲ್ಪಟ್ಟು ವಯಸ್ಸಾಗಿ ಬುದ್ಧಿ ಸ್ವಾಧೀನವಿಲ್ಲ, ಅದಲ್ಲದೆ ಈ ಕಾಲದಲ್ಲಿ ಆತನು ಇತರರ ಮೋಸದ ... ಸ್ವತ್ತುಗಳನ್ನು ಪರಾಧೀನ ಮಾಡುವದಾಗಿಯೂ, ... ಬರೆಯುವ ಹಾಗಿಯೂ ತಿಳಿದುಬರುತ್ತದೆ ... ನನ್ನ ತಂದೆಯು ನನ್ನ ... ಇದ್ದಾನೆ ಆತನಿಂದ ಯಾರಾದರೂ ಸ್ವತ್ತು ಪರಾಧೀನಮಾಡಿಸಿಕೊಂಡರೂ ಅಥವಾ ಪತ್ರಗಳನ್ನು ಬರಸಿಕೊಂಡರೂ ಅದು ಸಲ್ಲತಕ್ಕದ್ದಲ್ಲ ಅವರು ನಷ್ಟಕ್ಕೆ ಗುರಿಯಾಗುತ್ತಾರೆ ತಿಳಿಯುವುದು.

ತಾ॥ ೨೧—೧—೦೮ ... ಗೌಡನ ರುಜು

The Pourwal Cash Bazzar—Bangalore City.
ಧಾರಿವಾಲ್ (ಪಂಜಾಬ್) ಶಾಲುಗಳು.

130-8

ಕೆಂಪು, ಎಳ್ಳಿಬ್ಬೆ, ಕೆಂಪು, ಕೇಸರಿ ಹಸರು, ನಸ್ಯದ ಬಣ್ಣ ಬಾದಾಮಿ. ಕೆಂಪು ಬಿಳುಪು ಮುಂತಾದ ಬಣ್ಣದ್ದು. ಮತ್ತು ... ಸಮೂಹ ... ಉದ್ದ, ... ಅಗಲವುಳ್ಳದ್ದು.

... ವಿಲಾಯತಿಯಿಂದ ಬಂದಿರುವ ೫,೦೦೦ ... ತರಹವಾರಿ ಉಲ್ ಮತ್ತು ಇವುಗಳಲ್ಲಿ ತಯಾರಾದ ತರಹವಾರಿ ... ಗಳು. ನಮ್ಮಲ್ಲಿ ಸಿದ್ಧವಾಗಿರುತ್ತವೆ

ಇವುಗಳಲ್ಲದೆ ನೀವು ಕೇಳುವ ಯಾವ ಸಾಮಾನೇ ಆಗಲಿ ... ಅಗ್ಗವಾಗಿ ಕಳುಹಿಸುವವು ... ವಗೈರೆ ತಿಳಿಯಬೇಕಾದವರು ಇವರಿಗೆ ಬರೆಯಿರಿ—

ಹೆಚ್. ಜವಾರ್ ಮಲ್ ಕಂಪನಿ.

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೊಸ ವರ್ಷದ ಬಹುಮಾನಗಳು.

136 6

ಈ ಕೆಳಗೆ ಕಂಡ ಪುಸ್ತಕಗಳಲ್ಲಿ ... ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೬ ಆಣೆಯ ಸೀತಾಚರಿತೆಯ ... ನೇ ಭಾಗ ... ಆಣೆಯ ... ಆಣೆಯ ... ಇವುಗಳಲ್ಲದೆ ಪ್ರತಿ ... ಒಂದೊಂದು ಟಿಕೆಟ್ಟನ್ನು ಕಳುಹಿಸುತ್ತೇವೆ ... ಟಿಕೆಟ್ಟುಗಳಾದೊಡನೆಯೇ ೧೦೦ ... ಬಹುಮಾನಗಳನ್ನು ... ನೇ ಬಹುಮಾನ ... ರೂಪಾಯಿ, ... ನೇದು ... ರೂಪಾಯಿ, ... ನೇದು ... ರೂಪಾಯಿ. ... ನೇ ... ರೂಪಾಯಿಯದು ಬಹುಮಾನ ... ನೇದು ... ರೂಪಾಯಿನಾದು ಬಹುಮಾನ. ಒಟ್ಟು ... ಬಹುಮಾನಗಳು

ಬಿ. ವೆಂಕಟಚಾರ್ಯರ ಗ್ರಂಥಗಳು—... ಆಣೆ, ಮಾಲತಿ ... ಆಣೆ ... ಆಣೆ, ಇಂದಿರಾ ... ಆಣೆ, ... ಆಣೆ ಬಲಿಷ್ಠನಾದ ಮನೆಯಾಳಿಯು ... ಆಣೆ, ವೆನಿಸ್ ದೇಶದ ವಣಿಕ ... ಆಣೆ ಕ್ಷತ್ರಿಯರ ಮಣಿ ... ಆಣೆ

ಪಂಡಿತ ಎಸ್. ... ಗಳ ನವೀನ ನಾಟಕ ಗ್ರಂಥಗಳು.—ಸರಮಾ ... ಆಣೆ ಪ್ರಿಯದರ್ಶಿಕೆ ... ಆಣೆ ... ಆಣೆ ಸೀತಾಚರಿತ್ರೆ ... ಆಣೆ ಸತ್ಯವತೀಚರಿತ್ರೆ ... ಆಣೆ. ಉತ್ತರಸೀತಾಚರಿತೆ ... ಆಣೆ ಮಾಲತೀಮಾಧವ ... ಆಣೆ

ನಮ್ಮ ವಿಳಾಸ: ... ಪುಸ್ತಕಗಳನ್ನು ... ಬರೆಯಿರಿ

ದಿ ಜನರಲ್ ಏಜನ್ಸಿ ಲಕ್ಷ್ಮೀವಿಲಾಸ ರೋಡ್, ಮೈಸೂರು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ!

ಹಾಗಾದರೆ ಬೇಗ ... ತರಿಸಿರಿ.

24

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸವಾಸ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಕಳುಹಿಸಲ್ಪಡುತ್ತವೆ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಬಿಗಿಯಾಗಿ ಹಾಗೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ; ೧ ರೂ ೩ ಆ; ೧ ರೂ ೬ ಆ

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ ... ಟೋಪಿಗಳು ೧ ರೂ. ೧೨ ಆ, ೧ ರೂ. ೮ ಆ; ೧ ರೂ ೩ ಆ. ... ಟೋಪಿಗಳು ೧ ರೂ. ೮ ಆ, ೧ ರೂ ೩ ಆ

ಕೂಸುಗಳ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ವಯೋಮಿಂಗಿನ ಪೆ-ರೂ-ನಾ ಇದು ಶೀತರೋಗ ಪರಿಹಾರಿ.

ಮಾಜಿ ಗವರ್ನರವರು ಹೊಗಳುತ್ತಾರೆ. ಇದು ಉತ್ತಮೋತ್ತಮ ಪಾಪ ಬಲಕಾರಿ.



ವಯೋಮಿಂಗ್ ಸಂಸ್ಥಾನದ ದಿವ್ಯ ಸಭಾಮಂದಿರವು.

ಅಧಿಕಾರಿಗಳು.

ವಿಶೇಷ ಪರಾಬ್ಧಿರಿಯನ್ನು ನಹಿಸಿ ತುಂಬಾ ನಂಬಿಗಸ್ಥರಾಗಿರುವ ದೊಡ್ಡ ದೊಡ್ಡ ಅಧಿಕಾರಿಗಳೆಲ್ಲಾ ಯಾವಾಗಲೂ ತುಂಬಾ ಕೆಲಸವುಳ್ಳವರಾಗಿದ್ದಾರೆ. ಇತರ ವ್ಯಾಸಂಗಗಳಿಗೆ ಗಮನಕೊಡಲು ಅವರಿಗೆ ಸ್ವಲ್ಪವೂ ಅವಕಾಶವಿರುವುದಿಲ್ಲ. ಆ ಪ್ರಕಾರ ಅಂಥಾ ಅಧಿಕಾರಿಗಳು ಯಾವುದಕ್ಕಾದರೂ ಶಿಫಾರಸು ಕಾಗದಗಳನ್ನು ಬರೆದುಕೊಡುವುದಕ್ಕೆ ಒಪ್ಪುವುದು ತುಂಬಾ ಅಪರೂಪವೇ ಸರಿ. ಇದಲ್ಲದೆ ಅಂಥಾವರು ವ್ಯಾಪಾರವನ್ನು ಕುರಿತ ಯಾವ ವಿಷಯಕ್ಕಾಗಾದರೂ ಪಬ್ಲಿಕ್ಕಾಗಿ ಶಿಫಾರಸು ಬರೆದುಕೊಡುವುದೆಂದರೆ ಬಹಳ ಕಷ್ಟ; ಮತ್ತು ಅದಕ್ಕೆ ಅವರ ಮನಸ್ಸೊಪ್ಪುವುದಿಲ್ಲ.

ಅಪರೂಪವಾದ ಶಿಫಾರಸುಗಳು.

ಈ ರೀತಿಯಾಗಿ ಪಬ್ಲಿಕ್ ಅಧಿಕಾರಿಗಳು ಅಂದರೆ, ಗವರ್ನರುಗಳು, ಸಭಾಜನಗಳ ಮೆಂಬರುಗಳು, ನ್ಯಾಯಾಧಿಕಾರಿಗಳು, ಸೇನಾಪತಿಗಳು ಮುಂತಾದವರು ಔಷಧದ ಪ್ರಯೋಜನದ ವಿಷಯದಲ್ಲಿ ಬಹಿರಂಗವಾಗಿ ತಮ್ಮ ಹೆಸರು ಕಾಣಿಸಿ ಶಿಫಾರಸು ಬರೆಯುವದು ಬಹಳ ಅಪರೂಪವಾಗಿದೆ.

ಆದಕಾರಣ ಅಂಥಾ ಬಹುಮಂದಿ ಅಧಿಕಾರಿಗಳು ಸ್ವಲ್ಪವೂ ಅನುಮಾನವಿಲ್ಲದ ಶಿಫಾರಸನ್ನು ಪೆರೂನಾ ವಿಷಯದಲ್ಲಿ ಬರೆದುಕೊಟ್ಟಿರುವುದು ದೊಡ್ಡ ಜಯಪ್ರದವೆಂದೇ ಹೇಳಬಹುದು. ಜನಾಂಗದಲ್ಲಿ ತುಂಬಾ ಹೆಸರುವಾಸಿಯನ್ನು ಪಡೆದಿರತಕ್ಕ ಅನೇಕ ದೊಡ್ಡಮನುಷ್ಯರೂ ಅಧಿಕಾರಿಗಳೂ ಅನೇಕ ವೇಳೆ ಬಹು ಸಂತೋಷದಿಂದ ಪೆರೂನಾ ವಿಷಯವನ್ನು ಹೊಗಳಿ ಬರೆದಿರುತ್ತಾರೆ.

ಅದ್ಭುತವಾದ ಸಂಗತಿಯು.

ಪೆರೂನಾವಿನಲ್ಲಿ ಬಹು ವಿಶೇಷವೂ ಮಹಾ ಅಸಾಧಾರಣವೂ ಆದ ಗುಣವಿರುತ್ತೆಂದು ಎಲ್ಲರೂ ಹೆಸರುವಾಸಿಯನ್ನು ಪಡೆದಿರುವುದಕ್ಕೆ ಕಾರಣವನ್ನು ತಿಳಿಸಲು ಮಾರ್ಗವೇ ತೋರುವುದಿಲ್ಲ. ಇದರ ಎಲ್ಲಾ ತರಗತಿಗಳಲ್ಲಿರತಕ್ಕ ಜನಗಳು ಒಂದೇ ಆದ್ದರಿಂದ ಅವರೆಲ್ಲರ ಅಭಿಪ್ರಾಯವೂ ಏಕತರವಾಗಿರುತ್ತದೆ.

ಸ್ವಾಭಾವಿಕವಾದ ಉತ್ಸಾಹವು.

ಒಬ್ಬ ಮನುಷ್ಯನಿಗೆ ದೀರ್ಘರೋಗವಿದ್ದು, ಇತರ ಯಾವ ಔಷಧದಿಂದಲೂ ಆ ರೋಗನಿವಾರಣೆಯಾಗದೆ, ಕಡೆಗೆ ಒಂದರಿಂದ ವಾಸಿಯಾದಲ್ಲಿ ಸಾಮಾನ್ಯವಾಗಿ ಅವನೂ ಅವನನ್ನು ನೋಡತಕ್ಕ ಜನರೂ ಸ್ವಾಭಾವಿಕವಾಗಿ ತಮ್ಮ ಉತ್ಸಾಹವನ್ನು ಪ್ರಕಟಪಡಿಸುತ್ತಾರೆ. ದೊಡ್ಡ ಉಪಕಾರವಾದದ್ದಕ್ಕೆ ಕೃತಜ್ಞತೆಯೇ ಸ್ವಭಾವವಾಗಿದೆ. ಆದಕಾರಣ ಉಪಕಾರ ಹೊಂದಿದಂಥಾ ಎಲ್ಲಾ ತರಗತಿಗಳ ಜನರೂ ತಮ್ಮ ಅನುಭವವನ್ನು ಪ್ರಕಾಶಪಡಿಸುವುದಕ್ಕಾಗಿ ಕೃತಜ್ಞತಾ ಪೂರ್ವಕವಾಗಿ ಒಪ್ಪಿಕೊಂಡಿರುವುದೇ ಮುಖ್ಯವಾದ ಮತ್ತು ವಿಶೇಷವಾದ ಕಾರ್ಯವಾಗಿದೆ.

ನಿಜವಾದ ಉಪಕಾರವು.

ಪೆರೂನಾ ಕೂಡಲೇ ಗುಣಕೊಡುತ್ತದೆ ಇನೇ ಮುಖ್ಯಕಾರಣ. ಕೃಶ್ಯರೋಗಗಳನ್ನು ನಿವಾರಣೆಮಾಡಿಕೊಳ್ಳುವುದು ತುಂಬಾ ಕಷ್ಟ. ಅನೇಕ ಡಾಕ್ಟರುಗಳು ಅದನ್ನು ವಾಸಿಮಾಡಲಾರದೆ ಹೋಗುತ್ತಾರೆ.

ಕೃತಜ್ಞತೆಯೇ ಫಲಿಸುವುದು

ಅನೇಕ ವರುಷಗಳಿಂದ ಅನುಭವಿಸುತ್ತಿದ್ದ ದೀರ್ಘರೋಗವನ್ನೆಲ್ಲಾ ಕೆಲವು ಬಾಟ್ಲು ಪೆರೂನಾ ಔಷಧವು ವಾಸಿಮಾಡುತ್ತದೆ. ಇದರಿಂದ ಸ್ವಾಭಾವಿಕವಾಗಿ ಹುಟ್ಟುವಂಥಾ ಕೃತಜ್ಞತೆಯನ್ನು ಅಡಗಿಸಿಬಿಡುವುದು ಖಂಡಿತವಾಗಿಯೂ ಅಸಾಧ್ಯವಾಗಿರುತ್ತದೆ.

ನೆತ್ತಿ ಮತ್ತು ಕೊರಳ ಶೀತವು

ಮೆ॥ ಜೋಸೆಫ್ ರೀಸ್, ೩೫೦೫ ಎಫ್ ೧೫ನೇ ಬೀದಿ, ಸೆಂಟ್ ಲೂಯಿಸ್, ಮೊ. ಇವರು ಬರೆಯುವುದು:—

"ನನಗೆ ನೆತ್ತಿಯಲ್ಲೂ ಗಂಟ್ಲಲ್ಲೂ ಶೀತಹಿಡಿದು ಬಹಳ ಕಷ್ಟಪಟ್ಟೆನು. ಆದರೆ ಪೆರೂನಾ ಸೇವನೆಯನ್ನು ಆರಂಭಿಸಿ ಐದು ಬಾಟ್ಲುಯಷ್ಟು ಮುಗಿಸಿದೆನು. ಮತ್ತು ಎರಡು ಬಾಟ್ಲು ಮನಾಲಿನ್ ಉಪಯೋಗಿಸಿದೆನು. ಅಷ್ಟರೊಳಗೇ ನನಗೆ ವಾಸಿಯಾಯಿತು.

"ಪೆರೂನಾವು ತುಂಬಾ ಬಲಕಾರಿಯಾದ ಔಷಧವೆಂದು ನಾನು ಯೋಚಿಸುತ್ತೇನೆ. ಕೃಶ್ಯರೋಗಗಳಿಂದ ಪೀಡಿತರಾದವರೆಲ್ಲಾ ಪೆರೂನಾವನ್ನೇ ಸೇವಿಸಲೆಂದು ಹೇಳುವೆನು."

ಶೀತದಿಂದ ಹುಟ್ಟುವ ಜ್ವರವು.

ಮಿಸೆಸ್. ಡಬ್ಲ್ಯು. ಜೆ. ಗುಡ್, ಬ್ರಾಡ್ ವೇ, ವಾ ಇವರು ಬರೆಯುತ್ತಾರೆ:—

"ನನಗೆ ೧೫ನೇ ವಯಸ್ಸಿನಲ್ಲಿ ಶೀತಜ್ವರ ಬಂದಿತು. ಮತ್ತು ಬರುತ್ತಾ ವರುಷಗಳಿಂದಲೂ ನನ್ನ ನೆತ್ತಿಗೆ ಶೀತಹಿಡಿದು ಕಾಣಿಸಿಕೊಂಡಿತು.

"ಅಲ್ಪ್ರಮಾಣದ್ದರಿಂದ ಆದು ಗಂಟ್ಲಿಗೂ ಮೂಗಿಗೂ ವ್ಯಾಪಿಸಿತು. ನಿತ್ಯ ಬಳಗ ಬಂದು ಪರೀಕ್ಷೆ ಮಾಡಿಸಿಕೊಂಡ ಮೇಲೆ ನೀವು ಹೇಳಿದ ರೀತಿ ನಾಲ್ಕು ತಿಂಗಳ ವರೆಗೆ ಪೆರೂನಾವನ್ನು ಸೇವಿಸಿದೆನು. ಈಗ ನಾನು ಚನ್ನಾಗಿಯೂ ಆರೋಗ್ಯದಿಂದಲೂ ಇದ್ದೇನೆ.

"ನಾನು ಪೆರೂನಾವನ್ನು ಅಷ್ಟಿಷ್ಟು ಹೊಗಳಲಾರೆನು, ಎಷ್ಟು ಹೊಗಳಿದರೂ ಸ್ವಲ್ಪವೇ. ಅದರಿಂದ ಏನೇನು ಆಗುವದೆಂದು ಹೇಳಲ್ಪಟ್ಟಿದೆಯೋ ಅದೆಲ್ಲಾ ಖಂಡಿತವಾಗಿ ನೆರವೇರುತ್ತದೆ."

ಪೆರೂನಾ ಶೀತವನ್ನು ನಿವಾರಣೆ ಮಾಡುತ್ತದೆ.

ಜೆ॥ ಎಲ್. ಕ್ಲಿಫರ್ಡ್ ಕ್ರಿಗ್, ಜರ್, ೨೯೨೯ ಇ. ಮಾರ್ಷಲ್ ಬೀದಿ, ರಿಚ್ ಮಂಡ್ ವಾ ಇವರು ಬರೆಯುವದು:—

"ನನಗೆ ಶೀತವಾದ ಒಡನೆಯೇ ಪೆರೂನಾವನ್ನು ತರಿಸಿಕೊಳ್ಳುತ್ತೇನೆ. ಅದನ್ನು ಸೇವಿಸಿದ ಕೂಡಲೇ ಶೀತವು ಬಿಟ್ಟುಹೋಗುತ್ತದೆ.

ವಾಸಿಯಾಗದೆಂಬ ನಿರಾಶೆಯು.

"ಕೆಲವು ವಾರಗಳ ತನಕ ನಾನು ಚನ್ನಾಗಿ ಸುಖವಾಗಿರಲಿಲ್ಲ. ವಾಸಿಯಾದೀತೋ ಇಲ್ಲವೋ ಎಂದು ನಿರಾಶೆಯುಂಟಾಗಿತ್ತು. ಯಾಕೆಂದರೆ ನನ್ನ ಸ್ನೇಹಿತರು ಹೇಳಿದಂಥಾ ನಾನಾ ಔಷಧಗಳನ್ನು ಸೇವನೆ ಮಾಡಿದೆನು. ಎ ಮ ಮರುಷಗಳ ತನಕ ಔಷಧಗಳನ್ನು ಸೇವಿಸುತ್ತಾ ಬಂದಾಗ್ಯೂ ನನಗೆ ಸ್ವಲ್ಪವೂ ಗುಣತೋರಲಿಲ್ಲ.

ಕಡೇ ಪರಿಹಾರವು

"ಕಡೆಗೆ ಪೆರೂನಾ ತರಿಸಿ ಕೊಡುಕೊಳ್ಳಲಾರಂಭಿಸಿದೆನು. ಸ್ವಲ್ಪ ದಿನಗಳಲ್ಲೇ ನನಗೆ ಸಂಪೂರ್ಣವಾಗಿ ವಾಸಿಯಾಯಿತೆಂದು ಬಹು ಸಂತೋಷದಿಂದ ಹೇಳುತ್ತೇನೆ.

"ಈಗ ಒಂದು … ನನಗೆ ಅದರ ಬಾಧೆಯೇನೂ ಇಲ್ಲ … ನನ್ನ ಅಪಾರವಾದ ಕಷ್ಟವನ್ನು ನಿವಾರಣೆ … ಟ್ಟಿದ್ದರಿಂದ ಅದನ್ನು ಬಹು … ಕೊಳ್ಳುತ್ತೇನೆ."

ಪೆರೂನಾ ಕಾಣಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ — ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು; ಅಥವಾ,

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೧೫ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

3—1—1908 ರಿಂದ 10—1—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	31	24	0	0
ಮೈಸೂರು ,,	25	22	0	[illegible]
ಬೆಂಗಳೂರು ಡಿಸ್ಟ್ರಿಕ್ಟ	0	0	0	[illegible]
ಮೈಸೂರು ,,	150	111	0	[illegible]
ಕೋಲಾರ್ ,,	36	27	0	[illegible]
ಕೋಲಾರ್ ಚಿನ್ನದ ಗಣಿಗಳು.	24	19	0	[illegible]
ತುಮಕೂರು ಡಿಸ್ಟ್ರಿಕ್ಟ್	22	8	0	[illegible]
ಹಾಸನ ,,	13	9	8	[illegible]
ಚಿತ್ರದುರ್ಗ ,,	8	8	0	0
ಕಡೂರ್ ,,	15	9	4	[illegible]
ಶಿವಮೊಗ್ಗ ,,	0	0	0	0
ಒಟ್ಟು	324	247	12	[illegible]

ಶಾಲಿವಾಹನ ಶಕ ವರುಷಂಗಳು ೧೮೨೦ ನೇ ಪ್ಲವಂಗನಾಮ ಸಂವತ್ಸರದ ಪುಷ್ಯ ಬಹುಳ ಪಂಚಮಿ ಗುರುವಾರದಿಂದ ಪುಷ್ಯ ಬಹುಳ ಏಕಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೮ನೇ ಜನವರಿ.

ತಾ	ವಾರ	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	[illegible]
23	ಗುರು	* ಪಂಚಮಿ	19 36	ಉ	49 19	10
24	ಶುಕ್ರ	ಷಷ್ಠಿ	50 49	ಹ	52.9	11
25	ಶನಿವಾ	. ಸಪ್ತಮಿ	51.2	ಚಿ	53 52	12
26	ರವಿವಾ	ಅಷ್ಟಮಿ	50.15	ಸ್ವಾ	54 4	13
27	ಚಂದ್ರ	] ನವಮಿ	17 56	–	53 23	14
28	ಕುಜ	ದಶಮಿ	11 14	ವಿ	51.52	15
29	ಬುಧ	‡ ಏಕಾದಶಿ	10 38	ಅ	49.20	16

* ಶುಭ ಗ್ರಹಣಯೋಗ

. ವಿಷ್ಣುಕ್ರಮ.

, ಮಾತಾಭಾವ

‡ ಸರ್ವತ್ರ ಏಕಾದಶಿ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಪ್ಪೇ ಅಕ್ಕಿ ಪಲ್ಲಾ ೧ಕ್ಕೆ	ರೂ	೧೩ ೦-೦	೧೩-೮
ಕಂಬಾಳಿ ಅಕ್ಕಿ ಅವಲ್		೧೩-೮ ೦	೧೩-೮
,, ಸಣ್ಣ		೧೩-೦-೦	೧೩-೪
ಕಾಚಾಪ್ರಿ ಅಕ್ಕಿ		೧೩-೦-೦	೧೩-೦
ಸಣ್ಣಕ್ಕಿ ಅವಲ್		೧೫-೮ ೦	೧೫-೦
,, ದೊಡ್ಡ		೧೫ ೦-೦	೧೫-೦
ತೊಗರಿ ಬೇಳೆ ಪಲ್ಲಾ ೧ಕ್ಕೆ		೧೩-೮-೦	೧೫-೦
,, ದುಂಡು		೧೨ ೮-೦	೧೪-೮
ಜೋಳ ರಾಗಿ ಪಲ್ಲಾ ೧ಕ್ಕೆ		೩-೪-೦	೩ ೦೨
ಕಾರ್ರಾಗಿ		೩ ೦-೦	೩ ೮
ಜೋಳ		೩ ೦-೦	೩-೮
ಹಲಸಂದೆ ಪಲ್ಲಾ ೧ಕ್ಕೆ		೧೦ ೮-೦	೧೦ ೦
ಬಿಳೀ ಅವರೆ		೮-೧೪ ೦	೮-೦
ಹೆಸರು		೧೦ ೮-೦	೧೨ ೦
ಉದ್ದು		೧೩ ೦-೦	೧೨ ೦
ಕಡಲೆ		೧೪-೮-೦	೧೩ ೦
ಎಳ್ಳು ಸೆ ೧ಾ ೬ಕ್ಕೆ		೨೪-೮-೦	೨೩-೦
ಹುರುಳಿ		೫ ೮-೦	೩-೦
ಸರಳೆ ೧ ೦೩ ಸೇರಿಗೆ		೧೨-೦ ೩	೦-೨-೮
ಸೀಗೇಕಾಯಿ ಮಣ ೧ಕ್ಕೆ		೨ ೮ ೦	೨ ೦
ಮೆಣಸಿನಕಾಯಿ		೨-೮ ೦	೨ ೮
ದುಂಡು		೨-೪ ೦	೨ ೬
ಬೆಲ್ಲ ದೊಡ್ಡ ಅಚ್ಚು		೫ ೦-೦	ಮ ೨-೧
ಒಳ್ಳೆಣ್ಣೆ ಮಣ ೧ಕ್ಕೆ		೩-೯ ೦	೩-೦
ಹರಳೆಣ್ಣೆ ,,		೪-೧೨-೦	೪ ೮
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೦ ೦	೩ ೪
ಉಪ್ಪು ,,		೫-೦-೦	೭ ೮
ಹೊಗೆಸೊಪ್ಪು		೨-೮-೧	೨ ೦
,, ಹಳೇದು		೧-೮	೧ ೨೪
ತುಪ್ಪ ಮಣ ೧ಕ್ಕೆ		೧೩-೦ ೦	೧೫ ೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ		೪-೧೫-೨	೪ ೬
ತೆಂಗಿನಕಾಯಿ ೧೦೦ ಕ್ಕೆ		೩-೮-೦	೨ ೮
ಅರಳೇಕಾಯಿ ಮಣ ೧ಕ್ಕೆ		೧-೦-೦	೧-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨-೦	೦-೧೨
ಚಿನ್ನ (ಪೌನ್) ಒಂದು		೧೫-೩-೦	೧೫ ೫
,, ,, ಪವನು		೧೫-೧೦-೦	೧೫-೩
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೪ ೯
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೩೫-೦-೦	೩೦-೦

Printed and Published by the Rev. E W. Thompson, M. A., Proprietor and Manager, Wesleyan Mission Press, Mysore. 23/1/1908.

REGISTERED
M 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸರ್ ೧೯೦೮ ನೇ ಇಸವಿ ಜನವರಿ ತಾರೀಖು ೩೦ ನೇ ಗುರುವಾರ. ಸಂಚಿಕೆ ೩೫

ಮಹಾ ಬಾಧಾಪಹಾರಿಣಿಯು

68 JI

ಇದನ್ನು ಕೇಳ ಪದು ಪ್ರಪಂಚದಲ್ಲಿ ಇಲ್ಲವು

ಕ್ಷಿಪೆಂಟ್‌ನ ವಿ ಯ ಕ್ಷೇತ್ರ ಲೇಪನವು ಸಕಲ ವಿಧವಾದ ಬಾಧೆ ಗಳನ್ನು ಪರಿಹರಿಸತಕ್ಕದ್ದೆಂದು ಡಾಕ್ಟರುಗಳು ಸರ್ಜರು, ಶಾಸ್ತ್ರಜ್ಞರು ಮೊದಲಾದ ಅನೇಕರು ಒಪ್ಪಿ ಹೇಳುತ್ತಿದಾರೆ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು ವಾಯುನೋವು, ಕಿವಿ ಗಂಟಲು ನೋವು, ಹಲ್ಲು ನೋವು, ನಾನಾವಿಧ ವಾಯುರೋಗಗಳು ಕೀಲುರೋಗಗಳು, ಬೆನ್ನುನೋವು, ಕೀಲುಗಳ ಮತ್ತು ಕಟ್ಟುಗಳ ನೋವು ಚೇಳು ಕಡಿದ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಕಟ್ಟುವ ನೋವುಗಳೂ ಬಂದಿಕ ನಿವಾರಣೆಯಾಗುತ್ತವೆ ಈ ಪೆಂಟ್‌ನ ವ ಲವು ಪೋಷಿಸ ಸ್ಥಳದ ಕಲಸ್ಯನ ಪ್ರಖ್ಯಾತ ಜನರು ಟ್ಟನ್ನು ಉಪಯೋಗಿಸಿಬಿಟ್ಟ ವೈದ್ಯರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದ ಹೇಳಿರುತ್ತಾರೆ

ಕ್ರಯ ಸೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ಒಟ್ಟಾಗಿ ಡಜನ್ ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಖರ್ಚು ಮಾತ್ರ ವರ್ತಕರು ವ್ಯಾಪಾರಸ್ಥರಿಗೆ ವಿಶೇಷ ಡಜನ್ ಬಾಟ್ಲು ಒಂದೆ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಕೊಡುತ್ತೇವೆ ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಳಕೆ ಮಾಡುತ್ತಾರೆ ಮಾರಾಟದ ವಿಳಾಸ—

ಎಸ್ ಡಬ್ಲ್ಯು ಚರ—

೨ ನೇ ರೋಡು ವೇಪೇರಿ ಮದರಾಸ್

ಇಲ್ಲಿ ನೋಡಿ!

8

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ ಯ ಹರೋಹಳ್ಳಿ ಮಠ ಮೋಹನದಾಸರಿಂದ ಉತ್ತಮ ತರಹದ ಹಾಸಿನ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ

ಕ್ರಯ —೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯ ವರೆಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಕೇಳಿದ ಪ್ರಕಾರ ಡಿಸ್ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ —ಮೋಹನದಾಸ

ಹುಲಿನಾಡ ಬೀದಿ ಕುಣಿಗಲ್ ಡಿಸ್ಟ್ರಿಕ್ಟ್ ಇಲಾಖೆ ತುಮಕೂರು

ಈಗಲೇ ಸೀಮೆಯಿಂದ ಬಂದಿದೆ.

11 11

೫೦೦ ಜೊತೆ ಟೋಪಿ ಹೊಲಿಯುವ ಸುಂದರವಾದ ಉಲ್ ದಾರಗಳು ಬಿಷಪ್ ನೀರು—ಮೂರು ಇದೆ ರೂ, ಕನ್ನಡ ಕ್ರಯ

೧ ಟೋಪಿಯಾಗುವ ಉಲ್ ದಾರಕ್ಕೆ	೦—೮—೦
೧೦ ಟೋಪಿಯಾಗುವ ಬಂಡಲ್‌ಗೆ ೧ ಕ್ಕೆ	೩—೮—೦
ಸೂಜಿ ೧ ಕ್ಕೆ	೦—೧—೬
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೦

ಖರೀದಿ ಕಾಗದದಲ್ಲಿ ಬರೆಯುವ ಫ್ರೀ ಪೋಸ್ಟ್ ಕಾರ್ಡ್ ೧೦೦ ಕ್ಕೆ ೪ ಆ ಣೆ ಡಜನ್ ಕ್ಯಾಲೆಂಡರ್ ಗಳ ಹಿಸಿನ ಶ್ರೀನಂದಕರದ ೧೯೦೮ ನೆ ಇಸವಿಯ ಕ್ಯಾಲೆಂಡರ್ ಪಡೆಯಿರಿ ವಿಳಾಸ —

ಪ್ರೊಪ್ರೈಟರ್ ದ ರಾಜ ಮಾರ್ಕೆಟ್ ಮಂಗಳೂರು

ಹೊಸ ವರ್ಷದ ಬಹುಮಾನಗಳು

136 7

ಈ ಕೆಳಗೆ ಕಂಡ ಪುಸ್ತಕಗಳಲ್ಲಿ ಒಂದು ರೂಪಾಯಿನ ಬೆಲೆ ಯುಳ್ಳ ಪುಸ್ತಕಗಳನ್ನು ಕೊಂಡುಕೊಳ್ಳುವವರಿಗೆ ೪ ಆಣೆಯ ಸೀತಾಚರಿತೆಯು ೧ನೇ ಭಾಗ, ೩ ಆಣೆಯ ಸ್ತೋತ್ರಮಾಲಿಕೆ ೨ ಆಣೆಯ ಶೃಂಗಾರಶತಕ ಇವುಗಳಲ್ಲದೆ ಪ್ರತಿ ನಾಲ್ಕಾಣೆಗೂ ಒಂದೊಂದು ಟಿಕೆಟ್ಟನ್ನು ಕೊಡುತ್ತೇವೆ ೨೦೦೦ ಟಿಕೆಟ್ಟುಗಳಾದೊಡನೆಯೇ ೧೦೦ ರೂಪಾಯಿನ ಬಹುಮಾನಗಳನ್ನು ಹಂಚುತ್ತೇವೆ ೧ನೇ ಬಹುಮಾನ ೨೫ ರೂಪಾಯಿ, ೨ನೇದು ೨೦ ರೂಪಾಯಿ ೩ನೇದು ೧೨ ರೂಪಾಯಿ ೪ನೇ ನೇರೂಪಾಯಿನ್ನೈದು ಬಹುಮಾನ ೫ ನೇದು ೩ ರೂಪಾಯಿ ನೂರು ಬಹುಮಾನ ಒಟ್ಟು ೧೪೫ ಬಹುಮಾನಗಳು

ಬಿ ವೆಂಕಟಚಾರ್ಯರ ಗ್ರಂಥಗಳು — ಕೋಹಿನೂರು ೧೨ ಆಣೆ, ಮಾಲತಿ ೨॥ ಆಣೆ ಅತ್ತಿಗೆ ೩ ಆಣೆ ಇಂದಿರಾ ೪ ಆಣೆ, ರಂಭಾರಾಣಿ ೩ ಆಣೆ ಒಲಿಸ್ಥನಾದ ವನೆಯ ಳಿಯು ೧॥ ಆಣೆ, ವೆನಿಸ್ ದೇಶದ ವರ್ತಕ ೧॥ ಆಣೆ ಕ್ಷತ್ರಿಯರ ವಂಶ ೨ ಆಣೆ

ಪಂಡಿತ ಎಸ್ ಶ್ರೀಕಂಠಶಾಸ್ತ್ರಿಗಳ ನವೀನ ನಾಟಕ ಗ್ರಂಥಗಳು — ನಿರುಪಮಾ ೨ ಆಣೆ ಪ್ರಿಯದರ್ಶಿಕೆ ೬ ಆಣೆ ಕೃಷ್ಣವಿಜಯ ೬ ಆಣೆ ಸೀತಾಚರಿತ್ರೆ ೮ ಆಣೆ ಸತ್ಯವತೀಚರಿತ್ರೆ ೪ ಆಣೆ, ಉತ್ತರಸೀತಾಚರಿತ್ರೆ ೨ ಆಣೆ ಮಾಲತೀಮಾಧವ ೬ ಆಣೆ

ನಮ್ಮ ವಿಳಾಸ ನಿಮ್ಮ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ

ದಿ ಜನರಲ್ ಏಜನ್ಸಿ ಲಕ್ಷ್ಮೀ ವಿಲಾಸ ರೋಡ್, ಮೈಸೂರು

ಪ್ರಸಿದ್ಧವಾದ "ಪಾಫ್" ಹೊಲಿಯುವ ಯಂತ್ರಗಳು

RENOWNED "PFAFF" SEWING MACHINES.

ಪಾಫ್ ಹೊಲಿಯುವ ಯಂತ್ರವು ಮಹಾ ಬಲಿಷ್ಠವಾದದ್ದು ಬಹು ಗಟ್ಟಿಯಾದದ್ದು ಅಪಾರ ಸಾಮರ್ಥ್ಯವುಳ್ಳದ್ದು ವಿಶೇಷ ಬಾಳಿಕೆ ಬರುವಂಥಾದ್ದು ಮನೆಯ ಕೆಲಸಕ್ಕೂ ಕಸಬುದಾರರ ಕೆಲಸಕ್ಕೂ ಉಪಯುಕ್ತವಾಗಿವೆ

ಬೇಕಾಗಿದೆ ಈ ಯಂತ್ರಗಳ ಮಾರಾಟಕ್ಕೆ ಏಜಂಟರುಗಳು ದಯಮಾಡಿ ಜಿಲ್ಲೆಗಳಲ್ಲಿಯೂ ನೇಮಿಸಿಕೊಳ್ಳತಕ್ಕವರ ಮನ ಗಳ ಬಗ್ಗೆ ಮೈಸೂರು ಸಂಸ್ಥಾನ ಹೊರಗಿನ ಸೀಮೆ ಬೆಂಗಳೂರು ಕೊಟ್ಟು ಸ ಈ ಪ್ರಾಂತ್ಯಗಳಲ್ಲಿ ಬೇಕಾಗಿದೆ



ಈ ಯಂತ್ರದಿಂದ ಉಂಟಾಗು ವಷ್ಟು ಪ್ರಯೋಜನ ಅನ್ಯಾವ ಯಂತ್ರದಿಂದಲೂ ಆಗುವದಿಲ್ಲ ಆದ್ದರಿಂದಲೆ ಈ ಹೊಲಿಯುವ ಯಂತ್ರಗಳು ಜಗತ್ತಿನಲ್ಲೆಲ್ಲಾ ಪ್ರಖ್ಯಾತಿಹೊಂದಿ ಎಲ್ಲೆಲ್ಲೂ ಜನರು ವಿಶೇಷವಾಗಿ ಇವುಗಳನ್ನೇ ಉಪಯೋಗಿಸುತ್ತಾರೆ ಬಗ್ಗೆ ಬರೆದು ತಿಳಿ LONG LIVE

ಈ ಯಂತ್ರಗಳ ಕ್ರಯ ಮುಂತಾದ ವಿಶೇಷ ತರಹೆಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕು

The Commission and General Agency

SOLE AGENTS SHIMOGA

ಕಮಿಷನ್ ಮತ್ತು ಜನರಲ್ ಏಜನ್ಸಿ ಕಂಪನಿ,

ಸೋಲ್ ಏಜಂಟರು, ಶಿವಮೊಗ್ಗಾ.

ಸೂಚನೆ —ಈಗ ತಾನೆ ಎಕ್ಸ್‌ಚೇಂಜ್ ಎಂಬ ಹಡಗಿನ ಮುಖಾಂತರ ಜಹಜುಗಳಲ್ಲಿ ಹೊಸ ಯಂತ್ರಗಳು ಬಹಳ ಬಂದು ಇರುತ್ತವೆ ಬೇಕಾದವರು ಬಂದು ಖುದ್ದು ನೋಡಬಹುದು.

ಹಣಕ್ಕೆ ನಷ್ಟವಿಲ್ಲ! ಸಾಮಾನಕ್ಕೆ ಕೆಡುಕಿಲ್ಲ!!!

ಈಗಲೇ ವಿಲಾಯತಿಯಿಂದ ಬಂದವೆ.

೯ ಕ್ಯಾರಟ್ ಚಿನ್ನದ ಉಂಗುರಗಳು.

ಇವರ ಬಣ್ಣವು, ಕೆಲಸವು ನೋಡುವುದಕ್ಕೆ ಮನೋರಂಜಕವಾಗಿರುತ್ತವೆ.



ಇಲ್ಲಿ ಮಾಡುವುದಾದರೆ ಕೂಲಿ ಮಾತ್ರ ರೂ. ೫ ಕೊಡಬೇಕು ಕೊಟ್ಟರು ಮಾಡುವದು ಕಷ್ಟ. ಬೇಕಾದವರು ಒಂದು ಉಂಗುರವನ್ನು ತರಿಸಿಕೊಂಡು ಪರೀಕ್ಷಿಸಿರಿ. ಎರಡುತಲೆ ಹಾವಿನ ಉಂಗುರ ತಲೆಗಳಲ್ಲಿ ಕೆಂಪು ಡೈಮಂಡ್ ಇಟ್ಟಿರುವದು ಉಂಗುರ ೧ಕ್ಕೆ ಕ್ರಯ ವಿ. ಪಿ. ಸಹಿತ ರೂ. ೫—೭—೦ ಕೆಂಪು ಡೈಮಂಡ್ ಇದಲ್ಲದೆ ಎರಡು ತಲೆ ಹಾವಿನ ಉಂಗುರ ೧ಕ್ಕೆ ಕ್ರಯ ವಿ. ಪಿ. ಸೇರಿ ರೂ. ೬—೭—೦ ೨ನೇ ನಕ್ಷೆಯಲ್ಲಿ ಕಾಣಿಸುವ ನಮೂನೆ ಉಂಗುರ ೧ಕ್ಕೆ ಕ್ರಯ ವಿ. ಪಿ. ಸೇರಿ ರೂ. ೭—೭—೦ ಉಂಗುರ ಬೆರಳಿನ ಅಳತೆ ಕಳುಹಿರಿ [8-3]

ರಾಸ್ಕೋಪ ಸಿಸ್ಟಂ ವಾಚ್.—ಈ ಗಡಿಯಾರ ಬಹಳ ಬಲವಾದದ್ದು. ಬಹಳ ಬಾಳಿಕೆ ಬರುವದು ಕಾಲಕ್ಕೆ ಸರಿಯಾಗಿ ೩೦ ಘಂಟೆ ನಡಿಯುವದು ಹಿಂದೆ ಎರಡು ಸಾರೆ ಪರೀಕ್ಷೆಯಿಂದ ಸರಿಮಾಡಿದ್ದು ಒಂದು ಸೊಗಸಾದ ಪೆಟ್ಟಿಗೆಯಲ್ಲಿಟ್ಟು ೫ ವರ್ಷದ ಗ್ಯಾರಂಟಿ ರಸೀದು ಸಹಿತ ಕಳುಹಿಸಲ್ಪಡುವದು ೧ಕ್ಕೆ ಕ್ರಯ ವಿ. ಪಿ. ಸೇರಿ ರೂ. ೬—೭—೦



ಗಡಿಯಾರದ ಸರಪಣಿಗಳು ಅವ್ಯೋರ ಸಿಲ್ವರ್ ಎಂಬುವ ಉತ್ತಮ ಬೆಳ್ಳಿಯಿಂದ ಮಾಡಲ್ಪಟ್ಟವು ಎಂದಿಗೂ ಕಪ್ಪು ಆಗುವದೇ ಇಲ್ಲ. ಶುದ್ಧ ಬೆಳ್ಳಿಯಂತೆಯೇ ಇರುತ್ತವೆ ಇಂಗ್ಲೀಷು ನಮೂನೆಗಳು ನೋಡುವದಕ್ಕೆ ಮನೋರಂಜಕವಾಗಿರುತ್ತವೆ ೧ಕ್ಕೆ ಕ್ರಯ ವಿ. ಪಿ. ಸೇರಿ ರೂ. ೧—೭—೦

ಟಿ. ಸಿ. ಸುಗಂಧ ನಶ್ಯದಪುಡಿ ಉತ್ಪಾದಕರಿಂದ ಸಮಸ್ತ ನಶ್ಯರ ಉಪಯೋಗಾರ್ಥಕ್ಕೆ ಅರ್ಪಣವಾಗಿದೆ ಈಚಿಗೆ ಇದರಲ್ಲಿ ಸುಧಾರಣೆಮಾಡಿರುವಕಾರಣ ಯೂರೋಪ್ ದೇಶೀಯರನ್ನು ಸಹ ಮಾಕೋ ಪಟ್ಟಿಯ ಅಭ್ಯಾಸವನ್ನು ಬಿಡಿಸಿ ಆಕರ್ಷಣೆ ಮಾಡಿದೆ ಈ ನಶ್ಯ ಉಪಯೋಗಿಸುವದರಿಂದ ಪೀನಾಸಿ, ಅರೆತಲೆನೋವು, ತಲೆನೋವು, ನೇತ್ರವ್ಯಾಧಿ, ಜಲದೋಷ, ಶೀತವೇ ಮೊದಲಾದ ೯೬ ವ್ಯಾಧಿಗಳನ್ನು ನಾಶಪಡಿಸುವದು. ಸ್ಮರಣಶಕ್ತಿ ಮೇಧಾಶಕ್ತಿಯನ್ನುಂಟುಮಾಡುವದು. ಯಾವಾಗಲೂ ತಲೆ ಲಘುವಾಗಿ ತಂಪಾಗಿ ಇದ್ದೀತು ಮನಸ್ಸಿಗೆ ಉಲ್ಲಾಸವನ್ನೂ, ಉದ್ಯೋಗದಲ್ಲಿ ಉತ್ಸುಕತೆಯನ್ನೂ ಉಂಟುಮಾಡುವದು ಅನೇಕ ವ್ಯಾಧಿಗಳನ್ನು ಧ್ವಂಸ ಮಾಡುವ ಅಮೋಘವಾದ ಔಷಧರೂಪಿನ ನಶ್ಯವನ್ನು ಈ ವರಿಗೂ ಜಗತ್ತಿನಲ್ಲಿ ಯಾರೂ ನೋಡಿ ಕೇಳಿರಲಾರರು. ಈ ನಶ್ಯವನ್ನು ನಿರಂತರ ಯಾರು ಉಪಯೋಗಿಸುವರೋ ಅವರಿಗೆ ಮೇಲ್ಕಂಡ ವ್ಯಾಧಿಗಳ ಸ್ಪರ್ಶ ಒಂದಾದರೂ ಸಮೀಪಕ್ಕೂ ಬರಲಾರದು ದಿನಕ್ಕೆ ೨೪ ಘಂಟೆ ಸ್ಪರ್ಶ ನಿದ್ರಾಕಾಲವಿನಃ ಉಳಿದ ಕಾಲದಲ್ಲೆಲ್ಲಾ ೨ ಅಥವಾ ೩ ಆವರ್ತಿ ಈ ನಶ್ಯವನ್ನು ಉಪಯೋಗಿಸಿದ ಮಾತ್ರಕ್ಕೆ ತೃಪ್ತಿಯಾಗುವದು ಇದರಿಂದ ತಿಂಗಳು ಅಥವಾ ವರ್ಷದ ಒಟ್ಟು ಖರ್ಚಿನಲ್ಲಿ ಎಷ್ಟು ಖರ್ಚಾಗುವದೋ ಆ ಭೋಗಿಗಳೇ ಸಾಕ್ಷಿ ಹೇಳುವರು. ಇತರ ನಶ್ಯಕ್ಕೆ ಈ ಸುಗಂಧ ನಶ್ಯದ ಪುಡಿ ಒಂದು ಚಿಟುಕೆ ಮಿಶ್ರ ಮಾಡಿದ ಮಾತ್ರಕ್ಕೆ ಇದರ ಗುಣವು ಆ ನಶ್ಯದೊಳಗೆ ವ್ಯಾಪಿಸುವದು ಯಾವಾಗಲೂ ಅಭ್ಯಾಸೋಜ್ಞಾನವು ಅಂದರೆ ಚಂದ್ರ ಸೂರ್ಯ ಈಡಾಪಿಂಗಳ ಎಂಬ ನಾಡಿಯು ಸಮವಾಗಿ ನಡಿಯುವಂತೆ ಈ ನಶ್ಯವು ಮಾಡುವದರಿಂದ ಯೋಗಾಭ್ಯಾಸದ ಶ್ರಮವನ್ನು, ಕಣ್ಣಿ ಪ್ರಶ್ನೆ ಕೇಳಬೇಕೆಂಬ ಭ್ರಮಾಕ ಬುದ್ಧಿಯನ್ನು ಸಹ ನಾಶ ಮಾಡೀತು. ಕ್ರಯ ವಿ. ಪಿ. ಸೇರಿ ಡಬ್ಬಿ ೧ಕ್ಕೆ ೩ ಆಣೆ ೧೨ ಡಬ್ಬಿಗಳಿಗೆ ೨—೧೪—೦ ಸೇರಿಗೆ (೨೪ ರೂ. ತೂಕ) ರೂ. ೨—೧೨—೦

ಬಹುಮಾನ! ಬಹುಮಾನ!! ಬಹುಮಾನ!!!

(೧) ಎರಡು ಡಜನ್ ಡಬ್ಬಿಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಸೊಗಸಾದ ಟೈಂಪೀಸು (ಗಡಿಯಾರವನ್ನು) ಬಹುಮಾನವಾಗಿ ಕಳುಹಿಸುವೆವು (೨) ಮೂರು ಡಜನ್ ಡಬ್ಬಿಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಅವರ ವಿಳಾಸದ ರಬ್ಬರ್ ಸ್ಟಾಂಪನ್ನು ತಯಾರುಮಾಡಿ, ಸೊಗಸಾದ ಪೆಟ್ಟಿಗೆ, ಪ್ಯಾಡು, ಇಂಕ್ ಬಾಟಲು ಬ್ರಷ್ ಸಹಿತ ಕಳುಹಿಸುವೆವು (೩) ನಾಲ್ಕು ಡಜನ್ ಡಬ್ಬಿಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಉತ್ತಮವಾದ ಲೀವರ್ ವಾಚನ್ನು ಕಳುಹಿಸುವೆವು.

ಸೂಚನೆ:—(೧) ಎರಡು ಡಜನ್, ಮೂರು ಡಜನ್ ಡಬ್ಬಿಗಳನ್ನು ತರಿಸಿಕೊಂಡು ಬಹುಮಾನ ಪಡೆಯತಕ್ಕವರು ಮುಂಚಿತವಾಗಿ ಅಡ್ವಾನ್ಸು ೪ ಆಣೆ ಪೋಸ್ಟೇಜು ಸ್ಟಾಂಪು ಕಳುಹಿಸಬೇಕು ಇಲ್ಲದಿದ್ದರೆ ಬಹುಮಾನವು, ಸಾಮಾನೂ ಖಂಡಿತ ಕಳುಹಿಸಲ್ಪಡಲಾಗದು (೨) ನಾಲ್ಕು ಡಜನ್ ಡಬ್ಬಿಗಳನ್ನು ತರಿಸಿಕೊಂಡು ಒಂದು ಲೀವರ್ ವಾಚನ್ನು ಬಹುಮಾನ ಪಡೆಯತಕ್ಕವರು ಮುಂಚಿತವಾಗಿ ಅಡ್ವಾನ್ಸು ೧ ರೂ. ಕಳುಹಿಸಬೇಕು ಇಲ್ಲದಿದ್ದರೆ ಬಹುಮಾನವು ಸಾಮಾನೂ ಖಂಡಿತ ಕಳುಹಿಸಲ್ಪಡಲಾರವು ಮುಂಚಿತವಾಗಿ ಕಳುಹಿಸುವ ಹಣವನ್ನು ನಾವು ವಿ. ಪಿ. ಮಾಡುವಾಗ ವಜಾಮಾಡಿಕೊಳ್ಳುವೆವು. ಬಹು ಶೀಘ್ರದಲ್ಲಿ ತರಿಸಿಕೊಳ್ಳಿ. ಆಲಸ್ಯಮಾಡಿದರೆ ಬಹುಮಾನ ಸಿಕ್ಕಲಾರದು

ವಿಳಾಸ:—ಟಿ. ಸಿ. ಕನ್ನಯ್ಯಶೆಟ್ಟಿ ಅಂಡ್ ಸನ್.

ಜನರಲ್ ಮರ್ಚಂಟ್, ನಂ. ೨೦, ಸಿಂಗಣ್ಣನ ಬೀದಿ,

ಸಾಹುಕಾರಪೇಟೆ, ಮದರಾಸು.

CHAMBERLAIN'S PAIN BALM

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.



1-5

ಬೆನ್ನೆಲುಬಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಉಂಟಾಗುವ ನೋವು, ತಲೆನೋವು, ಬಚ್ಚಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುರೋಗವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವದು, ಕಠಿಣವಾಗಿ ಕಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡನೆ ಇರುವುದು, ನಿದ್ದೆ ಇಲ್ಲದೆ ಇರುವುದು—ಇವೇ ಅಥವಾ ನಿಮಗೆ ಯಾವಾಗ ಉಂಟಾಗುವುದೋ ಅಗ್ಗ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೈಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಉಪದ್ರವನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕ್ಷಯಿಂದ ಮುಟ್ಟಿದ್ದೇನೂ ಇಲ್ಲ

ಇದು ಎಲ್ಲೆಲ್ಲೂ ವಿಕ್ರಯಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ಮುಕ್ಕ್ಯಂಗನಾಕಂಠಮಾಲೆ ಮತ್ತು ಜ್ಯೋತಿರ್ಮಯಶಾಂಭವಿ

7-4

ಎಂಬೀ ಕನ್ನಡವಚನ ಗ್ರಂಥಗಳೆರಡೂ ಪ್ರೀಢವಾದ ವೇದಾಂತ ಸಿದ್ಧಾಂತಾರ್ಥವನ್ನು ಸುಲಭವಾಗಿ ಆಬಾಲವೃದ್ಧರಿಗೂ ಬೋಧಿಸತಕ್ಕವುಗಳಾಗಿವೆ ಪ್ರತಿಯೊಬ್ಬರೂ ನೋಡತಕ್ಕವುಗಳು ಅಂಚೆ ವೆಚ್ಚ ಸೇರಿ ಕ್ರಯ ೩ ಆಣೆ

ಬಿ. ಆರ್. ತಿಪ್ಪಯ್ಯಶಾಸ್ತ್ರಿ ಚಿಕ್ಕದಮರ

ಹಳೆ ಅಗ್ರಹಾರ ಮೈಸೂರು

ವ್ಯವಹಾರನಿರ್ಣಯ.

ಪುಟಗಳು ಕನ್ನಡದ ಲಾ ಪುಸ್ತಕವು ಕ್ರಯ ವಿ. ಪಿ.

೫೯೬ ದ್ವಿತೀಯಮುದ್ರಣ ಸೇರಿ ರೂ. ೨—೧—೦

ಈ ... ಮುದ್ರಣದಲ್ಲಿ ಭಾಗವೆಲ್ಲವೂ ಹೊಸದಾಗಿ ಬರೆಯಲ್ಪಟ್ಟು ವಿಸ್ತರಿಸಲ್ಪಟ್ಟಿದೆ ಹಿಂದೂ ಲಾ (ಸ್ಮೃತಿವಾಕ್ಯಗಳೊಡನೆ), ಮಾಮೂಲಿನ ಲಾ, ಪೀನಲ್ ಕೋಡು ಇವುಗಳು ವಿಶೇಷವಾಗಿ ವಿಸ್ತರಿಸಲ್ಪಟ್ಟಿವೆ ಮೈಸೂರು, ಮದರಾಸು, ಬೊಂಬಾಯಿ ನ್ಯಾಯಸ್ಥಾನಗಳ ತೀರ್ಮಾನಗಳ ಲಾ ನ್ಯಾಯಸ್ಥಾನದ ವಿಲೇವಾರಿ, ಅನಾಥರಕ್ಷಣೆ, ಕ್ರಿಮಿನಲ್ ಪ್ರೊಸೀಜರ್ ಈ ವಿಷಯಕವಾದ ಪ್ರಕರಣಗಳು ಹೊಸದಾಗಿ ಸೇರಿಸಲ್ಪಟ್ಟಿವೆ ೩೯ ಶಾಸನಗಳು, ಅನೇಕ ಮೂಲ ಗ್ರಂಥಗಳು, ಪ್ರೀವಿಕೌನ್ಸಿಲ್, ಚೀಫ್ ಕೋರ್ಟುಗಳ ತೀರ್ಮಾನಗಳು ಇವುಗಳಿಂದ ಸಂಗ್ರಹ ಮಾಡಲ್ಪಟ್ಟಿದೆ ಸಮಸ್ತ ವ್ಯವಹಾರಗಳನ್ನೊಳಗೊಂಡಿರುವ ೯೭ ವಿಧದ ದಸ್ತಾವೇಜ್ ನಮೂನೆಗಳೂ, ಲಾ ಪ್ರಕಾರ ಸಿವಿಲ್, ಕ್ರಿಮಿನಲ್ ಕೋರ್ಟುಗಳಿಗೂ, ಪೋಲೀಸಿಗೂ ಬರೆಯತಕ್ಕ ಅರ್ಜಿಗಳ ೪೯ ತರದ ನಮೂನೆಗಳೂ ಇದರಲ್ಲಿ ಅಡಗಿವೆ ಕಳೆದ ಮೂರು ತಿಂಗಳಲ್ಲಿ ಮುದ್ರಿಸಿದ್ದ ೧,೫೦೦ ಪ್ರತಿಗಳು ೩ ತಿಂಗಳಲ್ಲೇ ಖರ್ಚಾಗಿಹೋದದರಿಂದ ಇದರ ಉಪಯುಕ್ತತೆಯು ತಿಳಿದುಬಂದು ಪ್ರೋತ್ಸಾಹಕರಾದ ಸ್ನೇಹಿತರಂತೆ ಇದರ ಉಪಯುಕ್ತತೆಯನ್ನು ಮತ್ತಷ್ಟು ಹೆಚ್ಚು ಮಾಡಿದೆ ವಿಷಯಪರಿಮಾಣಾಧಿಕ್ಯ, ಸ್ಫುಟಾಕ್ಷರ, ಉತ್ತಮವಾದ ಕಾಗದ, ಬಟ್ಟೆಯ ಬೈಂಡ್ ಇವುಗಳಿಂದ ಕೂಡಿ ಈ ಸಲದ ಮುದ್ರಣವು ಬಹಳ ಪ್ರಶಸ್ತವಾಗಿದ್ದರೂ ಅನುಪನ್ನರಿಗೆ ಸುಲಭಗ್ರಾಹ್ಯವಾಗಲು ಮೊದಲನೆಯದಕ್ಕಿಂತಲೂ ಬೆಲೆಯಲ್ಲಿ ನಾಲ್ಕು ಆಣೆ ಮಾತ್ರ ಹೆಚ್ಚಿಸಿದೆ ಪುಸ್ತಕ ಅಪೇಕ್ಷಿಸುವವರು ಬರೆಯುವ

ವಿಳಾಸ ಗ್ರಂಥಕರ್ತರು ಸಿ. ಎಂ. ಮಲ್ಲಾರಾಧ್ಯರು,

ಸಸ್ಟ್ರೀಟ್ ಪ್ಲೀಡರ್ ಮೈಸೂರು

೧೮೯೩ ರಿಂದ ೧೯೦೩ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION

31-40

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವರ್ಷ ಶೋಧಿಸಿ ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಕ್ರಮಗಳು, ನಾನಾ ತರದ ಕೆಮ್ಮಲು,

ಸಕಲವಿಧ ಕೃಶತೆಗಳು ಮಾಂಸಖಂಡಗಳ ಕ್ಷೀಣತೆ



ಆಹಾರದಲ್ಲಿ ಅರುಚಿ

ಇದಲ್ಲದೆ ತಂಗೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕ್ರಯಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮನುಷ್ಯ ಇರುವ

ಔಷಧವನ್ನೇ ಕೊಂಡುಕೊಳ್ಳಿ

ಖಾತರಿ ಸಾಮಾನ್! ಹೊಸ ಬೂರ್ನೀಸ್. ಬೇಗ ತರಿಸಿ!!

123-11

ಶುದ್ಧ ಉತ್ತಮ ಉಣ್ಣೆಯ ದಪ್ಪವಾದ "ಬ್ಲಾಂಕೇಟ್" ಎಂಬ ಹೊಸ ನಮೂನೆ ಬನಾತವು ಎಷ್ಟೇ ಕ್ರೂರವಾದ ಚಳಿಯನ್ನಾದರೂ ದೂರಕ್ಕೆ ಓಡಿಸಿ ಮೈಗೆ ಬೇಕಾದ ಕಾವನ್ನೀಯುತ್ತೆ ಸುಖವಾದ ಹೊದ್ದಿಕೆ! ಅತಿರಮ್ಯ! ಉದ್ದ ೯೦ ಅಂಗುಲ, ಅಗಲ ೬೪ ಅಂಗುಲ ಕ್ರಯ ರೂ. ೩, ಎರಡನೆಯ ತರಹ ರೂ. ೪ (ಶುದ್ಧ ಉಣ್ಣೆ)

ಪುದುಚ್ಚೇರಿ ರೇಷ್ಮೆ ವಸ್ತ್ರಗಳು. ರೂ. ೪!!

ಅಂಚು, ಕೊನೆಗಳಲ್ಲಿ ಬೆಳ್ಳಿಗೂ ಜರಿಗಳಿಂದಲೂ ಕೂಡಿ ಮಧ್ಯದಲ್ಲಿ ಕೆಂಪಾಗಿ ಹೊಸ ಸೊಗಸಾದ ನಮೂನೆ ಪುದುಚ್ಚೇರಿ ರೇಷ್ಮೆ ವಸ್ತ್ರಗಳು ಹೊದಿಯಲು ಯೋಗ್ಯವಾಗಿ ಬದಲಾಯಿಸದ ಗಟ್ಟಿ ಬಣ್ಣದ್ದಾಗಿ ೩ ಮೊಳ ಅಗಲವಿದೆ ಒಂದು ತರಿಸಿ ಉಪಯೋಗಿಸಿ ನಿದರ್ಶನ ತಿಳಿಯಿರಿ. ರೂ. ೩೦ ರ ರೇಷ್ಮೆ ವಸ್ತ್ರವನ್ನು ಮೀರಿಸುತ್ತೆ ೩ ಮೊಳ ದುಪ್ಪಟ್ಟ ರೂ. ೬ ನಾಲ್ಕು ಮೊಳದುದ್ದು ರೂ. ೫

ಬಿಳಿ ರೇಷ್ಮೆ ಅಂಚು! ಮದ್ರಾಸ್ ಸೀರೆ! ಖಾತರಿ ಬಣ್ಣ

ಬಿಳಿಯ ಅಗಲ ರೇಷ್ಮೆ ಅಂಚು ೩ ಅಂಗುಲದಗಲ ಒಂದೇ ತರನೆಯ ೩ ಮೊಳದುದ್ದ ರೇಷ್ಮೆ ಸೆರಗುಗಳೆರಡು ಶ್ರೇಷ್ಠವಾದ ನೂಲಿನ ೩! ಮೊಳದಗಲ ೧೮ ಮೊಳದುದ್ದದ ಸೀರೆ ಕಪ್ಪು ಅಥವಾ ಕೆಂಪಿನ ಮೇಲಿನ ಮೇಘ ವರ್ಣದ್ದು ಕ್ರಯ ರೂ. ೧೧—೪—೦ ಬಿಳಿಯ ರೇಷ್ಮೆಯ ಚೌಕಳಿಯಿಂದ ಕೂಡಿದ್ದು ರೂ. ೧೪—೦—೦ ಎರಡಂಗುಲ ಅಂಚಿನ ಮಾಮೂಲಿ ಸೀರೆ ರೂ. ೩.

ವಿಳಾಸ. ದಿವಾ ಎಂಪೋರಿಯಂ, ಸೈಡೆನ್‌ಹಾಂ ರೋಡ್,

ವೇಪೇರಿ, ಮದರಾಸ್.

ರಬ್ಬರ್ ಹ್ಯಾಂಡ್ ಪ್ರೆಸ್.

114-17

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿದ್ದಾಗ ಅದಕ್ಕೆ ೧೩ ರಿಂದ ೧೮ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು ತೆಲಗು, ಉರ್ದು, ಪರ್ಷಿಯನ್, ಅರಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮುದ್ರಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮದಾರರೂ ಮತ್ತು ವಿಶೇಷ ಕರು ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳಕಾಲ ಹಿಡಿಯುವದು. ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ನೆರವಿನಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವವರೆಂಬ ಏನೂ ಸಂದೇಹವಿಲ್ಲ.

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.

ಹಾಫ್ ಪ್ರುಲ್‌ಸ್ಕ್ಯಾಪ್ ಸೈಜು, ೬—೦—೦

ಪೋಸ್ಟೇಜು ಜಾಸ್ತಿ (extra).

ವಿಳಾಸ ವರ್ಧಮಾನ ಏಜನ್ಸಿ,

ಪೋಸ್ಟು ಕಾಲಬಾದೇವಿ,

ಮುಂಬಯಿ

ವೃತ್ತಾಂತ ಪತ್ರಿಕೆ

—:o:—

೧೯೦೮ ನೇ ಇಸವಿ ಜನವರಿ ತಾ|| ೩೦ ನೇ ಗುರುವಾರ

ಜಪಾನ್ ಮಂತ್ರಿಯೂ ಹಿಂದುಸ್ಥಾನವೂ

ಹಿಂದುಸ್ಥಾನದಲ್ಲಿ ಬಹುಜನರು ಈಗ ಜಪಾನಿನವರನ್ನು ಹೊಗಳುತ್ತಿದ್ದಾರೆ. ಯಾಕೆಂದರೆ ಪಾಶ್ಚಾತ್ಯರಾದ ರಾಜ್ಯಗಳೂ ಜಪಾನ್ ದೇಶವು ವಿಶೇಷ ಉತ್ಕೃಷ್ಟ ಸ್ಥಿತಿಗೆ ಬಂದಿರುವುದು. ಇತರ ರಾಜ್ಯಗಳೂ ಪ್ರವೃದ್ಧಮಾನವಾಗುವುದಕ್ಕೆ ಸ್ಫೂರ್ತಿಯನ್ನು ಕೊಡುತ್ತಿದೆ. ವಿದ್ಯಾವಂತರಾದ ಬಹು ಜನ ಹಿಂದುಗಳು ಇಂಗ್ಲೀಷರ ಅಥವಾ ಯೂರೋಪ್ಯರ ರಾಜ್ಯತಂತ್ರವನ್ನು ಲಾಲಿಸುವುದರಲ್ಲಿ ಈಗ ಇಷ್ಟವುಳ್ಳವರಾಗಿಲ್ಲ; ಜಪಾನಿನವರ ಮಾತುಗಳನ್ನು ಚತುರರಸಿಕ್ಕೆ ಕೇಳುತ್ತಾರೆ. ಆದ ಕಾರಣ ಒಬ್ಬ ಜಪಾನ್ ಮಂತ್ರಿಯು ಟೋಕಿಯೋ ನಗರದಲ್ಲಿ ಹೇಳಿರುವುದನ್ನು ಇಲ್ಲಿ ಸೂಚಿಸಿ, ಎಲ್ಲರೂ ಇದನ್ನು ಮನಸ್ಸಿಟ್ಟು ಓದಿ ತಿಳಿದುಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ. ಕೌಂಟ್ ಓಕೂಮಾಯವರು ಈಗಿನ ಜಪಾನ್ ರಾಜತಂತ್ರಜ್ಞರಲ್ಲಿ ಪ್ರಮುಖರೆನಿಸಿಕೊಂಡಿದ್ದಾರೆ. ಅಲ್ಲಿನ ಪಾರ್ಲಿಮೆಂಟ್ ಸಭೆಗಳನ್ನು ಸ್ಥಾಪನೆ ಮಾಡಿ ರಾಜ್ಯಭಾರಕ್ರಮಗಳನ್ನು ಬದಲಾಯಿಸಿದವರಲ್ಲಿ ಇವರೂ ಒಬ್ಬರು. ಇವರು ಈಗಲೂ ಮಂತ್ರಿಪದವಿಯುಳ್ಳರಾಗಿದ್ದಾರೆ. ಜಪಾನಿಗೂ ಹಿಂದುಸ್ಥಾನಕ್ಕೂ ಸ್ನೇಹ ಬೆಳಸುವುದಕ್ಕೆ ರಾಜಧಾನಿಯಾದ ಟೋಕಿಯೋ ನಗರದಲ್ಲಿ ಒಂದು ಸಂಘವು ಸ್ಥಾಪಿತವಾಯಿತು. ಈ ಸಂಘವನ್ನು ಸ್ಥಾಪಿಸುವಾಗ್ಗೆ ಕೌಂಟ್ ಓಕೂಮಾಯವರು ಉಪನ್ಯಾಸ ಮಾಡಿ, ಹಿಂದುಸ್ಥಾನವು ಅಭಿವೃದ್ಧಿಯಾಗದೆ ಇರುವುದಕ್ಕೆ ಮತಭೇದವೂ, ಜಾತಿಭೇದವೂ, ಮೂಢಭಕ್ತಿಯೂ ಮುಖ್ಯ ಕಾರಣಗಳೆಂದೂ ಸ್ವಲ್ಪಭಕ್ತಿ ಎಂಬ ವಿಷವು ರಾಷ್ಟ್ರದಲ್ಲೆಲ್ಲಾ ಹಬ್ಬಿ ದೇಶವು ಕ್ಷೀಣವಾಗುತ್ತಿದೆಯಲ್ಲದೆ ಇಂಗ್ಲೀಷರ ಪ್ರಭುತ್ವದಿಂದ ಈ ಸ್ಥಿತಿ ಸ್ವಲ್ಪವಾದರೂ ಪರಿಹಾರವಾಗಲಿಲ್ಲವೆಂದೂ ಅಭಿಪ್ರಾಯಪಟ್ಟಿದ್ದಾರೆ. ಇನ್ನೂ ಅವರು ಹೇಳಿರುವುದೇನೆಂದರೆ—

"ಕೆಲವರು ಹಿಂದುಸ್ಥಾನವನ್ನು ಇಂಗ್ಲೀಷ್ ಗವರ್ನ್‌ಮೆಂಟಿನವರ ಸ್ವಾಧೀನದಿಂದ ಬಿಡಿಸಿಕೊಳ್ಳಬೇಕೆಂದು ಕುತೂಹಲಪಡುತ್ತಿರುವಂತೆ ತೋರುತ್ತದೆ. ಇದು ಬಹಳ ಅವಿವೇಕವಾದ ಕಾರ್ಯವೆನ್ನುವುದಕ್ಕೆ ಸಂಶಯವಿಲ್ಲ. ಇದಕ್ಕೆ ಪ್ರತಿಯಾಗಿ ಜನರು ತಮ್ಮಲ್ಲಿರುವ ದುಷ್ಟ ರೀತಿ ಆಚಾರ ವ್ಯವಹಾರಗಳನ್ನೆಲ್ಲಾ ತ್ಯಜಿಸಿಬಿಟ್ಟು ಸತ್ಯತೆ ನೀತಿ ಪ್ರಾಮಾಣಿಕತೆ ಸಚ್ಚರಿತ್ರಾದಿಗಳಲ್ಲಿ ಉತ್ತಮೋತ್ತಮರಾಗಲಿ. ಸ್ವಾತಂತ್ರ್ಯಕ್ಕಾಗಿ ಅವರು ಇಷ್ಟಪಡಬೇಕಾದದ್ದಿಲ್ಲ. ಅದು ತನ್ನಷ್ಟಕ್ಕೆ ತಾನೇ ದೊರಕುವುದು.

"ಯಾವ ಜನರೇ ಆಗಲಿ ಮೊದಲು ತಮ್ಮಲ್ಲಿರುವ ದುಷ್ಟಾಚಾರ ಸಮಸ್ತ ಪದ್ಧತಿಗಳನ್ನೂ ವರ್ಜಿಸಿ, ಸತ್ಯಾವಲಂಬಿಗಳೆನ್ನಿಸಿಕೊಳ್ಳದೆ ಸ್ವಾತಂತ್ರ್ಯ, ಸ್ವರಾಜ್ಯವೆಂಬುದನ್ನು ಪಡೆಯಲು ಅರ್ಹರೆನ್ನಿಸಿಕೊಳ್ಳಲಾರರು. ಹಿಂದೂ ಜನರಲ್ಲಿರತಕ್ಕ ಜಾತಿಪದ್ಧತಿ ಮತ್ತು ಅವರಲ್ಲಿರುವ ಮೂಢಭಕ್ತಿಯೂ ತುಚ್ಛವಾದ ಆಚಾರವ್ಯವಹಾರಗಳೂ ಸುಸಂಸ್ಕೃತರೆನ್ನಿಸಿಕೊಳ್ಳುವಂಥ ಯಾವ ಜನರಿಗೂ ಸಲ್ಲತಕ್ಕವಲ್ಲ. ಇವು ಜನಸಾಮಾನ್ಯ ಅಭಿವೃದ್ಧಿಗೂ ದೇಶದ ಏಳಿಗೆಗೂ ದೊಡ್ಡ ಪ್ರತಿಬಂಧಕಗಳಾಗಿರುತ್ತವೆ.

"ಐವತ್ತು ವರ್ಷಗಳ ಕೆಳಗೆ ನಾವು ಜಪಾನಿನಲ್ಲಿ ಪಶ್ಚಿಮರಾಜ್ಯದವರ ಸಂಪರ್ಕವನ್ನು ಪಡೆದೆವು. ಆಗ ನಮ್ಮಲ್ಲಿದ್ದ ಕುಂದುಕೊರತೆಗಳನ್ನೂ ಆ ಜನರಲ್ಲಿದ್ದ ಉತ್ಕೃಷ್ಟವಾದ ಗುಣ ನಡತೆಗಳನ್ನೂ ನೋಡಿದ ಕೂಡಲೇ ನಮ್ಮ ಅವಗುಣಗಳನ್ನು ತ್ಯಜಿಸುತ್ತಾ ಅವರಲ್ಲಿ ಕಂಡುಬಂದಂಥಾ ಸದ್ವಿಷಯಗಳನ್ನು ಆಚರಣೆಗೆ ತಂದುಕೊಳ್ಳುತ್ತಾ ಬಂದೆವು. ಈಗಲೂ ನಾವು ಈ ಭಾಗದಲ್ಲಿ ತೃಪ್ತರಾಗಿಲ್ಲ. ಇನ್ನೂ ಅದೇ ಕಾರ್ಯದಲ್ಲಿ ನಿರತರಾಗಿರುತ್ತೇವೆ. ಒಳ್ಳೆಯದೆಂದು ಕಂಡುಬರತಕ್ಕವುಗಳನ್ನೆಲ್ಲಾ ನಾವು ಆಚರಿಸುವೆವು. ಹಿಂದುಸ್ಥಾನದಲ್ಲಿರುವಂತೆಯೇ ನಮ್ಮಲ್ಲೂ ಐವತ್ತು ವರ್ಷಗಳ ಹಿಂದೆ ಜಾತಿಪದ್ಧತಿಯು ಕಟ್ಟುಪಾಡು ಇದ್ದೇ ಇದ್ದಿತು. ಆದರೆ ಅದರ ದೋಷಗಳು ತಿಳಿದ ಕೂಡಲೇ ನಾವು ಅದನ್ನು ತ್ಯಜಿಸಿಬಿಟ್ಟೆವು. ಈಗ ನಮ್ಮಲ್ಲಿ ಸಕಲ ಪ್ರಜೆಗಳೂ ಏಕವಾಗಿ, ಒಂದೇ ತರವಾದ ಹಕ್ಕುಬಾಧ್ಯತೆಗಳನ್ನು ಉಳ್ಳವರಾಗಿರುತ್ತೇವೆ. ಹೀಗೆಯೇ ಸಮಸ್ತ ಹಿಂದುಗಳು ಒಂದಾಗಲು ಧೈರ್ಯಪಡುವರೋ? ಯಾಕೆಂದರೆ ಇದರಿಂದಲೇ ಹಿಂದುಸ್ಥಾನದ ಮುಂದಿನ ಗತಿಯು ಹೇಗಾಗುವುದೆಂದು ನಿರ್ಧರಿಸಲಾಗುತ್ತದೆ."

ಕಬೀರನ ಬೋಧನೆಯು.

ಹಿಂದುಸ್ಥಾನದ ಉತ್ತರ ಕಡೆಯಲ್ಲಿ ಕಬೀರನ ಹೆಸರು ಪ್ರಸಿದ್ಧವಾಗಿದೆ. ೧೯೦೧ನೇ ಇಸ್ವಿ ಖಾನೇಷುಮಾರಿಗೆ ಅನುಸಾರವಾಗಿ ೮ ಲಕ್ಷ ಜನರು ಇವನ ಶಿಷ್ಯರಾಗಿದ್ದಾರೆ. ದಕ್ಷಿಣ ಕಡೆಯಲ್ಲಿ ಈ ಮಹಾತ್ಮನ ಹೆಸರನ್ನು ಕೇಳಿರುವವರು ಕೆಲವರು ಮಾತ್ರ ಇರಬಹುದು. ಆ ಕಾರಣ ಈಗ ನಾವು ಈ ಮಹನೀಯನ ವಿಷಯವನ್ನು ಸಂಕ್ಷೇಪವಾಗಿ ತಿಳಿಸುವುದಕ್ಕೆ ಪ್ರಾರಂಭಿಸುವೆವು.

ಕಬೀರನು ಸುಮಾರು ಕ್ರಿ. ಶ. ೧೪೪೦ನೇ ವರ್ಷದಲ್ಲಿ ಹುಟ್ಟಿ ೧೫೧೮ನೇ ಇಸ್ವಿಯಲ್ಲಿ ಪರಲೋಕವನ್ನೈದಿದ್ದನು. ಇವನ ಜನನದ ವಿಷಯದಲ್ಲಿ ಅನೇಕರು ಅನೇಕ ವಿಧವಾಗಿ ಹೇಳುತ್ತಾರೆ. ಹೇಗೆಂದರೆ ಕೆಲವರು ಇವನು ನೇಯುವ ಕೆಲಸವನ್ನು ಮಾಡುತ್ತಿದ್ದ ಮುಸಲ್ಮಾನನ ಮಗನೆಂದೂ ಇನ್ನು ಕೆಲವರು ಒಬ್ಬ ಬ್ರಾಹ್ಮಣ ವಿಧವೆಯ ಹಸ್ತದಲ್ಲಿ ಹುಟ್ಟಿ ಮುಸಲ್ಮಾನರ ಮನೆಯಲ್ಲಿ ಬೆಳೆದನೆಂದೂ ಇನ್ನೂ ವಿವಿಧವಾಗಿಯೂ ಹೇಳುವುದುಂಟು.

ಇವನು ಮುಸಲ್ಮಾನ ಮತದ ಒಂದು ಪಂಗಡವಾದ ಸೂಫಿ ಎಂಬ ಮತವನ್ನು ಅವಲಂಬಿಸಿರುವಂಥ ಶೇಕ್‌ತಕ್ಕಿ ಎಂಬ ಪೀರನ ಶಿಷ್ಯನಾಗಿದ್ದನು. ಹೀಗೆ ಶಿಷ್ಯನಾಗಿದ್ದರೂ ಅವನು ಹಿಂದುಗಳನ್ನೂ ಮುಸಲ್ಮಾನರನ್ನೂ ಸಮವಾದ ಪ್ರೀತಿಯಿಂದ ಕಾಣುತ್ತಾ ಈ ಉಭಯರನ್ನೂ ಸತ್ಯವಾದ ಒಂದೇ ಮಾರ್ಗವನ್ನು ಹೊಂದಿಸಬೇಕೆಂಬ ಪೂರ್ಣವಾದ ಇಷ್ಟವುಳ್ಳವನಾಗಿದ್ದನು. ಹೀಗಿದ್ದರೂ ಹಿಂದೂ ಮುಸಲ್ಮಾನರಲ್ಲಿ ಕೆಲಕೆಲವರು ಇವನನ್ನು ದ್ವೇಷಿಸುತ್ತಿದ್ದುದು ಆಶ್ಚರ್ಯವಲ್ಲ. ಇವನ ವಿಷಯದಲ್ಲಿ ನಿಂದೆಗೆ ಕಾರಣವೇನೆಂದರೆ—ಇವನು ಬ್ರಾಹ್ಮಣರನ್ನು ಕುರಿತು ನೀವು ಜನಿವಾರವನ್ನು ಹಾಕಿಕೊಳ್ಳುವುದರಿಂದ ಮಾತ್ರ ಮೋಕ್ಷವನ್ನು ಹೊಂದಲಾರಿರಿ ಎಂದೂ, ಮುಸಲ್ಮಾನರನ್ನು ಕುರಿತು ನೀವು ಸುನ್ನತಿಯನ್ನು ಮಾಡಿಕೊಳ್ಳುವುದರಿಂದ ಮಾತ್ರ ಮೋಕ್ಷವನ್ನು ಹೊಂದಲಾರಿರಿ ಎಂದೂ ಹೇಳುತ್ತಿದ್ದುದೇ.

ಆದರೂ ಈ ಮಹಾತ್ಮನಲ್ಲಿದ್ದಂಥ ಶಾಂತತ್ವ, ಪರಿಶುದ್ಧತ್ವ, ಸಾಧುತ್ವ ಮೊದಲಾದ ಮಹಾ ಗುಣಗಳನ್ನು ನೋಡಿ ಮೇಲೆ ಕಂಡ ಉಭಯ ಮತದವರಾದ ಅನೇಕರು ಇವನನ್ನು ಪ್ರೀತಿಸಿದರು. ಅನಂತರ ಈತನಿಗೆ ಅಂತ್ಯಕಾಲವು ಒದಗಿ ಇವನು ಪರಲೋಕವಾಸಿಯಾದ ಕಾಲದಲ್ಲಿ ಇವನ ಶವದ ವಿಷಯದಲ್ಲಿ ಹಿಂದೂ ಮುಸಲ್ಮಾನರಿಗೆ ಕಲಹವುಂಟಾಯಿತು. ಆಗ ಈ ಮಹನೀಯನು ಉಭಯರ ಮಧ್ಯದಲ್ಲಿ ಪ್ರತ್ಯಕ್ಷನಾಗಿ ಅವರನ್ನು ಕುರಿತು ನೀವು ಈ ಶವದ ಮೇಲಣ ಮುಸುಕನ್ನು ತೆಗೆಯಿರಿ ಎಂದು ಹೇಳಿದನು. ಆಗ ಅವರದನ್ನು ತೆಗೆಯಲು ಕೆಳಗೆ ಒಂದು ಹೂವುಗಳ ರಾಶಿಯಿದ್ದಿತಂತೆ. ಆಗ ಮುಸಲ್ಮಾನರು ಅದರಲ್ಲಿ ಅರ್ಧಭಾಗವನ್ನು ತೆಗೆದುಕೊಂಡು ಹೋಗಿ ನೆಲದಲ್ಲಿ ಹೂತು ಬಿಟ್ಟರಂತೆ. ಉಳಿದರ್ಧ ಭಾಗವನ್ನು ಹಿಂದೂಗಳು ತೆಗೆದುಕೊಂಡು ಸುಟ್ಟು ಬಿಟ್ಟರಂತೆ.

ಕಬೀರನು ತೀರಿಹೋಗಿ ನಾನೂರು ವರುಷಗಳಾದವು. ಆದರೆ ಅವನ ಬೋಧನೆಯು ಇದುವರೆವಿಗೂ ಎಲ್ಲರಿಂದಲೂ ಗೌರವಿಸಲ್ಪಡುತ್ತದೆ. ಈ ಪತ್ರಿಕೆಯಲ್ಲಿ ಕಬೀರನು ವಿಗ್ರಹ ತೀರ್ಥಗಳ ವಿಷಯದಲ್ಲಿ ರಚಿಸಿರುವ ಪದಗಳಲ್ಲಿ ಕೆಲವನ್ನು ಮಾತ್ರ ಈ ವಾರ ತಿಳಿಸುವೆವು.

"ಮಹಾತ್ಮರುಗಳಿರಾ! ಲೋಕವು ತನ್ನನ್ನು ಸಂಪೂರ್ಣವಾಗಿ ಮರೆತು ಹುಚ್ಚನಂತಾಗಿ ಹೋಗಿರುತ್ತದೆ. ನಾನು ಸತ್ಯವನ್ನು ನುಡಿದರೆ ಲೋಕವು ನನ್ನನ್ನು ಕೊಲ್ಲ ಬರುತ್ತದೆ. ಅದು ಅಬದ್ಧದಲ್ಲಿ ನಂಬಿಕೆ ಇಡುವಷ್ಟು ಸತ್ಯದಲ್ಲಿ ನಂಬಿಕೆ ಇಡುವುದಿಲ್ಲ. ಭಕ್ತಾದಿಗಳು ಪ್ರಾತಃಕಾಲದಲ್ಲಿ ದಿನದಿನ ಸ್ನಾನಮಾಡುವುದನ್ನು ನೋಡಿರುತ್ತೇನೆ. ಅವರು ನಿಜವಾದ ಭಗವಂತನನ್ನು ಮರೆತು ಕಲ್ಲುಗಳನ್ನು ಪೂಜಿಸುವರು. ಕಲ್ಲುಗಳಲ್ಲೂ ಹಿತ್ತಾಳೆ, ತಾಂಬ್ರ ಮೊದಲಾದವುಗಳಿಂದ ಮಾಡಲ್ಪಟ್ಟ ವಿಗ್ರಹಗಳಲ್ಲೂ ಪಾರಮಾರ್ಥಿಕಜ್ಞಾನವು ದೊರಕಬಹುದೇ? ಅವರು ಯಾತ್ರಾಸ್ಥಾನಗಳಿಗೆ ಹೋಗುವುದರಲ್ಲೂ ಕುತ್ತಿಗೆಗಳಿಗೆ ಹೂವಿನ ಹಾರಗಳನ್ನು ಹಾಕಿಕೊಳ್ಳುವುದರಲ್ಲೂ ನೆತ್ತಿಯ ಮೇಲೆ ಪಟ್ಟೆನಾಮಗಳನ್ನು ಹಚ್ಚಿಕೊಳ್ಳುವುದರಲ್ಲೂ ತಲೆಗೆ ಕಾವಿ ಕುಲಾವಿ, ಕೈಯಲ್ಲಿ ರುದ್ರಾಕ್ಷಿ ಮಾಲೆ, ಇವುಗಳಿಂದಲಂಕೃತರಾಗಿರುವುದಕ್ಕೂ ಅವರವರ ದೇವರ ನಾಮವನ್ನು ಸುಮ್ಮನೆ ಉಚ್ಚರಿಸಿ ಹಾಡುವುದರಲ್ಲೂ ಆಸಕ್ತರಾಗಿರುತ್ತಾರೆ. ಅದರೇನು? ಅವರು ನಿಜವಾದ ಭಗವಂತನನ್ನು ತ್ಯಜಿಸಿರುವರೆಂಬುವದಂತೂ ಸಹಜ.

"ರುದ್ರಾಕ್ಷಿ ಕಾಯಿಗಳು ಮರದಿಂದಲೂ, ವಿಗ್ರಹಗಳೂ ಕಲ್ಲಿನಿಂದಲೂ ಉತ್ಪನ್ನವಾದುವು. ಗಂಗೇ ಮತ್ತು ಯಮುನಾ ಇವು ನೀರೇ ಹೊರತು ಮತ್ತಾವುದೂ ಅಲ್ಲ. ರಾಮನೂ ಕೃಷ್ಣನೂ ಸತ್ತು ಹೋಗಿ ಅನೇಕ ಸಂವತ್ಸರಗಳಾದವು.

"ಕಲ್ಲನ್ನು ಪೂಜಿಸುವುದರಿಂದ ಒಬ್ಬನು ದೇವರನ್ನು ಕಾಣಬಹುದೆಂದರೆ ನಾನು ಬೆಟ್ಟವನ್ನೇ ಪೂಜಿಸುವೆನು. ಆದಾಗ್ಯೂ ಇದಕ್ಕಿಂತಲೂ ಧಾನ್ಯ ಬೀಸುವ ಕಲ್ಲುಗಳು ಎಷ್ಟೋ ಪ್ರಯೋಜನವಾಗಿವೆಯಲ್ಲವೇ?

"ಸ್ನಾನ ಮಾಡುವುದಕ್ಕೆ ಅನೇಕ ತೀರ್ಥಗಳು ದೊರಕುತ್ತವೆ. ಪೂಜಿಸುವುದಕ್ಕೆ ಅನೇಕ ವಿಗ್ರಹಗಳು ಕಲ್ಪಿತವಾಗಿವೆ. ಆದರೆ ಕಬೀರನಾದ ನಾನು ಪಾಪವಿಮೋಚನೆಯು ಹಾಗೆ ದೊರಕತಕ್ಕದ್ದಲ್ಲವೆಂತಲೂ ಹರಿಸೇವೆಯಿಂದಲೇ ಒಬ್ಬನು ವಿಮುಕ್ತನಾಗುವನೆಂತಲೂ ತಿಳಿಸುತ್ತೇನೆ.

"ಹೃದಯದೊಳಗೆ ವಿಪರೀತವಾದ ಕಲ್ಮಷಗಳನ್ನಿಟ್ಟುಕೊಂಡು ಯಾತ್ರಾಸ್ಥಳಗಳಿಗೆ ಹೋಗಿ ಅಲ್ಲಿ ಪವಿತ್ರವೆಂದು ಕರೆಯಲ್ಪಡುವ ನೀರಿನಲ್ಲಿ ಸ್ನಾನಮಾಡಿದರೆ ಮೋಕ್ಷಸಂಪಾದನೆಮಾಡುವುದಕ್ಕಾದೀತೆ? ಎಂದಿಗೂ ಆಗುವುದಿಲ್ಲ."

ಸಶೇಷ

ಬಹಿರ್ದೇಶದ ವೃತ್ತಾಂತಗಳು.

ಬೆಂಗಳೂರು ದಂಡಿನಲ್ಲಿ ಇದುವರೆಗೆ ೨೦ ಸಾವಿರ ಜನರಿಗೆ ಪ್ಲೇಗ್ ಕಿಡುಬನ್ನು ಹಾಕಿದರು. ಈಗ ಅಲ್ಲಿ ಮಕ್ಕಳಿಗೂ ದೊಡ್ಡವರಿಗೂ ಸಿಡುಬು ಏಳುವುದಕ್ಕೆ ಪ್ರಾರಂಭವಾಗಿದೆ.

* * *

ಸರ್ವ ಅಧಿಕಾರದಿಂದಾಗಿದ್ದು ಪೆನ್ಷನ್ ಪಡೆದು ಸೀಮೆಗೆ ಹೋಗಿದ್ದ ಜನರಲ್ ಜೆ. ಬಿ. ಗ್ರಾಂಟ್‌ಯವರು ಕೆಲವು ದಿನಗಳ ಮಟ್ಟಿಗೆ ಬೆಂಗಳೂರಿಗೆ ಬಂದು ಹೋಗುವರೆಂತಲೂ, ಅಲ್ಲಿನ ಕೆಲವು ದೊಡ್ಡ ಮನುಷ್ಯರು ಅವರಿಗೆ ಒಂದು ಬಹುಮಾನಪತ್ರವನ್ನು ಕೊಡತಕ್ಕವರಾಗಿದ್ದಾರೆಂತಲೂ ತಿಳಿಯುವುದು.

* * *

ಬೆಂಗಳೂರಿನಲ್ಲಿ ಗಟ್ಟಿಗರಾದ ವಕೀಲರೆಂದು ಹೆಸರುವಾಸಿಯನ್ನು ಪಡೆದಿದ್ದ ಮಿ|| ಸಾಲಿಗ್ರಾಮದ ಸುಬ್ಬರಾಯರು ಕಳೆದ ವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

* *

ಮುಂದಿನ ಗುರುವಾರ ಬೆಂಗಳೂರು ಲಾಲ್ ಬಾಗ್ ಉದ್ಯಾನವನದಲ್ಲಿ ವರ್ಷಗಳಲ್ಲಿ ನಡೆಯುವ ಫಲಪುಷ್ಪ ಪ್ರದರ್ಶನೋತ್ಸವವು ಸಾಯಂಕಾಲ ೩|| ಗಂಟೆಯಿಂದ ಪ್ರಾರಂಭವಾಗುವುದು.

* * *

ನಮ್ಮ ಸಂಸ್ಥಾನದಲ್ಲಿ ಬಾಲಕರಿಗೆ ಹಸ್ತಕೌಶಲವನ್ನು ಕಲಿಸುವುದಕ್ಕೆ ನೇಮಕವಾಗಿ ಬಂದು ಬೆಂಗಳೂರಿನಲ್ಲಿ ಆರು ತಿಂಗಳಿಂದ ಬೋಧನೆ ಮಾಡುತ್ತಿದ್ದ ಜಾಕ್ಸನ್ ಆರ್ಚರವರು ಕಳೆದ ವಾರ ಸೀಮೆಗೆ ಪ್ರಯಾಣಮಾಡಿದರು.

* * *

ಶ್ರೀಮನ್ಮಹಾರಾಜರವರು ಮದರಾಸಿನಲ್ಲೇ ನಾಳೆ ಭಾನುವಾರ ಸಮುದ್ರಸ್ನಾನ ಮುಂತಾದ್ದನ್ನು ಮಾಡಿಕೊಂಡು, ಮರುದಿನ ಸಾಯಂಕಾಲ ಪ್ರಯಾಣ ಮಾಡಿ, ಪರಿವಾರಸಹಿತ ಬೆಂಗಳೂರಿಗೆ ದಯಮಾಡುತ್ತಾರೆಂದು ತಿಳಿಯುವುದು.

* * *

ಅರ್ಧೋದಯ ಪುಣ್ಯಕಾಲವೆಂಬ ಹಿಂದುಗಳ ವಿಶೇಷದಿನವು ನಾಳೆ ಭಾನುವಾರವಾಗುವುದರಿಂದ ಸಾವಿರಾರು ಜನರು ಎಲ್ಲಾ ಕಡೆಗಳಿಂದಲೂ ಕಾವೇರಿಯಲ್ಲಿ ಸ್ನಾನಾದಿಗಳನ್ನು ಮಾಡುವುದಕ್ಕೆ ಶ್ರೀರಂಗಪಟ್ಟಣದಲ್ಲಿ ಸೇರುವರು.

* * *

ಸೀಮೆಯಿಂದ ವಾಪಸು ಬಂದ ರೆವ್. ಜೆ. ಡಬ್ಲ್ಯು. ಸಾಡೇಯವರಿಗೆ ರಾಜಧಾನಿಯ ಕ್ರೈಸ್ತಮಂಡಲಿಯವರು ಮೊನ್ನೆ ಮಂಗಳವಾರ ಸಾಯಂಕಾಲ ದೇವಾಲಯದಲ್ಲಿ ಸಭೆಸೇರಿ, ಸುಸ್ವಾಗತಪೂರ್ವಕವಾದ ವಂದನಾಪತ್ರಿಕೆಯನ್ನೊಪ್ಪಿಸಿ, ಬಹು ಸಂಭ್ರಮದಿಂದ ತಮ್ಮ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿದರು.

* * *

ಮೈಸೂರು ಸರ್ಕಾರಿ ಗೆಜೆಟ್ಟಿನಲ್ಲಿ ಧಾರಣೆಮಾಸಿಗಳನ್ನು ಪ್ರಕಟಿಸುತ್ತಾರಷ್ಟೆ. ಡೆಪ್ಯುಟಿ ಕಮಿಷನರರುಗಳು ಆಯಾ ಡಿಸ್ಟ್ರಿಕ್ಟಿನ ಧಾರಣೆಗಳನ್ನು ಬರೆದು ಕಳುಹಿಸುವುದಕ್ಕಿಂತ ಮೊದಲು ಬಹಳ ಮುತುವರ್ಜಿಯಿಂದ ತನಿಖೆಮಾಡಿ, ಸರಿಯಾಗಿ ಆಯಾ ಕಾಲದ ನಿರಖು ಧಾರಣೆಗಳನ್ನೇ ಗೊತ್ತುಮಾಡಿ ತಿಳಿಸಬೇಕೆಂದು ರೆವಿನ್ಯೂ ಕಮಿಷನರು ಸರ್ಕ್ಯುಲರ್ ಕೊಟ್ಟಿರುತ್ತಾರೆ.

* * *

ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಸಭೆಯಲ್ಲಿ ಚರ್ಚೆಯಾಗುತ್ತಿರುವ ಪೋಲೀಸ್ ಕಾನೂನನ್ನು ಸಿಲೆಕ್ಟ್ ಕಮಿಟಿಯವರು ಚೆನ್ನಾಗಿ ಪರಿಶೋಧನೆಮಾಡಿ, ಅವಶ್ಯವಾದ ಕಡೆಗಳಲ್ಲೆಲ್ಲಾ ಬದಲಾವಣೆ ಮಾಡಿರುತ್ತಾರೆ. ಹೀಗೆ ಬದಲಾಯಿಸಲ್ಪಟ್ಟ ಕಾನೂನು ಈ ವಾರದ ಗೆಜೆಟ್ಟಿನಲ್ಲಿ ಪ್ರಕಟವಾಗಿದೆ. ಇನ್ನು ಮುಂದೆ ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ಇದು ಚರ್ಚೆಗೆ ಬಂದು, ತೀರ್ಮಾನವಾಗುವುದು.

* * *

ಕಾಂಥರೀ ಸೀಮೆಯಲ್ಲಿ ಜನರು ಬರೆಯತಕ್ಕ ಕಾಗದಗಳ ರೀತಿಗಳಿಗೆ ಅಂಚೆ ಇಲಾಖೆಯವರು ಬಿಕರಿಮಾಡುವ ಟಪಾಲ್ ಸ್ಟಾಂಪನ್ನೇ ಹಚ್ಚಬಹುದೆಂದು ಅರಿಯಾಯತಿ ತೋರಿಸಿದಾರೆ. ಆದರೆ ರಾಜಕೀಯವಾದ ಈ ಸಂಸ್ಥಾನದಲ್ಲಿ ರಶೀತಿಗಳಿಗೆ ಅದೇ ರೀತಿ ಟಪಾಲಿನ ಚಿಲ್ಲರೆ ಚೀಟಿಗಳನ್ನು ಅಂಟಿಸಕೂಡದೆಂತಲೂ, ಅದಕ್ಕಾಗಿಯೇ ಮಾಡಿರುವ ಒಂದಾಣೆಯ ಬೇರೇ ರಶೀತಿ ಸ್ಟಾಂಪುಗಳನ್ನೇ ಜನರು ಕೊಂಡು ಅಂಟಿಸಬೇಕೆಂತಲೂ ಮೈಸೂರು ಸ್ಟಾಂಪ್ ಕಮಿಷನರವರು ಇಸ್ತಿಹಾರು ಕೊಟ್ಟಿದಾರೆ.

* * *

ಹಿಂದಿನ ವಾರ ಸಕಲೇಶಪುರದ ಕಾರೊನೇಷನ್ ಪಾರ್ಕ್ ಎಂಬ ಉದ್ಯಾನವನದಲ್ಲಿ ಫಲಪುಷ್ಪ, ಧಾನ್ಯ, ತೋಟದ ಕೆಲಸಕ್ಕೆ ಉಪಯೋಗಿಸುವ ಆಯುಧ, ಮಗ್ಗ, ಮೊದಲಾದವನ್ನು ಪ್ರದರ್ಶನಮಾಡಿ, ಉತ್ತಮವಾದವುಗಳಿಗೆ ಬಹುಮಾನ ಕೊಡಿಸಿದರು. ಮಿ|| ಗ್ರಾಹಾಂ ಅಂಡ್ರಸನ್‌ರವರು ಇಂಗ್ಲೀಷಿನಲ್ಲೂ, ರಾ|| ಕಮಿಷನರು ಮಿ|| ನಾರಾಯಣಯ್ಯಂಗಾರ್ಯ ಕನ್ನಡದಲ್ಲೂ ಇಂಥಾ ಪ್ರದರ್ಶನಗಳಿಂದಾಗುವ ವಿಶೇಷ ಪ್ರಯೋಜನಗಳನ್ನು ಕುರಿತು ಉಪನ್ಯಾಸಮಾಡಿದರು. ಈ ರೀತಿ ಪ್ರಜೆಗಳ ಮುಖಂಡರು ಆಗಾಗ್ಗೆ ತಮ್ಮ ತಮ್ಮ ಸ್ಥಳದಲ್ಲಿ ಪ್ರದರ್ಶನಗಳನ್ನು ಏರ್ಪಡಿಸುತ್ತಾ ಬಂದರೆ ದೇಶೋನ್ನತಿಗೆ ಅನುಕೂಲ ಸದಾಯವಾಗುವುದು.

* * *

ಹಿಂದಿನ ಸೋಮವಾರ ಸಾಯಂಕಾಲ ಮದರಾಸ್ ಪಟ್ಟಣದಲ್ಲಿ ಮಿ|| ರಂಗನಾಥ ಮೊದಲಿಯಾರ್ ಎಂಬ ಭಾರೀ ವರ್ತಕರು ನಮ್ಮ ಮಹಾರಾಜರನ್ನೂ, ಯುವರಾಜರೇ ಮೊದಲಾದವರನ್ನೂ ಪ್ಯಾರಡೈಸ್ ಎಂಬ ತಮ್ಮ ಉದ್ಯಾನವನದ ಬಂಗಲೆಗೆ ಕರೆದು, ಗಾರ್ಡನ್ ಪಾರ್ಟಿ ಎಂಬ ಸಂತೋಷೋತ್ಸವವನ್ನು ನಡಿಸಿದರು. ಕೋಲಾಟ, ಕತ್ತಿ ಮೊದಲಾದ ಗರಡಿ ಸಾಮುಗಳು, ಗಾರಡಿ ಚಮತ್ಕಾರಗಳು, ನಾಟ್ಯ, ಸಂಗೀತಾದಿಗಳು ನಡೆದವು. ಫಲಾಹಾರಗಳು ಬಳಿಕ ನೇತ್ರಾನಂದಕರವಾದ ಬಾಣಬಿರುಸುಗಳು ಹಾರಿಸಲ್ಪಟ್ಟವು. ರಿಜಿಮೆಂಟಿನ ಬ್ಯಾಂಡಿನವರ ವಾದ್ಯವು ಮನೋಹರವಾಗಿತ್ತು. ಸುಮಾರು ೭|| ಗಂಟೆಯ ಮೇಲೆ ಮಹಾರಾಜರವರು ವಾಪಸು ತಮ್ಮ ಬಿಡಾರಕ್ಕೆ ತೆರಳಿದರು.

ಮೇಲ್ಕೋಟೆಯ ಪರಸ್ಪರ ಸಹಾಯಕ ಸಂಘವು.

ಕಳೆದ ೧೯೦೭ನೆ ಡಿಸೆಂಬರ್ ತಾ ೧೯ ರಲ್ಲಿ ಮೈಸೂರು ಗವರ್ನಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮೆ॥ ಎಂ. ಶಾಮರಾಯರು ಮೈಸೂರು ಡಿಸ್ಟ್ರಿಕ್ಟ್ ಮೇಲ್ಕೋಟೆಯಲ್ಲಿರುವ ಪರಸ್ಪರ ಸಹಾಯಕ ಸಂಘದ ಸ್ಥಿತಿಗತಿಯನ್ನು ಅಜಮಾಯಿಷಿ ಮಾಡಿದರು ಅವರು ಬರೆದಿರುವ ರಿಪೋರ್ಟಿನ ಸಾರಾಂಶವೇನೆಂದರೆ.—

ಈ ಮೇಲ್ಕೋಟೆಯ ಸಂಘವು ಸದ್ಯದಲ್ಲಿ ಅಲ್ಲಿನ ನೆಯ್ಗೆಯವರ ಪ್ರಯೋಜನಕ್ಕಾಗಿಯೇ ಏರ್ಪಾಡಾಗಿದೆ ಅದರಲ್ಲಿ ಮೆಂಬರುಗಳಾಗಿ ಸೇರಿಕೊಂಡಿರತಕ್ಕ ೩೪ ಮಂದಿಯ ಪೈಕಿ ೨೮ ಜನ ನೆಯ್ಗೆ ಕಸಬು ಮಾಡತಕ್ಕವರು. ಉಳಿದವರು ವ್ಯವಸಾಯ, ಸರ್ಕಾರಿ ನೌಕರಿ, ದೇವಸ್ಥಾನದ ನೌಕರಿಗಳಲ್ಲಿರುತ್ತಾರೆ ಈ ಸೊಸೈಟಿಯವರು ಅಗ್ಗವಾಗಿ ಸಿಕ್ಕುವ ಪರಸ್ಥಳಗಳಿಂದ ನೂಲು, ರೇಷ್ಮೆ ಮೊದಲಾದದ್ದನ್ನು ಒಟ್ಟೊಟ್ಟಾಗಿ ತರಿಸಿಟ್ಟು, ಮೆಂಬರುಗಳಿಗೆ ಮಾತ್ರ ಅಡ್ವಾನ್ಸಾಗಿ ಕೊಟ್ಟು, ಅವರು ತಯಾರುಮಾಡಿದ ಸರಕುಗಳನ್ನು ಸೊಸೈಟಿಗೆ ತೆಗೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ನೆಯ್ಗೆಯವರಿಗೆ ಬರತಕ್ಕ ಲಾಭದ ಅಥವಾ ಕೂಲಿಯ ಪೈಕಿ ಬಹಳ ಸ್ವಲ್ಪ ಸ್ವಲ್ಪ ಭಾಗವನ್ನು ಡಿಪಾಜಿಟ್ಟಾಗಿ ಹಿಡಿದುಕೊಂಡು, ಈ ಡಿಪಾಜಿಟ್ಟು ಮೊಬಲಗು ಹೆಚ್ಚಿದ ಹಾಗೆಲ್ಲಾ ಅದನ್ನು ಆಯಾ ಮೆಂಬರ ಷೇರಿಗೆ ಸೇರಿಸಿಕೊಳ್ಳುತ್ತಾ ಬರುತ್ತಾರೆ ಇದರಿಂದ ಆ ಜನರಲ್ಲಿ ಸ್ವಲ್ಪ ಸ್ವಲ್ಪವಾಗಿ ಹಣ ಶೇಖರ ಮಾಡತಕ್ಕ ಅಭಿಲಾಷೆಯು ತಾನಾಗಿಯೇ ಉಂಟಾಗುವುದಕ್ಕೆ ತುಂಬಾ ಸಹಾಯವಾಗಿರುತ್ತದೆ ಈ ಸಂಘದ ಲೆಕ್ಕಗಳನ್ನು ಬರೆಯುವುದಕ್ಕೆ ೧೩ ರಿಜಿಸ್ಟರುಗಳನ್ನು ಇಟ್ಟುಕೊಂಡಿದ್ದಾರೆ ಅದರ ೫ ರೂಪಾಯಿ ತಲಬುಳ್ಳ ಒಬ್ಬ ಗುಮಾಸ್ತೆಯೇ ಈ ಲೆಕ್ಕಗಳನ್ನೆಲ್ಲಾ ತೃಪ್ತಿಕರವಾಗಿ ಬರೆಯುವುದು ಸಂಘಕ್ಕೆ ತುಂಬಾ ಅನುಕೂಲವೇ ಸರಿ ಮೆ॥ ಕರಡಿ ವೆಂಕಟರಮಣ ಶೆಟ್ಟರು ಸಂಘದ ಪ್ರಸಿಡೆಂಟರಾಗಿದ್ದುಕೊಂಡು, ಕಮಿಟಿ ಮೆಂಬರುಗಳ ಸಹಾಯ ಪಡೆದು ಈ ಸಂಘದ ಕಾರ್ಯಗಳನ್ನು ತುಂಬಾ ವಿವೇಕವಾಗಿ ನಡಿಸುತ್ತಾ ಬಂದಿದ್ದಾರೆಂದೂ, ಈ ಸಂಘದಿಂದ ಅಲ್ಲಿನ ನೆಯ್ಗೆಯವರಿಗೆ ವಿಶೇಷ ಸಹಾಯವಾಗುತ್ತಿದೆ ಎಂದೂ, ಸಂಘದ ಮೂಲಧನವು ಹೆಚ್ಚಿದ ಪಕ್ಷದಲ್ಲಿ ಇನ್ನೂ ಪ್ರಯೋಜನವಾದೀತೆಂದೂ ರಿಜಿಸ್ಟ್ರಾರವರು ತಿಳಿಸುತ್ತಾರೆ

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಲೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು ಮೊದಲು ಡಿಸೆಂಬರ್ ತಿಂಗಳ ಜಮಾ ಖರ್ಚು ಮುಂತಾದ ಲೆಕ್ಕಗಳನ್ನು ಓದಿ ಹೇಳಿದರು. ಅಕ್ಟ್ರಾಯಿ ಉತ್ಪತ್ತಿಯು ಹಿಂದಿನ ವರುಷದ ಆ ತಿಂಗಳಿಗಿಂತ ೩೦೦ ರೂಪಾಯಿ ಜಾಸ್ತಿ ಆಯಿತು ಡಿಸೆಂಬರಿನಲ್ಲಿ ಜನನ ೧೯೧, ಮರಣ ೪೨೫ ಎಂದು ತಿಳಿಯಬಂದಿತು ಮ್ಯುನಿಸಿಪಲ್ ಲೆಕ್ಕಗಳನ್ನು ತನಿಖೆಮಾಡಿದ ಆಡಿಟರುಗಳು ಈ ಟರ್ಮಿನಲ್ಲಿ ಮ್ಯುನಿಸಿಪಲ್ ತೆರಿಗೆ ಮುತ್ಸದ್ದಿಗಳ ಬಳಿ ಆಯಾ ಮೊಹಲ್ಲೆಯ ಬೇರೆ ಬೇರೆ ಖಾತೆಗಳು ಇರಬೇಕೆಂತಲೂ, ಅದಕ್ಕೆ ಪ್ರತಿಯಾಗಿ ಮ್ಯುನಿಸಿಪಲ್ ಆಫೀಸಿನಲ್ಲಿ ಟವುನ್ನಿನ ಜನರಲ್ ಖಾತೆ ಒಂದು ಮಾತ್ರ ಇದ್ದರೆ ಸಾಕಾಗಿದೆ ಎಂತಲೂ, ಮುತ್ಸದ್ದಿಗಳ ಬಳಿ ಬಿಲ್ ಪುಸ್ತಕವೂ ಕರಡು ಪುಸ್ತಕವೂ ಇದ್ದರೆ ಸಾಕೆಂತಲೂ, ಇನ್ನು ಮುಂದೆ ಮನೆ ಮಾಲೀಕರಿಗೆಲ್ಲಾ ತಾರತಮ್ಯವಿಡದೆ ೧೫ ದಿನದ ವಾಯಿದೆ ಉಳ್ಳ ಬಿಲ್ ಕೊಟ್ಟು, ವಸೂಲಾಗತಕ್ಕ ಕಂದಾಯವನ್ನು ಮೊದಲು ತಮ್ಮ ಬಳಿ ಇರತಕ್ಕ ಕರಡು ಪುಸ್ತಕದಲ್ಲಿ ದಾಖಲ್ ಮಾಡಿ, ತರುವಾಯ ಆಫೀಸಿಗೆ ಬಂದು ಜನರಲ್ ಖಾತೆ ಪುಸ್ತಕದಲ್ಲಿ ಬರೆಯುವಂತೆ ಮಾಡಬೇಕೆಂತಲೂ ರಿಪೋರ್ಟು ಬರೆದಿದ್ದರು ಕೌನ್ಸಿಲರುಗಳೆಲ್ಲಾ ಈ ಅಭಿಪ್ರಾಯವನ್ನೇ ಅನುಮೋದಿಸಿದ್ದರಿಂದ ಅದರಂತೆ ಜಾರೀಲಿ ತರಬೇಕೆಂದು ತೀರ್ಮಾನ ಮಾಡಿದರು

ಮ್ಯುನಿಸಿಪಲ್ ಯುನಾನಿ ಆಸ್ಪತ್ರೆಯಲ್ಲಿ ಔಷಧಗಳ ಖರ್ಚಿಗೆ ಇನ್ನೂ ೧೦ ರೂಪಾಯಿ ಮಾಹೆಯಾನ ಹೆಚ್ಚು ಕೊಡಬೇಕೆಂತಲೂ, ೬ ರೂಪಾಯಿ ತಲಬಿನ ಇನ್ನೊಬ್ಬ ಕೂಲಿಯನ್ನು ನೇಮಕಮಾಡಿಕೊಳ್ಳಬಹುದೆಂತಲೂ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ

ರಾಜಧಾನಿಯಿಂದ ರಫ್ತಾಗುವ ಸರಕಿನ ಮೇಲೆ ಒಂದು ಗಾಡಿಗೆ ಒಂದಾಣೆಯಂತೆ ಅಕ್ಟ್ರಾಯಿ ಸುಂಕವನ್ನು ವಸೂಲ್ಮಾಡಬಹುದೆಂದು ಸರ್ಕಾರದವರು ಮ್ಯುನಿಸಿಪಾಲಿಟಿಗೆ ಅಧಿಕಾರ ವಹಿಸಿರುತ್ತಾರೆ.

ರಾಜಧಾನಿಯಲ್ಲಿ ಸರ್ಕಾರಿ ಕಟ್ಟಡಗಳಿಗೆ ನಲ್ಲಿಗಳಿಂದ ನೀರು ತಂದುಬಿಟ್ಟಿದ್ದ ಪಕ್ಷದಲ್ಲಿ ಅಂಥಾ ಕಟ್ಟಡಗಳಲ್ಲಿ ವಾಸಮಾಡತಕ್ಕವರು ಸರ್ಕಾರಿ ನೌಕರರಾಗಿದ್ದಾಗ್ಯೂ ನೀರಿನ ತೆರಿಗೆಯನ್ನು ಅವರೇ ಕೊಡಬೇಕಾಗಿದೆ ಎಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ

ಮ್ಯುನಿಸಿಪಾಲಿಟಿಯವರು ಮಾಡಿಸತಕ್ಕ ಕಾಮಗಾರಿಗಳಲ್ಲಾ ಆಯಾ ಕೆಲಸಕ್ಕೆ ಅನುಗುಣವಾದ ಕಟ್ಟಳೆ ದರಗಳನ್ನು ಇಟ್ಟುಕೊಂಡು, ಅದರಂತೆ ಕಾಮಗಾರಿ ಮಾಡಿಸಿ ಹಣ ಪಾವತಿಮಾಡುತ್ತಿದ್ದರು ಈಚೆಗೆ ಇಂಜನಿಯರ್ ಇಲಾಖೆಯವರು ಆಚರಣೆಯಲ್ಲಿಟ್ಟುಕೊಂಡಿರುವಂಥಾ ದರಗಳ ಪಟ್ಟಿಯನ್ನು ತರಿಸಿ ಅಜಮಾಯಿಷಿಮಾಡಿಸಿದರು ಕೆಲವು ದರಗಳು ಮ್ಯುನಿಸಿಪಾಲಿಟಿಯಲ್ಲಿ ಹೆಚ್ಚಾಗಿಯೂ ಇಂಜನಿಯರ್ ಇಲಾಖೆಯಲ್ಲಿ ಕಡಮೆಯಾಗಿಯೂ, ಇನ್ನು ಕೆಲವು ಇಂಜನಿಯರ್ ಇಲಾಖೆಯಲ್ಲಿ ಹೆಚ್ಚಾಗಿಯೂ ಮ್ಯುನಿಸಿಪಾಲಿಟಿಯಲ್ಲಿ ಕಡಮೆಯಾಗಿಯೂ ಇದ್ದವು ಮ್ಯುನಿಸಿಪಲ್ ಕೌನ್ಸಿಲರುಗಳು ಆ ದರಗಳನ್ನೆಲ್ಲಾ ಓದಿಸಿ ಹೋಲಿಸಿ ನೋಡಿ, ಎಲ್ಲಾ ಕಾಮಗಾರಿಗಳಿಗೂ ಕಡಮೆಯಾಗಿದ್ದಂಥಾ ದರಗಳನ್ನೇ ಜಾರಿಯಲ್ಲಿಟ್ಟುಕೊಳ್ಳಬೇಕೆಂದು ಗೊತ್ತುಮಾಡಿದರು.

ಕುಕ್ಕರಹಳ್ಳಿ ಕೆರೆಯ ನೀರು ಕುಡಿಯುವುದು ಯಾವಾಗ್ಯೂ ಆರೋಗ್ಯಕರವಲ್ಲವೆಂದು ಗೊತ್ತಾಗಿರೋದರಿಂದ ಆ ಕೆರೆಯನ್ನು ಇಂಜನಿಯರ್ ಇಲಾಖೆಗೆ ವಹಿಸಿಬಿಟ್ಟಲ್ಲಿ ವ್ಯವಸಾಯಕ್ಕಾದರೂ ಆ ನೀರನ್ನು ಉಪಯೋಗಪಡಿಸಬಹುದಾಗಿದೆ ಎಂದು ಸೂಪರಿಂಟೆಂಡಿಂಗ್ ಇಂಜನಿಯರವರು ಬರೆದಿದ್ದರು. ಕೌನ್ಸಿಲರುಗಳು ಈ ವಿಷಯವನ್ನು ಸ್ವಲ್ಪ ಚರ್ಚಿಸಿ, ಮುಂದಿನ ಮೀಟಿಂಗಿನಲ್ಲಿ ತೀರ್ಮಾನಮಾಡತಕ್ಕದ್ದೆಂತಲೂ, ಅಷ್ಟರೊಳಗಾಗಿ ಆ ಇಂಜನಿಯರವರಿಂದ ವ್ಯವಸಾಯಕ್ಕೆ ಅಂದರೇನು ಎಂಬ ವಿಷಯದಲ್ಲಿ ಅವರ ಅಭಿಪ್ರಾಯವನ್ನು ಸಂಪೂರ್ಣವಾಗಿ ಕೇಳಿ ತಿಳಿಸಬೇಕೆಂತಲೂ ಗೊತ್ತುಮಾಡಿದರು

ಚಾಮರಾಜ ಅಗ್ರಹಾರದ ಮನೆಗಳಲ್ಲಿ ಎರಡು ಮನೆಗಳಿಗೆ ಒಂದರಂತೆ ನೀರಿನ ನಲ್ಲಿಯನ್ನು ಹಿತ್ತಲಿನ ಗೋಡೆಗೆ ಹೊರಗಡೆ ಇಡಿಸಿದ್ದಾರೆ ಆ ಮನೆಗಳವರು ಆ ನಲ್ಲಿಗಳನ್ನು ಒಳಗಡೆಗೆ ಇಡಿಸಿಕೊಡಬೇಕೆಂದು ಅರ್ಜಿ ಬರೆದುಕೊಂಡಿದ್ದರು. ಕೌನ್ಸಿಲರುಗಳು ಆ ನಲ್ಲಿಗಳನ್ನು ನೋಡಿ ಇತ್ಯರ್ಥಮಾಡಬೇಕೆಂದು ಗೊತ್ತುಮಾಡಿದ್ದಾರೆ

ಮೈಸೂರು ಪಟ್ಟಣಕ್ಕೆ ನಲ್ಲಿ ಮೂಲಕ ಒಳ್ಳೇ ಕುಡಿಯುವ ನೀರನ್ನು ತಂದುಬಿಟ್ಟಾಗ್ಗ್ಯೂ, ನೀರಿನ ಏರ್ಪಾಡು ಧರ್ಮಾರ್ಥವಾದದ್ದೆಂದು ತಿಳಿಸಿದ್ದರು ಈಚೆಗೆ ಪ್ರಜೆಗಳಿಂದ ಸಾರ್ವತ್ರಿಕವಾಗಿ ಮನೆ ತೆರಿಗೆಯಂತೆ ನೀರಿನ ತೆರಿಗೆಯನ್ನೂ ಹಾಕಿ ವಸೂಲ್ಮಾಡಬೇಕೆಂದು ಸರ್ಕಾರದಿಂದ ಹುಕುಂ ಬಂದಿತ್ತು ಆಗ್ಗೆ ಮ್ಯುನಿಸಿಪಲ್ ಕೌನ್ಸಿಲರುಗಳು ಈ ವಿಷಯವನ್ನು ಚರ್ಚೆಮಾಡಿ, ಈ ನೀರು ಧರ್ಮಾರ್ಥವಾದ್ದರಿಂದ ಅದಕ್ಕೆ ತೆರಿಗೆ ಹಾಕಕೂಡದೆಂದು ಗವರನ್ಮೆಂಟಿಗೆ ಅರಿಕೆ ಮಾಡಿಕೊಂಡಿದ್ದರು ಈಗ ನೀರಿನ ತೆರಿಗೆಯನ್ನು ಹಾಕಲೇಬೇಕೆಂತಲೂ, ಯಾವ ದರವನ್ನು ಮ್ಯುನಿಸಿಪಲ್ ಬೋರ್ಡಿನವರು ಹಾಕಬಹುದೆಂದು ಅನುಮೋದಿಸುತ್ತಾರೋ ತಿಳಿಸಬೇಕೆಂತಲೂ ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ. ಕೌನ್ಸಿಲರುಗಳು ಈ ವಿಷಯವನ್ನು ಚರ್ಚಿಸಿ ದರವನ್ನು ಗೊತ್ತುಮಾಡುವಂತೆ ಒಂದು ಕಮಿಟಿಯನ್ನು ನೇಮಿಸಿದರು ಈ ಕಮಿಟಿಯ ಮೆಂಬರುಗಳ್ಯಾರೆಂದರೆ— ಮೆ॥ ಗಳಾದ ರಂಗೈಯಂಗಾರ್ಯ, ವೆಂಕಟಕೃಷ್ಣಯ್ಯನವರು, ಮಾದಪ್ಪನವರು, ಅಂಬಳೇ ಅಣ್ಣಯ್ಯ ಪಂಡಿತರು, ವೈಸ್ ಪ್ರಸಿಡೆಂಟರು

ವೀರಣ್ಣನವರ ಛತ್ರ, ಈರನಗೆರೆ, ಕಳೇ ಅಗ್ರಹಾರ, ನಜರಬಾದು, ಈ ಮೊಹಲ್ಲೆಗಳಲ್ಲಿ ಮ್ಯುನಿಸಿಪಲ್ ಆಸ್ಪತ್ರೆಗಳನ್ನು ಬಾಡಿಗೆ ಮನೆಗಳಲ್ಲಿ ಇಟ್ಟು ಇರುತ್ತಾರೆ. ಇದನ್ನು ತಪ್ಪಿಸಿ ಮ್ಯುನಿಸಿಪಾಲಿಟಿಯಿಂದ ಪ್ರತ್ಯೇಕವಾದ ಒಳ್ಳೇ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಸಿವಿಲ್ ಸರ್ಜನರವರು ಬರೆದಿದ್ದರು. ಹೀಗೆ ಕಟ್ಟಿಸುವುದಾದರೆ ಅದರ ಖರ್ಚಿನಲ್ಲಿ ಮೂರನೇ ಒಂದು ಪಾಲು ಹಣವನ್ನು ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನವರು ಕೊಡುವರೆಂತಲೂ ತಿಳಿಸಿದರು. ಈ ವಿಚಾರವನ್ನು ಕೌನ್ಸಿಲರುಗಳು ಚರ್ಚಿಸಿ, ಅದಕ್ಕೆ ಬೇಕಾದ ಅಂದಾಜು ಪಟ್ಟಿಗಳನ್ನು ತಯಾರುಮಾಡಿಸಬೇಕೆಂತಲೂ, ಮುಂದಿನ ವರುಷದ ಖರ್ಚಿನಲ್ಲಿ ಈ ಕಟ್ಟಡಗಳಿಗೂ ಹಣವನ್ನು ಒದಗಿಸಬಹುದೆಂತಲೂ ತೀರ್ಮಾನ ಮಾಡಿದರು.

ಪಶ್ಚಿಮಾಭಿವೃದ್ಧಿಯಲ್ಲಿ ಒಂದು ದೊಡ್ಡ ಸ್ಕೂಲನ್ನು ಕಟ್ಟಬೇಕೆಂದು ತೀರ್ಮಾನವಾಗಿದೆ ಅದಕ್ಕೆ ಸರಿಯಾದ ಸ್ಥಳವನ್ನು ಮೆ॥ ಗಳಾದ ವೀರ್ ಯರವರು, ವೆಂಕಟಕೃಷ್ಣಯ್ಯನವರು, ಸಿವಿಲ್ ಸರ್ಜನರವರು ಸೇರಿ ಅಜಮಾಯಿಷಿ ಮಾಡಿ ಗೊತ್ತುಮಾಡಬೇಕೆಂದು ನಿಷ್ಕರ್ಷೆಯಾಗಿದೆ

ಸರ್ಕಾರಿ ಗಾಡಿಗಳನ್ನೂ ಕುದುರೆಗಳನ್ನೂ ಅಧಿಕಾರಿಗಳಾಗಲಿ ಇತರರಾಗಲಿ ಬಾಡಿಗೆಗೆ ಪಡೆದುಕೊಂಡರೆ ಅಂಥವರಿಂದ ಗಾಡಿ ಮತ್ತು ಕುದುರೆಯ ತೆರಿಗೆಯನ್ನು ವಸೂಲ್ಮಾಡಬೇಕೆಂತಲೂ, ಮ್ಯುನಿಸಿಪಲ್ ಸರಹದ್ದಿನೊಳಗೆ ಉತ್ಪತ್ತಿಯಾಗುವ ತರಿ, ಖುಷ್ಕಿ, ತೋಟಗಾಯಿತು ಉತ್ಪತ್ತಿಯನ್ನೆಲ್ಲಾ ಮ್ಯುನಿಸಿಪಾಲಿಟಿಗೇ ಸೇರಿಸಿಕೊಳ್ಳಬೇಕೆಂತಲೂ, ದೊಡ್ಡ ಕೆರೆ ಏರಿ ಕೆಳಗಣ ರಸ್ತೆಗೆ ಜಲ್ಲಿ ಕಲ್ಲು ಹಾಕಿ ಗಟ್ಟಿಮಾಡಬೇಕೆಂತಲೂ, ಅಕ್ಟ್ರಾಯಿ ಇಲಾಖಾ ನೌಕರಮಾನೇರಿಗೆಲ್ಲಾ ಮುಫತ್ತಾಗಿ ಯೂನಿಫಾರಂ ದಿರಸುಗಳನ್ನು ಕೊಡಿಸಬೇಕೆಂತಲೂ, ಬೆಂಗಳೂರಿನಲ್ಲಿರುವಂತೆ ರಾಜಧಾನಿಯಲ್ಲೂ ಎಲ್ಲಾ ಮೊಹಲ್ಲೆಗಳಲ್ಲೂ ಸ್ನಾನಘಟ್ಟಗಳನ್ನು (ಕೊಳ) ಕಟ್ಟಿಸಿಕೊಡಬೇಕೆಂತಲೂ ಮೆ॥ ಶ್ರೀಕಂಠಯ್ಯನವರು ಸೂಚಿಸಿದರು ಈ ವಿಷಯಗಳನ್ನು ಮ್ಯಾನೇಜಿಂಗ್ ಕಮಿಟಿಯವರು ಚರ್ಚೆಮಾಡಿ, ರಿಪೋರ್ಟನ್ನು ಬೋರ್ಡಿಗೆ ಕಳುಹಿಸತಕ್ಕದ್ದೆಂದು ಗೊತ್ತುಮಾಡಿದರು

ಪ್ರತಿ ಒಂದು ಮೊಹಲ್ಲೆಯ ಮಧ್ಯಪ್ರದೇಶದಲ್ಲೂ ದೊಡ್ಡದಾಗಿಯೂ ವಿಸ್ತಾರವಾಗಿಯೂ ಇರುವಂಥಾ, ಹುಡುಗರಿಗೂ ಹುಡುಗಿಯರಿಗೂ ಅನುಕೂಲಿಸುವಂಥಾ ಎರಡೆರಡು ಸ್ಕೂಲ್ ಕಟ್ಟಡಗಳನ್ನು ಮ್ಯುನಿಸಿಪಾಲಿಟಿಯಿಂದ ಕಟ್ಟಿಸಿಕೊಡಬೇಕೆಂತಲೂ, ಆ ಸ್ಕೂಲುಗಳಿಗೆ ಅವಶ್ಯವಾದ ಪದಾರ್ಥಗಳನ್ನು ಒದಗಿಸಿಕೊಡಬೇಕೆಂತಲೂ ಮೆ॥ ವೆಂಕಟಕೃಷ್ಣಯ್ಯನವರು ಸೂಚಿಸಿದರು ಈಗಿರುವ ಸ್ಕೂಲ್ ಕಮಿಟಿ ಮೆಂಬರುಗಳು ಜಿಲ್ಲಾ ಆಫೀಸರ ಮತ್ತು ಮ್ಯುನಿಸಿಪಲ್ ಇಂಜನಿಯರ ಸಹಾಯವನ್ನು ಪಡೆದು, ಸ್ಥಳ ಗೊತ್ತುಮಾಡುವುದೇ ಮೊದಲಾದ ವಿಷಯಗಳನ್ನೆಲ್ಲಾ ನಿಷ್ಕರ್ಷೆಮಾಡಬೇಕೆಂದು ಕೌನ್ಸಿಲರುಗಳು ತೀರ್ಮಾನಿಸಿರುತ್ತಾರೆ

ನಜರಬಾದ್ ಆಸ್ಪತ್ರೆಗೆ ಒಬ್ಬ ಸೂಲಗಿತ್ತಿಯನ್ನು ನೇಮಿಸಿಕೊಡಬೇಕೆಂದು ಸೂಚಿಸಿದ್ದಕ್ಕೆ ಸೀನಿಯರ್ ಸರ್ಜನರವರು ಸದ್ಯದಲ್ಲಿ ಯೋಗ್ಯರಾದ ಸೂಲಗಿತ್ತಿಯರ್ಯಾರೂ ದೊರಕಲಿಲ್ಲವೆಂದು ಜವಾಬು ಕೊಟ್ಟಿದ್ದಾರೆ

ತಾಲ್ಲೂಕು ವರ್ತಮಾನಗಳು

ಆನೇಕಲ್ ತಾ॥ ದೊಮ್ಮಸಂದ್ರ ಈ ಊರಿನಲ್ಲಿ ಪ್ಲೇಗ್ ಗಲಾಟೆ ನಿಂತು ಊರುಬಿಟ್ಟಿದ್ದ ಜನಗಳು ಪುನಃ ಊರಿಗೆ ಬಂದು ಸೇರುತ್ತಿದ್ದಾರೆ. ಮಳೆ ಬೆಳೆಗಳು ತಕ್ಕಮಟ್ಟಿಗೆ ಆಗಿದ್ದಾಗ್ಯೂ ರೈತರು ರಾಗಿಯನ್ನು ಜಬರಾದ ಕಾಲದಲ್ಲಿ ಮಾರಬೇಕೆಂಬ ಆಶೆಯಿಂದ ಪಾತ್ರೆಗಳಲ್ಲಿ ತುಂಬಿದ್ದಾರೆ ಈ ಊರಲ್ಲಿ ದೇವಾಂಗದವರೂ ಮತ್ತು ನೀಲಿಕಾರ್ಖಾನೆಗಳ ಕೂಲಿ ಜನಗಳೂ ಬಹಳ ಇರುವುದರಿಂದ ಬಡ ಜನಗಳಿಗೆ ರಾಗಿ ಸಿಕ್ಕುವುದೇ ಕಷ್ಟವಾಗಿದೆ ಅನೇಕ ಬಡಜನರು ರಾಗಿ ಸಿಕ್ಕದೆ ಒಂದೆರಡು ಹೊತ್ತು ಉಪವಾಸವಾಗಿರುತ್ತಾರೆ. ಇಂಥಾ ಕಷ್ಟಕಾಲದಲ್ಲಿ ಇಲ್ಲಿನ ನೀಲಿಕಾರ್ಖಾನೆ ಮೆ॥ ಬಡೇಸಾಹೇಬರೂ ಮತ್ತು ಅವರ ಮಕ್ಕಳು ಅಬ್ದುಲ್ ಖಾದರ್ ಸಾಹೇಬರೂ ಮೊದಲೇ ತೆಗೆದಿಟ್ಟಿದ್ದ ರಾಗಿಯನ್ನು ಬಡ ಜನಗಳಿಗೆಲ್ಲಾ ಯಾವ ನಫೆಯೂ ಇಲ್ಲದೆ ಸುಲಭ ಖರೀದಿಗೆ ಮಾರುತ್ತಿದ್ದಾರೆ ಈಗ ಬಡ ಜನಗಳೆಲ್ಲಾ ಇಂಥಾ ಕಷ್ಟಕಾಲದಲ್ಲಿ ಇಷ್ಟುಮಾತ್ರ ರಾಗಿ ಸಿಕ್ಕಿತಲ್ಲಾ ಎಂದು ಸಂತೃಪ್ತರಾಗಿರುತ್ತಾರೆ.

ತರೀಕೆರೆ. ತರೀಕೆರೆಗೆ ಚಿಕ್ಕಮಗಳೂರು ತಾಲ್ಲೂಕು ಸರ್ವಇನಾಂ ಬೆಳವಾಡಿ ಗ್ರಾಮದ ಪಟೇಲರಾದ ಬ್ರಂ॥ ವೆಂಕಟದಾಸಪ್ಪನವರು ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿ ಸಮೇತರಾಗಿ ದಯಮಾಡಿಸಿ ಇಲ್ಲಿನ ಸರ್ಕಾರಿ ಛತ್ರದಲ್ಲಿ ಬಿಡಾರ ಮಾಡಿರುತ್ತಾರೆ ಇವರು ಒಂದು ದಿನ ಪರಮಾತ್ಮನ ಲೀಲಾರೂಪವಾದ ಪ್ರಪಂಚ ಧರ್ಮವನ್ನು ಕುರಿತು ಉಪನ್ಯಾಸ ಮಾಡಿದರು ಒಂದುದಿನ ಕಡೂರು ಡಿಸ್ಟ್ರಿಕ್ಟ್ ಡಿಪ್ಯುಟಿ ಕಮಿಷನರ್ ಸಾಹೇಬರವರು, ಅ॥ ಕಮಿಷನರು ತಾ॥ ಅಮಲ್ದಾರರು, ಇನ್ಸ್ಪೆಕ್ಟರು, ಡಾಕ್ಟರು, ಕಡೂರು ಸಿವಿಲ್ ಸರ್ಜನರವರು, ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಮೆಂಬರು ಮುಂತಾದ ದೊಡ್ಡ ಮನುಷ್ಯರುಗಳೊಂದಿಗೆ ಮೇಲ್ಕಂಡ ಛತ್ರಕ್ಕೆ ದಯಮಾಡಿ ದೇವತಾ ದರ್ಶನವನ್ನು ಮಾಡಿ ಟವುನ್ನಿನೊಳಗೆ ದಯಮಾಡಿಸುತ್ತಾ ಇರುವಲ್ಲಿ ಅಲ್ಲಲ್ಲಿ ಪ್ಲೇಗು ತಲೆದೋರುತ್ತಾ ಇರುವುದನ್ನು ತಿಳಿದು, ಎಲ್ಲರೂ ಶೀಘ್ರತೆಯಿಂದ ಷೆಡ್ಡುಗಳಿಗೆ ಹೋದರೆ ದೇವರು ಒಳ್ಳೇದು ಮಾಡುವನೆಂದು ಅಲ್ಲಿ ದಯಮಾಡಿಸಿದ್ದವರೆಲ್ಲರಿಗೂ ಅಪ್ಪಣೆ ಕೊಡಿಸಿ ಬೇಗ್ನೆ ದಯಮಾಡಿಸಿದರು. ನಾಳೆ ಲಕ್ಕವಳ್ಳಿ ಮಾರ್ಗವಾಗಿ ಕೊಪ್ಪ, ಶೃಂಗೇರಿ ಪ್ರಾಂತ್ಯ ಪ್ರಯಾಣ ಮಾಡಿಸುತ್ತಾರೆಂದು ವರ್ತಮಾನವಿದೆ.

ಹೊಸದುರ್ಗ ಬಿಸಲಿನ ಧಗೆಯು ಜಾಸ್ತಿಯಾಗಿದೆ. ರೈತರು ಕಣದ ಕೆಲಸಗಳನ್ನು ಮುಗಿಸುತ್ತಾ ಬಂದರು ಅನೇಕ ಕೆರೆಗಳಲ್ಲಿ ಕಡಲೇ ಪೈರು ಬಿತ್ತನೆಯಾಗಿದೆ ಸಂತೆಯು ಸಾಧಾರಣವಾಗಿ ಸೇರುತ್ತೆ. ಜನರೆಲ್ಲಾ ಆರೋಗ್ಯವಾಗಿರುತ್ತಾರೆ ಈ ತಾಲೂಕು ಪೈಕಿ ಹುಣ್ಣಿರು ಜಮಾಬಂದಿಯಾಗಿಲ್ಲ ದೇವಪುರದಲ್ಲಿ ಅಮ್ಮನ ಜಾತ್ರೆಯು ಮುಗಿಯಿತು ಹೋದ ವರ್ಷದಂತೆಯೇ ಈ ವರ್ಷವೂ ಇಸ್ಟೇಟ್ ಕಂಪೆನಿಯು ಬಲವಾಗಿ ಸೇರಿತ್ತು ಈ ಆಟಕ್ಕೆ ಹುಬ್ಬಳ್ಳಿ ಕಡೆ ಜನರೂ ಬಂದಿದ್ದರು ವರ್ತಕರೂ, ಯಾತ್ರಿಕರೂ ಬಹುಜನ ಸೇರಿದ್ದರು ಬೂದಿಹಾಳ್ ಗ್ರಾಮದ ಕೆರೆಯಲ್ಲಿ ಕಡಲೇ ಸಾಗು ಆಗಿದೆ. [illegible] ಲಾಗಾಯ್ತು ಗ್ರಾಮ[illegible] ಚನ್ನಾಗಿದೆ ಬೆಳಗೂರಿನಲ್ಲಿ ಬ್ರ॥ ಕೃಷ್ಣಪ್ಪನವರು ಸುಮಾರು ೪—೬ ತಿಂಗಳ ಕೆಳಗೆ ತಾಲೂಕು ಘಟ್ಟದ ಉಜ್ಜಯಿನೀ ಮಠದ ಏಜಂಟು ಮೆ॥ ಚನ್ನಬಸವಾಧ್ಯರ ಗುಮಾಸ್ತೆಯ ಕುದುರೆಯನ್ನು ತಮ್ಮದೆಂದು ತಡೆದು ಕಟ್ಟಿಕೊಂಡ ವಿಷಯದಲ್ಲಿ ಫಿರ್ಯಾದು ನಡೆದು ವಿಚಾರಣೆಯಾಗುವ ಪರಿಯಂತರ ಸರ್ಕಾರಿ ಸುಪರ್ದಿನಲ್ಲಿ ಕುದುರೆಯು ಇರಬೇಕೆಂದು ಪೋಲೀಸಿನವರ ವಶದಲ್ಲಿ ಬಿಟ್ಟಿದ್ದ ಈಗ ಬೆಳಗೂರು ಪಟೇಲರ ವಶಕ್ಕೆ ಕೊಟ್ಟಿರುತ್ತಾರೆ. ತಾ॥ ೨—೬ ನೇ ದಿನ ಇಲ್ಲಿನ ಪೋಲೀಸ್ ದಫೇದಾರರು—"ಹೊಸದಾಗಿ ಚಲಾವಣೆಗೆ ಬಂದಿರುವ ನಿಕ್ಕಲ್ ಲೋಹದ ಒಂದಾಣೆ ನಾಣ್ಯವನ್ನು ಚಲಾವಣೆ ಮಾಡದೆ ಬೇಕಿಲ್ಲವೆಂದು ತಿರಸ್ಕರಿಸುವವರಿಗೆ ಸರ್ಕಾರದವರು ಜುಲ್ಮಾನೆಯನ್ನು ವಿಧಿಸುತ್ತಾರೆ" ಎಂದು ಊರಿನಲ್ಲೆಲ್ಲಾ ಟಾಂ ಟಾಂ ಹೊಡಿಸಿದರು. ನವನಾಗರೀಕತೆ ಅರಿಯದ ಇಲ್ಲಿನ ಕೆಲವು ರೈತರು ಇದನ್ನು ಕೇಳಿ—ಇನ್ನು ಮುಂದೆ ಬೆಳ್ಳಿನಾಣ್ಯ ಕಡಮೆಯಾಗುತ್ತೆ ಎಂದು ತಂಡ ತಂಡವಾಗಿ ಮನಸ್ಸಿಗೆ ಬಂದಂತೆ ಮಾತನಾಡುವರು ಬೆಳಗೂರು ಸ್ಕೂಲ್ ಇನ್ಸ್ಪೆಕ್ಷನ್ಗಾಗಿ ಡೆಪ್ಯುಟಿ ಇನ್ಸ್ಪೆಕ್ಟರು ಬಂದು ಇದ್ದರು ಸ್ಕೂಲ್ ವಿಷಯದಲ್ಲಿ ಗ್ರಾಮಸ್ಥರನ್ನು ಕರೆಸಿ, ಅಭಿವೃದ್ಧಿ ಸ್ಥಿತಿಗೆ ತರುವ ವಿಷಯಕ್ಕೆ ಗಮನ ಕೊಡುವಂತೆ ತಿಳಿಸಿ ಆ ದಿನ ರಾತ್ರಿ ಸ್ಕೂಲ್ ಬಾಲಕರನ್ನೂ ಇತರರನ್ನೂ ಸೇರಿಸಿಕೊಂಡು, ಗ್ರಾಮಫೋನಿಂದಲೂ, ಮ್ಯಾಜಿಕ್ ಲ್ಯಾಂಟರ್ನ್ ಆಟದಿಂದಲೂ ಸಂತೋಷಪಡಿಸಿ ಮರುದಿನ ಬೆಳಗ್ಗೆ ಬೂದಿಹಾಳ್‌ಗೆ ಹೊರಟುಹೋದರು

ಮಳವಳ್ಳಿ - ಈ ತಿಂಗಳು ೨ನೇ ತಾ ಸೋಮವಾರ, ಮಧ್ಯಾಹ್ನ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರು ಜಮಾಬಂದಿಯ ಉದ್ದೇಶ್ಯ ದಯಮಾಡಿಸಿದರು ಇನ್ನು ಕೊಂಚ ಕಾಲ ಇಲ್ಲೇ ಇರುತ್ತಾರೆ —ಈ ಊರಲ್ಲಿ ವಿಲೇಜ್ ಪೋಸ್ಟು ಮಾಸ್ಟರ್ ವೆಂಕಟಸುಬ್ಬಯ್ಯನೆಂಬುವನು ೨ ಡಪ್ರಸ್ ಫೂರ್ ನಾಟ್ ಕಂಪನಿಗೆ ಇಲ್ಲಿಯ ಕೆಲವು ಗ್ರಾಮದ ಮುಖ್ಯಸ್ಥರಿಗೆ ಅವರ ಅನುಮತಿ ಇಲ್ಲದೆ ಕಾಗದಗಳನ್ನು ಬರೆದು, ವಿ ಪಿ ಮೂಲಕ ಪಾರ್ಸಲ್‌ಗಳು ಬಂದ ಬಳಿಕ ಆ ವಿಳಾಸದಾರರುಗಳಿಗೆ ತಿಳಿಸದೆ ಅದನ್ನೆಲ್ಲಾ ಒಡೆದು ಅದರ ತುಂಬಾ ಇಟ್ಟಿಗೆ ಮಣ್ಣು ಇವುಗಳನ್ನು ತುಂಬಿ ವಾಪಸು ಮಾಡಿದನು ಆ ಕಂಪೆನಿಯ ಮ್ಯಾನೇಜರು ಈ ರೀತಿ ಮೊದಲು ಏವಸ ತಿರಸ್ಕಾರವಾಗಿ ಹೋದ ಪಾರ್ಸಲ್ ಒಂದನ್ನು ಒಡೆದು ನೋಡುವಲ್ಲಿ ಅದರಲ್ಲಿ ಮಣ್ಣೇ ಇತ್ತು ಅದನ್ನು ಪೋಸ್ಟ್ ಆಫೀಸ್ ಮುಖ್ಯಸ್ಥರಿಗೆ ತಿಳಿಯಪಡಿಸಿ, ನಂತರ ಹೋದ ಪಾರ್ಸಲುಗಳನ್ನೆಲ್ಲಾ ಅವರ ಸಮಕ್ಷಮ ಒಡೆದು ನೋಡುವಲ್ಲಿ ಅವುಗಳಲ್ಲಿಯೂ ಇದೇ ರೀತಿ ಮಣ್ಣು, ಇಟ್ಟಿಗೆಯೇ ಇತ್ತು ಆಗ ಇಲ್ಲಿಯ ಪೋಸ್ಟ್ ಆಫೀಸು ಸೂಪರಿಂಟೆಂಡೆಂಟಿಗೆ ತಂತಿ ಮೂಲಕ ತಿಳಿಯಪಡಿಸಿದರು ಪೋಸ್ಟಲ್ ಇನ್ಸ್ಪೆಕ್ಟರು ಇಲ್ಲಿಗೆ ದಯಮಾಡಿಸಿ ಪತ್ತೆ ತರದೂದು ಬಗ್ಗೆ ಇಲ್ಲಿನ ಪೋಲೀಸ್ ಇಲಾಖೆಗೆ ಇವನನ್ನು ಕೊಟ್ಟರು ಇವನ ವಾಸಸ್ಥಳದಲ್ಲಿ ಖರೀದಿಗೆ ಪಡೆದಿದ್ದ ಮನುಷ್ಯರಲ್ಲಿ ಕೆಲವು ಸಾಮಾನುಗಳೆಲ್ಲಾ ಸಿಕ್ಕಿದವು ನಾಳೆಯ ಸೋಮವಾರದ ದಿವಸ ಈ ಕೇಸು ಮೈಸೂರಿನಲ್ಲಿ ವಿಚಾರಣೆಯಾಗುತ್ತಿದೆ ಕೊಳ್ಳೇಗಾಲ, ಶಿವನಸಮುದ್ರ, ಮಳವಳ್ಳಿಯಲ್ಲಿಯ ವರ್ತಕರು ತಮ್ಮ ಸಾಮಾನುಗಳನ್ನು ಕಳುಹಿಸಬೇಕಾದರೂ ತರಿಸಿಕೊಳ್ಳಬೇಕಾದರೂ ಮದ್ದೂರು ರೈಲ್ವೆ ಸ್ಟೇಷನಿಗೆ ಹೋಗಬೇಕು. ಸಂಚಿಗಸ್ತಾದ

...ಯವರ ಕೈಯಲ್ಲಿ ತರಿಸಿಕೊಳ್ಳುವುದು ಸಾಧಾರಣವಾಗಿದೆ. ಈ ...ಪ್ಲೀಸ್ ಪೇಟೆಯ ಒಬ್ಬ ವರ್ತಕರು ಕೊಳ್ಳೇಗಾಲಕ್ಕೆ ಕೆಲವು ...ಸಾಮಾನುಗಳನ್ನು ಕಳುಹಿಸಿದರು. ಮಧ್ಯ ದಾರಿಯಲ್ಲಿ ಅವರ ಸಾಮಾ...ನಲ್ಲಿ ಅರ್ಧಕ್ಕಿಂತಲೂ ಹೆಚ್ಚಾಗಿ ಕಳುವಾಗಿರುವಂತೆ ತಿಳಿಯಬರು...ದೆ. ಇಂಥಾ ಘಾಟಾ ಮಾರ್ಗಗಳಲ್ಲಿ ಈ ರೀತಿ ತೊಂದರೆಯುಂಟಾ...ಗದ ಜನಗಳು ಮಾಡತಕ್ಕದ್ದೇನಿದೆ?—ಇಲ್ಲಿಯ ಗವರ್ನಮೆಂಟ್ ...ವಿ. ಸ್ಕೂಲು ಇಂಗ್ಲೀಷು ತರಗತಿಗಳಲ್ಲಿ ಪ್ರತಿ ತಿಂಗಳಲ್ಲಿಯೂ ...ರ್ಥಿಗಳ ಸಂಖ್ಯೆಯು ಕಡಮೆಯಾಗುತ್ತಲಿದೆ. ಪಾಠಗಳು ಸರಿ...ಗಿ ನಡಿಯದೇ ಇರುವುದರಿಂದ ಕೋಟೆ ಮತ್ತು ಪೇಟೆಗಳಲ್ಲಿ ...ಪ್ರೈವೇಟ್ ಸ್ಕೂಲುಗಳು ಏರ್ಪಾಡಾಗಲು ಕಾರಣವಾಗಿದೆ. ನಮ್ಮ ...ಇನ್ಸ್‌ಪೆಕ್ಟರವರು ಸದ್ಯದಲ್ಲೇ ದಯಮಾಡಿಸಿ, ಹಾಗೇನಾದರೂ ...ಗಳಲ್ಲಿ ಅದಕ್ಕೆಲ್ಲಾ ತಕ್ಕ ಏರ್ಪಾಡು ಮಾಡಿ ವಿದ್ಯಾಭ್ಯಾ...ಸ ಮಾಡುವರೆಂದು ಕೋರುತ್ತೇವೆ.—ಬಹುಕಾಲದಿಂದಲೂ ವಿದ್ಯಾ...ರ್ಥಿಗಳು ವಿನೋದವನ್ನು ಹೊಂದುತ್ತಿದ್ದ ಚೆಂಡು ಆಟದ ಪ್ರದೇಶದಲ್ಲಿ ...ಟಾಂಗಾ ಕುದುರೆಗಳಿಗೆ ಷೆಡ್ಡು ಹಾಕಿರುವುದು ಬಾಲಕರಿಗೆ ...ಅನಾನುಕೂಲವಾಗಿರುತ್ತದೆ. ಸಾರ್ವಜನಿಕ ಆಟಗಳಲ್ಲಿ ...ಪ್ರಸಿದ್ಧ ಮಾಡತಕ್ಕ ಸರ್ಕಾರದವರು ಬೇರೇ ಸ್ಥಳದಲ್ಲಿ ಕುದುರೆ...ಯ ಶೆಡ್ಡು ಏರ್ಪಾಡು ಮಾಡಿ, ಬಾಲಕರಿಗೆ ಅನುಕೂಲಮಾಡಿ...ಕೊಡುತ್ತಾರೆಂದು ಕೋರುತ್ತೇವೆ.

ಹೊಳಲ್ಕೆರೆ. ಈ ಊರಿನ ರೈಲ್ವೇ ಸ್ಟೇಷನ್ನಿನಲ್ಲಿ ಜೋಳ, ...ಗಿ, ಖುರ್, ನಾಣ್ಯ, ಸಾಸ್ವೆ, ಇವುಗಳ ವ್ಯಾಪಾರವು ದಿನ ಒಂದಕ್ಕೆ ೨೦೦೦-೩,೦೦೦ ಬೆಲೆವರೆಗೂ ಬಿಕರಿಯಾಗುತ್ತೆ. ಮತ್ತು ದಿನೇ ದಿನೇ ಧಾರಣೆ ಭಾವವು ಏರುತ್ತೆಯೇ ಹೊರ್ತು ಇಳಿತಂ ಆಗುವದಿಲ್ಲ. ...ಊರಲ್ಲಿ ಮೂರು ಕೆರೆಗಳಲ್ಲಿಯೂ ನೀರು ಇಲ್ಲದಕಾರಣ ಕೆರೆ...ಯ ಹಿಂದೆ ಇರತಕ್ಕ ೩೦೦-೪೦೦ ತೋಟಗಳು ಒಣಗಿಹೋಗುತ್ತಲಿವೆ ಮತ್ತು ದನಕರುಗಳಿಗೂ ಜನಗಳಿಗೂ ನೀರಿಗೆ ತೊಂದರೆಯು ಬಹಳ ...ವಾಗಿದೆ. ಈಗ ಅರ್ಧ ಗ್ರಾಮಕ್ಕೆಲ್ಲಾ ವೈಶ್ಯರ ಅನಂತ ಶೆಟ್ ಪುಟ್ಟ...ಪ್ಪನವರ ಬಾವಿಯೇ ಪೂರೈಸಿದೆ. ಈ ಬಾವಿಯಲ್ಲಿ ಒಂದು ತೆಂ...ಗಿನ ಮರ ನೀರು ಸುಮಾರು ಆಳ. ಇದೇ ಬಾವಿಯಿಂದ ೨೦ ಗಜ ದೂರ...ದಲ್ಲಿರುವ ಕಲ್ಲಪ್ಪನ ಬಾವಿಯಲ್ಲಿ ಬಟ್ಟೆ ಒಗೆಯುವಿಕೆ ಅನುಕೂಲ...ವಿತ್ತು. ಈಗ ಅದರಲ್ಲಿಯೂ ನೀರು ಕೆಟ್ಟು ಕಸ ಕಡ್ಡಿ ತುಂಬಿಕೊಂ...ಡು ನೀರೆಲ್ಲಾ ಹಸುರಾಗಿದೆ. ಮತ್ತು ಇದರ ಸುತ್ತಲೂ ಗಿಡಗಳು ಬೆಳ...ದು ಜನಗಳು ತುಂಬಾ ಗಲೀಜು ಮಾಡುತ್ತಾ ಇದ್ದಾರೆ. ಇದನ್ನು ...ಲೋಕಲ್ ಫಂಡ್ ಕಮಿಟಿಗೆ ಸಂಬಂಧಪಟ್ಟವರು ಊರಲ್ಲಿ ...ವಸೂಲ್ ಮಾಡುತ್ತಾ ಇದ್ದಾರೆ. ಇಸ್ಪೀಟು ಆಟಗಳು ಜೋರಾಗಿವೆ. ...ಕೆಲವರ ಹುಡುಗರು ಸೇರಿ ಚಾವಡಿಯಲ್ಲಿ ಇಸ್ಪೀಟು ಆಟವನ್ನು ಆಡು...ತ್ತಾರೆ. ಇದಕ್ಕೆ ಪೋಲೀಸಿನವರು ಸಿಗಾ ಕೊಡುವದಿಲ್ಲ.—ಮಂಗಳ...ವಾರ ರಾತ್ರಿ ಮರ್ಚೆಂಟ್ ಉದ್ಧಾರಪ್ಪನವರ ಮನೆ ಸುಟ್ಟು ೧೫೦-೨೦೦ ...ರೂಪಾಯಿ ಮಾಲು ನಷ್ಟವಾಯಿತು.—ಬಹಳ ವ್ಯಾಪಾರವು ಮಂದವಾ...ಗಿದೆ. ಈಗ್ಗೆ ೧೫-೨೦ ದಿವಸದ ಮುಂಚೆ ಅನಂತ ಸುಬ್ರಾಯ ಪ್ರಭು ...ದಾವಣಗೆರೆಗೆ ೨೫೦ ರೂಪಾಯಿನ ಅರ್ಧ ನೋಟು ರಿಜಿಸ್ಟರು ಮಾಡಿಸಿದ್ದರು. ಮೊದಲು ಅರ್ಧ ನೋಟಿಗೆ ಜವಾಬು ಬಂದನಂತರ ...ಅರ್ಧ ನೋಟನ್ನು ರಿಜಿಸ್ಟರು ಮಾಡಿದರು. ಆ ರಿಜಿಸ್ಟರನ್ನು ...ಒಡೆದು ಅದರಲ್ಲಿದ್ದ ನೋಟನ್ನು ತೆಗೆದುಕೊಂಡಿರುತ್ತಾರೆ. ಇದನ್ನು ...ಪೋಸ್ಟು ಇಲಾಖೆಯವರು ವಿಚಾರಮಾಡುತ್ತಾ ಇದ್ದಾರೆ. ಈ ಗವರ್ನ...ಮೆಂಟಿನ ರಿಜಿಸ್ಟರ ಮೂಲಕ ನೋಟು ಕಳುಹಿಸುವುದೂ ಬಹಳ ಕಷ್ಟ...ವಾಗಿದೆ.—ಸದ್ಯ ಈ ಗ್ರಾಮದಲ್ಲಿ ರೋಗಾದಿಗಳ ಉಪಾಂತ್ರವೇನೂ ...ಇಲ್ಲ.

ಇಂಡಿಯಾ ದೇಶದ ವೃತ್ತಾಂತಗಳು.

ಸೇಲಂಪಟ್ಟಣದ ಅಂಗಡೀ ಬೀದಿಯಲ್ಲಿ ಕಳೆದ ವಾರ ಬೆಂಕಿ ಬಿದ್ದು ಎರಡು ದೊಡ್ಡ ಅಂಗಡಿಗಳು ಸಾಮಾನುಸಹಿತ ಸುಟ್ಟುಹೋಗಿ ಮಾಲೀಕರಿಗೆ ಒಂದು ಲಕ್ಷ ರೂಪಾಯಿಯ ನಷ್ಟವಾಯಿತು.

❦❦❦

ಬೊಂಬಾಯಿನ ಟಂಕಸಾಲೆಯಲ್ಲಿ ಕೆಲವು ಕಾಲದಿಂದ ಇತರ ದೇಶದ ನಾಣ್ಯವನ್ನು ಛಾಪಾ ಹಾಕದೆ ಬರೀ ಒಂದಾಣೆಯ ನಿಕ್ಕಲ್ ನಾಣ್ಯಗಳನ್ನೇ ಮಾಡಿ ಚಲಾವಣೆಗೆ ಕೊಡುತ್ತಿದ್ದಾರೆ

❦❦❦

ಹುಚ್ಚುನಾಯಿ ನರಿಯಿಂದ ಕಡಿಸಿಕೊಂಡವರಿಗೆ ಚಿಕಿತ್ಸೆ ಮಾಡುವುದಕ್ಕೆ ಬನಾರಸಿನಲ್ಲಿ ಒಂದು ಆಸ್ಪತ್ರೆ ಆಗಬೇಕೆಂದು ಅಲ್ಲಿನವರು ಪ್ರಯತ್ನಪಟ್ಟು ಚಂದಾ ಕೂಡಿಸಿದ್ದರಲ್ಲಿ ಅದಕ್ಕೆ ಬೇಕಾಗಿದ್ದ ೮೦ ಸಾವಿರ ರೂಪಾಯಿಗಿಂತ ಇನ್ನೂ ೧೦ ಸಾವಿರ ರೂಪಾಯಿ ಹೆಚ್ಚಾಗಿ ಕೂಡಿದೆ

❦❦❦

ಖಾಲಿಯಾದ ಪಂಜಾಬ್ ಲೆಫ್ಟಿನೆಂಟ್ ಗವರ್ನರ್ ಕೆಲಸವು ಸರ್ ...ಡೇನಿಯಲ್ ರವರಿಗೂ, ಇವರು ನೋಡುತ್ತಿದ್ದ ರೆವಿನ್ಯೂ ಸೆಕ್ರೆಟರಿ ...ವೆಸಿ ಎಸ್. ಎಚ್. ಬಟ್ಲರ್ ರವರಿಗೂ ಸೇರಿ... ಎಸ್. ಎಂ. ಫ್ರೇಸರ್ ರವರು ಇನ್ನು ಕೆಲವು ಕಾಲ ವೈಸ್‌ರಾ...ಯ ಕೌನ್ಸಿಲಿನಲ್ಲಿಯೇ ಇರುವಂತಾಯಿತು.

❦❦❦

ದರ್ಭಾಂಗದ ಮಹಾರಾಜರವರಿಗೆ ಪುತ್ರೋತ್ಸವದ ಸಂತೋಷದಲ್ಲಿ ಕಲ್ಕತ್ತಾ ಯೂನಿವರ್ಸಿಟಿ ವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಒಂದು ಸರಸ್ವತೀ ಭಂಡಾರವನ್ನು ಸ್ಥಾಪಿಸಬೇಕೆಂದು ಹೇಳಿ ಅದಕ್ಕಾಗಿ ಇವರು ಎರಡೂವರೆ ಲಕ್ಷ ರೂಪಾಯನ್ನು ಲೆಫ್ಟಿನೆಂಟ್ ಗವರ್ನರ ಧರ್ಮಾರ್ಥವಾಗಿ ಕಳುಹಿಸಿಕೊಟ್ಟಿದ್ದಾರೆ.

❦❦❦

ಸಿಲೋನ್ (ಲಂಕಾ) ದ್ವೀಪದಲ್ಲಿ ತೆಂಗಿನ ಮರಗಳಿಗೆ ಒಂದು ವಿಧ ...ವಾದ ಹುಳ ಹಿಡಿದು ಗಿಡವನ್ನೂ ಫಲವನ್ನೂ ಹಾಳುಮಾಡುತ್ತಿದೆ. ಸರ್ಕಾರದವರು ಅಂಥಾ ಗಿಡಗಳನ್ನು ಕೂಡಲೇ ಕಡಿದು ಸುಟ್ಟುಬಿಡಬೇಕೆಂತಲೂ ಯಾವ ತೋಟದಲ್ಲಾದರೂ ಅಂಥಾ ಮರಗಳಿದ್ದ ಪಕ್ಷದಲ್ಲಿ ಜುಲ್ಮಾನೆ ವಿಧಿಸುವುದಾಗಿಯೂ ರೈತರಿಗೂ ಜಮೀನ್ದಾರರಿಗೂ ಹುಕುಂ ಕೊಟ್ಟಿದ್ದಾರೆ.

❦❦❦

ರಾಜಪುಟಾನಾ ಮಾಳ್ವಾ ರೈಲ್ವೆ ನೌಕರರು ಅಂದರೆ ವಿಶೇಷವಾಗಿ ಪೋಲೀಸಿನವರು ಈಗ ಕ್ಷಾಮ ಪ್ರಾಪ್ತವಾಗಿರುವುದರಿಂದ ತಮ್ಮ ಸಂಬಳದ ದರವನ್ನು ಹೆಚ್ಚಿಸಿಕೊಡಬೇಕೆಂದು ಕೇಳಿಕೊಂಡರು. ಅಧಿಕಾರಿಗಳು ಅವಕ್ಕೆ ಲಕ್ಷ್ಯ ಕೊಡದೆ ಎಂದಿನಂತೆಯೇ ಅವರ ಸಂಬಳವನ್ನು ಕೊಟ್ಟರು. ಅದನ್ನು ಪೋಲೀಸ್ ನೌಕರರ್‍ಯಾರೂ ತೆಗೆದುಕೊಳ್ಳದೆ ತಿರಸ್ಕಾರ ಮಾಡಿರುತ್ತಾರೆ.

❦❦❦

ಮಧ್ಯ ಪ್ರಾಂತ್ಯಗಳಲ್ಲಿ ಅಮರಾವತಿ ಎಂಬ ಭಾರೀ ಪಟ್ಟಣದ ಮ್ಯುನಿಸಿಪಾಲಿಟಿಗೆ ಮೆಂಬರಾಗಿದ್ದ ಪ್ರೊ|| ಖಾಪರ್ಡೆ ಯವರನ್ನು ಅಲ್ಲಿನ ಚೀಫ್‌ಕಮಿಷನರರವರು ಕಾರಣಾಂತರದಿಂದ ಮೆಂಬರಕೆಲಸದಿಂದ ವಜಾ ಮಾಡಿಬಿಟ್ಟರು. ಇದನ್ನು ಕೇಳಿ ಅವರ ಕೂಡ ಮೆಂಬರುಗಳಾಗಿದ್ದ ದೇಶೀಯ ದೊಡ್ಡ ಮನುಷ್ಯರು ಆಗ್ರಹಪಟ್ಟು, ಎಲ್ಲಾ ಒಟ್ಟು ಕೂಡಿ ಮೆಂಬರ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ.

❦❦❦

ನೆಲ್ಲೂರು ಡಿಸ್ಟ್ರಿಕ್ಟಿಗೆ ಸೇರಿದ ಕೆಲವು ಗ್ರಾಮಗಳಲ್ಲಿ ಖುಷ್ಕಿ ಜಮೀನುಗಳಿಗೂ ಸಣ್ಣ ಕಾಲ್ವೆಗಳ ಮೂಲಕ ನೀರು ಹಾಯಿಸಿ ಖುಷ್ಕಿ ಫಸಲನ್ನು ಬೆಳಸಬೇಕೆಂದು ಸರ್ಕಾರದವರು ಪ್ರಯತ್ನಪಟ್ಟು ರೈತರಿಗೆ ಪ್ರೋತ್ಸಾಹಕೊಡಲಾರಂಭಿಸಿದ್ದಾರೆ. ಆ ಪ್ರಾಂತ್ಯದಲ್ಲಿ ಮಳೆ ಬೀಳುವುದು ಬಹಳ ಕಡಮೆಯಾದಕಾರಣ ಮದರಾಸ್ ಗವರ್ನಮೆಂಟಿನವರು ಈ ಏರ್ಪಾಡನ್ನು ಜಮಾಯಿಷಿ ತರೀಖು ಸ್ಯಾಂಕ್ಷನ್ ಮಾಡಿರುತ್ತಾರೆ

❦❦❦

ಕಲ್ಕತ್ತಾ ಪಟ್ಟಣದ ಹತ್ತಿರ ಧನವೈದ್ಯವೆಂಬ ಸ್ಟೇಷನಿನಲ್ಲಿ ರೈಲ್ವೆ ಕೂಲಿಕಾರರಿಗೆ ಕೂಲಿ ಕೊಡುವುದಕ್ಕಾಗಿ ಒಂದು ಕಬ್ಬಿಣದ ಪೆಟ್ಟಿಗೆಯಲ್ಲಿ ಹಣವನ್ನು ಇಟ್ಟು, ಒಬ್ಬ ಜವಾನನನ್ನು ಕಾವಲು ನೇಮಿಸಿದ್ದರು. ಆರು ಮಂದಿ ಕಳ್ಳರು ಇದನ್ನು ನೋಡಿಕೊಂಡಿದ್ದು ಬಂದು ಆ ಜವಾನನನ್ನು ಹಿಡಿದು ಕಟ್ಟಿಹಾಕಿ, ಕಬ್ಬಿಣದ ಪೆಟ್ಟಿಗೆಯನ್ನು ಒಡೆದು, ಅದರಲ್ಲಿದ್ದ ೨೩,೦೦೦ ರೂಪಾಯನ್ನು ಅಪಹರಿಸಿಕೊಂಡು ಹೋಗಿದ್ದಾರೆ.

❦❦❦

ಅಮರಾವತಿ ನಗರದಲ್ಲಿ "ಕರ್ತವ್ಯ" ಎಂಬ ಹೆಸರಿನಿಂದ ಪ್ರಕಟವಾಗುತ್ತಿರುವ ವರ್ತಮಾನ ಪತ್ರಿಕೆಯಲ್ಲಿ ರಾಜದ್ರೋಹಕರವಾದ ಟಿಪ್ಪಣಿಯನ್ನು ಎಡಿಟರು ಬರೆದರೆಂದು ಅವರ ಮೇಲೆ ಸರ್ಕಾರದವರು ಫಿರ್ಯಾದು ಮಾಡಿದ್ದಕ್ಕೆ ಆ ಎಡಿಟರವರು ಕೋರ್ಟಿಗೆ ಬಂದು ತಮ್ಮ ಅಪರಾಧವನ್ನು ಒಪ್ಪಿಕೊಂಡು ಜಡ್ಜಿಯವರನ್ನು ಕ್ಷಮಾಪಣೆ ಬೇಡಿಕೊಂಡರು. ಜಡ್ಜಿಯವರು ಅವರ ಅಪರಾಧವನ್ನು ಮನ್ನಿಸಿ, ಎಡಿಟರಿಗೆ ಎಚ್ಚರಿಕೆ ಹೇಳಿ, ಮೊಕದ್ದಮೆಯನ್ನು ವಜಾಮಾಡಿರುತ್ತಾರೆ

❦❦❦

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಎಲ್ಲಾ ಸ್ಟೇಷನುಗಳಲ್ಲೂ ಪ್ಲೇಗ್ ಉಪದ್ರವ ಕಾರಣ ಪ್ರಯಾಣಿಕರ ಆರೋಗ್ಯಸ್ಥಿತಿಯನ್ನು ಪರೀಕ್ಷೆಮಾಡಿ, ಪಾಸುಗಳನ್ನು ಕೊಡುತ್ತಿದ್ದರು. ಇದನ್ನೆಲ್ಲಾ ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಗವರ್ನರವರು ಹುಕುಂ ಕೊಟ್ಟಿದ್ದಾರೆ. ಅದೇ ರೀತಿ ಬಂಗಾಳಾ ಮತ್ತು ಮದರಾಸ್ ಗವರ್ನಮೆಂಟುಗಳಲ್ಲೂ ಈ ಏರ್ಪಾಡನ್ನು ನಿಲ್ಲಿಸಬೇಕೆಂತಲೂ, ಇದರಿಂದ ಪ್ರಯಾಣಿಕರಿಗೆ ತುಂಬಾ ಅನಾನುಕೂಲಗಳುಂಟಾಗುತ್ತಿವೆ ಎಂತಲೂ ವರ್ತಕ ಮಹಾಜನರು ಅರ್ಜಿಗಳನ್ನು ಬರೆದುಕೊಂಡಿದ್ದಾರೆ

❦❦❦

ಕಾಕಿನಾಡಾದಲ್ಲಿ ಸಿವಿಲ್ ಸರ್ಜನರಾದ ಕ್ಯಾಪ್ಟನ್ ಕೆಂಪ್ ಯವರು ಕೆ. ಕೃಷ್ಣರಾಯನೆಂಬ ಹುಡುಗನನ್ನು ಹೊಡೆದದ್ದಕ್ಕೆ ತೃಪ್ತಿಕರವಾದ ಕಾರಣವೇನೂ ಇರಲಿಲ್ಲವೆಂತಲೂ, ಆದರೆ ಆ ಹುಡುಗನು ಅವರ ಮೇಲೆ ತಂದ ಮೊಕದ್ದಮೆಯಲ್ಲಿ ಅವರು ಬಹಳ ಹಣ ಖರ್ಚುಮಾಡಿರುತ್ತಾರಾದ್ದರಿಂದ ಅವರಿಗೆ ಇನ್ನೇನೂ ಹೆಚ್ಚು ಶಿಕ್ಷೆಯನ್ನು ವಿಧಿಸುವುದು ತರವಲ್ಲವೆಂತಲೂ, ಆದರೂ ಅವರು ಈಗಿನಂತೆ ಮುಂದೇನಾದರೂ ಅತೃಪ್ತಿಕರವಾಗಿ ನಡೆದುಕೊಂಡ ಪಕ್ಷದಲ್ಲಿ ಅವರನ್ನು ಮಿಲ್ಟೇರಿ ಇಲಾಖೆಗೆ ವರ್ಗಮಾಡಿಬಿಡುತ್ತೇವೆಂತಲೂ ಮದರಾಸ್ ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ.

❦❦❦

ಪ್ಲೇಗ್ ಉಪದ್ರವವು ಹಿಂದೂಸ್ಥಾನದಲ್ಲಿ ಇದುವರೆಗೆ ಇಳಿಮುಖವಾಗಿದ್ದು ಈಗೀಗ ಹೆಚ್ಚುತ್ತಾ ಬಂದಿದೆ. ಹಿಂದಿನ ವಾರ ಒಟ್ಟು ೩,೧೫೦ ಜನರು, ಅಂದರೆ ಆಚೇವಾರದ ಸಂಖ್ಯೆಗಿಂತ ೩೭೩ ಜನರು ಹೆಚ್ಚಾಗಿ ಆ ಉಪದ್ರದಲ್ಲಿ ಮೃತಪಟ್ಟರು. ಈ ಪೈಕಿ ಬೊಂಬಾಯಿ ೭೧೯, ಮೈಸೂರು ಸಂಸ್ಥಾನ ೯೩೬, ಸಂಯುಕ್ತ ಆಧಿಪತ್ಯಗಳು ೬೬೯, ಬಂಗಾಳಾ ೭೯೮, ಬನಾರಸ್ ೨೭೩, ಪಂಜಾಬ್ ೨೭೦, ಮಧ್ಯಪ್ರಾಂತ್ಯಗಳು ಮತ್ತು ಬೇರಾರ್ ೧೩೮, ಮದರಾಸ್ ಆಧಿಪತ್ಯ ೧೬೯, ರಾಜಪುಟಾನಾ ೯೬, ಹೈದರಾಬಾದ್ ಸಂಸ್ಥಾನ ೫೬, ಮಧ್ಯ ಇಂಡಿಯಾ ೩೦, ಈ ರೀತಿ ಮರಣಗಳಾಗಿವೆ

❦❦❦

ತಂಜಾವೂರು ಜಿಲ್ಲೆಗೆ ಸೇರಿದ ತಿರುವಾಡಿ ಮಂದಿರದಲ್ಲಿ ಹಿಂದಿನ ವಾರ ರಥೋತ್ಸವವಾಯಿತು. ಅಗ್ಗೆ ಸುಮಾರು ಮೂರು ನಾಲ್ಕು ಸಾವಿರ ಜನರು ಆ ಸ್ಥಳದಲ್ಲಿ ಸೇರಿದ್ದರು. ರಥವನ್ನು ಎಳೆಯುತ್ತಿರುವಲ್ಲಿ ಅದು ಅರಮನೆಯ ಬಳಿ ಕಲಶ ಮುರಿದು ಅರಮನೆಯ ಉಪ್ಪರಿಗೆಯ ಮೇಲೆ ಬಿದ್ದು ಅದನ್ನು ಕೆಡವಿ ಅನಾಹುತವಾಯಿತು. ಅರಮನೆಯ ಕೈಸಾಲೆಯಲ್ಲಿ ನಿಂತು ರಥೋತ್ಸವವನ್ನು ನೋಡುತ್ತಿದ್ದ ಹೆಂಗಸರು ಮಕ್ಕಳ ಮೇಲೆ ಉಪ್ಪರಿಗೆಯು ಕಳಚಿಬಿದ್ದದ್ದರಿಂದ ೫೬ ಮಂದಿ ಹತರಾದರೆಂತಲೂ ಕೆಲವರಿಗೆ ಗಾಯಗಳಾಗಿ ಆಸ್ಪತ್ರೆಯಲ್ಲಿ ಇಲಾಜು ಹೊಂದುತ್ತಿದ್ದಾರೆಂತಲೂ ತಿಳಿದು ಬಂದಿದೆ

❦❦❦

ಉತ್ತರದೇಶದಲ್ಲಿ ಕ್ಷಾಮಬಾಧೆಯು ದಿನೇ ದಿನೇ ಹೆಚ್ಚುತ್ತಿರುವಂತೆ ಕಾಣುವುದು. ಈಗ ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಕ್ಷಾಮಪೀಡಿತರ ಸಂಖ್ಯೆಯು ನಾಲ್ಕು ಲಕ್ಷಕ್ಕಿಂತ ಸ್ವಲ್ಪ ಹೆಚ್ಚಾಗಿರುತ್ತದೆ. ಈ ಪೈಕಿ ಸಂಯುಕ್ತ ಆಧಿಪತ್ಯ ಒಂದರಲ್ಲೇ ೩,೧೧,೦೦೦ ಜನರು ಸರ್ಕಾರದವರ ಪೋಷಣೆಯಲ್ಲಿರುವರು. ಹಿಂದುಸ್ಥಾನದ ಕ್ಷಾಮನಿವಾರಣೆಯ ಶಾಶ್ವತ ಧರ್ಮಫಂಡಿನಿಂದಲೂ, ಇತರ ಕಡೆಗಳಲ್ಲಿ ವಸೂಲಾದ ಚಂದಾ ಹಣದಿಂದಲೂ ೫೮,೦೦೦ ರೂಪಾಯಿ ತೆಗೆದುಕೊಂಡು, ಚಳಿಗೆ ಸಿಕ್ಕಿದಂಥಾ ಕ್ಷಾಮಪೀಡಿತರಿಗೆ ಕಂಬಳಿ ಮುಂತಾದ್ದು ತರಿಸಿ, ಹಂಚಿಕೊಟ್ಟರು. ಎಲ್ಲಾ ಭಾಗಗಳಲ್ಲೂ ಧಾಂಡವಾಸಿಗಳು ಹೆಚ್ಚುತ್ತಾ ಬಂದಿವೆ.

❦❦❦

ಬೊಂಬಾಯಿನಲ್ಲಿ ರೈಲ್ವೆ ಕಾರ್ಖಾನೆಯೊಳಗೆ ಕೆಲಸ ಮಾಡುತ್ತಿದ್ದ ಕೂಲಿಯವರ ಪೈಕಿ ಸುಮಾರು ಎಂಟು ಸಾವಿರ ಜನರು ತಮಗಿರುವ ಕಷ್ಟಕೊರತೆಗಳನ್ನು ಅಧಿಕಾರಿಗಳಿಗೆ ಹೇಳಿಕೊಂಡು, ಅವರು ಲಾಲಿಸದೆ ಹೋದದ್ದರಿಂದ ಎಲ್ಲರೂ ಕೆಲಸಕ್ಕೆ ಹೋಗದೆ ನಿಂತುಬಿಟ್ಟರು. ನಾಲ್ಕಾರು ದಿವಸಗಳ ಮೇಲೆ ಅಧಿಕಾರಿಗಳು ಆ ಜನರನ್ನೆಲ್ಲಾ ಸಮಾಧಾನಪಡಿಸಿ ಕೆಲವು ರಿಯಾಯಿತಿಗಳನ್ನು ತೋರಿಸುವಂತೆ ಹೇಳಿದರು. ಅವರು ಕೆಲಸದ ಮೇಲೆ ಹೋಗುತ್ತಿದ್ದರೂ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ, ಅವರ ಮೂಲಕ ತಮ್ಮ ಕಷ್ಟಗಳನ್ನು ಅರಿಕೆ ಮಾಡಿಕೊಳ್ಳುವಂತೆ ಏರ್ಪಾಡು ಮಾಡಿದ್ದಾರೆ. ಇದಕ್ಕಾಗಿ ಅವರು ಚಂದಾ ಹಾಕಿ ಒಬ್ಬ ಲಾಯರನ್ನೂ ತಮ್ಮ ಕಡೆ ನೇಮಿಸಿಕೊಂಡಿದ್ದಾರೆ.

❦❦❦

ಸಿಂಧುದೇಶಕ್ಕೆ ಸೇರಿದ ಹೈದರಾಬಾದ್ ಪಟ್ಟಣದ ಬಳಿ ಕಾಲಾ ಎಂಬ ಜೈಲ್‌ಖಾನೆಯಲ್ಲಿ ಎಂಟು ಮಂದಿ ಖೈದಿಗಳು ಒಗ್ಗಟ್ಟಾಗಿ ಮಧ್ಯಾಹ್ನದ ಹೊತ್ತಿನಲ್ಲಿ ತಮ್ಮ ಕೊಠಡಿಗಳಿಂದ ಬಂದು, ಜೈಲ್ ಬಾಗಿಲ ಬಳಿ ಇಟ್ಟಿದ್ದ ಬಂದೂಕು ಕತ್ತಿ ದೊಣ್ಣೆಗಳನ್ನು ತೆಗೆದುಕೊಂಡು, ಅಲ್ಲಿದ್ದ ಒಬ್ಬ ಕಾವಲುಗಾರನನ್ನು ಗುಂಡಿನಿಂದ ಹೊಡೆದು ಕೆಡವಿ, ಇನ್ನೊಬ್ಬ ಸಿಪಾಯಿಯನ್ನು ಹೊಡೆದು ಮಲಗಿಸಿ, ಜೈಲಿನಿಂದ ಹೊರಕ್ಕೆ ಓಡಿಹೋಗುತ್ತಾ ದಾರಿಯಲ್ಲಿ ಸಿಕ್ಕಿದ ಒಬ್ಬ ಜವಾನನಿಗೂ ಗುಂಡು ಹೊಡೆದರು. ಆದರೆ ಅದು ಅವನಿಗೆ ತಗಲಲಿಲ್ಲ. ಅವರೆಲ್ಲಾ ತಪ್ಪಿಸಿಕೊಂಡುಹೋಗಿಬಿಟ್ಟರು. ಈಗ ಪೋಲೀಸಿನವರು ಆ ೮ ಮಂದಿಯನ್ನೂ ಹಿಡಿಯಬೇಕೆಂದು ತರದೂದು ಮಾಡುತ್ತಿದ್ದಾರೆ.

❦❦❦

ತಂಜಾವೂರಿಗೆ ಸೇರಿದ ಕರ್ನಾಂಗುಡಿ ಎಂಬಲ್ಲಿ ಒಬ್ಬ ಐಶ್ವರ್ಯವಂತನ ಮಗಳು ಸತ್ತುಹೋದಳು. ಪೋಲೀಸ್ ಸಬ್ ಇನ್ಸ್‌ಪೆಕ್ಟರೂ, ಸ್ಟೇಷನ್ ಹೌಸ್ ಆಫೀಸರೂ, ಇಬ್ಬರು ಪೋಲೀಸಿನವರೂ, ಗ್ರಾಮ ಮುನ್ಸಿಫನೂ ಅವರ ಮನೆಗೆ ಹೋಗಿ, ಅವರನ್ನು ೧೦೦ ರೂಪಾಯಿ ಲಂಚ ಕೇಳಿ, ಅವರು ಕೊಡದೆಹೋದದ್ದರಿಂದ ಶವವನ್ನು ಮಾರುದಿನ ಸಾಯಂಕಾಲದವರೆಗೆ ದಫನಮಾಡದಂತೆ ತಡೆದು, ಡಾಕ್ಟರಿಂದ ಕೊಯಿಸಿ ಅವಮಾನಪಡಿಸಿ ತುಂಬಾ ದಾಂಧಲೆ ನಡಿಸಿದರು. ಇದಕ್ಕಾಗಿ ಅವರ ಮೇಲೆ ಮೊಕದ್ದಮೆ ಆದದ್ದರಲ್ಲಿ ಮ್ಯಾಜಿಸ್ಟ್ರೇಟರು ಮೂರುಮಂದಿಯನ್ನು ಖುಲಾಸ್‌ಮಾಡಿ, ಸಬ್ ಇನ್ಸ್‌ಪೆಕ್ಟರಿಗೂ ಸ್ಟೇಷನ್ ಆಫೀಸರಿಗೂ ತಲಾ ಆರು ತಿಂಗಳ ಕಠಿಣ ಸಜಾ ವಿಧಿಸಿದರು.

❦❦❦

ಬೊಂಬಾಯಿ ಆಧಿಪತ್ಯದ ಗವರ್ನರಾದ ಸರ್ ಜಾರ್ಜ್ ಕ್ಲಾರ್ಕ್ ಯವರು ಜನರಿಗೆ ಪ್ಲೇಗ್ ಕಿಡುಬನ್ನು ಹಾಕಿಸುವ ವಿಷಯದಲ್ಲಿ ಇನ್ನೂ ಪ್ರೋತ್ಸಾಹಮಾಡಬೇಕೆಂದು ಎರಡನೇ ಸಲ ದೇಶೀಯ ವರ್ತಮಾನಪತ್ರಿಕಾ ಎಡಿಟರುಗಳನ್ನೆಲ್ಲಾ ಬೊಂಬಾಯಿಗೆ ಕರೆಸಿಕೊಂಡು, ಅವರಿಗೆ ಆ ಕಿಡುಬಿನ ಹಾಲು ತಯಾರಾಗತಕ್ಕ ಕಾರ್ಖಾನೆಯನ್ನೂ ಅದರ ಕ್ರಮಗಳನ್ನೂ ತೋರಿಸಿ, ತಾವಾಗಿ ಅವರಿಗೆಲ್ಲಾ ಕೆಲವು ಹಿತೋಕ್ತಿಗಳನ್ನು ಹೇಳಿದರು. ಈ ಕಿಡುಬಿನ ಮೂಲಕ ಹಾಲನ್ನು ಶರೀರದೊಳಕ್ಕೆ ಹಾಕುವಲ್ಲಿ ಪ್ಲೇಗ್ ಉಪದ್ರವನ್ನು ವ್ಯಾಪಿಸದಂತೆ ತಡೆಯುತ್ತೇವಲ್ಲದೆ ಎಷ್ಟುಮಾತ್ರಕ್ಕೂ ಅದರಿಂದ ಪ್ಲೇಗ್ ಕಾಣಿಸಿಕೊಳ್ಳುವುದಿಲ್ಲ ಎಂದು ತಿಳಿಸಿದರು. ಮೇ|| ಬಾಲಗಂಗಾಧರ ತಿಲಕರವರು ಎಡಿಟರುಗಳ ಪರವಾಗಿ ಗವರ್ನರವರನ್ನು ಬಹಳವಾಗಿ ಕೊಂಡಾಡಿ ವಂದನೆಗಳನ್ನು ಒಪ್ಪಿಸಿ, ಹೀಗೆಯೇ ಆಳುವವರು ಪ್ರಜೆಗಳ ಕ್ಷೇಮಾಭಿವೃದ್ಧಿಯನ್ನು ಬಯಸುವವರಾಗಲೆಂದು ಅರಿಕೆಮಾಡಿದರು.

❦❦❦

ಬೊಂಬಾಯಿ ಪಟ್ಟಣದಲ್ಲಿ ಮೊದಲು ಮ್ಯುನಿಸಿಪಲ್ ಕಮಿಷನರಾಗಿದ್ದ ಮೇ|| ಎ. ಕ್ರಾಫರ್ಡ್ ಎಂಬಾತನು ಬ್ರಾಡ್ಲೆ ಎಂಬೊಬ್ಬನ ಮೇಲೆ ಇವನು ತನ್ನ ನಾಯಿಯನ್ನು ಛೂ ಬಿಟ್ಟು ತನ್ನ (ಕ್ರಾಫರ್ಡನ) ಬೆಕ್ಕನ್ನು ಕಡಿಸಿದನೆಂದು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ತಂದನು. ಆದರೆ ವಿಚಾರಣೆಯಾಗುವಾಗ್ಗೆ ಅಪರಾಧಿಯು ಬೇಕೆಂದು ತನ್ನ ನಾಯಿಯನ್ನು ಛೂಬಿಟ್ಟದ್ದು ರುಜುವಾತಾಗಲಿಲ್ಲವಾದ್ದರಿಂದ ಮ್ಯಾಜಿಸ್ಟ್ರೇಟರು ಮೊಕದ್ದಮೆಯನ್ನು ವಜಾಮಾಡಿದೆ ಎಂದು ಹೇಳಿದರು. ಕೂಡಲೇ ಫಿರ್ಯಾದಿಯು ಕೋಪೋದ್ರೇಕನಾಗಿ, ಮ್ಯಾಜಿಸ್ಟ್ರೇಟರನ್ನು ನಾನಾಬಗೆಯಾಗಿ ಹೀಯಾಳಿಸಿ ಅವರನ್ನು ಕುರ್ಚಿಯಿಂದ ಕೆಳಕ್ಕೆ ತಳ್ಳಿಬಿಡುವುದಕ್ಕೆ ಪ್ರಯತ್ನಪಟ್ಟನು. ಪೋಲೀಸಿನವರು ಅವನನ್ನು ಅಲ್ಲೇ ದಸ್ತಗಿರಿ ಮಾಡಿದರು. ಆಗ ಅವನು ತನಗೆ ಕಾಯಿಲೆಯಾಗಿ ನರಳುತ್ತಿದ್ದೇನೆಂದು ಹೇಳಿಕೊಂಡನು. ಡಾಕ್ಟರನ್ನು ಕೂಡಲೇ ಕರೆಸಿ ಜಮಾಯಿಷಿ ಮಾಡಿಸಿ, ಕೋರ್ಟಿನಿಂದ ಹೊರಕ್ಕೆ ಕರೆದುಕೊಂಡು ಹೋದರು. ಜಡ್ಜಿಗಳಿಗೆ ಅವಮಾನಮಾಡಿದನೆಂಬ ಮೊಕದ್ದಮೆ ಅವನ ಮೇಲೆ ಬಂದಿದ್ದರೂ, ಅವನಿಗೆ ಸ್ವಲ್ಪ ವಿಶ್ರಾಂತಿಯನ್ನು ಕೊಟ್ಟರು.

ವಿದೇಶ ವರ್ತಮಾನಗಳು

ಆಫ್ರಿಕಾ ಖಂಡದ ಪೋರ್ಚುಗೀಸ್ ಎಂಬ ಪ್ರಾಂತ್ಯಕ್ಕೆ ಸೇರಿದ ಅಕ್ರಾ ಎಂಬ ಸ್ಥಳದಲ್ಲಿ ಪ್ಲೇಗ್ ಉಪದ್ರವು ಪ್ರಾರಂಭವಾಗಿದೆ. ಈ ಉಪದ್ರವನ್ನು ಅಣಗಿಸ ಬೇಕೆಂದು ಅಲ್ಲಿನ ಜನರಿಗೆ ಪ್ಲೇಗ್ ಔಷಧಿ ಹಾಕಬೇಕೆಂದು ಡಾಕ್ಟರ್ ಸರ್ಕಾರದವರು ಹಿತ್ತಲಿನ ಸಾಲನ್ನು ತೆಗೆದುಹಾಕಿ ಅಲ್ಲಿನ ಪ್ರಯಾಣ ಮಾಡಿದರು.

***

ಕಳೆದ ೧೯೦೭ ನೆ ಇಸವಿ ಡಿಸೆಂಬರ್ ತಿಂಗಳಲ್ಲಿ ಅಮೇರಿಕಕ್ಕೆ ಹೋದ ಜಪಾನಿನವರ ಸಂಖ್ಯೆಗಿಂತಲೂ ೧೯೦೬ ನೆ ಡಿಸೆಂಬರಿನಲ್ಲಿ ಅಲ್ಲಿ ಹೋಗಿ ಇಳಿದವರ ಸಂಖ್ಯೆಯು ... ಕಡಿಮೆ. ಇದರಿಂದ ಜಪಾನಿನವರು ಆ ದೇಶಕ್ಕೆ ಹೋಗುವುದರಲ್ಲಿ ಅಷ್ಟು ಆತುರಪಡುವವರಾಗಿಲ್ಲವೆಂದು ತೋರುವುದು.

***

ಬೇಲೂ ... ತಮ್ಮ ... ಚೂರಿಯ ... ರಸ್ತೆಯ ಪಕ್ಕದಲ್ಲಿ ಉದ್ದಕ್ಕೂ ಹಿನ್ನೆಯಿಂದ ರೈಲು ಹಳಿ ಗಳಿಗೆ ಕಂಬಿಗಳನ್ನು ತಾಕಬೇಕೆಂದು ತರದವರು ... ಜನ ... ನೋಡಿ ಆ ರೈಲನ್ನು ... ಕಾಕಿದರೆ ಅದರ ... ಗಾಡಿಯನ್ನು ಬಲಾತ್ಕಾರದಿಂದ ತಡೆದು ಬಿಡುತ್ತೇವೆಂತಲೂ ಪ್ರತಿಭಟಿಸಿ ಉತ್ತರ ... ಮಾಡಿ.

***

ಕೆಲವು ಜರ್ಮನ್ ಪಾದ್ರಿಗಳು ಅಮೇರಿಕಕ್ಕೆ ಸೇರಿದ ಮೆಕ್ಸಿಕೋದಲ್ಲಿ ಸ್ವಲ್ಪ ದಿನ ಇದ್ದು ಅಲ್ಲಿಂದ ಕಳೆದ ... ಕ್ಯಾಲಿಫೋರ್ನಿಯಕ್ಕೆ ಹೋದರು. ಆ ... ಬೇರೆ ದೇಶಗಳಲ್ಲಿದ್ದು ತಮ್ಮ ದೇಶಕ್ಕೆ ಬರತಕ್ಕವರನ್ನು ಸೇರಿಸಿಕೊಳ್ಳುವುದಿಲ್ಲವೆಂದು, ಹಾಗೆ ಬರತಕ್ಕವರು ತಮ್ಮ ... ಯಿಂದ ... ಬಿಡಿಸಬೇಕೆಂದು ... ಕಳೆದ ವಾರ ಹೋದ ... ಜನ ಜರ್ಮನ್ ... ದೇಶದವರು ಸೇರಿಸಿಕೊಳ್ಳದೆ ಹಿಂದಕ್ಕೆ ಕಳುಹಿಸಿಬಿಟ್ಟರು.

***

ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ವಿಕ್ಟೋರಿಯಾ ಆಧಿಪತ್ಯದ ಮುಖ್ಯಾಧಿಪತಿಯಾದ ಮಿ| ಬೇಂಟ್ ರವರು ತಮ್ಮ ಅಧಿಕಾರಕ್ಕೊಳಪಟ್ಟ ಎಲ್ಲ ಕಚ್ಚೇರಿಗಳಲ್ಲಿ ೩೦೦ ರೂಪಾಯಿಗಿಂತ ಹೆಚ್ಚಾಗಿ ಉತ್ಪತ್ತಿಯಾಗತಕ್ಕ ಎಲ್ಲಾ ಬ್ಯಾಂಕುಗಳಿಂದಲೂ ವರ್ತಮಾನ ಪತ್ರಿಕೆಗಳಿಂದಲೂ, ನಾಟಕಾದಿಗಳೇ ಮೊದಲಾದ ಎಲ್ಲಾ ತರದ ವಿನೋದಗಳಿಂದಲೂ ಕೇಕಡಾ ... ರಂತೆ ಸರ್ಕಾರಕ್ಕೆ ವಸೂಲ್ಮಾಡಬೇಕೆಂದು ಯೋಚನೆ ಮಾಡಿರುತ್ತಾರೆ. ಈ ಬಾಬಿನಲ್ಲಿ ವರುಷಕ್ಕೆ ಸರ್ಕಾರಕ್ಕೆ ಸುಮಾರು ನಾಲ್ಕು ಲಕ್ಷ ರೂಪಾಯಿ ಉತ್ಪತ್ತಿಯಾಗುವುದೆಂದು ಅಂದಾಜಿಸಲ್ಪಟ್ಟಿದೆ.

***

ಪೂರ್ವದಲ್ಲಿ ... ಯುದ್ಧದಲ್ಲೂ ... ನಡೆದ ... ದಂಗೆಯ ಯುದ್ಧದಲ್ಲೂ ಇಂಗ್ಲೀಷ್ ಸೈನ್ಯದಲ್ಲಿದ್ದು ಇಂಗ್ಲೀಷ್ ರಾಜ್ಯದ ಕ್ಷೇಮಾಭ್ಯುದಯಕ್ಕಾಗಿ ಶತ್ರುಗಳ ಮೇಲೆ ಬಿದ್ದು ಕಾದಿದಂಥಾ ಇಂಗ್ಲೀಷ್ ಯುದ್ಧಭಟರಲ್ಲಿ ಸುಮಾರು ಸಾವಿರ ಜನರು ಈಗ ... ದಿಕ್ಕಿಲ್ಲದೆ ಜೀವನಕ್ಕೆ ಮಾರ್ಗವಿಲ್ಲದೆ ಲಂಡನ್ ... ಧರ್ಮಸತ್ರಗಳಲ್ಲಿ ಬಿದ್ದು ಹೊಟ್ಟೆ ಹೊರೆದುಕೊಳ್ಳುತ್ತಿದ್ದಾರೆ. ಇಂಥಾವರನ್ನೆಲ್ಲಾ ಈ ... ಕಷ್ಟಪಡಿಸುವುದು ರಾಜ್ಯಕ್ಕೇ ಅವಮಾನಕರವೆಂದು ಕೆಲವು ... ಯರು ಯೋಚಿಸಿ, ಅವರನ್ನು ... ಕಾಪಾಡುವುದಕ್ಕಾಗಿ ಒಂದು ಫಂಡನ್ನು ಕೂಡಿಸಬೇಕೆಂದು ಗೊತ್ತುಮಾಡಿದರು. ಎರಡು ... ವಾರಗಳೊಳಗಾಗಿ ಈ ಫಂಡಿಗೆ ಎರಡೂವರೆ ಲಕ್ಷ ರೂಪಾಯಿ ಚಂದಾ ವಸೂಲಾಗಿರುವುದು. ಆದರೆ ೧೦೦೦ ಯುದ್ಧಭಟರನ್ನು ಕಾಪಾಡುವುದಕ್ಕೆ ಕಡೇ ಪಕ್ಷ ಒಂಬತ್ತು ಲಕ್ಷ ರೂಪಾಯಿಯಾದರೂ ಬೇಕಾಗುವುದೆಂದು ಗೊತ್ತು ಮಾಡಲ್ಪಟ್ಟಿದೆ.

ಮೈಸೂರು ಗೆಜೆಟ್ ಸಂಗ್ರಹ

ಮಿ॥ ಟಿ ವರದಾಚಾರ್ಲುನಾಯುಡು ಯವರು ಕಾಲವಾದದ್ದರಿಂದ ಮೈ॥ ಟಿ ಕೃಷ್ಣಮೂರ್ತಿರಾಯರನ್ನು ೩ನೆ ಕ್ಲಾಸ್ ಟೆಂ ಸಬ್ ಆ ಸರ್ಜನ್ನರಾಗಿ ನೌಕರರು ಮಾಡಿದೆ.

ಕೋಲಾರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ ಆಫೀಸ್ ಹೆಡ್ ಕ್ಲಾರ್ಕ್ ... (ವೇದಾಂತ ಐಯಂಗಾರು) ಮುಳಬಾಗಲ ತಾಲ್ಲೋಕ್ ಚಾರ್ಜನ್ನು ವಹಿಸಿರತಕ್ಕದ್ದು.

ಮುಂದೆ ಹೇಳುವ ಅಮಲ್ದಾರ್ರ ವರ್ಗಾವರ್ಗಿ ಹುಕುಂ ಮಾಡಿದೆ — ಮಿ॥ ಎಂ ಎಸ್ ರಾಮಚಂದ್ರರಾಯರನ್ನು ಕಡೂರಿನಿಂದ ಹಿರಿಯೂರು ತಾಲ್ಲೋಕಿಗೆ.

ರೆವಿನ್ಯೂ ಪ್ರೊಬೇಷನರ್ ಟಿ. ಹನುಮಂತರಾಯರನ್ನು ರೆವಿನ್ಯೂ ಕಮೀಷನರವರ ಆಫೀಸಿನಿಂದ ಬೆಂಗಳೂರು ಡೆಪ್ಯುಟಿ ಕಮೀಷನರ ಆಫೀಸಿನಲ್ಲಿ ಕೆಲಸಮಾಡುವಂತೆ ವರ್ಗಮಾಡಿದೆ.

ಆ॥ ಡೆಪ್ಯುಟಿ ಕಮೀಷನರ್ ಮಿ॥ ಬಿ ಜಿ ಶಾನಭೋಗಸ್ವಾಮಿ ರಾಯರವರಿಗೆ ಅವರ ಕಡೂರ್ ಡಿಸ್ಟ್ರಿಕ್ಟ್ ಛಾರ್ಜನ್ನು ಕೊಟ್ಟ ಲಾಗಾಯತು ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಎಕ್ಸೈಸ್ ಇಲಾಖಾ ಆ॥ ಕಮೀಷನರ್ ಮಿ॥ ಎ ಮೃತ್ಯುಂಜಯ ಐಯ್ಯರ್ ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಿ॥ ಕ ... ಯವರು ಗವರ್ನಮೆಂಟ್ ಉದ್ಯಾನವನಗಳ ಮತ್ತು ಮ್ಯೂಜಿಯ ಮ್ಸಿನ ಸೂಪರಿಂಟೆಂಡೆಂಟ್ ಕೆಲಸದ ಛಾರ್ಜನ್ನು ಜನವರಿ ... ಮಿ॥ ಜೆ ಕ್ಯಾಮರಾನ್ ಯವರಿಂದ ವಹಿಸಿಕೊಂಡರು.

ಕಡೂರ್ ಡಿಸ್ಟ್ರಿಕ್ಟ್ ... ಆಫೀಸರ್ ಮಿ॥ ಟಿ ಎಂ ನರಸಿಂಗರಾಯರನ್ನು ಸರ್ವೆ ಇಲಾಖಾ ಕೆಲಸವನ್ನು ಕಲಿಯುವುದಕ್ಕೆ ಕಳುಹಿಸಿ ರೋಣದಿಂದ ಆಕ್ಟಿಂಗ್ ಆ॥ ಕಮಿಷನರ್ ಮಿ॥ ಎಂ ಕೃಷ್ಣಸ್ವಾಮಯ್ಯಂಗಾರ್ರು ಕಡೂರ್ ಸಬ್ ಡಿವಿಜನ್ ಛಾರ್ಜನ್ನು ವಹಿಸಿರತಕ್ಕದ್ದು.

ಮಿ॥ ಬಿ ನಂಜುಂಡಯ್ಯನವರನ್ನು ಆ॥ ಕಮೀಷನರ ದರ್ಜೆಯ ... ನೆ ಕ್ಲಾಸಿಗೆ ಕಳೆದ ಸೆಪ್ಟಂಬರ್ ... ರಿಂದ ಬಡ್ತಿ ಮಾಡಲಾಗಿದೆ.

ಸರ್ವೆ ಇಲಾಖೆಯಲ್ಲಿ ಕೆಲಸಮಾಡುತ್ತಿರುವ ಆ ಕಮಿಷನರ್ ಮಿ॥ ಕೆ ಜಿ ... ರನ್ನು ಕಳೆದ ಸೆಪ್ಟಂಬರ್ ... ರ ಲಾಗಾಯತು ... ನೆ ಕ್ಲಾಸಿಗೆ ಬಡ್ತಿಮಾಡಲಾಗಿದೆ.

ಆಸ್ಪತ್ರೆ ಅಸಿಸ್ಟೆಂಟ್ ಪಿ ಎಸ್ ಸೋಮಸುಂದರ ಮೊದಲಿಯಾರನ್ನು ಕಳೆದ ನವೆಂಬರ್ ... ರಿಂದ ... ನೆ ಕ್ಲಾಸಿಗೆ ಬಡ್ತಿಮಾಡಿದೆ.

ಫಾರೆಸ್ಟ್ ರೇಂಜರುಗಳಾದ ಡಿ ... ರಾಯರನ್ನು, ಎ ... ನನ್ನು ... ಎಂ ಎ ... ನನ್ನು ಜನವರಿ ಲಾಗಾಯತು ... ಆ॥ ಕನ್ಸರ್ವೇಟರ್ ... ಮಾಡಲಾಗಿದೆ.

... ತಾಲ್ಲೋಕು ... ಮಿ॥ ಎಂ ... ಕೃಷ್ಣಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸಬ್ ಆ॥ ಇಂಜನಿಯರ್ ಮಿ॥ ಎಂ ಜಿ ರಂಗಯ್ಯನವರನ್ನು ವರ್ಗಮಾಡಿರೋಣದರಿಂದ ಆ॥ ಇಂಜನಿಯರ್ ಮಿ॥ ಬಿ ನಂಜುಂಡಾರಾಧ್ಯರು ಶಿವಮೊಗ್ಗ ಡಿವಿಜನ್ನಲ್ಲಿರುವ ... ಸಬ್ ಡಿವಿಜನ್ ಛಾರ್ಜನ್ನಲ್ಲಿರತಕ್ಕದ್ದು.

ಡಾಕ್ಟರ್ ಲೆಸ್ಲಿ ಸಿ ... ಯವರನ್ನು ಜನವರಿ ... ರಿಂದ ಮೈಸೂರು ಗವರ್ನಮೆಂಟಿನ ಮೈಕಾಲಜಿಸ್ಟ್ ಮತ್ತು ಎಂಟಮಾಲಜಿಸ್ಟ್ (ಕ್ರಿಮಿಶಾಸ್ತ್ರ) ಪರೀಕ್ಷಕರಾಗಿ, ನೇಮಕ ಮಾಡಿದೆ.

ಸೀಮ್ ಸಿಪಾಸಿಸಿ ನೋಡಿರಿ

೧೦ 32

ಯಾವದು ಉತ್ತಮ? ಸ್ವತಃ ಪರೀಕ್ಷಿಸಿ ನೋಡುವದೇ ಅಥವಾ ಕೀರ್ತಿಯುಳ್ಳ ಪ್ರಸಿದ್ಧ ಡಾಕ್ಟರರ ಅನುಭವವನ್ನು ನಂಬುವದೋ ?

ನ ತನವಾಗಿದ್ದರೆ ಪರೀಕ್ಷೆ ಮಾಡಿ ... ಸರಿಯಾಗಿ ಉಂಟೋ ಎಂಬದನ್ನು ... ಇಲ್ಲವಾದರೆ ಸಂದೇಹ ... ಪರಕೀಯರ ಮಾತು ಪರಿಷ್ಕಾರವಾದ ... ವಾಗಿರುವದಿಲ್ಲ. ಡೋನ್ಸ್ ರ ಬ್ಯಾಕ್ ಏಕ್ ... ಪಿಲ್ಸ್ ಗಳ ... ಪ್ರತಿ ಒಂದು ಶೀಸೆಯೊಂದಿಗೆ ಸ್ವದೇಶೀಯ ಸಾಕ್ಷ್ಯವು ಇರುತ್ತದೆ. ಈ ಕೆಳಗಿನದನ್ನು ಓದಿ ನೋಡಿರಿ ... ಮೆಡಿಕಲ್ ಕಾಲೇಜಿನಲ್ಲಿ ವನಸ್ಪತಿ ಶಾಸ್ತ್ರದ ... ವೈದ್ಯದ ಉಪನ್ಯಾಸಕರಾಗಿಯೂ ... ಎಂಪಿ ಮೆಡಿಕಲ್ ಕಾಲೇಜಿನಲ್ಲಿ ವೈದ್ಯ ಚಿಕಿತ್ಸಕರಾಗಿಯೂ, ಇರುವ ಡಾಕ್ಟರ್ ... ಯವರು ಹೇಳುವದೇನಂದರೆ — ಡೋನ್ಸ್ ರ ಬ್ಯಾಕ್ ಏಕ್ ಕಿಡ್ನಿ ಪಿಲ್ಸ್ ಗಳು ಬೆನ್ನುನೋವು ... ಮೂತ್ರಕೋಶದ ವ್ಯಾಧಿ ಗುಳಿಗೆಗಳನ್ನು ಮುಖ್ಯವಾಗಿ ಬೆನ್ನುನೋವು ... ಬಾಧೆಯಾಗಿರುವಲ್ಲಿ ಸ್ತ್ರೀಯರಿಗೆ ಮುಖ್ಯವಾಗಿ ಚಿಕಿತ್ಸೆ ನಡಿಸಿ ಹೆಚ್ಚು ಸಮಾಧಾನ ಪಟ್ಟಿದ್ದೇನೆ. ಸ್ತ್ರೀಯರ ಅನೇಕ ಅಸ್ವಸ್ಥಗಳು ಮೂತ್ರಪಿಂಡಗಳ ದೋಷದಿಂದಾಗುವಂಥವಾಗಿವೆ ಮತ್ತು ಅಂಥಾ ಯಾವತ್ತು ಸಂಗತಿಗಳಲ್ಲಿ ಈ ಔಷಧದಿಂದ ತಪ್ಪದೇ ಮತ್ತು ನಿಶ್ಚಯವಾಗಿ ಗುಣವು ಸಿಕ್ಕುತ್ತದೆ.

ಅವು ಮೂತ್ರಕೋಶದ ಬಗ್ಗೆನೇ ಮುಖ್ಯವಾಗಿ ಉದ್ದೇಶಿಸಲ್ಪಟ್ಟ ವಿಶಿಷ್ಟವಾಗಿ ಮೂತ್ರಸಂಬಂಧವಾದ ವಿಷಪದಾರ್ಥಗಳನ್ನು ದೂರಪಡಿಸುವಲ್ಲಿ ಸಹಕಾರಿಯಾಗಿದೆ ... ವಿದ್ರಧಿ, ಬೆನ್ನುನೋವು, ವಾತರೋಗ ... ಮೂತ್ರಪಿಂಡದ ... ರಕ್ತಪಿತ್ತ ... ಮೂಲಿನತ್ವವನ್ನು ಶುದ್ಧಿಪಡಿಸುತ್ತದೆ.

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ. ಶೀಸೆ ಒಂದಕ್ಕೆ ರೂ ... ಅಥವಾ ೬ ಶೀಸೆಗಳಿಗೆ ರೂ ... ೧೦ ... ಅಥವಾ ಮುಂಬಯಿಯಲ್ಲಿಯ ಡೋನ್ಸ್ ರ ಔಷಧಗಳ ಕಚೇರಿಯಿಂದ ನೇರಾ ತರಿಸಿಕೊಳ್ಳಬಹುದು. ಪಿ ಓ ಬಾಕ್ಸ್ ನಂ ..., ಮುಂಬಾಯಿ.

ಯಾವ ತರವಾದ ಮೋಸವೂ ಇಲ್ಲ. ದರಗಳು ಬಹಳ ಸುಲಭ ವಿಪರೀತವಾಗಿ ಮಾರಾಟವಾಗುತ್ತಿವೆ. ಜಾಗ್ರತೆ ನೋಡಿ.

ಲೋಕದಲ್ಲೆಲ್ಲಾ ಅತ್ಯಂತ ಆಶ್ಚರ್ಯವಾದುದು

131 12

ಬಹು ಸೊಗಸಾದ ಮತ್ತು ಮೇಜಿನ ಮೇಲಿಡ ವುದಕ್ಕೆ ಉಪಯುಕ್ತವಾದ ದೊಡ್ಡ ಗಡಿಯಾರ ಮತ್ತು ಜೇಬಿನಲ್ಲಿಡುವುದಕ್ಕೆ ಯೋಗ್ಯವಾದ ವಾಚ್ ಗಡಿಯಾರ ಎರಡು ಗಡಿಯಾರಗಳು ಸಿಕ್ಕುತ್ತವೆ ಬಹುಮಾನರೂಪಗಳೇ,

ನಮ್ಮ ಹಿಂದೂ ದೇಶದ ವರ್ತಕರನೇಕರು ತಾವು ಮಾರುವ ಪದಾರ್ಥಗಳ ವಿಷಯ ವಿಪರೀತವಾಗಿ ಹೊಗಳಿ, ಸುಳ್ಳು ಸಂಗತಿಗಳನ್ನು ಪ್ರಕಟಿಸುವವರಾಗಿದ್ದಾರೆ. ಅಂಥಾ ವರ್ಣನೆಯನ್ನು ಓದುವವರು ಪದಾರ್ಥಗಳನ್ನು ಕೊಂಡಮೇಲೆ ಮೋಸಹೋಗುವರು. ಆದರಿಂದಲೇ ಜನರು ಕ್ರಯದ ಪಟ್ಟಿಗಳನ್ನು ಓದುವುದಿಲ್ಲ. ಆದರೆ ನೀವೆಂದಿಗೂ ನಮ್ಮ ಅಂಗಡಿಯ ವಿಷಯ ಯಾವ ಸಂಶಯವನ್ನೂ ಇಡಬಾರದು. ನಮ್ಮ ಅಂಗಡಿಯಲ್ಲಿ ನೀವು ಒಂದಾವರ್ತಿ ವ್ಯಾಪಾರ ಮಾಡಿದರೆ ಇನ್ನೆಂದಿಗೂ ನಮ್ಮನ್ನು ಬಿಟ್ಟು ಬೇರೆ ಅಂಗಡಿಗಳಿಗೆ ಹೋಗಲಾರಿರಿ. ನೋಡಿರಿ, ಜೇಬಿನಲ್ಲಿ ಇಡುವ ಒಂದು ಸೊಗಸಾದ ಗಡಿಯಾರವನ್ನು ಕೊಂಡರೆ ಅದರ ಜೊತೆಯಲ್ಲಿ ೪೧೭ ಪದಾರ್ಥಗಳನ್ನು ಕಳುಹಿಸುತ್ತೇವೆ. ಗಡಿಯಾರಕ್ಕೆ ಒಂದಾವರ್ತಿ ಬೀಗ ಕೊಟ್ಟರೆ ೩೦ ಗಂಟೆಗಳ ಕಾಲ ನಡೆಯುವುದು. ಸೊಗಸಾದ ಮುಳ್ಳುಗಳು, ಬಿಳೀ ಗಾಜಿನ ಮೇಲೆ ಬರೆಯಲ್ಪಟ್ಟ ಗಂಟೆಗಳ ಅಂಕೆಗಳು ಇವುಗಳು ಅದರಲ್ಲಿರುತ್ತವೆ. ಇದಕ್ಕೆ ಐದು ವರ್ಷಗಳು ಗ್ಯಾರಂಟಿ ಕೊಡುತ್ತೇವೆ. ಈ ಗಡಿಯಾರವನ್ನು ಕಳುಹಿಸುವುದಕ್ಕೆ ಮೊದಲು ಅದನ್ನು ನಾವು ಚನ್ನಾಗಿ ಪರೀಕ್ಷೆಮಾಡಿಯೇ ಕಳುಹಿಸುವೆವು. ಅದರ ಜೊತೆಯಲ್ಲಿ ಕೆಳಗೆ ಕಂಡ ಪದಾರ್ಥಗಳನ್ನು ಕಳುಹಿಸುವೆವು —ಒಂದು ಸೊಗಸಾದ ಗಡಿಯಾರದ ಸರಪಣಿ, ಮೇಜಿನ ಮೇಲೆ ಇಡುವ ದೊಡ್ಡ ಗಡಿಯಾರ ಒಂದು, ವಿಲಾಯಿತಿಯ ಪ್ಲಿಮಾಂಡ ದುಡ್ಡಿನ ಪಟ್ಟಿಗೆಯೊಂದು ಇದಕ್ಕೆ ಅರಗಳೂ ಬೀಗದ ಕೈಗಳೂ ಇರುವವು. ಒಂದು ಉತ್ಕೃಷ್ಟವಾದ ದುಬ್ಬಿ, ತಿಂಗಳುಗಟ್ಲೇ ಒಂದೇ ಆಸೆಯ ಎಣ್ಣೆ ಕುಡಿಯುವ ಸೊಗಸಾದ ಲ್ಯಾಂಪ್ ದೀಪ, ಒಂದು ಸೊಗಸಾದ ಫೌಂಟನ್ ಪೆನ್ನು, ಒಂದು ಜೇಬಿನ ... ಬರುವ ಪೆನ್ಸಿಲು ... ಒಂದು ಚಾಕು, ಒಂದು ಬಲವಾದ ಚರ್ಮದಿಂದ ಮಾಡಿದ ... ಒಂದು ಸೊಗಸಾದ ಬಾಚಣಿಗೆ, ಒಂದು ದರ್ಪಣ (ಕನ್ನಡಿ), ಸೊಗಸಾದ ಕತ್ತರಿ, ರಾತ್ರಿಯಲ್ಲಿ ... ಟೋಪಿ, ಷರ್ಟ್ ಗುಬ್ಬಿಕ್ಕೆ ಉಪಯೋಗವಾದ ಸೊಗಸಾದ ಗುಂಡಿಗಳು, ಒಂದು ಕನ್ನಡಕ, ಒಂದು ಸೊಗಸಾದ ಪಟ್ಟಿಗೆಯಲ್ಲಿ ಸೋಪು, ಒಂದು ಉತ್ಕೃಷ್ಟವಾದ ಕೈವಸ್ತ್ರ, ಥಳಥಳಿಸುವ ... ರಬ್ಬರು, ಸೊಗಸಾದ ಮಾರೇ ... ಹೊಸದ ... ಹನ್ನೆರಡು ಪೇಪರ್ ... ಗಳು, ಆರು ... ನೂರೈವತ್ತು ಸೊಗಸಾದ ಎನ್ವಿಲೋಪುಗಳು (ಲಕೋಟೆಗಳು) ನೂರೈವತ್ತು ಲೆಟರ್ ಕಾಗದಗಳು ... ಪೋಸ್ಟು ... ಗಳು, ಎಪ್ಪತ್ತು ... ಇವೆಲ್ಲವುಗಳಿಗೆ ಏಳು ರೂಪಾಯಿ ... ಅರ್ಧ ಬೆಲೆಗನ್ನು ... ವಿ. ಪಿ. ಮೂಲಕ ಕಳುಹಿಸುತ್ತೇವೆ.

ಎಂ ಎ. ಗಟಾಲಾ ಅಂಡ್ ಕಂಪನಿ,

(ಉತ್ತರ ಅರ್ಕಾಡು) ಚಿತ್ತೂರು

ಎಂಬ ವಿಳಾಸಕ್ಕೆ ಬರೆದುಕೊಳ್ಳಿ.

(ಪದಾರ್ಥಗಳನ್ನು ಕೊಂಡ ಮೇಲೆ ಅವುಗಳನ್ನು ನೀವು ಅಪೇಕ್ಷಿಸದಿದ್ದರೆ ನಿಮ್ಮ ದ್ರವ್ಯವನ್ನು ವಾಪಸು ಕಳುಹಿಸುತ್ತೇವೆ.

ಆರ್ಡರ್ ಫಾರಂ

ಅಯ್ಯಾ,

ದಯಮಾಡಿ ನಾನು ಟೇಬಲಿನಲ್ಲಿಯೇ ಜೇಬಿನಲ್ಲಿ ... ಒಂದು ಗಡಿಯಾರವನ್ನು ಮೇಜಿನ ಮೇಲಿಡುವುದಕ್ಕೆ ಒಂದು ಸೊಗಸಾದ ದೊಡ್ಡ ಗಡಿಯಾರವನ್ನೂ ಇವುಗಳ ಸಂಗಡ ೪೧೭ ಬಹುಮಾನಗಳನ್ನು ಕಳುಹಿಸಿಕೊಡಿರಿ. ಅದಕ್ಕಾಗ ಮ ಖರೀದಿ ರೂ ೬—೮— (1, 7 8 0) ಯಲ್ಲಿ ಅರ್ಧ ಬೆಲೆಗನ್ನು ಅಂದರೆ ರೂ ೩-೧೨-೦ ನ್ನು ಮನಿಯಾರ್ಡರ್ ಮೂಲಕ ಕಳುಹಿಸಿರುತ್ತೇನೆ. ಬಾಕಿ ಬೆಲೆಗನ್ನು ನೀವು ದಯವಿಟ್ಟು ವಿ ಪಿ ಪಿ ಮೂಲಕ ತೆಗೆದುಕೊಳ್ಳಿ.

ಹೆಸರು.

ವಿ ಳಾ

ಪೋಸ್ಟ್ ಆಫೀಸ್

ಹತ್ತಿರದಲ್ಲಿರುವ ರೈಲ್ವೆ ಸ್ಟೇಷನ್

ಇಂತಿ

[ಈ ಆರ್ಡರ್ ಫಾರಂನನ್ನು ಇದರ ಸಂಗಡ ಅರ್ಧ ಬೆಲೆಯಾದ ರೂ ೩-೧೨-೦ ನ್ನು ಕಳುಹಿಸುವಂಥವರಿಂದ ನಾವು ರೂ ೬-೮-೦ ಬೆಲೆಯ ಪದಾರ್ಥಗಳನ್ನು ಕಳುಹಿಸಲಿ ಯಾವ ಪೋಸ್ಟೇಜ್ ಖರ್ಚನ್ನು ತೆಗೆದುಕೊಳ್ಳುವುದಿಲ್ಲ. ನಾವೇ ಪೋಸ್ಟು ಖರ್ಚನ್ನು ವಹಿಸುತ್ತೇವೆ.]

ಪ್ರಕಟನೆ.

1 1 1

ಇವರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ

ಅಮೃತಮಹಲ್ ... ಬಾಬತ್ತು ಕಲವು ... ಮತ್ತು ... ರಾಸುಗಳನ್ನು ಬಾಬ್ತು ಇಸವಿ ಫೆಬ್ರವರಿ ಮಾಹೆ ... ನೇ ತಾರೀಖು ಲಾಗಾಯಿತು ಕೃಷ್ಣರಾಜಪೇಟೆ ತಾಲ್ಲೋಕು ಚಿಕ್ಕಬಳ್ಳಿನ ಕಾವಲಿನಲ್ಲಿ ... ಜಾತ್ರೆ ನಡೆಯುವ ಜಾಗದ ಸಮೀಪದಲ್ಲಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟಪಟ್ಟವರು ಹಾಜರಾಗಿ ಖರೀದಿಮಾಡಿ ಸದರಿ ರಾಸುಗಳನ್ನು ಪಡೆಯಬಹುದು.

ಎಚ್ ... ರಾಜೀ ಅರಸ್

ಕ್ಯಾಂಪ್ ಮೈಸೂರು ಸೂಪರಿಂಟೆಂಡೆಂಟ್

ತಾ ... ಜನವರಿ ೧೯ ಅಮೃತಮಹಲ್ ಇಲಾಖೆ

ಸಮಸ್ತ ಜನಗಳಿಗೂ ಕೃತಪಡಿಸುವ ಸಂಗತಿ

1 1 1

ಬೆಂಗಳೂರು ದೊಡ್ಡಪೇಟೆಯಲ್ಲಿರುವ ಕೋಮಟಿ ... ಶೆಟ್ಟಿ ... ವೆಂಕಟಕೃಷ್ಣಶೆಟ್ಟಿ ಪತ್ನಿ ಈತನ ತಂದೆ ಲಕ್ಷ್ಮೀದೇವಮ್ಮನ ಸ್ವಾಧೀನದಲ್ಲಿರುವ ಸ್ವತ್ತುಗಳು.

೧ ಬೆಂಗಳೂರು ದೊಡ್ಡಪ್ಯಾಟೆಯಲ್ಲಿರುವದು ಮುನಿಸಿಪಲ್ ನಂಬರು ೫೮ನೆ ಮನೆ ಇದಕ್ಕೆ ಸೇರಿದ ಅಂಗಡಿಗಳು ಮೂರಕ್ಕೆ ಮುನಿಸಿಪಲ್ ನಂಬರು ೫೮—೧, ೫೮—೨, ೫೮—೩, ... ದ ಪೇಟೆಯಲ್ಲಿ ಖಾಲಿ ನಿವೇಶನ ಮಾರುವ ಅಂಗಡಿಗೆ ಮುನಿಸಿಪಲ್ ನಂಬರು ೪೪೧, ಈ ಸ್ವತ್ತುಗಳು ಈ ಕೆಳಗೆ ರುಜುವ ಮಾಡುವವರು ಹಕ್ಕುದಾರರಿಗೆ ಒಳಪಟ್ಟು ಇರುವದನ್ನ ಇವರಿಗೆ ತಿಳಿಯದಂತೆ ಖಾಲಿ ಸ್ವಾಧೀನಸ್ಥರಾಗಿರುವ ಲಕ್ಷ್ಮೀದೇವಮ್ಮನಿಂದ ಯಾರಾದರೂ ಕ್ರಯ, ಭೋಗ್ಯ, ದಾನ ವಗೈರೆ ಮಾಡಿಕೊಂಡಲ್ಲಿ ಊರ್ಜಿತವಾಗಲಾರದು.

ತಿರುಚನಾಪಲ್ಲಿಯಿಂದ ಬಂದಿರುವ ಕೋಮಟಿ ... ಮುನಿಯಣ್ಣಶೆಟ್ಟಿ ಮಗ ದೊಡ್ಡ ಸುಬ್ಬರಾಯಶೆಟ್ಟಿ ರುಜುವು

ಬೆಂಗಳೂರಿನಲ್ಲಿ ಇರುವ ಕೋಮಟಿ ಚಿಕ್ಕ ಸುಬ್ರಾಯಶೆಟ್ಟಿ ಮಗ ಮುನಿಸ್ವಾಮಿಶೆಟ್ಟಿ ರುಜುವು

ಬೆಂಗಳೂರಿನಲ್ಲಿ ಇರುವ ಕೋಮಟಿ ಮುನಿಯಣ್ಣಶೆಟ್ಟಿ ಮಗ ವೆಂಕಟಸ್ವಾಮಿಶೆಟ್ಟಿ ರುಜುವು

11 1 1908 ಬೆಂಗಳೂರು.

ಜ್ವರಹರಿ.

118 13



ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ತಜ್ವರ, ಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಪಾರಾಮಾತ್ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ಎಂಬ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಕೊಂಡಿರುವರು. ಇನ್ನು ಜನಗಳು ಕಾಹಿಲೆ ಬೀಳುತ್ತಿರುವ ದಯವಿಟ್ಟು ಇನ್ನೊಂದು ಎಂ ಡಿ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರದಾರೆ.

ಕ್ರಯ.—ಸೀಸೆ ೧ ಕ್ಕೆ ೪ ಆಣೆ, ೧ ಡ‌ಜ. ೧—೪ ರೂ., ೨—೧೨ ಆ, ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫ್ ಬಿಡಲಾಗುವದು.

****

ಚಿಮಂಕ ಪ್ರಾರ.

ಈ ಔಷಧವು ಅಜೀರ್ಣ, ಶೀತ ಭೇದಿ, ಸಾಧಾರಣ ಹೊಟ್ಟೆ ಕಳೆ ನೋವು, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ ಹೊಟ್ಟೆ ಮಹೌಷಧವಾಗಿ ಬಳಸಲ್ಪಟ್ಟಿದೆ. ಕಡಲೇ ಗಾಳಿಯಿಂದ ಬಹು ಬೇಗನೆ ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕಡಿವೆ ಗುಣಪಡಿಸುತ್ತದೆ. ಜನಪದ ದರದ ಪ್ರಾರಂಭ ದಿವಸದಿಂತಲೇ ಸೀಸೆಗಳಲ್ಲಿ ಕಳುಹಿಸುವದು.

ಕನಡ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಕೆಲವು ಕಾಲ ಕಷ್ಟ ಅನೇಕ ನನ್ನ ತಾಲೂಕಿನಲ್ಲಿ ಪ್ರಯೋಗಿಸಿದ ಅನುಭವದಲ್ಲಿ ಅನೇಕ ಪರೀಕ್ಷೆಗಳಿಂದಲೂ ಕಾಲರಾ, ಅಜೀರ್ಣ ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ ಸ್ಪೆಶಲ್ ಔಷಧ ಕೊಡಲೆ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ಎನ್ನಬಹುದು.

ಈ ಎರಡು ಔಷಧಗಳೂ ಊರು ಊರುಗಳಲ್ಲಿರುವ ವೈದ್ಯಶಾಲೆಗಳಲ್ಲಿ ಔಷಧ ವ್ಯಾಪಾರಿಗಳಲ್ಲಿ ಕ್ರಯಕ್ಕೆ ದೊರೆಯುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ:—

ದಿ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

The Pourwal Cash Bazzar—Bangalore City.

ಧಾರಿವಾಲ್ (ಪಂಜಾಬ್) ಶಾಹಲುಗಳು.

130-9

ಕೆಂಪು, ಎಸ್ಟ್ರಬ್ಲ್ಯೂ, ಕೆಂಪು, ಕೇಸರಿ, ಹಸರು, ಸಕ್ಕದ ಬಣ್ಣ, ಬಾದಾಮಿ, ಕೆಂಪು ಬಿಳುಪು, ಮುಂತಾದ ಬಣ್ಣವುಳ್ಳದ್ದು, ಮತ್ತು ಚೆಕ್ ನಮೂನೆ, ಪೂರಾ ೩ರು ಮೊಳ ಉದ್ದ, ಮೂರು ಮೊಳ ಅಗಲವುಳ್ಳದ್ದು.

ಈಗತಾನೇ ವಿಲಾಯತಿಯಿಂದ ಬಂದಿರುವ ೫,೦೦೦ ಪೌಂಡು ಟೋಪಿಗೆ ಬೇಕಾದ ತರಹವಾರಿ ಉಲ್ಲನ್ ಮತ್ತು ಇವುಗಳಲ್ಲಿ ತಯಾರಾದ ತರಹವಾರಿ ಟೋಪಿಗಳು ನಮ್ಮಲ್ಲಿ ಸಿದ್ಧವಾಗಿರುತ್ತವೆ.

ಇವುಗಳಲ್ಲದೆ ನೀವು ಕೇಳುವ ಯಾವ ಸಾಮಾನು ಆಗಲಿ ನಂಬಿಕೆಯಿಂದ ಅಗ್ಗವಾಗಿ ಕಳುಹಿಸುವೆವು. ಖರೀದಿ ವಗೈರ ತಿಳಿಯಬೇಕಾದವರು ಇವರಿಗೆ ಬರೆಯಿರಿ—

ಹೆಚ್. ಜವಾನ್ ಮಲ್ ಕಂಪನಿ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸನ್ ೧೯೦೮ನೇ ಇಸವಿಯ

127 10



ಎ ನಂ ೧ ಚಿನೀನಾ. ಬಿ ನಂ ೧ ಸಿ. ನಂ ೧ ಚಿನೀನಾ ಡಿ ನಂ ಪಂಚಾಂಗ ಸಹಿತವಾದ ಇಂಗ್ಲಿಷು—ಕನ್ನಡ ಡೈರಿ.

ಈ ಡೈರಿಗಳು ವರ್ತಕರು, ಉದ್ಯೋಗಿಗಳು, ಕಂಟ್ರ್ಯಾಕ್ಟರು, ದೊಡ್ಡ ಮನುಷ್ಯರು, ಮುನ್ಷಿಬಾಷ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ಶೀಲಕ ಸಂ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪೋಸ್ಟ್ ರೇಟು, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಬಡ್ಡಿ ಲೆಕ್ಕಗಳ ಲೆಕ್ಕ, ತಕ್ತೆಗಳು, ಗೌರಿ ಪಂಚಾಂಗ, ಪ್ರಶ್ನ ಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹು ಕಾಲ ಗುಳಿಕಕಾಲ, ನಾಡಿಕೆ, ದಿನ ಸಂಬಳದ ಪಟ್ಟಿ, ಥೋಟಿಲೆಕ್ಕ, ಜಮಾಖರ್ಚು ಪಟ್ಟಿ, ಇನ್ನೂ ಅನೇಕ ವಿಷಯಗಳಿವೆ. ಉತ್ಕೃಷ್ಟವಾದ ಕಾಗದ, ರಂಗು ಹಾಕಿದೆ, ಶಿಲ್ಕು ಕಾರ್ಡು ಪೈಂಡು, ಚಿನ್ನ ಬಿಳಿ, ಬಂಗಾರದ ಕ್ರಯ—

ಎ ನಂಬರ್ ಚಿಕ್ಕ ಸೈಜು ೩ ಆಣೆ ಸಿ ನಂಬರು ದೊಡ್ಡ ಸೈಜು ೬ ಆ ಬಿ ನಂಬ್ರದ್ದು ೪, ಡಿ ನಂಬ್ರದ್ದು ೮.

ಹೊಸ ನಮೂನೆ ಉತ್ಕೃಷ್ಟವಾದ 'ಚಿನೀನಾ' ಡೈರಿ ಇದು ಸರ್ಕಾರದಲ್ಲಿ ರಿಜಿಸ್ಟರಾಗಿದೆ.

"ಚಿನೀನಾ" ೧ ನಂ. ೬ ಆ. | "ಚಿನೀನಾ" ೨ ನಂ. ೬ ಆ

ಪೋಸ್ಟ್ ಚಾರ್ಜು ಬೇರೆ ಒಂದೇ ಸಾರಿ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ ವಿ. ಪಿ. ಮೂಲಕವೂ ತರಿಸಿಕೊಳ್ಳಿ.

ಪಿ. ಕೆ. ಮತ್ತು ಎಂ. ಎನ್ ಕೃಷ್ಣಸ್ವಾಮಿ ಶೆಟ್ಟಿ

ಒಕ್ಕಲಿಪುರ ಪೇಟೆ, ಬೆಂಗಳೂರು ಸಿಟಿ.

ಕಾರ್ಡು ಸೈಜು ೪|×೩|.

ಫೋಟೋ ತೆಗೆಯುವ

ಫೋಟೋ ಕ್ಯಾಮೆರಾ.

84 24

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮೆರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ ಆದರೆ ಇದರ ಖರೇ ಕಿಮ್ಮತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ :—

ಘೂಟಾಲಾಲ ಭಗನಲಾಲ ಮಹಾಜನ ಠಾಕೂರದ್ವಾರ ರೋಡ ಪೋಸ್ಟ್ ಕಾಲಬಾದೇವಿ ಮುಂಬಯಿ.

ಮೈಸೂರು ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

36-50

೧. ಬೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಸೆಳತ (ಖಾಲ), ಮೈ ನಡುಕ, ಶೀತವಾತಗಳ ಬಾಧೆ. ಅಜೀರ್ಣ. ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ಬಿಕ್ಕಳಿಕೆ, ಅರುಚಿ, ಇನ್ನೂ ಅನೇಕ ರೋಗಗಳನ್ನು ಕೆಲವೇ ದಿನಗಳಲ್ಲಿ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಾಯಿ ರೋಗಗಳು ನಾಶವಾಗಿರುತ್ತವೆ. ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ಆಕ್ಕದಲ್ಲಿ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಕಾಲದ, ಮಕ್ಕಳ ಎಳೆವು, ಜ್ವರ, ಸನ್ನಿಜ್ವರ, ಕ್ರಿಮಿಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿಪದಾರ್ಥವಾಗಿ ಅನುಪಾನಪತ್ರ, ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಡಬ್ಬಿಗೆ ೬ ಆಣೆ; ೪ ಡಬ್ಬಿಗೆ ೧ ರೂಪಾಯಿ ಹೆಚ್ಚು. ೧ ರಿಂದ ೧೨ ಡಬ್ಬಿ ವರೆಗೆ ಪೋಸ್ಟೇಜು ೬ ಆಣೆ.

ವಿಳಾಸ —ವಾಗ ದ ವೆಂಕಟಾಚಲ ಪಂಡಿತ

ಎಸ್ ಎಸ್ ಎ. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್ ಮೈಸೂರು.

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

25

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಮಾರುತ್ತಿರುವ ಟೋಪಿಗಳ ದಾರವೆಲ್ಲಾ ಬೇರಾದದ್ದು. ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಜಾಗ್ರತೆಯಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇ ದಾರ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಕಾಗದ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚೆನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ ಕಾಕಿ ಟೋಪಿಗಳು ೧ ರೂ. ೪ ಆ.; ೧ ರೂ. ೬ ಆ.; ೧ ರೂ. ೮ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೪ ಆ.. ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ. ೧ ರೂ. ೪ ಆ. ೧ ರೂ. ೬ ಆ.

ಉಣ್ಣೆಯ ಟೋಪಿಗಳು ೧ ರೂ. ೪ ಆ.; ೧ ರೂ. ೬ ಆ.

ಹುಡುಗರ ಟೋಪಿ, ಸೂಫಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್ ಹಾಸನದ ಟೋಪಿ, ಕಾರ್ಖಾನೆ, ಹಾಸನ.

WILLIAM & CO., BOMBAY.

ಅಪೂರ್ವಶೋಧ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

27-49

ಅನೇಕರೆಲ್ಲರ ಪ್ರಶಂಸೆಯೊಳಗಾದ ಅಮೃತಾಂಜನ ಸರ್ವಲೋಕರಂಜನ ಸರ್ವ ವ್ಯಾಧಿಭಂಜನ ಚಿಕಿತ್ಸಾ ವಿಷಯಗಳಲ್ಲಿ ನಿಪುಣ, ದೇಹಾಂಗಗಳಿಗೆ ಸಂಜೀವನ ವಾಸನೆಯಲ್ಲಿ ಮನೋರಂಜನ ಬೆಲೆಯಲ್ಲಿ ಅಲ್ಪ ವಿಸ್ತೃತಯಲ್ಲಿ ಅನ್ಯತ ಔಷಧಿಯಲ್ಲಿ ಸೈಯಿತ, ಕೊಳ್ಳುವವರಲ್ಲಿ ಮಾನಿರತ್ವಾಯ್ಯ ಔಷಧಿ ಗುಣ ಕಂಡುಬರುವದಿಲ್ಲವಾದರೆ ಹಿಂತಿರುಗಿ ಕೊಡಲ್ಪಡುವದು. ಒಂದೇ ಸಲ ಬಾಟ್ಲಿ ತರಿಸಿಕೊಂಡವರಿಗೆ ಬಂದು ಬೆಳ್ಳಿಯ ಕಪ್ ಉಚಿತವಾಗಿ ನೊರದು.

ನಿಶ್ಚಂಕೆಯಾಗಿ ಭಾರತವರ್ಷೀಯ ಔಷಧಗಳಿಂದ ತಯಾರಿಸಿದ ಹೊರಪ್ರಯೋಗಕ್ಕೋಸುಗ ಮುಲಾಮು ಇದರಿಂದ ತಲೆನೋವು. ಶಿರೋವೇದನೆ ವಾತ ಸಂಧಿವಾತ ಪಕ್ಷವಾತ. ಗಂಟಲು ನೋವು ಸೊಂಟನೋವು. ಗಂಟಲು ನೋವು ಶೀತ. ಚಳುಕು ಉಳುಕು. ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಿಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

ಬಾಟ್ಲಿ ಒಂದಕ್ಕೆ ಕಿಮ್ಮತು ೦—೮—೦ ಪೋಸ್ಟು ಖರ್ಚು ೦—೪—೦

ಗಜಕರ್ಣದ ಮುಲಾಮು.

ಇದು ಸೇರಿ ಹಾಕುವದರೊಳಗೆ ಗಜಕರ್ಣವು ಹೋಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಇದರ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಡಬ್ಬಿ ಒಂದಕ್ಕೆ ಕಿಮ್ಮತು ೦—೬—೦. ಪೋಸ್ಟು ಖರ್ಚು ೦—೩—೦

ದಂತಮಂಜನ —ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಹಲ್ಲುಗಳು ಬೆಳ್ಳಗಾಗುತ್ತವೆ. ಹಲ್ಲು ನೋವನ್ನು ತೆಗೆಯುತ್ತದೆ. ಡಬ್ಬಿ ಒಂದಕ್ಕೆ ೦—೨—೦ ಪೋಸ್ಟು ಖರ್ಚು ೦—೩—೦

ವೀರ್ಯಗುಟಿಕ.—ಧಾತುಪುಷ್ಟಿ ನಿಶ್ಯಕ್ತಿನಂತರಿಗೆ ಶಕ್ತಿ ಕೊಡುತ್ತದೆ. ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ರಕ್ತ ಶುದ್ಧಿ ಮಾಡಿ ದೇಹ ಆರೋಗ್ಯಕೊಡುತ್ತದೆ. ಡಬ್ಬಿ ಒಂದಕ್ಕೆ ೧—೦—೦. ಪೋಸ್ಟು ಖರ್ಚು ೦—೩—೦.

ಕೇಶವರ್ಧಿನಿ.—ತಲೆ ಕೂದಲು ಉದುರುವದು, ಕೂದಲುಗಳನ್ನು ಬೆಳೆಸುವದು, ಕೂದಲುಗಳನ್ನು ಕಪ್ಪುಮಾಡುವದು. ಮನಸ್ಸಿಗೆ ಸಂತೋಷವು, ಬಹಳ 'ಪರಿಮಳ ಉಳ್ಳದ್ದು. ೩ ಔನ್ಸ್ ಬಾಟ್ಲಿ ಒಂದಕ್ಕೆ ೧—೦—೦. ಪೋಸ್ಟು ಖರ್ಚು ೦—೩—೦.

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೯ ಓಕ್ ಲೇನ್. ಫೋರ್ಟ್, ಮುಂಬಯಿ.

ಟೆಲಿಗ್ರಾಫು ಅಡ್ರೆಸು—"ಅಮೃತಾಂಜನ," ಮುಂಬಯಿ.

ವಯೋಮಿಂಗಿನ ಪೆ-ರೂ-ನಾ ಇದು ಶೀತರೋಗ ಪರಿಹಾರಿ.

ಮಾಜಿ ಗವರ್ನರವರು ಹೊಗಳುತ್ತಾರೆ. ಇದು ಉತ್ತಮೋತ್ತಮವಾದ ಬಲಕಾರಿ.



ವಯೋಮಿಂಗ್ ಸಂಸ್ಥಾನದ ದಿವ್ಯ ಸಭಾಮಂದಿರವು.

ರಗ-13

ಅಧಿಕಾರಿಗಳು

ವಿಶೇಷ ಜನಾಭಿಪ್ರಾಯವನ್ನು ಪಡೆದ ಬಹು ನಂಬಿಗಸ್ತರಾಗಿರುವ ಗೌರವ ದೊಡ್ಡ ಅಧಿಕಾರಿಗಳೆಲ್ಲಾ ಯಾವಾಗಲೂ ತುಂಬಾ ಕೆಲಸವುಳ್ಳವರಾಗಿದ್ದಾರೆ. ಇತರ ವ್ಯಾಸಂಗಗಳಿಗೆ ಗಮನಕೊಡಲು ಅವರಿಗೆ ಸ್ವಲ್ಪವೂ ಅವಕಾಶವಿರುವದಿಲ್ಲ. ಆದಕಾರಣ ಅಂಥಾ ಅಧಿಕಾರಿಗಳು ಯಾವುದಕ್ಕಾದರೂ ಶಿಫಾರಸು ಕಾಗದಗಳನ್ನು ಬರೆದುಕೊಡುವುದಕ್ಕೆ ಒಪ್ಪುವುದು ಬಹಳ ಅಪರೂಪವೇ ಸರಿ. ಇದಲ್ಲದೆ ಅಂಥಾ ಮನುಷ್ಯರು ಮನಃಪೂರ್ವಕವಾಗಿ ಯಾವ ವಿಷಯಕ್ಕಾದರೂ ಪ್ರಶಂಸಕ್ಕಾಗಿ ಶಿಫಾರಸು ಬರೆದುಕೊಡುವದೇನಾದರೆ ಬಹಳ ಕಷ್ಟ, ಪತ್ರ ಅವಕ್ಕೆ ಅವರ ಸಮ್ಮತಿ ಇರುವದಿಲ್ಲ.

ಅಪರೂಪವಾದ ಶಿಫಾರಸುಗಳು

ಈ ದೇಶದ ಪಬ್ಲಿಕ್ ಅಧಿಕಾರಿಗಳು ಅಂದರೆ ಗವರ್ನರುಗಳು, ಕಾಂಗ್ರೆಸ್ಸಿನ ಮೆಂಬರುಗಳು, ರಾಯಭಾರಿಗಳು, ಸೆನೆಟರುಗಳು ಮುಂತಾದವರು ಔಷಧದ ಪ್ರಯೋಜನದ ವಿಷಯದಲ್ಲಿ ಬಹಿರಂಗವಾಗಿ ತಮ್ಮ ಹೆಸರು ಕಾಣಿಸಿ ಶಿಫಾರಸು ಬರೆಯುವುದು ಬಹಳ ಅಪರೂಪವಾಗಿದೆ.

ಆದಕಾರಣ ಅಂಥಾ ಬಹುಮಂದಿ ಅಧಿಕಾರಿಗಳು ಸ್ವಲ್ಪವೂ ಅನುಮಾನವಿಲ್ಲದ ಶಿಫಾರಸನ್ನು ಪೆರೂನಾ ವಿಷಯದಲ್ಲಿ ಬರೆದುಕೊಟ್ಟಿರುವುದು ದೊಡ್ಡ ಜಯಪ್ರದವೆಂದೇ ಹೇಳಬಹುದು. ಐ ನಾಂಗದಲ್ಲಿ ತುಂಬಾ ಹೆಸರುವಾಸಿಯನ್ನು ಪಡೆದಿರತಕ್ಕ ಅನೇಕ ಗೌರವಮನುಷ್ಯರೂ ಅಧಿಕಾರಿಗಳೂ ಅನೇಕ ವೇಳೆ ಬಹು ಸಂತೋಷದಿಂದ ಪೆರೂನಾ ವಿಷಯವನ್ನು ಹೊಗಳಿ ಬರೆದಿರುತ್ತಾರೆ.

ಅದ್ಭುತವಾದ ಸಂಗತಿಯು

ಪೆರೂನಾವಿನಲ್ಲಿ ಬಹು ವಿಶೇಷವೂ ಮಹಾ ಅಸಾಧಾರಣವೂ ಆದ ಗುಣವಿರುತ್ತೆಂದು ಎಲ್ಲೆಲ್ಲೂ ಹೆಸರುವಾಸಿಯನ್ನು ಪಡೆದಿರುವದಕ್ಕೆ ಕಾರಣವನ್ನು ತಿಳಿಯಲು ಮಾರ್ಗವೇ ತೋರುವುದಿಲ್ಲ. ಆದರೂ ಎಲ್ಲಾ ತರಗತಿಗಳಲ್ಲಿರತಕ್ಕ ಜನಗಳು ಒಂದೇ ಆದ್ದರಿಂದ ಅವರೆಲ್ಲರ ಅಭಿಪ್ರಾಯವು ಏಕತರವಾಗಿರುತ್ತದೆ.

ಸ್ವಾಭಾವಿಕವಾದ ಉತ್ಸಾಹವು

ಒಬ್ಬ ಮನುಷ್ಯನಿಗೆ ದೀರ್ಘರೋಗವಿದ್ದು, ಇತರ ಯಾವ ಔಷಧದಿಂದಲೂ ಆ ರೋಗನಿವಾರಣೆಯಾಗದೆ, ಕಡೆಗೆ ಒಂದರಿಂದ ವಾಸಿಯಾದಲ್ಲಿ ಸಾಮಾನ್ಯವಾಗಿ ಅವನೂ ಅವನನ್ನು ನೋಡತಕ್ಕ ಜನವೂ ಸ್ವಾಭಾವಿಕವಾಗಿ ತಮ್ಮ ಉತ್ಸಾಹವನ್ನು ಪ್ರಕಟಪಡಿಸುತ್ತಾರೆ. ದೊಡ್ಡ ಉಪಕಾರವಾದದ್ದಕ್ಕೆ ಕೃತಜ್ಞತೆಯೇ ಸ್ವಭಾವವಾಗಿದೆ. ಆದಕಾರಣ ಉಪಕಾರ ಹೊಂದಿದಂಥಾ ಎಲ್ಲಾ ತರಗತಿಗಳ ಜನರೂ ತಮ್ಮ ಅನುಭವವನ್ನು ಪ್ರಕಾಶಪಡಿಸುವುದಕ್ಕಾಗಿ ಕೃತಜ್ಞತಾಪೂರ್ವಕವಾಗಿ ಒಪ್ಪಿಕೊಂಡಿರುವುದೇ ಮುಖ್ಯವಾದ ಮತ್ತು ವಿಶೇಷವಾದ ಕಾರ್ಯವಾಗಿದೆ.

ನಿಜವಾದ ಉಪಕಾರವು

ಪೆರೂನಾ ಕೂಡಲೇ ಗುಣಕೊಡುತ್ತದೆ. ಇದೇ ಮುಖ್ಯಕಾರಣ. ಶೈತ್ಯರೋಗಗಳನ್ನು ನಿವಾರಣೆಮಾಡಿಕೊಳ್ಳುವದು ತುಂಬಾ ಕಷ್ಟ. ಅನೇಕ ವೈದ್ಯರುಗಳು ಅದನ್ನು ವಾಸಿಮಾಡಲಾರದೆ ಹೋಗುತ್ತಾರೆ.

ಕೃತಜ್ಞತೆಯೇ ಫಲಿಸುವುದು

ಅನೇಕ ವರುಷಗಳಿಂದ ಅನುಭವಿಸುತ್ತಿದ್ದ ದೀರ್ಘರೋಗವನ್ನೆಲ್ಲಾ ಕೆಲವು ಬಾಟ್ಲು ಪೆರೂನಾ ಔಷಧವು ವಾಸಿಮಾಡುತ್ತದೆ. ಇದರಿಂದ ಸ್ವಾಭಾವಿಕವಾಗಿ ಹುಟ್ಟುವಂಥಾ ಕೃತಜ್ಞತೆಯನ್ನು ಅಡಗಿಸಿಬಿಡುವುದು ಖಂಡಿತವಾಗಿಯೂ ಅಸಾಧ್ಯವಾಗಿರುತ್ತದೆ.

ನೆತ್ತಿ ಮತ್ತು ಕೊರಳ ಶೀತವು

ಮಿ| ಜೋಸೆಫ್ ರೀಸ್, ೩೪೬೪ ಎಗ್ಲೆಸ್ಟೋ ಬೀದಿ, ಸೆಂಟ್ ಲೂಯಿಸ್, ಮೊ ಇವರು ಬರೆಯುವುದು —

"ನನಗೆ ನೆತ್ತಿಯಲ್ಲೂ ಗಂಟ್ಲಲ್ಲೂ ಶೀತಹಿಡಿದು ಬಹಳ ಕಷ್ಟಪಟ್ಟೆನು. ಆದರೆ ಪೆರೂನಾ ಸೇವನೆಯನ್ನು ಆರಂಭಿಸಿ ಐದು ಬಾಟ್ಲುಗಳಷ್ಟು ಉಪಯೋಗಿಸಿದೆನು. ಮತ್ತು ಎರಡು ಬಾಟ್ಲು ಮನಲಿನ್ ಉಪಯೋಗಿಸಿದೆನು. ಅಷ್ಟರೊಳಗೇ ನನಗೆ ವಾಸಿಯಾಯಿತು.

"ಪೆರೂನಾವು ತುಂಬಾ ಬಲಕಾರಿಯಾದ ಔಷಧವೆಂದು ನಾನು ಯೋಚಿಸುತ್ತೇನೆ. ಶೈತ್ಯ ರೋಗಗಳಿಂದ ಪೀಡಿತರಾದವರೆಲ್ಲ ಪೆರೂನಾವನ್ನೇ ಸೇವಿಸಲೆಂದು ಹೇಳುವೆನು."

ಶೀತದಿಂದ ಹುಟ್ಟುವ ಜ್ವರವು

ಮಿಸೆಸ್ ಡಬ್ಲಿಯು ಕೆ ಗುಡ್, ಬ್ರಾಸ್ವೇ, ವಾ ಇವರು ಬರೆಯುವುದು —

"ನನಗೆ ೧೮೯೬ನೇ ಇಸ್ವಿಯಲ್ಲಿ ಶೀತಜ್ವರ ಬಂದಿತು. ಎಂಟು ಒಂಬತ್ತು ವರುಷಗಳಿಂದಲೂ ನನ್ನ ನೆತ್ತಿಗೆ ಶೀತದಿಂದ ಬಾಧೆಪಟ್ಟೆನು.

"ಅಲಕ್ಷ್ಯಮಾಡಿದ್ದರಿಂದ ಅದು ಗಂಟ್ಲಿಗೂ ಮೂಗಿಗೂ ವ್ಯಾಪಿಸಿತು. ನಿಮ್ಮ ಬಳಿಗೆ ಬಂದು ಪರೀಕ್ಷೆ ಮಾಡಿಸಿಕೊಂಡ ಮೇಲೆ ನೀವು ಹೇಳಿದ ರೀತಿ ನಾಲ್ಕು ತಿಂಗಳ ವರೆಗೆ ಪೆರೂನಾವನ್ನು ಸೇವಿಸಿದೆನು. ಈಗ ನಾನು ಚೆನ್ನಾಗಿಯೂ ಆರೋಗ್ಯದಿಂದಲೂ ಇದ್ದೇನೆ.

ನಾನು ಪೆರೂನಾವನ್ನು ಅಷ್ಟಿಷ್ಟು ಹೊಗಳಲಾರೆನು, ಎಷ್ಟು ಕೊಂಡಾಡಿದರೂ ಸ್ವಲ್ಪವೇ. ಅದರಿಂದ ಏನೇನು ಆಗುವುದೆಂದು ಹೇಳಲ್ಪಟ್ಟದೆಯೋ ಅದೆಲ್ಲಾ ಖಂಡಿತವಾಗಿ ನೆರವೇರುತ್ತದೆ."

ಪೆರೂನಾ ಶೀತವನ್ನು ನಿವಾರಣೆ ಮಾಡುತ್ತದೆ

ಮಿ| ಎಲ್ ಕ್ರಿಫರ್ಡ ಫ್ರಿಗ್ ಜರ್, [illegible] ಮಾರ್ಬಲ್ ಬೀದಿ, ಸೆಂಟ್ ರಿಚ್ ಮಂಡ್, ವಾ ಇವರು ಬರೆಯುವದು —

"ನನಗೆ ಶೀತವಾದ ಒಡನೆಯೇ ಪೆರೂನಾವನ್ನು ತರಿಸಿಕೊಳ್ಳುತ್ತೇನೆ. ಅದನ್ನು ಸೇವಿಸಿದ ಕೂಡಲೇ ಶೀತವು ಬಿಟ್ಟುಹೋಗುವದು.

ವಾಸಿಯಾಗದೆಂಬ ನಿರಾಶೆಯು

"ಕೆಲವು ವಾರಗಳ ತನಕ ನಾನು ಚೆನ್ನಾಗಿ ಸುಖವಾಗಿರಲಿಲ್ಲ. ವಾಸಿಯಾಗದೇನೋ ಇಲ್ಲವೋ ಎಂದ ನಿರಾಶೆಯುಂಟಾಗಿತ್ತು. ಯಾಕೆಂದರೆ ನನ್ನ ಸ್ನೇಹಿತರು ಹೇಳಿದಂಥಾ ನಾನಾ ಔಷಧಗಳನ್ನು ಸೇವನೆ ಮಾಡಿದೆನು. ಎರಡು ವರುಷಗಳ ತನಕ ಔಷಧಗಳನ್ನು ಸೇವಿಸುತ್ತಾ ಬಂದಾಗ್ಯೂ ನನಗೆ ಸ್ವಲ್ಪವೂ ಗುಣತೋರಲಿಲ್ಲ.

ಕಡೇ ಪರಿಹಾರವು

"ಕಡೆಗೆ ಪೆರೂನಾ [illegible] ಸ್ವಲ್ಪ ದಿನಗಳಲ್ಲೇ ನನಗೆ ಸಂಪೂರ್ಣವಾಗಿ ವಾಸಿಯಾಯಿತೆಂದು [illegible] ಸಂತೋಷದಿಂದ ಹೇಳುತ್ತೇನೆ.

"ಈಗ ಒಂದು ವರುಷದಿಂದಲೂ ನನಗೆ ಅದರ ಬಾಧೆಯೇನೂ ಇಲ್ಲ. ಪೆರೂನಾ ನನ್ನ ಅಪಾರವಾದ ಕಷ್ಟವನ್ನು ನಿವಾರಣೆ ಮಾಡಿಬಿಟ್ಟಿದ್ದರಿಂದ ಅದನ್ನು ಬಹು ಸಂತೋಷದಿಂದ ಹೊಗಳುತ್ತೇನೆ."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ.—ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು, ಅಥವಾ,

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೩ ಮಿಂಟ್ ಬೀದಿ, ಮದರಾಸ್,

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

10 — —1908 ರಿಂದ 17—1—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	35	28	0	[illegible]
ಮೈಸೂರು ,,	38	29	0	[illegible]
ಬೆಂಗಳೂರು ಡಿಸ್ಟ್ರಿಕ್ಟು	*	*	0	[illegible]
ಮೈಸೂರು ,,	94	60	8	[illegible]
ಕೋಲಾರ್ ,,	20	14	16	[illegible]
ಕೋಲಾರ್ ಚಿನ್ನದ ಗಣಿಗಳು	18	15	0	[illegible]
ತುಮಕೂರು ಡಿಸ್ಟ್ರಿಕ್ಟು	31	11	0	[illegible]
ಹಾಸನ ,,	10	8	3	[illegible]
ಚಿತ್ರದುರ್ಗ ,,	11	7	0	[illegible]
ಕಡೂರ್ ,,	31	28	3	[illegible]
ಶಿವಮೊಗ್ಗ ,,	0	0	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	288	200	33	11

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಪುಷ್ಯ ಬಹುಳ ದ್ವಾದಶಿ ಗುರುವಾರದಿಂದ ಮಾಘ ಶುದ್ಧ [illegible] ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಜನವರಿ ಮತ್ತು ಫೆಬ್ರವರಿ

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	[illegible]
30	ಗುರು	ದ್ವಾದಶಿ	[illegible] 40	ಮೂಲ	45 50	17
31	ಶುಕ್ರ *	ತ್ರಯೋ	30 30	ಪೂಷಾ	12 36	18
1	ಶನಿ	ಚತುರ್ದಶಿ	21 16	ಉತ್ತರಾ	37 23	19
2	ರವಿ	ಅಮಾವಾಸ್ಯೆ	16 50	ಶ್ರ	34 14	20
3	ಚಂದ್ರ †	ಪಾಡ್ಯ	12 56	ಧ	30 12	21
4	ಕುಜ ,	ಬಿದಿಗೆ	7 27	ಶ	26 22	22
5	ಬುಧ ‡	ತದಿಗೆ	2 10	ಉಪರಿ	55 50	23

* ಮಾಸಶಿವರಾತ್ರಿ, ಪ್ರದೋಷ

ತಿಥಿದ್ವಯಂ ಗರುಡಜಯಂತಿ, ಅರ್ಧೋದಯ ಪುಣ್ಯಕಾಲ

† ಚಂದ್ರದರ್ಶನ, ಮಾಘಸ್ನಾನಾರಂಭ

, ವ್ಯತೀಪಾತಯೋಗ, ಮೊಹರಂ ಪ್ರಾರಂಭ ಚಂ ೧

‡ ತಿಲಚತುರ್ಥಿ, ಕುಂದಚತುರ್ಥಿ, ದಗ್ಧಯೋಗ

ಪೇಟೆ ಧಾರಣೆ

ದಿನಸು	ಮೈಸೂರು	ಬೆಂಗಳೂರು
ಕಾಸ್ನೀ ಅಕ್ಕಿ ಪಲ್ಲ ೧ಕ್ಕೆ	ರೂ ೧೩ ೦ ೦	೧೬ ೮
ಕಂಬೂತಿ ಅಕ್ಕಿ ಅವಲ್	೧೩ ೮ ೦	೧೩ ೮
,, ೨ ನಂ	೧೨ ೦ ೦	೧೨ ೩
ಜಾದ್ರಾಣ ಅಕ್ಕಿ	೨೩ ೦ ೦	೧೬ ೦
[illegible] ಅವಲ್	೧೫ ೮ ೦	೧೬ ೦
,, ದುಯ್ಯಂ	೧೫ ೦ ೦	೧೫ ೬
ತೊಗರಿ ಬೇಳೆ ಪಲ್ಲ ೧ಕ್ಕೆ	೧೩ ೮ ೦	೧೧ ೦
,, ದುಯ್ಯಂ	೧೨ ೮ ೦	೧೪ ೮
ಕೈ ರಾಗಿ ಪಲ್ಲ ೧ಕ್ಕೆ	೭ ೪ ೦	೭ ೧೨
ಕಾದ್ರಾಗಿ	೬ ೦ ೦	೭ ೮
ಜೋಳ	೫ ೯ ೦	೭ ೮
ಹಲಸಂದೆ ಪಲ್ಲ ೧ಕ್ಕೆ	೧೦ ೮ ೦	೧೦ ೦
ಬಿಳೀ ಅವರೆ	೮ ೧೪ ೦	೮ ೦
ಹೆಸರು	೧೦ ೭ ೦	೧೨ ೦
ಉದ್ದು	೧೩ ೭ ೬	೧೨ ೦
ಕಡಲೆ	೧೪ ೮ ೦	೧೩ ೦
ಎಳ್ಳು [illegible]	೨೪ ೮ ೦	೨೩ ೦
ಹುರುಳಿ	೫ ೮ ೦	೬ ೦
ಹರಳು ೧೦೦ ಸೇರಿಗೆ	೧೨ ೦ ೦	೧೨ ೮
ಸೀಗೇಕಾಯಿ ಮಣ ೧ಕ್ಕೆ	೨ ೮ ೦	೨ ೩
ಮೆಣಸಿನಕಾಯಿ	೨ ೮ ೦	೨ ೮
,, ದುಯ್ಯಂ	೨ ೪ ೦	೨ ೬
ಬೆಲ್ಲ ದೊಡ್ಡ ಅಚ್ಚು	೫ ೦ ೦	ಮ ೨ ೬
[illegible] ಮಣ ೧ಕ್ಕೆ	೬ ೪ ೦	೬ ೪
ಹರಳೆಣ್ಣೆ ,,	೪ ೧೨ ೦	೪ ೮
ಕೊತ್ತುಂಬರಿ ಪಲ್ಲ ೧ಕ್ಕೆ	೫ ೦ ೦	೬ ೪
ಉಪ್ಪು ,,	೫ ೦ ೦	೫ ೮
ಹುಣಸೇ ಹಣ್ಣು	೨ ೮ ೦	೨ ೦
,, ಹಳೇದು	೧ ೮	೦ ೧೪
ತುಪ್ಪ ಮಣ ೧ಕ್ಕೆ	೧೩ ೦ ೦	೧೫ ೦
ಸೀಮೆಯೆಣ್ಣೆ ಪಟ್ಟ ೧ಕ್ಕೆ	೪ ೧೫ ೬	೪ ೬
ತೆಂಗಿನಕಾಯಿ ೧೦೦ಕ್ಕೆ	೨-೮ ೦	೨ ೮
ಅಳಲೇಕಾಯಿ ಮಣ ೧ಕ್ಕೆ	೧ ೦-೦	೧ ೪
ಅಂಟುವಾಳದ ಕಾಯಿ ಮಣ ೧ಕ್ಕೆ	೦ ೧೨-೦	೦ ೧೦
ಚಿನ್ನ (ಪೌನ್) ಕೆಂಪು	೧೫ ೪-೦	೧೫ ೪
,, ,, ಪಸಿಮೆ	೧೫-೧೦-೦	೧೫ ೬
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೩ ೯
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೭೫-೦-೦	೭೧-೬

Printed and Published by the Rev E Thompson, M A, Proprietor and Manager, Wesley Mission Press, Mysore 30/1/1908

REGISTERED
M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೧ | ಮೈಸೂರು—ಸರ್ ೧೯೦೮ ನೇ ಇಸವಿ ಫೆಬ್ರುವರಿ ತಾರೀಖು ೬ ನೇ ಗುರುವಾರ. | ಸಂಚಿಕೆ ೩೬

BASEL MISSION WEAVING ESTABLISHMENT,
59-12

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಟ್ಟೆ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ವರ್ಸ್ಟೆಡ್) ಟ್ವೀಡ್ ನಮೂನೆಯು ಉಡುಪುಗಳ ಚಕ್ಕೆ ಬಟ್ಟೆಗಳೂ, ಹಂಟಿಂಗ್ ಬನಿಯನ ಬಟ್ಟೆಗಳೂ, ಶರ್ಟಿಂಗ್ ಯಾನೆ ಕಮೀಜ ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ, ಟೇಬಲ್ ಕ್ಲೋತ್ ಯಾನೆ ಮೇಜುವಸ್ತ್ರಗಳೂ, ಟುವಾಲು ವಗೈರೆ ನಾಜೂಕಾಗಿ ತಯಾರಿಸಲ್ಪಟ್ಟು ಯಾವಾಗಲೂ ಸಿದ್ಧವಾಗಿಯಾಗಲೀ ರಖಂ ಆಗಿಯಾಗಲೀ ಮಾರಾಟಕ್ಕೆ ತಯಾರಿರುತ್ತವೆ.

ಒಳ್ಳೇ ಕಮಿಶ್ಶನ್ :—ರೂಪಾಯಿ ೧೦೦ ರ ಮೇಲೆ ಮಾಲುಗಳನ್ನು ತೆಗದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲ್ಪಡುವ ಹೆಚ್ಚಿನ ವಿವರ ಖುದ್ದಾಗಿ ಯಾ ಕಾಗದ ಮೂಲಕ ತಿಳುಕೊಳ್ಳಬಹುದು.

ನಮೂನೆ ಯಾ ಮಾದರಿಗಳು :—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಕಳುಹಿಸಲ್ಪಡುವವು.

ವಿಶೇಷ ಲಕ್ಷಿಸತಕ್ಕದ್ದು :—ಈ ನಮ್ಮ ಮಾಲುಗಳಿಗೆ ಹಚ್ಚಲ್ಪಡುವ "ಟ್ರೇಡ್ ಮಾರ್ಕ" ಎಂಬ ವ್ಯಾಪಾರಗುರ್ತಿನ ಲೇಬಿಲ್ ಯಾನೆ ಚೀಟಿ ಹಚ್ಚಿರುತ್ತದೆ. ಈ ಗುರ್ತಿನ ಚೀಟಿಗಳು ಇಲ್ಲದವುಗಳೆಲ್ಲಾ ತಾಜಾ ನಿರ್ಸ್ಟೆಡ್ ಮಾಲುಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತ :—ನಗದಾಗಿ ಇಲ್ಲವೆ ಮಾಲುಗಳು ವಿ. ಪಿ. ಟಪ್ಪಾಲ ಮೂಲಕ ಕಳುಹಿಸಲ್ಪಡಬೇಕಾದ್ದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರಿಯತಕ್ಕದ್ದು.—

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು "ಕೋಪಿರೈಟ್" ಪಡಕೊಂಡಿರುವ ಲೇಬಿಲುಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ಮಾಲುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು.

ವಿಳಾಸ.—BASEL NISSIOM WEAVING ESTABLISHMENT,
MANGALORE S CANARA

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

27 51

ತುಸಿಕೊಳ್ಳಿರಿ ತ್ವರೆಗೈಯಿರಿ ಅಮೃತಾಂಜನ ಸರ್ವಲೋಕರಂಜನ ಸರ್ವ ವ್ಯಾಧಿಭಂಜನ ... ಸಕಲರೋಗ ನಿವಾರಣ, ದೇಹಾಂಗಗಳಿಗೆ ಸಂಜೀವನ ವಾಸನೆಯಲ್ಲಿ ಮನೋರಂಜನ ಬೆಲೆಯಲ್ಲಿ ಅಲ್ಪ ಯೋಗ್ಯತೆಯಲ್ಲಿ ಅದ್ಭುತ ಔಷಧಿಯಲ್ಲಿ ಉಚಿತ, ಕೊಳ್ಳುವವರಲ್ಲಿ ಮಾಡಿರಿತ್ವಯಿರ್, ಇದರ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು. ಒಂದೇ ಸಾರಿ ಬಾಟ್ಲ ತುಸಿಕೊಂಡವರಿಗೆ ಒಂದು ನಯ ಬೆಳ್ಳಿಯ ಕಪ್ ಉಚಿತವಾಗಿ ದೊರಕುವದು

ನಿಶ್ಶಂಕೆಯಾಗಿ ಭಾರತವರ್ಷೀಯ ಔಷಧಗಳಿಂದ ತಯಾರಿಸಿದ ಹೊರುಪಯೋಗಕ್ಕೋಸುಗ ಮುಲಾಮು. ಇದರಿಂದ ತಲೆನೋವು, ಶಿರೋವೇದನೆ ವಾತ, ಸಂಧಿವಾತ ಪಕ್ಷವಾತ, ಗಂಟ್ಲು ನೋವು, ಸೊಂಟದನೋವು, ಗಂಟ್ಲು ನೋವು, ಶೀತ ಜಕಮು, ಉಳುಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಿಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು.

ಬಾಟ್ಲ ಒಂದಕ್ಕೆ ಕಿಮ್ಮತು ೦—೮—೦. ಪೋಸ್ಟು ಖರ್ಚು ೦—೪—೦.

ಗಳಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಡಕರ್ಣವು ಹೋಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ, ಮತ್ತು ಉರಿಯುವದಿಲ್ಲ. ಇದರ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು. ಡಬ್ಬಿ ಒಂದಕ್ಕೆ ಕಿಮ್ಮತು ೦—೬—೦. ಪೋಸ್ಟು ಖರ್ಚು ೦—೪—೦.

ದಂತಮಂಜನ.—ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಹಲ್ಲುಗಳು ಬೆಳ್ಳಗಾಗುತ್ತವೆ. ಹಲ್ಲು ನೋವನ್ನು ತೆಗೆಯುತ್ತದೆ. ಡಬ್ಬಿ ಒಂದಕ್ಕೆ ೦—೨—೦ ಪೋಸ್ಟು ಖರ್ಚು ೦—೪—೦.

ಸ್ವಪ್ನಗುಟಿಕ.—ಧಾತುಪುಷ್ಟಿ ನಿರ್ಬಲವಂತರಿಗೆ ಶಕ್ತಿಕೊಡುತ್ತದೆ, ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ರಕ್ತಶುದ್ಧಿ ಮಾಡಿ ದೇಹ ಆರೋಗ್ಯಕೊಡುತ್ತದೆ. ಡಬ್ಬಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೩—೦.

ಕೇಶವರ್ಧಿನಿ.—ತಲೆ ನೋವುಳು ತಂತ್ರಮಾಡುವದು, ಕೂದಲುಗಳನ್ನು ಬೆಳಸುವದು, ಕೂದಲುಗಳನ್ನು ಕಪ್ಪುಮಾಡುವದು, ಮನ ಸಂತೋಷಪಡಿಸುವದು, ಚಲೋ ಪರಿಮಳ ಉಳ್ಳದ್ದು, ೩ ಔನ್ಸು ಬಾಟ್ಲ ಒಂದಕ್ಕೆ ೧—೦—೦. ಪೋಸ್ಟು ಖರ್ಚು ೦—೪—೦.

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಪೋರ್ಟ್, ಮುಂಬಯಿ.
ಟೆಲಿಗ್ರಾಫು ಅಡ್ರೆಸು—"ಅಮೃತಾಂಜನ," ಮುಂಬಯಿ.

ಕಾರ್ಡು ಸೈಜು ೪¼ × ೩¼.

ಫೋಟೋ ತೆಗೆಯುವ

ಫೋಟೋ ಕ್ಯಾಮೆರಾ.

84 25

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮೆರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ :—
ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಜ್ವರಹರಿ.
118-14



ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೬೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೬೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ಡಜ., ೧—೮ ರೂ., ರೂ. ೬—೧೨ ಆ.; ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

❋❋❋❋❋❋❋❋

ಓಮಂ ಕರ್ಪೂರ

Omum Camphor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಶೂಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ ಗಣಪತಿಯವರು—ಹೆವ್ವಿಯ ಓಮಂ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ :—
ಚೆವ್ವಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

ಹಣಕ್ಕೆ ನಷ್ಟವಿಲ್ಲ! ಸಮಾನಕ್ಕೆ ಕಡಿಮೆಯಿಲ್ಲ!!!

ಈಗಲೇ ವಿಲಾಯತಿಯಿಂದ ಬಂದವು.

೯ ಕ್ಯಾರಟ್ ಚಿನ್ನದ ಉಂಗುರಗಳು.

ಇದರ ಬಣ್ಣವು, ಕೆಲಸವು ನೋಡುವುದಕ್ಕೆ ಮನೋರಂಜಕವಾಗಿರುತ್ತದೆ ಇಲ್ಲಿ ಮಾಡುವ

ದಾದರೆ ಕೂಲಿ ಮಾತ್ರ ರೂ. ೫ ಕೊಡಬೇಕು. ಕೊಟ್ಟರು ಸಿಗತಕ್ಕದು ಕಷ್ಟ. ಬೇಕಾದವರು ಒಂದು ಉಂಗುರವನ್ನು ತರಿಸಿಕೊಂಡು ಪರೀಕ್ಷಿಸಿರಿ ಎರಡು ತಲೆ ಹಾವಿನ ಉಂಗುರ ತಲೆಗಳಲ್ಲಿ ಪೇಸ್ಟು ಡೈಮಂಡ್ ಇಟ್ಟಿರುವದು. ಉಂಗುರ ೧ಕ್ಕೆ ಕ್ರಯ ವಿ. ಪಿ ಸಹಿತ ರೂ ೧—೪—೦ ಪೇಸ್ಟು ಡೈಮಂಡ್ ಇದಲ್ಲದೆ ಎರಡು ತಲೆ ಹಾವಿನ ಉಂಗುರ ೧ಕ್ಕೆ ಕ್ರಯ ವಿ. ಪಿ. ಸೇರಿ ರೂ ೬ ೪-೦ ೨ನೇ ನಕ್ಷೆಯಲ್ಲಿ ಕಾಣಿಸುವ ನಮೂನೆ ಉಂಗುರ ೧ಕ್ಕೆ ಕ್ರಯ ವಿ ಪಿ ಸೇರಿ ರೂ. ೪ ೪-೦ ಉಂಗುರ ಬೇಕಾದವರು ಬೆರಳಿನ ಅಳತೆ ಕಳುಹಿರಿ. [8-4]

ರಾಸ್ಕೋಪ ಸಿಸ್ಟಂ ವಾಚ್.—ಈ ಗಡಿಯಾರ ಬಹಳ ಬಲವಾದದ್ದು. ಬಹಳ ಬಾಳಿಕೆ ಬರುವದು ಕಾಲಕ್ಕೆ ಸರಿಯಾಗಿ ೩೦ ತಾಸು ನಡೆಯುವದು ಹಿಂದೆ ಎರಡು ಪುಟ್ಟಿಗಳ ಪರೀಕ್ಷೆಯಿಂದ ಸರಿಮಾಡಿದ್ದು ಒಂದು ಸೊಗಸಾದ ಪೆಟ್ಟಿಗೆಯಲ್ಲಿಟ್ಟು ೫ ವರ್ಷದ ಗ್ಯಾರೆಂಟಿ ಒಳಿದು ಸಹಿತ ಕಳುಹಿಸಲ್ಪಡುವದು ೧ಕ್ಕೆ ಕ್ರಯ ವಿ ಪಿ ಸೇರಿ ರೂ ೪-೭-೦.



ಗಡಿಯಾರದ ಸರಪಣಿಗಳು.—ಅಮೇರಿಕ ಸಿಲ್ವರ್ ಎಂಬ ಉತ್ತಮ ಬೆಳ್ಳಿಯಿಂದ ಮಾಡಲ್ಪಟ್ಟವು ಎಂದಿಗೂ ಕಪ್ಪು ಆಗುವದೇ ಇಲ್ಲ. ಶುದ್ಧ ಬೆಳ್ಳಿಯಂತೆಯೇ ಇರುತ್ತವೆ ಇಂಗ್ಲೀಷು ನಮೂನೆಗಳು ನೋಡುವದಕ್ಕೆ ಮನೋರಂಜಕವಾಗಿರುತ್ತವೆ ೧ಕ್ಕೆ ಕ್ರಯ ವಿ. ಪಿ. ಸೇರಿ ರೂ ೧-೪-೦

ಟಿ. ಸಿ ಸುಗಂಧ ನಶ್ಯದಪುಡಿ.—ಉತ್ತಮವಾದ [illegible] ಸಭ್ಯರ ಉಪಯೋಗಕ್ಕಾಗಿ [illegible] ಇದರಲ್ಲಿ ಸುಧಾರಣೆಮಾಡಿ [illegible] ಯೂರೋಪ್ ದೇಶದವರು [illegible] ಅನೇಕ ಪರೀಕ್ಷೆ ಮಾಡಿದೆ ಈ ನಶ್ಯ ಉಪಯೋಗಿಸುವದರಿಂದ ಪೀನಾಸಿ, ಅರೆತಲೆನೋವು, ತಲೆನೋವು, ನೇತ್ರವ್ಯಾಧಿ, ಜಲಶೋಷ, ಕ್ಷಯರೋಗ ಮೊದಲಾದ [illegible] ವ್ಯಾಧಿಗಳನ್ನು ನಾಶಮಾಡಿಸುವದು [illegible] ವದು. ಯಾವಾಗಲೂ ತಲೆ ಹಗುರವಾಗಿ ತಂಪಾಗಿ ಇದ್ದೀತು. ಮನಸ್ಸಿಗೆ ಉಲ್ಲಾಸವನ್ನೂ, ಉದ್ಯೋಗದಲ್ಲಿ ಉತ್ಸುಕತೆಯನ್ನೂ ಉಂಟುಮಾಡುವದು ಅನೇಕ ವ್ಯಾಧಿಗಳನ್ನು ಧ್ವಂಸ ಮಾಡುವ ಅಮೋಘವಾದ ಔಷಧರೂಪಿನ ನಶ್ಯವನ್ನು ಈ ವರಿಗೂ ಜಗತ್ತಿನಲ್ಲಿ ಯಾರೂ ನೋಡಿ ಕೇಳಿರಲಾರರು ಈ ನಶ್ಯವನ್ನು ನಿರಂತರ ಯಾರು ಉಪಯೋಗಿಸುವರೋ ಅವರಿಗೆ ಮೇಲ್ಕಂಡ ವ್ಯಾಧಿಗಳ ಪೈಕಿ ಒಂದಾದರೂ ಸಮೀಪಕ್ಕೆ ಬರಲಾರವು. ದಿನಕ್ಕೆ ೨೪ ಘಂಟೆ ಪೈಕಿ ನಿದ್ರಾಕಾಲವಿನಾ ಉಳಿದ ಕಾಲದಲ್ಲೆಲ್ಲಾ ೨ ಅಥವಾ ೩ ಅವತಿಗೆ ಈ ನಶ್ಯವನ್ನು ಉಪಯೋಗಿಸಿದ ಮಾತ್ರಕ್ಕೆ ತೃಪ್ತಿಯಾಗುವದು ಇದರಿಂದ ತಿಂಗಳು ಅಥವಾ ವರ್ಷದ ಒಟ್ಟು ಖರ್ಚಿನಲ್ಲಿ ಎಷ್ಟು ಖರ್ಚಾಗುವದೋ ಆ ಭೋಗಿಗಳೇ [ಸಾಕ್ಷಿ ಹೇಳುವರು ಇತರ ನಶ್ಯಕ್ಕೆ ಈ ಸುಗಂಧ ನಶ್ಯದ ಪುಡಿ ಒಂದು ಚಿಟಿಕೆ ಮಿಶ್ರ ಮಾಡಿದ ಮಾತ್ರಕ್ಕೆ ಇದರ ಗುಣವು ಆ ನಶ್ಯದೊಳಗೆ ವ್ಯಾಪಿಸುವದು. ಯಾವಾಗಲೂ ಜ್ಞಾನವು ಅಂದರೆ ಚಂದ್ರ ಸೂರ್ಯ [illegible] ಎಂಬ ನಾಡಿಯು ಸಮವಾಗಿ ನಡಿಯುವಂತೆ ಈ ನಶ್ಯವು ಜಾಸ್ತಿ ಎದರಿಂದ ಯೋಗಭ್ಯಾಸದ ಕ್ರಮವನ್ನು, ಕಣ್ಣೇ ಪ್ರತ್ಯಕ್ಷ ಕೇಳಿ [illegible] ಬುದ್ಧಿಯನ್ನು ಸಹ ನಾಶಮಾಡೀತು. ಕ್ರಯ ವಿ ಪಿ ಸೇರಿ ಡಬ್ಬಿ ೧ಕ್ಕೆ ೬ ಆಣೆ ೧೨ ಡಬ್ಬಿಗಳಿಗೆ ೨-೧೪-೦. ಸೇರಿ (೫೦ ರೂ ತೂಕ) ರೂ. ೨-೦-೦.

ಬಹುಮಾನ! ಬಹುಮಾನ!! ಬಹುಮಾನ!!!

(೧) ಎರಡು ಡಜನ್ ಡಬ್ಬಿಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಸೆಂಗಮದ ಟೈಂಪೀಸು (ಗಡಿಯಾರವನ್ನು) ಬಹುಮಾನವಾಗಿ ಕಳುಹಿಸುವೆವು (೨) ಮೂರು ಡಜನ್ ಡಬ್ಬಿಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಅವರ ವಿಳಾಸದ ರಬ್ಬರ್ ಸ್ಟಾಂಪನ್ನು ತಯಾರುಮಾಡಿ, ಸೆ ಗಮದ ಪೆಟ್ಟಿಗೆ, ಬ್ಯಾಡ್ಜು, ಇಂಕ್‌ಬಾಟ್ಲು ಬ್ರಷ್ ಸಹಿತ ಕಳುಹಿಸುವೆವು. (೩) ನಾಲ್ಕು ಡಜನ್ ಡಬ್ಬಿಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಉತ್ತಮವಾದ ಲೀವರ್ ವಾಚನ್ನು ಕಳುಹಿಸುವೆವು

ಸೂಚನೆ:—(೧) ಎರಡು ಡಜನ್, ಮೂರು ಡಜನ್ ಡಬ್ಬಿಗಳನ್ನು ತರಿಸಿಕೊಂಡು ಬಹುಮಾನ ಪಡೆಯತಕ್ಕವರು ಮುಂಚಿತವಾಗಿ ಅಡ್ವಾನ್ಸು ೪ ಆಣೆ ಪೋಸ್ಟೇಜು ಸ್ಟಾಂಪು ಕಳುಹಿಸಬೇಕು ಇಲ್ಲದಿದ್ದರೆ ಬಹುಮಾನವೂ ಸಮಾನೂ ಖಂಡಿತ ಕಳುಹಿಸಲ್ಪಡಲಾಗದು. (೨) ನಾಲ್ಕು ಡಜನ್ ಡಬ್ಬಿಗಳನ್ನು ತರಿಸಿಕೊಂಡು ಒಂದು ಲೀವರ್ ವಾಚನ್ನು ಬಹುಮಾನ ಪಡೆಯತಕ್ಕವರು ಮುಂಚಿತವಾಗಿ ಅಡ್ವಾನ್ಸು ೧ ರೂ. ಕಳುಹಿಸಬೇಕು ಇಲ್ಲದಿದ್ದರೆ ಬಹುಮಾನವೂ ಸಮಾನೂ ಖಂಡಿತ ಕಳುಹಿಸಲ್ಪಡಲಾರವು ಮುಂಚಿತವಾಗಿ ಕಳುಹಿಸುವ ಹಣವನ್ನು ನಾವು ವಿ ಪಿ. ಮಾಡುವಾಗ ವಜಾಮಾಡಿಕೊಳ್ಳುವೆವು ಬಹುಶೀಘ್ರದಲ್ಲಿ ತರಿಸಿಕೊಳ್ಳಿ. ಆಲಸ್ಯವಾದಿದರೆ ಬಹುಮಾನ ಸಿಕ್ಕಲಾರವು

ವಿಳಾಸ:—ಟಿ. ಸಿ. ಕನ್ನಯ್ಯಶೆಟ್ಟಿ ಅಂಡ್ ಸನ್ಸ್, ಜನರಲ್ ಮರ್ಚಂಟ್, ನಂ. ೨೦, ಸಿಂಗಣ್ಣನ ಬೀದಿ, ಸಾಹುಕಾರಪೇಟೆ, ಮದರಾಸು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲಿನ್ ಯವರು ಹೊಟ್ಟೆನೋವಿಗೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



1-6

ಚಳಿ ಹೊಟ್ಟೆಯ ನೋವು, ಬೇಧಿ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಬ್ಬರ, [illegible] ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು, ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಟ್ಯಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೆ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲಮಾಡಿ ನಿಲ್ಲಿಸುತ್ತದೆ. ಖಂಡಿತವಾಗಿ ಗುಣಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ವ್ಯವಹಾರನಿರ್ಣಯ.

ಪುಟಗಳು ೫೩೬ | ಕನ್ನಡದ ಲಾ ಪುಸ್ತಕವು | ದ್ವಿತೀಯಮುದ್ರಣ. | ಕ್ರಯ ವಿ. ಪಿ ಸೇರಿ ರೂ ೧-೧-೦

1-6

ಈ ಮುದ್ರಣದ ಮುಖ್ಯಾಂಶ ಭಾಗವೆಲ್ಲವೂ ಹೊಸದಾಗಿ ಬರೆಯಲ್ಪಟ್ಟು ವಿಸ್ತರಿಸಲ್ಪಟ್ಟಿದೆ. ಹಿಂದೂ ಲಾ (ಸ್ಮೃತಿವಚನಗಳೊಡನೆ), ಮಹಮದೀಯ ಲಾ, ಪೀನಲ್ ಕೋಡು ಇವುಗಳು ವಿಶೇಷವಾಗಿ ವಿಸ್ತರಿಸಲ್ಪಟ್ಟಿವೆ ಮೈಸೂರು, ಮದರಾಸು, ಬೊಂಬಾಯಿ ದೇಶಗಳಿಗೆ ಸಾಮಾನ್ಯವಾದ ಲಾ ಸ್ವತಸ್ವತ್ವನ ವಿಲೇವಾರಿ, ಅನಾಥರಕ್ಷಣೆ, ಸ್ತ್ರೀ ಸ್ತ್ರೀರ ವಾರಸ್ಸು ಹಕ್ಕು. ಈ ವಿಷಯಕವಾದ ಖಾನೂನುಗಳು ಹೊಸದಾಗಿ ಸೇರಿಸಲ್ಪಟ್ಟಿವೆ. ೨೫ ಖಾನೂನುಗಳು, ಅನೇಕ ವಾಲ್ಯು ಗ್ರಂಥಗಳು, ಹೈಕೋರ್ಟು, ಚೀಫ್ ಕೋರ್ಟುಗಳ ರಿಪೋರ್ಟುಗಳು ಇವುಗಳಿಂದ ಸಂಗ್ರಹ ಮಾಡಲ್ಪಟ್ಟಿದೆ ಸಮಸ್ತ ವ್ಯವಹಾರಗಳನ್ನೊಳಗೊಂಡಿರುವ ೯೦ ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್, ಕ್ರಿಮಿನಲ್ ಕೋರ್ಟುಗಳಿಗೂ, ಪೋಲೀಸಿಗೂ ಬರೆಯಲ್ಪಡುವ [illegible] ನಮೂನೆಗಳೂ [illegible] ವೇ ತಿಂಗಳಲ್ಲಿ ಮುದ್ರಿಸಿದ್ದ ೧,೫೦೦ ಪ್ರತಿಗಳು ೩ ತಿಂಗಳಲ್ಲೇ ಖರ್ಚಾಗಿಹೋದುವರಿಂದ ಇದರ ಉಪಯುಕ್ತತೆಯು ತಿಳಿದುಬಂದು ಪ್ರೋತ್ಸಾಹದಿಂದ, ಮೇಲೆ ಕಂಡಂತೆ ಇದರ ಉಪಯುಕ್ತತೆಯನ್ನು ಮತ್ತಷ್ಟು ಹೆಚ್ಚು ಮಾಡಿದೆ ವಿಷಯಪರಿಮಾಣಾಧಿಕ್ಯ, ಸ್ಫುಟಾಕ್ಷರ, ಉತ್ತಮವಾದ ಕಾಗದ, ಒಟ್ಟೆಯ ಬೈಂಡ್ ಇವುಗಳಿಂದ ಕೂಡಿದ ಈ ಸಲದ ಮುದ್ರಣವು ಬಹಳ ಪ್ರಶಸ್ತವಾಗಿದ್ದರೂ ಜನಸಾಮಾನ್ಯರಿಗೆ ಸುಲಭಗ್ರಾಹ್ಯವಾಗಲು ಮೊದಲನೆಯದಕ್ಕಿಂತಲೂ ಬೆಲೆಯಲ್ಲಿ ನಾಲ್ಕು ಆಣೆ ಮಾತ್ರ ಹೆಚ್ಚಿಸಿದೆ ಪುಸ್ತಕ ಅಪೇಕ್ಷಿಸುವವರು ಬರೆಯುವ

ವಿಳಾಸ—ಗ್ರಂಥಕರ್ತರು, ಎಂ ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು.

ರಬ್ಬರ್ ಹ್ಯಾಂಡ್ ಪ್ರೆಸ್.

14-18

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಉರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತಿದೆ ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೭೫ ರಿಂದ ೧೫೦ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು, ಉರ್ದು, ಪರ್ಷಿಯನ್, ಅರಾಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು ಅದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಆಫೀಸು ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಂದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು. ಎಷ್ಟೋ ಶಾಲೆಗಳ ಸಹಾಯದಿಂದ ಒಂದು ಕೆಲಸಕ್ಕೆ ಬಹಳಕಾಲ ಹಿಡಿಯುವದು ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನು ಬರಿ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ದೆಸೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು. ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦
ಹಾಫ್ ಫುಲ್‌ಸ್ಕ್ಯಾಪ್ ಸೈಜು, ೬—೦—೦
ಪೋಸ್ಟೇಜು ಬೇರೆ (extra).

ವಿಳಾಸ: ವರ್ಧಮಾನ ಏಜನ್ಸಿ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಮಕ್ಕಳ ಹಿತಕಾರಿ ಎಂದು

SCOTT'S EMULSION 31-17

(ಸ್ಕಾಟ್ಸ್ ಇಮಲ್ಷನ್)

ಎಂಬೀ ನೇವಲ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಕೆಸರುಬಟ್ಟಿದ್ದಾರೆ. ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ಕಂಪು ರುಚಿಯಾಗಿರುವದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಹಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಆರೋಗ್ಯವಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕ್ಯಸೋಕದ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

26

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು! ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಬುದ್ಧಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದ ಮತ್ತು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಬಿಳಿದು, ಕೆಂಪು, ಕಪ್ಪು, ಬೆರಕೆ, ಕಾಫಿ ಟೋಪಿಗಳು ೧ ರೂ ೮ ಆ., ೧ ರೂ ೬ ಆ., ೧ ರೂ ೪ ಆ

ನೇಕ್ಷಿ ಚುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ

ಜರದ ಟೋಪಿಗಳು ೯ ರೂ. ೧೨ ಆ.; ೧ ರೂ. ೧೪ ಆ; ೧ ರೂ. ೬ ಆ.

ಬನಾತಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂಥಿನ್ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ವೃತ್ತಾಂತ ಪತ್ರಿಕೆ

ಸ್ ೧೯೦೪ ನೇ ಇಸವಿ ಫೆಬ್ರವರಿ ತಾ॥ ೬ ನೇ ಗುರುವಾರ

ಪೋರ್ಚುಗಾಲ್ ದೊರೆ ಮತ್ತು ಯುವರಾಜರ ಕೊಲೆಗಳು.

ಯೂರೋಪ್ಖಂಡ ರಾಜ್ಯಗಳಲ್ಲಿ ಒಂದಾದ ಪೋರ್ಚುಗಾಲ್ ಸಂಸ್ಥಾನದ ದೊರೆಯವರೂ, ಅವರ ಜ್ಯೇಷ್ಠಪುತ್ರನೂ ಕಳೆದ ಶನಿವಾರ ಮಧ್ಯಾಹ್ನ ಕೊಲ್ಲಲ್ಪಟ್ಟರೆಂದು ತಿಳಿಸಲು ವಿಷಾದಿಸುತ್ತೇವೆ. ದೊರೆ, ರಾಣಿ, ಯುವರಾಜ, ಎರಡನೇ ಮಗ, ಈ ನಾಲ್ವರೂ ವಿಲ್ಲಾ ವಿಕೋಸಾ ಎಂಬ ಭವನದಿಂದ ಒಂದು ತೆರೆದ ಗಾಡಿಯಲ್ಲಿ ಕುಳಿತು, ಲಿಸ್ಬನ್ ರಾಜಧಾನಿಗೆ ದಯಮಾಡುತ್ತಿರುವಲ್ಲಿ ಬ್ಲಾಕ್‌ಹಾರ್ಸ್ ಸ್ಕ್ವೇರ್ ಎಂಬ ಚೌಕದ ಬಳಿ ನಿಂತಿದ್ದ ಕೆಲವರು ಗಾಡಿಗೆ ಪಿಸ್ತೂಲು ಹೊಡೆದರು. ಗುಂಡುಗಳು ಕಾರ್ಲೋಸ್ ದೊರೆಗೂ, ಲೂಯಿ ಫಿಲಿಪ್ ಯುವರಾಜನಿಗೂ, ಮ್ಯಾನ್ಯುಯಲ್ ಡ್ಯೂಕ್ ಆಫ್ ಬೇಜಾ ಎಂಬ ಎರಡನೇ ಮಗನಿಗೂ ತಗಲಿದವು. ಅಮೀಲಿಯಾ ರಾಣಿಯು ಯುವರಾಜನಿಗೆ ಮರೆಯಾಗಿ ನಿಂತುಕೊಂಡರೂ ಸಾರ್ಥಕವಾಗಲಿಲ್ಲ. ದೊರೆಯನ್ನೂ ಯುವರಾಜನನ್ನೂ ಚಿಕಿತ್ಸೆಗಾಗಿ ಸಾಗಿಸಿಕೊಂಡು ಹೋಗುವಾಗ್ಗೆ ದೊರೆಯು ದಾರಿಯಲ್ಲೇ, ಯುವರಾಜನು ಆಸ್ಪತ್ರೆಯೊಳಗೂ ಕಾಲವಾದರು. ಎರಡನೇ ಮಗನಿಗೂ ಸ್ವಲ್ಪ ಗಾಯವಾಗಿದ್ದಾಗ್ಯೂ ಅದು ಬೇಗನೆ ವಾಸಿಯಾಗುವುದು.

ಕಾರ್ಲೋಸ್ ದೊರೆಯು ೨೬ನೇ ವಯಸ್ಸಿನಲ್ಲಿ ಅಂದರೆ ೧೮೮೯ನೇ ಅಕ್ಟೋಬರ್ ೧೯ ರಲ್ಲಿ ರಾಜ್ಯಭಾರವನ್ನು ವಹಿಸುತ್ತಿದ್ದನು. ಲೂಯಿ ಫಿಲಿಪ್ ಎಂಬ ಯುವರಾಜನಿಗೆ ೨೧ ವರುಷವಾಗಿದ್ದಿತು. ಗಾಯವಾಗಿರುವ ಎರಡನೇ ಮಗನಿಗೆ ೧೯ ವಯಸ್ಸಾಗಿರುವುದು. ದೊರೆಯೂ ಯುವರಾಜನೂ ಕೊಲೆಯಾದ ಕೂಡಲೇ ಪೊಲೀಸಿನವರು ೬ ಕೊಲೆಗಾರರ ಮೇಲೆ ಗುಂಡುಹೊಡೆದು ಇಬ್ಬರನ್ನು ಕೊಂದರು. ಇನ್ನೊಬ್ಬನು ನೆರಮನೆಯಲ್ಲಿ ಆತ್ಮಹತ್ಯ ಮಾಡಿಕೊಂಡನು. ಅರಮನೆ ಕೋರ್ಟು ಕಚೇರಿಗಳನ್ನು ಸೈನಿಕರು ಬಂದೋಬಸ್ತು ಮಾಡುತ್ತಿದ್ದಾರೆ. ಆ ದಿನ ಸಾಯಂಕಾಲದಲ್ಲಿ ಮಂತ್ರಿಗಳು ಒಂದು ಸಭೆ ನಡಿಸಿದರು. ಪಟ್ಟಣವೆಲ್ಲಾ ನಿಶ್ಶಬ್ದವಾಗಿದೆ. ಬಹು ಕಠಿಣವಾದ ಮಿಲಿಟರಿ ಸರ್ಕಾರು ನಡೆದಿದೆ. ಅನೇಕ ಜನರನ್ನು ಹಿಡಿದು ಜೈಲಿನಲ್ಲಿ ಹಾಕಿದಾರೆ. ಇತ್ತಲಾಗಿ ಎರಡನೇ ಮಗನಿಗೆ ರಾಜ್ಯಾಭಿಷೇಕವಾಯಿತೆಂತಲೂ ಅಮೀಲಿಯಾ ರಾಣಿಯೇ ರೀಜೆಂಟ್ ಆಗಿರಬಹುದೆಂತಲೂ ಬಸ್ತಿಯಾರು ಕೊಡಲ್ಪಟ್ಟಿವೆ. ಈ ವರ್ತಮಾನವು ಯೂರೋಪಿನ ರಾಜ್ಯಗಳಲ್ಲೆಲ್ಲಾ ತುಂಬಾ ಪರಿತಾಪವನ್ನುಂಟು ಮಾಡಿರುವುದು. ರಾಜರುಗಳೂ ಮಂತ್ರಿಗಳೂ ಸಂತಾಪಯುಕ್ತವಾದ ತಂತಿ ವರ್ತಮಾನವನ್ನು ಕಳುಹಿಸಿದಾರೆ.

ಕೆಲವು ಕಾಲದಿಂದಲೂ ಪೋರ್ಚುಗಾಲ್ ರಾಜ್ಯದ ಕಾರುಬಾರುಗಳು ತೃಪ್ತಿಕರವಾಗಿಲ್ಲ. ಕೆಲವು ಕಷ್ಟಗಳುಂಟಾಗಿ ರಾಜದ್ರೋಹದ ಸಂಘಗಳು ಹೆಚ್ಚಿವೆ. ಅಂತವು ಪ್ರಬಲವಾಗಿದೆ. ಅದಕ್ಕಾರಣ ಎಲ್ಲಾ ಕಡೆಯ ದರ್ಬಾರು ನಡೆಸಲಾಯಿತು. ಗವರ್ನ್‌ಮೆಂಟು ಬಹಳ ಸಾಲಮಾಡಿ ನಡೆಯುತ್ತಿದೆ. ಕಾರ್ಲೋಸ್ ದೊರೆಯೂ ಫ್ರಾಂಕೋ ಎಂಬ ಮಂತ್ರಿಯೂ ಒಂದಾಗಿ ರಾಜ್ಯಭಾರದ ಕಷ್ಟವನ್ನು ಕೋರಿಯಾಗಿ ಕ್ರಮಪಡಿಸಬೇಕೆಂದು ಉದ್ಯುಕ್ತರಾದರು. ಪಾರ್ಲಿಮೆಂಟಿನ ಮೆಂಬರುಗಳು ಮಂತ್ರಿಗೆ ಪ್ರತಿಪಕ್ಷಿಗಳಾಗಿ ನಿಂತರು. ಮಂತ್ರಿಯು ಪಾರ್ಲಿಮೆಂಟನ್ನು ಮುಕ್ತಾಯಮಾಡಿ ದೊರೆಯೊಬ್ಬನೇ ಸ್ವತಂತ್ರಿಸಿ ರಾಜ್ಯಭಾರ ಮಾಡಬೇಕೆಂದು ಅಭಿಪ್ರಾಯಪಟ್ಟು, ಕೆಲವು ತಿಂಗಳಿಂದ ಅದೇ ರೀತಿ ನಡೆಯುತ್ತಾ ಬಂದಿದೆ. ಇದನ್ನು ನೋಡಿ ಪ್ರತಿಪಕ್ಷಿಗಳು ಆಗಾಗ್ಗೆ ಸರ್ಕಾರಿ ಕೆಲಸಗಳಿಗೆ ಅಡಚಣೆಗಳನ್ನು ಒಡ್ಡುತ್ತಾ, ಫಿತೂರಿ ದಂಗೆಗಳನ್ನು ಮಾಡುತ್ತಾ ಬಂದರು. ಕಳೆದ ವಾರ ರಾಜಧಾನಿಯಲ್ಲಿ ದಂಗೆಯಾಯಿತು. ಪೊಲೀಸಿನವರು ದಂಗೆಕೋರರ ಮೇಲೆ ಗುಂಡುಹೊಡೆದು ಕೆಲವರನ್ನು ಹಿಡಿದು ಸೆರೆಯಲ್ಲಿ ಹಾಕಿ ದಂಗೆಯನ್ನು ಶಮನಮಾಡಿದರು. ಈಗ ಮೊದಲಿನಂತೆಯೇ ಮಧ್ಯವಾದ ರೀತಿಯಲ್ಲಿ ರಾಜ್ಯಭಾರ ನಡಿಯಬೇಕೆಂದು ಅಪೇಕ್ಷಿಸುವ ಜನರೂ, ಇಲ್ಲವೇ ಏಕನಾಯಕಪ್ರಭುತ್ವವನ್ನೇ ನಿರ್ಮೂಲಮಾಡಬೇಕೆಂದು ಕೋರುವ ಜನರೋ ಫಿತೂರಿ ಮಾಡಿ ಸಚ್ಚರಿತ್ರನೂ, ಗುಣಾಢ್ಯನೂ, ಪ್ರಜಾಹಿತೈಷಿಯೂ ಆಗಿದ್ದ ದೊರೆಯನ್ನೂ ಆತನ ಹಿರೀ ಮಗನನ್ನೂ ಬಹು ಕ್ರೂರವಾಗಿ ಕೊಲೆಮಾಡಿರುತ್ತಾರೆ.

ಕಬೀರನೂ ಅವನ ಬೋಧನೆಯೂ.

ಹಿಂದಿನ ವಾರ ಕಬೀರನು ವಿಗ್ರಹಾರಾಧನೆಯ ವಿಷಯವಾಗಿ ತೀರ್ಥಯಾತ್ರೆಗಳ ವಿಷಯವಾಗಿ ತಿಳಿಸಿದ ಬೋಧನೆಯನ್ನು ಸಂಕ್ಷೇಪವಾಗಿ ವಿವರಿಸಿದೆವು. ಹೊರಗಿನ ಆಚಾರವಿಚಾರಗಳು ಮನುಷ್ಯನನ್ನು ಪವಿತ್ರನನ್ನಾಗಿ ಮಾಡಿ ಮೋಕ್ಷ ಪದವಿಯನ್ನು ಕೊಡಲಾರವೆಂದು ಕಬೀರನು ದೃಢವಾಗಿ ನಂಬಿದ್ದನು. ಹಾಗಾದರೆ ಮಾನವರಾಗುವುದಕ್ಕೆ ಮಾರ್ಗವಾವುದು? ದೇವರನ್ನು ನಂಬಿಕೆಯಿಂದಲೂ ಪೂರ್ಣ ವಿಧೇಯತ್ವದಿಂದಲೂ ಸೇವಿಸುವುದರಲ್ಲಿಯೂ, ಸತ್ಯತೆ, ಮಾನ್ಯತೆ, ತಾಳ್ಮೆ ಇವೇ ಮೊದಲಾದ ಉನ್ನತ ಗುಣಗಳನ್ನು ಧರಿಸುವುದರಲ್ಲಿಯೂ ಒಬ್ಬನು ಭಕ್ತನಾಗುವನೆಂದು ಕಬೀರನು ತಿಳಿಸುತ್ತಾನೆ. ದೇವರ ವಿಷಯವೂ ಆತನು ಮೆಚ್ಚತಕ್ಕ ಭಕ್ತನ ವಿಷಯವೂ ಕಬೀರನು ತಿಳಿಸುವ ಅಭಿಪ್ರಾಯವನ್ನು ಇಲ್ಲಿ ತಿಳಿಸುತ್ತೇವೆ.

“ಎಲ್ಲಾ ವಿಧವಾದ ಕಷ್ಟಗಳಿಂದ ನಿಮ್ಮನ್ನು ಬಿಡಿಸಿ ಕಾಪಾಡತಕ್ಕ ಭಗವಂತನನ್ನು ಪೂಜಿಸಿರಿ. ಆ ಭಗವಂತನು ದಶರಥರಾಯನ ವಂಶದಲ್ಲಿ ಹುಟ್ಟಿ ಲಂಕಾ ದ್ವೀಪದ ರಾಜನನ್ನು ಹಿಂಸಿಸಲಿಲ್ಲ. ಆತನು ದೇವಕಿಯ ಉದರದಲ್ಲಿ ಜನ್ಮಿಸಲೂ ಇಲ್ಲ, ಯಶೋದಾದೇವಿಯು ಆತನನ್ನು ತನ್ನ ತೊಡೆಯ ಮೇಲೆ ಆಡಿಸಲೂ ಇಲ್ಲ. ಆತನು ಲೋಕವನ್ನು ನಾಶಮಾಡಲಿಲ್ಲ. ಆತನು ಬಲಿಚಕ್ರವರ್ತಿಯ ಸಂಗಡ ಕಾದಾಡಲೂ ಇಲ್ಲ, ಹಿರಣ್ಯಾಕ್ಷನನ್ನು ಕೊಲ್ಲಲೂ ಇಲ್ಲ. ಆತನು ವರಾಹಾವತಾರವನ್ನು ತಾಳಿದ್ದು ಸುಳ್ಳು, ಕ್ಷತ್ರಿಯ ಕುಲವನ್ನು ನಾಶಮಾಡಿದ್ದು ಸುಳ್ಳು. ಆತನೆಂದಿಗೂ ಗೋಪಿ ಸ್ತ್ರೀಯರ ಸಂಗಡ ಸರಸವಾಡಲೂ ಇಲ್ಲ. ದ್ವಾರಕಾ ಪಟ್ಟಣದಲ್ಲಿ ಸಾಯಲೂ ಇಲ್ಲ, ಜಗನ್ನಾಥದಲ್ಲಿ ಹೂಳಲ್ಪಡಲೂ ಇಲ್ಲ. ಅಂಥಾ ಸುಳ್ಳು ಬೋಧನೆಗಳನ್ನು ಯಾರೂ ನಂಬಬಾರದೆಂದು ಕಬೀರನಾದ ನಾನು ತಿಳಿಸುವೆನು. ಯಾವನ ವಿಷಯ ಜನರು ವಿಷಯಾಸಕ್ತನೆಂದು ಭಾವಿಸಿದಾರೆಯೋ ಅಂಥವನು ಪೂಜಿಸಲ್ಪಡುವುದಕ್ಕೆ ಅರ್ಹನಲ್ಲವು.”

“ಸತ್ಯವನ್ನಾಚರಿಸುವುದಕ್ಕಿಂತ ಲೋಕದಲ್ಲಿ ಬೇರೊಂದು ಭಕ್ತಿಸಾಧನೆ ಇರುವುದೇ? ಅಬದ್ಧ ನುಡಿಗಿಂತಲೂ ಲೋಕದಲ್ಲಿ ಮತ್ತೊಂದು ಹೇಯವಾದ ಪಾಪ ಉಂಟೇ? ಯಾವನ ಹೃದಯದಲ್ಲಿ ಸತ್ಯತೆಯು ನೆಲೆಗೊಂಡಿರುವದೋ ಅಂಥವನಲ್ಲಿ ನಾನು ವಾಸವಾಗಿರುವೆನು.”

“ಗುರುವೇ, ಗುರುವೇ ಎಂದು ಅನೇಕರು ಕರೆಯುವರು, ಆದರೆ ನನಗೊಂದು ಸಂಶಯವುಂಟು. ಗುರುವನ್ನು ತಿಳಿಯದಿರುವವನು ಆತನ ಪಾದದ ಹತ್ತಿರ ಹ್ಯಾಗೆ ಕೂತುಕೊಳ್ಳುವನು.”

“ಸ್ವಯಲ್ಲಿ ದೀಪವಿದ್ದರೂ ಕಣ್ಣಿಯಲ್ಲಿ ಬಿದ್ದರೆ ಆ ದೀಪದಿಂದ ಪ್ರಯೋಜನವೇನು?”

“ಗರ್ವದಲ್ಲಿ ಸಪ್ತವುಂಟು, ಪಾಪದಲ್ಲಿ ನರಳುವಿಕೆಯುಂಟು, ದಯೆಯಲ್ಲಿ ಸ್ಥಿರತ್ವವುಂಟು. ಕ್ಷಮಾಗುಣದಲ್ಲಿ ದೇವರಿದ್ದಾನೆ.”

“ನಿನ್ನಲ್ಲಿ ಕ್ಷಮಾಗುಣವಿಲ್ಲದಿದ್ದರೆ ನೀನು ದೇವರನ್ನು ಕಾಣಲಾರೆ. ನೀನು ಬೇಕಾದಷ್ಟು ಒಳ್ಳೇ ಮಾತುಗಳನ್ನಾಡಬಹುದು, ಆದರೆ ನಿನ್ನಲ್ಲಿ ಕ್ಷಮಿಸುವ ಸ್ವಭಾವವಿಲ್ಲದಿದ್ದರೆ ನೀನು ದೇವರ ಹತ್ತಿರಕ್ಕೆ ಹೋಗುವುದು ಅಸಾಧ್ಯ.”

ಎಲ್ಲಾ ಮನುಷ್ಯರೂ ಒಬ್ಬನೇ ದೇವರಿಂದ ಸೃಷ್ಟಿಸಲ್ಪಟ್ಟವರೆಂದು ಕಬೀರನು ನಂಬಿದ್ದನು. ಆದ್ದರಿಂದ ಮನುಷ್ಯರೆಲ್ಲರೂ ಯಾವ ಭೇದವಿಲ್ಲದೆ ಒಟ್ಟಾಗಿ ಕೂಡಿ ಆತನನ್ನು ಸ್ಮರಿಸಿ ಪೂಜಿಸಬೇಕೆಂದು ಕಬೀರನು ಹಾರೈಸುತ್ತಿದ್ದನು.

ಬಹುದೇಶದ ವೃತ್ತಾಂತಗಳು

ಮಹಾರಾಜರವರ ಬಾಡಿಗಾರ್ಡಿನಲ್ಲಿ ಕೆಲಸಮಾಡುವ ರಿಸಾಲ್ದಾರ್ ಸಿಂಧವಾರ ಮನೆಯಲ್ಲಿ ಸುಮಾರು ೪೦೦ ರೂಪಾಯಿನ ನಗನಾಣ್ಯಗಳು ಕಳುವಾದವು.

* * *

ಶ್ರೀಮನ್ಮಹಾರಾಜರವರೂ ಮಹಾಮಾತೃಶ್ರೀಯವರೂ ಪರಿವಾರ ಸಹಿತ ಮೊನ್ನೆ ಮಂಗಳವಾರ ಬೆಳಗ್ಗೆ ಮದರಾಸಿನಿಂದ ಬೆಂಗಳೂರಿಗೆ ವಾಪಸು ಬಿಜಯಮಾಡಿದ್ದರು.

* * *

ಮಡಿಕೇರಿಯಲ್ಲಿ ಹಂಟು ಭವಿಷ್ಯರೆಂದು ಹೆಸರು ಪಡೆದಿದ್ದ ಮಿಸಸ್ ಸೋಫಿಯಾ ಎ ಬಾಕೆ ಕಾಲವಾದರೆಂದು ವರ್ತಮಾನ ಬಂದಿದೆ. ಮರಣಕಾಲದಲ್ಲಿ ಅವರಿಗೆ ಇನ್ನೂ ೬೯ ವಯಸ್ಸಾಗಿತ್ತೆಂದು ತಿಳಿಯುವದು.

* * *

ಕೊಡಗಿನ ಕಡೆ ಸರ್ಕೀಟು ದಯಮಾಡಿರುವ ಬ್ರಿಟಿಷ್ ರೆಸಿಡೆಂಟ್ ಮಿ॥ ಎಸ್, ಎಂ, ಫ್ರೇಸರ್ ಯವರು ಈ ವಾರ ಹಿಂತಿರುಗಿ ಬಂದು ಒಂದು ದಿನ ರಾಜಧಾನಿಯಲ್ಲಿದ್ದು, ಬೆಂಗಳೂರಿಗೆ ಪ್ರಯಾಣಮಾಡುವವರಾಗಿದಾರೆ. ಅವರ ಪತ್ನಿಯವರು ಕಳೆದ ವಾರ ಬೆಂಗಳೂರಿಗೆ ವಾಪಸು ಹೋದರು.

* * *

ಹರಿಹರದ ಸ್ಕೂಲಿನಲ್ಲಿ ಓದುತ್ತಿದ್ದ ಚಿಂದಿಗನವಲೆ ದಾಸಾನುಜ್ಯ ಯಂಗಾರ್ ಎಂಬ ಹುಡುಗನು ಲೋವರ್ ಸೆಕಂಡರಿ ಪರೀಕ್ಷೆಯ ಕಾಲದಲ್ಲಿ ದುರ್ನಡತೆಯನ್ನು ತೋರಿಸಿದ್ದರಿಂದ ಅವನನ್ನು ಒಂದು ವರ್ಷ ಪರಿಗೆ ಆ ಪರೀಕ್ಷೆಗೆ ಸೇರಿಸುವುದಿಲ್ಲವೆಂದು ಹುಕುಂ ಆಗಿದೆ. ಇದೇ ಸ್ಕೂಲಿನ ವಿದ್ಯಾರ್ಥಿಯ ವಿಷಯವು ಇಲಾಖೆಯಲ್ಲಿ ಚರ್ಚೆ ನಡೆಯುತ್ತಿರುವಂತೆ ಕೇಳುತ್ತೇವೆ.

* * *

ಮೈಸೂರು ಸಂಸ್ಥಾನದ ಪಶುವೈದ್ಯ ಇಲಾಖಾ ಇನ್ಸ್‌ಪೆಕ್ಟರ್ ಮಿ॥ ಎ. ನರಸಿಂಹಯ್ಯಂಗಾರ್ರು ಈ ಸಲ ನವರಾತ್ರಿ ಪ್ರದರ್ಶನ ಶಾಲೆಯಲ್ಲಿ ಓದಿ ಹೇಳಿದ ದನಗಳ ವಿಷಯವಾದ ಉಪನ್ಯಾಸವನ್ನು ಪುಸ್ತಕ ರೂಪವಾಗಿ ಪ್ರಕಟಿಸಿರುತ್ತಾರೆ. ಇದರಲ್ಲಿ ದನಕರುಗಳನ್ನು ಪೋಷಿಸುವದಕ್ಕೆ ಅನುಕೂಲವಾದ ಸ್ಥಳಗಳು, ಹಿಂದೂ ದೇಶದಲ್ಲಿರುವ ದನಕರುಗಳು, ಮೇವು, ನೀರು, ವಸತಿ, ಶ್ರಮ, ವಿಶ್ರಾಂತಿ, ರೋಗನಿವಾರಣೆಯ ಪಾಯ, ಹಿಡಮಾಡುವುದು, ಈ ಮೊದಲಾದ ವಿಚಾರಗಳನ್ನೆಲ್ಲಾ ಪ್ರತ್ಯೇಕವಾಗಿ ಸಾಮಾನ್ಯ ಜನರೂ ಸುಲಭವಾಗಿ ತಿಳಿದುಕೊಳ್ಳುವಂತೆ ಕನ್ನಡದಲ್ಲಿ ವಿವರಿಸಿರುತ್ತಾರೆ. ರೈತ ಪ್ರಜೆಗಳೂ ಪಶು ಕಾರು ದನಗಳನ್ನು ಸಾಕುವಂಥಾ ಇತರ ಪ್ರಜೆಗಳೂ ಓದಿ, ಅದರಂತೆ ಆಚರಣೆಗೆ ತಂದುಕೊಳ್ಳಬಾರದೆಂದು ಹಾರೈಸುತ್ತೇವೆ.

* *

ಬೆಂಗಳೂರು ದಂಡಿನಲ್ಲಿದ್ದ ಕಂಟ್ರಾಕ್ಟ್ ಬೆಂಗಳೂರು, ಬಳ್ಳಾರಿ, ಮದರಾಸ್, ಸಿಕಂದ್ರಾಬಾದ್, ಈ ಮೊದಲಾದ ಕಡೆಗಳಲ್ಲಿರುವ ಕಂಪೆನಿ ದಂಡಿನ ಇಲಾಖೆಗೆ ಕಂಟ್ರಾಕ್ಟ್ ಮೈಕಲ್ ಸಾಮಾನ್ ಸರಬರಾಜು ಮಾಡುತ್ತಿದ್ದ ಮುದಲಿಯಾರ್ ಎಂಬ ಸಾಹುಕಾರನು ಕಳೆದ ವಾರ ಬೆಂಗಳೂರು ದಂಡಿನ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ದಿವಾಳಿ ಸರ್ಟಿಫಿಕೇಟಿಗೆ ಅರ್ಜಿ ಹಾಕಿದಾನೆ. ಆತನಿಗೆ ೧೦,೭೦೦ ರೂಪಾಯಿನ ಆಸ್ತಿಯೂ, ೧॥ ಲಕ್ಷ ರೂಪಾಯಿನ ಸಾಲವೂ, ಇರುವುದಾಗಿಯೂ ೩೦ ಮಂದಿ ಸಾಲಗಾರರು ಈಗ ಕೋರ್ಟಿನಲ್ಲಿ ಸರ್ಟಿಫಿಕೇಟ್ ಕೊಡಕೂಡದೆಂದು ಎದುರರ್ಜಿ ಕೊಟ್ಟಿರುವುದಾಗಿಯೂ ತಿಳಿದುಬಂದಿದೆ.

ಬೆಂಗಳೂರು ದಂಡು

ಪುರಾಭಿವೃದ್ಧಿಯ ಕಾರ್ಯಗಳು

ಬೆಂಗಳೂರು ದಂಡನ್ನು ಬಡಾವಣೆ ಮಾಡುತ್ತಿದಾರಷ್ಟೆ. ಕೆಲವು ದಿನಗಳ ಹಿಂದೆ ಅಲ್ಲಿನ ಎರಡನೇ ಮ್ಯಾಜಿಸ್ಟ್ರೇಟಾದ ಮಿ॥ ಅಬ್ದುಲ್ ರಹಮಾನ್ ಸಾಹೇಬರ ಸಂಗಡ ನಾವು ಹೋಗಿ ಈ ಬಡಾವಣೆಯನ್ನು ನೋಡಿ ಬಂದೆವು. ಮಿ॥ ಅಬ್ದುಲ್ ರಹಮಾನ್ ಸಾಹೇಬರು ಈ ಬಡಾವಣೆಯ ವಿಷಯದಲ್ಲಿ ತುಂಬಾ ಉತ್ಸಾಹಿಗಳಾಗಿರುತ್ತಾರೆ. ಅವರೂ ಮ್ಯಾಜಿಸ್ಟ್ರೇಟ್ ಮಿ॥ ಮಾರ್ಗನ್ ರವರೂ, ಇಂಜನಿಯರ್ ಮಿ॥ ಸ್ಟೀವೆನ್ಸ್ ರವರೂ ಏಕೀಭವಿಸಿ ಜಾಗರೂಕತೆಯಿಂದಲೂ ಚಟುವಟಿಕೆಯಾಗಿಯೂ ಬಹಳ ಕಷ್ಟಪಟ್ಟು ಈ ಕಾರ್ಯವನ್ನು ಸಾರ್ಥಕಪಡಿಸಿರುತ್ತಾರೆ. ಈ ಬಡಾವಣೆಯು ಪ್ರಾರಂಭವಾಗಿ ಸುಮಾರು ೧೪ ತಿಂಗಳಾಯಿತು. ಬ್ಲಾಕ್‌ಪಲ್ಲಿ ಎಂಬ ಭಾಗವು ತುಂಬಾ ಕೆಳಕ್ಕಾಗಿದ್ದು ಮನೆಗಳು ಬಹಳ ಒತ್ತಾಗಿದ್ದವು. ಗಾಳಿ ಸಂಚಾರ, ಬೆಳಕು ಸಹ ಬರುತ್ತಿರಲಿಲ್ಲ. ಬಡಬಗ್ಗರೂ ಆಗಾಗ್ಗೆ ವಾಂತಿಭೇದಿ, ಪ್ಲೇಗ್, ಕಾಲರಾ ಮೊದಲಾದ ರೋಗಗಳಿಗೆ ಸಿಕ್ಕಿ ನರಳುತ್ತಲೂ ಲಯವಾಗುತ್ತಲೂ ಇದ್ದರು. ಈ ಜನರೆಲ್ಲಾ ಬಡಾವಣೆಯಲ್ಲಿ ಆರೋಗ್ಯಕರವಾದ ಮನೆಗಳನ್ನು ಕಟ್ಟಿಕೊಳ್ಳುವಂತೆ ಪ್ರೋತ್ಸಾಹಪಡಿಸಿ, ಅವರ ಆರೋಗ್ಯಾದಿಗಳನ್ನು ಕಾಪಾಡಬೇಕೆಂದು ಪ್ರಯತ್ನಪಟ್ಟಾಗ, ಇಂಡಿಯಾ ಗವರ್ನ್‌ಮೆಂಟಿನವರು ಎರಡು ಲಕ್ಷ ರೂಪಾಯಿ ಮಾತ್ರ ಸ್ವೀಕರಿಸಿದರು.

ಈಗ ಬಡಾವಣೆ ಮಾಡಲ್ಪಟ್ಟಿರುವ ಸ್ಥಳವನ್ನು ಹೋಗಿ ನೋಡುವುದರಲ್ಲಿ ನಮಗೆ ತುಂಬಾ ಸಂತೋಷವೂ ಆಶ್ಚರ್ಯವೂ ಉಂಟಾದವು. ಹದಿನೆಂಟು ತಿಂಗಳೊಳಗಾಗಿ ಅಲ್ಲಿ ನಡೆದಿರುವ ಕಾರ್ಯಗಳು ಅಪಾರವಾಗಿರುತ್ತವೆ. ವಿಸ್ತಾರವಾದ ಬೀದಿಮಾರ್ಗಗಳನ್ನು ಎಲ್ಲಾ ಕಡೆಗಳಲ್ಲೂ ಹಾಕಿದಾರೆ. ಉಭಯಪಾರ್ಶ್ವಗಳಲ್ಲಿ ಸಾಲುಮರಗಳು ಬೆಳೆಯುತ್ತಲಿವೆ. ವಿದ್ಯುಚ್ಛಕ್ತಿಯ ದೀಪಗಳು ರಾತ್ರಿಯನ್ನು ಹಗಲಾಗಿ ಮಾಡಿವೆ. ಬಡಬಗ್ಗರು ವಾಸಕ್ಕೆ ಯೋಗ್ಯವಾದಂಥಾ ಸಣ್ಣ ಮನೆಗಳು ಸಾಲುಸಾಲಾಗಿ ಎದ್ದಿರುವವು. ಪ್ರತಿಮನೆಯೊಳಗೂ ೨—೩ ಕೊಠಡಿಗಳೂ ಹಿಂಭಾಗದಲ್ಲಿ ಹಿತ್ತಲುಗಳೂ ಇರುತ್ತವೆ. ಈ ಮನೆಗಳನ್ನು ಮೆ॥ ರಾಮಸ್ವಾಮಿ ಮೊದಲಿಯಾರ್ರು, ಮಿ॥ ಹಾಜಿ ಇಸ್ಮಾಯಿಲ್ ಸೇಟರು, ಈ ಮೊದಲಾದವರು ಹಣ ಹಾಕಿ ಕಟ್ಟಿಸಿ ತಿಂಗಳಿಗೆ ಒಂದೊಂದು ರೂಪಾಯಿನಂತೆ ಬಾಡಿಗೆಗೆ ಕೊಟ್ಟಿದಾರೆ. ಇನ್ನೂ ಅವರಲ್ಲದೆ ಇನ್ನೂ ಉತ್ತಮವಾದ ಮನೆಗಳನ್ನು ಈ ಬಡಾವಣೆಯಲ್ಲಿ ನಾವು ನೋಡಿದೆವು. ಇವುಗಳನ್ನು ಜನರು ತಮ್ಮ ಸ್ವಂತಕ್ಕಾಗಿ ಕಟ್ಟಿಕೊಂಡಿರುತ್ತಾರೆ. ಇವರೆಲ್ಲಾ ಬ್ಲಾಕ್‌ಪಲ್ಲಿಯಲ್ಲಿದ್ದ ತಮ್ಮ ಹಳೆಯ ಮನೆಗಳನ್ನು ಬಿಟ್ಟು ಬಂದವರು. ಈ ಪೃಥ್ವಿ ಬಿಟ್ಟು ಮನಸ್ಸಿಗೆ ಗಾಯಕರನ್ನು ಅವರ ಮನೆಯನ್ನು ನೋಡಿದೆವು. ಆ ಮನೆಯು ಬಹಳ ಅಂದವಾಗಿಯೂ, ನಿರ್ಮಲವಾಗಿಯೂ ಇದೆ. ಅದರಲ್ಲಿ ವಾಸಮಾಡುವುದು ಬಹಳ ಹರ್ಷವೂ ಆರೋಗ್ಯಕರವೂ ಆಗಿರುವುದು. ಈ ಬಡಾವಣೆಯನ್ನು ಪ್ರಾರಂಭಿಸಿದಾಗ ಜನರನ್ನು ಅಲ್ಲಿಂದ ಕಳುಹಿಸಿ ಹಳೇ ಮನೆಗಳಿಂದ ಬಿಡಿಸಿ ಹೊರಡಿಸುವುದು ಬಹಳ ಪ್ರಯಾಸವಾಯಿತೆಂತಲೂ, ಜನರು ಈ ಬಡಾವಣೆಯಲ್ಲಿ ದೈವ ಇಲ್ಲವೆಂದು ಹಿಂತೆಗೆಯುತ್ತಿದ್ದರೆಂತಲೂ, ಈಗ ಈ ದೈವದ ಗೆಲುವನ್ನು ಒಪ್ಪಿಕೊಳ್ಳುತ್ತಿರುವರೆಂತಲೂ ನಗುತ್ತಾ ಮಿ॥ ಅಬ್ದುಲ್ ರಹಮಾನ್ ಸಾಹೇಬರು ನಮ್ಮ ಕೂಡ ಹೇಳಿದರು. ಹಾಗಾದರೋ ಜನರು ತಾವೇ ಹೊಸದಾಗಿ ಒಂದು ಕಟ್ಟಿರುವ ಮನೆಗಳಲ್ಲಿ ವಾಸಮಾಡುವುದೂ, ಅವರೇ ಸ್ವಂತ ಕಟ್ಟಿಸಿಕೊಳ್ಳುವುದೂ ಸುಲಭವಾಗಿದೆ. ಈಗ ಖಾಲಿ ಇರುವ ನಿವೇಶನಗಳನ್ನೆಲ್ಲಾ ಜನರು ತೆಗೆದುಕೊಂಡಿದಾರೆ.

ಇನ್ನೊಂದು ಭಾಗದಲ್ಲಿ, ಬಹುಜನ ದೇಶೀಯ ದೊಡ್ಡಮನುಷ್ಯರೂ ಯೂರೇಷಿಯನ್ ಜನರೂ ಸುಂದರವಾದ ಮನೆಗಳನ್ನೂ ಬಂಗಲೆಗಳನ್ನೂ ಕಟ್ಟಿಕೊಂಡು ಸಂಸಾರ ಸಹಿತ ವಾಸಮಾಡುತ್ತಿದಾರೆ. ಮೆ॥ ರಾಮಸ್ವಾಮಿ ಮೊದಲಿಯಾರ್ರು ಕಟ್ಟಿಸುತ್ತಿರುವ ಆಸ್ಪತ್ರೆ ಕಟ್ಟಡವು ಪೂರೈಸುತ್ತಾ ಬಂದಿದೆ. ಇದಲ್ಲದೆ ಅಲ್ಲಿ ಒಂದು ಸ್ಕೂಲೂ ಮಾರ್ಕೆಟ್ಟೂ ಇದ್ದರಲ್ಲೇ ನಿರ್ಮಾಣವಾಗುವವು.

ಈ ಬಡಾವಣೆಯನ್ನು ನೋಡಿ ನಾವು ತುಂಬಾ ಸಂತೋಷಪಟ್ಟೆವು. ಅದನ್ನು ನೋಡಿದ ಮೇಲೆ ನಮಗೆ ಎರಡು ವಿಷಯಗಳು ಖಚಿತವಾಗಿ ತಿಳಿದುಬಂದಿವೆ. ಮೊದಲನೆಯದಾಗಿ, ಗವರ್ನ್‌ಮೆಂಟಿನವರು ಮಾಡುವುದಕ್ಕಿಂತಲೂ ಪ್ರಜೆಗಳು ತಾವಾಗಿಯೇ ಮಾಡಿಕೊಳ್ಳುವ ಕೆಲಸಕಾರ್ಯಗಳು ಎಷ್ಟೋ ಬೇಗ ನೆರವೇರಿ ಅನುಕೂಲವಾಗಿಯೂ, ತೃಪ್ತಿಕರವಾಗಿಯೂ ಆಗುತ್ತವೆ. ಈಗ ಮೈಸೂರಿನ ಬಡಾವಣೆಯಲ್ಲಿ ಕೆಲಸ ನಿಧಾನವಾಗಿ ಸಾಗುತ್ತಿರುವದು, ಜನರು ಸ್ವಂತವಾಗಿ ಮಾಡಿಕೊಂಡದ್ದು. ಎರಡನೆಯದಾಗಿ, ಅಧಿಕಾರಿಗಳಲ್ಲಿ ಪ್ರಜೆಗಳಲ್ಲಿ ಪರಸ್ಪರವಾದ ಪ್ರೀತಿ, ಉತ್ಸಾಹ, ಸತ್ಯಸಂಧತೆಗಳಿದ್ದ ಪಕ್ಷದಲ್ಲಿ ಯಾವ ಕಾರ್ಯವಾದರೂ ಶೀಘ್ರವಾಗಿಯೂ ಸಾರ್ಥಕವಾಗಿಯೂ ನೆರವೇರಲು ಅಡ್ಡಿಯಿಲ್ಲ.

ದೇಶಾಭಿವೃದ್ಧಿಯಾಗುವುದು ಹೇಗೆ?

ಗ್ರಾಮಾಂತರದ ಜನಗಳಲ್ಲಿ ಪ್ರಕೃತದಸ್ಥಿತಿಯಲ್ಲಿರುವ ಪರಸ್ಪರವಾದ ದ್ವೇಷವೂ, ಅಸೂಯೆಯೂ ಅವರ ಹೀನಸ್ಥಿತಿಗೆ ಮುಖ್ಯ ಕಾರಣವಾಗಿರುವುದನ್ನು ಸರ್ವರೂ ಬಲ್ಲರು ಪ್ರಾಮಾಣಿಕತೆಯು ಬಹುಶಃ ಬಹಳ ಕಡಮೆಯಾಗಿದೆ ಸ್ವಾರ್ಥತೆ, ಮೋಸ, ಇವುಗಳ ವಿಷಯವಾಗಿ ಹೇಳಬೇಕಾದುದೇ ಇಲ್ಲ ಜನಗಳ ಅನುಕೂಲಕ್ಕಾಗಿ ಮಾಡಿದ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳೂ ಕಾನೂನುಗಳೂ ಜನಗಳಲ್ಲಿ ವ್ಯಾಜ್ಯಗಳು ಹೆಚ್ಚುವುದಕ್ಕೆ ಕಾರಣವಾದವು ನೀತಿ ನ್ಯಾಯಗಳು ಅಭಾವವಾಗಿವೆ ಉದಾಹರಣಾರ್ಥವಾಗಿ, ಒಬ್ಬನಿಗೆ ಹತ್ತು ರೂಪಾಯಿ ಕೊಟ್ಟು ನಂತರ ಕೊಡು ಎಂದು ಕೇಳಿಹೋದರೆ ಪುನಃ ಬಂದು ಕೇಳಿದಾಗ ಹಣವ ವಾಪಸು ಬರುವುದು ಕಷ್ಟ ಸಾಕ್ಷಿಗಳು ಇದ್ದ ಸಂದರ್ಭದಲ್ಲಿಯಾಗಲೀ, ಅಥವಾ ಅದನ್ನ ಕೊಟ್ಟವನು ಬರವಾಡಿ ಕೊಳ್ಳುವುದಕ್ಕೆ ಸಮರ್ಥನಾಗಿದಾನೆಂದು ಹಣ ತೆಗೆದುಕೊಂಡವನಿಗೆ ತಿಳಿದಿದ್ದರೆ ಆಗಲೀ ವಿನಾ ಅದನ್ನ ಕೊಟ್ಟುಬಿಡುವುದು ತನ್ನ ಕರ್ತವ್ಯವಾಗಿದೆ ಎಂಬ ಬುದ್ಧಿಯು ತೆಗೆದುಕೊಂಡವನಲ್ಲಿ ಹುಟ್ಟುವುದಿಲ್ಲ ಸುಳ್ಳು ಮೊಕದ್ದಮೆಗಳ ಮತ್ತು ಸುಳ್ಳು ಸಾಕ್ಷಿಗಳ ವಿಷಯವಾಗಿ ಎಷ್ಟು ಹೇಳಿದರೂ ಸ್ವಲ್ಪವೇ ಈ ಸ್ಥಿತಿಯಲ್ಲಿರುವ ಅವಿವೇಕಿಗಳಿಂದ ಮತ್ತು ಐಕಮತ್ಯವಿಲ್ಲದ ಜನಗಳನ್ನ ಹಿಂಸಿಸುವುದು ಲಂಚಕೋರರಾದ ಚಿಲ್ಲರೆ ನೌಕರರಿಗೆ ಬಹಳ ಸುಲಭವಾಗಿದೆ ತಿಳುವಳಿಕೆ ಇಲ್ಲದ ಜನಗಳನ್ನು ತಮ್ಮ ಬಲದಿಂದ ಹೇಳಿದ ಹಾಗೆ ಕೇಳುವಂತೆ ಮಾಡಿಕೊಂಡು, ಚಿಲ್ಲರೆ ಅಧಿಕಾರಿಗಳನ್ನು ಲಂಚದ ಮೂಲಕ ತಮ್ಮ ಬಳಿಗೆ ಸೇರಿಸಿ, ಸ್ವೇಚ್ಛಾ ಪ್ರವರ್ತನೆಯಲ್ಲಿರುವವರೇ ಅನೇಕ ಕಡೆ ಜನಗಳ ಮುಖಂಡರನ್ನಿಸಿಕೊಂಡಿದಾರೆ ತಮ್ಮ ತಂತ್ರಕ್ಕೆ ಒಳಗಾಗದವರನ್ನು ನಾನಾ ವಿಧದಲ್ಲಿ ಪೀಡಿಸುತ್ತಾ, ತಮ್ಮ ಹಣ ಮತ್ತು ದಾಕ್ಷಿಣ್ಯದ ಬಲದಿಂದ ಕೋರ್ಟು ಕಚೇರಿಗಳಿಗೆ ಅಲೆಸುತ್ತಿರುವ ಈ "ಮುಖಂಡ" ರಿಂದಲೇ ಇತರರಿಗೆ ಹಿಂಸೆ ಇಂಥಾ ಸ್ಥಿತಿಯನ್ನು ತಪ್ಪಿಸುವುದು ಪ್ರತಿಯೊಬ್ಬ ದೇಶಾಭಿಮಾನಿಯ ಮುಖ್ಯ ಕರ್ತವ್ಯವಾಗಿದೆ

ಒಕ್ಕಲಿಗರು ಅನಾದಿಯಿಂದಲೂ ಉಳಿದ ವರ್ಣಾಶ್ರಮದವರ ಜೀತದಲ್ಲಿದ್ದು, ಈಗಿನ ಇಂಗ್ಲೀಷರ ಆಳ್ವಿಕೆಯಲ್ಲಿ ಎಲ್ಲರ ಸಮಾನವಾಗಿ ಭಾವಿಸಲ್ಪಟ್ಟಿರುವುದರಿಂದ ನವೀನವಾಗಿ ಸ್ವಾತಂತ್ರ್ಯಕ್ಕೆ ಕಣ್ಣುಬಿಟ್ಟ ಈ ಜನರಿಗೆ ಈಕಾಲದ ನಾಗರೀಕತೆಯೂ ಕೋರ್ಟು ಕಾನೂನು ಮುಂತಾದ ಏರ್ಪಾಡುಗಳೂ ಭ್ರಮೆಯನ್ನುಂಟುಮಾಡಿವೆ ಕಾಲಕ್ಕೆ ತಕ್ಕಹಾಗೆ ಅವರ ಬುದ್ಧಿಯು ವಿಕಾಸವನ್ನು ಹೊಂದದೆ ಇದ್ದರೆ, ಈ ಏರ್ಪಾಡುಗಳಿಂದ ಅವರಿಗೆ ಪ್ರಯೋಜನವಾಗುವುದಕ್ಕೆ ಬದಲಾಗಿ ಕೆಡಕಾಗುವುದರಲ್ಲಿ ಸಂದೇಹವಿಲ್ಲ ಈಗ್ಗೆ ೫೦ ೬೦ ವರ್ಷಗಳ ಹಿಂದೆ ಒಬ್ಬ ರೈತನು ಇನ್ನೊಬ್ಬನಿಂದ ೧೦೦ ಹಣ ಸಾಲ ತೆಗೆದುಕೊಂಡು ಹೋದನೆ, ಇದಕ್ಕೆ ಪತ್ರ ಹುಟ್ಟುತ್ತಿರಲಿಲ್ಲ ಸೂರ್ಯ ಚಂದ್ರರೇ ಸಾಕ್ಷಿಗಳಾಗಿದ್ದರು ಆದಾಗ್ಯೂ ಆ ಸಾಲವನ್ನು ಬಹು ಎಚ್ಚರಿಕೆಯಿಂದ ತೀರಿಸುತ್ತಿದ್ದನು ಈಗಿನ ಕಾಲದಲ್ಲಿ ಪತ್ರಹುಟ್ಟಿ ರಿಜಿಸ್ಟರಾದಾಗ್ಯೂ ಎಷ್ಟೋ ಸಾಲಗಳು ಮುಳುಗಿಹೋಗುತ್ತಿವೆ ಹಣಕೊಡುವವನ ಸಹಾಯಾರ್ಥವಾಗಿ ಹುಟ್ಟಿದ ರಿಜಿಸ್ಟ್ರೇಷನ್ ಆಕ್ಟು, ಸ್ಟಾಂಪ್ ಆಕ್ಟು, ಇವುಗಳ ಉದ್ದೇಶಗಳನ್ನು ತಿಳಿದುಕೊಳ್ಳಲಾರದ ರೈತನು ಪತ್ರಬರೆಯದೆ ಸಾಲಕೊಟ್ಟರೆ ಆಗಲೀ, ಪತ್ರಬರೆಯುವುದರಲ್ಲೇ ರಿಜಿಸ್ಟರ್ ಮಾಡಿಸುವುದರಲ್ಲೇ ಕಾನೂನನ್ನು ಕೊಂಚ ಅತಿಕ್ರಮಿಸಿದ್ದರೆ ಆಗಲೀ ಕೊಟ್ಟ ಸಾಲವನ್ನು ವಾಪಸು ಕೊಡಕೂಡದೆಂದು ತಿಳಿದುಕೊಳ್ಳುತ್ತಾನೆ ಇದು ಕಾನೂನಿನ ಉದ್ದೇಶವನ್ನು ಗ್ರಹಿಸಲಾರದ ದೋಷವೇ ವಿನಾ ಬೇರೆ ಅಲ್ಲ ಸ್ವಾತಂತ್ರ್ಯಸುಖವನ್ನ ಅನುಭವಿಸುವ ಮನುಷ್ಯನಿಗೆ ಅವಶ್ಯಕವಾದ ಕಾನೂನು ಮೌಢ್ಯದಲ್ಲಿರುವ ರೈತನ ವಿಷಯದಲ್ಲಿ ಕೆಡಕಾಗಿ ಪರಿಣಮಿಸಿದ್ದರಿಂದ ರೈತನು ಸ್ವಾತಂತ್ರ್ಯಕ್ಕೆ ಅರ್ಹನಲ್ಲವೇ? ಎಂದರೆ, ಹಾಗಲ್ಲ ಸ್ವಾತಂತ್ರ್ಯವು ಸಕಲ ಮನುಷ್ಯರಿಗೂ ಆಭರಣಪ್ರಾಯವಾದದ್ದು ಆದರೆ ಅದರ ಪ್ರಯೋಜನವನ್ನು ಅನುಭವಿಸುವುದಕ್ಕೆ ತಕ್ಕ ಯೋಗ್ಯತೆ ಬೇಕು ಈ ಯೋಗ್ಯತೆಯು ಅವನನ್ನು ವಿದ್ಯಾವಂತನನ್ನಾಗಿ ಮಾಡುವುದರಿಂದ ಉಂಟಾಗುತ್ತದೆ

ಸಾಮಾನ್ಯವಾಗಿ ಗ್ರಾಮಾಂತರದ ಜನಗಳಲ್ಲಿ ಉಂಟಾಗುವ ವ್ಯಾಜ್ಯಗಳೆಲ್ಲವೂ ಸ್ವಾರ್ಥಪರರಾದ ಜನಗಳ ಪ್ರೇರಣೆಯ ಮೇಲೇ ಹುಟ್ಟಿವೃದ್ಧಿ ಹೊಂದುತ್ತವೆ ಹೀಗೆ ರೈತರು ದೇಶಾಭಿಮಾನ ರಹಿತರಾದ ಮತ್ತು ಸ್ವಾರ್ಥಪರರಾದ ಜನಗಳ ಕೈಲಿ ಸಿಕ್ಕಿರುವ ಬೊಂಬೆಗಳಂತೆ ಆಗಿರುವುದರಿಂದ ಸರ್ಕಾರದವರು ಪ್ರಜಾ ಹಿತಕ್ಕಾಗಿ ಮಾಡುವ ಏರ್ಪಾಡುಗಳೆಲ್ಲಾ ನಿರರ್ಥಕವಾಗಿಯೂ ಪ್ರಜೆಗಳಿಗೇ ಕೆಡಕಾಗಿಯೂ ಪರಿಣಮಿಸುತ್ತವೆ ಸರ್ಕಾರದವರು ಗ್ರಾಮಪಂಚಾಯತಿ ಕೋರ್ಟುಗಳನ್ನು ಕಲ್ಪಿಸಿಕೊಡಬೇಕೆಂದು ಕೆಲವರು ಅವರನ್ನ ಕೇಳುತ್ತಾರೆಯಷ್ಟೆ ಜನಗಳಿಗೆ ಅವುಗಳ ಪ್ರಯೋಜನವು ತಿಳಿಯದೆ ಇರುವುದರಿಂದಲೂ, ಅವರು ಮೌಢ್ಯದಲ್ಲಿರುವುದರಿಂದಲೂ ಇಂಥಾ ಏರ್ಪಾಡು ಮೇಲೆ ವಿವರಿಸಿದ ಮುಖಂಡರಿಗೆ ಕಾರ್ಯ ಸಾಧನೆಗೆ ಒಳ್ಳೇ ಆಯುಧವಾಗುವುದು ರೈತರ ಪ್ರಯೋಜನಾರ್ಥವಾಗಿ ಸ್ಥಾಪಿಸಲ್ಪಟ್ಟ ವ್ಯವಸಾಯದ ಬ್ಯಾಂಕುಗಳು ಯಾವ ಗತಿಯನ್ನ ಹೊಂದುತ್ತವೆ ಎಂಬುವುದನ್ನು ಎಲ್ಲರೂ ತಿಳಿದಿದಾರೆ ಸ್ವರಾಜ್ಯಕ್ಕಾಗಿ ಪ್ರಯತ್ನಿಸುತ್ತಿರುವ ದೇಶಾಭಿಮಾನಿಗಳು ಮೊದಲು ತಮ್ಮ ಗಮನವನ್ನ ಮೇಲ್ಕಂಡ ವಿಷಯಕ್ಕೆ ತಿರುಗಿಸಬೇಕು

ಮುಖ್ಯವಾಗಿ ಈ ವಿಷಯದಲ್ಲಿ ಮಾಡಬೇಕಾದುದೇನೆಂದರೆ— ಜನಗಳು ವಿದ್ಯಾಭ್ಯಾಸದ ವಿಷಯದಲ್ಲಿ ಉತ್ಸಾಹಶಾಲಿಗಳಾಗುವಂತೆ ಪ್ರೋತ್ಸಾಹಿಸಬೇಕು ಜ್ಞಾನವಂತರಾದ ಹಾಗೆಲ್ಲಾ ಜನರು ಪ್ರಕೃತಸ್ಥಿತಿಗೆ ಕಣ್ಣನ್ನು ತೆರೆದು, ತಮಗೆ ಹಿತವಾದದ್ದು ಯಾವುದೆಂಬುವುದನ್ನು ನೋಡುವರು ಬಾಲ್ಯದಿಂದಲೇ ಸತ್ಯ, ನ್ಯಾಯ, ದಯೆ, ದೇಶಾಭಿಮಾನ, ಅಸ್ವಾರ್ಥತೆ, ಆತ್ಮಾವಲಂಬನೆ, ಧೈರ್ಯ ಸ್ಥೈರ್ಯಗಳೇ ಮೊದಲಾದ ದೇಶೋನ್ನತಿಗೆ ಅವಶ್ಯಕವಾದ ಗುಣಗಳು ದೃಢಮೂಲವಾಗುವಂತೆ ಉಪನ್ಯಾಸಗಳ ಮೂಲಕವೂ ಶಿಕ್ಷಣದ ಮೂಲಕವೂ ಏರ್ಪಾಡು ಮಾಡಬೇಕು. ಎರಡನೆಯವನನ್ನು ಕೆಡಿಸಿ ತಾನು ಬದುಕಬೇಕೆಂಬ ಬುದ್ಧಿ ಇರುವವರೆಗೂ ಇಬ್ಬರೂ ಏಳಿಗೆಯಾಗಲಾರರು ತಾನೂ ನೆರೆಯವನೂ ಇಬ್ಬರೂ ಸುಖವಾಗಿರಬೇಕೆಂದು ಹಾರೈಸಿ ಮಾಡಿದ ಪ್ರಯತ್ನವು ದೇವರ ದಯದಿಂದ ಕೈಗೂಡುವುದು ಮುಖ್ಯ, ಈ ಭಾವನೆಯು ಸರ್ವತ್ರ ವ್ಯಾಪಿಸುವಂತೆ ಮಾಡಬೇಕು

ಗ್ರಾಮಾಂತರದಲ್ಲಿ ಜನಗಳು ವ್ಯಾಜ್ಯಗಳಿಗೋಸ್ಕರ ವರ್ಷಂಪ್ರತಿ ಲಕ್ಷಾಂತರ ರೂಪಾಯಿಗಳನ್ನು ಹಾಳುಮಾಡಿಕೊಳ್ಳುತ್ತಿದಾರಷ್ಟೆ ಅವರ ವ್ಯಾಜ್ಯಗಳೆಲ್ಲವೂ ಪ್ರಾಯಶಃ ಜಿದ್ದಿನಿಂದಲೇ ಹುಟ್ಟಿ ಸ್ವಾರ್ಥಪರರ ಪ್ರೋತ್ಸಾಹದಿಂದಲೇ ವೃದ್ಧಿಯಾಗುವುದರಿಂದ ದೇಶಾಭಿಮಾನಿಗಳಾದ ಲಾಯರುಗಳೂ ಇತರ ವಿವೇಕಿಗಳೂ ಸೇರಿ, ಇವುಗಳನ್ನು ಬಗೆಹರಿಸಿ, ಜನಗಳಲ್ಲಿ ಪ್ರೀತಿ ವಿಶ್ವಾಸಗಳನ್ನೂ ನಂಬಿಕೆಯನ್ನೂ ಹೆಚ್ಚಿಸಬೇಕು ದೇಶೋನ್ನತಿಗಾಗಿ ಪ್ರತಿಯೊಬ್ಬನೂ ತನಗಾಗುವ ಕೊಂಚ ನಷ್ಟವನ್ನ ಸಹಿಸಬೇಕಾಗುತ್ತದೆ ಇತರರು ವ್ಯಾಜ್ಯಮಾಡುವುದರಿಂದ ತನಗಾಗುವ ಪ್ರಯೋಜನವನ್ನು ಕಳೆದುಕೊಳ್ಳಬೇಕಲ್ಲಾ ಎಂದು ಯೋಚಿಸಕೂಡದು. ತಾನು ದೇಶಹಿತಕ್ಕಾಗಿ ನಷ್ಟಪಟ್ಟೆನೆಂದು ತಿಳಿಯಬೇಕು ವಿವೇಕಿಗಳಾದವರು ತಮ್ಮ ಅಸ್ವಾರ್ಥತೆಯನ್ನು ಅಜ್ಞಾನಿಗಳಾದ ಜನರಿಗೆ ನಿದರ್ಶನ ಮಾಡಿಕೊಟ್ಟ ಹೊರತು ಇವರು ಮೇಲ್ಕಂಡವರನ್ನು ನಂಬುವುದಿಲ್ಲ ಇದೂ ಅಲ್ಲದೆ ದೇಶವು ಅಭಿವೃದ್ಧಿಗೆ ಬರಬೇಕಾದರೆ ಎಲ್ಲಾ ಪ್ರಜೆಗಳೂ ವೃದ್ಧಿಹೊಂದಬೇಕಾದದ್ದು ಅವಶ್ಯಕವಾದ್ದರಿಂದ ಅಜ್ಞಾನದಲ್ಲಿರುವ ಶೇಕಡ ೯೦ ಜನಗಳನ್ನು ಹಿಂದೆಬಿಟ್ಟು, ಕೆಲವರು ಮಾತ್ರ ಮುಂದೆ ಹೋದ ಮಾತ್ರಕ್ಕೇ ದೇಶವು ವೃದ್ಧಿಯಾಗಲಾರದು ಇದೂ ಅಲ್ಲದೆ ಒಂದು ದೇಶದಲ್ಲಿರುವ ವ್ಯವಸಾಯಗಾರರೂ ಮತ್ತು ಕೈಗಾರಿಕೆ ಜನರೇ ಬಹಳ ಮಟ್ಟಿಗೆ ಐಶ್ವರ್ಯದ ಉತ್ಪತ್ತಿಗೆ ಕಾರಣಭೂತರಾದ್ದರಿಂದ ಇವರಲ್ಲಿ ನೆಮ್ಮದಿಯೂ, ಸತ್ಯತೆಯೂ, ನೀತಿಯೂ, ವಿವೇಕವೂ, ದೇಶಾಭಿಮಾನವೂ, ಅಸ್ವಾರ್ಥತೆಯೂ ನೆಲಗೊಳ್ಳದೆ, ದೇಶಾಭಿವೃದ್ಧಿಯು ಹ್ಯಾಗೆತಾನೇ ಆಗುವುದು? ಸ್ವರಾಜ್ಯಾಭಿಲಾಷಿಗಳು ಈ ಸಂಗತಿಗಳನ್ನು ಗ್ರಹಿಸಿ, ತಮ್ಮ ಪ್ರಯತ್ನಕ್ಕೆ ಸಹಾಯಭೂತವಾದ ಈ ಕಾರ್ಯದಲ್ಲಿ ಕೈಹಾಕಬೇಕು

ಇವನ್ನೆಲ್ಲಾ ಯೋಚಿಸಿದರೆ, ಮೇಲ್ಕಂಡಂತೆ ದುಂದು ಆಗುತ್ತಿರುವ ಹಣವು ಜನಗಳ ಹಿತಾರ್ಥವಾಗಿ ಉಪಯೋಗಿಸಲ್ಪಟ್ಟರೆ ಎಷ್ಟು ಮೇಲೆಂಬುವುದು ಗೊತ್ತಾಗುತ್ತದೆ. ಗ್ರಾಮಾಂತರಗಳಲ್ಲಿ ಅನೇಕ ಕಡೆ ಉತ್ತಮವಾದ ಪಾಠಶಾಲೆಗಳೇ ಇಲ್ಲ ಸುಗುಣಿಗಳಾಗಿಯೂ ದೇಶಾಭಿಮಾನಿಗಳಾಗಿಯೂ ವಿದ್ಯಾವಂತರಾಗಿಯೂ ಇರುವ ಉತ್ತಮತರದ ಶಿಕ್ಷಕರು ಸರ್ಕಾರದವರು ಕೊಡುವ ೬-೧೦ ರೂಪಾಯಿಗೆ ಸಿಕ್ಕಲಾರರು ಉತ್ತಮ ಶಿಕ್ಷಕರಿಲ್ಲದಿದ್ದರೆ ಉತ್ತಮ ವಿದ್ಯಾರ್ಥಿಗಳಾಗುವುದಿಲ್ಲ ಇವರು ದೊಡ್ಡವರಾದ ಮೇಲೆ ಉತ್ತಮ ಪ್ರಜೆಗಳಾಗಲಾರರು ಆದ್ದರಿಂದ ಈ ವಿಷಯವಾಗಿ ಜನರೇ ಪ್ರಯತ್ನಪಡಬೇಕು ಮುಖ್ಯವಾಗಿ, ಮೇಲ್ಕಂಡ ವಿಷಯಗಳನ್ನು ಸರ್ವರೂ ಪರ್ಯಾಲೋಚಿಸಿ ಜನಗಳ ಐಕಮತ್ಯಕ್ಕೂ ಸೌಖ್ಯಕ್ಕೂ ಮುಖ್ಯ ಕಾರಣವಾದ ಜ್ಞಾನವನ್ನೂ ಸದ್ಗುಣಗಳನ್ನೂ ಸರ್ವತ್ರ ಪ್ರಚಾರ ಮಾಡಿದರೆ ದೇಶವು ವೃದ್ಧಿಹೊಂದುವುದರಲ್ಲಿ ಸಂದೇಹವಿಲ್ಲ

ದೇಶಾಭಿಮಾನಿ

ಇಂಡಿಯಾ ದೇಶದ ವೃತ್ತಾಂತಗಳು

ಪೂರ್ವ ಬಂಗಾಳಾ ಮತ್ತು ಆಸ್ಸಾಂ ಎಂಬ ಹೊಸ ಆಧಿಪತ್ಯದ ಎರಡನೇ ಲೆಫ್ಟಿನೆಂಟ್ ಗವರ್ನರಾದ ಸರ್ ಲಾನ್ಸೆಲಾಟ್ ಹೇರ್‌ಯವರು ಕಾಯಿಲೆಯಾಗಿರುವುದರಿಂದ ಡಾಕ್ಟರ ಅಭಿಪ್ರಾಯದಂತೆ ರಜಾ ಪಡೆದು ಶೀಮೆಗೆ ಹೋಗಿಬರುವವರಾಗಿದಾರೆ

***

ಕಲ್ಕತ್ತಾ ಪಟ್ಟಣದಲ್ಲಿ ಸಂಧ್ಯಾ ಮತ್ತು ನವಶಕ್ತಿ ಎಂಬ ಎರಡು ದೇಶೀಯ ವರ್ತಮಾನ ಪತ್ರಿಕೆಗಳಲ್ಲಿ ರಾಜದ್ರೋಹಕರವಾದ ಬಾತ್ಮಿಗಳು ಪ್ರಕಟವಾದವೆಂದು ಹೇಳಿ ಸರ್ಕಾರದವರು ಆ ಎರಡು ಪತ್ರಿಕೆಗಳ ಎಡಿಟರುಗಳನ್ನೂ ವಾರಂಟಿನಿಂದ ಹಿಡಿಸಿ, ಅವರ ಮೇಲೆ ಫಿರ್ಯಾದು ತಂದಿದಾರೆ ಈ ಮೊಕದ್ದಮೆಗಳು ಈಗ ವಿಚಾರಣೆಯಾಗುತ್ತಿರುವವು

***

ಬಳ್ಳಾರಿಯಲ್ಲಿರುವ ಮೆ॥ ಹನುಮಂತಪ್ಪನೆಂಬೊಬ್ಬ ಭಾರೀ ವರ್ತಕರು ಅಲ್ಲಿನ ಬಡಜನರ ವಿಷಯದಲ್ಲಿ ತುಂಬಾ ಮರುಕಹೊಂದಿ, ಕಳೆದ ಅಕ್ಟೋಬರ್ ೧೫ ರಿಂದ ಜನವರಿ ೧೫ ರವರೆಗೆ ಮೂರು ತಿಂಗಳಕಾಲ ಪ್ರತಿದಿನವೂ ೨೦೦ ಮಂದಿಗೆ ಕಮ್ಮಿಯಿಲ್ಲದೆ ಭೋಜನ ಸಲಿಸುತ್ತಾ ಬಂದರು. ಇವರ ಉಪಕಾರವನ್ನ ಅಲ್ಲಿನವರೆಲ್ಲಾ ತುಂಬಾ ಹೊಗಳುತ್ತಿದಾರೆ

***

ಲಾರ್ಡ್ ಕರ್ಜನ್ ಪ್ರಭುಗಳು ಹಿಂದುಸ್ಥಾನದ ವೈಸರಾಯ್ ಆಗಿದ್ದಾಗ್ಗೆ ಅವರು ನಡೆಸಿದ ಕಾರ್ಯಕಾರ್ಯಗಳನ್ನೂ, ರಾಜಕೀಯ ಬದಲಾವಣೆಗಳನ್ನೂ, ಈ ರಾಷ್ಟ್ರದ ಮತ್ತು ಪ್ರಜಾ ಕೋಟಿಗಳ ಸ್ಥಿತಿಗತಿಗಳ ಬದಲಾವಣೆಗಳನ್ನೂ, ಈಗ ಈ ರಾಷ್ಟ್ರದಲ್ಲಿ ಹುಟ್ಟಿ ಹಬ್ಬುತ್ತಿರುವ ನವೀನ ಕುತೂಹಲ ಅಭಿಪ್ರಾಯಾದಿಗಳನ್ನೂ ಕುರಿತು ಅವರೇ ಸ್ವತಃ ಬರೆದು ಒಂದು ಪುಸ್ತಕರೂಪದಲ್ಲಿ ಪ್ರಕಟಿಸುವವರಾಗಿದಾರೆಂದು ತಿಳಿದು ಬಂದಿದೆ

***

ಬಳ್ಳಾರಿಯಲ್ಲಿ ಪ್ಲೇಗ್ ಉಪದ್ರದ ನಿಮಿತ್ತ ಮನೆಗಳನ್ನು ಬಿಟ್ಟು ಹೋದವರಲ್ಲಿ ವಾಸಮಾಡತಕ್ಕವರ್‍ಯಾರೂ ಪ್ಲೇಗ್ ಶಿಲುಬನ್ನು ಹಾಕಿಸಿಕೊಂಡಲ್ಲದೆ ಮನೆಗೆ ಬರಕೂಡದೆಂದು ಪ್ರಕಟಿಸಿದ್ದರು ಆದರೂ ಕೆಲವು ವರ್ತಕರೂ ಇತರರೂ ಒಂದು ದಿನ ರಾತ್ರಿ ಗುಡಿಸಲು ಬಿಟ್ಟು ಊರಿಗೆ ಬಂದು ತಮ್ಮ ಮನೆಗಳಲ್ಲಿ ಮಲಗಿದ್ದರು, ಪೋಲೀಸ್ ಸೂಪರೇಂಟರೇ ಮೊದಲಾದವರು ಸಮರಾತ್ರಿಯಲ್ಲಿ ಗಸ್ತು ಬಂದಾಗ ಈ ಸಂಗತಿ ಪತ್ತೆಯಾದದ್ದರಿಂದ ನೂರಾರು ಮಂದಿಯನ್ನ ದಸ್ತಗಿರಮಾಡಿ, ಈಗ ಅವರ ಮೇಲೆ ಮೊಕದ್ದಮೆ ತಂದಿದಾರೆ.

ಈ ತಿಂಗಳ ೧೫, ೧೬, ೧೭ ನೇ ತಾರೀಖುಗಳಲ್ಲಿ ಗೋದಾವರಿ ಜಿಲ್ಲೆಗೆ ಸೇರಿದ ಕಾಕಿನಾಡಾ ಪಟ್ಟಣದಲ್ಲಿ ಗೋಶಾಲೆಗಳ ಮತ್ತು ವ್ಯವಸಾಯದ ಪ್ರದರ್ಶನ ನಡೆಯುವುದು ಸರ್ಕಾರದವರ ಸಹಾಯವನ್ನ ಪಡೆದು ಅಲ್ಲಿನ ದೊಡ್ಡ ಮನುಷ್ಯರು ಈ ಪ್ರದರ್ಶನವನ್ನ ನಡಿಸಿ, ಉತ್ಕೃಷ್ಟವಾದ ದನಗಳಿಗೂ, ವ್ಯವಸಾಯೋಪಕರಣಗಳಿಗೂ, ಧಾನ್ಯಾದಿ ಬೆಳೆಗಳಿಗೂ ಮೊದಲಾಗಿನ್ನೂ ದ್ರವ್ಯ ರೂಪವಾದ ಬಹುಮಾನಗಳನ್ನೂ ಕೊಡುವವರಾಗಿದಾರೆಂದು ಪ್ರಕಟವಾಗಿದೆ

***

ಕಲ್ಕತ್ತಾ ಪಟ್ಟಣದಲ್ಲಿ ಮೆ॥ ಜಾರ್ಜ್ ಡೇಕ್ ಎಂಬೊಬ್ಬ ಏಜೆಂಟ್ ನಡಿಸುವ ರೈಲ್ವೆ ನೌಕರನು ೧೯೦೫ನೇ ಇಸವಿಯಲ್ಲಿ ಒಬ್ಬ ಹೆಂಗಸನ್ನು ಮದುವೆಯಾದನು ಒಂದು ವರುಷವಾದ ಮೇಲೆ ಅವಳಿಗೆ ಹುಚ್ಚು ಹಿಡಿದು, ಆ ಬಗಾಯಿತು ಆಸ್ಪತ್ರೆಯಲ್ಲೇ ಇದ್ದುಕೊಂಡಿದಾಳೆ ಡಾಕ್ಟರುಗಳು ಅವಳಿಗೆ ಬುದ್ಧಿ ಸ್ಥಿಮಿತವಾಗಲಾರದೆಂತಲೇ ಅಭಿಪ್ರಾಯಪಟ್ಟರು ಇದರ ಮೇಲೆ ಆಕೆಯ ಗಂಡನು ಹೈಕೋರ್ಟಿನಲ್ಲಿ ಅರ್ಜಿ ದಾಖಲ್ ಮಾಡಿ, ವಿವಾಹ ಸಂಬಂಧವನ್ನು ಕಡಿದುಕೊಂಡುಬಿಟ್ಟನು

***

ಆಸ್ಸಾಂ ಬಂಗಾಳಾ ರೈಲ್ವೆ ಲೈನಿನಲ್ಲಿ ಕಳ್ಳರು ಗಾಡಿಗಳೊಳಗೆ ನುಗ್ಗಿ ಪ್ರಯಾಣಿಕರ ಹಣ ಕಾಸು ಒಡವೆ ಬಟ್ಟೆ ಮುಂತಾದವುಗಳನ್ನು ಕಳವುಮಾಡಿಕೊಂಡು ಹೋಗುತ್ತಿದ್ದರು ಪೋಲೀಸ್ ಸೂಪರೇಂಟರೂ ಇನ್ಸ್‌ಪೆಕ್ಟರೂ ಸಬ್ ಇನ್ಸ್‌ಪೆಕ್ಟರೂ ಕೆಲವು ಕಾಲದಿಂದ ಅವರನ್ನು ಹಿಡಿಯಬೇಕೆಂದು ನಾನಾ ಪ್ರಯತ್ನಗಳನ್ನು ಮಾಡುತ್ತಾ ಬಂದದ್ದರಲ್ಲಿ ಆ ಕಳ್ಳರ ಪೈಕಿ ೧೫ ಮಂದಿ ಸಿಕ್ಕಿಬಿದ್ದರು ಅವರನ್ನು ಶೋಧನೆ ಮಾಡಿದಾಗ ಕಳವಿನ ಮಾಲುಗಳು ಸುಮಾರು ಸಾವಿರಾರು ರೂಪಾಯಿನಷ್ಟು ಸಿಕ್ಕಿದವು ಅವರ ಮೇಲೆ ಮೊಕದ್ದಮೆ ಮಾಡಿದಾರೆ

***

ಈಚೆಗೆ ಪ್ಲೇಗ್ ಉಪದ್ರದಲ್ಲಿ ಜನರು ಮೃತಪಡುವುದು ವಾರವಾರಕ್ಕೆ ಹೆಚ್ಚುತ್ತಾ ಬಂದಿದೆ ಹಿಂದಿನ ವಾರ ಈ ರಾಷ್ಟ್ರದಲ್ಲೆಲ್ಲಾ ಒಟ್ಟು ೮,೦೯೯ ಜನರಿಗೆ ಆ ಉಪದ್ರ ತಗಲಿದ್ದರಲ್ಲಿ ೬,೧೯೦ ಜನರು ಕಾಲವಾಗಿರುತ್ತಾರೆ ಈ ಪೈಕಿ ಬೊಂಬಾಯಿ ಆಧಿಪತ್ಯದೊಳಗೆ ೪೦೬, ಸಂಯುಕ್ತ ಆಧಿಪತ್ಯ ೫,೨೩, ಪಂಜಾಬ್ ೩೯೧, ಮೈಸೂರು ಸಂಸ್ಥಾನ ೬೧೧, ಬಂಗಾಳಾ ೬೦೪, ಬರ್ಮಾ ೩೨೯, ಮಧ್ಯಪ್ರಾಂತ್ಯಗಳು ಮತ್ತು ಬೀರಾರ್ ೧೦೪, ರಾಜಪುತಾನಾ ೧೨೧, ಹೈದರಾಬಾದ್ ಸಂಸ್ಥಾನ ೫೭, ಮಧ್ಯ ಇಂಡಿಯಾ ೨೫, ವಾಯುವ್ಯ ಸರಹದ್ದಿನ ಪ್ರಾಂತ್ಯ ೧, ಈ ರೀತಿ ಮರಣಗಳಾಗಿವೆ

***

ಸಂಯುಕ್ತ ಆಧಿಪತ್ಯಗಳಲ್ಲಿ ಕ್ಷಾಮನಿವಾರಣೆಗೋಸ್ಕರ ಆ ಇಲಾಖೆಯ ನೌಕರನಿಗೆ ೫,೦೦೦ ರೂಪಾಯಿನ ಚೆಕ್ಕನ್ನು ಕೊಟ್ಟು, ಆದಕ್ಕೆ ಬ್ಯಾಂಕಿನಲ್ಲಿ ಹಣ ತೆಗೆದುಕೊಂಡು ಬಂದು, ಕ್ಷಾಮಪೀಡಿತರ ಅನ್ನೋದಕಗಳಿಗೆ ವಿನಿಯೋಗಿಸಬೇಕೆಂದು ಸರ್ಕಾರದ ಹುಕುಂ ಆಯಿತು ವಾಲ್ಟರ್ ಲೂಕರ್ ಎಂಬ ನೌಕರನು ಆ ಚೆಕ್ಕನ್ನು ಬ್ಯಾಂಕಿನಲ್ಲಿ ಮುರಿಸಿ, ಹಣ ತೆಗೆದುಕೊಂಡು ಪರಾರಿಯಾದನು ಈಗ ಅವನನ್ನು ಪೋಲೀಸಿನವರು ಗೋಂಡಾ ಸ್ಟೇಷನ್ನಿನಲ್ಲಿ ಪತ್ತೆಮಾಡಿ ಹಿಡಿದರು ಅವನ ಸಹಪಾಠಿಯಾಗಿದ್ದ ಮೆಕ್ ಡರ್ಮಟ್ ಎಂಬುವನು ಸಿಕ್ಕಿಲ್ಲ ಇವನು ಬೆಂಗಳೂರಿಗೆ ಬಂದಿರುವುದಾಗಿ ವರ್ತಮಾನವಿದೆ

***

ಅಫ್ಘಾನಿಸ್ಥಾನದ ಅಮೀರರವರು ಇನ್ನೂ ತಮ್ಮ ರಾಜಧಾನಿಯಾದ ಕಾಬೂಲ್ ನಗರದಲ್ಲೇ ಇರುತ್ತಾರೆ ಜಲಾಲಾಬಾದಿಗೆ ಅವರು ಇನ್ನೂ ಪ್ರಯಾಣ ಮಾಡಲಿಲ್ಲ ಕಾಬೂಲ್ ನಗರದಲ್ಲಿ ಈಗ ದೊಡ್ಡಮ್ಮನೂ ಸಿಡುಬೂ ಬಹಳ ಪ್ರಬಲವಾಗಿರುವುದು ಅಮೀರರ ಹೆಣ್ಣುಮಕ್ಕಳಿಗೂ ಸಿಡುಬು ಎದ್ದಿತ್ತು ಆದರೆ ಗುಣವಾಗಿದೆ ಆದರೆ ನಸ್ರುಲ್ಲಾ ಖಾನರವರ ಮೂರು ಜನ ಮಕ್ಕಳು ಆ ರೋಗದಲ್ಲಿ ಸತ್ತು ಹೋದರು ಕಾಬೂಲಿನಲ್ಲಿರುವ ಯೂರೋಪಿಯನ್ ಗಂಡಸರಿಗೂ ಹೆಂಗಸರಿಗೂ ಮಕ್ಕಳಿಗೂ ಸಿಡುಬು ಹಾಕುತ್ತಿದೆ ೪೬ ಮಂದಿ ಕಾಲವಾದರೆಂದು ತಿಳಿಯುವುದು ನಸ್ರುಲ್ಲಾ ಖಾನರಿಗೂ ಸಿಡುಬು ಆಗಿ ಈಗೀಗ ಗುಣವಾಗುತ್ತಿದೆ

***

ಲಾಹೋರ್ ಪಟ್ಟಣದ ಮ್ಯುನಿಸಿಪಾಲಿಟಿಯವರು ಸಾಲೀಯಾನಾ ಶೇಕಡಾ ೫ ರೂಪಾಯಿ ಬಡ್ಡಿ ಕೊಡುವ ೧೫ ಲಕ್ಷ ರೂಪಾಯಿನ ಪತ್ರಗಳನ್ನು ಬಿಕರಿ ಮಾಡಿ, ಇದರಿಂದ ಬರುವ ಸಾಲದ ಹಣದಲ್ಲಿ ಆ ಪಟ್ಟಣದಲ್ಲಿ ಬಚ್ಚಲು ಚರಂಡಿಗಳನ್ನು ಕಟ್ಟುವುದಕ್ಕೆ ೬॥ ಲಕ್ಷ, ಸಾಯರ್ ಕಟ್ಟೆಗೆ ೨ ಲಕ್ಷವೂ ೧೪ ಸಾವಿರ, ಮಾರ್ಕೆಟ್ಟುಗಳಿಗೆ ೨ ಲಕ್ಷ, ಭಾವಿ ಮತ್ತು ಇತರಗಳಿಗೆ ೧॥ ಲಕ್ಷ, ರಸ್ತೆ ಮತ್ತು ಗಲ್ಲಿಗಳಿಗೆ ೧ ಲಕ್ಷವೂ ೬೪ ಸಾವಿರ, ರಸ್ತೆಗಳನ್ನು ಅಗಲವಾಗಿ ಮಾಡುವುದಕ್ಕೆ ೧ ಲಕ್ಷ, ಬೆಂಕಿಯನ್ನು ಆರಿಸುವ ಸಲಕರಣೆಗಳಿಗೆ ೬೫ ಸಾವಿರ, ವಿದ್ಯುಚ್ಛಕ್ತಿಯ ದೀಪಗಳಿಗೆ ೬೦ ಸಾವಿರ, ಹೀಗೆ ಪುರಾಭಿವೃದ್ಧಿಯ ಕಾರ್ಯಗಳಿಗೆ ವಿನಿಯೋಗಿಸಿಕೊಳ್ಳುವವರಾಗಿದಾರೆ

***

ಕಪೂರ್‌ಥಾಲ ಸಂಸ್ಥಾನದ ಮಹಾರಾಜರವರು ಸ್ಪೆಯಿನ್ ರಾಜ್ಯಕ್ಕೆ ಸೇರಿದ ಮಲಗಾ ಪಟ್ಟಣದ ಸೆನೋರಿತ ಅನಿತ ಡೆಲ್ಗಾಡೋ ಎಂಬ ಸುಂದರಸ್ತ್ರೀಯನ್ನು ವರಿಸಿ ಎರಡು ವಾರಗಳ ಕೆಳಗೆ ಮದುವೆ ಮಾಡಿಕೊಂಡರು ವಿಲ್ಲಾ ಬುಯೋನಾ ವಿಸ್ತಾ ಎಂಬ ಸ್ಥಳದಲ್ಲಿ ವಿವಾಹವು ಸಿಕ್ಕರ ಮತಪದ್ಧತಿಗೆ ಅನುಸಾರವಾಗಿ ಜರುಗಿಸಲ್ಪಟ್ಟಿತು ಈ ಯುವತಿಯು ಬಹಳ ಸೌಂದರ್ಯವಂತಳೆಂದೂ, ವಿವಾಹಕಾಲದಲ್ಲಿ ಆಕೆಯು ಜರತಾರಿ ಕಿಂಕಾಪು ಸೀರೆ ಕುಪ್ಪಸಗಳನ್ನು ಉಟ್ಟು ತೊಟ್ಟು, ಮಹಾ ಪ್ರಕಾಶಮಾನವಾದ ನವರತ್ನಖಚಿತವಾದ ಆಭರಣಗಳನ್ನು ಧರಿಸಿಕೊಂಡಿದ್ದಳೆಂತಲೂ, ಈ ವಿವಾಹವು ಅಲ್ಲಿನ ಜನರಲ್ಲೆಲ್ಲಾ ತುಂಬಾ ಆನಂದಕರವಾಗಿ ನೆರವೇರಿತೆಂತಲೂ ತಿಳಿದುಬಂದಿದೆ

ಕುಂಭಕೋಣದಲ್ಲಿ ಊರಿನ ಸುಮಾರು ಎರಡು ಮೈಲಿ ದೂರದಲ್ಲಿ ಪ್ರಸಿದ್ಧವಾದ ಒಂದು ದೇವಸ್ಥಾನವು ಶಿಥಿಲವಾಗಿತ್ತು. ನಾಟುಕೋಟೆ ಶೆಟ್ಟಿಗಳು ಸುಮಾರು ೧೫ ಲಕ್ಷ ರೂಪಾಯಿ ಖರ್ಚುಮಾಡಿ, ಅದನ್ನು ಈಗ ತಾನೇ ಜೀರ್ಣೋದ್ಧಾರ ಮಾಡಿದಾರೆ. ಈ ದಿನ ಆ ದೇವಸ್ಥಾನದಲ್ಲಿ ಕುಂಭಾಭಿಷೇಕವೆಂಬ ಪ್ರತಿಷ್ಠಾ ಕಾರ್ಯಗಳು ನಡೆಯುವವು. ಅಲ್ಲಿಗೆ ಶ್ರೀ ಶಂಕರಾಚಾರ್ಯರೂ ಶ್ರೀ ಶೃಂಗೇರಿಸ್ವಾಮಿಗಳೂ ಹೋಗುವರು. ಸುಮಾರು ಒಂದು ಲಕ್ಷ ಬ್ರಾಹ್ಮಣ್ಯವು ಅಲ್ಲಿ ಸೇರುತ್ತದೆಯಂತಲೂ, ಈ ಪ್ರತಿಷ್ಠಾ ಕಾರ್ಯಗಳಿಗೆ ಒಂದು ಲಕ್ಷ ರೂಪಾಯಿ ತಗಲಬಹುದೆಂತಲೂ ಪ್ರಕಟವಾಗಿದೆ. ಇದಕ್ಕೋಸ್ಕರ ಜನರು ಅಲ್ಲಿಗೆ ಹೋಗಿಬರಲು ಅನುಕೂಲಿಸುವಂತೆ ರೈಲ್ವೆ ಕಂಪನಿಯವರು ರಿಟರ್ನ್ ಟಿಕೇಟುಗಳನ್ನು ಕೊಟ್ಟಿರುತ್ತಾರೆ.

***

ದಕ್ಷಿಣ ದೇಶದಲ್ಲಿ ಕೆಲವು ಮಂದಿ ಸೇರಿ ಹಣಕಾಸಿ ಮೂಳೆ ಗೊರಸುಗಳನ್ನು ಜಮಾಯಿಸಿ, ಜರ್ಮನಿಗೆ ಸಾಗಿಸಿ ಲಾಭಸಂಪಾದಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಇದುವರೆಗೆ ಕೊಲಂಬೋದಲ್ಲೂ, ಟುಟಿಕೋರಿನಲ್ಲೂ, ಕೊಚ್ಚಿಯಲ್ಲೂ ಅವರು ಕೂಡಿಸಿದ ಆ ಗೊಬ್ಬರವು ರಾಶಿರಾಶಿಯಾಗಿ ಬಿದ್ದಿವೆ. ಹಡಗುಗಳಲ್ಲಿ ಸಾಗಿಸೋಣವೆಂದರೆ ಅದಕ್ಕೆ ಬೆಂಕಿ ಹತ್ತಿ ಎಲ್ಲಿ ಅನಾಹುತವಾಗುವುದೋ ಎಂದು ಹೆದರಿ ಯಾವ ಹಡಗಿನವರೂ ಒಪ್ಪುವುದಿಲ್ಲ. ಇದನ್ನು ಜಮಾಯಿಸುವುದಕ್ಕೆ ಅವರಿಗೆ ೭೫,೦೦೦ ರೂಪಾಯಿಗಿಂತಲೂ ಹೆಚ್ಚಾಗಿ ಖರ್ಚಾಗಿರುವುದು. ಇದು ಸಾಗಿಹೋಗದ ಪಕ್ಷದಲ್ಲಿ ಅವರು ಕೆಟ್ಟುಹೋದಾರೆನ್ನುವುದಕ್ಕೆ ಸಂಶಯವಿಲ್ಲ. ಟುಟಿಕೋರಿನ ಒಂದು ಕಂಪನಿಯವರು ಜರ್ಮನಿಯಿಂದಲೇ ಹಡಗನ್ನು ತರಿಸಿ ಅದನ್ನು ಅಲ್ಲಿಗೆ ರವಾನೆ ಮಾಡುವುದಕ್ಕೆ ಪ್ರಯತ್ನಪಟ್ಟಿರುವದಾಗಿ ತಿಳಿಯುವುದು.

***

ನಮ್ಮ ದೇಶದ ನೆಯ್ಗೆ ಕಸಬನ್ನು ಅಭಿವೃದ್ಧಿ ಪಡಿಸಬೇಕೆಂದು ಮದರಾಸ್ ಪಟ್ಟಣದಲ್ಲಿ ಕೆಲವು ದೇಶೀಯ ದೊಡ್ಡ ಮನುಷ್ಯರು ಮಗ್ಗಗಳ ಪ್ರದರ್ಶನವನ್ನು ಅಲ್ಲಿನ ಸ್ಕೂಲ್ ಆಫ್ ಆರ್ಟ್ಸ್ ಎಂಬ ಪಾಠಶಾಲೆಯೊಳಗೆ ಈ ತಿಂಗಳು ೬ರಿಂದ ೨೫ರ ವರೆಗೆ ನಡೆಸುವರು. ಉತ್ಕೃಷ್ಟವಾದ ಮತ್ತು ಸುಲಭವಾಗಿರುವ ಕೈ ಮಗ್ಗಗಳೂ ಇನ್ನಿತರ ವಸ್ತುಗಳೂ ಪ್ರದರ್ಶನ ಮಾಡಲ್ಪಡುವವು. ಉತ್ಕೃಷ್ಟವಾಗಿ ನೆಯ್ದವರಿಗೆ ಬಹುಮಾನಗಳನ್ನು ಕೊಡುತ್ತಾರೆ. ತರುವಾಯ ಮಾರ್ಚಿ ೫ರಿಂದ ಅದೇ ಪಾಠಶಾಲೆಯಲ್ಲಿ ಒಂದು ಸಭೆ ನಡೆಯುವುದು. ನೆಯ್ಗೆಯನ್ನು ಅಭಿವೃದ್ಧಿಗೆ ತರುವುದಕ್ಕೆ ಅವಶ್ಯವಾದಂಥಾ ವಿಷಯಗಳನ್ನು ಆ ಸಭೆಯಲ್ಲಿ ಚರ್ಚೆ ಮಾಡಿ, ಗೊತ್ತು ಮಾಡುವುದಲ್ಲದೆ ನೆಯ್ಗೆಯವರಿಗೆ ಹೊಸ ಕ್ರಮಗಳನ್ನು ಅಲ್ಲಲ್ಲಿ ಕಲಿಸಿ ಕೊಡುವುದಕ್ಕೂ ಅವರಿಗೆ ದ್ರವ್ಯವೇ ಮೊದಲಾದದ್ದನ್ನು ಕೊಟ್ಟು ಪ್ರೋತ್ಸಾಹ ಪಡಿಸುವುದಕ್ಕೂ ಏರ್ಪಾಡು ಮಾಡುವರೆಂದು ತಿಳಿಯುವುದು.

***

ಇಂದೋರ್ ಸಂಸ್ಥಾನದ ಹೋಲ್ಕಾರ್ ಮಹಾರಾಜರವರು ಬಾಲ್ಯವಯಸ್ಸಿನವರಾದುದರಿಂದ ರೀಜೆನ್ಸಿ ಕೌನ್ಸಿಲ್ ಸಭೆಯವರು ಆ ಸಂಸ್ಥಾನದ ಕಾರಬಾರುಗಳನ್ನು ನಡಿಸುತ್ತಿದ್ದಾರೆ. ಈಗ ಈ ಕೌನ್ಸಿಲ್ ಸಭೆಯ ಅಧಿಪತಿ ಇನಾಮದಾರರಾಗಿ ಆ ಸಂಸ್ಥಾನದ ಅಂಚೆ ಇಲಾಖೆಯನ್ನು ಇಂಪೀರಿಯಲ್ ಪೋಸ್ಟ್ ಇಲಾಖೆಯವರು ಮುಂದಿನ ಮಾರ್ಚಿ ೧ನೇ ತಾರೀಖು ವಹಿಸಿಕೊಳ್ಳುವರು. ಇದರಿಂದ ಅಂಚೆ ವಿಚಾರದಲ್ಲಿ ಅಲ್ಲಿನ ಪ್ರಜೆಗಳಿಗೆ ತುಂಬಾ ಅನುಕೂಲವಾಯಿತು. ಆದರೆ ಆ ಸಂಸ್ಥಾನದ ಒಳಾಗ್ರದಲ್ಲೇ ಜನರು ಕಾಗದ ಪತ್ರಗಳನ್ನು ಬರೆದುಕೊಳ್ಳುವ ಪಕ್ಷಕ್ಕೆ ಹೋಲ್ಕಾರ್ ಸರ್ಕಾರದವರು ಪ್ರಕಟಿಸುವ ಅಂಚೆ ಸ್ಟಾಂಪುಗಳನ್ನು ಇಟ್ಟು ಕಾಕಬಹುದು. ಆ ಸಂಸ್ಥಾನದಿಂದ ಹೊರಗಿನವರಿಗೆ ಅಲ್ಲಿನವರು ಕಾಗದ ಬರೆಯಬೇಕಾದರೆ ಇಂಪೀರಿಯಲ್ ಪೋಸ್ಟಿನ ಸ್ಟಾಂಪುಗಳನ್ನು ಹಚ್ಚಬೇಕಂತೆ ಏರ್ಪಾಡಾಗಿದೆ. ಈ ಏರ್ಪಾಡಿನಿಂದ ಆ ಸಂಸ್ಥಾನಕ್ಕೆ ಅಂಚೆ ಬಾಬಿನ ಉತ್ಪತ್ತಿಯು ಕಡಮೆಯಾಗಲಿಲ್ಲ. ಪ್ರಜೆಗಳಿಗೂ ಸಂಸ್ಥಾನಕ್ಕೂ ತುಂಬಾ ಸಹಾಯವಾಯಿತು.

***

ಪಾಟಿಯಾಲಾ ಸಂಸ್ಥಾನದ ಮಹಾರಾಜರವರು ಇನ್ನೂ ಚಿಕ್ಕವಯಸ್ಸಿನಲ್ಲಿರುವುದರಿಂದ ರೀಜೆನ್ಸಿ ಕೌನ್ಸಿಲ್ ಸಭೆಯವರು ಸಂಸ್ಥಾನವನ್ನು ಆಳುತ್ತಿದ್ದಾರೆ. ಈ ಕೌನ್ಸಿಲಿನಲ್ಲಿ ಮೆಂಬರಾಗಿದ್ದ ರಾಯಿ ಬಹದೂರ್ ಭಗವಾನ್ ದಾಸ್ ಎಂಬವರು ಕಾಲವಾದರು. ಅವರಸ್ಥಾನಕ್ಕೆ ನೇಮಕವಾದ ಸರ್ದಾರ್ ಗುರುದಿತ್ ಸಿಂಗ್‌ಯವರನ್ನು ಇಂಡಿಯಾ ಗವರ್ನಮೆಂಟಿನವರು ಮಹಾರಾಜರವರ ಗಾರ್ಡಿಯನ್ನಾಗಿ ನೇಮಿಸಿದಾರೆ. ಈ ಗುರುದಿತ್ ಸಿಂಗರು ಲೇಟ್ ಮಹಾರಾಜರವರ ವಜೀರರಾಗಿದ್ದರು. ಪೋಲೋ ಎಂಬ ಕುದುರೆ ಚೆಂಡಾಟದಲ್ಲಿ ಬಹಳ ನಿಪುಣರೆಂದು ಹೆಸರು ಪಡೆದಿದಾರೆ. ಇವರ ಅಸಿಸ್ಟೆಂಟರಾಗಿರುವ ಮಿ॥ ಮಿಸ್ತ್ರಿ ಎಂಬ ಪಾರ್ಸಿ ದೊಡ್ಡಮನುಷ್ಯರು ಕ್ರಿಕೆಟ್ ಎಂಬ ಚೆಂಡಾಟದಲ್ಲಿ ಗಟ್ಟಿಗರಾಗಿರುವರು. ಮಹಾರಾಜರು ಚಿಕ್ಕ ವಯಸ್ಸಿನವರಾದರೂ ತಮ್ಮ ತಂದೆಯಂತೆ ಆಟಗಳಲ್ಲಿ ಕುಶಲರಾಗಿರೋಣದರಿಂದ ಮೇಲ್ಕಂಡ ದೊಡ್ಡ ಮನುಷ್ಯರ ಸಹವಾಸದಲ್ಲಿ ಪೋಲೋ ಮತ್ತು ಕ್ರಿಕೆಟ್ ಎಂಬ ಚೆಂಡಾಟಗಳಲ್ಲಿ ನಿಪುಣತೆಯನ್ನು ಸಂಪಾದಿಸಿಕೊಂಡಾರೆನ್ನುವುದಕ್ಕೆ ಸಂಶಯವಿಲ್ಲ.

***

ಹಿಂದುಸ್ಥಾನದಲ್ಲಿ ಊರಿಂದೂರಿಗೆ ಜನರು ಅಂಗಡಿಗಳಿಂದ ತಮಗೆ ಬೇಕಾದ ಸಾಮಾನುಗಳನ್ನು ವಿ ಪಿ ಮೂಲಕ ತರಿಸಿಕೊಳ್ಳುವುದೂ, ಸಾಮಾನು ಬಂದ ನಂತರ ಅದರ ಕ್ರಯವನ್ನು ಪೋಸ್ಟ್ ಆಫೀಸಿಗೆ ಪಾವತಿ ಮಾಡುವುದೂ ಜಾರಿಯಲ್ಲಿ ನಡೆಯುತ್ತೆ. ಆದರೆ ವಿಲಾಯತಿಯಿಂದ ಈ ದೇಶದವರು ಸಾಮಾನ್ ತರಿಸಬೇಕಾದರೆ ಅದರ ಕ್ರಯವನ್ನು ಮೊದಲೇ ಅಲ್ಲಿಗೆ ಮನಿಆರ್ಡರು ಮಾಡಬೇಕಾಗಿರುವುದು. ಇದನ್ನು ತಪ್ಪಿಸಿ ಸೀಮೆಯಿಂದ ಪದಾರ್ಥಗಳನ್ನೂ ಸರಕುಗಳನ್ನೂ ವಿ ಪಿ ಮೂಲಕ ತರಿಸಿಕೊಳ್ಳುವಂತೆ ಏರ್ಪಾಡು ಮಾಡಿಕೊಡಬೇಕೆಂದು ಹಿಂದುಸ್ಥಾನದಲ್ಲಿ ಕೆಲವರು ಸರ್ಕಾರದವರನ್ನು ಕೇಳಿಕೊಂಡರು. ಸರ್ಕಾರದವರು ಈ ರೀತಿ ಜಾರಿಯಲ್ಲಿ ತರಬಹುದೇ ಎಂದು ಹಿಂದುಸ್ಥಾನದ ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವಂಥಾ ವರ್ತಕ ಮಂಡಲಿಯವರನ್ನು ಕೇಳಿದಾರೆ. ಕೆಲವು ಕಡೆಯ ವರ್ತಕರು ಈ ಹೊಸ ಪದ್ಧತಿಯನ್ನು ಜಾರಿಗೆ ತರಕೂಡದೆಂದು ಆಗಲೇ ಅಭಿಪ್ರಾಯಪಟ್ಟು ತಿಳಿಸಿರುವರು. ಉಳಿದವರೂ ಇದೇ ಅಭಿಪ್ರಾಯಪಡುವವರಾಗಿದಾರೆಂದು ಕಾಣುತ್ತಿದೆ.

***

ಕಾಶೀ ಪಟ್ಟಣದಲ್ಲಿ ಮಿಸೆಸ್ ಬೆಸೆಂಟ್ ಎಂಬ ಇಂಗ್ಲಿಷ್ ಸ್ತ್ರೀಯು ಸ್ಥಾಪಿಸಿ ನಡಿಸುತ್ತಿರುವ ಹಿಂದೂ ಕಾಲೇಜ್ ಎಂಬ ವಿದ್ಯಾಶಾಲೆಯು ಈಚೆಗೆ ತುಂಬಾ ಅಭಿವೃದ್ಧಿಯಾಗಿರುತ್ತದೆ. ಆ ವಿದ್ಯಾಶಾಲೆಯಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೋಸ್ಕರ ಒಂದು ಸರಸ್ವತೀ ಭಂಡಾರವನ್ನೂ ವಾಚಕ ಮಂದಿರವನ್ನೂ ಕಟ್ಟಿಸಿರುತ್ತಾರೆ. ಈ ವಾಚಕ ಸಂಘವನ್ನು ಪ್ರಾರಂಭಿಸುವಾಗ್ಗೆ ಕಳೆದ ವಾರ ಮಿಸೆಸ್ ಬೆಸೆಂಟ್ ಎಂಬಾಕೆಯು ಸಭಿಕರನ್ನು ಕುರಿತು ವಿದ್ಯಾ ವಿಷಯಕವಾದ ಒಂದು ಶ್ರೇಷ್ಠ ಉಪನ್ಯಾಸವನ್ನು ಮಾಡಿದರು. ಈಗ ಹಿಂದುಸ್ಥಾನದಲ್ಲಿ ಬಾಲಕರಿಗೆ ಎಲ್ಲೆಲ್ಲೂ ಪರದೇಶದ ವಿದ್ಯವನ್ನೂ ಅಭಿಪ್ರಾಯಗಳನ್ನೂ ಕಲಿಸುವುದೇ ಪ್ರಬಲವಾಗಿದೆ ಎಂತಲೂ, ಇದರಿಂದ ಇಲ್ಲಿನ ಹುಡುಗರಿಗೆ ಚಿಕ್ಕಂದಿನಿಂದಲೂ ರೋಮಾಪ್ರಾಂತ್ಯದ ಚರಿತ್ರೆ ಮೊದಲಾದವು ಚೆನ್ನಾಗಿ ತಿಳಿಯುವುದಕ್ಕೂ, ಅವರಲ್ಲಿ ಮಾತೃಸ್ಥಾನವಾದ ಈ ಭರತಖಂಡದ ವಿಷಯದಲ್ಲಿ ಏಕಾಭಿಪ್ರಾಯವೂ ಏಕವಾತ್ಸಲ್ಯವೂ ಹುಟ್ಟಿ ಬೆಳೆಯದೆ ಇರುವುದಕ್ಕೂ ಕಾರಣವಾಗಿದೆ ಎಂತಲೂ, ಇಲ್ಲಿನ ಬಾಲಕರಿಗೆ ತಮ್ಮ ದೇಶದ ಚರಿತ್ರೆ, ರಚನೆ, ಸ್ಥಿತಿಗತಿಗಳು ತಿಳಿದಿರುವುದಕ್ಕಿಂತಲೂ ಅನ್ಯದೇಶಗಳ ವಿಚಾರಗಳೇ ಹೆಚ್ಚಾಗಿ ತಿಳಿದಿವೆ ಎಂತಲೂ, ಆದಕಾರಣ ಈ ರಾಷ್ಟ್ರವು ಅಭಿವೃದ್ಧಿಗೆ ಬಾರದೆ ಕ್ಷೀಣ ಹೊಂದುತ್ತಿದೆಯಾದ್ದರಿಂದ ದೇಶವತ್ಸಲರು ಬಾಲಕರಿಗೆ ಅವಶ್ಯವಾದಂಥಾ ಚರಿತ್ರಾದಿಪುಸ್ತಕಗಳನ್ನು ಹೊಸರೀತಿಯಲ್ಲಿ ಬರೆದು ಪ್ರಚಾರಕ್ಕೆ ತರಬೇಕೆಂತಲೂ ಆಕೆ ತಿಳಿಸಿರುತ್ತಾರೆ.

***

ಸಂಯುಕ್ತ ಆಧಿಪತ್ಯಗಳ ಲೆಫ್ಟಿನೆಂಟ್ ಗವರ್ನರ್ ಸರ್ ಜಾರ್ಜ್ ಲ್ಯಾಟೌಷ್‌ಯವರು ಲಕ್ನೋ ಪಟ್ಟಣದಲ್ಲಿ ಒಂದು ಮಹಾ ಸಭೆಯನ್ನು ನಡಿಸಿ, ಆ ಆಧಿಪತ್ಯದಲ್ಲಿ ಕ್ಷಾಮ ಪ್ರಾಪ್ತವಾಗಿರೋಣದರಿಂದ ಅದರ ನಿವಾರಣೆಗಾಗಿ ಒಂದು ಧರ್ಮ ಫಂಡನ್ನು ಸ್ಥಾಪನೆಮಾಡಿ, ಚಂದಾ ಕೂಡಿಸಲಾರಂಭಿಸಿದಾರೆ. ಮೊದಲನೇ ದಿನವೇ ೧ ಲಕ್ಷವೂ ೬೦ ಸಾವಿರ ರೂಪಾಯಿ ಫಂಡಿಗೆ ವಸೂಲಾಯಿತು. ಇತ್ತಲಾಗಿ ವಿಲಾಯತಿಯಲ್ಲಿರುವ ಸರ್ ಜೇಂಸ್ ಬೂರ್ಡಿಲ್ಲಾನ್‌ರವರೇ ಮೊದಲಾದ ಕೆಲವು ದೊಡ್ಡ ಮನುಷ್ಯರು ಆ ದೇಶದಲ್ಲೂ ಚಂದಾ ಕೂಡಿಸಿ ಹಿಂದುಸ್ಥಾನಕ್ಕೆ ಕಳುಹಿಸಬೇಕೆಂದು ಸಾಹಸಪಡುತ್ತಿದಾರೆ. ಪಂಜಾಬಿನ ಹಿಂದೂ ಸಭೆಯವರು ಕ್ಷಾಮ ನಿವಾರಣೆಯ ಫಂಡನ್ನು ಪ್ರಾರಂಭಿಸಿ, ಧಾನ್ಯ ಗೋಧಿ ಹಿಟ್ಟು ಮುಂತಾದದ್ದನ್ನು ತರಿಸಿ ಬಡಬಗ್ಗರಿಗೆ ಅಗ್ಗವಾಗಿಯೂ, ಕ್ಷಾಮಪೀಡಿತರಿಗೆ ಧರ್ಮಾರ್ಥವಾಗಿಯೂ ಕೊಡುತ್ತಿದ್ದಾರೆ. ಹಿಂದುಸ್ಥಾನದ ಕ್ಷಾಮನಿವಾರಣಾರ್ಥವಾದ ಶಾಶ್ವತ ಧರ್ಮ ಫಂಡನ್ನು ಜಯಪುರದ ಮಹಾರಾಜರೂ ಇತರ ರಾಜರೂ ಸ್ಥಾಪಿಸಿರುತ್ತಾರಷ್ಟೆ. ಈ ಫಂಡಿನಲ್ಲಿ ೩೦ ಲಕ್ಷ ರೂಪಾಯಿ ಶೇಖರವಾಗಿರುತ್ತದೆ. ಇದರ ಬಡ್ಡಿಯನ್ನೂ ಕ್ಷಾಮನಿವಾರಣೆಗಾಗಿ ಸರ್ಕಾರದವರು ವಿನಿಯೋಗಿಸುತ್ತಿರುವರು. ಈಗ ಹಿಂದುಸ್ಥಾನದಲ್ಲೆಲ್ಲಾ ಒಟ್ಟು ೫,೩೬,೪೦೦ ಜನರು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದ್ದಾರೆ, ಅಂದರೆ, ಹೋದ ವಾರದ ಸಂಖ್ಯೆಗಿಂತಲೂ ೧ ಲಕ್ಷವೂ ೩೦ ಸಾವಿರ ಜನರು ಹೆಚ್ಚಾದರು. ಇತ್ತಲಾಗಿ ಬಂಗಾಳಾ ಗವರ್ನಮೆಂಟಿನವರು ಅಲ್ಲಿನ ಧಾರಣೆ ವಾಸಿಗಳು ಹೆಚ್ಚಿರೋಣದರಿಂದ ೩೦ ರೂಪಾಯಿನೊಳಗೆ ಸಂಬಳವುಳ್ಳಂಥಾ ಸರ್ಕಾರಿ ನೌಕರರಿಗೆಲ್ಲಾ ಕೆಲವು ತಿಂಗಳುಗಳವರೆಗೆ ೬-೫ ರೂಪಾಯಿಯಂತೆ ಅಲೌವೆನ್ಸು ಕೊಡಿಸುತ್ತಿದಾರೆ.

***

ಕಳೆದ ಡಿಸೆಂಬರ್ ತಿಂಗಳಲ್ಲಿ ನಡೆದ ಮದರಾಸ್ ಯೂನಿವರ್ಸಿಟಿ ವಿದ್ಯಾಸಂಘದ ಪರೀಕ್ಷೆಗಳ ಪೈಕಿ ಮೆಟ್ರಿಕ್ಯುಲೇಷನ್ ಪರೀಕ್ಷೆಯ ಫಲಿತಾಂಶವು ಇದುವರೆಗೂ ಪ್ರಕಟವಾಗದೆ ಇರುವುದಕ್ಕೆ ಕಾರಣವೇನೆಂದು ಮದರಾಸಿನ ಕೆಲವು ದೊಡ್ಡ ಮನುಷ್ಯರು ವಿಚಾರಿಸಿದರು. ಈ ಸಲ ಪರೀಕ್ಷೆಗೆ ಕಟ್ಟಿದ್ದ ಹುಡುಗರ ಪೈಕಿ ಬಹು ಜನರು ಚರಿತ್ರೆ ಮತ್ತು ಸೈನ್ಸ್ ಎಂಬೆರಡು ಭಾಗಗಳಲ್ಲೇ ಫೇಲಾಗಿದಾರೆಂತಲೂ, ಇಂಗ್ಲೀಷು, ಲೆಕ್ಕ, ಮಾತೃಭಾಷೆ, ಈ ಭಾಗಗಳಲ್ಲಿ ಶೇಕಡಾ ೫೦ಕ್ಕಿಂತಲೂ ಹೆಚ್ಚುಮಂದಿ ತೇರ್ಗಡೆಯಾಗಿದಾರೆಂತಲೂ ತಿಳಿದು ಬಂದಿತು. ಆದಕಾರಣ ಈ ಮೂರು ಭಾಗಗಳಲ್ಲಿ ತೇರ್ಗಡೆಯಾಗಿದ್ದರೆ ಸಾಕಾಗಿದೆ ಎಂತಲೂ, ಇಂಥವರ ಹೆಸರುಗಳನ್ನೆಲ್ಲಾ ಯೂನಿವರ್ಸಿಟಿಯವರು ಈ ಸಲ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪ್ಯಾಸಾಗಿರುವಂತೆ ಪ್ರಕಟಿಸಬೇಕೆಂತಲೂ, ಇಲ್ಲವಾದರೆ ವಿದ್ಯಾರ್ಥಿಗಳು ಮುಂದಕ್ಕೆ ವಿದ್ಯಾಭ್ಯಾಸಮಾಡಲು ಅಡಚಣೆಯಾಗುವುದೆಂತಲೂ, ಈ ವಿಚಾರಗಳನ್ನು ಸಿನೆಟ್ ಮೀಟಿಂಗಿನಲ್ಲಿ ಬೇಗನೆ ಗೊತ್ತು ಮಾಡದೆಹೋದರೆ ಯೂನಿವರ್ಸಿಟಿಯು ಬಹಳ ಹೆಸರುಗೆಡುವಂಥಾ ಸಂದರ್ಭವಾಗುವುದೆಂತಲೂ ಒಂದು ಅರ್ಜಿಯನ್ನು ಬರೆದು ವೈಸ್ ಛಾನ್ಸೆಲರ್ ಎಂಬ ಉಪಾಧ್ಯಕ್ಷರಿಗೆ ಕಳುಹಿಸಿದಾರೆ. ಈ ಅರ್ಜಿಗೆ ರುಜು ಮಾಡಿರುವ ಮದರಾಸ್ ಪಟ್ಟಣದ ದೊಡ್ಡ ಮನುಷ್ಯರ್ಯಾರೆಂದರೆ— ಮೆ॥ ಗಳಾದ ಅನಂತಶಯನದ ಮಾಜಿ ದಿವಾನ್ ಕೆ ಕೃಷ್ಣಸ್ವಾಮಿ ರಾಯರು, ಮಾಜಿ ಡೆಪ್ಯುಟಿ ಕಲೆಕ್ಟರ್ ಪಿ ಎಸ್ ಗಣಪತಿ ಐಯರ್, ಹೈಕೋರ್ಟ್ ವಕೀಲ್ ಎಲ್ ಎ ಗೋವಿಂದರಾಘವ ಐಯಂಗಾರ್, ರೆಜಿಸ್ಟ್ರೇಷನ್ ಇಲಾಖಾ ಮಾಜಿ ಇನ್ಸ್‌ಪೆಕ್ಟರ್ ಜನರಲ್ ಪಿ ರಾಜರತ್ನ ಮೊದಲಿಯಾರ್, ಹೈಕೋರ್ಟ್ ವಕೀಲ್ ಪಿ ಆನಂದಾಚಾರ್ಲು, ಪಚ್ಚೆಯಪ್ಪನವರ ಧರ್ಮ ಕರ್ತ ಪಿ ತ್ಯಾಗರಾಜ ಚೆಟ್ಟಿ, ಮೊದಲಾದವರು. ಸಿನೆಟ್ ಮೀಟಿಂಗು ನಾಳೆ ನಡಿಯುವುದಾಗಿದೆ.

ತಾಲ್ಲೋಕು ವರ್ತಮಾನಗಳು.

ತುಂಕೂರು.—ಬಿಸಲು ಕಾಯುತ್ತಾ ಇದೆ. ಪ್ಲೇಗ್ ರೋಗವು ಶಮನವಾಗಿ ಜನರು ತರಾತುರಿಯಿಂದ ಮನೆಗಳಿಗೆ ಡಿಸಿಂಫೆಕ್ಟ್ ಮಾಡಿಸಿಕೊಂಡು ವಾಸಕ್ಕೆ ಬರುತ್ತಿದಾರೆ. ಮಂಡಿಗಳೆಲ್ಲಾ ತೆರೆದು ವ್ಯಾಪಾರಕ್ಕೆ ಪ್ರಾರಂಭಿಸಿರುತ್ತಾರೆ. ಇನ್ನು ಒಂದು ತಿಂಗಳೊಳಗಾಗಿ ಊರು ಭರ್ತಿಯಾಗುವ ಸಂಭವವಿದೆ. ಹಾಲಿ ಡಿಸಿಂಫೆಕ್ಟ್ ಮಾಡಿಸಲು ಸರ್ಕಾರದ ತರಫ್ ಸಿಬ್ಬಂದಿ ಏರ್ಪಾಡು ಮಾಡಿದಾರೆ. ಈ ಸಂದರ್ಭದಲ್ಲಿ ಆ ಸಿಬ್ಬಂದಿಯವರು ಡಿಸಿಂಫೆಕ್ಟ್ ಮಾಡುವುದೇ ಆಗಲಿ, ಮಾಡಿದ ಮನೆಗಳಿಗೆ ಗುರುತು ಮಾಡುವದೇ ಆಗಲಿ ಕಾಲಕ್ಕೆ ಸರಿಯಾಗಿ ಮಾಡಿಕೊಡುವದೇ ಅಪರೂಪ. ಹೊರಗಡೆ ಷೆಡ್ಡಿನಲ್ಲಿರುವ ಜನರು ಮನೆ ಶುದ್ಧಿ ಮಾಡಿಸಲು ಬೆಳಗಿನಿಂದ ಸಾಯಂಕಾಲದ ವರೆಗೂ ನಿಷ್ಪ್ರಯೋಜನವಾಗಿ ಕಾದು ಹೋಗುತ್ತಿದಾರೆ. ಇದರಲ್ಲೂ ವಾಸಕ್ಕೆ ಚೀಟಿ ಪಡೆಯಲು ಸ್ವಲ್ಪವು ಕಷ್ಟವಾದರೂ ರುಸುಂ ಕೊಡಬೇಕಾಗಿದೆಯಂತೆ. ಇದು ಯಾವ ದಂಡವೋ ನಾವರಿಯೆವು. ಈ ವಿಷಯವಾಗಿ ಮೇಲ್ಪಟ್ಟ ಅಧಿಕಾರಿಗಳು ಸರಿಯಾಗಿ ವಿಚಾರಿಸಿ, ಪ್ರಜೆಗಳ ಅನುಕೂಲವನ್ನು ಲಕ್ಷಿಸುವವರಾಗಲಿ ಎಂದು ಕೋರುತ್ತೇವೆ.—ಹೋದ ವಾರ ಇಲ್ಲಿಗೆ ನಮ್ಮ ಸಂಸ್ಥಾನದ ಸೀನಿಯರ್ ಕೌನ್ಸಿಲರ್ ಮೆ॥ ಆನಂದರಾಯರವರು ದಯಮಾಡಿಸಿ, ಎರಡು ದಿನ ಇಲ್ಲಿ ಇದ್ದು, ಮುಂದಕ್ಕೆ ದಯಮಾಡಿಸಿದರು.—ಹೋದ ವಾರ ಇಲ್ಲಿನ ಜನರಲ್ಲಿ ಮಾತುಬಾರಿಗಳಿಯೂ ಪ್ರಜಾಪ್ರತಿನಿಧಿ ಸಭೆಯ ಮೆಂಬರಾಯೂ ಇದ್ದ ಪಾವುದ್ ಖಾನ್ ಸಾಹೇಬರ ಒಬ್ಬನೊಂದು ಕ್ರಿಮಿನಲ್ ಮೊಕದ್ದಮೆಗೆ ಗುರಿಯಾಗಿ ಮೂರು ವಾರ ಕೆಲಸ ಸಜಾವು ಅಮಲ್ದಾರ್ರ ಕೋರ್ಟಿನಲ್ಲಿ ಆಯಿತು. ಮಾರನೇ ದಿವಸ ೪೦೦ ರೂಪಾಯಿ ಜಾಮೀನಿನ ಮೇಲೆ ಖುಲಾಸು ಮಾಡಿರುತ್ತಾರೆ. ಮೊಕದ್ದಮೆ ಅಪೀಲಾಗಿ ಮೇಲಣ ಕೋರ್ಟಿನಲ್ಲಿ ನಡಿಯುತ್ತಿದೆ. ಫಲಿತಾಂಶ ಮುಂದೆ ತಿಳಿಯಬೇಕು.—ಈಗ ಹೊರಗಡೆ ಗುಡಿಸಲುಗಳಲ್ಲಿ ಕಳ್ಳತನವೂ ದನಗಳನ್ನು ಹಿಡಿದುಕೊಂಡು ಹೋಗಿ ಕೊಲ್ಲುವದೂ ಶುರುವಾಗಿದೆ.

ಚಿತ್ರದುರ್ಗ.—ಧಾರಣೆ ವಾಸಿಗಳು ಇತರ ಕಡೆ ಜಾಸ್ತಿಯಾಗಿರುವಂತೆ ಇಲ್ಲಿ ಸಹ ಜೀವನೋಪಾಯಕ್ಕೆ ಅತ್ಯಗತ್ಯವಾದ ರಾಗಿ, ಅಕ್ಕಿ, ಜೋಳ ಮೊದಲಾದ ಜಿನಸಿಗಳು ಬಹಳ ಪ್ರಿಯವಾಗಿ ಮಾರಲ್ಪಡುತ್ತಲಿವೆ. ಬಿಸಲಿನ ಝಳವಂತೂ ಸಹಿಸಲಿಕ್ಕೆ ಕಷ್ಟವಾಗಿದೆ.—ಸೀಮೆ ಎಣ್ಣೆ ಡಬ್ಬದ ಹತ್ತಿರ ಉರಿಯುತ್ತಿರುವ ಬುಡ್ಡಿ ದೀಪಕ್ಕೆ ಆರಿಸದೆ ಎಣ್ಣೆ ಹೊಯ್ಯುತ್ತಿದ್ದವರಿಗೆ ಎಣ್ಣೆ ಡಬ್ಬವೆಲ್ಲಾ ಹತ್ತಿಕೊಂಡು ಅಪಾಯ ತೆಗೆದುಕೊಂಡಿತೆಂದು ವರ್ತಮಾನ ಹುಟ್ಟಿದೆ. ಈ ಎಣ್ಣೆ ದೀಪಗಳನ್ನು ಉರಿಸುವವರು ಬಹಳ ಎಚ್ಚರಿಕೆಯಿಂದ ದೀಪಗಳನ್ನು ಆರಿಸಿಯೇ ಎಣ್ಣೆಯನ್ನು ಹಾಕಬೇಕೆಂದು ಈಗಲಾದರೂ ಕಲಿತುಕೊಳ್ಳಬಾರದೇ? ಕಳೆದ ಶನಿವಾರ ಬೆಂಗಳೂರು ಮುಖವಾಗಿ ಇಂಗ್ಲೀಷ್ ಸೋಜರುಗಳ ಒಂದು ಚಿಕ್ಕ ಲಷ್ಕರ್ ಇಲ್ಲಿ ಬಂದಿಳಿದಿದ್ದು, ಭಾನುವಾರ ಬೆಳಿಗ್ಗೆ ದಾವಣಗೆರೆ ಕಡೆ ಹೊರಟು ಹೋಯಿತು.—ಮ್ಯುನಿಸಿಪಾಲಿಟಿ ವಿಚಾರದಲ್ಲಿ ಯಾರಿಗೆ ಹೇಳಿಕೊಂಡರೂ ಗ್ರಾಮ ಶುಚಿತ್ವ, ಪಾನಾರ್ಹವಾದ ನೀರಿನ ನಲ್ಲಿಗಳ ಬಳಿ ಕೊಳೆಬಟ್ಟೆ ಒಗೆಯುವದೇ ಮುಂತಾದ ಅಸಹ್ಯ, ರಾತ್ರಿವೇಳೆಯಲ್ಲಿ ಅತ್ಯಾವಶ್ಯವಾದ ಲಾಂದ್ರಗಳನ್ನಿಡುವದು, ಸಣ್ಣ ಸಣ್ಣ ಗಲ್ಲಿಗಳಲ್ಲಿರುವ ಕಸರು ಸಾಗಿಸುವದು ಮುಂತಾದ ಅವಶ್ಯಕವಾದ ಕೆಲಸಗಳು ಸಲೀಸಾಗಿ ನಡಿಯುವದಿಲ್ಲ. ಸುಮ್ಮನಿರಬೇಕೇ ಹೊರತು ಬೇರೆ ಪ್ರಯೋಜನವಿಲ್ಲ.—ಇಲ್ಲಿ ಹನುಮಂತರಾಯರವರಿಂದ ಸ್ಥಾಪಿತವಾಗಿ ನಡಿಸಲ್ಪಡುತ್ತಿರುವ ಒಕ್ಕಲಿಗರ ಮಕ್ಕಳ ವಿದ್ಯಾರ್ಥಿನಿಲಯವು ದಿನೇ ದಿನೇ ಅಭಿವೃದ್ಧಿಯಾಗುತ್ತಿರುವದು ಸಂತೋಷವೇ. ಆದರೆ ಹನುಮಂತರಾಯರವರಿಗೆ ಈ ನಿಲಯದ ಕಾರ್ಯಕರ್ತಿಗಳು ಸಲೀಸಾಗಿ ನಡೆಯುವಂತೆ ಇಲ್ಲಿನ ಎ ವಿ ಸ್ಕೂಲಿಗೆ ಮಂಜೂರಿಯಿಸಿ ಕೊಡಬೇಕೆಂದು ಸರ್ಕಲ್ ಇನ್ಸ್‌ಪೆಕ್ಟರಿಗೂ, ಇನ್ಸ್‌ಪೆಕ್ಟರ್ ಜನರಲ್ ರವರಿಗೂ ಅರ್ಜಿ ಬರೆದು ಕೊಂಡಿದ್ದಾಗ್ಯೂ ಇನ್ನೂ ಅವರು ಆ ರೀತಿ ನಡಿಸಿಕೊಡದೆ ಇರುವದು ಅನಾನುಕೂಲವಾಗಿದೆ.

ದಾವಣಗೆರೆ.—ದಾವಣಗೆರೆ ತಾಲ್ಲೋಕು ಕರೂರು ಗ್ರಾಮದ ಪಟೇಲ್ ದ್ಯಾಮಪ್ಪನವರ ಕ್ಯಾಂಪಿಗೆ ತಾ. ೨೭ನೇ ಬುಧವಾರ ಮಧ್ಯಾಹ್ನ ಸುಮಾರು ೩ ಘಂಟೆ ಸಮಯದಲ್ಲಿ ಆಕಸ್ಮಾತ್ ಬೆಂಕಿ ತಗಲಿತು. ಮನೆಯಲ್ಲಿ ಇದ್ದರು ಹೆಂಗಸರು ಹೊರಗೆ ಅಕ್ಕಿಯನ್ನು ಕುಟ್ಟುತ್ತಿದ್ದರು. ಒಂದು ಸಣ್ಣ ಹುಡುಗಿಯು ಉರಿಯನ್ನು ನೋಡಿ ತಾಯಿಗೆ ಹೇಳಿತು. ಕೂಡಲೇ ಪಡಸಿ ಹೆಂಗಸರು ನೋಡಿ ಗದ್ದಲ ಮಾಡಿದರು. ಜನಗಳೆಲ್ಲಾ ಕೂಡುವ ಹೊತ್ತಿಗೆ ಅರ್ಧ ಕ್ಯಾಂಪು ಸುಟ್ಟಿತ್ತು. ನೀರು ತಂದು ಆರಿಸಬೇಕೆಂದರೆ ಭಾವಿಯು ದೂರದಲ್ಲಿರುವುದರಿಂದ ಅದೂ ಸಾಗಲಿಲ್ಲ. ಮನೆಯಲ್ಲಿನ ಸಾಮಾನನ್ನು ತೆಗೆಯಲು ಬಿಸಿಲುಕಾಲವಾದ್ದರಿಂದಲೂ, ಬೆಂಕಿ ಉರಿಯುತ್ತಿರುವುದರಿಂದಲೂ ಒಳಗೆ ಯಾರನ್ನೂ ಪ್ರವೇಶಮಾಡಗೊಡಿಸಲಿಲ್ಲ. ಜೋಪಡಿಯೂ ಸಾಮಾನೂ ಸುಡುವುದರೊಳಗಾಗಿ ಒಂದು ಫರ್ಲಾಂಗ್ ದೂರದಲ್ಲಿರುವ ಕಣದಲ್ಲಿ ಸೊಪ್ಪಿ ಬಣವೆಗೆ ತಗಲಿ ಉರಿ ಎದ್ದಿತು. ಇಲ್ಲಿದ್ದ ಜನಗಳು ಓಡಿ ಹೋಗಿ ಏಣಿಯನ್ನು ಹಾಕಿ ಮೇಲಕ್ಕೆ ಹತ್ತಿ ಕಳ್ಳಿ, ನೀರು ಹಾಕಿದರು. ಕೂಡಲೆ ಬೆಂಕಿಯು ಮೇಲಿನಿಂದ ಕೆಳಕ್ಕೆ ಬಿದ್ದು, ಬುಡದಿಂದ ಅವರಿಗೆ ಎದ್ದಿತು. ಮೇಲೆ ಹತ್ತಿ ಉರಿಯನ್ನು ಆರಿಸುತ್ತಿದ್ದ ಗೌಡ, ಮಂದಿಗೌಡಪ್ಪ, ಸೈಯದ್ ಅಬ್ದುಲ್ ಸಮ್ಮದ್ ಸಾಬಿ ಇವರು ಇಳಿಯುವುದು ಕಷ್ಟವಾಗಿ, ಅರ್ಧ ಬಣವೆಯಿಂದಲೇ ಹಾರಿ ಈಚೆಗೆ ಬಂದರು. ಇವರು ಉಳಿದುಬಂದದ್ದೇ ಹೆಚ್ಚು ಎಂದು ಎಲ್ಲರೂ ಆಶ್ಚರ್ಯಪಟ್ಟರು. ತರುವಾಯ ಇದರ ಜೊತೆಗೆ ಇದ್ದ ಇನ್ನು ಮೂರು ಬಣವೆಗಳೂ ಸುಟ್ಟುಹೋದವು. ದವಸ ಧಾನ್ಯಗಳು ಯಾವೂ ಸುಡಲಿಲ್ಲ. ಸುಮಾರು ೬೦೦ ರೂಪಾಯಿನ ಮಾಲು ನಷ್ಟವಾಯಿತು. ಸದರಿ ಬಣವೆಗಳು ೩ ದಿನಗಳ ವರೆಗೂ ಯಥಾಪ್ರಕಾರವಾಗಿ ಉರಿದುಹೋದವು. ಈ ವರ್ತಮಾನವನ್ನು ಸಮೀಪದಲ್ಲಿರುವ ದಾವಣಗೆರೆ ಸಾಹುಕಾರ್ ಪರಯೂಳುಗಳಾದ ಶ್ರೀ ವೀ ತಿರಕಪ್ಪನವರ ಮಗದ ಇಡಾಕ್ಷರಪ್ಪಯ್ಯನವರು ಕೇಳಿ ತಮ್ಮ ಗಾಡಿಯಲ್ಲಿಯೇ ತಗಡು, ಗಳ, ವಸ್ತ್ರ ಸಾಮಾನನ್ನೂ

ಮತ್ತು ತಂಬಿಗೆ, ತಪ್ಪಲೆ, ಕಂಬಳಿ ಮೊದಲಾದ ಸಾಮಾನುಗಳನ್ನೂ ತೇರಿಸಿಕೊಂಡು ಬಂದು, ಸಂಭಾವಿತರಾಗಿಯೂ ಧರ್ಮಿಷ್ಟರಾಗಿಯೂ ಮನೆಯಲ್ಲಿ ೪೦ ದಿನಗಳ ವರೆಗೂ ಸಂಸಾರವಿರತಕ್ಕವರಾಗಿಯೂ ಮತ್ತು ೪೦, ೫೦ ಜಾನುವಾರುಗಳ ವರೆಗೂ ಇಟ್ಟಿರುವ ಇವರಿಗೆ ನನ್ನ ಸಹಾಯವನ್ನು ಮಾಡಿ, ಜೋಡಿಯನ್ನು ತಯಾರುಮಾಡಿಸಿಕೊಟ್ಟು ಹೊರಟುಹೋದರು ಪ್ರಕೃತ ದಯಾಳುಗಳಾದ ಆದೇ ಗ್ರಾಮದ ಮ॥ ಗೌ॥ ಕಳಸಪ್ಪನವರು ಸೊಪ್ಪಿನ ಮುಳ್ಳಪ್ಪನವರು, ಅರೇರ ನಿಂಗಪ್ಪನವರು, ಇನ್ನೂ ಕೆಲವರು ಸೇರಿ ೨೦ ಗಾಡಿ ಸೊಪ್ಪು ಸೊಪ್ಪೆಯನ್ನು ಅವರು ಹೇಳದೇನೆ ತಮ್ಮಷ್ಟಕ್ಕೆ ತಾವೇ ಆ ದಿವಸವೇ ಹೊಡಿಸಿಕೊಂಡು ಬಂದು, ಹಾಕಿಸಿದರು. ಇಂಥಾ ದಯಾಳುಗಳಾದ ಇವರು ಇದನ್ನು ಮಾಡದಿದ್ದರೆ ಎತ್ತುಗಳಿಗೆ ಮೇವು ಹಾಕಲು ಒಂದು ಕಡ್ಡಿ ಕೂಡ ಇರಲಿಲ್ಲ. ಊರಲ್ಲಿ ಎರಡು ದಂಗಡಗಳಿವೆಯಾದ್ದರಿಂದ ಬೆಂಕಿಯನ್ನು ಹತ್ತಿಸಿದವರು ಇಂಥವರೆಂದು ಹೇಳಲು ಆಗುವದಿಲ್ಲ — ಇದೇ ಶಿರೂರು ಗ್ರಾಮದಲ್ಲಿರುವ ಶ್ರೀಯುತ ಸಂಪನ್ನರಾದ ಮೆ॥ ಸೈಯದ್ ಅಬ್ದುಲ್ ಸಮ್ಮದ್ ಸಾಹೇಬರಿಗೆ ಗಂಡು ಕೂಸು ಜನನವಾದ್ದರಿಂದ ಅವರು ಎಲ್ಲಾ ಜನಗಳನ್ನೂ ಸಭೆಸೇರಿಸಿ, ತಮ್ಮ ಸಂತೋಷವನ್ನು ತೋರ್ಪಡಿಸಿದರು ಸಭೆಯವರಿಗೆಲ್ಲಾ ಹಾರ, ತುರಾಯಿ, ಸಕ್ಕರೆ, ತಾಂಬೂಲಾದಿಗಳು ಕೊಡಲ್ಪಟ್ಟವು ಎಲ್ಲರೂ ಜಯ ಜಯವೆಂದು ಹಾರೈಸಿದರು

ಹೊಳೆನರಸೀಪ್ರುರ — ಬಿಸಲಿನ ತಾಪವು ಬಹು ಜೋರಾಗಿದೆ ಧಾರಣೆವಾಸಿಗಳು ಸಾಮಾನ್ಯವಾಗಿ ಅಕ್ಕಿ ೯ ಸೇರು, ರಾಗಿ ೧೪ ಸೇರು ಮಾರಾಟವಾಗುತ್ತದೆ ಅಲ್ಲದೆ ಸಂತೆಯಲ್ಲಿ ಹಸಿಕೆಯ ಹಾವಳಿಯು ಹಳ್ಳಿ ವ್ಯಾಪಾರಸ್ಥರನ್ನು ತುಂಬಾ ಗಾಬರಿ ಪಡಿಸುತ್ತೆ ಒಕ್ಕಲಿಗರ ಯಾಲಕ್ಕಿ ಗೌಡನೆಂಬುವನು ತಾನು ಪಟೇಲನೆಂದು ಸಂತೆಯಲ್ಲಿ ಮಾರುವ ಹಳ್ಳಿಯವರ ಪದಾರ್ಥಗಳನ್ನೆಲ್ಲಾ ಸುಲಿಗೆ ಮಾಡುತ್ತಾ ಕೊಡದವರನ್ನು ದಂಡಿಸಿ ಬಲಾತ್ಕಾರದಿಂದ ಸುಲಿಗೆ ಮಾಡುತ್ತಾನೆ ಮ್ಯುನಿಸಿಪಾಲಿಟಿಯವರು ಸುಮ್ಮನಿರುವದು ಬಹು ಆಶ್ಚರ್ಯ ನಮ್ಮ ಅಮಲ್ದಾರರಾದರೂ ಗಮನಕ್ಕೆ ತರುವದು ಬಹು ಅವಶ್ಯವಾಗಿದೆ ಅಲ್ಲದೆ ವೀಳ್ಯದೆಲೆ, ಬಾಳೇಹಣ್ಣು, ಕಾಯಿ ಮುಂತಾದ ವಿಷಯದಲ್ಲಿ ಸುಂಕಕ್ಕೆ ತನಿಖೆ ತೆಗೆದುಕೊಳ್ಳುವದು ಉತ್ತಮ. ಯಾಕೆಂದರೆ ಈಗ್ಗೆ ಮೂರು ನಾಲ್ಕು ತಿಂಗಳ ಕೆಳಗೆ ನಮ್ಮ ಅಮಲ್ದಾರರು ಸಂತೆಗೆ ದಯಮಾಡಿಸಿ, ನೆಲಕಂಡ ಸುಂಕದ ಬಾಬನ್ನು ತಾವೇ ಖುದ್ದಾಗಿ ನೋಡಿದರು. ಇದು ಮಾರುವವರ ಮೋಸವೋ ಮ್ಯುನಿಸಿಪಾಲಿಟಿ ಕಂಟ್ರಾಕ್ಟರರ ಮೋಸವೋ ತಿಳಿಯಲಿಲ್ಲ — ಕೋಟೆ ಪೇಟೆಗಳಲ್ಲಿ ಹಂದಿಗಳು ಬಹು ಕಾವಳಿಯನ್ನುಂಟುಮಾಡುತ್ತವೆ ಹಿಂದಿನ ಅಮಲ್ದಾರರುಗಳ ಕಾಲದಲ್ಲಿ ಟವನ್ನಲ್ಲಿ ಯಾವ ಹಂದಿಗಳನ್ನು ಸಾಕಬಾರದೆಂದು ಬಹು ಖಂಡಿತವಾದ ಅಪ್ಪಣೆಯನ್ನು ವಿಧಿಸಿದ್ದರು. ಆಗ್ಗೆ ಇವುಗಳ ಹೆಸರೇ ನಿರ್ಮೂಲವಾಗಿತ್ತು ಈಗಲೂ ನಮ್ಮ ಅಮಲ್ದಾರರು ಈ ವಿಷಯಕ್ಕೆ ಬಹು ಖಂಡಿತವಾದ ಅಪ್ಪಣೆಯನ್ನು ಕೊಡುವರೆಂದು ನಂಬಿದ್ದೇನೆ — ದೇವಾಂಗದ ಬೀದಿಯ ಹಿಂದಿನ ಬೀದಿಯಲ್ಲಿ, ಕೇಂದಿ ಅಂಗಡಿ ಬಳಿ ಇರುವ ಮಾಸ್ತ್ಯನ ಮನೆ ಮುಂಭಾಗದಲ್ಲೂ ದೂಜಾಟವು ಬಹು ವಿಶೇಷವಾಗಿದೆ ಪೋಲೀಸ್ ಇಲಾಖೆಯವರು ನೋಡಿ ನೋಡಿ ಸುಮ್ಮನಾದರೆ ಎಂದಿಗೆ ಈ ಕೆಟ್ಟ ಪದ್ಧತಿಯನ್ನು ನಿಲ್ಲಿಸುವರೋ ತಿಳಿಯಲಿಲ್ಲ

ಆನೇಕಲ್ - ಈ ಊರಿನಲ್ಲಿ ಲಂಡನ್ ಮಿಷನಿಗೆ ಸೇರಿದ ಮೂರು ಪಾಠಶಾಲೆಗಳುಂಟು ಪಂಚಮರಿಗಾಗಿ ಒಂದೂ, ಉತ್ತಮ ಬಾಲಕಿಯರಿಗೆ ಒಂದೂ, ಎ. ವಿ ಸ್ಕೂಲ್ ಒಂದೂ ಇರುವವು. ಕಳೆದ ತಿಂಗಳಿನ ೩೦—೩೧ನೇ ತಾ ಈ ಪಾಠಶಾಲೆಗಳ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಗಳಿಗೆ ವಾರ್ಷಿಕ ಬಹುಮಾನಗಳು ಕೊಡಲ್ಪಟ್ಟವು ೩೦ನೇ ತಾ ಪಂಚಮರ ಸ್ಕೂಲಿನಲ್ಲಿರುವ ಬಾಲಕ ಬಾಲಕಿಯರಿಗೆ ಬಹುಮಾನಗಳು ಆದವು. ಇವರಿಗೆ ಪುಸ್ತಕಗಳು ಮತ್ತು ಬಟ್ಟೆಬರೆಗಳು ಸಿಕ್ಕಿದವು. ರೆವ್. ಜಿ. ವಿಲ್ಕಿನ್ಸ್ ಯವರು ಅಗ್ರಾಸನವನ್ನು ವಹಿಸಿದ್ದರು ಹುಡುಗಿಯರು ಸಮಯಕ್ಕೆ ತಕ್ಕ ಸಂಗೀತಗಳನ್ನು ಹಾಡಿದರು. ಕೆಲವರು ರಸಿಟೇಷನ್, ಡೈಲಾಗ್ ಇತ್ಯಾದಿಗಳನ್ನು ಬಹು ತೃಪ್ತಿಕರವಾಗಿ ಆಡಿದರು ಚೇರ್ಮನ್‌ರವರು ಸಮಯೋಚಿತವಾದ ಕೆಲವು ಮಾತುಗಳನ್ನು ಹೇಳಿದ ಮೇಲೆ ನಮ್ಮ ಮಹಾರಾಜರವರಿಗೆ ಮಂಗಳ ಕೀರ್ತನೆಯನ್ನು ಹಾಡಿ ಭಗವತ್ ಪ್ರಾರ್ಥನೆಯಿಂದ ಕೂಟವು ಮುಗಿಯಿತು ಅದೇ ಸಾಯಂಕಾಲ ಉತ್ತಮರ ಬಾಲಿಕಾ ಪಾಠಶಾಲೆಯಲ್ಲಿ ಇನಾಮುಗಳು ಕೊಡಲ್ಪಟ್ಟವು ತಾಲೂಕು ಶಿರಸ್ತೇದಾರ್ ಮೆ॥ ಎಲ್ ನಾರಾಯಣರಾಯರು ಅಗ್ರಾಸನವನ್ನು ವಹಿಸಿದ್ದರು ಬಾಲಕಿಯರು ಸಂಗೀತ, ಡೈಲಾಗ್ ಮತ್ತು ರಸಿಟೇಷನ್‌ಗಳನ್ನು ಮಾಡಿದರು ಒಬ್ಬಳು ಕಿಂಡರ್ ಗಾರ್ಟನ್ ಕೆಲಸದಲ್ಲಿ ಒಂದು ಚಿತ್ರವನ್ನು ಬೋರ್ಡಿನ ಮೇಲೆ ಬರೆದಳು ಒಬ್ಬಳು ಒಂದು ಮನೆಯನ್ನು ಘನಗಳಿಂದ ಕಟ್ಟಿದಳು ಈ ರೀತಿ ಅವರು ಬಂದಿದ್ದ ಸಾಹೇಬರೆಲ್ಲರನ್ನೂ ಸಂತೋಷಪಡಿಸಿದರು. ಅಗ್ರಾಸನಾಧಿಪತಿಗಳು ವಿದ್ಯಕ್ಕಾಗಿ ಮಿಷನರಿಗಳು ಬಹು ಪ್ರಯತ್ನಪಡುತ್ತಿದ್ದಾರೆ ದೂ, ಇವರ ಪ್ರಯಾಸದ ಫಲವನ್ನ ಆ ಬಾಲಕಿಯರ ಮಾಡಿದ ಕೆಲಸದಿಂದ ಗೊತ್ತಾಗಿದೆ ಎಂದೂ ತುಂಬಾ ಸಂತೋಷದಿಂದ ಹೇಳಿದರು ರೆವ್ ಜಿ ವಿಲ್ಕಿನ್ಸ್ ಯವರು ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹವಾದ ಮಾತುಗಳನ್ನ ಆಡಿದರು ಮೆ॥ ಸುಬ್ಬರಾಯಶಾಸ್ತ್ರಿಗಳು ವಿದ್ಯಾ ವಿಷಯದಲ್ಲಿ ಮಿಷನರಿಗಳು ಬಹು ಪ್ರಯಾಸಪಡುತ್ತಾರೆಂದೂ, ಬಾಲಕಿಯರು ಇಂಥಾ ಶಾಲೆಗಳಿಗೆ ಬರುವುದರಿಂದ ಜಾತಿಭ್ರಷ್ಟರಾಗುತ್ತಾರೆಂಬುವ ಅಭಿಪ್ರಾಯವು ಶುದ್ಧ ತಪ್ಪೆಂದೂ ತಮ್ಮ ಉಪನ್ಯಾಸದಲ್ಲಿ ಸ್ಪಷ್ಟವಾಗಿ ತೋರಿಸಿಕೊಟ್ಟರು. ಬಹುಮಾನವಾಗಿ ಈ ಬಾಲಕಿಯರಿಗೆ ಪಟ್ಟೆ, ಗೊಂಬೆ, ಪುಸ್ತಕ, ಸೀರೆ ಮುಂತಾದವು ಕೊಡಲ್ಪಟ್ಟವು ಮಹಾರಾಜರವರ ಮಂಗಳ ಮತ್ತು ಭಗವತ್ ಪ್ರಾರ್ಥನೆಯಿಂದ ಸಭೆಯು ಮುಗಿಯಿತು ೩೧ನೇ ತಾ ಸಾಯಂಕಾಲ ಇಲ್ಲಿನ ಎ ವಿ ಸ್ಕೂಲಿನಲ್ಲಿ ಇನಾಮುಗಳು ಕೊಡಲ್ಪಟ್ಟವು ನಮ್ಮ ತಾಲೂಕು ಅಮಲ್ದಾರ್ ಮೆ॥ ಸಿ. ಎಸ್ ಕುಪ್ಪುಸ್ವಾಮಿ ಅಯ್ಯಂಗಾರ್ರವರು ಅಗ್ರಾಸನವನ್ನು ವಹಿಸಿದ್ದರು ಬಾಲಕರು ವಿಧವಿಧವಾದ ಡೈಲಾಗ್‌ಗಳನ್ನೂ, ರಸಿಟೇಷನ್‌ಗಳನ್ನೂ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಮಾಡಿದರು. ಕೆಲವರು ಒಂದು ಡ್ರಾಮಾವನ್ನು ಆಡಿದರು ಸಂಗೀತಗಳು ಬಹು ಇಂಪಾಗಿದ್ದುವು ಅಗ್ರಾಸನಾಧಿಪತಿಗಳು ವಿದ್ಯಾರ್ಥಿಗಳಿಗೆ ಬಹು ಒಳ್ಳೆಯ ಉಪನ್ಯಾಸವನ್ನು ಮಾಡಿದರು. ರೆವ್ ಜಿ ವಿಲ್ಕಿನ್ಸ್ ಯವರು ಸಹ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಮಾತನಾಡಿದರು ಈ ಸಂದರ್ಭದಲ್ಲಿ ನಮ್ಮ ಸಬ್ ರಜಿಸ್ಟ್ರಾರ್ ಮೆ॥ ವೆಂಕಟಾಚಾರ್ರು ಮಿಷನರಿಗಳ ವಿದ್ಯಾಭ್ಯಾಸಕ್ಕಾಗಿನ ಪ್ರಯತ್ನವನ್ನು ಕುರಿತು ಸ್ವಲ್ಪ ಸಾರಿದರು. ಬಹುಮಾನ ಕೊಡಲ್ಪಟ್ಟ ನಂತರ ಸಭೆ ಮುಕ್ತಾಯವಾಯಿತು

ಮೈಸೂರು ಗೆಜೆಟ್ ಸಂಗ್ರಹ.

ಮುಂದೆ ಹೇಳುವವರನ್ನು ಮೈಸೂರು ಟ್ರಸ್ಟ್ ಬೋರ್ಡಿನ ಮೆಂಬರುಗಳಾಗಿ ನೇಮಕಮಾಡಿದೆ — ಮೆ॥ ಗಳಾದ ಇ ಮೆಕಾನಕಿ, ಮಹಮದ್ ಜಾಫರ್ ಸಾಹೇಬ್, ಎಂ ಅನಂತರಾಜಯ್ಯ ಎಂ ಸಿ ರಂಗಯ್ಯಂಗಾರ್, ಎಂ ವೆಂಕಟಕೃಷ್ಣಯ್ಯನವರು

ಅಮಲ್ದಾರ್ ನಂ॥ ಸಿ ವಿ ನಾರಾಯಣರಾಯರಿಗೆ ಕೊಟ್ಟಿರುವ ಮೂರು ತಿಂಗಳ ಕಾಯಿಲೆ ರಜವನ್ನು ಇನ್ನು ಮೂರು ತಿಂಗಳು ಜಾಸ್ತಿ ಮಾಡಿದೆ

ಅರಸೀಕೆರೆ ತಾಲ್ಲೂಕ್ ಅಮಲ್ದಾರ್ ಮೆ॥ ಕೆ. ಶ್ರೀನಿವಾಸರಾಯರಿಗೆ ಕೊಟ್ಟಿರುವ ರಜವನ್ನು ಇನ್ನು ಎರಡು ತಿಂಗಳು ಜಾಸ್ತಿ ಮಾಡಿದೆ.

ಮೈಸೂರು ಸಿಟಿ ಪೋಲೀಸ್ ಇಲಾಖಾ ಚೀಫ್ ಇನಸ್ಪೆಕ್ಟರ್ ಮೆ॥ ಎಲ್ ಇ ಒಷ್ಟಾರ್ಟಿಯವರನ್ನು ೫ನೇ ಕ್ಲಾಸ್ ಅ॥ ಕಮೀಷನರಾಗಿ ಬಡ್ತಿ ನೋಡುವಂತೆ ಬಡ್ತಿಮಾಡಿ, ಕಡೂರು ಡಿಸ್ಟ್ರಿಕ್ಟಿನ ಪೋಲೀಸ್ ಅ॥ ಸೂಪರಿಂಟೆಂಡೆಂಟಾಗಿ ಕೆಲಸಮಾಡುವಂತೆ ವರ್ಗಮಾಡಿದೆ

ಶಿರಸ್ತೇದಾರ್ ಎಂ. ಎಸ್. ನಾರಾಯಣರಾಯರು ಅಕ್ಟೋಬರ್ ೧೩ ರಿಂದ ಡಿಸೆಂಬರ್ ೨೪ ರ ವರೆಗೆ ಕೋಲಾರದ ತಾಲ್ಲೂಕ್ ಅಮಲ್ದಾರರಾಗಿ ಬದಲಿ ಕೆಲಸಮಾಡಿರುತ್ತಾರೆ

ಹೆಗ್ಗಡದೇವನಕೋಟೆ ತಾಲ್ಲೂಕ್ ಅಮಲ್ದಾರ್ ಮೆ॥ ಪಿ ರಂಗರಾಯರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳದೆ ಹೋದದ್ದರಿಂದ ರದ್ದುಮಾಡಿದೆ

ಅರಮನೆ ಡಿವಿಜನ್ ಅ॥ ಇಂಜನಿಯರ್ ಮೆ॥ ಟಿ ಎಸ್ ಶೇಷಯ್ಯಂಗಾರ್ರಿಗೆ ಇನ್ನೊಂದು ವರುಷದ ಫರ್ಲೋ ರಜಾ ಕೊಟ್ಟಿದೆ

ಶಿವಮೊಗ್ಗ ಡಿವಿಜನ್ ಸಬ್ ಅ॥ ಇಂಜನಿಯರ್ ಮೆ॥ ಟಿ ಕೆ ಅರುಣಾಚಲಂ ಅಯ್ಯರಿಗೆ ಆರು ತಿಂಗಳ ರಜಾ ಕೊಟ್ಟಿದೆ

ವಿದೇಶ ವರ್ತಮಾನಗಳು

ವಿಲಾಯತಿಯ ಮಹಾರಾಜಾ ಚಕ್ರವರ್ತಿ ರೋವರ್ಟ್‌ವುರವರೂ ಮಹಾರಾಜ್ಞಿಯವರೂ ಪರಿವಾರಸಹಿತ ಈ ತಿಂಗಳಲ್ಲಿ ಡೆನ್ಮಾರ್ಕ್ ಮತ್ತು ನಾರ್ವೆ ರಾಜ್ಯಗಳಿಗೆ ದಯಮಾಡುವವರಾಗಿದಾರೆ

***

ವಿಲಾಯತಿಗೆ ಸೇರಿದ ಬ್ರಿಸ್ಟಲ್ ಪಟ್ಟಣದ ಯೂನಿವರ್ಸಿಟಿ ಎಂಬ ವಿದ್ಯಾ ಮಂಡಲಿಯ ಫಂಡಿಗೆ ೧೪ ಲಕ್ಷ ರೂಪಾಯಿಯನ್ನು ಮೆ॥ ಎಚ್ ಓ ವಿಲ್ಸ್ ಎಂಬೊಬ್ಬ ಹೊಗೆಸೊಪ್ಪಿನ ವರ್ತಕನು ಧರ್ಮ ಮಾಡಿರುತ್ತಾನೆ

***

ಟ್ಸಿಟ್ಸಿ ಎಂಬೊಂದು ಜಾತಿಯ ಸೊಳ್ಳೆಯ ಕಡಿತದಿಂದ ಒಂದು ವಿಧವಾದ ಕೆಟ್ಟ ಜ್ವರ ಉಂಟಾಗುತ್ತದೆ ಇದರ ಪರಿಹಾರವನ್ನು ಕಂಡುಹಿಡಿದವರಿಗೆ ೫೦,೦೦೦ ರೂಪಾಯಿ ಬಹುಮಾನ ಕೊಡುತ್ತೇವೆಂದು ಜರ್ಮನಿ ಸರ್ಕಾರದವರು ಪ್ರಕಟಿಸಿದಾರೆ

***

ಚೀನಾ ರಾಜ್ಯದಲ್ಲಿ ಕಡಗಿನ ಕಳ್ಳರು ಪ್ರಬಲಿಸಿರುತ್ತಾರೆ ಕ್ಯಾಂಟಾನ್ ಪಟ್ಟಣದ ಹತ್ತಿರ ಯಾಂಗ್‌ಟ್ಸೀ ನದಿಯಲ್ಲಿ ಅವರು ಎರಡು ಹಡಗುಗಳನ್ನು ಲೂಟಿಮಾಡಿ, ಇಬ್ಬರನ್ನು ಕೊಂದು, ೧೫ ಸಾವಿರ ದ್ರವ್ಯವನ್ನು ಎತ್ತಿಕೊಂಡು ಹೋಗಿದಾರೆ

***

ಮಕ್ಕಾ ಎಂಬ ಮಹಮ್ಮದೀಯರ ಯಾತ್ರಾಸ್ಥಾನಕ್ಕೆ ಹೋಗಿದ್ದ ಸಾವಿರಾರು ಜನರು ವಾಂತಿಭೇದಿ ಉಪದ್ರ ತಗಲಿ ಕಾಲವಾದರೆಂತಲೂ, ಈಗಲೂ ದಿನಕ್ಕೆ ೧೦೦ ಜನರಂತೆ ಆ ರೋಗದಲ್ಲಿ ಸಾಯುತ್ತಿದಾರೆಂತಲೂ ತಂತೀ ವರ್ತಮಾನ ಬಂದಿದೆ.

***

ಜೆಡ್ಡಾ ಪಟ್ಟಣದಿಂದ ಸಮಾಚಾರ ಬಂದಿರುವಂತೆ ಮಹಮದೀಯರ ಹಾಜ್ ಎಂಬ ದೊಡ್ಡ ಹಬ್ಬವು ಮುಗಿಯಿತು ಆದರೆ ಅಲ್ಲಿ ವಾಂತಿಭೇದಿ ಉಪದ್ರವು ಪ್ರಾರಂಭವಾಗಿ, ದಿನಕ್ಕೆ ೨೦೦-೨೫೦ ಜನರಂತೆ ಮೃತಪಡುತ್ತಿದಾರೆಂದು ತಿಳಿಯುವುದು

***

ಹಿಂದುಸ್ಥಾನದ ವೈಸ್‌ರಾಯರಾಗಿದ್ದ ಈಗ ವಿಲಾಯತಿಯಲ್ಲಿರುವ ಲಾರ್ಡ್ ಕರ್ಜನ್ ಪ್ರಭುಗಳು ಅಲ್ಲಿನ ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಸಭೆಯಲ್ಲಿ ಮೆಂಬರಾಗಿ ದಾಖಲಾದರು ಇನ್ನು ಮುಂದೆ ರಾಜ್ಯಭಾರ ವಿಷಯಗಳಲ್ಲಿ ಇವರ ಸಾಹಸ ಕಾರ್ಯಗಳನ್ನು ಕೇಳುತ್ತಾ ಬರುವೆವು

***

ಉತ್ತರ ಅಮೇರಿಕಕ್ಕೂ ದಕ್ಷಿಣ ಅಮೇರಿಕಕ್ಕೂ ಮಧ್ಯೆ ಇರುವ ಸಣ್ಣ ಭೂಕಂಠವನ್ನು ಒಡೆದು ಹಾಕಿ, ಹಡಗುಗಳು ಸಂಚರಿಸುವಂತೆ ಭಾರೀ ಕಾಲುವೆಯನ್ನು ಮಾಡಲಾರಂಭಿಸಿ ಎರಡು ವರುಷಗಳಾದವು ಕಾಮಗಾರಿಯು ಬಹು ಚುರುಕಾಗಿ ನಡೆಯುತ್ತಿದೆ ಈ ಕಾಮಗಾರಿಗೆ ಒಟ್ಟು ೬೦ ಕೋಟಿ ದ್ರವ್ಯ ಖರ್ಚಾಗುವುದೆಂದು ಪ್ರಕಟವಾಗಿದೆ

***

ರಷ್ಯಾ ರಾಜ್ಯದ ಮಾಗಾರಿಗಳ ಇಲಾಖೆಯ ಮಂತ್ರಿಯು ಸೈಬೀರಿಯಾ ದೇಶದಲ್ಲಿ ಎರಡನೇ ರೈಲ್ ರಸ್ತೆಯನ್ನು ತಯಾರುಮಾಡಿಸಬೇಕೆಂದು ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ ಡೂಮಾ ಪಾರ್ಲಿಮೆಂಟಿನವರ ಸ್ವೀಕಾರಕ್ಕೆ ಒಗ್ಗೆ ಕಳುಹಿಸಿರುತ್ತಾನೆ ಈ ರೈಲ್ ರಸ್ತೆಗೆ ೫೩ ಕೋಟಿಯೂ ೬೦ ಲಕ್ಷ ರೂಪಾಯಿ ಖರ್ಚಾದೀತು. ಈ ರಸ್ತೆಯ ಮೊದಲನೇ ಸೆಕ್ಷನ್ (ಭಾಗ) ಮುಂದಿನ ೧೯೧೦ ನೆ ಇಸವಿಯೊಳಗಾಗಿ ಪೂರೈಸುವಂತೆ ವಿಮರ್ಶೆಯಾಗಿದೆ

***

ದಕ್ಷಿಣ ಆಫ್ರಿಕದ ವಜ್ರಗಳ ಗಣಿಯಲ್ಲಿ ದೊರಕಿದಂಥಾ ಕಲಿನಾ ಎಂಬ ಭಾರೀ ವಜ್ರವನ್ನು ಕಂಪನಿಯವರು ವಿಲಾಯತಿಯ ಚಕ್ರವರ್ತಿ ಸಾರ್ವಭೌಮರವರಿಗೆ ಒಪ್ಪಿಸಬೇಕೆಂದು ಗೊತ್ತುಮಾಡಿದಾರೆ. ಈಗ ಈ ವಜ್ರವನ್ನು ಸಾಣೆ ಹಿಡಿದು ಪಟ್ಟೆ ಬಿಡಿಸುವುದಕ್ಕೆ ಆಂಸ್ಟರ್ಡಾಂ ನಗರದ ಒಂದು ಕಂಪನಿಗೆ ಕೊಟ್ಟು, ಅದರ ಉಸ್ತುವಾರಿಗಾಗಿ ಪೋಲೀಸಿನವರನ್ನು ನೇಮಕ ಮಾಡಿರುತ್ತಾರೆ ಅದನ್ನು ಸಾಣೆ ಹಿಡಿದು ಸಿದ್ಧಪಡಿಸುವುದಕ್ಕೆ ಒಂದು ವರುಷ ಹಿಡಿಯುವುದೆಂದು ತಿಳಿದು ಬಂದಿದೆ

***

ಜರ್ಮನಿ ರಾಜ್ಯಕ್ಕೆ ಸೇರಿದ ಬರ್ಕನ್‌ಫೆಲ್ಡ್ ಪಟ್ಟಣದ ಆಸ್ಪತ್ರೆಯಲ್ಲಿ ಮೆಲಿಂಗ್ ಎಂಬ ಡಾಕ್ಟರು ಒಂದು ಮಗುವನ್ನು ಮಲಗಿಸಿಕೊಂಡು ಅದರ ಕಾಯಿಲೆ ವಾಸಿ ಮಾಡುವುದಕ್ಕೋಸ್ಕರ ಶಸ್ತ್ರ ಚಿಕಿತ್ಸೆ ಮಾಡುತ್ತಿರುವಾಗ್ಗೆ, ಡಾಕ್ಟರಿಗೇ ಎದೆ ಶೂಲೆ ಹುಟ್ಟಿ ಅಲ್ಲೇ ಪ್ರಾಣಬಿಟ್ಟನು ಕೂಡಲೇ ಆಸ್ಪತ್ರೆಯಲ್ಲಿ ಗಲಭೆಯಾಯಿತು ಅವನು ಮಾಡಿದ ಶಸ್ತ್ರ ಚಿಕಿತ್ಸೆಯನ್ನು ಇತರರ್ಯಾರೂ ಪೂರೈಸದೆ ಹೋದದ್ದರಿಂದ ಆ ಮಗುವು ತಕ್ಷಣವೇ ಸತ್ತುಹೋಯಿತು ಇಂಥಾ ಆಶ್ಚರ್ಯಕರವಾದ ಮರಣಗಳು ಇದುವರೆಗೆ ಎಲ್ಲೂ ಸಂಭವಿಸಿಲ್ಲವು

***

ರಷ್ಯಾ ಚಕ್ರವರ್ತಿಯವರ ಪತ್ನಿಯಾದ ಜಾರೀನಾ ರಾಣಿಯವರಿಗೆ ಕಾಯಿಲೆ ಜಾಸ್ತಿಯಾಗಿ, ಇದು ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗ್ ಪಟ್ಟಣದ ಅಧಿಕಾರಿಗಳಲ್ಲೂ ದೊಡ್ಡ ಮನುಷ್ಯರುಗಳಲ್ಲೂ ವಿಶೇಷ ಕಳವಳವನ್ನುಂಟುಮಾಡಿದೆ. ಅರಮನೆಯಲ್ಲಿ ನಡೆಯಬೇಕಾಗಿದ್ದ ಸಂತೋಷೋತ್ಸವಗಳನ್ನೆಲ್ಲಾ ನಿಲ್ಲಿಸಿಬಿಟ್ಟರು. ಚಕ್ರವರ್ತಿಯವರು ರಾಣಿಯವರನ್ನು ಕೆಲವು ದಿವಸ ಇತರ ದೇಶಗಳಿಗೆ ಹೋಗಿದ್ದು ಬರುವಂತೆ ಎಷ್ಟು ಹೇಳಿದರೂ ಕೇಳದೆ, ಪತಿಯನ್ನೂ ಮಕ್ಕಳನ್ನೂ ಬಿಟ್ಟು ಎಲ್ಲೂ ಹೋಗುವುದಿಲ್ಲವೆಂದು ಹೇಳುತ್ತಿದಾರೆ ಈ ಬಗೆ ಚಕ್ರವರ್ತಿಯವರು ಸಂಸಾರ ಸಮೇತ ರಷ್ಯಾದಿಂದ ಹೊರಟು, ಇಟಲೀ ದೇಶಕ್ಕೆ ಹೋಗಿ ಅಲ್ಲಿ ಕೆಲವು ಕಾಲ ಇದ್ದು ಬರುವದಕ್ಕೆ ಏರ್ಪಾಡು ನಡೆದಿದೆ ಎಂದು ತಿಳಿಯುವದು

***

ಜರ್ಮನಿ ರಾಜ್ಯದ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಕಾರ್ಖಾನೆಯ ಯಜಮಾನರು ಕೊಡತಕ್ಕ ಕೂಲೀ ದರಗಳು ದಿನಕ್ಕೆ ಸಾಕಾಗುವುದಿಲ್ಲವೆಂತಲೂ, ದರವನ್ನು ಜಾಸ್ತಿ ಮಾಡಿಕೊಡದಿದ್ದರೆ ಕೆಲಸಕ್ಕೆ ಯಾರೂ ಹೋಗಕೂಡದೆಂತಲೂ ಕೂಲಿಕಾರರು ಸ್ಟ್ರೈಕ್ ಮಾಡಿಕೊಂಡು ನಿಂತುಬಿಟ್ಟರು. ಹತ್ತು ಸಾವಿರ ಕೂಲಿ ಜನರು ಸಭೆಮಾಡಿ, ಕೂಲಿ ಸಾಲದಿದ್ದರೆ ತಮಗೆಲ್ಲ ಜೀವನೋಪಾಯವನ್ನು ಕಲ್ಪಿಸಬೇಕೆಂದು ಮಾರ್ಗದಲ್ಲಿ ಹೋದರು ಪೋಲೀಸಿನವರು ಆ ಜನಗಳನ್ನು ಚೆದರಿಸುವುದಕ್ಕೆ ಹೋದಾಗ ಅವರಿಗೂ ಇವರಿಗೂ ಜಗಳ ಕದನಗಳಾದವು. ಪೋಲೀಸಿನವರು ನಿಷ್ಕರುಣೆಯಿಂದ ಜನರ ಗುಂಪಿನ ಮೇಲೆ ಗುಂಡು ಹೊಡೆದು ರಕ್ತಪ್ರವಾಹ ಕಾಣಿಸಿದರು ಇಷ್ಟರಲ್ಲೇ ಆ ಕೂಲಿಕಾರರೆಲ್ಲಾ ಅರಮನೆಗೆ ಹೋಗುತ್ತಾರೆಂಬ ಸುದ್ದಿಯುಂಟಾದದ್ದರಿಂದ ಅದರ ಸಂರಕ್ಷಣೆಗಾಗಿ ಸುತ್ತಲೂ ಸೈನ್ಯಗಳು ಹೋಗಿ ನಿಂತವು ಮಂತ್ರಿಗಳು ಕೂಲಿಕಾರರನ್ನು ಹಿತೋಕ್ತಿಗಳಿಂದ ಸಮಾಧಾನಪಡಿಸಿ ಕಳುಹಿಸಿಕೊಟ್ಟರು

ಕಲ್ಕತ್ತೆಯ ಡಾಕ್ಟರುಗಳ ಅಭಿಪ್ರಾಯಗಳು

91-23

ನಾವು ಸ್ವತಃ ಕಾರ್ಯ ನೋಡಲಿಕ್ಕಾಗುವಾಗ, ನಮ್ಮ ಕಿವಿಗಳಿಂದ ಕೇಳುವಾಗ, ನಮ್ಮ ಸ್ನೇಹಿತರು ರುಜುಪಡಿಸುವಾಗ ಇವಕ್ಕಿಂತ ಮೇಲಾದ ಸಾಕ್ಷ್ಯ ಯಾವದು?

ಮುಂಬಾಯಿ ಜನರು ಏನು ಹೇಳುತ್ತಾರೆಂಬುದಾಗಲೀ, ಕೊಲಂಬೋ ಜನರ ಅಭಿಪ್ರಾಯವೇನೆಂಬುದಾಗಲೀ ಹೇಳಿ ಪ್ರಯೋಜನವಿಲ್ಲ ಕಲ್ಕತ್ತೆಯವರಿಗೆ ಈ ಔಷಧವಿಷಯವಾಗಿ ನಿಜವಾಗಿ ಗೊತ್ತಿರುವಂಥಾ ಸಂಗತಿಯನ್ನೇ ತಿಳಿಸುತ್ತೇವೆ ನೀವು ನಿಮ್ಮ ನೆರೆಕರೆಯವರ ಮಾತನ್ನು ನಂಬುವಿರೋ? ಹಾಗಾದ ಪಕ್ಷದಲ್ಲಿ ಬೋಸ್ ಮಲ್ಲಿಕ್ ಕಂಪನಿ ಔಷಧ ಶಾಲೆಯ ವೈದ್ಯ ಚಿಕಿತ್ಸಕರಾದ ಡಾಕ್ಟರ್ ಪರೇಶನಾಥ ದತ್ತರವರ ಅಭಿಪ್ರಾಯವನ್ನು ಓದಿ ನೋಡಿರಿ

ಡೋನ್ಸನ (ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಬೆನ್ನು ನೋವಿನ ಮೂತ್ರಬಾಧೆಯ ಗುಳಿಗೆಗಳು ಮೂತ್ರಕೋಶದ ಬಾಧೆಗಳಲ್ಲಿ ಮುಖ್ಯವಾಗಿ ಕಲ್ಲು ಬೀಳುವಲ್ಲಿ ಉಪಯೋಗಕರವಾಗಿದೆ

ಬೆನ್ನುನೋವು-ಮೂತ್ರೋದ್ರೇಕ(ಮೂತ್ರ) ಸಂಬಂಧವಾದ ಇತರ ಬಾಧೆಗಳ ಹಾಗೆಯೇ ಕಲ್ಲು ಬೀಳುವದು ನಿಶ್ಚಯವಾಗಿ ಮೂತ್ರಪಿಂಡಗಳ ಬಲಹೀನತೆಯಿಂದ ಯಾ ಕೆಟ್ಟುಹೋಗುವಿಕೆಯಿಂದ ಆಗಿರುವದು

ಈ ಮಾತ್ರೆಗಳಲ್ಲಿ ಸಸ್ಯಾದಿ ಮೂಲ ಪದಾರ್ಥಗಳು ಮಾತ್ರ ಇರುತ್ತವೆ ಅವು ಬೇಗನೇ ಉಪಶಮನವಾಗುವ ಸಿಕ್ಕುವಂತೆ ವಿಲಾಯತಿಯವರು, ಅತ್ಯಂತ ಸೂಕ್ಷ್ಮವಾದ ದೇಹಪ್ರಕೃತಿಯುಳ್ಳವರು ಸಹಾ ಉಪಯೋಗಿಸಬಹುದು ಮತ್ತು ಕೂಡಲೇ ಶಾಶ್ವತವಾದ ಗುಣಕಾರಿ ಸಿಕ್ಕುವದರಲ್ಲಿ ಸಂದೇಹವಿಲ್ಲ ಮುಂದೆ ಇದರಿಂದ ಯಾವ ಬಾಧಕವೂ ಆಗಲಾರದು

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ ಶೀಸೆ ಒಂದಕ್ಕೆ ರೂ. ೨. ಅಥವಾ ೬ ಶೀಸೆಗಳಿಗೆ ರೂ ೧೦—೮—೦ ಅಥವಾ ಮುಂಬಾಯಿಯಲ್ಲಿಯ ಡೋನ್ಸ್ ಔಷಧಗಳ ಕೋಠಿಯಿಂದಾ ಕೇಡಾ ತರಿಸಿಕೊಳ್ಳಬಹುದು ಪಿ ಒ ಬಾಕ್ಸ್ ನಂ ೨೦, ಮುಂಬಾಯಿ.

ಇಲ್ಲಿ ನೋಡಿ.

86

ಮಂಗಳೂರು ಪಿಂಡರ್ ಇಲಾಖೆಯಲ್ಲಿ ಯೂರೋಪಿಯನ್ ಮೇಸ್ತ್ರಿಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಸಾದಾ ಉಲ್ ದಾಲದಿಂದ ತಯಾರಾಗುತ್ತವೆ.
ಕ್ರಯ —೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯು

೬ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ಡಿಸ್ಕೌಂಟ್ ಕೊಡಲ್ಪಡುವದು
ನಮ್ಮ ವಿಳಾಸ —ಮೇನೇಜರ್
ಬಾಸಲ ಮಿಶನ್ ಕಾರ್ಖಾನೆ, ಪಿಂಡರ್ ಇಲಾಖೆ, ಮಂಗಳೂರು.

ಈ ತರಹದ ವೇಷವೂ ಇಲ್ಲ. ದರಗಳು ಬಹಳ ಸುಲಭ ವಾಗಿ ಮಾರಾಟವಾಗುತ್ತವೆ ಜಾಗ್ರತೆ ನೋಡಿ.

ಲೋಕದಲ್ಲೆಲ್ಲಾ ಅತ್ಯಂತ ಆಶ್ಚರ್ಯವಾದುದು

121-13

ಬಹು ಸೊಗಸಾದ ಮತ್ತು ಜೇಬಿನ ಮೇಲಿಡುವುದಕ್ಕೆ ಉಪಯುಕ್ತವಾದ ದೊಡ್ಡ ಗಡಿಯಾರ ಮತ್ತು ಜೇಬಿನಲ್ಲಿಡುವುದಕ್ಕೆ ಯೋಗ್ಯವಾದ ವಾಚ್ ಗಡಿಯಾರ ಎರಡು ಗಡಿಯಾರಗಳು ಸಿಕ್ಕುತ್ತವೆ ಬಲ್ಲಿರಾ?

ನಮ್ಮ ಹಿಂದೂ ದೇಶದ ವರ್ತಕರನೇಕರು ತಾವು ಮಾರುವ ಪದಾರ್ಥಗಳ ವಿಷಯ ವಿಪರೀತವಾಗಿ ಹೊಗಳಿ, ಸುಳ್ಳು ಸಂಗತಿಗಳ ಪ್ರಕಟಿಸುವವರಾಗಿದ್ದಾರೆ ಅಂಥಾ ವರ್ಣನೆಯನ್ನು ಓದುವವರು ಪದಾರ್ಥಗಳನ್ನು ಕೊಂಡಮೇಲೆ ಮೋಸಹೋಗುವರು. ಅವರಿಂದ ನಮ್ಮ ದರಖಾಸ್ತು ಪಟ್ಟಿಗಳನ್ನು ಓದುವುದಿಲ್ಲ. ಆದರೆ ನೀವೆಂದಿಗೂ ನಮ್ಮ ಅಂಗಡಿಯ ವಿಷಯ ಯಾವ ಸಂಶಯವನ್ನೂ ಇಡಬಾರದು. ನಮ್ಮ ಅಂಗಡಿಯಲ್ಲಿ ನೀವು ಒಂದಾವರ್ತಿ ವ್ಯಾಪಾರ ಮಾಡಿದರೆ ಕೈಬಿಡದೆ ನಮ್ಮನ್ನು ಬಿಟ್ಟು ಬೇರೆ ಅಂಗಡಿಗಳಿಗೆ ಹೋಗಲಾರಿರಿ. ಪಾಕೆಟ್ ಜೇಬಿನಲ್ಲಿ ಇಡುವ ಒಂದು ಸೊಗಸಾದ ಗಡಿಯಾರವನ್ನು ಕೊಂಡರೆ ಅದರ ಜೊತೆಯಲ್ಲಿ ಕೆಳಗೆ ಬರೆದ ಪದಾರ್ಥಗಳನ್ನು ಕಳುಹಿಸುತ್ತೇವೆ. ಗಡಿಯಾರಕ್ಕೆ ಒಂದಾವರ್ತಿ ಕೀಗ ಕೊಟ್ಟರೆ ೩೦ ಗಂಟೆಗಳ ವರೆಗೆ ನಡೆಯುತ್ತದೆ. ಸೊಗಸಾದ ಮುಳ್ಳುಗಳು, ಬಿಳೀ ಗಾಜಿನ ಮುಚ್ಚಳ ಬರೆಯಲ್ಪಟ್ಟ ಗಂಟೆಗಳ ಅಂಕೆಗಳು. ಇವುಗಳು ಅದಂಲ್ಲದೆ ಇದಕ್ಕೆ ಐದು ವರ್ಷಗಳ ಗ್ಯಾರಂಟಿ ಕೊಡುತ್ತೇವೆ. ಈ ಗಡಿಯಾರವನ್ನು ಕಳುಹಿಸುವುದಕ್ಕೆ ಮೊದಲು ಅದನ್ನು ನಾವು ಚೆನ್ನಾಗಿ ಪರೀಕ್ಷೆಮಾಡಿಯೇ ಕಳುಹಿಸುವೆವು. ಅದರ ಜೊತೆಯಲ್ಲಿ ಕೆಳಗಿನ ಪದಾರ್ಥಗಳನ್ನು ಕಳುಹಿಸುವೆವು —ಒಂದು ಸೊಗಸಾದ ಚಿನ್ನದ ಸರಪಳಿ ಜೇಬಿನ ಮೇಲೆ ಇಡುವ ದೊಡ್ಡ ಗಡಿಯಾರ ಇದು ವಿಲಾಯತಿಯಲ್ಲಿ ಮಾಡಿದ ಮುದ್ರಣ ಪಟ್ಟಿಗೆಯೊಂದು, ಇದರ ಮೇಲೆ ಬಣ್ಣದ ಚಿತ್ರಗಳೂ ಇರುವವು. ಒಂದು ಉತ್ಕೃಷ್ಟವಾದ ಪಟ್ಟಿ, ಹಿಂಗಿಸಲ್ಲಾ ಒಂದೇ ಆಸೆಯು ಎಷ್ಟೋ, ಕಾಡಿಯುವ ಸೊಗಸಾದ ಟ್ಯಾಬ್ ಬೀಗ, ಒಂದು ಸೊಗಸಾದ ಫೌಂಟೆನ್ ಪೆನ್ನು, ಒಂದು ಜೊತೆ ಬಿಳಿಕ ಬಣ್ಣದ ಮೇಜೋಡು ದಂತದ ಹಿಡಿಯುಳ್ಳ ಒಂದು ಚಾಕು, ಒಂದು ಬಿಳುಪಾದ ಚರ್ಮದಿಂದ ಮಾಡಿದ ದುಡ್ಡು ಚೀಲ, ಒಂದು ಸೊಗಸಾದ ಬಾಚಣಿಗೆ, ಒಂದು ದರ್ಪಣ (ಕನ್ನಡಿ), ಸೊಗಸಾದ ಕತ್ತರಿ, ರುಮಾಲಿನಲ್ಲಿ ಸಿಕಿಸಿಕೊಳ್ಳುವ ಕಂಚಿ ಪಿನ್ನು, ಪೆನ್ನು ಮುಟ್ಟಕ್ಕೆ ಉಪಯೋಗವಾದ ಸೊಗಸಾದ ಗುಂಡಿಗಳು, ಒಂದು ಕನ್ನಡಕ, ಒಂದು ಸೊಗಸಾದ ಪಟ್ಟಿಗೆಯಲ್ಲಿ ಕೋಟು ಮುಕ್ತ್ಯಾದ ಗುಂಡಿ, ಗಿಳಿಯಾಕಾರದ ಸೊಟ್ಟು, ರಬ್ಬರು, ಜೇಬಿನ ಕಡಿಕ, ಸೀಸದ ಕಡ್ಡಿ ಹಿಡಿಯುವ ಯಂತ್ರ, ಪ್ರೇಮ ಪತ್ರ, ಕಲ್ಲುಗಳು, ಮತ್ತು ಸೀಸದ ಕಡ್ಡಿಗಳು, ನೂರೈವತ್ತು ಸಲಗಳು ಅನೇಕ ಚಿತ್ರಗಳು (ಲಕೋಟೆಗಳು) ನೂರೈವತ್ತು ಲೆಟರ್ ಕಾಗದಗಳು, ನೂರು ಪೋಸ್ಟ್ ಕಾರ್ಡುಗಳು, ಎಪ್ಪತ್ತು ಪೀಸು ಪತ್ರ ಎಲ್ಲಾಗಳು, ಇವೆಲ್ಲವುಗಳಿಗೆ ಬೆಲೆ ರೂಪಾಯಿ ಎಂಟು ಆಣೆ (ರೂ ೬—೮—೦) ಅಂಚೆಕ್ಕಾಸೂ ಬಹಳ ಆರ್ಧ ಮೊಬಲಗನ್ನು ಮುಂಗಡವಾಗಿ ಮನಿಯಾರ್ಡರ್ ಮೂಲಕ ರವಾನಿಸಬೇಕು.

ಎಂ. ಬ. ಗಟವಾಲಾ ಅಂಡ್ ಕಂಪೆನಿ,
(ಉತ್ತರ ಅರ್ಕಾಡು) ಚಿತ್ತೂರು.
ಎಂಬ ವಿಳಾಸಕ್ಕೆ ಬರೆದುಕೊಳ್ಳಿ.
(ಪದಾರ್ಥಗಳನ್ನು ಕೊಂಡ ಮೇಲೆ ಅನೇಗಳನ್ನು ನೀವೆ ಆನೆಷ್ಟ ಮೊಬಲಗನ್ನು ನಿಮ್ಮ ದುಡ್ಡನ್ನು ವಾಪಸು ಕಳುಹಿಸುತ್ತೇವೆ.)

ಆರ್ಡರ್ ಫಾರಂ

ಆಮ್ಯಾ,
ಪಯಾಪಾಡಿ ಪಾಂಟಿನಾಲಿನಲ್ಲಿಯೇ ಜೇಬಿನಲ್ಲಿಡುವ ಒಂದು ಗಡಿಯಾರವನ್ನೂ ಮೇಜಿನ ಮೇಲಿಡುವುದಕ್ಕೆ ಒಂದು ಸೊಗಸಾದ ದೊಡ್ಡ ಗಡಿಯಾರವನ್ನೂ ಇವುಗಳ ಸಂಗಡ ೪೦ ಬಹುಮಾನಗಳ ನ್ನು ಕಳುಹಿಸಿಕೊಡಿರಿ ಅದಕ್ಕಾಗಿನ ಬೆಲೆಯು ರೂ ೬—೮—೦ ಮತ್ತು 7-8 ೦) ಯಲ್ಲಿ ಅರ್ಧ ಮೊಬಲಗನ್ನು ಅಂಚೆದಿರೂ ೩—೧೨—೦ ನ್ನು ಮನಿಯಾರ್ಡರ್ ಮೂಲಕ ರವಾನಿಸಿರುತ್ತೇನೆ. ಬಾಕಿ ಮೊಬಲಗನ್ನು ನೀವು ದಯವಿಟ್ಟು ವಿ ಪಿ ಪಿ ಮೂಲಕ ತೆಗೆದುಕೊಳ್ಳಿ

ಹೆಸರು . . . .
ಊರು . . . .
ಪೋಸ್ಟ್ ಆಫೀಸ್ . . . .
ಹತ್ತಿರವಿರುವ ರೈಲ್ವೆ ಸ್ಟೇಷನ್ . . . .

ಇಂತಿ.

[ಈ ಆರ್ಡರ್ ಫಾರಂ ಮನ್ನೂ ಇದರ ಸಂಗಡ ಅರ್ಧ ಮೊಬಲಗಾದ ರೂ. ೩—೧೨—೦ ನ್ನು ಕಳುಹಿಸುವಂಥವರಿಂದ ವಾಪ್ತ ರೂ. ೧—೮—೦ ಬೆಳೆಯ ಪದಾರ್ಥಗಳನ್ನು ಕಳುಹಿಸುವಲ್ಲಿ ಯಾವ ಪೋಸ್ಟೇಜ್ ಖರ್ಚನ್ನೂ ತೆಗೆದುಕೊಳ್ಳುವುದಿಲ್ಲ. ನಾವೇ ಪೋಸ್ಟೇಜನ್ನು ವಹಿಸುತ್ತೇವೆ]

ಈಗಲೇ ಸೀಮೆಯಿಂದ ಬಂದಿದೆ.

117-15

೫,೦೦೦ ಹಾಸಗೆ ಟೋಪಿ ಹೊಲಿಯುವ ಸುಪೀರಿಯರ್ ಉಲ್ ದಾರಗಳು ಬಿಡಬೇಕರಿ—ಮಾತ್ರ ಇದೆ—ಬೇರಿ, ಕಮ್ಮಿ ಕ್ರಯ.

೧ ಟೋಪಿಯಾಗುವ ಉಲ್ ದಾರಕ್ಕೆ	೦—೪—೦
೧೦ ಟೋಪಿಯಾಗುವ ಬಂಡಲ್‌ಗೆ ೧ ಕ್ಕೆ	೩—೪—೦
ಕೊಕ್ಕೆ ಸೂಜಿ ೧ ಕ್ಕೆ	೦—೧—೩
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೬

ಎರಡು ಕಡೆಯಲ್ಲಿ ಬರೆಯುವ ಪೋಸ್ಟ್ ಕಾರ್ಡ್ ೧೦೦ ಕ್ಕೆ ೬ ಆ ಒಂದಾಣೆ ಸ್ಟಾಂಪು ಕಳುಹಿಸಿ ನೇತ್ರಾನಂದಕರವಾದ ೧೯೦೮ ನೆ ಇಸವಿಯ ಕ್ಯಾಲೆಂಡರ್ ಪಡೆಯಿರಿ ವಿಳಾಸ:—

ಪ್ರೊಪ್ರೈಟರ್, ದಿ ಉಲ್ ಮಾರ್ಟ್, ಮಂಗಳೂರು.

The Pourwal Cash Bazaar—Bangalore City.
ಧಾರಿವಾಲ್ (ಪಂಜಾಬ್) ಶಾಲುಗಳು.

130-10

ಕೆಂಪು, ಎಗ್ಗೆ ಬಣ್ಣ, ಕೆಂಪು, ಕೇಸರಿ, ಹಸುರು, ನಸ್ಯದ ಬಣ್ಣ, ಬಾದಾಮಿ, ಕೆಂಪು ಬಿಳುಪು, ಮುಂತಾದ ಬಣ್ಣದ್ದು. ಮತ್ತು ಚೆಕ್ ನಮೂನೆ, ಪೂರಾ ಆರು ಮೊಳ ಉದ್ದ, ಮೂರು ಮೊಳ ಅಗಲವುಳ್ಳದ್ದು.

ಈಗತಾನೆ ವಿಲಾಯತಿಯಿಂದ ಬಂದಿರುವ ೫,೦೦೦ ಪೌಂಡು ಟೋಪಿಗೆ ಲಾಯಕ್ಕಾದ ತರಹೆವಾರಿ ಉಲ್ ಮತ್ತು ಇವುಗಳಲ್ಲಿ ತಯಾರಾದ ತರಹೆವಾರಿ ಟೋಪಿಗಳು ನಮ್ಮಲ್ಲಿ ಸಿದ್ಧವಾಗಿರುತ್ತವೆ.

ಇವುಗಳಲ್ಲದೆ ನೀವು ಕೇಳುವ ಯಾವ ಸಾಮಾನೇ ಆಗಲಿ ನಂಬಿಕೆಯಿಂದ ಅಗ್ಗವಾಗಿ ಕಳುಹಿಸುವೆವು ಹೆಚ್ಚಿನ ವಿವರ ತಿಳಿಯಬೇಕಾದವರು ಇವರಿಗೆ ಬರೆಯಿರಿ—

ಹೆಚ್. ಜವಾರ್ ಮಲ್ ಕಂಪೆನಿ,
ಚಿಕ್ಕಪೇಟೆ, ಬೆಂಗಳೂರು ಸಿಟಿ

ಚಾತುರ ಸಾಮಾನು ' ಹೊಸ ಬ್ಯೂರ್ನೀಸ್ ಜೀಗ ತರಿಸಿ "

123-12

ದಪ್ಪ ಹಗುರ ಉಣ್ಣೆಯ ದಪ್ಪವಾದ " ಬ್ಲಾಂಕೇಟ್ " ಎಂಬ ಹೊಸ ನಮೂನೆ ಒಳಾತ್ರ ಎಷ್ಟೋ ಹುರುಳವಾದ ಛಳಿಯನ್ನು ದೂರ ದೂರಕ್ಕೆ ಓಡಿಸಿ ಮೈಗೆ ಸೌಖ್ಯ ಬಿಸಿಯನ್ನು ಕೊಡುತ್ತೆ. ಸುಖವಾದ ಹೊದ್ದಿಕೆ! ಅತಿರಮ್ಯ! ಉದ್ದ ೯೦ ಅಂಗುಲ, ಅಗಲ ೬೪ ಅಂಗುಲ ಕ್ರಯ ರೂ ೩. ಎರಡನೆಯ ತರ ರೂ. ೪ (ಶುದ್ಧ ಉಣ್ಣೆ)

ಪ್ರದುಕ್ಕೋರಿ ರೇಷ್ಮೆ ವಸ್ತ್ರಗಳು. ರೂ. ೪ !!

ಅಂತು, ಹೊಸಗೆಲ್ಲಿ ಬೆಳ್ಳಗೂ ಹೆಂಗಸರಿಗೂ ಕಳೆ ಮಧ್ಯದಲ್ಲಿ ಕಾಣುವ ಶೈನ ಸೊಗಸಾದ ನಮೂನೆ ಪ್ರದುಕ್ಕೋರಿ ರೇಷ್ಮೆ ವಸ್ತ್ರಗಳು ಹೆಂಗಸರಿಗೆ ಯೋಗ್ಯವಾಗಿ ಬದಲಾಯಿಸದ ಗಟ್ಟಿ ಬಣ್ಣದ್ದಾಗಿ ೩ ವರ್ಷದವರೆಗೆ ಒಂದು ಚರಿಸಿ ಹಾಳಾಗದ ನಿಜಕ್ಕೂ ವಿಳಿಯ ರೂ ೩೦ ರ ರೇಷ್ಮೆ ವಸ್ತ್ರವನ್ನು ಮಾರಿಸುತ್ತ ೩ ಮೊಳ ದುದ್ದ ರೂ ೬ ಪಾಲು ಮೊಳದುದ್ದ ರೂ ೫

ಬಿಳಿ ರೇಷ್ಮೆ ಅಂಚು ' ಮದ್ರಾಸ್ ಸೀರೆ! ಚಾತುರ ಬಣ್ಣ

ಬಿಳಿಯ ಅಗ್ಗಾಂ ರೇಷ್ಮೆ ಅಂಚು ೩ ಅಂಗುಲದಗಲ ಒಡೆ ಇರ ಕೆಯ ೩ ವರ್ಷದ್ದ ರೇಷ್ಮೆ ಸೆರಗುಗಳಂ ಬ್ರೈಟ್ಟವಾದ ನೂಲಿನ ೩ ಮೊಳದಗಲ ೧೯ ಮೊಳದುದ್ದದ ಸೀರೆ ಕಪ್ಪು ಅಥವಾ ಕೆಂಪಿನ ಮೇಲಿನ ಮೇಘ ವರ್ಣದ್ದು ಕ್ರಯ ರೂ ೧೦—೮—೦ ಬಿಳಿಯ ರೇಷ್ಮೆಯ ಬೌಕಳಿಯಿಂದ ಕೂಡಿದ್ದು ರೂ ೧೪—೦—೦ ಎರಡಂಗುಲ ಅಂಚಿನ ಮಾರಿಗೆ ಸೀರೆ ರೂ ೩.

ವಿಳಾಸ ರಾವ್ ಎಂಪೋರಿಯಂ, ಸ್ಪೆಡನ್‌ಹಾಂ ರೋಡ್
ಪೇರಿಯಿರಿ. ಮದರಾಸ್.

ಮಹಾ ಬಾಧಾಪಹಾರಿಣಿಯು

76-17

ಇದನ್ನು ಉಪಯೋಗಿಸುವುದು ಪ್ರಪಂಚದಲ್ಲೇ ಇಲ್ಲವು

ಶ್ರೀ ನವೆಂಟೇಶ್ವರ ಎ ಕ್ಷಣೇ ಲೋಕದ ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸುವುದಕ್ಕೆಂದು ತಜ್ಞರುಗಳು ವರ್ತಕರು, ಕಾಫಿ ಪ್ಲಾಂಟರುಗಳ್, ಈ ಮೊದಲಾದ ಅನೇಕರು ಒಪ್ಪಿ ಮೆಚ್ಚುತ್ತಿದ್ದಾರೆ ಈ ರಸಾಯನವನ್ನು ಉಪಯೋಗಿಸಿದ ಮಾತ್ರಕ್ಕೆ ತಲೆನೋವು, ವಾಯುನೋವು, ಕೆಮ್ಮು, ಗಂಟಲು ನೋವು, ಹೊಟ್ಟೆನೋವು, ನಾನಾವಿಧ ವಾಯುರೋಗಗಳು, ಕೀಲುರೋಗಗಳು, ಹಲ್ಲು ನೋವು, ಕಿವಿ ಬೇನೆ ಸಂಧಿವಾತ ಗಳು ನೋವು, ಚೇಳು ಕಡಿದ ನೋವು, ಕಲ್ಲು ನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಬಹುಬೇಗನೆ ಪರಿಹಾರವಾಗುತ್ತವೆ. ಈ ಮೊಬೈಲಿನ ರ ಈ ಅನೇಕಭಾವಾದ ದೈವೀಕ ನೋವಿಲ್ಲ. ಸ್ಥಳದ ಮೂಲಕ್ಕಾಗಿ ನವ ನ್ನು ಪ್ರಾಕ್ಟಿಸ್, ಅದಂ ಕಟ್ಟನೇ ಆಸಗಿಸಿಬಿಡುತ್ತದೆ ಬೇಕಾದಂತ ಪತ್ರಿಕಾಕರ್ತರು ಇದಕ್ಕೆ ಸರ್ಟಿಫಿಕೇಟು ಕೊಟ್ಟಿರುವುದಲ್ಲದೆ ಪಾ ಹೊಗಳುತ್ತಾರೆ

ಕ್ರಯ ೬೫ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೬ ಆಣೆ ಅದರ ೩ ಅಥವಾ ಹೆಚ್ಚು ಬಾಟ್ಲಿ ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ತಾಲ್ಲೂಕು ರುಗಳಿಗೆ ೧೨ ಬಾಟ್ಲಿ ಒಂದೆ ಸಲ ತರಿಸಿಕೆ ಕಮಿಷನ್ ದಾರರಿಗೆ ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ ವೈದ್ಯರೂ ಬಳಸ ಮಾಡುತ್ತಾರೆ ಮುಖ್ಯ ವಿಜಾಲಯ ವಿಳಾಸ—

ಎಫ್. ಡಬ್ಲ್ಯು ಅರ್ಕೆ,
ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಹೊಸ ವರ್ಷದ ಬಹುಮಾನಗಳು.

136-8

ಈ ಕೆಳಗೆ ಕಂಡ ಪುಸ್ತಕಗಳಲ್ಲಿ ಒಂದು ರೂಪಾಯಿನ ಬೆಲೆ ಬಾಳುವ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೬ ಆಣೆಯ ಸೀತಾ ಚರಿತೆಯ ೧ನೇ ಭಾಗ, ೩ ಆಣೆಯ ಸ್ತೋತ್ರಮಾಲಿಕೆ, ೨ ಆಣೆಯ ಶೃಂಗಾರಶತಕ ಇವುಗಳಲ್ಲದೆ ಪ್ರತಿ ನಾಲ್ಕಾಣೆಗೂ ಒಂದೊಂದು ಟಿಕೆಟ್ಟನ್ನು ಕಳುಹಿಸುತ್ತೇವೆ ೨,೦೦೦ ಟಿಕೆಟ್ಟುಗಳಾದೊಡನೆಯೇ ೧೦೦ ರೂಪಾಯಿನ ಬಹುಮಾನಗಳನ್ನು ಹಂಚುತ್ತೇವೆ. ೧ನೇ ಬಹುಮಾನ ೨೫ ರೂಪಾಯಿ, ೨ನೇದು ೨೦ ರೂಪಾಯಿ, ೩ನೇದು ೧೨ ರೂಪಾಯಿ, ೪ನೇದು ೫ ರೂಪಾಯಿನ್ನೈದು ಬಹುಮಾನ, ೫ನೇದು ೩ ರೂಪಾಯಿನಾರು ಬಹುಮಾನ ಒಟ್ಟು ೧೪ ಬಹುಮಾನಗಳು

ಬಿ ವೆಂಕಟಚಾರ್ಯರ ಗ್ರಂಥಗಳು.—ಕೋಹಿನೂರು ೧೨ ಆಣೆ, ಮಾಲತಿ ೨॥ ಆಣೆ, ಅತ್ತಿಗೆ ೩ ಆಣೆ, ಇಂದಿರಾ ೬ ಆಣೆ, ರಾಧಾರಾಣಿ ೩ ಆಣೆ, ಬಲಿಷ್ಠನಾಥ ಮನೆಯಳಿಯ ೧॥ ಆಣೆ, ವೆನಿಸ್ ದೇಶದ ವಣಿಕ ೧॥ ಆಣೆ, ಕ್ಷತ್ರಿಯರಮಣಿ ೨ ಆಣೆ

ಪಂಡಿತ ಎಸ್ ಶ್ರೀಕಂಠಶಾಸ್ತ್ರಿಗಳ ನವೀನ ನಾಟಕ ಗ್ರಂಥಗಳು.—ನಿರುಪಮಾ, ೧೨ ಆಣೆ, ಪ್ರಿಯದರ್ಶಿಕೆ ೬ ಆಣೆ, ಕೃಷ್ಣವಿಜಯ ೬ ಆಣೆ, ಸೀತಾಚರಿತ್ರೆ ೮ ಆಣೆ, ಸತ್ಯವತೀ ಚರಿತ್ರೆ ೬ ಆಣೆ, ಉತ್ತರ ಸೀತಾಚರಿತ್ರೆ ೨ ಆಣೆ, ಮಾಲತೀಮಾಧವ ೬ ಆಣೆ

ನಿಮ್ಮ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ.
ದಿ ಜನರಲ್ ಏಜನ್ಸಿ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28-51

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಬಾಳುವ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಹುಳು, ಸಂದುಗಳ ನೋವು, ಮೈ ಕೈಕಾಲು ಸೆಳತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ಸನ್ನಿಪಾತ, ಅರೋಚಕ, ಇವಲ್ಲದೆ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಗೂ ದಾರಿಕೊಡದೆ, ವೀರ್ಯ ಪವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುದೋಷ, ಪಾಳ್ಯ ಎಳವು, ಜ್ವರ, ನಷ್ಟಜ್ವರ, ಕೃಕಶ್ಚಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿ ವರ್ಧಕವಾಗಿದೆ.

ಅನುಪಾನಸಹಿತ ವಿಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೬ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೬ ಆಣೆ

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,
ಎಸ್ ಎಸ್. ಆರ್. ವೈದ್ಯಶಾಲಾ.
ಲಕ್ಷ್ಮೀವಿಲಾಸ ರೋಡ್ ಮೈಸೂರು.

ಸನ್ ೧೯೦೮ ನೇ ಇಸವಿಯ

127-11

ಎ ನಂ ೧ ಜನೀವಾ ಬಿ ನಂ ೩ ಸಿ ನಂ ೧ ಜನೀವಾ ಡಿ ನಂ ೧

ಪಂಚಾಂಗ ಸಹಿತವಾದ ಇಂಗ್ಲಿಷು—ಕನ್ನಡ ಡೈರಿ

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಬುಕ್‌ಕೀಪರ್ ಸಮಸ್ತರಿಗೂ ಉಪಯೋಗವಾಗಿ ರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು:—ಕೆಲಕ ಸಂಗ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಚಕ್ರಗಳು, ರಜಾದಿನಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪ್ರೋನೋಟ್ ರುಸುಂ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜವಿರ್ಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪುಷ್ಕರ ಸ್ನಾನ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ಸಾಂಕ್ರಾಂತಿ, ಪಿತ ಕಂಪನಿ ದ ಪಟ್ಟಿ, ಧೋರಿಲೆಕ್ಕ, ದಿನವಾರುಬಿ ಸಹಿತ್ಯೆ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರಟ್ಟು ಹಾಕಿದೆ ಕೀವು ಸಾವರ್ಣ ಬೈಂಡು ಚಿನ್ನ ಬೆಳ (ಬೆಲೆಪಾಕಿದೆ ಕ್ರಯ—

ಎ ನಂಬರ್ ಚಿಕ್ಕದೈದು ೩ ಆಣೆ	ಸಿ ನಂಬರು ದೊಡ್ಡದು ೬ ಆ.
ಬಿ. ಮಧ್ಯದ್ದು ೫ ,,	ಡಿ ,, ಮಧ್ಯದ್ದು ೮ ,,

ಹೊಸ ನಮೂನೆ ಉತ್ಕೃಷ್ಟವಾದ 'ಜನೀವಾ' ಡೈರಿ ಇದು ಸರ್ಕಾರದಲ್ಲಿ ರಿಜಿಸ್ಟರಾಗಿದೆ

"ಜನೀವಾ" ೧ ನಂ ೬ ಆ. | "ಜನೀವಾ" ೨ ನಂ. ೩ ಆ.

ಪೋಸ್ಟ್ ಚಾರ್ಜು ಬೇರೆ ಒಂದೇ ನಮೂನೆಯ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ. ವಿ ಪಿ ಮೂಲಕವೂ ತರಿಸಿಕೊಳ್ಳಿ.

ಟಿ. ಕೆ. ಮತ್ತು ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಬಳ್ಳಾಪುರ ಪೇಟೆ, ಬೆಂಗಳೂರು ಸಿಟಿ.

ನರಗಳ ಅಪಾರವಾದ ದುರ್ಬಲವನ್ನು ಪೆರೂನಾವು ಅದ್ಭುತವಾದ ರೀತಿಯಲ್ಲಿ ನಿವಾರಣೆ ಮಾಡಿರುತ್ತದೆ.

ಶರೀರಗತವಾದ ಶೈತ್ಯನಿವಾರಣೆಗೆ ಪೆರೂನಾ ಅವಶ್ಯವಾಗಿದೆ.

ನರಗಳ ದುರ್ಬಲವನ್ನು ವಾಸಿಮಾಡುವುದರಲ್ಲಿ ಇದು ವಿಶೇಷ ಪ್ರಖ್ಯಾತವಾಗಿದೆ.

ಹೆಚ್ಚಾದ ಕಷ್ಟಕೆಲಸದಿಂದಲೂ, ಮನಸ್ಸನ್ನು ವಿಶೇಷವಾಗಿ ಕಷ್ಟಪಡಿಸುವುದರಿಂದಲೂ, ಬೇಸಿಗೆಯ ಅಪಾರವಾದ ಉಷ್ಣದ ದೆಸೆಯಿಂದಲೂ ಶರೀರದ ಧರ್ಮವು ನಿಶ್ಶಕ್ತಿಯಾಗಿದ್ದರೆ ಪೆರೂನಾವು ಇದನ್ನು ಸಂಪೂರ್ಣವಾಗಿ ನಿವಾರಣೆ ಮಾಡಿ, ಶಕ್ತಿಯನ್ನು ಕೊಟ್ಟು, ಪುಷ್ಟಿಯನ್ನುಂಟುಮಾಡುತ್ತದೆ

ಬೇಸಿಗೆಯು ದೀರ್ಘ ಕಾಲವಿರುವಂಥಾ ರಾಜ್ಯಗಳಲ್ಲಿ ಜನರು ಧಗೆಯ ತೀಕ್ಷ್ಣವನ್ನು ಸುಲಭವಾಗಿ ಸಹಿಸಿಕೊಳ್ಳುವವರಾಗಿದಾರೆಂದು ಹೇಳಬಹುದು ಆದರೆ ಅಪಾರವಾದ ಧಗೆಯೂ ಸಹಿಸಲಶಕ್ಯವಾದ ಚಳಿಯೂ ಒಂದರ ಹಿಂದೊಂದು ಥಟ್ಟನೆ ಪ್ರಾಪ್ತವಾಗತಕ್ಕಂಥಾ ದೇಶಗಳಲ್ಲಿ ಅನೇಕರ ಶರೀರಧರ್ಮವು ಆ ಉಷ್ಣವನ್ನು ಸಹಿಸಿಕೊಳ್ಳಲು ಶಕ್ತಿಯುಳ್ಳದ್ದಾಗಿರುವುದಿಲ್ಲ. ಇದರಿಂದಲೇ ಬಹಳ ಕಾಯಿಲೆಗಳು ಉಂಟಾಗುತ್ತವೆ

ಹೊಟ್ಟೆಗೆ ಹಿತ ಹಿಡಿಯುವುದು ಅಜೀರ್ಣವಾಗಿರುವುದು, ಆಹಾರ ಅರಗದೆ ಇರುವುದು ಇವೆಲ್ಲಾ ಉಷ್ಣಕಾಲದಲ್ಲಿ ಪ್ರಾಪ್ತವಾಗುವ ಅಲ್ಪರೋಗಗಳೆಂದು ತಿಳಿಯಬಾರದು

ಆಹಾರ ಅರಗುವುದರಲ್ಲಿ ವ್ಯತ್ಯಾಸವಾದರೆ ಆಹಾರದ ಮುಖ್ಯ ಭಾಗಗಳನ್ನು ಶರೀರವು ಹೀರಿಕೊಳ್ಳುವುದಿಲ್ಲ ಇದರಿಂದ ಶರೀರಕ್ಕೆ ಪುಷ್ಟಿ ಕಡಮೆಯಾಗುವುದು

ಅಜೀರ್ಣದಿಂದ ದುರ್ಬಲವು.

ದುರ್ಬಲ, ಸೋಮಾರಿತನ, ಜಿಗುಪ್ಸೆ, ಬುದ್ಧಿ ಮಾಂದ್ಯ, ಮಾಂಸಖಂಡಗಳ ಬಲಹೀನತೆ, ನರಗಳ ದುರ್ಬಲ, ಇವೆಲ್ಲಾ ಕ್ರಮಕ್ರಮವಾಗಿ ಪ್ರಾಪ್ತವಾಗುವವು ಇಂಥಾ ಸಮಯದಲ್ಲಿ ಜೀರ್ಣಶಕ್ತಿಯನ್ನು ಪಟುವಾಗಿ ಮಾಡಿಕೊಳ್ಳುವುದಕ್ಕೆ ಪರಿಹಾರವನ್ನು ನೋಡಿ ಮಾಡಿಕೊಳ್ಳಬೇಕು ಪೆರೂನಾ ಸೇವನೆಯು ಜೀರ್ಣಕೋಶಗಳನ್ನು ಕ್ರಮಪಡಿಸುತ್ತದೆಂದು ಪ್ರಖ್ಯಾತಿ ಪಡೆದಿರುತ್ತದೆ ಇದಕ್ಕೆ ಅಂಥಾ ಶಕ್ತಿಯುಂಟೆಂದು ಸಾವಿರಾರು ಸಂದರ್ಭಗಳಲ್ಲಿ ದೃಷ್ಟಾಂತಕ್ಕೆ ಬಂದಿದೆ ವಾಸಿಯಾಗುವುದೇ ಇಲ್ಲವೆಂಬ ನಿರಾಶೆಯುಂಟಾಗಿದ್ದಂಥಾ ಅನೇಕರಿಗೆ ಪೆರೂನಾವು ಅದ್ಭುತವಾಗಿ ಆರೋಗ್ಯವನ್ನು ಕೊಟ್ಟಿದೆ

ಆದರೆ ಪೆರೂನಾದಲ್ಲಿ ಈ ಗುಣವಿರುವುದೇನೂ ಆಶ್ಚರ್ಯವಲ್ಲ ಶರೀರದೊಳಗಿರತಕ್ಕ ಅಂಗಗಳ ಸುತ್ತಲೂ ಆವರಿಸಿಕೊಂಡಿರುವಂಥಾ ನರಗಳ ಮಾಂಸಸ್ನಾಯುಗಳನ್ನು ಶಕ್ತಿಪಡಿಸುವುದೇ

ಪೆರೂನಾವಿನ ಉತ್ತಮೋತ್ತಮವಾದ ಗುಣ.

ಇದರ ಕೆಲಸ ಇದರಿಂದ ನರಗಳಲ್ಲಿ ಶಕ್ತಿಯು ಯಥಾಪ್ರಕಾರ ಕೂಡಿಕೊಳ್ಳುತ್ತದೆ ಆ ಮೇಲೆ ಅಂಗಗಳೆಲ್ಲಾ ತಮ್ಮ ತಮ್ಮ ಕಾರ್ಯವನ್ನು ಕ್ರಮವಾಗಿ ಮಾಡಿಕೊಳ್ಳುತ್ತಾ ಬರುವವು ಆದಕಾರಣ ನಿಮಗೆ ಶರೀರದರ್ಮದಲ್ಲಿ ಮೇಲ್ಕಂಡಂಥಾ ಕಾಯಿಲೆಗಳೇನಾದರೂ ಇದ್ದರೆ ಒಂದು ಬಾಟ್ಲ ಪೆರೂನಾ ತೆಗೆದುಕೊಂಡು ಸೇವಿಸಿ ನೋಡಿರಿ. ಒಂದು ಬಾಟ್ಲ ಸೇವಿಸುವುದರೊಳಗಾಗಿ ಅದರಿಂದ ನಿಮಗೆ ಫಲವಾಗುವುದೋ ಇಲ್ಲವೋ ಅನುಭವಕ್ಕೆ ಬರುತ್ತದೆ

ಆದರಿಂದ ವಿಶೇಷ ಪ್ರಯೋಜನವಾಗಿದೆ ಎಂದು ಬಹುಜನರು ವಿವರಿಸಿ ನಮ್ಮಲ್ಲಿಗೆ ಕಾಗದಗಳನ್ನು ಬರೆದಿರುತ್ತಾರೆ ಅವುಗಳನ್ನು ಓದಿದಾಗ ಬರೆದವರಿಗೆ ಈ ಔಷಧದಿಂದ ಎಷ್ಟು ಪ್ರಯೋಜನವೂ ಸಂತೋಷವೂ ಉಂಟಾಯಿತೋ ತಿಳಿಯುತ್ತದೆ ಕಷ್ಟವನ್ನು ನಿವಾರಣೆಮಾಡುವುದರಲ್ಲೂ ಆರೋಗ್ಯವನ್ನು ಕೊಡುವುದರಲ್ಲೂ ಪೆರೂನಾವು ಎಷ್ಟು ಚನ್ನಾಗಿ ದೇಹದ ಅಂಗಾಂಗಗಳನ್ನು ವ್ಯಾಪಿಸಿ ತನ್ನ ಕೆಲಸವನ್ನು ಸಾರ್ಥಕಮಾಡುವುದೋ ವಿವರಿಸಲಾರೆವು

ಮೆ' ಪಿ ಬ್ರಿಯರ್, ೩೩ ಮೂರನೆ ಬೀದಿ, ಲಿಮ್ಯಲೊ, ಕ್ವಿಬೆಕ್.

"ನನ್ನ ಗುಮಾಸ್ತೆ ಕೆಲಸದಲ್ಲಿ ನನಗೆ ತುಂಬಾ ಪಣವಾಗಿ ಒಂದು ವರುಷದ ಕೆಳಗೆ ಬಹಳ ನಿಶ್ಶಕ್ತಿಯಾಯಿತು ನನ್ನ ಉದ್ಯೋಗವು ನನಗೆ ಬಹು ಕಠಿಣವಾಗಿ, ನನ್ನ ನರಗಳು ತುಂಬಾ ಬಲಹೀನವಾದವು ಕಚೇರಿಯಲ್ಲಿದ್ದಾಗ ಗಂಟೆ ಎಷ್ಟುಬೇಗ ಮುಗಿದೀತೋ ಎಂದು ಎದುರು ನೋಡುವುದೇ ನನ್ನ ಕುತೂಹಲವಾಗಿದ್ದಿತು 38 41

"ನಾನು ಕ್ರಮೇಣ ದುರ್ಬಲನಾಗುತ್ತಾ ಬಂದೆನು ಕೆಲವು ತಿಂಗಳ ಮೇಲೆ ನನ್ನ ಕಣ್ಣು ಮಂದವಾಗಿ ಹೋಯಿತು ತರುವಾಯ ನಾನು ಕೆಲಸವೇನೂ ಮಾಡಲಾರದೆ ಬಿದ್ದುಕೊಂಡೆನು ಹಾಸಿಗೆ ಬಿಟ್ಟೇಳದಂತಾಯಿತು. ನನ್ನ ಎದೆಯು ಬಡಿದುಕೊಳ್ಳುವುದೂ ಆರಂಭವಾಯಿತು

"ಒಬ್ಬ ವೈದ್ಯನ ಕೈಲಿ ಕೆಲವು ವಾರಗಳ ತನಕ ಔಷದ ತೆಗೆದುಕೊಂಡೆನು ಆದರೂ ನನಗೆ ಒಂದೇ ಸಮನಾಗಿದ್ದಿತು ಡಾಕ್ಟರು ಕೂಡ ಇನ್ನೇನೂ ಚಿಕಿತ್ಸೆ ಮಾಡಲಾರದೆ ಹೋದದ್ದನ್ನು ನೋಡಿ, ನಾನೇ ಸ್ವತಃ ಔಷಧವನ್ನು ಮಾಡಿಕೊಳ್ಳೋಣವೆಂದು ಪ್ರಯತ್ನ ಪಟ್ಟೆನು ಪತ್ರಿಕೆಗಳಲ್ಲಿ ಪ್ರಕಟವಾದ ಬಲಕಾರಿಗಳೆಂಬ ಹಲವು ಔಷಧಗಳನ್ನು ಕೊಂಡು ಸೇವಿಸಿದಾಗ್ಯೂ ನನಗೆ ಪ್ರಯೋಜನವೇನೂ ಕಾಣಲಿಲ್ಲ.

"ತರುವಾಯ ಪೆರೂನಾವನ್ನು ಸೇವಿಸಿ ನೋಡೋಣವೆಂದು ಪ್ರಾರಂಭಿಸಿದೆನು ಆದರೆ ಒಂದು ವಾರ ತೆಗೆದುಕೊಳ್ಳುವಷ್ಟರೊಳಗೇ ನನ್ನ ದೇಹಸ್ಥಿತಿಯು ಚನ್ನಾಗುವಂತೆ ನನಗೇ ತೋರಿಬಂದಿತು ಇನ್ನೂ ಕೆಲವು ವಾರಗಳು ಕಳೆದ ತರುವಾಯ (ಈ ಔಷಧವನ್ನು ಸೇವಿಸುವುದರಲ್ಲಿ ಅನುಸರಿಸಬೇಕಾದಂಥಾ ಕ್ರಮವನ್ನು ಸ್ವಲ್ಪವೂ ತಪ್ಪಲಿಲ್ಲ) ನನ್ನ ಕೆಟ್ಟುಹೋಗಿದ್ದ ಶರೀರಸ್ಥಿತಿಯೆಲ್ಲಾ ಕ್ರಮಪಟ್ಟಿತು ನನ್ನ ದೃಷ್ಟಿಯು ಚನ್ನಾಯಿತು ಬೇಗನೆ ನನ್ನ ಕೆಲಸದ ಮೇಲೆ ಹೋಗುವಹಾಗಾದೆನು

"ನಾನು ನಿರೀಕ್ಷಿಸಿಕೊಂಡಿದ್ದಂತೆ ನನಗೆ ಸಂಪೂರ್ಣ ಗುಣವಾಯಿತು ಮೂರು ವಾರಗಳ ಮೇಲೆ ನಾನು ಆಫೀಸಿಗೆ ನನ್ನ ಗುಮಾಸ್ತೆ ಕೆಲಸದ ಮೇಲೆ ಹಾಜರಾದೆನು ಪೆರೂನಾ ಖಂಡಿತವಾಗಿ ನನ್ನ ವಿಷಯದಲ್ಲಿ ಅದ್ಭುತವಾದ ಔಷಧವಾಗಿ ಪರಿಣಮಿಸಿತು ನನ್ನ ಹಾಗೇ ಅಪಾರ ಕೆಲಸದಿಂದ ಶಕ್ತಿಯನ್ನೆಲ್ಲಾ ಹಾಳುಮಾಡಿಕೊಂಡಿರುವಂಥಾವರು ಇದನ್ನು ಸೇವಿಸಿದರೆ ಖಂಡಿತವಾಗಿಯೂ ಅವರಿಗೆ ತುಂಬಾ ಶಕ್ತಿಪುಷ್ಟಿಗಳನ್ನು ಅದು ಕೊಡುತ್ತದೆ"

ಯುದ್ಧದ ಬಾತ್ಮಿದಾರನ ಅಸಿಸ್ಟೆಂಟು ಪೆರೂನಾವನ್ನು ಹೊಗಳುತ್ತಾನೆ

ಚೀಣಾದಲ್ಲಿ ಯುದ್ಧ ನಡೆದಾಗ್ಗೆ ಅಲ್ಲಿನ ಬಾತ್ಮಿದಾರನ ಅಸಿಸ್ಟೆಂಟು ಮಿ॥ ಎಚ್' ಬಿ. ವ್ಯಾಕಲಿ, ಕೇರಾಫ್' ಬ್ಲಾಕ್' ಮತ್ತು ವೈಟ್', ೬೮೮ ಕ್ರೇಗ್' ಬೀದಿ, ಮಾಂಟ್ರಿಯಲ್', ಕ್ಯಾನಡಾ, ಈತನು ಬರೆಯುವುದು —

"ಬಹಳ ಚಳಿ ಅಥವಾ ಬಹಳ ಉಷ್ಣವಾದ ದೇಶಗಳಲ್ಲಿ ಸಂಚಾರ ಮಾಡುವಾಗ್ಗೆ ಒಂದು ಬಾಟ್ಲ ಪೆರೂನಾ ತೆಗೆದುಕೊಂಡು ಹೋದರೆ ಅದು ಎಂಥಾ ಪ್ರೇಮ ಪಾತ್ರವಾದ ಸ್ನೇಹಿತನಂತೆ ಪರಿಣಮಿಸುವುದೋ ಗೊತ್ತಾದೀತು ನಾನು ತೆಗೆದುಕೊಂಡು ಹೋದ ಪದಾರ್ಥಗಳ ಪೈಕಿ ಇದನ್ನು ತುಂಬಾ ಹೊಗಳುತ್ತೇನೆ ವಿಶೇಷ ಉಷ್ಣವಾಗಿದ್ದರೆ ಪೆರೂನಾ ಶಮನ ಮಾಡುತ್ತದೆ, ಅಥವಾ ಶೀತ ಬಹಳವಾಗಿ ಕೆಮ್ಮುಗಸೆ ಉಂಟಾಗಿದ್ದರೂ ಅದನ್ನು ಕೂಡ ಪೆರೂನಾ ವಾಸಿಮಾಡುವುದು

"ಇಲ್ಲವೇ, ನಿದ್ದೆ ಬಾರದಿದ್ದರೂ, ಆಹಾರ ರುಚಿಸದಿದ್ದರೂ ಪೆರೂನಾ ಅವನ್ನು ಕ್ರಮಪಡಿಸಿ, ದೇಹದೊಳಗಿನ ಭಾಗಗಳನ್ನು ಬಲಪಡಿಸುತ್ತದೆ ನಾನು ಅದನ್ನೇ ತಿಂಗಳು ಗಟ್ಲೆಯಾಗಿ ಸೇವನೆಮಾಡಿದೇನೆ ಆದ್ದರಿಂದ ಅದು ಕಷ್ಟಕಾಲದಲ್ಲಿ ತುಂಬಾ ಉಪಕಾರವಾದುತ್ತದೆಂದು ಹೇಳುವುದಕ್ಕೂ ಅದನ್ನು ಎಲ್ಲರೂ ತೆಗೆದುಕೊಳ್ಳುವಂತೆ ಶಿಫಾರಸು ಮಾಡುವುದಕ್ಕೂ ಸಂತೋಷವುಳ್ಳವನಾಗಿದೇನೆ"

ದೇಹಸ್ಥಿತಿ ಎಷ್ಟೇ ಕೆಟ್ಟಿದ್ದರೂ ಪೆರೂನಾ ಗುಣಮಾಡಿ ಆರೋಗ್ಯ ಕೊಡಬಲ್ಲದು

ಮಿಸೆಸ್' ಜೆ ಕೋಲ'ಸ್, ೪೫೧ ನೊತ್ರ ಡೇಂ ಬೀದಿ, ಪೈಸೆಂಟ್', ಮಾಂಟ್ರೀಲ್', ಕ್ಯಾ, ಈಕೆ ಬರೆಯುವುದು —

ಕಳೆದ ಚಳಿಗಾಲದಲ್ಲಿ ನನಗೆ ತುಂಬಾ ಶೀತವಾಯಿತು ಅದು ನನ ನೆತ್ತಿಗೂ ಗಂಟಲಿಗೂ ವ್ಯಾಪಿಸಿದ್ದರಿಂದ ನಾನು ಮನೆ ಕೆಲಸಗಳನ್ನು ಮಾಡುವುದಕ್ಕಾಗದೆ ಹಾಸಿಗೆಯಲ್ಲೇ ಬಿದ್ದುಕೊಂಡಿದ್ದೆನು ಒಬ್ಬ ಸ್ನೇಹಿತನು ಒಂದು ಪೆರೂನಾ ತರಿಸಿ ತೆಗೆದುಕೋ ಎಂದು ಹೇಳಿದನು. ಅದರಂತೆ ನಾನು ಒಂದು ಬಾಟ್ಲ ತರಿಸಿ ಸೇವಿಸುವುದಕ್ಕೆ ಆರಂಭಮಾಡುವಾಗ್ಗೆ ಗುಣಕಾಣುತ್ತಾ ಬಂದಿತು ಹಾಗೇ ನಾನು ಮೂರು ಬಾಟ್ಲ ತೆಗೆದುಕೊಂಡದ್ದರಿಂದ ಈಗ ನನಗೆ ಪೂರ್ವದಂತೆ ಆರೋಗ್ಯವಾಗಿರುತ್ತದೆ ನನ್ನ ಮಗಳ ಶರೀರಸ್ಥಿತಿಯು ಬಹಳ ಕೆಟ್ಟುಹೋಗಿದ್ದಿತು ಅವಳಿಗೂ ಪೆರುನಾ ಸೇವನೆಯಿಂದಲೇ ಒಳ್ಳೇ ಆರೋಗ್ಯ ಉಂಟಾಗಿದೆ"

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ. ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ—ಈ ಔಷಧ ಸಿಕ್ಕುವ ಸ್ಥಳಗಳು:—

(೧) ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು . ಅಥವಾ.

... ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

17—1—1908 ರಿಂದ 24—1—1908 ರ ವರೆಗೆ

ಸ್ಥಳ.	ಪ್ಲೇಗ್ ಆಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ಆಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	5	17	0	0
ಮೈಸೂರು ,,	24	23	0	0
ಬೆಂಗಳೂರು ಡಿಸ್ಟ್ರಿಕ್ಟು	126	112	0	0
ಮೈಸೂರು ,,	41	42	0	2
ಕೋಲಾರ್ ,,	55	33	56	34
ಕೋಲಾರ್ ಚಿನ್ನದ ಗಣಿಗಳು	12	13	0	0
ತುಮಕೂರು ಡಿಸ್ಟ್ರಿಕ್ಟು	16	16	0	0
ಹಾಸನ ,,	18	8	24	25
ಚಿತ್ರದುರ್ಗ ,,	13	12	0	0
ಕಡೂರ್ ,,	35	17	2	2
ಶಿವಮೊಗ್ಗ ,,	*	*	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	347	293	84	63

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಪ್ಲವಂಗನಾಮ ಸಂವತ್ಸರದ ಮಾಘ ಶುದ್ಧ ಪಂಚಮಿ ಗುರುವಾರದಿಂದ ಮಾಘ ಶುದ್ಧ ಏಕಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಫೆಬ್ರವರಿ.

ತಾ.	ವಾರ.		ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ಹೇದಿ ಮಕರ ಮಾಸ
6	ಗುರು	,,	ಪಂಚಮಿ	54-12	ಉತ್ತಾಭಾ	20 56	24
7	ಶುಕ್ರ	*	ಷಷ್ಟಿ	51-41	ರೇ	19 29	25
8	ಶನಿವಾ	¶	ಸಪ್ತಮಿ	50 12	ಅ	18 40	26
9	ರವಿವಾ	.	ಅಷ್ಟಮಿ	49 18	ಭ	14 12	27
10	ಚಂದ್ರ	†	ನವಮಿ	50 19	ಕೃ	21 3	28
11	ಕುಜ	,,	ದಶಮಿ	52-58	ರೋ	20-1	29
12	ಬುಧ	‡	ಏಕಾದಶಿ	56-20	ಮೃ	27-50	1

,, ಮದನಪಂಚಮಿ * ಕುಮಾರಷಷ್ಠಿವ್ರತ ¶ ರಥಸಪ್ತಮಿ, ಶ್ರೀರಂಗಪಟ್ಟಣದಲ್ಲಿ ರಂಗನಾಥರಥ. :: ಮಹಾವ್ಯತೀಪಾತ, ಭೀಷ್ಮಾಷ್ಟಮಿ † ಮಧ್ವರಾಯರ ಪುಣ್ಯದಿನ ;; ಮಂಡಕತೊರೆ ಮಲ್ಲಿಕಾರ್ಜುನಸ್ವಾಮಿ ರಥ ‡ ಸ್ಮಾರ್ತ ಭೀಷ್ಮ ಏಕಾದಶಿ

ಪೇಟೆಯ ಧಾರಣೆ

ದಿನಸಿ		ಮೈಸೂರು.	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ.	೧೩ ೦-೦	೧೪-೧-೦
ಕಂಬಾತಿ ಅಕ್ಕಿ ಅವಲ್	.	೧೩-೮-೦	೧೩ ೮-೦
,, ದುಯಂ		೧೩-೦-೦	೧೩ ೪-೦
ಜಾಪ್ರಾಣ ಅಕ್ಕಿ	.	೧೩-೦ ೦	೧೪-೦-೦
ಸಣ್ಣಕ್ಕಿ ಅವಲ್	.	೧೫-೮-೦	೧೬-೦-೦
,, ದುಯಂ	.	೧೫ ೦-೦	೧೫-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೩-೮-೦	೧೫-೦-೦
,, ದುಯಂ		೧೨ ೮-೦	೧೪-೦-೦
ಸೈರ ರಾಗಿ ಪಲ್ಲಾ ೧ಕ್ಕೆ		೬-೪-೦	೬ ೮-೦
ಕಾರ್ರಾಗಿ		೬-೦-೦	೬ ೪ ೦
ಜೋಳ	.	೬ ೦ ೦	೬ ೮ ೦
ಹಲಸಂದೆ ಪಲ್ಲಾ ೧ಕ್ಕೆ	.	೧೦ ೮-೦	೧೧ ೦ ೦
ಬಿಳೀ ಅವರೆ		೮-೧೪-೦	೮ ೦ ೦
ಹೆಸರು		೧೦ ೧-೦	೧೨ ೦ ೦
ಉದ್ದು		೧೩-೦ ೦	೧೨ ೦ ೦
ಕಡಲೆ		೧೪-೮-೦	೧೩-೦ ೦
ಎಳ್ಳು ಪ ೧೨ ಕ್ಕೆ	..	೨೪-೮-೦	೨೩ ೮ ೦
ಹುರುಳಿ	..	೫ ೮-೦	೬ ೦ ೦
ವರಳು ೧-೦೩ ಸೇರಿಗೆ	.	೧೨-೦-೦	೧೨ ೦ ೦
ಸೀಗೇಕಾಯಿ ಮಣ ೧ಕ್ಕೆ	.	೨-೮-೦	೧ ೧೨ ೦
ಮೆಣಸಿನಕಾಯಿ	..	೨-೮-೦	೨-೮-೦
ದುಯಂ	..	೨-೪-೦	೨-೬ ೦
ಬೆಲ್ಲ ದೊಡ್ಡ ಅಚ್ಚು	..	೫-೦-೦	ಪಂ೧-೧೨ ೦
ಒಳ್ಳೆಣ್ಣೆ ಮಣ ೧ಕ್ಕೆ	..	೬-೪-೦	೬-೦-೦
ಹರಳೆಣ್ಣೆ ,,	..	೪-೧೨-೦	೪ ೮ ೧
ಕೊಬ್ಬರಿ ಪಲ್ಲಾ ೧ಕ್ಕೆ	..	೫-೦-೦	೬ ೪ ೦
ಉಪ್ಪು ,,	..	೫-೦-೦	೫ ೧೦ ೦
ಹುಣಸೇ ಹಣ್ಣು	..	೨-೮-೯	೨ ೦ ೦
,, ಹಳೇದು	..	೧-೮	೧ ೮-೦
ತುಪ್ಪ ಮಣ ೧ಕ್ಕೆ	..	೧೩-೦ ೦	೧೫ ೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	.	೪-೧೫-೦	೪ ೦-೦
ತೆಂಗಿನಕಾಯಿ ೧೦೦ ಕ್ಕೆ	..	೩-೮-೦	೩ ೦ ೦
ಆಳರೇಕಾಯಿ ಮಣ ೧ಕ್ಕೆ	.	೧-೦-೦	೧-೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	.	೦-೧೨-೦	೦-೧೨-೦
ಚಿನ್ನ (ಪವನ್) ಕಂಟು	..	೧೫-೬-೦	೧೫-೬-೦
,, ,, ಪಸಿಮೆ	..	೧೫-೧೦-೦	೧೫-೮-೦
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	೨೪-೧೨-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೩೫-೦-೦	೩೧-೮ ೦

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore. 6/2/1908.

REGISTERED M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಬಿ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೮ ನೇ ಇಸವಿ ಫೆಬ್ರವರಿ ತಾರೀಖು ೧೩ ನೇ ಗುರುವಾರ. ಸಂಚಿಕೆ ೩೭

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

27 51

ತರಿಸಿಕೊಳ್ಳಿರಿ ತ್ವರೆಯಾಗಿಯಿರಿ ಅಮೃತಾಂಜನ ಸರ್ವಲೋಕರಂಜನ ಸರ್ವವ್ಯಾಧಿನಾಶನ ಚಿಕಿತ್ಸಾ ... ದೇಹಾಂಗಗಳಿಗ ಸಂಜೀವನ ... ಮನೋರಂಜನ ಬೆಲೆಯಲ್ಲಿ ಒಳ್ಳೆ ... ಅಮೃತ ... ಕೊಳ್ಳುವವರಲ್ಲಿ ಮಾಡುತ್ತಾರೆ ... ಕಂಡುಬರುವದಿಲ್ಲವಾದರೆ ... ಹಿಂತಿರುಗಿ ಕೊಡಲ್ಪಡುವದು ... ತರಿಸಿಕೊಂಡವರಿಗೆ ... ಬೆಲೆಯ ಕಸ ಉಚಿತವಾಗಿ ... ವನು

ನಿಶ್ಯಂಕೆಯಾಗಿ ಭಾರತವರ್ಷೀಯ ಔಷಧಗಳಿಂದ ತಯಾರಿಸಿದ ಹೊರುಪಯೋಗಕ್ಕೋಸುಗ ಮುಲಾಮು ಇದರಿಂದ ತಲೆನೋವು, ಶಿರೋವೇದನ ವಾತ, ಸಂಧಿವಾತ ಪಕ್ಷವಾತ, ಗಂಟ್ಲು ನೋವು ಹೊಟ್ಟೆನೋವು ಗಂಟ್ಲು ನೋವು ... ಚಳಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ

ಈ ಕಂಪನಿಯವರು ಬಹಳ ಸಮೂನೆಯ ಔಷಧಿಗಳನ್ನು ತಯಾರಿಸುವದರಿಂದ ಕ್ಯಾಟಲಾಗ್ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

ಬಾಟ್ಲಿ ಒಂದಕ್ಕೆ ಕಿಮ್ಮತು ೦—೮—೦ ಪೋಸ್ಟು ಖರ್ಚು ೦—೪—೦

ಗಳಕರ್ಣದ ಮುಲಾಮು.

... ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ ಇದ ... ಹಿಂತಿರುಗಿ ಕೊಡಲ್ಪಡುವದು ಡಬ್ಬಿ ಒಂದಕ್ಕೆ ಕಿಮ್ಮತ್ತು ೦—೪—೦ ಪೋಸ್ಟು ಖರ್ಚು ೦—೩—೦

ದಂತಮಂಜನ —ಹಲ್ಲುಗಳಿಂದ ... ನಿಲ್ಲಿಸುತ್ತದೆ ಹಲ್ಲುಗಳು ಗಟ್ಟಿಯಾಗುತ್ತವೆ ಹಲ್ಲುಗಳು ಬೆಳ್ಳಗಾಗುತ್ತವೆ ಹಲ್ಲು ... ತೋರುತ್ತದೆ ಡಬ್ಬಿ ಒಂದಕ್ಕೆ ೦—೩—೦ ಪೋಸ್ಟು ಖರ್ಚು ೦—೩—೦

ವಶ್ಯಗುಟಿಕ —... ಸ್ಪರ್ಶೇಂದ್ರಿಯ ... ನಿಲ್ಲಿಸುತ್ತದೆ ರಕ್ತ ... ಡಬ್ಬಿ ಒಂದಕ್ಕೆ ... ಪೋಸ್ಟು ಖರ್ಚು ೦—೩—೦

ಕೇಶವರ್ಧಿನಿ —... ಕೂದಲುಗಳನ್ನು ಬೆಳೆಸುವದು, ಕೂದಲುಗಳನ್ನು ಕಪ್ಪುಮಾಡುವದು, ... ಬಾಟ್ಲಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೩—೦

ವಿಳಾಸ —ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್. ಪೋರ್ಟ್, ಮುಂಬಯಿ.

ಟೆಲಿಗ್ರಾಫು ಅಡ್ರೆಸು—'ಅಮೃತಾಂಜನ.' ಮುಂಬಯಿ.

ಕಾರ್ಡು ಸೈಜು ೪| × ೩|

ಫೋಟೋ ತೆಗೆಯುವ

ಫೋ ಟೋ ಕ್ಯಾ ಮೆ ರಾ.

84 26

ಬೆಲೆ ಪಕ್ಕಾ ಮೂರು ರೂಪಾಯಿ

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿ ಕೊಡುವೆವು ಎಷ್ಟೋ ಕಡೆಗೆ ಇದಕ್ಕೆ ೧೫ ರಿಂದ ೨೫ ರೂ ಬೆಲೆ ... ಆದರೆ ಇದರ ಬರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು ಟಪ್ಪಾಲ್ ಖರ್ಚು ... ಅನ್

ಇದು ಸಿಕ್ಕತಕ್ಕ ವಿಳಾಸ —

ಛಗನ್‌ಲಾಲ ಭಗನ್‌ಲಾಲ ಮಹಾಜನ ಠಾಕೂರದ್ವಾರ ರೋಡ, ಪೋಸ್ಟ ಕಾಲಬಾದೇವಿ ಮುಂಬಯಿ

ಜ್ವ ರ ಹ ರಿ 118-15



ಇದ ಸಾಧಾರಣ ಜ್ವರ, ಚಳೀಜ್ವರ, ಮೈರೀಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ಗುಣಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ ಚಳ್ಳಕೆರೆಯಲ್ಲಿರುವ ... ಇಲಾಖಾ ಸಬ್ ಡಿವಿಜನ್ ಆಫೀಸರ್ ... ವೆಂಕಟಪತಿ ಅಯ್ಯರವರು—... ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ... ಸೀಸೆಯಿಂದ ... ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳ ... ದರಿಂದ ದಯವಿಟ್ಟು ಇನ್ನೊಂದು ... ಸೀಸೆಯನ್ನು ... ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೬ ರೂ, ೧—೮ ರೂ, ರೂ ... ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

❋❋❋❋❋❋❋❋❋

ಓ ಮ ಂ ಕ ರ್ಪೂ ರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—... ದೃಷ್ಟಿಯಲ್ಲಿ ಮಹೌಷಧವಾಗಿ ಪರಿಣಮಿಸಿ, ... ವದು ಇದು ಹೆಂಗಸರು ತಿಂಗಳಿಗೆ ... ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ... ಕ್ರಯದ ದರದ ... ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—... ನಾನು ನನ್ನ ... ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ... ಅಜೀರ್ಣ ... ರೋಗಿಗಳಿಗೆ ಕೊಡುತ್ತೇನೆ ... ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಾರೆ

ಈ ಎರಡು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

... ದ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಸನ್ ೧೯೦೮ ನೇ ಇಸವಿಯ

125 12

... ಜನೇ... ಬಿ ಸಂ... ವರೆಗೆ ...

ಬಂದ ೧೯ ಸಹಿತವಾದ ಇಂಗ್ಲಿಷ್—ಕನ್ನಡ ಡೈರಿ

ಈ ಡೈರಿಗಳ ಪ್ರಕಾಶಕರು ... ಕಂಟ್ರಾಕ್ಟರು, ... ಉಪಯೋಗವಾಗಿ ... ಅಧಿಕವಾಗಿರುವ ವಿಷಯಗಳು —... ಪಂಚಾಂಗ ... ಸಹಿತ ಕ್ಯಾಲೆಂಡರು ... ರೈಲ್ ... ಪೋಸ್ಟ ... ಸ್ಟಾಂಪು, ರಿಜಿಸ್ಟರ್ ... ಜನಗಳ ಆಳತೆ, ... ಗೋದಿ ಪಂಚಾಂಗ, ... ಸಂಬಳದ ಪಟ್ಟಿ, ... ವಿಷಯಗಳಿವೆ ಉತ್ಕೃಷ್ಟವಾದ ... ಬೈಂಡು ... ಕ್ರಯ— ... ನಂಬರ್ ... ಸ್ಟೈಲ ... ಹೊಸ ನಮೂನ ಉತ್ಕೃಷ್ಟವಾದ 'ಜನಿವಾ' ಡೈರಿ ಇದು ಸರ್ಕಾರದಲ್ಲಿ ರಿಜಿಸ್ಟರಾಗಿದೆ

"ಜನಿವಾ' ೧ ನಂ ೩ ಆ ಜನೀವಾ ' ೨ ನಂ ೬ ಆ ಪೋಸ್ಟು ಚಾರ್ಜು ಬೇರೆ ಒಂದೇ ನಮೂನೆಯ ... ತರಿಸಿಕೊಂಡರೆ ... ಡೈರಿ ... ವಿ ಪಿ ಮೂಲಕವೂ ತರಿಸಿ...

ಟಿ ಕೆ ಮತ್ತು ಎಂ ಆರ್ ಕೃಷ್ಣಸ್ವಾಮಿ ಶೆಟ್ಟಿ

ಬಳ್ಳಾಪುರ ಪೇಟೆ ಬೆಂಗಳೂರು ಸಿಟಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

26 52



೧ ಶೋಕಾಮಯಹರ ಕಸ್ತೂರಿ ಮಾತ್ರೆ -ಈ ಮಾತ್ರೆಗಳನ್ನು ... ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ

ಚಳಿಜ್ವರ, ಜ್ವರ, ಹೊಟ್ಟೆ ಶೂಲೆ ಸಂಧುಗಳ ನೋವು, ಮೈ ಕೈಕಾಲು ಕೊಡತ (ಛಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ತಲೆ ನೋವು, ಕೆಮ್ಮಲು, ನೆಗಡಿ, ಪಿತ್ತ, ಆರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ ಯಾವ ... ದೂರಿಕೆ ... ವೀರ್ಯ ... ಬಡಬಾಪಡೆಯನ್ನು ... ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತು ... ಮಕ್ಕಳ ಎಳವ ಜ್ವರ, ... ಕೃಶತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರ ... ಶಂಕೆಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನವು ಔಷಧದ ಸಂಗಡಲೇ ಇರುತ್ತದೆ

... ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ರೂಪಾಯಿ, ೧ ರಿಂದ ... ಕುಪ್ಪಿ ವರೆಗೆ ಪೋಸ್ಟೇಜು ೩ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ

ಎಸ್ ಎಸ್ ಆರ್ ವೈದ್ಯಶಾಲಾ

ಲಕ್ಷ್ಮೀವಿಲಾಸ ರೋಡ್ ಮೈಸೂರು

ಖಾತರಿ ಸಾಮಾನ್! ಹೊಸ ಬೂರ್ನೀಸ್. ಬೇಗ ತರಿಸಿ !!

123-13

ಶುದ್ಧ ಜರ್ಸ ಉಣ್ಣೆಯ ದಪ್ಪವಾದ "ಬ್ಲಾಂಕೇಟ್" ಎಂಬ ಹೊಸ ನಮೂನೆ ಬನಾತವು ಎಷ್ಟೇ ಕ್ರೂರವಾದ ಛಳಿಯನ್ನಾದರೂ ದೂರಕ್ಕೆ ಓಡಿಸಿ ಮೈಗೆ ಬೇಕಾದ ಕಾವನ್ನೀಯುತ್ತೆ. ಸುಖವಾದ ಹೊದ್ದಿಕೆ! ಅತಿರಮ್ಯ! ಉದ್ದ ೯೦ ಅಂಗುಲ, ಅಗಲ ೬೮ ಅಂಗುಲ ಕ್ರಯ ರೂ. ೩ ಎರಡನೆಯ ತರದ ರೂ ೪ (ಶುದ್ಧ ಉಣ್ಣೆ)

ಪುದುಚ್ಚೇರಿ ರೇಷ್ಮೆ ವಸ್ತ್ರಗಳು. ರೂ. ೪ !!

ಅಂಚು, ಕೊನೆಗಳಲ್ಲಿ ಬೆಳ್ಳಿಯ ಸೂಗಳಿಂದಲೂ ಕೂಡಿ ಮಧ್ಯದಲ್ಲಿ ಕೆಂಪಾಗಿ ಹೊಸ ಸೊಗಸಾದ ನಮೂನೆ ಪುದುಚ್ಚೇರಿ ರೇಷ್ಮೆ ವಸ್ತ್ರಗಳು ಹೊದಿಯಲು ಯೋಗ್ಯವಾಗಿ ಬದಲಾಯಿಸದ ಗಟ್ಟಿ ಬಣ್ಣದ್ದಾಗಿ ೩ ಮೊಳದಗಲವಿದೆ ಒಂದು ತರಿಸಿ ಉಪಯೋಗಿಸಿ ನಿಜಸ್ಥಿತಿ ತಿಳಿಯಿರಿ. ರೂ ೩೦ ರ ರೇಷ್ಮೆ ವಸ್ತ್ರವನ್ನು ಮಾರಿಸುತ್ತೆ. ೩ಮೊಳ ಮಷ್ಟ ರೂ. ೪. ನಾಲ್ಕು ಮೊಳದುದ್ದ ರೂ. ೫

ಬಿಳಿ ರೇಷ್ಮೆ ಅಂಚು! ಮದ್ರಾಸ್ ಸೀರೆ! ಖಾತರಿ ಬಣ್ಣ.

ಬಿಳಿಯ ಅಕ್ಸಾಂ ರೇಷ್ಮೆ ಅಂಚು ೩ ಅಂಗುಲದಗಲ. ಒಂದೇ ತರಹೆಯ ೩ ಮೊಳದುದ್ದ ರೇಷ್ಮೆ ಸೆರಗುಗಳುಳ್ಳ ಶ್ರೇಷ್ಠವಾದ ನೂಲಿನ ೩॥ ಮೊಳದಗಲ ೧೮ ಮೊಳವುದ್ದದ ಸೀರೆ ಕಪ್ಪು ಅಥವಾ ಕೆಂಪಿನ ಮೇಲಿನ ಮೇಘ ವರ್ಣದ್ದು ಕ್ರಯ ರೂ. ೧೧—೮—೦ ಬಿಳಿಯ ರೇಷ್ಮೆಯ ಬೌಕಳಿಯಿಂದ ಕೂಡಿದ್ದು ರೂ ೧೪—೦—೦ ಎರಡಂಗುಲ ಅಂಚಿನ ಮಾರಿಗೆ ಸೀರೆ ರೂ ೬.

ವಿಳಾಸ: ರಾವ್ ಎಂಪೋರಿಯಂ, ಸ್ಟ್ರೀಸನ್‌ಹಾಂ ರೋಡ್.

ವೇಪೇರಿ. ಮದರಾಸ್.

ಮಹಾ ಬಾಧಾಪಹಾರಿಣಿಯು

58-98

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಶ್ಲೇಮೆಂಟ್‌ಯವರ ಈ ಕ್ಷಣೇ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು ವಕೀಲರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಟ್ಟಿಗೆ ಹೇಳುತ್ತಾರೆ. ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ಹಾಯುನೋವು, ಕಳೆ, ಗಂಟುನೋವು, ಜಠರವಾಯು, ನಾನಾವಿಧ ವಾಯುರೋಗಗಳು, ಗಾಯಗಳು, ಬೆನ್ನುನೋವು, ಕೀಲುಗಳ ಸಂಪುಟಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೇಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ ಅದರ ಹುಟ್ಟನ್ನೇ ಅಡಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಸಮಾನವಾದ ತೈಲವು ಬೇರೊಂದಿಲ್ಲವೆಂದು ಹೇಳುತ್ತಾರೆ.

ಕ್ರಯ ಶೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೬ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಫ್. ಡಬ್ಲ್ಯು. ಅರ್ಲ,

ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಇದು ನಿಮಗೆ ಹ್ಯಾಗೆ ಕಾಣುತ್ತೆ ?

ಇದಕ್ಕಿಂತ ಬೆಲೆಯುಳ್ಳದ್ದು ನಿಮಗೆ ಸಿಕ್ಕಲಾರದು

ಇಗೋ ನೋಡಿ ' ಇದು ಕಾಲಾನುಗುಣ್ಯವಾದದ್ದು.

ಗಟ್ಟಿಯಾದ ಮತ್ತು ಬಾಳಿಕೆ ಬರುವ ಸವಾರಿಯು ಇದರ ಬೆಲೆ ಮಾತ್ರವೇ ನಿಮಗೆ ಆಶ್ಚರ್ಯವನ್ನುಂಟುಮಾಡೀತು ಇನ್ನ್ಯಾವ ವಿಚಾರವನ್ನೂ ಚರ್ಚಿಸಿ ಪ್ರಯೋಜನವಿಲ್ಲ ನಾವು ಈಗ ತಿಳಿಸುವುದನ್ನು ತಿರಸ್ಕರಿಸದೆ ಫಲವನ್ನು ಹೊಂದಿರಿ ಸಂಪೂರ್ಣವಾಗಿಯೂ ಇಂಗ್ಲಿಷ್ ತಯಾರಿ [121-14]

ಇಂಗ್ಲಿಷ್ ನ್ಯೂಮ್ಯಾಟಿಕ್ ಟೈರುಗಳುಳ್ಳ

ಫ್ರೀವೀಲ್ ಬೈಸಿಕಲ್.

ಜನಕ್ಕೆ ಕೊಡುವ ಸಾಮಾನ್ಯ ಕ್ರಯಕ್ಕೆ ಇದು

ಯೋಗ್ಯವಾದದ್ದು

ಇದು ಉತ್ಕೃಷ್ಟವಾದ ಬೈಸಿಕಲ್ ೧೯೦೮ನೇ ಇಸವಿಯದ್ದು. ಕಠಿಣವಾದ ರಸ್ತೆಗಳಿಗೂ ಬಾಳಿಕೆಗೆ ಬರುವಂಥಾ ಯೋಗ್ಯತೆಯುಳ್ಳ ರೀತಿ ತಯಾರಿಸಿದೆ ಒಳಭಾಗಗಳಲ್ಲೆಲ್ಲಾ ಬಾಲ್ ಬೇರಿಂಗಿನಿಂದ ಮಾಡಿದ್ದು ಫ್ರೀವೀಲ್ ಉಳ್ಳದ್ದು ಮಡ್ ಗಾರ್ಡ್, ಒಳ್ಳೇ ಸ್ಯಾಡಲ್, ರಬ್ಬರ್ ಪೆಡಲ್, ಮುಂದಿನ ಮತ್ತು ಹಿಂದಿನ ಚಕ್ರಗಳಿಗೆ ರಿಂ ಬ್ರೇಕ್ ಎಂಬ ತಡೆಗಳು, ನ್ಯೂಮ್ಯಾಟಿಕ್ ಟೈರ್, ಚಕ್ರದ ತಂತಿಗಳು ನಿಕ್ಕಲ್, ಎಲ್ಲಾ ಭಾಗಗಳೂ ಬಹಳ ಗಟ್ಟಿಯಾದ ಬೊಗ್ಗದೆ ಇರುವ ಉಕ್ಕಿನ ಕೊಳವೆಗಳಿಂದ ತಯಾರಿಸಿದೆ ಹಗುರವಾಗಿಯೂ ತುಂಬಾ ಬಲವಾಗಿಯೂ ಇದೆ.

ಈ ಬೈಸಿಕಲ್ ಕೂಡ ನಾವು (೧) ಸುಂದರವಾದ ಲ್ಯಾಂಪು, (೨) ಒಳ್ಳೇ ಗಂಟೆ, (೩) ಪಂಪು, (೪) ಸ್ಪ್ಯಾನರ್, (೫) ಎಣ್ಣೆಯ ಡಬ್ಬಿ, (೬) ಸಾಮಾನುಗಳುಳ್ಳ ಚರ್ಮದ ಚೀಲ, ಇವನ್ನೆಲ್ಲಾ ಕಳುಹಿಸುತ್ತೇವೆ

ಕ್ರಯ ರೈಲ್ ಚಾರ್ಜು ಸೇರಿ ರೂ. ೯೦ ಮಾತ್ರ.

ಅರ್ಧ ಕ್ರಯವನ್ನು ಅಡ್ವಾನ್ಸು ಕಳುಹಿಸಬೇಕು. ಉಳಿದ ಅರ್ಧವನ್ನು ವಿ ಪಿ ಮೂಲಕ ತೆಗೆದುಕೊಳ್ಳುತ್ತೇವೆ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಎಂ. ಎ. ಘಟಾಲಾ ಅಂಡ್ ಕಂಪನಿ,

ಚಿತ್ತೂರು, ಉತ್ತರ ಆರ್ಕಾಡು

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡು ಹಿಡಿದ ಕೆಮ್ಮಿನ ಔಷಧವು.

1-7

ಶೀತದ ಕೆಮ್ಮು, ಗಂಟಲು ಗಾರೆಸುವುದು, ಹುಡಿಗೆಮ್ಮು, ಸಾಯುಗೆಮ್ಮು, ಎಲ್ಲಾ ತರದ ಶೀತ, ಗಂಟಲು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಲು ಪ್ರಯೋಜನವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಬಹಳ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಜತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಚಿತವಾಗಿ ನಿವಾರಣೆಮಾಡುತ್ತದೆ ಉಸುರು ಹೋಗುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಕಟ್ಟುವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪವಾದರೂ ಅಫೀಮನ್ನು ಸೇರಿಸಿಲ್ಲವಿದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಸ್ಟೇಯಂ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ರಬ್ಬರ್ ಹ್ಯಾಂಡ್ ಪ್ರೆಸ್.

114 19

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೩ ರಿಂದ ೧೮ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲಗು, ಉರ್ದು, ಮರಾಠಿ, ಅರಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು. ಪೂರ್ವ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳಕಾಲ ಹಿಡಿಯುವದು ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ಬೆಲೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ.

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦

ಹಾಫ್ ಫುಲ್‌ಸ್ಕ್ಯಾಪ್ ಸೈಜು, ೬—೦—೦

ಪೋಸ್ಟೇಜು ಬೇರೆ (extra)

ವಿಳಾಸ:— ವರ್ಧಮಾನ ಏಜನ್ಸಿ.

ಪೋಸ್ಟ್ ಕಾಲಬಾದೇವಿ,

ಮುಂಬಯಿ.

ವ್ಯವಹಾರನಿರ್ಣಯ.

ಪುಟಗಳು ೫೪೬	ಕನ್ನಡದ ಲಾ ಪುಸ್ತಕವು ದ್ವಿತೀಯಮುದ್ರಣ. 17	ಕ್ರಯ ವಿ ಪಿ ಸೇರಿ ರೂ ೯—೦—೦

ಈ ಮುದ್ರಣದ ಮುಕ್ಕಾಲು ಭಾಗವೆಲ್ಲವೂ ಹೊಸದಾಗಿ ಬರೆಯಲ್ಪಟ್ಟು ವಿಸ್ತರಿಸಲ್ಪಟ್ಟಿದೆ ಹಿಂದೂ ಲಾ (ಸ್ಮೃತಿವಚನಗಳೊಡನೆ), ಮಹಮದೀಯ ಲಾ, ಪೀನಲ್ ಕೋಡು ಇವುಗಳು ವಿಶೇಷವಾಗಿ ವಿಸ್ತರಿಸಲ್ಪಟ್ಟಿವೆ. ಮೈಸೂರು, ಮದರಾಸು, ಬೊಂಬಾಯಿ ದೇಶಗಳಿಗೆ ಸಾಮಾನ್ಯವಾದ ಲಾ ವ್ಯತಸ್ವತ್ತಿನ ವಿಲೇವಾರಿ, ಅನಾಥಪಿಂಡ್ಯಗಳ, ಸ್ತ್ರೀ ಸ್ವರ ವಾರಸ್ಯ ಹಕ್ಕು, ಈ ವಿಷಯಕವಾದ ಖಾನೂನುಗಳು ಹೊಸದಾಗಿ ಸೇರಿಸಲ್ಪಟ್ಟಿವೆ ೬೯ ಖಾನೂನುಗಳು, ಅನೇಕ ಮೂಲ ಗ್ರಂಥಗಳು, ಪ್ರೈವೇಟ್ ಚೀಫ್ ಕೋರ್ಟುಗಳ ತೀರ್ಪುಗಳು ಇವುಗಳಿಂದ ಸಂಗ್ರಹ ಮಾಡಲ್ಪಟ್ಟಿದೆ ಸಮಸ್ತ ವ್ಯವಹಾರಗಳಿಗೆ ಸಂಬಂಧಪಟ್ಟ ೯೨ ವಿಧದ ದಸ್ತವೇಜ್ ನಮೂನೆಗಳೂ, ಲಾ ಪ್ರಕಾರ ಸಿವಿಲ್, ಕ್ರಿಮಿನಲ್ ಕೋರ್ಟುಗಳಿಗೂ, ಪೋಲೀಸಿಗೂ ಬರೆಯಲ್ಪಡುವ ಅರ್ಜಿಗಳ ೬೯ ತರದ ನಮೂನೆಗಳೂ ಇದರಲ್ಲಡಗಿವೆ ಕಳೆದ ಮೇ ತಿಂಗಳಲ್ಲಿ ಮುದ್ರಿಸಿದ್ದ ೧,೫೦೦ ಪ್ರತಿಗಳು ೩ ತಿಂಗಳಲ್ಲೇ ಖರ್ಚಾಗಿಹೋದುದರಿಂದ ಇದರ ಉಪಯುಕ್ತತೆಯು ತಿಳಿದುಬಂದು ಪ್ರೋತ್ಸಾಹಕವಾಯ್ತು. ಮೇಲೆ ಕಂಡಂತೆ ಇದರ ಉಪಯುಕ್ತತೆಯನ್ನು ಮತ್ತಷ್ಟು ಹೆಚ್ಚು ಮಾಡಿದೆ ವಿಷಯಪರಿಮಾಣಾಧಿಕ್ಯ, ಸ್ಪಷ್ಟಾಕ್ಷರ, ಉತ್ತಮವಾದ ಕಾಗದ, ಬಟ್ಟೆಯ ಬೈಂಡ್ ಇವುಗಳಿಂದ ಕೂಡಿದ ಈ ಸಲದ ಮುದ್ರಣವು ಬಹಳ ಪ್ರಶಸ್ತವಾಗಿದ್ದರೂ ಜನಸಾಮಾನ್ಯರಿಗೆ ಸುಲಭಗ್ರಾಹ್ಯವಾಗಲು ಮೊದಲಿನದಕ್ಕಿಂತಲೂ ಬೆಲೆಯಲ್ಲಿ ಸ್ವಲ್ಪ ಅಂಶ ಮಾತ್ರ ಹೆಚ್ಚಿಸಿದೆ ಪುಸ್ತಕ ಅಪೇಕ್ಷಿಸುವವರು ಬರೆಯುವ

ವಿಳಾಸ—ಗ್ರಂಥಕರ್ತರು. ಎಂ. ವೆಂಕಟಾಚಾರ್ಯರು,

ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು.

ಔಷಧ ತೆಗೆದುಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ,

SCOTT'S EMULSION. 31-48

(ಸ್ಕಾಟ್ಸ್ ಇಮಲ್ ಷನ್)

ಶಕ್ತಿ ಶರೀರವುಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗದ ಬಲಹೀನರನ್ನೂ ದುರ್ಬಲರನ್ನೂ ಬೇಗನೆ ಹಗುರಿ ಕಾಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕ್ಯಾಸೋಬಾನೆ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧ ವನ್ನೇ ತೆಗೆದುಕೊಳ್ಳಿ

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ

ಹಾಗಲ್ಲದಿದ್ದರೆ ಬೇಗ ಬರೆದು ತರಿಸಿಕೊಳ್ಳಿ.

17

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳ ನೋಡಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಹುಡುಕುವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಇಲ್ಲಿಯದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ತೆಗೆದುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೇರಾಗಿ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ನೆಸೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದಿದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ. ಬಾದ, ಕೆಂಪು, ಕಪ್ಪು, ಬಿಳೀ, ಕಾಫಿ ಟೋಪಿಗಳು ೧ ರೂ [illegible] ;

೧ ರೂ ೩ ಆ., ೧ ರೂ ೬ ಆ.

ರೇಷ್ಮೆ ಜಾಕೈಯುಳ್ಳ ಟೋಪಿಗಳು ೧ ರೂ. ೪ ಆ.; ೨ ರೂ

ದಾರದ ಟೋಪಿಗಳು ೧ ರೂ. ೧೨ ಆ., ೧ ರೂ. ೪ ಆ , ೧ ರೂ. ೬ ಆ.

ಹುಡುಗರ ಟೋಪಿಗಳು ೧ ರೂ. ೪ ಆ.; ೧ ರೂ. ೩ ಆ

ಕೂಸುಗಳ ಟೋಪಿ, ಸೂಥಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ವೃತ್ತಾಂತಪತ್ರಿಕೆ

೧೯೦೮ ನೇ ಇಸವಿ ಫೆಬ್ರುವರಿ ತಾರೀಖು ೧೩ ನೇ [illegible]

ಟ್ರಾನ್ಸ್‌ವಾಲ್ ಸರ್ಕಾರವೂ ಹಿಂದುಸ್ಥಾನವೂ

ಹಿಂದುಸ್ಥಾನದಿಂದ ಟ್ರಾನ್ಸ್‌ವಾಲಿಗೆ ಹೋಗತಕ್ಕವರು ಅಲ್ಲಿ ತಮ್ಮ ಕೈಬೆರಳನ್ನು ಒತ್ತಿ ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂತಲೂ, ಇಲ್ಲವಾದರೆ ಅಲ್ಲಿಗೆ ಸೇರಿಸುವುದಿಲ್ಲವೆಂತಲೂ ಕಾನೂನು ಆಯಿತು. ಅನೇಕಾನೇಕ ಹಿಂದುಸ್ಥಾನದವರು ಅದು ಅವಮಾನಕರವಾದದ್ದೆಂದು ಹೇಳುತ್ತಾ, ಆ ಕಾನೂನನ್ನು ತಿರಸ್ಕರಿಸಿದರು. ಆ ಸರ್ಕಾರದವರು ನಿರ್ಬಂಧಪಡಿಸಿದಾಗ ಅಲ್ಲಿದ್ದ ಹಿಂದುಸ್ಥಾನದವರು ಪ್ರತಿಭಟಿಸಿ ಜೈಲಿಗೆ ಹೋದರೂ ಸರಿ, ಈ ಅವಮಾನವನ್ನು ಸಹಿಸಲಾರೆವು ಎಂದು ಹೇಳಿದರು. ಅನೇಕ ಮಂದಿಯನ್ನು ಸರ್ಕಾರದವರು ಬಂದೀಖಾನೆಗೆ ಹಾಕಿದರು. ಈ ವಿಷಯವು ಹಿಂದುಸ್ಥಾನದಲ್ಲೂ ವಿಲಾಯತಿಯಲ್ಲೂ ತುಂಬಾ ಕಳವಳವನ್ನುಂಟುಮಾಡಿತು. ಇಂಗ್ಲಿಷ್ ಪ್ರಜೆ ಎನ್ನಿಸಿಕೊಂಡ ಹಿಂದುಸ್ಥಾನದ ಜನರು ಟ್ರಾನ್ಸ್‌ವಾಲ್ ಎಂಬ ಇಂಗ್ಲಿಷ್ ರಾಜ್ಯದಲ್ಲಿ ಕೈಬೆರಳು ಒತ್ತಿ ರಿಜಿಸ್ಟರ್ ಮಾಡಿಸಿಕೊಳ್ಳಬೇಕು 'ಇತರ ಜಾತಿಗೆ ಈ ನಿರ್ಬಂಧವಿಲ್ಲದೆ ಇರುವುದು ಪಕ್ಷಪಾತವಲ್ಲವೇ' ಎಂಬೀ ರೀತಿಯಾದ ಆಕ್ಷೇಪಣೆಗಳು ಹುಟ್ಟಿದವು. ಸ್ವಾಸ್ಥ್ಯಗಳ ಸೆಕ್ರೆಟರಿಯಾದ ಮಾರ್ಲಿ ಎಂಬುವರು ಹಿಂದುಸ್ಥಾನ ಮತ್ತು ವಿಲಾಯತಿಯ ಜನರ ಆಕ್ಷೇಪಣೆಗಳನ್ನೂ ಅಭಿಪ್ರಾಯಗಳನ್ನೂ ನೋಡಿ ಸಂತಾಪಪಟ್ಟರು. ಈ ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂಬ ಕಾನೂನು ಯೋಗ್ಯವಾದದ್ದಲ್ಲವೆಂದು ಲಾರ್ಡ್ ಎಲ್ಗಿನ್, ಲಾರ್ಡ್ ಕರ್ಜನ್ ಮೊದಲಾದ ಮಹನೀಯರೂ ಕೂಡ ಸೂಚಿಸಿದರು.

ಕಳೆದ ವಾರ ಪಾರ್ಲಿಮೆಂಟ್ ಸಭೆಯು ಕೂಡಿದಾಗ ಲಾರ್ಡ್ ಎಲ್ಗಿನ್‌ರವರು ಹಿಂದುಸ್ಥಾನದವರಿಗೆ ಟ್ರಾನ್ಸ್‌ವಾಲಿನಲ್ಲಿ ಮೇಲ್ಕಂಡಂತೆ ತೊಂದರೆಯಾಗುವುದೂ ಇಲ್ಲದಂತೆ ಏರ್ಪಾಡು ಮಾಡಿರುವುದಾಗಿ ತಿಳಿಸಿದರು. ಟ್ರಾನ್ಸ್‌ವಾಲಿನಲ್ಲಿ ಈ ನಿರ್ಬಂಧಕ್ಕಾಗಿ ಬಂದೀಖಾನೆಯಲ್ಲಿ ಬಿದ್ದಿದ್ದ ಮಿ|| ಗಾಂಧಿ ಎಂಬ ಕ್ರಿಶ್ಚಿಯನ್ ಬ್ಯಾರಿಸ್ಟರ್ ಮೊದಲಾದ ಹಿಂದುಸ್ಥಾನದ ಪ್ರಜೆಗಳನ್ನು ಬಿಡುಗಡೆ ಮಾಡಿಸಿದರು. ಈ ವಿಷಯದಲ್ಲಿ ಟ್ರಾನ್ಸ್‌ವಾಲ್ ಸರ್ಕಾರದವರಿಗೂ ಇಂಗ್ಲಿಷ್ ಗವರ್ನಮೆಂಟಿಗೂ ಏನೇನು ನಡೆಯಿತೋ ಹಿಂದುಸ್ಥಾನದವರಿಗೆ ಅಲ್ಲಿ ಯಾವ ರಿಯಾಯತಿಗಳು ದೊರಕುತ್ತವೆಯೋ ಇನ್ನೂ ವಿವರವಾಗಿ ತಿಳಿಯಲಿಲ್ಲ. ಹೇಗೂ ಇದುವರೆಗೆ ಬಾಧಿಸುವ ಕಿರುಕುಳ ವರ್ತಮಾನಗಳಿಂದ ಈ ರಾಷ್ಟ್ರದ ಪ್ರಜೆಗಳಿಗೆ ಟ್ರಾನ್ಸ್‌ವಾಲಿನಲ್ಲಿ ಉಂಟಾಗುತ್ತಿದ್ದ ಅನಾನುಕೂಲಗಳು ಕಟ್ಟಕಡೆಗೂ ನಿವಾರಣೆಯಾದವೆಂದು ತಿಳಿದು ಸಂತೋಷಪಡುತ್ತೇವೆ.

ಒಬ್ಬ ಬಂಗಾಳಿ ಧೀರನು

ಯೇಸುಕ್ರಿಸ್ತನು [illegible] ಮೇಲೆ ಸತ್ತನೆಂದು ಚರಿತ್ರೆಯು ನಿಸ್ಸಂದೇಹವಾಗಿ ತಿಳಿಸುತ್ತದೆ. ಆತನು ದೇವಾಂಶಸಂಭೂತನಾದರೂ ಪೂರ್ವ[illegible] ಆಗಿರುವಲ್ಲಿ ಆತನಿಗೆ ಸಾಯುವ ಆವಶ್ಯಕತೆ ಏನು? ಈ ಅಂಶವನ್ನು ಇನ್ನೂ ಚೆನ್ನಾಗಿ ತಿಳಿದುಕೊಳ್ಳಬೇಕಾದರೆ ಕೆಳಗೆ ಕಾಣಿಸಿರುವ ಸಂಗತಿಯನ್ನು ಲಕ್ಷ್ಯಿಸಬೇಕು.

ಕಳೆದ ತಿಂಗಳು ಬಂಗಾಳಾ ದೇಶದ ಲೆಫ್ಟಿನೆಂಟ್ ಗೌರ್ನರವರು ನಫರ್‌ಚಂದ್ರ ಬಂಡಾ ಎಂಬೊಬ್ಬ ಬಂಗಾಳಿ ಧೀರನ ಪ್ರತಿಮೆಯನ್ನು ಪ್ರತಿಷ್ಠೆ ಮಾಡಿದರು. ಈ ಪ್ರತಿಮೆಗೋಸ್ಕರ ಸ್ವದೇಶಿಯರೂ ವಿದೇಶಿಯರೂ ಅನೇಕ ಸಾವಿರ ರೂಪಾಯಿಗಳನ್ನು ಚಂದಾ ಮೂಲಕವಾಗಿ ಕೂಡಿಸಿ ಈ ಧೀರನ ಹೆಸರನ್ನು ಶಾಶ್ವತಗೊಳಿಸಿರುವರು.

ಕಲ್ಕತ್ತಾ ಮುಂತಾದ ದೊಡ್ಡ ದೊಡ್ಡ ಊರುಗಳಲ್ಲಿ ಪಟ್ಟಣದ ಕೊಳಚೆಯನ್ನೆಲ್ಲಾ ಸಾಗಿಸಲು ದೊಡ್ಡ ಚರಂಡಿಗಳನ್ನು ಭೂಮಿಯೊಳಗೆ ಕಟ್ಟಿರುತ್ತಾರೆ. ಇಂಥಾ ಚರಂಡಿಗಳೊಳಗೆ ವಿಷಗಾಳಿಯು ವಿಷಭರಿತವಾಗಿದ್ದು ಜನರದನ್ನು ಹೀರಿದಾಕ್ಷಣವೇ ಅವರನ್ನು ಕೊಂದುಬಿಡುವುದು. ಆಗಾಗ್ಗೆ ಝಾಡಮಾಲಿಗಳು ಈ ಚರಂಡಿಗಳೊಳಗೆ ಬಹು ಎಚ್ಚರಿಕೆಯಿಂದಿಳಿದು ಅಲ್ಲಲ್ಲಿ ಕಟ್ಟಿಕೊಂಡಿರುವ ಕೊಳಚೆಗಳನ್ನು ಗಳಗಳ ಮೂಲಕ ತೆಗೆಯುವರು.

ಒಂದಾನೊಂದು ದಿನ ಇಬ್ಬರು ಮುಸಲ್ಮಾನ ಝಾಡಮಾಲಿಗಳು ಕಲ್ಕತ್ತಾ ಪಟ್ಟಣದ ಒಂದು ಚರಂಡಿಯಲ್ಲಿಳಿದು ಕೊಳಚೆಯನ್ನು ತೆಗೆಯುತ್ತಿರುವಲ್ಲಿ ಅದರೊಳಗಿದ್ದ ವಿಷಗಾಳಿಯು ಅವರಿಗೆ ತಗಲಿತು. ಅವರು ಮೂರ್ಛಿತರಾಗಿ ಸಾಯುವಹಾಗೆ ಬಿದ್ದುಕೊಂಡರು. ತಕ್ಷಣವೇ ಅಲ್ಲಿ ಜನರು ಗುಂಪುಕಟ್ಟಿಕೊಂಡು ಗಾಬರಿಬಿದ್ದು ಗಲಾಟೆ ಮಾಡಲಾರಂಭಿಸಿದರು. ನಫರ್‌ಚಂದ್ರನು ಆ ದಾರಿಯಲ್ಲಿ ತನ್ನ ಆಫೀಸಿಗೆ ಹೋಗುತ್ತಿದ್ದನು. ಅಲ್ಲಿದ್ದ ಜನರ ಗುಂಪನ್ನು ನೋಡಿ ಅವರನ್ನು ವಿಚಾರಿಸಲು ಇಬ್ಬರು ಝಾಡಮಾಲಿಗಳು ವಿಷಗಾಳಿಯನ್ನು ಕುಡಿದು ಸಾಯುತ್ತಿರುವುದಾಗಿ ಅವನಿಗೆ ತಿಳಿಯಿತು. ಅವನು ತಕ್ಷಣವೇ ತನ್ನ ಅಂಗಿಯನ್ನು ತೆಗೆದಿಟ್ಟು ಚರಂಡಿಯೊಳಕ್ಕಿಳಿದು ಕೆಳಗೆ ಬಿದ್ದುಕೊಂಡಿದ್ದ ಆ ಝಾಡಮಾಲಿಗಳನ್ನು ಬಹು ಪ್ರಯಾಸದಿಂದ ಮೇಲಕ್ಕೆ ತಂದನು. ಅದರ ಎರಡನೇಯವನನ್ನು ಎಳೆದು ಮೇಲಕ್ಕೆ ಎತ್ತಿಕೊಡುವುದರಲ್ಲಿಯೇ ಚರಂಡಿಯ ವಿಷಗಾಳಿಯು ಇವನಿಗೆ ತಗಲಿತು. ಇವನು ಮೂರ್ಛಿತನಾಗಿ ಚರಂಡಿಯಲ್ಲಿ ಬಿದ್ದುಬಿಟ್ಟನು. ಮೇಲಿದ್ದ ಜನರು ಇವನನ್ನು ಎತ್ತುವಷ್ಟರೊಳಗಾಗಿಯೇ ಇವನಿಗೆ ಪ್ರಾಣ ಹೋಗಿತ್ತು. ನಫರ್‌ಚಂದ್ರನು ವಿದ್ಯಾವಂತನಾಗಿದ್ದು ಉಚ್ಚಮಾಕುಲಕ್ಕೆ ಸೇರಿದ್ದನು. ಇವನು ಕನಿಷ್ಠಜಾತಿಗೆ ಸೇರಿದ್ದ ಝಾಡಮಾಲಿಗಳ ಪ್ರಾಣವನ್ನು ಉಳಿಸುವುದಕ್ಕೋಸ್ಕರ ತನ್ನ ಪ್ರಾಣವನ್ನೇ ಕೊಟ್ಟದ್ದು ಒಂದು ವಿಶೇಷವಾದ ಸಂಗತಿಯಲ್ಲವೇ? ಇವನು ಇತರರ ಮೇಲೆ ಇಟ್ಟಿದ್ದ ಪ್ರೀತಿಯೇ ಇವನ ಮರಣಕ್ಕೆ ಕಾರಣವಾಗಿತ್ತು. ಇಂಥಾ ಧೀರನ ಹೆಸರನ್ನು ಶಾಶ್ವತಗೊಳಿಸುವುದಕ್ಕೋಸ್ಕರ ಜನರು ಮಾಡಿದ ಕಾರ್ಯವು ಸ್ತೋತ್ರಾರ್ಹವಾದುದೇ ಸರಿ.

ಯೇಸುಕ್ರಿಸ್ತನು ತನ್ನ ಮರಣದ ವಿಷಯ ಈ ರೀತಿಯಾಗಿ ತಿಳಿಸಿದನು "ನನ್ನ ಪ್ರಾಣವನ್ನು ಯಾರೂ ನನ್ನಿಂದ ತೆಗೆಯರು, ನನ್ನಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ; ಅದನ್ನು ಕೊಡುವದಕ್ಕೆ ನನಗೆ ಅಧಿಕಾರ ಉಂಟು, ಈ ಅಪ್ಪಣೆಯನ್ನು ನನ್ನ ತಂದೆಯಿಂದ ಹೊಂದಿದ್ದೇನೆ ... ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚು ಪ್ರೀತಿಯು ಯಾವದೂ ಇಲ್ಲ" ಅಂದನು.

ಪಾಪದ ಕೊಚ್ಚೆನಲ್ಲಿ ಸಿಕ್ಕಿ ನರಳುತ್ತಿದ್ದ ಜನರನ್ನು ರಕ್ಷಿಸಲು ತನ್ನ ಪ್ರಾಣವನ್ನೇ ಯಜ್ಞಾರ್ಪಿಸುವದು ಅಗತ್ಯವೆಂದು ಯೇಸುಕ್ರಿಸ್ತನು ಚೆನ್ನಾಗಿ ತಿಳಿದಿದ್ದನು. ಆತನು ಶಿಲುಬೆಯ ಮೇಲೆ ಸತ್ತದ್ದು ಆತನಿಗೆ ಜನರಮೇಲಿದ್ದ ಪ್ರೀತಿಯನ್ನು ವ್ಯಕ್ತಗೊಳಿಸುತ್ತದೆ. ಆತನ ಪ್ರೀತಿಯನ್ನೂ ಮರಣವನ್ನೂ ಧ್ಯಾನಮಾಡುವಲ್ಲಿ ಆತ್ಮೀಯವಾದ ವರಪ್ರಸಾದಗಳು ನಮಗೆ ಲಭಿಸುವವು. ಆತನ ಮರಣ ಸ್ಮರಣೆಯು ಅನೇಕರನ್ನು ಎಲ್ಲಾವಿಧವಾದ ಕಾಮಾಭಿಲಾಷೆಗಳಿಂದಲೂ ಸ್ವಾರ್ಥತೆಯಿಂದಲೂ ಬಿಡಿಸಿ ಅವರಿಗೆ ಉತ್ತಮತರದ ಭಕ್ತಿ, ಧೈರ್ಯ, ಪವಿತ್ರ ಕೃತ್ಯಗಳನ್ನು ಕೊಟ್ಟು ದೇವರ ಸನ್ನಿಧಿಗೆ ಸೇರಿಸಿರುವುದು.

ಕ್ರಿಸ್ತನಾತನ ಅನುಭವವನ್ನು ಇಟ್ಟವರು ಭಕ್ತರು ಈ ರೀತಿಯಾಗಿ ತಿಳಿಸಿರುತ್ತಾರೆ "ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ, ಈಗ ಶರೀರದಲ್ಲಿರುವ ನಾನು ಜೀವಿಸುವದು ಹ್ಯಾಗೆಂದರೆ, ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ ಜೀವಿಸುತ್ತೇನೆ; ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಮರಣಕ್ಕೆ ಒಪ್ಪಿಸಿಟ್ಟನು" "ದೇವರು ತನ್ನ ಒಬ್ಬನೇ ಮಗನನ್ನು ನಾವು ಆತನ ಮೂಲಕ ಜೀವಿಸುವದಕ್ಕಾಗಿ ಲೋಕಕ್ಕೆ ಕಳುಹಿಸಿಕೊಟ್ಟದರಲ್ಲಿಯೇ ದೇವರ ಪ್ರೀತಿಯು ನಮ್ಮಲ್ಲಿ ಪ್ರತ್ಯಕ್ಷವಾಗಿದೆ. ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ, ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿ ಕೊಟ್ಟದರಲ್ಲಿಯೇ ಪ್ರೀತಿಯ ನಿಜಗುಣವು ತೋರಿಬರುತ್ತದೆ"

(ಗಲಾ ೨ ೨೦, ೧ ಯೋಹಾ ೬ ೧೦)

ಒಳದೇಶದ ವೃತ್ತಾಂತಗಳು.

ಮುಂದಿನ ವಾರದ ಲೇಟ್ ಅರ್ಬತ್‌ನಾಟ್ ಕಂಪನಿಗೆ ಸೇರಿ, ನಮ್ಮ ಮೈಸೂರು ಸಂಸ್ಥಾನದೊಳಗಿದ್ದ ಸಕ್ಕರೆ ಕಾರ್ಖಾನೆಯನ್ನು ಹರಾಜಿನಲ್ಲಿ ಮಾ|| ಹಾಜಿ ಇಸ್ಮೈಲ್ ಸೇಟರು ೧,೪೦,೦೦೦ ರೂಪಾಯಿಗೆ ಪಡೆದುಕೊಂಡರು.

✦✦✦

ಬೆಂಗಳೂರು ಲಾಲ್‌ಬಾಗ್ ಉದ್ಯಾನವನದಲ್ಲಿ ಕಳೆದ ಗುರುವಾರ ವಾರ್ಷಿಕ ಫಲಪುಷ್ಪ ಪ್ರದರ್ಶನವು ಬಹಳ ಸಂಭ್ರಮದಿಂದ ನಡೆಯಿತು. ಶ್ರೀ ಮಹಾರಾಜರವರೂ, ದಿವಾನರವರೇ ಮೊದಲಾದವರು ದಯಮಾಡಿದ್ದರು.

✦✦

ಸಕಲೇಶಪುರದಲ್ಲಿ ದೊಡ್ಡ ಜಮೀನ್ದಾರರಾಗಿಯೂ ತುಂಬಾ ದಯಾಳುವಾಗಿಯೂ ಇದ್ದ ಹೊಸಕೆರೆ ಸಿದ್ದೇಗೌಡರು ಹೋದವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶವವನ್ನು ದಫನ್ ಮಾಡುವಾಗ್ಗೆ ಸಾವಿರಾರು ಜನರು ಸುತ್ತುಮುತ್ತಿನಿಂದಲೂ ಹೋಗಿ, ಅವರಲ್ಲಿ ತಮಗಿದ್ದ ಭಕ್ತಿಪ್ರೀತಿಗಳನ್ನು ಪ್ರಕಾಶಪಡಿಸಿದರು.

✦✦✦

ಈ ಸಲ ಮೊಹರಂ ಹಬ್ಬವು ರಾಜಧಾನಿಯಲ್ಲಿ ಸಾಮಾನ್ಯವಾಗಿ ನಡೆಯುತ್ತಿದ್ದ ಗಿರೋವುಗಳೂ ಇತರ ತಮಾಷೆಗಳೂ ಅಷ್ಟು ವಿಶೇಷವಾಗಿಲ್ಲ. ಆದರೆ ಪ್ರಜಾ ನೆಮ್ಮದಿಗೆ ಭಂಗವುಂಟಾಗದಂತೆ ಪೋಲೀಸಿನವರು ತೃಪ್ತಿಕರವಾದ ಏರ್ಪಾಡುಗಳನ್ನು ಮಾಡಿರುತ್ತಾರೆ. ಈ ದಿನ ಈ ಹಬ್ಬದ ಕಡೆಯ ದಿನವಾದ್ದರಿಂದ ಎಲ್ಲಾ ಕೋರ್ಟು ಕಚೇರಿ ಸ್ಕೂಲುಗಳಿಗೂ ರಜಾ ಕೊಡಲ್ಪಟ್ಟಿದೆ.

✦✦✦

ಕಳೆದ ಸೋಮವಾರ ಮಧ್ಯಾಹ್ನ ಸುಮಾರು ೧೨ ಗಂಟೆಗೆ ಬ್ರಿಟಿಷ್ ರೆಸಿಡೆಂಟರಾದ ಮಿ|| ಪ್ರೇಸರ್‌ರವರು ತಮ್ಮ ಅಸಿಸ್ಟೆಂಟರ ಕೂಡ ಕೊಡಗಿನ ಕಡೆ ಸರ್ಕೀಟನ್ನು ಪೂರೈಸಿಕೊಂಡು, ರಾಜಧಾನಿಗೆ ದಯಮಾಡಿ, ಸುಮಾರು ಅರ್ಧಗಂಟೆ ಹೊತ್ತು ಇಲ್ಲಿನ ರೆಸಿಡೆನ್ಸಿ ಬಂಗಲೆಯಲ್ಲಿದ್ದು, ಕೂಡಲೇ ಬೆಂಗಳೂರಿಗೆ ಪ್ರಯಾಣಮಾಡಿದರು. ಎರಡು ವೇಳೆಯೂ ಗೌರವಾರ್ಥವಾದ ೧೩ ತೋಪುಗಳು ಹಾರಿಸಲ್ಪಟ್ಟವು.

✦✦✦

ಲೇಟ್ ಸಂಜೀವರಾಜೇ ಅರಸಿನವರ ಪತ್ನೀರವರಿಗೆ ಕಾಯಿಲೆಯಾಗಿರುವ ಸಂಗತಿಯನ್ನು ತಿಳಿದು, ಶ್ರೀಮನ್ಮಹಾರಾಜರವರೂ, ಮಹಾಮಾತೃಶ್ರೀಯವರೂ ಕಳೆದ ಭಾನುವಾರ ಬೆಳಿಗ್ಗೆ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿ, ಅಳಿಯುವರ ದೇಹಸ್ಥಿತಿಯನ್ನು ಪರಾಂಬರಿಸಿ, ಆ ದಿನವೆಲ್ಲಾ ರಾಜಧಾನಿಯಲ್ಲೇ ಇದ್ದು, ಸೋಮವಾರದ ಬೆಳಿಗ್ಗೆ ವಾಪಸು ಬೆಂಗಳೂರಿಗೆ ಚಿತ್ತೈಸಿದರು. ಎರಡು ವೇಳೆಯೂ ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು.

✦✦✦

ಬ್ರಹ್ಮಶ್ರೀ ಪಂಡಿತ ದ್ವಿವೇದಿ ಸುಬ್ಬಶಾಸ್ತ್ರಿಗಳು ಅಜೇವಾರ ರಾಜಧಾನಿಯ ಸ್ವಗೃಹದಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಋಗ್ಯಜುರ್ವೇದಗಳಲ್ಲಿ ಇವರು ವಿಶೇಷ ಪಾಂಡಿತ್ಯವನ್ನು ಪಡೆದು, ಪಂಡಿತಮಂಡಲಿಯಲ್ಲಿ ಅಗ್ರಗಣ್ಯರೆನಿಸಿಕೊಂಡಿದ್ದರು. ಕಳೆದ ಎಂಬತ್ತು ವರುಷಗಳಿಂದಲೂ ಇವರೂ ದ್ವಿವೇದಿ ರಾಮಶಾಸ್ತ್ರಿಗಳೂ ಅರಮನೆಯ ಪಂಡಿತರಾಗಿದ್ದರು. ಇವರಿಗೆ ೯೬ ವರುಷ ವಯಸ್ಸಾಗಿ ಸಕಲರಿಂದಲೂ ಸನ್ಮಾನವನ್ನು ಪಡೆದವರು. ಇವರು ಕಾಲವಾದ್ದರಿಂದ ಪಂಡಿತಮಂಡಲಿಗೆ ತುಂಬಾ ನಷ್ಟವಾಯಿತೆನ್ನುವುದಕ್ಕೆ ಸಂಶಯವಿಲ್ಲ. ಇವರಿಗೆ ಇರುವ ಮೂವರು ಕುಮಾರರಲ್ಲಿ ಹಿರಿಯರಾದ ದ್ವಿವೇದಿ ಸುಬ್ರಹ್ಮಣ್ಯಶಾಸ್ತ್ರಿಗಳು ಮಹಾರಾಜರವರ ಸಂಸ್ಕೃತ ಕಾಲೇಜಿನಲ್ಲಿ ಋಗ್ವೇದಬೋಧನಾ ಪಂಡಿತರಾಗಿದ್ದಾರೆ.

✦✦✦

ಬೆಂಗಳೂರು ಪೋಲೀಸಿನವರು ಕೊಲೆಗೇಡಿಗಳ ಒಂದು ಗುಂಪನ್ನು ಪತ್ತೆಮಾಡಿ ಹಿಡಿದಿದ್ದಾರೆ. ಇವರು ಈಗ ೭ ೮ ಮಂದಿ ಮಾತ್ರ ಇರುವರು. ಇವರೆಲ್ಲಾ ಒಂದಾಗಿ ಬೆಂಗಳೂರಿನಲ್ಲೂ ದಂಡಿನಲ್ಲೂ ಮದರಾಸಿನಲ್ಲೂ ಚಿಕ್ಕವರನ್ನೂ ದೊಡ್ಡವರನ್ನೂ ಗಂಡಸರನ್ನೂ ಹೆಂಗಸರನ್ನೂ ಉಪಾಯಾಂತರಗಳಿಂದ ಕರೆದುಕೊಂಡು ಹೋಗಿ, ಅಲಸೂರಿನ ಬಳಿ ದಂಡಿನಲ್ಲೂ ಸುಮಾರು ಎರಡು ವರುಷಗಳಿಂದಲೂ ಕೊಲ್ಲುತ್ತಲೂ, ಅವರ ಮೈಮೇಲಿದ್ದ ನಗನಾಣ್ಯಗಳನ್ನು ಅಪಹರಿಸುತ್ತಲೂ, ಶವಗಳನ್ನು ಮನೆಗಳ ಒಳಗೇ ಹುಗಿದಿಡುತ್ತಲೂ ಬಂದಿದ್ದಾರೆ. ಇವರಲ್ಲಿ ಕೆಲವರು ವಿದ್ಯೆ ಕಲಿತವರೂ ಉಂಟು. ಸ್ಮರಣೆತಪ್ಪುವ ಔಷಧಗಳನ್ನು ತಿಂಡಿಗಳಿಗೆ ಹಾಕಿ ತಿನ್ನಿಸಿ ಕೊಲ್ಲುತ್ತಿದ್ದರು. ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ಮೊನ್ನೆ ಸೋಮವಾರದಿಂದ ವಿಚಾರಣೆ ಮಾಡಲಾರಂಭಿಸಿದಾರೆ. ಅವರೇ ಪೋಲೀಸಿನವರನ್ನು ಕರೆದುಕೊಂಡು ಹೋಗಿ, ಆಯಾ ಮನೆಗಳಲ್ಲಿ ಕೊಂದು ಹೂತಿಟ್ಟ ಸ್ಥಳಗಳನ್ನೆಲ್ಲಾ ತೋರಿಸಿ, [illegible]ಗಳನ್ನು ತೆಗಿಸಿರುತ್ತಾರೆ. ಇದುವರೆಗೆ ಎಂಟು ಶವಗಳು ಸಿಕ್ಕಿರುತ್ತವೆ. ಈಗ ಈ ಘಾತುಕರು ತಾವು ಮಾಡುತ್ತಿದ್ದ ಕ್ರೂರ ಕೃತ್ಯಗಳನ್ನೆಲ್ಲಾ ವಿವರಿಸಿರುವರು. ಒಬ್ಬ ಹುಡುಗನನ್ನು ಜೀವವಾಗಿಯೇ ಇವರು ಹೂಳಿದ್ದು ಗೊತ್ತಾಗಿದೆ. ಈ ಭಯಂಕರವಾದ ವೃತ್ತಾಂತವು ಎಲ್ಲರಲ್ಲೂ ಪರಮಾಶ್ಚರ್ಯವನ್ನೂ [illegible] ಭಯವನ್ನೂ ಉಂಟುಮಾಡಿದೆ.

ಮೈಸೂರು ಗೆಜೆಟ್ ಸಂಗ್ರಹ

ಚಿತ್ರದುರ್ಗದ ಮುನಸೀಫ್ ಮಿ|| [illegible] ಕೃಷ್ಣರಾಯರಿಗೆ ಫೆಬ್ರುವರಿ ೪ ರಿಂದ ಪೂರಾ ಸಂಬಳದ ಮೇಲೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಜುಡಿಷಲ್ ಪ್ರೊಬೇಷನರ್ ಮಿ|| ಎ ಕೆ ಶ್ರೀನಿವಾಸಯ್ಯಂಗಾರ್ರವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿತ್ರದುರ್ಗದ ಮುನಸೀಫರಾಗಿ ಬದಲಿ ನೇಮಿತರಾದರು.

ರೆವಿನ್ಯು ಕಮೀಷನರ್ ರವರ ಕಾರ್ಯಾಲಯದ ಮಿ|| ಎ ರಂಗಸ್ವಾಮಯ್ಯಂಗಾರ್ರವರು ಜನವರಿ ೧೪ ರಲ್ಲಿ ಕೆಲಸದ ಮೇಲೆ ಹಾಜರಾದದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದು ಮಾಡಿದೆ.

ಮೈಸೂರು ರೆವಿನ್ಯು ಸರ್ವೆ ಇಲಾಖಾ ಅ|| ಕಮೀಷನರ್ ಮಿ|| ಡಿ. ಕೆ ಮಾರ್ತಾಂಡರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ರೆವಿನ್ಯು ಸರ್ವೆ ಡೆಪ್ಯುಟಿ ಸೂಪರಿಂಟೆಂಡೆಂಟರವರೇ ಕ್ಲಾಸಿಂಗ್ ಆಫೀಸಿನ ಚಾಲ್ತಿ ಕೆಲಸಗಳ ಚಾರ್ಜನ್ನು ವಹಿಸಿರತಕ್ಕದ್ದು.

ಕಂಟ್ರೋಲರವರ ಅಸಿಸ್ಟೆಂಟ್ ಮಿ|| ಎಂ ಎ ಶ್ರೀನಿವಾಸಾಚಾರ್ರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೂ ೧೫ ದಿವಸಗಳು ಜಾಸ್ತಿ ಮಾಡಿದೆ. ಸೀನಿಯರ್ ಸೂಪರಿಂಟೆಂಡೆಂಟ್ ಮಿ|| ಸುಬ್ಬರಾಮಯ್ಯನವರೇ ಆ ಕಂಟ್ರೋಲರವರ ಚಾಲ್ತಿ ಕೆಲಸಗಳ ಚಾರ್ಜನ್ನು ವಹಿಸಿರತಕ್ಕದ್ದು.

ಮಿ|| ಕೆ. ವೇದಾಂತಯ್ಯಂಗಾರ್ರನ್ನು ಮಳವಳ್ಳಿ ತಾಲ್ಲೂಕು ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಕಮಾಡಿದೆ.

ಮುಂದೆ ಹೇಳುವ ಆಫೀಸರುಗಳ ವರ್ಗಾವರ್ಗಿಯನ್ನು ಹುಕುಂ ಮಾಡಿದೆ.—(೧) ಮಿ|| ಎ ವೃತ್ತಪ್ಪಯ್ಯರವರು ಕೋಲಾರದ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ; (೨) ಮಿ|| ಬಿ ವೆಂಕೋಬರಾಯರು ಕೋಲಾರದಿಂದ ಹಾಸನ ಡಿಸ್ಟ್ರಿಕ್ಟ್ ಚನ್ನರಾಯಪಟ್ಟಣದ ಸಬ್ ಡಿವಿಜನ್ ಛಾರ್ಜಿಗೆ.

ಮೈಸೂರು ಇನ್‌ಫೆಂಟ್ರಿ ೩ನೇ ಬಟಾಲಿಯನ್ನಿನಲ್ಲಿ ಮುಂದೆ ಹೇಳುವ ಹಂಗಾಮಿ ಬಡ್ತಿಗಳನ್ನು ಜನವರಿ ೧೫ ರಿಂದ ಮಂಜೂರು ಮಾಡಿದೆ:—ಕಮಾಂಡಾಂಟ್ ಸೈಯದ್ ಅಹಮದ್ ರವರು ಕೆಲಸದಿಂದ ನಿವೃತ್ತರಾದಕಾರಣ ಸುಬೇದಾರ್ ಮೇಜರ್ ಹರಿರಾಯರು ಕಮಾಂಡಾಂಟರಾಗಿಯೂ, ಸುಬೇದಾರ್ ರಾಮಸಿಂಗ್ ರವರು ಸುಬೇದಾರ್ ಮೇಜರಾಗಿಯೂ ಕೆಲಸ ಮಾಡತಕ್ಕದ್ದು.

ಮೈಸೂರು ಸ್ಟೇಟ್ ಸೈನ್ಯದ ಛೀಫ್ ಕಮಾಂಡಾಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ ದೇಶರಾಜೇ ಅರಸಿನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪರ್ಸನಲ್ ಅಸಿಸ್ಟೆಂಟ್ ಮಿ|| ಆರ್. ಪುಟ್ಟಣ್ಣನವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಛೀಫ್ ಕಮಾಂಡಾಂಟರ ಆಫೀಸ್ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಸ್ಯಾನಿಟರಿ ಡಿವಿಜನ್ ಸಬ್ ಆ|| ಇಂಜನಿಯರ್ ಮಿ|| [illegible] ಕೃಷ್ಣಯ್ಯಂಗಾರ್ರಿಗೆ ಫೆಬ್ರುವರಿ ೫ ರಿಂದ ಹದಿನೈದು ದಿವಸ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಡಿವಿಜನ್ ಅ|| ಇಂಜನಿಯರ್ ಮಿ|| ಬಿ ಸಿ ಶ್ರೀನಿವಾಸಯ್ಯಂಗಾರ್ರಿಗೆ ಜನವರಿ ೨೨ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕೃಷಿಶಿಲ್ಪಾಭಿವರ್ಧಕ ಸಮಾಜವು.

"ಶ್ರೀ ಕೃಷ್ಣರಾಜ ಕೃಷಿ ಶಿಲ್ಪಾಭಿವರ್ಧಕ ಸಮಾಜ, ಲಿಮಿಟೆಡ್, ಮೈಸೂರು" ಎಂಬ ಸಂಘವನ್ನು ಸ್ಥಾಪಿಸುವುದಕ್ಕೋಸ್ಕರ ೧೯೦೭ನೇ ಇಸ್ವಿ ನವಂಬರು ೩ನೇ ತಾ. ಬುಧವಾರ ಪ್ರಾತಃಕಾಲ ೮ ಗಂಟೆಗೆ ಮೈಸೂರು ಪಬ್ಲಿಕ್ ಆಫೀಸು ಕಟ್ಟಡದಲ್ಲಿ ಸಭೆ ಸೇರಿ ನಡೆಸಿದ ಜನರಲ್ ಮೀಟಿಂಗಿನಲ್ಲಿ ಈ ಕೆಳಗೆ ವಿವರಿಸುವ ರೂಲುಗಳು ನಿರ್ಣಯಿಸಲ್ಪಟ್ಟವು.

ಈ ಮೀಟಿಂಗಿಗೆ ಸುಮಾರು ೨೦೦ ಜನದ ವರಿವಿಗೂ ದಯಮಾಡಿಸಿದ್ದರು. ಈ ಸಂಘವು "ಶ್ರೀ ಕೃಷ್ಣರಾಜ ಕೃಷಿ ಶಿಲ್ಪಾಭಿವರ್ಧಕ ಸಮಾಜ, ಲಿಮಿಟೆಡ್, ಮೈಸೂರು" ಎಂಬ ಹೆಸರಿನಿಂದ ಕರೆಯಲ್ಪಡತಕ್ಕದ್ದು.

ಈ ಸಮಾಜದ ಉದ್ದೇಶಗಳ್ಯಾವವೆಂದರೆ—೧. (ಅ) ವ್ಯವಸಾಯ ವಿಷಯವಾಗಿ ಜನಗಳ ತಿಳುವಳಿಕೆಯನ್ನು ಅಭಿವೃದ್ಧಿಪಡಿಸುವುದು (ಆ) ಉತ್ತಮತರದ ವ್ಯವಸಾಯವನ್ನು ದೃಷ್ಟಾಂತವಾಗಿ ತೋರಿಸುವುದು (ಇ) ಉತ್ತಮವಾದ ಬೀಜಗಳನ್ನು ತರಿಸಿ ಒದಗಿಸಿ ಕೊಡುವುದು. ೨. ವ್ಯವಸಾಯಕ್ಕೆ ಸಂಬಂಧಪಟ್ಟ ಹೊಸ ತರಹ ನೇಗಲು ಮೊದಲಾದ ಮುಟ್ಟುಗಳನ್ನೂ ಯಂತ್ರಗಳನ್ನೂ ರೈತರಿಗೆ ಒದಗಿಸಿ ಕೊಡುವುದು. ೩. ಕೈಗಾರಿಕೆ ಅಂದರೆ ನೆಯ್ಗೆ ಕೆಲಸಗಳನ್ನು ಒಳ್ಳೇ ಮಗ್ಗಗಳ ಮೂಲಕವೂ ಇತರ ಸಲಕರಣೆಗಳಿಂದಲೂ ಅಭಿವೃದ್ಧಿಪಡಿಸುವುದು ಇದಕ್ಕೆ ಬೇಕಾದ ದಳವಾಸೆ ಕುಮಾಕು ಮಾಡುವುದು. ಮತ್ತು ಕೈಗಾರಿಕ ಕೆಲಸದಲ್ಲಿ ತಯಾರಾಗುವ ವಸ್ತುಗಳ ಬಿಕರಿಗೆ ಅನುಕೂಲವನ್ನು ಕಲ್ಪಿಸುವುದು. ಯೋಗ್ಯವಾದ ಹೊಸ ತರಹ ಕೈಗಾರಿಕೆ ಕೆಲಸಗಳನ್ನು ಕಲ್ಪಿಸುವುದೇ ಮೊದಲಾದ ವಿಷಯಗಳು.

ಈ ಸಮಾಜದ ಮೂಲಧನ ಯಾವುದೆಂದರೆ—ಮೆಂಬರುಗಳು ಕೊಡುವ ಚಂದಾ, ಡೊನೇಷನ್ ಯಾನೆ ಇನಾಂ ರೂಪವಾಗಿ ಬರುವ ಸಹಾಯ ದ್ರವ್ಯ, ಸರ್ಕಾರದವರು ಕೊಡಬಹುದಾದ ಸಹಾಯದ್ರವ್ಯ ಮತ್ತು ಷೇರುಗಳ ಮೂಲಕ ಬರುವ ದ್ರವ್ಯ.

ಪ್ರತಿ ಒಬ್ಬ ಮೆಂಬರೂ ಒಂದು ರೂಪಾಯಿಗಿಂತ ಕಮ್ಮಿ ಇಲ್ಲದೆ ವಾರ್ಷಿಕ ಚಂದಾ ಕೊಡತಕ್ಕದ್ದು. ಈ ಸಂಘದ ಷೇರುಗಳ ಬಂಡವಾಳವು ಪ್ರಕೃತ ೨೦,೦೦೦ ರೂಪಾಯಿಗಳಾಗತಕ್ಕದ್ದು. ಷೇರು ಒಂದಕ್ಕೆ ೧೦ ರೂಪಾಯಿ ನಂತೆ ೨,೦೦೦ ಷೇರುಗಳನ್ನು ಮಾಡಿ ಬಂಡವಾಳವನ್ನು ಶೇಖರ ಮಾಡಬೇಕು.

ಈ ಸಮಾಜದ ಕಾರ್ಯ ನಿರ್ವಾಹಕ್ಕಾಗಿ ಈ ಸಮಾಜದ ಒಟ್ಟು ಮೆಂಬರುಗಳ ಪೈಕಿ ೧೦ ಜನಕ್ಕೆ ಕಡಮೆ ಇಲ್ಲದೆ ೨೮ ಜನಗಳಿಗೆ ಜಾಸ್ತಿ ಇಲ್ಲದೆ ಒಂದು ಮ್ಯಾನೇಜಿಂಗ್ ಕಮಿಟಿ ಇರತಕ್ಕದ್ದು. ಅವರ ಇವರ ಪೈಕಿ ಮುಕ್ಕಾಲು ಭಾಗಕ್ಕೆ ಕಮ್ಮಿ ಇಲ್ಲದೆ ಷೇರುದಾರರಿರತಕ್ಕದ್ದು. ಈ ಪೈಕಿ ಒಬ್ಬರು ಪ್ರೆಸಿಡೆಂಟರಾಗಿಯೂ, ಒಬ್ಬರು ವೈಸ್ ಪ್ರೆಸಿಡೆಂಟರಾಗಿಯೂ, ಇಬ್ಬರು ಸೆಕ್ರೆಟರಿಗಳಾಗಿಯೂ, ಒಬ್ಬರು ಟ್ರೆಜರರ್ ಆಗಿಯೂ, ಒಬ್ಬರು ಲೀಗಲ್ ಅಡ್ವೈಜರ್ ಆಗಿಯೂ ಇರತಕ್ಕದ್ದೆಂದು ಗೊತ್ತಾಯಿತು. ಕಮಿಟಿ ಮೆಂಬರುಗಳು.—ಮೆ॥ ಗಳಾದ ವಿ. ಎ. ನರಸಿಂಹಯ್ಯಂಗಾರ್ರು (ಪ್ರೆಸಿಡೆಂಟ್), ಎಂ. ಲಕ್ಷ್ಮೀಕಾಂತರಾಜೇ ಅರಸಿನವರು (ವೈಸ್ ಪ್ರೆಸಿಡೆಂಟ್), ಹೆಚ್. ನರಸಿಂಗರಾಯರೂ ಬಿ. ಸುಬ್ಬಶಾಮಯ್ಯರೂ (ಸೆಕ್ರೆಟರಿಗಳು), ವಿ. ರಾಘವಾಚಾರ್ರು (ಟ್ರೆಜರರ್), ಎಂ. ಸಿ. ರಂಗೈಯಂಗಾರು (ಲೀಗಲ್ ಅಡ್ವೈಜರ್) ಈ ಸಮಾಜದ ಆಡಳಿತವು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮಾತ್ರ ಪ್ರಕೃತ ಜಾರಿಯಲ್ಲಿರತಕ್ಕದ್ದು ಈ ಡಿಸ್ಟ್ರಿಕ್ಟಿಗೆ ಸೇರಿದ ೧೨ ತಾಲ್ಲೂಕುಗಳ ಪೈಕಿ ಪ್ರತಿ ಒಂದರಲ್ಲೂ ೨—೩ ಮಂದಿಯಂತೆ ಮುಖಂಡರನ್ನು ಈ ಸಂಘಕ್ಕೆ ಮೆಂಬರುಗಳಾಗಿ ನೇಮಿಸಿದಾರೆ.

ಈ ಸಂಘದ ಮ್ಯಾನೇಜಿಂಗ್ ಕಮಿಟಿಯ ಮೀಟಿಂಗು ಕಳೆದ ನವಂಬರು ೨೪ನೇ ತಾ ಭಾನುವಾರ ಮೈಸೂರು ಯಗ್ನಭಿಕ್ಷ ಕಟ್ಟಡದಲ್ಲಿ ನಡೆಯಿತು ಈ ಮೀಟಿಂಗಿನಲ್ಲಿ ಈ ಸಂಘವನ್ನು ಮೈಸೂರು ಕೋಆಪರೇಟಿವ್ ರೆಗ್ಯುಲೇಷನ್ ಪ್ರಕಾರ ರಿಜಿಸ್ಟರು ಮಾಡತಕ್ಕ ಬಗ್ಗೆ ಅಪ್ಲಿಕೇಷನ್ ತಯಾರ್ಮಾಡಿಸಿ ಕೂಡಲೆ ರವಾನಿಸಬೇಕೆಂದು ನಿಷ್ಕರ್ಷೆಯಾಗಿ ಅದರಂತೆ ಅಪ್ಲಿಕೇಷನ್ ಕೋಆಪರೇಟಿವ್ ಸೊಸೈಟಿಯ ರಿಜಿಸ್ಟ್ರಾರಿಗೆ ಕಳುಹಿಸಲಾಯಿತು. ಅನಂತರ ಡಿಸೆಂಬರ್ ೮ನೇ ತಾ ಭಾನುವಾರ ಮೈಸೂರು ಟೌನ್ ಹಾಲ್ ಬಂಗಲೆಯಲ್ಲಿ ಇನ್ನೊಂದು ಮ್ಯಾನೇಜಿಂಗ್ ಕಮಿಟಿಯ ಮೀಟಿಂಗು ನಡೆದು, ಅದರಲ್ಲಿ ಈ ಸಂಘದ ವಿಷಯವಾಗಿ ತಯಾರಾಗಿರುವ ಮಸೂದೆಯ ಬೈಲಾಗಳನ್ನು ತೀರ್ಮಾನಿಸತಕ್ಕ ಬಗ್ಗೆ ಅದೇ ಡಿಸೆಂಬರ್ ೧೫ನೇ ತಾ ಭಾನುವಾರ ಜನರಲ್ ಮೀಟಿಂಗು ಮಾಡಬೇಕೆಂದೂ, ಈ ಸಂಘದ ಉಪಯೋಗಕ್ಕೋಸ್ಕರ ಒಬ್ಬ ಗುಮಾಸ್ತೆಯನ್ನೂ ಒಬ್ಬ ಜವಾನನನ್ನೂ ಇಟ್ಟುಕೊಳ್ಳಬಹುದೆಂದೂ, ಈ ಊರು ಮಧ್ಯ ಪ್ರದೇಶದಲ್ಲಿ ಒಂದು ಬ್ರಾಂಚು ಆಫೀಸನ್ನು ಇಡಬೇಕೆಂದೂ ತೀರ್ಮಾನವಾಯಿತು ಇದಲ್ಲದೆ ಮೇಲೆ ನಮೂದಿಸುವಂತೆ ಅದೇ ಡಿಸೆಂಬರು ೧೫ನೇ ತಾರೀಖಿನಲ್ಲಿ ಒಂದು ಜನರಲ್ ಮೀಟಿಂಗು ನಡೆದು ತಯಾರಾಗಿದ್ದ ಡ್ರಾಫ್ಟು ಬೈಲಾಗಳು ತೀರ್ಮಾನಿಸಲ್ಪಟ್ಟವು ಮತ್ತು ೧೯೦೮ನೇ ಇಸ್ವಿ ಜನವರಿ ೨೬ನೇ ತಾ. ಭಾನುವಾರ ಮತ್ತೊಂದು ಮ್ಯಾನೇಜಿಂಗ್ ಕಮಿಟಿಯ ಮೀಟಿಂಗು ನಡೆದು ಅದರಲ್ಲಿ ವ್ಯವಸಾಯದ ಕಮಿಟಿ, ಕೈಗಾರಿಕೆ ಕೆಲಸದ ಕಮಿಟಿ ಮತ್ತು ಕಾರ್ಯನಿರ್ವಾಹಕ ಕಮಿಟಿ ಎಂಬದಾಗಿ ಮೂರು ಸಬ್ ಕಮಿಟಿಗಳನ್ನೂ, ಅದರ ಮೆಂಬರುಗಳನ್ನೂ ನಿರ್ಣಯಿಸಲಾಯಿತು ಮತ್ತು ಜನರಲ್ ಮೀಟಿಂಗಿನಲ್ಲಿ ತಯಾರಾಗಿದ್ದ ಬೈಲಾಗಳನ್ನು ಪ್ರಿಂಟು ಮಾಡಿಸಬಹುದು ಎಂಬುವದೇ ಮೊದಲಾದ ವಿಷಯಗಳೂ ತೀರ್ಮಾನವಾದವು ಈ ಸಂಘವು ಮೈಸೂರು ಪರಸ್ಪರ ಸಹಾಯಕ ಸಂಘಗಳ ರೆಗ್ಯುಲೇಷನ್ನಿಗೆ ಅನುಸಾರವಾಗಿ ಕಳೆದ ಜನವರಿ ೧೧ರಲ್ಲಿ ರಿಜಿಸ್ಟರಾಗಿ ಬಂದಿದೆ ಈಗ ಈ ಸಂಘಕ್ಕೆ ಸುಮಾರು ೧೫೦ ಜನಗಳ ವರಿವಿಗೂ ಮೆಂಬರುಗಳಾಗಿರುವುದಲ್ಲದೆ, ಸುಮಾರು ಒಂದು ಸಾವಿರವೂ ಬೆಲೆಯ ಷೇರುಗಳ ತನಕ ಜನರು ಆಗಲೇ ತೆಗೆದುಕೊಂಡಿರುತ್ತಾರೆ.

ಪೋರ್ಚುಗಲ್ ದೊರೆ ಮತ್ತು ಯುವರಾಜರ ಕೊಲೆಗಳು.

ಈಚೆಗೆ ಬಂದಿರುವ ವರ್ತಮಾನಗಳು.

ಪೋರ್ಚುಗಲ್ ರಾಜ್ಯದ ದೊರೆಯವರನ್ನೂ ಅವರ ಜ್ಯೇಷ್ಠಪುತ್ರರನ್ನೂ ರಾಜಧಾನಿಯಾದ ಲಿಸ್‌ಬನ್ ಪಟ್ಟಣದಲ್ಲಿ ಕೊಂದುಹಾಕಿದರೆಂಬ ದುಃಖಕರವಾದ ವರ್ತಮಾನವನ್ನು ಸಂಕ್ಷೇಪವಾಗಿ ಕಳೆದವಾರ ತಿಳಿಸಿರುತ್ತೇವಷ್ಟೆ. ಈ ವಿಷಯದಲ್ಲಿ ಈಚೆಗೆ ಬಂದಿರುವ ಸಮಾಚಾರಗಳನ್ನು ಇಲ್ಲಿ ಪ್ರಕಟಿಸುವೆವು.

ರಾಜ್ಯಭಾರದ ಏರ್ಪಾಡುಗಳು.

ಲಂಡನ್, ತಾ. ೩ನೆ ಸೋಮವಾರ.—ನೆನ್ನೆ ರಾತ್ರಿ ಲಿಸ್‌ಬನ್ ಪಟ್ಟಣದಲ್ಲಿ ಸ್ಟೇಟ್ ಕೌನ್ಸಿಲ್ ಎಂಬ ರಾಜಕೀಯ ಸಭೆ ನಡೆಯಿತು. ಇನ್‌ಫ್ಯಾಂಟ್ ಮ್ಯಾನ್ಯುಯಲ್ (ಕೊಲ್ಲಲ್ಪಟ್ಟ ದೊರೆಯ ೨ನೆ ಕುಮಾರ ಮತ್ತು ಈಗಿನ ದೊರೆ), ಇಬ್ಬರು ರಾಣೀರುಗಳು, ಡ್ಯೂಕ್ ಆಫ್ ಒಪೋರ್ಟೋ, ಈ ಮೊದಲಾದವರೂ ಇಲಾಖೆಗಳ ಮಂತ್ರಿಗಳೂ ಸಭೆಯಲ್ಲಿ ಹಾಜರಾಗಿದ್ದರು. ಮ್ಯಾನ್ಯುಯಲ್ ದೊರೆಯು ಸಭಾನಾಯಕರಾಗಿ ನಿಂತು, ಕೌನ್ಸಿಲ್ ಮೆಂಬರುಗಳನ್ನು ಕುರಿತು—"ನನಗೆ ತಿಳುವಳಿಕೆಯಾಗಲಿ ಅನುಭವವಾಗಲಿ ಇಲ್ಲ ರಾಜ್ಯಭಾರದ ಜವಾಬ್ದಾರಿಯನ್ನೆಲ್ಲಾ ನಿಮ್ಮ ಮೇಲೆ ಹಾಕಿರುತ್ತೇನೆ ನೀವು ದೇಶವತ್ಸಲರಾಗಿಯೂ ವಿವೇಕಶಾಲಿಗಳಾಗಿಯೂ ಕಾರುಬಾರುಗಳನ್ನು ನಡೆಸುತ್ತಾ ಬಂದೀರೆಂದು ಹಾರೈಸುವೆನು" ಎಂಬದಾಗಿ ಹೇಳಿದರು ಸೇನಾರ್ ಫ್ರಾಂಕೋ ಮೊದಲಾದ ಮಂತ್ರಿಗಳು ರಾಜ್ಯಭಾರವನ್ನು ನಡೆಸುವುದಕ್ಕೆ ಸರಿಯಾದ ಏರ್ಪಾಡು ಮಾಡುವುದಾಗಿ ಒಪ್ಪಿಕೊಂಡರು ಇದುವರೆಗೆ ಮುಖ್ಯ ಮಂತ್ರಿಯಾಗಿದ್ದ ಸೇನಾರ್ ಫ್ರಾಂಕೋ ಮೊದಲಾದ ಮಂತ್ರಿಗಳು ರಾಜ್ಯಭಾರವನ್ನು ನಡೆಸುವುದಕ್ಕೆ ಸರಿಯಾದ ಏರ್ಪಾಡು ಮಾಡುವುದಾಗಿ ಒಪ್ಪಿಕೊಂಡರು ಇದುವರೆಗೆ ಮುಖ್ಯ ಮಂತ್ರಿಯಾಗಿದ್ದ ಸೇನಾರ್ ಫ್ರಾಂಕೋರವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರು ವೈಸ್ ಅಡ್ಮಿರಲ್ ಫೆರಿರಾ ಡೊ ಅಮಾರಲ್‌ಯವರು ಮಂತ್ರಿಪದವಿಯನ್ನು ಅಂಗೀಕರಿಸಿ, ಬೇರೆಬೇರೆ ಇಲಾಖೆಗಳಿಗೆ ತಮ್ಮ ಕಡೆಯ ದೊಡ್ಡ ಮನುಷ್ಯರನ್ನು ಮುಖ್ಯ ಉದ್ಯೋಗದಾರರನ್ನಾಗಿ ನೇಮಿಸಿಕೊಂಡಿದಾರೆ

ಕೊಲೆಗಳ ವಿವರಣೆಯು

ಲಂಡನ್, ತಾ ೪, ೫.—ದೊರೆ, ರಾಣಿ, ಯುವರಾಜ, ಎರಡನೇ ಕುಮಾರ, ಈ ನಾಲ್ವರೂ ವಿಲ್ಲಾ ವಿಸೋಸಾ ಎಂಬ ಭವನದಿಂದ ಸಾರೋಟಿನಲ್ಲಿ ಕುಳಿತು ಅರಮನೆಗೆ ಬರುತ್ತಿದ್ದಾಗ್ಗೆ ಹಿಂದೆ ಮುಂದೆ ಬಾಡಿಗಾರ್ಡ್ ಎಂಬ ಅಂಗರಕ್ಷರಾದ ಸವಾರರು ಇರಲಿಲ್ಲ ಇದನ್ನು ನೋಡಿ ಒಬ್ಬ ಪ್ರಾಯಸ್ಥನು ಅಕಸ್ಮಾತ್ತಾಗಿ ಸಾರೋಟಿನ ಹಿಂದೆ ಹತ್ತಿ ನಿಂತುಕೊಂಡು, ದೊರೆಯವರ ಪಕ್ಕಕ್ಕೆ ಗುರಿಕಟ್ಟಿ ರಿವಾಲ್ವರ್ ಎಂಬ ಪಿಸ್ತೂಲನ್ನು ಹಾರಿಸಿದನು ಒಡನೆಯೇ ರಾಣಿಯವರು ಭಯಂಕರವಾಗಿ ಕೂಗಿಕೊಂಡು ಎದ್ದು, ಕೈಯಲ್ಲಿದ್ದ ತುರಾಯಿಯಿಂದ ಆ ಕೊಲೆಗಾರನನ್ನು ಹೊಡೆದರು. ಅಷ್ಟರೊಳಗಾಗಿ ಯುವರಾಜರು ಕೈಯಲ್ಲಿದ್ದ ದೊಣ್ಣೆಯಿಂದ ಬಲವಾಗಿ ಒಂದೇಟು ಕೊಟ್ಟರು ಆದರೂ ಆ ಕೊಲೆಗಾರನು ಅಷ್ಟಕ್ಕೇ ಸುಮ್ಮನಾಗದೆ ಎರಡನೇ ಸಲವೂ ಅದೇ ಪಿಸ್ತೂಲನ್ನು ಗುರಿಕಟ್ಟಿ ದೊರೆಯ ಬೆನ್ನಿಗೆ ಹೊಡೆದನು ಅಷ್ಟು ಹೊತ್ತಿಗೆ ಜಮಾಯಿಸಿದ ಜನರು ಅವನನ್ನು ಹಿಡಿದು ಗಾಡಿಯಿಂದ ಕೆಳಕ್ಕೆ ಎಳೆದು ಹಾಕಿದರು. ಕೂಡಲೇ ಒಬ್ಬ ಪೋಲೀಸಿನವನು ಅವನನ್ನು ಗುಂಡಿನಿಂದ ಹೊಡೆದು ಕೊಂದು ಬಿಟ್ಟನು ಈ ಗಲಭೆಯೊಳಗೆ ಇನ್ನೊಬ್ಬನು ತನ್ನ ಬಗಲಿನಿಂದ ಪಿಸ್ತೂಲನ್ನು ಹಿರಿದು, ಗಾಡಿಯಲ್ಲಿ ಕುಳಿತಿದ್ದ ಯುವರಾಜನಿಗೆ ಗುರಿಕಟ್ಟಿ ತಪ್ಪದೆ ಎರಡು ಸಲ ಗುಂಡು ಹೊಡೆದು, ಮೂರನೇ ಗುಂಡನ್ನು ಹೊಡೆಯುವುದಕ್ಕೆ ಪ್ರಯತ್ನಪಡುತ್ತಿರುವಾಗ ಒಬ್ಬ ಉದ್ಯೋಗಿನು ಕತ್ತಿಯನ್ನು ಹಿರಿದು ಅವನನ್ನು ಕತ್ತರಿಸಿಹಾಕಿದನು ಇನ್‌ಫ್ಯಾಂಟ್ ಮ್ಯಾನ್ಯುಯಲ್ ಎಂಬ ಎರಡನೇ ರಾಜಕುಮಾರನಿಗೆ ಇನ್ನೊಂದು ಕಡೆ ತಗಲಿ ಹಾರಿಬಂದ ಗುಂಡುಗಳು ಬಿದ್ದು ಗಾಯವಾಗಿದೆ

ದುಃಖಕರವಾದ ಸಂಗತಿಯು

ದೊರೆಯನ್ನೂ ಯುವರಾಜರನ್ನೂ ಚಿಕಿತ್ಸೆಗೆಂದು ಅರಮನೆಯ ಆಯುಧಶಾಲೆಗೆ ಸಾಗಿಸಿಕೊಂಡು ಹೋಗುತ್ತಿರುವಲ್ಲಿ ದೊರೆಯವರು ದಾರಿಯಲ್ಲೇ ಕಾಲವಾದರು, ಯುವರಾಜನಿಗೆ ಕುಟುಕು ಪ್ರಾಣವಿತ್ತು ಇಬ್ಬರನ್ನೂ ಎಡ ಬಲ ಪಾರ್ಶ್ವಗಳಲ್ಲಿ ಮಲಗಿಸಿಕೊಂಡು ರಾಣಿಯವರು ತಮ್ಮ ಎರಡು ಹಸ್ತಗಳನ್ನೂ ಇಬ್ಬರ ಮೈಮೇಲೂ ಹಾಕಿಕೊಂಡು, ರಾತ್ರಿಯೆಲ್ಲಾ ಗೋಳಾಡುತ್ತಿದ್ದರು ಈ ವಿಚಾರವು ಪ್ರಪಂಚದಲ್ಲೆಲ್ಲಾ ವಿಶೇಷ ಪರಿತಾಪವನ್ನುಂಟುಮಾಡಿದೆ

ಕೊಲೆಗಾರರು

ಈ ಕೊಲೆಗಾರರ ಪೈಕಿ ಒಬ್ಬನು ಲಿಸ್‌ಬನ್ ರಾಜಧಾನಿಯ ಪ್ರೈ ಸ್ಕೂಲ್ ಮಾಸ್ಟರಾಗಿಯೂ ಸವಾರ್ ಸೈನ್ಯದಲ್ಲಿ ಸಾರ್ಜಂಟಾಗಿಯೂ ಇದ್ದನು. ಇನ್ನಿಬ್ಬರು ಜಲ್ಲಿಸ ಷಾಪ್ ಅಂಗಡಿಗಳಲ್ಲಿ ನೌಕರಿ ಮಾಡಿಕೊಂಡಿದ್ದವರು. ಇವರೆಲ್ಲಾ ಪೋರ್ಚುಗಲ್ ಪ್ರಜೆಗಳೇ ಹೊರತು ಇತರ ರಾಜ್ಯಗಳವರಲ್ಲ.

ದುಃಖವಾರ್ತೆಗಳು

ಈ ಕೊಲೆಗಳ ಸಮಾಚಾರವು ಇತರ ರಾಜ್ಯಗಳಿಗೆ ಮುಟ್ಟಿದ ಕೂಡಲೇ ಯೂರೋಪಿನ ದೊರೆಗಳೆಲ್ಲಾ ತುಂಬಾ ವ್ಯಸನಾಕ್ರಾಂತರಾಗಿ, ಸಂತಾಪ ಸೂಚಕವಾದ ಸಂದೇಶ ವರ್ತಮಾನಗಳನ್ನು ರಾಣೀರಿಗೂ ಅವರ ಕುಮಾರರಿಗೂ ಕಳುಹಿಸಿರುತ್ತಾರೆ

ಶವಸಂಸ್ಕಾರವು.

ಕಾರ್ಲಸ್ ದೊರೆಯವರ ಮತ್ತು ಯುವರಾಜರವರ ಶವಗಳನ್ನು ಸಕಲವಾದ ರಾಜ ಮರ್ಯಾದೆಗಳಿಂದ ಕಳೆದ ಶನಿವಾರದ ದಿನ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ಪದ್ಧತಿಯ ಪ್ರಕಾರ ದಫನ್ಮಾಡಿದರು ಯೂರೋಪಿಯನ್ ರಾಜ್ಯಗಳ ಪ್ರತಿನಿಧಿಗಳು ಹೋಗಿ ಆ ದಿನ ಮೆರವಣಿಗೆಯಲ್ಲಿ ಹಾಜರಾಗಿದ್ದರು

ಲಂಡನ್, ಫೆಬ್ರವರಿ ೬, ೭, ೮.—ಮ್ಯಾನ್ಯುಯಲ್ ದೊರೆಯು ಇಸ್ತಿಹಾರು ಹಾಕಿಸಿ, ಹೊಸ ಮಂತ್ರಿಗಳು ರಾಜ್ಯಭಾರವನ್ನು ಪ್ರಜಾರಂಜಕವಾಗಿ ನಡೆಸುತ್ತಾರೆಂತಲೂ, ಎಷ್ಟುಮಾತ್ರಕ್ಕೂ ಏಕನಾಯಕ ಪ್ರಭುತ್ವವನ್ನು ಜಾರಿಗೆ ತರುವುದಿಲ್ಲವೆಂತಲೂ, ಪ್ರಜಾ ಪ್ರತಿನಿಧಿ ಸಭೆಗಳು ಪೂರ್ವದಂತೆಯೇ ರೂಢಿಸಲ್ಪಡುವವೆಂತಲೂ ಸಾರಿಸಿರುತ್ತಾರೆ.

ಲೇಟ್ ದೊರೆಯಾದ ಕಾರ್ಲಸ್‌ಯವರ ಮಂತ್ರಿಯಾಗಿದ್ದು ಪಾರ್ಲಿಮೆಂಟನ್ನು ವಜಾಮಾಡಿ ಏಕನಾಯಕ ಪ್ರಭುತ್ವವನ್ನು ಸ್ಥಾಪಿಸಬೇಕೆಂದು ಪ್ರಯತ್ನಪಟ್ಟ ಮಾಜಿ ಡಿಕ್ಟೇಟರ್ ಸೇನಾರ್ ಫ್ರಾಂಕೋ ಎಂಬುವನು ಪೋರ್ಚುಗಲ್ ರಾಜಧಾನಿಯನ್ನೇ ಬಿಟ್ಟು, ಫ್ರಾನ್ಸಿನ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರಕ್ಕೆ ಹೊರಟು ಹೋದನು. ಆತನ ಕೂಡ ಮಂತ್ರಿಗಳಾಗಿದ್ದ ಇನ್ನಿಬ್ಬರು ದೊಡ್ಡ ಮನುಷ್ಯರು ದೇಶಭ್ರಷ್ಟರಾಗಿ ತಲೆತಪ್ಪಿಸಿಕೊಂಡು ಓಡಿಹೋಗಿದಾರೆ. ಇವರುಗಳ ಕಾಲದಲ್ಲಿ ಸೆರೆಮನೆಯೊಳಗೆ ಬಿದ್ದಿದ್ದಂಥಾ ದೊಡ್ಡ ಮನುಷ್ಯರನ್ನೆಲ್ಲಾ ಈಗಿನ ದೊರೆಯವರು ಬಿಡುಗಡೆಮಾಡಿಸಿರುತ್ತಾರೆ.

ರಾಜಧಾನಿಯಲ್ಲೂ ರಾಜ್ಯದ ದೊಡ್ಡ ಶಹರುಗಳಲ್ಲೂ ಮ್ಯುನಿಸಿಪಲ್ ಏರ್ಪಾಡುಗಳನ್ನೆಲ್ಲಾ ಪೂರ್ವದಂತೆ ಪ್ರಜೆಗಳ ಮುಖಂಡರೇ ನೋಡಿಕೊಳ್ಳಬೇಕೆಂತಲೂ ವರ್ತಮಾನ ಪತ್ರಿಕೆಗಳ ನಿರ್ಬಂಧನಮಾಡುವುದಿಲ್ಲವೆಂತಲೂ ಈಗಿನ ದೊರೆಯವರೂ ಅವರ ಮಂತ್ರಿಯವರೂ ಪ್ರಕಟಿಸಿ, ಪ್ರಜೆಗಳನ್ನು ಸಮಾಧಾನಪಡಿಸಿರುತ್ತಾರೆ.

ಲೇಟ್ ದೊರೆಯವರನ್ನೂ ಯುವರಾಜರನ್ನೂ ಕೊಂದ ಮಾನವರ ಪೈಕಿ ಒಬ್ಬನು ನಿರಪರಾಧಿಯಾಗಿದ್ದನೆಂತಲೂ, ಅವನು ತನ್ನ ಯಜಮಾನನಿಗಾಗಿ ಅಂಚೆ ಸ್ಟಾಂಪುಗಳನ್ನು ಕೊಂಡುತರುವುದಕ್ಕಾಗಿ ಹೋಗಿದ್ದಾಗ ಅವನೂ ಕೊಲೆಗಾರರಲ್ಲಿ ಒಬ್ಬನೆಂದು ಊಹಿಸಿ ಅವನನ್ನು ಕೊಂದುಬಿಟ್ಟರೆಂತ ಒಂದು ವರ್ತಮಾನವಿದೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ಎಂದೂ ಜಾಗ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಖಾದಾರರಾಗುವದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್‌ಪಾಂಡೆನ್ಸ್.

ಕೆರೆಯ ನೀರು ನಷ್ಟವಾಗುತ್ತಿದೆ

ಅಯ್ಯಾ,

ತುಂಕೂರು ತಾಲ್ಲೋಕು ಮಾವುತ್ತೂರು ಗ್ರಾಮದ ಬಳಿ ಇರುವ ಕೆರೆಯಲ್ಲಿ ನೀರು ಇದೆ ಈ ನೀರಿನ ನಿಗಾಕ್ಕೆ ಒಬ್ಬ ನೀರುಗಾರನನ್ನು ಇಬ್ಬರು ಬೌಡಿಗಳನ್ನು ಸಹ ಸರ್ಕಾರದ ತಲಬಿನಮೇಲೆ ಇಟ್ಟಿದಾರೆ ನೀರನ್ನು ಸರಿಯಾದ ಮಾರ್ಗದಲ್ಲಿ ಸಾಗುವಳಿಗೆ ಉಪಯೋಗಿಸದೆ ವೃಥಾ ಅನಾಯಕವಾಗಿ ಹೋಗುತ್ತಿದೆ ನಾನು ನೋಡಿದೆ ಸರ್ಕಾರಕ್ಕೆ ಹಾಸಿಲು ಇಲ್ಲ, ರೈತರಿಗೆ ಪ್ರಯೋಜನವಿಲ್ಲ ಇವರುಗಳನ್ನು ಸರ್ಕಾರದ ತಲಬು ಕೊಟ್ಟು, ವೃಥಾ ಕೆರೆನೀರು ಹಾಳುಮಾಡುವುದಕ್ಕೆ ಇಟ್ಟಂತೆ ನನಗೆ ತೋರುತ್ತಿದೆ ಒಂದೆರಡು ನಾಲಾಕ್ಕೆ ಇಬ್ಬರಿಬ್ಬರು ಗ್ರಾಮದ ಪ್ರಮುಖರಾಗಿಯೂ ಜವಾಬ್ದಾರರಾಗಿಯೂ ಇರುವಂಥಾ ದೊಡ್ಡ ಮನುಷ್ಯರನ್ನು ಮೆಂಬರಾಗಿ ಸರ್ಕಾರದವರು ನೇಮಿಸಿದಲ್ಲಿ ಸರ್ಕಾರಕ್ಕೂ ಪ್ರಜೆಗಳಾದ ರೈತರಿಗೆ ಪ್ರಯೋಜನವೂ ಉಂಟಾದೀತು ಈ [illegible] ಈ ನೀರಿನ ನಿಗಾ [illegible]ದ್ದರಿಂದ ವೃಥಾ ಕಾಲುವೆ [illegible] ಸಂಗತಿಯನ್ನು ಮಧ್ಯದಲ್ಲಿರುವ ಹಳ್ಳಗಳೂ ಸಾಗರದ ಬಳಿ ಹಳ್ಳಗಳೂ ನೋಡಿದರೆ ನಿಚ್ಚಳ ಗೊತ್ತಾಗುತ್ತದೆ. ಇದು ಮುಖ್ಯವಾಗ ಇಲ್ಲಿನ ರೈತರು ಸರ್ಕಾರಕ್ಕೆ ಹೆದರಿ, ತಿಳಿಸದೆ ಇದಾರೆ. ನಾನು ವೃಥಾ ನೀರು ಹೋಗುವದು ನೋಡಿ, ಸಂಕಟಪಟ್ಟು ಬರೆದಿರುತ್ತೇನೆ ಈ ವಿಷಯಕ್ಕೆ ಸರ್ಕಾರದವರು ಇವರುಗಳನ್ನು ಬದಲಾಯಿಸುವದಾಗಲಿ, ನೀರು ಕಳವಿಗೆ ಅವಕಾಶವಿಲ್ಲದಂತೆ ಏರ್ಪಡಿಸುವದಾಗಲಿ ನಡಿಸಬೇಕೆಂದು ಹಾರೈಸುತ್ತೇನೆ

ಪ್ರತ್ಯಕ್ಷದರ್ಶಿ

ಪರೀಕ್ಷೆಯ ಸಂಗತಿಗಳು ಬೇಕು.

ಅಯ್ಯಾ,

[illegible]ಗೆರೆ ನಗರ ತಾಲ್ಲೋಕು ಹೀರೆಕೆರೆ ಗ್ರಾಮದಲ್ಲಿ ಕೋಟೆ ಸ್ಕೂಲ್ ಸ್ಥಾಪನೆಯಾಗಿ ಸುಮಾರು ೮ ೧೦ ವರುಷಗಳಾಯಿತು ಆ ಲಾಗಾಯ್ತು ಇದುವರೆಗೂ ಇಲ್ಲಿ ಒಬ್ಬ ಹುಡುಗನೂ ಪ್ಯಾಸಿಗೆ ಓದಿದ್ದಿಲ್ಲ ಯಾಕೆಂದರೆ ಆ ಲಾಗಾಯ್ತು ಇಲ್ಲಿಗೆ ಬಂದ ಮಾಸ್ತರುಗಳು ೩ನೇ ಕ್ಲಾಸು ಓದುವವಿಲ್ಲ ರೂಲಿಸು ಇಲ್ಲವೆಂತ ಹೇಳಿ, ೩ನೇ ಕ್ಲಾಸಿನಲ್ಲಿ ಬಿಟ್ಟು ಹುಡುಗರು ದನಕಾಯುತ್ತಿದಾರೆ ಇದಕ್ಕೆ ಸ್ಕೂಲ್ ಇನ್ಸ್‌ಪೆಕ್ಟರು ಬಂದಿದ್ದಾಗ್ಯೆ ಇಲ್ಲಿನ ಮೆಂಬರುಗಳು ಪಗ್ಗಸೇರು ಹೇಳಿಕೊಂಡಿದ್ದಕ್ಕಾಗಿ ಬೇರೊಬ್ಬ ಮಾಸ್ತರನ್ನು ನೇಮಿಸುತ್ತೇವೆಂತ ಅಪ್ಪಣೆ ಮಾಡಿದವರು ಇದುವರೆಗೆ ಏನೊಂದೂ ಸಡಿಯವಿಲ್ಲ ಇದರ ಓದಿಕ್ಕೆ ಹುಡುಗರು ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರಿಗೂ ಅರ್ಜಿ ಕೊಟ್ಟಿದ್ದಾಗ್ಯೂ ಇನ್ನೂ ಫಲವಾಗಲಿಲ್ಲ ಈಗ ಸ್ಕೂಲಿನಲ್ಲಿ ರಿಜಿಸ್ಟರ್ ದಾಖಲೆ ವಿದ್ಯಾರ್ಥಿಗಳ ೪೦ರ ಮೇಲೆ ಇದಾರೆ ಸಾವು ಇರುವ ಟೀಚರು ಗೋಳಾಡುತ್ತಾ ಇದಾರೆ ಮತ್ತು ಈ ಗ್ರಾಮದಲ್ಲಿ ಚಕ್ಕರಂಗಪ್ಪನೆಂಬುವರು ಧರ್ಮಾರ್ಥವಾಗಿ ಸ್ಕೂಲ್ ಹಂಚಿಸಿದಾರೆ ಈಗ ಇಷ್ಟರು ಹುಡುಗರಿಗೆ ಸ್ಕೂಲಿನಲ್ಲಿ ಪ್ರವೇಶವಾಗಿ ವಿದ್ಯಾಭ್ಯಾಸಂಗ ಮಾಡಿಸುವದಕ್ಕೆ ಸೂರ್ಯನಾರಾಯಣ ಶಾಸ್ತ್ರಿಗಳು ಮನೆಯಲ್ಲಿ ಅನ್ನ

...ಕೊಂಡು ಪರಸ್ಥಳದ ಹುಡುಗರಿಬ್ಬರಿಗೆ ಮಾತ್ರ ಪರೀಕ್ಷೆಗೆ ಒಪ್ಪಿ ... ಇದಾರೆ ಈ ಸ್ಕೂಲ್ ವಿಜಿಟರ್ ಪುಸ್ತಕದಲ್ಲಿ ಈ ಗ್ರಾಮಕ್ಕೆ ... ಅಮಲ್ದಾರ್ರವರು ಇನ್‌ಸ್ಪೆಕ್ಷನ್ನು ಮಾಡಿ, ಇನ್ನೊಬ್ಬ ಟೀಚರು ... ಉದಹರಿಸಿದಾರೆ ಮತ್ತು ಜನರಲ್ ಅಸಿಸ್ಟೆಂಟು ಸಾಹೇಬರ ... ಇನ್‌ಸ್ಪೆಕ್ಷನ್ ಮಾಡಿ ಮೇಲ್ಕಂಡಂತೆ ಬರೆದಿದಾರೆ

ಜನೋಪಕಾರಿ

ತಾಲ್ಲೋಕು ವರ್ತಮಾನಗಳು

ದಾವಣಗೆರೆ ಇಲ್ಲಿ ಜನಗಳು ಪ್ಲೇಗಿನ ದೆಸೆಯಿಂದ ಈಗ ಸುಮಾರು ೩ ತಿಂಗಳ ಲಾಗಾಯಿತು ಊರು ಬಿಟ್ಟು ಹೊರಗೆ ಕ್ಯಾಂಪುಗಳ ವಾಸವಾಗಿರುತ್ತಾರೆ ಇವರಲ್ಲಿ ದೊಡ್ಡಪೇಟೆ, ಕಾಯಿಪೇಟೆ ವೀರಶೈವ ಜನಗಳು ಹರಿಹರದ ರೋಡಿನಲ್ಲಿ ವಾಸವಾಗಿದ್ದಂದಿನಿಂದಲೂ ದೇವತಾ ಭಜನೆ, ನಿತ್ಯ ದಾಸೋಹ, ಪುರಾಣಶ್ರವಣ ಮುಂತಾದ ಕಾರ್ಯಗಳನ್ನು ನಡಸು ಕೊನೇ ದಿನ ತಾ॥ ೬ ಗುರುವಾರ ಈ ವೀರಶೈವ ಜನಗಳ ಮುಖಂಡರಾದ ಮ॥ ಬೇತೂರು ತಿಪ್ಪಣ್ಣನವರು, ಮ॥ ಹರಿಹರದ ... ಪ್ಪನವರು, ರಾ॥ ಬೆಳ್ಳೂಡಿ ... ನವರು ಸೇರಿ, ಈ ಮಹಾಕಾರ್ಯ ಸ್ಥಾಯಿಯಾಗಿ ನಿಲ್ಲುವದಕ್ಕೆ ಎಲ್ಲಾ ಖರ್ಚು ಬಾಬುಗಳನ್ನು ವಹಿಸಿಕೊಂಡು, ಎರಡು ಅನಾಥರ ವಿವಾಹವನ್ನು ಬಹಳ ವಿಜೃಂಭಣೆಯಿಂದ ಮಾಡಿಸಿದರು ಮಾರುದಿವಸ ... ಸಾವಿರಾರು ವೀರಶೈವ ಜನಗಳಿಗೆ ಸುಖ ಭೋಜನವನ್ನು ಮಾಡಿಸಿದರು ಸಾಯಂಕಾಲ ೭ ಘಂಟೆಯಿಂದ ೧೨ ಗಂಟೆವರಿಗೆ ಬೀದಿಯಲ್ಲಿ ಬಾಜಾ ಬಜಂತ್ರಿಯಿಂದ ... ಮೆರವಣಿಗೆಯೂ, ದೇವರ ಭಜನೆಯಿಂದ ಪಾಲ್ಕಿ ಉತ್ಸವ ಬಹಳ ವೈಭವದಿಂದ ನಡಸಿದರು

ಚನ್ನಪಟ್ಟಣ ಈಗ್ಗೆ ೧೫, ೨೦ ದಿವಸಗಳಿಂದಲೂ ಪ್ಲೇಗ್ ಕಾಣಿಸಿಕೊಂಡಿರುವದನ್ನು ತಿಳಿದು ಜನರು ತಮ್ಮ ತಮ್ಮ ಊರು ಮನೆಗಳನ್ನು ಬಿಟ್ಟು ... ಇದಾರೆ ... ಬಂದು ಸೇರಿದಾರೆ ಪ್ರತಿ ದಿವಸವೂ ಜನರು ಊರು ಮನೆಗೆ ... ಇದಾರೆ ಇನ್ನು ೧೦ ೧೫ ದಿನಗಳಲ್ಲಿ ನಮ್ಮ ಊರು ಪ್ಲೇಗಿನಿಂದ ... ಆದರೆ ಇನ್ನೂ ... ಅವರನ್ನು ... ಹಿಂದೆ ಮಂಡ್ಯದವರಿಗೆ ಸಂಭವಿಸಿದಂತೆ ಇಲ್ಲಿಯೂ ... ಎಂಬ ಅನುಮಾನ ಕೆಲವರಲ್ಲಿದೆ ಆದರೂ ಜನರು ... — ಮೆ॥ ರಂಗನಾಥರಾವ್ ಸಾಹೇಬರವರು ನಮ್ಮ ಊರಿಗೆ ಅಮಲ್ದಾರರಾಗಿ ಬಂದು ... ತಿಂಗಳು ಮಾತ್ರ ಆಗಿದ್ದಾಗ್ಯೂ ಇವರು ಈ ಊರಿನ ಪ್ರಜೆಗಳಿಗೂ, ಈ ತಾಲ್ಲೋಕಿಗೂ ಮಾಡಿ ತೋರಿಸಿರುವ ಶ್ರೇಯೋಭಿವಾಂಛೆಗಳು ಒಂದೆರಡಲ್ಲ ಈ ವರೆಗೂ ಇಂಥಾ ಮಾನ್ಯರು ನಮ್ಮ ತಾಲ್ಲೋಕಿಗೆ ಯಾರೂ ಬಂದಿರಲಿಲ್ಲವೆಂದು ಕೆಲವು ದೊಡ್ಡ ಮನುಷ್ಯರಿಂದ ಕೇಳಿದೇನೆ ಪ್ಲೇಗ್ ರೋಗ ಪ್ರಾರಂಭವಾದ ಲಾಗಾಯಿತು ಬಡ ಪ್ರಜೆಗಳಿಗೆ ಬೊಂಬುಗಳ ... ಪ್ರತಿ ಕ್ಯಾಂಪನ್ನು ... ಎಲ್ಲಿ ನೀರಿನ ಅನುಕೂಲವೋ ಎಲ್ಲಿ ಲಾಂದ್ರಗಳ ಅನುಕೂಲವೋ ಅಲ್ಲಲ್ಲಿ ತಕ್ಕ ... ಗಳನ್ನು ಮಾಡಿಸಿದ್ದಲ್ಲದೆ, ತಮ್ಮ ಸ್ವಂತ ಖರ್ಚಿನಿಂದಲೇ ಅನೇಕ ದೀಪಗಳನ್ನು ... ಈಗ ಜನರೆಲ್ಲಾ ಊರು ಸೇರಿದ ಮೇಲೆ ... ಅಷ್ಟು ಕಾಲದಲ್ಲಿ ವಿವಿಧ ಬುದ್ಧಿಮತಿಗಳನ್ನು ... ಬೇಕಾದ ಸಲಕರಣೆಗಳನ್ನು ಒದಗಿಸುತ್ತಾ ಧೈರ್ಯ ... ತಮ್ಮ ಸಾಮರ್ಥ್ಯವನ್ನು ಕಾರ್ಯತಃ ತೋರಿಸಿರುವ ನಮ್ಮ ಅಮಲ್ದಾರರಿಗೆ ಉಚಿತವಾದ ಸನ್ಮಾನವನ್ನು ಮಾಡಿ, ತಮ್ಮ ಕೃತಜ್ಞತಾ ಭಾವವನ್ನು ತೋರಿಸಬೇಕೆಂಬ ಮನಸ್ಸುಳ್ಳವರಾಗಿದಾರೆ — ... ನಲ್ಲಿ ... ಅಪ್ಪಾಜಿಯವರನ್ನು, ಗಂಧದ ಮರ ಕಡಿದ ಅಪರಾಧಕ್ಕೂ, ... ಅಚ್ಚುಗಳು ಅವರ ಮನೆಯಲ್ಲಿ ಸಿಕ್ಕಿವೆ ಎಂಬ ಅಪರಾಧಕ್ಕೆ ಸರ್ಕಾರದವರೇ ಗುರಿಪಡಿಸಿದಾರೆ ಈಗ ಸದರಿ ಅಪರಾಧಿಯು ... ಮೇಲೆ ಬಿಡುಗಡೆಯಾಗಿ ಬಂದಿರುವದಾಗಿ ತಿಳಿದು ಬಂದಿದೆ

ನೊಣವೂರು ಈ ತಾಲ್ಲೂಕಿನಲ್ಲಿ ... ಮಳೆ ಸಕಾಲಕ್ಕೆ ಬಾರದ್ದರಿಂದ ಅಲ್ಪ ಸ್ವಲ್ಪ ಆದ ಬೆಳೆಯನ್ನು ರೈತರು ... ಮಾಡುತ್ತಾರೆ ಈಗ ಸುಗ್ಗೀ ಕಾಲವಾಗಿದ್ದರೂ ಧಾರಣೆ ... ಇನ್ನು ಜಾಸ್ತಿಯಾಗಿಯೇ ಇವೆ ಬಡವರ ಜೀವನವಾಗುವದು ಬಹಳ ಪ್ರಯಾಸವಾಗಿದೆ ಇಂಥಾ ಕಷ್ಟಕಾಲದಲ್ಲಿ ಈ ಟವುನ್ನಲ್ಲಿ ಪ್ಲೇಗು ಸುರುವಾಗಿ ... ದಿನಗಳಿಂದ ೧೦ ಕೇಸುಗಳಾಯಿತು ಪ್ರಜೆಗಳೆಲ್ಲರೂ ಭಯಪಟ್ಟು ... ಮಾಡಿರುತ್ತಾರೆ ... ಜನಗಳೆಲ್ಲರೂ ಜೋಪಡಿಗಳಿಗೆ ಹೋಗಿರುತ್ತಾರೆ ... ಈ ಊರಲ್ಲಿ ಅಕ್ಕಸಾಲಿಗರ ಮರಿಯಪ್ಪ ಎಂಬುವರ ಮನೆಯಲ್ಲಿ ಒಂದು ಪ್ಲೇಗು ಕೇಸು ಆಯಿತು. ಇವರು ಒಂದು ಮೈಲಿ ದೂರದಲ್ಲಿ ಜೋಪಡಿ ಹಾಕುವದಕ್ಕೆ ಪ್ರಯತ್ನಪಟ್ಟರು ಆಗ ಆ ಸುತ್ತಲಿರುವ ಜೋಪಡಿಯವರೂ ... ಇವರನ್ನು ಇಲ್ಲಿ ಜೋಪಡಿ ಹಾಕಕೂಡದೆಂದು ನಿರ್ಬಂಧ ಮಾಡಿದರು ಆ ಸಮಯದಲ್ಲಿ ಮ್ಯುನಿಸಿಪಾಲಿಟಿ ಮೆಂಬರಾದ ಮ॥ ... ನವರು ಅಕ್ಕಸಾಲಿಗರ ಬಳಿಗೆ ಬಂದು—ಇವರು ಇಲ್ಲಿಯೇ ಜೋಪಡಿ ಹಾಕಲಿ, ಮುಂದಕ್ಕೆ ಕಾಯಿಲೆ ವಗೈರೆ ಏನಾದರೂ ಆದರೆ ನಾನು ಜವಾಬ್ದಾರನಾಗಿರುತ್ತೇನೆ ಎಂಬದಾಗಿ ಹೇಳಿದ್ದರಿಂದ ಎಲ್ಲರೂ ಸುಮ್ಮನಾದರು ನಂತರ ... ದಿನಗಳ ಒಳಗಾಗಿ ಸದರಿಯವರ ಮನೆಯಲ್ಲಿ ೪ ಕಾಯಿಲೆಯಾಯಿತು ಆ ಮೇಲೆ ಡಾಕ್ಟರು ಮತ್ತು ಸ್ಯಾನಿಟರಿ ಇನ್‌ಸ್ಪೆಕ್ಟರು ಬಂದು—ಇದು ಪ್ಲೇಗ್ ಕಾಯಿಲೆ ಎಂಬದಾಗಿ ಹೇಳಿದ್ದರ ಮೇಲೆ ಸುತ್ತಲಿದ್ದ ಜೋಪಡಿಯವರು ಮೇಲ್ಕಂಡ ಮೆಂಬರನ್ನು ವಿಚಾರಿಸುವಲ್ಲಿ ಅವರು—ನೀವೇ ಸ್ವಲ್ಪ ದೂರವಾಗಿ ಜೋಪಡಿ ಹಾಕಿಕೊಳ್ಳಿ ಎಂಬದಾಗಿ ಹೇಳಿದರು ಇದರಿಂದ ಅನೇಕ ಪ್ರಜೆಗಳಿಗೆ ಬಹಳ ತೊಂದರೆ ಉಂಟಾಗಲು ಸಂಶಯವಿಲ್ಲ ಮತ್ತು ಕಾಯಿಲೆ ವಗೈರೆ ಏನೂ ಇಲ್ಲದ ಸುತ್ತಲಿದ್ದ ... ಜೋಪಡಿಯವರು ದೂರವಾಗಿ ಹೋಗುವದು ಸಾಧ್ಯವೋ ? ಅಥವಾ ಕಾಯಿಲೆ ಇದ್ದ ಒಂದು ಜೋಪಡಿಯವರು ಮಾತ್ರ ಸ್ವಲ್ಪ ದೂರ ಹೋಗುವದು ಸಾಧ್ಯವೋ ? ವಾಚಕರೇ ಯೋಚಿಸಬೇಕು ಹೀಗಿರುವಲ್ಲಿ ... ಅಕ್ಕಸಾಲಿಗರ ಮನೆಯಲ್ಲಿ ಕಾಯಿಲೆ ಇದ್ದ ೪ ಜನಗಳ ಪೈಕಿ ಒಬ್ಬನು ಮೃತಪಟ್ಟನು ಸುತ್ತಲಿದ್ದ ಜೋಪಡಿಯವರು ಬಹಳ ಭಯಭ್ರಾಂತರಾಗಿರುತ್ತಾರೆ. ಪ್ರಜೆಗಳಿಗೆ ಉಂಟಾಗಿರುವ ಈ ಭಯವನ್ನು ದಯಾಳುಗಳಾದ ಸರ್ಕಾರದವರು ಕಾಯಿಲೆಯಾಗಿರುವ ಜೋಪಡಿಯವರನ್ನು ಸ್ವಲ್ಪ ದೂರವಾಗಿ ಹಾಕಿಸಿ ಪ್ರಜೆಗಳಿಗೆ ಭಯವನ್ನು ತಪ್ಪಿಸಿ ಕ್ಷೇಮವನ್ನುಂಟುಮಾಡಬೇಕೆಂದು ಪ್ರಾರ್ಥಿಸುತ್ತೇವೆ

ಮೂಡಿಗೆರೆ ತಾ॥ ಬಾಳೂರು —ಈಗ ಈ ಊರಿನಲ್ಲಿ ಸುಮಾರು ೧ ತಿಂಗಳ ಲಾಗಾಯಿತು ಬಿಸಲಿನ ತಾಪ ಹೆಚ್ಚಾಗಿದೆ ಜನಗಳು ತಮ್ಮ ತಮ್ಮ ಗದ್ದೆಗಳನ್ನೆಲ್ಲಾ ಕುಯ್ದು, ಈಗ ಒಕ್ಕುವದಕ್ಕೆ ಆರಂಭಿಸಿರುತ್ತಾರೆ ಈ ಸುಗ್ಗಿ ಕಾಲದಲ್ಲಿಯೇ ಇಲ್ಲಿಗೆ ೩, ೪ ಮೈಲಿಗಳ ದೂರದಲ್ಲಿರುವ ಬಣ್ಕಲ್ ಸಂತೆಯಲ್ಲಿ ಬತ್ತ ರೂಪಾಯಿಗೆ ... ಸೇರು, ಅಕ್ಕಿ ...—೧೦ ಸೇರು ಈ ರೀತಿ ಇದೆ ಈಗಲೇ ಇಷ್ಟು ಚಡಾವಾದರೆ ಮುಂದೆ ಹ್ಯಾಗೆ ಇರುತ್ತೆಂಬುವದು ಗೊತ್ತಿಲ್ಲ —ಊರಿಗೆ ಒಂದು ಮೈಲಿ ದೂರದಲ್ಲಿರುವ ... ಎಂಬುವ ಊರಿನಲ್ಲಿ ಒಬ್ಬ ಹೊಲೆಯನು ತನ್ನ ಗದ್ದೆಗಳನ್ನು ಕುಯ್ದು ಬಿಸಲಿನಲ್ಲಿ ಒಣಗಲು ಬಿಟ್ಟಿದ್ದನು ರಾತ್ರಿ ಕಾಲದಲ್ಲಿ ಕಳ್ಳರು ಯಾರೋ ಬತ್ತವನ್ನೆಲ್ಲಾ ಉಜ್ಜಿಕೊಂಡು ಹೋಗಿದಾರೆ ಮಾರನೇ ದಿನ ಅವನು ತನ್ನ ಗದ್ದೆಯನ್ನು ಹೊರಲು ಹೋಗಿ ನೋಡುವಾಗ್ಗೆ ಅಲ್ಲಿ ಬರೀ ಹುಲ್ಲೇ ಇತ್ತೇ ಹೊರ್ತು ಒಂದು ಕಾಳು ಬತ್ತವಾದರೂ ಇರಲಿಲ್ಲ ಅವನಿಗೆ ಸಾಧಾರಣವಾಗಿ ೪೦ ಬಂಡಿಗೆ ... ಆಗುತ್ತಿತ್ತು ಇಂಥಾದ್ದರಲ್ಲಿ ಬಡ ಬಗ್ಗರು ಹ್ಯಾಗೆ ಜೀವನ ಮಾಡಬೇಕು ?— ಇದೇ ಬಾಳೂರು ಪೋಸ್ಟು ಆಫೀಸಿನಲ್ಲಿ ಒಂಬತ್ತು ವರುಷದಿಂದ ಸಬ್ ಪೋಸ್ಟು ಮಾಸ್ಟರಾಗಿದ್ದ ರಾಂಭಟ್ಟರೆಂಬುವರು ಇದೇ ತಿಂಗಳು ತಾ ... ನೇ ಬೆಳಗ್ಗೆ ೧೦ ಘಂಟೆಗೆ ದೈವಾಧೀನರಾದರೆಂಬುವದನ್ನು ತಿಳಿಸಲು ಬಹಳ ವಿಷಾದಿಸುತ್ತೇನೆ ಇವರು ಇಲ್ಲಿಗೆ ಬಂದಲಾಗಾಯಿತು ಜನಗಳಲ್ಲಿ ಬಹಳ ಅನುರಾಗವನ್ನು ಇಟ್ಟುಕೊಂಡದ್ದಲ್ಲದೆ, ಬಹಳ ನೀತಿಯಿಂದಲೂ, ಔದಾರ್ಯದಿಂದಲೂ ಕೆಲಸಮಾಡುತ್ತಾ ಇದ್ದರು ಇವರ ಬದಲಿಗೆ ತಿಪಟೂರಿಂದ ಮ॥ ... ಯರೆಂಬುವರು ಬಂದಿರುತ್ತಾರೆ ಇವರೂ ಅವರಂತೆಯೇ ದಯಾಳುಗಳಾಗಿರುತ್ತಾರೆಂಬುವದಕ್ಕೆ ಸಂಶಯವಿಲ್ಲ ಗತಿಸಿದ ರಾಂಭಟ್ಟರ ಸಂಸಾರವೆಲ್ಲಾ ಇದೇ ಊರಿನಲ್ಲಿಯೇ ಇದಾರೆ ಅವರ ಊರಾದ ಕುಂದಾಪುರಕ್ಕೆ ಹೋಗಲು ಅವರಿಗೆ ಯಾರೊಬ್ಬರೂ ಇಲ್ಲಿ ಸಹಾಯಕರು ಇಲ್ಲ. ಅವರ ದುಃಖವನ್ನು ಕೇಳಲು ಅಸಾಧ್ಯ

ಚಿಕ್ಕಮಗಳೂರು ಈ ಕಡೆ ... ಗಂಟೆಯ ವರಿಗೂ ಚಳಿಯೂ ಹಿಮವೂ ಇರುತ್ತದೆ ಮಧ್ಯಾಹ್ನ ಮೋಡ ಕಟ್ಟುವದೂ, ಸಾಯಂಕಾಲ ಕೆಲವು ದಿನಗಳಿಂದ ತುಂತುರು ಮಳೆ ಬೀಳುವದೂ ಉಂಟು. ಪ್ಲೇಗ್ ನಿಂ... ಜೋಪಡಿಗಳಲ್ಲಿ ವಾಸವಾಗಿದ್ದವರು ಊರು ಸೇರಿದರು ಬಾಕಿ ಉಳಿದವರು ... ರಲ್ಲಿ ಮನೆಗಳನ್ನು ಸೇರಿಕೊಳ್ಳುತ್ತಾರೆ — ಈ ಡಿಸ್ಟ್ರಿಕ್ಟಿನಲ್ಲಿ ಆಗಾಗ್ಗೆ ಭಯಂಕರವಾದ ಕೊಲೆಗಳು ನಡೆಯುತ್ತವೆಂಬುವದಕ್ಕೆ ಜನರೇ ಸಾಕ್ಷಿಗಳಾಗಿರುತ್ತಾರೆ ಇಲ್ಲಿಗೆ ಒಂದು ಮೈಲಿ ಫಾಸಲೆಯಲ್ಲಿರುವ ... ಹಳ್ಳಿ ಎಂಬ ಗ್ರಾಮದಲ್ಲಿ ಕಳೆದ ... ರಲ್ಲಿ ಒಂದು ಭಯಂಕರವಾದ ಕೊಲೆ ನಡೆಯಿತು ... ಎಂಬುವನು ಕಾರಣಾಂತರದಿಂದ ತನ್ನ ಹೆಂಡತಿಯಾದ ಗಂಗಿ ... ಎಂಬುವಳನ್ನು ಕಾಲು, ಕೈಗಳಲ್ಲಿ ... ಊರಿಗೆ ಸಮೀಪವಾದ ಕಟ್ಟೆಯಲ್ಲಿ ... ನೀರು ಇರುವ ಸ್ಥಳದಲ್ಲಿ ರಹಸ್ಯವಾಗಿ ... ನನ್ನು ಹಾಕಿ, ... ಅವಳ ತಂದೆಯಾದ ... ಸಿದ್ದಣ್ಣನೆಂಬುವನು ... ಬಂದು, ಜನರಲ್ಲಿದ್ದ ಪ್ರಕಾರವನ್ನು ಕೇಳಿ ತನ್ನ ಮಗಳ ಮೇಲಿನ ... ಅಳಿಯನ ಮನೆಗೆ ಹೋಗಿ ತನ್ನ ಮಗಳನ್ನು ತೋರಿಸಬೇಕೆಂದು ಕೇಳುವಾಗ್ಗೆ ... ದಿನ ನಿನ್ನ ಮಗಳು ಗಂಗಮ್ಮ ... ಎಂದು ಹೇಳಿ, ಇನ್ನು ಕೆಲವು ಕ್ರೂರವಾದ ಮಾತುಗಳನ್ನು ಅಳಿಯನಿಂದ ಕೇಳಿಕೊಂಡು, ಇನ್ನೂ ಕೆಲವು ಗ್ರಾಮಗಳಿಗೆ ಹೋಗಿ ಹುಡುಕಿ ಇಲ್ಲವೆಂದು ... ಪೋಲೀಸಿಗೆ ... ರಿಪೋರ್ಟು ... ನೀರಿನಿಂದ ... ಗ್ರಾಮದ ಕೆಲವು ಜನರ ... ಜನರ ಎದುರಿನಲ್ಲಿ ... ಪೋಲೀಸಿನ ರಿಪೋರ್ಟ್ ಮತ್ತು ಡಾಕ್ಟರ ಸರ್ಟಿಫಿಕೇಟು ಒಂದೇ ಆಗಿ... ಏನಂದರೆ ... ಅಷ್ಟು ... ಗಾಯಗಳು ಎಲ್ಲಿಂದ ಬಂದವೋ. ಇದು ಕೇಳಿ ನಮ್ಮ ಮನಸ್ಸಿಗೆ ತುಂಬಾ ಅನುಮಾನವನ್ನು ಉಂಟು ಮಾಡುವ ಸಂಗತಿಯಾಗಿದೆ ಜನರ ಹೇಳಿಕೆಯ ... ಹೇಳಿಕೆಯೂ ಸಮನಾಗಿದೆ ಏನಂದರೆ ಅವು ... ಅಧಿಕಾರಿಗಳು ಈ ವಿಷಯಕ್ಕೆ ಸರಿಯಾಗಿ ಗಮನ ಕೊಡದೆ ಹೋದದ್ದು ತಂದೆ ಮನಸ್ಸಿಗೆ ಬಹು ಅನ್ಯಾಯವಾಗಿ ಕಂಡದ್ದರಿಂದ ಡೆಪ್ಯುಟಿ ಕಮಿಷನರಿಗೂ, ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರಿಗೂ ಅರ್ಜಂಟು ಟೆಲಿಗ್ರಾಫ್ ಮೂಲಕ ತಿಳಿಸಿದ್ದರಿಂದ ಅದು ಪುನಃ ವಿಚಾರಣೆಗೆ ಅಸ್ಪದವಾಗಿ ತಾಲ್ಲೂಕು ಇನ್‌ಸ್ಪೆಕ್ಟರ ಅಧೀನಾಯಿತಿಗೆ ಬಂದಿದೆ

ಚನ್ನರಾಯಪಟ್ಟಣ.—ಈ ಊರಿನಲ್ಲಿ ಜನಗಳೆಲ್ಲರೂ ಒಂದು ತಿಂಗಳ ಲಾಗಾಯಿತು ಪ್ಲೇಗಿನ ಹಾವಳಿಗೋಸ್ಕರ ಊರು ಬಿಟ್ಟು ನಾಲ್ಕು ಕಡೆಗಳಲ್ಲಿಯೂ ಗುಡಿಸಲುಗಳನ್ನು ಹಾಕಿಕೊಂಡು ವಾಸಮಾಡುತ್ತಿದಾರೆ ಊರು ಬಿಟ್ಟು ಷೆಡ್ಡುಗಳಿಗೆ ಹೋದ ಮೇಲೆ ೮-೯ ಪ್ಲೇಗು ಕೇಸುಗಳು ಆಗಿ, ಹಾಗೇ ನಿಂತುಹೋಗಿರುತ್ತೆ ಆದರೆ ಬೆಂಕಿಯ ಭಯವೂ, ಕಳ್ಳರ ಭಯವೂ ಜನಗಳಿಗೆ ವಿಶೇಷವಾಗಿ ಉಂಟಾಗಿರುತ್ತೆ ಕಳೆದ ಮಾಹೆ ತಾ ... ನೇ ಬುಧವಾರ ಇದೇ ಊರು ಕಂಟ್ರಾಕ್ಟರ್ ರಾಮಣ್ಣನವರ ಗುಡಿಸಲಿಗೆ ಕಾರಣಾಂತರದಿಂದ ಬೆಂಕಿ ಬಿದ್ದು ದಿನಸಿ, ಬಟ್ಟೆಬರೆ ವಗೈರೆ ಎಲ್ಲಾ ಉರಿದುಹೋಗಿ ಅವರಿಗೆ ಬಹು ಕಷ್ಟನಷ್ಟವನ್ನುಂಟುಮಾಡಿತು. ಆದರೆ ಜನಗಳಿಗಾಗಲೀ ದನಕರುಗಳಿಗಾಗಲೀ ಅಪಾಯವೇನೂ ಸಂಭವಿಸದ ಹಾಗೆ ಅನೇಕ ಜನರು ಸೇರಿ ಬಹಳ ಸಾಹಸಪಟ್ಟು ನೀರು ಒದಗಿಸಿ ಉರಿಯನ್ನು ಸಮಾಧಾನಪಡಿಸಿದರು. ಊರಿನೊಳಗೆ ಕಳ್ಳರು ಮನೆಗಳ ಬೀಗಗಳನ್ನು ಮುರಿದು ಕೈಗೆ ಸಿಕ್ಕಿದ್ದನ್ನು ದೋಚಿಕೊಂಡು ಹೋಗುತ್ತಾ ಇದಾರೆ ಇದೇ ಊರು ಸಿದ್ದಲಿಂಗೇಗೌಡರ ಮನೆಯಲ್ಲಿ ಒಬ್ಬನು ಕಳವುಮಾಡಿದನೆಂದು ಅಸಾಮಿಯನ್ನು ಪತ್ತೆ ಮಾಡಿ ಲಾಕಪ್ಪಿನಲ್ಲಿ ಇಟ್ಟಿರುತ್ತಾರೆ ಇದೇ ಊರು ಕಂಚುಗಾರ್ರ ಬೀದಿ ನಿಂಗಣ್ಣ ಎಂಬುವರು ಪ್ಲೇಗಿನ ಗಲಾಟೆಗೋಸ್ಕರ ಊರು ಬಿಟ್ಟು ಇಲ್ಲಿಗೆ ... ಮೈಲಿ ದೂರದಲ್ಲಿರುವ ... ಕೊಪ್ಪಲಿನಲ್ಲಿ ವಾಸಮಾಡುತ್ತಿದ್ದರು ಇವರ ಮನೆಗೂ ಕಳ್ಳರು ಬಿದ್ದು ನಗನಾಣ್ಯವನ್ನು ದೋಚಿಕೊಂಡು ಹೋಗಿರುತ್ತಾರೆ ನಮ್ಮ ಅಮಲ್ದಾರ್ರೂ ಪೋಲೀಸ್ ಇನ್‌ಸ್ಪೆಕ್ಟರೂ ಇಂಥಾ ಕಳ್ಳರನ್ನು ಪತ್ತೆ ಮಾಡಿಸಿ ಶಿಕ್ಷೆಗೆ ಗುರಿಪಡಿಸುತ್ತಾರೆಂದು ಧೃಢವಾಗಿ ನಂಬಿರುತ್ತೇವೆ. ಊರಿನ ಒಳಗೆ ಯಾರಯಾರ ಮನೆಯಲ್ಲಿ ಏನೇನು ಹೋಗಿರುತ್ತೋ ತಿಳಿಯಲು ಅವಕಾಶವೇ ಇಲ್ಲವಾಗಿರುತ್ತೆ —ಈ ಊರು ಸಂತೆಯನ್ನು ಪ್ಲೇಗಿನ ಹಾವಳಿಗೋಸ್ಕರ ಕೆರೆಯ ಒಳಭಾಗದಲ್ಲಾಗಲೀ ಮೈಸೂರು ರಸ್ತೆಯಲ್ಲಾಗಲೀ ಕಟ್ಟುವಂತೆ ... ಹೋದ ಅಮಲ್ದಾರು ಏರ್ಪಾಡು ಮಾಡಿದ್ದರು ನಮ್ಮ ಹೊಸ ಅಮಲ್ದಾರ್ರು ಬಂದ ಮೇಲೆ ಊರು ಒಳಗೆ ಮಾಮೂಲು ಜಾಗದಲ್ಲೇ ಸಂತೆ ಕಟ್ಟುವಂತೆ ಏರ್ಪಾಡಿಸಿರುತ್ತಾರೆ ಪ್ಲೇಗಿನ ಗಲಾಟೆ ಏನೂ ಇಲ್ಲವೆಂಬುವುದು ಅವರ ಅಭಿಪ್ರಾಯವಿರಬಹುದೆಂದು ಕಾಣುತ್ತೆ ಜನರು ಕೂಡ—ಬೆಂಕಿ ಕಳ್ಳರು ವಗೈರೇರಿಗೆ ಇದ್ದದ್ದನ್ನೆಲ್ಲಾ ಸುಲಿಗೆ ಕೊಟ್ಟು ಯಾತಕ್ಕೆ ಹಿಂಸೆಪಡಬೇಕು ? ಜಾಗ್ರತೆಯಾಗಿ ಊರೊಳಗೆ ಹೋಗುವುದಕ್ಕೆ ಸರ್ಕಾರದವರು ಅಪ್ಪಣೆ ಮಾಡಿದರೆ ಸಾಕು ಎಂದು ಆಡಿಕೊಳ್ಳುತ್ತಾರೆ ... ಷೆಡ್ಡುಗಳು ಹಾಕಿರುವ ಸ್ಥಳಗಳಲ್ಲಿ ಒಂದು ಲಾಂದ್ರವನ್ನು ಮಾತ್ರ ಇಡಿಸಿರುತ್ತಾರೆ ಹೊಲದಲ್ಲಿ ಷೆಡ್ಡುಗಳನ್ನು ಹಾಕಿರುವುದರಿಂದ ರಾಗಿ ಕಾಳೆ, ದಿಣ್ಣೆ, ಹಳ್ಳಕೊಳ್ಳಗಳನ್ನು ಎಡವಿ ಜನರು ಮುಗ್ಗರಿಸುತ್ತಾರೆ ಆ ಒಂದು ಲಾಂದ್ರದ ಪ್ರಕಾಶವೂ ಕೂಡಾ ಮಂಕಾಗಿರುತ್ತೆ ನಮ್ಮ ಅಮಲ್ದಾರ್ರು ನಿಗಾ ತೆಗೆದುಕೊಂಡು ೩-೪ ಲಾಂದ್ರಗಳನ್ನಾದರೂ ಇಡಿಸಿದರೆ ಕುರುಡರಿಗೆ ಕಣ್ಣುಬಂದಂತೆ ಆಗುತ್ತೆ ಇಲ್ಲದಿದ್ದರೆ ಜನಗಳಿಗೆ ಸಂಚಾರ ಮಾಡುವುದಕ್ಕೆ ತುಂಬಾ ಕಷ್ಟವಾಗುವುದರಲ್ಲಿ ಏನೂ ಸಂದೇಹವಿಲ್ಲ —ಈ ಮಾಹೆ ೩ನೇ ತಾ. ಬುಧವಾರ ಈ ಊರು ಎ ವಿ ಸ್ಕೂಲು ಹೆಡ್ಮಾಸ್ಟರು ... ನವರು ಪ್ಲೇಗಿನಿಂದ ಮೃತಪಟ್ಟರು ಈ ಊರು ಎ ವಿ ಸ್ಕೂಲಿನಲ್ಲಿ ಈ ವರ್ಷ ಲೋವರ್ ಸೆಕಂಡರಿ ಪರೀಕ್ಷೆಗೆ ಕನ್ನಡದಲ್ಲಿ ೭ ಜನವೂ, ಇಂಗ್ಲೀಷಿನಲ್ಲಿ ೪ ಜನವೂ ಕಳುಹಿಸಿದ್ದರು ಈ ಪೈಕಿ ಕನ್ನಡದಲ್ಲಿ ೬ ಜನವೂ ಪ್ಯಾಸಾಗಿದಾರೆ ಇಂಗ್ಲೀಷಿನಲ್ಲಿ ಒಬ್ಬನೂ ಪ್ಯಾಸಾಗಿಲ್ಲ —ಊರೊಳಗೆ ಗ್ರಾಮದೇವತೆಯ ಉತ್ಸವ ಮೂರ್ತಿಯನ್ನು ದೇವಸ್ಥಾನದಲ್ಲಿ ಪದ್ಧತಿ ಪ್ರಕಾರ ಇಟ್ಟಿತ್ತು ಷೆಡ್ಡುಗಳಿಗೆ ಹೋಗುವಾಗ್ಗೆ ಪೂಜಾರಿಯು ಅದಕ್ಕೆ ಇಟ್ಟಿದ್ದ ನಗಗಳ ನಾಣ್ಯವನ್ನು ಸಂಗಡ ತೆಗೆದುಕೊಂಡುಹೋಗದೆ ಅಲ್ಲೇ ಬಿಟ್ಟಿದ್ದನು, ಈಗ ಅವುಗಳು ಕಳವು ಆಗಿರುವ ಹಾಗೆ ತಿಳಿಯಬರುತ್ತೆ ನಮ್ಮ ಅಮಲ್ದಾರ್ರೂ ಪೋಲೀಸ್ ಇನ್‌ಸ್ಪೆಕ್ಟರೂ ಸಹಾ ತುಂಬಾ ಮುತುವರ್ಜಿ ವಹಿಸಿ ಜನಗಳಿಗಿರುವ ಭೀತಿಯನ್ನು ತಪ್ಪಿಸಿ, ಅವರು ಜಾಗ್ರತೆಯಾಗಿ ಊರು ಸೇರುವದಕ್ಕೆ ಏರ್ಪಾಡು ಮಾಡಿ, ಪ್ರಜೆಗಳ ... ಪಾತ್ರರಾಗಲಿ ಎಂದು ಪ್ರಾರ್ಥಿಸುತ್ತೇವೆ

ದೊಡ್ಡಬಳ್ಳಾಪುರ —೬ನೇ ತಾ ... ದ ಮಳೆಯಾಯಿತು. ... ಈಗ ರೂಪಾಯಿಗೆ ೧೪-೧೫ ಸೇರು ರಾಗಿ, ... ಸೇರು ಅಕ್ಕಿ ಮಾರುತ್ತಾರೆ ... ಡೆಪ್ಯುಟಿ ಕಮಿಷನರ್ ಸಾಹೇಬರು ಇಲ್ಲಿಗೆ ಬಂದು ಇದ್ದರು ಪ್ಲೇಗ್ ಬಂದ ಕಾಲದಲ್ಲಿ ರೈಲ್ವೆ ಸ್ಟೇಷನ್ ಕಡೆ ಸ್ಥಿರವಾದ ಮನೆಗಳನ್ನೇ ಕಟ್ಟಿಕೊಂಡು, ಊರನ್ನು ... ಹಾಗೆ ಹೇಳಿದರು —ತಾ ೬ ರಲ್ಲಿ ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ॥ ... ರಾಮಸ್ವಾಮಿಯವರು ಇಲ್ಲಿಗೆ ದಯಮಾಡಿ, ಒಂದು ಮೀಟಿಂಗ್ ನಡಸಿ, ಮೆಂಬರುಗಳನ್ನು ಸೇರಿಸಿದರು ಇದಕ್ಕೆ ಬಹು ಜನರು ಸೇರುತ್ತಾರೆಂಬಿದ್ದಾರೆ ನಮ್ಮ ಅಮಲ್ದಾರರು ಇದಕ್ಕೆ ಬಹಳ ಮುತುವರ್ಜಿ ವಹಿಸಿದಾರೆ — ಕೌನ್ಸಿಲರ್ ಮೆ॥ ಟಿ. ಆನಂದರಾಯರು ಇಲ್ಲಿಗೆ ದಯಮಾಡಿ ಇಲ್ಲಿನ ... ಗಳನ್ನೂ, ಹೆಣ್ಣುಮಕ್ಕಳ ಸ್ಕೂಲನ್ನೂ ನೋಡಿ ಬಹಳ ಸಂತೋಷಪಟ್ಟುಕೊಂಡು ಹೋದರು ಮೆ॥ ಆನಂದರಾಯರು ದೊಳಕೋಟೆ ಎಂಬ ಊರಿಗೆ ಹೋಗಿ ಅಲ್ಲಿನ ಸ್ಕೂಲ್ ನೋಡಿ, ವಾಪಸ್ ಬಂದರು ಇವರು ಕೌನ್ಸಿಲರ್ ಮೆ॥ ಆನಂದರಾಯರೆಂಬ ಸಂಗತಿಯೇ ಈ ಊರಿನವರಿಗೆ ತಿಳಿಯದೆ ಇದ್ದುದರಿಂದ ತಮ್ಮ ಕೊರತೆಗಳನ್ನು ಹೇಳಿಕೊಳ್ಳಲಿಲ್ಲವೆಂದೂ, ಇಷ್ಟು ದೂರ ಇವರು ಬಂದಾಗ್ಯೂ ನಮಗೆ ಪ್ರಯೋಜನವಿಲ್ಲದೆ ಹೋಯಿತೆ ಎಂದೂ ವ್ಯಸನಪಟ್ಟುಕೊಳ್ಳುತ್ತಾ ಇದ್ದರು ನೆಲಕೋಟೆಯ ಕೋಡಳ್ಳಿ ರಾಮಯ್ಯನವರು ಅಂಜನೇಯನ ಮತ್ತು ದಾಮೋದರ ದೇವಸ್ಥಾನಕ್ಕೆ ಮೂರು ಸಾವಿರ ರೂಪಾಯಿ, ಸತ್ರದ ರಿಪೇರಿಗಾಗಿ ಒಂದು ಸಾವಿರ ರೂಪಾಯಿ, ಒಟ್ಟು ೪ ಸಾವಿರ ರೂಪಾ

ಯನ್ನು ಸೆಕ್ರಿಟರಿ ಆಫ್ ಸ್ಟೇಟರ ವಶಕ್ಕೆ ಕೊಟ್ಟು, ತಿಂಗಳು ತಿಂಗಳಿಗೆ ಇದರ ಬಡ್ಡಿಯನ್ನು ಕೊಟ್ಟರೆ ಈ ಕೆಲಸಗಳಿಗೆ ಅನುಕೂಲವೆಂದು ಮಿ॥ ರಾಮೈಯಂಗಾರವರು ಡೆಪ್ಯುಟಿ ಕಮಿಷನರರನ್ನು ಕೇಳಿಕೊಂಡಿದ್ದಾರಂತೆ ಇದನ್ನು ಅನುಕೂಲಪಡಿಸಿ ಕೊಡುವರೆಂದು ನಂಬಿಕೊಂಡಿದ್ದೇವೆ – ನರಗನಹಳ್ಳಿ ಚೋಳಿದಾರ್ ಕೆ ಲಕ್ಷ್ಮೀನಾರಾಯಣರ ಒಂದು ಒಳ್ಳೇ ಹಸುವನ್ನು ಮನೆ ಹತ್ತಿರ ಒಂದು ಹುಲಿಯು ಕೊಂದುಹಾಕಿತಂತೆ – ಬೂಲಬೇಲಿ ಶೇಕ್ದಾರ್ ದಾಗ್ ಮಾಲೀಖಾನ್ ಸಾಹೇಬರ ಇದೇ ತಿಂಗಳು ತಾ ೭ ರಲ್ಲಿ ಸಂಸಾರ ಸಮೇತ ದೊಡ್ಡಬಳ್ಳಾಪುರಕ್ಕೆ ಹೋಗುವಾಗ ಇಲ್ಲಿನ ರೈಲ್ ಸ್ಟೇಷನ್ನಿಗೂ ಅರಸಳ್ಳಿಗೂ ರೈಲ್ ಬಂಗ್ಲೆಯ ಮಧ್ಯದಲ್ಲಿ ರಾತ್ರಿ ೧೧ ಗಂಟೆಯಲ್ಲಿ ಕಳ್ಳರು ಇವರನ್ನು ಹೊಡೆದು ೨೦೦ ರ ನೋಟುಗಳನ್ನೂ ಸುಮಾರು ೩೦೦ ರೂ ಒಡವೆಗಳನ್ನೂ ಕದ್ದುಕೊಂಡು ಹೋದರು. ಈ ಕಳ್ಳರು ಇಲ್ಲಿಗೆ ಸಮೀಪದ ಹಳ್ಳಿಗಳಲ್ಲಿ ಇದ್ದವರೇ ಎಂದು ಹೇಳುತ್ತಾರೆ ಇವರನ್ನು ಹಿಡಿಯುವದಕ್ಕಾಗಿ ನಮ್ಮ ಜಮಾದಾರರು ತುಂಬಾ ಪ್ರಯಾಸಪಡುತ್ತಾರೆ – ಅಂತರಹಳ್ಳಿ, ಕಡಸಹಳ್ಳಿ, ಮೇಡಹಳ್ಳಿ, ಮೊದಲಾದ ಕೆಲವು ಹಳ್ಳಿಗಳಲ್ಲಿ ದನಗಳಿಗೆ ದೊಡ್ಡರೋಗ ಬಂದು ಸುಮಾರು ೭೦-೮೦ ದನಗಳು ಸತ್ತುಹೋದವೆಂದು ಅಲ್ಲಿನ ಜನರು ಹೇಳುತ್ತಾರೆ ಈಗ ಸರ್ಕಾರದವರು ಈ ರೋಗಕ್ಕೆ ಹೊಸ ಚಿಕಿತ್ಸೆಯನ್ನು ಕಂಡುಹಿಡಿದು ಇದಾರೆಂದು ಪತ್ರಿಕೆಯ ಮೂಲಕ ತಿಳಿಯಿತು. ರಯೊತ್ರೆಲ್ಲ ಸರ್ಕಾರದವರು ಈ ಚಿಕಿತ್ಸೆಯನ್ನು ಈ ಕಡೆಗಳಲ್ಲಿ ಮಾಡಿಸಿ, ಬಡ ರೈತರ ದನಗಳನ್ನು ಕಾಪಾಡುವರೆಂದು ಹಾರೈಸುತ್ತಾರೆ – ಹಾಲ್ ಅಂಟಿಗೆ ಸೇರಿದ ಪೇಪಸಂದ್ರದಲ್ಲಿ ಒಬ್ಬ ಹೆಂಗಸಿನ ಹೆಣವು ಪತ್ತೆಯಾಗದೆ ಇಟ್ಟು ಹೂಳಲ್ಪಟ್ಟಿದೆ ಎಂದು ರಿಪೋರ್ಟು ಬಂದದ್ದರಿಂದ ಹೆಣವನ್ನು ತೆಗೆಸಿ ಇಲ್ಲಿನ ಆಸ್ಪತ್ರೆಗೆ ಪರೀಕ್ಷೆಯ ಬಗ್ಗೆ ತಂದಿದ್ದರು. ಕಾರಣವು ಇನ್ನೂ ಸರಿಯಾಗಿ ತಿಳಿಯಲಿಲ್ಲ ಪ್ಲೇಗ್ ಇರುವ ಕಡೆಗಳಿಂದ ಇಲ್ಲಿಗೆ ವಾಸಕ್ಕೆ ಯಾರಾದರೂ ಬಂದರೆ ಅಂಥವರು ೧೦ ದಿನ ಪರೀಕ್ಷೆ ಬಗ್ಗೆ ಡಾಕ್ಟರ ಬಳಿಗೆ ಹೋಗುತ್ತಿರಬೇಕು ಇಲ್ಲಿನವರ ಕ್ಷೇಮಕ್ಕಾಗಿ ಈ ಏರ್ಪಾಡು ಮಾಡಲಾಗಿದೆ

ಅಜ್ಜಂಪುರದ ನಮ್ಮನ್ನು ಆಳುತ್ತಿರುವ ಶ್ರೀಮನ್ ಮಹಾರಾಜರವರಿಗೆ ಪಟ್ಟಾಭಿಷೇಕವಾದ ಸ್ಮರಣಸದಲ್ಲಿ ಉಂಟಾದ ಆನಂದವು ಅನವರತ ಅಭಿವೃದ್ಧಿಯನ್ನು ಹೊಂದಿ, ಸರ್ವಸಮಷ್ಟಿಯ ರಾಜಭಕ್ತಿ ಪ್ರದರ್ಶನವಂಗ್ಯದು, ಶ್ರೇಯಃ ಪ್ರಾರ್ಥನೆಯಂ ಮಾಡಿ, ಪತ್ರಿಕಾ ವಾಚಕಶಾಲೆಯನ್ನೇರ್ಪಡಿಸಲು ಸಹಾಯಿಯಾದುದರಿಂದ ಇದೇ ಅಜ್ಜಂಪುರದ ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮಿ॥ ಜಿ ಶಂಕರಪ್ಪನವರ ಕೋರಿಕೆಯಂತೆ ಸಕಲ ದೇಶದ ಮನುಷ್ಯರುಗಳೇ ಇದೇ ವೆಬ್ರವರಿ ತಾ ೯ನೇ ಭಾನುವಾರ ಆ ಸ್ಕೂಲ್ ಕಟ್ಟಡಕ್ಕೆ ದಯಮಾಡಿಸಿದರು ಮಿ॥ ಶಂಕರಪ್ಪನವರು ಸಭಾಧ್ಯಕ್ಷತೆಯನ್ನು ಮಿ॥ ಬಾಳೆಕಟ್ಟೆ ಭಟ್ಟಪ್ಪನವರು ವಹಿಸಬೇಕೆಂದ ಸೂಚಿಸಿದ್ದನ್ನು ಆಸ್ಪತ್ರೆ ಅಸಿಸ್ಟೆಂಟ್ ಮಿ॥ ವರದಯ್ಯನವರು ಅನುಮೋದಿಸಿದರು. ಸಭಿಕರೆಲ್ಲರೂ ಒಪ್ಪಿದರು. ಅದರಂತೆ ಮಿ॥ ಭಟ್ಟಪ್ಪನವರು ಸಭಾಧ್ಯಕ್ಷತೆಯನ್ನು ವಹಿಸಿದರು ಕೂಡಲೆ ಮಿ॥ ಶಂಕರಪ್ಪನವರು ವಾಚಕಶಾಲಾ ಏರ್ಪಾಡಿನ ಅವಶ್ಯಕತೆಯನ್ನು ಕುರಿತು ಸರಸವಾಗಿ ಉಪನ್ಯಾಸ ಮಾಡಿದರು [ಸ್ಥಳ ಸಂಕೋಚದಿಂದ ಉಪನ್ಯಾಸವನ್ನು ಪ್ರಕಟಿಸಲು ಅನುಕೂಲವಾಗಲಿಲ್ಲವೆಂದು ವಿಷಾದಿಸುತ್ತೇವೆ —ಎಡಿಟರ್] ಸಭಿಕರೆಲ್ಲರೂ ತುಂಬಾ ಆನಂದದಿಂದಲೂ ಉತ್ಸಾಹದಿಂದಲೂ ಏಕಕಂಠ್ಯರಾಗಿ ಪತ್ರಿಕಾ ವಾಚಕಶಾಲಾ ಸ್ಥಾಪನೆಯನ್ನು ಅಂಗೀಕರಿಸಿದರು ಕೂಡಲೆ ಅದು ಸ್ಥಾಪಿತವಾಯಿತು. ಪ್ರಕೃತ ಈ ವಾಚಕಶಾಲೆಗೆ ಅವಶ್ಯಕವಾಗಿ ಬೇಕಾದ ಮರದ ಸಾಮಾನುಗಳನ್ನು ಪತ್ರಿಕೆಗಳನ್ನು ತರಿಸತಕ್ಕ ಬಗ್ಗೆ ಸಹಾಯದ್ರವ್ಯದ ಪಟ್ಟಿಯು ಏರ್ಪಾಡಾಗಿ ಕಡ್ಡಾಯಕ್ಕೆ ಸಕಲರಿಂದಲೂ ಹೊನ್ನೇಮರ ಪಟ್ಟಿಗೂ ಬರೆಯಲ್ಪಟ್ಟಿತು ಪ್ರಕೃತದಲ್ಲಿ ಮಿ॥ ಪಂಡ್ಯೆಯವರು ಸೆಕ್ರಿಟರಿಗಳಾಗಿಯೂ ಮಿ॥ ಕೆ ಶಂಕರಪ್ಪನವರು ಟ್ರೆಜರರಾಗಿಯೂ ಇರಬೇಕೆಂದು ಸೂಚಿಸಿದ ಪಟೇಲರು ಮಿ॥ ವೆಂಕಟಸುಬ್ಬಯ್ಯನವರ ಅಭಿಪ್ರಾಯವನ್ನು ಸಕಲರೂ ಸಮ್ಮತಿಸಿದರು. ಕೂಡಲೆ ಪತ್ರಿಕೆಗಳ ವಾಚನ ಮಹೋತ್ಸವವು ನೆರವೇರಿತು. ಬಳಿಕ ಶ್ಯಾನುಭೋಗರು ಮಿ॥ ಕೃಷ್ಣಪ್ಪನವರು ಅತ್ಯುತ್ಸಾಹದಿಂದ ಸಿದ್ಧಪಡಿಸಿದ್ದ ತಾಂಬೂಲ ಶರ್ಕರಾದಿಗಳು ಸಂಗೀತ ಪ್ರಸಂಗಾನಂತರ ಹಂಚಲ್ಪಟ್ಟವು. ತಾ ೯ನೇ ಭಾನುವಾರ ೬ನೇ ಘಂಟೆಗೆ ನಿಶ್ಚಿತವಾಗಿ, ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನಾ ಜಯಶಬ್ದಪೂರ್ವಕ ಸಭೆಯು ಪೂರ್ತಿಯಾಯಿತು.

ಪೆಗ್ಗದೇವನಕೋಟೆ — ಮೊದಲಾಗಿ ಏರ್ಪಡಿಸಿದ್ದ ಪ್ರೋಗ್ರಾಂನಂತೆ ನಮ್ಮ ಘನತನ್ನು ಹೊಂದಿದ ರೆಸಿಡೆಂಟರಾದ ಮಿ॥ ಫ್ರೇಸರ್ ಸಾಹೇಬರವರ ಸವಾರಿಯು ಈ ದಿನ (ತಾ ೧೦) ಇಲ್ಲಿಗೆ ಬರುವದಾಗಿದ್ದದ್ದರಿಂದ ರಾಜಬೀದಿಯು ಎಲ್ಲೆಲ್ಲಿಯೂ ತೋರಣಗಳಿಂದಲೂ, ಬಾವುಟಗಳಿಂದಲೂ, ಅಲಂಕರಿಸಲ್ಪಟ್ಟಿದ್ದ ಚಪ್ಪರಗಳಿಂದಲೂ ಶೋಭಿಸುತ್ತಿತ್ತು. ಅವರ ಗೌರವಾರ್ಥವಾಗಿ ಈ ಊರಿನ ಪ್ರಜೆಗಳಿಂದ ಕಟ್ಟಲ್ಪಟ್ಟಿದ್ದ ಚಪ್ಪರದಲ್ಲಿ ಇಲ್ಲಿದ್ದ ಕೆಲವು ಮುಖ್ಯ ಸರಕಾರಿ ಉದ್ಯೋಗಸ್ಥರೂ, ಮುನಿಸಿಪಲ್ ಮೆಂಬರುಗಳೂ, ಇನ್ನು ಇತರ ಪ್ರಜೆಗಳೂ ನಮ್ಮ ರೆಸಿಡೆಂಟ್ ಸಾಹೇಬರವರ ಆಗಮನವನ್ನು ನಿರೀಕ್ಷಿಸುತ್ತಿದ್ದರು. ಸ್ವಲ್ಪ ಹೊತ್ತಿನಲ್ಲಿಯೇ ಅವರೂ, ಅವರ ಅಸಿಸ್ಟೆಂಟರೂ ಅಶ್ವಾರೂಢರಾಗಿ ೧೦ ಘಂಟೆಗೆ ಮೋಟುಕಪ್ಪೆಯಿಂದ ಇಲ್ಲಿಗೆ ತಲುಪಿದರು ದಾರಿಯಲ್ಲಿ ಅವರ ಸವಾರಿಯು ಚಿತ್ತೈಸುತ್ತಿರುವಾಗ್ಗೆ ಅಮಲ್ದಾರರವರ ಮನೆಯ ಹತ್ತಿರ ಒಂದು ಕ್ಷಣ ನಿಂತು, ಅವರು ಹಾರ ತುರಾಯಿಗಳನ್ನು ಒಪ್ಪಿಸಿದ್ದನ್ನು ನಮ್ಮ ರೆಸಿಡೆಂಟ್ ಸಾಹೇಬರವರು ಸ್ವೀಕರಿಸಿ ಮುಂದಕ್ಕೆ ಹೊರಟರು ಅನಂತರ ಸ್ಕೂಲ್ ಕಟ್ಟಡದ ಹತ್ತಿರ ಬಂದು ಅಲ್ಲಿ ಸೇರಿದ್ದ ಬಾಲಕ ಬಾಲಕಿಯರ ವಿದ್ಯಾಭಿವೃದ್ಧಿಯನ್ನು ಸ್ಕೂಲ್ ಹೆಡ್ ಮಾಸ್ಟರಿಂದ ವಿಚಾರಿಸಿ ತಮಗೆ ಸ್ತ್ರೀ ವಿದ್ಯಾಭ್ಯಾಸದಲ್ಲಿ ರತಕ್ಕ ಆಸಕ್ತಿಯನ್ನು ತೋರ್ಪಡಿಸಿದರು. ಬಾಲಕಿಯರೆಲ್ಲರೂ ಮಧುರವಾದ ಗಾನವನ್ನು ಮಾಡಿದರು ರೆಸಿಡೆಂಟರವರು ಬಹಳ ಸಂತೋಷಪಟ್ಟು, ಎಲ್ಲರನ್ನೂ ವಂದಿಸಿ ಪ್ರಜೆಗಳಿಂದ ಕಟ್ಟಲ್ಪಟ್ಟ ಚಪ್ಪರದ ಹತ್ತಿರ ಚಿತ್ತೈಸಿದ

ಕೂಡಲೆ ಇವರ ಆಗಮನದ ನಿರೀಕ್ಷಣೆಯಲ್ಲಿದ್ದ ಮ್ಯುನಿಸಿಪಲ್ ಮೆಂಬರುಗಳೂ ಇತರ ಪ್ರಜೆಗಳೂ ರಾಜಭಕ್ತಿ ಪೂರ್ವಕವಾಗಿ ಒಪ್ಪಿಸಿದ ಫಲ, ಪುಷ್ಪ, ತುರಾಯಿ ಇವುಗಳನ್ನು ಬಹಳ ಸಂತೋಷದಿಂದ ಸ್ವೀಕರಿಸಿ, ಅವರ ಕ್ಷೇಮಲಾಭಗಳನ್ನು ವಿಚಾರಿಸಿ ತಂಗುವದಕ್ಕೆ ಏರ್ಪಟ್ಟ ಟ್ರಾವೆಲರ್ಸ್ ಬಂಗ್ಲೆಗೆ ಬಿಜಮಾಡಿದರು ಅನಂತರ ಊಟ ಉಪಚಾರವಾದ ಮೇಲೆ, ಅದೇ ದಿನ ತಮ್ಮ ಅಸಿಸ್ಟೆಂಟರ ಜತೆಯಲ್ಲಿ ಮೈಸೂರಿಗೆ ಪ್ರಯಾಣ ಮಾಡಿದರು ಈ ದಿನ ಪ್ರಜೆಗಳು ಆನಂದ ಭರಿತರಾಗಿಯೂ ಸಂಭ್ರಮಪೂರ್ಣರಾಗಿಯೂ ಇದ್ದರು. ಯಾವದಿನವೂ ಜೊತೆಗೆ ಬಂದಿದ್ದ ಸರ್ಕಾರಿ ಮುಖ್ಯ ಉದ್ಯೋಗಸ್ಥರೂ ಕೂಡ ಬಹಳ ಚಟುವಟಿಕೆಯನ್ನು ತೋರ್ಪಡಿಸಿದರು. ಆಗಾಗ್ಗೆ ನಮ್ಮ ಘನವನ್ನು ಹೊಂದಿದ ಮಿ॥ ಫ್ರೇಸರ್ ಸಾಹೇಬರಂಥಾ ಮಹನೀಯರುಗಳು ಇಲ್ಲಿಗೆ ಭೇಟಿ ಕೊಡುತ್ತಿದ್ದರೆ ಅವರುಗಳ ಸವಾರಿಯು ಇಲ್ಲಿಗೆ ಚಿತ್ತೈಸಿದ ಸ್ವಲ್ಪಕಾಲಮಟ್ಟಿಗಾದರೂ ಪ್ರಜೆಗಳೂ ಮುಖ್ಯ ಸರ್ಕಾರಿ ಉದ್ಯೋಗಸ್ಥರೂ ತಮ್ಮ ಚಟುವಟಿಕೆಯನ್ನು ತೋರಿಸುತ್ತಾರೆಂದೂ, ಊರಿನಲ್ಲಿ ರಸ್ತೆಗಳು ಕೂಡ ಕಶ್ಮಲವಿಲ್ಲದೆ ಚೊಕ್ಕಟವಾಗಿರುತ್ತವೆಂದೂ ನಂಬಿದ್ದೇನೆ

ಇಂಡಿಯಾ ದೇಶದ ವೃತ್ತಾಂತಗಳು

ಕೊಚ್ಬೀಹಾರಿನ ಮಹಾರಾಜ ಕುಮಾರ್ ರಾಜರಾಜೇಂದ್ರನಾರಾಯಣರವರು ದೇಹಾರೋಗ್ಯಕ್ಕೋಸ್ಕರ ಐರೋಪ್ಯಕ್ಕೆ ಪಯಣಮಾಡುವರು

❖❖❖

ಕಳೆದ ಶನಿವಾರ ಮದರಾಸ್ ಗವರ್ನರವರು ನೆಲ್ಲೂರಿಗೆ ದಯಮಾಡಿಸಿದ್ದದ್ದರ ಸಂತೋಷಕ್ಕಾಗಿ ಅಲ್ಲಿನ ಮಿ॥ ಲಕ್ಷ್ಮೀನರಸುರೆಡ್ಡಿ ಎಂಬ ದೊಡ್ಡಮನುಷ್ಯರು ೬,೦೦೦ ಬಡಬರಿಗೆ ಸುಭೋಜನವನ್ನು ಮಾಡಿಸಿದರು

❖❖❖

ಬಂಗಾಳ ಅಧಿಪತ್ಯಕ್ಕೆ ಸೇರಿದ ಮೊರ್ಭಂಜ್ ಸಂಸ್ಥಾನದಲ್ಲಿ ಕಾಗದಗಳ ತಯಾರಿ ಬಗ್ಗೆ ಒಂದು ಭಾರೀ ಕಾರ್ಖಾನೆಯನ್ನು ಸ್ಥಾಪಿಸುವವರಾಗಿದಾರೆ ಅಲ್ಲಿನ ಮಹಾರಾಜರವರು ಈ ಏರ್ಪಾಡಿಗೆ ತುಂಬಾ ಸಹಾಯಕರಾಗಿರುವರು.

❖❖❖

ಈ ತಿಂಗಳ ಕಡೆಯ ವಾರ ಮದರಾಸ್ ಪಟ್ಟಣದಲ್ಲಿ ಜರಗುವ ಕೈ ಮಗ್ಗಗಳ ಮತ್ತು ಕಾರ್ಖಾನೆ ಮಗ್ಗಗಳ ಪ್ರದರ್ಶನಕ್ಕೆ ೩೦ ಮಂದಿ ಆಗಲೇ ಪೋಟಾಪೋಟಿ ಮಾಡ-ಪ್ರಾಸಾಗಿ ತಿಳಿಸಿದಾರೆಂತಲೂ, ಇದುವರೆಗೆ ೭೬ ಮಗ್ಗಗಳು ಪ್ರದರ್ಶನಕ್ಕಾಗಿ ಕಳುಹಲ್ಪಟ್ಟಿವೆ ಎಂತಲೂ ತಿಳಿದುಬಂದಿದೆ

❖❖❖

ಮಾರ್ಚ ೧ ನೆ ತಾ ಲಕ್ನೋ ನಗರದಲ್ಲಿ ಸಂಯುಕ್ತ ಅಧಿಪತ್ಯಗಳ ದೊಡ್ಡ ಮನುಷ್ಯರು ಕೈಗಾರಿಕೆಗಳ ಪ್ರೋತ್ಸಾಹಕ್ಕಾಗಿ ಒಂದು ಸಭೆಯನ್ನು ನಡಿಸುವರು ಇಂಡಸ್ಟ್ರಿಯಲ್ ಸರ್ವೆ ಸೂಪರಿಂಟೆಂಡೆಂಟರಾದ ಮಿ॥ ಟಿ ಸಿ ಚಟರ್ಜಿಯವರು ಸಭೆಯ ಅಗ್ರಾಸನವನ್ನು ವಹಿಸುವವರಾಗಿದಾರೆ

❖❖❖

ಹಿಂದುಸ್ಥಾನದ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಮುಂದಿನ ವಾರ ಕಲ್ಕತ್ತೆಯಿಂದ ಹೊರಟು, ಗ್ವಾಲಿಯರ್ ಸಂಸ್ಥಾನಕ್ಕೆ ದಯಮಾಡಿ, ಅಲ್ಲಿಂದ ಕೆಲವ ಕಾಲ ಸಿಪಿ ಎಂಬ ಕಾಡಿನಲ್ಲಿ ಷಿಕಾರಿ ಮಾಡಿಕೊಂಡು, ಡೇರಾಡೂನ್ ಪಟ್ಟಣದ ಮೇಲೆ ಹಾಸಿ ಸಿಂಲಾ ಪಟ್ಟಣವನ್ನು ತಲುಪುವವರಾಗಿದಾರೆ

❖❖❖

ಕಟಕ್ ಪಟ್ಟಣದಲ್ಲಿ ರೈಲ್ವೆ ಇಲಾಖೆಯ ಡಿಸ್ಟ್ರಿಕ್ಟ್ ಇಂಜಿನಿಯರ್ ಆಫೀಸಿಗೆ ಕಳೆದವಾರ ಕಳ್ಳರು ಬಿದ್ದು ಕಬ್ಬಿಣದ ಪೆಟ್ಟಿಗೆಯನ್ನು ಒಡೆದು, ಒಳಗಿದ್ದ ಸಾವಿರಾರು ರೂಪಾಯಿಗಳನ್ನು ಎತ್ತಿಕೊಂಡು ಹೋದರು. ಆ ಆಫೀಸಿನ ಮಗ್ಗುಲಲ್ಲೇ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವಾಸಮಾಡುತ್ತಿದಾರೆ

❖❖❖

ಬೊಂಬಾಯಿ ಪಟ್ಟಣದಲ್ಲಿರುವ ನೈಗಾಂ ಮಿಲ್ಸ್ ಎಂಬ ೩೪೦೦೦ ಮಗ್ಗಗಳಿದ್ದ ಭಾರೀ ಹತ್ತೀ ಕಾರ್ಖಾನೆಗೆ ಕಳೆದ ವಾರ ಬೆಂಕಿ ಬಿದ್ದು ಸಂಪೂರ್ಣವಾಗಿ ಸುಟ್ಟುಹೋಯಿತು ಇದರಿಂದ ಸಾಹುಕಾರರಿಗೆ ೧೭ ಲಕ್ಷ ರೂಪಾಯಿ ನಷ್ಟವಾದರೂ ಈ ಹಣವೆಲ್ಲಾ ಇನ್ಷೂರೆನ್ಸ್ ಎಂಬ ವಿಮಾ ಕಂಪನಿಯವರಿಂದ ಕೊಡಲ್ಪಡುವುದು

❖❖❖

ಪೂರ್ವ ಬಂಗಾಳಾ ಮತ್ತು ಅಸ್ಸಾಂ ಎಂಬ ಹೊಸ ಬಂಗಾಳಾ ಪ್ರಾಂತ್ಯದ ಲೆಫ್ಟಿನೆಂಟ್ ಗವರ್ನರ್ ಸರ್ ಲ್ಯಾನ್ಸಲಾಟ್ ಹೇರ್‌ಯವರು ಕಳೆದ ವಾರ ಮಣಿಪುರಕ್ಕೆ ದಯಮಾಡಿ, ಆ ಸಂಸ್ಥಾನದ ರಾಜರಿಗೆ ರಾಜ್ಯಾಭಿಷೇಕವನ್ನು ಮಾಡಿ, ಅವರಿಂದ ಸತ್ಕಾರವನ್ನು ಹೊಂದಿ, ಮೋಟಾರ್ ಗಾಡಿಯಲ್ಲಿ ನಾಗಾ ಬೆಟ್ಟಕ್ಕೆ ಪ್ರಯಾಣ ಮಾಡಿದರು.

❖❖❖

ಇಂಡಿಯಾ ಗವರ್ನಮೆಂಟಿನ ಭೂಗರ್ಭ ಶೋಧನಾ ಇಲಾಖೆಯ ಡೈರೆಕ್ಟರಾದ ಮಿ॥ ಟಿ. ಎಚ್ ಹಾಲೆಂಡ್ ಯವರು ಹಿಂದುಸ್ಥಾನದಲ್ಲಿ ಆದ ಲೋಹಗಳ ಉತ್ಪತ್ತಿಯನ್ನು ಕುರಿತು ರಿಪೋರ್ಟು ಬರೆದಿರುವದರಲ್ಲಿ ಮಧ್ಯ ಇಂಡಿಯಾ ಸಂಸ್ಥಾನಗಳ ಪನ್ನಾ, ಚಾರ್ಖಾರಿ, ಅಜೈಘರ್ ಎಂಬೀ ಸ್ಥಳಗಳಲ್ಲಿ ತೆಗೆದಂಥಾ ವಜ್ರಗಳು ಬಹಳ ಶ್ರೇಷ್ಠವಾಗಿದ್ದವೆಂದೂ, ಅವುಗಳ ಬೆಲೆಯು ಸುಮಾರು ೧೦ ಲಕ್ಷ ರೂಪಾಯಿಗಳೆಂದೂ ತಿಳಿದುಬರುತ್ತದೆ

❖❖❖

ಹಿಂದುಸ್ಥಾನಕ್ಕೆಲ್ಲಾ ಸಾಮಾನ್ಯವಾಗಿ ಅನ್ವಯಿಸುವಂಥಾ ಒಂದು ಸೆಂಟ್ರಲ್ ವ್ಯವಸಾಯದ ಬ್ಯಾಂಕನ್ನು ಸ್ಥಾಪನೆಮಾಡಿ, ತರುವಾಯ ಅದರ ಶಾಖೆಗಳನ್ನು ಮುಖ್ಯ ಮುಖ್ಯವಾದ ಪ್ರದೇಶಗಳಲ್ಲೆಲ್ಲಾ ಏರ್ಪಡಿಸಿ ನಡಿಸಬೇಕೆಂದು ಚರ್ಚೆ ನಡಿಯುತ್ತಿತ್ತು ಈಗ ಇಂಡಿಯಾ ಗವರ್ನಮೆಂಟಿನವರು ಆದಿಯಲ್ಲೇ ಸೆಂಟ್ರಲ್ ಬ್ಯಾಂಕನ್ನು ಸ್ಥಾಪಿಸ ವದಕ್ಕಿಂತಲೂ ಗ್ರಾಮ ಊರುಗಳಲ್ಲಿ ಸಣ್ಣ ಸಣ್ಣ ಬ್ಯಾಂಕುಗಳನ್ನು ಪ್ರಾರಂಭಿಸುವದೇ ಕ್ಷೇಮಕರವೆಂದು ತೀರ್ಮಾನಿಸಿದಾರೆ

❖❖❖

ಕಲ್ಕತ್ತಾ ಪಟ್ಟಣದಲ್ಲಿ ಲೇಟ್ ಮಹಾರಾಣಿ ವಿಕ್ಟೋರಿಯಾರವರ ಜ್ಞಾಪಕಾರ್ಥವಾಗಿ ಒಂದು ಸಮಾಧಿ ಬಂಗಲೆಯನ್ನು ಕಟ್ಟಬೇಕೆಂದು ಲಾರ್ಡ್ ಕರ್ಜನವರು ವೈಸ್‌ರಾಯಿಯವರಾಗಿದ್ದಾಗ್ಗೆ ಒಂದು ಫಂಡು ಎತ್ತಲಾಯಿತಷ್ಟೆ ಈ ಫಂಡಿನಲ್ಲಿ ಈಗ ೫೦ ಲಕ್ಷ ರೂಪಾಯಿ ಕೂಡಿರುವುದೆಂತಲೂ, ಇನ್ನೂ ೫ ಲಕ್ಷ ರೂಪಾಯಿ ವಸೂಲಾಗುವುದರಲ್ಲಿದೆ ಎಂತಲೂ ಪ್ರಕಟವಾಗಿದೆ

❖❖❖

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಪಟ್ನಾ ನಗರದಲ್ಲಿ ದೇಶೀಯ ವಿದ್ಯಾವಂತರ ಸಮಾಜವು ನೆನ್ನೆಯ ದಿನ ನಡಿಯುವುದಾಗಿದ್ದಿತು. ಇದರಲ್ಲಿ ಒಂದು ಪ್ರದರ್ಶನವನ್ನೂ ಏರ್ಪಾಡು ಮಾಡಿದಾರೆ ಈ ರಾಷ್ಟ್ರದ ಕಸಬುಗಳನ್ನು ಅಭಿವೃದ್ಧಿಗೆ ತರಲು ತಕ್ಕ ಉಪಾಯಗಳನ್ನು ಕಲ್ಪಿಸಿ ಕಸಬುದಾರಿ ವಿದ್ಯೆಯನ್ನು ಹೆಚ್ಚಿಸಬೇಕೆನ್ನುವುದೇ ಈ ಸಭೆಯ ಉದ್ದೇಶವು ಭವಿಷ್ಯದ ಮುಖಂಡರಾದ ಬಾಬು ಅಂಬಿಕಾ ಚರಣ ಎಂಬುವರು ಸಭಾ ನಾಯಕರಾಗಿ ಸಮಾಜವನ್ನು ಜರುಗಿಸುವರು

❖❖❖

ಮಾಯನ್ನ ಪ್ರಾಂತ್ಯಗಳ ಅಧಿಪತ್ಯದಲ್ಲಿ ಸರ್ಕಾರದವರು ಜೈಲುಖಾನೆಗಳ ಒಳಗೆ ಬಂದೀವಾನರಿಂದ ಕಾಗದ ತಯಾರಿ ಲಿಥೋಗ್ರಾಫ್ ಪ್ರಿಂಟು, ಈ ಮೊದಲಾದುವನ್ನು ಮಾಡಿಸುತ್ತಾ ಇದಾರೆ ಇದರಿಂದ ಜೈಲ್ ಖಾನೆಗಳ ಉತ್ಪತ್ತಿಯು ಲಾಭಕರವಾಗುತ್ತಿದೆ ಬಂದೀವಾನರಿಗೆ ಒಳ್ಳೇ ಜೀವನೋಪಾಯವನ್ನು ಕಲ್ಪಿಸಿಕೊಟ್ಟ ಹಾಗೂ ಆಯಿತು ಈಗ ಇನ್ನೂ ಕೆಲವು ಸುಲಭವಾದ ಯಂತ್ರಗಳನ್ನು ಉಪಯೋಗಿಸುವ ಬೇರೆ ಕಸಬುಗಳನ್ನೂ ಜೈಲುಗಳೊಳಗೆ ನಡಿಸಬೇಕೆಂದು ಗವರ್ನಮೆಂಟಿನವರು ಪ್ರಯತ್ನಪಟ್ಟಿದಾರೆ

❖❖❖

ಕಳೆದ ವಾರ ಅರ್ಧೋದಯ ಪುಣ್ಯ ಕಾಲದ ದಿನ ಕಲ್ಕತ್ತೆಯಲ್ಲಿರುವ ಕಾಳಿಕಾ ಘಾಟಿನಲ್ಲಿ ಸ್ನಾನವಾದ ಪುಣ್ಯಕ್ಕೆ ಅನೇಕ ಸಹಸ್ರ ಹಿಂದುಗಳು ಜಮಾಯಿಸಿದ್ದರು. ಬಾಬು ರಾಧಾಚರಣ ಪಾಲ್‌ಯವರು ೧,೦೦೦ ಮಂದಿ ಯ…ನನ್ನು ಯಾತ್ರಿಕರಿಗೆ ಸೇವೆ ಮಾಡುವುದಕ್ಕಾಗಿ ನೇಮಕವಾಗಿದ್ದರು. ಇವರು ಉದ್ದಕ್ಕೂ ಯಾತ್ರಿಕರಿಗೆ ಯಾವ ವಿಧವಾದ ಕಷ್ಟವೂ ನಷ್ಟವೂ ಉಂಟಾಗಲಿಲ್ಲ ಇದನ್ನು ನೋಡಿ ಪೋಲೀಸ್ ಕಮಿಷನರರು ಬಾಬು ರಾಧಾಚರಣ ಪಾಲರ ಈ ಸ್ವದೇಶೀ ಏರ್ಪಾಡನ್ನು ಕೊಂಡಾಡಿ, ಅವರನ್ನು ವಂದಿಸಿದ್ದಾರೆ

❖❖❖

ಇಂಡಿಯಾ ಗವರ್ನಮೆಂಟಿಗೂ ಟಿಬೆಟ್ ರಾಜ್ಯಕ್ಕೂ ಕೆಲವು ಕಾಲಕ್ಕೆ ಮುಂಚೆ ಕದನವು ನಡೆದು, ಟಿಬೆಟ್ ಸರ್ಕಾರದವರು ೨೫ ಲಕ್ಷ ರೂಪಾಯಿ ಕೊಡುವವರೆಗೆ ಛುಂಬಿಯವೆಯೂ ಗಯಾಂಟ್ಸಿ, ಗಾರ್ಟಾಕ್ ಎಂಬ ಸ್ಥಳಗಳಲ್ಲೂ ಇಂಗ್ಲೀಷ್ ಸೈನ್ಯದ ವಾಸ್ತವ್ಯಗಳಿರಬೇಕೆಂದು ಗೊತ್ತಾಗಿತ್ತು ಅದರಂತೆ ಟಿಬೆಟ್ ಸರ್ಕಾರದವರು ಕಳೆದ ಮೂರು ಸಾಲಿನಲ್ಲಿ ಮೂರು ಕಂತು ಪಾವತಿಮಾಡಿ, ಆ ಹಣವನ್ನು ತೀರಿಸಿದರು ಈಗ ಇಂಗ್ಲೀಷ್ ಗವರ್ನಮೆಂಟಿನವರು ಮೇಲೆ ಕಂಡ ಮೂರು ಸ್ಥಳಗಳಲ್ಲೂ ತಾವು ಇಟ್ಟಿದ್ದ ಸೈನ್ಯಗಳನ್ನು ಅಲ್ಲಿಂದ ವಾಪಸ್ ಕಳಿಸಬೇಕೆಂದು ಹುಕುಂ ಕೊಟ್ಟಿದಾರೆ

❖❖❖

ಕೊಯಮುತ್ತೂರಿನಲ್ಲಿ ಕೆಲವು ವಿದ್ಯಾವಂತರು ಕೂಡಿ ಸೇರಿ ಒಂದು ನೇಯ್ಗೆ ಕಾರ್ಖಾನೆಯನ್ನು ಸ್ಥಾಪಿಸಿ, ನೂಲನ್ನೂ ಬಟ್ಟೆಬರೆಗಳನ್ನೂ ತಯಾರ್ಮಾಡುತ್ತಿದಾರೆ ಈ ಕಾರ್ಖಾನೆಯನ್ನು ಭಾನುವಾರಗಳ ದಿನ ಮುಚ್ಚಿಬಿಡುವರು ಇತರ ದಿನಗಳಲ್ಲಿ ಎಂಥಾ ಕಷ್ಟಬಂದರೂ ಕೆಲಸ ನಿಲ್ಲಿಸದೆ ಕೂಲಿಯವರಿಂದ ದಿನಕ್ಕೆ ೧೨ ಗಂಟೆಗಳ ಹೊತ್ತು ಕೆಲಸ ತೆಗೆದುಕೊಳ್ಳುತ್ತಾರೆ ಪ್ರತಿ ದಿನವೂ ಬೆಳಗ್ಗೆ ಕೆಲಸ ಪ್ರಾರಂಭಿಸುವುದಕ್ಕಿಂತ ಮೊದಲು ಕಂಪನಿಯವರು ಕೂಲಿಕಾರರುಗಳಿಗೆಲ್ಲಾ ಸ್ವಲ್ಪ ಬಿಸ್ಕತ್ತನ್ನೂ ಕಾಫಿಯನ್ನೂ ಕೊಡಿಸುವರು. ಈಗ ಅಲ್ಲಿ ದಿನಸಿಗಳ ಧಾರಣೆ ಹೆಚ್ಚಾಗಿರೋಣದರಿಂದ ಕೂಲಿಯವರುಗಳನ್ನೆಲ್ಲಾ ಸಲ್ಪವಟ್ಟಿಗೆ ಪೋಷಿಸಿರುತ್ತಾರೆ.

❖❖❖

ಕ್ಷಾಮ ಬಾಧೆಯು ಉತ್ತರದೇಶದಲ್ಲಿ ಹೆಚ್ಚುತ್ತಲಿದೆ. ಸಂಯುಕ್ತ ಅಧಿಪತ್ಯಗಳಲ್ಲಿ ಕಳೆದವಾರ ಆರು ಲಕ್ಷ ಪ್ರಜೆಗಳು, ಮಧ್ಯ ಇಂಡಿಯಾ ಸಂಸ್ಥಾನಗಳಲ್ಲಿ ೯೦ ಸಾವಿರ ಜನರು ಕ್ಷಾಮಪೀಡಿತರಾಗಿ ಸರ್ಕಾರದವರ ರಿಲೀಫ್ ಕಾಮಗಳಿಗೆ ಹೋಗಿ ಜೀವಿಸುತ್ತಿದ್ದರು ಸಂಯುಕ್ತ ಅಧಿಪತ್ಯಗಳಿಗೆ ಸೇರಿದ ಬಾರಾ ಬ್ಯಾಂಕಿ ಮತ್ತು ಸುಲ್ತಾನಪುರ ಡಿಸ್ಟ್ರಿಕ್ಟ್‌ಗಳು ಕ್ಷಾಮ ಪೀಡಿತವಾಗಿವೆ ಎಂದು ಸರ್ಕಾರದವರು ಪ್ರಕಟಿಸಿದಾರೆ ಮತ್ತು ಫರಕ್ಕಾಬಾದ್, ಡೇರಾಡೂನ್ ಪ್ರಾಂತ್ಯಗಳಲ್ಲಿ ಧರ್ಮದ ಅನ್ನಸತ್ರಗಳನ್ನು ಪ್ರಾರಂಭಿಸಬೇಕೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ ಇದಲ್ಲದೆ ಆ ಕ್ಷಾಮ ಪೀಡಿತವಾದ ಪ್ರಾಂತ್ಯಗಳಿಗೆ ಬಹು ಮಂದಿ ಡಾಕ್ಟರುಗಳನ್ನೂ ಆಸ್ಪತ್ರೆ ಅಸಿಸ್ಟೆಂಟರುಗಳನ್ನೂ ಕಳುಹಿಸಿಕೊಟ್ಟಿದಾರೆ

❖❖❖

ಅಲಹಾಬಾದಿನ ಸೆಷನ್ಸ್ ಜಡ್ಜಿ ಮಿ॥ ರುಸ್ತುಂಜೀಯವರು ಕಳೆದ ವಾರ ಒಬ್ಬ ಮಹಮದೀಯ ಅಪರಾಧಿಯನ್ನು ಕೊಲೆಯ ಅಪರಾಧಕ್ಕಾಗಿ ದರ್ಯಾಪ್ತಿ ಮಾಡಿ, ಅವನನ್ನು ಕುರಿತು—ನಿನಗೆ ಹತ್ತು ವರುಷ ಕಠಿಣ ಸಜಾ ವಿಧಿಸಿದೆ ಎಂದು ಹೇಳಿದರು ಅಪರಾಧಿಯು ಕೂಡಲೇ ತನ್ನ ಬಗಲಿಂದ ಒಂದು ಕಲ್ಲನ್ನು ಈಚೆಗೆ ತೆಗೆದು, ಜಡ್ಜಿಯವರಿಗೆ ಗುರಿಯಿಟ್ಟು ಹೊಡೆದನು ದೇವರ ದಯದಿಂದ ಅದು ಜಡ್ಜಿಯ ಮುಂದೆ ಇದ್ದ ಕಟಕಟೆಗೆ ಬಡಿಯಿತು ಆಗ ಅವನನ್ನು ಇನ್ನೊಬ್ಬ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಕರೆದುಕೊಂಡು ಹೋಗಿ ದರ್ಯಾಪ್ತಿ ಮಾಡಿಸಿದರು

[illegible] ಎರಡು ವರುಷ ಕ [illegible] ಸಜಾ ಆಯಿತು ಅವನಿಗೆ ೨೦ ವರುಷ [illegible] ಗಿದೆ ಎಂತಲೂ, ಹಿಂದೆ ಎರಡಾವರ್ತಿ ಸಜಾ ಆಗಿತ್ತೆಂತಲೂ [illegible] ಬಂದಿದೆ

❖❖❖

ಹಿಂದುಸ್ಥಾನದಲ್ಲಿ ಈಚೆಗೆ ಪ್ಲೇಗ್ ಉಪದ್ರವದಿಂದಾಗುವ ಮರಣ [illegible] ಹೆಚ್ಚುತ್ತಿವೆ ಹಿಂದಿನ ವಾರ ಒಟ್ಟು [illegible] ಮಂದಿ ಆ ಉ [illegible] ಮೃತಪಟ್ಟರು. ಈ ಸ್ಥಿತಿ ಬೊಂಬಾಯಿ ಆಧಿಪತ್ಯದಲ್ಲಿ [illegible], ಮದರಾಸ್ ಆಧಿಪತ್ಯ [illegible], ಬಂಗಾಳ [illegible], ಸಂಯುಕ್ತ ಪ್ರಾಂತ್ಯಗಳು [illegible], ಪಂಜಾಬ್ [illegible], ಬರ್ಮಾ [illegible], ಮಧ್ಯ ಪ್ರಾಂತ್ಯಗಳು ಮತ್ತು ಬೇರಾರ್ [illegible], ಮೈಸೂರು ಸಂಸ್ಥಾನ [illegible], ಹೈದರಾಬಾದ್ ಸಂಸ್ಥಾನ [illegible], ಮಧ್ಯ ಇಂಡಿಯಾ [illegible], ರಾಜಪುಟಾನಾ [illegible], ಈ ರೀತಿ ಮರಣಗಳಾಗಿವೆ.

❖❖❖

ಟೆಲಿಗ್ರಾಫ್ (ತಂತೀ) ವರ್ತಮಾನಗಳನ್ನು ಕಳುಹುವಾಗ್ಗೆ ಹಿಂ [illegible] ದಲ್ಲಿ ಪ್ರತ್ಯೇಕವಾದ ಸ್ಟಾಂಪುಗಳನ್ನು ಅಂಟಿಸಿದವರು ಇಟ್ಟು [illegible] ಅವುಗಳನ್ನು [illegible] ಈ ಸ್ಟಾಂಪುಗಳು ಅಂಚೆ ಸ್ಟಾಂ [illegible] ಗಿದ್ದರೂ ಅವನ್ನು ಅನ್ಯವಿಧದಲ್ಲಿ ಉಪಯೋಗಿಸಕೂಡ [illegible] ಇನ್ನು ಮುಂದೆ ಈ ಬೇರೆತರದ ಸ್ಟಾಂಪನ್ನೇ ವಜಾಮಾಡಿ, [illegible] ಸ್ಟಾಂಪನ್ನೇ ತಂತೀ ವರ್ತಮಾನ ಕಳುಹುವಾಗ ಅಂಟಿಸ [illegible] ಗವರ್ನಮೆಂಟಿನವರು ಯೋಚಿಸುತ್ತಿದ್ದಾರೆ ಇದು [illegible] ಆದರೆ ಕಂಪನೀ ಸೀಮೆಯಲ್ಲೆಲ್ಲಾ ಅಂಚೇಕಾಗದಕ್ಕೂ [illegible] ವರ್ತಮಾನ ಕಳುಹುವುದಕ್ಕೂ, ರಾಜಸಂಬಂಧ ರಶೀತಿಗಳಿಗೂ [illegible] ತರದ ಅಂದರೆ ಅಂಚೇ ಸ್ಟಾಂಪುಗಳನ್ನೇ ಇಚ್ಛೆಯಂತೆ ಸರಾಗ [illegible] ವುದು

❖❖❖

ಕಳೆದ ಡಿಸೆಂಬರ್ ಕಡೇ ವಾರದಲ್ಲಿ ಮೆಂ ಆರ್ಲೆ [illegible] ಎಂಬ ಇಂ [illegible] ಕನಕ್ಕರನ್ನು ಅವರು ರೈಲು [illegible] ಸಮಯದಲ್ಲಿ ಕೊಲ್ಲ [illegible] ಬಹಳ ವರ್ತಮಾನ ಅವರಿಗೆ ಗುಂಡು [illegible] ತಿದರೆಂತ [illegible] ಆದರೆ ಅವರು ಆ [illegible] ಗಳನ್ನು ವಾಸಿಮಾಡಿಕೊಂಡು ಸೀಮೆಗೆ [illegible] ಮಾಡಿದರೆಂತಲೂ ಅವರನ್ನು [illegible] ಹೊಡೆದ ಘಾತುಕರನ್ನು [illegible] ಕೊಡುವವರಿಗೆ [illegible] ರೂಪಾಯಿ ಬಹುಮಾನ ಕೊಡುವು [illegible] ಸರ್ಕಾರದವರು [illegible] ನೋಟೀಸು [illegible] ಸಿದ್ದಾರೆ ತಲೂ ತಿಳಿಸಿರು [illegible] ಆ [illegible] ಇದುವರೆಗೂ [illegible] ಹಿಂದೆ [illegible] ಮಿಸ್ಟರ್ ಪಟ್ಟಣದಲ್ಲಿ ಸರ್ಕಾರದವರು ಗೋರೆಗಳಿಗೆ [illegible] [illegible] ಕೂಡ ವಾರ [illegible] ಮಂದಿ ವಿದ್ಯಾ [illegible] ಗಳು ಸೇರಿ [illegible] ಸಾಕಿದರೆಂದು ಅವರ ಮೇಲೆ ನೋಟೀಸ್ [illegible] ಈ ಸ್ಥಿತಿ [illegible] ಗರು ಅಲ್ಲಿನ ದೊಡ್ಡ ಮನುಷ್ಯ [illegible] ಎಂತಲೂ, [illegible] ಅಲ್ಲಿ ತುಂಬಾ ಗಲಭೆಯು [illegible] ವರ್ತಮಾನ ಬಂದಿದೆ

❖❖❖

ಉತ್ತರ ಹಿಂದುಸ್ಥಾನದಲ್ಲಿರುವ ಗಯಾ ಎಂಬ ಹಿಂದೂ ಕ್ಷೇತ್ರಸ್ಥಾನದಲ್ಲಿ [illegible] ದೊಡ್ಡದೇವಾಲಯ ಒಂದಿದೆ. ಈ ದೇವಸ್ಥಾನದ ಕಾರುಬಾ [illegible] ವಿಷಯದಲ್ಲಿ [illegible] ಕಾಲದಿಂದಲೂ ಹಿಂದುಗಳಿಗೂ ಬೌದ್ಧರಿ [illegible] ವ್ಯಾಜ್ಯಗಳು [illegible] ಬಂದಿವೆ ಅನೇಕರ ಈ ವ್ಯಾಜ್ಯ [illegible] ಕಾರಣವೆನೆಂದು [illegible] ಅವನ್ನು [illegible] [illegible] ಕ್ರಿಸ್ತ [illegible] ದ ದೇವಾಲಯದ ಕಾರ್ಯಕರ್ತ [illegible] ಒಬ್ಬ ಹಿಂದೂ [illegible] ಆ [illegible] ಬಟ್ಟೆಬರೆಗಳನ್ನು [illegible] ವಾಸ [illegible] ಪೂಜೆಯ ದೇವಸ್ಥಾನಗಳಲ್ಲಿ ವಿಗ್ರಹಗ [illegible] ಅಲಂಕಾರಗಳನ್ನು ದೇವಾಲಯದ [illegible] ಮಾಡಿಕ [illegible] ಆ [illegible] ಅನಂತರ [illegible] ದೇವಾಲಯಕ್ಕೆ ಕೊಡತಕ್ಕ [illegible] ಗಳನ್ನೆಲ್ಲಾ ಹಿಂದೂ [illegible] ತನ್ನ ಸ್ವಾಧೀನ ತೆಗೆದುಕೊಳ್ಳು [illegible] ಅಂತು ಈ ಬೌದ್ಧರ ದೇವಾಲಯದ ಸರ್ವಸ್ವಾತಂತ್ರ್ಯವನ್ನೂ [illegible] ಭಕ್ತಾದಿಗಳಿಗೆ ಬಿಟ್ಟುಕೊಡದೆ, ಹಿಂದೂ [illegible] ತರೇ [illegible] ಕೊಂಡಿರುವುದು [illegible] ಬೌದ್ಧರು ಇದನ್ನು ತಪ್ಪಿಸಿ ತಮ್ಮ ದೇವಾಲಯವ [illegible] ನಡೆಸಿಕೊಳ್ಳಬೇಕೆಂದು [illegible] ಹಿಂದುಗ [illegible] ಇದಕ್ಕೆ ಅವಕಾಶ [illegible] ವುದಿಲ್ಲ ಆದಕಾರಣ ಬೌದ್ಧ [illegible] ಪ್ರತಿನಿಧಿ [illegible] ಸಭಾ ಎಂಬ ಒಂದು ಸಂಘವನ್ನು ಮಾ [illegible] ಈ ಸಂಘದ ಮೂಲಕ ಅದನ್ನು ಕ [illegible] ಪಡಿಸಿಕೊಳ್ಳಬೇ [illegible] ವರುಷಗಳಿಂದ ಸಾಹಸ ಪಡುತ್ತಿದ್ದಾರೆ. [illegible] ಎಂಬ [illegible], ಸಿಲೋನಿನ ಮಹಾರಾಜ ಕುಮಾರರೂ ಈ [illegible] ಮುಖ್ಯ ಪೋಷಕರಾಗಿರುತ್ತಾರೆ. ಈ ಸಂಘದವರೂ ಹಿಂದೂ [illegible] ಸೇರಿ, [illegible] ಸಮಾಧಾನವಾದ ರೀತಿಯಲ್ಲಿ ಈ [illegible] ನ್ನು [illegible] ಬೇಕೆಂದು ಪ್ರಯತ್ನ ಮಾಡಿದರಾ [illegible], ಅವರೇ [illegible] ರಾಜಿಯಾಗಬೇಕೆಂದರೆಂತಲೂ ತಿಳಿದು ಬಂ [illegible] ಈಗ ಈ ಸ [illegible] ಪ್ರಪಂಚದ ಎಲ್ಲಾ ಕಡೆಗಳಲ್ಲಿ ಇರತ [illegible] ಬೌದ್ಧ ಬಕ್ತರಿಗೆ ಈ ಸಂಗತಿಯನ್ನು ತಿಳಿಸಿ, ಅವರಿಂದ ದ್ರವ್ಯ ಸ [illegible] ಮಾದಿಗಳನ್ನು ಪಡೆದು, ಕ್ರಮವಾಗಿ ಮಂಡಂತರ ಮೇಲೆ ದಾವಾ [illegible] [illegible] ನಡಿಸುವವರಾಗಿದ್ದಾರೆ

ವಿಶೇಷ ವರ್ತಮಾನಗಳು.

[illegible] ಆಫ್ರಿಕಕ್ಕೆ ಸೇರಿದ ನಟಾಲಿನ ಗವರ್ನರವರು [illegible] [illegible] ಸಂಚಾರವಾಡುತ್ತಾ ಹೋಗಿದ್ದಾಗ ಕಳೆದ ವಾರ ಆ [illegible] [illegible] ಮುಖಂಡರುಗಳನ್ನೆಲ್ಲಾ ಸೇರಿಸಿ ಸಭೆ ಮಾಡಿ. ೧೯೦೬ [illegible] [illegible] ಆ ಪ್ರಾಂತ್ಯ ದಂಗೆಯೆದ್ದದ್ದಕ್ಕೆ ಶಿಕ್ಷೆಯನ್ನನುಭವಿಸು [illegible] ಅಪರಾಧಿಗಳಿಗೆಲ್ಲಾ ಕ್ಷಮಾಪಣೆಯನ್ನು ದಯಪಾಲಿಸಿ, ಅವರ [illegible] ಸೆರೆಮನೆಯಿಂದ ಬಿಡುಗಡೆ ಮಾಡಿಸಿ ಬಂದರು.

ಆಫ್ರಿಕಕ್ಕೆ ಸೇರಿದ ಅಲ್ಜೀರಿಯಾ ಪ್ರಾಂತ್ಯದಲ್ಲಿ [illegible] ಎಂಬ ಊರಿನೊಳಗೆ ಹಿಮದ ಮಳೆಯು ಜಾಸ್ತಿಯಾಗಿ [illegible] ಮಂದಿ ಅದಕ್ಕೆ ಸಿಕ್ಕಿ ಹತರಾದರೆಂದು ತಿಳಿದು ಬಂದಿದೆ.

❖❖❖

ರಷ್ಯಾ ರಾಜ್ಯಕ್ಕೆ ಹಿಂದುಸ್ಥಾನದಿಂದ ರಫ್ತಾಗಿ ಹೋಗುವ ಟೀ [illegible] ಗೆ ರಷ್ಯಾ ಸರ್ಕಾರದವರು ಸುಂಕ ಹಾಕಿದ್ದಾರೆ ಇದು ನ್ಯಾಯ ವಲ್ಲವೆಂತಲೂ ಅದನ್ನು ವಜಾಮಾಡಬೇಕೆಂತಲೂ ಇಂಗ್ಲಿಷ್ ಸರ್ಕಾರದವರು ರಷ್ಯಾ ಗವರ್ನಮೆಂಟಿಗೆ ಬರೆದಿರುವರು.

❖❖❖

ನ್ಯೂಜೀಲೆಂಡ್ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಪ್ರಸಿದ್ಧವಾದ ಕ್ರೈಸ್ಟ್ ಚರ್ಚ್ ಎಂಬ ಭಾರೀ ದೇವಾಲಯಕ್ಕೆ ಬೆಂಕಿ ಬಿದ್ದು ಅನಾಹುತವಾಯಿತು ಅದರ ಪಕ್ಕದಲ್ಲಿದ್ದ ಅಂಗಡಿ ಮಳಿಗೆಗಳೆಲ್ಲಾ ಸುಟ್ಟುಹೋದವು ಸುಮಾರು [illegible] ಲಕ್ಷ ರೂಪಾಯಿನ ಕಟ್ಟಡಗಳೂ ಸರಕುಗಳೂ ನಷ್ಟವಾಗಿರುತ್ತವೆ

❖❖❖

ರಷ್ಯಾ ರಾಜ್ಯಕ್ಕೆ ಸೇರಿದ ಒಡೆಸ್ಸಾ ಪಟ್ಟಣದಲ್ಲಿ ಜನರಲ್ ಕೌಲ್‌ಬಾರ್ಸ್ ಎಂಬವರು ಗವರ್ನರ್ ಜನರಲ್ ಎಂಬ ಅಧಿಕಾರಿಯಾಗಿರುತ್ತಾರೆ ಇವರ ಬಂಗಲೆಯನ್ನೂ ಸೇನಾನಾಯಕರ ಬಂಗಲೆಗಳನ್ನೂ ಮದ್ದಿಟ್ಟು ಹಾರಿಸಿಬಿಡಬೇಕೆಂದು ಕೆಲವರು ಫಿತೂರಿ ಮಾಡಿದ್ದರು ಸರ್ಕಾರದವರಿಗೆ ಇದರ ಸುಳಿವು ಗೊತ್ತಾದ ಒಡನೆಯೇ ಪತ್ತೆಹಚ್ಚಿ [illegible] ನಡಿಸಿ, ಈಗ ಫಿತೂರಿಗಾರರ ಪೈಕಿ ಇಪ್ಪತ್ತು ಮಂದಿಯನ್ನು ಹಿಡಿದು ಸೆರೆಮನೆಯಲ್ಲಿ ಹಾಕಿಕೊಂಡಿದ್ದಾರೆ

❖❖❖

ರಷ್ಯಾ ಜಪಾನ್ ಯುದ್ಧದಲ್ಲಿ ರಷ್ಯಾ ಸೈನ್ಯಾಧಿಪತಿಗಳು ಪೋರ್ಟ್ ಆರ್ಥರ್ ಎಂಬ ತೀರಪಟ್ಟಣವನ್ನು ಜಪಾನಿನವರಿಗೆ ಒಪ್ಪಿಸಿಕೊಟ್ಟು ಬಿಟ್ಟದ್ದಕ್ಕಾಗಿ ಆ ಉದ್ಯೋಗಸ್ಥರನ್ನೆಲ್ಲಾ ರಷ್ಯಾ ಸೈನ್ಯದ ಇಲಾಖೆ ಕೋರ್ಟಿನವರು ಹಿಡಿದು ವಿಚಾರಣೆ ಮಾಡಿದರು ಜನರಲ್ ಸ್ಟೆಸೆಲ್, ಜನರಲ್ ರೀಸ್, ಜನರಲ್ ಫಾಕ್ ಎಂಬೀ ಮೂರು ಮಂದಿ ಉದ್ಯೋಗಸ್ಥರಿಗೂ ಮರಣದಂಡನೆಯನ್ನು ವಿಧಿಸಬೇಕೆಂತಲೂ, ಜನರಲ್ ಸ್ಮಿರ್ನಾಫ್ ಎಂಬ ಉದ್ಯೋಗಸ್ಥನನ್ನು ಹತ್ತು ವರುಷಗಳ ವರೆಗೆ ಬಂದೀಖಾನೆಯಲ್ಲಿ ಇಡಬೇಕೆಂತಲೂ ಪಬ್ಲಿಕ್ ಪ್ರಾಸಿಕ್ಯೂಟರು ಕೇಳಿರುತ್ತಾರೆ

❖❖❖

[illegible] ಕೇಪಿ ಫಾರ್ಮನ್ ಎಂಬೊಬ್ಬ ಇಂಗ್ಲಿಷನು ಅಂತರಿಕ್ಷ ಮಾರ್ಗದಲ್ಲಿ ಹಾರಿಕೊಂಡು ಹೋಗುವಂಥಾ ಒಂದು ಯಂತ್ರವನ್ನು ರಚಿಸಿ, ಫ್ರಾನ್ಸಿನ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರದಲ್ಲಿ ಏಣಿ [illegible] ಬಿಟ್ಟು ಹಾರಿಸಿ, ಒಂದು ಭಾರೀ ಚಿನ್ನದ ಪದಕವನ್ನೂ ಎರಡು ಲಕ್ಷ ರೂಪಾಯಿನ [illegible] ಬಹುಮಾನ ಪಡೆದಿರುತ್ತಾನೆ, ಇದಲ್ಲದೆ ಆ ಪಂಥವ [illegible] ಏರ್ಪಡಿಸಿದ ದೊಡ್ಡ ಮನುಷ್ಯರೆಲ್ಲಾ [illegible] ಪಾರ್ಮನ್ ಎಂಬ [illegible] ಸಾಹಸ ಚಮತ್ಕಾರಾದಿಗಳನ್ನು ನೋಡಿ ತುಂಬಾ ಸಂತೋಷಪಟ್ಟು ಅತನಿಗೆ ದಿವ್ಯವಾದ ಔತಣವನ್ನು ಸಹಾ ಮಾಡಿ ಕಳುಹಿಸಿದ್ದಾರೆ

❖❖❖

[illegible] ರಾಜ್ಯದಲ್ಲಿ ದಂಗೆಕೋರರಿಗೆ ಬಿಕರೀ [illegible] ಕ್ಕೆ [illegible] ರಾಜ್ಯಕ್ಕೆ ಸೇರಿದ [illegible] ದಿಂದ ತನ್ನ ಮಾಲು ಎಂಬ [illegible] ಜನರು ಬಂದೂಕುಗಳನ್ನು ಭರ್ತಿಮಾಡಿ ಸಾಗಿಸಿಕೊಂಡು [illegible] ಎಂಬ ಬೇರೊಂದು ತೀರಪಟ್ಟಣಕ್ಕೆ ತಂದರು ಅಲ್ಲಿನ ಸರ್ಕಾರದವರು ಇದರ ಸುಳಿವನ್ನು ತಿಳಿದು ಕೂಡಲೇ ಹೋಗಿ, ಆ ಹಡಗನ್ನು ಹಿಡಿದು ಜಪ್ತಿಮಾಡಿ, ಬಂದೂಕುಗಳನ್ನೆಲ್ಲಾ ಕಿತ್ತು [illegible] ಹಡಗನ್ನು ಕ್ಯಾಂಟರ್ ಪಟ್ಟಣಕ್ಕೆ ತೆಗೆದುಕೊಂಡು ಹೋಗಿದ್ದಾರೆ ಅದರಲ್ಲಿ ೧,೪೦೦ ಬಂದೂಕುಗಳೂ ೫೦ ಸಾವಿರ ತೋಟಾಗಳೂ ಸಿಕ್ಕಿರುತ್ತವೆ ಎಂದು ಹಾಂಕಾಂಗಿನಿಂದ ತಂತೀ ವರ್ತಮಾನ ಬಂದಿದೆ

❖❖❖

ರಷ್ಯಾ ರಾಜ್ಯಾಂಗವೆನಿಸಿರುವ ಫಿನ್‌ಲೆಂಡಿನಲ್ಲಿ ಸ್ಥಳಾಧಿಕಾರಿಗಳು ತಮ್ಮ ಬಜಾನೆಯಿಂದ ರಷ್ಯಾ ರಾಜ್ಯಕ್ಕೆ ಕಾಣಿಕೆಯನ್ನು ಕೊಡದೆ, ಎಲ್ಲವನ್ನೂ ತಮ್ಮ ದೇಶದ ಕ್ಷೇಮಾಭಿವೃದ್ಧಿಗಾಗಿಯೇ ಉಪಯೋಗಿಸಿಕೊಳ್ಳಬೇಕೆಂದು ತೀರ್ಮಾನಿಸಿಕೊಂಡರು ಇದನ್ನು ರಷ್ಯಾ ಚಕ್ರವರ್ತಿಯವರು ಕೇಳಿ, ಹಾಗೆ ವಿನಿಯೋಗಿಸುವ ಭಾಗದಲ್ಲಿ ಫಿನ್‌ಲೆಂಡ್ ಸರ್ಕಾರದವರಿಗೆ ಸ್ವಾತಂತ್ರ್ಯ ಇರುವುದಿಲ್ಲವೆಂತಲೂ, ಚಕ್ರವರ್ತಿಯವರ ಅನುಜ್ಞೆಯಾಗುವ ರೀತಿಯಲ್ಲಿ ಖರ್ಚುಮಾಡಬೇಕೆಂತಲೂ ಖಂಡಿತವಾದ ಹುಕುಂ ಕೊಟ್ಟು, ಕೂಡಲೇ ಫಿನ್‌ಲೆಂಡ್ ಬಜಾನೆಯಿಂದ ರಷ್ಯಾ ಬಜಾನೆಗೆ ೧೦ ಲಕ್ಷ ರೂಪಾಯನ್ನು ಕಳುಹಿಸಿಕೊಡಬೇಕೆಂತಲೂ ಆಜ್ಞೆ ಮಾಡಿರುತ್ತಾರೆ ರಷ್ಯಾ ಸೈನ್ಯಗಳೂ ಅಲ್ಲಿಗೆ ಹೋಗಿ [illegible] ಮಾಡುತ್ತಿರುವವು

❖❖❖

ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ಕೆಲವು ಭಾಗಗಳಲ್ಲಿ ಹಿಂದಿನ ವಾರ ಸಹಿಸಲಶಕ್ಯವಾದ ಉಷ್ಣಗಾಳಿಯು ಆಕಸ್ಮಾತ್ತು ಪ್ರಾಪ್ತವಾಗಿ, ಅಡಿಲೇಡ್ ಮತ್ತು ಮೆಲ್‌ಬೋರ್ನ್ ನಗರಗಳಲ್ಲಿ ಇತರ ಕಡೆಗಳಲ್ಲಿ [illegible] ಜನರು ಬಿಸಿಲಿನ ತಾಪವನ್ನು ಸಹಿಸಲಾರದೆ ಸೊಕ್ಕಿ ಬಿದ್ದು ಪ್ರಾಣಬಿಟ್ಟರು ಈಚೆಗೆ ಬಂದಿರುವ ತಂತೀ ವರ್ತಮಾನವೇನೆಂದರೆ— ಉಷ್ಣವಾದ ಹವಾ ಪ್ರಾಪ್ತವಾಗಿದ್ದಾಗ ೧೦೦ ಕ್ಕಿಂತಲೂ ಹೆಚ್ಚಾದ ಜನರು ಮೃತಪಟ್ಟರು ವಿಕ್ಟೋರಿಯಾ ಆಧಿಪತ್ಯದ ಅನೇಕ ಭಾಗಗಳಲ್ಲಿ ಪೊದೆಗಳೂ ಬೇಲಿಗಳೂ ಹತ್ತಿಕೊಂಡು ಬಹು ಭಯಂಕರವಾಗಿ ಇತರ ಕಡೆಗಳಿಗೆ ವ್ಯಾಪಿಸುತ್ತಲಿವೆ. ನೂರಾರು ಮನೆಗಳು ಸುಟ್ಟುಹೋದವು ಬೆಂಕಿಯು ಪಟ್ಟಣಗಳಿಗೂ ವ್ಯಾಪಿಸುವಂತಿದೆ. [illegible] ಯುಗಳು ಅನೇಕವಾಗಿ ಉರಿಗೆ ಸಿಕ್ಕಿ ಹತವಾದವು ಎಂಬುದೇ

ಆರು ವರುಷಗಳ ಅನುಭವ

93 24

ಅಸ್ವಸ್ಥವಿರುವ ಕಾಲದಲ್ಲಿ ನಮ್ಮ ನೆರೆಕರೆಯವರಲ್ಲಿ ಎಷ್ಟು ಮಂದಿ ತದ್ ರೀತಿಯಲ್ಲಿ ಶ್ರಮಪಟ್ಟಿರಬಹುದೆಂಬುದನ್ನು ತಿಳಿದುಕೊಳ್ಳುವದು ಆಶ್ಚರ್ಯವಲ್ಲ ಹಾಗೆಯೇ ಅವರು ತಮ್ಮ ಸಂಕಟಗಳನ್ನು ಹ್ಯಾಗೆ ನಿವಾರಣೆಮಾಡಿಕೊಂಡರು ಎಂಬುದನ್ನು ಸಹಾ ಅರಿತುಕೊಂಡ ಪಕ್ಷದಲ್ಲಿ ಅವರು ಸಫಲವಾಗಿ ಅನುಸರಿಸಿದ ವಿಧಾನವನ್ನು ಕೈಕೊಳ್ಳಲು ನಾವು ನಿಶ್ಚಯಿಸುತ್ತೇವೆ ಹೀಗಿರುವಲ್ಲಿ ಕಲ್ಕತ್ತೆಯ ಒಬ್ಬ ಪ್ರಸಿದ್ಧ ಡಾಕ್ಟರು ನಮಗೆ ಉಪಶಮನವನ್ನು ಕೊಡುವದಾಗಿ ತಿಳಿಸುವ ಔಷಧದ ಚರಿತ್ರೆ ಕೇಳುವದು ಉತ್ತಮ. ಮಾಬರ್ನ್ ಕಂಪನಿಯ ವೈದ್ಯ ಉದ್ಯೋಗಸ್ಥರಾದ ಡಾಕ್ಟರ್ ಸಿ. ಸಿ. ಮಿತ್ರರವರು ಹೇಳುವದೇನಂದರೆ.—ನಾನು ಡೋನ್ಸ್‌ರ (ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಬೆನ್ನು ನೋವಿನ ಮೂತ್ರಕೋಶದ ಔಷಧ ಮಾತ್ರೆಗಳನ್ನು ನನ್ನ ವಿಚಾರಣೆ [illegible] ದೇಶೀಯ ರೋಗಿಗಳಿಗೆ ಕಳೆದ ೬ ವರುಷಗಳಿಂದ ಕೊಟ್ಟು ಬರುತ್ತೇನೆ ಅವುಗಳು ಬ್ರೈಟ್ಸ್ ಡಿಸೀಜ್ ಎಂಬ ಮೂತ್ರ ವ್ಯಾಧಿ, ಕಟಿವಾತ ನಿಮಿತ್ತವಾದ್ದಕ್ಕೆ ಅತ್ಯಂತ ಉಪಯೋಗಕರವಾದದ್ದೆಂದು ಕಂಡುಬಂದದೆ. ಮತ್ತು ಅಂಥಾ ವ್ಯಾಧಿಗ್ರಸ್ಥರಿಗೆ ಈ ಔಷಧವನ್ನು ಧೈರ್ಯದಿಂದ ಶಿಫಾರಸು ಮಾಡಲಿಕ್ಕೆ ಅಡ್ಡಿ ಇಲ್ಲಾ

ಮೂತ್ರನಾಡಿಗಳ ವ್ಯಾಧಿಯು ಅನೇಕಾವರ್ತಿ ತಿಳಿಯದೆ ಘಟ್ಟನೇ ಬರುತ್ತದೆ. ಅದರ ಹೇತು ಏನೆಂಬ ತಿಳಿಯುವದಿಲ್ಲ ರೋಗಿಗೆ ತಲೆನೋವು, ಮಾನಸಿಕ ದುರ್ಬಲತ್ವ, ಎದೆಗುಂದಿಸೋವು ನಿದ್ರಾಭಂಗ, ತಲೆ ತಿರುಗುವಿಕೆ, ಅನುತ್ಸಾಹ ಯಂತಾದ್ದು ತೋರುತ್ತದೆ ಇವು ಬೆನ್ನುನೋವು, ಜಲೋದರ ಮೂತ್ರ ಯಾ ವಾತೋಪದ್ರವಗಳು ಬ್ರೈಟ್ಸ್ ಡಿಸೀಜ್ ಇವುಗಳಂತೆಯೇ ಮೂತ್ರಪಿಂಡದ ಉಪದ್ರವದ ಚಿನ್ಹೆಗಳಾಗಿರುತ್ತವೆ.

ಈ ಮಾತ್ರೆಗಳು ಅವರ ಮೂತ್ರೋತ್ಪಾಟನೆಯನ್ನು ಮಾಡಿ ಗುಣ ಮಾಡುತ್ತವೆ

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ ಸೀಸೆ ಒಂದಕ್ಕೆ ರೂ ೨, ಅಥವಾ ೬ ಸೀಸೆಗಳಿಗೆ ರೂ ೧೦-೮-೦, ಅಥವಾ ಮುಂಬಾಯಿಯಲ್ಲಿಯ ಡೋನ್ಸ್‌ರ ಔಷಧಗಳ ಕೋಠಿಯಿಂದಾ ನೇರಾ ತರಿಸಿಕೊಳಬಹುದು. ಪಿ ಒ. ಬಾಕ್ಸ್ ನಂ ೨೦, ಮುಂಬಾಯಿ

ಕನ್ನಡದಲ್ಲಿ ಇದುವರೆಗೂ ಇಂಥಾ ಪುಸ್ತಕವು ಮುದ್ರಿಸಿಲ್ಲವು!!!

ರಾಬಿನ್‌ಸನ್ ಕ್ರೂಸೋ

ಇವನ ಸಾಹಸ ಕಾರ್ಯಗಳು!!!

136-9

ಕ್ರೌನ್ ಅಷ್ಟಪತ್ರ, ಪುಟಗಳು [illegible], ಚಿತ್ರಗಳು ೪೩.

ಇಂಗ್ಲೆಂಡಿನ ಪ್ರಸಿದ್ಧ ಚಿತ್ರಕಾರರಾದ ಮಿ ಸ್ಮಿತ್‌ರವರು ಈ ಪುಸ್ತಕಕ್ಕೆ ಬೇಕಾದ ಚಿತ್ರಗಳನ್ನು ಕಳುಹಿಸಿ ಕೊಟ್ಟಿರುವುದಲ್ಲದೆ, ಈ ಪುಸ್ತಕದ ವಿಷಯವಾಗಿ ಜ್ವಲಿನಲ್ಲಿರುವ ವೈದಿಯೊಬ್ಬನು « ನಾನು ಯೌವನಗಲಿ . ರಾಬಿನ್‌ಸನ್ ಕ್ರೂಸೋ ಕಥೆಯನ್ನು ಓದುವುದರಿಂದ ಬಹಳ ಸುಖಿಯಾಗುವೆನು ” ಎಂದು ಹೇಳಿದ್ದಾಗಿ ತಿಳಿಸುವರು.

ಕ್ರಯ: ಪಾಲ್ಕಿ [illegible] – ೧ ರೂಪಾಯಿ [illegible]

ವಿಳಾಸ – ಬಿ ಜನಾರ್ದನ ರಾವ್ ಬಿ ಎ ಮೈಸೂರು

ಇಲ್ಲಿ ನೋಡಿ.

9 5

ತುಮಕೂರು ಜಿಲ್ಲಾ ಇಲಾಖೆಯಲ್ಲಿ ಯೂರೋಪಿಯನ್ ಮೇಸ್ತ್ರಿಯವರಿಂದ ಉತ್ತಮ ತರದ ಸಾಬೂನಿನ ಬಿಲ್ಲೆಗಳು ಅತಿ ಶ್ರೇಷ್ಠವಾದ ಉಪ್ಪು ದಾಳದಿಂದ ತಯಾರಾಗುತ್ತವೆ

ಕ್ರಯ – [illegible]

[illegible] ಬಿಲ್ಲೆಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ [illegible] ರಂತೆ ಡಿಸ್ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ – ಮೇನೇಜರ್

ಹಾಸನದ ಬೇಪಿ ಕಾರ್ಖಾನೆ, ಜಿಲ್ಲಾ ಇಲಾಖೆ, ತುಮಕೂರು

ಈಗಲೇ ಸೀಮೆಯಿಂದ ಬಂದಿದೆ.

147 16

೫,೦೦೦ ಡಜನ್ ಬೋಸಿ ದೊಡ್ಡ ಮ ಸುಪೀರಿಯರ್ ಉಲನ್ ದಾರಗಳು. ಬಿಳೀದರಿ—ಪಾಕ್ರ ಇದೆ—ಚುರಿ, ಕಪ್ಪು ಕ್ರಯ

೧ ಪೌಂಡಿಗಾಗುವ ಉಲನ್ ದಾರಕ್ಕೆ	೫—೪—೦
೧೦ ಪೌಂಡಿನಾಗುವ ಬಂಡಲ್‌ಗೆ	೩—೪—೦
ಕೊಕ್ಕೆ ಸೂಜಿ ೧ ಕ್ಕೆ	೦—೧—೬
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೦

ಎರಡು ಕಡೆಯಲ್ಲಿ ಬರೆದಿರುವ ಪೋಸ್ಟ್ ಕಾರ್ಡ್ ೧೦೦ ಕ್ಕೆ [illegible].

ಒಂದಾಣೆ ಸ್ಟಾಂಪು ಕಳುಹಿಸಿ ನೇತ್ರಾನಂದಕರವಾದ ೧೯೦೪ ನೆ ಇಸವಿಯ ಕ್ಯಾಲೆಂಡರ್ ಪಡೆಯಿರಿ, ವಿಳಾಸ —

ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ನರಗಳ ಅಪಾರವಾದ ದುರ್ಬಲವನ್ನು ಪೆರೂನಾವು ಅದ್ಭುತವಾದ ರೀತಿಯಲ್ಲಿ ನಿವಾರಣೆ ಮಾಡಿರುತ್ತದೆ.

ಶರೀರಗತವಾದ ಶೈತ್ಯನಿವಾರಣೆಗೆ ಪೆರೂನಾ ಅವಶ್ಯವಾಗಿದೆ.

ನರಗಳ ದುರ್ಬಲವನ್ನು ವಾಸಿಮಾಡುವುದರಲ್ಲಿ ಇದು ವಿಶೇಷ ಪ್ರಖ್ಯಾತವಾಗಿದೆ. ಹೆಚ್ಚಾದ ಕಷ್ಟ ಕೆಲಸದಿಂದಲೂ, ಮನಸ್ಸನ್ನು ವಿಶೇಷವಾಗಿ ಕಷ್ಟಪಡಿಸುವುದರಿಂದಲೂ, ಬೇಸಿಗೆಯ ಅಪಾರವಾದ ಉಷ್ಣದ ದೆಸೆಯಿಂದಲೂ ಶರೀರದ ಸರ್ವಶಕ್ತಿಯೂ ಕುಗ್ಗಿದ್ದರೆ ಪೆರೂನಾವು ಇದನ್ನು ಸಂಪೂರ್ಣವಾಗಿ ನಿವಾರಿಸಿ ಗುಣಪಡಿಸಿ, ಶಕ್ತಿಯನ್ನು ಕೊಟ್ಟು ಪುಷ್ಟಿಯನ್ನುಂಟುಮಾಡುತ್ತದೆ.

ಬೇಸಿಗೆಯು ದೀರ್ಘಕಾಲವಿರುವಂಥಾ ದೇಶಗಳಲ್ಲಿ ಜನರು ಧಗೆಯ ತಾಪವನ್ನು ಸಹಿಸಲಾರದೆ [illegible] ಅಪಾರವಾದ ಧಗೆಯಿಂದ ಸಹಿಸಲಸಾಧ್ಯವಾದ ತಾಪದಿಂದ ಹುಟ್ಟುವ ಕ್ಷಯಮೊದಲಾದ ರೋಗಗಳಲ್ಲಿ ಅನೇಕರ ಶರೀರಧರ್ಮವು ಆ ಉಷ್ಣವನ್ನು ಸಹಿಸಿಕೊಳ್ಳಲು ಶಕ್ತಿಯುಳ್ಳದ್ದಾಗಿರುವುದಿಲ್ಲ. ಇದರಿಂದಲೇ ಬಹಳ ಕಾಯಿಲೆಗಳು ಉಂಟಾಗುತ್ತವೆ.

ಹೊಟ್ಟೆಗೆ [illegible] ಅಜೀರ್ಣವಾಗಿರುವುದು [illegible] ಉಷ್ಣಕಾಲದಲ್ಲಿ [illegible] ರೋಗಗಳಿಂದ ತಿಳಿಯಬಹುದು.

ಆಹಾರ ಅರಗುವುದರಲ್ಲಿ ವ್ಯತ್ಯಾಸವಾದರೆ ಆಹಾರದ ಮುಖ್ಯ ಭಾಗಗಳನ್ನು ಶರೀರವು ಹೀರಿಕೊಳ್ಳುವುದಿಲ್ಲ. ಇದರಿಂದ ಶರೀರಕ್ಕೆ ಪುಷ್ಟಿ ಕಡಮೆಯಾಗುತ್ತದೆ.

ಅಜೀರ್ಣದಿಂದ ದುರ್ಬಲವು.

ದುರ್ಬಲ, ಸೋಮಾರಿತನ, ಜಿಗುಪ್ಸೆ, ಬುದ್ಧಿಮಾಂದ್ಯ, ಮಾಂಸಖಂಡಗಳ ಬಲಹೀನತೆ, ನರಗಳ ದುರ್ಬಲ, ಇವೆಲ್ಲಾ ಕ್ರಮಕ್ರಮವಾಗಿ ಪ್ರಾಪ್ತವಾಗುವವು. ಇಂಥಾ ಸಮಯದಲ್ಲಿ ಜೀರ್ಣಶಕ್ತಿಯನ್ನು ಬಲವಾಗಿ ಮಾಡಿಕೊಳ್ಳುವುದಕ್ಕೆ ಪರಿಹಾರವನ್ನು ನೋಡಿ ಮಾಡಿಕೊಳ್ಳಬೇಕು. ಪೆರೂನಾ ಸೇವನೆಯು ಜೀರ್ಣಕೋಶಗಳನ್ನು ಕ್ರಮವಾಗಿ ಸುತ್ತಿ [illegible] ಸಂದರ್ಭಗಳಲ್ಲಿ [illegible] ಅನೇಕರಿಗೆ ಪೆರೂನಾ [illegible] ಆರೋಗ್ಯವನ್ನು ಕೊಟ್ಟಿದೆ.

ಆದರೆ ಪೆರೂನಾದಲ್ಲಿ ಈ ಗುಣವಿರುವುದೇನೂ ಆಶ್ಚರ್ಯವಲ್ಲ. ಜೀರ್ಣಕೋಶಗಳಿಗೂ ಅಂಗಗಳ ನಿತ್ಯ ಉಪಯೋಗಕ್ಕೂ [illegible] ನರಗಳ ಮೂಲಸ್ಥಾನಗಳನ್ನು ಶಕ್ತಿಪಡಿಸುವುದು.

ಪೆರೂನಾವಿನ ಉತ್ತಮೋತ್ತಮವಾದ ಗುಣ

ಇದರ ಕೆಲಸ. ಇದರಿಂದ ನರಗಳಲ್ಲಿ ಶಕ್ತಿಯು ಯಥಾಪ್ರಕಾರ ಕಾಣಿಸಿಕೊಳ್ಳುತ್ತಿದೆ. ಆ ದೇಹದ ಅಂಗಗಳೆಲ್ಲಾ ತಮ್ಮ ತಮ್ಮ ಕಾರ್ಯವನ್ನು ಕ್ರಮವಾಗಿ ಮಾಡಿಕೊಳ್ಳುತ್ತಾ ಬರುವುವು. ಆದರೆ ನಿಮಗೆ ಶರೀರಧರ್ಮದಲ್ಲಿ ಮೇಲ್ಕಂಡಂಥಾ ಕಾಯಿಲೆಗಳೇನಾದರೂ ಇದ್ದರೆ ಒಂದು ಬಾಟ್ಲು ಪೆರೂನಾ ತರಿಸಿಕೊಂಡು ಸೇವಿಸಿ ನೋಡಿರಿ. ಒಂದು ಬಾಟ್ಲು ಸೇವಿಸುವುದರೊಳಗಾಗಿ ಇದರಿಂದ ನಿಮಗೆ ಫಲವುಂಟಾಗುವುದೇ ಇಲ್ಲವೋ ಅನುಭವಕ್ಕೆ ಬರುತ್ತದೆ.

ಆದರಿಂದ ವಿಶೇಷ ಪ್ರಯೋಜನವಾಗಿದೆ ಎಂದು ಅ ಜನರು ವಿವರಿಸಿ ನಮ್ಮಲ್ಲಿಗೆ ಕಾಗದಗಳನ್ನು ಬರೆದಿರುತ್ತಾರೆ. ಅವುಗಳನ್ನು ಓದಿದಾಗ ಬರೆದವರಿಗೆ ಈ ಔಷಧದಿಂದ ಎಷ್ಟು ಪ್ರಯೋಜನವು ಸಂಭವಿಸಿತು ಎಂಬುದು ತಿಳಿಯುತ್ತದೆ. ಕಷ್ಟವನ್ನು ನಿವಾರಣೆಮಾಡುವುದರಲ್ಲಿ ಆರೋಗ್ಯವನ್ನು ಕೊಡುವುದರಲ್ಲೂ ಪೆರೂನಾವು ಪ್ರಖ್ಯಾತಿ ಹೊಂದಿದೆ. ದೇಹದ ಅಂಗಾಂಗಗಳನ್ನು ತೃಪ್ತಿ ತನ್ನ ಕೆಲಸವನ್ನು ಸುಸ್ಥಿರವಾಗಿ ಮಾಡುತ್ತದೋ ವಿವರಿಸಲಾಗಿದೆ.

ಮಿ ಪಿ ಬ್ರೂಕ್, ೩೫ ಮೂರನೆ ಬೀದಿ, ವಿನ್ನಿಪೆಗ್, ಕೆನಡ.

"ನನ್ನ ಗುಮಾಸ್ತೆ ಕೆಲಸದಲ್ಲಿ ನನಗೆ ತುಂಬಾ ಪ್ರಯಾಸವಾಗಿ ಒಂದು ವರುಷದ ಕೆಳಗೆ ಬಹಳ ನಿಶ್ಶಕ್ತಿಯಾಯಿತು. ನನ್ನ ಆರೋಗ್ಯವು ನನಗೆ ಒಳ್ಳೇದಾಗಿರಲಿಲ್ಲ. ನನ್ನ ನರಗಳು ತುಂಬಾ ಬಲಹೀನವಾಗಿ ಸ್ವಲ್ಪದರಲ್ಲಿ ಕೋಪ ಬರುತ್ತಿತ್ತು [illegible] ಎಂದು ಎಷ್ಟೋ ಸಾರಿ ನನ್ನ ಕೆಲಸ ನಿಲ್ಲಿಸಬೇಕಾಗಿದ್ದಿತು. ೫೦-೧೫

ನಾನು ಕ್ರಮೇಣ ದುರ್ಬಲನಾಗುತ್ತಾ ಬಂದೆನು. ಕೆಲಸ ಬಹಳ ವೇಳೆ ನನ್ನ ಕಣ್ಣು ಮಂಜಾಗಿ ಹೋಯಿತು. ತರುವಾಯ ನಾನು ಕೆಲಸವನ್ನು ಮಾಡಲಾರದೆ ಬಿದ್ದುಕೊಂಡೆನು. ನಾಸಿಗೆ ಬಿಟ್ಟೇಳಲಿಲ್ಲ. ನನ್ನ ಎದೆ ಬಡಿದುಕೊಳ್ಳುವುದು, ಆರಂಭವಾಯಿತು.

ಒಬ್ಬ ವೈದ್ಯನ ಕೈಲಿ ಕೆಲವು ವಾರಗಳ ತನಕ ಔಷಧ ತೆಗೆದುಕೊಂಡೆನು. ಆದರೂ ನನಗೆ ಏನೇ ಸಮಾಧಾನವಾಗಲಿಲ್ಲ. [illegible] ಚಿಕಿತ್ಸೆ ಮಾಡಲಾರದೆ ಹೋದದ್ದನ್ನು ನೋಡಿ, ನಾನೇ ಸ್ವತ ಔಷಧವನ್ನು ಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟೆನು. ಪತ್ರಿಕೆಗಳಲ್ಲಿ ಪ್ರಕಟವಾದ ಬಲಕಾರಿಗಳೆಂಬ ಹಲವು ಔಷಧಗಳನ್ನು ಸೇವಿಸಿದೆನು. ಅವುಗಳಿಂದ ನನಗೆ ಪ್ರಯೋಜನವೇನೂ ಕಾಣಲಿಲ್ಲ.

ತರುವಾಯ ಪೆರೂನಾವನ್ನು ಸೇವಿಸಿ ನೋಡೋಣವೆಂದು ಪ್ರಾರಂಭಿಸಿದೆನು. ಅದರ ಒಂದು ವಾರ ತೆಗೆದುಕೊಳ್ಳುವಷ್ಟರೊಳಗೆ ನನ್ನ ದೇಹಸ್ಥಿತಿಯು ಚೆನ್ನಾಗುವಂತೆ ನನಗೆ ತೋರಿತು. ಇನ್ನೂ ಕೆಲವು ವಾರಗಳು ಅದನ್ನು ಸೇವಿಸಿ [illegible] ನನ್ನ ಹೊಟ್ಟೆ [illegible] ನನ್ನ ದುಸ್ಥಿತಿಯು ಚೆನ್ನಾಯಿತು. [illegible] ನನ್ನ ಕೆಲಸದ ವೇಳೆ ಹೋಗಲು ಶಕ್ತನಾದೆನು.

ನಾನು ನಿರೀಕ್ಷಿಸಿಕೊಂಡಿದ್ದಂತೆ ನನಗೆ ಸಂಪೂರ್ಣ ಗುಣವಾಯಿತು. [illegible] ಗಳ ವೇಳೆ ನಾನು ಆಫೀಸಿಗೆ ನನ್ನ ಗುಮಾಸ್ತೆ ಕೆಲಸದ ವೇಳೆ ಹಾಜರಾದೆನು. [illegible] ಖಂಡಿತವಾಗಿ ನನ್ನ ವಿಷಯದಲ್ಲಿ ಅದ್ಭುತವಾದ ಔಷಧವಾಗಿ ಪರಿಣಮಿಸಿತು. [illegible] ಅಪಾರ ಕೆಲಸದಿಂದ ಶಕ್ತಿಯನ್ನೆಲ್ಲಾ ಕಳೆದುಕೊಂಡಿರುವಂಥವರು ಇದನ್ನು ಸೇವಿಸಿ ಬುದ್ಧಿಶಕ್ತಿಯೂ ಅವರಿಗೆ ತಿಳಿಯ ಶಕ್ತಿ ಪುಷ್ಟಿಗಳನ್ನು ಪಡೆಯಬಹುದು."

ಯುದ್ಧದ ಬಾತ್ಮೀದಾರನ ಅಸಿಸ್ಟೆಂಟು ಪೆರೂನಾವನ್ನು ಹೊಗಳುತ್ತಾನೆ

ಜಪಾನಿನಲ್ಲಿ ಯುದ್ಧ ನಡೆಯುತ್ತಿದ್ದಾಗ ಅಲ್ಲಿನ ಬಾತ್ಮೀದಾರನ ಅಸಿಸ್ಟೆಂಟ್ ಮಿ ಎಚ್ ಬಿ ಮ್ಯಾಕ್ಲೀ, ಕೇರಾಫ್ ಬಾಕ್ಸ್ ನಂ [illegible] ಮಾಂಟ್ರಿಯಲ್, ಕ್ಯಾನಡಾ. ಈತನು ಬರೆಯುತ್ತಾನೆ. —

"ಬಹಳ ಚಳಿ ಅಥವಾ ಬಹಳ ಉಷ್ಣವಾದ ದೇಶಗಳಲ್ಲಿ ಸಂಚಾರ ಮಾಡುವಾಗ ಒಂದು ಬಾಟ್ಲು ಪೆರೂನಾ ತೆಗೆದುಕೊಂಡು ಹೋದರೆ ಅದು ಎಂಥಾ ಸ್ನೇಹ ವಾತ್ಸಲ್ಯದ ಸ್ನೇಹಿತನಂತೆ ಪ್ರಯೋಜನ ನಾದೀತು. [illegible] ನಾನು ತೆಗೆದುಕೊಂಡು ಹೋದ ಪ ದಾರ್ಥಗಳ ಪೈಕಿ ಇದನ್ನು ತುಂಬಾ ಬೆಲೆಗೆ ಕೊಟ್ಟೆನೆ ವಿಶೇಷ ಉಷ್ಣವಾಗಿದ್ದರೆ ಪೆರೂನಾ ಶಮನ ಮಾಡುತ್ತದೆ, ಅಥವಾ ಶೀತ ಬಳಲಿಕೆಯಾಗಿ ಕೆಮ್ಮಿಗನೆ ಉಂಟಾಗಿದ್ದರೆ ಅದನ್ನು ಕೂಡ ಪೆರೂನಾ ನಿವಾರಿಸುತ್ತದೆ.

ಇಲ್ಲದೆ, ನಿದ್ರೆ ಬಾರದಿದ್ದರೂ, ಆಹಾರ ಜೀರ್ಣವಾಗದಿದ್ದರೂ ಪೆರೂನಾವನ್ನು ಕ್ರಮವಾಗಿ ಸೇವಿಸಿ, ದೇಹದೊಳಗಿನ ಭಾಗಗಳನ್ನು ಬಲಪಡಿಸುತ್ತದೆ. ನಾನು ಅದನ್ನು ನಿಂಗಳು ಬಗ್ಗೆ ಯಾಗ ಸೇವನೆಮಾಡಿದೆನು. ಅದ್ದರಿಂದ ಅದು ಅಷ್ಟು ಕಾಲದಲ್ಲಿ ತುಂಬಾ ಉಪಕಾರವಾಯಿತು."

[illegible] ದೆಂದು ಕೇಳಿ ನನಗೆ ಪೆರೂನಾವನ್ನು ಎಲ್ಲರೂ ತೆಗೆದುಕೊಳ್ಳಬಹುದೆಂದು [illegible] ನಾನು ಹೇಳುತ್ತೇನೆ.

ದೇಹಸ್ಥಿತಿ ಎಷ್ಟೇ ಕೆಟ್ಟಿದ್ದರೂ ಪೆರೂನಾ ಗುಣಮಾಡಿ ಆರೋಗ್ಯ ಕೊಡಬಲ್ಲದು

ಮಿಸೆಸ್ ಜೆ ಕೋಲ್ಸ್, [illegible] ನೋತ್ರೆ ಡೇಮ್ ಬೀದಿ ಪೈನ್ ಮಾಂಟ್ರಿಯಲ್, ಕ್ಯಾನಡಾ [illegible] ಬರೆಯುತ್ತಾರೆ. —

ಕಳೆದ ಚಳಿಗಾಲದಲ್ಲಿ ನನಗೆ ತುಂಬಾ ಶೀತವಾಯಿತು. ಅದು ನನ್ನ ನರಗಳಿಗೆಲ್ಲಾ ವ್ಯಾಪಿಸಿದ್ದರಿಂದ ನಾನು ನನ್ನ ಕೆಲಸಗಳನ್ನು ಮಾಡಲಾಗದೆ [illegible] ಬಿದ್ದುಕೊಂಡಿದ್ದೆನು ಒಬ್ಬ ಸ್ನೇಹಿತನು ಒಂದು ಪೆರೂನಾ ಬಾಟ್ಲು ತೆಗೆದುಕೊಳ್ಳಿ ಎಂದು ಹೇಳಿದನು. ಅದರಂತೆ ನಾನು ಒಂದು ಬಾಟ್ಲು ತರಿಸಿ ಸೇವಿಸಿದೆನು. ಆರಂಭದಲ್ಲೇ ಗುಣಕಾಣಿಸಿತು. ಬಳಿಕ ಇನ್ನೂ ನಾನು ಮೂರು ಬಾಟ್ಲು ತೆಗೆದುಕೊಂಡದ್ದರಿಂದ ಈಗ ನನಗೆ ಪೂರ್ಣವಾದ ಆರೋಗ್ಯವಾಗಿದೆ. [illegible] ಕೆಟ್ಟಿದ್ದರೂ [illegible] ಪೆರೂನಾ ಸೇವಿಸುವುದರಿಂದ ಒಳ್ಳೆ ಆರೋಗ್ಯ ಉಂಟಾಗುವದು."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ. ಇಂಗ್ಲೀಷು ತೆಲುಗು ಅಥವಾ ತಮಿಳು ಭಾಷೆಯಲ್ಲಿ ಬರೆದರೆ ಕಳುಹಿಸುತ್ತೇವೆ.

ವಿಳಾಸ —ಈ ಔಷಧ ಸಿಕ್ಕುವ ಸ್ಥಳಗಳು—

(೧) ಹಿಚ್‌ಕಾಕ್ ಅಂಡ್ ಸನ್ಸ್ ಬೆಂಗಳೂರು ಅಥವಾ

(೨) ಇಂಗ್ಲಿಷ್ ಡ್ರಗ್ ಕಂಪೆನಿ. ಕ್ಲಾಕ್ ಮಿಂಟ್ ಬೀದಿ ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್ ಕಾಲರಾ ಸ್ಥಿತಿ

೨೪—೧—೧೯೦೮ ರಿಂದ ೩೧—೧—೧೯೦೮ ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	37	21	0	0
ಮೈಸೂರು ,,	32	26	0	0
ಬೆಂಗಳೂರು ಡಿಸ್ಟ್ರಿಕ್ಟ್	*	1	0	0
ಮೈಸೂರು ,,	62	45	0	0
ಕೋಲಾರ್ ,,	63	46	10	6
ಕೋಲಾರ್ ಚಿನ್ನದ ಗಣಿಗಳು	19	13	0	0
ತುಮಕೂರು ಡಿಸ್ಟ್ರಿಕ್ಟ್	7	1	0	0
ಹಾಸನ ,,	11	9	8	7
ಚಿತ್ರದುರ್ಗ ,,	7	10	0	0
ಕಡೂರ್ ,,	27	11	0	0
ಶಿವಮೊಗ್ಗ ,,	*	*	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	265	198	18	13

ಶಾಲಿವಾಹನ ೧೮೨೯ ವರುಷಂಗಳಿಂ ೧೯೬೪ನೇ ಪ್ಲವಂಗನಾಮ ಸಂವತ್ಸರದ ಮಾಘ ಶುದ್ಧ ದ್ವಾದಶಿ ಗುರುವಾರದಿಂದ ಮಾಘ ಬಹುಳ ಬಿದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಫೆಬ್ರವರಿ.

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಡಿ ಕುಂಭ ಮಾಸ
13	ಗುರು	,,	ದ್ವಾದಶಿ	60 0	ಪುಷ್ಯ	33 30	೧
14	ಶುಕ್ರ	*	ದ್ವಾದಶಿ	3 40	ಆಶ್ಲೇಷ	39 10	3
15	ಶನಿ	¶	ತ್ರಯೋದಶಿ	5 50	ಮಘ	11 48	4
16	ರವಿ		ಚತುರ್ದಶಿ	11 15	ಪುಬ್ಬ	52 12	5
17	ಚಂದ್ರ		ಪೌರ್ಣಮಿ	16 29	ಉತ್ತರ	55 32	6
18	ಕುಜ	†	ಪಾಡ್ಯಮಿ	21 5	ಹಸ್ತ	60 0	7
19	ಬುಧ	‡	ಬಿದಿಗೆ	21-49	ಹಸ್ತ	4-4	8

,, ವೈಷ್ಣವ ಏಕಾದಶಿ, ಹರಿವಾಸರ. * ಪ್ರದೋಷ ¶ ತ್ರಿನೇತ್ರೇಶ್ವರ ಸ್ವಾಮಿ ರಥ, ತೊಂಡನೂರು ಗೋಪಾಲಕೃಷ್ಣಸ್ವಾಮಿ ರಥ . ಪ್ರತಿಪತ್ತಿಥಿ, ವ್ಯಾಸಪೂರ್ಣಿಮಾ → ಶೂನ್ಯತಿಥಿ ‡ ಶರೀಗೊಟ್ಟದ ಶ್ರೀನಿವಾಸಸ್ವಾಮಿ ರಥ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	ರೂ	೧೩ ೦ ೦	೧೨ ೬-೦
ಕಂಬಳಿತಿ ಅಕ್ಕಿ ,, ,,		೧೩ ೮-೦	೧೩ ೮-೦
,, [illegible]		೧೩ ೦ ೦	೧೩ ೬ ೦
ಜುವಾರ್ಸಿ ಅಕ್ಕಿ		೧೧ ೦ ೦	೧೩-೧೨-೦
ಸಣ್ಣಕ್ಕಿ ತವಲ್		೧೫-೦ ೦	೧೪ ೦-೦
,, ದಪ್ಪ		೧೫ ೦ ೦	೧೫-೦ ೦
ತೊಗರಿ ಬೇಳೆ ಪಲ್ಲ ೧ಕ್ಕೆ		೧೩-೮-೦	೧೬ ೦ ೦
,, ಮಾಮೂಲು		೧೨ ೮ ೦	೬ ೦-೦
ಕಡಲೆ ಬೇಳೆ ಪಲ್ಲ ೧ಕ್ಕೆ		೭ ೪ ೦	೯ ೮ ೦
ಕಾಡಬ್ಯಾಗಿ		೬ ೦ ೦	೭ ೬ ೦
ಜೋಳ		೯ ೦ ೦	೬ ೮ ೦
ಹುರುಳಿ ಪಲ್ಲ ೧ಕ್ಕೆ		೧೦ ೮ ೦	೧೧ ೦ ೦
ಬೆಲ್ಲ [illegible]		೮-೧೬ ೦	೮ ೦ ೦
ಗೋಧಿ		೧೦ ೮ ೦	೧೦ ೮ ೦
ಉದ್ದು		೧೩ ೦ ೦	೧೨ ೮-೦
ಕಡಲೆ		೧೬-೮-೦	೧೩-೦ ೦
ಎಳ್ಳು [illegible]		೨೬ ೮ ೦	೨೩-೮ ೦
ಹುರುಳಿ		೫೬ ೮-೦	೬-೦-೦
ಹರಳು [illegible]		೧೨ ೦ ೦	೧೨-೦ ೦
ಸೀಗೇಕಾಯಿ ಮಣ ೧ಕ್ಕೆ		೨ ೮ ೦	೦ ೧೨ ೦
ಮೆಣಸಿನಕಾಯಿ		೨ ೮ ೦	೨-೮-೦
ಧನಿಯಾ		೨ ೬-೦	೨ ೬ ೦
ಬೆಲ್ಲ ದೊಡ್ಡ ಅಚ್ಚು		೫ ೦ ೦	೧೯ ೦
ಒಣಕೊಬ್ಬರಿ ಮಣ ೧ಕ್ಕೆ		೬-೬ ೦	೬ ೬ ೦
ಕರಿಮೆಣಸು ,,		೬ ೧೨ ೦	೬ ೬
ಕೊತ್ತುಂಬರಿ ಪಲ್ಲ ೧ಕ್ಕೆ		೫-೦-೦	೬ ೦ ೦
ಉಪ್ಪು ,,		೫ ೦-೦	೫ ೮ ೦
ಹುಣಸೇ ಹಣ್ಣು		೨ ೮-೦	೨ ೦ ೦
,, ಹಳೇದು		೧-೮	೧ ೮
ತುಪ್ಪ ಮಣ ೧ಕ್ಕೆ		೧೩ ೦ ೦	೧೬ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೬ ೧೫-೦	೬ ೦
ತೆಂಗಿನಕಾಯಿ ೧೦೦ಕ್ಕೆ		೩ ೮-೦	೩ ೦
ಅಡಿಕೆ ಕಾಯಿ ಮಣ ೧ಕ್ಕೆ		೦-೦-೦	೦ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೦-೨-೦	೦-೦-೨-
ಚಿನ್ನ (ಪೌನ್) ಕಂಪ್ರ		೧೫ ೩-೦	೧೫ ೫
,, ,, ಪಸಿಮೆ		೧೫-೧೦-೦	೧೫ ೩
,, ,, ಗಟ್ಟಿ ತೊಲ ೧ಕ್ಕೆ		೨೩-೦-೨-೦	೨೬-೦-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೭೫-೦-೦	೭೩-೦

Printed and Published by the Rev E W Thompson, M A Proprietor and Manager, Wesleyan Mission Press, Mysore 13/2/1908

REGISTERED
M. 30

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಾಯು ೧ ಮುದ್ರೆ. ಕ್ರಾಯು ೧ ಮುದ್ರೆ.

ಸಂಪುಟ ೨೧ ಮೈಸೂರು—ಸನ್ ೧೯೦೮ ನೇ ಇಸವಿ ಫೆಬ್ರುವರಿ ತಾರೀಖು ೨೦ ನೇ ಗುರುವಾರ. ಸಂಚಿಕೆ ೩೮

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

27 52

ಮಸಿಕೊಳ್ಳಲು ತ್ವರಿತ್ಯೆಯು [illegible] ಅಮೃತಾಂಜನ [illegible] ಸರ್ವಾಂಗರಕ್ಷ [illegible] ತಲೆನೋವು, [illegible] ವಾತ ಸಂಧಿವಾತ ಪಕ್ಷವಾತ [illegible] ಗಂಟು [illegible] ಉತ್ತಮ [illegible]

ಈ ಕಂಪನಿಯವರು [illegible] ಕ್ಯಾಟಲಾಗ [illegible] ಕೆಳಗಿನ ವಿಳಾಸಕ್ಕೆ ಬರೆಯಿರಿ [illegible]

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೧—೮—೦ ಪೋಸ್ಟು ಖರ್ಚು ೦—೪—೦

ಗಜಕರ್ಣದ ಮುಲಾಮು.

[illegible] ಇದರಿಂದ ಚರ್ಮಕ್ಕೆ [illegible] ಡಬ್ಬಿ ಒಂದಕ್ಕೆ ಕಿಮ್ಮತ್ತು ೦—೬—೦ ಪೋಸ್ಟು ಖರ್ಚು ೦—೩—೦

ದಂತಮಂಜನ — [illegible] ಹಲ್ಲುಗಳು [illegible] ಡಬ್ಬಿ ಒಂದಕ್ಕೆ ೦—೩—೦ ಪೋಸ್ಟು ಖರ್ಚು ೦—೩—೦

ವಜ್ರಗುಟಿಕೆ — [illegible] ಬಾಟ್ಲಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೩—೦

ಕೇಶವರ್ಧಿನಿ — [illegible] ಬಾಟ್ಲಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೩—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬೭ ಓಕ್ ಲೇನ್, [illegible], ಮುಂಬಯಿ.

ಟೆಲಿಗ್ರಾಫ ಅಡ್ರೆಸ್ಸು—'ಅಮೃತಾಂಜನ,' ಮುಂಬಯಿ.

ಕಾರ್ಡ್ ಸೈಜು ೩ × ೩½

ಫೋಟೋ ತೆಗೆಯುವ

ಫೋಟೋ ಕ್ಯಾಮೆರಾ.

84 27

ಬೆಲೆ ಪತ್ರ ಮೂರು ರೂಪಾಯಿ

ಇದರಿಂದ [illegible] ಮನುಷ್ಯನ [illegible] ತೆಗೆಯುವದಕ್ಕೆ ಬರುತ್ತದೆ [illegible] ಮತ್ತು [illegible] ಇದರಲ್ಲಿ [illegible] ಕ್ಯಾಮರಾದ [illegible] ಕೊಳ್ಳುವವರಿಗೆ ನಾವು [illegible] ರೂಪಾಯಿ ಮಾತ್ರ ಇರುವದು [illegible]

[illegible]

[illegible] ಮುಂಬಯಿ

ಜ್ವರಹರಿ 41-16

ಇದು ಸಾಧಾರಣ ಜ್ವರ, [illegible] ಜ್ವರ, ಪಿತ್ತಜ್ವರ, [illegible] ಜ್ವರಗಳನ್ನು [illegible]

ಚಿತ್ರದುರ್ಗದ [illegible] ವೆಂಕಟಪತಿ [illegible] ನಿಮ್ಮ ಔಷಧದಿಂದ [illegible] ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಾಯು [illegible]

****

ಓಮಮ್ ಕರ್ಪೂರ

Omum Carpur

ಈ ಔಷಧವು ಅಜೀರ್ಣ [illegible] ಹೊಟ್ಟೆಶೂಲೆ [illegible] ಮಕ್ಕಳಿಗೆ [illegible]

ಕಡಪದ ಅಸಿಸ್ಟೆಂಟ್ ಸರ್ಜನ್ [illegible] ಅಜೀರ್ಣ [illegible] ಈ ಔಷಧ [illegible]

ಈ ಎರಡು ಔಷಧಗಳೂ [illegible] ಕೆಳಗಿನ ವಿಳಾಸದಲ್ಲಿ ಸಿಕ್ಕುತ್ತವೆ [illegible]

[illegible] ಕೆಮಿಸ್ಟ್ [illegible]

ವೈದ್ಯ [illegible] ಪಂಡಿತರ ಸಿದ್ಧೌಷಧಗಳು 161

೧ ಲೋಕಾಮಯಹರ ಕಸ್ತೂರಿ ಮಾತ್ರೆ —[illegible]



[illegible] ತಯಾರಿಸಿದೆ

[illegible] ಜ್ವರ, [illegible] ಅಜೀರ್ಣ, ಅಗ್ನಿಮಾಂದ್ಯ, [illegible] ರೋಗಗಳಿಗೆ [illegible]

[illegible]

ಎರಡು ಮಾತ್ರೆಯುಳ್ಳ [illegible] ಆಣೆ, [illegible] ವರೆಗೆ ಪೋಸ್ಟೇಜು [illegible] ಆಣೆ

ವಿಳಾಸ —ವೈದ್ಯ [illegible] ವೆಂಕಟಾಚಲ ಪಂಡಿತ,

ಎಸ್ ಎಸ್ ಆರ್ ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್ ಮೈಸೂರು

ರಬ್ಬರ್ ಹ್ಯಾಂಡ್ ಪ್ರೆಸ್.

314 20

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ [illegible] ಭೂಮಿಯೊಳಗೆ ಈ ಪ್ರೆಸ್ [illegible] ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು, ಉರ್ದು, [illegible] ಇಂಗ್ಲಿಷ್ ಮತ್ತು [illegible] ಭಾಷೆಯಲ್ಲಿ [illegible] ಸ್ವಲ್ಪ ಕಾಲದೊಳಗಾಗಿಯೇ [illegible] ಈ ಪ್ರೆಸ್ಸು ಸಾರ್ವಜನಿಕ ಕಚೇರಿ [illegible] ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, [illegible] ಮತ್ತು [illegible] ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು [illegible] ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ [illegible] ಈ ಕಾರಣದಿಂದ ಪ್ರತಿ [illegible] ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.

ಹಾಫ್ ಫುಲ್‌ಸ್ಕ್ಯಾಫ್ ಸೈಜು, ೬—೦—೦

ಪೋಸ್ಟೇಜು ಬೇರೆ (extra)

ವಿಳಾಸ — ವರ್ಧಮಾನ ಏಜನ್ಸಿ,

ಪೋಸ್ಟ್ ಕಾಲಬಾದೇವಿ,

ಮುಂಬಯಿ.

ಇಲ್ಲಿ ನೋಡಿ.

3-8

ತುಮಕೂರು ವಿಂರ್ಗ ಇಲಾಖೆಯಲ್ಲಿ ಯೂರೋಪಿಯನ್ ನೇಕ್ರ್ಯಾಪಾರಿಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಕ್ರಯ:— ೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯವರೆಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ:—ಮೇನೇಜರ್

ಹಾಸನದ ಟೋಪಿ ಕಾರ್ಖಾನೆ, ವಿಂರ್ಗ ಇಲಾಖೆ, ತುಮಕೂರು.

ಈಗಲೇ ಸೀಮೆಯಿಂದ ಬಂದಿದೆ.

117-17

೫,೦೦೦ ಹಾಸನ ಟೋಪಿ ಹೊಲಿಯುವ ಸುಪೀರಿಯರ್ ಉಲನ್ ದಾರಗಳು. ಬಿಳಿ ಬೇಕಿದ್ದರೆ—ಎಲ್ಲಾ ಇದೆ. ಬಣ್ಣ, ಕಮ್ಮಿ ಕ್ರಯ.

೧ ಟೋಪಿಯಾಗುವ ಉಲನ್ ದಾರಕ್ಕೆ	೦—೪—೦
೧೦ ಟೋಪಿಯಾಗುವ ಬಂಡಲ್‌ಗೆ ೧ ಕ್ಕೆ	೩—೪—೦
ಕೊಕ್ಕೆ ಸೂಜಿ ೧ ಕ್ಕೆ	೦—೧—೩
೩೦ ಇಂಚಿನ ಬಸಿಯನ್ ೧ ಕ್ಕೆ	೦—೯—೦

ಎರಡು ಕಡೆಯಲ್ಲಿ ಬರೆಯುವ ಪೋಸ್ಟ್ ಕಾರ್ಡ್ ೧೦೦ ಕ್ಕೆ ೬ ಆ.

ಬೆಂಡುಗೆ ಸ್ಟ್ಯಾಂಪು ಕಳುಹಿಸಿ ನೇತ್ರಾನಂದಕರವಾದ ೧೯೦೮ ನೆ ಇಸವಿಯ ಕ್ಯಾಲೆಂಡರ್ ಪಡೆಯಿರಿ. ವಿಳಾಸ.—

ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

The Southern India Government Security Life and Marriage Assurance Company

"Limited"

Registered under Act No. VI of 1882.

Head Office—Triplicane, Madras.

15 l

WANTED SEVERAL SUB-AGENTS

FOR MYSORE PROVINCE.

TERMS VERY LIBERAL.

Prospectus, &c., will be supplied on receipt of applications accompanied with one anna stamps to cover postage. Taluk and Hobli School Masters and Shanbogues preferred.

Applicants will realize the full benefit of the Proverb—"Little pains—Large Gains." Men already in other employ may also apply.

Premium—only one Rupee, both for Marriage and Life Policies.

Apply, either to—C. Padmanabhiah,
Chief Agent, Ittigegud, MYSORE.
or to—M. R. Ry., Venkatramiah Navaru,
Joint Agent, Kempa Nanjamamba Agrahar,
MYSORE

ವ್ಯವಹಾರನಿರ್ಣಯ.

ಪುಟಗಳು ೫೬೩.	ಕನ್ನಡದ ಲಾ ಪುಸ್ತಕವು ದ್ವಿತೀಯಮುದ್ರಣ. 1-8	ಕ್ರಯ ವಿ. ಪಿ ಸೇರಿ ರೂ. ೧-೧೨-೦

ಈ ಮುದ್ರಣದ ಮುಖ್ಯಭಾಗವೆಲ್ಲವೂ ಹೊಸದಾಗಿ ಬರೆಯಲ್ಪಟ್ಟು ವಿಸ್ತರಿಸಲ್ಪಟ್ಟಿದೆ. ಹಿಂದೂ ಲಾ (ಸ್ಮೃತಿವಾಕ್ಯಗಳೊಡನೆ), ಮಹಮ್ಮದೀಯ ಲಾ, ಪೀನಲ್ ಕೋಡು ಇವುಗಳು ವಿಶೇಷವಾಗಿ ವಿಸ್ತರಿಸಲ್ಪಟ್ಟಿವೆ. ಮೈಸೂರು, ಮದರಾಸು, ಬೊಂಬಾಯಿ ದೇಶಗಳಿಗೆ ಸಾಮಾನ್ಯವಾದ ಲಾ ವ್ಯತಸ್ವತ್ತಿನ ವಿಲೇವಾರಿ, ಅನಾಥರಕ್ಷಣೆ, ಸ್ತ್ರೀ ಸ್ವತ್ತು ವಾರಸ್ಸು ಇತ್ಯಾದಿ. ಈ ವಿಷಯಕವಾದ ಖಾನೂನುಗಳು ಹೊಸದಾಗಿ ಸೇರಿಸಲ್ಪಟ್ಟಿವೆ. ೫೯ ಖಾನೂನುಗಳು, ಅನೇಕ ಮೂಲ ಗ್ರಂಥಗಳು, ಹೈಕೋರ್ಟು, ಚೀಫ್ ಕೋರ್ಟುಗಳ ರಿಪೋರ್ಟುಗಳು ಇವುಗಳಿಂದ ಸಂಗ್ರಹ ಮಾಡಲ್ಪಟ್ಟಿದೆ. ಸಮಸ್ತ ವ್ಯವಹಾರಗಳನ್ನೊಳಗೊಂಡಿರುವ ೯೨ ವಿಧದ ದಸ್ತಾವೇಜ್ ನಮೂನೆಗಳೂ, ಲಾ ಪ್ರಕಾರ ಸಿವಿಲ್, ಕ್ರಿಮಿನಲ್ ಕೋರ್ಟುಗಳಿಗೂ, ಪೋಲೀಸಿಗೂ ಬರೆಯಲ್ಪಡುವ ಅರ್ಜಿಗಳ ೬೯ ತರದ ನಮೂನೆಗಳೂ ಇದರಲ್ಲಡಗಿವೆ. ಕಳೆದ ಮೇ ತಿಂಗಳಲ್ಲಿ ಮುದ್ರಿಸಿದ್ದ ೧,೫೦೦ ಪ್ರತಿಗಳು ೩ ತಿಂಗಳಲ್ಲೇ ಖರ್ಚಾಗಿಹೋದುದರಿಂದ ಇದರ ಉಪಯುಕ್ತತೆಯು ತಿಳಿದುಬಂದು ಪ್ರೋತ್ಸಾಹಕನಾಗಿ ಮೇಲೆ ಕಂಡಂತೆ ಇದರ ಉಪಯುಕ್ತತೆಯನ್ನು ಮತ್ತಷ್ಟು ಹೆಚ್ಚಿಸಿ ಮಾಡಿದೆ. ವಿಷಯಪರಿಮಾಣಾಧಿಕ್ಯ, ಸ್ಫುಟಾಕ್ಷರ, ಉತ್ತಮವಾದ ಕಾಗದ, ಬಟ್ಟೆಯ ಬೈಂಡ್ ಇವುಗಳಿಂದ ಕೂಡಿದ ಈ ಸಲದ ಮುದ್ರಣವು ಬಹಳ ಪ್ರಶಸ್ತವಾಗಿದ್ದರೂ ಅನುಪಜನ್ನರಿಗೆ ಸುಲಭಗ್ರಾಹ್ಯವಾಗಲು ಮೊದಲನೆ ಮುದ್ರಣಕ್ಕಿಂತಲೂ ಬೆಲೆಯಲ್ಲಿ ನಾಲ್ಕು ಆಣೆ ಮಾತ್ರ ಹೆಚ್ಚಿಸಿದೆ. ಪುಸ್ತಕ ಅಪೇಕ್ಷಿಸುವವರು ಬರೆಯುವ

ವಿಳಾಸ—ಗ್ರಂಥಕರ್ತರು, ಎಂ. ಮಲ್ಲಾರಾಧ್ಯರು,

ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಪರ ಔಷಧವು.



1-8

ಬೆನ್ನುಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಸಿಟ್ಟಿನ ನೋವು, ತಲೆನೋವು, ಪಟ್ಟಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಯತ್ತದೆ ಇರುವುದು—ಇದೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಪರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದಕ್ಕೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುತ್ತಿದೆ. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಕನ್ನಡದಲ್ಲಿ ಇದುವರೆಗೂ ಇಂಥಾ ಪುಸ್ತಕವು ಮುದ್ರಿಸಿಲ್ಲವು!!!

ರಾಬಿನ್‌ಸನ್ ಕ್ರೂಸೋ

ಇವನ ಸಾಹಸ ಕಾರ್ಯಗಳು!!!

136-10

ಕ್ರೌನ್ ಅಷ್ಟಪತ್ರ, ಪುಟಗಳು ೪೬, ಚಿತ್ರಗಳು ೫೩.

ಇಂಗ್ಲೆಂಡಿನ ಪ್ರಸಿದ್ಧ ಲೇಖಕರಾದ ಮಿ॥ ಸ್ಟೆಡ್‌ರವರು ಈ ಪುಸ್ತಕಕ್ಕೆ ಬೇಕಾದ ಚಿತ್ರಗಳನ್ನು ಕಳುಹಿಸಿ ಕೊಟ್ಟಿರುವುದಲ್ಲದೆ, ಈ ಪುಸ್ತಕದ ವಿಷಯವಾಗಿ ಜೈಲಿನಲ್ಲಿರುವ ಹೃದಯೊಬ್ಬನು "ನಾನು ಯಾವಾಗಲೂ 'ರಾಬಿನ್‌ಸನ್ ಕ್ರೂಸೋ' ಕಥೆಯನ್ನು ಓದುವುದರಿಂದ ಬಹಳ ಸುಖಿಯಾಗುವೆನು" ಎಂದು ಹೇಳಿದ್ದಾಗಿ ತಿಳಿಸಿದರು.

ಕ್ರಯ ನಾಲ್ಕು ಆಣೆ. ವಿ ಪಿ ಯಿಂದ ೬ ಆಣೆ

ವಿಳಾಸ:—ದಿ ಜನರಲ್ ಪ್ರೆಸ್, ಮೈಸೂರು.

ಖಾತು ಸಾಮಾನು! ಹೊಸ ಬಗೆಗಳು. ಬೇಗ ತರಿಸಿ!!

123-14

ಶುದ್ಧ ಉಲನ್ ಉಣ್ಣೆಯ ದಪ್ಪವಾದ "ಬ್ಲಾಂಕೇಟು" ಎಂಬ ಹೊಸ ನಮೂನೆ ಬನಾತವು ಎಷ್ಟೇ ಕ್ರೂರವಾದ ಛಳಿಯನ್ನಾದರೂ ದೂರಕ್ಕೆ ಓಡಿಸಿ ಮೈಗೆ ಬೇಕಾದ ಕಾವನ್ನಿಯುತ್ತೆ. ಸುಖವಾದ ಹೊದ್ದಿಕೆ! ಅತಿರಮ್ಯ! ಉದ್ದ ೯೦ ಅಂಗುಲ, ಅಗಲ ೬೪ ಅಂಗುಲ ಕ್ರಯ ರೂ ೩ ಎರಡನೆಯ ತರಗ ರೂ ೬ (ಶುದ್ಧ ಉಣ್ಣೆ)

ಪುದುಚ್ಚೇರಿ ರೇಷ್ಮೆ ವಸ್ತ್ರಗಳು. ರೂ. ೪!!

ಅಂಚು, ಕೊನೆಗಳಲ್ಲಿ ಬೆಳ್ಳಿಗೂ ನೂಲಗಳಿಂದಲೂ ಕೂಡಿ ಮಧ್ಯದಲ್ಲಿ ಕೆಂಪಾಗಿ ಹೊಸ ಸೊಗಸಾದ ನಮೂನೆ ಪುದುಚ್ಚೇರಿ ರೇಷ್ಮೆ ವಸ್ತ್ರಗಳು ಹೊದೆಯಲು ಯೋಗ್ಯವಾಗಿ ಬಡಲಾಯಸದ ಗಟ್ಟಿ ಬಣ್ಣದ್ದಾಗಿ ೩ ಮೊಳದಗಲವಿವೆ. ಒಂದು ತರಿಸಿ ಉಪಯೋಗಿಸಿ ಪರೀಕ್ಷಿಸಿ ತಿಳಿಯಿರಿ. ರೂ ೨೦ ರ ರೇಷ್ಮೆ ವಸ್ತ್ರವನ್ನು ಮೀರಿಸುತ್ತೆ. ೩ ಮೊಳ ದುಪ್ಪಟ ರೂ. ೬. ನಾಲ್ಕು ಮೊಳದುಪ್ಪಟ ರೂ. ೫.

ಬಿಳಿ ರೇಷ್ಮೆ ಅಂಚು! ಮದ್ರಾಸ್ ಸೀರೆ! ಖಾತರಿ ಬಣ್ಣ

ಬಿಳಿಯ ಅಪ್ಪಟ ರೇಷ್ಮೆ ಅಂಚು ೩ ಅಂಗುಲದಗಲ ಒಂದೇ ತರಹೆಯ ೩ ಮೊಳದುದ್ದ ರೇಷ್ಮೆ ಸೆರಗುಗಳಿಂದ ಶ್ರೇಷ್ಠವಾದ ನೂಲಿನ ೩॥ ಮೊಳದಗಲ ೧೮ ಮೊಳದುದ್ದದ ಸೀರೆ. ಕಪ್ಪು ಅಥವಾ ಕೆಂಪಿನ ಮೇಲಿನ ಮೇಘ ವರ್ಣದ್ದು. ಕ್ರಯ ರೂ. ೧೧—೮—೦. ಬಿಳಿಯ ರೇಷ್ಮೆಯ ಚೌಕಳಿಯಿಂದ ಕೂಡಿದ್ದು ರೂ. ೧೬—೦—೦ ಎರಡಂಗುಲ ಅಂಚಿನ ಮಾದರಿಗೆ ಸೀರೆ ರೂ. ೩.

ವಿಳಾಸ:—ರಾವ್ ಎಂಪೋರಿಯಂ, ಸ್ಟೇಷನ್‌ಹಾಂ ರೋಡ್,

ವೇಪೇರಿ, ಮದರಾಸ್.

ಮಹಾ ಬಾಧಾಪಹಾರಿಣಿಯು.

58-30

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಬಿಸ್ಕಿತೀ ಲೇಪನವು ಸಕಲ ವಿಧವಾದ ಬಾಧೆಗಳನ್ನು ಪರಿಹರಿಸತಕ್ಕದ್ದೆಂದು ಡಾಕ್ಟರುಗಳು ನರ್ಸುಗಳು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಶೇಕಡಾ ದಾರ ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು ವಾಯುನೋವು, ಶಳಿತ, ಗಂಟಲನೋವು, ಮೂರ್ಛಾರೋಗ, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅನೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಡಗಿಸಿಬಿಡುತ್ತದೆ. ಬಹುಕಾಲದಿಂದ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ ಸೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೬ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಫ್. ಡಬ್ಲ್ಯು. ಅರನ್,

ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆರೋಗ್ಯದ ಕಡಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION. 31-19

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು.

ಇದು ಸಂತೋಷವೂ ರುಚಿಯೂ ಉಳ್ಳದ್ದಾಗಿ ಆಹಾರದ ರುಚಿ ಯ ಬಲವನ್ನು ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧವಾರಾಟಗಾರರಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನಿನ ಗುರುತುಳ್ಳ ಔಷಧವನ್ನೇ ಕೊಂಡುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-8

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ನಿಶ್ಚಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಾಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದ ವಸ್ತು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಬಿಳಿದು, ಕೆಂಪು, ಕಪ್ಪು, ಬೆರಕೆ, ಕಾಫಿ ಟೋಪಿಗಳು ೧ ರೂ ೪ ಆ.; ೧ ರೂ ೩ ಆ; ೧ ರೂ. ೬ ಆ

ರೇಷ್ಮೆ ಜುಚ್ಚಿಯುಳ್ಳ ಟೋಪಿಗಳು ೧ ರೂ. ೪ ಆ.; ೨ ರೂ

ಜರದ ಟೋಪಿಗಳು ೧ ರೂ. ೧೨ ಆ; ೧ ರೂ. ೪ ಆ.; ೧ ರೂ. ೩ ಆ.

ಉಸುಕಿನ ಟೋಪಿಗಳು ೧ ರೂ. ೪ ಆ.; ೧ ರೂ. ೩ ಆ.

ಕೂಸುಗಳ ಟೋಪಿ, ಸ್ವೆಟರ್ ಮೇಜೋದು, ಆರ್ಗ ಮೇಜೋದು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ವೃತ್ತಾಂತಪತ್ರಿಕೆ

೧೯೦೮ ನೇ ಇಸವಿ ಫೆಬ್ರುವರಿ ತಾ॥ ೨೦ ನೇ ಗುರುವಾರ

ಶಿಕ್ಷಾರ್ಹನಾದ ದಂಡಯಾತ್ರೆಯು

ಹತ್ತು ವರುಷಗಳ ಹಿಂದೆ ಅಂದರೆ ಕಳೆದ ೧೮೯೭ ನೇ ಇಸವಿಯಲ್ಲಿ ಇಂಡಿಯಾ ಗವರ್ನಮೆಂಟಿನವರು ಹಿಂದೂಸ್ಥಾನದ ವಾಯುವ್ಯ ಸರಹದ್ದಿನ ಎಲ್ಲೆ ಬಳಿ ಇರುವ ಬೇರೆ ಬೇರೆ ಪಠಾಣರನ್ನು ಶಿಕ್ಷಿಸುವುದಕ್ಕಾಗಿ ಸೈನ್ಯಗಳನ್ನು ಕಳುಹಿಸಿ, ಅವರನ್ನು ಕೊಂದು, ಅವರ ಮನೆಮಠಗಳನ್ನೂ ಭೂಮಿಕಾಣಿಗಳನ್ನೂ ನಾಶಮಾಡಿ, ಅವರಿಂದ ಮತ್ತೆ ಆ ಎಲ್ಲೆಯೊಳಗಿರತಕ್ಕ ಹಿಂದುಸ್ಥಾನದ ಪ್ರಜೆಗಳಿಗೆ ಯಾವ ಕಷ್ಟನಷ್ಟಗಳೂ ಉಂಟಾಗದಂತೆ ಬುದ್ಧಿಕಲಿಸಿ ಬಂದ ಸಂಗತಿಯು ನಮ್ಮ ವಾಚಕರಲ್ಲಿ ಬಹುಮಂದಿಗೆ ತಿಳಿಯದೆ ಇಲ್ಲ. ಆಗ ಇಂಗ್ಲಿಷ್ ಸೈನ್ಯಗಳು ಪಶ್ಚಿಮೋತ್ತರ ಬಾರ್ಡರಿನಿಂದ ಬೂನೆರ್ ವರೆಗೆ ಸುಮಾರು ೬೦ ಮೈಲಿಗಳ ವಿಸ್ತೀರ್ಣವಾದ ಪ್ರದೇಶದಲ್ಲಿ ನುಗ್ಗಿ ಅಲ್ಲಿದ್ದ ಬೇರೆ ಬೇರೆ ಪಂಗಡಗಳ ಶತ್ರುಗಳ ಮೇಲೆ ಯುದ್ಧಕಾರ್ಯಗಳನ್ನು ನಡಿಸಿದರು. ಶತ್ರುಗಳು ಸ್ವಲ್ಪವಾದರೂ ಎರಡು ಲಕ್ಷಕ್ಕೆ ಕಡಿಮೆಯಾಗಿರಲಿಲ್ಲ. ಆಗ ನಡೆದ ಕದನಗಳೂ ಯುದ್ಧಗಳೂ ಎಂದಿಗೂ ಮರೆಯುವಹಾಗಿಲ್ಲ.

ಹತ್ತು ವರುಷಗಳಿಂದೀಚೆಗೆ ಅಂದರೆ ಒಂದೆರಡು ಸಂವತ್ಸರಗಳಿಂದಲೂ ಆ ಸರಹದ್ದಿನ ಹೊರಗೆ ಇರತಕ್ಕ ಜಕ್ಕಾಖೇಲ್ ಎಂಬ ಅಫ್ರಿದಿ ಜನರು ಎಲ್ಲೆಯನ್ನು ದಾಟಿ ಇಂಡಿಯಾ ಗವರ್ನಮೆಂಟಿನ ಆಳಿಕೆಗೆ ಒಳಪಟ್ಟ ಪ್ರದೇಶಕ್ಕೆ ಬಂದು ಲೂಟಿಮಾಡುತ್ತಲೂ ಕೊಳ್ಳೆಹೊಡೆಯುತ್ತಲೂ ಧಾನ್ಯ ಗೋವುಗಳನ್ನು ಎತ್ತಿ ಹಾಕಿಕೊಂಡು ಹೋಗುತ್ತಲೂ ಬಹಳ ಬಾಧೆಗಳನ್ನು ಪಡಿಸಿರುತ್ತಾರೆ. ಇದಲ್ಲದೆ ಈ ಅಫ್ರಿದಿಗಳು ಎಲ್ಲೆಕಟ್ಟಿನ ಠಾಣ್ಯಗಳಲ್ಲಿರುವ ಇಂಗ್ಲಿಷ್ ಸೈನಿಕರ ಮೇಲೂ ಬಿದ್ದು ಹಲವರನ್ನು ಕೊಂದು ಬಂದೂಕು, ಮದ್ದುಗುಂಡುಗಳನ್ನು ಅಪಹರಿಸಿಕೊಂಡು ಹೋಗಿರುವುದೂ ಉಂಟು. ಈ ಜನರು ಬೇರೆ ಬೇರೆ ಸಂಗಡಿಗರಾಗಿಯೂ ಒಟ್ಟಿಗೆ ಬೆರೆತೂ ಹೀಗೆ ಕದನಗಳನ್ನು ಮಾಡತಕ್ಕವರಾಗಿಯೂ ಬಹು ಪರಾಕ್ರಮಿಗಳಾಗಿಯೂ ಇರುತ್ತಾರೆ. ಇದಲ್ಲದೆ ಇಂಡಿಯಾ ಗವರ್ನಮೆಂಟಿನ ಸೈನಿಕರಲ್ಲಿ ಜಕ್ಕಾಖೇಲ್ ಅಫ್ರಿದಿಗಳು ಹಲವರು ಸಿಪಾಯಿಗಳಾಗಿರುವರು. ಅಂತು ಈ ಜನರಲ್ಲಿ ೨೦,೦೦೦ ಯುದ್ಧವೀರರು ಇರುತ್ತಾರೆಂದು ತಿಳಿಯುವುದು. ಈ ಅಫ್ರಿದಿಗಳು ಸಾಮಾನ್ಯವಾಗಿ ಎರಡು ಕಣಿವೆಗಳಲ್ಲಿ ವಾಸಮಾಡುತ್ತಾರೆ. ಖೈಬರ್ ಕಣಿವೆಯೊಳಗೆ ಇವರು ಬೇಸಗೆಕಾಲದಲ್ಲೂ ಬಾಜಾರ್ ಕಣಿವೆಯೊಳಗೆ ಚಳಿಗಾಲದಲ್ಲೂ ಇರತಕ್ಕವರಾಗಿದ್ದಾರೆ.

ಈ ದುಷ್ಟಜನರಾದ ಜಕ್ಕಾಖೇಲ್ ಅಫ್ರಿದಿಗಳ ಮೇಲೆ ಇಂಡಿಯಾ ಗವರ್ನಮೆಂಟಿನವರು ಈಗ ಒಂದು ದಂಡನ್ನು ಕಳುಹಿಸಿ, ಅವರನ್ನು ಚೆನ್ನಾಗಿ ಶಿಕ್ಷಿಸಬೇಕೆಂದೂ, ಅವರಿಂದ ಹಿಂದುಸ್ಥಾನದ ಪ್ರಜೆಗಳಿಗೆ ಯಾವ ಹಾನಿಬಾಧೆಗಳೂ ಉಂಟಾಗದಂತೆ ಮಾಡಬೇಕೆಂದೂ ನಿಶ್ಚಯ ಮಾಡಿದರು. ವಿಲಾಯತಿ ಗವರ್ನಮೆಂಟಿನವರು ಇದನ್ನು ಸ್ವೀಕಾರಮಾಡಿದ್ದೂ ಅಯಿತು. ಹಿಂದುಸ್ಥಾನದ ಇತರ ಠಾಣ್ಯಗಳಲ್ಲಿದ್ದ ಕೆಲವು ಸೈನ್ಯಗಳನ್ನೂ ಮದ್ದುಗುಂಡುಗಳನ್ನೂ ಪಿರಂಗಿಗಳನ್ನೂ ಪೆಷಾವರ್ ಎಂಬ ಎಲ್ಲೆಕಟ್ಟಿನ ಠಾಣ್ಯಕ್ಕೆ ಕಳುಹಿಸಿದರು. ಈ ಸೈನ್ಯಗಳ ಮುಖ್ಯಾಧಿಕಾರಿ ಮೇಜರ್ ಜನರಲ್ ಸರ್ ಜೇಮ್ಸ್ ವಿಲ್‌ಕಾಕ್ಸ್‌ಯವರೂ ಬ್ರಿಗೇಡಿಯರ್ ಜನರಲ್ ಮುಸ್ಲೆಯವರೂ ಬ್ರಿಗೇಡಿಯರ್ ಜನರಲ್ ಸಿ ಎ ಆಂಡರ್ಸನ್‌ರವರೂ, ಮೇಜರ್ ಜನರಲ್ ಎ ಎ ಬಾರೆಟ್‌ಯವರೂ ನೇಮಿಸಲ್ಪಟ್ಟು ಅಲ್ಲಿಗೆ ಹೋಗಿರುತ್ತಾರೆ.

ಕಳೆದ ೧೪ ನೇ ತಾರೀಖು ಶನಿವಾರ ಇಂಗ್ಲಿಷ್ ಸೈನ್ಯಗಳು ಪೆಷಾವರಿನ ಮುಂದಕ್ಕೆ ನುಗ್ಗಿ ಮೊದಲು ಸೈನಿಕರೆಲ್ಲ ಮೂರು ದಿನದ ಆಹಾರವನ್ನು ಸಂಗಡ ತೆಗೆದುಕೊಂಡು ಹೋಗಿರುವರು. ಈಗ ಇವರು ಜಕ್ಕಾಖೇಲ್ ಎಂಬ ಶತ್ರುಗಳಿರುವ ಬಾಜಾರ್ ಕಣಿವೆಯನ್ನು ತಲುಪಿರುವುದಾಗಿಯೂ ಶತ್ರುಗಳು ಈ ಯುದ್ಧವನ್ನು ನಿರೀಕ್ಷಿಸಿ ಈ ಮೊದಲೇ ತಮ್ಮ ಹೆಂಗಸರು ಮಕ್ಕಳುಗಳನ್ನು ಇತರ ಕಡೆಗಳಿಗೆ ಕಳುಹಿಸಿ ಯುದ್ಧಸನ್ನದ್ಧರಾಗಿದ್ದಾರೆಂದೂ ತಂತಿ ವರ್ತಮಾನ ಬಂದಿದೆ.

ಇಂಗ್ಲಿಷ್ ಸೈನ್ಯಗಳು ಬಳಿ ಸ್ಥಾನಗಳನ್ನು ಆಕ್ರಮಿಸಿಕೊಳ್ಳುವದಕ್ಕೆ ಶತ್ರುಗಳಿಗೆ ಅವಕಾಶಕೊಡದೆ ಕಣಿವೆ ದಾರಿಗಳನ್ನೆಲ್ಲಾ ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆ. ತಾ ೧೫ ನೇ ಸೋಮವಾರ ಮಧ್ಯಾಹ್ನ ೧ ಗಂಟೆಯಲ್ಲಿ ಬಂದಿರುವ ವರ್ತಮಾನವೇನೆಂದರೆ—ಯುದ್ಧ ನಡೆಯಿತು. ಒಬ್ಬ ಇಂಗ್ಲಿಷ್ ಸೈನಿಕನು ಮೃತನಾದನು. ಖಾಜಾಮಹಮದ್ ಎಂಬ ಇಂಗ್ಲಿಷ್ ಸಿಪಾಯಿಗೆ ಹೊಟ್ಟೆಯಲ್ಲಿ ತುಂಬಾ ಗಾಯವಾಗಿದೆ. ಇಂಗ್ಲಿಷ್ ಸೈನ್ಯಗಳು ಬಾಜಾರ್ ಕಣಿವೆ ದಾರಿಯನ್ನು ದಾಟಿ ೧ ಗಂಟೆಗೆ ಬಾಜಾರ್ ಕಣಿವೆಯೊಳಕ್ಕೆ ಪ್ರವೇಶಮಾಡಿದವು ಎಂಬುದೇ.

ಮಾತಿಗಿಂತಲೂ ಕ್ರಿಯೆಯೇ ಸರ್ವಶ್ರೇಷ್ಠವಾದದ್ದು

ಸಂಘಪರಿಷ್ಕಾರಕರು ನಮ್ಮ ಹಿಂದೂದೇಶದಲ್ಲಿ ಹೆಚ್ಚಿರುವರೆಂದು ವರ್ತಮಾನಪತ್ರಿಕೆಗಳಿಂದ ಗೊತ್ತಾಗುತ್ತದೆ. ಎಲ್ಲಿ ನೋಡಿದರೂ ಉಪನ್ಯಾಸ, ಯಾವ ದೇಶೀಯ ಪತ್ರಿಕೆಯನ್ನು ತೆಗೆದರೂ ಬಾಲ್ಯ ವಿವಾಹ ಮತ್ತು ಜಾತಿಭೇದಗಳ ಬಂಧನೆ ಇವುಗಳಿಂದ ಕೂಡಿದ ಟಾಕುಗಳು ತುಂಬಿರುತ್ತವೆ. ನಾವು ಹೀಗೆ ಮಾಡಬೇಕು, ನಾವು ಹಾಗೆ ಮಾಡಬಾರದು ಎಂದು ಕೇಳುವವರನೇಕರಿರುವರೇ ಹೊರತು ಹೇಳಿದ್ದನ್ನು ಅಭ್ಯಾಸಿಸತಕ್ಕವರು ಕೊಂಚಮಂದಿ ಮಾತ್ರ. ಬಾಲ್ಯವಿವಾಹವನ್ನು ಒಂದು ದೊಡ್ಡ ಸಭೆಯ ಇದಿರಿನಲ್ಲಿ ಘ ಆಕ್ಷೇಪಣೆಯಾಗಿ ಖಂಡಿಸುವವನು ತನ್ನ ಮನೆಯಲ್ಲಿರುವ ಸಣ್ಣ ಸಣ್ಣ ಹೆಣ್ಣುಮಕ್ಕಳಿಗೆ ವರರನ್ನು ಹುಡುಕುವುದು ಈ ದೇಶದಲ್ಲಿ ಅಪರೂಪವಲ್ಲ. ನಾಟಕ ಮಾತನ್ನೇ ಆಡುವರೇ. ಹಿರೀ ಮಾತಿಗಿಂತಲೂ ಕ್ರಿಯೆಯೇ ಸರ್ವಶ್ರೇಷ್ಠವೆಂದು ನೀವು ಅರಿಯಿರಾ? ಮಾತಿನಲ್ಲೇ ಕಾತರ ಕಾಲವಿಳಂಬವಾಗುವುದಿಲ್ಲವೇ? ಆದ್ದರಿಂದ ನಿಮಗೊಂದು ಸಲಹೆಯನ್ನು ಕೊಡುವೆವು. ಸಂಘಪರಿಷ್ಕಾರಕರೆನಿಸಿಕೊಳ್ಳುವವರು ಒಂದು ಸಂಘವನ್ನು ಮಾಡಿ ಅದಕ್ಕೆ ಕಟ್ಟಳೆಗಳನ್ನು ಏರ್ಪಡಿಸತಕ್ಕದ್ದು. ಅವು ಹೇಳತಕ್ಕ ಬೋಧನೆಯನ್ನು ಸಭೆಯು ದೊರೆತಾಗಲೆಲ್ಲಾ ಕಾರ್ಯತಃ ನಡಿಸಿ ತೋರಿಸತಕ್ಕದ್ದು. ಆಯಾ ಜಾತಿಗಳ ವಿವಿಧಶಾಖೆಗಳವರು ಒಂದಾಗಿ ಸೇರಿ ಸಹಪಙ್ತಿಭೋಜನ ಮಾಡತಕ್ಕದ್ದು. ಕೂಡಿದವಟ್ಟಿಗೂ ಎಲ್ಲಾ ಜನರಲ್ಲಿ ಸಹೋದರಭಾವವನ್ನು ಹುಟ್ಟಿಸತಕ್ಕದ್ದು. ಸಭ್ಯಕ್ಕೆ ಈ ಮೂರು ಕಟ್ಟಳೆಗಳು ಅತ್ಯಾವಶ್ಯವಾಗಿರುತ್ತವೆ. ಬಾಲ್ಯ ವಿವಾಹದಿಂದ ಹಿಂದೂ ಜನರು ಕ್ಷೀಣಾಗತಿಗೆ ಬಂದರು. ವಿವೇಚನೆಯಿಲ್ಲದ ಗಂಡುಗಳು ತಂದೆಯಾಗುವುದೂ, ಈಗಲೇ ಯುಕ್ತವಯಸ್ಸಾಗದ ಹುಡುಗಿಯು ಮಕ್ಕಳ ತಾಯಿಯಾಗುವುದೂ ಅಂದರೇನು? ಜನರು ಹ್ಯಾಗೆ ತಾನೇ ಬಲಿಷ್ಠರಾದಾರು? ಅವರಿಗೆ ಧೈರ್ಯವು ಎಲ್ಲಿಂದ ಬರುವುದು? ಮನು ಧರ್ಮಶಾಸ್ತ್ರದಲ್ಲಿ ಒಬ್ಬ ಯುವಕನು ತನ್ನ ವಿದ್ಯಾಭ್ಯಾಸವನ್ನು ಪೂರೈಸಿದ ತರುವಾಯ ಮದುವೆ ಮಾಡಿಕೊಳ್ಳಬೇಕೆಂದು ವಿಧಿ ಇದೆ. ಈ ಕಟ್ಟಳೆಯಂತೆ ಈಗಿನವರು ನಡೆದುಕೊಂಡರೆ ದೇಶಕ್ಕೆ ಬಹಳ ಪ್ರಯೋಜನವಾಗುವುದಲ್ಲವೇ? ಜಾತಿಯ ಬಿಗಿಯಿಂದ ನಮ್ಮ ದೇಶೀಯರಲ್ಲಿ ಅನ್ಯೋನ್ಯತೆಯು ತಪ್ಪಿತು. ಸ್ವಾರ್ಥವು ಹೆಚ್ಚಿತು, ಸಹೋದರಭಾವವು ನಿರ್ನಾಮವಾಯಿತು. ದೇಶಾಭ್ಯುದಯಕ್ಕೆ ಒಗ್ಗಟ್ಟೇ ದೊಡ್ಡ ಸಹಕಾರಿಯು. ಇದಿಲ್ಲದೆ ಹೋದರೆ ನಮ್ಮ ದೇಶವು ಕ್ಷಯಿಸಿ ಹೋಗುವುದು. ಸಂಘ ಪರಿಷ್ಕರಣಕ್ಕೆ ಬರೀ ಲೌಕಿಕಪ್ರಯತ್ನಗಳೇ ಸಾಲವು. ಸಂಘ ಪರಿಷ್ಕಾರಕರ ಉದ್ದೇಶಗಳು ಬಹು ಘನತರವಾದವುಗಳಾಗಿಯೇ ಇರಬೇಕು. ಜನರೆಲ್ಲರೂ ಎಲ್ಲಾ ವಿಧವಾದ ಅಧರ್ಮಗಳನ್ನು ತ್ಯಜಿಸಿ, ಅದಕ್ಕೆ ಸಂಬಂಧಪಟ್ಟ ಪವಿತ್ರಸಾಧನಗಳನ್ನು ಪಡೆಯುವುದರಲ್ಲಿ ಆಸಕ್ತರಾಗಿರುವುದಲ್ಲದೆ, ಇದಕ್ಕೂ ಪರಕ್ಕೂ ಅತ್ಯಾವಶ್ಯಕವಾಗಿ ಬೇಕಾಗುವ ಪಾರಮಾರ್ಥಿಕ ಗುಣಗಳನ್ನು ಪಡೆದುಕೊಳ್ಳಬೇಕಾಗಿರುತ್ತದೆ. ಒಂದಾನೊಂದು ಸಮಯದಲ್ಲಿ ಯೇಸುಕ್ರಿಸ್ತನು ಜನರಿಗೆ ಬೋಧನೆ ಮಾಡುತ್ತಿರುವಾಗ ಈ ರೀತಿಯಲ್ಲಿ ಹೇಳಿದನು—"ನೀವು ದೇವರ ರಾಜ್ಯವನ್ನೂ ಆತನ ನೀತಿಯನ್ನೂ ಪಡಕೊಳ್ಳುವದಕ್ಕೆ ಮೊದಲು ಪ್ರಯತ್ನಿಸಿರಿ. ಇದರ ಕೂಡ ಅವೆಲ್ಲಾ (ಲೌಕಿಕ ಪದಾರ್ಥಗಳು) ನಿಮಗೆ ದೊರಕುವವು."

ಒಳದೇಶದ ವೃತ್ತಾಂತಗಳು

ಶ್ರೀಮನ್ ಯುವರಾಜರವರ ವಿದ್ಯಾಬೋಧಕರಾಗಿದ್ದ ಕ್ಯಾಪ್ಟನ್ ಹೀಲ್ ಯವರು ಪತ್ನೀ ಸಹಿತ ಕಳೆದ ವಾರ ವಿಲಾಯತಿಗೆ ಪ್ರಯಾಣ ಮಾಡಿದರು.

***

ಬೆಂಗಳೂರಿನಲ್ಲಿರುವ ಯುರೋಪಿಯನ್ ಸರದಾರರಿಗೂ ಅವರ ಪತ್ನಿಯರುಗಳಿಗೂ ಶ್ರೀಮನ್ ಮಹಾರಾಜರವರು ಈ ತಿಂಗಳ ೨೮ ನೇ ತಾ ಬುಧವಾರ ಅಲ್ಲಿನ ಅರಮನೆಯಲ್ಲಿ ಔತಣವನ್ನು ಮಾಡಿಸುವರಾಗಿದೆ.

***

ಬೆಂಗಳೂರು ಕೋಲೆಪಾತಕ ಸಭೆಯವರು ನಡಿಸಿರುವ ಕೊಲೆಗಳ ವಿಷಯದಲ್ಲಿ ದಂಡಿನ ಸ್ಟೇಷನ್ ಪೊಲೀಸಿನವರು ತನಿಖೆ ನಡಿಸಿ, ಕೋರ್ಟುಗಳಿಗೆ ತರುತ್ತಿದ್ದಾರೆ. ಇದುವರೆಗೆ ೩-೪ ಮೊಕದ್ದಮೆಗಳು ದಾಖಲಾಗಿರುವವು.

***

ರಾಜಧಾನಿಯ ಹಾರ್ಡ್ವಿಕ್ ಕಾಲೇಜಿನ ಸೂಪರಿಂಟೆಂಡೆಂಟರಾಗಿದ್ದ ಶ್ರೀಮನ್ ಸೋಗಿದ್ದ ರೆವ್ ಡಬ್ಲಿಯು ಎಚ್ ಥಾರ್ಪ್ ಯವರು ನೆನ್ನೆ ಬೆಳಿಗ್ಗೆ ಸ್ವಾಮಿಯ ಬಳಿ ತಲಪಿದರು. ಇವರ ಪತ್ನಿಯವರು ಇನ್ನು ಕೆಲವು ದಿನಗಳಮೇಲೆ ಬರುವರೆಂದು ಕೇಳುತ್ತೇವೆ.

***

ಬೆಂಗಳೂರಿನಲ್ಲಿ ಟಾಟಾ ರಿಸರ್ಚ್ ಎಂಬ ವಿದ್ಯಾಶಾಲೆಯನ್ನು ಕಟ್ಟುವದಕ್ಕೆ ಪ್ರಾರಂಭವಾಗಬೇಕು. ಆ ವಿದ್ಯಾಶಾಲೆಯ ಮುಖ್ಯ ಬೋಧಕರಾಗಿ ಬಂದಿರುವ ಮಿ॥ ಟ್ರಾವರ್ಸ್ ಯವರೂ ದಿವಾನರವರೂ ಕಳೆದ ವಾರ ಒಟ್ಟಾಗಿ ಹೋಗಿ, ಕಟ್ಟತಕ್ಕ ನಿವೇಶನ ಮುಂತಾದ್ದನ್ನು ನೋಡಿಬಂದರು.

***

ಮೈಸೂರು ಜಿಲ್ಲೆ ಮಳವಳ್ಳಿ ತಾಲ್ಲೂಕಿನಲ್ಲಿ ಬೋರಿಂಗ್ ಪೇಟೆ ತಾಲ್ಲೂಕು ಸೊಸೈಟಿ ಎಂಬ ಲೇವಾದೇವಿ ಸಂಘದ ಪರಸ್ಪರ ಸಹಾಯಕ ಸಂಘವು ಏರ್ಪಟ್ಟಿದೆ. ಇವೆರಡು ಸಂಘಗಳ ಉದ್ದೇಶವು ಮುಖ್ಯವಾಗಿ ರೈತ ಪ್ರಜೆಗಳಿಗೆ ಪ್ರಯೋಜನ ಮಾಡಿ, ಅವರನ್ನು ಅವರ ಸಾಲಬಾಧೆಯಿಂದ ಬಿಡುಗಡೆ ಮಾಡುವದೇ ಆಗಿರುತ್ತದೆ.

***

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಬಂದೀವಾನರಿಗೆ ಜೇನುಗಳನ್ನು ಅರ್ಥ, ಮೇಣದಬತ್ತಿ, ತಂತಿಗಳ ಕೆಲಸ ಈ ಮೊದಲಾದವುಗಳನ್ನು ತಯಾರುಮಾಡುವದಕ್ಕೆ ಬೇಕಾದ ಸಹಾಯ ಸಂಪತ್ತುಗಳನ್ನು ಒದಗಿಸಿಕೊಟ್ಟು, ಅವರಿಂದಲೇ ಮಾಡಿಸಬೇಕೆಂದು ಸರ್ಕಾರದವರು ಪ್ರಯತ್ನಪಡುತ್ತಿದ್ದಾರೆ. ಇದರಿಂದ ಬಂದೀವಾನರಿಗೆ ಒಳ್ಳೇ ಕಸಬು ಕಲಿಸಿಕೊಟ್ಟಂತಾಗುವುದು.

***

ಮೈಸೂರು ಸಂಸ್ಥಾನದಲ್ಲಿ ಸರ್ಕಾರಿ ನೌಕರರಲ್ಲದವರು ಮೈಸೂರು ಸರ್ಕಾರದ ಆಫೀಸಿಗೆ ಸಂಬಂಧಪಟ್ಟ ಕಾಗದಪತ್ರಗಳ ಮೇಲೆ "ಸರ್ವಿಸ್ ಅಫೇರ್" ಎಂದು ನಮೂದಿಸಿ, ಸ್ಟಾಂಪು ಹಚ್ಚದೇನೇ ಅಂಚೆಯ ಮೂಲಕ ಅಧಿಕಾರಿಗಳಿಗಾಗಲೀ ಕಚೇರಿಗಳಿಗಾಗಲೀ ಕಳುಹಿಸಬಹುದು. ಇಂಥಾ ಕಾಗದಗಳ ಮೇಲೆ ಅರ್ಜಿದಾರನ ಹೆಸರು ವಿಳಾಸಗಳನ್ನು ಕಾಣಿಸಬೇಕು. ಈ ರೀತಿ ಮಾಡಿದಲ್ಲಿ ಕಾಗದಗಳು ಸರಿಯಾಗಿ ತಲಪುವವು ಎಂದು ಸರ್ಕಾರದವರು ತಿಳಿಸಿರುತ್ತಾರೆ.

ಕೃತಪ್ರಜೆಗಳ ನಿಕೇತನದ ವಿಸ್ತೀರ್ಣವು ಮೈದಾನ ಪ್ರದೇಶಗಳಲ್ಲಿ ೧೦ ಗುಂಟೆಗಿಂತಲೂ, ಮಲೆನಾಡು ಪ್ರದೇಶಗಳಲ್ಲಿ ೨೦ ಗುಂಟೆಗಿಂತಲೂ ಹೆಚ್ಚಾಗಿದ್ದರೆ ಅಂಥಾ ಹೆಚ್ಚು ಪ್ರದೇಶಕ್ಕೆ ಕಂದಾಯವನ್ನು ನಿಷ್ಕರ್ಷೆ ಮಾಡುವುದರಲ್ಲಿ ವಿ ಸಿಮೆಂ ದರವನ್ನು ೪ ಆಣೆಯಿಂದ ೪ ಆಣೆಗೆ ತಗ್ಗಿಸಿದ್ದೇ ಅಲ್ಲದೆ, ಒಬ್ಬನಿಗೆ ಒಂದೇ ಗ್ರಾಮದಲ್ಲಿ ಬೇರೆ ಬೇರೆ ಜಮೀನುಗಳು ಇದ್ದಲ್ಲಿ ಅವುಗಳ ಒಟ್ಟು ವಿಸ್ತೀರ್ಣದ ಮೇಲೆ ಕಂದಾಯವನ್ನು ಮೇಲ್ಕಂಡ ದರದಂತೆ ಲೆಕ್ಕಿಸಬೇಕೆಂತಲೂ ಮೈಸೂರು ಸರ್ಕಾರದವರು ಹುಕುಂ ಮಾಡಿದ್ದಾರೆ.

***

ರಾಜಧಾನಿಯಲ್ಲಿ ಸಂಜೀವರಾಜೇ ಅರಸಿನವರ ಪತ್ನಿಯರವರಿಗೆ ತುಂಬಾ ಕಾಯಿಲೆಯಾಗಿದ್ದು, ಅವರನ್ನು ನೋಡಿಕೊಂಡು ಹೋಗುವುದಕ್ಕೆ ಮಹಾಮಾತೃಶ್ರೀ ಯವರೂ ಮಹಾರಾಜರವರೂ ಬೆಂಗಳೂರಿಂದ ಒಟ್ಟಿಗೆ ಹತ್ತು ಬಂದಿದ್ದರೆಂದು ತಿಳಿಸಿದ್ದೆವಷ್ಟೆ. ಆ ಅರಸುವರು ಕಳೆದ ಗುರುವಾರ ಸಾಯಂಕಾಲ ಕಾಲವಾದರು. ಮೃತ ಕಾಂತರಾಜೇ ಅರಸಿನವರೂ, ಡರ್ಬಾರ್ ಭಕ್ಷೀಯರೂ, ಅರಮನೆ ಆಫೀಸರೂ ವಿಂತು, ಆ ರಾತ್ರಿಯೇ ಮರ್ಯಾದೆಗಳೊಡನೆ ಶವವನ್ನು ಕ್ರಮವಾಗಿ ದಹನಮಾಡಿಸಿದರು. ಅರಸಿಗೆ ಒಬ್ಬ ಸೊಸೆಯೂ, ಮೊಮ್ಮಗನೂ ಇರುತ್ತಾರೆ.

ಹಾರುವ ಯಂತ್ರಗಳು.

ಅನೇಕ ವರುಷಗಳಿಂದ ಆಕಾಶದಲ್ಲಿ ಸಂಚರಿಸುವುದಕ್ಕೆ ಉಪಯುಕ್ತವಾದ ವಿಮಾನಗಳನ್ನು ಕಂಡು ಹಿಡಿಯಬೇಕೆಂದು ಜನರು ಪ್ರಯತ್ನಪಡುತ್ತಲಿರುವುದು ವಾಚಕರಿಗೆ ತಿಳಿದ ಸಂಗತಿಯಷ್ಟೆ. ಮನುಷ್ಯನು ಸ್ವಾಭಾವಿಕವಾಗಿ ನೆಲದಮೇಲೆ ಸಂಚರಿಸತಕ್ಕ ಪ್ರಾಣಿಯಾಗಿರುತ್ತಾನೆ. ಹೀಗಿದ್ದರೂ ಅವನು ಅನೇಕ ರಥವಾಹನಗಳ ಸಹಾಯದಿಂದ ನೀರಿನಮೇಲೆ ಸಂಚರಿಸತಕ್ಕ ಉಪಾಯವನ್ನು ಕಂಡುಹಿಡಿದನು. ಈಚೀಚೆಗೆ ಅಂದರೆ ಸುಮಾರು ಇಪ್ಪತ್ತು ವರುಷಗಳಿಂದ ನೀರಿನೊಳಗೂ ಸಂಚರಿಸುವ ಉಪಾಯವನ್ನೂ ಕೂಡ ಕಂಡುಹಿಡಿದಿರುತ್ತಾನೆ. ವಿಮಾನಗಳು ನೀರಿನೊಳಗೆ ಸಂಚರಿಸುವಂತೆ ಕೆಲವು ಹಡಗುಗಳೂ ಸಂಚರಿಸುವವು.

ಆಕಾಶದಲ್ಲಿ ಸಂಚರಿಸುವುದಕ್ಕೆ ಕೆಲವು ಉಪಾಯಗಳನ್ನು ಕಲ್ಪಿಸಿಕೊಂಡಿರುವರು. ಆಕಾಶಬುಟ್ಟಿಯಂತೂ ನಮ್ಮ ದೇಶಕ್ಕೆ ಹೊಸದಲ್ಲ. ಕೆಲವು ಯಂತ್ರಗಳ ಶಕ್ತಿಯಿಂದ ಆಕಾಶಬುಟ್ಟಿಯನ್ನೂ ಕೂಡ ನಮ್ಮ ಇಚ್ಛೆಗೆ ನಡಿಸಿಕೊಂಡು ಹೋಗಬಹುದು. ಇದಕ್ಕೂ ಪಕ್ಷಿಗಳಿಗೆ ರೆಕ್ಕೆಗಳಿರುವ ಪ್ರಕಾರ ಎರಡು ಕಡೆ ದೊಡ್ಡ ರೆಕ್ಕೆಗಳಿರುವವು. ಮತ್ತು ಈ ರೀತಿಯ ಆಕಾಶ ಬುಟ್ಟಿಯು ಗಂಜೀಫಿನ ಚಿಟ್ಟೆಯಂತೆ ಮಧ್ಯದಲ್ಲಿ ದುಂಡಾಗಿಯೂ ಕೊನೆಗಳಲ್ಲಿ ಚೂಪಾಗಿಯೂ ಇರುವವು. ಇದರೊಳಗೆ ಗ್ಯಾಸ್ ಎಂಬ ಗಾಳಿಯನ್ನು ತುಂಬಿಸಿದ ಕೂಡಲೇ ಇದು ಮೇಲಕ್ಕೆ ಏರುವುದು. ಈ ಗಾಳಿಯು ಸಾಮಾನ್ಯವಾದ ವಾಯುವಿಗಿಂತ ಭಾರದಲ್ಲಿ ಕಡಿಮೆಯಾಗಿರುವುದರಿಂದ ಇದು ಮೇಲಕ್ಕೆ ಏಳುತ್ತದೆ. ಆಕಾಶಬುಟ್ಟಿಗಳು ಅಂತರಿಕ್ಷದಲ್ಲಿ ಸಂಚರಿಸುವುದಕ್ಕೆ ಇದೇ ಪ್ರಧಾನ ಮುಖ್ಯವಾದ ಕಾರಣ.

ಹ್ಯಾಗೂ ಆಕಾಶಬುಟ್ಟಿಯನ್ನು ಒಂದೇ ಕಡೆ ನಿಲ್ಲಿಸುವುದು ಕಷ್ಟ. ಅದು ಆಕಾಶದಲ್ಲಿ ಸಂಚರಿಸದೇ ಇದ್ದಾಗ ಅದನ್ನು ನೆಲದ ಮೇಲಿನ ಒಂದು ಗೂಟಕ್ಕೆ ಕಟ್ಟಬೇಕು. ನೀರಿನಲ್ಲಿ ಒಂದು ಬೆಂಡನ್ನು ಹಾಕಿದರೆ ಅದು ಮೇಲಕ್ಕೆ ತೇಲುವುದಲ್ಲವೇ? ಆದರೆ ಅದೇ ಬೆಂಡನ್ನು ನೀರಿನ ಮಧ್ಯದಲ್ಲಿ ನಿಲ್ಲಿಸಬೇಕಾದರೆ ಅದಕ್ಕೆ ಒಂದು ದಾರವನ್ನು ಕಟ್ಟಿ ನೀರಿನೊಳಕ್ಕೆ ಎಳೆದು ಹಿಡಿದಿರಬೇಕಾಗುತ್ತದೆ. ದಾರವನ್ನು ಬಿಟ್ಟಾಕ್ಷಣವೇ ಅದು ಮೇಲಕ್ಕೆ ಬಂದುಬಿಡುವುದು. ಆಕಾಶದಲ್ಲಿ ಆಕಾಶಬುಟ್ಟಿಯ ಸ್ಥಿತಿಯೂ ಇಂಥಾದ್ದೇ. ಐರೋಪ್ಯಖಂಡದಲ್ಲಿ ವಾಸಮಾಡುತ್ತಿರುವ ಬೇರೆ ಬೇರೆ ಜನಾಂಗದವರು ತಮ್ಮ ಸೈನ್ಯದ ಇಲಾಖೆಗಳಲ್ಲಿ ಇಂಥಾ ನೂತನವಾದ ಆಕಾಶಬುಟ್ಟಿಗಳನ್ನು ಉಪಯೋಗಿಸುತ್ತಿರುವರು. ಕೆಲವು ಸಮಯಗಳಲ್ಲಿ ಈ ವಿಮಾನಗಳು ಗಾಳಿಗೆ ಎದುರಾಗಿಯೂ ಕೂಡ ಸಂಚರಿಸುವುದುಂಟು.

ಆದರೆ ಆಕಾಶಬುಟ್ಟಿಗಳಿಗಿಂತಲೂ ಉತ್ತಮವಾದ ಒಂದು ಆಕಾಶವಿಮಾನವನ್ನು ಕಂಡುಹಿಡಿಯಬೇಕೆಂದು ಶಾಸ್ತ್ರಜ್ಞರು ಅನೇಕ ವರುಷಗಳಿಂದ ಪ್ರಯತ್ನಪಡುತ್ತಿದ್ದದ್ದು ಹೊಸ ಸಂಗತಿಯಲ್ಲ. ಅವರು ಮುಖ್ಯವಾಗಿ ಪಕ್ಷಿಗಳ ಸಂಚಾರ, ಅವುಗಳು ರೆಕ್ಕೆ ಆಡಿಸುವ ವಿಧಾನ, ಇವುಗಳನ್ನು ದೀರ್ಘವಾಗಿ ಯೋಚಿಸುತ್ತಿದ್ದರು. ಪಕ್ಷಿಯು ವಾಯುವಿಗಿಂತಲೂ ಭಾರವಾದುದೆಂದು ಎಲ್ಲರೂ ತಿಳಿದಿರುವರು. ಒಂದು ಪಕ್ಷಿಗೆ ರೆಕ್ಕೆಗಳನ್ನು ಕಟ್ಟಿ ಮೇಲಕ್ಕೆ ಎಸೆದರೆ ಅದು ಭೂಮಿಯ ಮೇಲೆ ಬೀಳುವುದು. ಆದರೂ ಅದು ಆಕಾಶದಲ್ಲಿ ಸಾಧಾರಣವಾಗಿ ಸಂಚರಿಸುವುದಕ್ಕೆ ಕಾರಣವೇನು? ಕೆಲವು ಸಮಯಗಳಲ್ಲಿ ಅವು ರೆಕ್ಕೆಗಳನ್ನು ಅಲ್ಲಾಡಿಸದೆ ಆಕಾಶದಲ್ಲಿ ತೇಲುವುದನ್ನು ಎಲ್ಲರೂ ನೋಡಿರುವರು. ಇದಕ್ಕೆ ಕಾರಣವೇನು? ಎಂಬೀ ಸಂಗತಿಗಳನ್ನು ದೀರ್ಘವಾಗಿ ಯೋಚಿಸತಕ್ಕದ್ದಾಗಿರುತ್ತದೆ. ಆಕಾಶದಲ್ಲಿ ಪಕ್ಷಿಗಳು ಸಂಚರಿಸುವಾಗ ತಮ್ಮ ರೆಕ್ಕೆಗಳನ್ನು ಒಂದು ವಿಧವಾಗಿ ಚಾಚಿ ಗಾಳಿಯ ಒತ್ತಡವನ್ನು ಉಪಯೋಗಿಸಿಕೊಳ್ಳುತ್ತವೆ. ಗಾಳಿ ಪಟವನ್ನು ನೋಡಿದರೆ ಈ ಸಂಗತಿಯು ಗೊತ್ತಾಗುವುದು. ಪಟವು ಸೂತ್ರದಾರದ ಮೂಲಕ ಒಂದು ವಿಧವಾಗಿ ಹಾರಿಕೊಂಡು ಆಕಾಶದಲ್ಲಿ ಆಡುವುದು. ಅದು ತಟ್ಟೆಯಾಗಿ ಮಾಗಿಕೊಂಡರೆ ತಕ್ಷಣವೇ ಭೂಮಿಗೆ ಬಂದು ಬೀಳುವದು. ಪಕ್ಷಿಗಳು ತಮ್ಮ ರೆಕ್ಕೆಗಳನ್ನು ಚಾಚಿಕೊಂಡು ಆಕಾಶದಲ್ಲಿ ತೇಲುತ್ತಿರುವಾಗ ಅವುಗಳ ರೆಕ್ಕೆಗಳ ಕೆಳಭಾಗದಲ್ಲಿ ಗಾಳಿಯ ಅಲೆಯು ಬೀಸುವುದರಿಂದ ಅವು ಆ ರೀತಿಯಲ್ಲಿ ತೇಲುತ್ತವೆ. ಇದೇ ರೀತಿಯಲ್ಲಿ ಗಾಳಿ ಪಟವು ಸಹ ಆಕಾಶದಲ್ಲಿ ತೇಲುವುದು.

ಪಕ್ಷಿಗಳು ಹಾರುವ ರೀತಿಯನ್ನನುಸರಿಸಿ ಆಕಾಶ ವಿಮಾನವನ್ನು ಕಟ್ಟಿದರೆ ಪ್ರಯತ್ನವು ಸಫಲವಾಗಬಹುದೆಂದು ಶಾಸ್ತ್ರಜ್ಞರು ಯೋಚಿಸಿ ಅದೇ ರೀತಿಯಲ್ಲಿ ಒಂದು ಯಂತ್ರವನ್ನು ಮಾಡಿರುತ್ತಾರೆ. ಇದರೊಳಗೆ ಯಾವ ವಿಧವಾದ ಗ್ಯಾಸ್ ಗಾಳಿಯೂ ಇರುವುದಿಲ್ಲ. ಇದು ಪಕ್ಷಿಯಂತೆ ಸ್ವಪ್ರಯತ್ನದಿಂದಲೇ ಆಕಾಶದಲ್ಲಿ ಹಾರಬೇಕಾದ್ದು. ಇದಕ್ಕೆ ಒಟ್ಟಿಯ ರೆಕ್ಕೆಗಳಿರುತ್ತವೆ. ಒಳಗಡೆ ಒಂದು ಯಂತ್ರದ ಶಕ್ತಿಯಿಂದ ಇದು ಚಲಿಸುವುದು. ಚಲಿಸುವ ಸಮಯದಲ್ಲಿ ಗಾಳಿಯ ಅಲೆಯು ಇದರ ಕೆಳಗಡೆಯಲ್ಲಿ ಪ್ರವೇಶಿಸಿ ಇದನ್ನು ಮೇಲಕ್ಕೆ ಎತ್ತುವುದು. ಕಳೆದ ತಿಂಗಳು ಪ್ಯಾರಿಸ್ ಪಟ್ಟಣದಲ್ಲಿ ಈ ನೂತನ ರೀತಿಯ ವಿಮಾನಗಳ ಪಂದ್ಯವು ಜರುಗಿತು. ಅಗ್ರಸ್ಥಾನದವರು ಒಂದು ಹಾರುವ ಯಂತ್ರವನ್ನು ಕಂಡುಹಿಡಿದು, ಅದನ್ನು ಹತ್ತು ಸಾವಿರ ಗಜಗಳ ಆಚೆ ನೆಲವನ್ನು ಸ್ವಲ್ಪವಾದರೂ ಮುಟ್ಟದಂತೆ ನಡಿಸಿಕೊಂಡು ಹೋಗಿ ಪುನಃ ತಾವಿದ್ದ ಸ್ಥಳಕ್ಕೆ ಬಂದರೆ ಅಂಥವರಿಗೆ ಒಂದು ಭಾರಿ ಬಹುಮಾನವು ದೊರಕುವುದೆಂದು ಪ್ರಕಟಿಸಿದ್ದರು. ಈ ಬಹುಮಾನವನ್ನು ಫಾರ್ಮನ್ ಎಂಬಾತನು ಪಡೆದುಕೊಂಡನು. ಇದು ಹಾರುವ ಯಂತ್ರಗಳಲ್ಲಿ ಮೊದಲನೇದೆಂದು ಹೇಳಬಹುದು.

[illegible]ಗೆ ಒಂದು ಭಾರವಾದದನ್ನು ಕಟ್ಟಿದರೆಂತಲೂ, [illegible] [illegible]ಯಲ್ಲಿ ತಮ್ಮ ಹುಡುಗನು ಅಪರಾಧಿಗಳ ಜತೆಯಲ್ಲಿ [illegible] ಬಿಡಲಿಲ್ಲವೆಂತಲೂ, ಏನೇನೋ ಹಾನಿ ತಮ್ಮ ಬಾಲ[illegible]ಗಿರುವದೆಂತಲೂ ಸಮಾಧಾನಸಿರುವದಾಗಿ ಅವನ ತಂದೆತಾಯಿ [illegible]ವರು

ಘಾತುಕರ ಚಾತುರ್ಯ

[illegible]ಅಪರಾಧಿಗಳ ಚಾತುರ್ಯವು ಅಷ್ಟಿಷ್ಟೆಂದು ಹೇಳಲಿಕ್ಕೆ ಆಗುವ[illegible] ಅಪ್ಪಾಜಿ ಎಂಬ ತರುಣನನ್ನು ಕೊಂದ ಕೂಡಲೆ [illegible]ಗಳಿಗೆ ಹೋಗಿ, ಅವನು ಅಲ್ಲಿರುವದಾಗಿ ತಂದೆ ತಾಯಿಗ[illegible] ಹೆಸರಿನಲ್ಲಿ ಅಲ್ಲಿಂದ ಒಂದು ತಂತಿಯನ್ನು ಕೊಟ್ಟರು [illegible] ದಿನಗಳಾದ ನಂತರ ಮುಂಬಾಯಿಯಲ್ಲಿರುವದಾಗಿ ಮ[illegible] ತಂತಿಯನ್ನು ಕೊಟ್ಟರು ಈ ವಿಧವಾದ ಸುಳ್ಳು ವರ್ತ[illegible] ನಂಬಿ ತಮ್ಮ ಮಕ್ಕಳು ಜೀವದಲ್ಲಿದ್ದಾರೆಂದು ತಂದೆ ತಾ[illegible]ಯಿಸಿದ್ದರು

[illegible]ದಿನ ಆಲಸ್ಯರಿನಲ್ಲಿ ನಡಿಸಿರುವ ಕೊಲೆಗಳು

[illegible]ವನ್ನು ಸಂಬಿನ ಆಲಸ್ಯರಿನಲ್ಲಿ ಕೊಲೆಮಾಡಿರುವದಾಗಿ ಅ[illegible] ತಿಳಿಸಲು, ಪೋಲೀಸಿನವರು ಅಪರಾಧಿಗಳನ್ನು ವಂದಿನ[illegible]ರ ಮುಂದೆ ಕಳೆದ ಬುಧವಾರ ಹಾಜರುಮಾಡಿ, ಶವ[illegible] ತೆಗೆಯುವದಕ್ಕೆ ಅಪ್ಪಣೆಯನ್ನು ಪಡೆದರು ಗುರುವಾರ [illegible] ಶವಗಳನ್ನು ಅಗೆದು ತೆಗೆಯುವದಕ್ಕೆ ಪ್ರಾರಂಭಿಸಿದರು

ಒಂದು ಗುಂಡಿಯಲ್ಲಿ ಎರಡು ಶವಗಳು

[illegible] ನೋಡುವಲ್ಲಿ ಒಂದು ಗುಣಿಯಲ್ಲಿ ಎರಡು ಶವಗಳು ಸಿಕ್ಕಿ[illegible] ಶವಗಳು ಒಂದು ಮಗ್ಗಲಲ್ಲಿ ಒಂದು ಹೂಳಲ್ಪಟ್ಟಿದ್ದವು ಒಂ[illegible] ವಿಶ್ವನಾಥ ಎಂಬ ತರುಣನದೆಂದು ಅಪರಾಧಿಗಳು ಗುರ್ತ[illegible] ಈ ತರುಣನು ಪೇಟೆ ಸಾಹುಕಾರ ಫೋಟೋ[illegible]ಯಲ್ಲಿ ಕೆಲ[illegible] ವರ್ಷದ ಹಿಂದೆ ಈ ತ[illegible]ನ್ನು ತಂದೆತಾಯಿಗಳು [illegible] ಸಿಕ್ಕದೆ ಹೋ[illegible] ಪೋಲೀಸಿಗೆ ಫಿರ್ಯಾದನ್ನು ಕೊಟ್ಟು, ತಮ್ಮ ಹುಡುಗನನ್ನು [illegible]ಕೊಟ್ಟವರಿಗೆ ೧೦೦ ರೂಪಾಯಿ ಬಹುಮಾನ ಕೊಡುವ[illegible] ಹೇಳಿದ್ದರು ಇವೆಲ್ಲವೂ ವಿಸ್ಮಯಜನಕವಾದವು ಈ [illegible] ಎಂಬ ತರುಣನನ್ನು ಒಬ್ಬ [illegible] [illegible] ಕೊಂಡು ಹೋಗುವದಾಗಿ ಅವನನ್ನು ತೋರಿಸಿ, ಅ[illegible] ಆಲಸ್ಯರಿನ ಮನೆಗೆ ಕರಕೊಂಡ [illegible]ಯು ಬರುವ [illegible] [illegible] ಸಾವಿರ ರೂಪಾಯಿಯನ್ನು ಕಳೆಯಿಂದು [illegible] [illegible] ಅವನ ಮೈಮೇಲಿದ್ದ ೨,೦೦೦ [illegible] ಒಡವೆಗಳನ್ನು ಅಪಹರಿಸಿಕೊಂಡನೆಂದು ಅಪರಾಧಿಗಳ[illegible]ರು

[illegible] ದೌರ್ಭಾಗ್ಯ

ಮತ್ತೊಂದು ಶವವು ಕೃಷ್ಣಶೆಟ್ಟಿ ಎಂಬ ತರುಣನದು ಈ ತರು[illegible] ಒಡವೆಗಳ ಆಸೆಗೆ ಕೊಲ್ಲಲಿಲ್ಲವೆಂದೂ, ಕೃಷ್ಣಶೆಟ್ಟಿಯು [illegible] ವಿಶ್ವನಾಥನ ಜೊತೆಯಲ್ಲಿ ಬರುತ್ತಿದ್ದದರಿಂದ [illegible] ಪಟ್ಟಿದೆ ಇರುವದಕ್ಕಾಗಿ ಅವನನ್ನು ಸಹಾ ವಿಶ್ವನಾ[illegible] ಜೊತೆಯಲ್ಲಿ ಕೊಲ್ಲಬೇಕಾಗಿ ಬಂತೆಂದೂ ಅಪರಾಧಿಗಳು [illegible]ರು

ವಿಸ್ಮಿತವಾದ ಘಾತಕತನ

[illegible]ಯಿಂದ ಜೀರ್ಣಿಸಿಕೊಳ್ಳುತ್ತ ಅಪರಾಧಿಗಳನ್ನು ಪೋಲೀಸಿನ[illegible]ಯಿಂದ ಹೇಗಲು, ಇಲ್ಲಿ ಗೋವಿಂದಾಚಾರಿ ಎಂಬ [illegible]ನನ್ನು [illegible] ಹೇಳಿದರು ಸದರಿ ಅಕ್ಕಸಾಲಿ [illegible] ಕೆಲವು ಒಡವೆಗಳನ್ನು ಮಾರುವದಕ್ಕೆ ಕೊಟ್ಟರಲು ಅವ[illegible] [illegible] ಸಂಶಯಪಟ್ಟು ಮಾಡಸು [illegible] [illegible] ಕೃತ್ಯಗಳು ತಿಳಿದಬಾರದೆಂಬ ಭಯದಿಂದ [illegible]ನ್ನು ಕೊಂದರೆಂದೂ ಅಪರಾಧಿಗಳು ಹೇಳಿರುವರು ಶವವನ್ನು [illegible] ನೋಡಲಾಗಿ ಬರೀ ಅಸ್ಥಿಗಳು ಮಾತ್ರ ಇದ್ದವು ಈ ಅಕ್ಕಸಾ[illegible] ವಿಷ [illegible] [illegible] [illegible] [illegible]

ಅಪರಾಧಿಗಳ [illegible]

ಅಪರಾಧಿಗಳ [illegible] ಒಂದು [illegible] ವಿಷ ಹಾಕಿದ [illegible]ನ್ನು [illegible] ಸ್ಮೃತಿ ತಪ್ಪಿಸುವ ಮದ್ದನ್ನು [illegible] [illegible] [illegible] ಕೊಳ್ಳುವದು [illegible] ಘಾತುಕ ಕೆಲಸಗಳನ್ನು [illegible] ಪೋಲೀಸಿನವರಿಗೆ ಗುಮಾನಿ [illegible] ಎರಡು ವರ್ಷ ಕಾಲ ತಪ್ಪಿರುವ ಇದಲ್ಲದೆ ಒಡವೆಗ[illegible] [illegible] ಮದರಾಸು ನೋಡಲೆಂದ ದೊಡ್ಡ ಪಟ್ಟಣಗ[illegible] [illegible] ಇನ್ನು ಕೆಲ [illegible] ಉದ್ದೇಶದಿಂದಲೇ [illegible] ಮದರಾಸಿನಿಂದ ಬೆಂಗಳೂರಿಗೆ ಕರೆದು[illegible] [illegible] ದಿನಗಳ ಕಾಲ [illegible] ತಮ್ಮ ಮನೆಯಲ್ಲಿ ಇಟ್ಟು[illegible] ಕೊಲ್ಲುವದಕ್ಕೆ ಸಮಯ ಸಿಕ್ಕದೆ ಹೋದುದರಿಂದ [illegible]ಬಿಟ್ಟರೆಂದು ಗೊತ್ತಾಗಿದೆ —ನ

ಇಂಡಿಯಾ ದೇಶದ ವೃತ್ತಾಂತಗಳು

ಈಶೀ ವರ್ತಮಾನಗಳನ್ನು ಬರೆದು ಕೊಡತಕ್ಕಂಥಾ [illegible] [illegible] ಗವರ್ನ್‌ಮೆಂಟಿನವರು ಇಷ್ಟರಲ್ಲೇ ಸ್ವಲ್ಪ ಮಟ್ಟಿಗೆ ಬದಲಾಯಿ[illegible]ಗಿದಾರೆ

***

ಮೆಸ್ಸರ್ಸ್ ವೈಟ್‌ವೇ ಲೇಡ್ಲಾ ಎಂಬ ಕಂಪನಿಯವರು ಕಲ್ಕ[illegible] [illegible]ದಲ್ಲಿ ತಮ್ಮ ಲಕ್ಷ ರೂಪಾಯಿ ಮುಟ್ಟಿಸಿ ಬಹು ಅಲಂಕಾ[illegible] ಅಂಗಡಿ ಮಳಿಗೆಯನ್ನು ಕಟ್ಟಿಸಿಕೊಳ್ಳುವವರಾಗಿದಾರೆ

[illegible] ತಾರೀಖು [illegible]ನೆ ಸಾಲಿನಲ್ಲಿ ಹಿಂದುಸ್ಥಾನದ [illegible]ಳಲ್ಲಿ ನೂಲ್ಯವನ್ನು ಭೂಮಿ ಹಾಕಿದ್ದರಿಂದ [illegible] ಕಳೆದು ಗವರ್ನ್‌ಮೆಂಟಿಗೆ ೩೦ ಲಕ್ಷ ರೂಪಾಯಿ ಹುಟ್ಟುವಳಿ ಆಯಿತೆಂದು ತಿಳಿಯುತ್ತದೆ.

***

ನೆನ್ನೆ ಸಾಯಂಕಾಲ ಮದರಾಸ್ ಗವರ್ನರ್‌ರವರು ಪರಿವಾರಸಹಿತ ಮದರಾಸಿನಿಂದ ಹೊರಟರು ಈ ಹೊಗಳ [illegible] ತಂಜಾವೂರು ಜಿಲ್ಲೆಗಳಲ್ಲಿ ಸಂಚಾರ[illegible], [illegible] ಶುಕ್ರವಾರ [illegible]ಗ್ಗೆ ಮದರಾಸಿಗೆ ವಾಪಸು ಬರುವರಾಗಿದಾರೆ

***

ಉತ್ತರ ದೇಶಕ್ಕೆ ಸೇರಿದ ರಾಜಗಳು ಸಂಸ್ಥಾನದಲ್ಲಿ ರೀಜನ್ಸಿ ಕೌನ್ಸಿಲ್ ಮೆಂಬರಾದ ಖಾಲಿಫಾ ಸೈದ್ ಮಹಮದ್ ಹುಸ್ಸೇನ್ ಖಾನ್ ಬಹದೂರ್‌ಯವರು ಕಾಲವಾದದ್ದರಿಂದ ಆ ಸಂಸ್ಥಾನದವರೆಲ್ಲಾ ತುಂಬಾ ವ್ಯಸನಪಡುತ್ತಿರುವರಂತೆ ತಿಳಿದು ಬಂದಿದೆ

***

ಕೇಟಲಿ [illegible]ಗೆ ಸೇರಿದ [illegible] ಎಂಬ [illegible]ನಲ್ಲಿ ಬೆಳೆಗಳು ಕೆಟ್ಟುಹೋಗಿ ಧಾನ್ಯದ ಧಾರಣೆ ಬಹಳ ಹೆಚ್ಚಿರುವುದರಿಂದ ಕ್ಷಾಮ ಪ್ರಾಪ್ತವಾಗಿದೆ ಸರ್ಕಾರದವರು ಒಂದು ಧರ್ಮ ಫಂಡನ್ನು ಕೂಡಿಸಿ, ಕ್ಷಾಮಪೀಡಿತರನ್ನು [illegible]ತ್ತಿದಾರೆ

***

ಮೈಸೂರಿನ [illegible] ಕೆಲವು ದಿನಗಳಿಗಾಗಿ [illegible] [illegible] ಎಂಬುವನಾಗಿರುವದು ಇದಕ್ಕಾಗಿ ಮೈಸೂರಿನ [illegible]ಯವರು ಅಲ್ಲಿಗೆ ಹೋಗಿದ್ದರು ಕಳೆದವಾರ ಕಲ್ಕತ್ತೆಯಿಂದ [illegible] ಬಂದ [illegible] ಪ್ರಯಾಣಮಾಡಿದಾರೆ

***

ಸಿಂಗಪುರ ಜಮೀನ್‌ದಾರರಾದ ತೀರ್ಥಪತಿಯವರು ಅಂಬಾ ಸಮುದ್ರದಲ್ಲಿರುವ ಹಿಂದೂ ಸ್ಕೂಲಿನ ಮೂಲ ಧನಕ್ಕೆ ೧೦,೦೦೦ ರೂಪಾಯನ್ನು ದಾನವಾಗಿ ಕೊಟ್ಟರು ಇದಲ್ಲಗೆ ಆ ಸ್ಕೂಲ್ ಕಟ್ಟಡದ ಫಂಡಿಗೂ ಅವರು [illegible] ರೂಪಾಯಿ ಕೊಟ್ಟಿದಾರೆ

***

ಬೆಂಗಳೂರಿನಲ್ಲಿ ಮೇ ಸಿಂಗ್ ಎಂಬೊಬ್ಬ ಮುತ್ತಿನ ಸಾಹುಕಾರನು ತನ ಮನೆಯ ಮಹಡಿ ಅಂತಸ್ತಿನಲ್ಲಿ ಒಂದು [illegible] ಪೆಟ್ಟಿಗೆಯಲ್ಲಿ ಇಟ್ಟಿದ್ದ ಸುಮಾರು ೨೨ ಸಾವಿರ ರೂ [illegible] [illegible] ಒಗವೆಗಳೂ ಕಳುವಾಗಿವೆ ಎಂದು ಪೋಲೀಸಿಗೆ ತಿಳಿಸಿರುತ್ತಾನೆ

***

ವಿಜಯನಗರದ ಮಹಾರಾಜರವರ ಸಹೋದರಿಯು ಮದರಾಸ್ ಪಟ್ಟಣದ ವೈಲಾಪುರದಲ್ಲಿ ಹಿಂದೂ ಬಾಲಿಕಾ ಪಾಠಶಾಲೆಯನ್ನು ೧೦ ಸಾವಿರ ರೂಪಾಯಿ ವಿನಿಯೋಗಿಸಿ ಕಟ್ಟಿಸಿಕೊಡುವದಾಗಿ ವಾಗ್ದಾನಮಾಡಿದಾರೆ ಈ ಕಟ್ಟಡಕ್ಕೆ ಗವರ್ನರವರ ಪತ್ನಿಯವರು ಕಳೆದ ಶುಕ್ರವಾರ ಸಾಯಂಕಾಲ ಅಸ್ತಿಭಾರವನ್ನು ಹಾಕಿದರು

***

ಹಿಂದೂಸ್ಥಾನದಲ್ಲಿ ಪ್ಲೇಗ್ ಉಪದ್ರದಿಂದ ಆಗುವ ಮರಣಗಳು ಈಗೀಗ ಹೆಚ್ಚುತ್ತಲಿವೆ ಕಳೆದವಾರ ಒಟ್ಟು ೯,೦೧೮ ಮಂದಿ ವ್ಯಕ್ತಿಗಳು [illegible] [illegible] ಅಧಿಪತ್ಯದಲ್ಲಿ ೧, ೧೨ ಮರಣಗಳಾದವು, ಪಂಜಾಬ್ ೧೯, [illegible] ೨೧೧, ಸಂಯುಕ್ತ ಅಧಿಪತ್ಯಗ[illegible] [illegible] [illegible]ಗಿವೆ.

***

ಹಿಂದೂಸ್ಥಾನದ ವೈಸ್‌ರಾಯ್ [illegible] ಮಿಂಟೋ [illegible] ಈ ವರ್ಷ ಕಲ್ಕತ್ತೆಯಿಂದ ಪ್ರಸ್ಥಾನ[illegible]ಗಳಲ್ಲಿ ಸಂಚರಿಸುವ[illegible] [illegible] [illegible] [illegible] ಒಂದು [illegible] [illegible] [illegible] ಕಲ್ಕತ್ತೆಗೆ [illegible] ಬರುವವರಾಗಿದ್ದಾರೆ

***

[illegible] [illegible] [illegible] ಅವನ ಮಾರಸ[illegible]ನು [illegible] ಸಾಲದ ಪತ್ರಕ್ಕೆ [illegible] ಕೊಡಬೇಕೆಂತಲೂ, ಸಾಮಾನ್ಯವಾಗಿ ಸಾಲದ ಪತ್ರಕ್ಕೆ [illegible]ಯಲ್ಲಿ [illegible] [illegible] [illegible] ಕೆಲಸ ಮಾಡಬೇಕೆಂತಲೂ ಕಲ್ಕತ್ತೆಯ [illegible] [illegible] ಬಂಗಾಳ [illegible] [illegible] ಬರೆದುಕೊಂಡಿದೆ

***

[illegible] ಮದರಾಸ್ [illegible] ಸ್ಕೂಲ್ ಆಫ್ ಆರ್ಟ್ಸ್ ಎಂಬ ಕಲಾಶಾಲೆ[illegible] [illegible] [illegible] [illegible] [illegible] ವರ್ಗಗಳ ಪ್ರದರ್ಶನದಲ್ಲಿ [illegible] ಉತ್ತಮ ತರದ [illegible]ವನ್ನು ಪ್ರದರ್ಶನ ಮಾಡತಕ್ಕವರಿಗೆ [illegible] ಬಹುಮಾನವನ್ನು ಎರಡನೆಯ [illegible] ೧೫೦ ರೂಪಾಯಿ ಬಹುಮಾನವನ್ನು ಕೊಡುವದಾಗಿ ಪ್ರಕಟವಾಗಿದೆ

***

ಮದರಾಸ್ ಪಟ್ಟಣದಲ್ಲಿ [illegible] ಎಂಬುವವನ [illegible] ಎಂಬುವವನೂ [illegible] ಒಂದು ದೋಣಿಯೊಳಗೆ ಕುಳಿತು ಬರುತ್ತಿದ್ದಾಗ ೧೦ ಮ ಏ ಕಾಲ ಆಳುಗಳನ್ನು ದೋಣಿಯು ಮುಳುಗಿ ಹೋದರು ಬಿದ [illegible] ಕರೆಗೆ ತಂದ ಬಿಟ್ಟರು ಅವರಿಬ್ಬರ ಸಾಹಸವನ್ನು ಗವರ್ನ್‌ಮೆಂಟಿನವರು ಮೆಚ್ಚಿ ಅವರಿಗೆ ಬಂಗಾರದ [illegible]ವನ್ನು ಬಹುಮಾನ ಕೊಡಿಸಿದಾರೆ

***

ಉತ್ತರ ದೇಶದಲ್ಲಿ ಈಗ ಕ್ಷಾಮ ಬಾಧೆಯು ದಿನೇದಿನೇ ಪ್ರಬಲವನ್ನು ಹೆಚ್ಚಾಗಿ ಪೀಡಿಸುತ್ತಿದೆ ಕಳೆದವಾರ ಒಟ್ಟು ಐವತ್ತು ಲಕ್ಷ ಪ್ರಜೆಗಳು ಕ್ಷಾಮಪೀಡಿತರಾಗಿ, ಸರ್ಕಾರಿ ರಿಲೀಫ್ ಕಾಮಗಾರಿಗಳನ್ನು [illegible]ಯುತ್ತಲೂ, ಹಲವು ಧರ್ಮಶಾಲೆಗಳಲ್ಲಿದ್ದುಕೊಂಡೂ ಹೊಟ್ಟೆ ಹೊರಕೊಳ್ಳುತ್ತಿದ್ದರೆಂತಲೂ, ಈ ಪೈಕಿ ಸುಮಾರು ಆರು ಲಕ್ಷ ಜನರು [illegible] ಅಧಿಪತ್ಯಗಳ ಜನರೆಂತಲೂ ತಿಳಿದು ಬಂದಿದೆ

***

ಈಚೆಗೆ ಕೆಲವು ಕಾಲದಿಂದ ಸಿಂಧು ದೇಶದಲ್ಲಿ ಸಾಮಾನ್ಯವಾಗಿಯೂ ಕರಾಚಿ ಪಟ್ಟಣದಲ್ಲಿ ವಿಶೇಷವಾಗಿಯೂ ಪ್ರಜೆಗಳ ಪ್ರಾಣ, ಮಾನ, ಧನಗಳಿಗೆ ತುಂಬಾ ಕೊರತೆಯುಂಟಾಗುತ್ತಿರುವುದನ್ನು ನೋಡಿ, ಆ ಪ್ರಾಂತ್ಯದ ಪ್ರಜಾವತ್ಸಲರು ಅಲ್ಲಲ್ಲಿ ಸಭೆಸೇರುತ್ತಲೂ, ಪ್ರಜಾ ಸೌಖ್ಯವನ್ನು ಕಾಪಾಡುವುದಕ್ಕೆ ಅವಶ್ಯವಾದ ಏರ್ಪಾಡುಗಳನ್ನು ತ್ವರಿತವಾಗಿ ಮಾಡಬೇಕೆಂದ ಗವರ್ನ್‌ಮೆಂಟಿಗೆ ಅರ್ಜಿಗಳನ್ನು ಬರೆದುಕೊಳ್ಳುತ್ತಲೂ ಬಂದಿದಾರೆ

***

ಮದರಾಸ್ ಪಟ್ಟಣದಲ್ಲಿ ಪ್ರಸಿದ್ಧವಾದ ಕ್ರಿಶ್ಚಿಯನ್ ಕಾಲೇಜ್ ಎಂಬ ವಿದ್ಯಾಶಾಲೆಯನ್ನು ಬಡಾವಣೆ ಮಾಡುವುದಕ್ಕೆ [illegible] ವೆಸ್ಲಿಯನ್ ಸಂಘದವರು ಚಂದಾ ಎತ್ತಲಾರಂಭಿಸಿ ಸುಮಾರು ನಾಲ್ಕು ತಿಂಗಳಾಯಿತು ಸರ್ಕಾರದವರು ೫೦,೦೦೦ ರೂಪಾಯಿ ಕೊಟ್ಟರು ವಿಲಾಯತಿಯಲ್ಲಿ ೬೦,೦೦೦ ರೂಪಾಯಿಯೂ, ಹಿಂದೂಸ್ಥಾನದಲ್ಲಿ ೬೬,೦೦೦ ರೂಪಾಯಿಯೂ ಚಂದಾ ವಸೂಲಾಗಿದೆ ಅಂತು ಈ ಫಂಡಿನಲ್ಲಿ ೧ ಲಕ್ಷವೂ ೭೮ ಸಾವಿರ ದ್ರವ್ಯ ಕೂಡಿತು ಇನ್ನೂ ೧ ಲಕ್ಷವೂ ೨೨ ಸಾವಿರ ರೂಪಾಯಿ ತನಗೆ ಬೇಕಾಗುವುದೆಂದೂ, ದಿಕ್ಷಯ [illegible] ಈ ವಿದ್ಯಾಶಾಲೆಗೆ ದ್ರವ್ಯಸಹಾಯ ಮಾಡಬೇಕೆಂದೂ ಪ್ರಕಟಿಸಿರುತ್ತಾರೆ.

***

ಮದರಾಸ್ ಗವರ್ನ್‌ಮೆಂಟಿನಲ್ಲಿ ದೊಡ್ಡ ಅಧಿಕಾರಿಯಾಗಿರುವ ಸರ್ ಫ್ರೆಡ್ರಿಕ್ ನಿಕಲ್ಸನ್‌ರವರ ಬಳಿ ವಿ ವಿ ರಾಮಣ್ಣ ಎಂಬೊಬ್ಬ ವಿದ್ಯಾವಂತನು ಆಸಿಸ್ಟೆಂಟಾಗಿ ನೌಕರಿ ಮಾಡುತ್ತಿದ್ದನು ಅವನು ಎಂ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವನು ಈತನು ಆಫೀಸಿನ ಲೆಕ್ಕದ ಪುಸ್ತಕಗಳಲ್ಲಿ ಭತ್ಯ ಮತ್ತು ಪ್ರಯಾಣದ ಖರ್ಚೆಂದು ಬರೆದು, ಸಾವಿರ ಚಿಲ್ಲರೆ ರೂಪಾಯಿಯನ್ನು ಖಜಾನೆಯಿಂದ ತರಿಸಿ ತಿಂದು ಹಾಕಿದನೆಂದು ಮೋಕದ್ದಮೆ ಆಯಿತು. ಇದು ಕಳೆದವಾರ ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆಯಾಗಿ, ಜಡ್ಜಿಯವರು ಅಪರಾಧಿಗೆ ಆರು ತಿಂಗಳ ಕಠಿಣ ಸಜವನ್ನೂ ೮೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ

***

ಕಲ್ಕತ್ತೆಗೆ ಸೇರಿದ ಸಂಬಲ್ಪುರದಿನಲ್ಲಿ ಸೆಟ್ಲ್‌ಮೆಂಟ್ ಆಫೀಸರಾದ ಮೆ|| ಸುಂದರ್ ಎಂ ಎ ಅಧಿಕಾರಿಯು ಹೋಗುತ್ತಿರುವಾಗ್ಗೆ ಅವರಿಗೆ ತಿಳಿಯದಂತೆ ಒಬ್ಬ ಕೂಲಿಯವನು ಹೋಗಿ, ಅವರ ಕಾಲುಗಳನ್ನು ಹಿಡಿದುಕೊಂಡನೆಂತಲೂ, ಅವರಿಗೆ ಗಾಬರಿಯಾಗಿ ಕಾಲಿನಿಂದ ಅವನನ್ನು ಒದ್ದದ್ದರಿಂದ ಅವನು ದೂರದಲ್ಲಿ ಹೋಗಿ ಬಿದ್ದು ಅಲ್ಲೇ ಮೃತಪಟ್ಟನೆಂತಲೂ ಆ ಅಧಿಕಾರಿಯ ಮೇಲೆ ಮೊಕದ್ದಮೆ ಬಂದು, ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿದರು. ಮೃತಪಟ್ಟವನಿಗೆ ಹೊಟ್ಟೆಯಲ್ಲಿ ಒಂದು ರೋಗವು ಕಟ್ಟಿ ಹೋಗಿದ್ದದ್ದರಿಂದ ಅವನು ಸತ್ತನೆಂದೂ, ಆ ಅಧಿಕಾರಿಯ ಉದ್ದೇಶವೂ ಮರಣಕರವಾಗಿರಲಿಲ್ಲವೆಂದೂ [illegible] ಆದ್ದರಿಂದ ಆ ಅಧಿಕಾರಿಗೆ ಮ್ಯಾಜಿಸ್ಟ್ರೇಟರು ಹತ್ತು ರೂಪಾಯಿ ಜುಲ್ಮಾನೆ ವಿಧಿಸಿದರು

***

ಬಂಗಾಳಾ ಅಧಿಪತ್ಯಕ್ಕೆ ಸೇರಿದ [illegible] ಸಬ್ ಡಿವಿಜನ್‌ನಲ್ಲಿ ಕಳೆದ ಆರು ತಿಂಗಳಿಂದಲೂ [illegible] ನಾಣ್ಯಗಳ ಚಲಾವಣೆಯು ಬಹಳ ಹೆಚ್ಚಾಗಿತ್ತು ಅಲ್ಲಿನ ಪೋಲೀಸಿನವರು ಎಷ್ಟು ಸಾಹಸಪಟ್ಟರೂ ಆ ನಾಣ್ಯಗಳ ಪೂರ್ವೋತ್ತರ ತಿಳಿಯಲಿಲ್ಲ ಆದರೂ ಅವರು ಗುಮಾನಿ ಇಟ್ಟು ನೋಡುತ್ತ ಬರುವಲ್ಲಿ ಕೆಲವು ಜನರು ಬಹಳ ಬೇಗನೆ ಐಶ್ವರ್ಯವಂತರಾಗುತ್ತಿದ್ದರೆಂದು [illegible] ಕಡೆಗೆ ಖೋಟಾನಾಣ್ಯಗಳನ್ನು ತಯಾರುಮಾಡುತ್ತಿದ್ದ ಒಂದು ಹಳೇ ಮನೆಯ ಪತ್ತೆಯಾಗಿ, ಪೋಲೀಸಿನವರ ಅಪರಾಧಿಗಳ ಗುಂಪನ್ನೇ ಹಿಡಿಯಬೇಕೆಂದು ಆ ಮನೆಯ ಸುತ್ತಲೂ ಪಹರೆ ಇಟ್ಟು, ಒಳಕ್ಕೆ ನುಗ್ಗಿದರು ಕೆಲವು ಅಪರಾಧಿಗಳು ಆಗಲೂ ಕೈಗೆ ಸಿಕ್ಕದೆ ಪರಾರಿಯಾದರು ೧೨ ಮಂದಿಯನ್ನು ವಶಗಪಡಿಸಿದಂತೆ ಆ ಮನೆಯಲ್ಲಿ ಖೋಟಾನಾಣ್ಯಗಳ ತಯಾರಿಗೆ ಆ ದವರು ಉಪಯೋಗಿಸುತ್ತಿದ್ದ ಸಾಮಾನು ಸಲಕರಣಗಳೆಲ್ಲಾ ಸಿಕ್ಕಿವೆ ಮತ್ತು ಖೋಟಾನಾಣ್ಯಗಳು ಭರ್ತಿಯಾಗಿದ್ದ ಕೆಲವು ಚೀಲಗಳು ಕೂಡಾ ಪೋಲೀಸಿನವರಿಗೆ ದೊರಕಿರುತ್ತವೆ ತಪ್ಪಿಸಿಕೊಂಡು ಹೋದವರನ್ನು ಹಿಡಿಯಬೇಕೆಂದು ತರದೂದು ಮಾಡುತ್ತಿದಾರೆ

***

ಕಲ್ಕತ್ತಾ ಪಟ್ಟಣದಲ್ಲಿ ಬಂಗಾಳಾ ದೇಶೀಯ ವಿದ್ಯಾ ವರ್ಧಕ ಸಭೆ ಎಂಬೊಂದು [illegible] ಏರ್ಪಟ್ಟು ಎರಡು ವರುಷಗಳಿಂದ [illegible] ದೇಶೀಯ ವಿದ್ಯೆಯನ್ನು ಕಲಿಸ ಪುದಕ್ಕೆ ಸಾಹಸ ಪಡುತ್ತಿದೆ [illegible] [illegible] ವಿದ್ಯೆಗಳನ್ನು ಕಲಿಸುವುದಕ್ಕೆ ಒಂದು ದೊಡ್ಡ ವಿದ್ಯಾಶಾಲೆಯನ್ನು ಇಟ್ಟಿದಾರೆ ಈಗ ೨೬೦ ಮಂದಿ ವಿದ್ಯಾರ್ಥಿಗಳು ಅಲ್ಲಿ ಓದುವರು ಇವರು ಕೊಡತಕ್ಕ ಫೀಜು ಬಹಳ ಸ್ವಲ್ಪ ಭಾರಿಯಾದ ಸರಸ್ವತೀ ಭಂಡಾರವನ್ನು ವಿದ್ಯಾರ್ಥಿಗಳ ಪ್ರಯೋಜನಾರ್ಥವಾಗಿ ಕಲ್ಪಿಸಿದಾರೆ ಇವನ್ನೆಲ್ಲಾ ಅವಲೋಕಿಸಿ ನೋಡಿರುವ ಯೂರೋಪಿಯನ್ ಅಧಿಕಾರಿಗಳೂ ವಿದ್ಯಾವಂತರೂ ಈ ವಿದ್ಯಾಶಾಲೆಯ ಕಾರ್ಯಗಳನ್ನು ಸ್ತುತಿಸಿರುತ್ತಾರೆ ಈ ವಿದ್ಯಾಸಂಘದ ಮೂಲ ಧನದಿಂದವರುಷಕ್ಕೆ ೩೫,೦೦೦ ರೂಪಾಯಿ ಬಡ್ಡಿ ಉತ್ಪತ್ತಿಯಾಗುವುದು ಇದಲ್ಲದೆ ಅನೇಕ ಮಹನೀಯರು ಕೊಡುತ್ತಾ ಬಂದಿರುವ ಮಾಸಾಶನವು ೧೫,೦೦೦ ರೂಪಾಯಿ ಆಗುತ್ತದೆ ಈ ರೀತಿ ಉತ್ಪತ್ತಿಯಾಗುವ ಹಣದಿಂದ ಮೇಲ್ಕಂಡ ವಿದ್ಯಾಶಾಲೆಯನ್ನು ನಡಿಸುವುದಲ್ಲದೆ, ಆ ಸಂಘದವರು ಯೋಗ್ಯರಾದ ದೇಶೀಯ ಯೌವನಸ್ಥರನ್ನು ಪರರಾಜ್ಯಗಳಿಗೆ ಕಳುಹಿಸಿಕೊಟ್ಟು, ಕಸಬು ಶಾಸ್ತ್ರಾಭ್ಯಾಸಗಳನ್ನು ಕಲಿತು ಬರುವಹಾಗೆ ವಿನಿಯೋಗಿಸುತ್ತಿದಾರೆ

ಅಫ್ಘಾನಿಸ್ಥಾನದಲ್ಲಿದ್ದು ಈಗತಾನೆ ವಾಪಸು ಬಂದ ಇಬ್ಬರು ಇಂಗ್ಲೀಷರು ಅಲ್ಲಿನ ಸ್ಥಿತಿಯನ್ನು ಕುರಿತು ಬರೆಯುವುದೇನೆಂದರೆ-ಅಮೀರರು ಸಕೀ(ರ್)ಟು ಮಾಡುತ್ತಿದ್ದರೂ ರಾಜಧಾನಿಗೂ ಅವರು ಇರುವ ಸ್ಥಳಕ್ಕೂ ಪ್ರತಿದಿನವೂ ಜವಾನರು ಹೋಗಿಬರುತ್ತಾ, ಅವರಿಂದ ರಾಜ್ಯದ ಎಲ್ಲಾ ಹುಕುಮುಗಳೂ ಅವರು ಕಾಬೂಲಿನಲ್ಲಿರುವಂತೆಯೇ ನಡೆಯುತ್ತವೆ ಅವರು ಎಲ್ಲಿದ್ದರೂ ಪ್ರತಿ ಸಂದರ್ಭದಲ್ಲೂ ಅಲ್ಲಿಂದಲೇ ಅವರು ಹುಕುಂ ಬರೆದು ಕಳುಹಿಸುತ್ತಾರೆ ಅಮೀರರ ತಾಯಿಯವರು ೯ ಮಂದಿ ಯೂರೋಪಿಯ ೯ ಗಂಡಸರೂ ಇಬ್ಬರು ಹೆಂಗಸರೂ ಇದಾರೆ ಒಬ್ಬ ಯೂರೋಪಿಯನ್ ಸ್ತ್ರೀಯನ್ನು ಅಮೀರರು ತಮ್ಮ ರಾಣಿಯವರ ಕೂಡ ಇರುವುದಕ್ಕೆಂದು ಕರೆಸಿದ್ದರು ಆದರೆ ರಾಣಿಯವರು ಪರದೇಶೀಯ ಸ್ತ್ರೀಯನ್ನು ತನ್ನ ಬಳಿ ಇಟ್ಟುಕೊಳ್ಳುವುದಕ್ಕೆ ಇಷ್ಟಪಡದೆ ವಾಪಸು ಕಳುಹಿಸಿಬಿಟ್ಟರು ಕಾಬೂಲ್ ರಾಜಧಾನಿಯಲ್ಲಿ ರಷ್ಯಾ ಜನರ್‍ಯಾರೂ ಇರುವಂತೆ ಕಾಣುವುದಿಲ್ಲ ಅಮೀರರು ಯಾವಾಗಲೂ ಯಾವ ಕಾರ್ಯವನ್ನು ಮಾಡುವರೋ, ಎಲ್ಲಿಗೆ ಪ್ರಯಾಣ ಮಾಡುವರೋ ಯಾರಿಗೂ ಹೇಳುವುದೇ ಇಲ್ಲ ನಾಡ್ದು ಗುಂಡು ಬಂದೂಕುಗಳನ್ನು ತಯಾರುಮಾಡತಕ್ಕವರೆಲ್ಲಾ ಆಫ್ಘಾನ್ ಪ್ರಜೆಗಳೇ ಆಗಿದಾರೆ ಆ ಕಾರ್ಖಾನೆಗಳಲ್ಲಿ ಯೂರೋಪಿಯನ್ ಕಾರೇಗಾರರ್‍ಯಾರೂ ಇಲ್ಲ ಎಂಬುದೇ

***

ಮದರಾಸ್ ಅಧಿಪತ್ಯಕ್ಕೆ ಸೇರಿದ ಎಲ್ಲಾ ಜಿಲ್ಲೆಗಳಲ್ಲೂ ಸರ್ಕಾರಿ ಜೈಲ್‌ಖಾನೆಗಳಿರುತ್ತವಷ್ಟೆ ಅವುಗಳಲ್ಲಿರತಕ್ಕ ಬಂದೀವಾನರನ್ನು ನೋಡುವುದಕ್ಕೂ ಅವರಿಗಿರತಕ್ಕ ಕಷ್ಟಸುಖಗಳನ್ನು ವಿಚಾರಿಸಿ ಕ್ರಮಪಡಿಸುವುದಕ್ಕೂ ಗವರ್ನಮೆಂಟಿನವರು ಈಗ ಏರ್ಪಾಡು ಮಾಡಿರುತ್ತಾರೆ ಆಯಾ ಕಡೆಗಳಲ್ಲಿ ದೊಡ್ಡಮನುಷ್ಯರಾಗಿಯೂ ಪ್ರಜೆಗಳಲ್ಲಿ ಗಣ್ಯರಾಗಿಯೂ ಇರುವಂಥಾ ಬೇರೋಜುಗಾರರಾದ (ಅಂದರೆ, ಸರ್ಕಾರಿ ಉದ್ಯೋಗಸ್ಥರಲ್ಲದಂಥಾ) ವಿದ್ಯಾವಂತರನ್ನು ಜೈಲ್‌ಖಾನೆಗಳ ವಿಸಿಟಿಂಗ್ ಮೆಂಬರುಗಳಾಗಿ ನೇಮಿಸಬೇಕೆಂದೂ, ಜೈಲ್‌ಖಾನೆಗಳಲ್ಲಿ ನಡಿಯತಕ್ಕ ಕ್ರಮಗಳನ್ನೆಲ್ಲಾ ಜೈಲುಗಳ ಅಧಿಕಾರಿಗಳು ಅವರಿಗೆ ಹೇಳಿ ತಿಳಿಸಬೇಕೆಂದೂ, ಅವರು ಆ ಕ್ರಮಗಳಿಗನುಸಾರವಾಗಿ ಬಂದೀಖಾನೆಗಳಿಗೆ ಆಗಾಗ್ಗೆ ಹೋಗಿ ಅಲ್ಲಿ ನಡಿಯತಕ್ಕ ಕಾರ್ಯಗಳನ್ನು ನೋಡುತ್ತಲೂ, ಬಂದೀವಾನರ ಕೂಡ ಮಾತನಾಡಿ ಅವರ ಇಂಗಿತಗಳನ್ನು ತಿಳಿಯುತ್ತಲೂ, ಲೋಪಗಳೇನಾದರೂ ಕಂಡುಬಂದರೆ ಜೈಲ್ ಅಧಿಕಾರಿಗಳಿಗೆ ತಿಳಿಸಿ ಕ್ರಮಪಡಿಸುತ್ತಲೂ ಬರಬೇಕೆಂದೂ ಗವರ್ನರವರು ಹುಕುಂ ಕೊಟ್ಟಿದಾರೆ ಜಿಲ್ಲೆಗಳ ಕಲೆಕ್ಟರುಗಳು ಅಂಥಾ ಮೆಂಬರುಗಳನ್ನು ಚುನಾಯಿಸಿ ನೇಮಿಸುವರು ಮದರಾಸ್ ಪಟ್ಟಣದಲ್ಲಿರತಕ್ಕ ಜೈಲುಗಳಿಗೆ ಅಲ್ಲಿನ ಪೋಲೀಸ್ ಕಮೀಷನರು ಮೆಂಬರುಗಳನ್ನು ನೇಮಕಮಾಡುವರು ಒಂದಾವರ್ತಿ ನೇಮಕವಾದವರು ಎರಡು ವರುಷಗಳವರೆಗೆ ಮೆಂಬರಗಳಾಗಿರತಕ್ಕದ್ದೆಂದು ನಿಷ್ಕರ್ಷೆ ಮಾಡಲ್ಪಟ್ಟಿದೆ ಇದು ಪ್ರಜಾರಂಜಕವಾದ ಏರ್ಪಾಡೆನ್ನುವುದಕ್ಕೆ ಸಂಶಯವಿಲ್ಲ

ಮೈಸೂರು ಗೆಜೆಟ್ ಸಂಗ್ರಹ

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ಮೆ॥ ಎಂ ಕಾಂತರಾಜೇ ಅರಸಿನವರಿಗೆ ಕ್ರಿಸ್ಮಸ್ ರಜದೊಂದಿಗೆ ಎರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಮೈಸೂರು ಸೀನಿಯರ್ ಅಸಿಸ್ಟೆಂಟ್ ಕಮೀಷನರ್ ಮೆ॥ ವಿ ಆರ್ ತ್ಯಾಗರಾಜ ಅಯ್ಯರವರಿಗೆ ಜನವರಿ ೨೮ ರಿಂದ ಅರ್ಧ ತಿಂಗಳ ಸಂಬಳವಿಲ್ಲದ ರಜಾ ಕೊಟ್ಟಿದೆ

ಹಾಸನದ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ॥ ಎಚ್ ನಾರಾಯಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಹಾಸನದ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮೆ॥ ಎಂ ರಂಗರಾಯರು ೫ನೇ ಕ್ಲಾಸ್ ಅಸಿಸ್ಟೆಂಟ್ ಕಮೀಷನರಾಗಿ ಬದಲಿ ನೋಡುವಂತೆ ನೇಮಿಸಲ್ಪಟ್ಟು, ತಮ್ಮ ಇತರ ಕೆಲಸಗಳ ಕೂಡ ಹಾಸನದ ಡಿಸ್ಟ್ರಿಕ್ಟ್ ಪೋಲೀಸ್ ಆಫೀಸಿನ ಛಾರ್ಜನ್ನೂ ವಹಿಸಿರತಕ್ಕದ್ದು

ಚಿಗ್ಗದೇವನ ಕೋಟೆ ತಾಲ್ಲೂಕು ಅಮಲ್ದಾರ್ ಮೆ॥ ಪಿ ರಂಗರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು ಡಿಸ್ಟ್ರಿಕ್ಟ್ ಶಿರಸ್ತೇದಾರ್ ಎಸ್ ವಿ ಕೃಷ್ಣಸ್ವಾಮಿ ಐಯ್ಯರವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹೆಗ್ಗಡದೇವನಕೋಟೆ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಬಿ ಜಗನ್ನಾಥರಾಯರು ಪಿಂಚನ್ ಮೇಲೆ ನಿವೃತ್ತರಾದ ಸಬಬು ಹರೀಹರ ತಾಲ್ಲೂಕಿನ ಶಿರಸ್ತೇದಾರ್ ಎಸ್ ಸುಬ್ಬರಾಯರನ್ನು ಯಡೆಹಳ್ಳಿ ಸಬ್ ತಾಲ್ಲೂಕಿನ ಡಿಪ್ಯುಟಿ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲಾಗಿದೆ

ಮದ್ದಗಿರಿ ಸಬ್ ಡಿವಿಷನ್ ಅಸಿಸ್ಟೆಂಟ್ ಕಮೀಷನರ್ ಮೆ॥ ಸಿ ವೆಂಕಟರಾಯರಿಂದ ಡೆಪ್ಯುಟಿ ಕಮೀಷನರ್ ಮೆ॥ ಕೆ ದೇವರಾಮಯ್ಯರವರು ತುಮಕೂರು ಡಿಸ್ಟ್ರಿಕ್ಟಿನ ಮತ್ತು ಖಜಾನೆಯ ಛಾರ್ಜನ್ನು ಜನವರಿ ೩೧ ರಲ್ಲಿ ವಹಿಸಿಕೊಂಡಿರುತ್ತಾರೆ

ಅಸಿ॥ ಇಂಜನಿಯರ್ ಮೆ॥ ಎನ್ ಸಿ ನರಸಿಂಹಯ್ಯಂಗಾರ್‍ರು ಕಳೆದ ನವಂಬರ್ ೨೦ ರಿಂದ ಜನವರಿ ೧೧ರ ತನಕ ತುಂಕೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರಾಗಿ ಕೆಲಸ ಮಾಡಿರುತ್ತಾರೆ

ಮೈಸೂರು ಇನ್‌ಫೆಂಟ್ರಿ ೨ನೇ ಬಟಾಲಿಯನ್ ಕಮಾಂಡರ್ ರ್‍ಯಾಂಕಿನಲ್ಲಿ ಹವಲ್ದಾರ್ ಮೇಜರ್ ಅಬ್ದುಲ್ ಯವರನ್ನು ೩ನೇ ಗ್ರೇಡ್ ಜಮಾದಾರಿಗೆ ಜನವರಿ ೧ರ ಲಾಗಾಯ್ತು ಬಡ್ತಿ ಮಾಡಲಾಗಿದೆ

ಖಾತ್ರಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಅಂಥವುಗಳಿಗೆ ನಾವು ನಿಗಾ ಕೊಡಲಾರೆವು

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್‌ಪಾಂಡೆನ್ಸ್

ಮನೆ ಕಟ್ಟುವುದಕ್ಕೆ ಸ್ಥಳ ಬೇಕು

ಅಯ್ಯಾ,

ಚಿತ್ರದುರ್ಗದ ತಾಲ್ಲೂಕ್ ಹಿರೇಗುಂಟನೂರು ಎಂಬ ಗ್ರಾಮದಲ್ಲಿ ೨೦೦ ಮನೆಗಳಿವೆ ಈ ಊರಿನಲ್ಲಿ ನಾಳೆ ಬೆಳೆಗಳು ತಕ್ಕಷ್ಟಾಗಿ ಆಗಿವೆ. ಈ ಗ್ರಾಮದಲ್ಲಿ ಹವಾ ಚೆನ್ನಾಗಿಲ್ಲವೆಂದೂ, ಆಗಾಗ ಅಂದರೆ ತಿಂಗಳು ಒಂದಕ್ಕೆ ೨—೩ ಜನಗಳು ಮರಣಾಧೀನರಾಗುವರೆಂದೂ, ಜನಗಳಿಗೆ ಯಾವಾಗಲೂ ಖಾಯಿಲೆ ಜಾಸ್ತಿಯಾಗಿ ಇದ್ದೇ ಇರುತ್ತವೆಂದೂ, ಜನಗಳು ಇದನ್ನು ಬಿಟ್ಟು ಇಲ್ಲಿಗೆ ಸ್ವಲ್ಪ ದೂರದಲ್ಲಿರುವ ಎತ್ತರವಾದ ಪ್ರದೇಶದ ಮೇಲೆ ಗ್ರಾಮವನ್ನು ಹೊಸದಾಗಿ ಕಟ್ಟಬೇಕೆಂದೂ ನಿಶ್ಚಯಿಸಿರುತ್ತಾರೆ ಇದಕ್ಕನುಸಾರವಾಗಿ ಈ ಊರಿನಲ್ಲಿ ಕೆಲವು ಮನೆಗಳು ದಿಕ್ಕಿಲ್ಲದೆ ಬಾಗಿಲು ಹಾಕಿವೆ ಇಂಥಾದ್ದರಲ್ಲಿ ಭೂಮಿಯನ್ನು ನಮ್ಮ ಸರ್ಕಾರದವರು ಕೊಡಿರುತ್ತಾರೆ ಕಳೆದ ತಾ ೬ ರಲ್ಲಿ ತಾಲ್ಲೂಕ್ ಅಮಲ್ದಾರರು ಬಂದು, ಮನೆಗಳಿಗೆ ಕಂದಾಯವನ್ನು ಹಾಕಿದಾಗ ಈ ಗ್ರಾಮದವರು ಕಂದಾಯವನ್ನು ಕೊಡಲಾರದೆ, ಭೂಮಿಯನ್ನು ಇಂಥಾ ಗತಕ್ಕೆ ಪ್ರಯೋಜನಗಳನ್ನು ತಿಳಿಯದೆ, ಇದು ನಮಗೆ ಬೇಡವೆಂದು ಹೇಳಿಕೊಂಡರು ಆದಾಗ್ಯೂ ಖಾನಂದರವರು ಅದನ್ನು ಮನಸ್ಸಿಗೆ ತಂದುಕೊಳ್ಳಲಿಲ್ಲ ತಾ ೨ ರಲ್ಲಿ ಜನರಲ್ ಅಸಿಸ್ಟೆಂಟ್ ಸಾಹೇಬರು ಇಲ್ಲಿಗೆ ಹಜೂರು ದರ್ಬಾರಿಗೋಸ್ಕರವಾಗಿ ಬಂದಿದ್ದರು ಆಗ್ಗೆ ಜನಗಳೆಲ್ಲ ಹೊಸದಾಗಿ ಗ್ರಾಮ ಕಟ್ಟಲು ಅಪ್ಪಣೆ ಕೊಡಬೇಕೆಂದು ಕೇಳಿಕೊಂಡದ್ದರಿಂದ ಖಾನಂದರು ಆ ಸ್ಥಳಕ್ಕೆ ದಯಮಾಡಿ ನೋಡಿಕೊಂಡು, ಹೊಸದಾಗಿ ಕಟ್ಟಲು ಆರ್ಡರ್ ಕೊಡುತ್ತೇವೆಂದು ಹೇಳಿ ಹೋದರು ಈ ನಮ್ಮ ಅಸಿಸ್ಟೆಂಟ್ ಸಾಹೇಬರವರಾದರೂ ಇನ್ನು ಮುಂದೆ ದಯವಿಟ್ಟು ಈ ಕೆಲಸವನ್ನು ನಡಿಸಿ ಕೊಟ್ಟರೆ ಬಡವರಾದ ಈ ಗ್ರಾಮದ ಪ್ರಜೆಗಳನ್ನು ಕಾಲನ ವಶಕ್ಕೆ ಕೊಡದೆ ಕಾಪಾಡಿದಹಾಗೆ ಆಗುತ್ತೆ

ಎ ಡಿ ಟಿ

ತಾಲ್ಲೂಕು ವರ್ತಮಾನಗಳು

ದಾವಣಗೆರೆ — ಈ ಊರಿನ ಜನಗಳು ಪ್ಲೇಗಿನ ದೆಸೆಯಿಂದ ಈಗ ಸುಮಾರು ೪ ತಿಂಗಳ ಲಾಗಾಯ್ತು ಊರು ಬಿಟ್ಟು ಹೊರಗೆ ಕ್ಯಾಂಪುಗಳಲ್ಲಿ ವಾಸವಾಗಿರುತ್ತಾರೆ ಇವರಲ್ಲಿ ತಂಬಾಕದಪೇಟೆ ವೀರಶೈವ ಜನಗಳಲ್ಲಿ ಮುಖ್ಯರಾದ ಹತ್ತಿಗಿರಿ ಹುಬ್ಬಳ್ಳಿ ಮ॥ ನೀಲಪ್ಪನವರು, ಮ॥ ನೀಲಗುಂದ ಮರಿಗೆಪ್ಪನವರು ಮ॥ ಚೌರಿಮಣಿ ಬಸವಲಿಂಗಪ್ಪನವರು ಸೇರಿ, ದುರ್ಗದ ರೋಡಿನಬಳಿಯಲ್ಲಿ ಒಂದು ಶಿಲಾ ಮಂಟಪವನ್ನು ಕಟ್ಟಿಸಿ, ತಾ ೧೪ ನೆ ಶುಕ್ರವಾರ ವೀರಶೈವ ಜಗದ್ಗುರುಗಳ ಶ್ರೀ ಮನ್ನಿರಂಜನ ಚಿತ್ರ ಮಹಾಸ್ವಾಮಿಗಳವರ ಕೃಪಾ ನಿರೀಕ್ಷಣ ಮಠದ ಮೃತ್ಯುಂಜಯ ಸ್ವಾಮಿಗಳ ಅನುಗ್ರಹದಿಂದ ಜಗದೀಶರ ಪ್ರತಿಷ್ಠೆ ಮಾಡಿಸಿದರು ಆ ದಿವಸ ಸಾವಿರಾರು ವೀರಶೈವ ಬಡ ಜಂಗಮರಿಗೆ ಸುಭೋಜನವನ್ನು ಮಾಡಿಸಿದರು —ಇಲ್ಲಿ ಪ್ಲೇಗ್ ಭಯವು ೨ ತಿಂಗಳಿಂದ ತಪ್ಪಿ ಹೋದದ್ದರಿಂದ ಕ್ಯಾಂಪಿನಲ್ಲಿರುವವರು ಸರ್ಕಾರದವರ ಅಪ್ಪಣೆ ಪಡೆದು ಊರೊಳಗಿನ ಮನೆಗೆ ಹೋಗುವುದಕ್ಕೆ ಶುರುವು ಮಾಡಿರುತ್ತಾರೆ

ಚಿತ್ರದುರ್ಗ —ಕಳೆದವಾರ ಪೋಸ್ಟಲ್ ಸೂಪರಿಂಟೆಂಡರು ಶಿವಮೊಗ್ಗದಿಂದ ಇಲ್ಲಿಗೆ ಬಂದು ಇಲ್ಲಿನ ಆಫೀಸುಗಳನ್ನು ತನಿಖೆಮಾಡಿಕೊಂಡು ಹೋದರು ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮೆ॥ ಕಾರ್ಸನ್ ಸಾಹೇಬರವರು ಸಹ ದಯಮಾಡಿಸಿ, ಬೇರೆಬೇರೆ ಮೇಕರ್ದಮೆಗಳಲ್ಲಿ ಮೆಹನತ್ತು ನಡಿಸಿದ ಪೋಲೀಸ್ ನೌಕರರಿಗೂ ಪಟೇಲರಿಗೂ ಬಹುಮಾನಗಳನ್ನು ಕೊಡಿಸಿ, ಪೋಲೀಸ್ ಸಿಬ್ಬಂದಿಯನ್ನು ದುರಸ್ತಿ ಮಾಡಿದರೆಂದು ವರ್ತಮಾನ ಆದರೆ ಇವರು ಇನ್ನೂ ಕೆಲವು ಪ್ರಾಂತ್ಯಗಳನ್ನು ನೋಡಿ ಸರಿಪಡಿಸಬೇಕೆಂದು ಉದ್ದೇಶಪಟ್ಟಿದ್ದ ಏನೋ ತುರ್ತು ಡ್ಯೂಟಿ ಮೇಲೆ ತಮ್ಮ ಪ್ರೋಗ್ರಾಂ ಬದಲಾಯಿಸಿ ನೇರ ಬೆಂಗಳೂರಿಗೆ ಹೋದರು — ಈ ಊರಿನ ಸುತ್ತ ಮುತ್ತಣ ಕಂದಕ ಪ್ರದೇಶಗಳನ್ನು ಸರ್ವೆ ಮಾಡುತ್ತಿರುವರು ಮತ್ತು ಈ ಕಂದಕಗಳನ್ನೇ ಸರಕಾರದವರು ಸಂಪೂರ್ಣವಾಗಿ ಮುಚ್ಚಿಸಿ ಬಿಡುವರೆಂದು ವರ್ತಮಾನ ಇದು ಬಹಳ ಒಳ್ಳೇ ಕೆಲಸವೇ ಸರಿ ಇವುಗಳಲ್ಲಿ ಮಳೆಯ ನೀರು ಪಟ್ಟಣದ ಸುತ್ತಲೂ ನಿಂತು ಬೇರೆಬೇರೆ ರೋಗಾದಿಗಳಿಗೆ ಆಕರವಾಗಿರುವುದಲ್ಲದೆ ಸೊಳ್ಳೆಗಳ ತವರುಮನೆಯಾಗಿದೆ ಇವುಗಳನ್ನು ಸಂಪೂರ್ಣವಾಗಿ ಭರ್ತಿಮಾಡಿಸಿದರೆ ಈ ತೊಂದರೆಗಳು ಪರಿಹಾರವಾಗಿ ಕ್ಷೇಮಕರವಾಗಿರುವದೆಂಬುದಕ್ಕೆ ಸಂದೇಹವಿಲ್ಲ ಆದರೆ ಇದರ ಅಭ್ಯಾಸದಿಂದ ನೀರನ್ನು ಪಡೆಯುತ್ತಿರುವ ಕೆಲವು ಕಾಯಿಪಲ್ಯದ ತೋಟಗಳಿಗೂ ಬಟ್ಟೆ ಬರೆ ಒಗೆಯುವದಕ್ಕೂ ಸ್ವಲ್ಪ ಅನಾನುಕೂಲವಾದೀತು ಇದಕ್ಕೆ ತಕ್ಕ ಏರ್ಪಾಡೇನಾದರೂ ಮಾಡಿದರೆ ಉತ್ತಮವೇ ಸರಿ —ಇಲ್ಲಿಗೆ ಸಮೀಪವಾಗಿರುವ ಕೆಳಗಳಹಟ್ಟಿ ಮಾಡಪ್ಪೂರಿ ತಿಮ್ಮಯ್ಯನೆಂಬವನನ್ನು ಯಾರೋ ಎಲ್ಲಿಯೋ ಕಳೆದ ತಿಂಗಳು ಕೊಂದು ಅದೇ ಗ್ರಾಮದ ಬಳಿ ತಂದು ಹಾಕಿದ್ದರು ಪೋಲೀಸಿನವರು ಗುಮಾನಿಯ ಮೇಲೆ ಆ ಗ್ರಾಮದ ಐದಾರು ಮಂದಿಯನ್ನು ಹಿಡಿದು ಚಲಾನ್ ಮಾಡಿದರು ಆದರೆ ನಮ್ಮ ಪೋಲೀಸ್ ಸೂಪರಿಂಟೆಂಡರವರು ಪೂರ್ಣ ನಿಗಾದಿಂದ ಚೆನ್ನಾಗಿ ತನಿಖೆ ಮಾಡಿದ್ದರಲ್ಲಿ ಅವರು ಅಪರಾಧಿಗಳೆಂಬುದಕ್ಕೆ ತಕ್ಕ ಕಾರಣಗಳು ಒದಗಲಿಲ್ಲವಾದ್ದರಿಂದ ಅವರನ್ನು ಜಾಮೀನ್ ಮೇಲೆ ಬಿಟ್ಟುಬಿಟ್ಟಿದಾರೆಂದು ತಿಳಿದು ಬಂದಿದೆ

ಹೊಸಕೋಟೆ —ಈ ಊರಿನಲ್ಲಿ ಸರಾಸರಿ ತಿಂಗಳಲಾಗಾಯ್ತು ಸ್ವಾಮಿ ಅನುಗ್ರಹದಿಂದ ಗಲಾಟೆಯೇನಿಲ್ಲ ಸಂಕೆ ಚೆನ್ನಾಗಿ ಶಾಂತರೂ ಕಾಳಿನ ಧಾರಣೆವಾಸಿಗಳು ದಿನೇದಿನೇ ಏರುತ್ತಾ ಇದೆ. ಇಲ್ಲಿನ ತಾಲ್ಲೂಕು ಕಛೇರಿಯ ಮುಂದೆ ರಮಣೀಯವಾಗಿದ್ದ ಉದ್ಯಾನವು ಹೋಗಿ ಬರುವ ಜನಗಳನ್ನು ಭ್ರಮಿಸಿ ತನ್ನಲ್ಲಿಗೆ ಬಂದು ವಿಶ್ರಮಿಸಿಕೊಳ್ಳುವಂತೆ ಕರೆಯುತ್ತಿದ್ದದ್ದು ಎಲ್ಲರಿಗೂ ತಿಳಿದೇ ಇದೆ ಅದು ಈಗ ಯಾವ ಕಾರಣದಿಂದಲೋ ಅಶ್ರದ್ಧೆಯಾಗಿದೆ -ಶ್ರೀ ಕೃಷ್ಣರಾಜೇಂದ್ರ ಹಾಲಿನಲ್ಲಿ ರೀಡಿಂಗ್ ರೂಮ್ ಮಾಡಿಕೊಂಡಿರುತ್ತಾರೆ ಸೇರಿರುವ ಮೆಂಬರುಗಳೆಲ್ಲಾ ಬಹು ಮುತುವರ್ಜಿಯಿಂದ ಪೇಪರುಗಳನ್ನು ಓದುತ್ತಿದಾರೆ —ಈ ಊರು ತುಂಬಾ ಆರೋಗ್ಯ ಸ್ಥಳವೆಂದು ಪ್ರಸಿದ್ಧಿಯಾಗಿರಲಾಗಿ ಮುನಿಸಿಪಾಲಿಟಿಯನ್ನು ಬಹು ಚೆನ್ನಾಗಿ ಸಾಕಿ(ಜಾಗಿ) ಇಟ್ಟುಕೊಳ್ಳುವದು ಎಷ್ಟೋ ಪ್ರಯೋಜನಕರವಾಗಿರುವದು —ನಮ್ಮಲ್ಲಿಯ ಪೋಲೀಸ್ ಇನ್ಸ್‌ಪೆಕ್ಟರಿಗೆ ದೇವನಹಳ್ಳಿಗೆ ವರ್ಗವೆಂತ ಸುದ್ದಿ ಇದ್ದದ್ದು ಕೇಳಿ ವ್ಯಸನವಾಗಿತ್ತು ತಿರಿಗಿ ಇಲ್ಲಿಯೇ ಖಾಯಂ ಆದದ್ದು ನಮ್ಮೆಲ್ಲರಿಗೆ ತುಂಬಾ ಸಂತೋಷ —ನಮ್ಮಲ್ಲಿಯ ಆಸ್ಪತ್ರೆಗೆ ಹೊಸ ಡಾಕ್ಟರು ಮೆ॥ ರಂಗರಾಜುರವರು ಬಂದು ಇದಾರೆ ಮೊದಲಿನ ಡಾಕ್ಟರು ಪ್ಲೇಗಿನಿಂದ ಪೀಡಿತರಾಗಿದಾಗ್ಗ ಡಿಸ್ಟ್ರಿಕ್ಟ್ ಸರ್ಜನರವರು ಬೆಂಗಳೂರಿನಿಂದ ಬಂದು ಪ್ಲೇಗಿನಿಂದ ಪೀಡಿತರಾದ ರೋಗಿಯನ್ನು ಮನೆಯಿಂದ ಆಸ್ಪತ್ರೆಯೊಳಗಿರುವ ವಾರ್ಡಿಗೆ ಸಾಗಿಸಿದರು ಆ ವಾರ್ಡಿನಲ್ಲಿ ಆ ಡಾಕ್ಟರು ಕಾಲವಾದರು ಇದನ್ನು ಜನರು ಕೇಳಿ ನೋಡಿ ಭೀತರಾಗಿ ಆಸ್ಪತ್ರೆಗೆ ಬರುವದನ್ನು ನಿಲ್ಲಿಸಿದರು ಈಗ ಬಂದಿರುವ ಡಾಕ್ಟರು ಜನಗಳಲ್ಲಿ ಸ್ನೇಹ ಬೆಳಸಿ, ಮಮತೆಯಿಂದ ಒಳ್ಳೇ ಮದ್ದು ಕೊಟ್ಟು ರೋಗಿಗಳನ್ನು ಪರಾಂಬರಿಸುತ್ತಾ, ಹೆದರಿ ಓಡದವರನ್ನು ಬರುವಂತೆ ಪ್ರೋತ್ಸಾಹಿಸುತ್ತಾ ಇದಾರೆ —ಪೋಸ್ಟ್ ಆಫೀಸು ತನ್ನ ಮೊದಲಿನ ಎಡೆಯನ್ನು ಬಿಟ್ಟು ಹೊಸ ಮನೆಗೆ ಇದೇ ತಿಂಗಳು ತಾ ೩ ರಲ್ಲಿ ಪ್ರವೇಶಿಸಿತು —ಈ ಊರಲ್ಲಿ ಕೆಲವು ಪೇಟೆದಾರರು ಸೇರಿ ತಮ್ಮಲ್ಲಿಯ ಗ ಡಂಗನಿಗೆ ಸರಾಸರಿ ವರ್ಷದೊಳಗೆ ಬೇರೆ ನಾಟಕ ಕಂಪನಿಯವರಿಂದ ನಾಟಕ ಕಲಿಸಿ, ನಾಲ್ಕು ನಾಟಕ ಆಡಿಸಿದರು ಈ ನಾಟಕದ ಹೆಸರು ಶ್ರೀ ಕೃಷ್ಣರಾಜೇಂದ್ರ ಬಾಲಸ್ವಾರಿಯಿಂದ ಇವರ ಆಟವನ್ನು ಪರಸ್ಥಳದವರು ನೋಡಿ ಕೇಳಿ ತಪ ಪ್ಲೇಗು ಕರಗಿಸಿ ಆದಿನ ಶೋಕೆಂಬ ಕುತೂಹಲಪಟ್ಟಿರುವಾಗಿದಾರೆ

ಚಿಂತಾಮಣಿ - ಈ ಊರಿನ ಅಗ್ರಹಾರದಲ್ಲಿ ಪಟ್ಟಾಭಿರಾಮನ ಗುಡಿ ಇದ್ದು, ನಾನಾಕಾರಣಗಳಿಂದ ಈ ಜಾತ್ರೆಯು ನಡೆಯದೆ ಹಾಗ್ಗೆ ಮೂವತ್ತು ವರುಷಗಳಿಂದ ಮಾಲೆ ಬಿದ್ದಿತ್ತು ಮೂಲಪ್ರತಿಮೆಯೂ ಮಂದಿರವೂ ಶಿಥಿಲವಾಗಿರಲು ಗ್ರಾಮಸ್ಥರು ಚಂದಾ ಎತ್ತಿ ಸಾಹುಕಾರ್ ಮುನಿಸುಬ್ಬಯ್ಯಶೆಟ್ಟಿಯವರಲ್ಲಿ ಕೊಡಲು ಸದ್ರಿಯವರು ತಮ್ಮ ಸ್ವಂತ ಹಣವನ್ನೂ ಹೇರಳವಾಗಿ ಖರ್ಚುಮಾಡಿ ಸುಮಾರು ಎರಡು ವರುಷಗಳಿಂದಲೂ ಕಾಮಗಾರಿ ಮಾಡಿಸಿ, ಮೂಲವಿಗ್ರಹವನ್ನೂ ಗುಡಿಯನ್ನೂ ಜೀರ್ಣೋದ್ಧಾರ ಮಾಡಿದರು ಅದರ ಕೂಡ ಜಾತ್ರೆ ನಡೆಯಲು ಅನೇಕ ವಿಘ್ನಗಳಿದ್ದವು ತಾಲ್ಲೂಕು ಅಮಲ್ದಾರರು ಎಲ್ಲಾ ವಿಘ್ನಗಳನ್ನು ಪರಿಹರಿಸಿ, ಇದೇ ತಾ ೪ ರ ಲಾಗಾಯ್ತು ೧೫ ವರೆಗೆ ೧೨ ದಿವಸ ಜಾತ್ರೆಯನ್ನು ಸಾಂಗವಾಗಿ ನೆರವೇರಲು ಏರ್ಪಾಡುಮಾಡಿದರು ಎತ್ತುಗಳು ಸೇರಿಸಲ್ಪಟ್ಟಿದ್ದವು ಇವುಗಳಲ್ಲಿ ಶ್ರೇಷ್ಠತರವಾದ ರಾಸುಗಳು ೩೦ ಜೋಡಿಗಳಿಗೆ ಅಮಲ್ದಾರರು ಇನಾಮುಗಳನ್ನು ಕೊಟ್ಟು ರೈತರಿಗೆ ಪ್ರೋತ್ಸಾಹ ಮಾಡಿದರು ಮತ್ತು ಅನ್ನ ಸತ್ರವು ಏರ್ಪಡಿಸಲ್ಪಟ್ಟು ಬಡಬಗ್ಗರಿಗೂ ಪರಸ್ಥಳದವರಿಗೂ ರೋಜನಾ ಭೋಜನವಾಗಿ ಆಹಾರವನ್ನು ನೀಡಿದರು ಈ ದುರ್ಭಿಕ್ಷದ ಕಾಲದಲ್ಲಿ ಹೇರಳ ಖರ್ಚ ಮಾಡಿ ಬಡ ಜನರಿಗೆ ಅನ್ನೋದಕಗಳಿಗೆ ಮಾರ್ಗ ಮಾಡಿದ ಉದಾರಿಗಳಾದ ಶೆಟ್ಟಿಗಳನ್ನೂ ಈ ಊರಿನ ಜೋಡಿದಾರರನ್ನೂ ತಿಮ್ಮಯ್ಯ ಮುಂತಾದ ಸಾಹುಕಾರರನ್ನೂ ಹೊಗಳಬೇಕಾಗಿದೆ ಮತ್ತು ಈ ಜಾತ್ರೆಯೂ ಮೊದಲು ಸಹಾ ಏಕ ಕಾಲದಲ್ಲಿ ಶುರುವಾದ್ದರಿಂದ ಪ್ರಜಾ ನೆಮ್ಮದಿಗೆ ಭಂಗ ಬರುವದೇನೋ ಏನೋ ಎಂಬ ಭೀತಿ ಇತ್ತು ಅಮಲ್ದಾರರು ದಯಾಯ ಕೋವಿನ ಮುಖಂಡರನ್ನು ಕರೆಸಿ ಕೊಂಡು ಯಾವ ಪ್ರಕಾರಗೂ ಅಸ್ಥಿರವಿಲ್ಲದೆ ಕಾರ್ಯಗಳನ್ನು ನಡಿಸಿರುತ್ತಾರೆ ಈ ನಮ್ಮ ಅಮಲ್ದಾರರ ವಿಷಯವಾಗಿ ನಾವು ಹೆಚ್ಚಾಗಿ ಬರೆಯುವುದು ಅಗತ್ಯವಿಲ್ಲ ಆಬಾಲವೃದ್ಧರೂ, ಕೋಟೆ ಮೊದಲ್ಗೊಂಡು ಸಕಲರೂ, ಅವರಲ್ಲಿ ಹೋಗಿ ತಮ್ಮ ಕಷ್ಟ ನಿಷ್ಠುರಗಳನ್ನು ಹೇಳಿಕೊಳ್ಳುವುದಕ್ಕೆ ಸಮಯವೂ ಕಾಲ ನಿರ್ಣಯವೂ ಅಭ್ಯಂತರವೂ ಏನಲೇಶವೂ ಇಲ್ಲವೇ ಇಲ್ಲ -ಇಲ್ಲಿ ಈ ವರಿವಿಗೆ ಪ್ಲೇಗಿನ ಹೆಸರೇ ಇರಲಿಲ್ಲ ಒಂದೆರಡು ಮನೆಯಲ್ಲಿ ಇಲಿ ಬಿತ್ತೆಂಬ ವಾರ್ತೆ ಹುಟ್ಟಿತು ಆದರೆ ಪ್ರಾಣನಷ್ಟವೇನೂ ಆಗಲಿಲ್ಲ ಹೊರಗಡೆ ಈ ತಾಲ್ಲೂಕುಗಳಲ್ಲಿ ಪ್ಲೇಗಿನ ಹಾವಳಿ ಹೇರಳವಾಗಿದೆ ಇದರಿಂದ ಅಲ್ಲಿಯವರು ಈ ಊರಿಗೆ ಬಂದು ಸೇರಿಕೊಳ್ಳುತ್ತಾರೆ ಅಂಥವರು ಅಜಾಗ್ರತೆಯಿಂದ ಬರುತ್ತಾರಾಗಿ ಇವರಿಂದ ಇಲ್ಲಿಯೂ ಪ್ರಾರಂಭಗಬಹುದೋ ಎಂಬ ಭೀತಿ ಇರುತ್ತದೆ ಗ್ರಾಮ ಪಾಕೀಜು ಸರಿಯಾಗಿದೆ ಆದರೆ ಕೆಲವು ಗಲ್ಲಿಗಳಲ್ಲಿ ಕಕ್ಕಸು ಕೆಟ್ಟಾಗಿದೆ ಮತ್ತು ಆ ರಂಚಿಗಳಲ್ಲಿ ಜನರು ಮಲಮೂತ್ರಗಳನ್ನು ನಿರ್ಭಯವಾಗಿ ವಿಸರ್ಜಿಸುತ್ತಿರುವುದರಿಂದ ತುಂಬಾ ದುರ್ವಾಸನೆ ಬಡಿದು ಸಂಚಾರಕ್ಕೂ ಆರೋಗ್ಯಕ್ಕೂ ಅಡಚಣೆಯಾಗಿದೆ ಈ ವಿಚಾರವಾಗಿ ಸ್ಯಾನಿಟರಿ ಇನ್ಸ್‌ಪೆಕ್ಟರು ತಕ್ಕ ನಿಗಾ ಕೊಡಬೇಕೆಂದು ಕೋರುತ್ತೇನೆ

ಹೊಸದುರ್ಗ —ಇಲ್ಲಿಗೆ ೫ ಮೈಲು ದೂರದಲ್ಲಿ ಇರುವ ಲಕ್ಕಿಹಳ್ಳಿ ವೇದಾವತಿ ನದಿಯು ಅರ್ಧ ಮೈಲಿ ದೂರದಲ್ಲಿದೆ ೧೦-೧೨ ದಿವಸಗಳ ಕೆಳಗೆ ಈ ಹಳ್ಳಿಯಲ್ಲಿ ೧ ಜನ ಕಳ್ಳರು ತಮ್ಮಲ್ಲಿ ಕತ್ತಿ ಕನ್ನಗತ್ತಿ, ಗಂಡು ಕೊಡಲಿ, ಮಚ್ಚು ಸಣ್ಣ ಹಾರೆ, ಈ ಮೊದಲಾದ

...ಆಯುಧಗಳನ್ನು ಮಳೆಯಲ್ಲಿ ಸಾಲಾಗಿ ನೆಟ್ಟು, ಒಂದು ಕುರಿ ...ಯನ್ನು ದೇವಸ್ಥಾನದ ಕೋಣೆ ಹಾಕಿ ಅನ್ನದ ಬಲಿಯನ್ನು ... ಕುರಿ ಕಾಯುವ ಗೊಲ್ಲರವನು ಕಂಡು, ಯಾರೋ ...ಮಾಡುತ್ತಾರೆಂದು ಸುಮ್ಮನಾದರು. ಅವರು ಸಾಯಂಕಾಲಕ್ಕೆ ...ಪಟ್ಟಿಗೆ ಮರಳುವದಕ್ಕಾಗಿ ಬಂದರು. ಗೊಲ್ಲ ಜನಗಳಿಗೆ ಈ ... ಎಂಬುವನು ಗುರ್ತು ಕಂಡವನಾಗಿಯೂ, ಇವರು ...ವರಿಂತ ಇವರಿಗೆ ತಿಳಿದಿದ್ದರಿಂದಲೂ ಇವರನ್ನು ಹಿಡಿದರೂ ... ಕೊಡಿಸಬೇಕೆಂದು ಗೊಲ್ಲರಲ್ಲಿ ಒಬ್ಬರಿಗೊಬ್ಬರು ಮಾ...ಡು ಕಳ್ಳರನ್ನು ಅಲ್ಲಿ ಹಿಡಿಯಲು ಸ್ಥಳವಿಲ್ಲವೆಂತಲೂ, ...ದಲ್ಲಿಯೇ ಇರುವ ಆಲಘಟ್ಟ ಗ್ರಾಮಕ್ಕೆ ಹೋದರೆ ...ಭಾಗದಲ್ಲಿ ಪಾಳೆಯವು ಅನುಕೂಲವಾಗಿದೆ ಎಂತಲೂ ... ಅದನ್ನು ಕೇಳಿ ಕಳ್ಳರು ಒಳ್ಳೇದೆಂದು, ಸದರಿ ದೇವಸ್ಥಾ...ಗಿ ನಿಂತರು. ಗೊಲ್ಲರು ಏನಾದರೂ ಮಾಡಿ ಈ ಕಳ್ಳರ ...ಹಿಡಿಯುವಂತೆ ಮಾಡಬೇಕೆಂದು ಯೋಚಿಸಿ, ಆಗ ಅವರಲ್ಲಿ ...ಗೊಲ್ಲನು ಆ ಕೂಡಲೆ ಆಲಘಟ್ಟ ಗ್ರಾಮಕ್ಕೆ ಬಂದು ಪಟೇಲ ...ಸಿದರು. ಆಗ ಪಟೇಲರು ಒಬ್ಬನನ್ನು ಜೊತೆಗೆ ಕರೆದುಕೊಂ... ದೇವಸ್ಥಾನದ ಹಿಂದೆ ಹೋಗಿ ನಿಂತು ಕೇಳುವಲ್ಲಿ, ಕಳ್ಳರು ...ವಿಷಯವಾಗಿಯೇ ಮಾತನಾಡುತ್ತಿದ್ದದ್ದನ್ನು ಕೇಳಿ, ನಿಜ ..., ಆ ಕೂಡಲೆ ತನ್ನ ಗ್ರಾಮಸ್ಥರಿಗೆಲ್ಲಾ ತಿಳಿಸಿ ಮನೆಗೆ ...ಬ್ಬರಂತೆ ಹೊರಡಿಸಿ ಸುಮಾರು ೫೦-೬೦ ಜನರಿಂದ ಕೂಡ...ಗಿ ಹೋಗಿ ದೊಣ್ಣೆಗಳನ್ನು ಇನ್ನು ಕೆಲವರಿಗೆ ಹಗ್ಗವನ್ನು ಕೊಟ್ಟು ...ವನ ಬಳಿಗೆ ಹೋಗುವಷ್ಟರಲ್ಲಿ ಕಳ್ಳರು ಮಲಗಿದ್ದರು. ಈ ... ದೇವಸ್ಥಾನದ ಸುತ್ತಲೂ ನಿಂತು, ದೊಣ್ಣೆಗಳನ್ನು ಹಚ್ಚಿದರು. ...ರೂ ನೀವು ಎನ್ನು ಜನವಾಗಿದ್ದರೂ ದೇವಸ್ಥಾನದ ಒಳಕ್ಕೆ ...ಗಿ ಅವರನ್ನು ಎಚ್ಚರಿಸಿದರು. ಕಳ್ಳರು ಎದ್ದು ಗಾಬರಿಯಾಗಲು, ...ವನ್ನು ಹಿಡಿದು ಬಿಟ್ಟುಕೊಂಡು ಗ್ರಾಮದ ಒಳಕ್ಕೆ ಕರೆದು ...ಹೋಗಿ ೬ ಜನ ದೇವಸ್ಥಾನದ ಒಳಕ್ಕೆ ಸೇರಿಸಿ, ನಂತರ ಇವ... ಹೋಗಿಸಿ ನೋಡುವಲ್ಲಿ ಇವರಲ್ಲಿ ಕೆಲವು ಆಯುಧಗಳು ...ಸಿಕ್ಕಿದವು. ೧೧೧ ಜನ ಪಂಚರುಗಳ ಸಮೇತರಾಗಿ ಊರು ಮುಂ... ದೇವಸ್ಥಾನಕ್ಕೆ ೬ ಜನ ನೋಡುವಲ್ಲಿ ಇನ್ನು ಕೆಲವು ಆಯುಧಗ... ವಿಯು ಮುಂದವು ಸಹ ಸಿಕ್ಕಿದವು. ಆ ಕೂಡಲೇ ಬೀಗದ ...ರಿಗೊಬ್ಬರುಗಳನ್ನು ಅಮಲ್ದಾರರಲ್ಲಿಗೂ ಪೊಲೀಸರಿಗೂ ... ಕಳುಹಿಸಿದರು. ಬೆಳಗು ಆಗುವದರಲ್ಲಿ ಅಮಲ್ದಾರರು ... ಕಳುಹಿಸಿದರು. ಎಂದು ಕಳ್ಳರನ್ನು ಹಿಡಿದ ಮಾಡಿ, ಆಯುಧ ಸಮೇತ ... ಸ್ಥಳಗಳನ್ನು ಹಾಕಿಸಿಕೊಂಡು ತಾಲೂಕಿಗೆ ಕರೆದು ...ಹೋದರು. ನಂತರ ದಿನ ನಮ್ಮ ಅಮಲ್ದಾರರು ಬೆಳಗೂರಿಗೆ ...ಮಾಡಿಸಿದರು. ಈ ಕಳ್ಳರು ಹಿಂದೆ ೨-೩ ದಫೆ ಜೇಲು ಶಿಕ್ಷೆ ವರೆಂ..., ನಾಗನೆಂಬುವನ ಪ್ರಾಣ ಅನುಭವಿಸುತ್ತಿದ್ದವನು ಲಾಕಪ್ಪಿನಿಂದ ...ಕೊಂಡು ಬಂದವನೆ ಕಲೂ ತಿಳಿದು ಬಂತು.—ಅಮಲ್ದಾರರು ...ರಿಗೆ ಬಂದು ... ಮಾಡಿಕೊಂಡು, ದೇವಸ್ಥಾನದಲ್ಲಿ ... ಆ ದಿನ ... ರು ಗ್ರಾಮದ ದೊಡ್ಡ ಮನುಷ್ಯರಾರೂ ... ಇವರನ್ನು ... ವಾಡಲಿಲ್ಲ ... ಮೇಂಬರು ... ಇದ್ದವರ್ಯಾರು ... ದರು ... ದಫೆ ... ಬರಲೇ ಇಲ್ಲ. ಆ ... ಕೆಲವ ... ಮನುಷ್ಯರನ್ನು ಒದೆದುಕೊಂ... ದಿನ ಗ್ರಾಮ ... ದರು ಈ ದೊಡ್ಡ ಗ್ರಾಮ... ಆ ಅಮಲ್ದಾರರು ಬಂದದ್ದು ಇದೇ ಮೊದಲು ಗ್ರಾಮದಲ್ಲಿ ...ಬ್ಬರೂ ಶಾಲೆ ಪ್ರಾಗ್ಯ ಭೇಟಿ ಮಾಡಲಿಲ್ಲ. ಏನು ಕಾರಣ ... ಲಿಂಗರು ಪಕ್ಕಲಿಗೆ ಉತ್ತಮ ಜಾತಿಯ ...ಸಾಲ್ಯವು ಒಂದೇ ಇಲ್ಲ. ಇತರ ಮತಸ್ಥರಿಗೆ ವಿದ್ಯೆಯು ... ಸಂಖ್ಯೆ ೫೦ಕ್ಕಿಂತ ಹೆಚ್ಚು. ಪ್ರತಿ ... ಕಾವಲುಗಾರರು ೩೦ಕ್ಕಿಂತ ಕಡಮೆ. ಈ ರೀತಿ ಹೀನ ...ರುತ್ತ ... ವಿಷಯ ಮೇಂಬರುಗಳಿಗೆ ಗಮನವಿಲ್ಲ. ಹಿಂದೆ ... ವಾಸ್ತರ್ ... ವ್ಯಾಸನದ ಮೇಲೆ ನಾರಕ್ಕೆ ಎರಡರಂತೆ ...ಗಳನ್ನು ಬಿಡ ... ಮಾಸ್ಟರನ್ನು ಬರಮಾಡಿಕೊಂಡರು. ... ಸ್ಕೂಲಿನಲಿ ... ಇಲ್ಲ. ವಿದ್ಯೆಯ ಮೇಲೆ ಈ ಗ್ರಾ... ಒಬ್ಬರಿಗೂ ಗಮನವಿಲ್ಲ.

ವಿದೇಶ ವರ್ತಮಾನಗಳು.

ಕಳೆದವಾರ ... ದಕ್ಷಿಣಭಾಗದಲ್ಲಿರುವ ಇಂಗ್ಲಿಷ್ ... ಕಾಲುವೆಯಲ್ಲಿ ಇಂಗ್ಲೆಂಡಿನ ಒಂದು ದೋಣಿಯು ಮುಳು...ಗಿತು. ಅದರಲ್ಲಿದ್ದ ಎಂಟು ಮಂದಿಯೂ ಕೆಲವು ಸಾಮಾನೂ ... ಹೋದವು

●●●

ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್‌ವಾಲಿನಲ್ಲಿ ಸರ್ಕಾರದವರ ...ಪ್ರಕಾರ ಹಿಂದುಸ್ಥಾನದ ಜನರಲ್ಲಿ ಅನೇಕರು ಬೆರಳು ...ಒತ್ತಿಸಿ ರಿಜಿಸ್ಟರ್ ಮಾಡಿಸಿಕೊಂಡರು. ಆದರೆ ಚೀನಾ ಜ...ಮೊದಲು ಅದಕ್ಕೆ ಒಪ್ಪದೆ ಸರ್ಕಾರದವರ ಹುಕುಮನ್ನು ತಿರಸ್ಕರಿಸುತ್ತಿದ್ದಾರೆ

●●●

ಅಮೇರಿಕದಲ್ಲಿ ಒಂದು ತಿಂಗಳ ಹಿಂದೆ ಹಲವು ಭಾರೀ ಬ್ಯಾಂಕು... ದಿವಾಳಿಯಾದದ್ದರಿಂದ ಮುತ್ತುಗಳನ್ನೂ ಕೆಂಪು ವಜ್ರ ಮೊದ... ರತ್ನಗಳನ್ನೂ ಕೊಂಡುಕೊಳ್ಳುವವರು ಯಾರೂ ಇಲ್ಲವೆಂದು ...ಬಂದಿದೆ. ಇದರಿಂದ ಆ ರತ್ನಗಳ ಕ್ರಯವು ಬಹಳ ಇಳಿದಿರು... ದಕ್ಷಿಣ ಆಫ್ರಿಕದ ವಜ್ರಗಳ ಗಣಿಗಳಲ್ಲಿ ತೆಗೆಯುವಂಥಾ ರತ್ನಗ... ಕಂಪನಿಯವರು ಬೇರೆಗೆ ಕಳುಹಿಸದೆ ... ಮಾಡುತ್ತಿದ್ದಾರೆಂದು ವರ್ತಮಾನ ಬಂದಿದೆ

ದಕ್ಷಿಣ ಆಫ್ರಿಕಾದಲ್ಲಿ ನಟಾಲ್ ಎಂಬ ಇಂಗ್ಲಿಷ್ ಸ್ವಾಧೀನಕ್ಕೆ ಸೇರಿದ ಗ್ಲೆಂಕೋ ಎಂಬೊಂದು ಗಣಿಯೊಳಗೆ ಅನಾಹುತವಾಗಿ ಒಂದು ಭಾಗವು ಆಕಸ್ಮಾತ್ತಾಗಿ ಕುಸಿದು ಬಿದ್ದಿತು. ಅದರಲ್ಲಿ ಕೆಲಸ ಮಾಡುತ್ತಿದ್ದವರ ಪೈಕಿ ೧೨ ಮಂದಿ ಯೂರೋಪ್ಯರೂ ೫೬ ಜನ ಸ್ವದೇಶಿಗಳೂ ಗಣಿಯೊಳಗೆ ಸಿಕ್ಕಿ ಹತರಾದಂತೆ ತಂತೀ ವರ್ತಮಾನ ಬಂದಿದೆ

●●●

ಮ್ಯಾಸಿಡೋನಿಯಾ ರಾಜ್ಯಕ್ಕೆ ಸೇರಿದ ಡ್ರಾಗೋಷ್ ಎಂಬ ಸ್ಥಳಕ್ಕೆ ೬೦ ಮಂದಿ ಗ್ರೀಕರು ಹೋಗಿ ಜನರನ್ನೆಲ್ಲಾ ಬಲವಂತವಾಗಿ ಅವರವರ ಮನೆಗಳಿಗೆ ಕಳುಹಿಸಿ, ಅವರು ಹೊರಕ್ಕೆ ಬಾರದಂತೆ ಉಸ್ತುವಾರಿ ಇಟ್ಟು, ಮನೆಗಳಿಗೆ ಬೆಂಕಿಹಾಕಿ ಸುಟ್ಟು ಬಿಟ್ಟರು. ಸುಮಾರು ೪೫ ಜನರು ಈ ರೀತಿ ಪ್ರಾಣ ಕಳೆದುಕೊಂಡಂತೆ ತಿಳಿದು ಬಂದಿದೆ

●●●

ಅಮೇರಿಕಕ್ಕೆ ಸೇರಿದ ಮಿಸಿಸಿಪಿ ಮತ್ತು ಟೆಕ್ಸಾಸ್ ಎಂಬೀ ಡಿಸ್ಟ್ರಿಕ್ಟುಗಳಲ್ಲಿ ಕಳೆದವಾರ ಒಂದು ದಿನ ಇದ್ದಕ್ಕಿದ್ದ ಹಾಗೇ ಆಕಾರವಾದ ಸುಂಟರಗಾಳಿ ಎದ್ದು ಗುಡುಗು ಸಿಡಿಲುಗಳೊಡನೆ ಕೂಡಿದ ಮಳೆಯು ಸಾರೋದ್ಧಾರವಾಗಿ ಸುರಿಯಿತು. ಈ ಸಂಭವದಲ್ಲಿ ಅನೇಕ ಜನರು ಬೀದಿಗಳಲ್ಲೂ ಮನೆಗಳಲ್ಲೂ ಗಾಯಪಟ್ಟರು. ಹಲವರು ಪ್ರಾಣ ಕಳೆದುಕೊಂಡಿದ್ದಾರೆ

●●●

ಕೈಬೆರಳನ್ನು ಒತ್ತುವುದರಿಂದ ಜನರ ಗುರ್ತನ್ನು ಗೊತ್ತು ಮಾಡುವ ಪದ್ಧತಿಯು ಕೆಲವು ವರುಷಗಳಿಂದೀಚೆಗೆ ಕಂಡುಹಿಡಿಯಲ್ಪಟ್ಟದ್ದು. ಈ ಪದ್ಧತಿಯು ಚೀನಾ ರಾಜ್ಯದಲ್ಲಿ ಪ್ರಾಚೀನ ಕಾಲದಲ್ಲಿ ಅಂದರೆ ಈಗ್ಗೆ ಸುಮಾರು ೨,೩೦೦ ವರುಷಗಳ ಹಿಂದೆಯೇ ರೂಢಿಯಲ್ಲಿತ್ತೆಂದು ಅಲ್ಲಿನ ಪ್ರಾಚೀನ ಶಿಲ್ಪಶಾಸ್ತ್ರ ಪರಿಶೋಧಕರು ಗೊತ್ತು ಮಾಡಿ ಪ್ರಕಟಿಸಿದ್ದಾರೆ

●●●

ವಿಲಾಯಿತಿ ಪಾರ್ಲಿಮೆಂಟು ಮೆಂಬರಾದ ಮಿ॥ ಕೇರ್ ಹಾರ್ಡಿಯವರು ಕಳೆದ ವಾರ ದಕ್ಷಿಣ ಆಫ್ರಿಕಕ್ಕೆ ಸೇರಿದ ಜೋಹಾನಸ್ ಬರ್ಗಿಗೆ ಹೋದರು. ಅಲ್ಲಿನ ಜನರು ಅವರನ್ನು ಸ್ಟೇಷನ್ನಿನಲ್ಲಿ ಹೊಡೆಯಲಾರಂಭಿಸಿ ಅವರ ಮೇಲೆ ಕಲ್ಲು, ಮೊಟ್ಟೆ ಮುಂತಾದ್ದನ್ನು ಎಸೆದರು. ಪೋಲೀಸಿನವರು ಅವರನ್ನು ಉಸ್ತುವಾರಿಯಾಗಿ ಏಟು ಬೀಳದಂತೆ ಕರೆದುಕೊಂಡು ಹೋಗುವುದು ಕಷ್ಟವಾಯಿತು

●●●

ಜರ್ಮನಿಯಲ್ಲಿ ಕೋಸ್ಲರ್ ಎಂಬೊಬ್ಬ ಪ್ರಸಿದ್ಧ ವೈದ್ಯನು ಒಂದು ತರಹ ಸಿಡುಬಿನ ಹಾಲನ್ನು ಕಂಡುಹಿಡಿದು ಅದನ್ನು ಜನರಿಗೆ ೨-೩ ವೇಳೆ ಸಿಡುಬು ಹಾಕಿದರೆ ಶಾಂತಿ ಭೇದಿ ಉಪದ್ರ ತಗಲುವುದಿಲ್ಲವೆಂದು ಗೊತ್ತುಮಾಡಿದಾನೆ. ಈಜಿಪ್ಟು ರಾಜ್ಯದಲ್ಲಿ ಈಗ ಈ ಉಪದ್ರವು ಬಹಳ ಜನರನ್ನು ಕೊಲ್ಲುತ್ತಿರುವುದರಿಂದ ಅಲ್ಲಿನ ಗವರ್ನ್‌ಮೆಂಟಿನವರು ಜರ್ಮನಿಯಿಂದ ಸಿಡುಬಿನ ಹಾಲನ್ನು ಬರೆದು ತರಿಸಿಕೊಂಡಿದ್ದಾರೆ. ಸಿಡುಬು ಹಾಕಿಸಿಕೊಂಡವರಿಗೆ ಆರು ತಿಂಗಳ ತನಕ ಆ ರೋಗ ತಗಲದಂತೆ ಅದು ಕಾಪಾಡುವುದೆಂದು ತಿಳಿದುಬಂದಿದೆ.

●●●

ಈಜಿಪ್ಟು ರಾಜ್ಯದಲ್ಲಿ ಸ್ವದೇಶೀ, ಸ್ವರಾಜ್ಯಗಳ ವಿಚಾರವು ನಡೆಯುತ್ತಿಗೆ ... ಈ ವಿಚಾರವನ್ನು ಪ್ರಾರಂಭಿಸಿದ ಮುಖಂಡರುಗಳ ಪೈಕಿ ತುಂಬಾ ಪ್ರಸಿದ್ಧಿಯನ್ನು ಹೊಂದಿದ್ದ ಮುಸ್ತಫಾ ಕಾಮಿಲ್ ಎಂಬ ಮುಸಲ್ಮಾನ ದೊಡ್ಡ ಮನುಷ್ಯನು ಕಾಲವಾದನು. ಶವವನ್ನು ಬಹಳ ಆಡಂಬರದಿಂದ ಮೆರವಣಿಗೆಯಾಗಿ ತೆಗೆದುಕೊಂಡು ಹೋಗಿ ದಫನ್ ಮಾಡಿದರು. ಸುಮಾರು ೫೦,೦೦೦ ಜನರು ಶವದ ಕೂಡ ಸಮಾಧಿ ಸ್ಥಾನಕ್ಕೆ ಹೋಗಿದ್ದು, ಆತನಲ್ಲಿ ತಮಗಿದ್ದ ಭಕ್ತಿಪ್ರೀತಿಗಳನ್ನು ಪ್ರಕಾಶಪಡಿಸಿದರೆಂದು ತಂತೀ ವರ್ತಮಾನ ಬಂದಿದೆ

●●●

ವಿಲಾಯಿತಿ ರಾಜ್ಯದ ಪಾರ್ಲಿಮೆಂಟಿನಲ್ಲಿ ಒಂದು ಹೊಸ ಕಾನೂನು ಈಗ ಚರ್ಚೆಯಾಗುತ್ತಿದೆ. ಅದನ್ನು ಜಾರಿಗೆ ತರುವುದರಲ್ಲಿ ಗವರ್ನ್‌ಮೆಂಟಿನವರ ಉದ್ದೇಶವೇನೆಂದರೆ, ೧೬ ವರುಷಕ್ಕೆ ಒಳಗಿರುವಂಥಾ ಮಕ್ಕಳ್ಯಾರೂ ಸಿಗರೆಟ್ ಬೀಡಿ ಚುಟ್ಟಾಗಳನ್ನು ಸೇದದಂತೆ ತಡೆಯುವುದು. ಈಗ ಸೇದುವವರನ್ನು ದಸ್ತಗಿರಿ ಮಾಡುವದಕ್ಕೆ ಪೋಲೀಸಿನವರಿಗೆ ಅಧಿಕಾರ ಉಂಟಾಗುತ್ತದೆ. ಮಕ್ಕಳು ಅಪರಾಧಗಳನ್ನು ಮಾಡಿದರೆ ಅವರನ್ನು ಬಂದೀಖಾನೆಗೆ ಕಳುಹಿಸಕೂಡದು. ಅವರನ್ನು ಕಾಪಾಡುವಂಥಾ ಕಾರ್ಖಾನೆಗಳಲ್ಲಿಟ್ಟು ಮೇಲ್ವಿಚಾರಣೆ ನೋಡಿಕೊಳ್ಳುವಂತೆ ವಿಚಾರಮಾಡಿತು. ಇದಲ್ಲದೆ ಅಪರಾಧಿಗಳಾದ ಮಕ್ಕಳನ್ನು ವಿಚಾರಿಸುವದಕ್ಕಾಗಿಯೇ ಪ್ರತ್ಯೇಕವಾದ ಮ್ಯಾಜಿಸ್ಟ್ರೇಟ್ ಕೋರ್ಟುಗಳನ್ನು ಅಲ್ಲಲ್ಲಿ ಸ್ಥಾಪಿಸುವದಕ್ಕೆ ಅನುಕೂಲವಾಗುತ್ತದೆ. ಇವೇ ಮೊದಲಾದವು ಕಾನೂನಿನ ಉದ್ದೇಶಗಳು

●●●

ವಿಲಾಯಿತಿಯಲ್ಲಿ ಸ್ತ್ರೀಯರು ತಮಗೆ ಪಾರ್ಲಿಮೆಂಟ್ ಮೆಂಬರುಗಳನ್ನು ಚುನಾಯಿಸುವುದಕ್ಕೆ ಗಂಡಸರಿಗಿರುವಂತೆ ಓಟು (ಸಮ್ಮತಿ) ಹಾಕುವ ಹಕ್ಕನ್ನು ಕೊಡಿಸಬೇಕೆಂದು ಕೆಲವು ಕಾಲದಿಂದಲೂ ಸರ್ಕಾರದವರನ್ನು ನಿರ್ಬಂಧಪಡಿಸುತ್ತಿದ್ದಾರೆ. ಕೆಲವು ವೇಳೆ ಅಂಥಾ ಸ್ತ್ರೀಯರ ದಾಂಧಲೆಯನ್ನು ತಡೆಯಲಾರದೆ ಸರ್ಕಾರದವರು ಅವರನ್ನು ಹಿಡಿಸಿ ಅವರಿಗೆ ಜುಲ್ಮಾನೆಯನ್ನೂ ಸಜಾವನ್ನೂ ವಿಧಿಸುವುದೂ ಉಂಟು. ಕಳೆದ ವಾರ ಹೌಸ್ ಆಫ್ ಕಾಮನ್ಸ್ ಎಂಬ ಸಭಾಸ್ಥಾನದಲ್ಲಿ ಗಲಭೆಯನ್ನೆಬ್ಬಿಸಬೇಕೆಂದು ಕೆಲವು ಸ್ತ್ರೀಯರು ಗಾಡಿಗಳಲ್ಲಿ ಹೋಗಿ ಇಳಿದರು. ಅಷ್ಟರಲ್ಲೇ ಪೋಲೀಸಿನವರು ತಡೆಹಾಕಿ, ೫೬ ಮಂದಿಯನ್ನು ದಸ್ತಗಿರಿ ಮಾಡಿ, ಆಗ ಮೇಲೆ ಫಿರ್ಯಾದು ಮಾಡಿದರು. ಮ್ಯಾಜಿಸ್ಟ್ರೇಟರು ಅವರಿಗೆಲ್ಲಾ ಜುಲ್ಮಾನೆಯನ್ನು ವಿಧಿಸಿ, ಜುಲ್ಮಾನೆ

...ಹಣವನ್ನು ಕೊಡದಿದ್ದರೆ ಅವರೆಲ್ಲಾ ಒಂದು ಅಥವಾ ಎರಡು ವಾರ ಸಜಾ ಅನುಭವಿಸಬೇಕೆಂದು ತೀರ್ಮಾನ ಮಾಡಿದರು. ಕೆಲವರು ಅದೇ ಪ್ರಕಾರ ಜುಲ್ಮಾನೆಯನ್ನು ಕೊಟ್ಟು ಹೋದರು. ಉಳಿದ ೪೮ ಮಂದಿ ಸ್ತ್ರೀಯರು ಜುಲ್ಮಾನೆ ಕೊಡುವುದಿಲ್ಲವೆಂದೂ ಬಂದೀಖಾನೆಯನ್ನೇ ಅನುಭವಿಸುತ್ತೇವೆಂದೂ ಹೇಳಿ, ಜೈಲಿಗೆ ಹೋಗಿರುತ್ತಾರೆ

●●●

ಉತ್ತರ ದಕ್ಷಿಣ ಅಮೇರಿಕಗಳನ್ನು ವಿಭಾಗ ಮಾಡುವುದಕ್ಕೆ ಪನಾಮಾ ಎಂಬ ಭೂಕಂಠವನ್ನು ಕಡಿದು ಜಲಮಾರ್ಗವನ್ನು ಮಾಡುತ್ತಿದ್ದಾರಷ್ಟೆ. ಇದನ್ನು ಸಂಯುಕ್ತ ಸಂಸ್ಥಾನಗಳ ಅಧಿಪತ್ಯದವರು ೧೯೦೪ನೇ ಇಸವಿ ಜೂನ್ ತಿಂಗಳಲ್ಲಿ ಪ್ರಾರಂಭಮಾಡಿದಾರೆ. ಎಂಟು ಕೋಟಿ ಘನಗಜಗಳ ಭೂಮಿಯನ್ನು ಕತ್ತರಿಸಬೇಕಾಗಿದ್ದುದರಲ್ಲಿ ಫ್ರೆಂಚ್ ಸರ್ಕಾರದವರು ಅರೆವಾಸಿಯನ್ನು ಕಡಿದು ಹಾಕಿದ್ದರು. ಇನ್ನು ೧೧ ಕೋಟಿಯೂ ೧೦ ಲಕ್ಷ ಘನಗಜಗಳ ಭೂಮಿಯನ್ನು ಒಡೆದು ಜಲಮಾರ್ಗ ಮಾಡಬೇಕಾಗಿದೆ. ಈಚೆಗೆ ಸಂಯುಕ್ತ ಅಧಿಪತ್ಯಗಳವರು ಸುಮಾರು ೩೬ ಲಕ್ಷ ಘನ ಜನಗಳನ್ನು ಅಗಿಸಿ ಹಾಕಿದಾರೆ. ಇದುವರೆಗೆ ಅವರಿಗೆ ಹತ್ತು ಕೋಟಿ ದ್ರವ್ಯ ಅಂದರೆ ಒಟ್ಟು ೫೦೦೦ರಲ್ಲಿ ಮೂರನೇ ಒಂದು ಪಾಲಿನಷ್ಟು ಖರ್ಚಾಗಿರುತ್ತದೆ. ಈ ಕಾಮಗಾರಿಯು ಇದೇ ರೀತಿ ನಡೆಯುತ್ತಾ ಬಂದ ಪಕ್ಷದಲ್ಲಿ ಈ ಜಲ ಮಾರ್ಗವು ಸಿದ್ಧವಾಗುವದಕ್ಕೆ ಇನ್ನೂ ಆರೇಳು ವರುಷಗಳಾದರೂ ಬೇಕಾಗುತ್ತದೆಂದು ಹೇಳುವರು. ಕಂಟ್ರಾಕ್ಟು ವಹಿಸಿಕೊಂಡಿರುವ ಕಂಪನಿಯವರು ಕೂಲಿ ಜನರ ಆರೋಗ್ಯವನ್ನು ಕಾಪಾಡುವುದಕ್ಕೂ ಅವರಿಗೆ ಅವಶ್ಯವಾದ ಸೌಕರ್ಯಗಳನ್ನು ಕಲ್ಪಿಸಿಕೊಡುವುದಕ್ಕೂ ಸುಮಾರು ಎರಡು ವರೆ ಕೋಟಿ ದ್ರವ್ಯವನ್ನು ಖರ್ಚು ಮಾಡಿರುತ್ತಾರೆ

ಜಾಹೀರಾತು

ಆಶೆಬಿಟ್ಟದ್ದು.

93 25

ಸ್ವಲ್ಪ ಮಾತ್ರ ಸಾಮಾನ್ಯವೆಂಬದರ ಅರ್ಥವು ಮರಣವೆಂಬದಾಗಿರುತ್ತದೆ. ವರ್ತಮಾನಪತ್ರಿಕೆಗಳಲ್ಲಿ ಆಶ್ಚರ್ಯಕರವಾದ ಬರವಣಿಗೆಯನ್ನು ನೀವು ಎಂದೂ ಓದಲಿಲ್ಲವೋ? ಮತ್ತು ಅದು ಒಂದು ಔಷಧ ಪ್ರಕಟನೆಯಾಗಿರುತ್ತದಾಗಿ ತಿಳಿದು ಬರಲಿಲ್ಲವೋ? ಆ ಲೇಖನವನ್ನು ಕುರಿತು ತೃಪ್ತಿಪಟ್ಟಿದ್ದೀರೋ? ಬಿಡುಕಾ ಪಡಲಿಲ್ಲವೆಂದು ನಾವು ತಿಳುಕೊಳ್ಳುತ್ತೇವೆ. ಯಾಕೆಂದರೆ ಅದು ನಿಮಗೆ ಪರಿಚಿತಿಯಿಲ್ಲದ ದೂರ ಪ್ರಾಂತ್ಯದಲ್ಲಿರುವ ಒಬ್ಬನ ಅನುಭವವಾಗಿದ್ದದ್ದರಿಂದ ಮಾತ್ರವಾಗಿರಬಹುದು. ಆದರೆ ಕಲ್ಕತ್ತೆಯ ಪ್ರಸಿದ್ಧ ಡಾಕ್ಟರುಗಳಲ್ಲಿ ಒಬ್ಬರ ಹೇಳಿಕೆಯಾಗಿದ್ದರೆ ನೀವು ನಂಬುತ್ತಿದ್ದಿರಿ. ಕಲ್ಕತ್ತೆಯ ಹಾರಿಸನ್ ರೋಡ್ ನಂ ೧೮ ಮಾರ್ವಾಡಿ ಹಿಂದು ಆಸ್ಪತ್ರೆಯ ಹೌಸ್ ಸರ್ಜನರಾಗಿರುವ ಡಾಕ್ಟರ್. ಪಿ ಸಿ ರಾಯ್ ಎಂಬವರು ಹೇಳುವದೇನೆಂದರೆ.— ಡೋನ್ಸ್ ಎಂಬವರ ಬೆನ್ನುನೋವು ಮೂತ್ರಕೋಶದ ಔಷಧಗುಳಿಗೆಗಳು (ಡೋನ್ಸ್ ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಅತ್ಯುತ್ತಮವಾದ ಔಷಧವಾಗಿರುತ್ತದೆ. ನಾವು ಕೈ ಬಿಟ್ಟ ಒಬ್ಬ ರೋಗಿ ಜಲೋದರವು ಈ ಔಷಧದಿಂದ ಚೆನ್ನಾಗಿ ಗುಣವಾಗಿಯದೆ. ಕಿಬ್ಬೊಟ್ಟೆಯಲ್ಲಿ ನೀರು ತುಂಬಿ ಕೈ ಕಾಲು ಮುಖವು ಬಾತು ಬಹಳ ಸಂಕಟ ಪಡುತ್ತಿದ್ದನು. ಹೊಟ್ಟೆಯೊಳಗೆ ಸೂಜಿ ಹಾಕಿ ಸುಮಾರು ೧೦೪ ಔನ್ಸ್ ನೀರು ತೆಗೆಯುವ ಹಾಗೆಯೇ ವಾರಕ್ಕೊಮ್ಮೆ ಮೂರು ಧಪೆ ತೆಗಿಯಬೇಕಾಯಿತು. ರೋಗಿಗೆ ದಿನ ಒಂದಕ್ಕೆ ೩ ಔನ್ಸ್ ಮಾತ್ರ ಮೂತ್ರ ಹೋಗುತ್ತಿತ್ತು. ಆತನಿಗೆ ಡೋನ್ಸ್ ಮೇಲೆ ಹೇಳಿದ ಮಾತ್ರೆಗಳು ಕೊಡುತ್ತಲೆ ದಿನ ಒಂದಕ್ಕೆ ೩೦ ಔನ್ಸ್ ಮೂತ್ರ ಹೋಗಲಿಕ್ಕೆ ಶುರುವಾಗಿ ಬೇಗ ಪೂರಾ ನಿಂತು ಹೋಗಿ ಆತನು ಪುನಃ ಆರೋಗ್ಯಸ್ಥಿತಿಗೆ ಬಂದನು. ಹೀಗೆಯೇ ಡೋನ್ಸ್‌ರ ಈ ಔಷಧದಿಂದ ಅನೇಕ ಜನರಿಗೆ ಗುಣಾಂಶ ಸಿಕ್ಕಿರುವದರಿಂದ ಇದು ಬಹಳ ಅಮೌಲ್ಯವಾದ ಔಷಧವಾಗಿರುತ್ತದೆ. ಜಲೋದರ ವ್ಯಾಧಿಯು ಇಷ್ಟು ಹೆಚ್ಚು ಮಿಾರಿಹೋದರೆ ಅಪಾಯಕರವೆಂದು ಎಣಿಸೋಣಾಗುತ್ತದೆ. ಈ ಸಂಗತಿಯು ಮಾರ್ವಾಡಿ ಆಸ್ಪತ್ರೆಯಲ್ಲಿ ರಿಕಾರ್ಡು ಮಾಡಲ್ಪಟ್ಟಿರುವದರಿಂದ ಯಾರೂ ಸಂದೇಹಪಡತಕ್ಕದ್ದಿಲ್ಲ. ಬೆನ್ನುನೋವು, ಮೂತ್ರ ಬಾಧೆ—ಮೂತ್ರಬಾಧೆ—ವಾತನೋವು ಇವುಗಳೊಳಗಾಡಿ ಜಲೋದರವು ಮೂತ್ರಕೋಶದ ದೋಷದಿಂದ ಉಂಟಾಗುವಂಥಾದ್ದಾಗಿದೆ. ಇವುಗಳಿಗೆಲ್ಲಾ ಈ ಮಾತ್ರೆಗಳು ಉತ್ಕೃಷ್ಟವಾದ ಔಷಧವಾಗಿರುವದು.

ಎಲ್ಲಾ ಔಷಧ ವರ್ತಕರಿಂದ ದೊರಕಲ್ಪಡುತ್ತದೆ. ಸೀಸೆ ಒಂದಕ್ಕೆ ರೂ ೨, ಅಥವಾ ೬ ಸೀಸೆಗಳಿಗೆ ರೂ ೧೦—೮—೦. ಅಥವಾ ಮುಂಬಯಿಯಲ್ಲಿಯ ಡೋನ್ಸ್‌ರ ಔಷಧಗಳ ಕೋಠಿಯಿಂದ ನೀಟಾ ತರಿಸಿಕೊಳ್ಳಬಹುದು. ಪಿ. ಓ. ಬಾಕ್ಸ್ ನಂ ೨೧೦, ಮುಂಬಯಿ.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜೆಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . ರೂ. ೧—೪—೦

ಪರಸ್ಥಳದವರು ಅಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ . . . . ರೂ. ೧—೧೪—೦

" " ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುತ್ತಿರುವ ಪತ್ರಿಕೆಯ ವಿಳಾಸದಲ್ಲಿ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ನರಗಳ ಅಪಾರವಾದ ದುರ್ಬಲವನ್ನು ಪೆರೂನಾವು ಅದ್ಭುತವಾದ ರೀತಿಯಲ್ಲಿ ನಿವಾರಣೆ ಮಾಡುತ್ತದೆ.

ಶರೀರಗತವಾದ ಚೈತನ್ಯನಿವಾ [illegible]

ನರಗಳ ದುರ್ಬಲವನ್ನು ನಾಶಮಾಡುವುದರಲ್ಲಿ ಇದು ವಿಶೇಷ ಪ್ರಖ್ಯಾತನಾಗಿದೆ. ಹೆಚ್ಚಾದ ಕಷ್ಟ ಕೆಲಸದಿಂದಲೂ, ಮನಸ್ಸನ್ನು ವಿಶೇಷವಾಗಿ ಕಷ್ಟಪಡಿಸುವುದರಿಂದಲೂ, ಬೇಸಿಗೆಯ ಅಪಾರವಾದ ಉಷ್ಣದ ದೆಸೆಯಿಂದಲೂ ಶರೀರದ ವರ್ಣಶಕ್ತಿ [illegible] ಪೆರೂನಾವು ಇದನ್ನು ಸಂಪೂರ್ಣವಾಗಿ ನಿವಾರಣೆ ಮಾಡಿ, ರಕ್ತವನ್ನು [illegible] ಮಾಡುತ್ತದೆ.

ಬೇಸಿಗೆಯ [illegible] ಕಾಲವಿರುವಂತಹ ದೇಶಗಳಲ್ಲಿ ಜನರು ಧಗೆಯ ತೀಕ್ಷ್ಣವನ್ನು ಸಹಿಸಿಕೊಳ್ಳುವವರಾಗಿರುತ್ತಾರೆ. [illegible] ಅಪಾರವಾದ ಧಗೆಯು [illegible] ಉಷ್ಣವನ್ನು ಸಹಿಸಿಕೊಳ್ಳಲು ಶಕ್ತಿಯುಳ್ಳವರಾಗಿರುವುದಿಲ್ಲ. ಇದರಿಂದಲೇ [illegible] ರೋಗಗಳುಂಟಾಗುತ್ತವೆ.

[illegible] ಅಜೀರ್ಣವಾಗಿರುವುದು [illegible] ರೋಗಗಳಿಂದ [illegible]

ಅಜೀರ್ಣದಿಂದ ದುರ್ಬಲವು

[illegible] ಆಹಾರದ [illegible] ಭಾಗಗಳನ್ನು ಶರೀರಕ್ಕೆ ಪುಷ್ಟಿ [illegible] ನಿದ್ರಾಹೀನತೆ, ಜಿಗುಪ್ಸೆ, [illegible] ಮಾಂಸಖಂಡಗಳ [illegible], ನರಗಳ ದುರ್ಬಲ, [illegible] ಪೆರೂನಾ [illegible]

ಆದರೆ ಪರೂನಾದಲ್ಲಿ [illegible]

ಪೆರೂನಾವಿನ ಉತ್ತಮೋತ್ತಮವಾದ ಗುಣ

[illegible] ಇದರ ಕೆಲಸ [illegible] ಅಂಗಗಳೆಲ್ಲ [illegible] ಪೆರೂನಾ [illegible] ಒಂದು ಬಾಟ್ಲಿ ಸೇವಿಸುವುದರಿಂದ ನಿಮಗೆ ಫಲವಾಗುವುದೋ ಇಲ್ಲವೋ [illegible] ಬರುತ್ತದೆ.

ಆದರಿಂದ ವಿಶೇಷ ಪ್ರಯೋಜನವಾಗಿರುವ [illegible] ವಿವರಿಸಿ ನಮ್ಮಲ್ಲಿಗೆ ಕಾಗದಗಳನ್ನು ಬರೆದಿದ್ದಾರೆ. ಅವುಗಳನ್ನು ಓದಿ [illegible] ಬರೆದವರಿಗೆ ಈ ಔಷಧದಿಂದ ಎಷ್ಟು [illegible] ತಿಳಿಯುತ್ತದೆ. ಅಶಕ್ತತೆಯನ್ನು ನಿವಾರಣೆಮಾಡುವುದರಲ್ಲೂ ಆರೋಗ್ಯವನ್ನು ಕೊಡುವುದರಲ್ಲೂ ಪೆರೂನಾವು ಎಷ್ಟು [illegible] ಅಂಗಾಂಗಗಳನ್ನು ವ್ಯಾಪಿಸಿ ತನ್ನ ಕೆಲಸವನ್ನು ಸಂಪೂರ್ಣ ಮಾಡುತ್ತದೋ ವಿವರಿಸಲಾಗಿದೆ.

ಮಿ ಪಿ ಬ್ರಾಡಿಕ್, [illegible]

[illegible] ನನ್ನ [illegible] ಕೆಲಸದಲ್ಲಿ ನನಗೆ [illegible]

[illegible]

ಯುದ್ಧದ ಬಾತ್ಮಿದಾರನ ಅಭಿಪ್ರಾಯ. ಪೆರೂನಾವನ್ನು ಹೊಗಳುತ್ತಾನೆ.

[illegible]

[illegible] ದೇಹಸ್ಥಿತಿ ಎಷ್ಟೇ ಕೆಟ್ಟಿದ್ದರೂ ಪೆರೂನಾ ಗುಣವಾದ ಆರೋಗ್ಯ ಕೊಡತಕ್ಕದ್ದು.

[illegible]

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ — ಈ ಔಷಧ ಸಿಕ್ಕುವ ಸ್ಥಳಗಳು—

(೧) ಕೆಮಿಕಲ್ [illegible], ಬೆಂಗಳೂರು, ಅಥವಾ

(೨) ಇಂಗ್ಲಿಷ್ ಡ್ರಗ್ ಕಂಪನಿ, [illegible], ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

[illegible] 1908 [illegible] 7 8—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	[illegible]	[illegible]	0	0
ಮೈಸೂರು ,,	12	12	0	0
ಬೆಂಗಳೂರು ಡಿಸ್ಟ್ರಿಕ್ಟು	*	*	0	0
[illegible]	29	24	0	0
ಕೋಲಾರ್ ,,	119	87	[illegible]	[illegible]
ಕೋಲಾರ್ ಚಿನ್ನದ ಗಣಿಗಳು	*	*	0	0
ತುಮಕೂರು ಡಿಸ್ಟ್ರಿಕ್ಟು	*	*	0	0
ಹಾಸನ ,,	[illegible]	[illegible]	8	[illegible]
ಚಿತ್ರದುರ್ಗ ,	1	1	0	0
[illegible] ,	33	15	0	0
[illegible] ,	17	5	0	0
* [illegible]	248	[illegible]	11	[illegible]

[illegible]

೧೯೦೮ನೇ ಫೆಬ್ರವರಿ.

[illegible]	[illegible]		[illegible]	[illegible]	[illegible]	[illegible]	[illegible]
20	[illegible]	,	[illegible]	27 34	[illegible]	8 10	9
21	[illegible]	*	[illegible]	[illegible]	[illegible]	11 18	10
22	[illegible]	[illegible]	[illegible]	29 2	[illegible]	13 33	11
23	[illegible]		[illegible]	23 18	[illegible]	11 16	12
24	[illegible]		[illegible]	25 45	[illegible]	11 4	13
25	[illegible]		[illegible]	32 23	[illegible]	12 11	14
26	[illegible]	‡	[illegible]	18 8	[illegible]	9 50	[illegible]

,, [illegible]
* [illegible]
[illegible]
. [illegible] ‡ [illegible]

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
[illegible]	[illegible]	[illegible]
[illegible]	[illegible]	[illegible]
,, [illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
,, [illegible]	[illegible]	[illegible]
[illegible]	[illegible]	[illegible]
,, [illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible] ಅವರೆ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
[illegible]	[illegible]	[illegible]
ಎಳ್ಳು [illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
ಮೆಣಸಿನಕಾಯಿ	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible] ,,	[illegible]	[illegible]
ಕೊತ್ತುಂಬರಿ [illegible]	[illegible]	[illegible]
ಉಪ್ಪು ,,	[illegible]	[illegible]
[illegible]	[illegible]	[illegible]
,, [illegible]	[illegible]	[illegible]
ತುಪ್ಪ [illegible]	[illegible]	[illegible]
ಸೀಮೆಎಣ್ಣೆ [illegible]	[illegible]	[illegible]
ತೆಂಗಿನಕಾಯಿ ೧೦೦ಕ್ಕೆ	[illegible]	[illegible]
[illegible]	[illegible]	[illegible]
[illegible]	[illegible]	[illegible]
ಚಿನ್ನ (ಪೌ೯) [illegible]	[illegible]	[illegible]
,, ,, [illegible]	[illegible]	[illegible]
,, ,, [illegible]	[illegible]	[illegible]
ಬೆಳ್ಳಿ [illegible] ೧೦೦ ಕ್ಕೆ	[illegible]	[illegible]

Printed and Published by the Rev E W Thomlson, M. A, Proprietor and Manager, Wesleyan Mission Press, Mysore. 20/2/1908

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೮ ನೇ ಇಸವಿ ಫೆಬ್ರುವರಿ ತಾರೀಖು ೨೭ ನೇ ಗುರುವಾರ. ಸಂಚಿಕೆ ೩೯

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತೆ—

ಅಮೃತಾಂಜನ

17-1

ತರಿಸಿಕೊಳ್ಳಿರಿ : ತ್ವರೆಗೈಯಿರಿ :— ಅಮೃತಾಂಜನ ಸರ್ವಲೋಕರಂಜನ, ಸರ್ವ ವ್ಯಾಧಿಭಂಜನ, ಚಿಕಿತ್ಸಾ ವಳಿಯೊಳ್ ಕಾಂಚನ, ದೇಹಾಂಗಗಳಿಗೆ ಸಂಜೀವನ, ವಾಸನೆಯಲ್ಲಿ ಮನೋರಂಜನ, ಬೆಲೆಯಲ್ಲಿ ಅಲ್ಪ, ಯೋಗ್ಯತೆಯಲ್ಲಿ ಅಮೃತ, ಔಷಧಿಯಲ್ಲಿ ಖ್ಯಾತಿ, ಕೊಳ್ಳುವವರಲ್ಲಿ ಮೂಡಿರುತ್ತದೆ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು. ಒಂದೇ ಸಾರಿ ಆರು ಬಾಟ್ಲು ತರಿಸಿಕೊಂಡವರಿಗೆ ಒಂದು ಜರ್ಮನ್ ಬೆಳ್ಳಿಯ ಕಪ್ ಉಚಿತವಾಗಿ ದೊರಕುವದು.

ಸ್ವದೇಶಿಯಾಗಿ ಭಾರತವರ್ಷೀಯ ಔಷಧಗಳಿಂದ ತಯಾರಿಸಿದ ಹೊರುಪಯೋಗಕ್ಕೋಸ್ಕರ ಮುಲಾಮು. ಇದರಿಂದ ತಲೆನೋವು, ಶಿರೋವೇದನೆ, ವಾತ, ಸಂಧಿವಾತ ಪಕ್ಷವಾತ, ಗಂಟ್ಲು ನೋವು, ಸೊಂಟದನೋವು, ಗಂಟ್ಲು ನೋವು, ಶೀತ, ಜಕಮು, ಉಳಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಿಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

ಬಾಟ್ಲಿ ಒಂದಕ್ಕೆ ಕಿಮ್ಮತು ೦—೮—೦. ಪೋಸ್ಟು ಖರ್ಚು ೦—೪—೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು. ಡಬ್ಬಿ ಒಂದಕ್ಕೆ ಕಿಮ್ಮತು ೦—೬—೦. ಪೋಸ್ಟು ಖರ್ಚು ೦—೩—೦.

ದಂತಮಂಜನ.—ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಹಲ್ಲುಗಳು ಬೆಳ್ಳಗಾಗುತ್ತವೆ. ಹಲ್ಲಿನ ನೋವನ್ನು ತೆಗೆಯುತ್ತದೆ. ಡಬ್ಬಿ ಒಂದಕ್ಕೆ ೦—೨—೦. ಪೋಸ್ಟು ಖರ್ಚು ೦—೩—೦.

ವಜ್ರಗುಟಿಕ.—ಧಾತುಪುಷ್ಟಿ ನಿರ್ಬಲವಂತರಿಗೆ ಶಕ್ತಿ ಕೊಡುತ್ತದೆ; ಸ್ವಪ್ನದೋಷವು ಆಗುವದು ನಿಲ್ಲಿಸುತ್ತದೆ. ರಕ್ತ ವೃದ್ಧಿಮಾಡಿ ದೇಹಕ್ಕೆ ಆರೋಗ್ಯ ಕೊಡುತ್ತದೆ. ಡಬ್ಬಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೩—೦.

ಕೇಶವರ್ಧಿನಿ.—ತಲೆ ನೋವುಗಳು ತಂಪುಮಾಡುವದು, ಕೂದಲುಗಳನ್ನು ಬೆಳೆಸುವದು, ಕೂದಲುಗಳನ್ನು ಕಪ್ಪುಮಾಡುವದು, ಮನಶ್ಶುದ್ಧಿ ಮಾಡುವದು, ಚಲೋ ಪರಿಮಳ ಉಳ್ಳದ್ದು. ೩ ಡಜನು ಬಾಟ್ಲಿ ಒಂದಕ್ಕೆ ೧—೦—೦. ಪೋಸ್ಟು ಖರ್ಚು ೦—೩—೦.

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಫೋರ್ಟ್, ಮುಂಬಯಿ.

ಟೆಲಿಗ್ರಾಫು ಅಡ್ರೆಸು—"ಅಮೃತಾಂಜನ," ಮುಂಬಯಿ.

ಕಾರ್ಡು ಸೈಜು ೪¼ × ३¼.

ಫೋಟೋ ತೆಗೆಯುವ

ಫೊಟೋ ಕ್ಯಾಮೆರಾ.

84-29

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮೆರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೇ ಕಿಮ್ಮತು ३ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ :—

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಜ್ವ ರ ಹ ರಿ. 18-4

ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಾಮಾಲತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೬೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವು ದರಿಂದ ದಯವಿಟ್ಟು ಇನ್ನೊಂದು ೬೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ :—ಸೀಸೆ ೧ ಕ್ಕೆ ೮ ಆಣೆ, ೧ ರೂ ; ೧—೮ ರೂ., ರೂ. ೨—೧೨ ಆ. ; ೧೧ ರೂ. ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫು ಬಿಡಲಾಗುವದು.

◆◆◆◆◆◆◆◆

ಓ ಮಂ ಕ ಪೂ ರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯು ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತೀಸಾರ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ :—

ಚೆಪ್ರಿಯಾರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಕೆಲಿಂಗ್ ಟೇಕ್ ರೈಸ್, ಮದರಾಸ್.

ಮೌಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-2

೧. ಲೋಕಾನುಪಯರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಜವಳಿದ ಬಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ವೀರ್ಯ ಹವಾಗಳ ಚಲನವಲನೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಕೆಮ್ಮು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೬೦ ಮಾತ್ರೆಯುಳ್ಳ ಕುಪ್ಪಿಗೆ ೩ ಆಣೆ; ೫ ಕುಪ್ಪಿಗೆ ೧ ರೂಪಾಯಿ. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೩ ಆಣೆ.

ವಿಳಾಸ :—ಮೌಳ್ಯದ ವೆಂಕಟಾಚಲ ಪಂಡಿತ,

ಎಸ್ ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್ ಮೈಸೂರು.

ರಬ್ಬರ್ ಹ್ಯಾಂಡ್ ಪ್ರೆಸ್.

114-21

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರಿಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೬ ರಿಂದ ೧೮ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲಗು, ಉರ್ದು, ಪರ್ಷಿಯನ್, ಅರಾಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು. ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು. ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳಕಾಲ ಹಿಡಿಯುವದು. ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ದೆಶೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು. ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ.

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.

ಹಾಫ್ ಫುಲ್‌ಸ್ಕ್ಯಾಪ್ ಸೈಜು, ೬—೦—೦.

ಪೋಸ್ಟೇಜು ಬೇರೆ (extra).

ವಿಳಾಸ:— ವರ್ಧಮಾನ ಏಜನ್ಸಿ,

ಪೋಸ್ಟ್ ಕಾಲಬಾದೇವಿ,

ಮುಂಬಯಿ.

ನಂಜನಗೂಡು ನೋಟೀಸ್

[illegible]

ಇಲ್ಲಿ ನೋಡಿ.

[illegible]

ನೀವು ಉಪಾಧ್ಯಾಯರೊ ?

ಹಾಗಾದರೆ ಇಲ್ಲಿ ಬರೆದಿರುವದನ್ನು ಓದಿ ನೋಡಿರಿ.

[illegible]

ನೋಟೀಸ್

[illegible]

CHAMBERLAIN'S COLIC, CHOLERA AND DIARRHOEA REMEDY,



[illegible]

SCOTT'S EMULSION

[illegible]

THE PLACE FOR HASSAN CAPS IS HASSAN.

ನಿಮ್ಮ ತಲೆಯು ನೋಯುತ್ತಿರುವದೇನು?

ಹಾಸನದ ಟೋಪಿ ಅಲ್ಲವೋ!

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

[illegible]

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

[illegible]

ಎಂ. ಮಲ್ಲಾರಾಧ್ಯರು.

ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು

ವೃತ್ತಾಂತ ಪತ್ರಿಕೆ

೧೯೦೮ ನೇ ಇಸವಿ ಫೆಬ್ರವರಿ ೨೭ ನೇ ತಾರೀಖು

ಹಿಂದುಸ್ಥಾನ ಎಕ್ಸಿಕ್ಯುಟಿವ್ ಸರಕಾರವು

[illegible]

ಊರಗೋಲದ ವೃತ್ತಾಂತಗಳು.

[illegible]

ಮೈಸೂರು ಗೆಜೆಟ್ ಸಂಗ್ರಹ

[illegible]

ಒಬ್ಬ ಯುರೋಪಿಯನ್ ಹುದ್ದೇದಾರನ ಕೃತಜ್ಞತೆಯು.

ಮೈಸೂರು ರೈತನಿಗುಂಟಾದ ಪ್ರಯೋಜನವು.

ಮೈಸೂರು ಗವರ್ನಮೆಂಟಿನ ಒಂದಾನೊಂದು ಇಲಾಖೆಯ ಮುಖ್ಯ ಹುದ್ದೇದಾರರಾಗಿರುವ ಒಬ್ಬ ಇಂಗ್ಲೀಷ್ ಸರದಾರರು ಕೆಲವು ದಿನಗಳ ಕೆಳಗೆ ಬೆಂಗಳೂರಿಂದ ರಾಜಧಾನಿಗೆ ಬಂದು ಕೆಲಸದ ನಿಮಿತ್ತವಾಗಿ ಶ್ರೀರಂಗಪಟ್ಟಣಕ್ಕೆ ಬೈಸಿಕಲ್ ಮೇಲೆ ಹೋಗಿ ಅಲ್ಲಿ ತಮ್ಮ ಅಧಿಕಾರಕ್ಕೆ ಒಳಪಟ್ಟದ್ದ ಭಾಗಗಳನ್ನು ತನಿಖೆಮಾಡಿಕೊಂಡು, ವಾಪಸು ಬೈಸಿಕಲ್ ಮೇಲೆ ರಾಜಧಾನಿಗೆ ಬರುತ್ತಿರುವಲ್ಲಿ ಬಿಸಿಲಿನ ಝಳ ಹೆಚ್ಚಾಗಿ ಅವರಿಗೆ ತುಂಬಾ ಬಾಯಾರಿಕೆಯಾಯಿತು. ಅವರು ಏನಾದರೂ ಕುಡಿಯಬೇಕೆಂದು ಎತ್ತ ನೋಡಿದರೂ ಎಲ್ಲೂ ಕಣ್ಣಿಗೆ ಬೀಳಲಿಲ್ಲ. ಮಾರ್ಗದಲ್ಲಿ ಅತ್ತಿತ್ತ ನೋಡುತ್ತಾ ಬರುತ್ತಿದ್ದಾಗ ಅವರಿಗೆ ಒಂದು ತೆಂಗಿನ ತೋಟವು ಕಣ್ಣಿಗೆ ಬಿದ್ದಿತು. ಕೂಡಲೇ ಬೈಸಿಕಲ್ಲನ್ನು ತೋಟದ ಬಳಿಗೆ ತೆಗೆದುಕೊಂಡು ಹೋಗಿ ಅದನ್ನು ಬೇಲಿಯ ಬಳಿ ನಿಲ್ಲಿಸಿ, ತೋಟದೊಳಕ್ಕೆ ನುಗ್ಗಿ ತಲೆಯೆತ್ತಿ ನೋಡುವಲ್ಲಿ ಒಂದು ತೆಂಗಿನಮರದಲ್ಲಿ ನಾಲ್ಕಾರು ಕುರುಬೆಗಳು ಕಂಡುಬಂದವು. ಸಾಹೇಬರು ಆ ಎಳನೀರನ್ನು ಹ್ಯಾಗಾದರೂ ಕೆಡವಿ ಕುಡಿದು ದಾಹಶಮನ ಮಾಡಿಕೊಳ್ಳಬೇಕೆಂದು ತುಂಬಾ ಪ್ರಯತ್ನಪಟ್ಟರು. ಅವರಿಗೆ ಕಾಲಲ್ಲಿ ಮೇಜಾಗಳಿದ್ದವು. ಅಲ್ಲದೆ ಮರ ಹತ್ತುವುದು ಅವರಿಗೆ ತಿಳಿಯದು. ಸ್ವಲ್ಪಹೊತ್ತು ಹಾಗೇ ಮರದ ಕೆಳಗೆ ನಿಂತಿರುವಲ್ಲಿ ಆ ತೋಟದ ರೈತನು—ಯಾರೋ ಬಂದು ತನ್ನ ತೋಟವನ್ನು ಹಾಳುಮಾಡುತ್ತಾರೆಂತಲೋ, ಫಲವನ್ನು ಅಪಹರಿಸಿಕೊಂಡು ಹೋಗುತ್ತಾರೆಂತಲೋ ಗಾಬರಿಬಿದ್ದು ಓಡಿಹೋಗಿ ನೋಡುವಲ್ಲಿ ಆ ಸಾಹೇಬರು ಅವನ ಕಣ್ಣಿಗೆ ಬಿದ್ದರು. ಅವನನ್ನು ಸಮಾಧಾನಪಡಿಸಿ ತಮ್ಮ ಬಳಿಗೆ ಬರಮಾಡಿಕೊಂಡು ಸನ್ನೆಗಳಿಂದಲೂ ಅರೆಭಾಷೆಯಿಂದಲೂ ತಮಗೆ ತುಂಬಾ ಬಾಯಾರಿಕೆಯಾಗಿದೆ ಎಂತಲೂ, ಹ್ಯಾಗಾದರೂ ಒಂದೆರಡು ಎಳನೀರುಗಳನ್ನು ಕೆಡವಿಕೊಡಬೇಕೆಂತಲೂ ಕೇಳಿದರು. ಆ ರೈತನು ತನಗೆ ಹತ್ತುವುದು ಚನ್ನಾಗಿ ಅಭ್ಯಾಸವಾಗಿಲ್ಲವೆಂದು ಎಷ್ಟು ಹೇಳಿದರೂ ಕೇಳದೆ, ಸಾಹೇಬರು ಅವನಿಗೆ ಧೈರ್ಯಪ್ರೋತ್ಸಾಹಾದಿಗಳನ್ನು ಹೇಳಿ, ಕಡೆಗೆ ಅವನನ್ನೇ ಮರಹತ್ತಿಸಿದರು. ಅವನು ತುಂಬಾ ಸಾಹಸಪಟ್ಟು ಮರವನ್ನು ಹತ್ತಿಹೋಗಿ ಪರೀಕ್ಷೆ ಮಾಡಿದಾಗ ಅದರ ಮೇಲೆ ಬರೀ ಕುರುಬೆಗಳು ಮಾತ್ರ ಇದ್ದವಲ್ಲದೆ, ಒಳ್ಳೇ ಹದವಾಗಿದ್ದದ್ದು ಒಂದೂ ಇರಲಿಲ್ಲ. ಆದರೂ ಸಾಹೇಬರು ಅದನ್ನೇ ಕಿತ್ತುಹಾಕು, ಅದೇ ಸಾಕು ಎಂದು ಕೆಳಗೆ ನಿಂತು ಕೂಗಿ ಸನ್ನೆಮಾಡಿ ತಿಳಿಸಿದರು. ರೈತನು ಆ ಕುರುಬೆಗಳನ್ನು ಕಿತ್ತು ಕೆಳಕ್ಕೆ ಕೆಡವಿಬಿಟ್ಟರೆ ಅವರು ಅದು ಹಿಡಿದುಕೊಳ್ಳದೆಹೋದರೆ ಅವು ಬಿದ್ದು ಒಡೆದುಹೋಗಿ ಕಡೆಗೆ ತಾನು ಹತ್ತಿದ ಶ್ರಮವೆಲ್ಲಾ ವ್ಯರ್ಥವಾಗುವುದೆಂದು ನೆನಸಿ, ಆ ಕುರುಬೆಗಳನ್ನೇ ೨-೩ ಕಿತ್ತು ಹಿಡಿದುಕೊಂಡೇ ಇಳಿದು ಬಂದನು. ತರುವಾಯ ಕುಡುಗೋಲಿಗಾಗಿ ಸಾಹೇಬರು ಸ್ವಲ್ಪಹೊತ್ತು ಕಾದಿರಬೇಕಾಯಿತು. ಕಡೆಗೆ ರೈತನು ಕುಡುಗೋಲು ತಂದು ಆ ಕುರುಬೆಗಳನ್ನೇ ಹೊಗಳು[?] ಕೆತ್ತಿ ಸಾಹೇಬರಿಗೆ ಕೊಟ್ಟನು. ಅವರು ಅದನ್ನೇ ಬಹಳ ರುಚಿಯಾಗಿದೆ ಎಂದು ಹೇಳುತ್ತಾ ಕುಡಿದು, ತಮ್ಮ ಪಿಪಾಸವನ್ನು ಆರಿಸಿಕೊಂಡರು.

ಅಷ್ಟು ಹೊತ್ತಿಗೆ ಸುಮಾರು ೨ ಗಂಟೆಯಾಗಿದ್ದಿತು. ಸಾಹೇಬರಿಗೆ ಮಾರು ಝಾಮದ ಊಟವಿಲ್ಲದೆ ಹೊಟ್ಟೆ ಹಸಿವು ಜೋರಾಯಿತು. ಅವರು ದಣಿವಾರಿಸಿಕೊಳ್ಳುತ್ತಾ ಮರದ ನೆರಳಿನಲ್ಲಿ ಸ್ವಲ್ಪ ಹೊತ್ತು ನಿಂತಿರುವಲ್ಲಿ ಅದೇ ರೈತನ ಹೆಂಡತಿಯು ಅವನಿಗೆ ಮನೆಯಿಂದ ಹಿಟ್ಟು, ರೊಟ್ಟಿ, ಖಾರ ಮುಂತಾದ್ದನ್ನು ಕುಕ್ಕೆಯಲ್ಲಿಟ್ಟುಕೊಂಡು ತೋಟಕ್ಕೆ ತಂದಳು. ಸಾಹೇಬರು ಅದನ್ನು ನೋಡಿ ಗೌಡನ ಬಳಿಗೆ ಹೋಗಿ, ಅವಳು ತಂದದ್ದೇನೆಂದು ಕೇಳಿದ್ದಕ್ಕೆ ಅದು ತನ್ನ ಊಟವೆಂದೂ ಅವಳು ತನ್ನ ಹೆಂಡತಿಯೆಂದೂ ಹೇಳಿದನು. ಆಗ ಸಾಹೇಬರು ಕೆಲವು ಸರಸವಾದ ಮಾತನ್ನಾಡಿ, ಗೌಡನ ಊಟದಲ್ಲಿ ಬಹಳ ಸ್ವಲ್ಪವನ್ನು ಕೇಳಿ ತಿಂದು ಬಹಳ ಖಾರವೆಂದು ಹೇಳುತ್ತಾ ಸಂತೋಷಪಟ್ಟು, ಆ ರೈತನ ಹೆಸರು ವಿಳಾಸಗಳನ್ನು ಕೇಳಿ ಬರೆದುಕೊಂಡು, ಬೈಸಿಕಲ್ ಹತ್ತಿ ವಾಪಸು ರಾಜಧಾನಿಗೆ ಬಂದು, ಕೂಡಲೇ ಆ ರೈತನಿಗೆ ೨೦ ರೂಪಾಯಿ ಬಹುಮಾನ ಕಳುಹಿಸಿದರು. ಈಚೆಗೆ ಸಾಹೇಬರು ಕ್ರಿಸ್ಮಸ್ ಹಬ್ಬದ ಬಹುಮಾನವೆಂದು ಹೇಳಿ ಆ ರೈತನಿಗೆ ೫೦ ರೂಪಾಯಿನ ಒಂದು ನೋಟನ್ನೂ, ಅವನ ಹೆಂಡತಿಗೆ ೫೦ ರೂಪಾಯಿನ ಚಿನ್ನದ ಬಳೆಗಳನ್ನೂ ಮಾಡಿಸಿ ಕಳುಹಿಸಿಕೊಟ್ಟರು. ಆದರೆ ಆ ಗೌಡನು ಆ ನೋಟನ್ನು ಮುರಿಸುವುದಕ್ಕೆ ಹೆದರಿಕೊಂಡು, ಅದನ್ನು ಸಾಹೇಬರಿಗೇ ಕೊಟ್ಟುಬಿಟ್ಟನು. ಇನ್ನು ಕೆಲವು ಕಾಲದೊಳಗಾಗಿ ಆ ಹುದ್ದೇದಾರರು ರಜಾಪಡೆದು ಸೀಮೆಗೆ ಹೋಗಿಬರುವವರಾಗಿರೋದರಿಂದ ಆ ರೈತನು ಕೊಟ್ಟ ನೋಟಿಗೆ ಹಣವನ್ನೇ ಕೊಡಿಸಿದ್ದಲ್ಲದೆ, ಈ ವರುಷದ ಕೊನೆಯಲ್ಲಿ ಆ ಗೌಡನ ಮನೆಯವರಿಗೆಲ್ಲಾ ಕ್ರಿಸ್ಮಸ್ ಹಬ್ಬದ ಬಹುಮಾನಕ್ಕಾಗಿ ೧೦೦ ರೂಪಾಯಿ ಬಟ್ಟೆ ಬರೆಗಳನ್ನು ಕೊಡಿಸುವಂತೆ ಏರ್ಪಾಡು ಮಾಡಿದ್ದಾರೆಂದು ಕೇಳುತ್ತೇವೆ. ಆ ಗೌಡನು ಮಾಡಿದ ಉಪಕಾರವೆಂಥಾದ್ದೋ, ಅದಕ್ಕಾಗಿ ಅವನಿಗೆ ದೊರಕಿದ ಪ್ರತಿಫಲವೆಂಥಾದ್ದೋ, ಆ ಹುದ್ದೇದಾರರ ಕೃತಜ್ಞತೆ ಪ್ರೀತಿ ವಿಶ್ವಾಸಾದಿಗಳು ಎಷ್ಟುಮಟ್ಟಿನವೋ ವಾಚಕರೇ ಊಹಿಸಿಕೊಳ್ಳಬಹುದು.

ರಾಜಧಾನಿಯ ಕುಡಿಯುವ ನೀರು.

ಮ್ಯುನಿಸಿಪಲ್ ಕೌನ್ಸಿಲರುಗಳ ಸ್ಪೆಷಲ್ ಮೀಟಿಂಗು.

ವಿದ್ಯುಚ್ಛಕ್ತಿಯಿಂದ ನೀರೆತ್ತುವ ಏರ್ಪಾಡು.

ಮೈಸೂರು ಪಟ್ಟಣಕ್ಕೆ ಬೆಳಗುಳದಿಂದ ಕಾವೇರೀ ನೀರನ್ನು ಎತ್ತಿ, ಕುಡಿಯುವ ನೀರನ್ನು ಒದಗಿಸುತ್ತಿದ್ದಾರಷ್ಟೆ. ಅಲ್ಲಿ ಎರಡು ಮೂರು ಇಂಜಿನ್‌ಗಳನ್ನು ಇಟ್ಟು, ಕಾಲುವೆಯಲ್ಲಿ ಹರಿಯುವ ನೀರಿನ ಶಕ್ತಿಯಿಂದ ಚಕ್ರಗಳನ್ನು ಓಡಿಸಿ, ಆ ಮೂಲಕ ನಾಲೆಯ ನೀರನ್ನು ಇಂಜಿನ್ ಮೂಲಕ ಎತ್ತಿ ನಳ್ಳಿಗಳ ಮೂಲಕ ಮೈಸೂರು ಪಟ್ಟಣಕ್ಕೆಲ್ಲಾ ಸರಬರಾಜು ಮಾಡುವರು. ಇದಕ್ಕಾಗಿ ಮ್ಯುನಿಸಿಪಾಲಿಟಿಗೆ ವರುಷಕ್ಕೆ ೨೩,೦೦೦ ರೂಪಾಯಿನಂತೆ ಖರ್ಚಾಗುತ್ತಿದೆ. ಇದಲ್ಲದೆ ಆ ನೀರನ್ನು ಪಟ್ಟಣದೊಳಗೆಲ್ಲಾ ನಳ್ಳಿಗಳ ಮೂಲಕ ಪ್ರಜೆಗಳಿಗೆ ತಂದು ಒದಗಿಸುವುದಕ್ಕೆ ಬಹಳ ಶ್ರಮಪಡಿಯನ್ನಿಟ್ಟಿದ್ದಾರೆ. ಈಗ ಆ ಇಂಜಿನ್‌ಗಳು ದಿನಕ್ಕೆ ೮ ಲಕ್ಷ ಗ್ಯಾಲನ್‌ನಂತೆ ನೀರು ಎತ್ತಿ ರಾಜಧಾನಿಗೆ ಕಳುಹಿಸುತ್ತಿದರೂ ನೀರಿನ ಸರಬರಾಯಿ ತೃಪ್ತಿಕರವಾಗಿಲ್ಲ. ಮತ್ತು ನೀರು ಸಾಕಾಗುವುದಿಲ್ಲ. ಈಚೆಗೆ ಮ್ಯುನಿಸಿಪಲ್ ಕೌನ್ಸಿಲರುಗಳ ಅಭಿಪ್ರಾಯದ ಪ್ರಕಾರ ಈ ನೀರು ಸರಬರಾಯಿನ ಇಲಾಖೆಯನ್ನು ಇಂಜನಿಯರ್ ಇಲಾಖೆಯವರು ವಹಿಸಿಕೊಂಡಿದ್ದಾರೆ. ಇದಕ್ಕಾಗಿ ಮ್ಯುನಿಸಿಪಾಲಿಟಿಯಿಂದ ಆ ಇಲಾಖೆಗೆ ವರುಷಕ್ಕೆ ೧೨,೦೦೦ ರೂಪಾಯಿನಂತೆ ಪಾವತಿಯಾಗುತ್ತಾ ಇರುವುದು.

ವಿದ್ಯುಚ್ಛಕ್ತಿಯ ಸಹಾಯ.

ಈಚೆಗೆ ಮೈಸೂರು ಸರ್ಕಾರದವರು ಶಿವಸಮುದ್ರದಲ್ಲಿ ವಿದ್ಯುಚ್ಛಕ್ತಿಯನ್ನು ಮೊದಲಿಗಿಂತಲೂ ಹೆಚ್ಚಾಗಿ ಉತ್ಪತ್ತಿ ಮಾಡಿ, ಅದರಿಂದ ಮೈಸೂರು ಪಟ್ಟಣಕ್ಕೂ ತಂತಿಗಳ ಮೂಲಕ ಆ ಶಕ್ತಿಯನ್ನು ತಂದು, ರಾತ್ರಿಹೊತ್ತು ಮ್ಯುನಿಸಿಪಲ್ ಲಾಂದ್ರಗಳನ್ನು ಹಚ್ಚಿ ಬೆಳಕು ಮಾಡಬೇಕೆಂದು ತೀರ್ಮಾನಿಸಿರುವುದೂ, ಈ ಬೆಳಕಿಗಾಗಿ ಮ್ಯುನಿಸಿಪಾಲಿಟಿಯಿಂದ ವಿದ್ಯುಚ್ಛಕ್ತಿಯ ಇಲಾಖೆಗೆ ಪ್ರತಿ ವರುಷವೂ ಹತ್ತು ಸಾವಿರ ರೂಪಾಯಿ ಪಾವತಿ ಆಗುವಂತೆ ಒಪ್ಪಂದ ನಡೆದಿರುವುದೂ ತಿಳಿಸಿದೆಯಷ್ಟೆ. ಈ ವಿದ್ಯುಚ್ಛಕ್ತಿಯ ಮನೆಯು ಇಲ್ಲಿನ ಕರ್ಜನ್ ಪಾರ್ಕಿನ ಪೂರ್ವಭಾಗದೊಳಗೆ ಕಟ್ಟಿ ಪೂರೈಸುವುದಕ್ಕೆ ಬಂದಿದೆ. ವಿದ್ಯುಚ್ಛಕ್ತಿಯನ್ನು ಶಿವಸಮುದ್ರದಿಂದ ಇಲ್ಲಿಗೆ ತಂತಿಗಳ ಮೂಲಕ ಸಾಗಿಸಿಕೊಂಡು ಬರುವುದಕ್ಕೆ ತಂತೀ ಕಂಭಗಳನ್ನು ಉದ್ದಕ್ಕೂ ನೆಡಲು ಆರಂಭವಾಗಿರುವಂತೆಯೂ, ಇದೇ ವರುಷದ ಜುಲೈ ತಿಂಗಳಲ್ಲಿ ಎಲ್ಲಾ ಸಿದ್ಧವಾಗಿ ವಿದ್ಯುಚ್ಛಕ್ತಿಯ ದೀಪವನ್ನು ರಾಜಧಾನಿಯಲ್ಲಿ ಉರಿಸಲಾರಂಭಿಸುತ್ತಾರೆಂತಲೂ ತಿಳಿದು ಬಂದಿದೆ.

ಈ ವಿದ್ಯುಚ್ಛಕ್ತಿಯನ್ನು ಕೆಲವು ಭಾಗ ಬೆಳಗುಳದಲ್ಲಿ ತಡೆದು, ಅಲ್ಲಿ ನೀರು ಎತ್ತುವ ಇಂಜಿನ್‌ಗಳನ್ನು ನಡೆಸುವುದಕ್ಕೆ ಪ್ರಯೋಗಿಸಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದರು. ಇದರಿಂದ ಈಗ ಆಗುವ ಖರ್ಚಿನಲ್ಲಿ ಶೇಕಡಾ ೨೦ ರಷ್ಟು ಕಡಮೆಯಾಗುವುದೆಂತಲೂ, ಆದರೆ ದಿನಕ್ಕೆ ಈ ಶಕ್ತಿಯಿಂದ ೧೫೦ ಲಕ್ಷ ಗ್ಯಾಲನ್ ನೀರನ್ನು ಎತ್ತಿ ರಾಜಧಾನಿಗೆ ಕಳುಹಿಸುವುದು ಸಾಧ್ಯವಾಗುವುದೆಂತಲೂ, ಈ ಹೊಸ ಏರ್ಪಾಡಿಗೆ ಮೊದಲು ೫೦ ಸಾವಿರ ರೂಪಾಯಿ ಖರ್ಚಾಗಬೇಕಾಗಿರೋದರಿಂದ ಈ ಹಣವನ್ನು ಮ್ಯುನಿಸಿಪಾಲಿಟಿಯವರು ಕೊಡಲು ಒಪ್ಪಿಕೊಳ್ಳುವರೇ ಎಂತಲೂ, ಇಷ್ಟು ಹಣವನ್ನೂ ಒದಗಿಸಲು ಮ್ಯುನಿಸಿಪಾಲಿಟಿಗೆ ಶಕ್ತಿ ಸಾಲದಿದ್ದರೆ ಅವರು ಸರ್ಕಾರದಲ್ಲಿ ಉಳಿಸಿಟ್ಟಿರುವ 'ರಿಜರ್ವ್ ಬ್ಯಾಲೆನ್ಸ್' ಎಂಬ ಹಣದಿಂದ ೨೫,೦೦೦ ರೂಪಾಯಿಯನ್ನು ಇದಕ್ಕೆ ವಿನಿಯೋಗಿಸುವಂತೆಯೂ, ಸರ್ಕಾರದವರು ಶೇಕಡಾ ೬ ರೂಪಾಯಿ ಬಡ್ಡಿಯ ಮೇಲೆ ೨೫,೦೦೦ ರೂಪಾಯಿ ಮ್ಯುನಿಸಿಪಾಲಿಟಿಗೆ ಸಾಲ ಕೊಡುವಂತೆಯೂ, ಈ ಸಾಲವನ್ನು ಅವರು ವರುಷಕ್ಕೆ ೫,೦೦೦ ರೂಪಾಯಿನಂತೆ ಐದು ವರುಷ ಕೊಟ್ಟು ತೀರಿಸಬಹುದೆಂತಲೂ, ಈ ಹೊಸ ಏರ್ಪಾಡಿಗೆ ಮ್ಯುನಿಸಿಪಾಲಿಟಿಯವರು ಒಪ್ಪುವುದಾದರೆ ರಾಜಧಾನಿಗೆ ಎಂದೆಂದಿಗೂ ಸ್ವಲ್ಪವೂ ಕೊರತೆ ಬಾರದಂತೆ ಬೇಕಾಗುವಷ್ಟು ನೀರು ಸರಬರಾಯಿ ಆದೀತೆಂತಲೂ, ಈ ವಿಚಾರಗಳನ್ನೆಲ್ಲಾ ಮ್ಯುನಿಸಿಪಲ್ ಕೌನ್ಸಿಲರುಗಳು ಆಲೋಚನೆ ಮಾಡಿ, ಕೂಡಲೇ ತೀರ್ಮಾನವನ್ನು ತಿಳಿಸಬೇಕು ಎಂದು ನೆಂಬಲಾಗಿ [?] ಗವರ್ನಮೆಂಟಿನವರು ಮ್ಯುನಿಸಿಪಲ್ ಪ್ರೆಸಿಡೆಂಟರಿಗೆ ಕಾಗದ ಬರೆದರು.

ಸ್ಪೆಷಲ್ ಮೀಟಿಂಗು

ಪ್ರೆಸಿಡೆಂಟ್ ಮ॥ ಕಾಂತರಾಜೇ ಅರಸಿನವರು ಗವರ್ನಮೆಂಟಿನವರ ಮೇಲ್ಕಂಡ ಸಲಹೆಯನ್ನು ಕುರಿತು ಆಲೋಚನೆ ಮಾಡುವುದಕ್ಕಾಗಿ ಕಳೆದ ಶುಕ್ರವಾರ ಬೆಳಿಗ್ಗೆ ಮ್ಯುನಿಸಿಪಲ್ ಕೌನ್ಸಿಲರುಗಳಿಗೆ ನೋಟಿಸ್ ಮೂಲಕ ತಿಳಿಸಿ, ಟೌನ್‌ಹಾಲಿಗೆ ಕರೆಸಿಕೊಂಡರು. ಆ ದಿನ ೧೧ ಮಂದಿ ಮೆಂಬರುಗಳು ಹಾಜರಾಗಿದ್ದರು. ಗವರ್ನಮೆಂಟು ಕಾಗದವನ್ನು ಪ್ರೆಸಿಡೆಂಟರು ಓದಿ ಹೇಳಿದ ಮೇಲೆ ಮೆಂಬರುಗಳು ಈ ಹೊಸ ಏರ್ಪಾಡನ್ನು ಅನುಮೋದಿಸಿ ತೀರ್ಮಾನ ಮಾಡಿರುವ ಅಭಿಪ್ರಾಯವೇನೆಂದರೆ—ಬೆಳಗುಳದಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ನೀರಿನ ಯಂತ್ರಗಳನ್ನು ನಡಿಸಿ, ರಾಜಧಾನಿಗೆ ನೀರು ಒದಗಿಸುವ ಏರ್ಪಾಡನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತೇವೆ. ಅದಕ್ಕೆ ಬೇಕಾಗುವ ೫೦ ಸಾವಿರ ರೂಪಾಯಿಯನ್ನು ಒದಗಿಸುವ ಭಾಗದಲ್ಲಿ ಮ್ಯುನಿಸಿಪಾಲಿಟಿಗೆ ಶಕ್ತ್ಯ ಸಾಲದು. ಅರ್ಧ ಹಣವನ್ನು ಸರ್ಕಾರದಲ್ಲಿರುವ ನಮ್ಮ ಬಾಬತು ಶಿಲ್ಕು ಹಣದಲ್ಲಿ ತೆಗೆದುಕೊಳ್ಳಬಹುದು. ಉಳಿದ ಅರ್ಧ ಹಣವನ್ನು ಸರ್ಕಾರದವರೇ ದಯವಿಟ್ಟು ಸಾಲವಾಗಿ ಕೊಡಿಸಬೇಕು. ಈ ಹಣವನ್ನು ಐದು ಸಾಲುಗಳಲ್ಲಿ ಕೊಟ್ಟು ತೀರಿಸುತ್ತೇವೆ. ಆದರೆ ಮ್ಯುನಿಸಿಪಾಲಿಟಿಯ ಶಕ್ತಿಯು ಸದ್ಯದಲ್ಲಿ ಬಡ ಸ್ಥಿತಿಯಲ್ಲಿರೋದರಿಂದ ಗವರ್ನಮೆಂಟಿನವರು ಈ ಸಾಲಕ್ಕೆ ಬಡ್ಡಿಯನ್ನು ಕೇಳದೆ ಬಿಟ್ಟುಕೊಡಬೇಕು ಎಂಬುದೇ.

ಮೈಸೂರು ಕೃಷಿಶಿಲ್ಪಾಭಿವರ್ಧಕ ಸಮಾಜವು.

"ಶ್ರೀಕೃಷ್ಣರಾಜ ಕೃಷಿಶಿಲ್ಪಾಭಿವರ್ಧಕ ಸಮಾಜ, ಲಿಮಿಟೆಡ್, ಮೈಸೂರು" ಎಂಬೀ ಸಂಘದ ಮ್ಯಾನೇಜಿಂಗ್ ಕಮಿಟಿಯವರು ೧೯೦೮ ನೇ ಇಸ್ವಿ ಫೆಬ್ರವರಿ ೧೬ ನೇ ತಾ. ಭಾನುವಾರ ಮಧ್ಯಾಹ್ನ ೩ ಘಂಟೆಯಲ್ಲಿ ಮೈಸೂರು ಟೌನ್ ಹಾಲ್ ಬಂಗಲೆಯಲ್ಲಿ ಮಾಡಿದ ಮೀಟಿಂಗಿನಲ್ಲಿ ತೀರ್ಮಾನವಾದ ವಿಷಯಗಳು:—

ಈ ಮೀಟಿಂಗಿನಲ್ಲಿ ಹಾಜರಾಗಿದ್ದ ಮೆಂಬರುಗಳು:—ಮೆ॥ ಗಳಾದ ವಿ ರಾಘವಾಚಾರ್ರು, ಜಿ ಸುಬ್ಬಸ್ವಾಮಯ್ಯರು, ಹೆಚ್. ನರಸಿಂಗರಾಯರು, ನರಸುಸ್ವಾಮಯ್ಯಂಗಾರ್ರು, ಬಿ. ನರಸಿಂಗರಾಯರು, ಸುಬ್ರಾಯಮೊದ್ಲಿಯಾರ್ರು, ಕೃಷ್ಣಶಾಸ್ತ್ರಿಗಳು, ಹೆಚ್ ಸಿ ಸುಬ್ರಾಯರು, ಎಂ ಜಿ ಕೃಷ್ಣಯ್ಯಂಗಾರ್ರು, ಅಂಬಳೆ ಅಣ್ಣಯ್ಯಪಂಡಿತರು, ಎಚ್. ನಂಜುಂಡರಾಜೇಅರಸಿನವರು, ಮದ್ದೂರು ರಾಮಣ್ಣನವರು, ಬಸಪ್ಪಯ್ಯನವರು, ತಿರುವೆಂಕಟಮೊದ್ಲಿಯಾರ್ರು, ವಾಸುದೇವಯ್ಯನವರು, ಮಾದಪ್ಪನವರು, ಬಳೆ ಚಿಕ್ಕ ಬಸವಣ್ಣನವರು.

ಈ ಮೀಟಿಂಗಿನಲ್ಲಿ ಮ॥ ವಿ. ರಾಘವಾಚಾರ್ರು ಅಗ್ರಾಸನವನ್ನು ವಹಿಸಬೇಕೆಂದು ಮ॥ ಜಿ ಸುಬ್ಬಸ್ವಾಮಯ್ಯರವರು ಸೂಚಿಸಿದ್ದನ್ನು ಮ॥ ಕೆ ನರಸುಸ್ವಾಮಯ್ಯಂಗಾರ್ರು ಸೆಕೆಂಡ್ ಮಾಡಿದರು. ಸಭಿಕರೆಲ್ಲರೂ ಅನುಮೋದಿಸಿದರು.

೧. ಅಸೋಸಿಯೇಷನಿಗೆ ಸಂಬಂಧಪಟ್ಟ ಒಂದು ಮ್ಯೂಜಿಯಮ್ಮನ್ನು ಏರ್ಪಡಿಸುವುದಕ್ಕಾಗಿ ಜುಬಿಲಿ [?] ಕಟ್ಟಡದಲ್ಲಿ ಕೂಡಿಟ್ಟಿರುವ ಅನೇಕ ಮಾದರಿ ಸಾಮಾನುಗಳನ್ನು ಅಸೋಸಿಯೇಷನ್ ಭಾಗಕ್ಕೆ ಕೊಡಿಸಬೇಕೆಂದು ರೆವಿನ್ಯೂ ಕಮಿಷನರಿಗೆ ಬರೆದುಕೊಳ್ಳಬೇಕು. ಮತ್ತು ಇವುಗಳನ್ನು ಕ್ರಮವಾದ ರೀತಿಯಲ್ಲಿ ಇಡುವುದಕ್ಕಾಗಿ ಅವಶ್ಯಕವಾದ ಕೇಸುಗಳನ್ನು ಕೊಳ್ಳಬಹುದು. ಇದಕ್ಕಾಗಿ ನೂರು ರೂಪಾಯಿನೊಳಗೆ ಖರ್ಚು ಮಾಡಬಹುದು. ೨. ಈ ಸಮಾಜದ ಉಪಯೋಗಕ್ಕಾಗಿ ಒಂದು ಪುಸ್ತಕಭಂಡಾರ ಮತ್ತು ರೀಡಿಂಗ್ ರೂಮನ್ನು ಏರ್ಪಡಿಸಬಹುದು. ಪುಸ್ತಕಗಳಿಗಾಗಿ ೫೦ ರೂಪಾಯಿ ಇರಿಸಬಹುದು. ಜರ್ನಲ್ ಮೊದಲಾದವುಗಳನ್ನು ಖರ್ಚಿಲ್ಲದೆ ತರಿಸುವುದಕ್ಕೆ ಪ್ರಯತ್ನಿಸಬೇಕು. ಚಾರ್ಜು ಕೊಡಬೇಕಾಗಿಬಂದಪಕ್ಷದಲ್ಲಿ ಸಾಧ್ಯವಾಗುವ ಮಟ್ಟಿಗೆ ಕೊಟ್ಟು ತರಿಸಬಹುದು. ೩. ಇಂಗ್ಲೀಷು ತಿಳಿಯದ ಮೆಂಬರುಗಳಿಗೆ ಜರ್ನಲ್ ಮತ್ತು ಪುಸ್ತಕಗಳಲ್ಲಿರಬಹುದಾದ ಮುಖ್ಯವಾದ ಅಂಶಗಳನ್ನು ಕನ್ನಡದಲ್ಲಿ ತರ್ಜಮೆ ಮಾಡಿಕೊಡಬೇಕು. ಟವುನಲ್ಲಿ ವಾಸವಾಗಿಲ್ಲದೆ ಹೊರಗೆ ತಾಲ್ಲೂಕುಗಳಲ್ಲಿ ವಾಸವಾಗಿರುವ ಮೆಂಬರುಗಳಲ್ಲಿ ಇಂಗ್ಲೀಷು ಭಾಷೆ ತಿಳಿದವರಿದ್ದರೆ ಅಂಥವರಿಗೆ ಬೇಕಾದ ಬುಕ್ಕುಗಳು ಮತ್ತು ಜರ್ನಲ್‌ಗಳನ್ನು ಅವರ ಖರ್ಚಿನಲ್ಲಿ ನಿಬಂಧನೆ ಮೇರೆ ಕಳುಹಿಸಬಹುದು.

೪. ವ್ಯವಸಾಯದ ಸಾಮಾನುಗಳು —(೧) ಜೋಳ ತುಳಿಸುವುದಕ್ಕೆ ಅನುಕೂಲವಾಗಿದೆ ಎಂದು ತಿಳಿದುಬರುವ ರೋಣಗಲ್ಲು ಒಂದನ್ನು ಮಾಡಿಸುವುದಕ್ಕೆ ಬೇಕಾದ ಅಳತೆಗಳು, ಪ್ಲಾನು, ಇವುಗಳಿಗಾಗಿ ಮೆ॥ ಸಿ ಕೆ ಸುಬ್ರಾಯರಿಗೆ ಕಾಗದವನ್ನು ಬರೆಯಬಹುದು. (೨) ಸೀಮೆ ನೇಗಿಲುಗಳಲ್ಲಿ ಕೆನಡಿಯನ್ [?] ಒಂದು ಮಾದರಿ ನೇಗಿಲನ್ನು ಅಗ್ರಿಕಲ್ಚರಲ್ ಕೆಮಿಸ್ಟರಿಂದ ತರಿಸಿ ಪರೀಕ್ಷಿಸಬೇಕು. (೩) ರೈತರಿಗೆ ಅವಶ್ಯಕವಾದ ಗುಳ, ಗುದ್ದಲಿ, ಪಿಕಾಸಿ, ಹಾರೆ, ಮಚ್ಚು, ಕೊಡಲಿ, ಕಾಕಗೋಲು, ಆರ, ಈ ಮೊದಲಾದವುಗಳನ್ನು ಕೊಂಡು ಇತರ ಕಡೆಯಲ್ಲಿ ದೊರೆಯುವುದಕ್ಕಿಂತಲೂ ಕಡಿಮೆ ಬೆಲೆಯಲ್ಲಿ ಮಾರುವುದಕ್ಕೆ ಈ ಸಂಘದವರು ಪ್ರಯತ್ನಿಸಬಹುದು.

೫. ಗೊಬ್ಬರ.—ಭತ್ತದ ಪೈರಿಗೆ ಕ್ಯಾಲ್ಸಿಯಂ ಫಾಸ್ಫೇಟ್ (ಮೂಳೆಪುಡಿ) ಪುಡಿ ಮತ್ತು ಪಟ್ಟುಪ್ಪು ಇವೆರಡನ್ನೂ ಹಾಕುವುದರಿಂದ ಬಹಳ ಪ್ರಯೋಜನವುಂಟೆಂದು ಬಂಗಾಳಾ ವ್ಯವಸಾಯದ ಇಲಾಖೆಯವರು ಅವರ ಪರಿಶೋಧನೆಗಳಿಂದ ತಿಳಿಸುವ ಭಾಗ ನಮ್ಮ ಸೀಮೆಯಲ್ಲಿ ಎಷ್ಟರ ಮಟ್ಟಿಗೆ ಉಪಯೋಗವೆಂದು ಪರೀಕ್ಷಿಸುವುದಕ್ಕಾಗಿ ಈ ಗೊಬ್ಬರಗಳನ್ನು ಉಪಯೋಗಿಸುವುದಕ್ಕೆ ಯಾರು ಒಪ್ಪುವರೋ ಅಂತಹ ಮೆಂಬರುಗಳನ್ನು ಗೊತ್ತುಮಾಡಿ ಅವರಿಗೆ ಅವುಗಳನ್ನು ತರಿಸಿ ಕೊಡುವ ಪ್ರಯತ್ನ ಮಾಡಬಹುದು. ಹಿಂಡೀ [?] ಗೊಬ್ಬರದ ವಿಷಯದಲ್ಲಿಯೂ ಹೀಗೆಯೇ ಪ್ರಯತ್ನ ಮಾಡಬಹುದು. ಕಾಡು ನೀಲೀ ಗಿಡವನ್ನು ಹಸೀ ಹಸಿ ಗೊಬ್ಬರಕ್ಕಾಗಿ ಬೆಳೆ ಮಾಡುವ ಪ್ರಯತ್ನವನ್ನು ಏರ್ಪಡಿಸುವುದಕ್ಕಾಗಿ ಬೀಜ ತರಿಸ ಬಹುದು.

೬. ಬೀಜಗಳು —ಹಿಂದೂಸ್ಥಾನದ ಇತರ ಕಡೆಗಳಲ್ಲಿ ಉಪಯೋಗವಾಗಿವೆ ಎಂದು ತಿಳಿದು ಬಂದಿರುವ ಹೊಸ ಮಾದರಿ ಬೀಜಗಳಿಂದ ನಮ್ಮ ಸೀಮೆಗೆ ಎಷ್ಟು ಪ್ರಯೋಜನವೆಂದು ತಿಳಿಯುವುದಕ್ಕಾಗಿ ಭತ್ತ, ಮೇವುಜೋಳ, ನೆಲಗಡಲೆ, ಹತ್ತಿ, ಇವುಗಳಲ್ಲಿ ಹೊಸ ಮಾದರಿಯ ಬೀಜಗಳನ್ನು ತರಿಸಿ, ಬೇಕಾದ ಮೆಂಬರುಗಳಿಗೆ ಕೊಟ್ಟು ಬೆಳೆ ಮಾಡಿಸಲು ಪ್ರಯತ್ನಿಸಬಹುದು.

೭. ಪೈರು —ಭತ್ತದ ಪೈರನ್ನು ನಾಟುವುದರಲ್ಲಿ ೯ ರಿಂದ ೧೨ ಅಂಗುಲ ಅಂತರದಲ್ಲಿ ಒಂದೊಂದು ಪೈರನ್ನು ನಾಟಹಾಕುವುದರಿಂದಾಗಬಹುದಾದ ಪ್ರಯೋಜನವನ್ನು ಪರೀಕ್ಷಿಸುವುದಕ್ಕಾಗಿ ಪ್ರಯತ್ನ ಮಾಡಬಹುದು.

೮. ನೆಯಿಗೆ—ಅವಶ್ಯಕವಾದ ನೂಲನ್ನು ಕೊಂಡು ನೆಯಿಗೆಯವರಿಗೆ ಅನುಕೂಲವಾಗಿ ಮಾರುವುದಕ್ಕೂ ಮತ್ತು ಅವರು ಮಾಡುವ ಸಾಮಾನುಗಳನ್ನು ಅಸೋಸಿಯೇಷನ್ನಿನವರು ಕೊಂಡುಕೊಳ್ಳುವುದಕ್ಕೂ ಏರ್ಪಡಿಸಬಹುದು.

೯. ಅಸೋಸಿಯೇಷನ್ ಸೆಕ್ರೆಟರಿ ಮೆ॥ ಜಿ ಸುಬ್ಬಸ್ವಾಮಯ್ಯರು, ಮೆಂಬರಾದ ಮೆ॥ ವಾಸುದೇವಯ್ಯನವರು ಮತ್ತು ಸಂಘದವರಿಂದ ಆರಿಸಲ್ಪಡಬಹುದಾದ ಒಬ್ಬ ಮೈಸೂರು ನೆಯಿಗೆಯವರು ಇವರುಗಳನ್ನು ಸರ್ಕಾರದ ಖರ್ಚಿನಿಂದ ಮದರಾಸಿನಲ್ಲಿ ನಡೆಯುವ ನೆಯಿಗೆ ಮಗ್ಗಗಳ ಪ್ರದರ್ಶನಕ್ಕೆ ಕಳುಹಿಸಬೇಕೆಂಬುದಾಗಿ ರೆವಿನ್ಯೂ ಕಮಿಷನರನ್ನು ಕೇಳಿಕೊಳ್ಳಬಹುದು.

೧೦. ಈ ಸಮಾಜಕ್ಕೆ ಸಂಬಂಧಪಟ್ಟ ಲೆಕ್ಕಗಳನ್ನು ಆಡಿಟ್ಟು [?] ಸಮಾಲೋಚನೆಗಳನ್ನು ಸೆಕ್ರೆಟರಿಯವರು ವಿಚಾರಿಸತಕ್ಕದ್ದು ಎಂದು ತೀರ್ಮಾನವಾಯಿತು.

ಉಪಯುಕ್ತವಾದ ಸಂಗತಿಗಳು

ಹಣ್ಣು ತಿನ್ನುವುದರ ಪ್ರಯೋಜನ.

ಸೃಷ್ಟಿಯಲ್ಲಿ ಸೀಬೆಹಣ್ಣು ವಾತರೋಗವನ್ನು ಪರಿಹರಿಸುವುದಕ್ಕಾಗಿಯೂ, ಕಿತ್ತಳೆಹಣ್ಣು ಮುಖ್ಯವಾಗಿರುವ ಪಿತ್ತಕೋಶವನ್ನು ಕ್ರಮ

...ಕ್ಕದ್ದಾಗಿಯೂ, ಚರ್ಮವನ್ನು ಶರೀರಕ್ಕೆ ಒಳ್ಳೇ ಕಾಂತಿಯನ್ನು ...ಕ್ಕದ್ದಾಗಿಯೂ ಇರುತ್ತವೆ. ಒಂದು ಪೌಂಡು ತೂಕ ಖರ್ಜೂ... ...ಕ್ಕೆ ಕೇವಲ ೩೦ ಪೌಂಡು ಆಹಾರಪದಾರ್ಥವಾಗಿರುವುದು. ಹೀಗಿರು...ಂದ ಜನಗಳು ಊಟದಲ್ಲಿ ಹಣ್ಣುಗಳನ್ನು ಹೆಚ್ಚಾಗಿ ಉಪಯೋಗಿ...ಕೆ ಒಳ್ಳೆಯದು. ಕಷ್ಟಪಟ್ಟು ಕೆಲಸಮಾಡತಕ್ಕ ಮನುಷ್ಯನು ...ಪದಾರ್ಥಗಳಿಗೆ ಹಣವನ್ನು ವ್ಯಯಮಾಡುವುದಕ್ಕೆ ಬದಲಾಗಿ ...ಗಳನ್ನು ಕೊಂಡುತಿನ್ನುವುದರಲ್ಲಿ ಪ್ರಯತ್ನಮಾಡಿದರೆ ಎಷ್ಟೋ ... ಅವನಿಗೆ ಮಾದಕಪದಾರ್ಥದಲ್ಲಿರತಕ್ಕ ಚಟವು ಶೀಘ್ರವಾಗಿಯೇ ...ಟ್ಟು ಹೋಗುತ್ತದೆ.

ನೇಯ್ಗೆಯವರಿಗೆ ಬುದ್ಧಿವಾದವು.

ಡೆನ್ಮಾರ್ಕ್ ದೇಶದಲ್ಲಿ ಹಾಲು ಬೆಣ್ಣೆ ಮುಂತಾದವುಗಳನ್ನು ...ಟ ಮಾಡುವುದರಲ್ಲಿ ಅಲ್ಲಿ ಏರ್ಪಟ್ಟಿರುವ ಪರಸ್ಪರ ಸಹಾಯಕ ...ಗಳಲ್ಲಡಗಿರುವ ತತ್ವವನ್ನೇ ಆಚರಣೆಯಲ್ಲಿ ತಂದಿರುತ್ತಾರೆ. ...ದು ಹೇಗೆಂದರೆ—ಸ್ವಲ್ಪ ಸ್ವಲ್ಪ ಕರುವಿರುವವರೆಲ್ಲರೂ ಒಟ್ಟು ...ತಮ್ಮ ತಮ್ಮಲ್ಲಿ ಉತ್ಪತ್ತಿಯಾಗುವ ಪದಾರ್ಥಗಳನ್ನು ಒಂದು ...ರ್ಖಾನೆಗೆ ಕಳುಹಿಸುತ್ತಾರೆ. ಈ ಕಾರ್ಖಾನೆಯಲ್ಲಿ ಇವರ ಪ್ರತಿ...ಬ್ಬನಿಗೂ ಅವನು ಎಷ್ಟು ಪದಾರ್ಥಗಳನ್ನು ಒದಗಿಸಿಕೊಟ್ಟ...ನೋ ಅಷ್ಟಕ್ಕನುಸಾರವಾದ ಹಿಸ್ಸೆ ಇರುತ್ತದೆ. ಕಾರ್ಖಾನೆ...ನ್ನು ನಡೆಯಿಸುವುದರಲ್ಲಿ ಪ್ರತಿಯೊಬ್ಬ ಮೆಂಬರಿಗೂ, ಇವನ ಹಿಸ್ಸೆ ...ದು ಹೆಚ್ಚು ಕಡಮೆ ಇದ್ದಾಗ್ಯೂ ಕೂಡ, ಸಂಪೂರ್ಣವಾಗಿ ಸಮಾನವಾದ ...ಧಿಕಾರ ಇರುತ್ತದೆ. ಇದೇ ರೀತಿಯಲ್ಲಿ ಈ ದೇಶದಲ್ಲಿ ನೇಯ್ಗೆಯವರು ...ವರೇ ಒಟ್ಟುಗೂಡಿ ಒಂದು ಸಂಘವನ್ನು ಏರ್ಪಡಿಸಿಕೊಂಡು ...ಗಳ ತಮ್ಮ ಉದ್ಯೋಗಕ್ಕೆ ಆವಶ್ಯಕವಾದ ಕಚ್ಚಾ ಸಾಮಾನುಗ...ನ್ನು ಒಟ್ಟಾಗಿ ಖರೀದಿಗೆ ಪಡೆದು, ಮಗ್ಗಗಳಿಗೆ ಅನುಕೂಲವಾಗಿ ಹಾ...ಗಳನ್ನು ತಯಾರುಮಾಡಿ, ಅವುಗಳಿಗೆ ತಯಾರಾದ ಸರಕುಗಳನ್ನು ...ವಿಸಾಡುವ ಏರ್ಪಾಡಿರಬೇಕು. ಇಂಥಾ ಸಂಘಗಳ ವ್ಯಾಪಾರಕ್ಕೆ ...ಬೇಕಾಗುವ ಬಂಡವಾಳವನ್ನು ನೇಯುಗೆ ಕಸಬಿನವರೇ ಮೆಂಬರುಗ...ಳಾಗಿ ಸೇರಿ ಷೇರುಗಳ ಮೂಲಕ ಒದಗಿಸಿಕೊಂಡು ಸಂಘದ ಆಡಳಿತ...ವನ್ನು ಪ್ರತಿಯೊಬ್ಬ ಮೆಂಬರೂ ಮುತುವರ್ಜಿಯಿಂದ ನೋಡಿಕೊಳ್ಳ...ಬೇಕು. ಬಂದ ಆದಾಯದಲ್ಲಿ ತಮ್ಮ ತಮ್ಮ ಷೇರುಗಳಿಗನುಸಾರವಾಗಿ ಮೆಂಬರುಗಳು ಹಂಚಿಕೊಳ್ಳಬಹುದು. ಬಟ್ಟೆಗಳನ್ನು ನೇಯುವ ಕೆಲಸವನ್ನೇ ಹಾಗಿನಂತೆ ಆಯಾ ನೇಯ್ಗೆಯವರ ಮನೆಗಳಲ್ಲೇ ನಡೆಯಬಹುದು. ಈ ಪ್ರಕಾರ ಕಸಬುದಾರರು ಅವರೇ ತಮ್ಮ ತಮ್ಮಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿಕೊಂಡು, ಪೈಪೋಟಿ ವ್ಯಾಪಾರವನ್ನು ತಾವೇ ...ಸಿ, ತಮ್ಮ ಅನುಕೂಲತೆಯನ್ನೇ ಮುಂದುಮಾಡಿಕೊಂಡು, ಕೆಲಸ ...ಡಿಸುವುದಕ್ಕೂ ಸಾಹುಕಾರರಿಂದ ಏರ್ಪಡಿಸಲ್ಪಟ್ಟ ಕಾರ್ಖಾನೆಗಳಲ್ಲಿ ...ನಿಷ್ಟವಾದ ಕೂಲಿಗೆ ಕೆಲಸಮಾಡುವುದಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಈ ಸಂದರ್ಭದಲ್ಲಿ ನೇಯ್ಗೆಯವನು ತನ್ನ ಸಾಹಸವನ್ನೆಲ್ಲಾ ...ರ್ಚುಮಾಡಿ ಎಷ್ಟು ಚೆನ್ನಾಗಿ ಕೆಲಸಮಾಡಿದಾಗ್ಯೂ ಕೂಡ ಅವನಿಗೆ ...ಗೊತ್ತಾದ ಕೂಲಿ ಮಾತ್ರ ದೊರೆತು, ಹೆಚ್ಚು ಲಾಭವೆಲ್ಲಾ ಸಾಹುಕಾರನಿಗೆ ಹೋಗುತ್ತದೆ

ಹೊಸ ಕಬ್ಬಿಣದ ನೇಗಿಲುಗಳು

ಚನ್ನರಾಯಪಟ್ಟಣದ ತಾಲ್ಲೂಕು ಆನತಿ ಗ್ರಾಮದ ಶ್ಯಾನುಭೋಗ ಮ॥ ಸುಬ್ಬರಾಯರು ಕೋಲಾರದ ಮಿರ್ಸ್ಟ್ ಕಂಪೆನಿಯವರು ೨೧॥ ರೂಪಾಯಿ ಬೆಲೆಯಾಗುವ ಒಂದು ಕಬ್ಬಿಣದ ನೇಗಿಲಿನಿಂದ ಆಗುವ ಕೆಲಸಕ್ಕೂ ಮತ್ತು ನಾಡು ನೇಗಿಲಿನಿಂದಾಗುವ ಕೆಲಸಕ್ಕೂ ಇರುವ ತಾರತಮ್ಯವನ್ನು ಕುರಿತು ಮೈಸೂರು ರೈತ ಗೆಜೆಟ್ಟಿನಲ್ಲಿ ಬರೆದಿರುವುದೇನೆಂದರೆ —ಸಾಗುವಳಿಯಲ್ಲಿರತಕ್ಕ ಖುಷ್ಕಿ ಜಮೀನಿಗೆ ಪ್ರಥಮತಃ ಎರಡು ದಫಾ ಕಬ್ಬಿಣದ ನೇಗಿಲಿನಿಂದ ಉಳುವದರಲ್ಲಿ ನಾಡನೇಗಿಲಿಂದ ೧೦ ದಫಾ ಉಳ್ಮೆ ಮಾಡಿದಷ್ಟು ಹಸನಾಗಿ ಬೇಸಾಯವು ಅನುಕೂಲಿಸುತ್ತದೆ. ಅಲ್ಲದೆ ಒಂದು ದಫಾ ಮಳೆ ಬಿದ್ದ ಕಾಲದಲ್ಲಿ ೧ ತಿಂಗಳ ಪರಿಯಂತರ ತೇವವಿರುವುದಲ್ಲದೆ ಎಳೇ ಪೈರುಗಳಿಗೆ ಸಹ ಕಂಪು ನಿಲ್ಲುತ್ತದೆ. ಒಂದು ನೇಗಿಲಿನಿಂದ ೨೦ ಎಕರೆ ಖುಷ್ಕಿ ಜಮೀನನ್ನು ಸಾಮಾನ್ಯವಾಗಿ ಒಬ್ಬ ಮನುಷ್ಯನು ೧೦೦ ರೂಪಾಯಿ ಬೆಲೆಬಾಳುವ ಎರಡು ಎತ್ತುಗಳಿಂದ ಸಾಗುವಳಿ ಮಾಡಬಹುದು. ಹೊಸದಾಗಿ ಖುಷ್ಕಿ ಜಮೀನನ್ನು ಬಂಜರಿನಿಂದ ಸಾಗಿಗೆ ತರಬೇಕಾಗಿದ್ದಲ್ಲಿ ೧೫ ಎಕರೆ ಜಮೀನನ್ನು ಸಾಗು ಮಾಡಬಹುದು. ಮೇಲೆ ಹೇಳಲ್ಪಟ್ಟ ಎತ್ತುಗಳಿಂದ ಸಾಮಾನ್ಯವಾಗಿ ೬ ಘಂಟೆಗಳ ಕಾಲದಲ್ಲಿ ೧। ಎಕರೆ ಜಮೀನು ಸಾಗುವಳಿ ಮಾಡಬಹುದು. ಇದೇ ಜಮೀನನ್ನು ನಾಡುನೇಗಿಲಿಂದ ಸಾಗು ಮಾಡಬೇಕಾದರೆ ೪೦ ರೂಪಾಯಿ ಬೆಲೆಬಾಳುವ ೨ ಜೋಡಿ ಎತ್ತುಗಳು, ಬಲವಾದ ೨ ಜನರು ಸಹಾ ಬೇಕಾಗುತ್ತದೆ. ಆದಾಗ್ಯೂ ಕಬ್ಬಿಣದ ನೇಗಿಲಿಂದಾಗುವಷ್ಟು ನಾಡುನೇಗಿಲಿಂದ ಜಮೀನು ಹಸನಾಗುವುದಿಲ್ಲ. ನಾಡುನೇಗಿಲು ೩। ಅಂಗುಲಕ್ಕಿಂತಲೂ ಹೆಚ್ಚು ಆಳವಾಗಿ ಭೂಮಿಯಲ್ಲಿ ನಾಟುವುದಿಲ್ಲ. ಅಲ್ಲದೆ ಭೂಮಿಯಲ್ಲಿ ದಿಂಡು ಉಳಿಯುವುದರಿಂದ ನೆಲವು ಜಾಗ್ರತೆ ಒಣಗಿಹೋಗುತ್ತದೆ. ಕಬ್ಬಿಣದ ನೇಗಿಲು ೬ ಅಂಗುಲ ಅಗಲವಾಗಿಯೂ ೭ ಅಂಗುಲದವರೆವಿಗೂ ಇಳಿಯುತ್ತದೆ. ಮತ್ತು ಭೂಮಿಯೆಲ್ಲಾ ಒಂದೇ ಮಟ್ಟವಾಗಿ ಸಾಗುವಳಿ ಆಗುತ್ತದೆ. ಮತ್ತು ಎಷ್ಟು ಗೊಬ್ಬರ ಮುಂತಾದ ಮಾಡಿದಾಗ್ಯೂ ೨ ದಫಾ ಉಳುವದರಲ್ಲಿ ಮಣ್ಣಿನಲ್ಲಿ ಚೆನ್ನಾಗಿ ಕಲೆತುಹೋಗುತ್ತದೆ. ಸಾಮಾನ್ಯವಾಗಿ ಎಲ್ಲಾ ರೈತರುಗಳೂ ನೆಮ್ಮದಸ್ತರಾಗಿಯೂ ಮತ್ತು ಭಾರೀ ಜಮೀನುಗಳುಳ್ಳವರಾಗಿಯೂ ಇರುವುದಿಲ್ಲ. ಆದಕಾರಣ ಇಂಥಾ ರೈತರು ಇಬ್ಬರು ಅಥವಾ ಮೂವರು ಸೇರಿ ೨ ಆಳುಗಳನ್ನೂ ಸಾಧಾರಣವಾದ ೨ ಜೋಡಿ ಎತ್ತುಗಳನ್ನೂ ಇಟ್ಟುಕೊಂಡು ಒಂದು ಕಬ್ಬಿಣದ ನೇಗಿಲಿನಿಂದ ತಮ್ಮ ತಮ್ಮ ಜಮೀನು ಸಾಗುವಳಿ ಮಾಡಬಹುದು. ತೆಂಗಿನ ತೋಟದಾರರೂ ಗನ್ನಾ ಬೆಳೆಮಾಡತಕ್ಕ ತರೀ ಜಮೀನುದಾರರೂ ಇದನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಾರಂಭಿಸಿದರೆ ವಿಶೇಷ ಪ್ರಯೋಜನವನ್ನು ಹೊಂದುವುದರಲ್ಲಿ ಸಂದೇಹವಿಲ್ಲ. ಈ ನೇಗಿಲಲ್ಲಿ ಬಹಳ ಬಾರ್ ಕೆಟ್ಟು ನಷ್ಟ ಸಂಭವಿಸತಕ್ಕ ಭಾಗ ಯಾವುದೂ ಇರುವುದಿಲ್ಲ. ಗುಳ ಸವೆದ ಹಾಗೆಲ್ಲಾ ಪ್ರತ್ಯೇಕ ಗುಳಗಳನ್ನು ಜೋಡಿಸಿ ನೇಗಿಲನ್ನು ಸರಿಪಡಿಸಬಹುದು. ೨೦ ಎಕರೆ ಜಮೀನನ್ನು ೩ ದಫಾ ಉಳುಮೆ ಮಾಡುವುದಕ್ಕೆ ೨ ಗುಳಗಳು ಬೇಕಾಗುವುವು. ಇದರ ಬೆಲೆಯು ಕೊಂಚವಾಗಿಯೇ ಇರುತ್ತದೆ. ಇದರಂತೆಯೇ ಮೈಸೂರು ಡಿಸ್ಟ್ರಿಕ್ಟು ಸಾಲಿಗ್ರಾಮದ ಕೃಷ್ಣಸ್ವಾಮಿರಾಯರು ಕೂಡ ಇಂಗ್ಲಿಷು ನೇಗಿಲುಗಳ ಉಪಯೋಗದಿಂದ ನಾಡುನೇಗಿಲುಗಳಿಂದಾಗುವುದಕ್ಕಿಂತಲೂ ಎಕರೆಯೊಂದಕ್ಕೆ ಸಾಧಾರಣವಾಗಿ ೨೫—೩೦ ರೂಪಾಯಿಯಷ್ಟು ಜಾಸ್ತಿ ಹುಟ್ಟುವಳಿ ಕಂಡುಬರುತ್ತೆಂತಲೂ, ಇದನ್ನು ಕಂಡು ಅಲ್ಲಿನ ರೈತಾಪಿ ಜನರು ಈ ಹೊಸ ನೇಗಿಲುಗಳನ್ನು ಅಪೇಕ್ಷಿಸುತ್ತಾರೆಂತಲೂ, ಆದರೆ ಅವು ದೊರೆಯುವ ಸ್ಥಳವು ಗೊತ್ತಿಲ್ಲದೇ ತಿಳಿಯಲಪೇಕ್ಷಿಸುತ್ತಾರೆಂತಲೂ ಬರೆದಿರುವರು.

ಗೋಮಾಳ ಭೂಮಿಯೂ ಹುರುಳಿ ವ್ಯವಸಾಯವೂ.

ಗೋಮಾಳದಲ್ಲಿ ಅಡಿಸಿದ ಕೆಲವು ಭಾಗಗಳನ್ನು ಹುರುಳಿ ಫಸಲನ್ನು ಬೆಳೆಯುವುದಕ್ಕೋಸ್ಕರ ಹಂಗಾಮಿಯಾಗಿ ಕೊಡಬಹುದು. ಗ್ರಾಮಸ್ಥರೆಲ್ಲಾ ಸೇರಿ ಪಟೇಲನ ಮುಖಾಂತ್ರ ಒಂದು ಅರ್ಜಿಯನ್ನು ಅಮಲ್ದಾರರಿಗೆ ಬರೆದುಕೊಳ್ಳುವುದು. ಅಮಲ್ದಾರ್ರು ಖುಷ್ಕಿ ಜಮೀನಿನ ಸರಾಸರಿ ಕಂದಾಯವನ್ನನುಸರಿಸಿ ಸದರಿ ಭೂಮಿಗೆ ಕಂದಾಯವನ್ನು ದಾಖಲ್ಮಾಡಿ, ಆ ಅರ್ಜಿಯನ್ನು ಸಬ್ ಡಿವಿಜನ್ ಆಫೀಸರ ಆರ್ಡರ್ ಬಗ್ಗೆ ರವಾನಿಸುವರು. ಆ ಆಫೀಸರು ಅರ್ಜಿಯಲ್ಲಿ ಕಾಣಿಸಿರುವ ಅಂಶಗಳನ್ನು ಪರಿಶೋಧಿಸಿ, ಕಂದಾಯವನ್ನು ನಿರ್ಣಯಮಾಡಿ, ಭೂಮಿಯನ್ನು ಕೊಡತಕ್ಕ ಬಗ್ಗೆ ಆರ್ಡರು ಮಾಡುವರು. ಈ ಆರ್ಡರು ಅಮಲ್ದಾರ್ರಿಗೆ ತಲುಪುತ್ತಲೇ ಅವರು ಗ್ರಾಮದ ಮುಖಂಡನೊಬ್ಬನ ಹೆಸರಿಗೆ ಸಾಗುವಳಿ ಚೀಟಿಯನ್ನು ಕೊಡುವರು. ಈ ಮುಖಂಡನು ಕಂದಾಯವನ್ನು ಕೊಡುವುದಕ್ಕೆ ಬದ್ಧನಾಗಿರುವನು. ಜರೂರು ಸಂದರ್ಭದಲ್ಲಿ ಗ್ರಾಮಸ್ಥರು ಪಟೇಲನ ಮುಖಾಂತ್ರ ಅರ್ಜಿಯನ್ನು ಬರೆದುಕೊಟ್ಟು ಭೂಮಿಯನ್ನು ಉತ್ತುಕೊಳ್ಳಬಹುದು. ಆದರೆ ಅವರು ಸಬ್ ಡಿವಿಜನ್ ಆಫೀಸರು ಮಾಡಬಹುದಾದ ಆರ್ಡರಿಗೆ ಒಳಪಟ್ಟಿರಬೇಕು. ಗ್ರಾಮಸ್ಥರು ತಾವು ಎಷ್ಟು ವಿಸ್ತೀರ್ಣದ ಜಮೀನನ್ನು ಸಾಗುವಳಿಮಾಡಿಕೊಳ್ಳುತ್ತಾರೆಂಬುದನ್ನು ಅವರೇ ಇತ್ಯರ್ಥಪಡಿಸಿಕೊಳ್ಳಬೇಕು. ಮುಖಂಡನಾದವನು ರೈತರಿಂದ ಕಂದಾಯವನ್ನು ವಸೂಲ್ಮಾಡಬಹುದು. ಒಂದು ವರ್ಷ ಫಸಲು ಬೆಳೆದ ಜಮೀನಿನಲ್ಲಿ ಇನ್ನು ಎರಡು ವರ್ಷಗಳು ಬೆಳೆಯನ್ನು ಹಾಕಕೂಡದು. ಮತ್ತು ಈ ಜಮೀನಿನಲ್ಲಿ ಹುರುಳಿ ವಿನಾ ಮತ್ಯಾವ ರೀತಿಯನ್ನು ಬೆಳೆಯ ಕೂಡದು.

ಧರ್ಮದ ಹಣ

ಧರ್ಮ ಸ್ಥಾಪನೆಗೋಸ್ಕರ ದಾನಮಾಡುವ ಹಣವನ್ನು ಸರ್ಕಾರಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಠೇವಣಿ ಇಡಬೇಕಾದರೆ ಕೆಳಗೆ ಕಂಡ ನಿಬಂಧನೆಗಳಂತೆ ನಡೆದುಕೊಳ್ಳಬೇಕೆಂದು ಸರ್ಕಾರದವರು ಅಪ್ಪಣೆ ಮಾಡಿದ್ದಾರೆ.—(೧) ಮೂರು ಸಾವಿರ ರೂಪಾಯಿಗಿಂತ ಕಮ್ಮಿಯಾಗಿ ಅಥವ ಒಂದು ಲಕ್ಷ ರೂಪಾಯಿಗಿಂತ ಹೆಚ್ಚಾಗಿ ಹಣವನ್ನು ಅಂಗೀಕರಿಸುವುದಿಲ್ಲ. (೨) ಈ ಹಣಕ್ಕೆ ಶೇಕಡ ೪ ರಂತೆ ಬಡ್ಡಿಯು ಕೊಡಲ್ಪಡುವುದು. ಚಕ್ರ ಬಡ್ಡಿ ದೊರೆಯಲಾರದು. (೩) ಸರ್ಕಾರದವರು ಪ್ರೋತ್ಸಾಹಕ್ಕೆ ಅರ್ಹವಾದದ್ದೆಂದು ನಿರ್ಣಯಿಸುವ ಧರ್ಮಕಾರ್ಯಗಳಿಗೋಸ್ಕರವಾಗಿಯೇ ಸದರಿ ಹಣವು ಅಂಗೀಕರಿಸಲ್ಪಡುವುದು. (೪) ಠೇವಣಿ ಇಟ್ಟುಕೊಂಡ ಹಣವೆಲ್ಲವನ್ನೂ ಆದರೂ, ಅಥವ ಅದರ ಯಾವ ಭಾಗವನ್ನಾದರೂ ಠೇವಣಿದಾರನ ವಾರಸುದಾರರ್ಯಾರೂ ವಾಪಸು ತೆಗೆದುಕೊಳ್ಳಲು ಹಕ್ಕು ಪಡೆದಿಲ್ಲವೆಂದು ಠೇವಣಿದಾರನು ಸರ್ಕಾರಕ್ಕೆ ಒಂದು ಕರಾರನ್ನು ಬರೆದುಕೊಡಬೇಕು. (೫) ಈ ರೀತಿ ಹಣವನ್ನು ಠೇವಣಿ ತೆಗೆದುಕೊಳ್ಳುವ ಪದ್ಧತಿಯನ್ನು ಸರ್ಕಾರದವರು ಯಾವಾಗಲಾದರೂ ನಿಲ್ಲಿಸಿಬಿಡಬಹುದು.

ಬೆಂಗಳೂರಿನಲ್ಲಿ ನಡೆದ ಕೊಲೆಗಳು.

ಒಂದು ಮೊಕದ್ದಮೆಯ ವಾಙ್ಮೂಲವು.

ಬೆಂಗಳೂರು ಅಲಸೂರು ಪೇಟೆಯ ಕೊಲೆ ಮೊಕದ್ದಮೆಗಳ ಪೈಕಿ ಮೊದಲನೇ ಮೊಕದ್ದಮೆಯು ಬೆಂಗಳೂರು ದಂಡಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮ॥ ಪಿ. ಎಲ್ ಮೂರ್ ಯವರ ಕೋರ್ಟಿನಲ್ಲಿ ದಾಖಲಾಯಿತು. ಈ ಮೊಕದ್ದಮೆಯಲ್ಲಿ ಬಾಪು ಮೊದಲಿಯಾರ್, ಸುಂದರರಾಜು ಎಂಬಿಬ್ಬರು ಅಪರಾಧಿಗಳು. ಇವರು ೧೯೦೭ನೇ ಅಕ್ಟೋಬರ್ ತಿಂಗಳಲ್ಲಿ ಗೋಪಾಲನೆಂಬೊಬ್ಬ ಹುಡುಗನನ್ನು ಕೊಂದರೆಂತಲೂ, ಆ ಹುಡುಗನ ಶವವು ಸಂಪಂಗಿ ಕೆರೆಯಲ್ಲಿ ಸಿಕ್ಕಿತೆಂತಲೂ ಮೊಕದ್ದಮೆ ಆಗಿದೆ.

ಅಲಸೂರಿನಲ್ಲಿ ವಾಸಮಾಡಿಕೊಂಡಿರುವ ಪೆನ್ಷನ್ ಸರ್ವೇಯರ್ ಗೋವಿಂದರಾಜುಲು ಮೊದಲಿಯಾರ್ರು ಕೋರ್ಟಿನಲ್ಲಿ ಬರೆಸಿದ ಕೈಫಿಯತ್ತೇನೆಂದರೆ—ನನ್ನ ಮಗನಿಗೆ ೧೩ ವರುಷವಾಗಿತ್ತು. ಅವನು ೧೯೦೭ನೇ ಅಕ್ಟೋಬರ್ ೧೭ ರಲ್ಲಿ ಮನೆ ಬಿಟ್ಟು ಎಲ್ಲೋ ತಪ್ಪಿಸಿಕೊಂಡು ಹೋದನು. ಅವನು ಒಂದು ಚೀಟಿ ಬಟ್ಟೆಯ ಅಂಗಿ, ಷರಾಯಿ, ಹಾಸನದ ಟೋಪಿ ಹಾಕಿಕೊಂಡಿದ್ದ. ಕೈಯಲ್ಲಿ ಚಿನ್ನದ ಮುರಿಯೂ, ಕಾಲಿನಲ್ಲಿ ಬೆಳ್ಳಿ ಬಳೆಗಳೂ ಇದ್ದವು. ಅವುಗಳ ಕ್ರಯ ಸುಮಾರು ೧೦೫ ರೂಪಾಯಿ. ಅಕ್ಟೋಬರ್ ೧೭ ರಲ್ಲಿ ಸಂಪಂಗಿ ಕೆರೆಯ ಬಳಿ ಒಂದು ಕೊಳದಲ್ಲಿ ನನ್ನ ಮಗನ ಶವ ಸಿಕ್ಕಿತು. ಚಿನ್ನದ ಮುರಿಗಳೂ ಬೆಳ್ಳಿ ಬಳೆಗಳೂ ಶವದಮೇಲಿರಲಿಲ್ಲ. ಬೌರಿಂಗ್ ಆಸ್ಪತ್ರೆಯಲ್ಲಿ ಶವವು ಪರೀಕ್ಷೆ ಮಾಡಲ್ಪಟ್ಟಿತು. ತಾ ೧೮ ರಲ್ಲಿ ಶವವನು ನನಗೆ ಕೊಡಲ್ಪಟ್ಟು, ಅದೇ ದಿನ ನಾನು ಅದನ್ನು ದಫನ್ ಮಾಡಿದೆನು. ಅಪರಾಧಿಗಳಿಬ್ಬರನ್ನೂ ಬಲ್ಲೆ. ನನ್ನ ಮಗ ಸತ್ತ ಮೂರು ದಿನಗಳ ಮೇಲೆ ಅಪರಾಧಿ ಸುಂದರರಾಜು ನಮ್ಮ ಮನೆಗೆ ಬಂದು, ನೀನು ನಿನ್ನ ಮಗ ಸಾಯುವುದಕ್ಕೆ ಮೊದಲು ಅವನ ಮೈಮೇಲೆ ಚಿನ್ನದ ಮುರಿ ಮತ್ತು ಬೆಳ್ಳಿ ಬಳೆಗಳಿದ್ದವೆಂದು ಪೋಲೀಸಿಗೆ ಯಾಕೆ ಸುಳ್ಳು ಹೇಳಿದೆ ಎಂದು ಕೇಳಿಕೊಂಡು ಬರುವಂತೆ ಪೋಲೀಸಿನವರು ನನ್ನನ್ನು ನಿನ್ನ ಬಳಿಗೆ ಕಳುಹಿಸಿದಾರೆ ಎಂದು ಕೇಳಿದನು. ನಾನು ನನ್ನ ಮಗನ ಮೈಮೇಲಿದ್ದ ಒಡವೆಗಳು ಕಳವಾಗಿವೆ ಎಂದು ಪೋಲೀಸಿಗೆ ತಿಳಿಸಿ, ೨ನೆ ಅಪರಾಧಿಯ ಮೇಲೂ ಇನ್ನೂ ಬೇರೆ ನಾಲ್ವರ ಮೇಲೂ ನನಗೆ ಅನುಮಾನವಿದೆ ಎಂದು ಹೇಳಿದೆ. ಈ ವಿಷಯವಾಗಿ ನವಂಬರ್ ೫ ರಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಕೊಟ್ಟಿದೇನೆ.

ಬೆಂಗಳೂರು ಸೆಂಟ್ರಲ್ ಜೈಲ್ಖಾನೆಯ ಛೀಫ್ ಜೈಲರ್ ಮ॥ ನಾಗಪ್ಪಯ್ಯರ್ ಯವರು ವಾಙ್ಮೂಲ ಬರೆಸಿದ್ದೇನೆಂದರೆ—೨ ನೆ ಅಪರಾಧಿ ಸುಂದರರಾಜು ಫೆಬ್ರವರಿ ೩ ರಲ್ಲಿ ತಾನಾಗಿಯೇ ಈ ಮೊಕದ್ದಮೆಯ ವಿಷಯದಲ್ಲಿ ನನಗೆ ಹೇಳಿ ವಾಙ್ಮೂಲ ಬರೆಸಿದಾನೆ. ನಾನು ಅವನನ್ನು ಹೆದರಿಸಲೂ ಇಲ್ಲ, ಅವನಿಗೆ ಯಾವ ಆಶೋತ್ತರವನ್ನೂ ಹೇಳಲಿಲ್ಲವೆಂದು ಸತ್ಯವಾಗಿ ಹೇಳುತ್ತೇನೆ. ಅವನು ನನ್ನ ದ್ವಾರಾ ಹೇಳಿ ಬರೆಸಿದ ವಾಙ್ಮೂಲವನ್ನು ಬೆಂಗಳೂರು ಡಿಸ್ಟ್ರಿಕ್ಟಿನ ಪೋಲೀಸ್ ಸೂಪರಿಂಟೆಂಡೆಂಟರಿಗೆ ಕಳುಹಿಸಿದೇನೆ. ಅಪರಾಧಿಯು ಕೃತ್ಯನಡೆದ ವಿಚಾರವನ್ನೆಲ್ಲಾ ಒಪ್ಪಿಕೊಂಡು ಇರುತ್ತಾನೆ. ಅವನು ಹೇಳಿರುವ ವಾಙ್ಮೂಲವೇನೆಂದರೆ—ದೀಪಾವಳಿ ಹಬ್ಬದಲ್ಲಿ ಮೊದಲನೆ ಅಪರಾಧಿ ಬಾಪೂವು ಎರಡನೆ ಅಪರಾಧಿ ಸುಂದರರಾಜುವನ್ನು ಕುರಿತು ಒಡವೆ ಹಾಕಿಕೊಂಡಿದ್ದ ಒಬ್ಬ ಮೊದಲಿಯಾರಿ ಹುಡುಗನನ್ನು ಕೊಲ್ಲಬೇಕೆಂದು ಸೂಚಿಸಿದನು. ಒಂದೆರಡು ದಿನಗಳೊಳಗೆ ಬಾಪು ಆ ಹುಡುಗನನ್ನು ಸುಂದರರಾಜು ಬಳಿಗೆ ಕರೆದುತಂದನು. ತರುವಾಯ ಇಬ್ಬರೂ ಆ ಹುಡುಗನನ್ನು ಲಾಲ್ ಬಾಗ್ ಎಂಬ ಒಂದು ಉದ್ಯಾನವನದೊಳಕ್ಕೆ ಕರೆದುಕೊಂಡುಹೋಗಿ, ಅಲ್ಲಿ ಅವನಿಗೆ ಒಂದು ಬಿಳೀ ಪುಡಿಯನ್ನು ತಿನ್ನಿಸಿದರು. ಆ ಔಷಧವು ಫಲಕಾರಿಯಾಗಲಿಲ್ಲ. ಉದ್ಯಾನವನದಲ್ಲಿ ಜನರ ಗಲಾಟೆ ಇದ್ದದ್ದರಿಂದ ಅವರು ಆ ಹುಡುಗನನ್ನು ಸಿಟಿ ಮೆಡಿಕಲ್ ಹಾಲ್ (ಔಷಧ ಮಾರುವ ಅಂಗಡಿ)ಗೆ ಕರೆತಂದರು. ಅಲ್ಲಿ ಶ್ರೀನಿವಾಸನ ಸಹಾಯದಿಂದ ಆ ಹುಡುಗನಿಗೆ ಇನ್ನೊಂದು ಗುಟುಕು ವಿಷವನ್ನು ಕುಡಿಸಿದರು. ಇದಲ್ಲದೆ ಶ್ರೀನಿವಾಸನು ಒಂದೂವರೆ ಡ್ರಾಂ ತೂಕದ ಕ್ಲೋರೋಫಾರಂ(ಪ್ರಜ್ಞೆ ತಪ್ಪುವ ಔಷಧ) ತೆಗೆದು ಮೊದಲನೇ ಅಪರಾಧಿಗೆ ಕೊಟ್ಟು, ಈಗ ಆ ಹುಡುಗನಿಗೆ ಕುಡಿಸಿದ ಔಷಧದಿಂದ ಪ್ರಯೋಜನವಾಗದಿದ್ದರೆ ಇದನ್ನೂ ಕೊಡುವಂತೆ ಹೇಳಿದನು. ತರುವಾಯ ಅವರು ಆ ಹುಡುಗನನ್ನು ರಾತ್ರಿ ಸುಮಾರು ೮॥ ಗಂಟೆಗೆ ಸಂಪಂಗಿ ಕೆರೆಯ ಬಳಿಗೆ ಕರೆದುಕೊಂಡು ಹೋದರು. ಅಲ್ಲಿ ಆ ಹುಡುಗನು ತಲೆ ಸುತ್ತುತ್ತದೆಂದು ಹೇಳಿದನು. ಆಗ ಅವರು ಕ್ಲೋರೋಫಾರಂ ಎಂಬ ಪ್ರಜ್ಞೆತಪ್ಪುವ ಔಷಧವನ್ನು ಕುಡಿಸಿದರು. ಹುಡುಗನಿಗೆ ಜ್ಞಾನತಪ್ಪಿಹೋಯಿತು. ಆಗ ಅವರು ಆ ಹುಡುಗನನ್ನು ಕೊಳಕ್ಕೆ ಎತ್ತಿಕೊಂಡುಹೋಗಿ ನೀರಿನಲ್ಲಿ ಅದ್ದಿ ಮುಳುಗಿಸಿ, ಪ್ರಾಣಹೋದ ಮೇಲೆ ಚಿನ್ನ, ಬೆಳ್ಳಿ ಬಳೆಗಳನ್ನು ಕಿತ್ತುಕೊಂಡು, ಶವವನ್ನು ಕೊಳದೊಳಕ್ಕೆ ಹಾಕಿಬಿಟ್ಟು, ಅಲಸೂರು ಪೇಟೆಗೆ ಹೋದರು. ಮಾರದಿನ ಅವರು ಆ ಬಳೆಗಳನ್ನು ಬಳೇಪೇಟೆಯಲ್ಲಿ ಒಬ್ಬ ಅಕ್ಕಸಾಲಿಗೆ ೬೫ ರೂಪಾಯಿಗೆ ವಿಕ್ರಯ ಮಾಡಿ, ಕೆಲವು ಪದಾರ್ಥಗಳನ್ನು ಕೊಂಡುಕೊಂಡು ಮನೆಗೆ ಹೋದರು. ಎರಡನೆ ಅಪರಾಧಿಯು ಆ ಹುಡುಗನ ಶವವನ್ನು ದಫನ್ ಮಾಡುವಾಗ್ಗೆ ಅದರ ಕೂಡ ಸ್ಮಶಾನಕ್ಕೆ ಹೋಗಿದ್ದಾಗ ಆ ಹುಡುಗನ ಹೆಸರು ಗೋಪಾಲನೆಂದು ತಿಳಿದುಕೊಂಡನು.

ಎರಡನೇ ಅಪರಾಧಿಯು ಮ॥ ನಾಗಪ್ಪಯ್ಯರ್ ಯವರನ್ನು ಪ್ರಶ್ನೆಮಾಡಿದಾಗ ಅವರು ಉತ್ತರವಾಗಿ—ನೀನು ನಡೆದ ಸಂಗತಿಯನ್ನೆಲ್ಲಾ ವಿಸ್ತಾರವಾಗಿ ಹೇಳಿಬಿಟ್ಟರೆ ಶಿಕ್ಷೆಯಾಗದಂತೆ ನಿನಗೆ ಕ್ಷಮಾಪಣೆ ದೊರಕಬಹುದೆಂದು ಎಂದು ಹೇಳಿದ್ದುಂಟೆಂದು ಒಪ್ಪಿಕೊಂಡರು.

ಸಿಟಿ ಮೆಡಿಕಲ್ ಹಾಲ್ ಎಂಬ ವೈದ್ಯಶಾಲೆಯೊಳಗೆ ಕಾಂಪೌಂಡರಾಗಿರುವ (ಔಷಧ ಮಾಡಿಕೊಡುವ) ಶ್ರೀನಿವಾಸಲು ಎಂಬವನು ಕೋರ್ಟಿನಲ್ಲಿ ಆ ದಿನ ಬರೆಸಿದ ವಾಙ್ಮೂಲವೇನೆಂದರೆ—ನಾನು ನಾಲ್ಕು ವರುಷಗಳಿಂದ ಈ ಅಪರಾಧಿಗಳನ್ನು ಬಲ್ಲೆನು. ಸುಮಾರು ಒಂದೂವರೆ ವರುಷದ ಹಿಂದೆ ಅಪರಾಧಿಗಳು ಸುಮಾರು ೧೨ ವರುಷದ ಹುಡುಗನನ್ನು ಕರೆದುಕೊಂಡು ಬಂದರು. ಎರಡನೇ ಅಪರಾಧಿಯು ನಿದ್ದೆ ಬರುವ ಔಷಧದ ಒಂದು ಗುಟುಕು ಕೊಡೆಂದು ಕೇಳಿದನು. ಒಂದು ಡೋಸು ಔಷಧ ಕೊಟ್ಟೆನು. ಅದರಲ್ಲೇ ಕ್ಲೋರೋಡಾರಂ ಎಂಬುದು ಬೆರಕೆಯಾಗಿತ್ತು. ಇದಲ್ಲದೆ ಎರಡನೆ ಅಪರಾಧಿಗೆ ಅದೇ ಕ್ಲೋರೋಫಾರಮನ್ನೂ ಲಿಂಟ್ ಎಂಬುದನ್ನೂ ಕೊಟ್ಟೆನು. ಇದೆಲ್ಲಾ ಯಾತಕ್ಕೆ ಬೇಕು ಎಂದು ನಾನು ಅವನನ್ನು ಕೇಳಲಿಲ್ಲ. ಅಪರಾಧಿಗಳು ಆಮೇಲೆ ಹೊರಟುಹೋಗಿದ್ದು, ೩-೪ ದಿನಗಳ ಮೇಲೆ ವಾಪಸು ಬಂದು, ಆ ಔಷಧವನ್ನು ಆ ಹುಡುಗನಿಗೆ ಕುಡಿಸಿ ಪ್ರಜ್ಞೆ ತಪ್ಪಿದಮೇಲೆ ಅವನನ್ನು ಕೊಳದಲ್ಲಿ ಹಾಕಿ ಬಂದೆವೆಂದು ಹೇಳಿದರು. ಈ ಕೊಲೆಗಳಿಗೆ ಸಂಬಂಧಪಟ್ಟ ಇನ್ನೊಂದು ಮೊಕದ್ದಮೆಯಲ್ಲಿ ನಾನೂ ಒಬ್ಬ ಅಪರಾಧಿಯಾಗಿರುತ್ತೇನೆ.

ಈ ರೀತಿ ಈ ಮೊಕದ್ದಮೆಯು ನಡೆಯುತ್ತಾ ಇದೆ.

ಎರಡನೇ ಮೊಕದ್ದಮೆಯ ವಾಙ್ಮೂಲವು

ಬೆಂಗಳೂರು ದಂಡಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟಾದ ಮ॥ ಪಿ. ಎಲ್. ಮೂರ್ ಯವರ ಕೋರ್ಟಿನಲ್ಲಿ ಎರಡನೆ ಕೊಲೆ ಮೊಕದ್ದಮೆಯು ದಾಖಲಾಗಿ ವಿಚಾರಣೆಯಾಗುತ್ತದೆ. ಈ ಮೊಕದ್ದಮೆಯಲ್ಲಿ ಬಾಪು, ಸುಂದರರಾಜು, ಸಲ್ಲಾಹಟಿ ಎಂಬವರು ಅಪರಾಧಿಗಳು. ಇವರು ಸುಮಾರು ೧೮ ತಿಂಗಳ ಕೆಳಗೆ ಅಲಸೂರು ಪೇಟೆಯಲ್ಲಿ

ಗೋವಿಂದರಾಜುಲು ಎಂಬಿವೊಬ್ಬ ಅಕ್ಕಸಾಲಿ ಹುಡುಗನನ್ನು ಕೊಂದು ಹಾಕಿದರೆಂದು ಈ ಮೊಕದ್ದಮೆ ತರಲ್ಪಟ್ಟಿದೆ ಆ ಹುಡುಗನ ಅಸ್ತಿಗಳು ಜೋಗಿಪಾಳ್ಯದಲ್ಲಿ ಒಂದು ಮನೆಯೊಳಗೆ ಒಂದು ಗುಂಡಿಯಲ್ಲಿ ಸಿಕ್ಕಿದವು.

ಮೊದಲನೆ ಸಾಕ್ಷಿ ಗೌರಮ್ಮನೆಂಬಾಕೆ ನಾಯಿಮ್ಮಲ ಬರೆಸಿದ್ದೇನೆಂದರೆ—ನನ್ನ ಮಗ ಗೋವಿಂದರಾಜುಲುವಿಗೆ ೧೪ ವರ್ಷವಾಗಿತ್ತು ಅವನು ತಪ್ಪಿಸಿಕೊಂಡು ಹೋಗಿ ೧೪ ತಿಂಗಳಾಗಿರಬಹುದು ಅವನು ಯಾಕೆ ತಪ್ಪಿಸಿಕೊಂಡು ಹೋದನೋ ನನಗೆ ತಿಳಿಯದು ಈ ವಿಷಯವನ್ನು ಪೋಲೀಸಿಗೆ ತಿಳಿಸಿದೆನು ಹುಡುಗ ಹೋದ ೨-೩ ದಿನಗಳ ಮೇಲೆ ಪೋಲೀಸಿನವರು ನನ್ನ ಕೈಫಿಯತ್ತನ್ನು ಬರೆದುಕೊಂಡರು. ನನ್ನ ಮಗನ ಮೈಮೇಲೆ ಎರಡು ಚಿನ್ನದ ಮುರಿ, ಕೆಂಪಿನ ಎರಡು ಚತ್ತಕಡಕು, ಗಡಿಯಾರ ಅದರ ಸರಪಣಿ ಇದ್ದವು. ಹೆಣವನ್ನು ಗುಣಿಯಿಂದ ಅಗೆದು ತೆಗೆದಾಗ ನಾನು ನೋಡಿದೆ ಅಸ್ತಿಗಳನ್ನು ನೋಡುವಲ್ಲಿ ನನ್ನ ಮಗನಿಗಿದ್ದಂತೆಯೇ ಉಬ್ಬುಹಲ್ಲಿತ್ತು ನನ್ನ ತಂಗಿಯೂ ನನ್ನ ಎರಡನೇ ಮಗನೂ ಆ ಅಸ್ತಿಗಳನ್ನು ನೋಡಿ ನನ್ನ ಮಗನದೇ ಹೌದೆಂದು ಗುರುತು ಹಿಡಿದರು ಶವವನ್ನು ಗುಣಿಯಿಂದ ಅಗೆದು ತೆಗೆದಾಗ ಅಪರಾಧಿಗಳೂ ಹಾಜರಾಗಿದ್ದರು

ಶ್ರೀನಿವಾಸರಾವ್ ಎಂಬ ಹೆಡ್ ಕಾನ್ಸ್ಟೇಬಲು—ಅಲಸೂರು ಪೋಲೀಸ್ ಠಾಣಾದಲ್ಲಿರುವ ರಿಕಾರ್ಡನ್ನು ನೋಡಿದರೆ ೧೯೦೬ನೇ ಸೆಪ್ಟಂಬರಿನಲ್ಲಿ ಆ ಹುಡುಗ ಹೋದಂತೆ ಕೈಫಿಯತ್ತು ಕೊಟ್ಟಿದೆ ಎಂದು ಹೇಳಿದನು.

ಬೌರಿಂಗ್ ಆಸ್ಪತ್ರೆಯ ಆಸ್ಪತ್ರೆ ಅಸಿಸ್ಟೆಂಟ್ ಮೆ॥ ಕೃಷ್ಣಸ್ವಾಮಿ ಪಿಳ್ಳೆಯವರು ಬರೆಸಿದ ವಾಙ್ಮೂಲವು:—ಗೋವಿಂದರಾಜುಲು ಎಂಬ ಹುಡುಗನ ಶವವನ್ನು ಗುಣಿಯಿಂದ ಅಗೆದು ತೆಗೆದಾಗ ನಾನು ಎದುರಿಗಿದ್ದೆನು ಎಲುಬುಗಳನ್ನು ನೋಡಿದ್ದರಲ್ಲಿ ಅವು ಗಂಡಸಿನವೆಂದು ನನಗೆ ಗೊತ್ತಾಯಿತು ಶವವು ಹೂಳಿಟ್ಟು ಒಂದು ವರುಷಕ್ಕಿಂತಲೂ ಹೆಚ್ಚಾಗಿರಬೇಕೆಂದು ತೋರಿತು. ಹೊಟ್ಟೆ ಇದ್ದ ಭಾಗದ ಮಣ್ಣನ್ನು ಪರೀಕ್ಷೆಗೋಸ್ಕರ ಕೆಮಿಕಲ್ ಎಗ್ಜಾಮಿನರ ಬಳಿಗೆ ಕಳುಹಿಸಿದೆ ಅವರಿಂದ ಸರ್ಟಿಫಿಕೇಟು ಇನ್ನೂ ಬಂದಿಲ್ಲ. ತಲೆಯ ಆಕಾರ ಸಾಮಾನ್ಯವಾಗಿತ್ತು ಹಲ್ಲುಗಳು ಅಳಿಚಿಕೊಂಡು ಕೊಳೆಯುತ್ತಿದ್ದವು

ಸೆಂಟ್ರಲ್ ಜೈಲಿನ ಚೀಫ್ ಜೈಲರ್ ಮೆ॥ ಆರ್ ಎಸ್ ನಾಗಸ್ವಾರ್ ಯವರು ಬರೆಸಿದ ವಾಙ್ಮೂಲವೇನೆಂದರೆ—ಈ ಮೊಕದ್ದಮೆಯಲ್ಲಿ ಎರಡನೇ ಅಪರಾಧಿಯು ಎಲ್ಲಾ ಸಂಗತಿಗಳನ್ನೂ ತಾನಾಗಿಯೇ ವಿವರಿಸಿ ಒಪ್ಪಿಕೊಂಡಿರುತ್ತಾನೆ. ಅವನನ್ನು ಹೆದರಿಸಲೂ ಇಲ್ಲ, ಯಾವ ಆಶೋತ್ತರವನ್ನೂ ಹೇಳಲಿಲ್ಲ ಮೂರನೆಯ ಅಪರಾಧಿಯೂ ವಾಙ್ಮೂಲವನ್ನು ಬರೆಸಿರುತ್ತಾನೆ. ಎರಡನೇ ಅಪರಾಧಿಯ ಹೇಳಿಕೆಯಲ್ಲಿ ಅವರು ಬೇರೆ ಕೊಲೆಗಳಲ್ಲಿ ಸಂಪಾದಿಸಿದ ಆಭರಣಾದಿಗಳನ್ನು ತಂದು ಗೋವಿಂದರಾಜುಲುವಿಗೆ ಬಿಕರಿ ಮಾಡಿದ್ದರು ಇವನ ಮೂಲಕ ತಮ್ಮ ಕೃತ್ಯಗಳೇನಾದರೂ ಹೊರಬೀಳುವವೋ ಎಂದು ಸಂಶಯಪಟ್ಟು, ಅವನನ್ನು ಆಸೆಹುಟ್ಟಿಸಿ ಜೋಗಿಪಾಳ್ಯದ ಒಂದು ಮನೆಗೆ ಕರೆದುಕೊಂಡು ಹೋಗಿ, ಸಿಟಿ ಮೆಡಿಕಲ್ ಹಾಲ್ ಎಂಬ ಔಷಧದ ಷಾಪಿನಿಂದ ತಂದ ಸ್ಟ್ರಿಕ್‌ನೈನ್ ಎಂಬ ವಿಷವನ್ನು ತಿನ್ನಿಸಿ, ಪ್ರಜ್ಞೆ ತಪ್ಪಿದಾಗ ಅವನ ಕತ್ತು ಕತ್ತರಿಸಿ, ಆ ಮನೆಯ ಅಂಗಳದಲ್ಲಿ ಒಂದು ಗುಣಿಯೊಳಗೆ ಹಾಕಿಟ್ಟರು ಮೊದಲೇ ಅವನ ಮೈಮೇಲಿದ್ದ ಆಭರಣಗಳನ್ನೆಲ್ಲಾ ಕಸುಕೊಂಡರು ಮೂರನೇ ಅಪರಾಧಿ ಸಲ್ಲತಂಬಿಯು—ತಾನು ಗುಣಿ ತೆಗೆದದ್ದುಂಟೆಂತಲೂ, ಆ ಹುಡುಗನನ್ನು ಕೊಂದ ಸಂಗತಿ ತನಗೆ ತಿಳಿದಿದ್ದರೂ, ಆ ಕೊಲೆಗೆ ಅವನು ಯಾವ ಸಹಾಯವನ್ನೂ ಮಾಡಿದವನಲ್ಲವೆಂತಲೂ ವಾಙ್ಮೂಲ ಬರೆಸಿರುವನೆ ಈ ವಾಙ್ಮೂಲಗಳನ್ನು ಮೆ॥ ನಾಗಸ್ವಾರ್ ಯವರು ಕೋರ್ಟಿನಲ್ಲಿ ಓದಿ ಹೇಳಿದರು

ಶ್ರೀನಿವಾಸಲು ಎಂಬುವನು ಸಾಕ್ಷಿ ನುಡಿದದ್ದೇನೆಂದರೆ—ನಾನು ಈ ಮೂವರು ಅಪರಾಧಿಗಳನ್ನೂ ಬಲ್ಲೆ ಅವರು ನನಗೆ ಆಪ್ತರಾಗಿದ್ದರು ಸುಮಾರು ೧೪ ತಿಂಗಳ ಕೆಳಗೆ ಸುಂದರರಾಜು ನನ್ನ ಬಳಿಗೆ ಬಂದು ಕೆಲವು ಔಷಧ ತೆಗೆದುಕೊಂಡು ಹೋದನು ಅವನು ಔಷಧದ ಕ್ರಯ ಕೊಡಲಿಲ್ಲ, ಆದರೆ ಅಪರಾಧಿಯು ನನಗೆ ಒಂದು ಗಡಿಯಾರವನ್ನು ಬಹುಮಾನವಾಗಿ ಕೊಟ್ಟನು ಲಕ್ಷ್ಮಿ ಕೊಲೆಯ ಮೊಕದ್ದಮೆಯಲ್ಲಿ ಬಾಬು, ಸುಂದರರಾಜು, ಇವರ ಕೂಡ ನಾನೂ ಒಬ್ಬ ಅಪರಾಧಿಯಾಗಿದ್ದೇನೆ

ರಾಮಾಚಾರಿ ಎಂಬೊಬ್ಬ ಅಕ್ಕಸಾಲಿಯು ಹೇಳಿದ್ದೇನೆಂದರೆ—ನಾನು ಈ ಮೂರು ಜನರ ಗುರ್ತನ್ನೂ ಬಲ್ಲೆ ಸುಮಾರು ೧೦-೧೧ ತಿಂಗಳ ಹಿಂದೆ ಎರಡನೇ ಅಪರಾಧಿಯು ಕೈಮುರಿಗೆ ಹಾಕಿದ್ದ ಚಿನ್ನದ ತಗಡು ತಂದುಕೊಟ್ಟನು ಅದರಲ್ಲಿ ೬೦ ರೂಪಾಯಿನ ಚಿನ್ನವಿತ್ತು.

ಈ ಮೊಕದ್ದಮೆಯು ವಿಚಾರಣೆಯಾಗುತ್ತಾ ಇದೆ.

ತಾಲ್ಲೋಕು ವರ್ತಮಾನಗಳು.

ನಂಜನಗೂಡು —ಈ ತಿಂಗಳು ೧೪ ತಾ ಬೆಳಿಗ್ಗೆ ಒಬ್ಬ ಬ್ರಾಹ್ಮಣ ಹುಡುಗನು ಕಪಿಲಾನದಿಯಲ್ಲಿ ಸ್ನಾನಮಾಡುತ್ತಾ ಇರುವಾಗ್ಗೆ ಅಕಸ್ಮಾತ್ತು ನೀರಿನಲ್ಲಿ ಮುಳುಗಿಕೊಂಡು ಮೂರು ದಿನಗಳ ನಂತರ ಹೊರಗೆ ತೇಲುತ್ತಿದ್ದನು ಅವನಿಗೆ ಯಾರೂ ವಾರಸುದಾರರು ಇರಲಿಲ್ಲ. ಕೆಲವರು ಚಂದಾ ಎತ್ತಿ ಹೆಣವನ್ನು ದಹನಮಾಡಿಸಿದರು. ಸಣ್ಣ ಹುಡುಗರು ಆಗಾಗ್ಗೆ ನದಿಯಲ್ಲಿ ಈಜುವದಕ್ಕೆ ಹೋಗಿ ಸಾಯುತ್ತಿದ್ದಾರೆ. ತಾಯಿತಂದೆಗಳು ಮಕ್ಕಳನ್ನು ತಹಬಂದಿಯಲ್ಲಿ ಇಟ್ಟುಕೊಳ್ಳಬೇಕು —ಈ ಊರಿನ ಮುನಸಿಪಾಲಿಟಿಯವರು ಸಂದುಗೊಂದುಗಳಲ್ಲಿಯೂ ದೊಡ್ಡ ಬೀದಿಗಳಲ್ಲಿಯೂ ಇರುವ ಕಸವು ಸರಿಯಾಗಿ ತೆಗೆಸುವದಿಲ್ಲ ಬೇಸಿಗೇಕಾಲದಲ್ಲಿಯೇ ಇಷ್ಟುಮಟ್ಟಿಗಿದ್ದರೆ ಮಳೆಗಾಲದ ಸ್ಥಿತಿ ಹ್ಯಾಗಿರುವದೋ ತಿಳಿಯದು ಸಾಂಕ್ರಾಮಿಕ ರೋಗಗಳಿಗೆ ಊರಿನ ಹೇಸಿಗೆಯೇ ಕಾರಣವಾಗುತ್ತೆ ಅಮಲ್ದಾರರು ಇನ್ನೂ ಮುತುವರ್ಜಿ ಮಾಡಿದರೆ ಗ್ರಾಮಪಾಕೀಜು ಆಗುತ್ತೆ

ದೊಡ್ಡಬಳ್ಳಾಪುರ —ಸುಗ್ಗಿಕಾಲವಾದಾಗ್ಯೂ ದವಸಗಳ ಧಾರಣೆ ಮಾತ್ರ ಇಳಿಯಲಿಲ್ಲ ರಾಗಿ ರೂಪಾಯಿಗೆ ೧೯ ಸೇರು, ಅಕ್ಕಿ ೭ ಸೇರಿನಂತೆ ಮಾಗುತ್ತೆ ಮೆ॥ ಗೋಪಾಲಯ್ಯಂಗಾರ್ರು ಕಾಲದಲ್ಲಿ ನಿಂತುಹೋಗಿದ್ದ ಗೋಹತ್ಯವು ಪುನಃ ತಲೆದೋರಿಗೆ ಗೌರ್ನಮೆಂಟಿನವರು ನಿಗಾ ಕೊಟ್ಟು ಕ್ರಮಪಡಿಸಬೇಕಾಗಿದೆ ಮುನ್ಸಿಪಾಲಿಟಿಯೂ ಸಹ ಕ್ರಮವಾಗಿಲ್ಲ ಬೈಸಿಕಲ್ ೧ ಕ್ಕೆ ೧ ರೂಪಾಯಿನಂತೆ ಕಂದಾಯ ಮಾತ್ರ ವಸೂಲ್ಮಾಡುತ್ತಾರೆ ರಸ್ತೆಗಳು ಮಾತ್ರ ಸರಿಯಾಗಿಲ್ಲ ಸಂದುಗೊಂದುಗಳಂತೂ ಕೇಳಲಳವಲ್ಲ ಬೈಸಿಕಲ್ ಮುರಿದು ಹೋಗಲಿಕ್ಕೆ ಎಷ್ಟು ಬೇಕೋ ಅಷ್ಟಾಗಿದೆ ಬೇಗ ಕ್ರಮಪಡಿಸಿದರೆ ಅನುಕೂಲ —ಯಲೆ ನೂರುವ ಗಂಗಮ್ಮ ಮತ್ತು ಮುಸಲ್ಮಾನ ಸಾಬರ ಮೊಕದ್ದಮೆ ವಿಚಾರಣೆಯಾಗಿ ಮುಂದಿನ ತಿಂಗಳು ೬ ಕ್ಕೆ ಹೀರಂಗು ಆಗಿರುತ್ತೆ —ಹಿಂದುಸ್ಥಾನಿ ಗರಲ್ಸ್ ಸ್ಕೂಲಿನಲ್ಲಿದ್ದ ಹೆಡ್ ಮಿಸ್ಟ್ರೆಸ್ಸಿನವರು ವರ್ಗವಾಗಿ ಹೋದ್ದರಿಂದ ೩ ಮತ್ತು ೪ ನೇ ಕ್ಲಾಸಿನಲ್ಲಿ ಓದುವ ಬಾಲಕಿಯರಿಗೆ ಈಗ ಬಂದಿರುವ ಮಿಸ್ಟ್ರೆಸ್ಸಿನವರಿಂದ ವ್ಯಾಸಂಗ ಮಾಡಿಸಲು ಅನಾನುಕೂಲವಾಗಿದೆ ಎಂದು ಮುಸಲ್ಮಾನ ಜನರು ಸರಿಯಾದ ಏರ್ಪಾಡು ಮಾಡಿಸಬೇಕಾಗಿ ಇಲಾಖಾ ಹಜರತ್ ಇನ್ಸ್ಪೆಕ್ಟರ್ ಜನರಲ್‌ರವರನ್ನು ಅರ್ಜಿ ಮೂಲಕ ಕೇಳಿಕೊಂಡಿರುತ್ತಾರೆ. ಸರ್ಕಾರದವರು ಕ್ರಮಪಡಿಸಿ ಉದ್ಧಾರ ಮಾಡ್ಯಾರೆಂದು ನಿರೀಕ್ಷಿಸುತ್ತೇವೆ.

ಹುಣಸೂರು —ಕಳೆದ ಡಿಸಂಬರ್ ೨೨ ನೇ ತಾ॥ ಇದೇ ತಾಲ್ಲೋಕಿಗೆ ಸೇರಿದ ಕೊತ್ತೇಗಾಲಗ್ರಾಮದ ಸೋಮಾಚಾರಿ ಎಂಬುವನು ಸುಮಾರು ೨೨೦ ರೂಪಾಯಿ ಬಾಳುವ ಒಂದು ಚಿನ್ನದ ಗಟ್ಟಿಯನ್ನು ತಂದು ಇದೇ ಹುಣಸೂರು ಟವರ್ನಲ್ಲಿ ವಾಸಮಾಡುತ್ತಿರುವ ವೈಶ್ಯರ ಮುನಿಸಾಮಿಶೆಟ್ಟಿಗೆ ಕೊಟ್ಟು ಹಣ ತೆಗೆದುಕೊಳ್ಳುತ್ತಿರುವಾಗ ಟವರ್ ದಫೇದಾರ್ ನರಸಿಂಗರಾಯರು ಗುಮಾನಿಯ ಮೇಲೆ ಆಚಾರಿಯನ್ನು ಮಾಲು ಸಹಿತ ಹಿಡಿದು ಮಹಜರುಮಾಡಿಸಿಕೊಂಡು ಮೇಲ್ಪಟ್ಟ ಅಧಿಕಾರಿಗಳಿಗೆ ರಿಫೋರ್ಟು ಕೊಡದೆ ಆಸಾಮಿಯನ್ನು ಕರೆದುಕೊಂಡು ಹೋಗಿ ಮಾರನೇ ದಿನದ ವರಿಗೂ ತಮ್ಮ ಮನೆಯಲ್ಲೇ ಇಟ್ಟುಕೊಂಡು ಮಾಲ್ ಅಪಹರಿಸಿ ಆಚಾರಿಯನ್ನು ಮಾಗಿಸು ಆತನ ಗ್ರಾಮಕ್ಕೆ ಕಳುಹಿಬಿಟ್ಟರೆಂತಲೂ ಆತನು ತನ್ನಗ್ರಾಮಕ್ಕೆ ಹೋಗಿ ಪುನಃ ಹುಣಸೂರಿಗೆ ಬಂದು ಅಮಲ್ದಾರರಲ್ಲಿ ಫಿರ್ಯಾದುಮಾಡಿದ್ದರ ಮೇಲೆ ಮೇಲ್ಕಂಡ ಟವರ್ ದಫೇದಾರರನ್ನು ಸಸ್ಪೆಂಡ್ ಮಾಡಿದ್ದಾರೆಂದೂ ತಿಳಿದುಬಂದಿದೆ —ಮೊಹರಂ ಹಬ್ಬದ ಕಾಲದಲ್ಲಿ ಗಲಾಟೆಗೆ ಅವಕಾಶವಾಗದಂತೆ ಪ್ರತಿವರ್ಷವೂ ಮೈಸೂರಿಂದ ರಿಜರ್ವ್ ಪೋಲೀಸು ಜಬ್ಬಂದಿ ಬರುತ್ತಿತ್ತು. ಆದರೆ ಈ ಸಲ ಅವರ ಸಹಾಯಪಡೆಯದೆ ನಮ್ಮ ಅಮಲ್ದಾರರೂ ಪೊ॥ ಇನ್ಸ್ಪೆಕ್ಟರೂ ಸಾಹಸಪಟ್ಟು ಯಾವ ಗಲಾಟೆಯೂ ನಡೆಯದಂತೆ ಏರ್ಪಾಡು ಮಾಡಿದ್ದು ಸಂತೋಷಕರವಾಗಿದೆ —ಬಳ್ಳಾರಿ ಕಡೆಯಿಂದ ಕನ್ನಾನೂರಿಗೆ ಹೋಗುವುದಕ್ಕೆ ಹೊರಟ ನೇಟಿವ್ ರಿಜಿಮೆಂಟ್ ಇದೇ ತಿಂಗಳು ೨೩ ನೇ ತಾ. ಇಲ್ಲಿಗೆ ಬಂದು ಮರುದಿನ ಪಿರಿಯಾಪಟ್ಟಣದ ಕಡೆ ಪ್ರಯಾಣಮಾಡಿತು. ಇದು ಹಿಂದೆ ಶ್ರೀರಂಗಪಟ್ಟಣವನ್ನು ಗೆದ್ದ ರಿಜಿಮೆಂಟಿನ ಶಾಖೆ ಎಂದು ತಿಳಿದುಬಂದಿದೆ ಇದಕ್ಕೆ ಬೇಕಾದ ಸಪ್ಲೈಮಾಡುವದರಲ್ಲಿ ನಮ್ಮ ಅಮಲ್ದಾರರೂ ಇನ್ಸ್ಪೆಕ್ಟರೂ ತುಂಬಾ ಮುತುವರ್ಜಿ ತೆಗೆದು ಮಾಡಿದರು ರಿಜಿಮೆಂಟನ್ನು ಎದುರುಗೊಳ್ಳುವದಕ್ಕೆ ಇವರು ಬಿಳಿಕೆರೆವರೆಗೂ ಹೋದದ್ದು ಮಾತ್ರವಲ್ಲದೆ ಅವರನ್ನು ಬೀಳ್ಕೊಳ್ಳುವದಕ್ಕೆ ಪಂಚವಳ್ಳಿ ತನಕ ಹೋಗಿದ್ದರು. ಮೊದಲನೆಕ್ಲಾಸ್ ಮ್ಯಾಜಿಸ್ಟ್ರೇಟರಾದ ಮೆ॥ ಸುಬ್ರಹ್ಮಣ್ಯ ಅಯ್ಯನವರು ಸಹ ಮೈಸೂರಿಂದ ಪಂಚವಳ್ಳಿಯವರೆಗೂ ಹೋಗಿರುತ್ತಾರೆಂದು ವರ್ತಮಾನ

ತುಂಕೂರು —ಬಿಸಲಿನ ಕಾಪವು ಜೋರಾಗುತ್ತಾ ಇದೆ. ಮುಂದಿಗಳಿಗೆ ಜವಸು ಗಾಡಿಗಳು ಬರುತ್ತಿರುವದರಿಂದ ವ್ಯಾಪಾರವು ಚುರುಕಾಗಿ ನಡೆಯುತ್ತಿದೆ ರಾಗಿ ಖಂಡಿ ೧ಕ್ಕೆ ೪೭ ರೂ ವರಿಗೂ, ಬತ್ತ ೪೫ ರೂ ವರಿಗೂ ಇದೆ ಜನವರಿ ಮಾಸಕ್ಕೆ ಬರುತ್ತಿದೆ ಈ ಮಧ್ಯೆ ಹೆರಹೇಟೆಯಲ್ಲಿ ಏನೋ ರೋಗದ ಗಲಾಟೆ ಆಯಿತೆಂತಲೂ ಮುಂದಿಗಳಲ್ಲಿ ಯಾವದರಲ್ಲೋ ಇಲಿ ಸತ್ತಿತೆಂತಲೂ ಗಾಳಿ ವರ್ತಮಾನ ಹುಟ್ಟಿ ಜನರಿಗೆ ಭಯವನ್ನುಂಟುಮಾಡಿದೆ ತಾಲ್ಲೋಕು ಕಚೇರಿಯನ್ನು ಮಾಮೂಲು ಜಾಗದಿಂದ ತೆಗೆದು ಡಿಸ್ಟ್ರಿಕ್ಟ್ ಆಫೀಸಿನ ಎದುರಿನಲ್ಲಿರುವ ಗೌರ್ನಮೆಂಟು ಹೌಸಿಗೆ ವರ್ಗಾಯಿಸಿರುತ್ತಾರೆ ಅಲ್ಲಿಗೆ ಗೌರ್ನಮೆಂಟು ಯಂಪ್ರೆಸ್ ಕ್ಯಾಸ್ಟು ಗರಲ್ ಸ್ಕೂಲನ್ನು ನಾಳೆ ಮೊದಲನೇ ತಾರೀಖಿಗೆ ವರ್ಗಾಯಿಸುವಂತೆ ಹುಕುಂ ಆಗಿದೆ. ಈ ಬದಲಾವಣೆಯಿಂದ ಎರಡು ಕೆಲಸಗಳಿಗೂ ಅನುಕೂಲ ಕಡಮೆಯೆಂದು ಧಾರಾಳವಾಗಿ ಹೇಳಬಹುದು —ತಾ ೨೩ನೇ ಭಾನುವಾರ ನಮ್ಮ ಪೋಲೀಸ್ ಇ॥ ಜನರಲ್ ಸಾಹೇಬರು ಸೀರ್ಯಾದ ಮಾರ್ಗವಾಗಿ ಬೆಳಿಗ್ಗೆ ೧೦ ಗಂಟೆಯಲ್ಲಿ ದಯಮಾಡಿಸಿ, ಇಲಾಖಾ ಅಧಿಕಾರಿಗಳಿಂದ ಸತ್ಕೃತರಾಗಿ ರೈಲ್ ಬಳಿ ಇರುವ ಟ್ರಾವಲರ್ಸ್ ಬಂಗಲೆಯಲ್ಲಿ ಇಳಿದುಕೊಂಡಿದಾರೆ ಇನ್ನೂ ೩ ೪ ದಿನಗಳು ಇಲ್ಲಿರುವದಾಗಿ ವರ್ತಮಾನ —ನಮ್ಮ ಊರಿನಲ್ಲಿ ಯಾವ ಕೆಲಸವಾದರೂ ಪ್ರಿಂಟು ಮಾಡಿಸಲು ಬೆಂಗಳೂರಿಗೇನೇ ಹೋಗಬೇಕಾಗಿತ್ತು ಅಂಥಾ ತೊಂದರೆಯು ನಿವಾರಣೆಯಾಗುವಂತಾ ಇಲ್ಲಿನ ಜನರಲ್ ಏರ್ಜೆನ್ಸಿಯ ಮುಖ್ಯಸ್ಥರಾದ ಮೆ॥ ಸೂರ್ಯನಾರಾಯಣ ರಾಯರು ಒಂದು ಪ್ರಿಂಟಿಂಗ್ ಪ್ರೆಸ್ ತರಿಸಿ ಕನ್ನಡ ಮತ್ತು ಇಂಗ್ಲೀಷಿನಲ್ಲಿ ಪ್ರಿಂಟು ಕೆಲಸಗಳನ್ನು ಮಾಡುತ್ತಿದಾರೆ ಇವರನ್ನು ದೊಡ್ಡ ಮನುಷ್ಯರು ಪ್ರೋತ್ಸಾಹಿಸುವಂತೆ ಕೋರುತ್ತೇವೆ —ನಮ್ಮ ತುಂಕೂರು ತಾಲ್ಲೂಕಿನಲ್ಲೆಲ್ಲಾ ಬೆಳ್ಳಾವಿಯ ಸಂತೆಯು ತುಂಬಾ ಪ್ರಸಿದ್ಧವಾಗಿ ಭಾರಿಯಾಗಿರುತ್ತದೆ ಅಂಥಾ ಗಲಾಟೆ ಸಂತೆಯಲ್ಲಿಯೂ ಕೂಡ ವ್ಯಾಪಾರಿಗಳಿಗೂ ಗಿರಾಕಿಗಳಿಗೂ ತೊಂದರೆ ಇಲ್ಲದಂತೆ ಜಾಗಗಳನ್ನು ವಿಂಗಡಿಸಿ ಸೌಕರ್ಯಗಳನ್ನು ಕಲ್ಪಿಸಿದಾರೆ. ಈ ಊರಿನ ಸಂತೆಯನ್ನು ದರೋ ಕೇಳುವವರೇ ದಿಕ್ಕಿಲ್ಲ ಇದು ತುಂಬಾ ಅಕ್ರಮ ಸ್ಥಿತಿಯಲ್ಲಿರುವದು. ಇದನ್ನು ಅಧಿಕಾರಿಗಳು ಕ್ರಮಪಡಿಸಿ ವ್ಯಾಪಾರಿಗಳಿಗೂ ಗಿರಾಕಿಗಳಿಗೂ ಅನುಕೂಲಪಡಿಸುವಂತೆ ಕೋರುತ್ತೇವೆ

ತಿಪ್ಟೂರು —ಇಲ್ಲಿದ್ದ ಆಕ್ಟಿಂಗ್ ಅಮಲ್ದಾರರು ಇದೇ ತಿಂಗಳು ೧೩ ನೇ ತಾ ಬೆಳಿಗ್ಗೆ ಖಾಯಂ ಅಮಲ್ದಾರಿಗೆ ಛಾರ್ಜನ್ನು ವಹಿಸಿದರು ಇಲ್ಲಿನ ಕೆರೆಯಲ್ಲಿ ನೀರು ಬತ್ತುತ್ತಾ ಬಂತು ಮುಂದಕ್ಕೆ ನೀರಿನ ಕ್ಷಾಮವು ಬರಬಹುದು ದೈವಾನುಗ್ರಹದಿಂದ ಜಾಗ್ರತೆ ಮಳೆ ಬಂದರೆ ಸಲೀಸಾದೀತು ಮ್ಯುನಿಸಿಪಾಲಿಟಿ ರಸ್ತೆಯು ಬರೀ ಧೂಳಾಗಿದೆ ಮುಖ್ಯವಾಗಿ ಇದು ಬೇಸಿಗೆ ಕಾಲವಾದ್ದರಿಂದ ರಸ್ತೆಯ ಅಜೂಬಾಜೂದಲ್ಲಿ ಮನೆಗಳೂ ಸ್ಕೂಲುಗಳೂ ಅಂಗಡಿಗಳೂ ಇರುವದರಿಂದ ಆ ಮನೆಯಲ್ಲಿ ವಾಸಿಸುವ ಜನರಿಗೆ ಈ ಧೂಳಿನಿಂದ ಆರೋಗ್ಯಕ್ಕೆ ಕುಂದಕವಾಗುತ್ತದೆನ್ನುವದಕ್ಕೆ ಏನೇನೂ ಸಂದೇಹವಿಲ್ಲ ಈ ಧೂಳು ಮನೆಗಳಿಗೆ ವಿಶೇಷವಾಗಿ ಸೇರುವದಕ್ಕೆ ಮ್ಯುನಿಸಿಪಾಲಿಟಿ ಝಾಡಮಾಲಿಗಳೇ ಕಾರಣ ಇವರು ನಡುವೇಳೆಯಲ್ಲಿ ಸುಮಾರು ೮ ಘಂಟೆಯವರಿಗೂ ಗುಡಿಸುತ್ತಾ ಇರುತ್ತಾರೆ. ಆದ್ದರಿಂದ ಸರ್ಕಾರದವರು ದಿಣ್ಣುವಿಟ್ಟು ಈ ಝಾಡಮಾಲಿಗಳು ಹೊತ್ತಾರೆ ೫ ರಿಂದ ೭ ಘಂಟೆಯೊಳಗೆ ಗುಡಿಸುವಂತೆ ಅಪ್ಪಣೆ ಕೊಡುವದಲ್ಲದೆ ಪ್ರತಿದಿವಸವೂ ಇಂಥಾ ವಿಷಯಗಳಲ್ಲಿ ಸರ್ಕಾರದವರು ನಿಗಾ ಇಟ್ಟರೆ ಇಂಥಾ ತೊಂದರೆಗಳಿಗೆ ಆಸ್ಪದವಾಗಲಾರದು —ಇಲ್ಲಿ ಟೌನ್ ಮ್ಯುನಿಸಿಪಲ್ ಮೆಂಬರಾಗಿದ್ದ ಸರಾಫ್ ನಂಜುಂಡಶೆಟ್ಟರು ಕಾಲವಾದ್ದರಿಂದ ಅವರ ಸ್ಥಾನಕ್ಕೆ ಈ ಊರಿನಲ್ಲಿ ಕೆಲವು ದೊಡ್ಡಮನುಷ್ಯರು ಇದ್ದಾಗ್ಯೂ ಇವರೆಲ್ಲಾ ಹಿಂದೆ ಮ್ಯುನಿಸಿಪಲ್ ಮೆಂಬರುಗಳಾಗಿ ಕೆಲಸ ನೋಡಿದವರಾಗಿರುತ್ತಾರೆ. ಅವರಲ್ಲಿ ಮ॥ ಸಾಹುಕಾರ್ ಕೊಟ್ಟೂರ್ರೈಯನವರು ಈ ಪದವಿಗೆ ಅರ್ಹರಾಗಿದಾರೆನ್ನುವದಕ್ಕೆ ಸಂಶಯವಿಲ್ಲ ಅಮಲ್ದಾರರು ಈ ವಿಷಯದಲ್ಲಿ ತಮಗೆ ನ್ಯಾಯವಾಗಿ ಕಂಡಪಕ್ಷಕ್ಕೆ ಮೇಲ್ಕಂಡ ದೊಡ್ಡಮನುಷ್ಯರನ್ನು ಚುನಾಯಿಸಿದರೆ ತುಂಬಾ ಸಂತೋಷ —ಮ॥ ಸಿಂಗರಿ ನಂಜಪ್ಪನವರು ರೈಲ್ ರಸ್ತೆಯ ಪಕ್ಕದಲ್ಲಿ ಕಟ್ಟಿಸುತ್ತಿರುವ ದೇವಸ್ಥಾನದ ಬಳಿ ಒಂದು ಆಳವಾದ ಭಾವಿಯನ್ನು ತೆಗೆಸುತ್ತಾ ಇರುವಾಗ್ಗೆ ಬಂಡೆಯು ಸಿಕ್ಕಿ ಡೈನಮೈಟ್ ಮೂಲಕ ಕಲ್ಲುಗಳನ್ನು ತೆಗೆದು ಖರ್ಚು ಇಟ್ಟು ಧರ್ಮದಮೇಲೆ ದೃಷ್ಟಿ ಇಟ್ಟು ಮಾಡಿಸುತ್ತಾರೆ ಈಗ ಈ ಭಾವಿಯಲ್ಲಿ ನೀರು ಕಂಡುಬಂದ ಮೇಲೆ ಸುಮಾರು ೧೦ ಅಡಿ ಆಳವರಿಗೂ ತೋಡಿಸುತ್ತಾ ಇದಾರೆ ಇದರಿಂದ ಮಳೆಗಾಲವಲ್ಲದ ಈ ಕಾಲದಲ್ಲಿ ಜನಗಳಿಗೂ ಮತ್ತು ಪ್ರಾಣಿಗಳಿಗೂ ಬಹು ಪ್ರಯೋಜನವಾಯಿತು —ಮ॥ ಸಾ॥ ಪುಟ್ಟಸ್ವಾಮಿಶೆಟ್ಟರ ೨ ನೇ ಸೊಸೆಯು ೨೦ ನೇ ತಾ ರಾತ್ರಿ ಬಾಣಂತಿ ಸನ್ನಿ ಜ್ವರದಿಂದ ಮೃತಪಟ್ಟರು ಇವರ ದುಃಖವು ಬಹಳವಾಗಿರುವುದು

ಕೊಳವಳ್ಳಿ —ಈಗೀಗ ಛಳಿಯೂ ಬಿಸಿಲೂ ಹೆಚ್ಚುತ್ತಾ ಬಂದಿದೆ. ನಮ್ಮ ತಾಲ್ಲೂಕು ಜಮಾಬಂದಿ ಕೆಲಸಗಳು ಪೂರೈಸಿ ೧೦-೧೨ ದಿವಸಗಳಾದವು ನಮ್ಮ ಎ ವಿ ಸ್ಕೂಲ್ ಎ॥ ಮಾಸ್ಟರ್ ಎಂ ರಾಮಣ್ಣನವರು ಮುಂಡ್ಯಕ್ಕೆ ದಯಮಾಡಿಸುವಾಗ್ಗೆ ಪುರಜನರೆಲ್ಲರೂ ತಾ. ೧೭ ನೇ ಮಂಗಳವಾರ ಹಳೇ ಸ್ಕೂಲು ಕಟ್ಟಡದಲ್ಲಿ ಒಂದು ಸಭೆ ಸೇರಿ ಇವರಿಗೆ ಒಂದು ಔತಣವನ್ನು ಮಾಡಿದರು ಇಲ್ಲಿಯ ಸಬ್ ರೆಜಿಸ್ಟ್ರಾರ್ ಮೆ॥ ಎಂ ನಂಜುಂಡೈಯನವರು ಆ ದಿನ ಅಗ್ರಾಸನವನ್ನು ವಹಿಸಿದ್ದರು ಮೆ॥ ರಾಮಣ್ಣನವರ ಗುಣಾತಿಶಯಗಳನ್ನು ಅವರು ಇಲ್ಲಿದ್ದ ೪-೫ ವರ್ಷಗಳಲ್ಲಿ ೪೦-೫೦ ಜನಕ್ಕಿಂತಲೂ ಹೆಚ್ಚಾಗಿ ಸ್ಕೂಲಿನಲ್ಲಿ ಅವರ ಮುತುವರ್ಜಿಗೆ ದೃಷ್ಟಾಂತ ಒಬ್ಬ ವಿದ್ಯಾರ್ಥಿಯು ಮೊದಲನೆ ತರಗತಿಯಲ್ಲಿ ಪ್ಯಾಸಾದ ಬಗೆಯನ್ನು ಸಭಿಕರಿಗೆ ಸೂಚಿಸಿ, ಪುರನಿವಾಸಿಗಳು ಮ॥ ರಾಮಣ್ಣನವರಲ್ಲಿ ತಮಗಿದ್ದ ಪ್ರೀತಿ ವಾತ್ಸಲ್ಯಾದಿಗಳನ್ನು ತೋರ್ಪಡಿಸಲು ಅವರ ಉದ್ದೇಶಿಸಿದ್ದ ಒಂದು ಬಂಗಾರದ ಉಂಗುರವನ್ನು ಮತ್ತು ೧೯೦೭ ರಲ್ಲಿ ತರಗತಿಗಳ ಪರೀಕ್ಷೆಯಲ್ಲಿ ಪ್ಯಾಸಾದವರಿಗೆ ಒಂದಿದ್ದ ಬಹುಮಾನ ಪುಸ್ತಕಗಳನ್ನು ಸಹ ಕೊಟ್ಟರು ಇಷ್ಟು ಬೇಗ ಇವರು ನಮ್ಮನ್ನು ಬಿಟ್ಟು ಬೇರೆ ಸ್ಥಳಕ್ಕೆ ವರ್ಗವಾದದ್ದು ನಮ್ಮ ದುರದೃಷ್ಟವೇ ಸರಿ ಇವರ ಜಾಗಕ್ಕೆ ಬಂದಿರುವ ಮ॥ ವೈ ಟೀಮಯ್ಯನವರೂ ಸಹಾ ಮುತುವರ್ಜಿಯಿಂದ ಕೆಲಸ ಮಾಡಿ ಮೆ॥ ರಾಮಣ್ಣನವರಂತೆಯೇ ಹೆಸರು ಪಡೆಯುತ್ತಾರೆಂದು ನಂಬಿರುತ್ತೇವೆ —ಹಿಂದೆ ಪೋಸ್ಟ್ ಆಫೀಸಿನ ಮೊಕದ್ದಮೆಯಲ್ಲಿ ಸಿಕ್ಕಿದ ವೆಂಕಟಸುಬ್ಬಯ್ಯನಿಗೆ ಒಂದು ವರುಷ ಕಠಿಣ ಸಜ ವಿಧಿಸಲ್ಪಟ್ಟಿತು ಇಲ್ಲಿಗೆ ೧೦ ಮೈಲಿ ದೂರದಲ್ಲಿರುವ ದ್ಯಾವ ಪಟ್ಟಣವೆಂಬ ಗ್ರಾಮದಲ್ಲಿ ಒಬ್ಬ ಮುಸಲ್ಮಾನನು ತನಗೆ ಖರೀದಿಗೆ ಕೊಟ್ಟ ಹೋರಿಗಳ ಮೊಬಲಗನ್ನು ಕೇಳಲು ಬಂದಿದ್ದ ಒಬ್ಬ ಕುಮಾಚಾರದವನನ್ನು ಕೊಂಚ ದೂರ ಕರೆದುಕೊಂಡುಹೋಗಿ ಅವನನ್ನು ಕೊಡಲಿಯಿಂದ ಖೂನಿ ಮಾಡಿರುತ್ತಾನೆ.—ಇತ್ತಲಾಗಿ ಚಿಕ್ಕ ಹೆಬ್ಬಗಿಲು ಎಂಬ ಗ್ರಾಮದಲ್ಲಿ ಒಬ್ಬ ಮುದುಕಿಯು ಒಂದು ಎಮ್ಮೆಯಿಂದ ತಿವಿದು ಸತ್ತುಹೋದಳು —ಈ ಊರು ದೊಡ್ಡಬೀದಿಯ ಚರಂಡಿಯನ್ನು ಎತ್ತರಿಸುವಬಗ್ಗೆ ಕಲ್ಲು ಕಿತ್ತು ಎರಡು ತಿಂಗಳಾದಾಗ್ಯೂ ಸರಿಪಡಿಸದೆ ಇರುವುದು. ಬಚ್ಚಲ ನೀರೆಲ್ಲಾ ಭೂಮಿಯಲ್ಲಿ ಇಳಿದು ಬಹು ಅನಾರೋಗ್ಯಕ್ಕೆ ಕಾರಣವಾಗಿದೆ ಗ್ರಾಮ ಗಾಸೀಲೈನಲ್ಲೂ ಕತ್ತಲೆಕಾಲದಲ್ಲಿ ದೀಪದ ವಿಷಯದಲ್ಲೂ ನಮ್ಮ ಸಬ್ ರೆಜಿಸ್ಟ್ರಾರ್ ಮೆ॥ ಎಂ ನಂಜುಂಡೈಯನವರು ಬಗೆ ಶ್ರದ್ಧೆಯನ್ನು ತೆಗೆದುಕೊಳ್ಳುತ್ತಿರುವ ಭಾಗ ತುಂಬಾ ಸಂತೋಷವೇ ಸರಿ. —ನಮ್ಮ ಶ್ರೀಮನ್ ಮಹಾರಾಜರವರ ಸವಾರಿಯು ಇಲ್ಲಿಗೆ ಚಿತ್ತೈಸಿದ್ದ ವೇಳೆಯಲ್ಲಿ ಪುರಜನಗಳೆಲ್ಲರೂ ಶಿಥಿಲವಾಗುತ್ತಿದ್ದ ಮೂರೇಹಳ್ಳಿ ನೃಸಿಂಹಸ್ವಾಮಿಯ ದೇವಸ್ಥಾನದ ರಿಪೇರಿ ಮಾಡಿಸಿಕೊಡಬೇಕೆಂದು ಕೇಳಿದ್ದಕ್ಕೆ ಮಹಾಸ್ವಾಮಿಯವರು ಅನುಕೂಲವಾಗಿ ಅಪ್ಪಣೆ ಕೊಟ್ಟಿದ್ದರು ಈಗ್ಗೆ ೮ ದಿವಸದಲ್ಲಿ ಅದಕ್ಕಾಗಿ ಎಂಟೂವರೆ ಸಾವಿರ ರೂಪಾಯಿ ಸ್ಯಾಂಕ್ಷನ್ ಆಗಿ ಆರ್ಡರ್ ಬಂದಿರುವ ಭಾಗವು ಪುರನಿವಾಸಿಗಳಿಗೆಲ್ಲಾ ತುಂಬಾ ಸಂತೋಷವನ್ನುಂಟುಮಾಡುತ್ತದೆ ಈ ಭಾಗದಲ್ಲಿ ನಮ್ಮ ಮಹಾರಾಜರವನ್ನು ಎಷ್ಟು ವಂದಿಸಿದರೂ ಸ್ವಲ್ಪವೇ —ಸಾವಿರ ರೂಪಾಯಿಗಿಂತಲೂ ಹೆಚ್ಚಾಗಿ ಸುಂಕ ವಸೂಲಾಗತಕ್ಕ ೫-೬ ಸಾವಿರ ಪ್ರಜೆಗಳುಳ್ಳ ಈ ಊರಿಗೆ ಒಬ್ಬ ಆಕ್ಟ್ರಾಯಿ ಮುತ್ಸದ್ದಿಯು ಇಲ್ಲದಿರುವುದು ಅನೇಕ ನೌಕರಮಾನೇರುಗಳಿಗೆ ತುಂಬಾ ಅನುಕೂಲವಾಗಿರುತ್ತದೆ ಈ ಭಾಗವನ್ನು ಮುನ್ಸಿಪಾಲಿಟಿಯವರು ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನಲ್ಲಿ ಚರ್ಚಿಸುವರೆಂದು ಕೋರುತ್ತೇವೆ.

ಸ್ಪೆಕ್ಟರ್ ಜನರಲ್ ಮೆ॥ ಎಫ್. ಸಿ ಇ. ಕಾರ್ ಸಾಹೇಬರು ತಾ. ...ನ ಸಾಯಂಕಾಲ ಬರುವರೆಂದು ತಿಳಿದು, ಇಲ್ಲಿನ ಪೊಲೀಸ್ ಇ...ನವರೂ, ಮುನಿಸಿಪಲ್ ಮೆಂಬರುಗಳೂ ಇಂಗ್ಲಿಷ್ ಬ್ಯಾಂಡ್ ...ಹಿರಿಯೂರು ಮಾರ್ಗದಲ್ಲಿ ಸ್ವಲ್ಪದೂರ ಹೋಗಿ ಕಾದಿದ್ದು, ...ಸಾಹೇಬರನ್ನು ಮರ್ಯಾದೆ ಪೂರ್ವಕವಾಗಿ ಎದುಗೊಂಡು, ...ಡ್ ವಾದ್ಯದೊಡನೆ, ಚಪ್ಪರ ತೋರಣ ಬಾವುಟಗಳಿಂದ ಒಪ್ಪು ... ಮುಸಾಫರಿ ಬಂಗಲೆಗೆ ಕರೆದುಕೊಂಡು ಬಂದರು. ತಾ. ೨೨ ...ಗ್ಗೆ ಸಾಹೇಬರು ಪುರ ಪ್ರವೇಶಮಾಡಿ, ಪೊಲೀಸ್ ಇಲಾಖೆಯ ... ಕೋರ್ಟಿನ ಸಂಗತಿಗಳನ್ನೂ ಆಸ್ಪತ್ರೆಯನ್ನೂ ಇನ್ಸ್ಪೆಕ್ಟ್ ...ವಿಚಾರಿಸಿ, ಬಂಗಲೆಗೆ ವಾಪಸ್ ಹೋದರು. ಅದೇ ದಿನ ಸಾ... ಐದು ಘಂಟೆಗೆ ಮುಂಚೆಯೇ ಗೌರ್ನಮೆಂಟ್ ಎ. ವಿ ...ಕ್ ಹೆಡ್ ಮಾಸ್ಟರಾದ ಮೆ॥ ವೆಂಕಣ್ಣನವರೂ, ಆ॥ ಮಾಸ್ಟರಾ...ಮ॥ ದಾಸಪ್ಪನವರೂ ತುಂಬಾ ಮುತುವರ್ಜಿವಹಿಸಿ, ತಕ್ಕ ಕ್ರ...ವನ್ನು ಮೊದಲೇ ಏರ್ಪಡಿಸಿದ್ದ ಪ್ರಕಾರ ಮೆ॥ ಗಳಾದ ಸಬ್ ...ಸ್ಟ್ರರ್ ರಾಘವೇಂದ್ರರಾಯರು, ಆಸ್ಪತ್ರೆ ಆ॥ ಅಪ್ಪೋತಿಕ್ಯ...ರು, ಸ್ಯಾನಿಟರಿ ಇನ್ಸ್ಪೆಕ್ಟರಾದ ಎಲ್. ಎಚ್. ವರದಾಚಾರ್ರ್ರು ಇ... ಪೊಲೀಸ್ ಇನ್ಸ್ಪೆಕ್ಟರಾದ ಹೈದರ್ ಹುಸೇನ್ ಸಾಹೇಬರು, ...ದಾರರಾದ ಶ್ರೀನಿವಾಸರಾಯರು, ಡಿ. ಪಿ. ಡಬ್ಲ್ಯೂ ಇಲಾಖೆ ... ರೈಟರುಗಳಾದ ರಾಮರಾಯರೂ, ರೇವಣ್ಣನವರೂ, ಮುಂಚು... ಮಸೀದಿಯ ಖಾಜಿ ನೂರುಲ್ಲಾ ಖಾನರೂ, ಹಿಂದೂಸ್ಥಾನಿ ...ಕ್ ಹೆಡ್ ಮಾಸ್ಟರಾದ ಬಾಡರ್ ಖಾನರೂ, ಮಿಷನ್ ಇಲಾಖಾ ...ಯ ಉಪದೇಶಕರು, ಮುನಿಸಿಪಾಲಿಟಿ ಮೆಂಬರಾದ ಆಗಲೆ ವೆಂಕ...ನ್ನಯ್ಯನವರು, ಇನ್ನೂ ಅನೇಕ ಮಂದಿ ಚಿಟ್ಟಿ ವರ್ತಕರೂ ಸಾ...ಕಾರರೂ, ಹಿಂದೂ ದೊಡ್ಡ ಮನುಷ್ಯರೂ, ಮಹಮದಿಯ ದೊಡ್ಡ ಮನುಷ್ಯರೂ, ಸ್ಕೂಲ್ ಬಾಲಕ ಬಾಲಕಿಯರೂ, ಕದಳಿ ಸ್ತಂಭಗಳಿಂ...ಲೂ, ಬಾವುಟಗಳಿಂದಲೂ ಅಲಂಕೃತವಾಗಿದ್ದ ಮೇಲ್ಕಂಡ ಎ. ವಿ. ...ಲಿನಲ್ಲಿ ಹಾಜರಾಗಿದ್ದರು. ಪೊ॥ ಇ॥ ಜನರಲ್ ಸಾಹೇಬರ ಸವಾ...ಯು ಸ್ಕೂಲ್ ಸಮೀಪಕ್ಕೆ ಬರುವಾಗ್ಗೆ ಬ್ಯಾಂಡ್ ವಾದ್ಯಗಳು ಮೊ...ಳಗಿದವು. ಕೂಡಲೆ ಒಳಗೆ ಸೇರಿದ್ದ ಸಭಿಕರೆಲ್ಲಾ ಎದ್ದು ನಿಂತಿರಲು, ...ಬಾಲಿಕೆಯರು ಪಿಟೀಲಿನೊಡನೆ ಗಾನ ಮಾಡುತ್ತಿರಲು, ಸಾಹೇಬರು ...ಳಗೆ ಪ್ರವೇಶಮಾಡಿ, ತಮಗೋಸ್ಕರ ಏರ್ಪಡಿಸಿದ್ದ ಉನ್ನತವಾದ ...ಸನವನ್ನು ಅಲಂಕರಿಸಿದರು. ಇವರ ಬಲಭಾಗದ ಪ್ರಥಮಸ್ಥಾ...ವನ್ನು ನಮ್ಮ ಅಮಲ್ದಾರರಾದ ಮೆ॥ ಶ್ರೀನಿವಾಸಯ್ಯಂಗಾರ್ರು ಅಲಂ...ರಿಸಿದರು ಎಡಭಾಗದ ಪ್ರಥಮಸ್ಥಾನವನ್ನು ತುಮಕೂರ್ ಡಿಸ್ಟ್ರಿ...ಕ್ಟ್ ಪೊ॥ ಸೂಪರಿಂಟೆಂಡೆಂಟರು ಅಲಂಕರಿಸಿದರು ಸಕಲರೂ ತಮ್ಮ ...ತಮ್ಮ ಸ್ಥಾನಗಳಲ್ಲಿ ಕುಳಿತ ಬಳಿಕ ಆ॥ ಮಾಸ್ಟರಾದ ದಾಸಪ್ಪನವ...ರು ಮುಂದೆ ನಿಂತು. ಇಂಗ್ಲಿಷಿನಲ್ಲಿ ಸ್ಕೂಲಿನ ರಿಪೋರ್ಟನ್ನು ಓದಿದ...ರು. ಅನಂತರ ಗರಲ್ ಸ್ಕೂಲ್ ಹೆ॥ ಮಾಸ್ಟರಾದ ನಂಜಪ್ಪನವರು ...ಕನ್ನಡದಲ್ಲಿ ತಮ್ಮ ಸ್ಕೂಲ್ ರಿಪೋರ್ಟನ್ನು ಓದಿದರು. ಈ ಎರಡು ...ರಿಪೋರ್ಟುಗಳಲ್ಲಿನ ಸಾರಾಂಶವೇನಂದರೆ—ಪೂರ್ವ ಸ್ಥಿತಿಗಿಂತಲೂ ...ಗಿನ ಸ್ಥಿತಿಯು ಸಂಖ್ಯೆಯಲ್ಲಿಯೂ, ವಿದ್ಯೆಯಲ್ಲಿಯೂ ಅಭಿವೃದ್ಧಿ ...ಯಾಗಿದೆ ಎಂಬುವದೇ. ಅನಂತರ ಕೆಲವು ಬಾಲಕರು ಮುಂದೆ ಬಂದು ...ಇಂಗ್ಲಿಷ್ ಪದ್ಯಗಳನ್ನೂ, ಸಂಸ್ಕೃತ ಪದ್ಯಗಳನ್ನೂ ಕಂಠಪಾಠವಾಗಿ ...ಹೇಳಿದರು ಇದನ್ನು ಕೇಳಿ ಸಾಹೇಬರೂ ಸಭಿಕರೂ ತಮ್ಮ ಸಂತೋ...ಷವನ್ನು ಕರತಾಡನಗಳ ಮೂಲಕ ತೋರಿಸಿದರು ಅನಂತರ ಸ್ಕೂಲ್ ...ಬಾಲಕ ಬಾಲಕಿಯರಿಗೆಲ್ಲಾ ಯೋಗ್ಯತಾನುಸಾರ ಬಹುಮಾನಗಳನ್ನು ...ಆ॥ ಜನರಲ್ ಸಾಹೇಬರು ತಮ್ಮ ಸ್ವಹಸ್ತದಿಂದ ದಯಪಾಲಿಸಿದರು ...ಬಳಿಕ ಹೂವಿನ ಹಾರ ತುರಾಯಿಗಳನ್ನು ಸ್ವೀಕರಿಸಿ ಎದ್ದು ನಿಂತು, ...ಸ್ಕೂಲ್ ಕಟ್ಟಡದ ವಿಷಯವೂ, ವಿದ್ಯಾಭಿವೃದ್ಧಿಯ ವಿಷಯವೂ ಕಾರಿ...ಕು ಮಾತನಾಡಿ, ಸ್ಕೂಲ್ ಮಾಸ್ಟರುಗಳು ತಮ್ಮನ್ನು ಆಗ್ರಾಸನಾಸೀನ...ರನ್ನಾಗಿ ಮಾಡಿದ್ದಕ್ಕೂ ಬಾಲಕಿಯರ ಗಾನಕ್ಕೂ ಸಂತೋಷಪಡುತ್ತೇ...ನೆಂದು ಅಲ್ಲದೆ ಚಪ್ಪರ ತೋರಣ ಮುಂತಾದ ಸಂತೋಷ ಸೂಚ...ಕ ಕಾರ್ಯಗಳಿಂದ ಸರ್ಕಾರಿ ಅಧಿಕಾರಿಗಳು ಸನ್ಮಾನಿಸಿದ್ದನ್ನೂ ಅವರ ...ಸಂತೋಷ ಮುತುವರ್ಜಿಗಳನ್ನೂ ಶ್ಲಾಘಿಸಿದರು ಆಗ್ಗೆ ಸಭಿಕರೆಲ್ಲಾ ...ತಮ್ಮ ಸಂತೋಷವನ್ನು ಕೈಚಪ್ಪಾಳೆಗಳಿಂದ ವ್ಯಕ್ತಪಡಿಸಿದರು ಬಾ...ಲಿಕೆಯರ ಮಂಗಳ ಗಾನವು ಮುಗಿದೊಡನೆ ಸಕಲರೂ ಎದ್ದು ನಿಂತು, ...ಶ್ರೀಮತ್ ಯುವರಾಜ ಶ್ರೀಮನ್ಮಹಾರಾಜರವರ ಹೆಸರುಗಳನ್ನು ...ಮೂರುಸಾರಿ ಕೇಳಿ, ಜಯಭಾಗ್ಯಗಳನ್ನು ಬಯಸಿ, ಹರ್ಷಧ್ವನಿ ಮಾಡಿ...ದರು ಇಲ್ಲಿಂದ ಹೊರಗೆ ಬಂದು ಬಾಲಕರ ನಾನಾವಿಧ ಆಟಗಳ ...ಜೊತೆಗೆ ಪಂಚಮ ಸ್ಕೂಲ್ ಬಾಲಕರು ಕತ್ತೆಗಳ ಮೇಲೆ ಹತ್ತಿ ಓಡಿಸಿದ ...ಓಟವನ್ನು ನೋಡಿ, ಗೆದ್ದವರಿಗೆ ಸಾಹೇಬರು ಸ್ವಹಸ್ತದಿಂದ ಇನಾಮು...ಗಳನ್ನು ಕೊಟ್ಟರು. ಬಳಿಕ ಟೂರ್ನಮೆಂಟುಗಳನ್ನು ನೋಡಿ ಸಂತೋ...ಷಚಿತ್ತರಾಗಿ ಬಂಗಲೆಗೆ ಬ್ಯಾಂಡ್ ವಾದ್ಯ ಸಮೇತ ಹೋಗಿ ತಲಪಿದರು ...ಮಾರನೆ ದಿನ ಪೊಲೀಸ್ ಇಲಾಖೆಯವರ ಜೀವನದ ಕೊರತೆಯ ...ವಿಜ್ಞಾಪನೆಯನ್ನು ಲಾಲಿಸಿ, ಗೌರ್ನಮೆಂಟಿಗೆ ಅವರ ಕೊರತೆಗಳನ್ನು ...ತಿಳಿಸುವದಾಗಿ ಉತ್ತರವನ್ನಿತ್ತು, ತುಮಕೂರು ಮಾರ್ಗವಾಗಿ ಮುಂದ...ಕ್ಕೆ ಪ್ರಯಾಣಮಾಡಿದರು

ಇಂಡಿಯಾ ದೇಶದ ವೃತ್ತಾಂತಗಳು.

ಉತ್ತರದೇಶಕ್ಕೆ ಸೇರಿದ ವಿಾರಟ್ಟಿನ ಬಳಿ ಹಂಚ್ಲೆ ಎಂಬ ಊರಿ...ಲ್ಲಿ ಕಬ್ಬಿನ ಹಾಲು ಕಾಯಿಸಿ ಸಕ್ಕರೆ ಮಾಡತಕ್ಕ ವಿಧಾನವನ್ನು ಕಲಿ...ಸುವದಕ್ಕೆ ಒಂದು ಪಾಠಶಾಲೆ ಏರ್ಪಡಾಗಿ ನಡೆಯುತ್ತಿದೆ. ಅಲ್ಲಿ ಈ ...ದೇಶದ ಎಲ್ಲಾ ಭಾಗಗಳಿಂದಲೂ ೩೯ ಜನರು ಹೋಗಿ ವಿದ್ಯಾರ್ಥಿ...ಗಳಾಗಿ ಸೇರಿ, ಆ ಕ್ರಮಗಳನ್ನು ಕಲಿಯುತ್ತಿರುವರು. ಬರ್ಮಾ ಅಧಿ...ಪತ್ಯದಿಂದಲೂ ಒಬ್ಬನು ಅಲ್ಲಿಗೆ ವಿದ್ಯಾರ್ಥಿಯಾಗಿ ಬಂದಿರುವಂತೆ ...ಪ್ರಕಟವಾಗಿದೆ

ಈಗ ದಕ್ಷಿಣ ದೇಶದಲ್ಲಿ ರೈಲ್ ರಸ್ತೆಯು ರಾಮೇಶ್ವರದ ಬಳಿ ಇರುವ ಮಂಡಪಂ ಎಂಬ ಸ್ಥಳದ ತನಕ ಹೋಗಿಬರುತ್ತಿದೆ. ಈಗ ಈ ಮಂಡಪಂ ಎಂಬ ಸ್ಥಳದಿಂದ ರೈಲ್ ರಸ್ತೆಯನ್ನು ಬಡಾವಣೆ ಮಾಡಿ ರಾಮೇಶ್ವರ ದ್ವೀಪದ ಆಚೆ ಮೂಲೆಯಾದ ಧನುಸ್ಕೋಟಿ ಎಂಬ ಸ್ಥಳದ ತನಕ ಹಾಕಬೇಕೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ.

❦❦❦

ಕಲ್ಕತ್ತಾ ಹೈ ಕೋರ್ಟಿನಲ್ಲಿ ರಜಾ ದಿನಗಳನ್ನು ಮೊದಲೇ ಗುಣಿಸಿ ಗೊತ್ತುಮಾಡಿ ತಿಳಿಸುವದಕ್ಕಾಗಿಯೇ ಒಬ್ಬ ಹಿಂದೂ ಜೋಯಿಸನು ನೇಮಕವಾಗಿದಾನೆ. ಇದು ವಂಶಪಾರಂಪರ್ಯವಾಗಿ ಬಂದಿರುವ ಉದ್ಯೋಗವಾಗಿದೆ. ಆತನಿಗೆ ಹೈ ಕೋರ್ಟಿನಿಂದ ಆ ಕೆಲಸಕ್ಕಾಗಿಯೇ ತಲಬು ಸಲ್ಲುತ್ತದೆ. ಈ ಜೋಯಿಸನು ನದ್ದಿಯಾ (ನವದ್ವೀಪ) ಎಂಬ ಭಾಗದಲ್ಲಿ ವಾಸಮಾಡತಕ್ಕ ಬ್ರಾಹ್ಮಣನಾಗಿರುತ್ತಾನೆ.

❦❦❦

ಕಲ್ಕತ್ತಾ ಪಟ್ಟಣದ ಫೋರ್ಟ್ ವಿಲಿಯಂ ಎಂಬ ಕೋಟೆಯೊಳಗೆ ವಿದ್ಯುಚ್ಛಕ್ತಿಯ ದೀಪವನ್ನು ಇಡುವುದಕ್ಕೆ ಕಂಟ್ರಾಕ್ಟು ಪಡೆಸಿಕೊಂಡಿದ್ದ ಮೆ॥ ಮುಕುಂದಲಾಲ್ ಮಲಿಕ್ ಎಂಬಾತನು ಗವರ್ನಮೆಂಟಿನಿಂದ ತನಗೆ ೧೩,೫೦೦ ಚಿಲ್ಲರೆ ರೂಪಾಯಿ ಬಾಕಿ ಬರಬೇಕಾಗಿದೆ ಎಂದು ಹೇಳಿ ಅಲ್ಲಿನ ಹೈ ಕೋರ್ಟಿನಲ್ಲಿ ದಾವಾ ತಂದಿದಾನೆ. ಈ ಮೊಕದ್ದಮೆಯನ್ನು ೯ ತಿಂಗಳಿಗೆ ಹಿಯರಿಂಗು ಹಾಕಿದಾರೆ.

❦❦❦

ವಿಲಾಯತಿಯಲ್ಲಿರುವ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮಂತ್ರಾಲೋಚನಾ ಸಭೆಗೆ ಹೊಸದಾಗಿ ಹಿಂದೂಸ್ಥಾನದ ಇಬ್ಬರು ಮೆಂಬರುಗಳು ನೇಮಕವಾದರಷ್ಟೆ. ಈ ಪೈಕಿ ಮೆ॥ ಜೆ ಗುಪ್ತರವರು ಪತ್ನಿ ಸಹಿತ ಕಲ್ಕತ್ತೆಯಿಂದ ಹೊರಟು ಬೊಂಬಾಯಿಗೆ ಬಂದು ಅಲ್ಲಿ ಗವರ್ನರವರ ಆತಿಥ್ಯವನ್ನು ಸ್ವೀಕರಿಸಿ, ಮ್ಯಾಸಿಡೋನಿಯಾ ಎಂಬ ಹಡಗು ಹತ್ತಿ ಸೀಮೆಗೆ ಪ್ರಯಾಣಮಾಡಿದರು.

❦❦❦

ಕಲ್ಕತ್ತೆಯಲ್ಲಿರುವ ಡಫ್ರಿನ್ ಆಸ್ಪತ್ರೆಯಲ್ಲಿ ಜನಾನಾ ಸ್ತ್ರೀರೋಗಿಗಳು ಇದ್ದುಕೊಂಡು ಚಿಕಿತ್ಸೆಹೊಂದುವದಕ್ಕಾಗಿ ಮೂರು ವಾರ್ಡುಗಳನ್ನು ವೈಸ್‌ರಾಯಿಯವರ ಪತ್ನೀರವರು ಪ್ರತಿಷ್ಠೆಮಾಡಿದರು. ಈ ಮೂರು ಕಟ್ಟಡಗಳಿಗೂ ಅಲ್ಲಿನ ಬಂಗಾಳಿ ಸ್ತ್ರೀಯರೂ ದರ್ಭಾ ಮತ್ತು ಬರ್ದ್ವಾನ್ ಮಹಾರಾಣೀರುಗಳೂ ಒಂದು ಲಕ್ಷ ರೂಪಾಯಿ ಚಂದಾ ಕೊಟ್ಟಿರುತ್ತಾರೆ.

❦❦❦

ಮುಂದಿನ ತಿಂಗಳಲ್ಲಿ ಕೆಲವು ಮಹಾರಾಜರುಗಳೂ ಅವರ ಪ್ರತಿನಿಧಿಗಳೂ ಅಂದರೆ ದರ್ಭಾಂಗ, ಕಪೂರ್ಥಲ, ಪಟಿಯಾಲಾ, ಕಾಶ್ಮೀರ, ಜಯಪುರ, ಜೋಧಪುರವೆಂಬೀ ಸಂಸ್ಥಾನಗಳವರು ವೈಸ್‌ರಾಯಿ ಪ್ರಭುಗಳನ್ನು ಹೋಗಿ ಕಂಡು, ಭಾರತಧರ್ಮಮಹಾಮಂಡಲ ಸಭೆಯ ಪರವಾಗಿ ಏನೋ ವಿಜ್ಞಾಪನೆಮಾಡಿಕೊಳ್ಳುವವರಾಗಿದಾರೆಂತಲೂ, ಬಹುಶಃ ಅದು ಹಿಂದೂ ಸತ್ರ ದೇವಸ್ಥಾನಾದಿ ಧರ್ಮಗಳ ಸಂರಕ್ಷಣೆಯ ವಿಚಾರವಾಗಿರಬಹುದೆಂದೂ ಪ್ರಕಟವಾಗಿದೆ.

❦❦❦

ಬಂಗಾಳಾ ಲೆಫ್ಟಿನೆಂಟ್ ಗವರ್ನರವರನ್ನು ರೈಲಿನಲ್ಲಿ ಹೋಗುವಾಗ್ಗೆ ಮಿಡ್ನಪುರದಲ್ಲಿ ರೈಲುಕೆಡವಿ ಅವರಿಗೆ ಕಂಟಕವನ್ನುಂಟುಮಾಡಬೇಕೆಂದು ಪ್ರಯತ್ನ ಪಟ್ಟರೆಂದು ಪೊಲೀಸಿನವರು ಏಳು ಜನರನ್ನು ಹಿಡಿದು ಅವರ ಮೇಲೆ ಮೊಕದ್ದಮೆ ತಂದಿರುತ್ತಾರೆ. ಈ ಪೈಕಿ ಮೂರು ಮಂದಿ ಆ ರೈಲ್ ರಸ್ತೆಯಲ್ಲಿ ಕೂಲಿಮಾಡುತ್ತಿದ್ದವರು. ಇವರು ಕಂಬಿಗಳ ಮೇಲೆ ಮದ್ದಿನ ಗುಂಡನ್ನು ಇಟ್ಟಿದ್ದೆವೆಂದು ಒಪ್ಪಿಕೊಂಡಿದಾರೆ ಈ ಮೊಕದ್ದಮೆಯನ್ನು ಮಿಡ್ನಪುರದ ಮ್ಯಾಜಿಸ್ಟ್ರೇಟರು ತನಿಖೆಮಾಡುತ್ತಿರುವರು

❦❦❦

ಹಿಂದೂಸ್ಥಾನದಲ್ಲಿ ಕಳೆದ ವಾರ ಪ್ಲೇಗ್ ಮರಣಸಂಖ್ಯೆಯು ಹೆಚ್ಚಿತು ಎಲ್ಲಾ ಕಡೆಗಳಲ್ಲೂ ಒಟ್ಟು ೬,೫೩೧ ಜನರು ಆ ಉಪದ್ರದಲ್ಲಿ ಮೃತಪಟ್ಟರು. ಈ ಪೈಕಿ ಬೊಂಬಾಯಿನಲ್ಲಿ ೯೫೫, ಸಂಯುಕ್ತ ಆಧಿಪತ್ಯಗಳಲ್ಲಿ ೯೭೧, ಪಂಜಾಬ್ ೩೦೦, ಬಂಗಾಳಾ ೫೮೮, ರಾಜಪುಟಾನ ೬೫೮, ಬರ್ಮಾ ೩೫೬, ಮೈಸೂರು ಸಂಸ್ಥಾನ ೭೯೩, ಮಧ್ಯ ಪ್ರಾಂತ್ಯಗಳು ಮತ್ತು ಬೀರಾರ್ ೧೩೭, ಮದರಾಸ್ ಆಧಿಪತ್ಯ ೩೪, ಮಧ್ಯ ಇಂಡಿಯಾ ೭೭, ಹೈದರಾಬಾದ್ ಸಂಸ್ಥಾನ ೧೫, ಕಾಶ್ಮೀರ ೧, ಈ ರೀತಿ ಮರಣಗಳಾಗಿವೆ.

❦❦❦

ಪಂಜಾಬಿನಿಂದ ಸಂಯುಕ್ತ ಆಧಿಪತ್ಯಗಳಿಗೆ ಧಾನ್ಯಾದಿಗಳನ್ನು ವಿಶೇಷವಾಗಿ ಸಾಗಿಸುತ್ತಾ ಬಂದಿದಾರೆ ಧಾರಣೆವಾಸಿಗಳು ಎಲ್ಲಾ ಕಡೆಗಳಲ್ಲೂ ಇನ್ನೂ ಹೆಚ್ಚಾಗಿಯೇ ಇರುತ್ತವೆ. ಕ್ಷಾಮಪೀಡಿತರ ಸಂಖ್ಯೆಯು ವಾರವಾರಕ್ಕೆ ಹೆಚ್ಚುತ್ತಿರುವುದು ಈಗ ಒಟ್ಟು ಹತ್ತು ಲಕ್ಷ ಪ್ರಜೆಗಳಿಗಿಂತಲೂ ಹೆಚ್ಚಾಗಿಯೇ ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿರುವರು. ಸಂಯುಕ್ತ ಆಧಿಪತ್ಯಗಳಲ್ಲಿ ೯ ಲಕ್ಷ ಜನರು, ಮಧ್ಯ ಇಂಡಿಯಾದಲ್ಲಿ ೧ ಲಕ್ಷ ಜನರು, ಬಂಗಾಳಾದಲ್ಲಿ ೧೬,೦೦೦ ಜನರು ಮಧ್ಯಪ್ರಾಂತ್ಯಗಳಲ್ಲಿ ೩,೦೦೦ ಜನರು, ಬೊಂಬಾಯಿ ಆಧಿಪತ್ಯ ೩,೦೦೦, ಪಂಜಾಬ್ ೧,೮೦೦, ಈ ರೀತಿ ಜನರು ಕ್ಷಾಮಪೀಡಿತರಾಗಿದಾರೆ.

❦❦❦

ಭೂಪಾಲ್ ಸಂಸ್ಥಾನದ ಯುವರಾಜರಾದ ನವಾಬ್ ಮಹಮದ್ ನಸರುಲ್ಲಾಖಾನ್ ಬಹದೂರ್‌ಯವರು ಜಂಗಲಿನಲ್ಲಿ ಷಿಕಾರಿಮಾಡುತ್ತಿದ್ದಾಗ ಏಕ ಕಾಲದಲ್ಲಿ ನಾಲ್ಕು ಹುಲಿಗಳು ಕಣ್ಣಿಗೆ ಬಿದ್ದವು ಅವರು ಐದೇ ನಿಮಿಷಗಳಲ್ಲಿ ಆ ನಾಲ್ಕನ್ನೂ ಗುಂಡಿನಿಂದ ಹೊಡೆದು ಮಲಗಿಸಿದರು ಇನ್ನೊಂದು ಜಂಗಲಿನಲ್ಲಿ ಷಿಕಾರಿಗೆ ಹೋಗಿರುವಾಗ್ಗೆ ಒಂದೇ ರಾತ್ರಿ ಐದು ಹುಲಿಗಳನ್ನು ಕೊಂದಿರುತ್ತಾರೆ. ಎರಡು ದಿನಗಳಲ್ಲಿ ಒಂಬತ್ತು ಹುಲಿಗಳನ್ನು ಸಂಹಾರ ಮಾಡಿದ್ದು ಅಪೂರ್ವವೆಂದು ಹೇಳಬಹುದಾಗಿದೆ

ಈ ವರುಷದ ಏಪ್ರೀಲ್ ೧ ರಲಾಗಾಯತು ಹಿಂದುಸ್ಥಾನದಲ್ಲಿ ತಂತೀವರ್ತಮಾನಗಳನ್ನು ಕಳುಹಿಸಬೇಕಾದವರು ವರ್ತಮಾನವನ್ನು ಫಾರಂವಿನಲ್ಲಿ ಬರೆದು ಅದಕ್ಕೆ ಅಂಚೆ ಸ್ಟಾಂಪುಗಳನ್ನೇ ಹಚ್ಚಿ, ಟೆಲಿಗ್ರಾಫ್ ಆಫೀಸಿಗೆ ಕಳುಹಿಸಬಹುದೆಂತಲೂ, ಹಣ ಕಟ್ಟಬೇಕಾದ ಅಗತ್ಯವಿಲ್ಲವೆಂತಲೂ, ಆದರೆ ಸ್ಟಾಂಪು ಹಚ್ಚಿದ ಫಾರಂವನ್ನು ಟೆಲಿಗ್ರಾಫ್ ಆಫೀಸಿನಲ್ಲಿ ಕೊಡುವಾಗ ಅದರ ಸ್ಟಾಂಪುಗಳ ಮೇಲೆ ಆಫೀಸಿನವರು ಮೊಹರು ಒತ್ತಿದ್ದನ್ನು ಕಣ್ಣಾರ ನೋಡಿಕೊಂಡು ಹೋಗುವುದು ಉತ್ತಮವೆಂತಲೂ ಗವರ್ನಮೆಂಟಿನವರು ರೂಲ್ಸನ್ನು ಬದಲಾವಣೆ ಮಾಡಿ ಪ್ರಕಟಿಸಿರುತ್ತಾರೆ. ಇನ್ನೊಂದು ಬದಲಾವಣೆ ಏನಂದರೆ—ತಂತೀವರ್ತಮಾನವನ್ನು ದಮಾನಸು ತಂದು ವಿಳಾಸದಾರರಿಗೆ ಬಟವಡೆಮಾಡುವಾಗ್ಗೆ ವಿಳಾಸದಾರರು ಪ್ರತ್ಯೇಕವಾದ ಚೀಟಿಯಲ್ಲಿ ಈಗಿನಂತೆ ರುಜು ಹಾಕಿಕೊಡಬೇಕಾದ ಅಗತ್ಯವಿಲ್ಲ ಆ ದಮಾನಸ ಬಳಿ ಇರುವ ಒಂದು ರಸೀತಿ ಪುಸ್ತಕದೊಳಗೆ ಒಂದು ಕಡೆ ವಿಳಾಸದಾರರು ರುಜು ಹಾಕಿಕೊಟ್ಟರೆ ಸಾಕಾಗಿದೆ ಎಂಬುದೇ

ಊರಜನರ ಹೇಳಿಕೆಮೇಲಿನ ನಂಬಿಕೆ.

93 26

ಕಲ್ಕತ್ತೆಯ ಇನ್ನೊಬ್ಬ ಡಾಕ್ಟರರು ಕೊಟ್ಟ ಅಭಿಪ್ರಾಯವನ್ನು ಇದರಡಿ ತೋರಿಸಿರುತ್ತೇವೆ. ಇದರಿಂದ ಈ ಪತ್ರಿಕೆಯಲ್ಲಿ ಸದಾಗವಾಗಿ ಪ್ರಚುರವಾಗುವ ಅನೇಕ ಸ್ಥಳೀಯ ದೃಷ್ಟಾಂತಗಳಿಗೆ ಇನ್ನೂ ಒಂದು ಸೇರಿದಂತಾಗುವದು.

ಇಂಥಾ ಸ್ಥಳೀಯ ಸಾಕ್ಷ್ಯದ ಯಥಾರ್ಥತ್ವವನ್ನು ನಾವು ಪರೀಕ್ಷಿಸಬಹುದಾದ್ದರಿಂದ ಸಾವಿರಾರು ಮೈಲು ದೂರದಲ್ಲಿರುವಂಥವರಿಂದ ಕೊಡಲ್ಪಡುವ ಸಾಕ್ಷ್ಯಕ್ಕಿಂತಲೂ ಇದು ಹೆಚ್ಚು ಪ್ರಯೋಜನಕರವಾಗಿರುವದು. ಕಲ್ಕತ್ತೆಯ ಜನರಿಗೆ ಕಲ್ಕತ್ತೆಯ ಜನರ ಮಾತೇ ಶ್ರೇಷ್ಠವು. ಹಾರಿಸನ್ ರೋಡ್ ನಂ ೩೬ ನೇ ಡಿಸ್‌ಪೆನ್ಸರಿ ಡಾಕ್ಟರ ಎಸ್. ಸಿ. ಸೇನ್, ಎಲ್. ಎಂ. ಎಸ್. ಇವರ ಹೇಳಿಕೆಗೆ ವಿಾಗಿಲಾದ್ದು ಬೇರೆ ಇರಲಾರದು. ಇವರು ಗವರ್ನಮೆಂಟ್-ಪ-ರೈವೆಟ್ ಆಸ್ಪತ್ರೆಗಳಲ್ಲಿ ಅನೇಕ ವರುಷ ಇದ್ದು ಅನುಭವವುಳ್ಳವರು. ಪ್ರಕೃತ ಕಲ್ಕತ್ತೆಯ ಟ್ರಾಂವೇ ಕಂಪನಿಯ ವೈದ್ಯಚಿಕಿತ್ಸಕರಾಗಿರುತ್ತಾರೆ ಇವರು ಹೇಳುವದೇನಂದರೆ—ಡೋನ್ಸ್‌ರ (ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಬೆನ್ನುನೋವಿನ—ಮೂತ್ರಕೋಶದ ಔಷಧ ಗುಳಿಗೆಗಳು ಮೂತ್ರಕೋಶ ಸಂಬಂಧವಾದ ಬಾಧೆಗಳಲ್ಲಿ ಕೊಟ್ಟು ನೋಡಿದ್ದೇನೆ. ಅಂಥಾ ಸಂಗತಿಗಳಲ್ಲೀ ತಕ್ಷಣವೇ ಉಪಶಮನ ಸಿಕ್ಕುವ ಬಗ್ಗೆ ಇವು ಅತ್ಯಂತ ಉಪಯೋಗಕರವಾಗಿವೆ.

ಬೆನ್ನು ನೋವು ಮೂತ್ರನಾಡಿಗಳು ದುರ್ಬಲವಾಗಿಯೂ ಅನಾರೋಗ್ಯ ಸ್ಥಿತಿಯಲ್ಲಿರುತ್ತವೆಂಬದಕ್ಕೆ ಒಂದು ಲಕ್ಷಣವಾಗಿರವದು. ಆ ಸಮಯದಲ್ಲಿ ಅವುಗಳಿಂದ ನಡಿಸಕೊಡುವದಕ್ಕಿಂತ ಹೆಚ್ಚು ಕೆಲಸ ತಾವು ಅವುಗಳ ಮೇಲೆ ಹೊರಿಸಿದರೆ ತಲೆನೋವು, ಆಯಾಸ, ಸಹನ ಇಲ್ಲದಿರುವಿಕೆ, ಮಂಗೋಪ, ಅಂಜಿಕೆ ಮುಂತಾದ್ದು ಉಂಟಾಗುವುದು. ಇವನ್ನು ಅಲಕ್ಷಿಸಿದರೆ ಜಲೋಧರವ್ಯಾಧಿ, ವಾತನೋವು, ಮೂತ್ರಬಾಧೆಗಳು ಮತ್ತು ಪ್ರಾಣಹಾನಿಕರವಾದ ಇತರ ಜಾಡ್ಯಗಳು ಸಂಭವಿಸುವವು. ಈ ಮಾತ್ರೆಗಳು ಮೂತ್ರಕೋಶ, ಮುಂತಾದ್ದಕ್ಕೆ ಸಂಬಂಧಪಡುವ ವಿಶಿಷ್ಟಬಾಧೆಗಳಿಗೆ ಮುದುಕರಿಗೂ, ಯೌವನಸ್ಥರಿಗೂ ನಿರ್ದಿಷ್ಟವಾದ ಔಷಧವಾಗಿರುವದು. ಇದನ್ನು ಸೇವಿಸಿದ್ದರಿಂದ ಮುಂದೆ ಯಾವ ಬಾಧಕವೂ ಇರಲಾರದು

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ. ಶೀಸೆ ಒಂದಕ್ಕೆ ರೂ ೨ ಅಥವಾ ೬ ಶೀಸೆಗಳಿಗೆ ರೂ ೧೦—೮—೦ ಅಥವಾ ಮುಂಬಾಯಿಯಲ್ಲಿಯ ಡೋನ್ಸರ ಔಷಧಗಳ ಕೋಠಿಯಿಂದ ಶೀದಾ ತರಿಸಿಕೊಳ್ಳಬಹುದು. ಪಿ. ಓ. ಬಾಕ್ಸ್. ನಂ. ೭೬, ಮುಂಬಾಯಿ.

ಈಗಲೇ ಶೀಮೆಯಿಂದ ಬಂದಿದೆ.

117-18

೫,೦೦೦ ಹಾಸನ್ ಟೋಪಿ ಹೊಲಿಯುವ ಸುಪೀರಿಯರ್ ಉಲನ್ ದಾರಗಳು. ಬಿಳಿಪು ಕೆಂಪು—ಮಾತ್ರ ಇದೆ—ಚಾರಿ, ಕನ್ನಿ ಕ್ರಯ.

೧ ಟೋಪಿಯಾಗುವ ಉಲನ್ ದಾರಕ್ಕೆ	೦—೮—೦
೧೦ ಟೋಪಿಯಾಗುವ ಬಂಡಲ್‌ಗೆ ೧ ಕ್ಕೆ	೩—೮—೦
ಕೊಕ್ಕೆ ಸೂಜಿ ೧ ಕ್ಕೆ	೦—೧—೬
೩೦ ಇಂಚಿನ ಬನಿಯಾನ್ ೧ ಕ್ಕೆ	೦—೯—೦

ಎರಡು ಕಡೆಯಲ್ಲಿ ಬರೆಯುವ ಪೋಸ್ಟ್ ಕಾರ್ಡ್ ೧೦೦ ಕ್ಕೆ ೪ ಆ.

ಒಂದಾಣೆ ಸ್ಟಾಂಪು ಕಳುಹಿಸಿ ನೇತ್ರಾನಂದಕರವಾದ ೧೯೦೮ ನೆ ಇಸವಿಯ ಕ್ಯಾಲೆಂಡರ್ ಪಡೆಯಿರಿ. ವಿಳಾಸ:—

ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ಕನ್ನಡದಲ್ಲಿ ಇದುವರೆಗೂ ಇಂಥಾ ಪುಸ್ತಕವು ಮುದ್ರಿಸಿಲ್ಲವು!!!

ರಾಬಿನ್‌ಸನ್ ಕ್ರೂಸೋ

ಇವನ ಸಾಹಸ ಕಾರ್ಯಗಳು!!!

136-11

ಕ್ರೌನ್ ಅಷ್ಟಪತ್ರ, ಪುಟಗಳು ೮೬, ಚಿತ್ರಗಳು ೫೩.

ಇಂಗ್ಲೆಂಡಿನ ಪ್ರಸಿದ್ಧ ಲೇಖಕರಾದ ಮೆ॥ ಸ್ಟೆಡ್‌ರವರು ಈ ಪುಸ್ತಕಕ್ಕೆ ಬೇಕಾದ ಚಿತ್ರಗಳನ್ನು ಕಳುಹಿಸಿ ಕೊಟ್ಟಿರುವುದಲ್ಲದೆ ಈ ಪುಸ್ತಕದ ವಿಷಯವಾಗಿ ಹೃದಿನಲ್ಲಿರುವ ವೃದಿಯೊಬ್ಬನು "ನಾನು ಯಾವಾಗಲೂ 'ರಾಬಿನ್‌ಸನ್ ಕ್ರೂಸೋ' ಕಥೆಯನ್ನು ಓದುವುದರಿಂದ ಬಹಳ ಸುಖಿಯಾಗುವೆನು" ಎಂದು ಹೇಳಿದ್ದಾಗಿ ತಿಳಿಸುವರು.

ಕ್ರಯ ನಾಲ್ಕು ಆಣೆ. ವಿ. ಪಿ. ಯಿಂದ ೬ ಆಣೆ.

ವಿಳಾಸ:— ದಿ ಜನರಲ್ ಏಜೆನ್ಸಿ, ಮೈಸೂರು.

ನರಗಳ ಅಪಾರವಾದ ದುರ್ಬಲತೆಯನ್ನು ಪೆರೂನಾವು ಅದ್ಭುತವಾದ ರೀತಿಯಲ್ಲಿ ನಿವಾರಣೆ ಮಾಡಿರುತ್ತದೆ.

ಶರೀರಗತವಾದ ಶೈತ್ಯನಿವಾರಣೆಗೆ ಪೆರೂನಾ ಅವಶ್ಯವಾಗಿದೆ.

ನರಗಳ ದುರ್ಬಲವನ್ನು ನಾಶಮಾಡುವುದರಲ್ಲಿ ಅದು ವಿಶೇಷ ಪ್ರಖ್ಯಾತವಾಗಿದೆ!

ಹೆಚ್ಚಾದ ಕಷ್ಟಕೆಲಸದಿಂದಲೂ, ಮನಸ್ಸನ್ನು ವಿಶೇಷವಾಗಿ ಕಷ್ಟಪಡಿಸುವುದರಿಂದಲೂ, ಬೇಸಿಗೆಯ ಅಪಾರವಾದ ಉಷ್ಣದ ದೆಸೆಯಿಂದಲೂ ಶರೀರದ ಧರ್ಮವು ನಿಶ್ಶಕ್ತಿಯಾಗಿದ್ದರೆ ಪೆರೂನಾವು ಅದನ್ನು ಸಂಪೂರ್ಣವಾಗಿ ನಿವಾರಣೆ ಮಾಡಿ, ಶಕ್ತಿಯನ್ನು ಕೊಟ್ಟು, ಪುಷ್ಟಿಯನ್ನುಂಟುಮಾಡುತ್ತದೆ.

ಬೇಸಿಗೆಯು ದೀರ್ಘಕಾಲವಿರುವಂಥಾ ದೇಶಗಳಲ್ಲಿ ಜನರು ಧಗೆಯ ತೀಕ್ಷ್ಣವನ್ನು ಸುಲಭವಾಗಿ ಸಹಿಸಿಕೊಳ್ಳುವವರಾಗಿದ್ದಾರೆಂದು ಕೇಳಬಹುದು. ಆದರೆ ಅಪಾರವಾದ ಧಗೆಯೂ ಸಹಿಸಲಶಕ್ಯವಾದ ಚಳಿಯೂ ಒಂದರ ಹಿಂದೊಂದು ಥಟ್ಟನೆ ಪ್ರಾಪ್ತವಾಗತಕ್ಕಂಥಾ ದೇಶಗಳಲ್ಲಿ ಅನೇಕರ ಶರೀರಧರ್ಮವು ಆ ಉಷ್ಣವನ್ನು ಸಹಿಸಿಕೊಳ್ಳುವ ಶಕ್ತಿಯುಳ್ಳದ್ದಾಗಿರುವುದಿಲ್ಲ. ಇದರಿಂದಲೇ ಬಹಳ ಕಾಯಿಲೆಗಳು ಉಂಟಾಗುತ್ತವೆ.

ಹೊಟ್ಟೆಗೆ ಶೀತ ಹಿಡಿಯುವುದು ಅಜೀರ್ಣವಾಗಿರುವುದು, ಆಹಾರ ಅರಗದೆ ಇರುವುದು ಇವೆಲ್ಲಾ ಉಷ್ಣಕಾಲದಲ್ಲಿ ಪ್ರಾಪ್ತವಾಗುವ ಅಲ್ಪ ರೋಗಗಳೆಂದು ತಿಳಿಯಬಾರದು.

ಆಹಾರ ಅರಗುವುದರಲ್ಲಿ ವ್ಯತ್ಯಾಸವಾದರೆ ಆಹಾರದ ಮುಖ್ಯ ಭಾಗಗಳನ್ನು ಶರೀರವು ಹೀರಿಕೊಳ್ಳುವುದಿಲ್ಲ. ಇದರಿಂದ ಶರೀರಕ್ಕೆ ಪುಷ್ಟಿ ಕಡಮೆಯಾಗುವುದು.

ಅಜೀರ್ಣದಿಂದ ದುರ್ಬಲವು.

ದುರ್ಬಲ, ಕೋಪಸ್ವಭಾವ, ಜುಗುಪ್ಸೆ, ಬುದ್ಧಿ ಮಾಂದ್ಯ, ಮಾಂಸಖಂಡಗಳ ಬಲಹೀನತೆ, ನರಗಳ ದುರ್ಬಲ, ಇವೆಲ್ಲಾ ಕ್ರಮಕ್ರಮವಾಗಿ ಪ್ರಾಪ್ತವಾಗುವವು. ಇಂಥಾ ಸಮಯದಲ್ಲಿ ಜೀರ್ಣಶಕ್ತಿಯನ್ನು ಪಟುವಾಗಿ ಮಾಡಿಕೊಳ್ಳುವುದಕ್ಕೆ ಪರಿಹಾರವನ್ನು ನೋಡಿ ಮಾಡಿಕೊಳ್ಳಬೇಕು. ಪೆರೂನಾ ಸೇವನೆಯು ಜೀರ್ಣಕೋಶಗಳನ್ನು ಕ್ರಮಪಡಿಸುತ್ತದೆಂದು ಪ್ರಖ್ಯಾತಿ ಪಡೆದಿರುತ್ತದೆ. ಇದಕ್ಕೆ ಅಂಥಾ ಶಕ್ತಿಯುಂಟೆಂದು ಸಾವಿರಾರು ಸಂದರ್ಭಗಳಲ್ಲಿ ದೃಷ್ಟಾಂತಕ್ಕೆ ಬಂದಿದೆ. ವಾಸಿಯಾಗುವುದೇ ಇಲ್ಲವೆಂಬ ನಿರಾಶೆಯುಳ್ಳವರಾಗಿದ್ದಂಥಾ ಅನೇಕರಿಗೆ ಪೆರೂನಾವು ಅದ್ಭುತವಾಗಿ ಆರೋಗ್ಯವನ್ನು ಕೊಟ್ಟಿದೆ.

ಅದರ ಮಹಿಮಾದಲ್ಲಿ ಈ ಗುಣವಿರುವುದೇನೂ ಆಶ್ಚರ್ಯವಲ್ಲ. ಶರೀರದೊಳಗಿರತಕ್ಕ ಅಂಗಗಳ ನಿತ್ಯಲೂ ಅವರಿಸಿಕೊಂಡಿರುವಂಥಾ ನರಗಳ ಮೂಲಸ್ಥಾನಗಳನ್ನು ಶಕ್ತಿಪಡಿಸುವುದೇ

ಪೆರೂನಾವಿನ ಉತ್ತಮೋತ್ತಮವಾದ ಗುಣ

ಅದರ ಕೆಲಸ. ಇದರಿಂದ ನರಗಳಲ್ಲಿ ಶಕ್ತಿಯು ಯಥಾಪ್ರಕಾರ ಕೂಡಿಕೊಳ್ಳುತ್ತದೆ. ಆ ಮೇಲೆ ಅಂಗಗಳೆಲ್ಲಾ ತಮ್ಮತಮ್ಮ ಕಾರ್ಯವನ್ನು ಕ್ರಮವಾಗಿ ಮಾಡಿಕೊಳ್ಳುತ್ತಾ ಬರುವವು. ಆದಕಾರಣ ನಿಮಗೆ ಶರೀರಧರ್ಮದಲ್ಲಿ ಮೇಲ್ಕಂಡಂಥಾ ಕಾಯಿಲೆಗಳೇನಾದರೂ ಇದ್ದರೆ ಒಂದು ಬಾಟ್ಲು ಪೆರೂನಾ ತೆಗೆದುಕೊಂಡು ಸೇವಿಸಿ ನೋಡಿರಿ. ಒಂದು ಬಾಟ್ಲು ಸೇವಿಸುವುದರೊಳಗಾಗಿ ಅದರಿಂದ ನಿಮಗೆ ಫಲವಾಗುವುದೋ ಇಲ್ಲವೋ ಅನುಭವಕ್ಕೆ ಬರುತ್ತದೆ.

ಅದರಿಂದ ವಿಶೇಷ ಪ್ರಯೋಜನವಾಗಿದೆ ಎಂದು ಬಹುಜನರು ವಿವರಿಸಿ ನಮ್ಮಲ್ಲಿಗೆ ಕಾಗದಗಳನ್ನು ಬರೆದಿರುತ್ತಾರೆ. ಅವುಗಳನ್ನು ಓದಿದಾಗ ಬರೆದವರಿಗೆ ಈ ಔಷಧದಿಂದ ಎಷ್ಟು ಪ್ರಯೋಜನವೂ ಸಂತೋಷವೂ ಉಂಟಾಯಿತೋ ತಿಳಿಯುತ್ತದೆ. ಕಷ್ಟವನ್ನು ನಿವಾರಣೆಮಾಡುವುದರಲ್ಲೂ ಆರೋಗ್ಯವನ್ನು ಕೊಡುವುದರಲ್ಲೂ ಪೆರೂನಾವು ಎಷ್ಟು ಚೆನ್ನಾಗಿ ದೇಹದ ಅಂಗಾಂಗಗಳನ್ನು ವ್ಯಾಪಿಸಿ ತನ್ನ ಕೆಲಸವನ್ನು ಸಾರ್ಥಕಮಾಡುವುದೋ ವಿವರಿಸಲಾರೆವು.

ಮ॥ ಪಿ. ಬ್ರಯೆರ್, ೨೭, ಮೂರನೆ ಬೀದಿ, ಲಿನ್ನೈಲೊ, ಕ್ವಿಬೆಕ್.

“ನನ್ನ ಗುಮಾಸ್ತೆ ಕೆಲಸದಲ್ಲಿ ನನಗೆ ತುಂಬಾ ಶ್ರಮವುಂಟಾಗಿ ಒಂದು ವರುಷದ ಕೆಳಗೆ ಬಹಳ ನಿಶ್ಶಕ್ತಿಯಾಯಿತು. ನನ್ನ ಉದ್ಯೋಗವು ನನಗೆ ಬಹು ಕಷ್ಟವಾಗಿ, ನನ್ನ ನರಗಳು ತುಂಬಾ ಬಲಹೀನವಾದವು. ಕಚೇರಿಯಲ್ಲಿದ್ದಾಗ ಗಂಟೆ ಎಷ್ಟುಬೇಗ ಮುಗಿದೀತೋ ಎಂದು ಎದುರು ನೋಡುವುದೇ ನನ್ನ ಕುತೂಹಲವಾಗಿದ್ದಿತು. 38-17

“ನಾನು ಕ್ರಮೇಣ ದುರ್ಬಲನಾಗುತ್ತಾ ಬಂದೆನು. ಕೆಲವು ತಿಂಗಳ ಮೇಲೆ ನನ್ನ ಕಣ್ಣು ಮಂದವಾಗಿ ಹೋಯಿತು. ತರುವಾಯ ನಾನು ಕೆಲಸವನ್ನೇ ಮಾಡಲಾರದೆ ಬಿಟ್ಟುಕೊಂಡೆನು. ದಾಸಿಗೆ ಬಿಟ್ಟೇಳದಂತಾಯಿತು. ನನ್ನ ಎದೆಯ ಬಡಿದುಕೊಳ್ಳುವುದು ಆರಂಭವಾಯಿತು.

“ಒಬ್ಬ ವೈದ್ಯನ ಕೈಲಿ ಕೆಲವು ವಾರಗಳ ತನಕ ಔಷಧ ತೆಗೆದು ಕೊಂಡೆನು. ಆದರೂ ನನಗೆ ಒಂದೇ ಸಮನಾಗಿದ್ದಿತು. ಡಾಕ್ಟರು ಕೂಡ ಇನ್ನೇನೂ ಚಿಕಿತ್ಸೆ ಮಾಡಲಾರದೆ ಹೋದದ್ದನ್ನು ನೋಡಿ, ನಾನೇ ಸ್ವತಃ ಔಷಧವನ್ನು ಮಾಡಿಕೊಳ್ಳೋಣವೆಂದು ಪ್ರಯತ್ನ ಪಟ್ಟೆನು. ಪತ್ರಿಕೆಗಳಲ್ಲಿ ಪ್ರಕಟಿಸಿದ ಜಾಹೀರಾತುಗಳಿಂದ ಹಲವು ಔಷಧಗಳನ್ನು ಕೊಂಡು ಸೇವಿಸಿದಾಗ್ಯೂ ನನಗೆ ಪ್ರಯೋಜನವೇನೂ ಕಾಣಲಿಲ್ಲ.

“ತರುವಾಯ ಪೆರೂನಾವನ್ನು ಸೇವಿಸಿ ನೋಡೋಣವೆಂದು ಆರಂಭಿಸಿದೆನು. ಅದರ ಒಂದು ವಾರ ತೆಗೆದುಕೊಳ್ಳುವಷ್ಟರೊಳಗೇ ನನ್ನ ದೇಹಸ್ಥಿತಿಯು ಚೆನ್ನಾಗುವಂತೆ ನನಗೇ ತೋರಿಬಂದಿತು. ಇನ್ನೂ ಕೆಲವು ವಾರಗಳು ಕಳೆದ ತರುವಾಯ (ಈ ಔಷಧವನ್ನು ಸೇವಿಸುವುದರಲ್ಲಿ ಅನುಸರಿಸಬೇಕಾದಂಥಾ ಕ್ರಮವನ್ನು ಸ್ವಲ್ಪವೂ ತಪ್ಪಲಿಲ್ಲ) ನನ್ನ ಕೆಟ್ಟುಹೋಗಿದ್ದ ಶರೀರಸ್ಥಿತಿಯೆಲ್ಲಾ ಕ್ರಮಪಟ್ಟಿತು. ನನ್ನ ದೃಷ್ಟಿಯು ಚೆನ್ನಾಯಿತು. ಬೇಗನೆ ನನ್ನ ಕೆಲಸದ ಮೇಲೆ ಹೋಗಲಾರಂಭಿಸಿದೆನು.

“ನಾನು ನಿರೀಕ್ಷಿಸಿಕೊಂಡಿದ್ದಂತೆ ನನಗೆ ಸಂಪೂರ್ಣ ಗುಣವಾಯಿತು. ಮೂರು ವಾರಗಳ ಮೇಲೆ ನಾನು ಆಫೀಸಿಗೆ ನನ್ನ ಗುಮಾಸ್ತೆ ಕೆಲಸದ ಮೇಲೆ ಹಾಜರಾದೆನು. ಪೆರೂನಾ ಖಂಡಿತವಾಗಿ ನನ್ನ ವಿಷಯದಲ್ಲಿ ಅದ್ಭುತವಾದ ಔಷಧವಾಗಿ ಪರಿಣಮಿಸಿತು. ನನ್ನ ಹಾಗೇ ಆಫೀಸು ಕೆಲಸದಿಂದ ಶಕ್ತಿಯನ್ನೆಲ್ಲಾ ಕಳೆದುಕೊಂಡಿರುವಂಥವರು ಅದನ್ನು ಸೇವಿಸಿದರೆ ಖಂಡಿತವಾಗಿಯೂ ಅವರಿಗೆ ತುಂಬಾ ಶಕ್ತಿ ಪುಷ್ಟಿಗಳನ್ನು ಅದು ಕೊಡುತ್ತದೆ.”

ಯುದ್ಧದ ಬಾತ್ಮಿದಾರನ ಅಸಿಸ್ಟೆಂಟು ಪೆರೂನಾವನ್ನು ಹೊಗಳುತ್ತಾನೆ

ಚೀನಾದಲ್ಲಿ ಯುದ್ಧ ನಡೆದಾಗ್ಗೆ ಅಲ್ಲಿನ ಬಾತ್ಮಿದಾರನ ಅಸಿಸ್ಟೆಂಟು ಮಿ॥ ಎಚ್. ಬಿ. ಮ್ಯಾಕಲಿ, ಹೋಟೆಲ್ ಬ್ಲಾಕ್ ಮತ್ತು ವೈಟ್, ೬೪೪ ಕ್ರೇಗ್ ಬೀದಿ ಮಾಂಟ್ರಿಯಲ್, ಕ್ಯಾನಡಾ, ಈತನು ಬರೆಯುವುದು. —

“ಬಹಳ ಚಳಿ ಅಥವಾ ಬಹಳ ಉಷ್ಣವಾದ ದೇಶಗಳಲ್ಲಿ ಸಂಚಾರ ಮಾಡುವಾಗ ಒಂದು ಬಾಟ್ಲು ಪೆರೂನಾ ತೆಗೆದುಕೊಂಡು ಹೋದರೆ ಅದು ಎಂಥಾ ಪ್ರೇಮ ಪಾತ್ರವಾದ ಸ್ನೇಹಿತನಂತೆ ಪರಿಣಮಿಸುವುದೋ ಗೊತ್ತಾದೀತು. ನಾನು ತೆಗೆದುಕೊಂಡು ಹೋದ ಪದಾರ್ಥಗಳ ಪೈಕಿ ಅದನ್ನು ತುಂಬಾ ಬೇಗ ಕಂಡೆನು. ವಿಶೇಷ ಉಷ್ಣವಾಗಿದ್ದರೆ ಪೆರೂನಾ ಶಮನ ಮಾಡುತ್ತದೆ, ಅಥವಾ ಶೀತ ಬಹಳವಾಗಿ ಕೆಮ್ಮುಗಳು ಉಂಟಾಗಿದ್ದರೂ ಅದನ್ನು ಕೂಡ ಪೆರೂನಾ ವಾಸಿಮಾಡುವುದು.

“ಇಲ್ಲವೇ, ಎದೆ ಬಡಿದಿದ್ದರೂ, ಆಹಾರ ರುಚಿಸದಿದ್ದರೂ ಪೆರೂನಾ ಅವನ್ನು ಕ್ರಮಪಡಿಸಿ, ದೇಹದೊಳಗಿನ ಭಾಗಗಳನ್ನು ಬಲಪಡಿಸುತ್ತದೆ. ನಾನು ಅದನ್ನೇ ತಿಂಗಳು ಗಟ್ಟಲೆಯಾಗಿ ಸೇವನೆಮಾಡಿದ್ದೇನೆ. ಆದ್ದರಿಂದ ಅದು ಕಷ್ಟಕಾಲದಲ್ಲಿ ತುಂಬಾ ಉಪಕಾರವಾದ ವಸ್ತುವೆಂದು ಹೇಳುವುದಕ್ಕೆ ಅದನ್ನು ಎಲ್ಲರೂ ತೆಗೆದುಕೊಳ್ಳುವಂತೆ ಶಿಫಾರಸು ಮಾಡುವುದಕ್ಕೆ ಸಂತೋಷಪಡುವವನಾಗಿದ್ದೇನೆ.”

ದೇಹಸ್ಥಿತಿ ಎಷ್ಟೇ ಕೆಟ್ಟಿದ್ದರೂ ಪೆರೂನಾ ಗುಣಮಾಡಿ ಆರೋಗ್ಯ ಕೊಡಬಲ್ಲದು

ಮಿಸಸ್ ಜೆ. ಗೌಲ್‌ಸ್, ೪೫೧ ನೊತ್ರೆ ಡೇಂ ಬೀದಿ, ವೆಸ್ಟ್‌ಮೌಂಟ್, ಮಾಂಟ್ರಿಯಲ್, ಕ್ಯಾನ, ಈಕೆ ಬರೆಯುವುದು. —

ಕಳೆದ ಚಳಿಗಾಲದಲ್ಲಿ ನನಗೆ ತುಂಬಾ ಶೀತವಾಯಿತು. ಅದು ನನ್ನ ನೆತ್ತಿಗೂ ಗಂಟಲಿಗೂ ವ್ಯಾಪಿಸಿದ್ದರಿಂದ ನಾನು ಮನೆ ಕೆಲಸಗಳನ್ನು ಮಾಡುವುದಕ್ಕಾಗದೆ ಹಾಸಿಗೆಯಲ್ಲೇ ಬಿದ್ದುಕೊಂಡಿದ್ದೆನು. ಒಬ್ಬ ಸ್ನೇಹಿತನು ಬಂದು ಪೆರೂನಾ ತರಿಸಿ ತೆಗೆದುಕೋ ಎಂದು ಹೇಳಿದನು. ಅದರಂತೆ ನಾನು ಒಂದು ಬಾಟ್ಲು ತರಿಸಿ ಸೇವಿಸುವುದಕ್ಕೆ ಆರಂಭಿಸಿದಾಗ್ಗೆ ಗುಣಕಾಣುತ್ತಾ ಬಂದಿತು. ಹಾಗೇ ನಾನು ಮೂರು ಬಾಟ್ಲು ತೆಗೆದುಕೊಂಡದ್ದರಿಂದ ಈಗ ನನಗೆ ಪೂರ್ವದಂತೆ ಆರೋಗ್ಯವಾಗಿರುತ್ತದೆ. ನನ್ನ ನರಗಳ ಬಲವಂತೂ ಬಹಳ ಕೆಟ್ಟುಹೋಗಿದ್ದಿತು. ಆದಾಗ್ಯೂ ಪೆರೂನಾ ಸೇವನೆಯಿಂದಲೆ ಒಳ್ಳೆ ಆರೋಗ್ಯ ಉಂಟಾಗಿದೆ.”

- ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ.—ಈ ಔಷಧ ಸಿಕ್ಕುವ ಸ್ಥಳಗಳು.—

(೧) ಹಿಗ್‌ಬಾತ್ ಅಂಡ್ ಸನ್ಸ್, ಬೆಂಗಳೂರು; ಅಥವಾ,

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯೪ ಮಿಂಟ್ ಬೀದಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

7—2—1908 ರಿಂದ 14—2—1908 ರವರೆಗೆ

ಸ್ಥಳ.	ಪ್ಲೇಗ್ ಹಿಡಿದದ್ದು.	ಪ್ಲೇಗ್ ಸತ್ತದ್ದು.	ಕಾಲರಾ ಹಿಡಿದದ್ದು.	ಕಾಲರಾ [illegible]
ಬೆಂಗಳೂರು ಪಟ್ಟಣ	33	16	0	0
ಮೈಸೂರು ,,	11	6	0	0
ಬೆಂಗಳೂರು ಡಿಸ್ಟ್ರಿಕ್ಟು	76	53	0	0
ಮೈಸೂರು ,,	44	30	0	0
ಕೋಲಾರ್ ,,	86	63	0	0
ಕೋಲಾರ್ ಚಿನ್ನದ ಗಣಿಗಳು	16	8	6	0
ತುಂಕೂರು ಡಿಸ್ಟ್ರಿಕ್ಟು	4	5	0	0
ಹಾಸನ ,,	7	0	1	1
ಚಿತ್ರದುರ್ಗ ,,	0	0	0	0
ಕಡೂರ್ ,,	21	6	0	0
ಶಿವಮೊಗ್ಗ ,,	*	*	0	0
* ಸಂಖ್ಯೆ ಕಾಣಿಸಿಲ್ಲ. ಒಟ್ಟು	303	239	1	1

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಮಾಘ ಬಹುಳ ದಶಮಿ ಗುರುವಾರದಿಂದ ಫಾಲ್ಗುಣ ಶುದ್ಧ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಫೆಬ್ರವರಿ ಮತ್ತು ಮಾರ್ಚಿ.

ತಾ	ವಾರ.	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	[illegible]
27	ಗುರು	ದಶಮಿ	13 13	ಮೂ	6 56	16
28	ಶುಕ್ರ *	ಏಕಾದಶಿ	7 50	ಪೂಷಾ	3-30	17
29	ಶನಿವಾ ¶	ದ್ವಾದಶಿ	2 2	ಉಷಾ	54 4	18
1	ರವಿವಾ ,,	ಚತುರ್ದಶಿ	50 4	ಧ	50 56	19
2	ಚಂದ್ರ :	ಅಮಾವಾ	44-24	ಶ	47 48	20
3	ಕುಜ	ಪಾಡ್ಯ	39 28	ಪೂಭಾ	3-38	21
4	ಬುಧ ‡	ಬಿದಿಗೆ	34 59	ಉಭಾ	41 2	22

*, ಸರ್ವತ್ರ ಏಕಾದಶಿ. ¶ ಶನಿಪ್ರದೋಷ ,, ಮಹಾಶಿವರಾತ್ರಿ, ನಂಜನಗೂಡಿನಲ್ಲಿ ಬೆಳ್ಳಿ ಕೈಲಾಸವಾಹನ . ಸರ್ವತ್ರ ಅಮಾವಾಸ್ಯೆ ಅಮಾಸೋಮಪ್ರತ, ಶ್ರೀರಂಗಪಟ್ಟಣದ ಗಂಗಾಧರೇಶ್ವರ ರಥ, ಪಾರ್ಥಿವ. ‡ ಚಂದ್ರೋದಯ

ಪೇಟೇ ಧಾರಣೆ

ದಿನಸಿ.		ಮೈಸೂರು.	ಬೆಂಗಳೂರು.
ಕಟ್ಟೇ ಅಕ್ಕಿ ಪಲ್ಲ ೧ಕ್ಕೆ	ರೂ.	೧೩ ೦-೦	೧೪-೬-೦
ಸಂಬಾಸತ್ತ ಅಕ್ಕಿ ಅವಲ್	..	೧೩ ೪-೦	೧೪ ೬-೦
,, ದುಯಂ	..	೧೩ ೦-೦	೧೩-೪-೦
ಬಾಬ್ರಿ ಅಕ್ಕಿ	.	೧೬-೦ ೦	೧೩-೧೨-೦
ಸಣ್ಣಕ್ಕಿ ಅವಲ್	.	೧೫-೪-೦	೧೬-೦-೦
,, ದುಯಂ	..	೧೫-೦-೦	೧೬-೦-೦
ತೊಗರೀ ಬೇಳೆ ಪಲ್ಲ ೧ಕ್ಕೆ	.	೧೪-೦-೦	೧೪ ೪ ೦
,, ದುಯಂ	.	೧೩ ೪-೦	೧೪ ೬-೦
ರಾಗಿ ಪಲ್ಲ ೧ಕ್ಕೆ	.	೬-೧೨ ೦	೬ ೪ ೦
ಕಾರಾಗಿ	.	೬-೪-೦	೭-೦-೦
ಜೋಳ	.	೭-೦-೦	೭-೧೨-೦
ಹುರುಳಿ ಪಲ್ಲ ೧ಕ್ಕೆ	.	೧೦-೪-೦	೧೦ ೦ ೦
ಬಿಳೀ ಅವರೆ	..	೪-೧೪-೦	೪-೦-೦
ಹೆಸರು	.	೧೦-೯-೦	೧೦-೪-೦
ಉದ್ದು	..	೧೪-೦-೦	೧೨-೪-೦
ಕಡಲೆ	.	೧೨-೪-೦	೧೨ ೧೨ ೦
ಎಳ್ಳು ಸೆ. ೧೨೭ ಕ್ಕೆ	.	೨೪-೪-೦	೨೩-೦-೦
ಹುರುಳಿ	..	೬-೪-೦	೬ ೪-೦
ಹರಳು ೧೨೭ ಸೇರಿಗೆ	.	೧೨-೦-೦	೧೨-೪ ೦
ಸೀಗೇಕಾಯಿ ಮಣ ೧ಕ್ಕೆ	..	೨-೪-೦	೧ ೧೨-೦
ಮೆಣಸಿನಕಾಯಿ	..	೨-೪-೦	೨-೧೦-೦
ದುಯಂ	..	೨-೪-೦	೨-೪-೦
ಬೆಲ್ಲ ದೊಡ್ಡ ಅಚ್ಚು	..	೫-೦-೦	ಮ ೧-೯-೦
ಒಳ್ಳೆಣ್ಣೆ ಮಣ ೧ಕ್ಕೆ	..	೬-೪-೦	೬ ೪-೦
ಹರಳೆಣ್ಣೆ ,,	..	೪-೧೨-೦	೪ ೪ ೦
ಕೊಬ್ಬರಿ ಪಲ್ಲ ೧ಕ್ಕೆ	..	೫-೪-೦	೬ ೦ ೦
ಉಪ್ಪು ,,	..	೫-೦-೦	೫ ೧೦ ೦
ಹುಣಸೇ ಹಣ್ಣು	..	೨-೪-೪	೦ ೪ ೦
,, ಹಳೇದು	..	೧-೪	೧ ೦೦ ೦
ತುಪ್ಪ ಮಣ ೧ಕ್ಕೆ	..	೧೩-೪ ೦	೧೫ ೦ ೦
ಸೀಮೆಎಣ್ಣೆ ಪೆಟ್ಟಿ ೧ಕ್ಕೆ	..	೪-೧೫-೦	೪ ೬-೦
ತೆಂಗಿನಕಾಯಿ ೧೦೦ಕ್ಕೆ	..	೭-೪-೦	೬ ೧೨ ೦
ಅಡಕೇಕಾಯಿ ಮಣ ೧ಕ್ಕೆ	..	೧-೪-೦	೧-೪-೦
ಅರಿಶಿನದ ಕಾಯಿ ಮಣ ೧ಕ್ಕೆ	..	೬-೧೨-೦	೬-೧೩-೦
ಹತ್ತಿ (ಪರ್ಕ) ಕೆಂಪು	..	೧೫-೬-೦	೧೫-೬-೦
,, ,, ಬಿಳುಪು	..	೧೫-೧೦-೦	೧೫-೭-೦
,, ,, ಗಟ್ಟಿ ಕಂಡಿ ೧ಕ್ಕೆ	..	೨೩-೧೨-೦	೨೫-೦-೦
ಬಿಳಿ ಗಟ್ಟಿ ಕಂಡಿ ೧೦೦ ಕ್ಕೆ	..	೩೫-೦-೦	೩೩ ೦ ೦

Printed and Published by the Rev. E. W. Thompson, M. A., Proprietor and Manager, Wesleyan Mission Press, Mysore. 27/2/1908.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೮ ನೇ ಇಸವಿ ಮಾರ್ಚಿ ತಾರೀಖು ೫ ನೇ ಗುರುವಾರ. ಸಂಚಿಕೆ ೪೦

BASEL MISSION WEAVING ESTABLISHMENT,

59-13

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಶನ್ (ಬಸ್ತ್ರ) ನೆಯ್ಯುವ ಕಾರಖಾನೆಯಲ್ಲಿ

[illegible] ಪಿಥದ (ಪಿ ಸ್ಗ್) ಟ್ವೀಡ್ [illegible] ಕೋಟು ಇಜಾರುಗಳಿಗೆ ಬೇಕಾದ ಬಟ್ಟೆಗಳೂ, ಶರ್ಟಿಂಗ್ ಎಂಬ ಅಂಗಿ ಬಟ್ಟೆಗಳೂ, ಶರ್ಟಿಂಗ್ ಎಂಬ ಕವಿಚ [illegible] ಬಟ್ಟೆಗಳು ಬೇರೆ ಇತರ ಬಟ್ಟೆಗಳೂ [illegible] ಯಾನೆ ಮೇಜುವಸ್ತ್ರಗಳೂ, ಟವಾಲುಗಳು [illegible] ಕಾಗಿ ತಯಾರಿಸಲ್ಪಟ್ಟ [illegible] ರಿಯಾಗಿಯಾಗಲೀ ರಿಯಾಗಿಯಾಗಲೀ [illegible] ತಯಾರಿರುತ್ತವೆ.

ಒಳ್ಳೇ ಕಮಿಶ್ಶನ್ — ರೂಪಾಯಿ ೧೦೦ ರ ಮೇಲೆ ಸಾಮಾನುಗಳನ್ನು ತೆಗದುಕೊಳ್ಳುವ ಗಿರಾಕಿಗಳಿಗೆ ಯಾ ಸೊಸೈಟಿ [illegible] ಸಿವರ ಖುದ್ದಾಗಿ [illegible] ಮುಖಾಂತರ ತಿಳುಕೊಳ್ಳಬಹುದು.

ನಮೂನೆ ಯಾ ಮಾದರಿಗಳು :—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರ ಕೊಂಡಲ್ಲಿ ಕಳುಹಿಸಲ್ಪಡುವವು

ವಿಶೇಷ ಲಕ್ಷ್ಯ ಸತಕ್ಕದ್ದು .—ಈ ನಮ್ಮ ಸಾಮಾನುಗಳಿಗೆ [illegible] "ಟ್ರೇಡ್ ಮಾರ್ಕ್" ಎಂಬ [illegible] ಲೇಬಿಲ್ ಯಾನೆ ಚೀಟು ಅಚ್ಚಿರುತ್ತದೆ ಈ ಗುರುತಿನ ಚೀಟುಗಳು ಇಲ್ಲದವುಗಳೆಲ್ಲಾ ನಮ್ಮ ಸಾಮಾನುಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತ —ನಗದಾಗಿ ಇಲ್ಲವೆ ಸಾಮಾನುಗಳು ವಿ. ಪಿ. ಟಪ್ಪಾಲ ಮುಖಾಂತರ ಕಳುಹಿಸಲ್ಪಡುವ ಕಾಗಿದ್ದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರಿಯತಕ್ಕದ್ದು

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು "ಕೋಪಿರೈಟ್" ಪಡೆದಿರುವ ಲೇಬಿಲುಗಳನ್ನಾಗಲೀ ಇಲ್ಲವೆ ಆ ಮಾನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ಸಾಮಾನುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು

ವಿಳಾಸ—BASEL MISSION WEAVING ESTABLISHMENT,
MANGALORE S CANARA

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅ ಮೃ ತಾ ಂ ಜ ನ

172

ತುಸಿಕೊಳ್ಳಿರಿ – ತ್ವರೆಗೈಯಿರಿ – ಅಮೃತಾಂಜನ ಸರ್ವಲೋಕರಂಜನ, ಸರ್ವ ವ್ಯಾಧಿಭಂಜನ ಚಿಕಿತ್ಸಾಪಾಲಿಯೊಳು ಜನ ದೇಹಾಂಗಗಳಿಗೆ ಸಂಜೀವನ ವಾಸ ದಲ್ಲಿ ಮನೋರಂಜನ, ಬೆಲೆಯಲ್ಲಿ ಅಲ್ಪ, ಆರೋಗ್ಯತೆಯಲ್ಲಿ ಅಮೃತ ಔಷಧಿಯಲ್ಲಿ [illegible] ತ ಕೂಳ್ಳುವವರಲ್ಲಿ ಮಾಡಿರಿತ್ವರ್ಯ, ಮಿಂದ ಗುಣ ಕಂಡುಬರುವದಿಲ್ಲವಾದರೆ [illegible] ಹಿಂತಿರಿಗಿ ಕೊಡಲ್ಪಡುವದು ಒಂದು ಬಾರಿ ಎರಡು ಬಾಟ್ಲಿ ತರಿಸಿಕೊಂಡವರಿಗೆ ಒಂದು [illegible] ಬೆಳ್ಳಿಯ ಕಪ್ ಉಚಿತವಾಗಿ ದೊರ ವದು

ನಿಶ್ಶಂಕೆಯಾಗಿ ಭಾರತವರ್ಷೀಯ ಔಷಧಗಳಿಂದ ತಯಾರಿಸಿದ ಹೊರುಪಯೋಗಕ್ಕೋಸುಗ ಮುಲಾಮು ಇದರಿಂದ ತಲೆನೋವು, ಶಿರೋವೇದನೆ ವಾತ ಸಂದಿವಾತ ಪಕ್ಷವಾತ, ಗಂಟ್ಲು ನೋವು, ಸೊಂಟದನೋವು ಗಂಟ್ಲು ನೋವು, ಹಿತ, ಜಕಮು, ಉಳಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ

ಈ ಕಂಪನಿಯವರು ಶೆಟ್ಟ [illegible] ಔಷಧಿಗಳನ್ನು [illegible] ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದರೆ ರವಾನಿಸಲ್ಪಡುವದು

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೦—೮—೦ ಪೋಸ್ಟು ಖರ್ಚು ೦—೪—೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ, ಇದ ರ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು ಡಬ್ಬಿ ಒಂದಕ್ಕೆ ಕಿಮ್ಮತ್ತು ೦—೩—೦. ಪೋಸ್ಟು ಖರ್ಚು ೦—೩—೦

ದಂತಮಂಜನ —ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಹಲ್ಲುಗಳು ಬೆಳ್ಳಗಾಗುತ್ತವೆ ಹಲ್ಲು ನೋವನ್ನು ತೆಗೆಯುತ್ತದೆ ಡಬ್ಬಿ ಒಂದಕ್ಕೆ ೦—೨—೦ ಪೋಸ್ಟು ಖರ್ಚು ೦—೩—೦

ವಜ್ರಗುಟಿಕ —ಧಾತುಪುಷ್ಟಿ ನಿರ್ಬಲವಂತರಿಗೆ ಶಕ್ತಿಕೊಡುತ್ತದೆ, ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ ರಕ್ತ ಶುದ್ಧಿಮಾಡಿ ದೇಹ ಆರೋಗ್ಯಕೊಡುತ್ತದೆ ಡಬ್ಬಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೩—೦

ಕೇಶವರ್ಧಿನಿ —ತಲೆ ಹೇನುಗಳು ಹಿಂಗುವದು, ಕೂದಲುಗಳನ್ನು ಬೆಳೆಸುವದು, ಕೂದಲುಗಳನ್ನು ಕಪ್ಪುಮಾಡುವದು, ಮನ ಶ್ಶುದ್ಧಿ ಮಾಡುವದು, ಚೆಲೋ ಪರಿಮಳ ಉಳ್ಳದ್ದು ೩ ಔನ್ಸು ಬಾಟ್ಲಿ ಒಂದಕ್ಕೆ ೧—೦—೦. ಪೋಸ್ಟು ಖರ್ಚು ೦—೩—೦

ವಿಳಾಸ—ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನ್. ಪೋರ್ಟ್, ಮುಂಬಯಿ.

ಟೆಲಿಗ್ರಾಪು ಅಡ್ರೆಸು—"ಅಮೃತಾಂಜನ," ಮುಂಬಯಿ.

ಕಾರ್ಡ್ ಸೈಜು ೪½ × ೩½

ಫೋಟೋ ತೆಗೆಯುವ

ಫ್ರಾ ಪಾ ಕ್ಯಾ ಮೆ ರಾ.

84 29

ಬೆಲೆ ಪಕ್ತ ಮೂರು ರೂಪಾಯಿ

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯುವಕ್ಕೆ ಬರುತ್ತದೆ ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿಕೊಡುವೆವು ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ ಬೆಲೆ ಬೀಳುತ್ತದೆ ಆದರೆ ಇದರ ದರ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು ಟಪ್ಪಾಲು ಖರ್ಚು ೯ ಆಣೆ

ಇದು ಸಿಕ್ಕತಕ್ಕ ವಿಳಾಸ —

ಛೋಟಾಲಾಲ ಭಗನಲಾಲ ಮಹಾಜನ ರಾಕೂರದ್ವಾರ ರೋಡ ಪೋಸ್ಟ್ ಕಾಲಬಾದೇವಿ ಮುಂಬಯಿ

ಜ್ವ ರ ಹ ರಿ 185

ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೩೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಯಿಲೇ ಬೀಳುತ್ತಿರುವುದರಿಂದ ದಯಮಾಡಿ ಇನ್ನೊಂದು ೩೦ ಔನ್ಸಿನ ಸೀಸೆಯನ್ನು ವಿ ಪಿ ಮುಖಾಂತರ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೯ ರೂ ; ೧—೮ ರೂ, [illegible] ೧೦ ರೂ , ಡಜ್ಜನು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಮಾಡಲಾಗುವದು.

●●●●●●●●

ಓ ಮು ಂ ಕ ಪೂ ೯ ರ



ಈ ಔಷಧವು ಅಜೀರ್ಣ ಶೀತಭೇದಿ, ಸಾಮಾನ್ಯ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ರಿಯದ ಓಮಂ ಕರ್ಪೂರವನ್ನು ನಾನೂ ನನ್ನ ಹಾಸ್ಪಿಟಲ್‌ದಲ್ಲೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದ ೩ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇನೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದಾರನಲ್ಲಿ ವಿಶೇಷ :—

ಪೆಪ್ರಿಯಾರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಂಟ್ ಥಾಮ್ ಸ್ಟ್ರೀಟ್, ಮದರಾಸ್.

ನರಗಳ ಅಪಾರವಾದ ದುರ್ಬಲವನ್ನು ಪೆರೂನಾವು ಅದ್ಭುತವಾದ ರೀತಿಯಲ್ಲಿ ನಿವಾರಣೆ ಮಾಡಿರುತ್ತದೆ.

ಶರೀರಗತವಾದ ಶೈತ್ಯನಿವಾರಣೆಗೆ ಪೆರೂನಾ ಅವಶ್ಯವಾಗಿದೆ.

ನರಗಳ ದುರ್ಬಲವನ್ನು ನಾಶಮಾಡುವುದ ರಲ್ಲಿ ಇದು ವಿಶೇಷ ಪ್ರಖ್ಯಾತವಾಗಿದೆ!

ಹೆಚ್ಚಾದ ಶಕ್ತಿ ಕೆಲಸದಿಂದಲೂ, ಮನಸ್ಸನ್ನು ವಿಶೇಷವಾಗಿ ಶಕ್ತಿ ಪಡಿಸುವುದರಿಂದಲೂ, ಬೇಸಿಗೆಯ ಅಪಾರವಾದ ಉಷ್ಣದ ಬೆಸೆಯಿಂದಲೂ ಶರೀರದ ಧರ್ಮವು ವಿಕೃತಿಯಾಗಿದ್ದರೆ ಪೆರೂನಾವು ಇದನ್ನು ಸಂಪೂರ್ಣವಾಗಿ ನಿವಾರಣೆ ಮಾಡಿ, ಶಕ್ತಿಯನ್ನು ಕೊಟ್ಟು, ಪುಷ್ಟಿಯನ್ನುಂಟುಮಾಡುತ್ತದೆ.

ಬೇಸಿಗೆಯು ದೀರ್ಘ ಕಾಲವಿರುವಂಥಾ ದೇಶಗಳಲ್ಲಿ ಜನರು ಧಗೆಯ ತೀಕ್ಷ್ಣವನ್ನು ಸುಲಭವಾಗಿ ಸಹಿಸಿಕೊಳ್ಳುವವರಾಗಿರುವರೆಂದು ಹೇಳಬಹುದು. ಆದರೆ ಅಪಾರವಾದ ಧಗೆಯು ಸಹಿಸಲಶಕ್ಯವಾದ ಚಳಿಯೂ ಒಂದರ ಹಿಂದೊಂದು ಥಟ್ಟನೆ ಪ್ರಾಪ್ತವಾಗತಕ್ಕಂಥಾ ದೇಶಗಳಲ್ಲಿ ಅನೇಕರ ಶರೀರಧರ್ಮವು ಆ ಉಷ್ಣವನ್ನು ಸಹಿಸಿಕೊಳ್ಳಲು ಶಕ್ತಿಯುಳ್ಳದ್ದಾಗಿರುವುದಿಲ್ಲ. ಇದರಿಂದಲೇ ಬಹಳ ಕಾಯಿಲೆಗಳು ಉಂಟಾಗುತ್ತವೆ.

ಹೊಟ್ಟೆಗೆ ಶೀತ ಹಿಡಿಯುವುದು ಅಜೀರ್ಣವಾಗಿರುವುದು, ಆಹಾರ ಅರಗದೆ ಇರುವುದು ಇವೆಲ್ಲಾ ಉಷ್ಣಕಾಲದಲ್ಲಿ ಪ್ರಾಪ್ತವಾಗುವ ಅಲ್ಪ ರೋಗಗಳೆಂದು ತಿಳಿಯಬಾರದು.

ಆಹಾರ ಅರಗುವುದರಲ್ಲಿ ವ್ಯತ್ಯಾಸವಾದರೆ ಆಹಾರದ ಮುಖ್ಯ ಭಾಗಗಳನ್ನು ಶರೀರವು ಹೀರಿಕೊಳ್ಳುವುದಿಲ್ಲ. ಇದರಿಂದ ಶರೀರಕ್ಕೆ ಪುಷ್ಟಿ ಕಡಮೆಯಾಗುವುದು.

ಅಜೀರ್ಣದಿಂದ ದುರ್ಬಲವು.

ದುರ್ಬಲ, ಸೋಮಾರಿತನ, ಜಿಗುಪ್ಸೆ, ಬುದ್ಧಿ ಮಾಂದ್ಯ, ಮಾಂಸಖಂಡಗಳ ಬಲಹೀನತೆ, ನರಗಳ ದುರ್ಬಲ, ಇವೆಲ್ಲಾ ಕ್ರಮಕ್ರಮವಾಗಿ ಪ್ರಾಪ್ತವಾಗುವವು. ಇಂಥಾ ಸಮಯದಲ್ಲಿ ಜೀರ್ಣಶಕ್ತಿಯನ್ನು ಪಟುವಾಗಿ ಮಾಡಿಕೊಳ್ಳುವುದಕ್ಕೆ ಪರಿಹಾರವನ್ನು ನೋಡಿ ಮಾಡಿಕೊಳ್ಳಬೇಕು. ಪೆರೂನಾ ಸೇವನೆಯು ಜೀರ್ಣರೋಗಗಳನ್ನು ಶಮನಪಡಿಸುತ್ತದೆಂದು ಪ್ರಖ್ಯಾತಿ ಪಡೆದಿರುತ್ತದೆ. ಇದಕ್ಕೆ ಅಂಥಾ ಶಕ್ತಿಯುಂಟೆಂದು ಸಾವಿರಾರು ಸಂದರ್ಭಗಳಲ್ಲಿ ದೃಷ್ಟಾಂತಕ್ಕೆ ಬಂದಿದೆ. ವಾಸಿಯಾಗುವುದೇ ಇಲ್ಲವೆಂಬ ನಿರಾಶೆಯುಂಟಾಗಿದ್ದಂಥಾ ಅನೇಕರಿಗೆ ಪೆರೂನಾವು ಅದ್ಭುತವಾಗಿ ಆರೋಗ್ಯವನ್ನು ಕೊಟ್ಟಿದೆ.

ಆದರೆ ಪೆರೂನಾದಲ್ಲಿ ಈ ಗುಣವಿರುವುದೇನೂ ಆಶ್ಚರ್ಯವಲ್ಲ. ಶರೀರದೊಳಗಿರತಕ್ಕ ಅಂಗಗಳ ಸುತ್ತಲೂ ಅವರಿಸಿಕೊಂಡಿರುವಂಥಾ ನರಗಳ ಮೂಲಸ್ಥಾನಗಳನ್ನು ಶಕ್ತಿಪಡಿಸುವುದೇ ಇದರ ಕೆಲಸ.

ಪೆರೂನಾವಿನ ಉತ್ತಮೋತ್ತಮವಾದ ಗುಣ

ಇದರಿಂದ ನರಗಳಲ್ಲಿ ಶಕ್ತಿಯು ಯಥಾಪ್ರಕಾರ ಕೂಡಿಕೊಳ್ಳುತ್ತದೆ. ಆ ಮೇಲೆ ಅಂಗಗಳೆಲ್ಲಾ ತಮ್ಮ ತಮ್ಮ ಕಾರ್ಯವನ್ನು ಕ್ರಮವಾಗಿ ಮಾಡಿಕೊಳ್ಳುತ್ತಾ ಬರುವವು. ಆದಕಾರಣ ನಿಮಗೆ ಶರೀರಧರ್ಮದಲ್ಲಿ ಮೇಲ್ಕಂಡಂಥಾ ಕಾಯಿಲೆಗಳೇನಾದರೂ ಇದ್ದರೆ ಒಂದು ಬಾಟ್ಲು ಪೆರೂನಾ ತೆಗೆದುಕೊಂಡು ಸೇವಿಸಿ ನೋಡಿರಿ. ಒಂದು ಬಾಟ್ಲು ಸೇವಿಸುವುದರೊಳಗಾಗಿ ಅದರಿಂದ ನಿಮಗೆ ಫಲವಾಗುವುದೋ ಇಲ್ಲವೋ ಅನುಭವಕ್ಕೆ ಬರುತ್ತದೆ.

ಅದರಿಂದ ವಿಶೇಷ ಪ್ರಯೋಜನವಾಗಿದೆ ಎಂದು ಬಹುಜನರು ವಿವರಿಸಿ ನಮ್ಮಲ್ಲಿಗೆ ಕಾಗದಗಳನ್ನು ಬರೆದಿರುತ್ತಾರೆ. ಅವುಗಳನ್ನು ಓದಿದಾಗ ಬರೆದವರಿಗೆ ಈ ಔಷಧದಿಂದ ಎಷ್ಟು ಪ್ರಯೋಜನವೂ ಸಂತೋಷವೂ ಉಂಟಾಯಿತೋ ತಿಳಿಯುತ್ತದೆ. ಕಷ್ಟವನ್ನು ನಿವಾರಣೆಮಾಡುವುದರಲ್ಲೂ ಆರೋಗ್ಯವನ್ನು ಕೊಡುವುದರಲ್ಲೂ ಪೆರೂನಾವು ಎಷ್ಟು ಚೆನ್ನಾಗಿ ದೇಹದ ಅಂಗಾಂಗಗಳನ್ನು ವ್ಯಾಪಿಸಿ ತನ್ನ ಕೆಲಸವನ್ನು ಸಾರ್ಥಕಮಾಡುವುದೋ ವಿವರಿಸಲಾರೆವು.

ಮೆ|| ಪಿ. ಬ್ರಿಯರ್, ೨೭, ಮೂರನೆ ಬೀದಿ, ಲಿಮ್ಯೆಲೂ, ಕ್ವಿಬೆಕ್.

“ನನ್ನ ಗುಮಾಸ್ತೆ ಕೆಲಸದಲ್ಲಿ ನನಗೆ ತುಂಬಾ ಮನೋವ್ಯಥೆಯಾಗಿ ಒಂದು ವರುಷದ ಕೆಳಗೆ ಬಹಳ ವಿಕೃತಿಯಾಯಿತು. ನನ್ನ ಉದ್ಯೋಗವು ನನಗೆ ಬಹು ಕಠಿಣವಾಗಿ, ನನ್ನ ನರಗಳು ತುಂಬಾ ಬಲಹೀನವಾದವು. ಕಚೇರಿಯಲ್ಲಿದ್ದಾಗ ಗಂಟೆ ಎಷ್ಟುಬೇಗ ಮುಗಿವದೋ ಎಂದು ಎದುರು ನೋಡುವುದೇ ನನ್ನ ಕುತೂಹಲವಾಗಿದ್ದಿತು. 38-47

“ನಾನು ಕ್ರಮೇಣ ದುರ್ಬಲನಾಗುತ್ತಾ ಬಂದೆನು. ಕೆಲವು ತಿಂಗಳ ಮೇಲೆ ನನ್ನ ಕಣ್ಣು ಮಂದವಾಗಿ ತೋರಿತು. ತರುವಾಯ ನಾನು ಕೆಲಸವನ್ನು ಮಾಡಲಾರದೆ ಬಿಟ್ಟುಕೊಂಡೆನು. ಹಾಸಿಗೆ ಬಿಟ್ಟೇಳದಂತಾಯಿತು. ನನ್ನ ಎದೆಯು ಬಿಗಿದುಕೊಳ್ಳುವುದೂ ಆರಂಭವಾಯಿತು.

“ಒಬ್ಬ ವೈದ್ಯನ ಕೈಲಿ ಕೆಲವು ವಾರಗಳ ತನಕ ಔಷಧ ತೆಗೆದುಕೊಂಡೆನು. ಆದರೂ ನನಗೆ ಒಂದೇ ಸಮನಾಗಿದ್ದಿತು. ಡಾಕ್ಟರು ಕೂಡ ಇನ್ನೇನೂ ಚಿಕಿತ್ಸೆ ಮಾಡಲಾರದೆ ಹೋದದ್ದನ್ನು ನೋಡಿ, ನಾನೇ ಸ್ವತಃ ಔಷಧವನ್ನು ಮಾಡಿಕೊಳ್ಳಬೇಕೆಂದು ಪ್ರಯತ್ನ ಪಟ್ಟೆನು. ಪತ್ರಿಕೆಗಳಲ್ಲಿ ಪ್ರಕಟವಾದ ಬಲಕಾರಿಗಳೆಂಬ ಕೆಲವು ಔಷಧಗಳನ್ನು ಕೊಂಡು ಸೇವಿಸಿದಾಗ್ಯೂ ನನಗೆ ಪ್ರಯೋಜನವೇನೂ ಕಾಣಲಿಲ್ಲ.

“ತರುವಾಯ ಪೆರೂನಾವನ್ನು ಸೇವಿಸಿ ನೋಡೋಣವೆಂದು ಪ್ರಾರಂಭಿಸಿದೆನು. ಆದರೆ ಒಂದು ವಾರ ತೆಗೆದುಕೊಳ್ಳುವಷ್ಟರೊಳಗೇ ನನ್ನ ದೇಹಸ್ಥಿತಿಯು ಚೆನ್ನಾಗುವಂತೆ ನನಗೇ ತೋರಬಂದಿತು. ಇನ್ನೂ ಕೆಲವು ವಾರಗಳು ಕಳೆದ ತರುವಾಯ (ಈ ಔಷಧವನ್ನು ಸೇವಿಸುವುದರಲ್ಲಿ ಅನುಸರಿಸಬೇಕಾದಂಥಾ ಕ್ರಮವನ್ನು ಸ್ವಲ್ಪವೂ ತಪ್ಪಲಿಲ್ಲ) ನನ್ನ ಕೆಟ್ಟುಹೋಗಿದ್ದ ಶರೀರಸ್ಥಿತಿಯೆಲ್ಲಾ ಕ್ರಮಪಟ್ಟಿತು. ನನ್ನ ದೃಷ್ಟಿಯು ಚೆನ್ನಾಯಿತು. ಬೇಗನೆ ನನ್ನ ಕೆಲಸದ ಮೇಲೆ ಹೋಗತಕ್ಕವನಾದೆನು.

“ನಾನು ನಿರೀಕ್ಷಿಸಿಕೊಂಡಿದ್ದಂತೆ ನನಗೆ ಸಂಪೂರ್ಣ ಗುಣವಾಯಿತು. ನಾಲ್ಕು ವಾರಗಳ ಮೇಲೆ ನಾನು ಆಫೀಸಿಗೆ ನನ್ನ ಗುಮಾಸ್ತೆ ಕೆಲಸದ ಮೇಲೆ ಹೋದೆನು. ಪೆರೂನಾ ಖಂಡಿತವಾಗಿ ನನ್ನ ವಿಷಯದಲ್ಲಿ ಅದ್ಭುತವಾದ ಔಷಧವಾಗಿ ಪರಿಣಮಿಸಿತು. ನನ್ನ ಹಾಗೇ ಅಪಾರ ಕೆಲಸದಿಂದ ಶಕ್ತಿಯನ್ನೆಲ್ಲಾ ಕಳೆದುಕೊಂಡವರು ಇದನ್ನು ಸೇವಿಸಿದರೆ ಖಂಡಿತವಾಗಿಯೂ ಅವರಿಗೆ ತುಂಬಾ ಶಕ್ತಿ ಪುಷ್ಟಿಗಳನ್ನು ಇದು ಕೊಡುತ್ತದೆ.”

ಯುದ್ಧದ ಬಾತ್ಮೀದಾರನ ಅಸಿಸ್ಟೆಂಟು ಪೆರೂನಾವನ್ನು ಹೊಗಳುತ್ತಾನೆ

ಚೀಣಾದಲ್ಲಿ ಯುದ್ಧ ನಡೆದಾಗ್ಗೆ ಅಲ್ಲಿನ ಬಾತ್ಮೀದಾರನ ಅಸಿಸ್ಟೆಂಟು ಮಿ|| ಎಚ್. ಬಿ. ಮ್ಯಾಕಲಿ, ಕೇರಾಫ್ ಬುಕ್ ಮತ್ತು ವೈಟ್, ೭೮೮ ಕ್ರೇಗ್ ಬೀದಿ ಮಾಂಟ್ರಿಯಲ್, ಕ್ಯಾನಡಾ, ಈತನು ಬರೆಯುವುದು:—

“ಬಹಳ ಚಳಿ ಅಥವಾ ಬಹಳ ಉಷ್ಣವಾದ ದೇಶಗಳಲ್ಲಿ ಸಂಚಾರ ಮಾಡುವಾಗ್ಗೆ ಒಂದು ಬಾಟ್ಲು ಪೆರೂನಾ ತೆಗೆದುಕೊಂಡು ಹೋದರೆ ಅದು ಎಂಥಾ ಪ್ರೇಮ ಪಾತ್ರವಾದ ಸ್ನೇಹಿತನಂತೆ ಪರಿಣಮಿಸುವುದೋ ಗೊತ್ತಿದೆ. ನಾನು ತೆಗೆದುಕೊಂಡು ಹೋದ ಪ್ರವಾಸಗಳ ಪ್ರತಿ ಇದನ್ನು ತುಂಬಾ ನೋಡಿಕೊಳ್ಳುತ್ತೇನೆ. ವಿಶೇಷ ಉಷ್ಣವಾಗಿದ್ದರೆ ಪೆರೂನಾ ಶಮನ ಮಾಡುತ್ತದೆ, ಅಥವಾ ಶೀತ ಬಲವಾಗಿ ನೆಮ್ಮಗಳು ಉಂಟಾಗಿದ್ದರೂ ಅದನ್ನು ಕೂಡ ಪೆರೂನಾ ವಾಸಿಮಾಡುವುದು.

“ಇಲ್ಲವೇ, ಏಟು ಬಿದ್ದಿದ್ದರೂ, ಆಗಾಗ ರುಚಿಸದಿದ್ದರೂ ಪೆರೂನಾ ಅದನ್ನು ಶಮನಪಡಿಸಿ, ದೇಹದೊಳಗಿನ ಭಾಗಗಳನ್ನು ಶುಚಿಪಡಿಸುತ್ತದೆ. ನಾನು ಇದನ್ನೇ ತಿಂಗಳು ಗಟ್ಟಲೆಯಾಗಿ ಸೇವನೆಮಾಡಿದೇನೆ. ಆದ್ದರಿಂದ ಇದು ಕಷ್ಟಕಾಲದಲ್ಲಿ ತುಂಬಾ ಉಪಕಾರವು ಮತ್ತು ದೊಡ್ಡ ಸಹಾಯವಾದ್ದರಿಂದ ಇದನ್ನು ಎಲ್ಲರೂ ತೆಗೆದುಕೊಳ್ಳುವಂತೆ ಶಿಫಾರಸು ಮಾಡುವುದಕ್ಕೆ ಸಂತೋಷಪಡುವವನಾಗಿದ್ದೇನೆ.”

ದೇಹಸ್ಥಿತಿ ಎಷ್ಟೇ ಕೆಟ್ಟಿದ್ದರೂ ಪೆರೂನಾ ಗುಣಮಾಡಿ ಆರೋಗ್ಯ ಕೊಡಬಲ್ಲದು.

ಮಿಸೆಸ್ ಜೆ. ಕೋಲ್ಸ್, ೪೫೧ ನೋತ್ರ ಡೇಂ ಬೀದಿ, ವೆಸ್ಟ್‌ಮೌಂಟ್, ಮಾಂಟ್ರಿಯಲ್, ಕ್ಯಾನ, ಈಕೆ ಬರೆಯುವುದು.—

ಕಳೆದ ಚಳಿಗಾಲದಲ್ಲಿ ನನಗೆ ತುಂಬಾ ಶೀತವಾಯಿತು. ಅದು ನನ್ನ ನೆತ್ತಿಗೂ ಗಂಟಲಿಗೂ ವ್ಯಾಪಿಸಿದ್ದರಿಂದ ನಾನು ನನ್ನ ಕೆಲಸಗಳನ್ನು ಮಾಡುವುದಕ್ಕಾಗದೆ ಹಾಸಿಗೆಯಲ್ಲೇ ಬಿದ್ದುಕೊಂಡಿದ್ದೆನು. ಒಬ್ಬ ಸ್ನೇಹಿತನು ಬಂದು ಪೆರೂನಾ ತರಿಸಿ ತೆಗೆದುಕೋ ಎಂದು ಹೇಳಿದನು. ಅದರಂತೆ ನಾನು ಒಂದು ಬಾಟ್ಲು ತರಿಸಿ ಸೇವಿಸುವುದಕ್ಕೆ ಆ ಭಯವಾದಾಗ್ಗೆ ಗುಣಕಾಣುತ್ತಾ ಬಂದಿತು. ಹಾಗೇ ನಾನು ಮೂರು ಬಾಟ್ಲು ತೆಗೆದುಕೊಂಡದ್ದರಿಂದ ಈಗ ನನಗೆ ಪೂರ್ವದಂತೆ ಆರೋಗ್ಯವಾಗಿರುತ್ತದೆ. ನನ್ನ ನರಗಳ ಶಕ್ತಿಯು ಬಹಳ ಕೆಟ್ಟುಹೋಗಿದ್ದಿತು. ಆದರೂ ಪೆರೂನಾ ಸೇವನೆಯಿಂದಲೇ ಒಳ್ಳೆ ಆರೋಗ್ಯ ಉಂಟಾಗಿದೆ.”

- ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಈ ಔಷಧ ಸಿಕ್ಕುವ ಸ್ಥಳಗಳು—

(೧) ಹಿಗಿನ್‌ಬಾತಮ್ ಅಂಡ್ ಸನ್ಸ್, ಬೆಂಗಳೂರು; ಅಥವಾ,

(೨) ಇಂಗ್ಲಿಷ್ ಡ್ರಗ್ ಕಂಪನಿ, ೩೯೮ ಮಿಂಟ್ ಬೀದಿ, ಮದರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

7—2—1908 ರಿಂದ 14—2—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	28	8	0	0
ಮೈಸೂರು ,,	11	6	0	0
ಬೆಂಗಳೂರು ಡಿಸ್ಟ್ರಿಕ್ಟು	76	62	0	0
ಮೈಸೂರು ,,	44	30	0	0
ಕೋಲಾರ್ ,,	84	93	0	0
ಕೋಲಾರ್ ಚಿನ್ನದ ಗಣಿಗಳು	16	6	0	0
ತುಮಕೂರು ಡಿಸ್ಟ್ರಿಕ್ಟು	4	5	0	0
ಹಾಸನ ,,	7	6	1	1
ಚಿತ್ರದುರ್ಗ ,,	0	0	0	0
ಕಡೂರ್ ,,	31	9	0	0
ಶಿವಮೊಗ್ಗ ,,	*	*	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	303	239	1	1

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಮಾಘ ಬಹುಳ ದಶಮಿ ಗುರುವಾರದಿಂದ ಫಾಲ್ಗುಣ ಶುದ್ಧ ಬಿದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೮ನೇ ಫೆಬ್ರುವರಿ ಮತ್ತು ಮಾರ್ಚಿ.

ತಾ	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ಸೌರ ಕುಂಭ ಮಾಸ
27	ಗುರು	ದಶಮಿ	13-13	ಮೂಲ	6 56	16
28	ಶುಕ್ರ *	ಏಕಾದಶಿ	7 50	ಪೂರ್ವಾ	3 30	17
29	ಶನಿ ¶	ದ್ವಾದಶಿ	2-2	ಉತ್ತರಾ	54-4	18
1	ರವಿ ,,	ಚತುರ್ದಶಿ	50-4	ಧ	50 56	19
2	ಚಂದ್ರ ::	ಅಮಾವಾಸ್ಯೆ	44 24	ಶ	47 48	20
3	ಕುಜ	ಪಾಡ್ಯ	39-28	ಪೂರ್ವಾ	3-38	21
4	ಬುಧ ‡	ಬಿದಿಗೆ	31 56	ಉತ್ತರಾ	41-2	22

*, ಸರ್ವತ್ರ ಏಕಾದಶಿ. ¶ ಶನಿಪ್ರದೋಷ. ,, ಮಹಾಶಿವರಾತ್ರಿ, ನಂಜನಗೂಡಿನಲ್ಲಿ ಬೆಳ್ಳಿಕೈಲಾಸವಾಹನ. :: ಸರ್ವತ್ರ ಅಮಾವಾಸ್ಯೆ, ಅಮಾಸೋಮವ್ರತ, ಶ್ರೀರಂಗಪಟ್ಟಣದ ಗಂಗಾಧರೇಶ್ವರ ರಥ, ಮಾರೀ ಹಬ್ಬ ‡ ಚಂದ್ರೋದಯ

ಪೇಟೇ ಧಾರಣೆ

ದಿನಸಿ.		ಮೈಸೂರು.	ಬೆಂಗಳೂರು.
ಕಡ್ಡೀ ಅಕ್ಕಿ ಮಲ್ಲಾ ೧ಕ್ಕೆ	ರೂ	೧೩-೦-೦	೧೪-೪-೦
ಕಂಬೋತಿ ಅಕ್ಕಿ ಅಸಲ್ ..	..	೧೩-೮-೦	೧೪-೦-೦
,, ೯ನೆಯದು	..	೧೩-೦-೦	೧೩-೮-೦
ಬಾಯಿಬ್ರಾಹ್ ಅಕ್ಕಿ		೧೩-೦-೦	೧೩-೧೨-೦
ಸಣ್ಣಕ್ಕಿ ಅಸಲ್ ..		೧೫-೮-೦	೧೬-೦-೦
,, ದುಯ್ಯಂ ..		೧೫-೩-೦	೧೫-೦-೦
ತೊಗರೀ ಬೇಳೆ ಮಲ್ಲಾ ೧ಕ್ಕೆ		೧೪-೦-೦	೧೪-೮-೦
,, ದುಯ್ಯಂ		೧೩-೮-೦	೧೪-೦-೦
ಪ್ರ್ಯ ರಾಗಿ ಮಲ್ಲಾ ೧ಕ್ಕೆ		೬-೧೨-೦	೬-೪-೦
ಕಾಡ್ರಾಗಿ ..		೬-೪-೦	೬-೦-೦
ಜೋಳ		೬-೦-೦	೬-೧೨-೦
ಅಲಸಂದೆ ಮಲ್ಲಾ ೧ಕ್ಕೆ ..		೧೦-೮-೦	೧೧-೦-೦
ಬಿಳೀ ಅವರೆ ..	..	೮-೧೪-೦	೮-೦-೦
ಹೆಸರು ..	..	೧೦-೯-೦	೧೦-೮-೦
ಉದ್ದು ..	..	೧೪-೦-೦	೧೨-೪-೦
ಕಡಲೆ ..	..	೧೨-೮-೦	೧೨-೧೨-೦
ಎಳ್ಳು ಸೆ. ೧೨೩ ಕ್ಕೆ	..	೨೪-೮-೦	೨೩-೦-೦
ಹುರುಳಿ ..	..	೬-೪-೦	೬-೪-೦
ಹರಳು ೧೨೩ ಸೇರಿಗೆ		೧೨-೦-೦	೧೨-೪-೦
ಸೀಗೇಕಾಯಿ ಮಣ ೧ಕ್ಕೆ ..	..	೨-೪-೦	೧-೧೨-೦
ಮೆಣಸಿನಕಾಯಿ	..	೨-೮-೦	೨-೧೦-೦
,, ದುಯ್ಯಂ ..	..	೨-೪-೦	೨-೮-೦
ಬೆಲ್ಲ ದೊಡ್ಡ ಅಚ್ಚು ..	..	೫-೦-೦	ಮ ೧-೯-೦
ಒಳ್ಳೆಣ್ಣೆ ಮಣ ೧ಕ್ಕೆ	..	೬-೪-೦	೬-೪-೦
ಹರಳೆಣ್ಣೆ ,, ..	..	೪-೧೨-೦	೪-೪-೦
ಕೊತ್ತುಂಬರಿ ಮಲ್ಲಾ ೧ಕ್ಕೆ ..	..	೫-೮-೦	೬-೦-೦
ಉಪ್ಪು ,, ..	..	೫-೦-೦	೫-೧೦-೦
ಹುಣಿಸೇ ಹಣ್ಣು ..	..	೨-೪-೯	೧-೮-೦
,, ಹಳೇದು ..	..	೧-೮	೧-೧೦-೦
ತುಪ್ಪ ಮಣ ೧ಕ್ಕೆ ..	..	೧೩-೮-೦	೧೫-೦-೦
ಸೀಮೆಯೆಣ್ಣೆ ಪಟ್ಟಿ ೧ಕ್ಕೆ		೪-೧೫-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	..	೩-೮-೦	೩-೧೨-೦
ಅಡಿಕೇಕಾಯಿ ಮಣ ೧ಕ್ಕೆ	..	೧-೦-೦	೧-೦-೦
ಅಂಬ್ಗಾಳದ ಕಾಯಿ ಮಣ ೧ಕ್ಕೆ	..	೩-೧೨-೦	೩-೧೩-೦
ಚಿನ್ನ (ಪೌನ್) ತೊಲ	..	೧೫-೬-೦	೧೫-೬-೦
,, ,, ಚೂರು	..	೧೫-೧೦-೦	೧೫-೬-೦
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	೨೫-೦-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೬೫-೦-೦	೬೩-೦-೦

Printed and Published by the Rev. E. W. Thomson, M. A., Proprietor and Manager, Wesleyan Mission Press, Mysore. 27/2/1908.

REGISTERED M. 30

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಗ೯೦೮ ನೇ ಇಸವಿ ಮಾರ್ಚಿ ತಾರೀಖು ೫ ನೇ ಗುರುವಾರ. ಸಂಚಿಕೆ ೪೦

BASEL MISSION WEAVING ESTABLISHMENT, 59-13

MANGALORE, SOUTH CANARA

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸಲ್ ಮಿಶ್ಯನ್ (ಬಸ್ತ್ರದ) ನೆಯ್ಗೆಯ ಕಾರಖಾನೆಯಲ್ಲಿ

...ಬಟ್ಟೆಗಳು, ಶರ್ಟಿಂಗ್ ಯಾನೆ ... ಬಟ್ಟೆಗಳು, ಬೇರೆ ಇತರ ಬಟ್ಟೆಗಳು ... ಯಾನೆ ... ತಯಾರಿಸಲ್ಪಟ್ಟ ... ತಯಾರಿರುತ್ತವೆ

ವಿಶೇಷ ಲಕ್ಷಿಸತಕ್ಕದ್ದು — ಈ ನಮ್ಮ ... ಗಳಿಗೆ ... "ಟ್ರೇಡ್ ಮಾರ್ಕ" ... ಲೇಬಿಲ್ ಯಾನೆ ಚೀಟು ... ತಕ್ಕದ್ದು

ಒಳ್ಳೇ ಕಮಿಶ್ಯನ್ — ... ಗಳನ್ನು ತೆಗದು ಕೊಳ್ಳುವ ... ಕೊಳ್ಳಬ... ವ

ನಮೂನೆ ಯಾ ಮಾದರಿಗಳು — ... ಊರಿನ ... ಕಾರರು ಈ ಕೆಳಗಿನ ವಿಳಾಸಕ್ಕೆ ಬರ ... ಕಳುಹಿಸಲ್ಪಡುವವು

ಶರ್ತ — ನಗದಾಗಿ ಇಲ್ಲವೆ ... ಟಪ್ಪಾಲ ಮುಖಾಂತರ ... ಮುಂಗಡವಾಗಿ ... ತಕ್ಕದ್ದು

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರಿಯತಕ್ಕದ್ದು

ಈ 'ಟ್ರೇಡ್ ಮಾರ್ಕ' ನ್ನಾಗಲೀ ನಾವು "ಕೋಪಿರೈಟ್" ಪಡದಿರುವ ... ಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ... ಗಳ ಮೇಲೆ ಪ್ರಯೋಗಿಸಬಾರದು ... ಕೂಡದು

ವಿಳಾಸ — BASEL MISSION WEAVING ESTABLISHMENT
MANGALORE S CANARA

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

172

ತಲೆಗೊಳ್ಳಿರಿ — ತ್ವರೆಗೈಯಿರಿ ಅಮೃತಾಂಜನ ಸರ್ವಲೋಕರಂಜನ ಸಕಲ ವ್ಯಾಧಿಭಂಜನ ಚಿಕಿತ್ಸಾವಳಿಯೊಳು ... ಸಂಜೀವನ ... ಮನೋರಂಜನ ... ಅದ್ಭುತ ... ಮಾಡಿರಿ ... ಕಂಡುಬರುವದಿಲ್ಲವಾದರೆ ... ಹಿಂತಿರುಗಿ ಕೊಡಲ್ಪಡುವದು ... ತರಿಸಿಕೊಂಡವರಿಗೆ ... ಉಚಿತವಾಗಿ ದೊರ ಕುವದು



ನಿಶ್ಯಂಕಯಾಗಿ ಭಾರತವರ್ಷೀಯ ಔಷಧಗಳ ತಯಾರಿಸಿದ ... ಸುಗ ಮುಲಾಮು ಇದರಿಂದ ತಲೆನೋವು ... ವಾತ ... ಪಕ್ಷವಾತ ಗಂಟ್ಲು ನೋವು ... ಗಂಟ್ಲು ನೋವು ... ಉಳುಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗ ಇದು ಅತ್ಯುತ್ತಮ

ಈ ಕಂಪನಿಯವರು ... ಔಷಧಿಗಳನ್ನು ... ಕೆಳಗಿನ ವಿಳಾಸಕ್ಕೆ ಬರೆದ ...

ಬಾಟ್ಲಿ ಒಂದಕ್ಕೆ ಕಿಮ್ಮತು ೦—೮—೦ ಪೋಸ್ಟು ಖರ್ಚು ೦—೪—೦

ಗಜಕರ್ಣದ ಮುಲಾಮು

... ಗಜಕರ್ಣ ... ಇದರಿಂದ ಚರ್ಮವು ... ಇಲ್ಲ ಮತ್ತು ಉರಿಯುವದಿಲ್ಲ ... ಗುಣ ಕಂಡು ಬರುವದಿಲ್ಲವಾದರೆ ... ಹಿಂತಿರುಗಿ ಕೊಡಲ್ಪಡುವದು ಡಬ್ಬಿ ಒಂದಕ್ಕೆ ಕಿಮ್ಮತು ೦—೩—೦ ಪೋಸ್ಟು ಖರ್ಚು ೦—೩—೦

ದಂತಮಂಜನ — ಹಲ್ಲುಗಳಿಂದ ಬರುವ ರಕ್ತ ನಿಲ್ಲುತ್ತದೆ ... ಹಲ್ಲುಗಳು ಗಟ್ಟಿಯಾಗುತ್ತವೆ ಹಲ್ಲುಗಳು ಬೆಳ್ಳಗಾಗುತ್ತವೆ ಹಲ್ಲು ನೋವನ್ನು ತೆಗೆಯುತ್ತದೆ ಡಬ್ಬಿ ಒಂದಕ್ಕೆ ೦—೨—೦ ಪೋಸ್ಟು ಖರ್ಚು ೦—೩—೦

ವಜ್ರಗುಳಿಕ — ... ಶಕ್ತಿ ಕೊಡುತ್ತದೆ, ... ನಿಲ್ಲಿಸುತ್ತದೆ ರಕ್ತ ... ದೇಹಕ್ಕೆ ಆರೋಗ್ಯಕೊಡುತ್ತದೆ ಡಬ್ಬಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೩—೦

ಕೇಶವರ್ಧಿನಿ — ತಲೆ ... ತಂಪುಮಾಡುವದು, ... ಗಳನ್ನು ಬೆಳೆಸುವದು ... ಗಳನ್ನು ಕಪ್ಪುಮಾಡುವದು, ... ಸರಿಯಾಗಿ ... ಬಾಟ್ಲಿ ಒಂದಕ್ಕೆ ೧—೦—೦, ಪೋಸ್ಟು ಖರ್ಚು ೦—೩—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಫೋರ್ಟು, ಮುಂಬಯಿ.

ಟೆಲಿಗ್ರಾಫ ಅಡ್ರೆಸು—"ಅಮೃತಾಂಜನ," ಮುಂಬಯಿ.

ಕಾರ್ಡ ಸೈಜು ೪| × ೩|

ಫೋಟೋ ತೆಗೆಯುವ

ಫೋಟೋ ಕ್ಯಾಮರಾ.

84 79

ಬೆಲೆ ಪಕ್ತ ಮೂರು ರೂಪಾಯಿ

ಇದರಿಂದ ... ಮನುಷ್ಯನ ಫೋಟೋ ಅವನಿಗೆ ... ತೆಗೆಯಬಹುದು ... ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ ಈ ಕ್ಯಾಮರಾದ ಮಾಹಿತಿಯನ್ನು ... ನಾವು ... ಮಾಡಿ ಕೊಡುವೆವು ... ಇದಕ್ಕೆ ೧೦ ರಿಂದ ೧೫ ರೂ ಬೆಲೆ ... ಇದರ ... ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು ಟಪ್ಪಾಲ್ ಖರ್ಚು ... ಅಣೆ

ಇದು ಸಿಕ್ಕತಕ್ಕ ವಿಳಾಸ —

... ಮಹಾಜನ ... ರೋಡ, ಪೋಸ್ಟು ... ಮುಂಬಯಿ

ಜ್ವರ ಹರ 18

ಇದು ಸಾಧಾರಣ ಜ್ವರ, ... ಜ್ವರ, ... ಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ, ... ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ... ವದು

... ಸಬ್ ಡಿವಿಜನ್ ಆಫಿಸರ್ ... ವೆಂಕಟಪತಿ ಅಯ್ಯರವರು— ... ದಿವಸಗಳ ಹಿಂದೆ ಕಳುಹಿಸಿಕೊಟ್ಟ ... ಸ್ವಲ್ಪ ಕಾಲದಲ್ಲಿ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ... ಜನಗಳು ... ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ ... ೧—೪ ರೂ ... ಪೋಸ್ಟೇಜ ...

****

ಹಿಮಾಂಶು ಕರ್ಪೂರ

ಈ ಔಷಧವು ಅಜೀರ್ಣ, ... ಭೇದಿ, ... ವಾಂತಿಭೇದಿ, ನಾನಾತರದ ... ರೋಗಗಳು ... ಔಷಧವಾಗಿ ... ಗುಣಕೊಡುವದು ... ಸಂದೇಹವಿಲ್ಲ ... ರೋಗಗಳನ್ನು ... ಗುಣಪಡಿಸುತ್ತದೆ ... ಎಂಬ ಔಷಧದಂತೆಯೇ ... ದೊರಕುವದು.

... ಗಣಪತಿಯವರು— ... ನನ್ನ ... ಆಸ್ಪತ್ರೆಯಲ್ಲಿ ಅನೇಕ ... ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧ ವೆಂದು ಬರೆದಾರೆ

ಈ ಎರಡು ಔಷಧಗಳೂ ... ಗಳಲ್ಲಿರುವ ... ಔಷಧ ವ್ಯಾಪಾರಿಗಳಲ್ಲೂ ... ಸಿಕ್ಕುತ್ತವೆ ಇಲ್ಲವೆ ಕೆಳಗಿನ ವಿಳಾಸದಲ್ಲಿ ವಿಚಾರಿಸ —

... ಔಷಧಗಳ ಕಂಪನಿ,

... ಲೇನ್ ... ಮುಂಬಯಿ.

ಸುಗಂಧಸಂಜೀವನೀ ಭೃಂಗಾಮಲಕ ತೈಲವು.

5-5

ಈ ತೈಲವನ್ನು ತಲೆಗೂ, ಮೈಗೂ ಸಹ ಲೇಪಿಸಿ ಅಭ್ಯಂಗಸ್ನಾನ ಮಾಡುವದು ದಿನಚರಿಯಲ್ಲಿ ಸುವಾಸನೆ, ಕೂದಲು ಮೃದುವಾಗುವದು, ನೇತ್ರಗಳ ದೃಷ್ಟಿ ವೃದ್ಧಿಯಾಗುವದು. ತಲೇನೋವು, ಅರ್ಧ ತಲೆ

ನೋವು, ತಲೆಸುತ್ತುವದು, ತಲೆಕೂಳೆ, ತಲೆಹುರ, ಮುಂತಾದ್ದು ನಿವಾರಣೆಯಾಗುತ್ತದೆ. ಕಣ್ಣೀರು ಸುರಿಯುವದು, ಕಣ್ಣುರಿ, ಕಣ್ಣುನೋವು ಮುಂತಾದವುಗಳಿಗೆ ಅತ್ಯಂತ ಗುಣಕಾರಿ. ಮೂಗಿನಿಂದ ರಕ್ತಸ್ರಾವ, ಮೂಗು ಒಣಗುವದು ಈ ವುಗಳನ್ನೆಲ್ಲಾ ಪರಿಹಾರ ಮಾಡುತ್ತೆ. ಮೈಕೈದುರದೆ ಮತ್ತು ಉರಿ ಮುಂತಾದ್ದು ನಿರ್ನಾಮವಾಗುತ್ತದೆ. ಉಷ್ಣಾಧಿಕ್ಯದಿಂದ ಅಂಗೈ ಅಂಗಾಲಿನ ಉರಿ, ನಿದ್ರೆಬಾರದೆ ಇರುವದು ಇವೇ ಮೊದಲಾದ ವ್ಯಾಧಿಗಳನ್ನು ಗುಣಮಾಡುತ್ತದೆ. ಮೆದುಳಿಗೆ ತಂಪುಮಾಡಿ ಸ್ಮರಣಶಕ್ತಿ ಹೆಚ್ಚಿಸುವದು. ವಿದ್ಯಾರ್ಥಿಗಳಿಗೂ, ವಿಶೇಷ ಯೋಚನೆಯಿಂದ ಕೆಲಸಮಾಡತಕ್ಕವರಿಗೂ ಅತ್ಯಂತ ಉಪಯುಕ್ತವಾದದ್ದು. ಕ್ರಯ ಶೀಸೆ ೧ ಕ್ಕೆ ೮ ಆಣೆ; ಅಂಚೆ ಹಾಸಲು ೯ ಆಣೆ.

ಯೋಗ್ಯತಾಪತ್ರ.

(೧) ನಾನು ನಿಮ್ಮಲ್ಲಿ ತಯಾರಾಗುವ ಸುಗಂಧ ಸಂಜೀವಿನೀ ಭೃಂಗಾಮಲಕ ತೈಲವನ್ನು ತರಿಸಿ ಉಪಯೋಗಿಸಿದೆನು. ತೈಲಕ್ಕೆ ಈವುಮಾಡಿರುವ ಸದ್ಗುಣಗಳು ಯಥಾರ್ಥವಾದವುಗಳೆಂದು ಹೇಳುವದಕ್ಕೆ ನಾನು ಬಹಳ ಸಂತೋಷಪಟ್ಟವನಾಗಿದ್ದೇನೆ. ಈ ತೈಲದಿಂದ ನಾನು ಬಹಳ ಫಲವನ್ನು ಹೊಂದಿದ್ದೇನೆ. ಸಂದೇಹ ಪ್ರಕೃತಿಯುಳ್ಳ ಮನುಷ್ಯನೂ ಸಹ ಪರಿಶುದ್ಧತೆಯಿಂದ ತಯಾರ್ಮಾಡಲ್ಪಟ್ಟ ಈ ತೈಲದಿಂದಾಗುವ ಸುಪ್ರಯೋಜನವನ್ನು ಹೊಂದುವನೆಂದು ನಾನು ದೃಢವಾಗಿ ಹೇಳಬಲ್ಲೆನು.

ತಾ॥ ೮—೧೧—೧೯೦೭. ಬಿ. ಬಾಬುರಾವ್,

ರಿಟೈರ್ಡ್ ತಹಶೀಲ್ದಾರ್, ಮಂಗಳೂರು.

(೨) ಆಯ್ಯಾ ಮಿತ್ರರೇ:—ತಮ್ಮ ಸುಗಂಧ ಸಂಜೀವನೀ ಭೃಂಗಾಮಲಕ ತೈಲವನ್ನು ಎಷ್ಟು ರೀತಿಯಾಗಿ ಹೊಗಳಿದರೂ ತೀರದು. ತಮ್ಮ ತೈಲವು ಬರುವದಕ್ಕಿಂತ ಮುಂಚೆ ತಲೆಕೊಳೆಯಿಂದಲೂ, ಹಲ್ಲುನೋವಿನಿಂದಲೂ, ನಿದ್ರೆಯಿಲ್ಲದ್ದರಿಂದಲೂ ಅನೇಕ ತರವಾದ ತೊಂದರೆಯನ್ನನುಭವಿಸುತ್ತಿದ್ದ ನನಗೆ, ಪ್ರಾಣವನ್ನು ಬಿಡುತ್ತಿರುವ ರೋಗಿಗೆ ಸಂಜೀವನವನ್ನು ಕೊಟ್ಟಂತೆ, ಒಂದೇ ದಿವಸಕ್ಕೆ ತಾವು ಹೇಳಿರುವ ಮೇರೆ ನಡಿಸಿದ್ದರಲ್ಲಿ ತುಂಬಾ ಗುಣವನ್ನು ಹೊಂದಿ, ನಾನೇ ಪರಮಸಂತೋಷಪಟ್ಟವನಾಗಿ ನನ್ನ ಮಿತ್ರರಾದ ಇನ್ನೊಬ್ಬರಿಗೂ ಕೊಟ್ಟಿದ್ದರಲ್ಲಿ ಅವರಿಗಿರುವ ಕಣ್ಣು ಉರಿ ಮತ್ತು ಕಣ್ಣಿನಲ್ಲಿ ಯಾವಾಗ್ಯೂ ನೀರು ಸುರಿಯುತ್ತಲೇ ಇರುವ ಈ ರೋಗವನ್ನು ಸಹ ಎಷ್ಟೋ ಮಟ್ಟಿಗೆ ಗುಣಹೊಂದಿಸಿರುತ್ತೆ. ತಾವು ಲೋಕೋಪಕಾರಾರ್ಥವಾಗಿ ತಯಾರಿಸಿದ ಈ ಪರಮೌಷಧವನ್ನು ಎಷ್ಟು ಹೊಗಳಿದರೂ ತೀರದಿದ್ದರಿಂದ ನನ್ನ ಮೇಲೆ ಕೃಪೆಯಿಟ್ಟು ಇನ್ನೂ ಅರ್ಧ ಡಜನ್ ಬಾಟ್ಲೆಯನ್ನು ದಯವಿಟ್ಟು ಜಾಗ್ರತೆಯಾಗಿ ಕಳಿಸಿದಲ್ಲಿ ತಮ್ಮ ಉಪಕಾರದಿಂದ, ರೋಗದಿಂದ ನರಳುತ್ತಿರುವ ನಾವು ಎಷ್ಟೋ ಗುಣವನ್ನು ಹೊಂದಿ ತಮ್ಮನ್ನು ಬಾರಿಬಾರಿಗೂ ನೆನಸುತ್ತಿರುವೆವೆಂಬುವದಕ್ಕೆ ತುಂಬಾ ಕೃತಜ್ಞರಾಗಿರುತ್ತೇವೆ.

ತಾ॥ ೪—೨—೧೯೦೮. ಡೇ. ರಾ. ಗು. ರಾಮಣ್ಣ,

ದೇವಂಗಿ, ತೀರ್ಥಹಳ್ಳಿ ತಾಲ್ಲೋಕು, ಶಿವಮೊಗ್ಗ ಜಿ॥

ರಕ್ತಶೋಧಕ ತೈಲವು.

ಅನೇಕ ಆಫೀಸರಿಂದ ಯೋಗ್ಯತಾ ಪತ್ರ ಹೊಂದಿದೆ. ಕ್ರಯ ಸುಲಭ. ಕ್ಷಿಪ್ರಗುಣಕಾರಿ. ತುರಿ, ಹುರಕಾಲು, ಬಿಳುಪಿಷ್ಟ, ಎಂಥಾ ಹುಳು ಬಿದ್ದಿದ್ದ ಹಳೆ ವ್ರಣವೇ ಆಗಲಿ, ಪುರಾತನ ವಿಷಪುರಿ, ಇತ್ಯಾದಿ ಮಹಾ ಕಠಿಣ ರೋಗಗಳೆಲ್ಲಾ ತೀವ್ರ ಆರೋಗ್ಯವಾಗುವದು. ಈ ತೈಲವನ್ನು ಲೇಪಿಸಿದರೆ ಉರಿಯುವದಿಲ್ಲ. ರಸ, ಗಂಧಕ, ಮೈಲತುತ್ತು ಮುಂತಾದದ್ದು ಖಂಡಿತವಾಗಿ ಇದರಲ್ಲಿ ಸೇರಿಸಿಲ್ಲ. ಮತ್ತು ಪಥ್ಯ ಕರಮಾನ. ಇತ್ಯಾದಿ ಬಾಧ್ಯಗಳನ್ನೆಲ್ಲಾ ಬಹುಬೇಗ ತಪ್ಪದೆ ಆರೋಗ್ಯ ಮಾಡುತ್ತದೆ. ಕ್ರಯ, ಶೀಸೆ ೧ ಕ್ಕೆ ೧೨ ಆಣೆ. ಅಂಚೆ ಹಾಸಲು ೪ ಆಣೆ.

ಯೋಗ್ಯತಾಪತ್ರ.

ಬೆಂಗಳೂರು,

ಪ್ರಿಯ ಸಭ್ಯರೇ, ೧೨ ನೇ ಮೇ, ೧೯೦೭.

ನಿಮ್ಮ ರಕ್ತಶೋಧಕ ತೈಲದ ಗುಣದಿಂದ ಮೈಸೂರ್ ಸರ್ವಿಸ್ ದಸ್ತುರಾದ ಮ॥ ರಾ॥ ಯಸ್. ವೆಂಕಟವರದೈಯ್ಯಂಗಾರ್ರವರ ಕುಟುಂಬವೆಲ್ಲಾ ಕೃತಜ್ಞರಾಗಿದ್ದಾರೆ. ೮ ತಿಂಗಳಿನ ಶಿಶುವಿಗೆ ಪ್ರಾಪ್ತವಾಗಿದ್ದ ಚರ್ಮರೋಗಕ್ಕೆ ಈ ತೈಲವನ್ನು ಒಂದು ವಾರ ಲೇಪಿಸುವಲ್ಲಿ ಆರೋಗ್ಯವು ಕಂಡುಬಂತು. ವಿಶೇಷ ಬೆಲೆಯುಳ್ಳ ಯೂರೋಪಿಯನ್ ಔಷಧವು ತಿಂಗಳುಗಟ್ಟಲೆ ಲೇಪಿಸಿದಾಗ್ಯೂ ಆರೋಗ್ಯಕಾಣದೆ ನಿಮ್ಮ ತೈಲದಿಂದ ಕ್ಷಿಪ್ರದಲ್ಲಿ ಆರೋಗ್ಯದ ಲಕ್ಷಣವಂ ನೋಡಿ ಆಶ್ಚರ್ಯಚಕಿತರಾಗಿದ್ದಾರೆ. ಆದಾರಣ್ಯ ನಿಮ್ಮ ತೈಲವನ್ನೇ ಉಪಯೋಗಿಸುತ್ತಿದ್ದೇವೆ. ಯಾವ ಚರ್ಮರೋಗಕ್ಕಾಗಲಿ ಈ ತೈಲವನ್ನು ಯಾರೂ ಉಪಯೋಗಿಸಬಹುದೆಂದು ಅಭಿಪ್ರಾಯಪಡುವ

ನಿಮ್ಮ ಕ್ಷೇಮಚಿಂತಕ,

ಯಸ್. ಕೃಷ್ಣಯ್ಯಂಗಾರ್,

ನೆಲ್ಲಂತ ಎರಡು ಔಷಧಗಳೂ ದೊರೆಯುವ ಸ್ಥಳ:—

☞ ಬಿ. ಆರ್. ಗೋವಿಂದರಾಜುಲು,

೧೭, ಆರ್ಲೇಪೇಟೆ, ಬೆಂಗಳೂರು ಸಿಟಿ.

CHAMBERLAIN'S COUGH REMEDY.

ಚೇಂಬರ್ಲೇನ್ಯವರು ಕಂಡು ಹಿಡಿದ ಕೆಮ್ಮಿನ ಔಷಧವು.

1-10

ಶೀತದ ಕೆಮ್ಮು, ಗಂಟ್ಲು ಗೂರೆನ್ನುವದು, ಕುಹಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲು ಸಲು, ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಳ ಪ್ರಯೋಜನವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ನಾನಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ನೆಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವದು. ಕರುಣಾಯು ಉಗುಳಿನಲ್ಲಿ ರಕ್ತಬೀಳುವದು, ಕಾಸಗೆಯ ಕ್ಷಯರೋಗಕ್ಕೆ ಆಸ್ಪದವಾಗುವದು.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲನಲ್ಲಿ ಶ್ಲೇಷ್ಮ ಕಟ್ಟುವದನ್ನೂ ಶ್ಲೇಷ್ಮ ಬೀಳುವದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೋಯ್ಯುವದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಕಟ್ಟುವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನಿದ್ರೆ ಸುಖವಾಗಿ ನಿಶ್ಚಿಂತಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಸ್ನೇಯಂಡವಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ಇಲ್ಲಿ ನೋಡಿ.

3-10

ತುಮಕೂರು ಜಿಲ್ಲಾ ಜಿಲ್ಲೆಯಲ್ಲಿ ಯೂರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಕಂಬಳಿಗಳು ಅತಿ ಶ್ರೇಷ್ಠವಾದ ಉಲ್ ಖಾನೆಯಿಂದ ತಯಾರಾಗುತ್ತವೆ.

ಕ್ರಯ:—೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯವರೆಗೆ

೧ ಡಜನ್ ಕಂಬಳಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ:—ಮ್ಯಾನೇಜರ್

ಹಾಸನದ ಕಂಬಳಿ ಕಾರ್ಖಾನೆ, ಜಿಲ್ಲಾ ಜೈಲು, ತುಮಕೂರು

ಮಹಾ ಬಾಧಾಪಹಾರಿಣಿಯು.

58-11

ಇದನ್ನು ಹೋಲುವದು ಪ್ರಪಂಚದಲ್ಲೇ ಇಲ್ಲವು.

ಕ್ಲೇಮೆಂಟ್‌ಯವರ ಯಂತ್ರ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಿದಾರೆ. ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ಮಂಡಿನೋವು, ಶೀತ, ಗಂಟ್ಲನೋವು, ಚರ್ಮವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಹೊಳುಕಿದ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೇಮೆಂಟ್‌ಯವರ ಈ ಅಮೋಘವಾದ ತೈಲವು ನೋಯಿಸುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಣಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ ಶೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜ್ ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಏಜೆಂಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜೆಂಟರ ವಿಳಾಸ—

ಎಫ್. ಡಬ್ಲಿಯು. ಅರ್ಲ,

ಸಿಮೆಟ್ರಿರೋಡ್, ವೇಪೇರಿ, ಮದರಾಸ್.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ರೋಗಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಆವಶ್ಯಕ

SCOTT'S EMULSION 31-51

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.



ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು.

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿದೆ.

ಮೀನುಮನುಷ್ಯ ಇರುವ ಈ ಔಷಧದ ಗುರುತು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈಗಲೇ ಸೀಮೆಯಿಂದ ಬಂದಿದೆ.

117-10

೫,೦೦೦ ಹೊಸ ಕೋಟು ಹೊಲಿಯುವ ಸುಪೀರಿಯರ್ ಉಲ್ ಧಾರಗಳು. ಬಿಡಿಪೇಪರು—ಮಾತ್ರ ಇದೆ—ಬಾರಿ, ಕಮ್ಮಿ ಕ್ರಯ:

೧ ಕೋಟಿಯಾಗುವ ಉಲನ್ ಧಾರಕ್ಕೆ	೧—೮—೦
೧೦ ಕೋಟಿನಾಗುವ ಬಂಡಲ್‌ಗೆ ೧ ಕ್ಕೆ	೩—೮—೦
ಕೊಳ್ಳೆ ಸಾಟಿ ೧ ಕ್ಕೆ	೦—೧—೬
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೧

ಎರಡು ಕಡೆಯಲ್ಲಿ ಬರೆಯುವ ಪೋಸ್ಟ್ ಕಾರ್ಡ್ ೧೦೦ ಕ್ಕೆ ೪ ಆ. ಒಂದಾಣೆ ಸ್ಟಾಂಪು ಕಳುಹಿಸಿ ನೇತ್ರಾನಂದಕರವಾದ ೧೯೦೮ ನೆ ಇಸವಿಯ ಕ್ಯಾಲೆಂಡರ್ ಪಡೆಯಿರಿ. ವಿಳಾಸ:—

ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ಓದಿದವರಿಗೆಲ್ಲಾ ಪ್ರಯೋಜನವನ್ನು ಉಂಟುಮಾಡುವ

ನೋಟೀಸು.

15-3

ದಿ ಜನರಲ್ ಇಂಡಿಯಾ ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಮತ್ತು ವ್ಯಾರಿಯಬಲ್ ಆಶ್ಯೂರೆನ್ಸ್ ಕಂಪನಿ ಲಿಮಿಟೆಡ್.

ಹೆಡ್ ಆಫೀಸು—ಮದ್ರಾಸು.

೧೮೮೨ನೆ ಇಸವಿ ೬ ನೇ ಆಕ್ಟ್ ಪ್ರಕಾರ ರಿಜಿಸ್ಟ್ರಾಗಿದೆ.

ಈ ಕಂಪನಿಗೆ ಚಂದಾದಾರರುಗಳನ್ನು ಸೇರಿಸುವದಕ್ಕೆ ಮೈಸೂರು ಸೀಮೆಯಲ್ಲಿ ಅನೇಕ ಜನ ಸಬ್ ಏಜಂಟ್ರುಗಳು ಬೇಕಾಗಿದೆ. ತಾಲೂಕು ಮತ್ತು ಹೋಬಳಿ ಸ್ಕೂಲ್ ಮಾಸ್ಟರುಗಳು, ಶ್ಯಾನುಭೋಗರು ಮತ್ತು ಚಂದಾದಾರರುಗಳನ್ನು ಸೇರಿಸುವದರಲ್ಲಿ ಚಟುವಟಿಕೆಯುಳ್ಳ ಪುರವಣಿಗೆ ತಿಳಿದಂಥವರುಗಳು ಎಲ್ಲರೂ ಸಬ್ ಏಜಂಟ್ರುಗಳಾಗಬಹುದು. ಇದರಿಂದ ತಮ್ಮಗಳ ಇತರ ಕೆಲಸಕ್ಕೆ ತೊಂದರೆಯಿಲ್ಲ. ಈ ಸುಲಭವಾದ ಕೆಲಸಕ್ಕೆ ದಿನವಹಿ ಸ್ವಲ್ಪಹೊತ್ತು ಗಮನಕೊಡುವದರಿಂದ ಹೆಚ್ಚು ಪ್ರಯೋಜನ ಪಡೆಯಬಹುದು. ಲೈಫ್‌ಗಾದರೂ, ಕಲ್ಯಾಣಫಂಡಿಗಾದರೂ ತಿಂಗಳ ೧ ಕ್ಕೆ ಒಂದೇ ರೂಪಾಯಿ ಚಂದಾ ಕೊಡತಕ್ಕದ್ದು. ಗಂಡಸರು ಹೆಂಗಸರು ಯಾರೇ ಆಗಲಿ ವಯಸ್ಸು ಜಾತಿ ವಾಸಸ್ಥಳ ಮುಂತಾದ ನಿರ್ಬಂಧವಿಲ್ಲದೆ ಮೆಂಬರುಗಳಾಗಬಹುದು. ಸಬ್ ಏಜಂಟ್ರುಗಳಾಗಿ ಕೆಲಸ ಮಾಡಲು ಅಪೇಕ್ಷಿಸತಕ್ಕವರು ಈ ಕೆಳಗೆ ಸೈನ್ ಮಾಡಿರುವವರ ಪೈಕಿ ಯಾರಿಗಾದರೂ ೧ ಆಣೆ ಸ್ಟಾಂಪನ್ನಿಟ್ಟು ಬರೆದರೆ ರೂಲ್ಸು ಪುಸ್ತಕಗಳು, ಫಾರಂಗಳು ಮತ್ತು ಕಮಿಷನ್ ಪಟ್ಟಿಯು ಕಳುಹಿಸುತ್ತೇವೆ. ವಿಳಾಸ:—

ಸಿ. ಪದ್ಮನಾಭೈಯ್ಯ, ಚೀಫ್ ಏಜಂಟ್, ಬ್ಯಾಂಗಲೋರ್ ಸಿಟಿ ಪೇಟೆ,

ವಿ. ವೆಂಕಟಸುಬ್ಬಯ್ಯ, ಜಾಯಿಂಟ್ ಏಜಂಟ್, ಮೈಸೂರು

ಖಾತರಿಸಾಮಾನ್! ಹೊಸಬೂರ್ನೀಸ್. ಬೇಗ ತರಿಸಿ!!

121-15.

ಶುದ್ಧ ಕಾಶ್ಮೀರ ಉಣ್ಣೆಯ ದಪ್ಪವಾದ "ಬ್ಲಾಂಕೆಟ್" ಎಂಬ ಹೊಸ ನಮೂನೆ ಬನಾತವು ಎಷ್ಟೇ ಕ್ರೂರವಾದ ಛಳಿಯನ್ನಾದರೂ ದೂರಕ್ಕೆ ಓಡಿಸಿ ಮೈಗೆ ಬೇಕಾದ ಕಾವನ್ನೀಯುತ್ತೆ. ಸುಖವಾದ ಹೊದ್ದಿಕೆ! ಅತಿರಮ್ಯ! ಉದ್ದ ೯೦ ಅಂಗುಲ, ಅಗಲ ೪೮ ಅಂಗುಲ. ಕ್ರಯ ರೂ ೬. ಎರಡನೆಯ ತರಹ ರೂ. ೪ (ಶುದ್ಧ ಉಣ್ಣೆ)

ಪುಮುಚ್ಚೇರಿ ರೇಷ್ಮೆವಸ್ತ್ರಗಳು. ರೂ. ೪!!

ಅಂಚು, ಕೊನಗಳಲ್ಲಿ ಬೆಳ್ಳಿಗೂ ಹೂಗಳಿಂದಲೂ ಕೂಡಿ ಮಧ್ಯದಲ್ಲಿ ಕೆಂಪಾಗಿ ಹೊಸ ಸೊಗಸಾದ ನಮೂನೆ ಪುಮುಚ್ಚೇರಿ ರೇಷ್ಮೆ ವಸ್ತ್ರಗಳು ಹೊಂದಿರಲು ಯೋಗ್ಯವಾಗಿ ಬದಲಾಯಿಸದ ಗಟ್ಟಿ ಬಣ್ಣದ್ದಾಗಿ ೩ ಮೊಳದಗಲವಿದೆ. ಒಂದು ತರಿಸಿ ಉಪಯೋಗಿಸಿ. ನಿಮ್ಮ ಸ್ಥಿತಿ ತಿಳಿಯಲಿ. ರೂ. ೩೦ ರ ರೇಷ್ಮೆ ವಸ್ತ್ರವನ್ನು ಮೀರಿಸುತ್ತೆ. ಕ್ರಯ:—೩ ಮೊಳದುದ್ದ ರೂ. ೪ ನಾಲ್ಕು ಮೊಳದುದ್ದ ರೂ. ೫.

ಬಿಳೀ ರೇಷ್ಮೆ ಅಂಚು! ಮದ್ರಾಸ್ ಸೀರೆ! ಖಾತರಿ ಬಣ್ಣ!

ಬಿಳಿಯ ಅಸ್ಸಾಂ ರೇಷ್ಮೆ ಅಂಚು ೩ ಅಂಗಲದಗಲ ಒಂದೇ ತರಹೆಯ ೩ ಮೊಳದುದ್ದ ರೇಷ್ಮೆ ಸೆರಗುಗಳೆರಡು. ಶ್ರೇಷ್ಠವಾದ ನೂಲಿನ ೩॥ ಮೊಳದಗಲ ೧೮ ಮೊಳದುದ್ದದ ಸೀರೆ. ಕಪ್ಪು ಅಥವಾ ಕೆಂಪಿನ ಮೇಲಿನ ಮೇಘವರ್ಣದ್ದು. ಕ್ರಯ ರೂ. ೧೧—೮—೦. ಬಿಳಿಯ ರೇಷ್ಮೆ ಬೌಕಳಿಯಿಂದ ಕೂಡಿದ್ದು ರೂ ೧೬—೦—೦. ಎರಡಂಗುಲ ಅಂಚಿನ ಮಾಲಿನ ಸೀರೆ ರೂ. ೬.

ವಿಳಾಸ:—ರಾವ್ ಎಂಪೋರಿಯಂ, ಸ್ಟರ್ಲಿಂಗ್‌ಹಾಂ ರೋಡ್,

ವೇಪೇರಿ, ಮದರಾಸ್.

ವೃತ್ತಾಂತ ಪತ್ರಿಕೆ

೧೯೦೮ ನೇ ಇಸವಿ ಮಾರ್ಚ ತಾ|| ೫ ನೇ ಗುರುವಾರ.

ಜಕ್ಕಾಖೇಲರ ಯುದ್ಧಸಮಾಪ್ತಿಯು

ಇಂಡಿಯಾ ಗವರ್ನಮೆಂಟಿನವರು, ಹಿಂದೂಸ್ಥಾನದ ವಾಯುವ್ಯ ಸರಹದ್ದಿನ ಆಚೆ ಇರುವ ಜಕ್ಕಾಖೇಲರೆಂಬ ಪಂಗಡದ ಮೇಲೆ ಶಿಕ್ಷಾರ್ಥವಾದ ದಂಡನ್ನು ಕಳುಹಿಸಿದ್ದರಷ್ಟೆ. ಈ ಇಂಗ್ಲಿಷ್ ಸೈನಿಕರು ಜಕ್ಕಾಖೇಲರ ಬಜಾರ್ ಕಣಿವೆ ಎಂಬ ಸ್ಥಳಕ್ಕೆ ಹೋಗಿ, ಅವರ ಕೋಟೆಕೊತ್ತಲಗಳನ್ನು ನಾಶಮಾಡಿ, ಹಲವು ಜನರನ್ನು ಕೊಂದು, ತಮ್ಮ ಪರಾಕ್ರಮವನ್ನು ತೋರಿಸಿದ್ದರಿಂದ ಆ ಜನರು ಗಾಬರಿಪಟ್ಟು, ತಮ್ಮ ಮುಖಂಡರನ್ನು ಇಂಗ್ಲಿಷ್ ಸೈನ್ಯಾಧಿಪತಿಗಳ ಬಳಿಗೆ ಕಳುಹಿಸಿ, ಶರಣಾಗಿ ಒಪ್ಪಿಕೊಂಡದ್ದರಿಂದ, ಈ ಯುದ್ಧಕಾರ್ಯಗಳು ಕೊನೆಮುಟ್ಟಿದವೆಂದು ತಿಳಿಸಲು ಸಂತೋಷಪಡುತ್ತೇವೆ. ಈಗ ಇಂಗ್ಲಿಷ್ ಸೈನ್ಯಗಳು ಆ ಶತ್ರುಪ್ರದೇಶವನ್ನು ಬಿಟ್ಟು, ವಾಪಸು ಹಿಂದೂಸ್ಥಾನಕ್ಕೆ (ಪೆಷಾವರ್ ಡಿಸ್ಟ್ರಿಕ್ಟ್ಗೆ) ಬರುತ್ತಿರುವವು. ಆ ಜಕ್ಕಾಖೇಲರಿಗೂ ಇಂಡಿಯಾ ಗವರ್ನಮೆಂಟಿಗೂ ಕಳೆದ ವಾರ ನಡೆದಿರುವ ಒಪ್ಪಂದ ಮುಂತಾದದ್ದನ್ನು ಬೇಗ ತಿಳಿಸುತ್ತೇವೆ. ಜನರಲ್ ವಿಲ್‌ಕಾಕ್ಸ್ ಯವರು ಈ ದಂಡಯಾತ್ರೆಯನ್ನು ಬಹಳ ತೃಪ್ತಿಕರವಾಗಿಯೂ ಅತಿ ಶೀಘ್ರವಾಗಿಯೂ ನಡೆಸಿದರೆಂದು ಹೇಳಬೇಕಾಗಿದೆ. ಸೈನ್ಯವು ಮುಂದೆ ಹೋಗಿ ಶತ್ರುಗಳ ಸ್ಥಾನವನ್ನು ಹೊಕ್ಕು ಉದ್ದೇಶಪಟ್ಟ ಕಾರ್ಯವನ್ನು ತೃಪ್ತಿಕರವಾಗಿ ನೆರವೇರಿಸಿಕೊಂಡು ವಾಪಸು ಬರುತ್ತದೆ. ಅವರು ಈ ದಂಡಯಾತ್ರೆಯಲ್ಲಿ ಬಹಳ ಡೇರೆ ಸಾಮಾನು ಮುಂತಾದದ್ದನ್ನು ತೆಗೆದುಕೊಂಡು ಹೋಗಿರಲಿಲ್ಲ. ಡೇರೆಗಳನ್ನು ಅಪೇಕ್ಷಿಸದ ಸೈನ್ಯವೆಲ್ಲಾ ಹಾಗೆ ಮಲಗುತ್ತಿತ್ತು. ಮುಖ್ಯವಾಗಿ ಆ ಪ್ರಾಂತ್ಯದಲ್ಲಿ ಹಿಮಸುರಿಯದೆ ತಡೆದದ್ದರಿಂದ ಸೈನಿಕರು ಸಾಮಾನಿನ ಬಂಡಿಗಳನ್ನು ಯುದ್ಧಭೂಮಿಗೆ ತೆಗೆದುಕೊಂಡುಹೋಗದೆ ಇದ್ದದ್ದೂ ಈ ಯುದ್ಧಕಾರ್ಯಗಳು ಇಷ್ಟು ತೃಪ್ತಿಕರವಾಗಿ ಮುಕ್ತಾಯವಾಗಲು ವಿಶೇಷ ಸಹಾಯವಾಯಿತು.

ಮೊಹಮಂದರ ವಿಚಾರವು.

ಇಂಗ್ಲಿಷ್ ಸೈನ್ಯ [illegible] ವ್ಯಾಪ್ತಿಕರ್ತರಾಗಿ ಹೋಗಿದ್ದ ಜನರಲ್ ವಿಲ್‌ಕಾಕ್ಸ್ ರವರು ೨ ದ ಫೆಬ್ರವರಿ ತಾ. ೨೮ ರಲ್ಲಿ ತಂತಿ ವರ್ತಮಾನ ಕಳುಹಿಸಿರುವುದೇನೆಂದರೆ.—ಎಲ್ಲಾ ಆಫ್ರಿದಿ [illegible] ನಮ್ಮ [illegible] ನೆನ್ನೆ ರಾತ್ರಿ ಕರಾರಿನ ನಿಬಂಧನೆಗಳನ್ನು ನಮ್ಮ [illegible] ನಿನ್ನೆ [illegible] ಸಾವಿರ ಮಂದಿ ಮಹ [illegible] ಬೆಂಬಲವಾಗಿ ನಿಂತಿರುವುದಾಗಿ [illegible] ಇವರೆಲ್ಲರೂ ಗವರ್ನಮೆಂಟಿನವರ ಕೃಪೆಗೆ ಪಾತ್ರರಾಗಿ [illegible] ಹೇಳಿಕೊಂಡು. ಇನ್ನು ಮೇಲೆ ಕೆಲವು ದುಷ್ಟರು ನಡಸಿದ ಅಕೃತ್ಯಕ್ಕಾಗಿ ಎಲ್ಲರನ್ನೂ [illegible] ಅಪರಾಧಿಗಳನ್ನಾಗಿ [illegible] ಜಕ್ಕಾಖೇಲರು ಸಭ್ಯರಾಗಿರುವ ಭಾಗ [illegible] ಸಹಿಸುತ್ತೇವೆಂದು ಒಪ್ಪಿ [illegible] ಪ್ರತಿನಿಧಿಗಳು ಜಕ್ಕಾಖೇಲರಲ್ಲಿರುವ [illegible] ಜನಗಳನ್ನು ಹಾಗೆ ಶಿಕ್ಷಿಸುವದಾಗಿ ಹೇಳಿ ಒಪ್ಪಿಕೊಂಡು, ನಾನೆ [illegible] ತಿಳಿಸಿದ ಸಂಗತಿಗಳನ್ನು ಪ್ರಭುವಿನ ಇಂಗ್ಲಿಷ್ [illegible] ಗವರ್ನಮೆಂಟಿಗೆ ತಿಳಿಸುವ [illegible] ೨೨,೦೦೦ ರೂಪಾಯಿ [illegible] ತಂದು ಜಾಮೀನಾಗಿ [illegible] ಒಪ್ಪಿಸಿರುತ್ತಾರೆ. ಜಕ್ಕಾಖೇಲರು ಈ ಅಭಿಪ್ರಾಯವನ್ನೆಲ್ಲಾ ಒಪ್ಪಿ ರುಜು ಹಾಕಿಕೊಟ್ಟ [illegible] ದರ್ಬಾರ್ ನಡಸಿ, ಗವರ್ನಮೆಂಟಿನ ಪರವಾಗಿ [illegible] ಒಪ್ಪಂದವನ್ನು ಅಂಗೀಕರಿಸಲಾಗಿದೆ. ಈ ದರ್ಬಾರಿನಲ್ಲಿ ಇಂಗ್ಲಿಷ್ ಅಧಿಕಾರಿಗಳೆಲ್ಲಾ ಹಾಜರಿದ್ದರು.

ಈ ರೀತಿ ಒಪ್ಪಂದ ನಡೆದದ್ದರಿಂದ ಇಂಗ್ಲಿಷ್ ಸೈನ್ಯಗಳು ಆಲ್ಲಿಂದ ವಾಪಸು ಬಂದುಬಿಟ್ಟವು.

ಪ್ರಪಂಚದ ಅಗಾಧಲಕ್ಷಣವು

ನಾವು ಇರುವಂಥಾ ಈ ಪ್ರಪಂಚವು ಎಷ್ಟು ಅಗಾಧವಾದದ್ದೋ ಅನೇಕರು ತಿಳಿದಿಲ್ಲ ; ಅಥವಾ, ಅದರ ವಿಸ್ತೀರ್ಣವಿಷ್ಟೆಂದು ಅವರಿಗೆ ಹೊಳೆಯುವುದಿಲ್ಲ. ಕೃಷ್ಣಪಕ್ಷದಲ್ಲಿ ರಾತ್ರಿಕಾಲ ತಲೆ ಎತ್ತಿ ನೋಡಿದರೆ ಒಂದೆರಡು ಗ್ರಹಗಳು ನಮಗೆ ಕಾಣುತ್ತವೆ. ಅವು ಮಿನುಗುತ್ತಿರುವ ಕೋಟ್ಯಂತರ ನಕ್ಷತ್ರಗಳಿಗಿಂತಲೂ ಬಹಳ ದೊಡ್ಡದಾಗಿಯೂ, ವಿಶೇಷ ಪ್ರಕಾಶಮಾನವಾಗಿಯೂ ತೋರುವವು. ಸೂಕ್ಷ್ಮವಾಗಿ ನೋಡಿದರೆ ಅವು ಅಂಥವುಗಳಲ್ಲ. ನಾವಿರತಕ್ಕ ಈ ಪ್ರಪಂಚವೂ ಒಂದು ಗ್ರಹವಾಗಿರುತ್ತದೆ. ಈ ಗ್ರಹಗಳೆಲ್ಲಾ ಸೂರ್ಯನ ಸುತ್ತಲೂ ಸಂಚರಿಸತಕ್ಕವುಗಳೆಂದು ಎಲ್ಲರಿಗೂ ತಿಳಿದೇ ಇರುವುದು. ಚಂದ್ರನಾದರೋ ಒಂದು ಸಣ್ಣ ವಸ್ತು. ಇದು ಈ ಭೂಮಿಯ ಸುತ್ತ ತಿರುಗುತ್ತಿರುವುದು. ಗ್ರಹಗಳೆನಿಸಿಕೊಂಡಿರುವವು ಸ್ವತಃ ಪ್ರಕಾಶವುಳ್ಳಂಥಾ ವಸ್ತುಗಳಲ್ಲ. ಸೂರ್ಯನ ತೀಕ್ಷ್ಣವಾದ ಕಿರಣಗಳು ಈ ಗ್ರಹಗಳ ಮೇಲೆ ಬಿದ್ದಾಗ, ಆ ಗ್ರಹಗಳು ಆ ಕಿರಣಗಳ ಪ್ರಕಾಶವನ್ನು ಪ್ರತಿಬಿಂಬಿಸಿ, ತಾವೇ ಪ್ರಕಾಶಿಸುತ್ತವೆಯೋ ಎನ್ನುವಂತೆ ಕಾಣಿಸಿಕೊಳ್ಳುವವು. ಆಕಾಶದಲ್ಲಿ ಅಣುಮಾತ್ರಗಳಾಗಿ ಕಾಣಿಸುವಂಥಾ ಕೋಟ್ಯನುಕೋಟಿ ನಕ್ಷತ್ರಗಳಾದರೋ ಈ ಗ್ರಹಗಳಿಗಿಂತಲೂ ಪಾರವಿಲ್ಲದಷ್ಟು ದೊಡ್ಡ ವಸ್ತುಗಳಾಗಿರುತ್ತವೆ ಎಂದು ತಿಳಿಯಬೇಕು. ಇವು ಸೂರ್ಯನಿಗಿಂತಲೂ ಎಷ್ಟೋ ದೊಡ್ಡವುಗಳಾಗಿರುತ್ತವೆ. ಸೂರ್ಯನಂತೆಯೇ ಇವೂ ಉರಿಯುವ ಅಗ್ನಿಖಂಡಗಳೇ ಆಗಿದ್ದುಕೊಂಡು, ಬೆಳಕನ್ನೂ ಸೆಕೆಯನ್ನೂ ಕೊಡುವವು. ಇವೆಲ್ಲಾ ಈ ಪ್ರಪಂಚಕ್ಕಿಂತಲೂ ಪಾರವಿಲ್ಲದಷ್ಟು ದೂರದಲ್ಲಿ ಇರೋಣದರಿಂದ ಅವು ನಮಗೆ ಬಹು ಸಣ್ಣವಾಗಿ ಕಾಣುತ್ತವೆ.

ಅಂತರಿಕ್ಷದಲ್ಲಿ ಒಂದು ವಸ್ತುವಿನಿಂದ ಇನ್ನೊಂದು ವಸ್ತುವು ಎಷ್ಟು ದೂರದಲ್ಲಿದೆ ಎಂಬುದನ್ನು ಊಹಿಸಿ ತಿಳಿದುಕೊಳ್ಳುವುದಕ್ಕಾಗಿ ಒಬ್ಬ ಶಾಸ್ತ್ರಜ್ಞನು ಒಂದು ಉಪಾಯವನ್ನು ಕಂಡು ಹಿಡಿದಿರುತ್ತಾನೆ. ಅದೇನೆಂದರೆ—ಸೂರ್ಯನನ್ನು ಒಂದು ಕಿತ್ತಳೇ ಹಣ್ಣೆಂದು ಇಟ್ಟುಕೊಂಡಲ್ಲಿ, ನಾವಿರುವ ಈ ಪ್ರಪಂಚದ ಆಕಾರವು ಒಂದು ಸಣ್ಣ ಸಾಸಿವೇಕಾಳಿನಂತೆ ಇದ್ದೀತು. ಸಾಸಿವೇಕಾಳನ್ನು ಕಿತ್ತಳೇ ಹಣ್ಣಿಗಿಂತ ೪೦ ಅಡಿ ದೂರದಲ್ಲಿ ಇಡಬೇಕು. ಆ ಸಾಸಿವೇಕಾಳಿಗೆ ಒಂದಂಗುಲ ದೂರದಲ್ಲಿ ಧೂಳಿನಲ್ಲಿರುವಂಥಾ ಒಂದು ಅಣುರೇಣುವನ್ನು ಇಡಿ. ಇದು ಚಂದ್ರನೆನ್ನಿಸಿಕೊಳ್ಳುವುದು. ಅಲ್ಲಿಂದ ಎರಡು ಫರ್ಲಾಂಗ್ ದೂರದಲ್ಲಿ ಒಂದು ಬಿತ್ತವನ್ನಿಟ್ಟರೆ ಇದೊಂದು ನಕ್ಷತ್ರವೆನಿಸುತ್ತದೆ. ಈ ಪ್ರಕಾರ ಕಾಲುಮೈಲಿ ಫಾಸಲೆಯುಳ್ಳ ಬಯಲಾದ ಪ್ರದೇಶದಲ್ಲಿ ಸಣ್ಣಸಣ್ಣ ಬೀಜಗಳನ್ನು ಇಟ್ಟಲ್ಲಿ ಇವು ನಕ್ಷತ್ರಗಳಾಗುವವು. ಇವುಗಳಿಗೂ ಗ್ರಹಗಳಿಗೂ ಸೂರ್ಯನಿಗೂ ಎಷ್ಟೆಷ್ಟು ದೂರವಿರಬಹುದೋ ಯಾರಿಂದ ತಾನೇ ಊಹಿಸುವುದಕ್ಕಾದೀತು ? ಇಷ್ಟೇ ದೂರವಿದ್ದೀತೆಂದು ಊಹೆ ಕಟ್ಟಿ ಹೇಳುವುದು ಯಾರಿಗೂ ಸಾಧ್ಯವಲ್ಲ. ಬಹಳ ಸಮೀಪದಲ್ಲಿದೆ ಎಂದು ಹೇಳುವಂಥಾ ನಕ್ಷತ್ರವು ಕನಿಷ್ಠ ಲಕ್ಷ ೭,೦೦೦ ಮೈಲಿ ದೂರದಲ್ಲಾದರೂ ಇದ್ದೀತೆಂದು ತಿಳಿಯಬೇಕು. ಇಷ್ಟು ದೂರ ಹೋಗಲು ನಾವು ಇಲ್ಲಿಂದ ಚೀನಾ ದೇಶಕ್ಕಾಗಲೀ, ಅಥವಾ ಆಫ್ರಿಕಾ ಖಂಡಕ್ಕಾಗಲೀ ಹೋಗಿ, ಅಲ್ಲಿ ಒಂದು ಬಿತ್ತವನ್ನಿಟ್ಟರೆ, ಅದೇ ಬಹಳ ಸಮೀಪದಲ್ಲಿರತಕ್ಕ ನಕ್ಷತ್ರವಾದೀತು.

ಆದಕಾರಣ ಕೀರ್ತನೆಗಾರನ ವಾಕ್ಯಗಳು ಎಷ್ಟು ಶ್ರೇಷ್ಠವಾಗಿವೆ ನೋಡಿರಿ—

"ನಮ್ಮ ಕರ್ತನಾದ ಯೆಹೋವನೇ, ನಿನ್ನ ಹೆಸರು ಎಲ್ಲಾ ಭೂಮಿಯಲ್ಲಿ ಎಷ್ಟೋ ಶ್ರೇಷ್ಠವಾಗಿದೆ! ನಿನ್ನ ಮಹಿಮೆಯನ್ನು ಆಕಾಶಗಳ ಮೇಲೆ ಇಟ್ಟಿದ್ದೀ. ನಿನ್ನ ಬೆರಳುಗಳ ಕೆಲಸವಾದ ನಿನ್ನ ಆಕಾಶಗಳನ್ನೂ, ನೀನು ಸಿದ್ಧಮಾಡಿದ ಚಂದ್ರ ನಕ್ಷತ್ರಗಳನ್ನೂ ನಾನು ನೋಡುವಾಗ, ನೀನು ಅವನನ್ನು ನೆನಸುವದಕ್ಕೆ, ಮನುಷ್ಯನು ಏನು ! ಅವನನ್ನು ಪರಿಸಂಧಿಸುವದಕ್ಕೆ ಮನುಷ್ಯನ ಮಗನು ಏನು ? ದೂತರಿಗಿಂತ ಅವನನ್ನು ಸ್ವಲ್ಪ ಕಡಿಮೆಮಾಡಿ, ಘನವನ್ನೂ ಗೌರವವನ್ನೂ ಅವನಿಗೆ ಕಿರೀಟವಾಗಿ ಇಟ್ಟಿದ್ದೀ."

ಸ್ವದೇಶದ ವೃತ್ತಾಂತಗಳು

ಡಾಕ್ಟರ್ ನೈಲ್ಯಾನಂ ಐಯರನ್ನು ಮೈಸೂರು ಸರ್ಕಾರದವರು ವೈದ್ಯ ಇಲಾಖೆಯಲ್ಲಿ ಸ್ಪೆಷಲಿಸ್ಟ್ ಆಗಿ ನೇಮಿಸಿಕೊಂಡಿದ್ದಾರೆ. ಇವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವರು.

***

ನಂಜನಗೂಡು ಚಿನ್ನದಗಣಿ ಕಂಪನಿಯವರು ಚಿನ್ನವನ್ನು ತೆಗೆಯುವುದಕ್ಕಾಗಿ ಕಂಪನಿಯ ಆರಂಭದಿಂದಲೂ ಹೆಚ್ಚಾಗಿ ಸುಮಾರು ೭೪ ಸಾವಿರ ರೂಪಾಯಿ ಖರ್ಚ ಮಾಡಿದರೆಂತಲೂ, ಈಗ ಬಸ್ ಷಾಫ್ಟ್ ಎಂಬ ಗಣಿಯಲ್ಲಿ ಚಿನ್ನ ಸಿಕ್ಕುವುದೆಂದು ಗೊತ್ತಾದ್ದರಿಂದ ಹೊಸದಾಗಿ ಷೇರುಗಳನ್ನು ವಿಕರಿಮಾಡಿ, ಹಣ ಕೂಡಿಸಿ, ಕೆಲಸವನ್ನು ಪ್ರಾರಂಭಿಸುತ್ತಾರೆಂತಲೂ ತಿಳಿದು ಬಂದಿದೆ.

***

ಕಳೆದ ಶನಿವಾರ ಬೆಳಿಗ್ಗೆ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ನಡೆದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಕೌನ್ಸಿಲರ್ ಮೆ|| ಸುಬ್ಬಣ್ಣನವರು ರಸ್ತೆಗೆ ಹಾಕತಕ್ಕ ಕಲ್ಲುಗಳ ರಾಶಿಯನ್ನು ತಾವು ಸಬರ್ಬ್ ಪೇಟೆಯಲ್ಲಿ ನೋಡಿದ್ದಾಗಿಯೂ, ಈಚೆಗೆ ಆ ರಾಶಿಯು ಅಲ್ಲಿ ಇಲ್ಲವೆಂತಲೂ "ಪ್ರೊಸೀಡಿಂಗ್ಸ್"ನಲ್ಲಿ ಪ್ರೆಸಿಡೆಂಟರು ಅಂಥಾ ಕೆಲಸವೇನೂ ನಡೆಯುತ್ತಿಲ್ಲವೆಂದು ಅವರಿಗೆ ಸಮಾಧಾನ ಹೇಳಿದರು.

***

ಕಳೆದ ಭಾನುವಾರ ರಾಜಧಾನಿಯ ಎತ್ತಿನ ಕರೋಟಪಟ್ಟಿಯಲ್ಲಿ ಬೆಂಗಳೂರಿನ ಮಹಬೂಬ್ ಖಾನ್ ಎಂಬ ಪೈಲ್ವಾನನಿಗೂ, ಪೆಷಾವರಿನ ಕಂಠೀನಾಲಾ ಎಂಬ ಹಾಫಿಸ್ ಪೈಲ್ವಾನನಿಗೂ ಕುಸ್ತಿ ನಡೆಯುವುದೆಂದು ತಿಳಿಸಿದ್ದೆವಷ್ಟೆ. ಆ ದಿನ ಶಿವರಾತ್ರಿ ಹಬ್ಬವಾದ್ದರಿಂದಲೂ, ಲೈಸೆನ್ಸು ದೊರೆಯದೆಹೋದದ್ದರಿಂದಲೂ ಕುಸ್ತಿ ನಡೆಯಲಿಲ್ಲ. ನಾಳೇ ತಾ. ೮ ನೇ ಭಾನುವಾರ ಈ ಕುಸ್ತಿಯು ನಡೆಯುವುದೆಂದು ತಿಳಿದುಬಂದಿದೆ.

***

ಶ್ರೀಮನ್ಮಹಾರಾಜರವರು, ಯುವರಾಜರವರು, ಮಹಾಮಾತೃಶ್ರೀಯವರು, ಮಹಾರಾಣಿಯವರೇ ಮೊದಲಾದ ರಾಜವರ್ಗದವರೆಲ್ಲಾ ನೆನ್ನೆ ಬೆಳಿಗ್ಗೆ ಬೆಂಗಳೂರಿಂದ ಸ್ಪೆಷಲ್ ರೈಲಿನಲ್ಲಿ ಹೊರಟು, ಸಾಯಂಕಾಲ ೫|| ಗಂಟೆಗೆ ರಾಜಧಾನಿಯನ್ನು ತಲಪುವವರಾಗಿದ್ದರು. ಯುಗಾದಿಯ ಹಬ್ಬವನ್ನು ರಾಜಧಾನಿಯಲ್ಲೇ ತೀರಿಸಿಕೊಂಡು, ಶ್ರೀಮನ್ಮಹಾರಾಜರವರು ಬೇಸಿಗೆ ಕಳೆಯುವುದಕ್ಕಾಗಿ ನೀಲಗಿರಿಗೆ ದಯಮಾಡುವರೆಂದು ತಿಳಿದು ಬಂದಿದೆ.

***

ಮೆ|| ಸ್ಟ್ಯಾನ್ಲಿ ಇಸ್ಮೆ, ಸಿ. ಎಸ್. ಐ., ಐ. ಸಿ. ಎಸ್. ಎಂಬವರು ಮೈಸೂರು ಚೀಫ್ ಜಡ್ಜಿಯಾಗಿ ನೇಮಿಸಲ್ಪಟ್ಟಿದ್ದಾರೆ. ಇವರಿಗೆ ೨,೫೦೦ ರೂ. ಸಂಬಳ ಸಲ್ಲುವಂತೆ ಗೊತ್ತಾಗಿದೆ. ಇವರು ಮೊದಲಿಂದಲೂ ಮಧ್ಯ ಪ್ರಾಂತ್ಯಗಳಲ್ಲಿ ರೆವಿನ್ಯೂ ಜುಡಿಷಲ್ ಇಲಾಖೆಗಳಲ್ಲಿ ಕೆಲಸಮಾಡುತ್ತಿದ್ದು, ಅಲ್ಲೇ ೧೮೯೩ ರಿಂದ ಜುಡಿಷಿಯಲ್ ಕಮಿಷನರಾಗಿದ್ದರು. ಈಗ ಇವರು ಪೆನ್ಷನ್ ಪಡೆದು ಕೆಲಸ ಬಿಟ್ಟಿದ್ದಾರೆ. ಇವರ ವಯಸ್ಸು ೫೫ ಆಯಿತೆಂದು ತಿಳಿಯುವುದು.

ಈ ತಿಂಗಳ ತಾ. ೧೬, ೧೭, ೧೮ ರಲ್ಲಿ ನಂಜನಗೂಡು ದೊಡ್ಡ ಜಾತ್ರೆಯಾಗುವಾಗ್ಗೆ ಸರ್ಕಾರದವರು ಗೋವುಗಳ ಪ್ರದರ್ಶನವನ್ನು ನಡಸಿ, ಉತ್ತಮವಾದ ರಾಸುಗಳಿಗೆ ಬಹುಮಾನಗಳನ್ನು ಕೊಡಬೇಕೆಂದು ಗೊತ್ತುಮಾಡಿದ್ದಾರೆ. ಪ್ರದರ್ಶನ ನಡೆಯುವ ಸ್ಥಳದಲ್ಲಿ ನೀರು ನೆರಳಿಗೆ ತುಂಬಾ ಅನುಕೂಲವಿದೆ. ಕಾಲ್ಗಳು ಮುಂತಾದ್ದನ್ನೂ ಅಲ್ಲಿ ಒದಗಿಸಿಕೊಡುವರು. ಇತರ ವಿಷಯಗಳನ್ನು ತಿಳಿಯಬೇಕಾದವರು ಅಲ್ಲಿನ ಅಮಲ್ದಾರರಿಗೆ ಬರೆದುಕೊಳ್ಳಬಹುದು.

***

ನಮ್ಮ ಮಾತೃಶ್ರೀಯವರು ಬೆಂಗಳೂರು ಬಾಲಿಕಾ ಪಾಠಶಾಲೆಯ ಮತ್ತು ಗೌರ್ನಮೆಂಟ್ ಸ್ಕೂಲ್ ಬಾಲಿಕೆಯರಿಗೆ ಪರೋಪಕಾರಿ ಮೆ|| ಕೊತ್ವಾಲನವರ ಪಾಠಶಾಲೆಯಲ್ಲಿ ಸೋಮವಾರ ಸಾಯಂಕಾಲ ಬಹುಮಾನಗಳನ್ನು ಕೊಟ್ಟರು. ಈ ಸಂದರ್ಭದಲ್ಲಿ ಉಭಯ ಪಾಠಶಾಲೆಗಳ ಒಳ್ಳೆ ನಡತೆಯುಳ್ಳ ಇಬ್ಬರು ಬಾಲಿಕೆಯರಿಗೆ ಮೆ|| ದೊಡ್ಡಣ್ಣನವರು ಎರಡು ಚಿನ್ನದ ಉಂಗುರಗಳನ್ನು ಬಹುಮಾನಕೊಟ್ಟರು ಮತ್ತು ಶ್ರೀಮನ್ಮಹಾರಾಣಿಯವರ ಆಗಮನದ ಜ್ಞಾಪಕಾರ್ಥವಾಗಿ ಬಾಲಿಕೆಯರಿಗೆಲ್ಲಾ ಅರಿಸಿನ, ಕುಂಕುಮ, ಪುಷ್ಪ, ವೀಳ್ಯ ಗಳನ್ನು ಹಂಚಿಸಿ ತಮ್ಮ ರಾಜಭಕ್ತಿವಿಶ್ವಾಸಗಳನ್ನು ಪ್ರದರ್ಶನ ಮಾಡಿದರು.

***

ಒಬ್ಬ ಬಾತ್ಮೀದಾರರು ಬರೆಯುವುದು—ಕಳೆದ ೧೭ ನೇ ತಾ ಸೋಮವಾರ ರಾಜಧಾನಿಯ ಹಳೇ ಅಗ್ರಹಾರದಲ್ಲಿ ವೀರೇಶಲಿಂಗನವರ ಮನೆ ಬೀದಿಯಲ್ಲಿರುವ ಮಹಾರಾಣಿಯವರ ಕಾಲೇಜಿನ ಉಪಾಧ್ಯಾಯಿನಿಯರಾದ ಲಕ್ಷ್ಮಮ್ಮನವರ ಮನೆಯಲ್ಲಿ ಸುಮಾರು ೩೦೦ ರೂ ನಗನಾಣ್ಯಗಳು ಕಳುವಾದವು. ಅದನ್ನು ಕೃಷ್ಣರಾಜ ಪೋಲೀಸ್ ಸ್ಟೇಷನಿಗೆ ರಿಪೋರ್ಟ ಮಾಡಿದ್ದರಲ್ಲಿ ಅವರು ಒಳ್ಳೆ ಚಮತ್ಕಾರವಾಗಿಯೂ ಜಾಗ್ರತೆಯಾಗಿಯೂ ಕಳ್ಳನನ್ನು ಹಿಡಿದು, ನಗನಾಣ್ಯಗಳನ್ನು ಪತ್ತೆ ಮಾಡಿದರು. ಆಸಾಮಿಯು ಕಳುವಾದ ಮನೆ ಪಕ್ಕದ ಮನೆಯಲ್ಲಿರುವ ಒಬ್ಬ ಬ್ರಾಹ್ಮಣಯುವಕನಾಗಿರುತ್ತಾನೆ. ಮ್ಯಾಜಿಸ್ಟ್ರೇಟರ ಬಳಿ ವಿಚಾರಣೆಯಾಗಿ, ಅಪರಾಧಿಗೆ ಒಂದು ವರುಷ ಕಠಿಣ ಸಜ ಆಯಿತೆಂದು ಕೇಳುತ್ತೇವೆ.

***

ದೊಡ್ಡಬಳ್ಳಾಪುರದ ಬಾತ್ಮೀದಾರರು ಬರೆಯುವುದು—ಮೈಸೂರು ಓರಿಯಂಟಲ್ ಲೈಬ್ರರಿಯ ಮೆ|| ರಾಘವೇಂದ್ರಾಚಾರ್ಯರು ಫೆಬ್ರವರಿ ತಾ. ೮ ರಲ್ಲಿ ಪ್ಲೇಗ್ ಸೋಂಕು ಹೊಂದಿ ಇಲ್ಲಿಗೆ ಬಂದರು. ಇವರನ್ನು ನಮ್ಮ ಅಮಲ್ದಾರರು ಪ್ರತ್ಯೇಕವಾಗಿ ಮಾರ್ಗಸಿಫ್ ಕೋಟಿನ ಹತ್ತಿರ ಇಡಿಸಿ ಬಹಳ ಸಹಾಯ ಮಾಡಿದ್ದರಿಂದ ಇವರು ಸ್ವಸ್ಥವಾಗಿಹೋದರು.—ಕೊಡಗಹಳ್ಳಿ ಪಟೇಲ್ ಅಂಸೆ ಗೌಡರು, ಅಚಾರ ರಂಗಪ್ಪನವರೇ ಮುಂತಾದವರು ಸೇರಿ, ಸುಮಾರು ೨,೫೦೦ ಜನಕ್ಕೆ ಸಂತರ್ಪಣೆ ಮಾಡಿಸಿದರು.—ಇಲ್ಲಿ ಬೆಲ್ಲ ಸಾಬು, ಗಿಡ್ಡು, ಸಣ್ಣಕ್ಕಿ ಹಂಡೆ ಸಾಬಿ ಸೇರಿ, ದೊಡ್ಡರೋಗ ತಗಲಿದ ರೋಗಿಗಳನ್ನು ತಂದು ಕೊಲ್ಲುತ್ತಾರೆಂದು ಅರ್ಜಿ ಬರೆದು, ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರು ಇದನ್ನು ಗಮನಕ್ಕೆ ತಂದುಕೊಳ್ಳುವಂತೆ ಬೇಡುತ್ತಾರೆ—ಅಲ್ಲಿ ಉಪ್ಪಾರಳ್ಳಿಯ ಸಣ್ಣರ ನರಸಿಕ್ಕನು ತಿಮ್ಮಾಪುರ ಹಳ್ಳಿಯಲ್ಲಿದ್ದನು. ತಾ. ೨೮ ನೇ ರಾತ್ರಿ ಅಡಿಗೆ ಮಾಡುವಾಗ ಒಂದು ಭಾರಿ ಕರೇನಾಗರಹಾವು ಇವನ ಸೆತ್ತನ್ನು ಕಚ್ಚುವದಕ್ಕೆ ಬಂದಿತು. ಕೂಡಲೆ ಇವನು ಹಾವಿನ ಹಿಂದೆ ಹೋಗಿ, ಅದರ ಕತ್ತನ್ನು ಬಿಗಿಯಾಗಿ ಹಿಡಿದು, ಕತ್ತಿಯಿಂದ ಕತ್ತರಿಸಿ ಬಾಯನ್ನು ಸೀಳಿಬಿಟ್ಟನು.

***

ರಾಜಧಾನಿಯಲ್ಲಿರುವ ಮೆ|| ಎಲ್. ಸುಬ್ಬರಾವ್ ಎಂಬುವರೂ, ಮೆ|| ಎಂ. ಆರ್. ನರಸಿಂಹ ಐಯ್ಯಂಗಾರ್ ಎಂಬವರೂ ವಿದ್ಯಾಭ್ಯಾಸ ಮಾಡಿಕೊಂಡು ಬರುವುದಕ್ಕಾಗಿ ಈ ತಿಂಗಳ ೧೪ ನೆ ತಾ ಬೊಂಬಾಯಿಂದ ಹೊರಡುವ ಅರೇಬಿಯಾ ಎಂಬ ಹಡಗಿನಲ್ಲಿ ವಿಲಾಯತಿಗೆ ಪ್ರಯಾಣ ಮಾಡುವವರಾಗಿದ್ದಾರೆ. ಮೆ|| ಸುಬ್ಬರಾಯರು ಬಿ. ಎ. ಪರೀಕ್ಷೆಯಲ್ಲೂ ಎಂ. ಬಿ., ಸಿ. ಎಂ. ಎಂಬ ಡಾಕ್ಟರ್ ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿ, ಇನ್ನೂ ವೈದ್ಯವನ್ನು ಹೆಚ್ಚಾಗಿ ಕಲಿತು ಬರುವುದಕ್ಕಾಗಿ ಮೈಸೂರು ಗವರ್ನಮೆಂಟಿನ ವೇತನವನ್ನು ಪಡೆದು ಇರುತ್ತಾರೆ. ಮೆ|| ನರಸಿಂಹಯ್ಯಂಗಾರರು ಬಿ. ಎ. ಪರೀಕ್ಷೆಯ ಎರಡು ಭಾಗಗಳಲ್ಲೂ ತೇರ್ಗಡೆ ಹೊಂದಿದವರಾಗಿಯೂ ರಾಜಧಾನಿಯಲ್ಲಿರುವ ಅಡ್ವೊಕೇಟ್ ಮೆ|| ಎಂ. ಸಿ. ರಂಗಯ್ಯಂಗಾರ್ಯ ಕುಮಾರರಾಗಿಯೂ ಇರುತ್ತಾರೆ. ಇವರು ಸ್ವಂತ ಹಣವನ್ನು ವಿನಿಯೋಗಿಸಿ, ಲಂಡನ್ ಪಟ್ಟಣದಲ್ಲಿರುವ ಲಿಂಕನ್ಸ್ ಇನ್ ಎಂಬ ನ್ಯಾಯಶಾಸ್ತ್ರಬೋಧನಾಶಾಲೆಯಲ್ಲಿ ವ್ಯಾಸಂಗಮಾಡಿ, ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಬರುವವರಾಗಿದ್ದಾರೆ. ಇವರ ಉದ್ದೇಶಗಳು ಕೈಗೂಡಿ, ಸುಕ್ಷೇಮರಾಗಿ ವಾಪಸು ಬರಲೆಂದು ಹಾರೈಸುತ್ತೇವೆ.

***

ಚನ್ನಪಟ್ಟಣದ ಬಾತ್ಮೀದಾರರು ಬರೆಯುವುದು—ಬಿಸಲಿನ ತಾಪವು ಹೆಚ್ಚಾಗಿ ಬರುತ್ತಿದೆ. ಜೋಪಡಿಗಳಿಂದ ಜನರು ಊರಿಗೆ ಬಂದು ಸೇರುವುದರಿಂದ ಪಟ್ಟಣವೆಲ್ಲಾ ಮನೋಹರವಾಗಿದೆ. ಈ ಮಧ್ಯೆ ಕೋಟೆಯಲ್ಲಿ ಕಳೆದವಾರ ನಾಲ್ಕಾರು, ಕುಂಬಾರ ಕೇರಿಯಲ್ಲಿ ಮೂರು ಪ್ಲೇಗ್ ಮರಣಗಳು ಆದವೆಂತಲೂ, ಇನ್ನೂ ಅಲ್ಲಲ್ಲಿ ಕಾಯಿಲೆಯು ಇದೆಯೆಂತಲೂ ತಿಳಿದುಬರುವದು. ಆದರೂ ಜನರು ನಿರ್ಭಯರಾಗಿ ತಮ್ಮ ಕಾರ್ಯಗಳನ್ನು ಮಾಡಿಕೊಳ್ಳುತ್ತಿದ್ದಾರೆ—ಕಳೆದವಾರ ಬೆಂಗಳೂರಿನಿಂದ ಮೆ|| ಪಲ್ಲವಿಯವರು ಇಲ್ಲಿಗೆ ದಯಮಾಡಿಸಿ, ಮೂರು ದಿವಸಗಳವರೆಗೂ ಊರಿನ ಬೇರೆಬೇರೆ ಭಾಗಗಳನ್ನು ನೋಡಿ, ತಾ. ೨೬ನೆ ಸೋಮವಾರ ಸಾಯಂಕಾಲ ಇಲ್ಲಿನ ಹೈಸ್ಕೂಲಿನಲ್ಲಿ ಒಂದು ಸಭೆ ಸೇರಿಸಿ, ಪ್ರಜೆಗಳಿಗೆ ಕ್ಷೇಮಕರವಾದ ಅನೇಕ ಆರೋಗ್ಯ ವಿಷಯಗಳನ್ನು ತಿಳಿಸಿದರು.—ಇಲ್ಲಿಗೆ ಸಮೀಪವಾದ ತಿಟ್ಟಮಾರನಹಳ್ಳಿಯವರು ಊರು ಬಿಟ್ಟು ಸುಮಾರು ೨-೩ ತಿಂಗಳಿಂದಲೂ ಜೋಪಡಿಗಳಲ್ಲಿದ್ದಾರೆ. ಈಗ ಒಂದು ವಾರದಿಂದ ಜೋಪಡಿಗಳ ಒಂದೆರಡು ಭಾಗಗಳಲ್ಲಿ ಇಲಿಗಳು ಸಾಯುತ್ತಿವೆ ಎಂತಲೂ, ಇನ್ನೂ ಒಂದು ತಿಂಗಳ ಮಟ್ಟಿಗೂ ಅವರು ಊರು ಸೇರಲಾಗದೆಂತಲೂ ತಿಳಿಯಬರುತ್ತದೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಲೆಯ ಮೀಟಿಂಗನ್ನು ನಡಿಸಿದರು. ಲೆಕ್ಕಪತ್ರಗಳನ್ನು ಮೊದಲು ಓದಿಸಿದ್ದರಲ್ಲಿ ಆಕ್ಟ್ರಾಯಿ ಬಾಬಿನಲ್ಲಿ ಹೋದ ವರುಷಕ್ಕಿಂತಲೂ ೧,೩೦೦ ರೂಪಾಯಿನಷ್ಟು ಹೆಚ್ಚು ವಸೂಲಾದಂತೆ ತಿಳಿಯಿತು. ಜನವರಿ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ೧೧,೩೬೬ ಚಿಲ್ಲರೆ ರೂಪಾಯಿ ಜಮಾ, ೯,೬೬೫ ಚಿಲ್ಲರೆ ರೂಪಾಯಿ ಖರ್ಚು ಆಗಿರುತ್ತದೆ. ಆ ತಿಂಗಳಲ್ಲಿ ಜನನ ೧೦೬, ಮರಣ—ಪ್ಲೇಗ್ ೧೧೩, ಜ್ವರ ೫೪, ಎಲ್ಲಾ ಕಾರಣಗಳಿಂದಲೂ ಒಟ್ಟು ೩೧೭ ಎಂದು ತಿಳಿಯಿತು.

ಕುಕ್ಕರಹಳ್ಳಿ ಕೆರೆಯ ನಾಲೆ ಮುಂತಾದ್ದನ್ನು ದುರಸ್ತು ಮಾಡಿಸುವುದಕ್ಕೆ ೬,೦೦೦ ರೂಪಾಯಿ ಬೇಕಾಗುವುದೆಂದು ಇಂಜನಿಯರ್ ಇಲಾಖೆಯವರು ಕೇಳಿದರು. ಈ ಕೆರೆಯನ್ನು ಇನ್ನು ಕೆಲವು ಕಾಲ ಇಂಜನಿಯರ್ ಇಲಾಖೆಗೆ ವಹಿಸದೆ ಮ್ಯುನಿಸಿಪಾಲಿಟಿಯ ಸ್ವಾಧೀನದಲ್ಲೇ ಇಟ್ಟುಕೊಂಡಿರಬೇಕೆಂದು ಗೊತ್ತಾಯಿತು.—ಲೇಟ್ ಸಬ್‌ರಿಜಿಸ್ಟ್ರಾರ್ ರವರ ಪತ್ನಿಯು ತಮ್ಮ ಬಾಬತು ಒಂದು ಬಾವಿಯನ್ನು ಮ್ಯುನಿಸಿಪಾಲಿಟಿಯವರು ಮುಚ್ಚಿಸಿ, ಪ್ರತಿಫಲಕೊಡುವುದಾಗಿ ಹೇಳಿದ ಹಣವನ್ನು ಕೊಡಿಸಬೇಕೆಂದು ಅರ್ಜಿ ಬರೆದಿದ್ದರು. ಕೌನ್ಸಿಲರುಗಳು ಈ ವಿಷಯವನ್ನು ಚರ್ಚಿಸಿ, ನ್ಯಾಯವಾದ ಪಕ್ಷದಾರನಿಗೆ ಈ ವಿಚಾರವನ್ನು ತಿಳಿಸಿ, ಈ ಪ್ರತಿಫಲವನ್ನು ಆಕೆಗೆ ಯಾಕೆ ಕೊಡಬಾರದೆಂದು ಕೇಳತಕ್ಕದ್ದೆಂದು ತೀರ್ಮಾನಿಸಿದರು.—ಸುಬ್ರಾಯನ ಕೆರೆಯಲ್ಲಿ ೧,೯೫೫ ರೂಪಾಯಿ ಖರ್ಚಿಸಿ ಒಂದು ಸ್ನಾನದ ಕೊಳವನ್ನು ಕಟ್ಟಿಸುವ ವಿಷಯದಲ್ಲಿ ಗವರ್ನಮೆಂಟಿನಿಂದ ಅದರ ಪ್ಲಾನನ್ನು ತರಿಸಬೇಕೆಂದು ತೀರ್ಮಾನವಾಗಿದೆ.—ಕೆಲವು ಹಸೆ ವರ್ತಕರು ಬೀದಿಯಾಗತಕ್ಕ ಹುಲ್ಲನ್ನು ಮನೆಗಳೊಳಗೆ ತುಂಬಿಸಿಕೊಂಡಿರುವುದು ಬೇಸಿಗೆಯಲ್ಲಿ ತುಂಬಾ ಅಪಾಯಕರವೆಂದು ತಿಳಿದು ಬಂದದ್ದರಿಂದ ಪ್ರತಿ ಮೊಹಲ್ಲೆಯಲ್ಲಿಯೂ ಬೈಲು ಸ್ಥಳಗಳನ್ನು ಮ್ಯುನಿಸಿಪಾಲಿಟಿಯವರು ನಿಂಗಡಿಸಿ ವರ್ತಕರಿಗೆ ತಿಳಿಸಿ, ಅಲ್ಲಿ ಹುಲ್ಲನ್ನು ಇಡುವಂತೆ ಮಾಡಬೇಕೆಂದು ಏರ್ಪಾಡಾಗಿದೆ.—ಚಿಕ್ಕಹಳ್ಳಿ ಕ್ಯಾಂಪಿನ ಕಚೇರಿಯನ್ನು ಸಾಗಿಸುವುದಕ್ಕೆ ಹೆಲ್ತ್ ಆಫೀಸರು ಒಂದು ಕಚೇರಿಗಾಗಿಯನ್ನು ಮೊಕ್ಕಲೂರು ಮಾಡಿಕೊಳ್ಳಬಹುದೆಂದು ಕೌನ್ಸಿಲರುಗಳು ಅಭಿಪ್ರಾಯಪಟ್ಟರು.—ಕಾಳಮ್ಮನ ಗುಡಿಯೊಳಕ್ಕೆ ನೀರಿನ ನಲ್ಲಿ ಇಡಿಸಿದರೆ ಅದಕ್ಕೆ ನೀರಿನ ತೆರಿಗೆ ಮಾಫ್ ಮಾಡಿಕೊಡಬೇಕೆಂದು ಆ ದೇವಸ್ಥಾನದ ಕಾರ್ಯದರ್ಶಿಯು ಬರೆದುಕೊಂಡಿದ್ದರು. ನಲ್ಲಿ ಇಡಿಸಿಕೊಳ್ಳುವ ಖರ್ಚು ವಹಿಸಿಕೊಂಡಲ್ಲಿ ನೀರನ್ನು ತೆರಿಗೆಯಿಲ್ಲದೆ ಕೊಡಬಹುದೆಂದು ತೀರ್ಮಾನವಾಯಿತು.—ಕೆಳಗೇರಿ ಸ್ಕೂಲಿಗೆ ೨೦ ರೂಪಾಯಿ, ಮೀವರ್ಸ್ ಲೈನ್ ಸ್ಕೂಲಿಗೆ ೬ ರೂಪಾಯಿ ಮ್ಯುನಿಸಿಪಲ್ ಗ್ರಾಂಟು ಕೊಡಬಹುದೆಂದು ಕೌನ್ಸಿಲರುಗಳು ಸ್ಯಾಂಕ್ಷನ್ ಮಾಡಿದಾರೆ.—ಯುನಾನಿ ಹಕೀಂ ಮಹಮದ್ ಖಾನ್ ರವರು ಮಕ್ಕಳಿಗೆ ಔಷಧಕೊಟ್ಟು ರೋಗ ವಾಸಿಮಾಡುವುದರಲ್ಲಿ ತುಂಬಾ ನಿಪುಣರಾಗಿರೋಣದರಿಂದ ಅವರಿಗೆ ಮ್ಯುನಿಸಿಪಾಲಿಟಿಯಿಂದ ಕೊಡುವ ೧೦ ರೂಪಾಯಿ ಗ್ರಾಂಟನ್ನು ೧೫ ರೂಪಾಯಿಗೆ ಬಡ್ತಿ ಮಾಡಬೇಕೆಂದು ತೀರ್ಮಾನವಾಗಿದೆ.—ರಾಜಧಾನಿಯಲ್ಲಿ ಮಕ್ಕಳಿಗೆ ದೇವಿ ಹಾಕುವುದಕ್ಕೆ ಬಲಾತ್ಕಾರ ಮಾಡುವಂಥಾ ಕಾನೂನನ್ನು ಜಾರಿಗೆ ತರಬೇಕೆಂಬ ವಿಷಯವು ಚರ್ಚೆಯಾಗಿ, ಈ ಬಾಬಿನಲ್ಲಿ ಬೆಂಗಳೂರಿನಲ್ಲಿ ಜಾರಿಯಲ್ಲಿರತಕ್ಕ ಕಾನೂನನ್ನು ತರಿಸಿ ನೋಡಿ ತೀರ್ಮಾನ ಮಾಡೋಣವೆಂದು ಗೊತ್ತು ಮಾಡಿದಾರೆ.—ಚಾಮರಾಜಪೇಟೆಯಲ್ಲಿ ಒಂದು ಪ್ರೈಮರಿ ಸ್ಕೂಲನ್ನು ಕಟ್ಟಿಸುವ ಭಾಗದಲ್ಲಿ ಸ್ಥಳ ಮುಂತಾದ್ದನ್ನು ಮೆಂಬರುಗಳು ನೋಡಿ ಗೊತ್ತು ಮಾಡಿದಾರೆ. ಈ ಕಟ್ಟಡದ ಪ್ಲಾನ್ ಮತ್ತು ಅಂದಾಜು ಪಟ್ಟಿಗಳನ್ನು ಗವರ್ನಮೆಂಟ್ ಸ್ಯಾಂಕ್ಷನ್ ಬಗ್ಗೆ ಕಳುಹಿಸಿಕೊಡಬೇಕೆಂದು ಕೌನ್ಸಿಲರುಗಳು ಅಭಿಪ್ರಾಯಪಟ್ಟರು.—ಮೀವರ್ಸ್ ಲೈನ್ ಮನೆಗಳ ಬಡಾವಣೆಗೆ ಒಬ್ಬ ಸೂಲಗಿತ್ತಿಯನ್ನು ಸರ್ಕಾರದವರು ಹಂಗಾಮಿ ತರೀಖು ಸ್ಯಾಂಕ್ಷನ್ ಮಾಡಿದಾರೆಂಬ ಅಂಶವು ಕೌನ್ಸಿಲರುಗಳ ತಿಳಿವಳಿಕೆಗೆ ತರಲಾಯಿತು.—ಸ್ಮಶಾನಭೂಮಿಗಳನ್ನು ನೋಡಿಕೊಳ್ಳುವುದಕ್ಕೆ ಸದ್ಯ ಪ್ರತ್ಯೇಕವಾದ ಸ್ಯಾನಿಟರಿ ಓವರ್ಸಿಯರು ಅವಶ್ಯವಿಲ್ಲವೆಂತಲೂ, ಆಯಾ ಮೊಹಲ್ಲಾ ಓವರ್ಸಿಯರುಗಳೇ ನೋಡಿಕೊಂಡರೆ ಸಾಕಾಗಿದೆ ಎಂತಲೂ ಗೊತ್ತಾಯಿತು.—೧೯೦೩ ರಲ್ಲಿ ಒಂದು ಚರಂಡಿಯನ್ನು ಕಟ್ಟಿಸಿದ ವಿಷಯದಲ್ಲಿ ಕಂಟ್ರಾಕ್ಟರ್ ರಾಮಸ್ವಾಮಯ್ಯನವರು ತಮಗೆ ಬರಬೇಕಾಗಿರುವ ಹಣಕ್ಕೆ ಮ್ಯುನಿಸಿಪಾಲಿಟಿಯ ಮೇಲೆ ದಾವಾ ಮಾಡಿದಾರೆ. ಈ ಮೊಕದ್ದಮೆಯನ್ನು ನಡಿಸುವದಕ್ಕೆ ಮ್ಯುನಿಸಿಪಾಲಿಟಿಯ ಕಡೆ ಅಡ್ವೊಕೇಟ್ ಮ॥ ರಂಗಯ್ಯಂಗಾರ್ಯರನ್ನು ನೇಮಿಸಬಹುದೆಂದು ಇತ್ಯರ್ಥವಾಗಿರುತ್ತದೆ.

ಇಂಡಿಯಾ ದೇಶದ ವೃತ್ತಾಂತಗಳು

ಪಾಟಿಯಾಲಾ ಸಂಸ್ಥಾನದ ಮಹಾರಾಜರವರಿಗೆ ಝೀಂದ್ ಸಂಸ್ಥಾನದ ಸೈನ್ಯಾಧಿಪತಿಯ ಕುಮಾರ್ತೆಯೊಡನೆ ಕೊಟ್ಟು ವಿವಾಹ ನಡೆಯುವಂತೆ ಗೊತ್ತಾಗಿದೆ.

***

ಅಲ್ಲಹಾಬಾದಿನಲ್ಲಿದ್ದ ಬೈ॥ ಕೇದಾರನಾಥರೆಂಬ ದೊಡ್ಡ ವಕೀಲರು ಕಳೆದ ವಾರ ಆಗ್ರಾ ಪಟ್ಟಣಕ್ಕೆ ಹೋಗುತ್ತಿದ್ದಾಗ ರೈಲ್ ಗಾಡಿಯಿಂದ ಕೆಳಕ್ಕೆ ಬಿದ್ದು ಮೃತಪಟ್ಟರು.

***

ಟುಟಿಕೋರಿನ್ (ತಟ್ಟುಗುಡಿ) ಪಟ್ಟಣದ ಸಮುದ್ರದ ತೀರದಲ್ಲಿ ಮುತ್ತಿನ ಚಿಪ್ಪುಗಳನ್ನು ತೆಗೆಯುವ ಕೆಲಸವನ್ನು ಈ ತಿಂಗಳಲ್ಲೇ ಪ್ರಾರಂಭಿಸಬೇಕೆಂದು ಮದರಾಸ್ ಗವರ್ನಮೆಂಟಿನವರು ಅಲ್ಲಿನ ಸೂಪರಿಂಟೆಂಡೆಂಟಿಗೆ ಹುಕುಂ ಕೊಟ್ಟಿದಾರೆ.

ಕಲ್ಕತ್ತಾ ಪಟ್ಟಣದ ಜಗನ್ನಾಥ ಘಾಟಿನಲ್ಲಿ ೧೫೦೦೦ ಮಣಗಳ ನಾರಿನ ಗಟ್ಟುಗಳು ಭರ್ತಿ ಆಗಿದ್ದ ಟಪ್ರು ಎಂಬ ಭಾರೀ ದೋಣಿಗೆ ಬೆಂಕಿ ಬಿದ್ದು, ಎಲ್ಲಾ ಸುಟ್ಟುಹೋಯಿತು.

***

ಅರಕಾನ್ ದೇಶದ ಸಮುದ್ರ ತೀರದಲ್ಲಿ ಒಂದು ದ್ವೀಪದ ಒಳಗೆ ಅಗ್ನಿಪರ್ವತದಲ್ಲಿ ಅಗ್ನಿಯು ಚಿಗಿದು ಬರುವಂತೆ ಮಣ್ಣು ಧಗೆ ಕಾರಿ ಹೊರಡುತ್ತಿದೆ ಎಂದು ಆ ಪ್ರಾಂತ್ಯ ಸಂಚಾರಮಾಡಿಕೊಂಡು ಬಂದವರು ತಿಳಿಸಿದಾರೆ.

***

ಜಯಪುರ ಸಂಸ್ಥಾನದ ಮಹಾರಾಜರವರಿಗೆ ಸ್ಕಾಟ್ಲೆಂಡ್ ದೇಶದ ಮುಖ್ಯಪಟ್ಟಣವಾದ ಎಡಿಂಬರೋ ವಿದ್ಯಾನಿಲಯದವರು "ನ್ಯಾಯಶಾಸ್ತ್ರಗಳ ಪಂಡಿತರು" ಎಂಬ ಘನವಾದ ಬಿರುದನ್ನು ಕೊಡಬೇಕೆಂದು ಗೊತ್ತು ಮಾಡಿಕೊಂಡಿದಾರೆ.

***

ವೈಸ್‌ರಾಯರವರ ಮಂತ್ರಾಲೋಚನಾ ಸಭೆಯಲ್ಲಿ ದೇಶೀಯ ಮೆಂಬರಾದ ಮ॥ ಜಿ. ಕೆ. ಗೋಖಲೆಯವರು ಏಪ್ರಿಲ್ ೨೫ ರಲ್ಲಿ ಬೊಂಬಾಯಿಗೆ ಬಂದು ಜಹಜು ಹತ್ತಿ, ವಿಲಾಯಿತಿಗೆ ಪ್ರಯಾಣಮಾಡುವವರಾಗಿದಾರೆಂದು ಪ್ರಕಟವಾಗಿದೆ.

***

ಧೋಲ್‌ಪುರದ ಮಹಾರಾಜಾಧಿರಾಜರವರು, ಕಿಶನ್‌ಘಡದ ಮಹಾರಾಜಾಧಿರಾಜರವರು, ರತ್ಲಾಂ ರಾಜರವರು, ಜವ್ರೋರಾ ನವಾಬರವರು, ಈ ನಾಲ್ವರಿಗೂ ಇಂಗ್ಲಿಷ್ ಸೈನ್ಯದಲ್ಲಿ ಕ್ಯಾಪ್ಟನ್ ಎಂಬ ಗೌರವವಾದ ಪದವಿಯನ್ನು ಇಂಗ್ಲಿಷ್ ಗವರ್ನಮೆಂಟಿನವರು ಕೊಟ್ಟಿರುತ್ತಾರೆ.

***

ಮೊಹರಂ ಹಬ್ಬದ ಕಡೇ ದಿನ ಲಖ್ನೋ ಪಟ್ಟಣದಲ್ಲಿ ಮಹಮದೀಯರಲ್ಲಿ ಷಿಯಾ ಪಂಗಡದವರಿಗೂ ಸುನ್ನಿ ಪಂಗಡದವರಿಗೂ ಮಾರಾಮಾರಿಗಳಾಗಿ, ನಾಲ್ಕಾರು ಜನರು ಪೂರಾ ಗಾಯಪಟ್ಟರು. ಈಗ ಪೋಲೀಸಿನವರು ೧೫೦ ಮಂದಿಯನ್ನು ದಸ್ತಗಿರಿ ಮಾಡಿ, ಮೊಕದ್ದಮೆ ಮಾಡಿರುತ್ತಾರೆ.

***

ಹಿಮಾಚಲದ ತಪ್ಪಲಲ್ಲಿರುವ ಕ್ಯಾಟ್ರ ಎಂಬ ಊರಿನ ಸರಹದ್ದಿನಲ್ಲಿ ಎಂಟು ಭಾರೀ ಗ್ರಾಮಗಳಲ್ಲಿ ಕಳೆದ ವಾರ ಎರಡಾವರ್ತಿ ಭೂಕಂಪಗಳಾದವು. ಕಳೆದ ಜನವರಿ ೨೨ ರಲ್ಲಿ ಪ್ರಾಪ್ತವಾದ ಭೂಕಂಪದಿಂದ ಬಿರುಕುಬಿಟ್ಟಿದ್ದ ಕಟ್ಟಡಗಳು ಈಗಿನ ಭೂಕಂಪದಿಂದ ಇನ್ನು ಸಡಿಲವಾದವೆಂದು ತಿಳಿದು ಬಂದಿದೆ.

***

ಉತ್ತರ ದೇಶದಲ್ಲಿ ಕ್ಷಾಮಪೀಡಿತರ ಸಂಖ್ಯೆಯು ಹೋದವಾರ ಹೆಚ್ಚಿತು. ಸಂಯುಕ್ತ ಆಧಿಪತ್ಯಗಳಲ್ಲಿ ೧೦ ಲಕ್ಷ ಪ್ರಜೆಗಳೂ, ಮಧ್ಯ ಇಂಡಿಯಾದಲ್ಲಿ ೧,೩೦,೦೦೦ ಪ್ರಜೆಗಳೂ ಕ್ಷಾಮಪೀಡಿತರಾಗಿ, ಸರ್ಕಾರದವರ ರಿಲೀಫ್ ಕಾಮಗಾರಿಗಳಲ್ಲೂ ಧರ್ಮ ಸತ್ರಗಳಲ್ಲೂ ಹೋಗಿ ಸೇರಿಕೊಂಡು ಜೀವನ ಮಾಡುತ್ತಿದಾರೆ.

***

ಬೊಂಬಾಯಿ ಪಟ್ಟಣದ ಅಪ್ಪೋಲೋ ಬಂದರಿನ ಬೀದಿಯಲ್ಲಿ ಮೂರು ದೊಡ್ಡ ಇಂಗ್ಲಿಷ್ ಷಾಪುಗಳಿಗೆ ಬೆಂಕಿ ಬಿದ್ದು, ಎರಡು ಲಕ್ಷ ರೂಪಾಯಿನ ಮಾರಿಕೆ ಸರಕುಗಳೂ, ಯಂತ್ರಗಳೂ, ಕಟ್ಟಡಗಳೂ ಉರಿದುಹೋದವು. ಆ ಪೈಕಿ ಟೀ ಸೊಪ್ಪು ಒಂದೇ ೫೦,೦೦೦ ರೂಪಾಯಿನ ಬೆಲೆ ಬಾಳುವಷ್ಟು ಸುಟ್ಟುಹೋಯಿತು.

***

ಬಂಗಾಳಾ ಆಧಿಪತ್ಯದಲ್ಲಿ ೨೪ ಪರಗಣಗಳೆಂಬ ಡಿಸ್ಟ್ರಿಕ್ಟಿಗೆ ಸೇರಿದ ಬಿಯಾನಗರದಲ್ಲಿ ಕಳೆದವಾರ ಸುಮಾರು ೩೦ ಮಂದಿ ಕಳ್ಳರು ಬಾಬು ಹರೀಶಚಂದ್ರದಾಸ್ ಎಂಬ ದೊಡ್ಡ ಜಮೀನ್ದಾರನ ಮನೆಗೆ ನುಗ್ಗಿ ಮನೆಯಲ್ಲಿದ್ದವರನ್ನು ಹೊಡೆದು ಗಾಯಮಾಡಿ, ಬಹಳ ನಗಗಳನ್ನೂ ನಗದು ೧,೦೦೦ ರೂಪಾಯಿಯನ್ನೂ ಎತ್ತಿಕೊಂಡು ಹೋದರು.

***

ಸಿಂಗಾರವೇಲುಪಿಳ್ಳೆ ಎಂಬುವನು ತಂಜಾವೂರಿನಿಂದ ಕೊಯಮುತ್ತೂರಿಗೆ ಹೋಗಿ, ತಾನು ಪೋಲೀಸ್ ಇನ್ಸ್‌ಪೆಕ್ಟರೆಂದು ಹೇಳಿಕೊಂಡು, ಜನರನ್ನು ಮರುಳುಮಾಡಿ, ಅವರಿಂದ ಹಣ ವಸೂಲುಮಾಡಿಕೊಳ್ಳುತ್ತಿದ್ದನು. ಪೋಲೀಸಿನವರು ಅವನನ್ನು ಹಿಡಿದು ಮೊಕದ್ದಮೆ ಮಾಡಿದರು. ಸೆಷನ್ಸ್ ಜಡ್ಜರು ಅವನಿಗೆ ಎರಡು ವರುಷ ಕಠಿಣಸಜಾ ವಿಧಿಸಿದಾರೆ.

***

ಕಲ್ಕತ್ತಾ ಪಟ್ಟಣದಲ್ಲಿ ಅಜಾ ಇಸ್ಮೈಲ್ ಎಂಬೊಬ್ಬ ಮಹಮದೀಯ ವರ್ತಕನು ಬಂಗಾಳಾ ಎಂಬ ಜಹಜಿನಲ್ಲಿ ಸುಂಕತೆರಿಸದೆ ಗುಟ್ಟಾಗಿ ಸುಮಾರು ೪ ಮಣ ಅಫೀಮನ್ನು ಸಾಗಿಸಿಕೊಂಡು ಹೋಗುತ್ತಿದ್ದು ಸಿಕ್ಕಿಬಿದ್ದನು. ಪೋಲೀಸ್ ಮ್ಯಾಜಿಸ್ಟ್ರೇಟರು ಆ ಅಫೀಮನ್ನೆಲ್ಲಾ ಕಿತ್ತು ಸರ್ಕಾರಕ್ಕೆ ಕೊಡಿಸಿದ್ದಲ್ಲದೆ, ಆ ವರ್ತಕನಿಗೆ ೮೦೦ ರೂಪಾಯಿ ಜುಲ್ಮಾನೆ ವಿಧಿಸಿದರು.

***

ಕಾನ್‌ಪುರದಲ್ಲಿ ದೊಡ್ಡ ದೊಡ್ಡ ಅಂಗಡಿಗಳ ವರ್ತಕರು ಕಳೆದ ವಾರ ಸಭೆಸೇರಿ, ಭಾನುವಾರದ ದಿನ ಯಾರೂ ಅಂಗಡಿ ತೆಗೆದು ವ್ಯಾಪಾರಮಾಡಬೇಕಾದ ಅಗತ್ಯವಿಲ್ಲವೆಂದು ಗೊತ್ತು ಮಾಡಿ, ಇದನ್ನು ಈ ತಿಂಗಳ ಆರಂಭದಿಂದ ಜಾರಿಯಲ್ಲಿ ತಂದಿರುತ್ತಾರೆ. ಇದಲ್ಲದೆ ಆ ವರ್ತಕರು ತಮ್ಮಲ್ಲೇ ತಮ್ಮ ವ್ಯಾಪಾರಿಗಳ ಸೌಕರ್ಯಕ್ಕಾಗಿ ಒಂದು ಸಂಘವನ್ನು ಮಾಡಿಕೊಂಡಿರುವರು.

***

ಗವರ್ನಮೆಂಟಿನವರು ಬಂಗಾಳಾದಲ್ಲೂ ಅಸ್ಸಾಂನಲ್ಲೂ ಕೆಲವು ಕಡೆ ಡಿಸ್ಟ್ರಿಕ್ಟ್ ರೆವಿನ್ಯೂ ಅಧಿಕಾರಿಗಳಿಗೆ ವ್ಯಾಜ್ಯಗಳನ್ನು ಹಿಡಿದು ತೀರ್ಮಾನ ಮಾಡತಕ್ಕ ಅಧಿಕಾರವನ್ನು ತಪ್ಪಿಸಿ, ಪ್ರತ್ಯೇಕವಾದ ಜಡ್ಜಿಗಳನ್ನು ನೇಮಕಮಾಡಬೇಕೆಂದೂ, ಈ ರೀತಿ ಕೆಲವು ಕಾಲ ನಡಿಸಿ ನೋಡಿ ತೃಪ್ತಿಕರವಾಗಿರುವಂತೆ ಕಂಡು ಬಂದರೆ, ಅನಂತರ ಇತರ ಕಡೆಗಳಲ್ಲೂ ಅದೇ ರೀತಿ ಆಚರಣೆಯಲ್ಲಿ ತರಬೇಕೆಂದೂ ಯೋಚಿಸಿರುತ್ತಾರೆ.

ಹಿಂದೂಸ್ಥಾನದಲ್ಲಿ ಪ್ಲೇಗ್ ಉಪದ್ರದಿಂದಾಗುವ ಮರಣಗಳು ವಾರವಾರಕ್ಕೆ ಹೆಚ್ಚುತ್ತಿವೆ. ಕಳೆದವಾರ ಒಟ್ಟು ೫೯,೫೧೭ ಜನರು ಆ ಉಪದ್ರದಲ್ಲಿ ಸತ್ತುಹೋದರು. ಈ ಪೈಕಿ ಬೊಂಬಾಯಿ ೧,೧೭೫, ಸಂಯುಕ್ತ ಆಧಿಪತ್ಯಗಳು ೧೭,೩೯೯, ಬಂಗಾಳಾ ೯೧೦, ಪಂಜಾಬ್ ೮೦೦, ರಾಜಪುಟಾನಾ ೭೬೮, ಬರ್ಮಾ ೩೩೩, ಮೈಸೂರು ಸಂಸ್ಥಾನ ೨೬೦, ಮಧ್ಯ ಪ್ರಾಂತ್ಯಗಳು ಮತ್ತು ಬೀರಾರ್ ೨೨೭, ಮದರಾಸ್ ಆಧಿಪತ್ಯ ೭೫, ಹೈದರಾಬಾದ್ ಸಂಸ್ಥಾನ ೨೭, ಮಧ್ಯ ಇಂಡಿಯಾ ೬೮, ಈ ರೀತಿ ಮರಣಗಳಾಗಿವೆ.

***

ಹಿಂದೂಸ್ಥಾನದಲ್ಲಿ ಸ್ತ್ರೀವಿದ್ಯಾಭ್ಯಾಸವೂ ಸಂಘಪರಿಷ್ಕರಣ ಕಾರ್ಯಗಳೂ ಕಳೆದ ಶತಮಾನದಲ್ಲಿ ಅಭಿವೃದ್ಧಿ ಹೊಂದಿರುವ ವೃತ್ತಾಂತವನ್ನು ಒಂದು ಪುಸ್ತಕ ರೂಪವಾಗಿ ರಚಿಸಿ, ಯೋಗ್ಯವಾದ ರೀತಿಯಲ್ಲಿ ಅದನ್ನು ಅಲಂಕಾರಮಾಡಿ, ಬೊಂಬಾಯಿನ ಸ್ತ್ರೀಬೋಧ ಜುಬಿಲಿ ಮೆಮೋರಿಯಲ್ ಎಂಬ ಬಹುಮಾನವಾಗಿ ವಿಲಾಯಿತಿಯ ಅಲೆಕ್ಸಾಂಡ್ರಾ ಮಹಾರಾಜ್ಞಿಯವರಿಗೆ ಒಪ್ಪಿಸುವವರಾಗಿದಾರೆ. ಈ ಬಹುಮಾನವನ್ನು ಅಂಗೀಕರಿಸುತ್ತೇನೆಂದು ಮಹಾರಾಜ್ಞಿಯವರು ಅಭಯವನ್ನು ದಯಪಾಲಿಸಿರುವರು.

***

ಕಲ್ಕತ್ತಾ ಪಟ್ಟಣದ ಹ್ಯಾರಿಸನ್‌ರೋಡ್ ಎಂಬ ಬೀದಿಯಲ್ಲಿ ಮ॥ ಮಿತ್ರ, ಮ॥ ಬೋಸ್ ಎಂಬಿಬ್ಬರು ಮ್ಯಾಜಿಸ್ಟ್ರೇಟರ ಕೋರ್ಟಿನ ಕೆಲಸ ತೀರಿದ ಮೇಲೆ ಒಟ್ಟಿಗೆ ಟ್ರಾಂ ಕಾರಿನಲ್ಲಿ ಕುಳಿತು ಬರುತ್ತಿರುವಾಗ ದಾರಿಯಲ್ಲಿ ಯಾರೋ ಸಲ್ಫ್ಯೂರಿಕ್ ಆಸಿಡ್ (ಗಂಧಕದ ಎಣ್ಣೆ)ಯನ್ನು ಅವರ ಮುಖಕ್ಕೆ ಎರಚಿದರು. ಅವರ ಮುಖಗಳು ಬೆಂದು ವಿಕಾರವಾಗಿರುತ್ತವೆ. ಈಗ ಆ ಅಪರಾಧಿಗಳನ್ನು ಪತ್ತೆಮಾಡಿದವರಿಗೆ ೫೦೦ ರೂಪಾಯಿ ಬಹುಮಾನ ಕೊಡುತ್ತೇನೆಂದು ಪೋಲೀಸ್ ಕಮಿಷನರು ಇಸ್ತಿಹಾರು ಹಾಕಿಸಿರುತ್ತಾರೆ.

***

ಪಂಜಾಬಿನ ಲೆಫ್ಟಿನೆಂಟ್ ಗವರ್ನರಾಗಿದ್ದು ೩—೪ ವರುಷಗಳ ಕೆಳಗೆ ಕಾಯಿಲೆಬಿದ್ದು ಆ ಕೆಲಸಕ್ಕೆ ರಾಜೀನಾಮೆಕೊಟ್ಟು ಸೀಮೆಗೆ ಪ್ರಯಾಣವಾಗಿದ್ದ ಸರ್ ಡೆನ್ಜಿಲ್ ಇಬೆಟ್‌ಸನ್‌ರವರು ಕಳೆದವಾರ ಕಾಲವಾದರೆಂದು ತಂತಿವರ್ತಮಾನ ಬಂದಿದೆ. ಇವರು ಮೈಸೂರು ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮ॥ ಇ. ಮೆಕಾನಕಿಯವರ ಮಾವನವರು. ತಂದೆಯನ್ನು ನೋಡಬೇಕೆಂದು ಅವರ ಮಗಳು ಬೊಂಬಾಯಿನವರೆಗೆ ಹೋಗಿದ್ದು, ಕಾಲವಾದ ವರ್ತಮಾನವನ್ನು ಅಲ್ಲಿ ತಿಳಿದು, ಸೀಮೆಗೆ ಹೋಗದೆ ಮರಳಿ ಬಂದುಬಿಟ್ಟರು.

***

ಕಳೆದ ವಾರ ಮದರಾಸ್ ಪಟ್ಟಣದಲ್ಲಿ ಒಬ್ಬ ಜೋಡೆತ್ತಿನ ಗಾಡಿಯವನು ತನ್ನ ಗಾಡಿಯೊಳಗೆ ೩,೬೦೦ ಪೌಂಡು (ಅಂದರೆ, ೧೫೦ ಮಣ)ಗಳ ಭಾರವುಳ್ಳ ಕಬ್ಬಿಣ ಸಾಮಾನನ್ನು ಭರ್ತಿಮಾಡಿ ಸಾಗಿಸುತ್ತಿದ್ದನೆಂದು, ಇದು ಎತ್ತುಗಳಿಗೆ ಬಹಳ ಹಿಂಸಕರವಾದದ್ದೆಂದು ಮೊಕದ್ದಮೆ ಆಯಿತು. ಮ್ಯಾಜಿಸ್ಟ್ರೇಟರು ಆ ಗಾಡಿಯವನಿಗೆ ೧೦ ರೂಪಾಯಿ ಜುಲ್ಮಾನೆ ವಿಧಿಸಿ, ಇನ್ನು ಮುಂದೆ ಜೋಡೆತ್ತಿನ ಗಾಡಿಗೆ ೧,೩೯೫ ಪೌಂಡು (ಅಂದರೆ, ೩೧ ಮಣ) ಪೌಂಡು ತೂಕಕ್ಕಿಂತಲೂ ಹೆಚ್ಚಿನ ಸಾಮಾನನ್ನು ಯಾರೂ ಏರಿ ಮಾಡಕೂಡದೆಂದು ನಿರ್ಬಂಧ ಮಾಡಿರುತ್ತಾರೆ.

***

ಕಲ್ಕತ್ತಾ ಪಟ್ಟಣದಲ್ಲಿ ಪ್ರಕಟವಾಗುವ "ನವಶಕ್ತಿ" ಎಂಬ ಪತ್ರಿಕೆಯನ್ನು ಅಚ್ಚುಹಾಕಿಕೊಡುತ್ತಿದ್ದ ಮನಮೋಹನಘೋಷ್ ಎಂಬಾತನ ಮೇಲೆ, "ಸಂಧ್ಯಾ" ಎಂಬ ಪತ್ರಿಕೆಯನ್ನು ಅಚ್ಚು ಮಾಡಿಕೊಡುತ್ತಿದ್ದ ಮದನಮೋಹನ ಚಟರ್ಜಿ ಎಂಬಾತನ ಮೇಲೂ ರಾಜದ್ರೋಹದ ಅಪರಾಧಗಳು ಬಂದು ದರ್ಯಾಪ್ತಾದದ್ದರಲ್ಲಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಮೊದಲನೆಯಾತನಿಗೆ ಆರು ತಿಂಗಳ ಕಠಿಣಸಜಾ, ೧,೦೦೦ ರೂಪಾಯಿ ಜುಲ್ಮಾನೆಯನ್ನೂ, ಎರಡನೆಯಾತನಿಗೆ ಎರಡು ವರುಷಗಳ ಕಠಿಣಸಜಾ, ೧,೦೦೦ ರೂಪಾಯಿ ಜುಲ್ಮಾನೆಯನ್ನೂ ಕಳೆದ ವಾರ ವಿಧಿಸಿರುತ್ತಾರೆ.

***

ಬರ್ಮಾ ಆಧಿಪತ್ಯದಿಂದ ಕಳೆದ ಫೆಬ್ರವರಿ ತಿಂಗಳ ಪ್ರಾರಂಭದಿಂದ ಕಲ್ಕತ್ತೆಗೆ ಹತ್ತು ಜಹಜುಗಳು ಅಕ್ಕಿಯನ್ನೇ ಭರ್ತಿಮಾಡಿ ತಂದು ಸುರಿಯುತ್ತಿವೆ. ಕಡೆ ಬಂದ ಆರು ಜಹಜುಗಳಲ್ಲಿ ಒಟ್ಟು ೬೫,೫೦ ಸಾವಿರ ಟನ್‌ಗಳ ಅಕ್ಕಿ ಬಂದ. ಕಲ್ಕತ್ತೆಯಿಂದ ಕ್ಷಾಮಪೀಡಿತವಾದ ಪಂಜಾಬಿಗೂ ಸಂಯುಕ್ತ ಆಧಿಪತ್ಯಗಳಿಗೂ ಅಂದರೆ ಡಿಲ್ಲಿ, ಆಗ್ರಾ, ಕಾನ್‌ಪೂರ್, ಲಕ್ನೋ, ಕಾಶೀ, ಅಲ್ಲಹಾಬಾದ್, ಈ ಮೊದಲಾದ ಕಡೆಗಳಿಗೆ ರೈಲಿನ ಮೇಲೆ ಸಾಗಿಸೋದವು. ಈ ತಿಂಗಳಲ್ಲಿ ಇನ್ನೂ ೧೫ ಜಹಜುಗಳು ಬರ್ಮಾದಿಂದ ೯೦,೦೦೦ ಟನ್‌ಗಳ ಅಕ್ಕಿಯನ್ನು ಕ್ಷಾಮಪೀಡಿತವಾದ ಮೇಲ್ಕಂಡ ಪ್ರದೇಶಗಳಿಗೆ ತಂದು ಒದಗಿಸುವವು.

***

ಸ್ಕಾಟ್ಲೆಂಡಿನ ಮುಖ್ಯಪಟ್ಟಣವಾದ ಎಡಿಂಬರೋ ನಗರದಲ್ಲಿ ಸುಮಾರು ೬ ವಾರಗಳ ಕೆಳಗೆ ಹಿಂದೂಸ್ಥಾನದ ಸರಕುಗಳನ್ನು ಒಂದು ಕಡೆ ಇಡಿಸಿ ಪ್ರದರ್ಶನ ಮಾಡಿದರು. ಈ ಪ್ರದರ್ಶನಸಂಘದ ಸೆಕ್ರೆಟರಿ ಮ॥ ಪಿ. ಸಿ. ಮೆಕ್‌ಗ್ರೆಗರ್ ಎಂಬುವರು ತಿಳಿಸಿರುವುದೇನೆಂದರೆ—ಈ ಪ್ರದರ್ಶನದಿಂದ ಸುಮಾರು ೬೯,೦೦೦ ರೂಪಾಯಿ ನಿವ್ವಳ ಹುಟ್ಟುವಳಿ ಆಗಿದೆ. ಹಿಂದೂಸ್ಥಾನದಿಂದ ವಿದ್ಯಾಭ್ಯಾಸ ಮಾಡಬೇಕೆಂದು ಬರತಕ್ಕ ಯೌವನಸ್ಥರು ಮೊದಲಾದವರು ವಾಸಮಾಡಲು ಅಲ್ಲಿ ಒಂದು ಮನೆಯನ್ನು ಅನುಕೂಲವಾಗಿ ಕಟ್ಟಿಸಿಕೊಡಬೇಕೆಂದು ಕೆಲವು ದೊಡ್ಡ ಮನುಷ್ಯರು ಸಾಹಸಪಡುತ್ತಿದಾರೆ. ಮೇಲ್ಕಂಡ ಹಣವನ್ನೆಲ್ಲಾ ಆ ಫಂಡಿಗೆ ಕೊಡಲಾಗುವದು. ವಿಜಯನಗರದ ಮಹಾರಾಜರವರು ೫೦,೦೦೦ ರೂಪಾಯಿ ಚಂದಾ ಕೊಟ್ಟಿದಾರೆ. ಇದಲ್ಲದೆ ಈ ಫಂಡಿಗೆ ಪ್ರಿನ್ಸ್ ಆಫ್ ವೇಲ್ಸ್ ರವರು, ಮ॥ ಅಸ್ಕಿತ್, ಲಾರ್ಡ್ ಲ್ಯಾನ್ಸ್‌ಡೌನ್, ಲಾರ್ಡ್ ರೇ, ಲಾರ್ಡ್ ರಿಪ್ಪನ್, ತಿರುವಾಂಕೂರು ಮಹಾರಾಜರವರು, ಈ ಮೊದಲಾದವರೆಲ್ಲಾ ಧನಸಹಾಯ ಮಾಡಿರುತ್ತಾರೆ.

ಜಬ್ಬಲ್‌ಪುರದಲ್ಲಿ ಸ್ತ್ರೀ ವೈದ್ಯಳಾದ ಶ್ರೀಮತಿ ಗಾಯತ್ರೀ ದೇವಿ ಯೆಂಬುವಳು ಕಳೆದ ವಾರ ಅಲ್ಲಹಾಬಾದ್ (ಪ್ರಯಾಗ) ಪಟ್ಟಣಕ್ಕೆ ಹೋಗಿ ಒಂದು ದೊಡ್ಡ ಸಭೆಯನ್ನು ನಡಿಸಿ, "ಸ್ತ್ರೀಧನ" ಎಂಬ ವಿಷಯವನ್ನು ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸ ಮಾಡಿ, ಈ ವಿಷಯದಲ್ಲಿ ಕೆಲವು ಬದಲಾವಣೆಗಳು ಈಗಿನ ಕಾಲಕ್ಕೆ ತಕ್ಕ ಹಾಗೆ ಆಗಬೇಕಾಗಿವೆ ಎಂದು ಉಪನ್ಯಾಸ ಮಾಡಿದಳು. ನೂರಾರು ಜನ ಸ್ತ್ರೀಯರು ಸಭೆಗೆ ಹೋಗಿದ್ದು ಆಕೆಯು ಸಮಾಚಾರ್ಯದಿಗಳ ನ್ನು ಕೇಳಿದಾಗ, ಆಕೆ ತಿಳಿಸಿದ ಅಭಿಪ್ರಾಯಗಳನ್ನು ಅನುಮೋದಿಸಿ ದರು ಇದಲ್ಲದೆ ಆಕೆ ವರದಾ (ಘೋಷಾ) ಪದ್ಧತಿಯನ್ನು ನಮ್ಮ ಹಿರಿಯರಂತೆ ಮಾಡದ ಹೊರತು ಸ್ತ್ರೀಯರು ಅಭಿವೃದ್ಧಿಗೆ ಬರ ಲಾರರೆಂದೂ ಆ ದಿನ ಉಪನ್ಯಾಸ ಮಾಡಿದಳು.

***

ವಿಧಾವರ್ ಪಟ್ಟಣದ ರೈಲ್ವೆ ಸ್ಟೇಷನಿನಲ್ಲಿ ಕಳೆದ ಸಂಗಳವಾರ ರಾತ್ರಿ ೯ ಗಂಟೆಯ ಹೊತ್ತಿನಲ್ಲಿ ಪಂಜಾಬಿನಿಂದ ಬೊಂಬಾಯಿ ಮೇಲ್ ಗಾಡಿ ಬರುವುದಕ್ಕೆ ಮೊದಲು ಕೆಲವು ಮಂದಿ ಕಳ್ಳರು ಸ್ಟೇಷನಿನೊಳಕ್ಕೆ ನುಗ್ಗಿ ಬಟ್ಟೆ ಚೌಕಿದಾರನನ್ನು ಗುಂಡಿನಿಂದ ಹೊಡೆ ದು ಮಲಗಿಸಿ, ಸ್ಟೇಷನ್ ಮಾಸ್ಟರಿದ್ದ ಕೊಠಡಿಯೊಳಕ್ಕೆ ಹೋಗಿ, ಆ ತನ ಗುಂಡು ಬಾವರ್ಗಾಡಿ ಹೆದರಿಸಿ ಕಾಲಿಗೆ ಹೊಡೆದು ಗಾಯಮಾಡಿ, ಅಲ್ಲಿಂದ ಟಿಕೆಟ್ ಆಫೀಸ್ ಬೀಗದ ಕೈ ಕಿತ್ತುಕೊಂಡು, ಪೆಟ್ಟಿಗೆಯಲ್ಲಿ ದ್ದ ೬೦೦ ರೂಪಾಯಿ ತೆಗೆದು ಗಂಟುಕಟ್ಟಿ, ತಂತೀ ವರ್ತಮಾನ ಕಳುಹಿಸುವ ಗುಮಾಸ್ತೆಯ ಕೋಣೆಗೆ ಹೋಗಿ, ಅವನನ್ನು ಎರಡು ಕಡೆ ಕತ್ತಿಯಿಂದ ಕೊಯಿದು ಗಾಯಮಾಡಿ, ಮಾಣಿವಿರತಕ್ಕ ಇತರ ಕೆಲ ಸಗಳನ್ನು ನುಗ್ಗಿ ಪೆಟ್ಟಿಗೆಗಳನ್ನು ಒಡೆಯುತ್ತಿರುವಲ್ಲಿ ಪೋಲೀಸಿನವರು ಬಂದರೆಂದು ಗೊತ್ತಾಯಿತು. ಕಳ್ಳರು ಅಷ್ಟಕ್ಕೇ ನಿಲ್ಲಿಸಿ ತಪ್ಪು ಬಳಿ ಕ್ಕೆ ಹಣಕಾಸನ್ನು ಎತ್ತಿಕೊಂಡು ಪರಾರಿಯಾದರು. ಪೋಲೀಸಿನವ ರಿಗೆ ಆ ಗುಂಪಿನಲ್ಲಿ ಒಬ್ಬನಾದರೂ ಸಿಕ್ಕಲಿಲ್ಲ.

***

ಕಲ್ಕತ್ತಾ ಪಟ್ಟಣದಲ್ಲಿ ಪ್ರಸಿದ್ಧಿಯಾಗಿರುವ ಪಿ. ಅಬ್ದುಲ್ ಕರೀಮು ಎಂಬುವರು ವಿಧವೆಯಾಗಿದ್ದ ೧೩ ವರುಷದ ತಮ್ಮ ಸಂಗಳನ್ನು ಬ್ರಾಹ್ಮಣ ಯುವನನ್ನನಿಗೆ ಕೊಟ್ಟು, ಕಳೆದ ವಾರ ತಮ್ಮ ಮನ ಯಲ್ಲಿ ವಿಧ್ಯುಕ್ತವಾಗಿ ವಿವಾಹ ಮಾಡಿದರು. ಅಗ್ಗ ಬಹು ಜನ ರೂ ದೊಡ್ಡ ಮನುಷ್ಯರು ಮದುವೆ ಮನೆಗೆ ಹೋಗಿದ್ದು ನೂತನ ವಧೂವರರನ್ನು ಆಶೀರ್ವದಿಸಿ ಬಂದರು. ಬಂಗಾಳದಲ್ಲಿ ವಿಧವಾ ವಿವಾಹ ನಡೆದದ್ದು ಬಹಳ ಅಪೂರ್ವ. ಆದರೆ ಆ ಹುಡುಗಿಯ ಮೊದ ಲನೇ ಗಂಡನ ತಾಯಿಯೂ, ಆ ಗಂಡನ ಸಹೋದರರೂ ಸೇರಿ, ಈ ವಿವಾಹವನ್ನು ನಡೆಯದಂತೆ ತಡೆಯಬೇಕೆಂದು ಕೋರ್ಟಿನಲ್ಲಿ ದಾವಾ ಮಾಡಿದ್ದಲ್ಲದೆ, ಆ ಹುಡುಗಿಯನ್ನು ಎರಡನೇ ಮದುವೆಗೆ ಕೊಡಲು ತಾಯಿಗೆ ಅಧಿಕಾರವೇನೂ ಇಲ್ಲವೆಂತಲೂ, ಮೃತಪಟ್ಟ ಗಂಡನ ಮನೆ ಯವರೇ ಆ ಹುಡುಗಿಯ ಪೋಷಕರೆಂತಲೂ, ಇನರು ಒಪ್ಪದೆ ಕೋ ರ್ಟಿನಲ್ಲಿ ಆ ವಿವಾಹವನ್ನು ತಂದೆಯೇ ಸ್ವತಂತ್ರಿಸಿ ಮಾಡಿಕೊಂಡನೆಂ ದೂ ಅರ್ಜಿ ಕೊಟ್ಟಿದ್ದಾರೆ. ಈ ಮೊಕದ್ದಮೆಯ ವಿಚಾರಣೆಯಾ ಗಬೇಕಿದೆ.

***

ನೀಲಗಿರಿ ಜಿಲ್ಲೆಯ ಮೇಲೆ ವೆಲ್ಲಿಂಗ್‌ಟನ್ ಎಂಬ ದಂಡಿನಲ್ಲಿ ಇಂಗ್ಲಿಷ್ ಸೈನ್ಯವನ್ನು ಇಟ್ಟಿರುತ್ತಾರೆ. ಈ ಸೈನ್ಯದಲ್ಲಿ ಲೆಫ್ಟಿನೆಂಟ್ ಪದ ಪದವಿಯಲ್ಲಿರುವ ವಾಟ್ಸ್ ಮೆಕಾರ್ಥಿ, ನಿಗ್ಗ ಎಂಬೀ ಮೂವರು ಮಂದಿಯ ಮೇಲೆ ಇವರು ಅಕಸ್ಮಾತಾಗಿ ಮನೆ ನುಗ್ಗಿ ದೊಂಬಿಮಾಡಿ ದರು ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಫಿರ್ಯಾದು ಬಂದಿದೆ. ಆ ಮೂವರ ಪೈಕಿ ಒಬ್ಬ ಹುದ್ದೇದಾರನು ನೆಂ ೩ ರಂಗ್ಯರು ಗೌಡನೆಂಬುವ ಬೇಸ್ತೆಯ ದೊಡ್ಡ ಮನುಷ್ಯನ ಮನೆಗೆ ಒಂದು ರಾತ್ರಿ ನುಗ್ಗಿ ಒಂದು ಕೊಠಡಿಯೊಳಕ್ಕೆ ಹೋದನು. ಆಗ ಮನೆಯವರು ಅವನನ್ನು ಹೊಡೆದು ಓಡಿಸಿದರು. ಸುಮಾರು ಎರಡು ಗಂಟೆ ಹೊತ್ತಿನ ಮೇಲೆ ಆ ಹುದ್ದೇದಾರನೂ ಅವನ ಸಂಗಡ ಇನ್ನಿಬ್ಬರು ಹುದ್ದೇದಾ ರರೂ ಅದೇ ಗೌಡನ ಮನೆಗೆ ಹೋಗಿ, ಬಾಯಿಯಲ್ಲಿದ್ದ ಗಾಡಿಗಳನ್ನೂ ಹಿಡಿದು ಮೊದಲಾದ ಸಾಮಾನನ್ನೂ ಹಾಳುಮಾಡಿ, ಒಂದು ವಾಕಿಣಾ ವನ್ನು ಹಿಡಿದುಕೊಂಡು, ಅದಕ್ಕೆ ಬೇಕು ಕಾಣಿ ಕೊಡಬೇಕೆಂದು ಹೊಡೆದರು. ಮಾರುದಿನ ಬೆಳಿಗ್ಗೆ ಆ ವಾಕಿಣವು ಜೀವವಿಲ್ಲದೆ ಬಾವಿಯ ಬಿದ್ದಿತು. ಈ ವಿಷಯದ್ದಮೆಯನ್ನು ಮಿಲ್ಟರೀ ಅಧಿಕಾರಿಗಳು ತನಿಖೆ ಮಾಡಿ, ಪೋಲೀಸಿಗೆ ಒಪ್ಪಿಸಿಬಿಟ್ಟರು. ಇವರು ಮೇಲ್ಕಂಡ ಮೂವರು ಮಂದಿಯ ಮೇಲೂ ಫಿರ್ಯಾದುಮಾಡಿದ್ದಾರೆ.

ವಿದೇಶ ವರ್ತಮಾನಗಳು.

ಅಮೇರಿಕಾಕ್ಕೆ ಸೇರಿದ ಆರ್ಜೆಂಟೈನ್ ಎಂಬ ಪ್ರಜಾ ಪ್ರಭುತ್ವದ ಪ್ರೆಸಿಡೆಂಟ್ ಎಂಬ ಮುಖ್ಯಾಧಿಕಾರಿಯನ್ನು ಕೊಲ್ಲಬೇಕೆಂದು ಮ ತ್ತೊಬ್ಬ ಗುಂಡು ಎಸೆದ ಹಾಗೂ, ಆದರೆ ಆ ಗುಂಡು ಒಡೆಯದೆ ಹೋದ ಹಾಗೂ, ನಾಲ್ಕು ಜನರು ಸಿಕ್ಕಿಬಿದ್ದಿದಾರೆಂತಲೂ ತಂತೀ ವರ್ತಮಾನ ಬಂದಿದೆ.

***

ರಷ್ಯಾ ಚಕ್ರವರ್ತಿ ಜಾರ್ ಯವರು ಸ್ಟಾಕ್‌ಹೋಲೀ ಎಂಬ ರಾಜಧಾನಿಯಲ್ಲಿ ದೂಮಾ ಪಾರ್ಲಿಮೆಂಟಿನ ೩೦೦ ಜನ ಮೆಂಬರುಗ ಳಿಗೆ ಕಳೆದ ಗುರುವಾರ ಭೇಟಿಕೊಟ್ಟು ಪ್ರಜಾನನ್ನುಯಿಯನ್ನು ಕಾ ಪಾಡುವ ಭಾಗದಲ್ಲಿ ಪಾರ್ಲಿಮೆಂಟಿನವರು ತಮಗೆ ಸಹಾಯಕರಾಗಿ ರಬೇಕೆಂದು ಕೇಳಿಕೊಂಡರು.

***

ಪೋರ್ಚುಗಲ್ ರಾಜ್ಯದ ದೊರೆಯನ್ನೂ ಯುವರಾಜರನ್ನೂ ಕೊಂದುಹಾಕಿದ ಘಾತುಕರ ಕುಟುಂಬಗಳ ಜೀವನಕ್ಕಾಗಿ ಆ ರಾಜ್ಯದ ರಾಜಧಾನಿಯಾದ ಲಿಸ್ಬನ್ ನಗರದ ವರ್ತಕರೂ ಮುಂತಾದವರೂ ಸೇರಿ ಒಂದು ಫಂಡು ಕೂಡಿಸಿದ್ದಾರೆ, ಈ ಫಂಡಿನಲ್ಲಿ ಇದು ವರೆಗೆ ೬೦,೦೦೦ ರೂಪಾಯಿ ಸೇರಿರುತ್ತದೆ.

ಕೊಲ್ಲಲ್ಪಟ್ಟ ಪೋರ್ಚುಗಲ್ ರಾಜ್ಯದ ದೊರೆಯು ತನ್ನ ಜೀವ ಮಾನವನ್ನು ವಿಮಾ (ಇನ್ಷೂರೆನ್ಸ್) ಕಂಪನಿಗಳಲ್ಲಿ ಇನ್ಷೂರು ಮಾಡಿ ಬಂದಾ ಕೊಡುತ್ತಿದ್ದರು. ಈಗ ಆ ವಿಮಾರು ಕಂಪನಿಗಳವರೂ ಆ ದೊರೆಯ ವಾರಸುದಾರರಿಗೆ ಅಂದರೆ ಈಗಿನ ೧೯ ವರುಷದ ದೊರೆ ಗೆ ೧೮೧ ಲಕ್ಷ ರೂಪಾಯಿ ಪಾವತಿ ಮಾಡಬೇಕಾಗಿದೆ.

***

ಆಫ್ರಿಕದ ಉತ್ತರ ಭಾಗದಲ್ಲಿರುವ ಮೊರೋಕ್ಕೋ ದೇಶದಲ್ಲಿ ಫ್ರೆಂಚರು ದಂಡುಕಟ್ಟಿ ಅಲ್ಲಿನ ತುಂಟಜನರನ್ನು ದಂಗೆ ಕೋರ ರನ್ನೂ ಶಿಕ್ಷಿಸುತ್ತಿದ್ದಾರೆ. ಫ್ರೆಂಚ್ ಸೈನ್ಯಗಳು ಕಳೆದ ಜನವರಿ ೧೬ ರಿಂದೀಚೆಗೆ ಸ್ವದೇಶಿಗಳ ಮೇಲೆ ಮಾಡಿದ ಯುದ್ಧಗಳಲ್ಲಿ ೩ ಜನ ಹುದ್ದೇ ದಾರರೂ, ೪೧ ಮಂದಿ ಸಿಪಾಯಿಗಳೂ ಮೃತಪಟ್ಟರು. ೨೦೩ ಜನ ಸೈನಿಕರಿಗೆ ಗಾಯಗಳಾದವು. ಈ ಯುದ್ಧ ಕಾರ್ಯಗಳು ಇನ್ನೂ ಕೊ ನೆಯಾಗಲಿಲ್ಲ.

***

ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ಐರ್ಲೆಂಡಿನಲ್ಲಿ ಕಳೆದ ವಾರ ಭಯಂಕರವಾದ ಬಿರುಗಾಳಿ ಬೀಸಿತು. ಅನೇಕ ಸ್ಥಳಗಳಲ್ಲಿ ಮನೆಮಠ ಗಳೂ ಆಸ್ತಿಪಾಸ್ತಿಗಳೂ ಹಾಳಾದವು. ಸ್ಕೂಲ್, ದೇವಾಲಯ ಮೊದ ಲಾದವುಗಳ ಮೇಲ್ಛಾವಣಿಗಳು ಕಿತ್ತು ಹಾರಿಹೋದವು. ಟೆಲಿಗ್ರಾಫ್ ತಂತೀ ಕಂಭಗಳು ಬಿದ್ದುಹೋದವು. ವರ್ತಮಾನ ಹೋಗಿಬರುವುದ ಕ್ಕೆ ಅಡಚಣೆಯುಂಟಾಯಿತು. ಸಮುದ್ರತೀರಗಳಲ್ಲಿ ಕಟ್ಟಿ ನಿಲ್ಲಿಸಿ ದ್ದ ಅನೇಕ ಹಡಗುಗಳು ದೋಣಿಗಳೂ ಕಿತ್ತು ಒಡೆದು ಮುಳುಗಿ ಹಾಳಾದವು.

***

ಜರ್ಮನಿ ರಾಜ್ಯದ ಎಲ್ ಸ್ಟೈನ್ ರಾಜಯುವರಾಜ ಪ್ರಿನ್ಸ್ ಹೆ ರಿಯವರೂ ಕೀಲ್ ಪಟ್ಟಣದ ರಾಜಬೀದಿಯಲ್ಲಿ ಮಾರೋಟರಲ್ಲಿ ಕುಳಿತು ಗಾಳಿಸವಾರಿ ಹೋಗುತ್ತಿದ್ದಾಗ ಕಳೆದ ಬುಧವಾರ ಅವರ ಗಾ ಡಿಯೂ ವಿದ್ಯುಚ್ಛಕ್ತಿಯ ಟ್ರಾಂ ಎಂಬ ರೈಲುಗಾಡಿಗೂ ಡಿಕ್ಕಿ ಹೊ ಡೆದು, ಅವರು ಕುಳಿತಿದ್ದ ಗಾಡಿಯ ಹಿಂದು ಚಕ್ರಗಳು ಕಿತ್ತು ಒಡೆದುಹೋದವು. ದೇವರ ದಯದಿಂದ ಅದರಲ್ಲಿ ಕುಳಿತಿದ್ದವರಲ್ಲಿ ಗೂ ಯಾವವೊಂದು ಅಪಾಯವೂ ಸಂಭವಿಸಲಿಲ್ಲವೆಂದು ತಂತೀ ವರ್ತ ಮಾನ ಬಂದಿದೆ.

***

ಅಮೇರಿಕಾಕ್ಕೆ ಸೇರಿದ ಫಿಲಡೆಲ್ಫಿಯಾ ನಗರದಲ್ಲಿ ಕೂಲಿ ಸಿಕ್ಕದೆ ಕಷ್ಟಪಡುತ್ತಿರುವ ರಷ್ಯದ ಮತ್ತು ಇಟಲಿಯ ೧೫೦೦೦ ಜನರು ಗುಂ ಪು ಕಟ್ಟಿಕೊಂಡು, ಅಂಗಡಿ ಬಾಗಿಲುಗಳನ್ನು ಹಿಡಿದು, ನಾನಾ ಅಕ್ರ ಮಕಾರ್ಯಗಳನ್ನು ನಡಿಸುತ್ತಾ, ಪ್ರಜಾನೆಮ್ಮದಿಗೆ ಭಂಗಮಾಡು ತ್ತಿದ್ದರು. ಪೋಲೀಸಿನವರು ಅವರ ಮೇಲೆ ಗುಂಡುಹೊಡೆದಲ್ಲದೆ ಅವ ರು ಚದರಿಹೋಗಲಿಲ್ಲ. ಸುಮಾರು ೧೫೦—೨೦೦ ಮಂದಿ ಗುಂಡೇಟು ತಗಲಿ ಗಾಯಪಟ್ಟರೆಂದೂ, ಕಡೆಗೆ ಎಲ್ಲಾ ಸಮಾಧಾನವಾಯಿತೆಂದೂ ತಂತೀ ವರ್ತಮಾನ ಬಂದಿದೆ.

***

ವಿಲಾಯಿತಿಯಲ್ಲಿ ಸರಕಾರ ಕಂದಾಯ ಮುಂತಾದ್ದನ್ನು ಕೊಟ್ಟು ಸ್ವತಂತ್ರವಾಗಿ ಜೀವನಮಾಡತಕ್ಕ ಸ್ತ್ರೀಯರಿಗೆ ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆಯಲ್ಲಿ ಸಮ್ಮತಿಕೊಡುವ (ಓಟು) ಅಧಿಕಾರ ವನ್ನು ಕೊಡಬೇಕೆಂದು ವಿಲಾಯಿತಿಯ ಪಾರ್ಲಿಮೆಂಟಿನಲ್ಲಿ ಚರ್ಚೆ ಯಾಗಿ ಒಂದು ಮಸೂದೆ ಕಾನೂನು ತಯಾರಾಗಿರುತ್ತದೆ. ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಮಾಜದ ಮೆಂಬರುಗಳು ಈ ಮಸೂದೆಯನ್ನು ಎರಡನೇ ಸಲ ಓದಿ ಚರ್ಚೆಮಾಡಿ, ಒಪ್ಪಿದ್ದಾ ಯಿತು. ಇನ್ನೊಂದುಸಾರಿ ಅದನ್ನು ಓದಿದ ಮೇಲೆ ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಸಭೆಗೆ ರವಾನೆಮಾಡುವರು.

***

ಫ್ರಾನ್ಸ್ ಸಂಸ್ಥಾನದಲ್ಲಿ ಒಬ್ಬ ರಸಾಯನದಾರನು ಒಂದು ಹೊಸ ನಮೂನೆಯ ಬಂದೂಕನ್ನು ತಯಾರುಮಾಡಿದನು. ಅದರ ಯೋಗ್ಯ ತೆಯನ್ನು ಪರೀಕ್ಷೆಮಾಡುವುದಕ್ಕೆ ಅಲ್ಲಿನ ಸೈನ್ಯದ ಮುಖ್ಯ ಹುದ್ದೇ ದಾರರೂ ಆ ಕಸಬಿನ ಇತರ ನಿಪುಣರೂ ಸೇರಿದ್ದರು. ಇವರೆಲ್ಲಾ ಆ ಬಂದೂಕಿನ ಯೋಗ್ಯತೆಯನ್ನು ಬಹಳವಾಗಿ ಕೊಂಡಾಡಿದರು. ಒಂದು ಮಿನಿಟಿಗೆ (ನಿಮಿಷಕ್ಕೆ) ಈ ಬಂದೂಕಿನಿಂದ ೩೦೦ ಸಾರಿ ಗುಂಡುಗ ಳನ್ನು ಹೊಡೆಯ ಬಹುದು. ಅದರಲ್ಲಿ ೨೫ ಸುತ್ತನಲ್ಲಿ ಗುಂಡುಗಳ ನ್ನಿಟ್ಟು, ಸ್ವಲ್ಪವೂ ಆಯಾಸವಿಲ್ಲದೆ ಹಾರಿಸಬಹುದೆಂದೂ, ಈ ಬಂದೂ ಕನ್ನ ಎಲ್ಲಾ ಭಾಗಗಳೂ ತೃಪ್ತಿಕರವಾಗಿದೆ ಎಂದೂ ಆ ಹುದ್ದೇದಾರ ರು ಶೋಧಿಸಿದವನಿಗೆ ಅಭಿನಂದಿಸಿದ್ದಾರೆ.

***

ರಷ್ಯಾ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಪೋಲೀಸಿ ನವರು ಕಳೆದ ವಾರ ೩೫ ಮಂದಿ ರಾಜ್ಯಕಂಟಕರನ್ನು ದಸ್ತಗಿರಿ ಮಾ ಡಿದರು. ಇವರನ್ನು ರಾಜಬೀದಿಗಳಲ್ಲಿ ಹಿಡಿಯುವಾಗ್ಗೆ ಅವರು ಕಗ್ಗದ ಪೋಲೀಸಿನವರ ಮೇಲೆ ಕದನಮಾಡಲಾರಂಭಿಸಿದರು. ಪಿಸ್ತೂಲುಗಳನ್ನು ಹಿಡಿದು ಪೋಲೀಸಿನವರ ಮೇಲೆ ಹೊಡೆದು, ಕೆಲವರನ್ನು ಗಾಯಮಾಡಿ ದರು. ಆದಾಗ್ಯೂ ಅವರನ್ನೆಲ್ಲಾ ಬಿಡದೆ ಹಿಡಿದು ಶೋಧನೆಮಾಡಿದಾಗ ಅವರ ಬಳಿ ಮದ್ದಿನ ಗುಂಡುಗಳೂ ಕೆಲವು ಗುಟ್ಟಿನ ಕಾಗದಪತ್ರಗಳೂ ದೊರೆತವು. ಈ ಕಾಗದಗಳಿಂದ ಅವರು ದೊಡ್ಡ ದೊಡ್ಡ ಅಧಿಕಾರಿಗ ಳನ್ನೆಲ್ಲಾ ಕೊಲ್ಲಬೇಕೆಂದು ಪ್ರಯತ್ನಪಟ್ಟಿದ್ದರೆಂದು ಗೊತ್ತಾಯಿತು. ಈ ಪೈಕಿ ಏಳು ಮಂದಿಯನ್ನು ಗಲ್ಲಿಗೆ ಎತ್ತಬೇಕೆಂದೂ ಶಿಕ್ಷೆ ವಿಧಿಸಿದ ರು. ಇವರಲ್ಲಿ ಇಬ್ಬರು ಹೆಂಗಸರೆಂತಲೂ, ಒಬ್ಬನು ಇಟಲಿ ದೇಶಸ್ಥ ನಾದ ಕಾಲ್ಪಿನೊ ಎಂಬುವನು ವರ್ತಮಾನ ಪತ್ರಿಕೆ ನಡಿಸತಕ್ಕವನೆಂ ತಲೂ ತಿಳಿದುಬಂದಿದೆ.

***

ಟರ್ಕಿಯ ರಾಜ್ಯದ ಕಾರುಕರ್ದಿಗಳು ಪ್ರಜಾ ಸಮ್ಮತವಾಗಿ ನಡೆಯುವಂತೆ ಕಾಣುವುದಿಲ್ಲ. ಸುಲ್ತಾನರು ಪಾರ್ಲಿಮೆಂಟಿನ ಪ್ರತಿ ಕಕ್ಷಿಗಳ ಪಕ್ಷವನ್ನು ವಹಿಸಿ, ರಷ್ಯದವರ ಬೆಂಬಲದ ಮೇಲೆ ರಾಜ್ಯಭಾ ರ ಮಾಡುತ್ತಿರುವಂತೆ ಕಾಣುವುದು. ಪ್ರಜೆಗಳಿಗೆ ಸುಲ್ತಾನರ ಮೇಲೆ ನಾನಾವಿಧವಾದ ಸಂಶಯಗಳುಂಟಾಗಿರುತ್ತವೆ. ಕಳೆದವಾರ ಸುಲ್ತಾನರ ವರ ಒಂದು ಮೋಟಾರ್ ಗಾಡಿಯು ರಾಜಬೀದಿಯಲ್ಲಿ ಹೋಗುತ್ತಿ ದ್ದಾಗ ದುಷ್ಕರ್ಮಿಯೊಬ್ಬ ಸುಲ್ತಾನರನ್ನು ಕೊಲ್ಲಬೇಕೆಂದು ಗಾ ಡಿಗೆ ಎರಡು ಮದ್ದಿನ ಗುಂಡುಗಳನ್ನು ಎಸೆದರು. ಗಾಡಿಗೆ ತಗಲುವುದಕ್ಕೆ ಮೊದಲೇ ಒಂದು ಗುಂಡು ಹಾರಿತು. ಎರಡನೆಯ ಗುಂಡು ಹಾರಿ ಗಾಡಿ ನಡಿಸುವವನನ್ನೂ ಇನ್ನಿಪ್ಪತ್ತು ಜನರನ್ನೂ ಗಾಯಮಾಡಿತು. ಇದ ಲ್ಲದೆ ಮೂರು ಮಂದಿ ಸತ್ತುಹೋದರು. ಆದರೆ ಸುಲ್ತಾನರು ಆ ಮೋಟಾರ್ ಗಾಡಿಯಲ್ಲಿ ಇರಲಿಲ್ಲ. ಹಿಂದೆ ಸ್ವಲ್ಪದೂರದಲ್ಲಿ ಒಂದು ಗಾಡಿಯಲ್ಲಿ ಕುಳಿತುಕೊಂಡಿದ್ದರು. ಈ ಅನಾಹುತಕ್ಕೆ ಅವರು ಸಿಕ್ಕದೆ ಅರಮನೆಗೆ ಹೋಗಿ ಸೇರಿಕೊಂಡರು. ಆ ಗುಂಡುಗಳನ್ನು ಎಸೆದು ಅ ನಾಹುತ ಮಾಡಿದವರನ್ನು ಹಿಡಿಯಬೇಕೆಂದು ಎಷ್ಟು ಪ್ರಯತ್ನಪಟ್ಟ ರೂ ಪ್ರಯೋಜನವಾಗಲಿಲ್ಲ.

***

ಲಂಡನ್ ಪಟ್ಟಣದಲ್ಲಿ ಕಚೇರಿ ನಡಿಗುವ ಸ್ಯಾನಿಟರಿ ಇಲಾಖೆಯ ಇನ್ಸ್‌ಪೆಕ್ಟರುಗಳೆಲ್ಲಾ ಒಂದು ಸಂಘವನ್ನು ಮಾಡಿಕೊಂಡಿದ್ದಾರೆ. ಇವ ರು ಎರಡು ವಾರಗಳ ಕೆಳಗೆ ತಮ್ಮ ಸಂಘದ ೫ನೆಯ ವಾರ್ಷಿಕೋ ತ್ಸವವನ್ನು ಮಾಡಿ, ಒಂದು ದಿನವನ್ನು ನಡಿಸಿದರು. ಭೋಜನಾನಂ ತರ ಸರ್ ಜೇಮ್ಸ್ ಕ್ರೈಟನ್ ಬ್ರೌನ್ ಎಂಬಾತನು ಸಭೆಯ ಅಗ್ರಾಸನ ವನ್ನು ವಹಿಸಿ, ಕೆಲವು ಪಟ್ಟಣಗಳಲ್ಲಿ ಮಕ್ಕಳು ಸಾಯುವುದನ್ನು ಕು ರಿತು—ಸ್ಯಾನಿಟರೀ ಕೊರತೆಗಳೂ, ಜನರು ಬಹಳ ಒತ್ತಾಗಿ ವಾಸ ಮಾಡುವುದೂ, ತಾಯಂದಿರ ಅಜಾಗರೂಕತೆಯೂ ಅನಕ್ಷರತೆಯೂ, ಕೆಟ್ಟ ಮತ್ತು ಅಗತ್ಯೋಚಿತ ಆಹಾರವೂ—ಇವುಗಳೂ, ಈ ಮೊದಲಾದ ಕಾರ ಣಗಳಿಂದಲೇ ಬಹು ಜನ ಮಕ್ಕಳು ಮೃತಪಡುತ್ತಾರೆ. ಅದರೂ ಈ ದೇಶದಲ್ಲಿಯೂ ಕೆಟ್ಟ ಮತ್ತು ರೋಗದಾಸಕವಾದ ಆಹಳ ಹಾಲ ನ್ನು ಕುಡಿಸುವುದರಿಂದಲೇ ಹೆಚ್ಚು ಮಕ್ಕಳು ಸಾಯುತ್ತಾರೆ. ಕೆಲವು ಕಡೆ ಶೇಕಡಾ ೪೦ ರಷ್ಟು ಹಸುಕರುಗಳು ಆರೋಗ್ಯವಾಗಿಲ್ಲ. ಇಂಥಾ ಹಸುಗಳ ಹಾಲನ್ನು ಕುಡಿಸುವುದರಿಂದ ಇಷ್ಟು ವಿಶೇಷವಾಗಿ ಮಕ್ಕಳು ಸಾಯುವುದು ಆಶ್ಚರ್ಯವಲ್ಲ. ಈ ಒಳ್ಳೇ ಹಾಲಿನ ವಿಷ ಯವು ಬಹು ಮುಖ್ಯವಾದದ್ದಾದಕಾರಣ ಈ ಸಲ ವಿಲಾಯಿತಿಯ ಪಾ ರ್ಲಿಮೆಂಟಿನವರು ಅವರ ವಿಷಯದಲ್ಲಿ ಒಳ್ಳೇ ಕ್ಷೇಮಕರವಾದ ಕಾ ನೂನನ್ನು ಮಾಡಿ ಜಾರಿಗೆ ತರುವವರಾಗಿದ್ದಾರೆ ಎಂಬದಾಗಿ ಉಪನ್ಯಾಸ ಮಾಡಿದರು.

***

ಪೋರ್ಚುಗಲ್ ರಾಜ್ಯದಲ್ಲಿ ಕಳೆದ ೧೯೦೩ ನೆ ಇಸವಿಯಲ್ಲಿ ನಾ ವೆಯ ಇಲಾಖಾ ನೌಕರರು ದಂಗೆಯೆದ್ದರೆಂಬ ಅಪರಾಧಕ್ಕೆ ಸಿಕ್ಕಿ ಬಿಟ್ಟು ದೇಶವೆಲ್ಲಾ ಸುಕಂ ಪ್ರಕಾರ ಸಜಾ ಶಿಕ್ಷೆಯನ್ನು ಅನುಭವಿಸು ತ್ತಿದ್ದರು. ದೊರೆಯನ್ನೂ ಯುವರಾಜನನ್ನೂ ಕೊಂದುಹಾಕಿದ ವೃ ತ್ತಾಂತವೂ, ಎರಡನೇ ಕುಮಾರನಾದ ಚಿಕ್ಕ ವಯಸ್ಸಿನ ಮ್ಯಾನ್ಯುಯ ಲ್ ಎಂಬಾತನಿಗೆ ಈಚೆಗೆ ಪಟ್ಟವಾದ ವಿಚಾರವೂ ವಾಚಕರಿಗೆ ತಿಳಿದಿದೆ ಯಷ್ಟೆ. ಈ ಮ್ಯಾನ್ಯುಯಲ್ ದೊರೆಯು ಮೇಲ್ಕಂಡ ಅಪರಾಧಿಗಳಿಗೆ ಎಲ್ಲ ಕ್ಷಮಾಪಣೆಯನ್ನು ದಯಪಾಲಿಸಿ, ಅವರನ್ನು ಸೆರೆಮನೆಯಿಂದ ಬಿಡುಗಡೆಮಾಡಿಸಿದರು. ಹೀಗೆ ಬಿಡುಗಡೆಹೊಂದಿದವರ ಹೆಂಡಿರುಮ ಕ್ಕಳೆಲ್ಲಾ ಏಕವಾಗಿ ಕಳೆದವಾರ ಅರಮನೆಗೆ ಹೋಗಿ ದೊರೆಯ ಮುಂ ದೆ ಅಡ್ಡಬಿದ್ದು, ಆತನ ಕೈಯನ್ನು ಹಿಡಿದು ಕಣ್ಣೀರುಸುರಿಸುತಾ ಮುತ್ತಿಟ್ಟುಕೊಂಡರು. ಚಿಕ್ಕ ವಯಸ್ಸಿನ ದೊರೆಯ ಮನಸ್ಸು ಬಹ ಳವಾಗಿ ಕರಗಿ ಮಕ್ಕಳನ್ನು ಎತ್ತಿ ಮುತ್ತಿಟ್ಟುಕೊಂಡು, ಅವರನ್ನೆಲ್ಲಾ ಕುರಿತು—ಈ ರಾಜ್ಯವನ್ನು ಆಳುವುದರಲ್ಲಿ ನನಗೆ ನಾನಾತೊಂದರೆಗ ಳು ಪ್ರಾಪ್ತವಾಗಬಹುದು. ನನ್ನ ಪ್ರಜೆಗಳೆಲ್ಲಾ ನನಗೆ ಸಹಾಯಕ ರಾಗಿ ನಿಂತು, ನನ್ನ ಕಾರ್ಯಗಳನ್ನು ಸರಿಯಾಗಿ ನೆರವೇರುವಂತೆ ಮಾಡಿಯಾರೆಂದು ನಿರೀಕ್ಷಿಸುತ್ತೇನೆ. ನಾನು ಸರ್ವದಾ ನ್ಯಾಯವಾಗಿ ಯೂ ಕರುಣೆಯಿಂದಲೂ ರಾಜ್ಯಭಾರ ಕಾರ್ಯಗಳನ್ನು ನಡಿಸಬೇಕೆಂ ದು ಸಂಕಲ್ಪವುಳ್ಳವನಾಗಿದ್ದೇನೆ ಎಂದು ಅಪ್ಪಣೆಕೊಡುತ್ತಿದ್ದರು. ಪ್ರಜೆ ಗಳೆಲ್ಲಾ ಇಂಥಾ ದೊರೆಯನ್ನು ಕೊಂಡಾಡುತ್ತಾರೆ.

***

ಇಟಲಿ ರಾಜ್ಯದಲ್ಲಿ ಕಳೆದ ೧೯೦೩ ನೆ ವರುಷದ ತನಕ ನೇನಾರ್ ನಾಸಿ ಎಂಬಾತನು ವಿದ್ಯಾಭ್ಯಾಸದ ಇಲಾಖಾ ಮಂತ್ರಿಯಾಗಿದ್ದನು. ಆಗ್ಗೆ ಆತನು ಸರಕಾರದ ಹಣಕಾಸನ್ನು ದಸ್ತು ಮಾಡಿ ಲಕ್ಷಗಳನ್ನು ಕೊಳ್ಳೆಹೊಡೆದು ವರ್ತಮಾನ ಪತ್ರಿಕೆ ಪುಸ್ತಕ ಪತ್ರಗಳಿಂದ ಆತನೇ ತನ್ನ ಲೆಕ್ಕ ಗಳನ್ನು ಅಧಿಕಾರಿಗಳಿಗೆ ಒಪ್ಪಿಸಿ ಅವರಿಂದ ಅಪವಾದಯೆಗೆ ಮಾಡಿಸಿ ದನು. ತರುವಾಯ ೧೯೦೫ ನೆ ಮಾರ್ಚ್ ತಿಂಗಳಲ್ಲಿ ನೇನಾರ್ ಟ್ರೋರಿ ಟೋ ಎಂಬ ಅಧಿಕಾರಿಯು ಆತನ ಮೇಲೆ ಫಿರ್ಯಾದು ತಂದನು. ಕೂಡಲೇ ನೇನಾರ್ ನಾಸಿಯು ತನ್ನ ಸೆಕ್ರಿಟರಿಯೊಡನೆ ಆ ದೇಶವನ್ನೇ ಬಿಟ್ಟು ಹೊರಗೆ ಹೋದನು. ಕೋರ್ಟಿನಲ್ಲಿ ಈ ಮೊಕದ್ದಮೆ ಆದ ಮೇಲೆ ಜಸ್ಟಿಸ್‌ಗಳು ಸರಕಾರದ ಮಂತ್ರಿಪದವಿಯಲ್ಲಿ ರುವಂಥಾ ದೊಡ್ಡ ಮನುಷ್ಯರನ್ನು ವಿಚಾರಿಸಿ ಶಿಕ್ಷಿಸುವ ಅಧಿಕಾರವು ಕೋರ್ಟುಗಳಿಗೆ ಅಧಿಕಾರವಿರುವುದಿಲ್ಲವೆಂದು ಹೇಳಿ, ಮೊಕದ್ದಮೆಯನ್ನು ವಜಾ ಮಾ ಡಿಬಿಟ್ಟರು. ದೇಶಾಂತರ ಹೋಗಿದ್ದ ನೇನಾರ್ ನಾಸಿಯು ಈ ತೀರ್ಮಾ ನವನ್ನು ಕೇಳಿ ತನಗೆ ಯಾವ ತೊಂದರೆಯೂ ಉಂಟಾಗಲಾರದೆಂದು ತಿಳಿದು ವಾಪಸು ಬಂದನು. ಸಿಸಿಲಿಯವರು ಆತನನ್ನು ಬಹು ಅಟ್ಟ ಹಾಸ ಪೂರ್ವಕವಾಗಿಯೂ ಸಂಭ್ರಮಯುಕ್ತವಾಗಿಯೂ ಎದುರು ಗೊಂಡು ಆದರಿಸಿ ಸನ್ಮಾನಮಾಡಿದರು. ಆಚೆಗೆ ಇಟಲೀ ರಾಜ್ಯದ ಪಾ ರ್ಲಿಮೆಂಟಿನವರು ಕೆಲವರು ಕಲೆತು, ಈತನನ್ನು ಹಿಡಿದು ಕರಿಸಿ, ಮೇಲ್ಕಂಡ ಅಪರಾಧವನ್ನು ಹೊರಿಸಿ, ದರ್ಯಾಪ್ತುಮಾಡಿ, ಆತನು ಅಪ ರಾಧಿಯಂತೆಂದು ತೀರ್ಮಾನಿಸಿ, ಆತನಿಗೆ ಕಳೆದವಾರ ೧೧ ತಿಂಗಳು ೨೦ ದಿವಸಗಳ ಸಜಾ ಶಿಕ್ಷೆಯನ್ನು ವಿಧಿಸಿರುತ್ತಾರೆ. ಇದಲ್ಲದೆ ಆತನು ಶಿಕ್ಷೆ ಯನ್ನನುಭವಿಸಿ ಬಂದ ಮೇಲೆ ನಾಲ್ಕು ವರುಷಗಳ ತನಕ ಯಾವ ಕೆಲ ದು ಪಬ್ಲಿಕ್ ಕೆಲಸಕಾರ್ಯಗಳಲ್ಲೂ ಸೇರಕೂಡದೆಂದೂ ತೀರ್ಮಾನ ನಿಸಿದ್ದಾರೆ.

ಬಾತ್ಮೀದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್

ಕರೆಸ್ಪಾಂಡೆನ್ಸ್.

ತಪ್ಪು ತಿದ್ದುವರು.

ಅಯ್ಯಾ,

ಸೀರ್ಯಾದ ಎ. ವಿ. ಸ್ಕೂಲಿನ ರಿಪೋರ್ಟನ್ನು ಇಂಗ್ಲಿಷಿನಲ್ಲಿ ಓದಿದವರು ಆ ಮಾಸ್ಟರ್ ದಾಸಪ್ಪನವರು ಎಂದು ತಿಳಿಸಿದೆಯಷ್ಟೆ. ಈಗ ತಾವು ದಯವಿಟ್ಟು, ಆ ಹೆಸರನ್ನು ತಪ್ಪಿಸಿ, ಅದಕ್ಕೆ ಬದಲಾಗಿ ಅ|| ಮಾಸ್ಟರು ಕೆ. ಶ್ರೀನಿವಾಸಾಚಾರ್ಯರು ಓದಿದರು ಎಂದು ಪ್ರಕಟಿಸುವಂತೆ ಪ್ರಾರ್ಥಿಸುತ್ತೇನೆ.

ಇಂತಿ ಸಲಾಂ

ಕೋಟಬಳ ಸ್ಕೂಲ್ ಅಭಿವೃದ್ಧಿ ಸ್ಥಿತಿ

ಅಯ್ಯಾ,

ಸೊರಬ ತಾಲ್ಲೂಕು ಮೂಡಿಕೇಟಬಳ ಸ್ಕೂಲು ಮುಖ್ಯೋಪಾಧ್ಯಾಯರಾದ ಮ|| ನಾಗಪ್ಪನವರು ಮುತುವರ್ಜಿಯಿಂದ ಕೆಲಸ ಮಾಡುತ್ತಾರೆ. ಈ ಸ್ಕೂಲಿನ ಸಹಾಯೋಪಾಧ್ಯಾಯರಾದ ಮ|| ಶ್ರೀನಿವಾಸರಾಯರು ಬಂದಲಾಗಾಯ್ತು ಕಳೆದ ಎರಡು ವರುಷಗಳಿಂದಲೂ ಕನ್ನಡ ಲೋವರ್ ಸೆಕೆಂಡ್ರಿ ತರಗತಿಯನ್ನು ಇಟ್ಟುಕೊಂಡು ಪಾಠ ಹೇಳುತ್ತಲಿದ್ದಾರೆ. ಈ ಸ್ಕೂಲಿನಲ್ಲಿ ೧೯೦೨ನೇ ಸಾಲಿನಲ್ಲಿ ಹೋಗಿದ್ದ ಮೂರು ಜನ ವಿದ್ಯಾರ್ಥಿಗಳ ಪೈಕಿ ಇಬ್ಬರೂ, ೧೯೦೩ನೇ ಸಾಲಿನಲ್ಲಿ ಪರೀಕ್ಷೆಗೆ ಹೋಗಿದ್ದ ಮೂರು ಜನ ವಿದ್ಯಾರ್ಥಿಗಳೂ ಪ್ಯಾಸಾದರು.

ಈ ತಾಲ್ಲೂಕಿನಲ್ಲಿ ತಾಲ್ಲೂಕ್ ಬ್ರಾಂಚ್ ಸ್ಕೂಲು ಇಲ್ಲದೆ ಇರುವುದರಿಂದಲೂ ಇದೇ ದೊಡ್ಡ ಸ್ಕೂಲ್ ಆಗಿರುವುದರಿಂದಲೂ ಇದನ್ನು ಬ್ರಾಂಚ್ ಸ್ಕೂಲ್ ಆಗಿಯೂ ಲೋವರ್ ಸೆಕೆಂಡ್ರಿ ತರಗತಿಯ ಉಪಾಧ್ಯಾಯರಾದ ಮ|| ಶ್ರೀನಿವಾಸರಾಯರಿಗೆ ನಮ್ಮ ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಸಾಹೇಬರವರು ಪ್ರಮೋಷನ್ ಕೊಟ್ಟು ಅಪ್ಪರ್ ಸೆಕೆಂಡ್ರಿ ತರಗತಿಗೆ ನೇಮಿಸುವರಾಗಿ ನಂಬಿರುತ್ತೇನೆ.

ಚಂದಾದಾರ

ತಪ್ಪಿಸಿಕೊಂಡಿದ್ದ ಖೈದಿಯನ್ನು ಹಿಡಿದದ್ದು

ಅಯ್ಯಾ,

ಈಗ್ಗೆ ಮೂರನೇ ವರ್ಷದಲ್ಲಿ ಯಡತೊರೆ ತಾಲ್ಲೂಕು ಚುಂಚನಕಟ್ಟೆ ಹೋಬಳಿ ಅಬ್ಬೂರು ಗ್ರಾಮದಲ್ಲಿ ನಡೆದ ಖೂನಿ ಖೈದಿಗಳಾದ ೧ನೇ ದೊಡ್ಡ ಸೈದ, ೨ನೇ ಪುಟ್ಟಸ್ವಾಮಿ ಉರುಫ್ ಈರಣ್ಣ ಎಂಬುವರು ಮೈಸೂರು ಜೈಲಿನಿಂದ ಕಾವಲಿನವನನ್ನು ಖೂನಿ ಮಾಡಿ, ಕದ್ದು ಓಡಿಹೋಗಿ, ಈಗ ಎರಡುವರೆ ವರ್ಷಗಳಾಗುತ್ತಾ ಬಂತು. ಈ ತಹಲ್ ವರೆಗೂ ಸರ್ಕಾರದವರು ಮೆಹನತ್ತು ಮಾಡಿ, ಹಿಡಿಯಲ್ ಇಲ್ಲ. ಈಗ್ಗೆ ಹೋದ ಮಾಸ ತಾ ೨೩ ರ ಮಧ್ಯಾಹ್ನ ೨ ಗಂಟೆ ಸಮಯದಲ್ಲಿ ಡಿಟ್ಟೋ ಹೋಬಳಿ ಕೋಳೂರು ಗ್ರಾಮದಲ್ಲಿರುವ ಮ|| ಚಿಗ್ಗದಿ ಕಂಟೀಗೌಡನ ಎರಡನೇ ಮಗನಾದ ಚನ್ನಪ್ಪ ಎಂಬುವನು ಸಿದ್ದಾಪುರದ ಸಂತೆಯಲ್ಲಿ ಪತ್ತೇಮಾಡಿ, ಪೊಲೀಸ್ ಇನ್ಸ್‌ಪೆಕ್ಟರನ್ನೂ, ದಫೇದಾರನನ್ನೂ, ೩-೪ ಜನ ಪೊಲೀಸಿನವರನ್ನೂ ಕರೆದುಕೊಂಡುಬಂದು, ಸದರಿ ದೊಡ್ಡ ಸೈದನೆಂಬ ೧ನೇ ಅಪರಾಧಿಯನ್ನು ತಬ್ಬಿ ಹಿಡಿದುಕೊಳ್ಳಲಾಗಿ, ಅವನು ಅವರನ್ನೆಲ್ಲಾ ತನ್ನ ಶಕ್ತಿಯಿಂದ ಧಿಕ್ಕಾರ ಪಡಿಸಿ, ಕಾಲಿಗೆ ಬುದ್ಧಿ ಹೇಳುತ್ತಾ ಇದ್ದನು. ಸದರಿ ಸಿದ್ದಾಪುರದ ಪೊಲೀಸ್ ಇನ್ಸ್‌ಪೆಕ್ಟರು ಬಹು ಧೈರ್ಯದಿಂದ ಅವನ ಜುಟ್ಟನ್ನು ತಮ್ಮ ಕೈಗೆ ಸುತ್ತಿಕೊಂಡು ಬೊಗ್ಗಿಸಲಾಗಿ, ಸುತ್ತುಮುತ್ತ ಇದ್ದವರೂ ಬಂದು ಹಿಡಿದುಕೊಂಡು, ಕೈಗೆ ಹಾತ್ ಬೇಡಿಯನ್ನು ಹಾಕಿ, ಪೊಲೀಸಿಗೆ ತೆಗೆದುಕೊಂಡು ಹೋಗಿ, ಜೈಲಿಗೆ ಕೂಡಿ, ಕೂಡಲೆ ಮೈಸೂರಿಗೆ ಟೆಲಿಗ್ರಾಂ ಕೊಡಿಸಿದರು.

ಇವನನ್ನು ಹಿಡಿದದ್ದು ಆಶ್ಚರ್ಯವಲ್ಲ. ೨ನೇ ಅಪರಾಧಿಯಾದ ಪುಟ್ಟಸ್ವಾಮಿ ಉರುಫ್ ಈರಣ್ಣ ಎಂಬುವನನ್ನು ಸಾಹಸಪಟ್ಟು ಹಿಡಿದರೆ ಸಾರ್ಥಕವಾಗುತ್ತೆ. ಇದುವರೆಗೆ ನಾವುಗಳು ನಿದ್ರಾಹಾರಗಳಿಲ್ಲದೆ ಬಹಳ ದುಃಖದಲ್ಲಿಯೇ ಇದ್ದೆವು. ಈಗಲೂ ಹಾಗೆಯೇ ಆಗಿದೆ. ಇವನು ತನ್ನ ಅಣ್ಣನು ಸಿಕ್ಕಿದನೆಂಬ ದುಃಖದಿಂದ ಊರಿಗೆ ಎಲ್ಲಿ ಬೆಂಕಿಯನ್ನು ಹಾಕುತ್ತಾನೋ ಎಂದು ಇಲ್ಲಿಯ ಪೊಲೀಸ್ ಕಾನ್ಸ್‌ಟೆಬಲ್ ಪುಟ್ಟರಾಮಯ್ಯನು ಬಹಳ ಮೆಹನತ್ತಿನಿಂದಲೂ, ಬಹು ಜಾಗರೂಕತೆಯಿಂದಲೂ ಗ್ರಾಮ ಗಸ್ತು ಮಾಡುತ್ತಿರುವನು. ೨ನೇ ಅಪರಾಧಿಯು ಸಿಕ್ಕುವ ವರಿವಿಗೂ ಇವನನ್ನೇ ಇಟ್ಟಿದ್ದು, ಮತ್ತೊಬ್ಬ ಕಾನ್ಸ್‌ಟೆಬಲ್ಲನ್ನು ಕಳುಹಿಸಿಕೊಟ್ಟು, ಬಡ ರೈತರುಗಳನ್ನು ಕಾಪಾಡಬೇಕೆಂದು ಬೇಡುತ್ತೇನೆ.

ಗೌಡ.

ದೊಡ್ಡಬಳ್ಳಾಪುರದ ವಿಷಯಗಳು.

ಅಯ್ಯಾ,

ಇಲ್ಲಿನ ಹಿಂದುಸ್ಥಾನಿ ಗರ್ಲ್ಸ್‌ಸ್ಕೂಲಿನಲ್ಲಿ ೭-೮ನೇ ತರಗತಿಗಳಲ್ಲಿ ಓದಿ ಪ್ಯಾಸಾದ ಹುಡುಗಿಯರಿರುತ್ತಾರೆ. ೩-೪ನೇ ಕ್ಲಾಸುಗಳಲ್ಲಿ ವ್ಯಾಸಂಗಮಾಡಲು ಕ್ಲಾಸುಗಳು ಇಟ್ಟಿಲ್ಲ. ಇಲ್ಲಿದ್ದ ಹೆಡ್ ಮಿಸ್ಟ್ರೆಸ್‌ರವರಿಗೆ ಬೆಂಗಳೂರಿಗೆ ವರ್ಗವಾದ್ದರಿಂದ ಅವರಿಗೆ ಬದಲಿ ಬಂದಿರುವ ಮಿಸ್ಟ್ರೆಸ್‌ರವರು ೩-೪ನೇ ಕ್ಲಾಸುಗಳನ್ನಿಟ್ಟು ಬೋಧಿಸಲು ಅನಾನುಕೂಲವಾಗಿದೆ. ಇಲ್ಲಿನ ಜನಗಳು ಈಗ ಬಂದಿರುವ ಮಿಸ್ಟ್ರೆಸ್‌ರವರನ್ನು ಕೇಳಿದರೆ ೩-೪ನೇ ಕ್ಲಾಸುಗಳನ್ನಿಡಲು ಆಗುವದಿಲ್ಲವೆಂದು ಹೇಳುತ್ತಾರೆ. ಸರ್ಕಾರದವರು ಎಲ್ಲಾ ಮತಸ್ಥರಿಗೂ ಅನುಕೂಲವಾಗುವಂತೆ ಮೈಸೂರು ಪ್ರಾವಿನ್ಸಿನಲ್ಲಿ ಬಹಳ ಏರ್ಪಾಡು ವಿದ್ಯಾಭ್ಯಾಸಕ್ಕಾಗಿ ಮಾಡಿಕೊಟ್ಟಿರುತ್ತಾರೆ. ಇಲ್ಲಿಂದ ವರ್ಗವಾಗಿ ಹೋದ ಮಿಸ್ಟ್ರೆಸ್‌ರವರ ಕಾಲದಲ್ಲಿ ಈ ಗರ್ಲ್‌ಸ್ಕೂಲಿನಲ್ಲಿ ೬೦-೭೦ ಜನ ವಿದ್ಯಾರ್ಥಿನಿಯರಿದ್ದರು. ಕೈಗಾರಿಕೆ ಮತ್ತು ಎಲ್ಲಾ ಪಾಠಗಳು ಕ್ರಮವಾಗಿ ನಡೆಯುತ್ತಲಿದ್ದು, ನವರಾತ್ರಿಯಲ್ಲಿ ಮೈಸೂರಿನಲ್ಲಿ ನಡೆದ ಯಗ್ಜಿಬಿಷನಿಗೆ ಈ ಸ್ಕೂಲಿನ ಬಾಲಿಕೆಯರು ತಯಾರಿಸಿದ ವಸ್ತುಗಳು ಕಳುಹಿಸಲ್ಪಟ್ಟಿದ್ದವು. ಅವರು ಹೋದ ಮೇಲೆ ಇವುಗಳೆಲ್ಲಾ ನಿಂತುಹೋದದ್ದಲ್ಲದೆ ಪಾಠಗಳಿಗೂ ಅನಾನುಕೂಲವಾಯಿತು. ಮತ್ತು ಬಾಲಿಕೆಯರ ಸಂಖ್ಯೆಯೂ ಕಡಿಮೆಯಾಯಿತು. ಅವರು ೩-೪ನೇ ಕ್ಲಾಸುಗಳನ್ನಿಡಲು ಸಹ ಏರ್ಪಾಡು ಮಾಡಿದ್ದರು. ನಮ್ಮಗಳ ದುರದೃಷ್ಟಕ್ಕೆ ಅವರನ್ನು ವರ್ಗಮಾಡಿದರು. ಈಗಲೂ ಸರ್ಕಾರದವರು ಅಂಥವರನ್ನೇ ಇಲ್ಲಿಗೆ ಕಳುಹಿಸಬೇಕು. ಬಾಲಿಕೆಯರು ವಯಸ್ಸಿನಲ್ಲಿರುವಾಗಲೇ ಪ್ರೋತ್ಸಾಹ ಮಾಡಿ ವಿದ್ಯಾವಂತರನ್ನಾಗ ಮಾಡಬೇಕಾದ್ದೇ ಧರ್ಮ. ವಯಸ್ಸಾದ ಮೇಲೆ ಹೆಣ್ಣುಮಕ್ಕಳು ಸ್ಕೂಲಿನಲ್ಲಿ ಓದಲು ಅನಾನುಕೂಲಗಳು ಎಷ್ಟೋ ಇರುತ್ತವೆ. ದಯಾಳು ಸರ್ಕಾರದವರೂ ಇಲಾಖಾ ಮೇಷ್ಟ್ರೀಸರರೂ ಕ್ರಮಪಡಿಸಿ, ಈ ಸ್ಕೂಲಿನಲ್ಲಿ ೩-೪ನೇ ಕ್ಲಾಸುಗಳನ್ನಿಡಿಸಿ ವಿದ್ಯಾಪ್ರೋತ್ಸಾಹವನ್ನು ಮಾಡಿಸಬೇಕಾಗಿ ಕೋರುತ್ತೇನೆ.

ಈ ಊರಿಗೆ ಈಗ ಸುಮಾರು ೧೦-೧೫ ವರುಷಗಳ ಕೆಳಗೆ ತಂಜಾವೂರು ಮತ್ತು ಮಧುರೆ ಈ ಪ್ರಾಂತ್ಯಗಳಿಂದ ಒಬ್ಬ ... ಬಂದು ೧೫೦—೨೦೦ ರೂಪಾಯಿನ ಬಸಳಿ ತಂದು ೭-೮ ತಿಂಗಳ ಮಾಮೂಲಿಗೆ ಸಾಲಕೊಡುತ್ತಿದ್ದು ಈಗ ಪ್ರಬಲಿಸಿ, ರೂಪಾಯಿ ಒಂದಕ್ಕೆ ೨ ... ನಾ ಒಂದು ಕಾಸಿನಂತೆ ಬಡ್ಡಿಗೆ ಕೊಡುತ್ತಾ, ಒಂದು ಕಂತಿಕ್ಕೆ ಬಡ್ಡಿ ಕ್ರಮವಾಗಿ ಕೊಡದೇ ಇದ್ದರೆ ಮಾರನೇ ದಿವಸ ... ಆತ ಬಳ್ಳಿನ ಯಾಗಿರುವ ಆಳಿನ ಸಂಗಡ ೪ ಆನೆಯಾಗಿರುವ ಆಸಾಮಿಯನ್ನು ಹಿಡಿದುತಂದು ಮನೆಯಲ್ಲಿ ಕೂಡಿಸಿಕೊಂಡು ನಿರ್ಬಂಧದಿಂದ ವಸೂಲು ಮಾಡುತ್ತಾರೆ. ಈ ರೀತಿ ಇವರ ಲೇವಾದೇವಿ ಈ ಪ್ರಾಂತ್ಯ ೭—೮ ತಾಲ್ಲೂಕಿನಲ್ಲಿ ಪ್ರಬಲಿಸಿರುವದರಿಂದ ಬಡಜನಗಳಿಗೆ ಬಹಳ ಹಿಂಸೆ ಉಂಟಾಗಿ, ಪ್ಲೇಗಿನ ಬಾಧೆಗಿಂತಲೂ ಹೆಚ್ಚಾದ ಹಿಂಸೆಗೆ ಕಾರಣವಾಗಿರುತ್ತೆ. ಆದ್ದರಿಂದ ನಮ್ಮ ದಯಾಳುವಾದ ಸರ್ಕಾರದವರು ಈ ಬಡಜನಗಳ ವಿಷಯದಲ್ಲಿ ಗಮನವಿಟ್ಟು, ಸರ್ಕಾರದಿಂದ ಯಾವದಾದರೂ ಒಂದು ಲೇವಾದೇವಿ ಏರ್ಪಡಿಸಿ ಕಾಪಾಡಬೇಕಾಗಿ ಪ್ರಾರ್ಥಿಸುವದಾಗಿದೆ.

ಹೋದ ತಿಂಗಳು ೨೩ನೇ ಭಾನುವಾರ ಬ್ರಾಹ್ಮಣರ ಪೇಟೆಯಲ್ಲಿ ಟೌನ್‌ತೋಟಕ್ಕೆ ಹೋಗುವ ಓಣಿಯಲ್ಲಿ ಆಗತಾನೇ ಹೆತ್ತ ಒಂದು ಹೆಣ್ಣು ಮಗುವನ್ನು ಇಟ್ಟಿದ್ದರು. ಇದನ್ನು ಕಂಡು ಪೊಲೀಸಿಗೆ ಕಳುಹಿಸಲು ಅಫೀಸರವರು ಕಂಡು, ಮಹಜರ್ ಎನಿಸಿ ವಿಚಾರಿಸಲು, ಯಾರೂ ಸಿಕ್ಕಲಿಲ್ಲ. ಆ ಮಗುವನ್ನು ಭವಾನಿ ಎನ್ನುವ ನಾಯಕಸಾನಿಗೆ ಸಾಕಲು ಕೊಟ್ಟರು.

ಬಾತ್ಮೀದಾರ್

ತಾಲ್ಲೋಕು ವರ್ತಮಾನಗಳು

ತಿಪ್ಪೂರು.—ಇದೇ ತಿಂಗಳ ೧ನೇ ತಾ ಚೀಫ್ ಜಡ್ಜಿಗಳಾದ ಮೆ|| ನಂಜುಂಡಯ್ಯನವರು ಈ ಊರಿಗೆ ದಯಮಾಡಿಸಿದಾಗ್ಗೆ ಈ ಊರಿನ ದೊಡ್ಡ ಮನುಷ್ಯರೆಲ್ಲಾ ಸೇರಿ, ಪೇಟೆ ಮಧ್ಯದಲ್ಲಿ ಹಾಕಿದ್ದ ಸುಂದರವಾದ ಚಪ್ಪರದಲ್ಲಿ ಮೆ|| ನಂಜುಂಡಯ್ಯನವರನ್ನು ಮರ್ಯಾದೆಯೊಡನೆ ಎದುರುಗೊಂಡು ಅವರಿಗೆ ಒಂದು ಅಡ್ರೆಸ್ ಒಪ್ಪಿಸಿದರು. ಚೀಫ್ ಜಡ್ಜಿಯವರು ಇವರು ತೋರಿಸಿದ ಪ್ರೀತಿಗಾಗಿ ತುಂಬಾ ಸಂತೋಷಪಟ್ಟರು. ಗೌ|| ಬಾಯ್ಸ್ ಸ್ಕೂಲನ್ನೂ ವಿವರ್ಣ ಬಾಲಿಕಾ ಪಾಠಶಾಲೆಯನ್ನೂ ಚೀಫ್ ಜಡ್ಜಿಯವರು ಪರಾಂಬರಿಸಲು ಭಾನುವಾರವಾದ್ದರಿಂದ ಅವಕಾಶವಾಗಲಿಲ್ಲ.—ಇಲ್ಲಿರುವ ಆಸ್ಪತ್ರೆ ಅಸಿಸ್ಟೆಂಟ್ ಮೆ|| ಸುಬ್ಬಯ್ಯ ನಾಯ್ಡು ಯವರು ತುಂಬಾ ಜಾಗ್ರತೆಯಿಂದಲೂ ಪ್ರೀತಿಯಿಂದಲೂ ಜನಗಳನ್ನು ನೋಡುತ್ತಾ, ಅವರಿಗೆ ಔಷಧಗಳ ಮೂಲಕ ಸಹಾಯಮಾಡುತ್ತಾ ಇದ್ದಾರೆ. ಕಸಾಬರ ಕೇರಿಯ ಬಳಿ ಇರುವ ಹಳ್ಳದಲ್ಲಿ ಹೇಸಿಕೆಯ ದುರ್ವಾಸನೆ ಹೆಚ್ಚಿದ್ದರಿಂದ ಅಮಲ್ದಾರರು ಈ ಕ್ಲಾಸುಗಳನ್ನು ಕಟ್ಟಿಸುವದಕ್ಕಾಗಿ ಪ್ರಯತ್ನ ಮಾಡಿದ್ದಾರೆಂದು ವರ್ತಮಾನವಿದೆ.

ಚಿತ್ರದುರ್ಗ.—ಬಿಳಿಜೋಳ, ಕಡಲೆ, ಗೋಧಿಯ ಸುಗ್ಗಿಗಳು ಪೂರೈಸುತ್ತ ಬಂದಿದೆ. ರೈತರು ಕಣಗಳಲ್ಲಿ ಇನ್ನೂ ಬಡಿಯುವ ತೂರಿಸುವ ಕೆಲಸಗಳನ್ನು ಜರುಗಿಸುತ್ತಲೇ ಇದ್ದಾರೆ. ಕಡೆಕಡೆಗೆ ಬಂದ ಮಳೆಯಿಂದ ಜೋಳ, ಕಡಲೆ, ಗೋಧಿ ಚೆನ್ನಾಗಿ ಬೆಳೆದಿದ್ದರೂ ಧಾರಣೆ ವಾಸಿಗಳು ಇಳಿತರವಾಗಿಲ್ಲ. ಅಕ್ಕಿ ರೂಪಾಯಿಗೆ ೭—೭|| ಸೇರು, ರಾಗಿ ೧೪, ಜೋಳ ೧೬—೧೭, ಗೋಧಿ ೬||—೭ ಸೇರು ಸಿಕ್ಕುವದೇ ಕಷ್ಟವಾಗಿದೆ. ಬೇಳೆ ೬||—೭ ಸೇರು ಸಿಕ್ಕುವದು ಕಷ್ಟ. ಬಿಸಲಿನ ತಾಪವು ದಿನೇದಿನೆ ಹೆಚ್ಚುತ್ತಿದೆ. ಆದರೆ ರಾತ್ರಿವೇಳೆ ತಂಗಾಳಿ ಬೀಸುತ್ತಿರುವದರಿಂದ ಸೆಕೆಗೆ ಬದಲು ಇನ್ನೂ ಚಳಿಯೇ ಆಗುತ್ತಲಿದೆ.—ಟವನ್ನಿನ ಬೀದಿಗಳು ಒಂದೆರಡು ವಿನಹ ಬಾಕಿಯವುಗಳೆಲ್ಲಾ ರಿಪೇರಿ ಇಲ್ಲದೆ ಗಾಳಿಗೆ ಧೂಳು ಯಥೇಷ್ಟವಾಗಿ ಅಡರಿ, ತಿರುಗಾಡುವವರನ್ನೂ ಮನೆಗಳನ್ನೂ ಆವರಿಸಿಕೊಳ್ಳುತ್ತಿದೆ. ಮೊಹತರ್ಫ ಕಂಡ್ರಾಯಿಗಳ ವಸೂಲಿ ಬಹಳ ಚಟುವಟಿಕೆಯಿಂದ ನಡಿಯುತ್ತಿರುವ ಹಾಗೆ ತೋರುತ್ತೆ. ಸಂದು ಗೊಂದುಗಳಲ್ಲಿ ಇರುವ ಕಚರಾ ನೋಡಿದರೆ ತಿರುಗಾಡುವವರಿಗೆ ಅಸಹ್ಯವಾಗುತ್ತೆ. ಜಾಡಮಾಲಿಗಳ ಸುಳಿವೇ ಆ ಪ್ರಾಂತ್ಯ ಕಾಣುವದಿಲ್ಲ. ಅಧಿಕಾರಿಗಳ ಗಮನಕ್ಕಂತೂ ಅದು ಬರುವದೇ ಇಲ್ಲ. ಜನರು ತಿರುಗಾಡುವ ಗಲ್ಲಿ ಚೌಕಗಳಲ್ಲಿ ಲಾಂದ್ರಗಳ ಹ ಸರೇ ಇಲ್ಲ. ಲವ ಹಚ್ಚುವ ಕಡೆ ಸ್ವಲ್ಪಸ್ವಲ್ಪ ಮಿಣುಗುಟ್ಟುತ್ತವೆಯೆ ಹೊರತು, ಏನೂ ಪ್ರಕಾಶವಿಲ್ಲ. ಇವುಗಳನ್ನು ನೀರಿನ ನಲ್ಲಿಗಳ ಬಳಿಯಲ್ಲಿ ಮಾನವ ಗಲೀಜನ್ನು ತಪ್ಪಿಸಿ ಕ್ರಮಪಡಿಸುವ ವಿಷಯವೇ ದಾರೋ ನಿರೀಕ್ಷೆಯಲ್ಲಿದ್ದೇವೆ.—ಕಳೆದವಾರ ಕೆಲವು ಗಾರಡಿ ವಿದ್ಯದವರೂ ಅಖ್ಯಾಡಧಾನಿಗಳೂ ಸ್ಕೂಲ್ ವಿದ್ಯಾರ್ಥಿಗಳಿಗೂ ಪುರಜನಗಳಿಗೂ ತಮ್ಮ ವಿದ್ಯೆ ಸಾಹಸಗಳನ್ನು ಟವರ್ ಹಾಲಿನಲ್ಲಿಯೂ ಎ. ವಿ. ಸ್ಕೂಲ್ ಕಾಂಪೌಂಡಿನಲ್ಲಿಯೂ ತೋರಿಸಿ, ಎಲ್ಲರನ್ನೂ ಸಂತೋಷಪಡಿಸಿದರು. ಇವರು ನಡಿಸಿದ ಕೆಲವು ಕೆಲಸಗಳು ನಿಜವಾಗಿಯೂ ಸ್ತೋತ್ರಾರ್ಹವಾಗಿದ್ದುವೆಂದು ಅನೇಕರು ಹೊಗಳುವರು. ಇದಕ್ಕೆ ತಕ್ಕ ಹಾಗೆ ಅವರಿಗೆ ತಕ್ಕ ಪ್ರತಿಫಲ ಲಭ್ಯವಾಗಿದೆ.—ಇಲ್ಲಿನ ಇಂಡಸ್ಟ್ರಿಯಲ್ ಸ್ಕೂಲನ್ನು ಹಳೇ ಅರಮನೆಯಿಂದ ಎ. ವಿ. ಸ್ಕೂಲಿನ ಕಾಂಪೌಂಡಿನಲ್ಲಿ ಕಟ್ಟಲ್ಪಡಬಹುದಾದ ಕಟ್ಟಡಕ್ಕೆ ವರ್ಗಾಯಿಸುವರೆಂದು ಹಿಂದೆ ಸೂಚಿಸಿದ್ದೆವಷ್ಟೆ. ಈಗ ಅಲ್ಲಿ ಸ್ಥಳದ ಅನಾನುಕೂಲದ ದೆಸೆಯಿಂದ ಸಂತೆ ಪೇಟೆಯಲ್ಲಿ ಬಹಿರಂಗವಾಗಿಯೂ ವಿಸ್ತಾರವಾಗಿಯೂ ಇರುವ ಪ್ರದೇಶದಲ್ಲಿ ಅದಕ್ಕೆ ತಕ್ಕ ಕಟ್ಟಡವನ್ನು ನಿರ್ಮಾಣ ಮಾಡುವರೆಂಬ ಸಲಹೆ ಇದೆ. ಇದು ಬಹಳ ಅನುಕೂಲವಾದ ಕಾರ್ಯವೇ ಆಗಿ, ಸರ್ವರೂ ಸಂತೋಷ ಪಡಬೇಕಾಗಿದೆ.

ಹೊಸಕೋಟೆ.—ಸರ್ಕಾರಿ ಆಸ್ಪತ್ರೆಗಳು ಇರುವಲ್ಲೆಲ್ಲಾ ಹೆಂಗಸರಿಗಾಗಿ ಮುಖ್ಯತಃ ಹೆರಿಗೆಗಾಗಿ ಸೂಲಗಿತ್ತಿಯನ್ನು ನೇಮಿಸಿರುವಂತೆ ನಮ್ಮಲ್ಲಿಯೂ ಸರಕಾರದವರು ನಿಯಮಿಸಿದ್ದಾರೆ. ಇಲ್ಲಿಗೆ ನಿಯಾಮಕವಾಗಿರುವ ಸೂಲಗಿತ್ತಿಯು ಸರಾಸರಿ ೧|| ತಿಂಗಳಿನಿಂದ ರಜಾ ಪಡೆದು ಹೋದಾಕೆ ತಿರುಗಿ ಬರಲೇ ಇಲ್ಲ. ಕಾರಣವೇನೋ ತಿಳಿಯದು. ಕಾರಣ ವಿಚಾರಿಸುವದು ನಮಗೆ ಬೇಡಲ್ಲ ಬೇಡ. ಆದರೆ ಇಷ್ಟುದಿನ ರಜಾದ ಮೇಲೆ ಹೋಗಿರುವವರ ಬದಲಿಗೆ ಇನ್ನೊಬ್ಬಾಕೆಯನ್ನು ನಿಯಮಿಸುವದು ಸರ್ಕಾರದವರ ಕ್ರಮವಿದೆ. ಈ ಕ್ರಮ ನಮ್ಮಲ್ಲಿ ವಿಸ್ಮರಿ ಹೋಗಿರುವದೆ. ಸರ್ಕಾರಿ ವೈದ್ಯ ಇಲಾಖೆಯವರಿಗೆ ಜ್ಞಾಪಕಶಕ್ತಿ ಕುಂದಿರಬಹುದೋ ಏನೋ. ಯಾಕೆಂದರೆ ಈಗ ಸಧ್ಯ ನಮ್ಮ ಊರಲ್ಲಿ ಹೆರಿಗೆಗಳು ನಡಿಯಬೇಕಾದದ್ದು ಇಂಥಾ ಕಾರ್ಯಕ್ಕೆ ಸೂಲಗಿತ್ತಿಯು ಬಹು ತುರ್ತಾಗಿ ಬೇಕಾಗಿದೆ. ಬೆಂಗಳೂರಿಗೆ ಕಳುಹಿಸೋಣವೆಂದರೆ ದಾರಿದ್ರ್ಯವು ಹಿಂಬಾಲಿಸಿಯದೆ. ಅಷ್ಟು ಚೈತನ್ಯ ನಮಗಿಲ್ಲ. ವೈದ್ಯ ಇಲಾಖೆಯವರು ಅಷ್ಟುದಿನ ಇನ್ನೊಬ್ಬ ಸೂಲಗಿತ್ತಿಯನ್ನು ಕಳುಹಿಸುತ್ತಾರೇನೋ ಎಂದು ಕಾದು ನಾಕಾಗಿ ಕಳೆದ ತಿಂಗಳು ತಾ ೨೭ ರಲ್ಲಿ ಬೆಂಗಳೂರಿಗೆ ಸೀನಿಯರ್ ಸರ್ಜನ್ ರವರ ಆಫೀಸಿಗೆ ತಂತಿ ವರ್ತಮಾನ ಬಿಟ್ಟಿದ್ದಾಯಿತು. ಇಂದಿನ ವರೆಗೂ ಏನೂ ಫಲ ಕಾಣೆವು. ಆ ತಂತಿ ವರ್ತಮಾನ ಮುಟ್ಟಿತೋ, ದಾರಿಯಲ್ಲಿ ಅದನ್ನು ಯಾರಾದರೂ ಕದ್ದು ಕಿತ್ತುಕೊಂಡರೋ, ಆಫೀಸಿನವರು ಅದನ್ನು ಎಲ್ಲಿಯಾದರೂ ಹಾಕಿ ಗಮನಿಸದೆ ಇರುತ್ತಾರೋ ತಿಳಿಯದು. ಕಷ್ಟದಲ್ಲಿ ವ್ಯಸನದಲ್ಲಿ ಬಿದ್ದವರಂತೂ ಕೊರಗುತ್ತಿದ್ದಾರೆ. ಸರ್ಕಾರದವರು ಇನ್ನಾದರೂ ಗಮನಕ್ಕೆ ತಂದು ದಯವಿಟ್ಟು ವೈದ್ಯ ಇಲಾಖೆಯವರನ್ನು ಪರಾಂಬರಿಸಿ ಬೇಗನೆ ಒಬ್ಬ ಸೂಲಗಿತ್ತಿಯನ್ನು ಕಳುಹಿಸಿಕೊಟ್ಟರೆ ನಮ್ಮೆಲ್ಲರಿಗೆ ಬಹಳ ಉಪಕಾರ ಮಾಡಿದಂತಾಗುತ್ತದೆ.—ಕಳೆದ ಎರಡು ವರ್ಷಗಳ ಹಿಂದೆ ಇಲ್ಲಿನ ವ್ಯವಸಾಯ ಸಂಘವು ಸ್ಥಾಪಿತವಾಗಿ ಚೈತ್ರಮಾಸದ ರಥೋತ್ಸವ ಕಾಲದಲ್ಲಿ ಬಿತ್ತೇ ಬೆಳೆಯ ಪ್ರದರ್ಶನವೂ ಬೆಳೆದವರಿಗೆ ಇನಾಮು ಸರ್ಟಿಫಿಕೇಟು ಕೊಡಬೇಕೆಂತ ನಿಯಮವಾಗಿದ್ದದ್ದು ಎಲ್ಲರಿಗೂ ತಿಳಿದಿದೆ. ಅದೇ ರೀತಿ ಕಳೆದ ವರ್ಷ ಚೈತ್ರಮಾಸದಲ್ಲಿ ರಥೋತ್ಸವವು ನಡೆಯದೆ ಯೋಗ್ಯ ಬೆಳೆಯ ಪ್ರದರ್ಶನವೇನೋ ಜರುಗಿತು. ಮೆ|| ಸ್ಪಾರ್ಕ್ಸ್ ರವರು ಇಲ್ಲಿಗೆ ದಯಮಾಡಿಸಿ, ಶ್ರೀಕೃಷ್ಣರಾಜೇಂದ್ರ ಹಾಲಿನಲ್ಲಿ ಉತ್ಕೃಷ್ಟ ಬೆಳೆ ಬೆಳೆದವರಿಗೆ ಸರ್ಟಿಫಿಕೇಟು, ಇನಾಮುಗಳನ್ನು ದಯಪಾಲಿಸಿದ್ದು ಕೂಡ ಸಕಲರಿಗೂ ತಿಳಿದಿದೆ. ಈ ವರ್ಷ ಕೂಡ ಚೈತ್ರಮಾಸ ಸಮೀಪಿಸುತ್ತಾ ಬಂದು ರಥೋತ್ಸವದ ಕಾಲ ಹತ್ತಿರವಾಗುತ್ತಾ ಇದ್ದರೂ ಸದರಿ ವ್ಯವಸಾಯ ಸಂಘದ ಮೆಂಬರುಗಳಿಗೆ ಇದರ ಏರ್ಪಾಡು ಮೊಳೆಯದೆ ಇದ್ದಾರೆಂದು ಕಾಣುತ್ತೆ. ಕಾರಣವೇನೋ ತಿಳಿಯಲಿಲ್ಲ. ಇನ್ನಾದರೂ ಆ ಸಂಘದ ಮೆಂಬರುಗಳು ಗಮನಕ್ಕೆ ತಂದುಕೊಂಡು ಈ ಕಾರ್ಯವನ್ನು ಬೇಗನೆ ತಕ್ಕ ಏರ್ಪಾಡು ಮಾಡಿದ್ದಾದರೆ ಜನಿಸಿದ ಈ ಕೂಸು ನೆಲದ ಪ್ರಾಯಕ್ಕೆ ಬಂದೀತು.

ಡಾಕ್ಟರು ಏನು ಹೇಳುತ್ತಾರೆ?

9.1 27

ಇವರು ಪ್ರಪಂಚದಲ್ಲೆಲ್ಲಾ ತಕ್ಕಷ್ಟಕ್ಕೆ ತಿಳಿದವರಾಗಿರುತ್ತಾರೆ ಮತ್ತು ಅವರು ಬಹಿರಂಗವಾಗಿ ಹೇಳುವ ಮಾತು ಕಲ್ಕತ್ತಾ ಪಟ್ಟಣದವರಿಗೆ ಪ್ರಾಧ್ಯಾನವಾಗಿರುವದು. ಇಂಡಿಯಾದ ಮೆಡಿಕಲ್ ಕಾಲೇಜಿನ ಎನೇಟಮಿ ಲೆಕ್ಚರರಾದ ಡಾಕ್ಟರ್ ಎ. ಕೆ. ಮುಖರ್ಜಿಯವರು ತಮ್ಮ ಸ್ವಂತ ಅನುಭವದ ಮೇಲೆ ಖಂಡಿತವಾಗಿ ಹೇಳುವುದೇನೆಂದರೆ:- ಕಿಡ್ನಿ ರೋಗ, ಬ್ಲಾಡರ್-ಯೂರಿನ್ ಸಂಬಂಧವಾದ ಇತರ ಬಾಧೆಗಳಿಂದ ಪೀಡಿತರಾಗಿ ಬೇರೆ ಔಷಧಗಳಿಂದ ಉಪಶಮನ ಸಿಕ್ಕದಂಥ ರೋಗಿಗಳ ಬೆನ್ನು ನೋವಿನ-ಮೂತ್ರಕೋಶ ಬಾಧೆಯ ಔಷಧ ಗುಳಿಗೆ (ಡೋನ್ಸ್ ಬ್ಯಾಕ್ ಏಕ್-ಕಿಡ್ನಿ ಪಿಲ್ಸ್) ಗಳನ್ನು ಸೇವಿಸುವ ವೇಳೆ ಆಶ್ಚರ್ಯಪಡಬಹುದು ಏಕೆಂದರೆ:—ಇತರ ಔಷಧಗಳಿಂದ ಗುಣವೇ ಸಿಕ್ಕದೆ ಇದ್ದವರಿಗೆ ಇವರಿಂದ ಗುಣವಾಗಿರುವುದೆ.

ಬೆನ್ನು ಸೊಂಟದಲ್ಲಿಯ ನೋವು ಮೂತ್ರಪಿಂಡದ ಉಪದ್ರವಿರುವದಾಗಿ ಸೂಚಿಸುತ್ತದೆ. ಕಿಡ್ನಿಯಲ್ಲಿಯೂ ನೋವು ಇರುವದು. ಇತರ ಚಿನ್ಹೆಗಳು ಯಾವವೆಂದರೆ ...ತಲೆ ತಿರುಗುವಿಕೆ, ತಲೆ ನೋವು, ನೀರು ತುಂಬಿದ ಬೀಗು, ದೃಷ್ಟಿ ಮಾಂದ್ಯ ಮುಂತಾದ್ದು. ಈ ಗುಳಿಗೆಗಳ ಮೂತ್ರಕೋಶಗಳನ್ನು ಕರಿಪಡಿಸಿ ಬೆನ್ನು ನೋವಿನ, ಸಾನೋವಿನ ಮೂತ್ರಬಾಧೆಗಳ ಮತ್ತು ಮೂತ್ರಸಂಬಂಧವಾದ ಇತರ ವ್ಯಾಧಿಗಳ ಹೇತುವನ್ನು ನಿವಾರಿಸುತ್ತವೆ.

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತವೆ. ಶೀಸೆ ಒಂದಕ್ಕೆ ರೂ ೨, ಅಥವಾ ೬ ಶೀಸೆಗಳಿಗೆ ರೂ. ೧೦-೮-೦, ಅಥವಾ ಮುಂಬಯಿಯಲ್ಲಿಯ ಡೋನ್ಸರ ಔಷಧಗಳ ಕೋಠಿಯಿಂದಾ ಕೇಟು ತರಿಸಿಕೊಳ್ಳಬಹುದು. ಪಿ. ಓ. ಬಾಕ್ಸ್ ನಂ ೨೨, ಮುಂಬಾಯಿ

ಕನ್ನಡದಲ್ಲಿ ಇದುವರೆಗೂ ಇಂಥಾ ಪುಸ್ತಕವು ಮುದ್ರಿಸಲ್ಪಟ್ಟಿಲ್ಲವು!!!

ರಾಬಿನ್‌ಸನ್ ಕ್ರೂಸೋ

ಇವನ ಸಾಹಸ ಕಾರ್ಯಗಳು!!!

136-12

ಕ್ರೌನ್ ಅಷ್ಟಪತ್ರ, ಪುಟಗಳು ೧೯೭, ಚಿತ್ರಗಳು ೫೩.

ಇಂಗ್ಲೆಂಡಿನ ಪ್ರಸಿದ್ಧ ಲೇಖಕರಾದ ಮಿ॥ ಡಿ ಫೋರವರು ಈ ಪುಸ್ತಕಕ್ಕೆ ಬೇಕಾದ ಚಿತ್ರಗಳನ್ನು ಕಳುಹಿಸಿ ಕೊಟ್ಟಿರುವುದಲ್ಲದೆ, ಈ ಪುಸ್ತಕದ ವಿಷಯವಾಗಿ ಪೈಲಿನಲ್ಲಿರುವ ಪತ್ರಿಯೊಬ್ಬನು “ನಾನು ಮಾತ್ರವೇ ರಾಬಿನ್‌ಸನ್ ಕ್ರೂಸೋ ಕಥೆಯನ್ನು ಓದುವುದರಿಂದ ಬಹು ಸುಖಿಯಾಗುವೆನು” ಎಂದು ಹೇಳಿದ್ದಾಗಿ ತಿಳಿಸುವರು.

ಕ್ರಯ ನಾಲ್ಕು ಆಣೆ. ವಿ. ಪಿ. ಯಿಂದ ೬ ಆಣೆ.

ವಿಳಾಸ:— ದಿ ಜನರಲ್ ಏಜನ್ಸಿ, ಮೈಸೂರು.

ನೋಟೀಸ್

22-2

ಶ್ರೀ ನರಸೀಪುರದ ತಾಲ್ಲೋಕು ಸೋಸಲೆ ಹೋಬಳಿ ಸೋಸಲೆ ಗ್ರಾಮದಲ್ಲಿರುವ ಮಹಲಿಂಗಯ್ಯ ಉರುಫ್ ಪುಟ್ಟಯ್ಯನವರ ಮಗಳು ... ಸರ್ವರಿಗೂ ತಿಳಿಯಪಡಿಸುವದೇನೆಂದರೆ — ನನ್ನ ತಂದೆಗೆ ... ಹೆಂಡತಿ ... ನೇ ಹೆಂಡತಿ ಮಗಳು ನೋಟೀಸು ... ಗಂಡು ಸಂತಾನವಿಲ್ಲ. ... ಮಗಳು ... ನನ್ನ ತಂದೆ ಅವರ ... ಕಾಲದಲ್ಲಿ ... ನನ್ನ ತಂದೆಯು ... ನನಗೆ ವಹಿಸಿಕೊಟ್ಟು ನನ್ನ ಚಿಕ್ಕಮ್ಮ ... ಜೀವನಾಂಶಕ್ಕೆ ... ನನ್ನ ... ಚಿಕ್ಕಮ್ಮ ... ನನ್ನ ತಂದೆಯ ಸ್ವಾಧೀನದಲ್ಲಿಟ್ಟ ... ಬೆಳ್ಳಿ ಬಂಗಾರು ... ಸ್ವತ್ತು ... ನನ್ನ ಚಿಕ್ಕಮ್ಮ ... ವಿಚಾರವಾಗಿ ... ಯಾವ ಸಾಲ್ಲವನ್ನಾಗಿ ... ಆಗಲಿ ಅವ್ರಗಳು ಸಿದ್ಧಿಸಲಾರದೆಂದು ಈ ನೋಟೀಸು ಕೊಟಿಸಿ ಇದ್ದೇನೆ.

ತಾ ೨೭—೨—೦೮ ಬಾರ್ವತಮ್ಮನ ರುಜು.

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ!

ಹಾಗಾದರೆ ಬೇಗ ಒದಗು ತರಿಸಿಕೊಳ್ಳಿ.

2-10

ಈ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ... ಹಾಸನ ... ಎಂದು ತಿಳಿಯಿರಿ.

ಈಗ ೩೦೦ ವರ್ಷಗಳಲ್ಲಿ ಮಾಡಿ ವಿಕರಿಯೊಗುತ್ತಿರುವ ಟೋಪಿ ... ಹಾಸನದ ಟೋಪಿಗಳೆಂದು ಎಲ್ಲ ... ಮೋಸಹೋಗುವರು.

ಆದರೆ ಇಲ್ಲಿ ನೋಡಿ — (೧) ನಮ್ಮಲ್ಲಿ ತಯಾರಾಗುವ ಟೋಪಿಗಳು ... ಬರುವದು (೨) ... ನಾವೇ ನಿಂತು ಚನ್ನಾಗಿ ... ಕಳುಹಿಸುವೆವು.

ಒಳ್ಳೇದಾದ, ಚನ್ನಾಗಿ ಹೆಣದ, ಬಹಳ ಬಾಳಿಕೆ ಬರುವ ಟೋಪಿ ... ಬರೆದು ತರಿಸಿಕೊಳ್ಳಿ. ಅಗ್ಗವಾದ ... ನಮ್ಮಲ್ಲಿ ದೊರೆಯುವದಿಲ್ಲ.

... ಟೋಪಿಗಳು ೧ ರೂ ೪ ಆ ... ೬ ಆ, ೧ ರೂ. ೬ ಆ

... ಟೋಪಿಗಳು ೧ ರೂ. ೪ ಆ.; ೨ ರೂ

... ೧ ರೂ. ೧೨ ಆ, ೧ ರೂ. ೪ ಆ.; ೧ ರೂ. ೬ ಆ

... ಟೋಪಿಗಳು ೧ ರೂ. ೪ ಆ, ೧ ರೂ. ೬ ಆ

... ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು ... ಇವುಗಳ ಕ್ರಯದ ಪಟ್ಟಿಯನ್ನು ನಮ್ಮಿಂದ ... ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಕನ್ನಡ ಮತ್ತು ಮರಾಠಿ ಪಂಚಾಂಗಗಳು

24-1

ಹರಪನಹಳ್ಳಿಯಲ್ಲಿ ವೇದದಲು ಜ್ಯೋತಿಷ್ಯ ಧರ್ಮಾರ್ಥ ... ಅನೇಕರಿಗೆ ವಿದ್ಯಾಭ್ಯಾಸಗೊಳಿಸಿದ ಪ್ರಸಿದ್ಧ ಜ್ಯೋತಿಷ್ಯರಾದ ಆರ್. ಕಾಂತಪ್ಪಜೋಯಿಸರಿಂದ ಸ್ವತಃ ಅನುಭವ ಸಿದ್ಧಾಂತ ಸಹಿತ ಸಂಪೂರ್ಣ ಫಲಗಳು ಮತ್ತು ಜ್ಯೋತಿಶ್ಯಾಸ್ತ್ರ ಸಂಬಂಧಿ ಪ್ರಶ್ನೋತ್ತರ ... ಬರೆದಿರುವ ಕೀಲಕ ಸಂವತ್ಸರದ ಪಂಚಾಂಗಗಳು ಮಾರಲಿಕ್ಕೆ ಸಿದ್ಧವಿರುತ್ತವೆ. ಕನ್ನಡ ಪಂಚಾಂಗದಲ್ಲಿ ದೊಡ್ಡ ೩೦ ಪಾನುಗಳಿದ್ದು, ಮರಾಠಿ ಪಂಚಾಂಗದಲ್ಲಿ ದೊಡ್ಡ ೪೦ ಪಾನುಗಳಿವೆ. ಪಂಚಾಂಗ ಒಂದಕ್ಕೆ ಕ್ರಯ ಮೂರು ಆಣೆ. ಮೂರು ಪಂಚಾಂಗದ ಒಳಗೆ ವಿ. ಪಿ. ಮಾಡಲಿಕ್ಕೆ ಆಗುವದಿಲ್ಲ. ಕನ್ನಡ ಅಥವ ಮರಾಠಿ ಪಂಚಾಂಗ ಬೇಕಾದ್ದು ಸ್ಪಷ್ಟ ಬರೆಯಬೇಕು. ಪತ್ರ ಕನ್ನಡ ಬಾಲಬೋಧ ಅಥವ ಇಂಗ್ಲಿಷಿನಲ್ಲಿ ಸ್ಪಷ್ಟ ಬರೆಯಿರಿ. ವ್ಯಾಪಾರಿಗಳಿಗೆ ಅನುಕೂಲವಾದ ಕಮೀಷನು ಕೊಡುವೆವು.

ಗೋಚಾರಫಲದರ್ಪಣ (ಕನ್ನಡ).

ಇದರಲ್ಲಿ ಗೋಚಾರಸಂಬಂಧಿ ಹಾಗೂ ಇತರ ಜ್ಯೋತಿಷ್ಯ ಸಂಬಂಧಿ ಪ್ರಶ್ನೋತ್ತರ ಮಾಹಿತಿ ಇರುವದು. ಈ ಪುಸ್ತಕದಲ್ಲಿ ಸುಮಾರು ೩೫೦ ರ ಮೇಲೆ ಪಾನುಗಳಿದ್ದು, ಉತ್ತಮವಾದ ಬೈಂಡು ಮಾಡಲ್ಪಟ್ಟಿರುತ್ತದೆ. ಇದರ ಕ್ರಯ ಒಂದು ರೂಪಾಯಿ. ಟಪಾಲ್ ಖರ್ಚು ಬೇರೆ. ಇತರರು ಮಾಡಿದ ಇದೇ ಹೆಸರಿನ ನಿರುಪಯೋಗವಾದ ಪುಸ್ತಕಗಳು ಇರುವದರಿಂದ ಕೊಳ್ಳುವವರು ಆರ್. ಕಾಂತಪ್ಪಜೋಯಿಸರ ಹೆಸರು ನೋಡಿಕೊಳ್ಳಬೇಕು. ಪತ್ತೆ:— ಬೊಂಡಾಡೆ ನರಸಪ್ಪ, ಚಿತ್ತವಾಡಗಿ, ಜಿಲ್ಲಾ ಬಳ್ಳಾರಿ.

Boandade Narasappa, Post Chittawadigi, Bellary Dt

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

16-3

೧ ಲೋಕಾಮಯಹರ ಕಸ್ತೂರಿ ಮಾತ್ರೆ.— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ನಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಕೆಮ್ಮು, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಊಟ ಮಾಡಿದ ... ಉಪಲಾಪನೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳೆವು, ಜ್ವರ ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ. ಅನುಪಾನಸಹಿತ ಔಷಧಿ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಡಪ್ಪಿಗೆ ೬ ಆಣೆ, ೫ ಡಪ್ಪಿಗೆ ೧ ಡಪ್ಪಿ ಹೆಚ್ಚು. ೧ ರಿಂದ ೬ ಡಪ್ಪಿ ವರೆಗೆ ಪೋಸ್ಟೇಜು ೬ ಆಣೆ.

ವಿಳಾಸ:— ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್ ಮೈಸೂರು.

ರಬ್ಬರ್ ಹ್ಯಾಂಡ್ ಪ್ರೆಸ್.

114-21

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೨೫ ರಿಂದ ೫೦ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ಇಂಗ್ಲಿಷ್, ತೆಲುಗು, ಉರ್ದು, ಹಿಂದೀ, ಅರಬಿಕ್, ಇಂಗ್ಲಿಷ್ ಮತ್ತು ಬೇಕಾದ ಭಾಷೆಯಲ್ಲಿ ಬಂದು ಪ್ರತಿ ತಯಾರು ಮಾಡಿ, ಮುದ್ರಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು. ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮದಾರರೂ ಮತ್ತು ... ಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು ... ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ... ಹಿಡಿಯುವದು ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ದೆಸೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು. ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ದಗ್ಗರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ.

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦

ಹಾಫ್ ಫುಲ್‌ಸ್ಕ್ಯಾಪ್ ಸೈಜು, ೬—೦—೦

ಪೋಸ್ಟೇಜು ಬೇರೆ (೦೫೬)

ವಿಳಾಸ:— ವರ್ಧಮಾನ ಏಜನ್ಸಿ,

ಪೋಸ್ಟ್ ಕಾಲಬಾದೇವಿ,

ಮುಂಬಯಿ.

“ಸರ್ವಜನಹಿತೋಪಕಾರಿಣಿ.”

23-1

ಈ ಮಾಸಪತ್ರಿಕೆಯಲ್ಲಿ ಸರ್ವರಿಗೂ ಉಪಯುಕ್ತವಾದ ಅನೇಕ ವಿಷಯಗಳು ಬರೆಯಲ್ಪಡುತ್ತಿವೆ. ಉಪೇಕ್ಷಿಸತಕ್ಕ ಪತ್ರಿಕೆಯಲ್ಲ. ತರಿಸಿ ನೋಡಿ. ಚಂದ ವರ್ಷಕ್ಕೆ ಅಂಚೆ ಹಾಸಲ್ ಸೇರಿ ೧೦ ಆಣೆ. ವಿಳಾಸ— “ಸರ್ವಜನಹಿತೋಪಕಾರಿಣಿ” ಆಫೀಸ್, ದೊಡ್ಡಪೇಟೆ, ಮೈಸೂರು.

“ಗೌಡರ ಹೊಗೆಸೇದುವ ಔಷಧ”

19-2

ಈ ನವೀನ ಔಷಧವು ಕೆಮ್ಮು, ಗಸೆ, ಮುಂತಾದ ವ್ಯಾಧಿಗಳನ್ನು ಶಾಶ್ವತ ಸಮನಗೊಳಿಸಿ ಶೀಘ್ರವಾಗಿ ಪರಿಹರಿಸುತ್ತದೆ. ಕ್ರಯ— ಪೊಟ್ಟಣಕ್ಕೆ ೪ ಆಣೆ. ವಿ. ಪಿ. ೧೧ ಆಣೆ. ಈ ವಿಳಾಸಕ್ಕೆ ಬರೆಯಿರಿ—

ಸಿ. ಲಕ್ಷ್ಮಣಗೌಡ, ಬಿ. ಎ., ಬಿ. ಎಲ್.,

ಪತ್ರಪ್ಪನ ಬೀದಿ, ಬೆಂಗಳೂರು ಸಿಟಿ.

ನೀವು ಉಪಾಧ್ಯಾಯರೋ?

26-2

ಹಾಗಾದರೆ ಇಲ್ಲಿ ಬರೆದಿರುವದನ್ನು ಓದಿ ನೋಡಿರಿ.

ಬಾಲಶಿಕ್ಷೆ. ಒಂದನೆಯ ಭಾಗ ೦—೦—೦

ಬಾಲಶಿಕ್ಷೆ. ಎರಡನೆಯ ,, ೦—೨—೬.

ಬಾಲಕರ ಮೊದಲನೆಯ ಪುಸ್ತಕ—ಟೀಕ್ಕವರೆಗೆ ಗ್ರಹಿಸುವದಕ್ಕೆ ಸುಲಭವಾಗಿಯೂ ಬುದ್ಧಿಪ್ರದವಾಗಿಯೂ ಓದುವುದರಲ್ಲಿ ಉಲ್ಲಾಸವನ್ನು ಹುಟ್ಟಿಸುವದಕ್ಕೆ ಬೇಕಾದ ಚಿತ್ರಗಳಿಂದ ರಂಜಿತವಾಗಿಯೂ ಇರುವ ಪುಸ್ತಕಗಳಂತೂ ಅತಿವಿರಳ. ಈಗ ನಾವು ಕಳಿಸುವ ಬಾಲಕರ ಮೊದಲನೆಯ ಪುಸ್ತಕದಲ್ಲಿ ಮೇಲ್ಕಂಡ ಅನುಕೂಲಗಳೆಲ್ಲ ಇವೆ. ೨೦ ವರುಷಗಳ ಅನುಭವಶಾಲಿಗಳಾದ ಉಪಾಧ್ಯಾಯರುಗಳಿಂದ ಬರೆಯಲ್ಪಟ್ಟಿರುವುದರಿಂದ ಇದರಲ್ಲಿ ಯಾವ ವಿಧವಾದ ನ್ಯೂನಾತಿರಿಕ್ತ ದೋಷಗಳಿಗೂ ಅವಕಾಶವಿರುವುದಿಲ್ಲ; ಮತ್ತು ನವೀನ ವಿದ್ಯಾಭ್ಯಾಸದ ಕ್ರಮಗಳಿಗೆ ಬೇಕಾದ ಸೌಲಭ್ಯಗಳನ್ನೆಲ್ಲಾ ಒದಗಿಸಿಕೊಡುತ್ತದೆ. ಬಾಲಕರಿಗೆ ಶುದ್ಧವಾದ ಹೊಸಗನ್ನಡವನ್ನು ಕಲಿಸುವುದಕ್ಕೆ ಇದು ಅತ್ಯಂತೋಪಯುಕ್ತವಾದ ಪುಸ್ತಕವು. ಉಪಾಧ್ಯಾಯರೇ, ನೀವು ಇದನ್ನು ತರಿಸಿ ಓದಿನೋಡಿ. ಆಗ ನಾವು ಹೇಳುವ ಮಾತು ನಿಜವೆಂಬುದು ನಿಮಗೇ ಅನುಭವಕ್ಕೆ ಬರುವುದು. ಕ್ರಯ ೦—೨—೬.

ಭೂಗೋಳಶಾಸ್ತ್ರ ೧ ನೆಯ ಮತ್ತು ೨ನೆಯ ಭಾಗಗಳು.— ಎರಡನೆ ಕ್ಲಾಸಿಗೆ ಉಪಯುಕ್ತವಾದುದು. ಬಣ್ಣ ಹಚ್ಚಿದ ಮೈಸೂರು ಪಟ ಸಮೇತ. ಕ್ರಯ ೦—೩—೦.

ಭೂಗೋಳಸಂಗ್ರಹ—ಆರನೇಯುದ್ದ—ಮೂರನೇ ಕ್ಲಾಸಿಗೆ ಉಪಯುಕ್ತವಾದುದು. ಕ್ರಯ ೦—೪—೦.

ವಿಳಾಸ—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

ಧರ್ಮಾಚಾರನಿರ್ಣಯ.

ಪುಟಗಳು ... ಪುಸ್ತಕವು | ಕ್ರಯ ವಿ. ಪಿ. ಸೇರಿ
೩೫೩ 4-10 | ರೂ ೧—೦—೦
ದ್ವಿತೀಯಮುದ್ರಣ.

ಈ ಮುದ್ರಣದ ಮೊದಲು ಭಾಗವೆಲ್ಲವೂ ಹೊಸದಾಗಿ ಬರೆಯಲ್ಪಟ್ಟು ವಿಸ್ತರಿಸಲ್ಪಟ್ಟಿದೆ. ಇಂದೂ ಲಾ (ಸ್ಮೃತಿವಚನಗಳೊಡನೆ), ಮಹಮದೀಯ ಲಾ, ಪೀನಲ್ ಕೋಡು ಇವುಗಳು ವಿಶೇಷವಾಗಿ ವಿಸ್ತರಿಸಲ್ಪಟ್ಟಿವೆ. ಮೈಸೂರು, ಮದರಾಸು, ಬೊಂಬಾಯಿ ದೇಶಗಳಿಗೆ ಸಾಮಾನ್ಯವಾದ ಲಾ ಮತ್ತು ಸ್ವತ್ತಿನ ವಿಲೇವಾರಿ, ಅನಾಥಂಪತ್ನಿ, ಸ್ತ್ರೀಸ್ವತ್ತು ಪಾರಂಪರ್ಯ ಹಕ್ಕು. ಈ ವಿಷಯಕವಾದ ಕಾನೂನುಗಳು ಹೊಸದಾಗಿ ಸೇರಿಸಲ್ಪಟ್ಟಿವೆ. ... ಕಾನೂನುಗಳು, ಅನೇಕ ಮೂಲ ಗ್ರಂಥಗಳು, ಹೈಕೋರ್ಟು, ಚೀಫ್ ಕೋರ್ಟುಗಳ ರಿಪೋರ್ಟುಗಳು ಇವುಗಳಿಂದ ಸಂಗ್ರಹ ಮಾಡಲ್ಪಟ್ಟಿದೆ. ಸಮಸ್ತ ವ್ಯವಹಾರಗಳನ್ನೊಳಗೊಂಡಿರುವ ೧೫೦ ನಿಧದ ದಸ್ತಾವೇಜ್ ನಮೂನೆಗಳು, ಲಾ ಪ್ರಕಾರ ಸಿವಿಲ್, ಕ್ರಿಮಿನಲ್ ಕೋರ್ಟುಗಳೂ, ಪೋಲೀಸ್ನೂ ಬರೆಯಲ್ಪಡುವ ಅರ್ಜಿಗಳ ೪೦ ತರದ ನಮೂನೆಗಳೂ ಇದರಲ್ಲಿವೆ. ಕಳೆದ ೯ ತಿಂಗಳಲ್ಲಿ ಮುದ್ರಿಸಿದ್ದ ೧,೫೦೦ ಪ್ರತಿಗಳು ೩ ತಿಂಗಳಲ್ಲೇ ಖರ್ಚಾಗಿಹೋದುದರಿಂದ ಇದು ಉಪಯುಕ್ತವೆಂದು ತಿಳಿಯಬಹುದು. ಪ್ರತ್ಯೇಕಿಸಲ್ಪಟ್ಟು ಮೇಲೆ ಹೇಳಿದಂತೆ ಇದರ ಉಪಯುಕ್ತತೆಯನ್ನು ಮತ್ತಷ್ಟು ಹೆಚ್ಚು ಮಾಡಿದೆ. ವಿಷಯಸೂಚಿಕಾಧಿಕ್ಯ, ಸ್ಫುಟಾಕ್ಷರ, ಉತ್ತಮವಾದ ಕಾಗದ, ಬಟ್ಟೆಯ ಬೈಂಡ್ ಇವುಗಳಿಂದ ಶೋಭಿಸುವ ಈ ಸಲದ ಮುದ್ರಣವು ಬಹಳ ಪ್ರಶಸ್ತವಾಗಿದ್ದರೂ ಅನುಭವಸ್ಥರಿಗೆ ಸುಲಭಗ್ರಾಹ್ಯವಾಗಲು ಮೊದಲನೆ ಮುದ್ರಣದ ಬೆಲೆಯಲ್ಲಿ ವಾಲ್ಯುಂ ಆಣೆ ಮಾತ್ರ ಹೆಚ್ಚಿಸಿದೆ. ಪುಸ್ತಕ ಅಪೇಕ್ಷಿಸುವವರು ಬರೆಯಬೇಕಾದ

ವಿಳಾಸ—ಗ್ರಂಥಕರ್ತರು, ಎಂ. ಮಲ್ಲಾರಾಧ್ಯರು,

ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು.

ಅನೇಕ ಸ್ತ್ರೀಯರ ಅನುಭವವು.

ಪೆರೂನಾ ಉಪಕಾರವು ಉಪಯುಕ್ತ ಸಂಸಾರಕ್ಕೆ ಅವಶ್ಯವು ಆದ ಔಷಧವೆಂದು
ಸಂತ ಪಟ್ಟಿರುವ ತಿಳಿಸುತ್ತಾರೆ

ಹೆಂಗಸರು ಹೇಳುತ್ತಿರುವದನ್ನು ಓದಿನೋಡಿ

ನಿರಂತರ ಗಂಟಲುಕಟ್ಟುವದು

ಮಿಸೆಸ್ ಡಿ ಸಿ ಕ್ಯಾಮೆರಾನ್, ಹೆಡ್ ಬಿಗ್ ಕ್ಯಾಂಪ್, ವೆಂಬರ್, ಮಾಟರ್ಸ್ ಆಫ್ ಅಮೇರಿಕಾ, ಈಕೆ ಬರೆಯುವುದು —

"ನನ್ನ ಶ್ವಾಸಕೋಶದ ನಾಳಗಳಿಗೆ ಶೀತಹಿಡಿದು ನನ್ನನ್ನು ಬಹಳವಾಗಿ ಕಾಡಿಸುತ್ತಿತ್ತು. ಆದರ ನಿವಾರಣೆಗೆ ಅನೇಕ ಪರಿಹಾರಗಳನ್ನು ಮಾಡಿ ನೋಡಿದರೂ ಪ್ರಯೋಜನವಾಗಲಿಲ್ಲ. ಇದು ನನಗೆ ನಾಶಿಯಾಗುತ್ತದೇ ಇಲ್ಲವೇ ಎಂಬ ಯೋಚನೆಯುಂಟಾಯಿತು. ಆಗ ಪೆರೂನಾವನ್ನು ಸೇವಿಸಿ ನೋಡೋಣವೆಂದು ಪ್ರಾರಂಭಿಸಿದೆನು

"ಸ್ವಲ್ಪಕಾಲದೊಳಗಾಗಿ ನನ್ನ ಶ್ವಾಸಕೋಶದ ನಾಳಗಳು ನಿರ್ಮಲವಾಗುತ್ತಾ ಬಂದವು. ಸರ್ವದಾ ಗಂಟಲು ಕಟ್ಟುವುದು ಕಡಮೆಯಾಯಿತು. ಧ್ವನಿಯು ಕುಗ್ಗಿ ದಪ್ಪನಾಗುವದು ನಿಂತಿತು. ಗಂಟಲಿನಲ್ಲಿ ಗಾರೆನ್ನುವದು ತಪ್ಪಿಹೋಯಿತು.

"ನನಗೆ ಶೀತಹಿಡಿದಿದ್ದದ್ದು ನಿವಾರಣೆಯಾದಂತೆ ನನ್ನಲ್ಲೇ ಭರವಸೆ ಹುಟ್ಟಿತು. ಈ ನಂಬಿಕೆ ಹುಟ್ಟಿ ಈಗ ಹಲವು ತಿಂಗಳು ಕಳೆದುಹೋಗಿರುತ್ತವೆ. ಆದರೂ ಪುನಃ ನನಗೆ ಆ ಶೀತ ಬರುವುದೇ ಇಲ್ಲವೆಂದು ತಿಳಿದಿದ್ದೇನೆ"

ಮೇಲೆ ಕಾಣುವ ಪ್ರಖ್ಯಾತ ಸ್ತ್ರೀಯರ ಗುಂಪನ್ನು ನಾವು ಎಷ್ಟು ಸಾವಿರ ಬೇಕಾದರೂ ದೃಷ್ಟಾಂತಕ್ಕೊಡಬಹುದು. ಆಗಲೂ ಪೆರೂನಾದಿಂದ ಪ್ರಯೋಜನವನ್ನು ಹೊಂದಿದ ಸಮಸ್ತ ಸ್ತ್ರೀಯರನ್ನು ಹೇಳಿದಂತಾಗ ನವಲ್ಲ. ಲಕ್ಷಾಂತರ ಹೆಂಗಸರು ಅದರ ಸೇವನೆಯಿಂದ ತಮ್ಮ ಸಕಲ ರೋಗಗಳನ್ನು ನಿವಾರಣೆಮಾಡಿಕೊಂಡಿರುತ್ತಾರೆ

ಹೊಟ್ಟೆಗೆ ಹಿಡಿದ ಶೀತವು

ಮಿಸ್ ಎಮಿಲಿ ಕಾಚ್, ೯೧೪ ಮಿಚಿಗನ್ ಆವ್, ಮಿಲ್ವಾಕೀ, ವಿಸ್, ಈಕೆ ಬರೆಯುವುದು —

"ಹೊಟ್ಟೆಗೆ ಶೀತ ಹಿಡಿದು ನರಳುತ್ತಿರುವವರಿಗೆಲ್ಲಾ ಪೆರೂನಾವನ್ನೇ ಉಪಯೋಗಿಸುವಂತೆ ನಾನು ಬಹು ಸಂತೋಷದಿಂದಲೂ ಪೂರ್ಣ ಹೃದಯದಿಂದಲೂ ಶಿಫಾರಸು ಮಾಡುತ್ತೇನೆ. ನಾನು ಅನೇಕ ಔಷಧಗಳನ್ನು ಉಪಯೋಗಿಸಿದೆನು. ಒಂದರಿಂದಲೂ ನನಗೆ ಆರೋಗ್ಯವಾಗಲಿಲ್ಲ. ಕಡೆಗೆ ನಾನು ಪೆರೂನಾವನ್ನು ಉಪಯೋಗಿಸಿ ನೋಡಬಹುದೋ ಎಂದು ನಿಶ್ಚಯಿಸಿ ಅದನ್ನು ಸೇವಿಸಿದ್ದರಲ್ಲಿ ನನಗೆ ರೋಗವೆಲ್ಲಾ ವಾಸಿಯಾಯಿತು.

ಇದನ್ನೇ ಮೊದಲು ಸೇವಿಸಿ, ಇತರ ಔಷಧಗಳನ್ನು ಉಪಯೋಗಿಸಿ ನನ್ನ ಹೊಟ್ಟೆ ಕರುಳುಗಳನ್ನು ಕೆಡಿಸಿಕೊಳ್ಳದಿದ್ದರೆ ಎಂದು ಈಗ ನಾನು ವ್ಯಸನಪಡುತ್ತೇನೆ. ಪೆರೂನಾ ನನ್ನ ರೋಗವನ್ನು ಸಂಪೂರ್ಣವಾಗಿ ವಾಸಿಮಾಡಿದೆ. ಮತ್ತು ಇನ್ನೊಂದು ದಫೆ ಯಾವ ರೋಗವೂ ನನ್ನ ಶರೀರಕ್ಕೆ ತಗಲದಂತೆ ತಡೆಯುವದಕ್ಕೋಸ್ಕರ ನಾನು ಯಾವಾಗಲೂ ಒಂದು ಬಾಟ್ಲಿಯನ್ನು ನನ್ನ ಬಳಿ ಇಟ್ಟುಕೊಂಡೇ ಇರುತ್ತೇನೆ. ನಾನು ಪಟ್ಟಂಥಾ ಕಷ್ಟವನ್ನು ಅನುಭವಿಸುತ್ತಿರುವ ಸಕಲರಿಗೂ ಪೆರೂನಾವನ್ನು ಉಪಯೋಗಿಸಲು ಬಹು ಸಂತೋಷದಿಂದ ಶಿಫಾರಸು ಮಾಡುತ್ತೇನೆ"

ಶ್ವಾಸಕೋಶದ ಶೀತವು

ಮಿಸೆಸ್ ವಿಂ ಹೋಮನ್, ೯೯೯ ಪ್ಲೀಸೆಂಟ್ ಏವ್, ಚಿಕಾಗೋ, ಇಲ್, ಈಕೆ ಬರೆಯುವದು — ನನ್ನ ಎದೆಗೆ ಅಂದರೆ ಶ್ವಾಸಕೋಶಕ್ಕೆ ವಾತ ಉಂಟಾಗಿ ಬಹಳ ಅನುಭವಿಸಿದೆನು. ಶ್ವಾಸಕೋಶದ ನಾಳಗಳು ಶೀತದಿಂದ ಕಟ್ಟಿಕೊಂಡಿದ್ದವು. ಚಿಕ್ಕಂದಿನಿಂದಲೂ ನನಗೆ ಬಂದಂತಹಾ ಕೆಟ್ಟ ಕೆಮ್ಮಲು ರೋಗವಿದ್ದು ಇಪ್ಪತ್ತು ವರ್ಷವಾಗಿದ್ದಾಗ ನನ್ನ ಕೆಮ್ಮಲು ನೋಡಿ ಎಲ್ಲರೂ ನನಗೆ ಉರಿಕೆಮ್ಮಲೆಂದೂ ಗಳಲು ಕ್ಷಯವೆಂದೂ ಹೇಳುತ್ತಿದ್ದರು. ದಿನತ್ತವಾಗುತ್ತಾ ಒಂದ ಹಾಗೆಲ್ಲಾ ಈ ಕೆಮ್ಮು ಬಹಳವಾಗಿ ಹೆಚ್ಚುತ್ತಾ ಬಂದು ನನ್ನನ್ನು ಬಹು ಕಷ್ಟಪಡಿಸಿತು.

"ಕೆಲವು ಕಾಲಾನಂತರ ಈ ಕೆಟ್ಟ ಕೆಮ್ಮಲು ನನ್ನನ್ನು ಶೀತಕಾಲದಲ್ಲಾ ಬೇಸಿಗೆ ಕಾಲದಲ್ಲಾ ಒಂದೇ ಸಮನಾಗಿ ಬಾಧೆಪಡಿಸುತ್ತಿದ್ದಿತು. ಕಡೆಗೆ ಕೆಮ್ಮುತ್ತಿದ್ದಕ್ಕಾಗಿ ನನ್ನ ಶ್ವಾಸಕೋಶದ ಒಂದು ನಾಳವು ಒಡೆದು ರಕ್ತ ಕಾರಿದೆನು. ಇದಾದ ಮೇಲೆ ನನ್ನ ಹೊಟ್ಟೆಯಲ್ಲೂ ಅಂದರೆ ಅನ್ನ ಕೋಶದಲ್ಲೂ ಒಂದು ರಕ್ತನಾಳವು ಒಡೆದು ದಿನ ದಿನವೂ ನಾನು ಕೃಶಳಾಗುತ್ತಲೂ, ಔಷಧ ಸೇವನೆಮಾಡುತ್ತಲೂ ಇದ್ದೆನು. ಆದರೆ ಯಾವ ಚಿಕಿತ್ಸೆಯಿಂದಲೂ ನನಗೆ ಸ್ವಲ್ಪವಾದರೂ ಕಷ್ಟನಿವಾರಣೆಯಾಗಲಿಲ್ಲ. (೧೫-೪೫)

"ನಾನು ಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕೋಸ್ಕರ ಒಂದು ಔಷಧಾಲಯಕ್ಕೆ ಹೋದೆನು. ಆದರಲ್ಲಿದ್ದ ಯಾವ ಔಷಧವನ್ನು ಸೇವಿಸಿದಾಗ್ಯೂ ನನಗೆ ವಾಸಿಯಾಗದೆ ಹೋಯಿತು. ರಾತ್ರಿ ಹೊತ್ತು ನಾನು ಹಾಸಿಗೆಯ ಮೇಲೆ ಅಂಗತಂಗನಾಗಿ ಮಲಗಿಕೊಳ್ಳುವದೇ ಅಸಾಧ್ಯವಾಯಿತು. ಬೆಳಗಿನ ಜಾವದ ಹೊತ್ತಿಗೆ ಬಹಳ ಕೆಮ್ಮು ಬಂದು ಕುಳಿತುಕೊಂಡರೆ ಇರವಂತಾಯಿತು. ಕಣ್ಣು ಮುಚ್ಚುವುದೆಂದರೆ ಅಸಾಧ್ಯ. ಇಷ್ಟೆಲ್ಲಾ ಆದ ಮೇಲೆ ನನ್ನನ್ನು ನೋಡಿದವರೆಲ್ಲಾ ನನಗೆ ಕ್ಷಯ ಹಿಡಿದಿದೆಯೆಂದು ನಿಶ್ಚಯಮಾಡಿದರು. ನನಗೂ ಅದೇ ಇದ್ದೀತೆಂದು ಗೊತ್ತಾಯಿತು.

"ಪೆರೂನಾವನ್ನು ಕುರಿತು ಬರೆದಿರುವ ಕಾಗದಗಳನ್ನು ಓದುತ್ತಾ ಬಂದದ್ದರಲ್ಲಿ — ಆ ಔಷಧದಿಂದ ನನ್ನ ರೋಗವೇನಾದರೂ ವಾಸಿಯಾಗಲಾರದು. ಆದರೆ ಅದನ್ನು ಸೇವಿಸಿ ನೋಡೋಣ ಎಂಬ ಯೋಚನೆ ನನ್ನಲ್ಲಿ ಉಂಟಾಯಿತು. ಬಂದಾದ ಮೇಲೆ ಒಂದರಂತೆ ಮೂರು ಬಾಟ್ಲಿಗಳ ಔಷಧವನ್ನು ಸೇವಿಸಿದೆನು. ಆಗ ನನ್ನ ಶರೀರ ಸ್ಥಿತಿ ಏನೋ ಬದಲಾವಣೆಯಾದಂತೆ ನನಗೆ ತೋರಿಬಂತು. ಬಾಯಿನಲ್ಲಿ ರುಚಿ ಹುಟ್ಟಿತು. ಆಹಾರದ ಮೇಲೆ ಇಚ್ಛೆಯುಂಟಾಯಿತು. ಕ್ರಮವಾಗಿ ಔಷಧ ಸೇವನೆಯನ್ನು ಮಾಡುತ್ತಾ ಬಂದೆನು. ಮನಸ್ಸಿನಲ್ಲಿದ್ದ ಅಧೈರ್ಯವೂ ಸಂಶಯವೂ ನಿವಾರಣೆಯಾದವು. ಈಗ ನಾನು ಧಾರಾಳವಾಗಿ ಅಂಗಾಂಗನಾಗಿ ಮಲಗಿ ರಾತ್ರಿಯೆಲ್ಲಾ ನಿದ್ದೆ ಮಾಡುತ್ತೇನೆ. ಆದ್ದರಿಂದ ಪೆರೂನಾದ ವಿಷಯದಲ್ಲಿ ನಾನು ಎಷ್ಟುಮಟ್ಟಿಗೆ ಕೃತಜ್ಞಳಾಗಿದ್ದೇನೆ ಎಂಬುದನ್ನು ನೀವೇ ಊಹಿಸಿಕೊಳ್ಳಬಹುದು"

ಕೃಶವಾಗುವಂಥಾ ಕ್ಷಯರೋಗವು

ಮಿಸೆಸ ರೊಕ್ಸ ಟೆಯಿಲರ್, ೬೦೦೦ ಮಾದಿಸನ್ ಅವೆನ್ಯು, ಚಿಕಾಗೋ, ಇಲ್, ವೈಸ್ ಪ್ರೆಸಿಡೆಂಟ್, ಇಲಿನಾಯಿಸ್ ಸ್ತ್ರೀಯರ ಸಂಘ, ಈಕೆ ಬರೆಯುವುದು —

"ಹೋದ ವರುಷವೆಲ್ಲಾ ನನಗೆ ಬಂದು ತಗಲಿದ ರೋಗ ಹುಟ್ಟಿ ನನ್ನ ಮಾಂಸಖಂಡಗಳೂ ದೇಹಶಕ್ತಿಯೂ ಕ್ರಮೇಣ ಕ್ಷಯಿಸುತ್ತಾ ಬಂದವು. ಕಡೆಗೆ ನಾನು ಯಾವ ಕೆಲಸವನ್ನು ಮಾಡಲಾರದಂತಾದೆನು. ಈ ರೋಗನಿವಾರಣೆಗೋಸ್ಕರ ಹಲವು ತರದ ಔಷಧಗಳನ್ನು ಸೇವಿಸಿದೆನು. ಕಡೆಯಲ್ಲಿ ನನಗೆ ಪೆರೂನಾ ಸೇವಿಸುವಂತೆ ಒಬ್ಬರು ಸೂಚಿಸಿದರು

"ಇದನ್ನು ಸೇವಿಸುತ್ತಾ ಬಂದಕೂಡಲೇ ನನ್ನ ಬಾಧೆಯೋ ಬದಲಾಯಿತು. ನನಗೆ ಯಥಾಪ್ರಕಾರ ಶಕ್ತಿ ಕೂಡಿಕೊಂಡಿತು. ನಾನು ಅದನ್ನು ಎಷ್ಟಾಗಿ ಕೊಂಡಾಡಿದರೂ ತೀರದು"

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಈ ಔಷಧ ಸಿಕ್ಕುವ ಸ್ಥಳವ್ಯಾವುದೆಂದರೆ:—

ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೨—೨—೧೯೦೮ ರಿಂದ ೨೯—೨—೧೯೦೮ ರವರೆಗೆ

ಸ್ಥಳ	ಪ್ಲೇಗ್ ಆಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ಆಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	26	8	0	0
ಮೈಸೂರು ,,	1	8	0	0
ಬೆಂಗಳೂರು ಡಿಸ್ಟ್ರಿಕ್ಟು	76	63	7	0
ಮೈಸೂರು ,,	44	40	0	0
ಕೋಲಾರ್ ,,	66	63	0	0
ಕೋಲಾರ್ ಚಿನ್ನದ ಗಣಿಗಳು	16	8	0	0
ತುಮಕೂರು ಡಿಸ್ಟ್ರಿಕ್ಟು	4	5	0	0
ಹಾಸನ	7	6	1	1
ಚಿತ್ರದುರ್ಗ ,,	0	0	0	0
ಕಡೂರ್ ,,	31	8	0	0
ಶಿವಮೊಗ್ಗ ,,	*	*	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	303	239	1	1

ಶಾಲಿವಾಹನ ೧೮೨೯ ನೇ ಪ್ಲವಂಗನಾಮ ಸಂವತ್ಸರದ ಫಾಲ್ಗುಣ ಶುದ್ಧ ೩ ಗುರುವಾರದಿಂದ ಫಾಲ್ಗುಣ ಶುದ್ಧ ನವಮಿ ಬುಧವಾರದ ವರೆಗಿನ ಬಂದು ವಾರದ ಪಂಚಾಂಗ

೧೯೦೮ನೇ ಮಾರ್ಚಿ

ತಾ	ವಾ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಇಂಗ್ಲೀಷ್ ತಾರೀಖು
5	ಗುರು	ತದಿಗೆ	31 14	ರೇ	39 16	23
6	ಶುಕ್ರ *	ಚೌತಿ	25 40	ಅಶ್ವಿ	58 24	24
7	ಶನಿ ●	ಪಂಚಮಿ	27 7	ಭ	39 0	25
8	ರವಿ	ಷಷ್ಠಿ	26 58	ಕೃ	40 12	26
9	ಸೋಮ	ಸಪ್ತಮಿ	25 2	ರೋ	41 13	27
10	ಮಂಗಳ ‡	ಅಷ್ಟಮಿ	30 18	ಮೃ	17 2	28
11	ಬುಧ	ನವಮಿ	33 33	ಆರ್ದ್ರ	51 53	29

* ಗಣೇಶ ಚತುರ್ಥಿ
ಸ ಹಾವ್ಯಕ್ಕು ಸಾಂತಸೇತುಮಿ
● ಶ ಭಪ್ರದಗೌರೀವ್ರತ
‡ ತಿರುಮಲಿಗೆಕೃಷ್ಣವೇಣಿ

ಪೇಟೆ ಧಾರಣೆ

ವಿವರ		ಮೈಸೂರು	ಬೆಂಗಳೂರು
ಕಡ್ಲೆ ಅಕ್ಕಿ ಪಲ್ಲಾ ೧ಕ್ಕೆ	ರೂ	೧೩ ೦-೦	೧೨ ೮-೦
ಕಂಬಳಿ ಅಕ್ಕಿ ಅವಲ್		೧೩ ೮ ೦	೧೪ ೮ ೦
		೧೩ ೦ ೦	೧೨ ೦-೦
ಜಾಬು ಇ ಅಕ್ಕಿ		೧೩ ೦ ೦	೧೨ ೦-೦
ಸಣ್ಣಕ್ಕಿ ಅವಲ್		೧೫-೮ ೦	೧೬ ೦-೦
,, ದ ರ್‍ಜ		೧೫ ೦ ೦	೧೫ ೦ ೦
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೨ ೦-೦	೧೬ ೦ ೦
ದುಂಡು		೧೩ ೮ ೦	೧೫ ೦ ೦
ಕಡ್ಲೆ ಬೇಳೆ ಪಲ್ಲಾ ೧ಕ್ಕೆ		೬ ೧೨ ೦	೭ ೦ ೦
ಕಾಳು		೬ ೨-೦	೬ ೧೨ ೦
ಜೋಳ		೭ ೦ ೦	೧೦ ೦-೭
ಹುರುಳಿ ಪಲ್ಲಾ ೧ಕ್ಕೆ		೧೦ ೮ ೦	೧ ೦ ೦
ಬಿಳಿ ಅವರೆ		೮-೧೨ ೦	೭ ೮ ೦
ಹೆಸರು		೧೦ ೮ ೦	೧೧ ೮ ೦
ಉದ್ದು		೧೨ ೦ ೦	೧೩ ೦ ೦
ಕಡಲೆ		೧೨-೮ ೦	೧೩ ೧ ೦
ಎಳ್ಳು ಪಲ್ಲಾ ೧ಕ್ಕೆ		೨೨ ೮ ೦	೨೫ ೦ ೦
ಹುರಳಿ		೬ ೭ ೦	೭ ೦ ೦
ಕಡಲೆಕಾಯಿ ಸೇರು		೧೨ ೦-೦	೧೨
ಹರಳು ಮಣಕ್ಕೆ		೨ ೮ ೦	೧ ೦
ಎಣ್ಣೆಕಾಳು		೨ ೮ ೦	೨ ೧೦ ೦
ಹುರುಳಿ		೨ ೭ ೦	೨ ೮ ೦
ಬೆಲ್ಲ ಸಿ ಸ್ಸ ಅಚ್ಚು		೫ ೧ ೦	೫ ೦ ೩ ೦
ಒಣ ಮೆಣಸಿನ ಕಾಯಿ ೧ಕ್ಕೆ		೩-೭ ೦	೩ ೭-೦
ಕೊಬ್ಬರಿ		೭ ೧-೦ ೦	೪ ೭ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫ ೮ ೦	೩ ೦ ೦
ಜೀರಿಗೆ ,,		೫-೦ ೦	೫ ೧೦ ೦
ಹುಣಸೇ ಹಣ್ಣು		೨ ೭-೧	೧ ೨ ೦
ಹಳದಿ		೧ ೮	೧ ೦ ೦
ತುಪ್ಪ ಮಣ ೧ಕ್ಕೆ		೧೩ ೮ ೦	೧೫ ೦-೦
ಸೀಮೆ ಎಣ್ಣೆ ಪೆಟ್ಟಿಗೆ ೧ಕ್ಕೆ		೭-೧೫ ೦	೭ ೦ ೦
ತೆಂಗಿನಕಾಯಿ ೧೦೦ ಕ್ಕೆ		೫ ೮ ೦	೬ ೧೨ ೦
ಎಳೆಲೆ ಕಾಯಿ ಮಣ ೧ಕ್ಕೆ		೧-೦-೦	೧ ೨ ೦
ಉಂಡೆ ಎಲೆ ಕಾಯಿ ಮಣ ೧ಕ್ಕೆ		೦ ೧೨-೦	೦-೧೩-೦
ನುಸ್ಸು (ಬೇರು) ಕೆಂಪು		೧೫ ೬-೦	೧೫-೫ ೦
,, ಹಸಿರು		೧೫-೧೦-೦	೧೫ ೭ ೦
,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೪ ೧೦ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೭೫-೦-೦	೭೨ ೦ ೦

Printed and Published by the Rev E W THOMPSON, M A Proprietor and Manager, Wesleyan Mission Press, Mysore 5/3/1908.

REGISTERED
M. 20

ವೃತ್ತಾಂತ ಪತ್ರಿಕೆ.

ಬಿಡಿ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೮ ನೇ ಇಸವಿ ಮಾರ್ಚಿ ತಾರೀಖು ೧೨ ನೇ ಗುರುವಾರ. ಸಂಚಿಕೆ ೪೧

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

1..

ತುಸಿಕೊಳ್ಳಿರಿ — ತ್ವರೆಗೊಳ್ಳಿರಿ - ಅಮೃತಾಂಜನ ಸರ್ವಲೋಕರಂಜನ ಸರ್ವ ವ್ಯಾಧಿಭಂಜನ, ಚಿಕಿತ್ಸಾಶಾಸ್ತ್ರಗಳ ... ಸಾಧನ, ದೇಹಾಂಗಗಳಿಗೆ ಸಂಜೀವನ ನಾಸ ... ಮನೋರಂಜನ, ಬೆಲೆಯಲ್ಲಿ ಅಲ್ಪ ... ಅಮೃತ ಔಷಧಿಯಲ್ಲಿ ... ಕೊಳ್ಳುವವರಲ್ಲಿ ಮಾರಿಸಿತ್ತು ... ಗುಣ ಕಂಡುಬರುವವಲ್ಲವಾದರೆ ... ಕೊಡಲ್ಪಡುವದು. ಒಂದ ... ಬಾಟ್ಲಿ ತರಿಸಿಕೊಂಡವರಿಗೆ ಒಂದು ... ಜಿಕ್ಕಿಯ ಕಪ್ ಉಚಿತವಾಗಿ ಕೊಡ ಲ್ಪಡುವದು.

ನಿಶ್ಚಿಂತರಾಗಿ ಭಾರತವರ್ಷೀಯ ಔಷಧಗಳಿಂದ ತಯಾರಿಸಿದ ಹೊರ ಉಪಯೋಗಕ್ಕೋಸ್ಕರ ಮುಲಾಮು. ಇದರಿಂದ ತಲೆನೋವು, ಶಿರೋವೇದನೆ, ವಾತ ಸಂಧಿವಾತ ಪಕ್ಷವಾತ, ಗಂಟ್ಲು ನೋವು, ಸೊಂಟನೋವು, ಗಂಟ್ಲು ನೋವು ಶೀತ, ಜಕಮು ಉಳುಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ.

ಈ ಕಂಪನಿಯವರು ಕೆಳಕ್ಕೆ ನಮೂದಿಸಿದ ಔಷಧಿಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಳುಹಿಸಲ್ಪಡುವದು.

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೦—೮—೦. ಪೋಸ್ಟು ಖರ್ಚು ೦—೪—೦

ಗಜಕರ್ಣದ ಮುಲಾಮು.

... ಇದರಿಂದ ಚರ್ಮಕ್ಕೆ ಕಪ್ಪು ... ಮತ್ತು ಉರಿಯುವದಿಲ್ಲ ... ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು. ಡಬ್ಬಿ ಒಂದಕ್ಕೆ ಕಿಮ್ಮತ್ತು ೦—೬—೦, ಪೋಸ್ಟು ಖರ್ಚು ೦—೪—೦

ದಂತಮಂಜನ —ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಹಲ್ಲುಗಳು ಬೆಳ್ಳಗಾಗುತ್ತವೆ. ಹಲ್ಲುಗಳ ನೋವನ್ನು ತೆಗೆಯುತ್ತದೆ. ಡಬ್ಬಿ ಒಂದಕ್ಕೆ ೦—೨—೦ ಪೋಸ್ಟು ಖರ್ಚು ೦—೪—೦

ವಜ್ರಗುಟಿಕೆ—ಧಾತುಪುಷ್ಟಿ ... ಚಿಕಿತ್ಸೆಮಾಡುತ್ತದೆ, ಸ್ವಪ್ನದಿಂದಾಗುವದು ನಿಲ್ಲಿಸುತ್ತದೆ. ರಕ್ತ ... ದೇಹಕ್ಕೆ ಆರೋಗ್ಯಕೊಡುತ್ತದೆ. ಡಬ್ಬಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೪—೦.

ಕೇಶವರ್ಧಿನಿ—ತಲೆ ನೋವು ... ಕೂದಲುಗಳನ್ನು ಬೆಳಸುವದು, ಕೂದಲುಗಳನ್ನು ಕಪ್ಪುಮಾಡುವದು, ಮನಸ್ಸಿಗೆ ... ಚಳಿ ... ಔನ್ಸು ಬಾಟ್ಲಿ ಒಂದಕ್ಕೆ ೧—೦—೦. ಪೋಸ್ಟು ಖರ್ಚು ೦—೪—೦.

ವಿಳಾಸ:—ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನ್, ಪೋರ್ಟ್, ಮುಂಬಯಿ.

ಟೆಲಿಗ್ರಾಫು ಅಡ್ರೆಸು—"ಅಮೃತಾಂಜನ," ಮುಂಬಯಿ.

ಕಾರ್ಡು ಸೈಜು ೪ x ೩½.

ಫೋಟೋ ತೆಗೆಯುವ

ಫೊ ಟೋ ಕ್ಯಾ ಮೆ ರಾ.

34-30

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಆತನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿ ಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಹೇಳುತ್ತಾರೆ. ಆದರೆ ಇದರ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲು ಖರ್ಚು ... ಬೇರೆ

ಇದು ಸಿಕ್ಕತಕ್ಕ ವಿಳಾಸ —

ಛೋಟಾಲಾಲ ಭಗನಲಾಲ ಮಹಾಜನ ಠಾಕೂರದ್ವಾರ ರೋಡ ಪೋಸ್ಟು ಕಾಲಬಾದೇವಿ. ಮುಂಬಯಿ

ಜ್ವ ರ ಹ ರಿ 19 6



ಇದು ಸಾಧಾರಣ ಜ್ವರ, ಚಳಿಜ್ವರ, ಮೋರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ನಾಟಿ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ನಾಶಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ... ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ... ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ ; ೧—೮ ರೂ., ರೂ ೨—೧೨ ಆ.; ೧೧ ರೂ ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓ ಮಂ ಕ ರ್ಪೂ ರ

Omum-Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಕೊಡಲ್ಪಡುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪೆನ್ನಿಯ ಓಮಂ ಕರ್ಪೂರವನ್ನು ನಾನೂ ನನ್ನ ಡಾಕ್ಟರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದ ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಪಟ್ಟಣಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಪೆನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

16-4

೧ ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಕೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಕೆಮ್ಮು ಕ್ಷಯ, ಸಂದುಗಳ ನೋವು, ಮೈ ಕೈಕಾಲು ಸೆಳತ (ವಾಯು), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿ ನಷ್ಟ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಲೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ವ್ಯಾಧಿಗೂ ದಾರಿಕೊಡದೆ, ನೀರು ಹವಾಗಳ ವಿಷಸ್ಥಿತಿಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಪುಷ್ಟಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಕೆಮ್ಮು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ರೂಪಾಯಿ. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್ ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್ ಮೈಸೂರು.

ರಬ್ಬರ್ ಹ್ಯಾಂಡ್ ಪ್ರೆಸ್.

114 22

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೫ ರಿಂದ ೧೮ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲಗು, ಉರ್ದು, ಪರ್ಷಿಯನ್, ಅರಾಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು. ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮುದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು. ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳ ಕಾಲ ಹಿಡಿಯುವದು. ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ದೆಸೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು. ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ.

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.

ಹಾಫ್ ಪುಲ್‌ಸ್ಕ್ಯಾಪ್ ಸೈಜು, ೬—೦—೦.

ಪೋಸ್ಟೇಜು ಬೇರೆ (extra)

ವಿಳಾಸ:— ವರ್ಧಮಾನ ಏಜನ್ಸಿ,

ಪೋಸ್ಟು ಕಾಲಬಾದೇವಿ,

ಮುಂಬಯಿ.

"ಸರ್ವಜನಹಿತೋಪಕಾರಿಣಿ."

23 2

ಈ ಮಾಸಪತ್ರಿಕೆಯಲ್ಲಿ ಸರ್ವರಿಗೂ ಉಪಯುಕ್ತವಾದ ಅನೇಕ ವಿಷಯಗಳು ಬರೆಯಲ್ಪಡುತ್ತಿವೆ ಉಪೇಕ್ಷಿಸತಕ್ಕ ಪತ್ರಿಕೆಯಲ್ಲ ತರಿಸಿ ನೋಡಿ ಚಂದ ವರ್ಷಕ್ಕೆ ಅಂಚೆ ಹಾಸಲ್ ಸೇರಿ ೧೨ ಆಣೆ ವಿಳಾಸ— "ಸರ್ವಜನಹಿತೋಪಕಾರಿಣಿ" ಆಫೀಸ್, ದೊಡ್ಡಪೇಟೆ, ಮೈಸೂರು

THE PLACE FOR HASSAN CAPS IS
HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-11

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನ ದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯವಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಒಬ್ಬರಿಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೆದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದ ದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ. ಸಾದಾ, ಕೆಂಪು, ಕಪ್ಪು, ಬಿಳಿಕೆ, ಕಾಫಿ ಟೋಪಿಗಳು ೧ ರೂ ೪ ಆ, ೧ ರೂ ೬ ಆ, ೧ ರೂ ೬ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೪ ಆ., ೨ ರೂ ದಾರದ ಟೋಪಿಗಳು ೧ ರೂ. ೧೨ ಆ, ೧ ರೂ. ೪ ಆ, ೧ ರೂ. ೬ ಆ ಉಣ್ಣೆಯ ಟೋಪಿಗಳು ೧ ರೂ. ೪ ಆ.; ೧ ರೂ ೬ ಆ.

ಕೊಡುಗಳ ಬೆಲೆ, ಸೂರ್ಯ ಮೇಲೋದು, ಆರ್ಡರ್ ಮೇಲೋ ಡು ಕತ್ತಿನ ಒಟ್ಟು, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಸುಗಂಧಸಂಜೀವನೀ

ಭೃಂಗಾಮಲಕ ತೈಲವು.

5-6

ಈ ತೈಲವನ್ನು ತಲೆಗೂ, ಮೈಗೂ ಸಹ ಲೇಪಿಸಿ ಅಭ್ಯಂಗಸ್ನಾನ ಮಾಡುವದರಿಂದ ತಲೆಯಲ್ಲಿ ಸುವಾಸನೆ, ಕೂದಲು ವೃದ್ಧಿಯಾಗುವ ದು, ನೇತ್ರಬಲತ್ವವು ವೃದ್ಧಿಯಾಗುವದು. ತಲೇನೋವು, ಅರ್ಧತಲೆ

ನೋವು, ತಲೆಸುತ್ತುವದು, ಪಿತ್ತ ಶರೀರ, ತಲೆಭಾಗ, ನುಣುಪಾ ದದ್ದು ನಿವಾರಣೆಯಾಗುತ್ತದೆ ಕಣ್ಣೀರು ಸುರಿಯುವದು, ಕಣ್ಣುರಿ, ಕಣ್ಣುನೋವು ಮುಂತಾದವುಗಳಿಗೆ ಅತ್ಯಂತ ಗುಣ ಕಾರಿ ಮೂಗಿನಿಂದ ರಕ್ತಸ್ರಾವ, ಮೂಗು ಒಣಗುವದು ಇವುಗಳನ್ನೆಲ್ಲಾ ಪರಿಹಾರ ಮಾಡುತ್ತೆ. ಮೈಯ್ಯಿಂದುರಿ ದೇಹದ ಉರಿ ಮುಂತಾದದ್ದು ನಿರ್ನಾಮ ವಾಗುತ್ತದೆ. ಉಷ್ಣಾಧಿಕ್ಯದಿಂದ ಅಂಗೈ ಅಂಗಾಲಿನ ಉರಿ, ನಿದ್ರೆಬಾರದೆ ಇರುವದು ಇವೇ ಮೊದಲಾದ ವ್ಯಾಧಿಗಳನ್ನು ಗುಣಮಾಡುತ್ತದೆ ಮೆದುಳಿಗೆ ತಂಪುಮಾಡಿ ಸ್ಮರಣ ಶಕ್ತಿ ಹೆಚ್ಚಿಸುವದು. ವಿದ್ಯಾರ್ಥಿಗಳಿಗೂ, ವಿಶೇಷ ಯೋಚನೆಯಿಂದ ಕೆಲಸಮಾಡತಕ್ಕವರಿಗೂ ಅತ್ಯಂತ ಉಪಯುಕ್ತವಾದದ್ದು ಕ್ರಯ ಸೀಸೆ ೧ ಕ್ಕೆ ೪ ಆಣೆ, ಅಂಚೆ ಹಾಸಲು ೯ ಆಣೆ.

ರಕ್ತಶೋಧಕ ತೈಲವು.

ಅನೇಕ ಆಫೀಸರಿಂದ ಯೋಗ್ಯತಾ ಪತ್ರ ಹೊಂದಿದೆ ಕ್ರಯ ಸುಲಭ ಹುಣ್ಣುಗುಣಕಾರಿ ತುರಿ, ಹುರುಕಾಲು, ಒಣಬಚ್ಚೆ, ಎಂಥಾ ಹುಳು ಬಿದ್ದಿದ್ದ ಹಳೆ ವ್ರಣವೇ ಆಗಲಿ, ಪುರಾತನ ವಿಷಪುರಿ, ಇತ್ಯಾದಿ ಮಹಾ ಕಠಿಣ ರೋಗಗಳೆಲ್ಲಾ ತೀವ್ರ ಆರೋಗ್ಯವಾಗುವದು. ಈ ತೈಲವನ್ನು ಲೇಪಿಸಿದರೆ ಉರಿಯುವದಿಲ್ಲ ರಸ, ಗಂಧಕ, ಮೈಲುತುತ್ತ ಮುಂತಾದದ್ದು ಖಂಡಿತವಾಗಿ ಇದರಲ್ಲಿ ಸೇರಿಸಿಲ್ಲ. ಮತ್ತು ಮಾತ್ರೆ ಕಠಿಣವಾದ ಇಪ್ಪತ್ತು ಜಾತ್ಯಗಳನ್ನೆಲ್ಲಾ ಬಹುಬೇಗ ತಪ್ಪದೆ ಆರೋಗ್ಯ ಮಾಡುತ್ತದೆ ಕ್ರಯ, ಸೀಸೆ ೧ ಕ್ಕೆ ೧೨ ಆಣೆ ಅಂಚೆ ಹಾಸಲು ೩ ಆಣೆ

ಮೇಲ್ಕಂಡ ಎರಡು ಔಷಧಗಳೂ ದೊರೆಯುವ ಸ್ಥಳ:—

☞ ಬಿ. ಆರ್. ಗೋವಿಂದರಾಜುಲು,

೧೫೨, ಅರಳೇಪೇಟೆ, ಬೆಂಗಳೂರು ಸಿಟಿ.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



1-11

ಬೆನ್ನು ಉಳುಕಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು. ಕಿಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಪಚ್ಚಾದ ಕಡೆಗೆ ನೋವು. ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕುಣಿಯಾಗಿ ಕಳೆಯುವ ಬಾಧೆ, ಜಂಟಗಳಲ್ಲಿ ಇರಿಯುವುದು. ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಕಾವು ಮಾಂಸದೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು: ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

"ಗೌಡರ ಹೊಗಳೇಡುವ ಔಷಧ"

19-3

ಈ ನವೀನ ಔಷಧವು ಕೆಮ್ಮು, ಗಸೆ, ಮೊದಲಾದ ವ್ಯಾಧಿಗಳನ್ನು ತಕ್ಷಣ ಶಮನಗೊಳಿಸಿ ಬೇಗನೆ ಪರಿಹರಿಸುತ್ತದೆ ಕ್ರಯ—ಪಟ್ಟಿಗೆ ೧ಕ್ಕೆ ೪ ಆಣೆ. ವಿ ಪಿ ೧೦ ಆಣೆ. ಈ ವಿಳಾಸಕ್ಕೆ ಬರೆಯಿರಿ—ಸಿ ಲಕ್ಷ್ಮಣ ಗೌಡ, ಬಿ ಎ, ಬಿ ಎಲ್, ವಕ್ರಸ್ವನ ಬೀದಿ, ಬೆಂಗಳೂರು ಸಿಟಿ

ಕನ್ನಡ ಮತ್ತು ಮರಾಠಿ ಪಂಚಾಂಗಗಳು.

24-2

ಹರಪನಹಳ್ಳಿಯಲ್ಲಿ ಮೊದಲು ಜ್ಯೋತಿಷ್ಯ ದರ್ಪಣಾಖ್ಯ ಪಾಠಶಾಲೆಯನ್ನು ಸ್ಥಾಪನೆಮಾಡಿ, ಅನೇಕರಿಗೆ ವಿದ್ಯಾಭ್ಯಾಸಗೊಳಿಸಿದ ಪ್ರಸಿದ್ಧ ಜ್ಯೋತಿಷ್ಯರಾದ ಆರ್ ಕಾಂತಪ್ಪಾಜೀಯವರಿಂದ ಸ್ವತ ಅನುಭವ ಸಿದ್ಧಾಂತ ಸಹಿತ ಸಂಪೂರ್ಣ ಫಲಗಳ, ಮತ್ತು ಜ್ಯೋತಿಶ್ಶಾಸ್ತ್ರ) ಸಂಬಂಧಿ ಪ್ರಶ್ನೆಕಮಾಹಿತಿ ಕೊಟ್ಟು ಬರೆದಿರುವ ಶೀಲಕ ಸಂವತ್ಸರದ ಪಂಚಾಂಗಗಳು ಹಾರದಲ್ಲಿಕ್ಕೆ ಸಿದ್ಧವಿರುತ್ತವೆ ಕನ್ನಡ ಪಂಚಾಂಗದಲ್ಲಿ ದೊಡ್ಡ ೩೦ ಪಾನುಗಳಿದ್ದು, ಮರಾಠಿ ಪಂಚಾಂಗದಲ್ಲಿ ದೊಡ್ಡ ೪೦ ಪಾನುಗಳಿವೆ ಪಂಚಾಂಗ ಒಂದಕ್ಕೆ ಕ್ರಯ ಎರಡು ಆಣೆ ಮರಾಠಿ ಪಂಚಾಂಗದ ಒಳಗೆ ವಿ ಪಿ ಮಾಡಲಿಕ್ಕೆ ಆಗುವದಿಲ್ಲ ಕನ್ನಡ ಶಿಥಿಲ ಮರಾಠಿ ಪಂಚಾಂಗ ಬೇಕಾದ್ದು ಸ್ಪಷ್ಟ ಬರೆಯಬೇಕು ಪತ್ತೆ ಕನ್ನಡ ಬಾಲಬೋಧ ಅಥವ ಇಂಗ್ಲೀಷಿನಲ್ಲಿ ಸ್ಪಷ್ಟ ಬರೆಯಿರಿ ವ್ಯಾಪಾರಿಗಳಿಗೆ ಅನುಕೂಲವಾದ ಕಮೀಷನನು ಕೊಡುವೆನು

ಗೋಚಾರಫಲದರ್ಪಣ (ಕನ್ನಡ).

ಇದರಲ್ಲಿ ಗೋಚಾರಸಂಬಂಧಿ ಹಾಗೂ ಇತರ ಜ್ಯೋತಿಷ್ಯ ಸಂಬಂಧಿ ಪ್ರಶ್ನೆಕಮಾಹಿತಿ ಇರುವದು ಈ ಪ್ರಸ್ತಕದಲ್ಲಿ ಸುಮಾರು ೨೦೦ ರ ಮೇಲೆ ಪಾನುಗಳಿದ್ದು, ಉತ್ತಮವಾದ ಕ್ಯಾಲಿಕೊ ಮಾಡಲ್ಪಟ್ಟರುತ್ತದೆ. ಇದರ ಕ್ರಯ ಒಂದು ರೂಪಾಯಿ ಟಪಾಲ್ ಖರ್ಚು ಬೇರೆ ಇತರರು ಮಾಡಿದ ಇದೇ ಹೆಸರಿನ ನಿರುಪಯೋಗವಾದ ಪುಸ್ತಕಗಳು ಇರುವದರಿಂದ ಕೊಳ್ಳುವವರು. ಆರ್ ಕಾಂತಪ್ಪಾಜೀಯವರ ಹೆಸರು ನೋಡಿಕೊಳ್ಳಬೇಕು ಪತ್ತೆ—ಬೊಂಡಾಡೆ ನರಸಪ್ಪ, ಚಿತ್ತವಾಡಗಿ, ಜಿಲ್ಲಾ ಬಳ್ಳಾರಿ

Boandade Narasappa, Post Chittawadgi Bellary Dt

ನೀವು ಉಪಾಧ್ಯಾಯರೋ?

20 3

ಹಾಗಾದರೆ ಇಲ್ಲಿ ಬರೆದಿರುವದನ್ನು ಓದಿ ನೋಡಿರಿ.

ಬಾಲಶಿಕ್ಷೆ: ಒಂದನೆಯ ಭಾಗ ೦—೧—೬.

ಬಾಲಶಿಕ್ಷೆ: ಎರಡನೆಯ ,, ೦—೨—೦

ಬಾಲಕರ ಮೊದಲನೆಯ ಪುಸ್ತಕ—ಚಿಕ್ಕವರಿಗೆ ಗ್ರಹಿಸುವದಕ್ಕೆ ಸುಲಭವಾಗಿಯೂ ಬುದ್ಧಿಪ್ರದವಾಗಿಯೂ ಓದುವುದರಲ್ಲಿ ಉಲ್ಲಾಸವನ್ನು ಹುಟ್ಟಿಸುವದಕ್ಕೆ ಬೇಕಾದ ಚಿತ್ರಪಟಗಳಿಂದ ರಂಜಿತವಾಗಿಯೂ ಇರುವ ಪುಸ್ತಕಗಳಿಂತಲೂ ಅತಿವಿರಳ. ಈಗ ನಾವು ಕಳಿಸುವ ಬಾಲಕರ ಮೊದಲನೆಯ ಪುಸ್ತಕದಲ್ಲಿ ಮೇಲ್ಕಂಡ ಅನುಕೂಲಗಳೆಲ್ಲಾ ಇವೆ. ೨೦ ವರುಷಗಳ ಅನುಭವಶಾಲಿಗಳಾದ ಉಪಾಧ್ಯಾಯರುಗಳಿಂದ ಬರೆಯಲ್ಪಟ್ಟಿರುವುದರಿಂದ ಇದರಲ್ಲಿ ಯಾವ ವಿಧವಾದ ನ್ಯೂನಾತಿರಿಕ್ತ ದೋಷಗಳಿಗೂ ಅವಕಾಶವಿರುವುದಿಲ್ಲ, ಮತ್ತು ನವೀನ ವಿದ್ಯಾಭ್ಯಾಸದ ಕ್ರಮಗಳಿಗೆ ಬೇಕಾದ ಸೌಲಭ್ಯಗಳನ್ನೆಲ್ಲಾ ಒಳಗೊಂಡಿರುತ್ತದೆ. ಬಾಲಕರಿಗೆ ಶುದ್ಧವಾದ ಮೊಸಗನ್ನಡವನ್ನು ಕಲಿಸುವುದಕ್ಕೆ ಇದು ಅತ್ಯಂತೋಪಯುಕ್ತವಾದ ಪುಸ್ತಕವು ಉಪಾಧ್ಯಾಯರೇ, ನೀವು ಇದನ್ನು ತರಿಸಿ ಓದಿನೋಡಿ ಆಗ ನಾವು ಹೇಳುವ ಮಾತು ನಿಜವೆಂಬುವದು ನಿಮಗೇ ಅನುಭವಕ್ಕೆ ಬರುವುದು. ಕ್ರಯ ೦—೨—೬.

ಭೂಗೋಳಶಾಸ್ತ್ರ ೧ ನೆಯ ಮತ್ತು ೨ನೆಯ ಭಾಗಗಳು— ಎರಡನೇ ಕ್ಲಾಸಿಗೆ ಉಪಯುಕ್ತವಾದದು. ಬಣ್ಣ ಹಚ್ಚಿದ ಮೈಸೂರು ಪಟ ಸಮೇತ ಕ್ರಯ ೦—೩—೦.

ಭೂಗೋಳಸಂಗ್ರಹ—ಆರನೇ ಮುದ್ರಣ—ಮೂರನೇ ಕ್ಲಾಸಿಗೆ ಉಪಯುಕ್ತವಾದದು. ಕ್ರಯ ೦—೩—೦.

ವಿಳಾಸ:—ಮ್ಯಾನೇಜರ್, ಸಿ. ಎಲ್ ಎಸ್. ಬುಕ್ ಡಿಪ್ಪೋ, ಮೈಸೂರು.

ಇಲ್ಲಿ ನೋಡಿ.

J 11

ತುಮಕೂರು ಮಿರ್ಜಾ ಇಲಾಖೆಯಲ್ಲಿ ಯಾರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ

ಕ್ರಯ—೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯ ವರೆಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಕೆಳಕಂಡ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ:—ಮ್ಯಾನೇಜರ್

ಹಾಸನದ ಟೋಪಿ ಕಾರ್ಖಾನೆ, ಮಿರ್ಜಾ ಇಲಾಖೆ, ತುಮಕೂರು.

ಮಹಾ ಬಾಧಾಪಹಾರಿಣಿಯು.

26-42

ಇದನ್ನು ಕೇಳುವದೇ ಪ್ರಪಂಚದಲ್ಲೇ ಇಲ್ಲವು ಕ್ಲೆಮೆಂಟ್‌ಯವರ ಯುಕ್ತಿಯಿಂ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು ಪತ್ರಕರು, ಕಾಫಿ ಪ್ಲಾಂಟರುಗಳು, ಈ ದೇಶದವರಾದ ಅನೇಕರು ಒಪ್ಪಿ ಕೊಳ್ಳುತ್ತಾರೆ. ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೆ ತಲೆನೋವು, ವಾಯುನೋವು, ಕಳಿತ, ಗಂಟುನೋವು, ಪಾರ್ಶ್ವವಾಯು, ನಾನಾವಿಧ ನಾಯುರೋಗಗಳು, ಕೀಲುರೋಗಗಳು, ಬೆನ್ನುನೋವು, ತೀಲುಗಳ ಸಂದುಕಟ್ಟುಗಳ ನೋವು, ಚೇಳುಕಚ್ಚಿದ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ಶೀತದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮಾಂಸಖಂಡವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಣಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಸಮಾನವಾದ ತೈಲವು ಬೇರೊಂದಿಲ್ಲವೆಂದು ಹೊಗಳುತ್ತಾರೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೩ ಆಣೆ ಅಬರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್ ಡಬ್ಲಿಯು ಆರ್

ಸಿಮೆಟ್ರಿರೋಡ್, ವೇಪೇರಿ, ಮದರಾಸ್

೧೮೭೩ ರಿಂದ ೧೯೦೩ ವರೆಗೆ

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 31-52

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರಲ್ಲಾ ಅನೇಕ ಸೇಕ ಪರಿಶೋಧನೆಮಾಡಿ, ಸರ್ವೋತ್ಕೃಷ್ಟವಾದದ್ದೆಂದು ಹೇಳಿರುತ್ತಾರೆ ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ:—

ಕ್ಷಯಕೋಶದ ಆಕ್ರಮಗಳು; ನಾನಾ ತರದ ಕೆಮ್ಮಲು.

ಸಕಲವಿಧ ಕೃಶ್ಯಗಳು, ಮಾಂಸಖಂಡಗಳ ಕ್ಷೀಣತೆ;

ಆಹಾರದಲ್ಲಿ ಅರುಚಿ ಇದ್ದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವೂ ಇದೇ

ಕೈಸೋಕದ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವದು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ವೃತ್ತಾಂತ ಪತ್ರಿಕೆ.

—:o:—

೧೮೯೮ ನೇ ಇಸವಿ ಮಾರ್ಚಿ ತಾ ೧೦ ನೇ ಗುರುವಾರ.

ಹೊಸ ಟ್ರಸ್ಟ್ ಬೋರ್ಡು.

ಮೈಸೂರು ಪಟ್ಟಣವನ್ನು ಅಭಿವೃದ್ಧಿ ಮಾಡುವದಕ್ಕೆ ಸರ್ಕಾರದವರು ಮಾಡಿರುವ ಹೊಸ ಏರ್ಪಾಡುಗಳು ಕಳೆದ ವಾರದಿಂದ ಜಾರಿಗೆ ತರಲ್ಪಟ್ಟಿವೆ. ಈ ಹೊಸ ಏರ್ಪಾಡಿನ ಪ್ರಕಾರ ಡೆಪ್ಯುಟಿ ಕಮಿಷನರ್ ಮೆ॥ ಕಾಂತರಾಜೇ ಅರಸಿನವರು ಟ್ರಸ್ಟ್ ಬೋರ್ಡಿನ ಪ್ರೆಸಿಡೆಂಟರಾಗಿರುತ್ತಾರೆ. ಅಭಿವೃದ್ಧಿಕಾರ್ಯಗಳನ್ನು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮೆ॥ ಹನುಮಂತರಾಯರಿಗೂ, ಟ್ರಸ್ಟ್ ಬೋರ್ಡಿನ ಎಗ್ಜಿಕ್ಯುಟಿವ್ ಇಂಜನಿಯರ್ ಮೆ॥ ಡಿಕ್ರೂಸ್‌ಯವರಿಗೂ ಹಂಚಿಕೊಟ್ಟಿದಾರೆ. ಮನೆಗಳಿಗೆ ಕ್ರಯಕಟ್ಟುವುದೂ, ಮಾಲೀಕರಿಗೆ ಹಣವಾವತಿಮಾಡುವುದೂ ವೈಸ್ ಪ್ರೆಸಿಡೆಂಟರ ಕೆಲಸ, ಕೊಂಡುಕೊಂಡಂಥಾ ಮನೆಗಳನ್ನು ಒಡಿಸಿ, ರಸ್ತೆಗಳನ್ನು ಹಾಸಿ, ಒಚ್ಚಲು ಚರಂಡಿಗಳನ್ನು ಕಟ್ಟಿಸುವದು ಮೆ॥ ಡಿಕ್ರೂಸ್‌ಯವರಿಗೆ ವಹಿಸಲ್ಪಟ್ಟಿದೆ. ಇಷ್ಟು ಅನುಕೂಲವಾಗಿಯೂ ತೃಪ್ತಿಕರವಾಗಿಯೂ ಕೆಲಸನಡಿಯುವಂತೆ ಏರ್ಪಾಡು ಮಾಡಿರುವ ವಿಷಯದಲ್ಲಿ ವಿರೋಧಾಭಿಪ್ರಾಯಗಳು ಹುಟ್ಟುವದನ್ನು ನೋಡಿ ವಿಷಾದಪಡಬೇಕಾಗಿದೆ. ಇಬ್ಬರು ಎಗ್ಜಿಕ್ಯುಟಿವ್ ಇಂಜನಿಯರುಗಳು ತೃಪ್ತಿಕರವಾಗಿ ಕೆಲಸ ಮಾಡುವದಕ್ಕೆ ಈ ಪ್ರಜಾಭಿವೃದ್ಧಿಕಾರ್ಯಗಳು ಅಷ್ಟು ಕಷ್ಟಕರವಾಗಿಲ್ಲವೆಂತಲೂ ಅಷ್ಟು ಹೆಚ್ಚಾಗಿಯೂ ಇಲ್ಲವೆಂತಲೂ ನಾವು ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದೇವೆ. ಇದ್ದದ್ದರಿಂದ ಸರ್ಕಾರದವರು ಮೆ॥ ಸೀತಾರಾಮರಾಯರನ್ನು ಬೇರೆ ಕೆಲಸಕ್ಕೆ ವರ್ಗಮಾಡಿ ಈ ಟ್ರಸ್ಟ್ ಬೋರ್ಡ್ ಆಫೀಸಿನ ಖರ್ಚನ್ನು ಕಡಮೆಮಾಡಿದ್ದು ಒಳ್ಳೇದೇ ಆಯಿತು.

ಈ ಪ್ರಜಾಭಿವೃದ್ಧಿಯ ಕಾರ್ಯಭಾರವನ್ನು ವಹಿಸಿರುವ ಹೊಸ ಅಧಿಕಾರಿಗಳು ತೃಪ್ತಿಕರವಾಗಿಯೂ ಚುರುಕಾಗಿಯೂ ಕೆಲಸಮಾಡುವರೆಂದು ನಿರೀಕ್ಷಿಸುತ್ತೇವೆ. ಈ ಟ್ರಸ್ಟ್ ಬೋರ್ಡಿನವರು ಇದುವರೆಗೆ ಮಾಡಿರುವ ಅಭಿವೃದ್ಧಿ ಕಾರ್ಯಗಳಲ್ಲೆಲ್ಲಾ ಒಂದು ದೊಡ್ಡ ಕೊರತೆಯು ಕಾಣಬರುತ್ತಲಿದೆ. ಪಟ್ಟಣದ ಹಲವು ಭಾಗಗಳಲ್ಲಿ ಅಭಿವೃದ್ಧಿಕೆಲಸಗಳು ನಡೆದಿರುವವು. ಆದರೆ ಒಂದು ಕಡೆಯೂ ಪೂರೈಸಿರುವಂತೆ ಕಾಣುವದಿಲ್ಲ. ಎಲ್ಲಾ ಕಡೆಗಳಲ್ಲೂ ಮನೆಗಳನ್ನು ಒಡೆದು ಹಾಕಿದಾರೆ. ಅಂಥಾ ಪ್ರದೇಶಗಳನ್ನು ಆರೋಗ್ಯಕರವಾದ ರೀತಿಯಲ್ಲಿ ಇಟ್ಟಿಲ್ಲ. ಮೋಟುಗೋಡೆಗಳೂ, ಹಳ್ಳಕೊಳ್ಳಗಳೂ, ಮಣ್ಣಿನ ಮತ್ತು ಕಸಕಡ್ಡಿಗಳ ರಾಶಿಗಳೂ ಹೇರಳವಾಗಿವೆ. ಆದಕಾರಣ ಟ್ರಸ್ಟ್ ಬೋರ್ಡಿನವರು ಇದುವರೆಗೆ ಅಭಿವೃದ್ಧಿಮಾಡಿದೆ ಎಂದು ಹೇಳುವ ಭಾಗಗಳನ್ನೆಲ್ಲಾ ಪ್ರಸ್ತಾವನೆ ಸಂಚಾರಮಾಡಿ ನೋಡಿ ಪ್ರತಿ ಒಂದನ್ನೂ ಕ್ರಮವಾಗಿಯೂ ಸಲಕ್ಷಣವಾಗಿಯೂ ಆರೋಗ್ಯಸೂತ್ರಗಳಿಗೆ ಅನುಸಾರವಾಗಿಯೂ ಮಾಡಿ ಮುಗಿಸಬೇಕೆಂದು ಸೂಚಿಸುತ್ತೇವೆ.

ಸತ್ಯವಂತನಾದ ವಕೀಲನು.

ವಾಚಕರಲ್ಲಿ ಅನೇಕರು ಅಮೆರಿಕ ದೇಶದ ವಿಷಯ ವಿವಿಧವಾದ ಸಂಗತಿಗಳನ್ನು ವರ್ತಮಾನ ಪತ್ರಿಕೆಗಳಲ್ಲಿ ಪದೇ ಪದೇ ಓದುವವರಾಗಿರುತ್ತಾರೆ. ಮೈಸೂರು ದೇಶದಿಂದ ಕೆಲವ ಯೌವನಸ್ಥರು ಅಲ್ಲಿಗೆ ಹೋಗಿ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ವಿದ್ಯೆಯನ್ನು ಕಲಿತುಕೊಂಡು ಬಂದದ್ದು ಕೆಲವರಿಗೆ ತಿಳಿದಿರಬಹುದು.

ಅಮೆರಿಕ ದೇಶವು ಬಹು ದೊಡ್ಡದು ಮತ್ತು ಪ್ರಸಿದ್ಧವಾದುದು. ಅದರಲ್ಲಿ ಅನೇಕ ಶ್ರೀಮಂತರು ವಾಸವಾಗಿದ್ದಾರೆ. ಅದರಲ್ಲಿನ ಜನರು ವಿದ್ಯಾವಂತರೂ ಕೈಗಾರಿಕೆ ಕೆಲಸಗಳಲ್ಲಿ ಪ್ರಸಿದ್ಧರೂ ಆಗಿರುವರೆಂಬುದು ಹೊಸ ಸಂಗತಿಯಲ್ಲ. ಕೆಲವು ವರುಷಗಳ ಹಿಂದೆ ಅಮೆರಿಕ ದೇಶದಲ್ಲಿ ಅಬ್ರಹಾಂ ಲಿಂಕನ್ ಎಂಬೊಬ್ಬ ಪ್ರಸಿದ್ಧಪುರುಷನು ವಾಸವಾಗಿದ್ದನು. ಇವನ ತಂದೆತಾಯಿಗಳು ಬಹಳ ಬಡವರಾಗಿದ್ದರು. ಅಬ್ರಹಾಮನು ಇನ್ನೂ ಹುಡುಗನಾಗಿರುವಾಗಲೇ ಕಾಡುಗಳಲ್ಲಿ ಮರಗಳನ್ನು ಕಡಿಯುವ ಕೆಲಸದಿಂದ ಜೀವಿಸುತ್ತಿದ್ದನು. ಒಂದೆರಡು ವರುಷಗಳಾದ ನಂತರ ಅವನು ಒಂದು ಗ್ರಾಮದಲ್ಲಿ ಒಂದು ಚಿಕ್ಕ ಅಂಗಡಿಯನ್ನಿಟ್ಟುಕೊಂಡು ಕಾಲಕ್ಷೇಪ ಮಾಡುತ್ತಿದ್ದನು. ತನ್ನ ಅಂಗಡಿಯ ಕೆಲಸದಲ್ಲಿ ಸ್ವಲ್ಪ ವಿರಾಮ ಸಿಕ್ಕಿದಾಗಲೆಲ್ಲಾ ಅವನು ಬಹು ಮಂದುವರ್ಗಿಯಿಂದ ಪುಸ್ತಕಗಳನ್ನು ಓದಿ ಜ್ಞಾನಸಂಪಾದನೆ ಮಾಡಿಕೊಳ್ಳುತ್ತಿದ್ದನು.

ಆತನಿಗೆ ನ್ಯಾಯಶಾಸ್ತ್ರವನ್ನು ಓದುವದರಲ್ಲಿ ಹೆಚ್ಚಾದ ಅಭಿರುಚಿಯುತ್ತು. ನ್ಯಾಯಶಾಸ್ತ್ರದಲ್ಲಿ ಇವನಿಗಿದ್ದ ಪರಿಚಿತಿಯನ್ನು ಆ ಗ್ರಾಮದ ಜನರು ತಿಳಿದು ತಮ್ಮ ವ್ಯಾಜ್ಯಗಳನ್ನು ಇವನಿಗೆ ಹೇಳಿ ಇವನ ಅಭಿಪ್ರಾಯವನ್ನು ಕೇಳುತ್ತಿದ್ದರು. ಅಬ್ರಹಾಮನು ಕೆಲವು ವರುಷಗಳಾದ ನಂತರ ಅಂಗಡಿಯನ್ನು ಬಿಟ್ಟು, ವಕೀಲನ ಕೆಲಸ ಮಾಡುವದಕ್ಕೆ ತೊಡಗಿದನು. ಕೊನೆಯಲ್ಲಿ ಇವನಿಗೆ ಒಂದು ಸರ್ಕಾರಿ ಕೆಲಸವು ದೊರೆಯಿತು. ಅವನು ಅಮೇರಿಕ ದೇಶದ ಪಾರ್ಲಿಮೆಂಟಿನಾ ಸಭೆಗೆ ಒಬ್ಬ ಮೆಂಬರಾದನು. ಇನ್ನೂ ಕೆಲವು ವರುಷಗಳಲ್ಲಿಯೇ ಅಮೇರಿಕ ದೇಶದವರು ಇವನ ಸಾಮರ್ಥ್ಯವನ್ನು ಮೆಚ್ಚಿ ಇವನನ್ನು ತಮ್ಮ ಪ್ರೆಸಿಡೆಂಟಾಗಿ ಚುನಾಯಿಸಿದರು.

ಅಮೇರಿಕ ದೇಶದ ಪ್ರೆಸಿಡೆಂಟ್ ಕೆಲಸವು ಚಕ್ರವರ್ತಿ ಪದವಿಗೆ ಸಮಾನವಾದದ್ದು. ಇಂಥಾ ಶ್ರೇಷ್ಠವಾದ ಪದವಿಗೆ ಅಬ್ರಹಾಮನು ಯೋಗ್ಯನಾಗಿದ್ದನು. ಇವನು ಪ್ರೆಸಿಡೆಂಟಾಗಿರುವಾಗ್ಗೆ ಅಮೇರಿಕ ದೇಶದ ಉತ್ತರ ಸಂಸ್ಥಾನದವರಿಗೂ ದಕ್ಷಿಣ ಸಂಸ್ಥಾನದವರಿಗೂ ಒಂದು ಘೋರವಾದ ಯುದ್ಧವು ಪ್ರಾರಂಭವಾಯಿತು. ಇಂಥಾ ಭಯಂಕರವಾದ ಸಂದರ್ಭದಲ್ಲಿ ಅಬ್ರಹಾಮನು ತನ್ನ ಸಾಮರ್ಥ್ಯವನ್ನು ವಿನಿಯೋಗಿಸಿ ತನ್ನ ದೇಶವು ಒಡೆದುಹೋಗದಂತೆ ಅದನ್ನು ಕಾಪಾಡಿದನು. ಇವನು ಯಾವಾಗಲೂ ಬಹು ಸತ್ಯವಂತನಾಗಿದ್ದನು. ಇವನೆಂದಿಗಾದರೂ ಲಂಚಕ್ಕೆ ಒಳಬಿದ್ದವನಲ್ಲ. ಇದನ್ನು ಅವನ ದೇಶಸ್ಥರು ಬಹು ಚೆನ್ನಾಗಿ ತಿಳಿದಿದ್ದರು. ದುಡ್ಡಿನಾಸೆಗೆ ಇವನೆಂದಿಗಾದರೂ ವ್ಯಾಜ್ಯಗಳನ್ನು ಹಿಡಿದು ವಾದಿಸುತ್ತಿರಲಿಲ್ಲ. ತನ್ನ ಹತ್ತಿರಕ್ಕೆ ಬಂದ ಕಕ್ಷಿಗಾರರನ್ನು ಚೆನ್ನಾಗಿ ವಿಚಾರಿಸಿ, ಅವರು ತಂದಿರುವ ವ್ಯಾಜ್ಯವು ನ್ಯಾಯವೆಂದು ಕಂಡುಬಂದರೇನೇ ಅಬ್ರಹಾಮನು ಅವರ ಪರವಾಗಿ ವಾದಿಸುತ್ತಿದ್ದನು. ಶಿಕ್ಷೆಗೆ ಪಾತ್ರರಾದ ಜನರ ಪಕ್ಷವನ್ನು ಅವನೆಂದಿಗಾದರೂ ವಹಿಸುತ್ತಿರಲಿಲ್ಲ. ಈ ರೀತಿಯಲ್ಲಿ ಇವನು ಮಾಡುತ್ತಿದ್ದ ಕೆಲಸಗಳಲ್ಲಿ ಸತ್ಯತೆಯನ್ನು ತೋರ್ಪಡಿಸಿದ್ದರಿಂದಲೇ ಉತ್ತಮ ಪದವಿಗೆ ಬಂದು, ಎಲ್ಲರಿಂದಲೂ ಸನ್ಮಾನಿಸಲ್ಪಟ್ಟನು. ಇವನಲ್ಲಿ ಗರ್ವವು ಲೇಶಮಾತ್ರವೂ ಇರಲಿಲ್ಲ. ಸಾಧಾರಣವಾದ ಮನುಷ್ಯನಂತೆ ಜೀವಿಸುತ್ತಿದ್ದನು. ನಾವೆಲ್ಲರೂ ಅಬ್ರಹಾಮನಂತೆ ಉನ್ನತ ಪದವಿಯನ್ನು ಅನುಭವಿಸದೇ ಇದ್ದರೂ ನಮ್ಮ ಪ್ರತಿ ದಿನದ ನಡತೆಯಲ್ಲಿ ಸತ್ಯವಂತರಾಗಿರಬಹುದಲ್ಲವೇ? ಅಬ್ರಹಾಮನು ಕ್ರೈಸ್ತಭಕ್ತನಾಗಿದ್ದನು. ತನ್ನ ಗುರುವಾದ ಯೇಸು ಕ್ರಿಸ್ತನ ಬೋಧನೆಯ ಪ್ರಕಾರ ನಡೆಯುವದೇ ಅವನ ಆಸೆಯಾಗಿತ್ತು. ಯೇಸುಕ್ರಿಸ್ತನು ಒಂದಾನೊಂದು ಸಮಯದಲ್ಲಿ ಈ ರೀತಿಯಾಗಿ ಬೋಧಿಸಿದನು:— “ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣ ನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಅಥವಾ, ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಟ್ಟಾನು?” “ಮನುಷ್ಯನಿಗೆ ಎಷ್ಟು ಆಸ್ತಿ ಇದ್ದರೂ ಅದು ಅವನಿಗೆ ಜೀವಾಧಾರವಾಗುವದಿಲ್ಲ.” “ಹೀಗಿರುವದರಿಂದ ನೀವು ದೇವರ ರಾಜ್ಯವನ್ನೂ ನೀತಿಯನ್ನೂ ಪಡಕೊಳ್ಳುವದಕ್ಕೆ ಮೊದಲು ಪ್ರಯತ್ನಿಸಿರಿ. ಇದರ ಕೂಡ ಅವೆಲ್ಲಾ ನಿಮಗೆ ದೊರಕುವವು.”

ಒಳದೇಶದ ವೃತ್ತಾಂತಗಳು.

ಚಾಮರಾಜನಗರದ ಚಾಮರಾಜೇಶ್ವರ ದೇವಸ್ಥಾನದೊಳಗೆ ಬಾರ್ಕಾವಿಲ್ದಾರ್ ಅಣ್ಣಾಜಿರಾಯರ ಬಾಬತು ಸುಮಾರು ೩೦೦ ರೂಪಾಯಿನ ನಗಗಳು ಕಳುವಾದವು. ಪತ್ತೆಮಾಡಿದವರಿಗೆ ೫೦ ರೂಪಾಯಿ ಬಹುಮಾನ ಕೊಡುವದಾಗಿ ಅವರು ತಿಳಿಸುತ್ತಾರೆ.

❖❖❖

ಶ್ರೀಮನ್ಮಹಾರಾಜರವರು ಬೇಸಿಗೆ ಕಳೆಯುವದಕ್ಕೆ ಯಾಗಾದಿ ಹಬ್ಬವಾದ ಮೇಲೆ ರಾಜಧಾನಿಯಿಂದ ನೀಲಗಿರಿಗೆ ಪಯಣಮಾಡುವವರಾಗಿದಾರೆಂದು ಕೇಳುತ್ತೇವೆ. ಶ್ರೀಮನ್ ಯುವರಾಜರವರು ಕಳೆದ ವಾರ ಬೆಂಗಳೂರಿನಿಂದ ನೆಟ್ಟಗೆ ನೀಲಗಿರಿಗೆ ಪ್ರಯಾಣಮಾಡಿದರು.

❖❖❖

ಪೆನ್ಷನ್ ಅಸಿಸ್ಟಂಟ್ ಕಮಿಷನರಾಗಿದ್ದ ಮೆ॥ ಎ. ರಾಘವೇಂದ್ರರಾಯರು ಆಚೇವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಸಂಸ್ಕೃತದಲ್ಲಿ ಪಾಂಡಿತ್ಯವಿದ್ದಿತು. ಮೈಸೂರು ಮಹಾರಾಜರ ಸಂಸ್ಕೃತ ಕಾಲೇಜಿನ ಮ್ಯಾನೇಜಿಂಗ್ ಕಮಿಟಿಯಲ್ಲಿ ಮೆಂಬರಾಗಿದ್ದರು.

❖❖❖

ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಲ್ ಮೆ॥ ಜೆ. ಕುಕ್‌ಯವರ ಹೆಸರನ್ನು ಶಾಶ್ವತಪಡಿಸಬೇಕೆಂದು ಒಂದು ಫಂಡು ಏರ್ಪಾಡಾಗಿ ಚಂದಾ ಕೂಡುತ್ತಿದೆಯಷ್ಟೆ. ಈ ಫಂಡಿಗೆ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮೆ॥ ಬಹಿರುದ್ದೀನ್ ಮೆಕ್ಕೆಯವರು ರೂ. ೧,೩೩೫—೮—೦ ಚಂದಾ ಎತ್ತಿದಾರೆಂದು ಕೇಳುತ್ತೇವೆ.

❖❖❖

ಕಳೆದ ಶುಕ್ರವಾರ ಸಾಯಂಕಾಲ ರಾಜಧಾನಿಯ ಮಿಷನ್ ಸ್ಕೂಲುಗಳ ಬಾಲಿಕೆಯರಿಗೆ ಇಲ್ಲಿನ ವಿಕ್ಟೋರಿಯಾ ಗರ್ಲ್ಸ್ ಸ್ಕೂಲಿನಲ್ಲಿ ಬಹುಮಾನಗಳು ಕೊಡಲ್ಪಟ್ಟವು. ಪೊಲೀಸ್ ಇನ್ಸ್ಪೆಕ್ಟರ್ ಜನರಲ್ ಮೆ॥ ಕಾರ್‌ಯವರ ಪತ್ನಿಯವರು ಅಗ್ರಾಸನವನ್ನು ವಹಿಸಿ, ಬಾಲಿಕೆಯರಿಗೆ ಬಹುಮಾನಗಳನ್ನು ಕೊಟ್ಟರು.

❖❖❖

ಮೈಸೂರು ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಛೇರ್ಮೆನ್ ಮೆ॥ ಬಿ. ಸೀತಾರಾಮರಾಯರು ಕಳೆದ ಶುಕ್ರವಾರ ಟ್ರಸ್ಟ್ ಬೋರ್ಡಿನ ಛಾರ್ಜನ್ನು ಡೆಪ್ಯುಟಿ ಕಮಿಷನರ್ ಮೆ॥ ಎಂ. ಕಾಂತರಾಜೇ ಅರಸಿನವರಿಗೆ ವಹಿಸಿರುತ್ತಾರೆ. ಆ ಲಾಗಾಯಿತು ಟ್ರಸ್ಟ್ ಬೋರ್ಡಿನ ಆಫೀಸು ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದಲ್ಲಿ ನಡಿಯುತ್ತಿದೆ.

❖❖❖

ವಿಲಾಯತಿಗೆ ಸೇರಿದ ಆಕ್ಸ್‌ಫರ್ಡ್ ವಿದ್ಯಾನಿಲಯದ ಮೆ॥ ಎಫ್. ಲೀವರ್ಡ್, ಎಂ. ಎ. ಯವರು ಬೆಂಗಳೂರಿಗೆ ಬಂದಿರುತ್ತಾರೆ. ಇವರು ಅಲ್ಲಿನ ಲಂಡನ್ ಮಿಷನ್ ಹೈ ಸ್ಕೂಲಿನಲ್ಲಿ ಈ ದಿನ ಸಾಯಂಕಾಲವೂ ನಾಳೆ, ನಾಡಿದ್ದು ಮತ್ತು ಭಾನುವಾರ ಸಾಯಂಕಾಲವೂ ೬॥ ಗಂಟೆಗೆ ಉಪನ್ಯಾಸ ಮಾಡುವರು. ಬೆಂಗಳೂರು ವಿದ್ಯಾವಂತರು ಹೋಗಿ ಕೇಳಿ, ಆ ಉಪನ್ಯಾಸಗಳಿಂದ ಪ್ರಯೋಜನ ಪಡೆಯುವರೆಂದು ನಿರೀಕ್ಷಿಸುತ್ತೇವೆ.

❖❖❖

ಗೌರಿಬಿದನೂರು ತಾಲ್ಲೂಕು ಮಸಾಜೇನಹಳ್ಳಿ ಸಮ್ಮತು ಗೌಡಿಗೆರೆ ಗ್ರಾಮದಲ್ಲಿ ತಿಂಗಳಿಂದ ಇಲಿಗಳು ಸಾಯುತ್ತಿದ್ದು, ಸುಬ್ಬಣ್ಣನವರ ಮನೆಯಲ್ಲಿ ಪ್ಲೇಗ್ ಕಾಣಿಸಿಕೊಂಡು, ಒಬ್ಬ ಹುಡುಗನು ಸತ್ತು ಎರಡು ದಿನ ದಿಕ್ಕಿಲ್ಲದೆ ಬಿದ್ದಿದ್ದನು. ಎಂಟು ದಿನಗಳಿಗೆ ೮ ಜನರು ಸತ್ತರು. ಪಂಡಿತರು ಬಂದು ಶವವನ್ನು ಸಾಗಿಸಿದರು. ಪಟೇಲ್ ಶಾನುಭೋಗರು ಗ್ರಾಮದ ಯೋಗಕ್ಷೇಮವನ್ನು ತಕ್ಕಹಾಗೆ ನೋಡಿಕೊಳ್ಳುತ್ತಾ ಇಲ್ಲ. ಇನ್ನೂ ೩ ಜನರು ಕಾಯಿಲೆಯಾಗಿದಾರೆ ಎಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ದಿವಾನ್ ಮೆ॥ ವಿ. ಪಿ. ಮಾಧವರಾಯರೂ, ರೆವಿನ್ಯೂ ಕಮಿಷನರ್ ಮೆ॥ ಎ. ರಂಗಸ್ವಾಮಿಯಂಗಾರರೂ ಇವರ ಪಾರ್ಟಿ ಕಿಟ್ಟಂಡಿಯೊಡನೆ ಕಳೆದ ಭಾನುವಾರ ರಾಜಧಾನಿಗೆ ದಯಮಾಡಿಸಿದರು. ಇವರೂ ಮೆ॥ ಗಳಾದ ಸೀತಾರಾಮರಾಯರು, ಅರಮನೆ ಇಂಜನಿಯರ್ ಮೆ॥ ಬಿ. ಪಿ. ರಾಘವಲುನಾಯ್ಡುಯವರು, ವೈಸ್ ಪ್ರೆಸಿಡೆಂಟ್ ಮೆ॥ ಜೆ. ಹನುಮಂತರಾಯರು, ಅಸಿಸ್ಟಂಟ್ ಕಮಿಷನರ್ ಮೆ॥ ಟಿ. ಕೆ. ಸುಂದರರಾಜೈಯಂಗಾರರೊಡನೆ ಸೋಮವಾರ ಬೆಳಿಗ್ಗೆ ಅರಮನೆಗೆ ಬಂದು ಇಲ್ಲಿಂದ ಪ್ಯಾರಿಸ್ ಸರ್ವವಸ್ತುಪ್ರದರ್ಶನಶಾಲೆಗೆ ಕಳುಹಿಸಬೇಕಾದ ನಾನಾ ನವೀನ ವಸ್ತುಗಳನ್ನು ಆರಿಸಿದರು.

❖❖❖

ಬೆಂಗಳೂರು ಪಟ್ಟಣದಲ್ಲೂ ದಂಡಿನಲ್ಲೂ ಕೊಲೆಗಳನ್ನು ನಡಿಸಿರುವ ಅಪರಾಧಿಗಳನ್ನು ಇನ್ನೂ ದರ್ಯಾಪ್ತು ಮಾಡುತ್ತಿದಾರೆ. ಮೊಕದ್ದಮೆಗಳೆಲ್ಲಾ ವಿಚಾರಣೆಯಾದ ಮೇಲೆ ಕಡೆಯಲ್ಲಿ ಸೆಷನ್ಸ್ ಜಡ್ಜರು ತೀರ್ಮಾನ ಹೇಳುವದಾಗಿ ಕಾಣುತ್ತದೆ. ಅಪರಾಧಿಗಳು ತಮ್ಮ ಕೃತ್ಯಗಳಿಗೆ ಕೆಲವು ಪೋಲೀಸಿನವರನ್ನೂ ಒಳಹಾಕಿಕೊಂಡಿದ್ದರೆಂದು ಹೇಳಿ ಬರೆಸಿದಾರೆ. ಅಲ್ಲದೆ ಬೆಂಗಳೂರಿನಲ್ಲಿ ಕೆಲವು ಸ್ತ್ರೀಯರು ಸೇರಿ ಹೆಣ್ಣು ಮಕ್ಕಳನ್ನು ಮೋಸಪಡಿಸಿ ಅಪಹರಿಸಿಕೊಂಡು ಹೋಗಿ ಕೊಲ್ಲುತ್ತಲೋ, ಇಲ್ಲವೇ ದುರ್ವ್ಯಾಪಾರಿಗಳಿಗೆ ವಿಕರಿ ಮಾಡುತ್ತಲೋ ಬಂದಿದಾರೆಂದೂ, ಈಗ ಈ ದುಷ್ಟ ಸ್ತ್ರೀಯರು ಸಿಕ್ಕಿಬಿದ್ದು, ಪೋಲೀಸಿನವರ ವಶದಲ್ಲಿರುತ್ತಾರೆಂದೂ ತಿಳಿದುಬಂದಿದೆ.

❖❖❖

ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಕಾಫಿ ವ್ಯವಸಾಯವನ್ನು ಅಭಿವೃದ್ಧಿಗೆ ತರಬೇಕೆಂದು ಗವರ್ನಮೆಂಟಿನವರು ಫಾರೆಸ್ಟ್ ಕನ್ಸರ್ವೇಟರ್ ಮೆ॥ ಮುತ್ತಣ್ಣನವರ ವಶಕ್ಕೆ ೧,೦೦೦ ರೂಪಾಯಿ ಕೊಡುವಂತೆ ಸ್ಯಾಂಕ್ಷನ್ ಮಾಡಿದಾರೆ. ಪ್ರತಿ ಒಬ್ಬ ವ್ಯವಸಾಯಗಾರನಿಗೂ ಮೆ॥ ಮುತ್ತಣ್ಣನವರು ಮೊದಲು ಒಂದು ಜೊತೆ ಎತ್ತನ್ನೂ ೫೦ ರೂಪಾಯಿನ ಬಿತ್ತನೆ ಬೀಜವನ್ನೂ ಮುಫತ್ತಾಗಿ ಕೊಡುವರು. ಆ ಜಮೀನಿಗಾಗಿ ಮೂರು ವರುಷ ಕಂದಾಯ ವಸೂಲ್ಮಾಡುವದಿಲ್ಲ. ಇದಲ್ಲದೆ ಸಾಗರ, ನಗರ ತಾಲ್ಲೂಕುಗಳ ಘಾಟಿಗಳ ಹುಲ್ಲುಬನ್ನಿಯನ್ನು ಮಾಫ್‌ಮಾಡಿದಾರೆ. ರೈತರಿಗೆ ಮನೆ ಕಟ್ಟಿಕೊಳ್ಳುವದಕ್ಕೂ ಬಿದಿರು ಸಾಮಾನಿಗೂ ಕಾಡಿನಿಂದ ಮಾಫಿಯಾಗಿ ಮರಮುಟ್ಟು ಕೊಡಬೇಕೆಂದೂ ಹುಕುಂ ಆಗಿದೆ.

❖❖❖

ರಾಜಧಾನಿಯಲ್ಲಿ ಅನಾಥ ಬಾಲಿಕಾಶ್ರಮವೊಂದು ಸ್ಥಾಪನೆಯಾಗಿ ಒಂದು ವರುಷವಾಯಿತು. ವಾರ್ಷಿಕೋತ್ಸವವನ್ನು ಕಳೆದ ವಾರ ಮಾಡಿದರು. ಸದ್ಯ ೧೨ ಮಂದಿ ವಿದ್ಯಾರ್ಥಿನಿಯರು ಇರುತ್ತಾರೆ. ಈ ಆಶ್ರಮವು ಮುಖ್ಯವಾಗಿ ವಿಧವೆಯರಿಗೆಂದು ಉದ್ದೇಶ ಮಾಡಲ್ಪಟ್ಟದ್ದರೂ ವಿವಾಹಿತರಾದ ಕನ್ಯೆಯರನ್ನೂ ಸೇರಿಸಿಕೊಳ್ಳುವದಕ್ಕೆ ಅವಕಾಶ ಮಾಡಿದಾರೆ. ಅಲ್ಲಿನ ಕ್ರಮವೇನೆಂದರೆ—ವಿದ್ಯಾರ್ಥಿನಿಯರು ಹಾಸಿಗೆಯಿಂದೆದ್ದು ದೇವರ ನಾಮವನ್ನು ಹೇಳಿ, ಮನೆಕೆಲಸಗಳನ್ನು ಮಾಡಿ, ಸ್ನಾನವಾದ ಮೇಲೆ ಭಗವದ್ಗೀತಾದಿ ಗ್ರಂಥಗಳನ್ನು ಓದಿ, ಮಧ್ಯಾಹ್ನ ವಿದ್ಯಾಭ್ಯಾಸ ಮಾಡುವರು. ರಾತ್ರಿ ಓದುತ್ತಿದ್ದು ಮಲಗುವದಕ್ಕೆ ಮೊದಲು ದೇವರ ನಾಮವನ್ನು ಹೇಳುವರು. ಈ ಬಾಲಿಕಾಶ್ರಮಕ್ಕೆ ಶ್ರೀಮತಿ ಎಸ್. ರಂಗಮ್ಮನವರು ಕಾರ್ಯದರ್ಶಿಗಳಾಗಿ, ಆಶ್ರಮದ ಕಾರ್ಯಗಳನ್ನು ನಿರ್ವಹಿಸುತ್ತಿದಾರೆ.

ಮೈಸೂರು ಗೆಜೆಟ್ ಸಂಗ್ರಹ.

೧೮೯೬ ನೆ ಮಾರ್ಚಿ ೨೮ ನೆ ತಾರೀಖು ಇಸ್ತಿಹಾರ್‌ನಾಮೆಯ ಪ್ರಕಾರ ಮೆ॥ ಟಿ. ಆನಂದರಾಯರನ್ನು ೧ ನೇ ಕೌನ್ಸಲರಾಗಿಯೂ, ಮೆ॥ ಕೆ. ಕೃಷ್ಣಣ್ಣಚೆಟ್ಟಿಯವರನ್ನು ೨ ನೆ ಕೌನ್ಸಲರಾಗಿಯೂ ಎರಡು ವರುಷದ ತನಕ ನೇಮಕ ಮಾಡಿತಷ್ಟೆ. ಈಗ ಈ ತಿಂಗಳ ೨೮ಕ್ಕೆ ಅವರ ಅಧಿಕಾರದ ಅವಧಿಯು ಪೂರೈಸುತ್ತದ್ದರಿಂದ ಶ್ರೀಮನ್ಮಹಾರಾಜರವರು ಅವರಿಬ್ಬರ ಅಧಿಕಾರಾವಧಿಯನ್ನು ಇನ್ನು ಮುಂದಕ್ಕೆ ನಡಿಯುವಂತೆ ಸ್ಯಾಂಕ್ಷನ್ ಮಾಡಿರುತ್ತಾರೆ.

ಮತ್ತೊಂದು ಹುಕುಂ ಕೊಡಲ್ಪಡುವತನಕ ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಆಫೀಸನ್ನು ಬೆಂಗಳೂರಿನಲ್ಲಿ ನಡಿಸತಕ್ಕದ್ದು.

ಅ॥ ಸರ್ಜನ್ ಮೆ॥ ಬಿ. ಡಿ. ರಾಘವೇಂದ್ರರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಕೆ. ಮುತ್ತಯ್ಯನವರಿಗೆ ಏಪ್ರಿಲ್ ೧ರಿಂದ ಅಥವಾ ಆ ತರುವಾಯ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು ಮೆ॥ ಮುತ್ತಯ್ಯನವರ ಕೆಲಸಗಳ ಛಾರ್ಜನ್ನೂ ವಹಿಸಿರತಕ್ಕದ್ದು.

ಆಕ್ಟಿಂಗ್ ಅಮಲ್ದಾರ್ ಮತ್ತು ೨ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಮೆ॥ ಮಹಮದ್ ಪೀರ್‌ಯವರು ಯಳಂದೂರು ಜಹಗೀರಿಯ ಅಮಲ್ದಾರರಾಗಿ ನೇಮಿಸಲ್ಪಟ್ಟಿದಾರೆ. ಅಮಲ್ದಾರ್ ಮೆ॥ ವಿ. ಕೃಷ್ಣರಾಯರು ಪೆನ್ಷನ್ ಮೇಲೆ ಕೆಲಸ ಬಿಟ್ಟಿರುವರು.

ಮುಂದೆ ಹೇಳುವ ಅಮಲ್ದಾರುಗಳ ವರ್ಗಾವರ್ಗಿ ಹುಕುಂ ಮಾಡಿದೆ.— (೧) ಅಮಲ್ದಾರ್ ಮೆ॥ ಎಂ. ಎಸ್. ಕೃಷ್ಣಣ್ಣನವರನ್ನು ಪಾವಗಡದಿಂದ ಹೊಸದುರ್ಗ ತಾಲ್ಲೂಕಿಗೆ; ಅಮಲ್ದಾರ್ ಮೆ॥ ಸಿ. ಆರ್. ನಾರಾಯಣಸ್ವಾಮಿ ಮೊದಲಿಯಾರ್‌ರನ್ನು ಹೊಸದುರ್ಗದಿಂದ ದಾವಣಗೆರೆ ತಾಲ್ಲೂಕಿಗೆ, ನೆಲಮಂಗಲದ ತಾಲ್ಲೂಕ್ ಶಿರಸ್ತೇದಾರ್ ಸಿ. ಕಾಶೀನಾಥರಾಯರು ಮುಳಬಾಗಲ್ ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸತಕ್ಕದ್ದು.

ಹಾಸನ ಡಿವಿಜನ್ ಸಬ್ ಅ॥ ಇಂಜನಿಯರ್ ಮೆ॥ ಎಸ್. ವೆಂಕಟಸುಬ್ಬಶೆಟ್ಟರಿಗೆ ಮಾರ್ಚಿ ೩ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಪಂಜಾಬಿನಿಂದ ಲಾಲಾ ಲಾಜಪತ್ ರಾಯಿಯವರು ಕಳೆದ ವಾರ ಕಲ್ಕತ್ತೆಗೆ ಹೋಗಿ, ಕ್ಷಾಮನಿವಾರಣೆಯ ಧರ್ಮದ ಫಂಡಿಗೆ ಚಂದಾ ಕೂಡಿಸುತ್ತಲೂ, ಅದಕ್ಕಾಗಿ ಉಪನ್ಯಾಸಗಳನ್ನು ಮಾಡುತ್ತಲೂ ಬಂದಿದ್ದಾರೆ.

***

ಕಲ್ಕತ್ತಾ ಪಟ್ಟಣದ ಸರ್ಕ್ಯುಲರ್ ರೋಡ್ ಎಂಬ ಬೀದಿಯಲ್ಲಿರುವ ಬಾಬು ಮಹಾನಂದದಾಸ್ ಎಂಬ ಸಾಹುಕಾರನ ಹಿಟ್ಟುತಯಾರಿ ಕಾರ್ಖಾನೆಗೆ ಬೆಂಕಿಬಿದ್ದು, ಎರಡು ಲಕ್ಷ ರೂಪಾಯಿನ ಸರಕುಗಳು ನಷ್ಟವಾದವು.

***

ಇಂಡಿಯಾ ಗವರ್ನಮೆಂಟಿನವರು ಜಕ್ಕಾಖೇಲ್ ಎಂಬ ಜನರ ಮೇಲೆ ದಂಡೆತ್ತಿ ಯುದ್ಧಮಾಡಿದ್ದು ಪೂರೈಸಿದರಷ್ಟೆ. ಈ ಯುದ್ಧ ಕಾರ್ಯಕ್ಕೆ ಗವರ್ನಮೆಂಟಿನವರು ಸುಮಾರು ೧೩ ಲಕ್ಷ ರೂಪಾಯಿ ಖರ್ಚುಮಾಡಿದಂತೆ ಪ್ರಕಟವಾಗಿದೆ.

***

ಈ ತಿಂಗಳ ೨೩ನೆ ತಾ. ಶುಕ್ರವಾರ ರಟ್ಲಾಂ ನಗರದಲ್ಲಿ ನಡೆಯುವ ಜೈನಮಹಾಸಭೆಗೆ ಅಹಮದಾಬಾದಿನ ಭಾರಿಕಾರ್ಖಾನೆಯ ಯಜಮಾನರಾದ ಮಿ॥ ಸೇಠ್ ಕೇವಲ್‌ದಾಸ್ ತ್ರಿಭುವನದಾಸ್‌ಯವರು ಪ್ರೆಸಿಡೆಂಟರಾಗಿ ನಿಂತು ಸಮಾಜವನ್ನು ಜರುಗಿಸುವುದಾಗಿ ಒಪ್ಪಿಕೊಂಡಿದ್ದಾರೆ.

***

ನೇಪಾಳ ಸಂಸ್ಥಾನದ ಮಂತ್ರಿಶ್ರೇಷ್ಠರು ಮುಂದಿನ ತಿಂಗಳಲ್ಲಿ ವಿಲಾಯತಿಗೆ ಪ್ರಯಾಣ ಮಾಡುವವರಾಗಿದ್ದಾರೆ. ಅವರ ಸಂಗಡ ಆ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟ್ ಮೇಜರ್ ಮ್ಯಾನರ್ಸ್ ಸ್ಮಿತ್‌ಯವರೂ, ಲೆಫ್ಟಿನೆಂಟ್ ವೈಲಿಯವರೂ, ಒಬ್ಬ ಸುಬೇದಾರ್ ಮೇಜರೂ ಹೋಗುವರು.

***

ಐದು ವರುಷಗಳಿಂದ ಸಂಡೂರು ಸಂಸ್ಥಾನದಲ್ಲಿ ದಿವಾನರಾಗಿರುವ ಮಿ॥ ಟಿ. ಕೋದಂಡರಾಮ ಅಯ್ಯರವರು ಇನ್ನು ಕೆಲವು ದಿನಗಳೊಳಗಾಗಿ ಪೆನ್ಶನ್‌ಪಡೆದು ಕೆಲಸ ಬಿಡುವವರಾಗಿದ್ದಾರೆ. ಈಗ ಬಳ್ಳಾರಿಯಲ್ಲಿ ತಹಶೀಲ್ದಾರರಾಗಿರುವ ಮಿ॥ ನಾರಾಯಣಶೆಟ್ಟರು ಆ ಸಂಸ್ಥಾನದ ದಿವಾನರಾಗಿ ನೇಮಿಸಲ್ಪಡುವರು.

***

ಲಾಹೋರಿನಲ್ಲಿ ದಂಗೆ ಎಬ್ಬಿಸಬೇಕೆಂದು ಪ್ರಯತ್ನಪಟ್ಟಂತೆ ಆರು ಜನರನ್ನು ಸರ್ಕಾರದವರು ಹಿಡಿದು ಜಪ್ತಿ ಮಾಡಿದರಷ್ಟೆ. ಈ ಪೈಕಿ ರಾವಲ್‌ಪಿಂಡಿನಗರದ ಬ್ಯಾರಿಸ್ಟರ್ ಮಿ॥ ಗುರುದಾಸರಾಂ ಎಂಬ ದೊಡ್ಡಮನುಷ್ಯನು ಟಾಂಗಾದಲ್ಲಿ ಪ್ರಯಾಣ ಮಾಡುತ್ತಿದ್ದಾಗ ಗಾಡಿಯಿಂದ ಕೆಳಕ್ಕೆ ಬಿದ್ದು ಮೃತಪಟ್ಟನೆಂದು ತಿಳಿದುಬಂದಿದೆ.

***

ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವು ಈಗೀಗ ಹೆಚ್ಚುತ್ತಾ ಬಂದಿದೆ. ಕಳೆದ ವಾರ ಈ ಉಪದ್ರದಲ್ಲಿ ಮೃತಪಟ್ಟವರು ಒಟ್ಟು ೯,೬೬೦ ಜನರೆಂದು ತಿಳಿಯುವುದು. ಆ ಪೈಕಿ ಬೊಂಬಾಯಿ ಆಧಿಪತ್ಯದಲ್ಲಿ ೧,೯೯೭, ಪಂಜಾಬಿನಲ್ಲಿ ೧,೨೯೧, ಸಂಯುಕ್ತ ಆಧಿಪತ್ಯಗಳಲ್ಲಿ ೧,೯೯೩, ಬಂಗಾಳದಲ್ಲಿ ೮೬೩, ಈ ರೀತಿ ಮರಣಗಳಾಗಿವೆ.

***

ಬಂಗಾಳಾ ಆಧಿಪತ್ಯದಲ್ಲಿ ವಿಧವೆಗಳಿಗೆ ಪುನರ್ವಿವಾಹವಾಗಬೇಕೆಂಬ ಕುತೂಹಲವು ಈಗೀಗ ಹೆಚ್ಚುತ್ತಿರುವಂತೆ ಕಾಣುವುದು. ಕಳೆದ ವಾರ ಕಲ್ಕತ್ತಾ ಪಟ್ಟಣದ ರಿಪ್ಪನ್ ಕಾಲೇಜ್ ಎಂಬ ವಿದ್ಯಾಶಾಲೆಯಲ್ಲಿ ಒಂದು ದೊಡ್ಡ ಸಭೆ ನಡೆಯಿತು. ಮಿ॥ ಸುರೇಂದ್ರನಾಥ ಬ್ಯಾನರ್ಜಿಯವರೇ ಮೊದಲಾದ ಬಹುಜನ ದೇಶಬಾಂಧವರು ವಿಧವಾ ಪುನರ್ವಿವಾಹವನ್ನು ರೂಢಿಗೆ ತರಬೇಕೆಂದು ಪ್ರೋತ್ಸಾಹಕರವಾದ ಉಪನ್ಯಾಸಗಳನ್ನು ಮಾಡಿದರು.

***

ಕಲ್ಕತ್ತಾ ಪಟ್ಟಣದ ಕಂಕಿನಾರಾ ಎಂಬ ನಾರಿನ ಕಾರ್ಖಾನೆಯಲ್ಲಿ ಯಜಮಾನರಿಗೂ ಕೂಲಿಕಾರರಿಗೂ ವಿರೋಧ ಹುಟ್ಟಿ, ಕಳೆದ ವಾರ ಕೂಲಿಕಾರರು ಗುಂಪುಕಟ್ಟಿಕೊಂಡು ಹೋಗಿ ಆ ಕಾರ್ಖಾನೆಯೊಳಕ್ಕೆ ನುಗ್ಗಿ ಹಾವಳಿ ನಡಿಸಬೇಕೆಂದು ಪ್ರಯತ್ನಪಟ್ಟರು. ಯಜಮಾನರು ಈ ಗುಂಪಿನ ಮೇಲೆ ಗುಂಡುಹೊಡೆದು, ಅವರಲ್ಲಿ ಮೂರು ಮಂದಿಯನ್ನು ಮಲಗಿಸಿಬಿಟ್ಟರು. ಅಷ್ಟರಲ್ಲೇ ಪೋಲೀಸಿನವರು ಹಾಜರಾಗಿ ದೊಂಬಿಯನ್ನೆಲ್ಲಾ ಚದರಿಸಿದರು.

***

ಉತ್ತರ ದೇಶದ ಕೆಲವು ಭಾಗಗಳಲ್ಲಿ ಹೋದವಾರ ಆಹಾರ ಜಿನಸಿಗಳ ಧಾರಣೆಯು ಸ್ವಲ್ಪಮಟ್ಟಿಗೆ ಇಳಿಯಿತು. ಆದರೂ ಕ್ಷಾಮದ ಬಾಧೆಯು ಮೊದಲಿದ್ದಂತೆ ಒಂದೇ ಸ್ಥಿತಿಯಲ್ಲಿದೆ. ಜನರು ಗೋವುಗಳನ್ನು ಬಹಳವಾಗಿ ಸಂತೆಗಳಿಗೆ ತಂದು ವಿಕ್ರಯಮಾಡುತ್ತಿದ್ದಾರೆ. ಕ್ಷಾಮಪೀಡಿತರ ಸಂಖ್ಯೆಯು ಹೆಚ್ಚುತ್ತಿರುವುದು. ಸಂಯುಕ್ತ ಆಧಿಪತ್ಯಗಳಲ್ಲಿ ೧ ಲಕ್ಷವೂ ೨೦ ಸಾವಿರ ಜನರೂ, ಮಧ್ಯ ಇಂಡಿಯಾದ ಸಂಸ್ಥಾನಗಳಲ್ಲಿ ೧ ಲಕ್ಷವೂ ೫೦ ಸಾವಿರ ಜನರೂ ಸರ್ಕಾರದವರ ಪೋಷಣೆಯಲ್ಲಿರುವರು. ಇತರ ಕಡೆಗಳಲ್ಲೂ ಕ್ಷಾಮಪೀಡಿತರು ಹೆಚ್ಚುತ್ತಿದ್ದಾರೆ.

***

ಬಾಬು ಸರತ್ ಚಂದ್ರದಾಸ್ ಎಂಬಾತನು ಬಂಗಾಳಾದಿಂದ ಟಿಬೆಟ್ಟಿಗೆ ಹೋಗಿ ಆ ಜನರ ಭಾಷೆಯನ್ನು ಕಲಿತು ಅಲ್ಲಿನ ಅನೇಕ ವಿಷಯಗಳನ್ನು ತಿಳಿದುಬಂದು ಒಂದು ಪುಸ್ತಕವನ್ನು ಬರೆದು ಇಂಡಿಯಾ ಗವರ್ನಮೆಂಟಿಗೆ ಒಪ್ಪಿಸಿದನು. ಈತನಿಗೆ ಇಂಡಿಯಾ ಗವರ್ನಮೆಂಟಿನಿಂದ ೧೫೦ ರೂಪಾಯಿ ಪೆನ್ಶನ್ ಸಲ್ಲುತ್ತಿದೆ. ಈಗ ಈ ಬಂಗಾಳಿ ಬಾಬುವು ತನಗೆ ೩೦೦ ರೂಪಾಯಿ ಪೆನ್ಶನ್ ಕೊಡುವಂತೆ ಕರಾರು ನಡೆದಿತ್ತೆಂತಲೂ, ಆ ರೀತಿ ಕೊಡಿಸಬೇಕೆಂತಲೂ ಕಲ್ಕತ್ತೆಯ ಹೈಕೋರ್ಟಿನಲ್ಲಿ ಗವರ್ನಮೆಂಟಿನಮೇಲೆ ದಾವಾ ತಂದಿರುತ್ತಾನೆ.

***

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಗೋರಖ್‌ಪುರದ ಡಿಸ್ಟ್ರಿಕ್ಟಿನಲ್ಲಿ ಒಂದು ಗುಂಪಿನ ಕಳ್ಳರು ಸೇರಿಕೊಂಡು ಕಳೆದ ಇಪ್ಪತ್ತೈದು ವರ್ಷಗಳಿಂದಲೂ ನಾನಾ ದರೋಡೆ ಕಳ್ಳತನಗಳನ್ನು ನಡಿಸಿ, ಪ್ರಜಾಕಂಟಕರಾಗಿದ್ದರು. ಈ ಗುಂಪಿನ ಪೈಕಿ ಪೋಲೀಸಿನವರು ೩೦ ಮಂದಿಯನ್ನು ಹಿಡಿದು, ಅವರ ಮೇಲೆ ಮೊಕದ್ದಮೆ ಮಾಡಿದರು. ಗೋರಖ್‌ಪುರದ ಸೆಷನ್ಸ್ ಜಡ್ಜರಾದ ಲಷ್‌ವರ್ತ್ ಯವರು ಅಪರಾಧಿಗಳನ್ನು ದರ್ಯಾಪ್ತುಮಾಡಿ, ಅವರಿಗೆಲ್ಲಾ ಏಳು ವರುಷದ ಲಾಗಾಯಿತು ಟಾಪು ಸಜಾವರೆಗೆ ಬೇರೆ ಬೇರೆ ಅವಧಿಗಳ ಕಠಿಣ ಸಜವನ್ನು ವಿಧಿಸಿರುತ್ತಾರೆ.

***

ಬರೋಡಾ ಪಟ್ಟಣದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಜನರು ಸುಲಭವಾಗಿ ಹೋಗಿಬರುವುದಕ್ಕೆ ಕಂಬಿಗಳಮೇಲೆ ಕುದುರೆಗಳಿಂದ ಎಳೆಯಲ್ಪಡುವಂಥಾ ಟ್ರಾಂ ಎಂಬ ಗಾಡಿಗಳನ್ನು ಇಡಬೇಕೆಂದು ಒಂದು ಕಂಪನಿ ಏರ್ಪಾಡಾಗಿದೆ. ಇದಕ್ಕೆ ಮಹಾರಾಜರವರು ಅನೇಕ ಸೌಲಭ್ಯಗಳನ್ನು ಕಂಪನಿಯವರಿಗೆ ಒದಗಿಸಿಕೊಟ್ಟಿದ್ದಾರೆ. ಕಂಪನಿಯವರು ಈಗ ಒಂದು ಲಕ್ಷ ರೂಪಾಯಿನ ಪತ್ರಗಳನ್ನು ವಿಕ್ರಯ ಮಾಡಿ, ಮೂಲಧನವನ್ನು ಕೂಡಿಸಬೇಕೆಂದು ಇಶ್ತಿಹಾರು ಹಾಕಿಸಿರುತ್ತಾರೆ.

***

ಕಲ್ಕತ್ತೆಯಲ್ಲಿ ಇಬ್ಬರು ದೇಶೀಯ ಮ್ಯಾಜಿಸ್ಟ್ರೇಟರು, ಗಾಡಿಯಲ್ಲಿ ಕುಳಿತು ಕೋರ್ಟಿನಿಂದ ಮನೆಗೆ ಹೋಗುತ್ತಿದ್ದಾಗ ನೈಟ್ರಿಕ್ ಆಸಿಡ್ ಎಂಬ ದ್ರಾವಕವನ್ನು ಒಂದು ತಿರುವಿನ ಮೂಲೆಯಲ್ಲಿ ಯಾರೋ ನಿಂತು ಅವರಮೇಲೆ ಎರಚಿದರೆಂತಲೂ, ಅವರಿಬ್ಬರೂ ಅದರ ಉರಿಯನ್ನು ಅನುಭವಿಸುತ್ತಿದ್ದಾರೆಂತಲೂ ತಿಳಿಸಿದ್ದೇವಷ್ಟೆ. ಈಚೆಗೆ ಅವರಿಬ್ಬರ ಪೈಕಿ ಕೇಧರನಾಥ ಮಿತ್ರ ಎಂಬ ಮ್ಯಾಜಿಸ್ಟ್ರೇಟರು ಆ ಗಾಯಗಳಿಂದಲೇ ನರಳಿ ಮೃತಪಟ್ಟರೆಂದು ತಂತಿ ವರ್ತಮಾನ ಬಂದಿದೆ. ಪೋಲೀಸಿನವರು ಆ ಘಾತುಕರ ಪೈಕಿ ಕೆಲವರನ್ನು ದಸ್ತಗಿರಿ ಮಾಡಿದ್ದಾರೆಂದೂ ತಿಳಿಯುವುದು.

***

ಅಲ್ಲಹಾಬಾದ್ (ಪ್ರಯಾಗ) ಪಟ್ಟಣದ ಮೇಯೋ ಹಾಲ್ ಎಂಬ ಬಂಗಲೆಯಲ್ಲಿ ಕಳೆದ ಶನಿವಾರ ಮೂರನೆ ಝಾಮದಲ್ಲಿ ಬಹು ವಿಶೇಷವಾದ ಫಲಪುಷ್ಪಪ್ರದರ್ಶನವಾಯಿತು. ಅಲ್ಲಿ ಅನೇಕಾನೇಕ ಯೂರೋಪ್ಯರ ಸರದಾರರೂ ಸ್ತ್ರೀಯರೂ ದೇಶೀಯ ದೊಡ್ಡ ಮನುಷ್ಯರೂ ಕೂಡಿದ್ದರು. ಎಲ್ಲರೂ ಬಹು ಸಂತೋಷದಿಂದ ವಿಹರಿಸುತ್ತಿರುವಲ್ಲಿ ಲಕ್ಷಾಂತರ ಜೇನುಹುಳುಗಳು ತಮ್ಮ ಗೂಡುಗಳಿಂದ ಎದ್ದು ಹಾರಾಡುತ್ತಾ ಬಂದು, ಅನೇಕರನ್ನು ಮುಸುರಿಕೊಂಡು ಕಚ್ಚಿ ತುಂಬಾ ಗಲಭೆಯನ್ನೆಬ್ಬಿಸಿದವು. ಎಲ್ಲರೂ ಗಾಬರಿಬಿದ್ದು ಚಲ್ಲಾಪಿಲ್ಲಿಯಾಗಿ ಓಡಿಹೋಗಬೇಕಾಯಿತು. ಆ ಪ್ರದರ್ಶನದ ಸಂಭ್ರಮವೆಲ್ಲಾ ನಿರರ್ಥಕವಾಗಿ, ಆಭಾಸವಾಯಿತು.

***

ಭೇರಿಯಾ ಸಂಸ್ಥಾನದ ರಾಜರಾದ ಮಹಾರಾವಳ್ ಶ್ರೀಮಾನ್‌ಸಿಂಗ್ ಜೀಯವರು ಕಳೆದ ವಾರ ಕಾಲವಾದರೆಂದು ತಿಳಿದು ಬಂದಿದೆ. ಇವರು ೧೮೫೫ರಲ್ಲಿ ಜನಿಸಿ, ೧೮೬೪ರಲ್ಲಿ ಸಿಂಹಾಸನವನ್ನು ಹತ್ತಿ ಬಹು ಪ್ರಜಾರಂಜಕರಾಗಿ ಆಳುತ್ತಿದ್ದರು. ಇವರು ಚೌಹಾಣ್ ಎಂಬ ರಾಜಪುತ್ರ ವಂಶದವರಾಗಿದ್ದರು. ಭೇರಿಯಾ ಸಂಸ್ಥಾನವು ೮೩೩ ಮೈಲಿ ವಿಸ್ತಾರವುಳ್ಳದ್ದಾಗಿಯೂ, ೩೩,೮೦೦ ಪ್ರಜಾಸಂಖ್ಯೆಯುಳ್ಳದ್ದಾಗಿಯೂ ಇದೆ. ಈ ಪ್ರಜೆಗಳಲ್ಲಿ ಹಿಂದುಗಳೇ ವಿಶೇಷವಾಗಿದ್ದಾರೆ. ಈ ರಾಜರ ಕೈಕೆಳಗೆ ೩೮ ಮಂದಿ ಸವಾರರೂ, ೨೫೦ ಮಂದಿ ಸಿಪಾಯಿಗಳೂ ಇರುತ್ತಾರೆ. ಅವರು ಎಲ್ಲಿಹೋದರೂ ಗೌರವಾರ್ಥವಾಗಿ ೯ ತೋಪುಗಳು ಹಾರಿಸಬೇಕೆಂಬ ಪದ್ಧತಿಯುಂಟು.

***

ಕಲ್ಕತ್ತೆಯ ಕೋರ್ಟಿನಲ್ಲಿ ಒಂದಾನೊಂದು ಮೊಕದ್ದಮೆ ವಿಚಾರಣೆಯಾಗುತ್ತಿದ್ದಾಗ ಬಾಬು ಬಿಪಿನ್ ಚಂದ್ರಪಾಲ್ ಎಂಬ ದೇಶಭಕ್ತರು ಆ ಮೊಕದ್ದಮೆಯಲ್ಲಿ ಸಾಕ್ಷಿ ಹೇಳುವುದು ತಮ್ಮ ಮನಸ್ಸಿಗೆ ಒಪ್ಪಿತವಾಗಿಲ್ಲವಾದಕಾರಣ ಸಾಕ್ಷಿ ನುಡಿಯಲಾರೆನೆಂದು ಹಟಹಿಡಿದದ್ದು, ಮ್ಯಾಜಿಸ್ಟ್ರೇಟರು ಕೋರ್ಟಿನ ಹುಕುಮನ್ನು ಅವರು ಉಲ್ಲಂಘನೆ ಮಾಡಿದರೆಂದು ಹೇಳಿ, ಅವರಿಗೆ ೬ ತಿಂಗಳ ಸಾಧಾರಣ ಸಜಾ ವಿಧಿಸಿದ್ದು ವಾಚಕರಿಗೆ ತಿಳಿದಿದೆಯಷ್ಟೆ. ಇವರನ್ನು ಮಿಯಾದು ಕಳೆದದ್ದರಿಂದ ಕಳೆದ ಸೋಮವಾರ ಜೈಲಿನಿಂದ ಬಿಡುಗಡೆಮಾಡಿದರು. ಕಲ್ಕತ್ತೆಯ ದೇಶೀಯ ಜನರು ಬಹಳ ಸಂಭ್ರಮದಿಂದ ಉತ್ಸವಗಳನ್ನು ನಡಿಸಿ, ಮಿ॥ ಪಾಲ್‌ಯವರಿಗೆ ಮರ್ಯಾದೆಮಾಡಿ, ಕರೆದುಕೊಂಡು ಬಂದರು.

***

ಕಲ್ಕತ್ತೆಯಲ್ಲಿ ಒಬ್ಬ ಕುಲೀನ ಬ್ರಾಹ್ಮಣನು ಐವತ್ತು ವರುಷಗಳಿಂದಲೂ ಹೆಂಡತಿಯಿಂದ ಪ್ರತ್ಯೇಕವಾಗಿದ್ದು, ಈಗ ಅವಳನ್ನು ತನ್ನ ಮನೆಗೆ ಕಳುಹಿಸಕೊಡಬೇಕೆಂದು ದಾವಾ ಮಾಡಿರುತ್ತಾನೆ. ಪ್ರತಿವಾದಿಯಾದ ಆತನ ಹೆಂಡತಿಯು ತನ್ನ ಗಂಡ ಮುಪ್ಪುಹಿಡಿದು ಅಲೆಯುತ್ತಿದ್ದು ತನ್ನನ್ನು ಸಂರಕ್ಷಣೆ ಮಾಡಲಾರದೆ ಬಹಳ ದಿನಗಳಿಂದಲೂ ತ್ಯಜಿಸಿರುತ್ತಾನಾದ್ದರಿಂದ ಈಗ ಆತನ ಕೂಡ ಇದ್ದು ಸಂಸಾರಮಾಡಲಾಗದು ಎಂದು ಡಿಫೆನ್ಸ್ ಹೇಳಿದಾಳೆ. ವಾದಿಗೆ ಈಗ ೬೦ ವರುಷ ತುಂಬಿದೆ. ಆತನ ಹೆಂಡತಿಗೆ ೫೦ ವರುಷವಾಗಿದೆ. ಈಕೆಗೆ ೧೦ ತುಂಬುವುದರೊಳಗೇ ಇವಳನ್ನು ಆ ಬ್ರಾಹ್ಮಣನಿಗೆ ಕೊಟ್ಟು ಮದುವೆ ಮಾಡಿದರೆಂತಲೂ, ಈ ಮದುವೆಯಾದ ಕೆಲವು ವರುಷಗಳ ಮೇಲೆ ಆತನು ಎರಡನೇ ಹೆಂಡತಿಯನ್ನು ಮಾಡಿಕೊಂಡು, ಅವಳ ಕೂಡ ಸಂಸಾರ ಮಾಡುತ್ತಾ ಬಂದಿದ್ದಾನೆ. ಈ ಗಂಡಹೆಂಡಿರು ಒಬ್ಬರನ್ನೊಬ್ಬರು ಗುರುತು ಹಿಡಿಯುವುದೇ ಕಷ್ಟವಾಗಿದೆ. ಮೊಕದ್ದಮೆ ಹೇಗೆ ತೀರ್ಮಾನವಾಗುವುದೋ ಎಂದು ಅಲ್ಲಿನ ಜನರು ಆಶ್ಚರ್ಯಪಡುತ್ತಿದ್ದಾರೆ.

***

ತಂಜಾವೂರು ಜಿಲ್ಲೆಯಲ್ಲಿ "ಆನೆಕಾಲು" ಎಂಬ ಒಂದು ಕೆಟ್ಟ ರೋಗವು ಅನೇಕರಿಗೆ ಉಂಟಾಗಿ ಕಷ್ಟಪಡಿಸುತ್ತಲಿದೆ. ಅಲ್ಲಿನ ಡಾಕ್ಟರುಗಳು ಅದರ ಪರಿಹಾರಕ್ಕೆ ಯಾವದೊಂದು ಚಿಕಿತ್ಸೆಮಾಡಿದಾಗ್ಯೂ ಪ್ರಯೋಜನವಾಗದೆ ಇರುವುದು. ಮೊನ್ನೆ ಮದರಾಸ್ ಗವರ್ನರವರು ಆ ಪ್ರಾಂತ್ಯ ಸಂಚಾರವನ್ನು ಮಾಡಿಕೊಂಡು ಬಂದರು. ಅಗ್ಗೆ ಅಲ್ಲಿನ ಡಾಕ್ಟರುಗಳು ಸೇರಿ ಈ ವಿಷಯವನ್ನು ಅಜಮಾಯಿಷಿ ಮಾಡಿಸಿ ಪರಿಹಾರವನ್ನು ಕಂಡುಹಿಡಿಯಬೇಕೆಂದು ಕೇಳಿಕೊಳ್ಳಲಿಲ್ಲ. ಆದರೇನು, ಈಗ ಈ ರೋಗವು ಮದರಾಸಿನಲ್ಲೂ ಅನೇಕರನ್ನು ಹಿಡಿದು ಬಾಧೆಪಡಿಸುತ್ತಲಿರೋಣದರಿಂದ ಅದರ ಪೂರ್ವೋತ್ತರವನ್ನು ಕಣ್ಣಾರ ನೋಡಿ ವಿಚಾರಿಸಿಕೊಂಡು ಹೋಗುವುದಕ್ಕಾಗಿ ಅಮೇರಿಕದಿಂದ ಒಬ್ಬ ಡಾಕ್ಟರು ಬಂದು ಇರುತ್ತಾರೆ. ಇವರ ಸಾಹಸವು ಎಷ್ಟರ ಮಟ್ಟಿಗೆ ಫಲಕಾರಿಯಾಗುವುದೋ ಮುಂದೆ ತಿಳಿಯತಕ್ಕದ್ದಾಗಿದೆ.

***

ನದಿಯಾ (ನವದ್ವೀಪ) ಡಿಸ್ಟ್ರಿಕ್ಟಿಗೆ ಸೇರಿದ ಕುಷ್ಟಿಯಾ ಎಂಬ ಊರಿನಲ್ಲಿ ಕಳೆದ ವಾರ ಮಿ॥ ಹಿಕನ್ ಬಾಥಾಂ ಎಂಬೊಬ್ಬ ಮಿಷನ್ ಪಾದ್ರಿಯು ಮನೆಗೆ ಹೋಗುತ್ತಿದ್ದಾಗ ಒಬ್ಬ ಬಂಗಾಳಿಯು ಅವರ ಎದುರು ಬಿದ್ದು ಅವರ ಎದೆಗೆ ಗುರಿಕಟ್ಟಿ ಒಂದು ಪಿಸ್ತೋಲನ್ನು ಹೊಡೆದು ಓಡಿಹೋದನು. ಅವರು ಅವನ ಬೆನ್ನುಹತ್ತಿ ಸ್ವಲ್ಪ ದೂರ ಹೋಗುವಷ್ಟರಲ್ಲೇ ಅವರಿಗೆ ಸಾಕಾಗಿ ನಿಂತುಬಿಟ್ಟರು. ಈಗ ಅವರನ್ನು ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡುತ್ತಿದ್ದಾರೆ. ಹೀಗೆ ನಿಷ್ಕಾರಣವಾಗಿ ಅವರನ್ನು ಗಾಯಮಾಡಿದ್ದು ಅನ್ಯಾಯವೆಂದು ಕಲ್ಕತ್ತೆಯ ಜನರೆಲ್ಲಾ ಹೇಳುತ್ತಾ, ಘಾತುಕನನ್ನು ತಿರಸ್ಕಾರಮಾಡುತ್ತಾ ಬಂದಿದ್ದಾರೆ. ಈಚೆಗೆ ಆ ಪ್ರಾಂತ್ಯದಲ್ಲಿ ಕೆಲವು ಜನರು ಯೂರೋಪ್ಯರ ಜನರನ್ನು ಕಂಡರೆ ಹಗೆಮಾಡುವುದು ಪ್ರಾರಂಭವಾಗಿದೆ. ಪೋಲೀಸ್ ಅಧಿಕಾರಿಗಳು ಅಲ್ಲಿಗೆ ಹೋಗಿ ಆಸಾಮಿಯನ್ನು ಪತ್ತೆ ಮಾಡುವ ತರದೂದನ್ನು ನಡಿಸಿರುತ್ತಾರೆ.

***

ಮದರಾಸ್ ಗವರ್ನಮೆಂಟಿನವರು ಮದರಾಸ್ ಆಧಿಪತ್ಯಕ್ಕೆ ಸೇರಿದ ಎಲ್ಲಾ ಡಿಸ್ಟ್ರಿಕ್ಟುಗಳೊಳಗೂ ಆಹಾರ ಜಿನಸುಗಳು ತುಂಬಾ ಪ್ರಿಯವಾಗಿ ಜನರಿಗೆ ಜೀವನ ಮಾಡಲು ಕಷ್ಟವಾಗಿದೆ ಎಂಬ ಅಂಶವನ್ನು ತಿಳಿದು, ಸರ್ಕಾರಿ ನೌಕರಿಯಲ್ಲಿರುವಂಥಾ ಚಿಲ್ಲರೆ ನೌಕರಿಗಳಲ್ಲಿ ಅಂದರೆ ೧೫ ರೂಪಾಯಿನೊಳಗೆ ತಲಬು ಸಲ್ಲುತ್ತಿರುವವರಿಗೆಲ್ಲಾ ತಿಂಗಳಿಗೆ ೧॥ ರೂಪಾಯಿನಂತೆ ಜಾಸ್ತಿಯಾಗಿ ಅಲೋವೆನ್ಸು ಜಾವತಿ ಮಾಡಬೇಕೆಂತಲೂ, ಕಾದರೆ ಅಲೋವೆನ್ಸನ್ನು ತಿಂಗಳಿಗೆ ೨॥ ರೂಪಾಯಿನಂತೆ ಲೆಕ್ಕಿಸಿ ಕೊಡಬೇಕೆಂತಲೂ, ಈ ಹುಕುಮನ್ನು ಕಳೆದ ಅಕ್ಟೋಬರ್ ೧ನೇ ಲಾಗಾಯಿತು ಜಾರಿಗೆ ತರಬೇಕೆಂತಲೂ ಈಗ ಹುಕುಂ ಹೊರಡಿಸಿದ್ದಾರೆ. ಇದಲ್ಲದೆ ಈ ರೀತಿ ಕೊಡತಕ್ಕ ಜಾಸ್ತಿ ರುಸುಮನ್ನು ಇನ್ನು ಮುಂದೆಯೂ ಎಲ್ಲಿಯ ತನಕ ಕೊಡಬೇಕಾಗುವುದೋ ರೆವಿನ್ಯೂ ಬೋರ್ಡಿನವರು ತನಿಖೆಮಾಡಿ ಗವರ್ನಮೆಂಟಿಗೆ ತಿಳಿಸಬೇಕೆಂದೂ ಆ ಹುಕುಮಿನಲ್ಲಿ ಸೂಚಿಸಿರುತ್ತಾರೆ. ಈ ಹುಕುಮಿನಿಂದ ಸರ್ಕಾರಿ ಕಚೇರಿಯಲ್ಲಿರುವ ಅಲ್ಪ ಸಂಬಳಗಾರರಿಗೆ ಸ್ವಲ್ಪ ಮಟ್ಟಿಗಾದರೂ ಪ್ರಯೋಜನವಾಯಿತೆನ್ನುವುದಕ್ಕೆ ಸಂಶಯವಿಲ್ಲ.

***

ದಕ್ಷಿಣದೇಶಕ್ಕೆ ಸೇರಿದ ಟುಟಿಕೊರಿನ್ (ತುಟ್ಟುಗುಡಿ) ಎಂಬ ಸಮುದ್ರತೀರಪಟ್ಟಣದಲ್ಲಿ ಮಿ॥ ಚಿದಂಬರಂಪಿಳ್ಳೆ, ಮಿ॥ ಸುಬ್ರಹ್ಮಣ್ಯಶಿವ ಎಂಬುವರು ಕೆಲವು ವಾರಗಳಿಂದ "ಸ್ವದೇಶೀ" ವಿಚಾರಗಳನ್ನು ಕುರಿತು ಬಹು ಕಠಿಣವಾದ ಉಪನ್ಯಾಸಗಳನ್ನು ಮಾಡಿ, ಈಗ "ಜನಸಂಘ" ಎಂಬ ಒಂದು ಸಂಘವನ್ನು ನಿರ್ಮಾಣ ಮಾಡಿರುತ್ತಾರೆ. ಈ ಹೊಸ ಸಂಘದವರ ಉದ್ದೇಶಗಳೇನೆಂದರೆ—(೧) ಕಸಬುಗಳನ್ನೂ ವ್ಯಾಪಾರಗಳನ್ನೂ ಅಭಿವೃದ್ಧಿಪಡಿಸಿ, ಸ್ವದೇಶೀ ಅಭಿಪ್ರಾಯಗಳನ್ನು ಹೆಚ್ಚಿಸುವುದು; (೨) ಪಟ್ಟಣದ ಎಲ್ಲಾ ಭಾಗಗಳಲ್ಲೂ ಪಂಚಾಯತಿ ಕೋರ್ಟುಗಳನ್ನು ಸ್ಥಾಪಿಸಿಕೊಂಡು, ಜನರು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನೆಲ್ಲಾ ಆ ಕೋರ್ಟುಗಳಲ್ಲೇ ಇತ್ಯರ್ಥಪಡಿಸಿಕೊಳ್ಳುವುದು; ಪ್ರಜೆಗಳಲ್ಲಿ ಸ್ವದೇಶೀ ವಾತ್ಸಲ್ಯಾದಿಗಳು ಹೆಚ್ಚುವಂತೆ ಮಾಡುವುದಕ್ಕೂ, ಪರದೇಶ ಸರಕುಗಳನ್ನು ತಿರಸ್ಕರಿಸುವಂತೆ ಪ್ರೋತ್ಸಾಹಪಡಿಸುವುದಕ್ಕೂ ಜನರನ್ನು ಚುನಾಯಿಸಿ ಒಂದು [illegible] ಮಾಡುವುದು. ಈ ಅರ್ಥಕ್ಕೆ ಆಗಲೇ ೪೦೦ ಜನರು ಸಮ್ಮತಿ ಹಾಕಿ ಆ ಸಂಘಕ್ಕೆ ಮೆಂಬರುಗಳಾಗಿ ಸೇರಿಕೊಂಡಿದ್ದಾರೆ. ಇದಲ್ಲದೆ ಅಲ್ಲಿನ ಕಸಬುದಾರರೂ ನಾವಿಕರೂ ಸಹ ಸೇರಿ, ಮೇಲ್ಕಂಡ ಅಭಿಪ್ರಾಯಗಳನ್ನು ಒಪ್ಪಿಕೊಂಡಿದ್ದಾರೆ. ಮತ್ತು ಸ್ವದೇಶೀ ವಿಚಾರದ ಪ್ರೋತ್ಸಾಹಕ್ಕಾಗಿ ಅಲ್ಲಿ ವಾರಕ್ಕೆರಡಾವರ್ತಿ ಪ್ರಕಟವಾಗುವಂಥಾ ಒಂದು ತಮಿಳು ಭಾಷೆಯ ವರ್ತಮಾನಪತ್ರಿಕೆಯನ್ನು ಹೊರಪಡಿಸಬೇಕೆಂದು ನಿಶ್ಚಯವಾಗಿರುತ್ತದೆ.

ವಿದೇಶ ವರ್ತಮಾನಗಳು.

ಮಾರಿಷಸ್ ದ್ವೀಪದಲ್ಲಿ ಮೂರು ದಿನ ವಿರಾಮವಿಲ್ಲದೆ ಬಲವಾದ ಸುಂಟರಗಾಳಿ ಬೀಸಿ, ಆಸ್ತಿ ಪಾಸ್ತಿಗಳನ್ನು ಬಹಳ ಮಟ್ಟಿಗೆ ಹಾಳು ಮಾಡಿರುತ್ತದೆ.

***

ಫ್ರಾನ್ಸ್ ಪ್ರಭುತ್ವದಲ್ಲಿ ಗಂಡ ಹೆಂಡರು ಮೂರು ವರ್ಷಕಾಲ ಪ್ರತ್ಯೇಕ ಪ್ರತ್ಯೇಕವಾಗಿ ವಾಸಮಾಡಿಕೊಂಡಿದ್ದ ಪಕ್ಷದಲ್ಲಿ, ಅವರ ಕೋರಿಕೆಯ ಪ್ರಕಾರ ಸರ್ಕಾರದವರು ಅವರ ವಿವಾಹಸಂಬಂಧವನ್ನು ಪರಿಹರಿಸಿಬಿಡಬಹುದು ಎಂಬರ್ಥಕ್ಕೆ ಈಗ ಒಂದು ಶಾಸನವು ಆಗತಕ್ಕದಾಗಿದೆ. ಈ ಶಾಸನದ ಮಸೂದೆಯು ತಯಾರಾಗಿ, ಈಗ ಅಲ್ಲಿನ ಮಂತ್ರಿಸಭೆಯಲ್ಲಿ ಚರ್ಚೆಯಾಗುತ್ತಿದೆ.

***

ವಿಲಾಯತಿಗೆ ಸೇರಿದ ಬ್ರಾಟನ್ ಎಂಬ ಊರಿನಲ್ಲಿ ಐದು ತಿಂಗಳ ಒಂದು ಮಗುವು ಕಾಲವಾಯಿತು. ಡಾಕ್ಟರು ಹೋಗಿ ಆ ಮಗು

ಶರೀರ ಸ್ಥಿತಿಯನ್ನು ಪರೀಕ್ಷಿಸಿನೋಡಿದಾಗ, ಆ ಮಗುವಿನ ದೇಹದಲ್ಲಿದ್ದ ಕೋಶಗಳೆಲ್ಲಾ ಹಿಂದು ಮುಂದಾಗಿಯೂ ರಕ್ತನಾಳಗಳು ತಿರುಗುಗಾಗಿಯೂ ಇದ್ದುವು. ಇಂಥಾ ವಿಚಿತ್ರವಾದ ಪ್ರಾಣಿಯು ೫ ವರ್ಷಗಳ ತನಕ ಬದುಕಿದ್ದದ್ದೇ ಪರಮಾಶ್ಚರ್ಯವೆಂದು ಹೇಳಿದರು.

***

ಅಮೇರಿಕಕ್ಕೆ ಪರದೇಶಗಳಿಂದ ಹೋಗಿರುವಂಥಾ ಘಾತುಕರನ್ನೂ ಅಪರಾಧಿಗಳನ್ನೂ ಪ್ರಜೆಗಳು ಸಹಾಯಮಾಡಿ ಪೋಲೀಸಿನವರಿಗೆ ಹಿಡಿದು ಕೊಡಬೇಕೆಂತಲೂ, ಅವರನ್ನೆಲ್ಲಾ ಅಲ್ಲಿಂದ ಹೊರಕ್ಕೆ ಕಳುಹಿಸಿಬಿಡಬೇಕೆಂತಲೂ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ. ಈ ಹುಕುಮನ್ನು ಅನುಸರಿಸಿ, ಚಿಕಾಗೋ ಪಟ್ಟಣದ ಪೋಲೀಸಿನವರು ೩೦೦ ಜನರನ್ನು ಆಗಲೇ ಹಿಡಿದು ಗಡೀಪಾರು ಮಾಡಿರುತ್ತಾರೆ.

***

ವಿಲಾಯತಿಯಲ್ಲಿ ಕಾಲವಾದ ಮಿಸ್ ಎಲಿಸಬೆತ್ ಬೂಡಿಂಟನ್ ಸೀರ್ಸ್, ಮೆ|| ಇ. ಎಚ್. ಹ್ಯಾರಿಸನ್, ಮಿಸೆಸ್ ಮೇರಿ ಬೆರ್ರಿ, ಮಿಸೆಸ್ ಜೂಲಿಯಾ ಸ್ಟೈರ್, ಮಿಸೆಸ್ ಕ್ಯಾಥರೀನ್ ಕಾರ್ನಫೋರ್ಡ್, ಮತ್ತು ಮಿಸ್ ಮೆಕ್‌ಮೋರ್ಡ್ ಎಂಬೀ ಆರುಮಂದಿಯೂ ತಮ್ಮ ತಮ್ಮ ಆಸ್ತಿಗಳಿಂದ ೫,೮೭,೦೦೦ ರೂಪಾಯನ್ನು ಬೇರೆ ಬೇರೆ ಧರ್ಮ ಕಾರ್ಯಗಳಿಗೆ ವಿನಿಯೋಗಿಸ ಬೇಕೆಂದು ಮರಣ ಶಾಸನಗಳನ್ನು ಬರೆದಿಟ್ಟಿದ್ದಾರೆ.

***

ಹೋದ ತಿಂಗಳಲ್ಲಿ ಲಂಡನ್ ಪಟ್ಟಣದೊಳಗೆ ಒಟ್ಟು ೧,೭೯,೫೬೩ ಮಂದಿ ಪಾಪರುಗಳು ಅಂದರೆ, ಜೀವನಕ್ಕೆ ಏನೇನೂ ಗತಿಯಿಲ್ಲದವರು, ಇದ್ದರೆಂದೂ, ಇವರನ್ನೆಲ್ಲಾ ಅಲ್ಲಿನ ಪ್ರಜೆಗಳಿಂದ ವಸೂಲಾಗುವ ಹಣದಿಂದಲೇ ಸಾಕುತ್ತಿದ್ದಾರೆಂದೂ ಪ್ರಕಟವಾಗಿದೆ. ಆ ಪಟ್ಟಣದಲ್ಲಿ ಯಾವಾಗಲೂ ಈ ಪಾಪರುಗಳು ಇದ್ದೇ ಇರುತ್ತಾರೆ. ಹೋದ ವರುಷಕ್ಕಿಂತ ಈ ವರುಷದಲ್ಲಿ ೫,೮೫೮ ಮಂದಿ ಪಾಪರುಗಳು ಹೆಚ್ಚಿದರೆಂದು ತಿಳಿಯುವುದು.

***

ಅಮೇರಿಕಕ್ಕೆ ಸೇರಿದ ಓಹಿಯೋ ಡಿಸ್ಟ್ರಿಕ್ಟಿನಲ್ಲಿ ಕ್ಲೀವ್‌ಲೆಂಡಿನ ಒಂದು ಪಾಠಶಾಲೆಗೆ ಬೆಂಕಿ ಬಿದ್ದಿತು. ಆಗ ಸುಮಾರು ೬೦೦ ಮಕ್ಕಳು ಓದುತ್ತಿದ್ದರು. ವಿಶೇಷವಾದ ಗಾಬರಿಯಿಂದಲೂ, ಶಾಲೆಗೆ ಬರಲು ಎರಡೇ ಬಾಗಿಲುಗಳಿದ್ದದ್ದರಿಂದಲೂ ಪ್ರಾಣನಷ್ಟವು ಅಪಾರವಾಯಿತು. ೧೬೦ ಮಕ್ಕಳ ಮತ್ತು ಇಬ್ಬರು ಉಪಾಧ್ಯಾಯರ ಶವಗಳನ್ನು ಹೊರಕ್ಕೆ ತೆಗೆದುಹಾಕಿದರು. ಮೃತಪಟ್ಟ ಮಕ್ಕಳೆಲ್ಲಾ ೬ ರಿಂದ ೧೪ ವರುಷ ವಯಸ್ಸಿನವರಾಗಿದ್ದರೆಂದು ತಿಳಿಯುವುದು.

***

ಅಮೇರಿಕದ ಮುಖ್ಯ ನಗರವಾದ ನ್ಯೂಯಾರ್ಕಿನಲ್ಲಿ ಕಳೆದ ವಾರ ೬೦೦ ಮಂದಿ ಉಪಾಧ್ಯಾಯರುಗಳು ಸಭೆ ಸೇರಿ, ಪಾಠಶಾಲೆಗಳಲ್ಲಿ ಅವಿಧೇಯರಾದ ವಿದ್ಯಾರ್ಥಿಗಳನ್ನು ಶಿಕ್ಷಿಸ ಬಹುದೋ ಕೂಡದೋ ಎಂದು ಚರ್ಚೆ ಮಾಡಿದರು. ೩೦೦ ಮಂದಿ ಮಾತ್ರದಲ್ಲಿ ಬೆತ್ತವನ್ನು ಪ್ರಯೋಗಿಸಲೇ ಕೂಡದೆಂದು ಅಭಿಪ್ರಾಯ ಪಟ್ಟರು. ಉಳಿದವರೆಲ್ಲಾ ಪ್ರೈಮರಿ ಪಾಠಶಾಲೆಗಳಲ್ಲಿ ಬೆತ್ತವನ್ನು ಉಪಯೋಗಿಸುವುದು ಅವಶ್ಯವೆಂದು ಅಭಿಪ್ರಾಯ ಪಟ್ಟದ್ದರಿಂದ ಆ ರೀತಿ ತೀರ್ಮಾನವಾಯಿತು.

***

ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳ ಗವರ್ನಮೆಂಟಿಗೂ ವೆನಿಜುವೇಲಾ ಪ್ರಭುತ್ವದ ಸರ್ಕಾರದವರಿಗೂ ಕೆಲವು ರಾಜಕೀಯ ವಿಚಾರದಲ್ಲಿ ಮನಸ್ತಾಪವುಂಟಾಗಿದೆ. ಪಂಚಾಯಿತರಿಂದ ತಮ್ಮ ನ್ಯೂನಾತಿರೇಕಗಳನ್ನು ಫೈಸಲುಮಾಡಿಸಿ ಬಗೆಹರಿಸಿಕೊಳ್ಳಬೇಕೆಂದು ಸಂಯುಕ್ತ ಸಂಸ್ಥಾನದವರು ಸೂಚಿಸಿದ್ದರು. ಆದರೆ ವೆನಿಜುವೇಲಾದವರು ಅದಕ್ಕೆ ಸಮ್ಮತಿಸಲಿಲ್ಲ. ಮುಂದೆ ಈ ಮನಸ್ತಾಪಕ್ಕಾಗಿ ಅವರಿಗೆ ಯುದ್ಧ ಪ್ರಸಂಗವೇನಾದರೂ ಉಂಟಾದೀತೋ ಎಂದು ಗಾಬರಿಯಾಗಿದೆ. ಇದು ಇನ್ನೊಂದು ವಾರದೊಳಗೆ ಇತ್ಯರ್ಥವಾಗುವುದು.

***

ನ್ಯೂಜೀಲಂಡ್ ಎಂಬ ಇಂಗ್ಲೀಷರಿಗೆ ಸೇರಿದ ದ್ವೀಪದಲ್ಲಿ ಕ್ರೈಸ್ಟ್‌ಚರ್ಚ್ ಎಂಬ ಪಟ್ಟಣದಲ್ಲಿ ಕಳೆದ ವಾರ ಪ್ರಾಪ್ತವಾದಂಥಾ ಬೆಂಕಿಯ ಅನಾಹುತವು ಹಿಂದೆ ಯಾವಾಗಲೂ ಸಂಭವಿಸಿರಲಿಲ್ಲವೆಂದು ತಿಳಿದು ಬಂದಿದೆ. ಸುಮಾರು ಅರುಕೋಟಿ ರೂಪಾಯಿನ ಆಸ್ತಿಪಾಸ್ತಿಗಳು ಸುಟ್ಟು ನಷ್ಟವಾದವು. ಒಂದು ಸಾವಿರ ಜನರ ವರೆಗೂ ಮನೆಮಠ, ಆಸ್ತಿಪಾಸ್ತಿಗಳನ್ನೆಲ್ಲಾ ಕಳೆದುಕೊಂಡು, ಜೀವನಕ್ಕೆ ಮಾರ್ಗವಿಲ್ಲದೆ ಅಲೆಯುತ್ತಿದ್ದಾರೆ. ತಿಮೋರೋ ಎಂಬ ಸ್ಥಳದಲ್ಲಿ ರೈತರ ಪರಸ್ಪರ ಸಹಾಯಕ ಸಂಘದ ಸರಕುಗಳು ತುಂಬಿದ್ದ ಕಟ್ಟಡವೆಲ್ಲಾ ಸರ್ವನಾಶ ಸಹಿತ ಸುಟ್ಟುಹೋಗಿ ಹತ್ತು ವರೆ ಲಕ್ಷ ರೂಪಾಯಿ ನಷ್ಟವಾಯಿತು.

***

ಪ್ರಪಂಚಕ್ಕೆಲ್ಲಾ ಅಪೂರ್ವವೂ ಆಶ್ಚರ್ಯಕರವೂ ಆದ ರೈಲ್ ರಸ್ತೆಯು ಅಮೇರಿಕದಲ್ಲಿ ಹಾಕಲ್ಪಟ್ಟಿದೆ. ಮಿಯಾಮಿ ಎಂಬ ಸ್ಥಳದಿಂದ ಕೀವೆಸ್ಟ್ ಎಂಬ ಊರಿಗೆ 'ತನಕ ರೈಲ' ಕಂಬಿಗಳನ್ನು ಉದ್ದಕ್ಕೂ ಸಮುದ್ರದಮೇಲೆ ಹಾಕಿರುತ್ತಾರೆ. ಈ ಕಂಬಿಗಳು ೧೩ ಮೈಲಿ ದೂರ ನೀರಿನಮೇಲೂ, ೧೯ ಮೈಲಿ ದೂರ ಕೆಸರು ತುಂಬಿರುವ ಭೂಮಿಯ ಮೇಲೂ ಹಾಕಿರುವವು. ಅಂತು ಈ ರೈಲ್ ರಸ್ತೆಯು ಒಟ್ಟು ೧೫೮ ಮೈಲಿ ದೂರವಾಗುತ್ತದೆ. ಕಳೆದ ವಾರದಿಂದ ಈ ಕಂಬಿಗಳಮೇಲೆ ರೈಲ್‌ಗಾಡಿಗಳನ್ನು ಬಿಡುವುದಕ್ಕಾರಂಭವಾಗಿ, ಪ್ರಯಾಣಿಕರು ಹೋಗಿ ಬರುತ್ತಿದ್ದಾರೆ. ಈ ರೈಲ್‌ರಸ್ತೆಯು ಇಂಜನಿಯರುಗಳ ನಿರ್ಮಾಣಶಕ್ತಿಯನ್ನು ವ್ಯಕ್ತಪಡಿಸುವುದಾಗಿದೆ.

***

ಚೀನಾ ಚಕ್ರಾಧಿಪತ್ಯದಲ್ಲಿ ವರ್ತಮಾನ ಪತ್ರಿಕೆಗಳನ್ನು ನಡಿಸತಕ್ಕ ಎಡಿಟರುಗಳೆಲ್ಲಾ ಚೀನಾದವರೇ ಆಗಿರಬೇಕೆಂತಲೂ, ಗವರ್ನಮೆಂಟಿನ ಅಧಿಕೃತಗಳನ್ನು ಕುರಿತು ಸಿಕ್ಕಿದಹಾಗೆಲ್ಲಾ ಆಕ್ಷೇಪಣೆ ಮಾಡುವುದಾಗಲಿ, ಗವರ್ನಮೆಂಟಿನ ಗೋಪ್ಯವಿಚಾರಗಳನ್ನು ಪ್ರಕಟಿಸುವುದಾಗಲಿ, ಪ್ರಜಾನೆಮ್ಮದಿಗೆ ಭಂಗಬರುವಂಥಾ ಮತ್ತು ಪ್ರಜೆಗಳ ಸಚ್ಚಾರಿತ್ರ ಸದಾಚಾರಗಳಿಗೆ ಲೋಪವುಂಟಾಗುವಂಥಾ ಚಿತ್ರಗಳನ್ನು ಪ್ರಕಟಿಸುವುದಾಗಲಿ ಶಿಕ್ಷಾರ್ಹಗಳಾದ ಅಪರಾಧಗಳೆನಿಸುವವೆಂತಲೂ, ಇತರ ಕಡೆಗಳಿಂದ ಚೀನಾ ದೇಶಭಾಷೆಯ ವರ್ತಮಾನಪತ್ರಿಕೆಗಳು ಚೀನಾದೊಳಕ್ಕೆ ಬರುವ ಪಕ್ಷಕ್ಕೆ ಅವೂ ಕೂಡ ಈ ನಿಬಂಧನೆಗಳಿಗೆ ಒಳಪಟ್ಟಿರಬೇಕೆಂತಲೂ ಆ ಗವರ್ನಮೆಂಟಿನವರು ಒಂದು ಕಾನೂನನ್ನು ಮಾಡಿ ಪ್ರಕಟಿಸಿರುತ್ತಾರೆ.

***

ಆಫ್ರಿಕಾ ಖಂಡದ ಉತ್ತರ ಭಾಗದಲ್ಲಿ ಫ್ರೆಂಚರಿಗೆ ಸೇರಿದ ಮೊರೋಕೋ ದೇಶದೊಳಗೆ ಕೆಲವು ಕಾಲದಿಂದ ಪ್ರಜಾ ನೆಮ್ಮದಿಗೆ ಭಂಗವುಂಟಾಗಿದೆ. ಫ್ರೆಂಚ್ ಸರ್ಕಾರದವರು ಆ ಪ್ರಾಂತ್ಯದಲ್ಲಿ ಕೆಲವು ಕಾಲದಿಂದಲೂ ಯುದ್ಧ ಕಾರ್ಯಗಳನ್ನು ನಡಿಸುತ್ತಾ ಬಂದಿದ್ದಾರೆ. ಅವರ ಸೈನಿಕರಲ್ಲಿ ಹಲವರು ಆಗಲೇ ಮೃತಪಟ್ಟರು. ಈ ಯುದ್ಧಗಳು ಮುಕ್ತಾಯವಾಗುವಂತೆ ಕಾಣು ಬರುವುದಿಲ್ಲ. ಯಾಕೆಂದರೆ ಫ್ರೆಂಚ್ ಸರ್ಕಾರದವರು ಕಾಸಾ ಬ್ಲಾಂಕಾ ಎಂಬ ರಾಜ್ಯಕ್ಕೆ ಇನ್ನೂ ೫,೦೦೦ ಸೈನಿಕರನ್ನು ಕೂಡಲೇ ಕಳುಹಬೇಕೆಂದು ಕಳೆದ ವಾರ ಗೊತ್ತು ಮಾಡಿದ್ದಾರೆ. ಆ ಪ್ರಾಂತ್ಯದ ಮುಸಲ್ಮಾನೀಯ ಜನರು ಫ್ರೆಂಚರ ಆಳ್ವಿಕೆಯನ್ನು ಇನ್ನೂ ಸಮ್ಮತಿಸದೆ, ಅವರನ್ನೆಲ್ಲಾ ಆಲ್ಜೀರಿಯಾ ದೇಶದಿಂದ ಓಡಿಸಿಯೇ ಬಿಡಬೇಕೆಂದು ಸಾಹಸಪಡುತ್ತಾರೆ. ಈ ಮುಸಲ್ಮಾನರಿಗೆ ಮುಲಾಯಿ ಹಫೀದಿ ಎಂಬಾತನು ಮುಖಂಡನಾಗಿ ನಿಂತು, ಎಲ್ಲಾ ಕಡೆಗಳಿಗೂ ಜನ, ಶಿಷ್ಯರನ್ನು ಕಳುಹಿಸಿ, ಜನರನ್ನು ಫ್ರೆಂಚರಿಗೆ ವಿರೋಧವಾಗಿ ಎತ್ತಿ ಕಟ್ಟುತ್ತಿದ್ದಾನೆ.

***

ಇಂಗ್ಲೆಂಡ್ ವರ್ತಕರು ಇಟ್ಟುಕೊಂಡಿರುವ ಹಡಗು ಪಡವುಗಳಲ್ಲಿ ಸಣ್ಣ ಸಣ್ಣ ಕೆಲಸಗಳನ್ನು ಮಾಡುವುದಕ್ಕೆ ಪರದೇಶಗಳ ಜನರನ್ನು ನೇಮಿಸಿಕೊಂಡಿದ್ದಾರೆ. ಇಂಗ್ಲಿಷ್ ಪ್ರಜೆಗಳಲ್ಲಿ ಅನೇಕಾನೇಕರಿಗೆ ಇದರಿಂದ ಜೀವನ ತಪ್ಪಲು ಮಾರ್ಗವಾಗಿದೆ ಎಂತಲೂ, ಅಂಥಾ ಅನ್ಯದೇಶದವರನ್ನು ಇನ್ನು ಮೇಲೆ ಕೆಲಸಕ್ಕೆ ನೇಮಿಸಿಕೊಳ್ಳುವುದನ್ನು ನಿಲ್ಲಿಸಿ, ಇಂಗ್ಲೀಷ್ ಜನರನ್ನೇ ನೇಮಿಸಿಕೊಳ್ಳಬೇಕೆಂತಲೂ ಆಕ್ಷೇಪಣೆ ಹುಟ್ಟಿತು. ಸರ್ಕಾರದವರು ಈ ಭಾಗವನ್ನು ರೂಢಿಗೆ ತರುವುದು ಸಾಧ್ಯವೇ ಎಂದು ಕೆಲವು ದೊಡ್ಡ ಮನುಷ್ಯರನ್ನು ನೇಮಿಸಿ, ಅವರಿಂದ ತನಿಖೆಮಾಡಿಸಿದರು. ಇವರು ರಿಪೋರ್ಟು ಬರೆದಿರುವುದನ್ನು ನೋಡಿದರೆ, ವರ್ತಕರು ಇಂಗ್ಲೀಷ್ ಜನರನ್ನೇ ನೇಮಿಸಿಕೊಳ್ಳುವುದಾದರೆ ಈಗ ಖರ್ಚು ಮಾಡುವುದಕ್ಕಿಂತಲೂ ಅವರು ಇನ್ನೂ ೧೫ ಲಕ್ಷ ರೂಪಾಯಿಯಾದರೂ ಹೆಚ್ಚಾಗಿ ಖರ್ಚು ಇಡಬೇಕಾಗುವುದೆಂದು ಗೊತ್ತಾಗುತ್ತದೆ. ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಈ ವಿಷಯವು ಚರ್ಚೆಗೆ ಬಂದು, ಇದು ಸಾಧ್ಯವಲ್ಲವೆಂದು ಇತ್ಯರ್ಥವಾಯಿತು.

***

ಉತ್ತರ ಆಫ್ರಿಕಾದಲ್ಲಿರುವ ಟ್ಯಾಂಜೀರಿನಲ್ಲಿ ರೈಸೂಲಿ ಎಂಬೊಬ್ಬ ಸ್ವದೇಶೀ ಮುಖಂಡನು ಕೆಲವು ದಿನಗಳ ಕೆಳಗೆ ಸರ್ ಹ್ಯಾರಿ ಮೆಕ್ಲೀನ್ ಎಂಬ ಇಂಗ್ಲೀಷ್ ಸರದಾರನನ್ನು ಸೆರೆ ಹಿಡಿದುಕೊಂಡು ಹೋಗಿ ಇಟ್ಟುಕೊಂಡಿದ್ದನು. ಆತನನ್ನು ಬಿಡಿಸಿಕೊಂಡು ಬರುವುದಕ್ಕೆ ಇಂಗ್ಲೀಷ್ ಸರ್ಕಾರದವರು ಕೆಲವು ಕಾಲದಿಂದ ತುಂಬಾ ಸಾಹಸಪಟ್ಟರು. ಈಗ ಆತನನ್ನು ಬಿಟ್ಟುಕೊಡುವ ಭಾಗದಲ್ಲಿ ಆ ಸ್ವದೇಶೀ ಮುಖಂಡನಿಗೂ ಇಂಗ್ಲೀಷ್ ಸರ್ಕಾರದವರಿಗೂ ನಡೆದಿರುವ ಕರಾರು ಏನೆಂದರೆ:—ಇಂಗ್ಲೀಷ್ ಗವರ್ನಮೆಂಟಿನವರು ರೈಸೂಲಿ ಎಂಬ ಮುಖಂಡನಿಗೆ ಮೂರು ಲಕ್ಷ ರೂಪಾಯಿ ಪ್ರತಿಫಲಕೊಡಬೇಕು. ಇಂಗ್ಲೀಷರು ಸೆರೆ ಹಿಡಿದಿಟ್ಟುಕೊಂಡಿರುವ ೧೪ ಮಂದಿಯನ್ನು ವಾಪಸು ಕಳುಹಿಸಬೇಕು. ರೈಸೂಲಿ ಎಂಬ ಮುಖಂಡನಿಗೂ ಆತನ ಹಿಂಬಾಲಕರಾದ ೨೧ ಮಂದಿ ಬಂಧುಬಳಗಗಳಿಗೂ ಇತರರಿಂದಲೂ ಯಾವುದೊಂದು ಅತಿಬಾಧೆಯೂ ಉಂಟಾಗದಂತೆ ಇಂಗ್ಲೀಷ್ ಗವರ್ನಮೆಂಟಿನವರು ಅವರನ್ನೆಲ್ಲಾ ಕಾಪಾಡಬೇಕು. ಮೇಲ್ಕಂಡ ಪ್ರತಿಫಲದ ಹಣದಲ್ಲಿ ೨,೨೫,೦೦೦ ರೂಪಾಯನ್ನು ಇಂಗ್ಲೀಷ್ ಗವರ್ನಮೆಂಟಿನವರು ತಮ್ಮ ಬ್ಯಾಂಕಿನಲ್ಲೇ ಮೂರು ವರುಷಗಳ ತನಕ ಡಿಪಾಜಿಟ್ಟು ಇಟ್ಟುಕೊಂಡಿದ್ದು, ಅದಕ್ಕೆ ಪ್ರತಿ ತಿಂಗಳಲ್ಲೂ ರೈಸೂಲಿ ಎಂಬ ಮುಖಂಡನಿಗೆ ೩೫೦ ರೂಪಾಯಿನಂತೆ ಬಡ್ಡಿ ಪಾವತಿ ಮಾಡುತ್ತಾ ಬರಬೇಕು. ಇದಲ್ಲದೆ ಆ ಮುಖಂಡನ ಮನೆಯಲ್ಲಿ ಗುಲಾಮಗಿತ್ತಿಯರಾಗಿ ಚಾಕರಿಮಾಡುತ್ತಿದ್ದ ಹೆಂಗಸರನ್ನೆಲ್ಲಾ ಇಂಗ್ಲೀಷರು ಆತನ ಬಳಿಗೆ ವಾಪಸು ಕಳುಹಿಸಬೇಕು. ಈ ರೀತಿ ಕರಾರು ನಡೆದಿರುವ ಕಾರಣ ಆ ಮುಖಂಡನು ಅದಕ್ಕೆ ಒಪ್ಪಿ ಮೇಲ್ಕಂಡ ಸರ್ ಹ್ಯಾರಿ ಮೆಕ್ಲೀನ್ ಎಂಬ ಸರದಾರನನ್ನು ಕರೆದುಕೊಂಡು ಹೋಗಿ, ಟ್ಯಾಂಜೀರ್ ಪಟ್ಟಣದಲ್ಲಿರುವ ಇಂಗ್ಲೀಷ್ ರಾಯಭಾರಿಯ ವಶಕ್ಕೆ ಒಪ್ಪಿಸಿ ಬಂದಿರುತ್ತಾನೆ.

ತಾಲ್ಲೋಕು ವರ್ತಮಾನಗಳು.

ದಾವಣಗೆರೆ.— ಈ ಊರಿನ ಪಟೇಲ್ ಶಾನುಭೋಗ ಮುಂತಾದ ಸಮಸ್ತ ದೈವದವರು ಸಹ ಸೇರಿಕೊಂಡು, ಈ ಊರಲ್ಲಿ ಫಾಲ್ಗುಣ ಶುದ್ಧ ಪೌರ್ಣಮಿ ಮಂಗಳವಾರ ಗ್ರಾಮದೇವತೆಯ ಹಬ್ಬದ ಪೂಜೆ, ಬೇವಿನ ಪಾಡ್ಯಮಿ ಬುಧವಾರ ಮಹಾಶಾಂತಿ ಮಹೋತ್ಸವ, ಗುರುವಾರ, ಶುಕ್ರವಾರ, ಶನಿವಾರ, ಈ ಮೂರು ದಿವಸಗಳೂ ಕುಸ್ತಿಗಳು ನಡೆಯಬೇಕೆಂದು ನಿಶ್ಚಯಿಸಿರುತ್ತಾರೆ. ಇದಕ್ಕೋಸ್ಕರ ಉಮೇದುವಾರ ಮುರಡಪ್ಪ ಎಂಬುವರು ಮೇಲ್ಕಂಡ ಪಟೇಲ ಶಾನುಭೋಗರ ಮತ್ತು ಸಮಸ್ತ ದೈವದವರ ಅನುಮತಿಯನ್ನು ಹೊಂದಿ, ಕೆಲವರನ್ನು ಸಹಾಯಕ್ಕೆ ಕರೆದುಕೊಂಡು, ಊರಿನಲ್ಲಿ ೩—೪ ಖಂಡುಗದ ವರೆಗೂ ಧವಸಧಾನ್ಯಾದಿಗಳನ್ನು ಚಂದಾ ಎತ್ತಿ, ಸದರಿ ಉತ್ಸವವನ್ನೂ, ಕುಸ್ತಿಗಳನ್ನೂ ನೋಡುವುದಕ್ಕೆ ಬಂದವರಿಗೂ ಮತ್ತು ಕುಸ್ತಿಗಳನ್ನು ಆಡತಕ್ಕ ಉಸ್ತಾದಿಗಳಿಗೂ ಸಹ ಊಟಕ್ಕೆ ಸಿದ್ಧಪಡಿಸಿರುತ್ತಾರೆ. ಈ ಕುಸ್ತಿಯಲ್ಲಿ ಗೆದ್ದವರಿಗೆ ಬಹುಮಾನಕೊಡುವುದಕ್ಕಾಗಿ ಬಂಗಾರದ ನಾಲ್ಕು ಕಡೆಗಳನ್ನೂ, ಬೆಳ್ಳಿಯ ಇಪ್ಪತ್ತೈದು ಕಡೆಗಳನ್ನೂ, ಶಲ್ಯ ವಸ್ತ್ರಾದಿಗಳನ್ನೂ ಆಯಾಯ ತರಗತಿಯ ಪ್ರಕಾರ ಕೊಡಲು ಏರ್ಪಾಡು ಮಾಡಿರುತ್ತಾರೆ.

ಹೊಸೂರು.—ಕಳೆದ ಜೂಲೈ ತಿಂಗಳಿನಲ್ಲಿ ಪ್ಲೇಗ್ ತುಂಬಾ ಹಾವಳಿಯನ್ನು ಮಾಡಿದ್ದರಿಂದ ಜನಗಳೆಲ್ಲಾ ಊರುಬಿಟ್ಟು, ಷೆಡ್ಡುಗಳಲ್ಲಿ ವಾಸಮಾಡಿ ಕಳೆದ ನವಂಬರ್ ಡಿಸೆಂಬರ್ ತಿಂಗಳುಗಳಲ್ಲಿ ಊರು ಸೇರಿ, ನೆಮ್ಮದಿಯಾಗಿರುವಲ್ಲಿ ಕಳೆದ ತಿಂಗಳು ಸುಮಾರು ಮೇಲೆ ಇಲಿಗಳು ಸತ್ತದ್ದು ಮಾತ್ರವಲ್ಲದೆ, ಎರಡು ಪ್ಲೇಗ್ ಕೇಸುಗಳಾದ್ದರಿಂದ ಜನರೆಲ್ಲಾ ತುಂಬಾ ಗಾಬರಿಪಡುತ್ತಿದ್ದಾರೆ. ಇದು ಇಷ್ಟರಲ್ಲೇ ನಿಂತು ಹೋದರೆ ತುಂಬಾ ಸಂತೋಷ. ಈಗಾಗಲೇ ಬಿಸಿಲಿನ ಕಾವವು ಹೇರಳವಾಗಿದೆ. ಕಾಲರಾ ಸಹ ಉಂಟೆಂದು ಜನರು ಹೇಳುತ್ತಿದ್ದಾರೆ. ಈ ಕಾಲದಲ್ಲಿ ವಿಶೇಷವಾಗಿ ಮಕ್ಕಳಿಗೆ ಸಿಡುಬು ಏಳುವುದು ಹೆಚ್ಚು. ಆದ್ದರಿಂದ ತಂದೆತಾಯಿಗಳು ಈ ವಿಷಯದಲ್ಲಿ ತುಂಬಾ ಎಚ್ಚರಿಕೆಯಾಗಿರುವುದೂ ಬೇಗನೆ ದೇವಿ ಹಾಕಿಸುವುದೂ ಒಳ್ಳೇದು.—ಈ ಊರಿನಲ್ಲಿ ಒಂದು ಜಟಕಾ ಕಂಪನಿ ಹೊಸದಾಗಿ ಏರ್ಪಡಾಗಿರುವುದು ಅನೇಕರಿಗೆ ತಿಳಿದೇ ಇದೆ. ಇವರು ಬೇಕಾದಷ್ಟು ಗಾಡಿಗಳನ್ನೂ ಕುದುರೆಗಳನ್ನೂ ಇಟ್ಟಿಲ್ಲವಾದ್ದರಿಂದಲೂ, ಇರುವ ಗಾಡಿ ಕುದುರೆಗಳಲ್ಲಿ ಕೆಲವು ಲಾಯಕ್ಕಾದವುಗಳಾಗಿಲ್ಲದ್ದರಿಂದಲೂ ದಾರಿಯಲ್ಲಿ ಪ್ರಯಾಣಿಕರು ಕಷ್ಟನಷ್ಟಕ್ಕೆ ಗುರಿಯಾಗಬೇಕಾಗಿದೆ ಎಂದು ಅನೇಕರು ಹೇಳುತ್ತಿದ್ದಾರೆ. ಆದ್ದರಿಂದ ಜಟ್ಕಾ ಕಂಪನಿಯವರು ಶೀಘ್ರದಲ್ಲಿ ಪ್ರಯಾಣಿಕರಿಗೆ ಅನುಕೂಲವಾದ ಏರ್ಪಾಡನ್ನು ಮಾಡಿಯಾರೆಂದು ಕೋರುತ್ತೇನೆ.

ಹೊಸದುರ್ಗ.—ಈ ಹೊಸದುರ್ಗದಲ್ಲಿ ನೀರಿನ ಕ್ಷಾಮಕ್ಕಾಗಿ ಜನಗಳು ಹಗಲೂ ರಾತ್ರಿ ಭಾವಿ ಬಳಿ ಕಾದು ಕಾದು ದಿನಕ್ಕೆ ೫—೬ ಕೊಡ ನೀರು ತೆಗೆದುಕೊಂಡು ಹೋಗುವುದೇ ದುರ್ಲಭವಾಗಿದೆ. ಅದರೊಳಗೆ ಒಬ್ಬರಿಗೊಬ್ಬರಿಗೆ ಗುದ್ದಾಟವಂತೂ ಹೇಳಲಿಕ್ಕೆ ಬಾರದು. ಅಲ್ಲದೆ ಜನಗಳು ಕೆಸರಾದ ನೀರು ಕುಡಿಯುವುದರಿಂದ ಅನಾರೋಗ್ಯವೆಂದು ಹೇಳಬೇಕಿಲ್ಲ. ಇದನ್ನು ತಪ್ಪಿಸಲು ನಮ್ಮ ಅಮಲ್ದಾರರು ಇಲ್ಲಿಗೆ ಸಮೀಪವಾಗಿರುವ ನಾರಿಕಾಟೆ ಕೆರೆಯ ನೀರಿನಿಂದ ಇಲ್ಲಿಗೆ ನಲ್ಲಿ ಇಡಿಸಬೇಕೆಂದು ಮುನಿಸಿಪಲ್ ಬೋರ್ಡ್ ಮೆಂಬರುಗಳು ಸಹ ಸೇರಿ ಮೀಟಿಂಗ್ ಮಾಡಿರುವುದಾಗಿ ಕೇಳಿ ತುಂಬಾ ಸಂತೋಷಪಡುತ್ತೇನಲ್ಲದೆ ಅದನ್ನು ನಮ್ಮ ಶ್ರೀಮನ್ ಮಹಾರಾಜರವರ ಸರ್ಕಾರದವರು ಸಹಾ ಸ್ಯಾಂಕ್ಷನ್ ಮಾಡುತ್ತಾರೆಂದು ಪ್ರಜೆಗಳೆಲ್ಲಾ ಬಾಯಿ ತೆರೆದುಕೊಂಡಿರುತ್ತಾರೆ. ಅಲ್ಲದೆ ಈ ಊರಿಗೆ ಯಾವಾಗಲೂ ಇದೇ ರೀತಿಯಾಗಿ ಇಲ್ಲಿನ ಜನಗಳಿಗೆ ಮಳೆಗಾಲದಲ್ಲಿ ವರುಷಕ್ಕೆ ೩ ತಿಂಗಳು ಸುಖವಾಗಿ ನೀರು ಸಿಕ್ಕುವುದೇ ದುರ್ಲಭವೆಂಬ ಅಂಶವು ನಮ್ಮ ಶ್ರೀಮನ್ ಮಹಾರಾಜರವರಿಗೂ ತಿಳಿದಿರಬಹುದು.—ತಾ. ೭ ನೇ ಶನಿವಾರ ಈ ಊರಲ್ಲಿ ದೇವಾಂಗದವರ ಕೇಸಮನೆ ಕೆಂಚ್ಚಯನವರ ಅಳಿಯ ಕರಿಯಪ್ಪನೆಂಬ ಹುಡುಗನು ಮನೆಯಲ್ಲಿ ಸ್ನಾನಮಾಡುವದಕ್ಕೆ ನೀರು ಸಿಕ್ಕದೆ ಹೋದ್ದರಿಂದ ತೋಟದಲ್ಲಿ ಇರುವ ಅರಸರ ಭಾವಿಗೆ ಸ್ನಾನಕ್ಕಾಗಿ ಹೋಗಿ ಭಾವಿಯೊಳಗೆ ಬಿದ್ದು ಸತ್ತುಹೋದನು. ಇದಕ್ಕಾಗಿ ಇಲ್ಲಿನ ಜನಗಳು ತುಂಬಾ ಸಂಕಟಪಡುತ್ತಾರೆ. ಮುಂದೂ ಈ ರೀತಿಯಾಗಿ ಅನಾಹುತವಾಗದಂತೆ ಧರ್ಮ ಪ್ರಭುಗಳು ಕೂಡಲೇ ನಲ್ಲಿಯನ್ನು ಸ್ಯಾಂಕ್ಷನ್ ಮಾಡಬೇಕಾಗಿ ಪ್ರಾರ್ಥನೆ.

ಚನ್ನಪಟ್ಟಣ.—ಬಿಸಲು ಜಾಸ್ತಿ. ಆದರೆ ರಾತ್ರಿಹೊತ್ತು ತಂಗಾಳಿಯಿಂದ ಚಳಿಯಾಗುತ್ತೆ. ಕೋಟೆಯಲ್ಲಿ ಇನ್ನೂ ಒಂದೆರಡು ಪ್ಲೇಗ್ ಮರಣಗಳಾಗುತ್ತಿರುವಂತೆ ಕೇಳುತ್ತೇನೆ. ಅಲ್ಲದೆ ಕೆಲವು ದಿನಗಳಿಂದ ಅಲ್ಲಲ್ಲಿ ದನಗಳಿಗೂ, ಕುರಿ ಆಡುಗಳಿಗೂ ಏನೋ ಒಂದು ವಿಧ ರೋಗ ಬಂದು ಮೃತಪಡುತ್ತವೆ. ಪ್ಯಾರಾಪಟ್ಟಣದ ಒಬ್ಬ ಗೌಡರ ೬೦೦ ರೂಪಾಯಿ ಬಾಳುವ ಜೋಡಿಯೂ, ಮಂಗಳವಾರ ಪೇಟೆ ಪುಟ್ಟಸ್ವಾಮಿ ಗೌಡರ ನಾಲ್ಕು ಜಾನುವಾರುಗಳೂ, ೨೦-೨೫ ಕುರಿಗಳೂ ಈ ರೋಗದಿಂದ ಮೃತಪಟ್ಟಿರುವದಾಗಿಯೂ, ಇನ್ನೂ ಕೆಲವು ಕಡೆಯಲ್ಲಿ ದನಗಳು ಸದರಿ ರೋಗ ತಗಲಿ ನರಳುತ್ತಿರುವದಾಗಿಯೂ ತಿಳಿದು ಬರುತ್ತೆ. ಕೆಲವರು ಇದನ್ನು ನೋಡಿ ಕುರಿ ದನಗಳಿಗೂ ಪ್ಲೇಗ್ ಬಂದಿದೆ ಎಂದು ಹೇಳಿಕೊಳ್ಳುತ್ತಾರೆ. ಇದು ಯಾವ ರೋಗವೋ, ಇದಕ್ಕೆ ಚಿಕಿತ್ಸೆಯೇನೋ ಯಾರಾದರೂ ತಿಳಿಸಿದರೆ ಬಹು ಉಪಕಾರವಾದೀತು.—ಇಲ್ಲಿಗೆ ೫ ಮೈಲಿ ದೂರದಲ್ಲಿರುವ ಕಬ್ಬಾಳದುರ್ಗದಲ್ಲಿ ಜಾತ್ರೆ ನಡೆಯಿತು. ಅಲ್ಲಿ ಸುಮಾರು ೩,೦೦೦ ಜನರು ಸೇರಿದ್ದರು. ಈ ಕಬ್ಬಾಳದುರ್ಗವು ಸುಮಾರು ೫೦೦ ಅಡಿಗಳ ಭಯಂಕರ ಬೆಟ್ಟ. ಹೈದರನು ಸೆರೆಹಿಡಿದ ಪಾಳೆಯಗಾರರನ್ನು ಮೇಲ್ಭಾಗದಲ್ಲಿ ಇರಿಸುತ್ತಿದ್ದ ಬಂಧನಾಗೃಹವೂ, ಮದ್ದಿನ ಮನೆ, ಕಣಜ, ದುಷ್ಟರನ್ನು ಮೇಲಿನಿಂದ ಕೆಳಕ್ಕೆ ನೂಕುತ್ತಿದ್ದ ಸ್ಥಳಗಳು, ಇವೆಲ್ಲಾ ಈಗಲೂ ಕಾಣುತ್ತವೆ. ಅದನ್ನು ನೋಡುತ್ತಾ ಬರುವಾಗ ಹೃದಯದಲ್ಲಿ ಅನೇಕಾನೇಕ ಕಾರ್ಯಗಳು ಸ್ಮರಣೆಗೆ ಬರುವವು. ಜಾತ್ರೆಯಲ್ಲಿ ಹಲವು ಪೋಲೀಸಿನವರಿದ್ದರೂ ಜೂಜು ಕೋರರಿಗೂ, ಹೆಂಗಸರ ಮಕ್ಕಳ ಕುತ್ತಿಗೆ ನಗಗಳನ್ನು ಕತ್ತರಿಸುವ ಕಳ್ಳರಿಗೂ ಕೊರತೆಯೇ ಇರಲಿಲ್ಲವು.

ಮಂಡ್ಯ.—ಇಲ್ಲಿ ಬಿಸಲು ಹೆಚ್ಚು. ಜ್ವರದ ಕೇಸುಗಳು ಇಳಿತವಾಗಿಲ್ಲ. ಇಲ್ಲಿನ ಮ್ಯುನಿಸಿಪಾಲಿಟಿಯು ಅಷ್ಟು ಸಮರ್ಪಕವಾಗಿಲ್ಲ. ಚರಂಡಿಗಳಲ್ಲಿರುವ ಕೊಳೆಯ ನೀರು ಸರಾಗವಾಗಿ ಹರಿದು ಹೋಗುವ ಹಾಗೆ ತಕ್ಕ ಏರ್ಪಾಡು ಮಾಡಿಲ್ಲ. ಅದಲ್ಲದೆ ಚರಂಡಿಗಳನ್ನು ತೊಳೆಯುವದೇ ಇಲ್ಲ. ಲಾಂದ್ರದ ಕಂಬಗಳು ಸಾಲವು. ರಾತ್ರಿಕಾಲದಲ್ಲಿ ಪ್ರಕಾಶವೇ ಇಲ್ಲ. ಹೊಸದಾಗಿ ಬಂದಿರುವ ನಮ್ಮ ಅಮಲ್ದಾರರು ಜನರ ಪ್ರೀತಿಗೆ ಪಾತ್ರರಾಗಿರುವದರಿಂದ ಪ್ರಜೆಗಳಿಗೆ ಇರತಕ್ಕ ಈ ನ್ಯೂನತೆಗಳನ್ನು ಕ್ರಮಪಡಿಸುವರೆಂದು ನಂಬುತ್ತೇವೆ.—ಎರಡು ವಾರದ ಕೆಳಗೆ ನಮ್ಮ ಸಬ್ ಡಿವಿಜನ್ ಆಫೀಸರ್ ಮೆ|| ಟಿ. ಕೃಷ್ಣರಾಯರು ಫ್ರೆಂಚ್‌ರಾಕ್ಸಿನಿಂದ ಬಂದು, ಮೂರು ದಿನ ಇಲ್ಲಿ ಇದ್ದು, ಬಹುಮಂದಿ ಕೆಲಸಗಳನ್ನು ಪೂರೈಸಿಕೊಂಡು ಹೋದರು.—ಇಲ್ಲಿನ ಮಿಡ್ಲ್ ಸ್ಕೂ

ಇಂಗ್ಲೀಷ್ ಸ್ಕೂಲು ದಿನೇ ದಿನೇ ಅಭಿವೃದ್ಧಿಸ್ಥಿತಿಯನ್ನು ಹೊಂದುತ್ತಲಿದೆ. ಪ್ಲೇಗಿನ ಗಲಾಟೆಗಾಗಿ ನಿಂತುಹೋಗಿದ್ದ ಬಾಲಕರೆಲ್ಲ ಪುನಃ ಸ್ಕೂಲಿಗೆ ಸೇರುತ್ತಾರೆ. ಇವರಿಗಾಗಿ ಇಲ್ಲಿನ ಹೆಡ್ ಮಾಸ್ಟರು ವಿದ್ಯಾಭಿವೃದ್ಧಿಯ ಸಂಘವನ್ನು ಏರ್ಪಾಡು ಮಾಡಿ, ಆ ಸಂಘದಲ್ಲಿ ಪ್ರತಿಯೊಬ್ಬ ಬಾಲಕನೂ ಉಪನ್ಯಾಸವನ್ನು ಬರೆದು ಓದುವ ಹಾಗೆ ಮಾಡಿದಾರೆ. ಈ ಸಂಘವು ಪ್ಲೇಗಿನ ದೆಸೆಯಿಂದ ನಿಂತುಹೋಗಿತ್ತು. ಈಗ ಅದು ಪುನಃ ನಡೆಯುವಂತೆ ತಕ್ಕ ಏರ್ಪಾಡು ಮಾಡಿರುತ್ತಾರೆ.—ಇದಲ್ಲದೆ ಈ ಮಿಡ್ಲ್ ಇಂಗ್ಲೀಷ್ ಸ್ಕೂಲಿನಲ್ಲೇ ಇಲ್ಲಿನ ದೊಡ್ಡ ದೊಡ್ಡ ಮನುಷ್ಯರೂ ಉದ್ಯೋಗಸ್ಥರೂ ಸೇರಿ ಒಂದು ರೀಡಿಂಗ್ ರೂಮನ್ನು ಮಾಡಿಕೊಂಡಿರುವರು. ಈ ವಾಚಕಶಾಲೆಯು ಕಳೆದ ವರುಷವೇ ಏರ್ಪಾಡಾಗಿ ಪ್ಲೇಗಿನ ದೆಸೆಯಿಂದ ನಿಂತುಹೋಗಿತ್ತು. ಈಗ ಅದನ್ನು ನಡೆಯುವ ಹಾಗೆ ನಮ್ಮ ಅಮಲ್ದಾರ್ರೇ ಮುಂತಾದವರು ಪ್ರಯಾಸಪಟ್ಟು ಈ ವಾಚಕಶಾಲೆಗೆ ಶ್ರೀಕೃಷ್ಣರಾಜ ರೀಡಿಂಗ್ ರೂಂ ಎಂದು ಹೆಸರಿಟ್ಟು ಅದನ್ನು ಕ್ರಮಪಡಿಸಿ ಅಭಿವೃದ್ಧಿಗೆ ಬರುವಂತೆ ಮಾಡಿರುತ್ತಾರೆ. ಈ ಏರ್ಪಾಡು ಶಾಶ್ವತವಾಗಿ ನಡೆಯಲೆಂದು ಹಾರೈಸುತ್ತೇನೆ.—ಕಳೆದ ಜನವರಿ, ಫೆಬ್ರವರಿ ತಿಂಗಳುಗಳಲ್ಲಿ ನಡೆದ ಚುಂಚನಕಟ್ಟೆ ಜಾತ್ರೆ ಮುಡುಕತೊರೆ ಜಾತ್ರೆಗಳಲ್ಲಿ ದನಗಳ ಪ್ರದರ್ಶನವು ಬಹಳ ತೃಪ್ತಿಕರವಾಗಿ ನೆರವೇರಿತು. ಚುಂಚನಕಟ್ಟೆ ಜಾತ್ರೆಯ ಕಾಲದಲ್ಲಿ ಇಲ್ಲಿನ ಬೂಕನ ಹೊಸೂರು ಮರೀಗೌಡರ ರಾಸು ಉತ್ಕೃಷ್ಟವಾಗಿದ್ದುದ್ದರಿಂದ ಅದಕ್ಕೆ ವಿಶೇಷ ಬಹುಮಾನವನ್ನು ಕೊಟ್ಟರು. ಅದಲ್ಲದೆ ಮುಡುಕತೊರೆ ಜಾತ್ರೆಯಲ್ಲಿ ಬೋಳೆ ಗೌಡರ ರಾಸು ಬೆಳವಣಿಗೆಯಲ್ಲಿ ಚನ್ನಾಗಿದ್ದುದ್ದರಿಂದ ಅದಕ್ಕೆ ಬಹುಮಾನ ದೊರಕಿತು.

ಚಿತ್ರದುರ್ಗ.—ಬಿಸಿಲು ಹೆಚ್ಚುತ್ತ ಬರುವುದರೊಂದಿಗೆ ದನಕರುಗಳ ಕುಡಿಯುವ ನೀರಿಗೂ ಬಹಳ ಅಭಾವವುಂಟಾಗಿದೆ. ಹೊಂಡದ ಮತ್ತು ಕೆರೆಯ ನೀರು ಟವರ್‍ಗೆ ಸರಬರಾಯಿ ಆಗುವುದರಿಂದ ದನಕರುಗಳು ಕುಳಿದು ನೀರು ಕೆಡಿಸುವವೆಂದು ಅಲ್ಲಿ ದನಕರುಗಳಿಗೆ ನೀರುಕೊಡದೆ ಇರುವುದೇನೋ ನ್ಯಾಯ. ಆದರೆ ಹೊಂಡದ ಕೆಳಗಿನ ನೀರು ವರುಷವೆಲ್ಲ ದನಕರುಗಳಿಗೆ ಉಪಯೋಗವಾಗುತ್ತಿದ್ದುದನ್ನು ಈಗ ಅಡ್ಡಿ ಮಾಡಿರುವುದು ಗೋಪಾಲರುಗಳಿಗೆ ಬಹಳ ತೊಂದರೆಯಾಗಿದೆ. ಅಲ್ಲಿಯೂ ನೀರು ಕುಡಿಸಕೂಡದಲ್ಲಿ ದನಕರುಗಳು ಇನ್ನೆಲ್ಲಿಗೆ ಹೋಗಬೇಕು? ಈ ವಿಷಯದಲ್ಲಿ ಊರಜನರು ಸರಕಾರಕ್ಕೆ ಅರ್ಜಿ ಬರೆದು ಒಂದು ತಿಂಗಳಾಯ್ತೆಂದು ಕೇಳುತ್ತೇವೆ. ಈ ವರೆಗೂ ಉತ್ತರವಿಲ್ಲ. ಈ ಬೇಸಿಗೆಯಲ್ಲಿ ಕೂಡಲೆ ಈ ವಿಷಯ ತೀರ್ಮಾನ ಮಾಡಿಯಾರೆಂದು ನಿರೀಕ್ಷಿಸುತ್ತೇವೆ.—ಕಳೆದವಾರ ಸಂತೇಪೇಟೆ ಸಾಹುಕಾರ್ ಮುಕ್ತೇಶ್ವರಪ್ಪನವರ ಮನೆಗೆ ಬೆಂಕಿಬಿದ್ದು ಆ ದೊಡ್ಡಮನೆಯೆಲ್ಲಾ ಸುಟ್ಟುಹೋಯಿತು. ಹೊರಗಣ ಮಳಿಗೆಯಲ್ಲಿ ಸೀಮೆಎಣ್ಣೆ ಡಬ್ಬಿಗಳು ಕೊಬರಿ ಮುಂತಾದ ಎಣ್ಣೇಬೀಜ ತುಂಬ ಇದ್ದುದ್ದರಿಂದ ಬೆಂಕಿಯು ಹೆಚ್ಚಾಗುತ್ತ ಆರಿಸಲು ಯಾರಿಗೂ ಅವಕಾಶವಿಲ್ಲದೆ ಹೋಯಿತು. ಇದರಿಂದ ಸುಮಾರು ಎರಡು ಸಾವಿರ ರೂಪಾಯಿವರೆಗೂ ಅವರಿಗೆ ನಷ್ಟವಾಗಿರುವುದರಲ್ಲಿ ಸಂದೇಹವಿಲ್ಲ. ಬೆಂಕಿ ಹೇಗೆ ಬಿತ್ತೆಂದು ಹೇಳುವುದು ಕಷ್ಟವಾಗಿದೆ. ಬೆಂಕಿಪೊಟ್ಟಣದ ಪೆಟ್ಟಿಗೆಗಳು ಅಲ್ಲೇ ಬಹಳವಾಗಿ ಇಟ್ಟಿದ್ದುದ್ದರಿಂದ ಅವು ಕಾವಿನಿಂದ ಹತ್ತಿಕೊಂಡವೋ, ಮನುಷ್ಯರಾದರೂ ಹಗೆಯಿಂದ ಈ ಕೆಲಸ ಮಾಡಿದರೋ ಹೇಳುವುದು ಅಸಾಧ್ಯವಾಗಿದೆ. ಪ್ರಾಣ ನಷ್ಟಗಳಾಗದಿದ್ದುದ್ದೇ ಪುಣ್ಯದುದಕಾರವು.—ಸ್ಕೂಲ್ ಸರ್ಕಲ್ ಇನ್ಸ್‍ಪೆಕ್ಟರು ಬಂದು ಇಲ್ಲಿನ ಸ್ಕೂಲ್ ವಿದ್ಯಾರ್ಥಿಗಳನ್ನು ಪರೀಕ್ಷೆ ಮಾಡುತ್ತಲಿರುವರು.—ಮತ್ತು ಸೆಷನ್ಸ್ ಜಡ್ಜರಾದ ಮೊಹಿಯುದ್ದೀನ್ ಯವರು ಇಲ್ಲಿನ ಮೊಕದ್ದಮೆಗಳನ್ನು ವಿಚಾರಿಸುತ್ತಲಿದಾರೆ. ಅವರು ಈ ತಿಂಗಳ ಕೊನೆಯವರೆಗೂ ಇಲ್ಲಿದ್ದು ವಿಚಾರಣೆಗಳನ್ನು ಪೂರೈಸುವರೆಂದು ವರ್ತಮಾನ.—ಕಳೆದ ವಾರ ಊರಿಗೆ ದಕ್ಷಿಣದಲ್ಲಿರುವ ಕೆಲವು ಗಿಡ್ಡಗಳಿಗೆ ಬೆಂಕಿಬಿದ್ದು ರಾತ್ರಿಹಗಲು ಉರಿಯುತ್ತಲೇ ಇದ್ದು ಸದ್ಯಕ್ಕೆ ಶಮನವಾಗಿದೆ. ಹೊಳಲಕೆರೆ ಪ್ರಾಂತ್ಯಕ್ಕೂ ಈ ಕಿಚ್ಚು ವ್ಯಾಪಿಸಿ ಒಂದು ಗ್ರಾಮವನ್ನೇ ಆವರಿಸಿ, ದಹಿಸಿಬಿಟ್ಟಿತೆಂದು ವರ್ತಮಾನ ಹುಟ್ಟಿದೆ. ಅಂತೂ ಬೆಂಕಿಯಿಂದ ಅನಾಹುತಗಳು ಈ ಬೇಸಿಗೆಯಲ್ಲಿ ಆಗದಂತೆ ಎಲ್ಲರೂ ಬಹಳ ಜಾಗರೂಕರಾಗಿರುವುದು ಬಹಳ ಅವಶ್ಯಕವಾಗಿದೆ.

ನಂಜನಗೂಡು.—ಈ ವಾರ ಇಲ್ಲಿಗೆ ನಮ್ಮ ಡೆಪ್ಯುಟಿ ಕಮಿಷನರು ಚಿತ್ತೈಸಿ, ಇಲ್ಲಿನ ಕೆಲಸಗಳನ್ನು ಜಮಾಬಂದಿ ಮಾಡಿಕೊಂಡು ಹೋದರು. ಈ ಸಾರಿ ನಡೆಯುವ ಜಾತ್ರೆಯಲ್ಲಿ ಯಾವ ಗಲಾಟೆಯೂ ಆಗಲಾರದೆಂದು ತೋರುತ್ತೆ. ದನಗಳನ್ನು ಚನ್ನಾಗಿ ಸಾಕುವವರಿಗೆ ಅಗ್ಗತಕ್ಕ ಬಹುಮಾನ ದೊರೆಯುತ್ತೆ. ಜನರು ತೋಟದಲ್ಲಿ ಇಳಿದುಕೊಳ್ಳಲು ಅನುಕೂಲವಾಗಿದೆ. ಅಲ್ಲಿದ್ದ ಮುಳ್ಳುಗಿಡಗಳನ್ನೆಲ್ಲಾ ಅಮಲ್ದಾರರು ಕೀಳಿಸಿ ಸಾಫ್ ಮಾಡಿಸಿದಾರೆ. ಆದರೆ ಕಳ್ಳಕಾಕರ ಕಾಟವಿಲ್ಲದಂತೆ ಅಮಲ್ದಾರರು ಪೋಲೀಸಿನವರ ಕಾವಲನ್ನು ಹೆಚ್ಚಿಸಿದರೆ ಉತ್ತಮ.—ಇಲ್ಲಿ ಮೊಹರಂ ಕಾಲದಲ್ಲಿ ಒಂದು ದೊಡ್ಡ ಕಳವು ನಡೆಯಿತು. ಒಂದು ದಿನ ರಾತ್ರಿ ೮—೯ ಗಂಟೆಯಲ್ಲಿ ಕೆಲವರು ವೇಷಹಾಕಿಕೊಂಡು ತಮಾಷೆ ಮಾಡುತ್ತಿರಲು, ಜನರು ಚಾಮಲಾಪುರದ ಬೀದಿಯಲ್ಲಿ ನೋಡುತ್ತಾ ಇದ್ದರು. ಆಗ್ಗೆ ವಿಠಾಯಿ ಚನ್ನಪ್ಪನವರ ಶಾಯಿ ಬಾಗಿಲು ಮುಚ್ಚಿಕೊಂಡು ಬೀದಿಗೆ ಬಂದು ತಮಾಷೆ ನೋಡುತ್ತಿರಲು, ಯಾರೋ ಆ ಮನೆ ಬೀಗಮುರಿದು ನಗದು ೩,೬೦೦ ರೂಪಾಯಿ ಮಾಲನ್ನು ಹೊತ್ತುಕೊಂಡು ಹೋದರು. ಕೂಡ್ಲೆ ಪೋಲೀಸಿಗೆ ರಿಪೋರ್ಟು ಆಯಿತು. ಆದರೆ ಕಳ್ಳರು ಈ ವರೆಗೂ ಪತ್ತೆ ಆಗಲಿಲ್ಲ. ಮಾಲೀಕರು ಬಹು ಚಿಂತೆಪಡುತ್ತಿದಾರೆ. ಮಾಲುಗಳನ್ನು ಪತ್ತೆಮಾಡಿ ಕೊಟ್ಟವರಿಗೆ ಅವರು ೫೦೦ ರೂಪಾಯಿ ಬಹುಮಾನಕೊಡುವದಾಗಿ ಮಾತುಕೊಟ್ಟಿದಾರೆ.—ಇಲ್ಲಿ ಬಿಸಲಿನ ತಾಪವು ದಿನೇ ದಿನೇ ಹೆಚ್ಚುತ್ತಾ ಬರುತ್ತದೆ. ಜನವರಿ ತಿಂಗಳಿನಲ್ಲಿ ಕಾಲುವೆಯಲ್ಲಿ ನೀರನ್ನು ಬಿಡದೆ ಹೋದದ್ದರಿಂದ ನಲ್ಲಿಗಳಲ್ಲಿ ನೀರು ಇಲ್ಲದೆ ಜನಗಳ ಕಷ್ಟ ಅಷ್ಟಿಷ್ಟೆಂದು ಹೇಳುವದಸಾಧ್ಯವಾಗಿರುತ್ತೆ. ಮಾರ್ಚಿ ೧ ರಿಂದ ೨೦ ನೇ ತಾರೀಖುವರೆಗೆ ನಾಲಾದಲ್ಲಿ ನೀರು ಬಿಡುವಂತೆ ಸರ್ಕಲರ್ ಇದ್ದಾಗ್ಯೂ, ಇದರಂತೆ ಮಾಡಿದರೆ ೧೬ ನೇ ತಾ. ನಲ್ಲಿ ನಡೆಯುವ ಶ್ರೀಕಂಠೇಶ್ವರ ಸ್ವಾಮಿ ದೊಡ್ಡ ಜಾತ್ರೆಕಾಲದಲ್ಲಿ ಬರುವ ಸೇವಾ ಜನರಿಗೆ ನೀರಿನ ತೊಂದರೆಯು ತಪ್ಪಬಹುದಾಗಿತ್ತೆಂದು ನಮ್ಮ ಅಮಲ್ದಾರ್ ಮೆ॥ ಧರ್ಮರಾಯರು ತಿಳಿದು, ೧೧ ನೇ ತಾ. ನಿಂದ ೩೦ ನೇ ತಾ. ವರೆಗೆ ನೀರು ಬಿಡಿಸುವಂತೆ ಏರ್ಪಾಡು ಮಾಡಿದಾರೆ. ಕಪಿಗಳ ಗುಂಪಿನಿಂದ ಇಲ್ಲಿನ ಜನಗಳ ಮನೆ, ಪದಾರ್ಥಗಳು ನಷ್ಟವಾಗುತ್ತಿದ್ದುದ್ದು ಹೇಳಲಸಾಧ್ಯ. ಅಮಲ್ದಾರರು ಈ ಕಷ್ಟವನ್ನು ತಪ್ಪಿಸಬೇಕೆಂದು ಯೋಚಿಸಿ, ಕಪಿ ಒಂದಕ್ಕೆ ಹಿಡಿದವನಿಗೆ ೫॥ ಆಣೆಯಂತೆ ಬಹುಮಾನ ಕೊಡುವದಾಗಿ ಗೊತ್ತುಮಾಡಿ, ಇದುವರೆಗೆ ನೂರಾರು ಕಪಿಗಳನ್ನು ಹಿಡಿಸಿ, ಅವುಗಳನ್ನೆಲ್ಲಾ ಮುಮ್ಮರಾಯನ ಗುಡ್ಡ ಕಾಲಿಯ್ಸ್ ಎಂಬ ಗುಡ್ಡದ ಬಳಿ ಇರುವ ಹುಣಿಸೆ ಮರದ ತೋಪಿಗೆ ಬಿಡಿಸಿ, ಅವುಗಳಿಂದ ಟೌನ್ ಪ್ರಜೆಗಳಿಗೆ ಆಗುತ್ತಿದ್ದ ತೊಂದರೆಯನ್ನು ನಿವಾರಣೆಮಾಡಿಸಿ, ಕೀರ್ತಿ ಸಂಪಾದಿಸಿಕೊಂಡರು. ಆದರೆ ನಮ್ಮ ಅಮಲ್ದಾರರು ರಾತ್ರಿ ೮—೯ ಗಂಟೆ ವರವಿಗೂ ಕಚೇರಿ ಮಾಡುವುದರಿಂದ, ದೂರಪ್ರಾಂತ ಗ್ರಾಮಗಳಿಂದ ಬರತಕ್ಕ ಜನಗಳು ವಾಪಸು ತಮ್ಮ ಸ್ಥಳ ಸೇರುವುದಕ್ಕೆ ತೊಂದರೆಯಾಗುತ್ತೆಂದು ಅಂದುಕೊಳ್ಳುವರು. ಇವರು ತಮ್ಮ ಹೆಸರಿಗೆ ತಕ್ಕಂತೆ ಶಾಂತಸ್ವಭಾವವುಳ್ಳವರಾಗಿರುವುದರಿಂದ ತಾಲ್ಲೋಕು ನೌಕರರಲ್ಲಿ ಕೆಲವರಿಗೆ ದುಸ್ಟೇಷ್ಟೆಯು ಹೆಚ್ಚುವುದಕ್ಕೆ ಅವಕಾಶವಾಗಿರುವಂತೆ ಕಾಣುವದು. ಈ ಭಾಗದಲ್ಲಿ ಅವರು ಗಮನ ಕೊಡಬೇಕಾಗಿದೆ.

ಬೆಂಗಳೂರು.—ಬೆಂಗಳೂರು ಗೌರ್ನಮೆಂಟ್ ಗರಲ್ಸ್ ಸ್ಕೂಲ್ ವಿದ್ಯಾರ್ಥಿನಿಯರಿಗೆ ಬಹುಮಾನಗಳನ್ನು ಹಂಚುವುದಕ್ಕಾಗಿ ಈ ಮಾಹೆ ೩ ನೆ ತಾ. ಮಂಗಳವಾರ ಮಧ್ಯಾಹ್ನ ೪ ಗಂಟೆಗೆ ಈ ಊರಿನ ಅನೇಕ ದೊಡ್ಡಮನುಷ್ಯರ ಭಾರ್ಯೆಯರೂ, ವಿದ್ಯಾರ್ಥಿನಿಗಳ ತಾಯಿಂದಿರೇ ಮೊದಲಾದ ಸ್ತ್ರೀ ಬಂಧುವರ್ಗದವರೂ "ಜನೋಪಕಾರಿ" ಸಾಹುಕಾರ್ ದೊಡ್ಡಣ್ಣನವರ ಸ್ಕೂಲ್ ಕಟ್ಟಡದಲ್ಲಿ ಸಭೆ ಸೇರಿದ್ದರು. ಅನೇಕಮಂದಿ ಯೂರೋಪಿಯನ್ ದೊರೆಸಾನಿಯರೂ ಬಂದಿದ್ದರು. ಈ ಸಭೆಯ ಅಗ್ರಾಸನವನ್ನು ಕೃಪೆಯಿಟ್ಟು ಮಹಾಮಾತೃಶ್ರೀ ಮಹಾರಾಣೀ ವಾಣೀವಿಲಾಸ ಸನ್ನಿಧಾನ, ಸಿ. ಐ. ಯವರು ಅಲಂಕರಿಸಿದ್ದರು. ಮಾತೃಶ್ರೀಯವರು ಚಿತ್ತೈಸುತ್ತಲೇ ವಾದ್ಯಘೋಷವೂ ಮಹಿಳಾಜನದ ಜಯಘೋಷವೂ ಮೊಳಗಿದವು. ಮಾತೃಶ್ರೀಯವರು ಅಗ್ರಾಸನವನ್ನು ಕೈಗೊಳ್ಳುತ್ತಲೇ ಪ್ರೋಗ್ರಾಮಿನಂತೆ ಬಾಲಕಿಯರು ಹಾಡುಗಳನ್ನೂ, ಕನ್ನಡ, ಸಂಸ್ಕೃತ, ಇಂಗ್ಲೀಷ್ ಪದ್ಯಗಳನ್ನೂ ಮಾಧುರವಾಗಿ ಗಾನ ಮಾಡಿದರು. ಅನಂತರ ಸ್ಕೂಲುಗಳ ರಿಪೋರ್ಟು ಓದಲ್ಪಟ್ಟಿತು. ಮುಂದಿನ ಕಾರ್ಯವು ಬಹುಮಾನಗಳನ್ನು ಹಂಚುವುದಾಗಿತ್ತು. ಪ್ರತಿತರಗತಿಯ ಮೊದಲಿನ ಮೂರು ಮಂದಿ ಬಾಲೆಯರು ಬೆಲೆ ಬಾಳುವ ಬೆಳ್ಳಿಯ ಬಟ್ಟಲುಗಳನ್ನು ಪಡೆದರು. ಸರ್ಕಾರದವರು ದಯಪಾಲಿಸಿದ ದ್ರವ್ಯದ ಜತೆಗೆ, ಪದಾರ್ಥರೂಪವಾಗಿ ಹಲವು ವಿದ್ಯಾಭಿಮಾನಿಗಳು ಬಹುಮಾನಗಳನ್ನು ತಾವಾಗಿ ಕಳುಹಿಸಿಕೊಟ್ಟರು. ಅವರಲ್ಲಿ ಮೆ॥ ಗಳಾದ ಸಾಹುಕಾರ ದೊಡ್ಡಣ್ಣನವರು, ಚಿತ್ರದುರ್ಗದ ಸೂರಪ್ಪಶೆಟ್ಟರು, ಡಿ. ಆದೆಪ್ಪನವರು, ಬಿಂತಲಪಲ್ಲಿ ವೆಂಕಟಮುನ್ನಯ ಶೆಟ್ಟರು, ಸಜ್ಜನರಾಯರು, ರಾಜಾವೆಂಕಟಸುಬ್ಬಶೆಟ್ಟರು, ಬಿ. ಚನ್ನಸಾಮಿಶೆಟ್ಟರೇ ಮೊದಲಾದವರು ಗೌರ್ನಮೆಂಟು ಗರಲ್ಸ್ ಸ್ಕೂಲಿಗೆ ೬ ಬೆಳ್ಳಿಯ ಬಟ್ಟಲುಗಳನ್ನು ಕಳುಹಿಸಿದರು. ಈ ಸಂದರ್ಭದಲ್ಲಿ, ಕರಿಯಪ್ಪಶೆಟ್ಟರು ಮರ್ಯಾದಿತರಾಗುವಂತೆ ಮಾಡಲು, ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ಎಲ್. ಕೃಷ್ಣರಾಯರು ಮಾತೃಶ್ರೀಯವರ ಸ್ವಾರಿಯು ಚಿತ್ತೈಸುವ ವರವಿಗೆ ಸಭಾಭವನದ ಬಾಗಿಲಿನಲ್ಲಿದ್ದು, ಇಂಥವರು ಬಂದರೆಂದು ಹೇಳುತ್ತಲೇ ಇದ್ದರು. ಇದರಿಂದ ಸ್ಕೂಲಿನ ಅಧಿಕಾರಿಗಳು ಅವರನ್ನು ಕೃತಜ್ಞತೆಯಿಂದ ವಂದಿಸದಿರಲಾರರು. "ಜನೋಪಕಾರಿ" ಸಾಹುಕಾರ್ ದೊಡ್ಡಣ್ಣನವರು ಅವರ ಪಾಠಶಾಲೆಯನ್ನು ಅಲಂಕಾರಗೊಳಿಸಿ, ಸರ್ವಸೌಲಭ್ಯಗಳನ್ನು ಮಾಡಿಕೊಟ್ಟಿದ್ದರು. ಇವರ ಸಹಧರ್ಮಿಣಿಯವರು ಇಂಥಾ ಸಂದರ್ಭದಲ್ಲಿ ತಮ್ಮ ಸಂತೋಷಾತಿಶಯಕ್ಕನುಗುಣವಾಗಿ ಸಭೆಯಲ್ಲಿ ಸೇರಿದ್ದ ಆಯಾ ಮಹಿಳೆಯರನ್ನು ಪುಷ್ಪ, ತಾಂಬೂಲ, ಫಲ, ಅರಿಶಿನ ಕುಂಕುಮಗಳನ್ನು ಕೊಟ್ಟು ಆದರಮಾಡಿ ಸತ್ಕೃತ್ಯರಾದರು. ದಾರಿಯಲ್ಲಿ ಬಾಲಕಿಯರು ಬರುವಾಗಲೂ, ಹೋಗುವಾಗಲೂ ಪೋಲೀಸ್ ಸಿಬ್ಬಂದಿಯವರು ಶ್ರದ್ಧೆಯಿಂದ ಫಿರ್ಯಾದಿಗವಕಾಶವಿಲ್ಲದಂತೆ ನೋಡಿಕೊಂಡರು. ಇಷ್ಟಕ್ಕಿಂತಲೂ ಮೇಲಾಗಿ ಮಹಾಮಾತೃಶ್ರೀಯವರು ಇಂಥಾ ಸಂದರ್ಭದಲ್ಲಿ ಪುರಸ್ತ್ರೀಯರಿಗೆ ದರ್ಶನವನ್ನಿತ್ತು, ಅವರನ್ನು ಉಲ್ಲಾಸಗೊಳಿಸಿ, ಪಾಠಶಾಲೆಗಳ ಶ್ರೇಯ ಪ್ರಾರ್ಥನೆಯನ್ನು ಹಾರೈಸಿ, ಪಾಠಶಾಲಾಧಿಕಾರಿಗಳಿಂದ ಒಪ್ಪಿಸಲ್ಪಟ್ಟ ಪುಷ್ಪಹಾರಗಳನ್ನು ಸ್ವೀಕರಿಸಿ, ರಾಜಭವನವನ್ನು ಕುರಿತು ಚಿತ್ತೈಸಿದರು. ಇಂಥಾ ವಿದ್ಯಾಭಿಮಾನಿಗಳೂ ನಿಗರ್ವಶಿರೋಭೂಷಣೆಯರೂ ಆದ ಮಹಾಮಾತೃಶ್ರೀಯವರನ್ನು ಪುತ್ರಪೌತ್ರ ಬಂಧು ಪ್ರಜಾವರ್ಗದೊಡನೆ ಶ್ರೀಭಗವಂತನು ಆಯುರಾರೋಗ್ಯಗಳನ್ನಿತ್ತು ಸಲಹಲಿ.

ಚಿಕ್ಕಮಗಳೂರು.—ಬಿಸಲಿನ ಝಳ ಹೆಚ್ಚುತ್ತಲಿದೆ. ರಾತ್ರಿಯಲ್ಲಿ ಚಳಿ ಜಾಸ್ತಿಯಾಗಿದೆ. ದವಸಧಾನ್ಯಗಳ ಧಾರಣೆ ಏರುತ್ತದೆ. ಅಕ್ಕಿ ರೂಪಾಯಿಗೆ ೭—೮ ಸೇರು, ರಾಗಿ ೧೬ ಸೇರು ಮಾರುತ್ತದೆ. ಇತರ ಪದಾರ್ಥಗಳ ವಿಷಯ ಹೇಳಲೇ ಕೆಲಸವಿಲ್ಲ.—ಪ್ಲೇಗ್ ನಿಂತಿದೆ. ಇತರ ಕಾಯಿಲೆಗಳು ಅಲ್ಲಲ್ಲಿ ಜಾಸ್ತಿಯಾಗುತ್ತಲಿವೆ. ಬಿಸಲಿನ ದೆಸೆಯಿಂದ ನಾಯಿಗಳಿಗೆ ಹುಚ್ಚುಹಿಡಿದು ಜನರಮೇಲೆ ಬಿದ್ದು ಕಚ್ಚಲಾರಂಭವಾಗಿದೆ. ಈ ವಿಷಯಕ್ಕೆ ಸರ್ಕಾರದವರು ಗಮನಕೊಟ್ಟು, ಕೇರಿ ನಾಯಿಗಳನ್ನು ಕೊಲ್ಲಿಸಿದರೆ ಪ್ರಯೋಜನ.—ಇಲ್ಲಿರುವ ಮಿಷನ್ ದೇವಸ್ಥಾನವನ್ನು ಕೆಲವು ಕಾಲದಿಂತ ಘನ ಪಾದ್ರಿಗಳಾದ ಜೆ. ರೆಡ್‍ಮಂಡ್ ಸಾಹೇಬರು ಬಹು ಪ್ರಯಾಸಪಟ್ಟು ಹಿಂಭಾಗವನ್ನು ವಿಸ್ತಾರಣೆ ಮಾಡಿಸಿ ಬಹು ಅಲಂಕಾರ ಮಾಡಿಸಿದ್ದರು. ಚೇರ್‍ಮನ್‍ರಾದ ಘನ ಜೆ. ಡಬ್ಲಿಯು. ಸಾಡೆ ದೊರೆಗಳು ಇದೇ ಮಾರ್ಚಿ ೧ ನೇ ತಾ. ಭಾನುವಾರ ಇಲ್ಲಿಗೆ ದಯಮಾಡಿಸಿ, ಅದನ್ನು ಪ್ರತಿಷ್ಠೆ ಮಾಡಿದರು. ಆಗ್ಗೆ ಇಲ್ಲಿನ ಕ್ರೈಸ್ತ ಮಂಡಲಿಯವರೂ, ಹಿಂದೂ ಜನ ಇತರರೂ ದೇವಸ್ಥಾನದಲ್ಲಿ ಹಾಜರಾಗಿದ್ದರು. ಪ್ರತಿಷ್ಠೆಯ ಕಾರ್ಯಗಳೆಲ್ಲಾ ನೆರವೇರಿದ ನಂತರ ಘನ ಸಾಡೇ ದೊರೆಗಳು ಅದೇ ದಿನ ಸಾಯಂಕಾಲ ವಾಪಸು ದಯಮಾಡಿದರು.—ಫೆಬ್ರವರಿ ೨೩ ನೇ ತಾ. ಸಾಯಂಕಾಲ ಇಂಗ್ಲೀಷ್ ಹೈಸ್ಕೂಲ್ ಕಟ್ಟಡದಲ್ಲಿ ಕನ್ನಡ ಸ್ಕೂಲ್ ಉಪಾಧ್ಯಾಯ ಸಂಘದವರ ಕೋರಿಕೆಯಂತೆ ಕಡೂರು ಡಿಸ್ಟ್ರಿಕ್ಟ್ ಸಿವಿಲ್ ಸರ್ಜನ್‍ರಾದ ಮೆ॥ ಕೆ. ಎಸ್. ಅಪ್ಪಯ್ಯನವರು ದೇಹತತ್ವದ ವಿಚಾರವಾಗಿ ಸರಸವಾಗಿಯೂ, ಸರಳವಾಗಿಯೂ, ಸರ್ವರಿಗೂ ಚನ್ನಾಗಿ ತಿಳಿಯುವಹಾಗೆಯೂ ಕನ್ನಡ ಭಾಷೆಯಲ್ಲಿ ಉಪನ್ಯಾಸ ಮಾಡಿದರು. ಈ ಸಭೆಗೆ ಸಬ್ ಜಡ್ಜಿಯವರು, ಅಸಿ. ಕಮಿಷನರೇ ಮೊದಲಾದ ದೊಡ್ಡಮನುಷ್ಯರೂ, ಇತರರೂ, ಕಾಲೇಜ್ ಮತ್ತು ಹೈಸ್ಕೂಲ್ ಉಪಾಧ್ಯಾಯರುಗಳೂ, ವಿದ್ಯಾರ್ಥಿಗಳೂ ಸಹ ಬಂದಿದ್ದರು. ಉಪನ್ಯಾಸದ ವಿಷಯವು ಸರ್ವಸಾಮಾನ್ಯವಾಗಿ ದುರವಗಾಹವಾದ ಶಾಸ್ತ್ರವಿಷಯಕವಾಗಿದ್ದರೂ, ಅವರು ಅನುಕ್ರಮವಾಗಿ ವೇದಾಂತ ಶಾಸ್ತ್ರದೊಡನೆ ಸಂಗ್ರಹಿಸಿ ಎಲ್ಲರ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವಂತೆ ವ್ಯಕ್ತಗೊಳಿಸಿದರು. ದೇಹನಿರ್ಮಾಣ ವಿಚಿತ್ರವನ್ನೂ ಅದರ ವ್ಯಾಪಾರವನ್ನೂ ಸ್ಪಷ್ಟಗೊಳಿಸಲು, ಕುರಿಯ ಶ್ವಾಸಕೋಶಗಳು, ಹೃದಯ, ಅನ್ನನಾಳ, ಜಠರ, ಕಾಲಖಂಡ, ಗುಲ್ಮ, ಮೇಧಸ್ಸು, ಬೆಂಕೆ ಗ್ರಂಥಿ, ಮೂತ್ರಪಿಂಡ, ಮೆದಳು, ನರ ಮೊದಲಾದವುಗಳನ್ನು ತೋರಿಸಿದ್ದಲ್ಲದೆ, ಮಾನುಷ ಭಾವಚಿತ್ರದಲ್ಲಿ ಅವಯವ, ಇಂದ್ರಿಯ, ರಕ್ತನಾಳ, ನರಗಳನ್ನು ಗುರ್ತುಮಾಡಿ ಆತ್ಮವಿಚಾರ ಶಾಸ್ತ್ರಸಮ್ಮತವಾಗಿ ಉದಾಹರಿಸಿದರು. ಇದಲ್ಲದೆ ನೀರಿನಲ್ಲಿರುವ ಸೂಕ್ಷ್ಮ ಕ್ರಿಮಿಗಳನ್ನೂ ಜ್ವರಾದಿಗಳನ್ನುಂಟುಮಾಡುವ ಕ್ರಿಮಿಗಳನ್ನೂ ಸಹ ಸೂಕ್ಷ್ಮದರ್ಶಕ ಯಂತ್ರದ ಮೂಲಕ ತೋರಿಸಿದರು. ಮುಂದೆ ಈ ಸಂಘದವರ ಪ್ರಾರ್ಥನೆಯಂತೆ ನೀರಿನ ಗುಣದೋಷಗಳನ್ನು ಉಪನ್ಯಾಸ ಮಾಡೋಣವದರಲ್ಲಿ ಬದ್ಧರಾಗಿ, ವಾಗ್ದಾನ ಕುತೂಹಲವನ್ನು ವೃದ್ಧಿಗೊಳಿಸಿರುವದರಿಂದ, ಈ ಸಂಘದವರು ಕೃತಜ್ಞರಾಗಿರುವರು. ಉಪನ್ಯಾಸಾನಂತರ ಸಂಘದ ಪ್ರಸಿಡೆಂಟರಾದ ಸ್ಕೂಲ್‍ಗಳ ಡೆಪ್ಯುಟಿ ಇನ್ಸ್‍ಪೆಕ್ಟರ್ ಮೆ॥ ಎಚ್. ಎನ್. ವೆಂಕಟರಮಣಯ್ಯನವರು ಉಪನ್ಯಾಸಕರಿಗೆ ಸಂಘದವರ ಆನಂದ ಮತ್ತು ಕೃತಜ್ಞತೆ ಪೂರ್ವಕವಾದ ವಂದನೋಕ್ತಿಗಳನ್ನು ಸಮರ್ಪಿಸಿ ಉಪನ್ಯಾಸಕ್ಕಾಗಿ ಸ್ಥಳಾವಕಾಶ ಕೊಟ್ಟ ಹೈಸ್ಕೂಲ್ ಹೆಡ್ ಮಾಸ್ಟರ್ ಮೆ॥ ಟಿ. ರಾಮಯ್ಯನವರನ್ನು ಸಂಘದವರು ವಂದಿಸಿರುವರೆಂದು ಸೂಚಿಸಿದರು.

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಸತ್ಯವಾದಿ—ಚನ್ನಪಟ್ಟಣ, ಯಥಾರ್ಥವಾದಿ—ಹುಣಸೂರು, ಈ ಬಾತ್ಮಿಗಳನ್ನು ಪ್ರಕಟಿಸಲಾರೆವು.

ಉಪಾಧ್ಯಾಯರ ಸಂಘ, ರೀಡಿಂಗ್ ರೂಮ್—ಈ ವಿಚಾರದ ಬಾತ್ಮಿಗಳನ್ನು ಪ್ರಕಟಿಸಿದೇವೆ. ಉಪನ್ಯಾಸಗಳನ್ನು ಪ್ರಕಟಿಸಲು ಅವಕಾಶವಾಗಲಿಲ್ಲ.

ಬೆಂಗಳೂರು ಕೋಲಪಾತಕ ಸಂಘದವರು ವಿಷದ್ರಾವಕಾದಿಗಳನ್ನು ಸಿಟಿ ಮೆಡಿಕಲ್ ಹಾಲ್‍ನಲ್ಲಿ ಅಲ್ಲ, ಶ್ರೀರಾಂ ಮೆಡಿಕಲ್ ಹಾಲ್‍ನಲ್ಲಿ ಪಡೆಯುತ್ತಿದ್ದರೆಂದು ಒಬ್ಬ ಬಾತ್ಮಿದಾರರು ಬರೆದಿದಾರೆ.

—ಎಡಿ।

ಕರೆಸ್‍ಪಾಂಡೆನ್ಸ್.

ಶಿವಮೊಗ್ಗಾ ಜನಗಳ ತೊಂದರೆ

ಅಯ್ಯಾ,

ಮೈಸೂರು ಸೀಮೆಯಲ್ಲಿ ಶಿವಮೊಗ್ಗೆಯು ಒಂದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ಎನ್ನುವದು ಎಲ್ಲರಿಗೂ ಗೊತ್ತಿದೆಯಷ್ಟೆ. ಬೆಂಗಳೂರು, ಮೈಸೂರು, ಇವೆರಡು ಸ್ಥಳಗಳನ್ನು ಬಿಟ್ಟರೆ ಮೂರನೇದು ಇದೇ. ಎಲ್ಲದರಲ್ಲಿಯೂ ಉತ್ತಮ ಸ್ಥಿತಿಯಲ್ಲಿತ್ತು. ಇಂಥಾ ಸ್ಥಳದಲ್ಲಿ ಪ್ರತಿ ವರ್ಷವೂ ಜನಗಳು ಪ್ಲೇಗು, ಕಾಲರಾ ಮುಂತಾದ ಸಾಂಕ್ರಾಮಿಕ ರೋಗಗಳಿಗೆ ತಲೆಕೊಟ್ಟು, ಈಗ್ಗೆ ಎಲ್ಲಾ ಸ್ಥಳಗಳಿಗಿಂತಲೂ ಕನಿಷ್ಠವಾದ ಮತ್ತು ಅನಾರೋಗ್ಯವಾದ ಡಿಸ್ಟ್ರಿಕ್ಟ್ ಎಂದು ಎಲ್ಲರಿಂದಲೂ ಅನ್ನಿಸಿಕೊಳ್ಳುತ್ತಾ ಇದೆ. ಮನುಷ್ಯನಿಗೆ ಆರೋಗ್ಯಭಾಗ್ಯವೇ ಭಾಗ್ಯವೇ ವಿನಹಾ ಇತರ ಯಾವ ಐಶ್ವರ್ಯವೇ ಆಗಲಿ ಅದರ ಪ್ರತಿಫಲವನ್ನು ಕೊಡಲಾರದು. ಅದಕ್ಕೆ ಕುಂದಕವುಂಟಾದರೆ ಮನುಷ್ಯನಿಗೂ ಯಾವ ಸುಖವೂ ಇಲ್ಲದೆ ನರಳಬೇಕಾಗುವುದು. ಆರೋಗ್ಯವು ಕೆಡಬೇಕಾದರೆ ಮುಖ್ಯವಾಗಿ ನೀರು, ಗಾಳಿ, ಇವೆರಡರಿಂದ ಕೆಟ್ಟುಹೋಗುತ್ತದೆ. ಇವೆ ಎರಡು ಮಾತ್ರ ಶಿವಮೊಗ್ಗದಲ್ಲಿ ಕಡಮೆಯಾಗಿರುವದರಿಂದ ಇಂಥಾ ಸ್ಥಿತಿಯಲ್ಲಿ ೭—೮ ವರ್ಷವೂ ಪ್ಲೇಗು ಮುಂತಾದ್ದರಿಂದ ೬—೭ ಸಾವಿರ ಜನರು ಪ್ರಾಣಗಳನ್ನು ಕಳೆದುಕೊಂಡರು. ಈ ಊರಿನವರೆಲ್ಲಾ ನದಿಯ ನೀರನ್ನೇ ವಿಶೇಷವಾಗಿ ಕುಡಿಯುತ್ತಾರೆ. ನೀರು ಮೈಲಾದಿಂದ ಮಿಶ್ರವಾದ್ದರಿಂದಲೂ, ಅನೇಕ ಕಶ್ಮಲಗಳು, ಎಲೆ, ಬೂದಿ, ಕಸ ಮುಂತಾದವುಗಳಿಂದಲೂ ಕೆಟ್ಟುಹೋಗಿರುತ್ತದೆ. ಇದೂ ಅಲ್ಲದೆ, ಎಲ್ಲರೂ ನದಿಯಲ್ಲಿ ಬಹಿರ್ದೇಶಕ್ಕೆ ಹೋಗಿ ಆ ನೀರನ್ನೆಲ್ಲಾ ಕೆಡಿಸುತ್ತಾರೆ. ಮೊದಲು ಮೆ॥ ಎಂ. ಎಸ್. ನಾರಾಯಣರಾಯರು ಡೆಪ್ಯುಟಿ ಕಮಿಷನರಾಗಿದ್ದಾಗ್ಗೆ ನದಿಯಲ್ಲಿ ಯಾರೂ ಬಹಿರ್ದೇಶಕ್ಕೆ ಹೋಗ-

ಕೂಡದೆಂತಲೂ ಪೋಲೀಸ್ ಶಿಪ್ಪಂದಿಯನ್ನು ಇಟ್ಟು ಮೇಲ್ಕಂಡ ಕೂಲಸನ್ನು ಅತಿಕ್ರಮಿಸಿದವರನ್ನು ಹಿಡಿಸಿ ಜುಲ್ಮಾನೆ ಮುಂತಾದ್ದರಿಂದ ಶಿಕ್ಷೆಗೆ ಗುರಿಪಡಿಸುತ್ತಿದ್ದರು. ಆದ್ದರಿಂದ ಈಗಿನಷ್ಟು ಅನಾಹುತಕ್ಕೆ ಕಾರಣವಿರುತ್ತಿರಲಿಲ್ಲ. ಈಚೆಗೆ ಈ ರೂಲು ಯಾವ ಕಾರಣದಿಂದಲೋ ಹಿಂತಕ್ಕೋಗಿ, ಮೊದಲಿದ್ದ ಕಷ್ಟಕ್ಕಿಂತಲೂ ಪ್ರಬಲವಾದ ಉದ್ಘಾಟನಕ್ಕೆ ಕಾರಣವಾಯಿತು. ಇದು ಹಾಗಿರಲಿ ಗಾಳಿಯ ವಿಷಯದಲ್ಲಿ ನೋಡಿದರೆ ಇದು ಮೇಲ್ಕಂಡ ನೀರಿಗಿಂತಲೂ ಕನಿಷ್ಠ ಸ್ಥಿತಿಯಲ್ಲಿ ಇರುತ್ತದೆ. ಆದರೆ ಇಲ್ಲಿಯ ಮ್ಯುನಿಸಿಪಾಲಿಟಿಯವರು ಈ ವಿಷಯದಲ್ಲಿ ಇಷ್ಟರಮಟ್ಟಿಗೆ ಗಮನ ಕೊಡದೆ ಇರುವದು ಬಹಳ ವಿಷಾದಕರವಾಗಿದೆ. ಎಲ್ಲಿ ನೋಡಿದರೂ ಎಂಜಲೆಲೆ, ಬೂದಿ, ಕಸ ತುಂಬಿ, ಹಾಸನೆ ಹುಟ್ಟಿ ಸುತ್ತಮುತ್ತಲೂ ಇರುವ ಗಾಳಿಯನ್ನು ಕೆಡಿಸಿಬಿಡುತ್ತದೆ. ಈಗ ಪುನಃ ಇಲ್ಲಿ ಪ್ಲೇಗು, ಕಾಲರಾ ಗಲಾಟೆ ಇರುತ್ತದೆ. ನೆನ್ನೆ ಮೊನ್ನೆಯಲ್ಲಿ ೨-೩ ಕೇಸುಗಳು ಆದವು. ಈಗ ನದಿಯ ನೀರು ಕುಡಿಯಕೂಡದೆಂತಲೂ, ಆ ನೀರನ್ನು ಮುಟ್ಟಕೂಡದೆಂತಲೂ ನಿರ್ಬಂಧಪಡಿಸಿರುತ್ತಾರೆ ಇದನ್ನು ಮಾಡುವದಕ್ಕಿಂತಲೂ ಮೇಲ್ಕಂಡ ದುಷ್ಕಾರ್ಯವನ್ನು ನಿಲ್ಲಿಸುವದು ಉತ್ತಮವಲ್ಲವೇ ? ಆದ್ದರಿಂದ ಇಲ್ಲಿಯ ದೊಡ್ಡ ಉದ್ಯೋಗಸ್ಥರು ಮೇಲ್ಕಂಡ ವಿಷಯಗಳನ್ನು ಮನಸ್ಸಿಗೆ ತಂದು, ನದಿಯಲ್ಲಿ ನಡೆಯುವ ಅಸಹ್ಯ ಕಾರ್ಯಗಳನ್ನೂ, ಊರಲ್ಲಿ ನಡಿಯುವ ವಿಪರೀತಗಳನ್ನೂ ಸರಿಪಡಿಸಿ ಪ್ರಜೆಗಳನ್ನು ಒಳ್ಳೆಯ ಸ್ಥಿತಿಲ್ಲಿ ಇಟ್ಟರೆ, ಮುಂದೆ ಪ್ಲೇಗು ಕಾಲರಾ ಮುಂತಾದ ಸಾಂಕ್ರಾಮಿಕ ರೋಗಗಳಿಗೆ ಇಷ್ಟು ಜನರು ತಲೆಕೊಡಲಾರರೆಂದು ನಂಬಿರುತ್ತೇನೆ.

ಕ್ಷೇಮಾಪೇಕ್ಷ.

ಹಿರೇಗುಂಟನೂರಿನ ವಿಷಯಗಳು

ಅಯ್ಯಾ,

ಚಿತ್ರದುರ್ಗದ ತಾಲ್ಲೂಕು ಹಿರೇಗುಂಟನೂರು ಗ್ರಾಮದಲ್ಲಿ ಸಾಹುಕಾರರೂ ವಿದ್ಯಾವಂತರೂ ಅನೇಕರಿದ್ದಾರೆ. ಇದ್ದಾಗ್ಯೂ ಈ ಊರಿನ ಸ್ಕೂಲಿನ ಸ್ಥಿತಿಯು ಚೆನ್ನಾಗಿಲ್ಲವು. ಅದೇನೆಂದರೆ, ಈಗ ಹಾಜರಿ ಪುಸ್ತಕದಲ್ಲಿ ೬೦ ಮಂದಿ ವಿದ್ಯಾರ್ಥಿಗಳು ಇದ್ದಾರೆ. ಆದರೆ ಪ್ರತಿದಿವಸ ೨೦-೨೫ ಮಂದಿ ವಿದ್ಯಾರ್ಥಿಗಳು ಹಾಜರಾಗುವರೇ ಹೊರತು ಹೆಚ್ಚಿಗೆ ಇಲ್ಲ. ಸ್ಕೂಲಿನ ಮೆಂಬರೆನ್ನುವರು ಒಂದು ದಿವಸವಾದರೂ ಸ್ಕೂಲಿನ ಸ್ಥಿತಿಯನ್ನು ವಿಚಾರಿಸಿದ್ದನ್ನು ನಾನು ಕಾಣಲಿಲ್ಲ. ಹೀಗಿರುವಲ್ಲಿ ಇದೇ ಗ್ರಾಮದಲ್ಲಿ ಬೇರೆ ಮಾಸ್ತರೊಬ್ಬರು ಕೆಲವು ಮಂದಿ ಬಾಲಕರನ್ನು ಸೇರಿಸಿಕೊಂಡು, ಪಾಠಶಾಲೆಯನ್ನು ಏರ್ಪಡಿಸಿರುತ್ತಾರೆ. ಇಲ್ಲಿನ ಜನಗಳು ಈ ಪಾಠಶಾಲೆಗೇನೇ ತಮ್ಮ ಬಾಲಕರನ್ನು ಕಳುಹಿಸುವದಕ್ಕೆ ಅಪೇಕ್ಷಿಸುತ್ತಾರೆಯೇ ಹೊರತು ಗವರ್ನಮೆಂಟಿನವರು ಧರ್ಮಾರ್ಥವಾಗಿ ಇಟ್ಟಿರತಕ್ಕ ಸರ್ಕಾರಿ ಸ್ಕೂಲಿಗೆ ಕಳುಹಿಸಲು ಇಚ್ಛಿಸುವವರಾಗಿಲ್ಲ. ಹೀಗೆ ಇವರುಗಳು ಅಪೇಕ್ಷಿಸದಿರಲು ಕಾರಣವೇನೋ ಚೆನ್ನಾಗಿ ತಿಳಿಯದು. ಇನ್ನು ಮುಂದಾದರೂ ಈ ಪಟ್ಟಣದ ಜನಗಳು ಒಟ್ಟಾಗಿ ಸೇರಿ, ಸ್ಕೂಲ್ ಉನ್ನತ ಸ್ಥಿತಿಗೆ ತಕ್ಕ ಸನ್ನಾಹಗಳನ್ನು ಮಾಡುವರೆಂಬದಾಗಿ ನಂಬಿದ್ದೇನೆ.

ಇದಲ್ಲದೆ ಈ ಊರಿಗೆ ರಯಲುಬಂಡಿಯನ್ನು ಹೊಸದಾಗಿ ಬಂದ ತರುವಾಯ ಇದರ ಪ್ರಯೋಜನಗಳನ್ನು ಅರಿಯದೆ, ಹಿಂದೆ ಇಂಗ್ಲೀಷಿನವರು ಈ ದೇಶಕ್ಕೆ ಬಂದು ರೈಲ್, ತಂತಿ, ಆಸ್ಪತ್ರೆ, ಅಂಚೆ ಮೊದಲಾದವುಗಳನ್ನು ಇಲ್ಲಿಗೆ ತಂದಾಗ್ಗೆ ಅನೇಕ ಪೊಳ್ಳು ಜನಗಳು ಇವುಗಳ ಪ್ರಯೋಜನಗಳನ್ನು ಅರಿಯದೆ, ನಾನಾರೀತಿಯ ಸ್ವನಿಕಾರ್ಯ ಮೊದಲಾದ ಕೆಲವು ಹಿಂದೂ ಶಿಬಿರಗಳಿಗೆ ಪ್ರೇರಿಸಿ, ಹ್ಯಾಗೆ ಇಂಗ್ಲೀಷ್ ಸ್ವನಿಕರ ಮೇಲೆ ಕೈ ಮಾಡಿಸಿದರೋ ಅದೇ ರೀತಿ ಇಲ್ಲಿನ ಬೇಗಾರರು ಕೆಲವು ದಿನಗಳ ಮಾತುಗಳನ್ನು ಕೇಳಿ, ಜವಾಬ್ದಾರಿ ಕೆಲಸಕ್ಕೆ ತಾವು ಬರುವುದಿಲ್ಲವೆಂಬದಾಗಿ ಮೊದಲು ತಾಲ್ಲೂಕು ಶಿರಸ್ತೇದಾರರ ಮುಂದೆ ಮುಚ್ಚಳಿಕೆಯನ್ನು ಬರೆದುಕೊಟ್ಟು ಹೋಗಿ, ಪುನಃ ಅವರೇ ಅಮಲ್ದಾರ್ ಸಮಕ್ಷಮದಲ್ಲಿ ತಾವು ಜವಾಬ್ದಾರಿ ಕೆಲಸಕ್ಕೆ ಸೇರುತ್ತೇವೆಂಬ ಮುಚ್ಚಳಿಕೆ ಬರೆದು ಕೊಟ್ಟಿದ್ದಾರೆ. ಇಲ್ಲಿನ ಜನಗಳು ಈಚೀಚೆಗೆ ಇದರ ಪ್ರಯೋಜನಗಳನ್ನು ತಿಳಿದು ಕೊಂಡು, ಇದು ಅಭಿವೃದ್ಧಿಯಾಗಲು ತಕ್ಕ ಸನ್ನಾಹಗಳನ್ನು ಮಾಡುತ್ತಾರೆ.

ಇದೇ ಗ್ರಾಮದ ದ್ಯಾವಮ್ಮನ ಗುಡಿ ಪಕ್ಕದಲ್ಲಿರುವ ಸಿಹಿ ನೀರು ಬಾವಿಯ ನೀರನ್ನು ಗ್ರಾಮಸ್ಥರೆಲ್ಲರೂ ಬಳಸುತ್ತಾರೆ. ಇಂಥಾದ್ದರಲ್ಲಿ ಇದರಲ್ಲೇ ಮುಖತೊಳೆಯುವುದು, ಪಾತ್ರೆಗಳನ್ನು ತೊಳೆಯುವುದು, ಇಂಥ ನೀರು ಕೆಡುವುದಕ್ಕೆ ಆಸ್ಪದವಾದ ಕೆಲಸಗಳನ್ನು ಮಾಡುತ್ತಾ ಇದ್ದರು. ಯೂನಿಯನ್ ಮಾಸ್ತರ್ದಿಯು ಇದನ್ನು ತಪ್ಪಿಸುತ್ತಾ ಇದ್ದರೆಂದು ತಿಳಿಯ ಬಂತು. ಇವರ ಜೊತೆಗೆ ಪೋಲೀಸಿನವರೂ ಕೆಲವು ಗ್ರಾಮಸ್ಥರೂ ಸೇರಿದರೆ ಇನ್ನೂ ಕೆಲಂಚ ಕಾಲದಲ್ಲಿಯೇ ಅದನ್ನೆಲ್ಲಾ ನಿಲ್ಲಿಸ ಬಹುದು.

ಸಂತೆಯಲ್ಲಿ ಗಾಡಿ ತಿರುಗುವುದಕ್ಕೂ, ಜನಗಳ ಸಂಚಾರಕ್ಕೂ ದಾರಿ ಬಿಡದೆ ವ್ಯಾಪಾರಸ್ಥರು ಅಂಗಡಿ ಇಟ್ಟು ಕಾಲಿತುಕೊಳ್ಳುತ್ತಿದ್ದರು ಎಂ ಗೋವಿಂದ ಶೆಟ್ಟರು ಬಂದಲಾಗಾಯಿತು ಇದನ್ನು ತಪ್ಪಿಸಿ ಎಲ್ಲರಿಗೂ ಅನುಕೂಲವಾಗುವ ಹಾಗೆ ಏರ್ಪಾಡು ಮಾಡುತ್ತಾ ಇದ್ದದ್ದನ್ನು ಕಂಡೆನು. ಇದರಂತೆಯೇ ಇನ್ನು ಮುಂದೆ ಅನುಕೂಲವಾದ ಕೆಲಸಗಳು ನಡೆಯುತ್ತವೆಂಬು ನಂಬಿದೇನೆ.

ವಿ. ದೇ. ಆ.

ಜೈನರೂ ವಿಧವಾ ಪುನರ್ವಿವಾಹವೂ.

ಅಯ್ಯಾ,

ನಮ್ಮ ದೇಶದ ಜೈನರು ಅನಾದಿಕಾಲದಿಂದಲೂ ಅತಿ ಪ್ರಬಲರಾಗಿದ್ದರೆಂದು ತಿಳಿಯಬರುತ್ತದೆ. ಕಾಲಕ್ರಮೇಣ ಅವರ ಅಭಿವೃದ್ಧಿಯು ಕಡಿಮೆಯಾಗಿ ಸಾಧಾರಣಸ್ಥಿತಿಗೆ ಬಂದಿರುತ್ತಾರೆ ಅವರಲ್ಲಿ ಮತಪದ್ಧತಿಯೂ ಆಚಾರಗಳೂ ಬಹು ಖಂಡಿತವಾಗಿವೆ. ಅದರಲ್ಲೂ ವಿವಾಹ ವಿಚಾರವಂತೂ ಹೇಳಕೂಡದಷ್ಟು ನಿರ್ಬಂಧಗಳಿಂದ ಕೂಡಿ ಆಚರಿಸಲ್ಪಡುತ್ತಿರುವದಲ್ಲದೆ, ಬಾಲ್ಯವಿವಾಹವೂ ರೂಢಿಯಲ್ಲಿರುವದರಿಂದಲೇ ಬಾಲವಿಧವೆಯರ ಸಂಖ್ಯೆಯು ದಿನೇ ದಿನೇ ಹೆಚ್ಚಾಗುತ್ತಿರುವದೇನೂ ಅತಿಶಯವಲ್ಲ. ಸ್ತ್ರೀಪುನರ್ವಿವಾಹ ವಿಷಯವು ಮತಸಂಬಂಧವಾದುದಾಗಿದ್ದರೂ ಅನೇಕ ಸಂವತ್ಸರಗಳಿಂದ ಚರ್ಚಿಸಲ್ಪಡುತ್ತಿದೆ ಕೆಲವರು ದೇಶಬುದ್ಧಿಯಿಂದ ಅದಕ್ಕನುಕೂಲವಾದ ಅಭಿಪ್ರಾಯವನ್ನು ಹೇಳದೆ ಹೋಗಿರುತ್ತಾರೆ. ಸ್ತ್ರೀಪುನರ್ವಿವಾಹವು ಅಂಗೀಕಾರಾರ್ಹವೆಂಬುವದಕ್ಕೆ ಜೈನಶಾಸ್ತ್ರಗಳಲ್ಲಿ ಪ್ರಮಾಣಗಳೇನೂ ಇಲ್ಲವೇ ? ಪ್ರಕೃತಧರ್ಮಗಳಿಗೂ ನೀತಿಪದ್ಧತಿಗಳಿಗೂ ವಿರುದ್ಧವಾಗದಂತೆ ಶಾಸ್ತ್ರವಚನಗಳಿಗೆ ಅರ್ಥವನ್ನು ಹೇಳಬಾರದೇ ? ಶಾಸ್ತ್ರಗಳಾದರೋ ಜನರನ್ನು ನೀತಿಸಂಪನ್ನರಾಗಿ ಮಾಡಲು ಏರ್ಪಟ್ಟಿರತಕ್ಕವುಗಳಲ್ಲವೇ ? ಅದರಂತೆಯೇ ವಿವಾಹಪದ್ಧತಿಯು ನೀತಿಯುಕ್ತವಾದ ಜೀವಿತವನ್ನು ಸಾಗಿಸುವದಕ್ಕಾಗಿ ಏರ್ಪಟ್ಟಿದೆ. ಆದ್ದರಿಂದ ಸ್ತ್ರೀಯರ ರಕ್ಷಣಕರ್ತರು ವಿವಾಹಮಾಡದೆ ಅಕೆ ತಪಸಗೊಪ್ಪಿದವರನ್ನು ಪರಿಸಿ ತಾನೇ ವಿವಾಹ ಮಾಡಿಕೊಳ್ಳಬಹುದೆಂದು ಶಾಸ್ತ್ರವು ಉದ್ಘೋಷಿಸುತ್ತಿದೆಯಲ್ಲವೇ ? ಒಬ್ಬ ಸ್ತ್ರೀಯು ಋತುಮತಿಯಾಗುವುದಕ್ಕೆ ಪೂರ್ವ ವಿಧವೆಯಾದರೆ ಆಕೆಯ ವಿವಾಹೋದ್ದೇಶವು ನೆರವೇರಿದಂತಾಯಿತೇ ? ಅಂಥಾ ಕನ್ಯೆಯು ಪುನಃ ವಿವಾಹವಾಗದಂತೆ ನಿಷೇಧಗೊಳಿಸುವದು ಯಾವ ಧರ್ಮಶಾಸ್ತ್ರ ? ಇದರಿಂದಲೇ ಸ್ತ್ರೀಯು ಋತುಮತಿಯಾಗುವದಕ್ಕೆ ಮೊದಲೇ ವಿವಾಹಿತೆಯಾಗಬೇಕೆಂದೂ, ಅದಕ್ಕೆ ಮುಂಚೆ ವಿಧವೆಯಾದರೆ ಪುನರ್ವಿವಾಹ ಕೂಡದೆಂದೂ ಹೇಳುವದು ಪರಸ್ಪರ ವಿರೋಧವಾದ ಮಾತಲ್ಲವೇ ? ಈ ಸಂಘರ್ಷಣಗಳಿಂದಲೇ ನಮ್ಮ ಜೈನರಲ್ಲಿ ಸಣ್ಣ ವಯಸ್ಸಿನ ವಿಧವೆಯರಿಗೆ ಪುನರ್ವಿವಾಹಕ್ಕೆ ಅವಕಾಶ ಕೊಡದಿರುವದರಿಂದ ಕೆಲವರು ದುರ್ಮಾರ್ಗಪ್ರವರ್ತಕರಾಗಿರುವುದಕ್ಕೆ ಅವಕಾಶವಾಗಿದೆ. ಇಂತಹ ಕೃತ್ಯಗಳಿಗೆ ಪುನರ್ವಿವಾಹವನ್ನು ನಿಷೇಧಿಸುವ ಪುರೋಹಿತರೂ, ಶಾಸ್ತ್ರಿಗಳೂ, ಕುಲಗುರುಗಳೂ ಸಹ ಭಗವಂತನ ಇದಿರಿನಲ್ಲಿ ಉತ್ತರವಾದಿಗಳಾಗಿ ನಿಲ್ಲಬೇಕಲ್ಲವೇ ? ನ್ಯಾಯವಾದ ಬುದ್ಧಿಯಿಂದ ಆಲೋಚಿಸಿದರೆ ಪುನರ್ವಿವಾಹವು ಸ್ತ್ರೀಪುರುಷರೀರ್ವರಿಗೂ ಸಮಾನವಾಗಿಯೇ ಪ್ರವರ್ತಿಸುತ್ತದೆ. ಹಾಗಾದ ಪಕ್ಷಕ್ಕೆ ಪುರುಷರು ವಿಧುರರಾದರೆ (ಅದರಲ್ಲು ಐವತ್ತು ಅರವತ್ತು ವರುಷದ ಕರುಣರು ವಿಧುರರಾದರೆ) ಗಡ್ಡ ಬಿಳಿಸಿಗಳಿಗೆ ಕಲ್ಪ ಮುಂತಾದದ್ದು ಬಳಿದುಕೊಂಡು ಹೆಚ್ಚಾದ ಕನ್ಯಾ ಶುಲ್ಕವನ್ನು ಕೊಟ್ಟು, ೨—೩—೪ ಮದುವೆಗಳಾಗುವದು ಉಂಟಾಗಿರುವಾಗ, ಏನೂ ತಿಳಿಯದ ಹಸುಳೆಗಳನ್ನು ವಿವಾಹ ಮಾಡಿ, ವಿಧವೆಯರಾದರೆ ಯಾರು ತಾನೇ ಕಣ್ಣಿನಿಂದ ನೋಡಲಾಗುವದು ! ಇದರಿಂದಲೂ ಜೈನಧರ್ಮಶಾಸ್ತ್ರದ ಮೂಲಮಂತ್ರವಾದ « ಅಹಿಂಸಾ ಪರಮೋ ಧರ್ಮಃ » ಎಂಬ ನ್ಯಾಯವು ಹಾಳಾದಂತಾಗಲಿಲ್ಲವೆ ? ಆದ್ದರಿಂದ ಮೇಲಿನ ವಿಚಾರಗಳನ್ನು ನಮ್ಮ ಜೈನ ಬಾಂಧವರು ಚೆನ್ನಾಗಿ ಪರ್ಯಾಲೋಚಿಸಿ, ಜನಾಂಗದ ಕ್ಷೀಣತೆಗೆ ಆಧಾರವಾಗಿರುವ ಈ ಅಕ್ರಮಗಳನ್ನು ಪ್ರಕೃತಸ್ಥಿತಿಗೆ ಅನುಸಾರವಾಗಿ ಕ್ರಮಪಡಿಸಿ ಧೈರ್ಯದಿಂದಲೂ, ಚಿತ್ತ ಮನಸ್ಸಿನಿಂದಲೂ ಸ್ತ್ರೀ ಪುನರ್ವಿವಾಹವನ್ನು ಆಚರಣೆಗೆ ತಂದು, ಯಾತಕ್ಕೆ ಪುಣ್ಯಭಾಗಿಗಳಾಗಬಾರದು ? ಎಲ್ಲರೂ ಈ ವಿಷಯದಲ್ಲಿ ಉತ್ಸಾಹಿಗಳಾಗಿರುವವರಾದರೂ ಯಾರಾದರೊಬ್ಬರು ಮೊದಲು ಈ ಕಾರ್ಯವನ್ನು ಕೈಕೊಂಡರೆ ಕ್ರಮವಾಗಿ ಒಬ್ಬೊಬ್ಬರಾಗಿ ಮುಂದರಿಯಲು ಅವಕಾಶವಾಗುತ್ತದೆಂಬ ಆಲೋಚನೆಯಲ್ಲಿಯೇ ತಟಸ್ಥರಾಗಿರುತ್ತಾರೆ. ಆದ್ದರಿಂದ ಮೊದಲು ಜೈನಪ್ರಮುಖರು ಈ ವಿಚಾರದಲ್ಲಿ ಜಾಗ್ರತೆ ಮನಸ್ಸಿರಿಸಿ, ಈ ನ್ಯಾಯವಾಗಿರುವ ಸಂದರ್ಭವನ್ನು ರೂಢಿಗೆ ತಂದು, ಕ್ಷೀಣಿಸಿಂದಿರುವ ಈ ಜನಾಂಗವನ್ನು ಅಭಿವೃದ್ಧಿಪಡಿಸುವಂತೆ ಪ್ರಾರ್ಥಿಸುವ

ಓರ್ವ ಜೈನ ಹಿತೈಷಿ.

ನೀವೇ ಪರೀಕ್ಷಿಸಿ ನೋಡಿರಿ.

08-73

ಯಾವದು ಉತ್ತಮ ? ಸ್ವತಃ ಪರೀಕ್ಷಿಸಿ ನೋಡುವದೋ ಅಥವಾ ಕಲ್ಕತ್ತೆಯ ಒಬ್ಬ ಪ್ರಸಿದ್ಧ ಡಾಕ್ಟರರ ಅನುಭವವನ್ನು ನಂಬುವದೋ ?

ನೂತನವಾಗಿದ್ದರೆ ಪರಿಶೋಧನೆಮಾಡಿ ಕೇಳಿಕೆಗೆ ಸರಿಯಾಗಿ ಉಂಟೋ ಎಂಬದನ್ನು ಖಾತ್ರಿ ಮಾಡಿಕೊಳ್ಳಬೇಕು. ಇಲ್ಲವಾದರೆ ಸಂದೇಹ ಹುಟ್ಟುವದು ಪರಕೀಯವರ ಮಾತು ಪರಿಷ್ಕಾರವಾದ ರುಜುವಾತಾಗಿರುವದಿಲ್ಲ. ಡೋನ್ಸ್ನರ ಬ್ಯಾಕ್ ಏಕ್-ಕಿಡ್ನಿ ಪಿಲ್ಸ್‌ಗಳಿರುವ ಪ್ರತಿ ಒಂದು ಶೀಸೆಯೊಂದಿಗೆ ಸ್ವದೇಶಿಯ ಸಾಕ್ಷ್ಯವು ಇರುತ್ತದೆ. ಈ ಕೆಳಗಿನದನ್ನು ಓದಿ ನೋಡಿರಿ. ಮೆಡಿಕಲ್ ಕಾಲೇಜಿನಲ್ಲಿ ವನಸ್ಪತಿಶಾಸ್ತ್ರದ (ಬಾಟನಿ)-ಮ-ಕಣ್ಣಾನೋವಿನ ವೈದ್ಯದ ಉಪನ್ಯಾಸಕರಾಗಿಯೂ ಈಸ್ಟ್ ಎಂಡ್ ಮೆಡಿಕಲ್ ಕಾಲಿಸಲ್ಲಿ ವೈದ್ಯ ಚಿಕಿತ್ಸಕರಾಗಿಯೂ, ಇರುವ ಡಾಕ್ಟರ್ ಎ. ಬಿ ದೇ ಯವರು ಹೇಳುವದೇನಂದರೆ.— ಡೋನ್ಸ್ನರ ಬ್ಯಾಕ್ ಏಕ್ ಕಿಡ್ನಿ ಪಿಲ್ಸ್‌ಗಳು ಬೆನ್ನುನೋವು-ಮೂತ್ರಕೋಶದ ಔಷಧಿ ಗುಳಿಗೆಗಳನ್ನು ಮುಖ್ಯವಾಗಿ ಬೆನ್ನುನೋವು ಸಹಜವಾದ ಬಾಧೆಯಾಗಿರುವಲ್ಲಿ ಸ್ತ್ರೀಯರಿಗೆ ಮುಖ್ಯವಾಗಿ ಚಿಕಿತ್ಸೆ ನಡಿಸಿ ಹೆಚ್ಚು ಸಮಾಧಾನ ಪಟ್ಟಿದ್ದೇನೆ ಸ್ತ್ರೀಯರ ಅನೇಕ ಅಸ್ವಸ್ಥಗಳು ಮೂತ್ರಪಿಂಡಗಳ ದೋಷದಿಂದಾಗುವಂಥಾದ್ದಾಗಿವೆ ಮತ್ತು ಅಂಥಾ ಯಾವತ್ತೂ ಸಂಗತಿಗಳಲ್ಲಿ ಈ ಔಷಧದಿಂದ ತಕ್ಷಣವೇ ಮತ್ತು ನಿಸ್ಸಂದೇಹವಾಗಿ ಗುಣಾಂಶ ಸಿಕ್ಕುತ್ತದೆ.

ಅವು ಮೂತ್ರಕೋಶದ ಬಗ್ಗೆನೇ ಮುಖ್ಯವಾಗಿ ಉದ್ದೇಶಿಸಲ್ಪಟ್ಟ ಔಷಧವಾಗಿ ಮೂತ್ರಸಂಬಂಧವಾದ ವಿಷಪದಾರ್ಥಗಳನ್ನು ದೂರಪಡಿಸುವಲ್ಲಿ ಸಹಕಾರಿಯಾಗಿದೆ. ಈ ರೀತಿ ನಿದ್ರೆಗೇಡು, ಬೆನ್ನುನೋವು, ವಾತರೋಗ, ಮೂತ್ರಬಾಧೆ ಇವುಗಳಿಗೆ ಹೇತುವಾಗಿರುವ ರಕ್ತದಲ್ಲಿರುವ ಮಲಿನತ್ವವನ್ನು ಶುದ್ಧಿಪಡಿಸುತ್ತದೆ.

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ. ಶೀಸೆ ಒಂದಕ್ಕೆ ರೂ ೨, ಅಥವಾ ೬ ಶೀಸೆಗಳಿಗೆ ರೂ. ೧೦-೧೨-೦, ಅಥವಾ ಮುಂಬಾಯಿಯಲ್ಲಿರುವ ಡೋನ್ಸ್ನರ ಔಷಧಗಳ ಕೋಠಿಯಿಂದ ನೇರಾ ತರಿಸಿಕೊಳ್ಳಬಹುದು ವಿ. ಬಿ. ಬಾಕ್ ನಂ. ೨೦, ಮುಂಬಾಯಿ.

ಈಗಲೇ ಸೀಮೆಯಿಂದ ಬಂದಿದೆ.

117-20

೫,೦೦೦ ಹಾರ್ಸ ಪೋಬ ಹೊಲಿಯುವ ಸುಪೀರಿಯರ್ ಉಲ್ಲನ್ ದಾರಗಳು. ಬಿಡಬೇಡಿರಿ—ಮಾತ್ರ ಇದೆ—ಬಿಳಿ, ಕಪ್ಪು ಕ್ರೀಮ್.

೧ ಹೋಬಿಯಾಗುವ ಉಲ್ಲನ್ ದಾರಕ್ಕೆ	೦—೮—೦
೧೦ ಹೋಬಿಯಾಗುವ ಬಂಡಲ್‌ಗೆ ೧ ಕ್ಕೆ	೩—೮—೦
ಕೊಕ್ಕೆ ಸೂಜಿ ೧ ಕ್ಕೆ	೦—೧—೬
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೦
ಎರಡು ಕಡೆಯಲ್ಲಿ ಬರೆಯುವ ಪೋಸ್ಟ್ ಕಾರ್ಡ್ ೧೦೦ ಕ್ಕೆ ೪ ಆ.	
ನಂಬ್ರ ೧ನೇ ಹಾರ್ಸ ಬೋಬಿ ದಬ್ಬ ೧ಕ್ಕೆ	೧೩—೨—೦

ವಿಳಾಸ:—

ಪ್ರೊಪ್ರೈಟರ್, ದಿ ಉಲ್ಲನ್ ಮಾರ್ಟ್, ಮಂಗಳೂರು.

ವ್ಯವಹಾರನಿರ್ಣಯ.

ಪುಟಗಳು ೫೭೬.	ಕನ್ನಡದ ಲಾ ಪುಸ್ತಕವು ದ್ವಿತೀಯಮುದ್ರಣ. 4-11	ಕ್ರಯ ವಿ. ಪಿ ಸೇರಿ ರೂ. ೧-೧-೦

ಮೈಸೂರು, ಬೊಂಬಾಯಿ, ಮದ್ರಾಸಿಗೆ ಅಗಾಮಾಜ್, ಹಿಂದೂ ಧರ್ಮಶಾಸ್ತ್ರಯು, ಕ್ರಿಮಿನಲ್ ಲಾ ೬೯ ಕಾನೂನು, ೯೦ ತರದ ದಸ್ತಾವೇಜು, ೭೯ ತರದ ಅರ್ಜಿಗಳ ನಮೂನೆ, ಲಾ ರಿಪೋರ್ಟ್, ರೂಲ್ಸ್ ಸರ್ಕ್ಯುಲರ್‌ಗಳಿಂದ ಮಾಡಿದೆ ಪುಸ್ತಕ ಅಪೇಕ್ಷಿಸುವವರು ಬರೆಯುವ ವಿಳಾಸ—ಗ್ರಂಥಕರ್ತರು, ಎಂ. ಮಲ್ಲಾರಾಧ್ಯರು,

ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು.

ಪುದುಚ್ಚೇರಿ ರೇಷ್ಮೆ ವಸ್ತ್ರಗಳು. ರೂ. ೮ !!

123-16

ಅಂಚು, ಕೊನೆಗಳಲ್ಲಿ ಬೆಳ್ಳಿಗೂ ಹೂಗಳಿಂದಲೂ ಕೂಡಿ ಮಧ್ಯದಲ್ಲಿ ಕೆಂಪಾಗಿ ಹೊಸ ಸೊಗಸಾದ ನಮೂನೆ ಪುದುಚೇರಿ ರೇಷ್ಮೆ ವಸ್ತ್ರಗಳು ಜೋಡಿಯಾಗಲು ಯೋಗ್ಯವಾಗಿ ಬದಲಾಯಿಸದ ಗಟ್ಟಿ ಬಣ್ಣದ್ದಾಗಿ ೩೦ ಮೊಳದಗಲವಿದೆ. ಒಂದು ತರಿಸಿ ಉಪಯೋಗಿಸಿ, ನಿಜಸ್ಥಿತಿ ತಿಳಿಯಿರಿ ರೂ. ೩೦ ರ ರೇಷ್ಮೆ ವಸ್ತ್ರವನ್ನು ವಿಜಾರಿಸುತ್ತೆ. ಕ್ರಯ —೩ ಮೊಳದುದ್ದ ರೂ. ೮ ನಾಲ್ಕು ಮೊಳದುದ್ದ ರೂ ೫. ಬುರ್ಬ್ನೀಸ್‌ಗಳು ಶುದ್ಧ ಹರ್ನ ಉಣ್ಣೆಯ ದಪ್ಪವಾದ ಬ್ಲಾಂಕೆಟ್ ಎಂಬ ಹೊಸ ನಮೂನೆ ಬನಾತವು ಎಷ್ಟೇ ಕ್ರೂರವಾದ ಛಳಿಯನ್ನಾದರೂ ದೂರಕ್ಕೆ ಓಡಿಸಿ ಮೈಗೆ ಬೇಕಾದ ಕಾವನ್ನೀಯುತ್ತೆ. ಸುಖವಾದ ಹೊದ್ದಿಕೆ. ಅತಿರಮ್ಯ. ಉದ್ದ ೯೦ ಅಂಗುಲ, ಅಗಲ ೫೮ ಅಂಗುಲ. ಕ್ರಯ ರೂ. ೭, ಎರಡನೆಯ ತರಹ ರೂ. ೪. ಹತ್ತಿ ಮಿಶ್ರವಾದದ್ದು ರೂ ೨. ಕರ್ಪೂರಾದಿ COUGH ಕೆಮ್ಮಿನ ಔಷಧ, ೧ ರೂಪಾಯಿ ಸ್ಯಾಂಪಲ್ಸ್ ಇಮಲ್ ಷನ್ ೨ ರೂಪಾಯಿ. ಪ್ರ ರ ಹ ರಿ . ಬ ಮ ಂ ಕ ಸ್ಪರ್ಶ ರ ಕ್ರ ಯ ೮ ಆಣೆ, ೧ ರೂ ; ೧—೮ ರೂ ಕೇಶವರ್ಧನಿ ೩ ಬಿನ್ನು ೧ ರೂಪಾಯಿ ಕ್ಲೆಮೆಂಟ್‌ಯವರ ಯೆಕ್ಸಿಮಾ ಲೇಪನ ೧೨ ಆಣೆ. ವಿಳಾಸ: ಧಾನ್ ಎಂಪೋರಿಯಂ, ಸ್ವರ್ಗ್‌ರಾಂ ರೋಡ್,

ವೇಪೇರಿ, ಮದರಾಸ್.

ನಂಜನಗೂಡು ಬ್ಯಾಂಕ್ ನೋಟೀಸು.

25-1

೧. ನಂಜನಗೂಡು ಶ್ರೀಕಂಠೇಶ್ವರ ಬ್ಯಾಂಕಿನಲ್ಲಿ ನಂಜನಗೂಡು ತಾಲ್ಲೋಕು ಕಳಲೆಯಲ್ಲಿದ್ದ ಜೋಡಿ ಪುಟ್ಟನಹಳ್ಳಿ ಶ್ಯಾನುಭೋಗ ನಂಜಪ್ಪನವರ ತಮ್ಮ ಸುಬ್ಬಣ್ಣನೆಂಬವರು ಹದಿನೈದು (೧೫) ರೋಜು ಸಾಯದೆಗೆ ಎಪ್ಪತ್ತು (೭೦) ರೂಪಾಯಿ ಅಂದಾಜಾವುಳ್ಳ, ಎರಡು ಗೆಜ್ಜೆಕಡಮೆಯಾಗಿರುವ, ಒಟ್ಟು ನಾಲ್ಕುವರೆ ರೂಪಾಯಿ ತೂಕವುಳ್ಳ ಭಂಗಾರದ ಒಂದು ಲಾವರಿ ಅಡ್ಡಿಕೆ ಸರವನ್ನು ಗಿರವಿ ಇಟ್ಟು, ತೆಗೆದುಕೊಂಡ ಐವತ್ತು (೫೦) ರೂಪಾಯಿಗಳನ್ನೂ, ಬ್ಯಾಂಕ್ ರೂಲ್ಸ್ ಅನುಸರಿಸಿ ಕೊಡಬೇಕಾದ ಬಡ್ಡಿಯನ್ನೂ ಸಹಾ ಕೊಡದೆ ತಪ್ಪಿರುತ್ತಾರೆ. ಮತ್ತು ರೂಲ್ಸ್ ಮೇರೆ ರಿಜಿಸ್ಟರಾಗಿ ಕೊಟ್ಟ ನೋಟೀಸಿಗೆ ಸಿಕ್ಕದೆ ತಪ್ಪಿಸಿಕೊಂಡಿರುತ್ತಾರೆಯಾಗಿ ಅವರಾಗಲಿ, ಅಥವಾ ಅವರಿಂದ ಅಧಿಕಾರ ಪಡೆದವರಾಗಲಿ ೧೯೦೮ ನೇ ಇಸವಿ ಏಪ್ರಿಲ್ ನಾಲ್ಕರ (೪) ಒಳಗಾಗಿ ಮೊಬಲಗು ಪಾವತಿ ಮಾಡಿ, ನಗವನ್ನು ಬಿಡಿಸಿಕೊಳ್ಳದಿದ್ದರೆ, ಬ್ಯಾಂಕಿನಲ್ಲಿ ೫—೪—೦೮ ರಲ್ಲಿ ಅದು ಹರಾಜು ಮಾಡಲ್ಪಡುತ್ತೆ. ಅನಂತರ ಬರುವ ಯಾವ ತಕರಾರೂ ಉಪಯೋಗಕ್ಕೆ ಬರಲಾರದು.

೨. ಮೇಲ್ಕಂಡ ಬ್ಯಾಂಕಿನಲ್ಲಿ ನಂಜನಗೂಡಿನಲ್ಲಿದ್ದ ಕುಪ್ಪದ ಮಾದೈಯನ ಮಗ ಶಿವಪ್ಪನೆಂಬವರು ಮೂವತ್ತು (೩೦) ರೋಜು ಮಾಯದೆಗೆ ಮೂವತ್ತು (೩೦) ರೂಪಾಯಿ ಅಂದಾಜಾವುಳ್ಳ ಬೆಳ್ಳಿ ಬಿಲ್ಲೆ ಹಾಕಿರುವ ಭಂಗಾರದ ಬಿಲೆಬಿಲ್ಲೆ ಒಂದು ಮತ್ತು ಬೆಸಂಬಿಯಾಡುತ್ತಿರುವ ಚಿನ್ನದ ಬುಗುಡಿ ಜೋಡಿ ಒಂದು ಒಟ್ಟು ಆರು ರೂಪಾಯಿ ತೂಕವುಳ್ಳ ಮೇಲ್ಕಂಡ ನಾಲ್ಕು ನಗಗಳನ್ನೂ ಗಿರವಿ ಇಟ್ಟು ತೆಗೆದುಕೊಂಡ ಇಪ್ಪತ್ತು (೨೦) ರೂಪಾಯಿಗಳನ್ನೂ, ಬ್ಯಾಂಕ್ ರೂಲ್ಸ್ ಅನುಸರಿಸಿ ಕೊಡಬೇಕಾದ ಬಡ್ಡಿಯನ್ನೂ ಸಹಾ ಕೊಡದೆ ತಪ್ಪಿರುತ್ತಾರೆ. ಸದರಿ ಶಿವಪ್ಪನು ಮೃತಿಯಾಗಿರುವದರಿಂದ ಅವನ ವಾರಸ್ದಾರರಿಗೆ ನೋಟೀಸು ಕೊಡಲು, ವಾರಸ್ದಾರರು ಗೊತ್ತಾಗಿ ಸಿಕ್ಕಲಿಲ್ಲ. ಅವರ ಕಡೆ ಸರಿಯಾದ ವಾರಸ್ಸುದಾರರು ಯಾರಾದರೂ ಇದ್ದಲ್ಲಿ, ಅವರು ಬ್ಯಾಂಕಿಗೆ ೪—೪—೦೮ ರ ಒಳಗಾಗಿ ಬಂದು, ಮೊಬಲಗು ಪಾವತಿ ಮಾಡಿ, ನಗಗಳನ್ನು ಬಿಡಿಸಿಕೊಳ್ಳಬಹುದು. ತಪ್ಪಿದಲ್ಲಿ ೫—೪—೦೮ ರಲ್ಲು ನಗ ಹರಾಜು ಮಾಡಲ್ಪಡುತ್ತೆ ಅನಂತರ ಬಂದ ಯಾವ ತಕರಾರೂ ಉಪಯೋಗಕ್ಕೆ ಬರಲಾರದು.

೯—೩—೧೯೦೮, ನಂಜನಗೂಡು ಶ್ರೀಕಂಠೇಶ್ವರ ಬ್ಯಾಂಕು.	ಗಾಯಕರ ನರಸಿಂಹಾಚಾರ್, ಏಜಂಟ್.

ಅನೇಕ ಸ್ತ್ರೀಯರ ಅನುಭವವು.

ಪೆರೂನಾ ಅನುಕೂಲವೂ ಉಪಯುಕ್ತವೂ ಸಂಸಾರದಲ್ಲಿ ಅವಶ್ಯವೂ ಆದ ಔಷಧವೆಂದು ಸಂಶಯವಿಲ್ಲದ ತಿಳಿಸುತ್ತದೆ.

ಹೆಂಗಸರು ಹೇಳಿರುವುದನ್ನು ಓದಿನೋಡಿ.

ನಿರಂತರ ಗಂಟ್ಲುಕಟ್ಟುವುದು.

ಮಿಸೆಸ್ ಡಿ ಸಿ ಕ್ಯಾಮೆರಾನ್, ಪೆರ 'ಬ್ಲ್ಯುಬರ್ಗ್ ಕ್ಯಾಲ್ ,ವೆಂಟರ್, ವಾಟರ್ಸ್ ಅಮೇರಿಕಾ, ಈಕೆ ಬರೆಯುವುದು:—

"ನನ್ನ ಶ್ವಾಸಕೋಶದ ನಾಳಗಳಿಗೆ ಶೀತಹಿಡಿದು ನನ್ನನ್ನು ಬಹಳವಾಗಿ ಕಾಡುತ್ತಿತ್ತು. ಅದರ ನಿವಾರಣೆಗೆ ಅನೇಕ ಔಷಧಗಳನ್ನು ಸೇವಿಸಿದರೂ ಪ್ರಯೋಜನವಾಗಲಿಲ್ಲ. ಇದು ನನಗೆ ವಾಸಿಯಾಗುವುದೇ ಇಲ್ಲವೆಂಬ ಯೋಚನೆಯುಂಟಾಯಿತು. ಈ ನಡುವೆ ಪೆರೂನಾವನ್ನು ಸೇವಿಸಿ ನೋಡೋಣವೆಂದು ಪ್ರಾರಂಭಿಸಿದೆನು.

"ಸ್ವಲ್ಪಕಾಲದೊಳಗಾಗಿ ನನ್ನ ಶ್ವಾಸಕೋಶದ ನಾಳಗಳು ನಿರ್ಮಲವಾಗುತ್ತಾ ಬಂದವು. ಸದಾ ಗಂಟ್ಲುಕಟ್ಟುವುದು ಕಡಮೆಯಾಯಿತು. ಧ್ವನಿಯು ಕಗ್ಗಿ ಹಸ್ಸನಾಗುವುದು ನಿಂತಿತು. ಗಂಟ್ಲಿನಲ್ಲಿ ಗಾಬರಿನ್ನುವುದು ತಪ್ಪಿಹೋಯಿತು.

"ನನಗೆ ಶೀತಹಿಡಿದಿದ್ದದ್ದು ನಿವಾರಣೆಯಾದಂತೆ ನನ್ನಲ್ಲಿ ಭರವಸೆಹುಟ್ಟಿತು. ಈ ನಂಬಿಕೆ ಹುಟ್ಟಿ ಈಗ ಹಲವು ತಿಂಗಳು ಕಳೆದುಹೋಗಿರುತ್ತವೆ. ಆದಕಾರಣ ಮತ್ತೆ ನನಗೆ ಆ ಶೀತ ಬರುವುದೇ ಇಲ್ಲವೆಂದು ತಿಳಿದಿದ್ದೇನೆ."

ಮೇಲೆ ಕಾಣುವಂಥಾ ಸ್ತ್ರೀಯರ ಗುಂಪನ್ನು ನಾವು ಎಷ್ಟು ಸಾವಿರ ಬೇಕಾದರೂ ದೃಷ್ಟಾಂತಕ್ಕೊಡಬಹುದು. ಆಗಲೂ ಪೆರೂನಾದಿಂದ ಪ್ರಯೋಜನವನ್ನು ಹೊಂದಿದ ಸಮಸ್ತ ಸ್ತ್ರೀಯರನ್ನೂ ಹೇಳಿದಂತಾಗುವುದಿಲ್ಲ. ಲಕ್ಷಾಂತರ ಹೆಂಗಸರು ಇದರ ಸೇವನೆಯಿಂದ ತಮ್ಮ ಸಕಲ ರೋಗಗಳನ್ನೂ ನಿವಾರಣೆಮಾಡಿಕೊಂಡಿರುತ್ತಾರೆ.

ಹೊಟ್ಟೆಗೆ ಹಿಡಿದ ಶೀತವು.

ಮಿಸ್ ಎಮಿಲಿ ಕಾಚ್, ೫೧೬ ಮಿಬಿಗೋನ್ ಅವ್, ಮಿಲ್ವಾಕೀ, ವಿಸ್, ಈಕೆಬರೆಯುವುದು:—

"ಹೊಟ್ಟೆಗೆ ಶೀತ ಹಿಡಿದು ನರಳುತ್ತಿರುವವರಿಗೆಲ್ಲಾ ಪೆರೂನಾವನ್ನೇ ಉಪಯೋಗಿಸುವಂತೆ ನಾನು ಬಹು ಸಂತೋಷದಿಂದಲೂ ಮನಃಪೂರ್ವಕವಾಗಿಯೂ ಶಿಫಾರಸು ಮಾಡಬಲ್ಲೆನು. ನಾನು ಅನೇಕ ಔಷಧಗಳನ್ನು ಉಪಯೋಗಿಸಿದೆನು. ಒಂದರಿಂದಲೂ ನನಗೆ ಆರೋಗ್ಯವಾಗಲಿಲ್ಲ. ಕಡೆಗೆ ನಾನು ಪೆರೂನಾವನ್ನು ಉಪಯೋಗಿಸಿ ನೋಡಬೇಕೆನ್ನುವಷ್ಟರಲ್ಲಿ ಅದನ್ನು ಸೇವಿಸಿದ್ದರಲ್ಲಿ ನನಗೆ ರೋಗವೆಲ್ಲಾ ವಾಸಿಯಾಯಿತು.

"ಇದನ್ನೇ ಮೊದಲು ಸೇವಿಸದೆ, ಇತರ ಔಷಧಗಳನ್ನು ಉಪಯೋಗಿಸಿ ನನ್ನ ಹೊಟ್ಟೆ ಕರುಳುಗಳನ್ನು ಕೆಡಿಸಿಕೊಂಡೆನಲ್ಲಾ ಎಂದು ಈಗ ನಾನು ವ್ಯಸನಪಡುತ್ತೇನೆ. ಪೆರೂನಾ ನನ್ನ ರೋಗವನ್ನು ಸಂಪೂರ್ಣವಾಗಿ ವಾಸಿಮಾಡಿದ ಮತ್ತು ಇನ್ನೊಂದು ದಫ ಯಾವ ರೋಗವೂ ನನ್ನ ಮೈಸತ್ತದಂತೆ ತಡೆಯುವುದಕ್ಕೋಸ್ಕರ ನಾನು ಯಾವಾಗಲೂ ಒಂದು ಬಾಟ್ಲಿಯನ್ನು ನನ್ನ ಬಳಿ ಇಟ್ಟುಕೊಂಡೇ ಇರುವೆನು. ನಾನು ಪಟ್ಟಂಥಾ ಕಷ್ಟವನ್ನು ಅನುಭವಿಸುತ್ತಿರುವ ಸಮಸ್ತರಿಗೂ ಪೆರೂನಾವನ್ನು ಉಪಯೋಗಿಸಲೆಂದು ಸಂತೋಷದಿಂದ ಶಿಫಾರಸು ಮಾಡುತ್ತೇನೆ."

ಶ್ವಾಸಕೋಶದ ಶೀತವು.

ಮಿಸೆಸ್ ವಿಂ ಹಾಮನ್, ೫೧೯ ಎಸ್. ಪಾಲೀನಾ ಬೀದಿ, ಚಿಕಾಗೋ, ಇಲ್, ಈಕೆ ಬರೆಯುವುದು:—"ನನ್ನ ಎದೆಗೆ ಅಂದರೆ ಶ್ವಾಸಕೋಶಕ್ಕೆ ಶೀತಘಾತ ಉಂಟಾಗಿ ಬಹಳ ಅನುಭವಿಸಿದೆನು. ಶ್ವಾಸಕೋಶದ ನಾಳಗಳು ಶೀತದಿಂದ ಕಟ್ಟಿಹೋಗಿದ್ದವು. ಚಿಕ್ಕಂದಿನಿಂದಲೂ ನನಗೆ ಒಂದುತರಹಾ ಕೆಟ್ಟ ಕೆಮ್ಮಲು ರೋಗವಿದ್ದೇ ಇದ್ದಿತು. ಮಗುವಾಗಿದ್ದಾಗ ನನ್ನ ಕೆಮ್ಮಲು ನೋಡಿ ಎಲ್ಲರೂ ನನಗೆ ಉರಿಕೆಮ್ಮಲೆಂದೋ ಗಸೆಗು ಕೆಮ್ಮಲೆಂದೋ ಹೇಳುತ್ತಿದ್ದರು. ನಾನು ದೊಡ್ಡವಳಾಗುತ್ತಾ ಬಂದ ಹಾಗೆಲ್ಲಾ ಈ ಕೆಮ್ಮಲು ಬಹಳವಾಗಿ ಹೆಚ್ಚುತ್ತಾ ಬಂದು, ನನ್ನನ್ನು ಬಹು ಕಷ್ಟಪಡಿಸಿತು.

"ಕೆಲವು ಕಾಲಾನಂತರ ಈ ಕೆಟ್ಟ ಕೆಮ್ಮಲು ನನ್ನನ್ನು ಶೀತಕಾಲದಲ್ಲೂ ಬೇಸಿಗೆಕಾಲದಲ್ಲೂ ಒಂದೇ ಸಮನಾಗಿ ಬಾಧೆಪಡಿಸುತ್ತಿದ್ದಿತು. ಕಡೆಗೆ ಕೆಮ್ಮುವುದಕ್ಕಾಗದೆ ನನ್ನ ಶ್ವಾಸಕೋಶದ ಒಂದು ನಾಳವು ಒಡೆದು ರಕ್ತಕಾರಿದೆನು. ಇದಾದ ಮೇಲೆ ನನ್ನ ಹೊಟ್ಟೆಯಲ್ಲೂ ಅಂದರೆ ಅನ್ನಕೋಶದಲ್ಲೂ ಒಂದು ರಕ್ತನಾಳವು ಒಡೆದು ದಿನೇ ದಿನೇ ನಾನು ಕ್ಷಯಿಸುತ್ತಲೂ, ಔಷಧಸೇವನೆಮಾಡುತ್ತಲೂ ಬಂದೆನು. ಆದರೂ ಯಾವ ಚಿಕಿತ್ಸೆಯಿಂದಲೂ ನನಗೆ ಸ್ವಲ್ಪವೂ ಕಷ್ಟನಿವಾರಣೆಯಾಗಲಿಲ್ಲ. [38-49]

"ನಾನು ಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕೋಸ್ಕರ ಒಂದು ಔಷಧಾಲಯಕ್ಕೆ ಹೋದೆನು. ಅದರಲ್ಲಿದ್ದ ಯಾವ ಔಷಧವನ್ನು ಸೇವಿಸಿದಾಗ್ಯೂ ನನಗೆ ವಾಸಿಯಾಗದೆ ಹೋಯಿತು. ರಾತ್ರಿಹೊತ್ತು ನಾನು ಹಾಸಿಗೆಯ ಮೇಲೆ ಅಂಗತಂಗನಾಗಿ ಮಲಗಿಕೊಳ್ಳುವುದೇ ಅಸಾಧ್ಯವಾಯಿತು. ಬೆಳಗಿನ ಝಾಮದ ೩—೪ ಗಂಟೆಯಾಗುವತನಕ ಎದ್ದು ಕೂತುಕೊಂಡೇ ಇರುವಂತಾಯಿತು. ಕಣ್ಣು ಮುಚ್ಚುವುದೆಂದರೆ ಅಸಾಧ್ಯ. ಇಷ್ಟೆಲ್ಲಾ ಆದ ಮೇಲೆ ನನ್ನನ್ನು ನೋಡಿದವರೆಲ್ಲಾ ನನಗೆ ಕ್ಷಯ ಹಿಡಿಯಿತೆಂದು ಖಂಡಿತಮಾಡಿದರು. ನನಗೂ ಅದೇ ಇದ್ದೀತೆಂದು ಗೊತ್ತಾಯಿತು.

"ಪೆರೂನಾವನ್ನು ಕುರಿತು ಬರೆದಿರುವ ಕಾಗದಗಳನ್ನು ಓದುತ್ತಾ ಬಂದದ್ದರಲ್ಲಿ—ಈ ಔಷಧದಿಂದ ನನ್ನ ರೋಗವೇನೋ ವಾಸಿಯಾಗಲಾರದು. ಆದರೂ ಅದನ್ನೂ ಸೇವಿಸಿ ನೋಡೋಣ ಎಂಬ ಯೋಚನೆ ನನ್ನಲ್ಲಿ ಉಂಟಾಯಿತು. ಒಂದಾದ ಮೇಲೆ ಒಂದರಂತೆ ಮೂರು ಬಾಟ್ಲಿಗಳ ಔಷಧವನ್ನು ಸೇವಿಸಿದೆನು. ಆಗ ನನ್ನ ಶರೀರಸ್ಥಿತಿಯು ಏನೋ ಬದಲಾವಣೆಯಾದಂತೆ ನನಗೇ ಹೊಳೆಯಿತು. ಬಾಯಿನಲ್ಲಿ ರುಚಿ ಹುಟ್ಟಿತು. ಆಹಾರದ ಮೇಲೆ ಇಚ್ಛೆಯುಂಟಾಯಿತು. ಕ್ರಮವಾಗಿ ಔಷಧ ಸೇವನೆಯನ್ನು ಮಾಡುತ್ತಾ ಬಂದೆನು. ಮನಸ್ಸಿನಲ್ಲಿದ್ದ ಅಧೈರ್ಯವೂ ಸಂಶಯವೂ ನಿವಾರಣೆಯಾದವು. ಈಗ ನಾನು ಧಾರಾಳವಾಗಿ ಅಂಗತಂಗನಾಗಿ ಮಲಗಿ, ರಾತ್ರಿಯೆಲ್ಲಾ ನಿದ್ದೆಮಾಡುತ್ತೇನೆ. ಆದ್ದರಿಂದ ಪೆರೂನಾದ ವಿಷಯದಲ್ಲಿ ನಾನು ಎಷ್ಟುಮಟ್ಟಿಗೆ ಕೃತಜ್ಞಳಾಗಿದ್ದೇನೋ ನೀವೇ ಊಹಿಸಿಕೊಳ್ಳಬಹುದು."

ಕೃಶವಾಗುವಂಥಾ ಕ್ಷಯರೋಗವು.

ಮಿಸೆಸ್ ರೋಕ್ಸ್ ಟೆಯಿಲರ್, ೬೨೧೦ ಮಾದಿಸ್ನ ಅವೆನ್ಯು, ಚಿಕಾಗೋ, ಇಲ್., ವೈಸ್-ಪ್ರೆಸಿಡೆಂಟ್, ಇಲಿನಾಯಿಸ್ ಸ್ತ್ರೀಯರ ಸಂಘ, ಈಕೆ ಬರೆಯುವುದು:—

"ಹೋದ ವರುಷದಲ್ಲಿ ನನಗೆ ಒಂದು ತರಹಾ ರೋಗ ಹುಟ್ಟಿ ನನ್ನ ಮಾಂಸಖಂಡಗಳೂ ದೇಹಶಕ್ತಿಯೂ ಕ್ರಮೇಣ ಕ್ಷಯಿಸುತ್ತಾ ಬಂದವು. ಕಡೆಗೆ ನಾನು ಯಾವ ಕೆಲಸವನ್ನೂ ಮಾಡಲಾರದಂತಾದೆನು. ಈ ರೋಗನಿವಾರಣೆಗೋಸ್ಕರ ಹಲವು ತರದ ಔಷಧಗಳನ್ನು ಸೇವಿಸಿದೆನು. ಕಡೆಯಲ್ಲಿ ನನಗೆ ಪೆರೂನಾ ಸೇವಿಸುವಂತೆ ಒಬ್ಬರು ಸೂಚಿಸಿದರು.

"ಇದನ್ನು ಸೇವಿಸುತ್ತಾ ಬಂದಕೂಡಲೇ ನನ್ನ ಬಾಳುವೆಯೇ ಬದಲಾಯಿತು. ನನಗೆ ಯಥಾಪ್ರಕಾರ ಶಕ್ತಿ ಕೂಡಿಕೊಂಡಿತು. ನಾನು ಅದನ್ನು ಎಷ್ಟಾಗಿ ಕೊಂಡಾಡಿದರೂ ತೀರದು."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಈ ಔಷಧ ಸಿಕ್ಕುವ ಸ್ಥಳವ್ಯಾವುದೆಂದರೆ:—

ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

21—2—1908 ರಿಂದ 28—2—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	24	16	0	0
ಮೈಸೂರು ,,	8	7	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	31	21	0	0
ಕೋಲಾರ್ ,,	68	63	0	0
ಕೋಲಾರ್ ಚಿನ್ನದ ಗಣಿಗಳು	4	7	0	0
ತುಂಕೂರು ಡಿಸ್ಟ್ರಿಕ್ಟು	14	14	0	0
ಹಾಸನ ,,	0	0	0	0
ಚಿತ್ರದುರ್ಗ ,,	4	[illegible]	0	0
ಕಡೂರ್ ,,	24	17	0	0
ಶಿವಮೊಗ್ಗ ,,	16	9	0	0
ಜುಮ್ಲಾ	307	245	0	0

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಪ್ಲವಂಗನಾಮ ಸಂವತ್ಸರದ ಫಾಲ್ಗುಣ ಶುದ್ಧ ದಶಮಿ ಗುರುವಾರದಿಂದ ಫಾಲ್ಗುಣ ಶುದ್ಧ ಪೌರ್ಣಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೮ನೇ ಮಾರ್ಚಿ.

ತಾ.	ವಾರ.		ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಶೇಡಿ ಯಂಗುಲ ಮಾನ
12	ಗುರು	::	ದಶಮಿ	37-53	ಪು	57-53	30
13	ಶುಕ್ರ	*	ಏಕಾದಶಿ	42-58	ಪ್ಯ	60-0	1
14	ಶನಿವಾ		ದ್ವಾದಶಿ	46-29	ಪ್ಯ	4-24	2
15	ರವಿವಾ	;;	ತ್ರಯೋ	53-23	ಆ	10-46	3
16	ಚಂದ್ರ	†	ಚತುರ್ದಶಿ	57-50	ಮ	16-48	4
17	ಕುಜ	‡	ಪೌರ್ಣಮಿ	60-0	ಪು	22-36	5
18	ಬುಧ		ಪೌರ್ಣಮಿ	2-50	ಉ	27-17	6

:: ನಂಜನಗೂಡು ಶ್ರೀಕಂಠಮುಡಿ ಉತ್ಸವ. * ಉತ್ಥಾನದ್ವಾದಶೀ, ಸರ್ವತ್ರ ಏಕಾದಶಿ. ಕಾಮನಹಬ್ಬ, ಮೇಲುಕೋಟೆ ವೈಮುಡಿ ಉತ್ಸವ. ;; ಚಾಮರಾಜನಗರದ ಚಾಮರಾಜೇಶ್ವರ ರಥ. † ನಂಜನಗೂಡು ಪಂಚರಥ, ತಿರುಮಕೂಡ್ಲು ಅಗಸ್ತ್ಯೇಶ್ವರ ರಥ, ಶಿವಸಮುದ್ರದ ಸೋಮೇಶ್ವರ ರಥ. ‡ ಕಾಮದಹನ, ಹೋಳಿಕೋತ್ಸವ, ಪ್ರಸನ್ನನಂಜುಂಡೇಶ್ವರ ರಥ. ನರಸೀಪುರದ ಪ್ರಹ್ಲಾದೋತ್ಸವ. ನೊಲುಕೋಟೆ ಚಲುವರಾಯಸ್ವಾಮಿ ರಥ.

ಪೇಟೆ ಧಾರಣೆ.

ವಿನಸು.		ಮೈಸೂರು.	ಬೆಂಗಳೂರು.
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ.	೧೩-೦-೦	೧೨-೮-೦
ಕೆಂಬೂತಿ ಅಕ್ಕಿ ಅವಲ್	..	೧೩-೮-೦	೧೬-೮-೦
,, ದ್ವಯಂ	..	೧೩-೦-೦	೧೬-೦-೦
ಜೀರಾಸಾಲ ಅಕ್ಕಿ	..	೧೪-೦-೦	೧೨-೦-೦
ಸಣ್ಣಕ್ಕಿ ಅವಲ್	..	೧೫-೮-೦	೧೬-೦-೦
,, ದ್ವಯಂ	..	೧೫-೦-೦	೧೫-೦-೦
ತೊಗರಿ ಬೇಳೆ ಪಲ್ಲಾ ೧ಕ್ಕೆ	..	೧೫-೮-೦	೧೬-೦-೦
,, ದ್ವಯಂ	..	೧೩-೮-೦	೧೪-೦-೦
ಸ್ಯಾ ರಾಗಿ ಪಲ್ಲಾ ೧ಕ್ಕೆ	..	೬-೧೨-೦	೭-೦-೦
ಕಾರಾಗಿ	..	೬-೪-೦	೬-೧೨-೦
ಜೋಳ	..	೭-೦-೦	೧೦-೦-೦
ಹಲಸಂದೆ ಪಲ್ಲಾ ೧ಕ್ಕೆ		೧೦-೮-೦	೧೧-೦-೦
ಬಿಳೀ ಅವರೆ	..	೮-೧೪-೦	೬-೮-೦
ಹೆಸರು	..	೧೦-೮-೦	೧೦-೮-೦
ಉದ್ದು	..	೧೪-೮-೦	೧೩-೦-೦
ಕಡಲೆ	..	೧೨-೮-೦	೧೩-೦-೦
ಎಳ್ಳು ಸೆ. ೧೨೭ ಕ್ಕೆ	..	೨೪-೮-೦	೨೫-೦-೦
ಹುರುಳಿ	..	೬-೪-೦	೭-೦-೦
ಹರಳು ೧೨೭ ಸೇರಿಗೆ	..	೧೨-೦-೦	೧೨-೪-೦
ಸೀಗೇಕಾಯಿ ಮಣ ೧ಕ್ಕೆ	..	೧-೮-೦	೧-೮-೦
ಮೆಣಸಿನಕಾಯಿ	..	೨-೮-೦	೨-೧೦-೦
,, ದ್ವಯಂ	..	೨-೪-೦	೨-೮-೦
ಬೆಲ್ಲ ದೊಡ್ಡ ಅಚ್ಚು	..	೫-೦-೦	ಮ ೧-೩-೦
ಬೆಳ್ಳುಳ್ಳಿ ಮಣ ೧ಕ್ಕೆ	..	೬-೮-೦	೬-೪-೦
ಅರಿಶಿನ ,,	..	೪-೧೨-೦	೪-೪-೦
ಕೊತ್ತುಂಬರಿ ಪಲ್ಲಾ ೧ಕ್ಕೆ	..	೫-೮-೦	೬-೦-೦
ಉಪ್ಪು ,,	..	೫-೦-೦	೫-೧೦-೦
ಹುಣಿಸೇ ಹಣ್ಣು	..	೧-೮-೦	೧-೨-೦
,, ಹಳೇದು	..	೧-೮	೧-೬-೦
ತುಪ್ಪ ಮಣ ೧ಕ್ಕೆ	..	೧೩-೮-೦	೧೫-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	..	೪-೧೫-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	..	೭-೮-೦	೬-೧೨-೦
ಅಳಲೇಕಾಯಿ ಮಣ ೧ಕ್ಕೆ	..	೧-೦-೦	೧-೨-೦
ಅಂಟುವಾಳದ ಕಾಯಿ ಮಣ ೧ಕ್ಕೆ	..	೦-೧೨-೦	೦-೧೩-೦
ಚಿನ್ನ (ಪವನ್) ಕೆಂಪು	..	೧೫-೬-೦	೧೫-೫-೦
,, ,, ಹಸಿರು	..	೧೫-೧೦-೦	೧೫-೭-೦
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	೨೪-೧೦-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೭೫-೦-೦	೭೨-೦-೦

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore. 12/3/1908.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೮ ನೇ ಇಸವಿ ಮಾರ್ಚಿ ತಾರೀಖು ೧೯ ನೇ ಗುರುವಾರ. ಸಂಚಿಕೆ ೪೩

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

17-4

ತರಿಸಿಕೊಳ್ಳಿರಿ :— ತ್ವರೆಗೈಯಿರಿ :— ಅಮೃತಾಂಜನ ಸರ್ವಲೋಕರಂಜನ, ಸರ್ವ ವ್ಯಾಧಿಭಂಜನ, ಚಿಕಿತ್ಸಾವಳಿಯೊಳ್ ಕಾಂಚನ, ದೇಹಾಂಗಗಳಿಗೆ ಸಂಜೀವನ, ವಾಸನೆಯಲ್ಲಿ ಮನೋರಂಜನ, ಬೆಲೆಯಲ್ಲಿ ಅಲ್ಪ, ಯೋಗ್ಯತೆಯಲ್ಲಿ ಅಮೃತ, ಔಷಧಿಯಲ್ಲಿ ಸ್ವಿರಹಿತ, ಕೊಳ್ಳುವದರಲ್ಲಿ ಮಾಡಿರಿತ್ವರ್ಯ, ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಒಂದೇ ಸಾರಿ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಜರ್ಮನ ಬೆಳ್ಳಿಯ ಕಪ್ ಉಚಿತವಾಗಿ ದೊರಕುವದು.

ನಿಶ್ಯಂಕೆಯಾಗಿ ಭಾರತವರ್ಷೀಯ ಔಷಧಗಳಿಂದ ತಯಾರಿಸಿದ ಹೊರುಪಯೋಗಕ್ಕೋಸುಗ ಮುಲಾಮು. ಇದರಿಂದ ತಲೆನೋವು, ಶಿರೋಭೇದನೆ, ವಾತ, ಸಂಧಿವಾತ ಪಕ್ಷವಾತ, ಗಂಟಲು ನೋವು, ಸೊಂಟದನೋವು, ಗಂಟಲು ನೋವು, ಶೀತ, ಹಕಮು, ಉಳಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ.

ಈ ಕಂಪನಿಯವರು ಕೆಲವು ನವಮಾನೆಯ ಔಷಧಿಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

ಬಾಟ್ಲಿ ಒಂದಕ್ಕೆ ಕಿಮ್ಮತು ೦—೮—೦. ಪೋಸ್ಟು ಖರ್ಚು ೦—೪—೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಚ್ಚುವದರೊಳಗೆ ಗಜಕರ್ಣವು ಹೋಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ, ಮತ್ತು ಉರಿಯುವದಿಲ್ಲ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು. ಡಬ್ಬಿ ಒಂದಕ್ಕೆ ಕಿಮ್ಮತು ೦—೬—೦. ಪೋಸ್ಟು ಖರ್ಚು ೦—೩—೦

ದಂತಮಂಜನ —ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಹಲ್ಲುಗಳು ಬೆಳ್ಳಗಾಗುತ್ತವೆ ಹಲ್ಲಿನ ನೋವನ್ನು ತೆಗೆಯುತ್ತದೆ ಡಬ್ಬಿ ಒಂದಕ್ಕೆ ೦—೨—೦ ಪೋಸ್ಟು ಖರ್ಚು ೦—೩—೦

ವಜ್ರಗುಟಿಕ.—ಧಾತುಪುಷ್ಟಿ ನಿರ್ಬಲವಂತರಿಗೆ ಶಕ್ತಿ ಕೊಡುತ್ತದೆ, ಸ್ಪರ್ಶೇಂದ್ರಿಯ ಆಗುವದು ನಿಲ್ಲಿಸುತ್ತದೆ ರಕ್ತ ಶುದ್ಧಿಮಾಡಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಡಬ್ಬಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೩—೦.

ಕೇಶವರ್ಧಿನಿ.—ತಲೆ ತಿಂಪು, ...ಮಾಡುವದ, ಕೂದಲುಗಳನ್ನು ಬೆಳೆಸುವದು, ಕೂದಲುಗಳನ್ನು ಕಪ್ಪುಮಾಡುವದು, ಮನಃಶುದ್ಧಿ ಮಾಡುವದು, ಚಲೋ ವಾಸನೆ ಉಳ್ಳದ್ದು ೪ ದಿನ್ನು ಬಾಟ್ಲ ಒಂದಕ್ಕೆ ೧—೦—೦. ಪೋಸ್ಟು ಖರ್ಚು ೦—೩—೦.

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್. ...ಫೋರ್ಟ, ಮುಂಬಯಿ.

ಟೆಲಿಗ್ರಾಫು ಅಡ್ರೆಸು—"ಅಮೃತಾಂಜನ," ಮುಂಬಯಿ.

ಕಾರ್ಡು ಸೈಜು ೪¼×೩¼.

ಫೋಟೋ ತೆಗೆಯುವ

ಘು ಪಾ ಕ್ಯಾ ಮೆ ರಾ.

84-31

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂಡಲೆಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೇ ಕಿಮ್ಮತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ :—

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ ಕಾಲಬಾದೇವಿ, ಮುಂಬಯಿ.

ಜ್ವ ರ ಹ ರಿ. 18-7

ಇದು ಸಾಧಾರಣ ಜ್ವರ, ಚಳೀಜ್ವರ, ಮೋದೀಜ್ವರ, ಪಿತ್ಥಜ್ವರ, ಶೀತಜ್ವರ, ದಾಹಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಜ್ಯಡ್ಜರಯಲ್ಲಿಂದ ಮಾನಿಭಾ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟೇಶ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಟದೇ ಬೇಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ :—ಸೀಸೆ ೧ ಕ್ಕೆ ೮ ಆಣೆ, ೧ ರೂ ; ೧—೮ ರೂ., ರೂ ೨—೧೨ ಆ.; ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಓ ಮ ಂ ಕ ರ್ಪೂ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಹುಳಿಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ ಗಣಪತಿಯವರು—ಹೆವ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ ದೊಡ್ಡ ಊರುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ:—

ಚೆವ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

16-5

೧ ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚುಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಗಂಟಲಿನ ನೋವು, ಮೈ ಕೈ ಶೂಲೆ ಕೆಂಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲಿನ ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ. ಯಾವ ಬಾಯಿಗೆಯೂ ದಾರಿಕೊಡದೆ, ನೀರು ಪದಾರ್ಥಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಹಡುಕಲು ಮಕ್ಕಳ ನೋವು, ಜ್ವರ, ನಚ್ಚುಜ್ವರ, ಕೈಕತ್ವಗಳನ್ನು ಗುಣಪಡಿಸುತ್ತವೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ರೂಪಾಯಿ. ೧ ರಿಂದ ೧೨ ಕುಪ್ಪಿ ವರಗೆ ಪೋಸ್ಟೇಜು ೪ ಆಣೆ.

ವಿಳಾಸ :—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್ ಎಸ್, ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್ ಮೈಸೂರು.

ರಬ್ಬರ್ ಸ್ಟಾಂಡ್ ಪ್ರೆಸ್.

114 23

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಅಭಿವೃದ್ಧಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ, ಇದುವರಿಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೨ ರಿಂದ ೧೮ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು, ಉರ್ದು, ಮರಾಠಿ, ಅರಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು. ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳಕಾಲ ಹಿಡಿಯುವದು ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ದೆಸೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.

ಹಾಫ್ ಫುಲ್ಸ್ಕ್ಯಾಫ್ ಸೈಜು, ೬—೦—೦.

ಪೋಸ್ಟೇಜು ಬೇರೆ (extra).

ವಿಳಾಸ:— ವರ್ಧಮಾನ ಏಜನ್ಸಿ,

ಪೋಸ್ಟ್ ಕಾಲಬಾದೇವಿ,

ಮುಂಬಯಿ.

" ಸರ್ವಜನೋಪಕಾರಿಣಿ."

23-3

ಈ ಮಾಸಪತ್ರಿಕೆಯಲ್ಲಿ ಸರ್ವರಿಗೂ ಉಪಯುಕ್ತವಾದ ಅನೇಕ ವಿಷಯಗಳು ಬರೆಯಲ್ಪಡುತ್ತಿವೆ. ಉಪೇಕ್ಷಿಸದೆ ಪತ್ರಿಕೆಯನ್ನು ತರಿಸಿ ನೋಡಿ. ಚಂದಾ ವರ್ಷಕ್ಕೆ ಅಂಚೆ ಹಾಸಲ್ ಸೇರಿ ೧-೨ ಆಣೆ. ವಿಳಾಸ— " ಸರ್ವಜನೋಪಕಾರಿಣಿ " ಆಫಿಸ್, ದೊಡ್ಡಪೇಟೆ, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ!

ಹಾಗಾದರೆ ಬೇಗ ಇನ್ನೊಂದನ್ನು ತರಿಸಿಕೊಳ್ಳಿ.

2 12

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನ ದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಧಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಧಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೪ ಆ., ೧ ರೂ. ೬ ಆ., ೧ ರೂ. ೮ ಆ.

ರೇಷ್ಮೆ ಜರಿಯುಳ್ಳ ಟೋಪಿಗಳು ೧ ರೂ. ೪ ಆ., ೨ ರೂ.

ಜರಿಯ ಟೋಪಿಗಳು ರೂ. ೧-೨ ಆ, ೧ ರೂ. ೪ ಆ, ೧ ರೂ. ೬ ಆ.

ಉಣ್ಣೆಯ ಟೋಪಿಗಳು ೧ ರೂ. ೪ ಆ, ೧ ರೂ. ೮ ಆ.

ಹಾಸನದ ಟೋಪಿ, ಸೂಳೆ ಮೇಹೋದು, ಅರ್ಧ ಪೇಟ ಇತ್ಯಾದಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಡಲ್ಪಡುವುದು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಸುಗಂಧಸಂಜೀವನೀ

ಭೃಂಗಾಮಲಕ ತೈಲವು.

5-7

ಈ ತೈಲವನ್ನು ತಲೆಗೂ, ಮೈಗೂ ಸಹ ಲೇಪಿಸಿ ಅಭ್ಯಂಗಸ್ನಾನ ಮಾಡುವದರಿಂದ ತಲೆಯಲ್ಲಿ ಸುವಾಸನೆ, ಕೂದಲು ಮೃದುವಾಗುವದು, ನೇತ್ರಪಟುತ್ವವು ವೃದ್ಧಿಯಾಗುವದು. ತಲೇನೋವು, ಅರ್ಧತಲೆನೋವು, ತಲೆಸುತ್ತುವದು, ತಲೆಶೂಲೆ, ತಲೆಭಾರ, ಮುಂತಾದ್ದು ನಿವಾರಣೆಯಾಗುತ್ತದೆ. ಕಣ್ಣೀರು ಸುರಿಯುವದು, ಕಣ್ಣುರಿ, ಕಣ್ಣುನೋವು ಮುಂತಾದವುಗಳಿಗೆ ಅತ್ಯಂತ ಗುಣಕಾರಿ. ಮೂಗಿನಿಂದ ರಕ್ತ ಸ್ರಾವ, ಮೂಗು ಒಣಗುವದು ಇವುಗಳನ್ನೆಲ್ಲಾ ಪರಿಹಾರ ಮಾಡುತ್ತೆ. ಮೈ ಕೈಯಿಂದ ಮತ್ತು ಉರಿ ಮುಂತಾದ್ದು ನಿರ್ನಾಮವಾಗುತ್ತದೆ. ಉಷ್ಣಾಧಿಕ್ಯದಿಂದ ಅಂಗೈ ಅಂಗಾಲಿನ ಉರಿ, ನಿದ್ರೆಬಾರದೆ ಇರುವದು ಇವೇ ಮೊದಲಾದ ವ್ಯಾಧಿಗಳನ್ನು ಗುಣಮಾಡುತ್ತದೆ ಮೆದುಳಿಗೆ ತಂಪುಮಾಡಿ ಸ್ಮರಣಶಕ್ತಿ ಹೆಚ್ಚಿಸುವದು. ವಿದ್ಯಾರ್ಥಿಗಳಿಗೂ, ವಿಶೇಷ ಯೋಚನೆಯಿಂದ ಕೆಲಸಮಾಡತಕ್ಕವರಿಗೂ ಅತ್ಯಂತ ಉಪಯುಕ್ತವಾದದ್ದು. ಕ್ರಯ ಸೀಸೆ ೧ ಕ್ಕೆ ೪ ಆಣೆ, ಅಂಚೆ ಹಾಸಲು ೯ ಆಣೆ.

ರಕ್ತಶೋಧಕ ತೈಲವು.

ಅನೇಕ ಸರ್ಟಿಫಿಕೇಟುಗಳಿಂದ ಯೋಗ್ಯತಾ ಪತ್ರ ಹೊಂದಿದೆ. ಕ್ರಯ ಸುಲಭ. ಹಿತ್ತಗುಣಕಾರಿ ತುರಿ, ಹುರುಕಾಲು, ಒಣಗಜ್ಜಿ, ನಡುಬಜ್ಜಿ, ಆನೆಗಜ್ಜಿ, ಎಂಥಾ ಹುಳು ಬಿದ್ದಿದ್ದ ಹಳೆ ವ್ರಣವೇ ಆಗಲಿ, ಪುರಾತನ ವಿಷಪುರಿ, ಇತ್ಯಾದಿಯಾದ ಕಠಿಣ ರೋಗಗಳೆಲ್ಲಾ ತೀವ್ರ ಆರೋಗ್ಯವಾಗುವದು. ಈ ತೈಲವನ್ನು ಲೇಪಿಸಿದರೆ ಉರಿಯುವದಿಲ್ಲ. ರಸ, ಗಂಧಕ, ಪಾದರಸ ಮುಂತಾದದ್ದು ಖಂಡಿತವಾಗಿ ಇದರಲ್ಲಿ ಸೇರಿಸಿಲ್ಲ. ಮತ್ತು ವಿಷಕ್ಕೆ ಕಾರಣವಾದ, ಇತ್ಯಾದಿ ಜಾಡ್ಯಗಳನ್ನೆಲ್ಲಾ ಬಹು ಬೇಗ ತಪ್ಪದೆ ಆರೋಗ್ಯಮಾಡುತ್ತದೆ ಕ್ರಯ, ಸೀಸೆ ೧ ಕ್ಕೆ ೧-೨ ಆಣೆ ಅಂಚೆ ಹಾಸಲು ೬ ಆಣೆ

ಮೇಲ್ಕಂಡ ಎರಡು ಔಷಧಗಳೂ ದೊರೆಯುವ ಸ್ಥಳ:—

☞ ಬಿ. ಆರ್. ಗೋವಿಂದರಾಜುಲು,

೧೩೪. ಅರಳೇಪೇಟೆ, ಬೆಂಗಳೂರು ಸಿಟಿ.



CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹುಟ್ಟಿಸಿರುವ ಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

1-12

ಈ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನು ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲನಮಾಡಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವದೇ ಇದರ ಗುಣ

ಇದು ಪರನಸ್ಪಂಗಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ಇಲ್ಲಿ ನೋಡಿ.

3-12

ತುಮಕೂರು ಡಿಸ್ಟ್ರಿಕ್ಟ್ ಜೈಲಿನಲ್ಲಿ ಯೂರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ

ಕ್ರಯ ೧-೦ ಆಣೆ ಮೊದಲ್ಗೊಂಡು ೧ ರೂ ೧-೨ ಆಣೆಯವರಿಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಸೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ —ಸೂಪರಿಂಟೆಂಡೆಂಟ್

ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ್ ಜೈಲು. ತುಮಕೂರು.

ಮಹಾ ಬಾಧಾಪಹಾರಿಣಿಯು

58 13

ಇದಕ್ಕಿಂತ ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್ ಯವರ ಯೂಕ್ಯಾಲಿಪ್ಟಸ್ ಲೇಪನವು ಸಕಲ ವಿಧವಾದ ಬಾಧೆಗಳನ್ನು ಪರಿಹರಿಸತಕ್ಕದ್ದೆಂದು ಡಾಕ್ಟರುಗಳು ನರ್ಸುಗಳು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಾರೆ ಈ ರಸಾಯನವನ್ನು ಲೇಪಿಸುವದರಿಂದ ಮಸ್ತಕ್ಕೆ ತಲೆನೋವು, ವಾಯುನೋವು, ಚಳಿ, ಗಂಟಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಕೀಲುರೋಗಗಳು, ಬೆನ್ನುನೋವು, ಕೀಲುಗಳ ಸಂಧುಕಟ್ಟುಗಳ ನೋವು, ಚಳಿಕಡಿತ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್ ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೇಲೆ ಸ್ವಲ್ಪವನ್ನು ವ್ಯಾಪಿಸಿ, ಆದರ ಪಟ್ಟನ್ನೇ ಉಜ್ಜಿಸಿಬಿಡುತ್ತದೆ. ಸಿಟಿ ಮಾಂಡಿ ಪತ್ರಿಕಾಕರ್ತರು ಇದಕ್ಕೆ ಕೋಮಲವಾದ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ

ಕ್ರಯ ಸೀಸೆ ೧ ಕ್ಕೆ ೧-೨ ಆಣೆ ಪ್ಯಾಕಿಂಗ್ ೬ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಜನ್ ಲೆಕ್ಕದಲ್ಲಿ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಫ್. ಡಬ್ಲಿಯು. ಅರ್ನ,

ಸಿಮೆಟ್ರಿರೋಡ್, ವೇಪೇರಿ, ಮದರಾಸ್.

ಮಕ್ಕಳ ಹಿತಕಾರಿ

ಎಂದು

SCOTT'S EMULSION 31-47

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ. ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು; ಆಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕೈಸೋಕದೆ ತಯಾರಾದದ್ದು.

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈಗಲೇ ಸೀಮೆಯಿಂದ ಬಂದಿದೆ.

117 21

೫,೦೦೦ ಹಾಸನ ಟೋಪಿ ಹೊಲಿಯುವ ಸುಪೀರಿಯರ್ ಉಲ್ಲನ್ ದಾರಗಳು. ಬಿಡಬೇಡಿರಿ—ನಾಕು ಇವೆ—ಬಾರಿ, ಶರ್ಮಿ ಕ್ರಯ

೧ ಟೋಪಿಯಾಗುವ ಉಲ್ಲನ್ ದಾರಕ್ಕೆ	೦—೪—೦
೧೦ ಟೋಪಿಯಾಗುವ ಬಂಡಲ್ ಗೆ ೧ ಕ್ಕೆ	೩—೪—೦
ಕೊಕ್ಕೆ ಸೂಜಿ ೧ ಕ್ಕೆ	೦—೧—೩
೩೦ ಇಂಚಿನ ಬನೀನ್ ೧ ಕ್ಕೆ	೦—೯—೦

ಎರಡು ಆಣೆಯಲ್ಲಿ ಬರೆಯುವ ಪೋಸ್ಟ್ ಕಾರ್ಡ್ ೧೦೦ ಕ್ಕೆ ೬ ಆ. ರಂಬು ೧ನೇ ಹಾಸನ ಟೋಪಿ ಪರ್ದ ಕ್ಕೆ ೧೦—೦

ವಿಳಾಸ —

ಪ್ರೊಪ್ರೈಟರ್, ದಿ ಉಲ್ಲನ್ ಮಾರ್ಟ್, ಮಂಗಳೂರು.

ವ್ಯವಹಾರನಿರ್ಣಯ.

ವೃತಿಗಳು	ಕನ್ನಡದ ಪ್ರಶ್ನೆ ಪುಸ್ತಕವು	ಕ್ರಯ ವಿ. ಪಿ. ಸೇರಿ
ಕೆಲಸ	ದ್ವಿತೀಯಮುದ್ರಣ 1 12	ರೂ ೧—೨—೦

ಪುದುಚ್ಚೇರಿ ರೇಷ್ಮೆ ವಸ್ತ್ರಗಳು. ರೂ. ೮ !!

123-17

ಅಂಚು, ಕೊನೆಗಳಲ್ಲಿ ಬೆಳ್ಳಿಗೂ ಹೂಗಳಿಂದಲೂ ಕೂಡಿ ಅಂದವಾಗಿ ಹೊಸ ಸೊಗಸಾದ ನಮೂನೆ ಪುದುಚೇರಿ ರೇಷ್ಮೆ ವಸ್ತ್ರಗಳು ಹೊದಿಯಲು ಯೋಗ್ಯವಾಗಿ ಬದಲಾಯಿಸದ ಗಟ್ಟಿ ಬಣ್ಣದ್ದಾಗಿ ೩೦ ಮೊಳದಗಲವಿದೆ. ಒಂದು ತರಿಸಿ ಉಪಯೋಗಿಸಿ, ನಿಜಸ್ಥಿತಿ ತಿಳಿಯಿರಿ ರೂ ೩೦ ರ ರೇಷ್ಮೆ ವಸ್ತ್ರವನ್ನು ವಿಚಾರಿಸುತ್ತೆ. ಕ್ರಯ—೩ ಮೊಳದುದ್ದ ರೂ. ೭ ನಾಲ್ಕು ಮೊಳದುದ್ದ ರೂ ೫. ಬುಲ್ಲಿಯೆಸ್ ಗಳು ಕೆಂಪು ನಸ ಉಣ್ಣೆಯ ದಪ್ಪವಾದ ಬ್ಲಾಂಕೆಟ್ ಎಂಬ ಹೊಸ ನಮೂನೆ ಬನಾತವು ಎಷ್ಟೇ ಕ್ರೂರವಾದ ಛಳಿಯನ್ನಾದರೂ ದೂರಕ್ಕೆ ಓಡಿಸಿ ಮೈಗೆ ಬೇಕಾದ ಕಾವನ್ನು ಕೊಡುತ್ತೆ. ಸುಖವಾದ ಹೊದ್ದಿಕೆ. ಅತಿರಮ್ಯ. ಉದ್ದ ೯೦ ಅಂಗುಲ, ಅಗಲ ೬೪ ಅಂಗುಲ. ಕ್ರಯ ರೂ ೩. ಎರಡನೆಯ ತರಹ ರೂ. ೪. ಹತ್ತಿ ಮಿಶ್ರವಾದದ್ದು ರೂ ೨. ಚೇಂಬರ್ಲೇನ್ COUGH ಕೆಮ್ಮಿನ ಔಷಧ, ೧ ರೂಪಾಯಿ ಸ್ಕಾಟ್ಸ್ ಇಮಲ್ಷನ್ ೨ ರೂಪಾಯಿ ಜ್ವರಹರಿ. ಒಮಂಕ ಪೂರಕ ೪ ಆಣೆ, ೧ ರೂ; ೧—೪ ರೂ ಕೇಶವರ್ಧಿನಿ ೩. ಡಿಸ್ಪಸ್ ೧ ರೂಪಾಯಿ ಕ್ಲೆಮೆಂಟ್ ಯವರ ಯೂಕ್ಯಾಲಿಪ್ಟಸ್ ಲೇಪನ ೧-೨ ಆಣೆ

ವಿಳಾಸ:—ರಾಮ್ ಎಂಪೋರಿಯಂ, ಸೈಡನ್ಹಾಂ ರೋಡ್, ವೇಪೇರಿ, ಮದರಾಸ್.

ವೃತ್ತಾಂತ ಪತ್ರಿಕೆ.

ಸ ೧೯೦೮ ನೇ ಇಸವಿ ಮಾರ್ಚಿ ತಾ॥ ೧೯ ನೇ ಗುರುವಾರ.

"ಶ್ರೀಮದ್ಭಾರತಧರ್ಮ ಮಹಾಮಂಡಲಿಯು."

ಮೇಲ್ಕಂಡ ಸಭೆಯ ಪ್ರತಿನಿಧಿಗಳು ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳಿಗೆ ಒಪ್ಪಿಸಿದ ಅಡ್ರೆಸ್ಸಿನ ಮತ್ತು ವೈಸ್‌ರಾಯಿಯವರು ಅವರಿಗೆ ಅಪ್ಪಣೆಕೊಡಿಸಿದ ಪ್ರತ್ಯುತ್ತರ ಮುಖ್ಯಾಂಶಗಳನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಇವೆರಡನ್ನೂ ನಮ್ಮ ವಾಚಕರು ಓದಿ ತಿಳಿದುಕೊಳ್ಳುವುದರಿಂದ ತುಂಬಾ ಪ್ರಯೋಜನವಾದೀತೆಂದು ಸೂಚಿಸುವೆವು. ದರ್ಭಾಂಗದ ಮಹಾರಾಜರವರು ವಿದ್ಯಾವಂತರೂ, ಸದ್ಗುಣಿಗಳೂ, ಸಚ್ಚರಿತ್ರರೂ ಆಗಿದ್ದಾರೆ; ತಮ್ಮ ಪ್ರಜೆಗಳ ಕ್ಷೇಮಾಭ್ಯುದಯಕ್ಕಾಗಿ ಬಹಳ ಕಷ್ಟಪಡತಕ್ಕವರೆಂದು ಯಶಸ್ಸನ್ನು ಪಡೆದಿರುವರು. ಆದಕಾರಣ ಸಕಲ ಮತಸ್ಥರೂ ಅವರನ್ನು ಸನ್ಮಾನಿಸಿ ಕೊಂಡಾಡಲು ಅರ್ಹರಾಗಿದ್ದಾರೆ. ಈ ಮಹಾ ಮಂಡಲಿಯನ್ನು ಸ್ಥಾಪಿಸಿದವರೂ ಅವರೇ. ಅದರ ಉದ್ದೇಶಗಳು ಇಂಥಿಂಥವುಗಳೆಂದು ಗೊತ್ತುಮಾಡಿ, ಅವುಗಳನ್ನು ಸಾರ್ಥಕಪಡಿಸುವುದರಲ್ಲಿ ವಿಶೇಷ ಉತ್ಸಾಹಶೀಲರಾಗಿ, ಕಾರ್ಯಗಳನ್ನು ನಡೆಸುತ್ತಿರುವವರೂ ಈ ಮಹಾರಾಜರವರೇ. ಈಗಲೂ ಈ ರಾಜರು ಆ ಮಂಡಲಿಯ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವರು. ಈ ಮಂಡಲಿಗೆ ಇನ್ನೂ ಬಹು ಮಂದಿ ದೊಡ್ಡ ಮನುಷ್ಯರು ಸೇರಿದ್ದಾಗ್ಯೂ, ಅದು ಇಷ್ಟು ಪ್ರಾಶಸ್ತ್ಯಕ್ಕೆ ಬರಲು ಈ ಮಹಾರಾಜರವರ ಕುತೂಹಲ ಸಾಹಸ ಸಾಮರ್ಥ್ಯಾದಿಗಳೇ ಕಾರಣವೆಂದು ಹೇಳಬಹುದು. ಈ ಮಂಡಲಿಯವರು ವೈಸ್‌ರಾಯಿಯವರಿಗೆ ಒಪ್ಪಿಸಿದ ಅಡ್ರೆಸ್ಸಿನಲ್ಲಿ ಏಕದೇವಾರಾಧನೆ, ಇಹಲೋಕದಲ್ಲಿ ದೇವರಿಂದ ನಿಯಾಮಿಕನಾಗಿರುವಂಥಾ ರಾಜನ ವಿಷಯದಲ್ಲಿ ಭಯಭಕ್ತಿ, ಭ್ರಾತೃವರ್ಗಕ್ಕೆ ಸೇರಿರುವ ಸಮಸ್ತ ಮಾನವರ ವಿಷಯದಲ್ಲೂ ಪ್ರೀತಿಯುಕ್ತವಾದ ಸೇವೆ, ಈ ಮೂರೂ ಪರಮ ಧರ್ಮಗಳೆಂದು ಕಾಣಿಸಿದೆ. ನಾವು ಕೂಡ ಯಥಾರ್ಥವಾಗಿಯೂ ಮನುಷ್ಯನಿಗೆ ಈ ಮೂರೂ ಮುಖ್ಯ ಧರ್ಮಗಳೆಂದು ಒಪ್ಪಿಕೊಳ್ಳಬಲ್ಲೆವು. ಮತ್ತು ಈ ಧರ್ಮಗಳನ್ನು ಬೋಧನೆಮಾಡುವುದರಲ್ಲೂ ಆಚರಿಸುವುದರಲ್ಲೂ ಸಾಹಸಪಡತಕ್ಕವರು ಯಾವ ಮತದವರೇ ಆಗಿದ್ದರೂ ಅಂಥವರನ್ನು ನೋಡಿ ನಾವು ಮನಃಪೂರ್ವಕವಾಗಿ ಆನಂದಪಡುವವರಾಗಿದ್ದೇವೆ.

ವಿದ್ಯೆಯು ಮತಭಕ್ತಿಯುತವಾಗಿರಬೇಕೆಂದು ಮೇಲ್ಕಂಡ ಅಡ್ರೆಸ್ಸಿನಲ್ಲಿ ಕಾಣಿಸಿರುವುದೂ ಯಥಾರ್ಥವಾದ ಮಾತೇ ಸರಿ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಎನಿತೆ ಎಂಥಾ ಮತವಾದರೂ ಆದೀತೆಂದು ಹೇಳಿದರೆ ನಾವು ಅನುಮೋದಿಸಲಾರೆವು. ಯಾಕೆಂದರೆ ಜನರನ್ನು ಕೆಡಿಸಿ ನೀಚಸ್ಥಿತಿಗೆ ತಂದುಬಿಡುವಂಥಾ ಮತಗಳೂ ಉಂಟೆಂದು ನಾವು ಹೇಳಬೇಕಾದದ್ದಿಲ್ಲವಾದ್ದರಿಂದ ಮತವೆನ್ನುವುದು ಸತ್ಯವಾದದ್ದಾಗಿಯೂ ಪರಿಶುದ್ಧವಾದದ್ದಾಗಿಯೂ ಇರಬೇಕಾದದ್ದೇ ಪರಮಾವಶ್ಯಕವು. ಇಲ್ಲವಾದರೆ ಪಾಠಶಾಲೆಗಳಲ್ಲಿ ಮಕ್ಕಳಿಗೆ ಅದನ್ನು ಹೇಳಿಕೊಟ್ಟು ಕಲಿಸುವುದರಿಂದ ಯಾವ ಪ್ರಯೋಜನವೂ ಆಗಲಾರದು. ಈಗ ಹಿಂದೂಸ್ಥಾನದಲ್ಲಿ ಮತದ ನಾನಾ ರೂಪಗಳು ನಮ್ಮ ಕಣ್ಣಿಗೆ ಬೀಳುತ್ತಲಿವೆ. ಈ ಮತಗಳು ಮನಸ್ಸಿಗೆ ಕತ್ತಲನ್ನು ಕವಿಸುವವುಗಳಾಗಿಯೂ, ಜನರನ್ನು ದುರಾಚಾರಗಳಲ್ಲಿ ಕೆಡವುವವುಗಳಾಗಿಯೂ ಇರುತ್ತವೆಂದು ಹೇಳಿದರೆ, ಸತ್ಯವಂತರೆಲ್ಲಾ ಈ ಮಾತನ್ನು ಒಪ್ಪಿಕೊಳ್ಳದೆ ಇರಲಾರರು. ಲಜ್ಜಾಸ್ಪದವಾದ ಬೊಂಬೆ ಮುಂತಾದ ಚಿತ್ರಗಳಿಂದಲೂ, ಮೂರ್ಖರೂ ದುರ್ಮಾರ್ಗರೂ ಆದ ಪೂಜಾರಿಗಳಿಂದಲೂ, ಹೇಯವಾದ ಚಾಲನ್ನುಳ್ಳ ಸ್ತ್ರೀಯರಿಂದಲೂ ಅನೇಕಾನೇಕ ದೇವಸ್ಥಾನಗಳು ಕೆಟ್ಟು ಅವಲಕ್ಷಣ ಪಡೆಯುತ್ತಿರುವವು. ಇಂಥಾ ಪೂಜಾಸ್ಥಾನಗಳು ಮಕ್ಕಳ ಶ್ರೇಯಸ್ಸಿಗೆ ಸಹಕಾರಿಗಳಾಗಲಾರವು. ಅವು ಮಕ್ಕಳು ಕೆಟ್ಟುಹೋಗುವುದಕ್ಕೆ ಮಾರ್ಗವಾಗಿವೆಯೇ ಹೊರತು ಅವನ್ನು ನೋಡಿ ಅವರು ಸಚ್ಚರಿತ್ರರಾಗುವುದಿಲ್ಲ. ಆದಕಾರಣ ಮತದಲ್ಲಿ ದುಷ್ಟವೂ ಮಲಿನವೂ ಆಗಿರುವಂಥಾ ಭಾಗಗಳನ್ನೆಲ್ಲಾ ವರ್ಜಮಾಡಿ, ಒಳ್ಳೆಯದೂ ಶ್ರೇಯಸ್ಕರವೂ ಆಗಿರತಕ್ಕವುಗಳನ್ನೇ ಕಾಪಾಡಿಕೊಂಡುಬರಬೇಕೆಂದು ಸಾಮಾನ್ಯವಾಗಿ ಸಮಸ್ತ ಹಿಂದುಗಳಿಗೂ, ವಿಶೇಷವಾಗಿ ಮೇಲ್ಕಂಡ ಮಂಡಲಿಯಂಥಾ ಸಭೆಗಳಿಗೂ ಸೂಚಿಸಿ ಪ್ರಾರ್ಥಿಸುತ್ತೇವೆ. ಈ ಕಾರ್ಯವು ಇತರರಿಂದ ಆಗತಕ್ಕದ್ದಲ್ಲ; ಹಿಂದುಗಳೇ ಮಾಡಿಕೊಳ್ಳತಕ್ಕದ್ದಾಗಿದೆ. ಇದು ಸರ್ಕಾರದವರ ಕರ್ತವ್ಯಾಂಶವೂ ಅಲ್ಲ. ಆಯಾ ಮತವರ್ತಿಗಳೇ ತಮ್ಮ ಮತವನ್ನು ಪರಿಷ್ಕರಿಸಿಕೊಳ್ಳಬೇಕಾಗಿರುವುದು.

ಇನ್ನೊಂದು ಸಂಗತಿಯೇನೆಂದರೆ, ಹಿಂದೂ ಮತಗ್ರಂಥಗಳಲ್ಲಿ ಹಲವು ವಿರುದ್ಧಾಭಿಪ್ರಾಯಗಳು ಕಂಡುಬರುವವು. ಕೆಲವು, ಅಂದರೆ ವೇದಗಳು, ಉಪನಿಷತ್ತುಗಳು ಮೊದಲಾದವು, ನಿರ್ದುಷ್ಟವಾಗಿಯೂ ಯೋಗ್ಯವಾಗಿಯೂ ಇರುತ್ತವೆ. ಇನ್ನು ಕೆಲವು, ಅಂದರೆ ಪುರಾಣಗಳು, ತಂತ್ರಗಳು, ಈ ಮೊದಲಾದವು ಸಂಪೂರ್ಣವಾಗಿ ಅಬದ್ಧಗಳಾಗಿಯೂ ಅಯೋಗ್ಯಗಳಾಗಿಯೂ ಇರುವವು. ಮೇಲ್ಕಂಡ ಧರ್ಮಮಂಡಲಿಯವರು ಸಂಸ್ಕೃತ ವಿದ್ಯಾಭ್ಯಾಸವನ್ನೂ, ಆ ಭಾಷೆಯನ್ನೂ, ಗ್ರಂಥ ರಚನಾದಿಗಳನ್ನೂ ಅಭಿವೃದ್ಧಿಗೆ ತರಬೇಕೆಂಬ ಉದ್ದೇಶವುಳ್ಳವರಾಗಿದ್ದಾರೆ. ಆದಕಾರಣ ಈ ಸಭೆಯವರು ಸರ್ವಯೋಗ್ಯವೆನಿಸಿರತಕ್ಕಂಥಾ ಭಾಗಗಳನ್ನು ಆರಿಸಿ ತೆಗೆದುಕೊಂಡು, ಅಯೋಗ್ಯವಾಗಿರುವವುಗಳನ್ನೆಲ್ಲಾ ವರ್ಜಮಾಡುವವರಾಗಲಿ.

ಅಂತು ಮತಭಕ್ತಿಯನ್ನು ಕಲಿತು ಅಭ್ಯಾಸಮಾಡತಕ್ಕ ಹುಡುಗರಲ್ಲಿ ಎರಡು ವಿಷಯಗಳು ಪ್ರಾಮುಖ್ಯವಾಗಿ ಕಂಡುಬರಬೇಕು. ಮತಬೋಧನೆಯಿಂದ ಹುಡುಗರು ಸತ್ಯವನ್ನು ಪ್ರೀತಿಸುವವರಾಗಿಯೂ, ಅದನ್ನು ಹುಡುಕುವುದರಲ್ಲಿ ಆಲಸ್ಯಪಡದವರಾಗಿಯೂ ಆಗಬೇಕಾದದ್ದು ಮೊದಲನೆಯ ಭಾಗವು. ಮತಬೋಧನೆಯಿಂದ ಬಾಲಕರ ಮನಸ್ಸು ದುಷ್ಕಾರ್ಯಗಳನ್ನೂ ದುರಿಚ್ಛೆಗಳನ್ನೂ ಖಂಡಿಸುವಂಥಾ ಸ್ಥೈರ್ಯಸ್ವಭಾವವನ್ನು ಪಡೆಯುವಂತೆ ಆಗಬೇಕಾದದ್ದೇ ಎರಡನೆಯ ಭಾಗವು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಸಿಟಿ ಪೋಲೀಸಿನವರು ಕಳೆದ ವಾರ ರಜಪತಿ ಐಯರ್ ಎಂಬುವನನ್ನು ದಸ್ತಗಿರಿ ಮಾಡಿರುತ್ತಾರೆ. ಇವನು ಕಂಚಿಯಲ್ಲಿ ಕೊಲೆ ನಡಸಿದನೆಂದು ಹೇಳುವರು.

* * *

ಮೈಸೂರು ಸರ್ಕಾರದ ವ್ಯವಸಾಯ ಪರಿಶೋಧನಾ ಇಲಾಖೆಯ ಮುಖ್ಯಾಧಿಕಾರಿಯಾದ ಡಾಕ್ಟರ್ ಲೆಮ್ಮನ್‌ರವರ ಪತ್ನಿಯು ಕಳೆದ ಭಾನುವಾರ ಬೆಂಗಳೂರಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

* * *

ಮೈಸೂರು ಸಂಸ್ಥಾನದ ಚೀಫ್ ಇಂಜನಿಯರಾಗಿರುವ ಮೆ॥ ಮೆಕ್ಹಚಿನ್‌ಯವರು ಇಷ್ಟರಲ್ಲೇ ಫರ್ಲೋ ರಜಾದ ಮೇಲೆ ಸೀಮೆಗೆ ಪ್ರಯಾಣ ಮಾಡುವರೆಂತಲೂ, ಆ ತರುವಾಯ ಅವರು ವಾಪಸು ಬರುವವರಾಗಿಲ್ಲವೆಂತಲೂ ಪ್ರಕಟವಾಗಿದೆ.

* * *

ಕಳೆದ ಸೋಮವಾರ ನಂಜನಗೂಡಿನಲ್ಲಿ ನಡೆದ ದೊಡ್ಡಜಾತ್ರೆಗೆ ಶ್ರೀಮನ್ಮಹಾರಾಜರವರು ಅರಮನೆಯ ಜನಾನಿಯವರೂ ದಯಮಾಡಿ ದೇವರ ಸೇವೆಯನ್ನು ನಡಸಿಕೊಂಡು, ಆ ಸಾಯಂಕಾಲವೇ ವಾಪಸು ರಾಜಧಾನಿಗೆ ಚಿತ್ತೈಸಿದರು.

* * *

ದಿವಾನ್ ಮೆ॥ ಮಾಧವರಾಯರೂ, ಮೆ॥ ಭಾಭಾರವರೂ ರಾಜಧಾನಿಯಿಂದ ಕಳೆದ ಶನಿವಾರ ರಾತ್ರಿ ರೈಲಿನಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡಿದರು. ರೆವಿನ್ಯು ಕಮೀಷನರ್ ಮೆ॥ ರಂಗಸ್ವಾಮಯ್ಯಂಗಾರ‍್ಯರು ನಾಳೆ ರಾಜಧಾನಿಗೆ ಬರುವವರಾಗಿದ್ದಾರೆ.

* * *

ಮೆ॥ ಎಚ್. ಚನ್ನಕೇಶವಯ್ಯಂಗಾರ‍್ಯರು ನಮಗೆ ಮದರಾಸಿನಿಂದ ಬರೆಯುವದೇನೆಂದರೆ— "ಬೆಂಗಳೂರಿನಲ್ಲಿ ಪ್ರಕಟವಾಗುವ ವಿಕಟಪ್ರತಾಪವೆಂಬ ಮಾಸಪತ್ರಿಕೆಗೆ ನಾನು ಇನ್ನು ಮುಂದೆ ಎಡಿಟರಾಗಿರುವುದಿಲ್ಲವೆಂಬ ಸಂಗತಿಯನ್ನು ದಯವಿಟ್ಟು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕು" ಎಂಬುದು.

* * *

ಕಳೆದ ವಾರ ದಾವಣಗೆರೆ ಹಳೇಗಿರಣಿಯಲ್ಲಿ ಬೆಂಕಿ ಬಿದ್ದು ಸುಮಾರು ೪೦೦೦ ರೂಪಾಯಿನ ಮಾಲು ನಷ್ಟವಾಯಿತು. ಜನಗಳಿಗೆ ಅಪಾಯವೇನೂ ಆಗಲಿಲ್ಲ. ಹೀಗೆಯೇ ಅನೇಕ ಸಾರಿ ನಷ್ಟವಾಗಿದೆ. ಇದು ಕಂಪನಿಯವರ ಅಜಾಗ್ರತೆಯಿಂದಲೋ ಏನೋ ತಿಳಿಯದು ಎಂದು ಒಬ್ಬ ಬಾತ್ಮಿದಾರರು ಬರೆಯುವರು.

* * *

ಹೋಷಂಗಾಬಾದ್ ಸಬ್ ಜಡ್ಜಿ ಮೆ॥ ವರದರಾಜಯ್ಯಂಗಾರ‍್ಯರು ಉತ್ತಮ ವರ್ಣದವರಲ್ಲಿ ವಿಧವೆಯರಿಗೆ ತಲೆ ಕೂದಲನ್ನು ತೆಗೆಸುವುದು ಶಾಸ್ತ್ರೋಕ್ತವಾದ ಕಾರ್ಯವಲ್ಲವೆಂತಲೂ, ಕನಿಕರವಿಲ್ಲದಂಥಾ ಬಹು ಕ್ರೂರವಾ ಪದ್ಧತಿಯೆಂತಲೂ, ಅದನ್ನು ಎಲ್ಲರೂ ತ್ಯಜಿಸಬೇಕೆಂತಲೂ ಕಳೆದ ಗುರುವಾರ ಇಲ್ಲಿನ ಟೌನ್‌ಹಾಲಿನಲ್ಲಿ ಉಪನ್ಯಾಸ ಮಾಡಿದರು.

* * *

ಕಳೆದ ವರುಷ ನಾರ್ಥ್‌ಕಿಡಿಯುದಿನ ರಾಜಧಾನಿಯಲ್ಲಿ ಕಿಡಿಯಿಂದ ಒಬ್ಬನು ಬಿದ್ದು ಅನಾಹುತವಾಯಿತು. ಈ ವರುಷ ಸರ್ಕಾರದವರು ಕಿಡಿಯಾಟಕ್ಕೆ ಲೈಸೆನ್ಸು ಕೊಡಲಿಲ್ಲ. ಮೊನ್ನೆ ಸೋಮವಾರ ಸಾಯಂಕಾಲ ನಡೆದ ಕಿಡಿಯಾಟದಲ್ಲಿ ಕೋಟೆಯ ಮತ್ತು ವೀರನಗೆರೆಯ ಕಿಡಿಗಳಿಗೆ ಮನುಷ್ಯಾಕಾರದ ಬೊಂಬೆಗಳನ್ನು ಕಟ್ಟಿ ತಂದು, ಸ್ವಲ್ಪಹೊತ್ತು ಆಡಿಸಿ, ಈ ಹಬ್ಬದ ಶಾಸ್ತ್ರವನ್ನು ಮುಗಿಸಿದರು.

ಮೈಸೂರು ಸಂಸ್ಥಾನದ ಫಾರೆಸ್ಟ್ ಇಲಾಖಾ ಮುಖ್ಯ ಉದ್ಯೋಗಸ್ಥರಾದ ಮೆ॥ ಮುತ್ತಣ್ಣನವರ ಮೇಲೆ ಮೆ॥ ಪದ್ಮರಾಜಯ್ಯನವರು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹಾಕಿದ್ದ ಮಾನನಷ್ಟದ ಮೊಕದ್ದಮೆಯನ್ನು ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ, ಮಾನನಷ್ಟವಾದದ್ದು ರುಜುವಾತಾಗಲಿಲ್ಲವೆಂದು ಹೇಳಿ, ಮೊಕದ್ದಮೆಯನ್ನು ವಜಾಮಾಡಿದರೆಂದು ತಿಳಿದುಬಂದಿದೆ.

* * *

ಬೆಂಗಳೂರು ಸೇಂಟ್ ಜೋಸೆಫ್ ಕಾಲೇಜಿನ ಇಬ್ಬರು ಬೋರ್ಡು ಹುಡುಗರು ಹೊಡೆದಾಡಿ, ಮ್ಯಾಜಿಸ್ಟ್ರೇಟರ ಕೋರ್ಟಿಗೆ ಬಂದು ಫಿರ್ಯಾದು ಹೇಳಿಕೊಂಡರು. ಅಡ್ವೊಕೇಟ್ ಮೆ॥ ಲಾರೆನ್ಸ್‌ರವರು ಈ ಹುಡುಗರ ಮೊಕದ್ದಮೆಯನ್ನು ಮ್ಯಾಜಿಸ್ಟ್ರೇಟರಿಗೆ ವಿವರಿಸಿ ಹೇಳಿ, ಅವರ ತಂದೆತಾಯಿಗಳು ಅವರನ್ನು ಸರಿಯಾಗಿ ನೋಡಿಕೊಳ್ಳದೆ ಅವಿವೇಕ ಮಾಡಿರುತ್ತಾರೆಂದು ಸೂಚಿಸಿದರು. ಮ್ಯಾಜಿಸ್ಟ್ರೇಟರು ಆ ಹುಡುಗರನ್ನು ತಕ್ಕಹಾಗೆ ದಂಡಿಸಿ ಕಳುಹಿಸಿಬಿಟ್ಟರು.

* * *

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮೆ॥ ಕಾರ್ಡ್ಯೂರವರಿಗೆ ಮದರಾಸ್ ಪೋಲೀಸ್ ಇಲಾಖೆಯಲ್ಲಿ ನೌಕರಿಯಾಗಿ, ಕಳೆದ ಭಾನುವಾರ ರಾತ್ರಿ ಬೆಂಗಳೂರಿಂದ ಪ್ರಯಾಣಮಾಡಿದರು. ಇವರನ್ನು ಸತ್ಕರಿಸುವುದಕ್ಕಾಗಿ ಬೆಂಗಳೂರು ಪೋಲೀಸಿನವರು ೧,೦೦೦ ರೂಪಾಯಿ ತಮ್ಮ ಚಂದಾ ಕೂಡಿಸಿ, ಮೊನ್ನೆ ಸೋಮವಾರ ಅಲ್ಲಿನ ಲಾಲ್‌ಬಾಗ್ ಎಂಬ ಉದ್ಯಾನವನದಲ್ಲಿ ದಿವ್ಯವಾದ ಔತಣವನ್ನೂ ಸಂತೋಷೋತ್ಸವವನ್ನೂ ನಡಿಸಬೇಕೆಂದು ಏರ್ಪಾಡುಮಾಡಿದ್ದರು. ಆದರೆ ಹಿಂದಿನ ದಿವಸವೇ ಅವರಿಗೆ ತಂತೀ ವರ್ತಮಾನ ಬಂದದ್ದರಿಂದ ಅವರು ಆ ಉತ್ಸವಕ್ಕಾಗಿ ನಿಲ್ಲಲು ಅವಕಾಶವಾಗಲಿಲ್ಲ.

ಮೈಸೂರು ಗೆಜೆಟ್ ಸಂಗ್ರಹ.

ಹಾಸನದ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮೆ॥ ಎ ರಂಗರಾಯರಿಗೆ ಮಾರ್ಚಿ ೧೦ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವತನಕ ಅಮಲ್ದಾರ್ ಮೆ॥ ಸಿ. ಆರ್. ನಾರಾಯಣಸ್ವಾಮಿಮೊದಲಿಯಾರ‍್ಯರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ ಬದಲಿ ನೋಡುವಂತೆ ನೇಮಿಸಲ್ಪಟ್ಟಿದ್ದಾರೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಅಸಿ॥ ಕಮಿಷನರ್ ಮೆ॥ ಎ ವೇದಾಂತದೇಶಿಗಂ ಐಯ್ಯಂಗಾರ‍್ಯರಿಗೆ ಮಾರ್ಚಿ ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವತನಕ ಶಿವಮೊಗ್ಗ ಸಬ್ ಡಿವಿಜನ್ ಅಸಿ॥ ಕಮಿಷನರ್ ಮೆ॥ ಆರ್ ಟಿ. ಮಹದೇವರಾಯರು ತಮ್ಮ ಇತರ ಕೆಲಸಗಳೊಂದಿಗೆ ಖಜಾನೆಯ ಛಾರ್ಜನ್ನೂ ವಹಿಸತಕ್ಕದ್ದು.

ಮೆ॥ ಜಿ. ಆರ್. ಶ್ರೀನಿವಾಸಯ್ಯಂಗಾರ‍್ಯರ ಕಾಲವಾದ ಸಬಬು ಅಮಲ್ದಾರ್ ಮೆ॥ ಸಿ. ಕೃಷ್ಣಸ್ವಾಮಯ್ಯನವರನ್ನು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ ನೇಮಕಮಾಡಿದೆ.

ಮೈಸೂರು ಸ್ಟೇಟ್ ಟ್ರೂಪ್ಸ್ ಚೀಫ್ ಕಮಾಂಡಾಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ. ದೇಸರಾಜೆ ಅರಸಿನವರು ರಜದಿಂದ ಮಾರ್ಚಿ ೩ ರಲ್ಲಿ ಬಂದು ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಮಾಡಿದೆ.

ಮೆ॥ ವಿ. ಎಚ್. ಕರ್ನೆಯವರು ಸರ್ವೀಸಿನಿಂದ ನಿವೃತ್ತರಾದ ತರುವಾಯ ಅವರಿಗೆ ಸೂಪರಿಂಟೆಂಡಿಂಗ್ ಇಂಜನಿಯರೆಂಬ ದರ್ಜೆಯನ್ನು ಕೊಡಲ್ಪಟ್ಟಿದೆ.

ಮೈಸೂರು ಡಿವಿಜನ್ ಸಬ್ ಅಸಿ ಇಂಜನಿಯರ್ ಮೆ॥ ವಿ ವಿ. ಕರ್ನೆಯವರಿಗೆ ಮಾರ್ಚಿ ೧೦ ರಿಂದ ಅಥವಾ ಅವರುಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಡಿವಿಜನ್ ಅಸಿ॥ ಇಂಜನಿಯರ್ ಮೆ॥ ಟಿ. ಸಿ. ಶ್ರೀನಿವಾಸಯ್ಯಂಗಾರ‍್ಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಎಂಟು ದಿನಗಳಿಗೆ ಜಾಸ್ತಿ ಮಾಡಿದೆ.

ಚಿತ್ರದುರ್ಗದ ಡಿವಿಜನ್ ಅಸಿ॥ ಇಂಜನಿಯರ್ ಮೆ॥ ಕೆ ಆರ್ ಶೇಷಾಚಾರ‍್ಯರಿಗೆ ಅವರುಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಾಲೂರ್ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ॥ ಕೆ. ಕೆ. ವೆಂಕಟಸ್ವಾಮಿ ಐಯರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಅವರ ಗೈರ್‌ಹಾಜರಿಯಲ್ಲಿ ಶಿರಸ್ತೇದಾರ‍್ಯರು ತಾಲ್ಲೂಕ್ ಛಾರ್ಜನ್ನೂ ವಹಿಸಿದ್ದರು.

ಸಿವಿಲ್ ಸರ್ಜನ್ ಮಿಸ್ ಆರ್. ಗೋವಿಂದರಾಜುಲುಯವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಏಳು ದಿನಗಳು ಜಾಸ್ತಿ ಮಾಡಿದೆ.

ತುಂಕೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ವೈ. ವಿ ಕೃಷ್ಣಮೂರ್ತಿಯವರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಅವರು ಇಷ್ಟಪಡುವ ತಾರೀಖು ಮೊದಲಾಗಿ ಉಪಯೋಗಿಸಿಕೊಳ್ಳಬಹುದಾಗಿದೆ.

ಎಕ್ಸೈಸ್ ಕಮಿಷನರೂ ರೆಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್‌ರೂ ಆದ ಮೆ॥ ಎಚ್. ಎಚ್. ಸ್ಪಾರ್ಕ್ಸ್ ಯವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಅವರ ಗೈರ್‌ಹಾಜರಿಯಲ್ಲಿ ಬೆಂಗಳೂರು ಡೆಪ್ಯುಟಿ ಕಮಿಷನರ್ ಮೆ॥ ಡಿ. ದೇವರಾಜೇ ಅರಸಿನವರು ಬದಲಿ ನೋಡತಕ್ಕದ್ದು. ಸೀನಿಯರ್ ಅಸಿ॥ ಕ. ಶರ್ಮರು ಬೆಂಗಳೂರು ಡೆಪ್ಯುಟಿ ಕಮಿಷನರಾಗಿ ಬದಲಿ ನೋಡತಕ್ಕದ್ದು.

ಮೈಸೂರು ಸಂಸ್ಥಾನದ ವ್ಯವಸಾಯಬ್ಯಾಂಕುಗಳು.

೧೯೦೬-೭ನೆ ಸಾಲಿನ ರಿಪೋರ್ಟು.

ಮೈಸೂರು ಸಂಸ್ಥಾನದ ವ್ಯವಸಾಯಬ್ಯಾಂಕುಗಳ ಇನ್ಸ್‌ಪೆಕ್ಟರ್ ಮಿ॥ ಎಂ ಶಾಮರಾವ್, ಎಂ. ಎ ಯವರು ಆ ಬ್ಯಾಂಕುಗಳ ಆಡಳಿತವನ್ನು ಕುರಿತು ರಿಪೋರ್ಟು ಬರೆದಿದ್ದಾರೆ. ಅದರ ಮುಖ್ಯ ಭಾಗಗಳನ್ನು ವಾಚಕರ ತಿಳಿವಳಿಕೆಯ ಬಗ್ಗೆ ಸಂಗ್ರಹಿಸಿ ಬರೆಯುತ್ತೇವೆ.

ಬ್ಯಾಂಕುಗಳ ಸಂಖ್ಯೆ, ಮೂಲಧನ ಮುಂತಾದ್ದು.

೧೯೦೬-೭ನೆ ಸಾಲಿನಲ್ಲಿ ೩೬ ವ್ಯವಸಾಯದ ಬ್ಯಾಂಕುಗಳಿದ್ದುವು; ಅಂದರೆ, ಹಿಂದಿನ ಸಾಲಿಗಿಂತ ೧೨ ಬ್ಯಾಂಕುಗಳು ಹೆಚ್ಚು. ಡಿಸ್ಟ್ರಿಕ್ಟುವಾರು ಹಂಚಿಹಾಕಿದರೆ ಬೆಂಗಳೂರಿನಲ್ಲಿ ೯, ಕೋಲಾರದಲ್ಲಿ ೧, ತುಮಕೂರಿನಲ್ಲಿ ೯, ಮೈಸೂರಿನಲ್ಲಿ ೭, ಶಿವಮೊಗ್ಗೆಯಲ್ಲಿ ೯, ಚಿತ್ರದುರ್ಗದಲ್ಲಿ ೧, ಈ ರೀತಿ ೩೬ ಬ್ಯಾಂಕುಗಳಲ್ಲಿ ಕೆಲಸ ನಡೆಯುತ್ತಿದ್ದುವು. ಈ ಬ್ಯಾಂಕುಗಳ ರಿಜಿಸ್ಟರ್ ಮೂಲಧನ ೭,೧೯,೦೦೦ ರೂಪಾಯಿ. ಮೂಲಧನವೆಂಬುವುದು ಗವರ್ನಮೆಂಟಿನಿಂದ ತೆಗೆದುಕೊಂಡಿರುವ ಸಾಲದ ಮೊಬಲಗಲ್ಲದೆ ಅನ್ಯಥಾ ಅಲ್ಲ. ಬ್ಯಾಂಕುಗಳ ಚಲಾವಣೆಗೆ ಅವಶ್ಯವಾದಷ್ಟು ಹಣವನ್ನು ಹೊರಗಿನಿಂದ ಡಿಪಾಜಿಟ್ಟು ಇಡಲ್ಪಟ್ಟಿಲ್ಲ. ಮತ್ತು ಅವುಗಳ ಈಗಿನ ಸ್ಥಿತಿಗತಿಯನ್ನು ನೋಡಿದರೆ, ಯಾವ ಡಿಪಾಜಿಟ್ಟು ಇಡುವ ಸಾಗೂ ಕಾಣುವುದಿಲ್ಲ.

ಮೆಂಬರುಗಳು, ಅವರ ಆಸ್ತಿ, ಡಿಪಾಜಿಟ್ಟು.

ಈ ಬ್ಯಾಂಕುಗಳ ಒಟ್ಟು ಮೆಂಬರುಗಳ ಸಂಖ್ಯೆ ೧,೨೮೯. ಈ ಪೈಕಿ ವ್ಯವಸಾಯಮಾಡುವವರು ೯೩೭ ಮಂದಿ, ಇತರ ಕಸಬಿನವರು ೩೫೨ ಮಂದಿ. ಜಾತಿವಾರಾಗಿ ಹಂಚಿಹಾಕಿದರೆ ಬ್ರಾಹ್ಮಣರು ೪೧೭, ಲಿಂಗಾಯತರು ೬೬೦, ಒಕ್ಕಲಿಗರು ೬೩೪, ಮುಸಲ್ಮಾನರು ೪೬, ಇತರರು ೧೩೪. ಈ ಬ್ಯಾಂಕುಗಳಿಗೆ ಸೇರಿರುವ ಮೆಂಬರುಗಳ ಆಸ್ತಿಯು ೯,೫೮,೪೭೪ ರೂಪಾಯಿ ಎಂದು ಅಂದಾಜು ಕಟ್ಟಿದೆ. ಆದರೆ ಈ ಅಂದಾಜು ಬಹಳ ಮಟ್ಟಿಗೆ ಊಹೆಯಿಂದಲೂ, ಪ್ರತಿ ವರುಷವೂ ಜಮಾಬಂದೀ ಆಫೀಸರುಗಳು ಕ್ರಮವಾಗಿ ಆ ಆಸ್ತಿಗಳ ಬೆಲೆಯ ಅಂದಾಜು ಪಟ್ಟಿಯನ್ನು ತಯಾರು ಮಾಡುವುದು ಅವಶ್ಯವೆಂದೂ ಕಾಣುತ್ತದೆ. ಈ ಬ್ಯಾಂಕುಗಳಲ್ಲಿ ಡಿಪಾಜಿಟ್ಟು ಹಣ ಬಂದಿರುವುದು ಬಹಳ ಸ್ವಲ್ಪ. ಮೆಂಬರುಗಳೂ, ಇತರರೂ ಕೆಲವು ಬ್ಯಾಂಕುಗಳಲ್ಲಿ ಮಾತ್ರ ೧೬,೩೭೬ ಚಿಲ್ಲರೆ ರೂಪಾಯನ್ನು ಡಿಪಾಜಿಟ್ಟು ಮಾಡಿದ್ದಾರೆ. ಆದರೆ ಆ ಪೈಕಿ ೭,೮೩೧ ಚಿಲ್ಲರೆ ರೂಪಾಯಿ ವಾಪಸು ಪಡೆದುಕೊಂಡಿದ್ದಾರೆ. ಈ ಪೈಕಿ ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ಹೊಂಗೇನಹಳ್ಳಿ ವ್ಯವಸಾಯದ ಬ್ಯಾಂಕೂ, ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಪಾಲಹಳ್ಳಿ ವ್ಯವಸಾಯದ ಬ್ಯಾಂಕೂ ತೃಪ್ತಿಕರವಾಗಿರುತ್ತವೆಂದು ಅನುಮೋದಿಸಬಹುದು.

ಮೆಂಬರುಗಳ ಸಾಲ ಮುಂತಾದ್ದು.

ಮೆಂಬರುಗಳು ಈ ಬ್ಯಾಂಕುಗಳಿಂದ ಪಡೆದುಕೊಂಡಿರುವ ಸಾಲದ ಪೈಕಿ ಅವರಿಂದ ವಸೂಲಾಗಬೇಕಾಗಿರುವ ಮೊಬಲಗೂ, ಅದರ ಬಡ್ಡಿಯೂ ೩,೧೧,೬೩೬ ಚಿಲ್ಲರೆ ರೂಪಾಯಿ ಆಗುತ್ತವೆ. ಇದಕ್ಕಾಗಿ ಈಡು ಮಾಡಲ್ಪಟ್ಟಿರುವ ಆಸ್ತಿಯು ೯,೫೮,೪೭೪ ರೂಪಾಯಿ ಆಗಬಹುದೆಂದು ಅಂದಾಜು ಕಟ್ಟಿದೆ. ಆದರೆ ಈ ಲೆಕ್ಕಗಳು ಖರಾವಾರಾಗಿವೆ ಎಂದು ಹೇಳುವುದಕ್ಕಾಗದು. ಸಾಲ ಪಡೆದುಕೊಂಡಿರುವ ಮೆಂಬರುಗಳಿಂದ ಹಣ ವಸೂಲ್ಮಾಡುವುದು ಬ್ಯಾಂಕುಗಳಿಗೆ ಬಹಳ ಕಷ್ಟಕರವಾಗಿದೆ. ಕೆಲವು ಸಂದರ್ಭಗಳಲ್ಲಿ ದಾವಾಗಳಾಗಿ ಡಿಕ್ರಿ ಪಡೆದುಕೊಂಡದ್ದಾಗಿದೆ. ಆದರೆ ಬ್ಯಾಂಕುಗಳಲ್ಲಿ ಅಧಿಕಾರಿಗಳಾಗಿರತಕ್ಕ ಅನೇಕ ಮೆಂಬರುಗಳೇ ತಾವು ತೆಗೆದುಕೊಂಡಿರುವ ಸಾಲವನ್ನು ಕ್ರಮವಾಗಿ ಕೊಟ್ಟು ತೀರಿಸದೆ ತಪ್ಪಿತಸ್ಥರಾಗಿರುತ್ತಾರಾದಕಾರಣ ಸರ್ಕಾರದವರು ಪ್ರವರ್ತಿಸಿದ ಹೊರತು ಬ್ಯಾಂಕುಗಳು ತಾವಾಗಿಯೇ ಹಣವನ್ನು ವಸೂಲ್ಮಾಡುವುದು ಸಾಧ್ಯವಿಲ್ಲವೆಂದು ಹೇಳಬಹುದು.

ಸಾಲದ ಉದ್ದೇಶ

ಮೆಂಬರುಗಳು ಬ್ಯಾಂಕುಗಳಿಂದ ಯಾವ ಉದ್ದೇಶಕ್ಕಾಗಿ ಸಾಲ ತೆಗೆದುಕೊಂಡರೆಂಬುವುದು ಖಚಿತವಾಗಿ ತಿಳಿಯುವುದಕ್ಕೆ ಮಾರ್ಗವೇ ಇಲ್ಲ. ಸಾಮಾನ್ಯವಾಗಿ ಹಿಂದಿನ ಸಾಲಗಳನ್ನು ತೀರಿಸುವುದಕ್ಕಾಗಿಯೂ, ನಾನಾ ವ್ಯವಸಾಯ ಕಾರ್ಯಗಳನ್ನು ನಡೆಸುವುದಕ್ಕಾಗಿಯೂ, ಸಾಲ ಕೊಟ್ಟಿರುವಂತೆ ಹೇಳುತ್ತಾರೆ. ಆದರೆ [illegible] ನೋಡಿದರೆ ಸಾಲ ತೆಗೆದುಕೊಂಡವರು ಆ ಉದ್ದೇಶಗಳಿಗೆ ಹಣವನ್ನು ವಿನಿಯೋಗಿಸಿದ್ದೇ ಅನುಮಾನವಾಗಿ [illegible] ಗಳ ಡೈರೆಕ್ಟರುಗಳು ಈ ಭಾಗವನ್ನು ಚೆನ್ನಾಗಿ [illegible] ಕ್ರಮವಾಗಿ ಪರಿಶೀಲಿಸಬೇಕಾದದ್ದು ಅವರ ಕರ್ತವ್ಯವಾಗಿದ್ದರೂ ಅವರು ಹಾಗೆ ಮಾಡಲಿಲ್ಲವೆಂದು ಕಾಣುತ್ತದೆ. ಅವರು ಪ್ರತಿ ಒಂದು ಸಂದರ್ಭದಲ್ಲೂ ತಕ್ಕ ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳಬೇಕಾಗಿತ್ತು.

ಬ್ಯಾಂಕುಗಳ ಹುಟ್ಟುವಳಿಯೂ ಖರ್ಚೂ

ಈ ಬ್ಯಾಂಕುಗಳ ಒಟ್ಟು ಆದಾಯವು ಸುಮಾರು ೧೩,೫೬೫ ರೂಪಾಯಿ. ಮೆಂಬರುಗಳಿಗೆ ಕೊಟ್ಟ ಸಾಲದ ಮೇಲಿನ ಬಡ್ಡಿ, ಜುಲ್ಮಾನೆ, ಮುಸ್ತಿಟ್ಟು ಮೊದಲಾದವುಗಳ ಹುಟ್ಟುವಳಿ ಮುಖ್ಯ ಬಾಬುಗಳು. ಒಟ್ಟು ಖರ್ಚು ೧೦,೪೦೬ ರೂಪಾಯಿ. ಇದರಲ್ಲಿ ಸರ್ಕಾರಕ್ಕೆ ಇವರು ಕೊಡಬೇಕಾಗಿದ್ದ ಸಾಲದ ಬಡ್ಡಿಯೂ, ಸಿಬ್ಬಂದಿ ಖರ್ಚು, ಸಾದಿಲ್ವಾರ್ ಖರ್ಚು ಸೇರಿರುತ್ತವೆ. ಈ ಬ್ಯಾಂಕುಗಳಲ್ಲಿ ಸಿಬ್ಬಂದಿ ಮತ್ತು ಸಾದಿಲ್ವಾರ್ ಖರ್ಚುಗಳನ್ನು ಬಹಳ ಹೆಚ್ಚಾಗಿ ಇಟ್ಟುಕೊಂಡಿದ್ದಾರೆ. ಈಗ ಈ ಬಾಬುಗಳನ್ನು ಬಹಳ ಮಟ್ಟಿಗೆ ಕಡಿಮೆ ಮಾಡಲಾಗಿದೆ. ಅನೇಕ ಬ್ಯಾಂಕುಗಳಲ್ಲಿ ಈಗ ಗುಮಾಸ್ತರ ಮತ್ತು ಜವಾನರ ಸಂಬಳಗಳನ್ನು ಇಳಿಸಿರುತ್ತಾರೆ. ಸಾದಿಲ್ವಾರ್ ಖರ್ಚನ್ನೂ ಬಹಳ ಮಟ್ಟಿಗೆ ಕಡಮೆ ಮಾಡುವಂತೆ ಏರ್ಪಾಡು ಮಾಡಲಾಗಿದೆ.

ಸರ್ಕಾರಕ್ಕೆ ವಸೂಲಾಗಬೇಕಾದ ಹಣಗಳು.

ಸರ್ಕಾರಕ್ಕೆ ಕಿಸ್ತು ರೂಪದಲ್ಲಿ ಈ ಬ್ಯಾಂಕುಗಳಿಂದ ಬರಬೇಕಾಗಿದ್ದ ೩,೧೦,೬೩೧ ಚಿಲ್ಲರೆ ರೂಪಾಯಿನ ಪೈಕಿ ಗತಸಾಲಿನಲ್ಲಿ ೨,೦೪,೧೪೪ ಚಿಲ್ಲರೆ ರೂಪಾಯಿ ವಸೂಲಾಗಿ, ಇನ್ನೂ ೧,೦೬,೪೮೭ ಚಿಲ್ಲರೆ ರೂಪಾಯಿ ಬಾಕಿ ಉಳಿದುಕೊಂಡಿತು. ಮತ್ತು ಸಮಸ್ತ ವ್ಯವಸಾಯ ಬ್ಯಾಂಕುಗಳಿಂದಲೂ ಕಳೆದ ಸಾಲಿನಲ್ಲಿ ಅಸಲಿಗೆ ೪೯,೦೧೦ ರೂಪಾಯಿಯೂ, ಬಡ್ಡಿಗೆ ೧೪,೮೪೬ ರೂಪಾಯಿಯೂ ಖಜಾನೆಗಳಿಗೆ ಪಾವತಿ ಆಗಿರುತ್ತದೆ. ಈ ಪೈಕಿ ಊರ್ಜಿತಸ್ಥಿತಿಯಲ್ಲಿರುವಂಥಾ ಬ್ಯಾಂಕುಗಳೇ ಅಸಲಿಗೆ ೩೦,೬೧೮ ರೂಪಾಯನ್ನೂ, ಬಡ್ಡಿಗೆ ೯,೮೮೫ ರೂಪಾಯನ್ನೂ ಸಲ್ಲಿಸಿರುವವು.

ಲೇವಾದೇವಿಯನ್ನು ನಿಲ್ಲಿಸಲ್ಪಟ್ಟಿರುವ ೭೨ ವ್ಯವಸಾಯದ ಬ್ಯಾಂಕುಗಳಿಂದ ಕಳೆದ ಸಾಲಿನ ಅಖೈರ್ ವರೆಗೆ ೧,೮೧,೮೫೮ ರೂಪಾಯಿ ಕಿಸ್ತು ಪಾವತಿ ಆಗಬೇಕಾಗಿದ್ದದ್ದರ ಪೈಕಿ ೯೧,೮೭೮ ರೂಪಾಯಿ ವಸೂಲಾಗಿ, ಇನ್ನೂ ೯೦,೦೭೯ ರೂಪಾಯಿ ಬಾಕಿಯಲ್ಲಿದೆ. ಗತಸಾಲ್ ಒಂದರಲ್ಲೇ ಈ ಬ್ಯಾಂಕುಗಳು ಅಸಲಿಗೆ ೧೮,೪೯೭ ರೂಪಾಯನ್ನೂ, ಬಡ್ಡಿಗೆ ೪,೯೬೦ ರೂಪಾಯನ್ನೂ ಸರ್ಕಾರಕ್ಕೆ ಸಲ್ಲಿಸಿರುವವು.

ಇತರ ವಿಷಯಗಳು

ಗವರ್ನಮೆಂಟಿನವರು ಕೊಟ್ಟಿರುವ ಸಾಲವೆಲ್ಲಾ ವಸೂಲಾದ ಮೇಲೆ ಈ ಬ್ಯಾಂಕುಗಳು ಚಲಾವಣೆಯಲ್ಲಿರಲಾರವೆಂದು ಖಂಡಿತವಾಗಿ ಹೇಳಬಹುದು. ಹಾಲ್‌ದೊಡ್ಡೇರಿ, ಪಾಲಹಳ್ಳಿ, ಹೊಂಗೇನಹಳ್ಳಿ, ಈ ಸ್ಥಳಗಳಲ್ಲಿರುವ ಮೂರು ವ್ಯವಸಾಯಬ್ಯಾಂಕುಗಳು ಮಾತ್ರ ಬಹಳ ಕ್ರಮವಾಗಿ ಕಿಸ್ತುಗಳನ್ನು ಪಾವತಿಮಾಡುತ್ತಾ, ಸ್ವಲ್ಪ ಸಿಲ್ಕು ಹಣಗಳನ್ನು ಕೂಡಿಸಿಟ್ಟುಕೊಂಡಿರುತ್ತವೆ. ಈ ಬ್ಯಾಂಕುಗಳವರೂ ಕೂಡ ಆ ಕೂಡಿಸಿರುವ ಹಣವನ್ನು ಸರ್ಕಾರದ ಸಾಲವೆಲ್ಲಾ ಕೊಟ್ಟು ಪೂರೈಸಿದ ತರುವಾಯ ಬೇರೆ ಬ್ಯಾಂಕುಗಳನ್ನಿಟ್ಟು, ಮೂಲಧನವಾಗಿ ವಿನಿಯೋಗಿಸಿಕೊಂಡು ಇರುತ್ತೇವೆಂಬುದನ್ನು ಬಿಟ್ಟು, ಯಾವುದಾದರೂ ಧರ್ಮಕಾರ್ಯಗಳಿಗೆ ಕೊಟ್ಟುಬಿಡಬೇಕೆನ್ನುವವರಾಗಿದ್ದಾರೆ. ಈ ಬ್ಯಾಂಕುಗಳನ್ನೆಲ್ಲಾ ಪರಸ್ಪರಸಹಾಯಕ ಸಂಘಗಳನ್ನಾಗಿ ಮಾಡಿದ ಹೊರತು ಅವು ಊರ್ಜಿತವಾಗುವಂತೆ ಕಾಣುವುದಿಲ್ಲ.

ಹಿಂದೂ ಪ್ರತಿನಿಧಿಗಳೂ ವೈಸ್‌ರಾಯಿಯವರೂ

“ಶ್ರೀ ಭಾರತಧರ್ಮ ಮಹಾಮಂಡಲಿಯು”

ಕಳೆದ ೬ನೆ ತಾರೀಖು ಮಂಗಳವಾರ ಈ ರಾಷ್ಟ್ರದ ಹಿಂದುಗಳ ಪರವಾಗಿ ಕೆಲವು ಮುಖ್ಯ ಪ್ರತಿನಿಧಿಗಳು ಕಲ್ಕತ್ತಾ ಪಟ್ಟಣದಲ್ಲಿ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳನ್ನು ಕಾಣಿಸಿಕೊಂಡು, ಅವರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸಿದರು. ಅಲ್ಲಿಗೆ ಹೋಗಿದ್ದ ಹಿಂದೂ ದೊಡ್ಡ ಮನುಷ್ಯರೂ ಪ್ರತಿನಿಧಿಗಳೂ ಯಾರೆಂದರೆ—ಕಾಶ್ಮೀರ್, ಉಲ್ವಾರ್, ಕೃಷ್ಣಘರ್, ಸೈಲಾನಾ, ಒಚ್ಛಾ, ರೇವಾ, ಕಾಶೀ, ಈ ಮೊದಲಾದ ರಾಜರುಗಳ ಪ್ರತಿನಿಧಿಗಳು, ಶಾರದಾ ಮಠದ ಶ್ರೀಶಂಕರಾಚಾರ್ಯರು, ಗೋವರ್ಧನಮಠ, ದ್ವಾರಕೆಯ ಶೃಂಗೇರೀ ಮಠ, ಪುರಿ (ಜಗನ್ನಾಥ) ಮೈಸೂರು, ಈ ಕಡೆಗಳ ವೈದಿಕ ಪ್ರತಿನಿಧಿಗಳು, ನಾಥದ್ವಾರಗದ್ದಿಗೆ ಮತ್ತು ಗಯೆಯ ಮಹಂತರುಗಳ ಕಡೆ ಪ್ರತಿನಿಧಿಗಳು, ಬಹು ಮಂದಿ ಪ್ರಸಿದ್ಧರಾದ ಮಹಾಮಹೋಪಾಧ್ಯಾಯರುಗಳು ಮತ್ತು ಮುಖ್ಯರಾದ ದೊಡ್ಡ ಮನುಷ್ಯರು, ಇವರೆಲ್ಲಾ ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಅಧಿಪತ್ಯಗಳಿಂದಲೂ ಹೋಗಿದ್ದರು. ಈ ಮಹನೀಯರು ಉತ್ತರ ದೇಶದಲ್ಲಿ ಸ್ಥಾಪನೆಯಾಗಿರುವ ''ಶ್ರೀ ಭಾರತಧರ್ಮ ಮಹಾಮಂಡಲಿ'' ಎಂಬ ಸಭೆಗೆ ಸೇರಿದವರಾಗಿರುತ್ತಾರೆ. ಈ ಸಭೆಯು ಹಿಂದುಸ್ಥಾನದಲ್ಲೆಲ್ಲಾ ಬಹಳ ಪ್ರಾಮುಖ್ಯತೆಯನ್ನೂ ವಿಶೇಷವಾದ ಕೀರ್ತಿಯನ್ನೂ ಪಡೆದಿರುತ್ತದೆ. ಅದರ ಮುಖ್ಯ ಉದ್ದೇಶಗಳೇನೆಂದರೆ—ಹಿಂದುಸ್ಥಾನದ ಎಲ್ಲಾ ದಿಗ್ದೇಶಗಳಲ್ಲೂ ಸಂಸ್ಕೃತ ವಿದ್ಯೆಯನ್ನು ವಿಶೇಷವಾಗಿ ಪ್ರಚಾರಕ್ಕೆ ತರುವುದು, ಹಿಂದೂ ಜನಗಳಲ್ಲೆಲ್ಲಾ ಐಕಮತ್ಯವನ್ನುಂಟುಮಾಡುವುದು, ಹಿಂದೂ ಮತವನ್ನು ಪ್ರಚಾರಕ್ಕೆ ತಂದು ಅಭಿವೃದ್ಧಿಪಡಿಸುವುದು, ಹಿಂದುಗಳ ಆಚಾರವ್ಯವಹಾರಗಳನ್ನೆಲ್ಲಾ ವೇದೋಕ್ತ ಕ್ರಮಂಗಳಿಗೆ ಅನುಸಾರವಾಗುವಂತೆ ತಿದ್ದುಪಾಟುಮಾಡಿ, ಜನಸಮುದಾಯವನ್ನು ಅಭಿವೃದ್ಧಿ ಹೊಂದುವಂತೆ ಪ್ರೋತ್ಸಾಹಪಡಿಸುವುದು, ಇತ್ಯಾದಿಗಳಾಗಿವೆ. ಆದಕಾರಣ ಈ ''ಮಂಡಲಿ''ಯ ಉದ್ದೇಶವು ಸ್ತುತ್ಯಾರ್ಹವಾಗಿರುತ್ತದೆಂದು ಹೇಳಬೇಕಾದದ್ದಿಲ್ಲ. ಇದೇ ಮಂಡಲಿಯನ್ನು ಅಭಿವೃದ್ಧಿ [illegible] ಇದರ ಉದ್ದೇಶವು [illegible] ಈ ರಾಷ್ಟ್ರದಲ್ಲಿ ಹಿಂದುಗಳೆಂಬ ಕೋಟ್ಯನುಕೋಟಿ ಜನಗಳೆಲ್ಲಾ ಒಂದಾಗಿ [illegible] ಜೊತೆಸೇರಿಸಿಕೊಳ್ಳುವರು.

“ಮಂಡಲಿ”ಯ ಪ್ರಾರ್ಥನೆಯು

ಈ ಸಭೆಯ ಪ್ರತಿನಿಧಿಗಳು ವೈಸ್‌ರಾಯಿಯವರಿಗೆ ಒಪ್ಪಿಸಿದ ಅಡ್ರೆಸ್ಸಿನಲ್ಲಿ ಒಂದು ವಿಷಯವನ್ನು ಪ್ರಾಮುಖ್ಯವಾಗಿ ಕಾಣಿಸಿ, ಆ ಭಾಗದಲ್ಲಿ ಅವರ ಸಹಾಯವನ್ನು ಬೇಡಿಕೊಂಡರು. ಈ ರಾಷ್ಟ್ರದ ಸಮಸ್ತ ಸ್ಕೂಲುಗಳಲ್ಲೂ ಕಾಲೇಜುಗಳಲ್ಲೂ ಗವರ್ನಮೆಂಟಿನವರು ಹುಡುಗರ ವಿದ್ಯಾಭಿವೃದ್ಧಿಗಾಗಿ ಮಾಡುತ್ತಾ ಬಂದಿರುವ ಸಮಸ್ತವಾದ ಏರ್ಪಾಡುಗಳೂ ಸ್ತೋತ್ರಾರ್ಹಗಳಾಗಿರುತ್ತವೆ. ಇದಕ್ಕಾಗಿ ''ಮಂಡಲಿ''ಯವರು ಗವರ್ನಮೆಂಟಿನವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತಾರೆ. ಆದರೆ ಅದೇ ಸ್ಕೂಲು ಮತ್ತು ಕಾಲೇಜುಗಳಲ್ಲಿ ಬರೀ ಪ್ರಾಪಂಚಿಕವಾದ ವಿದ್ಯೆಗಳನ್ನೇ ಕಲಿಸುತ್ತಾ ಬಂದಿರೋಣವುದು, ಅದರ ಫಲಿತಾಂಶವು ಬಹು ದುಃಖಕರವಾಗಿ ಪರಿಣಮಿಸಿರುವುದು. ಆದಕಾರಣ ಈ ರಾಷ್ಟ್ರದ ಬಾಲಕರನ್ನು ಸರ್ಕಾರದವರು ಪ್ರಾಪಂಚಿಕ ಕಲಾಕೋವಿದರನ್ನಾಗಿ ಮಾಡುವುದರ ಜೊತೆಗೆ ಸದ್ಗುಣಿಗಳನ್ನಾಗಿಯೂ ಸಚ್ಚರಿತ್ರರನ್ನಾಗಿಯೂ ತರಪೇತು ಮಾಡಬೇಕಾಗಿರುತ್ತದೆ. ''ಮಂಡಲಿ''ಯವರು ಈ ಮೊದಲಾದ ವಿಚಾರಗಳನ್ನು ಕುರಿತು ವೈಸ್‌ರಾಯಿಯವರನ್ನು ಬೇಡಿಕೊಂಡರು.

ವೈಸ್‌ರಾಯಿಯವರ ಪ್ರತ್ಯುತ್ತರ.

ಈ ಮಂಡಲಿಯವರನ್ನು ಆದರಪೂರ್ವಕವಾಗಿ ಸತ್ಕರಿಸಿ, ವೈಸ್‌ರಾಯಿ ಪ್ರಭುಗಳು ಅವರಿಗೆ ಪ್ರತ್ಯುತ್ತರವನ್ನಿತ್ತರು. ಅದರ ಮುಖ್ಯಾಭಿಪ್ರಾಯವೇನೆಂದರೆ—ಹಿಂದುಸ್ಥಾನದ ವೈದಿಕರೆಲ್ಲಾ ಈ ರೀತಿ ಏಕಾಭಿಪ್ರಾಯವುಳ್ಳವರಾಗಿ, ಸಂಸ್ಕೃತ ವಿದ್ಯೆಯನ್ನು ಅಭಿವೃದ್ಧಿಗೆ ತರಬೇಕೆಂಬ ಉದ್ದೇಶದಿಂದ ಇಷ್ಟು ಸಾಹಸಪಡುತ್ತಿರುವುದನ್ನು ನೋಡಿ ನನಗೆ ತುಂಬಾ ಸಂತೋಷವುಂಟಾಗಿದೆ. ನಿಮ್ಮ ಸಂಘವು ರಾಜಕೀಯ ವಿಷಯಗಳಿಗೆ ತಲೆ ಹಾಕತಕ್ಕದ್ದಲ್ಲವೆಂತಲೂ, ಮತಭಕ್ತಿಯನ್ನು ಅಭಿವೃದ್ಧಿಪಡಿಸೋಣದರಿಂದ ಸಮಸ್ತರೂ ಒಂದಾಗಿ ಸದ್ಗುಣ ಸಚ್ಚರಿತ್ರೆಗಳನ್ನು ಅವಲಂಬಿಸುವಂತೆ ಪ್ರೋತ್ಸಾಹಪಡಿಸತಕ್ಕದ್ದೆಂತಲೂ ತಿಳಿದಿರುತ್ತೇವೆ. ಹಿಂದೂ ವೇದಶಾಸ್ತ್ರಾದಿಗಳು ದೇವರ ವಿಷಯದಲ್ಲೂ, ದೇವಾಂಶದವರಾದ ರಾಜರುಗಳ ವಿಷಯದಲ್ಲೂ ವಿಶೇಷವಾದ ಭಕ್ತಿ ಶ್ರದ್ಧಾದಿಗಳನ್ನು ಇಟ್ಟಿರಬೇಕೆಂದು ಬೋಧಿಸುತ್ತವೆ. ಈ ಭಾಗದಲ್ಲಿ ಇತರ ಮತತತ್ವಗಳು ಬೇರೆ ಅಭಿಪ್ರಾಯಗಳನ್ನು ಹೊಂದಿಲ್ಲ. “ದೇವರಿಗೆ ಹೆದರು, ರಾಜನನ್ನು ಸನ್ಮಾನಿಸು” ಎಂದು ಕ್ರೈಸ್ತವೇದಗಳು ಸಾರುತ್ತವೆ. ಮತಭಕ್ತಿಯೇ ಸಕಲವಿಧವಾದ ಅಭಿವೃದ್ಧಿಗೂ ಮೂಲಕಾರಣವಾಗಿರುತ್ತದೆ. ಇಂಥಾದ್ದರಲ್ಲಿ ಈ ರಾಷ್ಟ್ರದ ಪ್ರಾಚೀನಗ್ರಂಥಗಳನ್ನು ಎಲ್ಲಾ ಕಡೆಗಳಲ್ಲೂ ಪ್ರಚಾರಕ್ಕೆ ತಂದು, ಸಮಸ್ತ ಹಿಂದುಗಳನ್ನೂ ಸಚ್ಛೀಲರನ್ನಾಗಿ ಮಾಡಬೇಕೆನ್ನುವ ನಿಮ್ಮ ಉದ್ದೇಶವು ಸ್ತೋತ್ರಾರ್ಹವಾಗಿದೆ ಎಂದು ನಾವು ಹೇಳಬೇಕಾಗಿಲ್ಲ. ನೀವು ಹೇಳುವಂತೆ ಈ ರಾಷ್ಟ್ರದ ಬಾಲಕರು ಬೆಳೆಯುತ್ತಾ ಬಂದಹಾಗೆಲ್ಲಾ ರಾಜಭಕ್ತರಾಗಿಯೂ, ಸತ್ಯಶೀಲರಾಗಿಯೂ, ಸ್ವಾರ್ಥವನ್ನು ತ್ಯಜಿಸಿ ಪರಾರ್ಥವನ್ನೇ ಬಯಸತಕ್ಕಂಥಾ ಭಕ್ತಿವಂತರಾಗಿಯೂ ಆಗುವುದು ಪರಮಾವಶ್ಯಕವಾಗಿರುತ್ತದೆ. ನಾವೆಲ್ಲಾ ಈ ದೇಶದಲ್ಲಿ ವಿದ್ಯೆಯನ್ನು ಕಲಿಸುವುದಕ್ಕೆ ವಿಶೇಷವಾದ ಗಮನವನ್ನು ಕೊಡಬೇಕಾಗಿದೆ. ಇದೇ ನಮ್ಮೆಲ್ಲರ ಪ್ರಥಮ ಕಾರ್ಯವಾಗಿರಬೇಕು. ಇದಕ್ಕಿಂತಲೂ ಮುಖ್ಯವಾದ ಕೆಲಸ ಮತ್ತೊಂದಿಲ್ಲವು. ಈ ರಾಷ್ಟ್ರದ ಭವಿಷ್ಯ ಸ್ಥಿತಿಗತಿಯು ಅದರಿಂದ ಸಾರ್ಥಕವಾಗಬೇಕಾಗಿದೆ. ಸದ್ಯದಲ್ಲಿ ಇಲ್ಲಿನ ವಿದ್ಯಾಭ್ಯಾಸದ ಕ್ರಮಗಳು ಯೋಗ್ಯಸ್ಥಿತಿಯಲ್ಲಿಲ್ಲ. ವಿದ್ಯಾಭ್ಯಾಸ ಮಾಡತಕ್ಕವರು ಕೂಡ ತಮ್ಮ ಕರ್ತವ್ಯವನ್ನು ಸಾವಧಾನದಿಂದ ನೆರವೇರಿಸುವುದಿಲ್ಲ. ಬುದ್ಧಿಕುಶಲತೆಯಿಂದ ಶ್ರೇಯಸ್ಸನ್ನಾಗಲಿ ಕ್ಷೇಮಗತಿಯನ್ನಾಗಲಿ ಹೊಂದಬಹುದು. ಈಗ ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ವಿದ್ಯಾಭ್ಯಾಸಮಾಡಿಸಬೇಕು, ಬುದ್ಧಿಕುಶಲತೆಯನ್ನು ಹೆಚ್ಚಿಸಬೇಕು ಎಂಬುದು ವಿಶೇಷವಾದ ಕುತೂಹಲವುಂಟಾಗಿರುತ್ತದೆ. ಇದನ್ನು ಸಾರ್ಥಕಪಡಿಸಬೇಕಾದ ಭಾರವು ನಿಮ್ಮನ್ನೇ ಹೊಂದಿರುತ್ತದೆ. ಗವರ್ನಮೆಂಟಿನವರು ತಮ್ಮ ವಿದ್ಯಾಶಾಲೆಗಳಲ್ಲಿ ಮತಭಕ್ತಿ ವಿಚಾರಗಳನ್ನು ಕಲಿಸುವಂತೆ ಏರ್ಪಾಡುಮಾಡುವುದು ಕ್ಷೇಮಕರವಲ್ಲವಾದ್ದರಿಂದ ಅವರು ಪ್ರಾಪಂಚಿಕವಾದ ವಿದ್ಯೆಯನ್ನು ಮಾತ್ರ ಕಲಿಸುತ್ತಿದ್ದಾರೆ. ಮತಭಕ್ತಿಯ ವಿಷಯದಲ್ಲಿ ಗವರ್ನಮೆಂಟಿನವರು ಪ್ರವರ್ತಿಸುವುದೇ ಇಲ್ಲವೆಂದು ನಿಷ್ಕರ್ಷೆ ಮಾಡಿಕೊಂಡಿರುವುದು ಈ ರಾಷ್ಟ್ರದಲ್ಲಿ ಬಹಳ ಒಳ್ಳೇದಾಗಿದೆ. ಇಷ್ಟು ವರುಷಗಳಿಂದೀಚೆಗೆ ಈ ದೇಶದ ವಿದ್ಯಾಭ್ಯಾಸದಲ್ಲಿ ಒಂದು ದೊಡ್ಡ ಬದಲಾವಣೆಯು ಕಂಡುಬರುತ್ತಿರುವುದು. ಇದು ಬಹಳ ಶ್ರೇಯಸ್ಕರವಾದದ್ದು. ಕೇಳಬಲ್ಲವು ಈ ದೇಶದ ವಿದ್ಯಾಶಾಲೆಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ ನಡಿಸುತ್ತಾ ಬಂದಿರುವರು. ೧೯೦೧ನೆಯ ಸಾಲಿನಲ್ಲಿ ಹಿಂದುಸ್ಥಾನದ ವಿದ್ಯಾಶಾಲೆಗಳಿಗೆ ಸಂಬಂಧಪಟ್ಟಂತೆ ೧,೪೧೫ ವಿದ್ಯಾರ್ಥಿನಿಲಯಗಳಿದ್ದುವು. ಅವುಗಳಲ್ಲಿ ೪೭,೩೦೬ ಮಂದಿ ಬಾಲಕರು ಇದ್ದು ವ್ಯಾಸಂಗಮಾಡುತ್ತಿದ್ದರು. ಈ ನಿಲಯಗಳಿಗೆ ಗವರ್ನಮೆಂಟಿನವರು ದ್ರವ್ಯಸಹಾಯಮಾಡುತ್ತಾ ಬಂದಿದ್ದಾಗ್ಯೂ ದೇಶೀಯ ದೊಡ್ಡ ಮನುಷ್ಯರೂ ವಿದ್ಯಾಸಂಘಗಳವರೂ ಚಂದಾಕೊಟ್ಟು, ಆ ನಿಲಯಗಳನ್ನು ನಡೆಸುತ್ತಾ ಬಂದಿರುವರು. ಅವುಗಳಿಗೆ ಸರ್ಕಾರದಿಂದ ೬ ಲಕ್ಷದ ೩ ಸಾವಿರ ರೂಪಾಯಿ ಗ್ರಾಂಟು ಕೊಡಲಾಯಿತು. ಆದರೆ ಸಾರ್ವಜನಿಕರಿಂದ ಹತ್ತು ಲಕ್ಷ ರೂಪಾಯಿ ಕೊಡಲ್ಪಟ್ಟಿದೆ. ಈ ವಿದ್ಯಾರ್ಥಿನಿಲಯಗಳಲ್ಲಿ ಸೇರಬೇಕಾದ ಹಿಂದುಗಳು ತಮ್ಮ ಬಾಲಕರ ಭಕ್ತಿ ವೃದ್ಧಿಗೆ ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳಬಹುದೇ ದಾ, ಇದೇ ಅನುಕೂಲವಾದ ಸ್ಥಳವೆಂದೂ ಹೇಳಬಲ್ಲೆನು.

ತಂದೆತಾಯಿಗಳ ಕರ್ತವ್ಯವು

ಇದೇ [illegible] ಸಂದರ್ಭದಲ್ಲಿ ನಿಮಗೆ ತಿಳಿಸಲು [illegible] ನಿಮ್ಮ ದೇಶೀಯರನ್ನು ಭಕ್ತಿಮಾರ್ಗದಲ್ಲಿ [illegible] ಅಭಿವೃದ್ಧಿಗೆ ತರಬೇಕೆಂಬ ಅಪೇಕ್ಷೆಯು ಸಹಜವಾದದ್ದೆಂದು ನಾವು ಮನಃಪೂರ್ವಕವಾಗಿ ಒಪ್ಪಿಕೊಳ್ಳುವೆವು. ಈಗಿನ ವಿದ್ಯಾಭ್ಯಾಸದ ಪದ್ಧತಿಯಲ್ಲಿ ಬದಲಾವಣೆಯಾಗಬೇಕೆಂದು ನೀವು ಕೇಳುವುದಕ್ಕಿಂತಲೂ, ನನ್ನ ಹತ್ತಿರ [illegible] ಹೇಳುವಂತೆ ನೀವು ಪ್ರಯತ್ನಪಡಬಾರದೇ? ಮನೆಯಲ್ಲಿಯೇ ವಿದ್ಯಾಭ್ಯಾಸವು ಆರಂಭವಾಗುವುದು ಮನೆಯಲ್ಲಿ. ಅದರ ತಂದೆತಾಯಿಗಳ ಮೇಲೆ ಈ ಮಂಡಲಿಯವರು ಸ್ವಲ್ಪ ಅಧಿಕಾರವನ್ನು ಚಲಾಯಿಸುವಂತೆ ಮಾಡಿಕೊಳ್ಳಬೇಕು. ತಂದೆತಾಯಿಗಳು ತಮ್ಮ ಮನೆಗಳಲ್ಲಿರತಕ್ಕ ಮಕ್ಕಳಿಗೆ ಬಾಲ್ಯಾರಂಭದಿಂದಲೂ ಅವರ ಮತಭಕ್ತಿ ವಿಚಾರವನ್ನು ರಾಜಭಕ್ತಿ ಸತ್ಯ ಸದ್ಗುಣಗಳ ವಿಚಾರವನ್ನು ಕಲಿಸುತ್ತಾ ಬರುವಂತೆ ನಿಮ್ಮ ಮಂಡಲಿಯವರು ಏಕೆ ಹೇಳಬಾರದೇ? ಮನೆಗಳಲ್ಲಿ ಸಣ್ಣವಯಸ್ಸಿನ ಮಕ್ಕಳು ಈ ವಿಷಯಗಳನ್ನು ಬಹಳ ಬೇಗನೆ ಕಲಿತುಕೊಳ್ಳುವರು. ಅಲ್ಲಿ ಹಾಕಿಕೊಟ್ಟ ಅಸ್ತಿಭಾರವು ಶಾಶ್ವತವಾದದ್ದಾಗಿಯೂ ಪೂರ್ಣ ಫಲಕಾರಿಯಾದದ್ದಾಗಿಯೂ ಇದ್ದೀತು. ಈ ವಿಷಯಕ್ಕೆ ನಿಮ್ಮ ಮಂಡಲಿಯವರು ವಿಶೇಷವಾದ ಗಮನವನ್ನು ಕೊಡುವರೆಂದು ಕೋರುತ್ತೇವೆ. ಈ ದಿನ ನೀವು ಒಪ್ಪಿಸಿದ ಅಡ್ರೆಸ್ಸಿಗಾಗಿ ನಾವು ನಿಮ್ಮನ್ನು ಮನಃಪೂರ್ವಕವಾಗಿ ವಂದಿಸಿ, ನಿಮ್ಮ ಮಂಡಲಿಯ ಉದ್ದೇಶಗಳೆಲ್ಲಾ ಶೀಘ್ರದಲ್ಲೇ ಕೈಗೂಡಲೆಂದು ಹಾರೈಸುವೆವು ಎಂಬುದೇ

ತಿನ್ನವೆಲ್ಲಿ ಪಟ್ಟಣದಲ್ಲಿ ದಂಗೆಯು

ದಂಗೆಕೋರರು ನಡಿಸಿದ ನಾನಾ ಅಕೃತ್ಯಗಳು

ದಕ್ಷಿಣ ದೇಶಕ್ಕೆ ಸೇರಿದ ಮಧುರಾ ಪಟ್ಟಣದ ಬಳಿಗೆ ಇರುವ ತಿನ್ನವೆಲ್ಲಿ ಎಂಬ ದೊಡ್ಡ ಪಟ್ಟಣದಲ್ಲಿ ಕಳೆದ ತಾ ೧೩ ನೇ ಶುಕ್ರವಾರ ಮಧ್ಯಾಹ್ನದ ಮೇಲೆ ಒಂದು ದಂಗೆ ನಡಿಯಿತು ಕೆಲವರು ಪ್ರಾಣಕೊಡಬೇಕಾಯಿತು ಈ ವಿಚಾರವಾಗಿ ಮರುದಿನ ಅಲ್ಲಿನ [illegible] ತಂತೀ ವರ್ತಮಾನದ ಮೂಲಕ ತಿಳಿಸಿರುವುದೇನೆಂದರೆ—

ದಂಗೆಗೆ ಕಾರಣಗಳು

ಕೆಲವು ದಿನಗಳಿಂದಲೂ ತಿನ್ನವೆಲ್ಲಿಯಲ್ಲೂ ಅದರ ಬಳಿ ಇರುವ ಟುಟಿಕಾರಿನ್ (ತಟ್ಟುಗುಡಿ) ನಲ್ಲೂ ಕೆಲವು ಕಾರ್ಯಗಳು ನಡೆದದ್ದರಿಂದ ಪ್ರಜೆಗಳ ಮನಸ್ಸು ಕಳವಳಗೊಂಡಿತ್ತು. ನಾಲ್ಕಾರು ವಾರಗಳ ಹಿಂದೆ ತಟ್ಟುಗುಡಿ ಕಾರ್ಖಾನೆಯಲ್ಲಿ ಕೂಲೀ ಜನರು ಕೆಲಸಕ್ಕೆ ಹೋಗದೆ ನಿಂತು, ಸ್ವಲ್ಪ ಮಟ್ಟಿಗೆ ದಾಂಧಳೆ ನಡಿಸಿದ್ದರು ತಿನ್ನವೆಲ್ಲಿ ಜಿಲ್ಲೆಯ ಜನರೆಲ್ಲಾ ಸಾಮಾನ್ಯವಾಗಿ ಆ ಕಾರ್ಖಾನೆಯ ಕೂಲಿ ಜನರ ವಿಷಯದಲ್ಲಿ ಕನಿಕರಪಡುತ್ತಲೂ, ಅದರ ಯಜಮಾನರ ಮೇಲೆ ದುರಭಿಪ್ರಾಯವನ್ನುಳ್ಳವರಾಗಿಯೂ ಇದ್ದರು ಇದಲ್ಲದೆ ಸ್ವದೇಶೀ ಸ್ವೀಕಾರ, ಸ್ವಾರಾಜ್ಯ, ಪರದೇಶೀ ಬಹಿಷ್ಕಾರ ಎಂಬೀ ವಿಷಯಗಳನ್ನು ಕುರಿತು ಆ ಊರಿನ ಸ್ವದೇಶೀ ಹಡಗಿನ ಕಂಪನಿ ಏಜಂಟ್ ವಿ ಓ ಚಿದಂಬರಂಪಿಳ್ಳೆ, ಸುಬ್ರಹ್ಮಣ್ಯಶಿವಾ ಎಂಬೀ ಕೆಲವು ಜನರು ಪ್ರಜೆಗಳನ್ನು ಕೂಡಿಸಿ ಉಪನ್ಯಾಸಗಳನ್ನು ಮಾಡುತ್ತಾ ಬಂದರು ಇದರ ದೆಸೆಯಿಂದ ಪ್ರಜಾ ನೆಮ್ಮದಿಗೆ ಭಂಗಬಂದೀತೆಂಬ ಊಹೆಯುಂಟಾಯಿತು ಮಾರನೆಯದಾಗಿ, ಕಲ್ಕತ್ತೆಯಲ್ಲಿ ಸೆರೆಮನೆಯಿಂದ ಮಿ॥ ಬಿಪಿನಚಂದ್ರಪಾಲ್‌ರವರನ್ನು ಕಳೆದ ೯ ನೇ ತಾ ಸೋಮವಾರ ಬಿಡುಗಡೆ ಮಾಡಿದರಷ್ಟೆ ತಿನ್ನವೆಲ್ಲಿಯ ಜನರು ಆ ದಿನ ವಿಶೇಷ ಉತ್ಸಾಹದಿ ಸಂತೋಷ ಕಾರ್ಯಗಳನ್ನು ನಡಿಸಿ, ಮಿ॥ ಪಾಲ್‌ರವರ ಶ್ರೇಯೋಭಿವೃದ್ಧಿಯನ್ನು ಬಯಸಬೇಕೆಂದು ಮೇಲ್ಕಂಡ ಮುಖಂಡರ ಸಲಹೆಯ ಪ್ರಕಾರ ಏರ್ಪಾಡು ಮಾಡುತ್ತಿದ್ದರು ಆದರೆ ಸರ್ಕಾರದವರು ಆ ಉತ್ಸವಕಾಲದಲ್ಲಿ ಪ್ರಜಾ ನೆಮ್ಮದಿಗೆ ಭಂಗವಾಗಬಹುದೆಂದು ನಿರೀಕ್ಷಿಸಿ, ಆ ಮುಖಂಡರನ್ನು ಕರೆದು, 'ಪ್ರಜಾ ನೆಮ್ಮದಿಗೆ ಭಂಗವಾಗದಂತೆ ನೀವು ಜಾಮೀನು ಮುಚ್ಚಳಿಕೆ ಕೊಡಬೇಕು' ಎಂದು ಹೇಳಿ, ಅದಕ್ಕಾಗಿ ಮ್ಯಾಜಿಸ್ಟ್ರೇಟರಲ್ಲಿ ಅವರ ಮೇಲೆ ಫಿರ್ಯಾದು ಮಾಡಿ, ಅವರನ್ನು ಬಂದೀಖಾನೆಯಲ್ಲಿ ಹಾಕಿಕೊಂಡರು ಮ್ಯಾಜಿಸ್ಟ್ರೇಟರು ಆ ಮೂವರು ಮಂದಿಯನ್ನೂ ಜಾಮೀನಿನ ಮೇಲೆ ಖುಲಾಸ್ ಮಾಡುವುದಿಲ್ಲವೆಂದು ಹೇಳಿಬಿಟ್ಟರು ಈ ವಿಚಾರವು ಜನರ ಕಳವಳವನ್ನು ಹೆಚ್ಚು ಮಾಡಿ, ಅವರ ಮನಸ್ಸನ್ನು ಕೆಡಿಸಿಬಿಟ್ಟಿತು ಮುಖ್ಯವಾಗಿ ಚಿದಂಬರಂಪಿಳ್ಳೆಯನ್ನು ಜೈಲಿನಲ್ಲಿಟ್ಟಿರುವ [illegible] ಒಂದು ಗಲಭೆಯಾಗುತ್ತದೆಂದು ಎಲ್ಲರಿಗೂ ಅನುಮಾನವುಂಟಾಗಿತ್ತು

ಗಲಭೆಯ ಪ್ರಾರಂಭವು

ವ್ಯಾಪಾರ ಮುಚ್ಚಿದ್ದು ನಿಂತುಹೋಯಿತು

ತಿನ್ನವೆಲ್ಲಿ ಸೇತುಪೆ ಎಂಬಲ್ಲಿ ಗಲಭೆಯು ಪ್ರಾರಂಭವಾಯಿತು ಟುಟಿಕಾರಿನ್ ಪಟ್ಟಣದಲ್ಲೂ ಅಂಗಡಿ ಮುಂಗಟ್ಟುಗಳನ್ನೂ ಕಚೇರಿಗಳನ್ನೂ ಜನರ ಮುಚ್ಚಿಬಿಟ್ಟು, ಗುಂಪುಗುಂಪಾಗಿ ರೈಲುಹತ್ತಿ ತಿನ್ನವೆಲ್ಲಿಗೆ ಬಂದು, ಅಲ್ಲಿನ ವರ್ತಕರ ಮತ್ತು ಜನಗಳ ಕೂಡ ಸೇರಿ, ದೊಂಬಿಯನ್ನು ಹೆಚ್ಚು ಮಾಡಿದರು ತಿನ್ನವೆಲ್ಲಿಯ ಅಂಗಡಿ ಮುಂಗಟ್ಟುಗಳಿಗೆ ಜನಗಳು ಹೋಗಿ, ವರ್ತಕರನ್ನು ಕುರಿತು 'ನಮ್ಮ ಮುಖಂಡರಾದ ಚಿದಂಬರಂ ಪಿಳ್ಳೆಯನ್ನು ಜೈಲಿಗೆ ಹಾಕಿದ್ದಾರೆ ನೀವೆಲ್ಲಾ ಅಂಗಡಿ ತೆರೆದಿದ್ದೀರೋ? ಬೇಗ ಮುಚ್ಚಿಬಿಡಿ'' ಎಂಬೀ ರೀತಿಯಾಗಿ ಹೇಳಿದರು ವರ್ತಕರೆಲ್ಲಾ ಅವರಂತೆ ಅಂಗಡಿಗಳನ್ನು ಹಾಕಿಬಿಟ್ಟರು ಇದೇ ವೇಳೆಗೆ ತಿನ್ನವೆಲ್ಲಿ ಟೌನಿನಲ್ಲೂ ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟವು ವ್ಯಾಪಾರವೆಲ್ಲಾ ನಿಂತುಹೋಯಿತು

ಕ್ರೂರಕೃತ್ಯಗಳು

ಈ ರೀತಿ ಪಟ್ಟಣಗಳ ಜನರು ಸುಮಾರು ೩—೪ ಸಾವಿರದ ತನಕ ಗುಂಪುಕೂಡಿ, ಹಿಂದೂ ಕಾಲೇಜ್ ಎಂಬ ವಿದ್ಯಾಶಾಲೆಯೊಳಕ್ಕೆ ನುಗ್ಗಿ, ಹುಡುಗರನ್ನೆಲ್ಲಾ ತಮ್ಮ ಹಿಂದೆ ಬರುವಂತೆ ಕರೆದರು ಕಾಲೇಜಿನ ಸೆಕ್ರೆಟರಿ ಮಿ॥ [illegible] ಹೆಡ್ ಮಾಸ್ಟರ್ [illegible] ದೊಂಬೀ ಜನರ [illegible] ಗರ ತಂಟೆಗೆ ಬರಬೇಡಿ ಎಂದು ಹೇಳಿದರು ಆಗ ತುಂಬಾ ಗಲಭೆಯುಂಟಾಯಿತು ಕಾಲೇಜಿನ ಬಾಗಿಲು ಹಾಕಿಬಿಟ್ಟರು ಮೆ॥ [illegible] ವರು ಓಡಿಹೋಗಿ ಅಲ್ಲಿನ ಬ್ಯಾರಿ ಕಂಪನಿ ಕಟ್ಟಡದೊಳಗೆ ಅಡಗಿಕೊಂಡರು ಗುಂಪಿನವರು ಅವರನ್ನೂ ಮೆ॥ ಕ್ಯಾಂಪರ್ ಎಂಬ ಬ್ಯಾರಿ ಕಂಪನಿಯ ಏಜಂಟರನ್ನೂ ಕಲ್ಲುಗಳಿಂದ ಹೊಡೆದು, ''ವಂದೇ ಮಾತರಂ'' ಎಂದು ಕೂಗುತ್ತಾ, ಬ್ಯಾರಿ ಕಂಪನಿಯ ಮೇಲೆ ಕಲ್ಲುಗಳ ಮಳೆಗರೆದರು

ಇನ್ನೊಂದು ಸ್ಕೂಲಿನ ನಷ್ಟವು

ಇದಾದ ತರುವಾಯ ಈ ದಂಗೇ ಗುಂಪಿನವರು ಸಿ ಎಂ. ಎಸ್. ಕಾಲೇಜ್ ಎಂಬ ಕ್ರೈಸ್ತ ವಿದ್ಯಾಶಾಲೆಯೊಳಕ್ಕೆ ನುಗ್ಗಿ ಹೆಡ್ ಮಾಸ್ಟರ್ ಮಿ॥ ಷಾಫ್ಟರ್ ರವರನ್ನು ಕರೆದು, ಸ್ಕೂಲ್ ಮುಚ್ಚಬೇಕೆಂದು ಕೇಳಿದರು ಮಿ॥ [illegible] ಎಂಬೊಬ್ಬ ಉಪಾಧ್ಯಾಯನು ಹೊರಕ್ಕೆ ಬಂದು ಸ್ಕೂಲನ್ನು ಮುಚ್ಚುವುದಿಲ್ಲವೆಂದು ತಿರಸ್ಕರಿಸಿದ ಕೂಡಲೇ ಆ ಜನರು ಆತನನ್ನು ಹಿಡಿದು ಚೆನ್ನಾಗಿ ಮರ್ದನಮಾಡಿದರು ಇದಲ್ಲದೆ ಜನರು ಆ ವಿದ್ಯಾಶಾಲೆಯೊಳಕ್ಕೆ ಪ್ರವೇಶಿಸಿ, ಕುರ್ಚಿ ಮೇಜು ಬೆಂಚು ಬೀರು ಮೊದಲಾದ ಸಾಮಾನುಗಳನ್ನೆಲ್ಲಾ ಒಡೆದು, ಕಿಟಕಿಗಳನ್ನು ಚೂರುಚೂರು ಮಾಡಿ, ಹೆಡ್ ಮಾಸ್ಟರ ಮೇಲೆ ಕಲ್ಲುಗಳನ್ನು ಹೊಡೆದರು

ಮ್ಯುನಿಸಿಪಲ್ ಆಫೀಸು ಬೂದಿಯಾಯಿತು

ಇಷ್ಟಕ್ಕೇ ಈ ರೇಗಿದ ಗುಂಪಿನವರು ಸುಮ್ಮನಾಗಲಿಲ್ಲ ಅವರು ಅಲ್ಲಿಂದ ಮ್ಯುನಿಸಿಪಲ್ ಕಚೇರಿಯೊಳಕ್ಕೆ ನುಗ್ಗಿದರು ಇದು ಪಟ್ಟಣದಲ್ಲೆಲ್ಲಾ ಬಹಳ ಅಲಂಕಾರವಾದ ಕಟ್ಟಡವಾಗಿತ್ತು ಜನರು ಅದರೊಳಕ್ಕೆ ನುಗ್ಗಿ, ಒಂದು ಗೋಡೆಯನ್ನು ಕೆಡವಿ, ಸೀಮೆಯೆಣ್ಣೆಯನ್ನು ರೆಕಾರ್ಡು ದಫ್ತರಗಳ ಮೇಲೆ ಸುರಿದು, ಬೆಂಕಿಯಿಟ್ಟು ಎಲ್ಲವನ್ನು ಸುಟ್ಟುಬಿಟ್ಟರು ಉರಿಯು ಕಟ್ಟಡಕ್ಕೆಲ್ಲಾ ವ್ಯಾಪಿಸಿ, ಮ್ಯುನಿಸಿಪಲ್ ಆಫೀಸನ್ನು ಸಂಪೂರ್ಣವಾಗಿ ದಹಿಸಿಬಿಟ್ಟಿತು ಬೆಂಕಿಯು ೨—೩ ದಿನಗಳ ತನಕ ಆರಲಿಲ್ಲ

ಪೋಸ್ಟ್ ಆಫೀಸು

ಅನಂತರ ಈ ದೊಂಬೀ ಜನರು ತಿನ್ನವೆಲ್ಲಿ ಟವನಿನಲ್ಲಿರುವ ಪೋಸ್ಟ್ ಆಫೀಸ್ ಕಟ್ಟಡಕ್ಕೆ ಹೋಗಿ, ಅದರ ಬಾಗಿಲಿಗೆ ಸೀಮೆಯೆಣ್ಣೆಯನ್ನು ಸುರಿದು ಬೆಂಕಿತೋರಿಸಿ ಸುಟ್ಟುಬಿಟ್ಟರು ತಂತೀ ವರ್ತಮಾನ ಹೋಗಿಬರುವ ತಂತಿಗಳನ್ನೂ ಕತ್ತರಿಸಬೇಕೆಂದು ಪ್ರಯತ್ನಪಟ್ಟದ್ದು ನೆರವೇರದೆ ಹೋಯಿತು

ಅಂಗಡಿಮುಂಗಟ್ಟು ಲೂಟಿಯಾದದ್ದು

ತರುವಾಯ ದಂಗೇಕೋರರ ಗುಂಪು ಪೆನ್ನಿಂಗ್‌ಟನ್ ಮಾರ್ಕೆಟ್ಟಿನೊಳಕ್ಕೆ ನುಗ್ಗಿ ಅಲ್ಲಿದ್ದ ಅಂಗಡಿಗಳನ್ನೆಲ್ಲಾ ಲೂಟಿಮಾಡಿ, ಮ್ಯುನಿಸಿಪಾಲಿಟಿಯವರು ಸೀಮೆಯೆಣ್ಣೆ ಶೇಖರ ಮಾಡಿಟ್ಟುಕೊಂಡಿದ್ದದ್ದಕ್ಕೆ ಬೆಂಕಿ ಹಾಕಿ ಉರಿಸಿದರು ಈ ಉರಿಯು ಎರಡು ದಿನಗಳ ತನಕ ಆರಲಿಲ್ಲ ಅಷ್ಟರೊಳಗೆ ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟವು

ಪೋಲೀಸ್ ಠಾಣಾದ ದುರ್ಗತಿಯು

ಆದಾದ ಮೇಲೆ ದಂಗೇಕೋರರು ಪೋಲೀಸ್ ಠಾಣಾದ ಕಡೆ ನುಗ್ಗಿ ಹೋದರು ಠಾಣಾದಲ್ಲಿ ಆಗ ಒಬ್ಬ ಪೋಲೀಸಿನವನು ಮಾತ್ರ ಇದ್ದನು ಅವನನ್ನು ಆ ಜನರು ಹೊಡೆದು ಮಲಗಿಸಿ, ಅಲ್ಲಿ ಸಿಕ್ಕಿದ ರಿಕಾರ್ಡುಗಳಿಗೂ, ಕತ್ತಿ ದೊಣ್ಣೆ ಮೊದಲಾದ ಸಾಮಾನುಗಳಿಗೂ ಬೆಂಕಿ ತೋರಿಸಿ ಉರಿಸಿಬಿಟ್ಟರು ಒಂದು ಪೆಟ್ಟಿಗೆಯ ತುಂಬಾ ಇದ್ದ ತೋಟಾಗಳನ್ನು ನಾಶಮಾಡಿದರು ಆ ಠಾಣಾವಿನ ಲಾಕಪ್ಪಿನಲ್ಲಿದ್ದ ನಾಲ್ವರು ಅಪರಾಧಿಗಳನ್ನು ಸೆರೆಯಿಂದ ಬಿಡುಗಡೆ ಮಾಡಿ, ಓಡಿಸಿದರು

ಸಿವಿಲ್ ಕೋರ್ಟಿನ ದುರ್ಗತಿಯು

ದಂಗೇಕೋರರ ಈ ಗುಂಪು ರೋಷಾವೇಶದಿಂದ ಕೆಂಡವಾಗಿ ಅಡಿಷನಲ್ ಮುನ್ಸೀಫ್ ಕೋರ್ಟಿಗೆ ನುಗ್ಗಿದರು ಆಗ ಮುನ್ಸಿಫರು ಮೊಕದ್ದಮೆಯನ್ನು ಕರೆಸಿ ದರ್ಯಾಪ್ತು ಮಾಡುತ್ತಿದ್ದರು ದಂಗೇಕೋರರು ಮುನ್ಸಿಫರನ್ನು ಕುರಿತು "ಕೋರ್ಟನ್ನು ಮುಚ್ಚಿಬಿಡಿ" ಎಂದು ಆಜ್ಞೆಮಾಡಿದರು ಮುನ್ಸಿಫರು ಕೋರ್ಟನ್ನು ಮುಚ್ಚಲೇಬೇಕಾಯಿತು ದಂಗೇಕೋರರು ಕೋರ್ಟಿನೊಳಕ್ಕೆ ನುಗ್ಗಿ, ರೆಕಾರ್ಡುಗಳನ್ನೆಲ್ಲಾ ಬೆಂಕಿತೋರಿಸಿ ಸುಟ್ಟು ಆನಂದಪಟ್ಟರು

ಇಷ್ಟೊಂದು ದೊಂಬಿಯ ಕಾರ್ಯಗಳೆಲ್ಲಾ ಬಹಳ ಸ್ವಲ್ಪಹೊತ್ತಿನೊಳಗಾಗಿ ನಡೆದುಹೋದವು

ಕಲೆಕ್ಟರು ಬಂದದ್ದು

ಅಷ್ಟುಹೊತ್ತಿಗೆ ಡಿಸ್ಟ್ರಿಕ್ಟಿನ ಕಲೆಕ್ಟರ್ ಮಿ॥ ಎಲ್ ಎಂ. ವಿಂಚ್‌ರವರೂ, ಪೋಲೀಸ್ ಸೂಪರಿಂಟೆಂಡೆಂಟ್ ಮಿ॥ ಸ್ವೀಟಿಂಗ್‌ರವರೂ, ಹೆಡ್ ಕ್ವಾರ್ಟರ್ ಡೆಪ್ಯುಟಿ ಕಲೆಕ್ಟರ್ ಮಿ॥ ಧರ್ಮರಂಗರಾಜರವರೂ ತಿನ್ನವೆಲ್ಲಿಗೆ ಬಂದಿಳಿದರು. ರಸ್ತೆಗಳಲ್ಲೆಲ್ಲಾ ದಂಗೇಕೋರರ ಗುಂಪು [illegible] ತುಳುಕುತ್ತಿದ್ದಿತು

ಜನರ ಮೇಲೆ ಗುಂಡು ಹೊಡಿಸಿದ್ದು

ಪಟ್ಟಣದೊಳಕ್ಕೆ ಪ್ರವೇಶಿಸುವಲ್ಲಿ ತೆಪ್ಪಕುಳದ ಬಳಿ ದಂಗೇಕೋರರು ಮೇಲ್ಕಂಡ ಅಧಿಕಾರಿಗಳನ್ನು ಕಂಡು, ಅವರ ಮೇಲೆ ಕಲ್ಲುಗಳನ್ನು ಎಸೆದರು ಆದರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪೋಲೀಸಿನವರಿಗೆ ದಂಗೇಕೋರರನ್ನು ಗುಂಡಿನಿಂದ ಹೊಡೆಯುವಂತೆ ಆಜ್ಞೆಮಾಡಿದರು [illegible] ದಂಗೇಕೋರರು [illegible] ಹೋಗುತ್ತಾ ಇದ್ದರು [illegible] ಮ್ಯುನಿಸಿಪಲ್ ಲಾಂದ್ರಗಳನ್ನೆಲ್ಲಾ ಒಡೆದ [illegible]

ಸೈನ್ಯಗಳು ಬಂದಿಳಿದುವು

ಈ ದಂಗೇಕೋರರ ಅತ್ಯಾಚಾರ [illegible] ಹೆಚ್ಚಾಗುವುದೆಂದು ಅಧಿಕಾರಿಗಳಿಗೆ ಅನುಮಾನ [illegible] ಕೂಡಲೇ ತಿರುಚನಾಪಲ್ಲಿಗೆ [illegible] ತಿಳಿಸಿ ಸೈನಿಕರನ್ನು ಕರೆಸಿಕೊಂಡರು. ಮತ್ತು ಆ ವರೆಗೆ ನಡೆದ ವಿದ್ಯಮಾನಗಳನ್ನೆಲ್ಲಾ [illegible] ಗವರ್ನಮೆಂಟಿಗೆ ರಿಪೋರ್ಟು ಮಾಡಿದರು ತಿರುಚನಾಪಲ್ಲಿಯಿಂದ ಒಬ್ಬ [illegible] ಕೈಕೆಳಗೆ ೧೦೦ ಮಂದಿ ಸೈನಿಕರು ಮರುದಿನ ಬೆಳಿಗ್ಗೆ ಹೋಗಿ ಇಳಿದು, ತಿನ್ನವೆಲ್ಲಿ ಪಟ್ಟಣದ ಮುಖ್ಯ ಬೀದಿಗಳಲ್ಲೆಲ್ಲಾ ನಿಂತು ಪಹರೆ ಕೊಡುತ್ತಿದ್ದಾರೆ ಜನರೂ ಪ್ರಜೆಗಳು ಇನ್ನೂ ಕಳವಳಪಡುತ್ತಿರುವರು ಅಂಗಡಿಗಳನ್ನು ತೆರೆಯಲಿಲ್ಲ ವರ್ತಕರು ಅಂಗಡಿ ತೆರೆಯುವುದೇ ಇಲ್ಲವೆಂದು ಮುಷ್ಕರ ಮಾಡಿಕೊಂಡಿರುವಂತೆ ಕಾಣುತ್ತಿದೆ

ಅಂಗಡಿಯವರನ್ನು ದಸ್ತಗಿರಿಮಾಡಿದ್ದು

ಕಳೆದ ಶನಿವಾರ ಕೆಲವು ಸರ್ಕಾರದವರು ಐದುಜನ ಅಂಗಡಿಯವರನ್ನು ಅವರು ದೊಂಬಿಗೆ ಸೇರಿದ್ದರೆಂದು ಹೇಳಿ ದಸ್ತಗಿರಿ ಮಾಡಿರುತ್ತಾರೆ

ಚಿದಂಬರಂ ಪಿಳ್ಳೆಯ ಅರ್ಜಿಯು

ಚಿದಂಬರಂ ಪಿಳ್ಳೆಯನ್ನು ಜಾಮೀನಿನ ಮೇಲೆ ಬಿಡಕೂಡದೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹುಕುಂ ಮಾಡಿದರು ಈಗ ಆತನು ಈ ಹುಕುಮನ್ನು ರದ್ದುಮಾಡಿ, ತನ್ನನ್ನು ಜಾಮೀನಿನ ಮೇಲೆ ಬಿಡಿಸಬೇಕೆಂದು ಸೆಷನ್ಸ್ ಜಡ್ಜಿಯವರಲ್ಲಿ ಅಪೀಲ್ ಮಾಡಿಕೊಂಡಿರುತ್ತಾನೆ

ಬೆಂಗಳೂರು ಕೊಲೆಯ ಮೊಕದ್ದಮೆಗಳು.

ಭಯಂಕರವಾದ ಕೃತ್ಯವು

ಬೆಂಗಳೂರಿನ ಅಲಸೂರು ಪೇಟೆಯಲ್ಲಿ ಬಾಪು, ಸುಂದರರಾಜು, ನಲ್ಲತಂಬಿ ಎಂಬುವರು ಒಬ್ಬ [illegible] ಕೊಂದುಹಾಕಿದ ವಿಚಾರವೆಲ್ಲಾ ವಾಚಕರಿಗೆ ತಿಳಿಸಿರುತ್ತೇವಷ್ಟೆ ಸೆಷನ್ಸ್ ಜಡ್ಜರಾದ ಮಿ॥ ಪಿ ಎಚ್ ರೆನ್ನಿಯವರು ದರ್ಯಾಪ್ತಿಯೆಲ್ಲಾ ಮುಕ್ತಾಯವಾದ ತರುವಾಯ ಜಡ್ಜ್‌ಮೆಂಟನ್ನು ಹೇಳದೆ, ಇನ್ನೊಂದು ಮೊಕದ್ದಮೆಯನ್ನು ತನಿಖೆಮಾಡಿ, ಕಡೆಗೆ ತೀರ್ಮಾನ ಹೇಳುವುದಾಗಿ ತೆಗೆದಿಟ್ಟುಕೊಂಡರು

ಎರಡು ಕೊಲೆಗಳ ಮೊಕದ್ದಮೆ.

ಕಳೆದ ೧೯೦೭ ನೇ ಜೂನ್ ತಿಂಗಳಲ್ಲಿ ಬಾಪು, ಸುಂದರರಾಜು, ನಲ್ಲತಂಬಿ ಎಂಬುವರು ವಿಶ್ವನಾಥಶೆಟ್ಟಿ, ಕೃಷ್ಣಸ್ವಾಮಿನಾಯ್ಡು ಎಂಬ ಪ್ರಾಯಸಮರ್ಥರಾದ ಹುಡುಗರನ್ನು ಚಿತಾವಣೆಮಾಡಿ, ಅಲಸೂರಿನಲ್ಲಿ ಒಂದು ಮನೆಯೊಳಕ್ಕೆ ಕರೆದುಕೊಂಡು ಹೋಗಿ, ವಿಷವನ್ನೂ ಪ್ರಜ್ಞೆತಪ್ಪುವ ಔಷಧವನ್ನೂ ಕುಡಿಸಿ, ಕತ್ತುಗಳನ್ನು ಕತ್ತರಿಸಿ, ನಾಲ್ಕು ದಿನ ಮೊದಲೇ ಅವರಿಗಾಗಿ ಅಗೆದು ಸಿದ್ಧಪಡಿಸಿದ್ದ ಗುಣಿಯಲ್ಲಿ ಹೂಳಿದರೆಂಬ ಮೊಕದ್ದಮೆಯನ್ನು ಸೆಷನ್ಸ್ ಜಡ್ಜರು ದರ್ಯಾಪ್ತು ಮಾಡಿದರು ಈ ಮೊಕದ್ದಮೆಯಲ್ಲಿ ಸಾಕ್ಷಿಗಳ ಕೈಫಿಯತ್ತು ಆದ ತರುವಾಯ ಎರಡನೇ ಮೂರನೇ ಅಪರಾಧಿಗಳನ್ನು ಕೇಳಿದಾಗ, ಅವರು ತಾವು ಮೊದಲು ಹೇಳಿ ಬರೆಸಿರುವುದೆಲ್ಲಾ ನಿಜವೆಂದು ಒಪ್ಪಿಕೊಂಡರು ಮೊದಲನೇ ಅಪರಾಧಿಯನ್ನು ಪ್ರಶ್ನೆಮಾಡಿದಾಗ ಅವನು ಸಂಗತಿಗಳನ್ನೆಲ್ಲಾ ಕ್ರಮವಾಗಿ ವಿವರಿಸಿ ಒಪ್ಪಿಕೊಂಡನು ಅವನ ಹೇಳಿಕೆಯ ಪ್ರಕಾರ ಈ ಕೊಲೆಗಳು ನಡೆದ ಕ್ರಮವೇನೆಂದರೆ—ಬಾಪುವಿನ ಮನೇ ಬಳಿ ವಾಸವಾಗಿದ್ದ ದಾಸಪ್ಪನೆಂಬವನು ಬಾಪುವನ್ನು ಒಳಹಾಕಿಕೊಂಡು ಅವನಿಗೆ ನೂರಾರು ರೂಪಾಯಿ ಲಂಚ ಕೊಟ್ಟು ಈ ಕೊಲೆಗಳನ್ನು ಮಾಡಿಸಿದನು ದಾನಿಯಲ್ ಎಂಬೊಬ್ಬ ಹೆಡ್ ಕಾನ್‌ಸ್ಟೇಬಲೂ ಈ ಗುಂಪಿಗೆ ಸೇರಿದ್ದನು. ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಹಾಡ್ಜಿಯವರು ಬಾಪುವಿಗೆ ಸಹಾಯಕರಾಗಿದ್ದು, ಪದ್ಮನಾಭ [illegible] ಎಂಬ ಪೋಲೀಸಿನವರನ್ನು ಬೆಂಬಲಕ್ಕೆ ಕೊಟ್ಟರು ಬಾಪುವು ಹಾಡ್ಜಿಗೆ ಸುಮಾರು ೩೦೦ ರೂಪಾಯಿ ತನಕ ಲಂಚ ಕೊಟ್ಟನು. ಶವಗಳನ್ನು ಹೂಳಿದ್ದ ಮನೆಯ ಸುತ್ತಲೂ ಪೋಲೀಸಿನವರೇ ಉಸ್ತುವಾರಿ ಮಾಡುತ್ತಿದ್ದರು ಈ ಮೊಕದ್ದಮೆಯ ದರ್ಯಾಪ್ತು ಮುಗಿದ ಮೇಲೆ, ಜಡ್ಜಿಯವರು ಮುಂದಕ್ಕೆ ತೀರ್ಮಾನ ಹೇಳುತ್ತೇವೆಂದು ತೆಗೆದಿಟ್ಟುಕೊಂಡರು

ಗೋಪಾಲನೆಂಬ ಹುಡುಗನ ಕೊಲೆಯು.

ಸೆಷನ್ಸ್ ಜಡ್ಜಿಯವರು ಮೂರನೇ ಕೊಲೆ ಮೊಕದ್ದಮೆಯನ್ನು ದರ್ಯಾಪ್ತು ಮಾಡಲಾರಂಭಿಸಿದರು ಈ ಮೊಕದ್ದಮೆಯಲ್ಲಿ ಬಾಪು, ಸುಂದರರಾಜು ಎಂಬುವರು ೧೯೦೬ ನೆ ಸೆಪ್ಟಂಬರಿನಲ್ಲಿ ಗೋಪಾಲನೆಂಬ ಹುಡುಗನನ್ನು ಸಂಪಿಗೆ ಕೆರೆಯಲ್ಲಿ ಕಟ್ಟಿ ಮುಳುಗಿಸಿ ಕೊಂದುಹಾಕಿದಂತೆ ಕೈಫಿಯತ್ತು ಮೊದಲೇ ಬರೆಸಿದ್ದರು ಮೊದಲೇ ಅಪರಾಧಿ ಬಾಪುವನ್ನು ಕರೆದು ಕೇಳಿದಾಗ ಅವನು ಈ ಕೊಲೆಯ ಕ್ರಮವನ್ನು ವಿವರಿಸುವಲ್ಲಿ ಲಕ್ಷ್ಮಿ ಎಂಬೊಬ್ಬ ಹೆಂಗಸನ್ನು ಕೊಂದುಹಾಕಿದ ವಿಚಾರವನ್ನು ಹೇಳಿದನು ಸುಬ್ಬರಾಯುಲು ಎಂಬುವನು ಅವಳನ್ನು ಇಟ್ಟುಕೊಂಡಿದ್ದಾಗ, ಅವಳು ದ್ರೋಹಮಾಡಿದ್ದರಿಂದ ಸುಬ್ಬರಾಯುಲು ಬಾಪುವಿನ [illegible] ಮುಸಲತ್ತುಮಾಡಿ, ಅವಳನ್ನು ಕೊಲ್ಲಿಸಿದನಾಗಿ ತಿಳಿಯುವುದು ಅಲಸೂರು ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ವೆಂಕಟಸುಬ್ಬಯ್ಯನೂ ಇನ್ನು ಕೆಲವು ಪೋಲೀಸಿನವರೂ ಈ ಸಂಗತಿಯನ್ನು ತಿಳಿದು ಬಾಪು ಸುಂದರರಾಜುಗಳನ್ನು ಕರೆಸಿ, ಲಂಚವನ್ನು ತೆಗೆದುಕೊಂಡು, ಆ ಪೋಲೀಸ್ [illegible] ಸರಹದ್ದಿನಲ್ಲಿ ಬಿಟ್ಟು ಬೇರೆ ಕಡೆ ಕೊಲೆ ನಡೆಸಬಹುದೆಂದು ತಿಳಿಸಿದರು ಅಪರಾಧಿಗಳು ಆ ಹೆಂಗಸನ್ನು ಔಷಧ ಮಾರುವ ಒಂದು ಅಂಗಡಿಗೆ ಕರೆದುಕೊಂಡು ಹೋಗಿ, ಅಲ್ಲಿ ಔಷಧ ಕೊಡುವವನ ಸಹಾಯದಿಂದ ಅವಳನ್ನು ಕೊಂದುಬಿಟ್ಟರು [illegible] ಅಪರಾಧಿಗಳ ಅಲಸೂರು ಸ್ಟೇಷನ್ ಪೋಲೀಸಿನವರ [illegible] ಪಡೆದು ಹೋಗಿ ಆ ಹೆಂಗಸಿನ ಮನೆಯನ್ನು ಪ್ರವೇಶಿಸಿ, ಒಳಗಿದ್ದ [illegible] ಸಬ್ ಇನ್‌ಸ್ಪೆಕ್ಟರ್ ವೆಂಕಟಸುಬ್ಬಯ್ಯನಿಗೆ ಒಂದು ಪಾಲು ಕೊಟ್ಟರು [illegible] ಸಬ್ ಇನ್‌ಸ್ಪೆಕ್ಟರ [illegible] ಗೋಪಾಲನೆಂಬ ಹುಡುಗನ ಕೊಲೆಯಲ್ಲಿ ಅಪರಾಧಿಗಳ ಒಳಸಂಚಿಗೆ ಸೇರಿದ್ದನು ಇದಲ್ಲದೆ ಛೀಫ್ ಇನ್‌ಸ್ಪೆಕ್ಟರ್ ಬಾರ್ಟನ್ ಸಬ್ ಇನ್‌ಸ್ಪೆಕ್ಟರ್ [illegible] ಇವರಿಗೆ ಈ ಕೊಲೆಯ ವಿಚಾರ ತಿಳಿದು, ಅವರೂ ಒಪ್ಪಿಕೊಂಡಿದ್ದರು ಇಲ್ಲಿಗೆ ಈ ಮೊಕದ್ದಮೆಯು ಮುಕ್ತಾಯವಾಯಿತು ಸೆಷನ್ಸ್ ಜಡ್ಜರು ಜಡ್ಜ್‌ಮೆಂಟನ್ನು ಇನ್ನೊಂದು ದಿನ ಹೇಳುವುದಾಗಿ ತಿಳಿಸಿದರು

ಪೋಲೀಸಿನವರನ್ನು ಲಾಕಪ್ಪಿನಲ್ಲಿ ಹಾಕಿದ್ದು

ಮ್ಯಾಜಿಸ್ಟ್ರೇಟರ ವಾರಂಟ್ ಪ್ರಕಾರ ಮೇಲ್ಕಂಡ ಪೋಲೀಸಿನವರನ್ನು ಅಂದರೆ ಇನ್‌ಸ್ಪೆಕ್ಟರುಗಳಾದ ಹಾಡ್ಜಿ, ವೆಂಕಟಸುಬ್ಬಯ್ಯ ಇನ್ನು ಕೆಲವು ಪೋಲೀಸಿನವರನ್ನು ತನಿಖೆ ಮಾಡುವುದಕ್ಕಾಗಿ ಕೆಲಸ ಬಿಡಿಸಿ, ದಸ್ತಗಿರಿ ಮಾಡಿದರು ಮೇಲ್ಕಂಡ ಕೊಲೆಗಳಲ್ಲಿ ಸಹಾಯ ಮಾಡುತ್ತಿದ್ದವರೆಂತಲೂ, ಆ ವಿಚಾರವನ್ನು ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸದೆ ಗೋಪ್ಯಮಾಡಿದರೆಂತಲೂ ತಿಳಿದುಬಂದ ಪೋಲೀಸಿನವರನ್ನು ಅಂದರೆ ಹೆಡ್ ಕಾನ್‌ಸ್ಟೇಬಲ್‌ಗಳಾದ ದಾನಿಯಲ್, ವೆಂಕಟಸುಬ್ಬರಾವ್, ಕಾನ್‌ಸ್ಟೇಬಲ್ ಶಿವಪ್ರಸಾದ್, ವೆಂಕಟಸ್ವಾಮಿ, ಭವಾನಿಸಿಂಗ್, ಈ ಜನಗಳನ್ನು ಹಿಡಿದು ಅವರ ಮೇಲೆ ಮೊಕದ್ದಮೆಯನ್ನು ಮಾಡಿದಾಗ ವಿಚಾರಣೆಗೆ ಬಂದಾಗ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮೇಲ್ಕಂಡ ಕೊಲೆ ಮೊಕದ್ದಮೆಗಳೆಲ್ಲಾ ಪೂರೈಸಿದ ತರುವಾಯ ಈ ಪೋಲೀಸಿನವರ ಮೇಲೆ ಬಂದಿರುವ ಮೊಕದ್ದಮೆಯನ್ನು ದರ್ಯಾಪ್ತು ಮಾಡೋಣ

ವೆಂದು ಅಭಿಪ್ರಾಯಪಟ್ಟು, ಆ ಪೋಲೀಸ್ ಅಪರಾಧಿಗಳನ್ನು ಜಾಮೀನ್ ಮೇಲೆ ಖುಲಾಸ್ ಮಾಡಬಹುದೆಂದು ಹುಕುಂ ಕೊಟ್ಟಿದ್ದಾರೆ.

ಚಲುವರಾಜು ಎಂಬ ಹುಡುಗನ ಕೊಲೆಯು

ಬಾಪು, ಸುಂದರರಾಜು, ನಲ್ಲತಂಬಿ, ಈ ಮೂವರೂ ಕಳೆದ ೧೯೦೭ನೇ ಅಕ್ಟೋಬರ್ ೯ರಲ್ಲಿ ಚಲುವರಾಜು ಎಂಬ ೧೪ ವರುಷದ ಹುಡುಗನನ್ನು ಪುಸಲಾಯಿಸಿ, ಕ್ಯಾವಲ್ರಿ ರೋಡಿನಲ್ಲಿರುವ ಒಂದು ಮನೆಗೆ ಕರೆದುಕೊಂಡುಹೋಗಿ, ಅಲ್ಲಿ ಕೊಂದುಹಾಕಿ, ಅದೇ ಮನೆಯ ಅಡಿಗೆಮನೆಯೊಳಗೆ ಗುಣಿ ತೋಡಿ ಹೂತಿಟ್ಟರೆಂಬುವುದು ನಾಲ್ಕನೇ ಮೊಕದ್ದಮೆಯಾಗಿರುತ್ತದೆ. ಈ ಕೃತ್ಯವನ್ನು ಮಾಡಿ, ಒಡವೆಗಳನ್ನು ಅಪಹರಿಸಿದ್ದುಂಟೆಂದು ಅಪರಾಧಿಗಳು ಮೊದಲೇ ಒಪ್ಪಿ ಕೈಫಿಯತ್ತು ಕೊಟ್ಟಿದ್ದರು. ಸೆಷನ್ಸ್ ಜಡ್ಜರ ಮುಂದೆ ಮೊದಲನೇ ಅಪರಾಧಿಯು ಹೇಳಿ ಬರೆಸಿದ ಕೈಫಿಯತ್ತೇನೆಂದರೆ—

ಸಿಟಿಯಲ್ಲಿ ಶಾಮಣ್ಣನೆಂಬೊಬ್ಬನು ಒಬ್ಬ ಹೆಂಗಸನ್ನು ಇಟ್ಟುಕೊಂಡಿದ್ದನು. ಆ ಹೆಂಗಸಿನ ಬಳಿಗೆ ಅಂತರಂಗದಲ್ಲಿ ಬಂದು ಹೋಗುತ್ತಿದ್ದ ಚಲುವರಾಜು ಎಂಬ ಮೇಲ್ಕಂಡ ಹುಡುಗನನ್ನು ತೀರಿಸಿಬಿಡಬೇಕೆಂದು ಶಾಮಣ್ಣನು ಹೇಳಿ, ಅದಕ್ಕಾಗಿ ೨೦ ರೂಪಾಯಿ ಅಡ್ವಾನ್ಸು ಕೊಟ್ಟು, ಆ ಹುಡುಗನ ಮನೆಯನ್ನು ತೋರಿಸಿದನು. ಅಪರಾಧಿಗಳು ಆ ಹುಡುಗನ ಸ್ನೇಹ ಬೆಳಸಿ, ಅವನನ್ನು ಕ್ಯಾವಲ್ರಿ ರೋಡಿನಲ್ಲಿರುವ ಮನೆಗೆ ಕರೆದುಕೊಂಡುಹೋಗಿ, ನಿಷ್ಕರುಣಿಸಿ ಕೊಂದು, ಒಡವೆಗಳನ್ನು ಕಳಚಿಕೊಂಡು, ಶವವನ್ನು ಗುಣಿಯಲ್ಲಿಹಾಕಿ ಮಣ್ಣುಮುಚ್ಚಿದರು. ಎರಡುಮೂರು ದಿನಗಳ ಮೇಲೆ ಸಬ್ ಇನ್ಸ್‌ಪೆಕ್ಟರ್ ಹಾರ್ಡಿ ಮೊದಲನೇ ಅಪರಾಧಿಯನ್ನು ಕರೆಸಿಕೊಂಡು, ಆ ಕೊಲೆಯ ವಿಚಾರವನ್ನು ಪ್ರಶ್ನೆಮಾಡಿದರು. ಬಾಪುವು ಮಾಡಿದ್ದುಂಟೆಂದೂ, ಇನ್ನುಮುಂದೆ ಅಂಥಾ ಕೃತ್ಯಗಳನ್ನು ಮಾಡುವುದಿಲ್ಲವೆಂದೂ ಇನ್ಸ್‌ಪೆಕ್ಟರಿಗೆ ಹೇಳಿದನು. ಆಗ ಇನ್ಸ್‌ಪೆಕ್ಟರು ರಾಬರ್ಟ್‌ಸನ್ ಪೇಟೆಯಿಂದ ಆ ಹುಡುಗನೇ ಅವನ ತಂದೆಗೆ ತಾನು ಮದರಾಸಿಗೆ ಹೋಗಿದ್ದೇನೆನ್ನುವ ಅರ್ಥಕ್ಕೆ ಒಂದು ತಂತೀವರ್ತಮಾನ ಕೊಡಿಸಬೇಕೆಂದು ಬಾಪುವಿಗೆ ಸೂಚಿಸಿದರು. ತರುವಾಯ ಹಾರ್ಡಿ ಬಾಪುವಿನ ಕೂಡ ಆ ಮನೆಗೆ ಹೋಗಿ ನೋಡಿ, ಇದಕ್ಕೆ ಬಲವಾದ ಬೀಗವನ್ನು ಹಾಕು ಎಂದು ಹೇಳಿದಂತೆ ಅವನು ಹಿತ್ತಾಳೆ ಬೀಗವನ್ನು ಆಗಲೇ ಕೊಂಡು ತಂದುಹಾಕಿದನು.

ಹುಂಡಿಯ ಫೋರ್ಜರಿ.

ಪೋಲೀಸಿನವರ ವಿಷಯದಲ್ಲಿ ಇನ್ನೇನಾದರೂ ತಿಳಿಸತಕ್ಕದ್ದುಂಟೇ ಎಂದು ಸೆಷನ್ಸ್ ಜಡ್ಜರು ಪ್ರಶ್ನೆಮಾಡಿದ್ದಕ್ಕೆ ಮೊದಲನೇ ಅಪರಾಧಿ ಬಾಪು ಹೇಳಿ ಬರೆಸಿರುವುದೇನೆಂದರೆ—

ಸುಮಾರು ಎಂಟು ತಿಂಗಳ ಹಿಂದೆ ನಾರಾಯಣಸ್ವಾಮಿ ಎಂಬ ಪೋಸ್ಟ್ ಜವಾನನು ಮೆ॥ ಎಚ್. ಎಚ್. ಸ್ಪಾರ್ಕ್ಸ್‌ಯವರ ಬಾಬತು ಛೆಕ್ಕನ್ನು ತಂದು, ಮೂರನೇ ಅಪರಾಧಿಗೆ ತೋರಿಸಿದನು. ಅವನು ಇನ್ನೊಬ್ಬನ ಕೈಲಿ ಕೊಟ್ಟು, ಅದನ್ನು ಬ್ಯಾಂಕಿಗೆ ತೋರಿಸಿ, ಹಣ ತರುವಂತೆ ಕಳುಹಿಸಿದನು. ಆದರೆ ಅದರಲ್ಲಿ ಒಂದು ಕಡೆ ೩೫೦ ರೂಪಾಯಿ ಎಂದೂ, ಇನ್ನೊಂದು ಕಡೆ ೧೫೦ ರೂಪಾಯಿ ಎಂದೂ ಮೊಬಲಗು ವ್ಯತ್ಯಾಸವಾಗಿ ಬರೆದಿತ್ತು. ಅದ್ದರಿಂದ ಅದನ್ನು ತಿದ್ದಿಸಿಕೊಂಡು ಬರಬೇಕೆಂದು ಹೇಳಿ ಮದರಾಸ್ ಬ್ಯಾಂಕಿನವರು ವಾಪಸು ಕೊಟ್ಟರು. ಆ ಛೆಕ್ಕನ್ನು ಸಬ್ ಇನ್ಸ್‌ಪೆಕ್ಟರ್ ಹಾರ್ಡಿ ವಶಕ್ಕೆ ಕೊಟ್ಟಾಗ, ಅವರು ಅದನ್ನು ತಮ್ಮ ಬಳಿಯಲ್ಲೇ ಇಟ್ಟುಕೊಂಡಿದ್ದು, ಮಾರನೇದಿನ ಹೋದಾಗ ಆ ಛೆಕ್ಕನ್ನು ಕೊಟ್ಟು ಹಣ ತರುವಂತೆ ಹೇಳಿದರು. ಬ್ಯಾಂಕಿಗೆ ಛೆಕ್ಕು ತೋರಿಸಿದಾಗ ಅಲ್ಲಿ ಹಣ ಸಿಕ್ಕಿತು. ಆ ಹಣದಲ್ಲಿ ೨ ರೂಪಾಯನ್ನು ತಂದವನಿಗೆ, ೧೪೮ ರೂಪಾಯಿ ನಾರಾಯಣಸ್ವಾಮಿಗೆ, ೧೦೦ ರೂಪಾಯಿ ಬಾಪುವಿಗೆ, ೧೦೦ ರೂಪಾಯಿ ಹಾರ್ಡಿಗೆ, ಈ ರೀತಿ ಹಂಚಿಕೊಂಡರು. ಎರಡನೇ ಮತ್ತು ಮೂರನೇ ಅಪರಾಧಿಗಳು ಮೇಲ್ಕಂಡ ವಿಚಾರವೆಲ್ಲಾ ಯಥಾರ್ಥವಾಗಿ ನಡೆದ ಸಂಗತಿಗಳೇ ಹೌದೆಂದು ಹೇಳಿ ಒಪ್ಪಿಕೊಂಡರು. ಇಲ್ಲಿಗೆ ಈ ಮೊಕದ್ದಮೆಯು ಮುಕ್ತಾಯವಾಯಿತು. ಸೆಷನ್ಸ್ ಜಡ್ಜರು ಈ ಮೊಕದ್ದಮೆಯ ತೀರ್ಮಾನವನ್ನು ಮುಂದಕ್ಕೆ ಹೇಳುವುದಾಗಿ ತಿಳಿಸಿದರು.

ಎರಡು ಮೊಕದ್ದಮೆಗಳ ಜಡ್ಜಮೆಂಟು.

ಕಳೆದ ಶುಕ್ರವಾರ ಮಧ್ಯಾಹ್ನ ಸೆಷನ್ಸ್ ಜಡ್ಜರು ನಾಲ್ಕನೇ ಮೊಕದ್ದಮೆಯು ಮುಕ್ತಾಯವಾದ ಮೇಲೆ ಹಿಂದೆ ಪೂರೈಸಿದ್ದ ಎರಡು ಮೊಕದ್ದಮೆಗಳಲ್ಲೂ ಜಡ್ಜಮೆಂಟನ್ನು ಓದಿ ಹೇಳಿದರು. ಅದರ ಅಭಿಪ್ರಾಯವೇನೆಂದರೆ—

(೧) ಗೋವಿಂದಾಚಾರಿ ಎಂಬ ಅಕ್ಕಸಾಲೇ ಹುಡುಗನನ್ನು ಕೊಂದ ಮೊಕದ್ದಮೆಯಲ್ಲಿ ಮೊದಲನೇ ಅಪರಾಧಿ ಬಾಪುವಿಗೆ—ಕೊಲೆ ನಡಿಸಿದ್ದಕ್ಕೆ ಫಾಸೀಸಜಾ, ಕಳುವು ಮಾಡಿದ್ದಕ್ಕೆ ಹತ್ತು ವರುಷ ಕಠಿಣ ಸಜಾ; ಎರಡನೇ ಅಪರಾಧಿ ಸುಂದರರಾಜೂವಿಗೆ—ಕೊಲೆ ನಡಿಸಿದ್ದಕ್ಕೆ ಫಾಸೀ ಸಜಾ, ಕಳುವು ಮಾಡಿದ್ದಕ್ಕೆ ಹತ್ತು ವರುಷ ಕಠಿಣ ಸಜಾ; ಮೂರನೇ ಅಪರಾಧಿ ನಲ್ಲತಂಬಿಗೆ—ಕೊಲೆಯಲ್ಲಿ ಕುಮುಕು ಮಾಡಿದ್ದಕ್ಕೆ ಫಾಸೀ ಸಜಾ, ಕಳುವಿಗೆ ಸಹಾಯಮಾಡಿದ್ದಕ್ಕೆ ಹತ್ತು ವರುಷ ಸಜಾ, ಈ ರೀತಿ ಶಿಕ್ಷೆ ವಿಧಿಸಲ್ಪಟ್ಟಿತು.

(೨) ವಿಶ್ವನಾಥಶೆಟ್ಟಿ, ಕೃಷ್ಣನಾಯ್ಡು ಎಂಬಿಬ್ಬರನ್ನೂ ಕೊಂದುಹಾಕಿದ ಮೊಕದ್ದಮೆಯಲ್ಲಿಯೂ ಕೂಡ ಆ ಮೂರು ಅಪರಾಧಿಗಳಿಗೂ ಮೇಲ್ಕಂಡ ಪ್ರಕಾರವೇ ಫಾಸೀ ಸಜವೂ ಕಠಿಣ ಸಜವೂ ವಿಧಿಸಲ್ಪಟ್ಟಿದೆ ಎಂದು ತಿಳಿಸಿದರು.

ಅಪರಾಧಿಗಳು.

ಈ ಮೂವರು ಅಪರಾಧಿಗಳೂ ಸೆಷನ್ಸ್ ಜಡ್ಜಿಯವರು ಓದಿ ಹೇಳಿದ ಮೇಲ್ಕಂಡ ಶಿಕ್ಷಾರೂಪವಾದ ಜಡ್ಜಮೆಂಟನ್ನು ಕೇಳಿ, ಹಸನ್ಮುಖಿಗಳಾಗಿ ಕೋರ್ಟಿನಲ್ಲಿ ನಗುತ್ತಿದ್ದರೇ ಹೊರತು ಸ್ವಲ್ಪವಾದರೂ ವ್ಯಸನಪಟ್ಟವರಂತಾಗಲಿ, ಹೆದರಿಕೊಂಡವರಂತಾಗಲಿ ಕಾಣಿಸಿಕೊಳ್ಳಲಿಲ್ಲ. ಜಡ್ಜಮೆಂಟು ಹೇಳಿದ ಕೂಡಲೇ ಪೋಲೀಸಿನವರು ಆ ಮೂರು ಮಂದಿಗೂ ಕೈಕೋಳಗಳನ್ನು ತೊಡಿಸಿ, ಕೋರ್ಟಿನಿಂದ ಹೊರಕ್ಕೆ ಕರೆದುಕೊಂಡು ಹೋದರು. ಕೋರ್ಟಿನ ಒಳಗೂ ಹೊರಗೂ ಕಿಕ್ಕಿರಿಯುವಂತೆ ಸೇರಿದ್ದ ಜನರ ಗುಂಪನ್ನು ನೋಡಿ, ಅಪರಾಧಿಗಳು ಕೋಳಗಳ ಸಹಿತ ಕೈಗಳನ್ನೆತ್ತಿ ಅಲ್ಲಾಡಿಸುತ್ತಾ, ಪೋಲೀಸಿನವರ ಕೂಡ ಜೈಲಿಗೆ ಹೋದರು.

ಪ್ರಜೆಗಳ ಪ್ರಾರ್ಥನೆ.

ಬೆಂಗಳೂರಿನ ಪ್ರಜೆಗಳು ಸಾವಿರಾರು ಮಂದಿ ಅರ್ಜಿಗಳನ್ನು ಬರೆದು ರುಜುಗಳನ್ನು ಹಾಕಿ ಬ್ರಿಟಿಷ್ ರೆಸಿಡೆಂಟರಿಗೂ, ಮೈಸೂರು ಗವರ್ನಮೆಂಟಿನವರಿಗೂ ಆ ದಿನವೇ ರವಾನೆಮಾಡಿದರು. ಈ ಅಪರಾಧಿಗಳು ಬಹು ಘಾತುಕತನದಿಂದ ನಿಷ್ಕಾರಣವಾಗಿ ಬಹು ಜನರನ್ನು ಕೊಂದುಬಿಟ್ಟಿರುತ್ತಾರೆಂತಲೂ, ಇಂಥಾ ಪ್ರಜಾ ಕಂಟಕರನ್ನು ಬಹಿರಂಗವಾಗಿ ಪ್ರಜೆಗಳೆಲ್ಲಾ ನೋಡುವಂತೆ ಪಬ್ಲಿಕ್ ಮೈದಾನಿನಲ್ಲಿ ಅಂದರೆ ಆ ಕೊಲೆಗಳು ನಡೆದ ಸರಹದ್ದಿನಲ್ಲೇ ಗಲ್ಲಿಗೆ ಹಾಕಿಸಬೇಕೆಂತಲೂ, ಈ ರೀತಿ ಮಾಡಿದರೆ ಇತರರ್‍ಯಾರೂ ಇಂಥಾ ಘೋರ ಕೃತ್ಯಗಳನ್ನು ನಡಿಸದ ಹಾಗೆ ಎಚ್ಚರಿಕೆ ಹುಟ್ಟುವುದೆಂತಲೂ ಕೇಳಿಕೊಂಡಿದ್ದಾರೆ.

ಹೊಸ ವಿಚಾರಗಳು.

ಈಗ ದಂಡಿನಲ್ಲೂ ಬೆಂಗಳೂರಿನಲ್ಲೂ ಆರು ಕೊಲೆಗಳು ನಡೆದಿರುತ್ತವೆಂದು ಮೊಕದ್ದಮೆ ಬಂದು, ಆ ಪೈಕಿ ಎರಡು ಮೊಕದ್ದಮೆಗಳಲ್ಲಿ ಅಪರಾಧಿಗಳಿಗೆ ಫಾಸೀ ಸಜಾ ವಿಧಿಸಲ್ಪಟ್ಟಿದೆಯಷ್ಟೆ. ಈಗಲೇ ಆ ಜಡ್ಜಮೆಂಟಿನ ಪ್ರಕಾರ ಅವರನ್ನು ಗಲ್ಲಿಗೆ ಹಾಕುವುದು ಸಾಧ್ಯವೆಂದು ಕಾಣುವುದಿಲ್ಲ. ಅವರು ನಡಿಸಿರುವ ಇನ್ನು ಕೆಲವು ಕೊಲೆಗಳ ಪೂರ್ವೋತ್ತರವನ್ನೆಲ್ಲಾ ಗೊತ್ತು ಮಾಡಬೇಕಾಗಿರುವುದು. ಬೆಂಗಳೂರು ಟವರ್ನಲ್ಲಿ ಎರಡು ಕೊಲೆಗಳೂ ಮೆ॥ ಸ್ಪಾರ್ಕ್ಸ್‌ಯವರ ಛೆಕ್ಕಿನ (ಹುಂಡಿಯ) ಫೋರ್ಜರಿ ಮೊಕದ್ದಮೆಯೂ ತನಿಖೆ ನಡೆದು ವಿಚಾರಣೆಯಾಗಬೇಕು. ಅವರು ಹೇಳಿರುವಂತೆ ಮತ್ತು ಅವರ ಮುಂದೆ ಹೊರಪಡುವಂತೆ ಯಾವ ಪೋಲೀಸಿನವರು ಎಷ್ಟು ಮಂದಿ ಎಷ್ಟು ಮಟ್ಟಿಗೆ ಈ ಕೊಲೆಗಾರರ ಗುಂಪಿಗೆ ಸಹಾಯಕರಾಗಿದ್ದರೆಂಬುವುದು ನಿರ್ಧರವಾಗಬೇಕು. ಇದುವರೆಗೆ ಆಗಲೇ ಅವರ ಕೈಫಿಯತ್ತಿನ ಪ್ರಕಾರ ದಂಡಿನ ಪೋಲೀಸ್ ಇಲಾಖೆಯ ಕೆಲವು ನೌಕರರು ಅವರಿಗೆ ಅಂತರಂಗದಲ್ಲೂ ಬಹಿರಂಗದಲ್ಲೂ ಸಹಾಯಮಾಡುತ್ತಿದ್ದರೆಂಬುವುದು ಪ್ರಕಟವಾಗಿದೆ. ಅದ್ದರಿಂದ ಇವರು ಹೇಳಿದ್ದದ್ದು ನಿಜವೋ ನಿಜವಲ್ಲವೋ ಎಂಬುವುದು ತೃಪ್ತಿಕರವಾಗಿ ಗೊತ್ತಾದ ಹೊರತು ಬಾಪು, ಸುಂದರರಾಜು, ನಲ್ಲತಂಬಿ, ಇವರನ್ನು ಗಲ್ಲಿಗೆ ಹಾಕುವಸಂಭವ ಕಾಣುತ್ತಿಲ್ಲ. ಈಗ ಈ ಪೋಲೀಸಿನವರ ಮೇಲೆ ಉಂಟಾಗಿರುವ ಅಪಮಾನವನ್ನು ಇತ್ಯರ್ಥ ಪಡಿಸುವ ಭಾಗದಲ್ಲಿ ಪೋಲೀಸ್ ಅಧಿಕಾರಿಗಳನ್ನೇ ಅದರ ಪತ್ತೆಗಾಗಿ ನೇಮಕಮಾಡುವುದು ಸಹಜವಲ್ಲವೆಂಬುದಾಗಿ ಪ್ರಜೆಗಳು ಅನುಮಾನ ಪಡುತ್ತಾರೆ. ಈ ವಿಷಯದಲ್ಲಿ ಜನರು ನಾನಾ ಪ್ರಕಾರವಾಗಿ ಯೋಚಿಸುತ್ತಿರುವರು. ಬಹು ಜನರ ಅಭಿಮತವೇನಾಗಿರಬಹುದೆಂದು ಊಹಿಸುವಲ್ಲಿ ಸರ್ಕಾರದವರು ಈ ಪೋಲೀಸ್ ಇಲಾಖೆಯವರ ಮೇಲೆ ಬಂದಿರುವ ಅಪವಾದವನ್ನು ತನಿಖೆ ಮಾಡಿಸುವುದಕ್ಕೆ ಪ್ರತ್ಯೇಕವಾಗಿ ಕೆಲವು ದೊಡ್ಡ ಮನುಷ್ಯರನ್ನು ಪಂಚಾಯಿತರನ್ನಾಗಿ ನೇಮಕ ಮಾಡಬೇಕೆಂದೂ, ಈ ಪಂಚಾಯತಿಗೆ ದಂಡಿನಲ್ಲಿ ಮುಖಂಡರಾಗಿರತಕ್ಕ ಕೆಲವರನ್ನು ಮೆಂಬರುಗಳಾಗಿ ಚುನಾಯಿಸಿ ಗೊತ್ತುಮಾಡಬೇಕೆಂತಲೂ ಕುತೂಹಲಪೂರ್ವಕವಾಗಿ ಅಪೇಕ್ಷಿಸುವಂತೆ ಕಾಣುವುದು.

ಹಿಂದುಸ್ಥಾನದ ಮಗ್ಗಗಳ ಪ್ರದರ್ಶನವು.

ಹಿಂದುಸ್ಥಾನದ ಎಲ್ಲಾ ಭಾಗಗಳೊಳಗೂ ನೆಯ್ಗೆಯವರಿಗೆ ಅನುಕೂಲವಾದ ಮಗ್ಗಗಳನ್ನು ತಯಾರ್ಮಾಡಿಕೊಟ್ಟು, ನೆಯ್ಗೆ ಕಸಬನ್ನು ಅಭಿವೃದ್ಧಿಗೆ ತರಬೇಕೆಂಬ ಉದ್ದೇಶದಿಂದ ಮದರಾಸ್ ಪಟ್ಟಣದ ದೇಶೀಯ ಸಂಘದವರು (ನ್ಯಾಷನಲ್ ಫಂಡು) ಮದರಾಸಿನ ಸ್ಕೂಲ್ ಆಫ್ ಆರ್ಟ್ಸ್ ಎಂಬ ಕಲಾಶಾಲೆಯಲ್ಲಿ ಮಗ್ಗಗಳ ಪ್ರದರ್ಶನವನ್ನು ನಡಿಸಿದರು. ಈ ಪ್ರದರ್ಶನದಲ್ಲಿ ಉತ್ಕೃಷ್ಟವೆನಿಸಿದಂಥಾ ಮಗ್ಗಗಳಿಗೆ ಬೆಳ್ಳಿಯ, ಕಂಚಿನ ಮೆಡಲುಗಳನ್ನೂ ಹಣವನ್ನೂ ಬಹುಮಾನ ಕೊಡುವುದಕ್ಕಾಗಿ ಕಳೆದ ಬುಧವಾರ ಸಾಯಂಕಾಲ ಅದೇ ಕಲಾಶಾಲೆಯಲ್ಲಿ ಒಂದು ದೊಡ್ಡ ಸಭೆ ಸೇರಿತು. ಮದರಾಸ್ ಗವರ್ನರಾದ ಸರ್ ಆರ್ಥರ್ ಲಾಲಿಯವರು ಅಗ್ರಾಸನವನ್ನು ವಹಿಸಿ, ಬಹುಮಾನಗಳನ್ನು ಕೊಟ್ಟರು. ಸಭೆಯಲ್ಲಿ ನೂರಾರುಮಂದಿ ವಿದ್ಯಾವಂತರೂ ಅಧಿಕಾರಿಗಳೂ ಹಾಜರಾಗಿದ್ದರು.

ನ್ಯಾಷನಲ್ ಫಂಡಿನ ಮತ್ತು ಕೈಗಾರಿಕೆಗಳ ಸಂಘದ ಪ್ರೆಸಿಡೆಂಟರಾದ ದಿವಾನ್ ಬಹದೂರ್ ಕೆ. ಕೃಷ್ಣಸ್ವಾಮಿರಾಯರು ಸಭಾನಾಯಕರಾದ ಗವರ್ನರನ್ನೂ ಸಭಾಸದರಾದ ದೊಡ್ಡಮನುಷ್ಯರನ್ನೂ ಕುರಿತು ಹೇಳಿದ ಮುಖ್ಯವಿಚಾರಗಳೇನೆಂದರೆ—

ಮದರಾಸಿನ ನ್ಯಾಷನಲ್ ಫಂಡ್ ಮತ್ತು ಕೈಗಾರಿಕೆಗಳ ಸಂಘದ ಮೆಂಬರುಗಳಾದ ನಾವು ಗವರ್ನಮೆಂಟಿನವರ ಸಹಾಯವನ್ನು ಪಡೆದು ನಡಿಸಿರುವ ಈ ಮಗ್ಗಗಳ ಪ್ರದರ್ಶನದಲ್ಲಿ ಯೋಗ್ಯವೆನಿಸುವುಗಳಿಗೆ ತಾವು ಈ ದಿನ ಬಹುಮಾನಗಳನ್ನು ದಯಪಾಲಿಸಬೇಕೆಂದು ಬೇಡಿಕೊಳ್ಳುತ್ತೇವೆ. ನಮ್ಮ ಸಂಘವು ೧೯೦೫ ನೆ ಇಸವಿಯಲ್ಲಿ ಪ್ರಾರಂಭವಾಯಿತು. ಅದರ ಉದ್ದೇಶಗಳೇನೆಂದರೆ—ದೇಶೀಯ ಕಸಬುಗಳಿಗೆ ಆಶ್ರಯಕೊಟ್ಟು ಅವನ್ನು ಅಭಿವೃದ್ಧಿಗೆ ತರುವುದು, ಶಾಸ್ತ್ರೀಯವಾದ ಮತ್ತು ಕಸಬುದಾರಿಯಾದ ವಿದ್ಯೆಗಳನ್ನು ಜನರಿಗೆ ಕಲಿಸುವುದು, ಪ್ರದರ್ಶನಗಳ ಮೂಲಕವೂ ಉಪನ್ಯಾಸಗಳ ಮೂಲಕವೂ ಗ್ರಂಥ ಪ್ರಚಾರದ ಮೂಲಕವೂ ಕೈಗಾರಿಕೆಗಳ ವಿಚಾರವಾದ ವಿದ್ಯಮಾನಗಳನ್ನು ಜನರಿಗೆ ತಿಳಿಸುವುದು, ಈ ಮೊದಲಾದವು. ನಮ್ಮ ಸಂಘವು ಏರ್ಪಾಡಾದ ಈಚೆಗೆ ನಾವು ನಮ್ಮ ಫಂಡಿನ ಹಣದಿಂದ ವಿಲಾಯತಿಗೂ, ಜಪಾನಿಗೂ, ಬೊಂಬಾಯಿಗೂ ವೇತನಗಳನ್ನು ಕೊಟ್ಟು ಯೌವನಸ್ಥರನ್ನು ಕಸಬು ಕಲಿತು ಬರುವುದಕ್ಕಾಗಿ ಕಳುಹಿಸಿರುತ್ತೇವೆ. ಜಪಾನಿಗೆ ಹೋಗಿರತಕ್ಕ ಮೂರು ಮಂದಿ ರೇಷ್ಮೆ ವ್ಯವಸಾಯ, ಕಾಗದಗಳ ತಯಾರಿ, ಕ್ಯಾಲಿಕೊ ಅಚ್ಚು ಮತ್ತು ಬಣ್ಣ, ಇವನ್ನು ಕಲಿಯುತ್ತಿದ್ದಾರೆ. ವಿಲಾಯತಿಗೆ ಹೋಗಿರತಕ್ಕ ಒಬ್ಬ ವಿದ್ಯಾರ್ಥಿಯು ಲಂಡನ್ ಪಟ್ಟಣದಲ್ಲಿ ಚರ್ಮಕ್ಕೆ ಹದಕೊಡುವ ವಿಧಾನಗಳನ್ನು ಕಲಿಯುತ್ತಿರುವನು. ಬೊಂಬಾಯಿಗೆ ಹೋಗಿರುವ ಇಬ್ಬರು ಬಟ್ಟೆ ನೂಲಿನ ತಯಾರಿಯನ್ನೂ ಮೆಕ್ಯಾನಿಕಲ್ ಇಂಜನಿಯರ್ ವಿದ್ಯೆಯನ್ನೂ ಕಲಿಯುವರು. ಮದರಾಸಿನಲ್ಲೂ ಕಂಚಿಯಲ್ಲೂ ಹನ್ನೆರಡು ಜನ ನೇಯ್ಗೆಯ ಯೌವನಸ್ಥರು ಲಾಳಿ ಮಗ್ಗಗಳ ವಿಧಾನವನ್ನೂ ಅವುಗಳಲ್ಲಿ ಕೆಲಸಮಾಡುವುದನ್ನೂ ಕಲಿಸುತ್ತಿದ್ದಾರೆ. ಇದಲ್ಲದೆ ಕಂಚಿ, ತಿನ್ನವೆಲ್ಲಿ, ವಿಶಾಖಪಟ್ಟಣ, ಈ ಸ್ಥಳಗಳಲ್ಲಿ ನಡೆದ ಮಗ್ಗಗಳ ಪ್ರದರ್ಶನಗಳಲ್ಲಿ ನಮ್ಮ ಸಂಘದ ಫಂಡಿನಿಂದ ಪ್ರದರ್ಶಕರಿಗೆ ಬಹುಮಾನಗಳನ್ನು ಕೊಟ್ಟಿದೇವೆ. ಕೈಗಾರಿಕೆಗಳ ಮತ್ತು ಕಸಬುಗಳ ವಿಷಯವನ್ನು ಕುರಿತು ಬರೆದಿರುವಂಥಾ ಪುಸ್ತಕಗಳನ್ನು ಶೇರಿಸಿಟ್ಟು, ಒಂದು ಸರಸ್ವತೀಭಂಡಾರವನ್ನು ಕಲ್ಪಿಸಿರುತ್ತೇವೆ. ಹೋದ ವರುಷ ಈ ಮಗ್ಗಗಳ ಪ್ರದರ್ಶನವನ್ನು ನಡಿಸಬೇಕೆಂದು ಪ್ರಯತ್ನಪಟ್ಟೆವು. ಆದರೆ ಅರ್ಬತ್‌ನಾಟ್ ಕಂಪನಿಯು ದಿವಾಳಿಯಾಗಿ ಅದರಲ್ಲಿಟ್ಟಿದ್ದ ನಮ್ಮ ಫಂಡಿನ ಹಣ ನಷ್ಟವಾಯಿತಾದ್ದರಿಂದ ನಡಿಸಲು ಅವಕಾಶವಾಗಲಿಲ್ಲ. ಈಚೆಗೆ ಗವರ್ನಮೆಂಟಿನವರು ೫೦ ಲಾಳೀ ಮಗ್ಗಗಳನ್ನು ನಮಗೆ ಸಾಲವಾಗಿ ಕೊಡಿಸಿದ್ದಲ್ಲದೆ ಈ ಪ್ರದರ್ಶನಕ್ಕಾಗಿ ೨,೫೦೦ ರೂಪಾಯಿ ಸಹಾಯಮಾಡಿದರು. ಪ್ರದರ್ಶನವನ್ನು ಈ ಕಲಾಶಾಲೆಯಲ್ಲಿ ನಡಿಸುವಂತೆ ಅಪ್ಪಣೆಕೊಡಿಸಿದರು. ಈ ರೀತಿ ಸಹಾಯಮಾಡಿದ್ದಕ್ಕಾಗಿ ನಾವೆಲ್ಲಾ ಗವರ್ನಮೆಂಟಿನವರನ್ನು ಕೃತಜ್ಞತಾಪೂರ್ವಕವಾಗಿ ವಂದಿಸುತ್ತೇವೆ. ದಕ್ಷಿಣದೇಶದ ಕೆಲವು ದೇಶೀಯ ರಾಜರುಗಳೂ ನಮಗೆ ದ್ರವ್ಯಸಹಾಯಮಾಡಿ, ಈ ಪ್ರದರ್ಶನವನ್ನು ಪ್ರೋತ್ಸಾಹಪಡಿಸಿದರು. ಇದಲ್ಲದೆ ನಮ್ಮ ಫಂಡಿನಿಂದಲೂ ೧,೦೦೦ ರೂಪಾಯಿ ಇದಕ್ಕೆ ವಿನಿಯೋಗಿಸಿರುತ್ತೇವೆ.

ಕೈ ಮಗ್ಗಗಳು ಈ ರಾಷ್ಟ್ರದಲ್ಲಿ ಬಹು ಮುಖ್ಯವಾದವು. ಕೋಟ್ಯಂತರ ಪ್ರಜೆಗಳು ಈ ಮಗ್ಗದ ಕಸಬಿನಿಂದ ಜೀವನ ಮಾಡಬೇಕಾಗಿದೆ. ಇದಕ್ಕೋಸ್ಕರ ಅತ್ಯಂತ ಸುಲಭವಾಗಿಯೂ ಲಾಭಕರವಾಗಿಯೂ ಇರತಕ್ಕ ಕೈ ಮಗ್ಗವನ್ನು ಕಂಡುಹಿಡಿದು ನಮ್ಮ ನೆಯ್ಗೆಯವರಿಗೆಲ್ಲಾ ತಿಳಿಸಬೇಕೆಂಬ ಉದ್ದೇಶದಿಂದಲೇ ಈ ಪ್ರದರ್ಶನವನ್ನು ನಡಿಸಿದೆವು. ಈ ಪ್ರದರ್ಶನಕ್ಕೆ ೫೧ ಮಗ್ಗಗಳು ತರಲ್ಪಟ್ಟಿದ್ದವು. ಈ ಪೈಕಿ ೧೬ ಮಗ್ಗಗಳು ಕಳ್ಳದಲ್ಲಿ ಕಾಲಿಟ್ಟು ನೇಯತಕ್ಕವು; ೪ ಮಗ್ಗಗಳು ಕಳ್ಳದಲ್ಲಿ ನೇಯತಕ್ಕವುಗಳಾದರೂ ಅವುಗಳಲ್ಲಿ ಲಾಳಿಗಳನ್ನು ಉಪಯೋಗಿಸುತ್ತಾರೆ. ಉಳಿದವುಗಳೆಲ್ಲಾ ಚೌಕಟ್ಟುಗಳುಳ್ಳ ಎತ್ತರವಾದ ಬೇರೆ ಬೇರೆ ಜಾತಿಯ ದೊಡ್ಡ ಮಗ್ಗಗಳಾಗಿದ್ದವು. ಕಲ್ಕತ್ತೆ, ಬೊಂಬಾಯಿ, ಬರೋಡ, ಬೆಳ್ಗಾವ, ಸೇಲಂ, ವಿಶಾಖಪಟ್ಟಣ, ಮಧುರೆ, ಕುಂಭಕೋಣ, ನೆಲ್ಲೂರು, ಉತ್ತರ ಆರ್ಕಾಟು, ಅನಂತಪುರ, ಹೈದರಾಬಾದು, ಮದರಾಸು, ಈ ಪ್ರಾಂತ್ಯಗಳಿಂದ ಜನರು ಮಗ್ಗಗಳನ್ನು ತಂದು ಪ್ರದರ್ಶನ ಮಾಡಿರುತ್ತಾರೆ. ಪರೀಕ್ಷಕರು ಎಲ್ಲಾ ಮಗ್ಗಗಳನ್ನೂ, ಅವುಗಳಲ್ಲಿ ಕೆಲಸ ನಡಿಯುವುದನ್ನೂ, ಅವುಗಳ ರಚನೆಯನ್ನೂ ಚೆನ್ನಾಗಿ ಪರೀಕ್ಷೆಮಾಡಿದ್ದಾಯಿತು. ಸರ್ವೋತ್ಕೃಷ್ಟವಾಗಿಯೂ ಅತ್ಯಂತ ಸುಲಭವಾಗಿಯೂ ಇರತಕ್ಕಂಥಾ ಮಗ್ಗವ್ಯಾವುದೂ ಪ್ರದರ್ಶನದಲ್ಲಿ ಕಾಣಲಿಲ್ಲವಾದ್ದರಿಂದ ಪರೀಕ್ಷಕರು ೫೦೦ ರೂಪಾಯಿನ ಸ್ಪೆಷಲ್ ಬಹುಮಾನವನ್ನು ಕೊಡತಕ್ಕದ್ದಿಲ್ಲವೆಂದು ತಿಳಿಸಿದಾರೆ. ಆದರೆ ಅಹಮದಾನಗರದ ಮೆ॥ ಚರ್ಚಿಹಿಲ್‌ಯವರು ತಂದು ಪ್ರದರ್ಶನ ಮಾಡಿರುವ ಮಗ್ಗವು ಬಹಳ ಪ್ರಶಸ್ತವೂ ಬಹು ಸುಲಭವೂ ಆಗಿದೆ ಎಂದೂ, ಅದರಲ್ಲಿ ಇನ್ನು ಸ್ವಲ್ಪ ಬದಲಾವಣೆ ಮಾಡಿದಲ್ಲಿ ಸರ್ವತ್ರ ಉಪಯೋಗಿಸಲು ಯೋಗ್ಯವಾಗಬಹುದೆಂದೂ ಪರೀಕ್ಷಕರು ಹೊಗಳಿರುತ್ತಾರೆ. ಮತ್ತು ಲಾಳಿ ಮಗ್ಗಗಳನ್ನೂ ನಮ್ಮ ದೇಶದವರು ಉಪಯೋಗಿಸುವಂತೆ ಪ್ರೋತ್ಸಾಹಪಡಿಸಬೇಕೆಂದು ನಮ್ಮ ಸಂಘದಿಂದ ಆ ಮಗ್ಗಗಳಿಗೆ ಬಹುಮಾನಗಳನ್ನು ಕೊಡಿಸಲಾಗಿದೆ.

ಬಹುಮಾನಗಳ ವಿನಿಯೋಗವು.

ಗವರ್ನರಾದ ಸರ್ ಆರ್ಥರ್ ಲಾಲಿಯವರು ಬಹುಮಾನಗಳನ್ನು ಹಂಚಿಕೊಟ್ಟರು. ಅಹಮದ್‌ನಗರದ ಮೆ॥ ಚರ್ಚಿಹಿಲ್‌ಯವರಿಗೆ ೧೦೦ ರೂಪಾಯಿ, ಕುಂಭಕೋಣದ ಮೆ॥ ಗೋಪಾಲಕೃಷ್ಣಶೆಟ್ಟರಿಗೆ ೧೫೦ ರೂಪಾಯಿ, ಇದೇ ರೀತಿ ಇನ್ನೂ ಅನೇಕರಿಗೆ ಬಹುಮಾನಗಳೂ ಬೆಳ್ಳಿಯ ಮತ್ತು ಕಂಚಿನ ಬಿರುದುಗಳೂ ಕೊಡಲ್ಪಟ್ಟವು. ಮದರಾಸ್ ಪಟ್ಟಣದಲ್ಲಿ ನೆಯ್ಗೆ ಜಾತಿಯಲ್ಲಿ ಹುಟ್ಟಿ, ವಿದ್ಯಾಭ್ಯಾಸಮಾಡಿ, ಆ ಕಸಬನ್ನು ಬಹಳ ಉಚ್ಛ್ರಾಯಸ್ಥಿತಿಗೆ ತಂದು ಹೆಸರು ಪಡೆದಿರುವುದಲ್ಲದೆ ಆ ಪಟ್ಟಣದಲ್ಲಿ ಒಂದು ವೇಳೆ ಮ್ಯುನಿಸಿಪಲ್ ಕಮಿಷನರಾಗಿಯೂ ಇರುವ ತ್ಯಾಗರಾಜಶೆಟ್ಟರು ಈ ಪ್ರದರ್ಶನದಲ್ಲಿ ಅನೇಕ ಮೆಡಲುಗಳನ್ನೂ ದ್ರವ್ಯರೂಪವಾದ ಹಲವು ಬಹುಮಾನಗಳನ್ನೂ ಸಂಪಾದಿಸಿಕೊಂಡಿದ್ದಾರೆ. ಇವರನ್ನು ಗವರ್ನರವರೂ ಸಭಾಸದರೂ ಏಕವಾಕ್ಯತೆಯಿಂದ ಕೊಂಡಾಡಿದರು.

ಗವರ್ನರವರ ಭಾಷಣವು.

ಈ ಪ್ರಕಾರ ಬಹುಮಾನಗಳನ್ನು ಕೊಟ್ಟ ಮೇಲೆ ಗವರ್ನರವರು ಸಭಾಸದರನ್ನು ಕುರಿತು ಅಪ್ಪಣೆಕೊಡಿಸಿದ ಮುಖ್ಯವಿಷಯಗಳೇನೆಂದರೆ—ಪುರಜನರು ಈ ರೀತಿ ಪ್ರೋತ್ಸಾಹಕರವಾದ ಪ್ರದರ್ಶನವನ್ನು ನಡಿಸಿದ್ದು ಸ್ತೋತ್ರಾರ್ಹವಾಗಿರುತ್ತದೆ. ಇಂಥಾ ಕಸಬು ದಿನೇ ದಿನೇ ಕ್ಷೀಣಗತಿಗೆ ಬರುತ್ತಿರುವುದು ತುಂಬಾ ದುಃಖಕರವಾಗಿರುವುದು. ಆದ ಕಾರಣ ನಾವುಗಳೆಲ್ಲಾ ಈ ಕಸಬನ್ನು ಹ್ಯಾಗಾದರೂ ಮಾಡಿ ಅಭಿವೃದ್ಧಿಗೆ ತರಬೇಕಾಗಿದೆ. ಈ ರಾಷ್ಟ್ರದಲ್ಲಿ ಕಾರ್ಖಾನೇ ಕೆಲಸಗಳು ಅಪರೂಪ. ಪಶ್ಚಿಮರಾಜ್ಯಗಳಲ್ಲಿರುವಂಥಾ ಕಾರ್ಖಾನೆಗಳನ್ನು ಈ ದೇಶದಲ್ಲಿ ಏರ್ಪಡಿಸುವುದು ಸಾಧ್ಯವೆಂದಾಗಲಿ, ಸಹಜವೆಂದಾಗಲಿ ಊಹಿಸಲಾಗದು. ಒಂದು ವೇಳೆ ಅಂಥಾ ಏರ್ಪಾಡಿನಲ್ಲಿ ಬದಲಾವಣೆಗಳನ್ನು ಮಾಡಿ, ರೂಢಿಗೆ ತಂದರೆ ಅದರಿಂದ ಒಳ್ಳೇದಾದರೂ ಆಗಬಹುದು. ಆದರೆ ಏಕಕಾಲದಲ್ಲಿ ಆತುರಪಟ್ಟು ಅಂಥಾ ಕಾರ್ಖಾನೆಗಳ ಏರ್ಪಾಡನ್ನು ಪ್ರಾರಂಭಿಸುವುದರಲ್ಲೂ ಅನೇಕರಿಗೆ ಅಭಿಪ್ರಾಯವಿಲ್ಲ. ನನ್ನ ಅಭಿಪ್ರಾಯವೇನೆಂದರೆ, ಅಂಥಾ ಕಾರ್ಖಾನೆಗಳು ಈ ದೇಶಕ್ಕೆ ಅನುಕೂಲಿಸಲಾರವು. ಇಲ್ಲಿನ ಜನರಿಗೂ ಅದು ಯೋಗ್ಯವಾದದ್ದೆಂದು ಹೇಳುವುದಕ್ಕಾಗದು. ಆದಕಾರಣ ಈ ಕಾರ್ಖಾನೆಗಳ ವಿಚಾರವನ್ನು ಸದ್ಯ ಮಾನ

...ವಾದಿ, ಇಲ್ಲಿನ ನೆಯ್ಗೆಯವನಿಗೆ ಅನುಕೂಲವಾದದ್ದು ವುದೆಂದು ...ಸಿ ನೋಡಿದರೆ, ಈಗ ಅವನು ತನ ಮನೆಯಲ್ಲಿ ಇಟ್ಟುಕೊಂ... ಕೈಮಗ್ಗವೇ ಸರ್ವೋತ್ತಮವಾದದ್ದೆಂತಲೂ, ಅವನ ಜೀ... ಅನುಕೂಲವಾದದ್ದೆಂತಲೂ ನನಗೆ ತೋರುವುದು ಆದರೆ ...ತ್ತ ಸಹಾಯದಿಂದಲೂ ಕಾರ್ಖಾನೆಗಳಲ್ಲು ತಯಾರಾಗುವಷ್ಟು ...ವಾದ ರೀತಿಯಲ್ಲಿ ಆ ಕೈಮಗ್ಗಗಳಲ್ಲು ಸನಗುಗಳು ತಯಾರಾ... ಹಾಗೆ ಆ ಕೈಮಗ್ಗಗಳ ರಚನೆಯನ್ನು ಕ್ರಮಪಡಿಸಬೇಕು ...ವನ ನೆಯ್ಗೆಯು ಈ ದೇಶದಲ್ಲಿ ಮನೆಯ ಕಸುಬೇ ಹೊರತು ...ನೆಯ ಕಸುಬಿನಿಸಿರುವದಿಲ್ಲ ಆದಕಾರಣ ಮನೆಗಳಲ್ಲೇ ಅವ... ಮಗ್ಗಗಳನ್ನಿಟ್ಟು ಕಸಬು ನಡಿಸುತ್ತಾ ಬಂಡೀಕಲ್ಲದೆ ಅವರು ...ಬುದ್ಧಿಕುಶಲತೆಯನ್ನು ಉಪಯೋಗಿಸುತ್ತಾ ಲಾಭಕರವಾದ ...ಮಾರ್ಗಗಳನ್ನೂ ಉಪಾಯಗಳನ್ನೂ ಕಂಡು ಹಿಡಿಯಬೇಕು ... ಬುದ್ಧಿಕುಶಲತೆಯನ್ನು ಉಂಟುಮಾಡಬೇಕೆಂಬುವುದೇ ...ರ್ಮೆಂಟಿನವರ ಉದ್ದೇಶವಾಗಿದೆ ಆದ್ದರಿಂದ ಅವರು ಪ್ರಯತ್ನ ...ಪಡುವದಕ್ಕೆ ಸರ್ಕಾರದವರು ಪ್ರೋತ್ಸಾಹನಗಳನ್ನು ಕಲ್ಪಿಸುತ್ತಿರುವ... ಈಗ ನಡೆದ ಪ್ರದರ್ಶನವೂ ಅದೇ ಉದ್ದೇಶ ಪೂರ್ವಕವಾದದ್ದು ...ತೃಪ್ತಿಕರವಾಗಿ ನೆರವೇರಿತೆಂದು ನಾವೆಲ್ಲಾ ಸಂತೋಷಪಡುವವ...ರಾಗಿದೇವೆ

ಒಂದಕ್ಕಿಂತಲೂ ಒಂದು ಮಗ್ಗದಲ್ಲಿ ಕೆಲಸ ನೇಯಲು ಸಾಧ್ಯವೇ, ...ವ ಮಗ್ಗಗಿಂದ ಎಷ್ಟು ಹೆಚ್ಚಾಗಿ ನೇಯಬಹುದು ಎಂಬೀ ವಿಷಯವನ್ನು ನಿರ್ಧರಿಸುವುದಕ್ಕೆ ಈ ಸ್ಪರ್ಧೆಯನ್ನು ಮಾಡಿದರು ಇದು ...ನಡೆದಿರುವುದರ ಪೈಕಿ ಹಳೇ ಇಂಗ್ಲಿಷ್ ಲೂಮ್ ಮಗ್ಗವೇ ಸರ್ವೋ...ತ್ತಮವಾದದ್ದೆಂತಲೂ, ಅದಕ್ಕೆ ಸರಿಸಮಾನವಾಗಿ ಕೆಲಸಮಾಡತಕ್ಕ ...ಮಗ್ಗವು ಇನ್ನೂ ದೃಷ್ಟಿಗೆ ಬರಲಿಲ್ಲವೆಂತಲೂ ಕೇಳಬಂದಿದೆ ...ಭಾಗಗಳಲ್ಲ ಅದು ಕೈಮಗ್ಗಕ್ಕಿಂತ ... ಕಡಿಮೆ ಹೆಚ್ಚು ...ಮಾಡತಕ್ಕದ್ದಾಗಿರುವುದು ಆದರೆ ಮೆ|| ಚಟರ್ಟನ್ ರವರು ... ಪ್ರದರ್ಶನ ಕಾಲದ ಮಗ್ಗವು ಬಹಳ ಉತ್ತಮವಾದದ್ದೆಂದು ...ಬರತ್ತೆ ಇದರಿಂದ ನಮ್ಮ ನೆಯ್ಗೆಯವರಿಗೆ ಎಷ್ಟು ಸಹಾಯ... ...ದೆ ಮುಂದೆ ನೋಡಬೇಕು ಈ ಮಗ್ಗದಿಂದ ಲಾಭವು... ...ನಿರೀಕ್ಷಿಸಿರುವಂತೆ ಈ ದೇಶದ ನೇಯ್ಗೆ ಕಸಬು ಉಚ್ಛ್ರಾಯ ...ಗೆ ಬಂದೀತೆಂದು ನಂಬುತ್ತೇನೆ

ಮುಕ್ತಾಯವ

ಕಡೆಯಲ್ಲಿ ...ಕರೆಲಾ ಗವರ್ನರರನ್ನು ವಂದಿಸಿ ಅವರಿಗೆ ...ವಿನ ಹಾರ ಹಾಕಿ ಪ ರ್ದಾಯಾದಿ... ಕಳುಹಿಸಿಕೊಟ್ಟರು

ಯಾತ್ರಿಕಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರುವ ಪತ್ರಿಕೆಗೆ ನಾವ ಸಿಗು... ...ದಕಾರಣ ಪತ್ರಿಕಾರರು ... ತಿಳುವಳಿಕೆಗೋ... ...ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ... ಬರೆಯತಕ್ಕದ್ದು ...ತ್ತು ಪತ್ರಿಕಾ ನ್ನ ಕಾಗದದ ಎರಡು ಪಕ್ಕಗಳಲ್ಲೂ ... ...ಇಂಥವುಗಳಿಗೆ ನಾವ ಸಿಗ ...

ಪತ್ರಿಕಾರರು ಪಡುವ ಅಭಿಪ್ರಾಯಗಳಿಗೆ ನಾವ ಹೊಣೆಗಾರರ... ...ಬಿಲ್ಲವೆಂಬಂಶವನ್ನು ... ಕಳುಹಿಸಬೇಕು —ಎಡಿಟರ್,

ಕರೆಸ್ಪಾಂಡೆನ್ಸ್

ಪಿ ಕಿತ್ತು ಹೋದ ನಷ್ಟವ

ಸ್ವಾ,

ತಂಕರದ ತಾಲ್ಲೂಕ ಕೋಳಾಲದ ... ಜೇಡ ಘಟ್ಟ ...ಗ್ರಾಮದ ಯಜಮಾನ ಸಾ| ಸಿದ್ದಪ್ಪನವರು ಪ್ಲೇಗಿನ ಭೀತಿ ...ಊರಿಗೆ ಪೂರ್ವದಿಕ್ಕ ತಮ್ಮ ಹೊಲದಲ್ಲಿ ಗರಿ ಕಲ್ಲ... ...ಗಿ ಭಾರಿಯಾಗಿ ಜೋಪಡಿ ಹಾಕಿದ್ದರೆ ಇವರು ... ...ಜನಗಳೆಂತಕ್ಕ ಸಂಸಾರವೆ ... ಕೃಷ್ಣಮ್ಮನವರು ಬಡಜನಗಳಿಗೆ ...ಉಪಕಾರಿಗಳಾಗಿವಾರೆ ಇದೇ ಮಾಹೆ ೮ ನೇ ತಾ ಭಾನುವಾ... ...ಗಡಿ ಸಮಯದಲ್ಲಿ ಇವರ ಜೋಪಡಿ ಹತ್ತಿಕೊಂಡು ಸುಮಾರು ...ದು ಸಾವಿರ ರೂಪಾಯಿನ ಒಡವೆಗಳೂ, ... ಸಾರದ ಪಟ್ಟೆಗಳೂ ...ವೂ ಮತ ... ಪಟ್ಟು ಸಾಮಾನುಗಳು ಒಂದು ಸಾವಿರ ...ನ ವರೆಗೂ ಇದ್ದದ್ದು ... ಸುಟ್ಟು ಹೋಗಿ ಉಪಯೋಗ... ...ದಂತೆ ಆಗಿದೆ ಇವರ, ಇವರಳಿಯಂದಿರುಗಳ ಪತ್ರಗಳು ಹತ್ತ... ...ದು ಸಾವಿರ ರೂಪಾಯಿಗಳ ವರೆಗೂ ಇದ್ದದ್ದು ಕೆಲವು ಪಾಡುವು ... ಸುಟ್ಟು ಇವೆ. ಆದಾಗ್ಯು ವಸಂತಿ... ಪಂಪ ತೋಂದರೆ ಬರ... ...ದು ದೈವಾಧೀನದಿಂದ ಹತ್ತು ಸಾವಿರ ರೂಪಾಯಿನ ಬೆಳ್ಳಿ ...ನಗಗಳು ಬೇರೇ ಸ್ಥಳದಲ್ಲಿ ಭೂಸ್ಥಾಪನೆ ಆಗಿದ್ದದ್ದರಿಂದ ...ದ ವೇನೂ ಆಗಲಿಲ್ಲ. ಎರಡು ಬಂಡಿ ಧಾನ್ಯ ನಷ್ಟವಾಯಿ... ...ವ ಆತ್ತಿಗೆ ಸಿದ್ದಮ್ಮನವರು ಮಕ್ಕಳು ಈಚೆಗೆ ಬಂದದ್ದನ್ನು ...ಗುಡಿಸಿಲಿಂದ ಮಕ್ಕಳನ್ನು ನೋಡುವ ಉದ್ದಿಶ್ಯ ಒಳಕ್ಕೆ ...ಗಿ, ಆಚೆಗೆ ಬರುವುದರೊಳಗಾಗಿ ಬೆನ್ನು, ಕೈಗಳು, ಕಾಲುಗಳಿಗೆ ...ಗು ತಗಲಿ, ಜಖಂ ಆಗಿದೆ ಆದರೆ ಗಾಯಕ್ಕೆ ಇಲಾಜುಮಾಡು... ...ಪ್ರಾಣಭಯವಿಲ್ಲ ಇಂಥಾ ಪರೋಪಕಾರಿಗಳಿಂದ ಸಂಸಾರಿ... ...ಗೆ ಉಂಟಾಗಿರುವ ಕಷ್ಟನಷ್ಟಗಳ ವಿಷಯದಲ್ಲಿ ಈ ಸಾಂತ್ವನದ ...ಗಳು ಆ ದಿವಸದ ಲಾಗಾಯ್ತು ಇದುವರೆಗೆ ನೋಡಿದಾಗ್ಯೂ ...ದು, ಇನ್ನೂರು ಜನಗಳ ಪ್ರಕಾರ ಬಂದು ವಿಚಾರಿಸಿಕೊಳ್ಳುತ್ತಾ ... ಪೋಲೀಸ್ ದಫೇದಾರು ಬಂದು ಸ್ಥಳವಿದ್ಯಮಾನ ರಿಕಾರ್ಡು ...ಕೊಂಡು ಹೋದರು. ಇನ್ನೂ ಊರು ಸೇರಲಿಲ್ಲ ಹೆಂಗಸರು ...ಳು ಹೊರಗೆ ಇನ್ನೊಬ್ಬರ ಜೋಪಡಿ ಸಮೀಪದಲ್ಲಿದ್ದರು. ...ಕೊಪ್ಪರು ಒಳಗೆ ಮಲಗಿದ್ದರು ಯಜಮಾನರು ಊರಲ್ಲಿರ... ... ಮಧ್ಯೆ ಗುಡಿಸಲಲ್ಲಿ ಭೋಜನಕ್ಕೆ ಆಕಾಶಕ್ಕೆ ಏಕವಾಗಿ

ಸೆಣ್ಣಿಗೆ ಉರಿ ಎದ್ದು ಎಲ್ಲಾ ಪ್ರದೇಶಕ್ಕೂ ಆವರಿಸಿಕೊಂಡಿತು ಆ ಸ್ಥಳದಲ್ಲಿ ಒಲೆ ಮುಂತಾದ್ದೇನೂ ಇರಲಿಲ್ಲ ಹಗಲು, ದೀಪವೂ ಇರಲಿಲ್ಲ ಈ ರೀತಿ ಅಂಟಿಕೊಂಡಿತು

ತಾ|| ೧೦—೩—೦೮ ಪ್ರತ್ಯಕ್ಷದರ್ಶಿ

ಕೆಲವು ಗ್ರಾಮ ಏರ್ಪಾಡುಗಳು

ಅಯ್ಯಾ,

ಪೂರ್ವದಲ್ಲಿದ್ದ ನಮ್ಮ ಗ್ರಾಮ ಏರ್ಪಾಡುಗಳನ್ನು ಪರಿಶೀಲಿಸಿದರೆ ನಮಗೆ ಅನೇಕ ಸಂಗತಿಗಳು ಕಂಡುಬರುವವು ಪ್ರತಿಯೊಂದು ಗ್ರಾಮವೂ ಒಬ್ಬ ಹೆಗ್ಗಡೆಯ ಕೈಕೆಳಗೆ ಇತ್ತು ಹೆಗ್ಗಡೆಯು ಗ್ರಾಮದ ರೈತರಿಂದ ವಸೂಲಾದ ಒಂದು ಗೊತ್ತಾದ ಮೊಬಲಗನ್ನು ದೇಶದ ರಾಜನಿಗೆ ಪ್ರತಿವರ್ಷವೂ ಕೊಡುತ್ತಿದ್ದನು ಈ ಹಣವನ್ನು ಯಾವದೋ ಒಂದು ಗೊತ್ತಾಗಿದ್ದ ವರದ ಮೇರಿಗೆ ರೈತರಿಂದ ವಸೂಲ್ಮಾಡುವದು ಶಾನುಭೋಗನ ಕೆಲಸವಾಗಿದ್ದಿತು ಇದಕ್ಕಾಗಿ ಅವನು ಲೆಕ್ಕವನ್ನು ಇಟ್ಟು ಲೆಕ್ಕಕ್ಕೆ ಜವಾಬ್ದಾರನಾಗಿರುತ್ತಿದ್ದನು ಜವಾನೀ ಕೆಲಸಕ್ಕೂ ಕೆಲವು ಸಮಯಗಳಲ್ಲಿ ಗ್ರಾಮದ ಉಸ್ತುವಾರಿಗೂ ತೋಟಿ, ತಳವಾರ ನೀರುಗಂಟಿ ಮೊದಲಾದವರು ಇದ್ದರು ಗ್ರಾಮಸ್ತರ ಸಹಾಯಕ್ಕಾಗಿ ಬಾರಾ ಬಲೂತಿಗಳಿದ್ದರು. ಇವರುಗಳಿಗೆಲ್ಲಾ ಮೇಲ್ಕಂಡ ಕೆಲಸಗಳನ್ನು ಮಾಡುವದಕ್ಕಾಗಿ ಕಂದಾಯವಿಲ್ಲದ ಇನಾಂ ಜಮೀನುಗಳು ಇದ್ದದ್ದಲ್ಲದೆ ಇದರ ಮೇಲೆ ಶಾನುಭೋಗನಿಗೆ ಮಕೀ ಕಾಣಿಕೆ ಮೊದಲಾದ ...ಮಾನಗಳೂ, ಇತರರಿಗೆ ವಿಭಾಗಗಳೂ ಗ್ರಾಮಸ್ತರಿಂದ ಸಲ್ಲುತ್ತಿದ್ದವು ಈ ಕೆಲಸಗಳು ವಂಶಪಾರಂಪರ್ಯವಾಗಿದ್ದವು

ಗ್ರಾಮಸ್ತರಲ್ಲಿ ಯಾರಲ್ಲಿಯಾದರೂ ವ್ಯಾಜ್ಯಗಳುಂಟಾದರೆ ಯೆಲ್ಲರೂ ಒಟ್ಟಾಗಿ ಪಂಚಾಯತಿಕೇರಿ ವ್ಯವಹಾರವನ್ನು ತೀರ್ಮಾನಮಾಡುತ್ತಿದ್ದರು ಇದರಿಂದ ಕಕ್ಷಿಗಳಿಗೆ ಯಾವವಿಧವಾದ ಖರ್ಚು ಲಾಸ್ಸು ನೂ ಇರಲಿಲ್ಲ ಮತ್ತು ಪಂಚಾಯಿತರು ಗ್ರಾಮಸ್ತರೇ ಆಗಿ ವ್ಯಾಜ್ಯದ ಮರ್ಮವನ್ನ ಚೆನ್ನಾಗಿ ಬಲ್ಲವರಾಗಿದ್ದುದರಿಂದ ಅವರ ತೀರ್ಮಾನಗಳೆಲ್ಲವೂ ನ್ಯಾಯವಾಗಿಯೇ ಇರುತ್ತಿದ್ದವು

ಗ್ರಾಮದ ಸರಹದಿನೊಳಗಿದ್ದ ಜಮೀನುಗಳೆಲ್ಲವೂ ಗ್ರಾಮಸ್ತರದೇ ಆಗಿದ್ದವು ಅವರಿಗೆ ಬೇಕಾಗಿದ್ದ ವರಮುಟ್ಟು ಸೌದೆ ಸೊಪ್ಪುಗಳಿಗೆ ಕಾವಲು, ಕಲ್ಲುಗಾವಲೂ, ಕೆರೆಕಟ್ಟೆಗಳೂ ಮುಂತಾಗಿ ಎಲ್ಲಾ ಅನುಕೂಲಗಳೂ ಇದ್ದವು ಒಂದು ಗ್ರಾಮದವರಿಗೆ ಸೇರಿದ್ದ ಜಮೀನುಗಳಿಗೆ ಇನ್ನೊಂದು ಗ್ರಾಮದವರು ಪ್ರವೇಶಿಸಿ ಜನರ ಹಕ್ಕಿನ ಮೇಲೆ ಅತಿಕ್ರಮ ಮಾಡುತ್ತಿರಲಿಲ್ಲ ಹಾಗೆ ಮಾಡುವದಾಗಿದ್ದರೆ ಗ್ರಾಮದವರೆಲ್ಲರೂ ಒಟ್ಟಾಗಿ ಸೇರಿ ನಿರ್ಬಂಧಿಸುತ್ತಿದ್ದರು

ಒಂದು ಗ್ರಾಮಕ್ಕೆ ದರೋಡೆಗಾರರೇ ಲೂಟಿಗಾರರೇ ಯಾರಾದರೂ ಗುಂಪುಕಟ್ಟಿಕೊಂಡು ಬರುವದಾಗಿದ್ದರೆ ಗ್ರಾಮದ ಸಂರಕ್ಷಣಾರ್ಥವಾಗಿ ಎಲ್ಲರೂ ಆಯುಧಗಳನ್ನು ಧರಿಸಿ ಎದುರಿಸುವದಕ್ಕೆ ಹೊರಡುತ್ತಿದ್ದರು ಗ್ರಾಮದೊಳಗೆ ಕನ್ನ, ಚೋರಿ ಮೊದಲಾದವುಗಳು ನಡೆಯದಂತೆ ತೋಟಿ ತಳವಾರರ ಉಸ್ತುವಾರಿ ಇದ್ದದ್ದಲ್ಲದೆ ಗ್ರಾಮಸ್ತರೂ ಸರದೀ ಮೇರಿಗೆ ಗಸ್ತು ತಿರುಗುತ್ತಿದ್ದರು ಉತ್ಸವಾದಿಗಳು ಬಂದರೆ ಎಲ್ಲರೂ ಸೇರಿ ವಿಜೃಂಭಣೆಯಿಂದ ನಡೆಸುತ್ತಿದ್ದರು ಕೆಲಸ, ಕಾಮಗಾರಿಗಳನ್ನು ಮನೆಗೊಬ್ಬನಂತೆ ಹೋಗಿ ಮಾಡುತ್ತಿದ್ದರು ಈ ಪ್ರಕಾರ ಒಂದು ಗ್ರಾಮಕ್ಕೆ ಸಂಬಂಧಪಟ್ಟ ಕೆಲಸಗಳನ್ನೆಲ್ಲಾ ಆ ಗ್ರಾಮಸ್ತರೇ ಸ್ವಾಮ್ಯದಾಯತ್ತೇನ ನಡೆಸಿಕೊಳ್ಳುತ್ತಿದ್ದುದರಿಂದ ಇವುಗಳನ್ನು ಮಾಡಿಕೊಳ್ಳುವದರಲ್ಲಿ ಅವರಿಗಿದ್ದ ಆಸಕ್ತಿಯಿಂದಲೂ, ಉತ್ಸಾಹದಿಂದಲೂ ಸಮರ್ಪಕವಾಗಿ ನೆರವೇರುತ್ತಿದ್ದವು ಗ್ರಾಮಸ್ತರಲ್ಲಿ ಐಕಮತ್ಯವೂ ಮೈತ್ರಿ, ಪ್ರೀತಿ ವಿಶ್ವಾಸಗಳೂ ಸಂಪೂರ್ಣವಾಗಿದ್ದವು

ಈ ಪ್ರಕಾರ ಪೂರ್ವದಲ್ಲಿ ಗ್ರಾಮದ ಆಡಳಿತವನ್ನು ಗ್ರಾಮಸ್ಥರೇ ಸೇರಿ ನಡೆಸುತ್ತಾ ಇದ್ದದ್ದನ್ನು ತಪ್ಪಿಸಿ ಕ್ರಮೇಣ ಸರ್ಕಾರದವರು ನಡೆಸುವದಕ್ಕೆ ವಹಿಸಿಕೊಂಡರು ಗ್ರಾಮದ ಶಾನುಭೋಗ ಮೊದಲಾದ ನೌಕರರ ಗ್ರಾಮದವರಿಂದಲೇ ಮಕೀ ಕಾಣಿಕೆ, ವಿಭಾಗ ಯಾನೆ ಸುಂಕಗಳನ್ನು ಪಡೆಯುತ್ತಿದ್ದದ್ದರಿಂದ ರೈತರ ಹಿತವನ್ನು ಬಯಸಿ ಅವರ ಅನುಕೂಲಗಳಿಗಾಗಿ ಕೆಲಸ ಮಾಡಬೇಕಾಗಿತ್ತು ಮತ್ತು ಈ ಪದ್ಧತಿ ... ಕಾಲ ನಡೆದು ಬಂದಿದ್ದದರಿಂದಲೂ ಈ ನೌಕರರೆಲ್ಲರೂ ವಂಶಪಾರಂಪರ್ಯವಾದ ಹಕ್ಕುಳ್ಳವರಾದ್ದರಿಂದಲೂ ಅವರು ರೈತರ ಹಿತವು ... ಅನ್ಯೋನ್ಯವಾಗಿ ಕೆಲಸ ನಡೆಸಿಕೊಂಡು ಬರುತ್ತಿದ್ದರು ಈ ಏರ್ಪಾಡು ಕ್ರಮೇಣ ತಪ್ಪಿ ಶಾನುಭೋಗರು ಸರ್ಕಾರದ ನೌಕರರಾಗುತ್ತಾ ಬಂದರು ಮತ್ತು ಇವರು ಸರ್ಕಾರದ ನೌಕರರಾದ ಕೂಡಲೆ ಇವರ ಹಿತವೂ ರೈತರ ಹಿತವೂ ಬೇರೆ ಬೇರೆಯಾಗಿ ಜನಗಳಲ್ಲಿ ವ್ಯಾಜ್ಯಗಳೂ ಕಿರುಕುಳಗಳೂ ಉಂಟಾಗುವುದಕ್ಕೆ ಪ್ರಾರಂಭವಾದವು ಗ್ರಾಮಗಳ ಆಡಳಿತದಲ್ಲಿ ಸರ್ಕಾರದವರು ಹೆಚ್ಚು ಹೆಚ್ಚಾಗಿ ಪ್ರವೇಶ ಮಾಡಿದ ಹಾಗೆಲ್ಲಾ ಜನಗಳಿಗೆ ಪ್ರಯೋಜನಕರವಾಗಿದ್ದ ಪ್ರತಿಬಾಬಿಗೂ ಬೇರೆ ಬೇರೆ ತೆರಿಗೆಗಳು ದಾಖಲಾಗುತ್ತಾ ಬಂದವು ರೆವಿನ್ಯೂ ಸರ್ವೆ ಆದ ಮೇಲೆ ಗ್ರಾಮದಲ್ಲಿ ವ್ಯವಸಾಯಕ್ಕಲ್ಲದೆ ಇತರ ವಿಷಯಗಳಲ್ಲಿ ಗ್ರಾಮಸ್ತರ ಪ್ರಯೋಜನಾರ್ಥವಾಗಿದ್ದ ಜಮೀನುಗಳ ಮೇಲೆಲ್ಲಾ ಕಂದಾಯ ಹಾಕಿದ್ದರಿಂದ ರೈತರಿಗೆ ಖಾಲಿ ಜಮೀನುಗಳ ಮೇಲಿದ್ದ ಹಕ್ಕೆಲ್ಲಾ ಹೋಯಿತು ಮತ್ತು ಸರ್ವೆ ಸೆಟಲ್ಮೆಂಟುಗಳು ಆದಹಾಗೆಲ್ಲಾ ಕಂದಾಯ ಜಾಸ್ತಿಯಾಗುತ್ತಾ ಬಂತು ಜನರಿಗೆ ತಮ್ಮ ಜಮೀನುಗಳ ಮೇಲಿದ್ದ ಸ್ವಾತಂತ್ರ್ಯವೂ ಕಡಮೆಯಾಯಿತು ತಾನು ವ್ಯವಸಾಯಮಾಡುತ್ತಿದ್ದ ಜಮೀನಿನಲ್ಲಿ ರೈತನು ಒಂದು ಮನೆ ಕಟ್ಟಿಕೊಳ್ಳಬೇಕಾದರೂ ನಿರ್ಬಂಧವಾಯಿತು ಅನೇಕ ಶತಮಾನಗಳಿಂದ ಅನುಭವಿಸಿಕೊಂಡು ಬರುತ್ತಿರುವ ಜಮೀನನ್ನು ಕಂದಾಯ ಕೊಡಲು ಕೊಂಚ ಸುಸ್ತು ಮಾಡಿದರೆ ಹೀಳಬಾಳು ಹರಾಜು ಮಾಡಿಸಿ ಬಿಡುವನು ಮತ್ತು ಎಲ್ಲಾ ವಿಷಯಕ್ಕೂ ಸರ್ಕಾರದ ಸಹಾಯವನ್ನು ಅಪೇಕ್ಷಿಸಬೇಕಾಗಿರುವದರಿಂದಲೂ, ಇದಕ್ಕಾಗಿ ಕಚೇರಿಗೆ ಅಲೆಯುತ್ತಾ ಇರಬೇಕಾಗಿರುವದರಿಂದಲೂ, ತಾಲ್ಲೂಕು ಕಚೇರಿಗಳೆಲ್ಲಾ ಲಂಚದ ಮಯವಾಗಿಬಿಟ್ಟಿವೆ ಇದನ್ನು ನಿಲ್ಲಿಸುವದಕ್ಕೆ ಈಗಿನ ಏರ್ಪಾಡಿನಲ್ಲಿ ಎಂದಿಗೂ ಸಾಧ್ಯವಿಲ್ಲ

ಪೋಲೀಸ್ ವಿಷಯವಂತು ಹೇಳಬೇಕಾದ್ದೇ ಇಲ್ಲ ಗ್ರಾಮಸ್ತರಿಗೆ ಗ್ರಾಮವನ್ನು ಕಾಪಾಡಿಕೊಳ್ಳುವದರಲ್ಲಿಯೂ ಪರಸ್ಪರ ಸಹಾಯ ಮಾಡುವದರಲ್ಲಿಯೂ ಪೂರ್ವದಲ್ಲಿದ್ದ ಆವಶ್ಯಕತೆಯೂ ಮುಕ್ತವಾಗಿಯೂ ಹೋಗಿ ಅಲ್ಪ ವಿಷಯಗಳಲ್ಲಿಯೂ ಕೂಡ ಸರ್ಕಾರದ ರಕ್ಷಣೆಯ ಮೇಲೆಯೇ ಅವಲಂಬಿಸಿರಬೇಕಾಗಿರುವದರಿಂದ, ಈ ವಿಷಯದಲ್ಲಿ ಸರ್ಕಾರದವರು ಯಾವ ಏರ್ಪಾಡು ಮಾಡಿದರೆ ತಾನೇ ಸಮರ್ಪಕವಾದೀತು ? ಪರದೇಶದ ಶತ್ರುಗಳ ಹಾವಳಿಯೂ ಲೂಟಿಗಾರರ ದಾಂಧಲೆಯೂ ನಿಂತದ್ದೇನೋ ನಿಜ ಆದರೆ ಈಗ ನಡೆಯುತ್ತಿರುವ ಖೂನಿಗಳೂ, ದರೋಡೆಗಳೂ, ಕಳ್ಳತನಗಳೂ ಇವುಗಳನ್ನು ನಿಲ್ಲಿಸುವದಕ್ಕೂ ಲಕ್ಷಾಂತರ ಜನಗಳ ಧನ ಮಾನ ಪ್ರಾಣಗಳನ್ನು ಕಾಪಾಡುವದಕ್ಕೂ ಕೆಲವು ಪೋಲೀಸಿನವರಿಗೆ ಹ್ಯಾಗೆ ಸಾಧ್ಯ ? ತಕ್ಸೀರುಗಳನ್ನು ಅಡಗಿಸುವದರಲ್ಲಿಯೂ, ಪತ್ತೇ ಮಾಡುವದರಲ್ಲಿಯೂ, ಖೂಟರನ್ನು ಶಿಕ್ಷೆಗೆ ಗುರಿಪಡಿಸುವದರಲ್ಲಿಯೂ ಪೋಲೀಸಿನವರಿಗೆ ಪ್ರಜೆಗಳ ಮೇಲೆ ಅಪಾರವಾದ ಅಧಿಕಾರವು ಕೊಡಲ್ಪಟ್ಟಿದೆ ಜನರಿಗೆ ಯಾವ ಸ್ವಾತಂತ್ರ್ಯವೂ ಇಲ್ಲದ್ದರಿಂದ ಪೋಲೀಸಿನವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸುವದು ಸುಲಭವಾಗಿರುತ್ತದೆ ಈ ವಿಷಯದಲ್ಲಿ ಅವರೂ ಮನುಷ್ಯರೇ ವಿನಹಾ ದೇವತೆಗಳಲ್ಲ

ಸಿವಲ್ ಕ್ರಿಮಿನಲ್ ವ್ಯಾಜ್ಯಗಳೆಲ್ಲಾ ರುಜುವಾತಿನ ಆಧಾರದ ಮೇಲೆ ಕೋರ್ಟಿನಲ್ಲಿ ತೀರ್ಮಾನವಾಗಬೇಕಾಗಿರುವದರಿಂದ ಸುಳ್ಳು ಸಾಕ್ಷಿಗಳೂ ಸುಳ್ಳು ಫಿರ್ಯಾದುಗಳೂ ಅಸಂಖ್ಯಾತವಾಗಿವೆ ಇದರಿಂದ ಜನರಿಗೆ ದೊಡ್ಡ ನಷ್ಟವಲ್ಲದೆ ಪರಸ್ಪರ ಸಂಬಳಿಗೂ ವಿಶ್ವಾಸಕ್ಕೂ ಅಪೋಹ ಬರುತ್ತಿರುವದು

ಪರಸ್ಪರ ಸಹಾಯವೆಂಬುವದು ಅದೃಶ್ಯವಾಯಿತು ಎಷ್ಟು ಗ್ರಾಮಗಳವರು ತಮ್ಮ ಗ್ರಾಮದಲ್ಲಿ ಭಾವಿ ತೆಗಿಸಿಕೊಡಬೇಕೆಂದೂ ರಸ್ತೆ ಹಾಕಿಸಿಕೊಡಬೇಕೆಂದೂ ಕಂಡಕಂಡ ಅಧಿಕಾರಿಗಳ ಮುಂದೆಲ್ಲಾ ಹಲ್ಲುಕಿರಿಯುತ್ತಿರುವದನ್ನು ನಾವು ನೋಡಿಲ್ಲ ? ಮನೆಗೊಬ್ಬನಂತೆ ಸೇರಿ ಒಟ್ಟಾಗಿ ಕೆಲಸಮಾಡಿದರೆ ಬೇಕಾದಷ್ಟು ರಸ್ತೆಗಳನ್ನು ಹಾಕಬಹುದು ಆದರೆ ಅದರ ಅವಶ್ಯಕತೆಯೇ ಹೋಯಿತು ಈಗ ಸರ್ಕಾರದವರು ಗ್ರಾಮಗಳ ಆಡಳಿತದಲ್ಲಿ ಪ್ರವೇಶಿಸಿ ಗ್ರಾಮಸ್ತರ ಅನ್ಯೋನ್ಯವಾದ ಕಾರ್ಯಗಳಿಗೆ ಅಡ್ಡಲಾಗಿ ಬಂದದ್ದರಿಂದಲೂ, ಅವರು ಸ್ವಂತವಾಗಿ ಮಾಡಿಕೊಳ್ಳುತ್ತಿದ್ದಂಥಾ ಕಾರ್ಯಗಳನ್ನು ತಾವು ನಡಿಸಿಕೊಡ ಪಡೆಕ್ಕೆ ಕೈಕೊಂಡು ಐಕಮತ್ಯಕ್ಕೆ ಆಸ್ಪದವಾಗಿದ್ದ ಕಾರಣವನ್ನು ಹೋಗಲಾಡಿಸಿದ್ದರಿಂದಲೂ ಸಹ ಜನಗಳು ಅಪ್ರಯೋಜಕರಾಗಿಯೂ, ನಿಷ್ಕ್ರಿಯಸ್ಥರಾಗಿಯೂ, ಹೇಡಿಗಳಾಗಿಯೂ ಆಗುತ್ತಿದ್ದಾರೆ ಹೆಚ್ಚು ಅಧಿಕಾರವನ್ನು ತಮ್ಮ ಕೈಲಿಟ್ಟುಕೊಳ್ಳುವದಕ್ಕೂ ಇಷ್ಟುಬಂದಷ್ಟು ಕಂದಾಯಕ್ಕೆ ಪೋಗ್ಯಮಾಡಿಕೊಳ್ಳುವದಕ್ಕೂ ಜನರನ್ನು ಈ ಸ್ಥಿತಿಗೆ ತಂದು ಅದಕ್ಕೆ ಬದಲಾಗಿ ಸರಕಾರದವರು ಎಷ್ಟು ಚೆನ್ನಾಗಿ ಪ್ರಜೆಗಳನ್ನು ಕಾಪಾಡಿದರೆ ತಾನೇ ಪ್ರತಿಫಲವಾದೀತು ?

ಮಾಳೂರು ದೇಶಾಭಿಮಾನಿ

ಕಲ್ಕತ್ತೆಯ ಡಾಕ್ಟರುಗಳ ಅಭಿಪ್ರಾಯಗಳು

93 29

ನಾವು ಸ್ವತಃ ಕಾರ್ಯ ನೋಡಲಿಕ್ಕಾಗದಾಗ ನಮ್ಮ ಕಿವಿಗಳಿಂದ ಕೇಳಿದಾಗ, ನಮ್ಮ ಸ್ನೇಹಿತರು ರುಜುಪಡಿಸುವಾಗ ಇದಕ್ಕಿಂತ ಮೇಲಾದ ಸಾಕ್ಷ್ಯ ಯಾವದು ?

ಸಾಂಖ್ಯಾಯಿ ಜನರು ಏನು ಹೇಳುತ್ತಾರೆಂಬದಾಗಲೀ ಕೊಲಂಬೋ, ಬೇರ ಅಭಿಪ್ರಾಯವೇನೆಂಬದಾಗಲೀ ಹೇಳಿ ಪ್ರಯೋಜನವಿಲ್ಲ. ಕಲ್ಕತ್ತೆಯವರಿಗೆ ಈ ಔಷಧವಿಷಯವಾಗಿ ನಿಜವಾಗಿ ಗೊತ್ತಿರುವಂಥಾ ಸಂಗತಿಯನ್ನೇ ತಿಳಿಸುತ್ತೇವೆ ನೀವು ನಿಮ್ಮ ನೆರೆಕೆರೆಯವರ ಮಾತನ್ನು ನಂಬುವಿರೋ ? ಹಾಗಾದ ಪಕ್ಷದಲ್ಲಿ ಬೋಸ್ ಮತ್ತು ಕಂಪನಿ ಔಷಧ ಶಾಲೆಯ ವೈದ್ಯ ಚಿಕಿತ್ಸಕರಾದ ಡಾಕ್ಟರ್ ಪರೇಶನಾಥ ದತ್ತರವರ ಅಭಿಪ್ರಾಯವನ್ನು ಓದಿ ನೋಡಿರಿ

ಡೋನ್ಸರ (ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಬೆನ್ನು ನೋವಿನ ಮೂತ್ರಬಾಧೆಯ ಗುಳಿಗೆಗಳು ಮೂತ್ರಕೋಶದ ಬಾಧೆಗಳಲ್ಲಿ ಮುಖ್ಯವಾಗಿ ಕಲ್ಲು ಬೀಳುವಲ್ಲಿ ಉಪಯೋಗಕರವಾಗಿದೆ

ಬೆನ್ನು ನೋವು ಮನಾತಿರೋಗವು ಮೂತ್ರಸಂಬಂಧವಾದ ಇತರ ವ್ಯಾಧಿಗಳ ಹಾಗೆಯೇ ಕಲ್ಲು ಬೀಳುವದು ನಿಶ್ಚಯವಾಗಿ ಮೂತ್ರಪಿಂಡಗಳ ಬಲಹೀನತೆಯಿಂದ ಯಾ ಕೆಟ್ಟುಹೋಗುವಿಕೆಯಿಂದ ಆಗಿರುವದು

ಈ ಮಾತ್ರೆಗಳಲ್ಲಿ ಸಸ್ಯಾದಿ ಮೂಲ ಪದಾರ್ಥಗಳು ಮಾತ್ರ ಇರುತ್ತವೆ ಅವು ಬೇಗನೇ ಉಪಶಮನಗುಣ ಸಿಕ್ಕುವಂತೆ ವಿಲಾಯಿಸಿರುವವು, ಅತ್ಯಂತ ಸೂಕ್ಷ್ಮವಾದ ದೇಹಪ್ರಕೃತಿಯವರು ಸಹಾ ಉಪಯೋಗಿಸಬಹುದು ಮತ್ತು ಶಾಶ್ವತವಾದ ಗುಣಾಂಶ ಸಿಕ್ಕುವಲ್ಲಿ ಸಂದೇಹವಿಲ್ಲ. ಮುಂದೆ ಇದರಿಂದ ಯಾವ ಬಾಧಕವೂ ಇರಲಾರದು

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ ಶೀಸೆ ಒಂದಕ್ಕೆ ರೂ ೨, ಅಥವಾ ೬ ಶೀಸೆಗಳಿಗೆ ರೂ. ೧೦—೮—೦ ಅಥವಾ ಮುಂಬಾಯಿಯಲ್ಲಿಯ ಡೋನ್ಸ್ ಔಷಧಗಳ ಕೋರಿಯಿಂದಾ ಸೀದಾ ತರಿಸಿಕೊಳ್ಳಬಹುದು ಪಿ ಒ ಬಾಕ್ಸ್ ನಂ ೨೦, ಮುಂಬಾಯಿ.

' ಗೌಡರ ಹೊಗೆಸೊಪ್ಪಿನ ಔಷಧ ''

19 4

ಈ ನವೀನ ಔಷಧವು ಕೆಮ್ಮು, ಗಸೆ, ಮುಂತಾದ ವ್ಯಾಧಿಗಳನ್ನು ತಕ್ಷಣ ಶಮನಗೊಳಿಸಿ ಬೇಗನೆ ಪರಿಹರಿಸುತ್ತದೆ ಪ್ರಯ... ಪೆಟ್ಟಿಗೆಂಕ್ಕೆ ೮ ಆಣೆ ವಿ ಪಿ. ೧೧ ಆಣೆ ಈ ವಿಳಾಸಕ್ಕೆ ಬರೆಯಿರಿ ... ಲಕ್ಷ್ಮಣಗೌಡ, ಬಿ ಎ, ಬಿ ಎಲ್, ಪತ್ರಪ್ಪನ ಬೀದಿ, ಬೆಂಗಳೂರು ಸಿಟಿ.

ಅನೇಕ ಸ್ತ್ರೀಯರ ಅನುಭವವು.

ಪೆರೂನಾ ಅನುಕೂಲವೂ ಉಪಯುಕ್ತವೂ ಸಂಸಾರದಲ್ಲಿ ಅವಶ್ಯವೂ ಆದ ಔಷಧವೆಂದು ಸಂಶಯವಿಲ್ಲದೆ ತಿಳಿಸುತ್ತಾರೆ.

ಹೆಂಗಸರು ಹೇಳಿರುವುದನ್ನು ಓದಿನೋಡಿ

ನಿರಂತರ ಗಂಟಲುಕಟ್ಟುವುದು

ಮಿಸೆಸ್ ಡಿ ಸಿ ಕ್ಯಾಮೆರಾನ್ ... ಲಾಡ್ಸ್‌ಬರ್ಗ್ ಕ್ಯಾಸಲ್, ವೆಂಬರ್, ಡಾಟರ್ಸ್ ಆಫ್ ಅಮೇರಿಕಾ, ಈಳ ಬರೆಯುತ್ತಾಳೆ —

"ನನ್ನ ಶ್ವಾಸಕೋಶದ ನಾಳಗಳಿಗೆ ಶೀತಹಿಡಿದು ನನ್ನನ್ನು ಬಹಳವಾಗಿ ಕಾಡುತ್ತಿತ್ತು. ಅದರ ನಿವಾರಣೆಗೆ ಅನೇಕ ಪರಿಹಾರಗಳನ್ನು ಮಾಡಿ ನೋಡಿದರೂ ಪ್ರಯೋಜನವಾಗಲಿಲ್ಲ. ಇದು ನನಗೆ ವಾಸಿಯಾಗ ಪ್ರದೇ ಇಲ್ಲವೆಂಬ ಯೋಚನೆಯುಂಟಾಯಿತು. ಕಡೆಗೆ ಪೆರೂನಾವನ್ನು ಸೇವಿಸಿ ನೋಡೋಣವೆಂದು ಪ್ರಾರಂಭಿಸಿದೆನು.

"ಸ್ವಲ್ಪಕಾಲದೊಳಗಾಗಿ ನನ್ನ ಶ್ವಾಸಕೋಶದ ನಾಳಗಳು ನಿರ್ಮಲವಾಗುತ್ತಾ ಬಂದುವು. ಸರ್ವದಾ ಗಂಟಲುಕಟ್ಟುವ ಕಡಮೆಯಾಯಿತು. ಧ್ವನಿಯು ಹೆಚ್ಚಿಗೆ ದಪ್ಪನಾಗುವುದು ನಿಂತಿತು. ಗಂಟಲಿನಲ್ಲಿ ಗಾಯಿನ್ನು [illegible] ಕ್ಷಯವಾಯಿತು.

"ನನಗೆ [illegible] ಹಿಡಿದಿದ್ದದ್ದು ಸಾಧಾರಣವಾದುದಂತೆ ನನ್ನಲ್ಲಿ [illegible] ಈ ನಂಬಿಕೆ ಹುಟ್ಟಿ ಈಗ [illegible] ಗಳು ಕಳೆದುಹೋಗಿರುತ್ತವೆ. ಆದಕಾರಣ ಮಾತೆ ನನಗೆ ಆ ರೋಗ ಬರುವುದೇ ಇಲ್ಲವೆಂದು ತಿಳಿದಿದ್ದೇನೆ."

ಮೇಲೆ ಕಾಣುವಂಥಾ ಸ್ತ್ರೀಯರ ಗುಂಪನ್ನು ನಾವು ಎಷ್ಟು ಸಾರಿ ಬೇಕಾದರೂ ದೃಷ್ಟಾಂತವಾಗಿ ಹಿಡಬಹುದು. ಆಗಲೂ ಪೆರೂನಾದಿಂದ ಪ್ರಯೋಜನವನ್ನು ಪಡೆದಿದ್ದ ಸಮಸ್ತ ಸ್ತ್ರೀಯರನ್ನು ಹೇಳಿದಂತಾಗ ಬಲ್ಲ [illegible] ಹೆಂಗಸರು ಇದರ ಸೇವನೆಯಿಂದ ತಮ್ಮ ಸಕಲ ರೋಗಗಳನ್ನೂ ನಿವಾರಣೆಮಾಡಿಕೊಂಡಿರುತ್ತಾರೆ.

ಹೊಟ್ಟೆಗೆ ಹಿಡಿದ ಶೀತವು

ಮಿಸ್ ಎಮಿಲಿ ಕಾಚ್, [illegible] ಮಿಚಿಗನ್ ಅವ್, ಮಿಲ್‌ವಾಕೀ, ವಿಸ್, ಈಕೆ ಹೇಳುವುದು

"ಹೊಟ್ಟೆಗೆ ಶೀತ ಹಿಡಿದು ನರಳುತ್ತಿರುವವರಿಗೆಲ್ಲಾ ಪೆರೂನಾವನ್ನೇ ಉಪಯೋಗಿಸುವಂತೆ ನಾನು ಬಹು ಸಂತೋಷದಿಂದಲೂ ವ ನಂಬೂರ್ವಕವಾಗಿಯೂ ಶಿಫಾರಸುಮಾಡುತ್ತೇನೆ. ನಾನು ಅನೇಕ ಔಷಧಗಳನ್ನು ಉಪಯೋಗಿಸಿದರೂ ಒಂದರಿಂದಲೂ ಆರೋಗ್ಯವಾಗಲಿಲ್ಲ. ಕಡೆಗೆ ನಾನು ಪೆರೂನಾವನ್ನು ಉಪಯೋಗಿಸಿ ನೋಡಿದೆನು. [illegible] ಅದನ್ನು ಸೇವಿಸಿದ್ದರಲ್ಲಿ ನನಗೆ ರೋಗವೆಲ್ಲಾ ವಾಸಿಯಾಯಿತು.

"ಇದನ್ನೇ ಮೊದಲು ಸೇವಿಸಿ, ಇತರ ಔಷಧಗಳನ್ನು ಉಪಯೋಗಿಸಿ ನನ್ನ [illegible] ಕರೀರಗಳನ್ನು ಕೆಡಿಸಿಕೊಂಡೆನಲ್ಲಾ [illegible] ಈಗ ನಾನು ವ್ಯಸನಪಡುತ್ತೇನೆ. [illegible] ನನ್ನ ರೋಗ [illegible] ಪೂರ್ಣವಾಗಿ [illegible] ಮಾತ್ರ ಇನ್ನೊಂದು ಔಷಧವೂ ರೋಗವೂ ನನ್ನ [illegible] ಪದಕ್ಕೆ [illegible] ನಾನು [illegible] ಒಂದು ಬಾಟ್ಲಿಯನ್ನು ನನ್ನ ಬಳಿ ಇಟ್ಟುಕೊಂಡೇ ಇರುವೆನು. ನಾನು ಪಟ್ಟಂಥಾ ಕಷ್ಟವನ್ನು ಅನುಭವಿಸುತ್ತಿರುವ ಸ್ತ್ರೀಯರಿಗೆ [illegible] ವನ್ನು ಉಪಯೋಗಿಸಲಿ ದಸಂತೋಷದಿಂದ ಶಿಫಾರಸು ಮಾಡುತ್ತೇನೆ."

ಶ್ವಾಸಕೋಶದ ಶೀತವು

ಮಿಸೆಸ್ ವಿಂ ಹಾಮನ್, [illegible] ಪಾಲಿನಾ ಬೀದಿ ಚಿಕಾಗೊ, ಇಲ್, ಈಕೆ ಬರೆಯುವುದು — "ನನ್ನ ಎದೆ ಅಂದರೆ ಶ್ವಾಸಕೋಶಕ್ಕೆ ಶೀತವು ಉಂಟಾಗಿ ಬಹಳ ಪೀಡಿಸಿದೆನು. ಶ್ವಾಸಕೋಶದ ನಾಳಗಳು ಶೀತದಿಂದ ಕಟ್ಟಿಹೋಗಿದ್ದವು. ಚಿಕ್ಕಂದಿನಿಂದಲೂ ನನಗೆ ಒಂದುತರದ ಕೆಟ್ಟ ಕೆಮ್ಮಲು ರೋಗವಿದ್ದೇ ಇದ್ದಿತು. ಮಗುವಾಗಿದ್ದಾಗ ನನ್ನ ಕೆಮ್ಮಲು ನೋಡಿ ಎಲ್ಲರೂ ನನಗೆ ಉರಕೆಮ್ಮಲೆಂದು, ಗಸೆಯ ಕೆಮ್ಮಲೆಂದೂ ಹೇಳುತ್ತಿದ್ದರು. ನೊಮ್ಮವನಾಗುತ್ತಾ ಬಂದ ಹಾಗೆಲ್ಲಾ ಈ ಕೆಮ್ಮಲು ಬಹಳವಾಗಿ ಹೆಚ್ಚುತ್ತಾ ಬಂದ ನನ್ನನ್ನು ಬಹು ಕಷ್ಟಪಡಿಸಿತು.

"ಕೆಲವು ಕಾಲಾನಂತರ ಈ ಕೆಟ್ಟ ಕೆಮ್ಮಲು ನನ್ನನ್ನು ಶೀತಕಾಲದಲ್ಲೂ ಬೇಸಿಗೆ ಕಾಲದಲ್ಲೂ ಒಂದೇ ಸಮಾನಾಗಿ ಬಾಧೆಪಡಿಸುತ್ತಿದ್ದಿತು. ಕಡೆಗೆ ಕೆಮ್ಮುವುದಕ್ಕಾಗದೆ ನನ್ನ ಶ್ವಾಸಕೋಶದ ಒಂದು ನಾಳವು ಒಡೆದು ರಕ್ತ ಕಾರಿದೆನು. ಇದಾದ ಮೇಲೆ ನನ್ನ ಹೊಟ್ಟೆಯಲ್ಲಿ ಅಂದರೆ ಅನ್ನಕೋಶದಲ್ಲೂ ಒಂದು ರಕ್ತನಾಳವು ಒಡೆದು ದಿನೇ ದಿನೇ ನಾನು ಕ್ಷಯಿಸುತ್ತಲೂ, ಔಷಧ ಸೇವನೆಮಾಡುತ್ತಲೂ ಬಂದೆನು. ಆದರೂ ಯಾವ ಚಿಕಿತ್ಸೆಯಿಂದಲೂ ನನಗೆ ಸ್ವಲ್ಪವೂ ಕಷ್ಟನಿವಾರಣೆಯಾಗಲಿಲ್ಲ. [38-50]

"ನಾನು ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದ ಕೆಮ್ಮೇಸ್ಟರ ಒಂದು ಔಷಧಾಲಯಕ್ಕೆ ಹೋದೆನು. ಅದರಲ್ಲಿದ್ದ ಯಾವ ಔಷಧವನ್ನು ಸೇವಿಸಿದಾಗ್ಯೂ ನನಗೆ ವಾಸಿಯಾಗದೆ ಹೋಯಿತು. ರಾತ್ರಿ ಹೊತ್ತು ನಾನು ಹಾಸಿಗೆಯ ಮೇಲೆ ಅಂಗತಂಗನಾಗಿ ಮಲಗಿಕೊಳ್ಳುವುದೇ ಅಸಾಧ್ಯವಾಯಿತು. ಬೆಳಗಿನ ಝಾಮದ [illegible] ಗಂಟೆಯಾಗುವ ತನಕ ಎದ್ದು ಕುಳಿತುಕೊಂಡೇ ಇರಬೇಕಾಯಿತು. ಕಣ್ಣು ಮುಚ್ಚುವುದೆಂದರೆ ಅಸಾಧ್ಯ. ಇಷ್ಟೆಲ್ಲಾ ಆದ ಮೇಲೆ ನನ್ನನ್ನು ನೋಡಿದವರೆಲ್ಲಾ ನನಗೆ ಕ್ಷಯ ಹಿಡಿಯಿತೆಂದು ಖಂಡಿತವಾಡಿದರು. ನನಗೂ ಅದೇ ಇದ್ದೀತೆಂದು ಗೊತ್ತಾಯಿತು.

"ಪೆರೂನಾವನ್ನು ಕುರಿತು ಬರೆದಿರುವ ಕಾಗದಗಳನ್ನು ಓದುತ್ತಾ ಬಂದದ್ದರಲ್ಲಿ — ಈ ಔಷಧದಿಂದ ನನ್ನ ರೋಗವೇನೋ ವಾಸಿಯಾಗಲಾರದು ಆದರೂ ಅದನ್ನು ಸೇವಿಸಿ ನೋಡೋಣ ಎಂಬ ಯೋಚನೆ ನನ್ನಲ್ಲಿ ಉಂಟಾಯಿತು. ಒಂದಾದ ಮೇಲೆ ಒಂದರಂತೆ ಮೂರು ಬಾಟಲಿಗಳ ಔಷಧವನ್ನು ಸೇವಿಸಿದೆನು. ಆಗ ನನ್ನ ಶರೀರ ಸ್ಥಿತಿಯು ಏನೋ ಒದಲಾವಣೆಯಾದಂತೆ ನನಗೇ ತೋಳೆಯಿತು. ಒಂದು [illegible] ರಟಿ ಹುಟ್ಟಿತು. ಆಹಾರದ ಮೇಲೆ ಇಚ್ಛೆಯುಂಟಾಯಿತು. ಕ್ರಮವಾಗಿ ಔಷಧ ಸೇವನೆಯನ್ನು [illegible] ಬಂದೆನು. ಮನಸ್ಸಿನಲ್ಲಿದ್ದ ಆದ್ವೈರ್ಯವೂ ಸಂಶಯವೂ ನಿವಾರಣೆಯಾದವು. ಈಗ ನಾನು ಧಾರಾಳವಾಗಿ ಅಂಗತ ಗನಾಗಿ ಮಲಗಿ, ರಾತ್ರಿಯೆಲ್ಲಾ ನಿದ್ದೆ ಮಾಡುತ್ತೇನೆ. ಆದ್ದರಿಂದ ಪರೂನಾದ ವಿಷಯದಲ್ಲಿ ನಾನು ಎಷ್ಟು ಮಟ್ಟಿಗೆ ಕೃತಜ್ಞಳಾಗಿದ್ದೇನೆಂದು ನೀವೇ ಊಹಿಸಿಕೊಳ್ಳಬಹುದು."

ಕೃಶವಾಗುವಂಥಾ ಕ್ಷಯರೋಗವು.

ಮಿಸೆಸ್ ಜೆಸ್ಸಿ ಬಿಯಲರ್ [illegible] ದರ್ಶನ್, ಚಿಕಾಗೊ, ಇಲ್, ವೈಸ್-ಪ್ರೆಸಿಡೆಂಟ್, ಇಲಿನಾಯಿಸ್ ಸ್ತ್ರೀಯರ ಸಂಘ, ಈಕೆ ಬರೆಯುವುದು —

"ಹೋದ ವರುಷವೆಲ್ಲಾ ನನಗೆ ಒಂದು ತರಹ ರೋಗ ಹಿಡಿದು ನನ್ನ ಮಾಂಸಖಂಡಗಳೂ ದೇಹಶಕ್ತಿಯೂ ಕ್ಷೀಣ ಕ್ಷಯಿಸುತ್ತಾ ಬಂದವು. ಕಡೆಗೆ ನಾನು ಯಾವ ಕೆಲಸವನ್ನೂ ಮಾಡಲಾರದೆ ಹೋದೆನು. ಆ ರೋಗನಿವಾರಣೆಗೋಸ್ಕರ [illegible] ಔಷಧಗಳನ್ನು ಸೇವಿಸಿದೆನು. ಕಡೆಯಲ್ಲಿ ನನಗೆ ಪೆರೂನಾ ಸೇವಿಸುವಂತೆ ಒಬ್ಬರು ಸೂಚಿಸಿದರು.

"ಇದನ್ನು ಸೇವಿಸುತ್ತಾ ಬಂದಹಾಗೆಲ್ಲಾ ನನ್ನ ಬಳಿ ಬೇಗ ಗುಣವಾಯಿತು. ನನಗೆ ಈ ಧಾತುಪುಷ್ಟಿ ಕೊಟ್ಟುಕೊಂಡಿತು. ನಾನು ಅದನ್ನು ಎಷ್ಟಾಗಿ ಕೊಂಡಾಡಿದರೂ ತೀರದು."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ

ವಿಳಾಸ — ಈ ಔಷಧ ಸಿಕ್ಕುವ ಸ್ಥಳವ್ಯಾವುದೆಂದರೆ:—

ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

29 2—1908 ರಿಂದ 6—3—1908 ರ ವರೆಗೆ

ಸ್ಥಳ	ಪ್ಲೇಗ್ ಆಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ಆಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	19	14	0	1
ಮೈಸೂರು ,,	4	3	0	0
ಬೆಂಗಳೂರು ಡಿಸ್ಟ್ರಿಕ್ಟು	*	*	0	0
ಮೈಸೂರು ,,	42	28	0	0
ಕೋಲಾರ್ ,,	91	74	0	0
ಕೋಲಾರ್ ಚಿನ್ನದ ಗಣಿಗಳು	8	5	0	0
ತುಂಕೂರು ಡಿಸ್ಟ್ರಿಕ್ಟು	*	*	0	0
ಹಾಸನ ,,	1	1	0	0
ಚಿತ್ರದುರ್ಗ ,,	0	0	0	0
ಕಡೂರ್	22	18	0	0
ಶಿವಮೊಗ್ಗಾ	*	1	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	85	43	0	0

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪ್ಲವಂಗನಾಮ ಸಂವತ್ಸರದ ಫಾಲ್ಗುಣ ಬಹುಳ ಪಾಡ್ಯಮಿ ಗುರುವಾರದಿಂದ ಫಾಲ್ಗುಣ ಬಹುಳ ಅಮಾವಾಸ್ಯೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಮಾರ್ಚಿ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಡಿ ಕುಂಭ ಮಾಸ
19	ಗುರು	ಪಾಡ್ಯ	4-20	ಹ	30 40	7
20	ಶುಕ್ರ	ಬಿದಿಗೆ	5 38	ಚಿ	32 38	8
21	[illegible] *	ತದಿಗೆ	5 42	ಸ್ವಾ	32 4	9
22	ರವಿ ,,	ಚೌತಿ	5 15	ವಿ	33 43	10
23	ಚಂದ್ರ	ಪಂಚಮಿ	2 10	ಅನುರಿ	56 14	11
24	ಕುಜ	ಸಪ್ತಮಿ	54 2	ಜ್ಯೇ	51 4	12
25	ಬುಧ ‡	ಅಷ್ಟಮಿ	19 3	ಮೂ	27-17	13

ಮಹಾ ವ್ಯತೀಪಾತ, ಚಲ ವರಾಹ ಜಯಂತಿ, ಸರಕೆಸ್ವರದಲ್ಲಿ ಗಂಗಾ ಸಂಕ್ರಮಸ್ನಾನ ದಶ [illegible] ಅಮೃತಯೋಗ, ಸಂಕಷ್ಟ ಚತುರ್ಥಿ [illegible] ವೇಮಾಯನಾಗತೇ ರವಿ, ಅಮೃತಯೋಗ [illegible] ಚೆಟ್ಟನಲ್ಲಿ ಮಹಾ ಒಳೇಶ್ವರ ರಥ ‡ ತಿಸೇರಸ್ಥ ಕಾ

ಪೇಟೇ ಧಾರಣೆ

ವಿನಸಿ	ಮೈಸೂರು	ಬೆಂಗಳೂರ
ಕಣ್ಣೇ ಅಕ್ಕಿ ಪಲ್ಲಾ ಒಕ್ಕೆ ರೂ	೩ ೦ ೦	೧ ೦ ೦
[illegible]	[illegible]	[illegible]
[illegible]	೧೩ ೬ ೦	[illegible]
ಜೀರಿಗೆ ಅಕ್ಕಿ	[illegible]	[illegible]
ಸಣ್ಣಕ ಬವಲ್	೫ ೯ ೦	೩ ೦ ೦
[illegible]	೫ ೦ ೦	೧೫-೦ ೦
ತೆ [illegible] ಬೇಳೆ	[illegible]	೧೩ ೦
[illegible]	[illegible]	[illegible]
ಹ [illegible]	೬ ೧-೨	೩ ೦
ಕ [illegible]	೭ ೪	೬ ೧-೨
ಜ [illegible]	೯ ೦ ೦	೮ ೦ ೦
[illegible]	೧ ೮	೧೧ ೦ ೦
[illegible]	೮ ೧೪ ೦	೩ ೮ ೦
[illegible]	೧೦ ೯ ೨	೧೦-೮ ೦
[illegible]	೧೪ ೮ ೦	೧೨ ೮ ೦
ಹುರಳಿ	೧೨ ೮ ೦	೧೩ ೦ ೦
ಎಳ್ಳು [illegible]	೨೪ ೮ ೦	೨೫-೦ ೦
ಹುರುಳಿ	೬-೪-೦	೬ ೦ ೦
ಹರಳು [illegible] ಸೇರಿಗೆ	೧-೨-೦-೦	೦-೨ ೪ ೦
ಸೀಗೇಕಾಯಿ ಮಣ ಒಕ್ಕೆ	೧ ೮-೦	೧ ೮ ೦
ಮೆಣಸಿನಕಾಯಿ	೨ ೮ ೦	೩ ೦ ೦
ದುಂಡು	೨-೪ ೦	೨-೮-೦
ಬೆಲ್ಲ ದೊಡ್ಡ ಅಚ್ಚು	೫ ೦-೦	ಮು ೧ ೬-೦
ಒಳ್ಳೆಣ್ಣೆ ಮಣ ಒಕ್ಕೆ	೬-೮-೦	೬-೪-೦
ಹರಳೆಣ್ಣೆ ,,	೪-೧-೨ ೦	೪ ೪ ೦
ಕೊತ್ತುಂಬರಿ ಪಲ್ಲಾ ಒಕ್ಕೆ	೫ ೮-೦	೬ ೬ ೦
ಉಪ್ಪು ,,	೫-೦-೦	೫ ೦ ೦
ದುಣಸೇ ಹಣ್ಣು	೧-೮ ೯	೦ ೦ ೦
ಹಳೇದು	೧-೮	೧ ೪ ೦
ತುಪ್ಪ ಮಣ ಒಕ್ಕೆ	೧೩ ೮ ೦	೧೫ ೦ ೦
ಸೀಮೆಯೆಣ್ಣೆ ಪೆಟ್ಟಿ ಒಕ್ಕೆ	೪-೧೫-೬	೪ ೦ ೦
ತೆಂಗಿನಕಾಯಿ ೧೦೦ ಕ್ಕೆ	೩ ೯ ೦	೩ ೦ ೦
ಅಳಲೇಕಾಯಿ ಮಣ ಒಕ್ಕೆ	೧-೦-೦	೧ ೨ ೦
ಅಂಟ್ವಾಳದ ಕಾಯಿ ಮಣ ಒಕ್ಕೆ	೦ ೧-೨-೦	೦-೧೪-೬
ಚಿನ್ನ (ಪವನ್) ಕೆಂಪು	೧೫-೬-೦	೧೫ ೫ ೦
,, ಪಸಿಮೆ	೧೫-೧೧ ೦	೧೫-೯ ೦
,, ಗಟ್ಟಿ ತೊಲ ಒಕ್ಕೆ	೨೪-೧-೦-೦	೨೪ ೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೭೫-೦-೦	೭೦-೦-೦

Printed and Published by the Rev E W. THOMPSON, M A, Proprietor and Manager, Wesleyan Mission Press, Mysore 19/3/1908

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ | ಮೈಸೂರು—ಸನ್ ೧೯೦೮ ನೇ ಇಸವಿ ಮಾರ್ಚಿ ತಾರೀಖು ೨೬ ನೇ ಗುರುವಾರ. | ಸಂಚಿಕೆ ೪೩.

WILLIAM & CO., BOMBAY.

ಅಪೂರ್ವಲಾಭ · ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

17 3

ತಲೆಸಿಕೊಳ್ಳಿರಿ ತ್ವರೆಗೈಯಿರಿ

ಅಮೃತಾಂಜನ ಸರ್ವಲೋಕರಂಜನ ಸರ್ವ ವ್ಯಾಧಿಭಂಜನ ಚಿಕಿತ್ಸೆಯು ... ಕಾಯದ ... ಯೆಲ್ಲಿ ... ತಿಳಿಯಲ್ಲಿ ... ಕೊಳ್ಳುವವರಲ್ಲಿ ಮಾಡಿರುತ್ತಾರೆ ... ಉಂಡುಬರುವದಿಲ್ಲವಾದರೆ ... ಕೂಡಲೆ ಹಿಂದಕ್ಕೆ ತೆಗೆದುಕೊಳ್ಳಲ್ಪಡುವದು ... ಬಾಟ್ಲಿ ತರಿಸಿಕೊಂಡವರಿಗೆ ಒಂದು ಹರ್ಮೊನಿ ... ಉಚಿತವಾಗಿ ಕೊಡಲ್ಪಡುವದು.

ಸಿದ್ಧೌಷಧಿಯಾಗಿ ಭಾರತವರ್ಷೀಯ ಔಷಧಗಳಿಂದ ತಯಾರಿಸಿದ ಹೊರಉಪಯೋಗಕ್ಕೋಸ್ಕರ ಮುಲಾಮು. ಇದರಿಂದ ತಲೆನೋವು, ಶಿರೋವೇದನೆ, ವಾತ, ಸಂಧಿವಾತ, ಪಕ್ಷವಾತ, ಗಂಟಲು ನೋವು, ಸೊಂಟದನೋವು, ಗಂಟುನೋವು, ಹಿತ, ಚಳುಕು, ಉಳುಕು, ಕೈಕಾಲುಗಳಿಗೆ ಬರುವ ಎಲ್ಲಾ ತರದ ನೋವಿಗೆ ಇದು ಉತ್ತಮ.

ಈ ಕಂಪನಿಯವರು ಕೆಲ್ಸ ಸಮೋಸೆಯ ಔಷಧಿಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ... ವಿಳಾಸಕ್ಕೆ ಬರೆದಲ್ಲಿ ... ರವಾನಿಸಲ್ಪಡುವದು.

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೦—೮ ೧. ಪೋಸ್ಟು ಖರ್ಚು ೦—೪—೦.

ಗಜಕರ್ಣದ ಮುಲಾಮು.

... ಇದರಿಂದ ... ಮತ್ತು ... ಬಿಲ್ಲೆ ಒಂದಕ್ಕೆ ಕಿಮ್ಮತ್ತು ೦—೩—೦ ಪೋಸ್ಟು ಖರ್ಚು ೦—೪—೦.

ದಂತಮಂಜನ—... ಹಲ್ಲುಗಳು ಭದ್ರವಾಗುತ್ತವೆ ... ಹಲ್ಲುಗಳು ಬೆಳ್ಳಗಾಗುತ್ತವೆ ... ಒಂದಕ್ಕೆ ೦—೨—೦ ಪೋಸ್ಟು ಖರ್ಚು ೦—೪—೦

ವಜ್ರಗುಟಿಕೆ—... ಸ್ವರೋತ್ಪತ್ತಿಯು ಆಗುವದು ... ರಕ್ತ ಶುದ್ಧಿಯಾಗಿ ದೇಹ ... ಬಾಟ್ಲಿ ಒಂದಕ್ಕೆ ೦—೧—೦ ಪೋಸ್ಟು ಖರ್ಚು ೦—೪—೦.

ಕೇಶವರ್ಧಿನಿ—... ಕೂದಲುಗಳನ್ನು ... ಬಾಟ್ಲಿ ಒಂದಕ್ಕೆ ೦—೦—೦. ಪೋಸ್ಟು ಖರ್ಚು ೦—೪—೦

ವಿಳಾಸ:—ವಿಲಿಯಂ ಮತ್ತು ಕಂಪೆನಿ, ೧೯೬ ಟಿಕ್ ಲೇನ್, ಗಿರ್ಗಾಂವ್, ಮುಂಬಯಿ.

ಟೆಲಿಗ್ರಾಫು ಅಡ್ರೆಸು—'ಅಮೃತಾಂಜನ,' ಮುಂಬಯಿ.

ಕಾರ್ಡು ಸೈಜು ೩½ × ೪½.

ಫೋಟೋ ತೆಗೆಯುವ

ಫೂ ಪಾ ಕ್ಯಾ ಮೆ ರಾ.

84 32

ಬೆಲೆ ಪಕ್ಕ ಮೂರು ರೂಪಾಯಿ

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿಕೊಡುವೆವು. ಎಲ್ಲೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಕಿರಿ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲು ಖರ್ಚು ೯ ಆಣೆ

ಇದು ಸಿಕ್ಕತಕ್ಕ ವಿಳಾಸ.

ಛೋಟಾಲಾಲ ಭಗವಾನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟು ಕಾಲಬಾದೇವಿ, ಮುಂಬಯಿ

ಜ್ವ ರ ಹ ರಿ 18-8

ಇದು ಸಾಧಾರಣ ಜ್ವರ, ಚಳಿಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟು ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕಳುಹಿ ದಿನಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇದು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಜ್ವರರೋಗ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಯಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಾರ್ಸಲ್ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ರೂ; ೦—೮ ರೂ., ರೂ ೨—೧—೦ ಆ., ೧೦ ರೂ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಪಿ ಮ ಂ ಕ ರ್ಪೂ ರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಬಳಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪೆಪ್ಪರಮಿಂಟ್ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ. ಹೊಟ್ಟೆ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ವಾರ್ತೆಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ.—

ಅಮೃತಾಂಜನ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

ಮೌಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

16-6

೧ ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ... ಕಸ್ತೂರಿ ... ಉತ್ತಮ ... ತಯಾರಿಸಿದೆ.



ಚಳಿಜ್ವರ, ಜ್ವರ, ಕಾಲರಾ ... ಸಂಧುಗಳ ನೋವು, ... ನಿಶ್ಶಕ್ತಿ, ಅಜೀರ್ಣ, ಅಗ್ನಿಮಾಂದ್ಯ, ಕೆಮ್ಮು, ದಮ್ಮು, ಕೆಮ್ಮುಲ, ನೆಗಡಿ, ... ಮುಂತಾದ ... ರೋಗಗಳನ್ನು ... ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ... ಉಪಯೋಗಿಸುತ್ತಿದ್ದರೆ ... ಹೊಸ ... ಆರೋಗ್ಯ ... ಯಾವ ಬಾಧೆಯೂ ... ನೀರು ... ಸರಿಪಡಿಸಿ, ರಕ್ತದಲ್ಲಿ ದೋಷವನ್ನು ... ಶಕ್ತಿಯನ್ನು ... ಸ್ತ್ರೀಯರ ಋತುಕಾಲ, ... ಮುಂತಾದ ... ಗಳನ್ನು ... ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ... ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನರಹಿತ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಡಬ್ಬಿಗೆ ೪ ಆಣೆ; ೪ ಡಬ್ಬಿಗೆ ೧ ಡಬ್ಬಿ ಸಹ. ೧ ರಿಂದ ೧೦ ಡಬ್ಬಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಮೌಳ್ಯದ ವೆಂಕಟಾಚಲ ಪಂಡಿತ,
ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು.

ರಬ್ಬರ್ ಹ್ಯಾಂಡ್ ಪ್ರೆಸ್.

114 24

ಕಲಾಕೌಶಲ್ಯದಿಂದ ... ಉದ್ಯೋಗದಿಂದ ಊರ್ಜಿತಸ್ಥಿತಿಗೆ ಬಂದಿರುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಇದಕ್ಕೆ ೭೫ ರಿಂದ ೧೦೦ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು, ಉರ್ದು, ಪರ್ಷಿಯನ್, ಅರಬಿಕ್, ಇಂಗ್ಲಿಷ್ ಮತ್ತು ಬೇಕಾದ ಭಾಷೆಯಲ್ಲಿ ಬಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು. ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರು, ವಕೀಲರು, ವರ್ತಕರು, ಜಮೀನ್ದಾರರು ಮತ್ತು ಪರೀಕ್ಷಕರು ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು. ಎಷ್ಟೋ ಕಾರಕೂನರ ಸಹಾಯದಿಂದ ಬಹು ಕೆಲಸಕ್ಕೆ ಬೇಕಾಗಿರುವ ಹಿಡಿಯುವದು ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ದೆಸೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು. ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ.

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.

ಹಾಫ್ ಫುಲ್ಸ್ಕ್ಯಾಫ್ ಸೈಜು, ೬—೦—೦.

ಪೋಸ್ಟೇಜು ಬೇರೆ (extra)

ವಿಳಾಸ:— ವರ್ಧಮಾನ ಏಜನ್ಸಿ,
ಪೋಸ್ಟು ಕಾಲಬಾದೇವಿ,
ಮುಂಬಯಿ.

"ಸರ್ವಜನೋಪಕಾರಿಣಿ."

23-4

ಈ ಮಾಸಪತ್ರಿಕೆಯಲ್ಲಿ ಸರ್ವರಿಗೂ ಉಪಯುಕ್ತವಾದ ಅನೇಕ ವಿಷಯಗಳು ಬರೆಯಲ್ಪಡುತ್ತವೆ. ಉಪೇಕ್ಷಿಸತಕ್ಕ ಪತ್ರಿಕೆಯಲ್ಲ. ತರಿಸಿ ನೋಡಿ. ಚಂದ ವರ್ಷಕ್ಕೆ ಅಂಚೆ ಹಾಸಲ್ ಸೇರಿ ೧೨ ಆಣೆ ವಿಳಾಸ—
"ಸರ್ವಜನೋಪಕಾರಿಣಿ" ಆಫೀಸ್, ದೊಡ್ಡಪೇಟೆ, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-18

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಚಿಕರಿಯಾಗುತ್ತಿರುವ ಟೋಪಿಗಳ ಹಾರವೆಲ್ಲಾ ಟೀಳಾದವು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಹಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಹಸಿರು, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ. ೧ ರೂ. ೬ ಆ., ೧ ರೂ. ೪ ಆ.

ರೇಷ್ಮೆ ಬುಟ್ಟೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.

ಹಾರದ ಟೋಪಿಗಳು ೧ ರೂ. ೧೨ ಆ., ೧ ರೂ. ೮ ಆ.; ೧ ರೂ. ೬ ಆ.

ಉಣ್ಣೆಯ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕಂಗಸುಗಳ ಟೋಪಿ, ಸೂಫಿ ಮೇಲೋದು, ಅರ್ಧ ಮೇಲೋದು ಕತ್ತರಿಸಿ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿಕೊಂಡವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಸುಗಂಧಸಂಜೀವನೀ

ಭೃಂಗಾಮಲಕ ತೈಲವು.

5-8

ಈ ತೈಲವನ್ನು ತಲೆಗೂ, ಮೈಗೂ ಸಹ ಲೇಪಿಸಿ ಅಭ್ಯಂಗಸ್ನಾನ ಮಾಡುವದರಿಂದ ತಲೆಯಲ್ಲಿ ಸುವಾಸನೆ, ಕೂದಲು ಮೃದುವಾಗುವದು, ನೇತ್ರದೃಷ್ಟಿ ವೃದ್ಧಿಯಾಗುವದು. ತಲೇನೋವು, ಅರ್ಧತಲೆನೋವು, ತಲೆಸುತ್ತುವದು, ತಲೆಶೂಲೆ, ತಲೆಭಾರ, ಮೊಂಡಾದ್ದು ನಿವಾರಣೆಯಾಗುತ್ತದೆ.

ಕಣ್ಣೀರು ಸುರಿಯುವದು, ಕಣ್ಣುರಿ, ಕಣ್ಣುನೋವು ಮುಂತಾದವುಗಳಿಗೆ ಅತ್ಯಂತ ಗುಣಕಾರಿ. ಮೂಗಿನಿಂದ ರಕ್ತಸ್ರಾವ, ಮೂಗು ಒಣಗುವದು ಇವುಗಳನ್ನೆಲ್ಲಾ ಪರಿಹಾರ ಮಾಡುತ್ತೆ. ಮೈಕೈಯುರಿ ಮತ್ತು ಉರಿ ಮುಂತಾದ್ದು ನಿರ್ನಾಮವಾಗುತ್ತದೆ. ಉಷ್ಣಾಧಿಕ್ಯದಿಂದ ಅಂಗೈ ಅಂಗಾಲಿನ ಉರಿ, ನಿದ್ರೆಬಾರದೆ ಇರುವದು ಇವೇ ಮೊದಲಾದ ವ್ಯಾಧಿಗಳನ್ನು ಗುಣಮಾಡುತ್ತದೆ. ಮೆದುಳಿಗೆ ತಂಪುಮಾಡಿ ಸ್ಮರಣಶಕ್ತಿ ಹೆಚ್ಚಿಸುವದು, ವಿದ್ಯಾರ್ಥಿಗಳಿಗೂ, ವಿಶೇಷ ಯೋಚನೆಯಿಂದ ಕೆಲಸಮಾಡತಕ್ಕವರಿಗೂ ಅತ್ಯಂತ ಉಪಯುಕ್ತವಾದದ್ದು. ಕ್ರಯ ಶೀಷೆ ೧ ಕ್ಕೆ ೮ ಆಣೆ; ಅಂಚೆ ಹಾಸಲು ೯ ಆಣೆ.

ರಕ್ತಶೋಧಕ ತೈಲವು.

ಅನೇಕ ಅಸಾಮಿಗಳಿಂದ ಯೋಗ್ಯತಾ ಪತ್ರ ಹೊಂದಿದೆ. ಕ್ರಯ ಸುಲಭ ಶೀಘ್ರಗುಣಕಾರಿ ತುರಿ, ಹುಳಕಾಲು, ಒಣಬೊಬ್ಬೆ, ನವೆಬೊಬ್ಬೆ, ಆನೆಬೊಬ್ಬೆ, ಎಂಥಾ ಹುಳು ಬಿದ್ದಿದ್ದ ಹಳೆ ವ್ರಣವೇ ಆಗಲಿ, **ಪುರಾತನ ವಿಷಜ್ವರ**, ಇತ್ಯಾದಿ ಮಹಾ ಕಠಿಣ ರೋಗಗಳೆಲ್ಲಾ ತೀವ್ರ ಆರೋಗ್ಯವಾಗುವದು. ಈ ತೈಲವನ್ನು ಲೇಪಿಸಿದರೆ ಉರಿಯುವದಿಲ್ಲ. ರಸ, ಗಂಧಕ, ಮೈಲಮುತ್ತು ಮುಂತಾದದ್ದು ಖಂಡಿತವಾಗಿ ಇದರಲ್ಲಿ ಸೇರಿಸಿಲ್ಲ. ಮತ್ತು ಮಕ್ಕಳ ಕಂಪಾನ, ಇತ್ಯಾದಿ ಚಾಪ್ಯಗಳನ್ನೆಲ್ಲಾ ಬಹು ಬೇಗ ತಪ್ಪದೆ ಆರೋಗ್ಯಮಾಡುತ್ತದೆ. ಕ್ರಯ, ಶೀಷೆ ೧ ಕ್ಕೆ ೧೨ ಆಣೆ. ಅಂಚೆ ಹಾಸಲು ೪ ಆಣೆ.

ಮೇಲ್ಕಂಡ ಎರಡು ಔಷಧಗಳೂ ದೊರೆಯುವ ಸ್ಥಳ:—

☞ ಬಿ ಆರ್. ಗೋವಿಂದರಾಜುಲು,

೧೯೮, ಅರಳೇಪೇಟೆ, ಬೆಂಗಳೂರು ಸಿಟಿ.

CHAMBERLAIN'S COUGH REMEDY.

ಚೇಂಬರ್ಲೇನರವರು ಕಂಡು ಹಿಡಿದ ಕೆಮ್ಮಿನ ಔಷಧವು.



1-13

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು, ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಖಾಸಪ್ರಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು, ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೋಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎಷ್ಟೇ ಬಹಳಗಾದಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿಲ್ಲವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು   ಸಣ್ಣಶೀಸೆಗೆ ೧ ರೂಪಾಯಿ.   ದೊಡ್ಡಶೀಸೆಗೆ ೨ ರೂಪಾಯಿ.

ವ್ಯವಹಾರ ನಿರ್ಣಯ.

4-13

ಪುಟಗಳು ೫೬೬. ಕ್ರಯ ಪಿ. ಪಿ ಸೇರಿ ೧—೧೨—೦. ಈ ಕನ್ನಡದ ಲಾ ಪುಸ್ತಕವನ್ನು ಅಪೇಕ್ಷಿಸುವವರು "ಎಂ ಮಲ್ಲಾರಾಧ್ಯರು, ಪ್ಲೀಡರ್, ಮೈಸೂರು" ಎಂಬೀ ವಿಳಾಸಕ್ಕೆ ಬರೆದುಕೊಳ್ಳುವುದು. ವಿಷಯಗಳನ್ನು ಮೊದಲೇ ತಿಳಿಯಬಪೇಕ್ಷಿಸುವವರಿಗೆ ವಿಷಯಸೂಚಿತ ಪತ್ರವು ರವಾನಿಸಲ್ಪಡುತ್ತದೆ.

ಮಹಾ ಬಾಧಾಪಹಾರಿಣಿಯು.

58-44

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಯಕ್ಷಿಣೀ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು ವರ್ತಕರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಾರೆ ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಕಳಿತ, ಗಂಟಲನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಉಳುಕಿದ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಣಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿದ್ದಾರೆ

ಕ್ರಯ ಶೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಫ್. ಡಬ್ಲ್ಯು. ಆರ್ಚ,

ಸಿಮೆಟ್ರಿರೋಡ್, ವೇಪೇರಿ, ಮದರಾಸ್.

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವುದು ಉತ್ತಮ

SCOTT'S EMULSION. 31-51

(ಸ್ಕಾಟ್ಸ್ ಇಮಲ್ಷನ್)

ಘಟ್ಟ ಶರೀರವುಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ವ್ಯಾಪಕವಾದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ.

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಗೊಳಿಸಿ, ಸಂಪೂರ್ಣ ಸ್ವಾಸ್ಥ್ಯವನ್ನು ಉಂಟುಮಾಡುತ್ತದೆ.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಲ್ಪಡುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಶಾಲೆ

ಲಂಡನ್, ಇಂಗ್ಲೆಂಡ್.

ಈ ಮಿನುಗುವಮನುಷ್ಯ ಇರುವ ಔಷಧ ವನ್ನೇ ಕೊಂಡುಕೊಳ್ಳಿ

ಇಲ್ಲಿ ನೋಡಿ.

3-18

ತುಮಕೂರು ಪೇಟೆ ಇಲಾಖೆಯಲ್ಲಿ ಯೂರೋಪಿಯನ್ ಮೇಸ್ತ್ರಿಯಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ಹಾರದಿಂದ ತಯಾರಾಗುತ್ತವೆ

ಕ್ರಯ —೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯವರಿಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಕೇಳಿದ ಪ್ರಕಾರ ಡಿಸ್‌ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮೇನೇಜರ್.

ಹಾಸನದ ಟೋಪಿ ಕಾರ್ಖಾನೆ, ಪೇಟೆ ಇಲಾಖೆ, ತುಮಕೂರು.

ಈಗಲೇ ಶೀಮೆಯಿಂದ ಬಂದಿದೆ.

117-22

೫,೦೦೦ ಹಾಸನ ಟೋಪಿ ಹೆಣೆಯುವ ಸುಪೀರಿಯರ್ ಉಲ್ ಹಾರಗಳು. ಬಣ್ಣಗಳು—ನಾನಾ ತರಹ—ಬಾರಿ, ಕಮ್ಮಿ ಕ್ರಯ

೧ ಟೋಪಿಯಷ್ಟು ಉಲ್ ಹಾರಕ್ಕೆ	೦—೪—೦
೧೦ ಟೋಪಿಯಷ್ಟು ಬಂಡಲ್‌ಗೆ ೧ ಕ್ಕೆ	೩—೪—೦
ಹೊಕ್ಕು ಸೂಜಿ ೧ ಕ್ಕೆ	೦—೧—೬
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೦
ವಿಳಾಸ ಕಾಣೆಯಲ್ಲಿ ಬರೆಯುವ ಪೋಸ್ಟ್ ಕಾರ್ಡ್ ೧೦೦ ಕ್ಕೆ ೪ ಆ.	
ನಂಬ್ರ ೧ನೇ ಹಾಸನ ಟೋಪಿ ಡಜನ್ ೧ಕ್ಕೆ	೧೩—೨—೦

ವಿಳಾಸ.—

ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ, ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ [illegible] ಪ್ರತಿಗೆ ವರುಷಕ್ಕೆ [illegible] ರೂ.

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಅಂಚೆ ಹಾಸಲ್

ಸೇರಿ . . . . ರೂ ೦—೧೪—೦

" " " " ,, ೦—೧೪—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಳುಹುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಕಾಣಿಸಿರುವಂಥಾ ರಿಜಿಸ್ಟರ್ ನ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ರೂ. ೨. ೪. ೬. ಶಾಲುಗಳು! ಬುರ್ನೀಸ್‌ಗಳು!!

123-18

ಸರ್ವರ ಮೈ ಮೇಲೆ ಹೊದಿಯಲು ಬಹಳ ನಾಜೂಕಾದ ಹೂವಿನಂತೆ ಮೆತ್ತಗಿದ್ದರೂ ಬೇಕಾದಷ್ಟು ಸುಖವನ್ನೂ ಶಾಖವನ್ನೂ ಕೊಡುವ ಸ್ವದೇಶಿ ಉಣ್ಣೆಯ ಶಾಲು ೩ ಮೊಳದುದ್ದ, ೩ ಮೊಳದಗಲ ತೇಲಿ, ಕೆಂಪು, ಹಸಿರು, ಗುಲಾಬಿ ಬಣ್ಣದ್ದು ರೂ. ೩ ೨ನೆಯ ತರಹ ರೂ ೫ ಶೇರಿ ಬಣ್ಣದ ಹತ್ತಿ ಮಿಶ್ರ ರೂ. ೨ ಬ್ಲಾಂಕೆಟ್ಟು ಬೇಸಿಗೆಗೂ ಛಳಿಗೂ ತಕ್ಕ ದಪ್ಪದ ಬುರ್ನೀಸ್ ಹತ್ತಿ ಮಿಶ್ರ ರೂ. ೨ ಹೊಸ ಸೊಗಸಾದ ನಮೂನೆ ರೂ. ೩ ಶುದ್ಧ ಹರ್ಕ ಉಣ್ಣೆಯದು ರೂ ೬ ಚಿಕ್ಕದ್ದು ರೂ ೪.

ಪುದುಚ್ಚೇರಿ ರೇಷ್ಮೆ ವಸ್ತ್ರಗಳು. ರೂ. ೪ !!

ಗಟ್ಟಿ ಕೆಂಪು ಬಣ್ಣದ ರೇಷ್ಮೆ ವಸ್ತ್ರ ಅಂಚು ಕೊನೆಗಳಲ್ಲಿ ಬಿಳಿಯ ರೇಷ್ಮೆಯಲ್ಲಿ ಬಹು ಅಂದವಾದ ಹೂಗಳುಳ್ಳದ್ದು ಎಷ್ಟು ವರ್ಷ ಉಪಯೋಗಿಸಿದರೂ ಸೊಗಸಾಗಿ ಪ್ರಕಾಶಿಸುತ್ತೆ. ೭ ಮೊಳದಗಲ. ಬಹು ಸುಲಭ ಕ್ರಯ. ೩ ಮೊಳದುದ್ದ ರೂ. ೪ ೭ ಮೊಳದುದ್ದ ರೂ ೫ ೫ ಮೊಳದುದ್ದ ರೂ ೬ ಹತ್ತಿಯ ೩೧ ಮೊಳದುದ್ದ ರೂ. ೧' ಚೇಂಬರ್ಲೇನ್ನರ ಕೆಮ್ಮು, ಶೀತಭೇದಿ, ನೋವುಗಳ ಔಷಧಿಗಳು ಶೀಸೆ ೧ಕ್ಕೆ ರೂ ೧ ಮರುಲಾ ೫ ಔನ್ಸು ಶೀಸೆಗೆ ರೂ ೨. ಕ್ಲೆಮೆಂಟ್ಸರ ಮಹಾಬಾಧಾಪಹಾರಿಣಿ ಯಕ್ಷಿಣೀಲೇಪನ ೧೨ ಆಣೆ.

ವಿಳಾಸ:—ರಾವ್ ಎಂಪೋರಿಯಂ, ಸೈಡನ್‌ಹಾಂ ರೋಡ್,

ವೇಪೇರಿ, ಮದರಾಸ್.

ವೃತ್ತಾಂತ ಪತ್ರಿಕೆ.

—:o:—

ಸಕ ೧೯೦೮ ನೇ ಇಸವಿ ಮಾರ್ಚಿ ತಾ|| ೨೬ ನೇ ಗುರುವಾರ

ಅಪರಾಧಿಗಳನ್ನು ಬಹಿರಂಗದಲ್ಲಿ ಗಲ್ಲಿಗೆ ಹಾಕಬೇಕೇ ?

ಬೆಂಗಳೂರು ದಂಡಿನಲ್ಲಿ ಬಹು ಕ್ರೂರವಾದ ಕೊಲೆಗಳನ್ನು ನಡಿಸಿರುವಂಥಾ ಅಪರಾಧಿಗಳನ್ನು ಆಯಾ ಸ್ಥಳಗಳಲ್ಲಿ ಬಹಿರಂಗವಾಗಿ ಗಲ್ಲಿಗೆ ಹಾಕಿಸಬೇಕೆಂದು ಅನೇಕ ಪ್ರಜೆಗಳು ಅರ್ಜಿ ಬರೆದು ರುಜುಗಳನ್ನು ಹಾಕಿ ಬ್ರಿಟಿಷ್ ರೆಸಿಡೆಂಟರಿಗೂ ಮೈಸೂರು ಗವರ್ನಮೆಂಟಿನವರಿಗೂ ಒಪ್ಪಿಸಿ ಕೇಳಿಕೊಂಡಿದಾರೆಂದು ಪ್ರಕಟವಾಗಿದೆಯಷ್ಟೆ. ಈ ಅಪರಾಧಿಗಳು ನಡಿಸಿರುವ ಕೊಲೆಗಳು ಮಹಾ ಘೋರವಾದವುಗಳೆಂದೂ ಅತ್ಯಂತ ಹೇಯವಾದವುಗಳೆಂದೂ ಎಷ್ಟು ಹೇಳಿದರೂ ತೀರದು. ಅಂಥವರಿಗೆ ಕಾನೂನಿನಲ್ಲಿ ವಿವರಿಸುವ ಅತ್ಯಂತ ಕಠಿಣವಾದ ಶಿಕ್ಷೆಯನ್ನು ಖಂಡಿತವಾಗಿ ವಿಧಿಸಲೇಬೇಕು ; ಅದಕಾರಣ ಈ ಘೋರವಾದ ಕೊಲೆಗಳನ್ನು ನಡಿಸುವುದರಲ್ಲಿ ಉದ್ಯುಕ್ತರಾಗಿದ್ದವರನ್ನೂ ಅವರಿಗೆ ಎಳ್ಳಷ್ಟಾದರೂ ಸಹಾಯಮಾಡಿದವರನ್ನು ಕಂಡುಹಿಡಿದು, ಅವರಿಗೆಲ್ಲಾ ತಕ್ಕಹಾಗೆ ಶಿಕ್ಷೆ ವಿಧಿಸುವ ತನಕ ಸರ್ಕಾರದವರು ಸುಮ್ಮನಿರಲಾರರೆಂತಲೂ, ಪ್ರಜೆಗಳು ಈ ಭಾಗದಲ್ಲಿ ಸರ್ಕಾರದವರಿಗೆ ಬೆಂಬಲವಾಗಿ ನಿಂತು ಸಹಾಯಮಾಡುವರೆಂತಲೂ ಎಲ್ಲರೂ ನಿರೀಕ್ಷಿಸಿಕೊಂಡಿದಾರೆ.

ಅಪರಾಧಿಗಳನ್ನು ಕೋಟೆ ಸ್ಥಳಗಳಲ್ಲಿ ಎಲ್ಲರ ಎದುರಿಗೂ ನಿಲ್ಲಿಸಿ ಗಲ್ಲಿಗೆ ಹಾಕುವುದು ಸಹಜವಾದ ಕಾರ್ಯವೇ ? ಅಲ್ಲವಾದರೆ, ಯಾಕೆ ಕೂಡದು ” ಎಂಬೀ ವಿಚಾರವನು ಕುರಿತು ಸ್ವಲ್ಪ ಪ್ರಸ್ತಾಪಮಾಡುವೆವು. ಬಹಿರಂಗವಾಗಿ ಗಲ್ಲಿಗೆ ಹಾಕಬೇಕೆಂಬ ಸಲಹೆಯನ್ನು ಬ್ರಿಟಿಷ್ ಗವರ್ನಮೆಂಟಿನವರು ನಿಮಿಷಮಾತ್ರವಾದರೂ ತಮ್ಮ ಆಲೋಚನೆಗೆ ತಂದುಕೊಳ್ಳಲಾರರೆಂದು ಹೇಳಬಲ್ಲೆವು. ಆ ರೀತಿ ಆಗಬೇಕೆಂದು ಪ್ರಜೆಗಳು ಪ್ರಾರ್ಥಿಸಿಕೊಂಡಪಕ್ಷದಲ್ಲಿ, ಅವರು ಅದನ್ನು ತಿರಸ್ಕರಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ.

ಅನೇಕ ವರುಷಗಳ ಕೆಳಗೆ ವಿಲಾಯತಿಯಲ್ಲಿ ಬಹಿರಂಗವಾಗಿಯೇ ಜನರನ್ನು ಗಲ್ಲಿಗೆ ಹಾಕುತ್ತಿದ್ದರು ಇಲ್ಲವೇ ಶಿರಚ್ಛೇದನಮಾಡುತ್ತಿದ್ದರು. ಇಲ್ಲಿಯೂ ಅಂದರೆ ಹಿಂದುಸ್ಥಾನದೊಳಗೂ ಇಂಗ್ಲಿಷ್ ಗವರ್ನಮೆಂಟು ಸ್ಥಾಪನೆಯಾಗುವುದಕ್ಕೆ ಮೊದಲು ಆ ಪದ್ಧತಿಯೇ ರೂಢಿಯಲ್ಲಿದ್ದಿತು. ಚೀನಾ ಚಕ್ರಾಧಿಪತ್ಯದಲ್ಲಾದರೋ ಈಗಲೂ ಬಹಿರಂಗವಾಗಿಯೇ ಅಪರಾಧಿಗಳನ್ನು ಮಹಾ ಕ್ರೂರವಾದ ರೀತಿಯಲ್ಲಿ ಕೊಲ್ಲುತ್ತಾರೆ. ಹಾಗಾದರೆ ಇಂಗ್ಲಿಷರೇ ಮೊದಲಾದ ನಾಗರಿಕ ಜನಾಂಗದವರು ಆ ಪದ್ಧತಿಯನ್ನು ಯಾತಕ್ಕಾಗಿ ನಿರಾಕರಿಸಿಬಿಟ್ಟರು ? ಅವರು ಅಪರಾಧಿಗಳನ್ನು ಈಗ ಜೈಲ್‌ಖಾನೆಗಳೊಳಗೆ ಅಂತರಂಗದಲ್ಲಿ ಅಧಿಕಾರಿಗಳ ಸಮಕ್ಷಮ ಗಲ್ಲಿಗೆ ಹಾಕುವರು. ಇದಕ್ಕೆ ಕಾರಣವೇನೆಂದರೆ—ಅಪರಾಧಿಗಳನ್ನು ಬಹಿರಂಗವಾಗಿ ಕೊಲ್ಲುವುದಾಗಲಿ ಗಲ್ಲಿಗೆ ಹಾಕುವುದಾಗಲಿ ನೋಡುವುದರಿಂದ ಜನರ ಮನಸ್ಸು ಕಟ್ಟುಹೋಗಲು ಕಾರಣವಾಗುವುದು ; ಹಾಗೆ ನೋಡುವುದರಲ್ಲಿ ಜನರಿಗೆ ಬೇಸರವಾಗಲಾರದು. ಒಂದು ವೇಳೆ ಕೆಲವರಲ್ಲಿ ಭೀತಿಯುಂಟಾಗಬಹುದು. ಆದರೆ ಅನೇಕರು ಕೊಲೆಗಳನ್ನು ನೋಡುವುದರಿಂದ ಏವಕರಗುವುದಕ್ಕೆ ಪ್ರತಿಯಾಗಿ ಕಲ್ಲಾಗುವುದು. ಅದರಿಂದ ಜನರು ಕಠಿಣಹೃದಯರಾಗಿಯೂ, ನಿಷ್ಕರುಣಿಗಳಾಗಿಯೂ, ಹಿಂಸಾ ಪ್ರಿಯರಾಗಿಯೂ ಆಗುವರೆನ್ನುವುದಕ್ಕೆ ಸಂಶಯವಿಲ್ಲ.

ಒಬ್ಬನು ಹಿಂಸೆಯನ್ನು ಅನುಭವಿಸುತ್ತಿರುವಾಗ ಇನ್ನೊಬ್ಬನು ನಿಂತುನೋಡುವುದು ಅವನಿಗೆ ಒಳ್ಳೆಯದಲ್ಲ. ಬಹಿರಂಗವಾಗಿ ಕೊಲೆಗಳು ನಡೆಯುತ್ತಿದ್ದಾಗಲೂ ಯೋಗ್ಯರಾದ ಸಜ್ಜನರು ಯಾರೂ ನೋಡುವುದಕ್ಕೆ ಹೋಗುತ್ತಿರಲಿಲ್ಲ. ಸಾಮಾನ್ಯಜನರು ಮಾತ್ರ ತಮಾಷೆಯಾದ ಆಟವೇ ಮೊದಲಾದ ವಿನೋದಗಳನ್ನು ನೋಡುವುದಕ್ಕೆ ಹೋಗುವಂತೆ ಹೋಗಿ ನಿಂತು ಮನುಷ್ಯನ ಕೊಲೆಯನ್ನು ನೋಡುತ್ತಿದ್ದರು. ಇದರಿಂದ ಅಂಥಾ ಕಡೆಗಳಲ್ಲಿ ದುಷ್ಕೃತ್ಯಗಳು ಕಡಮೆಯಾಗುವುದಕ್ಕೆ ಪ್ರತಿಯಾಗಿ ಜನರು ನಿಷ್ಕರುಣಿಗಳಾದರು, ಕ್ರೂರಿಗಳಾದರು, ಅವರ ಮಧ್ಯೆ ಕ್ರೂರಕೃತ್ಯಗಳು ಹೆಚ್ಚಿದವು.

ಕಷ್ಟಪಡುವವರನ್ನೂ ಹಿಂಸೆಗೆ ಗುರಿಯಾದವರನ್ನೂ ನೋಡಿದರೆ ಮನಸ್ಸು ಕರಗುವುದೂ, ಕರುಣೆಯನ್ನು ತೋರಿಸಬೇಕೆನ್ನುವುದೂ ಜನರಲ್ಲಿ ಇನ್ನೂ ಬಹಳಮಟ್ಟಿಗೆ ಕಡಮೆಯಾಗಿರುತ್ತದೆ. ದಾರಿಯಲ್ಲಿ ನರಳುತ್ತಾ ಬಿದ್ದಿರುವವನನ್ನು ನೋಡಿದರೂ ನೋಡದಹಾಗೆಯೇ ಹೋಗುವುದು ಅಪರೂಪವಲ್ಲ. ಇಂಥಾದ್ದರಲ್ಲಿ, “ನಿನಗೇನಪ್ಪಾ, ಯಾಕೆ ಸಂಕಟಪಡುತ್ತೀ, ಏನಾಗಬೇಕು ” ಎಂದು ಕೇಳುವುದಾಗಲಿ, ಕನಿಕರಪಟ್ಟು ಸಹಾಯಮಾಡುವುದಾಗಲಿ ಇನ್ನೂ ಅಪರೂಪವೇ ಆಗಿದೆ. ಗಾಯಪಟ್ಟವರನ್ನೂ ರೋಗಿಗಳನ್ನೂ ಹೊತ್ತುಕೊಂಡು ಹೋಗತಕ್ಕವರನ್ನು ನೋಡಿದರೆ ಮೂಟೆಗಳನ್ನು ಹೊರತಕ್ಕವರಂತೆ ಕಾಣುವರೇ ಹೊರತು ಅವರಲ್ಲಿ ನಯವಾಗಲಿ ನಾಜೂಕಾಗಲಿ ಕನಿಕರವಾಗಲಿ ಕಾಣುವುದಿಲ್ಲ. ಅವರ ಒರಟಾಟವೂ ನಿಶ್ಚಿಂತೆಯೂ ರೋಗಿಯ ಮತ್ತು ಗಾಯಪಟ್ಟವನ ಬಾಧೆಯನ್ನು ಹೆಚ್ಚು ಮಾಡುವುದು. ಪರರ ಬಾಧೆ ವ್ಯಥೆಗಳನ್ನು ಬೇಗನೆ ಅರಿತು, ಅವುಗಳ ನಿವಾರಣೆಗೆ ಕೈಲಾದದ್ದನ್ನೆಲ್ಲಾ ಮಾಡತಕ್ಕ ಸ್ವಭಾವವುಳ್ಳವನೇ ಸತ್ಪ್ರಜೆ ಎನಿಸಿಕೊಳ್ಳುವನು.

ಹಿಂದುಸ್ಥಾನದ ಎಲ್ಲಾ ಕೋಮುಗಳ ಪ್ರಜೆಗಳೂ ಇನ್ನೂ ಕರುಣೆವಂತರಾಗಿಯೂ ದಯಾಪರರಾಗಿಯೂ ಆಗಬೇಕೆಂದು ಕುತೂಹಲಪಡುತ್ತೇವಾದ್ದರಿಂದ ಬಹಿರಂಗವಾಗಿ ಅಪರಾಧಿಗಳನ್ನು ಗಲ್ಲಿಗೆ ಹಾಕುವುದು ಯೋಗ್ಯವಲ್ಲವೆಂದು ಸೂಚಿಸುತ್ತೇವೆ. ಅದರಿಂದ ಜನರು ಹೆಚ್ಚು ಹೆಚ್ಚಾಗಿ ಕಠಿಣಹೃದಯರಾಗುತ್ತಾರೆ. ಅಪರಾಧಿಗಳನ್ನು ಗಲ್ಲಿಗೆ ಹಾಕಬೇಕಾದ ಪಕ್ಷದಲ್ಲಿ ಅಧಿಕಾರಿಗಳು ನಿಂತು ಧರ್ಮವಾಗಿಯೂ ಗಲಭೆಗೆ ಅವಕಾಶವಿಲ್ಲದೆಯೂ ಶಾಂತವಾಗಿಯೂ ಗಲ್ಲಿಗೆ ಹಾಕಲಿ. ಹೀಗಲ್ಲದೆ ಕೋಟೆ ಸ್ಥಳಗಳಲ್ಲಿ ಗಲ್ಲಿಗೆ ಹಾಕುವುದನ್ನು ಜನರು ನಿಂತು ನೋಡುವುದರಿಂದ ಯಾವ ಪ್ರಯೋಜನವೂ ಆಗಲಾರದು.

ಕೋಟೆ ಸಂಸ್ಥಾನವು.

ಕೋಟೆ ಎಂಬ ಸಂಸ್ಥಾನದಲ್ಲಿ ಫಿರಂಗಿಯವರ ಕಾಲೊನಿಗಳು ನಡೆದಿರುವುದನ್ನು ಕೇಳಿ ಇದ್ದೇವೆ. ಅದೇ ವಿಚಾರಿಸುತ್ತೇವೆ. ಅದು ಒಂದು ದ್ವೀಪದ ಭಾಗವಾಗಿರುತ್ತದೆ. ಈ ದ್ವೀಪವು ಅಟ್ಲಾಂಟಿಕ್ ಸಾಗರದಲ್ಲಿ ಅಮೇರಿಕಾದ ಸಮುದ್ರ ತೀರದ ಬಳಿ ಇರುವುದು. ಕೋಟೆ ಸಂಸ್ಥಾನವು ಸುಮಾರು ೫೦ ಲಕ್ಷ ಪ್ರಜಾ ಸಂಖ್ಯೆಯನ್ನುಳ್ಳದ್ದು. ಬಹು ಭಾಗದ ಪ್ರಜೆಗಳೆಲ್ಲಾ ನೀಗ್ರೋಗಳು ಅಥವಾ ಅರ್ಧ ಜಾತಿಯವರು. ಪಾರ್ಲಿಮೆಂಟ್ ಮೆಂಬರುಗಳಿಂದ ಏಳು ವರುಷಕ್ಕೊಂದಾವರ್ತಿ ಚುನಾಯಿಸಲ್ಪಡುವ ಪ್ರೆಸಿಡೆಂಟೆಂಬ ಅಧಿಕಾರಿಯಿಂದ ಆಳಲ್ಪಡತಕ್ಕ ಸಂಸ್ಥಾನವಾಗಿದೆ. ಆತನ ಸಹಾಯಕ್ಕೆ ಎರಡು ಪಾರ್ಲಿಮೆಂಟ್ ಸಭೆಗಳಿರುವುವು. ಕೋಟೆ ಗವರ್ನಮೆಂಟು ಬಹಳ ಸಾಲಮಾಡಿಕೊಂಡಿದೆ. ಜನರು ಚಟುವಟಿಕೆಯುಳ್ಳವರಲ್ಲ ; ದಿನೇ ದಿನೇ ಅಭಿವೃದ್ಧಿಗೆ ಬರತಕ್ಕವರಾಗಿಯೂ ಕಾಣುವುದಿಲ್ಲ. ಆ ಸಂಸ್ಥಾನವಾದರೋ ಬಹಳ ಫಲವತ್ತಾದದ್ದು. ಪ್ರಜೆಗಳು ಕಷ್ಟಪಟ್ಟು ವ್ಯವಸಾಯ ಕೈಗಾರಿಕೆಗಳಲ್ಲಿ ಉದ್ಯುಕ್ತರಾಗುವುದಾದರೆ ಅಂಬಾ ಐಶ್ವರ್ಯವಂತರಾಗಬಹುದಾಗಿದೆ.

ನಂಜನಗೂಡಿನಲ್ಲಿ ನಡೆದ ಗೋಕಾಯಿಗಳ ಪ್ರದರ್ಶನ.

ಹೋದವಾರ ನಂಜನಗೂಡಿನಲ್ಲಿ ದೊಡ್ಡಜಾತ್ರೆ ನಡೆಯಿತಷ್ಟೆ. ಆಗ್ಗ ಅಲ್ಲಿ ಗೋಕಾಯಿಗಳ ಒಂದು ಪ್ರದರ್ಶನವು ನಡೆದುದಾಗಿತು. ಪ್ರದರ್ಶನಕ್ಕೆ ತರಲ್ಪಟ್ಟಿದ್ದ ರಾಸುಗಳನ್ನು ಮಹಾರಾಜರವರೇ ಖುದ್ದು ಪರಾಂಬರಿಸಿದರು. ಪ್ರದರ್ಶನವಾದ ಮಾರನೇ ದಿನ ಯೋಗ್ಯವಾದುವುಗಳಿಗೆ ಇನಾಮುಗಳು ಕೊಡಲ್ಪಟ್ಟವು. ಸರ್ಕಾರದ ವ್ಯವಸಾಯ ಇಲಾಖೆಯವರು ಬೆಂಗಳೂರಿನಿಂದ ಕೆಲವು ವ್ಯವಸಾಯದ ಯಂತ್ರಗಳನ್ನು ಕಳುಹಿಸಿಕೊಟ್ಟಿದ್ದರು. ಇವುಗಳಲ್ಲಿ ಕೇರುವ ಯಂತ್ರವುಂಟಿತ್ತು. ಇದನ್ನು ಕೊಂಚ ಹೊತ್ತು ಮಾತ್ರ ಉಪಯೋಗಿಸಿದರು. ಯಾಕೆಂದರೆ ಇದಕ್ಕೆ ಕಟ್ಟಿದ್ದ ಎತ್ತುಗಳು ಸ್ವಲ್ಪ ಪರಟಾಗಿ ಕೆಲಸ ಮಾಡದ್ದರಿಂದ ಯಂತ್ರದ ಒಂದು ಭಾಗವು ಮುರಿದು ಹೋಯಿತು. ಎರಡು ನೂರು ತರದ ನೇಗಿಲುಗಳು ಪ್ರದರ್ಶನಕ್ಕೆ ಬಂದಿದ್ದವು. ಕೋಲಾರದ ಕೈಗಾರಿಕೆ ಶಾಲೆಯ ಸೂಪರಿಂಟೆಂಡಾದ ಹಾಲಿಸ್ಟರ್ ಸಾಹೇಬರು ಕಳುಹಿಸಿಕೊಟ್ಟ ನೇಗಿಲು ಭಾರವಿಲ್ಲದಿರುವುದರಿಂದ ರೈತರು ಸದರೀ ನೇಗಿಲನ್ನು ಸುಲಭವಾಗಿ ಉಪಯೋಗಿಸಬಹುದು. ಇದರ ಕ್ರಯವೂ ಕೂಡ ಕೊಂಚವೇ ಆಗಿರುತ್ತದೆ. ಇದು ಭೂಮಿಯನ್ನು ಆಳವಾಗಿ ಉಳುವುದಲ್ಲದೆ ಉಳುವಾಗ್ಗ ಎದ್ದು ಬರುವ ಮಣ್ಣನ್ನು ಕ್ರಮವಾಗಿ ಒಂದು ಕಡೆಗೆ ನೂಕುವದು.

ವ್ಯವಸಾಯಾಭಿವೃದ್ಧಿಯ ವಿಷಯ ಮೈಸೂರು ನಾರ್ಮಲ್‌ಸ್ಕೂಲ್ ಉಪಾಧ್ಯಾಯರಾದ ಮ|| ರಾ|| ನರಸಿಂಹ ಅಯ್ಯಂಗಾರರು ಒಂದು ಉಪನ್ಯಾಸವನ್ನು ಮಾಡಿದರು. ಆಗ್ಗ ಮೈಸೂರು ಡೆಪ್ಯುಟಿ ಕಮಿಷನರಾದ ಮ|| ರಾ|| ಕಾಂತರಾಜ ಅರಸಿನವರು ಅಗ್ರಾಸನವನ್ನು ವಹಿಸಿದ್ದರು.

ಬಳದೇಶದ ವೃತ್ತಾಂತಗಳು.

ಮೊನ್ನೆ ಸೋಮವಾರ ಮಧ್ಯಾಹ್ನ ಬೆಂಗಳೂರು ಅಠಾರಾ ಕಚೇರಿಯಲ್ಲಿ ಮೈಸೂರು ಲೆಜಿಸ್ಲೆಟಿವ್ ಸಭೆಯು ನಡೆಯಿತು.

◆◆◆

ರಾಜಧಾನಿಯ ರೈಲ್ವೇ ಸ್ಟೇಷನಿನಲ್ಲಿ ಕಳೆದ ವಾರ ಒಬ್ಬ ಮಹಮ್ಮದೀಯ ಹೆಂಗಸು ಸಾಮಾನು ಬಂಡಿಗಳ ಕೆಳಗೆ ಸಿಕ್ಕಿ ಸತ್ತುಹೋಗಿದ್ದಳೆಂದು ಕೇಳುತ್ತೇವೆ.

◆◆◆

ಮೈಸೂರು ಸಂಸ್ಥಾನದ ಛೀಫ್ ಜಡ್ಜರಾಗಿ ಕೆಲಸ ನೋಡುತ್ತಿರುವ ಮ|| ನಂಜುಂಡಯ್ಯನವರು ಇಷ್ಟರಲ್ಲೇ ಮೂರು ತಿಂಗಳ ರಜಾ ಪಡೆಯುವವರಾಗಿದಾರೆಂದು ಪ್ರಕಟಿಸಲಾಗಿದೆ.

◆◆◆

ರಿಜಿಸ್ಟ್ರೇಷನ್ ಆಫೀಸುಗಳಲ್ಲಿ ಪತ್ರಗಳನ್ನು ರಿಜಿಸ್ಟರ್ ಮಾಡಿಸುವಾಗ್ಗ ಸಬ್ ರಜಿಸ್ಟ್ರಾರುಗಳು ಪತ್ರಬರೆದುಕೊಟ್ಟವರ ಎಡಗೈಯ ಹೆಬ್ಬೆಟ್ಟನ್ನು ಒತ್ತಿಸಿ ರೆಕಾರ್ಡು ಇಟ್ಟುಕೊಳ್ಳಬೇಕೆಂದು ಸರ್ಕಾರದವರು ಸರ್ಕಿಲರ್ ಕೊಟ್ಟಿದಾರೆ.

◆◆◆

ಮ|| ದಳವಾಯಿ ದೇವರಾಜೇ ಅರಸಿನವರಿಗೆ ಈ ಸಂಸ್ಥಾನದ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಕೆಲಸವೂ, ಮಿ|| ಹ್ಯೂಬರ್ಟ್ ಸಾಹೇಬರಿಗೆ ಡೆಪ್ಟಿ ಇನ್‌ಸ್ಪೆಕ್ಟರ್ ಜನರಲ್ ಕೆಲಸವೂ, ಮಿ|| ಬಿ. ಜಿ. ಶಂಭಾರಾಮಾಜಿ ನಾಯಕರವರಿಗೆ ಬೆಂಗಳೂರು ಡೆಪ್ಟಿ ಕಮಿಷನರ ಕೆಲಸವೂ ನೇಮಕವಾದಂತೆ ಕೇಳುತ್ತೇವೆ.

◆◆◆

ಡೆಪ್ಟಿ ಕಮಿಷನರ್ ಮ|| ಕಾಂತರಾಜೇ ಅರಸಿನವರ ಮಾತೃಶ್ರೀಯವರು ಅರವತ್ತು ವರುಷ ತುಂಬಿದ್ದಕ್ಕೆ ಷಷ್ಟ್ಯಬ್ದಪೂರ್ತಿ ಶಾಂತಿಯನ್ನು ಮಾಡಿಸಿಕೊಳ್ಳುವವರಾಗಿದಾರೆ. ಇದಕ್ಕಾಗಿ ಕಳೆದವಾರ ಪರಕಾಲ ಗುರುಗಳಿಗೆ ಪಾದಪೂಜೆ ಮಾಡಿದರು. ಷಷ್ಟ್ಯಬ್ದ ಶಾಂತಿ ಕಾರ್ಯಗಳೂ ಸಂತರ್ಪಣೆ ಮುಂತಾದದ್ದೂ ವಿಶೇಷವಾಗಿ ರಾಜಧಾನಿಯಲ್ಲಿ ನಡಿಸುವವರಾಗಿದಾರೆ.

◆◆◆

ರಾಜಧಾನಿಯಲ್ಲಿ ಇತ್ತೀಚೆಗೆ ಸುಮಾರು ವಾರದಿಂದ ಕಾಲರಾ ಉಪದ್ರ ತಗಲಿ ಕಾಲರಾದಿಂದ ಕೆಲವು ಜನರು ಸತ್ತಿದೆ. ಪ್ರಜೆಗಳು ಪಾತ್ರೆಗಳನ್ನು ತೊಳೆಯುವುದಕ್ಕೂ ಅಡಿಗೆಗೂ ಆರೋಗ್ಯಕರವಾದ ಒಳ್ಳೇ ನೀರನ್ನೇ ಉಪಯೋಗಿಸಬೇಕು. ಮತ್ತು ನೀರನ್ನು ಕಾಯಿಸಿ ಕುಡಿಸಿದರೆ ಕಾದಿಯಬಾರದೆಂದೂ, ಹಣ್ಣುಗಳನ್ನೂ, ಹಸ್ಯವಾಗಿದ ಪದಾರ್ಥಗಳನ್ನೂ ತಿನ್ನಬಾರದೆಂದೂ ಸೂಚಿಸುತ್ತೇವೆ.

◆◆◆

ಶ್ರೀಮನ್ಮಹಾರಾಜರವರು ಪರಿವಾರ ಸಹಿತ ಏಪ್ರಿಲ್ ೧ ನೇ ತಾ. ಭಾನುವಾರ ಬೆಳಿಗ್ಗೆ ಮೋಟಾರ್ ಗಾಡಿಯಲ್ಲಿ ರಾಜಧಾನಿಯಿಂದ ನೀಲಗಿರಿಗೆ ದಯಮಾಡುವರೆಂತಲೂ, ಆ ದಿವಸ ರಾತ್ರಿ ಮಹಾಮಾತೃಶ್ರೀಯವರೇ ಮೊದಲಾದ ಜನಾನಾದವರು ರಾಜಧಾನಿಯಲ್ಲಿ ರೈಲ್ ಹತ್ತಿ ಬೆಂಗಳೂರಿಗೆ ದಯಮಾಡಿ, ಎರಡುದಿನ ಮಧ್ಯೆ ನಿಲ್ಲದೆ ನೀಲಗಿರಿಯನ್ನು ತಲುಪುವವರಾಗಿದಾರೆಂತಲೂ ಕೇಳುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರಿನಲ್ಲಿ ಸ್ಥಾಪಿಸಲ್ಪಡುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಂಬ ಶಾಸ್ತ್ರಸಂಶೋಧನಾ ವಿದ್ಯಾಶಾಲೆಗೋಸ್ಕರ ಶ್ರೀಮನ್ಮಹಾರಾಜಾ ಸರ್ಕಾರದವರು ಕೆಲವು ಜಮೀನುಗಳನ್ನು ಇಂಡಿಯಾ ಗವರ್ನಮೆಂಟಿನವರ ಅಧಿಕಾರಕ್ಕೆ ಬಿಟ್ಟುಕೊಟ್ಟಿರುತ್ತಾರಷ್ಟೆ. ಈ ಪ್ರದೇಶವು ಬೆಂಗಳೂರು ದಂಡಿನ ಆಡಳಿತಕ್ಕೆ ಸೇರಿಸಿಕೊಳ್ಳಲ್ಪಟ್ಟಿದೆ. ಮತ್ತು ದಂಡಿನಲ್ಲಿ ಚಲಾವಣೆಯಲ್ಲಿರತಕ್ಕ ಸಮಸ್ತ ಕಾಯಿದೆ ಕಾನೂನುಗಳೂ ಆ ಪ್ರದೇಶದಲ್ಲಿ ಜಾರಿಯಲ್ಲಿರುತ್ತವೆ ಎಂಬದಾಗಿ ಇಂಡಿಯಾ ಗವರ್ನಮೆಂಟಿನವರು ಇಸ್ತಿಹಾರು ಕೊಟ್ಟಿದಾರೆ.

ಶಿವಮೊಗ್ಗ ಮ್ಯುನಿಸಿಪಲ್ ಬೋರ್ಡಿಗೆ ರೆವ್ ಡಬ್ಲಿಯು. ಇ. ಟಾಂಲಿನ್ಸನ್‌ರವರನ್ನು ಮೆಂಬರಾಗಿ ನೇಮಿಸಿದೆ.

ಮೈಸೂರು ಡಿಸ್ಟ್ರಿಕ್ಟಿನ ಡೆಪ್ಟಿ ಕಮಿಷನರವರೇ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಛೇರ್ಮನ್ನರಾಗಿರತಕ್ಕದ್ದೆಂದು ಗೊತ್ತುಮಾಡಿದೆ.

ಕಾಣಿಗಲ್ ತಾಲ್ಲೂಕ್ ಬೋರ್ಡಿಗೆ ಸಬ್ ರೆಜಿಸ್ಟ್ರಾರ್ ಮೆ|| ಬಿ. ಆನಂದರಾಯರು ವೈಸ್ ಪ್ರೆಸಿಡೆಂಟರಾಗಿರಬೇಕೆಂದು ಬೋರ್ಡಿನ ಮೆಂಬರುಗಳು ಚುನಾವಣೆಮಾಡಿರುವುದರಿಂದ ಅದನ್ನು ಖಾಯಂ ಮಾಡಿದೆ.

ಮೈಸೂರು ವ್ಯವಸಾಯದ ಇಲಾಖಾ ಕೆಮಿಸ್ಟಾದ ಡಾಕ್ಟರ್ ಎ. ಲ್ಹೆಮನ್‌ರವರಿಗೆ ಮಾರ್ಚಿ ೧೬ ರಿಂದ ೨೩ ರ ವರೆಗೆ ಉಭಯ ದಿನಗಳೂ ಕೂಡಿ ಪ್ರಿವಿಲೇಜ್ ರಜಾ ಕೊಟ್ಟಿದೆ.

ಅ|| ಸಬ್ ಅ|| ಸರ್ಜನ್ ಮಿ|| ಪಿ. ಎಸ್. ರಾಮಚಂದ್ರ ಐಯರಿಗೆ ಜನವರಿ ೩ ರಿಂದ ಎರಡು ತಿಂಗಳು ಹದಿನೇಳು ದಿನಗಳು ಪ್ರಿವಿಲೇಜ್ ರಜಾ ಕೊಟ್ಟಿದೆ.

ಮೈಸೂರ್ ರೆವಿನ್ಯೂ ಸರ್ವೆ ಅ|| ಕಮಿಷನರ್ ಮಿ|| ಬಿ. ಕೆ. ದಾಸಾಚಾರ್ಯರು ರಜದಿಂದ ವಾಪಸು ಬಂದು ಮಾರ್ಚಿ ೩ ರಲ್ಲಿ ಕೆಲಸಕ್ಕೆ ದಾಖಲಾದದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದು ಮಾಡಿದೆ.

ಕೋಲಾರ್ ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರ್ ಮಿ|| ಸಿ. ಶ್ರೀಕಂಠೇಶ್ವರ ಐಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಸೀನಿಯರ್ ಅ|| ಕಮಿಷನರ್ ಮಿ|| ಕೆ. ಶ್ರೀನಿವಾಸರಾಯರು ತಮ್ಮ ಇತರ ಕೆಲಸಗಳೊಂದಿಗೆ ಡೆಪ್ಟಿ ಕಮಿಷನರ ಚಾರ್ಜಿ ಕೆಲಸಗಳ ಭಾರವನ್ನೂ ವಹಿಸತಕ್ಕದ್ದು.

ಅರಕೆರೆ ತಾಲ್ಲೂಕ್ ಅಮಲ್ದಾರ್ ಮಿ|| ಕೆ. ಶ್ರೀನಿವಾಸರಾಯರಿಗೆ ಕೊಟ್ಟಿರುವ ರಜಾ ಜೊತೆಗೆ ಇನ್ನೂ ಆರು ವಾರಗಳ ಕಾಯಿಲೆ ರಜಾ ಕೊಟ್ಟಿದೆ.

ಹೊಳಲ್ಕೆರೆ ತಾಲ್ಲೂಕು ಅಮಲ್ದಾರ್ ಮಿ|| ಸಿ. ವಿ. ಕೃಷ್ಣಸ್ವಾಮಿ ರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಶಿರಸ್ತೆದಾರ್ ಮೆ|| ಬಿ. ಮಲ್ಲಿಕಾರ್ಜುನಪ್ಪನವರು ಹೊಳಲ್ಕೆರೆ ತಾಲ್ಲೂಕ್ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಅ|| ಸರ್ಜನ್ ಮಿ|| ಸಿ. ಅಪ್ಪಾದೊರೈ ಮೊದಲಿಯಾರನ್ನು ಕಳೆದ ಡಿಸೆಂಬರ್ ೫ ರಿಂದ ೩ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮಧುಗಿರಿ ಸಬ್ ಡಿವಿಜನ್ ಅ|| ಕಮಿಷನರ್ ಮಿ|| ಸಿ. ವೆಂಕಟರಾಯರನ್ನು ಎಕ್ಸೈಸ್ ಕಮಿಷನರವರ ಆಫೀಸ್ ಅಸಿಸ್ಟೆಂಟರಾಗಿ ಬೆಂಗಳೂರಿಗೆ ವರ್ಗ ಮಾಡಿದೆ.

ಚಿತ್ರದುರ್ಗದ ಡಿವಿಜನ್ ಅ|| ಎಗ್ಜಿಕ್ಯುಟಿವ್ ಇಂಜನಿಯರ್ ಮೆ|| ಎಚ್. ಡಿ. ರೈಸ್‌ರವರಿಗೆ ಇಪ್ಪತ್ತನಾಲ್ಕು ದಿನಗಳ ಪ್ರಿವಿಲೇಜ್ ರಜವನ್ನೂ ಅದರ ಜೊತೆಗೆ ಆರು ತಿಂಗಳು ಆರು ದಿನಗಳ ಕಾಯಿಲೆ ರಜವನ್ನೂ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಕೊಡಲ್ಪಟ್ಟಿದೆ.

ಉತ್ತರ ದೇಶದ ಕ್ಷಾಮವು.

ಧರ್ಮಫಂಡು ಕೂಡಿಸಲಾರಂಭವಾಯಿತು

ಕಲ್ಕತ್ತಾ ಪಟ್ಟಣದಲ್ಲಿ ಹಿಂದುಸ್ಥಾನದ ಕ್ಷಾಮನಿವಾರಣಾರ್ಥವಾಗಿ ಕಳೆದ ವಾರ ಒಂದು ಧರ್ಮ ಫಂಡು ಪ್ರಾರಂಭವಾಗಿ ಚಂದಾ ಕೂಡುತ್ತಿದೆ. ಈ ಫಂಡಿನ ಸ್ಥಾಪನೆಗಾಗಿ ಕಲ್ಕತ್ತೆಯ ಮುಖ್ಯ ಪ್ರಜೆಗಳು ಸಭೆ ಸೇರಿದ್ದರು. ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಸಭೆಯಲ್ಲಿ ಅಗ್ರಸ್ಥಾನವನ್ನು ವಹಿಸಿ, ಈಗ ಪ್ರಾಪ್ತವಾಗಿರುವ ಬರವನ್ನು ಸಭಿಕರಿಗೆ ವಿವರಿಸಿ, ಎಲ್ಲರೂ ಕ್ಷಾಮಪೀಡಿತರಿಗಾಗಿ ದ್ರವ್ಯಸಹಾಯ ಮಾಡಿ ಪುಣ್ಯ ಸಂಪಾದನೆ ಮಾಡಿಕೊಳ್ಳಬೇಕೆಂದು ಅಪ್ಪಣೆ ಕೊಡಿಸಿದರು. ಅವರು ತಿಳಿಸಿದ ಮುಖ್ಯಾಂಶಗಳೇನೆಂದರೆ—

ಈಗ ಕ್ಷಾಮವು ಸಂಯುಕ್ತ ಆಧಿಪತ್ಯಗಳ ಎಲ್ಲಾ ಭಾಗಗಳಲ್ಲೂ; ಮಧ್ಯ ಇಂಡಿಯಾಕ್ಕೆ ಸೇರಿದ ಕೆಲವು ದೇಶೀಯ ಸಂಸ್ಥಾನಗಳಲ್ಲೂ; ಪಂಜಾಬ್, ಬಂಗಾಳಾ, ಮಧ್ಯಪ್ರಾಂತ್ಯಗಳು, ಬೊಂಬಾಯಿ, ಈ ಆಧಿಪತ್ಯಗಳಿಗೆ ಸೇರಿದ ಕೆಲಕೆಲವು ಭಾಗಗಳಲ್ಲೂ ಪ್ರಾಪ್ತವಾಗಿ ಪ್ರಜೆಗಳನ್ನು ನಾನಾ ಪ್ರಕಾರವಾಗಿ ಕಾಡುತ್ತಲಿದೆ. ಈ ಕ್ಷಾಮಪೀಡಿತ ಪ್ರದೇಶವು ಐದು ಕೋಟಿ ಪ್ರಜೆಗಳನ್ನೊಳಗೊಂಡಿರುವ ೧೫,೦೦೦ ಚದರ ಮೈಲಿ ವಿಸ್ತಾರವಾಗಿರುವುದು; ಅಂದರೆ, ಇಂಗ್ಲೆಂಡ್, ವೇಲ್ಸ್, ಸ್ಕಾಟ್ಲೆಂಡ್, ಐರ್ಲೆಂಡ್, ಹಾಲೆಂಡ್, ಬೆಲ್ಜಿಯಂ, ಈ ರಾಜ್ಯಗಳನ್ನೆಲ್ಲಾ ಒಟ್ಟು ಕೂಡಿಸಿದಷ್ಟು ವಿಸ್ತಾರವಾದ ಪ್ರದೇಶವಾಗುವುದು; ಇನ್ನೊಂದು ವಿಧವಾಗಿ ನೋಡಿದರಲ್ಲಿ ಈ ಕ್ಷಾಮವು ವಿಸ್ತೀರ್ಣದಲ್ಲಿ ಹಿಂದುಸ್ಥಾನದ ಹನ್ನೆರಡನೇ ಒಂದು ಭಾಗದಲ್ಲೂ, ಪ್ರಜಾಸಂಖ್ಯೆಯಲ್ಲಿ ಆರನೇ ಒಂದಂಶಕ್ಕೂ ವ್ಯಾಪಿಸಿರುತ್ತದೆ. ಇಷ್ಟಾದರೂ ಹಿಂದುಸ್ಥಾನದ ಒಟ್ಟು ಮೊಬಲಗನ್ನು ಸೇರಿಸಿ ಕ್ಷಾಮದ ಫಂಡನ್ನು ಕೂಡಿಸಬೇಕಾದ ಅಗತ್ಯವೇನೂ ಕಂಡುಬರುವುದಿಲ್ಲವೆಂದು ಊಹಿಸಬಹುದು. ಈಗ ಸಂಯುಕ್ತ ಆಧಿಪತ್ಯದ ಸ್ಥಿತಿಗತಿಯನ್ನು ನೋಡಿದರೆ ಬಹು ದುಃಖಕರವಾಗಿದೆ. ಅಲ್ಲಿನ ಸರ್ಕಾರದವರು ಕ್ಷಾಮನಿವಾರಣೆಗೆ ಮಾಡಿರುವ ಏರ್ಪಾಡುಗಳು ಸಾಲದೆ ಇರುತ್ತವೆ. ಆದಕಾರಣ ಹಿಂದುಸ್ಥಾನದಲ್ಲೆಲ್ಲಾ ಚಂದಾ ಕೂಡಿಸಬೇಕಾದದ್ದು ಅಗತ್ಯವೆಂದು ನನಗೆ ತಿಳಿದು ಬಂದಿದೆ. ಆ ಪ್ರಾಂತ್ಯಗಳೊಳಗೆಲ್ಲಾ ಪೈರುಪಚ್ಚೆಗಳು ಕೆಟ್ಟುಹೋದವು. ಪಂಜಾಬಿನ ಒಂದು ಡಿವಿಜನ್ ಸ್ಥಿತಿಯನ್ನು ಕೇಳಿದಲ್ಲಿ ಈ ಸಲ ಬೆಳೆಗಳು ಅದರಲ್ಲಿ ಒಂದು ಪಾಲೂ ಸರಿಯಾಗಿ ಆಗಿರುವುದಿಲ್ಲ; ಅಂದರೆ ಎರಡು ಕೋಟಿ ರೂಪಾಯಿನ ಬೆಳೆ ಕಡಮೆಯಾಗಿ, ನಷ್ಟವುಂಟಾಗಿರುತ್ತದೆ. ಅತ್ತಲಾಗಿ ಸಂಯುಕ್ತ ಆಧಿಪತ್ಯಗಳಲ್ಲೆಲ್ಲಾ ಈ ವರುಷ ಐದರಲ್ಲಿ ಎರಡು ಪಾಲಿನಷ್ಟು ದರ ಬೆಳೆಯಾಗದೆ ಹೋಯಿತು. ಆ ಪ್ರಾಂತ್ಯಗಳಲ್ಲಿ ಬೆಳೆಯುವ ಮುಖ್ಯ ಆಹಾರ ಧಾನ್ಯಗಳಲ್ಲೇ ಅಂದರೆ ಅಕ್ಕಿ ಜೋಳ ಇವೆರಡು ಬೆಳೆಗಳಲ್ಲೇ ಹದಿನೈದು ಕೋಟಿ ರೂಪಾಯಿನಷ್ಟು ನಷ್ಟವಾಯಿತು. ತಾತ್ಕಾಲದಲ್ಲಿ ೧೫ ಲಕ್ಷ ಪ್ರಜೆಗಳಿಗಿಂತಲೂ ಹೆಚ್ಚಾಗಿಯೇ ಗವರ್ನಮೆಂಟಿನವರ ರಿಲೀಫ್ ಕಾಮಗಾರಿಗಳಲ್ಲೂ ಧರ್ಮಸತ್ರಗಳಲ್ಲೂ ಸೇರಿಕೊಂಡು ಅನ್ನೋದಕಗಳನ್ನು ಪಡೆಯುತ್ತಿದ್ದಾರೆ. ಈ ಪೈಕಿ ೧೩ ಲಕ್ಷ ಪ್ರಜೆಗಳು ಬ್ರಿಟಿಷ್ ಗವರ್ನಮೆಂಟಿನ ಆಳಿಕೆಗೆ ಸೇರಿದವರೆಂತಲೂ, ೨ ಲಕ್ಷ ಜನರು ದೇಶೀಯ ಸಂಸ್ಥಾನಗಳಿಗೆ ಸೇರಿದವರೆಂತಲೂ ತಿಳಿಯುವುದು. ನಾನು ಈ ಸಭೆಗೆ ಬರುತ್ತೇನೆಂದು ಒಪ್ಪಿಕೊಂಡ ಮೇಲೆ ವಿಲಾಯತಿಯ ಮಹಾರಾಜಾ ಚಕ್ರವರ್ತಿಯವರು ಈ ಧರ್ಮಫಂಡಿನ ಪೋಷಕ (ಪೇಟ್ರನ್) ರಾಗುತ್ತೇನೆಂದು ಒಪ್ಪಿ ನನಗೆ ತಂತಿವರ್ತಮಾನವನ್ನು ದಯಪಾಲಿಸಿರುತ್ತಾರೆ. ಅಲ್ಲದೆ ಈ ರಾಷ್ಟ್ರದ ನಾನಾ ವಿಭಾಗಗಳ ಗವರ್ನಮೆಂಟಿನವರೂ ಅನುತಾಪಪಟ್ಟು ಈ ಫಂಡಿಗೆ ಸಹಾಯ ಮಾಡುತ್ತೇನೆಂದು ತಿಳಿಸಿದ್ದಾರೆ. ಆದಕಾರಣ ನಾವು ಈ ದಿನ ಪ್ರಾರಂಭಿಸಿದ ಈ ಪುಣ್ಯಕರವಾದ ಫಂಡು ಬೇಗನೆ ಹೆಚ್ಚಿ, ನಮ್ಮ ಉದ್ದೇಶವು ಬಹಳವಾಗಿ ಸಾರ್ಥಕವಾದೀತೆಂದು ಹೇಳಬಹುದಾಗಿದೆ ಎಂಬೀ ರೀತಿಯಾಗಿ ಉಪನ್ಯಾಸ ಮಾಡಿದರು.

ಈಗ ಪ್ರಾಪ್ತವಾಗಿರುವ ಕ್ಷಾಮವು ಹಿಂದೆ ೧೯೦೦ ನೆ ಇಸವಿಯಲ್ಲೂ ಮತ್ತು ಅದರ ಹಿಂದೆ ೧೮೯೭ ನೆ ಇಸವಿಯಲ್ಲೂ ಪ್ರಾಪ್ತವಾಗಿದ್ದ ಕ್ಷಾಮಗಳಿಗಿಂತ ಬಹಳ ಕಠಿಣವಾಗಿರುತ್ತದೆಂದು ವೈಸ್‌ರಾಯಿ ಪ್ರಭುಗಳೇ ಅಪ್ಪಣೆ ಕೊಡಿಸಿದ್ದಾರೆ. ಈಗ ಕ್ಷಾಮಪೀಡಿತರಾಗಿರತಕ್ಕ ಗಂಡಸರು ಹೆಂಗಸರು ಮಕ್ಕಳುಗಳಿಗೆ ಒಳ್ಳೇ ಆಹಾರ, ಬೆಚ್ಚನೆ ಹೊದ್ದಿಕೆ, ರೋಗದಲ್ಲಿ ನರಳುವವರಿಗೆ ಉಪಚಾರ, ಈ ಮೊದಲಾದವುಗಳನ್ನು ನಡಿಸುವುದಕ್ಕೂ; ಬಾಯಿಬಿಟ್ಟು ಕೇಳಲಾರದೆ ಮನೆಗಳಲ್ಲೇ ಇದ್ದುಕೊಂಡು ಕ್ಷಾಮಪೀಡಿತರಾಗಿರುವಂಥಾ ಮನುಷ್ಯರಿಗೆ ಜೀವನ ನಡಿಸುವುದಕ್ಕೂ; ಕ್ಷಾಮನಿವಾರಣೆಯಾದ ಮೇಲೆ ಜೀವನೋಪಾಯಕ್ಕೆ ಮಾರ್ಗವಿಲ್ಲದೆ ಕಷ್ಟಪಡುವಂಥಾ ಕಸುಬುದಾರರಿಗೆ ಮತ್ತೆ ಜೀವನೋಪಾಯಗಳನ್ನು ಕಲ್ಪಿಸಿಕೊಡುವುದಕ್ಕೂ ಈ ಧರ್ಮದ ಫಂಡನ್ನು ವಿನಿಯೋಗಿಸಬೇಕಾಗುವುದು. ಆದಕಾರಣ ಸಕಲ ಪುಣ್ಯವಂತರೂ ಭೂತದಯಾಪರತ್ವವುಳ್ಳವರೂ ತಮ್ಮ ತಮ್ಮ ಕೈಲಾದಷ್ಟು ಹಣವನ್ನು ಧರ್ಮಕೊಟ್ಟು, ಈ ರಾಷ್ಟ್ರದ ಇನ್ನೊಂದು ಭಾಗದಲ್ಲಿ ಕ್ಷಾಮಪೀಡಿತರಾಗಿರುವಂಥಾ ಸಹೋದರ ಪ್ರಜೆಗಳಾದ ಜನರಿಗೆ ಉಪಕಾರ ಮಾಡುವರೆಂದು ಪ್ರಾರ್ಥಿಸುತ್ತೇವೆ.

ಈ ಕ್ಷಾಮನಿವಾರಣೆಯ ಧರ್ಮಫಂಡಿಗೆ ನಮ್ಮ ದೇಶದಲ್ಲಿ ಚಂದಾ ಕೊಡತಕ್ಕ ಪುಣ್ಯಾತ್ಮರು ಅಂಥಾ ಹಣವನ್ನು ನಮ್ಮ ವಿಳಾಸಕ್ಕೆ ಕಳುಹಿಸಿದರೆ ನಾವು ಅದನ್ನು ಸ್ವೀಕರಿಸಿ ಈ ಪತ್ರಿಕೆಯ ಮೂಲಕ ಕೃತಜ್ಞತಾಪೂರ್ವಕವಾಗಿ ಪ್ರಕಟಿಸಿ, ಉತ್ತರ ದೇಶಕ್ಕೆ ಮೇಲ್ಕಂಡ ಫಂಡಿಗೆ ರವಾನೆ ಮಾಡುತ್ತೇವೆ. ಪ್ರತಿ ಸ್ಥಳದಲ್ಲೂ ಜನರು ಅಲ್ಪಮಾತ್ರವಾಗಿಯಾದರೂ ಹಣವನ್ನು ಕೂಡಿಸಿ ಕಳುಹಿಸಿದ ಪಕ್ಷದಲ್ಲಿ ಒಟ್ಟಿನಲ್ಲಿ ಬಹಳ ಸಹಾಯವಾಗುವುದು. ಈ ಭಾಗದಲ್ಲಿ ವಾಚಕರೆಲ್ಲಾ ಸಹಾಯಕರಾಗುವರೆಂದು ನಿರೀಕ್ಷಿಸುತ್ತೇವೆ.

ಬೆಂಗಳೂರು ಕೊಲೆಗಳ ಮೊಕದ್ದಮೆಯು.

ಪೊಲೀಸಿನವರ ಮೇಲೆ ಬಂದಿರುವ ಅಪರಾಧವು.

ಅಂತರಂಗವಾದ ತನಿಖೆಯು

ಬೆಂಗಳೂರು ದಂಡಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮೆ|| ಬಿ ಎಲ್. ಮೂರ್‌ಯವರು ಅಲಸೂರು ಕೊಲೆಗಳಲ್ಲಿ ಪೊಲೀಸಿನವರ ಪೈಕಿ ಯಾರ್ಯಾರು ಸೇರಿದ್ದಾರೆಂದು ಕಳೆದ ವಾರ ೨೩ ದಿನ ಸೆಂಟ್ರಲ್ ಜೈಲಿನೊಳಗೆ ಅಂತರಂಗದಲ್ಲೇ ತನಿಖೆ ಮಾಡಿದರು. ಅವರು ಪಬ್ಲಿಕ್ಕಾಗಿ ತನಿಖೆಮಾಡದೆಹೋದರೆಂದು ಜನರು ಆಕ್ಷೇಪಣೆಮಾಡಿದರು.

ಕಳೆದ ಗುರುವಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಸಬ್ ಇನ್ಸ್‌ಪೆಕ್ಟರುಗಳಾದ ಶೇರ್ ಹಾಜಿ ಮತ್ತು ವೆಂಕಟಸುಬ್ಬಯ್ಯ ಇವರ ಮೇಲೆ ಕೊಲೆಮಾಡಿದರೆಂತಲೂ ಕೊಲೆಗೆ ಸಹಾಯಮಾಡಿದರೆಂತಲೂ ಮೊಕದ್ದಮೆ ದಾಖಲಾಯಿತು. ಅವರಿಬ್ಬರನ್ನೂ ಹಾಜರ್ ಮಾಡಿಸಿಕೊಂಡು, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅವರನ್ನು ಕುರಿತು ಹೇಳಿದ್ದೇನೆಂದರೆ—ಶೇರ್ ಹಾಜಿ ಆದ ನೀನು ಪೊಲೀಸ್ ಆಫೀಸರು. ವಿಶ್ವನಾಥನನ್ನೂ ಕೃಷ್ಣಸ್ವಾಮಿಯನ್ನೂ ಕೊಲ್ಲುವುದಾಗಿ ಬಾಪು ನಿನಗೆ ಬಂದು ತಿಳಿಸಿದನು. ಕೊಲೆ ನಡೆಯುವುದಕ್ಕೆ ಮೊದಲೂ ನಡೆದ ಮೇಲೂ ನೀನು ಬಾಪುವಿನಿಂದ ಹಣವನ್ನು ತೆಗೆದುಕೊಂಡು ನೀನು ಆ ಕೊಲೆಗಳಿಗೆ ಸಹಾಯ ಮಾಡಿದಿ. ಮತ್ತು ಅವುಗಳನ್ನು ರಿಪೋರ್ಟ್ ಮಾಡಲಿಲ್ಲ. ಕೊಲೆ ನಡೆದ ಮನೆಗೆ ಕಾನ್‌ಸ್ಟೇಬಲ್‌ರನ್ನು ನೀನು ಕಳುಹಿಸಿ ಸಹಾಯಮಾಡಿದಿ. ಕೊಲೆ ನಡೆದ ಮೇಲೆ ನೀನು ಆ ಮನೆಗೆ ಹೋಗಿ ಶವಗಳನ್ನು ನೋಡಿ ಬಂದು ರಿಪೋರ್ಟ್ ಮಾಡಲಿಲ್ಲ. ಕ್ಯಾವಲ್ರಿ ರೋಡಿನಲ್ಲಿ ಚಲುವರಾಯ ಮೊದಲಿಯಾರ್ ಎಂಬವನನ್ನು ಕೊಂದುಹಾಕಿದ ವಿಚಾರ ನಿನಗೆ ಪೊಲೀಸ್ ಆಫೀಸರಾದ್ದರಿಂದ ವರ್ತಮಾನ ಬಂದಿತು. ಆ ಕೊಲೆಯ ಸಂಗತಿಯನ್ನು ನೀನು ರಿಪೋರ್ಟ್ ಮಾಡಲಿಲ್ಲ. ಅದಕ್ಕೆ ಪ್ರತಿಯಾಗಿ ಕೊಲೆ ನಡೆದ ಮನೆಗೆ ಒಳ್ಳೇ ಬೀಗವನ್ನು ಹಾಕುವಂತೆ ಬಾಪುವಿಗೆ ಸೂಚಿಸಿ, ಆ ಕೊಲೆಯನ್ನು ಪತ್ತೆಯಾಗದಂತೆ ಮಾಡಬೇಕೆಂದು ಪ್ರಯತ್ನಪಟ್ಟೆ. ಬಾಪುವು ೩,೫೦೦ ರೂಪಾಯಿನ ಚೆಕ್ಕನ್ನು ಮೋಸದಿಂದ ಪಡೆದು ಅದನ್ನು ಮುರಿಸಬೇಕೆಂದಿದ್ದನೆಂಬುವುದು ಪೊಲೀಸ್ ಆಫೀಸರಾಗಿದ್ದ ನಿನಗೆ ತಿಳಿದುಬಂದಿತು. ನೀನೇನೋ ಅಥವಾ ನಿನ್ನ ಮೂಲಕ ಯಾರಿಂದಲೋ ಆ ಚೆಕ್ಕನ್ನು ತಕ್ಕ ರೀತಿಯಲ್ಲಿ ತಿದ್ದಿಸಿ ಮೋಸದಿಂದ ಅದರ ಹಣವನ್ನು ತರಿಸಿದಿ. ಬಂದ ಹಣದಲ್ಲಿ ನೀನು ೧೦೦೦ ರೂಪಾಯಿ ತೆಗೆದುಕೊಂಡಿ. ಬಾಪು, ಸುಂದರರಾಜು, ನಲ್ಲತಂಬಿ ಎಂಬಿವರು ಬಹಳ ಘೋರವಾದ ಕೃತ್ಯಗಳನ್ನು ಮಾಡುತ್ತಾ ಬಂದಿದ್ದಾರೆಂಬ ಸಂಗತಿಯನ್ನು ಪೊಲೀಸ್ ಆಫೀಸರಾದ ನಿನಗೆ ತಿಳಿದುಬಂದಿದ್ದರೂ ಅಂಥಾ ದುಷ್ಟರನ್ನು ಹಿಡಿಯುವುದಕ್ಕಾಗಲಿ, ರಿಪೋರ್ಟ್ ಮಾಡುವುದಕ್ಕಾಗಲಿ ಪ್ರಯತ್ನಮಾಡದೆ, ಅವರು ಇನ್ನೂ ಕೆಟ್ಟ ಕೃತ್ಯಗಳನ್ನು ನಡಿಸುತ್ತಾ ಬರುವಂತೆಯೂ, ಅವರು ಸಿಕ್ಕಿಬೀಳದೆ ತಪ್ಪಿಸಿಕೊಳ್ಳುವಂತೆಯೂ ಅವರಿಗೆ ಸಹಾಯ ಮಾಡಿದಿ.

ಸಬ್ ಇನ್ಸ್‌ಪೆಕ್ಟರ್ ವೆಂಕಟಸುಬ್ಬಯ್ಯನಾದ ನೀನು ಪೊಲೀಸ್ ಆಫೀಸರಾಗಿದ್ದುಕೊಂಡು, ಬಾಪು, ಸುಂದರರಾಜು, ಶ್ರೀನಿವಾಸಲು ಎಂಬುವರ ಕೂಡ ಸೇರಿ, ಲಕ್ಷ್ಮಿ ಎಂಬ ಹೆಂಗಸನ್ನು ಕೊಲ್ಲಿಸಿದಿ. ಅವಳನ್ನು ಕೊಂದ ಮೇಲೆ ನೀನು ಅವಳ ಮನೆಗೆ ರಾತ್ರಿ ನುಗ್ಗಿ ಕಳವು ಮಾಡಿದಿ. ಗೋಪಾಲಸ್ವಾಮಿಯ ಕೊಲೆ ವಿಷಯ ನಿನಗೆ ತಿಳಿದುಬಂದರೂ ಅದರ ಪತ್ತೆ ತಂದೂಡು ಮಾಡದೆ ತಪ್ಪಿರುತ್ತೀ. ಅದಕ್ಕೆ ಪ್ರತಿಯಾಗಿ ಗೋಪಾಲಸ್ವಾಮಿಯ ಮೇಲೆ ನಗವೇನೂ ಇರಲಿಲ್ಲವೆಂದೂ ಅವನು ಕೊಲ್ಲಲ್ಪಡಲಿಲ್ಲವೆಂದೂ ಊಹೆ ಬರುವಂತೆ ಬಾಪುವಿನಿಂದ ೫೦ ರೂಪಾಯಿ ಲಂಚ ತೆಗೆದುಕೊಂಡು ರಿಪೋರ್ಟ್ ಬರೆದಿರುತ್ತೀ. ಅಪರಾಧಿಗಳನ್ನು ಪತ್ತೆ ಮಾಡುವುದಕ್ಕೆ ಬದಲಾಗಿ ನೀನು ಆ ಕೃತ್ಯಕ್ಕೆ ಸಹಾಯ ಮಾಡಿದಿ.

ಈ ರೀತಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಛಾರ್ಜ್ ಷೀಟನ್ನು ಓದಿ ಹೇಳಿದ ತರುವಾಯ ಪೊಲೀಸಿನವರು ಅವರಿಬ್ಬರನ್ನೂ ಡಿಸ್ಟ್ರಿಕ್ಟ್ ಲಾಕಪ್ಪಿಗೆ ಕರೆದುಕೊಂಡು ಹೋದರು. ಜಾಮೀನ್ ಮೇಲೆ ಬಿಡಬೇಕೆಂದು ಅವರು ಕೇಳಿಕೊಂಡದ್ದಕ್ಕೆ ಮ್ಯಾಜಿಸ್ಟ್ರೇಟರು ಬಿಡುವುದಿಲ್ಲವೆಂದು ಅರ್ಜಿಯನ್ನು ವಜಾ ಮಾಡಿದರು.

ತರುವಾಯ ವೆಂಕಟಸ್ವಾಮಿ ಭವಾನಿಸಿಂಗ್, ಡ್ಯಾನಿಯಲ್, ಗೋವಿಂದರಾಜು, ಪಾಕಿಯಂ, ಸುಬ್ರಹ್ಮಣ್ಯ, ಶಿವಪ್ರಸಾದ್, ವೆಂಕಟಸುಬ್ಬರಾವ್ ಎಂಬೀ ಎಂಟು ಮಂದಿ ಪೊಲೀಸಿನವರನ್ನು ಕೋರ್ಟಿನಲ್ಲಿ ಹಾಜರು ಮಾಡಿದಾಗ ಮ್ಯಾಜಿಸ್ಟ್ರೇಟರು ಅವರನ್ನೆಲ್ಲಾ ನಾಳೆ ಹಾಜರಾಗಬೇಕೆಂದು ಹೇಳಿ ಕಳುಹಿಸಿದರು.

ತಾ ೨೨ನೆ ಶುಕ್ರವಾರ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಈ ಮೊಕದ್ದಮೆಯು ವಿಚಾರಣೆಗೆ ಬರಲಾಯಿತು. ದರ್ಯಾಫ್ತು ಪ್ರಾರಂಭವಾಗುವುದಕ್ಕೆ ಮೊದಲು ಪೊಲೀಸ್ ಸೂಪರಿಂಟ್ ಮೆ|| ಹ್ಯಾನ್ನಿಂಗ್‌ಟನ್‌ರವರು ಇನ್ನೊಂದು ವಾರದ ತನಕ ಪುರಸತ್ತು ಕೊಟ್ಟರೆ ಅನುಕೂಲವೆಂದು ಮ್ಯಾಜಿಸ್ಟ್ರೇಟರನ್ನು ಕೇಳಿಕೊಂಡರು. ಅದರಂತೆ ಆಗಬಹುದೆಂದು ಮ್ಯಾಜಿಸ್ಟ್ರೇಟರು ಒಂದು ವಾರ ಹೀರಿಂಗ್ ಹಾಕಿದ್ದಾರೆ. ಅಪರಾಧಿ ಸಬ್ ಇನ್ಸ್‌ಪೆಕ್ಟರ್ ಶಾರ್ ಕಡೆಯ ಲಾಯರು ಜಾಮೀನನ್ನು ಜಾಮೀನ್ ಮೇಲೆ ಬಿಡಿಸಿಕೊಳ್ಳುವುದಕ್ಕೂ, ಈ ಮೊಕದ್ದಮೆಯನ್ನು ಇನ್ನೊಬ್ಬ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡಿಸುವಂತೆ ವರ್ಗ ಮಾಡಿಸಿಕೊಳ್ಳುವುದಕ್ಕೂ ಮದರಾಸ್ ಹೈ ಕೋರ್ಟಿನಲ್ಲಿ ಅರ್ಜಿ ಕೊಟ್ಟು ಪ್ರಯತ್ನ ಪಡುವನಾಗಿ ತಿಳಿಸಿದರು.

ಹೆಡ್ ಕಾನ್‌ಸ್ಟೇಬಲ್‌ಗಳಾದ ವೆಂಕಟಸುಬ್ಬರಾಯನನ್ನೂ ಡ್ಯಾನಿಯಲ್ಲನ್ನೂ ದರ್ಯಾಫ್ತು ಮಾಡುವುದನ್ನು ೨೩ ನೇ ತಾರೀಖಿಗೆ ಹೀರಿಂಗ್ ಇಟ್ಟುಕೊಡಬೇಕೆಂತಲೂ, ಅವರ ಜಾಮೀನ್‌ಪತ್ರಗಳನ್ನು ವಜಾ ಮಾಡಿ, ಅವರನ್ನು ಡಿಸ್ಟ್ರಿಕ್ಟ್ ಲಾಕಪ್ಪಿನಲ್ಲಿ ಇಡಿಸುವಂತೆ ಹುಕುಂ ಆಗಬೇಕೆಂತಲೂ ಪೊಲೀಸ್ ಇನ್ಸ್‌ಪೆಕ್ಟರ್ ಮೆ|| ಬಾರ್ಟಲ್ಸ್‌ಯವರು ಎರಡನೇ ಮ್ಯಾಜಿಸ್ಟ್ರೇಟ್ ಮೆ|| ಅಬ್ದುಲ್‌ರಹಮಾನ್‌ರವರನ್ನು ಕೇಳಿಕೊಂಡರು. ಅವರು ಅದೇ ರೀತಿ ಹುಕುಂಮಾಡಿದ್ದಾರೆ.

ಬೇರೆ ಐದುಜನ ಪೊಲೀಸಿನವರನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಮಾಡಿದರು. ಇವರನ್ನೆಲ್ಲಾ ಮರುದಿನ ಕೋರ್ಟಿಗೆ ಬರಬೇಕೆಂದು ಆಜ್ಞಾಪಿಸಿ, ಜಾಮೀನ್ ಮೇಲೆ ಬಿಟ್ಟಿರುತ್ತಾರೆ.

ಹೇಟೀ ದ್ವೀಪದಲ್ಲಿ ಗಲಭೆಯು.

ಪೂರ್ವಚರಿತ್ರೆ ಮತ್ತು ಸ್ಥಿತಿಗತಿಗಳು

ಕೆರಿಬಿಯನ್ ಕಡಲಿನಲ್ಲಿ ವೆಸ್ಟ್ (ಪಶ್ಚಿಮ) ಇಂಡಿಯಾ ಎಂಬ ದ್ವೀಪಗಳ ಸಮುದಾಯವಿರುತ್ತದೆ. ಈ ದ್ವೀಪಗಳ ಪೈಕಿ ಕ್ಯೂಬಾ ದ್ವೀಪವನ್ನು ಬಿಟ್ಟರೆ ಹೇಟಿ ಎಂಬ ದ್ವೀಪವೇ ಆ ದ್ವೀಪಸಮುದಾಯದಲ್ಲೆಲ್ಲಾ ಎರಡನೇದು ದ್ವೀಪವಾಗಿರುವುದು. ಒಂದಾನೊಂದು ಕಾಲದಲ್ಲಿ ಈ ಹೇಟಿ ದ್ವೀಪವು ಫ್ರೆಂಚರಿಗೆ ಸೇರಿದ್ದಿತು. ಈ ದ್ವೀಪವು ತುಂಬಾ ಫಲವತ್ತಾದದ್ದು; ಆ ದ್ವೀಪಗಳೊಳಗೆಲ್ಲಾ ಇದರ ರಚನೆಯು ಬಹಳ ಸುಂದರವಾಗಿರುತ್ತದೆ. ಆಫ್ರಿಕದಿಂದ ಪೂರ್ವಕಾಲದಲ್ಲಿ ನೀಗ್ರೋ ಎಂಬ ಕಪ್ಪುಜನರು ವರ್ಷಕ್ಕೆ ೩,೦೦೦ ಜನರ ಪ್ರಕಾರ ಹೋಗಿ ಹೇಟಿ ದ್ವೀಪದಲ್ಲಿ ನಿಂತು ಜೀವನೋಪಾಯವನ್ನು ಮಾಡಿಕೊಳ್ಳುತ್ತಾ ಬಂದದ್ದರಿಂದ ಕೆಲವು ಕಾಲದೊಳಗಾಗಿ ಆ ಜನರೇ ಆ ದ್ವೀಪದಲ್ಲಿ ಎಲ್ಲಿ ನೋಡಿದರೂ ಇರುವಂತೆ ತುಂಬಿಕೊಂಡರು. ಇವರು ಎಲ್ಲಾ ವಿಷಯಗಳಲ್ಲೂ ಮುಂದಕ್ಕೆ ಬಂದು ಸ್ವಲ್ಪಕಾಲದಲ್ಲೇ ಫ್ರೆಂಚರನ್ನು ಅಲ್ಲಿಂದ ಓಡಿಸಿ, ದ್ವೀಪದ ಆದ್ಯಂತವನ್ನೂ ತಮ್ಮ ಸ್ವಾಧೀನಮಾಡಿಕೊಂಡುಬಿಟ್ಟರು. ತರುವಾಯ ಆ ನೀಗ್ರೋ ಎಂಬ ಕಪ್ಪುಜನರು ಆ ದ್ವೀಪವನ್ನು ಪೂರ್ವಭಾಗವೆಂತಲೂ ಪಶ್ಚಿಮಭಾಗವೆಂತಲೂ ಎರಡು ವಿಭಾಗಗಳು ಮಾಡಿಕೊಂಡು, ತಾವೇ ತಾವಾಗಿ ಎರಡು ಸ್ವತಂತ್ರವಾದ ಪ್ರಜಾಪ್ರಭುತ್ವಗಳನ್ನು ಸ್ಥಾಪಿಸಿಕೊಂಡು, ಸುಮಾರು ಎರಡು ಶತಮಾನಗಳಿಂದ ಆ ದ್ವೀಪವನ್ನು ಆಳಿಕೊಳ್ಳುತ್ತಾ ಬಂದಿದ್ದಾರೆ. ಆದರಲ್ಲಿ ಈಚೆಗೆ, ಅಂದರೆ ಸುಮಾರು ೫೦ ವರುಷಗಳಿಂದ ಆವೆರಡು ಪ್ರಭುತ್ವಗಳೂ ಕ್ರಮವಾಗಿ ಪರಿಪಾಲನೆಗೆ ಅವಶ್ಯವಾದ ರಾಜ್ಯಭಾರ ಇಲಾಖೆಗಳನ್ನು ಏರ್ಪಡಿಸಿಕೊಂಡು, ಸ್ವತಂತ್ರವಾಗಿಯೇ ಕಾರುಬಾರಿಗಳನ್ನು ನಡಿಸಿಕೊಳ್ಳುತ್ತಾ ಬಂದಿರುವವು. ಇವಾದರೂ ಈ ಪ್ರಜಾಪ್ರಭುತ್ವಗಳ ಒಳಸಂಗತಿಗಳು ಪ್ರಪಂಚಕ್ಕೆ ಗೊತ್ತಾಗಿಲ್ಲ. ಈಗ ಏಕಾಏಕಿ ಅಲ್ಲಿ ರಾಜ್ಯಭಾರಸ್ಥಾನಗಳಲ್ಲಿ ಏನೋ ಗಲಭೆಗಳುಂಟಾಗಿ ಭಯಂಕರವಾದ ಕೊಲೆಗಳೂ ದೊಂಬಿಗಳೂ ನಡೆದಿರುವುದಾಗಿ ತಂತಿವರ್ತಮಾನಗಳು ಬಂದಿರುತ್ತವೆ. ಆಯಾ ತಾರೀಖಿನಲ್ಲಿ ಬಂದ ವರ್ತಮಾನಗಳನ್ನು ವಾಚಕರ ತಿಳಿವಳಿಕೆಯ ಬಗ್ಗೆ ಇಲ್ಲಿ ಪ್ರಕಟಿಸುವೆವು.

ಭಯಂಕರವಾದ ಕೃತ್ಯಗಳು

ಲಂಡನ್, ಮಾರ್ಚ್ ತಾ ೧೬ ನೇ ಸೋಮವಾರ—ಹೇಟಿದ್ವೀಪದ ಮುಖ್ಯಪಟ್ಟಣವಾದ ಪೋರ್ಟ್ ಆವ್ ಪ್ರಿನ್ಸ್ ಎಂಬಲ್ಲಿ ಬಹು ಭಯಂಕರವಾದ ರಾಜಕೀಯ ಗಲಭೆ ಹುಟ್ಟಿರುತ್ತದೆ. ಸರ್ಕಾರದವರು ಮುಖಂಡರಾದ ಇನ್ನೆರಡು ಮಂದಿ ದೊಡ್ಡಮನುಷ್ಯರನ್ನು ಏಕಾಏಕಿ ಅವರ ಹಾಸಿಗೆಗಳಿಂದ ಹಿಡಿದು ಎಳೆದುಕೊಂಡು ಬಂದು, ಅವರು ಯಾವುದೋ ಒಂದು ಫಿತೂರಿಯ ಗುಂಪಿನಲ್ಲಿ ಸೇರಿದ್ದರೆಂದು ಹೇಳಿ, ಅವರನ್ನೆಲ್ಲಾ ತತ್‌ಕ್ಷಣವೇ ಕೊಂದುಹಾಕಿಬಿಟ್ಟರು. ಈ ವರ್ತಮಾನವು ಪಟ್ಟಣದಲ್ಲಿ ಹರಡಿಕೊಂಡ ಒಡನೆಯೇ ಅನೇಕಾನೇಕರು ಮನೆಮಠಗಳನ್ನು ಬಿಟ್ಟು ಪ್ರಾಣಸಂರಕ್ಷಣಾರ್ಥವಾಗಿ ಪರರಾಜ್ಯಗಳ ರಾಯಭಾರಿಗಳಿದ್ದ ಬಂಗಲೆಗಳಿಗೆ ಹೋಗಿ ಅವರ ಆಶ್ರಯದಲ್ಲಿ ನಿಂತುಕೊಂಡರು. ಕೂಡಲೇ ಹೇಟಿ ಸರ್ಕಾರದವರು ಫ್ರೆಂಚ್ ಜರ್ಮನ್ ರಾಯಭಾರಿಗಳಿಗೆ ಬಂಧಿತವಾದ ಕಾಗದಗಳನ್ನು ಬರೆದು ಆ ಜನರನ್ನೆಲ್ಲಾ ತಮ್ಮ ವಶಕ್ಕೆ ಒಪ್ಪಿಸದೆ ಹೋದರೆ ತಾವು ಯುದ್ಧ ಮಾಡುವೆವೆಂದು ತಿಳಿಸಿದರು.

ಪರರಾಜ್ಯಗಳ ಕಾರ್ಯಗಳು

ಈ ಸುದ್ದಿಯನ್ನು ಕೇಳಿ ಇಂಗ್ಲಿಷ್ ಗವರ್ನಮೆಂಟಿನವರು ಹೇಟಿಯಲ್ಲಿರುವ ತಮ್ಮ ಪ್ರತಿನಿಧಿಯನ್ನೂ ತಮ್ಮ ಪ್ರಜೆಗಳನ್ನೂ ಕಾಪಾಡುವುದಕ್ಕೋಸ್ಕರ ಅಲ್ಲಿಗೆ ಎರಡು ಹಡಗುಗಳನ್ನು ಕಳುಹಿಸಿದ್ದಾರೆ. ಹಾಗೆಯೇ ಫ್ರೆಂಚರ ಮತ್ತು ಜರ್ಮನಿಯವರ ಯುದ್ಧದ ಹಡಗುಗಳೂ ಅಲ್ಲಿಗೆ ರವಾನಿಸಲ್ಪಟ್ಟವು. ಜರ್ಮನಿಯವರೂ ಫ್ರೆಂಚರೂ ಒಂದಾಗಿ ಕಾರ್ಯಗಳನ್ನು ನಡಿಸುವರೆಂದು ವರ್ತಮಾನವಿದೆ.

ಕ್ರೂರಕೃತ್ಯಗಳು

ಲಂಡನ್, ಮಾರ್ಚ್ ತಾ ೧೭ ನೇ ಮಂಗಳವಾರ—ಪೋರ್ಟ್ ಆವ್ ಪ್ರಿನ್ಸ್ ಪಟ್ಟಣದಲ್ಲಿ ಗವರ್ನಮೆಂಟಿನವರು ಭಾನುವಾರದ ದಿನ ೨೭ ಜನರನ್ನು ಕೊಲ್ಲಿಸಿದರು. ಇವರೆಲ್ಲಾ ಗವರ್ನಮೆಂಟನ್ನೇ ತಲೆಕೆಳಗು ಮಾಡಬೇಕೆಂದು ಫಿತೂರಿ ಮಾಡಿದವರೆಂಬುದಾಗಿ ಗುಮಾನಿ ಇತ್ತು. ಕೊಲೆಯಾದವರು ಕಪ್ಪುಜನರು. ಬಂದೀಖಾನೆಗಳೆಲ್ಲಾ ಸೆರೆಹಿಡಿಯಲ್ಪಟ್ಟ ಪ್ರಜೆಗಳಿಂದ ತುಂಬಿ ಹೋಗಿರುತ್ತವೆ. ಗುಮಾನಿಯಾದವರೆಗೆಲ್ಲಾ ಸಂಕೋಲೆ ಬೇಡಿಗಳನ್ನು ಕೊಡಿಸಿರುವರು. ಪ್ರಜಾಪ್ರಭುತ್ವದ ಪ್ರೆಸಿಡೆಂಟರು (ರಾಜ್ಯಭಾರದ ಮುಖ್ಯಾಧಿಕಾರಿಯು) ಪ್ರಜಾ ನೆಮ್ಮದಿಯನ್ನು ಕಾಪಾಡಲು ಏರ್ಪಾಡು ಮಾಡುತ್ತೇನೆಂದು ಇಸ್ತಿಹಾರು ಹಾಕಿಸಿದ್ದಾರೆ.

ಆ ಪಟ್ಟಣದಲ್ಲಿರುವ ಪರರಾಜ್ಯಗಳ ರಾಯಭಾರಿಗಳು (ಅಂದರೆ, ವಿಲಾಯತಿ, ಜರ್ಮನಿ, ಫ್ರಾನ್ಸ್ ರಾಜ್ಯಗಳ ಪ್ರತಿನಿಧಿಗಳು) ಅಲ್ಲಿರುವ ಪರದೇಶಿಗಳನ್ನೆಲ್ಲಾ ಕಾಪಾಡಬೇಕಾಗಿ ತೋರುತ್ತದೆ ಎಂಬುದಾಗಿ ತಮ್ಮ ತಮ್ಮ ಗವರ್ನಮೆಂಟಿಗೆ ವರ್ತಮಾನ ಕೊಟ್ಟಿದ್ದಾರೆ. ಇಂಗ್ಲಿಷ್ ರಾಯಭಾರಿಯಾದರೋ—ಅಲ್ಲಿ ಈಗ ಹುಟ್ಟಿರುವ ಈ ಗಲಭೆಯಲ್ಲಾ ಪರದೇಶಿಗಳನ್ನು ಅಲ್ಲಿಂದ ಓಡಿಸಿಬಿಡಬೇಕೆಂಬುವುದೇ ಅವರ ಮುಖ್ಯ ಉದ್ದೇಶವೆನ್ನುವುದಕ್ಕೆ ಸಂಶಯವಿಲ್ಲವೆಂದು ತಿಳಿಸಿದ್ದಾರೆ.

ಹೇಟೀ ಸರ್ಕಾರದವರು ಹೇಳುವುದು.

ಗೋನೇವಿಸ್ ಎಂಬ ಊರಿನಲ್ಲಿ ಫ್ರೆಂಚ್ ರಾಯಭಾರಿಯು ಇದ್ದಾನೆ. ಜನವರಿ ತಿಂಗಳಲ್ಲಿ ಒಂದು ದಂಗೆಯಾಯಿತು. ಜನರಲ್ ಫರ್ಮಿ ಎಂಬಾತನು ಈ ದಂಗೆಗೆ ಮುಖಂಡನಾಗಿದ್ದನು. ಅವನು ಕೆಲವು ಮುಖಂಡರನ್ನು ಸೇರಿಸಿಕೊಂಡು ಮುಸಲತ್ತುಗಳನ್ನು ಮಾಡಿ, ಪ್ರಭುತ್ವದ ಪ್ರೆಸಿಡೆಂಟರನ್ನೂ ಇಲಾಖೆಗಳ ಮಂತ್ರಿಗಳನ್ನೂ ಕೊಂದುಹಾಕಬೇಕೆಂದು ಫಿತೂರಿಮಾಡಿದನು. ಆ ದಗಾ ಆಯಿತು; ಅವನು ಫ್ರೆಂಚ್ ರಾಯಭಾರಿಯ ಆಶ್ರಯಕ್ಕೆ ಹೋಗಿ ಸೇರಿಕೊಂಡಿದ್ದಾನೆ. ಇಂಥಾ ಫಿತೂರಿಯು ನಡೆದಿರುವಂತೆ ಸರ್ಕಾರದವರಿಗೆ ಗೊತ್ತಾಗಿದೆ ಎಂದು ಹೇಟಿ ಗವರ್ನಮೆಂಟಿನವರು ತಿಳಿಸುತ್ತಾರೆ.

ಹೇಟಿಯಲ್ಲಿ ಪ್ರಜಾನೆಮ್ಮದಿಯು ಕೆಟ್ಟು ಬಹಳ ಭಯಂಕರವಾಗಿದ್ದ [illegible] ರಾಯಭಾರಿಗಳ ಆಶ್ರಯದಲ್ಲಿರುವಂಥಾ ಪ್ರಜೆಗಳನ್ನು ಹೇಟಿ ಸರ್ಕಾರದವರು ಊರು ಬಿಟ್ಟು ಹೋಗಗೊಡುವಂತೆ ಕಾಣುವುದಿಲ್ಲವೆಂದು ಅಮೇರಿಕದಿಂದ ತಿಳಿದುಬರುತ್ತದೆ.

ಅಮೇರಿಕದಿಂದ ಪೋರ್ಟ್ ಆವ್ ಪ್ರಿನ್ಸಿಗೆ ಎರಡು ಯುದ್ಧದ ಹಡಗುಗಳು ಕಳುಹಲ್ಪಟ್ಟಿವೆ. ಇಂಗ್ಲೀಷರ ಮತ್ತು ಜರ್ಮನಿಯ ಹಡಗುಗಳು ಅಲ್ಲಿಗೆ ಹೋಗಿ ತಲುಪಿದವು.

ಜನರು ಊರು ಬಿಟ್ಟು ಹೋಗುವಂತಾಯಿತು.

ಲಂಡನ್, ಮಾರ್ಚಿ ತಾ ೧೮ ನೇ ಬುಧವಾರ.—ಪ್ರಾಣಭಯಕ್ಕಾಗಿ ಪೋರ್ಟ್ ಆವ್ ಪ್ರಿನ್ಸ್ ನಗರದ ಪ್ರಜೆಗಳು ಪರರಾಜ್ಯಗಳ ರಾಯಭಾರಿಗಳ ಆಶ್ರಯದಲ್ಲಿ ಹೋಗಿ ಸೇರಿಕೊಂಡಿದ್ದಾರಷ್ಟೆ. ರಾಯಭಾರಿಗಳು ಅವರನ್ನೆಲ್ಲಾ ಅಲ್ಲಿಂದ ಇತರ ಕಡೆಗಳಿಗೆ ಕಳುಹಿಸಬಿಡುವುದಕ್ಕೆ ತಮಗೆ ಅವಕಾಶಕೊಡಬೇಕೆಂದು ಹೇಟೀ ಗವರ್ನಮೆಂಟಿನವರನ್ನು ಬರೆದು ಕೇಳಿದ್ದರು. ಇದಕ್ಕೆ ಗವರ್ನಮೆಂಟಿನವರು ಒಪ್ಪಿಕೊಂಡು, ಆ ಜನರನ್ನು ಕಳುಹಿಸಬಹುದೆಂದೂ, ಆದರೆ ಇನ್ನು ಮುಂದೆ ಆ ರಾಯಭಾರಿಗಳ ಬಂಗಲೆಗಳು ಯಾರಿಗೂ ಆಶ್ರಯಸ್ಥಾನಗಳಾಗಕೂಡದೆಂದೂ ಖಂಡಿತವಾಗಿ ತಿಳಿಸಿದ್ದಾರೆ.

ಲಂಡನ್, ಮಾರ್ಚಿ ತಾ. ೧೯ ನೇ ಗುರುವಾರ.—ಪರರಾಜ್ಯಗಳ ಯುದ್ಧದ ಹಡಗುಗಳು ಹೇಟಿದ್ವೀಪಕ್ಕೆ ಬಂದಿರುವುದರಿಂದಲೂ, ರಾಯಭಾರಿಗಳ ಆಶ್ರಯದಲ್ಲಿದ್ದ ಜನರನ್ನು ಇತರ ಕಡೆಗಳಿಗೆ ಕಳುಹಿಸಬಹುದೆಂದು ಹೇಟಿ ಸರ್ಕಾರದವರು ಅನುಮತಿಕೊಟ್ಟು ರಾಯಭಾರಿಗಳಿಗೆ ತಿಳಿಸಿದ್ದರಿಂದಲೂ ಅಲ್ಲಿನ ಗಲಭೆಯೆಲ್ಲಾ ಶಮನವಾಗಿರುತ್ತದೆ.

ತಿನ್ನವೆಲ್ಲಿ ಪಟ್ಟಣದಲ್ಲಿ ದಂಗೆಯು.

ತಿನ್ನವೆಲ್ಲಿಯಲ್ಲೂ ಟುಟಿಕೊರಿನ್‌ನಲ್ಲೂ ಪುಂಡುಜನರು ದಂಗೆಯೆದ್ದು ನಡಿಸಿದ ನಾನಾ ಅಕೃತ್ಯಗಳನ್ನೂ ಸರ್ಕಾರದವರು ಕೂಡಲೇ ಪ್ರಜಾನೆಮ್ಮದಿಯನ್ನು ಕಾಪಾಡುವುದಕ್ಕೆ ಮಾಡಿದ ಕಾರ್ಯಗಳನ್ನೂ ಸ್ವಲ್ಪಮಟ್ಟಿಗೆ ಕಳೆದವಾರ ತಿಳಿಸಿರುತ್ತೇವಷ್ಟೆ. ಈಚೆಗೆ ಅಲ್ಲಿ ನಡೆದಿರುವ ವಿದ್ಯಮಾನಗಳೇನೆಂದರೆ—

ಸರ್ಕಾರಿ ಅಧಿಕಾರಿಗಳು ಪೋಲೀಸಿನವರನ್ನು ಊರಿನ ಬೀದಿಗಳಲ್ಲೆಲ್ಲಾ ನೇಮಿಸಿ ಪ್ರಜಾನೆಮ್ಮದಿಗೆ ಭಂಗಬಾರದಂತೆ ಬಂದೋಬಸ್ತು ಮಾಡಿಸುತ್ತಿದ್ದಾರೆ. ಪ್ರಜೆಗಳು ಒಟ್ಟುಕೂಡಿ, ಸಭೆಗಳನ್ನು ನಡಿಸಕೂಡದೆಂಬ ಹೊಸ ಕಾನೂನನ್ನು ಆ ಪಟ್ಟಣಗಳಲ್ಲಿ ಜಾರಿಗೆ ತಂದಿರುವರು. ಆ ಭಾನುವಾರವೂ ವರ್ತಕರು ಅಂಗಡಿಗಳನ್ನು ತೆರೆಯಲಿಲ್ಲ. ಸರ್ಕಾರದವರ ಪ್ರೋತ್ಸಾಹ ಬಲವಂತಗಳಿಂದ ಈಚೆಗೆ ವ್ಯಾಪಾರಗಳು ಎಂದಿನಂತೆ ನಡೆಯುತ್ತಿರುವುವು. ಪೋಲೀಸ್ ಸ್ಟೇಷನ್ ಹೌಸ್ ಆಫೀಸಿನವರಾಗಿದ್ದು, ಸ್ವದೇಶೀ ಕಾರ್ಯಾಸಕ್ತನಾದ್ದರಿಂದ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದ ಗುರುನಾಥ ಐಯಂಗಾರೆಂಬಾತನನ್ನು ಟುಟಿಕೊರಿನ್‌ನಿಂದ ಹಿಡಿದು ಒಡನೆಯೇ ಸರ್ಕಾರದವರು ದಸ್ತಗಿರಿಮಾಡಿದರು. ತಿನ್ನವೆಲ್ಲಿಯಲ್ಲೂ ಟುಟಿಕೊರಿನ್‌ನಲ್ಲೂ ಅನೇಕ ಜನರನ್ನು ದೊಂಬಿಗೆ ಸೇರಿದ್ದರೆಂದು ಹಿಡಿದು ಲಾಕಪ್ಪಿನಲ್ಲಿ ಹಾಕಿಕೊಂಡಿದ್ದಾರೆ.

ದಂಗೆಯಲ್ಲಿ ನಡೆದ ಕೆಲವು ಸಂಗತಿಗಳು

ದಂಗೆಯಾದ ದಿನ ಜನರು ದೊಂಬಿ ಮಾಡುತ್ತಾ ಸಿ. ಎಂ. ಎಸ್. ಕಾಲೇಜ್ ಎಂಬ ಪಾಠಶಾಲೆಗೆ ಹೋಗಿ, ಅದರ ನಾಲ್ಕು ಕಡಗಳನ್ನು [illegible] ಹೆಡ್ ಮಾಸ್ಟರ್ ಮಿ॥ ಎಚ್. ಷಾಫ್ಟರ್‌ಯವರು ಇದ್ದ ಕೊಠಡಿಯನ್ನು ನುಗ್ಗಬೇಕೆಂದು ಹೊರಟರು. ಅವರ ಚಲ್ಲಯ್ಯನೆಂಬ ಒಬ್ಬ ವಿದ್ಯಾರ್ಥಿಯು ಕೈಲಿ ಒಂದು ಚಾಕುವನ್ನು ಹಿಡಿದು ಬಾಗಿಲಲ್ಲಿ ನಿಂತು, ಯಾರೂ ಒಳಕ್ಕೆ ಪ್ರವೇಶಿಸದಂತೆ ತಡೆದು, ಬಹು ಧೈರ್ಯದಿಂದ ಗುರುವನ್ನು ಕಾಪಾಡಿದನು. ಆದರೆ ಮಿ॥ ಷಾಫ್ಟರ್‌ಯವರು ಅನೇಕ ವರುಷಗಳಿಂದ ಆ ಊರಿನಲ್ಲೇ ಇದ್ದುಕೊಂಡು, ಜನರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿರತಕ್ಕವರಾದಕಾರಣ, ಅವರೇ ಹೊರಕ್ಕೆ ಬಂದು, ದೊಂಬಿಯಲ್ಲಿದ್ದ ಜನರನ್ನು ಕರೆದು ಅವರಿಗೆ ಹಿತವಾದ ಮಾತುಗಳನ್ನು ಹೇಳಿ ಸಮಾಧಾನಪಡಿಸಿ, ಗುಂಪನ್ನು ಅಲ್ಲಿಂದ ಮುಂದಕ್ಕೆ ಕಳುಹಿಸಿಬಿಟ್ಟರು.

ಮ್ಯುನಿಸಿಪಾಲಿಟಿಯ ನಷ್ಟ

ಈ ದಂಗೇ ಕಾರ್ಯಗಳಲ್ಲೆಲ್ಲಾ ಮ್ಯುನಿಸಿಪಲ್ ಆಫೀಸಿಗೇ ಬಹಳ ನಷ್ಟವಾಯಿತು. ಸುಮಾರು ೩೦,೦೦೦ ರೂಪಾಯಿ ಖರ್ಚುಮಾಡಿ ರಮ್ಯವಾಗಿ ಕಟ್ಟಿಸಿದ್ದ ಮ್ಯುನಿಸಿಪಲ್ ಆಫೀಸು ಈಗ ಸಂಪೂರ್ಣವಾಗಿ ನಿರ್ನಾಮವಾಯಿತು. ಅದರೊಳಗೆ ಇಟ್ಟಿದ್ದ ಸಮಸ್ತ ರಿಕಾರ್ಡುಗಳೂ ಸುಟ್ಟುಹೋದವು. ಆದರೆ ಸುಮಾರು ೧,೦೦೦ ರೂಪಾಯಿ ಬೆಲೆಬಾಳುವ ಮ್ಯುನಿಸಿಪಾಲಿಟಿಯು ಕಟ್ಟಿಸಿದ್ದ ಪಟ್ಟಗೆಯೊಂದೇ ಉಳಿಕೊಂಡಿತು. ಶ್ರೀಮೆಯಲ್ಲಿಯನ್ನು ಭರ್ತಿಮಾಡಿಟ್ಟುಕೊಂಡಿದ್ದ ಮ್ಯುನಿಸಿಪಲ್ ಲೈಬ್ರರಿ ಸಂಪೂರ್ಣವಾಗಿ ನಾಶವಾಯಿತು.

ಪೋಲೀಸ್ ಸ್ಟೇಷನ್.

ದಂಗೆಕೋರರ ಪೋಲೀಸ್ ಸ್ಟೇಷನಿಗೆ ನುಗ್ಗಿದಾಗ ಅಲ್ಲಿ ಕಾವಲಿಗಿಟ್ಟ ಪೋಲೀಸಿನವನು ಅವರನ್ನು ತಡೆಯಬೇಕೆಂದು ಅವರ ಮೇಲೆ ಹುಸಿಮದ್ದು ಹಾಕಿ ಮಾಮೂಲಿನಂತೆ ಗುಂಡುಹೊಡೆದನು. ಗುಂಪಿನಲ್ಲಿ ಒಬ್ಬನಿಗೆ ಅದರಿಂದ ಗಾಯವಾಯಿತು. ಜನರು ಆ ಪೋಲೀಸಿನವರನ್ನು ಹೊಡೆದುಮಲಗಿಸಿ, ಒಳಕ್ಕೆ ನುಗ್ಗಿ ಒಳಗಿದ್ದ ೩೦ ಬಂದೂಕು ರಿವಾಲ್ವರ್‌ಗಳನ್ನೂ ತೋಟಾ ಮತ್ತು ಗೋಲಿಗಳನ್ನೂ ರಿಕಾರ್ಡುಗಳನ್ನೂ ಒಟ್ಟು ಸೇರಿಸಿ ಬೆಂಕಿಹಾಕಿ ಸುಟ್ಟುಬಿಟ್ಟರು. ಕೆಲವು ಬಂದೂಕುಗಳನ್ನು ಎತ್ತಿಕೊಂಡು ಹೋದರೆಂದೂ ತಿಳಿದುಬಂದಿದೆ.

ಮುನ್ಸಿಫ್ ಕೋರ್ಟಿನ ದುರವಸ್ಥೆಯು

ಮುನ್ಸಿಫ್ ಕೋರ್ಟಿಗೆ ಈ ದೊಂಬಿ ಜನರು ಹೋದಾಗ ಮುನ್ಸಿಫರು ಮೊಕದ್ದಮೆಯನ್ನು ದರ್ಯಾಫ್ತು ಮಾಡುತ್ತಿದ್ದರು. ದಂಗೆಕೋರರು ಮುನ್ಸಿಫರನ್ನು ಹೊರಕ್ಕೆ ಬರುವಂತೆ ಕರೆದರು. ಕೋರ್ಟಿನಲ್ಲಿ ಇವರೇನು ಮಾಡುತ್ತಾರೋ ಎಂದು ಹೆದರಿ, ಮುನ್ಸಿಫರು ಹೊರಗೆಬಂದರು. ದಂಗೆಕೋರರು ಕೋರ್ಟನ್ನು ಮುಚ್ಚಿಬಿಡಿ ಎಂದು ಕೇಳಿದರು. ಜನರ ಗುಂಪನ್ನು ನೋಡಿ ಅವರ ಮಾತನ್ನು ತಿರಸ್ಕರಿಸಿದರೆ ಅವರಿಂದಾಗಬಹುದಾದ ಕೆಡುಕನ್ನು ಮುನ್ಸಿಫರು ಯೋಚಿಸಿ, ಕೋರ್ಟನ್ನು ಅವರ ಮಾತಿನಪ್ರಕಾರ ಮುಚ್ಚಿಬಿಟ್ಟರು. ವಕೀಲರೂ ಕಕ್ಷಿಗಾರರೂ ಮನೆಗಳಿಗೆ ಹೋಗಿ ಸೇರಿಕೊಂಡರು. ಜನರ ಗುಂಪು ಅಲ್ಲಿಗೆ ಸುಮ್ಮನಾಗದೆ ಕೋರ್ಟಿನೊಳಕ್ಕೆ ಪ್ರವೇಶಿಸಿ ಕೆಲವು ಸಾಮಾನುಗಳನ್ನೂ ಲೆಕ್ಕದ ಪುಸ್ತಕಗಳನ್ನೂ ಹೊರಕ್ಕೆ ತಂದು ರಾಶಿಹಾಕಿ ಬೆಂಕಿಯಿಟ್ಟು ಸುಟ್ಟರು. ಕೋರ್ಟಿನ ಮುಂಭಾಗದಲ್ಲಿದ್ದ ಒಂದು ಚಪ್ಪರವೂ ಹತ್ತಿ ಉರಿದು ಹೋಯಿತು.

ಪೋಸ್ಟ್ ಆಫೀಸು

ಪೋಸ್ಟ್ ಆಫೀಸಿಗೆ ಮೊದಲು ದಂಗೆಕೋರರು ನುಗ್ಗಿ ಎಲ್ಲಾ ಹಾಳುಮಾಡಬೇಕೆಂದು ಹೋದರು. ಆದರೆ ಪೋಸ್ಟ್ ಮಾಸ್ಟರ್ ಮಿ॥ ಶಂಕರನಾರಾಯಣ ಐಯರು ಅದರ ಸುಳಿವನ್ನು ತಿಳಿದು ಪೋಸ್ಟ್ ಆಫೀಸಿನ ಮುಂಬಾಗಿಲನ್ನು ಹೊಚ್ಚಿ ಬಲಪಡಿಸಿದರು. ಇನ್ನೊಂದು ಕಡೆಯ ಬಾಗಿಲಲ್ಲಿ ಪೋಸ್ಟ್ ಜವಾನರನ್ನೂ ಇತರ ನೌಕರರನ್ನೂ ನಿಲ್ಲಿಸಿಕೊಂಡು, ಒಳಕ್ಕೆ ಯಾರನ್ನೂ ಬಿಡದಂತೆ ಬಂದೋಬಸ್ತು ಮಾಡಿದರು. ದಂಗೇ ಜನರು ಹೆಬ್ಬಾಗಿಲನ್ನು ಬಡಿದು ನೋಡಿ ಅಲ್ಲಿ ಸಾಧ್ಯವಾಗದಿರಲು, ಇನ್ನೊಂದು ಕಡೆಯ ಬಾಗಿಲಿಗೆ ಹೋದರು. ಅಲ್ಲೂ ಜವಾನರೇ ಮುಂತಾದವರು ಅವರಿಗೆ ಅವಕಾಶಕೊಡದೆ ಓಡಿಸಿಬಿಟ್ಟರು. ಆದರೂ ಜನರು ಸಮೀಪದಲ್ಲಿದ್ದ ಒಂದು ಜೋಪಡಿಗೆ ಬೆಂಕಿ ಹಾಕಿ ಸುಟ್ಟರು.

ಅಂತ್ಯ ವಿಚಾರಗಳು.

ಕಡೆಗೆ ದಂಗೆಯನ್ನು ಶಮನ ಮಾಡುವುದಕ್ಕೆಂದು ಅಧಿಕಾರಿಗಳೆಲ್ಲಾ ಅಲ್ಲಿಗೆ ಹೋದಾಗ ದಂಗೆಕೋರರು ಅವರ ಮೇಲೂ ಕಲ್ಲುಗಳನ್ನೆಸೆದು ಗಾಯಪಡಿಸಲಾರಂಭಿಸಿದರು. ಡಿಪ್ಟಿ ಮ್ಯಾಜಿಸ್ಟ್ರೇಟ್ ಮಿ॥ ಘಮರಂಗರಾಜಯ್ಯಂಗಾರವರು ಅದೇ ಊರಿನವರಾದ್ದರಿಂದ ಜನರ ಗುಂಪಿನೊಳಕ್ಕೆ ಹೋಗಿ ಅವರಿಗೆ ಬುದ್ಧಿ ಹೇಳುತ್ತಾ ಇರುವಲ್ಲಿ ಒಬ್ಬ ಪ್ರಾಯದ ಸಮರ್ಥನು ಅವರಿಗೆ ಹೇಳಿದ್ದೇನೆಂದರೆ—"ನಾಯನಾ! ನೀವೇನೇ ಅಂತಃ ನಮಗೇ ಸಹಾಯ ಮಾಡಬೇಕೆನ್ನುವವರು. ಇದನ್ನು ನಾವು ಬಲ್ಲೆವು. ನಮಗೆ ಒಂದು ಉದ್ದೇಶವಿದೆ. ಅದೇನೂ ಅಕ್ರಮವಾದದ್ದಲ್ಲ. ನೀವು ನಮಗೆ ಸಹಾಯ ಮಾಡಿರೆಂದು ನಮಗೆ ನಂಬಿಕೆ ಸಂಪೂರ್ಣವಾಗಿದೆ. ಆದಕಾರಣ ನಾವೇನೂ ಹೆದರತಕ್ಕವರಾಗಿಲ್ಲ" ಎಂದು ಹೇಳಿದನು. ಗುಂಪೆಲ್ಲಾ ಈ ಮಾತು ಕೇಳಿ "ವಂದೇಮಾತರಂ" ಎಂದು ಕೂಗಿದರು. ಪೋಲೀಸ್ ಇನ್ಸ್ಪೆಕ್ಟರು ಆ ಪ್ರಾಯಸಮರ್ಥನನ್ನು ದಸ್ತಗಿರಿ ಮಾಡಿದರು. ದೊಂಬಿಯು ಚದುರುವುದಿಲ್ಲವೆಂದು ಕಂಡು, ಅಧಿಕಾರಿಗಳ ಮೇಲೆ ಕಲ್ಲೆಸೆಯುತ್ತಾ ಬಂದಾಗ, ಸರ್ಕಾರದವರು ಹುಸಿಮದ್ದು ಹಾಕಿಸಿ ಆಕಾಶಕ್ಕೆ ಎತ್ತಿ ಬಂದೂಕು ಹಾರಿಸಿದರು. ಆದರೂ ಜನರು ಲಕ್ಷ್ಯಮಾಡಲಿಲ್ಲ. ತರುವಾಯ ಹುಸಿಮದ್ದು ಹಾಕದೆ ಗುಂಪಿನೊಳಕ್ಕೇ ಹೊಡೆದರು. ಕೆಲವರಿಗೆ ಗಾಯವಾಗಿ, ಗಾಯವಾಯಿತು. ಆಗಲೂ ಆ ಗುಂಪು ಕದಲಲಿಲ್ಲ. ಕಡೆಯಲ್ಲಿ ಚರೆ ಗುಂಡುಗಳನ್ನು ಹಾಕಿಯೇ ಹೊಡೆಯಬೇಕಾಯಿತು. ಇದರಿಂದ ನಾಲ್ವರು ಮೃತಪಟ್ಟರೆಂದು ಸರ್ಕಾರದವರು ತಿಳಿಸಿರುತ್ತಾರೆ. ಜನರು ಸತ್ತು ಬಿದ್ದದ್ದನ್ನು ನೋಡಿದಕೂಡಲೇ ಗುಂಪೆಲ್ಲಾ ಚದರಿಹೋಯಿತು.

ದಸ್ತಗಿರಿಮಾಡಿ, ಶಿಕ್ಷೆ ವಿಧಿಸಿದ್ದು

ತಿನ್ನವೆಲ್ಲಿಯಲ್ಲೂ ಟುಟಿಕೊರಿನ್‌ನಲ್ಲೂ ದಂಗೆಕೋರರ ಗುಂಪಿನಲ್ಲಿದ್ದವರೆಂದು ಹೇಳಿ ಸರ್ಕಾರದವರು ಸುಮಾರು ೫೦ ಮಂದಿಯನ್ನು ದಸ್ತಗಿರಿ ಮಾಡಿಸಿದರು. ಇತರರನ್ನೂ ದಸ್ತಗಿರಿ ಮಾಡುವವರಾಗಿದ್ದಾರೆ. ಜಾಯಿಂಟ್ ಮ್ಯಾಜಿಸ್ಟ್ರೇಟ್ ಮಿ॥ ಆಷೆಯವರು ಈ ದಂಗೆಯಲ್ಲಿ ಹಿಡಿಯಲ್ಪಟ್ಟವರನ್ನೆಲ್ಲಾ ಸಮ್ಮರಿಯಾಗಿ ದರ್ಯಾಫ್ತು ಮಾಡಿ, ಅಕ್ರಮಕೂಟಕ್ಕೆ ಸೇರಿದ್ದವರೆಂದು ಅವರ ಮೇಲೆ ತಪ್ಪು ಹೊರಿಸಿ ಶಿಕ್ಷೆ ವಿಧಿಸಿದ್ದು ಹ್ಯಾಗೆಂದರೆ—೯ ಜನರಿಗೆ ಆರುವಾರ ಬರಖಾಸ್ತಾಗುವ ತನಕ ಸಜಾ, ೩ ಮಂದಿಗೆ ಒಂದು ವಾರ ಸಜಾ, ೫ ಮಂದಿಗೆ ಎರಡುವಾರ, ೭ ಜನರಿಗೆ ಮೂರು ವಾರ, ಇಬ್ಬರಿಗೆ ನಾಲ್ಕು ವಾರ, ಈ ರೀತಿ ಸಾದಾ ಸಜಾ ವಿಧಿಸಿದರು. ಉಳಿದ ಅಪರಾಧಿಗಳನ್ನು ಮುಂದೆ ದರ್ಯಾಫ್ತು ಮಾಡುವರು.

ಶಿಕ್ಷಾರ್ಥವಾದ ಪೋಲೀಸ್ ಪಹರೆ

ಮದರಾಸ್ ಗವರ್ನಮೆಂಟಿನವರು ಮುಂದೆ ಹೇಳುವ ಸ್ಥಳಗಳಲ್ಲಿ ಪ್ರಜಾನೆಮ್ಮದಿಗೆ ಭಂಗಬಾರದಿರುವುದೆಂತಲೂ, ಅದನ್ನು ಶಮನಮಾಡುವುದಕ್ಕಾಗಿ ಆರು ತಿಂಗಳ ವರೆಗೆ ಆ ಪ್ರದೇಶದಲ್ಲಿ ಶಿಕ್ಷಾರ್ಥವಾದ ಪೋಲೀಸ್ ಸಿಬ್ಬಂದಿಯನ್ನು ಈಗಿರುವ ಪೋಲೀಸ್ ಸಿಬ್ಬಂದಿಯ ಜೊತೆಗೆ ನೇಮಿಸಿದೆ ಎಂತಲೂ, ಈ ಹೊಸ ಪೋಲೀಸ್ ಸಿಬ್ಬಂದಿಯ ಸಂಬಳವನ್ನೆಲ್ಲಾ ಆಯಾ ಪ್ರಾಂತ್ಯದ ಪ್ರಜೆಗಳಿಂದಲೇ ವಸೂಲ್ಮಾಡಿ ಜಮಾ ಮಾಡಬೇಕೆಂತಲೂ ಹುಕುಂ ಕೊಟ್ಟಿದ್ದಾರೆ. ಆ ಪ್ರದೇಶಗಳೂ, ಪೋಲೀಸ್ ಸಿಬ್ಬಂದಿಯೂ, ಯಾವುವು ಮತ್ತು ಎಷ್ಟೆಂದರೆ – ತಿನ್ನವೆಲ್ಲಿ ಮ್ಯುನಿಸಿಪಲ್ ಟೌನಿಗೆ ಇಬ್ಬರು ಇನ್ಸ್ಪೆಕ್ಟರು, ೫ ಜನ ಸಾರ್ಜೆಂಟರು, ೧೫ ಮಂದಿ ಹೆಡ್ ಕಾನ್ಸ್ಟೇಬಲ್‌ಗಳು, ೧೫೦ ಕಾನ್ಸ್ಟೇಬಲ್‌ಗಳು, ತಾಚನಲ್ಲೂರ್ ಸ್ಟೇಷನ್ ಸರಹದ್ದಿಗೆ ಸೇರಿದ ನಾಲ್ಕು ಹಳ್ಳಿಗಳು ವಿನಾ ಉಳಿದ ಗ್ರಾಮಗಳಿಗೆಲ್ಲಾ ಒಬ್ಬ ಸಾರ್ಜೆಂಟು, ಇಬ್ಬರು ಹೆಡ್ ಕಾನ್ಸ್ಟೇಬಲ್‌ಗಳು, ೨೫ ಮಂದಿ ಕಾನ್ಸ್ಟೇಬಲ್‌ಗಳು; ಟುಟಿಕೊರಿನ್ ಮ್ಯುನಿಸಿಪಲ್ ಟೌನಿಗೂ ಇನ್ನು ಮೂರು ಗ್ರಾಮಗಳಿಗೂ ಒಬ್ಬ ಇನ್ಸ್ಪೆಕ್ಟರು, ೩ ಮಂದಿ ಸಾರ್ಜೆಂಟರು, ೧೦ ಜನ ಹೆಡ್ ಕಾನ್ಸ್ಟೇಬಲ್‌ಗಳು, ೧೦೦ ಮಂದಿ ಕಾನ್ಸ್ಟೇಬಲ್‌ಗಳು.

ದೇವಸ್ಥಾನದ ಮೆರವಣಿಗೆಯು.

ಅದೇ ಗಲಭೆಯ ಕಾಲದಲ್ಲಿ ತಿನ್ನವೆಲ್ಲಿ ಟೌನಿನಲ್ಲೂ ನದಿಯ ಬಳಿಯೂ ಹಿಂದೂ ದೇವಸ್ಥಾನದ ದೇವರ ಉತ್ಸವ ನಡಿಯಬೇಕಾಗಿತ್ತು. ಆಗ್ಗೆ ಪದ್ಧತಿಯಂತೆ ಸಾವಿರಾರು ಜನರು ಸೇರಿದರು. ಈ ದೇವರ ಉತ್ಸವಕ್ಕೆ ಅಡ್ಡಿಮಾಡುವುದು ಯೋಗ್ಯವಲ್ಲವೆಂದು ಸರ್ಕಾರದವರು ಯೋಚಿಸಿ, ಪೋಲೀಸಿನವರ ಸಹಾಯಕೊಟ್ಟು, ಪದ್ಧತಿಯ ಪ್ರಕಾರ ಉತ್ಸವವನ್ನು ಊರಿನಲ್ಲಿ ಮಾಡಿಸಿದರು. ಆದರೆ ನದಿಯ ಬಳಿ ಜನರು ದೊಂಬಿ ಸೇರುವುದು ಕ್ಷೇಮಕರವಲ್ಲವೆಂದು ನೆನಸಿ, ಅದನ್ನು ಮಾತ್ರ ನಿಲ್ಲಿಸಿಬಿಟ್ಟರು.

ಸ್ವದೇಶೀ ಬೋಧಕರು

ಸ್ವದೇಶೀ ಬೋಧಕರಾದ ಚಿದಂಬರಂಪಿಳ್ಳೆ, ಸುಬ್ರಹ್ಮಣ್ಯಶಿವಾ ಮೊದಲಾದವರನ್ನು ಜಾಮೀನ್ ಮೇಲೆ ಬಿಡುವ ವಿಚಾರದಲ್ಲಿ ಸೆಷನ್ಸ್ ಜಡ್ಜರು ಲಾಯರುಗಳ ಗೋಷ್ಠಲವನ್ನು ಕೇಳಿ, ಕಡೆಗೆ ಅವರನ್ನು ಜಾಮೀನಿನ ಮೇಲೆ ಬಿಡಲಾಗ ಮಾಡುವುದಿಲ್ಲವೆಂದು ಹೇಳಿಬಿಟ್ಟರು.

ಚಿದಂಬರಂಪಿಳ್ಳೆ, ಸುಬ್ರಹ್ಮಣ್ಯಶಿವಾ, ಪದ್ಮನಾಭ ಐಯಂಗಾರ್ ಎಂಬೀ ಮೂರು ಮಂದಿಯನ್ನೂ ಜಾಮೀನ್ ಮೇಲೆ ಬಿಟ್ಟುಕೊಡಬೇಕೆಂದು ಮದರಾಸ್ ಪಟ್ಟಣದ ಹೈಕೋರ್ಟ್ ವಕೀಲ್ ಮಿ॥ ರಂಗಾಚಾರ್ಯರು ಹೈಕೋರ್ಟಿನಲ್ಲಿ ಅರ್ಜಿ ಕೊಟ್ಟು, ಚಿದಂಬರಪಿಳ್ಳೆಯು ೨ ನೇ ಗ್ರೇಡ್ ಪ್ಲೀಡರ್‌ರೆಂದೂ ಸ್ವದೇಶೀ ಹಡಗಿನ ಕಂಪನಿಯ ಏಜಂಟಾಗಿಯೂ ಇರುವನೆಂತಲೂ, ಎರಡನೆಯವರು ಒಬ್ಬ ಸನ್ಯಾಸಿ ಎಂತಲೂ, ಮೂರನೆಯವರು ಮೊದಲು ಮದರಾಸ್ ಹೈಕೋರ್ಟಿನಲ್ಲಿ ಟ್ರಾನ್ಸ್ಲೇಟರಾಗಿದ್ದು ಈಚೆಗೆ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಸ್ವದೇಶೀ ಬೋಧಕರಾಗಿದ್ದಾರೆಂತಲೂ, ಇಂಥವರನ್ನು ಕೆಳಗಿನ ಕೋರ್ಟುಗಳವರು ಜಾಮೀನ್ ಮೇಲೆ ಬಿಡದೆ ಇದ್ದಾರೆಂತಲೂ, ಕಾನೂನುಗಳನ್ನು ಉದಾಹರಿಸಿ ಹೇಳಿಕೊಂಡರು. ಇಬ್ಬರು ಜಡ್ಜಿಗಳು ಉಭಯ ಕಕ್ಷಿಯ ವಕೀಲರ ಹೇಳಿಕೆಯನ್ನೂ ಕೇಳಿ, ಮೇಲ್ಕಂಡ ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡತಕ್ಕದ್ದೆಂದು ತೀರ್ಮಾನ ಮಾಡಿದರು. ಪ್ರತಿ ಒಬ್ಬರೂ ೨,೫೦೦ ರೂಪಾಯಿನ ಸ್ವಂತ ಮುಚ್ಚಳಿಕೆಯನ್ನು ಬರೆದುಕೊಡುವುದಲ್ಲದೆ ೧,೦೦೦ ರೂಪಾಯಿನ ಇಬ್ಬರು ಜಾಮೀನ್ದಾರರನ್ನು ಒದಗಿಸಬೇಕೆಂದು ಹುಕುಂ ಆಗಿದೆ.

ವಕೀಲರ ಮೇಲೆ ಮೊಕದ್ದಮೆಯು.

ಟುಟಿಕೊರಿನ್ ಪಟ್ಟಣದಲ್ಲಿ ಲಾಯರುಗಳಾಗಿರುವ ಕೆ. ಆರ್. ವೆಂಕಟರಾಮ ಐಯರ್ (ಇವರು ಮಿ॥ ಗುರುಸ್ವಾಮಿ ಐಯರವರ ಸಹೋದರರು), ಪಿ. ಎಲ್. ವೇಂಗು ಐಯರ್, ಬಾಳಾಜಿರಾವ್, ರಾಮಕೃಷ್ಣಯ್ಯ, ನಾರಾಯಣಸ್ವಾಮಿ ಶಾಸ್ತ್ರಿಗಳ್ ಎಂಬೀ ಐದು ಮಂದಿ ಹೈಕೋರ್ಟ್ ವಕೀಲರ ಮೇಲೂ ಜಾಯಿಂಟ್ ಮ್ಯಾಜಿಸ್ಟ್ರೇಟ್ ಮಿ॥ ಆಷೆಯವರು ನೋಟೀಸ್ ಜಾರಿ ಮಾಡಿಸಿದ್ದಾರೆ. ಇವರೆಲ್ಲಾ ಪ್ರಜಾನೆಮ್ಮದಿಗೆ ಭಂಗವನ್ನುಂಟುಮಾಡುವುದಕ್ಕೆ ಪ್ರಯತ್ನಪಟ್ಟರೆಂತಲೂ, ಜನರಲ್ಲಿ ಸ್ವದೇಶೀ ಪ್ರೋತ್ಸಾಹಕ್ಕಾಗಿ ಪರಸ್ಪರ ಮನೋವ್ಯಥೆಯುಂಟಾಗುವಂತೆ ಮಾಡಿದರೆಂತಲೂ, ವಿದೇಶೀ ಸರಕನ್ನು ಯಾರೂ ಮುಟ್ಟಕೂಡದೆಂದು ಜನರಲ್ಲಿ ಭಯವನ್ನುಂಟುಮಾಡಿದರೆಂತಲೂ, ಆದಕಾರಣ ಅವರು ನೇಕಚಾಲಿನ ಜಾಮೀನ್ ಮುಚ್ಚಳಿಕೆ ಬರೆದುಕೊಡಬೇಕೆಂತಲೂ ಮ್ಯಾಜಿಸ್ಟ್ರೇಟರು ಕೇಳಿದ್ದಾರೆ. ಈ ಮೊಕದ್ದಮೆಯು ದರ್ಯಾಫ್ತಿಯಾಗುತ್ತಿದೆ.

ಪ್ರಜಾಪ್ರತಿನಿಧಿಗಳ ಪ್ರಾರ್ಥನೆಯು

ಶಿಕ್ಷಾರ್ಥವಾದ ಪೋಲೀಸ್ ಸಿಬ್ಬಂದಿಯನ್ನು ನೇಮಿಸುವುದು ನ್ಯಾಯವಲ್ಲವೆಂದೂ, ಈ ಭಾಗದಲ್ಲಿ ಪ್ರಜೆಗಳ ಅಹವಾಲನ್ನು ಲಾಲಿಸಿ ಕಟಂತರ ಹುಕುಂ ದಯಪಾಲಿಸಬೇಕೆಂತಲೂ ತಿನ್ನವೆಲ್ಲಿ ಟುಟಿಕೊರಿನ್ ಪಟ್ಟಣಗಳ ಪ್ರಜೆಗಳ ಪರವಾಗಿ ಮಿ॥ ಗುರುಸ್ವಾಮಿ ಐಯರವರು ಮದರಾಸ್ ಗವರ್ನರವರಿಗೆ ತಂತಿ ವರ್ತಮಾನ ಕೊಟ್ಟರು. ಇವರು ದೊಡ್ಡ ವಕೀಲರು, ಪ್ರಜೆಗಳ ಪಕ್ಷವನ್ನು ವಹಿಸಿ ಸರ್ಕಾರದಲ್ಲಿ ಹೋರಾಡತಕ್ಕವರು, ಮದರಾಸ್ ಗವರ್ನರವರ ಮಂತ್ರಾಲೋಚನಾ ಸಭೆಯಲ್ಲಿ ಮೆಂಬರಾಗಿಯೂ ಇರುತ್ತಾರೆ. ಇಂಥಾ ದೊಡ್ಡ ಮನುಷ್ಯರು ಕೊಟ್ಟ ತಂತೀ ವರ್ತಮಾನವನ್ನು ನೋಡಿ, ಮದರಾಸ್ ಗವರ್ನರವರು—ಆ ಪಟ್ಟಣಗಳ ಪ್ರಜಾಪ್ರತಿನಿಧಿಗಳು ಈ ತಿಂಗಳ ೨೮ನೆ ತಾರೀಖು ಶನಿವಾರದ ದಿನ ಬಂದು ತಮ್ಮ ಅಹವಾಲುಗಳನ್ನು ಸಾಕ್ಷಾತ್ತಾಗಿ ಹೇಳಿಕೊಳ್ಳಬಹುದು ಎಂಬರ್ಥಕ್ಕೆ ಮಿ॥ ಗುರುಸ್ವಾಮಿ ಐಯರಿಗೆ ತಂತಿಯ ಮೂಲಕ ಜವಾಬು ದಯಪಾಲಿಸಿರುತ್ತಾರೆ.

ಹಿಂದುಸ್ಥಾನದ ಜಮಾಖರ್ಚು.

ಕಳೆದ ಶುಕ್ರವಾರ ಮಧ್ಯಾಹ್ನ ಕಲ್ಕತ್ತಾ ಪಟ್ಟಣದಲ್ಲಿ ವೈಸ್‌ರಾಯ್ ಲಾರ್ಡ್ ಮಿಂಟೋ ಪ್ರಭುಗಳು ಮಂತ್ರಾಲೋಚನಾ ಸಭೆಯನ್ನು ನಡಿಸಿದರು. ಸಭೆಯಲ್ಲಿ ಇಂಡಿಯಾ ಗವರ್ನಮೆಂಟಿನ ಮೆಂಬರುಗಳೂ ಬೇರೆಬೇರೆ ಅಧಿಕಾರಿಗಳ ಪ್ರಜಾಪಕ್ಷದ ಗೌರವ ಮೆಂಬರುಗಳೂ ಹಾಜರಾಗಿದ್ದರು. ಈ ಸಭೆಯಲ್ಲಿ ಖಜಾನಾ ಇಲಾಖೆಯವರಾದ ಮಿ॥ ಇ. ಎನ್. ಬೇಕರ್‌ಯವರು ಹೋದ ವರುಷದ ಆದಾಯವ್ಯಯಗಳ ನಿಜವಾದ ಲೆಕ್ಕಗಳನ್ನೂ, ಚಾಲ್ತಿ ಸಾಲಿನ ರಿವೈಸ್ಡ್ ಬಡ್ಜೆಟ್ ಅಂದಾಜು ಪಟ್ಟಿಯನ್ನೂ, ಮುಂದಿನ ವರುಷದ ಉತ್ಪತ್ತಿ ಖರ್ಚುಗಳ ಎಸ್ಟಿಮೇಟನ್ನೂ ಓದಿದರು. ಅವುಗಳಲ್ಲಿ ಕಂಡುಬರುವ ಮುಖ್ಯ ಭಾಗಗಳನ್ನು ಮುಂದೆ ವಿವರಿಸುತ್ತೇವೆ.

೧೯೦೬–೭ನೇ ಸಾಲಿನ ಜಮಾಖರ್ಚು

ಬಾಬು.	ಪೌಂಡುಗಳು
ಉತ್ಪತ್ತಿ	೭,೩೧,೪೪,೫೫೪
ಖರ್ಚು	೭,೧೫,೫೫,೧೭೯
ನಿವ್ವಳ ಶಿಲ್ಕು	೧೫,೮೯,೩೭೫

೧೯೦೭–೮ನೇ ಸಾಲಿನ ಅಂದಾಜು ಪಟ್ಟಿ

ಉತ್ಪತ್ತಿ	೭,೦೯,೮೯,೨೦೦
ಖರ್ಚು	೭,೦೫,೫೩,೮೦೦
ಅಂದಾಜು ಶಿಲ್ಕು	೪,೩೫,೩೦೦

೧೯೦೮–೯ನೇ ಸಾಲಿನ ಬಡ್ಜೆಟ್

ಉತ್ಪತ್ತಿ	೬,೩೬,೩೮,೯೦೦
ಖರ್ಚು	೬,೨೮,೬೬,೩೦೦
ಅಂದಾಜು ಶಿಲ್ಕು	೫,೭೧,೫೦೦

೧೯೦೬–೭ನೇ ಸಾಲಿನ ವಿವರಣೆ

ಕಳೆದ ೧೯೦೭ನೇ ಮಾರ್ಚಿ ಆಖೈರಿಗೆ ಮುಕ್ತಾಯವಾದಂಥಾ ಗುದಸ್ತಾಸಾಲಿನಲ್ಲಿ ೧೫,೮೯,೩೭೫ ಪೌಂಡು ಗವರ್ನಮೆಂಟಿಗೆ ಖರ್ಚು ಕಳೆದು ಶಿಲ್ಕು ಉಳಿಯಿತು (ಪೌಂಡು ೧ ಕ್ಕೆ ೧೫ ರೂಪಾಯಿಯನಂತೆ ಹಿಡಿದು ಗಣಿಸಿದಲ್ಲಿ ಮೇಲ್ಕಂಡ ಜಮಾಖರ್ಚು ಶಿಲ್ಕುಗಳು ರೂಪಾಯಿಗಳಾಗುವವು) ಜಮೀನ್ ಕಂದಾಯ, ಎಕ್ಸೈಜ್, ಫಾರಸ್ಟು, ಅಂಚೆ, ಈ ಬಾಬುಗಳ ಉತ್ಪತ್ತಿಯು ಮೊದಲೇ ಅಂದಾಜು ಕಟ್ಟಿದ್ದಕ್ಕಿಂತಲೂ ಕಡಮೆಯಾಯಿತು. ರೈಲ್ವೆ ಬಾಬ್ತು ಸಲಿಯೊಂದರಲ್ಲೇ ೭,೨೩,೨೬೩ ಪೌಂಡು ಕಡಮೆಯಾಗಿದೆ. ಒಟ್ಟಾಗಿ ಅಫೀಮು ಉಪ್ಪು, ಸುಂಕಗಳು, ಸೈನ್ಯ, ಈ ಬಾಬುಗಳಲ್ಲಿ ಅಂದಾಜಿಗಿಂತಲೂ ಜಾಸ್ತಿ ಉತ್ಪತ್ತಿಯಾಗಿದೆ. ಉಪ್ಪಿನ ಸುಂಕವು ೬೨,೭೦೬ ಪೌಂಡು ಹೆಚ್ಚಿತು. ಹಿಂದಿನ ಸಾಲಿಗಿಂತಲೂ ಈ ಸಾಲಿನಲ್ಲಿ ೨೩,೫೩,೦೦೦ (ಬಂಗಾಳಾ) ಮಣಗಳಷ್ಟು ಹೆಚ್ಚು ಉಪ್ಪಿಗೆ ಸುಂಕ ತೀರ್ವೆ ಆಗಿರುತ್ತದೆ. ಸೈನ್ಯದ ಬಾಬಿಗೆ ತೆಗದಿಟ್ಟಿದ್ದ ಒಟ್ಟು ಹಣದಲ್ಲಿ ೧,೫೨,೬೬೩ ಪೌಂಡು ಖರ್ಚಾಗದೆ ಉಳಿದುಹೋಯಿತು.

೧೯೦೭–೮ನೇ ಸಾಲಿನ ಅಂದಾಜು ಪಟ್ಟಿ

ಈ ಸಾಲಿನಲ್ಲಿ ಅಂದರೆ ೧೯೦೮ನೇ ಮಾರ್ಚಿ ೩೧ ಕ್ಕೆ ಆಖೈರಾಗುವ ಚಾಲ್ತಿ ವರುಷದಲ್ಲಿ ೭ ಕೋಟಿ ೨೫ ಲಕ್ಷ ಪೌಂಡು ಉತ್ಪತ್ತಿಯಾಗಬಹುದೆಂದೂ, ಆ ಪೈಕಿ ೭,೧೩,೨೫,೪೦೦ ಪೌಂಡು ಖರ್ಚಾಗಿ, ೭ ಲಕ್ಷದ ೭೪ ಸಾವಿರ ಪೌಂಡು ನಿವ್ವಳ ಶಿಲ್ಕು ಉಳಿಯಬಹುದೆಂದೂ ಮೊದಲು ಅಂದಾಜು ಕಟ್ಟಿತ್ತು. ಚಾಲ್ತಿ ಸಾಲಿನಲ್ಲಿ ನಾಳೆಗಳು ಸರಿಯಾಗಿ ನಡೆಯದೆ ಕ್ಷಾಮ ಪ್ರಾಪ್ತವಾಗಿರೋದರಿಂದ ಉತ್ಪತ್ತಿಯು ಪಟ್ಟಿಗೆ ಕಡಮೆಯಾಗಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ಈ ತಿಂಗಳ ಆಖೈರಿನೊಳಗೆ ಅಂದರೆ ಈ ಚಾಲ್ತಿ ಸಾಲಿನ ಉತ್ಪತ್ತಿಯು ಬಹಳ ೧೫,೧೧,೮೦೦ ಪೌಂಡು ಕಡಮೆಯಾದೀತು; ಅಂದರೆ ಈ ವರುಷದ ಶಿಲ್ಕು ೨,೩೫,೪೦೦ ಪೌಂಡಾಗಬಹುದೆಂದು ಕಾಣುತ್ತದೆ. ಅಂದಾಜು ಪಟ್ಟಿಗಿಂತಲೂ ಚಾಲ್ತಿ ಸಾಲಿನಲ್ಲಿ ಜಾಸ್ತಿ ಉತ್ಪತ್ತಿಯಾಗಿರುವ ಬಾಬುಗಳ್ಯಾವವೆಂದರೆ—

ಉತ್ಪತ್ತಿ ಹೆಚ್ಚಿದ ಬಾಬುಗಳು.

ಬಾಬು.	ಪೌಂಡು.	ಬಾಬು	ಪೌಂಡು.
ಅಫೀಮು.	೩,೭೧,೮೦೦	ಸುಂಕಗಳು	೩,೬೮,೫೦೦
ಉಪ್ಪು	೪೯,೯೦೦	ತೆರಿಗೆಗಳು	೪೯,೨೦೦
ಸ್ಟಾಂಪು	೬೩,೩೦೦	ಟಂಕಸಾಲೆ	೧,೯೨,೭೦೦

ಉತ್ಪತ್ತಿ ಕಡಮೆಯಾದ ಬಾಬುಗಳು.

ಜಮೀನ್ ಕಂದಾಯ	೧೩,೦೧,೧೦೦	ಟೆಲ್ಲಿಗ್ರಾಫು	೫೯,೭೦೦
ಫಾರೆಸ್ಟು	೧,೪೮,೧೦೦	ರೈಲ್ವೆ	೩,೨೫,೪೦೦

ಕಳೆದ ಮಾರ್ಚಿಯಲ್ಲಿ ಬಜೆಟ್ಟು ತಯಾರು ಮಾಡಿದಾಗ ಅಫೀಮಿನ ದರವನ್ನು ಪೆಟ್ಟಿಗೆ ೧ ಕ್ಕೆ ಸರಾಸರಿ ೧,೨೫೦ ರೂಪಾಯಿಯನಂತೆ ಬಿಕರಿಯಾಗಬಹುದೆಂದು ಅಂದಾಜು ಕಟ್ಟಿತ್ತು. ಆದರೆ ಪೆಟ್ಟಿಗೆ ೧ ಕ್ಕೆ ಸರಾಸರಿ ೧,೩೫೦ ರೂಪಾಯಿಯನಂತೆ ಬಿಕರಿ ಆಗಿರುವುದು. ಇದರಿಂದ ೪೫ ಲಕ್ಷ ರೂಪಾಯಿ ಹೆಚ್ಚಾಗಿ ಉತ್ಪತ್ತಿಯಾಯಿತು. ೧೩,೨೯೭ ಪೆಟ್ಟಿಗೆಗಳು ಬಿಕರಿ ಆಗಬಹುದೆಂದು ಅಂದಾಜು ಕಟ್ಟಿದ್ದಲ್ಲದೆ ಈಗ ೧೫,೦೦೦ ಪೆಟ್ಟಿಗೆಗಳು ಬಿಕರಿ ಆಗಿರುವವು. ಆದ್ದರಿಂದ ಇನ್ನೂ ೧೦ ಲಕ್ಷ ರೂಪಾಯಿ ಹೆಚ್ಚು ಆದಾಯವಾಗುವಂತೆ ಕಾಣುತ್ತದೆ.

ಉಪ್ಪಿನಿಂದ ಉತ್ಪತ್ತಿಯಾಗುವ ಸುಂಕವು ೩,೩,೩೬,೯೦೦ ಪೌಂಡು ಆಗುವುದೆಂದು ಹೇಳಬಹುದು. ಈ ವರುಷ ಒಟ್ಟು ೪೭೩ ಲಕ್ಷ (ಬಂಗಾಳಾ) ಮಣಗಳ ಉಪ್ಪಿಗೆ ಸುಂಕ ತೀರಿಸುತ್ತಾರೆ. ಈಗ ಒಂದು ಮದರಾಸ್ ದಲ್ಲೂ ಹಿಂದುಸ್ಥಾನದಲ್ಲೂ ಬರ್ಮಾ ಅಧಿಪತ್ಯದಲ್ಲೂ ಉಪ್ಪಿನ ಸುಂಕವು ವ್ಯತ್ಯಾಸವಿಲ್ಲದೆ ಮಣಕ್ಕೆ ೧ ರೂಪಾಯಿಯನಂತೆ ಇರುತ್ತದೆ. ಹಿಂದುಸ್ಥಾನದಲ್ಲಿ ಉಪ್ಪನ್ನು ಜನರು ಈಚೆಗೆ ಬಹಳವಾಗಿ ಉಪಯೋಗಿಸುತ್ತಿದ್ದಾರೆ. ಕಳೆದ ೧೯೦೩–೪ ನೆ ಸಾಲಿನವರೆಗೆ ಉಪ್ಪಿನ ಸುಂಕವು ಮಣಕ್ಕೆ ರೂ ೨–೮–೦ ಇದ್ದಿತು. ಆ ಸಾಲಿನಲ್ಲಿ ಆ ದರವನ್ನು ಎರಡು ರೂಪಾಯಿಗೂ, ೧೯೦೫–೦೬ ನೆ ಸಾಲಿನಲ್ಲಿ ರೂ. ೧–೮–೦ ಗೂ, ಚಾಲ್ತಿ ಸಾಲಿನಲ್ಲಿ ಒಂದು ರೂಪಾಯಿಗೂ ಇಳಿಸಲಾಯಿತು. ಗವರ್ನಮೆಂಟಿಗೆ ಮೊದಲು ೬೧,೯೩,೪೦೦ ಪೌಂಡು ಉತ್ಪತ್ತಿಯಾಗುತ್ತಿದ್ದ ಉಪ್ಪಿನ ವರಮಾನವು ಈಗ ೩,೩,೩೬,೯೦೦ ಪೌಂಡಿಗೆ ಇಳಿಯಿತು. ಇದು ಗವರ್ನಮೆಂಟಿಗೆ ನಷ್ಟವಾಗಿ ಕಂಡಾಗ್ಯೂ ಇದು ಸಾರ್ಥಕವಾದದ್ದೆಂದೇ ಹೇಳಬೇಕು. ಇದರಿಂದ ಈ ರಾಷ್ಟ್ರದ ಪ್ರಜೆಗಳಿಗೆ ಪ್ರಯೋಜನವಾಗಬೇಕೆನ್ನುವುದೇ ಅವರ ಉದ್ದೇಶವಾಗಿದೆ.

ಉಪ್ಪು ಮನುಷ್ಯನಿಗೂ ಗೋಕಾಯಿಗಳಿಗೂ ಬೆಳೆಗಳಿಗೂ ಬಹು ಮುಖ್ಯವಾದ ಮತ್ತು ಅತ್ಯಂತಾವಶ್ಯಕವಾದ ಪದಾರ್ಥವಾದ್ದರಿಂದ ಅದರ ಮೇಲೆ ಯೂರೋಪಿನ ಯಾವ ರಾಜ್ಯಗಳಲ್ಲೂ ಸುಂಕ ಹಾಕಿಲ್ಲವೆಂತಲೂ, ಇಂಡಿಯಾ ಗವರ್ನಮೆಂಟಿನವರು ಮಾತ್ರ ಈ ದೇಶದಲ್ಲಿ ಹಾಕಿ ವಸೂಲು ಮಾಡುತ್ತಾರೆಂತಲೂ ಕೆಲವರು ಆಕ್ಷೇಪಣೆ ಮಾಡುತ್ತಾರೆ. ಅಂಥಾ ಅನ್ಯ ದೇಶಗಳ ವಿಚಾರವನ್ನು ನೋಡಿದರೆ ಇತರ ರಾಜ್ಯಗಳಲ್ಲೆಲ್ಲಾ ಉಪ್ಪಿನ ಸುಂಕವು ಹಿಂದುಸ್ಥಾನದ ಪ್ರಜೆಗಳು ಕೊಡುವುದಕ್ಕಿಂತ ಬಹಳ ಹೆಚ್ಚಾಗಿದೆ. ಹ್ಯಾಗಂದರೆ ಉಪ್ಪಿನ ಸುಂಕವು ಫ್ರಾನ್ಸ್ ಪ್ರಾಂತಗಳಲ್ಲಿ ತಲೆಗೆ ೮ ಆಣೆ, ಜರ್ಮನಿಯಲ್ಲಿ ೧೧ ಆಣೆ, ಇಟಲಿಯಲ್ಲಿ ೨ ರೂ. ಆಸ್ಟ್ರಿಯಾ ಹಂಗೇರಿಯಲ್ಲಿ ೧೮ ಆಣೆ, ಹಾಲೆಂಡಿನಲ್ಲಿ ೬ ಆಣೆ, ಹಿಂದುಸ್ಥಾನದಲ್ಲಿ ೨॥ ಆಣೆ ಬೀಳುತ್ತದೆಂದು ತಿಳಿಸಿದ್ದಾರೆ. ಇದರಿಂದ ಇತರ ರಾಜ್ಯಗಳಿಗಿಂತಲೂ ಹಿಂದುಸ್ಥಾನದವರೇ ಬಹಳ ಸ್ವಲ್ಪವಾಗಿ ಉಪ್ಪಿನ ತೆರಿಗೆಯನ್ನು ಕೊಡುತ್ತಾರೆಂಬುದು ಸ್ಪಷ್ಟವಾಗಿದೆ.

ಹಿಂದಿನ ಸಾಲಿನಿಂದ ಈ ವರ್ಷಕ್ಕೆ ತೆರಿಗೆ ಉತ್ಪತ್ತಿ ಬಟ್ಟೆಗಳು ಈ ವರುಷ ಹಿಂದೆ ಮಾಡಿದ ಲೆಕ್ಕದಂತೆ ಉತ್ಪತ್ತಿ ಬಟ್ಟೆಗಳ ಸುಂಕವೇ ೧೫॥ ಲಕ್ಷ ರೂಪಾಯಿ ಆಗಿದೆ. ಇಷ್ಟರ ಮೇಲೆ ಈ ವರುಷ ಹಿಂದುಸ್ಥಾನದೊಳಗೆ ಉತ್ಪತ್ತಿ ಬಟ್ಟೆಗಳ ಮೇಲೆ ಜಾಸ್ತಿಯಾಗಿ ಬಂದಿರುವವು. ಇವುಗಳ ಮೇಲಿನ ತೆರಿಗೆ ೩೭ ಲಕ್ಷ ರೂಪಾಯಿ ವಸೂಲಾಗಿರುವುದು.

ಟಂಕಸಾಲೆಯ ಉತ್ಪತ್ತಿಯು ಹೆಚ್ಚಿತು. ೧ ಆಣೆಯ ಬಾವುಟ ನಿಕ್ಕಲ್ ನಾಣ್ಯಗಳನ್ನು ಛಾಪಾ ಹಾಕಿದುದರಲ್ಲಿ ಗವರ್ನಮೆಂಟಿಗೆ ೧೬ ಲಕ್ಷ ರೂಪಾಯಿ ಲಾಭ ಕಂಡುಬಂದಿದೆ. ಹಿಂದಿನ ಬೆಳ್ಳಿಯ ನಾಣ್ಯಗಳನ್ನು ಛಾಪಾ ಹಾಕಿದ್ದರಲ್ಲಿ ೧೮ ಲಕ್ಷ ರೂಪಾಯಿ ಲಾಭವಾಗಿದೆ.

ಮುಂದಿನ ವರುಷದ ಜಮಾಖರ್ಚಿನ ಅಂದಾಜು ಪಟ್ಟಿಯನ್ನು ಮೇಲೆ ನಮೂದಿಸಿದ್ದೇವೆ. ಹಿಂದುಸ್ಥಾನದ ಪೊಲೀಸ್ ಇಲಾಖೆಯನ್ನು ಕ್ರಮಪಡಿಸುವುದಕ್ಕೆ ಗವರ್ನಮೆಂಟಿನವರು ೧೨ ಲಕ್ಷ ರೂಪಾಯನ್ನು ಬೇರೆಬೇರೆ ಅಧಿಪತ್ಯಗಳಿಗೆ ಹಂಚಿಕೊಡುವರು. ಅಂದರೆ ಬೊಂಬಾಯಿಗೆ ೪। ಲಕ್ಷ, ಬಂಗಾಳಾಕ್ಕೆ ೪ ಲಕ್ಷ, ಪೂರ್ವಬಂಗಾಳ ಮತ್ತು ಆಸ್ಸಾಂಗೆ ೧। ಲಕ್ಷ, ಮತ್ತು ಮಧ್ಯಪ್ರಾಂತ್ಯಗಳಿಗೆ ೭॥ ಲಕ್ಷ, ಕೆಲವು ವಿಭಾಗಗಳಿಗೆ ೧ ಲಕ್ಷ ಈ ರೀತಿ ಕೊಡುತ್ತಾರೆ.

ಪ್ರಜಾ ಆರೋಗ್ಯ,ಭಿವೃದ್ಧಿಕಳವಾದ ಪಿಡುಗುಗಳು ಪ್ಲೇಗ್ ಉಪದ್ರವನ್ನು ಅಡಗಿಸುವ ಕಾರ್ಯಗಳಿಗೆ ಗವರ್ನಮೆಂಟಿನವರು ಮುಂದಿನ ಸಾಲಿನಲ್ಲಿ ಎಲ್ಲಾ ಅಧಿಪತ್ಯಗಳಿಗೂ ೩೦ ಲಕ್ಷ ರೂಪಾಯಿಗಳನ್ನು ವಿನಿಯೋಗಿಸುವವರಾಗಿದ್ದಾರೆ; ಅಂದರೆ ಮದರಾಸಿಗೆ ೩॥ ಲಕ್ಷ, ಬೊಂಬಾಯಿ ೩॥ ಲಕ್ಷ, ಬಂಗಾಳಾ ೪॥ ಲಕ್ಷ, ಸಂಯುಕ್ತ ಪ್ರಾಂತ್ಯಗಳು ೫ ಲಕ್ಷ, ಪಂಜಾಬ್ ೪ ಲಕ್ಷ, ಬರ್ಮಾ ೩ ಲಕ್ಷ, ಪಶ್ಚಿಮಪ್ರಾಂತ್ಯಗಳು ೨ ಲಕ್ಷ, ಪೂರ್ವಬಂಗಾಳಾ ಮತ್ತು ಆಸ್ಸಾಂ ೩ ಲಕ್ಷ, ವಾಯುವ್ಯ ಸರಹದ್ದಿನ ಪ್ರಾಂತ್ಯ ೫೦ ಸಾವಿರ, ಈ ರೀತಿ ಗ್ರಾಂಟು ಕೊಡುತ್ತಾರೆ.

ಕ್ಷಾಮದಿಂದಾಗುವ ನಷ್ಟಗಳು.

ಈಗ ಸಾಮಾನ್ಯವಾಗಿ ಹಿಂದುಸ್ಥಾನದ ಹಲವು ಭಾಗಗಳಲ್ಲಿ ಪ್ರಾಪ್ತವಾಗಿರುವ ಕ್ಷಾಮವನ್ನು ನಿವಾರಣೆಮಾಡುವುದಕ್ಕೆ ಗವರ್ನಮೆಂಟಿನವರು ಚಾಲ್ತಿ ಸಾಲಿನಲ್ಲಿ ೫,೧೬,೦೦೦ ಪೌಂಡುಗಳನ್ನು ಖರ್ಚು ಮಾಡುವರು. ಮುಂದಿನ ವರುಷದ ಜಮೀನ್ ಕಂದಾಯದ ಉತ್ಪತ್ತಿಯಲ್ಲಿ ೧೩,೦೧,೧೦೦ ಪೌಂಡು ಕಡಮೆಯಾಗುವುದು. ಈ ಪೈಕಿ ಸಂಯುಕ್ತ ಅಧಿಪತ್ಯ ಒಂದರಲ್ಲೇ ೯,೪೫,೩೦೦ ಪೌಂಡು ಕಡಮೆಯಾಗುತ್ತದೆ. ಇದಲ್ಲದೆ ಮುಂದಿನ ಸಾಲಿನಲ್ಲಿ ಗವರ್ನಮೆಂಟಿನವರು ಕ್ಷಾಮನಿವಾರಣೆಗೆ ೮,೮೦,೫೦೦ ಪೌಂಡನ್ನು ಖರ್ಚು ಮಾಡುವುದಾಗಿ ಅಂದಾಜು ಕಟ್ಟಿದ್ದಾರೆ; ಅಂದರೆ ಆ ಪೈಕಿ ೬,೬೬,೩೦೦ ಪೌಂಡು ಸಂಯುಕ್ತ ಅಧಿಪತ್ಯಗಳಿಗೇ ವಿನಿಯೋಗಿಸಲ್ಪಡುತ್ತವೆ.

ಸಭೆಯಲ್ಲಿ ನಡೆಯುವ ಚರ್ಚೆಗಳು.

ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯು ನಾಳೆ ಮಧ್ಯಾಹ್ನ ಕಲ್ಕತ್ತಾ ಪಟ್ಟಣದಲ್ಲಿ ಕೂಡುವುದು. ಆಗ್ಗೆ ಮೇಲ್ಕಂಡ ಜಮಾಖರ್ಚುಗಳ ವಿಚಾರವಾಗಿಯೂ, ಈ ರಾಜ್ಯಭಾರದ ಇತರ ವಿಷಯಗಳ ವಿಚಾರವಾಗಿಯೂ ಮೆಂಬರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸುವರು. ಚರ್ಚೆಯೆಲ್ಲಾ ಪೂರೈಸಿದ ಮೇಲೆ ವೈಸ್‌ರಾಯಿಯವರು ಎಲ್ಲಾ ವಿಚಾರಗಳನ್ನೂ ಕುರಿತು ಉಪನ್ಯಾಸಮಾಡುವರು.

ತಾಲ್ಲೋಕು ವರ್ತಮಾನಗಳು.

ಅರಸೀಕೆರೆ ತಾ॥ ಬಾಣಾವಾರ.—ಹಗಲು ಬಿಸಲುಜಾಸ್ತಿ. ಅನೇಕರು ನೆಗಡಿ, ತಲೆನೋವು, ಜ್ವರ ಮುಂತಾದ ರೋಗಗಳಿಂದ ನರಳುತ್ತಿರುವರು. ಧಾರಣಾಸಿಗಳು ಈ ಸುಗ್ಗೀ ಕಾಲದಲ್ಲೇ ಏರುತ್ತಿರುವವು. ರೂಪಾಯಿಗೆ ೧೪–೧೬ ಸೇರು ರಾಗಿ, ೭–೮ ಸೇರು ಅಕ್ಕಿ, ೫ ಸೇರು ಬೇಳೆ ಮಾರುವುದು. ಈ ಊರಿಗೆ ಸಮೀಪವಾದ ಜಾವಗಲ್ ಸಂತೆಯಿಂದ ವಾರವಾರಕ್ಕೆ ಸಾವಿರಾರು ಮೂಟೆ ಭತ್ತ ಮುಂತಾದ ದಿನಸುಗಳು ರೈಲಿನಲ್ಲಿ ಪರಸ್ಥಳಕ್ಕೆ ಸಾಗುತ್ತಿರುವುದೇ ಇದಕ್ಕೆ ಕಾರಣ. ಲಾಭವಿಲ್ಲವೆಂದು ವರ್ತಕರೂ, ಜೀವನಕ್ಕೆ ಕಷ್ಟವೆಂದು ಬಡವರೂ ಹಾಹಾಕಾರ ಪಡುತ್ತಾರೆ. ಬಿಸಿಲುಕಾಲಕ್ಕೆ ತಕ್ಕಂತೆ ಕೆರೆಗಳೆಲ್ಲಾ ಬತ್ತಿ ಭಾವಿಗಳಲ್ಲಿ ನೀರು ದೊರೆಯುವುದು ದುರ್ಲಭ. ಇರುವ ನೀರನ್ನು ಬಂದೋಬಸ್ತಾಗಿ ಕಾಪಾಡಿಕೊಳ್ಳುವುದು ಊರಿನವರ ಕರ್ತವ್ಯವಾಗಿದೆ. ಮತ್ತು ಊರಿನ ಸಂದುಗೊಂದುಗಳನ್ನು ಗಲೀಜಾಗದಂತೆ ಇಟ್ಟುಕೊಳ್ಳುವುದು ಯೂನಿಯನ್ ಸಂಘಕ್ಕೆ ಸೇರಿದೆ.—ಫೆಬ್ರುವರಿಯಲ್ಲಿ ಹಾಸನದ ಡೆಪ್ಯುಟಿ ಕಮಿಷನರು ಬಂದು ಊರಿನ ಗಲೀಜನ್ನೆಲ್ಲಾ ಶುಚಿಮಾಡಿಸಿದರು. ಮತ್ತು ಫೆಬ್ರುವರಿ ೨೮ ರಲ್ಲಿ ಸರ್ಕಲ್ ಇನ್ಸ್‌ಪೆಕ್ಟರೂ ಡೆಪ್ಯುಟಿ ಇನ್ಸ್‌ಪೆಕ್ಟರೂ ಬಂದು ಸ್ಕೂಲ್ ಇನ್ಸ್‌ಪೆಕ್ಷನ್ ಮಾಡಿದರು. ಸ್ಕೂಲಿನ ಸ್ಥಿತಿಯು ಉತ್ತಮವಾಗಿಯೇ ಇದೆ. ಇದಕ್ಕೆ ಇಲ್ಲಿನ ಮಾಸ್ಟರುಗಳ ಏಕಮತ್ಯವೇ ಕಾರಣ.

ಕುಣಿಗಲ್‌ಪೇಟೆ.—ಪ್ಲೇಗ್ ಉಪದ್ರವು ಕಳೆದ ವರುಷ ನವಂಬರಿನಲ್ಲಿ ಪ್ರಾರಂಭವಾಗಿ ೨೫ ಜನರನ್ನು ಕೊಂದುಹಾಕಿ, ಆ ವೇಳೆ ಜನರನ್ನು ಊರಿನೊಳಕ್ಕೆ ಬಿಟ್ಟಿತು. ಈಗ್ಗೆ ೨೦ ದಿನಗಳಿಂದಲೂ ಜನರೆಲ್ಲರೂ ತಮ್ಮ ಮನೆಗಳಲ್ಲಿ ನೆಮ್ಮದಿಯಾಗಿ ವಾಸಮಾಡುತ್ತಿದ್ದಾರೆ. ಜನರು ಜೋಪಡಿಗಳಲ್ಲಿದ್ದಾಗ್ಗೆ ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರೂ ಲೋಕಲ್ಫಂಡರೂ ಜನರನ್ನು ತುಂಬಾ ಪ್ರೀತಿಯಿಂದ ಕಂಡು ಬೇಕಾದ ಸಹಾಯಗಳನ್ನು ಮಾಡಿ ಕೀರ್ತಿ ಪಡೆದರು.—ಈಗ್ಗೆ ಒಂದು ವಾರದ ಕೆಳಗೆ ಒಬ್ಬ ಬ್ರಾಹ್ಮಣ ಯಜಮಾನನು ಇಲ್ಲಿನ ರೈಲ್ ಸ್ಟೇಷನ್ನಿನಲ್ಲಿ ಬಂದಿಳಿದು, ಸ್ಟೇಷನ್ ಮಾಸ್ಟರು ಹೊರಗೆ ಹೋಗುವದನ್ನು ಕಾದಿದ್ದು ತನ್ನ ಹತ್ತಿರ ಇದ್ದ ಕಳ್ಳ ಬೀಗದ ಕೈಯಿಂದ ಪೆಟ್ಟಿಗೆಯನ್ನು ತೆರೆದು, ಒಳಗಿದ್ದ ೮ ರೂಪಾಯಿಯನ್ನು ಎತ್ತಿಹಾಕಿ ರೈಲಿನ ಮೇಲೆ ಚನ್ನಪಟ್ಟಣದ ರೈಲ್ ಸ್ಟೇಷನ್ ಹಣ್ಣಿನ ಪೆಟ್ಟಿಗೆಯನ್ನು ನೋಡಲು ಹೋಗಿದ್ದವನನ್ನು ಇಲ್ಲಿನ ಸ್ಟೇಷನ್ ಮಾಸ್ಟರು ಬೈಸಿಕಲ್ ಹತ್ತಿ ಕೂಗಿ ಕರೆದುತಂದು, ಅವನಿಗೆ ಪೊಲೀಸ್ ಠಾಣಾವನ್ನು ತೋರಿಸಿದರು. ಗುದ್ಲಹಳ್ಳಿ ಗ್ರಾಂಟ್ ಸಾಹೇಬರ ೧,೩೦೦ ಬೆಳ್ಳಿಯ ರೂಪಾಯನ್ನು ತಾನೇ ಅಪಹರಿಸಿ, ರಾತ್ರಿ ಕಳ್ಳರು ಕದ್ದರೆಂದು ಪೊಲೀಸಿಗೆ ರಿಪೋರ್ಟು ಮಾಡಿದ್ದ ಸೈಯದ್ ರಹಿಮಾನ್ ಎಂಬುವನನ್ನು ಇಲ್ಲಿನ ಜಮೇದಾರ್ರು ಹಿಡಿದು ಹಣವನ್ನೂ ಆಸಾಮಿಯನ್ನೂ ಪತ್ತೆಮಾಡಿ ಲಾಕಪ್ಪನ್ನು ತೋರಿಸಿದ್ದಾರೆ. ಈ ಆಸಾಮಿಗೆ ಸರ್ಕಾರದವರು ಒಂದುವರೆ ವರ್ಷ ಸಜಾ ಮಾಡಿದರು.—ಈ ಊರಿನ ಮುಖ್ಯ ಜಲಾಧಾರವಾಗಿರುವ ದೊಡ್ಡಕೆರೆಯಲ್ಲಿ ನೀರಿಲ್ಲದೆ ಜನರಿಗೆ ಬಹಳ ತೊಂದರೆಯಾಗಿದೆ. ಸರ್ಕಾರದವರಾದರೂ ಮುನಿಸಿಪಾಲಿಟಿಯವರೇ ಸಮಾನರಾಗಿ ಒಂದು ವರ್ಷದಿಂದಲೂ ನಾಲ್ಕು ಮೇಲಿನ ಯಂತ್ರಗಳನ್ನು ತರಿಸಿ, ಕೊಳಗೆ ತೋಡಿಸಿ, ವಾಪಸು ಅದರ ಸ್ಥಳಕ್ಕೆ ಸೇರಿಸಿದ್ದಾರೆ.—ಈ ಊರಿನಲ್ಲಿ ಯಾಚಕರಿಂದ ಪೀಡಿಸುವ ಸುಬ್ಬಾಭಟ್ಟರೆಂಬವರು ಯಡತೊರೆ ತಾಲ್ಲೋಕು ವೀರ್ಲ ಗ್ರಾಮದಲ್ಲಿ ಕಾವೇರಿಗೆ ಇಳಿಯಲು ಅನುಕೂಲವಾದ ಸೋಪಾನವನ್ನು ಕಟ್ಟಿಸಲು ಪ್ರಯತ್ನಮಾಡಿ ಅದಕ್ಕಾಗಿ ಜನರಿಂದ ಯಾಚಿಸಿ ಎತ್ತಲು ಪ್ರಯತ್ನಪಡುತ್ತಿರುವರು.—ಇಲ್ಲಿನ ಸಬ್ ಡಿವಿಜನ್ ಆಫೀಸರಾಗಿದ್ದ ಮಿ॥ ಸಿ. ಪೇ. ಜಯರಾಜನ್ ಅವರಿಗೆ ಚನ್ನರಾಯಪಟ್ಟಣಕ್ಕೆ ವರ್ಗವಾಗಿ, ಅವರ ಸ್ಥಾನಕ್ಕೆ ಮಿ॥ ಟಿ. ಕೃಷ್ಣಯ್ಯನವರು ಬಂದು ಕೆಲಸಮಾಡುತ್ತಿದ್ದಾರೆ.

ಮಳವನರಸೀಪುರ.—ಹಗಲು ಬಿಸಲಿನ ತಾಪವೂ ರಾತ್ರಿ ಸೆಕೆಯ ತಾಪವೂ ಅಧಿಕವಾಗಿದೆ. ಧಾರಣಾಸಿಗಳು ಸಾಧಾರಣವಾಗಿ ರಾಗಿ ೧೮ ಸೇರು, ಅಕ್ಕಿ ೯ ಸೇರು ಈ ಪ್ರಕಾರವಾಗಿವೆ.—ತಾ ೧೭ನೇ ಮಂಗಳವಾರ ಈ ಊರು ನರಸಿಂಹಸ್ವಾಮಿಯ ಜಾತ್ರೆಯಾಯಿತು. ತೇರು ಬಹುದಿನದ ಹಳೇ ಸಾಮಾನುಗಳಿಂದ ಕೂಡಿದ್ದರಿಂದ ವರುಷೇ ವರುಷವು ರಿಪೇರಿಯಾಗುತ್ತಾ ಇದೆ. ಒಂದುಸಲ ಚನ್ನಾಗಿ ಹೊಸ ಸಾಮಾನುಗಳನ್ನು ಹಾಕಿ, ಬೇರೆ ಸ್ಥಳಗಳಲ್ಲಿರುವ ಹಾಗೆ ಕಲ್ಲಿನ ಚಕ್ರಗಳನ್ನು ಮಾಡಿಸಿದರೆ ಎಷ್ಟೋ ವರುಷಗಳು ಇದರ ರಿಪೇರಿಯೇ ನಿಂತುಹೋಗಿ ಉತ್ಸವವು ಬಹು ಆಡಂಬರದಿಂದ ನಡೆಯುವುದಲ್ಲದೆ ಪ್ರಜೆಗಳಿಗೂ ಸರಕಾರಕ್ಕೂ ತೊಂದರೆ ಇರಲಾರದು. ಇದರ ವಿಷಯದಲ್ಲಿ ಈ ಊರಿಗೆ ಬರುವ ಯಾವ ಅಮಲ್ದಾರ್ರಾದರೂ ಯೋಚಿಸದೆ ಇರುತ್ತಾರೆ. ಈ ವಿಷಯದಲ್ಲಿ ಮುಜರಾಯಿ ಇಲಾಖೆಯವರು ನಿಗಾಕೊಡುವದು ತುಂಬಾ ಯೋಗ್ಯವಾಗಿದೆ.—ತಾ ೧೮ನೇ ಬುಧವಾರ ಕೋಟೆ, ಪೇಟೆ ವಿಂಡ್ಲ ಬಾಲಿಕಾ ಪಾಠಶಾಲೆಯ ಬಾಲಕಿಯರಿಗೆ ಕೋಟೆ ಸ್ಕೂಲಿನಲ್ಲಿ ಬಹುಮಾನ ಕೊಡಲ್ಪಟ್ಟಿತು. ಹಾಸನದ ರೆವ್. ಎಚ್. ಎಚ್. ನ್ಯೂಹಾಂ ಸಾಹೇಬರು ಪತ್ನಿ ಸಹಿತ ಬಂದು ಬಾಲಕಿಯರಿಗೆ ಬಹುಮಾನಗಳನ್ನು ಹಂಚಿದರು. ಮುನಿಸಿಫರೇ ಮೊದಲಾದ ಆಫೀಸರುಗಳು ಸಭೆಯನ್ನು ಅಲಂಕರಿಸಿದ್ದರು. ಬಾಲಕಿಯರು ಒಂದು ಗಾನವನ್ನು ಹಾಡಿದರು. ಅನಂತರ ಮಿ॥ ಚಿಂತಾಮಣಿ ಕೇಲಬ್‌ಯವರು ಮೇಲ್ಕಂಡ ಎರಡು ಸ್ಕೂಲುಗಳ ರಿಪೋರ್ಟನ್ನು ಓದಿದರು. ಅನಂತರ ೮ ವರುಷದ ಇಬ್ಬರು ಬಾಲಕಿಯರು ಬಡವರಿಗೂ, ಐಶ್ವರ್ಯವಂತರಿಗೂ ಇರುವ ವ್ಯತ್ಯಾಸವನ್ನು ಕುರಿತು ಬಹು ಸ್ಪಷ್ಟವಾದ ಮಾತುಗಳಿಂದಲೂ ಶ್ಲೋಕಗಳಿಂದಲೂ ದೀರ್ಘವಾದ ಒಂದು ಸಂಭಾಷಣೆಯನ್ನು ಮಾಡಿದರು. ಸಭಿಕರೆಲ್ಲಾ ಬಹು ಆಶ್ಚರ್ಯದಿಂದ ಸಂತೋಷಪಟ್ಟರು. ಅನಂತರ ಮುನಿಸಿಫ್ ಮಿ॥ ನರಸಿಂಹಯ್ಯನವರು ಬಾಲಕಿಯರಿಗೆ ಬುದ್ಧಿವಾದವನ್ನೂ ವಿಂಡ್ಲ ಸಂಘದವರು ನಮ್ಮ ದೇಶದ ಬಾಲೆಯರ ವಿದ್ಯಾಭ್ಯಾಸಕ್ಕಾಗಿ ತೆಗೆದುಕೊಳ್ಳುತ್ತಿರುವ ಶ್ರಮವನ್ನೂ ಕುರಿತು ಬಹು ಒಳ್ಳೆ ಉಪನ್ಯಾಸ ಮಾಡಿದರು.—ಟೌನಿನಲ್ಲಿ ಹಂದಿಗಳ ಅವಾಂತ್ರ ಹೆಚ್ಚಾಗುತ್ತಿದೆ. ಮುನಿಸಿಪಾಲಿಟಿಯವರ ನಿಶ್ಚಿಂತೆಯು ಬಹು ಹೆಚ್ಚಾಯಿತು.—ಈ ಊರು ವೈಶ್ಯರ ಮನೆಗಳ ಹಿಂಭಾಗದಲ್ಲಿ ಅಂದರೆ ದೇವಾಂಗದವರ ಬೀದಿಯ ಪಕ್ಕದಲ್ಲಿ ಒಂದು ರಸ್ತೆಯನ್ನು ಮಾಡಲು ಈಗ್ಗೆ ಮೂರು ವರುಷಗಳಿಂದಲೂ ಮುನಿಸಿಪಾಲಿಟಿಯವರು ಸೋಗಸು ಪಡುತ್ತಿದ್ದಾಗ್ಯೂ ಇನ್ನೂ ಆ ಕಾರ್ಯವು ಮುಂದರಿಯಲಿಲ್ಲ. ಯಾಕೆಂದರೆ ಇಲ್ಲಿ ಮನೆಗಳು ಬಹು ಒತ್ತಾಗಿವೆ. ಈ ಸ್ಥಳದಲ್ಲಿ ಜನಗಳ ಸಂಚಾರವು ಕಡಮೆ. ಕೆಲವು ತಿಂಗಳ ಕೆಳಗೆ ಬಿಳೀ ಮಗ್ಗದ ವಸಂತ್ಯೆಯನ್ನು ಕೆಲವು ಜನಗಳು ಹೊಡೆದದ್ದೂ, ಈಗ ಅದು ವಿಚಾರಣೆಯಲ್ಲಿರುವದೂ ಈ ಊರಿನವರಿಗೆ ತಿಳಿದಿದೆ. ಆದ್ದರಿಂದ ಈ ಭಾಗ ಸ್ಥಳದಲ್ಲಿ ಒಂದು ರಸ್ತೆಯಾಗುವದು ಬಹು ಉತ್ತಮವೆಂದು ಕಾಣುತ್ತೆ.—ಈ ಊರು ಪೋಸ್ಟ್ ಆಫೀಸು ಮೊದಲಿದ್ದ ಸ್ಥಳದಿಂದ ಗರುಡಾಚಾರ್ರ ಮನೆಗೆ ವರ್ಗವಾಯಿತು. ಈ ಸ್ಥಳವು ಪೇಟೆ ಕೋಟೆಗೆ ಮಧ್ಯರಾಷ್ಟ್ರವಾದ್ದರಿಂದ ಅನುಕೂಲವಾಗಿದೆ. ಆದರೆ ಪೋಸ್ಟ್ ಮಾಸ್ಟರು ಕೂತುಕೊಳ್ಳುವ ಸ್ಥಳದಲ್ಲಿರುವ ಕಿಟಕಿಯು ಯಾವಾಗಲೂ ಮುಚ್ಚಿಯೇ ಇರುವದರಿಂದ ಸ್ಟಾಂಪು, ಕಾರ್ಡು, ಕವರುಗನ್ನು ಕೇಳತಕ್ಕವರೂ ಮನಿಆರ್ಡರ್, ರಿಜಿಸ್ಟರ್, ಮೊದಲಾದವುಗಳನ್ನು ತರುವವರೂ ಕಿಟಕಿ ಬಾಗಿಲನ್ನು ನೋಡಿ ಹಿಂದಕ್ಕೆ ಹೋಗಬೇಕು. ಮತ್ತೆ ಹೋದರೆ— "ಆಮ್ಮಾ, ಹೊತ್ತಾಯಿತು ನಾಳೆ ದಿನ ಬಾ" ಎಂದು ಹೇಳುವರು. ಆದ್ದರಿಂದ ಪೋಸ್ಟ್ ಇಲಾಖೆಯವರು ಈ ಪೋಸ್ಟಿನ ಕಿಟಕಿ ಬಾಗಿಲುಗಳನ್ನು ಸಕಾಲಕ್ಕೆ ಸರಿಯಾಗಿ ಚನ್ನಾಗಿ ತೆರೆದು ಅನುಕೂಲವಾದ ರೀತಿಯಲ್ಲಿ ಕಾರ್ಡು, ಕವರು, ಮಣಿಆರ್ಡರ್, ರಿಜಿಸ್ಟರ್ ವಗೈರೆಗಳು ನಡೆಯುವಂತೆ ಏರ್ಪಾಡುಮಾಡಬೇಕೆಂದು ನಂಬಿದ್ದೇನೆ.

ಖಾತ್ರಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ನೆಲಮಾಗಲು ಶಿವಪ್ಪಗೌಡರು.—ನಿಮ್ಮ ಖಾತ್ರಿಯನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗದು. ಆ ವಿಚಾರವನ್ನು ಕುರಿತು ನೀವು ನಾಲ್ಕಾರು ಜನ ಸೇರಿ, ಆ ಇಲಾಖೆಯ ಮೇಲ್ಪಟ್ಟ ಅಧಿಕಾರಿಗೆ ಬರೆದುಕೊಂಡರೆ ಅವರು ಖಂಡಿತವಾಗಿ ಕೃಪಮಾಡುತ್ತಾರೆಂದು ನಂಬುತ್ತೇವೆ.

"ವಂದೇ ಮಾತರಂ" ಎಂದರೆ ಈ ಭಾರತ ಭೂಮಿಗೆ ಜಯವಾಗು ಎಂದು ಅರ್ಥವು. ಹಿಂದೂಸ್ಥಾನದ ಪ್ರಜೆಗಳು ಏಕವಾಗಿ ಈ ದೇಶವನ್ನು ಅಭಿವೃದ್ಧಿಗೆ ತರಬೇಕೆನ್ನುವುದು ಅದರ ಅಭಿಪ್ರಾಯವಾಗಿದೆ. ಆದರೆ ಜನರು ಅಂಥಾ ಅಭಿಪ್ರಾಯವನ್ನು ಸಾರ್ಥಕಪಡಿಸುವ ಭಾಗದಲ್ಲಿ ಸಹಜವಾದ ಮತ್ತು ಶ್ರೇಯಸ್ಕರವಾದ ಮಾರ್ಗಗಳನ್ನು ಅವಲಂಬಿಸಿ ವ್ಯವಸಾಯಮಾಡದೆ ಬರೀ ವಾಗ್ಯುದ್ಧದಲ್ಲಿ ಆಸಕ್ತರಾಗಿ, ಮುಂದೆ ಅಭಿವೃದ್ಧಿಗೆ ಬರತಕ್ಕಂಥಾ ಬಾಲಕರ ಮನಸ್ಸಿಗೆ ಕಲುಷವಾದ ರಾಜಕೀಯ ವಿಚಾರಗಳನ್ನು ತುಂಬಿ, ಅಭಾಸಮಾಡಲಾರಂಭಿಸುತ್ತಾರೆ. ಎಡಿ.]

ಕರೆಸ್‌ಪಾಂಡೆನ್ಸ್.

ಘಾತುಕತನದ ಪರಿಣಾಮವು.

ಸ್ವಾಮಿ,

ಚಿತ್ರದುರ್ಗದಲ್ಲಿರತಕ್ಕ ವರ್ತಕರಿಗೆ ದಾವಣಗೆರೆ ಸಾಹುಕಾರರು ಹುಂಡಿಗಳನ್ನು ಸಾಲಕೊಟ್ಟು, ವಾಯಿದೆ ಮೇಲೆ ಅವರ ಕಡೆ ಗುಮಾಸ್ತರು ಬಂದು ಹಣ ವಸೂಲ್ಮಾಡಿಕೊಂಡು ಹೋಗತಕ್ಕ ಪದ್ಧತಿ. ಈಗ್ಗೆ ದಿನಗಳ ಹಿಂದೆ ಅವರಂತೆ ೧೭-೧೮ ವರುಷದ ಒಬ್ಬ ಹುಡುಗನು ಇಲ್ಲಿಗೆ ಬಂದು, ೩೦೦ ಚಿಲ್ಲರೆ ರೂಪಾಯನ್ನು ವಸೂಲ್ಮಾಡಿಕೊಂಡು, ಊರಿಗೆ ಪರಿಚಯಸ್ತರೂ ಒಂದೇ ಊರಿನವರೂ ಆದ ಚನ್ನಬಸಪ್ಪನೆಂಬ ನಗ್ಯರೇರ ಜೊತೆಯಲ್ಲಿ ಗಾಡಿ ಕಟ್ಟಿಕೊಂಡು ರಾತ್ರಿ ಸುಮಾರು ೮ ಮೈಲಿ ಪ್ರಯಾಣ ಮಾಡಿದ ನಂತರ ಆ ಹುಡುಗನನ್ನು ಹಿಡಿದು ಕಲ್ಲಿಗೆಯಿಂದ ಅವನ ತಲೆ ಕೈಕಾಲು ಮೂಳೆಗಳನ್ನೆಲ್ಲಾ ಜಜ್ಜಿ ಜ್ಞಾನ ತಪ್ಪಿದ ನಂತರ ಅವನು ಸತ್ತನೆಂದು ತಿಳಿದು, ಹಣ ತೆಗೆದುಕೊಂಡು ಓಡಿಹೋದರು. ಜ್ಞಾನವಿಲ್ಲದೆ ಗಾಡಿಯಲ್ಲಿ ರಕ್ತಮಯವಾಗಿ ಬಿದ್ದಿದ್ದ ಇವನನ್ನು ಗಾಡಿಯ ಎತ್ತುಗಳು ಗಾಡಿ ಸಮೇತ ಎಳೆದುಕೊಂಡು ದಾವಣಗೆರೆಯ ಕಡೆ ಹೋಗುತ್ತಾ, ೩೦ ಮೈಲಿ ದೂರದ ಭರಮಸಾಗರದ ವರೆಗೂ ಬಂದವು. ಅಲ್ಲಿ ಪೋಲೀಸಿನವರು ಗಾಡಿ ತಡೆದು, ಅಲ್ಲಿಗೆ ಸಮೀಪದಲ್ಲಿದ್ದ ಪೋಲಿಸ್ ಇನ್ಸ್‌ಪೆಕ್ಟರಿಗೂ ಅಮಲ್ದಾರರಿಗೂ ವರ್ತಮಾನಕೊಟ್ಟರು. ಅಮಲ್ದಾರ್ ಮೆ॥ ಮಾಚಯ್ಯನವರು ಪಾಕ್ಷಿಕ ಆ ಸ್ಥಳಕ್ಕೆ ಹೋಗಿ, ಗಾಯಗಳಿಂದ ಜ್ಞಾನವಿಲ್ಲದೆ ಬಿದ್ದಿದ್ದವನನ್ನು ಡೋಲಿಯಲ್ಲಿ ಮಲಗಿಸಿ, ಅದೇ ದಿನ ಚಿತ್ರದುರ್ಗದ ಆಸ್ಪತ್ರೆಗೆ ಕಳುಹಿಸಿ, ಅವನ ಆರೋಗ್ಯಕ್ಕಾಗಿ [illegible] ಪ್ರಯತ್ನಪಟ್ಟರು. [illegible] ಅವನಿಗೆ ಸ್ವಲ್ಪ ಜ್ಞಾನ [illegible] ದಾಕ್ಟರ್ [illegible] ಸ್ವದೇಶದಿಂದ [illegible] ಎಲ್ಲಾ ಸಂಗತಿಗಳೂ ಅವನಿಂದ [illegible] ಸ್ತು, ೩ ದಿನ ಅಪರಾಧಿಗಳಿಗೆ ಇಸಮ್ [illegible] ಸಜಾ, ೧೫೦ [illegible] ದಂಡ ಶಿಕ್ಷೆಯಾಯಿತು. ಮೆ॥ ಮಾಚಯ್ಯನವರ ಮುಂಜಾಗ್ರತೆಯು ಅವನನ್ನು ಜೀವದಿಂದ ಉಳಿಸಿತು.

ಚಿತ್ರದುರ್ಗ. ಖಾತ್ರಿದಾರ್.

ಬಗ್ಗವಳ್ಳಿ ವಿಷಯಗಳು.

ಸ್ವಾಮಿ,

ತರೀಕೆರೆ ತಾಲ್ಲೂಕು ಬಗ್ಗವಳ್ಳಿ ಗ್ರಾಮದಲ್ಲಿರುವ ಗೌರ್ನಮೆಂಟ್ ಹೋಬಳಿ ಸ್ಕೂಲಿನಲ್ಲಿ ೧೯೦೫ ನೇ ಸಾಲ್ ವಿದ್ಯಾರ್ಥಿಗಳ ಸಂಖ್ಯೆ ೧೦—೧೨ ಇದ್ದದ್ದು, ಈಚೆಗೆ ಅಂದರೆ ೨ ವರ್ಷಗಳಿಂದ ದಿನೇ ದಿನೇ ಅಭಿವೃದ್ಧಿಯಾಗುತ್ತಾ ಬಂದು, ಹಾಲಿ ೫೦ ಮಂದಿ ಬಾಲಕರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅದಕೆ ಒಬ್ಬ ಮಾಸ್ತರು ೫ ತರಗತಿಗಳನ್ನಿಟ್ಟುಕೊಂಡು ೫೦ ಮಂದಿ ವಿದ್ಯಾರ್ಥಿಗಳಿಗೆ ಪಾಠ ನಡಿಸುತ್ತಾ, ಸ್ಕೂಲನ್ನು ಅಭಿವೃದ್ಧಿ ಸ್ಥಿತಿಗೆ ತರುತ್ತಾ ಇರುವುದು ಬಹಳ ಸಂತೋಷಕರವಾಗಿರುತ್ತೆ. ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರು ಈ ಸ್ಕೂಲಿಗೆ ಒಬ್ಬ ಸಹಾಯೋಪಾಧ್ಯಾಯನನ್ನು ಕಳುಹಿಸಿಕೊಟ್ಟು ಕೀರ್ತಿ ಹೊಂದುವರೆಂದು ನಿರೀಕ್ಷಿಸಿರುತ್ತೇನೆ.—ಈ ಸ್ಕೂಲನ್ನು ಅಭಿವೃದ್ಧಿಗೆ ತಂದ ಮಾಸ್ತರು ಡಿ. ರಾಮಯ್ಯನವರು ಬಾಬತು ೧೯೦೫ ನೇ ಇಸವಿ ಡಿಸೆಂಬರ್ ಮಾಹೆ ತಲಬು ಇದುವರೆಗೂ ಪಾವತಿ ಆಗಿರುವುದಿಲ್ಲ. ಈ ಕಡೆ ವಿಚಾರಿಸಬೇಕಾಗಿದೆ.—ಸ್ಕೂಲ್ ಮಾಡಲು ಅನುಕೂಲವಾದ ಒಂದು ಕಟ್ಟಡವು ಈ ಊರಿನಲ್ಲಿ ಇಲ್ಲದೇ ಇರುವುದು ವಿದ್ಯಾಭಿವೃದ್ಧಿಗೆ ಕುಂದಕವಾಗಿರುತ್ತೆ. ಹಾಲಿ ಸ್ಕೂಲ್ ಮಾಡುತ್ತಿರುವ ಕೆಳಗಿನ ಎರಡು ಅಂಕಣದ ಮನೆಯು ಸುತರಾಂ ಸಾಲದು. ಅಲ್ಲದೆ ಪಾಡುಬಿದ್ದ ಕಟ್ಟಡವು ಕೇವಲ ಅಪಾಯವಾದ ಸ್ಥಿತಿಯಲ್ಲಿದೆ. ಸ್ಕೂಲ್ ಕಮಿಟಿ ಮೆಂಬರುಗಳೂ ಗ್ರಾಮಸ್ಥರೂ ಹೊಸ ಕಟ್ಟಡ ತಯಾರಾಗುವವರೆಗೆ ಬೇರೆ ಮನೆಯಲ್ಲಿ ಸ್ಕೂಲ್ ನಡಿಸುವುದಕ್ಕೆ ಅನುಕೂಲಪಡಿಸಿಕೊಡುವುದು ಉತ್ತಮ. ಅತಿ ಶೀಘ್ರದಲ್ಲಿಯೇ ಹೊಸ ಕಟ್ಟಡ ಕಟ್ಟಿಸಿಕೊಡದೇ ಇದ್ದಲ್ಲಿ ಇಷ್ಟು ಅಭಿವೃದ್ಧಿ ಸ್ಥಿತಿಗೆ ಬಂದ ಸ್ಕೂಲು ಬೇರೇ ಕಡೆಗೆ ವರ್ಗಾಯಿಸಲ್ಪಡುವುದರಲ್ಲಿ ಸಂಶಯವಿಲ್ಲ.—ಕಳೆದ ವರುಷ ಪ್ರದರ್ಶನಕ್ಕೆ ಮೆಂಬರ್ ಮೆ॥ ಎಂ. ಗುರುಸಿದ್ದಪ್ಪನವರು ತಮ್ಮ ಜಮೀನಿನಲ್ಲಿ ಬೆಳೆದ ಕಬ್ಬನ್ನು ಕಳುಹಿಸಿದ್ದರು. ಇದಕ್ಕಾಗಿ ಕಮಿಟಿಯವರು ಯೋಗ್ಯತಾ ಪತ್ರಿಕೆಯನ್ನೂ, ಬಹುಮಾನವನ್ನೂ ಕಳುಹಿಸಿದಾರೆ.—ರೀಡಿಂಗ್ ರೂಂ ಕಾರ್ಯಗಳು ಕೇವಲ ಉತ್ಸಾಹದಿಂದಲೂ, ಶ್ರದ್ಧೆಯಿಂದಲೂ ನಡಿಯುತ್ತಿವೆ. ಈ ವಾಚಕ ಮಂದಿರವು ವಿಶೇಷ ಅಭಿವೃದ್ಧಿಗೆ ಬರಲು ಸೆಕ್ರೆಟರಿ ಮೆ॥ ಎ. ಲಕ್ಷ್ಮಣ ಶಾಸ್ತ್ರಿಗಳು ಜನಗಳಿಗೆ ಪ್ರೋತ್ಸಾಹಿಸುತ್ತಾರೆಂದು ನಂಬಿರುವ

ಪ್ರಜಾ ಹಿತೈಷಿ.

ಇಂಡಿಯಾ ದೇಶದ ವೃತ್ತಾಂತಗಳು.

ಬರ್ಮಾ ಅಧಿಪತ್ಯಕ್ಕೆ ಸೇರಿದ ಓಕ್ವೋ ಎಂಬ ಊರಿನಲ್ಲಿ ಬೆಂಕಿ ಬಿದ್ದು ೧೫೦ ಮನೆಗಳು ಸುಟ್ಟು, ಸುಮಾರು ೫ ಲಕ್ಷ ರೂಪಾಯಿ ನಷ್ಟವಾಯಿತು.

***

ಕಳೆದ ವಾರ ಉತ್ತರ ದೇಶದಲ್ಲೆಲ್ಲಾ ೧೫,೫೪,೬೩೯ ಜನರು ಕ್ಷಾಮಪೀಡಿತರಾಗಿ, ಸರ್ಕಾರದವರ ಪೋಷಣೆಯಲ್ಲಿದ್ದರು; ಅಂದರೆ ಹಿಂದಿನ ವಾರದ ಸಂಖ್ಯೆಗಿಂತಲೂ ೩,೭೦೦ ಜನರು ಹೆಚ್ಚು.

***

ಟುಟಿಕಾರಿನ್ (ತುತ್ತುಗುಡಿ) ಯ ಸಮುದ್ರ ತೀರದಲ್ಲಿ ಸರ್ಕಾರದವರು ಎರಡು ಮೂರು ವಾರಗಳಿಂದ ಮುತ್ತಿನ ಚಿಪ್ಪುಗಳನ್ನು ತೆಗಿಸುತ್ತಿದ್ದಾರೆ. ಮೊದಲು ಆ ಮುತ್ತಿನ ಚಿಪ್ಪುಗಳು ರೂಪಾಯಿಗೆ ೫ ರಂತೆ ಬಿಕರಿಯಾಗುತ್ತಿದ್ದವು. ಈಗೀಗ ರೂಪಾಯಿಗೆ ೭೯ ರ ವರೆಗೆ ಹೆಚ್ಚು ಕೇಳುತ್ತಿದ್ದರಿಂದ ಈ ವ್ಯಾಪಾರವು ಸರ್ಕಾರದವರಿಗೆ ಅಷ್ಟು ಲಾಭಕರವಾಗಿಲ್ಲ. ಇನ್ನೊಂದು ವಾರದೊಳಗಾಗಿ ಆ ಕೆಲಸವನ್ನು ನಿಲ್ಲಿಸಿಬಿಡಬಹುದು.

***

ಮಲಬಾರ್ ಜಿಲ್ಲೆಗೆ ಸೇರಿದ ಕಣ್ಣಪುರಂಬಾ ಎಂಬ ಊರಿನಲ್ಲಿ ಕೆಲವರು ಸೇರಿಕೊಂಡು, ಸಮಾಧಿಗಳನ್ನು ಅವೇಳೆಗಳಲ್ಲಿ ಹೋಗಿ ಬಗೆದು ಹೆಣಗಳನ್ನು ಕಿತ್ತು ಅವುಗಳ ಮೇಲೆ ಇರತಕ್ಕ ಬಟ್ಟೆಬರೆಗಳನ್ನೂ ಆಭರಣಾದಿಗಳನ್ನೂ ಅಪಹರಿಸುತ್ತಿದ್ದರು. ಈ ಸಂಗತಿಯು ಊರಿನಲ್ಲೆಲ್ಲಾ ತುಂಬಾ ಗಲಭೆಯನ್ನೂ ಕಳವಳವನ್ನೂ ಉಂಟುಮಾಡಿತು. ಪೋಲೀಸಿನವರು ಪತ್ತೆ ತರಹೂದು ನಡಿಸಿ, ಇದುವರೆಗೆ ಆರು ಜನರನ್ನು ದಸ್ತಗಿರಿಮಾಡಿರುತ್ತಾರೆ.

***

ಹುಚ್ಚುನಾಯಿ, ನರಿ ಮೊದಲಾದ ಪ್ರಾಣಿಗಳಿಂದ ಕಡಿಸಿಕೊಂಡವರಿಗೆ ಚಿಕಿತ್ಸೆಮಾಡುವುದಕ್ಕಾಗಿ ಕೂನೂರಿನಲ್ಲಿ ಒಂದು ಆಸ್ಪತ್ರೆಯನ್ನು ಹೊಸದಾಗಿ ಇಟ್ಟು ನಡಿಸುತ್ತಿದ್ದಾರೆ. ಈ ಆಸ್ಪತ್ರೆಯ ಮೊದಲನೇ ವಾರ್ಷಿಕ ರಿಪೋರ್ಟು ಪ್ರಕಟವಾಯಿತು. ಒಟ್ಟು ೧೯೬ ರೋಗಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಿದರು. ಅವರ ಪೈಕಿ ಮದರಾಸ್ ಅಧಿಪತ್ಯದವರು ೭೯ ಜನರು, ಹೈದರಾಬಾದಿನವರು ೧೯ ಮಂದಿ, ಲಂಕಾದ್ವೀಪದವರು ೧೯ ಮಂದಿ, ಬೊಂಬಾಯಿಯವರು ೩೧ ಜನರು, ಮೈಸೂರು ಸಂಸ್ಥಾನದವರು ೧೭ ಜನರು, ಬರ್ಮಾದವರು ೧೭ ಜನರು, ಈ ರೀತಿ ಹೋಗಿ ಚಿಕಿತ್ಸೆಮಾಡಿಸಿಕೊಂಡಿರುತ್ತಾರೆ.

***

ಮದರಾಸ್ ಅಧಿಪತ್ಯದಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೆಲ್ಲಾ ಇದುವರೆಗೆ ಪ್ರಯಾಣದ ಖರ್ಚಿಗೆ ಸರ್ಕಾರದವರು ಏನೂ ಕೊಡುತ್ತಿರಲಿಲ್ಲ. ಮುಂದಿನ ಏಪ್ರಲ್ ೧ರಿಂದ ಎಲ್ಲಾ ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೂ ಪ್ರಯಾಣದ ಖರ್ಚು ಕೊಡಬೇಕೆಂದು ಹುಕುಂ ಮಾಡಿ, ಆದಕ್ಕೋಸ್ಕರ ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ. ಮದರಾಸ್ ಅಧಿಪತ್ಯದಲ್ಲಿ ೭೫೬ ಮಂದಿ ರೆವಿನ್ಯೂ ಇನ್ಸ್‌ಪೆಕ್ಟರುಗಳು ಇರುತ್ತಾರೆ. ಇವರೆಲ್ಲಾ ತಿಂಗಳಿಗೆ ೨೫ ದಿನ ಗ್ರಾಮಗಳ ಮೇಲೆ ಸಂಚಾರ ಮಾಡಬೇಕೆಂಬ ವಿಧಿ ಇರುತ್ತದೆ. ಆದಕಾರಣ ಅವರಿಗೆ ದಿನಕ್ಕೆ ೪ ಆಣೆಯಂತೆ ಪ್ರಯಾಣದ ಭತ್ಯ ಕೊಡಬೇಕೆಂದು ಸ್ಯಾಂಕ್ಷನ್ ಮಾಡಿದಾರೆ.

***

ಪಿಶಾವರ್ ಪಟ್ಟಣದಲ್ಲಿ ಈ ತಿಂಗಳ ೭ ನೆ ತಾರೀಖಿನ ದಿನ ಒಂದು ಭಯಂಕರವಾದ ಲೂಟಿಯಾಯಿತು. ಹಿಂದೂಸ್ಥಾನದ ಸರಹದ್ದಿನ ಆಚೆಯಿಂದಲೂ ಆಫ್ರಿದಿ ಜನರು ಬಂದು ಈ ಲೂಟಿಯನ್ನು ಮಾಡಿದರೆಂದು ಹೇಳುತ್ತಿದ್ದರು. ಈಗ ಈ ಲೂಟಿಗೆ ಸಂಬಂಧಪಟ್ಟವರನ್ನು ಅಂದರೆ ಸುಮಾರು ೯೪ ಜನರನ್ನು ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ. ಅವರನ್ನೆಲ್ಲಾ ಆಡಮಾಯಿಸಿ ನೋಡಲಾಗಿ ಆ ಪೈಕಿ ೬೦ ಮಂದಿ ಆಫ್ರಿದಿ ಜನರಂತಲೂ, ಉಳಿದವರೆಲ್ಲಾ ಪಿಶಾವರಿನ ಮತ್ತು ಆ ಡಿಸ್ಟ್ರಿಕ್ಟಿನ ಬದ್ಧಚಾಲಿನ ಜನಗಳೆಂತಲೂ, ತಿಳಿದು ಬಂದಿದೆ. ಈಗ ಸರ್ಕಾರದವರು ೬೦ ಮಂದಿ ಆಫ್ರಿದಿ ಜನರನ್ನೂ ಖುಲಾಸ್ ಮಾಡಿ, ಅವರ ಸ್ಥಳಗಳಿಗೆ ವಾಪಸು ಕಳುಹಿಸಿಬಿಟ್ಟರು. ಕಳುವಾಗಿದೆ ಎಂದು ಹೇಳುವ ಮಾಲುಗಳನ್ನೆಲ್ಲಾ ಆ ಜನರು ಇನ್ನು ಮೂರು ವಾರಗಳೊಳಗಾಗಿ ತಂದು ಒಪ್ಪಿಸಿಬಿಡುತ್ತೇವೆಂದು ಕರಾರು ಮಾಡಿಕೊಂಡು ಹೋಗಿದಾರೆ.

***

ಪೂನಾ ಪಟ್ಟಣದಲ್ಲಿ ದೇಶಾಭ್ಯುದಯ ಸಂಘದವರು ಪರಸ್ಪರ ಸಹಾಯಕವಾದ ಒಂದು ಕಂಪನಿಯನ್ನು ಸ್ಥಾಪಿಸಿ, ಅದನ್ನು ಸರ್ಕಾರದಲ್ಲಿ ರಿಜಿಸ್ಟರ್ ಮಾಡಿಸಿರುತ್ತಾರೆ. ಈ ಕಂಪನಿಯ ಉದ್ದೇಶಗಳೇನೆಂದರೆ—ದೇಶೀಯ ಬಾಲಕರಲ್ಲಿ ಸಮರ್ಥರೆನಿಸಿಕೊಂಡವರನ್ನು ವೇತನ ಕೊಟ್ಟು ಪರದೇಶಗಳಿಗೆ ಕಳುಹಿಸಿ, ಕಸಬುಗಳನ್ನು ಕಲಿತು ಬರುವಂತೆ ಮಾಡುವುದು, ಅನುಕೂಲವಾಗಿ ಕಂಡು ಬರುವಂಥಾ ಸ್ಥಳಗಳಲ್ಲಿ ಸಣ್ಣ ಸಣ್ಣ ಕಸಬುಗಳನ್ನು ಏರ್ಪಾಡು ಮಾಡಿ ನಡಿಸುವುದು, ಇಂಥಾ ಕಸಬುಗಳ ಮೇಲ್ವಿಚಾರಣೆ ಮಾಡುವುದಲ್ಲದೆ ಅವುಗಳನ್ನು ಅಭಿವೃದ್ಧಿಗೆ ಬರುವಂತೆ ಮಾಡುವುದಕ್ಕೂ ದೇಶೀಯ ಜನರಲ್ಲಿ ಯೋಗ್ಯರಾದ ಶಿಕ್ಷಕರು ದೊರಕದೇಹೋದಲ್ಲಿ ಅನ್ಯದೇಶೀಯರನ್ನಾದರೂ ಕರೆಸಿ ಸಂಬಳ ಕೊಟ್ಟು ನೇಮಕಮಾಡುವುದು, ಈ ಮೊದಲಾದವು. ಈ ರೀತಿ ಏರ್ಪಾಡು ಮಾಡಿದಲ್ಲದೆ ಈ ರಾಷ್ಟ್ರದಲ್ಲಿ ಕಸಬುಗಳು ಅಭಿವೃದ್ಧಿಗೆ ಬರಲಾರವೆಂತಲೂ, ಜನರಿಗೆ ಕಸಬುಗಳಲ್ಲಿ ಅಭಿರುಚಿಯುಂಟಾಗಲಾರದೆಂತಲೂ ಸಂಶಯವಿಲ್ಲದೆ ಹೇಳಬಹುದು. ಈ ಸಂಘದಲ್ಲಿ ಕಾರ್ಯದರ್ಶಿಗಳಾಗಿರತಕ್ಕವರ್‍ಯಾರೆಂದರೆ—ಮೆ॥ ಗಣಪತ ಪಟ್ವರ್ಧನ, ಬರೋಡಾವಾಲಾ, ಎಂ. ಕೆ. ಸಾವಿರಾವ್.

ಪ್ಲೇಗ್ ಉಪದ್ರವಕ್ಕೆ ಗಡ್ಡೆಗೂ ನಾನಾ ಚಿಕಿತ್ಸೆಗಳನ್ನು ಜನರು ಮಾಡುತ್ತಿರುವರಷ್ಟೆ. ಮುಂದೆ ಹೇಳುವ ಚಿಕಿತ್ಸೆಯು ಒಳ್ಳೆಯದೆಂದು ತಿಳಿದು ಬಂದಿರುವುದರಿಂದ ಅದನ್ನು ಇಲ್ಲಿ ಸೂಚಿಸುತ್ತೇವೆ. ಅದೇನೆಂದರೆ—ಅಶ್ವತ್ಥದ ಎಲೆಗಳು ೫, ಬಿಲ್ವಪತ್ರೆಯ ೩ ಎಲೆಗಳುಳ್ಳ ದಳಗಳು ೧೫, ತುಳಸಿಯ ಬಲಿತ ಎಲೆಗಳು ೩೫, ಇವುಗಳನ್ನು ಒಂದು ಮಡಿಕೆಯಲ್ಲಿ ೧ ಪಕ್ಕಾಸೇರು (೪೦ ತೊಲೆ) ನೀರು ಸಹಿತ ಹಾಕಿ ಮಂದಾಗ್ನಿಯಿಂದ ಕಾಯಿಸಿ ಅಷ್ಟಾವಶೇಷ (ಅಂದರೆ ೧೦ ತೊಲೆ) ನೀರು ಆದನಂತರ ತೆಗೆದು ವಸ್ತ್ರಗಾಳಿತ ಮಾಡಿ ಗಾಜಿನ ಪಾತ್ರೆಯಲ್ಲಿ ಹಾಕಿ ಇಡುವದು. ರೋಗಿಯ ಶಕ್ತಿಮಾನದ ಪ್ರಕಾರ ಟೀ ಚಮ್ಚೆಯಿಂದ ಒಂದು ಮೋಜಿನ ಚಮ್ಚೆ ವರೆಗೆ ೨ ತಾಸಿಗೊಂದಾವರ್ತಿ ಕೊಡಬೇಕು. ಈ ಕಷಾಯ ಕೊಟ್ಟ ೩೪ ತಾಸಿನೊಳಗೆ ಸ್ವಲ್ಪ ಸ್ವಲ್ಪ ಬೆವರು ಬಂತು ಜ್ವರವು ಕಮ್ಮಿಯಾಗುವುದಲ್ಲದೆ ತಿರಿಗಿ ಜ್ವರಸ್ತಾ ಬರುವುದಿಲ್ಲ, ವಾಯು ತುಂಬುವುದೂ ಇಲ್ಲ. ೭೨ ತಾಸಿನನಂತರ ರೋಗಿಯು ಹೆಚ್ಚು ವಿಶ್ರಾಂತಿಯನ್ನು ಹೊಂದುವನು.—ಗುಡ್ಡೆಯ ಮೇಲೆ ಕಟ್ಟತಕ್ಕ ಪೋಲ್ಟೀಸಿನ ಕ್ರಮ—ಬಿಡಕಳ್ಳಿಯ ಜಡೆಯನ್ನು ತಂದು ಬೆಂಕಿಯಲ್ಲಿ ಹಾಕಿ ಮುಳ್ಳು ಕರಟಿದನಂತರ ಮೇಲಿನ ಸಿಪ್ಪೆ ತೆಗೆದು ಚಿಸೂಡಿ ಅದರ ಟೊಂಡನ್ನು ಸ್ವಲ್ಪ ನೀರುಹಾಕಿ ಅರೆದು ಬಿಸಿಮಾಡಿ ಉಗುರುಬೆಚ್ಚಗೆ ಅದನಂತರ ಗುಡ್ಡೆಯ ಮೇಲೆ ಇಟ್ಟು ಕಟ್ಟಬೇಕು. ೩ ತಾಸಿಗೊಂದಾವರ್ತಿ ಬದಲಿಸಿ ಕಟ್ಟಲು ೩೪ ತಾಸಿನಲ್ಲಿ ಗುಡ್ಡೆ ಸಣ್ಣದಾಗುತ್ತ ಬರುವುದು. ಜ್ವರವು ಸಹ ಕಮ್ಮಿಯಾಗುವುದು. ೭೨ ತಾಸಿನೊಳಗೆ ಗುಡ್ಡೆ ಸಣ್ಣದಾಗಿ ಜ್ವರ ಪೂರಾ ಬಿಟ್ಟುಹೋಗುವುದು. ಗುಡ್ಡೆಯು ಇನ್ನೂ ಮಾಗದೆ ಇದ್ದರೆ, ಪೂರಾ ಮಾಗುವ ವರೆಗೆ ಮೇಲೆ ಹೇಳಿದ ಕ್ರಮದಂತೆ ಪೋಲ್ಟೀಸು ಹಚ್ಚತಕ್ಕದ್ದು. ಪೋಲ್ಟೀಸು ಕಟ್ಟುವ ಮೊದಲು ಪ್ರತಿ ಸಾರಿ ಸ್ವಲ್ಪ ಹರಳೆಣ್ಣೆಯನ್ನು ಗುಡ್ಡೆಗೆ ಪಸೆಯಾಗಿ ಹಾಗಿಸಬೇಕು. ಈ ಔಷಧಿ ಚಿಕಿತ್ಸೆಯನ್ನು ಪ್ರಯೋಗಿಸಿ ನೋಡಿದ ಫಲಟಣದಲ್ಲಿ ೧೦೦ ಮಂದಿಯಲ್ಲಿ ೯೦ ಮಂದಿಗೆ ಗುಣವಾಗಿಯದೆ ಎಂದು ಮರಾಟಿ ಭಾಷೆಯ "ಕೇಸರಿ" ಎಂಬ ಪತ್ರದಲ್ಲಿ ಹೇಳಿಯದೆ.

ಆರು ವರುಷಗಳ ಅನುಭವ.

93-30

ಅಸ್ವಸ್ಥವಿರುವ ಕಾಲದಲ್ಲಿ ನಮ್ಮ ನೆರೆಕರೆಯವರಲ್ಲಿ ಎಷ್ಟುಮಂದಿ ತಪ್ ರೀತಿಯಲ್ಲಿ ಭ್ರಮಪಟ್ಟಿರಬಹುದೆಂಬದನ್ನು ತಿಳಿದುಕೊಳ್ಳುವದು ಆಶ್ಚರ್ಯವಲ್ಲ. ಹಾಗೆಯೇ ಅವರು ತಮ್ಮ ಸಂಕಟಗಳನ್ನು ಹ್ಯಾಗೆ ನಿವಾರಣೆಮಾಡಿಕೊಂಡರು ಎಂಬದನ್ನು ಸಹಾ ಅರಿತುಕೊಂಡ ಪಕ್ಷದಲ್ಲಿ ಅವರು ಸಫಲವಾಗಿ ಅನುಸರಿಸಿದ ವಿಧಾನವನ್ನು ಕೈಕೊಳ್ಳಲು ನಾವು ನಿಶ್ಚಯಿಸುತ್ತೇವೆ. ಹೀಗಿರುವಲ್ಲಿ ಕಲ್ಕತ್ತೆಯ ಒಬ್ಬ ಪ್ರಸಿದ್ಧ ಡಾಕ್ಟರು ನಮಗೆ ಉಪಶಮನವನ್ನು ಕೊಡುವದಾಗಿ ತಿಳಿಸುವ ಔಷಧದ ಕುರಿತು ಕೇಳುವದು ಉತ್ತಮ. ಮುಂಬಯಿ ಕಂಪೆನಿಯ ವೈದ್ಯ ಉದ್ಯೋಗಸ್ಥರಾದ ಡಾಕ್ಟರ್ ಸಿ. ಸಿ. ಮಿತ್ರರವರು ಹೇಳುವದೇನಂದರೆ:—ನಾನು ಡಿಯೇನ್ಸ್‌ರ (ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಬೆನ್ನ ನೋವಿನ-ಮೂತ್ರಕೋಶದ ಔಷಧ ಮಾತ್ರೆಗಳನ್ನು ನನ್ನ ವಿಲಾಯತಿ—ಈ ದೇಶದ ರೋಗಿಗಳಿಗೆ ಕಳೆದ ೬ ವರುಷಗಳಿಂದ ಕೊಟ್ಟು ಬರುತ್ತೇನೆ. ಅವುಗಳು ಬ್ರಾಯಿಟ್ಸ್ ಡಿಸೀಜ್ ಎಂಬಮೂತ್ರವ್ಯಾಧಿ, ಕಟಿವಾತ ಮುಂತಾದ್ದಕ್ಕೆ ಅತ್ಯಂತ ಉಪಯೋಗಕರವಾದದ್ದೆಂದು ಕಂಡುಬಂದದೆ ಮತ್ತು ಅಂಥಾ ವ್ಯಾಧಿಗ್ರಸ್ಥರಿಗೆ ಈ ಔಷಧವನ್ನು ಧೈರ್ಯದಿಂದ ಶಿಫಾರಸು ಮಾಡಲಿಕ್ಕೆ ಅಡ್ಡಿ ಇಲ್ಲಾ.

ಮೂತ್ರನಾಡಿಗಳ ವ್ಯಾಧಿಯು ಅನೇಕಾವರ್ತಿ ತಿಳಿಯದೆ ಫಕ್ಕನೇ ಬರುತ್ತದೆ. ಅದರ ಹೇತು ಏನೆಂದು ತಿಳಿಯುವದಿಲ್ಲ. ರೋಗಿಗೆ ತಲೆನೋವು, ಮಾನಸಿಕ ದುರ್ಬಲತೆ, ಎದೆಗುಂದಿನೋವು, ನಿದ್ರಾಭಂಗ, ತಲೆ ತಿರುಗುವಿಕೆ, ಅನುತ್ಸಾಹ ಮುಂತಾದ್ದು ಮುದಾಗುತ್ತದೆ. ಇವು ಬೆನ್ನುನೋವು, ಜಲೋದರ, ಮೂಲ ಯಾ ಮಾತೋಪದ್ರವಗಳು, ಬ್ರೈಟ್ಸ್ ಡಿಸೀಜ್ ಇವುಗಳ ಹಾಗೆಯೇ ಮೂತ್ರಪಿಂಡದ ಉಪದ್ರವದ ಚಿಹ್ನೆಗಳಾಗಿರುತ್ತವೆ.

ಈ ಮಾತ್ರೆಗಳು ಅದರ ಮೂಲೋತ್ಪಾಟನೆಯನ್ನು ಮಾಡಿ ಗುಣಮಾಡುತ್ತವೆ.

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ. ಶೀಸೆ ಒಂದಕ್ಕೆ ರೂ ೨, ಅಥವಾ ೬ ಶೀಸೆಗಳಿಗೆ ರೂ ೧೦-೮-೦, ಅಥವಾ ಮುಂಬಯಿಯಲ್ಲಿಯ ಡೀನ್ಸ್‌ರ ಔಷಧಗಳ ಕೋಠಿಯಿಂದ ಕ್ರಮ [illegible] ಕೊಳಬಹುದು. ಪಿ. ಓ. ಬಾಕ್ಸ್ ನಂ ೭೦, ಮುಂಬಯಿ.

ಬೆಂಗಳೂರು ಮರ್ಕೆಂಟೈಲ್ ಕಂಪನಿ ಲಿಮಿಟೆಡ್ ಆಫೀಸಿನಿಂದ ನೋಟೀಸು.

27 1

ಈ ಕಂಪನಿಯಲ್ಲಿ "ಅನಾಥ ಅನಾಯಹೀನ ಸಂರಕ್ಷಕ ಸಭಾ, ಧಾರವಾಡ" ಎಂಬ ಹೆಸರಿನ ಮೇಲೆ ೧೮೩೫ ನೆ ಇಸವಿ ಸೆಪಟಂಬರು ೯ ನೆ ತಾರೀಖಿನಲ್ಲಿ ರೂ ೧೫೦, ಡಿಸೆ ೧೬ ಲ್ಲಿ ರೂ ೭೫, ಡಿಸೆಂಬರ್ ೨೨ ಲ್ಲಿ ರೂ ೩೨೫, ೧೮೯೯ ನೆ ಇಸವಿ ನವಂಬರ್ ೧೭ ಲ್ಲಿ ರೂ ೧೦೦. ಜುಮ್ಲಾ ೬೦೦ (ಆರು ನೂರು) ರೂಪಾಯಿಗಳನ್ನು ಮೆ॥ ರಾ॥ ಲಿಂಗನಗೌಡ ಪರಾಯಕರವರು ತಂದು ಠೇವಾಗಿ ದಾಖಲ್ ಮಾಡಿಸಿ ಇದ್ದು, ಅವರು ಜೀವಂತರಾಗಿ ಇರುವ ವರಿಗೂ ಅದರ ನಫೆ ಪೈಕಿ ಅವರು ತೆಗೆದುಕೊಂಡು ಖರ್ಚ ಮಾಡಿದ್ದು ಮಿಕ್ಕಿದ ಜಾತಾ ನಫೆ ಪೈಕಿ ರೂ ೯೬—೦—೧೦ ಪೈ ಉಳಿದು ಇರುತ್ತೆ. ಈಚೆಗೆ ಈ ಮೇಲಿನ ವಿಷಯದಲ್ಲಿ ಯಾರನ್ನು ಅಧಿಕಾರಪಡೆದು ಬಂದು ಕೇಳಲಿಲ್ಲವಾಗಿ ಈ ಮೂಲಕ ತಿಳಿಸುವದೇನೆಂದರೆ—ಚಾಲತಿ ಇಸವಿ ಜೂನ್ ಆಖೈರು ಒಳಗಾಗಿ ಮೇಲೆ ಕಂಡ ಸಭೆಯ ಧರ್ಮಕರ್ತರುಗಳು ಯಾರಾದರೂ ಇದ್ದು ಕ್ರಮವಾದ ದಾಖಲೆಗಳನ್ನು ನಮ್ಮ ಕಂಪನಿಯಲ್ಲಿ ಹಾಜರಾಗಿ ಮೇಲೆ ಕಂಡ ಮೊಬಲಗು ತೆಗೆದುಕೊಳ್ಳವದಕ್ಕೂ, ಅದರನ್ನು ಸಭೆಯವರ ಇರಾದೆಯಂತೆ ಖರ್ಚ ಮಾಡುವದಕ್ಕೆ ತಕ್ಕ ದಾಖಲೆಗಳು ಕಂಪನಿಯವರು ಒಪ್ಪುವ ರೀತ್ಯಾ ತೋರಿಸಿದರೆ ಅವರ ವಶಕ್ಕೆ ಬಿಟ್ಟು ಮೊಬಲಗು ಕೊಡುವ ವಿಷಯದಲ್ಲಿ ಕಂಪನಿಯವರ ಇರಾದೆ ಸಹಿತ ಅದರಂತೆ ನಡಿಸಲ್ಪಡುತ್ತೆ. ಹಾಗೆ ಯಾರೂ ಹಾಜರಾಗದೆ ಇದ್ದ ಪಕ್ಷದಲ್ಲಿ ಈ ಕಂಪನಿಯ ಜನರಲ್ ಮೀಟಿಂಗಿನಲ್ಲಿ ಈ ವಿಷಯ ಚರ್ಚೆಗೆ ತಂದು ಕಂಪನಿಯ ಷೇರು ಹೋಲ್ಡರುಗಳ ಮೆಜಾರಿಟಿ ಇರಾದೆಯಂತೆ ಈ ಧರ್ಮದ ಕೆಲಸವನ್ನು ಬೇರೆ ವಿಧವಾಗಿ ನಡಿಸಲು ಏರ್ಪಾಡು ಮಾಡಲ್ಪಡುತ್ತೆ. ತಾ ೭೨ ನೆ ಮಾರ್ಚಿ, ೧೯೦೪ನೇ ಇಸವಿ.

ಬೈ ಆರ್ಡರ್,

ರಾಘವೇಂದ್ರಪ್ಪ, ಏಜೆಂಟ್.

ಅನೇಕ ಸ್ತ್ರೀಯರ ಅನುಭವಪತ್ರ.

ಪೆರೂನಾ ಅನುಕೂಲವೂ ಉಪಯುಕ್ತವೂ ಸಂಸಾರದಲ್ಲಿ ಅವಶ್ಯವೂ ಆದ ಔಷಧವೆಂದು ಸಂಶಯವಿಲ್ಲದೆ ತಿಳಿಸುತ್ತೇವೆ.

ಹೆಂಗಸರು ಹೇಳಿರುವುದನ್ನು ಓದಿನೋಡಿ

ನಿರಂತರ ಗಂಟಲುಕಟ್ಟುವುದು

ಮಿಸೆಸ್ ಡೇವಿಡ್ ಸಿ. ಕ್ಯಾಮಿರಾನ್ ಹೆರ ಲ್ಡ್ಸ್‌ಬರ್ಗ್, ಕ್ಯಾಲ್, ಮೆಂಬರ್, ಡಾಟರ್ಸ್ ಆಫ್ ಅಮೇರಿಕಾ, ಈ ರೀತಿ ಬರೆಯುತ್ತಾಳೆ —

"ನನ್ನ ಶ್ವಾಸಕೋಶದ ನಾಳಗಳಿಗೆ ಶೀತಹಿಡಿದು ನನ್ನನ್ನು ಬಹಳ ಹಿಂಸೆಪಡಿಸುತ್ತಿದ್ದುದರ ನಿವಾರಣೆಗೆ ಅನೇಕ ಪರಿಹಾರಗಳನ್ನು ಮಾಡಿ ನೋಡಿದರೂ ಪ್ರಯೋಜನವಾಗಲಿಲ್ಲ. [illegible] ನನಗೆ ವಾಸಿಯಾಗುವುದೇ ಇಲ್ಲವೆಂಬ ಯೋಚನೆ ಉಂಟಾಯಿತು. ಕಡೆಗೆ ಪೆರೂನಾವನ್ನು ಸೇವಿಸಿ ನೋಡೋಣವೆಂದು ಪ್ರಾರಂಭಿಸಿದೆನು.

"ಸ್ವಲ್ಪಕಾಲದೊಳಗಾಗಿ ನನ್ನ ಶ್ವಾಸಕೋಶದ ನಾಳಗಳು ನಿರ್ಮಲವಾಗುತ್ತಾ ಬಂದವು. ನನ್ನ ಗಂಟಲುಕಟ್ಟುವುದು ಕಡಮೆಯಾಯಿತು. [illegible] ಗಂಟಲಿನಲ್ಲಿ ಗಾರನ್ನುವುದು ತಪ್ಪಿಹೋಯಿತು. ನನಗೆ [illegible] ನನ್ನಲ್ಲಿ [illegible] ಈಗ ಸುಮಾರು ತಿಂಗಳು ಕಳೆದುಹೋಗಿರುತ್ತವೆ. ಅದಕಾರಣ [illegible] ನನಗೆ ಅದು ಬರುವುದೇ ಇಲ್ಲವೆಂದು ತಿಳಿದಿದ್ದೇನೆ"

ಮೇಲೆ ಕಂಡಂಥಾ ಸ್ತ್ರೀಯರ ಗುಂಪನ್ನು ನಾವು ಎಷ್ಟು ಸಾವಿರ ಬೇಕಾದರೂ ದೃಷ್ಟಾಂತಕ್ಕೊಡಬಹುದು. ಆಗಲೂ ಪೆರೂನಾದಿಂದ ಪ್ರಯೋಜನವನ್ನು ಹೊಂದಿದ ಸಮಸ್ತ ಸ್ತ್ರೀಯರನ್ನೂ ಹೇಳಿದಂತಾಗುವುದಿಲ್ಲ. ಲಕ್ಷಾಂತರ ಹೆಂಗಸರು ಅದರ ಸೇವನೆಯಿಂದ ತಮ್ಮ ಸಕಲ ರೋಗಗಳನ್ನೂ ನಿವಾರಣೆಮಾಡಿಕೊಂಡಿರುತ್ತಾರೆ.

ಹೊಟ್ಟೆಗೆ ಹಿಡಿದ ಶೀತವು

ಮಿಸ್ ಎಮಿಲಿ ಕಾಚ್ ೧೦೫ ವಿ ಟೇಗಲ್ ಅವ್, ಮಿಲ್ವಾಕಿ, ವಿಸ್ ಈ ರೀತಿ ಬರೆಯುವುದು —

"ಹೊಟ್ಟೆಗೆ ಶೀತ ಹಿಡಿದು ನರಳುತ್ತಿರುವವರಿಗೆಲ್ಲಾ ಪೆರೂನಾವನ್ನೇ ಉಪಯೋಗಿಸುವಂತೆ ನಾನು ಬಹು ಸಂತೋಷದಿಂದಲೂ [illegible] ಮಾನ ಪೂರ್ವಕವಾಗಿಯೂ ಶಿಫಾರಸು ಮಾಡಬಲ್ಲೆನು. ನಾನು ಅನೇಕ ಔಷಧಗಳನ್ನು ಉಪಯೋಗಿಸಿದೆನು. ಒಂದರಿಂದಲೂ ನನಗೆ ಆರೋಗ್ಯವಾಗಲಿಲ್ಲ. ಕಡೆಗೆ ನಾನು ಪೆರೂನಾವನ್ನು ಉಪಯೋಗಿಸಿ ನೋಡಬೇಕೆಂದು ನಿಶ್ಚಯಿಸಿ ಅದನ್ನು ಸೇವಿಸಿದ್ದರಲ್ಲಿ ನನಗೆ ರೋಗವೆಲ್ಲಾ ವಾಸಿಯಾಯಿತು.

ಇದನ್ನೇ ಮೊದಲು ಸೇವಿಸಿದ್ದರೆ ಇತರ ಔಷಧಗಳನ್ನು ಉಪಯೋಗಿಸಿ ನನ್ನ ಹೊಟ್ಟೆ [illegible] ಕೆಡಿಸಿಕೊಳ್ಳುತ್ತಿರಲಿಲ್ಲ. [illegible] ನಾನು ವ್ಯಸನಪಡುತ್ತೇನೆ. ಪೆರೂನಾ ನನ್ನ ರೋಗವನ್ನು ಸಂಪೂರ್ಣವಾಗಿ ವಾಸಿಮಾಡಿದುದಲ್ಲದೆ [illegible] ರೋಗವೂ ನನ್ನ ದೇಹಕ್ಕೆ ಹತ್ತದಂತೆ [illegible] ನಾನು ಯಾವಾಗಲೂ ಒಂದು ಬಾಟಲನ್ನು ನನ್ನ ಬಳಿ ಇಟ್ಟುಕೊಂಡಿದ್ದೇನೆ. ನಾನು ಪಟ್ಟಂಥಾ ಕಷ್ಟವನ್ನು ಅನುಭವಿಸುತ್ತಿರುವ ಇತರರಿಗೂ ಪೆರೂನಾವನ್ನು ಉಪಯೋಗಿಸಲು ಸಂತೋಷದಿಂದ ಶಿಫಾರಸು ಮಾಡುತ್ತೇನೆ"

ಶ್ವಾಸಕೋಶದ ಶೀತವು

ಮಿಸೆಸ್ ವಿಂ ಹಾರ್ಮನ್, ೫೬೯ ನಾರ್ತ್ ಹಾಲಿಸ್ಟೀಡ್ ಚಿಕಾಗೋ, ಇಲ್, ಈ ರೀತಿ ಬರೆಯುವುದು — "ನನ್ನ ಎದೆಗೆ ಅಂದರೆ ಶ್ವಾಸಕೋಶಕ್ಕೆ ಶೀತವುಂಟಾಗಿ ಬಹಳ [illegible] ಅನುಭವಿಸಿದೆನು. ಶ್ವಾಸಕೋಶದ ನಾಳಗಳು [illegible] ಕಟ್ಟಿಕೊಂಡಿದ್ದುದು [illegible] ನನಗೆ ಒಂದುತರಹ ಕೆಟ್ಟ ಕೆಮ್ಮಲು [illegible] ಇದ್ದಿತು. [illegible] ನ್ನು ಕೆಮ್ಮಲು [illegible] ನನಗೆ [illegible] ಶೀತವೂ [illegible] ತ್ತಿದ್ದರು. ಪೇಟೆಂಟ್ ಔಷಧಗಳು [illegible] ಒಂದು [illegible]

[illegible] ನನ್ನನ್ನು [illegible] ಒಂದೇ [illegible] ತಡೆಗೆ [illegible] ಔಷಧವು ಶ್ವಾಸಕೋಶದ [illegible] ನನ್ನ [illegible] ಅಂದರೆ [illegible] ಔಷಧ ಸೇವನೆ [illegible] ಚಿಕಿತ್ಸೆಯಿಂದಲೂ ನನಗೆ ಸ್ವಲ್ಪವೂ [illegible] ಇಲ್ಲ. [3551]

"ನನ [illegible] ಒಂದು [illegible] ಆದರಲ್ಲದೆ [illegible] ಸೇವಿಸಿದಾಗ್ಯೂ ನನಗೆ [illegible] ರಾತ್ರಿ [illegible] ನಾನು [illegible] ವೇಳೆ ಅಂಗತಂಗನಾಗಿ [illegible] ಲಗಿಕೊಳ್ಳುವದೇ ಅಸಾಧ್ಯವಾಯಿತು. ಬೆಳಗಿನ ಝಾವದ ೨-೩ ಗಂಟೆಯಾಗುವತನಕ [illegible] ಇರ ವಂತಾಯಿತು. [illegible] ಅಸಾಧ್ಯ [illegible] ವೇಳೆ ನನ್ನನ್ನು ನೋಡುವವರೆಲ್ಲಾ ನನಗೆ ಕ್ಷಯ [illegible] ನನಗೂ ಅದೇ [illegible] ಯಿತು.

"ಪೆರೂನಾವನ್ನು ಕುರಿತು ಬರೆದಿರುವ ಕಾಗದಗಳನ್ನು ಓದುತ್ತಾ ಬಂದದ್ದರಲ್ಲಿ — ಈ ಔಷಧದಿಂದ ನನ್ನ ರೋಗವೇನಾದರೂ ವಾಸಿಯಾಗಲಾರದು [illegible] ಅದನ್ನು ಸೇವಿಸಿ ನೋಡೋಣ [illegible] ಸ್ವಲ್ಪ ಉಂಟಾಯಿತು. ಒಂದು [illegible] ಬಾಟಲುಗಳ ಔಷಧವನ್ನು ಸೇವಿಸಿದೆನು. ಆಗ ನನ್ನ ಶರೀರ [illegible] ಬದಲಾಯಿಸುವುದಕ್ಕೆ ನನಗೆ [illegible] ಸ್ವಲ್ಪ [illegible] ಅದೇ ವೇಳೆ [illegible] ಯಿತು. ಕ್ರಮವಾಗಿ ಔಷಧ ಸೇವನೆಯನ್ನು ಮಾಡುತ್ತಾ ಬಂದೆ. [illegible] ನನ್ನ ಸಂಶಯವೂ [illegible] ಈಗ ನಾನು [illegible] ಗನಾಗಿ [illegible] ರಾತ್ರಿಯೆಲ್ಲಾ ನಿದ್ದೆ ಮಾಡುತ್ತೇನೆ. ಆದ್ದರಿಂದ [illegible] ವಿಷಯದಲ್ಲಿ ನಾನು ಎಷ್ಟುಮಟ್ಟಿಗೆ ಕೃತಜ್ಞಳಾಗಿದ್ದೇನೋ ನೀವೇ ಊಹಿಸಿಕೊಳ್ಳಬಹುದು"

ಕೃಶವಾಗುವಂಥಾ ಕ್ಷಯರೋಗವು

ಮಿಸೆಸ್ ರಾಕ್ಸ್ ಟೈಯಲರ್, [illegible] ಚಿಕಾಗೋ, ಇಲ್, ವೈಸ್-ಪ್ರಸಿಡೆಂಟ್, ಇಲಿನಾಯಿಸ್ ಸ್ತ್ರೀಯರ ಸಂಘ, ಈ ರೀತಿ ಬರೆಯುವುದು —

"[illegible] ನನಗೆ ಒಂದು [illegible] ರೋಗ [illegible] ನನ್ನ ಮಾಂಸಖಂಡಗಳೂ [illegible] ಕ್ಷಯ [illegible] ಬಂದವು. ಕಡೆಗೆ ನಾನು ಯಾವ ಕೆಲಸವನ್ನೂ ಮಾಡಲಾರದಂತಾದೆನು. [illegible] ಔಷಧಗಳನ್ನು ಸೇವಿಸಿದೆನು. ಕಡೆಯಲ್ಲಿ ನನಗೆ ಪೆರೂನಾ ಸೇವಿಸುವಂತೆ [illegible] ಸೂಚಿಸಿದರು.

"ಇದನ್ನು ಸೇವಿಸುತ್ತಾ ಒಂದು ಕೂಡಲೇ ನನ್ನ [illegible] ಬದಲಾಯಿತು. ನನಗೆ ಯಥಾಪ್ರಕಾರ ಶಕ್ತಿ ಕೊಟ್ಟಿತು. [illegible] ಅದನ್ನು [illegible] ದರೂ ತೀರದು"

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ

ವಿಳಾಸ — ಈ ಔಷಧ ಸಿಕ್ಕುವ ಸ್ಥಳವ್ಯಾವುದೆಂದರೆ.—

ಪಿಯರ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೮-೩-೧೯೦೮ ರಿಂದ ೧೪-೩-೧೯೦೮ ರವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	15	14	*	*
ಮೈಸೂರು ,,	*	*	*	*
ಬೆಂಗಳೂರು ಡಿಸ್ಟ್ರಿಕ್ಟು	*	*	*	*
ಮೈಸೂರು ,,	43	3[illegible]	0	0
ಕೋಲಾರ್ ,,	*	*	*	*
ಕೋಲಾರ್ ಚಿನ್ನದ ಗಣಿಗಳು	4	3	*	*
ತುಂಕೂರು ಡಿಸ್ಟ್ರಿಕ್ಟು	9	7	3	2
ಹಾಸನ ,,	0	0	0	0
ಚಿತ್ರದುರ್ಗ	0	0	0	0
ಕಡೂರ್	5	5	0	0
ಶಿವಮೊಗ್ಗ ,,	18	10	9	4
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	82	7[illegible]	1[illegible]	8

ಈ ಪಂಚಾಂಗ [illegible] ನೇ ಶಾಲಿವಾಹನ ಶಕ [illegible] ಪಾಲ್ಗುಣ ಬಹುಳ ನೌಮಿ ಗುರುವಾರದಿಂದ ಪಾಲ್ಗುಣ ಬಹುಳ ಅಮಾವಾಸ್ಯೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಮಾರ್ಚಿ ಮತ್ತು ಏಪ್ರಿಲ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ ತಾ
26	ಗು	ನೌಮಿ	43 23	ಪೂಷಾ	31 58	14
27	ಶು	ದಶಮಿ	37 37	ಉತ್ತರಾಷಾ	20 2	15
28	[illegible] *	ಏಕಾದಶಿ	31 10	ಶ್ರ	15 56	16
29	[illegible]	ದ್ವಾದಶಿ	25 12	ಧ	11 16	17
30	ಸೋ	ತ್ರಯೋ	20 51	ಶ	7 48	18
31	[illegible]	ಚತುರ್ದ	11 41	ಪೂಭಾ	1 12	19
1	ಬುಧ ‡	ಅಮಾವಾ	10 10	ಉಭಾ	1 22	20

* ಸರ್ವತ್ರ ಏಕಾದಶಿ, ಶ್ರೀಮದ್ವ ಯೋಗಿಪಾಲಸ್ವಾಮಿ ಪುಣ್ಯ
ಮೃತ್ಯುಯೋಗ, ಪ್ರದೋಷ
ತಿಥಿದ್ವಯ
ಸರ್ವತ್ರ ಅಮಾವಾಸ್ಯೆ
‡ ವಿನಾಯಗ್ರಹ ಸಂಕ್ರಾಂತಿ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಣ್ಣೇ ಅಕ್ಕಿ ಪಲ್ಲ ೧ಕ್ಕೆ ರೂ	[illegible]	[illegible]
ಕಂಬಳಿ ಅಕ್ಕಿ [illegible]	[illegible]	[illegible]
	[illegible]	[illegible]
ಜಾಬಾಳ ಅಕ್ಕಿ	[illegible]	[illegible]
[illegible] ಅವಲ್	[illegible]	[illegible]
[illegible]	[illegible]	[illegible]
ತೊಗರಿ ಬೇಳೆ ಪಲ್ಲ ೧ಕ್ಕೆ	[illegible]	[illegible]
[illegible]	[illegible]	[illegible]
[illegible] ರಾಗಿ ಪಲ್ಲ ೧ಕ್ಕೆ	[illegible]	[illegible]
ಹಾರಕ	[illegible]	[illegible]
ಜೋಳ	[illegible]	[illegible]
ಹಲಸಂದೆ ಪಲ್ಲ ೧ಕ್ಕೆ	[illegible]	[illegible]
ಬಿಳೀ ಅವರೆ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಕಡಲೆ	[illegible]	[illegible]
ಎಳ್ಳು [illegible]	[illegible]	[illegible]
[illegible]	[illegible]	[illegible]
[illegible] ಸೇರಿಗೆ	[illegible]	[illegible]
ಸೀಗೆ [illegible] ಮಣ ೧ಕ್ಕೆ	[illegible]	[illegible]
ಮೆಣಸಿನಕಾಯಿ	[illegible]	[illegible]
[illegible]	[illegible]	[illegible]
ಬೆಲ್ಲ [illegible]	[illegible]	[illegible]
[illegible] ಮಣ ೧ಕ್ಕೆ	[illegible]	[illegible]
ಕರಿಬೆಲ್ಲ	[illegible]	[illegible]
ಕೊತ್ತುಂಬರಿ ಪಲ್ಲ ೧ಕ್ಕೆ	[illegible]	[illegible]
ಜೀರಿಗೆ ,,	[illegible]	[illegible]
[illegible] ಪಲ್ಲ	[illegible]	[illegible]
[illegible]	[illegible]	[illegible]
ತುಪ್ಪ ಮಣ ೧ಕ್ಕೆ	[illegible]	[illegible]
ಸೀಮೆ ಎಣ್ಣೆ ಪೆಟ್ಟಿ ೧ಕ್ಕೆ	[illegible]	[illegible]
ತೆಂಗಿನಕಾಯಿ ೧೦೦ ಕ್ಕೆ	[illegible]	[illegible]
ಎಳೆಲೇಕಾಯಿ ಮಣ ೧ಕ್ಕೆ	[illegible]	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ	[illegible]	[illegible]
ಚಿನ್ನ (ಪರಿ) ತೊಲ	[illegible]	[illegible]
ಪವನ್	[illegible]	[illegible]
ಗಟ್ಟಿ ತೊಲ ೧ಕ್ಕೆ	[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	[illegible]	[illegible]

Printed and Published by the Rev E W Thomson M A Proprietor and Manager, Wesleyan Mission Press Mysore 26/3/1908

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೮ ನೇ ಇಸವಿ ಏಪ್ರೆಲ್ ತಾರೀಖು ೨ ನೇ ಗುರುವಾರ. ಸಂಚಿಕೆ ೪೪

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

17-6

ತುಸಿಕೊಳ್ಳಿರಿ. ತ್ವರೆಗೈಯಿರಿ: ಅಮೃತಾಂಜನ ಸರ್ವಲೋಕರಂಜನ. ಸರ್ವ ಸರ್ವ ವ್ಯಾಧಿಭಂಜನ. ಚೇತನ್ನಾನಾಶದುಃಖ ಕಾಂತನ. ದೇಹಾಂಗಗಳಿಗೆ ಸಂಜೀವನ. ವಾಸನೆಯಲ್ಲಿ ಮನೋರಂಜನ. ಬೆಲೆಯಲ್ಲಿ ಅಲ್ಪ. ಯೋಗ್ಯತೆಯಲ್ಲಿ ಅದ್ಭುತ ಔಷಧಿಯಲ್ಲಿ ದ್ವಿರಹಿತ. ಕೊಳ್ಳುವವರಲ್ಲಿ ಪೂರ್ಣಸಂತೃಪ್ತಿ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು ಒಂದೇ ಸಾವಿರ ಬಾಟ್ಲು ತುಸಿಕೊಂಡವರಿಗೆ ಒಂದು ಜರ್ಮನ್ ಬೆಳ್ಳಿಯ ಕಪ್ ಉಚಿತವಾಗಿ ದೊರಕುವದು.

ನಿಶ್ಯಂಕೆಯಾಗಿ ಭಾರತವರ್ಷಿಯ ಔಷಧಗಳಿಂದ ತಯಾರಿಸಿದ ಹೊರಉಪಯೋಗಕ್ಕೋಸುಗ ಮುಲಾಮು. ಇದರಿಂದ ತಲೆನೋವು, ಶಿರೋವೇದನೆ, ವಾತ, ಸಂಧಿವಾತ ಪಕ್ಷವಾತ, ಗಂಟ್ಲು ನೋವು, ಸೊಂಟದನೋವು, ಗಂಟ್ಲು ನೋವು, ಶೀತ, ಜಾಕಮು. ಉಳುಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ.

ಈ ಕಂಪನಿಯವರು [illegible] ನಮೂನೆಯ [illegible] ಕ್ಯಾಟಲಾಗು [illegible] ಕೆಳಗಿನ ವಿಳಾಸಕ್ಕೆ ಬರೆಯಿರಿ [illegible]

ಬಾಟ್ಲಿ ಒಂದಕ್ಕೆ ಕಿಮ್ಮತು ೦—೮—೦. ಪೋಸ್ಟು ಖರ್ಚು ೦—೪—೦.

ಗಜಕರ್ಣದ ಮುಲಾಮು.

[illegible] ಗಜಕರ್ಣವು [illegible] ಇದರಿಂದ ಚರ್ಮವು [illegible] ಉರಿಯುವದಿಲ್ಲ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು. ಡಬ್ಬಿ ಒಂದಕ್ಕೆ ಕಿಮ್ಮತು ೦—೬—೦. ಪೋಸ್ಟು ಖರ್ಚು ೦—೪—೦.

ದಂತಮಂಜನ —ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಹಲ್ಲುಗಳು ಬೆಳ್ಳಗಾಗುತ್ತವೆ. ಹಲ್ಲುಗಳ ನೋವನ್ನು ತೆಗೆಯುತ್ತದೆ. ಡಬ್ಬಿ ಒಂದಕ್ಕೆ ೦—೨—೦ ಪೋಸ್ಟು ಖರ್ಚು ೦—೪—೦

ವಜ್ರಗುಟಿಕೆ.— [illegible] ಸ್ವಪ್ನ(ಸ್ಖಲನ)ವು ಆಗುವದು ನಿಲ್ಲಿಸುತ್ತದೆ. ರಕ್ತ ಶುದ್ಧಿಮಾಡಿ ದೇಹದಲ್ಲಿ [illegible] ಡಬ್ಬಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೪—೦.

ಕೇಶವರ್ಧಿನಿ.—ತಲೆ ಕೂದಲು [illegible] ಕೂದಲುಗಳನ್ನು ಬೆಳೆಸುವದು, ಕೂದಲುಗಳನ್ನು ಕಪ್ಪುಮಾಡುವದು, ಮನಶ್ಶುದ್ಧಿ ಮಾಡುವದು, [illegible] ಉಳ್ಳದ್ದು. ೬ ಔನ್ಸು ಬಾಟ್ಲು ಒಂದಕ್ಕೆ ೧—೦—೦. ಪೋಸ್ಟು ಖರ್ಚು ೦—೪—೦.

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನ್, ಫೋರ್ಟ್, ಮುಂಬಯಿ.

ಟೆಲಿಗ್ರಾಫು ಅಡ್ರೆಸು—"ಅಮೃತಾಂಜನ," ಮುಂಬಯಿ.

BASEL MISSION WEAVING ESTABLISHMENT, 59-13

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಿಲ್ತ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ಮಿಶ್ರಿತ) ಟ್ವೀಡ್ ನಮೂನೆಯ ಕೋಟು ಚಡ್ಡಿಗಳ ಚೆಕ್ಕ್ ಬಟ್ಟೆಗಳೂ, ಹಂಟಿಂಗ್ ಮೊದಲಾದ ಬಟ್ಟೆಗಳೂ, ಶರ್ಟಿಂಗ್ ಮೊದಲಾದ ಅಂಗಿಯ ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ, ಟೇಬಲ್ ಕ್ಲೋತ್ ಮೊದಲಾದ ವಸ್ತುಗಳೂ, ಟುವಾಲು ವಗೈರೆಗಳೂ ನಾಜೂಕಾಗಿ ತಯಾರಿಸಲ್ಪಟ್ಟು ಯಾವಾಗಲೂ ಸಿದ್ಧವಾಗಿಯಾಗಲೀ ರಖಂ ಆಗಿಯಾಗಲೀ ಮಾರಾಟಕ್ಕೆ ತಯಾರಿರುತ್ತವೆ.

ಒಳ್ಳೇ ಕಮಿಶ್ಯಾಕನ್:—ರೂಪಾಯಿ ೧೦೦ ರ ಮೇಲೆ ಮಾಲುಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾದೀತು. ಪಟ್ಟಿನ ವಿವರ ಖುದ್ದಾಗಿ ಯಾ ಕಾಗದ ಮೂಲಕ ತಿಳುಕೊಳ್ಳಬಹುದು

ನಮೂನೆ ಯಾ ಮಾದರಿಗಳು:—ಪರಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಕಳುಹಿಸಲ್ಪಡುವವು.

ವಿಶೇಷ ಲಕ್ಷ್ಯಸತಕ್ಕದ್ದು:—ಈ ನಮ್ಮ ಮಾಲುಗಳಿಗೆ ಇಲ್ಲಿ ಕಾಣಿಸಿರುವ "ಟ್ರೇಡ್ ಮಾರ್ಕ್" ಎಂಬ ವ್ಯಾಪಾರಗುರ್ತಿನ ಲೇಬಿಲ್ ಯಾನೆ ಚೀಟು ಹಚ್ಚಿರುತ್ತದೆ. ಈ ಗುರ್ತಿನ ಚೀಟುಗಳು ಇಲ್ಲದವುಗಳೆಲ್ಲಾ ತಾಜಾ ಮಿಶ್ಯನ ಮಾಲುಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತ:—ನಗದಾಗಿ ಇಲ್ಲವೆ ಮಾಲುಗಳು ವ್ಹಿ. ಪಿ. ಟಪ್ಪಾಲ ಮೂಲಕ ಕಳುಹಿಸಲ್ಪಡಬೇಕಾಗಿದ್ದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರಿಯತಕ್ಕದ್ದು

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು "ಕೋಪಿರೈಟ್" ಪಡದಿರುವ ಲೇಬಿಲುಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ಮಾಲುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು.

ವಿಳಾಸ:—BASEL MISSION WEAVING ESTABLISHMENT,
MANGALORE, S. CANARA.

ಕಾರ್ಡು ಸೈಜು ೪½ × ೩½.

ಫೋಟೋ ತೆಗೆಯುವ

ಫೋಟೋ ಕ್ಯಾಮೆರಾ.

84-33

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ:-

ಛೋಟಾಲಾಲ ಛಗನಲಾಲ ಮಹಾಜನ. ಠಾಕೂರದ್ವಾರ ರೋಡ, ಪೋಸ್ಟ ಕಾಲಬಾದೇವಿ, ಮುಂಬಯಿ.

ಜ್ವ ರ ಹ ರಿ. 18-9



ಇದು ಸಾಧಾರಣ ಜ್ವರ, [illegible], ಚಳಿಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ [illegible] ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು [illegible] ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಜನರು ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ [illegible] ದರಿಂದ ದಯಮಾಡಿ [illegible] ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ. ೧ ರೂ.; ೧—೮ ರೂ., ರೂ. ೨—೧೨ ಆ.; ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಓ ಮ ಂ ಕ ರ್ಪೂ ರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಸೀಲ್ದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಊರುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸಕ್ಕೆ ಬರೆಯಲಿ ವಿಶೇಷ:—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-14

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಬಳ್ಳೇದಾದ, ಚನ್ನಾಗಿ ಹಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ.

೧ ರೂ. ೬ ಆ.; ೧ ರೂ. ೪ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.

ಜರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ.; ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂಥಿಂಗ್ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ವ್ಯವಹಾರ ನಿರ್ಣಯ.

4-14

ಪುಟಗಳು ೫೪೬. ಕ್ರಯ ವಿ. ಪಿ. ಸೇರಿ ೧—೧೨—೦. ಈ ಕನ್ನಡದ ಲಾ ಪುಸ್ತಕವನ್ನು ಅಪೇಕ್ಷಿಸುವವರು "ಎಂ. ಮಲ್ಹಾರಿಚಾರ್ಯರು, ಪ್ಲೀಡರ್, ಮೈಸೂರು" ಎಂಬೀ ವಿಳಾಸಕ್ಕೆ ಬರೆದುಕೊಳ್ಳುವುದು. ವಿಷಯಗಳನ್ನು ಮೊದಲೇ ತಿಳಿಯಲಪೇಕ್ಷಿಸುವವರಿಗೆ ವಿಷಯಸೂಚಕ ಪತ್ರವು ರವಾನಿಸಲ್ಪಡುತ್ತದೆ.

ಮಹಾ ಬಾಧಾಪಹಾರಿಣಿಯು.

58-45

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಯಕ್ಷಿಣೀ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು ವರ್ತಕರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಿದಾರೆ ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಕಳಿತ, ಗಂಟ್ಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಣಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ ಶೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೨, ವೇದಮುಲಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಈಗಲೇ ಶೀಮೆಯಿಂದ ಬಂದಿದೆ.

117-23

೫,೦೦೦ ಹಾಸನ ಟೋಪಿ ಹೊಲಿಯುವ ಸುಪೀರಿಯರ್ ಉಲ್ಲನ್ ದಾರಗಳು. ಹಿಡಬೇಡಿರಿ—ಮಾತ್ರ ಇದೆ—ಬಾರಿ, ಕಮ್ಮಿ ಕ್ರಯ.

೧ ಟೋಪಿಯಾಗುವ ಉಲ್ಲನ್ ದಾರಕ್ಕೆ	೦—೮—೦
೧೦ ಟೋಪಿಯಾಗುವ ಬಂಡಲ್‌ಗೆ ೧ ಕ್ಕೆ	೩—೮—೦
ಕೊಕ್ಕೆ ಸೂಜಿ ೧ ಕ್ಕೆ	೦—೧—೬
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೦
ಎರಡು ಕಡೆಯಲ್ಲಿ ಬರೆಯುವ ಪೋಸ್ಟ್ ಕಾರ್ಡ್ ೧೦೦ ಕ್ಕೆ	೪ ಆ.
ನಂಬ್ರ ೧ನೇ ಹಾಸನ ಟೋಪಿ ದರ್ಜ ೧ಕ್ಕೆ	೧೩—೨—೦

ವಿಳಾಸ:—

ಪ್ರೊಪ್ರೈಟರ್, ದಿ ಉಲ್ಲನ್ ಮಾರ್ಟ್, ಮಂಗಳೂರು.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

1-14



ಬೆನ್ನು ಬಟಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಜೋರಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ, ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ರಬ್ಬರ್ ಹ್ಯಾಂಡ್ ಪ್ರೆಸ್.

114 25

ಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೨ ರಿಂದ ೧೮ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು, ಉರ್ದು, ಪರ್ಷಿಯನ್, ಅರಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು. ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮುದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು. ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳಕಾಲ ಹಿಡಿಯುವದು ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ದೆಸೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು. ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ

ನೋಟ್ ಪೇಪರ್ ಸೈಜು, ರೂಪಾಯಿ	೪—೦—೦.
ಹಾಫ್ ಫುಲ್‌ಸ್ಕ್ಯಾಪ್ ಸೈಜು,	೬—೦—೦.

ಪೋಸ್ಟೇಜು ಬೇರೆ (extra).

ವಿಳಾಸ:— ವರ್ಧಮಾನ ಏಜನ್ಸಿ,

ಪೋಸ್ಟ್ ಕಾಲಬಾದೇವಿ,

ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-7

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಜವಳಿ ಮುಸ್ತ್ರ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಜೋಮು (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮು, ದಮ್ಮು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧವಾಗಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಜ್ಜುಜ್ವರ, ಕೈಕೆತ್ತುಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಕೊಡುತ್ತೇವೆ. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್ ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ.

ಸಣ್ಣ ಮಕ್ಕಳು ಕೇಳಿದಂತೆ ಕೇಳದೆ ಸಿಟ್ಟಿಗೆ ಬಳಸುವಂಥವರಾಗಿದ್ದ ಆಹಾರರುಚಿ ಕಡಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION. 31-55

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕಲಸಿ ಕೊಟ್ಟು ಬರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು.

ಅದು ಸಂತೋಷವೂ ಆನಂದವೂ ಆಗುವದಾಗಿ ಆಹಾರದ ರುಚಿ ಹೊಂದಿ ಸುಖ ಚನ್ನ ತೋರಿಸುವದು

ಕೈಯಿಂದ ಮುಟ್ಟ ತಯಾರಿಸಿದ್ದಲ್ಲ.

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮೀನು ಹಿಡಿದಿರುವ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ರೂ. ೨ ೪. ೬. ಶಾಲುಗಳು! ಬುಲ್ಬೀಸ್‌ಗಳು!!

123 19

[illegible] ಸೈವನ ಲೆನಿನ್ ದಿಂದ ಒಳಗೆ ನಾಜೂಕಾದ ಹೂವಿನಂತೆ ಮೇಲೆ ಇದ್ದರೂ ಕೋಮಲವಾದ ಸೂಕ್ಷ್ಮವಾದ ಶಾಲುಗಳನ್ನು ಕೊಡುವ ಸ್ಥಳ [illegible] ೬ ಗೋಳಿಯದ್ದು, ೩ ಮೊಳದಗಲ. ತೇಲಿ, ಕೆಂಪು, ಹಸುರು, ಗುಲಾಬಿ ಬಣ್ಣದ್ದು ರೂ ೬ ೨ನೆಯ ತರದ ರೂ ೫ ಕೇಲಿ ಬಣ್ಣದ ಕತ್ತಿ ಮಿಶ್ರ ರೂ. ೨ ಬ್ಲಾಂಕೆಟ್ಸ್ ಬ ಜೇಸಿಗೆ ಛಳಿಗೂ ತಕ್ಕ ದಪ್ಪದ ಬುಲ್ಬೀಸ್ ಹತ್ತಿ ಮಿಶ್ರ ರೂ. ೨. ಕೆಂಪು ಸೊಗಸಾದ ಹಸುರಿನ ರ ೩ ಶುದ್ಧ ಉಣ್ಣೆ ಉಳ್ಳದು ರೂ ೬ ಚಿಕ್ಕದ್ದು ರೂ ೪

ಪುದುಕ್ಕೋಟಿ ರೇಷ್ಮೆ ವಸ್ತ್ರಗಳು. ರೂ. ೪ !!

ಗಟ್ಟಿ ಕೆಂಪು ಬಣ್ಣದ ರೇಷ್ಮೆ ವಸ್ತ್ರ ಅಂಚು ಸೆರಗುಗಳಲ್ಲಿ ಬಿಳಿಯ ರೇಷ್ಮೆಯಲ್ಲಿ ಬಹು ಅಂದವಾದ ಹೂಗಳುಳ್ಳದ್ದು. ಎಷ್ಟು ವರ್ಷ ಉಪಯೋಗಿಸಿದರೂ ಸೊಗಸಾಗಿ ಪ್ರಕಾಶಿಸುತ್ತೆ. ೨ ಮೊಳದಗಲ. ಬಹು ಸುಲಭ ಕ್ರಯ. ೩ ಮೊಳದುದ್ದ ರೂ. ೪ ೪ ಮೊಳದುದ್ದ ರೂ ೫ ೫ ಮೊಳದುದ್ದ ರೂ. ೬ ಹತ್ತಿಯ ೩॥ ಮೊಳದುದ್ದ ರೂ. ೧. ಚೇಂಬರ್ಲೈನ್ಸರ ಕೆಮ್ಮು, ಶೀತಭೇದಿ, ನೋವುಹರ ಔಷಧಿಗಳು ಶೀಸೆ ೧ಕ್ಕೆ ರೂ. ೧ ದೊಡ್ಡ ೫ ಔನ್ಸ್ ಶೀಸೆಗೆ ರೂ ೨. ಕ್ಲೆಮೆಂಟ್ಸರ ಮಹಾಬಾಧಾಪಹಾರಿಣಿ ಯಕ್ಷಿಣೀಲೇಪನ ೧೨ ಆಣೆ.

ವಿಳಾಸ:—ದಾವ್ ಎಂಪೋರಿಯಂ. ಸೈಡನ್‌ಹಾಂ ರೋಡ್,

ವೇಪೇರಿ, ಮದರಾಸ್.

ಇಲ್ಲಿ ನೋಡಿ.

3-14

ತುಮಕೂರು ಜಿಲ್ಲಾ ಇಲಾಖೆಯಲ್ಲಿ ಯೂರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಕ್ರಯ:—೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯವರೆಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಸೋನೇಜರ್,

ಹಾಸನದ ಟೋಪಿ ಕಾರ್ಖಾನೆ, ಜಿಲ್ಲಾ ಇಲಾಖೆ, ತುಮಕೂರು

ವೃತ್ತಾಂತ ಪತ್ರಿಕೆ.

:o:

ಸನ್ ೧೯೦೮ ನೇ ಇಸವಿ ಏಪ್ರಿಲ್ ತಾ॥ ೨ ನೇ ಗುರುವಾರ

ದೇಶೋನ್ನತಿಗೆ ಸಹಕಾರಿಯಾದ ಶಾಸ್ತ್ರಶೋಧನಾ ವಿದ್ಯಾಶಾಲೆಯು.

ಕೆಲವು ವರುಷಗಳ ಹಿಂದೆ ಬೊಂಬಾಯಿ ಅಧಿಪತ್ಯದಲ್ಲಿ ಮಹಾ ಶ್ರೀಮಂತನಾಗಿದ್ದು ಕಾಲವಾದ ಮೆ॥ ತಾತಾ ಎಂಬ ವರ್ತಕನು ಹಿಂದುಸ್ಥಾನದಲ್ಲಿ ಶಾಸ್ತ್ರಶೋಧನಾ ವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದು ತನ್ನ ಆಸ್ತಿಯಿಂದ ೩೦ ಲಕ್ಷ ರೂಪಾಯಿ ಬಾಳುವ ಸ್ವತ್ತುಗಳನ್ನು ಧರ್ಮಾರ್ಥವಾಗಿ ಬಿಟ್ಟುಕೊಟ್ಟನು. ಇಂಡಿಯಾ ಗವರ್ನಮೆಂಟಿನವರು ಈ ವಿದ್ಯಾಶಾಲೆಗೆ ಯೋಗ್ಯವಾದ ಸ್ಥಳವನ್ನು ಗೊತ್ತುಮಾಡ ಬೇಕೆಂದು ಮೂವರು ಶಾಸ್ತ್ರಜ್ಞರನ್ನು ನೇಮಿಸಿದರು. ಎಲ್ಲರೂ ತಿಳಿದಿರುವಂತೆ ಈ ಶಾಸ್ತ್ರಜ್ಞರು ಬೆಂಗಳೂರೇ ವಿದ್ಯಾಶಾಲೆಯ ಏರ್ಪಾಡಿಗೆ ಎಲ್ಲಾ ಭಾಗಗಳಲ್ಲೂ ಬಹಳ ಅನುಕೂಲವಾಗಿದೆ ಎಂದು ಗೊತ್ತುಮಾಡಿದರು. ಈ ವಿದ್ಯಾಶಾಲೆಗೋಸ್ಕರ ಬೇಕಾಗುವಷ್ಟು ಜಮೀನನ್ನೂ, ಅದರ ಕಟ್ಟಡಕ್ಕೆ ಒಂದು ಲಕ್ಷ ರೂಪಾಯನ್ನೂ, ವಿದ್ಯಾಶಾಲೆಯನ್ನು ನಡೆಸುವುದಕ್ಕೆ ೫೦,೦೦೦ ರೂಪಾಯಿನ ವರ್ಷಾಶನವನ್ನೂ ಕೊಡುವಂತೆ ಮೈಸೂರು ಗವರ್ನಮೆಂಟಿನವರು ವಾಗ್ದಾನಮಾಡಿರುವುದೂ ನಮ್ಮ ವಾಚಕರಿಗೆ ತಿಳಿದಿರುವುದು.

ಈ ಶಾಸ್ತ್ರಪರಿಶೋಧನಾ ವಿದ್ಯಾಶಾಲೆಯಕ್ಕೆ ಡಾಕ್ಟರ್ ಮಾರಿಸ್ ಟ್ರಾವರ್ಸ್, ಎಫ್. ಆರ್. ಎಸ್. ಎಂಬ ಪ್ರಸಿದ್ಧ ಪಂಡಿತರನ್ನು ವಿಲಾಯತಿಯಿಂದ ಕರಸಿ ಡೈರೆಕ್ಟರಾಗಿ ನೇಮಕಮಾಡಿರುತ್ತಾರೆ. ಇವರು ಸುಮಾರು ೧೫ ದಿನಗಳಿಂದ ಈ ವಿದ್ಯಾಶಾಲೆಯ ಸಂಬಂಧದಲ್ಲಿ ಒಂದು ರಿಪೋರ್ಟನ್ನು ಬರೆದಿರುವರು. ಅವರು ಅದರಲ್ಲಿ ಸೂಚಿಸುವ ಪ್ರಕಾರ ಈ ವಿದ್ಯಾಶಾಲೆಯು ಐದು ವಿಭಾಗಗಳಾಗಿ ವಿಭಾಗಿಸಲ್ಪಟ್ಟು ಪ್ರತಿ ಒಂದು ಶಾಖೆಗೂ ಒಬ್ಬ ಪ್ರಧಾನ ಪಂಡಿತನನ್ನೂ ಆತನ ಕೈಕೆಳಗೆ ಕೆಲವು ಸಹಾಯೋಪಾಧ್ಯಾಯರನ್ನೂ ನೇಮಕಮಾಡುತ್ತಾರೆ. ಈ ವಿದ್ಯಾಶಾಲೆಯಲ್ಲಿ ನಡೆಯತಕ್ಕ ಬೋಧನೆಯೂ ಶಾಸ್ತ್ರಪರಿಶೋಧನೆಯೂ ಈ ದೇಶಕ್ಕೆ ಅನುರೂಪವಾದದ್ದು. ಅವನ್ನು ಈ ದೇಶಭಾಷೆಯಲ್ಲಿ ನಡಿಸುವುದು ಸುಲಭವಲ್ಲವು. ಇವರೆ ಅದರಲ್ಲಿ ನಡೆಯತಕ್ಕ ಕಾರ್ಯಗಳು ಈ ದೇಶಕ್ಕೆ ವಿಶೇಷ ಪ್ರಯೋಜನಕರವಾಗಿಯೂ ಸಹಾಯಕವಾಗಿಯೂ ಪರಿಣಮಿಸುತ್ತವೆ. ಬೀಜ ಮೊದಲಾದ ಸಿದ್ಧಾನ್ನಪದಾರ್ಥಗಳ ರಚನೆ, ಅವುಗಳ ಅಂಶಗಳನ್ನು ಪರಿಶೋಧನೆಯಿಂದ ಕಂಡುಹಿಡಿಯುವುದು; ಜೀವಿತವನ್ನು ಗಳಿಸಿದಂಥಾ ಗಿಡ ಬಳ್ಳಿ ಮೊದಲಾದ ಸಸ್ಯಾದಿಗಳ ಮತ್ತು ಪ್ರಾಣಿಗಳ ರಚನೆ ಅವುಗಳ ಅಂಶಗಳನ್ನು ವಿಂಗಡಿಸಿ ಶೋಧನೆಮಾಡುವುದು; ಸ್ವಾಭಾವಿಕವಾದ ವಸ್ತುಗಳ ...ಗಳನ್ನು, ಅವುಗಳ ಮಿಶ್ರಣದಿಂದ ಮನುಷ್ಯನ ಉಪಯೋಗಕ್ಕೆ ಬರುವಂಥಾ ಯಾವ ಯಾವ ವ್ಯಾಪಾರಪದಾರ್ಥಗಳನ್ನು ತಯಾರಿಸಬಹುದು ಎಂಬುದನ್ನೂ ಪರೀಕ್ಷೆಗಳ ಮೂಲಕ ಕಂಡುಕೊಳ್ಳುವುದು; ಹಾಲು ಮೊದಲಾದ ದ್ರವಪದಾರ್ಥಗಳ ...ರ ಅವು ಹುಳಿ ತಿರುಗಿ ರೂಪಾಂತರ ಹೊಂದುವವು, ಹಾಗಾಗುವುದಕ್ಕೆ ಅವುಗಳಲ್ಲಿ ಹುಟ್ಟತಕ್ಕ ಕ್ರಿಮಿಗಳೇ ಕಾರಣವು, ಇಂಥಾ ರೂಪಾಂತರವನ್ನು ಶೋಧನೆಮಾಡಿ, ...ಗಾರಿಕೆ ವಸ್ತುಗಳ ತಯಾರಿಗೆ ಅವಶ್ಯವಾದ ಅನೇಕ ವಿಧಾನಗಳನ್ನು ಕಂಡುಹಿಡಿಯುವುದು. ಐದನೆಯದಾಗಿ ವಿದ್ಯುಚ್ಛಕ್ತಿ ಶಾಸ್ತ್ರವನ್ನು ಪರೀಕ್ಷೆಗಳ ಮೂಲಕ ಗ್ರಹಿಸಿಕೊಳ್ಳುವುದು (ಈ ವಿದ್ಯೆಯನ್ನು ಕಾರ್ಯತಃ ಕಲಿಯುವುದಕ್ಕೆ ಬೆಂಗಳೂರಿನಲ್ಲಿ ವಿಶೇಷ ಸೌಲಭ್ಯಗಳುಂಟೆಂದು ಡಾ॥ ಟ್ರಾವರ್ಸ್‌ರವರು ತಿಳಿಸುತ್ತಾರೆ); ಈ ರೀತಿ ಐದು ಶಾಖೆಗಳಲ್ಲಿ ಶೋಧನಾವಿದ್ಯೆಯು ಕಲಿಸಲ್ಪಡುವುದು. ಆರನೇ ಶಾಖೆಯು ...ದ್ದೆಂದು ಆ ಪಂಡಿತರು ಇನ್ನೂ ನಿಶ್ಚಯಮಾಡಲಿಲ್ಲ.

ಈ ಶಾಸ್ತ್ರಶೋಧನಾ ಶಾಲೆಯಲ್ಲಿ ಮೊದಲು ೬೦ ಮಂದಿ ವಿದ್ಯಾರ್ಥಿಗಳು ಸೇರಲು ಅವಕಾಶವುಂಟಾಗುವುದು. ವಿದ್ಯಾರ್ಥಿಗಳೆಲ್ಲಾ ಅಲ್ಲೇ ಇದ್ದುಕೊಂಡು ಪರಿಶೋಧನೆ ನಡಿಸುವರಲ್ಲದೇ ಅನುಕೂಲವಾಗಿರುವಂತೆ ಏರ್ಪಾಡಾಗುತ್ತದೆ. ಈ ವಿದ್ಯಾಶಾಲೆಯನ್ನು ನಡಿಸುವುದಕ್ಕೆ ಮೆ॥ ತಾತಾರವರು ಬಿಟ್ಟುಕೊಟ್ಟಿರುವ ಆಸ್ತಿಗಳಿಂದ ವರುಷಕ್ಕೆ ೧,೨೫,೦೦೦ ರೂಪಾಯಿ ಹುಟ್ಟುವಳಿಯಾಗುವುದು; ಇದಲ್ಲದೆ ಇಂಡಿಯಾ ಗವರ್ನಮೆಂಟಿನವರು ೮೭,೫೦೦ ರೂಪಾಯನ್ನೂ ಮೈಸೂರು ಸರ್ಕಾರದವರು ೫೦,೦೦೦ ರೂಪಾಯನ್ನೂ ಕೊಡುತ್ತಾ ಬರುವುದಾಗಿ ವಾಗ್ದಾನಮಾಡಿರುತ್ತಾರೆ. ವಿದ್ಯಾಶಾಲೆಯನ್ನು ಪ್ರಾರಂಭಿಸುವುದಕ್ಕೆ ಈ ಹಣವೇ ಸಾಕಾಗುವುದೆಂತಲೂ, ಮುಂದೆ ಸಾಲದೆ ಬಂದ ಪಕ್ಷದಲ್ಲಿ ಬೇರೆ ಬೇರೆ ಅಧಿಪತ್ಯಗಳ ಗವರ್ನಮೆಂಟಿನವರೂ ದೇಶೀಯ ಸಂಸ್ಥಾನಗಳ ಸರ್ಕಾರದವರೂ ಅಯಾ ಕಡೆಗಳಿಂದ ಬರುವಂಥಾ ವಿದ್ಯಾರ್ಥಿಗಳ ಸಂಖ್ಯೆಗೆ ಅನುಸಾರವಾಗಿ ದ್ರವ್ಯಸಹಾಯಮಾಡದೆ ಇರಲಾರರೆಂತಲೂ ಮೇಲ್ಕಂಡ ಡೈರೆಕ್ಟರವರು ನಿರೀಕ್ಷಿಸುತ್ತಾರೆ.

ಹಿಂದುಸ್ಥಾನದ ಕಲಾಕೌಶಲ್ಯವನ್ನೂ ಕಸಬುಗಳನ್ನೂ ಅಭಿವೃದ್ಧಿಗೆ ತರತಕ್ಕಂಥಾ ವಿಧಾನಗಳನ್ನು ಶಾಸ್ತ್ರಸಿದ್ಧವಾಗಿ ಪರಿಶೋಧನೆಗಳ ಮೂಲಕ ಕಂಡುಹಿಡಿಯಬೇಕೆಂಬುವುದೇ ಈ ವಿದ್ಯಾನಿಲಯದ ಮುಖ್ಯೋದ್ದೇಶವಾಗಿರುತ್ತದೆ. ಜರ್ಮನಿ, ವಿಲಾಯತಿ, ಅಮೇರಿಕ, ಮೊದಲಾದ ಪಶ್ಚಿಮ ರಾಜ್ಯಗಳಲ್ಲಿ ಇಂಥಾ ಪರಿಶೋಧನಾ ಶಾಲೆಗಳು ಇರೋಣವರಿಂದಲೇ ಆ ದೇಶಗಳ ಕಸಬುಗಳು ಉಚ್ಛ್ರಾಯಸ್ಥಿತಿಗೆ ಬಂದಿರುತ್ತವೆ. ಪಶ್ಚಿಮ ರಾಜ್ಯಗಳಲ್ಲಿ ಸಿದ್ಧಾಂತಕ್ಕೆ ಬಂದಿರುವಂಥಾ ಶಾಸ್ತ್ರವಿದ್ಯೆಯನ್ನು ಹಿಂದುಸ್ಥಾನಕ್ಕೆ ತಂದು ಇಲ್ಲಿನ ಪ್ರಜೆಗಳಿಗೆ ಕಲಿಸಬೇಕೆಂಬುವುದು ಗವರ್ನಮೆಂಟಿನವರ ಅಭಿಮತವೂ ಉತ್ತಮಲವೂ ಆಗಿರುತ್ತದೆ. ಆದಕಾರಣ ಇಂಥಾ ವಿದ್ಯೆಗಳಲ್ಲಿ ಸಂಪೂರ್ಣ ಪಾಂಡಿತ್ಯವನ್ನು ಪಡೆದಿರತಕ್ಕ ಶಾಸ್ತ್ರಜ್ಞರನ್ನು ಈ ರಾಷ್ಟ್ರಕ್ಕೆ ಕರೆದುತಂದು ಪಂಡಿತಸ್ಥಾನಗಳಿಗೆ ನೇಮಿಸುವರು. ಇದಲ್ಲದೆ ಅಂಥಾ ಪರಿಶೋಧನಾ ವಿಷಯಗಳು ಶಾಸ್ತ್ರವತ್ತಾಗಿ ಬಹುಮಟ್ಟಿಗೆ ಫ್ರೆಂಚ್ ಮತ್ತು ಜರ್ಮನಿ ಭಾಷೆಗಳಲ್ಲೇ ಇದುವರೆಗೆ ಪ್ರಕಟವಾಗಿರುತ್ತವೆ. ಈ ಭಾಷೆಗಳನ್ನು ತಿಳಿದ ಪಂಡಿತರನ್ನೇ ಜೊತೆಗಾರನ್ನಾಗಿ ನೇಮಿಸುವುದು ಅವಶ್ಯ. ಇವರೆ ಈ ಪರಿಶೋಧನಾ ವಿದ್ಯೆಯು ಈ ದೇಶದಲ್ಲಿ ಪ್ರಚಾರಕ್ಕೆ ಬಂದು, ದೇಶೀಯ ವಿದ್ಯಾವಂತರು ಪಾಂಡಿತ್ಯವನ್ನು ಸಂಪಾದಿಸಿಕೊಂಡ ಹಾಗೆಲ್ಲಾ ಅಂಥವರನ್ನೇ ಬೇರೆ ಬೇರೆ ಶಾಖೆಗಳಿಗೆ ಬೋಧಕರನ್ನಾಗಿ ನೇಮಕವಾಗುತ್ತಾ ಬಂದಾರೆಂದು ಡೈರೆಕ್ಟರವರು ತಿಳಿಸುವರು.

ಇಂಥಾ ಉತ್ಕೃಷ್ಟವಾದ ವಿದ್ಯಾನಿಲಯವನ್ನು ಬೆಂಗಳೂರಿನಲ್ಲಿ ಹೆಬ್ಬಾಳದ ಬಳಿ ಕಟ್ಟಲು ಕಾಮಗಾರಿಯ ಅಂದಾಜು ಪಟ್ಟಿಗಳು ತಯಾರಾಗಿರುತ್ತವೆ. ಇಷ್ಟರಲ್ಲೇ ಕಟ್ಟಡಗಳ ಕಾಮಗಾರಿಯನ್ನೂ ಪ್ರಾರಂಭಮಾಡುವವರಲ್ಲವಾರೆ. ಈ ಕಟ್ಟಡದ ಕಂಟ್ರಾಕ್ಟನ್ನು ಬೊಂಬಾಯಿನ ಒಬ್ಬ ದೊಡ್ಡ ಕಾರ್ಖಾನೆಗಾರರು ವಹಿಸಿಕೊಂಡಿರುವುದಾಗಿ ಕೇಳುತ್ತೇವೆ.

ಬಳದೇಶದ ವೃತ್ತಾಂತಗಳು.

ಬ್ರಿಟಿಷ್ ರೆಸಿಡೆಂಟರು ಪತ್ನಿ ಪರಿವಾರ ಸಹಿತ ನಾಳೆ ಬೆಂಗಳೂರಿನಿಂದ ನೀಲಗಿರಿಗೆ ದಯಮಾಡುವವರಾಗಿದ್ದಾರೆ.

❖❖❖

ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಮೆ॥ ಟಿ. ಮಾದವರಾಜೇ ಅರಸಿನವರು ಮೊನ್ನೆ ಮಂಗಳವಾರ ಬೆಳಿಗ್ಗೆ ರಾಜಧಾನಿಗೆ ಬಂದಿದ್ದಾರೆ.

❖❖❖

ಸೆಂಟ್ರಲ್ ಕಾಲೇಜಿನ ಮುಖ್ಯೋಪಾಧ್ಯಾಯರಾದ ಮೆ॥ ಕುಕ್‌ರವರು ಫರ್ಲೋ ಪಡೆದು ಈ ತಿಂಗಳಲ್ಲಿ ಕೆಲಸದಿಂದ ನಿವೃತ್ತರಾಗುತ್ತಾರೆ. ಇವರು ಪತ್ನಿಸಹಿತ ಕಳೆದ ವಾರ ರಾಜಧಾನಿಗೆ ಬಂದು, ಶ್ರೀಮನ್ಮಹಾರಾಜರವರ ಭೇಟಿಮಾಡಿಕೊಂಡು ಹೋದರು.

❖❖❖

ಶ್ರೀಮನ್ಮಹಾರಾಜರವರ ಏಡಿಕಾಂಗರಾಗಿರುವ ಮೆ॥ ಆರ್ಗಾರ್ಜರವರ ಕುಮಾರರಾದ ಮೆ॥ ವಿ ಜಾರ್ಜರವರಿಗೆ ಅಸಿಸ್ಟೆಂಟ್ ಕಮಿಷನರ ಕೆಲಸವಾಯಿತು. ಇವರು ಸದ್ಯ ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರಟರಿಯವರ ಆಫೀಸಿನಲ್ಲಿ ಕೆಲಸ ಮಾಡತಕ್ಕದ್ದೆಂದು ಗೊತ್ತಾಗಿದೆ.

❖❖❖

ದಿವಾನ್ ಮೆ॥ ವಿ. ಪಿ. ಮಾಧವರಾಯರು ಶ್ರೀಶೃಂಗೇರಿ ಸ್ವಾಮಿಗಳನ್ನು ಕಂಡುಬರುವುದಕ್ಕಾಗಿ ಕಳೆದ ಶನಿವಾರ ರಾತ್ರಿ ಬೆಂಗಳೂರಿನಿಂದ ತಿರುಚನಾಪಲ್ಲಿಗೆ ಪ್ರಯಾಣಮಾಡಿದರು. ಅವರು ಒಂದು ವಾರದೊಳಗೆ ವಾಪಸು ಬರಬಹುದೆಂದು ಕೇಳುತ್ತೇವೆ. ಫಿನಾನ್ಸ್ ಕೌನ್ಸಿಲರ್ ಮೆ॥ ಟಿ. ಆನಂದರಾಯರು ದಿವಾನಗಿರಿಯ ಭಾರವನ್ನು ವಹಿಸಿರುತ್ತಾರೆ.

❖❖❖

ಕಳೆದ ವಾರ ಮೆ॥ ಕಾಂತರಾಜೇ ಅರಸಿನವರ ಮಾತೃಶ್ರೀಯವರಿಗೆ ೬೦ ವರುಷ ತುಂಬಿದ ಶಾಂತಿಯೂ ದಾನಧರ್ಮಗಳೂ ಸಂತರ್ಪಣೆಗಳೂ ರಾಜಧಾನಿಯಲ್ಲಿ ನಡೆದವು. ಕಳೆದ ಭಾನುವಾರ ಮೆ॥ ಕಾಂತರಾಜೇ ಅರಸಿನವರು ಶ್ರೀಮನ್ಮಹಾರಾಜರವರಿಗೂ ಮಹಾಮಾತೃಶ್ರೀಯವರಿಗೂ ತಮ್ಮ ಭವನದಲ್ಲಿ ಪಾದಪೂಜೆ ಔತಣಾದಿಗಳನ್ನು ನಡೆಸಿದರು.

❖❖❖

ನಾಳೆ ತಾ ೫ ನೇ ಭಾನುವಾರ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಮೋಟಾರ್ ಗಾಡಿಯಲ್ಲಿ ರಾಜಧಾನಿಯಿಂದ ನೀಲಗಿರಿಗೆ ದಯಮಾಡುವರು. ಮಹಾಮಾತೃಶ್ರೀಯವರೂ ಅರಮನೆಯ ಜನಾನಾದವರೂ ಅದೇ ದಿನ ರಾತ್ರಿ ರೈಲಿನಲ್ಲಿ ಬೆಂಗಳೂರಿಗೆ ಹೊರಟು, ಮಾರುದಿನ ಬೆಳಿಗ್ಗೆ ಮದರಾಸ್ ರೈಲ್ ಹತ್ತಿ ನೀಲಗಿರಿಯನ್ನು ತಲುಪುವವರಾಗಿದ್ದಾರೆ. ದರ್ಬಾರ್ ಭಕ್ಷಿಯವರು ಪದ್ಧತಿಯ ಪ್ರಕಾರ ನೀಲಗಿರಿ ಕ್ಯಾಂಪಿನ ಭಾರವನ್ನು ವಹಿಸುವಂತೆ ಅಪ್ಪಣೆಯಾಗಿದೆ.

❖❖❖

ರಾಜಧಾನಿಯಲ್ಲಿ ಬಿಸಿಲಿನ ಕಾವು ಹೆಚ್ಚಾಗಿದೆ. ಮೋಡವಾಡುವುದು ಪ್ರಾರಂಭವಾಗಿದ್ದರೂ ಮಳೆ ಬೀಳಲಿಲ್ಲ. ಧಾರಣೆವಾಸಿಗಳು ಬಹಳ ಅಡಾವಾಗಿಯೂ, ಇನ್ನೂ ಹೆಚ್ಚುತ್ತಲೂ ಇರುವವು. ಪ್ಲೇಗ್ ರೋಗಿಗಳು ಗಾಬರಿಯು ಸ್ವಲ್ಪ ತಪ್ಪುಗುತ್ತಿದೆ. ನಾಂತಿಭೇದಿ ಉಪದ್ರವು ತರಹದೆ ಇರುತ್ತದೆ. ಕಳೆದ ವಾರದಲ್ಲಿ ಎರಡು ಅನುಮಾನಾಸ್ಪದವಾದ ಮರಣಗಳಾದವು.

❖❖❖

ಸುಮಾರು ಎರಡು ವಾರಗಳ ಕೆಳಗೆ ಸಕಲೇಶಪುರದಲ್ಲಿ ಯೂರೋಪಿಯನ್ ಮತ್ತು ದೇಶೀಯ ಪ್ಲಾಂಟರುಗಳೂ ದೊಡ್ಡ ಮನುಷ್ಯರೂ ಸೇರಿ, ವ್ಯವಸಾಯದ ಮತ್ತು ಫಲಪುಷ್ಪಗಳ ಪ್ರದರ್ಶನವನ್ನು ನಡಿಸಿ, ಉತ್ತಮಪದಾರ್ಥಗಳಿಗೆ ಬಹುಮಾನಗಳನ್ನು ಕೊಟ್ಟರು. ತರುವಾಯ ಇಂಥಾ ಪ್ರದರ್ಶನಗಳನ್ನು ಪ್ರತಿವರ್ಷವೂ ನಡಿಸಬೇಕೆಂದು ತೀರ್ಮಾನಮಾಡಿ, ಕಾರ್ಯನಿರ್ವಾಹಕಸಭೆಯನ್ನು ಗೊತ್ತುಮಾಡಿದರು.

❖❖❖

ರಾಜಧಾನಿಯಲ್ಲಿ ಹೊಸ ಅರಮನೆಯ ಕಾಮಗಾರಿಯು ಇನ್ನೂ ನಡೆಯುತ್ತಲೇ ಇದೆ. ಅದರ ಮುಂಭಾಗದ ಮೇಲ್ಗಡೆಯಲ್ಲಿ ಗೋಪುರವನ್ನೂ ಕಳಶವನ್ನೂ ಇಡುತ್ತಿದ್ದಾರೆ. ದರ್ಬಾರ್ ಹಾಲ್ ಮೊದಲಾದ ಒಳಭಾಗಗಳನ್ನು ಚಿತ್ರ ಮೊದಲಾದವುಗಳಿಂದ ಅಲಂಕರಿಸುವುದಕ್ಕೂ ಕೆಲಸಗಳು ನಡೆಯುತ್ತಿರುವವು. ಆದಕಾರಣ ಈ ವರುಷವೂ ನವರಾತ್ರಿಯ ಉತ್ಸವಗಳು ಜಗನ್ಮೋಹನ ಬಂಗಲೆಯಲ್ಲೇ ಜರುಗಲು ಅನುಮಾನವಿಲ್ಲ.

❖❖❖

ಮೈಸೂರು ಮುನಿಸಿಪಾಲಿಟಿಯಲ್ಲಿ ಇಂಜನಿಯರಾಗಿದ್ದು, ಈಚೆಗೆ ಟ್ರಸ್ಟ್ ಬೋರ್ಡಿನಲ್ಲಿ ಸಬ್ ಡಿವಿಜನ್ ಆಫೀಸರಾಗಿದ್ದ ಮೆ॥ ಸಿ ಎಸ್. ಕೃಷ್ಣಸ್ವಾಮಿ ಐಯರು ಬೋರ್ಡಿನ ಹಳೇ ಸಾಮಾನುಗಳನ್ನು ಹರಾಜು ಹಾಕಿದ್ದರಲ್ಲಿ ಉತ್ಪತ್ತಿಯಾದ ಮೊಬಲಗನ್ನು ಟ್ರಸ್ಟ್ ಬೋರ್ಡಿಗೆ ಜಮೆ ಮಾಡದೆ ಬಹಳ ಅವಕಾಶ ಮಾಡಿದ್ದರಿಂದ ಸರ್ಕಾರದವರು ಅವರನ್ನು ಕೆಲಸದಿಂದ ವಜಾ ಮಾಡಬೇಕೆಂದು ಹುಕುಂ ಕೊಟ್ಟಿದ್ದಾರೆ.

❖❖❖

ಕೋಲಾರ್ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ವ್ಯವಸಾಯ ಪ್ರೋತ್ಸಾಹಕ್ಕಾಗಿ ಒಂದು ಸಂಘವನ್ನು ಏರ್ಪಡಿಸಿರುತ್ತಾರೆ. ಇದಲ್ಲದೆ ಮೇ ತಿಂಗಳಲ್ಲೇ ಅಥವಾ ಜೂನ್ ತಿಂಗಳ ಮೊದಲನೇ ವಾರದಲ್ಲೋ ಚಿಂತಾಮಣಿಯಲ್ಲಿ ವ್ಯವಸಾಯ ಸಂಬಂಧವಾದ ಒಂದು ಪ್ರದರ್ಶನವನ್ನು ನಡಿಸಬೇಕೆಂದು ಗೊತ್ತುಮಾಡಿದ್ದಾರೆ. ಅಲ್ಲಿ ವ್ಯವಸಾಯೋಪಕರಣಗಳೂ ಧಾನ್ಯಾದಿಗಳೂ ಪ್ರದರ್ಶನ ಮಾಡಲ್ಪಡುತ್ತವೆಂದು ತಿಳಿದು ಬಂದಿದೆ.

❖❖❖

ರಾಜಬಂಧುಗಳ ಪೈಕಿ ಸರ್ದಾರ್ ಗೋಪಾಲರಾಜೇ ಅರಸಿನವರನ್ನು ಅರಮನೆಯ ಮೋಟಾರ್ ಗಾಡಿಗಳ ಇಲಾಖಾ ಆನರರಿ ಸೂಪರಿಂಟೆಂಡೆಂಟರಾಗಿಯೂ, ಮೆ॥ ಪುಟ್ಟಯ್ಯಾಜೆ ಅರಸಿನವರ ಕುಮಾರರಾದ ಮೆ॥ ಎಂ. ಬಿ. ಸುಬ್ರಹ್ಮಣ್ಯರಾಜೇ ಅರಸಿನವರನ್ನು ಅರಮನೆ ಇಲಾಖೆಯಲ್ಲಿ "ಕಾಮದಾರ್" ಎಂಬ ಕೆಲಸಕ್ಕೂ ಶ್ರೀಮನ್ಮಹಾರಾಜರವರು ನೇಮಕಮಾಡಿರುತ್ತಾರೆ. ಮೆ॥ ಪಾಪಣ್ಣಯ್ಯನವರನ್ನು ಅರಮನೆ ಇಂಜನ್ ಹೌಸ್‌ನಿಂದ ಮೇಲ್ಕಂಡ ಮೋಟಾರ್ ಗಾಡಿಗಳ ಇಲಾಖೆಗೆ ವರ್ಗಮಾಡಿದ್ದಾರೆ.

❖❖❖

ಕೆಲವು ದಿನಗಳ ಹಿಂದೆ ಮದರಾಸ್ ಯೂನಿವರ್ಸಿಟಿ ವಿದ್ಯಾಸಂಘದ ಸೆನೆಟ್ ಮೆಂಬರುಗಳ ಮೀಟಿಂಗಿನಲ್ಲಿ ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಮೆ॥ ಛಾಬ್ರಾಯರವರು ಸಂಸ್ಕೃತ ಪಂಡಿತರ ವಿಚಾರವನ್ನು ಎತ್ತಿ ಮಾತನಾಡುವಾಗ್ಗೆ ಅವರನ್ನು ಸಾಧಾರಣವಾಗಿ ಅಲ್ಲಗಳೆದರೆಂದು ಮೊದಲಾಗಿ ರಾಜಧಾನಿಯ ಸಂಸ್ಕೃತ ಪಂಡಿತರಿಗೆ ತಿಳಿದು ಬಂದದ್ದರಿಂದ ಇಲ್ಲಿನ ಪಂಡಿತರೂ ಸಂಸ್ಕೃತ ವಿದ್ಯಾಭ್ಯಾಸಿಗಳೂ ಟೌನ್ ಹಾಲ್ ಬಂಗಲೆಯಲ್ಲಿ ಮೊನ್ನೆ ಸೋಮವಾರ ಸಾಯಂಕಾಲ ಸಭೆ ಸೇರಿ, ಮೆ॥ ಛಾಬ್ರಾಯರವರು ಆ ಸಭೆಯಲ್ಲಿ ಆ ರೀತಿ ಮಾತನಾಡಿದ್ದು ಸರ್ವಥಾ ಯೋಗ್ಯವಲ್ಲವೆಂತಲೂ, ಇದಕ್ಕಾಗಿ ಸಂಸ್ಕೃತ ಪಂಡಿತರಿಗೂ ಆ ವಿದ್ಯಾ ಪ್ರೋತ್ಸಾಹಕರಿಗೂ ವಿಷಾದವನ್ನೂ ಆಗ್ರಹವನ್ನೂ ಉಂಟುಮಾಡಿದೆ ಎಂತಲೂ, ಈ ಸಂಗತಿಯನ್ನೆಲ್ಲಾ ಶ್ರೀಮನ್ಮಹಾರಾಜರವರಿಗೂ, ಮದರಾಸಿನ ವಿದ್ಯಾಸಂಘಕ್ಕೂ ಅರಿಕೆಮಾಡಬೇಕೆಂತಲೂ ತೀರ್ಮಾನಿಸಿದರು.

❖❖❖

ರಾಜಧಾನಿಯಲ್ಲಿ ಕೋಟೆಯೊಳಗಿರತಕ್ಕ ಪ್ರಜೆಗಳು ವಿಶೇಷವಾಗಿ ಕಸರ್ಗ ಮಾರ್ಕೆಟಿನ ಮೂಲಕ ತಿರುಗಾಡಬೇಕಾಗಿದೆ. ಕೆಲವು ತಿಂಗಳ ಹಿಂದೆ ಈ ಮಾರ್ಕೆಟಿನ ಮೂಲಕ ಕೋಟೆಗೆ ಒಂಟೆತ್ತಿನ ಅಥವಾ ಜೋಡೆತ್ತಿನ ಗಾಡಿಗಳನ್ನು ಬಿಡಕೂಡದೆಂದು ಕಟ್ಟುಮಾಡಿದ್ದರು. ಕೋಟೆಯ ಪ್ರಜೆಗಳು ಡೆಪ್ಯುಟಿ ಕಮಿಷನರಿಗೆ ಹೇಳಿಕೊಂಡದ್ದರ ಮೇಲೆ ಅವರು ಆ ನಿರ್ಬಂಧವನ್ನು ತಪ್ಪಿಸಿದ್ದರು. ಈಚೆಗೆ ಒಂದೆರಡು ವಾರಗಳಿಂದ ಮತ್ತೆ ಈ ನಿರ್ಬಂಧವುಂಟಾಗಿದೆ. ಕೋಟೆಯ ಪ್ರಜೆಗಳು ಸಾಮಾನುಗಳನ್ನು ಗಾಡಿಗಳಲ್ಲಿ ಸಾಗಿಸಿಕೊಂಡು ಹೋಗುವುದೂ, ರೈಲಿನಿಂದ ಹೆಂಗಸರು ಮಕ್ಕಳನ್ನು ಗಾಡಿಯಲ್ಲಿ ಕೂಡಿಸಿಕೊಂಡು ಹೋಗುವುದೂ, ರೋಗಿಗಳನ್ನು ಆಸ್ಪತ್ರೆಗಳಿಗೆ ಕರೆದುಕೊಂಡುಹೋಗಿ ಬರುವುದೂ ಅಸಾಧ್ಯವಾಗಿದೆ. ಗಾಡಿಗಳ ತಿರುಗಾಟವನ್ನು ಪೊಲೀಸಿನವರು ಖುದ್ದುವಾರಿ ಇಟ್ಟು ಕ್ರಮಪಡಿಸಿ, ಪ್ರಜಾಸೌಕರ್ಯವನ್ನು ಹೆಚ್ಚಿಸುವುದಕ್ಕೆ ಪ್ರತಿಯಾಗಿ, ಗಾಡಿಗಳನ್ನೇ ಕೋಟೆಯೊಳಕ್ಕೆ ಬಿಡುವುದಿಲ್ಲವೆಂದು ಹಿಂಸೆಮಾಡುವುದು ತರವಲ್ಲ. ಈ ಭಾಗದಲ್ಲಿ ಡೆಪ್ಯುಟಿ ಕಮಿಷನರರೂ ಪೊಲೀಸ್ ಸೂಪರಿಂಟೆಂಡೆಂಟರೂ ಕೂಡಲೇ ಗಮನಕೊಟ್ಟು, ಕೋಟೆಯ ಪ್ರಜೆಗಳಿಗಿರುವ ಈ ಅತಿಬಾಧೆಯನ್ನು ತಪ್ಪಿಸಿಕೊಟ್ಟಾರೆಂದು ನಿರೀಕ್ಷಿಸುತ್ತೇವೆ.

ಮೈಸೂರು ಸರ್ಕಾರಿ ಹುಕುಮು.

ಕುರುಳಿ ವ್ಯವಸಾಯ.

ಗವರ್ನಮೆಂಟಿನವರು: ಗ್ರಾಮದ ಗೋಮಾಳದ ಪೈಕಿ ಚುನಾಯಿಸಲ್ಪಟ್ಟ ತಾಕುಗಳನ್ನು ಕುರುಳಿ ಪೈರಿಡುವುದಕ್ಕೆ ಹಂಗಾಮಿಯಾಗಿ ಕೊಡುವುದನ್ನು ಮಂಜೂರುಮಾಡಿ, ಈ ವಿಷಯದಲ್ಲಿ ರೆವಿನ್ಯೂ ಕಮಿಷನರವರಿಂದ ಸೂಚಿಸಲ್ಪಟ್ಟ ಕಟ್ಟಳೆಗಳನ್ನು ಅನುಮೋದಿಸಿರುವುದು ಸರಿಯಷ್ಟೆ. ಈ ವಿಚಾರದಲ್ಲಿ ಡೆಪ್ಯುಟಿ ಕಮಿಷನರವರೂ ಮತ್ತು ಅವರ ಕೈಕೆಳಗಿನ ಆಫೀಸರುಗಳೂ ಸಹ ಈ ಕಟ್ಟಳೆಗಳನ್ನು ಚೆನ್ನಾಗಿ ಪ್ರಸಿದ್ಧಪಡಿಸಿ, ರೈತರು ಕೆಚ್ಚು ಬೆಳೆಗಳನ್ನು ಬೆಳೆಯುವುದರಲ್ಲಿಯೂ ಗ್ರಾಮದ ಗೋಮಾಳ ಜಮೀನನ್ನು ಅಭಿವೃದ್ಧಿಪಡಿಸುವುದರಲ್ಲಿಯೂ ಅವರಿಗೆ ಪ್ರೋತ್ಸಾಹ ಕೊಡಬೇಕಲ್ಲದೆ, ತಾಲ್ಲೂಕು ಆಫೀಸರುಗಳು ಮತ್ತು ಗ್ರಾಮಾಧಿಕಾರಿಗಳು ಈ ವಿಚಾರದಲ್ಲಿ ಮಾಡುವ ಪ್ರಯತ್ನ ಮತ್ತು ಇದರ ಫಲಿತಾಂಶವನ್ನು ಜಮಾಬಂದಿ ರಿಪೋರ್ಟಿನಲ್ಲಿ ನಮೂದಿಸತಕ್ಕದ್ದು. ಗೋಮಾಳ ಜಮೀನು ಪೈಕಿ ಚುನಾಯಿಸಲ್ಪಟ್ಟ ತಾಕುಗಳನ್ನು ಕುರುಳಿ ಸಾಗುವಳಿಗೋಸ್ಕರ ಹಂಗಾಮಿಯಾಗಿ ಕೊಡುವ ಬಗ್ಗೆ ವಿಧಿಸಲ್ಪಟ್ಟ ಕಟ್ಟಳೆಗಳು ಯಾವವೆಂದರೆ—ಗ್ರಾಮದ ರೈತರೆಲ್ಲರೂ ಅವರ ಗೋಮಾಳ ಜಮೀನಿನ ಪೈಕಿ ಒಂದು ಭಾಗವನ್ನು ಹಂಗಾಮಿ ಸಾಗುವಳಿ ಬಗ್ಗೆ ತೆಗೆದುಕೊಳ್ಳಲು ಒಪ್ಪುವುದಾದರೆ ಇವರು ಪಟೇಲ ಅಥವಾ ಎಲ್ಲರೂ ಒಪ್ಪುವ ಒಬ್ಬ ಮುಖಂಡನ ಮಾರ್ಫತ್ತು ದರಖಾಸ್ತು ಕೊಡಬಹುದು. ಗ್ರಾಮಸ್ಥರು ದರಖಾಸ್ತುದಾರರನ್ನು ಅವರೇ ಖುದ್ದಾಗಿಯಾಗಲಿ ಅಥವಾ ಒಬ್ಬ ಪ್ರತಿನಿಧಿಯ ಮಾರ್ಫತ್ತಾಗಲಿ ಅಮಲ್ದಾರರ ಸಮಕ್ಷಮ ಹಾಜರುಮಾಡತಕ್ಕದ್ದು. ಅಮಲ್ದಾರರು ಅರ್ಜಿಯಲ್ಲಿ ನಮೂದಿಸಿರುವ ಸಂಗತಿಗಳು ಸರಿಯಾಗಿ ಇದೆಯೋ ಎಂಬ ಬಗ್ಗೆ ಕೂಡಲೆ ವಿಚಾರಮಾಡಿ ಸದರಿ ಅರ್ಜಿಯನ್ನು ತಮ್ಮ ಶಿಫಾರಸಿನೊಂದಿಗೆ ಸಬ್ ಡಿವಿಜನ್ ಆಫೀಸರವರ ಹುಕುಂ ಬಗ್ಗೆ ಕಳುಹಿಸಿಕೊಡತಕ್ಕದ್ದಲ್ಲದೆ, ಅಜಮಾಯಿಷಿನಲ್ಲಿರುವ ಖುಷ್ಕಿ ಜಮೀನಿಗೆ ಬಿದ್ದಿರುವ ಸರಾಸರಿ ಕಂದಾಯದ ದರವನ್ನು ಅನುಸರಿಸಿ ವಸೂಲಾಗಬೇಕಾದ ಕಂದಾಯವನ್ನು ಸಹ ನಮೂದಿಸಬೇಕು. ಸಬ್ ಡಿವಿಜನ್ ಆಫೀಸರವರು ಅರ್ಜಿಯನ್ನು ಕಾಲವಿಳಂಬವಿಲ್ಲದೆ ಪರಿಶೋಧಿಸಿ, ಜಮೀನನ್ನು ಸಾಗುವಳಿಗೆ ಕೊಡುವುದರಲ್ಲಿ ಅಭ್ಯಂತರವೇನೂ ಇಲ್ಲದೇ ಇರುವ ಸಂದರ್ಭದಲ್ಲಿ ವಸೂಲಾಗಬೇಕಾದ ಕಂದಾಯವನ್ನು ಗೊತ್ತುಮಾಡಿ ಹುಕುಂ ಮಾಡಬೇಕು. ಹುಕುಂ ತಲಪಿದ ನಂತರ ಅಮಲ್ದಾರರು ಗ್ರಾಮಸ್ಥರು ಒಪ್ಪುವ ಅವರ ಕಡೆ ಒಬ್ಬ ಪ್ರತಿನಿಧಿಯ ಹೆಸರಿನಲ್ಲಿ, ಒಂದು ಹಂಗಾಮಿ ಸಾಗುವಳಿ ಚೀಟಿಯನ್ನು ಕೊಡಬೇಕು. ಈತನು ಸದರಿ ಜಮೀನಿನ ಮೇಲೆ ಕಟ್ಟಿರುವ ಕಂದಾಯವನ್ನು ಪಾವತಿಮಾಡಲು ಜವಾಬುದಾರನಾಗಿರುತ್ತಾನೆ.

ಈ ನಿಯಮಗಳನ್ನು ಅನುಸರಿಸುವುದಕ್ಕೆ ಸಾಕಾದಷ್ಟು ವ್ಯವಧಾನವಿಲ್ಲದೆ ಇರುವ ಸಂದರ್ಭದಲ್ಲಿ ಗ್ರಾಮಸ್ಥರು ಸದರಿ ಅರ್ಜಿಯಲ್ಲಿ ತಾವು ಸಬ್ ಡಿವಿಜನ್ ಆಫೀಸರವರ ಹುಕುಮಿನ ಪ್ರಕಾರ ನಡೆಕೊಳ್ಳುತ್ತೇವೆಂಬ ಷರತ್ತನ್ನು ಸ್ಪಷ್ಟವಾಗಿ ನಮೂದಿಸಿ, ಸದರಿ ಅರ್ಜಿಯನ್ನು ತಾಲ್ಲೂಕಿಗೆ ಒಡನೆ ರವಾನಿಸುವ ಬಗ್ಗೆ ಸಾನುಭೋಗ ಪಟೇಲರಲ್ಲಿ ಹಾಜರು ಮಾಡಿ, ನಂತರ ಜಮೀನನ್ನು ಸ್ವಾಧೀನಪಡಿಸಿಕೊಂಡು ಉಳುವುದಕ್ಕೆ ಶುರು ಮಾಡಬಹುದು. ಗ್ರಾಮಸ್ಥರು ಒಟ್ಟಿನ ಮೇಲೆ ಕೊಡಲ್ಪಟ್ಟ ವಿಸ್ತೀರ್ಣವನ್ನು ಅವರೇ ಹಂಚಿಕೊಳ್ಳುವ ಏರ್ಪಾಡು ಮಾಡಿಕೊಳ್ಳಬೇಕಲ್ಲದೆ ಅವರು ಒಪ್ಪಿ ನೇಮಿಸಿರುವ ಪ್ರತಿನಿಧಿಯು ರೈತರಿಂದ ಹಂಚಿಗೆ ಪ್ರಕಾರ ಕಂದಾಯವನ್ನು ವಸೂಲ್ಮಾಡಬಹುದು. ಪೈರು ಕಟಾವಾಗುವುದಕ್ಕೆ ಮುಂಚೆಯೇ ಜಮೀನಿನ ಮೇಲೆ ಕಟ್ಟಿದ ಕಂದಾಯವನ್ನು ಸರ್ಕಾರಕ್ಕೆ ಪಾವತಿಮಾಡತಕ್ಕದ್ದು. ಕಂದಾಯವು ಪಾವತಿಯಾಗುವುದಕ್ಕೆ ಮುಂಚೆಯೇ ಪೈರನ್ನು ಕೊಯ್ದು ಸಾಗಿಸುವುದನ್ನು ನಿರೋಧಿಸುವುದಕ್ಕೆ ಅಮಲ್ದಾರರು ಅಧಿಕಾರವುಳ್ಳವರಾಗಿರುತ್ತಾರೆ. ಈ ಮೇರೆಗೆ ಕಂದಾಯವನ್ನು ಪಾವತಿಮಾಡದೆ ಇದ್ದಲ್ಲಿ ಅಮಲ್ದಾರರು ಫಸಲನ್ನು ಹರಾಜುಹಾಕಿಸಬಹುದು. ಹರಾಜು ನಡೆದ ಏಳು ದಿನಗಳೊಳಗಾಗಿಯೇ ಹರಾಜು ನಡವಳಿಕೆಯನ್ನು ಖಾಯಂ ಬಗ್ಗೆ ಸಬ್ ಡಿವಿಜನ್ ಆಫೀಸರವರಲ್ಲಿಗೆ ಕಳುಹಿಸಬೇಕು. ಹರಾಜು ಖಾಯಂ ಆದಲ್ಲಿ, ಹರಾಜಿನಲ್ಲಿ ಉತ್ಪತ್ತಿಯಾದ ಮೊಬಲಗು ಬಾಕಿ ಇರುವ ಕಂದಾಯಕ್ಕಿಂತಲೂ ಹೆಚ್ಚಾಗಿದ್ದರೆ, ಹೆಚ್ಚಾದ ಮೊಬಲಗನ್ನು ಗ್ರಾಮಸ್ಥರಿಗೆ ನೋಟೀಸು ಮೂಲಕ ತಿಳುವಳಿಕೆ ಕೊಟ್ಟು, ಅವರ ಕಡೆ ಪ್ರತಿನಿಧಿಗೆ ವಾಪತಿಮಾಡಬಹುದು. ಹೀಗಿಲ್ಲದೆ ಒಂದುವೇಳೆ ಕಮ್ಮಿಯಾಗಿದ್ದರೆ ಹರಾಜು ಮೊಬಲಗನ್ನು ಭರ್ತಿ ಹಾಕಿಕೊಂಡ ಮೇಲೆ ಇನ್ನು ಬಾಕಿ ಉಳಿಯುವ ಕಂದಾಯದ ಮೊಬಲಗನ್ನು ಡೆಪ್ಯುಟಿ ಕಮಿಷನರವರು ಮಾಫ್ ಮಾಡಬಹುದು. ಮೇಲೆ ನಮೂದಿಸಿರುವ ಮೇರೆಗೆ ಜಮೀನು ಸಾಗುವಳಿಗೆ ಕೊಡುವುದನ್ನು ಮಂಜೂರುಮಾಡುವುದರಲ್ಲಿ ಇದರಡಿ ನಮೂದಿಸಿರುವ ರೂಲುಗಳನ್ನು ಸಹಾ ಜಾರಿಯಲ್ಲಿರತಕ್ಕದ್ದು—(೧) ಒಂದು ಸಾಲಿನಲ್ಲಿ ಸಾಗುವಳಿಗೆ ಕೊಟ್ಟ ಜಮೀನು ಮುಂದೆ ಬಿಡದೆ ಎರಡು ಸಾಲುಗಳು ನೀಳನಲ್ಲಿಟ್ಟಿರತಕ್ಕದ್ದು. ಒಂದು ಗ್ರಾಮದ ಪೂರಾ ಗೋಮಾಳ ಜಮೀನನ್ನು ಮೂರು ತಾಕುಗಳಾಗಿ ವಿಂಗಡಿಸಿ, ಒಂದು ತಾಕನ್ನು ಒಂದು ಸಾಲಿಗೆ ಪರಿವರ್ತನೆಯಿಂದ ಸಾಗುವಳಿಗೆ ಕೊಟ್ಟಲ್ಲಿ ಪ್ರತಿ ತಾಕೂ ಮೂರು ವರ್ಷಕ್ಕೆ ಒಂದು ದಫಾ ಸಾಗುವಳಿಗೆ ಬಂದಂತಾಗುತ್ತದೆ (೨) ಸದರಿ ಜಮೀನಿನಲ್ಲಿ ಏಕಪ್ರಕಾರವಾಗಿ ಕುರುಳಿ ಫಸಲನ್ನೇ ಇಡಬೇಕು. (೩) ಸಾಗುವಳಿಯಿಂದ ಕೊರಚಲು ಜಂಗಲು ಅಥವಾ ಮರವಾಗುವ ಸಸಿಗಳು ನಾಶವಾಗುವ ಸಂಭವವಿದ್ದಲ್ಲಿ ಅಂಥಾ ಪ್ರದೇಶಗಳನ್ನು ಸರ್ವಥಾ ಸಾಗುವಳಿಗೆ ಕೊಡಕೂಡದು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಮೊನ್ನೆ ತಾ. ೩೦ನೇ ಸೋಮವಾರ ಬೆಳಿಗ್ಗೆ ಇಲ್ಲಿನ ಟೌನ್‌ಹಾಲ್ ಬಂಗಲೆಯಲ್ಲಿ ಸಭೆಸೇರಿ, ತಿಂಗಳು ಕಟ್ಟಲೆಯ ಮೀಟಿಂಗನ್ನು ನಡಿಸಿದರು. ಮೊದಲು ಫೆಬ್ರುವರಿ ತಿಂಗಳ ಜಮಾಖರ್ಚು ಮುಂತಾದ ಲೆಕ್ಕಗಳು ಓದಲ್ಪಟ್ಟವು. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಆಕ್ಟ್ರಾಯಿ ಬಾಬಿನಲ್ಲಿ ೬,೩೦೦ ಚಿಲ್ಲರೆ ರೂಪಾಯಿ ಅಂದರೆ, ಹೋದ ವರುಷ ಅದೇ ತಿಂಗಳಿಗಿಂತ ೧,೦೦೦ ರೂಪಾಯಿ ಹೆಚ್ಚಾಗಿ, ಉತ್ಪತ್ತಿಯಾಯಿತು. ಒಟ್ಟು ೧೧,೬೫೩ ಚಿಲ್ಲರೆ ರೂಪಾಯಿ ಜಮಾ ಆಯಿತು, ೮,೩೫೭ ಚಿಲ್ಲರೆ ರೂಪಾಯಿ ಖರ್ಚಾಯಿತು. ಜನನ ೯೮; ಮರಣ ಪ್ಲೇಗ್ ೨೧, ಜ್ವರ ೧೬, ಇತರ ಕಾರಣಗಳು ೧೨೬, ಒಟ್ಟು ೧೬೩ ಎಂದು ತಿಳಿದು ಬಂದಿದೆ. ಆಡಿಟರುಗಳು ಆ ತಿಂಗಳ ಲೆಕ್ಕಗಳನ್ನು ತನಿಖೆಮಾಡಿ, ಬೇರೆ ಮೊಹಲ್ಲಾಗಳ ಖಾತೆಗಳನ್ನು ಮ್ಯುನಿಸಿಪಲ್ ಆಫೀಸಿನಲ್ಲೇ ಇಡಿಸಬೇಕೆಂತಲೂ, ಪೌಚರುಗಳನ್ನು ಕ್ರಮಬದ್ಧವಾಗಿರುವಂತೆ ತಪ್ಪಿಸಿ ಪ್ರಿಂಟಾದ ಫಾರಂನಲ್ಲಿ ಇಡಿಸಬೇಕೆಂತಲೂ, ಯಾವುದೋ ಒಂದು ಖರ್ಚು ಬಾಬನ್ನು ಬೇರೆ ಹೆಡ್ಡಿಗೆ ದಾಖಲ್ಮಾಡಿದಾರೆಂತಲೂ, ಉಳಿದ ಲೆಕ್ಕಾಚಾರಗಳೆಲ್ಲಾ ಸರಿಯಾಗಿವೆ ಎಂತಲೂ ರಿಪೋರ್ಟು ಬರೆದಿದ್ದರು.

ಮ್ಯಾನೇಜಿಂಗ್ ಕಮಿಟಿಯಲ್ಲಿ ಇತ್ಯರ್ಥವಾದ ವಿಷಯಗಳು

ಮ್ಯುನಿಸಿಪಾಲಿಟಿಯ ಮ್ಯಾನೇಜಿಂಗ್ ಕಮಿಟಿಯವರು ಫೆಬ್ರುವರಿ ಮತ್ತು ಮಾರ್ಚಿ ತಿಂಗಳಲ್ಲಿ ಸಭೆಸೇರಿ, ಜರುಗಿಸುವ ಕಾರ್ಯಗಳನ್ನೆಲ್ಲಾ ಓದಿಸಿದರು. ಆ ಪೈಕಿ ಮುಖ್ಯವಾದ ಬಾಬುಗಳ್ಯಾವವೆಂದರೆ—(೧) ಪ್ರತಿ ಒಂದು ಮೊಹಲ್ಲೆಯಲ್ಲೂ ಯೋಗ್ಯವಾದ ಮತ್ತು ಆರೋಗ್ಯ ಸೂತ್ರಗಳಿಗೆ ಅನುಸಾರವಾದ ಸ್ನಾನಘಟ್ಟಗಳನ್ನು ಮ್ಯುನಿಸಿಪಾಲಿಟಿಯಿಂದ ಕಟ್ಟಿಸಿಕೊಟ್ಟು ಪ್ರಜೆಗಳಿಗೆ ಸಹಾಯ ಮಾಡಬೇಕೆಂದು ಒಂದು ಸಲಹೆ ಬಂದಿತ್ತು. ಸದ್ಯ ರಾಜಧಾನಿಗೆ ನೀರಿನ ಸರಬರಾಯಿ ಸಾಲದೆಂತಲೂ, ವಿದ್ಯುಚ್ಛಕ್ತಿಯ ಸಹಾಯದಿಂದ ಬಳಗುಳದಲ್ಲಿ ಯಂತ್ರಗಳನ್ನು ನಡಿಸುವುದಕ್ಕಾರಂಭವಾಗಿ ಹೆಚ್ಚು ನೀರು ರಾಜಧಾನಿಗೆ ಬರುವಂತಾದಮೇಲೆ, ಈ ಸ್ನಾನಘಟ್ಟಗಳನ್ನು ಕಟ್ಟಿಸುವುದು ಅನುಕೂಲವೆಂತಲೂ ತೀರ್ಮಾನ ಮಾಡಿದಾರೆ (೨) ದೊಡ್ಡಕೆರೆ ಏರಿ ಕೆಳಗಡೆ ಇರುವ ಗಾಡಿ ರಸ್ತೆಗೆ ಜಲ್ಲಿ ಕಲ್ಲು ವಿಶೇಷವಾಗಿ ಹಾಕಿಸಿ, ರಸ್ತೆಯನ್ನು ಚನ್ನಾಗಿ ಮಾಡಿಸಬೇಕೆಂದು ಗೊತ್ತಾಗಿದೆ (೩) ಕಾರಂಜಿಕೆರೆಯ ಏರಿಯ ಮೇಲೆ ಉಭಯ ಪಾರ್ಶ್ವಗಳಲ್ಲೂ ರೈಲ್ ಕಂಬಿಗಳನ್ನು ಹಾಕಿ ಕಟಕಟೆ ಕಟ್ಟಿಸಬೇಕೆಂದು ಗೊತ್ತುಮಾಡಿ, ಅದಕ್ಕಾಗಿ ೪,೫೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ. (೪) ಪ್ರತಿ ವರುಷವೂ ಮಾರ್ಚಿ ಆಖೈರಿನಲ್ಲಿ ರಾಜಧಾನಿಯ ಮ್ಯುನಿಸಿಪಾಲಿಟಿಯವರು ಸೆನ್ಸಸ್ (ಪ್ರಜಾ ಗಣತಿ) ಲೆಕ್ಕಗಳನ್ನು ಬರೆಸಿಡುವುದು ಬಹಳ ಆವಶ್ಯವಾದ್ದರಿಂದ ಅದಕ್ಕಾಗಿ ಹಂಗಾಮಿಯಾಗಿ ಕೆಲವು ಶಿಬ್ಬಂದಿಯನ್ನು ನೇಮಿಸಬಹುದಾಗಿದೆ ಎಂದು ತೀರ್ಮಾನಿಸಿದಾರೆ (೫) ಮ್ಯುನಿಸಿಪಲ್ ಕಂದಾಯಗಳ ಕಲೆಕ್ಟರಿಗೆ ಬಗರು ತಲೆಬಿನ ಮೇಲೆ ರಜಾ ಕೊಟ್ಟಿರೋಣದರಿಂದ ಕಂದಾಯಗಳ ವಸೂಲಾತಿಗಾಗಿ, ಹಂಗಾಮಿಯಾಗಿ ಮೂರು ತಿಂಗಳ ತನಕ ಮಾಹೆಯಾನಾ ೧೫ ರೂಪಾಯಿ ತಲಬಿನಲ್ಲಿ ಮಾಸ್ಟರ್ ಮಂದಿ ಶೇಕದಾರರನ್ನು ನೇಮಿಸಬೇಕೆಂದು ಗೊತ್ತುಮಾಡಿದಾರೆ. (೬) ಈ ಬೇಸಿಗೆ ಕಾಲ ಕಳೆಯುವ ತನಕ ಟರ್ನ್ ಮಧ್ಯರಾತ್ರಿ ದಲ್ಲಿ ಅಂದರೆ ಕರ್ಸನ್ ಪಾರ್ಕಿನಿಂದ ಸುತ್ತಲೂ ಇರುವ ಭಾಟಿಯ ರಸ್ತೆಗಳಿಗೆ ನೀರು ಹಾಕಿ ತಿರುಗಾಡತಕ್ಕವರಿಗೆ ಕ್ಷೇಮವನ್ನುಂಟುಮಾಡಬೇಕೆಂದು ಗೊತ್ತುಮಾಡಿದರು.

ಸರ್ಕಾರದವರು ಪಿಲ್ಲೇರಿ ಇಲಾಖಾದಲ್ಲಿ ಕೆಲವು ಕುದುರೆಗಳನ್ನೂ ಗಾಡಿಗಳನ್ನೂ ಇಟ್ಟುಕೊಂಡು, ಕೆಲವು ಅಧಿಕಾರಿಗಳಿಗೆ ಬಾಡಿಗೆಗೆ ಕೊಡುವ ಪದ್ಧತಿಯುಂಟು. ಇಂಥಾ ಬಾಡಿಗೆ ಗಾಡಿಗಳಿಗೂ ಮ್ಯುನಿಸಿಪಲ್ ತೆರಿಗೆಯನ್ನು ಹಾಕಿ ವಸೂಲ್ಮಾಡಬೇಕೆಂದು ಕೆಲವು ಕೌನ್ಸಿಲರುಗಳು ಸೂಚಿಸಿದರು. ಆದರೆ ಎಲ್ಲರ ಅನುಮತಿಯನ್ನೂ ಕೇಳಿದಾಗ ಸರ್ಕಾರಿ ಗಾಡಿ ಕುದುರೆಗಳಿಗೆ ಕಂದಾಯವನ್ನು ವಸೂಲ್ಮಾಡುವುದು ಸರಿಯಲ್ಲವೆಂದು ಬಹುಮಂದಿ ಅಭಿಪ್ರಾಯಪಟ್ಟದ್ದರಿಂದ ಆ ವಿಚಾರವನ್ನೇ ನಿಲ್ಲಿಸಿಬಿಟ್ಟರು.

೧೯೦೮—೦೯ ನೆ ಇಸವಿ ಬಜೆಟ್ಟು

ತರುವಾಯ ಮುಂದಿನ ವರುಷದ ಮ್ಯುನಿಸಿಪಲ್ ಜಮಾಖರ್ಚಿನ ಅಂದಾಜು ಪಟ್ಟಿಗಳನ್ನು ಓದಿಸಿದರು. ಅದರಲ್ಲಿ ತಿಳಿದುಬಂದ ಸಂಗತಿಗಳೇನೆಂದರೆ—೧೯೦೮—೦೯ ನೆ ಸಾಲ್ ಪ್ರಾರಂಭದಲ್ಲಿ ಮ್ಯುನಿಸಿಪಾಲಿಟಿಯಲ್ಲಿ ೬೫,೮೪೯ ರೂಪಾಯಿ ಶಿಲ್ಕು ಉಳಿಯುವುದು. ಮೊಹತರ್ಫಾ ಕಂದಾಯಗಳನ್ನು ಕೇಳಿದಂತೆ ಗೊತ್ತುಮಾಡಬೇಕೆಂದು ಸರ್ಕಾರದವರು ವಿಧಿಸುವುದರಿಂದ ಮನೆಗಂದಾಯವು ಒಟ್ಟು ೨೬,೦೦೦ ರೂಪಾಯಿ ಆದೀತೆಂದು (ಅಂದರೆ, ಈಗ್ಗಿಂತ ೧,೦೦೦ ರೂಪಾಯಿ ಹೆಚ್ಚು) ಅಂದಾಜು ಹಾಕಿದೆ. ಕೆಲವು ಮೊಹಲ್ಲೆಗಳಲ್ಲಿ ಮ್ಯುನಿಸಿಪಾಲಿಟಿಯವರೇ ಶಿಬ್ಬಂದಿಯನ್ನಿಟ್ಟು ಪಾಯಿಖಾನೆಯನ್ನು ಬಳಿಸಿ, ಅದಕ್ಕಾಗಿ ಮನೆಗಳವರಿಂದ ತಿಂಗಳು ತಿಂಗಳಿಗೆ ರುಸುಮನ್ನು ವಸೂಲ್ಮಾಡುತ್ತಿದ್ದರು. ಇದು ಕೆಲವು ತಿಂಗಳು ನಡಿಯುವಷ್ಟರಲ್ಲೇ ಈ ಏರ್ಪಾಡು ತೃಪ್ತಿಕರವಲ್ಲವೆಂದು ಗೊತ್ತಾಯಿತು. ಆದ್ದರಿಂದ ಇದನ್ನು ವಜಾ ಮಾಡಿದೆ ಎಂದು ಗವರ್ನಮೆಂಟಿಗೆ ತಿಳಿಸಿದಾರೆ. ಮುಂದಿನ ಬಜೆಟ್ಟಿನಲ್ಲಿ ಲಷ್ಕರ್ ಮೊಹಲ್ಲೆಗೂ ವೀರಣ್ಣನವರ ಛತ್ರ ಮನೆಗಳಿಗೂ ಇಬ್ಬರು ಗೂಲಗಿತ್ತಿಯರನ್ನು ನೇಮಿಸುತ್ತಾರೆ. ಇದಲ್ಲದೆ ದೇವೀಶಿಡುಬು ಹಾಕುವುದಕ್ಕೆ ಒಬ್ಬರನ್ನು ಹೊಸದಾಗಿ ನೇಮಕ ಮಾಡುವರು. ಕಸವು ಗುಡಿಸುವುದು, ಕನ್ಸರ್ವೆನ್ಸಿ, ಆರೋಗ್ಯದ ಏರ್ಪಾಡು, ಈ ಬಾಬುಗಳಿಗೆ ಈಗ ೪೩,೦೦೦ ರೂಪಾಯಿ ಖರ್ಚಾಗುತ್ತಿದೆ. ಜಾಡಮಾಲಿಗಳ ಶಿಬ್ಬಂದಿಯನ್ನು ಹೆಚ್ಚಿಸುವುದಕ್ಕೂ ಅವರಿಗೆ ಪ್ರತ್ಯೇಕವಾದ ಮನೆಗಳನ್ನು ಮ್ಯುನಿಸಿಪಾಲಿಟಿಯಿಂದ ಕಟ್ಟಿಸಿಕೊಡಬೇಕೆಂಬ ಉದ್ದೇಶಕ್ಕೂ ಇನ್ನೂ ೧೮,೦೦೦ ರೂಪಾಯಿ ಜಾಸ್ತಿ ತೆಗೆದಿಟ್ಟಿದಾರೆ.

ಮ್ಯುನಿಸಿಪಾಲಿಟಿಯ ಲೆಕ್ಕಪತ್ರಗಳನ್ನೆಲ್ಲಾ ೧೯೦೪ ನೆ ಸಾಲಿನ ಆಗಾಯಿತು ಮೂರು ಸಾಲುಗಳ ವರೆಗೆ ಸರಿಯಾಗಿ ತನಿಖೆಮಾಡುವುದಕ್ಕೆ ಸರ್ಕಾರದವರು ಕಂಟ್ರೋಲರ್ ಆಫೀಸಿನಿಂದ ಆಡಿಟರುಗಳನ್ನು ಮ್ಯುನಿಸಿಪಾಲಿಟಿಯವರ ಕೈವಶಕ್ಕೆ ಕೊಟ್ಟಿದಾರೆ. ಇವರು ಒಂದು ಸುಮಾರು ೮ ತಿಂಗಳಿಂದ ಲೆಕ್ಕಗಳನ್ನು ಅಜಮಾಯಿಷಿ ಮಾಡುತ್ತಿದಾರೆ ಇವರ ಕೆಲಸವೆಲ್ಲಾ ಪೂರೈಸಿದ ಮೇಲೆ ಇವರಿಗೆ ಸರ್ಕಾರದವರು ನಿಗದಿಮಾಡುವಷ್ಟು ಪ್ರತಿಫಲವನ್ನು ಮ್ಯುನಿಸಿಪಾಲಿಟಿಯಿಂದ ಕೊಡತಕ್ಕದ್ದೆಂದು ತಿಳಿಸಿದಾರೆ.

ಮೇಲ್ಕಂಡ ವಿಷಯಗಳು ಚರ್ಚೆಯಾಗಿ ಗೊತ್ತುಮಾಡಲ್ಪಡುವ ವೇಳೆಗೆ ಬಹಳ ಹೊತ್ತಾಯಿತಾದ್ದರಿಂದ ಆ ದಿನ ಚರ್ಚೆಯಾಗದೆ ಉಳಿಕೊಂಡ ಇನ್ನೂ ಬಹು ವಿಷಯಗಳನ್ನು ಒಂದು ಸ್ಪೆಷಲ್ ಮೀಟಿಂಗಿನಲ್ಲಿ ಇತ್ಯರ್ಥಮಾಡಬೇಕೆಂದು ಪ್ರಸಿಡೆಂಟರು ಅಭಿಪ್ರಾಯಪಟ್ಟರು. ಕೌನ್ಸಿಲರುಗಳು ಅದರಂತೆ ಒಪ್ಪಿಕೊಂಡು, ಆ ದಿನದ ಮೀಟಿಂಗನ್ನು ಮುಕ್ತಾಯಮಾಡಿದರು.

ಇಂಡಿಯಾ ದೇಶದ ವೃತ್ತಾಂತಗಳು

ಹಿಂದುಸ್ಥಾನದ ಕ್ಷಾಮನಿವಾರಣೆಯ ಧರ್ಮಫಂಡಿಗೆ ದರ್ಭಾಂಗದ ಮಹಾರಾಜರವರು ೧೨,೦೦೦ ರೂಪಾಯಿ ಚಂದಾ ಕಳುಹಿಸಿದಾರೆ

***

ತಂತೀ ವರ್ತಮಾನವನ್ನು ಕಳುಹಿಸುವ ಫಾರಮ್ಮನ್ನು ಗವರ್ನಮೆಂಟಿನವರು ಈ ತಿಂಗಳ ಪ್ರಾರಂಭದಿಂದ ಬದಲಾಯಿಸಿರುತ್ತಾರೆ

***

ಬಂಗಾಳ ಆಧಿಪತ್ಯಕ್ಕೆ ಸೇರಿದ ಬಿಹಾರ ಸಂಸ್ಥಾನದಲ್ಲಿ ಕಳೆದ ವಾರ ಗಾಳಿಮಳೆಯಿಂದ ಕಾಲವಾದರೆಂದು ತಂತೀ ವರ್ತಮಾನ ಬಂದಿದೆ

***

ಬಂಗಾಳಾ ಆಧಿಪತ್ಯದಲ್ಲಿ ಕ್ಷಾಮದ ದೆಸೆಯಿಂದ ೨೦,೦೦೦ ಜನರು ಸರ್ಕಾರದವರ ಪೋಷಣೆಯಲ್ಲಿರುವರು. ಈ ಪೈಕಿ ಬಿಹಾರ್ ಡಿಸ್ಟ್ರಿಕ್ಟಿನವರೇ ೧೪,೦೦೦ ಜನರು

***

ಕಳೆದ ಎರಡು ತಿಂಗಳಿಂದಲೂ ಕಲ್ಕತ್ತೆಯಲ್ಲಿ ವಾಂತಿಭೇದಿ ಉಪದ್ರವು ಕಾಣಿಸಿಕೊಂಡು, ದಿನೇ ದಿನೇ ಹೆಚ್ಚುತ್ತಿದೆ. ಹಿಂದಿನ ವಾರ ೨೦೪ ಜನರು ಈ ಉಪದ್ರ ತಗಲಿ ಕಾಲವಾದರೆಂದು ತಂತೀ ವರ್ತಮಾನ ಬಂದಿದೆ

***

ಈಗ ಹಿಂದುಸ್ಥಾನದಲ್ಲಿ ಒಟ್ಟು ೩೦,೨೮೬ ಮೈಲಿ ರೈಲ್ ಮಾರ್ಗಗಳಿರುವವು. ಈ ವರುಷದಿಂದ ಗವರ್ನಮೆಂಟಿನವರು ರೈಲ್ ಮಾರ್ಗಗಳ ಕಾಮಗಾರಿಯನ್ನು ಬಹಳ ಹೆಚ್ಚಾಗಿ ಮಾಡಿಸುತ್ತಾ ಬರುವವರಾಗಿದಾರೆ

***

ಈಗ ತಾನೇ ಸೆರೆಯಿಂದ ಬಿಡುಗಡೆಯಾದ ಬಾಬು ಬಿಪಿನ ಚಂದ್ರಪಾಲ್‌ಯವರ ಹೆಸರಿನ ಮೇಲೆ ಕಲ್ಕತ್ತೆಯಲ್ಲಿ ಕಳೆದ ಶನಿವಾರ ಒಂದು ದೊಡ್ಡ ಸಭೆ ನಡೆಯಿತು. ಕೆಲವು ಜನರು ಹಣವನ್ನು ಕೂಡಿಸಿ, ಮಿಸ್ಟರ್ ಪಾಲ್‌ಯವರಿಗೆ ಒಪ್ಪಿಸಿದರೆಂದು ತಿಳಿಯುವುದು

***

ಕಳೆದ ವಾರ ಕಲ್ಕತ್ತಾ ಪಟ್ಟಣದಲ್ಲಿ ಸ್ಥಾಪನೆಯಾದ ಹಿಂದುಸ್ಥಾನದ ಕ್ಷಾಮನಿವಾರಣೆಯ ಧರ್ಮ ಫಂಡಿಗೆ ಒಂದು ಲಕ್ಷ ರೂಪಾಯಿ ಚಂದಾ ವಸೂಲಾಯಿತು. ಮೈಸೂರಿನ ಪ್ರಭುಗಳೂ, ಆ ಪಟ್ಟಣದ ಭಾರೀ ಕಾರ್ಖಾನೆಗಳ ಮುಖಂಡರೂ ಆ ಫಂಡಿಗೆ ಹಣವನ್ನು ಕೊಟ್ಟಿದಾರೆ

***

ಈಗ ಹಿಂದುಸ್ಥಾನದಲ್ಲಿ ೭೫,೦೦೦ ಇಂಗ್ಲಿಷ್ ಸೈನಿಕರು ಇರುತ್ತಾರೆಂತಲೂ, ಈ ಸಂಖ್ಯೆಯು ರಾಯಲ್ ಕಮಿಷನ್ ಬದ್ಧಿಗೆ ತೀರ್ಮಾನಕ್ಕಿಂತ ೫,೦೦೦ ಕಡಮೆಯಾಗಿದೆ ಎಂತಲೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಕಳೆದ ವಾರ ವಿಲಾಯತಿ ಪಾರ್ಲಿಮೆಂಟಿನಲ್ಲಿ ತಿಳಿಸಿದರು.

***

ನಾಳೆ ಸಾಯಂಕಾಲ ಮದರಾಸ್ ಪಟ್ಟಣದ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಸಭೆ ಸೇರಿ ಉತ್ತರ ದೇಶದ ಕ್ಷಾಮನಿವಾರಣೆಗಾಗಿ ಒಂದು ಧರ್ಮಫಂಡನ್ನು ಸ್ಥಾಪಿಸಿ ಚಂದಾ ಕೂಡಿಸುವುದಕ್ಕೆ ಪ್ರಾರಂಭಿಸುವವರಾಗಿದಾರೆ. ಗವರ್ನರವರು ಅಗ್ರಾಸನವನ್ನು ವಹಿಸಿ ಸಭೆಯನ್ನು ನಡಿಸುವರು.

***

ತಿನ್ನವೆಲ್ಲಿ ಟುಟಿಕೊರಿನ್ ಪಟ್ಟಣಗಳಲ್ಲಿ ಸ್ವದೇಶೀ ಬೋಧಕರಾಗಿದ್ದ ಚಿದಂಬರಪಿಳ್ಳೆ, ಸುಬ್ರಹ್ಮಣ್ಯಶಿವಾ, ಪದ್ಮನಾಭಯ್ಯಂಗಾರ್ ಎಂಬವರ ಮೇಲೆ ಈಗ ಅವರು ಪ್ರಜೆಗಳನ್ನು ಸರ್ಕಾರದವರ ಮೇಲೆ ಎತ್ತಿ ಕಟ್ಟುವಂಥಾ ಪ್ರಯತ್ನಗಳನ್ನು ಮಾಡಿದರೆಂದು ಸರ್ಕಾರದವರು ಮೊಕದ್ದಮೆ ಹಂದಿದಾರೆ. ಅವರನ್ನು ಜಾಮೀನಿನ ಮೇಲೆ ಬಿಡಲಿಲ್ಲ.

***

ಈಗ ಆಹಾರದಿನಸುಗಳ ಧಾರಣೆವಾಸಿಗಳು ಬಹಳ ಹೆಚ್ಚಾಗಿರೋಣದರಿಂದ ೩೦ ರೂಪಾಯಿನೊಳಗೆ ತಲಬು ಪಡೆಯತಕ್ಕಂಥಾ ಸರ್ಕಾರಿ ನೌಕರಮಾನೇರಿಗೆಲ್ಲಾ ಕೆಲವು ಕಾಲದ ವರೆಗೆ ಅಲೋವೆನ್ಸು ತರೀಖು ಸ್ವಲ್ಪ ಜಾಸ್ತಿ ಸಂಬಳವನ್ನು ಕೊಡಬೇಕೆಂದು ಇಂಡಿಯಾ ಗವರ್ನಮೆಂಟಿನವರು ಮದರಾಸ್ ಆಧಿಪತ್ಯದ ಗವರ್ನರವರಿಗೆ ತಿಳಿಸಿರುತ್ತಾರೆ.

ಟಿಬೆಟ್ಟಿನಿಂದ ಇಲ್ಲಿನ ವರ್ತಕರು ಪುನುಗು, ತುಪಟ ಮೊದಲಾದ ಪದಾರ್ಥಗಳನ್ನು ತಂದು ಕಲ್ಕತ್ತೆಯಲ್ಲಿ ಬಿಕರಿ ಮಾಡುತ್ತಿದ್ದಾರೆ. ಹಿಂದುಸ್ಥಾನಕ್ಕೂ ಟಿಬೆಟ್ಟಿಗೂ ಹೋಗಿ ಬರುವ ಮಾರ್ಗವು ಏರ್ಪಾಡಾದರೆ ವ್ಯಾಪಾರ ಸಾಮಗ್ರಿಗಳು ಎರಡು ಕಡೆಗಳಲ್ಲೂ ಬಿಕರಿ ಆಗಲು ಅವಕಾಶವಾಯಿತು. ಎರಡು ಕಡೆಗಳ ವರ್ತಕರಿಗೂ ವ್ಯಾಪಾರ ಸೌಲಭ್ಯಗಳು ಹುಟ್ಟಿ ಹೆಚ್ಚುತ್ತಿವೆ.

❦❦❦

ನಾಯಿ ನರಿ ಮೊದಲಾದ ಪ್ರಾಣಿಗಳಿಂದ ಕಚ್ಚಿಸಿಕೊಂಡವರಿಗೆ ಚಿಕಿತ್ಸೆ ಮಾಡುವುದಕ್ಕೆ ಬರ್ಮಾದಲ್ಲಿ ಇದುವರೆಗೆ ಪ್ರತ್ಯೇಕವಾದ ಆಸ್ಪತ್ರೆ ಇರಲಿಲ್ಲ. ಅದರ ಏರ್ಪಾಡಿಗಾಗಿ ಅಲ್ಲಿನ ದೊಡ್ಡ ಮನುಷ್ಯರು ಒಂದು ಲಕ್ಷ ರೂಪಾಯಿ ಚಂದಾ ಕೂಡಿಸಿದ್ದಾರೆ. ಗವರ್ನಮೆಂಟಿನವರು ಆಸ್ಪತ್ರೆಗೆ ಬೇಕಾಗುವ ಸ್ಥಳವನ್ನು ಕೊಟ್ಟು, ಕಟ್ಟಿಸುವುದಕ್ಕೆ ಅದರ ಮೂಲಧನಕ್ಕೂ ದ್ರವ್ಯಸಹಾಯ ಮಾಡುವವರಾಗಿದ್ದಾರೆ.

❦❦❦

ಬರ್ಮಾ ಅಧಿಪತ್ಯಕ್ಕೆ ಸೇರಿದ ಮ್ಯೆಂಗ್ಯಾನ್ ಪ್ರಾಂತ್ಯದಲ್ಲಿ ಕ್ಷಾಮ ನಿವಾರಣೆಗೆ ಒಂದು ಧರ್ಮ ಫಂಡನ್ನು ಸ್ಥಾಪಿಸಿದರು. ಅನೇಕಾನೇಕ ಪ್ರಜೆಗಳು ಹೆಚ್ಚು ಹಣ ಕೊಡಲು ಚೈತನ್ಯವಿಲ್ಲದೆ ಕಾಸು, ಆಣೆಗಳಂತೆ ಚಂದಾ ಕೊಟ್ಟಿರುತ್ತಾರೆ. ಹೀಗೆಯೇ ೨,೭೦೦ ರೂಪಾಯಿ ವಸೂಲಾಯಿತು. ಇದರಿಂದ ಕ್ಷಾಮನಿವಾರಣೆಯ ವಿಷಯದಲ್ಲಿ ಆ ಜನರು ಎಷ್ಟು ಕನಿಕರಪಡತಕ್ಕವರಾಗಿದ್ದಾರೋ ಊಹಿಸಿಕೊಳ್ಳಬಹುದಾಗಿದೆ.

❦❦❦

ಬರ್ಮಾ ಅಧಿಪತ್ಯಕ್ಕೆ ಸೇರಿದ ದಕ್ಷಿಣ ಷಾನ್ ಸಂಸ್ಥಾನಗಳಲ್ಲಿ ಟಾವಂಗ್ಯೆ ಎಂಬ ಊರಿನೊಳಗೆ ಬೆಂಕಿ ಬಿದ್ದು ಸೌಬಾ ಎಂಬ ಅರಸನ ಅರಮನೆಯೂ, ಐದು ಸನ್ಯಾಸಿಗಳ ಮಠಗಳು, ಒಂದು ಹಂಗಾಮಿ ಆಸ್ಪತ್ರೆ, ೨೫೮ ಮನೆಗಳು, ಇಷ್ಟೆಲ್ಲಾ ಒಂದು ರಾತ್ರಿಯಲ್ಲಿ ದಹಿಸಿ ಬೂದಿಯಾದವು. ಸುಮಾರು ೮-೯ ಲಕ್ಷ ರೂಪಾಯಿನ ಆಸ್ತಿಗಳು ಹಾಳಾದವೆಂತಲೂ, ಇಬ್ಬರು ಉರಿಯಲ್ಲಿ ಸಿಕ್ಕಿ ಪ್ರಾಣ ಕಳೆದುಕೊಂಡರೆಂತಲೂ ತಿಳಿದು ಬಂದಿದೆ.

❦❦❦

ಟ್ಯುಟಿಕೊರಿನ್ ತಿನ್ನವೆಲ್ಲಿ ಪಟ್ಟಣಗಳ ಪ್ರಜಾಪ್ರತಿನಿಧಿಗಳು ಮದರಾಸ್ ಗವರ್ನರವರ ಭೇಟಿ ಮಾಡಿ, ತಮ್ಮ ಅಹವಾಲುಗಳನ್ನು ಅವರಿಗೆ ಅರಿಕೆ ಮಾಡಿಕೊಳ್ಳುವುದಕ್ಕೆ ಗವರ್ನರವರು ಅವಕಾಶಕೊಟ್ಟಿದ್ದರಷ್ಟೆ. ಈ ಭೇಟಿಯು ಕಳೆದ ಶನಿವಾರ ನಡೆಯಬೇಕಾಗಿತ್ತು. ಆದರೆ ಗವರ್ನರವರು ಆ ಪ್ರತಿನಿಧಿಗಳಿಗೆ ನೆನ್ನೇದಿನ ಬರಬೇಕೆಂದು ತಿಳಿಸಿದ್ದರು. ಆ ಪ್ರಜೆಗಳ ವಿಜ್ಞಾಪನೆಗಳು ಯಾವ ರೀತಿ ಪರಿಣಮಿಸುವವೋ ಮುಂದೆ ತಿಳಿಯಬೇಕಾಗಿದೆ.

❦❦❦

ನೀಲಗಿರಿ ಬೆಟ್ಟದ ಮೇಲೆ ದೊಡ್ಡ ವರ್ತಕನೂ ಕಂಟ್ರ್ಯಾಕ್ಟರೂ ಆದ ರಂಗಸ್ವಾಮಿಗೌಡನೆಂಬ ದೊಡ್ಡ ಮನುಷ್ಯನ ಮನೆಗೆ ಮೂರು ಮಂದಿ ಸ್ವಸ್ಥರು ಯೂರೋಪಿಯನ್ ಗುಂಡೇದಾರರು ರಾತ್ರಿ ಹೊತ್ತು ನುಗ್ಗಿ ದಾಂಧಳೆ ನಡಿಸಿದರೆಂದೂ, ಈ ಮೊಕದ್ದಮೆಯನ್ನು ಮ್ಯಾಜಿಸ್ಟ್ರೇಟರು ತನಿಖೆ ಮಾಡುತ್ತಿದ್ದಾರೆಂದೂ ತಿಳಿಸಿದ್ದೆವಷ್ಟೆ. ಕಳೆದ ವಾರ ಮ್ಯಾಜಿಸ್ಟ್ರೇಟರು ಅಪರಾಧವೇನೂ ರುಜುವಾತಾಗಲಿಲ್ಲವೆಂದು ಆ ಮೂರು ಮಂದಿಯನ್ನೂ ಖುಲಾಸ್ ಮಾಡಿರುತ್ತಾರೆ.

❦❦❦

ಕಳೆದ ವಾರ ಉತ್ತರ ದೇಶದಲ್ಲಿ ಸಂಯುಕ್ತ ಅಧಿಪತ್ಯಗಳಲ್ಲಿ ೩೩,೩೫,೦೦೦ ಜನರು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದ್ದರು; ಅಂದರೆ, ಹಿಂದಿನ ವಾರದ ಸಂಖ್ಯೆಗಿಂತ ೮೦,೦೦೦ ಜನ ಕಡಮೆ. ಮಧ್ಯ ಇಂಡಿಯಾಕ್ಕೆ ಸೇರಿದ ಸಂಸ್ಥಾನಗಳಲ್ಲಿ ೧,೩೩,೨೦೦ ಜನರು ಕ್ಷಾಮಪೀಡಿತರಾಗಿ ರಿಲೀಫ್ ಕಾಮಗಾರಿಗಳಲ್ಲಿದ್ದರು; ಅಂದರೆ, ಹಿಂದಿನ ವಾರದ ಸಂಖ್ಯೆಗಿಂತ ೧,೩೦೦ ಮಂದಿ ಕಡಮೆ. ಬಂಗಾಳದಲ್ಲಿ ಈಗ ೨೧,೩೦೦ ಜನರು ಕ್ಷಾಮಪೀಡಿತರಾಗಿದ್ದಾರೆ.

❦❦❦

ಸಿಲೋನ (ಲಂಕಾ) ದ್ವೀಪಕ್ಕೆ ಸೇರಿದ ಬದುಲ್ಲಾ ಎಂಬ ಊರಿನಲ್ಲಿ ಗುಣವರ್ಧನನೆಂಬುವನು ಗೃಹಕೃತ್ಯದ ಜಗಳದ ನಿಮಿತ್ತವಾಗಿ ತನ್ನ ಹೆಂಡತಿ, ಅತ್ತೆ, ಭಾವ, ಈ ಮೂವರು ಮಂದಿಯನ್ನೂ ಗುಂಡಿನಿಂದ ಹೊಡೆದು ಕೊಂದುಹಾಕಿ, ತಾನೂ ಆತ್ಮಹತ್ಯ ಮಾಡಿಕೊಳ್ಳಬೇಕೆಂದು ಪ್ರಯತ್ನಪಟನು. ಆದರೆ ಗೋಲಿ ಮುಗಿದು ಹೋಗಿತ್ತು. ಆಗ ಅವನು ಬಂದೂಕವನ್ನು ಎಸೆದು, ಪೋಲೀಸಿಗೆ ಹೇಳಿ ಕಳುಹಿಸಿ, ಅವರ ಕೂಡ ತಾನು ಆ ಕೊಲೆಗಳನ್ನು ನಡಿಸಿರುವುದಾಗಿ ಹೇಳಿ, ಬರಿಸಿ ಅವರ ವಶವರ್ತಿಯಾದನು.

❦❦❦

ರಾಯಬಹದೂರ್ ಪವಲತ್‌ರಾಂ, ಸಿ ಐ ಇ ಯವರು ಕಳೆದ ಗುರುವಾರ ಜಲಂಧರ್ ನಗರದಲ್ಲಿ ಕಾಲವಾದರು. ಇವರು ಸಿಂಲಾ ಸೀಜನಲ್ಲಿ ಪೋಸ್ಟ್ ಮಾಸ್ಟರ್ ಜನರಲ್‌ರ ಆಫೀಸ್ ಸೂಪರಿಂಟೆಂಡೆಂಟರಾಗಿ ಕೆಲಸಮಾಡುತ್ತಾ, ಬಹಳ ಒಳ್ಳೇ ಹೆಸರನ್ನು ಪಡೆದುಕೊಂಡಿದ್ದರು. ಡಿಲ್ಲಿ ದರ್ಬಾರ್ ಕಾಲದಲ್ಲಿ ಇವರೇ ಅಲ್ಲಿನ ಪೋಸ್ಟ್ ಆಫೀಸುಗಳ ಏರ್ಪಾಡನ್ನೆಲ್ಲಾ ಮಾಡಿದವರು. ಇವರಿಗೆ ೧೮೮೩ ರಲ್ಲಿ ರಾಯಬಹದೂರ್ ಎಂಬ ಬಿರುದೂ, ೧೮೯೭ ರಲ್ಲಿ ಸಿ. ಐ. ಇ. ಎಂಬ ಬಿರುದೂ ಕೊಡಲ್ಪಟ್ಟಿದ್ದವು.

❦❦❦

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬನು ಸಾಲಗಾರನಾಗಿ ಡಿಕ್ರಿ ಹಣಕ್ಕೆ ತನ್ನ ಹೆಂಡತಿಯ ನಗಗಳನ್ನು ತೆಗೆದು ಕೋರ್ಟಿಗೆ ಕೊಟ್ಟನು. ಹೆಂಡತಿಯು ಅರ್ಜಿ ಕೊಟ್ಟು, ತನ್ನ ಅನುಮತಿ ಪಡೆಯದೆ ತನ್ನ ಗಂಡನು ತನ್ನ ನಗಗಳನ್ನು ಕೊಟ್ಟಿರುತ್ತಾನೆಂತಲೂ, ಆ ನಗಗಳನ್ನು ಅವನ ಸಾಲಕ್ಕೆ ಜಪ್ತಿಮಾಡದೆ ತನಗೆ ವಾಪಸು ಕೊಡಿಸಬೇಕೆಂತಲೂ ಕೇಳಿಕೊಂಡಳು. ಹೈಕೋರ್ಟಿನ ಜಡ್ಜಿಯವರು ಈ ಅರ್ಜಿಯನ್ನು ತನಿಖೆ ಮಾಡಿ, ಹೆಂಡತಿಯ ಅನುಮತಿ ಪಡೆಯದೆ ಗಂಡನಿಗೆ ಆಕೆ ನಗಗಳನ್ನು ತೆಗೆದುಕೊಳ್ಳಲು ಅಧಿಕಾರವಿರುವುದಿಲ್ಲವೆಂದು ಹೇಳಿ, ಆಕೆ ನಗಗಳನ್ನೆಲ್ಲಾ ಅವಳಿಗೆ ವಾಪಸು ಕೊಡಿಸಿರುತ್ತಾರೆ.

❦❦❦

ಹಿಂದುಸ್ಥಾನದ ವಾಯುವ್ಯಸರಹದ್ದಿನ ಆಚೆ ಇರುವ ವಜೀರಿಸ್ಥಾನದ ಮಹಮಂಡ್ ಎಂಬ ಜನರು ತಮ್ಮ ಎಲ್ಲೆಯನ್ನು ದಾಟಿ ಹಿಂದುಸ್ಥಾನದೊಳಕ್ಕೆ ಬಂದು ಜನರನ್ನು ಹಿಂಸಿಸಿ, ಕಳುವು ಮಾಡುತ್ತಿದ್ದರು. ಇಂಗ್ಲಿಷ್ ಸರ್ಕಾರದವರು ಆ ಜನರಲ್ಲಿ ೨೦೦ ಮಂದಿಯನ್ನೂ ಅವರ ಬಾಬತು ೨,೦೦೦ ಗೋಕಾಯಿಗಳನ್ನೂ ಸೆರೆ ಹಿಡಿದು ತಂದು ಇಟ್ಟುಕೊಂಡರು. ಈಗ ಆ ಜನರ ಮುಖಂಡರು ಟಾಕ್ ಎಂಬ ಸ್ಥಳಕ್ಕೆ ಬಂದು ಸರ್ ಹಾರಾಲ್ಡ್ ಡೀನ್ ಎಂಬ ಇಂಗ್ಲಿಷ್ ಅಧಿಕಾರಿಯ ಕೂಡ ಮಾತನಾಡಿಕೊಂಡು, ತಮ್ಮ ಜನರನ್ನೂ ಗೋಕಾಯಿಗಳನ್ನೂ ಬಿಡಿಸಿಕೊಂಡು ಹೋಗಬೇಕೆಂದು ಪ್ರಯತ್ನಪಟ್ಟಿದ್ದಾರೆ.

❦❦❦

ಅಫ್ಘಾನಿಸ್ಥಾನದಲ್ಲಿ ಅಧಿಕಾರಿಗಳು ಬಲಕಾಫ್ ಎಂಬೊಬ್ಬ ರಷ್ಯಾ ಪ್ರಜೆಯನ್ನು ದಸ್ತಗಿರಿ ಮಾಡಿದ್ದಾರೆ. ಇವನು ಹೀರಟ್ಟಿನ ಹತ್ತಿರ ಸಿಕ್ಕಿದನು. ಮಹಮ್ಮದೀಯರ ಮುಲ್ಲಾಗಳಂತೆ ವೇಷ ಮರೆಸಿಕೊಂಡಿದ್ದನು. ಅವನ ಮೈ ಶೋಧನೆಮಾಡಿದಾಗ ಕೆಲವು ನಕ್ಷೆಗಳು ಸಿಕ್ಕಿದವು. ಅಫ್ಘಾನಿಸ್ಥಾನದ ಯಾವ ಯಾವ ಕಡೆ ಎಂಥೆಂಥಾ ದವಸಧಾನ್ಯಗಳು ಸಿಕ್ಕುವವೋ, ಎಲ್ಲೆಲ್ಲಿ ನೀರು ರಸ್ತೆಗಳು ಇರುವವೋ, ಹೀರಟ್ಟಿನಿಂದ ಆಸ್ಟ್ರಾಬಾದ್ ರೈಲ್ ಸ್ಟೇಷನ್ ತನಕ ಎಷ್ಟು ಮಾರ್ಗಗಳಿರುವವೋ, ಈ ಮೊದಲಾದ ವಿಷಯಗಳನ್ನೆಲ್ಲಾ ಅವನು ಬರೆದಿಟ್ಟುಕೊಂಡಿದ್ದನು. ಈಗ ಇವನನ್ನು ಕಾಬೂಲ್ ಪಟ್ಟಣದಲ್ಲಿ ಹಿಡಿದಿಟ್ಟುಕೊಂಡಿರುವರು.

❦❦❦

ವಿಲಾಯತಿಗೆ ಸೇರಿದ ಆಕ್ಸ್‌ಫರ್ಡ್ ವಿದ್ಯಾನಿಲಯದಲ್ಲಿ ತಮಿಳು, ತೆಲುಗು ಭಾಷೆಗಳನ್ನು ಕಲಿಸುತ್ತಿದ್ದ ಡಾ॥ ಪೋಪ್ ಯವರು ತೀರಿಹೋದರು. ಈಗ ಅವರ ಸ್ಥಾನಕ್ಕೆ ಹಿಂದುಸ್ಥಾನದಿಂದ ಯೋಗ್ಯರಾದವರನ್ನು ಕರೆಸಿ ನೇಮಕ ಮಾಡಬೇಕೆಂದು ಗೊತ್ತಾಗಿದೆ. ತಮಿಳು ಮತ್ತು ತೆಲುಗು ಭಾಷೆಗಳನ್ನು ಕಲಿಸುವ ಪಂಡಿತನಿಗೆ ಆ ವಿದ್ಯಾನಿಲಯದವರು ತಿಂಗಳಿಗೆ ೨೫೦ ರೂಪಾಯಿ ಸಂಬಳ ಕೊಡುವರು. ಇದಲ್ಲದೆ ಆ ವಿದ್ಯೆಗಳನ್ನು ಕಲಿಯತಕ್ಕ ವಿದ್ಯಾರ್ಥಿಗಳು ತಲಾ ಇಷ್ಟೆಂದು ಪಂಡಿತರಿಗೆ ಫೀವನ್ನು ಕೊಡುವರು. ಈ ಕೆಲಸವನ್ನು ಒಪ್ಪಿಕೊಳ್ಳುವುದಕ್ಕೆ ಇಷ್ಟಪಡತಕ್ಕವರೆಲ್ಲಾ ಇದೇ ಏಪ್ರೆಲ್ ತಿಂಗಳ ಆಖೈರಿನೊಳಗಾಗಿ ಮೇಲ್ಕಂಡ ವಿದ್ಯಾನಿಲಯದ ಅಧಿಕಾರಿಗಳಿಗೆ ಅರ್ಜಿ ಬರೆದುಕೊಳ್ಳಬೇಕೆಂದು ಪ್ರಕಟಿಸಿದ್ದಾರೆ.

❦❦❦

ವಿಶಾಖಪಟ್ಟಣದ ಜಿಲ್ಲೆಗೆ ಸೇರಿದ ಪಾಲಕೊಂಡಾದಿಂದ ೧೨ ಮೈಲಿ ದೂರದಲ್ಲಿ ಸಂಗಂ ಎಂಬ ಒಂದು ಗ್ರಾಮವಿದೆ. ಈ ಗ್ರಾಮದಲ್ಲಿ ವಜ್ರಗಳೂ ಬೆಳ್ಳಿಯೂ ಸಿಕ್ಕುತ್ತವೆಂದು ತಿಳಿಯಬರುತ್ತದೆ. ಅದು ಯಾರೋ ನರಸಿಂಹಂ ಎಂಬೊಬ್ಬ ಮಹಾ ಧರ್ಮಿಷ್ಟನ ಇನಾಮತಿ ಗ್ರಾಮವಾಗಿದೆ. ಒಂದು ಯೂರೋಪಿಯನ್ ಕಂಪನಿಯವರು ಆ ಗ್ರಾಮವನ್ನು ೨ ಲಕ್ಷ ರೂಪಾಯಿಗೆ ಕೊಡುತ್ತೀರಾ ಎಂದು ಆ ಇನಾಂದಾರರನ್ನು ಕೇಳಿದರು. ಅವರು ೧೫ ಲಕ್ಷ ರೂಪಾಯಿ ಕೊಟ್ಟ ಹೊರತು ಕೊಡುವುದಿಲ್ಲವೆಂದು ಹೇಳಿದ್ದಾರೆ. ಆ ಇನಾಂದಾರರು ಗ್ರಾಮಸ್ಥರನ್ನು ಕೂಲಿಗೆ ನೇಮಿಸಿ ಪರೀಕ್ಷೆ ಮಾಡಿದ್ದರಲ್ಲಿ ವಜ್ರಗಳೂ, ಬೆಳ್ಳಿಯೂ, ಒಂದು ತರದ ಹೊಳೆಯುವ ಬಿಳೀ ಕಲ್ಲುಗಳೂ ದೊರಕಿದವು ಎಂದು ಅಲ್ಲಿನ ಬ್ರಾಹ್ಮಣರೊಬ್ಬರು ಬರೆಯುತ್ತಾರೆ.

❦❦❦

ಕೊಲ್ಲಾಪುರ ಸಂಸ್ಥಾನದಲ್ಲಿ ಮಹಾರಾಜರವರು ತಮ್ಮ ಕುಮಾರ್ತೆಯ ವಿವಾಹವನ್ನು ಮಹಾ ಆಡಂಬರದಿಂದ ಕಳೆದ ವಾರ ನಡಿಸಿದರು. ಲಕ್ಷಾಂತರ ಪ್ರಜೆಗಳೂ, ನೂರಾರು ಮಂದಿ ಯೂರೋಪಿಯನ್ ಸರದಾರರೂ ಹಾಜರಾಗಿದ್ದು, ವಿವಾಹಮಹೋತ್ಸವಗಳನ್ನು ನೆರವೇರಿಸಿದರು. ಬೊಂಬಾಯಿ ಅಧಿಪತ್ಯದ ಗವರ್ನರ್ ಸರ್ ಜಾರ್ಜ್ ಕ್ಲಾರ್ಕ್ ಯವರು ದಯಮಾಡಿದ್ದರು. ಶ್ರೀಮನ್ಮಹಾರಾಜರವರು ಲೇಟ್ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರ ಜ್ಞಾಪಕಾರ್ಥವಾಗಿ ಆಕೆಯವರ ಭಾವಪ್ರತಿಮೆಯನ್ನು ಮಾಡಿಸಿ ತರಿಸಿದ್ದರು. ಗವರ್ನರವರು ಅದನ್ನು ಪ್ರತಿಷ್ಠೆ ಮಾಡಿ, ಮಹಾರಾಜರವರ ಕೃತಜ್ಞತೆ ರಾಜಭಕ್ತಿಗಳನ್ನು ಕೊಂಡಾಡಿದರು. ಯೂರೋಪಿಯನ್ ಸರದಾರರಿಗೆಲ್ಲಾ ಹೊಸ ಅರಮನೆಯ ದರ್ಬಾರ್ ಮಂದಿರದಲ್ಲಿ ದಿವ್ಯವಾದ ಔತಣ ಜರುಗಿದಾಗಲೂ ಗವರ್ನರವರು ಮಹಾರಾಜರವರ ಔದಾರ್ಯವನ್ನೂ ಅತಿಥಿಸತ್ಕಾರಾದಿಗಳನ್ನೂ ಕುರಿತು ಉಪನ್ಯಾಸ ಮಾಡಿದರು.

ವಿಶೇಷ ವರ್ತಮಾನಗಳು.

ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್ ರವರೂ ಪತ್ನಿ ಪರಿವಾರಸಹಿತ ಜರ್ಮನಿಗೆ ಪ್ರಯಾಣ ಮಾಡಿರುತ್ತಾರೆ.

❦❦❦

ವಿಲಾಯತಿಗೆ ಸೇರಿದ ಮ್ಯಾಂಚೆಸ್ಟರ್ ಪಟ್ಟಣದಲ್ಲಿ ಮಿಸೆಸ್ ರೈಲೆಂಡ್ಸ್ ಎಂಬಾಕೆಯು ಧರ್ಮ ಕಾರ್ಯಗಳಿಗೆ ತನ್ನ ಆಸ್ತಿಯಿಂದ ವಿನಿಯೋಗಿಸಿರುವುದು ೧೭ ಲಕ್ಷವೂ ೩೦ ಸಾವಿರ ರೂಪಾಯಿಗಳೆಂದು ತಂತೀ ವರ್ತಮಾನ ಬಂದಿದೆ.

❦❦❦

ರಷ್ಯಾ ರಾಜ್ಯದ ಪಾಠಶಾಲೆಗಳಲ್ಲಿ ಬಾಲಕರಿಗೆ ಜರ್ಮನೀ ಭಾಷೆಯನ್ನು ಕಲಿಸುವುದಕ್ಕೂ ರಷ್ಯಾ ಯೌವನಸ್ಥರನ್ನು ಜರ್ಮನ ರಾಜ್ಯಕ್ಕೆ ಹೋಗಿಬರುವಂತೆ ಪ್ರೋತ್ಸಾಹಪಡಿಸುವುದಕ್ಕೂ ಗವರ್ನಮೆಂಟಿನವರು ಏರ್ಪಾಡು ಮಾಡುತ್ತಿದ್ದಾರೆ.

❦❦❦

ವಿಲಾಯತಿ ರಾಜ್ಯದ ಮಂತ್ರಿಶ್ರೇಷ್ಠರಾದ ಸರ್ ಹೆನ್ರಿ ಕ್ಯಾಂಬೆಲ್ ಬ್ಯಾನರ್ಮನ್‌ರವರಿಗೆ ಶೋಥೆ ರೋಗ ಪ್ರಾಪ್ತವಾಗಿದೆ ಎಂದು ತಂತೀ ವರ್ತಮಾನ ಬಂದಿದೆ. ಮಿ॥ ಆಸ್ಕ್ವಿತ್ ಎಂಬ ಅಧಿಕಾರಿಯು ಅವರ ಸ್ಥಾನಕ್ಕೆ ನೇಮಕವಾಗಬಹುದೆಂದು ವದಂತಿಯಿರುವುದು.

❦❦❦

ಅಮೇರಿಕಕ್ಕೆ ಸೇರಿದ ಮೆಕ್ಸಿಕೋ ರಾಜ್ಯದಲ್ಲಿ ಭೂಕಂಪದ ದೆಸೆಯಿಂದ ಚಿಲಾಪಾ ಎಂಬ ಊರಿಗೆ ಊರೇ ನಾಶವಾಯಿತು. ಪಟ್ಟಣವು ಈಗ ಹತ್ತಿಕೊಂಡು ಉರಿಯುತ್ತಿದೆ. ಬಹಳ ಪ್ರಾಣನಷ್ಟವಾಗಿರಬಹುದೆಂದು ಭೀತಿಯುಂಟಾಗಿದೆ ಎಂದು ತಂತೀ ವರ್ತಮಾನ ಬಂದಿದೆ.

❦❦❦

ಕೋರಿಯಾ ರಾಜ್ಯದಲ್ಲಿ ಜಪಾನವರು ಕಾಲೂರಿಕೊಳ್ಳುತ್ತಾ ಬಂದಿದ್ದಾರೆಂದು ಅಲ್ಲಿನ ಪ್ರಜೆಗಳು ಜಪಾನವರನ್ನು ದ್ವೇಷಿಸುತ್ತಾರೆ. ಕಳೆದ ವಾರ ಕೆಲವು ಕೋರಿಯಾ ಜನರು ಜಪಾನವರನ್ನು ಕೊಂದುಹಾಕಿದರು. ಅಮೇರಿಕದ ಮಿ॥ ಸ್ಟೀವೆನ್ಸ್ ಎಂಬಾತನೂ ಈ ಕೊಲೆಗಾರರ ಕೈಗೆ ಸಿಕ್ಕಿ ಮೃತಪಟ್ಟನು.

❦❦❦

ತುರ್ಕಿಯವರಿಗೆ ಸೇರಿದ ಅಲ್ಬೇನಿಯಾದಲ್ಲಿ ಬಾಸಿಬಾಜೌಕ್ ಎಂಬ ಜನರು ಅಲ್ಬೇನಿಯಾ ಜನರ ಮೇಲೆ ಬಿದ್ದು ೩೩ ಜನರನ್ನು ಕೊಂದು, ೮ ಮಂದಿಯನ್ನು ಗಾಯಮಾಡಿದ್ದಾರೆಂದೂ, ಈ ದೊಂಬಿಯನ್ನು ಅಡಗಿಸುವುದಕ್ಕೆ ತುರ್ಕಿ ಸೈನಿಕರು ಅಲ್ಲಿಗೆ ಕಳುಹಲ್ಪಟ್ಟಿದ್ದಾರೆ ಎಂದೂ ತಂತೀ ವರ್ತಮಾನ ಬಂದಿದೆ.

❦❦❦

ಜರ್ಮನ ರಾಜ್ಯಕ್ಕೆ ಸೇರಿದ ಮತ್ಸ್ಯಮಾರ ಎಂಬ ಜಹಜು ಹಾಳೋಡೇಟ್ ಎಂಬ ತೀರಪಟ್ಟಣದ ಬಳಿ ಇನ್ನೊಂದು ಜಹಜಿಗೆ ಬಡಿದು ಸಮುದ್ರದೊಳಗೆ ಮುಳುಗಿಹೋಯಿತು. ಆ ಜಹಜಿನ ಯಜಮಾನನೂ, ೪೩ ಮಂದಿ ಆಳುಕಾಳುಗಳೂ, ಬಹು ಮಂದಿ ಪ್ರಯಾಣಸ್ಥರೂ ಸಮುದ್ರಪಾಲಾದರೆಂತಲೂ, ಪ್ರಯಾಣಸ್ಥರೇ ಅದರಲ್ಲಿ ೨೩೭ ಮಂದಿ ಇದ್ದರೆಂತಲೂ ತಿಳಿದು ಬಂದಿದೆ.

❦❦❦

ಜರ್ಮನಿ ರಾಜಧಾನಿಯಾದ ಬರ್ಲಿನ್ ನಗರದಲ್ಲಿ ಒಬ್ಬ ದೊಡ್ಡ ಮನುಷ್ಯನ ಮಗಳು ಐದು ಅಡಿ ಸುತ್ತಿನ ನಾಲ್ಕು ಅಡಿಯುಳ್ಳ ಮುತ್ತಿನ ಪದಕವನ್ನು ಕಳೆದುಕೊಂಡಳು. ಈ ಪದಕದ ಮುತ್ತುಗಳು ಬಹು ಅಮೂಲ್ಯವಾಗಿದ್ದವೆಂತಲೂ, ಅದು ಎರಡು ಲಕ್ಷ ರೂಪಾಯಿಗಿಂತಲೂ ಹೆಚ್ಚು ಬೆಲೆಯುಳ್ಳದ್ದೆಂತಲೂ, ಈ ಕಳುವು ಇನ್ನೂ ಪತ್ತೆ ಆಗಲಿಲ್ಲವೆಂತಲೂ ತಿಳಿಯಬಂದಿದೆ.

❦❦❦

ವಿಲಾಯತಿಗೆ ಸೇರಿದ ಮ್ಯಾಂಚೆಸ್ಟರ್ ಪಟ್ಟಣದಲ್ಲಿ ಮಿಸೆಸ್ ರೈಲೆಂಡ್ಸ್ ಎಂಬ ಪುಣ್ಯವಂತಳು ಆ ಪಟ್ಟಣದಲ್ಲಿ ೫೩ ತರದ ಧರ್ಮ ಕಾರ್ಯಗಳಿಗೆ ೬೫ ಲಕ್ಷದ ೫೫ ಸಾವಿರ ರೂಪಾಯನ್ನು ತನ್ನ ಆಸ್ತಿಯಿಂದ ಕೊಟ್ಟು, ತನ್ನ ಹೆಸರನ್ನು ಶಾಶ್ವತಪಡಿಸಬೇಕೆಂದು ಉಯಿಲು ಬರೆದಿರುತ್ತಾಳೆ. ಈಕೆಯ ಧರ್ಮದಿಂದ ವಿದ್ಯಾಶಾಲೆಗಳಿಗೂ ಆಸ್ಪತ್ರೆಗಳಿಗೂ ತುಂಬಾ ಸಹಾಯವಾಯಿತು.

❦❦❦

ಸ್ಪೈಯಿನ್ ರಾಜ್ಯದ ದೊರೆಯವರು ತಮ್ಮ ಇಬ್ಬರು ಕುಮಾರರನ್ನು ಕೂರಿಸಿಕೊಂಡು ರಾಜಧಾನಿಯಿಂದ ಟೊಲೆಡೊ ಪಟ್ಟಣಕ್ಕೆ ಹೋಗುತ್ತಿದ್ದಾಗ ಮೋಟಾರ್ ಗಾಡಿಯು ಒಂದು ಮರಕ್ಕೆ ಬಡಿದು ತಲೆಕೆಳಗಾಯಿತು. ಪ್ರತಿ ಒಬ್ಬರಿಗೂ ಸ್ವಲ್ಪ ಸ್ವಲ್ಪ ಗಾಯಗಳಾದವು. ಅಲ್ಲಿಂದ ಅವರೆಲ್ಲಾ ದೇವಾಲಯಕ್ಕೆ ಹೋಗಿ ಪ್ರಾರ್ಥನೆಯನ್ನು ತೀರಿಸಿಕೊಂಡು ವಾಪಸು ರಾಜಧಾನಿಗೆ ಅಂದರೆ ಮೆಡ್ರಿಡ್ ಪಟ್ಟಣಕ್ಕೆ ಸಾಯಂಕಾಲ ತಲಪಿದರು.

❦❦❦

ವಿಲಾಯತಿಗೆ ಸೇರಿದ ಬ್ರಿಸ್ಟಲ್ ಪಟ್ಟಣದಲ್ಲಿ ಆರ್ಥರ್ ಫ್ಲೈ ಎಂಬೊಬ್ಬ ದಂತ ವೈದ್ಯನು ೧೯೦೫ನೇ ಇಸವಿಯಿಂದ ಮೋಸಗಾರವಾದ ನಡತೆಯಲ್ಲಿದ್ದು ಐದು ಜನ ಹೆಂಗಸರನ್ನು ಮದುವೆಮಾಡಿಕೊಂಡು, ಅವರ ಹಣವನ್ನು ಅಪಹರಿಸಿ, ಅವರನ್ನು ಬಿಟ್ಟುಹೋದನು. ಇವನ ಮೇಲೆ ಮೊಕದ್ದಮೆ ಬಂದಾಗ ಅವನು ಹಾಗೆ ಮಾಡಿದ್ದುಂಟೆಂದು ಒಪ್ಪಿಕೊಂಡದ್ದರಿಂದ ಮ್ಯಾಜಿಸ್ಟ್ರೇಟರು ಅವನಿಗೆ ಏಳು ವರುಷ ಕಠಿಣ ಸಜಾ ವಿಧಿಸಿದರು.

❦❦❦

ವಿಲಾಯತಿಗೆ ಸೇರಿದ ಆಕ್ಸ್‌ಫರ್ಡ್ ಪಟ್ಟಣದಲ್ಲಿ ಪ್ರಸಿದ್ಧವಾದ ಒಂದು ವಿದ್ಯಾನಿಲಯವಿರುವುದು. ಇದರ ಮೂಲಧನಕ್ಕೆ ೩೭ ಲಕ್ಷ ರೂಪಾಯಿ ಚಂದಾ ಕೂಡಿಸಬೇಕೆಂದು ಲಾರ್ಡ್ ಕರ್ಜನ್‌ರವರು ಪ್ರಯತ್ನಪಡುತ್ತಿದ್ದಾರೆ. ಇದುವರೆಗೆ ೧೦ ಲಕ್ಷದ ೮೦ ಸಾವಿರ ರೂಪಾಯಿ ಕೂಡಿರುವುದು. ಫಂಡಿನಲ್ಲಿ ೧೫ ಲಕ್ಷ ರೂಪಾಯಿ ಕೂಡಿದ ಒಡನೆ ಜೋನ್ ಮಿ॥ ಆಸ್ಟಿನ್ ಎಂಬ ಪುಣ್ಯಾತ್ಮನು ೧॥ ಲಕ್ಷ ರೂಪಾಯಿ ಕೊಡುವುದಾಗಿ ವಾಗ್ದಾನ ಮಾಡಿರುವನು.

❦❦❦

ರೋಚೆಟ್ಟಿ ಎಂಬೊಬ್ಬನು ಫ್ರಾನ್ಸಿನ ಮುಖ್ಯಪಟ್ಟಣವಾದ ಪ್ಯಾರಿಸ್ ನಗರದಲ್ಲಿ ಒಂದು ಮೋಸಕರವಾದ ಕಂಪನಿಯನ್ನು ಏರ್ಪಡಿಸಿ, ಜನರಿಂದ ಷೇರುಗಳನ್ನು ಕೂಡಿಸಿ, ಆ ಹಣದಲ್ಲಿ ೧೨೦ ಕೋಟಿ ರೂಪಾಯನ್ನು ತಿಂದುಬಿಟ್ಟನು. ಈಗ ಆ ಬ್ಯಾಂಕು ದಿವಾಳಿಯಾಗಿ ಅವನು ಮೋಸಗಾರನೆಂದು ಪ್ರಕಟವಾಯಿತು. ಸರ್ಕಾರದವರು ಅವನನ್ನು ಹಿಡಿದು ಲಾಕಪ್ಪಿನಲ್ಲಿ ಹಾಕಿಕೊಂಡಿದ್ದಾರೆ. ಅನೇಕ ಪ್ರಜೆಗಳು ಅವನಿಗೆ ಹಣ ಕೊಟ್ಟು ಸಂಕಟಪಡುತ್ತಿರುವರು.

❦❦❦

ಅಮೇರಿಕದ ಸಂಯುಕ್ತ ಸಂಸ್ಥಾನಗಳನ್ನು ಪ್ರಜಾಪ್ರತಿನಿಧಿಗಳ ಅಭಿಪ್ರಾಯದಂತೆ ಆಳುತ್ತಾ ಬಂದಿರುವ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರು ತಮ್ಮ ಅಧಿಕಾರದ ಅವಧಿಯು ಪೂರೈಸುವುದರಿಂದ ೧೯೦೯ನೆ ಇಸವಿ ಮಾರ್ಚ್ ತಾ. ೪ ರಲ್ಲಿ ಕೆಲಸವನ್ನು ಬಿಟ್ಟು, ಆ ತರುವಾಯ ಪ್ರಪಂಚವನ್ನೆಲ್ಲಾ ಸುತ್ತಿ ನೋಡಿಕೊಂಡು ಬರುವುದಕ್ಕಾಗಿ ಪ್ರಯಾಣ ಹೊರಡುವರೆಂತಲೂ, ಆಗ್ಗೆ ಅವರು ಸಿಲೋನ (ಲಂಕಾ) ದ್ವೀಪಕ್ಕೂ ಬಂದು ಹೋಗಬಹುದೆಂತಲೂ ಪ್ರಕಟವಾಗಿದೆ.

ಐರ್ಲಾಂಡಿಗೆ ಸೇರಿದ ಡಂಬಿ ನಗರದಲ್ಲಿ ಜರ್ಮ ಮಕಾರ್ಥಾ ಎಂಬುವನು ಬಹಿರಂಗವಾದ ಸ್ಥಳದಲ್ಲಿ ಜನರ ಮಧ್ಯೆ ನಿಂತು ಶ್ರೋತೃಗಳಿಗೆ ದೊರೆಯನ್ನೂ ಯುವರಾಜನನ್ನೂ ಕೊಂದುಹಾಕಿದ ವಿಷಯವನ್ನು ಕುರಿತು ಉಪನ್ಯಾಸ ಮಾಡುತ್ತಾ, “ಐರ್ಲ್ಯಾಂಡಿನವರು ಎಡ್ವರ್ಡ್ ದೊರೆಯನ್ನೂ ಕೊಂದುಹಾಕಲು ಹಿಂತೆಗೆಯುವುದಿಲ್ಲ” ಎಂಬದಾಗಿ ಹೇಳಿದನು. ಇದನ್ನು ಕೇಳಿ ಪ್ರಜೆಗಳೆಲ್ಲಾ ಗಾಬರಿಪಟ್ಟರು. ಇವನ ಮೇಲೆ ಮೊಕದ್ದಮೆಯಾಗಿ ಮ್ಯಾಜಿಸ್ಟ್ರೇಟರು ತನಿಖೆಮಾಡಿ, ಅವನಿಗೆ ಮೂರು ತಿಂಗಳ ಸಜಾ ವಿಧಿಸಿದರು.

***

ಲಂಡನ್ ಪಟ್ಟಣದಲ್ಲಿ ಮನಸ್ಸಿನ ರೋಗಗಳಿಗೆ ಚಿಕಿತ್ಸೆ ಮಾಡತಕ್ಕಂಥಾ ಒಂದು ಆಸ್ಪತ್ರೆಯನ್ನು ೬,೫೦,೦೦೦ ರೂಪಾಯಿ ವೆಚ್ಚಿಸಿ ಕಟ್ಟಿಸಿಕೊಡುವುದಾಗಿ ಮಿ॥ ಎಚ್. ಮಾಡ್ಸಲಿ ಎಂಬಾತನು ವಾಗ್ದಾನ ಮಾಡಿರುತ್ತಾನೆ. ಈತನು ಡಾಕ್ಟರಾಗಿದ್ದುಕೊಂಡು ೫೦-೬೦ ವರುಷಗಳಿಂದಲೂ ಮನಸ್ಸಿನ ರೋಗಗಳಿಗೆ ಚಿಕಿತ್ಸೆ ಮಾಡುವುದರಲ್ಲೇ ಆಸಕ್ತನಾಗಿರುತ್ತಾನೆ. ಮನುಷ್ಯನ ಮೆದುಳಿನಲ್ಲಿ ಹುಟ್ಟತಕ್ಕ ನಾನಾ ಅಕ್ರಮಗಳನ್ನು ಸರಿಪಡಿಸುವುದರಲ್ಲಿ ಈತನು ತುಂಬಾ ಕಟ್ಟೆಗನಾಗಿರುವನು. ಲಂಡನ್ ಪಟ್ಟಣದ ಅಧಿಕಾರಿಗಳು ಸಹ ಈತನ ಧರ್ಮಬುದ್ಧಿಯನ್ನು ಸಹಸನನ್ನೂ ಕೊಂಡಾಡಿದರು.

***

ಮಹಾರಾಣಿ ವಿಕ್ಟೋರಿಯಾ ಚಕ್ರವರ್ತಿನಿಯವರ ಹೆಸರನ್ನು ಶಾಶ್ವತಪಡಿಸ ಬೇಕೆಂದು ಲಂಡನ್ ಪಟ್ಟಣದಲ್ಲಿ ಒಂದು ಕಟ್ಟಡವೂ ದಿವ್ಯವಾದ ಪ್ರತಿಮೆಯೂ ತಯಾರಾಗುತ್ತಿವೆ. ಈ ಕೆಲಸಗಳಿಗೆ ವಿಲಾಯಿತಿಯ ಕಾರೀಗಾರರನ್ನು ನೇಮಿಸದೆ ಪರರಾಜ್ಯಗಳವರನ್ನೇ ಬಹು ವಿಶೇಷವಾಗಿ ಕರೆಸಿ ಅವರಿಂದ ಮಾಡಿಸುತ್ತಿದಾರೆಂತಲೂ, ಇದು ಇಂಗ್ಲಿಷ್ ಕಾರೀಗಾರರಿಗೆ ತುಂಬಾ ನಷ್ಟವನ್ನೂ ವ್ಯಸನವನ್ನೂ ಉಂಟುಮಾಡಿದೆ ಎಂತಲೂ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದು ಚಕ್ರವರ್ತಿ ಸಾರ್ವಭೌಮರಿಗೆ ಒಪ್ಪಿಸಿರುತ್ತಾರೆ. ಈ ಅರ್ಜಿಗೆ ವಿಲಾಯಿತಿ, ಸ್ಕಾಟ್ಲೆಂಡ್, ವೇಲ್ಸ್ ಎಂಬ ವಿಭಾಗಗಳಲ್ಲಿರುವ ೪೫,೦೦೦ ಇಂಗ್ಲಿಷ್ ಪ್ರಜೆಗಳು ರುಜುಹಾಕಿರುವರು.

***

ಅಮೇರಿಕಾದ ಮುಖ್ಯಪಟ್ಟಣವಾದ ನ್ಯೂಯಾರ್ಕ್ ನಗರದಲ್ಲಿ ಮ್ಯೂಚುಯಲ್ ರಿಸರ್ವ್ ಲೈಫ್ ಅಷೂರೆನ್ಸ್ ಕಂಪನಿ ಎಂಬ ಭಾರಿ ವಿಮಾ ಕಂಪನಿಯು ದಿವಾಳಿಯಾಯಿತೆಂದು ತಿಳಿಸಿದೇವಷ್ಟೆ. ಈ ಕಂಪನಿಯಲ್ಲಿ ೩೩,೦೦೦ ಜನರು ತಮ್ಮ ಜೀವವಿಮಾವನ್ನು ವಿಮಾಮಾಡಿ ತಿಂಗಳುಕಟ್ಟಲೆ ಚಂದಾ ಕಟ್ಟುತ್ತಿದ್ದರು. ಇವರು ಕಟ್ಟಿದ್ದ ಹಣವೆಲ್ಲಾ ಮುಳುಗಿಹೋಯಿತು. ಈ ಕಂಪನಿಯು ೧೬ ಲಕ್ಷ ರೂಪಾಯನ್ನು ದೇಣೀದಾರರಿಗೆ ಕೊಡಬೇಕಾಗಿದೆ. ಇದುವರೆಗೆ ಕಂಪನಿಯ ವ್ಯಾನೇಜರುಗಳಾಗಿದ್ದು ಕಂಪನಿಯ ಹಣವನ್ನು ದುರ್ವಿನಿಯೋಗಪಡಿಸಿದ ಅಕ್ಷಮ್ಯರಿಂದಿಬ್ಬರಿಗೆ ಸರ್ಕಾರದವರು ಸಜಾ ಶಿಕ್ಷೆಯನ್ನು ವಿಧಿಸಿದಾರೆ. ಈ ಕಂಪನಿಯಲ್ಲಿ ಹಣ ಹಾಕಿದ್ದ ವಿಲಾಯಿತಿ ಪ್ರಜೆಗಳು ತುಂಬಾ ದುಃಖಪಡುತ್ತಿರುವರು.

***

ವಿಲಾಯಿತಿಗೆ ಸೇರಿದ ಡಾರ್ಬಿಷೈರಿನಲ್ಲಿರುವ ಮಿ॥ ಎ. ಎಲ್. ರೈಟ್ ಎಂಬಾತನು ಆ ಊರಿನಲ್ಲಿ ಮಕ್ಕಳ ರೋಗಕ್ಕೆ ಚಿಕಿತ್ಸೆಮಾಡುವಂಥಾ ಆಸ್ಪತ್ರೆಯನ್ನು ೧,೫೦,೦೦೦ ರೂಪಾಯಿ ವೆಚ್ಚಿಸಿ ಕಟ್ಟಿಸಿಕೊಡುವುದಾಗಿ ವಾಗ್ದಾನ ಮಾಡಿರುತ್ತಾನೆ. ವಿಲಾಯಿತಿಯಲ್ಲಿ ಕಾಲವಾದ ಲಾರ್ಡ್ ಓವರ್‌ಟನ್ ಎಂಬ ದೊಡ್ಡ ಮನುಷ್ಯನು ೯,೧೯,೦೦೦ ರೂಪಾಯನ್ನೂ, ಮಿ॥ ಜೆ ಆರ್ ಟರಲ್ ಎಂಬಾತನು ೩ ಲಕ್ಷ ರೂಪಾಯನ್ನೂ, ಮಿಸೆಸ್ ಫಾನಿಕಾಟ್ಸನ್ ಎಂಬಾಕೆಯು ೨,೩೦,೦೦೦ ರೂಪಾಯನ್ನೂ, ಮಿ॥ ವಿಲ್ಲಿಯಂ ಆರ್ ಗ್ರಬ್ ಎಂಬಾತನು ೩,೬೦,೦೦೦ ರೂಪಾಯನ್ನೂ, ಮಿಸ್ ಕ್ಯಾಥರೀನ್ ಸ್ಟುವರ್ಟ್ ಫೋರ್ಬಿಸ್ ಎಂಬಾಕೆಯು ೩,೯೦,೦೦೦ ರೂಪಾಯನ್ನೂ ತಮ್ಮ ತಮ್ಮ ಆಸ್ತಿಗಳಿಂದ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣ ಶಾಸನ (ವಿಲ್) ವನ್ನು ಬರೆದಿಟ್ಟಿರುತ್ತಾರೆ.

***

ಚೀಣಾಯವರು ಜರ್ಮಾನವರ ತಪ್ಪನಾದು ಎಂಬ ಹಡಗನ್ನು ತಡೆದು ಜರ್ಮಾನವರಿಗೆ ಅವಮಾನಪಡಿಸಿದ್ದರಿಂದ ಜರ್ಮಾನವರು ಆಗ್ರಹಪಟ್ಟು ಆಗ ಚೀಣಾಯವರ ಮೇಲೆ ಯುದ್ಧಮಾಡುವುದಾಗಿ ತಿಳಿಸಿದ್ದರಷ್ಟೆ. ಈ ವಿಷಯದಲ್ಲಿ ಚೀಣಾಯವರು ಅವರಿಗೆ ಪ್ರತಿಫಲವನ್ನು ಕೊಡುವುದಾಗಿಯೂ ಅವರ ಕ್ಷಮೆಯನ್ನು ಕೇಳಿಕೊಳ್ಳುವುದಾಗಿಯೂ ಒಪ್ಪಿಕೊಂಡರು. ಆದರೆ ಕಳೆದ ವಾರ ಚೀಣಾಯವರು ಸುಮಾರು ೫೦ ಸಾವಿರ ಜನರು ಕ್ಯಾಂಟನ್ ಪಟ್ಟಣದಲ್ಲಿ ಸೇರಿ ದೊಡ್ಡ ಸಭೆಯನ್ನು ನಡಿಸಿ, ಬಹು ಕೋಪವಾದ ಉಪನ್ಯಾಸಗಳನ್ನು ಮಾಡಿ, ಜರ್ಮನ್ ರಾಜ್ಯದ ಯಾವ ಪದಾರ್ಥಗಳನ್ನೂ ಚೀಣಿಯವರ್ಯಾರೂ ಉಪಯೋಗಿಸಕೂಡದೆಂದು ಬಹಿಷ್ಕಾರ ಹಾಕಿ, ತಮ್ಮ ಮೈಮೇಲಿದ್ದ ಜರ್ಮನ್ ಬಟ್ಟೆಬರೆಗಳನ್ನೂ ಟೋಪಿ ಕೈವಸ್ತ್ರಗಳನ್ನೂ ತೆಗೆದು ಬೆಟ್ಟದಂತೆ ಅಲ್ಲೇ ರಾಶಿಹಾಕಿ ಬೆಂಕಿಯಿಂದ ಸುಟ್ಟುಬಿಟ್ಟರು. ಮತ್ತು ಜರ್ಮಾನವರಿಗೆ ಅಧಿಯಾಳಾಗಿ ಅವರು ಹೇಳಿದಂತೆ ಒಪ್ಪಿಕೊಂಡ ಚೀಣಾ ವೈಸರಾಯಿ ಯವರಾರ್ಪಕಾಯರು ಎಂಬಾತನನ್ನು ಸರಿಯಾಗಿ ಸರ್ಕಾರದವರು ಶಿಕ್ಷಿಸಬೇಕೆಂದು ಕೇಳಿಕೊಂಡಿದಾರೆ.

ದೇವಜ್ಞಾನವು.

೧. ನಾವು ಈ ಲೋಕವನ್ನು ಅದರಲ್ಲಿರುವ ಚರಾಚರ ಪದಾರ್ಥಗಳನ್ನು ನೋಡುವಾಗ ಇವುಗಳೆಲ್ಲಾ ನಿರ್ಮಾಣಮಾಡಿದಾತನು ಒಬ್ಬನಿರಬೇಕೆಂದು ಗೊತ್ತುಮಾಡುತ್ತೇವೆ. ಈ ನಂಬಿಕೆಯು ಎಲ್ಲಿ ನೋಡಿದರೂ ಜನರ ಮನಸ್ಸಿನಲ್ಲಿ ಸಾಮಾನ್ಯವಾಗಿದ್ದಾಗಿವೆ. ಪದಾರ್ಥಗಳ ಇರುವಿಕೆಗೆ ಒಂದು ಕಾರಣವಿರಬೇಕು. ಅದಿಲ್ಲದೆ ಕಾರ್ಯವಾಗಲಾರದು. ಕೆಲವರು ಜಗತ್ತಿನಲ್ಲಿರುವ ಅಣುರೇಣುಗಳಿಂದ ಪದಾರ್ಥಗಳು ತಮ್ಮಷ್ಟಕ್ಕೆ ತಾವೇ ಉಂಟಾಗುತ್ತವೆ ಎಂದು ಭಾವಿಸಿಕೊಳ್ಳುತ್ತಾರೆ. ಅಂಥಾ ಅಣುಗಳಿಗಾದರೂ ಒಂದು ಕಾರಣವಿರಬೇಕಂದರೆ— ಹಾಗಲ್ಲ, ಆ ಅಣುಗಳೇ ಕಾರಣವಾಗಿವೆ ಬೇರೆ ಕಾರಣವಿಲ್ಲವೆಂದು ವಾದಿಸುವವರಿದ್ದಾರೆ. ಮನುಷ್ಯನು ಬೇರೆ ಬೇರೆ ಪದಾರ್ಥಗಳಿಂದ ಸಂಯೋಗವುಳ್ಳವನಾಗಿದ್ದರೂ ತನ್ನ ಸುತ್ತುಮುತ್ತಲೂ ಇರುವ ವಸ್ತುಗಳಿಂದ ನಿಜವಾದ ಸತ್ಯವನ್ನು ಹೊಂದಿಕೊಳ್ಳದೆ, ವಸ್ತುಗಳಿಗೆ ಪ್ರತ್ಯೇಕವಾದ ಪರಮಾತ್ಮನೊಬ್ಬನಿಲ್ಲವೆಂತಲೂ, ಆತನಿಂದಲೇ ತನಗೆ ಸುಖಸಮಾಧಾನಗಳು ಲಭ್ಯವಾಗುವವೆಂದಲೂ ತಿಳಿದು, ಆತನಿಗೆ ವಿಧೇಯನಾಗಿ ಆತನ ಮರೆಹೊಗುತ್ತಾನೆ. ಇಂಥಾ ತಿಳುವಳಿಕೆಯು ನಮ್ಮ ಮನುಷ್ಯನಿಗೆ ಸ್ವಾಭಾವಿಕವಾಗಿ ದೇವರಿಂದ ಕೊಡಲ್ಪಟ್ಟಿದೆ. ಇದು ನ್ಯಾಯವಾದದ್ದೂ ಪ್ರಯೋಜನವಾದದ್ದೂ ಆಗಿದೆ. ಇದಕ್ಕೆ ವಿರೋಧವಾಗಿ ಪ್ರತಿಭಟಿಸುವುದು ಜಗತ್ತಿನ ಗತಿಬಿಗಳಿಗೆ ಆಸ್ಪದವೇ ಹೊರತು ಪ್ರಯೋಜನವೇನೂ ಇಲ್ಲ.

ವೇದಭಾಗವು.

ದೇವರ ವಿಷಯವಾಗಿ ತಿಳಿಯಬೇಕಾದುದನ್ನು ಅವರು ಮನುಷ್ಯರಿಗೆ ಸ್ಪಷ್ಟವಾಗಿ ತಿಳಿದಿದೆ; ಆದನ್ನು ಅವರಿಗೆ ದೇವರೇ ಸ್ಪಷ್ಟವಾಗಿ ತಿಳಿಸಿದ್ದಾನೆ. ಹ್ಯಾಗಂದರೆ—ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ—ಆತನ ನಿತ್ಯಶಕ್ತಿಯೂ, ದೇವತ್ವವೂ, ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೋಚರವಾಗಿ ಕಾಣಬರುತ್ತವೆ (ರೋಮಾ ೧, ೧೯—೨೦). ಆಕಾಶಗಳು ದೇವರ ಘನವನ್ನು ಸಾರುತ್ತವೆ, ಅಂತರಿಕ್ಷವು ಆತನ ಕೈಕೆಲಸವನ್ನು ತಿಳಿಸುತ್ತದೆ; ದಿವಸವು ದಿವಸಕ್ಕೆ ಮಾತನ್ನು ಉಕ್ಕಿಸುತ್ತದೆ, ರಾತ್ರಿಯು ರಾತ್ರಿಗೆ ತಿಳಿವಳಿಕೆಯನ್ನು ಅರುಹುತ್ತದೆ (ಕೀರ್ತನೆ ೧೯, ೧-೨).

ಎ. ಸೃಷ್ಟಿಕರ್ತನು ಬೇರೆ, ಸೃಷ್ಟಿಗಳು ಬೇರೆ. ಆತನು ಸೃಷ್ಟಿಗಳಿಗೆ ಎಲ್ಲಾ ವಿಷಯದಲ್ಲಿ ಪ್ರತ್ಯೇಕವಾದವನೂ ಶ್ರೇಷ್ಠನಾದವನೂ ಆಗಿದ್ದಾನೆ. ಆತನು ಎಲ್ಲೆಲ್ಲಿಯೂ ಇರುವವನಾಗಿದ್ದರೂ ಪದಾರ್ಥಗಳಿಗೆ ಪ್ರತ್ಯೇಕವಾಗಿದ್ದಾನೆ. ಸೃಷ್ಟಿಕರ್ತನು ದೇವರು, ಸೃಷ್ಟಿಗಳು ಆತನ ಕೃತ್ಯಗಳು. ಹೀಗಿರುವಲ್ಲಿ ಎಲ್ಲಾ ಒಂದಾಗಲಾರವು. ಪದಾರ್ಥಗಳಲ್ಲಿ ಆತನ ವ್ಯಾಪಕತೆಯು ಇದ್ದಾಗ್ಯೂ ಆ ಪದಾರ್ಥವೇ ಆತನಲ್ಲ. ಗಾಳಿಯು ಒಂದು ಪದಾರ್ಥದ ಒಳಗೂ ಹೊರಗೂ ಚಲಿಸುವದಾಗಿದ್ದರೂ ಗಾಳಿಯೇ ಬೇರೆ, ಪದಾರ್ಥವೇ ಬೇರೆ. ಹಾಗೆಯೇ ದೇವರು ಬೇರೆ, ವಸ್ತುಗಳು ಬೇರೆಯಾಗಿವೆ ಎಂದು ಹೇಳಬೇಕಾಗಿದೆ.

ವೇದಭಾಗವು (ಭಕ್ತನಾದ ದಾವೀದನ ಪ್ರಾರ್ಥನೆ).

ಕರ್ತನೇ, ತಲತಲಾಂತರಗಳಲ್ಲಿ ನೀನು ನಮ್ಮ ವಾಸಸ್ಥಾನವಾಗಿದ್ದಿ. ಬೆಟ್ಟಗಳು ಹುಟ್ಟುವದಕ್ಕೆ ಮುಂಚೆಯೂ ನೀನು ಭೂಮಿಯನ್ನು ಲೋಕವನ್ನು ನಿರ್ಮಿಸುವದಕ್ಕಿಂತ ಮುಂಚೆಯೂ ಯುಗಯುಗಗಳಿಂದ ಯುಗಯುಗಗಳಿಗೂ ನೀನೇ ದೇವರಾಗಿದ್ದೀ. ನೀನು ಮನುಷ್ಯನನ್ನು ನಾಶಕ್ಕೆ ತಿರುಗಿಸಿ ಮನುಷ್ಯನ ಮಕ್ಕಳೇ ತಿರುಗಿರಿ ಎಂದು ಹೇಳುತ್ತೀ. ಯಾಕಂದರೆ ಸಾವಿರ ವರುಷಗಳು ನಿನ್ನ ದೃಷ್ಟಿಗೆ ಕಳೆದುಹೋಗುವ ನಿನ್ನಿನ ದಿವಸದ ಹಾಗೆಯೂ ರಾತ್ರಿ ಜಾಮದ ಹಾಗೆಯೂ ಅವೆ. ಅವರನ್ನು ಪ್ರವಾಹದಿಂದ ಬಡಿದುಕೊಂಡು ಹೋಗುತ್ತೀ; ನಿದ್ದೆಯ ಹಾಗಿದ್ದಾರೆ, ಬೆಳಿಗ್ಗೆ ಬೆಳೆಯುವ ಹುಲ್ಲಿನ ಹಾಗಿದ್ದಾರೆ. ಅದು ಬೆಳಿಗ್ಗೆ ಅರಳಿ ಬೆಳೆಯುತ್ತದೆ, ಸಂಜೆಯಲ್ಲಿ ಕೊಯ್ಯಲ್ಪಟ್ಟು ಒಣಗುತ್ತದೆ. ಯಾಕಂದರೆ ನಿನ್ನ ಕೋಪದಿಂದ ಅಳಿದುಹೋಗಿ ನಿನ್ನ ಉಗ್ರದಿಂದ ತಲ್ಲಣಗೊಳ್ಳುತ್ತೇವೆ. ನಮ್ಮ ಅಕ್ರಮಗಳನ್ನು ನಿನ್ನ ಮುಂದೆಯೂ ನಮ್ಮ ಮರೆಯಾದ ಪಾಪಗಳನ್ನು ನಿನ್ನ ಮುಖದ ಬೆಳಕಿನಲ್ಲಿಯೂ ಇಡುತ್ತೀ. ಯಾಕಂದರೆ ನಮ್ಮ ದಿನಗಳೆಲ್ಲಾ ನಿನ್ನ ಉಗ್ರದಲ್ಲಿ ಹೋಗುತ್ತವೆ. ನಮ್ಮ ವರುಷಗಳನ್ನು ಕಥೆಯ ಹಾಗೆ ಕಳೆಯುತ್ತೇವೆ. ನಮ್ಮ ವರುಷಗಳ ದಿವಸಗಳು ಎಪ್ಪತ್ತು ವರುಷ, ಬಲದಿಂದ ಇದ್ದರೆ ಎಂಭತ್ತು ವರುಷ; ಆದರೆ ಅವುಗಳ ಹೆಚ್ಚಳವು ಕಷ್ಟವೂ ವ್ಯರ್ಥವೂ ಆಯಾಸವೂ ಆಗಿದೆ. ಯಾಕಂದರೆ ಅದು ಬೇಗ ಕಡಿದುಹಾಕಲ್ಪಡುತ್ತದೆ, ನಾವು ಹಾರಿಹೋಗುತ್ತೇವೆ. ನಾವು ಜ್ಞಾನವುಳ್ಳ ಹೃದಯವನ್ನು ಹೊಂದುವ ಹಾಗೆ ನಮ್ಮ ದಿವಸಗಳನ್ನು ಲೆಕ್ಕಿಸುವದನ್ನು ನಮಗೆ ಕಲಿಸು (ಕೀರ್ತನೆ ೯೦, ೧-೧೨).

ಬೆಂಗಳೂರು ವರ್ತಮಾನಗಳು.

ಕಳೆದ ಅಕ್ಟೋಬರ್ ಲಾಗಾಯತು ಬೆಂಗಳೂರು ದಂಡಿನಲ್ಲಿ ೨೨ ಸಾವಿರ ಜನರು ಪ್ಲೇಗ್ ಟೀಕೆಯನ್ನು ಹಾಕಿಸಿಕೊಂಡಿದಾರೆಂದು ತಿಳಿದು ಬಂದಿದೆ.

ಬೆಂಗಳೂರು ದಂಡಿನ ಮ್ಯುನಿಸಿಪಾಲಿಟಿಯವರು ಬೆರಿಗೆಗಳನ್ನು ಪಸುಲ್ಯಾಯುವಂಥಾ ಮುಖ್ಯದ್ವಾರಗಳಲ್ಲಾ ಅವರವರು ವಸುಲ್ಯಾಡುವ ತರಿಗೆ ಮೊಬಲಗಿನ ಮೇಲೆ ಕಮಿಷನ್ ಇಷ್ಟೆಂದು ಕಮಿಷನ್ ಮಾತ್ರ ಮಾಡಬೇಕೆಂದು ಮ್ಯುನಿಸಿಪಲ್ ಕಮಿಷನರು ತೀರ್ಮಾನಮಾಡಿದ್ದನ್ನು ಬ್ರಿಟಿಷ್ ರೆಸಿಡೆಂಟರವರು ಮಂಜೂರು ಮಾಡಿರುತ್ತಾರೆ.

ಬೆಂಗಳೂರು ರೈಲ್ವೆ ಸ್ಟೇಷನ್ ಬಳಿ ಇರುವ ಧರ್ಮಾಂಬುಧಿ ಕೆರೆಯ ಏರಿಯನ್ನು ಉದ್ದಕ್ಕೂ ಅಗಲಿಸಿ ಒಳಗೆರೆಗೆ ಭರ್ತಿ ಮಾಡಿ, ಒಳಗೆರೆಯನ್ನು ಉದ್ಯಾನವನವಾಗಿ ಮಾಡುವುದಕ್ಕೆ ೬೦ ಸಾವಿರ ರೂಪಾಯಿ ಖರ್ಚಾಗುತ್ತದೆಂದು ಸ್ಯಾನಿಟರಿ ಇಂಜನಿಯರವರು ಗವರ್ನಮೆಂಟಿಗೆ ಬರೆದಿದ್ದಾರೆ. ಇದು ಸ್ಯಾಂಕ್ಷನ್ ಆದರೆ ಆ ಉದ್ಯಾನವನವೂ, ಅದರ ನಾಲ್ಕು ಮೂಲೆಗಳಲ್ಲೂ ಕಲ್ಲುಕಟ್ಟಿದ ನಾಲ್ಕು ಕೊಳಗಳೂ ನಿರ್ಮಾಣವಾಗುವವು.

ಕಳೆದ ವಾರ ಬೆಂಗಳೂರು ದಂಡಿನಲ್ಲಿರುವ ರಾವ್ ಬಹದ್ದೂರ್ ಮೆ॥ ನಾರಾಯಣಸ್ವಾಮಿ ಮೊದಲಿಯಾರವರ ಪಾಠಶಾಲೆಗೆ ಬಾಲಕರಿಗೆ ಬ್ರಿಟಿಷ್ ರೆಸಿಡೆಂಟರಾದ ಮಿ॥ ಎಸ್ ಎಂ. ಫ್ರೇಸರ್‌ಯವರು ಬಹುಮಾನಗಳನ್ನು ಕೊಟ್ಟು, ಸರ್ಕಾರಿ ಪಾಠಶಾಲೆಗಳಲ್ಲಿ ಮತಭಕ್ತಿ ವಿಚಾರವನ್ನು ಕುರಿತು ಬಾಲಕರಿಗೆ ಬೋಧನೆಮಾಡುವುದು ಗವರ್ನಮೆಂಟವರ ಸಂಕಲ್ಪಕ್ಕೆ ವಿರೋಧವಾದದ್ದಾದರೂ ಸಾಮಾನ್ಯವಾಗಿ ಬಾಲಕರಿಗೆ ಸನ್ನೀತಿ ಸತ್ಪ್ರವರ್ತನೆಗಳನ್ನೂ ಹೊತಃಶಿಕ್ಷಾ ಪಾಠ ವಿಧಾನಗಳನ್ನು ಕಲಿಸದೆ ಇಲ್ಲವೆಂತಲೂ, ಮತಭಕ್ತಿಯನ್ನು ಕಲಿಸಬೇಕಾದದ್ದು ತಂದೆತಾಯಿಗಳಿಗೆ ಸೇರಿದ್ದಾಗಿದ್ದರೂ ಅವರು ತಮ್ಮ ಕಾರ್ಯ ನನ್ನು ಸರಿಯಾಗಿ ನಡೆಸುತ್ತಾ ಇಲ್ಲವೆಂತಲೂ, ಪಾಠಶಾಲೆಗಳಿಗೆ ಸಂಬಂಧಪಟ್ಟಿರುವಂಥಾ ವಿದ್ಯಾರ್ಥಿನಿಲಯಗಳಲ್ಲಿ ಆಯಾ ಮತಸ್ಥರು ತಮ್ಮ ಮತದೇವತೆಗಳನ್ನು ನೇಮಿಸುವುದಾಗಿ, ಬಾಲಕರಿಗೆ ಭಕ್ತಿಮಾರ್ಗವನ್ನು ಕಲಿಸುವಂತೆ ಏರ್ಪಾಡುಮಾಡುವುದರಲ್ಲಿ ಯಾವ ಆಕ್ಷೇಪಣೆಯೂ ಉಂಟಾಗಲಾರದೆಂತಲೂ, ಈ ವಿಷಯಕ್ಕೆ ಮಕ್ಕಳ ಪೋಷಕರು ಗಮನಕೊಡಬೇಕೆಂತಲೂ ಉಪನ್ಯಾಸಮಾಡಿದರು.

ಬೆಂಗಳೂರು ದಂಡಿನಲ್ಲಿ ಹಲವಾರು ಕೊಲೆಗಳಲ್ಲಿ ಸೇರಿದವರೆಂದು ತಿಳಿದುಬಂದಿರುವ ಪೋಲೀಸ್ ಅಧಿಕಾರಿಗಳನ್ನೂ ಕಾನಿಸ್ಟೇಬಲ್‌ಗಳನ್ನೂ ಬೇರೆ ಬೇರೆ ಕೋರ್ಟುಗಳಲ್ಲಿ ದರ್ಯಾಫ್ತು ಮಾಡುತ್ತಿದಾರೆ. ಜಾಮೀನ ಮೇಲೆ ಆ ಅಪರಾಧಿಗಳನ್ನು ಬಿಡಲಾಗದೆಂದು ತೀರ್ಮಾನವಾಯಿತು. ಬೆಂಗಳೂರು ಸಿಟಿಯಲ್ಲೂ ಸರಹದ್ದಿನಲ್ಲೂ ಕೆಲವು ಕೊಲೆಗಳು ನಡೆದಿವೆ ಎಂದು ಸಂಶಯಪಡುವುದು ಕೃತಿಯುತ್ತ ಕೊಟ್ಟಿದ್ದಾನೆ. ಮಿ॥ ಎಲ್ ಕೃಷ್ಣರಾಯರು ಬೇರೆ ಮೂರು ಜನರನ್ನು ಹಸ್ತಗಿರಿ ಮಾಡಿರುತ್ತಾರೆ. ಇವರು ಎರಡು ಮೂರು ವರುಷಗಳಿಂದ ಸಂಬಂಗ್ರೆಯ ನೆಂಬ ಹುಡುಗನನ್ನು ಕೊಂದು ಅವನ ಮೈಮೇಲಿದ್ದ ಆ ಭರಣಗಳನ್ನು ಅಪಹರಿಸಿದರೆಂತಲೂ, ತರುವಾಯ ಕೆಂಗೇರಿಯಿಂದ ಇಬ್ಬರು ವೇಶ್ಯಾಸ್ತ್ರೀಯರನ್ನು ಕರೆತಂದು ಡಬ್ಬಿಲೆಂಬು ಬಳಿ ಕೊಂದುಹಾಕಿ ಅವರ ಮೈಮೇಲಿದ್ದ ಒಡವೆಗಳನ್ನೆಲ್ಲಾ ತೆಗೆದುಕೊಂಡರೆಂತಲೂ ತಿಳಿದು ಬಂದಿದೆ. ಅತ್ಯಲಾಗಿ ಹಲವಾರು ಕೊಲೆಗಳಲ್ಲಿ ಮುಖ್ಯ ಕೊಲೆಪಾತಕನಾದ ಬಾಬುವು— ಈ ಪೋಲೀಸಿನವರ ಮೇಲೆ ದಾಖಲಾಗಿರುವ ಮೊಕದ್ದಮೆಗಳಲ್ಲೇ ಅವರು ಸಿಕ್ಕಿಬಿದ್ದು, ತಮಗಾದ ಶಿಕ್ಷೆಯೇ ಅವರಿಗೂ ಆಗದೆ ಹೋಗುವ ಪಕ್ಷದಲ್ಲಿ ತಾನು ಹಲವಾರಿನಲ್ಲೂ ದಂಡಿನ ಇತರ ಕಡೆಗಳಲ್ಲೂ ನಡೆದಿರುವ ಇನ್ನು ಬೇರೆ ಕೊಲೆಗಳನ್ನು ವಿವರಿಸಿ, ಹೂಳಿದ ಹಣಗಳನ್ನು ತೋರಿಸುತ್ತೇನೆಂತಲೂ, ಅವುಗಳಲ್ಲಾದರೂ ಪೋಲೀಸಿನವರು ಸಿಕ್ಕಿಬೀಳುವಂತೆ ಮಾಡುತ್ತೇನೆಂತಲೂ ಹೇಳಿದಾನೆ. ಬೆಂಗಳೂರು ಸಿಟಿ ಸರಹದ್ದಿನಲ್ಲಿ ನಡೆದಂಥಾ ಕೊಲೆಗಳ ಮೊಕದ್ದಮೆಗಳನ್ನು ಈ ವಾರ ಚೀಫ್ ಕೋರ್ಟಿನವರು ವಿಚಾರಣೆಮಾಡುವವರಾಗಿದಾರೆ.

ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗ ಡಿಸ್ಟ್ರಿಕ್ಟಿನ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ॥ ಬಿ ಎಫ್ ವಿಲ್ಸನ್ ರವರು ಏಪ್ರಿಲ್ ೨೮ ರವರೆಗೆ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಪಡಿಸಿದೆ.

ಮೈಸೂರು ಡಿಸ್ಟ್ರಿಕ್ಟಿನ ಸಿವಿಲ್ ಸರ್ಜನ್ ಮೆ॥ ಇ. ಎಸ್. ಕೃಷ್ಣಸ್ವಾಮಿ ಐಯಂಗಾರರಿಗೆ ಅವರು ಉಪಯೋಗಿಸಿಕೊಳ್ಳದ ತಾರೀಖಿನಿಂದ ಕಳೆದವರೆಗೂ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಅವರ ಸ್ಥಾನಕ್ಕೆ ಬರುವ ತನಕ ಹಾಸನ ಸರ್ಜನ್ ಮೆ॥ ಎಸ್ ಜಿ ಆದಿನಾರಾಯಣಪ್ಪನವರು ಆ ಕೆಲಸದ ಭಾರವನ್ನು ವಹಿಸಿಕೊಳ್ಳತಕ್ಕದ್ದು.

ಕಾಸರಗೋಡು ಇಲಾಖೆಯ ಆಫೀಸರ್ ಮೆ॥ ಆರ್ ನರಸಿಂಹಾಚಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೩ ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಅಸಿಸ್ಟೆಂಟ್ ಕಮಿಷನರ್ ಮೆ॥ ಬಿ ಕೇಶವಯ್ಯಂಗಾರರವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಪೋಲೀಸ್ ಇನ್ಸ್‌ಪೆಕ್ಟರ್ ಆರ್ ಸುಂದರರಾಯರು ಕೋಲಾರ ಜಿಲ್ಲೆಯ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ಮಾಡಲ್ಪಟ್ಟನು.

ಮೆ॥ ಜಿ ಬಿ ಕೃಷ್ಣಯ್ಯನವರು ನಾಯಕನನ್ನು ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಅಮಲ್ದಾರನಾಗಿ ನೇಮಿಸಿದೆ. ಇವರು ಕೆಲಸದ ಮೇಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಮೈಸೂರು ಎಕ್ಸಿಕ್ಯೂಟಿವ್ ಇಂಜನೀಯರು ಮೆ॥ ಎ ಲ್ಲಿವೇಲ್ಲಿಯವರು ಮಾರ್ಚಿ ತಾ. ೧೯ ರಲ್ಲಿ ಕೆಲಸದ ಮೇಲೆ ಹಾಜರಾದದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಪಡಿಸಿದೆ.

ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ॥ ಕೆ. ಆರ್. ಶ್ರೀನಿವಾಸೈಯಂಗಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೩೦ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಅಸಿ॥ ಕಮಿಷನರ್ ಮೆ॥ ಬಿ ವೆಂಕೋಬರಾಯರು ಮತ್ತೊಂದು ಹುಕುಂ ಹೊರಡುವ ತನಕ ಕಡೂರು ಡಿಸ್ಟ್ರಿಕ್ಟಿನ ಭಾರವನ್ನು ವಹಿಸಿರತಕ್ಕದ್ದು.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ॥ ಡಿ ದೇವರಾಜ ಅರಸಿನವರನ್ನು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾಗಿ ನೇಮಿಸಿದೆ.

ಅಸಿ॥ ಸರ್ಜನ್ ಮೆ॥ ಬಿ ಬಿ. ರಾಘವೇಂದ್ರರಾಯರಿಗೆ ಒಂದೂವರೆ ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿರುವುದರಿಂದ ಮೆ॥ ಎಸ್. ನಾರಾಯಣರಾಯರು ಚೀಫ್ ಕ್ವಾರ್ಟರ್ಸ್ ಎಸ್ಟಾಬ್ಲಿಷ್‌ಮೆಂಟಿನ ಭಾರವನ್ನು ವಹಿಸಿರತಕ್ಕದ್ದು.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿನ ಅ॥ ಸೂಪರಿಂಟೆಂಡೆಂಟ್ ಮೆ॥ ಎಚ್ ವೆಂಕಟನರಸೈಯನವರನ್ನು ದೇವನಹಳ್ಳಿ ತಾಲ್ಲೂಕಿನ ಅಮಲ್ದಾರ್ ಮತ್ತು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿದೆ.

ಮತ್ತೊಂದು ಹುಕುಂ ಹೊರಡುವ ತನಕ ಮೆ॥ ಕೆ. ವೇದಾಂತೈಯಂಗಾರ್ರು ಮುಳಬಾಗಲ್ ತಾಲ್ಲೂಕಿನ ಭಾರವನ್ನು ವಹಿಸಿರತಕ್ಕದ್ದು.

ಕೋಲಾರ್ ಡಿವಿಜನ್ ಅ॥ ಇಂಜನಿಯರ್ ಮೆ॥ ಎಗ್. ರಾಮದಾಸರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಖಾಯಿಲೆ ರಜಾ ಕೊಟ್ಟಿದೆ.

ಮುಂದೆ ಹೇಳುವ ವರ್ಗಾವರ್ಗಿ ಹುಕುಂ ಮಾಡಿದೆ:—ಅ|| ಇಂ ಜಿನಿಯರ್ ಮೆ|| ಟಿ ಕೆ ಅರಸಾಚಲ ಐಯರನ್ನು ಶಿವಮೊಗ್ಗೆಯಿಂದ ದಾವಣಗೆರೆ ರೇಂಜಿಗೆ ವರ್ಗ ಮಾಡಿದೆ.

ಅ|| ಇಂಜಿನಿಯರ್ ಮೆ|| ಸಿ ಕೃಷ್ಣೈಯಂಗಾರ‍್ರು ಚಿತ್ರದುರ್ಗದ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರಾಗಿ ಬದಲಿ ನೋಡತಕ್ಕದ್ದು.

ಎಗ್ಸಿಕ್ಯೂಟಿವ್ ಇಂಜನಿಯರ್ ಮೆ|| ಡಿ. ಸೀತಾರಾಮರಾಯರನ್ನು ಪಬ್ಲಿಕ್ ವರ್ಕ್ಸ್ ಸೂಪರಿಂಟೆಂಡಿಂಗ್ ಇಂಜನಿಯರಾಗಿ ನೇಮಿಸಿದೆ.

ನೊರಬದ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ|| ಜಿ. ಮುರ ಹರಿನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೧೦ ದಿವಸ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರ್ ಎಂ. ಕೆ. ಹನುಮಂತರಾಯರು ತಾಲ್ಲೂಕಿನ ಚಾಲ್ತಿ ಕೆಲಸಗಳ ಭಾರವನ್ನು ವಹಿಸಿರತಕ್ಕದ್ದು.

ಸಾಗರದ ತಾಲ್ಲೂಕ್ ಅಮಲ್ದಾರ್ ಮೆ|| ಎಂ ಕೃಷ್ಣಸ್ವಾಮಿ ಅಯ್ಯಂಗಾರ‍್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರ್ ಚಲ್ಲಪತಿ ರಾಯನ್ನು ನಾಯರು ತಾಲ್ಲೂಕಿನ ಚಾಲ್ತಿ ಕೆಲಸಗಳ ಭಾರವನ್ನು ವಹಿಸಿರತಕ್ಕದ್ದು.

ಕೊಣ್ಣಾಳಿ ತಾಲ್ಲೂಕಿನ ಅಮಲ್ದಾರ್ ಮೆ|| ಕೃಷ್ಣಾಜಿನಾಯಣ ಭಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರ್ ಬಿ. ಹನುಮಂತರಾಯರು ತಾಲ್ಲೂಕಿನ ಚಾಲ್ತಿ ಕೆಲಸಗಳ ಭಾರವನ್ನು ವಹಿಸಿರತಕ್ಕದ್ದು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಉಪಕಾರಣ ಬಾತ್ಮಿದಾರರು ನಮ್ಮ ತಿಳಿವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಗಳನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರ ಏನಿನ ಅಭಿಪ್ರಾಯಗಳಿಗೆ ನಾವು ಜವಾಬ್ದಾರರು ಆಗುವದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್.

ಬಹಿರಂಗವಾಗ ಗಲ್ಲಿಗೆ ಹಾಕುವುದು

ಸ್ವಾಮಿ,

ಬಂಗಾಳದ ಸಿವಿಲ್ ಗವರ್ನ್ಮೆಂಟಿನವರೂ ಸಹ ನಿರಪರಾಧಿಗಳಾದ ಜನಗಳನ್ನು ಕೊಂದು ಅವರ ಸ್ವತ್ತನ್ನು ಅಪಹರಿಸುತ್ತಿದ್ದ ಬಾಬು ನರೈನಿಂಗ್ ಸರ್ಕಾರ್ ಕೋರ್ಟಿನಲ್ಲಿ ಫಾಸೆ ಸಜಾ ಆಗಿ ಬಿದ್ದಿರುತ್ತೆ. ಅವರನ್ನು ಬಹಿರಂಗವಾಗಿ ಕೊಲ್ಲಬೇಕೆಂದು ಅಲ್ಲಿನ ಪ್ರಜೆಗಳು ಗವರ್ನ್ಮೆಂಟಿನವರನ್ನು ಕೇಳಿಕೊಳ್ಳುತ್ತಾ ಇರತಕ್ಕ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಪ್ರಕಟಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಇಂಥಾ ಕ್ರೂರಕೃತ್ಯಗಳು ಇಂಗ್ಲಿಷ್ ಗವರ್ನ್ಮೆಂಟು ಈ ನಮ್ಮ ಇಂಡಿಯಾ ದೇಶವನ್ನು ಆಳುವದಕ್ಕೆ ಮೊದಲು ಸಾಧಾರಣವಾಗಿ ನಡೆಯುತ್ತಿದ್ದವು. ಆಗ ತಪ್ಪಿತಸ್ಥರಿಗೆ ಘೋರವಾದ ಶಿಕ್ಷೆಗಳು ವಿಧಿಸತಕ್ಕದ್ದು ಸಾಧಾರಣವಾಗಿದ್ದಿತು. ಇಂಗ್ಲಿಷ್ ಗವರ್ನ್ಮೆಂಟು ಬಂದ ನಂತರ ಇಂಥಾ ಕ್ರೂರಕೃತ್ಯಗಳು ನಡಿಸುತ್ತಿದ್ದವರನ್ನು ಅವರಿಗೆ ಸಹಾಯ ಮಾಡುತಕ್ಕವರನ್ನು ಸಹಾ ಕಂಡು ಹಿಡಿದು, ಆ ದುಷ್ಟಗುಂಪಿನವರನ್ನು ಶಿಕ್ಷಿಸಿ, ಅದರ ತರುವಾಯ ಇಂಥಾ ಕೆಟ್ಟ ಬುದ್ಧಿಯು ಜನಗಳಿಗೆ ಹುಟ್ಟದಂತೆ ಜನಗಳನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡಿ, ಅವರಿಗೆ ಒಳ್ಳೇದು ಕೆಟ್ಟದ್ದು ಎಂಬ ವಿವೇಕಜ್ಞಾನವನ್ನು ಉಂಟು ಮಾಡಿದರು. ಮತ್ತು ಅವರ ಸಂತೋಷಕ್ಕೆ ಶಿಕ್ಷೆಯೇ ಇದ್ದಿತಲ್ಲವೆಂದ ಪ್ರಜೆಗಳಿಗೆ ಕೆಟ್ಟ ಹೆಸರು ಬರದಂತೆ ನೋಡಲೇ ಅವರನ್ನು ಹಿಡಿದು, ಒಳ್ಳೇ ನಡತೆಗಾಗಿಯೂ, ಚನ್ನಾಗಿ ವಿಚಾರಣೆ ಮಾಡಿಯೂ, ಅವರಿಂದ ಜಾಮೀನು ತೆಗೆದುಕೊಂಡು, ಅವರ ಮೇಲೆ ನಿಗಾ ಇಡುತ್ತಾ ಬಂದರು. ಈ ಪದ್ಧತಿ ಹೆಚ್ಚಾಗಿ ಉಪಯೋಗಕಾರಿಯಾದ ನಡವಳಿಕೆಯ ಉಪಾಯಕ್ಕೆ ಸೌಖ್ಯವಾಗಿ ಈ ವರೆಗೆ ನಡೆಯುತ್ತಾ ಬಂದಿದೆ.

ಈಚೆಗೆ ಕೆಲವು ಜನರು ಯುಕ್ತಾಯುಕ್ತ ವಿಚಾರವಿಲ್ಲದೆ ಹುಟ್ಟು ಅದರಿಂದ ಪ್ರಜೆಗಳ ಸ್ಥಿತಿಯು ಕೆಟ್ಟು, ಇಂಥಾ ದುಷ್ಕೃತ್ಯಗಳು ನಡೆಯುವುದಕ್ಕೆ ಆರಂಭವಾಗಿರಬಹುದೆಂದು ತೋರುತ್ತೆ. ಅದಕ್ಕೆ ನಿಲ್ಲಿಸಬೇಕಾದರೆ ತಪ್ಪಿತಸ್ಥರನ್ನು ಬಹಿರಂಗವಾಗಿ ಗಲ್ಲಿಗೆ ಹಾಕೋಣದರಿಂದ ಏನೂ ಉಪಯೋಗವಿಲ್ಲ. ಅವರಿಗೆ ಸಹಾಯಕರಾಗಿದ್ದವರನ್ನು ಅವರ ಸಂಬಂಧಗಳನ್ನೂ ಚನ್ನಾಗಿ ಗೊತ್ತು ಮಾಡಿ, ಇಂಥಾ ಕೆಟ್ಟ ಕೃತ್ಯಗಳಿಗೆ ಪ್ರೇರೇಪಕರಾದವರನ್ನು ಕ್ರೂರಾತ್ಮರನ್ನು ಎಷ್ಟು ಕ್ರೂರವಾಗಿ ಶಿಕ್ಷಿಸಿದರೂ ಒಪ್ಪಬಹುದು. ಅಲ್ಲಿಗೆ ವಿಷವೃಕ್ಷವೇ ನಿರ್ನಾಮವಾಗಿ, ಇಂಥಾ ಕೆಟ್ಟ ಕೃತ್ಯಗಳು ನಿಂತು ಹೋದೀತು. ಹಾಗಿಲ್ಲದೆ ವೃಕ್ಷವನ್ನು ಕಾಪಾಡಿ, ರೆಂಬೆಗಳನ್ನು ಮಾತ್ರ ಕಡಿದರೆ ಈ ಬಾಬೂ ನರೈನರನ್ನು ಮಾತ್ರ ಕ್ರೂರವಾಗಿ ಶಿಕ್ಷಿಸಿದ್ದರಿಂದ ಯಾವ ಬಂದೋಬಸ್ತು ಮಾಡಿದ ಹಾಗೆ ಆಗುವದಿಲ್ಲ.

ಒಬ್ಬ ರಿಟೈರ್ಡ್ ಆಫೀಸರು.

ತಾಲ್ಲೂಕು ವರ್ತಮಾನಗಳು.

ಯಡೆಹಳ್ಳಿ.—ಇಲ್ಲಿ ೩-೪ ದಿನದಿಂದ ಬಹಳ ಸೆಕೆಯಾಗುತ್ತಿದೆ. ಬಿಸಿಲತಾಪ ಸಹಿಸುವುದಕ್ಕೆ ಅಸಾಧ್ಯವಾಗಿದೆ. ಭತ್ತದ ಧಾರಣೆ ಈಗ ೫ ಖಂಡುಗಕ್ಕೆ ೧೩—೧೪ ರೂಪಾಯಿ ಆಗಿದೆ. ಮುಂದೆ ಯಾವ ಗತಿ ಆಗುತ್ತೋ ಎಂದು ಬಡ ರೈತರೆಲ್ಲಾ ಹಾಹಾಕಾರ ಪಡುತ್ತಲಿದ್ದಾರೆ. ಇಲ್ಲಿನ ಮುನಸೀಫ್ ಕೋರ್ಟು ಹೋಗಿ ೯ ತಿಂಗಳಾದರೂ ಇಲ್ಲಿಯ ಕೆಲವು ಜನ—ಚಿಕ್ಕಮಗಳೂರು ಮುನಸೀಫ್ ಕೋರ್ಟಿನಲ್ಲಿ ಕೆಲಸ ಜಾಸ್ತಿ ಇರುವುದರಿಂದ ಇಲ್ಲಿಗೇ ಜಾಗ್ರತೆಯಲ್ಲಿಯೇ ಕೋರ್ಟು ಬರುತ್ತೆಂದು ಹೇಳುತ್ತಿದ್ದಾರೆ. ಸರ್ಕಾರದವರು ಇಲ್ಲಿಯೇ ಕೋರ್ಟು ಇಡುವ ವಿಷಯದಲ್ಲಿ ಅನೇಕ ದಫೆ ಅರ್ಜಿ ಮೂಲಕವೂ, ಪತ್ರಿಕೆಗಳ ಮೂಲಕವೂ ಇಲ್ಲಿನ ಕೋರ್ಟು ತೆಗೆಯುವುದರಿಂದಾಗುವ ಅನಾನುಕೂಲಗಳನ್ನು ನಮೂದಿಸಿ ಪ್ರಾರ್ಥಿಸಿಕೊಂಡಾಗ್ಯೂ ಸಾರ್ಥಕಕ್ಕೆ ಬಾರದೆಹೋದದ್ದು ಈಗ ಬರುತ್ತೆಂಬುದು ಸ್ವಪ್ನಪ್ರಾಯವೇ ಸರಿ.—ಇಲ್ಲಿಗೆ ಹೊಸದಾಗಿ ಅಮಲ್ದಾರರಾಗಿ ಬಂದಿರುವ ಮೆ|| ಸುಬ್ಬರಾಯರು ಬಹಳ ಚಟುವಟಿಕೆಯಿಂದ ಕೆಲಸ ಕಾರ್ಯಗಳನ್ನು ಮಾಡುತ್ತಾ ಜನಗಳ ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ. ಈ ಊರಿನ ಡಾಕ್ಟರು ಮೆ|| ಚನ್ನಯ್ಯನವರು ಇಲ್ಲಿಗೆ ಬಂದು ೩—೪ ವರುಷಗಳಾದರೂ ಮೊದಲಿನಿಂದ ಇದುವರೆಗೆ ರೋಗಿಗಳ ಒಂದೇ ಸಮನಾಗಿ ಸಕಾಲದಲ್ಲಿ ಔಷಧೋಪಚಾರಗಳನ್ನು ಮಾಡಿ, ಅನೇಕ ಅಸಾಧ್ಯ ರೋಗಗಳನ್ನು ಸಹ ಗುಣಮಾಡಿರುವುದರಿಂದ ಈ ಊರಿನ ಅನೇಕರು ಇವರೇ ಬಹಳಕಾಲ ಇಲ್ಲಿ ಇರಬೇಕೆಂದು ಹಾರೈಸುತ್ತಿದ್ದಾರೆ.

ಚನ್ನಪಟ್ಟಣ.—ಬಿಸಲಿನ ತಾಪವೂ, ಸೆಕೆಯೂ ಜಾಸ್ತಿಯಾಗಿರುತ್ತೆ. ಇಲ್ಲಿನ ಪುರಜನರಿಗೆಲ್ಲಾ ಜಲಾಧಾರವಾಗಿರುವ ಕಣ್ವೀರ ಕೆರೆಯ ನೀರು ಮುಗಿದುಹೋಗಿ, ಉಳಿದಿರುವ ಸ್ವಲ್ಪ ನೀರೂ ಬೊಗ್ಗಡವಾಗಿ ಅನಾರೋಗ್ಯಕರವಾಗಿರುತ್ತೆ. ಒಂದೆರಡು ವಾರಗಳಿಂದಲೂ ಕೋಟೆ ಪೇಟೆಗಳಲ್ಲಿ ನೂರಾರು ಮಂದಿಗೆ ಅಕಸ್ಮಾತ್ ಹೊಟ್ಟೆ ಕಳೆಯುತ್ತಾ ದಿನಕ್ಕೆ ೧೫, ೨೦ ಸಾರಿ ಭೇದಿಯೂ ವಾಂತಿಯೂ ಆಗುತ್ತಾ ೨-೩ ದಿನಗಳಲ್ಲಿ ಬಹಳ ನಿಶ್ಶಕ್ತರುಗಳನ್ನಾಗಿ ಮಾಡುತ್ತಿದೆ. ಹೀಗಾಗಿ ೨-೩ ಮರಣಗಳೂ ಆದಂತೆ ತಿಳಿಯಬರುತ್ತೆ. ಇದಕ್ಕೆ ಇಲ್ಲಿನ ಜಲದೋಷವೇ ಕಾರಣವಿರಬಹುದು. ಈ ವಿಷಯಕ್ಕೆ ಇಲ್ಲಿನ ಹೆಲ್ತ್ ಆಫೀಸರು ನಿಗಾ ಕೊಟ್ಟರೆ ಉತ್ತಮವು.—ಕಳೆದ ಗುರುವಾರ ಒಂದು ಹದ ಮಳೆಯಾಗಲು ಕರೆಗೆ ೧೫ ದಿನಗಳ ಜಲವು ಸಂಗ್ರಹವಾದಹಾಗಾಯಿತು. ದನಕರುಗಳ ರೋಗವು ಇನ್ನೂ ಶಾಂತಿಗೆ ಬಂದಹಾಗೆ ತೋರುವದಿಲ್ಲವು.—ಎರಡು ವಾರಗಳ ಕೆಳಗೆ ಸಬ್ ಡಿವಿಜನ್ ಆಫೀಸರಾದ ಮೆ|| ಕೃಷ್ಣನವರು ಬಂದು ಇಲ್ಲಿನ ಮುಸಾಫರಿ ಬಂಗಲೆಯಲ್ಲಿ ಇಳಿದು, ಇಲ್ಲಿನ ಕೆಂಕೆನಹಳ್ಳಿ ಪಟೇಲ್ ಅಪ್ಪಾಜಿ ಎಂಬವರ ಮೇಲೆ ಆರೋಪಿಸಲಾಗಿದ್ದ ಗಲಭೆಯ ಕೇಸಿನ ಕೆಲವು ಸಾಕ್ಷಿಗಳನ್ನು ಮತ್ತು ಕಳೆದ ವಾಕ್ಯ ವಿವರಣೆಗಳನ್ನು ವಿಚಾರಿಸಿದರು. ಈಚೆಗೆ ಸದರಿ ವಿಚಾರಣೆಯಿಂದ ಕೇಸು ವಜಾ ಆಗಿರುವದಾಗಿ ತಿಳಿಯಬರುತ್ತೆ.—ಇಲ್ಲಿನ ಪೊಲೀಸ್ ೨ನೇ ಅಧಿಕಾರಿಯಾಗಿದ್ದ ಜಮೇದಾರ್ ಸುಬ್ಬಾಯರನ್ನು ಸರ್ಕಾರದವರು ಇಲ್ಲಿಂದ ಕೆಲ್ಲೆಸ್ಪೇಟೆ ಸಬ್ ತಾಲ್ಲೂಕಿಗೆ ವರ್ಗ ಮಾಡಿರುತ್ತಾರೆ.—ಈ ಊರಿಗೆ ೩ ಮೈಲಿ ಸಮೀಪದ ಮತ್ತೀಕೆರೆಯಲ್ಲಿ ಪ್ರತಿ ವರುಷವೂ ಜಾತ್ರೆಯು ನಡೆಯುವದು. ಮುಂದೆ ಈ ಜಾತ್ರೆಯ ಸಮಯದಲ್ಲಿಯೇ ದನಗಳ ಪ್ರದರ್ಶನವೂ ನಡೆಸಬೇಕಾಗಿ ಸರ್ಕಾರಿ ಗೆಜೆಟಿನಲ್ಲಿ ಪ್ರಕಟವಾಗಿರುವ ಈ ಮಾಹ್ನ ಗುಣವಾಗಿ ಇದೇ ಏಪ್ರಿಲ್ ತಾ ೧೫—೧೮ರ ವರೆಗೂ ನಡೆಯಲಿಕ್ಕಿರುವ ಸಗರೆ ಮಾದೇಶ್ವರ ಜಾತ್ರೆಯ ಸಮಯದಲ್ಲಿ ದನಗಳ ಪ್ರದರ್ಶನವೂ, ಮಾರುವ ಕೊಳ್ಳುವ ವ್ಯಾಪಾರವೂ ಘನತರವಾಗಿ ನಡೆಯಲು, ತಿಮ್ಮಸಂದ್ರದ ಪಟೇಲ್ ಅಂಕೇಗೌಡರೂ ಮತ್ತು ತಿಪ್ಪೆ ಗೌಡರೂ ಬೇಕಾಗುವ ಸಲಕರಣೆಗಳನ್ನು ಸಿದ್ಧಮಾಡುತ್ತಿರುವರು. ಸದರಿ ಪ್ರದರ್ಶನವು ಇದೇ ವರುಷ ಪ್ರಾರಂಭವಾಗುವದರಿಂದಲೂ, ಸರ್ಕಾರದವರ ಪ್ರೋತ್ಸಾಹವಿರುವದರಿಂದಲೂ ದೇಶದ ನಾಲ್ಕೂರು ಕಡೆಗಳಿಂದಲೂ ಮನೋಹರ ಜಾನುವಾರುಗಳು ಜಮಾಯಿಸಬಹುದೆಂಬ ನಿರೀಕ್ಷೆ ಇದೆ.

ಹೊಸ್ಪತ್ತಿ ಬಿಸ್ಕೊಡ್ಪುರ ಈಗ ಸುಗ್ಗೀ ಕಾಲವಾಗಿದ್ದರೂ ರೂಪಾಯಿಗೆ ೧೪—೧೫ ಸೇರು ರಾಗಿ, ೬ ೫ ಸೇರು ಅಕ್ಕಿಯನ್ನು ಮಾರುತ್ತಾರೆ. ಬಡವರು ಜೀವನ ಮಾಡುವದು ತುಂಬಾ ಕಷ್ಟವಾಗಿದೆ.— ಇಲ್ಲಿ ಬಹುಕಾಲದಿಂದಲೂ ಇದ್ದ ಹೆಡ್ ಮಾಸ್ಟರಾಗಿರುವ ಮೆ|| ಮಾಧವರಾಯರಿಗೆ ದೇವನಹಳ್ಳಿಗೆ ವರ್ಗವಾಯಿತು. ಇವರು ಜನರಲ್ಲಿ ತುಂಬಾ ಪ್ರೀತಿಯುಳ್ಳವರಾಗಿದ್ದರು. ಇವರು ವರ್ಗವಾಗಿ ಹೋಗುವದರಿಂದ ಬಹು ಜನರು ಪರಿತಾಪಪಡುತ್ತಾರೆ.—ಈ ಪ್ರಾಂತ್ಯದಲ್ಲಿಯೂ, ಕೋಲಾರ ನಂದಿಗಿರಿ ಕಡೆಗಳಲ್ಲಿಯೂ ದನಗಳಿಗೆ ದೊಡ್ಡ ಜಾಡ್ಯವೆಂಬುವದು ತಗಲಿ, ದನಗಳು ಸಾಯುತ್ತಾ ಇವೆ ಎಂದು ಹೇಳುತ್ತಾರೆ.—ಇಲ್ಲಿನ ಮಹಮ್ಮದೀಯರ ರೀಡಿಂಗ್ ರೂಂ ಕೆಲವು ಕಾಲದಿಂದ ಮುಚ್ಚಿಹೋಗಿತ್ತು. ಯಾಕೆಂದರೆ ಅದರ ಮ್ಯಾನೇಜರು ಊರಿನಲ್ಲಿ ಇರಲಿಲ್ಲ. ಈಗ ಅವರು ಪುನಃ ಬಂದು ಅದನ್ನು ಯಥಾಪ್ರಕಾರ ನಡಿಸುತ್ತಾ ಇದ್ದಾರೆ. ಮಹಮ್ಮದೀಯರು ಮಾತ್ರವಲ್ಲದೆ ಇತರರ್ಯಾರೇ ಆದರೂ ಹೋಗಿ ಓದಬಹುದು ಎಂದು ಹೇಳುತ್ತಾರೆ.—ಮಾರ್ಚಿ ೧೯ನೇ ತಾರೀಖಿನಲ್ಲಿ ಚಂದ್ರಮೌಳೀಶ್ವರ ಸ್ವಾಮಿಯ ರಥೋತ್ಸವವು ನಡೆಯಿತು. ಆಗ ಅರಳೆಪಲ್ಲಿಗೆ ಬಾಗಲಲ್ಲಿ ಇರುವ ವೈಶ್ಯರೂ ಮತ್ತು ಬೇರೆ ಕೆಲವು ಮುಖ್ಯಸ್ಥರೂ ಸೇರಿ ಆ ದಿನ ಸಾಯಂಕಾಲ ಬಡಬಗ್ಗರಾದ ಎಲ್ಲಾ ಜನರಿಗೂ ಸಮಾರಾಧನೆಯನ್ನು ಮಾಡಿಸಿದರು. ಸುಮಾರು ೨,೫೦೦ ಜನರು ತೃಪ್ತಿಯಾಗಿ ಭೋಜನಮಾಡಿ ಸಂತೋಷಪಟ್ಟರು. ಇದೇ ದೊಡ್ಡ ಪರ್ಷೆಯಾಗಿತ್ತು. ಆ ಪರ್ಷೆಯಲ್ಲಿ ಜನರು ಕಡಮೆಯಾಗಿದ್ದರೂ ಇಲ್ಲಿ ಕಡಮೆಯೇನೂ ಆಗಿರಲಿಲ್ಲ. ಇಂಥ ಕಷ್ಟಕಾಲದಲ್ಲಿ ಬಡ ಜನರಿಗೆ ಅನ್ನ ಹಾಕಿದ್ದರಿಂದ ಬಹು ಜನರು ಅವರ ಉದಾರ ಗುಣವನ್ನು ಕೊಂಡಾಡುತ್ತಾರೆ. ಇನ್ನು ಮುಂದೆ ಜಾತ್ರೆಯ ಸಮಯದಲ್ಲಿ ಇದೇ ರೀತಿ ಮಾಡಬೇಕೆಂಬ ಕೋರಿಕೆ ಇದೆ ಎಂದು ಕಾಣುತ್ತೆ.— ಎಲೇ ಮಾರುವ ಗಂಗಮ್ಮನು ತನ್ನನ್ನು ಹೊಡೆದಳೆಂದು ಒಬ್ಬ ಮಹಮ್ಮದೀಯನು ಫಿರ್ಯಾದು ಮಾಡಿದ್ದನಷ್ಟೆ. ವಿಚಾರಣೆಯ ದಿನ, ಫಿರ್ಯಾದಿಗಳ ಕಡೆಯವರಿಗೆ ಅವಳು ಕೋರ್ಟು ಖರ್ಚು ೧೦ ರೂಪಾಯಿ ಕೊಟ್ಟು—ನನ್ನಿಂದ ತಪ್ಪಾಯಿತು, ದಯಮಾಡಿ ಮನ್ನಿಸಿರಿ ಎಂದು ರಾಜೀಮಾಡಿಕೊಂಡಳು.—ಸುಮಾರು ೨೫ ದಿನಗಳ ಹಿಂದೆ ಒಂದು ದಿನ ರಾತ್ರಿ ಸೂಲಗಿತ್ತಿ ವೆಂಕಟಮ್ಮನವರ ಮನೆಯ ಬೀದಿ ಕಡೆಗೆ ಇರುವ ಕಿಟಕಿಯ ಸಂದಿನಲ್ಲಿಯೋ ಅಥವಾ ಒಳಗಿನಿಂದಲೋ ಮಗ್ಗದ ಮೇಲೆಯೂ ವೆಂಕಟಮ್ಮನ ಹಾಸಿಗೆ ಸೀರೆ ಮೇಲೆ ಯಾರೋ ಅಗ್ನಿದ್ರಾವಕವನ್ನು ಎರಚಿ ಇರುತ್ತಾರೆ. ಅವರನ್ನು ಪತ್ತೆಯಿಸಬೇಕೆಂದು ಬಹು ಜನರು ಅರ್ಜಿಗಳನ್ನು ಬರೆದು ಇದ್ದಾರೆ. ಇಂಥವರನ್ನು ಪತ್ತೆಯಿಸಬೇಕೆಂಬುವದೇ ಜನರ ಅಭಿಪ್ರಾಯವಾಗಿದೆ. ಪೋಲೀಸಿನವರು ಇದರ ವಿಷಯ ಗಮನಕೊಡಬೇಕಾಗಿ ತೋರುತ್ತೆ.

ಅಶೆಬಿಟ್ಟಿದ್ದ್ದು.

93-31

ಸ್ವಲ್ಪ ಮಾತ್ರ ಸಾವಕಾಶವೆಂಬದರ ಅರ್ಥವು ಮರಣವೆಂಬನಾಗಿರುತ್ತದೆ. ವರ್ತಮಾನಪತ್ರಿಕೆಗಳಲ್ಲಿ ಆಶ್ಚರ್ಯಕರವಾದ ಬರವಣಿಗೆಯನ್ನು ನೀವು ಎಂದೂ ಓದಲಿಲ್ಲವೋ? ಮತ್ತು ಅದು ಒಂದು ಔಷಧ ಪ್ರಕಟಣೆಯಾಗಿರುತ್ತದಾಗಿ ತಿಳಿದು ಬರಲಿಲ್ಲವೋ? ಆ ಲೇಖನವನ್ನು ಕುರಿತು ತೃಪ್ತಿಪಟ್ಟಿದ್ದೀರೋ? ಬಹುಶಃ ಪಡಲಿಲ್ಲವೆಂದು ನಾವು ತಿಳಿದುಕೊಳ್ಳುತ್ತೇವೆ. ಯಾಕೆಂದರೆ ಅದು ನಿಮಗೆ ಪರಿಚಿತವಿಲ್ಲದ ದೂರ ಪ್ರಾಂತ್ಯದಲ್ಲಿರುವ ಒಬ್ಬನ ಅನುಭವವಾಗಿದ್ದದ್ದರಿಂದ ಮಾತ್ರವಾಗಿರಬಹುದು. ಆದರೆ ಕಲ್ಕತ್ತೆಯ ಪ್ರಸಿದ್ಧ ಡಾಕ್ಟರುಗಳಲ್ಲಿ ಒಬ್ಬರ ಹೇಳಿಕೆಯಾಗಿದ್ದರೆ ನೀವು ನಂಬುತ್ತಿದ್ದಿರಿ. ಕಲ್ಕತ್ತೆಯ ಹ್ಯಾರಿಸನ್ ರೋಡ್ ನಂ ೧೫೮ ನಂಬರಿನ ಹಿಂದು ಆಸ್ಪತ್ರೆಯ ಹೌಸ್ ಸರ್ಜನರಾಗಿರುವ ಡಾಕ್ಟರ್ ಓ. ಸಿ. ರಾಯ್ ಎಂಬವರು ಹೇಳುವದೇನೆಂದರೆ:— ಡೋನ್ಸ್ ಎಂಬುವರ ಬೆನ್ನುನೋವು ಮೂತ್ರಕೋಶದ ಔಷಧಗುಳಿಗೆಗಳು (ಡೋನ್ಸ್ ಬ್ಯಾಕ್ ಏಕ್ ಕಿಡ್ನಿ ಪಿಲ್ಸ್) ಅತ್ಯುತ್ತಮವಾದ ಔಷಧವಾಗಿರುತ್ತದೆ. ನಾವು ಕೈ ಬಿಟ್ಟ ಒಬ್ಬ ರೋಗಿಗೆ ಜಲೋದರವು ಈ ಔಷಧದಿಂದ ಚೆನ್ನಾಗಿ ಗುಣವಾಗಿಯದೆ. ಕಿಬ್ಬೊಟ್ಟೆಯಲ್ಲಿ ನೀರು ತುಂಬಿ ಕೈ ಕಾಲು ಮುಖವು ಬಾತು ಬಹಳ ಸಂಕಟ ಪಡುತ್ತಿದ್ದನು. ಹೊಟ್ಟೆಯೊಳಗೆ ಸೂಜಿ ಹಾಕಿ ಸುಮಾರು ೧೦೫ ಔನ್ಸ್ ನೀರು ತೆಗೆಯಿತು. ಹೀಗೆಯೇ ಮರಳಿ ಮತ್ತೆ ಮೂರು ಧಫಾ ತೆಗೆಯಬೇಕಾಯಿತು. ರೋಗಿಗೆ ದಿನ ಒಂದಕ್ಕೆ ೬ ಔನ್ಸ್ ಮಾತ್ರ ಮೂತ್ರ ಹೋಗುತ್ತಿತ್ತು. ಆತನಿಗೆ ಡೋನ್ಸ್ ಮೇಲೆ ಹೇಳಿದ ಮಾತ್ರೆಗಳು ಕೊಡುತ್ತಲೆ ದಿನ ಒಂದಕ್ಕೆ ೩೬ ಔನ್ಸ್ ಮೂತ್ರ ಹೋಗಲಿಕ್ಕೆ ಶುರುವಾಗಿ ಬೇಗ ಊದು ನಿಂತು ಹೋಗಿ ಅತನು ಪುನಃ ಆರೋಗ್ಯಸ್ಥಿತಿಗ ಬಂದನು. ಹೀಗೆಯೇ ಡೋನ್ಸರ ಈ ಔಷದದಿಂದ ಅನೇಕ ಜನರಿಗೆ ಗುಣವು ಸಿಕ್ಕಿರುವದರಿಂದ ಇದು ಬಹಳ ಅಮೌಲ್ಯವಾದ ಔಷಧವಾಗಿರುತ್ತದೆ. ಜಲೋದರ ವ್ಯಾಧಿಯು ಇಷ್ಟು ಹೆಚ್ಚು ಮಿರಿಹೋದರೆ ಅಪಾಯಕರವೆಂದು ಎಣಿಸೋಣಾಗುತ್ತದೆ. ಈ ಸಂಗತಿಯು ಮಾರ್ವಾಡಿ ಆಸ್ಪತ್ರೆಯಲ್ಲಿ ರಿಕಾರ್ಡು ಮಾಡಲ್ಪಟ್ಟಿರುವದರಿಂದ ಯಾರೂ ಸಂದೇಹಪಡತಕ್ಕದ್ದಿಲ್ಲ. ಬೆನ್ನುನೋವು, ಮೂತ್ರ ಬಾಧೆ—ಮೂತ್ರಕೋಶದ ದೋಷದಿಂದ ಉಂಟಾಗುವಂಥಾದ್ದಾಗಿದೆ. ಇವುಗಳಿಗೆಲ್ಲಾ ಈ ಮಾತ್ರೆಗಳು ಉತ್ಕೃಷ್ಟವಾದ ಔಷಧವಾಗಿರುವವು.

ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ. ಶೀಸೆ ಒಂದಕ್ಕೆ ರೂ ೨. ಅಥವಾ ೬ ಶೀಸೆಗಳಿಗೆ ರೂ ೧೦—೮—೦. ಅಥವಾ ಮುಂಬಾಯಿಯಲ್ಲಿಯ ಡೋನ್ಸರ ಔಷಧಗಳ ಕೋಠಿಯಿಂದ ನೇರಾ ತರಿಸಿಕೊಳ್ಳಬಹುದು ಪಿ ಓ ಬಾಕ್ಸ್ ನಂ ೨೦, ಮುಂಬಾಯಿ.

ಲಾ ಗೆಜೆಟ್.

28 1

ಎಲ್ಲಾ ಪತ್ರಿಕೆಗಳಂತೆ ಓದಿ ಬಿಸಾಡತಕ್ಕದ್ದಲ್ಲ. ಈ ಗೆಜೆಟ್ಟಿನಲ್ಲಿ ಪ್ರತಿ ತಿಂಗಳೂ ಕೋರ್ಟುಗಳ ಸಿವಿಲ್, ಕ್ರಿಮಿನಲ್, ರೆವಿನ್ಯೂ ಲಾಗಳನ್ನೂ ಚೀಫ್ ಕೋರ್ಟು ತೀರ್ಮಾನಗಳನ್ನೂ ಪ್ರಕಟಿಸುವೆವು. ಸರ್ವರೂ ಕೂಡಲೇ ತರಿಸಿಕೊಳ್ಳಿ. ಇದರ ಚಂದಾ ವರ್ಷಕ್ಕೆ ರೂ ೧—೮—೦ ವಿಳಾಸ:—ಬಿ. ನರಸಿಂಗರಾವ್, ಎಡಿಟರ, ಲಾ ಗೆಜೆಟು, ಬೆಂಗಳೂರು

ಬೆಂಗಳೂರು ಮರ್ಕೆಂಟೈಲ್ ಕಂಪನಿ ಲಿಮಿಟೆಡ್ ಆಫೀಸಿನಿಂದ ನೋಟೀಸು.

27-2

ಈ ಕಂಪನಿಯಲ್ಲಿ "ಅನಾಥ ಅಪ್ರಯೋಜಕರ ಸಂರಕ್ಷಕ ಸಭಾ, ಧಾರವಾಡ" ಎಂಬ ಹೆಸರಿನ ಮೇಲೆ ೧೮೩೫ ನೆ ಇಸವಿ ಸೆಪ್ಟೆಂಬರು ೯ ನೆ ತಾರೀಖಿನಲ್ಲಿ ರೂ ೧೫೦, ಡಿಟೋ ೧೬ ಲಕ್ಕಾ ರೂ ೨೫, ಡಿಟೋ ೨೩ ಲಕ್ಕಾ ರೂ ೩೦೫, ೧೮೯೧ ನೆ ಇಸವಿ ನವೆಂಬರ್ ೧೬ ಲಕ್ಕಾ ರೂ ೧೦೦, ಜುಮ್ಲಾ ೬೦೦ (ಆರು ನೂರು) ರೂಪಾಯಿಗಳನ್ನು ಮೆ|| ರಾ|| ಲಿಂಗೋಪಾಧ್ಯಾಯರನಾಯಕರವರು ತಂದು ಷೇರಾಗಿ ದಾಖಲ್ ಮಾಡಿಸಿ ಇದ್ದು, ಅವರು ಜೀವಂತರಾಗಿ ಇರುವ ವರಿಗೂ ಅದರ ನಫೆ ಪೈಕಿ ಅವರು ತೆಗೆದುಕೊಂಡು ಖರ್ಚು ಮಾಡಿದ್ದು ಪಕೈದೆ ಜಾತಾ ನಫೆ ಪೈಕಿ ರೂ. ೯೩೯—೦—೧೦ ಪೈ ಉಳಿದು ಇರುತ್ತೆ. ಈಚೆಗೆ ಈ ಮೊಬಲಗಿನ ವಿಷಯದಲ್ಲಿ ಯಾರನ್ನೂ ಅಧಿಕಾರಪಡೆದು ಬಂದು ಕೇಳಲಿಲ್ಲವಾಗಿ ಈ ಮೂಲಕ ತಿಳಿಸುವದೇನೆಂದರೆ—ಚಾಲತಿ ಇಸವಿ ಜುಲೈ ಆಖೈರು ಒಳಗಾಗಿ ಮೇಲೆ ಕಂಡ ಸಭೆಯ ಧರ್ಮಕರ್ತರುಗಳು ಯಾರಾದರೂ ಇದ್ದು ಕ್ರಮವಾದ ದಾಖಲೆಗಳನ್ನು ನಮ್ಮ ಕಂಪನಿಯಲ್ಲಿ ಹಾಜರಾಗಿ ಮೇಲೆ ಕಂಡ ಮೊಬಲಗು ತೆಗೆದುಕೊಳ್ಳುವವಕ್ಕೆ, ಅದರನ್ನು ಸಭೆಯವರ ಇರಾದೆಯಂತೆ ಖರ್ಚು ಮಾಡುವದಕ್ಕೆ ತಕ್ಕ ದಾಖಲೆಗಳು ಕಂಪನಿಯವರು ಒಪ್ಪುವ ರೀತ್ಯಾ ತೋರಿಸಿದರೆ ಅವರ ವಶಕ್ಕೆ ಬಡ್ಡಿ ಮೊಬಲಗು ಕೊಡುವ ವಿಷಯದಲ್ಲಿ ಕಂಪನಿಯವರ ಇರಾದೆ ಪಡೆದು, ಅದರಂತೆ ನಡಿಸಲ್ಪಡುತ್ತೆ. ಹಾಗೆ ಯಾರೂ ಹಾಜರಾಗದೆ ಇದ್ದ ಪಕ್ಷದಲ್ಲಿ ಈ ಕಂಪನಿಯ ಜನರಲ್ ಮೀಟಿಂಗಿನಲ್ಲಿ ಈ ವಿಷಯ ಚರ್ಚೆಗೆ ತಂದು ಕಂಪನಿಯ ಷೇರು ಹೋಲ್ಡರುಗಳ ಮೆಜಾರಟಿ ಇರಾದೆಯಂತೆ ಈ ಧರ್ಮದ ಕೆಲಸವನ್ನು ಬೇರೇ ವಿಧವಾಗಿ ನಡಸಲು ಏರ್ಪಾಡು ಮಾಡಲ್ಪಡುತ್ತೆ. ತಾ. ೨೩ನೆ ಮಾರ್ಚಿ, ೧೯೦೮ನೇ ಇಸವಿ.

ಬೈ ಆರ್ಡರ್,
ರಾಘವೇಂದ್ರಪ್ಪ, ಏಜಂಟ್.

ಕೆನಡಾದಲ್ಲಿ ಪೆರೂನಾ ಸೇವನೆ ಮಾಡುವ ಒಂದಾನೊಂದು ಸಂಸಾರವು.

ಪೆರೂನಾವನ್ನು ಸಕಾಲದಲ್ಲಿ ಕೆಲವು ಹೊತ್ತುಕೊಟ್ಟರೆ ದೊಡ್ಡ ಕಾಯಿಲೆಗಳನ್ನೆಲ್ಲಾ ಅದು ನಿವಾರಣೆ ಮಾಡಬಲ್ಲದೆಂದು ಮಕ್ಕಳುಳ್ಳ ಅನೇಕ ಸ್ತ್ರೀಯರು ಕಂಡುಕೊಂಡಿರುತ್ತಾರೆ.

ಮಿಸೆಸ್ ಎಟ್ಟಾ ಬೂಕರ್, ಡಂಡರ್ಕ, ಸಸ್ಕ., ಎನ್ ಡಬ್ಲ್ಯು ಟಿ, ಕ್ಯಾನ್, ಈಕೆ ಬರೆಯುವುದೇನೆಂದರೆ:— "ನನ್ನ ದೇಹದೊಳಗೆ ಸ್ತ್ರೀರೋಗವು ಬಹಳ ನರಳಿದೆನು ಕಡೆಗೆ ಡಾ॥ ಹಾರ್ಟ್‌ಮನ್ನರನ್ನು ಕರೆಸಿಕೊಂಡು, ಅವರು ಹೇಳಿದ ಔಷಧವನ್ನು ಸೇವನೆ ಮಾಡಿದ್ದರಿಂದ ನನ್ನ ಕೆಟ್ಟ ರೋಗವು ನಿವಾರಣೆಯಾಯಿತು. ಇದಕ್ಕಾಗಿ ನಾನು ಅವರಿಗೆ ಬಹಳ ಕೃತಜ್ಞಳಾಗಿರುತ್ತೇನೆ. ಸ್ತ್ರೀರೋಗಕ್ಕೆಲ್ಲಾ ಪೆರೂನಾ ಉತ್ತಮೋತ್ತಮವಾದ ಔಷಧವೆಂದು ನನಗೆ ತೋರುವುದು. ಈಗ ನನಗಿರುವಷ್ಟು ಸೌಖ್ಯವು ಲವಲೇಶವೂ ಹಿಂದೆ ಯಾವಾಗಲೂ ಇರಲಿಲ್ಲ.

ಮಿಸೆಸ್ ಬೂಕರ್ ಬರೆದಿರುವ ಇನ್ನೊಂದು ಕಾಗದದಲ್ಲಿ ಆಕೆ ಹೇಳುವುದೇನೆಂದರೆ — "ಪೆರೂನಾ ಬಹಳ ಆಶ್ಚರ್ಯವಾದ ಔಷಧವೆಂದು ಅನುಭವಪೂರ್ವಕವಾಗಿಯೂ ಯಥಾರ್ಥವಾಗಿಯೂ ಹೇಳಬಲ್ಲೆನು ನನ್ನ ಮಗಳು ಎಲ್ಲಿ ಬೂಕರಿಗೆ ಎಷ್ಟು ಮಟ್ಟಿಗೆ ಆರೋಗ್ಯವಾಗಬೇಕೆಂದು ನಾನು ನಿರೀಕ್ಷಿಸಿದ್ದೆನೋ ಅಷ್ಟು ಒಳ್ಳೇದಾಯಿತು. ಆದ್ದರಿಂದ ಅವಳಿಗೆ ವಾಸಿಯಾದ ವಿಷಯವನ್ನು ನೀವು ಪ್ರಕಟಿಸಬಹುದೆಂದು ಧಾರಾಳವಾಗಿ ಹೇಳುತ್ತೇನೆ" [38-52]

"ಶೀತವಾಯುವಿನಿಂದ ನನ್ನ ಮಗು ನರಳಿತು. ಇದನ್ನು ಸೇವಿಸಿದಾರಭ್ಯ ಅದಕ್ಕೆ ಆರೋಗ್ಯವಾಯಿತು ಅದಕ್ಕೆ ಬಲ ಉಂಟಾಯಿತು ಆರು ವರ್ಷಗಳಿಂದಲೂ ಅದರ ರೋಗ... ಈಗ ಮಗುವನ್ನು ನೋಡಿದರೆ ಚಿತ್ರಕ್ಕೆ ಯೋಗ್ಯವಾದ ಮಗುವಿನಂತೆ ಸುಖವಾಗಿದೆ"

ಅಜೀರ್ಣವಿದ್ದ ಮಗು.

ಮಿಸೆಸ್ ಜೆ ಎಂ ಬ್ರೌನ್, ಡನ್ಮೋರ್ ವಿ... ಯು ಎಸ್ ಎ, ಈಕೆ ಬರೆಯುವುದು:—

"...ವಾದ ನನ್ನ ಹೆಣ್ಣು ಮಗುವಿಗೆ ಕೆಲವು ಕೆಟ್ಟ ಕೆಮ್ಮಲು ಹುಟ್ಟಿ, ಅದರ ಮೇಲೆ ವ್ಯಾಧಿಯು ಬಂದು, ರಾತ್ರಿ, ಹೊತ್ತು ವಿಶೇಷವಾಗಿ ಬಹಳ ಸಂಕಟ ಪಡುತ್ತಿದ್ದಳು. ಸನ್ನಿವಾತಜ್ವರ ... ಲಕ್ಷಣವಾಗಿ ... ಆರಂಭಿಸಿದರೆ ಆದುದಲ್ಲದೇ ಮಗು ಎಲ್ಲಿ ಪ್ರಾಣ ಬಿಡುವುದೋ ಎನ್ನುವಷ್ಟು ಕಷ್ಟ ಪಡುತ್ತಿತ್ತು. ನಾವು ಕೊಟ್ಟ ಯಾವ ಔಷಧದಿಂದಲೂ ಮಗುವಿಗೆ ವಾಸಿಯಾಗಲಿಲ್ಲ. ಆಗ ನಾನು ಡಾ॥ ಹಾರ್ಟ್‌ಮನ್ನರ "ಜೀವನಾನದಲ್ಲಿ ಬರುವ ರೋಗಗಳು" ಎಂಬ ಪುಸ್ತಕವನ್ನು ನೋಡಿದೆನು ... ಕೇಳಿಕಳುಹಿಸಿದೆನು ... ಆಗಲೇ ಪೆರೂನಾವನ್ನು ಮಗುವಿಗೆ ಕೊಡಲಾರಂಭಿಸಿದೆನು ಒಂದೇ ಬಾಟ್ಲಿಯ ಔಷಧವನ್ನು ಕೊಟ್ಟೆನು ಇದರಿಂದ ಮಗುವು ಸಂಪೂರ್ಣಗುಣವಾಗಿದೆ

"ಈ ಮಗುವಿಗೆ ಹುಟ್ಟಿದಾರಭ್ಯ ಅಜೀರ್ಣರೋಗವಿತ್ತು, ಅದರ ಮೇಲೆ ... ತೆಗೆದುಕೊಳ್ಳುತ್ತಾ ಬಂದಾರಭ್ಯ ಯಾವ ... ಆಹಾರವನ್ನು ತಿಂದರೂ ಅದಕ್ಕೆ ಅಜೀರ್ಣವಾಗುವದಿಲ್ಲ ಈಗ ಈ ಮಗು ಚನ್ನಾಗಿ ಆರೋಗ್ಯವಾಗಿದೆ ನನ್ನ ಸ್ನೇಹಿತರು ನನ್ನ ಮಗು ಬಹಳ ಚನ್ನಾಗಿದೆ ಎಂದು ಹೇಳಿದರೆ ಅದೆಲ್ಲಾ ಪೆರೂನಾದಿಂದ ಆದದ್ದು ಎಂದು ನಾನು ಅವರಿಗೆ ತಿಳಿಸುತ್ತೇನೆ ... ಅಜೀರ್ಣಕ್ಕೂ ಪೆರೂನಾ ಬಿಟ್ಟರೆ ಇನ್ನಾವುದೂ ಪ್ರಯೋಜನಕಾರಿಯಾದದ್ದಲ್ಲವೆಂದು ನನಗೆ ತೋರುತ್ತದೆ. ಮತ್ತು ಈ ರೋಗಗಳನ್ನು ಅನುಭವಿಸುವವರಿಗೆಲ್ಲಾ ಪೆರೂನಾವನ್ನೇ ಸೇವಿಸುವಂತೆ ಶಿಫಾರಸು ಮಾಡುತ್ತೇನೆ."

ಅವರ ಹುಡುಗನ ಪ್ರಾಣವನ್ನು ಕಾಪಾಡಿತು.

ಮಿಸೆಸ್ ಆರ್ನೆಸ್ಟ್ ಹಾಕ್ಸ್‌ನ್, ೧೭೦೨ ನಾಸಲ್ ಬೀದಿ, ಡೆಸ್‌ಮಾಯಿನೆಸ್, ಅಯೋವಾ, ಯು ಎಸ್ ಎ, ಈಕೆ ಬರೆಯುವುದು.—

"ಎರಡು ವರುಷಗಳ ಹಿಂದೆ ... ಎಂಬ ನನ್ನ ಚಿಕ್ಕ ಹುಡುಗನಿಗೆ ಕೆಟ್ಟ ಜ್ವರ ಬಂದು ಬಿದ್ದುಕೊಂಡನು. ಅದರ ಜೊತೆಗೆ ಚಳಿಯೂ ಬಂತು ... ವೈದ್ಯರು ... ಅವನ ಶ್ವಾಸಕೋಶಗಳಿಗೂ ಹೊಟ್ಟೆಗೂ ವ್ಯಾಪಿಸಿದವು ಕೆಲವು ವಾರಗಳ ತನಕ ನಾವು ಪ್ರತಿ ಗಂಟೆಯಲ್ಲೂ ಬಿದುಕಲಾರನೆಂದು ನಿರೀಕ್ಷಿಸಿ, ಅವನ ಬಳಿಯಲ್ಲೇ ಕಾದಿದ್ದೆವು ಕಡೆಗೆ ಅವನಿಗೆ ಸ್ವಲ್ಪ ವಾಸಿಯಾಗಿ ಎದ್ದು ಕೂತುಕೊಳ್ಳುವಂತಾದನು ಆಗ ಅವನಿಗೆ ಕೆಮ್ಮು ಕಾಣಿಸಿಕೊಂಡು, ಏನು ಮಾಡಿದರೂ ನಿಲ್ಲದೆ, ಕ್ಷಯ ... ಬಂದನು ... ಯೂ ತುಂಬಾ ದೀರ್ಘವಾಗಿಯೂ ಇದ್ದು, ಅವನ ಶ್ವಾಸಕೋಶವನ್ನು ಬಹಳ ಕೆಡಿಸಿತು. ಅವನಿಗೆ ಕ್ಷಯರೋಗವೆಂದು ಎಲ್ಲರೂ ಊಹಿಸಿದರು ಆಗ ನಾವು ಇತರ ಔಷಧಗಳನ್ನು ಬಿಟ್ಟು, ಪೆರೂನಾವನ್ನು ಕೊಟ್ಟು ನೋಡೋಣವೆಂದು ಒಂದು ಬಾಟ್ಲಿಯನ್ನು ಕೊಂಡು ತಂದು, ಅದರಲ್ಲಿ ಹೇಳಿರುವ ಕ್ರಮದಂತೆ ಕೊಡುತ್ತಾ ಬಂದೆವು ಎರಡು ಬಾಟ್ಲಿ ಪೆರೂನಾ ಸೇವಿಸಿದ ವೇಳೆ ಅವನಿಗೆ ಚನ್ನಾಗಿ ವಾಸಿಯಾಯಿತು ... ಅವನು ಒಂದು ದಿನವಾದರೂ ಕಾಯಿಲೆಯನ್ನು ಕಾಣದೆ ಆರೋಗ್ಯವಾಗಿಯೂ ಸಂತೋಷದಿಂದಲೂ ಬೆಳೆಯುತ್ತಿದ್ದಾನೆ. ನಾವು ಸರ್ವದಾ ಪೆರೂನಾವನ್ನು ಹೊಗಳುತ್ತೇವೆ ಏಕೆಂದರೆ ಅದು ನಮ್ಮ ಹುಡುಗನ ಪ್ರಾಣವನ್ನು ಉಳಿಸಿತು

ಕಾಯಿಲೆ ಬೀಳುವ ಮಕ್ಕಳು.

ಮಿಸೆಸ್ ಷಾಫರ್, ೩೯೦೦ ಪ್ರಿನ್ಸ್‌ಟನ್ ಆವ್ ಸೆಂಟ್ ಲೂಯಿಸ್, ಮಿ. ಸೌರಿ ಯು ಎಸ್ ಎ ಈಕೆ ಬರೆಯುತ್ತಾಳೆ.—

"ಹೋದ ವರುಷ ಪ್ರಾರಂಭದಲ್ಲಿ ನನ್ನ ನಾಲ್ಕು ವರ್ಷದ ಮಗಳು ಆಲಿಸ್ ವಿಷಯವನ್ನು ನಿಮಗೆ ಬರೆದು, ನಿಮ್ಮ ಅಭಿಪ್ರಾಯವನ್ನು ಕೇಳಿದೆನು ಅವಳು ಹುಟ್ಟಿದಾರಭ್ಯ ಕಾಯಿಲೆ ಬೀಳುತ್ತಾ ಬಹಳ ಕೃಶವಾಗಿದ್ದಳು. ಅವಳಿಗೆ ಹೊಟ್ಟೆ ನೋವೂ ಇದ್ದು, ಜ್ಞಾನ ತಪ್ಪುತ್ತಿದ್ದು, ... ನಿದ್ರೆಯೂ ಇಲ್ಲ ನಾನು ಅವಳಿಗೆ ನಾನಾ ಔಷಧಗಳನ್ನು ಕೊಟ್ಟು ... ನಿಮ್ಮ ಸಲಹೆಯಿಂದ ಪೆರೂನಾ ಕೊಡಲಾರಂಭಿಸಿದೆನು. ಅವಳಿಗೆ ಆರೋಗ್ಯವಾಯಿತು; ಶಕ್ತಿ ಕೂಡಿಕೊಂಡಿತು, ಪೆರೂನಾ ಬಾಲಕರಿಗೆ ... ದ ಔಷಧವಾಗಿರುತ್ತದೆ ಇಂಥಾ ಅದ್ಭುತವಾದ ಔಷಧವನ್ನು ನಾನು ಯಾವಾಗಲೂ ಉಪಯೋಗಿಸದೆ ಇದ್ದಿಲ್ಲ

"ನಾನು ... ಬಹಳ ... ಬಳಲುತ್ತಿದ್ದೆನು ಆದ್ದರಿಂದ ಪೆರೂನಾ ಸೇವಿಸಲಾರಂಭಿಸಿದೆನು. ನನ್ನ ದೇಹವೆಲ್ಲಾ ... ದಿಂದ ನಡುಗುತ್ತಿತ್ತು ... ಔಷಧವು ನನಗೆ ... ನನಗೆ ಇನ್ನಾವ ಔಷಧ ಮೇಲೂ ಅಭಿರುಚಿಯಿಲ್ಲ

"ಪೆರೂನಾ ನನ್ನ ಎಳೇ ಮಗುವನ್ನು ಬದುಕಿಸಿತು.

ಅದಕ್ಕೆ ಚಳಿಯು ಜ್ವರವೂ ಬರುತ್ತಿತ್ತು ಈಗ ಈ ಮಗು ದೊಡ್ಡದಾಗಿ ... ಆರೋಗ್ಯವಾಗಿದೆ ... ಹುಟ್ಟಿದಾರಭ್ಯ ಪೆರೂನಾವನ್ನು ಆಗಾಗ್ಗೆ ಕೊಡುತ್ತಿದ್ದೇನೆ ... ಅದು ಇಷ್ಟು ಆರೋಗ್ಯವಾಗಿದೆಯೆಂದು ನನಗೆ ತೋರುತ್ತದೆ. ಪೆರೂನಾವನ್ನು ಎಷ್ಟು ಹೊಗಳಿದರೂ ಹೇರಲು ಅದನ್ನು ಉಪಯೋಗಿಸುವುದಕ್ಕೆ ಪ್ರಾರಂಭಿಸಿದ ಲಾಗಾಯ್ತು ... ನಮ್ಮ ಮನೆಗೆ ಬಂದಿಲ್ಲ ಅದು ಬಹಳವಾಗಿ ಕೆಲಸಕ್ಕೆ ಬರತಕ್ಕದ್ದಾಗಿದೆ"

ಮಗು ಈಗ ಆರೋಗ್ಯವಾಗಿದೆ.

ಮಿಸೆಸ್ ಜೆ ಡಬ್ಲ್ಯು. ವರ್ತ್ ಆಫ್ ಹಾಕ್, ಟೆಕ್ಸಾಸ್, ಯು ಎಸ್ ಎ, ಈಕೆ ತನ್ನ ಕೈಯಾರೆ ... ವಿಷಯದಲ್ಲಿ ಡಾ॥ ಹಾರ್ಟ್‌ಮನ್ನರಿಗೆ ಬರೆಯುವುದು :—

"ಇದೇ ಜನವರಿಗೆ ನನ್ನ ಮಗುವಿಗೆ ಎರಡು ವರ್ಷ ತುಂಬಿತು ಈ ಮಗುವಿಗೆ ಮೂತ್ರಕೋಶವು ಕೆಟ್ಟುಹೋಗಿತ್ತು. ಮಗುವು ಬಹಳ ... ವಾಸಿಯಾಗಬಹುದೆಂದು ನಾವ್ಯಾರೂ ಯೋಚಿಸಿರಲಿಲ್ಲ ಈ ಮಗು ಮೂರು ನಾಲ್ಕು ತಿಂಗಳ ಕಾಲ ಕಾಯಿಲೆ ಬಿದ್ದಿತ್ತು ಒಂದು ಬಾಟ್ಲಿ ಪೆರೂನಾದಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಕೊಡುವಷ್ಟರಲ್ಲೇ ಆ ಮಗುವಿಗೆ ಆರೋಗ್ಯವಾಗಿದೆ

ಮಗುವಿಗೆ ಪೆರೂನಾ ಮಾಡಿದ್ದು.

ಮಿಸೆಸ್ ಫ್ರಿಟ್ಸ್‌ರೂಥಿ, ಓಂಕ್ವಿಲ್ಲ್, ಇಲ್ಲಿನಾಯಿಸ್, ಯು ಎಸ್. ಎ, ಈಕೆ ಬರೆಯುವುದು –

"ನಾನು ನಿಜವಾಗಿ ಆರೋಗ್ಯವಾಗಿದೇನೆ ಈ ಮಾತು ಹೇಳುವುದರಲ್ಲಿ ನನಗೆ ತುಂಬಾ ಸಂತೋಷ ನನ್ನ ಒಂದು ಮಗು ಐದು ತಿಂಗಳು ಜ್ವರವನ್ನು ಅನುಭವಿಸಿತು ಏನುಮಾಡಿದರೂ ವಾಸಿಯಾಗಲಿಲ್ಲ. ಅದು ಮಲೇರಿಯಾ ಎಂಬ ಶೀತಜ್ವರವೆಂದು ಡಾಕ್ಟರು ಹೇಳಿದರು ಅದರೆ ಅವರು ಕೊಟ್ಟ ಔಷಧದಿಂದ ಸ್ವಲ್ಪವೂ ಪ್ರಯೋಜನವಾಗಲಿಲ್ಲ.

"ಆಗ ನಾನು ಪೆರೂನಾ ಕೊಟ್ಟೆನು ಕೂಡಲೇ ಅದು ಮಗುವಿಗೆ ಗುಣಕೊಟ್ಟಿತು. ಇದುವರೆಗೆ ಆ ಮಗು ಜ್ವರವನ್ನು ಕಾಣದು

"ನಾನು ಡಾ॥ ಹಾರ್ಟ್‌ಮನ್ನರಿಗೆ ಕಾಗದಾ ಬರೆದಾಗ ನಾನು ಮನೇ ಕೆಲಸಗಳನ್ನು ಮಾಡಲಾರದಷ್ಟು ... ಇದ್ದೆನು ಈಗ ನಾನು ಸಂಪೂರ್ಣವಾಗಿ ಆರೋಗ್ಯಹೊಂದಿರುತ್ತೇನೆ."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇಒಂದು ಸ್ಥಳವ್ಯಾವುದೆಂದರೆ:— ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

13—2—1908 ರಿಂದ 20—3—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	10	8	*	*
ಮೈಸೂರು ,,	1	0	3	1
ಬೆಂಗಳೂರು ಡಿಸ್ಟ್ರಿಕ್ಟು	*	*	0	0
ಮೈಸೂರು ,,	17	13	73	49
ಕೋಲಾರ್ ,,	51	51	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	5	5	0	0
ಹಾಸನ ,,	9	8	34	28
ಚಿತ್ರದುರ್ಗ ,,	0	0	0	1
ಕಡೂರ್ ,,	7	3	0	0
ಶಿವಮೊಗ್ಗ ,,	*	*	*	*
* ಸಂಖ್ಯೆ ಕಾಣಿಸಿಲ್ಲ ಮೊತ್ತ	100	85	110	78

ಶಾಲಿವಾಹನ ಶಕ ವರುಷಂಗಳು ೧೮೩೦ನೇ ಕೀಲಕನಾಮ ಸಂವತ್ಸರದ ಚೈತ್ರ ಶುದ್ಧ ಪಾಡ್ಯಮಿ ಗುರುವಾರದಿಂದ ಚೈತ್ರ ಶುದ್ಧ ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಏಪ್ರಿಲ್

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ತೇದಿ ಮಹಮ್ಮದೀಯ
2	ಗುರು	* ಪಾಡ್ಯಮಿ	6-40	ರೇ	58-39	21
3	ಶುಕ್ರ ,,	ಬಿದಿಗೆ	3 42	ಅ	58 36	22
4	ಶನಿ †	ತದಿಗೆ	2 3	ಭ	59-49	23
5	ರವಿ	ಚೌತಿ	1 30	ಕೃ	60-0	24
6	ಸೋಮ	ಪಂಚಮಿ	2-38	ರೋ	2-0	25
7	ಮಂಗಳ :	ಷಷ್ಠಿ	4 49	ಮೃ	5-38	26
8	ಬುಧ ‡	ಸಪ್ತಮಿ	8-22	ಆ	10 32	27

* ಚಾಂದ್ರಮಾನ ಸಂವತ್ಸರಾರಂಭ, ನಿಂಬದಳಭಕ್ಷಣಂ. ಪಂಚಾಂಗ ಶ್ರವಣ
,, ರಂಜಾನ್ ಆರಂಭ.
÷ ಲಕ್ಷ್ಮೀಗೌರೀವ್ರತ
.. ಷಷ್ಠೀವ್ರತ.
‡ ಸೂರ್ಯ ಸಪ್ತಮಿ.

ಪೇಟೆ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು
ಶ್ರೇಷ್ಠ ಅಕ್ಕಿ ...	ರೂ.	[illegible]	[illegible]
ಕಂಬಳಿ ... ಅಕ್ಕಿ ...		[illegible]	[illegible]
...		[illegible]	[illegible]
ಜಾರಿ ... ಅಕ್ಕಿ		[illegible]	[illegible]
... ರಾಗಿ		[illegible]	[illegible]
...		[illegible]	[illegible]
...		[illegible]	[illegible]
...		[illegible]	[illegible]
...		[illegible]	[illegible]
ಜೋಳ		[illegible]	[illegible]
ಜೋಳ		[illegible]	[illegible]
ಕಲಕಂಡೆ ...		[illegible]	[illegible]
ಬಿಳೀ ಅವರೆ		[illegible]	[illegible]
ಹೆಸರು		[illegible]	[illegible]
ಉದ್ದು		[illegible]	[illegible]
ಕಡಲೆ		[illegible]	[illegible]
ಎಳ್ಳು ...		[illegible]	[illegible]
ಮೆಣಸು		[illegible]	[illegible]
... ಶೇರಿಗೆ		[illegible]	[illegible]
ಸೀಗೇಕಾಯಿ ...		[illegible]	[illegible]
ಮೆಣಸಿನಕಾಯಿ		[illegible]	[illegible]
ಮಾಯಿ		[illegible]	[illegible]
ಬೆಲ್ಲ ... ಅಚ್ಚು		[illegible]	[illegible]
ಒಳ್ಳೆ ...		[illegible]	[illegible]
ಹರಳೆಣ್ಣೆ ,,		[illegible]	[illegible]
ಕೊತ್ತಂಬರಿ ಬೀಜ ...		[illegible]	[illegible]
ಉಪ್ಪು ,,		[illegible]	[illegible]
...		[illegible]	[illegible]
...		[illegible]	[illegible]
ತುಪ್ಪ ...		[illegible]	[illegible]
ಸೀಮೆಯೆಣ್ಣೆ ಪಟ್ಟ ...		[illegible]	[illegible]
ತೆಂಗಿನಕಾಯಿ ೧೦೦ಕ್ಕೆ		[illegible]	[illegible]
ಅಳಲೇಕಾಯಿ ...		[illegible]	[illegible]
ಅಂಟುವಾಳದ ಕಾಯಿ ...		[illegible]	[illegible]
ಚಿನ್ನ (ಪವನ್) ಕೆಂಪು		[illegible]	[illegible]
,, ,, ಹಸಿರು		[illegible]	[illegible]
,, ,, ಗಟ್ಟಿ ತೊಲ ...		[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		[illegible]	[illegible]

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore 2/4/1908

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೧ | ಮೈಸೂರು—ಸ ೧೯೦೮ ನೇ ಇಸವಿ ಏಪ್ರಿಲ್ ತಾರೀಖು ೯ ನೇ ಗುರುವಾರ. | ಸಂಚಿಕೆ ೪೫

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

17 7

ತರಿಸಿಕೊಳ್ಳಿರಿ — ತ್ವರೆಗೈಯಿರಿ ಅಮೃತಾಂಜನ ಸರ್ವಲೋಕರಂಜನ ಸರ್ವ ವ್ಯಾಧಿನಾಶನ, ಚಿಕಿತ್ಸಾ ಶಾಲೆಯೊಳಗೆ ... ದೇಹಾಂಗಗಳಿಗೆ ಸಂಜೀವನ, ವಾಸ ... ಮನೋರಂಜನ ಬೆಲೆಯಲ್ಲಿ ಅಲ್ಪ ... ಯಲ್ಲಿ ಅದ್ಭುತ ಔಷಧಿಯಲ್ಲ ... ಕೊಳ್ಳುವವರಲ್ಲಿ ಮಾಡಿರುವಂಥ ... ಗುಣ ಕಂಡುಬರುವದಿಲ್ಲವಾದರೆ ... ಕೊಡಲ್ಪಡುವದು ಒಂದು ... ಬಾಟ್ಲು ತರಿಸಿಕೊಂಡವರಿಗೆ ಒಂದು ... ಬಳ್ಳಿಯ ಕಪ್ ಉಚಿತವಾಗಿ ದೊರ ಯದು

ನಿಶ್ಶಂಕೆಯಾಗಿ ಭಾರತವರ್ಷೀಯ ಔಷಧಗಳಿಂದ ತಯಾರಿಸಿದ ಹೊರುಪಯೋಗಕ್ಕೋಸುಗ ಮುಲಾಮು. ಇದರಿಂದ ತಲೆನೋವು, ಶಿರೋವೇದನೆ, ವಾತ, ಸಂಧಿವಾತ ಪಕ್ಷವಾತ, ಗಂಟ್ಲು ನೋವು, ಸೊಂಟದನೋವು, ಗಂಟ್ಲು ನೋವು, ಶೀತ, ಜಕಮು, ಉಳುಕು, ಕ್ರಿಮಿ ಉಗಳಿಗೆ ತಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಿಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು

ಬಾಟ್ಲಿ ಒಂದಕ್ಕೆ ಕಿಮ್ಮತ್ತು —೮—೦. ಪೋಸ್ಟು ಖರ್ಚು ೦—೪—೦

ಗಜಕರ್ಣದ ಮುಲಾಮು.

... ಹಾಗಿಸುವದರೊಳಗೆ ಗಜಕರ್ಣವು ಹೋಗ ... ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ ಇದ ... ಕಂಡುಬರುವದಿಲ್ಲವಾದರೆ ಹಣ ಹಿಂತಿರುಗಿ ಕೊಡಲ್ಪಡುವದು ಡಬ್ಬಿ ಒಂದಕ್ಕೆ ಕಿಮ್ಮತ್ತು ೦—೩—೧. ಪೋಸ್ಟು ಖರ್ಚು ೦—೪—೦

ದಂತಮಂಜನ —ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಹಲ್ಲುಗಳು ಬೆಳ್ಳಗಾಗುತ್ತವೆ ಹಲ್ಲು ... ತೆಗೆಯುತ್ತದೆ ಡಬ್ಬಿ ಒಂದಕ್ಕೆ ೦—೩—೧ ಪೋಸ್ಟು ಖರ್ಚು ೦—೪—೦

ವಜ್ರಗುಟಿಕ—ದಾತುಪುಷ್ಟಿ ನಿಶ್ಶಕ್ತಿ ... ಶಕ್ತಿ ಕೊಡುತ್ತದೆ, ಸ್ವಪ್ನದೋಷ ... ನಿಲ್ಲಿಸುತ್ತದೆ ... ಆರೋಗ್ಯಕೊಡುತ್ತದೆ ಡಬ್ಬಿ ಒಂದಕ್ಕೆ ೧—೦—೦ ಪೋಸ್ಟು ಖರ್ಚು ೦—೪—೦

ಕೇಶವರ್ಧಿನಿ.—ತಲೆ ... ತಂಪು ಮಾಡುವದು, ... ಕೂದಲುಗಳನ್ನು ಕಪ್ಪುಮಾಡುವದು, ಮನ ... ಉಳ್ಳದ್ದು. ... ಬಾಟ್ಲು ಒಂದಕ್ಕೆ ೧—೦—೦. ಪೋಸ್ಟು ಖರ್ಚು ೦—೪—೦

ವಿಳಾಸ:—ವಿಲಿಯಂ ಮತ್ತು ಕಂಪೆನಿ, ೧೩ ಓಕ್ ಲೇನ್, ಫೋರ್ಟು, ಮುಂಬಯಿ.

ಟೆಲಿಗ್ರಾಫು ಅಡ್ರೆಸ್—"ಅಮೃತಾಂಜನ." ಮುಂಬಯಿ.

ಕಾರ್ಡು ಸೈಜು ೪½×೩¼.

ಫೋಟೋ ತೆಗೆಯುವ

ಫೋ ಟೋ ಕ್ಯಾ ಮೆ ರಾ.

84 34

ಬೆಲೆ ಕೇವಲ ಮೂರು ರೂಪಾಯಿ

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿಕೊಡುವೆವು ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ ಬೆಲೆ ಬೀಳುತ್ತದೆ. ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು ಟಪಾಲ್ ಖರ್ಚು ೯ ಆಣೆ

ಇದು ಸಿಕ್ಕತಕ್ಕ ವಿಳಾಸ —

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟು ಕಾಲಬಾದೇವಿ, ಮುಂಬಯಿ

ಜ್ವರಹರಿ

18 10



ಇದು ಸಾಧಾರಣ ಜ್ವರ, ಚಳಿಜ್ವರ, ... ಪಿತ್ತಜ್ವರ, ಶೀತಜ್ವರ, ವಾತಜ್ವರ, ... ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಜಡ್ಜರವರಲ್ಲಿರುವ ... ಆಫೀಸರ್ ... ವೆಂಕಟಪತಿ ಅಯ್ಯ ರವರು—ನೀವು ಕಳುಹಿಸಿಕೊಟ್ಟ ... ಸೀಸೆಗಳು ... ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ... ಗುಣ ಹೊಂದಿರುವರು. ಇನ್ನೂ ಜನಗಳು ... ದರಿಂದ ದಯವಿಟ್ಟು ಇನ್ನೊಂದು ... ಸೀಸೆಗಳನ್ನು ... ಉಪಕಾರವಾಗಿದೆ—ಎಂದು ಬರೆದಿರುವರು

ಕ್ರಯ —ಸೀಸೆ ೧ಕ್ಕೆ ... ಆಣೆ. ... ರೂ ... ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಓಮಂಕಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹತ್ತರವಾಗಿ ಪರಿಣಮಿಸಿ, ... ಕೊಡು ವದು ಇದು ಹೆಂಗಸರು ಶಿಶುಗಳಿಗೆ ... ಕೊಡುವಾಗ್ಗೆ ಕೊಟ್ಟರೂ ... ಕ್ರಯದ ... ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

... ಅಸಿಸ್ಟೆಂಟ್ ಸರ್ಜನ ... ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ... ಅಜೀರ್ಣ ಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ —

ಚೆನ್ನಪಟ್ಟಣದ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ರಬ್ಬರ್ ಸ್ಟಾಂಪ್ ಪ್ರೆಸ್.

114 26

... ಉದ್ಯೋಗದಿಂದ ... ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗು ... ಇದುವರೆಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿ... ಅದಕ್ಕೆ ... ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿ ... ಕನ್ನಡ, ಮರಾಠಿ, ತೆಲುಗು, ಉರ್ದು, ಪರ್ಷಿಯನ್, ಅರಬಿ ... ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಸ್ತುತಿ ತರಗ ... ಮಾಡಿಸಿದ ಮೊಹರು ಬಹು ಸ್ವಲ್ಪ ಕಾಲದೊಳಗಾಗಿಯೇ ... ಗಳನ್ನು ತಯಾರು ಮಾಡಬಹುದು. ಅದ್ದರಿಂದ ... ಸರ್ಕಾರಿ ... ಮ್ಯುನಿಸಿಪಾಲಿಟಿ ಪೋಲೀಸ್ ಆಫೀ ... ವಕೀಲರೂ, ವರ್ತಕರೂ, ಇನಾಮದಾರರೂ ಮುತ್ತು ಪರೀಕ್ಷ ... ಸಂಗ್ರಹದಲ್ಲಿ ಅವಶ್ಯ ಇದ ... ಕಾಲಕ್ಕೆ ... ಈ ನಮ್ಮ ಪ್ರೆಸ್ಸಿನಿಂದ ... ಕೆಲಸವನ್ನು ... ಮಾಡುವದಕ್ಕೆ ಸಾಧ್ಯ ... ಪ್ರೆಸ್ ಜನ ... ಯಾತ್ರಿಸುವಾಗಿರುವದು ಈ ಕಾರಣದಿಂದ ... ಈ ಪ್ರೆಸ್ಸನ್ನು ಅವಶ್ಯವಾಗಿ ... ಇಲ್ಲ

ಪೋಸ್ಟ್ ಪೇಪರ್ ಸೈಜು, ರೂಪಾಯಿ ೪—೦—೦

ಕಾಪ್ ಫುಲ್‌ಸ್ಕ್ಯಾಪ್ ಸೈಜು, ೬—೦—೦.

ಪೋಸ್ಟೇಜು ಬೇರೆ (ಖರ್ಚು)

ವಿಳಾಸ — ವರ್ಧಮಾನ ಏಜನ್ಸಿ,

ಪೋಸ್ಟು ಕಾಲಬಾದೇವಿ,

ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

16 8

೧ ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಯನ್ನು ... ಚೆನ್ನಪಟ್ಟಣ, ... ಉತ್ತರ ... ದೇಶಗಳ ವಿಕ್ರಯಿಂದ ...



... ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ... ಕಾಲು ಶೀತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಇಲ್ಲ ... ನೆಗಡಿ, ನಿಶ್ಶಕ್ತಿ, ಅರೋಚಕ, ... ಅನೇಕ ರೋಗಗಳಿಗೆ ಕೇವಲ ... ಗುಣವಾಗುತ್ತದೆ.

... ಅಥವಾ ... ಉಪಯೋಗಿಸುತ್ತಿದ್ದರೆ ... ಸುವಾಸನೆಯಾಗಿರು ... ಜೀರ್ಣಗೊಳಿಸಿ, ... ದಾರಿಕೊಂಡಿ, ನೀರು ... ರುಚಿಯನ್ನು ... ವೃದ್ಧಿಪಡಿಸುತ್ತದೆ ... ಯತಶೂಲೆ, ಮಕ್ಕಳ ... ಜ್ವರ, ... ಜ್ವರ ... ಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಕೋಳಿಗೆ ... ಒಳ್ಳೇ ಶಕ್ತಿ ವರ್ಧಕವಾಗಿದೆ.

ಅನುಭವಪತ್ರ ಔಷಧದ ಸಂಗಡಲೇ ಇರುತ್ತದೆ

... ಮಾತ್ರೆಯುಳ್ಳ ಕುಪ್ಪಿಗೆ ೬ ಆಣೆ, ೫ ಕುಪ್ಪಿಗೆ ೧ ರೂಪಾಯಿ ... ೧ ರಿಂದ ... ಕುಪ್ಪಿ ವರೆಗೆ ಪೋಸ್ಟೇಜು ೩ ಆಣೆ.

ವಿಳಾಸ—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್ ... ಅರ ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು

ವ್ಯವಹಾರ ನಿರ್ಣಯ.

4-15

ಪುಟಗಳು ೫೭೬. ಕ್ರಯ ವಿ. ಪಿ. ಸೇರಿ ೧—೧೨—೦. ಈ ಪುಸ್ತಕದ ಉಪಯುಕ್ತತೆಯನ್ನು ಅಪೇಕ್ಷಿಸುವವರು “ಎಂ. ಮಲ್ಲಾರಾಧ್ಯರು, ಪ್ಲೀಡರ್, ಮೈಸೂರು” ಎಂಬೀ ವಿಳಾಸಕ್ಕೆ ಬರೆದುಕೊಳ್ಳುವುದು. ವಿಷಯಗಳನ್ನು ಮೊದಲೇ ತಿಳಿಯಲಪೇಕ್ಷಿಸುವವರಿಗೆ ವಿಷಯಸೂಚಿತ ಪತ್ರವು ರವಾನಿಸಲ್ಪಡುತ್ತದೆ.

ಈಗಲೇ ಶೀಮೆಯಿಂದ ಬಂದಿದೆ.

117-24

೫,೦೦೦ ಹಾರ್ಸ ಟೋಪಿ ಶೋಭಿಯುವ ಸುಪೀರಿಯರ್ ಉಲ್ಲನ್ ದಾರಗಳು. ಬಿಡಬೇಡಿರಿ—ಮಾತ್ರ ಇದೆ—ಬಾರಿ, ಕಮ್ಮಿ ಕ್ರಯ.

೧ ಟೋಪಿಯಾಗುವ ಉಲ್ಲನ್ ದಾರಕ್ಕೆ	೦—೮—೦
೧೦ ಟೋಪಿಯಾಗುವ ಬಂಡಲ್‌ಗೆ ೧ ಕ್ಕೆ	೩—೮—೦
ಕೊಕ್ಕೆ ಸೂಜಿ ೧ ಕ್ಕೆ	೦—೧—೬
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೦

ಎರಡು ಕಡೆಯಲ್ಲಿ ಬರೆಯುವ ಪೋಸ್ಟ್ ಕಾರ್ಡ್ ೧೦೦ ಕ್ಕೆ ೪ ಆ.

ನಂಬ್ರ ೧ನೇ ಹಾರ್ಸ ಟೋಪಿ ದರ್ಜನ್ ೧ಕ್ಕೆ ೧೩—೦—೦

ವಿಳಾಸ:—

ಪ್ರೊಪ್ರೈಟರ್, ದಿ ಉಲ್ಲನ್ ಮಾರ್ಟ್, ಮಂಗಳೂರು.

ಮಹಾ ಬಾಧಾಪಹಾರಿಣಿಯು.

58-46

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಯೆಷ್ಟಿಣೀ ಲೇಪನವು ಸಕಲ ವಿಧವಾದ ಬಾಧೆಗಳನ್ನು ಪರಿಹರಿಪತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಿದ್ದಾರೆ. ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಕಳತ, ಗಂಟ್ಲುನೋವು, ಬಾರ್ಬರ್ ವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳುಕಡಿದ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಣಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇವಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ ಶೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಅದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜ್ ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುತ್ತಾದಾವರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ವೇದಮುಲಪಿಳ್ಳೆ ಬೀದಿ, ವೇಪೇರಿ, ಮದರಾಸ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಒಂದು ತರಿಸಿಕೊಳಿ.

2 15

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಬುದ್ಧಿಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ ೬ ಆ, ೧ ರೂ. ೪ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂರ್ಫಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿಕೊಂಡವರಿಗೆ ಕೊಟ್ಟು ಕಳುಹಿಸುವೆವು.

ಸ್ಟೈ- ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

1-15



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆನಾಕಂಟ ...

ನೋವು, ಹೊಟ್ಟೆಯ ... ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ... ಈ ...

ಯೋಗ್ಯವಾದ ಔಷಧವು ಜನರನ್ನು ಬದುಕಿಸಿರುವಷ್ಟು ... ಬಾಧೆಗಳ ...

ರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಸೊಟ್ಟು ಈ ಔಷಧವನ್ನು ಸೇವಿಸಿದ ... ಹೊಟ್ಟೆಯ ...

ರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ... ಭೇದಿಯು ...

ಈ ಔಷಧದಿಂದ ನಿರ್ಮೂಲನಮಾಡಿ ನಿಲ್ಲಿಸುತ್ತದೆ ... ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುತ್ತದೆ. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ.

ಮಧುರೆ ಶೀರೆಗಳು.

123-20

ಗ್ಯಾರಂಟಿಯಾದ ಗಟ್ಟಿ ಬಣ್ಣದ ಉಟ್ಟು ಉಪಯೋಗಿಸಲು ಶ್ರೇಷ್ಠವಾದ ಹೆಸರುಗೊಂಡ ಬಹಳ ಸುಲಭಬೆಲೆಯ ಮಧುರೆಯ ಸೀರೆಗಳು ಈಗಿನ ಬೇಸಿಗೆಗೆ ಮುಖ್ಯವಾಗಿ ಬೇಕಾದವು. ಇವು ಬಹು ನಯವಾಗಿಯೂ ನಾಜೂಕಾಗಿಯೂ ನೋಡಲು ಬಹು ಸೊಗಸಾಗಿಯೂ ಎಂದಿಗೂ ಕೆಡದ ಗಟ್ಟಿ ಬಣ್ಣವುಳ್ಳದ್ದಾಗಿಯೂ ತಯಾರಿಸಿ ಅಗಲ ೨॥ ಮೊಳ, ಉದ್ದ ೧೬॥ ಗಿಂತ ಹೆಚ್ಚು ಮೊಳವುಳ್ಳವಾಗಿಯೂ ಇವೆ ಎಷ್ಟು ವರ್ಷ ಒಗೆದು ಉಟ್ಟು ನಂತರ ಬಣ್ಣ ಸ್ವಲ್ಪ ಕೆಟ್ಟಾಗಲ್ಲ ಸೀರೆಯನ್ನು ಹಿಂದಕ್ಕೆ ಪಡೆದು ಖರೀದಿಯನ್ನು ವಾಪಸ್ ಕೊಡುವೆವು. ಇವು ಕೆಂಪು ಅಥವಾ ಕಪ್ಪು ಬಣ್ಣಗಳಲ್ಲಿ ದೊರೆಯುತ್ತೆ. ಅಚ್ಚ ಸಾದಾ ಕೆಂಪು ಅಥವಾ ಕಪ್ಪಿನದು ಕ್ರಯ ರೂ. ೨ ಇವರಲ್ಲಿ ಬಿಳಿಯ ಚುಕ್ಕೆ ಯಾ ಹುವ್ವುಗಳಿಂದ ಕೂಡಿದ್ದು, ಹೊಡೆಯುವ ಸೆರಗಿನಲ್ಲಿ ಬಣ್ಣದ ಉಂಡದ್ದು ರೂ ೩। ಈ ಸೀರೆಗಳು ಎಲ್ಲಾ ದೊಡ್ಡ ಮನುಷ್ಯರ ಮನೆಗಳಲ್ಲಿಯೂ ಸರ್ವವರ್ಣದವರೂ ಉಪಯೋಗಿಸಲು ಲಾಯಖಾದದ್ದು. ಈ ಸುಲಭ ಕ್ರಯ ಒಂದು ಅಂಗಳು ಮಾತ್ರ, ಪೂರಾದ ರೇಷ್ಮೆ ಅಂಚಿನ ಬಿಳಿಯ ಪಂಚೆಗಳು ೮ ಮೊಳದುದ್ದ ಜತೆ ೧ ಕ್ಕೆ ರೂ ೪ ಸಾದಾ ಮಂಬೈ ಪಂಚೆ ಜತೆ ೧ ಕ್ಕೆ ರೂ ೨|, ೨, ೧||.

ವಿಳಾಸ.—ರಾಮ್ ಎಂಪೋರಿಯಂ, ಸ್ಮಿತ್ ಸೆಂ ರೋಡ್. ವೇಪೇರಿ, ಮದ್ರಾಸು.

ಸರ್ಕಾರದ ಇಸ್ತಿಹಾರು.

32-1

1. ೧೯೦೮ನೇ ಇಸವಿ ಏಪ್ರಿಲ್ ೧ನೇ ತಾರೀಖು ಲಾಗಾಯಿತು ೧೯೦೮ನೇ ಇಸವಿ ಜೂನ್ ೩೦ರ ವರೆಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ತೆಗೆದುಕೊಳ್ಳುವದಕ್ಕೆ ಮೈಸೂರು ಶೀಮೆಯ ಶ್ರೀಮನ್ಮಹಾರಾಜಾ ಸರ್ಕಾರದ ಕಂಟ್ರೋಲರು ಸಿದ್ಧರಾಗಿರುತ್ತಾರೆ, ಪ್ರತಿ ಒಂದು ಅಪ್ಲಿಕೇಷನ್ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು:—

(೧) ಹುಂಡಿಯ ಮೊಬಲಗು,

(೨) ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು (೩) ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. ೫೦೦ ರೂಪಾಯಿಗಳಿಗೆ ಕಡಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫೀಸರಿಗೆ ಹುಂಡಿಯ ಮೊಬಲಗನ್ನೂ ಮತ್ತು ಕೆಳಗೆ ನಮೂದಿಸಿರುವ ದರದ ಮೇರೆ ಕಮಿಷನ್ ತೆಗೆದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿಕೊಡುವ ಖಜಾನೆ ಹೆಸರು	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ
ಸ್ಟೇಟ್ ಹುಜೂರು	ಕೋಲಾರ ತುಮಕೂರು ಶಿವಮೊಗ್ಗ ಕಡೂರು ಚಿತ್ರದುರ್ಗ ಮೈಸೂರು ಹಾಸನ	ಶೇಕಡ $\frac{1}{16}$

(Sd.) M N. KRISHNA RAO,
Offg. Comptroller.

ಲಾ ಗೆಜೆಟ್.

25-2

ಎಲ್ಲಾ ಪತ್ರಿಕೆಗಳಿಗಿಂತ ಓದಿ ಬಿಸಾಡತಕ್ಕದ್ದಲ್ಲ. ಈ ಗೆಜೆಟ್ಟಿನಲ್ಲಿ ಪ್ರತಿ ತಿಂಗಳೂ ಕೋರ್ಟುಗಳ ಸಿವಿಲ್, ಕ್ರಿಮಿನಲ್, ರೆವಿನ್ಯೂ ಲಾಗಳನ್ನು ಚೀಫ್ ಕೋರ್ಟ್ ತೀರ್ಪುಗಳನ್ನು ಪ್ರಕಟಿಸುವೆವು ... ಕೂಡಲೇ ತರಿಸಿಕೊಳ್ಳಿ ಇದರ ಚಂದಾ. ವರ್ಷಕ್ಕೆ ರೂ ೧ ೮—೦

ವಿಳಾಸ:—ಬಿ. ನರಸಿಂಗರಾವ್, ಎಡಿಟರ, ಲಾ ಗೆಜೆಟ್, ಬೆಂಗಳೂರು

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಆಸಾಯ. ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕಾರಣ!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION. 31-56

(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷಧವು ಈ ಕಾರಣಗಳನ್ನು ಹೋಗಲಾಡಿಸುವದು.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಅಂಗಡಿಗಳಲ್ಲೂ ದೊರಕುತ್ತವೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್ ಇಂಗ್ಲೆಂಡ್

ಈ ಮೀನು ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ ಎಂದರೆ ನಿನಗೆ ಯಾವ ನೋವೇ ಉಂಟಾಗಿರಲಿ—“ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ?” ಎಂದು ನಿನ್ನನ್ನು ನೀನೇ ಕೇಳಿಕೋ. ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ, ಮಾರನೇ ದಿವಸಕ್ಕೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ.)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹು ಹೊತ್ತು ಕಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೆಷ್ಟೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದುವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಬಿಡುವದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕೆಟ್ಟಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [93-32]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ, ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳ ಮೂರರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು, ಅಥವಾ, ಡೋನ್ಸ್. ಪಿ. ಒ. ಬಾಕ್ಸ್ ೨೦, ಬೊಂಬಾಯಿ,– ಇವರಲ್ಲಿ ದೊರೆಯುವುವು.

ವೃತ್ತಾಂತ ಪತ್ರಿಕೆ.

:0:

ಸ॥ ೧೯೦೮ ನೇ ಇಸವಿ ಏಪ್ರಿಲ್ ತಾ॥ ೯ ನೇ ಗುರುವಾರ.

ಗವರ್ನಮೆಂಟೂ ಕಸಬುಗಳ ಅಭಿವೃದ್ಧಿಯೂ.

ತಿನ್ನವೆಲ್ಲಿಯ ಪ್ರತಿನಿಧಿಗಳು ಮದರಾಸ್ ಗವರ್ನರವರಿಗೆ ಒಪ್ಪಿಸಿದ ವಿಜ್ಞಾಪನಾ ಪತ್ರಿಕೆಯಲ್ಲಿ ಸರ್ಕಾರಿ ಉದ್ಯೋಗಸ್ಥರು ಯೂರೋಪ್ಯರ ಕಂಪನಿಯ ಪಕ್ಷವನ್ನು ವಹಿಸಿ, ಸ್ವದೇಶೀ ಕಂಪನಿಯನ್ನು ಹಾಳುಮಾಡಬೇಕೆಂದು ಪ್ರಯತ್ನಪಟ್ಟರೆಂದು ಆಕ್ಷೇಪಣೆಮಾಡಿದರು. ಅವರಿಗೆ ಗವರ್ನರವರು ಹೇಳಿದ ಪ್ರತ್ಯುತ್ತರದಿಂದ ಆ ಆಕ್ಷೇಪಣೆಯು ನಿರಾಧಾರವಾದದ್ದೆಂದು ಗೊತ್ತಾಗುತ್ತದೆ. ಇಂಗ್ಲಿಷ್ ಅಧಿಕಾರಿಗಳು ಧರ್ಮಿಷ್ಠರೆಂತಲೂ, ಸತ್ಯವಂತರೆಂತಲೂ, ನಿಷ್ಪಕ್ಷಪಾತಿಗಳೆಂತಲೂ ನಾವು ಹೇಳಬೇಕಾದದ್ದಿಲ್ಲ. ಅನ್ಯಥಾ ಹೇಳುವುದು ಅವರ ಸಂಕಲ್ಪಕ್ಕೆ ವಿರೋಧವಾಗಿರುತ್ತದೆ. ಸ್ವದೇಶೀ ಕಸಬುಗಳನ್ನು ಉತ್ಪಾದನವನ್ನೂ ಅಭಿವೃದ್ಧಿಗೆ ತರತಕ್ಕ ಕಾರ್ಯಗಳನ್ನು ಇಂಡಿಯಾ ಗವರ್ನಮೆಂಟಿನವರು ಪ್ರೋತ್ಸಾಹಪಡಿಸುವುದರಲ್ಲಿ ವಿಶೇಷ ಕುತೂಹಲವುಳ್ಳವರಾಗಿವಾರೆಂದು ಮದರಾಸ್ ಗವರ್ನರವರು ಆ ಪ್ರತಿನಿಧಿಗಳಿಗೆ ಒತ್ತಿ ಹೇಳಿದರು.

ಈ ರಾಷ್ಟ್ರದ ಕಸಬುಗಳನ್ನು ಅಭಿವೃದ್ಧಿಗೆ ತರಬೇಕು. ಉತ್ಪಾದನವನ್ನು ಪರಿಶೋಧನೆಯಿಂದ ಹೊರಕ್ಕೆ ತೆಗೆದು ಮನುಷ್ಯನ ಉಪಯೋಗಕ್ಕೆ ಒದಗಿಸಬೇಕು ಎಂಬುವುದೇ ಗವರ್ನಮೆಂಟಿನವರ ಉದ್ದೇಶವಾಗಿದೆ. ಹಿಂದೆಕ್ಕಿಂತ ಇದನ್ನು ಒಪ್ಪಿಕೊಳ್ಳುತ್ತಾರೆನ್ನುವುದಕ್ಕೆ ಸಂದೇಹವಿಲ್ಲ. ಹಿಂದುಸ್ಥಾನವನ್ನು ಬಡಸ್ಥಿತಿಯಲ್ಲಿಯೇ ಇಟ್ಟಿರಬೇಕೆಂಬುವುದರಲ್ಲಿ ಗವರ್ನಮೆಂಟಿನವರಿಗೆ ಯಾವ ಲಾಭವೂ ಯಾವ ಪ್ರಯೋಜನವೂ ಇರುವುದಿಲ್ಲ. ಹಿಂದುಸ್ಥಾನವು ಐಶ್ವರ್ಯಯುಕ್ತವಾದದ್ದಾದರೆ ಗವರ್ನಮೆಂಟಿನವರಿಗೆ ಐಶ್ವರ್ಯವಂತರಾಗಿ ಭಾರಿಯಾದ ಪ್ರೋತ್ಸಾಹಕಾರಕ ಕಾರ್ಯಗಳನ್ನು ನಡಸಿ ಕೀರ್ತಿ ಪಡೆಯಲು ಅವಕಾಶವಾದೀತು. ಒಡೆತನವು ನಂಶರಣವನ್ನು ಪ್ರಾಣ ಹಾನಿ ದೇಶವನ್ನು ಕಷ್ಟ ನಾನಾ ನಷ್ಟಗಳಿಗೂ ಅಸಹಿಷ್ಣುಗಳೂ ಉಪದ್ರವಾಗುತ್ತವೆ ಸುಮಾರು ಎಂಬತ್ತು ವರ್ಷಗಳ ಹಿಂದೆ ಬ್ರಿಟಿಷ್ ರಾಜ್ಯಭಾರವು ತರುಣಾವಸ್ಥೆಯಲ್ಲಿದ್ದಾಗ ಗವರ್ನಮೆಂಟಿನವರು ಪಶ್ಚಿಮ ರಾಜ್ಯಗಳ ಶಾಸ್ತ್ರವಿದ್ಯೆಗಳನ್ನೂ ಕಲಾಕೌಶಲ್ಯಗಳನ್ನೂ ಹಿಂದುಸ್ಥಾನದವರಿಗೆ ಕಲಿಸಬೇಕೆಂಬ ವಿಷಯವು ಪಾರ್ಲಿಮೆಂಟಿನಲ್ಲಿಯೂ ಕಲ್ಕತ್ತಾಯಲ್ಲೂ ಚರ್ಚೆಯಾಯಿತು. ಸದ್ಗುಣರೂ ಸತ್ಯವಂತರೂ ಮಹನೀಯರೂ ಆದ ಇಂಗ್ಲಿಷ್ ಅಧಿಕಾರಿಗಳು—"ಅಂಥಾ ಪ್ರಶಸ್ತವಾದ ವಿದ್ಯೆಗಳನ್ನೂ ಕಸಬುಗಳನ್ನೂ ಅವರಿಗೆ ಕಲಿಸದೆ ಹೋಗುವುದು ನಮಗೆ ಧರ್ಮವಲ್ಲ. ಅವುಗಳಿಂದ ನಾವು ಹ್ಯಾಗೆ ಐಶ್ವರ್ಯಯುಕ್ತರಾಗಿರುತ್ತೇವೆಯೋ ಅದೇ ರೀತಿಯಲ್ಲಿ ಹಿಂದುಸ್ಥಾನದವರೂ ಉಚ್ಛ್ರಾಯಸ್ಥಿತಿಗೆ ಬರುವಂತೆ ಅವರಿಗೆ ನಾವು ಕಲಿಸಿಕೊಡಬೇಕು" ಎಂಬದಾಗಿ ತೀರ್ಮಾನಮಾಡಿದರು. ಅವರ ಮೇಲೆ ಗವರ್ನಮೆಂಟಿನವರು ಸ್ಕೂಲು ಕಾಲೇಜುಗಳನ್ನು ಕಟ್ಟಿಸಿದರು. ಪೈನ್ಸ್ ಆರ್ಟ್ಸ್ ಸ್ಕೂಲ್ ಆಫ್ ಆರ್ಟ್ಸ್, ವ್ಯವಸಾಯಶಾಸ್ತ್ರಶೋಧನಾ ಪಾಠಶಾಲೆಗಳನ್ನು ಸ್ಥಾಪಿಸಿದರು; ಬೇರೆ ಬೇರೆ ತರದ ಕಸಬುದಾರಿ ಕಾರ್ಖಾನೆಗಳನ್ನಿಟ್ಟು, ಕಲೆಗಳನ್ನು ಶಾಸ್ತ್ರವತ್ತಾಗಿ ಕಲಿಸುವುದಕ್ಕೆ ಏರ್ಪಡಿಸಿದರು. ಇವುಗಳ ದೆಸೆಯಿಂದ ಈ ರಾಷ್ಟ್ರದ ವ್ಯಾಪಾರವೂ ಕಸಬುಗಳೂ ದಿನೇ ದಿನೇ ಅಭಿವೃದ್ಧಿಹೊಂದುತ್ತಿವೆ. ಅದಲ್ಲದೆ ವ್ಯವಸಾಯಾಭಿವೃದ್ಧಿಗಾಗಿಯೂ ಕಲಾಕೌಶಲ್ಯಗಳ ಜೀರ್ಣೋದ್ಧಾರಾರ್ಥವಾಗಿಯೂ ಈ ರಾಷ್ಟ್ರದ ಎಲ್ಲಾ ಕಡೆಗಳಲ್ಲೂ ಪ್ರದರ್ಶನಗಳೂ ಉಪನ್ಯಾಸಗಳೂ ನಡೆಯುತ್ತಿರುವುದನ್ನೂ, ಇದಕ್ಕೆ ಗವರ್ನಮೆಂಟಿನವರು ವಿಶೇಷವಾಗಿ ಪ್ರೋತ್ಸಾಹಕೊಟ್ಟು, ವ್ಯವಸ್ಥೆ ಮೊದಲಾದ ಹಲವು ರೀತಿಗಳಲ್ಲಿ ಸಹಾಯಮಾಡುತ್ತಿರುವುದನ್ನೂ ದೃಷ್ಟಾಂತವಾಗಿ ಸೂಚಿಸುತ್ತೇವೆ. ರೈತರಿಗೆ ವ್ಯವಸಾಯದಲ್ಲಿ ಲಾಭಕರವಾದ ಹೊಸ ಕ್ರಮಗಳನ್ನೂ, ಉಪಕರಣಗಳನ್ನೂ ತೋರಿಸಿ ಕಲಿಸಿಕೊಡುತ್ತಿದ್ದಾರೆ. ನೆಯ್ಗೆಯ ಕಸಬನ್ನು ಅಭಿವೃದ್ಧಿಗೆ ತರಬೇಕೆಂದು ನಾನಾ ತರದ ಮಗ್ಗಗಳ ಪ್ರದರ್ಶನಗಳನ್ನು ಗವರ್ನಮೆಂಟಿನವರೇ ಮುಂದರಿಸಿ ನಿಂತು ನಡಿಸಿ, ಬಹುಮಾನಗಳನ್ನು ಕೊಡಿಸುತ್ತಾ ಬಂದಿರುವರು. ಪ್ರಸಿದ್ಧ ತಾತಾರವರು ಕೊಟ್ಟಿರುವ ಧನದ ಜೊತೆಗೆ ಮೈಸೂರು ಗವರ್ನಮೆಂಟಿನವರು ದ್ರವ್ಯವನ್ನೂ ಜಮೀನನ್ನೂ ಕೊಟ್ಟಿರುವುದೂ, ಶಾಸ್ತ್ರಶೋಧನಾ ವಿದ್ಯಾಶಾಲೆಯನ್ನು ಸ್ಥಾಪಿಸಬೇಕೆಂದು ಇಂಡಿಯಾ ಗವರ್ನಮೆಂಟಿನವರು ಏರ್ಪಾಡುಮಾಡಿರುವುದಲ್ಲದೆ ಅದಕ್ಕಾಗಿ ಹಣವನ್ನೂ ಕೊಟ್ಟು, ಸಮರ್ಥರಾದ ವಿದ್ಯಾಬೋಧಕರನ್ನು ಸೀಮೆಯಿಂದ ಕರೆಸಿ ನೇಮಕಮಾಡಿರುವುದೂ ಈ ರಾಷ್ಟ್ರದ ಐಶ್ವರ್ಯವನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದಲೇ. ಯಾವನೇ ಆಗಲಿ ತನ್ನ ದೇಹಕ್ಕೆ ತಾನೇ ಊನ ಮಾಡಿಕೊಳ್ಳಬೇಕೆಂದು ಅಪೇಕ್ಷಿಸಲಾರನು. ಇಂಡಿಯಾ ಗವರ್ನಮೆಂಟು ಹಿಂದುಸ್ಥಾನವೆಂಬ ತನ್ನ ದೇಹದ ಅಂಗಗಳು ಬಲವಾಗಿಯೂ ಚಟುವಟಿಕೆಯಾಗಿಯೂ ಆರೋಗ್ಯವಾಗಿಯೂ ಬೆಳೆಯಬೇಕೆಂತಲೇ ಕುತೂಹಲಪಡುವುದಾಗಿದೆ.

ಬೌದ್ಧಾವತಾರ.

ಮ॥ ರಾ॥ ಬಿದರೆ ಅಶ್ವತ್ಥನಾರಾಯಣರಾಯರು ಬೌದ್ಧಾವತಾರವೆಂಬ ಪುಸ್ತಕವನ್ನು ರಚಿಸಿ ನಮಗೊಂದು ಪ್ರತಿಯನ್ನು ಕಳುಹಿಸಿರುವರು. ಪುಸ್ತಕವು ಸುಲಭವಾದ ಕನ್ನಡ ಶೈಲಿಯಲ್ಲಿ ಬರೆಯಲ್ಪಟ್ಟವುದಲ್ಲದೆ ಓದುವವರಿಗೂ ರಸಿಕವಾಗಿರುವುದು.

ಬುದ್ಧನಂತೂ ಲೋಕಪ್ರಸಿದ್ಧನಾದ ಮಹನೀಯನಲ್ಲಿ ಒಬ್ಬನೆಂಬುದು ಸರ್ವವಿದಿತ ಸಂಗತಿಯಾಗಿದೆ. ಆದರೆ ಮ॥ ರಾ॥ ಅಶ್ವತ್ಥನಾರಾಯಣರಾಯರು ಬುದ್ಧನ ತತ್ವಗಳಿಗೂ ವೇದಾಂತಮತಕ್ಕೂ ಯಾವ ವ್ಯತ್ಯಾಸವೂ ಇಲ್ಲವೆಂದು ಅಭಿಪ್ರಾಯಪಡುತ್ತಾರೆ. ನಾವು ಇದನ್ನು ಖಂಡಿತವಾಗಿಯೂ ಒಪ್ಪಲಾರೆವು. ಮ॥ ರಾ॥ ಅಶ್ವತ್ಥನಾರಾಯಣರಾಯರು ಹೇಳುವಹಾಗೆ ನಿಜವಾದ ಪಕ್ಷದಲ್ಲಿ ಯಾತಕ್ಕೆ ಶ್ರೀ ಶಂಕರಾಚಾರ್ಯರೇ ಮೊದಲಾದ ವೇದಾಂತಿಗಳು ಬೌದ್ಧಮತ ತತ್ವಗಳನ್ನು ಖಂಡಿಸಿರುವರು? ಈ ಆಕ್ಷೇಪಣೆಗೆ ಗ್ರಂಥಕರ್ತರು ಬೌದ್ಧರೇ ತಮ್ಮ ಗುರುವಿನ ಬೋಧನೆಯನ್ನು ಚೆನ್ನಾಗಿ ಗ್ರಹಿಸಲಿಲ್ಲವೆಂದೂ, ಅವರು ಆರಂಭದಿಂದ ಕಡೆಯವರಾಗಿ ಸನಾತನ ಎಲ್ಲಾ ಮತಗಳಿಗಿಂತ ಶ್ರೇಷ್ಠವಾದುದೆಂದು ತಿಳಿದು, ಆ ಅಂದಿನಿಂದಲೂ ಬೌದ್ಧಮತವನ್ನು ಚೆನ್ನಾಗಿ ಪರೀಕ್ಷೆ ಮಾಡುವದೆ ಬುದ್ಧನು ವೇದಾಂತವನ್ನು ಬೋಧಿಸಿರುವನೇ ಹೊರತು ನಾಸ್ತಿಕ್ಯವನ್ನು ಬೋಧಿಸಲಿಲ್ಲವೆಂತಲೂ ತಿಳಿಸುವರು. ಆದರೆ ಮ॥ ರಾ॥ ಅಶ್ವತ್ಥನಾರಾಯಣರಾಯರು ಇದನ್ನು ಸ್ಥಾಪಿಸಬಲ್ಲರೆ? ಇವರು ತಿಳಿಸುವ ಈ ಸಂಗತಿಯು ನಿಜವಾದ ಪಕ್ಷದಲ್ಲಿ ಶ್ರೀ ಶಂಕರಾಚಾರ್ಯರು ಬೌದ್ಧರನ್ನು ಕುರಿತು—ನಿಮ್ಮ ಗುರುವಿನ ಬೋಧನೆಯೂ ನಾನು ಅವಲಂಬಿಸಿರುವ ವೇದಾಂತ ಮತಕ್ಕೂ ಯಾವ ಭೇದವೂ ಇಲ್ಲವೆಂದು ತಿಳಿಸುತ್ತಿದ್ದರಲ್ಲವೇ? ಆದರೆ ಅವರು ಹಾಗೆ ಮಾಡದೆ ಬಿಡಲು—ಬುದ್ಧನೇ ಒಂದಕ್ಕೊಂದು ವಿರುದ್ಧವಾದ ತತ್ವಗಳನ್ನು ಬೋಧಿಸಿದನೆಂತಲೂ, ಆ ಮೂರು ತತ್ವಗಳೂ ಅಸಂಗತವೆಂತಲೂ ತಿಳಿಸಿರುವರು (ವೇದಾಂತಸೂತ್ರ), ಶಂಕರಭಾಷ್ಯ, ಅಧ್ಯಾಯ ೨, ಪಾದ ೨, ಸೂತ್ರ ೩೨ ನ್ನು ನೋಡಿರಿ)

ಪುಸ್ತಕದ ಮತ್ತೊಂದು ಕಡೆಯಲ್ಲಿ ಗ್ರಂಥಕರ್ತರು ಕ್ರೈಸ್ತಮತಕ್ಕೂ ಬೌದ್ಧಮತಕ್ಕೂ ಯಾವ ವ್ಯತ್ಯಾಸವಿಲ್ಲವೆಂತಲೂ ಕ್ರೈಸ್ತಮತದಲ್ಲಿ ಸಿಕ್ಕತಕ್ಕ ಎಲ್ಲಾ ಒಳ್ಳೆ ಬೋಧನೆಗಳು ಬೌದ್ಧಮತದಲ್ಲಿ ಅಡಗಿವೆಯೆಂತಲೂ ತಿಳಿಸುತ್ತಾರೆ. ಈ ಅಭಿಪ್ರಾಯವನ್ನು ನಾವೆಂದಿಗೂ ಅನುಮೋದಿಸಲಾರೆವು. ಕ್ರಿಸ್ತನ ಬೋಧನೆಗೂ ಬುದ್ಧನ ಬೋಧನೆಗೂ ಅಪಾರವಾದ ವ್ಯತ್ಯಾಸವಿರುವುದು. ಯೇಸು ಕ್ರಿಸ್ತನ ಜೀವಮಾನಚರಿತ್ರೆಯನ್ನು ನಾವು ಚೆನ್ನಾಗಿ ಓದಿದರೆ ಆತನಿಗೂ ತಂದೆಯಾದ ದೇವರಿಗೂ ಒಂದು ವಿಧವಾದ ನಿತ್ಯಸಂಬಂಧವಿತ್ತೆಂದು ತಿಳಿದುಕೊಳ್ಳಬಹುದು. ಆತನು ತನ್ನ ಶಿಷ್ಯರಿಗೆ ತಾನು ಯಾವಾಗಲೂ ದೇವರ ಸಾನ್ನಿಧ್ಯದಲ್ಲಿದ್ದು ಆತನಿಗೆ ಪ್ರಾರ್ಥಿಸುತ್ತಿರುವೆನೆಂತಲೂ ತಾನು ತಿಳಿಸುವ ಬೋಧನೆಗಳೂ ಮಾಡುವ ಕೆಲಸಗಳೂ ದೇವರ ಚಿತ್ತಕ್ಕನುಸಾರವಾಗಿವೆಯೆಂತಲೂ ತಿಳಿಸುವನು. ಆತನು ಪ್ರತಿದಿನದಲ್ಲೂ ಪ್ರಾರ್ಥನೆಯಲ್ಲಿ ನಿರತನಾಗಿದ್ದನು. ಆತನು ಜಗತ್ಸಂರಕ್ಷಕನಾದ ಭಗವಂತನು ಸರ್ವೇಶ್ವರ ಒಡೆಯನಾಗಿದ್ದಾನೆಂಬುದೇ ಆತನ ಬೋಧೆಯ ಮುಖ್ಯ ತತ್ವವಾಗಿರುತ್ತದೆ. ಬುದ್ಧನೆಂಬುವನು ದೇವರ ವಿಷಯವಾದ ಯಾವ ಬೋಧನೆಯನ್ನೂ ತಿಳಿಸಲಿಲ್ಲ. ಸ್ವಪ್ರಯತ್ನವೇ ಆತನ ತತ್ವವಾಗಿತ್ತು. ಆತನೆಂದಿಗೂ ಪ್ರಾರ್ಥನೆ ಮಾಡಿದವನಲ್ಲ. ... ಇವರಿಬ್ಬರ ಬೋಧನೆಗಳಿಗೂ ವಿಷ್ಟ್ಯೇ ದೊಡ್ಡ ... ಭೇದವಿದೆ.

... ದ್ದನ ಅವಸಾನ ಕಾಲದಲ್ಲಿ ಆತನು ತನ್ನ ಪ್ರೇಮಪಾತ್ರನಾದ ... ಕರೆದು ಹೇಳಿ—ಆನಂದನೇ ನಾನು ವೃದ್ಧನಾಗಿದ್ದೇನೆ ನನ್ನ ಆಯುಷ್ಯವು ಎಂಬತ್ತು ವರುಷಗಳಾಗಿಯದಾಗಿ ... ಈ ನನ್ನ ... ಪ್ರಯಾಣವು ಕೊನೆಗಾಣುತ್ತಿರುವುದು. ನಾನಂತೂ ... ಹಳೆಯ ಬಂಡಿಗೆ ಸಮಾನನಾಗಿರುತ್ತೇನೆ. ಅದನ್ನು ಯಾವ ರೀತಿಯಾಗಿ ಕಷ್ಟದಿಂದ ನಡಿಸಬೇಕೋ ಅದೇ ರೀತಿಯಲ್ಲಿ ನನ್ನ ... ನ್ನು ನಡಿಸಬೇಕಾಗಿದೆ. ಇನ್ನು ಮುಂದೆ ನಿನಗೆ ನೀನೇ ಬೆಳಕು ... ನಿನ್ನಲ್ಲಿಯೇ ಆಶ್ರಯವನ್ನು ಹುಡುಕಿಕೊ. ಬೇರೆ ಎಲ್ಲಿಯೂ ... ಬೇಡ. ಸತ್ಯವನ್ನು ನಿನ್ನ ಬೆಳಕಾಗಿ ಹಿಡಿದುಕೊ. ಸತ್ಯವೇ ನಿನಗೆ ಆಶ್ರಯವಾಗಿರುವುದು. ನಾನು ಈ ಲೋಕವನ್ನು ಬಿಟ್ಟಮೇಲೆ ನಾನು ಉಪದೇಶಿಸಿದ ತತ್ವವೂ ನಾನು ಸ್ಥಾಪಿಸಿದ ಸಂಘವೂ ನಿನಗೆ ಗುರುವಾಗಿರಲಿ ಎಂದು ತಿಳಿಸಿದನು.

ಯೇಸು ಕ್ರಿಸ್ತನು ಪರಲೋಕವಾಸಿಯಾಗುವುದಕ್ಕೆ ಮೊದಲು ತನ್ನ ಶಿಷ್ಯವೃಂದಕ್ಕೆ—ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ. ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೆ; ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೆನು; ನಿಮಗೆ ಸ್ಥಳವನ್ನು ಸಿದ್ಧಮಾಡುವುದಕ್ಕೆ ಹೋಗುತ್ತೇನಲ್ಲಾ; ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು; ... ನಾನು ನಿಮ್ಮನ್ನು ... ; ನಿಮ್ಮ ಬಳಿಗೆ ಬರುತ್ತೇನೆ... ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು, ಅವನನ್ನು ನನ್ನ ತಂದೆಯು ಪ್ರೀತಿಸುವನು. ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು... ನಾನು ತಂದೆಯ ಬಳಿಯಿಂದ ಹೊರಟು ಈ ಲೋಕಕ್ಕೆ ಬಂದಿದ್ದೇನೆ; ಇನ್ನು ಲೋಕವನ್ನು ಬಿಟ್ಟು ತಂದೆಯ ಬಳಿಗೆ ಹೋಗುತ್ತೇನೆ ಎಂಬದಾಗಿ ತಿಳಿಸಿದನು.

ಬುದ್ಧೋಕ್ತಿಗಳು ಜನರನ್ನು ನಾಸ್ತಿಕ್ಯದ ಕಡೆಗೆ ತಿರುಗಿಸುವವು. ಆದರೆ ಕ್ರೈಸ್ತಮತವು ಎಲ್ಲಾ ಜನರಿಗೂ ತಂದೆಯಾದ ದೇವರು ಇರುತ್ತಾನೆಂತಲೂ ಆತನು ಜಗತ್ ಸಂರಕ್ಷಕನೂ ಶಾಶ್ವತನೂ ಪವಿತ್ರನೂ ಆಗಿರುವನೆಂತಲೂ ತಿಳಿಸುತ್ತದೆ.

ಸ್ವದೇಶದ ವೃತ್ತಾಂತಗಳು.

ಕಳೆದ ಶನಿವಾರ ಅರಮನೆಯಲ್ಲಿ ಶ್ರೀಮನ್ ಮಹಾರಾಣಿಯವರ ವರ್ಷ ವರ್ಧಂತಿ ಕಲ್ಲಿಯ ಆರತಕ್ಷತೆ, ದಾನಧರ್ಮಾದಿಗಳು ನಡೆದವು.

❖❖❖

ಕಳೆದ ಭಾನುವಾರ ದಿವಾನರವರೂ, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರೂ ರಾಜಧಾನಿಯಿಂದ ಬೆಂಗಳೂರಿಗೆ ಪ್ರಯಾಣ ಮಾಡಿದರು.

❖❖❖

ಕಳೆದ ಶುಕ್ರವಾರ ಮೆ॥ ಕಾಂತರಾಜೇ ಅರಸಿನವರು ತಮ್ಮ ಭವನದಲ್ಲಿ ಶ್ರೀಮನ್ ಮಹಾರಾಜರವರಿಗೂ, ಮಹಾಮಾತೃಶ್ರೀಯವರೇ ಮೊದಲಾದ ರಾಜವರ್ಗದವರಿಗೂ, ಅರಸುಗಳಿಗೂ ಔತಣವನ್ನು ಮಾಡಿದರು.

❖❖❖

ರಾಜಧಾನಿಯಲ್ಲಿ ನಾದಮುನಿ ಮೊದಲಿಯಾರ್, ನಾಗಲಿಂಗಂ ಪಿಳ್ಳೆ ಎಂಬಿಬ್ಬರು ಕೃಷ್ಣರಾಜ ಮೊಹಲ್ಲಾದಲ್ಲಿರುವ ಎರಡು ಮನೆಗಳಿಗೆ ಹೋಗಿ ತಾವು ಮ್ಯಾಜಿಸ್ಟ್ರೇಟ್ ಕೋರ್ಟಿನವರೆಂದು ಹೇಳಿ ಮನೆಯವರನ್ನು ಹೆದರಿಸಿ, ಒಬ್ಬರಿಂದ ಒಂದು ಪದಕವನ್ನು ತೆಗೆದುಕೊಂಡು, ಪೋಲೀಸಿನವರು ಬಂದಾಗ ಅವರನ್ನು ತನಿಖೆ ಮುಂತಾದ್ದು ಮಾಡಿ ಮೋಸಮಾಡಿಸಬೇಕೆಂದು ಪ್ರಯತ್ನಪಟ್ಟರು. ಈಗ ಇವರಿಬ್ಬರ ಮೇಲೂ ಮೊಕದ್ದಮೆ ಬಂದಿದೆ.

❖❖❖

ಕಳೆದ ಭಾನುವಾರ ಬೆಳಿಗ್ಗೆ ೬ ಗಂಟೆಗೆ ಶ್ರೀಮನ್ ಮಹಾರಾಜರವರು ಪ್ರೈವೇಟ್ ಸೆಕ್ರೆಟರಿ ಮೆ॥ ವೆಂಕಟಕೃಷ್ಣಯ್ಯನವರು ಮತ್ತು ಇವರ ಪತ್ನೀರ ಸಹಿತ ಮೋಟಾರ್ ಗಾಡಿಯಲ್ಲಿ ರಾಜಧಾನಿಯಿಂದ ನೀಲಗಿರಿಗೆ ದಯಮಾಡಿದರು. ಮಹಾಮಾತೃಶ್ರೀಯವರೂ ಮಹಾರಾಣಿಯವರೇ ಮೊದಲಾದವರೆಲ್ಲಾ ಆ ದಿನ ರಾತ್ರಿ ಸ್ಪೆಷಲ್ ರೈಲಿನಲ್ಲಿ ರಾಜಧಾನಿಯಿಂದ ಬೆಂಗಳೂರಿಗೆ ಹೋಗಿ ಮರುದಿನ ರಾತ್ರಿ ಬೆಂಗಳೂರಿನಲ್ಲಿ ... ಜೋಲಾರ್ ಪೇಟೆ ಮಾರ್ಗವಾಗಿ ನೀಲಗಿರಿಗೆ ಪ್ರಯಾಣ ಮಾಡಿದರು. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು.

❖❖❖

ಒಂದೆರಡು ವಾರಗಳಿಂದ ರಾಜಧಾನಿಯಲ್ಲಿ ಕಳವು ನಡೆಯಲು ಪ್ರಾರಂಭವಾಗಿದೆ. ರೈಲ್ ಸ್ಟೇಷನ್ ಬಳಿ ಇರುವ ಎಂಪ್ಯರ್ ಹೋಟೇಲಿನಲ್ಲಿ ಒಬ್ಬ ಸಾಹೇಬನ ಬಾಬತು ಕೈಪೆಟ್ಟಿಗೆಯು ಹಣ ಸಹಿತ ಕಳುವಾಯಿತು. ಎರಡನೆಯದಾಗಿ ಚಾಮರಾಜಪೇಟೆ ಅಗ್ರಹಾರದಲ್ಲಿ ಒಂದು ಮನೆಗೆ ಕಳ್ಳರು ಬಿದ್ದು ಸುಮಾರು ೧,೦೦೦ ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿದರು. ಮೂರನೆಯದಾಗಿ ದಿವಾನರ ಬಂಗಲೆ ಎದುರಿಗಿರುವ ಒಬ್ಬ ಅಡ್ವೋಕೇಟರ ಮನೆಯಲ್ಲಿ ಸುಮಾರು ೩೦೦ ರೂಪಾಯಿ ಮಾಲುಗಳು ಕಳುವಾದವು. ನಾಲ್ಕನೆಯದಾಗಿ ಹಳ್ಳದಕೇರಿಯ ಒಂದು ಮನೆಯೊಳಗೆ ಕಳುವಾಯಿತು. ಇದನ್ನು ನೋಡಲಾಗಿ ಪೋಲೀಸಿನವರ ಚಟುವಟಿಕೆಯೂ ಜಾಗ್ರತೆಯೂ ತೃಪ್ತಿಕರವಾಗಿರುವಂತೆ ಕಾಣುವುದಿಲ್ಲ.

ಮೈಸೂರ್ ಲೋವರ್ ಸೆಕಂಡರಿ ಪರೀಕ್ಷೆ.

ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಲೋವರ್ ಸೆಕಂಡರಿ ಪರೀಕ್ಷೆಯ ರೂಲುಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ, ಈ ವರುಷದ ಮಾರ್ಚ್ ಲಾಗಾಯತು ಜಾರಿಗೆ ತರಲ್ಪಟ್ಟಿದೆ ಎಂದು ಪ್ರಕಟಿಸಿದಾರೆ. ಆ ಪೈಕಿ ಮುಖ್ಯ ಬದಲಾವಣೆಗಳ್ಯಾವೆಂದರೆ:—

(೧) ಇನ್ನು ಮುಂದೆ ಈ ಪರೀಕ್ಷೆ ನಡೆಯುವ ಸ್ಥಳಗಳು ಯಾವವೆಂದರೆ—ಬೆಂಗಳೂರ್ ಡಿಸ್ಟ್ರಿಕ್ಟಿನಲ್ಲಿ ಬೆಂಗಳೂರು, ದೊಡ್ಡಬಳ್ಳಾಪುರ, ಚನ್ನಪಟ್ಟಣ, ಮಾಗಡಿ, ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಕೋಲಾರ, ಮಾಲೂರು, ಚಿಂತಾಮಣಿ, ಚಿಕ್ಕಬಳ್ಳಾಪುರ. ತುಂಕೂರು ಡಿಸ್ಟ್ರಿಕ್ಟಿನಲ್ಲಿ ತುಂಕೂರು, ಮಧುಗಿರಿ, ಗುಬ್ಬಿ, ಚಿಕ್ಕನಾಯಕನಹಳ್ಳಿ. ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಚಿತ್ರದುರ್ಗ, ಹರಿಹರ, ಚಳ್ಳಕೆರೆ, ಹೊಳಲಕೆರೆ. ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಶಿವಮೊಗ್ಗ, ಶಿಕಾರಿಪುರ, ಸಾಗರ, ತೀರ್ಥಹಳ್ಳಿ. ಕಡೂರು ಡಿಸ್ಟ್ರಿಕ್ಟಿನಲ್ಲಿ ಚಿಕ್ಕಮಗಳೂರು, ಕಡೂರು, ಮೂಡಿಗೆರೆ. ಹಾಸನದ ಡಿಸ್ಟ್ರಿಕ್ಟಿನಲ್ಲಿ ಹಾಸನ, ಹೊಳೆನರಸೀಪುರ, ಚನ್ನರಾಯಪಟ್ಟಣ, ನರಸೀಪುರ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮೈಸೂರು, ನಂಜನಗೂಡು, ... , ಮಳವಳ್ಳಿ, ನಾಗಮಂಗಲ, ಶ್ರೀರಂಗಪಟ್ಟಣ. ಈ ಪ್ರಕಾರ ಈ ಸಂಸ್ಥಾನದ ೩೩ ಸ್ಥಳಗಳಲ್ಲಿ ಲೋವರ್ ಸೆಕಂಡರಿ ಪರೀಕ್ಷೆಯನ್ನು ನಡಸುತ್ತಾರೆ.

(೨) ಕನ್ನಡ ಅಥವಾ ಇತರ ಮಾತೃಭಾಷೆಯಲ್ಲಿ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಬಾಲಕರು ಇಂಗ್ಲೀಷನ್ನು ಮಾತ್ರ ಓದಿ ಪರೀಕ್ಷೆಗೆ ಇಟ್ಟಿರುವ ೧೦೦ ಸಂಖ್ಯೆಗಳಲ್ಲಿ ಶೇಕಡಾ ೪೦ ರಷ್ಟು ತೆಗೆದುಕೊಂಡ ಪಕ್ಷದಲ್ಲಿ ತೇರ್ಗಡೆ ಹೊಂದಬಹುದು.

ಶಿಕ್ಷೆ ವಿಧಿಸಲ್ಪಟ್ಟ ವಿದ್ಯಾರ್ಥಿಗಳು.

ವೆಂಕಟರಮಣಾಚಾರ್ರು ಮಗ ೧೬ ವರುಷದ ಎಂ. ನರಸಿಂಹಾಚಾರ್ ಎಂಬವನು ಪಿ. ಕೃಷ್ಣಾಚಾರ್ ಎಂಬ ಇನ್ನೊಬ್ಬ ಹುಡುಗನ ಹೆಸರಿಟ್ಟುಕೊಂಡು ಚಿತ್ರದುರ್ಗದ ಸೆಂಟರಿನಲ್ಲಿ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ಪ್ರಶ್ನಪತ್ರಿಕೆಗಳ ಉತ್ತರಗಳನ್ನು ಬರೆದದ್ದರಿಂದ ಆ ಹುಡುಗನನ್ನು ೧೯೦೮ ನೆ ಡಿಸೆಂಬರ್ ಆಖೈರ್ ವರೆಗೆ ಈ ಸಂಸ್ಥಾನದ ಯಾವ ಪಬ್ಲಿಕ್ ಸ್ಕೂಲಿನಲ್ಲೂ ಸೇರಿಸಿಕೊಳ್ಳಕೂಡದು.

೨೦ ವರುಷದ ಮೇಲ್ಕಂಡ ಪಿ. ಕೃಷ್ಣಾಚಾರ್ ಎಂಬವನು ತನಗೆ ಬದಲಾಗಿ ಎಂ. ನರಸಿಂಹಾಚಾರ್ ಎಂಬವನನ್ನು ಕಳುಹಿಸುವ ಹಾಗೆ ಏರ್ಪಾಡು ಮಾಡಿದ್ದರಿಂದ ಆ ಪಿ. ಕೃಷ್ಣಾಚಾರಿಯನ್ನು ೧೯೦೯ ನೆ ಡಿಸೆಂಬರ್ ಆಖೈರ್‌ವರೆಗೆ ಈ ಸಂಸ್ಥಾನದ ಯಾವ ಪಬ್ಲಿಕ್ ಸ್ಕೂಲಿನಲ್ಲೂ ಸೇರಿಸಿಕೊಳ್ಳಕೂಡದು.

ಜೈನಮಂಡಲಿಯೂ, ಪಾರ್ಶ್ವನಾಥ ಬೆಟ್ಟಗಳೂ.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಪಾರ್ಶ್ವನಾಥ ಬೆಟ್ಟಗಳ ಮೇಲೆ ಜೈನಮತಸ್ಥರ ಯಾತ್ರಾಸ್ಥಳವು ಇರುವುದೂ, ಅಲ್ಲಿಗೆ ವರುಷಕ್ಕೆ ೩೦,೦೦೦ ಕ್ಕಿಂತಲೂ ಹೆಚ್ಚಾಗಿಯೇ ಜೈನಭಕ್ತರು ಹೋಗಿ ಪೂಜೆ ಪುನಸ್ಕಾರಾದಿಗಳನ್ನು ಮಾಡಿಕೊಂಡು ಬರುತ್ತಿದ್ದೂ, ಈಚೆಗೆ ಈ ಬೆಟ್ಟಗಳು ಯೂರೋಪಿಯನ್ ಜನರ ಹವಾಕ್ಕೆ ಯೋಗ್ಯವೂ ಅನುಕೂಲವೂ ಆಗಿವೆ ಎಂದು ಆ ಜನರು ಅಲ್ಲಿ ಬಂಗಲೆ ಆರಾಮಾದಿಗಳನ್ನು ಕಟ್ಟಿಕೊಳ್ಳಬೇಕೆಂದು ಪ್ರಯತ್ನಪಟ್ಟದ್ದು, ಬಂಗಾಳಾ ಲೆಫ್ಟಿನೆಂಟ್ ಗವರ್ನರವರು ಜೈನಪ್ರಜೆಗಳ ಪ್ರತಿನಿಧಿಗಳನ್ನು ಕರೆಸಿಕೊಂಡು ಅವರ ಅಭಿಪ್ರಾಯವನ್ನು ತಿಳಿದು, ಅವರಿಗೆ ಒಳ್ಳೇ ಸಲಹೆಗಳನ್ನು ಕೊಟ್ಟು ಸಮಾಧಾನಪಡಿಸಿ ಕಳುಹಿಸಿಕೊಟ್ಟಿರುವುದೂ ವಾಚಕರಿಗೆ ತಿಳಿದಿರುತ್ತದೆ ಹೋದವರುಷ ಆಗೋಷ್ಟು ತಿಂಗಳಲ್ಲಿ ಸುಮಾರು ಮೂರುಸಾವಿರ ಜೈನಪ್ರಜೆಗಳು ಹಿಂದುಸ್ಥಾನದ ನಾನಾ ಭಾಗಗಳಿಂದ ಹೋಗಿ, ಲೆಫ್ಟಿನೆಂಟ್ ಗವರ್ನರವರನ್ನು ಕಂಡು ಬಂದರು. ಆಗ್ಗೆ ಲೆಫ್ಟಿನೆಂಟ್ ಗವರ್ನರವರು ಅವರನ್ನು ಕುರಿತು:—ಈ ಪಾರ್ಶ್ವನಾಥ ಪರ್ವತ ಪ್ರಾಂತ್ಯವು ಪಾಲ್‌ಗಂಜ್ ಸಂಸ್ಥಾನದ ರಾಜರಿಗೆ ಸೇರಿರುತ್ತದೆ ಅಲ್ಲಿಗೆ ಇತರರ್‍ಯಾರೂ ಪ್ರವೇಶ ಮಾಡಕೂಡದೆಂತಲೂ, ಜೈನ ಭಕ್ತಾದಿಗಳು ಮಾತ್ರವೇ ಸರ್ವ ಸ್ವಾತಂತ್ರ್ಯವನ್ನೂ ಪಡೆದಿರಬೇಕೆಂತಲೂ ಉದ್ದೇಶ ಪಡುವ ಪಕ್ಷದಲ್ಲಿ ಆ ಬೆಟ್ಟ ಪ್ರಾಂತ್ಯವನ್ನೆಲ್ಲಾ ಆ ರಾಜರಿಂದ ಸಂಪಾದಿಸಿಕೊಳ್ಳಬೇಕೆಂತಲೂ, ಇಲ್ಲವಾದರೆ ಇತರ ಜನಾಂಗದವರು ಅದರ ಮೇಲೆ ಮನೆ ಮಠ ಕಟ್ಟಿಕೊಂಡು ವಾಸಮಾಡದಂತೆ ಅಡ್ಡಿಮಾಡಲಾಗುವುದಿಲ್ಲವೆಂತಲೂ ಅಪ್ಪಣೆ ಕೊಡಿಸಿದರು ತರುವಾಯ ಜೈನ ಪ್ರತಿನಿಧಿಗಳು ಆ ರಾಜರನ್ನು ಹೋಗಿ ಕಂಡಾಗ ಅವರು ಮೂರು ಲಕ್ಷ ರೂಪಾಯಿ ಕೊಟ್ಟರೆ ಆ ಬೆಟ್ಟ ಪ್ರಾಂತ್ಯವನ್ನು ಅವರಿಗೆ ಭೋಗ್ಯಮಾಡಿ ಕೊಡುವುದಾಗಿ ತಿಳಿಸಿದರು ಅದರ ಮೇಲೆ ಹ್ಯಾಗಾದರೂ ಮಾಡಿ ಆ ಬೆಟ್ಟ ಪ್ರಾಂತ್ಯವನ್ನು ತಮ್ಮ ಸ್ವಾಧೀನಕ್ಕೆ ತಂದಿಟ್ಟುಕೊಳ್ಳಬೇಕೆಂದು ಜೈನಮಂಡಲಿಯವರು ನಿಶ್ಚಯಮಾಡಿಕೊಂಡು, ತಮ್ಮ ಮತಸ್ಥರಿಗೆಲ್ಲಾ ಈ ವಿಚಾರವನ್ನು ತಿಳಿಸಿ, ಚಂದಾ ಎತ್ತುತ್ತಿದ್ದಾರೆ ಇದಕ್ಕೋಸ್ಕರ ಕಳೆದವಾರ ಆಗ್ರಾ ಡಿಸ್ಟ್ರಿಕ್ಟಿಗೆ ಸೇರಿದ ಫಿರೋಜಾಬಾದಿನಲ್ಲಿ ಖೂರ್ಜಾ ಎಂಬ ಊರಿನಲ್ಲಿ ಒಂದು ಜೈನ ಮಹಾ ಸಭೆ ನಡೆಯಿತು ಹಿಂದುಸ್ಥಾನದ ನಾನಾ ಭಾಗಗಳಿಂದ ಸುಮಾರು ೩,೦೦೦ ಜೈನ ಪ್ರತಿನಿಧಿಗಳು ಅಲ್ಲಿಗೆ ಹೋಗಿದ್ದರು. ಆ ಊರಿನಲ್ಲಿ ಗಣ್ಯರಾದ ಮೆ॥ ಪರಮಸುಖರಾಯ ಅಮೋಲಕಚಂದ್ ಎಂಬುವರು ಆ ಪ್ರತಿನಿಧಿಗಳ ಊಟ ಉಪಚಾರಾದಿಗಳಿಗೆ ಅವಶ್ಯವಾದ ಸೌಕರ್ಯಗಳನ್ನೆಲ್ಲಾ ಒದಗಿಸಿ ಕೊಟ್ಟರು. ಮೇಲ್ಕಂಡ ಉದ್ದೇಶಕ್ಕೆ ೩ ಲಕ್ಷ ರೂಪಾಯಿ ಕೂಡಿಸಬೇಕೆಂಬುವುದೇ ಆ ಸಭೆಯ ಮುಖ್ಯ ತೀರ್ಮಾನವು ಒಟ್ಟು ೧,೩೫,೦೦೦ ರೂಪಾಯಿ ವಸೂಲಾಯಿತು ಇಷ್ಟು ಹಣ ವಸೂಲಾದ ವಿವರ ಹ್ಯಾಗೆಂದರೆ—ಬೊಂಬಾಯಿ ಅಧಿಪತ್ಯದ ಜೈನರಿಂದ ೫೦ ಸಾವಿರ ರೂಪಾಯಿ, ಇಂಡೋರ್ ಪಟ್ಟಣದ ಜೈನರು ೨೧,೦೦೦ ರೂಪಾಯಿ, ಮೆ॥ ಪರಮಸುಖರಾಯ ಅಮೋಲಕಚಂದ್ ಯವರು ೧೫,೦೦೦ ರೂಪಾಯಿ, ಅಜ್ಮೀರದ ರಾಯಬಹದ್ದೂರ್ ಸೇಠ್ ನೇಮಿಚಂದ್ ಯವರು ೧೫ ಸಾವಿರ, ಬೊಂಬಾಯಿನ ಜವಾಹಿರಿ ವರ್ತಕರಾದ ಸೇಠ್ ಮಾಣಿಕಚಂದ್ ಪನ್ನಾಚಂದ್ ಯವರು ೧೦,೦೦೦ ರೂಪಾಯಿ, ಡೆಹಲಿ ಪಟ್ಟಣದ ಮೂರು ಮಂದಿ ಜೈನ ಶ್ರೀಮಂತರು ೩,೬೦೦ ರೂಪಾಯಿ, ಈ ಪ್ರಕಾರ ಚಂದಾ ಹಣವನ್ನು ಕೊಟ್ಟಿದ್ದಾರೆ

ಹಿರಿಯೂರಿನ ಅನಾರೋಗ್ಯ ಸ್ಥಿತಿಯು.

ಸರ್ಕಾರಿ ಹುಕುಮು

ಕಳೆದ ನವೆಂಬರ್ ತಿಂಗಳಲ್ಲಿ ಚಿತ್ರದುರ್ಗದ ಡೆಪ್ಯುಟಿ ಕಮಿಷನರು ಹಿರಿಯೂರು ಟೌನಿನ ಅನಾರೋಗ್ಯ ಸ್ಥಿತಿಯನ್ನು ವಿವರಿಸಿ, ಈಗಿರುವ ಸ್ಥಳದಿಂದ ಊರನ್ನು ಅಲ್ಲಿನ ತಾಲ್ಲೂಕ್ ಕಚೇರಿಯ ಬಳಿಗೆ ಹಾಕಿ, ಅಲ್ಲಿ ಜನರು ಮನೆಗಳನ್ನು ಕಟ್ಟಿಕೊಳ್ಳುವಂತೆಯೂ, ಒಳ್ಳೇ ನೀರಿನ ಸರಬರಾಯಿ ಆಗುವಂತೆಯೂ ಮಾಡಿಕೊಟ್ಟರೆ ತುಂಬಾ ಅನುಕೂಲವೆಂದು ಗವರ್ನಮೆಂಟಿಗೆ ಅರಿಕೆಮಾಡಿದರು ಅವರು ತಿಳಿಸಿದ ಮುಖ್ಯ ವಿಷಯಗಳೇನೆಂದರೆ—ಈಗ ಹಿರಿಯೂರು ಟೌನು ಕೃಷ್ಣಾಂಬುಧಿ ಕೆರೆಯ ಕೆಳಗೆ ಬಹಳ ತಗ್ಗಾದ ಮತ್ತು ಶೈತ್ಯವುಳ್ಳ ಪ್ರದೇಶದಲ್ಲಿದೆ. ಅಲ್ಲಿನ ಮಣ್ಣು ಕೃಷ್ಣಭೂಮಿಯಾದ್ದರಿಂದಲೂ ಒಂದು ಕಣಿವೆಯಂತೆ ಇರುವುದರಿಂದಲೂ ಬಿದ್ದ ನೀರು ಅಲ್ಲೇ ನಿಂತು ಬಹಳ ಅನಾರೋಗ್ಯಕರವಾಗಿದೆ ಇದನ್ನು ತಪ್ಪಿಸಿ ತಾಲ್ಲೂಕ್ ಕಚೇರಿಯ ಬಳಿ ಈಗ ಗೊತ್ತುಮಾಡಿರುವ ಸ್ಥಳದಲ್ಲಿ ಊರನ್ನು ಕಟ್ಟಿದರೆ ತುಂಬಾ ಅನುಕೂಲವಾಗಿದೆ ಎಂದು ಆ ಸ್ಥಳವನ್ನು ಪರೀಕ್ಷೆ ಮಾಡಿದವರೆಲ್ಲಾ ಅಭಿಪ್ರಾಯಪಟ್ಟಿದ್ದಾರೆ ಅಲ್ಲಿಗೆ ವಾಣಿವಿಲಾಸದಿಂದ ನೀರು ತಂದು ಒದಗಿಸುವುದೂ ಕಷ್ಟವಲ್ಲವೆಂದು ಕಾಣುತ್ತದೆ ಜನರು ಅಲ್ಲಿ ಬಂದು ಮನೆಗಳನ್ನು ಕಟ್ಟಿಕೊಳ್ಳಲು ಪ್ರೋತ್ಸಾಹವಾಗುವುದಕ್ಕೆ ಗವರ್ನಮೆಂಟಿನವರು ಮುಂದಾಗಿ ತಾಲ್ಲೂಕ್ ನೌಕರಮಾನೇರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕಾಗಿದೆ. ಈಗ ಈ ನೌಕರಮಾನೇರಿಗೆ ಊರಿನಲ್ಲಿ ವಾಸಮಾಡಲು ಆರೋಗ್ಯಕರವಾದ ಮನೆಗಳಿಲ್ಲದೆ ಬಹಳ ಕಾಯಿಲೆ ಬೀಳುವವರಾಗಿದ್ದಾರೆ ಈ ಹೊಸ ಸ್ಥಳದಲ್ಲಿ ಊರನ್ನು ಕಟ್ಟುವುದರಿಂದ ಪ್ರಜಾ ಆರೋಗ್ಯವು ಸಾಮಾನ್ಯವಾಗಿ ಅಭಿವೃದ್ಧಿಗೊಂಡುವುದು ಮಾತ್ರವಲ್ಲದೆ ಈಗಿನ ಮರಣಸಂಖ್ಯೆಯು ಬಹುಮಟ್ಟಿಗೆ ಕಡಮೆಯಾಗುವುದು ಮತ್ತು ಈಗಿರುವ ಟೌನ್ ಆರೋಗ್ಯವು ಕೆಡುವುದೆಂದು ವ್ಯವಸಾಯಮಾಡದಂತೆ ತಡೆದಿರುವ ಸುಮಾರು ೩,೦೦ ಎಕರೆ ಜಮೀನು ಮುಂದೆ ವ್ಯವಸಾಯಕ್ಕೆ ಬಂದು ಗವರ್ನಮೆಂಟಿಗೆ ಕಂದಾಯರೂಪದಲ್ಲಿ ವರುಷಕ್ಕೆ ೩,೦೦೦ ರೂಪಾಯಿ ವರೆಗೆ ಉತ್ಪತ್ತಿಯೂ ಆದೀತು. ಈಗ ಬೇರೆ ಕಡೆ ಊರು ಕಟ್ಟುವುದಕ್ಕಾಗಿ ಗವರ್ನಮೆಂಟಿಗೆ ಖರ್ಚಾಗುವ ಹಣವನ್ನು ಬಿಡುವಷ್ಟಿಗೆ ಆ ಉತ್ಪತ್ತಿಯಲ್ಲಿ ಭರ್ತಿ ಮಾಡಿಕೊಳ್ಳಬಹುದಾಗಿದೆ. ಈಗ ಗೊತ್ತುಮಾಡಿರುವ ಹೊಸ ಸ್ಥಳವು ೪೩ ಎಕರೆ ೯ ಗುಂಟೆ ವಿಸ್ತಾರವುಳ್ಳದ್ದಾಗಿದೆ. ಈ ಪೈಕಿ ೭ ಎಕರೆ ೫ ಗುಂಟೆಯಷ್ಟನ್ನು ತಾಲ್ಲೂಕ್ ಕಚೇರಿಯ ಆವರಣಕ್ಕೆ ಸೇರಿಸಿಕೊಳ್ಳುವರು

ಇದರ ಮೇಲೆ ಗವರ್ನಮೆಂಟಿನವರು ಹುಕುಂ ಮಾಡಿರುವುದೇನೆಂದರೆ—ಸರ್ಕಾರಿ ನೌಕರರಿಗೆ ಮನೆಗಳನ್ನು ಕಟ್ಟಿಕೊಡಬೇಕೆಂದು ಡೆಪ್ಯುಟಿ ಕಮಿಷನರು ಸೂಚಿಸಿರುವ ಸ್ಥಳವು ಅನುಕೂಲವಾಗಿರುತ್ತದೆ ಕಳ್ಳರು ಕಟ್ಟೆಯಲ್ಲಿ ಕಟ್ಟಿಸಿಕೊಟ್ಟಿರುವ ತರಹದ ಮನೆಗಳನ್ನು ಇಲ್ಲಿಯೂ ಸರ್ಕಾರಿ ನೌಕರರಿಗೆ ಕಟ್ಟಿಸಿಕೊಡಬಹುದು ಈ ಮನೆಗಳನ್ನು ಗವರ್ನಮೆಂಟ್ ಖರ್ಚಿನಿಂದ ಕಟ್ಟಿಸಿಕೊಟ್ಟು, ನೌಕರರಿಗೆ ಅಲ್ಪಸ್ವಲ್ಪ ಬಾಡಿಗೆಗೆ ಕೊಡಬಹುದು ಪ್ರಜೆಗಳು ಮನೆ ಕಟ್ಟಿಕೊಳ್ಳತಕ್ಕ ನಿವೇಶನವನ್ನು ಅದಕ್ಕಿಂತ ಪ್ರತ್ಯೇಕವಾಗಿರುವಂತೆ ವಿಂಗಡಿಸಿಕೊಡಬೇಕು ಈ ಭಾಗದಲ್ಲಿ ಮುಂದಿನ ಕಾರ್ಯಗಳನ್ನು ನಡಿಸಲು ಛೀಫ್ ಇಂಜನಿಯರವರು, ಡೆಪ್ಯುಟಿ ಕಮಿಷನರು, ಎಗ್ಸಿಕ್ಯುಟಿವ್ ಇಂಜನಿಯರು, ಸ್ಯಾನಿಟರಿ ಇಂಜನಿಯರು, ಈ ಮೊದಲಾದವರು ಆಲೋಚನೆಮಾಡಿ ಗವರ್ನಮೆಂಟಿನ ಸ್ಯಾಂಕ್ಷನ್ ಬಗ್ಗೆ ರಿಪೋರ್ಟ್ ಮತ್ತು ಅಂದಾಜು ಪಟ್ಟಿಗಳನ್ನು ಕಳುಹಿಸಬೇಕಾಗಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಕಳೆದವಾರ ಕಲ್ಕತ್ತೆಯಲ್ಲೂ ರಂಗೂನ್ ಪಟ್ಟಣದಲ್ಲೂ ಎರಡು ಸರ್ತಿ ಭೂಮಿಯು ಸಾವಧಾನವಾಗಿ ಕಂಪಿಸಿತು.

***

ಬಳ್ಳಾರಿಯಲ್ಲಿ ಇಂಡಿಯಾ ಗವರ್ನಮೆಂಟಿನವರು ೧೦,೦೦೦ ಇಂಗ್ಲಿಷ್ ಸೈನ್ಯವನ್ನು ತಂದಿಟ್ಟು, ಆ ಊರನ್ನು ಮಿಲ್ಟಿರಿ ಸ್ಟೇಷನ್ ಮಾಡುವವರಾಗಿದ್ದಾರೆಂದು ಪ್ರಕಟವಾಗಿದೆ

***

ಲಾಲಾ ಲಜಪತರಾಯರವರು ಈ ವಾರ ರಂಗೂನ್ ಪಟ್ಟಣಕ್ಕೆ ಹೋಗಿ ಹಿಂದುಸ್ಥಾನದ ಕ್ಷಾಮನಿವಾರಣೆಯ ಧರ್ಮ ಫಂಡಿಗೆ ಹಣವನ್ನು ಕೂಡಿಸಿಕೊಂಡು ಬರುವವರಾಗಿದ್ದಾರೆ

***

ಮದರಾಸ್ ಪಟ್ಟಣದ ವೈದ್ಯವಿದ್ಯಾಶಾಲೆಯಲ್ಲಿ ಈ ವರುಷ ಏಳು ಮಂದಿ ಸ್ತ್ರೀಯರು ಅ॥ ಸರ್ಜನ್ ಪರೀಕ್ಷೆ ಕೊಟ್ಟು, ಡಾಕ್ಟರುಗಳಾಗಿ ತೇರ್ಗಡೆ ಹೊಂದಿರುತ್ತಾರೆಂದು ತಿಳಿಸಲು ಸಂತೋಷಿಸುವೆವು

***

ಮದರಾಸ್ ಪಟ್ಟಣದಲ್ಲಿ ಕ್ರಿಶ್ಚಿಯನ್ ಕಾಲೇಜ್ ಎಂಬ ವಿದ್ಯಾಶಾಲೆಯನ್ನು ಬಹಾಮಣಿ ಮಾಡಿ ಕಟ್ಟಬೇಕೆಂಬ ಉದ್ದೇಶಕ್ಕೆ ಹೈದರಾಬಾದಿನ ನೈಜಾಮರವರು ೫,೦೦೦ ರೂಪಾಯಿ ಚಂದಾ ಹಣವನ್ನು ಕಳುಹಿಸಿಕೊಟ್ಟರು.

***

ಕಲ್ಕತ್ತಾ ಪಟ್ಟಣದಲ್ಲಿ ವಾಂತಿಭೇದಿ, ಸಿಡುಬು ಉಪದ್ರವಗಳು ಹೆಚ್ಚುತ್ತಾ ಬಂದಿವೆ. ಹೋದ ವಾರ ವಾಂತಿಭೇದಿಯಿಂದ ೨೫೪ ಜನರೂ, ಸಿಡುಬಿನಿಂದ ೩೧ ಜನರೂ ಕಾಲವಾದರು ಅದರ ಹಿಂದಿನ ವಾರ ೨೦೯–೨೦ ಈ ರೀತಿ ಮರಣಗಳಾಗಿದ್ದವು.

***

ಬಂಗಾಳಾ ಅಧಿಪತ್ಯದಲ್ಲಿ ಅಡ್ವೊಕೇಟ್ ಜನರಲ್ ಎಂಬ ಅಧಿಕಾರವನ್ನು ಚಕ್ರವರ್ತಿ ಸಾರ್ವಭೌಮರವರು ಮೆ॥ ಎಸ್ ಪಿ ಸಿನ್ಹಾ ಎಂಬ ದೇಶೀಯ ಬ್ಯಾರಿಸ್ಟರಿಗೆ ಕೊಟ್ಟಿರುತ್ತಾರೆ ಇದುವರೆಗೆ ಈ ಕೆಲಸಕ್ಕೆ ಯೂರೋಪಿಯನ್ ಸರದಾರರೇ ನೇಮಕವಾಗುತ್ತಿದ್ದರು

***

ಬೊಂಬಾಯಿ ಪಟ್ಟಣದಲ್ಲಿ ೨೩೭ ಮಂದಿ ಟೆಲಿಗ್ರಾಫ್ (ತಂತೀವರ್ತಮಾನ) ಕಳಿಸುವ ಜವಾನರು ತಮ್ಮ ಸಂಬಳವನ್ನು ಹೆಚ್ಚಿಸಿಕೊಡದಿದ್ದರೆ ಕೆಲಸಕ್ಕೆ ಬರುವುದಿಲ್ಲವೆಂದು ಹೇಳಿ ಹಟಹಿಡಿದು ನಿಂತುಬಿಟ್ಟಿದ್ದಾರೆ ತಂತೀ ವರ್ತಮಾನಗಳನ್ನು ಅಂಚೆಯ ಜವಾನರ ಮೂಲಕವೇ ಜನರಿಗೆ ಪಾವತಿಮಾಡಿಸುತ್ತಿದ್ದಾರೆ

***

ಬರೋಡಾ ಸಂಸ್ಥಾನದಲ್ಲಿ ರೈಲ್ವೆ ಸ್ಟೇಷನ್ನಿಂದ ಊರಿನ ಮುಖ್ಯ ರಾಜಮಾರ್ಗಗಳಲ್ಲೆಲ್ಲಾ ಟ್ರಾಂ ಗಾಡಿಗಳನ್ನು ಓಡಿಸುವುದಕ್ಕೆ ಒಂದು ಕಂಪನಿಯವರು ಕಂಟ್ರಾಕ್ಟು ವಹಿಸಿಕೊಂಡು, ಕಂಬಿ ಹಾಕುವುದನ್ನು ಪ್ರಾರಂಭಿಸಿದ್ದಾರೆ ಇನ್ನೆರಡು ತಿಂಗಳೊಳಗಾಗಿ ಗಾಡಿಗಳು ಓಡಾಡ ಮಾಡಲಾಗುವುದೆಂದು ತಿಳಿದು ಬಂದಿದೆ

***

ಕಳೆದ ವಾರ ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವದಿಂದಾದ ಮರಣಗಳು ಹಿಂದಿನ ವಾರಕ್ಕಿಂತ ಹೆಚ್ಚಾದವು ಒಟ್ಟು ೬,೮೫೯ ಜನರು ಈ ಉಪದ್ರವದಲ್ಲಿ ಕಾಲವಾದರು ಈ ಪೈಕಿ ಪಂಜಾಬ್ ೨,೩೭೯, ಸಂಯುಕ್ತ ಅಧಿಪತ್ಯಗಳು ೧,೬೩೪, ಬೊಂಬಾಯಿ ಅಧಿಪತ್ಯ ೧,೪೮೬, ರಾಜಪುಟಾನಾ ೬೭೧, ಈ ರೀತಿ ಮರಣಗಳಾಗಿವೆ.

***

ರಂಗೂನ್ ಪಟ್ಟಣದಿಂದ ನಾಲ್ಕು ಮೈಲಿ ದೂರದಲ್ಲಿರುವ ಕೆಮ್ಮೆಂಡೈನ್ ಎಂಬ ಸ್ಥಳದಲ್ಲಿ ಬೆಂಕಿಬಿದ್ದು ೪೯ ಮನೆಗಳು ನಾಶವಾದವು ಒಂದು ಮನೆಯಲ್ಲಿ ಚಿಮಿಣಿ ಯಣ್ಣೆಯ ದೀಪ ಉರುಳಿಕೊಂಡದ್ದರಿಂದ ಈ ಅನಾಹುತವಾಯಿತೆಂತಲೂ, ಇದರಿಂದ ಒಂದೂವರೆ ಲಕ್ಷ ರೂಪಾಯಿನ ಆಸ್ತಿಗಳು ನಷ್ಟವಾದವೆಂತಲೂ ತಂತೀ ವರ್ತಮಾನ ಬಂದಿದೆ.

***

ಉತ್ತರ ದೇಶಕ್ಕೆ ಸೇರಿದ ಪಾಟ್ನಾ ಎಂಬ ಘಾಟೀ ನಗರದ ರೈಲ್ವೆ ಸ್ಟೇಷನ್ನಿನಲ್ಲಿ ಎರಡು ರೈಲ್ ಗಾಡಿಗಳು ಎದುರುಬದುರಾಗಿ ಬಂದು ಬಡಿದಾಡಿ ಅನಾಹುತವಾಯಿತು. ಇದರಿಂದ ಏಳು ಗಾಡಿಗಳು ಒಡೆದುಹೋದವು. ಎರಡು ಗಾಡಿಗಳಲ್ಲಿ ಸೀಮೆಯೆಣ್ಣೆ ಭರ್ತಿಯಾಗಿದ್ದದ್ದು ಹತ್ತಿ ಉರಿದುಹೋಯಿತು ಮೂವರು ಜನರಿಗೆ ತುಂಬಾ ಗಾಯಗಳಾಗಿ ಬದುಕುವುದು ಕಷ್ಟವೆಂದು ತಿಳಿದು ಬಂದಿದೆ

***

ಬರೋಡಾ ಸಂಸ್ಥಾನಕ್ಕೆ ಸೇರಿದ ಭಾಬಾಯಿ, ಸಿದ್ಪುರ, ನವಸಾರಿ ಎಂಬೀ ಸ್ಥಳಗಳಲ್ಲಿ ಹತ್ತಿ, ಅಫೀಮು, ಕಬ್ಬು, ಈ ಬೆಳೆಗಳನ್ನು ನೆಟ್ಟು, ರೈತರ ಜನಗಳಿಗೆ ವಿವೇಕವನ್ನು ಕಲಿಸಬೇಕೆಂದೂ, ಆ ಸಂಸ್ಥಾನದಲ್ಲಿ ಈ ಬೆಳೆಗಳು ವಿಶೇಷವಾಗಿ ಆಗುವಂತೆ ಪ್ರೋತ್ಸಾಹಪಡಿಸಬೇಕೆಂದು ಮಹಾರಾಜರವರು ಅಪ್ಪಣೆ ಕೊಟ್ಟು, ಪರೀಕ್ಷಾರ್ಥವಾದ ಹೊಲಗಳನ್ನು ಅಲ್ಲಲ್ಲಿ ಕಲ್ಪಿಸಬೇಕೆಂದು ಸ್ಯಾಂಕ್ಷನ್ ಮಾಡಿದ್ದಾರೆ

***

ತಿರುವಾಂಕೂರು (ಅನಂತಶಯನ ರಾಜಧಾನಿಯಾದ) ತ್ರಿವಾಂಡ್ರಂ ನಗರದಲ್ಲಿ ಯಾವ ಮತದವರೇ ಆಗಲಿ, ಯಾವ ಗುಂಪಿನವರೇ ಆಗಲಿ ಇನ್ನು ಎರಡು ತಿಂಗಳ ಕಾಲ ಸರ್ಕಾರಿ ಬಹಿರಂಗವಾದ ಸ್ಥಳಗಳಲ್ಲಿ ಎಂಥಾ ಉಪನ್ಯಾಸವನ್ನೂ ಮಾಡಕೂಡದೆಂತಲೂ, ಇದರಿಂದ ಪ್ರಜಾ ಸಮಾಧಿಗೆ ಭಂಗವುಂಟಾದೀತೆಂಬ ಅನುಮಾನ ಉಂಟಾಗಿದೆ ಎಂತಲೂ ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಇಸ್ತಿಹಾರು ಹಾಕಿಸಿರುತ್ತಾರೆ

***

ಬೊಂಬಾಯಿ ಪಟ್ಟಣದಲ್ಲಿ ಅಸಂ ಮೈಲಿ ಯವರ ಜ್ಞಾಪಕಾರ್ಥವಾಗಿ ಪಾಲಿಟಾನಾ ಸಂಸ್ಥಾನದ ಕುಮಾರ ಶ್ರೀ ವಿಜಯಸಿಂಗ್‌ಜಿ ಯವರು ಒಂದು ಆಸ್ಪತ್ರೆಯನ್ನು ಕಟ್ಟಿಸಿ, ಅದರಲ್ಲಿ ವಿಶೇಷವಾಗಿ ಕ್ಷಯ ರೋಗಗಳಿಗೇ ಚಿಕಿತ್ಸೆ ನಡಿಯುವಂತೆ ಏರ್ಪಾಡು ಮಾಡಿದ್ದಾರೆ ಈ ಕಟ್ಟಡವನ್ನು ಬೊಂಬಾಯಿ ಗವರ್ನರವರು ಕಳೆದ ವಾರ ಪ್ರತಿಷ್ಠೆ ಮಾಡಿ, ಆ ಕುಮಾರರವರ ಧರ್ಮ ಬುದ್ಧಿಯನ್ನು ಕೊಂಡಾಡಿದರು ಪ್ರಯೋಗ ಚಿಕಿತ್ಸೆಗೆ ಹಿಂದುಸ್ಥಾನದಲ್ಲಿ ಇದೇ ಮೊದಲನೆಯ ಆಸ್ಪತ್ರೆಯೆಂದು ತಿಳಿದುಬಂದಿದೆ

***

ಬೊಂಬಾಯಿ ಪಟ್ಟಣದ ಭೈಕಲಾ ಎಂಬ ಭಾಗದಲ್ಲಿ ಥ್ಯಾಕರ್ಸೇ ಮಿಲ್ಲಿನ ಕಂಪನಿಯವರ ಹತ್ತಿ ಕಾರ್ಖಾನೆಗೆ ಬೆಂಕಿ ಬಿದ್ದು ೫೬ ಲಕ್ಷ ರೂಪಾಯಿನ ಮಾಲುಗಳೂ ಆಸ್ತಿಗಳೂ ನಷ್ಟವಾದವು. ಈ ಕಾರ್ಖಾನೆಯಲ್ಲಿ ೬೩೦ ಮಗ್ಗಗಳೂ ೩೮,೦೦೦ ರಾಟೆಗಳೂ ಇದ್ದವು ಅದರ ಮೂಲಧನ ೧೨ ಲಕ್ಷ ರೂಪಾಯಿ ೧,೭೫೫ ಮಂದಿ ಈ ಕಾರ್ಖಾನೆಯಲ್ಲಿ ಕೆಲಸಮಾಡಿ ಜೀವನವನ್ನು ಸಂಪಾದಿಸಿಕೊಳ್ಳುತ್ತಿದ್ದರು ಇಂಥಾ ಭಾರಿಯಾದ ದೇಶೀಯ ಕಾರ್ಖಾನೆಯು ಈ ರೀತಿ ಹಾಳಾದದ್ದಕ್ಕಾಗಿ ವಿಷಾದಪಡಬೇಕಾಗಿದೆ

***

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಕಳೆದ ವಾರ ಕಲ್ಕತ್ತೆಯಿಂದ ಗ್ವಾಲಿಯರ್ ಸಂಸ್ಥಾನಕ್ಕೆ ದಯಮಾಡಿ, ಸಿಂಧಿಯಾ ಮಹಾರಾಜರವರ ಅತಿಥಿಸತ್ಕಾರವನ್ನು ಹೊಂದುತ್ತಲಿದ್ದಾರೆ ಅಲ್ಲಿನ ಸೈನ್ಯದ ಕವಾಯಿತನ್ನು ಪರಾಂಬರಿಸಿದರು. ಸೈನ್ಯಗಳು ಎರಡು ಪಂಗಡಗಳಾಗಿ ಒಬ್ಬರಮೇಲೊಬ್ಬರು ನಕಲಿ ಯುದ್ಧಮಾಡಿ, ತಮ್ಮ ಸಾಹಸ ಚಮತ್ಕಾರಾದಿಗಳನ್ನು ಪ್ರಕಾಶಪಡಿಸಿದರು ತರುವಾಯ ವೈಸ್‌ರಾಯಿಯವರು ಬೇಟೆಗೆ ದಯಮಾಡಿ ನಾಲ್ಕು ಹುಲಿಗಳನ್ನೂ ಒಂದು ಚಿರತೆಯನ್ನೂ ಶಿಕಾರಿಮಾಡಿಕೊಂಡು ಬಂದರು.

***

ಮಿಡ್ನಾಪುರದ ಸಿವಿಲ್ ಸರ್ಜನ್ ಕ್ಯಾಪ್ಟನ್ ಬ್ರಿಡ್ಯಾಂಸನ್ ಎಂಬಾತನು ರಂಗಪುರದ ರೈಲ್ವೆ ಸ್ಟೇಷನ್ನಿನಲ್ಲಿ ೨ನೇ ಕ್ಲಾಸ್ ಗಾಡಿಯೊಳಗೆ ಕುಳಿತಿದ್ದ ಪಂಡಿತ ಯಾದವೇಶ್ವರ ನೆಂಬಾತನನ್ನು ಹೊಡೆದು ಗಾಡಿಯಿಂದ ಎಳೆದು ಹಾಕಿದನು ಸ್ಟೇಷನ್ ಮಾಸ್ಟರು ಹೋಗಿ ಆ ಸಾಹೇಬನನ್ನು ಗದ್ದರಿಸಿದಾಗ ಸಾಹೇಬನು ಸ್ಟೇಷನ್ ಮಾಸ್ಟರನ್ನೂ ಚೆನ್ನಾಗಿ ಹೊಡೆದನು ತರುವಾಯ ಅಲ್ಲಿದ್ದ ಬಂಗಾಳಿಗಳು ಆ ಸಾಹೇಬನ ಮೇಲೆ ಬಿದ್ದು ಅವನನ್ನು ಚೆನ್ನಾಗಿ ಹೊಡೆದರು ಈಗ ಈ ದೊಂಬೀ ವಿಚಾರವನ್ನು ಪೋಲೀಸಿನವರು ತನಿಖೆಮಾಡುತ್ತಿದ್ದಾರೆ

***

ತಿರುವಾಂಕೂರು (ಅನಂತಶಯನ) ಸಂಸ್ಥಾನದ ದಕ್ಷಿಣ ಪ್ರಾಂತ್ಯದಲ್ಲಿ ನಾಲ್ಕೈದು ತಾಲ್ಲೂಕುಗಳೊಳಗೆ ದನಗಳ ರೋಗವು ಪ್ರಾರಂಭವಾಗಿ ಇದುವರೆಗೆ ಸುಮಾರು ನಾಲ್ಕು ಸಾವಿರ ಗೋಕರುಗಳು ಮೃತಪಟ್ಟವು ಪ್ರತಿದಿನವೂ ನೂರು ರಾಸುಗಳಿಗೆ ಕಡಮೆ ಇಲ್ಲದೆ ಸಾಯುತ್ತಲಿವೆ ರೈತ ಪ್ರಜೆಗಳು ತುಂಬಾ ನಷ್ಟಹೊಂದಿ ಬಹಳ ವ್ಯಸನಪಡುತ್ತಿದ್ದಾರೆ ಗವರ್ನಮೆಂಟಿನವರು ಮದರಾಸಿನಿಂದ ಒಳ್ಳೇ ನಿಪುಣರಾದ ಪಶುರೋಗ ಚಿಕಿತ್ಸಕರನ್ನು ಕರೆಸಿಕೊಂಡು, ಆ ರೋಗವನ್ನು ಇತರ ಕಡೆಗಳಿಗೆ ಹಬ್ಬದಂತೆ ತಡೆಯಬೇಕೆಂದು ಪ್ರಯತ್ನ ಪಡುತ್ತಿರುವರು.

***

ಹಿಂದುಸ್ಥಾನದ ವಾಯವ್ಯ ಸರಹದ್ದಿನ ಅಟಕ್ ಕೋಟೆ ನಗರದಿಂದ ಸ್ವಲ್ಪ ದೂರದಲ್ಲಿ ಯಾರೋ ೨,೦೦೦ ಬಂದೂಕುಗಳನ್ನು ಹೂತಿಟ್ಟಿದ್ದಾರೆಂದು ತಿಳಿದು ಬಂದಿದೆ ಈ ಸಂಗತಿಯನ್ನು ತಿಳಿದು ಆ ಪ್ರಾಂತ್ಯದ ಜನರು ೪೦೦ ಮಂದಿ ಅದನ್ನು ತೆಗೆದುಕೊಂಡು ಬರಬೇಕೆಂದು ಹೊರಟಿದ್ದಾರೆ ಅದರ ಸಮೀಪದಲ್ಲೇ ಇರುವ ಇಂಗ್ಲಿಷ್ ರಾಜ್ಯದವರು ಕೂಡ ಆ ಬಂದೂಕುಗಳನ್ನು ಕಿತ್ತು ಸ್ವಾಧೀನಪಡಿಸಿಕೊಂಡು ಬರಬೇಕೆಂದು ಪ್ರಯತ್ನಪಟ್ಟಿದ್ದಾರೆ ಇವರ ಸಹಾಯಕ್ಕಾಗಿ ಬೇರೆ ೬೦೦ ಸೈನಿಕರನ್ನು ಇಂಡಿಯಾ ಗವರ್ನಮೆಂಟಿನವರು ಅಲ್ಲಿಗೆ ಕಳುಹಿಸುವರು ಎಂದು ಪ್ರಕಟವಾಗಿದೆ.

***

ಉತ್ತರ ದೇಶದಲ್ಲಿ ಕ್ಷಾಮ ಬಾಧೆಯು ಹೆಚ್ಚಾಗುತ್ತಲೇ ಇದೆ ಸುಮಾರು ೧೬ ಲಕ್ಷ ಪ್ರಜೆಗಳು ಸರ್ಕಾರದವರ ಪೋಷಣೆಯಲ್ಲಿರುತ್ತಾರೆ ಮೊನ್ನೆ ಹೋದ ವಾರ ಸಾಯಂಕಾಲ ಮದರಾಸ್ ಪಟ್ಟಣದಲ್ಲಿ ಗವರ್ನರವರು ಒಂದು ಮಹಾ ಸಭೆಯನ್ನು ನಡಿಸಿ, ಉತ್ತರದೇ

ಜ್ಞಾಪಕ ನಿರ್ಮಾಣಕ್ಕಾಗಿ ಒಂದು ಫಂಡ್ ಫಂಡನ್ನು ಏರ್ಪಡಿಸುವ ಚಂದಾ ಕೂಡಿಸಲಾರಂಭಿಸಿರುವ ವೈಸರಾಯಿಯವರು ಕಲ್ಕತ್ತೆ ಯಲ್ಲಿ ಪ್ರಾರಂಭಿಸಿದ ಈ ಧರ್ಮ ಫಂಡಿಗೆ ಇದುವರೆಗೆ ಒಂದು ಲಕ್ಷ ತೊಂಬತ್ತು ಸಾವಿರ ರೂಪಾಯಿಗಿಂತಲೂ ಹೆಚ್ಚಾಗಿ ಚಂದಾ ವಸೂಲಾಗಿರುವುದೆಂದು ತಿಳಿದು ಬಂದಿದೆ.

***

ಕಳೆದ ಜನವರಿ ೧ ನೆ ತಾರೀಖಿನ ದಿನ ವಾಯವ್ಯ ಪ್ರಾಂತ್ಯಗಳಿಗೆ ಸೇರಿದ ಬಿಂದ್ವಾರಾ ಎಂಬ ಊರಿನಲ್ಲಿ ಸೇಟ್ ರಘುದ್ದಾಸ್ ಎಂಬೊಬ್ಬ ಜೈನ ವೈಸಿಕನು ತನ್ನ ಅಂಗಡಿಯಲ್ಲಿ ಕುಳಿತಿದ್ದಾಗ್ಗೆ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಮಿ॥ ಫ್ಲೇಸ್ಛೇರ್ ಎಂಬ ಅಧಿಕಾರಿಯು ಆತನ ಅಂಗಡಿಯ ಮುಂದೆ ಹೋದಾಗ ಆ ವರ್ತಕನು ಎದ್ದು ಸಲಾಮು ಮಾಡಲಿಲ್ಲವೆಂಬದಾಗಿ ಕೋಪಿಸಿಕೊಂಡು ಆ ಸಾಹೇಬನು ಆತನನ್ನು ಹೊಡೆದು ಸ್ಪೈದನೆಂದೂ, ೫೦೦ ರೂಪಾಯಿ ಡಾಮಿ ಜ ಕೊಡಿಸಬೇಕೆಂದೂ ಆ ವರ್ತಕನು ಆ ಸಾಹೇಬರ ಮೇಲೆ ಸಿವಿಲ್ ಕೋರ್ಟಿನಲ್ಲಿ ನಾಲಿಶನ್ನು ಡಾವಾ ತಂದಿರುವನು.

***

ರಂಗೂನ್ ಪಟ್ಟಣದಲ್ಲಿ ಒಬ್ಬ ಚೀನೆಯವನು ಕಳೆದ ಮಾ ೨೦ ನೆ ದಿನ ರಾತ್ರಿ) ಇಂದಿನ ಮನೆಗಳ ಪೈಕಿ ಮೂರಕ್ಕೆ ನುಗ್ಗಿ ನಗ ನಾಣ್ಯಗಳನ್ನು ಅಪಹರಿಸಿ, ಇನ್ನೊಂದು ಮನೆಗೆ ಪ್ರವೇಶಿಸಿದನು. ಅದರ ಕೋಣೆಯಲ್ಲಿ ಮಲಗಿದ್ದ ದೊರೆಸಾನಿಯು ನಿದ್ದೆಯಿಂದೆಚ್ಚತ್ತು ತಲೆ ಬಳಿಗೆ ಇಟ್ಟುಕೊಂಡಿದ್ದ ಪಿಸ್ತೂಲನ್ನು ಬಾರು ಮಾಡಿ ಹೊಡೆದು ಆ ಕಳ್ಳನ ಗಾಯ ಮಾಡಿದಳು. ಅವನು ಏಟುತಿಂದು ಪೆಟ್ಟು ಇಳಿದು ಬರುವುದಕ್ಕಾಗದೆ ಮೆಟ್ಟಿಲ ಮೇಲೆ ಆಕ್ರೋಶಿಸುತ್ತಾ ಬಿದ್ದಿದ್ದನು. ಪೋಲೀಸಿನವರು ಅವನನ್ನು ಹಿಡಿದು ಅವನ ಬಳಿ ಇದ್ದ ಕಳವು ಮಾಲನ್ನೆಲ್ಲಾ ತೆಗೆದುಕೊಂಡು, ಅವನೀದ ಸ್ವಹಸ್ತ ಯತ್ತು ಬರೆದು ಕೊಂಡರು. ಕಡೆಗೆ ಅವನು ಆಸ್ಪತ್ರೆಯಲ್ಲಿ ತೀರಿಹೋದನು.

***

ತಿನ್ನವೆಲ್ಲಿ, ಟುಟಿಕಾರಿನ ಪಟ್ಟಣಗಳಲ್ಲಿ ಪ್ರಜೆಗಳು ದಂಗೆಮಾಡಿದ್ದರಿಂದ ಮದರಾಸ್ ಗವರ್ನಮೆಂಟಿನವರು ಆ ಪಟ್ಟಣಗಳಲ್ಲಿ ಶಿಕ್ಷಾರ್ಥವಾದ ಪೊಲೀಸ್ ಕಿಬ್ಬಂದಿಯನ್ನು ನೇಮಿಸಿದರಷ್ಟೆ. ಈ ಭಾಗದ ಸ್ಥಳಿಕರು ಸ್ಥಳನಿದ್ವಮಾನಗಳನ್ನು ಗವರ್ನರವರಿಗೆ ಅರಿಕೆ ಮಾಡಿ, ಆ ಪೋಲೀಸ್ ಕಿಬ್ಬಂದಿಯನ್ನು ವಜಾಮಾಡಿಸಿ ಕೊಳ್ಳಬೇಕೆಂದು ಕೆಲವು ದೊಡ್ಡ ಮನುಷ್ಯರು ಅಲ್ಲಿಂದ ಕಳೆದ ಬುಧವಾರ ಮಧ್ಯಾಹ್ನ ದಲ್ಲಿ ಬಂದರು. ಇವರಿಗೆ ಸುಮಾರು ಮೂರು ಗಂಟೆಗಳ ಕಾಲ ಸಂಭಾಷಣೆ ಅವಕಾಶ ಕೊಟ್ಟು, ಅವರು ಅರಿಕೆಮಾಡಿದ ಸಂಗತಿಗಳನ್ನೆಲ್ಲಾ ಕೇಳಿ, ಶಿಕ್ಷಾರ್ಥವಾದ ಪೊಲೀಸನ್ನು ತೆಗೆದುಹಾಕುವುದಕ್ಕೆ ತೃಪ್ತಿಕರವಾದ ಕಾರಣಗಳನ್ನು ಅವರು ತೋರಿಸಲಿಲ್ಲವೆಂದು ಜವಾಬು ಕೊಟ್ಟರು.

***

ರಂಗೂನ್ ಪಟ್ಟಣದ ಮ್ಯುನಿಸಿಪಾಲಿಟಿಯವರು ಬೀದಿಬಾಟಲ ಪಕ್ಕದ ಅಂಗಡಿಗಳನ್ನು ಇಟ್ಟುಕೊಳ್ಳತಕ್ಕ ವರ್ತಕರಿಂದ ಒಂದು ಆಡಿ ಯ ಸ್ಥಳಕ್ಕೆ ತಿಂಗಳಿಗೆ ೧ ಆಣೆ ಲೆಖ್ಖದಿಂದ ೨ ರೂಪಾಯಿ ವರೆಗೆ ತೆರಿಗೆಯನ್ನು ನಿರ್ಧರಿಸಿ ಮಾಡಿ ಈ ತಿಂಗಳ ೧೦ ನೆ ತಾರೀಖು ಲಾಗಾಯತು ವಸೂಲ್ಮಾಡಬೇಕೆಂದು ಇಸ್ತಿಹಾರು ಹಾಕಿಸಿದರು. ಅಲ್ಲಿನ ವರ್ತಕರೂ ಚಿಲ್ಲರೆ ವ್ಯಾಪಾರಗಾರರೂ ಪ್ರಜೆಗಳೂ ಸಾವಿರಾರು ಮಂದಿ (ಸೋಮವಾರ)ಯಲ್ಲಿ ಸಭೆ ಸೇರಿ ಈ ತೆರಿಗೆಯನ್ನು ಯಾರೂ ಕೊಡ ಕೂಡದೆಂದು ಗೊತ್ತು ಮಾಡಿಕೊಂಡರು. ಮರುದಿನ ಸರ್ಕಾರದವರು ಪ್ರಜೆಗಳಿಗೂ ಕಲಹಗಳಾದವು. ಬೀದಿಬೀದಿಗಳಲ್ಲಿ ನೂರಾರು ಪೋಲೀಸಿನವರೂ ಸಿಪಾಯಿಗಳೂ ನಿಂತು ಪಹರೆ ಕೊಡುತ್ತಾ ಬಂದರು. ಗುದ್ದಾಟದಲ್ಲಿ ಎರಡು ಪಕ್ಷದಲ್ಲೂ ಕೆಲವರಿಗೆ ಕಲ್ಲೇಟುಗಳು ಬಿದ್ದವು. ಇದು ಪ್ರಜಾನಿನ್ನಾದಿಯು ನೆರೆಗೊಂಡಿಲ್ಲವೆ.

***

ಕಳೆದ ಶನಿವಾರ ಬೆಳಿಗ್ಗೆ ಮದರಾಸ್ ಪಟ್ಟಣದ ವಿಕ್ಟೋರಿಯಾ ಹಾಲ್ ಎಂಬ ಸಭಾಮಂದಿರದಲ್ಲಿ ಮಹಮ್ಮದೀಯ ವಿದ್ಯಾಭಿವೃದ್ಧಿ ಸಭೆ ಯಾದವು ಪ್ರಾರಂಭವಾಯಿತು. ದಕ್ಷಿಣ ದೇಶದ ಎಲ್ಲಾ ಭಾಗಗಳಿಂದ ಮಹಮ್ಮದೀಯ ಪ್ರತಿನಿಧಿಗಳು ಸೇರಿದ್ದರು. ಮದರಾಸಿನಲ್ಲಿ ಮೈಸೂರು ರಾಜ್ಯದ ರಾಯಭಾರಿಯಾಗಿರುವ ಖಾನ್ ಬಹದೂರ್ ಹಾಜಿ ಇಸ್ಮಾಯಿಲ್ ಅಬ್ದುಲ್ ಅಜೀಜ್ ಬಾದ್‌ಷಾ ಸಾಹೇಬ್ ಯವರು ಪ್ರತಿನಿಧಿಗಳಿಗೆ ಸುಸ್ವಾಗತವನ್ನು ಬಯಸಿ, ಉಪನ್ಯಾಸಪೂರ್ವಕವಾಗಿ ಸಭೆಯನ್ನು ಪ್ರಾರಂಭಿಸಿದರು. ವೇಲೂರ ಅರಬಿ ಕಾಲೇಜಿನ ಪ್ರಿನ್ಸಿಪಲ್ ಆಗ ಬಹದೂರ್ ನವಾಬ್ ಮಹಮದ್ ರಜಾಖಾನ್ ಯವರು ಸಭಾನಾಯಕರಾಗಿದ್ದರು. ಬಹುಮಂದಿ ಮಹಮ್ಮದೀಯ ದೊಡ್ಡಮನುಷ್ಯರೂ ಯೂರೋಪ್ಯರೂ ಸಹಾಯರೂ ಮಹಮ್ಮದೀಯ ಬಾಲಕರ ವಿದ್ಯಾಭಿವೃದ್ಧಿಗೋಸ್ಕರವಾಗಿ ಏರ್ಪಾಡುಗಳನ್ನು ಕುರಿತು ವಿಷಯದಲ್ಲಿ ಬಹಳ ಉಪಯುಕ್ತವಾದ ಸರಸವೂ ಆದ ಉಪನ್ಯಾಸಗಳನ್ನು ಮಾಡಿದರು. ಸಮಸ್ತ ಸರ್ಕಾರಿ ವಿದ್ಯಾಶಾಲೆಗಳಲ್ಲಿಯೂ ಗ್ರ್ಯಾಂಟ್ ಸ್ಕೂಲುಗಳಲ್ಲಿಯೂ ಮಹಮ್ಮದೀಯ ವಿದ್ಯಾರ್ಥಿಗಳಿಗೆ ಅರ್ಧ ಫೀಸು ಮಾಫ್‌ಮಾಡಿ ವಿದ್ಯೆ ಕಲಿಸುವ ಸಭಿಕರು ಗವರ್ನಮೆಂಟಿನವರನ್ನು ಕೇಳಿಕೊಳ್ಳಬೇಕೆಂದು ನಿರ್ಧಾರ ಮಾಡಿದರು.

***

ಕಲ್ಕತ್ತಾ ಪಟ್ಟಣದಲ್ಲಿ ಹಿಂದುಸ್ಥಾನದ ಇನ್ನೂ ಕೆಲವು ಪಟ್ಟಣಗಳಲ್ಲಿ ತಂತೀ ವರ್ತಮಾನ ಕೊಡುವ ಆಫೀಸುಗಳಲ್ಲಿ ನೌಕರ ರೊಳಗೆ ಹಾಜರಾತಿ ವಿಷಯದಲ್ಲಿ ಈ ತಿಂಗಳ ಪ್ರಾರಂಭದಿಂದ ಮುಷ್ಕರವಾಯಿತು. ಹೊಸ ಏರ್ಪಾಡನ್ನು ಮಾಡಿ ಜಾರಿಗೆ ತಂದರು. ಆ ನೌಕರರು ಈ ಹೊಸ ಕ್ರಮದಿಂದ ತಮಗೆ ಕೆಲಸ ಹೆಚ್ಚಾಗುತ್ತೆಂದೂ, ಈ ಅನಾನುಕೂಲವನ್ನು ತಪ್ಪಿಸದಿದ್ದರೆ ತಾವು ಕೆಲಸ ಮಾಡುವುದು ಕಷ್ಟವಾದೀತೆಂದೂ ಗವರ್ನಮೆಂಟಿಗೆ ಅರಿಕೆಮಾಡಿಕೊಂಡರು. ಗವರ್ನಮೆಂಟಿನವರು ಖಂಡಿತವಾದ ಉತ್ತರ ಕೊಡದೆ ಇರುತ್ತಾ ಬಂದದ್ದರಿಂದ ಕಲ್ಕತ್ತಾ ಪಟ್ಟಣದ ಟೆಲಿಗ್ರಾಫ್ ಆಫೀಸುಗಳಲ್ಲಿ ಹಿಂದುಸ್ಥಾನದ ತಂತೀ ವರ್ತಮಾನಗಳು ಎಂಟು ಸಾವಿರವೂ, ವಿದೇಶಗಳ ತಂತೀ ವರ್ತಮಾನಗಳು ಎಳು ನೂರೂ ವಿಳಂಬವಾದರಿಂದ ಬಟವಡೆ ಆಗದೆ ಉಳಿದು ಹೋದವು. ಈ ಪೈಕಿ ಕೆಲವನ್ನು ರಂಗೂನಿಗೂ, ಢಾಕಾ, ಬೆಂಗಳೂರು, ಗೌಹಟ್ಟಿಗೂ ಅಂಚೆಯ ಮೂಲಕ ಕಳುಹಿಸಿದರು. ಕರಾಚಿ, ಅಲಹಾಬಾದ್, ಬೊಂಬಾಯಿ, ರಂಗೂನ್, ಈ ಮೊದಲಾದ ಪಟ್ಟಣಗಳಲ್ಲೂ ಇದೇ ಸ್ಥಿತಿ ಪ್ರಾಪ್ತವಾಗಿದೆ. ಆಯಾ ಪಟ್ಟಣಗಳ ವರ್ತಕರ ಮಂಡಲಿಯವರು ತಮ್ಮ ಕಷ್ಟ ನಷ್ಟಗಳನ್ನು ಗವರ್ನಮೆಂಟಿಗೆ ಅರಿಕೆ ಮಾಡಿಕೊಂಡು, ಟೆಲಿಗ್ರಾಫ್ ಇಲಾಖೆಯ ಈ ಅಕ್ರಮಗಳನ್ನು ಕೂಡಲೇ ಸರಿಪಡಿಸಿಕೊಡಬೇಕೆಂದು ತಿಳಿಸಿದ್ದಾರೆ.

ವಿದೇಶ ವರ್ತಮಾನಗಳು.

ಸ್ಪ್ಯಾಂಕ್ ಬರ್ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೆ ಜೀವನಾರ್ಥವಾಗಿ ಹೋಗಿ ಇಳಿದುಮುನ್ನೂರು ಜನ ಬೀಡೆಯವರನ್ನು ಅಲ್ಲಿನ ಸರ್ಕಾರದವರು ಊರೊಳಕ್ಕೆ ಬರಗೊಡದೆ ವಾಪಸು ಕಳುಹಿಸಿಬಿಟ್ಟರು.

***

ಫ್ರಾನ್ಸ್ ಸಂಸ್ಥಾನದ ಪ್ರೆಸಿಡೆಂಟರಾದ ಎಂ. ಲೂಬಿಯರ್ ಯವರು ಬರುವ ತಿಂಗಳ ಮೊದಲನೇ ವಾರದಲ್ಲಿ ಸಂಚಾರ ಹೊರಟು ರಷ್ಯಾ, ಹಾಲೆಂಡ್, ಡೆನ್ಮಾರ್ಕ್, ನಾರ್ವೆ, ಈ ಮೊದಲಾದ ರಾಜ್ಯಗಳಿಗೆ ಹೋಗಿ ಬರುವವರಾಗಿದ್ದಾರೆ.

***

ಇಂಗ್ಲೆಂಡಿನ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿ ಪರಿವಾರ ಸಹಿತ ಫ್ರಾನ್ಸ್ ಸಂಸ್ಥಾನದ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರಕ್ಕೆ ಹೋಗಿ, ವೇಷ ಮರೆಸಿಕೊಂಡು, ಹದಿನೈದು ದಿನಗಳ ತನಕ ವಾಸಮಾಡಿಕೊಂಡಿದ್ದು ಹಿಂತಿರುಗುತ್ತಾರೆ.

***

ವಿಲಾಯತಿ ರಾಜ್ಯದ ಮಂತ್ರಿಶ್ರೇಷ್ಠರಾದ ಸರ್ ಹೆನ್ರಿ ಕ್ಯಾಂಬೆಲ್ ಬ್ಯಾನರ್ಮನ್‌ರವರ ದೇಹಸ್ಥಿತಿಯು ಈಗ ಸ್ವಲ್ಪ ಚನ್ನಾಗಿದೆ. ಡೊರೆಯವರು ತಮ್ಮ ವೈದ್ಯರಾದ ಡಾಕ್ಟರ್ ಡಾಸನ್ ಎಂಬುವರನ್ನು ಮಂತ್ರಿಯ ಮನೆಗೆ ಕಳುಹಿಸಿ, ಅವರ ದೇಹಸ್ಥಿತಿಯನ್ನು ವಿಚಾರಿಸಿಕೊಳ್ಳುತ್ತಿದ್ದಾರೆ.

***

ಸಂಯುಕ್ತ ಅಧಿಪತ್ಯಗಳಿಗೆ ಸೇರಿದ ಓಹಿಯೋ ಮೊದಲಾದ ಕಡೆಗಳ ಗಣಿಗಳಲ್ಲಿ ಕೆಲಸ ಮಾಡತಕ್ಕ ಎರಡೂವರೆ ಲಕ್ಷ ಮಂದಿ ಕೂಲಿಕಾರರು ತಮ್ಮ ಕೂಲಿ ದರಗಳನ್ನು ಜಾಸ್ತಿಮಾಡಿ ಕೊಡುವತನಕ ತಾವು ಕೆಲಸಕ್ಕೆ ಬರುವುದಿಲ್ಲವೆಂದು ನಿಂತುಬಿಟ್ಟಿದ್ದಾರೆ. ಅಮೇರಿಕದಲ್ಲಿ ಈ ವಿಚಾರವು ಸ್ವಲ್ಪ ಗಲಿಬಿಲಿಯನ್ನುಂಟುಮಾಡಿದೆ.

***

ಕ್ಯಾನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಮರ ಕಡಿಯುವ ಭಾರಿ ನೌಕರರು ಕಂಟ್ರ್ಯಾಕ್ಟರುಗಳ ಜೊತೆಗೆ ಸೇರಿಕೊಂಡು, ಗವರ್ನಮೆಂಟಿನಿಂದ ಬಹಳ ಹೆಚ್ಚು ದರಗಳ ಪ್ರಕಾರ ಹಣವನ್ನು ವಸೂಲ್ಮಾಡಿ ಪಟಾಯಿಸಿಕೊಳ್ಳುತ್ತಿದ್ದರೆಂದು ಶೋಧಿಸಲ್ಪಟ್ಟದ್ದರಿಂದ ಕೆಲವು ದೊಡ್ಡ ಮನುಷ್ಯರು ಅಂತರಂಗದಲ್ಲೇ ಆಪಾದಿತರಾಗಿ, ಆ ಮೂರು ಮಂದಿಯನ್ನೂ ಕೆಲಸದಿಂದ ವಜಾಮಾಡಿಸಿದ್ದಾರೆ. ಈ ವಿಚಾರವು ಅಲ್ಲಿನ ಪಿಲಾಯತಿಯಲ್ಲಿ ಸ್ವಲ್ಪ ಗಲಭೆಯನ್ನು ಉಂಟುಮಾಡಿದೆ.

***

ಕಳೆದ ಗುರುವಾರ ರಾತ್ರಿ ಇಂಗ್ಲೆಂಡಿಗೂ ಫ್ರಾನ್ಸಿಗೂ ನಡುವೆ ಇರುವ ಇಂಗ್ಲಿಷ್ ಛಾನಲ್ ಎಂಬ ಕಡಲುಕಾಲುವೆಯಲ್ಲಿ ಬರ್ವಿಕ್ ಎಂಬ ಹಡಗು ಟೈಗರ್ ಎಂಬ ಜಾಹಜಿಗೆ ಬಡಿದದ್ದರಿಂದ ಟೈಗರ್ ಎಂಬ ಹಡಗು ಸಮುದ್ರದಲ್ಲಿ ಮುಳುಗಿಹೋಯಿತು. ಅದರಲ್ಲಿದ್ದ ೩೬ ಜನರ ಪೈಕಿ ಹದಿನಾರು ಮಂದಿ ಯಾರೂ ಉಳಿಯಲಿಲ್ಲ. ಲಂಡನ್ ಪಟ್ಟಣದಲ್ಲಿ ಮತ್ತು ಇನ್ನೂ ಬೇರೆ ಪಟ್ಟಣಗಳಲ್ಲಿ ಶೋಕ ಸಂಬಂಧವಾದ ವರ್ತಮಾನ ಕಳುಹಿಸಿದರು.

***

ಇಟಲಿ ರಾಜ್ಯದ ಮುಖ್ಯಪಟ್ಟಣವಾದ ರೋಮ್ ನಗರದಲ್ಲಿ ಕಳೆದ ವಾರ ಕೂಲಿಕಾರರಿಗೂ ಪೊಲೀಸಿನವರಿಗೂ ರಾಜಬೀದಿಗಳಲ್ಲಿ ಕದನ ಆರಂಭವಾಯಿತು. ೨೦ ಮಂದಿ ಪೊಲೀಸಿನವರಿಗೆ ಗಾಯಗಳಾದವು. ಕೂಲಿಕಾರರಲ್ಲಿ ಮೂರು ಮಂದಿ ಸತ್ತರು. ೧೧ ಜನರಿಗೆ ಗಾಯಗಳಾದವು. ಅಂಗಡಿಮುಂಗಟ್ಟುಗಳು ಮುಚ್ಚಲ್ಪಟ್ಟವೆ. ಟ್ರಾಂಗಾಡಿಗಳನ್ನು ನಡೆಸುವುದಕ್ಕೆ ಜನರು ಸಿಕ್ಕದೆ ಅವು ನಿಲ್ಲುವುವು. ರೋಮ್ ನಗರವು ಪಟ್ಟಣದಲ್ಲಿ ಪ್ರಜಾಸ್ತೋಮದಿಯನ್ನು ಕಾಪಾಡುವುದಕ್ಕೆ ಸರ್ಕಾರದವರು ಮಿಲಿಟರಿ ಸಿಪಾಯಿಗಳನ್ನು ಕಳುಹಿಸಿದಾರೆ.

***

ಸ್ಪೇನ್ ರಾಜ್ಯದಲ್ಲಿ ಕೆಲವು ದುಷ್ಟರು ಅನಾಹುತಗಳನ್ನುಂಟುಮಾಡುತ್ತೇವೆಂದು ಹೆದರಿಕೆ ಹುಟ್ಟಿಸಿ, ಗವರ್ನರುಗಳಿಂದ ಹಣ ಕಿತ್ತುಕೊಳ್ಳುತ್ತಲೂ, ಹಣ ಕೊಡದೆ ಇದ್ದಾಗ ಮದ್ದಿನ ಗುಂಡುಗಳನ್ನು ಹಾಕಿ ಕೊಲೆ ಅನಾಹುತಗಳನ್ನು ನಡೆಸುತ್ತಲೂ ಇದ್ದರು. ಗವರ್ನರುಗಳು ಅವರ ಆಸೆಯನ್ನು ತೃಪ್ತಿಪಡಿಸುವುದಕ್ಕಾಗದೆ ಕಡೆಗೆ ಅವರನ್ನೆಲ್ಲಾ ಹಿಡಿಸಿ ಲಾಕಪ್ಪಿನಲ್ಲಿ ಹಾಕಿಸಿದರು. ಬಾರ್ಸಿಲೋನಾ ಎಂಬ ಪಟ್ಟಣದಲ್ಲಿ ಆ ತಂಟೆಗಾರರನ್ನು ವರ್ಗಾಯಿಸಿ ಮಾಡುತ್ತಿದ್ದಾರೆ. ಈ ಸಂಗತಿಯು ಆ ರಾಜ್ಯದಲ್ಲಿ ತುಂಬಾ ಗಲಭೆಯನ್ನುಂಟುಮಾಡಿದೆ.

***

ಕಳೆದ ಮಾರ್ಚಿ ತಾ ೩೧ ಕ್ಕೆ ಅಖೈರಾದ ಒಂದು ಸಾಲಿನಲ್ಲಿ ವಿಲಾಯತಿ ರಾಜ್ಯದಲ್ಲಿ ೧೫೨,೩೪೭,೩೭೦ ಪೌಂಡು ಉತ್ಪತ್ತಿಯಾಯಿತು. ಹೋದ ಸಾಲಿನಲ್ಲಿ ೧೫೭,೪೦೦,೩೭೦ ಪೌಂಡು ಆದಾಯ ಪಟ್ಟುವಳಿ ಆಗಿತ್ತು. ೧೯೦೫—೦೬ನೇ ಸಾಲಿನಲ್ಲಿ ಖರ್ಚು ಕಳೆದು ೪೦ ಲಕ್ಷ ಪೌಂಡು ಮಿಗ್ಗಳ ಆದಾಯವಾಗಿದೆ. ಇದರಲ್ಲಿ ಪೌಂಡು ಟಿಕ್ಕ ೧೧ ರೂಪಾಯಿಯಂತೆ ಲೆಕ್ಕ ಮಾಡಿದರೆ ರೂಪಾಯಿನಲ್ಲಿ ಎಷ್ಟು ಅರ್ಬುದ ಗೊತ್ತಾಗುತ್ತದೆ. ಆದಾಯದ ಮೇಲಣ ತೆರಿಗೆಯಿಂದ ೬೯ ಲಕ್ಷದ ೯೦ ಸಾವಿರ ಪೌಂಡು ಪಟ್ಟುವಳಿ ಆಗಿರುತ್ತದೆ.

ತಾಲ್ಲೋಕು ವರ್ತಮಾನಗಳು.

ದಾವಣಗೆರೆ.—ಈ ಊರಿನಲ್ಲಿ ಪೂರ್ವಾಚಾರ್ಯ ಪದ್ಧತಿಯು ಪ್ರಕಾರ ಎರಡು ವರ್ಷಕ್ಕೊಂದಾವರ್ತಿ ನಡೆಯುವ ದುರ್ಗಾದೇವತೆಯ ಜಾತ್ರೆಯು ಮಾರ್ಚಿ ತಾ ೧೯ ರಲ್ಲಿ ಬಹಳ ವೈಭವದಿಂದ ನೆರವೇರಿತು. ಈ ಜಾತ್ರೆಗೆ ಸುಮಾರು ೩೦ ಸಾವಿರ ಪರಿಷೆ ಜನಗಳು ಸೇರಿದ್ದರು. ಈ ಪರಿಷೆಗೆ ಬಂದ ಎಲ್ಲಾ ಕೇರಿಯ ಬಡಜನರಿಗೆ ಇಲ್ಲಿನ ವರ್ತಕರ ಪೈಕಿ ಮೀಗಲಾದ ಬಿಲ್ಲಾಗಟ್ಟಿ ಗುರುಸಿದ್ಧಪ್ಪನವರು, ಉರಕೋಡಿ ಗುರುಲಿಂಗಪ್ಪನವರು, ಗೋಳಸಂಗಿ ವೀರಭದ್ರಪ್ಪನವರು, ಪೂಗಾವನಕಟ್ಟಿ ದೊಡ್ಡಪ್ಪನವರು, ರೈತರಾದ ಜನಗಳ ಪೈಕಿ ಮಾರುವರಪ್ಪನವರು, ದಾನೋಜಿಯವರು ಸೇರಿ ಚಂದಾ ಮೂಲಕ ದವಸ ಧಾನ್ಯಾದಿಗಳನ್ನು ತಂದು ಮಾ॥ ಹೊಳೆಯಪ್ಪನವರ ರುದ್ರಪ್ಪನವರ ತೋಟದಲ್ಲಿ ನಿತ್ಯವೂ ಒಂದು ಹೊತ್ತಿಗೆ ಸುಮಾರು ೬ ಸಾವಿರ ಜನಗಳಂತೆ ತಾ ೧೯, ೨೦, ೨೧, ಈ ಮೂರು ದಿನಗಳ ವರೆಗೂ ಎರಡು ಹೊತ್ತಿನ ಊಟವನ್ನು ಕೊಟ್ಟರು. ಅಂತು ಸುಮಾರು ೩೬ ಸಾವಿರ ಜನಗಳಿಗೆ ಊಟವನ್ನು ಕೊಟ್ಟಹಾಗಾಯಿತ್ತು. ಈ ಮೇಳ್ಯಂಡ ದಿನಗಳಲ್ಲಿ ಜಾಹೀರಾತ್ ಪ್ರಕಾರ ಹಾಜರಾದ ಗುಂಡು ವಸ್ತುಗಳಿಗೆ ಜಾಸ್ತಿ ಕಾಳಗವನ್ನು ಮಾಡಿಸಿ, ಗದ್ದೆ ಎತ್ತುಗಳಿಗೆ ಬಿಟ್ಟರಿಗೆ ಹಜೂರ್ ಡೆಪ್ಯುಟಿ ಕಮಿಷನರ್ ಸಾಹೇಬರ ಅನುಗ್ರಹದಿಂದಲೂ ಮತ್ತು ಇಲ್ಲಿನ ಸಬ್ ಡಿವಿಜನ್ ಸಾಹೇಬರ ಅನುಗ್ರಹದಿಂದಲೂ ಎರಡು ಭಂಗಾರದ ಒಳೆಗಳು ಕೊಡಲ್ಪಟ್ಟವು. ಬಾಕಿ ಗದ್ದೆ ವಸ್ತುಗಳಿಗೆ ೨೩ ಬೆಳ್ಳಿಯ ಬಳೆಗಳೂ, ಕಲ್ಯ ವಸ್ತ್ರಾದಿಗಳೂ ಆಯಾಯ ತರಗತಿಯ ಪ್ರಕಾರ ಇಲ್ಲಿನ ಸಾಹುಕಾರರು ಬಸವನಗೌಡರು ಹೊಳೆಯನೂರು ರುದ್ರಪ್ಪನವರ ಸ್ವಹಸ್ತ ಸರ್ವಜನರ ಸಮ್ಮತಿ ಯಿಂದ ಕೊಡಲ್ಪಟ್ಟವು. ಈ ಗ್ರಾಮನಿವಾಸಿಗಳ ಉದಾರಗುಣವನ್ನು ಕರಿತು ಜಾತ್ರೆಗೆ ಬಂದ ಸರ್ವಜನರೂ ಕೊಂಡಾಡುತ್ತಾ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು. ಹಿಂದೆ ಯಾವಾಗಲೂ ಈ ಜಾತ್ರೆ ಇಷ್ಟು ಘನವಾಗಿ ನಡೆದಿರುವದಿಲ್ಲವಾದ್ದರಿಂದ ಈ ಧರ್ಮಾಪೇಕ್ಷೆಯುಳ್ಳ ಮಹನೀಯರುಗಳಿಗೆ ಭಗವಂತನು ಶ್ರೇಯೋಭಿವೃದ್ಧಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಚಿತ್ರದುರ್ಗ.—ಈಗ ಸುಮಾರು ಒಂದು ವಾರದಿಂದ ಮೋಡಗಳು ಆಡುವದು ಗುಡುಗು ಬಿರುಗಾಳಿ ಬಹಳ ಇದ್ದಾಗ್ಯೂ ಮಳೆ ಬರಲಿಲ್ಲ. ಬಿಸಲಿನ ಧಗೆಯನ್ನು ಸಹಿಸಲಸಾಧ್ಯವಾಗಿದೆ. ಈ ಜಿಲ್ಲೆಯ ಅನೇಕ ಭಾಗಗಳಲ್ಲಿ ಈಗ ಪರಿಷೆಗಳು ನಡೆಯುತಾ ಇವೆ. ಇವುಗಳೊಳಗಾಗಿ ಬಹಳ ವಿಶೇಷವಾದ ನಾಯಕನಹಟ್ಟಿಯ ಪರಿಷೆಯು ಕಳೆದ ಮಾರ್ಚಿ ತಿಂಗಳಲ್ಲಿ ಆಯ್ತು. ಇದು ಬಹು ದೊಡ್ಡದು ಬಳ್ಳಾರಿ ಮುಂತಾದ ಬೇರೆ ಬೇರೆ ಕಡೆಗಳಿಂದ ಇಲ್ಲಿಗೆ ಬಹು ಜನರು ಬರುತ್ತಾರೆ. ಅಂತೂ ಲಿಂಗಾಯತರೂ ಇತರ ಜನಗಳೇ ಹೊರ್ತು ಬ್ರಾಹ್ಮಣರು ಈ ಜಾತ್ರೆಗೆ ಬರುವದಿಲ್ಲ. ಬೇರೆ ಬೇರೆ ತಂದ ನಾಟಕ, ಕಸ್ತಿ, ಚಿತ್ರ ವಿಚಿತ್ರವಾದ ಆಟಗಳೂ ತನುವಾಗಿಯೂ ಮಾಡುವವರ ಸಂದಣಿಯಿಂದ ಸ್ಥಳವೆಲ್ಲಾ ಮಯವಾಗಿರುತ್ತದೆ. ದುಡ್ಡು ಕೀಳುವದಕ್ಕೆ ಇವರು ಸೋಲಬಂದು ನಾನಾ ವಿಧ ಜೂಜಾಟಗಳು ರಾತ್ರಿ ಹಗಲು ವಿರಾಮವಿಲ್ಲದೆ ಯಾರ ಭಯವೂ ರೀತಿಯೂ ಇಲ್ಲದೆ ನಡೆಯುತ್ತವೆ. ತೇರಿನ ದಿನ ಬಹು ಗಲಾಟೆ. ಆ ತೇರಿನ ಮೇಲೆ ಎರಚುವದಕ್ಕೆ ಚೂರುಬೆಲ್ಲ ಮೆಣಸು ಮಾರುವವರ ದೂಳಿಯೂ ಎರಚಿದ ಚೂರುಗಳು ನೆಲದ ಮೇಲೆ ಬಿದ್ದನಂತರ ಅವುಗಳನ್ನು ಆರಿಸಿಕೊಳ್ಳುವ ಗಂಡಸರೂ ಹೆಂಗಸರೂ ಮಕ್ಕಳ ಗದ್ದಲವೂ ಬಹಳ. ಇನ್ನೊಂದು ವಿಚಿತ್ರವಾದ ವಿಷಯ. ಒಂದು ಪಂಗಡದ ನಾಯ್ಕರ ಹುಡುಗರು ಜಾತ್ರೆಗೆ ಮುಂಚೆ ಒಂದು ತಿಂಗಳಲ್ಲಿ ಸುಣ್ಣ ಹಿಡಿಸಿ ಕೊಳ್ಳುವರು. ಇವರು ವ್ಯಾಘ್ರದಂತೆ ಜಾತ್ರೆ ಕಾಲದಲ್ಲಿ ಬೇರೆ ಬೇರೆ ತಂಡಗಳಾಗಿ ವಾದ್ಯಗಳ ಸಮೇತ ದುಡ್ಡಿಗೆ ಬೇಳಗಳನ್ನು ಹಿಡಿದು ಕುಣಿಯುತ್ತಾ ದೇವರ ದರ್ಶನಕ್ಕೆ ಬರುವರು. ಇವೆಲ್ಲಾ ಆದ ಮಾರನೇ ದಿನದ ಸಾಯಂಕಾಲ ಗುಡಿಯ ಮುಂದೆಯೂ ಬೇರೆ ಕಡೆಗಳಲ್ಲಿಯೂ ದೇವರ ಹೆಸರಿನಲ್ಲಿ ಬಿಳಿಬಾಗಿ ಕೊಬ್ಬರಿಯನ್ನು ಉರಿ ಹಚ್ಚಿ ಸುಡುವರು. ಉರಿಯು ಧಗದ್ಧಗಾಯಮಾನವಾಗಿ ಮುಗಿಲನ್ನು ಮುಟ್ಟುತ್ತಾ ಆ ರಾತ್ರಿ ಎಲ್ಲಾ ಉರಿಯುತ್ತಲೇ ಏಕಪ್ರಕಾರವಾಗಿ ಇರುವದು. ಸಾವಿರಾರು ರೂಪಾಯಿಗಳ ಕೊಬ್ಬರಿ ಈ ರೀತಿ ಆ ದಿನ ನಷ್ಟವಾಗುವದು. ಈ ಡಂಭಕರೂ ಸೂಳೆಯರೂ ಕಿರುಕುಳದವರೂ ತಾಳಿದವರೂ ಇವರೇ ಮುಂತಾಗಿರುವವರು ಸರ್ಕಾರದವರು ತಮ್ಮ ಸಿಬ್ಬಂದಿಯಿಂದ ಗಲಭೆಗೆ ಅಸ್ಪದಾಗವಂತೆ ಮಾಡಿದ್ದು ಬಹು ಸಂತೋಷ. ಕೆಲವು ಭಕ್ತ್ಯಾಶ್ಚರ್ಯದ ಲಿಂಗಾಯತರು ಕೆಲ ನಿಂತನನ್ನುಮಾಡಿ ಜನಗಳಿಗೆಲ್ಲಾ ಗಾಡಿಗಳ ಮೇಲೆ ನೀರು ಸರಬರಾಯಿ ಮಾಡಿದ್ದು ಬಹಳ ಉಪಕಾರದ ಕೆಲಸ. ಕ್ರಿಶ್ಚಿಯನ್ ಮತೋಪದೇಶಕರಾದ ಪಾದ್ರಿಗಳೂ ಉಪದೇಶಕರೂ ಅಲ್ಲಿ ಹಾಜರಿದ್ದು ಅನೇಕ ವಿಧವಾಗಿ ಸತ್ಯೋಪದೇಶವನ್ನು ಮಾಡಿ ಫೋಟೋಗ್ರಾಫಿನ ಚಿತ್ರಗಳನ್ನು ತೋರಿಸಿ ಜನಗಳಿಗೆ ಸತ್ಯವೇದದ ಸುವಾರ್ತೆಗಳನ್ನು ಸಾರಿದರು.

ಚಿಕ್ಕಮಗಳೂರು.—ಕೆಲವು ದಿನಗಳ ಕೆಳಗೆ ಈ ಕಡೆಗೆ ಸಹ ಮಳೆಯಾಯಿತು. ಬಿಸಲಿನ ಝಳ ಮತ್ತಷ್ಟು ಹೆಚ್ಚಿದೆ. ಪ್ಲೇಗ್ ನೆಸೆಯಿಂದ ಜನರು ಪಟ್ಟಣಗಳನ್ನು ಬಿಟ್ಟುಹೋದವರು ಥಟನೆ ತಮ್ಮ ಮನೆಗಳನ್ನು ಸೇರಿ ಸ್ವಸ್ಥಕಾಲಕ್ಷೇಪ ಈಗ ಕೆಲವು ಮನೆಗಳಲ್ಲಿ ಇಲಿಗಳ ಸಾಯುತ್ತವೆ ಎಂಬ ಸಮಾಚಾರವನ್ನು ಕೇಳುತ್ತೇನೆ. ಈ ಕಾಲದಲ್ಲಿ ಮ್ಯುನಿಸಿಪಲ್ ಅಧಿಕಾರಿಗಳು ಊರು ಶುಚಿಯ ವಿಷಯ ತುಂಬಾ ಗಮನ ಕೊಡಬೇಕಾಗಿದೆ. ಬಾಡಿಗಾಡಿಗಳು ರಸ್ತೆಗಳಲ್ಲಿ ಬಿದ್ದಿರುವ ಕಸವನ್ನು ನಾಶ ಮಾಡಿಸುತ್ತಾರೆ. ಚರಂಡಿಗಳಲ್ಲಿನ ಚಿಕ್ಕೆಲಿನ ರೀತಿ, ಹಳೇ ಸಿವೇಜನಗಳಲ್ಲಿನ ಕಳಹಾ, ಮುಂತಾದ್ದನ್ನು

ಅವರು ತೆಗೆಯುವದಿಲ್ಲ. ಮೇಲ್ಪಟ್ಟ ಅಧಿಕಾರಿಗಳು ಈ ವಿಷಯವನ್ನು ಕ್ರಮ ಪಡಿಸಬೇಕು.—ಕೆಲವು ಜೂಜುಕೋರರು ಜನರನ್ನು ಗುಂಪು ಕೂಡಿಸಿಕೊಂಡು ತಮ್ಮ ಕೆಲಸವನ್ನು ಮಾಡತೊಡಗುತ್ತಾರೆ. ಈ ಭಾಗದಲ್ಲಿ ಟವುನ್ ಪೋಲೀಸಿನವರು ತಮ್ಮ ಗಮನಕ್ಕೆ ತಂದುಕೊಂಡರೆ ಉಭಯತ್ರರಿಗೂ ಕ್ಷೇಮವುಂಟು.—ಸದರನ್ ಮರಾಠಾ ರೈಲ್ವೆ ಅಧಿಕಾರಿಗಳು ಈ ಸ್ಟೇಷನಲ್ಲಿ ತಮ್ಮ ಕಡೆಯ ಔಟ್ ಏಜನ್ಸಿ ಎಂಬ ಕಂಪನಿಯನ್ನು ಸ್ಥಾಪಿಸಿ ಅದರಿಂದ ಸಾಮಾನುಗಳನ್ನು ತರಿಸಿಕೊಡುವದುಂಟು. ಇದರಿಂದ ಜನರಿಗೆ ಒಂದು ಪ್ರಯೋಜನವಿದ್ದರೂ ಕಾಲಕ್ಕೆ ಸರಿಯಾಗಿ ಅವು ಬರುವದಿಲ್ಲವಾದ್ದರಿಂದ ಜನರಿಗೆ ಬಹಳ ಅನಾನುಕೂಲಗಳಿವೆ. ಬಹು ಜರೂರಾಗಿ ಕಾಯತಿಯಾಗಿರುವ ವರ್ತಮಾನ ಪತ್ರಿಕೆಗಳೇ ೫-೬ ದಿವಸಗಳು ತಡವಾಗಿ ಬರುತ್ತವೆ. ಬೇರೆ ಸಾಮಾನುಗಳ ವಿಷಯ ಹೇಳಬೇಕಾದದ್ದಿಲ್ಲ. ಈ ಅನಾನುಕೂಲಗಳನ್ನು ರೈಲ್ವೆ ಅಧಿಕಾರಿಗಳು ಗಮನಕ್ಕೆ ತಂದು ಅಲ್ಪ ಏರ್ಪಾಡುಗಳನ್ನು ಮಾಡಿದರೆ ಜನಗಳಿಗೆ ಬಹಳ ಪ್ರಯೋಜನವಿರುತ್ತದೆ.—ಕಳೆದ ತಾ ೨೬ ನೇ ಗುರುವಾರ ಮಧ್ಯಾಹ್ನ ೩ ರಿಂದ ೧೧ ಘಂಟೆ ವರೆಗೆ ಚಿಕ್ಕಮಕ್ಕಳೂ ನ್ಯೂ ಯಾರ್ ವಿಕ್ಟರ್ ಗರ್ಲ್ಸ್ ಮೋಡಲ್ ಸ್ಕೂಲ್ ಕಟ್ಟಡದಲ್ಲಿ ಸದರಿ ಮೋಡಲ್ ಸ್ಕೂಲ್, ಟ್ರೇನಿಂಗ್ ಸ್ಕೂಲ್ ಮತ್ತು ಕೆಲವು ಹಳ್ಳಿ ಬಾಯ್ಸ್ ಸ್ಕೂಲ್ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ, ಬಹುಮಾನಗಳು ಕೊಡಲ್ಪಟ್ಟವು. ಈ ಬಹುಮಾನಗಳನ್ನು ಹೊಂದಿದವರ ಸಂಖ್ಯೆಯು ೧೩೦ ಕ್ಕೆ ಅಧಿಕವಾಗಿತ್ತು. ಕಟ್ಟಡವು ಬಣ್ಣದ ಬಟ್ಟೆಗಳು, ತೋರಣ, ಮುಂತಾದವುಗಳಿಂದ ಅಲಂಕರಿಸಲ್ಪಟ್ಟಿತ್ತು. ವಿದ್ಯಾರ್ಥಿನಿಯರ ತಂದೆ ತಾಯಿಗಳೂ, ಗೌರ್ನಮೆಂಟ್ ಸ್ಕೂಲುಗಳ ಉಪಾಧ್ಯಾಯರೂ, ಇನ್ನೂ ಅನೇಕ ಮಹನೀಯರೂ ಕಟ್ಟಡವು ತುಂಬಿತ್ತು. ವಿ. ಸಿ. ಎಲಿಂಗ್‌ಟನ್ ದೇವರಸನ್ನಿಧಿ ವರ್ಣ ಚಿತ್ರಗಳನ್ನು ... ಗಳನ್ನು ಹಂಚುವದಕ್ಕೆ ದಯಮಾಡಿ ... ನಿಶ್ಚಯ ಸಿಲ್ಪಟ್ಟಿತ್ತು. ಕಾರಣಾಂತರದಿಂದ ಅವರು ಬಾರದ್ದಕ್ಕಾಗಿ ಅವರಿಗೆ ವ್ಯಸನವುಂಟಾಯಿತು. ಆದರೂ ಅವರಿಗೆ ಬದಲಾಗಿ ಈ ಸ್ಕೂಲುಗಳ ಸೂಪರಿಂಟೆಂಡೆಂಟಾದ ಘನ ರೆವರೆಂಡ್ ಸಾಹೇಬರವರು ಅಗ್ರಾಸನವನ್ನು ವಹಿಸಿದರು. ಮೊದಲು ದೇವರ ಪ್ರಾರ್ಥನೆ ನಡೆಯಿತು. ಸ್ಕೂಲುಗಳಲ್ಲಿ ಉಪಾಧ್ಯಾಯರು ನಡಿಸಿದ ಕೆಲಸಗಳ ... ಸ್ಕೂಲುಗಳ ವಿದ್ಯಾಭಿವೃದ್ಧಿಯ ವಿಷಯವಾಗಿಯೂ ... ಉಪನ್ಯಾಸಮಾಡಿದರು. ತರುವಾಯ ವಿದ್ಯಾರ್ಥಿನಿಯರ ... ಅನುಸಾರವಾಗಿ ಬಹುಮಾನಗಳು ಕೊಡಲ್ಪಟ್ಟವು. ... ಸ್ಕೂಲ್ ಅ|| ಮಿಸ್ಟ್ರೆಸ್ ಸ|| ಎಸ್ ಕೃಷ್ಣಮ್ಮನವರು ... ಸ್ಕೂಲುಗಳಲ್ಲಿ ನಡಿಸಿದ ತೃಪ್ತಿಕರವಾದ ಕೆಲಸಗಳನ್ನು ... ಆರ್ಮೆರ್‌ರವರು ಸಭಿಕರಿಗೆ ತಿಳಿಸಿದ ಮೇಲೆ ಸದರಿ ಮಿಸ್ ಕೃಷ್ಣಮ್ಮನವರನ್ನು ಒಂದು ಉಪನ್ಯಾಸಮಾಡುವಂತೆ ಕೇಳಿಕೊಂಡದ್ದರಿಂದ ಅವರು ಸ್ತ್ರೀವಿದ್ಯಾಭ್ಯಾಸದ ಪ್ರಯೋಜನವನ್ನು ಕುರಿತು ಶ್ಲಾಘ್ಯತರವಾದ ಉಪನ್ಯಾಸಮಾಡಿ, ಸಭಿಕರ ಮನಸ್ಸನ್ನು ಸಂತೋಷಪಡಿಸಿದರು. ತದನಂತರ ಬಾಲಕಿಯರು ಅಭಿನಯ ಸಹಿತವಾದ ಹಾಡುಗಳನ್ನು ಹೇಳಿದರು. ಆ ಕೂಡಲೇ ಉಪಾಧ್ಯಾಯರು ಸಭಿಕರಿಗೆ ಪುಷ್ಪ ತಾಂಬೂಲಗಳನ್ನೂ ಬಾಲಕ ಬಾಲಕಿಯರಿಗೆ ತಿಂಡಿಯನ್ನೂ ಹಂಚಿದರು. ಕಡೆಗೆ ಬಾಲಕಿಯರು ಮಂಗಳವನ್ನು ಹಾಡಿ ಸಭೆಯನ್ನು ನಾಯಗಿಸಿದರು.

ಹುಣಸೂರು.—ಬೆಳಿಗ್ಗೆ ೧೦ ಘಂಟೆ ಆಗಾಯಿತು ಸಾಯಂಕಾಲ ೫ ಘಂಟೆಯ ವರೆಗೂ ಬಿಸಲಿನ ದಗೆಯು ಜೋರಾಗಿದೆ. ಈ ತಾಲ್ಲೂಕಿನ ಸುತ್ತುಮುತ್ತು ಇರುವ ಕೆಲವು ಗ್ರಾಮಗಳಲ್ಲಿ ಮಾರಿಭೇದಿ ರೋಗವು ತಲೆಹಾಕಿದೆ ಎಂದು ವರ್ತಮಾನ ... ಆದೇ ತಿಂಗಳು ೫ನೇ ತಾ. ಒಬ್ಬ ಮುಸಲ್ಮಾನರವನಿಗೆ ... ಯಾರವನಿಗೂ ತಗಲಿ ಸತ್ತುಹೋದರು. ಈ ಟವುನಿಗೆ ಕುಡಿಯುವ ನೀರು ಸರಬರಾಯಿ ಆಗುವ ಚಿಕ್ಕ ಹುಣಸೂರಿನ ಕೆರೆಯು ಬಹು ಗಲೀಜಾಗಿದೆ. ಅದ್ದರಿಂದ ಮೇಲ್ಪಟ್ಟ ಅಧಿಕಾರಿಗಳು ನೀರಿನ ವಿಷಯದಲ್ಲಿಯೂ, ಮ್ಯುನಿಸಿಪಾಲಿಟಿ ಪಾಕೀಜಾ ವಿಷಯದಲ್ಲಿಯೂ ಮುಖ್ಯವಾಗಿ ಈ ಕಾಲದಲ್ಲಿ ನಿಗಾ ಕೊಡುವದು ಅವಶ್ಯಕವಾಗಿದೆ. ಕಳೆದ ತಿಂಗಳು ಕಡೇ ವಾರದಲ್ಲಿ ಒಂದು ಸಲ ಒಳ್ಳೇ ಮಳೆ ಆಯಿತು. ಅಂದಿನಿಂದ ಮಳೆ ಮೋಡವಾಗುವದೂ, ಗುಡುಗು ಸಿಡಿಲಿನ ಅರ್ಭಟವೂ ಜೋರಾಗಿದೆಯೋ ಹೊರತು ಮಳೆ ಯೆಂಬುವದು ಇಲ್ಲವೇ ಇಲ್ಲ. ದಿನಸಿಗಳ ಧಾರಣೆಯು ವಾರವಾರವೂ ಹೆಚ್ಚುತ್ತಾ ಇದೆ. ಸುಗ್ಗಿ ಕಾಲದಲ್ಲಿಯೇ ಹೀಗಾದರೆ ಮುಂದೇನಾಗತಿ ಎಂಬದಾಗಿ ಬಡಜನಗಳು ಬಾಯಿಬಿಡುತ್ತಾ ಇದ್ದಾರೆ. ಸಂತೆಗಳಲ್ಲಿಯೂ ಅಂಗಡಿಗಳಲ್ಲಿಯೂ ವ್ಯಾಪಾರಸ್ಥರು ಇಟ್ಟಿರುವ ಸೇರು ಪಾವುಗಳ ವಿಷಯದಲ್ಲಿ ಸರ್ಕಾರದವರು ಆಗಾಗ್ಗೆ ನಿಗಾ ಕೊಡುವದು ಬಹಳ ಒಳ್ಳೇದು.—ಕಳೆದ ತಿಂಗಳು ೨೩ನೇ ತಾ. ಇಲ್ಲಿನ ಎ. ವಿ. ಸ್ಕೂಲ್ ಮಾಸ್ಟರು ಕೃಷ್ಣಪ್ಪನೆಂಬವನು ತನ್ನ ಹೆಂಡತಿಯನ್ನು ಕ್ರೂರವಾಗಿ ದಂಡಿಸುತ್ತಿದ್ದದ್ದನ್ನು ನೆರೆಹೊರೆಯವರು ನೋಡಿ, ಬುದ್ಧಿ ಹೇಳಲು ಅವರ ಮೇಲೆಯೇ ಕೋಪೋದ್ರೇಕನಾಗಿ ಬೈಯುವದಕ್ಕೆ ಶುರುಮಾಡಿದನೆಂತಲೂ ಈ ಸಂಗತಿಯು ಪೋಲೀಸಿಗೆ ತಿಳಿದುಬರಲಾಗಿ ಇನ್‌ಸ್ಪೆಕ್ಟರೂ, ದಫೇದಾರರೂ ಹೋಗಿ ವಿಚಾರಿಸುವಲ್ಲಿ ಅವರನ್ನೂ ಆವನು ಯಥಾ‌ವತ್ತಾಗಿ ಬೈದದ್ದರಿಂದ ಮೇಲ್ಕಂಡ ಉಪಾಧ್ಯನನ್ನು ಪೋಲೀಸ್ ಸ್ಟೇಷನಿಗೆ ಕರೆದುಕೊಂಡು ಬಂದು ಕೈಫಿಯತ್ತು ತೆಗೆದುಕೊಳ್ಳುವಲ್ಲಿಯೂ ಹುಚ್ಚನ ಹಾಗೆ ಮಾತಾಡಿದ್ದರಿಂದ ಇನ್‌ಸ್ಪೆಕ್ಟರು ಈತನನ್ನು ಪರೀಕ್ಷೆಯ ಬಗ್ಗೆ ಡಾಕ್ಟರ ಬಳಿಗೆ ಕಳುಹಿಸಲು, ಡಾಕ್ಟರು ನೋಡಿ ರೋಗವು ಹೆಚ್ಚಾಗಿಹೋಗಿದ್ದರೂ ತಾನು ಮಾತಾಡುವದು ತನಗೇ ತಿಳಿಯದು ಎಂಬರ್ಥಕ್ಕೆ ಸರ್ಟಿಫಿಕೇಟು ಕೊಟ್ಟರು. ಇಷ್ಟರಲ್ಲೇ ಆವನು ಸುಮ್ಮನಾಗದೆ ಮೈಸೂರಿಗೆ ಹೋಗಿ, ಇನ್‌ಸ್ಪೆಕ್ಟರ ಮೇಲೆ ಕೋರ್ಟಿನಲ್ಲಿ ಫಿರ್ಯಾದು ಮಾಡುವಾಗಲೂ, ಜಡ್ಜಿಯವರ ಎದುರಿನಲ್ಲಿ ಹುಚ್ಚನಹಾಗೆ ಮಾತಾಡಿದ್ದರಿಂದ ಜಡ್ಜಿಯವರು ಹೊರಗೆ ನೂಕಿಸಿಬಿಟ್ಟರೆಂದೂ ವರ್ತಮಾನ ಬಂದಿದೆ. ಇಲ್ಲಿನ ಪೋಸ್ಟ್ ಮಾಸ್ಟರು ಇಲ್ಲಿಗೆ ಬಂದು ಸುಮಾರು ಎರಡು ತಿಂಗಳಾದರೂ ಅವರು ಎಲ್ಲರ ಪ್ರೀತಿ, ಗೌರವನ್ನು ಸಂಪಾದಿಸಿಕೊಂಡಿರುವದೂ, ಯಾವ ಪ್ರಕಾರದ ಆಕ್ಷೇಪಣೆ ಇಲ್ಲದೆ ತಮ್ಮ ಕೆಲಸವನ್ನು ಜಾಗರೂಕತೆಯಿಂದ ನಡಿಸುತ್ತಾ ಬಂದಿರುವದೂ ಸಂತೋಷಕರವಾಗಿದೆ.

ತರೀಕೆರೆ.—ಇಲ್ಲಿ ಪ್ಲೇಗ್ ರೋಗದಿಂದ ಕಳೆದ ಮೂರು ತಿಂಗಳಿಂದಲೂ ಗ್ರಾಮ ಖಾಲಿಯಾಗಿರುವ ವಿಷಯ ವಾಚಕರಿಗೆ ತಿಳಿದಿದೆಯಷ್ಟೆ. ಈ ರೋಗವು ೬೦ ಮಂದಿಗೆ ತಗಲಿ ೩೫ ಮಂದಿ ಸತ್ತಿದ್ದಾರೆ. ಇಲ್ಲಿನ ಇಂಗ್ಲಿಷ್ ವೈದ್ಯರ ಚಿಕಿತ್ಸೆಯೂ, ಕರ್ನಾಟಕ ಪಂಡಿತರ ಕೆಲಸದಿಂದಲೂ ಬಹಳ ಮಟ್ಟಿಗೆ ರೋಗಿಷ್ಟರಿಗೆ ಉಪಕಾರವಾಯಿತು. ಅಲ್ಲದೆ ಉಭಯತ್ರರ ಪ್ರಯತ್ನದಿಂದ ರೋಗದ ಅಭಿವೃದ್ಧಿಗೆ ಅವಕಾಶವಾಗಲಿಲ್ಲ. ನಮ್ಮ ತಾಲ್ಲೂಕು ಆಫೀಸರ ಮತ್ತು ಸ್ಯಾನಿಟರಿ ಇನ್‌ಸ್ಪೆಕ್ಟರ ಕ್ರಮವು ಶ್ಲಾಘನೀಯವಾದದ್ದು. ಆದರೆ ಗ್ರಾಮದ ಪಾಕೀಜಾ ವಿಷಯ ತೃಪ್ತಿಕರವಾಗಿಲ್ಲ. ಸಿಬ್ಬಂದಿ ಸಾಲದ್ದಾಗಿದ್ದರೂ, ಗ್ರಾಮ ನಿವಾಸಿಗಳು ಸ್ವಲ್ಪವಾದರೂ ಪಾಕೀಜಾ ವಿಷಯ ಚಿಂತಿಸುವದಿಲ್ಲವೆಂದು ಹೇಳಬೇಕಾಗಿದೆ. ಕಳ್ಳರಿಗೆ ಸುಕಾಲವಾಗಿದೆ. ರಾತ್ರಿಕಾಲದಲ್ಲಿ ಬೆಳಕು ಕೊಡುವ ಮ್ಯುನಿಸಿಪಲ್ ಲಾಂದ್ರಗಳೇ ಸಾಕ್ಷಿ. ಬಾಲಕರಿಂದ ಕೂಡ ಪಾಠಶಾಲೆಯು ಸುತ್ತಲೂ ಪ್ರದಕ್ಷಿಣೆ ತಿರುಗುತ್ತಿರುವರು ಉಪಾಧ್ಯಾಯರಿಗೆ ಕರುಣ ಯಾವಾಗ ಬಂದೀತೋ!

ಹೊಸದುರ್ಗ.—ಈ ಊರಿನಲ್ಲಿ ೨೦೦ ಮನೆಗಳ ವರಿವಿಗೂ ದೇವಾಂಗದವರು ಇರುತ್ತಾರೆ. ಇವರೆಲ್ಲ ಕೈಗಾರಿಕೆ ಜನಗಳೇ ಹೊರತು ಬೇರೆಯಾಗಿ ಕೆಲಸದವರು ಯಾರೂ ಅಲ್ಲ. ಈಗ ಕೈಗಾರಿಕೆ ಕೆಲಸದ ವಿಷಯದಲ್ಲಿ ಇದಾರಂಬ ವಿಷಯ ಈ ತಾಲ್ಲೂಕು ಅಮಲ್ದಾರರು ಮಿ|| ಎಂ. ಎಸ್ ಕೃಷ್ಣಪ್ಪನವರು ಮತ್ತು ಎಕ್ಸೈಸ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರು ಮಿ|| ಹಸನ್ ಅಲ್ಲಿ ಸಾಹೇಬರು ತಾ ೨೬ ನೇ ಮಾರ್ಚಿ ಗುರುವಾರ ಮಾಡಿದ ಉಪನ್ಯಾಸವೇನೆಂದರೆ—ಈ ಗ್ರಾಮದ ದೇವಾಂಗದ ಜನಗಳು ಮತ್ತು ಮುನಿಸಿಪಲ್ ಬೋರ್ಡು ಮೆಂಬರುಗಳು ... ಗುಮಾಸ್ತೆಯರು ಸಹ ಅದಕ್ಕಾಗಿ ಈ ಊರು ಗೌರ್ನಮೆಂಟ್ ಸ್ಕೂಲಿನಲ್ಲಿ ಸೇರಿದ್ದರು. ನೇಯಿಗೆ ಜನಗಳು ಬಹಳವಾಗಿ ... ಬಟ್ಟೆಗಳು ತಯಾರಾಗುತ್ತವೆಯಷ್ಟೆ. ಆದಾಗ್ಯೂ ಇವರಿಗೆ ಫಲಿತಾಂಶ ಕಮ್ಮಿ. ಪ್ರಯುಕ್ತ ಈ ಊರಲ್ಲಿ ಸೊಸೈಟಿ ಬ್ಯಾಂಕು ... ಬೇಕಾಗಿಯೂ, ಮತ್ತು ಇದಕ್ಕಾಗಿ ೪—೦೦ ಸಾವಿರ ರೂಪಾಯಿ ... ಮೂಲಧನ ಬೇಕಾಗಿರುವದರಿಂದ ಇದಕ್ಕೆ ಸರ್ಕಾರಿಗೂ ಸಮ್ಮತಿಪಟ್ಟರೆ ಇದಕ್ಕೆ ಸಹಾಯಕರು ಸಹ ಬೇಕಾಗುತ್ತೆ. ಪ್ರಯುಕ್ತ ಏನು ಅಭಿಪ್ರಾಯವೆಂದು ಸಭಿಕರನ್ನು ಕೇಳಿದಲ್ಲಿಯೂ ತರಹಾತರಹವಾಗಿ ಇದರಿಂದ ಬರತಕ್ಕ ಆದಾಯಗಳನ್ನು ಸಹ ನಮ್ಮ ಅಮಲ್ದಾರ್ ಮಿ|| ಕೃಷ್ಣಪ್ಪನವರು ಸಭಿಕರಿಗೆ ತಿಳಿಸಲು ಎಲ್ಲಾ ಜನಗಳೂ ಒಪ್ಪಿ ಷೇರು ಒಂದಕ್ಕೆ ೧೦ ರೂಪಾಯಿ ಪ್ರಕಾರ ಗೊತ್ತು ಮಾಡಿದಾರೆ. ಇದಕ್ಕಾಗಿ ಇಲ್ಲಿನ ಜನಗಳು ತುಂಬಾ ಸಂತೋಷಪಡುತ್ತಾರೆ.—ಅಲ್ಲದೆ ಇಲ್ಲಿ ಜನಗಳ ನೀರಿನ ಕಷ್ಟ ತಪ್ಪಿಸಲು ನಮ್ಮ ಅಮಲ್ದಾರರೂ ಮತ್ತು ಮುನಿಸಿಪಲ್ ಬೋರ್ಡಿನ ಮೆಂಬರು ಸಹ ಸೇರಿ ಮೀಟಿಂಗ್ ಮಾಡಿ, ಇಲ್ಲಿಗೆ ಮಾರ್ಕೆಟ್ ತಲಾವಿನಿಂದ ನಲ್ಲಿ ಇಡಿಸಬೇಕಾಗಿ ನಮ್ಮ ಶ್ರೀಮನ್ಮಹಾರಾಜರವರಿಗೆ ಅತ್ತಿಕ್ಕೆ ಮಾಡಿಸಿರುವದಾಗಿ ವರ್ತಮಾನ ಕೇಳಿಸಿ ... ವರಿವಿಗೂ ಏನೊಂದು ಯಾಕೆ ಬಂದು ಇರುವದು ಕೇಳಲಿಲ್ಲ. ಇಂಥಾ ಕಾಲದಲ್ಲಿ ಸರ್ಕಾರದವರು ಜಾಗ್ರತೆಯಾಗಿ ಮುತುವರ್ಜಿಯಿಂದ ನಲ್ಲಿ ತಾರದೆ ಇದ್ದಲ್ಲಿ ಏನು ಫಲವೋ ಗೊತ್ತಾಗದು. ಅಲ್ಲದೆ ಇಲ್ಲಿನ ಜನಗಳು ನಲ್ಲಿಗಾಗಿ ಆಗುವ ಖರ್ಚು ಸಹ ಕೊಡಲು ಒಪ್ಪಿರುತ್ತಾರೆ. ಈಗಲೂ ಇಷ್ಟರಲ್ಲೇ ಮಳೆ ಬಾರದೆ ಇದ್ದಲ್ಲಿ ಇಲ್ಲಿಗೆ ಸಮೀಪವಾಗಿರುವ ಅಂದರೆ ೩ ಮೈಲಿ ದೂರದಲ್ಲಿರುವ ವೇದಾವತಿ ನದಿಗೆ ನೀರಿಗ ಹೋಗಬೇಕಾಗುತ್ತೆ. ಆದಕಾರಣದಿಂದ ಸರ್ಕಾರದವರು ಕೂಡಲೇ ಇಲ್ಲಿಗೆ ನಲ್ಲಿ ಸ್ಯಾಂಕ್ಷನ್ ಮಾಡಿ, ಈ ಜನಗಳ ಕಷ್ಟ ತಪ್ಪಿಸಬೇಕಾಗಿ ಬೇಡುವೆವು.

ತಿನ್ನವೆಲ್ಲಿಯ ಗಲಭೆಯು

ಮದರಾಸ್ ಗವರ್ನರವರ ತೀರ್ಮಾನವು

ಗಲಭೆಗೆ ಕಾರಣವು

ಮದರಾಸ್ ಗವರ್ನರವರು ತಿನ್ನವೆಲ್ಲಿ ಮತ್ತು ಟುಟಿಕಾರಿನ್ ಪಟ್ಟಣಗಳಿಂದ ಬಂದ ಪ್ರತಿನಿಧಿಗಳಿಗೆ ತಿಳಿಸಿದ ಅಭಿಪ್ರಾಯಗಳೇನೆಂದರೆ—ಪ್ರಜಾಪ್ರತಿನಿಧಿಗಳಾದ ನೀವು ಅರಿಕೆಮಾಡಿದ ವಿಚಾರಗಳನ್ನು ಗವರ್ನಮೆಂಟಿನವರು ಸಂಪೂರ್ಣವಾಗಿಯೂ ಜಾಗರೂಕತೆಯಿಂದಲೂ ಪರ್ಯಾಲೋಚನೆ ಮಾಡುವರು. ಪ್ರತಿನಿಧಿಗಳು ಈಗ ವಿವರಿಸಿರುವ ಕಾರಣಗಳನ್ನು ನೋಡಿದರೆ ಗವರ್ನಮೆಂಟಿನವರು ಕೊಟ್ಟಿರುವ ಹುಕುಮನ್ನು ಬದಲಾಯಿಸುವುದಕ್ಕೆ ಮಾರ್ಗವೇನೂ ಕಾಣುವುದಿಲ್ಲ. ತಿನ್ನವೆಲ್ಲಿಯಲ್ಲಿ ಗಲಭೆಯುಂಟಾದದ್ದಕ್ಕೆ ಕೆಲವರು ಟುಟಿಕಾರಿನಲ್ಲೂ ತಿನ್ನವೆಲ್ಲಿಯಲ್ಲೂ ಉಪನ್ಯಾಸಮಾಡಿದ್ದೇ ಕಾರಣವೆಂದು ಅಲ್ಲಿನ ಪ್ರತಿನಿಧಿಗಳು ಒಪ್ಪಿಕೊಂಡ ಭಾಗದಲ್ಲಿ ಗವರ್ನಮೆಂಟಿನವರು ಸಂತೋಷಪಡುತ್ತಾರೆ. ಈ ಯಥಾರ್ಥವಾದ ಸಂಗತಿಯನ್ನು ಈ ಪ್ರತಿನಿಧಿಗಳು ತಿಳಿದುಕೊಂಡಿರುವಂತೆಯೇ ಈ ಅಧಿಪತ್ಯದ ಸಕಲ ಪ್ರಜೆಗಳೂ ಮಂದಟ್ಟುಮಾಡಿಕೊಂಡಾರೆಂದು ಕೋರುತ್ತೇವೆ.

ದುಷ್ಟ ಪ್ರವರ್ತನೆಯ ಫಲಗಳು

ಈಗ ಎಲ್ಲೆಲ್ಲೂ ಸಂಘರ್ಗಿಕವೂ ರಾಜಕೀಯವೂ ಆದ ವಿಚಾರಗಳಲ್ಲಿ ಬದಲಾವಣೆಗಳುಂಟಾಗಬೇಕೆಂದು ಚರ್ಚೆಗಳೂ ಉಪನ್ಯಾಸಗಳೂ ನಡೆಯುತ್ತಿರುವುದನ್ನು ಅಲ್ಲಗಳೆಯುವುದು ಅಸಾಧ್ಯ. ಆದರೆ ಯಾವ ಭಾಗದಲ್ಲಾದರೂ ಜನರು ಉತ್ತಮ ಸ್ಥಿತಿಗೆ ಬರಬೇಕಾದಲ್ಲಿ ಅವರು ನ್ಯಾಯಾನುಸಾರವಾಗಿಯೂ ನೆಮ್ಮದಿಗೆ ಲೋಪಬಾರದಂತೆಯೂ ನಡೆದುಕೊಳ್ಳಬೇಕಾದದ್ದು ಪರಮಾವಶ್ಯಕವಾಗಿರುತ್ತದೆ. ಈ ಅಂಶವು ಗವರ್ನಮೆಂಟಿನವರಿಗೂ ಸತ್ಪ್ರಜೆಗಳಿಗೂ ಮುಖ್ಯ ಕರ್ತವ್ಯವಿರುವುದು. ಆದರೆ ಈ ದೇಶದಲ್ಲಿ ಪ್ರಜೆಗಳಿಗೆ ಅವರ ಕರ್ತವ್ಯವನ್ನು ಕಲಿಸುವುದು, ಅವರನ್ನು ನ್ಯಾಯಕ್ಕೂ ನೆಮ್ಮದಿಗೂ ಅನುಸಾರವಾಗಿ ನಡೆದುಕೊಳ್ಳುವಂತೆ ಮಾಡುವುದು, ಅಧಿಕಾರವನ್ನು ವಹಿಸಿರತಕ್ಕವರ ವಿಷಯದಲ್ಲಿ ಭಯಭಕ್ತಿಯಿಂದ ನಡೆದುಕೊಳ್ಳುವುದು, ಈ ಭಾಗದಲ್ಲೆಲ್ಲಾ ಸರ್ಕಾರದವರೊಬ್ಬರೇ ನಿಂತು ಬಲಾತ್ಕಾರಪೂರ್ವಕವಾಗಿ ಕಾರ್ಯನಿರ್ವಾಹ ಮಾಡಬೇಕಾಗಿರುತ್ತದೆ. ಪಬ್ಲಿಕ್ಕಾಗಿ ಮೀಟಿಂಗುಗಳನ್ನು ನಡಿಸಿ, ಧಾರಾಳವಾಗಿ ಉಪನ್ಯಾಸಗಳನ್ನು ಮಾಡುವುದಕ್ಕೂ, ವರ್ತಮಾನ ಪತ್ರಿಕೆಗಳ ಮೂಲಕ ಅಭಿಪ್ರಾಯಗಳನ್ನು ಪ್ರಕಟಿಸುವುದಕ್ಕೂ ಯಾವ ಅಡ್ಡಿಯೂ ಅಡಚಣೆಯೂ ಇಟ್ಟಿಲ್ಲವೆಂದೇ ಹೇಳಬಹುದು. ಆದರೆ ಇಂಥಾ ಶ್ರೇಷ್ಠವಾದ ಸ್ವಾತಂತ್ರ್ಯಗಳನ್ನು ದುರುಪಯೋಗಪಡಿಸಿದರೆ, ಟುಟಿಕಾರಿನ್, ತಿನ್ನವೆಲ್ಲಿಯಲ್ಲಿ ನಡೆದಂತೆ ಆ ದುರುಪಯೋಗಪಡಿಸಿದವರನ್ನು ಅಲ್ಲಗಳೆಯುವುದಕ್ಕೆ ಪ್ರತಿಯಾಗಿ ಪ್ರಜಾವತ್ಸಲರೆಂತಲೂ ದೇಶೋದ್ಧಾರಕರೆಂತಲೂ ಪರಿಗಣಿಸಿ, ಹೊಗಳುವರು. ಹೀಗೆ ಹೊಗಳುವುದಕ್ಕೆ ಅವರು ಅಧಿಕಾರವಹಿಸಿದವರನ್ನು ಎದುರಿಸಿ ಅವರನ್ನು ತೃಣದಂತೆ ಕಂಡರಲ್ಲಾ ಎಂಬುವುದೇ ಹೊರತು ಬೇರೆ ಮತ್ಯಾವ ಸಹಜವಾದ ಕಾರಣವೂ ಕಾಣುವುದಿಲ್ಲ. ಇಂಥಾ ದುಷ್ಟ ಪ್ರವರ್ತನೆಯನ್ನು ಹುಟ್ಟಿದಂತೆ ಅಡಗಿಸಿಬಿಡುವುದಕ್ಕೆ ಗವರ್ನಮೆಂಟಿನವರು ಕಠಿಣತರವಾದ ನಿರ್ಬಂಧಗಳನ್ನು ಕಲ್ಪಿಸಿ ಜಾರಿಗೆ ತಂದು, ದುಷ್ಟಪ್ರವರ್ತನೆಯು ಎಂದಿಗೂ ಫಲಕಾರಿಯಲ್ಲವೆಂಬ ಅಂಶವನ್ನು ಜನರಿಗೆ ಕಲಿಸಬೇಕಾಗುವುದು.

ಪ್ರಜೆಯ ಕರ್ತವ್ಯವು

ಪ್ರಜೆಗಳು ಕೆಲವು ಸಂದರ್ಭಗಳಲ್ಲಿ ಸುಮ್ಮನಿರಬೇಕು; ಇನ್ನು ಕೆಲವು ಸಂದರ್ಭಗಳಲ್ಲಿ ಚಟುವಟಿಕೆಯಾಗಿ ಕಾರ್ಯ ನಡಿಸಬೇಕು. ಇವೆರಡೂ ಅವರ ಕರ್ತವ್ಯಾಂಶವಾಗಿರುತ್ತವೆ. ಅವಶ್ಯಬಿದ್ದಾಗ ಪ್ರಜೆಗಳು ಮುಂದೆ ಬಂದು ಗವರ್ನಮೆಂಟಿಗೆ ಸಹಾಯಕರಾಗಿ ನಿಂತು, ಅವರ ಕೂಡ ಏಕೀಭವಿಸಿ ಕಾರ್ಯ ನಡಿಸದಿದ್ದರೆ ಆ ... ವಿರೋಧಿಗಳೆನಿಸಿಕೊಳ್ಳಲು ... ಗಲಭೆಯೇನೂ ಆಗದಂತೆ ನೋಡಿಕೊಳ್ಳುವುದಕ್ಕಾಗಿ ಪ್ರಜೆಗಳು ಸರ್ಕಾರದವರಿಗೆ ಸಹಾಯ ಮಾಡಬೇಕೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಟುಟಿಕಾರಿನ್ ಪ್ರಜೆಗಳಿಗೆ ತಿಳಿಸಿದರು. ಪ್ರಜೆಗಳು ನಮ್ಮದಿಗೆಯನ್ನು ಕಾಪಾಡುವುದಕ್ಕೆ ಒಪ್ಪಿರಾದರೂ ಮುಂದೆ ಬರದೆ ಸುಮ್ಮನಿದ್ದರು. ಹೀಗೆ ಸುಮ್ಮನಿದ್ದದ್ದರಿಂದ ಅವರು ಅದರ ಫಲವನ್ನು ಸಂಪೂರ್ಣವಾಗಿ ವಹಿಸಬೇಕಾಗಿರುತ್ತದೆ.

ಸ್ವದೇಶೀ ವಿಚಾರವು.

ಸ್ವದೇಶೀ ಹಡಗಿನ ಕಂಪನಿಯ ಮೇಲೆ ಯೂರೋಪಿಯನ್ ಸ್ಟೀಮರು ಕಂಪನಿಯವರು ಹೊಟ್ಟೆ ಕಿಚ್ಚುಪಟ್ಟು, ... ಹಡಗಿನ ಕಂಪನಿಯ ಪಕ್ಷಪಾತಿಗಳಾಗಿದ್ದಾರೆಂದು ಈ ಪ್ರತಿನಿಧಿಗಳು ಸೂಚಿಸುತ್ತಾರೆ. ಸ್ವದೇಶೀ ಕಸಬನ್ನು ಅಭಿವೃದ್ಧಿಗೆ ತರಬೇಕೆಂಬುವುದೊಂದೇ ಆ ಕಂಪನಿಯ ನಿಜವಾದ ಉದ್ದೇಶವಾಗಿದ್ದ ಪಕ್ಷದಲ್ಲಿ, ಅಂಥಾ ವಿಚಾರದ ವಿಷಯದಲ್ಲಿ ... ಕಾರ್ಯ ನಡಿಸುತ್ತಾ ಬಂದಿದ್ದಾಗ್ಯೂ ... ಸ್ವದೇಶೀ ಕಂಪನಿಯ ವಿಷಯದಲ್ಲಿ ಗವರ್ನಮೆಂಟಿನವರು ... ತಿನ್ನವೆಲ್ಲಿ, ಟುಟಿಕಾರಿನ್ ... ಗವರ್ನಮೆಂಟಿನವರ ಕರ್ತವ್ಯ ... ಇಲ್ಲ.

ದೊಂಬಿಯನ್ನು ಅಡಗಿಸಿದ್ದು

ಆ ಡಿಸ್ಟ್ರಿಕ್ಟಿನಲ್ಲೆಲ್ಲಾ ಗಲಭೆಯುಂಟಾದದ್ದನ್ನು, ಆ ಗಲಭೆಯನ್ನು ಅಡಗಿಸಿ ಪ್ರಜಾನೆಮ್ಮದಿಯನ್ನು ಕಾಪಾಡಿ ನಡಿಸುವುದಕ್ಕೆ ಅಧಿಕಾರಿಗಳು ಎಷ್ಟು ತಾಳ್ಮೆಯಿಂದ ಕಾರ್ಯಗಳನ್ನು ನಡಿಸಿರುತ್ತಾರೆಯೋ ಅವನ್ನು ನೋಡಿದರೆ ಆ ... ಕಾರ್ಯಗಳು ಸ್ತೋತ್ರಾರ್ಹಗಳಾಗಿಯೇ ಇರುತ್ತವೆ. ಆ ... ಕಾರ್ಯಗಳನ್ನು ನಡಿಸಬೇಕಾಗಿ ಬಂದದ್ದನ್ನು ... ಕಷ್ಟ ... ನಷ್ಟಗಳನ್ನೂ ನೋಡಿ ಗವರ್ನಮೆಂಟಿನವರು ... ವಿಷಾದಿಸುತ್ತಾರೆ. ಆದರೆ ಅಧಿಕಾರಿಗಳು ಅಷ್ಟು ಜಾಗ್ರತೆಯಾಗಿಯೂ ಚಟುವಟಿಕೆಯಿಂದಲೂ ಕಾರ್ಯಗಳನ್ನು ನಡಿಸದೆ ಹೋಗಿದ್ದ ಪಕ್ಷದಲ್ಲಿ ಕೇಡು ಅಪಾರವಾಗುತ್ತಿತ್ತೆನ್ನುವುದಕ್ಕೆ ಸಂಶಯವಿಲ್ಲ.

ಶಿಕ್ಷಾರ್ಥವಾದ ಪೋಲೀಸು.

ಶಿಕ್ಷಾರ್ಥವಾದ ಪೋಲೀಸನ್ನು ವಜಾಮಾಡುವುದಕ್ಕೆ ಪ್ರತಿನಿಧಿಗಳು ಸಾಕಾದಷ್ಟು ತೃಪ್ತಿಕರವಾದ ಕಾರಣವನ್ನು ತೋರಿಸಿಲ್ಲ. ಮತ್ತು ದಂಗೆಯಾದ ದಿನ ನಡೆದ ವಿಧ್ವಂಸನಗಳನ್ನು ಪ್ರತಿನಿಧಿಗಳು ಬಹಳ ಮಟ್ಟಿಗೆ ಲಘುಪಡಿಸಿ ಸೂಚಿಸಿರುತ್ತಾರೆ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮುಂದೆ ಬಂದು ಕಾರ್ಯಗಳನ್ನು ನಡಿಸದೆ ಹೋಗಿದ್ದರೆ ದೊಂಬೀ ಜನರಿಂದ ಇನ್ನೂ ಅಪಾರವಾದ ನಷ್ಟವೇ ಸಂಭವಿಸುತ್ತಿತ್ತೆಂದು ಗವರ್ನಮೆಂಟಿನವರು ನಂಬುತ್ತಾರೆ. ಶಿಕ್ಷಾರ್ಥವಾದ ಪೋಲೀಸನ್ನು ತೆಗೆದುಹಾಕಿಬಿಟ್ಟರೆ ಮತ್ತೆ ಅಂಥಾ ಗಲಭೆಗಳು ಪ್ರಾಪ್ತವಾಗಲಾರವೆಂಬುವುದಕ್ಕೆ ಯಾವ ಭರವಸೆಯೂ ಕಾಣುವುದಿಲ್ಲ. ನಿರಪರಾಧಿಗಳಾದ ಪ್ರಜೆಗಳ ಮಾನ ಪ್ರಾಣ ಧನಗಳನ್ನು ಸಂರಕ್ಷಿತವಾಗಿ ಕಾಪಾಡುವ ಭಾರವು ಗವರ್ನಮೆಂಟಿಗೆ ಸೇರಿದ್ದಾಗಿದೆ. ಈ ಉದ್ದೇಶದಿಂದ ಅವರು ಈ ಹೆಚ್ಚು ಪೋಲೀಸ್ ಸಿಬ್ಬಂದಿಯನ್ನು ನೇಮಕಮಾಡುವುದು ಅವಶ್ಯವಾಯಿತು. ಟುಟಿಕಾರಿನ್, ತಿನ್ನವೆಲ್ಲಿಗಳಲ್ಲಿ ಜನರ ದುರ್ನಡತೆಗಾಗಿ ಹೆಚ್ಚು ಪೋಲೀಸನ್ನು ನೇಮಿಸಿ, ಅದರ ಸಿಬ್ಬಂದಿಯ ಖರ್ಚನ್ನು ಮಲಬಾರ್, ಗಂಜಾಂ ಗೋದಾವರಿ ಮೊದಲಾದ ಜಿಲ್ಲೆಗಳ ಪ್ರಜೆಗಳಿಂದ ವಸೂಲ್ಮಾಡುವುದು ಸಹಜವಲ್ಲ.

ಮೈಸೂರು ಗೆಜೆಟ್ ಸಂಗ್ರಹ.

... ಸ್ಯಾನಿಟರಿ ಕಮಿಷನರ್ ಮ|| ಪಿ ... ಯವರಿಗೆ ಏಪ್ರಿಲ್ ೩ ರಿಂದ ... ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರ್ ಆದ ಸರ್ಜನ್ ಮೆ|| ಬಿ. ಎಸ್. ಡೇವಿಡ್ ಯವರು ತಮ್ಮ ಇತರ ಕೆಲಸಗಳೊಂದಿಗೆ ಡಿಪ್ಟಿ ಸ್ಯಾನಿಟರಿ ಕಮಿಷನರ ಆಫೀಸ್ ಛಾರ್ಜನ್ನೂ ವಹಿಸಿರತಕ್ಕದ್ದು.

ಮೈಸೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿದ್ದ ಮೆ|| ಸೈಯದ್ ಅಜ್ ಪೀರಾನ್ ಯವರಿಗೆ ಇಪ್ಪತ್ತುರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಸಬ್ ಅ|| ಕನ್ಸರ್ವೇಟರ್ ಬಿ ಎಸ್. ಗೋವಿಂದರಾಯರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳದೆ ಹೋದದ್ದರಿಂದ ರದ್ದುಮಾಡಿದೆ.

ಮೈಸೂರ್ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮೆ|| ಎ. ಸುಬ್ರಹ್ಮಣ್ಯ ಅಯ್ಯರವರು ರಜದಿಂದ ವಾಪಸು ಬಂದು ಫೆಬ್ರುವರಿ ೩ ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದು ಮಾಡಿದೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಇಂಗ್ಲಿಷ್ ಪ್ರೊಫೆಸರಾಗಿರುವ ಮಿ|| ಜೆ. ಬಿ. ಹಯಾಟ್, ಎಂ. ಎ. ಯವರನ್ನು ಮೆ|| ಜೆ ಕುಕ್ ಯವರು ಕೆಲಸದಿಂದ ನಿವೃತ್ತರಾಗುವ ತಾರೀಖು ಮೊದಲುಗೊಂಡು ಆ ಕಾಲೇಜಿನ ಪ್ರಿನ್ಸಿಪಲ್‌ರಾಗಿ ನೇಮಿಸಿದೆ.

ಶ್ರೀಮನ್ ಮಹಾರಾಜರವರು ಮೆ|| ಎಸ್. ಇಸ್ಮಾಯಿಲ್ ಸಿ. ಎಸ್. ಐ ಯವರನ್ನು ಮೈಸೂರು ಚೀಫ್ ಕೋರ್ಟಿನ ಚೀಫ್ ಜಡ್ಜರನ್ನಾಗಿ ನೇಮಕ ಮಾಡಿರುತ್ತಾರೆ.

ಗುಬ್ಬಿ ತಾಲೂಕಿನ ಅಮಲ್ದಾರ್ ಮೆ|| ಸಿ. ನಾರಾಯಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲುಗೊಂಡು ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿರಸ್ತೆದಾರ್ ಪಿ. ಸಂಜೀವರಾಯರು ತಾಲ್ಲೂಕಿನ ಟಪಾಲ್ತಿ ಕೆಲಸದ ಛಾರ್ಜನ್ನು ವಹಿಸಿರತಕ್ಕದ್ದು.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಅನಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್

ಅರಸೀಕೆರೆ ತಾಲ್ಲೂಕು ಜಾವಗಲ್ ಗ್ರಾಮಕ್ಕೆ ಪೂರ್ವದಲ್ಲಿ ಮಂಗಳವಾರ ಶುಕ್ರವಾರ ಅಂಚೆ ಬರುತ್ತಾ ಇದ್ದುದು ಈಗ ತಪ್ಪಿ ಬುಧವಾರ ಶನಿವಾರ ಬರುತ್ತದೆ ಎಂದೂ, ಇದರಿಂದ ಜನಗಳಿಗೆ ಅನಾನುಕೂಲವಾಗಿದೆ ಎಂದೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಹಳ್ಳಿಕಾರ ಬೋರೈಯ್ಯ, ಮದ್ದಗಿರಿ:—ನೀವು ಬಾತ್ಮಿಯನ್ನು ಸ್ಪಷ್ಟವಾಗಿ ಬರೆಯಬೇಕು.

ಬಸವಭೀಮಾಸ್ತ್ರಿ, ಚಿಕ್ಕಮಗಳೂರು, ಎಂ. ದೇವದಾಸಪ್ಪ, ಚನ್ನಪಟ್ಟಣ; ವಿದ್ಯಾರ್ಥಿ, ಚಿತ್ರದುರ್ಗ.—ಈ ಬಾತ್ಮಿಗಳನ್ನು ಪ್ರಕಟಿಸಲಾರೆವು.

ಚಿತ್ರದುರ್ಗದಲ್ಲಿ ನಡೆಯುವ ಭವಿಷ್ಯತ್ತು.—ಈ ವಿಷಯವನ್ನು ಜಿಲ್ಲಾ ಪೊಲೀಸ್ ಇಲಾಖೆಗೆ ತಿಳಿಸಬಹುದಾಗಿದೆ.

—ಎಡಿ]

ಕರೆಸ್ಪಾಂಡೆನ್ಸ್.

ಹೊಸ ಸರ್ವೆ ಸೆಟ್ಲ್‌ಮೆಂಟು.

ಅಯ್ಯಾ,

ಸೊರಬ ತಾಲ್ಲೂಕು ಕುಬಟೂರ ಗ್ರಾಮಸ್ಥರಿಗೆ ಈ ವರುಷ ಬಂದ ತೊಂದರೆಗಳು ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ. ವಿಶ್ವಾವಸು ಸಂವತ್ಸರದಾರಭ್ಯ ಈ ಊರಿನಲ್ಲಿ ಮಳೆ ಸರಿಯಾಗಿ ಆಗದೆ ಬೆಳೆಯೂ ಸರಿಯಾಗಿ ಬಾರದೆ ರೈತರುಗಳೆಲ್ಲ ಬಹಳ ಕಷ್ಟಪಡುತ್ತಿದ್ದರು. ಇಂಥ ಕಷ್ಟ ಸಮಯದಲ್ಲಿ ಸರಕಾರದವರು ನಮ್ಮ ಅನವಟ್ಟಿ ಹೋಬಳಿಗೆ ಮಾತ್ರ ಕಂದಾಯವನ್ನು ದ್ವಿಗುಣವಾಗಿ ಹೆಚ್ಚಿಸಿದರು. ಈ ಕೆಲಸಕ್ಕೋಸ್ಕರ ಸೊರಬಕ್ಕೆ ದಯಮಾಡಿಸಿದ ಆಫೀಸರ ಹತ್ತಿರ ಹೇಳೋಣ ಬಡವರು ಅಕರಾಲು ಹೇಳಿಕೊಂಡಾಗ್ಯೂ ಗಣನೆಗೆ ತಾರದೇ ಹೋದರು. ಇನ್ನು ಮುಂದೆ ಜಮೀನುದಾರರಿಗೆ ಏನೂ ಪ್ರಯೋಜನವಿಲ್ಲ. ಒಂದು ನೂರು ರೂಪಾಯಿ ಕಂದಾಯ ಕೊಡತಕ್ಕ ಜಮೀನುದಾರನಿಗೆ ವರುಷ ಒಂದಕ್ಕೆ ೫೦ ರೂಪಾಯಿಗೆ ಹೆಚ್ಚಾಗಿ ಮಿಗತೆ ಉಳಿಯಲು ಕೂಡ ಬಹಳ ಕಷ್ಟವಾಗುತ್ತದೆ.

ಇದೂ ಅಲ್ಲದೆ ಇದೇ ವರುಷವೇ ಕೆರೆ ಕಾಮಗಾರಿಗಾಗಿ ೯೦ ರೂಪಾಯಿ ಕಂಟ್ರಿಬ್ಯೂಷನ್ ಕೊಡಬೇಕಾಗಿದೆ. ಒಂದು ರೂಪಾಯಿ ಕಂದಾಯಕ್ಕೆ ಎಂಟು ಆಣೆಗೆ ಹೆಚ್ಚಾಗಿ ಬೀಳುತ್ತದೆ. ಪ್ರತಿ ವರುಷವೂ ಒಂದು ರೂಪಾಯಿಗೆ ೧ ಆಣೆಯಂತೆ ಹೆಚ್ಚಾಪ್ ಫಂಡು ವಸೂಲು ಮಾಡುತ್ತಾ ಇರುವ ಮೊಬಲಗನ್ನು ಯಾವ ಕೆಲಸಕ್ಕೆ ಉಪಯೋಗಿಸುತ್ತಾರೋ ಗೊತ್ತಾಗುವದಿಲ್ಲ. ಇದನ್ನೆಲ್ಲಾ ನೋಡಿದರೆ ರೈತರ ಹಣ ಹತ್ತಲ್ಲಿ ರೂಪಾಯಿನ ಗಿಡ ಬೆಳೆಯುತ್ತದೆಂತ ಸರಕಾರದವರು ತಿಳಿದಿರುವಂತೆ ತೋರುತ್ತದೆ. ಇದಕ್ಕೆ ನಾವು ಬಹಳ ವಿಷಾದಪಡುತ್ತೇವೆ.

ಪುರೋಹಿತ ಶ್ರೀನಿವಾಸಾಚಾರ್

ಜಟಕಾ ಗಾಡಿಯವರ ಮೋಸವು.

ಅಯ್ಯಾ,

ನಾನು ಕೋರ್ಟು ಕೆಲಸಕ್ಕಾಗಿ ಚಿತ್ರದುರ್ಗಕ್ಕೆ ಹೋಗುವನು ತಾ ೩೦ ನೇ ಮಧ್ಯಾಹ್ನ ೪ ಘಂಟೆಗೆ ಜಟಕಾ ಗಾಡಿಗಳು ಸೇರುವ ಬಳಿಗೆ ಬಂದೆನು. ನನ್ನ ಗಾಡಿಗೆ ಬಾ ಎಂದು ನಾಮುಂದು ತಾಮುಂದಾಗಿ ಗಾಡಿಯವರು ನನ್ನ ಕೈಲಿದ್ದ ಬಟ್ಟೆ ಗಂಟುಗಳನ್ನು ಕಿತ್ತುಕೊಳ್ಳುವದಕ್ಕೆ ಬಂದರು. ಅತಿ ಜುಲುಂ ಮಾಡಿದ ದಾದೂಸಾಬೀ ಮಗ ಮಸ್ತಾನ್ ಎಂಬುವನ ಗಾಡಿಗೆ ಎಂಟಾಣೇ ಮುಂಚಿತವಾಗಿಯೇ ಬಾಡಿಗೆ ತಾವತೀ ಮಾಡಿ ಗಾಡಿಯಲ್ಲಿ ಕೂತುಕೊಂಡೆನು. ಚಿತ್ರದುರ್ಗದಿಂದ ಹೊಳಲ್ಕೆರೆ ಮಾರ್ಗವಾಗಿ ೧೨ ಮೈಲು ದೂರ ಹೋಗುವಷ್ಟರಲ್ಲಿ ೩-೪ ದಫೆ ಕುದುರೆಯು ತಂಟೆ ಮಾಡಿದು ಆದರೂ ಗಂಡಾಂತ್ರ ತಪ್ಪಿಸಿಕೊಂಡು ೧೨ ನೇ ಮೈಲೀ ಬಳಿ ಇರುವ ಕುದುರೇ ಬದಲಾಯಿಸುವ ಬಳಿಗೆ ಬಂದೆವು ಈ ಗಾಡಿಯವನು ಕುದುರೆಯನ್ನು ಬದಲಾಯಿಸಲೇ ಇಲ್ಲ ಅದೇ ಕುದುರೆಯಿಂದಲೇ ಮುಂದಕ್ಕೆ ೨-೩ ಮೈಲು ಹೋಗುವಷ್ಟರಲ್ಲಿ ಕುದುರೆಯು ತಂಟೆ ಮಾಡಿದಾಗ ಬಂಡಿಯು ಅಚ್ಚು ಮುರಿದು ಗಾಡಿಯು ಮಗುಚಿಕೊಂಡಿತು. ನಾನು ಹಿಂಭಾಗದಲ್ಲಿ ಕೂತಿದ್ದೆ. ಜಾಗ್ರತೆಯಾಗಿ ಹಾರಿ ಇಳಿದದ್ದರಿಂದ ನನಗೆ ಪೆಟ್ಟು ಆಗಲಿಲ್ಲ. ಮುಂಭಾಗದಲ್ಲಿಯೂ ಮಧ್ಯದಲ್ಲಿಯೂ ಕೂತಿದ್ದವರು ಒಬ್ಬರಿಗೊಬ್ಬರು ಡಿಕ್ಕೀ ಹೊಡದು ಗಾಯಪಟ್ಟರು. ಆದರೆ ಪ್ರಾಣಭಯವೇನೂ ಆಗಲಿಲ್ಲ. ಆಗ ೬॥ ಗಂಟೆ ಸಮಯವಾಗಿತ್ತು. ರೈಲಿಗೆ ಹೋಗಬೇಕಾಗಿದ್ದವರು ಈ ಗಾಡಿಯಲ್ಲಿ ನಾನಲ್ಲದೆ ಇನ್ನಿಬ್ಬರು ಇದ್ದರು ಆಗ ಬಾಕಿ ಗಾಡಿಯವರನ್ನು ಕೇಳಿದ್ದಕ್ಕೆ ಅಷ್ಟೇನೂ ಫಿಕರ್ ಇಲ್ಲದಿದ್ದಾಗ್ಯೂ ಆಗಲಾರದೆಂತ ಹೇಳಿದರು ಆಗ ನಮ್ಮ ಗಾಡಿಯವನೇ “ಏಕ್ ರೂಪಾಯಿ ದೂಸ್ರೇ” ಎಂತ ಹೇಳಿದನು ಎಷ್ಟು ಚಪುಕಿಸಿಮಾತಿದಾಗ್ಯೂ ಪುನಃ ಕೈಯಿಂದ ಒಂದು ರೂಪಾಯಿಯನ್ನು ಕೊಟ್ಟು ಕೊಡುಕೊಂಡೆನು. ಇತರರು ರಾತ್ರಿಯೆಲ್ಲ ಆ ಕಾಡಿನಲ್ಲಿಯೇ ಬೀಳಬೇಕಾಯಿತು. ನಂತರ ಹೊಳಲ್ಕೆರೆಗೆ ಬಂದು ನಿಂತಕೊಡಲೇ ಸ್ಟೇಷನಿಗೆ ಹೋಗಬೇಕಾಗಿದ್ದ ಇನ್ನೊಬ್ಬನಿಂದ ಈ ಗಾಡಿಯವನು ಎರಡು ಆಣೆ ಯನ್ನು ತೆಗೆದುಕೊಂಡು ಇಷ್ಟು ಜನರ ಮಧ್ಯೆ ಆತನನ್ನು ಕೂರಿಸಿದನು ಗಾಡಿಯು ರೈಲ್‌ಸ್ಟೇಷನ್ ಬಳಿಗೆ ಬರುವಷ್ಟರಲ್ಲಿ ೯॥ ಘಂಟೆಯಾಗಿ ಮೆಯಿಲ್ ಗಾಡಿಯು ಹೊರಟಿತು. ಟಿಕೆಟ್‌ಗೆ ತೊಂದ್ರೆಯಾಗಿ ರೈಲು ಹತ್ತಬೇಕಾಯಿತು. ಆದಿನ ಅಚ್ಚು ಮುರಿದ ಗಾಡಿಯೇ ಆ ದಿನದ ಹಿಂದೆ ೪ ನೇ ಮೈಲಿಯಲ್ಲಿ ಮುರಿದುಹೋಗಿದ್ದು ಆ ಮರುದಿನವೂ ಅದೇ ಗಾಡಿಯನ್ನೇ ಕಟ್ಟಿದನೆಂತ ಬಾಕೀ ಗಾಡಿಯವರು ತಿಳಿಸಿದರು ಈ ರೀತಿ ಗಾಡಿಗಳಲ್ಲಿ ಬರತಕ್ಕವರಿಗೆ ಗಂಡಾಂತರ ಕಳೆದಂತೆ ಆಗುತ್ತೆ. ಮಧ್ಯೆ ಮಧ್ಯೆ ಗಾಡಿ ಮುರಿದರೆ ಬಾಕೀ ಗಾಡಿಯವರು ಕೇಳಿದ್ದನ್ನು ಕೊಡಬೇಕಾಗುತ್ತೆ. ಈ ಜಟಕಾ ಗಾಡಿಯವರಾದರೋ ಅತಿ ಆಸೆಯವರು. ಗಾಡೀ ತುಂಬಿದ್ದಾಗ್ಯೂ ಪುನಃ ಜನರನ್ನು ಕೂರಿಸುತ್ತಾರೆ ಈ ಗಾಡಿಗಳು ರಾತ್ರಿವೇಳೆ ತಿರುಗಾಡತಕ್ಕವಾದಾಗ್ಯೂ ಲಾಂದ್ರಗಳೇ ಇರುವದಿಲ್ಲ. ಚಿತ್ರದುರ್ಗದಿಂದ ಒಂದೇ ಕುದುರೆಯನ್ನು ೪ ಗಂಟೇ ವೇಳೆಯಲ್ಲಿ ರೈಲ್ವೇ ಸ್ಟೇಷನಿಗೆ ೨೬ ಮೈಲು ದೂರ ಹೊಡೆಯುತ್ತಾರೆ. ಗಾಡಿಯ ಏಜಂಟರು ತಮ್ಮ ಆಳನ್ನು ಕಳುಹಿಸುತ್ತಾರೆ ಯಜಮಾನರು ಗಾಡಿಗೆ ಭರ್ತಿಯಾಗಿ ಜನರನ್ನು ಕೂರಿಸಿ ಕಳುಹಿಸಿದಾಗ್ಯೂ ಆಳು ತನ್ನದೊಂದು ಗಿರಾಕಿಯನ್ನು ೧, ೨ ಮೈಲು ಮುಂದೆ ಕಳುಹಿಸಿ ಅಲ್ಲಿ ಕೂರಿಸಿಕೊಳ್ಳುವ ಪದ್ಧತಿಯೂ ಉಂಟು. ಈಗ ಚಿತ್ರದುರ್ಗದ ಕೆಲವು ಜಾಯರು ಸೇರಿ ಎರಡು ಕುದುರೆಯ “ಟಾಂಗ” ಎಂಬ ಗಾಡಿಯನ್ನು ಇಟ್ಟಿರುತ್ತಾರೆ ಹೋಗತಕ್ಕದ್ದು ಒಂದು, ಬರತಕ್ಕದ್ದು ಒಂದು, ಈ ರೀತಿ ಎರಡೇ ಗಾಡಿ ಇಟ್ಟು ಇರುವದರಿಂದ ಜಾಸ್ತಿ ಜನರಿಗೆ ಅನುಕೂಲವಿಲ್ಲ. ಈ ಮಹನೀಯರು ಇದರಂತೆ ಇನ್ನೂ ಎರಡು ಗಾಡಿಗಳನ್ನು ಜಾಸ್ತಿ ಇಟ್ಟು ನಡಿಸಿದಲ್ಲಿ ಪ್ರಯಾಣಿಕರಿಗೆ ಸಹಾಯವೂ, ಕಂಪೆನಿಯವರಿಗೆ ಲಾಭವೂ ಉಂಟಾಗುವದೆಂದು ನನ್ನ ಪ್ರಾರ್ಥನೆ.

ಟಿ ವೆಂಕಟರಾಯಶೆಟ್ಟಿ.

ಸ್ವತ್ತುಗಳ ಪರಾಧೀನತೆ ತಡೆ ನೋಟೀಸು.

30-1

ಚನ್ನರಾಯಪಟ್ಟಣ ತಾಲ್ಲೂಕು ಹಿರಿಸಾವೆ ಹೋಬಳಿ ಬಿಳಿಕೆರೆ ಗ್ರಾಮದ ಕೊಪ್ಪಲ ನಂಜೇಗೌಡನ ಮಗ ತಿಮ್ಮೇಗೌಡನು ಇದರಿಂದ ಸಮಸ್ತ ಜನರಿಗೂ ತಿಳಿಸುವದೇನೆಂದರೆ:—

ಈ ಬಿಳಿಕೆರೆ ಗ್ರಾಮದಲ್ಲಿ ನನ್ನ ದೊಡ್ಡಪ್ಪ ತಿರುಮಲೇಗೌಡನೆಂತ ಇದ್ದು, ಅವ ಪವತಿ ಮಗ ತಿಮ್ಮೇಗೌಡನೆಂಬ ಒಬ್ಬನೇ ಮಗನಿದ್ದು, ಈಗ್ಗೆ ಸುಮಾರು ೯ ತಿಂಗಳಲ್ಲಿ ಕಾಯಿಲೆ ಆಗಿ, ಅವನ ತಂಗಿ ಮನೆಯಾದ ಚನ್ನರಾಯಪಟ್ಟಣ ತಾಲ್ಲೂಕು ಕಸಬಾ ಹೋಬಳಿ ಗುಂಡಕಟ್ಟಹಳ್ಳಿ ಗ್ರಾಮದಲ್ಲಿ ಮೃತನಾದ ಅವನ ತಾಯಿ ತಿಮ್ಮಿಯೂ ಹೆಂಡತಿ ನಂಜಿಯೂ ಸಹ ಇದ್ದಾರೆ ಮೃತನಿಗೆ ಮಕ್ಕಳಿಲ್ಲ. ಇವನ ತಂಗಿ ಹೊಂಬಿ ಎಂಬುವಳು ತನ್ನ ಗಂಡನಿಂದ ಪೋಷಿತಳಾಗಿದ್ದುಕೊಂಡಿರುವಳು.

ಮೃತನಿಗೆ ೩ ನಂಬರ್ ಜಮೀನುಗಳು, ೨ ಮಾಳಿಗೆ ಮನೆಗಳು, ೧ ಹುಲ್ಲು ಕೊಪ್ಪಲು, ೧ ಸಪ್ಪಿನ ಮಡಿ, ೧ ಗಾಡಿ. ಸುಮಾರು ೧೨೦ ರೂಪಾಯಿ ಬೆಲೆ ಬಾಳತಕ್ಕ ೧ ಜೋಡಿ ಎತ್ತು ಹೊರತು ಇತರ ದನಕರುಗಳು, ನಗದು ಹಣಗಳು, ಚಿನ್ನ ಬೆಳ್ಳಿ ಮೊದಲಾದ್ದು ಸಹ ಇದೆ ಚರಾಸ್ತಿ ಇಷ್ಟೇನು ಹೇಳಲಾಗುವದಿಲ್ಲ. ಮೃತನಿಗೆ ಪಿತ್ರಾರ್ಜಿತ ವಾರಸು ದಾರನು ನಾನೇ ಆಗಿದೇನೆ. ಸದರಿ ಮೃತನ ಆಸ್ತಿಗಳನ್ನು ನನಗೆ ಆಗದ ದ್ವೇಷಿ ಜನರು ಹೆಂಗಸರಿಗೆ ದುರ್ಬೋಧೆ ಪಡಿಸಿ ನನಗೆ ನೋಡಮ ವಹಿಕೆಂಬ ಇರುವೆಯಿಂದ ಉಪಭೋಗ್ಯಾದಿಗಳ ಮೂಲಕ ಸ್ವಾಧೀನ ಹೊಂದಬೇಕೆಂದು ಪ್ರಯತ್ನ ನಡಿಸುತ್ತಾ ಇದ್ದಾರೆ ಈ ಹೆಂಗಸರು ಜೀವಿತಕಾಲ ಪರಿಯಂತ ಜೀವನಾಂಶಕ್ಕೆ ಅರ್ಹರೇ ಹೊರತು ಸ್ವತ್ತುಗಳನ್ನು ಪರಾಧೀನ ಮಾಡಲು ಯಾವ ಅಧಿಕಾರವೂ ಉಳ್ಳವರಾಗಿಲ್ಲ. ಪಿತ್ರಾರ್ಜಿತ ಆಸ್ತಿಯಾಗಿರುತ್ತೆ. ಸ್ವಂತ ವಾರಸುದಾರನಾದ ನನಗೆ ವಿರೋಧವಾಗಿ ಈ ಲಾಗಾಯ್ತು ಸ್ವರೂಪ ಯಾವ ವಿಧವಾಗಿಯೂ ನನ್ನ ಅನುಮತಿ ವಿನಹ ಸದರಿ ಹೆಂಗಸರುಗಳಿಂದ ಸದರಿ ತಿಮ್ಮೇಗೌಡನ ಆಸ್ತಿಗಳನ್ನು ಹೊಂದಕೂಡದು. ಹಾಗೆ ಹೊಂದಿದವರ ಅಂಥಾವರಿಗೆ ಸ್ವತ್ತು ಅನುಕೂಲವಾಗತಕ್ಕದ್ದಲ್ಲ. ಇವುಗಳ ಸಂಬಂಧವಾಗಿ ಯಾವ ಸ್ಥಳದಲ್ಲಿಯಾದರೂ ವ್ಯಾಜ್ಯಗಳನ್ನು ನಡಿಸಿದರೆ ಅಂಥಾವರ ನಷ್ಟಗಳಿಗೆ ಸದರಿ ಆಸ್ತಿಗಳೂ ನಾನು ಸಹ ಗುರಿಯಾಗುವದಿಲ್ಲ. ನನಗೆ ಸಂಭವಿಸುವ ನಷ್ಟಗಳಿಗೇನೇ ಅಂಥಾ ವ್ಯಾಜ್ಯನಡಿಸುವವರು ಗುರಿಯಾಗಿರಬೇಕು. ಸದರಿ ತಿಮ್ಮೇಗೌಡನು ಮೃತನಾಗುವ ವರೆಗೆ ಯಾರಲ್ಲೂ ಯಾವ ವಿಧವಾದ ಸಾಲವೂ ಮಾಡಿಲ್ಲ. ಅವನ ಹೆಸರಿನಿಂದ ಯಾರಾದರೂ ಕಾಗದಗಳನ್ನು ತಂದಿಟ್ಟುಕೊಂಡಿದ್ದು ಏನಾದರೂ ರಿಕಾರ್ಡುಗಳನ್ನು ಮಾಡಿಕೊಂಡರೆ ಅಂಥಾವರು ಫೋರ್ಜರಿಗೆ ಗುರಿ ಮಾಡಲ್ಪಡುವರು; ಮತ್ತು ಇವನ ಮರಣಕಾಲದಲ್ಲಿ ನಾನು ಹಾಜರಿದ್ದೆ. ಹಣ್ಣು ಸಕ್ಕರೆ ಮಾಡಿಕೊಳ್ಳಬೇಕೆಂದು ಯಾರಿಗೂ ಹೇಳಲೂ ಇಲ್ಲ. ಮೃತನ ಹೆಂಡತಿ ನಂಜಿಯ ಹಾಲಿ ಬಾಳಿಕಾರಳಾಗಿರುತ್ತಾಳೆಂಬ ನಡತ ಮೇಲೆ ಯಾರು ದರೂ ಪರ್ಯಾಯಾಗಿ ಮೊದಲಾದವುಗಳನ್ನು ಮಾಡಿಕೊಂಡರೂ ಅವು ಊರ್ಜಿತವಾಗತಕ್ಕದ್ದಲ್ಲ. ಈ ಭಾಗ ಸರ್ವರೂ ತಿಳಿದುಕೊಂಡು ಸದರಿ ತಿಮ್ಮೇಗೌಡನ ಚರಸ್ಥಿರ ವೊಹರಾದ ಯಾವ ಆಸ್ತಿಯನ್ನೂ ಯಾರೂ ತೆಗೆದುಕೊಳ್ಳಕೂಡದು. ತೆಗೆದುಕೊಂಡರೆ ಮುಂದೆ ಆಗತಕ್ಕ ನಷ್ಟಗಳಾದರಾದ ಭಾಗ ಇದರಿಂದ ತಿಳಿಸಿದೆ. ತಾ. ೩೧—೩—೧೯೦೪.

ನಂಜೇಗೌಡನ ಮಗ ತಿಮ್ಮೇಗೌಡನ ಗುರುತಿನ ರುಜು.

ಇಲ್ಲಿ ನೋಡಿ.

3-15

ತುಮಕೂರು ಮಿರ್ಜ ಇಲಾಖೆಯಲ್ಲಿ ಯೂರೋಪಿಯನ್ ಪೋಲ್ಯಿಕಾರಿಕೆಯಿಂದ ಉತ್ತಮ ತರಹದ ಹಾಸಗದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ನಿಂದ ತಯಾರಾಗುತ್ತವೆ.

ಕ್ರಯ:—೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯ ವರೆಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಕೆಳಕಂಡಂತೆ ಡಿಸ್ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮೇನೇಜರ್,

ಹಾಸಗದ ಟೋಪಿ ಕಾರ್ಖಾನೆ, ಮಿರ್ಜ ಇಲಾಖೆ, ತುಮಕೂರು.

ತುಂಕೂರು ನೋಟೀಸ್.

29-1

ತುಂಕೂರಿನಲ್ಲಿ ರುವ ಜೆ. ಯಸ್. ಕಣ್ಣಯ್ಯಶೆಟ್ಟಿ ಎಂಬ ನಾನು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—ನಾನು ಕೆಲವು ಕಾಲದಿಂದ ಟೋಪಿ ಮಾಡಿಸಿ ಮಾರುವದರಲ್ಲಿ ನನ್ನ ಮೇಲ್ವಿಳಾಸಕ್ಕೆ ಮಿರ್ಜ ಎಂಬ ಹೆಸರನ್ನು ತಿಳಿಯದೆ ಸೇರಿಸಿದ್ದೇನೆ. ಈಗ ಬಹಳ ವರುಷದಿಂದ ಈ ದೇಶದಲ್ಲಿ ಇರುವಂಥಾ ವೆಸ್ಲಿಯನ್ ಮಿರ್ಜ ಎಂಬುವರಿಗೂ ನನಗೂ ಏನೇನೂ ಸಂಬಂಧವಿರುವದಿಲ್ಲವಾದದರಿಂದ ಇಂದಿನಿಂದ ಈ ಮಿರ್ಜ ಎಂಬ ಹೆಸರನ್ನು ಸಂಪೂರ್ಣವಾಗಿ ಬಿಟ್ಟು ಅದನ್ನು ಉಪಯೋಗಿಸದೆ ಬಿಟ್ಟಿರುತ್ತೇನೆ.

(ಸ್ವ.) ಜೆ. ಯಸ್. ಕಣ್ಣಯ್ಯಶೆಟ್ಟಿ,

ಉಲ್ಲನ್ ಅಂಡ್ ಸ್ಟೇಷನರಿ ಮರ್ಚೆಂಟು, ತುಂಕೂರು.

ಹೊಸವರ್ಷ! ಹೊಸ ಮಾಸಪತ್ರಿಕೆ!

“ಕರ್ಣಾಟಕ ಚಂದ್ರಿಕೆ.”

31 1

ವಾರ್ಷಿಕ ಚಂದಾ ರೂ. ೧. ಅಂಚೇ ಹಾಸಲು ಸೇರಿ ರೂ. ೧-೪-೦

ಈ ಉತ್ತಮವಾದ ಮಾಸಪತ್ರಿಕೆಯು ಪ್ರೌಢವಿದ್ವಾಂಸರ ಸಹಾಯದಿಂದ ಪ್ರತಿ ಪೂರ್ಣಿಮೆಯೂ ಪ್ರಕಟಿಸಲ್ಪಡುವದು. ಇದು ಬಾಲರಿಗೂ ಬಾಲಕಿಯರಿಗೂ ಮುಖ್ಯವಾಗಿ ಪ್ರತಿ ಒಬ್ಬ ಕುಟುಂಬಿಗಳಿಗೂ ಅತ್ಯಂತೋಪಯುಕ್ತವಾದುದು. ಹೊಸಕನ್ನಡದ ಪಠನಕಾವ್ಯಗಳೂ ಪುಸ್ತಕ (ನಕಲಿ) ಗಳೂ ಕಾದಂಬರಿ (ಕಥೆ) ಗಳೂ ಸ್ತ್ರೀಯರಿಗೆ ಅತ್ಯವಶ್ಯಕವಾದ ಅನೇಕ ವಿಷಯಗಳೂ ಇದರಲ್ಲಿ ಅಡಕವಾಗಿವೆ. ಆಯಾ ಗ್ರಂಥಗಳಿಗೆ ಬೇರೆಬೇರೆ ಪುಟಸಂಖ್ಯೆಯನ್ನು ಕೊಡುವುದರಿಂದ ಪ್ರತ್ಯೇಕವಾಗಿ ಬೈಂಡ್ ಕಟ್ಟಿಸಿಕೊಳ್ಳುವುದಕ್ಕೆ ಅನುಕೂಲವಾಗಿದೆ. ಹಿಂದಿನ ಪಿರಾರಿಗೆ ೭ ಆಣೆಯ ‘ಪ್ರಿಯದರ್ಶಿಕೆ’ ಎಂಬ ನಾಟಕವನ್ನೂ, ೪ ಆಣೆಯ ‘ಸ್ವರ್ಣಕೀ ಚರಿತ್ರೆ’ ಎಂಬ ಹೊಸಕನ್ನಡದ ವಿಚಿತ್ರಸಂಪುಟವನ್ನೂ ೬ ಆಣೆಯ ‘ಉತ್ತರರಾಮಚರಿತೆ’ ಯನ್ನೂ ಉಚಿತವಾಗಿ ಕಳುಹಿಸುತ್ತೇವೆ ಐದು ಜನ ಚಂದಾದಾರರನ್ನು ಸೇರಿಸಿಕೊಟ್ಟವರಿಗೆ ಮೇಲ್ಕಂಡ ಬಹುಮಾನಗಳಲ್ಲದೆ ಪತ್ರಿಕೆಯನ್ನು ಅರ್ಧ ಚಂದಾಗೆ ಕಳುಹಿಸುತ್ತೇವೆ. ೧೦ ಜನರನ್ನು ಸೇರಿಸಿಕೊಟ್ಟವರಿಗೆ ಪತ್ರಿಕೆಯನ್ನೂ ಮೇಲ್ಕಂಡ ಪುಸ್ತಕಗಳನ್ನೂ ಉಚಿತವಾಗಿ ಕಳುಹಿಸುವುದು ಅಲ್ಲದೆ ೯ ಆಣೆ ‘ಸೀತಾಚರಿತ್ರೆ’ ೬ ಆಣೆ ‘ಸ್ವಪ್ನವಿಜಯ,’ ೩ ಆಣೆ ‘ಸ್ತೋತ್ರಮಾಲಿಕೆ’ ಇವನ್ನೂ ಉಚಿತವಾಗಿ ಕಳುಹಿಸುತ್ತೇವೆ. ಮಾದರಿ ಸಂಚಿಕೆ ಅಪೇಕ್ಷಿಸುವವರು ಒಂದಾಣೆ ಸ್ಟಾಂಪ್ ಟಿಕೆಟು ಬರಹ ಕೊಂಡರೆ ಕಳುಹಿಸುವೆವು. ಇಂತಹ ಸುಸಮಯವು ಮುಂದೆ ಸಿಕ್ಕಲಾರದು! ಈಗಲೇ ಚಂದಾದಾರರಾಗುವವರಿಗೆ ಮಾತ್ರ ಮೇಲ್ಕಂಡ ಬಹುಮಾನಗಳು ಸಿಕ್ಕುವುವು!! ಜಾಗ್ರತೆಯಾಗಿ ಬರೆದುಕೊಳ್ಳಿರಿ! ವಿಸ್ತಾರ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ! ನಮ್ಮ ವಿಳಾಸ—

ಅರಮನೆಯ ವಿದ್ವಾಂಸ ನಂಜನಗೂಡು ಶ್ರೀಕಂಠಶಾಸ್ತ್ರಿ,

ಎಡಿಟರ್, ಕರ್ಣಾಟಕ ಚಂದ್ರಿಕೆ, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಕೆನಡಾದಲ್ಲಿ ಪೆರೂನಾ ಸೇವನೆ ಮಾಡುವ ಒಂದಾನೊಂದು ಸಂಸಾರವು.

ಪೆರೂನಾವನ್ನು ಸಕಾಲದಲ್ಲಿ ಕೆಲವು ಹೊತ್ತು ಕೊಟ್ಟರೆ ದೊಡ್ಡ ಕಾಯಿಲೆಗಳನ್ನೆಲ್ಲಾ ಅದು ನಿವಾರಣೆ ಮಾಡಬಲ್ಲದೆಂದು ಮಕ್ಕಳುಳ್ಳ ಅನೇಕ ಸ್ತ್ರೀಯರು ಕಂಡುಕೊಂಡಿರುತ್ತಾರೆ.

ಮಿಸೆಸ್ ಎಟ್ಟಾ ಬೂಕರ್, ಡಂಪರ್ಣ, ಸಸ್ಕ., ಎಸ್ ಡಬ್ಲ್ಯು ಟಿ, ಕ್ಯಾನ್, ಈಕೆ ಬರೆಯುವುದು:—"ನನ್ನ ದೇಹದೊಳಗೆ ಕೃತ್ಯರೋಗವು ಹುಟ್ಟಿ ನರಳಿದೆನು ಕಡೆಗೆ ಡಾ॥ ಹಾರ್ಟ್‌ಮೇನರನ್ನು ಕರೆಸಿಕೊಂಡು, ಅವರು ಹೇಳಿದ ಔಷಧವನ್ನು ಸೇವನೆ ಮಾಡಿದ್ದರಿಂದ ನನ್ನ ಕೆಟ್ಟ ರೋಗವು ನಿವಾರಣೆಯಾಯಿತು. ಇದಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞಳಾಗಿರುತ್ತೇನೆ. ಕೃತ್ಯರೋಗಕ್ಕೆಲ್ಲಾ ಪೆರೂನಾ ಉತ್ತಮೋತ್ತಮವಾದ ಔಷಧವೆಂದು ನನಗೆ ತೋರುವುದು. ಈಗ ನನಗಿರುವಷ್ಟು ಸೌಖ್ಯವು ಲವಲೇಶವಾದರೂ ಹಿಂದೆ ಯಾವಾಗಲೂ ಇರಲಿಲ್ಲ."

ಮಿಸೆಸ್ ಬೂಕರ್ ಬರೆದಿರುವ ಇನ್ನೊಂದು ಕಾಗದದಲ್ಲಿ ಅಕೆ ಹೇಳುತ್ತಿದ್ದೇನೆಂದರೆ.—"ಪೆರೂನಾ ಮಹಾ ಆಶ್ಚರ್ಯವಾದ ಔಷಧವೆಂದು ಅನುಭವಪೂರ್ವಕವಾಗಿಯೂ ಯಥಾರ್ಥವಾಗಿಯೂ ಹೇಳಬಲ್ಲೆನು ನನ್ನ ಮಗಳು ಎಲ್ಸಿ ಬೂಕರಿಗೆ ಎಷ್ಟು ಸುಟ್ಟಗೆ ಆರೋಗ್ಯವಾಗಬೇಕೆಂದು ನಾನು ನಿರೀಕ್ಷಿಸಿದ್ದೆನೋ ಅಷ್ಟು ಒಳ್ಳೇದಾಯಿತು. ಆದ್ದರಿಂದ ಅವಳಿಗೆ ವಾಸಿಯಾದ ವಿಷಯವನ್ನು ನೀವು ಪ್ರಕಟಿಸಬಹುದೆಂದು ಧಾರಾಳವಾಗಿ ಹೇಳುತ್ತೇನೆ" [38-53]

"ಶೀತವಾಯುವಿನಿಂದ ನನ್ನ ಮಗು ನರಳಿತು ಇದನ್ನು ಸೇವಿಸಿದಾರಭ್ಯ ಅದಕ್ಕೆ ಆರೋಗ್ಯವಾಯಿತು. ಅದಕ್ಕೆ ಬಲ ಉಂಟಾಯಿತು. ಅರುಚಿಯೆಲ್ಲಾ ಪರಿಹಾರವಾಗಿ, ಈಗ ಮಗುವನ್ನು ನೋಡಿದರೆ ಚಿತ್ರಕ್ಕೆ ಯೋಗ್ಯವಾದ ಮಗುವಿನಂತೆ ಸುಖವಾಗಿದೆ."

ಅವರ ಹುಡುಗನ ಪ್ರಾಣವನ್ನು ಕಾಪಾಡಿತು.

ಮಿಸೆಸ್ ಅರ್ನೆಸ್ಟ್ ಹಾಕ್ಸ್ ೧೩೦೦ ಪಾಪಲ್ ಬೀದಿ, ಡೆಸ್‌ಮಾಯಿನೆಸ್, ಅಯೋವಾ, ಯು ಎಸ್ ಎ, ಈಕೆ ಬರೆಯುವುದು:—

"ಎರಡು ವರುಷಗಳ ಹಿಂದೆ [illegible] ಎಂಬ ನನ್ನ ಚಿಕ್ಕ ಹುಡುಗನಿಗೆ ಕೆಟ್ಟ ಜ್ವರ ಬಂದು ಬಿದ್ದುಕೊಂಡನು ಅದರ ಜತೆಗೆ ಚಳಿಯೂ ಬಂತು ಬೋಸ್ಟಿಗಳು ಮೈಮೇಲೆ ಕಾಣಿಸಿಕೊಳ್ಳದೆ ಅವನ ಶ್ವಾಸಕೋಶಗಳಿಗೂ ಹೊಟ್ಟೆಗೂ ವ್ಯಾಪಿಸಿದವು. ಕೆಲವು ವಾರಗಳ ತನಕ ನಾವು ಪ್ರತಿ ಗಂಟೆಯಲ್ಲೂ ಬದುಕಲಾರನೆಂದು ನಿರೀಕ್ಷಿಸಿ, ಅವನ ಬಳಿಯಲ್ಲೇ ಕಾದಿದ್ದೆವು ಕಡೆಗೆ ಅವನಿಗೆ ಸ್ವಲ್ಪ ವಾಸಿಯಾಗಿ ಎದ್ದು ಕೂತುಕೊಳ್ಳುವಂತಾದನು ಆಗ ಅವನಿಗೆ ಕೆಮ್ಮು ಕಾಣಿಸಿಕೊಂಡು, ಏನು ಮಾಡಿದರೂ ನಿಲ್ಲದೆ, ಕ್ಷಯಿಸುತ್ತಾ ಬಂದನು ಆ ಕೆಮ್ಮು ಬಹಳ ಕಠಿಣವಾಗಿಯೂ ಬಹು ದೀರ್ಘವಾಗಿಯೂ ಇದ್ದು, ಅವನ ಶ್ವಾಸಕೋಶವನ್ನು ಬಹಳ ಕೆಡಿಸಿತು. ಅವನಿಗೆ ಕ್ಷಯರೋಗವೆಂದು ಎಲ್ಲರೂ ಊಹಿಸಿದರು ಆಗ ನಾವು ಇತರ ಔಷಧಗಳನ್ನು ಬಿಟ್ಟು, ಪೆರೂನಾವನ್ನು ಕೊಟ್ಟು ನೋಡೋಣವೆಂದು ಒಂದು ಬಾಟ್ಲಿಯನ್ನು ಕೊಂಡು ತಂದು, ಅದರಲ್ಲಿ ಹೇಳಿರುವ ಕ್ರಮದಂತೆ ಕೊಡುತ್ತಾ ಬಂದೆವು ಎರಡು ಬಾಟ್ಲಿ ಪೆರೂನಾ ಸೇವಿಸಿದ ಮೇಲೆ ಅವನಿಗೆ ಚೆನ್ನಾಗಿ ವಾಸಿಯಾಯಿತು ಅಂದಿನಿಂದೀಚೆಗೆ ಅವನು ಒಂದು ದಿನವಾದರೂ ಕಾಯಿಲೆಯನ್ನು ಕಾಣನು ಆರೋಗ್ಯವಾಗಿಯೂ ಸಂತೋಷದಿಂದಲೂ ಬೆಳೆಯುತ್ತಿದ್ದಾನೆ ನಾವು ಸರ್ವದಾ ಪೆರೂನಾವನ್ನು ಹೊಗಳುತ್ತೇವೆ. ಏಕೆಂದರೆ ಅದು ನಮ್ಮ ಹುಡುಗನ ಪ್ರಾಣವನ್ನು ಉಳಿಸಿತು"

ಕಾಯಿಲೆ ಬೀಳುವ ಮಕ್ಕಳು.

ಮಿಸೆಸ್ ವಾಘನ್, ೫೯೦೦ ಪ್ರೆಸ್ಟೆಟ್ ಅವ್ ಸೆಂಟ್ ಲೂಯಿಸ್, ಮಿಸೌರಿ ಯು ಎಸ್ ಎ ಈಕೆ ಬರೆಯುವುದು:—

"ಕಳೆದ ವರುಷ ಪ್ರಾರಂಭದಲ್ಲಿ ನನ್ನ ನಾಲ್ಕು ವರ್ಷದ ಮಗಳು ಆಲಿಸ್ ವಿಷಯವನ್ನು ನಿಮಗೆ ಬರೆದು, ನಿಮ್ಮ ಅಭಿಪ್ರಾಯವನ್ನು ಕೇಳಿದೆನು. ಅವಳು ಹುಟ್ಟಿದಾರಭ್ಯ ಕಾಯಿಲೆ ಬೀಳುತ್ತಾ ಬಹಳ ಕೃಶವಾಗಿದ್ದಳು. ಅವಳಿಗೆ ಒಳ್ಳೆಯಷ್ಟು ನಿದ್ರೆಯಾಗುತ್ತಿರಲಿಲ್ಲ, ಜ್ಞಾನ ತಪ್ಪುತ್ತಿದ್ದು, [illegible] ತಪ್ಪುಗಳೂ [illegible] ಇಲ್ಲ ನಾನು ಅವಳಿಗೆ ನಾನಾ [illegible] ಪೆರೂನಾ ಕೊಡಲಾರಂಭಿಸಿದೆನು ಅವಳಿಗೆ ಆರೋಗ್ಯವಾಯಿತು; ಶಕ್ತಿ ಕೂಡಿಕೊಂಡಿತು ಪೆರೂನಾ ಬಳಕೆಯ [illegible] ಔಷಧವಾಗಿರುತ್ತದೆ ಇಂಥಾ ಆಶ್ಚರ್ಯವಾದ ಔಷಧವನ್ನು ನಾನು ಯಾವಾಗಲೂ ಉಪಯೋಗಿಸುತ್ತಿದ್ದೇನೆ.

"ನನಗೆ [illegible] ಎಂಬ [illegible] ಪರಿಸ್ಥಿತಿಯು [illegible] ಇದ್ದ [illegible] ಕೆಲವು [illegible] ನನ್ನ [illegible] ಔಷಧಿ [illegible] ನನಗೆ ಆರೋಗ್ಯ [illegible] ನನಗೆ ಅನ್ಯ [illegible] ಅಭಿಪ್ರಾಯವಿಲ್ಲ

ಪೆರೂನಾ ನನ್ನ ಚಿಕ್ಕ ಮಗುವನ್ನು ಬದುಕಿಸಿತು.

ಅದಕ್ಕೆ ಚಳಿಯೂ ಜ್ವರವೂ ಬರುತ್ತಿತ್ತು. ಈಗ ಆ ಮಗು ದೊಡ್ಡದಾಗಿ ಮೈತುಂಬಿಕೊಂಡು ಆರೋಗ್ಯವಾಗಿದೆ ಅವನಿಗೆ ಹುಟ್ಟಿದಾರಭ್ಯ ಪೆರೂನಾವನ್ನು ಆಗಾಗ್ಗೆ ಕೊಡುತ್ತಿದ್ದೆನೆ ಅದ್ದರಿಂದಲೇ ಅವನು ಇಷ್ಟು ಆರೋಗ್ಯವಾಗಿದ್ದಾನೆಂದು ನನಗೆ ತೋರುತ್ತದೆ ಪೆರೂನಾವನ್ನು ನನ್ನ ಕುಟುಂಬದವರು ಆಗಾಗ್ಗೆ ಉಪಯೋಗಿಸುತ್ತಿದ್ದಕ್ಕೆ ಪ್ರಾರಂಭಿಸಿದ ಆಗಾಗ್ಗೆ [illegible] ಡಾಕ್ಟರಿಗೆ ನಮ್ಮ ಮನೆಗೆ ಬಂದಿಲ್ಲ ಅದು ಬಹಳವಾಗಿ ಕೊಂಡಾಡತಕ್ಕದ್ದಾಗಿದೆ"

ಮಗು ಈಗ ಆರೋಗ್ಯವಾಗಿದೆ.

ಮಿಸೆಸ್ ಜೆ ಡಬ್ಲ್ಯು ಸರ್ ಆಫ್ ಹೌಸ್, ಟೆಕ್ಸಾಸ್, ಯು ಎಸ್ ಎ, ಈಕೆ ತನ್ನ ಕೈಮಗು ರೂಬಿ ವಿಷಯವಾಗಿ ಡಾ॥ ಹಾರ್ಟ್‌ಮೇನರಿಗೆ ಬರೆಯುವುದು:—

"ಇದೇ ಜನವರಿಗೆ ನನ್ನ ಮಗುವಿಗೆ ಎರಡು ವರ್ಷ ತುಂಬಿತು. ಈ ಮಗುವಿಗೆ **ಮೂತ್ರಕೋಶವು ಕೆಟ್ಟುಹೋಗಿತ್ತು**, ಮಗುವು ಬರೀ ಮೂಳೆ ಚಕ್ಕಳವಾಗಿದ್ದಳು ವಾಸಿಯಾದೀತೆಂದು ನಾವ್ಯಾರೂ ಯೋಚಿಸಿರಲಿಲ್ಲ. ಈ ಮಗು ಮೂರು ನಾಲ್ಕು ತಿಂಗಳ ಕಾಲ ಕಾಯಿಲೆ ಬಿದ್ದಿತ್ತು. ಒಂದು ಬಾಟ್ಲಿ ಪೆರೂನಾದಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಕೊಡುವಷ್ಟರಲ್ಲೇ ಈ ಮಗುವಿಗೆ ಆರೋಗ್ಯವಾಗಿದೆ

ಅಜೀರ್ಣವಿದ್ದ ಮಗು.

ಮಿಸೆಸ್ ಜೆ. ಎಂ ಬ್ರೌನ್, ಡನ್ನಿಗನ್, ಮಿಸೌರಿ, ಯು ಎಸ್. ಎ, ಈಕೆ ಬರೆಯುವುದು:—

"ಮೂರು ವರುಷದ ನನ್ನ ಹೆಣ್ಣುಮಗುವಿಗೆ ಶೀತದಿಂದ ಕೆಟ್ಟ ಕೆಮ್ಮಲು ಹುಟ್ಟಿ, ಅದರ ಮೇಲೆ ಜ್ವರವೂ ಬಂದು, ರಾತ್ರಿ ಹೊತ್ತು ವಿಶೇಷವಾಗಿ ಬಹಳ ಸಂಕಟ ಪಡುತ್ತಿದ್ದಳು ನಿಷ್ಟಮಾಡುತ್ತಿದ್ದ ಹಾಗೇ ಎಚ್ಚರವಾಗಿ ಕೆಮ್ಮುವುದಕ್ಕಾರಂಭಿಸಿದರೆ ಅದರಲ್ಲೇ ಮಗು ಎಲ್ಲಿ ಪ್ರಾಣ ಬಿಡುವುದೋ ಎನ್ನುವಷ್ಟು ಕಷ್ಟಪಡುತ್ತಿತ್ತು. ನಾವು ಕೊಟ್ಟ ಯಾವ ಔಷಧದಿಂದಲೂ ಮಗುವಿಗೆ ವಾಸಿಯಾಗಲಿಲ್ಲ ಆಗ ನಾನು ಡಾ॥ ಹಾರ್ಟ್‌ಮೇನರ 'ಜೀವಮಾನದಲ್ಲಿ ಬರುವ ರೋಗಗಳು' ಎಂಬ ಪುಸ್ತಕವನ್ನು ನೋಡೋಣವೆಂದು ಹೇಳಿಕಳಿಸಿದೆನು. ಪುಸ್ತಕ ದೊರಕಿತು ಆಗಲೇ ಪೆರೂನಾವನ್ನು ಮಗುವಿಗೆ ಕೊಡಲಾರಂಭಿಸಿದೆನು ಒಂದೇ ಬಾಟ್ಲಿಯ ಔಷಧವನ್ನು ಕೊಟ್ಟೆನು. ಇದರಿಂದ ಮಗುವು ಸಂಪೂರ್ಣಗುಣವಾಗಿದೆ

"ಈ ಮಗುವಿಗೆ ಹುಟ್ಟಿದಾರಭ್ಯ **ಅಜೀರ್ಣರೋಗವಿತ್ತು**. ಆದರೆ ಪೆರೂನಾ ತೆಗೆದುಕೊಳ್ಳುತ್ತಾ ಬಂದಾರಭ್ಯ ಯಾವ ತರಹಾ ಆಹಾರವನ್ನು ತಿಂದರೂ ಅದಕ್ಕೆ ಅಜೀರ್ಣವಾಗುವುದಿಲ್ಲ ಈಗ **ಈ ಮಗು ಚೆನ್ನಾಗಿ ಆರೋಗ್ಯವಾಗಿದೆ.** ನನ್ನ ಸ್ನೇಹಿತರು ನನ್ನ ಮಗು ಬಹಳ ಚೆನ್ನಾಗಿದೆ ಎಂದು ಹೇಳಿದರೆ ಅದೆಲ್ಲಾ ಪೆರೂನಾದಿಂದ ಆದದ್ದು ಎಂದು ನಾನು ಅವರಿಗೆ ತಿಳಿಸುತ್ತೇನೆ ಕೆಮ್ಮಲಿಗೂ, ಅಜೀರ್ಣಕ್ಕೂ ಪೆರೂನಾ ಬಿಟ್ಟರೆ ಇನ್ಯಾವುದೂ ಪ್ರಯೋಜನಕರವಾದದ್ದಲ್ಲವೆಂದು ನನಗೆ ತೋರುತ್ತದೆ. ಮತ್ತು ಈ ರೋಗಗಳನ್ನು ಅನುಭವಿಸುವವರಿಗೆಲ್ಲಾ ಪೆರೂನಾವನ್ನೇ ಸೇವಿಸುವಂತೆ ಶಿಫಾರಸು ಮಾಡುತ್ತೇನೆ."

ಮಗುವಿಗೆ ಪೆರೂನಾ ಮಾಡಿದ್ದು.

ಮಿಸೆಸ್ ಫ್ರಿಟ್ಸ್‌ರೂಥಿ, ಹಿಂಕ್ಲಿವಿಲ್ಲೆ, ಇಲ್ಲಿನಾಯಿಸ್, ಯು ಎಸ್ ಎ, ಈಕೆ ಬರೆಯುವುದು:—

"ನಾನು ನಿಜವಾಗಿ ಆರೋಗ್ಯವಾಗಿದ್ದೇನೆ ಈ ಮಾತು ಹೇಳುವುದರಲ್ಲಿ ನನಗೆ ತುಂಬಾ ಸಂತೋಷ ನನ್ನ ಒಂದು ಮಗು ಐದು ತಿಂಗಳು **ಜ್ವರವನ್ನು** ಅನುಭವಿಸಿತು ಏನುಮಾಡಿದರೂ ವಾಸಿಯಾಗಲಿಲ್ಲ. ಅದು ಮಲೇರಿಯಾ ಎಂಬ ಜ್ವರವೆಂದು ಡಾಕ್ಟರು ಹೇಳಿದರು ಆದರೆ ಅವರು ಕೊಟ್ಟ ಔಷಧದಿಂದ ಸ್ವಲ್ಪವೂ ಪ್ರಯೋಜನವಾಗಲಿಲ್ಲ

"ಆಗ ನಾನು ಪೆರೂನಾ ಕೊಟ್ಟೆನು ಕೂಡಲೇ ಅದು ಮಗುವಿಗೆ ಗುಣಕೊಟ್ಟಿತು. ಇದುವರೆಗೆ ಆ ಮಗು ಜ್ವರವನ್ನು ಕಾಣದು.

"ನಾನು ಡಾ॥ ಹಾರ್ಟ್‌ಮೇನರಿಗೆ ಕಾಗದ ಬರೆದಾಗ ನಾನು ಮನೇ ಕೆಲಸಗಳನ್ನು ಮಾಡಲಾರದವಳಾಗಿ ಹೀನಸ್ಥಿತಿಯಲ್ಲಿದ್ದೆನು ಈಗ ನಾನು ಸಂಪೂರ್ಣವಾಗಿ ಆರೋಗ್ಯಹೊಂದಿರುತ್ತೇನೆ."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

[illegible]0—3—1908 ರಿಂದ 27 3—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	5	3	0	0
ಮೈಸೂರು ,,	1	1	1	1
ಬೆಂಗಳೂರು ಡಿಸ್ಟ್ರಿಕ್ಟ್	*	*	0	0
ಮೈಸೂರು ,,	33	24	5	10
ಕೋಲಾರ್ ,,	23	20	1	0
ಕೋಲಾರ್ ಚಿನ್ನದ ಗಣಿಗಳು.	8	2	0	0
ತುಂಕೂರು ಡಿಸ್ಟ್ರಿಕ್ಟ್	0	0	*	*
ಹಾಸನ ,,	4	3	44	36
ಚಿತ್ರದುರ್ಗ ,,	0	0	0	0
ಕಡೂರ್ ,,	8	10	6	5
ಶಿವಮೊಗ್ಗ ,,	1	1	*	*
* ಸಂಖ್ಯೆ ಕಾಣಿಸಿಲ್ಲ ಮೊತ್ತ	78	64	57	5[illegible]

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಚೈತ್ರ ಶುದ್ಧ ಅಷ್ಟಮಿ ಗುರುವಾರದಿಂದ ಚೈತ್ರ ಶುದ್ಧ ಚತುರ್ದಶೀ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೮ನೇ ಏಪ್ರಿಲ್.

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ತೇದಿ ಚೈತ್ರ ಮಾಸ
9	ಗುರು.	* ಅಷ್ಟಮಿ	12-36	[illegible]	16-18	28
10	ಶುಕ್ರ	,, ನವಮಿ	17 32	[illegible]	22 38	29
11	ಶನಿ	† ದಶಮಿ	22 56	[illegible]	29-4	30
12	ಭಾನು	,, ಏಕಾದಶಿ	27 50	[illegible]	35-26	1
13	ಚಂದ್ರ	ದ್ವಾದಶಿ	32-16	[illegible]	41 21	2
14	ಕುಜ	ತ್ರಯೋದಶಿ	35-50	[illegible]	46-6	3
15	ಬುಧ	‡ ಚತುರ್ದಶಿ	38 8	[illegible]	49-56	4

* ನವಮೀ ತಿಥಿ, ಅಶೋಕಾಷ್ಟಮಿ ,, ನವಮೀ ತಿಥಿ, ಶ್ರೀರಾಮನವಮಿ ರಾಮೋತ್ಸವಾರಂಭ † ದಶಮೀ ತಿಥಿ, ಧರ್ಮರಾಜ ದಶಮಿ, ‡ ಚಿತ್ರವಿಷು ಪುಣ್ಯಕಾಲ, ಸೌರ ವಸಂತಾರಂಭ, ಸರ್ವತ್ರ ಏಕಾದಶಿ . ವಾಮನ ದ್ವಾದಶಿ, ಮೈಸೂರಿನಲ್ಲಿ ಜನಾರ್ದನಸ್ವಾಮಿ ರಥ ಪ್ರದೋಷ, ಅನಂಗತ್ರಯೋದಶಿ, ಮಾಗಡಿ ರಂಗನಾಥ ರಥ, ‡ ಮುಳೂರು ಅಪ್ರಮೇಯಸ್ವಾಮಿ ರಥ

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು
ಶಾಲೀ ಅಕ್ಕಿ ಒಂದು ಪಲ್ಲಕ್ಕೆ	ರೂ. [illegible]	[illegible]
ಕಂಬಸಾಲಿ ಅಕ್ಕಿ ,,	[illegible]	[illegible]
,, [illegible]	[illegible]	[illegible]
ಜಂಬಾಪು ಅಕ್ಕಿ	[illegible]	[illegible]
ಸಣ್ಣಕ್ಕಿ [illegible]	[illegible]	[illegible]
,, [illegible]	[illegible]	[illegible]
ತೊಗರಿ [illegible]	[illegible]	[illegible]
,, [illegible]	[illegible]	[illegible]
[illegible]	[illegible]	[illegible]
ಕಾಡಾಗಿ	[illegible]	[illegible]
ಜೋಳ	[illegible]	[illegible]
ಹುಲಸಂದೆ [illegible]	[illegible]	[illegible]
ಬಿಳೀ ಅವರೆ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಕಡಲೆ	[illegible]	[illegible]
ಎಳ್ಳು [illegible]	[illegible]	[illegible]
ಹುರುಳಿ	[illegible]	[illegible]
ಹರಳು [illegible]	[illegible]	[illegible]
ಸೀಗೆ [illegible]	[illegible]	[illegible]
ಮೆಣಸಿನಕಾಯಿ	[illegible]	[illegible]
[illegible]	[illegible]	[illegible]
ಬೆಲ್ಲ [illegible]	[illegible]	[illegible]
[illegible]	[illegible]	[illegible]
ಹರಳೆಣ್ಣೆ ,,	[illegible]	[illegible]
ಕೊತ್ತುಂಬರಿ [illegible]	[illegible]	[illegible]
ಉಪ್ಪು ,,	[illegible]	[illegible]
ಹುಣಸೇ ಹಣ್ಣು	[illegible]	[illegible]
[illegible]	[illegible]	[illegible]
ತುಪ್ಪ [illegible]	[illegible]	[illegible]
ಸೀಮೆಯೆಣ್ಣೆ ಪೆಟ್ಟಿ [illegible]	[illegible]	[illegible]
ತೆಂಗಿನಕಾಯಿ ೧೦೦ ಕ್ಕೆ	[illegible]	[illegible]
ಅಡಿಕೆ [illegible]	[illegible]	[illegible]
ಅಂಬ್ಯ [illegible]	[illegible]	[illegible]
ಚಿನ್ನ [illegible]	[illegible]	[illegible]
,, ,, ಪವನು	[illegible]	[illegible]
,, ,, [illegible]	[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	[illegible]	[illegible]

Printed and Published by the Rev. E. W. THOMPSON, M A., Proprietor and Manager, Wesleyan Mission Press, Mysore 9/4/1908

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೮ ನೇ ಇಸವಿ ಏಪ್ರೆಲ್ ತಾರೀಖು ೧೬ ನೇ ಗುರುವಾರ. ಸಂಚಿಕೆ ೪೬.

WILLIAM & CO., BOMBAY.

ಅಪೂರ್ವಲಾಭ— ಸರ್ವಾಂಗರಕ್ಷ— ಲೋಕಪ್ರಖ್ಯಾತ—

ಅಮೃತಾಂಜನ

17-8

ತರಿಸಿಕೊಳ್ಳಿರಿ. ತ್ವರೆಗೈಯಿರಿ:— ಅಮೃತಾಂಜನ ಸರ್ವಲೋಕರಂಜನ, ಸರ್ವ ವ್ಯಾಧಿಭಂಜನ ಚಿಕಿತ್ಸಾವಳಿಯೊಳ್ ಕಾಂಚನ, ದೇಹಾಂಗಗಳಿಗೆ ಸಂಜೀವನ, ವಾಸನೆಯಲ್ಲಿ ಮನೋರಂಜನ, ಬೆಲೆಯಲ್ಲಿ ಅಲ್ಪ, ಯೋಗ್ಯತೆಯಲ್ಲಿ ಅದ್ಭುತ, ಔಷಧಿಯಲ್ಲಿ ಸ್ಥಿರಚಿತ್ತ, ಕೊಳ್ಳುವವರಲ್ಲಿ ಮಾಡಿರತಕ್ಕ ಪರೀಕ್ಷೆಯಿಂದ ಗುಣ ಕಾಣದೆಬರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು. ಒಮ್ಮೆ ಸಾವಿರ ಬಾಟ್ಲಿ ತರಿಸಿಕೊಂಡವರಿಗೆ ಒಂದು ಹಾರ್ಮೋನಿಯಮ್ ಪೆಟ್ಟಿಗೆಯು ಕಮಿಷನ್ ಉಚಿತವಾಗಿ ದೊರಕುವದು.

ನಿಶ್ಶಂಕೆಯಾಗಿ ಭಾರತವರ್ಷೀಯ ಔಷಧಗಳಿಂದ ತಯಾರಿಸಿದ ಹೊರುಪಯೋಗಕ್ಕೋಸ್ಕರ ಮುಲಾಮು. ಇದರಿಂದ ತಲೆನೋವು, ಶಿರೋವೇದನೆ, ವಾತ, ಸಂಧಿವಾತ ಪಕ್ಷವಾತ, ಗಂಟ್ಲು ನೋವು, ಸೊಂಟದನೋವು, ಗಂಟ್ಲುನೋವು, ಶೀತ, ಚಳಿ, ಉಳುಕು, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ.

ಈ ಕಂಪನಿಯವರು ಬೆಚ್ಚ ನಮೂನೆಯ ಔಷಧಿಗಳನ್ನು ತಯಾರಿಸುವವರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

ಬಾಟ್ಲಿ ಒಂದಕ್ಕೆ ಕಿಮ್ಮತ್ತು ೦—೮—೦. ಪೋಸ್ಟ್ ಖರ್ಚು ೦—೪—೦.

ಗಳಕರ್ಣದ ಮುಲಾಮು.

ಸೂರು ಸಾರಿ ಹಾಕಿದವರೊಳಗೆ ಗಳಕರ್ಣವು ಹೋಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಇದರಿಂದ ಗುಣ ಕಾಣದಿರುವದಿಲ್ಲವಾದರೆ ಹಣ ಹಿಂತಿರಿಗಿ ಕೊಡಲ್ಪಡುವದು. ಡಬ್ಬಿ ಒಂದಕ್ಕೆ ಕಿಮ್ಮತ್ತು ೦—೬—೦. ಪೋಸ್ಟ್ ಖರ್ಚು ೦—೩—೦

ದಂತಮಂಜನ.—ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಹಲ್ಲುಗಳು ಬೆಳ್ಳಗಾಗುತ್ತವೆ. ಹಲ್ಲುಗಳ ನೋವನ್ನು ತೆಗೆಯುತ್ತದೆ. ಡಬ್ಬಿ ಒಂದಕ್ಕೆ ೦—೨—೦. ಪೋಸ್ಟ್ ಖರ್ಚು ೦—೩—೦.

ವಜ್ರಗುಟಿಕ.—ಧಾತುಪುಷ್ಟಿ ನಿರ್ಬಲವಂತರಿಗೆ ಶಕ್ತಿ ಕೊಡುತ್ತದೆ; ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ರಕ್ತ ಶುದ್ಧಿಮಾಡಿ ದೇಹಪುಷ್ಟಿ ಆರೋಗ್ಯಕೊಡುತ್ತವೆ. ಡಬ್ಬಿ ಒಂದಕ್ಕೆ ೧—೦—೦ ಪೋಸ್ಟ್ ಖರ್ಚು ೦—೩—೦.

ಕೇಶವರ್ಧಿನಿ.—ತಲೆ ನೆಂಮಳು ತಂಪುಮಾಡುವದು, ಕೂದಲುಗಳನ್ನು ಬೆಳೆಸುವದು, ಕೂದಲುಗಳನ್ನು ಕಪ್ಪುಮಾಡುವದು, ಮನಶುದ್ಧಿ ಮಾಡುವದು, ಚಲೋ ಪರಿಮಳ ಉಳ್ಳದ್ದು. ೩ ಟಿನ್ನು ಬಾಟ್ಲಿ ಒಂದಕ್ಕೆ ೧—೦—೦. ಪೋಸ್ಟ್ ಖರ್ಚು ೦—೩—೦.

ವಿಳಾಸ:—ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನ್. ಫೋರ್ಟ್, ಮುಂಬಯಿ.

ಟೆಲಿಗ್ರಾಫು ಅಡ್ರೆಸು—"ಅಮೃತಾಂಜನ," ಮುಂಬಯಿ.

ಕಾರ್ಡ್ ಸೈಜು ೪¼ × ೩¼.

ಫೋಟೋ ತೆಗೆಯುವ

ಫೊಟೋಕ್ಯಾಮೆರಾ.

84 35

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿ ಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ:—

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಜ್ವರಹರಿ. 18-11



ಇದು ಸಾಧಾರಣ ಜ್ವರ, ಹಳೇಜ್ವರ, ಮೊರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ನಾಯಿಮಾಕ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ.; ೦—೮ ಪೈ., ರೂ. ೨—೧೨ ಆ.; ೧೦ ರೂ., ಪನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂಕರ್ಪೂರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ನಿಮ್ಮ ಓಮಂಕರ್ಪೂರವನ್ನು ನಾನೂ ನನ್ನ ಹಾಸ್ಪಿಟಲ್ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಊರುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಚೆನ್ನಪಟ್ಟಣದ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ರಬ್ಬರ್ ಸ್ಟ್ಯಾಂಪ್ ಪ್ರೆಸ್.

114-27

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ. ಇದುವರಿಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೫೦ ರಿಂದ ೧೫೦ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲುಗು, ಉರ್ದು, ಮರಾಠಿ, ಅರಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಅದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು. ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರೂ, ವಕೀಲರೂ, ವರ್ತಕರೂ, ಇನಾಮದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡಬೇಕು. ಎಷ್ಟೋ ಕಾಗದಗಳ ಸಹಾಯದಿಂದ ಒಂದು ಕೆಲಸಕ್ಕೆ ಬಹಳ ಕಾಲ ಹಿಡಿಯುವದು. ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನು ಬಹು ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ನೆರವಿಂದ ಈ ಪ್ರೆಸ್ ಜನರ ಪ್ರೀತಿಗೆ ಪಾತ್ರವಾಗಿರುವದು. ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತಿರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ.

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦

ಹಾಫ್ ಫುಲ್‌ಸ್ಕ್ಯಾಪ್ ಸೈಜು, ೬—೦—೦.

ಪೋಸ್ಟೇಜು ಬೇರೆ (extra).

ವಿಳಾಸ:— ವರ್ಧಮಾನ ಏಜನ್ಸಿ,

ಪೋಸ್ಟ್ ಕಾಲಬಾದೇವಿ,

ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-9



೧ ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹಲವು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂಧುಗಳ ನೋವು, ಮೈ ಕೈಕಾಲು ಸೆಳತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಗೋ ದಾಹಕೊಡದೆ, ನೀರು ಸಾವಾಗಳ ಬಿಡಲಾಸೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ಪುಷ್ಟಿಪಡಿಸುತ್ತೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕ್ಷೀಣತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೫ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೫ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,

ಎಚ್. ಎಸ್. ಆರ್. ವೈದ್ಯಶಾಲಾ.

ಲಕ್ಷ್ಮೀವಿಲಾಸ ರೋಡ್, ಮೈಸೂರು.

ಮಹಾ ಬಾಧಾಪಹಾರಿಣಿಯು.

68-47

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಯೆಷ್ಟಿಣೀ ಲೇಪನವು ಸಕಲ ವಿಧವಾದ ಬಾಧೆಗಳನ್ನು ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಾರೆ. ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಶಳಿತ, ಗಂಟಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಮೇಳುಕಬಿದ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಣಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲನೆಂದು ಹೊಗಳಿರುತ್ತಾರೆ.

ಕ್ರಯ ಶೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೬ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜೆಂಟರ ವಿಳಾಸ—

ಎಸ್. ಪೀಟರ್ಸ್,

೩೭, ವೇದಮಲೆಪಿಳ್ಳೆ ಬೀದಿ, ವೇಪೇರಿ, ಮದರಾಸ್.

೩ ನೇ ಭಾಷೆ. ತ್ವರಾಗಿ ಇಂಗ್ಲೀಷ್ ಕಲಿಯುವಿಕೆ.

35-1

ಕ್ರಯ—ಒಂದು ರೂಪಾಯಿ ನಾಲ್ಕಾಣೆ

ಬಿಕರಿಗೆ ಸಿದ್ಧವಾಗಿದೆ ದಪ್ಪಕಾಗದ ಭದ್ರವಾದ ಬೈಂಡುಳ್ಳದ್ದು. ಇಂಗ್ಲಿಷ್ ಭಾಷೆಯನ್ನು ಬರೆಯುವುದಕ್ಕೂ ಓದುವುದಕ್ಕೂ ಮಾತಾಡುವುದಕ್ಕೂ ಬೋಧಕರ ಸಹಾಯ ಸ್ವಲ್ಪವೂ ಇಲ್ಲದೆ ಒಂದೆರಡು ತಿಂಗಳುಗಳಲ್ಲಿಯೇ ತಾವಾಗಿ ಕಲಿಸುವ ಅತ್ಯುತ್ತಮವಾದ ಪುಸ್ತಕವಿದು. ಇದರಲ್ಲಿ ಎ, ಬಿ, ಸಿ, ಡಿ, ಲಾಗಾಯ್ತು ಜಡ್ ವರೆಗೆ ಉಳ್ಳ ಬರವಣಿಗೆ ಮತ್ತು ಅಚ್ಚು ಅಕ್ಷರಗಳನ್ನು ಗುರ್ತು ಹಿಡಿಯುವದು, ಅಚ್ಚು ಅಕ್ಷರಗಳನ್ನು ಒಂದಕ್ಕೊಂದು ಕೂಡಿಸುವದು, ಶಬ್ದಗಳ ಮತ್ತು ವಾಕ್ಯಗಳ ಸಮುದಾಯ, ಸಂಸಾರ ಗೃಹಕೃತ್ಯ ವ್ಯಾಪಾರಿಕ ಭೋಜನ ಕಲಾಶಾಲೆ ರೂಲ್ಸು ಮುಂತಾದವುಗಳಲ್ಲಿ ಬಳಸಬಹುದಾದ ಈಗ ವಾಡಿಕೆಯಲ್ಲಿರುವ ಡಿಕ್ಷನೇರಿ ಮೊದಲಾದವುಗಳಲ್ಲಿ ಇಲ್ಲದ ಅನೇಕ ಅಪೂರ್ವ ಶಬ್ದಗಳು, ಕೋಷ್ಟಕಗಳು, ಗಾದೆಗಳು ಮುಂತಾದ್ದು ಸೇರಿಸಿರುವುದಲ್ಲದೆ, ಇಂಗ್ಲೀಷು ಪ್ರತಿ ಶಬ್ದದ ಉಚ್ಚಾರಣೆಯನ್ನೂ ಕನ್ನಡದಲ್ಲಿ ಬರೆದು ಅರ್ಥವನ್ನೂ ಸಹ ಕನ್ನಡದಲ್ಲಿ ಬರೆದಿರುತ್ತೇವೆ. ಸರ್ಕಾರಿ ಸಾಹುಕಾರಿ ರೈತಾಪಿಜನರು ಬರೆಯುವ ಕಾಗದಗಳ ನಮೂನೆಗಳು, ಕರಾರುಗಳು, ತಂತಿವರ್ತಮಾನಗಳು ಕೊಡುವ ನಕಲುಗಳು, ಗಾದೆಗಳು ಮೊದಲಾದುವುಗಳನ್ನು ಸ್ವಲ್ಪಮಟ್ಟಿಗೆ ಕನ್ನಡ ಕಲಿತಿರುವವರು ಕೂಡ ಈ ಪುಸ್ತಕದ ಸಹಾಯದಿಂದಲೇ ದ್ರವ್ಯದೇಹಪ್ರಯಾಸಗಳಿಲ್ಲದೆ ಸುಲಭವಾಗಿ ಕಲಿಯಬಹುದು. ವ್ಯಾಪಾರಸ್ಥರು ರೈತರು ಜಮೀನ್ದಾರರು ಶಾನಭೋಗ ವಕೀಲರು ಗುತ್ತಿಗೆಯವರು ಲಾಯರ್ ಗುಮಾಸ್ತೆಯರೇ ಮೊದಲಾದ ಇಂಗ್ಲಿಷ್ ತಿಳಿಯದೆ ಇಂಗ್ಲಿಷ್ ಕಲಿಯಬೇಕೆಂಬ ಜನರಿಗೆಲ್ಲಾ ಅತ್ಯುಪಯೋಗವಾದ ಪುಸ್ತಕವಿದು. ಮೊದಲನೆ ಮುದ್ರಣಕ್ಕಿಂತಲೂ ಹೆಚ್ಚಾಗಿ ಅನೇಕ ವಿಷಯಗಳನ್ನು ಸೇರಿಸಿರುವುದರಿಂದ ೨೫೦ ಪುಟಗಳಾಗಿವೆ. ಕ್ರಯ ರೂ ೧—೪—೦. ಜಾಗ್ರತೆ ತರಿಸಿಕೊಳ್ಳಿರಿ!

೩ ನೇ ಛಾಪೆ ಪ್ರಶ್ನೋತ್ತರ ಲೇಖ್ಯಬೋಧಿನಿ.—ಕ್ರಯ ರೂ ೧—೪—೦ ಬರೆಯುವದಕ್ಕೆ ಮೊದಲಿಡುವದು, ಪೂರೈಸುವದು, ಸಂಗತಿಗಳನ್ನು ಅಡಗಿಸುವದು, ಮರ್ಯಾದೆಗಳು ಸಮಾನರಿಗೆ, ಐಶ್ವರ್ಯವಂತರಿಗೆ, ಮಠಾಧಿಪತಿಗಳಿಗೆ, ಜಗದ್ಗುರುಗಳಿಗೆ ಮುಂತಾದವರಿಗೆಲ್ಲಾ ಆಯಾ ಮತಪದ್ಧತಿಯನುಸರಿಸಿ ಬರೆಯುವ ಒಕ್ಕಣೆಗಳು, ರೆವಿನ್ಯೂ ದರಖಾಸ್ತು, ರಾಜಿನಾಮೆ, ಲ್ಯಾಂಡ್ ರೆವಿನ್ಯೂ ರೂಲ್ಸು ಅನುಸರಿಸಿ ರೈತರಿಗೆ ರಿಯಾಯಿತಿ ದೊರೆಯುವ ಬಗೆಬಗೆ ಸಂಗತಿಯಲ್ಲಿ ಅರ್ಜಿಗಳು, ಸಿವಿಲ್ ಕೋರ್ಟು ಬಗೆಬಗೆ ದಾವಾ ಅರ್ಜಿಗಳು, ಸರ್ವ ಸಾಕ್ಷಿ ಪ್ರತಿವಾದಿ ತಕರಾರುಗಳು, ವಿಚಾರಣೆ, ತೀರ್ಮಾನ, ಡಿಕರಿ, ಜಾರಿ, ಜಡ್ಜ್‌ಮೆಂಟ್, ಜಪ್ತಿ, ಹರಾಜ್, ಸ್ವತ್ತುಸ್ವಾಧೀನ, ದಿವಾಳಿ, ಪೈನರು, ಗಾರ್ಡಿಯನ್, ದಾಯಭಾಗ, ಮುಂತಾದ್ದರಲ್ಲಿ ನಡವಳಿಕೆ ವಿಧಿ, ಸ್ಟ್ಯಾಂಪು, ಅಪ್ಪೀಲ್, ರಿವ್ಯೂ, ಮೊದಲಾದ ಎಲ್ಲಾ ವಿಷಯಗಳೂ ವಿಶದವಾಗಿ ಬರೆದಿದೆ. ಕ್ರಿಮಿನಲ್ ಕೋರ್ಟುಗಳಲ್ಲಿ ನಡೆಯುವ ಇಂಡಿಯನ್ ಪೀನಲ್ ಕೋಡಿನ ಯಾವಯಾವ ಸೆಕ್ಷನುಗಳು ಯಾವ್ಯಾವ ತಪ್ಪಿತಕ್ಕೆ ಲಗಾವಾಗುತ್ತದೆ ಎನ್ನುವದು, ಯಾವಯಾವ ತಪ್ಪಿತಗಳನ್ನು ಯಾವ ಮೇಜಿಸ್ಟ್ರೇಟರು ವಿಚಾರಿಸಬೇಕೆನ್ನುವದು, ಇಂಜನೀರ್, ಫಾರೆಸ್ಟ್, ಎಕ್ಸೈಜ್, ವಿದ್ಯಾಭ್ಯಾಸ, ಮ್ಯುನಿಸಿಪಲ್, ಪೋಲೀಸ್, ರೆಜಿಸ್ಟ್ರೇಷನ್, ಸಿವಿಲ್ ಪ್ರೊಸೀಜರ್‌ಕೋಡು, ಪೀನಲ್ ಕೋಡು, ಹಿಂದೂಲಾ, ಮಹಮ್ಮದೀಯಲಾ, ಕಂಪನೀಸ್ ಆಕ್ಟು, ದೊಡ್ಡ, ಅರಂಸು, ಮೊದಲಾದ ಎಲ್ಲಾ ಆಕ್ಟುಗಳೂ ಅಡಗಿರುತ್ತೆ. ಲೇವಾದೇವಿ ಸಿಂಗಲ್ ಯಂಟ್ರಿ, ರೋಜು ವರ್ಗ ಮೊದಲಾದ್ದು ಬರೆವ ರೀತಿ, ಜನಭಾವಿಕ ಲೆಕ್ಕ ಬರೆವ ರೀತಿ, ಇವೇ ಮೊದಲಾದ ಎಲ್ಲಾ ಸಂಗತಿಗಳೂ ವಿವರಿಸಿದೆ ಮೇಲ್ಕಂಡ ಪುಸ್ತಕಗಳು ಜಾಗ್ರತೆ ಮುಗಿದುಹೋಗಬಹುದಾದ್ದರಿಂದ ಜಾಗ್ರತೆ ತರಿಸಿಕೊಳ್ಳಿ ಕ್ರಯ—ಒಂದು ರೂಪಾಯಿ ನಾಲ್ಕಾಣೆ

ವಿಳಾಸ :—ಮ್ಯಾನೇಜರ್, ಕರ್ನಾಟಕ ಪುಸ್ತಕಶಾಲಾ,

ಲಕ್ಕೂರು ಪೋಸ್ಟ್, ಕೋಲಾರ್ ಡಿಸ್ಟ್ರಿಕ್ಟ್.

CHAMBERLAIN'S COUGH REMEDY.

ಚೇಂಬರ್ಲೆನ್‌ಯವರು ಕಂಡು ಹಿಡಿದ ಕೆಮ್ಮಿನ ಔಷಧವು.

1-16

ಕೀಡು ಕೆಮ್ಮು, ಗಂಟಲು ಗೊರಗುವುದು, ನಾಯಿಕೆಮ್ಮು, ಉಬ್ಬಸಕೆಮ್ಮು, ಎಲ್ಲಾ ತರದ ಶೀತ, ಗಂಟಲು ಸಿಕ್ಕು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು, ಕಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೆನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಕಟ್ಟುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎಸೆ ಒಣಗುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೆನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷದದಲ್ಲಿ ಸ್ವಲ್ಪಮಾತ್ರವಾದರೂ ಅಫೀಮು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರು

ಕ್ಯೆಯಿಂದಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣಶೀಸೆಗೆ ೧ ರೂಪಾಯಿ. ದೊಡ್ಡಶೀಸೆಗೆ ೨ ರೂಪಾಯಿ.

ವ್ಯವಹಾರ ನಿರ್ಣಯ.

4-16

ಪುಟಗಳು ೧೪೭. ಕ್ರಯ ಪಿ. ಪಿ ಸೇರಿ ೧—೧೨—೦ ಈ ಪುಸ್ತಕವನ್ನು ಅಪೇಕ್ಷಿಸುವವರು ,, ಎಂ ಪುಟ್ಟಾಚಾರ್ಯರು, ಪ್ಲೀಡರ್, ಮೈಸೂರು ” ಎಂಬೀ ವಿಳಾಸಕ್ಕೆ ಬರೆದುಕೊಳ್ಳುವುದು. ವಿಷಯಗಳನ್ನು ಮೊದಲೇ ತಿಳಿಯಲಪೇಕ್ಷಿಸುವವರಿಗೆ ವಿಷಯಸೂಚಿ ಪತ್ರವು ರವಾನಿಸಲ್ಪಡುತ್ತದೆ.

ಇಲ್ಲಿ ನೋಡಿ.

3-16

ತುಮಕೂರು. ವಿಜ್ಞ ಇಲಾಖೆಯಲ್ಲಿ ಯಾವತೋಪಿಯನ್ ಮೇ ಟ್ಯಬೀರಣೆಯಿಂದ ಉತ್ತಮ ತರದ ಹಾಸನದ ಟೋಪಿಗಳ ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಕ್ರಯ —೧೨ ಆಣೆ ರಿಂದಲೊಂದು ೧ ರೂ ೧೨ ಆಣೆ ವರೆಗೆ

೧ ಡಜ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಕ್ರಮವರಂತೆ ಡಿಸ್‌ಕೌಂಟ್ ಕೊಡಲ್ಪಡುವದು

ನಮ್ಮ ವಿಳಾಸ.—ಮ್ಯಾನೇಜರ್.

ಹಾಸನದ ಟೋಪಿ ಕಾರ್ಖಾನೆ, ವಿಜ್ಞ ಇಲಾಖೆ, ತುಮಕೂರು.

ಸರ್ಕಾರದ ಇಸ್ತಿಹಾರು.

32 2

1 ೧೯೦೮ನೇ ಇಸವಿ ಏಪ್ರಿಲ್ ೧ನೇ ತಾರೀಖು ಲಾಗಾಯಿತು ೧೯೦೮ನೇ ಇಸವಿ ಜೂನ್ ೩೦ರ ವರೆಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ತೆಗೆದುಕೊಳ್ಳುವದಕ್ಕೆ ಮೈಸೂರು ಶೀಮೆಯ ಶ್ರೀಮನ್ಮಹಾರಾಜಾ ಸರ್ಕಾರದ ಕಂಟ್ರೋಲರು ಸಿದ್ಧರಾಗಿರುತ್ತಾರೆ. ಪ್ರತಿ ಒಂದು ಅಪ್ಲಿಕೇಷನ್ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು:—

(೧) ಹುಂಡಿಯ ಮೊಬಲಗು.

(೨) ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು (೩) ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. ೫೦೦ ರೂಪಾಯಿಗಳಿಗೆ ಕಡಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಅಫೀಸರಿಗೆ ಹುಂಡಿಯ ಮೊಬಲಗನ್ನೂ ಮತ್ತು ಕೆಳಗೆ ನಮೂದಿಸಿರುವ ದರದ ಮೇರೆ ಕಮಿಷನ್ ತೆಗೆದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿಕೊಡುವ ಖಜಾನೆ ಹೆಸರು	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ
ಸ್ಟೇಟ್ ಹುಜೂರು	ಕೋಲಾರ ತುಮಕೂರು ಶಿವಮೊಗ್ಗ ಕಡೂರು ಚಿತ್ರದುರ್ಗ ಮೈಸೂರು ಹಾಸನ	ಶೇಕಡ ೧/೧೬

(Sd.) M. N. KRISHNA RAO.

Offg Comptroller.

ಹಿಂದುಸ್ಥಾನದಲ್ಲಿ ಮಕ್ಕಳು

ಬಾಲ್ಯ ಲಗ್ನದ ವ್ಯವಸ್ಥೆಯಿಂದ ನಾನಾ ರೋಗಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಗೊಂಡು ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಕವಾದ ಸೇವನಾ ಔಷಧವನ್ನು ಕೊಡುವುದು ಆವಶ್ಯಕ

SCOTT'S EMULSION

33-3

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು

ಕ್ಯೆಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿವೆ.

ವಿಶಾನುಷ್ಯ ಇರುವ ಈ ಔಷಧದ ಗುರುತು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-16

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ನೆರಿಕೆ, ಕಾಫಿ ಟೋಪಿಗಳು ೧ ರೂ ೮ ಆ., ೧ ರೂ ೬ ಆ., ೧ ರೂ. ೪ ಆ.

ರೇಶ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ.

ಉಣ್ಣೆಯ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂರ್ಯ ಮೋಹಕ್ಕೇಡು, ಅರ್ಧ ಮೋಜೋಡು ಕತ್ತಿನ ಪಟ್ಟಿ, ಇನ್ನಿತರ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ವೃತ್ತಾಂತಪತ್ರಿಕೆ.

—:o:—

ಸನ್ ೧೯೦೪ ನೇ ಇಸವಿ ಏಪ್ರೆಲ್ ತಾ|| ೧೬ ನೇ [illegible]

ಅಧಿಕಾರಿಗಳನ್ನು ನಿಂದಿಸುವುದು

ಮೈಸೂರು ಸಂಸ್ಥಾನದಲ್ಲಿ ಪ್ರಕಟವಾಗುವ ಇಂಗ್ಲಿಷ್ ಅಥವಾ ಕನ್ನಡ ವರ್ತಮಾನ ಪತ್ರಿಕೆಗಳಲ್ಲಿ ಸರ್ಕಾರಿ ಅಧಿಕಾರಿಗಳನ್ನು ದೂರಿ ಅವರನ್ನು ನಿಂದಿಸಿರುವಂಥಾ ಬಾತ್ಮಿಗಳು ಈಗ ಕೆಲವು ತಿಂಗಳಿಂದಲೂ ಪ್ರಕಟವಾಗುತ್ತಲಿವೆ. ಇದನ್ನು ಓದಲು ನಮಗೆ ವಿಷಾದವಾಗುವುದು. ಯಾಕಂದರೆ ಆ ಅಧಿಕಾರಿಗಳ್ಯಾರೋ ಅವರ ಹೆಸರನ್ನು ಮಾತ್ರ ಕಾಣಿಸದೆ, ಆ ಬಾತ್ಮಿಗಳಲ್ಲಿ ಕೆಲವು ಸೂಚನೆಗಳನ್ನು ತೋರಿಸಿ, ಅವುಗಳಿಂದ ದೂರಲ್ಪಟ್ಟ ಅಧಿಕಾರಿಗಳು ಇಂಥವರೇ ಆಗಿರಬಹುದೆಂದು ವಾಚಕರು ಊಹಿಸಿ ತಿಳಿದುಕೊಳ್ಳುವಂತೆ ಬರೆಯುತ್ತಾರೆ. ದೃಷ್ಟಾಂತವಾಗಿ ಈ ವಾರದ "ಮೈಸೂರ್ ಹೆರಲ್ಡ್" ಎಂಬ ಇಂಗ್ಲಿಷ್ ಪತ್ರಿಕೆಯಲ್ಲಿ ಪ್ರಕಟವಾಗಿರುವ ಅಪಮಾನಕರವಾದ ಒಂದು ಬಾತ್ಮಿಯನ್ನು ಸೂಚಿಸುವೆವು. ಅದನ್ನು ಬರೆದವನು ಅಸ್ಪಷ್ಟವಾಗಿಯೂ ತನ್ನ ಹೆಸರನ್ನು ಪ್ರಕಾಶಪಡಿಸುವುದೇ ಇಲ್ಲ. ಯಾವ ಎಡಿಟರೇ ಆಗಲಿ ಯುಕ್ತಾಯುಕ್ತತೆಯ ಪರ್ಯಾಲೋಚನೆಯನ್ನು ತ್ಯಜಿಸಿ ಅಂಥಾ ಹೇಯವಾದ ಬಾತ್ಮಿಯು ಪ್ರಕಟವಾಗಲು ಅವಕಾಶ ಕೊಡಬಹುದೇ ಎಂತಲೂ ಸೂಚಿಸಲು ನಮಗೆ ವಿಷಾದವಾಗುವುದು.

ವರ್ತಮಾನ ಪತ್ರಿಕೆಗಳನ್ನು ನಡಿಸುವವರು ಅಧಿಕಾರಿಗಳನ್ನು ದೂರುವ ಭಾಗದಲ್ಲಿ ಎರಡು ವಿಷಯಗಳನ್ನು ತಮ್ಮ ಗಮನಕ್ಕೆ ತಂದುಕೊಳ್ಳಬೇಕಾಗಿದೆ ಎಂದು ನಮಗೆ ತೋರುತ್ತದೆ. ಮೊದಲನೆಯದಾಗಿ, ದೂರಿಗೆ ಗುರಿಯಾದ ಅಧಿಕಾರಿಯ ಹೆಸರನ್ನು ಸ್ಪಷ್ಟವಾಗಿಯೂ ಸಂಪೂರ್ಣವಾಗಿಯೂ ಪ್ರಕಟಿಸಬೇಕಾದದ್ದಲ್ಲದೆ ಅಂಥಾ ದೂರಿಗೆ ಕಾರಣಗಳಾದ ಆತನ ಕೃತ್ಯಗಳನ್ನು ಸವಿಸ್ತರವಾಗಿಯೂ ವಿವರಿಸಬೇಕು. [illegible] ಮಾತ್ರವಲ್ಲದೆ [illegible] ನ್ಯಾಯಯುಕ್ತವಾಗಿ [illegible] ಮತ್ತು [illegible] ಸ್ಪಷ್ಟವಾಗಿಯೂ ಕಾರಣಯುತವಾಗಿಯೂ [illegible] ಇರಬೇಕು. [illegible] ಅಧಿಕಾರಿಯ ಹೆಸರು [illegible] ಕೆಲವು [illegible] ಊಹಿಸಿ ತಿಳಿದುಕೊಳ್ಳುವ ರೀತಿಯಲ್ಲಿ ಬರೆದು [illegible] ಕೃತ್ಯವೇ ಹೊರತು ಅನ್ಯಥಾ ಎಣಿಸಲಾಗದು. [illegible] ದೂರನ್ನು [illegible] ಓದಿದಲ್ಲಿ ಪ್ರಚುರಿತವಾಗಬೇಕೆಂಬ [illegible] ಉತ್ತಮ [illegible] ಮಾಡುತ್ತಿರುವುದು ವಾಚಕರಿಗೆ [illegible]. ಅವರ [illegible] ತನಗೋ ತನ್ನ ಇಷ್ಟಮಿತ್ರರಿಗೋ ಕಂಡರಾಗದ [illegible] ಕಾಣಿಸಿ [illegible] ಮಾತುಗಳಿಂದ ಎತ್ತಿ [illegible] ತನ್ನ ಹೊಟ್ಟೆಕಿಚ್ಚನ್ನು ತೀರಿಸಿಕೊಳ್ಳುವವನಾಗಿ ಬಾತ್ಮಿಯನ್ನು ಬರೆದಿರುತ್ತಾನೆಂದು ವಾಚಕರು ತಿಳಿದುಕೊಳ್ಳುವರು. ವರ್ತಮಾನ ಪತ್ರಿಕೆಗಳನ್ನು ನಡಿಸುವಂಥಾ ಎಡಿಟರುಗಳಿಗೆ ನಾನಾ ತರದ ಬಾತ್ಮಿಗಳು ಪ್ರಕಟನೆಗಾಗಿ ಬರುತ್ತಿರುವುವು. ಅವುಗಳನ್ನೆಲ್ಲಾ [illegible] ಸಾಧುವೂ ಬಹುಪ್ರಜಾ ಹಿತಕರವೂ ಆಗಿರತಕ್ಕವುಗಳನ್ನು ಮಾತ್ರ ಪ್ರಕಟಿಸಬೇಕು. ಕ್ಷುದ್ರವೂ ಹೇಯವೂ ಆದವುಗಳನ್ನು [illegible] ಎಡಿಟರುಗಳ ಧರ್ಮವಾಗಿರುತ್ತದೆ. ಅಧಿಕಾರಿಯನ್ನಾಗಲಿ ಅನಧಿಕಾರಿಯನ್ನಾಗಲಿ ಅಧರ್ಮಯುಕ್ತವಾದ ರೀತಿಯಲ್ಲಿ ಯಾರೂ ಆಕ್ಷೇಪಿಸಿ ದೂರದಂತೆ ನೋಡಿಕೊಳ್ಳುವುದೂ, ಸರ್ವದಾ ಬಹುಪ್ರಜಾ ಹಿತವನ್ನೇ ತಮ್ಮ ದೃಷ್ಟಿಪಥದಲ್ಲಿಟ್ಟಿರುವುದೂ ಕೂಡ ಎಡಿಟರುಗಳ ಮುಖ್ಯ ಕರ್ತವ್ಯವಾಗಿರಬೇಕು. ಆದರೆ ಮೈಸೂರು ಸಂಸ್ಥಾನದ ಕೆಲವು ಪತ್ರಿಕೆಗಳು ಸ್ವಲ್ಪಮಾತ್ರವೂ ಈ ಧರ್ಮವನ್ನು ಅನುಸರಿಸುತ್ತಿರುವಂತೆ ಕಾಣುವುದಿಲ್ಲವಲ್ಲಾ ಎಂದು ವ್ಯಸನಪಡಬೇಕಾಗಿದೆ. ಅಧಿಕಾರಿಯನ್ನು ನಿಂದಿಸಿರುವ ಬಾತ್ಮಿಯನ್ನು ಓದಿಕೊಂಡ ಕೂಡಲೇ ವಾಚಕನ ಮನಸ್ಸಿಗೆ "ಈ ಅಧಿಕಾರಿಯು ಯಾರನ್ನು ರೇಗಿಸಿರಬಹುದು" "ಯಾರು ಅತನ ಸಂಗಡ ಜಗಳವಾಗಿರಬಹುದು" ಎಂಬೀ ರೀತಿಯಾದ ಪ್ರಶ್ನೆಗಳು ಹೊಳೆಯುವವು. ಪಬ್ಲಿಕ್ಕಿಗೆ ಪ್ರಯೋಜನವಾಗುವ ವಿಚಾರವಾಗಲಿ, ರಾಜ್ಯಭಾರಕ್ಕೆ ಹಿತಕರವಾದ ಸಲಹೆಗಳಾಗಲಿ ಆ ಬಾತ್ಮಿಯಲ್ಲಿ ಕಂಡುಬರುವುದಿಲ್ಲ; ಸ್ವಂತ ಹೊಟ್ಟೆಕಿಚ್ಚು, ಹಗೆತನಗಳನ್ನು ತೀರಿಸಿಕೊಳ್ಳುವುದರ ಮೂಲಕ ಚಿತ್ತತೃಪ್ತಿಯನ್ನು ಪಡೆಯಬೇಕೆಂದು ಅವಿವೇಕಿಗಳನೇಕರು ಕೂಡಿಸಿ ಬರೆದ ಬಾತ್ಮಿಯಾಗಿರುತ್ತದೆ.

ಉಪಕಾರಿಗಳೂ ಈ ಸಂಸ್ಥಾನದಲ್ಲಿ ಸಾಧುಗಳೂ ಮಾನಿಷ್ಠರೂ ಸತ್ವವಂತರೂ ಆದ ಪ್ರಜೆಗಳ ಪರವಾಗಿ ನಾವು ನಿಂತು, ಇಂಥಾ ದುಷ್ಟತರವಾದ ರೀತಿಯುಳ್ಳ ವರ್ತಮಾನ ಪತ್ರಿಕೆಗಳ ಪ್ರಚಾರವನ್ನು ಖಂಡಿಸಬೇಕಾಗಿದೆ. ಮೈಸೂರು ಬೆಂಗಳೂರು ಷಹರುಗಳಲ್ಲಿ ದೇಶಾಭಿಮಾನಕಾಂಕ್ಷಿಗಳಾಗಿರುವ ಯೌವನಸ್ಥರು ಈ ವಿಚಾರವನ್ನು ಚನ್ನಾಗಿ ಪರ್ಯಾಲೋಚನೆಮಾಡಿ, ಅಧಿಕಾರಿಗಳನ್ನು ನಿಂದಿಸುವುದರಲ್ಲಿ ಸ್ವಾರ್ಥತೆಯನ್ನೂ ಹೇಡಿತನವನ್ನೂ ತ್ಯಜಿಸಿ, ನೈಜವಾದ ದೇಶವಾತ್ಸಲ್ಯಶೀಲರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಸತ್ಯವಾದಿ ಬಹುಜನ ವಿರೋಧಿ.

ಭೂಲೋಕದಲ್ಲಿ ಎತ್ತ ಕಡೆ ಹೋದರೂ ಅಧರ್ಮವು ವ್ಯಾಪಿಸಿಕೊಂಡಿರುವುದು. ಜನರು ಅಭ್ಯಾಸಿಸುತ್ತಿರುವ ಪದ್ಧತಿಗಳೆಲ್ಲವೂ ಯೋಗ್ಯವಾದವುಗಳೆಂದು ಹೇಳುವುದು ಅಸಾಧ್ಯ. ಅನೇಕದ ಅನುಸರಣೆಯಲ್ಲಿರತಕ್ಕ ಕೆಲವು ದುರಾಚಾರಗಳು ಅಗತ್ಯವಾಗಿ ಬದಲಾವಣೆಯನ್ನು ಹೊಂದಬೇಕಾಗಿರುತ್ತದೆ. ದುಷ್ಟರು ತಾವು ಒಳ್ಳೆಯವರಾಗುವುದಿಲ್ಲ. ಬೇರೆಯವರನ್ನೂ ಒಳ್ಳೆಯವರಾಗುವಂತೆ [illegible] ಯೇಸು ಕ್ರಿಸ್ತನು ಇಂಥವರಲ್ಲಿ ಒಬ್ಬನೆಂದು ಹೇಳಬಹುದೇ ? ಎಂದಿಗೂ ಹೇಳಕೂಡದು. ಆತನು ತಾನು ಪವಿತ್ರನಾಗಿದ್ದುದಲ್ಲದೆ ಪಾಪದಲ್ಲಿದ್ದವರನ್ನು ಸದಾಚಾರಸಂಪನ್ನರಾಗುವಂತೆ ಮಾಡಲು ಪ್ರಯತ್ನ ಮಾಡಿದನು. ಇಂಥಾ ಪ್ರಯತ್ನವೇ ಆತನ ಜೀವಮಾನದ ಮುಖ್ಯೋದ್ದೇಶವಾಗಿತ್ತು.

ನಾಳೆ ದಿವಸವು ಶುಭಶುಕ್ರವಾರವೆಂದು ಕ್ರೈಸ್ತರಲ್ಲಿ ಹೆಸರಾಗಿರುತ್ತದೆ. ಆ ದಿನದಲ್ಲಿ ಯೇಸುಕ್ರಿಸ್ತನು ಶಿಲುಬೆಯಮೇಲೆ ಸತ್ತುಹೋದದ್ದನ್ನು ಆತನ ಭಕ್ತಾದಿಗಳು ಸ್ಮರಿಸುತ್ತಾರೆ. ಅನೇಕಾನ್ಯಮತ ಜನರು— ಯಾಕೆ ಯೇಸುಕ್ರಿಸ್ತನು ಶಿಲುಬೆಯಮೇಲೆ ಸತ್ತು ಹೋಗಬೇಕಾಗಿತ್ತು ಎಂಬುದಾಗಿ ಪ್ರಶ್ನೆ ಮಾಡುತ್ತಾರೆ. ಇಂಥಾ ಪ್ರಶ್ನೆಗೆ ನಾವು ಕೊಡುವ ಉತ್ತರವು [illegible] ಮನುಷ್ಯರು ಯೇಸುಕ್ರಿಸ್ತನನ್ನು ಶಿಲುಬೆಯ ಮೇಲೆ ಹಾಕಿಸಿ ಕೊಂದರು. ಮನುಷ್ಯರಲ್ಲಿ ಸತ್ಯಕ್ಕೂ ಪವಿತ್ರತ್ವಕ್ಕೂ ವಿರುದ್ಧವಾದ ಗುಣಸ್ವಭಾವಗಳು ಉಂಟೆಂದು ಯೇಸುಕ್ರಿಸ್ತನ ಮರಣದಿಂದ ತಿಳಿದುಕೊಳ್ಳಬಹುದು. ನಾವು ಯೋಗ್ಯರೂ ಸಾಧುಗಳೂ ಬುದ್ಧಿವಂತರೂ ಆಗಿದ್ದರೆ [illegible] ಶಾಸ್ತ್ರ ಅಭ್ಯಾಸಿಸುತ್ತ [illegible] ದುಷ್ಕೃತ್ಯಗಳನ್ನು ಬಿಟ್ಟುಬಿಡುವರೆಂದು ನಾವು ಅನೇಕ [illegible] ಯೋಚಿಸಬಹುದು. ಆದರೆ ದುಷ್ಟತ್ವವು ಈ ರೀತಿ ಹೋಗತಕ್ಕದಲ್ಲ.

[illegible] ಉದಾಹರಣೆಯನ್ನು ಕುರಿತು ಇಲ್ಲಿ ಪ್ರಸ್ತಾಪಿಸೋಣ. ಕೆಲವು ದಿನಗಳ ಹಿಂದೆ ಒಬ್ಬರು ಬಾಲ್ಯವಿವಾಹದ ವಿಷಯವನ್ನು ಕುರಿತು [illegible] ಪುಸ್ತಕವನ್ನು ರಚಿಸಿದರು. ಗ್ರಂಥಕರ್ತರು ಬಹು [illegible] ಅವರು ವೇದಗಳಿಂದಲೂ ಇನ್ನು ಪುರಾತನ ಸ್ಮೃತಿಗಳಿಂದಲೂ ವಚನಗಳನ್ನು ತೆಗೆದು ಪುರಾತನ ಆರ್ಯರಲ್ಲಿ ಬಾಲ್ಯವಿವಾಹ [illegible] ವೆಂದು ಸ್ಥಾಪಿಸುತ್ತಾರೆ. [illegible] ಪೂರ್ಣ [illegible] ಅವರಿಗೆ [illegible] ವಯಸ್ಸಾಗುತ್ತ [illegible] ಕಟ್ಟಳೆಗಳಾಗ [illegible] ಎಂದು ಶಾಸ್ತ್ರೋಕ್ತವಾಗಿ ತಿಳಿಸುತ್ತಾರೆ. ಅವರು ತಿಳಿಸುವ ಸಂಗತಿಯನ್ನು ನಾವು ಅನುಭವಪೂರ್ವಕವಾಗಿಯೂ ಒಪ್ಪುವೆವು. ಬಾಲ್ಯವಿವಾಹವನ್ನು ನೋಡಿದರೆ ಆ ಪದ್ಧತಿಯಿಂದ ಅನೇಕ ಬಗೆಯಾದ ಕೇಡುಗಳು ಸಂಭವಿಸುತ್ತಿರುವುವು. ಗ್ರಂಥಕರ್ತರು ಹೇಳುವ ಸಂಗತಿಯಲ್ಲ ನಿಜವು ಅದರೇನು ? ಒಬ್ಬನು [illegible] ಮಾರ್ಗವನ್ನು ತೋರಿಸಿಕೊಟ್ಟ ಮಾತ್ರಕ್ಕೆ ಎಲ್ಲಾ ಕಾರ್ಯಗಳು ಪೂರ್ತಿಯಾದುವೆಂದು ನಾವು ಹೇಳಬಹುದೋ ? ಆತನು ತಾನು ಕೊಟ್ಟ ಸಲಹೆಯನ್ನು ಉಪಯೋಗಿಸುತ್ತೇನೆಂದು ಮನೆಯಲ್ಲಿ ಕೂ [illegible] ತಾನು ಬೋಧಿಸಿದ್ದನ್ನು ಕಾರ್ಯರೂಪವಾಗಿ ಸಾಧಿಸಬೇಕಾಗಿರುತ್ತದೆ. ಇಂಥಾ ಸಂಘಪರಿಷ್ಕಾರಕನಿಗೆ ಅಗ್ನಿಯೂ ಅನೇಕ ವಿಧವಾದ ತೊಂದರೆಗಳೆ ಸಂಭವಿಸೇ ಸಂಭವಿಸುವವು. ಅವನು [illegible] ಬುದ್ಧಿವಂತನೂ ಗುಣಾಢ್ಯನೂ ಆಗಿದ್ದರೂ ಸರಿ ಅವನು ಎಷ್ಟೇ ಬುದ್ಧಿವಂತಿಕೆಯಿಂದ ವಾದಿಸಿದರೂ ಸರಿ, ಅನಂಭವದಿಂದ ಕೂಡಿದ ಕೆಲ [illegible] ಗಳು ಸ್ಮೃತಿಗಳಲ್ಲಿ ಬಾಲ್ಯವಿವಾಹಕ್ಕೆ ಯಾವ ಆಕ್ಷೇಪಣೆ ಇಲ್ಲವೆಂದು ವಾದಿಸುವರಲ್ಲವೇ ? [illegible] ಮೇಲೆ ಬಿಷ್ಣ ಮಳೆಯು ಹ್ಯಾಗೆ ಕಲ್ಲನ್ನು ಪ್ರವೇಶಿಸಲಾರದೋ ಅಂಥಾ [illegible] ನಲ್ಲಿ ನ್ಯಾಯ [illegible] ವಚನಗಳು ಪ್ರವೇಶಿಸವಿಲ್ಲ. ಇದೂ ಅಲ್ಲದೆ ಮನೆಯಲ್ಲಿ ವಿದ್ಯಾವಂತರಲ್ಲದ ಕೆಲವು [illegible] ಬಾಲ್ಯವಿವಾಹವನ್ನು ಶಾಸ್ತ್ರೋಕ್ತವಾಗಿ ನಡಿಸಬೇಕೆಂದು ತಮ್ಮ ಮನೆ [illegible] ಹಿಂಸಿಸುವರು. [illegible] ಕೆಲವು ಕಂಟಿಗಳು [illegible] ಕೊಡುವವರಾಗಿ ತಮ್ಮ [illegible] ಆದಷ್ಟು ಜಾಗ್ರತೆ [illegible] ಮಾಡಿಕೊಡುವರು. ಇದೂ ಅಲ್ಲದೆ ವಿಷಯಾಸಕ್ತಿಯಿಂದ [illegible] ಕೆಲವು ದುರಾತ್ಮರು [illegible] ಇಂಥಾ ಜನರನ್ನು ಖಂಡಿಸುವವನು ಅವರ ಪ್ರೀತಿಗೆ ಪಾತ್ರನಾದಾನೇ ? ಎಂದಿಗೂ ಇಲ್ಲ. ಅವನು ಧೀರನೂ ತನಗೆ ಏನೇ ಸಂಭವಿಸಿದರೂ ಸತ್ಯವಾದುದನ್ನು ಮಾಡುವವನೂ ಆಗಿಲ್ಲದಿದ್ದರೆ ? ಹಾಗಿಲ್ಲದ ಪಕ್ಷದಲ್ಲಿ ಅವನ ವಚನಗಳಿಂದ [illegible] ಪ್ರಯೋಜನವೂ ಆಗಲಾರದು. ಅವನು ಒಡೆಯ [illegible] ಅಪವಾದಿಕೆಯಂತೆ [illegible] ನಾಗಿರುತ್ತಾನೆ.

ಜನರಲ್ಲಿ ಸ್ವಾರ್ಥತೆಯೂ ಕಲಹ [illegible] ಗರ್ವವೂ [illegible] ಕೆಡುಕೂ ಇದ್ದುಕೊಂಡು ಅವರು ಸತ್ಯವಂತರಾಗಿ [illegible] ಅಡ್ಡಿಯಾಗಿರುವುದರಿಂದ ಯೇಸುಕ್ರಿಸ್ತನು ಸತ್ತು [illegible] ತು. ಅವನಂತೂ ಸದಾಚಾರ [illegible] ಎಲ್ಲರಿಗೂ ಗೊತ್ತಾಗಿದೆ. ಯೇಸುಕ್ರಿಸ್ತನ [illegible] ಗಳನ್ನು ಕಲಿಯತಕ್ಕುದು. ಆತನ ಮರಣದಿಂದ ಪಾಪಕ್ಕೆ [illegible] ತಲೂ ಅದು ಯಾವಾಗಲೂ [illegible] ತನಗೆ [illegible] ಅದರ ಪ್ರೇರಣೆಯಿಂದಲೇ ಜನರು ದೇವರ ಮಾರ್ಗವನ್ನು ಬಿಟ್ಟು ತಮ್ಮ ಸ್ವಂತ ಇಷ್ಟದ ಪ್ರಕಾರ ನಡೆಯುತ್ತಾರೆಂತಲೂ ನಾವು ತಿಳಿದುಕೊಳ್ಳಬೇಕು. ಯೇಸುಕ್ರಿಸ್ತನ ಮರಣವು ಪಾಪದ ಭೀಕರತ್ವವನ್ನು ತಿಳಿಸುತ್ತದೆ. ಪಾಪದಿಂದ ಕೂಡಿದ ಹೃದಯವು ಸತ್ಯವಂತನೂ ಯೋಗ್ಯನೂ ಆದವನಿಗೆ [illegible] ಕೊಲ್ಲುವಷ್ಟು ಭಯಂಕರವಾಗಿರುತ್ತದೆ. ಎರಡನೇದಾಗಿ ಯೇಸುಕ್ರಿಸ್ತನ ಮರಣವು ಪೂರ್ಣ ವಿಧೇಯತ್ವದ ಫಲವನ್ನು ಸೂಚಿಸುತ್ತದೆ. ಆತನೆಂದಿಗೂ ಅನ್ಯಾಯವನ್ನು ನೋಡಿ ಸಹಿಸುತ್ತಿರಲಿಲ್ಲ. ಹೊಗಳಿಸಿಕೊಳ್ಳುವುದು ಆತನಿಗೆ ಅಸಹ್ಯವಾಗಿದ್ದಿತು. ಸತ್ಯವಾದುದನ್ನು ಆತನೆಂದಿಗೂ ಮರೆಮಾಡುತ್ತಿರಲಿಲ್ಲ. ಅನೇಕರಿಗೆ ಸಮ್ಮತವೂ ಹಿತವೂ ಆಗಿರುವ ಪಾಪದ ಮಾರ್ಗದಲ್ಲಿ ಆತನು ಎಂದಿಗೂ ನಡೆದವನಲ್ಲ. ಆತನು ತಾನು ಹೇಳಕೂಡದಷ್ಟು ಕಷ್ಟಗಳನ್ನನುಭವಿಸಬೇಕಾದ್ದು ತಿಳಿದಿದ್ದರೂ ಸತ್ಯಾಚರಣೆಯನ್ನು ಮಾತ್ರ ಬಿಡಲಿಲ್ಲ. ಆತನು ಶಿಲುಬೆಯ ಮರಣದ ಪರ್ಯಂತರಕ್ಕೂ ವಿಧೇಯನಾಗಿದ್ದನು. ಆದ್ದರಿಂದ ದೇವರು ಆತನನ್ನು ಉನ್ನತಪಡಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಕೊಟ್ಟಿರುತ್ತಾನೆಂದು ಪೌಲನೆಂಬ ಮಹಾತ್ಮನು ತಿಳಿಸುತ್ತಾನೆ.

ವಾಚಕರೇ ನಿಮ್ಮ ಹೃದಯವು ಹ್ಯಾಗಿರುತ್ತದೆ. ಅದು ಕೆಟ್ಟದ್ದಾಗಿಯೂ ಗರ್ವ ಮತ್ತು ಇನ್ನು ಅನೇಕ ವಿಧವಾದ ದುರಾಶೆಗಳಿಂದ ಕೂಡಿದುದಾಗಿಯೂ ಇರುತ್ತದೋ ? ನೀವು ಸತ್ಯಕ್ಕೆ ವಿರೋಧಿಗಳಾಗಿರುವಿರಾ ? ಅಥವಾ ಒಳ್ಳೆಯದನ್ನೇ ಹಿಂಬಟ್ಟುವುದಕ್ಕೆ ಇಷ್ಟಪಡುತ್ತೀರಾ ? ನೀವು ಒಳ್ಳೆಯವರಾಗುವುದಕ್ಕೆ ಇಷ್ಟಪಟ್ಟರೆ ಯೇಸುಕ್ರಿಸ್ತನು ತಿಳಿಸುವ ಪ್ರಕಾರ ನಿಮಗೆ ತೊಂದರೆಗಳು ಸಂಭವಿಸುವವು. ಆತನು ತನ್ನ ಶಿಷ್ಯರಿಗೆ ಇದೇ ವಿಷಯವು ಪುರಸ್ಕಾರವಾಗಿ ತಿಳಿಸಿದ್ದನು. ಆತನು ಅವರಿಗೆ ಸುಖಜೀವನವನ್ನು ಕಲ್ಪಿಸಿಕೊಡದೆ ತನ್ನ ಹಿಂದೆ ಶಿಷ್ಯನಾಗಿ ಬರುವವನು ತನ್ನ ಶಿಲುಬೆಯನ್ನು ಹೊತ್ತುಕೊಂಡು (ಅಂದರೆ ಕಷ್ಟಗಳನ್ನನುಭವಿಸುವವನಾಗಿ) ಬರಬೇಕೆಂದು ತಿಳಿಸುತ್ತಾನೆ.

ಸತ್ಯವಾದುದನ್ನು ಮಾಡುವುದಕ್ಕೆ ನೀವೆಂದಿಗೂ ಹೆದರಬೇಡಿರಿ. ನಿಮಗೆ ಕೊನೆಯಲ್ಲಿ ಜಯವೇ ಆದೇ ಆಗುವುದು. ಯಾಕಂದರೆ ದೇವರು ನಿಮ್ಮ ಸಹಾಯಕನಾಗಿರುವನು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ದಂಡಿನಲ್ಲಿ [illegible] ಪ್ರಜೆಗಳಿಗೆ ಪ್ಲೇಗ್ [illegible]

❀❀❀

ಕಳೆದ ವಾರ ದಿವಾನರವರು ಬೆಂಗಳೂರಿನಿಂದಲೂ, ಕರ್ನಲ್ [illegible] ದೇಶರಾಜೇ ಅರಸಿನವರು ರಾಜಧಾನಿಯಿಂದಲೂ "ನೀಲಗಿರಿ"ಗೆ ಪ್ರಯಾಣ ಮಾಡಿದರು.

❀❀❀

ಹೊಸ ಛೀಫ್ ಜಡ್ಜಿಯವರು ಈ ಬೇಸಿಗೆ ರಜಾ ಕಾಲದಲ್ಲಿ ನೀಲಗಿರಿಗೆ ಹೋಗಿರುತ್ತಾರೆಂದು [illegible] ಆದರೆ ಅವರು ನೀಲಗಿರಿಗೆ ಹೋಗುವರೆಂದು ತಿಳಿದುಬಂದಿದೆ.

❀❀❀

[illegible] ಮನೆಯ ಅಟ್ಟತೊಟ್ಟಿಯ ಮೇಲೆ ಒಬ್ಬ ಮನುಷ್ಯನು ಕುಳಿತಿರುವಾಗ ಆಕಸ್ಮಾತ್ತಾಗಿ ಆ ಗಿಡದ ಒಂದು ರೆಂಬೆಯು ಕಳಚಿಬಿದ್ದು ಅವನಿಗೆ ಬಹಳ ಪೆಟ್ಟಾದ್ದಲ್ಲದೆ ಸೋಪಾನದ ಕೈಪಿಡಿ ಗೋಡೆಗಳನ್ನೂ ಮುರಿದು ಹಾಕಿತು. ಈಚೆಗೆ ಆ ಮನುಷ್ಯನು ಇಲಾಜು ಮಾಡಿಸಿಕೊಳ್ಳುತ್ತಿದ್ದಾನೆಂದು ಕೇಳುತ್ತೇವೆ.

❀❀❀

ರಾಜಧಾನಿಯ ಅರಮನೆಯಲ್ಲಿ ಇಂಜನಿಯರುಗಳು ಇಲ್ಲಿನ ಕಾರಾಗಾರದಿಂದ ಒಂದು ಎತ್ತರವಾದ ಕನಡಿ ಕದಗಳುಳ್ಳ ಪೆಟ್ಟಿಗೆಯನ್ನು ನವೀನವಾದ ರೀತಿಯಲ್ಲಿ ತಯಾರುಮಾಡಿಸಿ, ಈ ಸಂಸ್ಥಾನದಲ್ಲಿ ವಿಶೇಷ ಪ್ರಸಿದ್ಧವಾಗಿರತಕ್ಕಂಥಾ ವಸ್ತುಗಳನ್ನು ಸಂಗ್ರಹಮಾಡಿ ಅದರಲ್ಲಿಡಿಸಿ, ಫ್ರಾನ್ಸ್ ರಾಜ್ಯದ ರಾಜಧಾನಿಯಾದ ಪ್ಯಾರಿಸ್ ನಗರದಲ್ಲಿ ನಡೆಯುವಂಥಾ ಪ್ರದರ್ಶನಶಾಲೆಗೆ ಕಳುಹಿಸಿದಾರೆ. ಇದಕ್ಕೆಲ್ಲಾ ಸುಮಾರು ೫,೦೦೦ ರೂಪಾಯಿ ತನಕ ಖರ್ಚಾಯಿತೆಂದು ತಿಳಿಯುವುದು.

❀❀❀

ಶ್ರೀಮನ್ಮಹಾರಾಜರವರು ನಿತ್ಯವೂ ಪೂಜೆ ಮಾಡುತ್ತಿದ್ದ "ಜಗದಾಂಬಾ" ಎಂಬ ಗೋವು ಕಳೆದ ಶುಕ್ರವಾರ ಸಾಯಂಕಾಲ ಕಾಲವಾಯಿತು. ಅರಮನೆ ಇಲಾಖೆಯವರು ಮರುದಿನ ಅದಕ್ಕೆ ಅಲಂಕಾರ ಮಾಡಿ ರಣಗಾಡಿಯ ಮೇಲೆ ಮಂಟಪಕಟ್ಟಿ ಅದರಲ್ಲಿ ಕೂರಿಸಿ, ಮರ್ಯಾದೆಗಳೊಡನೆ ಚಾಮರಾಜ ತೋಟಕ್ಕೆ ಮೆರವಣಿಗೆ ಮಾಡಿಕೊಂಡು ಹೋಗಿ ಅಲ್ಲಿ ಪದ್ಧತಿಯ ಪ್ರಕಾರ ಅದನ್ನು ಸಮಾಧಿ ಮಾಡಿಸಿದರು. ಈ ಹಸುವು ಲೇಟ್ ಚಾಮರಾಜ ಒಡೆಯರವರ ಕಾಲದಿಂದಲೂ ಅರಮನೆಯಲ್ಲಿದ್ದು ಪೂಜೆ ಮಾಡಿಸಿಕೊಳ್ಳುತ್ತಿತ್ತು.

❀❀❀

ಮೈಸೂರು ಗವರ್ನಮೆಂಟಿನವರು ಈ ವರುಷ ದಾಮೋದರದಾಸ್ ಧರ್ಮಫಂಡಿನಿಂದ ನಾಲ್ಕು ಮಂದಿ ವಿದ್ಯಾರ್ಥಿಗಳಿಗೆ ಭಾರಿಯಾದ (ಅಂದರೆ, ವರುಷಕ್ಕೆ ೨೦೦ ಪೌಂಡುಗಳ) ವೇತನಗಳನ್ನು ಕೊಡುವವರಾಗಿದಾರೆ. ಆ ಸ್ಕಾಲರ್‌ಷಿಪ್ಪನ್ನು ಗಣಿಗಳ ವಿಚಾರವಾದ ವಿದ್ಯೆ ಕಲಿಯುವುದಕ್ಕೆ ಕಳುಹಿಸಿದರು. ಈ ವೇತನಗಳನ್ನು ಪಡೆದು ವಿಲಾಯತಿ ಮೊದಲಾದ ಅನ್ಯದೇಶಗಳಿಗೆ ಓದಲು ಹೋಗಬೇಕೆಂದು ಅಪೇಕ್ಷಿಸುವ ಯೌವನಸ್ಥರು ಬಿ. ಎ. ಪರೀಕ್ಷೆಯಲ್ಲಿ ನೇರ್ಪಾಗಿ ತೇರ್ಗಡೆ ಹೊಂದಿರಬೇಕೆಂತಲೂ, ಜೂನ್ ೧೫ ರೊಳಗಾಗಿ ಗವರ್ನಮೆಂಟ್ ಸೆಕ್ರೆಟರಿಯವರಿಗೆ ಅರ್ಜಿ ಬರೆದುಕೊಳ್ಳಬೇಕೆಂತಲೂ ಸರ್ಕಾರದವರು ತಿಳಿಸಿದಾರೆ.

❀❀❀

ಬೆಂಗಳೂರು ದಂಡಿನ ಮ್ಯಾಜಿಸ್ಟ್ರೇಟರು [illegible] ಕೋರ್ಟಿನಲ್ಲಿ ಸಬ್ ಇನ್ಸ್ಪೆಕ್ಟರ್ ಜೆ. [illegible] ಎಂಬಾತನು ಸಹಾಯಕನಾಗಿದ್ದನೆಂದು ಮುಂಚಾಗಿ ಕೇಸು ಬಂದದ್ದರಿಂದ ಆತನನ್ನು ಮದರಾಸ್ ಹೈಕೋರ್ಟಿನ ಸರ್ವಿಸ್ ಜಡ್ಜರು ದರ್ಯಾಪ್ತು ಮಾಡಬೇಕೆಂದು ತೀರ್ಮಾನ ಮಾಡಿದಾರಷ್ಟೆ, ಮದ್ರಾಸ್ ಹೈಕೋರ್ಟಿನಲ್ಲಿ ಮಿ|| [illegible] ಎಂಬ ಬ್ಯಾರಿಸ್ಟರು ಆತನ ಪರವಾಗಿ ವಾದಿಸಿ, ಕಳೆದ ಬುಧವಾರ ಆತನನ್ನು ಜಾಮೀನಿನ ಮೇಲೆ ಬಿಡಿಸಿಕೊಂಡಿದಾರೆ. ಆತನು ೫,೦೦೦ ರೂಪಾಯಿನ ಬಾಬತ್ತು ಎರಡು ಜಾಮೀನುದಾರರನ್ನು ಕೊಟ್ಟಿದ್ದಲ್ಲದೆ ೧,೦೦೦ ರೂಪಾಯಿಗೆ ಸ್ವಂತ ಜಾಮೀನು ಮುಚ್ಚಳಿಕೆಯನ್ನೂ ಬರೆದುಕೊಟ್ಟಿದಾನೆ.

ಪ್ಲೇಗ್ ಇಲಾಖೆಯ ರಿಪೋರ್ಟು

೧೯೦೬—೦೭ ನೇ ಸಾಲಿನಲ್ಲಿ ಪ್ಲೇಗಿನ ಹಾವಳಿಯು.

ಮೈಸೂರು ಸಂಸ್ಥಾನದ ಸ್ಯಾನಿಟರಿ ಕಮಿಷನರವರು ೧೯೦೬—೧೯೦೭ ನೇ ಸಾಲಿನಲ್ಲಿ ಪ್ಲೇಗ್ ಉಪದ್ರವದ ಸ್ಥಿತಿಯನ್ನು ಕುರಿತು ರಿಪೋರ್ಟು ಬರೆದು ೧೯೦೭ ನೇ ನವಂಬರ್ ತಿಂಗಳಲ್ಲಿ ಗವರ್ನಮೆಂಟಿಗೆ ಕಳುಹಿಸಿದರು. ಗವರ್ನಮೆಂಟಿನವರು ಅದರ ಮೇಲೆ ೧೯೦೮ ನೇ ಫೆಬ್ರುವರಿ ಆಖೈರಿನಲ್ಲಿ ಬರೆದಿರುವ ರುಕುಂ ಈಗ ನಮ್ಮಲ್ಲಿಗೆ ಬಂದಿರುತ್ತದೆ. ಈ ರುಕುಮಿನಲ್ಲಿ ಕಂಡುಬರುವ ಮುಖ್ಯ ವಿಚಾರಗಳನ್ನು ಇಲ್ಲಿ ಪ್ರಕಟಿಸುವೆವು.

ಈ ಸಂಸ್ಥಾನದಲ್ಲಿ ಹಿಂದಿನ ಸಾಲಿನಲ್ಲಿ ಪ್ಲೇಗ್ ಉಪದ್ರವವು ಎಷ್ಟು ಮಂದಿಗೆ ತಗಲಿತೋ, ಎಷ್ಟು ಮಂದಿ ಕಾಲವಾದರೋ ಅದಕ್ಕಿಂತ ೧೯೦೬—೦೭ ನೇ ಸಾಲಿನಲ್ಲಿ ಎರಡರಷ್ಟು ಜನರಿಗೆ ಆ ಉಪದ್ರವ ತಗಲಿತು, ಎರಡರಷ್ಟು ಜನರು ಕಾಲವಾದರು. ಈ ವಿಷಯವು ವಿಷಾದಕರವಾಗಿರುತ್ತದೆ. ಶಿವಮೊಗ್ಗ ಮತ್ತು ಚಿತ್ರದುರ್ಗದ ಡಿಸ್ಟ್ರಿಕ್ಟುಗಳಲ್ಲಿ ಈ ಉಪದ್ರವವು ಸಾಮಾನ್ಯವಾಗಿ ಇರಲಿಲ್ಲವೆಂದು ಹೇಳಬಹುದು. ಆದರೆ ಮೈಸೂರು ಪಟ್ಟಣದಲ್ಲೂ, ಬೆಂಗಳೂರು ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲೂ ಉಪದ್ರವದಿಂದಾದ ಮರಣಗಳು ಬಹಳವಾಗಿ ಹೆಚ್ಚಿರುತ್ತವೆ. ಈ ವಿಚಾರವನ್ನು ಮುಂದಿನ ಪಟ್ಟಿಯಿಂದ ಚೆನ್ನಾಗಿ ಹೋಲಿಸಿ ನೋಡಬಹುದಾಗಿದೆ.

ಸ್ಥಳ		೧೯೦೫-೦೬		೧೯೦೬-೦೭	
		ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರ್ ಸಿಟಿ		೪೭೯	೩೦೫	೬೧೨	೩೯೮
ಮೈಸೂರ್ ಸಿಟಿ		೫	೩	೮೦೧	೬೦೭
ಬೆಂಗಳೂರ್ ಡಿಸ್ಟ್ರಿಕ್ಟ್		೪೪೯	೩೮೩	೧,೬೩೧	೧,೧೨೪
ಕೋಲಾರ್	,,	೨೩೬	೧೪೩	೧೩೩	೧೧೨
ತುಂಕೂರ್	,,	೧೧೩	೮೭	೧೭೪	೧೧೭
ಮೈಸೂರ್	,,	೩೭೬	೨೪೩	೩೦೭	೨೦೯
ಹಾಸನ	,,	೬೩	೪೯	೬೦೯	೫೨೬
ಶಿವಮೊಗ್ಗ	,,	೮೦೯	೧೬೩	೬೪	೪೬
ಕಡೂರ್	,,	೨೩೯	೧೬೩	೧,೩೬೯	೧,೦೪೦
ಚಿತ್ರದುರ್ಗ	,,	೯೭	೨೫	೩	೩
	ಒಟ್ಟು	೩,೦೩೩	೨,೧೩೮	೫,೯೮೩	೪,೨೮೭

ಮೇಲ್ಕಂಡ ಪಟ್ಟಿಯಿಂದ ೧೯೦೫-೦೬ ನೇ ಸಾಲಿಗಿಂತಲೂ ೧೯೦೬—೦೭ ನೇ ಸಾಲಿನಲ್ಲಿ ಪ್ಲೇಗ್ ಉಪದ್ರವ ೨,೯೫೦ ಜನರಿಗೆ ಹೆಚ್ಚಾಗಿ ತಗಲಿತೆಂತಲೂ ೨,೧೪೯ ಜನರು ಹೆಚ್ಚಾಗಿ ಕಾಲವಾದರೆಂತಲೂ ಗೊತ್ತಾಗುವುದು. ಪ್ಲೇಗನ್ನು ಅಣಗಿಸುವ ಭಾಗದಲ್ಲಿ ಪ್ರಜೆಗಳೂ ಅಧಿಕಾರಿಗಳೂ ಅನೇಕ ಗ್ರಾಮಗಳಲ್ಲಿ ಜಾಗ್ರತೆಯಾಗಿಯೂ ಚುರುಕಿನಿಂದಲೂ ಕೆಲಸ ನಡೆಸದೆ ಹೋದರೆಂಬ ಮಾತನ್ನು ಮಾತ್ರ ಸ್ಯಾನಿಟರಿ ಕಮಿಷನರು ತಿಳಿಸುತ್ತಾರಲ್ಲದೆ ಈ ಉಪದ್ರವ ಕಾಯಿಲೆಗಳೂ ಮರಣಗಳೂ ಇಷ್ಟು ಹೆಚ್ಚಾಗುವುದಕ್ಕೆ ಖಂಡಿತವಾದ ಕಾರಣಗಳನ್ನು ಸೂಚಿಸಿಲ್ಲ. ಆದರೆ ಅನೇಕ ಸಂದರ್ಭಗಳಲ್ಲಿ ಮನೆಯವರೂ ಗ್ರಾಮಸ್ಥರೂ ಪ್ಲೇಗ್ ಕಾಣಿಸಿಕೊಂಡ ಒಡನೆಯೇ ಮತ್ತು ಇಲಿ ಸತ್ತಿತೆಂದು ಕಂಡ ಕೂಡಲೇ ಮನೆಗಳನ್ನೂ ಗ್ರಾಮಗಳನ್ನೂ ಖಾಲಿಮಾಡಿ ಇತರ ಕಡೆಗಳಿಗೆ ಹೊರಟುಹೋದದ್ದೂ ಜೋಪಡಿಗಳಲ್ಲಿ ವಾಸಮಾಡುತ್ತಿದ್ದದ್ದೂ ವಿಚಾರಣೆಗೆ ಬಂದಿರುತ್ತದೆ. ಇದಲ್ಲದೆ ಅಂಥವರು ವಾಪಸು ಮನೆಗಳಿಗೆ ಬರುವುದಕ್ಕಿಂತ ಮೊದಲು ಸುಣ್ಣ ಹಚ್ಚುವುದು, ಶುದ್ಧಿ ಮಾಡುವುದು, ದ್ರಾವಕಗಳನ್ನು ಹಾಕಿ ತೊಳೆಯುವುದು, ಮೊದಲಾದ ಕಾರ್ಯಗಳನ್ನು ಮಾಡಿಯೇ ಇರುತ್ತಾರೆ. ಇದಲ್ಲದೆ ಸರ್ಕಾರದವರು ಹೆಲ್ತ್ ಕ್ಯಾಂಪುಗಳನ್ನು ಕಟ್ಟಿಕೊಟ್ಟಿರುವ ಕಡೆಗಳಲ್ಲಿ ಜನರು ಬೇಗನೆ ಹೋಗಿ ವಾಸಿಸಲಾರಂಭಿಸಿದರು. ಕೆಲವು ಕಡೆಗಳಲ್ಲಿ ಪ್ಲೇಗ್ ಸೋಂಕು ಉಂಟಾದ ಗ್ರಾಮಗಳಲ್ಲಿ ಜನರು ಬಹಳ ದೂರ ಹೋಗಿ ವಾಸಮಾಡದೆ ರಸ್ತೆಯ ಆಚೇ ಪಕ್ಕದಲ್ಲೇ ಗುಡಿಸಲುಗಳನ್ನು ಹಾಕಿಕೊಂಡು ವಾಸಮಾಡುತ್ತಾರೆಂದು ತಿಳಿದುಬರುವುದು. ಈ ರೀತಿ ಊರುಬಿಟ್ಟು ಹೋಗೋಣದರಿಂದ ಪ್ರಯೋಜನವಾಗಲಾರದು. ಆದಕಾರಣ ಊರಿಗೂ ಗ್ರಾಮಕ್ಕೂ ಗುಡಿಸಲು ಹಾಕಿಸಿಕೊಳ್ಳುವ ಸ್ಥಳಕ್ಕೂ ಕನಿಷ್ಠಪಕ್ಷ ಎಷ್ಟು ದೂರವಿರಬೇಕೋ ಅದನ್ನು ಸ್ಯಾನಿಟರಿ ಕಮಿಷನರವರು ಗೊತ್ತುಮಾಡಿ, ಎಲ್ಲಾ ಡಿಸ್ಟ್ರಿಕ್ಟ್ ಅಧಿಕಾರಿಗಳೂ ತಿಳಿಯಪಡಿಸಬೇಕಾಗಿದೆ. ಇದಲ್ಲದೆ ಇಲಿ ಹೆಗ್ಗಣಗಳನ್ನು ಕೊಂದುಹಾಕುವ ಭಾಗದಲ್ಲೂ ಜನರು ಪ್ಲೇಗ್ ತಡೆಯುವ ಸಿಡುಬನ್ನು ಹಾಕಿಸಿಕೊಳ್ಳುವ ಭಾಗದಲ್ಲೂ ಎಲ್ಲಾ ಇಲಾಖೆಗಳ ಸ್ಥಳಾಧಿಕಾರಿಗಳೂ ಏಕೀಭವಿಸಿ ಕಾರ್ಯಗಳನ್ನು ನಡಿಸುವುದು ಅಗತ್ಯವಾಗಿದೆ.

ಪ್ಲೇಗ್ ಕಾಯಿಲೆಯವರನ್ನು ಇಟ್ಟು ಇಲಾಜು ಮಾಡುವುದಕ್ಕೆ ಬೆಂಗಳೂರಿನಲ್ಲೂ ಕೋಲಾರ್ ಚಿನ್ನದ ಗಣಿಗಳಲ್ಲೂ ಸ್ಪೆಷಲ್ ಆಸ್ಪತ್ರೆಗಳಿರುವುವಷ್ಟೆ. ಇವುಗಳಲ್ಲಿ ದಾಖಲಾದ ರೋಗಿಗಳ ಪೈಕಿ ಶೇಕಡಾ ೩೭.೧೨ ಮತ್ತು ೪೭.೬೪ ಜನರಂತೆ ಬದುಕಿಕೊಂಡಿದ್ದಾರೆಂದು ತಿಳಿಯುವುದು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ, ಮುಂದೆ ಹೇಳುವ ವಿಷಯಗಳನ್ನು ಚರ್ಚಿಸಿ ತೀರ್ಮಾನಮಾಡಿದರು. ಆ ಪೈಕಿ ಮುಖ್ಯವಾದವುಗಳು ಯಾವುವೆಂದರೆ—

ಬಲಾತ್ಕಾರದಿಂದ ಸಿಡುಬು ಹಾಕುವುದು.

ಮೈಸೂರು ಪಟ್ಟಣದಲ್ಲಿ ದೇವೀ ಸಿಡುಬನ್ನು ಪ್ರಜೆಗಳಿಗೆ ಬಲಾತ್ಕಾರದಿಂದ ಹಾಕಬೇಕಾಗಿದೆ. ಎಷ್ಟು ದಿನಗಳ ವರಿಗೆ ಈ ಕಾನೂನನ್ನು ಜಾರಿಯಲ್ಲಿಟ್ಟಿರಬಹುದು ಎಂದು ಸರ್ಕಾರದವರು ಮ್ಯುನಿಸಿಪಲ್ ಕೌನ್ಸಿಲರುಗಳ ಅಭಿಪ್ರಾಯವನ್ನು ಕೇಳಿದ್ದರು. ಹೀಗೆ ಬಲಾತ್ಕಾರಮಾಡಿ ಮಕ್ಕಳಿಗೂ, ದೊಡ್ಡವರಿಗೂ ಒಂದಾವರ್ತಿಯಾದರೂ ಹಾಕಿಸುವುದು ಅವಶ್ಯವೆಂತಲೂ, ಪರೀಕ್ಷಾರ್ಥವಾಗಿ ಮೊದಲು ಈ ಬಲಾತ್ಕಾರದ ಕಾನೂನನ್ನು ಒಂದು ವರುಷ ಅಂದರೆ ೧೯೦೮ ನೇ ಏಪ್ರಿಲ್ ೧ ರಿಂದ ೧೯೦೯ ನೇ ಮಾರ್ಚ್ ೩೧ ರ ವರೆಗೆ ಜಾರಿಯಲ್ಲಿ ಇಡಬಹುದೆಂತಲೂ ಕೌನ್ಸಿಲರುಗಳು ಅಭಿಪ್ರಾಯಪಟ್ಟರು.

ದೇವಸ್ಥಾನಕ್ಕೆ ಸ್ಥಳ ಬೇಕು.

ಮೈಸೂರು ಕೆಂಪನಂಜಮ್ಮಣ್ಣಿ ಅಗ್ರಹಾರದಲ್ಲಿರುವ ಪಿ ಶ್ರೀನಿವಾಸಾಚಾರ್ಯರೆಂಬುವರು ಶ್ರೀಮನ್ಮಹಾರಾಜರವರಿಗೆ ಒಂದು ಅರ್ಜಿಯನ್ನು ಬರೆದುಕೊಂಡು, ಶ್ರೀರಾಮದೇವರ ಹೆಸರಿನಲ್ಲಿ ಒಂದು ದೇವಸ್ಥಾನವನ್ನು ಕಟ್ಟುವುದಕ್ಕೆ ಬಂಡೀಕೇರಿಯಲ್ಲಾಗಲಿ ಓಲಗದಕೇರಿಯಲ್ಲಾಗಲಿ ೧,೫೦೦ ಚದರಡಿಯಷ್ಟು ಖಾಲಿ ಜಾಗವನ್ನು ಸ್ವಲ್ಪ ಮೊಬಲಗನ್ನು ಕೊಡಿಸಿಕೊಡಬೇಕೆಂತಲೂ, ದೇವಸ್ಥಾನವನ್ನು ಕಟ್ಟುವುದಕ್ಕೂ ಅದರ ಪಡಿತರ ದೀಪಾರಾಧನೆಗಳಿಗೂ ಯಾವ ಸಹಾಯವನ್ನೂ ಅಪೇಕ್ಷಿಸದೆ ತಾವೇ ನಡಿಸಿಕೊಂಡು ಬರುತ್ತೇವೆಂತಲೂ ಕೇಳಿಕೊಂಡಿದ್ದರು. ಈ ಅರ್ಜಿಯು ಇತ್ಯರ್ಥದ ಬಗ್ಗೆ ಮ್ಯುನಿಸಿಪಲ್ ಕೌನ್ಸಿಲಿಗೆ ಕಳುಹಿಸಲಾಯಿತು. ಕೌನ್ಸಿಲರುಗಳು ಈ ವಿಚಾರವನ್ನು ಕುರಿತು ಸ್ವಲ್ಪಹೊತ್ತು ಚರ್ಚೆಮಾಡಿ, ವೈಸ್ ಪ್ರಸಿಡೆಂಟರಿಗೆ ವಹಿಸಿ, ಅವರೇ ಆ ಆಚಾರ್ಯರನ್ನು ಮೊದಲು ಕರೆಸಿಕೊಂಡು, ಅವರ ಆಶಯವನ್ನೆಲ್ಲಾ ಸವಿಸ್ತಾರವಾಗಿ ತಿಳಿದು, ಕೌನ್ಸಿಲಿಗೆ ರಿಪೋರ್ಟು ಮಾಡಬೇಕೆಂದು ಇತ್ಯರ್ಥಮಾಡಿದರು.

ನೀರಿನ ಸರ್ಬರಾಜು

ರಾಜಧಾನಿಯಲ್ಲಿ ಬೇರೆ ಬೇರೆ ಮೊಹಲ್ಲೆಗಳಲ್ಲಿ ಪುಣ್ಯವಂತರು ಧರ್ಮಕ್ಕಾಗಿ ನೀರಿನ ಕೊಳಾಯಿಗಳನ್ನು ಕಟ್ಟಿಸಿಕೊಟ್ಟಿದ್ದಾರೆಂತಲೂ ಈ ಕೊಳಾಯಿಗಳನ್ನು ನೀರಿನ ಇಲಾಖೆಯವರು ಕಿತ್ತು ನೀರು ನಿಲ್ಲಿಸಿ ಧರ್ಮಕ್ಕೆ ಲೋಪಮಾಡುತ್ತಿದ್ದಾರೆಂತಲೂ ಮೆ|| ಮಾದಪ್ಪನವರು, ಮೆ|| ಪಂಡಿತರೂ ಸೂಚಿಸಿದರು. ಮೆ|| ರಂಗಸ್ವಾಮಯ್ಯಂಗಾರ್ಯ ಮೊದಲಾದ ಇತರ ಕೌನ್ಸಿಲರುಗಳೂ ಇಂಥಾ ಅಕ್ರಮಗಳನ್ನು ತಡೆಯಬೇಕೆಂದು ಅಭಿಪ್ರಾಯಪಟ್ಟರು. ಕಡೆಗೆ ಇನ್ನುಮೇಲೆ ನೀರಿನ ಕೊಳಾಯಿಗಳನ್ನು ಸ್ಥಳದಿಂದ ಸ್ಥಳಕ್ಕೆ ಕಿತ್ತು ಕಟ್ಟಬೇಕಾದರೂ, ನೀರು ನಿಲ್ಲಿಸಬೇಕಾದರೂ, ಹೊಸ ಕೊಳಾಯಿಗಳನ್ನು ಕಟ್ಟಬೇಕಾದರೂ ನೀರಿನ ಇಲಾಖೆಯವರು ಮೊದಲೇ ಮ್ಯುನಿಸಿಪಲ್ ಕೌನ್ಸಿಲಿಗೆ ತಿಳಿಸಿ ಅವರ ಅಭಿಪ್ರಾಯದಂತೆ ನಡೆಯಬೇಕೆಂದು ತೀರ್ಮಾನವಾಯಿತು. ಮತ್ತು ಮೇಲ್ಕಂಡ ಧರ್ಮದ ಕೊಳಾಯಿಗಳನ್ನು ಎಲ್ಲೆಲ್ಲಿ ನಿಲ್ಲಿಸಿರುತ್ತಾರೋ ಅದನ್ನೆಲ್ಲಾ ಒಂದು ಪಟ್ಟಿಮಾಡಿ, ಪ್ರೆಸಿಡೆಂಟರಿಗೆ ಕಳುಹಿಸಿದಲ್ಲಿ ಅವರು ಆ ವಿಷಯದಲ್ಲಿ ಕ್ರಮವಾದ ಹುಕುಂ ಕೊಟ್ಟು ಸರಿಪಡಿಸುವುದಾಗಿ ತಿಳಿಸಿದರು.

ರಾಜಧಾನಿಯಲ್ಲಿ ನೀರಿನ ತೆರಿಗೆಯನ್ನು ಮನೆಗೆ ನಲ್ಲಿ ಇಡಿಸಿಕೊಂಡಿರತಕ್ಕವರು ವಿನಹಾ ಇತರ ಪ್ರಜೆಗಳ್ಯಾರೂ ಕೊಡುವುದಿಲ್ಲ. ಪ್ರಜೆಗಳಿಗೆಲ್ಲಾ ಒಂದೇ ಸಮನಾಗಿ ನೀರಿನ ತೆರಿಗೆ ವಿಧಿಸಿ ವಸೂಲ್ಮಾಡಬೇಕೆಂದು ಗವರ್ನಮೆಂಟಿನಿಂದ ಹುಕುಂ ಬಂದಿತ್ತು. ಇದನ್ನು ಮ್ಯುನಿಸಿಪಲ್ ಸಬ್ ಕಮಿಟಿ ಮೆಂಬರುಗಳು ಚರ್ಚಿಸಿ, ರಾಜಧಾನಿಗೆ ಈಗ ನೀರು ಸಮರ್ಪಕವಾಗಿ ಅವಿಚ್ಛಿನ್ನವಾಗಿ ಸರಬರಾಯಿ ಆಗುತ್ತಾ ಇಲ್ಲವೆಂತಲೂ, ವಿದ್ಯುಚ್ಛಕ್ತಿಯ ಸಹಾಯದಿಂದ ಬೆಳಗೊಳದ ಇಂಜಿನುಗಳು ನೀರು ಎತ್ತಿ ಕಳುಹಿಸುವವರೆಗೂ, ಕೆರೆಯಲ್ಲೂ ಲೋಪವೂ ಇಲ್ಲದೆ ನೀರು ಸರಬರಾಯಿ ಆಗುತ್ತದೆ. ಖಚಿತವಾದ ಮೇಲೆ ಪ್ರಜೆಗಳಿಗೆಲ್ಲಾ ನೀರಿನ ತೆರಿಗೆಯನ್ನು ಹಾಕಿ ವಸೂಲ್ಮಾಡಬಹುದೆಂತಲೂ ರಿಪೋರ್ಟು ಬರೆದು ಕಳುಹಿಸಿದರು. ಮ್ಯುನಿಸಿಪಲ್ ಕೌನ್ಸಿಲರುಗಳು ಆ ರಿಪೋರ್ಟ್ ಸರಿಯೆಂದು ಅದರಂತೆ ಒಪ್ಪಿ ತೀರ್ಮಾನಮಾಡಿರುತ್ತಾರೆ.

ಆಕ್ಟ್ರಾಯಿ ಸುಂಕಗಳು.

ಹೊರಗಿನಿಂದ ರಾಜಧಾನಿಗೆ ಬರತಕ್ಕ ಅನೇಕ ಸರಕುಗಳ ಮೇಲೆ ಅಂದರೆ ಬೆಣ್ಣೆ, ತುಪ್ಪ, ಸಕ್ಕರೆ, ಬೆಲ್ಲ, ಎಣ್ಣೆ, ಎಣ್ಣೆಬೀಜಗಳು, ಬಟ್ಟೆಗಳು, ಕೀಮೆಯೆಣ್ಣೆ, ಹೊಗೇಸೊಪ್ಪು, ವೀಳ್ಯದೆಲೆ, ತೆಂಗಿನಕಾಯಿ, ಎಳನೀರು, ಸಾಗುವಾನಿ, ಕುರಿ, ಆಡು ಈ ಮೊದಲಾದ ಪದಾರ್ಥ ಮತ್ತು ಪ್ರಾಣಿಗಳ ಮೇಲೆ ಆಕ್ಟ್ರಾಯಿ ಸುಂಕವನ್ನು ವಸೂಲ್ಮಾಡುತ್ತಿದ್ದಾರೆ. ಈ ಪೈಕಿ ಕೆಲವನ್ನು ಜಾರಿಯಲ್ಲಿಟ್ಟುಕೊಂಡು, ಉಳಿದವುಗಳಿಗೆಲ್ಲಾ ಸುಂಕಹಾಕುವುದನ್ನು ಬಿಟ್ಟುಬಿಡಬೇಕೆಂದು ಕೆಲವು ಮೆಂಬರುಗಳು ಸೂಚಿಸಿದರು. ಇವರ ಅಭಿಪ್ರಾಯದ ಪ್ರಕಾರ ಸಾಗುವಾನಿ, ತುಪ್ಪ, ಕೀಮೆಯೆಣ್ಣೆ, ಜವಳಿ, ಇವುಗಳಿಗೆ ಮಾತ್ರ ಸುಂಕ ಹಾಕಬೇಕು. ಟೋಲ್ ಗೇಟುಗಳ ಮೂಲಕ ಪಟ್ಟಣಕ್ಕೆ ಬರತಕ್ಕ ಖಾಲಿ ಗಾಡಿಗೆ ೨ ಆಣೆ, ಭರ್ತಿಗಾಡಿಗೆ ೪ ಆಣೆ, ಈ ಪ್ರಕಾರ ಹೆಚ್ಚು ಮಾಡಿ ವಸೂಲ್ಮಾಡುವುದು. ಆಡು, ಕುರಿ, ಮೇಕೆಗಳಿಗೆ ಕಸಾಬ್ ಖಾನೆಯ ಬಳಿ ತೆರಿಗೆ ವಸೂಲ್ಮಾಡುವುದು. ಇಷ್ಟು ಇಟ್ಟುಕೊಂಡರೆ ಸಾಕಾಗಿದೆ. ಈಗ ಬಡಬಗ್ಗರನ್ನು ಚಿಲ್ಲರೆ ನೌಕರರು ಹಿಂಸಿಸಿ ದುಡ್ಡು ಕಿತ್ತುಕೊಳ್ಳುವುದಕ್ಕೆ ಅವಕಾಶ ಹೆಚ್ಚಾಗಿದೆ. ಇದು ತಪ್ಪಿಹೋಗುವುದು. ಈ ಸುಂಕಗಳಿಂದ ಬಡಬಗ್ಗರಿಗೆ ತುಂಬಾ ಭಾರವಾಗಿದೆ. ಸುಂಕದ ಬಾಬುಗಳು ಕೆಲವು ಮಾತ್ರವೇ ಇದ್ದರೆ ಈಗಿನಷ್ಟು ಸಿಬ್ಬಂದಿ ಅವಶ್ಯವಿಲ್ಲ. ಈ ರೀತಿ ಸುಂಕದ ಬಾಬುಗಳನ್ನು ಬದಲಾವಣೆ ಮಾಡಿದಾಗ್ಯೂ ವರುಷದ ಆಕ್ಟ್ರಾಯಿ ಹುಟ್ಟುವಳಿಯೇನೂ ಕಡಮೆಯಾಗುವುದಿಲ್ಲ. ಈಗ ಸಾಲು ೧ ಕ್ಕೆ ೧,೫೦,೦೦೦ ರೂಪಾಯಿ ಹುಟ್ಟುವಳಿ ಆಗುವ ಸ್ಥಳದಲ್ಲಿ ೧,೩೩,೦೦೦ ರೂಪಾಯಿ ಉತ್ಪತ್ತಿಯಾದೀತು ಎಂಬೀ ರೀತಿಯಾಗಿ ಕೆಲವು ಮೆಂಬರುಗಳು ಸೂಚಿಸಿದರು. ಮೆ|| ರಂಗೈಯಂಗಾರ್ರು—ಈ ಆಕ್ಟ್ರಾಯಿ ಬಾಬುಗಳೆಲ್ಲಾ ಅನೇಕ ವರ್ಷದಿಂದ ಜಾರಿಯಲ್ಲಿರುತ್ತವೆ. ಇದನ್ನು ಏಕಾಏಕಿ ಬದಲಾಯಿಸಿಬಿಡುವುದು ಸರಿಯೆಂದು ಕಾಣುವುದಿಲ್ಲ. ಮ್ಯುನಿಸಿಪಾಲಿಟಿಯವರು ಈ ಸುಂಕಗಳನ್ನು ವಜಾ ಮಾಡಿಬಿಟ್ಟರೆ ಅದರಿಂದ ಪುರವಾಸಿಗಳಿಗೇನಾದರೂ ಪ್ರಯೋಜನವಾಗುವುದೇ? ಅಥವಾ, ಧಾರಣೆಗಳು ಈಗಿನಂತೆಯೇ ಇದ್ದು ಹೊರಗಿನ ವ್ಯಾಪಾರದಾರರಿಗೆ ಮಾತ್ರ ಅನುಕೂಲವಾಗುವುದೇ? ಎಂಬೀ ವಿಚಾರವನ್ನೆಲ್ಲಾ ಪರ್ಯಾಲೋಚಿಸಬೇಕು. ಸಾಮಾನ್ಯವಾಗಿ ಒಂದು ಸಲ ಧಾರಣೆ ಏರಿಹೋದರೆ ಅದು ಹಾಗೇ ಶಾಶ್ವತವಾಗಿ ನಿಂತುಬಿಡುತ್ತದೆ. ಸ್ವಲ್ಪ ಸುಂಕ ತೆಗೆದುಹಾಕಿದರೂ ಆ ಧಾರಣೆ ಇಳಿಯುವುದಿಲ್ಲ. ಇದು ನಮ್ಮೆಲ್ಲರಿಗೂ ಅನುಭವಕ್ಕೆ ಬಂದಿರುವ ವಿಚಾರವೇ ಆಗಿದೆ ಎಂಬೀ ರೀತಿಯಾಗಿ ಹೇಳಿದರು. ಇತರ ಕೌನ್ಸಿಲರುಗಳೂ ಇದೇ ರೀತಿ ಅಭಿಪ್ರಾಯಪಟ್ಟದ್ದರಿಂದ ಈ ಬದಲಾವಣೆಯ ವಿಚಾರವನ್ನು ಇನ್ನು ಕೆಲವು ಕಾಲದ ನಂತರಕ್ಕೆ ಆಲೋಚನೆಯಲ್ಲಿಟ್ಟಿರಬೇಕೆಂದು ತೀರ್ಮಾನವಾಯಿತು.

ಪಟ್ಟಣದ ಆರೋಗ್ಯವಿಚಾರವು

ಹೆಲ್ತ್ ಆಫೀಸರು ಪಟ್ಟಣದ ಆರೋಗ್ಯವಿಚಾರವನ್ನು ಕುರಿತು ಒಂದು ರಿಪೋರ್ಟು ಬರೆದು, ಅದರಲ್ಲಿ ಕಂಡ ವಿಚಾರಗಳನ್ನು ಮ್ಯುನಿಸಿಪಲ್ ಕೌನ್ಸಿಲರುಗಳು ಪರ್ಯಾಲೋಚಿಸಿ, ಆರೋಗ್ಯಾಭಿವೃದ್ಧಿಗೆ ಸಂಬಂಧಪಟ್ಟ ವಿಧಾನಗಳನ್ನು ಸೂಚಿಸಬೇಕೆಂಬದಾಗಿ ಸೂಚಿಸಿದರು. ಅವರ ರಿಪೋರ್ಟಿನಲ್ಲಿ ಕಾಣಿಸಿದ ಮುಖ್ಯವಿಷಯಗಳ್ಯಾವವೆಂದರೆ—ಪಟ್ಟಣದಲ್ಲಿ ಶೋಧಿಸಿದ ನೀರು ಇದೆ ಎಂದು ಹೆಸರು. ಆದರೆ ಆ ನೀರು ಅಲ್ಪಪ್ರಯೋಜನವಾದದ್ದು. ವಿದ್ಯುಚ್ಛಕ್ತಿಯ ದೀಪಗಳು ಬರುವವು. ತೋಟಕ್ಕೆ ಎಲ್ಲಾ ರಮ್ಯವೇ ಹೊರತು ಪಟ್ಟಣದ ಪ್ರಜೆಗಳಲ್ಲಿರತಕ್ಕ ಕೊಳಕಿನ ಅಭ್ಯಾಸಗಳೂ ನಾನಾ ರೋಗಗಳು ಹುಟ್ಟುವುದಕ್ಕೆ ಅವಕಾಶಗಳೂ ಸ್ವಲ್ಪವೂ ಕಡಮೆಯಾಗಲಿಲ್ಲ. ರಾಜಧಾನಿಯಲ್ಲಿ ೧೨,೯೫೦ ವಾಸದ ಮನೆಗಳಿರುವವು. ಈ ಮನೆಗಳ ಪಾಯಖಾನೆ ಕೊಳಕನ್ನು ಬಳಿಯುವುದಕ್ಕೆ ಮನೆಗಳವರೇ ಸ್ವಂತವಾಗಿ ಗುಡಸರವನ್ನು ನೇಮಿಸಿಕೊಂಡಿದ್ದಾರೆ. ಅದು ಚೊಕ್ಕಟವಾಗುವುದಿಲ್ಲ. ಮನೆಗಳಲ್ಲೇ ಕೊಳೆತು ನಾತಬಡಿದು ರೋಗೋತ್ಪತ್ತಿಗೆ ಕಾರಣವಾಗುತ್ತದೆ. ಒಳ್ಳೆಯತಕ್ಕವರು ಪಾಯಖಾನೆಯನ್ನು ರೊಚ್ಚನ್ನು ಮನೆಗಳ ಪಕ್ಕದಲ್ಲಿರುವ ಮ್ಯುನಿಸಿಪಲ್ ಕಸರಾ ಗುಂಡಿಗಳಿಗೆ ತಂದು ಸುರಿಯುತ್ತಾರೆ. ೫,೦೦೦ ಮನೆಗಳಲ್ಲಿ ಪಾಯಖಾನೆಗಳೇ ಇಲ್ಲ. ೬೦೦ ಮನೆಗಳವರು ಗುಂಡಿಗಳನ್ನೋ ಬಾವಿಗಳನ್ನೋ ಮಾಡಿಕೊಂಡಿದ್ದಾರೆ. ದಿನವೂ ಗುಡಿಸುವುದೇ ಇಲ್ಲ. ನಾಲ್ಕಾರು ತಿಂಗಳ ವಿನಃ, ಕೆಲವು ಸಂದರ್ಭಗಳಲ್ಲಿ ವರುಷಗಟ್ಟಲೆ ಪಾಯಖಾನೆಯನ್ನು ಆ ಗುಂಡಿಗಳಲ್ಲಿ ಇಟ್ಟುಕೊಂಡಿದ್ದು ಬಿಕರಿಮಾಡುತ್ತಾರೆ. ಅನೇಕಾನೇಕ ಜನರು ಬೈಲು ಮತ್ತು ಬೀದಿಗಳಲ್ಲೂ, ತೋಟ ಗೋಡೆ ಮೊದಲಾದ ಮರೆಯಾದ ಸ್ಥಳಗಳಲ್ಲೂ ಪಾಯಖಾನೆಮಾಡಿ, ಪ್ರದೇಶಾರೋಗ್ಯವನ್ನು ಕೆಡಿಸುತ್ತಾರೆ. ಈ ೬೦೦ ಮನೆಗಳ ಪಾಯಖಾನೆ ನಿಷ್ಫಲವಾಗಿ ದಿನಾ ಸಾಗಿಸಲು ಅವಕಾಶವಿಲ್ಲದೆ ಇರೋಣದರಿಂದಲೂ, ಗುಂಡಿ ಬಾವಿಗಳಲ್ಲಿ ಭರ್ತಿಮಾಡಿಟ್ಟು ಕೊಳೆಯೋಣದರಿಂದಲೂ, ಬೈಲುಸ್ಥಳಗಳೆಲ್ಲಾ ಗಲೀಜಾಗೋಣದರಿಂದಲೂ, ವಾಂತಿಭೇದಿ, ರಕ್ತಭೇದಿ, ಆಮಶಂಕೆ, ವಿಷಮಶೀತಜ್ವರ, ಶಿರೋವೇದನೆ, ಹೃದ್ರೋಗವೇ ಮೊದಲಾದ ಅನೇಕ ವ್ಯಾಧಿಗಳು ಪ್ರಾಪ್ತವಾಗಿ ಪ್ರಜೆಗಳನ್ನು ಕಾಡಿಸುವುದಕ್ಕೂ ಮರಣಸಂಖ್ಯೆಯನ್ನು ಹೆಚ್ಚಿಸುವುದಕ್ಕೂ ಬಹಳ ಸಹಾಯವಾಗಿದೆ. ಈ ಪಾಯಖಾನೆ ನಿತ್ಯವೂ ಸಾಗಿಸೋಗುವಂತೆ ಮೊದಲುಮಾಡಬೇಕಾಗಿದೆ. ಪ್ರತಿ ಮನೆಗೂ ಒಂದು ಯೋಗ್ಯವಾದ ಹಿತ್ತಲು ಮನೆಯೂ, ಪಾಯಖಾನೆ ಸಾಗಿಸೋಗುವುದಕ್ಕೆ ಕನ್ಸರ್ವೆನ್ಸಿ ಗಲ್ಲಿಯೂ ಏರ್ಪಾಡುಮಾಡಿಕೊಡಬೇಕು ಎಂಬೀ ರೀತಿಯಾಗಿ ಹೆಲ್ತ್ ಆಫೀಸರು ರಿಪೋರ್ಟು ಬರೆದಿದ್ದರು. ಮ್ಯುನಿಸಿಪಲ್ ಕೌನ್ಸಿಲರುಗಳು ಈ ವಿಚಾರವು ಬಹು ಮುಖ್ಯವಾದದ್ದೆಂತಲೂ, ಬಡವರ ಮನೆಗಳೂ ಭಾಗ್ಯವಂತರ ಮನೆಗೂ ಯೋಗ್ಯವಾದ ಸುಲಭವಾದ ಎರಡು ವಿಧದ ಪಾಯಖಾನೆ ಮನೆಗಳ ನಮೂನೆಗಳನ್ನು ಹೆಲ್ತ್ ಆಫೀಸರು ತಯಾರುಮಾಡಿ ಮ್ಯುನಿಸಿಪಲ್ ಕೌನ್ಸಿಲಿಗೆ ಕಳುಹಿಸಬೇಕೆಂತಲೂ, ಆ ನಮೂನೆಯಂತೆ ಎಲ್ಲಾ ಮನೆಗಳವರೂ ಹಿತ್ತಲು ಮನೆಗಳನ್ನು ಕಟ್ಟಿಸಿಕೊಳ್ಳಬೇಕೆಂದು ಬಲಾತ್ಕಾರಮಾಡುವುದಕ್ಕೆ ಅನುಕೂಲವಾದ ಕಾನೂನನ್ನು ಮಸೂದೆಮಾಡಿ ಮ್ಯುನಿಸಿಪಲ್ ಕೌನ್ಸಿಲಿಗೆ ಹಾಜರುಮಾಡಬೇಕೆಂತಲೂ ತೀರ್ಮಾನಿಸಿದರು.

ಇತರ ವಿಷಯಗಳು

ಬೆಳಗೊಳದಲ್ಲಿ ನೀರು ಎತ್ತುವ ಕೆಲಸದಲ್ಲಿರುವ ನೌಕರರನನೇಕರನ್ನು ಆಗಾಗ್ಗೆ ಅವರ ಆರೋಗ್ಯಕ್ಕೋಸ್ಕರ ಬೇರೆ ಕಡೆಗೆ ವರ್ಗ ಮಾಡಬೇಕಾಗಿರೋಣದರಿಂದ ಅಂಥಾ ನೌಕರರಿಗೆ ಪೆನ್ಷನ್ ಕೊಡಬೇಕಾಗುವ ಸಂದರ್ಭದಲ್ಲಿ ಮ್ಯುನಿಸಿಪಾಲಿಟಿಯಿಂದ ಆ ಪೆನ್ಷನ್ ಮೊಬಲಗನ್ನು ಕೊಡಬಹುದೇ ಎಂದು ಗವರ್ನಮೆಂಟಿನವರು ಪ್ರಶ್ನೆ ಮಾಡಿದ್ದರು. ಮ್ಯುನಿಸಿಪಲ್ ಕೌನ್ಸಿಲರುಗಳು ಈ ವಿಷಯವನ್ನು ಚರ್ಚೆ ಮಾಡಿ, ಎಷ್ಟು ಜನ ನೌಕರರಿಗೆ ಪೆನ್ಷನ್ ಕೊಡಬೇಕಾಗುವುದೋ ತಿಳಿಯಬೇಕೆಂದು ಅಪೇಕ್ಷಿಸಿದರು. ಈ ವಿಷಯವನ್ನು ಗವರ್ನಮೆಂಟಿಗೆ ಬರೆದು ಕೇಳಿದಾರೆ.

ಸುಬ್ರಾಯನ ಕೆರೆಯಲ್ಲಿ ಪ್ರಜೆಗಳಿಗೆ ಅನುಕೂಲವಾದ ಒಂದು ಸ್ನಾನಘಟ್ಟವನ್ನು ಕಟ್ಟಿಸಿಕೊಡಬೇಕೆಂಬ ವಿಷಯವನ್ನು ಮ್ಯುನಿಸಿಪಲ್ ಮ್ಯಾನೇಜಿಂಗ್ ಕಮಿಟಿಯವರು ಚರ್ಚೆಯಿಂದ ಗೊತ್ತುಮಾಡಿ, ಸ್ಯಾಂಕ್ಷನ್ ಬಗ್ಗೆ ಬೋರ್ಡಿಗೆ ತರಬೇಕೆಂದು ತೀರ್ಮಾನಮಾಡಿದರು.

ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸವು.

೧೯೦೬—೦೭ ನೇ ಸಾಲಿನ ರಿಪೋರ್ಟು.

ಗವರ್ನಮೆಂಟಿನ ಅಭಿಪ್ರಾಯ.

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್‌ರವರು ಕಳೆದ ೧೯೦೭ ನೆ ಜೂನಿಗೆ ಆಖೈರಾದ ಒಂದು ಸಾಲಿನ ರಿಪೋರ್ಟನ್ನು ಕಳೆದ ಡಿಸೆಂಬರಿನಲ್ಲಿ ಗವರ್ನಮೆಂಟಿಗೆ ಕಳುಹಿಸಿ ಕೊಟ್ಟರು. ಗವರ್ನಮೆಂಟಿನವರು ಅದನ್ನೆಲ್ಲಾ ಪರಾಂಬರಿಸಿ ಕಳೆದ ಮಾರ್ಚಿ ತಾರೀಖು ೧೩ ರಲ್ಲಿ ಅದರ ಮೇಲೆ ಬರೆದಿರುವ ಹು-

ಯು ಈ ವಾರ ನಮ್ಮ ಕೈಗೆ ಬಂದಿರುತ್ತದೆ ವಾಚಕರ ತಿಳುವಳಿಕೆಗಾಗಿ ಆ ಪುಸ್ತಕದಲ್ಲಿ ಕಂಡ ಮುಖ್ಯ ವಿಷಯಗಳನ್ನು ಇಲ್ಲಿ ವಿವರಿಸುವೆವು.

ಸ್ಕೂಲುಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆಗಳು

ಕಳೆದ ೧೯೦೫—೦೬ನೇ ಸಾಲಿನಲ್ಲಿ ಸ್ಕೂಲುಗಳ ಸಂಖ್ಯೆಯೂ ವಿದ್ಯಾರ್ಥಿಗಳ ಸಂಖ್ಯೆಯೂ ಬಹಳಮಟ್ಟಿಗೆ ಹೆಚ್ಚಿತು ಆದರೆ ಕಳೆದ ೧೯೦೬—೦೭ನೆ ಸಾಲಿನಲ್ಲಿ ಅದೇ ಪ್ರಕಾರ ಅವು ಅಭಿವೃದ್ಧಿಹೊಂದಲಿಲ್ಲ. ಪ್ಲೇಗ್ ಮೊದಲಾದ ಉಪದ್ರಗಳು ಪ್ರಬಲವಾಗಿದ್ದದ್ದೇ ಇದಕ್ಕೆ ಕಾರಣವಾಗಿದೆ. ಕಳೆದ ಸಾಲಿನಲ್ಲಿ ಪಬ್ಲಿಕ್ ಸ್ಕೂಲುಗಳೂ ಪಾಠಶಾಲೆಗಳೂ ೨,೨೭೦ ಇದ್ದದ್ದು ಈ ಸಾಲಿನಲ್ಲಿ ೨,೨೭೯ಕ್ಕೆ ಹೆಚ್ಚಿದವು. ಆದರೆ ಸಾಹುಕಾರಿ ಸ್ಕೂಲು ಪಾಠಶಾಲೆಗಳ ಸಂಖ್ಯೆಯು ೧,೮೨೨ ರಿಂದ ೧,೬೫೫ಕ್ಕೆ ಕಡಮೆಯಾಯಿತು ಈ ಪ್ರೈವೆಟ್ (ಸಾಹುಕಾರಿ) ವಿದ್ಯಾಶಾಲೆಗಳ ಲೆಕ್ಕಗಳೆಲ್ಲಾ ರೆವಿನ್ಯೂ ಇಲಾಖೆಯ ಮೂಲಕ ತಿಳಿದುಬರುತ್ತಿಂತಲೂ, ಆದಕಾರಣ ಈ ಸಂಖ್ಯೆಯು ಎಷ್ಟು ಮಟ್ಟಿಗೆ ಖರಾರುವಾಕ್ಕು ಎಂದು ನಂಬ ಬಹುದೋ ಹೇಳುವುದಕ್ಕಾಗುವುದಿಲ್ಲವೆಂತಲೂ ಇನ್ಸ್ಪೆಕ್ಟರ್ ಜನರಲ್‌ರವರು ತಿಳಿಸುತ್ತಾರೆ. ಇಂಥಾ ಪ್ರೈವೆಟ್ ಪಾಠಶಾಲೆಗಳಿಗೆ ಗವರ್ನಮೆಂಟಿನವರು ತುಂಬಾ ಪ್ರೋತ್ಸಾಹವನ್ನು ಕೊಟ್ಟು ಅವುಗಳ ಅಭಿವೃದ್ಧಿಯಲ್ಲೇ ಆಸಕ್ತರಾಗಿರೋಣವಿಂದ ಈ ವಿಧವಾದ ಪಾಠಶಾಲೆಗಳ ಪುರೋಭಿವೃದ್ಧಿಯ ವಿಷಯದಲ್ಲಿ ರೆವಿನ್ಯೂ ಮತ್ತು ವಿದ್ಯಾಭ್ಯಾಸದ ಇಲಾಖೆಗಳವರು ಏಕೀಭವಿಸಿ ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾಗಿರುತ್ತದೆ. ಪಬ್ಲಿಕ್ ಮತ್ತು ಪ್ರೈವೆಟ್ ಪಾಠಶಾಲೆಗಳಲ್ಲಿನ ಬಾಲಕ ಬಾಲಕಿಯರುಗಳ ಸಂಖ್ಯೆಯು ೧೯೦೫—೦೬ ರಲ್ಲಿ ೧,೨೩,೦೯೬ ಇದ್ದದ್ದು ೧೯೦೬—೦೭ ರಲ್ಲಿ ೧,೧೭,೯೫೦ ಕ್ಕೆ ಇಳಿದು ಹೋಯಿತು. ಅಂದರೆ ಈ ಸಂಸ್ಥಾನದ ಬಾಲಕರಲ್ಲಿ ೧೯೦೫—೦೬ ನೇ ಸಾಲಿನಲ್ಲಿ ಶೇಕಡಾ ೨೫.೦೭ ಮಂದಿಯೂ ಬಾಲಕಿಯರಲ್ಲಿ ಶೇಕಡಾ ೪.೮೬ ಮಂದಿಯೂ ವಿದ್ಯೆ ಕಲಿಯುತ್ತಿದ್ದರು, ೧೯೦೬—೦೭ನೆ ಸಾಲಿನಲ್ಲಿ ಶೇಕಡಾ ೨೩.೯೦ ಹುಡುಗರೂ, ೪.೬೬ ಹುಡುಗಿಯರೂ ವಿದ್ಯೆ ಕಲಿಯುತ್ತಿರುವಂತೆ ಕಡಮೆಯಾದರು

ವಿದ್ಯಾಭ್ಯಾಸಕ್ಕೆ ಆದ ಖರ್ಚು

ಮೈಸೂರು ಸರ್ಕಾರದವರು ೧೯೦೫-೦೬ ನೆ ಸಾಲಿನಲ್ಲಿ ವಿದ್ಯಾಭ್ಯಾಸದ ಇಲಾಖೆಯ ಮೂಲಕ ೧೩,೬೪,೯೩೧ ರೂಪಾಯಿ ಖರ್ಚು ಮಾಡಿದ್ದರು ಆದರೆ ೧೯೦೬-೦೭ ನೆ ಸಾಲಿನಲ್ಲಿ ೧೪,೪೪,೩೧೧ ರೂಪಾಯಿ ಖರ್ಚಾಗಿರುತ್ತದೆ ಯಾವ ಯಾವ ಬಾಬಿನಿಂದ ಈ ಹಣ ಕೊಡಲಾಯಿತೆಂದರೆ ಸ್ಟೇಟ್ ಫಂಡಿನಿಂದ ೮,೧೨,೮೬೬ ರೂ., ಲೋಕಲ್ ಫಂಡಿನಿಂದ ೨,೬೮,೧೮೭ ರೂ., ಮ್ಯುನಿಸಿಪಲ್ ಫಂಡಿನಿಂದ ೨೨,೮೦೩ ರೂ., ಸ್ಕೂಲು ಮತ್ತು ಪಾಠಶಾಲೆಗಳಲ್ಲಿ ವಸೂಲಾದ ಫೀಜಿನಿಂದ ೧,೫೭,೯೩೮ ರೂ., ಇತರ ಬಾಬುಗಳಿಂದ ೧,೮೭,೬೦೮ ರೂ., ಜುಮ್ಲಾ ರೂ ೧೪,೪೪,೩೧೧ ಖರ್ಚಾಯಿತು

ಇನ್ಸ್ಪೆಕ್ಟರುಗಳ ಕೆಲಸ ಸ್ಥಳ ಮೊದಲಾದವುಗಳನ್ನು ಈ ಸಾಲಿನಲ್ಲಿ ಕ್ರಮಪಡಿಸಲಾಯಿತು ಹಿಂದಿನ ಸಾಲುಗಳಿಗಿಂತಲೂ ಈ ಸಾಲಿನಲ್ಲಿ ಸ್ಕೂಲುಗಳ ಪರೀಕ್ಷೆಗಳು ವಿಶೇಷ ತೃಪ್ತಿಕರವಾಗಿ ನಡೆದವೆಂದು ಇನ್ಸ್ಪೆಕ್ಟರ್ ಜನರಲ್‌ರವರ ಮೂಲಕ ಗವರ್ನಮೆಂಟಿನವರು ತಿಳಿದು ಸಂತೋಷಪಡುತ್ತಾರೆ ೧೯೦೫-೦೬ ರಲ್ಲಿ ೩೪೯ ಸ್ಕೂಲುಗಳು ಇನ್ಸ್ಪೆಕ್ಷನ್ ಆಗದೆ ಉಳಿದಿದ್ದವು ಆದರೆ ಈ ಸಾಲಿನಲ್ಲಿ ೫೮ ಸ್ಕೂಲುಗಳು ವಿನಾ ಉಳಿದ ವಿದ್ಯಾಶಾಲೆಗಳನ್ನೆಲ್ಲಾ ಇನ್ಸ್ಪೆಕ್ಟರುಗಳು ಒಂದಾವರ್ತಿ ಮೇಲ್ವಿಚಾರಣೆ ನೋಡಿರುತ್ತಾರೆ

ಕಾಲೇಜುಗಳು.

ಕಾಲೇಜ್ ಎಂಬ ಶ್ರೇಷ್ಠವಿದ್ಯಾ ಪಾಠಶಾಲೆಗಳ ತರಗತಿಗಳಲ್ಲಿ ೪೧೨ ಮಂದಿ ವಿದ್ಯಾರ್ಥಿಗಳು ಕಲಿಯುತ್ತಿದ್ದರು, ಅಂದರೆ, ಹಿಂದಿನ ಸಾಲಿಗಿಂತ ೩೨ ಮಂದಿ ಹೆಚ್ಚು. ಬಿ. ಎ ಮತ್ತು ಎಫ್ ಎ. ಪರೀಕ್ಷೆಗಳ ಫಲಿತಾಂಶಗಳು ತೃಪ್ತಿಕರವಾಗಿದ್ದವು

ಮೈಸೂರು, ಬೆಂಗಳೂರು ಕಾಲೇಜುಗಳ ಸ್ಟೂಡೆಂಟ್ಸ್ ಹೋಂ (ವಿದ್ಯಾರ್ಥಿನಿಲಯ) ಗಳಲ್ಲಿ ಮೇಲ್ವಿಚಾರಣೆಯು ತೃಪ್ತಿಕರವಾಗಿತ್ತು, ಅವುಗಳಲ್ಲಿ ವಾಸಮಾಡಿಕೊಂಡು ಓದತಕ್ಕ ವಿದ್ಯಾರ್ಥಿಗಳ ಗುಣ ನಡತೆಗಳು ಕ್ರಮಪಡುವುದಕ್ಕೆ ತುಂಬಾ ಸಹಾಯವಾಯಿತು.

ಸೆಕೆಂಡರಿ ವಿದ್ಯಾಭ್ಯಾಸವು

ಸೆಕೆಂಡರಿ ವಿದ್ಯಾಭ್ಯಾಸದ ವಿಷಯದಲ್ಲಿ ಇನ್ಸ್ಪೆಕ್ಟರ್ ಜನರಲ್‌ರವರು ತಿಳಿಸಿರುವ ಸಂಗತಿಗಳು ಸಂತೋಷಕರವಾಗಿರುತ್ತವೆ ಹೈಸ್ಕೂಲುಗಳು ೧೫ ಇದ್ದದ್ದು ಈ ಸಾಲಿನಲ್ಲಿ ೧೬ಕ್ಕೆ ಹೆಚ್ಚಿದವು ಮಿಡಲ್ ಸ್ಕೂಲುಗಳ ಸಂಖ್ಯೆಯೂ ಕೂಡ ೨೭೩ ರಿಂದ ೨೮೦ ಆಗಿರುತ್ತವೆ ಹೈಸ್ಕೂಲ್ ತರಗತಿಗಳಲ್ಲಿ ಓದತಕ್ಕವರ ಸಂಖ್ಯೆಯು ೧,೮೫೮ಕ್ಕೂ ಮಿಡಲ್ ತರಗತಿಗಳ ವಿದ್ಯಾರ್ಥಿಗಳ ಸಂಖ್ಯೆಯು ೧೦,೮೦೧ಕ್ಕೂ ಹೆಚ್ಚಿರುತ್ತವೆ ೧೯೦೬ ನೇ ಇಸವಿಯಲ್ಲಿ ೧೫ ಸ್ಕೂಲುಗಳಿಂದ ವಿದ್ಯಾರ್ಥಿಗಳು ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹಣ ಕಟ್ಟಿದ್ದರು ಮೈಸೂರು ಮಹಾರಾಜಾ ಕಾಲೇಜು, ಚಿಕ್ಕಬಳ್ಳಾಪುರ, ಹಾಸನ, ಶಿವಮೊಗ್ಗೆ, ತುಂಕೂರು ಹೈಸ್ಕೂಲುಗಳೂ, ಮೈಸೂರು ಮರಿಮಲ್ಲಪ್ಪನವರ ಹೈಸ್ಕೂಲೂ ತೇರ್ಗಡೆಹೊಂದಿಸಿರುವ ಬಾಲಕರ ಸಂಖ್ಯೆಯು ಸಾಮಾನ್ಯವಾಗಿ ತೃಪ್ತಿಕರವಾಗಿದೆ ಸೆಂಟ್ರಲ್ ಕಾಲೇಜಿನ ಹೈಸ್ಕೂಲ್ ಶಾಖೆಯ ಫಲಿತಾಂಶವು ತೃಪ್ತಿಕರವಾಗಿಲ್ಲ ಚನ್ನಪಟ್ಟಣದ ಹೈಸ್ಕೂಲಿನಿಂದ ಕಳುಹಲ್ಪಟ್ಟ ೧೮ ಮಂದಿಯಲ್ಲಿ ಮೂವರು ಮಾತ್ರ ತೇರ್ಗಡೆ ಹೊಂದಿದಾರೆ ಮಿಷನ್ ಹೈಸ್ಕೂಲುಗಳು ಒಳ್ಳೇ ಸ್ಥಿತಿಗೆ ಬರಲಿಲ್ಲವೆಂದು ಸೂಚಿಸಲು ವಿಷಾದಿಸಬೇಕಾಗಿದೆ.

ಪ್ರೈಮರಿ ವಿದ್ಯಾಭಿವೃದ್ಧಿಯು

ಪ್ಲೇಗ್ ಉಪದ್ರವ ಅವಾಂತ್ರದಿಂದ ಪ್ರೈಮರಿ ವಿದ್ಯಾಭ್ಯಾಸಕ್ಕೆ ಬಹಳ ಅಡಚಣೆಯಾಯಿತು ಪಬ್ಲಿಕ್ ಮತ್ತು ಪ್ರೈವೆಟ್ ಪಾಠಶಾಲೆಗಳು ೩,೭೦೮ ರಿಂದ ಈ ಸಾಲಿನಲ್ಲಿ ೩,೫೬೫ಕ್ಕೆ ಇಳಿದವು. ವಿದ್ಯಾರ್ಥಿಗಳ ಸಂಖ್ಯೆಯೂ ಕೂಡ ೧,೦೭,೨೦೪ ರಿಂದ ೧,೦೨,೨೩೦ ಕ್ಕೆ ಕಡಮೆಯಾಗಿದೆ ಸ್ಕೂಲುಗಳ ಸಂಖ್ಯೆಯನ್ನು ಹೆಚ್ಚಿಸೋಣವೇ ಮೊದಲಾದ ಏರ್ಪಾಡುಗಳಿಂದ ಪ್ರೈಮರಿ ವಿದ್ಯಾಭ್ಯಾಸವನ್ನು ಕ್ರಮಪಡಿಸಬೇಕೆಂದು ಇನ್ಸ್ಪೆಕ್ಟರ್ ಜನರಲ್‌ರವರು ಸೂಚಿಸುತ್ತಾರೆ. ಇದು ಅವಶ್ಯವೆಂದು ಗವರ್ನಮೆಂಟಿನವರು ಒಪ್ಪಿಕೊಳ್ಳುವುದಲ್ಲದೆ ಆ ವಿಷಯದಲ್ಲಿ ಇನ್ಸ್ಪೆಕ್ಟರ್ ಜನರಲ್‌ರವರಿಂದ ಖಂಡಿತವಾದ ಸಲಹೆಗಳು ಬರುವುದನ್ನೇ ಎದುರುನೋಡುತ್ತಿದ್ದಾರೆ. ಈಚೆಗೆ ಗ್ರಾಮ ಸ್ಕೂಲುಗಳ ಅಪ್ಪರ್ ಪ್ರೈಮರಿ ತರಗತಿಗಳಲ್ಲಿ ಸ್ಕೂಲ್ ಫೀಜನ್ನು ಮಾಫ್ ಮಾಡಿದ್ದರಿಂದಲೂ ಗ್ರಾಮಪಾಠಶಾಲೆಗಳ ಉಪಾಧ್ಯಾಯರ ಸಂಬಳವನ್ನು ಬಡ್ತಿ ಮಾಡಿದ್ದರಿಂದಲೂ ಪ್ರೈಮರಿ ವಿದ್ಯಾಭ್ಯಾಸವು ಹರಡುವುದಕ್ಕೂ ಕ್ರಮಪಡುವುದಕ್ಕೂ ತುಂಬಾ ಸಹಾಯವಾಯಿತೆಂದು ನಿರೀಕ್ಷಿಸಲ್ಪಟ್ಟಿದೆ ಗ್ರಾಮಪಾಠಶಾಲೆಗಳ ಕಮಿಟಿ ಮೆಂಬರುಗಳು ಚಟುವಟಿಕೆಯಾಗಿ ಸ್ಕೂಲುಗಳ ಶ್ರೇಯಸ್ಸನ್ನು ಕಾಪಾಡಿಕೊಂಡು ಬಂದಿದ್ದಾರೆಂದು ತಿಳಿಸಲು ಸಂತೋಷವುಂಟಾಗಿದೆ.

ರೆವಿನ್ಯೂ ಅಧಿಕಾರಿಗಳು ಗ್ರಾಮ ಸ್ಕೂಲುಗಳ ವಿಷಯದಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿ ತೋರ್ಪಡಿಸುತ್ತಾ ಬಂದಿಲ್ಲವೆಂದು ಇನ್ಸ್ಪೆಕ್ಟರ್ ಜನರಲ್‌ರವರು ಸೂಚಿಸಿರುವುದು ದುಃಖಕರವಾಗಿದೆ ರೆವಿನ್ಯೂ ಅಧಿಕಾರಿಗಳು ಈ ವಿಷಯಕ್ಕೆ ಗಮನಕೊಟ್ಟರೆಂತಲೂ, ಅವರು ವಿದ್ಯಾಭ್ಯಾಸದ ಇಲಾಖೆಯವರೊಡನೆ ಕಲೆತು ಉಭಯರೂ ಏಕೀಭವಿಸಿ ಗ್ರಾಮಾಂತರಗಳಲ್ಲಿ ಜನರಿಗೆ ವಿದ್ಯೆಯಲ್ಲಿ ಅಭಿರುಚಿಯುಂಟಾಗುವಂತೆಯೂ, ವಿದ್ಯಾಭ್ಯಾಸವು ಕ್ರಮವಾಗಿ ನಡೆಯುವಂತೆಯೂ ಕಾರ್ಯಗಳನ್ನು ನಡಿಸಿಯಾರೆಂತಲೂ ಗವರ್ನಮೆಂಟಿನವರು ನಿರೀಕ್ಷಿಸುತ್ತಾರೆ ವಿದ್ಯಾಭ್ಯಾಸದ ವಿಷಯದಲ್ಲಿ ಈ ಅಧಿಕಾರಿಗಳು ಸೂಚಿಸುವ ಬದಲಾವಣೆಗಳೇ ಮೊದಲಾದ್ದನ್ನು ವಿದ್ಯಾಭ್ಯಾಸದ ಇಲಾಖೆಯವರು ಒಪ್ಪಿ ಅಂಗೀಕರಿಸದೆ ಹೋದರೂ ಹೋಗಬಹುದು. ಆದರೆ ಇದರಿಂದ ಅವರ ಪ್ರೋತ್ಸಾಹವೂ ಸಾಹಸವೂ ಕಡಮೆಯಾಗಲು ಕಾರಣವಿಲ್ಲ ರೆವಿನ್ಯೂ ಅಧಿಕಾರಿಗಳಿಗೆ ಜನರ ಪರಿಚಯವೂ ಮತ್ತು ಸ್ಥಳ ವಿದ್ಯಮಾನಗಳ ಪರಿಚಯವೂ ವಿಶೇಷವಾಗಿರೋಣದರಿಂದ ಅವರು ಗ್ರಾಮಾಂತರಗಳಲ್ಲಿ ವಿದ್ಯಾಭಿವೃದ್ಧಿಗೆ ತುಂಬಾ ಸಹಾಯಮಾಡಬಹುದಾಗಿದೆ

ನಾರ್ಮಲ್ ಸ್ಕೂಲು

ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ಕೆಲಸವು ಚನ್ನಾಗಿ ನಡೆಯಿತು ಪರೀಕ್ಷೆಗಳ ಫಲಿತಾಂಶಗಳು ತೃಪ್ತಿಕರವಾಗಿವೆ ಪರೀಕ್ಷೆ ಕೊಟ್ಟ ಮತ್ತು ಕ್ರಮಗಳನ್ನು ಕಲಿಯುವ ಉಪಾಧ್ಯಾಯರ ಸಂಖ್ಯೆಯು ಕಳೆದ ವರುಷ ೭೭೬ ಇದ್ದದ್ದು ಈ ಸಾಲಿನಲ್ಲಿ ೬೭೬ ಕ್ಕೆ ಇಳಿಯಿತು

ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಕಿಂಡರ್‌ಗಾರ್ಟನ್ ಮತ್ತು ಮ್ಯಾನ್ಯುಯಲ್ ಶಿಕ್ಷಣಗಳಿಗಾಗಿ ಸರ್ಕಾರದವರು ೪,೩೮೦ ರೂಪಾಯಿ ಸ್ಯಾಂಕ್ಷನ್ ಮಾಡಿದರು ಇದಕ್ಕೋಸ್ಕರ ಮಿಸ್ ಲ್ಯಾಟರ್ ಯವರನ್ನೂ, ಮಾಸ್ಟರ್ ಲಾಸರಸ್‌ರವರನ್ನೂ ವಿಲಾಯತಿ ಮತ್ತು ಅಮೇರಿಕಗಳಿಂದ ಮೇ॥ ಭಾಭಾಯವರ ಶಿಫಾರಸಿನ ಮೇರೆ ಕರೆಸಲಾಯಿತು ಆದಾಗ್ಯೂ ಮಿಸ್ ಲ್ಯಾಟರ್‌ಯವರು ಮಾಡುತ್ತಿದ್ದ ಶ್ರೇಷ್ಠವಾದ ಶಿಕ್ಷಣದ ಪ್ರಯೋಜನವು ಜನರಿಗೆ ತಿಳಿಯುವುದರೊಳಗಾಗಿ ಅಕಾಲಮರಣವಾದರು, ಇದರಿಂದ ಸಂಸ್ಥಾನಕ್ಕೆ ತುಂಬಾ ನಷ್ಟವಾಯಿತೆಂದು ಗವರ್ನಮೆಂಟಿನವರು ವ್ಯಸನಪಡುತ್ತಾರೆ ಮಾಸ್ಟರ್ ಲಾಸರಸ್‌ರವರ ಶಿಕ್ಷಣದಿಂದ ಈ ಸಂಸ್ಥಾನದ ಕೆಲವು ಉಪಾಧ್ಯಾಯರು ಮ್ಯಾನ್ಯುಯಲ್ ವಿದ್ಯೆಯ ಕ್ರಮಗಳನ್ನು ಕಲಿತುಕೊಳ್ಳುವಂತಾಯಿತು.

ಕಸಬುದಾರಿ ಪಾಠಶಾಲೆಗಳು

ಹೋದ ಸಾಲಿನಲ್ಲಿದ್ದಷ್ಟು ಕಸಬುದಾರಿ ಪಾಠಶಾಲೆಗಳೇ ೧೯೦೬-೦೭ನೇ ಸಾಲಿನಲ್ಲೂ ಇದ್ದವು ಕಸಬು ಕಲಿಯತಕ್ಕ ವಿದ್ಯಾರ್ಥಿಗಳು ಮಾತ್ರ ೮೫೭ ರಿಂದ ೮೪೩ಕ್ಕೆ ಇಳಿದರು ಮೈಸೂರು ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ತೃಪ್ತಿಕರವಾಗಿ ಕೆಲಸ ನಡೆದಿದೆ ಪರೀಕ್ಷೆಗಳ ಫಲಿತಾಂಶವು ಬಹಳ ಚನ್ನಾಗಿತ್ತು ಕಲ್ಕತ್ತೆಯಲ್ಲಿ ೧೯೦೬ ರಲ್ಲಿ ನಡೆದ ಪ್ರದರ್ಶನಶಾಲೆಯಲ್ಲಿ ಈ ಸ್ಕೂಲಿಗೆ ಕೆಲವು ಮೆಡಲುಗಳೂ ಸರ್ಟಿಫಿಕೇಟುಗಳೂ ಬಂದಿರುತ್ತವೆ.

ರೇಷ್ಮೆ ಕಸಬನ್ನು ಮಾಡತಕ್ಕ ಕೋಮಿನ ಹುಡುಗರಿಗೂ ಹುಡುಗಿಯರಿಗೂ ಆ ಕಸಬನ್ನು ಕ್ರಮವಾಗಿ ಕಲಿಸಿಕೊಡುವ ಭಾಗದಲ್ಲಿ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿ, ಅದಕ್ಕಾಗಿ ಬೆಂಗಳೂರಿನಲ್ಲಿರುವ ತಾತಾರವರ ರೇಷ್ಮೆ ಕಾರ್ಖಾನೆಗೆ ೩,೦೦೦ ರೂಪಾಯಿನಂತೆ ವರ್ಷಾಶನವನ್ನು ಕೊಡಲಾಗಿದೆ. ಆ ಕಾರ್ಖಾನೆಯನ್ನು ಸರ್ಕಾರದವರೇ ವಹಿಸಿಕೊಂಡು, ಇನ್ನೂ ಆ ಕಸಬನ್ನು ಅಭಿವೃದ್ಧಿಗೆ ತರುವ ಭಾಗದಲ್ಲಿ ಗವರ್ನಮೆಂಟಿನವರು ಪರ್ಯಾಲೋಚನೆಮಾಡುತ್ತಿದ್ದಾರೆ

ಸ್ತ್ರೀ ವಿದ್ಯಾಭ್ಯಾಸವು

ಗತಸಾಲಿನಲ್ಲಿ ಸ್ತ್ರೀವಿದ್ಯಾಭ್ಯಾಸವು ತೃಪ್ತಿಕರವಾಗಿ ನಡೆದಿರುವುದು. ಸಂಸ್ಥಾನದಲ್ಲಿ ಬಾಲಿಕಾ ಪಾಠಶಾಲೆಗಳ ಸಂಖ್ಯೆಯು ೨೯೧ ರಿಂದ ೨೯೩ಕ್ಕೆ ಹೆಚ್ಚಿದೆ ಆದರೆ ಪಾಠಶಾಲೆಗಳಿಗೆ ಹೋಗತಕ್ಕ ಹುಡುಗಿಯರ ಸಂಖ್ಯೆಯು ಸ್ವಲ್ಪ ಕಡಮೆಯಾಯಿತು. ಬೆಂಗಳೂರಿನಲ್ಲಿ ಲಂಡನ್ ಮಿಷನ್ ಸಂಘದವರು ಬಾಲಕಿಯರಿಗಾಗಿ ಇಟ್ಟಿದ್ದ ಪಾಠಶಾಲೆಯನ್ನು ಹೈಸ್ಕೂಲ್ ಮಾಡಿದ್ದರಿಂದ ಸಂಸ್ಥಾನದಲ್ಲಿ ಈಗ ೨ ಹೈಸ್ಕೂಲುಗಳು ಇರುತ್ತವೆ ಪಬ್ಲಿಕ್ ಪರೀಕ್ಷೆಗಳ ಫಲಿತಾಂಶಗಳು ತೃಪ್ತಿಕರವಾಗಿದ್ದವು ನಾಲ್ಕು ಸುಬ್ಬಮ್ಮನವರು ಬಿ ಎ ಪರೀಕ್ಷೆಯಲ್ಲಿ ಚರಿತ್ರೆ ಭಾಗದಲ್ಲಿ ತೇರ್ಗಡೆ ಹೊಂದಿದರು. ಮತ್ತು ಒಬ್ಬ ಯೂರೋಪಿಯನ್ ಬಾಲಕಿಯು ಎಫ್ ಎ ಪರೀಕ್ಷೆಯಲ್ಲೂ ಒಬ್ಬ ಹಿಂದೂ ಹುಡುಗಿಯು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲೂ ಉತ್ತೀರ್ಣರಾದರು. ಸಂಸ್ಥಾನದ ಎಲ್ಲಾ ಬಾಲಿಕಾ ಪಾಠಶಾಲೆಗಳಿಂದಲೂ ಒಟ್ಟು ೨೧ ಹುಡುಗಿಯರು ಇಂಗ್ಲಿಷ್ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲೂ, ೪೬ ಮಂದಿ ದೇಶಭಾಷೆಯ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲೂ ತೇರ್ಗಡೆಯಾಗಿದ್ದಾರೆ. ೯ ಮಂದಿ ಹುಡುಗಿಯರು ಉಪಾಧ್ಯಾಯಿನಿಯರ ಪರೀಕ್ಷೆ ಕೊಟ್ಟರು. ಸ್ತ್ರೀವಿದ್ಯಾಭಿವೃದ್ಧಿಗಾಗಿ ೧೯೦೫-೦೬ನೇ ಸಾಲಿನಲ್ಲಿ ೧,೯೪,೦೮೧ ರೂಪಾಯಿ ಖರ್ಚಾಗಿತ್ತು; ೧೯೦೬-೦೭ನೇ ಸಾಲಿನಲ್ಲಿ ೨,೦೯,೦೨೩ ರೂಪಾಯಿ ಖರ್ಚಾಗಿದೆ ಬಾಲಿಕಾ ಪಾಠಶಾಲೆಗಳ ಮೇಲ್ವಿಚಾರಣಾ ಕಮಿಟಿ ಮೆಂಬರುಗಳು ಅವುಗಳ ಪುರೋಭಿವೃದ್ಧಿಯ ವಿಷಯದಲ್ಲಿ ಉತ್ಸಾಹಶೀಲರಾಗಿ ಕೆಲಸಮಾಡಿರುತ್ತಾರೆಂದು ಸಂತೋಷಪಡಬೇಕಾಗಿದೆ

ಮಹಮದೀಯರ ವಿದ್ಯಾಭಿವೃದ್ಧಿಯು.

ಮಹಮದೀಯರಲ್ಲಿ ವಿದ್ಯೆಯು ಅಭಿವೃದ್ಧಿ ಹೊಂದುತ್ತಿದೆ. ಮಹಮದೀಯರಿಗಾಗಿ ಇಟ್ಟಿರುವ ಪಾಠಶಾಲೆಗಳ ಸಂಖ್ಯೆಯು ೨೮೬ ರಿಂದ ೨೯೧ ಕ್ಕೂ, ಮಹಮದೀಯ ವಿದ್ಯಾರ್ಥಿಗಳ ಸಂಖ್ಯೆಯು ೧೫,೨೭೨ ರಿಂದ ೧೫,೩೫೯ ಕ್ಕೂ ಹೆಚ್ಚಿರುತ್ತವೆ. ಮಹಮದೀಯರ ಗಂಡು ಹುಡುಗರಲ್ಲಿ ಶೇಕಡಾ ೫೬.೯ ಮಂದಿಯೂ ಹುಡುಗಿಯರಲ್ಲಿ ಶೇಕಡಾ ೧೭.೭೭ ಮಂದಿಯೂ ವಿದ್ಯೆ ಕಲಿಯುತ್ತಿದ್ದಾರೆ ಮಹಮದೀಯರಲ್ಲಿ ಇಷ್ಟು ಹೆಚ್ಚು ಮಂದಿ ವಿದ್ಯಾಭ್ಯಾಸ ಮಾಡುತ್ತಿರುವುದು ಪರಮಾಶ್ಚರ್ಯಕರವಾಗಿರುತ್ತದೆ ಇತರ ಯಾವ ಪಂಗಡದವರಲ್ಲೂ ಇಷ್ಟು ಹೆಚ್ಚು ಮಂದಿ ಬಾಲಕ ಬಾಲಕಿಯರು ವಿದ್ಯೆ ಕಲಿಯುತ್ತಲಿಲ್ಲ. ಪ್ರೈಮರಿ ತರಗತಿಗಳಲ್ಲೇ ಹೆಚ್ಚು ಜನ ಸೇರಿ ಓದುವರು ಮೇಲಿನ ತರಗತಿಗಳಲ್ಲಿ ಅವರ ಸಂಖ್ಯೆಯು ಕಡಮೆಯಾಗುತ್ತದೆ ಇದನ್ನು ನೋಡಿ ವ್ಯಸನಪಡಬೇಕಾಗಿದೆ ಇಂಗ್ಲಿಷ್ ಕಲಿಸುವ ತರಗತಿಗಳಲ್ಲೂ ಅವರ ಸಂಖ್ಯೆ ತುಂಬಾ ಕಡಮೆಯಾಗಿರುವುದು ಮಹಮದೀಯರಿಗೆ ಗವರ್ನಮೆಂಟಿನವರು ಕಲ್ಪಿಸಿಕೊಟ್ಟಿರತಕ್ಕ ರಿಯಾಯತಿಗಳನ್ನೂ ಸೌಲಭ್ಯಗಳನ್ನೂ ತಿಳಿದು, ಅವುಗಳಿಂದ ಪ್ರಯೋಜನ ಪಡೆದಾರೆಂದು ನಿರೀಕ್ಷಿಸಲ್ಪಟ್ಟಿದೆ ಹಿಂದಿನ ಸಾಲಿನಲ್ಲಿ ಹೀನಸ್ಥಿತಿಯಲ್ಲಿದ್ದ ಕೆಲವು ಹಿಂದುಸ್ಥಾನಿ ಪಾಠಶಾಲೆಗಳು ಈ ಸಾಲಿನಲ್ಲಿ ಅಭಿವೃದ್ಧಿಗೆ ಬಂದಿರುವುದನ್ನು ನೋಡಿ ಸಂತೋಷವಾಗುವುದು. ಒಬ್ಬ ಮಹಮದೀಯ ಹುಡುಗನು ಎಫ್. ಎ. ಪರೀಕ್ಷೆಯಲ್ಲೂ ಮೂರುಮಂದಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲೂ ೭೯ ಮಂದಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲೂ ತೇರ್ಗಡೆಹೊಂದಿರುತ್ತಾರೆ.

ಕೀಳು ದರ್ಜೆಯವರ ವಿದ್ಯಾಭ್ಯಾಸವು.

ಕೀಳು ದರ್ಜೆಯವರ ಮಕ್ಕಳಿಗೆ ವಿದ್ಯೆಕಲಿಸುವುದಕ್ಕೆ ಗತಸಾಲಿನಲ್ಲಿ ೮೦ ಪಾಠಶಾಲೆಗಳೂ, ಲಂಬಾಣಿಗಳಿಗಾಗಿ ೧೨ ಪಾಠಶಾಲೆಗಳೂ ಇದ್ದವು ಕೀಳು ದರ್ಜೆಯವರ ಮಕ್ಕಳು ೨,೪೩೮ ಜನರೂ, ೨೬೮ ಮಂದಿ ಲಂಬಾಣಿ ಹುಡುಗರು ವಿದ್ಯೆ ಕಲಿತುಕೊಳ್ಳುತ್ತಿದ್ದರು. ಲಂಬಾಣಿ ಮತ್ತು ಬೇಗಾರಿ ವಿದ್ಯಾರ್ಥಿಗಳಿಗೆ ೨—೩ ನೇ ಕ್ಲಾಸುಗಳಲ್ಲಿ ಓದುವುದಕ್ಕೆ ೨ ರೂಪಾಯಿನ ೮ ವಿದ್ಯಾರ್ಥಿವೇತನಗಳೂ ಸಲ್ಲುತ್ತಿದ್ದವು.

ಅಂತ್ಯೋಕ್ತಿಗಳು

ಅಂತು ಎಲ್ಲಾ ಭಾಗಗಳನ್ನೂ ನೋಡಲಾಗಿ ಈ ಸಂಸ್ಥಾನದ ವಿದ್ಯಾಭಿವೃದ್ಧಿಯು ಗತಸಾಲಿನಲ್ಲಿ ಚನ್ನಾಗಿತ್ತು. ಮೇ॥ ಭಾಭಾಯವರು ಈ ಇಲಾಖೆಯನ್ನು ಚಟುವಟಿಕೆಯಿಂದ ನಡಿಸಿರುವ ಭಾಗದಲ್ಲಿ ಗವರ್ನಮೆಂಟಿನವರು ಅವರ ಸಾಹಸವನ್ನು ಮೆಚ್ಚಿ ರಿಕಾರ್ಡ್ ಮಾಡಿರುತ್ತಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ರಾಜಪುಟಾನಾಕ್ಕೆ ಸೇರಿದ ಜೋಧಪುರದ ಮಹಾರಾಜರವರಿಗೆ ಉದಯಪುರದ ಮಹಾರಾಜರವರ ಕುಮಾರ್ತೆಯನ್ನು ಕೊಟ್ಟು ನಾಳೆಯ ದಿನ ವಿವಾಹವಾಗುವಂತೆ ನಿಷ್ಕರ್ಷೆಯಾಗಿದೆ

***

ಕಳೆದ ವಾರ ಮೈಸೂರಿನ ಪ್ರಭುಗಳು ಗ್ವಾಲಿಯರ್ ಸಂಸ್ಥಾನಕ್ಕೆ ಸೇರಿದ ಶಿಪ್ರಿ ಎಂಬ ಕಾಡಿನಲ್ಲಿ ಇನ್ನೂ ಮೂರು ಹುಲಿಗಳನ್ನು ಶಿಕಾರಿ ಮಾಡಿಕೊಂಡು ಬಂದರೆಂದು ತಿಳಿಯುವುದು

***

ಬಂಗಾಳಾ ಲೆಫ್ಟಿನೆಂಟ್ ಗವರ್ನರವರು ಕುಳಿತು ಪ್ರಯಾಣಮಾಡುತ್ತಿದ್ದ ರೈಲ್ ಗಾಡಿಯನ್ನು ಕೆಡವಿ ಅನಾಹುತವನ್ನು ಕಲ್ಪಿಸಬೇಕೆಂದು ಪ್ರಯತ್ನಪಟ್ಟ ಏಳು ಮಂದಿ ಅಪರಾಧಿಗಳ ವಿಚಾರಣೆ ಪೂರೈಸಿತು. ಆ ಪೈಕಿ ೬ ಮಂದಿಗೆ ತಲಾ ಹತ್ತು ವರುಷದ ಲಾಗಾಯಿತು ೫ ವರುಷಗಳವರೆಗೆ ಕಠಿಣ ಸಜಾ ವಿಧಿಸಿರುತ್ತಾರೆ.

***

ಚಿಟಗಾಂಗಿಗೆ ಸೇರಿದ ಅಖೌರಾ ಎಂಬ ತೀರಪಟ್ಟಣದಲ್ಲಿ ಕಳೆದ ಗುರುವಾರ ಸಾಯಂಕಾಲ ಭಯಂಕರವಾದ ಸುಂಟರಗಾಳಿ ಹುಟ್ಟಿ ಒಂದು ಹಡಗು ಮುರಿದುಹೋಯಿತು ಬೇಸ್ಟು ನದೀ ಸೇತುವೆಯೂ ಒಂದು ಸ್ಟೇಷನ್ ಮನೆಯೂ ಹಾಳಾದವು. ಅನೇಕ ಮನೆಮಠಗಳು ಗಿಡಮರಗಳೂ ಕಳಚಿ ಬಿದ್ದುಹೋದವು. ಆದರೆ ಪ್ರಾಣನಷ್ಟವೇನೂ ಸಂಭವಿಸಲಿಲ್ಲ

***

ಬರೋಡ ಮಹಾರಾಜರವರು ಕರುಣಾದ್ರ್ರಹೃದಯರಾದ ಪ್ರಜಾಪಾಲಕರೂ, ಬಹಳ ಧರ್ಮಿಷ್ಠರೂ ಆಗಿರುವುದನ್ನೂ ಬೊಂಬಾಯಿ ಆಧಿಪತ್ಯದಲ್ಲಿರುವ ರಾಮಕೃಷ್ಣ ಗೋಪಾಲ ಭಂಡಾರಕರವರು ಸಂಸ್ಕೃತ ವಿದ್ಯಾ ಪಂಡಿತರಾಗಿ ಅನೇಕ ಪ್ರಾಚೀನ ಗ್ರಂಥಗಳನ್ನು ಪ್ರಕಟಿಸಿರುವುದನ್ನೂ ವಿಲಾಯತಿ ರಾಜ್ಯಕ್ಕೆ ಸೇರಿದ ಸ್ಕಾಟ್ಲೆಂಡಿನ ಮುಖ್ಯಪಟ್ಟಣವಾದ ಎಡಿಂಬರೋ ನಗರದ ವಿದ್ಯಾನಿಲಯದ ಪಂಡಿತರು ತಿಳಿದು ಅವರಿಬ್ಬರಿಗೂ "ಡಾಕ್ಟರ್ ಆಫ್ ಲಾಸ್" ಎಂಬ ಘನತರವಾದ ಬಿರುದನ್ನು ದಯಪಾಲಿಸಿರುತ್ತಾರೆಂದು ತಂತೀ ವರ್ತಮಾನ ಬಂದಿದೆ

***

ಕಳೆದ ವಾರ ಉತ್ತರದೇಶದಲ್ಲಿ ೧೪ ಲಕ್ಷದ ೩೦ ಸಾವಿರ ಪ್ರಜೆಗಳು (ಅಂದರೆ, ಹಿಂದಿನ ವಾರದ ಸಂಖ್ಯೆಗಿಂತ ೯೪,೦೦೦ ಜನರು ಕಡಮೆ) ಸರ್ಕಾರದವರ ಪೋಷಣೆಯಲ್ಲಿದ್ದರು. ಈ ಪೈಕಿ ಸಂಯುಕ್ತ ಆಧಿಪತ್ಯಗಳು ಮತ್ತು ಅಯೋಧ್ಯೆಯಲ್ಲಿ ೧೨ ಲಕ್ಷದ ೫೫ ಸಾವಿರ ಪ್ರಜೆಗಳೂ, ಮಧ್ಯ ಇಂಡಿಯಾ ದೇಶೀಯ ಸಂಸ್ಥಾನಗಳಲ್ಲಿ

೧,೬೬,೦೦೦ ಜನರೂ, ಬಂಗಾಳದಲ್ಲಿ ೬೩,೦೦೦ ಜನರೂ, ಮಧ್ಯಪ್ರಾಂತ್ಯಗಳು ೧೮ ಸಾವಿರ ಜನರೂ, ಬೊಂಬಾಯಿ ೩೬,೦೦೦, ಪಂಜಾಬು ೧,೯೦೦ ಜನರೂ, ಮದರಾಸ್ ೪೩೬ ಜನರೂ ಸರ್ಕಾರದವರ ರಿಲೀಫ್ ಕಾರ್ಖಾನೆಗಳಲ್ಲೂ ಧರ್ಮಸತ್ರಗಳಲ್ಲೂ ಸೇರಿಕೊಂಡು ಜೀವಿಸುತ್ತಿದ್ದರು.

❦❦❦

ಕಳೆದ ಗುರುವಾರ ಸಾಯಂಕಾಲ ಮದರಾಸ್ ಗವರ್ನರವರು ಪರಿವಾರ ಸಹಿತ ಮದರಾಸಿನಲ್ಲಿ ರೈಲ್ ಹತ್ತಿ ಬೇಸಿಗೆ ಕಳೆಯುವುದಕ್ಕಾಗಿ ನೀಲಗಿರಿ ಬೆಟ್ಟವನ್ನು ಕುರಿತು ಪ್ರಯಾಣ ಮಾಡಿದರು.

❦❦❦

ಕೊಲ್ಹಾಪುರದ ಮಹಾರಾಜರವರ ಕುಮಾರಿಯ ವಿವಾಹ ಮಹೋತ್ಸವಕ್ಕಾಗಿ ಬೊಂಬಾಯಿ ಗವರ್ನರವರು ಅಲ್ಲಿಗೆ ದಯಮಾಡಿದ್ದಾಗ್ಗೆ ಅಲ್ಲಿನ ನಾಲ್ಕು ಸ್ವದೇಶೀ ವಿದ್ಯಾಶಾಲೆಗಳನ್ನು ಅಜಮಾಯಿಷಿ ಮಾಡಿ ತುಂಬಾ ಸಂತೋಷಪಟ್ಟು ೫೧೦ ರೂಪಾಯಿ ಕೊಟ್ಟು ಪ್ರೋತ್ಸಾಹಪಡಿಸಿರುತ್ತಾರೆ.

❦❦❦

ಕೇದರನಾಥದಲ್ಲೂ ಬದ್ರಿನಾಥದಲ್ಲೂ ಈ ತಿಂಗಳಲ್ಲಿ ನಡೆಯುವ ಉತ್ಸವಗಳಿಗೆ ಇತರ ಕಡೆಗಳಿಂದ ಹಿಂದೂ ಯಾತ್ರಿಕರು ಬರುವುದು ಕ್ಷೇಮಕರವಲ್ಲವೆಂತಲೂ, ಈಗ ಆ ಪ್ರಾಂತ್ಯದಲ್ಲಿ ಕ್ಷಾಮಪ್ರಾಪ್ತವಾಗಿ ಆಹಾರದಿನಸಿಗಳು ಸಿಕ್ಕುವುದು ಬಹಳ ಕಷ್ಟವಾಗಿದೆ ಎಂತಲೂ ಕಾರ್ಘರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಇಸ್ತಿಹಾರು ಹಾಕಿಸಿರುತ್ತಾರೆ.

❦❦❦

ಅಸಂಜೇಯನ ಸಂಸ್ಥಾನದ ಎಲ್ಲಾ ಕೋರ್ಟು ಕಚೇರಿಗಳಲ್ಲೂ ಬ್ರಾಹ್ಮಣ ನೌಕರರ ಸಂಖ್ಯೆಯೇ ಬಹಳ ಹೆಚ್ಚಾಗಿದೆ ಎಂತಲೂ, ಕೀಳು ಜಾತಿಯವರನ್ನು ವಿಶೇಷವಾಗಿ ನೇಮಿಸುತ್ತಾ ಬರಬೇಕೆಂತಲೂ ಇನ್ನು ಮೇಲೆ ಯಾವ ಕೋರ್ಟಿನಲ್ಲೂ ಕಚೇರಿಯಲ್ಲೂ ಕೀಳು ಜಾತಿಯವರನ್ನು ಬಿಡದೆ ತಡೆಯಕೂಡದೆಂತಲೂ, ಹಾಗೆ ತಡೆದಲ್ಲಿ ಶಿಕ್ಷೆಯಾಗುವುದೆಂತಲೂ ಸರ್ಕಾರದವರು ಇಸ್ತಿಹಾರು ಹಾಕಿರುತ್ತಾರೆ.

❦❦❦

ಬರ್ಮಾ ಅಧಿಪತ್ಯಕ್ಕೆ ಸೇರಿದ ಪಾಂಡಲೆ ಪಟ್ಟಣದಲ್ಲಿ ಒಬ್ಬ ಪಂಜಾಬಿಯು ತನ್ನ ಹೆಂಡತಿ, ಹೆಣ್ಣು ಮಗಳು, ತಂದೆ ತಾಯಿ, ದಾಯಾದ, ಈ ಮೂರು ಮಂದಿಯನ್ನೂ ಕೊಂದುಹಾಕಿದ್ದಲ್ಲದೆ ಆ ಹೆಂಡತಿಯ ಸಹೋದರಿಯನ್ನೂ ಹೊಡೆದು ಗಾಯಮಾಡಿದನು. ಜನರು ಅವನನ್ನು ಹಿಡಿಯಬೇಕೆಂದು ಓಡಿಸಿಕೊಂಡು ಹೋದರು. ಕಡೆಗೆ ಅವನೇ ಬಂದು ಅವರ ವಶವರ್ತಿಯಾದನು. ಈಗ ಅವನನ್ನು ಲಾಕಪ್ಪಿನಲ್ಲಿ ಹಾಕಿದ್ದಾರೆ.

❦❦❦

ಕಾಶ್ಮೀರ ಸಂಸ್ಥಾನದಲ್ಲಿ ಕಳೆದ ವಾರ ಸಾರೋದ್ಧಾರವಾಗಿ ಮಳೆ ಸುರಿದು ಹಲವು ಸ್ಥಳಗಳಲ್ಲಿ ಭೂಮಿಯು ಕುಸಿದುಹೋಯಿತೆಂತಲೂ, ಕಲ್ಲುಗಳೂ ಮಣ್ಣೂ ಕಳಚಿ ಬಾರಾಮುಲ್ಲಾವಿಗೆ ಹೋಗತಕ್ಕ ಮಾರ್ಗದ ಮೇಲೆ ಬಿದ್ದು, ರಸ್ತೆಯನ್ನು ಉದ್ದಕ್ಕೂ ಮುಚ್ಚಿಬಿಟ್ಟಿವೆ ಎಂತಲೂ, ಪ್ರಯಾಣಿಕರ ಸಂಚಾರಕ್ಕೆ ಅವಕಾಶವಿಲ್ಲದೆ ಇದೆ ಎಂತಲೂ, ನದಿಯಲ್ಲಿ ಪ್ರವಾಹ ಹೆಚ್ಚಿ ಹರಿಯುತ್ತಿವೆ ಎಂತಲೂ ತಂತೀವರ್ತಮಾನ ಬಂದಿದೆ.

❦❦❦

ಅಯೋಧ್ಯೆಯಲ್ಲಿ ಲೇಟ್ ವಿಕ್ಟೋರಿಯಾ ಮಹಾರಾಜ್ಞೀರವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಅಲ್ಲಿನ ಪ್ರಜೆಗಳು ಬಹು ಧಾರಾಳವಾಗಿ ಚಂದಾ ಹಣವನ್ನು ಕೊಟ್ಟರು. ಅಕೆಯವರ ಒಂದು ಪ್ರತಿಮೆಯನ್ನು ಕಳೆದ ವಾರ ಲಕ್ನೋ ಪಟ್ಟಣದಲ್ಲಿ ಲೆಫ್ಟಿನೆಂಟ್ ಗವರ್ನರ್ ಸರ್ ಜಾನ್ ಹ್ಯೂಯಟ್‌ಯವರು ಪ್ರತಿಷ್ಠೆ ಮಾಡಿದರು. ಇದಕ್ಕೆ ಲಕ್ಷವು ೩೧ ಸಾವಿರ ರೂಪಾಯಿ ಖರ್ಚಾಯಿತು. ಅಯೋಧ್ಯೆಯಲ್ಲಿ ಕಟ್ಟಲ್ಪಡುವ ೨ ನೇ ಪ್ರತಿಮೆಗೆ ಇನ್ನು ೫೦ ಸಾವಿರ ರೂಪಾಯಿ ಫಂಡಿನಲ್ಲಿ ಉಳಿದಿರುವುದು.

❦❦❦

ಹೋದ ತಿಂಗಳಲ್ಲಿ ಕೊಲ್ಹಾಪುರ ಸಂಸ್ಥಾನದ ಮಹಾರಾಜರವರ ಕುಮಾರ್ತೆಯಾದ ರಾಧಾಬಾಯಿ ಅಕ್ಕಾಸಾಹೇಬ್ ಎಂಬಾಕೆಗೆ ವಿವಾಹವಾದಾಗ್ಗೆ ಭೌನಗರದ ಮಹಾರಾಜರವರು ಅಲ್ಲಿಗೆ ಹೋಗಿದ್ದರು. ಆಗ ಅವರು ಅಲ್ಲಿನ ಬಾಲಿಕಾ ಪಾಠಶಾಲೆಯನ್ನು ಅಜಮಾಯಿಷಿ ಮಾಡಿ, ಬಾಲಿಕೆಯರಲ್ಲಿ ಉತ್ತಮವಾಗಿ ತೇರ್ಗಡೆ ಹೊಂದಿದಂಥವರಿಗೆ ಪ್ರತಿವರುಷವೂ ಒಂದು ಚಿನ್ನದ ಪದಕವನ್ನೂ ಎರಡು ವೇತನಗಳನ್ನೂ ಕೊಡಬೇಕೆಂದು ಹೇಳಿ, ಆ ರಾಜಕುಮಾರ್ತೆಯ ಹೆಸರಿನ ಮೇಲೆ ೭,೦೦೦ ರೂಪಾಯಿ ಫಂಡು ಹಾಕಿದರು. ಕೊಲ್ಹಾಪುರದ ಪ್ರಜೆಗಳು ಭೌನಗರದ ಮಹಾರಾಜರವರ ಸ್ನೇಹಭಾವವನ್ನೂ ಅವರ ಧರ್ಮಬುದ್ಧಿಯನ್ನೂ ಕೊಂಡಾಡುತ್ತಿದ್ದಾರೆ.

❦❦❦

ತಿನ್ನವೆಲ್ಲಿ ಟುಟಿಕೊರಿನ್ ಪಟ್ಟಣಗಳಲ್ಲಿ ದಂಗೆ ನಡಿಸಿದ್ದಕ್ಕಾಗಿ ಸರ್ಕಾರದವರು ೬೫ ಜನರನ್ನು ದಸ್ತಗಿರಿ ಮಾಡಿ, ಬಂಧನದಲ್ಲಿ ಇಟ್ಟಿದ್ದಾರೆ. ಆ ಪೈಕಿ ದೊಡ್ಡ ಮನುಷ್ಯನೂ ಗೌರವಸ್ಥನೂ ಆಗಿದ್ದ ಬಿಲ್ಲಯ್ಯಾಪಿಳ್ಳೆ ಎಂಬುವನು ಲಾಕಪ್ಪಿನಲ್ಲಿ ವಾಂತಿಭೇದಿ ತಗಲಿ ಕಾಲವಾದನು. ಮತ್ತು ಪ್ರಜೆಗಳನ್ನು ಸರ್ಕಾರದವರ ಮೇಲೆ ಎತ್ತಿಕಟ್ಟಿ ದಂಗೆ ಎಬ್ಬಿಸುವಂಥಾ ಪ್ರಯತ್ನ ಮಾಡಿದರೆಂದು ಸರ್ಕಾರದವರು ಚಿದಂಬರಂಪಿಳ್ಳೆ, ಸುಬ್ರಹ್ಮಣ್ಯಶಿವಾ, ಪದ್ಮನಾಭ ಐಯಂಗಾರ್ ಎಂಬೀ ಮೂರು ಮಂದಿಯನ್ನು ಪ್ರಾಸಿಕ್ಯೂಟ್ ಮಾಡುತ್ತಿದ್ದಾರೆ. ಈ ಮೊಕದ್ದಮೆಗಳು ಇನ್ನೂ ಪೂರೈಸಲಿಲ್ಲ. ಅಷ್ಟರಾಗಿ ಆರು ಮಂದಿ ಹೈಕೋರ್ಟ್ ವಕೀಲರನ್ನು ಹಿಡಿದು, ಅವರಿಂದ ನೇಕಚಾಲಿಗೆ ಜಾಮೀನ್ ಮುಚ್ಚಳಿಕೆ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಹುಕುಂ ಕೊಟ್ಟರು. ಈ ಮೊಕದ್ದಮೆಯಲ್ಲೂ ಕೆಲವು ಭಾಗ ವಿಚಾರಣೆ ನಡೆದು ಇರುತ್ತದೆ.

❦❦❦

ಮದರಾಸ್ ಅಧಿಪತ್ಯದಲ್ಲಿ ಆಹಾರ ದಿನಸುಗಳ ಧಾರಣೆಗಳು ಹೆಚ್ಚಿ ಬಡ ನೌಕರರ ಜೀವನಕ್ಕೆ ಕಷ್ಟವಾಗಿದೆ ಎಂದು ತಿಳಿದು ಬಂದದ್ದರಿಂದ ಮದರಾಸ್ ಗವರ್ನರವರು ಆ ಅಧಿಪತ್ಯದ ಎಲ್ಲಾ ಜಿಲ್ಲೆಗಳಲ್ಲೂ ೩೦ ರೂಪಾಯಿನೊಳಗೆ ಸಂಬಳವುಳ್ಳ ನೌಕರನಾದವರಿಗೆ ಏಪ್ರೆಲ್ ೧ ರ ಲಾಗಾಯತು ಆರು ತಿಂಗಳ ತನಕ ಅಲೋವೆನ್ಸು ಕೊಡಬೇಕೆಂದು ಈಗತಾನೆ ಸ್ಯಾಂಕ್ಷನ್ ಮಾಡಿದಾರೆ. ಈ ಅಲೋವೆನ್ಸನ್ನು ಕೊಡುವ ಕ್ರಮವು ಹ್ಯಾಗೆಂದರೆ—ಗಂಜಾಂ, ಮದರಾಸ್, ದಕ್ಷಿಣಕನಡಾ, ಮಲಬಾರ್, ಈ ಜಿಲ್ಲೆಗಳಲ್ಲಿ ೧೬ ರೂಪಾಯಿ ಒಳಗೆ ಸಂಬಳವುಳ್ಳವರಿಗೆಲ್ಲಾ ತಲಾ ೧॥ ರೂಪಾಯಿಯಂತೆಯೂ, ೧೬ ರೂಪಾಯಿನಿಂದ ೩೦ ರೂಪಾಯಿನೊಳಗೆ ಸಂಬಳವುಳ್ಳ ನೌಕರನಾದವರಿಗೆ ತಲಾ ೨ ರೂಪಾಯಿಯಂತೆಯೂ; ಇತರ ಡಿಸ್ಟ್ರಿಕ್ಟುಗಳಲ್ಲಿ ಆ ಎರಡು ದರ್ಜೆಗಳ ನೌಕರರಿಗೂ ತಲಾ ೧ ರೂಪಾಯಿ, ೨ ರೂಪಾಯಿಯಂತೆಯೂ ಪ್ರತಿ ತಿಂಗಳಲ್ಲೂ ಪಾವತಿಮಾಡಬಹುದೆಂದು ಹುಕುಂ ಕೊಟ್ಟಿದ್ದಾರೆ.

❦❦❦

ಕಲ್ಕತ್ತಾ ಪಟ್ಟಣದಲ್ಲಿ ವನಮಾಲಿ ಎಂಬೊಬ್ಬ ಲಕ್ಷಾಧಿಪತಿಯು ಬುದ್ಧಿಸ್ವಾಧೀನವಿಲ್ಲದೆ ನಾನಾ ಪ್ರಕಾರ ಅವಲಂಬಿಸಿದಾನೆ. ಜಯಪುರದ, ಕಾಶ್ಮೀರದ, ಬರ್ದ್ವಾನಿನ, ಈ ಮೊದಲಾದ ಮಹಾರಾಜರುಗಳ ಬಳಿಯಲ್ಲಿರುವ ಕೋಟ್ಯಂತರ ರೂಪಾಯಿನ ಆಸ್ತಿಯೆಲ್ಲಾ ಈ ಹುಚ್ಚನು ತನ್ನದೇ ಎಂದೂ, ತನ್ನ ಮಗನು ತನಗೆ ಹುಟ್ಟಿದವನಲ್ಲವೆಂದೂ, ಬರ್ದ್ವಾನ್ ಮಹಾರಾಜರವರು ಮೋಸಮಾಡಿ ಆ ಹುಡುಗನನ್ನು ತನ್ನ ಮನೆಗೆ ತಂದು ಬಿಟ್ಟಿದ್ದಾರೆಂದೂ, ತನ್ನ ಮನೆಯ ಸುತ್ತಲೂ ಕಳ್ಳರು ಬಂದು ನಿಂತು ತನ್ನ ಆಸ್ತಿಯನ್ನು ಕಳುವುಮಾಡಬೇಕೆಂದು ಪ್ರಯತ್ನಪಡುತ್ತಾರೆಂದೂ ನಾನಾ ರೀತಿಯಾಗಿ ಹೇಳುತ್ತಾ, ಕೋರ್ಟು ಕಚೇರಿಗಳಿಗೂ ಗವರ್ನರ್ ಮೊದಲಾದ ಅಧಿಕಾರಿಗಳಿಗೂ ಅರ್ಜಿಗಳನ್ನು ಹಾಕುತ್ತಾ ಬಂದಿದಾನೆ. ಈಗ ಆತನ ಹೆಂಡತಿಯಾದ ಶ್ರೀಮತಿ ದೇವಜ್ಞಾನಿದಾಸಿ ಎಂಬಾಕೆಯು ಹೈಕೋರ್ಟಿಗೆ ಅರ್ಜಿಕೊಟ್ಟು, ತನ್ನ ಗಂಡನನ್ನು ಹುಚ್ಚನೆಂದು ಭಾವಿಸಿ ಹುಕುಂ ಕೊಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾಳೆ.

❦❦❦

ಅಯೋಧ್ಯೆಯ ಮಹಾರಾಜರವರು ಈಚೆಗೆ ಸಾಲಸೋಲಗಳನ್ನು ಮಾಡಿ ಆದಾಯವೂ ವಿಸ್ತಾರವೂ ಆದ ಜಮೀನ್ದಾರಿಯನ್ನು ಅನ್ಯಾಕ್ರಾಂತವಾಗುವ ಸ್ಥಿತಿಗೆ ತಂದಿದ್ದರು. ಸಂಯುಕ್ತ ಪ್ರಾಂತ್ಯದ ಲೆಫ್ಟಿನೆಂಟ್ ಗವರ್ನರವರು ಆ ಜಮೀನ್ದಾರಿಯನ್ನು ಕೆಲವು ಕಾಲಕ್ಕೆ ಮುಂಚೆ ಸರ್ಕಾರದವರ ಮೇಲ್ವಿಚಾರಣೆಗೆ ಸೇರಿಸಿಕೊಂಡು, ಅಭಿವೃದ್ಧಿಸುತ್ತಾ ಬಂದಿದಾರೆ. ೬೩,೫೦,೦೦೦ ರೂ. ಸಾಲ ಹೊತ್ತು ಹೊಂದಿದ್ದ ಆ ಜಮೀನ್ದಾರಿಯು ಬರೀ ಬಡ್ಡಿಗಾಗಿಯೇ ವರುಷಕ್ಕೆ ೩,೯೩,೦೦೦ ರೂಪಾಯಿ ಕೊಡಬೇಕಾಗಿತ್ತು. ಆ ಪ್ರಾಂತ್ಯಕ್ಕೆ ಸೇರಿದ ಇತರ ಭಾರೀ ಜಮೀನ್ದಾರರು ಉತ್ತಾರು ಲಕ್ಷ ರೂಪಾಯಿಗಳನ್ನು ಸುಲಭ ಬಡ್ಡಿಗೆ ಕೊಟ್ಟು, ಅಯೋಧ್ಯೆಯ ಭಾರೀ ಸಾಲಗಳನ್ನು ತೀರಿಸುವುದಕ್ಕೆ ಸಹಾಯ ಮಾಡಿದರು. ಲೆಫ್ಟಿನೆಂಟ್ ಗವರ್ನರವರು ಅವರಿಗೆಲ್ಲಾ ಪ್ರೋತ್ಸಾಹ ಕೊಟ್ಟು, ಈ ಜಮೀನ್ದಾರಿಯನ್ನು ಉಳಿಸಿರುತ್ತಾರೆ. ಇದಕ್ಕೋಸ್ಕರ ಅಲ್ಲಿನ ತಾಲ್ಲೂಕುದಾರರೆಲ್ಲಾ ಬಲರಾಮಪುರದ ಮಹಾರಾಜರನ್ನು ಮುಂದಿಟ್ಟುಕೊಂಡು, ಲೆಫ್ಟಿನೆಂಟ್ ಗವರ್ನರ ಬಳಿಗೆ ಹೋಗಿ, ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿ ಬಂದರು. ಇಂಡಿಯಾ ಗವರ್ನಮೆಂಟಿನವರೂ ಕೂಡ ಈ ಅಯೋಧ್ಯೆಯ ಸಾಲ ತೀರಿಸುವುದಕ್ಕೆ ೬೫ ಲಕ್ಷ ರೂಪಾಯಿ ಕೊಟ್ಟು, ಸುಭಿಕ್ಷಕಾಲ ಬಂದಾಗ್ಗೆ ಸ್ವಲ್ಪಸ್ವಲ್ಪವಾಗಿ ವಾಪಸು ತೆಗೆದುಕೊಳ್ಳುವಂತೆ ಒಪ್ಪಿರುತ್ತಾರೆ.

❦❦❦

ಜುನಾಘಡ ಸಂಸ್ಥಾನದ ರಾಜಧಾನಿಯಲ್ಲಿ ಮೆ॥ ಲಾಲಾ ಶಂಕರ ಲಕ್ಷ್ಮೀದಾಸ್ ಎಂಬ ದೊಡ್ಡ ಮನುಷ್ಯನು ಇರುತ್ತಾನೆ. ಈತನ ಸಾಹಸಕಾರ್ಯಗಳಿಂದಲೇ ವಿಲಾಯತಿಯಲ್ಲಿ ಬಹು ಜನರು ಮಾಂಸಾಹಾರವನ್ನು ತ್ಯಜಿಸಿ, ದವಸಧಾನ್ಯಾದಿಗಳನ್ನೂ ಹಣ್ಣುಹಂಪಲನ್ನೂ ತಿನ್ನುತ್ತಿದ್ದಾರೆ. ಈ ದೊಡ್ಡ ಮನುಷ್ಯನು ಕೆಲವು ಕಾಲದ ಹಿಂದೆ ಹಿಂದೂಸ್ಥಾನದ ವೈಸ್‌ರಾಯರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿ, ಇನ್ನು ಮೇಲೆ ಆಹಾರಕ್ಕಾಗಿ ಯಾರೂ ಗೋಕಾಯಿಗಳನ್ನು ಕೊಲ್ಲಕೂಡದೆಂದು ಅಪ್ಪಣೆಯಾಗಬೇಕೆಂಬುದಾಗಿ ಬೇಡಿಕೊಂಡನು. ಈಗ ಈತನು "ಜನರು ಹ್ಯಾಗೆ ವಿಷಪ್ರಾಶನಮಾಡುತ್ತಿದ್ದಾರೆ" ಎಂಬ ವಿಚಾರವನ್ನು ಕುರಿತು ಒಂದು ಪುಸ್ತಕವನ್ನು ರಚಿಸಿ ವೈಸ್‌ರಾಯರವರಿಗೆ ಒಪ್ಪಿಸಿರುತ್ತಾನೆ. ಈ ಪುಸ್ತಕದಲ್ಲಿ ಜನರು ಕೊಳೆತ ಅಥವಾ ರೋಗಜನಕವಾದ ಮಾಂಸವನ್ನು ತಿಂದು ಸಾಯುತ್ತಿರುವುದು, ದೀರ್ಘರೋಗಿಗಳು ಮಾಂಸಾಹಾರವನ್ನು ತ್ಯಜಿಸಿ ಕಾಯಿಪಲ್ಯ ಕಾಳುಗಳನ್ನು ತಿನ್ನುವುದರಿಂದ ಆರೋಗ್ಯವಾಗಿರುವುದು, ಈ ಮೊದಲಾದ ವಿಷಯಗಳನ್ನು ವಿವರಿಸಿರುತ್ತಾನೆ. ಆರೋಗ್ಯಕರವಾದ ಆಹಾರವನ್ನು ವಿವರವಾಗಿ ಕಲಿಸಿಕೊಡುವ ಈ ಪುಸ್ತಕವನ್ನು ಈ ರಾಜ್ಯದ ಸಮಸ್ತ ವಿದ್ಯಾಶಾಲೆಗಳಲ್ಲೂ ಬಾಲಕರು ಓದಿ ಮೆಟ್ರಿಕ್ಯುಲೇಷನ್ ಪರೀಕ್ಷೆಕೊಡುವಂತೆ ಮಾಡಬೇಕೆಂತಲೂ, ಇದನ್ನು ಜಾರಿಗೆ ತಂದರೆ ನೂರಾರು ಆಸ್ಪತ್ರೆಗಳನ್ನು ಕಟ್ಟಿ ರೋಗಿಗಳನ್ನು ವಾಸಿಮಾಡಬೇಕಾದ ಅವಶ್ಯಕತೆಯೇ ತಪ್ಪಿಹೋಗುವುದೆಂತಲೂ ವೈಸ್‌ರಾಯರವರಿಗೆ ವಿಜ್ಞಾಪನೆಮಾಡಿಕೊಂಡಿರುವನು.

❦❦❦

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಸಿಕಂದರಾಬಾದ್ ಪಟ್ಟಣದಲ್ಲಿ ರಾಯಬಹದೂರ್ ಸೇಠ್‌ರಾಂ ಗೋಪಾಲ್‌ಯವರೂ ಅವರ ಪಾಲುದಾರರಾದ ಮೆ॥ ಎ. ನರಸಿಂಹಲುಯವರೂ ಒಂದು ಕಸಬುದಾರಿ ಪಾಠಶಾಲೆಯನ್ನು ಸ್ಥಾಪಿಸಿ, ೧೯೦೨ ನೇ ಇಸವಿಯಿಂದ ನಡಿಸುತ್ತಾ ಬಂದಿದಾರೆ. ವಿದ್ಯಾರ್ಥಿಗಳು ಈ ಪಾಠಶಾಲೆಯಲ್ಲಿ ಕಸಬನ್ನು ಕಲಿತು ಪರೀಕ್ಷೆಗಳಲ್ಲಿ ತೇರ್ಗಡೆಹೊಂದುತ್ತಾ, ಜೀವನೋಪಾಯವನ್ನು ಕಲ್ಪಿಸಿಕೊಳ್ಳುತ್ತಾ ಬಂದಿದಾರೆ. ಕಳೆದ ವರುಷ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಮೆ॥ ವೇಕ್ ಎಂಬ ಅಧಿಕಾರಿಯು ಬಹುಮಾನಗಳನ್ನು ಕೊಟ್ಟು, ಸಭಿಕರನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ಅದರ ಮುಖ್ಯವಿಷಯಗಳೇನೆಂದರೆ—ಈಗ ಸ್ಕೂಲುಗಳಲ್ಲಿ ಕಲಿಸತಕ್ಕ ವಿದ್ಯೆಯು ವಿದ್ಯಾರ್ಥಿಗಳಿಗೆ ನಿಷ್ಪ್ರಯೋಜಕವಾಗಿದ್ದು. ಅದರಲ್ಲಿ ಉಪಾಧ್ಯಾಯರ ತಪ್ಪೇನೂ ಇರುವುದಿಲ್ಲ. ಸರ್ಕಾರದವರು ವಿಧಿಸಿರುವಂತೆ ಅವರು ವಿದ್ಯೆ ಕಲಿಸಬೇಕಾಗಿದೆ. ಕೆಲವು ಕಸಬುಗಳಲ್ಲಿ ಅಪಾರವಾದ ಜನರು ತುಂಬಿಕೊಂಡಿದ್ದಾರೆ. ಈ ಪೈಕಿ ಲಾಯರುಗಳ ಕಸಬನ್ನೂ ಗುಮಾಸ್ತರ ಕಸಬನ್ನೂ ದೃಷ್ಟಾಂತವಾಗಿ ಸೂಚಿಸಬಹುದಾಗಿದೆ. ಸ್ವಭಾವಸಿದ್ಧವಾಗಿ ನೋಡಿದರೆ ರಾಷ್ಟ್ರವು ವ್ಯವಸಾಯ ಸೀಮೆಯಾಗಿದೆ. ಜಮೀನ್ದಾರರೂ ದೊಡ್ಡ ಮನುಷ್ಯರೂ ಮೋಟಾರ್ ಗಾಡಿಗಳಿಗೆ ಹಣ ಹಾಕಿ ಅವುಗಳಲ್ಲಿ ಕುಳಿತು ತಿರುಗುವುದಕ್ಕಿಂತಲೂ, ಎತ್ತು ಕಟ್ಟು ಮೊದಲಾದ ಆಭರಣವಾದ ಬೆಳೆಗಳನ್ನು ಹ್ಯಾಗೆ ಬೆಳೆಯಬಹುದೆಂಬುದೂ, ಸೇದ್ಯವನ್ನು ಅಭಿವೃದ್ಧಿಪಡಿಸುವುದಕ್ಕೂ, ಗೋಕಾಯಿಗಳನ್ನು ಪುಷ್ಟಿಕರವಾಗಿ ಸಾಕಿ ಬೆಳೆಸುವುದಕ್ಕೂ ಏನೇನು ಮಾಡಬೇಕೆಂತಲೂ ಯೋಚಿಸಿ, ಈ ಭಾಗದಲ್ಲಿ ಸಾಹಸಪಟ್ಟು ತಮ್ಮ ದ್ರವ್ಯವನ್ನು ವಿನಿಯೋಗಿಸುವುದು ಕ್ಷೇಮಕರವೂ ಅತ್ಯಂತಾವಶ್ಯಕವೂ ಆಗಿದೆ ಎಂತಲೂ ಕಾಣುತ್ತದೆ. ಇದರಿಂದ ರೈತನು ಪುಷ್ಟಿವಂತನಾಗಿ, ದೇಶದಲ್ಲಿ ಗೊಣಗಾಟಗಳು ನಿವಾರಣೆಯಾಗುವುವು. ಈಗ ಎಲ್ಲರೂ "ಸ್ವದೇಶೀ" ಎಂಬ ಮಾತನ್ನು ಕೇಳುತ್ತೇವೆ. ನೈಜವಾದ "ಸ್ವದೇಶಿ"ಯನ್ನು ಎಲ್ಲರೂ ಅನುಸರಿಸಬೇಕಾಗಿದೆ ಎಂಬುದೇ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಸಂಸ್ಥಾನದ ಸಮಸ್ತ ಸಬ್ ರಿಜಿಸ್ಟ್ರಾರುಗಳೂ ಸೆಷನ್ಸ್ ಮೊಕದ್ದಮೆಗಳಲ್ಲಿ ಜೂರರ್ ಅಥವಾ ಅಸೆಸರ್‌ಗಳಾಗಿ ಕರೆಯಲ್ಪಡಕೂಡದೆಂದು ವಿನಾಯತಿ ಮಾಡಲ್ಪಟ್ಟಿದ್ದಾರೆ.

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ ಮೆ॥ ಕೆ. ಎಸ್. ಚಂದ್ರಶೇಖರ ಐಯರವರಿಗೆ ಏಪ್ರೆಲ್ ೪ ರ ಲಾಗಾಯತು ೨॥ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರ ಗೈರ್ಹಾಜರಿಯಲ್ಲಿ ಮೆ॥ ಸಿ. ಎಸ್. ಬಾಲಸುಂದರಂ ಐಯರವರು ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯಾಗಿ ಕೆಲಸನೋಡತಕ್ಕದ್ದು.

ಹಂಗಾಮಿ ಸಬ್ ಅ॥ ಸರ್ಜನ್ ಮೆ॥ ಬಿ. ಕೃಷ್ಣಮಾಚಾರ್ಯರಿಗೆ ಏಪ್ರೆಲ್ ೧೧ ರಿಂದ ೧೨ ದಿನಗಳ ಸಂಬಳವಿಲ್ಲದ ರಜಾ ಕೊಟ್ಟಿದೆ.

ಮಾಗಡಿ ತಾಲ್ಲೂಕಿನ ಅಮಲ್ದಾರ್ ಮೆ॥ ಎನ್. ಗೋಪಾಲಕೃಷ್ಣಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅಮಲ್ದಾರ್ ಮೆ॥ ಬಿ. ವಿ. ನಾರಾಯಣರಾಯರು ರಜಾವಿಂದ ಬಂದು ಹಂಗಾಮಿಯಾಗಿ ಮಾಗಡಿ ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು.

ಮುಂದೆ ಹೇಳುವ ಅಮಲ್ದಾರರನ್ನು ಬಡ್ತಿ ಮಾಡಿದೆ:—ಮೆ॥ ವಿ. ಎನ್. ಗುರುರಾಯರು ೧ನೇ ಕ್ಲಾಸಿಗೆ; ಮೆ॥ ಸೈಯದ್ ಎಂ. ಏಸ್. ಪುಟ್ಟಣ್ಣನವರು, ಎಂ. ರಘುನಾಥರಾವ್, ಎಂ. ಕೃಷ್ಣಸ್ವಾಮಿ ಐಯಂಗಾರ್ರು ೨ನೇ ಕ್ಲಾಸಿಗೆ; ಮೆ॥ ಪಿ. ರಂಗರಾಯರು, ಮೆ॥ ಎಂ. ಕೃಷ್ಣರಾಯರು ೩ನೇ ಕ್ಲಾಸಿಗೆ.

ಮುಂದೆ ಹೇಳುವ ಶಿರಸ್ತೆದಾರರ ಬಡ್ತಿಯು ಮಾರ್ಚಿ ತಾ. ೨೩ ರಿಂದ ಮಂಜೂರುಮಾಡಲ್ಪಟ್ಟಿದೆ:—ಮೆ॥ ಕೆ. ಎಸ್. ನಾರಸಾಮಿ ಐಯಂಗಾರರು ೧ನೇ ಕ್ಲಾಸಿಗೆ, ಮೆ॥ ಸಿ. ಶ್ರೀಕಂಠೇಶ್ವರ ಐಯರವರು ೨ನೇ ಕ್ಲಾಸಿಗೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹರಿಹರದ ಸಬ್ ತಾಲ್ಲೂಕ್ ಆಕ್ಟಿಂಗ್ ಡೆಪ್ಟಿ ಅಮಲ್ದಾರ್ ಎಂ. ಎಸ್. ಜಯತೀರ್ಥರಾಯರು ದಾವಣಗೆರೆ ತಾಲ್ಲೂಕ್ ಛಾರ್ಜನ್ನು ನೋಡಿಕೊಳ್ಳತಕ್ಕದ್ದು.

ಮುಂದೆ ಹೇಳುವ ಅಮಲ್ದಾರರ ವರ್ಗಾವರ್ಗಿ ಹುಕುಂ ಮಾಡಿದೆ. ಮೆ॥ ಶ್ರೀ ನರಸಿಂಹಶಾಸ್ತ್ರಿಗಳನ್ನು ಕೊಪ್ಪದಿಂದ ತೀರ್ಥಹಳ್ಳಿ ತಾಲ್ಲೂಕಿಗೆ; ಮೆ॥ ಪಿ. ಸುಬ್ಬರಾಯರನ್ನು ತೀರ್ಥಹಳ್ಳಿಯಿಂದ ಕೊಪ್ಪ ತಾಲ್ಲೂಕಿಗೆ.

ಸ್ಯಾನಿಟರಿ ಡಿವಿಜನ್ ಸಬ್ ಅ॥ ಇಂಜನಿಯರ್ ಮೆ॥ ಎನ್. ಬಿ. ಕೃಷ್ಣಯ್ಯಂಗಾರ್ರಿಗೆ ಏಪ್ರೆಲ್ ೬ ರ ಲಾಗಾಯತು ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತಾಲ್ಲೋಕು ವರ್ತಮಾನಗಳು.

ಶಿವಮೊಗ್ಗ.—ಕೂಡ್ಲಿ ಜಾತ್ರೆಯೂ ಎತ್ತಿನ ಜಾತ್ರೆಯೂ ಬಹಳವಾಗಿ ಸೇರಿತ್ತು. ಒಂದು ದಿನ ಕೆಲವರು ನದೀ ತೀರದಲ್ಲಿ ಬುತ್ತಿ ಅನ್ನವನ್ನು ಉಂಡು ಒಬ್ಬರನ್ನೊಬ್ಬರು ತಾಂಬೂಲವನ್ನು ಕೇಳಿಕೊಳ್ಳಲು, ಪರಿಚಯಸ್ಥರಲ್ಲದ ಆ ಬೇರೆ ಕೆಲವರು ಕೂಡಲೆ ಅಂಗಡಿಯಿಂದ ವೀಳ್ಯದೆಲೆ ಅಡಿಕೆಯನ್ನು ತರಿಸಿ ಮೂವರು ತಾಂಬೂಲ ಸ್ನೇಹಿತರಿಗೆ ಕೊಡಲು, ಇವರು ತಿಂದರಂತೆ. ಕೂಡಲೆ ಒಬ್ಬ ಮುದುಕನಿಗೆ ಜ್ಞಾನ ತಪ್ಪಲು, ಬಾಕಿ ಯೌವನಸ್ಥರಿಬ್ಬರು ಮುದುಕನನ್ನು ಜಾತ್ರೆಯ ಗಾಡಿಗಳ ಬಳಿಗೆ ತಂದುಹಾಕಿದರು. ಅಂತೂ ಆ ಮುದುಕನು ಆ ರಾತ್ರಿಯೆಲ್ಲಾ ಕಷ್ಟಪಟ್ಟು ಬೆಳಿಗ್ಗೆ ಸತ್ತುಹೋದನು. ಇಷ್ಟರೊಳಗಾಗಿ ಸದರಿ ಯೌವನಸ್ಥರಿಬ್ಬರೂ ಹುಚ್ಚರಂತೆ ಮಾತಾಡುವುದಕ್ಕೆ ಪ್ರಾರಂಭವಾಯಿತು. ಬೇರೇ ಜನರು ಇವರನ್ನು ಕರೆದುಕೊಂಡು ರೆವ್. ಟಾಂಲಿನ್ಸನ್ ದೊರೆಯವರ ಡೇರಾ ಬಳಿಗೆ ಬಂದರು. ಅವರು ಕಾರ್ಯದ ಅದ್ಯಂತವನ್ನೂ ಚೆನ್ನಾಗಿ ವಿಚಾರಿಸಿ, ಪೋಲೀಸಿಗೆ ತಿಳುವಳಿಕೆ ಕೊಟ್ಟರು. ಮತ್ತು ಸತ್ತು ಬಿದ್ದಿರುವ ಹೆಣದ ಬಳಿಗೆ ಹೋಗಿ ನೋಡಿ ಬಹಳ ವ್ಯಸನಪಟ್ಟರು. ಇತ್ತ ಪೋಲೀಸಿನವರಾದರೋ ಉಂಡು ಉಟ್ಟು ತೇಗಿ ಮೆತ್ತಗೆ ಬಂದರು. ಬೆಳಿಗ್ಗೆ ಬಿದ್ದ ಹೆಣವು ಮಧ್ಯಾಹ್ನ ಎರಡನೆಯವರಿಂದ ತಿಳಿಯುವವರಿಗೂ ಪೋಲೀಸಿನ ಗೊತ್ತೇ ಇರಲಿಲ್ಲ. ಕಡೆಗೆ ಪೋಲೀಸಿನವರು ಮಹಜರ್ ಮಾಡಿಸಿ ಹೆಣವನ್ನೂ, ಜ್ಞಾನತಪ್ಪಿರುವ ಇಬ್ಬರನ್ನೂ ಶಿವಮೊಗ್ಗ ಆಸ್ಪತ್ರೆಗೆ ಕಳುಹಿಸಿದರು. ಅಷ್ಟು ದೊಡ್ಡ ಜಾತ್ರೆಗೆ ಪೋಲೀಸ್ ನಿಗಾ ಸಾಲದ್ದಾಗಿತ್ತೆಂದು ಹೇಳಬಹುದು.—ಕಳ್ಳರ್‍ಯಾರೋ ೩೦೦ ರೂಪಾಯಿ ಬಾಳತಕ್ಕ ಎರಡು ಎತ್ತುಗಳನ್ನು ಗುಪ್ತವಾಗಿ ಹೊಡೆದುಕೊಂಡುಹೋಗಿಬಿಟ್ಟರೆಂದು ಜನರು ಮಾತಾಡುತ್ತಿದ್ದರು.

ಶೆರಿಯಾಪಟ್ನ.—ಇಲ್ಲಿ ಸುಮಾರು ನಾಲ್ಕು ತಿಂಗಳ ಕೆಳಗೆ ಸಾಯುವುದಕ್ಕಾರಂಭವಾಗಿ, ಎರಡು ತಿಂಗಳ ಕಾಲ ಜನರನ್ನು ಬಿಟ್ಟಿತು. ಆದರೂ ಜನರೂ ಊರು ಮನೆಗಳನ್ನು ಬಿಡಲಿಲ್ಲ. ಈ ಸಂಗತಿಯನ್ನು ಇಲ್ಲಿ ಆಸ್ಪತ್ರೆ ಅಸಿಸ್ಟೆಂಟರಾದ ಮೆ|| ರಾಮಸ್ವಾಮಿ ಅವರು ತಿಳಿಸಿ ಜನಗಳಿಗೆ ಆದರಲ್ಲೂ ಬ್ರಾಹ್ಮಣರಿಗೆ ಸಾಕ್ಷ್ಯದು ಊರು ಬಿಟ್ಟು ಗುಡಿಸಲಿಗೆ ಹೋಗಿ ಎಂದು ತಿಳಿಸಿದರು. ಅವರು ಸಾಯುವವರಲ್ಲೇ ಆಗಿನ, ಪ್ಲೇಗ್ ಆಗಲಿಲ್ಲ, ಯಾಕೆ ಈಗಲೇ ಬೇಕು ಎಂದು ಹೇಳುತ್ತಾ ಮನೆಗಳಲ್ಲೇ ಇದ್ದರು. ಅಷ್ಟರಲ್ಲೇ ಒಂದು ಮನೆಯೊಳಗೆ ಇಬ್ಬರಿಗೆ ಪ್ಲೇಗ್ ತಗಲಿ ಕಾಲವಾದರು. ಆದರು ೬-೭ ಮನೆಗಳವರು ವಿನಹಾ ಉಳಿದವರೆಲ್ಲಾ ಊರು ಬಿಟ್ಟು ಗುಡಿಸಲುಗಳಲ್ಲಿ ವಾಸಮಾಡಲಾರಂಭಿಸಿದರು. ಜೋಪಡಿಗಳಿಗೆ ಹೋದ ಮೇಲೂ ಒಬ್ಬ ಹೆಂಗಸು ಕಾಲವಾದಳು. ಊರಲ್ಲಿ ಮೂರು ಮಂದಿ ಸತ್ತರು. ಜನರು ಗುಡಿಸಲುಗಳಲ್ಲಿದ್ದಾಗ್ಗೆ ಆನೆಕಲ್ಲಿನೊಡನೆ ಬಿದ್ದ ಮಳೆಯು ಬಲವಾಗಿ ಸುರಿದದ್ದರಿಂದಲೂ ಈಚೆಗೆ ಪ್ಲೇಗ ಕಡಿಮೆಯಾಗುತ್ತಿದ್ದದ್ದರಿಂದಲೂ ಜನರು ಊರು ಬಿಟ್ಟ ಒಂದು ತಿಂಗಳಿಗೇನೇ ವಾಪಸು ಮನೆಗಳಿಗೆ ಬಂದು ಸೇರಿಕೊಂಡರು. ಈಗ ೨೦ ದಿನಗಳಿಂದ ಎಲ್ಲಾ ಆರೋಗ್ಯವಾಗಿದೆ.—ಇಲ್ಲಿನ ಡಾಕ್ಟರು ೨೦ ತಿಂಗಳಿಂದಲೂ ತುಂಬಾ ಮಿತವರ್ತನೆಯಿಂದ ರೋಗಿಗಳಿಗೆ ಔಷಧಗಳನ್ನು ಕೊಡುತ್ತಾರೆ. ರೋಗಿಗಳ ವಿಷಯದಲ್ಲಿ ಇಷ್ಟು ಪ್ರೀತಿ ಕನಿಕರಗಳನ್ನು ತೋರಿಸಿದ ಆಸ್ಪತ್ರೆ ಅಸಿಸ್ಟೆಂಟರು ಇದುವರೆಗೆ ಇಲ್ಲಿಗೆ ಯಾರೂ ಬಂದಿಲ್ಲ. ಇವರು ಚಿಕ್ಕ ವಯಸ್ಸಿನವರಾದರೂ ಒಳ್ಳೇ ಅನುಭವವಾದ ಔಷಧಗಳನ್ನು ಕೊಡುವವರಲ್ಲದೆ ಅವಶ್ಯವಿರುವ ರೋಗಿಗಳ ಮನೆಗಳಿಗೂ ಹೋಗಿ ನೋಡಿಕೊಂಡು ಬರುತ್ತಾರೆ.—ಇಲ್ಲಿ ರೈತರು ಕಟಾವುಮಾಡಿ ದವಸವನ್ನು ಮನೆಗೆ ತಂದಿದ್ದರು. ಜನರು ಊರು ಬಿಟ್ಟು ಜೋಪಡಿಗಳಲ್ಲಿ ವಾಸಮಾಡುತ್ತಿದ್ದಾಗ ಕೋಟೆಯೊಳಗೆ ಒಬ್ಬ ವರ್ತಕನ ಮನೆಗೂ, ಪೇಟೆಯಲ್ಲಿ ೨-೩ ಮನೆಗಳಿಗೂ ಕಳ್ಳರು ಬಿದ್ದು ಸಿಕ್ಕಿದಷ್ಟನ್ನು ಸಾಗಿಸಿಕೊಂಡುಹೋದರು.

ತೀರ್ಥಹಳ್ಳಿ.—ಈ ಮಲೆನಾಡು ಪ್ರಾಂತ್ಯದಲ್ಲಿ ದಕ್ಷಿಣ ಕನ್ನಡಾ ಜಿಲ್ಲೆಯಿಂದ ಈ ಪ್ರಾಂತ್ಯಕ್ಕೆ ಬಂದು ಕೂಲೀ ಕೆಲಸ ಮಾಡಿ ಜೀವಿಸುವ ಜನರು ಕೋಳೀ ಕಾಳಗದಲ್ಲಿ ಪೂರಾ ಆಸಕ್ತಿಯುಳ್ಳವರಾಗಿದ್ದಾರೆ. ಎಷ್ಟೇ ಕಷ್ಟ ಬಡವರೇ ಆಗಿದ್ದರೂ ಒಂದೊಂದು ಕೋಳಿ ಸಂಬಂಧ ಒಂದೊಂದು ಒಂದುವರೆ ರೂಪಾಯಿನ ವರೆಗೂ ಬರೀದಿ ಕೊಟ್ಟುಕೊಂಡು ಅದನ್ನು ಸಾಕಿ ಅದರ ಕಾಲಿಗೆ ಸಣ್ಣ ಸಣ್ಣ ಕತ್ತಿಗಳನ್ನು ಕಟ್ಟಿ ಕಾಳಗಕ್ಕೆ ಬಿಡುವರು. ಈ ರೀತಿ ಬಿಟ್ಟ ಕೋಳಿಗಳು ಜಗಳ ಮಾಡುವಾಗ ಆ ಕತ್ತಿಗಳ ಪೆಟ್ಟಿನಿಂದ ಅವುಗಳಿಗೆ ಆಗುವ ಹಿಂಸೆಯೂ ಅಷ್ಟು ಸಾಧಾರಣವಲ್ಲವು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮೂಗು ಪ್ರಾಣಿಗಳನ್ನು ಹಿಂಸಿಸುವವರಿಗೆ ಶಿಕ್ಷೆ ವಿಧಿಸುತ್ತಾರೆ ಇದರಲ್ಲಿ ಇದನ್ನು ಈ ಪ್ರಾಂತ್ಯ ಜಾಸ್ತಿ ತಂದು ಈ ಕ್ರೂರ ಜನರಿಗೆ ಶಿಕ್ಷೆ ವಿಧಿಸಬೇಕು!—ತೀರ್ಥಹಳ್ಳಿ ತಾಲ್ಲೂಕು ತಂಗನ ಸಮೀಪದ ಒಂದು ಗ್ರಾಮದ ಮಂಜಣ್ಣಾ ಶೆಟ್ಟರ ಮನೆಯಲ್ಲಿ ಸುಮಾರು ಎಂಟು ದಿನಗಳ ಹಿಂದೆ ದರೋಡೆ ಕಳವು ನಡೆಯಿತು. ಈ ಪ್ರಾಂತ್ಯ ಒಂದೆರಡು ಮನೆಗಳಿದ್ದರೆ ಅದಕ್ಕೆ ಒಂದೊರಡು ಮೈಲು ದೂರ ಆ ಮಂಜಣ್ಣ ಶೆಟ್ಟಿ ಅವನ ತಾಯಿಯೂ ಮಗನೂ ರಾತ್ರಿಯಲ್ಲಿ ನಿದ್ರೆ ಮಾಡುತ್ತಿರುವಾಗ ಸುಮಾರು ೩೦ ಕಳ್ಳರು ಉಪಾಯಾಂತರದಿಂದ ಒಳಗೆ ಪ್ರವೇಶಿಸಿ ನಿದ್ದೆಯಲ್ಲಿದ್ದವರ ಮೇಲೆ ಬಿದ್ದು ಮನೆಯವರನ್ನು ಕಟ್ಟಿಹಾಕಿ ಕೊಡಲಿಯಿಂದ ಬಲಿಹೊಡೆಯಲಾರಂಭಿಸಲು ಮಂಜಣ್ಣನ ಮಗನು ಪೆಟ್ಟನ್ನು ತಡೆಯಲಾರದೆ ಹಣವನ್ನು ಇಟ್ಟಿದ್ದ ಸ್ಥಳವನ್ನು ತೋರಿಸಿದ್ದರಿಂದ ಕಳ್ಳರು ನಗದು ಸಾವಿರ ರೂಪಾಯಿ ಒಡವೆ ಸುಮಾರು ಐನೂರು ರೂಪಾಯಿನ ಮಾಲನ್ನು ತೆಗೆದುಕೊಂಡು ಪರಾರಿಯಾದರು. ಅದು ಪೊಲೀಸಿನವರಿಗೆ ರಿಪೋರ್ಟಾದದ್ದರ ಮೇಲೆ ಈಗ್ಗೆ ಒಂದು ವಾರದಿಂದಲೂ ಪೊಲೀಸಿನವರು ಆ ಪ್ರಾಂತ್ಯ ಕಳವು ಮಾಡಿದವರನ್ನು ತಲಾಷು ಮಾಡುತ್ತಿದ್ದಾರೆಂದು ಕೇಳುತ್ತೇನೆ.—ಪ್ಲೇಗಿನ ದೆಸೆಯಿಂದ ಊರು ಬಿಟ್ಟು ಹೋಗಿದ್ದವರೆಲ್ಲಾ ಈಗೀಗ ಊರನ್ನು ಸೇರುತ್ತಲಿದ್ದಾರೆ. ಬಿಸಲಿನ ತಾಪ ಹೆಚ್ಚಾಗಿದೆ. ಮೋಡಮಾಡುತ್ತಲಿದ್ದರೂ ಈ ಪ್ರಾಂತ್ಯ ಇನ್ನೂ ಮಳೆ ಬರಲಿಲ್ಲ.

ಹರಿಹರ.—ಹರಿಹರ ಸಬ್ ತಾಲ್ಲೂಕು ನಂದಿಗುಡಿ ಜಾತ್ರೆಯು ಈ ಮಾರ್ಚಿ ತಾ ೨೦ ರಿಂದ ೧೭ ವರೆಗೆ ನಡೆಯಿತು. ಈ ಗ್ರಾಮವು ತುಂಗಭದ್ರಾ ತೀರದಲ್ಲಿರುವದರಿಂದ ದನಕರಗಳಿಗೆ ನಿಲ್ಲುವುದಕ್ಕೆ ನೀರಿಗೂ ಮೇವಿಗೂ ಸುಖವಾದಷ್ಟು ಸೌಕರ್ಯವಾದ ಪ್ರಧಾನ ಸ್ಥಳವಾಗಿರುತ್ತೆ. ಈ ಸ್ಥಳದಲ್ಲಿ ಪ್ರತಿ ವರ್ಷವೂ ಜಾತ್ರೆ ಆಗುತ್ತೆ. ಈಗ ಅಭಿವೃದ್ಧಿಯಲ್ಲಿ ಬರುತ್ತಿದೆ ಎಂದು ಕೇಳಬರುವದಾಗಿದೆ. ಈ ಜಾತ್ರೆ ಸಮಯಕ್ಕೆ ಈ ಹರಿಹರದ ಡೆಪ್ಯುಟಿ ಅಮಲ್ದಾರು ತಿಳಿವಳಿಕೆಯ ಮೇಲೆ ಗೋಕಾಯಿಗಳ ಪ್ರದರ್ಶನವೂ ಮತ್ತು ವ್ಯವಸಾಯಕ್ಕೆ ಉಪಯುಕ್ತವಾದ ಬೀಜಗಳು ಮತ್ತು ಆಯುಧಸಾಮಗ್ರಿಗಳ ಪ್ರದರ್ಶನವೂ ನಡೆಯಿತು. ಇದಕ್ಕೋಸ್ಕರ ಎತ್ತರವಾದ ಮತ್ತು ಅಂದವಾದ ಚಪ್ಪರವನ್ನು ಹಾಕಿಸಿತ್ತು. ಇದರಲ್ಲಿ ಸಾಲಾಗಿ ಕ್ರಮಾನುಸಾರ ಗೋವುಗಳನ್ನೂ ಬಿತ್ತನೆ ಧಾನ್ಯ, ನೇಗಿಲು ಮುಂತಾದವುಗಳನ್ನೂ ಇಟ್ಟು ಪ್ರದರ್ಶನ ನಡೆಯಿತು. ಇದರಲ್ಲಿ ಉತ್ತಮವಾದವುಗಳಿಗೆ ಯೋಗ್ಯತಾ ಪತ್ರಿಕೆಗಳೊಡನೆ ಬಹುಮಾನವೂ ದೊರಕಿತು. ಇಲ್ಲಿಗೆ ಚನ್ನಗಿರಿ, ರಾಣೆಬೆನ್ನೂರು, ಶಿರಾಳ, ಹರಿಹರ, ದಾವಣಗೆರೆ ಪ್ರಾಂತ್ಯದಿಂದ ಸುಮಾರು ೬,೦೦೦ ದನಗಳ ವರೆಗೆ ಬಂದು ಸೇರಿದ್ದವು. ಇದು ಜೊತೆ ೧ ಕ್ಕೆ ೩೦ ರ ರಿಂದ ೫೦೦ ರೂಪಾಯಿವರೆಗೆ ಮಾರಲ್ಪಡುತ್ತಿದ್ದುವು. ಈ ಪ್ರದರ್ಶನಕ್ಕೆ ವಿಚಿತ್ರ ಸೃಷ್ಟಿ, (ಅಂದರೆ, ಕಣ್ಣು ೩, ಮುಖ ೧, ಬಾಲ ೨, ಕಾಲುಗಳು ೬ ಉಳ್ಳ ಆಕಳು) ಬಂದಿತ್ತು. ಅದಕ್ಕೆ ಮಲಮೂತ್ರ ವಿಸರ್ಜನೆ ೨ ಕಡೆ ಆಗುತ್ತಿತ್ತು. ಅದಕ್ಕೆ ಬಹುಮಾನವು ದೊರಕಿತು. ಈ ಜಾತ್ರೆಗೆ ಡೆಪ್ಯುಟಿ ಕಮಿಷನರು ಹಾಗೂ ಅಸಿಸ್ಟೆಂಟು ಕಮಿಷನರು ದಯಮಾಡಿಸಿದ್ದರು. ತಾ ೧೭ ರಲ್ಲಿ ಸಭೆ ನಡೆಯಿತು. ಅಗ್ರಾಸನಾಧಿಪತಿಗಳಾದ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಬಹುಮಾನಗಳು ಕೊಡಲ್ಪಟ್ಟವು. ಈ ಸಭೆಯಲ್ಲಿ ದನ ಸಂರಕ್ಷಣೆ, ಚಿಕಿತ್ಸೆ, ಔಷಧ ಹಾಕಿಸುವದು, ಗೊಬ್ಬರದ ಉಪಯೋಗ, ಇವುಗಳು ರೈತಾಪಿ ಜನಗಳಿಗೆ ತಿಳಿಯುವಂತೆ ಉಪನ್ಯಾಸ ಮಾಡಲ್ಪಟ್ಟವು. ಈ ಜಾತ್ರೆಗೆ ನಾನಾ ಕಡೆಯಿಂದ ಸುಮಾರು ೧೫,೦೦೦ ಜನಗಳ ವರೆಗೂ ಬಂದು ಸೇರಿರಬಹುದು. ಅವರವರ ವಸತಿಗೆ ಅನುಕೂಲವಾದ ಗೃಹಗಳನ್ನು ಹೆಚ್ಚು ಅಮಲ್ದಾರರೇ ಚಪ್ಪರ ಮುಂತಾದವುಗಳಿಂದ ಏರ್ಪಡಿಸಿದ್ದರು. ಜಾತ್ರೆಗೆ ಬಂದ ಜನಗಳಿಗೂ ಮತ್ತು ದನಗಳಿಗೂ ನೀರು ಸಾಕಾಗುವಷ್ಟು ಆಹಾರ ಮುಂತಾದವುಗಳನ್ನು ಅಲ್ಲಿಯ ಶ್ರೀ ಶಿವನಂಜುಂಡ ದೇಶಿಕೇಂದ್ರ ಸ್ವಾಮಿಗಳವರು ಶ್ರದ್ಧೆಯಿಂದ ಸಾಕಿಸಬಿಟ್ಟು ಒದಗಿಸಿದ್ದರು. ಇವರ ಆತಿಥ್ಯ ಜನರಿಗೆ ಹಿತಕರವಾಗಿದ್ದದ್ದರಿಂದ ಇವರನ್ನು ಬಹಳ ಕೊಂಡಾಡುವರು. ಕೃಷಿ ನೇಗಿಲಿನ ಉಪಯೋಗವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರು ಖುದ್ದಾಗಿ ರೈತಾಪಿ ಜನಗಳಿಗೆ ತೋರಿಸಿ ಅನುಭವಕ್ಕೆ ತಂದಿರುತ್ತಾರೆ.—ಹರಿಹರದಲ್ಲಿ ಊರಮ್ಮನ ಜಾತ್ರೆ ನಡೆಯಿತು. ಹವಾ, ಬಿಸಲಿನ ತಾಪ ಜಾಸ್ತಿ. ಸಾಯಂಕಾಲ ನೋಡುವಾಗ್ಗೆ ಆರೋಗ್ಯ ಈಗಿರಾನೇ ಚಳಿ, ಜ್ವರ, ಕಿಡುಬು, ಅಂಟುಜಂಕೆ ತಲೆದೋರುತ್ತಿವೆ. ಇದು ಕಲ್ಲಂಗಡಿ ಕರಬೂಜ ಹಣ್ಣಿನ ಫಲವಾಗಿರಬಹುದು. ಮ್ಯುನಿಸಿಪಾಲಿಟಿ ಗ್ರಾಮ ಹಾಕೀಜೆದೆ. ರಾತ್ರಿಯಲ್ಲಿ ಅಂಗಡಿ ಬೀದಿ, ರಾಜಬೀದಿ ಹೊರ್ತು ಇತರ ಬೀದಿಗಳಲ್ಲಿ ದೀಪ ಪ್ರಕಾಶವಿಲ್ಲದೆ ಕತ್ತಲಲ್ಲಿ ಲಾಂದ್ರಕಂಭ ಮಾತ್ರ ನಿಂತಿರುತ್ತೆ. ಮ್ಯುನಿಸಿಪಲ್ ಕಂದಾಯ ಮಾತ್ರ ಸ್ವಜಿಗೆಯಿಂದ ವಸೂಲಾಗುತ್ತೆ.—ಸ್ಕೂಲುಗಳ ಪರೀಕ್ಷೆಯು ಕಾರ್ಯಕಾರವಂತೆ ನಡೆಯಿತು ಎಂದು ಸರ್ಕಲ್ ಇನ್ಸ್‌ಪೆಕ್ಟರವರು ಬಂದಿದ್ದರಿಂದ ತಿಳಿಯಬರುತ್ತೆ.—ರವಿನ್ಯೂ ಕಂದಾಯವು ಎಂದು ಬಿಸ್ತು ವಸೂಲಾಯಿತು. ಪಟೀ ಹಾರಿಕೆ ಪ್ರತಿ ದಿನಸು ಜಾಸ್ತಿಯಾಗುತ್ತಿದೆ. ಇದರಿಂದ ಬಡಬಗ್ಗರಿಗೆ ಜ್ಞಾಪದ ಭಯ ಉಂಟಾಗುವಂತಿದೆ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾನ್ನವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ.—ಟಿಸ್ಸಿನಲ್ಲಿ ಥಳುಕು, ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಲುವಾಗಿಯೋ ಇರುವುದು; ಬೆವರೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈ ನೋವು ಕೀಲುನೋವು, ಮರವು; ನಿತ್ರಾಣ, ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ನೈಜಾವು, ಬಹುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾನ್ನವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [93-33]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨-೧೦-೦, ಅಥವಾ ೬ ಬುಡ್ಡಿಗಳಿಗೆ ರೂ. ೧೧-೮-೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ, ಇವರಲ್ಲಿ ದೊರೆಯುವುದು.

ಹೊಸಪಂಡಿತ ಭೀಮರಾಯರು ರಚಿಸಿರುವ

ವೈದ್ಯಸಂಗ್ರಹ.

36-1

ನಮ್ಮ ತಂದೆ ಹೊಸಪಂಡಿತ ಭೀಮರಾಯರು ಲೋಕೋಪಕಾರಾರ್ಥವಾಗಿ ಈ ವೈದ್ಯಸಂಗ್ರಹವನ್ನು ರಚಿಸಿ, ೬೦ ವರ್ಷಗಳ ಹಿಂದೆ ಮೈಸೂರು ಗೌರ್ನವೆಂಟ್ ಮುದ್ರಾಕ್ಷರಶಾಲೆಯಲ್ಲಿ ಉತ್ತಮಕಾಗದ, ಸ್ಫುಟಾಕ್ಷರಗಳಿಂದ ಮುದ್ರಿಸಿದ್ದಾರೆ. ಕೆಲವು ಪ್ರತಿಗಳು ಮಾತ್ರ ಉಳಿದಿರುವ ಈ ಗ್ರಂಥದಲ್ಲಿ ನಮ್ಮ ತಂದೆ ವಿಜ್ಞಾಪಿಸಿರುವ ಕೆಳಗಿನ ಸಂಗತಿಯಿಂದ ಗ್ರಂಥವಿಚಾರವೆಲ್ಲಾ ಅತ್ಯಂತವಾಗಿ ವಾಚಕರಿಗೆ ವೇದ್ಯವಾಗುವದು:—"ವೈದ್ಯಸಂಗ್ರಹವೆಂಬ ಗ್ರಂಥವನ್ನು ಮುಂದೆ ವಿವರಿಸುತ್ತೇನೆ. ನನ್ನಲ್ಲಿ ವೈದ್ಯ ವಿದ್ಯಾಭ್ಯಾಸ ಮಾಡಿ ಕ್ವಿಪ್ನವಾದ ಶಾಮಶಾಸ್ತ್ರಿಯು ನನ್ನ ವಿಷಯವಾಗಿ ಬರೆದಿರುವ ಪುಸ್ತಕವನ್ನೂ ಅನಂತರ ನಾನು ಉತ್ತರದೇಶಕ್ಕೆ ಸಂಚಾರಕ್ಕೋಸ್ಕರವಾಗಿ ಅನೇಕ ಸಂಸ್ಥಾನಗಳಲ್ಲಿ ಸಭೆಯಂ ಮಾಡಿ ಅಲ್ಲಿ ವಿದ್ವತ್ಪರೀಕ್ಷೆಯಂ ಮಾಡಿ ಕೊಟ್ಟಿರುವ ಮರ್ಯಾದೆಗಳನ್ನೂ ಇದರ ಒಳಗೆ ಸೇರಿಸಿ, ಲೋಕೋಪಕಾರಾರ್ಥವಾಗಿ ಇದರಲ್ಲಿ ಶಾರೀರಲಕ್ಷಣ, ದಿನಚರ್ಯ, ಋತುಚರ್ಯ, ನಾಡಿಯಿಂದ ಭೂತಭವಿಷ್ಯದ್ವರ್ತಮಾನ, ರೋಗಪರೀಕ್ಷೆ, ಔಷಧ ಮಾಡುವ ಲಕ್ಷಣ, ಸ್ವಪ್ನಾರಿಷ್ಟ, ರೋಗಾರಿಷ್ಟ, ನಾಡಿಯಿಂದ ಅರಿಷ್ಟ, ಸೂಚಕ, ಇವುಗಳನ್ನು ತಿಳಿದು, ಔಷಧಿ ಕೊಡುವ ಲಕ್ಷಣವೇ ಮೊದಲಾದ ಅನೇಕ ವಿಷಯಗಳನ್ನು ಬಲಿತವಾದ ಕನ್ನಡದಲ್ಲಿ ವಿವರಿಸಿದ್ದೇನೆ" ಎಂದು ಬರೆದಿರುತ್ತಾರೆ. ಈ ಅಪೂರ್ವ ಗ್ರಂಥವನ್ನು ಪಡೆಯಬಯಸುವವರು ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ಮೊದಲು ಇದ್ದ ಕ್ರಯ ೩ ರೂಪಾಯಿ, ಈಗ ಕ್ರಯ ರೂ. ೨-೮-೦. ೨೦ ಪ್ರತಿ ತರಿಸುವವರಿಗೆ ೧ ಪ್ರತಿ ಇನಾಮು. ಈ ಪುಸ್ತಕದ ಕೊನೆಯಲ್ಲಿ ಕಾಂಸ ೬ನೇ ಭಾಗ ತಯಾರಾಗಿಲ್ಲ. ನನ್ನ ವಿಳಾಸ—

ಹೊಸಪಂಡಿತ ಕೇಶವಗಿರಿರಾವ್, ಕಿಲ್ಲೆ, ಮೈಸೂರು.

ಹಾಸನದ ಟೋಪಿ ಬೇಕೇ?

117-25

ನಂಬರ್ ೧ ಹಾಸನ ಟೋಪಿ ಡಜನ್ ೧ ಕ್ಕೆ ರೂ. ೧೩-೦-೦ ಸಾದಾ ಕೆಂಪು ಕಪ್ಪು ಬೆರಿಕೆ, ಕಾಪಿ ನೀಲಿ ಟೋಪಿಗಳು ೧ ಕ್ಕೆ ರೂ. ೧-೬-೦, ೧-೪-೦. ಚುಕ್ಕೆಯುಳ್ಳ ಟೋಪಿಗಳು ೧ ಕ್ಕೆ ರೂ. ೧-೪-೦, ೧-೨-೦. ಮೈಸೂರು ಟೋಪಿ ಡಜನ್ ೧ ಕ್ಕೆ ರೂ. ೪-೦-೦. ಸಾದಾ ಟೋಪಿಗಳು ಡಜನ್ಕ್ಕೆ ರೂ. ೬-೬-೦ ಸಾದಾ Chaapir ಡಜನ್ ೧ ಕ್ಕೆ ರೂ. ೬-೬-೦. ೧೦ ಟೋಪಿ ಆಗುವ ಉಲ್ ಡಾರಕ್ಕೆ ರೂ. ೩-೪-೦. —ನಮ್ಮ ವಿಳಾಸ:—

ಪ್ರೊಪ್ರೈಟರ್, ದಿ ಉಲ್ ಮಾರ್ಟ್, ಮಂಗಳೂರು.

ದೇಶಬಾಂಧವರೇ! ಲಾಲಿಸಿ!!

128-21

ಸ್ವದೇಶೀ ಭಾವನೆಯು ಎಲ್ಲೆಲ್ಲಿಯೂ ಹರಡಿದೆ. ಆದ್ದರಿಂದ ಕರ್ನಾಟಕ ರಾಜ್ಯದವರೆಲ್ಲರು ಪ್ರಸಿದ್ಧವಾದ ಮಧುರೆಯಲ್ಲಿ ಹೆಸರು ವಾಸಿಯಾದ ಗಟ್ಟಿ ಮತ್ತು ಗ್ಯಾರಂಟಿ ಬಣ್ಣದ ಎರಡುವರೆ ಮೊಳದಗಲ ಹದಿನಾರುವರೆ ಮೊಳಕ್ಕೆಂತ ಜೆಚ್ಚಾದ ಉದ್ದವುಳ್ಳ ಕೆಂಪು ಅಥವಾ ಕಪ್ಪು ಬಣ್ಣದ ಬಸು ಸೀರೆಗಳು ಮತ್ತು ನವನಾಜ ಬೇಸಿಗೆಗೂ ಸಹ ಬಹಳ ಉಪಯೋಗವಾದ ಬಿಂಧರ ಸೀರೆಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತಾ ದುದರಿಂದ ಕೂಡಲೆ ನಮಗೆ ಬರೆದು ತರಿಸಿಕೊಳ್ಳಿ. ವ್ಯಾಪಾರಸ್ಥರು ಸಹಾ ತರಿಸಿ ಮಾರುವಷ್ಟು ಸುಲಭಕ್ರಯ. ಸಾದಾ ಕ್ರಯ ರೂ. ೨-೪-೦. ಬೆಳಿಯ ಚುಕ್ಕೆ ಜರಿ ಮತ್ತು ಗಳಿಂದ ಕೂಡಿದ್ದು ರೂ. ೩-೪-೦. ಬಹಳ ನಯವಾದ ಮತ್ತು ನಾಜೋಕಾದದ್ದು ರೂ. ೫, ರೂ. ೬

ಪುದುಚ್ಚೇರಿ ರೇಷ್ಮೆ ವಸ್ತ್ರಗಳು.

೭ ಮೊಳಗಲ, ಹಾಲ್ಕುಮೊಳದುದ್ದ, ರೂ. ೫. ಬೇಸಿಗೆಯ ಹೊಸಗಾದ ಜಂಪೀರಸ್ ರೂ. ೭. ಮಾಂಬಿ ಪಂಚೆ ೪ ಮೊಳದುದ್ದ ರೇಷ್ಮೆ ಅಂಚು ಜೊತೆ ೧ ಕ್ಕೆ ರೂ. ೪ ಸಾದಾ ರೂ. ೩||, ರೂ. ೩.

ವಿಳಾಸ:—ರಾವ್ ಎಂಪೋರಿಯಂ, ಸ್ವೆರ್ಡಹಾಂ ರೋಡ್,

ವೇಪೇರಿ, ಮದ್ರಾಸು.

ತುಂಕೂರು ನೋಟೀಸ್.

39-2

ತುಂಕೂರಿನಲ್ಲಿ ರುವ ಜಿ. ಯಸ್. ಕಣ್ಣಯ್ಯಶೆಟ್ಟಿ ಎಂಬ ನಾನು ಇಗರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ನಾನು ಕೆಲವು ಕಾಲದಿಂದ ಟೋಪಿ ಮಾಡಿಸಿ ಮಾರುವದರಲ್ಲಿ ನನ್ನ ಮೋಲ್ವಿಳಾಸಕ್ಕೆ ಮಿರ್ಜ ಎಂಬ ಹೆಸರನ್ನು ತಿಳಿಯದೆ ಸೇರಿಸಿದ್ದೇನೆ. ಈಗ ಬಹಳ ವರುಷದಿಂದ ಈ ದೇಶದಲ್ಲಿ ಇರುವಂಥಾ ಪೆನ್ಸಿಯರ್ ಮಿರ್ಜ ಎಂಬುವರಿಗೂ ನನಗೂ ಏನೇನೂ ಸಂಬಂಧವಿರುವದಿಲ್ಲವಾದದರಿಂದ ಇಂದಿನಿಂದ ಈ ಮಿರ್ಜ ಎಂಬ ಹೆಸರನ್ನು ಸಂಪೂರ್ಣವಾಗಿ ಬಿಟ್ಟು ಅದನ್ನು ಉಪಯೋಗಿಸದೆ ಬಿಟ್ಟಿರುತ್ತೇನೆ.

(ಸೈ.) ಜಿ. ಯಸ್. ಕಣ್ಣಯ್ಯಶೆಟ್ಟಿ,

ಉಲ್ಲನ್ ಅಂಡ್ ಸ್ಟೇಷನರಿ ಮರ್ಚಂಟು, ತುಂಕೂರು.

ಹೊಸವರ್ಷ! ಹೊಸ ಮಾಸಪತ್ರಿಕೆ!

"ಕರ್ಣಾಟಕ ಚಂದ್ರಿಕೆ."

31 2

ವಾರ್ಷಿಕ ಚಂದಾ ರೂ. ೧, ಅಂಚೆ ಹಾಸಲು ಸೇರಿ ರೂ. ೧-೩-೦

ಈ ಉತ್ತಮತರದ ಮಾಸಪತ್ರಿಕೆಯು ಪ್ರೌಢವಿದ್ವಾಂಸರ ಸಹಾಯದಿಂದ ಪ್ರತಿ ಪೂರ್ಣಿಮೆಯಾ ಪ್ರಕಟಿಸಲ್ಪಡುತ್ತಿದೆ. ಇದು ಬಾಲಯರಿಗೂ ಬಾಲಕರಿಗೂ ಮುಖ್ಯವಾಗಿ ಪ್ರತಿ ಒಬ್ಬ ಕುಟುಂಬಿಗರಿಗೂ ಅತ್ಯಂತೋಪಯುಕ್ತವಾದದು. ಜೊತೆಗೆ ಪದ್ಯ ವಚನಕಾವ್ಯಗಳೂ ಪ್ರಹಸನ (ನಕಲಿ)ಗಳೂ ಕಾದಂಬರಿ (ಕಥೆ)ಗಳೂ ಸ್ತ್ರೀಯರಿಗೆ ಅತ್ಯವಶ್ಯಕವಾದ ಅನೇಕ ವಿಷಯಗಳೂ ಇದರಲ್ಲಿ ಅಡಕವಾಗಿವೆ. ಅಲ್ಲದೆ ಗ್ರಂಥಗಳಿಗೆ ಬೇರೆಬೇರೆ ಪುಟಸಂಖ್ಯೆಯನ್ನು ಕೊಡುವುದರಿಂದ ಪ್ರತ್ಯೇಕವಾಗಿ ಬೈಂಡ್ ಕಟ್ಟಿಸಿಕೊಳ್ಳುವುದಕ್ಕೆ ಅನುಕೂಲವಾಗಿವೆ. ಚಂದಾದಾರರಿಗೆ ೭ ಅಂಕದ 'ಪ್ರಿಯದರ್ಶಿಕಾ' ಎಂಬ ನಾಟಕವನ್ನೂ, ೭ ಅಂಕದ 'ಸತ್ಯವತೀ ಚರಿತ್ರೆ' ಎಂಬ ಪೂರ್ಣವನ್ನ ಪದ ವಿಚಿತ್ರವಾದ ಕಥೆಯನ್ನೂ ೭ ಅಂಕದ 'ಉತ್ತರಸೀತಾಚರಿತ್ರೆ'ಯನ್ನೂ ಉಚಿತವಾಗಿ ಕಳುಹಿಸುತ್ತೇವೆ. ಇದು ಜನ ಚಂದಾದಾರರನ್ನು ಸೇರಿಸಿಕೊಟ್ಟವರಿಗೆ ಮೇಲ್ಕಂಡ ಬಹುಮಾನಗಳಲ್ಲದೆ ಪತ್ರಿಕೆಯನ್ನು ಅರ್ಧ ಚಾರ್ಜಿಗೆ ಕಳುಹಿಸುತ್ತೇವೆ. ೧೦ ಜನರನ್ನು ಸೇರಿಸಿಕೊಟ್ಟವರಿಗೆ ಪತ್ರಿಕೆಯನ್ನೂ ಮೇಲ್ಕಂಡ ಪುಸ್ತಕಗಳನ್ನೂ ಉಚಿತವಾಗಿ ಕಳುಹಿಸುವುದಲ್ಲದೆ ೪ ಅಂಕ 'ಸೀತಾಚರಿತ್ರೆ' ೬ ಅಂಕ 'ಕೃಷ್ಣವಿಜಯ,' ೩ ಅಂಕ 'ಸ್ತೋತ್ರಮಾಲಿಕೆ' ಇವನ್ನೂ ಉಚಿತವಾಗಿ ಕಳುಹಿಸುತ್ತೇವೆ. ಮಾದರಿ ಸಂಚಿಕೆ ಅಪೇಕ್ಷಿಸುವವರು ಒಂದಾಣೆ ಸ್ಟಾಂಪಿಟ್ಟು ಬರೆದುಕೊಂಡರೆ ಕಳುಹಿಸುವೆವು. ಇಂತಹ ಸುಸಮಯವು ಮುಂದೆ ಸಿಕ್ಕಲಾರದು! ಈಗಲೇ ಚಂದಾದಾರರಾಗುವವರಿಗೆ ಮಾತ್ರ ಮೇಲ್ಕಂಡ ಬಹುಮಾನಗಳು ಸಿಕ್ಕುವುವು!! ಜಾಗ್ರತೆಯಾಗಿ ಬರೆದುಕೊಳ್ಳಿರಿ! ನಿಮ್ಮ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ! ನಮ್ಮ ವಿಳಾಸ—

ಆರನೂರೆನೆಯ ವಿದ್ವಾಂಸ ನಂಜನಗೂಡು ಶ್ರೀಕಂಠಶಾಸ್ತ್ರಿ,

ಎಡಿಟರ್, ಕರ್ಣಾಟಕ ಚಂದ್ರಿಕೆ, ಕೃಷ್ಣರಾಜಮೊಹಲ್ಲಾ, ಮೈಸೂರು.

ಕೆನಡಾದಲ್ಲಿ ಪೆರೂನಾ ಸೇವನೆ ಮಾಡುವ ಒಂದಾನೊಂದು ಸಂಸಾರವು.

ಪೆರೂನಾವನ್ನು ಸಕಾಲದಲ್ಲಿ ಕೆಲವು ಹೊತ್ತು ಕೊಟ್ಟರೆ ದೊಡ್ಡ ಕಾಯಿಲೆಗಳನ್ನೆಲ್ಲಾ ಅದು ನಿವಾರಣೆ ಮಾಡಬಲ್ಲದೆಂದು ಮಕ್ಕಳುಳ್ಳ ಅನೇಕ ಸ್ತ್ರೀಯರು ಕಂಡುಕೊಂಡಿರುತ್ತಾರೆ.



ಮಿಸೆಸ್ ಎಟ್ಟಾ ಬೂಕರ್, ಹಂಬರ್, ಬ್ಯಾ, ಎಗ ಡಬ್ಲ್ಯು ಟಿ ಕ್ಯಾನ್, ಈಕೆ ಬರೆಯುವುದು —"ನನ್ನ ದೇಹದೊಳಗೆ ಹೃತ್ಪರೋಗವು ಹುಟ್ಟಿ ನರಳಿದೆನು. ಕಡೆಗೆ ಡಾ॥ ಹಾರ್ಟ್‌ಮನ್‌ರನ್ನು ಕರೆಸಿಕೊಂಡು, ಅವರು ಹೇಳಿದ ಔಷಧವನ್ನು ಸೇವನೆ ಮಾಡಿದ್ದರಿಂದ ನನ್ನ ಕೆಟ್ಟ ರೋಗವು ನಿವಾರಣೆಯಾಯಿತು. ಇದಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞಳಾಗಿರುತ್ತೇನೆ. ಹೃತ್ಪರೋಗಕ್ಕೆಲ್ಲಾ ಪೆರೂನಾ ಉತ್ತಮೋತ್ತಮವಾದ ಔಷಧವೆಂದು ನನಗೆ ತೋರುವುದು. ಈಗ ನನಗಿರುವಷ್ಟು ಸೌಖ್ಯವು ಲವಲೇಶವಾದರೂ ಹಿಂದೆ ಯಾವಾಗಲೂ ಇರಲಿಲ್ಲ.

ಮಿಸೆಸ್ ಬೂಕರ್ ಬರೆದಿರುವ ಇನ್ನೊಂದು ಕಾಗದದಲ್ಲಿ ಈಕೆ ಹೇಳುವುದೇನೆಂದರೆ —"ಪೆರೂನಾ ಮಹಾ ಆಶ್ಚರ್ಯವಾದ ಔಷಧವೆಂದು ಅನುಭವಪೂರ್ವಕವಾಗಿಯೂ ಯಥಾರ್ಥವಾಗಿಯೂ ಹೇಳಬಲ್ಲೆನು. ನನ್ನ ಮಗಳು ಎಷ್ಟು ಬೇಗನೆ ಎಷ್ಟು ಚೆನ್ನಾಗಿ ಆರೋಗ್ಯವಾಗಬೇಕೆಂದು ನಾನು ನಿರೀಕ್ಷಿಸಿದ್ದೆನೋ ಅಷ್ಟು ಒಳ್ಳೆಯದಾಯಿತು. ಆದ್ದರಿಂದ ಅವಳಿಗೆ ವಾಸಿಯಾದ ವಿಷಯವನ್ನು ನೀವು ಪ್ರಕಟಿಸಬಹುದೆಂದು ಧಾರಾಳವಾಗಿ ಹೇಳುತ್ತೇನೆ" [31 ೬]

"ಕ್ಷೀಣವಾದ ಎಳೆಯ ನನ್ನ ಮಗು ನರಳುತ್ತಿದ್ದನ್ನು ನೋಡಿ ಇದನ್ನು ಸೇವಿಸಿದಂದಿನಿಂದ ಅವಳಿಗೆ ಆರೋಗ್ಯವಾಯಿತು. ಅವಳಿಗೆ ಬಲ ಉಂಟಾಯಿತು. ಆರು ಟಿನ್‌ಗಳನ್ನು ಖರ್ಚುಮಾಡಿದ್ದೇನೆ. ಈಗ ಈ ಮಗುವನ್ನು ನೋಡಿದರೆ ಚಿತ್ರಕ್ಕೆ ಯೋಗ್ಯವಾದ ಮಗುವಿನಂತೆ ಕಾಣುತ್ತಾಳೆ"

ಅಜೀರ್ಣವಿದ್ದ ಮಗು

ಮಿಸೆಸ್ ಜೆ [illegible] ಬ್ರೌನ್, ಡನ್ನಾ[illegible] ಮಿಸ್ಸೌರಿ, ಯು. ಎಸ್. ಎ. ಈಕೆ ಬರೆಯುವುದು —

"ಎರಡು ವರುಷದ ನನ್ನ ಕೂಸಿಗೆ ಹುಟ್ಟಿದಂದಿನಿಂದ ಕೆಟ್ಟ ಕೆಮ್ಮಲು ಹುಟ್ಟಿ, ಆಸರ ಮೇಲೆ ಜ್ವರವೂ ಬಂದ [illegible] ವಿಶೇಷವಾಗಿ ಒಳಗೆ ಸಂಕಟ ಪಡುತ್ತಿದ್ದಳು. ನಿದ್ರೆಮಾಡುತ್ತಿದ್ದ ಹಾಗೆ ಎಚ್ಚರವಾಗಿ ಅಳಲಾರಂಭಿಸಿದರೆ ಅದರಷ್ಟೇ ಕಾಗ ಎಷ್ಟು [illegible] ವಿಪರೀತ ಎಷ್ಟು ಕಷ್ಟಪಡುತ್ತಿದ್ದಳು. ನಾನು ಕೊಟ್ಟ ಯಾವ ಔಷಧದಿಂದಲೂ ಮಗುವಿಗೆ ವಾಸಿಯಾಗಲಿಲ್ಲ. ಆಗ ನಾನು ಡಾ॥ ಹಾರ್ಟ್‌ಮನ್‌ರ 'ಜೀವನದಲ್ಲಿ ಬರುವ ರೋಗಗಳು' ಎಂಬ ಪುಸ್ತಕವನ್ನು ನೋಡಬೇಕೆಂದು ಕೇಳಿಕಳುಹಿಸಿದೆನು. ಪುಸ್ತಕ ದೊರಕಿತು. ಆಗಲೇ ಪೆರೂನಾವನ್ನು ಮಗುವಿಗೆ ಕೊಡಲಾರಂಭಿಸಿದೆನು. ಒಂದೇ ಬಾಟ್ಲು ಔಷಧವನ್ನು ಕೊಟ್ಟೆನು. ಇದರಿಂದ ಮಗುವಿಗೆ ಸಂಪೂರ್ಣಗುಣವಾಗಿದೆ.

"ಈ ಮಗುವಿಗೆ ಹುಟ್ಟಿದಂದಿನಿಂದ ಅಜೀರ್ಣರೋಗವಿತ್ತು. ಆದರೆ ಪೆರೂನಾ ತೆಗೆದುಕೊಳ್ಳಲಾರಂಭಿಸಿದಂದಿನಿಂದ ಯಾವ ತರಹಾ ಆಹಾರವನ್ನು ತಿಂದರೂ ಅದಕ್ಕೆ ಅಜೀರ್ಣವಾಗುವದಿಲ್ಲ. ಈಗ ಈ ಮಗು ಚೆನ್ನಾಗಿ ಆರೋಗ್ಯವಾಗಿದೆ. ನನ್ನ ಸ್ನೇಹಿತರು ನನ್ನ ಮಗು ಬಹಳ ಚೆನ್ನಾಗಿದೆ ಎಂದು ಹೇಳಿದರೆ ಅದೆಲ್ಲಾ ಪೆರೂನಾದಿಂದ ಆದದ್ದು ಎಂದು ನಾನು ಅವರಿಗೆ ತಿಳಿಸುತ್ತೇನೆ. ಕೆಮ್ಮಲಿಗೂ, ಅಜೀರ್ಣಕ್ಕೂ ಪೆರೂನಾ ಬಿಟ್ಟರೆ ಇನ್ನ್ಯಾವುದೂ ಪ್ರಯೋಜನಕರವಾದದ್ದಲ್ಲವೆಂದು ನನಗೆ ತೋರುತ್ತದೆ. ಮತ್ತು ಈ ರೋಗಗಳನ್ನು ಅನುಭವಿಸುವವರಿಗೆಲ್ಲಾ ಪೆರೂನಾವನ್ನೇ ಸೇವಿಸುವಂತೆ ಶಿಫಾರಸು ಮಾಡುತ್ತೇನೆ."

ಅವರ ಹುಡುಗನ ಪ್ರಾಣವನ್ನು ಕಾಪಾಡಿತು

ಮಿಸೆಸ್ ಅರ್ನೆಸ್ಟ್ ಡಾಕ್ಕಿನ್ಸ್, ೮೦೧ ಮಾಪಲ್ ಬೀದಿ, ಡೆಸ್‌ಮಾಯಿನೆಸ್, ಅಯೋವಾ, ಯು. ಎಸ್. ಎ., ಈಕೆ ಬರೆಯುವುದು —

"ಎರಡು ವರುಷಗಳ ಹಿಂದೆ ಕರ್ಕಿ ಎಂಬ ನನ್ನ ಚಿಕ್ಕ ಹುಡುಗನಿಗೆ ಕೆಟ್ಟ ಜ್ವರ ಬಂದು ಬಿದ್ದುಕೊಂಡರು. ಅವರ ಜೊತೆಗೆ ಚಳಿಯೂ ಬಂತು. [illegible] ಮೈಮೇಲೆ ಕಾಣಿಸಿಕೊಳ್ಳದೆ ಅವನ ಶ್ವಾಸಕೋಶಗಳಿಗೂ ಹೊಟ್ಟೆಗೂ ವ್ಯಾಪಿಸಿತು. ಕೆಲವು ವಾರಗಳ ತನಕ ನಾವು ಪ್ರತಿ ಗಂಟೆಯಲ್ಲೂ ಬಿನುಕಲೆಂದು ನಿರೀಕ್ಷಿಸಿ ಅವನ ಬಳಿಯಲ್ಲೇ ಕಾದಿದ್ದೆವು. ಕಡೆಗೆ ಅವನಿಗೆ ಸ್ವಲ್ಪ ವಾಸಿಯಾಗಿ ಎದ್ದು ಕೂತುಕೊಳ್ಳುವಂತಾದನು. ಆಗ ಅವನಿಗೆ ಕೆಮ್ಮು ಕಾಣಿಸಿಕೊಂಡು, ಏನು ಮಾಡಿದರೂ ನಿಲ್ಲದೆ, ಕ್ಷಯ [illegible] ವನು ಆ ಕೆಮ್ಮು [illegible] ಯೂ ತುಂಬಾ ದೀರ್ಘವಾಗಿಯೂ [illegible] ಅವನ ಶ್ವಾಸಕೋಶವನ್ನು [illegible] ತು. ಅವನಿಗೆ [illegible] ರು ಉಪಚರಿಸಿದರು. ಆಗ ನಾವು ಇತರ ಔಷಧಗಳನ್ನು ಬಿಟ್ಟು ಪೆರೂನಾವನ್ನು ಕೊಟ್ಟು ನೋಡಬೇಕೆಂದು ಒಂದು ಬಾಟ್ಲನ್ನು ಕೊಂಡು ತಂದು, ಅದರಲ್ಲಿ ಹೇಳಿರುವ ಕ್ರಮದಂತೆ ಕೊಡುತ್ತಾ ಬಂದೆವು. ಎರಡು ಬಾಟ್ಲು ಪೆರೂನಾ ಸೇವಿಸಿದ ಮೇಲೆ ಅವನಿಗೆ ಚೆನ್ನಾಗಿ ವಾಸಿಯಾಯಿತು. ಅಂದಿನಿಂದೀಚೆಗೆ ಅವನು ಒಂದು ದಿನವಾದರೂ ಕಾಯಿಲೆಯನ್ನು ಕಾಣನು. ಆರೋಗ್ಯವಾಗಿಯೂ ಸಂತೋಷದಿಂದಲೂ ಬೆಳೆಯುತ್ತಿದ್ದಾನೆ. ನಾವು ಸರ್ವದಾ ಪೆರೂನಾವನ್ನು ಹೊಗಳುತ್ತೇವೆ. ಏಕೆಂದರೆ ಅದು ನಮ್ಮ ಹುಡುಗನ ಪ್ರಾಣವನ್ನು ಉಳಿಸಿತು."

ಕಾಯಿಲೆ ಬೀಳುವ ಮಕ್ಕಳು

ಮಿಸೆಸ್ ಷಾಫರ್, ೪೯೦೧ ಪ್ರಿನ್ಸ್‌ಟನ್ ಅವ್, ಸೆಂಟ್‌ಲೂಯಿಸ್, ಮಿಸ್ಸೌರಿ ಯು. ಎಸ್. ಎ. ಈಕೆ ಬರೆಯುವುದು —

"ಹೋದ ವರುಷ ಪ್ರಾರಂಭದಲ್ಲಿ ನನ್ನ ನಾಲ್ಕು ವರ್ಷದ ಮಗಳು ಆಲಿಸ್ ವಿಷಯವನ್ನು ನಿಮಗೆ ಬರೆದು, ನಿಮ್ಮ ಅಭಿಪ್ರಾಯವನ್ನು ಕೇಳಿದೆನು. ಅವಳು ಹುಟ್ಟಿದಾರಭ್ಯ ಕಾಯಿಲೆ ಬೀಳುತ್ತಾ ಬಹಳ ಕೃಶವಾಗಿದ್ದಳು. ಅವಳಿಗೆ ಒಳ್ಳೆಯದು ಕೆಟ್ಟದ್ದು ತಿಳಿಯುವುದರ ಜ್ಞಾನ ತಪ್ಪುವಾದು, ಶೀತಜ್ವರಗಳು ಬರುವುದು ತಪ್ಪಲಿಲ್ಲ. ನಾನು ಆಗಾಗ ನಾನಾ ಔಷಧಗಳನ್ನು ಕೊಟ್ಟು ವಾಸಿಯಾಗದ್ದರಿಂದ ಕಡೆಗೆ ಪೆರೂನಾ ಕೊಡಲಾರಂಭಿಸಿದೆನು. ಅವಳಿಗೆ ಆರೋಗ್ಯವಾಯಿತು. ಶಕ್ತಿ ಕೂಡಿಕೊಂಡಿತು. ಪೆರೂನಾ ಬಹಳ ಕಾಲ ಯಾವ ಬದಲಾವಣೆಯಿಲ್ಲದೆ ಇರುತ್ತದೆ. ಇಂಥಾ ಅದ್ಭುತವಾದ ಔಷಧವನ್ನು ನಾನು ಯಾವಾಗಲೂ ಉಪಯೋಗಿಸುತ್ತಿದ್ದೆ.

"ನನ್ನ ಕಡೇ ಮಗಳು ಬಲಹೀನಸ್ಥಿತಿಯಲ್ಲಿದ್ದಳು. ಅಷ್ಟರಿಂದ ಪೆರೂನಾ ಸೇವಿಸಲಾರಂಭಿಸಿದೆನು. ನನ್ನ ದೇಹವೆಲ್ಲಾ ಶೀತದಿಂದ ನಡುಗುತ್ತಿತ್ತು. ದೈವದ ದಯದಿಂದ ಈ ಔಷಧವು ನನಗೆ ಆರೋಗ್ಯವನ್ನು ಕೊಟ್ಟಿದೆ. ನನಗೆ ಇನ್ನ್ಯಾವ ಔಷಧದ ಮೇಲೆ ಅಭಿಮಾನವಿಲ್ಲ.

"ಪೆರೂನಾ ನನ್ನ ಎಳೇ ಮಗುವನ್ನು ಬದುಕಿಸಿತು. ಅದಕ್ಕೆ ಚಳಿಯೂ ಜ್ವರವೂ ಬರುತ್ತಿತ್ತು. ಈಗ ಈ ಮಗು ದೊಡ್ಡದಾಗಿ ಮೈತುಂಬಿಕೊಂಡು ಆರೋಗ್ಯವಾಗಿದೆ. ಅವನಿಗೆ ಹುಟ್ಟಿದಾರಭ್ಯ ಪೆರೂನಾವನ್ನು ಆಗಾಗ್ಗೆ ಕೊಡುತ್ತಿದ್ದೇನೆ. ಆದ್ದರಿಂದಲೇ ಅವನು ಇಷ್ಟು ಆರೋಗ್ಯವಾಗಿದ್ದಾನೆಂದು ನನಗೆ ತೋರುವುದು. ಪೆರೂನಾವನ್ನು ಎಷ್ಟು ಹೊಗಳಿದರೂ ಸಾಲದು. ಅದನ್ನು ಉಪಯೋಗಿಸುವುದಕ್ಕೆ ಪ್ರಾರಂಭಿಸಿದ ಲಾಗಾಯ್ತು ಒಬ್ಬ ಡಾಕ್ಟರಾದರೂ ನಮ್ಮ ಮನೆಗೆ ಬಂದಿಲ್ಲ. ಅದು ಬಹಳವಾಗಿ ಕೊಂಡಾಡತಕ್ಕದ್ದಾಗಿದೆ."

ಮಗು ಈಗ ಆರೋಗ್ಯವಾಗಿದೆ

ಮಿಸೆಸ್ ಜಿ ಡಬ್ಲ್ಯು ಹರ್ಡ್ ಆಫ್ ಹೌಸ್, ಟೆಕ್ಸಾಸ್, ಯು. ಎಸ್. ಎ., ಈಕೆ ತನ್ನ ಹೈಮನು ರೂಬಿ ವಿಷಯದಲ್ಲಿ ಡಾ॥ ಹಾರ್ಟ್‌ಮನ್‌ರಿಗೆ ಬರೆಯುವುದು —

"ಇದೇ ದಿನವರೆಗೆ ನನ್ನ ಮಗುವಿಗೆ ಎರಡು ವರ್ಷ ತುಂಬಿತು. ಈ ಮಗುವಿಗೆ ಮೂತ್ರಕೋಶವು ಕೆಟ್ಟುಹೋಗಿತ್ತು. ಮಗುವು ಬರೀ ಮೂಳೆ ಚಕ್ಕಳವಾಗಿದ್ದಳು. ವಾಸಿಯಾದೀತೆಂದು ಯಾರೂ ಯೋಚಿಸಿರಲಿಲ್ಲ. ಈ ಮಗು ಮೂರು ನಾಲ್ಕು ತಿಂಗಳ ಕಾಲ ಕಾಯಿಲೆ ಬಿದ್ದಿತ್ತು. ಒಂದು ಬಾಟ್ಲು ಪೆರೂನಾದಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಕೊಡುವಷ್ಟರಲ್ಲೇ ಈ ಮಗುವಿಗೆ ಆರೋಗ್ಯವಾಗಿದೆ."

ಮಗುವಿಗೆ ಪೆರೂನಾ ಮಾಡಿದ್ದು

ಮಿಸೆಸ್ ಫ್ರುಶ್ಚರುಥ ಪಿಂಕ್ನಿವಿಲ್ಲೆ, ಇಲ್ಲಿನಾಯಿಸ್, ಯು. ಎಸ್. ಎ., ಈಕೆ ಬರೆಯುವುದು —

"ನಾನು ನಿಜವಾಗಿ ಆರೋಗ್ಯವಾಗಿದ್ದೇನೆ. ಈ ಮಾತು ಹೇಳುವುದರಲ್ಲಿ ನನಗೆ ತುಂಬಾ ಸಂತೋಷವು. ನನ್ನ ಒಂದು ಮಗು ಐದು ತಿಂಗಳು ಜ್ವರವನ್ನು ಅನುಭವಿಸಿತು. ಏನು ಮಾಡಿದರೂ ವಾಸಿಯಾಗಲಿಲ್ಲ. ಅದು ವಿಷಮಶೀತಜ್ವರವೆಂದು ಡಾಕ್ಟರು ಹೇಳಿದರು. ಆದರೆ ಅವರು ಕೊಟ್ಟ ಔಷಧದಿಂದ ಸ್ವಲ್ಪವೂ ಪ್ರಯೋಜನವಾಗಲಿಲ್ಲ.

"ಆಗ ನಾನು ಪೆರೂನಾ ಕೊಟ್ಟೆನು. ಕೂಡಲೇ ಅದು ಮಗುವಿಗೆ ಗುಣಕೊಟ್ಟಿತು. ಇದುವರೆಗೆ ಆ ಮಗು ಜ್ವರವನ್ನು ಕಾಣದು.

"ನಾನು ಡಾ॥ ಹಾರ್ಟ್‌ಮನ್‌ರಿಗೆ ಕಾಗದಾ ಬರೆದಾಗ ನಾನು ಮನೇ ಕೆಲಸಗಳನ್ನು ಮಾಡಲಾರದಷ್ಟು ಬಲಹೀನಸ್ಥಿತಿಯಲ್ಲಿದ್ದೆನು. ಈಗ ನಾನು ಸಂಪೂರ್ಣವಾಗಿ ಆರೋಗ್ಯಹೊಂದಿರುತ್ತೇನೆ."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ. ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್ ಹಿಂಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

27—3—1908 ರಿಂದ 4—4—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	0	0	0
ಮೈಸೂರು ,,	1	0	2	2
ಬೆಂಗಳೂರು ಡಿಸ್ಟ್ರಿಕ್ಟು	*	*	0	0
ಮೈಸೂರು ,,	13	11	1	2
ಕೋಲಾರ ,,		*	*	*
ಕೋಲಾರ ಚಿನ್ನದ ಗಣಿಗಳು	4	5	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	1	1	44	38
ಚಿತ್ರದುರ್ಗ	0	0	0	1
ಕಡೂರು	15	4	5	4
ಶಿವಮೊಗ್ಗ ,,	1	*	*	4
* ಸಂಖ್ಯೆ ಕಾಣಿಸಿಲ್ಲ ಒಟ್ಟು	19	23	50	37

ಶಾಲಿವಾಹನ ಶಕ ವರುಷಂಗಳು ೧೮೩೦ನೇ ಕೀಲಕನಾಮ ಸಂವತ್ಸರದ ಚೈತ್ರ ಶುದ್ಧ ಪೌರ್ಣಮಿ ಗುರುವಾರದಿಂದ ಚೈತ್ರ ಬಹುಳ ಷಷ್ಠಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಏಪ್ರಿಲ್

ತಾ	ವಾ	ತಿ	ಘಳಿಗೆ	ನಕ್ಷತ್ರ	ಘಳಿಗೆ	[illegible]
16	ಗುರು *	ಪೌರ್ಣಮಿ	39 32	ಚಿತ್ತಾ	12 22	5
17	ಶುಕ್ರ	ಪಾಡ್ಯ	39 29	ಸ್ವಾತಿ	51 36	[illegible]
18	ಶನಿ	ಬಿದಿಗೆ	36 2	ವಿಶಾಖ	53 2	7
19	ರವಿ	ತದಿಗೆ	30 40	[illegible]	52 08	8
20	ಚಂದ್ರ	ಚೌತಿ	32 2	ಜ್ಯೇಷ್ಠ	50 56	9
21	ಮಂಗಳ	ಪಂಚಮಿ	25 2	ಮೂಲ	15 16	10
22	ಬುಧ	ಷಷ್ಠಿ	22 32	ಪೂ	44 38	11

ಚೈತ್ರ ಪೂರ್ಣಿಮಾ, ಬೆಳಗಿರಂಗಸ್ವಾಮಿ ರಥ [illegible] ತಿಥಿ ಬೆಟ್ಟದ [illegible] ಸಂಕಷ್ಟಚತುರ್ಥಿ [illegible] ಯೋಗ, [illegible] ತಿಥಿ [illegible] ಸರಸ್ವತಿ ಸ್ವಾಮಿ ರಥ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಾರ್ ಅಕ್ಕಿ ಪಲ್ಲಾ ೧ಕ್ಕೆ ರೂ	೧೩ ೦ ೦	೧೪ ೮ ೦
ಕಂಬಳಿ ಅಕ್ಕಿ [illegible]	೧೩ ೮	೧೪ ೦ ೦
,, [illegible]	೧೩ ೦ ೦	೧೩ ೮ ೦
ಜೀರಾಸಾಲೆ ಅಕ್ಕಿ	೧ ೦	೧೭-೮-೦
ಎಣ್ಣೆಕ್ಕಿ ಅವಲ್	೧೫ ೮ ೦	೧೭ ೦-೦
,, [illegible]	೧೫ ೦ ೦	೧೫ ೦ ೦
ಸಣ್ಣಗಿರಿ ಬೇಳೆ ಪಲ್ಲಾ ೧ಕ್ಕೆ	೧೨ ೮ ೦	೧೪ ೮ ೦
,, [illegible]	೧೩ ೮ ೦	೧೪ ೦ ೦
ಸ್ವರ್ಣ ರಾಗಿ ಪಲ್ಲಾ ೧ಕ್ಕೆ	೬ ೧೨ ೦	೭ ೦ ೦
ಕಾರಾಗಿ	೬ [illegible]-೦	೬ ೧೨ ೦
ಜೋಳ	೭-೦-೦	೮-೦-೦
ಹಲಸಂದೆ ಪಲ್ಲಾ ೧ಕ್ಕೆ	೧೦ ೮ ೦	೧೧ ೦
ಬಿಳೀ ಅವರೆ	೮ ೧೪ ೦	೮ ೦ ೦
ಹೆಸರು	೧೦ ೦	೧೧ ೮ ೦
ಉದ್ದು	೧೪ ೮ ೦	೧೬ ೪ ೦
ಕಡಲೆ	೧೨-೮-೦	೧೩ ೦ ೦
ಎಳ್ಳು ಸೇರು ೧೨ಕ್ಕೆ	೨೪ ೮ ೦	೨೪ ೮ ೦
ಹುರುಳಿ	೬ ೪-೦	೬ ೮ ೦
[illegible] ಸೇರಿಗೆ	೧೨ ೦-೦	೧೨ ೪ ೦
ಸೀಗೇಕಾಯಿ ಮಣ ೧ಕ್ಕೆ	೧ ೮ ೦	೧ ೮ ೦
ಮೆಣಸಿನಕಾಯಿ	೨ ೮ ೦	೩ ೦-೦
[illegible]	೨ ೪ ೦	೨ ೧೦-೦
ಬೆಲ್ಲ ದೊಡ್ಡ ಅಚ್ಚು	೫ ೦ ೦	೭ ೧ ೪ ೦
ಒಳ್ಳೆಣ್ಣೆ ಮಣ ೧ಕ್ಕೆ	೩ ೮ ೦	೩-೪-೦
ಹರಳೆಣ್ಣೆ ,,	೪-೧೨ ೦	೪ ೪ ೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫-೮-೦	೬ ೩ ೦
ಉಪ್ಪು ,,	೫ ೦ ೦	೫ ೦ ೦
ಹುಣಸೇ ಹಣ್ಣು	೧-೮-೦	೧ ೦ ೦
,, ಹಳೇದು	೧ ೮	೧ ೪ ೦
ತುಪ್ಪ ಮಣ ೧ಕ್ಕೆ	೧೩-೮ ೦	೧೫ ೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೪-೧೫ ೦	೪ ೦ ೦
ತೆಂಗಿನಕಾಯಿ ೧೦೦ಕ್ಕೆ	೩ ೮-೦	೩ ೦ ೦
ಅಳಲೇಕಾಯಿ ಮಣ ೧ಕ್ಕೆ	೧ ೨ ೦	೧ ೦ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦ ೧೨ ೦	೦ ೧೪-೦
ಚಿನ್ನ (ಪೌನ್) ಒಂದು	೧೫ ೬-೦	೧೫-೩-೦
,, ,, ಪಸಿನು	೧೭-೧೦ ೦	೧೫ ೧೦ ೦
,, ,, ಗಟ್ಟಿ ತೊಲ ೧ಕ್ಕೆ	೨೩ ೧೨-೦	೨೪ ೩ ೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೩೫-೦-೦	೩೦-೦-೦

Printed and Published by the Rev E W Thompson M A, Proprietor and Manager, Wesleyan Mission Press Mysore 16/4/1908

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೮ ನೇ ಇಸವಿ ಏಪ್ರಿಲ್ ತಾರೀಖು ೨೩ ನೇ ಗುರುವಾರ. ಸಂಚಿಕೆ ೪೭

AMRUTANJAN DEPOT, 16 OAK-LANE, BOMBAY. {17-9}

ಗುಣ ಕಂಡುಬರುವದಿಲ್ಲವಾದರೆ ಹಣ ವಾಪಸು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ —ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು ಜಕಮ್ ಮತ್ತು ಘಾಯ, ಗಂಟ್ಲುನೋವು ಎದೆನೋವು, ಶೀತ ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ. ಡಾಕ್ಟರುಗಳ ಅಭಿಪ್ರಾಯಗಳು

ಪಿ. ಆರ್. ಪಿರ್ಲೋಗಾಂಕರ್, ಎಲ್ ಆರ್ ಸಿ ಪಿ ಎಂಡ್ ಎಸ್. ಎಲ್ ಎಮ್ ಮುಂಬಯಿ ಇವರು ಬರೆಯುವದೇನಂದರೆ ತಲೆನೋವಿಗೆ ಮತ್ತು ಎಲ್ಲಾ ತರದ ನೋವಿಗೆ ಅಮೃತಾಂಜನವು ಅತಿ ಉತ್ತಮವಾದದ್ದು

ಮ ಧನಾನಾಥ ಬಿ ನಾಯರ್ ಡಾಂಡೇಕರ್ ಎಲ್ ಎಮ್ ಎಂಡ್ ಎಸ್ ಎಂಡ್ ಜೆ ಪಿ, ಮುಂಬಯಿ ವಾತದ ನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು

ಮ ದೇಸಾಯಿ ನಾರಾಯಣೋತ್ತಮ, ಹೈಕೋರ್ಟು ವಕೀಲ ಮುಂಬಯಿ. ಇವರ ಅಭಿಪ್ರಾಯ ತಲೆನೋವಿಗೂ ಮತ್ತು ಎಲ್ಲಾ ತರದ ನೋವಿಗೂ ಅಮೃತಾಂಜನವು ಉತ್ತಮವಾದದ್ದು

ಮ ಆರ್ ಡಿಸೋಜಾ ಮ್ಯಾನೇಜರ್ ಕಾಫಿ ಎಸ್ಟೇಟು ಮರಕಾರಾ, ಕೊಡಗು ಇವರ ಅಭಿಪ್ರಾಯ ನಿಮ್ಮಲ್ಲಿನ ಅಮೃತಾಂಜನವು ಶೀತ ಕಫ ಮತ್ತು ನೋವಿಗೂ ಸಹ ಉತ್ತಮವಾದದ್ದು ನನ್ನ ಕೂಲಿಯವರಿಗೆ ಬಹಳವಾಗಿ ಗುಣಪಡಿಸುತ್ತದೆ

ಮ ರಾಜಾರಾಮ ತುಕಾರಾಮ ವೈಸ್ ಪ್ರೆಸಿಡೆಂಟ್, ಬಂದರಾ ಮುನಿಸಿಪಾಲಿಟಿ. ಇವರ ಅಭಿಪ್ರಾಯ ನಿಮ್ಮ ಅಮೃತಾಂಜನವು ತಲೆನೋವಿಗೂ ವಾತಕ್ಕೂ ಅತ್ಯುತ್ತಮವಾದದ್ದು

ಅಮೃತಾಂಜನವು ಹಿಂದುಸ್ಥಾನದಲ್ಲಿ ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ ಬಾಟ್ಲಿ ಒಂದಕ್ಕೆ ಕಿಮ್ಮತ್ತು ೦—೮—೦ ಪೋಸ್ಟು ಚಾರ್ಜ್ ೦ ೪ ೦ ಅಥವಾ ಮುಂಬಾಯಿಯಲ್ಲಿಯ ಏಜಂಟ ಮತ್ತು ಕಂಪನಿಯಿಂದ ನೇರಾ ತರಿಸಿಕೊಳ್ಳಬಹುದು

ಈ ಕಂಪನಿಯವರು ಮತ್ತು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು ವಿಳಾಸ ಅಮೃತಾಂಜನ ಡಿಪೋ ೧೬ ಓಕ್ ಲೇನ ಮುಂಬಯಿ ಟೆಲಿಗ್ರಾಫ್ ಅಡ್ರೆಸ್ಸು "ಅಮೃತಾಂಜನ" ಮುಂಬಯಿ ಏಜಂಟರು —ವಿಲಿಯಂ ಮತ್ತು ಕಂಪನಿ, ಫ್ರೋರ್ಟು ಮುಂಬಯಿ.

ಗಜಕರ್ಣದ ಮುಲಾಮು —ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ಕಜ್ಜಿ ವಗೈರೆ ನಾಶವಾಗುವದು ಇದು ಉರಿಯುವದಿಲ್ಲ ಡಬ್ಬಿ ಒಂದಕ್ಕೆ ಕಿಮ್ಮತ್ತು ೦—೩—೦

ರಬ್ಬರ್ ಹ್ಯಾಂಡ್ ಪ್ರೆಸ್.

114 28

ಕಲಾಕೌಶಲ್ಯದಿಂದ ಮತ್ತು ಉದ್ಯೋಗದಿಂದ ಊರ್ಜಿತಸ್ಥಿತಿ ಹೊಂದುವ ಈ ಭಾರತ ಭೂಮಿಯೊಳಗೆ ಈ ಪ್ರೆಸ್ ತಯಾರಾಗುತ್ತದೆ ಇದುವರಿಗೆ ಈ ಪ್ರೆಸ್ಸು ಪರದೇಶದಿಂದ ಬರುತ್ತಿರುವಾಗ ಅದಕ್ಕೆ ೧೩ ರಿಂದ ೧೭ ರೂಪಾಯಿಗಳ ವರೆಗೆ ಬೆಲೆ ಬೀಳುತ್ತಿತ್ತು. ಈ ಪ್ರೆಸ್ಸಿನೊಳಗೆ ಕನ್ನಡ, ತಮಿಳು, ತೆಲಗು, ಉರ್ದು, ಪರ್ಷಿಯನ್, ಅರಬಿಕ್, ಇಂಗ್ಲೀಷ್ ಮತ್ತು ಬೇಕಾದ ಭಾಷೆಯಲ್ಲಿ ಒಂದು ಪ್ರತಿ ತಯಾರು ಮಾಡಿ, ಮಾಡಿಸಿದ ಮೇಲೆ ಬಹು ಸ್ವಲ್ಪ ಕಾಲದೊಳಗಾಗಿಯೇ ಇದರಿಂದ ೧೫೦ ಪ್ರತಿಗಳನ್ನು ತಯಾರು ಮಾಡಬಹುದು ಆದ್ದರಿಂದ ಈ ಪ್ರೆಸ್ಸು ಸಾರ್ವಜನಿಕ ಕಚೇರಿ ಮ್ಯುನಿಸಿಪಾಲಿಟಿ ಪೋಲೀಸ್ ಆಫೀಸರರೂ, ವಕೀಲರೂ, ವರ್ತಕರೂ, ಇನಾಮುದಾರರೂ ಮತ್ತು ಪರೀಕ್ಷಕರೂ ತಮ್ಮ ಸಂಗ್ರಹದಲ್ಲಿ ಅವಶ್ಯ ಇಡತಕ್ಕದ್ದು. ಎಷ್ಟೋ ಕಾರಕೂನರ ಸಹಾಯದಿಂದ ಒಂದು ಕೆಲಸಕ್ಕೆ ಬಹಳಕಾಲ ಹಿಡಿಯುವದು ಆದರೆ ಈ ನಮ್ಮ ಪ್ರೆಸ್ಸಿನಿಂದ ಅಂಥಾ ಕೆಲಸವನ್ನಾದರೂ ಸ್ವಲ್ಪ ಕಾಲದಲ್ಲಿಯೇ ಮಾಡುವದಕ್ಕೆ ಸಾಧ್ಯ. ಇದರ ದೆಸೆಯಿಂದ ಈ ಪ್ರೆಸ್ ಜನಗಳ ಪ್ರೀತಿಗೆ ಪಾತ್ರವಾಗಿರುವದು ಈ ಕಾರಣದಿಂದ ಪ್ರತಿ ಒಬ್ಬರೂ ತಮ್ಮ ಹತ್ತರ ಈ ಪ್ರೆಸ್ಸನ್ನು ಅವಶ್ಯಕವಾಗಿ ಇಡುವದರಲ್ಲಿ ಏನೂ ಸಂದೇಹವಿಲ್ಲ

ನೋಟ್ ಪೇಪರ್ ಸೈಜು, ರೂಪಾಯಿ ೪—೦—೦.
ಹಾಫ್ ಫುಲ್‌ಸ್ಕ್ಯಾಪ್ ಸೈಜು, ೬—೦—೦.
ಪೋಸ್ಟೇಜು ಬೇರೆ (extra).

ವಿಳಾಸ — ವರ್ಧಮಾನ ಏಜನ್ಸಿ,
ಪೋಸ್ಟ್ ಕಾಲಬಾದೇವಿ,
ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

16-10

೧. ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ೩ ಪಳಿವ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಕೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿವೆ

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂಧುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ಸಡಿಲ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಜೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಜಠರದ ಬಾಧೆಯೂ ಆರೋಗ್ಯದಷ್ಟೆ, ನೀರು ಮಲಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ,
ಎಸ್. ಎಸ್. ಆರ್ ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು.

ಕಾರ್ಡ್ ಸೈಜು ೪½ × ೩½.

ಫೋಟೋ ತೆಗೆಯುವ

ಕ್ಯಾಮರಾ.

84 36

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿಕೊಡುವೆವು ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು ಟಪ್ಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ —

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ

ಜ್ವರಹರಿ 18-12



ಇದು ಸಾಧಾರಣ ಜ್ವರ ಚಳಿಜ್ವರ, ಮರೋಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಪಂಚಾಯತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಮ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ.; ೧—೮ ರೂ., ರೂ ೨—೧೨ ಆ., ೧೧ ರೂ.; ಪನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂಕಪೂರ.

Cream Ca...

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ನಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗೋಪಾಲಯವರು—ಪೆಪ್ಪರು ಓಮದ ಕರ್ಪೂರವನ್ನು ನಾನು ನನ್ನ ಖಾಸಗಿಯಾಗಿಯೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇನೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವೇಕ ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—
ಪೆಪ್ರಿಯನರ ಗ್ರೇಟ್ ಇಂಡಿಯನ ಔಷಧಗಳ ಕಂಪನಿ,
ಸಲೆಂಡ್ ಬೀಚ್ ಲೈನ, ಮದರಾಸ್.

ಹಾಸನದ ಟೋಪಿ ಬೇಕೇ?

117-26

ನಂಬರ್ ೧ ಹಾಸನ ಟೋಪಿ ಡಜನ್ ೧ಕ್ಕೆ ರೂ. ೧೩—೨—೦ ಸಾದ ಕೆಂಪು ಕಪ್ಪು ಬಿಳಿಕೆ, ಕಾಪಿ ನೀಲಿ ಟೋಪಿಗಳು ೧ಕ್ಕೆ ರೂ. ೧—೬—೦, ೧—೫—೦. ಚುಕ್ಕೆಯುಳ್ಳ ಟೋಪಿಗಳು ೧ಕ್ಕೆ ರೂ. ೧—೫—೦, ೧—೨—೮ ವೈಸೂರು ಟೋಪಿ ಡಜನ್ ೧ಕ್ಕೆ ರೂ. ೮—೨—೦. ಸಾದಾ ಟೋಪಿಗಳು ಡಜನಕ್ಕೆ ರೂ. ೬—೬—೮ ಸಾದಾ Chaapir ಡಜನ್ ೧ಕ್ಕೆ ರೂ ೬—೬—೦ ೧೦ ಟೋಪಿ ಆಗುವ ಉಲ್ ದಾರಕ್ಕೆ ರೂ. ೩—೮—೦. ನಮ್ಮ ವಿಳಾಸ:—

ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ದೇಶಬಾಂಧವರೇ! ಲಾಲಿಸಿ!!

129 22

ಸ್ವದೇಶೀ ಭಾವನೆಯು ಎಲ್ಲೆಲ್ಲಿಯೂ ಹರಡಿದೆ. ಇದರಿಂದ ಕರ್ನಾಟಕ ರಾಜ್ಯದವರೆಲ್ಲರು ಪ್ರಸಿದ್ಧವಾದ ಮಧುರೆಯಲ್ಲಿ ಹೆಸರು ವಾಸಿಯಾದ ಗಟ್ಟಿ ಮತ್ತು ಗ್ಯಾರಂಟಿ ಬಣ್ಣದ ಎರಡುವರೆ ಮೊಳದಗಲ ಹದಿನಾರುವರೆ ಮೊಳಕ್ಕಿಂತ ಹೆಚ್ಚಾದ ಉದ್ದವುಳ್ಳ ಕೆಂಪು ಅಥವಾ ಕಪ್ಪು ಬಣ್ಣದ ಬಹು ಸೊಗಸಾದ ಮತ್ತು ನಯವಾದ ಬೇಸಿಗೆಗೂ ಸಹ ಬಹಳ ಉಪಯೋಗವಾದ ಮಧುರೆ ಸೀರೆಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತಾ ಇದುದರಿಂದ ಕೂಡಲೆ ನಮಗೆ ಬರೆದು ತರಿಸಿ ಕೊಳ್ಳಿ. ವ್ಯಾಪಾರಸ್ಥರು ಸಹಾ ತರಿಸಿ ಮಾರುವಷ್ಟು ಸುಲಭಕ್ರಯ ಸಾದಾ ಕ್ರಯ ರೂ ೨—೮—೦ ಬಿಳಿಯ ಚುಕ್ಕೆ ಯಾ ಪಟ್ಟೆಗಳಿಂದ ಕೂಡಿದ್ದು ರೂ ೩—೬—೦ ಬಹಳ ನಯವಾದ ಮತ್ತು ನಾಜೋಕಾದದ್ದು ರೂ ೫, ರೂ ೬

ಪ್ರುದುಚ್ಚೇರಿ ರೇಷ್ಮೆ ವಸ್ತ್ರಗಳು.

೨ ಮೊಳದಗಲ, ನಾಲ್ಕುಮೊಳದುದ್ದ, ರೂ ೫. ಬೇಸಿಗೆಯ ಸೊಗಸಾದ ಬನೀನ್ಸ್ ರೂ ೨ ಮಂಚ್ಛೆ ಪಂಚೆ ೮ ಮೊಳದುದ್ದ ರೇಷ್ಮೆ ಅಂಚು ಜೋತೆ ೧ಕ್ಕೆ ರೂ ೭ ಸಾದಾ ರೂ ೨॥. ರೂ ೩ ವಿಳಾಸ:—ರಾವ್ ಎಂಪೋರಿಯಂ. ಸ್ಟೇಷನ್ ರೋಡ್,

ಮೇಚೇರಿ, ಮದ್ರಾಸು.

ತುಂಕೂರು ನೋಟೀಸ್.

29-3

ತುಂಕೂರಿನಲ್ಲಿರುವ ಜೆ. ಯಸ್. ಕಣ್ಣಯ್ಯಶೆಟ್ಟಿ ಎಂಬ ನಾನು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ-ನಾನು ಕೆಲವು ಕಾಲದಿಂದ ಟೋಪಿ ಮಾಡಿಸಿ ಮಾರುವದರಲ್ಲಿ ನನ್ನ ಮೇಲ್ವಿಳಾಸಕ್ಕೆ ಮಿರ್ಜ ಎಂಬ ಹೆಸರನ್ನು ತಿಳಿಯದೆ ಸೇರಿಸಿದ್ದೇನೆ. ಈಗ ಬಹಳ ವರುಷದಿಂದ ಈ ದೇಶದಲ್ಲಿ ಇರುವಂಥಾ ಪೆಸ್ಸಿಯನ್ ಮಿರ್ಜ ಎಂಬುವರಿಗೂ ನನಗೂ ಏನೇನೂ ಸಂಬಂಧವಿರುವದಿಲ್ಲವಾದದರಿಂದ ಇಂದಿನಿಂದ ಈ ಮಿರ್ಜ ಎಂಬ ಹೆಸರನ್ನು ಸಂಪೂರ್ಣವಾಗಿ ಬಿಟ್ಟು ಅದನ್ನು ಉಪಯೋಗಿಸದೆ ಬಿಟ್ಟಿರುತ್ತೇನೆ.

(ಸೈನ್.) ಜೆ. ಯಸ್. ಕಣ್ಣಯ್ಯಶೆಟ್ಟಿ,

ಉಲ್ಲನ್ ಅಂಡ್ ಸ್ಟೇಷನರಿ ಮರ್ಚೆಂಟು, ತುಂಕೂರು.

ಹೊಸವರ್ಷ! ಹೊಸ ಮಾಸಪತ್ರಿಕೆ!

"ಕರ್ಣಾಟಕ ಚಂದ್ರಿಕೆ."

31 3

ವಾರ್ಷಿಕ ಚಂದಾ ರೂ. ೧. ಅಂಚೇ ಕೂಸಲು ಸೇರಿ ರೂ ೧-೫-೦

ಈ ಉತ್ತಮತರದ ಮಾಸಪತ್ರಿಕೆಯು ಪ್ರೌಢವಿದ್ವಾಂಸರ ಸಹಾಯದಿಂದ ಪ್ರತಿ ಪೂರ್ಣಿಮೆಯಲ್ಲೂ ಪ್ರಕಟಿಸಲ್ಪಡುವುದು. ಇದು ಬಾಲೆಯರಿಗೂ ಬಾಲಕರಿಗೂ ಮುಖ್ಯವಾಗಿ ಪ್ರತಿ ಒಬ್ಬ ಕುಟುಂಬದವರಿಗೂ ಅತ್ಯಂತೋಪಯುಕ್ತವಾದುದು. ಕೋಸಕನ್ನಡದ ವಚನಕಾವ್ಯಗಳೂ ಪ್ರಹಸನ (ನಕಲಿ)ಗಳೂ ಕಾದಂಬರಿ (ಕಥೆ)ಗಳೂ ಸ್ತ್ರೀಯರಿಗೆ ಅತ್ಯವಶ್ಯಕವಾದ ಅನೇಕ ವಿಷಯಗಳೂ ಇದರಲ್ಲಿ ಅಡಕವಾಗಿವೆ. ಅಯಾ ಗ್ರಂಥಗಳಿಗೆ ಬೇರೆಬೇರೆ ಪುಟಸಂಖ್ಯೆಯನ್ನು ಕೊಡುವುದರಿಂದ ಪ್ರತ್ಯೇಕವಾಗಿ ಬೈಂಡ್ ಕಟ್ಟಿಸಿಕೊಳ್ಳುವುದಕ್ಕೆ ಅನುಕೂಲವಾಗಿದೆ. ಚಂದಾದಾರರಿಗೆ ೬ ಆಣೆಯ 'ಪ್ರಿಯದರ್ಶಿಕೆ' ಎಂಬ ನಾಟಕವನ್ನೂ, ೪ ಆಣೆಯ 'ಸತ್ಯವತೀ ಚರಿತ್ರೆ' ಎಂಬ ಹೊಸಕನ್ನಡದ ವಿಚಿತ್ರವಾದ ಕಥೆಯನ್ನೂ ೨ ಆಣೆಯ 'ಉತ್ತರಸೀತಾಚರಿತ್ರೆ'ಯನ್ನೂ ಉಚಿತವಾಗಿ ಕಳುಹಿಸುತ್ತೇವೆ. ಐದು ಜನ ಚಂದಾದಾರರನ್ನು ಸೇರಿಸಿಕೊಟ್ಟವರಿಗೆ ಮೇಲ್ಕಂಡ ಬಹುಮಾನಗಳಲ್ಲದೆ ಪತ್ರಿಕೆಯನ್ನು ಅರ್ಧ ಚಾರ್ಜಿಗೆ ಕಳುಹಿಸುತ್ತೇವೆ. ೧೦ ಜನರನ್ನು ಸೇರಿಸಿಕೊಟ್ಟವರಿಗೆ ಪತ್ರಿಕೆಯನ್ನೂ ಮೇಲ್ಕಂಡ ಪುಸ್ತಕಗಳನ್ನೂ ಉಚಿತವಾಗಿ ಕಳುಹಿಸುವುದಲ್ಲದೆ ೮ ಆಣೆ 'ಸೀತಾಚರಿತ್ರೆ' ೬ ಆಣೆ 'ಕೃಷ್ಣವಿಜಯ,' ೩ ಆಣೆ 'ಸ್ತೋತ್ರಮಾಲಿಕೆ' ಇವನ್ನೂ ಉಚಿತವಾಗಿ ಕಳುಹಿಸುತ್ತೇವೆ. ಮಾದರಿ ಸಂಚಿಕೆ ಅಪೇಕ್ಷಿಸುವವರು ಒಂದಾಣೆ ಸ್ಟಾಂಪುಹಚ್ಚಿ ಬರೆದುಕೊಂಡರೆ ಕಳುಹಿಸುವೆವು. ಇಂತಹ ಸುಸಮಯವು ಮುಂದೆ ಸಿಕ್ಕಲಾರದು! ಈಗಲೇ ಚಂದಾದಾರರಾಗುವವರಿಗೆ ಮಾತ್ರ ಮೇಲ್ಕಂಡ ಬಹುಮಾನಗಳು ಸಿಕ್ಕುವವು!! ಜಾಗ್ರತೆಯಾಗಿ ಬರೆಯಿರಿ! ನಿಮ್ಮ ವಿಳಾಸಗಳನ್ನು ಸ್ಪಷ್ಟವಾಗಿತಿಳಿಸಿರಿ! ನಮ್ಮ ವಿಳಾಸ—

ಅರಮನೆಯ ವಿದ್ವಾಂಸ ನಂದನಗುಡಮ ಶ್ರೀಕಂಠಶಾಸ್ತ್ರಿ,

ಎಡಿಟರ್, ಕರ್ನಾಟಕ ಚಂದ್ರಿಕೆ, ಕೃಷ್ಣರಾಜ ಮೊಹಲ್ಲಾ, ಮೈಸೂರು.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

1-17



ಬೆನ್ನಲುಬಿನಲ್ಲಿನ ನೋವು, ಸಂಧಿಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು ತಲೆನೋವು, ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವುದು. ವಿವಿಧ ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ... ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು ನಿದ್ರೆ ಇಲ್ಲದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ಕ್ರಯದಿಂದ ಮಾತ್ರ ದೊಡ್ಡ ಸೀಸೆಗೆ ೨ ರೂಪಾಯಿ.

೧೮೭೬ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ!

ಮುವತ್ತೊಂದು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION

33-4

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ಸಲ ಪರಿಶೋಧನೆಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈ ಔಷಧವು ಸರ್ವಶ್ರೇಷ್ಠವಾದದ್ದಾಗಿ ಪರಿಣಮಿಸಿದೆ.—

ಕ್ಷಯರೋಗದ ಆಕ್ರಮಣಗಳು; ನಾನಾ ತರದ ಕೆಮ್ಮುಗಳು; ಸಕಲವಿಧ ಕೃಶತ್ವಗಳು, ಮಾಂಸಖಂಡಗಳ ಕ್ಷೀಣತೆ; ಆಹಾರದಲ್ಲಿ ಅರುಚಿ

ಇವಲ್ಲದೆ ಹಿಂದೆಗೂ ಮುಂದೆಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವೂ ಇದೇ.

ಕೈಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್. ಇಂಗ್ಲೆಂಡ್

ಈ ಮನುಷ್ಯ ಇರುವ ಔಷಧವನ್ನೇ ಕೇಳುತ್ತಾಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳಿ.

2-17

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿಕೆ, ಕಾಫಿ ಟೋಪಿಗಳು ೧ ರೂ ೮ ಆ ೧ ರೂ. ೬ ಆ.; ೧ ರೂ. ೫ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ ೬ ಆ

ಉಸಾಬಿನ ಟೋಪಿಗಳು ೧ ರೂ. ೮ ಆ.; ೧ ರೂ ೬ ಆ.

ಕೂಸುಗಳ ಟೋಪಿ, ಸೂಥಿನ್ ಮೇಜೋಡು, ಅರ್ಧ ಮೋಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುತೇವೆ.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ವ್ಯವಹಾರ ನಿರ್ಣಯ.

4-17

ಟೋಪಿಗಳು ೧೦೦ಕ್ಕೆ ಕ್ರಯ ವಿ ಪಿ ಸಹ ೧—೭—೦. ಈ ಕಾಸ್ಸಿನಿಂದ ಬುಕ್ಕುಗಳನ್ನು ಅಪೇಕ್ಷಿಸುವವರು ... ಎಂ. ಮಲ್ಲಾರಾಧ್ಯರು, ಬ್ಲೇಡರ್, ಮೈಸೂರು" ಎಂಬೀ ವಿಳಾಸಕ್ಕೆ ಬರೆದುಕೊಳ್ಳುವುದು. ವಿಷಯಗಳನ್ನು ನೋಡಲೇ ತಿಳಿಯಲಪೇಕ್ಷಿಸುವವರಿಗೆ ವಿಷಯಸೂಚಿ ಪತ್ರವು ರವಾನಿಸಲ್ಪಡುತ್ತದೆ.

ಇಲ್ಲಿ ನೋಡಿ.

3 17

ಹಾಸನದ ಮಿರ್ಜ ಪಟ್ಟಣದಲ್ಲಿ ... ಪ್ರಸಿದ್ಧಿಯಾದ ಉತ್ತಮ ತರದ ಹಾಸನದ ಟೋಪಿಗಳು. ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ

ಕ್ರಯ ... ಆಣೆ ಮೊದಲ್ಗೊಂಡು ... ಆಣೆಯವರೆಗೆ

... ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಕ್ರಮದಂತೆ ಡಿಸ್ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮ್ಯಾನೇಜರ್

ಹಾಸನದ ಟೋಪಿ ಕಾರ್ಖಾನೆ, ಮಿರ್ಜ ಇಲಾಖ ತುಮಕೂರು

ಸರ್ಕಾರದ ಇಸ್ತಿಹಾರು.

32 3

1 ೧೯೦೮ನೇ ಇಸವಿ ಏಪ್ರಿಲ್ ೧ನೇ ತಾರೀಖು ಮೊದಲುಗೊಂಡು ೧೯೦೮ನೇ ಇಸವಿ ಜೂನ್ ೩೦ನೇ ತಾರೀಖಿನ ಒಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್ ಗಳನ್ನು ತೆಗೆದುಕೊಳ್ಳುವದಕ್ಕೆ ಮೈಸೂರು ಹಿಜ್ ಹೈನೆಸ್ ಮಹಾರಾಜಾ ಸರ್ಕಾರದ ಕಂಟ್ರೋಲರು ಸಿದ್ಧರಾಗಿರುತ್ತಾರೆ. ಪ್ರತಿ ಒಂದು ಅಪ್ಲಿಕೇಷನ್ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು:—

(೧) ಹುಂಡಿಯ ಮೊಬಲಗು.

(೨) ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು (೩) ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2 ೫೦೦ ರೂಪಾಯಿಗಳಿಗೆ ಕಡಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3 ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫೀಸಿನಿಗೆ ಹುಂಡಿಯ ಮೊಬಲಗನ್ನೂ ಮತ್ತು ಕೆಳಗೆ ನಮೂದಿಸಿರುವ ದರದ ಮೇರೆ ಕಮಿಷನ್ ತೆಗೆದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿಕೊಡುವ ಖಜಾನೆ ಹೆಸರು	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ
ಸ್ಟೇಟ್ ಹುಜೂರು	ಕೋಲಾರ ತುಮಕೂರು ಶಿವಮೊಗ್ಗ ಕಡೂರು ಚಿತ್ರದುರ್ಗ ಮೈಸೂರು ಹಾಸನ	ಶೇಕಡ $\frac{1}{16}$

(Sd.) M. N. KRISHNA RAO,
Offg. Comptroller.

ವೃತ್ತಾಂತ ಪತ್ರಿಕೆ.

:o:

ಸನ್ ೧೮೯೦ ನೇ ಇಸವಿ ಏಪ್ರೆಲ್ ತಾ॥ ೨೩ ನೇ ಬುಧವಾರ

ತುರ್ಕಿಯೂ ಇತರ ರಾಜ್ಯಗಳೂ

ಯೂರೋಪ್ಪಿನಲ್ಲಿರುವ ಇಟಲಿ ರಾಜ್ಯದವರು ತುರ್ಕಿ ರಾಜ್ಯದವರಮೇಲೆ ಸಿಟ್ಟಾಗಿರುವಂತೆ ಕಳೆದ ಸೋಮವಾರ ಬಂದಿರುವ ತಂತೀ ವರ್ತಮಾನದಿಂದ ಗೊತ್ತಾಗುವುದು. ಇಟಲಿಯವರ ಐದು ಪೋಸ್ಟಾಫೀಸುಗಳನ್ನು ತುರ್ಕಿ ರಾಜ್ಯದವರು ತಮ್ಮ ಪಟ್ಟಣಗಳಲ್ಲಿ ಇಡಗೊಡಿಸಲಿಲ್ಲ. ಇಟಲಿಯ ಒಬ್ಬ ಸನ್ಯಾಸಿಯನ್ನು ತುರ್ಕಿಯವರು ಟ್ರಿಪೋಲಿಯಲ್ಲಿ ಕೊಂದುಹಾಕಿದರು, ಇಟಲಿ ಪ್ರಜೆಗಳು ತುರ್ಕಿ ರಾಜ್ಯದಲ್ಲಿ ಆಸ್ತಿಪಾಸ್ತಿಗಳನ್ನು ಸಂಪಾದಿಸಿಕೊಳ್ಳಕೂಡದೆಂದು ತುರ್ಕಿಯವರು ಅಡ್ಡಿ ಮಾಡಿದರು, ಮತ್ತು ಇಟಲಿಯವರು ತುರ್ಕಿಯ ತೀರಪಟ್ಟಣಗಳಲ್ಲಿ ವ್ಯಾಪಾರಾದಿಗಳನ್ನು ನಡೆಸದಂತೆ ತುರ್ಕಿಯವರು ಅಡಚಣೆಗಳನ್ನು ಕಲ್ಪಿಸುತ್ತಿದಾರೆ ಇವೇ ಆ ಎರಡು ರಾಜ್ಯಗಳಿಗೂ ಮನಸ್ತಾಪವುಂಟಾಗಲು ಕಾರಣಗಳೆಂದು ಮೊಲ್ಟ್ಕಂಡ ತಂತೀ ವರ್ತಮಾನ ತಿಳಿಸುವುದು. ಇದಲ್ಲದೆ ಜರ್ಮನಿಯವರು ಇಟಲಿಯವರನ್ನು ಎತ್ತಿಕಟ್ಟುತ್ತಿದಾನೆಂದೂ ತಿಳಿಯುವುದು. ಇದಕ್ಕೋಸ್ಕರ ಇಟಲಿಯವರು ತಮ್ಮ ಹಡಗುಗಳ ಮೂರು ಸೈನ್ಯವನ್ನು ತುರ್ಕಿಯವರಮೇಲೆ ರವಾನೆ ಮಾಡುವವರಾಗಿದ್ದಾರೆಂದೂ, ಆ ಸೈನ್ಯಗಳು ಕಳೆದ ಸೋಮವಾರ ಇಟಲಿಯಿಂದ ಹೊರಳುವುದಾಗಿ ನಿಷ್ಕರ್ಷೆಯಾಗಿದೆ ಎಂದೂ ತಂತೀವರ್ತಮಾನ ಬಂದಿದೆ. ಆದರೆ ಈ ರೀತಿ ಹಡಗಿನ ಸೈನ್ಯವನ್ನು ಕಳುಹಿಸಲು ಈಗ ಪ್ರಕಟವಾಗಿರುವುದೇ ಕಾರಣವೆಂದು ಊಹಿಸುವುದು ಕಷ್ಟ. ಸಹಜವಾಗಿ ತುರ್ಕಿಯವರ ಪಕ್ಷವನ್ನು ವಹಿಸಿರುವ ಜರ್ಮನಿಯವರು ಆ ಪಕ್ಷವನ್ನು ಬಿಟ್ಟು ಇಟಲಿಯವರನ್ನು ಎತ್ತಿಕಟ್ಟಲು ಕಾರಣ ಗೊತ್ತಾಗುವುದಿಲ್ಲ. ಫ್ರಾನ್ಸಿನವರಿಗೂ ರಷ್ಯಾದವರಿಗೂ ತುರ್ಕಿಯವರ ಮೇಲೆ ಕೆಲವು ಕಾಲದಿಂದ ಅಸಮಾಧಾನಗಳು ಉಂಟಾಗಿರುತ್ತವೆ. ಎರಡೂ ಸೂಚನೆಗಳೂ ಇಲ್ಲದ ಸಕಾರಣಕ ಇಟಲಿಯವರು ತುರ್ಕಿ ರಾಜ್ಯದಮೇಲೆ ಸೈನ್ಯವನ್ನು ಕಳುಹಿಸಿರುವುದಕ್ಕೆ ತೃಪ್ತಿಕರವಾದ ಕಾರಣಗಳು ಇನ್ನೂ ತೋರಬಹುದಿಲ್ಲ. ಎಷ್ಟಿಯಾ ಎಂಬ ಅಧಿಪತ್ಯದ ಆಳ್ವಿಕೆಯು ತುರ್ಕಿಯವರಿಗೆ ಸೇರುವುದೇ ಸಹಜವೆಂದು ಆಸ್ಟ್ರಿಯಾ ರಾಜ್ಯದವರು ಹೇಳುವುದು ಇದು ಇಟಲಿಯವರಿಗೆ ಇಷ್ಟವಾಗಿಲ್ಲ. ಆದಕಾರಣ ತುರ್ಕಿಯವರ ಪಕ್ಷವನ್ನು ವಹಿಸಿ ಇಟಲಿಯವರಿಗೆ ವಿರೋಧಿಗಳಾಗಿ ನಿಲ್ಲತಕ್ಕವರು ಆಸ್ಟ್ರಿಯಾ ರಾಜ್ಯದವರೊಬ್ಬರಲ್ಲದೆ ಇನ್ನಾವ ಯೂರೋಪ್ಪಿಯನ್ ಜನಾಂಗದವರೂ ನಿಲ್ಲಲಾರರೆಂದು ಹೇಳಬಹುದಾಗಿದೆ.

ಕ್ರೈಸ್ತರು ಯಾಕೆ ಕ್ರೈಸ್ತಮತವನ್ನು ಪ್ರಸಂಗಿಸಬೇಕು

ಹಿಂದೂ ಮತಸ್ಥರು ಅನ್ಯಮತದವರಿಗೆ ತಮ್ಮ ಮತಬೋಧನೆಯನ್ನು ಮಾಡಕೂಡದು. ಯಾಕೆಂದರೆ ಅನ್ಯಮತದವರು ಹಿಂದೂ ಮತವು ಒಳ್ಳೇದೆಂದು ನಂಬಿ ಅವಲಂಬಿಸುವದಕ್ಕೆ ಅಪೇಕ್ಷೆಪಟ್ಟಾಗ್ಯೂ ಆ ಮತಸ್ಥರು ಅವನನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳಕೂಡದು. ತ್ರಿವರ್ಣದವರು ಹೊರತು ಬೇರೆ ಯಾರಾದರೂ ವೇದವನ್ನು ಓದಕೂಡದು. ಶೂದ್ರನಾದರೂ ಮ್ಲೇಂಛನಾದರೂ ಹಿಂದೂ ದೇವಸ್ಥಾನಕ್ಕೆ ಪ್ರವೇಶಮಾಡಕೂಡದು. ಪ್ರವೇಶಮಾಡಿದಕೊಡ್ಲೆ ದೇವಸ್ಥಾನ ಹೊಲೆಯಾಯಿತು. ತನ್ನ ಮನೆಗೆ ಇತರ ಮತಸ್ಥರನ್ನು ಸೇರಿಸಿಕೊಂಡ ಕೂಡ್ಲೆ ತನಗೆ ಹೊಲೆ ಸಂಭವಿಸಿತು. ಇಂಥಾ ಬೋಧನೆಯನ್ನು ಮಾಡತಕ್ಕ ಮತವು ದೇವರಿಂದ ಬಂದದ್ದೋ ಮನುಷ್ಯಕಲ್ಪನೆಯೋ ಯೋಚಿಸಿರಿ.

ಆದರೆ ಕ್ರೈಸ್ತರಿಗೆ ಅವರ ಗುರುವು ಈ ಲೋಕವನ್ನು ಬಿಡುವ ಪಕ್ಷ ಮುಂಚೆ ಅಪ್ಪಣೆ ಕೊಟ್ಟದ್ದೇನಂದರೆ—ಪರಲೋಕ ಭೂಲೋಕಗಳಲ್ಲಿ ನನಗೆ ಸಮಸ್ತ ಅಧಿಕಾರವು ಕೊಡಲ್ಪಟ್ಟದೆ ಆದದರಿಂದ ನೀವು ಸಮಸ್ತ ರಾಜ್ಯಗಳಿಗೆ ಹೋಗಿ ಸಮಸ್ತ ಜನಗಳಿಗೆ ಸುವಾರ್ತೆ ಪ್ರಸಂಗಿಸಿ, ತಂದೆಯು ಮಗನ ಪರಿಶುದ್ಧಾತ್ಮನ ಹೆಸರಿನಲ್ಲಿ ಸ್ನಾನದೀಕ್ಷೆಯನ್ನು ಕೊಡಿರಿ ಎಂಬುದು. ಈ ಅಪ್ಪಣೆಯನ್ನು ಅನುಸರಿಸಿ ಕ್ರಿಸ್ತನ ಭಕ್ತರು ಈಗ ಸುಮಾರು ಎರಡು ಸಾವಿರ ವರುಷಗಳಿಂದ ಎಲ್ಲಾ ಜಾತಿಯ ಜನಗಳಿಗೂ, ದರಿದ್ರರಿಗೂ, ಧನಿಕರಿಗೂ, ವಿದ್ಯಾವಂತರಿಗೂ, ವಿದ್ಯಾಹೀನರಿಗೂ, ಬ್ರಾಹ್ಮಣರಿಗೂ, ಹೊಲೆಯರಿಗೂ, ಮುಸಲ್ಮಾನರಿಗೂ, ಲೋಕದಲ್ಲಿರುವ ಎಲ್ಲಾ ತರವಾದ ಹೆಂಗಸರಿಗೂ ಗಂಡಸರಿಗೂ ಕೂಡ ಕ್ರಿಸ್ತನ ರಕ್ಷಣೆಯ ಸುವಾರ್ತೆಯನ್ನು ಉಪದೇಶ ಮಾಡುತ್ತಾ ಬಂದಿದ್ದಾರೆ ಮತ್ತು ಎಲ್ಲಾ ಜಾತಿಯ ಜನಗಳೂ ಕ್ರಿಸ್ತನ ಮತವನ್ನು ಅವಲಂಬನೆ ಮಾಡಿದ್ದಾರೆ. ಆದ್ದರಿಂದ ಈ ಮತವು ಎಲ್ಲರಿಗೂ ಹಂದುವಾದದ್ದಾಗಿದೆ. ಕ್ರೈಸ್ತರ ಸತ್ಯವೇದವನ್ನು ಯಾವ ಭಾಷೆಯಲ್ಲಾದರೂ ಯಾವ ಜನಗಳಾದರೂ ತಮ್ಮ ಸ್ವಭಾಷೆಯಲ್ಲಿ ಓದಬಹುದು. ಮೊದಲು ಕ್ರೈಸ್ತರಾಗಿದ್ದವರಲ್ಲದೆ ಆ ಮತವನ್ನು ಹೊಸದಾಗಿ ಅವಲಂಬನೆ ಮಾಡಿದವರು ಕೂಡಾ ಕ್ರಿಸ್ತನ ಮತದ ಸತ್ಯವನ್ನು ಎಲ್ಲಾ ಜನಗಳಿಗೂ ತಿಳಿಸುವದಕ್ಕೋಸ್ಕರ ತಮ್ಮ ದ್ರವ್ಯ ಸಾಮರ್ಥ್ಯ ವಿದ್ಯೆ ಜೀವಗಳನ್ನು ಕೂಡಾ ಖರ್ಚು ಮಾಡುವವರಾಗಿದ್ದಾರೆ. ಇದು ಯಾತಕ್ಕೆ? ಅವರಿಗೆ ಇದರಿಂದ ಬರತಕ್ಕ ಲಾಭವೇನು? ಕ್ರೈಸ್ತಭಕ್ತನು ತಾನು ಕ್ರಿಸ್ತನಿಂದ ಹೊಂದಿದ ರಕ್ಷಣೆಯ ಭಾಗ್ಯವನ್ನು ಎಲ್ಲರೂ ಹೊಂದಬೇಕೆಂಬುವದೇ ಅವನ ಕುತೂಹಲವಾಗಿರುತ್ತದೆ. ಬೆಳಕನ್ನು ಹೊಂದಿದವನು ಅಂಧರನ್ನು ಬೆಳಕಿಗೆ ಕರೆಯದೆ ಇರುವನೇ? ಜ್ಞಾನಸಂಪಾದನೆ ಮಾಡಿಕೊಂಡವನು ಇತರರು ಅಜ್ಞಾನದ ಕತ್ತಲಲ್ಲಿ ಇದ್ದರೆ ಅವನು ನೆಮ್ಮದಿಯಾಗಿರುವನೇ? ಪರಮ ತಂದೆಯ ದಯಕ್ಕೆ ಪಾತ್ರನಾದ ದೇವಭಕ್ತನು ಅನಾಥರಾದವರು ಪಿಶಾಚನ ಅಧೀನರಾಗಿರುವದನ್ನು ನೋಡಿ ಸುಮ್ಮನೆ ಇರುವನೇ? ಕ್ರಿಸ್ತಭಕ್ತನು ಪಾಪಪರಿಹಾರವನ್ನು ಹೊಂದಿ ಜೀವನ್ಮುಕ್ತನಾಗಿದ್ದಾನೆ. ಹಾಗಾದರೆ ಪಾಪದಲ್ಲಿ ನಾಶ ಮಾಡಿಕೊಂಡು ಪಾಪಪರಿಹಾರದ ಮಾರ್ಗವನ್ನು ಹುಡುಕಲು ತಡವಾಡುತ್ತಿರುವವರನ್ನು ನೋಡಿ ಎಂದಿಗೂ ಸುಮ್ಮನಿರಲಾರನು

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ವರ್ಷ ವರ್ಧಂತೀ ಉತ್ಸವ ಕಾಲಕ್ಕೆ ಬರೋಡಾ ಸಂಸ್ಥಾನದ ರಾಜವರ್ಗದವರು ರಾಜಧಾನಿಗೆ ಬರುವವರಾಗಿದ್ದಾರೆಂದು ಪ್ರಕಟವಾಗಿದೆ.

❦❦❦

ರಾಜಧಾನಿಯಲ್ಲಿ ಸ್ಥಾಪಿಸಲ್ಪಟ್ಟಿರುವ ವಿತಂತುಗಳ ವಿದ್ಯಾಸದನದ ಶ್ರೇಯೋಭಿವೃದ್ಧಿಗಾಗಿ ಶ್ರೀಮನ್ಮಹಾರಾಜರವರು ೧,೨೦೦ ರೂಪಾಯಿ ಕೊಡಿಸಿರುತ್ತಾರೆಂದು ತಿಳಿದು ಬಂದಿದೆ

❦❦❦

ಮದ್ರಾಸು ರೈಲ್ವೆ ಸ್ಟೇಷನಲ್ಲಿ ಇಟ್ಟಿರುವ ಹೋಟೇಲಿನಲ್ಲಿ ಮೊದಲಿನಷ್ಟು ಆತುರವಾಗಿಯೂ ರುಚಿಕರವಾಗಿಯೂ ಭೋಜನ ದೊರೆಯುವುದಿಲ್ಲವೆಂದು ಒಬ್ಬ ಪಾಂಥಸ್ಥರು ಆಕ್ಷೇಪಣೆ ಮಾಡಿದಾರೆ

❦❦❦

ಗುಬ್ಬಿ ತಾಲ್ಲೂಕು ಹಾಗಲವಾಡಿ, ನಿಟ್ಟೂರು, ಹಂದನಕೆರೆ ಎಂಬ ಹೋಬಳಿಗಳಲ್ಲಿ ರೀಸರ್ವ ಕಾವಲುಗಳು. ಮುಂದಿನ ತಿಂಗಳಿಂದ ಆರಂಭವಾಗುವನೆಂದು ಸರ್ಕಾರದವರು ಪ್ರಕಟಿಸಿದಾರೆ

❦❦❦

ಕಳೆದ ಶನಿವಾರವೂ ಸೋಮವಾರವೂ ರಾಜಧಾನಿಯಲ್ಲಿ ಎರಡು ಸಲ ಒಳ್ಳೇ ಮಳೆಯಾಯಿತು. ಕೆಲವು ಮರಗಳು ಗಾಳಿಯಿಂದ ಕಳಚಿ ಬಿದ್ದುಹೋಗಿದವು. ಕೆರೆಗಳಿಗೆ ಸ್ವಲ್ಪ ನೀರು ಬಂದಿದೆ. ಹವಾ ತಂಪಾಗಿರುವುದು.

❦❦❦

ಕಾಮಗೆರೆಯಿಂದ ದ್ರಾಕ್ಷಾ ತ.ವ.ಕೊಳ್ಳಮಾಥ ಸಾಗುವಾನಿ ನೆಡುವ ಮತ್ತು ನಕ್ಷೆ ಜಂಗಲ್‌ಫೀ, ಬೆಂಕಿಹಾದಿಗಳಿಗೆ ತಲೆಹೊರೆ ನಾಲ್ಕು ಆಣೆಗೆ ಇಷ್ಟುಮತ್ತು ರುಸುಮನ್ನು ಸರ್ಕಾರಕ್ಕೆ ಕೊಡತಕ್ಕದೆಂದು ಸರ್ಕಾರದವರು ಪಟ್ಟಿ ಕೃಷಿ ನೋಟಿಸು ಪ್ರಕಟಿಸಿದಾರೆ.

❦❦❦

ಈ ಸಂಸ್ಥಾನದ ಯಾವ ಭಾಗದಲ್ಲಾದರೂ ಆಗಲಿ ಗಲಭೆ ಸಂಭವಿಸಿ, ಜನರು ಸತ್ತರೆ, ಗಾಯಗಳನ್ನು ಹೊಂದಿದರೂ ಅಥವಾ ೫೦೦ ರೂಪಾಯಿಗಿಂತ ಹೆಚ್ಚು ಆಸ್ತಿ ಹಾನಿಯಾದರೂ ಗವರ್ನಮೆಂಟಿಗೆ ಸ್ಥಳಾಧಿಕಾರಿಗಳು ಆ ವಿಚಾರದಲ್ಲಿ ರಿಪೋರ್ಟು ಕಳುಹಿಸಬೇಕೆಂದು ಹುಕುಂ ಆಗಿದೆ

❦❦❦

ಚಳ್ಳಕೆರೆ ತಾಲ್ಲೂಕಿನಲ್ಲಿ ಮಾರೀಕಣಿವೆ ತಲಾವಿನ ನೀರಿನಿಂದ ವೇದಾವತಿ ಹೊಳೆಯ ಉಭಯ ಪಾರ್ಶ್ವಗಳಲ್ಲೂ ಸುಮಾರು ಅರ್ಧ ಮೈಲಿ ಭೂಮಿ ತರೀ ಸಾಗುವಳಿಗೆ ಅನುಕೂಲವಾಗಬಹುದೆಂದು ಗೊತ್ತಾಗಿರುವದರಿಂದ ಸರ್ಕಾರದವರು ಆ ಜಮೀನುಗಳನ್ನು ಮುಂದಿನ ತಿಂಗಳ ಕಡೇ ವಾರದಲ್ಲಿ ಹರಾಜು ಮೂಲಕ ವಿಕ್ರಯ ಮಾಡುವವರಾಗಿದಾರೆ.

❦❦❦

ಈಗ ಸಂಸ್ಥಾನದಲ್ಲಿ ಡಿಪ್ಟಿ ಅಮಲ್ದಾರಿ, ಅಮಲ್ದಾರಿಗಳನ್ನು ಬದಲಿ ನೋಡುತ್ತಿರುವವರಿಗೆ ಆ ಕೆಲಸ ಖಾಯಂ ಆಗಬೇಕಾದರೂ, ಇತರರಿಗೆ ಆ ಕೆಲಸ ದೊರಕಬೇಕಾದರೂ ಮುಂದೆ ಆಗೋಸ್ಟು ತಿಂಗಳಲ್ಲಿ ನಡೆಯುವ ಲೆಕ್ಕಾಚಾರ ವಿಷಯವಾದ ಒಂದು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕಾದದ್ದು ಆವಶ್ಯವೆಂದು ಗವರ್ನಮೆಂಟಿನವರು ತಿಳಿಸಿರುತ್ತಾರೆ.

❦❦❦

ತಿರುಮಕೂಡ್ಲು ನರಸೀಪುರದಲ್ಲಿ ರೇಷ್ಮೆ ವ್ಯಾಪಾರದವರು ಸೇರಿ, ಆ ಕಸುಬನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಒಂದು ಪರಸ್ಪರ ಸಹಾಯಕ ಸಂಘವನ್ನು ಏರ್ಪಾಡು ಮಾಡಿಕೊಂಡರು. ಹತ್ತು ರೂಪಾಯಿನ ೩,೦೦೦ ಷೇರುಗಳು ಬಿಕರಿ ಆಗಿರುತ್ತವೆ. ಈ ಸಂಘದವರು ಯಂತ್ರ ಮೊದಲಾದ ಸಾಧನಗಳನ್ನು ತರಿಸಿ, ಆ ಕಸಬನ್ನು ಅಭಿವೃದ್ಧಿಪಡಿಸಬೇಕೆಂದು ಉದ್ದೇಶಪಟ್ಟಿದಾರೆ

❦❦❦

ಬೆಂಗಳೂರಿನಲ್ಲಿರುವ ತಾತಾರವರ ರೇಷ್ಮೆ ಕಾರ್ಖಾನೆಯ ಮುಖಂಡರಾದ ಮೆ॥ ಓಡ್ಯೂಯವರನ್ನು ಈ ಸಂಸ್ಥಾನದಲ್ಲಿ ರೇಷ್ಮೆ ತಯಾರಾಗುವ ಸ್ಥಳಗಳಿಗೆಲ್ಲಾ ಕಳುಹಿಸಿ, ಆ ಕಸಬಿನವರಿಗೆ ಹೊಸ ಕ್ರಮಗಳನ್ನು ಕಲಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ಗವರ್ನಮೆಂಟಿನವರು ಯೋಚಿಸುತ್ತಿದಾರೆ ಇದರಿಂದ ಈ ದೇಶದ ರೇಷ್ಮೆಯ ಕಸಬು ಅಭಿವೃದ್ಧಿ ಹೊಂದೀತೆಂದು ಹೇಳಬಹುದಾಗಿದೆ

❦❦❦

ಮಾಲೂರು ತಾಲ್ಲೂಕು ಶಿರಸ್ತೆದಾರ್ ಮೆ॥ ಎ. ಸುಬ್ಬರಾಯರನ್ನು ಗೋರೀಬಿದನೂರಿಗೂ, ಗೋರೀಬಿದನೂರು ತಾಲ್ಲೂಕು ಶಿರಸ್ತೆದಾರ್ ಮೆ॥ ಸಿ. ಜಿ. ಸುಬ್ಬರಾಯರನ್ನು ಮಾಲೂರಿಗೂ ವರ್ಗ ಮಾಡಿದಾರೆ ಮತ್ತು ಸರ್ವೆ ಇಲಾಖೆಯಲ್ಲಿ ಕ್ಲಾರ್ಕ ಆಗಿದ್ದ ಮೆ॥ ರಘುಪತಿ ರಾಘವೇಂದ್ರಯವರನ್ನು ಮೈಸೂರು ಡಿಸ್ಟ್ರಿಕ್ಟ್ ಸರ್ವೆ ಕೆಲಸಕ್ಕೆ ಆರು ತಿಂಗಳ ಮಟ್ಟಿಗೆ ತಾತ್ಕಾಲಿಕ ನೇಮಕ ಮಾಡಿದಾರೆ.

ಹೊಂಗನೂರು ತಾಲ್ಲೂಕು ತೀರ್ಥದಲ್ಲಿ ಈಚೆಗೆ ನಾಲ್ಕೈದು ವರುಷಗಳಿಂದಲೂ ಬಹು ಉತ್ಸಾಹದಿಂದ ಮಕ್ಕಳಿಗೆ ವಿದ್ಯೆ ಕಲಿಸುತ್ತಿದ್ದ ಉಪಾಧ್ಯಾಯರನ್ನು ಇನ್ನೊಂದು ಕಡೆಗೆ ವರ್ಗ ಮಾಡಿದರೆಂತಲೂ, ಅಲ್ಲಿನ ಪ್ರಜೆಗಳು ಬಹಳ ವ್ಯಸನಪಟ್ಟು ಅವರಿಗೆ ಸನ್ಮಾನ ಮಾಡಿ ಕಳುಹಿಸಿಕೊಟ್ಟರೆಂತಲೂ, ಅವರನ್ನು ಅಲ್ಲೇ ಇಟ್ಟರಬೇಕೆಂದು ೩-೪ ಅರ್ಜಿಗಳನ್ನು ಬರೆದುಕೊಂಡರೂ ಪ್ರಯೋಜನವಾಗಲಿಲ್ಲವೆಂತಲೂ ಒಬ್ಬ ಪಾತ್ರದಾರರು ಬರೆಯುತ್ತಾರೆ.

❦❦❦

ಬೆಂಗಳೂರು ಪಟ್ಟಣದ ಹಲಸೂರು ಹೇಟೆ ಸ್ಪೇಷಲ್ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶೇಕ್ ಹಾದಿರ್ ಎಂಬಾತನು ಕೊಲೆಗಳಲ್ಲಿ ಸಹಾಯಕನಾಗಿದ್ದನೆಂದು ಮದರಾಸ್ ಸೆಷನ್ಸ್ ಕೋರ್ಟಿನಲ್ಲಿ ಕಳೆದ ವಾರ ಮೊಕದ್ದಮೆ ನಡೆಯಿತು. ಎರಡು ಮೊಕದ್ದಮೆಗಳಲ್ಲೂ ಪಂಚಾಯತಿದಾರರು ಆತನ ಮೇಲೆ ಅಪರಾಧ ತೋರುವುದಿಲ್ಲವೆಂದು ಅಭಿಪ್ರಾಯಪಟ್ಟದ್ದರಿಂದ ಜಡ್ಜಿಯವರು ಆ ಮೊಕದ್ದಮೆಯನ್ನು ವಜಾ ಮಾಡಿ, ಆತನನ್ನು ಖುಲಾಸ್ ಮಾಡಿಸಿದರು.

❦❦❦

ಸರ್ಕಾರಿ ಮತ್ತು ಸಾಹುಕಾರಿ ಪಾಠಶಾಲೆಗಳಲ್ಲಿ ಬಾಲಕರಿಗೆ ಅನುಕೂಲವನ್ನು ಹೇಳಿಕೊಡಬೇಕೆಂದು ಪ್ರತಿ ವರುಷವೂ ಮೈಸೂರು ಪ್ರಜಾಪ್ರತಿನಿಧಿ ಸಭೆಯವರು ಗವರ್ನಮೆಂಟಿನವರನ್ನು ಕೇಳುತ್ತಲೇ ಬಂದದ್ದೂ, ಕಳೆದ ವರುಷದ ಸಭೆಯಲ್ಲಿ ದಿವಾನರವರು ಪ್ರತಿನಿಧಿಗಳ ಪ್ರಾರ್ಥನೆಯನ್ನು ಲಾಲಿಸಿ, ಅದರಂತೆ ಹುಕುಂ ಕೊಡುವುದಾಗಿ ವಾಗ್ದಾನ ಮಾಡಿದ್ದೂ ವಾಚಕರಿಗೆ ತಿಳಿದಿದೆಯಷ್ಟೆ. ಸರ್ಕಾರದಿಂದ ವಿದ್ಯಾಭ್ಯಾಸದ ಇಲಾಖೆಗೆ ಹುಕುಂ ಹೊರಟು ಸುಮಾರು ಎರಡು ತಿಂಗಳಾಯಿತು. ಇನ್ಸ್‌ಪೆಕ್ಟರ್ ಜನರಲ್‌ರವರಿಂದ ಇನ್ಸ್‌ಪೆಕ್ಟರುಗಳಿಗೂ, ಅವರಿಂದ ಸ್ಕೂಲುಗಳಿಗೂ ಅದು ಬರುವುದಕ್ಕೂ, ಉಪಾಧ್ಯಾಯರು ಅದರ ಹೇಳಿಕೊಡುವದನ್ನು ಪ್ರಾರಂಭಿಸುವುದಕ್ಕೂ ಇನ್ನೆಷ್ಟು ಕಾಲ ಹಿಡಿಯುವುದೋ ಹೇಳಲಾಗದು

❦❦❦

ರಾಜಧಾನಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಕೋಆಪರೇಟಿವ್ ಸೊಸೈಟಿ ಎಂಬ ಪರಸ್ಪರ ಸಹಾಯಕ ಸಂಘದ ಎರಡನೇ ಜನರಲ್ ಮೀಟಿಂಗು ಈ ತಿಂಗಳ ೨೫ ನೆ ತಾ ೩. ಘಂಟೆ ಬೆಳಗ್ಗೆ ಇಲ್ಲಿನ ಮುನಿಸಿಪಲ್ ಕಚೇರಿಯಲ್ಲಿ ನಡೆಯುವುದೆಂದು ಮ್ಯಾನೇಜಿಂಗ್ ಕಮಿಟಿಯವರು ಪ್ರಕಟಿಸಿರುತ್ತಾರೆ ಆ ಮೀಟಿಂಗಿನಲ್ಲಿ ನಡೆಯತಕ್ಕ ವಿಷಯಗಳೇನೆ ಎಂದರೆ—(೧) ಮ್ಯಾನೇಜಿಂಗ್ ಕಮಿಟಿಯವರ ೧೮೮೯—೯೦ ನೆ ಸಾಲಿನ ರಿಪೋರ್ಟು; (೨) ಆಡಿಟರುಗಳ ರಿಪೋರ್ಟು, (೩) ಕೋಆಪರೇಟಿವ್ ನೆ ಸ್ಟೋರುಗಳ ಹಾಗೆ ಇತರ ಕೋಆಪರೇಟಿವ್ ಸೊಸೈಟಿಗಳಿಗೆ ಈ ಸೊಸೈಟಿಯಿಂದ ಸಾಲಕೊಡಲು ಸಾಧ್ಯವೇ ಎಂದು ಕೇಳಿರುವ ವಿಚಾರದ ವ್ಯವಸ್ಥೆ; (೪) ಸೊಸೈಟಿಯ ಅಧಿಕಾರಿಗಳ ಮತ್ತು ಮ್ಯಾನೇಜಿಂಗ್ ಕಮಿಟಿಯ ಮೆಂಬರುಗಳ ಚುನಾವಣೆ; (೫) ಇತರ ಅವಶ್ಯ ವಿಷಯಗಳು ಇವೇ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಕಮಿಷನರ್ ಮೆ॥ ಸಿ. ರಾಜಗೋಪಾಲಚಾರ್ಲುಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಖಜಾನಾ ಅಸಿಸ್ಟೆಂಟ್ ಕಮಿಷನರ್ ಮೆ॥ ಎಂ. ಮೃತ್ಯುಂಜಯ ಐಯರವರಿಗೆ ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಅಮಲ್ದಾರ್ ಮೆ॥ ವಿ. ಎಸ್. ರಂಗಗೋಪಾಲಾಚಾರ್ರಿಗೆ ರಜಾ ಕೊಟ್ಟಿರೋಣವರಿಂದ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕೃಷ್ಣರಾಜಪೇಟೆ ತಾಲ್ಲೂಕಿನ ಶಿರಸ್ತೇದಾರ್ ಕೆ. ಎಲ್. ರಾಮಚಂದ್ರಯನವರು ಆ ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲೀ ನೇಮಿಸಲ್ಪಟ್ಟಿದಾರೆ.

ಅಸಿಸ್ಟೆಂಟ್ ಕಮಿಷನರ್ ಮೆ॥ ಎಂ. ಶ್ರೀನಿವಾಸಮೂರ್ತಿಯವರನ್ನು ಗುಬ್ಬಿ ಸಬ್ ಡಿವಿಜನ್ ಛಾರ್ಜಿನಿಂದ ಮಧುಗಿರಿ ಸಬ್ ಡಿವಿಜನ್ ಛಾರ್ಜಿಗೆ ವರ್ಗಮಾಡಿದೆ.

ಮೆ॥ ಎಸ್. ಇಸ್ಮ. ಸಿ. ಎಸ್. ಐ ಯವರು ಏಪ್ರಿಲ್ ತಾ. ೩ ರಲ್ಲೂ ಮೆ॥ ಎಚ್. ವಿ. ನಂಜುಂಡಯ್ಯನವರಿಂದ ಮೈಸೂರು ಛೀಫ್ ಕೋರ್ಟಿನ ಛೀಫ್ ಜಡ್ಜ್ ಕೆಲಸದ ಛಾರ್ಜನ್ನು ವಹಿಸಿಕೊಂಡಿದಾರೆ.

ಮೈಸೂರು ಛೀಫ್ ಕೋರ್ಟಿನ ಜಡ್ಜಿಯ ಕೆಲಸದ ಛಾರ್ಜನ್ನು ಮೆ॥ ಕೆ. ಎಸ್. ಚಂದ್ರಶೇಖರಯ್ಯಯವರು ಏಪ್ರಿಲ್ ತಾ. ೩ ರಲ್ಲಿ ವಹಿಸಿಕೊಟ್ಟರು.

ಶ್ರೀಮನ್ಮಹಾರಾಜರವರು ಮೆ॥ ಗುಲಾಂ ಮೃತ್ಯುಜಾ ಬೇಗ್ ಯವರಿಗೆ ಮೈಸೂರು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನಲ್ಲಿ ಪ್ರೊಬೇಷನರ್ ದರ್ಜೆಯನ್ನು ದಯಪಾಲಿಸಿರುತ್ತಾರೆ.

ಶ್ರೀಮನ್ಮಹಾರಾಜರವರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನ ಕಮಿಷನ್ ರ್‍ಯಾಂಕಿಯಲ್ಲಿ ಮಹಮದ್ ನಸರ್ ಖಾನಯವರನ್ನು ೫ ನೇ ಗ್ರೇಡ್ ಜಮಾದಾರಿಯಿಂದ ನಾಲ್ಕನೇ ಗ್ರೇಡಿಗೆ ಬಡ್ತಿ ಮಾಡುವಂತೆ ಸ್ಯಾಂಕ್ಷನ್ ದಯಪಾಲಿಸಿರುತ್ತಾರೆ.

ನಾಡಿಗಳ ಇಲಾಖೆ ಎಕ್ಸಿಕ್ಯೂಟಿವ್ ಇಂಜನಿಯರ್ ಮೆ॥ ಎ ರಾಮಸ್ವಾಮಿ ಐಯರ್‌ಯವರಿಗೆ ಏಪ್ರಿಲ್ ತಾ. ೧೪ ರಿಂದ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚನ್ನಗಿರಿ ತಾಲ್ಲೂಕು ಅಮಲ್ದಾರ್ ಮೆ॥ ಬಿ. ಸಿ. ಕೇಶವಯ್ಯನವರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖು ಮೊದಲ್ಗೊಂಡು ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶಿರಸ್ತೆದಾರ್ ಬೀಮರಾಯರು ತಾಲ್ಲೂಕಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು.

ಮಾತೃಭಕ್ತಿಯು.

ಪ್ರತಿಯೊಬ್ಬ ಗೃಹಸ್ಥನೂ ತನ್ನ ಮನೆಯು ಸುಖಸಾಮ್ರಾಜ್ಯದಲ್ಲಿ ಇರಬೇಕೆಂದೂ ಸ್ವಲ್ಪವೂ ದುಃಖದಲ್ಲಿರಬಾರದೆಂದೂ ಕೋರುವನಷ್ಟೆ. ಅದರಂತೆಯೇ ಒಂದು ರಾಜ್ಯದ ರಾಜನೂ ತನ್ನ ದೇಶದಲ್ಲಿ ಸುಖಶಾಂತಿಗಳು ನೆಲೆಯಾಗಿರಬೇಕೆಂದೇ ಅಪೇಕ್ಷಿಸುವನಲ್ಲವೆ? ಪಾಪಕರ್ಮವಿಶಿಷ್ಟರಾಗಿಯೂ ಅಲ್ಪಾಯುಗಳಾಗಿಯೂ ಇರುವ ಮನುಷ್ಯರೇ ತಮ್ಮ ಜೀವಿತಕಾಲದಲ್ಲಿ ಶಾಶ್ವತಸುಖವನ್ನು ಕೋರುವಾಗ ಪಾಪದೂರನೂ ನಿತ್ಯನೂ ಸರ್ವೇಶ್ವರನೂ ಆದ ದೇವರು ತನ್ನ ಸೃಷ್ಟಿಗೆ ಶಾಶ್ವತ ಸುಖವನ್ನು ಆಶೀರ್ವದಿಸುವುದು ಯುಕ್ತವೇ ಆಗಿದೆಯೆಂಬುದು ನಿರ್ವಿವಾದವಾಗಿದೆ. ಇಂತಹ ಸುಖವನ್ನು ದೇವರು ತಾನಾಗಿ ಪ್ರತ್ಯಕ್ಷದಿಂದ ಕೊಡುವುದಿಲ್ಲ. ಸೃಷ್ಟಿವಸ್ತುಗಳ ಮೂಲಕವೇ ಸಹಾಯಮಾಡಬೇಕಲ್ಲದೆ ಮತ್ತೆ ಬೇರೆ ಇಲ್ಲ. ಹೀಗೆಯೇ ಪ್ರತಿಯೊಂದು ಪ್ರಾಣಿಯ ಸೃಷ್ಟಿ ಸ್ಥಿತಿ ಲಯಗಳಿಗೆಲ್ಲ ಅಯಾ ಪ್ರಾಣಿಗಳೇ ಸಹಕಾರಿಗಳಾಗಿರುವಂತೆ ಏರ್ಪಡಿಸಿರುವನು. ಪ್ರಕೃತದಲ್ಲಿ ಮನುಷ್ಯನಿಗೆ ಅವಶ್ಯಕವಾದ ಸುಖಸಂಪತ್ತಿಗೆ ದೇವರು ಎಷ್ಟು ಸಹಾಯವನ್ನು ಒದಗಿಸಿರುವನೋ ಅದರ ಕೃತಜ್ಞತೆಯನ್ನು ನಾವು ಹೇಗೂ ತೀರಿಸಲಾರೆವು ಸಕಲವನ್ನೂ ಸಿದ್ಧಪಡಿಸಿಕೊಟ್ಟ ದೇವರನ್ನು ಮೆಚ್ಚಿಸುವುದು ದುಸ್ಸಾಧ್ಯವಾದುದರಿಂದಲೇ ಆಯಾ ಕಾಲಕ್ಕೆ ತಕ್ಕಂತೆ ಉಪಕರಿಸಿದವರುಗಳಿಗೆ ಕೃತಜ್ಞತೆಯನ್ನಾದರೂ ಅರ್ಪಿಸುವುದು ಮನುಷ್ಯನ ಮುಖ್ಯ ಕರ್ತವ್ಯವಾಗಿದೆ.

ದೇವರ ಪ್ರಥಮ ಉಪಕಾರವನ್ನು ಕೃತಜ್ಞತೆಯ ಮೂಲಕ ನಾವು ಸಾರ್ಥಕಗೊಳಿಸಿ ಧನ್ಯರಾಗಬೇಕಾದರೆ ನಾವು ಮಾತೃಭಕ್ತಿಯ ಕಡೆಗೆ ಗಮನಕೊಡಬೇಕಾಗಿದೆ. ನಾವು ಯಾವುದಾದರೂ ಒಂದು ಭಾರವನ್ನು ಸ್ವಲ್ಪಕಾಲದಲ್ಲಿ ಸ್ವಲ್ಪ ದೂರಕ್ಕೆ ತೆಗೆದುಕೊಂಡು ಹೋಗಲು ಎಷ್ಟು ಜುಗುಪ್ಸೆಯನ್ನೂ ಆಯಾಸವನ್ನೂ ಹೊಂದುವೆವೆಂಬುದನ್ನು ಮೊದಲು ಯೋಚಿಸಬೇಕು. ತಲೆಯಲ್ಲಿ ಸ್ವಲ್ಪ ನೀರು ನಿಂತು ನೆಗಡಿಯಾದಾಗ ಒಂದೆರಡು ದಿವಸದ ತಲೆಯ ಭಾರವನ್ನು ಎಷ್ಟು ಕಷ್ಟದಿಂದ ಸಹಿಸುವೆವೆಂಬುದನ್ನೂ ಆಲೋಚಿಸಬೇಕು. ಹೀಗೆ ಆಲೋಚಿಸಿದರಲ್ಲದೆ ನಮ್ಮನ್ನು ನಮ್ಮ ತಾಯಿಯು ತನ್ನ ಗರ್ಭದಲ್ಲಿ ಎಷ್ಟು ಕಷ್ಟದಿಂದ ವಹಿಸಿದ್ದಳೆಂಬುದನ್ನು ನಾವು ತಿಳಿಯಬಹುದು! ನಮ್ಮಂತೆ ಚಿಕಾಸೆಯನ್ನಾಗಲೀ ದುಃಖವನ್ನಾಗಲೀ ನಮ್ಮ ತಾಯಿಯು ಆ ಕಾಲದಲ್ಲಿ ತೋರ್ಪಡಿಸಿರುವಳೇ? ಎಷ್ಟೋ ಆನಂದದಿಂದ ದೇವರ ಉಪಕಾರವು ತನ್ನಿಂದ ಬಹಿರ್ಭೂತನಾಗುವುದೆಂಬ ನಂಬಿಕೆಯೇ ಆಕೆಯ ದುಃಖನಿವಾರಣೆಗೆ ಕಾರಣವಾಗಿದೆಯಲ್ಲವೇ? ಗರ್ಭವು ಭೂಪಾತನವಾಗುವುದರೊಳಗಾಗಿಯೇ ಸ್ತನ್ಯವನ್ನು ಸಿದ್ಧಮಾಡಿ, ತಾಯಿಯ ಮೂಲಕ ತನ್ನ ಮಹಿಮೆಯನ್ನು ಪ್ರಕಟಿಸುವ ದೇವರ ಮಹಿಮೆಯು ಎಂತಹುದಾಗಿರಬೇಕು! ದೇವರು ತನ್ನ ಮಹಿಮೆಯನ್ನು ಪ್ರಕಟಿಸಬೇಕಾದರೆ ಉತ್ಕೃಷ್ಟವಸ್ತುವಿನಲ್ಲಿಯೇ ಅಲ್ಲದೆ ಮತ್ತೇನು? ಅಂತಹ ಉಪಕಾರವು ಯಾರ ಮೂಲಕವಾಗಿ ನಮಗೆ ಲಭ್ಯವಾಗುವುದೋ ಅದು ನಮಗೆ ಪ್ರತ್ಯಕ್ಷ ದೈವವಲ್ಲವೇ? ನಮ್ಮ ಶೈಶವದಲ್ಲಿ ನಾವು ನಮ್ಮ ತಾಯಿಗೆ ಎಷ್ಟು ಸಂಕಟಗಳನ್ನುಂಟುಮಾಡಿರುವೆವೆಂಬುದನ್ನು ದೃಷ್ಟಾಂತಗೊಳಿಸಬೇಕಾದರೆ, ಈಗ ತಾಯಿಯರಾಗುತ್ತಿರುವವರನ್ನು ಪರೀಕ್ಷಿಸಿದರೆ ಸಾಕಾಗಿದೆ. ಎಷ್ಟೋ ಮಕ್ಕಳು ರಾತ್ರಿಯೆಲ್ಲಾ ತಮ್ಮ ತಾಯಿಯರಿಗೆ ತಮ್ಮ ರೋದನಸಂಗೀತದಿಂದ ನಿದ್ರೆಯನ್ನೇ ಮಾಡಗೊಡಿಸದಿರುವವು. ಬಾಲಾರಿಷ್ಟಾದಿಗಳಿಂದಲೂ ರೋಗಗಳಿಂದಲೂ ಎಷ್ಟೋ ದುಃಖವನ್ನುಂಟುಮಾಡುತ್ತಿರುವವು. ಇಂತಹ ಕಷ್ಟಪರಂಪರೆಗಳನ್ನೆಲ್ಲಾ ಎಷ್ಟೋ ಶಾಂತತೆಯಿಂದ ಸಹಿಸಿ, ಪುನಃ ನಮ್ಮ ಅಭಿವೃದ್ಧಿಗೆ ಸಹಾಯಮಾಡುವ ತಾಯಿಯು ದೇವರಿಗಿಂತಲೂ ಮೊದಲು ಪೂಜನಾರ್ಹಳೆಂದು ಯಾವ ಮೂಢನು ತಾನೇ ಹೇಳಲಾರನು? ಅದುದರಿಂದಲೇ "ಮಾತಾ ಪ್ರತ್ಯಕ್ಷ ದೇವತಾ" ಎಂದು ಪ್ರಸಿದ್ಧವಾಗಿದೆ. ಮನುಷ್ಯನು ಸುಖಸಾಮ್ರಾಜ್ಯದಲ್ಲಿ ನೆಲೆಯಾಗಿರಬೇಕಾದರೆ ಪುಣ್ಯಸಾಧನೆ ಇರಬೇಕು. ಇಂತಹ ಪುಣ್ಯಸಾಧನೆಗೆ ಮಾತೃಸೇವೆಯೇ ಮೂಲವಾಗಿರಬೇಕೆಂದು ದೇವರು ಉದ್ದೇಶಿಸಿರುವಂತೆ ತೋರುವುದು. ಏಕೆಂದರೆ, ಒಂದೊಂದು ವಿಧದ ದೇವಾರಾಧನೆಯಿಂದ ಒಂದೊಂದು ಜಾತಿಯಲ್ಲಿ ನ್ಯೂನಾಧಿಕ ಫಲಗಳೇ ಆಗಿವೆಯೆಂದು ವಾದವಿವಾದಗಳಲ್ಲಿ ಪರಿಣಮಿಸಿದರೂ, ಸರ್ವಜಾತಿಯಲ್ಲಿಯೂ ಸರ್ವಕಾಲದಲ್ಲಿಯೂ ಮಾತೃಸೇವೆಯಲ್ಲಿ ಪುಣ್ಯನ್ಯೂನತೆಯನ್ನಾಗಲೀ ಪಾಪಶಂಕೆಯನ್ನಾಗಲೀ ಯಾರೂ ಹೇಳಿಲ್ಲ. ಅದುದರಿಂದಲೇ ತಾಯಿಯು ಪ್ರತಿ ಮನುಷ್ಯನಿಗೂ ಪ್ರತ್ಯಕ್ಷದೇವತಾ ಸ್ವರೂಪಳೇ ಆಗಿರುವಳು. ಇಂತಹ ದೇವತೆಗೆ ದ್ರೋಹಮಾಡಿದವನು ಎಂದಿಗೂ ಸುಖಿಯಾಗುವುದಿಲ್ಲ. ಈಗ ಪ್ರಪಂಚದಲ್ಲಿ ಸುಖ ಲೇಶವೂ, ದುಃಖ ಅಪಾರವೂ ಉಂಟಾಗಲು ಕಾರಣವೇನು? ಮಾತೃಭಕ್ತಿ ಕಡಮೆಯಾಗಿರುವುದೇ ಅಲ್ಲವೇ?

ಪೂರ್ವಕಾಲದಲ್ಲಿ ಮಾತೃಭಕ್ತಿಯೆಂಬುದು ಬಲು ಚೆನ್ನಾಗಿದ್ದಿತು ಇದಕ್ಕೆ ಅನೇಕ ಇತಿಹಾಸಗಳುಂಟು. ಹಿಂದಿನ ಕಾಲದಲ್ಲಿ ಪರಶುರಾಮನು ತನ್ನ ಪ್ರತಿ ದ್ವಂದ್ವಿಯೊಡನೆ ಭೂ ಪ್ರದಕ್ಷಿಣೆಯ ಪುಣ್ಯಫಲವನ್ನು ಸಂಪಾದಿಸಲು ಪ್ರತಿಜ್ಞೆ ಮಾಡಿದನು. ಯಾರು ಮುಂಚಿತವಾಗಿ ಭೂಪ್ರದಕ್ಷಿಣೆಯನ್ನು ಪೂರೈಸುವರೋ ಅವರು ನಾಲ್ಕೊಬ್ಬರ ಫಲವನ್ನು ಕಾಣಿಕೆಯಾಗಿ ಪರಿಗ್ರಹಿಸುವಂತೆ ಗೊತ್ತಾಗಿದ್ದಿತು. ಅದರಂತೆಯೇ ಎರಡನೆಯವನು ಭೂ ಸಂಚಾರಕ್ಕೆ ಹೊರಟನು. ಮಹಾ ನದೀನದಗಳನ್ನೂ ಘೋರಾಟವಿಗಳನ್ನೂ ವಿವಿಧ ಪುಣ್ಯಕ್ಷೇತ್ರಗಳನ್ನೂ ಮಹಾನಗರಗಳನ್ನೂ ಸುತ್ತಿ ಸುತ್ತಿ ಕೆಲವು ವರ್ಷಗಳ ಮೇಲೆ ಗೊತ್ತಾಗಿದ್ದ ಸ್ಥಳಕ್ಕೆ ಬಂದನು. ಪರಶುರಾಮನು ತನ್ನ ಸ್ಥಳವನ್ನು ಬಿಡದೆ, ತನ್ನ ತಾಯಿಯ ಶುಶ್ರೂಷೆಯನ್ನು ಮಾಡುತ್ತಾ ನಿಶ್ಚಿಂತನಾಗಿದ್ದನು. ಪ್ರದಕ್ಷಿಣೆಯನ್ನು ಪೂರೈಸಿ, ತನ್ನ ಸನಿಹಕ್ಕೆ ತನ್ನ ಪ್ರತಿದ್ವಂದ್ವಿಯು ಬರುವುದರೊಳಗಾಗಿ ತಾನು ತನ್ನ ತಾಯಿಗೆ ಒಂದು ಪ್ರದಕ್ಷಿಣೆಯನ್ನು ಮಾಡಿ ಕಾದೇ ಗದ್ದೆನೆಂದು ಹೇಳಿದನು. ಈಗ ಉಭಯರಿಗೂ ಚರ್ಚೆ ನಡೆದು, ಮಹರ್ಷಿಗಳಿಗೆ ತಿಳಿಸಲು, ಅಧ್ಯಕ್ಷರು "ಸಾಸಿರ ಭೂ ಪ್ರದಕ್ಷಿಣೆಗಳಿಗಿಂತಲೂ ಒಂದು ಬಾರಿ ತಾಯಿಯನ್ನು ಪ್ರದಕ್ಷಿಣ ಮಾಡುವುದೇ ಕೋಟ್ಯಂಶ ಫಲಾಧಿಕವು" ಎಂದು ಸಾರಿದರು. ಭೀಷ್ಮಾಚಾರ್ಯರು ತಮ್ಮ ತಾಯಿಗೆ ವಾಗ್ದಾನಮಾಡಿದಂತೆ ತಾವು ಯಾವಜ್ಜೀವವೂ ಬ್ರಹ್ಮಚಾರಿಗಳಾಗಿಯೇ ಇದ್ದು, ಮಾತೃಭಕ್ತಿಯನ್ನು ಪ್ರದರ್ಶನ ಮಾಡಿದರು. ಕರ್ಣನು ತನ್ನ ತಾಯಿಗೆ ವಾಗ್ದಾನ ಮಾಡಿದಂತೆ ತನ್ನ ಶತ್ರುವನ್ನು ಸೋಲಿಸಲು ಸಹಾಯಭೂತವಾಗಿದ್ದ ಪ್ರತಿಜ್ಞೆಯನ್ನೂ ಶಕ್ತಿಯನ್ನೂ ಹಿಂದಕ್ಕೆ ತೆಗೆದು ತನ್ನ ಪ್ರಾಣವನ್ನೇ ಪ್ರಪಂಚಕ್ಕೆ ಈಡಾಡಿದನು. ಪಾಂಡವರಲ್ಲಿ ದ್ರೌಪದಿಯನ್ನು ಒಬ್ಬನೇ ಜಯಿಸಿ ಸ್ವಯಂವರಿಸಿದರೂ, ತಾಯಿಯ ಅಪ್ಪಣೆಯಂತೆ ಐವರೂ ವರಿಸಿ ಮಾತೃವಾಕ್ಯವನ್ನು ಪರಿಪಾಲನೆ ಮಾಡಿದರು. ಶ್ರೀರಾಮನು ಸಾಮ್ರಾಜ್ಯಾಭಿಷೇಕವನ್ನು ತೊರೆದು ಕಾಡಿನಲ್ಲಿ ಸುತ್ತಿ ಸುತ್ತಿ ಕಡು ದುಗುಡಗಳಿಗೀಡಾದುದು ಮಾತೃವಾಕ್ಯ ಪರಿಪಾಲನೆಗೋಸುಗವೇ ಅಲ್ಲವೇ? ಶಂಕರಾಚಾರ್ಯರು ತಾವು ಸಂಕಲ್ಪಿಸಿದಾಗಲೇ ಸನ್ಯಾಸವನ್ನು ಸ್ವೀಕರಿಸದೆ, ಸಾವಕಾಶಕ್ಕೆ ಬಿಟ್ಟುದು ಮಾತೃಭಕ್ತಿಗೋಸುಗವೇ. ಮಧ್ವಾಚಾರ್ಯರೂ ತಾವು ಸಂಕಲ್ಪಿಸಿದಂತೆ ಸನ್ಯಾಸವನ್ನು ಸ್ವೀಕರಿಸಲು ಪ್ರತಿಬಂಧಕವನ್ನುಂಟುಮಾಡಿದಾಗ ತಮ್ಮ ತಾಯಿಯ ಇಷ್ಟಾರ್ಥವು ನೆರವೇರುವ ವರೆಗೂ ತಮ್ಮ ಸಂಕಲ್ಪವನ್ನು ದೂರಮಾಡಿದ್ದರು.

ಇವಲ್ಲದೆ ಚರಿತ್ರೆಗಳೂ ಹಲವುಂಟು. ಅಲೆಗ್ಝಾಂಡರನೆಂಬ ಗ್ರೀಕ್ ದೇಶದ ಚಕ್ರವರ್ತಿಯು ತನ್ನ ತಾಯಿಯಲ್ಲಿ ಎಷ್ಟು ಭಕ್ತಿಯುತನಾಗಿದ್ದನೆಂಬುದು ಲೋಕಕ್ಕೆಲ್ಲ ಆದರ್ಶಪ್ರಾಯವಾಗಿದೆ. ಅಲೆಗ್ಝಾಂಡರನು ಸಾಮಾನ್ಯನಲ್ಲ. ಪ್ರಪಂಚದ ಪುರಾಗ್ರೇಸರರಲ್ಲಿ ಅವನು ಗಣ್ಯನು ಮತ್ತು ರಾಜಾಧಿರಾಜನು. ಅನೇಕ ರಾಜರುಗಳ ಕಪ್ಪಗಳನ್ನು ತೆಗೆದುಕೊಂಡು ತನ್ನ ಸಾರ್ವಭೌಮತೆಯನ್ನು ಅನ್ವರ್ಥಗೊಳಿಸಿದ್ದನು. ಆಕಾಶದ ಕೆಳಗಿರುವುದೆಲ್ಲ ಅಲೆಗ್ಝಾಂಡರನ ರಾಜ್ಯವಾಗಿರಬೇಕೆಂಬ ಆಶೆಯು ಅವನಿಗಿದ್ದಿತು. ಅಂತಹ ಚಕ್ರವರ್ತಿಯು ತನ್ನ ತಾಯಿಗೆ ಹೆದರಿ ನಡೆಯುತ್ತಿದ್ದನೆಂಬುದು ಆಶ್ಚರ್ಯಕರವಾಗಿದೆ. ಪ್ರಪಂಚವೇ ಚಕ್ರವರ್ತಿಗೆ ಕಂಪಿಸುತ್ತಿರುವಾಗ ಸಾರ್ವಭೌಮನು ತಾಯಿಗೆ ಅಡಿಯಾಳಾಗಿದ್ದನೆಂಬುದು ಹೇತಿಹನವೋ ಘನತೆಯೋ ಯೋಚಿಸಬೇಕಾಗಿದೆ.

ನಮ್ಮ ಚಕ್ರವರ್ತಿಗಳಾಗಿರುವ ಎಡ್ವರ್ಡ್ ಸಾರ್ವಭೌಮರ ಮಾತೃಭಕ್ತಿಯು ಅನ್ಯಾದೃಶವಾದುದೆಂದು ತಿಳಿದು ಬಂದಿದೆ. ಅವರ ತಾಯಿಯವರು ಜೀವಂತರಾಗಿದ್ದಾಗ ಅವರ ಅಪ್ಪಣೆಯನ್ನು ಸ್ವಲ್ಪವೂ ಉಲ್ಲಂಘಿಸದೆ ತಮ್ಮ ಆಯುಸ್ಸಿನ ಮುಖ್ಯಭಾಗವನ್ನೇ ಯುವಸಾರ್ವಭೌಮತೆಯಲ್ಲಿ ಕಳೆದಿರುವುದನ್ನು ನೋಡಿದರೆ ಇಂಗ್ಲೀಷ್ ಚರಿತ್ರೆಯಲ್ಲಿ ಇವರ ಮಾತೃಭಕ್ತಿಯು ಕೇವಲ ಸ್ತುತ್ಯರ್ಹವಾಗಿಯೇ ನಿಲ್ಲುವುದರಲ್ಲಿ ಸಂದೇಹವಿಲ್ಲ. ಈಗಲೂ ತಮ್ಮ ತಾಯಿಯವರ ಆಜ್ಞೆಗಳನ್ನೂ ಅವರ ನಿಯಮಗಳನ್ನೂ ಬಹಳ ಚೆನ್ನಾಗಿ ಕಾಪಾಡುವನೆಂಬ ಇವರ ವಾಗ್ದಾನವು ಎಂತಹ ಮಾತೃಭಕ್ತಿಯನ್ನು ಸೂಚಿಸುವುದು!

ನಮ್ಮ ಶ್ರೀನರಸಿಂಹರಾಜರವರೂ ಇಂದಿನ ವರೆಗೂ ತಮ್ಮ ಮಹಾ ಮಾತೃಶ್ರೀಯವರ ಅಪ್ಪಣೆಯನ್ನು ಮೀರಿ ಸ್ವಲ್ಪವೂ ಮುಂದುವರಿಯುವುದಿಲ್ಲವೆಂದು ತಿಳಿದು ಬಂದಿದೆ. ತಾವು ಸ್ವತಂತ್ರಿಸಿ ರಾಜ್ಯಭಾರ ಮಾಡಲು ಸಮರ್ಥರಾಗಿದ್ದರೂ ಮಾತೃವಾಕ್ಯವನ್ನುಲ್ಲಂಘಿಸದೆ ಪರಿಪಾಲಿಸುತ್ತಿರುವುದು ಪೂರ್ವದ ಮಹನೀಯರ ಸ್ಮರಣೆಗೆ ಅವಕಾಶವನ್ನುಂಟುಮಾಡಿದೆ.

ಹೀಗೆ ಮಾತೃಭಕ್ತಿಯು ಪ್ರಪಂಚದಲ್ಲಿ ಯೋಗ್ಯರಿಂದ ಉತ್ಕೃಷ್ಟವೆಂದು ಭಾವಿಸಲ್ಪಟ್ಟು ಧನ್ಯರಿಂದ ಆಚರಿಸಲ್ಪಡುವುದು. ಯಾರು ಮಾತಾಪಿತೃಗಳಿಗೆ ಅವರು ಅನ್ಯಥಾ ಉತ್ಪನ್ನರಾದವರೆಂದು ಶಾಸ್ತ್ರವುಂಟು. ಅದುದರಿಂದ ಸರ್ವರೂ ಮಾತೃಭಕ್ತಿ ಪರಾಯಣರಾಗಿ ಸುಖಸಂಪತ್ತನ್ನು ಹೊಂದಿ ಧನ್ಯರಾಗಬೇಕೆಂದು ಪ್ರಾರ್ಥನೆ —ವಿ.

ಮೈಸೂರು ವ್ಯವಸಾಯದ ಬ್ಯಾಂಕುಗಳು.

೧೯೦೬—೦೭ ನೇ ಸಾಲಿನ ಸರ್ಕಾರಿ ರಿಪೋರ್ಟು.

ಮೈಸೂರು ಸಂಸ್ಥಾನದ ವ್ಯವಸಾಯದ ಬ್ಯಾಂಕುಗಳ ೧೯೦೬-೦೭ ನೇ ಸಾಲಿನ ರಿಪೋರ್ಟನ್ನು ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರುಗಳಿಂದಲೂ, ಸಂಸ್ಥಾನದ ಕಂಟ್ರೋಲರವರಿಂದಲೂ ತರಿಸಿಕೊಂಡು, ಅವುಗಳನ್ನೆಲ್ಲಾ ಪರಾಂಬರಿಸಿ, ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ. ಕಂಟ್ರೋಲರವರು ಬರೆದಿರುವ ರಿಪೋರ್ಟಿನ ಮುಖ್ಯಾಂಶಗಳನ್ನು ಪ್ರಕಟಿಸುವೆವು.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಗವರ್ನಮೆಂಟಿನವರು ೧೮೯೬-೯೮ ಸಾಲುಗಳಲ್ಲಿ ೧,೯೭,೫೦೪ ರೂಪಾಯಿ ಸಾಲ ಕೊಟ್ಟಿದ್ದರು. ೧೯೦೬—೦೭ ನೇ ಸಾಲಿಗೆ ೧,೪೨,೪೦೬ ಚಿಲ್ಲರೆ ರೂಪಾಯಿ ಬಾಕಿ ಆಯಿತು. ಈ ಪೈಕಿ ಆ ಸಾಲಿನಲ್ಲಿ ೫೭,೩೫೯ ಚಿಲ್ಲರೆ ರೂಪಾಯಿ ವಸೂಲಾಗಿ, ಅಸಲಿಗೆ ಇನ್ನೂ ೮೭,೦೭೭ ಚಿಲ್ಲರೆ ರೂಪಾಯಿಯೂ, ಬಡ್ಡಿಗೆ ೩,೨೦೫ ಚಿಲ್ಲರೆ ರೂಪಾಯಿಯೂ ಬಾಕಿ ಉಳಿದಿದೆ. ಈ ಪೈಕಿ ಎರಡು ಬ್ಯಾಂಕುಗಳನ್ನು (ಅಂದರೆ, ವಡಿಗೇನಹಳ್ಳಿಯ ಮತ್ತು ತಾವರೆಕೆರೆಯ ಎರಡು ಬ್ಯಾಂಕುಗಳನ್ನು) ಮುಚ್ಚಿಬಿಡಬೇಕೆಂದು ಗವರ್ನಮೆಂಟ್ ಹುಕುಂ ಆಗಿರುತ್ತದೆ. ಮೊದಲನೇ ಬ್ಯಾಂಕಿನಿಂದ ಇನ್ನೂ ಅಸಲಿಗೆ ೪,೭೯೨ ಚಿಲ್ಲರೆ ರೂಪಾಯಿಯೂ, ಬಡ್ಡಿಗೆ ೭೬೨ ಚಿಲ್ಲರೆ ರೂಪಾಯಿಯೂ, ಎರಡನೇ ಬ್ಯಾಂಕಿನಿಂದ ಅಸಲಿಗೆ ೫,೧೭೪ ಚಿಲ್ಲರೆ ರೂಪಾಯಿಯೂ, ಬಡ್ಡಿಗೆ ೮೪ ಚಿಲ್ಲರೆ ರೂಪಾಯಿಯೂ ಗವರ್ನಮೆಂಟಿಗೆ ಬರಬೇಕಾಗಿದೆ. ವಡಿಗೇನಹಳ್ಳಿ ಬ್ಯಾಂಕಿನ ಹಣದ ವಸೂಲಿಗೆ ಖಂಡಿತವಾದ ಹುಕುಂ ಕೊಡಲಾಗಿದೆ ಎಂದು ಡೆಪ್ಯುಟಿ ಕಮಿಷನರು ತಿಳಿಸುತ್ತಾರೆ. ಇತರ ಬ್ಯಾಂಕುಗಳ ವಿಚಾರದಲ್ಲಿ ಯಾವ ರಿಪೋರ್ಟೂ ಬಂದಿಲ್ಲ. ಈಚೆಗೆ ಗವರ್ನಮೆಂಟಿನವರು ಆರದೇಶಹಳ್ಳಿ ಬ್ಯಾಂಕಿನಿಂದ ಬರಬೇಕಾಗಿರುವ ಹಣವನ್ನೆಲ್ಲಾ (ಅಂದರೆ, ಅಸಲಿಗೆ ೪,೦೦೯ ಚಿಲ್ಲರೆ ರೂಪಾಯಿ, ಬಡ್ಡಿಗೆ ೧೮೨ ಚಿಲ್ಲರೆ ರೂಪಾಯಿ) ತಕ್ಷಣ ವಸೂಲ್ಮಾಡಬೇಕೆಂದು ಹುಕುಂ ಕೊಟ್ಟಿದ್ದಾರೆ. ಈ ಭಾಗದಲ್ಲಿ ಡೆಪ್ಯುಟಿ ಕಮಿಷನರು ಅಮಲ್ದಾರ್ರಿಗೆ ರಿಪೋರ್ಟು ಮಾಡಬೇಕೆಂದು ಬರೆದು ಕೇಳಿರುವಂತೆ ತಿಳಿಸುತ್ತಾರೆ.

ಕೋಲಾರ್ ಡಿಸ್ಟ್ರಿಕ್ಟು.

ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ೧೮೯೬—೯೮ ರಲ್ಲಿ ನಾಲ್ಕು ಬ್ಯಾಂಕುಗಳಿಗೆ ಗವರ್ನಮೆಂಟಿನವರು ೫೩,೦೦೦ ರೂಪಾಯಿ ಸಾಲ ಕೊಟ್ಟಿದ್ದರು. ಆ ಪೈಕಿ ೧೯೦೬—೦೭ ನೇ ಸಾಲಿನಲ್ಲಿ ೩೭,೯೦೦ ರೂಪಾಯಿ ಬಾಕಿ ಇತ್ತು. ಅದರಲ್ಲಿ ೨೦,೩೫೬ ಚಿಲ್ಲರೆ ರೂಪಾಯಿ ವಸೂಲಾಯಿತು. ಇನ್ನೂ ಅಸಲಿಗೆ ೧೭,೮೪೮ ಚಿಲ್ಲರೆ ರೂಪಾಯಿ (ಇದರಲ್ಲಿ ೩,೩೭೮ ಚಿಲ್ಲರೆ ರೂಪಾಯಿ ಬಡ್ಡಿ ಸೇರಿದೆ.) ಉಳಿದಿದೆ. ಈ ಹಣವು ಸಬ್ಬನಹಳ್ಳಿ, ತಿಪ್ಪನಹಳ್ಳಿ, ಮುದುವತ್ತಿ ಎಂಬೀ ಮೂರು ಬ್ಯಾಂಕುಗಳಿಂದ ಬರಬೇಕಾಗಿದೆ. ಈ ಬ್ಯಾಂಕುಗಳು ಮುಚ್ಚಹೋಗಿವೆ. ಮೊದಲನೇ ಎರಡು ಬ್ಯಾಂಕುಗಳ ಮೆಂಬರುಗಳಿಂದ ಬಲಾತ್ಕರಿಸಿ ಹಣ ವಸೂಲ್ಮಾಡುವಂತೆ ಡೆಪ್ಯುಟಿ ಕಮಿಷನರು ಹುಕುಂ ಕೊಟ್ಟಿರುವುದಾಗಿಯೂ, ಮುದುವತ್ತಿ ಬ್ಯಾಂಕಿನ ಮೆಂಬರುಗಳು ೧೯೦೭ ನೆ ಇಸವಿಯಿಂದ ಎಂಟು ಕಿಸ್ತುಗಳಲ್ಲಿ ಪಾವತಿಮಾಡಿ ಸಾಲ ತೀರಿಸುವಂತೆ ಒಪ್ಪಿಕೊಂಡಿರುವುದಾಗಿಯೂ ಡೆಪ್ಯುಟಿ ಕಮಿಷನರು ತಿಳಿಸುತ್ತಾರೆ. ಆದರೆ ಈ ಬ್ಯಾಂಕಿನವರು ಕಿಸ್ತು ಪಾವತಿಮಾಡಲಿಲ್ಲ. ಡೆಪ್ಯುಟಿ ಕಮಿಷನರು ಈ ಹಣವನ್ನು ಕೂಡಲೆ ವಸೂಲ್ಮಾಡಬೇಕೆಂದು ಅಮಲ್ದಾರ್ರಿಗೆ ಹುಕುಂ ಕೊಟ್ಟಿರುವುದಾಗಿ ತಿಳಿಸುತ್ತಾರೆ. ಹೊನಗೇನಹಳ್ಳಿ ಬ್ಯಾಂಕು ಕಿಸ್ತುಗಳನ್ನೂ ಬಡ್ಡಿಯನ್ನೂ ಪಾವತಿಮಾಡಿದೆ.

ತುಂಕೂರು ಡಿಸ್ಟ್ರಿಕ್ಟು.

ತುಂಕೂರು ಡಿಸ್ಟ್ರಿಕ್ಟಿನಲ್ಲಿ ಹನ್ನೊಂದು ಬ್ಯಾಂಕುಗಳಿಗೆ ೯೯,೫೦೦ ರೂಪಾಯಿ ಸಾಲ ಕೊಡುವಂತೆ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದರು ಪೈಕಿ ೧೯೦೬—೦೭ ನೆ ಸಾಲಿಗೆ ೬೮,೭೭೦ ರೂಪಾಯಿ ಬಾಕಿಯಾಗಿತ್ತು. ಅದರಲ್ಲಿ ೫೩,೩೧೫ ಚಿಲ್ಲರೆ ರೂಪಾಯಿ ವಸೂಲಾಗಿದೆ. ಇನ್ನೂ ಅಸಲಿಗೆ ೧೫,೫೫೪ ರೂಪಾಯಿಯೂ ಬಡ್ಡಿಗೆ ೧,೦೪೦ ಚಿಲ್ಲರೆ ರೂಪಾಯಿಯೂ ವಸೂಲಾಗಬೇಕಾಗಿದೆ ಹ್ಯಾಗೆಂದರೆ—

ಬ್ಯಾಂಕು.	ಅಸಲು.	ಬಡ್ಡಿ
ಮಂಚಗಾಲೊಪ್ಪ	೨,೩೧೦	೧೫೫
ಕ್ಯಾತಸಂದ್ರ	೨,೨೨೫	೧೫೯
ಕಡಗತ್ತೂರು	೨,೯೧೯	೧೪೮
ಚಿಕ್ಕನಾಯ್ಕನಹಳ್ಳಿ	೩,೭೫೦	೨೮೦
ರಾಂಪುರ	೧,೩೦೮	೧೩೨

ಇದು ವಿನಹಾ ಉಳಿದ ಬ್ಯಾಂಕುಗಳಿಂದ ಬರಬೇಕಾಗಿರುವ ಮೊಬಲಗು ಸ್ವಲ್ಪ ಸ್ವಲ್ಪವಾಗಿರೋಣದರಿಂದ ಸುಲಭವಾಗಿ ವಸೂಲಾಗಬಹುದು. ಇದನ್ನು ಬೇಗ ವಸೂಲ್ಮಾಡಬೇಕೆಂದು ಡೆಪ್ಯುಟಿ ಕಮಿಷನರಿಗೆ ತಿಳಿಸಿದೆ. ಕ್ಯಾತಸಂದ್ರದ ಬ್ಯಾಂಕಿನ ಮೆಂಬರುಗಳು ಹಣವನ್ನು ೧೯೦೭ ನೇ ಡಿಸೆಂಬರ್ ಆಖೈರಿನೊಳಗೆ ಪಾವತಿಮಾಡುತ್ತೇವೆಂದು ಹೇಳಿ ಗವರ್ನಮೆಂಟಿನಿಂದ ಮಾಫಿ ಪಡೆದುಕೊಂಡಿದ್ದಾರೆ.

ಶಿವಮೊಗ್ಗಾ ಡಿಸ್ಟ್ರಿಕ್ಟು

ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಹದಿನೆಂಟು ಬ್ಯಾಂಕುಗಳಿಗೆ ಒಟ್ಟು ೧,೨೦,೧೦೦ ರೂಪಾಯಿ ಸಾಲ ಕೊಟ್ಟಿತ್ತು. ೧೯೦೬—೦೭ ನೇ ಸಾಲಿಗೆ ೮೩,೪೬೬ ಚಿಲ್ಲರೆ ರೂಪಾಯಿ ಬಾಕಿ ಇದ್ದು, ಈ ಪೈಕಿ ೯೫,೭೪೨ ಚಿಲ್ಲರೆ ರೂಪಾಯಿ ವಸೂಲಾಯಿತು. ಇನ್ನೂ ೩೦,೭೨೪ ರೂಪಾಯಿ ಅಸಲೂ, ೭,೫೯೭ ಚಿಲ್ಲರೆ ರೂಪಾಯಿ ಬಡ್ಡಿಯೂ ಬಾಕಿ ಇದೆ. ಇಸೂರು, ಚರ್ಗುಂಡಿ, ಹರೊಮುಚಡಿ, ನೋಮುಲಾಪುರ, ನಲ್ಲೂರು, ಹೊನ್ನಾಳಿ, ಸಂತೆಬೆನ್ನೂರು, ಗೊಗ್ಗ, ಹಿತ್ಲ, ಸಾಲೂರು, ಈ ಬ್ಯಾಂಕುಗಳ ಬಾಕಿಗಳನ್ನು ೧೯೦೭ ನೇ ಡಿಸೆಂಬರ್ ಆಖೈರಿನೊಳಗಾಗಿ ವಸೂಲ್ಮಾಡಬೇಕೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದರು. ಇದುವರೆಗೆ ೩,೪೮೦ ಚಿಲ್ಲರೆ ರೂಪಾಯಿ ಮಾತ್ರ ವಸೂಲಾಗಿದೆ. ಇದರಲ್ಲೂ ಹೊನ್ನಾಳಿ ಬ್ಯಾಂಕಿಗೆ ಆಧಾರವಾಗಿದ್ದ ಜಮೀನು ಬಿಕರಿಯಿಂದ ೩,೩೧೯ ಚಿಲ್ಲರೆ ರೂಪಾಯಿ ಬಂದಿರುತ್ತದೆ. ಆದರೆ ನ್ಯಾಮತಿ, ವಿಟಗೊಂಡಕೆರೆ, ಶಿರಾಳಕೊಪ್ಪ, ಅರ್ಚದ, ಕೋಲಿಸ್ಸಿಂಪಿ, ಗಣೇಶನಕಂಟೆ, ಈ ಬ್ಯಾಂಕುಗಳು ಪಡೆದಿದ್ದ ಸಾಲದ ಹಣವನ್ನೆಲ್ಲಾ ಸಂಪೂರ್ಣವಾಗಿ ಮುಂದಾಗಿಯೇ ಕೆಲವು ಕಿಸ್ತುಗಳನ್ನು ಕೊಟ್ಟು ತೀರಿಸಿವೆ.

ಚಿತ್ರದುರ್ಗ ಡಿಸ್ಟ್ರಿಕ್ಟು.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಮುಲ್ಲಾಪುರ, ತಾಳ್ಯ, ಮಲೇಬೆನ್ನೂರು ಎಂಬೀ ಮೂರು ಬ್ಯಾಂಕುಗಳಿಗೆ ೨೪,೦೦೦ ರೂಪಾಯಿ ಸಾಲ ಕೊಟ್ಟಿತ್ತು. ಈ ಪೈಕಿ ಮಲೇಬೆನ್ನೂರಿನ ಬ್ಯಾಂಕಿನಿಂದ ಬಡ್ಡಿಗಾಗಿ ಮಾತ್ರ ಸ್ವಲ್ಪ ಹಣ ಬರಬೇಕು, ಅದು ಅಸಲು ಹಣವನ್ನೆಲ್ಲಾ ಪಾವತಿ ಮಾಡಿದೆ. ತಾಳ್ಯದ ಬ್ಯಾಂಕಿನಿಂದ ಅಸಲಿಗೆ ೪,೩೭೭ ರೂಪಾಯಿಯೂ, ೩೩೫ ಚಿಲ್ಲರೆ ರೂಪಾಯಿ ಬಡ್ಡಿಯೂ ಬರಬೇಕಾಗಿದೆ. ಈ ಬ್ಯಾಂಕನ್ನು ಮುಚ್ಚಿಬಿಡಬೇಕೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ. ಡೆಪ್ಯುಟಿ ಕಮಿಷನರು ಹಣ ವಸೂಲ್ಮಾಡುವುದಕ್ಕೆ ಮುಂದಿನ ಅಮಲ್ ನಡಿಸಲಾಗುತ್ತೆ ಎಂದು ೧೯೦೭ ನೇ ಜೂಲೈನಲ್ಲಿ ಬರೆದಿದ್ದಾರೆ. ಮುಲ್ಲಾಪುರದ ಬ್ಯಾಂಕಿನಿಂದ ೪,೯೦೦ ರೂಪಾಯಿ ಬರಬೇಕಾಗಿದ್ದದ್ದಕ್ಕೆ ೧,೯೬೦ ರೂಪಾಯಿ ಮಾತ್ರ ಪಾವತಿ ಆಗಿ, ಇನ್ನೂ ೨,೯೪೦ ರೂಪಾಯಿ ಅಸಲೂ, ೨೭೩ ಚಿಲ್ಲರೆ ರೂಪಾಯಿ ಬಡ್ಡಿಯೂ ಬರಬೇಕಾಗಿದೆ.

ಮೈಸೂರು ಡಿಸ್ಟ್ರಿಕ್ಟು

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸರ್ಕಾರದವರು ಹತ್ತು ಬ್ಯಾಂಕುಗಳಿಗೆ ೨ ಲಕ್ಷದ ೧೩ ಸಾವಿರ ರೂಪಾಯಿ ಸಾಲ ಕೊಡುವಂತೆ ಸ್ಯಾಂಕ್ಷನ್ ಮಾಡಿದರು. ೧೯೦೬—೦೭ ನೇ ಸಾಲಿಗೆ ೧,೧೧,೧೩೬ ಚಿಲ್ಲರೆ ರೂಪಾಯಿ ವಸೂಲಾಗಬೇಕಾಗಿತ್ತು. ಆ ಪೈಕಿ ೩೯,೭೯೧ ಚಿಲ್ಲರೆ ರೂಪಾಯಿ ವಸೂಲಾಗಿ ಇನ್ನೂ ೩೭,೫೬೩ ಚಿಲ್ಲರೆ ರೂಪಾಯಿ ಉಳಿಕೊಂಡಿದೆ. ಇದಲ್ಲದೆ ಬಡ್ಡಿಗಾಗಿ ೬೧,೯೭೭ ಚಿಲ್ಲರೆ ರೂಪಾಯಿ ವಸೂಲಾಗಿ, ಇನ್ನೂ ೭,೧೮೭ ಚಿಲ್ಲರೆ ಬಾಕಿಯುಳ್ಳಿದೆ. ಮುಚ್ಚಿಬಿಡಬೇಕೆಂದು ಹುಕುಂ ಆಗಿರುವ ಮಂಡ್ಯ, ಫ್ರೆಂಚ್‌ರಾಕ್ಸ್, ನಾಗಮಂಗಲ, ಚಾಮರಾಜನಗರ, ಈ ಸ್ಥಳಗಳ ಬ್ಯಾಂಕುಗಳಿಂದ ಇನ್ನೂ ೨೦,೧೯೩

...ಸಾವಿರ ರೂಪಾಯಿ ಅಸಲೂ, ೭,೨೪೪ ಚಿಲ್ಲರೆ ರೂಪಾಯಿ ಬಡ್ಡಿಯೂ ವಸೂಲಾಗಬೇಕಾಗಿದೆ. ಈಚೆಗೆ ಸರಗೂರು ಬ್ಯಾಂಕಿನ ಬಾಕಿಯನ್ನು ಪೂರಾಗಿ ಎಲ್ಲಾ ಪಾವತಿಮಾಡಿದೆ. ಚಾಮರಾಜನಗರದ ಬ್ಯಾಂಕನ್ನು ಬೇರೆ ರಿಪೋರ್ಟು ಬರುವ ತನಕ ಮತ್ತೆ ನಡಿಸಬೇಕೆಂದು ಹುಕುಂ ಆಗಿದೆ. ಇವೆರಡು ವಿನಹಾ ಉಳಿದ ಬ್ಯಾಂಕುಗಳಿಂದ ಬರಬೇಕಾಗಿರುವ ಬಾಕಿಗಳನ್ನು ವಸೂಲ್ಮಾಡಲು ಪ್ರಯತ್ನಪಟ್ಟಿರುವಂತೆ ಕಾಣುವುದಿಲ್ಲ.

ಕಡೂರ್ ಡಿಸ್ಟ್ರಿಕ್ಟು

ಕಡೂರು ಡಿಸ್ಟ್ರಿಕ್ಟಿನಲ್ಲಿ ೧೯೦೬—೦೭ ನೇ ಸಾಲಿಗೆ ಅರ್ಸಿಕೆರೆಯ ಬ್ಯಾಂಕಿನಿಂದ ಕಿಸ್ತಿನ ಬಾಕಿ ೧೦,೬೪೮ ರೂಪಾಯಿಯೂ, ಬಡ್ಡಿ ಬಾಕಿ ೧,೫೬೫ ಚಿಲ್ಲರೆ ರೂಪಾಯಿಯೂ; ಸಖರಾಯಪಟ್ಟಣದ ಬ್ಯಾಂಕಿನಿಂದ ಕಿಸ್ತಿನ ಬಾಕಿ ೫,೬೫೦ ರೂಪಾಯಿಯೂ, ಬಡ್ಡಿ ಬಾಕಿ ೧,೨೦೦ ಚಿಲ್ಲರೆ ರೂಪಾಯಿಯೂ ಉಳಿದಿತ್ತು. ಈ ಬ್ಯಾಂಕುಗಳನ್ನು ಮುಚ್ಚಬೇಕೆಂತಲೂ, ಬಾಕಿಯಾಗಿರುವ ಹಣವನ್ನು ಸಖರಾಯಪಟ್ಟಣದ ಬ್ಯಾಂಕಿನ ಮೆಂಬರುಗಳಿಂದ ಹತ್ತು ಕಿಸ್ತುಗಳಲ್ಲೂ, ಅರ್ಸಿಕೆರೆಯ ಬ್ಯಾಂಕಿನ ಮೆಂಬರುಗಳಿಂದ ಹದಿನೈದು ಕಿಸ್ತುಗಳಲ್ಲೂ ವಸೂಲ್ಮಾಡಬಹುದೆಂತಲೂ ಗವರ್ನ್ಮೆಂಟ್ ಹುಕುಂ ಆಗಿದೆ. ಮೊದಲನೇ ಕಿಸ್ತು ೧೯೦೭ ನೇ ಜೂನಿನಲ್ಲಿ ವಸೂಲಾಗಬೇಕಾಗಿತ್ತು. ಡೆಪ್ಯುಟಿ ಕಮಿಷನರರು ಆ ಬ್ಯಾಂಕುಗಳ ಲೆಕ್ಕಗಳು ತನಿಖೆಯಾಗುತ್ತಿರುವುದರಿಂದ ಕಿಸ್ತಿನ ಹಣ ಇಷ್ಟೆಂದು ಇನ್ನೂ ನಿರ್ಧರವಾಗಿಲ್ಲವೆಂದು ತಿಳಿಸುತ್ತಾರೆ. ಚಿಕ್ಕಮಗಳೂರು ಬ್ಯಾಂಕಿನ ಮೆಂಬರುಗಳಿಂದ ಅಸಲಿಗೆ ೧೦,೨೦೧ ಚಿಲ್ಲರೆ ರೂಪಾಯಿಯೂ ಬಡ್ಡಿಗೆ ೧೩,೨೦೨ ಚಿಲ್ಲರೆ ರೂಪಾಯಿಯೂ ಬರಬೇಕಾಗಿದೆ. ಇದಲ್ಲದೆ ಈಚೆಗೆ ಕೊಟ್ಟಿರತಕ್ಕ ಸಾಲದ ಪೈಕಿ ೨೬೭ ಚಿಲ್ಲರೆ ರೂಪಾಯಿಯೂ ಇದರ ಬಡ್ಡಿ ೩೯೩ ಚಿಲ್ಲರೆ ರೂಪಾಯಿಯೂ ಇನ್ನೂ ವಸೂಲಾಗಿಲ್ಲ. ಡೆಪ್ಯುಟಿ ಕಮಿಷನರು ಆ ಮೆಂಬರುಗಳಿಗೆ ತಗಾದೆ ನೋಟಿಸ್ ಕೊಟ್ಟಿರುವುದಾಗಿ ತಿಳಿಸಿದ್ದಾರೆ.

ಹಾಸನದ ಡಿಸ್ಟ್ರಿಕ್ಟು

ಹಾಸನದ ಡಿಸ್ಟ್ರಿಕ್ಟಿನಲ್ಲಿ ಸಕಲೇಶಪುರದ ಒಂದೇ ಬ್ಯಾಂಕಿಗೆ ನಾಲ್ಕು ಲಕ್ಷ ರೂಪಾಯಿ ಸಾಲ ಕೊಟ್ಟಿರುವುದರಲ್ಲಿ ೧೯೦೬—೦೭ ನೇ ಸಾಲಿನಲ್ಲಿ ಕಿಸ್ತು ಮೊಬಲಗು ೩೯,೬೧೨ ಚಿಲ್ಲರೆ ರೂಪಾಯಿಯೂ, ಬಡ್ಡಿ ೨೮,೬೫೩ ಚಿಲ್ಲರೆ ರೂಪಾಯಿಯೂ ಬಾಕಿ ಇತ್ತು. ಈ ಸಾಲಿನಲ್ಲಿ ವಸೂಲಾಗಿರುವ ಮೊಬಲಗು ಜೋತಾ ಇನ್ನೂ ೩೭,೦೪೪ ಚಿಲ್ಲರೆ ರೂಪಾಯಿ ಅಸಲಿಗೂ, ೧೯,೦೭೬ ಚಿಲ್ಲರೆ ರೂಪಾಯಿ ಬಡ್ಡಿಗೂ ಬಾಕಿ ನಿಂತಿದೆ. ಇದಲ್ಲದೆ ತೋಟಗಳ ಚಾಲ್ತಿ ಕೆಲಸಗಳಿಗೆ ಈಚೆಗೆ ೪೧,೭೯೩ ಚಿಲ್ಲರೆ ರೂಪಾಯಿ ಸಾಲ ಕೊಟ್ಟಿರುವುದರಲ್ಲಿ ೧೬,೯೮೦ ಚಿಲ್ಲರೆ ರೂಪಾಯಿ ಅಸಲಿಗೂ, ೨೬೮ ಚಿಲ್ಲರೆ ರೂಪಾಯಿ ಬಡ್ಡಿಗೂ ವಸೂಲಾಗಿದೆ. ಗವರ್ನ್ಮೆಂಟಿನವರು ೧೯೦೭ ನೇ ಜೂನ್ ವರೆಗೆ ಕೊಟ್ಟಿರುವ ಎಲ್ಲಾ ಹಣವನ್ನು ಬಡ್ಡಿ ಸಹಿತ ಈ ಬ್ಯಾಂಕಿನಿಂದ ವಸೂಲ್ಮಾಡಬೇಕೆಂದು ಹುಕುಂ ಕೊಟ್ಟರು. ಮೆಂಬರುಗಳು ಕೆಡದೆ ಬಿಡದಾಗಿರುವುದರಿಂದ, ಕೊಟ್ಟ ಹಣ ಆರು ವರ್ಷದಲ್ಲೇ ವಸೂಲಾಗುವ ಪಕ್ಷದಲ್ಲಿ ಅಡ್ವಾನ್ಸು ಕೊಡಬೇಕೆಂದು ಗವರ್ನ್ಮೆಂಟಿನವರು ತಿಳಿಸಿದ್ದರು. ಡೆಪ್ಯುಟಿ ಕಮಿಷನರರು ೧೯೦೬—೦೭ ರಲ್ಲಿ ೧೦,೫೦೦ ಚಿಲ್ಲರೆ ರೂಪಾಯಿ ಅಡ್ವಾನ್ಸು ಕೊಟ್ಟು, ಕಟಾವಿನಲ್ಲಿ ಫಸಲಿನಿಂದ ಅಷ್ಟು ವಸೂಲಾದೀತೆಂದು ಊಹಿಸಿದ್ದರು. ಆದರೆ ಸುಮಾರು ೬,೦೦೦ ರೂಪಾಯಿ ವರಮಾನ ಉತ್ಪತ್ತಿಯಾಗಿ, ಈ ಅಡ್ವಾನ್ಸಿನಲ್ಲೇ ೭,೫೦೦ ಚಿಲ್ಲರೆ ರೂಪಾಯಿ ಬಾಕಿ ಉಳಿದುಕೊಂಡಿದೆ.

ಗವರ್ನ್ಮೆಂಟ್ ಹುಕುಮು

ಮೇಲ್ಕಂಡ ರಿಪೋರ್ಟುಗಳನ್ನು ಪರಾಂಬರಿಸಿ ಸರ್ಕಾರದವರು ಬರೆದಿರುವ ಹುಕುಂ ಏನೆಂದರೆ—ಸಕಲೇಶಪುರ ಮತ್ತು ಚಿಕ್ಕಮಗಳೂರು, ಈ ಎರಡು ಬ್ಯಾಂಕುಗಳ ಹೊರತು ಉಳಿದ ಐವತ್ತೊಂಬತ್ತು ವ್ಯವಸಾಯ ಬ್ಯಾಂಕುಗಳಿಗೆ ಒಟ್ಟು ೭,೫೦,೧೦೬ ರೂಪಾಯಿ ಸಾಲ ಕೊಟ್ಟಿದೆ. ಈ ಸಾಲಕ್ಕಾಗಿ ಕಿಸ್ತು ಬಾಕಿಯು ೧೯೦೭ ನೇ ಜೂನ್ ಆಖೈರಿಗೆ ೬,೮೩,೩೦೩ ಚಿಲ್ಲರೆ ರೂಪಾಯಿ ಬರಬೇಕಾಗಿದ್ದದ್ದಕ್ಕೆ ೨,೯೬,೭೦೨ ಚಿಲ್ಲರೆ ರೂಪಾಯಿ ವಸೂಲಾಗಿದೆ. (ಮಾಲವಳ್ಳಿ, ವಿಟಲೋಂಡ, ಕೊಪ್ಪ, ನ್ಯಾಮತಿ, ಕೊಳ್ಳೇಗಾಲ, ಅರ್ಕಡ, ಗೊಸಿನಕೆರೆ, ಮಾಲೇಬೆನ್ನೂರು, ಈ ಬ್ಯಾಂಕುಗಳು ಕಿಸ್ತಿನ ಹಣಕ್ಕಿಂತಲೂ ಹೆಚ್ಚಾಗಿ ೪,೦೬೫ ಚಿಲ್ಲರೆ ರೂಪಾಯಿ ಪಾವತಿ ಮಾಡಿರುತ್ತವೆ.) ಸಾಲಾಖೈರಿನಲ್ಲಿ ೨,೦೨,೯೦೩ ಚಿಲ್ಲರೆ ರೂಪಾಯಿ ಬಾಕಿಯುಳಿದಿತ್ತು. ಐದು ಬ್ಯಾಂಕುಗಳು ಕಿಸ್ತುಗಳನ್ನು ಸಲ್ಲಿಸಿಲ್ಲ. ಒಂಬತ್ತು ಮಾತ್ರ ಪೂರ್ತಿ ಪಾವತಿ ಮಾಡಿರುವುವು. ಮಾಮವತ್ತಿ, ಶ್ರೀರಂಗಪಟ್ಟಣ, ಸೋಮವಾಪುರ, ಸಂತೇಬೆನ್ನೂರು, ಜೋಗಿ, ಇಸ್ಸೂರು, ಅರ್ಕಾಕೆಪ್ಪ, ಸಖರಾಯಪಟ್ಟಣ, ಮಲ್ಲಾಪುರ, ಹಾಳ್ಯ, ಈ ಬ್ಯಾಂಕುಗಳಿಂದ ಈ ಸಾಲಿನಲ್ಲಿ ಯಾವ ಹಣವೂ ವಸೂಲಾಗಿಲ್ಲ. ಡಿಸ್ಟ್ರಿಕ್ಟುವಾರು ಈ ವ್ಯವಸಾಯದ ಬ್ಯಾಂಕುಗಳಿಂದ ಬರಬೇಕಾಗಿರತಕ್ಕ ಬಾಕಿಗಳೂ, ಬಡ್ಡಿಯೂ ಎಷ್ಟೆಂದರೆ—

ಡಿಸ್ಟ್ರಿಕ್ಟು.	ಅಸಲ್‌ಬಾಕಿ.	ಬಡ್ಡಿಬಾಕಿ
ಬೆಂಗಳೂರು.	೮೮,೨೨೫.	೨,೫೩೫
ಕೋಲಾರ.	೧೩,೬೩.	೭,೮೩೬
ತುಮಕೂರು.	೧೨,೫೫೭.	೩೯೧
ಮೈಸೂರು.	೩೨,೬೪೧	೯,೨೧೮
ಶಿವಮೊಗ್ಗ.	೩೦,೨೮೬.	೫,೭೧೩
ಕಡೂರು.	೧೭,೨೧೫.	೨,೩೬೭
ಚಿತ್ರದುರ್ಗ.	೭,೩೦೩.	೬೧೩

ಬ್ಯಾಂಕುಗಳೆಲ್ಲಾ ಬಹಳ ಹಣವನ್ನು ಬಾಕಿಯುಳ್ಳಿಟ್ಟುಕೊಂಡಿವೆ. ವಸೂಲಾಗಿರುವುದು ತೃಪ್ತಿಕರವಾಗಿಲ್ಲ. ಅಸಲಿನಲ್ಲೂ ಬಡ್ಡಿಯಲ್ಲೂ ಬಹಳ ಹೆಚ್ಚಾಗಿ ವಸೂಲಾಗಬೇಕಾಗಿರುತ್ತದೆ ಎಂದು ವಿಷಾದಿಸಬೇಕಾಗಿದೆ. ಇದನ್ನೆಲ್ಲಾ ಬೇಗ ವಸೂಲ್ಮಾಡುವುದಕ್ಕೆ ರೆವಿನ್ಯೂ ಕಮಿಷನರು ಅವಶ್ಯವಾದ ಏರ್ಪಾಡನ್ನು ಮಾಡಬೇಕೆಂದು ಗವರ್ನ್ಮೆಂಟಿನವರು ಸೂಚಿಸುತ್ತಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಕತ್ತಾ ಪಟ್ಟಣದ ಬಳಿ ಶ್ರೀರಾಮಪುರದಲ್ಲಿ ಕಳೆದ ಮಂಗಳವಾರ ರಾತ್ರಿ ನಾರಿನ ಕಾರ್ಖಾನೆಗೆ ಬೆಂಕಿ ಬಿದ್ದು ನಾಲ್ಕು ಲಕ್ಷ ರೂಪಾಯಿನ ಸರಕೂ ಯಂತ್ರಗಳೂ ಕಟ್ಟಡಗಳೂ ಹಾಳಾದವು.

***

ಕ್ಷಾಮ ಪ್ರಾಪ್ತವಾಗಿರುವ ಪ್ರದೇಶಕ್ಕೆ ಗವರ್ನ್ಮೆಂಟಿನವರು ಕಲಾವಿಗೋನ್ಸರ ಕಲ್ಕತ್ತಾ ಪಟ್ಟಣದ ಟಂಕಸಾಲೆಯಿಂದ ದಿನಕ್ಕೆ ೯ ಲಕ್ಷದಂತೆ ತಾಂಬ್ರದ ನಾಣ್ಯಗಳನ್ನು ಛಾಪಾ ಮಾಡಿಸಿ ಕಳುಹಿಸಿಕೊಡುತ್ತಿದ್ದಾರೆ.

***

ಹಿಂದೂಸ್ಥಾನದಿಂದ ಯಾರೂ ಯಾವ ಪ್ರಾಣಿಯನ್ನೂ ನಟಾಲಿಗೆ ಕಳುಹಿಸಕೂಡದೆಂದೂ, ಕಳುಹಿಸಿದರೆ ಅಂಥಾ ಪ್ರಾಣಿಗಳನ್ನು ಕೆಲವು ದಿನಗಳ ತನಕ ಸೆಗ್ರಿಗೇಷನ್ ಕ್ಯಾಂಪುಗಳಲ್ಲಿ ತಡೆಯುತ್ತಾರೆಂತಲೂ ಪ್ರಕಟವಾಗಿದೆ.

***

ಕಾಶ್ಮೀರ ಸಂಸ್ಥಾನದಲ್ಲಿ ಕಳೆದ ವಾರ ಆರು ದಿನಗಳ ತನಕ ಬಿಡದೆ ಒಂದೇ ಸಮನಾಗಿ ಮಳೆ ಸುರಿಯಿತು. ರಾಜಧಾನಿಯಾದ ಶ್ರೀನಗರದಲ್ಲಿ ಅನೇಕ ಸೇತುವೆಗಳೂ ರೈಲ್ ರಸ್ತೆಗಳೂ ಕಿತ್ತು ಕೊಚ್ಚಿಹೋದವು. ಜೇಲಂ ನದಿಯಲ್ಲಿ ೧೫ ಅಡಿ ಪ್ರವಾಹವು ಕಟ್ಟಿ ಹರಿಯುತ್ತಿದೆ.

***

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಫರಾ ಎಂಬ ಡಿಸ್ಟ್ರಿಕ್ಟಿನಲ್ಲಿ ಒಂದು ಪ್ರಜಾಪ್ರತಿನಿಧಿಸಭೆಯು ಕೂಡುವುದೆಂದು ತಿಳಿದು ಬಂದದ್ದರಿಂದ ಆಗ್ಗೆ ಅಲ್ಲಿ ಗಲಭೆಯೇನೂ ಉಂಟಾಗದಂತೆ ಪ್ರಜಾ ನೆಮ್ಮದಿಯನ್ನು ಕಾಪಾಡುವುದಕ್ಕಾಗಿ ಸರ್ಕಾರದವರು ಅಲ್ಲಿಗೆ ೧೦೦ ಗೂರ್ಖಾ ಸೈನಿಕರನ್ನು ಕಳುಹಿಸಿರುತ್ತಾರೆ.

***

ಕಳೆದ ಗುರುವಾರ ಬೆಳಗಿನ ಝಾಮದಲ್ಲಿ ಬೊಂಬಾಯಿ ಪಟ್ಟಣದ ಬಾಂಡೋರಾ ಎಂಬ ಬೀದಿಯಲ್ಲಿದ್ದ ಜಾರ್ಜ್ ಪಟ್ರೀನೋ ಕಂಪನಿಯ ಸಿಗರೆಟ್ ಕಾರ್ಖಾನೆಗೆ ಬೆಂಕಿ ಬಿದ್ದು, ಕಟ್ಟಡವೂ ಸಾಮಾನುಗಳೂ ಎಲ್ಲಾ ಸುಟ್ಟುಹೋಗಿ, ಉರಿಯು ಮೂರು ದಿನಗಳ ತನಕ ಆರದೆ ಇತ್ತು. ಕಂಪನಿಯವರಿಗೆ ಒಂದು ಲಕ್ಷ ರೂಪಾಯಿನ ಆಸ್ತಿ ನಷ್ಟವಾಯಿತು.

***

ಸುಮಾರು ಹನ್ನೆರಡು ತಿಂಗಳಿಂದ ಬೊಂಬಾಯಿನಲ್ಲಿ ಕಾಯಿಟ್ ಎಂಬುವನು ಸೇರಿಕೊಂಡು, ಅನೇಕ ಬಂಗಲೆಗಳಲ್ಲಿ ಕಳ್ಳತನ ಮಾಡುತ್ತಾ, ಪೋಲೀಸಿನವರಿಗೆ ಸಿಕ್ಕದೆ ಇದ್ದನು. ಅವನನ್ನು ಹಿಡಿಯುವುದಕ್ಕಾಗಿಯೇ ೧೦೦ ಜನ ಪೋಲೀಸಿನವರು ನೇಮಕವಾಗಿದ್ದರು. ಇಂಥಾ ಚೋರನನ್ನು ಕಳೆದ ವಾರ ಬಹಳ ಸಾಹಸದಿಂದ ಹಿಡಿದಿರುತ್ತಾರೆಂದು ತಂತೀವರ್ತಮಾನ ಬಂದಿದೆ.

***

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಕಳೆದ ಸೋಮವಾರದ ತನಕ ಗ್ವಾಲಿಯರ್ ಸಂಸ್ಥಾನದಲ್ಲಿದ್ದು ೮—೧೦ ಹುಲಿಗಳನ್ನು ಶಿಕಾರಿ ಮಾಡಿ, ಮೊನ್ನೆ ಮಂಗಳವಾರದ ದಿನ ಅಲಿಘರಿಗೆ ದಯಮಾಡಿ, ಅಲ್ಲಿನ ಮಹಮದೀಯ ವಿದ್ಯಾಶಾಲೆಯನ್ನು ಪರಾಂಬರಿಸಿ, ಅಲ್ಲಿಂದ ಡೆಹರಾಡೂನ್ ಪಟ್ಟಣವನ್ನು ತಲಪಿದರು. ಅವರು ಇನ್ನು ೧೦—೧೨ ದಿನಗಳೊಳಗಾಗಿ ಸಿಮ್ಲಾ ಪಟ್ಟಣಕ್ಕೆ ದಯಮಾಡುವವರಾಗಿದ್ದಾರೆ.

***

ಕಲ್ಕತ್ತಾ ಪಟ್ಟಣದಲ್ಲಿ ಸರ್ಕಾರದವರು "ಸಂಧ್ಯಾ" ಎಂಬ ವರ್ತಮಾನಪತ್ರಿಕೆಯನ್ನು ಅಚ್ಚು ಹಾಕುತ್ತಿದ್ದ ಮನುಷ್ಯನನ್ನು ಹಿಡಿದು ಆತನ ಮೇಲೆ ಫಿರ್ಯಾದು ಮಾಡಿದ್ದಾರೆ. ಆತನ ನಿಜವಾದ ಹೆಸರು ಯೋಗೀಂದ್ರನಾಥಸೇನ ಎಂಬುವುದೆಂತಲೂ, ಆದರೆ ಆತನು ಆ ಹೆಸರನ್ನು ಮ್ಯಾಜಿಸ್ಟ್ರೇಟರಿಗೆ ಹೇಳದೆ ಲಾಲ್ ಬಿಹಾರಿಸೇನ್ ಎಂಬುದೇ ತನ್ನ ಹೆಸರೆಂದು ತಿಳಿಸಿ, ಸರ್ಕಾರದವರನ್ನು ಮೋಸಪಡಿಸಿದನೆಂತಲೂ ಮೊಕದ್ದಮೆ ಆಗಿದೆ.

***

ಪೂರ್ವ ಬಂಗಾಳಾ ಮತ್ತು ಅಸ್ಸಾಂ ಎಂಬ ಹೊಸ ಅಧಿಪತ್ಯದ ಲೆಫ್ಟಿನೆಂಟ್ ಗವರ್ನರಾಗಿರುವ ಸರ್ ಲ್ಯಾನ್ಸ್‌ಲಾಟ್ ಹೇರ್ ಯವರು ಆರು ತಿಂಗಳ ರಜಾ ಪಡೆದು ಶೀಮೆಗೆ ಪ್ರಯಾಣಮಾಡುವರು. ಹೈದರಾಬಾದ್ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟ್ ಮಿ|| ಸಿ. ಎಸ್. ಬೇಲಿಯವರು ಬಂಗಾಳಾ ಅಧಿಪತ್ಯದ ಲೆಫ್ಟಿನೆಂಟ್ ಗವರ್ನರಾಗಿಯೂ, ವಾಯುವ್ಯ ಸರಹದ್ದಿನ ಪ್ರಾಂತ್ಯದ ರೆವಿನ್ಯೂ ಕಮಿಷನರ್ ಮಿ|| ಎಂ. ಎಫ್. ಒ'ಡ್ವಾಯರ್ ಯವರು ಹೈದರಾಬಾದಿನ ರೆಸಿಡೆಂಟರಾಗಿಯೂ ಬದಲಿ ನೋಡತಕ್ಕದ್ದೆಂದು ನೇಮಿಸಲ್ಪಟ್ಟಿದ್ದಾರೆ.

***

ಬೊಂಬಾಯಿ ಪಟ್ಟಣದ ಚಿತ್ರಕಲಾಶಾಲೆಯಲ್ಲಿ ಕಳೆದ ವಾರ ತಸ್ವೀರುಗಳ ಪ್ರದರ್ಶನ ನಡೆಯಿತು. ಗವರ್ನರವರು ದಯಮಾಡಿ ಪ್ರದರ್ಶನವನ್ನು ಪ್ರಾರಂಭಿಸಿ, ಯೋಗ್ಯವಾದ ಉಪನ್ಯಾಸವನ್ನು ಮಾಡಿದರು. ಆ ಶಾಲೆಯಲ್ಲಿ ೪೩೩ ಚಿತ್ರ ಪಟಗಳು ಪ್ರದರ್ಶನಮಾಡಲ್ಪಟ್ಟಿದ್ದವು. ೨,೬೫೦ ಮಂದಿ ಹೋಗಿ ನೋಡಿ ನೇತ್ರಾನಂದ ಹೊಂದಿದ್ದಲ್ಲದೆ ೫,೩೬೬ ರೂಪಾಯಿ ಕೊಟ್ಟು, ಪ್ರದರ್ಶನಮಾಡಲ್ಪಟ್ಟಿದ್ದ ಅನೇಕ ಸುಂದರವಾದ ತಸ್ವೀರುಗಳನ್ನು ಕೊಂಡುಕೊಂಡರು. ಟಿಕೆಟ್ಟುಗಳ ವಿಕ್ರಯದಿಂದಲೂ ೨,೪೩೨ ರೂಪಾಯಿ ಉತ್ಪತ್ತಿಯಾಯಿತು.

***

ಬಂಗಾಳಾ ಅಧಿಪತ್ಯಕ್ಕೆ ಸೇರಿದ ತಾರಕೇಶ್ವರದಲ್ಲಿ ಚರಕಪೂಜೆ ಎಂಬ ಉತ್ಸವವೂ ಜಾತ್ರೆಯೂ ನಡೆಯಿತು. ಆಗ್ಗೆ ಅಲ್ಲಿ ಸೇರಿದ್ದ ಜನಗಳ ಪೈಕಿ ೧೦೦ ಜನರಿಗಿಂತಲೂ ಹೆಚ್ಚಾಗಿಯೇ ವಾಂತಿ ಭೇದಿ ತಗಲಿ ಸತ್ತುಹೋದರು. ಮೃತಪಟ್ಟವರ ಶವಗಳನ್ನು ಕ್ರಮಪ್ರಕಾರ ದಹನ ಮಾಡಿಸದೆ, ಶವಗಳನ್ನೆಲ್ಲಾ ಹಳ್ಳಗಳಿಗೆ ಹಾಕಿಸಿ ಬಿಟ್ಟರೆಂತಲೂ, ಪ್ರಜಾ ಆರೋಗ್ಯಕ್ಕೆ ಅಲ್ಲಿ ಸರಿಯಾದ ಏರ್ಪಾಡುಗಳನ್ನು ಮಾಡಿಸಿರಲಿಲ್ಲವೆಂತಲೂ, ಇದಕ್ಕೆಲ್ಲಾ ಅಲ್ಲಿನ ಮಹಂತರೇ ಕಾರಣರಾಗಿರುತ್ತಾರೆಂತಲೂ ಬಹು ಜನರು ಸೇರಿ ಬಂಗಾಳಾ ಗವರ್ನ್ಮೆಂಟಿಗೆ ಅರ್ಜಿ ಬರೆದುಕೊಂಡಿದ್ದಾರೆ.

***

ಹಿಂದೂಸ್ಥಾನದಲ್ಲಿ ಕಳೆದ ವಾರ ಪ್ಲೇಗ್ ಉಪದ್ರದಿಂದಾದ ಮರಣಗಳು ಬಹಳ ಹೆಚ್ಚಾಗಿರುತ್ತವೆ. ಪಂಜಾಬ್ ಅಧಿಪತ್ಯದಲ್ಲಿ ೨,೬೬೫ ಮರಣಗಳಾದವು; ಸಂಯುಕ್ತ ಅಧಿಪತ್ಯಗಳು ೧,೯೩೮; ಬೊಂಬಾಯಿ ೧,೭೩೬; ಬಂಗಾಳಾ ೧,೨೯೭; ರಾಜಪುಟಾನಾ ೬೫೭; ಮಧ್ಯ ಪ್ರಾಂತ್ಯಗಳು ೧೨೬; ಬಿಹಾರ್ ೯೫; ಮೈಸೂರು ಸಂಸ್ಥಾನ ೩೦; ಮದರಾಸ್ ಅಧಿಪತ್ಯ ೬೫; ಮಧ್ಯ ಇಂಡಿಯಾ ೭೧; ಕಾಶ್ಮೀರ ೨೧; ವಾಯುವ್ಯ ಸರಹದ್ದು ಪ್ರಾಂತ್ಯ ೨೫; ಹೈದರಾಬಾದ್ ಸಂಸ್ಥಾನ ೧೨; ಅಂತು ಹಿಂದೂಸ್ಥಾನದಲ್ಲೆಲ್ಲಾ ಒಟ್ಟು ೮,೬೯೦ ಜನರು ಈ ಉಪದ್ರದಲ್ಲಿ ಕಾಲವಾಗಿದ್ದಾರೆ.

***

ಕೊಯಮುತ್ತೂರು ಟವ್ನ ಮುತ್ರಾವಾರ ಪೇಟೆಯಲ್ಲಿ ಕಳೆದ ಮಂಗಳವಾರ ರಾತ್ರಿ ಕೆಲವರು ನಾಲ್ಕು ಮಂದಿಯನ್ನು ಚಾಕುವಿನಿಂದ ಬಗೆದು ಗಾಯಮಾಡಿದರು. ಆ ನಾಲ್ವರ ಪೈಕಿ ಚಂದಾಸಾಹೆಬ್, ಬಾಬ್ಜಾನ್ ಸಾಹೆಬ್ ಎಂಬುವರು ಆ ಗಾಯಗಳಿಂದ ಕಾಲವಾದರು. ಉಳಿದ ಇಬ್ಬರಿಗೂ ಘೋರ ಗಾಯವಾಗಿ ಆಸ್ಪತ್ರೆಯಲ್ಲಿ ಇಲಾಜು ಮಾಡಿಸಿಕೊಳ್ಳುತ್ತಿದ್ದಾರೆ. ಈ ಕೃತ್ಯ ಮಾಡಿದವರೆಂದು ಪೋಲೀಸಿನವರು ಏಳು ಮಂದಿಯನ್ನು ಹಿಡಿದು ಲಾಕಪ್ಪಿನಲ್ಲಿ ಹಾಕಿಕೊಂಡಿದ್ದಾರೆ. ಸಿವಿಲ್ ವ್ಯಾಜ್ಯದಲ್ಲಿ ಅವರಿಗುಂಟಾಗಿದ್ದ ದ್ವೇಷವೇ ಈ ಘಾತುಕ ಕೃತ್ಯಕ್ಕೆ ಕಾರಣವೆಂದು ತಿಳಿಯುವುದು.

***

ಡೆಹಲಿ ಪಟ್ಟಣದ ಬಳಿ ಇರುವ ಹಿಸ್ಸಾರಿನಲ್ಲಿ ಆರ್ಯಸಮಾಜದವರು ಒಂದು ಹಿಂದೂ ಅನಾಥಾಲಯವನ್ನು ಸ್ಥಾಪಿಸಿ ನಡಿಸುತ್ತಿದ್ದಾರೆ. ಜೈನರ ಮತ್ತು ಇತರ ಹಿಂದೂಗಳ ಅನಾಥ ಮಕ್ಕಳನ್ನು ಈ ಕ್ಷಾಮ ಕಾಲದಲ್ಲಿ ಅಲ್ಲಿ ಸಾಕಬೇಕೆಂದು ಏರ್ಪಾಡಾಗಿದೆ. ಈ ಅನಾಥಶಾಲೆಗೆ ಅಲ್ಲಿನ ಪ್ಲೀಡರಾದ ಛಂಗೇರಾಮ್ ಎಂಬಾತನು ಮುಖಂಡನಾಗಿರುವನು. ಈಗ ಹಿಂದೂಗಳಲ್ಲಿ ಎಲ್ಲಾ ಜಾತಿಯವರೂ ಅನಾಥ ಮಕ್ಕಳನ್ನು ಅಂದರೆ ಇನ್ನೂ ೫೦೦ ಮಂದಿಯನ್ನು ಈ ಅನಾಥಶಾಲೆಯಲ್ಲಿ ಸಾಕುವುದಕ್ಕೆ ಉಪಕಾರಿಗಳೆಲ್ಲರೂ ಅಂಥಾ ಅನಾಥರನ್ನು ಅಲ್ಲಿಗೆ ಕಳುಹಿಸಬಹುದೆಂತಲೂ, ಅವಶ್ಯವಾದರೆ ಅವರ ರೈಲ್ ಛಾರ್ಜನ್ನೂ ಸಹ ಅನಾಥಶಾಲೆಯವರೇ ಸಲ್ಲಿಸುವರೆಂತಲೂ ಮುಖಂಡರಾಗಿರುವ ಮೇಲ್ಕಂಡ ಪ್ಲೀಡರು ಪ್ರಕಟಿಸಿದ್ದಾರೆ.

***

ಬಳ್ಳಾರಿ ಟವ್ನ ಬಜಾರ್ ಬೀದಿಯಲ್ಲಿ ಹಿಂದಿನ ಮಂಗಳವಾರ ರಾತ್ರಿ ಹಿಂದೂಗಳಿಗೂ ಮಹಮದೀಯರಿಗೂ ಉತ್ಸವದ ವಿಷಯವಾಗಿ ಕಲಹ ಮಾರಾಮಾರಿ ನಡೆಯಿತು. ಹಿಂದೂಗಳ ಗುಂಪಿನಲ್ಲಿ ಕೋಮಟಿಗರು ವಿಶೇಷವಾಗಿದ್ದರು. ಇವರು ಮಾಮೂಲಿನ ಪ್ರಕಾರ ತಮ್ಮ ದೇವರ ಉತ್ಸವವನ್ನು ಮಾಡಿಸಿಕೊಂಡು ಹೋಗುತ್ತಿರುವಲ್ಲಿ ಒಂದು ಮಸೀದಿಯಲ್ಲಿ ಮುಸಲ್ಮಾನರು ನಿಂತು ನಮಾಜ್ ಮಾಡುತ್ತಿದ್ದು, ಉತ್ಸವವನ್ನು ಬಿಡದೆ ತಡೆದರು. ಅವರುಗಳಿಗೆ ಮಾತು ನಡೆದು ಜಗಳವೂ ಆಯಿತು. ಮುಸಲ್ಮಾನರು ಹಿಂದೂಗಳ ವಿಗ್ರಹವನ್ನು ಕೆಡವಿ ಒಡೆದು ಹಾಕಿದರು. ಡೆಪ್ಯುಟಿ ಮ್ಯಾಜಿಸ್ಟ್ರೇಟ್ ಮಿ|| ದಕ್ಷಿಣಾಮೂರ್ತಿಯವರಿಗೆ ಈ ವರ್ತಮಾನ ತಿಳಿದು, ಕೂಡಲೇ ಅವರು ಅಲ್ಲಿಗೆ ಹೋಗಿ ಕೆಲವು ಜನರನ್ನು ದಸ್ತಗಿರಿ ಮಾಡಿಸಿರುತ್ತಾರೆ.

***

ಸಂಯುಕ್ತ ಅಧಿಪತ್ಯಗಳು, ಪಂಜಾಬ್ ಮತ್ತು ವಾಯುವ್ಯ ಸರಹದ್ದಿನ ಪ್ರಾಂತ್ಯ, ಈ ಪ್ರದೇಶಗಳಲ್ಲಿ ಕ್ಷಾಮಬಾಧೆಯು ಸ್ವಲ್ಪ ಸ್ವಲ್ಪ ಕಡಮೆಯಾಗುತ್ತಿದೆ. ಈಚೆಗೆ ೩-೪ ಒಳ್ಳೇ ಮಳೆಗಳು ಸುರಿದವು. ಆದರೆ ವಾರ್ಲ್ ಡಿಸ್ಟ್ರಿಕ್ಟಿನಲ್ಲಿ ಕ್ಷಾಮಪ್ರಾಪ್ತವಾಗಿರುವಂತೆಯೂ, ರಿಲೀಫ್ ಕಾಮಗಾರಿಗಳೂ ಧರ್ಮಸತ್ರಗಳೂ ಪ್ರಾರಂಭಿಸಲ್ಪಟ್ಟಿರುವುದಾಗಿಯೂ, ಆದರೆ ಅಲ್ಪಸ್ವಲ್ಪ ಮಳೆ ಆಗ್ಗೆ ಬಂದಿರೋಣದರಿಂದ ಭೀತಿಯು ಕಡಮೆಯಾಗಿರುವುದಾಗಿಯೂ ತಿಳಿದು ಬಂದಿದೆ. ಸಂಯುಕ್ತ ಅಧಿಪತ್ಯಗಳಲ್ಲಿ ಒಂದು ಲಕ್ಷ ಕ್ಷಾಮಪೀಡಿತರು ರಿಲೀಫ್ ಕಾಮಗಾರಿಗಳನ್ನು ಬಿಟ್ಟು, ತಮ್ಮ ತಮ್ಮ ಜಮೀನ್ ಸಾಗುವಳಿ ಮುಂತಾದ ಕೆಲಸಗಳ ಮೇಲೆ ಹೊರಟುಹೋದರು. ಇತರ ಕಡೆಗಳಲ್ಲಿ ಕ್ಷಾಮಪೀಡಿತರ ಸಂಖ್ಯೆ ಕಡಮೆಯಾಗಲಿಲ್ಲ. ಈಗ ೧೩ ಲಕ್ಷ ಜನರು ಸರ್ಕಾರದವರ ಪೋಷಣೆಯಲ್ಲಿದ್ದಾರೆ. ರಾಜಪುಟಾನಾದಲ್ಲಿ ಈ ಸಲ ಕ್ಷಾಮಬಾಧೆಯುಂಟಾಗಲಾರದೆಂದು ತಿಳಿಯುವುದು.

***

ಮೇರಟ್ ಡಿಸ್ಟ್ರಿಕ್ಟಿನ ಹಿಂದೂ ಮಹನೀಯರು ದೊಡ್ಡ ಮನುಷ್ಯರು ಒಂದಾಗಿ ಕಳೆದ ವಾರ ಒಂದು ಮಹಾ ಸಭೆಯನ್ನು ನಡಿಸಿದ್ದಲ್ಲದೆ, ಕೈಗಾರಿಕೆಗಳ ಪ್ರದರ್ಶನವನ್ನೂ ಮಾಡಿಸಿದರು. ಸಭಾನಾಯಕರಾದ ಮಿ|| ಪಥರಾಯ್ಬೇಗರವರು ಬಹು ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ಆಗ ತೀರ್ಮಾನವಾದ ವಿಚಾರಗಳ್ಯಾವುವೆಂದರೆ—ಪ್ರಜೆಗಳಿಗೆ ಆಯಾ ಬಂದಾರಿ ವಿದ್ಯೆಗಳನ್ನು ಕಲಿಸುವುದು, ಹಣವನ್ನು ಕೂಡಿಸುವುದು, ಜಮೀನ್ದಾರರು ತಮ್ಮ ಗ್ರಾಮಗಳಲ್ಲಿ ವ್ಯವಸಾಯದ ಬ್ಯಾಂಕುಗಳನ್ನು ಸ್ಥಾಪಿಸಿ, ವ್ಯವಸಾಯಾಭಿವೃದ್ಧಿಗೆ ಪ್ರೋತ್ಸಾಹಕೊಡುವುದು, ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು, ಹತ್ತಿನ ಬೆಳೆ ಮತ್ತು ಸಕ್ಕರೆ ತಯಾರಿಗಳನ್ನು ಹೆಚ್ಚಿಸುವುದು, ಸ್ವದೇಶೀ ಪ್ರೋತ್ಸಾಹ, ಈ ಮೊದಲಾದವುಗಳೇ. ಮೇರಟಿನ ಬಾಲಕರಿಗೆ ಕಸಬುಗಳನ್ನು ಕಲಿಸುವುದಕ್ಕಾಗಿ ೧೮,೦೦೦ ರೂಪಾಯಿ ಚಂದಾ ಕೂಡಿದೆ. ಈ ಹಣದಲ್ಲಿ ವಿದ್ಯಾರ್ಥಿವೇತನಗಳನ್ನು ಕೊಡಿಸಬೇಕೆಂದು ಗೊತ್ತು ಮಾಡಿದರು.

ಹಿಂದುಸ್ಥಾನದ ಟಂಕಸಾಲೆಗಳಲ್ಲಿ ಕಳೆದ ಫೆಬ್ರುವರಿ ಒಂದು ತಿಂಗಳಲ್ಲಿ ೬೪ ಲಕ್ಷ ರೂಪಾಯಿನ ನಾಣ್ಯಗಳು ಛಾಪಾ ಆದವೆಂತಲೂ, ಕಳೆದ ೧೧ ತಿಂಗಳಲ್ಲಿ ಒಟ್ಟು ೧೬ ಕೋಟಿ ರೂಪಾಯಿಗಳನ್ನು ಅಚ್ಚು ಹಾಕಿರುತ್ತಾರೆಂತಲೂ ತಿಳಿದು ಬಂದಿದೆ.

***

ಬೊಂಬಾಯಿ ಪಟ್ಟಣದಲ್ಲಿ ಮೆ॥ ಬಿ. ಎಂ. ಮಲಬಾರಿಯವರು ಸ್ತ್ರೀಯರನ್ನು ಒಂದು ಸಂಘವಾಗಿ ಸೇರಿಸಿ, ಅವರಿಗೆ ವಿದ್ಯಾದಿ ಸಹಾಯಗಳನ್ನು ಒದಗಿಸಿ ಕೊಟ್ಟು, ಅವರಿಂದ ದೇಶಕ್ಕೆ ಉಪಕಾರವಾಗುವಂತೆ ಏರ್ಪಾಡುಮಾಡುತ್ತಾರೆ. ಇದಕ್ಕಾಗಿ ಭಾಗ್ಯವಂತರೂ ದೇಶಾಭಿಮಾನಿಗಳೂ ದ್ರವ್ಯಸಹಾಯ ಮಾಡಬೇಕೆಂದು ಕೇಳಿಕೊಂಡಿರುವರು.

***

ಕಲ್ಕತ್ತಾ ಪಟ್ಟಣದ ವೈದ್ಯ ವಿದ್ಯಾಶಾಲೆಯಲ್ಲಿ ಉಪಾಧ್ಯಾಯನಾಗಿರುವ ಡಾಕ್ಟರ್ [illegible] ಎಂಬಾತನು ಮೋಟಾರ್ ಗಾಡಿಯಲ್ಲಿ ಕುಳಿತು ಹೋಗುತ್ತಿದ್ದಾಗ ಒಬ್ಬ ಹಿಂದೂವು ಆ ಗಾಡಿಯ ಕೆಳಗೆ ಸಿಕ್ಕಿ ಗಾಯಪಟ್ಟು ಸತ್ತುಹೋದನು. ಆ ಡಾಕ್ಟರು ತುಂಬಾ ದುಃಖಪಟ್ಟು ಮೃತಪಟ್ಟವನ ಹೆಂಡತಿಗೆ ೧,೦೦೦ ರೂಪಾಯಿ ಪ್ರತಿಫಲವನ್ನು ಕೊಟ್ಟು ಸಂತೈಸಿರುತ್ತಾನೆ.

***

ಪೂರ್ವ ಬಂಗಾಳಾ ಮತ್ತು ಆಸ್ಸಾಂ ಎಂಬ ಹೊಸ ಅಧಿಪತ್ಯಕ್ಕೆ ಸೇರಿದ ಬಸೀಹಾಟ್ ಎಂಬ ಪಟ್ಟಣದಲ್ಲಿ ಅಂಗಡೀ ಬೀದಿಯನ್ನು ಸುಟ್ಟುಬಿಡುವುದಾಗಿ ಹೆಸರಿಲ್ಲದ ನೋಟೀಸುಗಳು ಹಂಚಲ್ಪಟ್ಟಿದ್ದವು. ಅದಕ್ಕೆ ತಕ್ಕಂತೆ ಅಲ್ಲಿನ ಒಂದು ದೊಡ್ಡ ಅಂಗಡಿಯು ಉರಿದು ಹೋಗಿ ಸುಮಾರು ಎರಡು ಲಕ್ಷ ರೂಪಾಯಿ ನಷ್ಟವಾಯಿತು. ಪ್ರಜೆಗಳಿಗೂ ವರ್ತಕರಿಗೂ ಇನ್ನೇನೇನು ಅನಾಹುತಗಳಾಗುವವೋ ಎಂದು ಭೀತಿಯುಂಟಾಗಿದೆ.

***

ಟಿಬೆಟ್ ರಾಜ್ಯಕ್ಕೆ ಹಿಂದುಸ್ಥಾನದಿಂದ ವರ್ತಕರು ಸರಕುಗಳನ್ನು ತೆಗೆದುಕೊಂಡು ಹೋಗಿ ಬಿಕರಿ ಮಾಡಿ ಅಲ್ಲಿಂದ ಸಾಮಾನುಗಳನ್ನು ಕೊಂಡು ತರುವ ವಿಷಯದಲ್ಲಿ ಇಂಡಿಯಾ ಗವರ್ನಮೆಂಟಿನವರು ಕೆಲವು ಕರಾರುಗಳನ್ನು ಮಾಡಿಕೊಳ್ಳಬೇಕೆಂದು ಚೀನಾ ಪ್ರತಿನಿಧಿಯಾದ ಚಂಗ್ ಎಂಬ ರಾಯಭಾರಿಯು ಕೂಡ ಚರ್ಚೆ ಮಾಡುತ್ತಿದ್ದಾರೆ. ನಾಲ್ಕಾರು ತಿಂಗಳಾದರೂ ಯಾವುದೊಂದೂ ಇನ್ನೂ ಖಂಡಿತವಾಗಲಿಲ್ಲ. ಈ ವಿಚಾರವಾಗಿ ವರ್ತಕರು ಗವರ್ನಮೆಂಟಿಗೆ ವಿಜ್ಞಾಪನಾಪತ್ರಿಕೆಗಳನ್ನು ಒಪ್ಪಿಸಿರುತ್ತಾರೆ.

***

ನೇಪಾಳ ಸಂಸ್ಥಾನದ ಮಂತ್ರಿಶ್ರೇಷ್ಠರಾದ ಘನ [illegible] ಚಂದ್ರಸೋಮೇಶ್ವರಜಂಗ್ ಬಹದೂರ್ ಅವರು ವಿಲಾಯತಿ ಪ್ರಯಾಣ ಮಾಡುವ ಉದ್ದೇಶದಿಂದ ಕಳೆದ ವಾರ ಬೊಂಬಾಯಿಗೆ ಬಂದಿಳಿದರು. ಅವರ ಅಳಿಯಂದಿರಾದ ರಾಜಾ ಮಹಾಪೃಥ್ವಿ ಬಹದೂರ್ ಅವರೂ, ಕಲೆಕ್ಟರವರೂ, ನೇಪಾಳದ ಬ್ರಿಟಿಷ್ ರೆಸಿಡೆಂಟರೂ ರೈಲ್ವೆ ಸ್ಟೇಷನ್ನಲ್ಲಿ ಅವರನ್ನು ಎದುರುಗೊಂಡು, ಮೆರವಣಿಗೆಯೊಡನೆ ಕರೆದುಕೊಂಡು ಹೋಗಿ ಗವರ್ನಮೆಂಟ್ ಹೌಸ್ ಎಂಬ ಬಂಗಲೆಯಲ್ಲಿ ಇಳಿಸಿದರು. ಮಂತ್ರಿಶ್ರೇಷ್ಠರು ರೆಸಿಡೆಂಟರ ಜೊತೆಯಲ್ಲಿ ಕಳೆದ ಶುಕ್ರವಾರದ ದಿನ ಸಿಟಿ ಆಫ್ ವಿಯೆನ್ನಾ ಎಂಬ ಹಡಗನ್ನು ಹತ್ತಿ ವಿಲಾಯತಿಗೆ ಪ್ರಯಾಣಮಾಡಿದರು.

***

ಗೌಡಸಾರಸ್ವತ ಬ್ರಾಹ್ಮಣರು, ಮಂಗಳೂರು, ಕಾರವಾರ, ಮಲಬಾರ್, ಕೊಚ್ಚಿ, ಗೋವೆ, ಬೊಂಬಾಯಿ, ಈ ಪ್ರಾಂತ್ಯಗಳಲ್ಲಿ ವಿಶೇಷವಾಗಿದ್ದಾರೆ. ಅವರು ತಮ್ಮ ಗಂಡು ಹೆಣ್ಣು ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೆ ಸ್ಕೂಲುಗಳನ್ನು ಮಾಡಿರುವುದಲ್ಲದೆ ತಮ್ಮ ವ್ಯಾಪಾರಾಭಿವೃದ್ಧಿಗಾಗಿ ಒಂದು ಬ್ಯಾಂಕನ್ನೂ ಏರ್ಪಡಿಸಿಕೊಂಡಿರುತ್ತಾರೆ. ಈಗ ಈ ಜನರು ತಮ್ಮ ಸಂಘವನ್ನು ಅಭಿವೃದ್ಧಿಗೆ ತರುವುದಕ್ಕೋಸ್ಕರ ಒಂದು ಸಮಾಜವನ್ನು ಮಾಡಿಕೊಂಡು, ಫಂಡುಗಳನ್ನು ಕೂಡಿಸುವುದಕ್ಕೆ ಸಾಹಸಪಟ್ಟಿದ್ದಾರೆ. ಕಳೆದ ವಾರ ಮಂಗಳೂರಿನಲ್ಲಿರುವ ಅವರ ಕ್ಯಾನರಾ ಹೈಸ್ಕೂಲ್ ಬಳಿ ಭುವನೇಂದ್ರವೆಂಬ ಮಂದಿರದಲ್ಲಿ ಸಮಾಜ ನಡೆಯಿತು. ಆ ಜನರ ದೇವಸ್ಥಾನಗಳ ಫಂಡನ್ನು ನ್ಯಾಯವಾದ ಧರ್ಮಕಾರ್ಯಗಳಿಗೆ ವಿನಿಯೋಗಿಸುವುದಕ್ಕೂ ಸ್ಕೂಲುಗಳ ಬೋಧಕರಿಗೂ ಸಂಸ್ಕೃತ ವಿದ್ಯಾಶಾಲೆಗಳನ್ನು ಸ್ಥಾಪಿಸಿ ನಡೆಸುವುದಕ್ಕೂ ಯೋಗ್ಯರಾದ ಯೌವನಸ್ಥರನ್ನು ವೇತನ ಕೊಟ್ಟು ಅನ್ಯದೇಶಗಳಿಗೆ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿಕೊಡುವುದಕ್ಕೂ ಏರ್ಪಾಡುಗಳನ್ನು ಮಾಡುವಂತೆ ತೀರ್ಮಾನ ಮಾಡಿದರು.

***

ದಕ್ಷಿಣ ದೇಶಕ್ಕೆ ಸೇರಿದ ನಾಗರಕೋಯಿಲ್ ಎಂಬ ಪಟ್ಟಣದಲ್ಲಿ ಕಳೆದ ಶುಕ್ರವಾರ ಸಾಯಂಕಾಲ ಅಗ್ನಿಕುಂಡದ ಮೇಲೆ ನಡೆಯುವ ಉತ್ಸವವನ್ನು ಮಾಡಿದರು. ಅಲ್ಲಿನ ಸೌರಾಷ್ಟ್ರ ಜನರು ಕೆಲವು ಕಾಲದಿಂದ ಮಹಾಭಾರತವನ್ನು ಓದಿಸಿ, ಅದು ಪೂರೈಸಿದ್ದರಿಂದ ದ್ರೌಪದಿ ಅರ್ಜುನರ ಉತ್ಸವಗಳನ್ನು ಮಾಡಿದರು. ಸುಮಾರು ೪೦ ಜನ ಭಕ್ತಾದಿಗಳು ನಾಲ್ವತ್ತೊಂದು ದಿನಗಳ ತನಕ ಆರನೊಟ್ಟೆ ಕಾಲಕ್ಕೊಮ್ಮೆ ಆಹಾರ ತೆಗೆದುಕೊಂಡು ಉಪವಾಸ ವ್ರತವನ್ನು ಅನುಸರಿಸಿದರು. ಸುಮಾರು ೨೦೬ ಅಡಿ ವಿಸ್ತಾರವಾದ ಗುಂಡಿಯಲ್ಲಿ ೪೦ ಗಾಡಿಗಳ ಸೌದೆಯನ್ನು ಸುರಿದು, ಆ ದಿನ ಬೆಳಗ್ಗಿನಿಂದ ಉರಿಸುತ್ತಾ ಬಂದರು. ಸಾಯಂಕಾಲದ ಹೊತ್ತಿಗೆ ಅಗ್ನಿಕುಂಡದಲ್ಲಿ ಕೆಂಡಗಳು ಅಪಾರವಾಗಿ ಆದವು. ಅವನ್ನೆಲ್ಲಾ ಬಡಿದು ಒಂದೇ ಸಮನಾಗಿ ಹರಡಿದರು. ಸುತ್ತಲೂ ಕಬ್ಬಿಣದ ಕಟಕಟೆಗಳನ್ನು ಹಾಕಿದ್ದರು. ಬೆಂಕಿಯ ಜ್ವಾಲೆಗೆ ಈ ಕಟಕಟೆಗಳು ಕೂಡ ಕಾದುಹೋಗಿದ್ದುವು. ಮೇಲ್ಕಂಡ ಭಕ್ತಾದಿಗಳು ಸ್ನಾನಮಾಡಿ, ಅರಿಶಿನದ ವಸ್ತ್ರಗಳನ್ನು ಧರಿಸಿ, ಅಗ್ನಿಕುಂಡದೊಳಗೆ ಇಳಿದು ಕೆಂಡಗಳ ಮೇಲೆ ಒಂದು ಸುತ್ತು ಪ್ರದಕ್ಷಿಣೆಯಾಗಿ ನಡೆದು ಮೇಲಕ್ಕೆ ಹತ್ತಿಬಂದರು. ಇದನ್ನು ಸುಮಾರು ೬,೦೦೦ ಜನರು ನಿಂತು ನೋಡಿದರು. ಇದಲ್ಲದೆ ಕೆಲವು ಯೂರೋಪಿಯನ್ ನಿವಾಸಿಗಳೂ ದೇಶೀಯ ಅಧಿಕಾರಿಗಳೂ ಹಾಜರಾಗಿದ್ದು, ಈ ಉತ್ಸವವನ್ನು ಬಹು ಕುತೂಹಲದಿಂದ ನೋಡುತ್ತಿದ್ದರು.

ಹೈದರಾಬಾದಿನಲ್ಲಿ ಕ್ಯಾಪ್ಟನ್ ನೆವಿಲ್ಲಿ ಎಂಬಾತನು ವಿಚಿತ್ರತರವಾದ ಒಬ್ಬ ಕುಳ್ಳ ಮನುಷ್ಯನನ್ನು ತಂದು ಜನರಿಗೆ ಪ್ರದರ್ಶನ ಮಾಡುತ್ತಿದ್ದಾನೆ. ಈ ಕುಳ್ಳ ಮನುಷ್ಯನು ಕಳೆದ ೧೯೦೫ ನೇ ಇಸವಿ ಜನವರಿ ತಾ. ೫ ರಲ್ಲಿ ವಿಲಾಯತಿಗೆ ಸೇರಿದ [illegible] ಎಂಬ ತೀರದ ಪಟ್ಟಣದಲ್ಲಿ ಒಂದು ಕಲಿಗೆಯು ನೀಲಿ ಸಮುದ್ರದ ಅಲೆಗಳಿಂದ ಹೊಡೆದುಕೊಂಡು ಬಂದು ಕ್ಯಾಪ್ಟನ್ ನೆವಿಲ್ಲಿ ಎಂಬಾತನಿಗೆ ದೊರಕಿದನು. ಈ ಕುಳ್ಳನಿಗೆ ಡಿಕ್ ಟ್ರಿಲೂನಿ ಎಂದು ಹೆಸರಿಟ್ಟಿದ್ದಾರೆ. ಇವನು ೨೬॥ ಅಂಗುಲ ಎತ್ತರವಾಗಿಯೂ, ೩೯೦ ರೂಪಾಯಿನಷ್ಟು ಭಾರವಾಗಿಯೂ ಇರುತ್ತಾನೆ, ಅಂದರೆ, ಎತ್ತರದಲ್ಲಿ ಒಂದು ವರುಷ ತುಂಬಿದ ಮಗುವಿನಷ್ಟಾಗಿಯೂ, ತೂಕದಲ್ಲಿ ೩-೪ ತಿಂಗಳ ಮಗುವಿನಷ್ಟೂ ಇರುವನು. ಮತ್ತು ಅನೇಕ ಡಾಕ್ಟರುಗಳು ಅವನ ಅಂಗಾಂಗಗಳನ್ನೂ ಕಾಯಪುಷ್ಟಿಯನ್ನೂ ಪರೀಕ್ಷೆಮಾಡಿ, ಅವನಿಗೆ ೩೦ ವರುಷದಿಂದ ೬೦ ವರುಷದ ವರೆಗೂ ವಯಸ್ಸಾಗಿರಬೇಕೆಂದು ಅಂದಾಜು ಕಟ್ಟುತ್ತಾರೆ. ಅವನ ಸ್ವಭಾವ ಯಾವುದೋ ತಿಳಿಯದು. ಆದರೆ ಆ ಕುಳ್ಳನಿಗೆ ಕ್ಯಾಪ್ಟನ್ ನೆವಿಲ್ಲಿ ಎಂಬ ಪೋಷಕನು ಇಂಗ್ಲೀಷನ್ನೂ ಫ್ರೆಂಚ್ ಭಾಷೆಯನ್ನೂ ತಕ್ಕ ಮಟ್ಟಿಗೂ ಚೆನ್ನಾಗಿ ಕಲಿಸಿದ್ದಾನೆ. ಕುಳ್ಳನ ಊಟ ತಿಂಡಿ ನೀರು ಸಾಮಾನ್ಯವಾಗಿವೆ. ಸಣ್ಣ ಸಿಗರೆಟ್ಟನ್ನಾಗಲಿ ಸಣ್ಣ ಗುಡಿಗುಡಿಯನ್ನಾಗಲಿ ಸೇದುತ್ತಾ ಆರೋಗ್ಯವಾಗಿದ್ದಾನೆ. ಅವನ ಪೋಷಕನು ಇಷ್ಟರಲ್ಲೇ ಮದರಾಸ್, ಮೈಸೂರು, ಬೆಂಗಳೂರು ಮೊದಲಾದ ಪಟ್ಟಣಗಳಿಗೆ ಆ ಕುಳ್ಳನನ್ನು ಕರೆದು ತರುವವನಾಗಿದ್ದಾನೆಂದು ಪ್ರಕಟವಾಗಿದೆ.

ವ್ಯವಸಾಯದ ಮುಟ್ಟುಗಳೂ, ಬೀಜದ ಧಾನ್ಯಗಳೂ.

ಬೀಜದ ಧಾನ್ಯಗಳನ್ನೂ ಮತ್ತು ನೂತನ [illegible] ಮುಟ್ಟುಗಳನ್ನು ಸರ್ಕಾರದ ಖರ್ಚಿನಿಂದ ತರಿಸಿ, ಅವುಗಳ ತಾರತಮ್ಯಗಳನ್ನು ನಿದರ್ಶನ ಪೂರ್ವಕವಾಗಿ ರೈತಾಪಿ ಜನರಿಗೆಲ್ಲಾ ತೋರ್ಪಡಿಸಿ ಕೊಟ್ಟು, ತನ್ಮೂಲಕ ಅವರ ಸ್ಥಿತಿಗತಿಗಳನ್ನು ಉತ್ತಮ ಪಡಿಸುವ ಬಗ್ಗೆ ಸರ್ಕಾರದವರು ಪ್ರಯತ್ನ ಪಡುತ್ತಿರುವರಷ್ಟೆ. ಈ ವಿಚಾರದಲ್ಲಿ ರೆವಿನ್ಯು ಕಮಿಷನರ್ ಸಾಹೇಬರು ಗವರ್ನಮೆಂಟಿಗೆ ಮಾಡಿರುವ ರಿಪೋರ್ಟಿನ ಮುಖ್ಯ ತಾತ್ಪರ್ಯವೇನೆಂದರೆ —

ಗವರ್ನಮೆಂಟಿನವರು ೧೯೦೬ ನೇ ಇಸವಿಯಲ್ಲಿ ಕೊರಡು [illegible] ಒಂದು, ಕಾಳನ್ನು ಬಡಿಯುವ ಎರಡು ಯಂತ್ರಗಳು ಮತ್ತು ಮೇವನ್ನು ಸಣ್ಣ ಸಣ್ಣ ಚೂರಾಗಿ ಕತ್ತರಿಸುವ ಯಂತ್ರ ಒಂದು, ಇವುಗಳನ್ನು ಖರೀದಿಗೆ ತೆಗೆದುಕೊಳ್ಳುವ ಬಗ್ಗೆ ೩೦೦ ರೂಪಾಯಿ ಸ್ಯಾಂಕ್ಷನ್ ಮಾಡಿದರು. ಈ ಪೈಕಿ ಒಂದು ತೂರುವ ಯಂತ್ರ ಮತ್ತು ಮೇವು ಕತ್ತರಿಸುವ ಯಂತ್ರಗಳನ್ನು ಕೊಂಡು, ಇವೆರಡನ್ನು ೧೯೦೬ ನೇ ದಸರಾ ಎಗ್ಜಿಬಿಷನ್ನಲ್ಲಿ ಪ್ರದರ್ಶಿಸಲಾಯಿತು. ಮೇವು ಕತ್ತರಿಸುವ ಯಂತ್ರವು [illegible] ಆ ಯಂತ್ರವನ್ನು ಕೊಂಡುಕೊಂಡರು. ತೂರುವ ಯಂತ್ರವನ್ನು ಮೈಸೂರು ನಾರ್ಮಲ್ ಸ್ಕೂಲ್ ವ್ಯವಸಾಯದ [illegible]ದಲ್ಲಿ ನಿದರ್ಶನಾರ್ಥವಾಗಿ ವ್ಯವಸಾಯದ ಶಿಕ್ಷಕರ ವಶದಲ್ಲಿ ಇಟ್ಟಿರುತ್ತೆ. ನಾಗಪುರದಿಂದ ಮೇವು ಕತ್ತರಿಸುವ ಇನ್ನೊಂದು ಯಂತ್ರವನ್ನು ತರಿಸಿ ಜನಗಳ ತಿಳುವಳಿಕೆ ಬಗ್ಗೆ ಬೆಂಗಳೂರು ಮಾರ್ಕೆಟ್ಟಿನಲ್ಲಿ ನಿದರ್ಶನ ಮಾಡಲು, ಬೇರೆ ಯಂತ್ರ ಮುಟ್ಟುಗಳ ವ್ಯಾಪಾರಿಗಳ [illegible] ವಶದಲ್ಲಿ ಕೊಟ್ಟಿರುತ್ತೆ. ೧೯೦೬—೭ ನೇ ಸಾಲಿನಲ್ಲಿ ಬೀಜದ ಧಾನ್ಯಗಳನ್ನೂ ಮುಟ್ಟುಗಳನ್ನೂ ತರಿಸಲು ೫೦೦ ರೂಪಾಯಿ ಸ್ಯಾಂಕ್ಷನ್ ಮಾಡಿದರು. ಈ ಮೊಬಲಗಿನಲ್ಲಿ ಒಟ್ಟು ೩೦ರೂ. ೬ಆ. ಬೆಲೆಯುಳ್ಳ ಹೊಸ ತರಹ ಮಂಡಿಯೊಂದನ್ನು ರಾಜಕೋಟ್‌ನಿಂದ ತರಿಸಿ, ಒಂದನ್ನು [illegible] ಬೆಲೆಯುಳ್ಳ ಮೇವು ಕತ್ತರಿಸುವ ಎರಡು ಯಂತ್ರಗಳನ್ನು ತರಿಸಿದ್ದಾಯಿತು. ಮತ್ತು ಬೀಜಕ್ಕಾಗಿ 'ಬಾಲಿವಾರ್' ಬತ್ತ, 'ಫ್ಲೈ ಆಸ್ಪ್ಯಾಡಿ' ಬತ್ತ, ಕಬ್ಬಿನ ಬೀಜಗಳು ಸಹ ತರಿಸಲ್ಪಟ್ಟವು. ಬೀಜಗಳನ್ನು [illegible] ಪರೀಕ್ಷೆಗಾಗಿ ಹಂಚಿರುತ್ತೆ. ಆದರೆ ಅವರಿಂದ ಪರೀಕ್ಷೆಯ ಫಲಿತಾಂಶವು ಇನ್ನೂ ತಿಳಿದುಬಂದಿಲ್ಲ. ಮೇವು ಕತ್ತರಿಸುವ ಯಂತ್ರಗಳ ಪೈಕಿ ಒಂದನ್ನು [illegible] ತಿರುಮಾಲಯ್ಯನ ವೆಂಕಟಪ್ಪನವರಿಗೂ ಮತ್ತೊಂದನ್ನು ಮೈಸೂರಲ್ಲಿ ಅಸಿಸ್ಟೆಂಟ್ ಕಮಿಷನರ್ ಮೆ॥ ಸಂಪದ್ಗಿರಿಯಯ್ಯಂಗಾರ್ರಿಗೂ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತೆ. ಕೈಮಂಡಿ ಮತ್ತು ನೇಗಿಲುಗಳನ್ನು ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ಪರೀಕ್ಷೆಗಾಗಿಯೂ ನಿದರ್ಶನಕ್ಕಾಗಿಯೂ ಇಟ್ಟಿರುತ್ತೆ.

೧೯೦೭—೮ನೇ ಸಾಲ್‌ನಲ್ಲಿ ೫೦೦ ರೂಪಾಯಿ ಸ್ಯಾಂಕ್ಷನ್ ಆಯಿತು. ಈ ಪೈಕಿ ೧೨೩—೧೦—೦ ರೂಪಾಯಿಗೆ [illegible]ದಿಂದ ದಸರಾ ಎಗ್ಜಿಬಿಷನ್ನಿಗೆ ಬಂದಿದ್ದ ಒಂದು ಕೈ ಮಗ್ಗವನ್ನು ಖರೀದಿಗೆ ತೆಗೆದುಕೊಂಡು, ಅದನ್ನು ಮೈಸೂರಲ್ಲಿ ನೆಯಿಗೆ ಕಸಬಿನಲ್ಲಿ ಮುಂದಾಳಾಗಿರುವ ಮೆ॥ ವಾಸುದೇವಯ್ಯನವರಿಗೆ ಉಪಯೋಗಮಾಡುವದಕ್ಕೆ ಕೊಟ್ಟಿರುತ್ತೆ. ನಂದ್ಯಾಲದಿಂದ ೪೦ ಮಣ ಬೀಜದ ಅರಿಶಿನವನ್ನು ತರಿಸಿ, ಮೈಸೂರು ಬೋಗಾದಿ ಹೋಬಳಿ ಮೆ॥ ಕೃಷ್ಣಯ್ಯಂಗಾರ್ರಿಗೂ ಮತ್ತು ಮೈಸೂರು ಡೆಪ್ಯುಟಿ ಕಮಿಷನರ ಅಭಿಪ್ರಾಯದಂತೆ ಕೆಲವು ರೈತರಿಗೂ ಹಂಚಿದ್ದಾಯಿತು. 'ಬಿಸಿ' ಹತ್ತಿ ಬೀಜದ ಕೆಲವು ಚೀಲಗಳನ್ನು ತರಿಸಿ, ಪ್ರಾಮುಖರಾದ ಕೆಲವು ಹತ್ತಿ ಬೆಳೆಯುವವರಿಗೆ ಹಂಚುವ ಬಗ್ಗೆ ಮೈಸೂರು ಮತ್ತು ಚಿತ್ರದುರ್ಗದ ಡೆಪ್ಯುಟಿ ಕಮಿಷನರಿಗೆ ಕಳುಹಿಸಿರುತ್ತೆ. ೧೦೦ ರೂಪಾಯಿನ ಅಬ್ಸೀನಿಯಾ ದೇಶದ ಕಾಫಿ ಬೀಜವು ತರಿಸಲ್ಪಟ್ಟಿತು. ಡಿಸ್ಟ್ರಿಕ್ಟುಗಳಲ್ಲಿ ಪರೀಕ್ಷೆಗಾಗಿ ಬೇಕಾಗುವ ಬೀಜದ ಧಾನ್ಯಗಳ ಪಟ್ಟಿಯನ್ನು ತಿಳಿಸಬೇಕೆಂದು ಎಲ್ಲಾ ಡೆಪ್ಯುಟಿ ಕಮಿಷನರಿಗೂ ಬರೆದಿರುತ್ತೆ. ಮತ್ತು ಸಾಲ್ ಆಖೈರಿನೊಳಗೆ ಸ್ಯಾಂಕ್ಷನ್ ಮಾಡಿದ ಮೊಬಲಗಿನಲ್ಲಿ ಇನ್ನೂ ಬಾಕಿ ಉಳಿದಿರುವ ೨೩೬ ರೂಪಾಯಿಗಳನ್ನು ಬೀಜ ಮತ್ತು ಮುಟ್ಟುಗಳಿಗೆ ಪೂರ್ತಿಯಾಗಿ ಖರ್ಚುಮಾಡಲು ಉದ್ದೇಶಪಟ್ಟಿರುತ್ತೆ. ವ್ಯವಸಾಯದ ಇಲಾಖಾ ಕೆಮಿಸ್ಟ್‌ರವರು ಕೆಲವು ವ್ಯವಸಾಯದ ಮುಟ್ಟುಗಳನ್ನು ತರಿಸಿ, ಆ ಪೈಕಿ ಎಗ್ಜಿಬಿಷನ್ನಲ್ಲಿ ಪ್ರದರ್ಶಿಸಿದರು.

ಮೇಲೆ ವಿವರಿಸಿದ ಬೀಜಗಳೇ ಅಲ್ಲದೆ, ಜಾಗ್ರತೆಯಾಗಿ ಬೆಳೆಯುವ ಸಂಭಾ 'ಚಿರಮದಾನ್ಯರು' ಎಂಬ ಬತ್ತವನ್ನು ಬೆಳೆದರೆ ಉತ್ತಮವೆಂದು ಜನಗಳಿಗೂ ಮತ್ತು ಕೆಲವು ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರಿಗೂ ತಿಳಿಸಿದ್ದಲ್ಲದೆ, ಇದನ್ನು ಬೆಳೆಯಲು ಒಪ್ಪಿದ ಕೆಲವು ಬೇಸಾಯಗಾರರಿಗೆ ಅವರ ಖರ್ಚಿನಿಂದಲೇ ಅನೇಕ ಮೂಟೆ ಈ ಬತ್ತದ ಬೀಜವನ್ನು ತರಿಸಿ, ತಿರುಚನಾಪಲ್ಲಿಯಿಂದ ಸೀದಾ ಅವರಿಗೇ ತಲುಪಿಸುವ ಏರ್ಪಾಡು ಮಾಡಿದ್ದಾಯಿತು. ಮತ್ತು ಷಿಯಾಳಿಯಲ್ಲಿರುವ ಮೆ॥ ಚಿದಂಬರನಾಥ ಮೊದಲಿಯಾರ್ರಿಂದ 'ಬಾಂಕು' ಬತ್ತದ ಬೀಜವನ್ನು ತರಿಸಿ ಹಂಚಿರುತ್ತೆ. ಈ ಪರೀಕ್ಷೆಗಳ ಫಲಿತಾಂಶದ ರಿಪೋರ್ಟು ಡಿಸ್ಟ್ರಿಕ್ಟುಗಳಿಂದ ಇನ್ನೂ ಬಂದಿರುವದಿಲ್ಲ.

ಮೈಸೂರು, ಚಿತ್ರದುರ್ಗ ಮತ್ತು ಕಡೂರು ಈ ಮೂರು ಸ್ಥಳಗಳಲ್ಲಿ ಈಗ ವ್ಯವಸಾಯಕ ಸಂಘಗಳು ಏರ್ಪಟ್ಟಿರುವದರಿಂದಲೂ ೧೯೦೮ನೇ ಜೂನ್ ಆಖೈರಿನೊಳಗಾಗಿ ಇನ್ನೂ ಮೂರು ಡಿಸ್ಟ್ರಿಕ್ಟು ಸಂಘಗಳು ಏರ್ಪಡುವ ಸಂಭವವಿರುವದರಿಂದಲೂ ವ್ಯವಸಾಯಕ ಮುಟ್ಟುಗಳನ್ನೂ ಬೀಜದ ಧಾನ್ಯಗಳನ್ನೂ ತರಿಸಲು ೧೯೦೮—೦೯ನೇ ಸಾಲ್‌ನಿಂದ ಇನ್ನೂ ಸ್ವಲ್ಪ ಜಾಸ್ತಿ ಹಣ ಬೇಕಾಗಬಹುದಾದ ಕಾರಣ ಮುಂದಿನ ವರ್ಷದಿಂದ ಈ ಬಗ್ಗೆ ಗ್ರಾಂಟನ್ನು ೫೦೦ ರೂಪಾಯಿನಿಂದ ೧,೦೦೦ ರೂಪಾಯಿಗೆ ಹೆಚ್ಚಿಸುವದು ಅವಶ್ಯಕವಾಗಿರುತ್ತದೆಂದು ರೆವಿನ್ಯು ಕಮಿಷನರು ಬರೆದರು. ಅದೇ ಪ್ರಕಾರ ಗವರ್ನಮೆಂಟಿನವರು ರೆವಿನ್ಯು ಕಮಿಷನರವರ ಶಿಫಾರಸ್ ಮೇರೆಗೆ ೧೯೦೮—೦೯ನೇ ಸಾಲಿಗೆ ಸದರಿ ಗ್ರಾಂಟನ್ನು ೧,೦೦೦ ರೂಪಾಯಿಗೆ ಹೆಚ್ಚಿಸಿರುತ್ತಾರೆ.

ಪ್ರಾಂತೀಕ ವರ್ತಮಾನಗಳು.

ಬೆಂಗಳೂರು — ಈ ತಿಂಗಳು ೮ ನೇ ತಾ ಬುಧವಾರ ಬೆಂಗಳೂರಿನಲ್ಲಿರುವ ಕ್ರೈಸ್ತಮಂಡಲಿಗೆ ಕೇವಲ ವ್ಯಸನವಾದ ದಿನವಾಗಿದ್ದಿತೆಂದು ಹೇಳಬಹುದು. ಯಾಕೆಂದರೆ ಅವರ ಮಧ್ಯೆ ಅನೇಕ ವರ್ಷಗಳಿಂದಲೂ ಸುವಾರ್ತೆ ಕೆಲಸ ಮಾಡುತ್ತಲಿದ್ದು ಸರ್ವಜನ ಪ್ರೀತಿ ಪಾತ್ರರಾಗಿದ್ದ ಜೆ. [illegible] ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ೧೮೬೦ ನೇ ಇಸವಿಯಲ್ಲಿ ಕ್ರೈಸ್ತ ಮತಾವಲಂಬಿಗಳಾಗಿ, ಸುಮಾರು ೧೧ ವರ್ಷ ಉಪಾಧ್ಯಾಯರಾಗಿದ್ದು ಸುವಾರ್ತಿಕ ಕಾರ್ಯವನ್ನು ವಹಿಸಿಕೊಂಡು ಬೆಂಗಳೂರಿನಿಂದ ಅನೇಕ ಊರುಗಳಿಗೆ ಸಂಚರಿಸಿದರು. ಆ ಪ್ರಾಂತ್ಯ ಸುಮಾರು ೧೬ ವರ್ಷ ತಮ್ಮ [illegible] ಕೆಲಸದಲ್ಲಿ ಕಳೆದರು. ಅಲ್ಲಿನ ಜನ [illegible] ಎಷ್ಟರಮಟ್ಟಿಗೆ [illegible] ಮಾಡಿ [illegible] ಸಭೆಗೆ ಮೊದಲನ್ನಾಗಿ [illegible] ಮತ್ತು [illegible] ಇವರು ಜನರಿಗೆ [illegible] ಅನುಭವಿಸಿ [illegible] ಪ್ರಾಂತ್ಯದ ೫೬ ವರುಷ ಕೆಲಸವಾದ ಮೇಲೆ [illegible] ೧೯೦೬ ನೇ ಇಸ್ವಿ ಜನವರಿ [illegible] ಬೆಂಗಳೂರಿಗೆ ಬಂದು [illegible] ವಿಶ್ರಾಂತಿಯನ್ನು ಅನುಭವಿಸುತ್ತಿದ್ದರು. [illegible] ಇವರಿಗೆ ೭೬ ವರುಷ ವಯಸ್ಸು [illegible] ಪತ್ನಿಯೂ, [illegible] ಜನ [illegible] ಇದ್ದಾರೆ. [illegible] ಕಾಂತಿ [illegible] ಇವರ ಹೆಸರನ್ನು [illegible] ಜ್ಞಾಪಕದಲ್ಲಿಡುವರು.

ನಂಜನಗೂಡು — ಇಲ್ಲಿ ಈ ತಿಂಗಳು ೨೫ ಮತ್ತು ೨೬ ನೇ ತಾ ಗಳಲ್ಲಿ ಎರಡು ಸಲ ಒಳ್ಳೇ ಮಳೆಗಳಾದವು. ಭೂಮಿ ತಂಪಾಯಿತು. ರೈತರು ಹೊಲಗಳನ್ನು ಉತ್ತು, ರಾಗಿ ಜೋಳ ಮುಂತಾದವುಗಳನ್ನು ಬಿತ್ತುತ್ತಿದ್ದಾರೆ.— ಈ ಪೌರ್ಣಮಿ ಉತ್ಸವ ಕಾಲದಲ್ಲಿ ಅನೇಕ ಜನರು ದೇವಸ್ಥಾನಕ್ಕೆ ಬಂದಿದ್ದರು. ಮಳೆ ತುಂಬಾ ಬಂದ ಕಾರಣ ತೋಪಿನಲ್ಲಿ ಇಳಿದುಕೊಂಡಿದ್ದ ಪರಸ್ಥಳದವರಿಗೆ ಬಹಳ ತೊಂದರೆಯಾಯಿತು. ಅತ್ತಿಕುಪ್ಪೆ ಕಡೆಯಿಂದ ಬಂದಿದ್ದ ಜನರು ಗಾಡಿಯನ್ನು ಬಿಟ್ಟುಕೊಂಡು ತೋಪಿನಲ್ಲಿದ್ದರು. ಅಲ್ಲಿ ಒಂದು ಹಳೇ ಹುಣಿಸೆ ಮರವಿತ್ತು. ಆ ಮರವು ಗಾಳಿಯ ರಭಸಕ್ಕೆ ಬುಡಸಹಿತ ಬಿದ್ದುಹೋಯಿತು. ಆಗ ಅದರಡಿಯಲ್ಲಿದ್ದ ಗಾಡಿಯ ಮೇಲೆಯೂ, ಎತ್ತಿನ ಮೇಲೆಯೂ ಆ ಮರದ ಒಂದು ಕೊಂಬೆಯು ಬಿತ್ತು. ಕೂಡಲೆ ಗಾಡಿಯು ಮುರಿಯಿತು. ಅತ್ತಿಕುಪ್ಪದ ಕಡೆಯಿಂದ ಬಂದ ಹೆಂಗಸಿಗೆ ಪೆಟ್ಟು ಆಗಿ, ಡಾಕ್ಟರ ಇಲಾಜಿನಲ್ಲಿದ್ದು ಗುರುವಾರ ತೀರಿ ಹೋದಳು. ಆ ಗಾಡಿಯವರಿಗೆ ತುಂಬಾ ನಷ್ಟವಾಯಿತು. ಈಗ ಮುಂಗಾರು ಮಳೆಯೂ ಗಾಳಿಯೂ ಇರುವದರಿಂದ ಜನರು ಮರಗಳ ಕೆಳಗೆ ಹೋಗುವದು ತುಂಬಾ ಅಪಾಯಕರವಾದದ್ದು.—ಇಂಜಿನೀರ್ ಇಲಾಖೆಯವರು ಹೋದ ವರ್ಷ ರೋಡ್ ಇಳಿದು ಇಲ್ಲಿ ನಿಲ್ಲಿಸುವದಕ್ಕಾಗಿ ಒಂದು ಕಟ್ಟಡವನ್ನು ಗಾರೆ ಇಟ್ಟಿಗೆಗಳಿಂದ ಕಟ್ಟಿಸಿದರು. ಆ ಕಟ್ಟಡ ಇಂಜಿನೀರ್ ಆಫೀಸಿನ ಹತ್ತಿರವೇ ಇತ್ತು. ಈ ವಾರ ಬಂದ ಗಾಳಿ ಮಳೆಗಳಿಂದ ಅದು ಬಿದ್ದು ಹೋಯಿತು. ಅದಕ್ಕಾಗಿ ನಾಲ್ಕು ನೂರು ರೂಪಾಯಿಗಳ ವರೆಗೆ ಖರ್ಚುಮಾಡಿದ್ದರು.—ಈ ಟವುನಲ್ಲಿ ಅನೇಕ ಕಡೆ ಬಚ್ಚಲಿನ ನೀರು ಸಲೀಸಾಗಿ ಹರಿದು ಹೋಗುವದಿಲ್ಲ. ಮುಖ್ಯವಾಗಿ ಇಂಗ್ಲಿಷ್ ಸ್ಕೂಲ್ ಇರುವ ಬೀದಿಯಲ್ಲಿ ಬಹಳ ಗಲೀಜು ತುಂಬಿದೆ. ಆ ಪ್ರಾಂತ್ಯ ಜನಗಳು ಆರೋಗ್ಯ ವಿಷಯದಲ್ಲಿ ನಿಶ್ಚಿಂತೆಯುಳ್ಳವರಾಗಿದ್ದಾರೆ. ಬಚ್ಚಲು, ಕಸ, ಕಲ್ಮಲ, ಇವು ತುಂಬಿವೆ. ಇನ್ನು ಕೆಲವು ಕಡೆಗಳಲ್ಲಿ ಜನರು [illegible] ಮಾಡಿ, ನದಿಯ ನೀರನ್ನು ಕೆಡಿಸುತ್ತಾರೆ. ಮಾದಿಗರು ಮಾಂಸ ಹಬ್ಬ ಮಾಡಿ, [illegible] ಮೇಕೆ, ಇನ್ನೂ ಅನೇಕ ಪ್ರಾಣಿಗಳನ್ನು ಕೊಂದು, ಅವನ್ನು ನದಿ

ನೀರನ್ನೇ ತೊಳೆಯಬೇಕಾಗುತ್ತದೆ. ಅಂಥಾ ನೀರನ್ನು ಅನೇಕ ಪಾನಮಾಡಬೇಕಾಗುತ್ತೆ. ಇದರಿಂದ ಸಾಂಕ್ರಾಮಿಕ ರೋಗವು ಬರುವರಲ್ಲಿ ಸಂದೇಹವಿಲ್ಲ. ಇದನ್ನು ಅಧಿಕಾರಿಗಳು ಬಂದೋಬಸ್ತು ಮಾಡಿಸಿದರೆ ಒಳ್ಳೇದು.

ಕೊಳಹೊನ್ನೂರು.—ಈಗ ೧೫ ದಿನಗಳಲ್ಲಿ ...ಹದ ಗಳಾದವು. ಕೆರೆ ಕಟ್ಟೆಗಳೆಲ್ಲಾ ಬತ್ತಿ ಹಳ್ಳಿಗಳಲ್ಲಿ ನೀರಿಗೆ ಕಾಟ. ಥರ್ಮಾಮೀಟರು ವಿಶೇಷವಾಗಿದ್ದುದು ಬಿಸಿಲಿನಿಂದ ಪಟ್ಟಣಕ್ಕೆ ...ತ್ತಿರುವುದು ತುಂಬಾ ತಾಪವಾಗಿದೆ ... ಮಾತ್ರ ಅಗ್ಗ.—ಮುನಿಸಿಪಲ್ ಲಾಂದ್ರಗಳು ಕ್ಷಯರೋಗಿಷ್ಟು ...ಗ ನರಳುತ್ತಿವೆ. ಜನರು ಬಳಸುವ ನಲ್ಲೀ ಸಮೀಪದಲ್ಲಿಯೇ ಬಾಧೆಗಳನ್ನು ತೀರಿಸಿಕೊಳ್ಳುತ್ತಿರುವುದರಿಂದ ಈ ಕಶ್ಮಲೋದಕ ...ಪಾನ ಮಾಡುವುದೂ, ಅಲ್ಲಿ ಜನಿಸುವ ದುರ್ವಾಯು ಸೇವಿಸುವುದೂ ಪ್ರಜಾ ಆರೋಗ್ಯಕ್ಕೆ ಕಂಟಕವಲ್ಲವೇ. ಮುನಿಸಿಪಲ್ ...ಬುದ್ಧಿಯು ಈ ವಿಷಯದಲ್ಲಿ ಇದುವರೆಗೂ ನಿಗಾ ಕೊಡದೆ ಇರು...ಲೋಚನೀಯ.—ಇಲ್ಲಿ ಸತ್ಯಧರ್ಮಸ್ವಾಮಿಗಳ ಮಠವೆಂಬುದು ...ಮತಿಗಳ ಸ್ಥಾನವನ್ನೂ ಅದರ ಸುತ್ತಲೂ ನೋಡಲು ಗ ...ಕರೇ ಶಿಲಾಮಯ ಮಂಟಪವೊಂದಿರುವುದು. ಇದರ ಒಳಭಾಗ ...ಬೃಂದಾವನದೆದುರಿಗೆ ನೋಡಲು ... ಕಡೆಯಿಂದಲೂ ಶಿಲೆಯಿಂದ ...ಸ್ವಚ್ಛ ಮರಳಿಂದ ಯುಕ್ತೋದಕವು ಪ್ರವಹಿಸುತ್ತಲೇ ಇರುವುದು ...ಆ ಸ್ಥಳದಲ್ಲಿ ಸ್ಫಟಿಕದಂತೆ ಹೊಳೆಯುತ್ತಿರುವ ಲಿಂಗದ್ವಯ ...ತ್ಪತ್ತಿಯಾಗಿರುವುದು ಲೋಕಪ್ರಸಿದ್ಧವಾಗಿ ಅನೇಕ ಜನರು ಲಿಂಗ ...ನಾಪೇಕ್ಷೆಯಿಂದ ಬರುತ್ತಿರುವರು. ಇಂಥಾದ್ದರಿಂದ ಉದಕಸ...ತ್ತನ್ನು ಹರಿದು ಹೋಗಗೊಡದೆ ... ಮಾರ್ಗಗಳ್ಯಾವುವೂ ಇಲ್ಲದಿರುವುದರಿಂದ ಕ್ರಮೇಣ ಹೀನ ಸ್ಥಿತಿಗೆ ...ವುದರಲ್ಲಿ ಅನುಮಾನವಿಲ್ಲವು. ಭದ್ರಾನದಿಗೆ ಅಣೆಕಟ್ಟು ಕಟ್ಟಿ ...ಸ್ಥಳಕ ಪ್ರಯೋಜನಕಾರಿ ಮಾಡಬೇಕೆನ್ನುವ ಉದ್ದೇಶದಿಂದ ಆ ಕಾ...ರ್ಯವು ಸ್ಯಾಂಕ್ಷನ್ ಮಾಡಲ್ಪಟ್ಟಿರುವುದನ್ನು ಕೇಳಿ ರೈತರಿಗೆಲ್ಲಾ ಸ...ವಾಗಿದ್ದು ಪುನಃ ಕೆಲಸಕ್ಕೆ ಯಾವಾಗ ಪ್ರಾರಂಭಿಸುವುದೋ ...ವುದರ ಯೋಚನೆಯಲ್ಲಿ ಬೆಳೆ ಆಗಲಿ, ಇಲ್ಲದೆ ಇರಲಿ, ಜವಾನ ಸರ್ಕಾರಕ್ಕೊಪ್ಪಿಸುವುದಕ್ಕೂ ಮನಸ್ಸಿಲ್ಲದೆ ಬೇಳೆ ಕೊಡದೆ ...ಕೆಲಸ ನಿರೀಕ್ಷಣೆಯಲ್ಲಿರುವರು.—ಇಲ್ಲಿಯ ಕೊಪ್ಪದ ಕೆರೆಗೆ ...ಮೈಲಿ ದೂರದಲ್ಲಿರುವ ಹಳ್ಳಗಳನ್ನು ಸೇರಿಸಿ ನೀರು ಒದಗಿಸು...ವುದಾಗಿ, ಗ್ರಾಮದ ಪ್ರಮುಖರಿಂದ ೫೦೦ ರೂಪಾಯಿ ಕಂಟ್ರಿಬ್ಯೂಷನ್ ಹಣವನ್ನು ಸರ್ಕಾರದವರು ತೆಗೆದುಕೊಂಡು ೧೦೦೦ ರೂ... ಗತಿಸಿದಾಗ್ಯೂ ಅದರ ವಿಚಾರವೇ ಇಲ್ಲದೆ ಇರುವುದರಿಂದ ...ಅದೃಷ್ಟಹೀನರೇ ಸರಿ. ಈಗಲೂ ಸ್ಯಾಂಕ್ಷನ್ ಮಾಡಿಸೋಣ ...ಭದ್ರಾನದಿಯ ಕೆಲಸಕ್ಕೆ ಉಪಕ್ರಮಿಸೋಣವಾದರೆ ಅನೇಕ ...ರು ಬದುಕಿಕೊಳ್ಳುವರು. ಹಳ್ಳವನ್ನು ... ಕೊಪ್ಪದ ಕೆರೆಗೆ ...ಸಿದರೆ ಎಷ್ಟೋ ಅನುಕೂಲವಾದೀತು.

ವಿದೇಶ ವರ್ತಮಾನಗಳು.

ಕಳೆದ ಫೆಬ್ರವರಿ ಆಖೈರಿನಲ್ಲಿ ಜರ್ಮನಿ ರಾಜ್ಯದ ರಾಜಧಾನಿ ಯಾದ ಬರ್ಲಿನ್ ಪಟ್ಟಣದಲ್ಲಿ ಸುಮಾರು ... ಕಡೆ ಮನೆಗಳಿಗೆ ಬೆಂಕಿ ಬಿದ್ದು ಬಹಳ ... ಸರ್ಕಾರಿ ಕಟ್ಟಡಗಳನ್ನು ನಾಶಮಾಡಿದರು.

***

ಚೀನಾ ರಾಜ್ಯಕ್ಕೆ ಸೇರಿದ ಕ್ಯಾಂಟನ್ ನಗರದಲ್ಲಿ ಯಾಂಗ್ಟ್ಸೀ ...ದಿಯ ಪ್ರವಾಹ ಬಂದು ಬಹಳ ಅನಾಹುತವನ್ನುಂಟುಮಾಡಿದೆ. ಸುಮಾರು ೫,೦೦೦ ಜನರು ಪ್ರವಾಹದಲ್ಲಿ ... ಸಿಕ್ಕಿ ...ಟ್ಟು ಹೋಗಿರುತ್ತಾರೆ.

***

ಫ್ರಾನ್ಸ್ ರಾಜ್ಯಕ್ಕೆ ಸೇರಿದ ಪ್ಯಾರಿಸ್ ನಗರದಲ್ಲಿ ಎಂ. ಡಿಲಾ ...ಬೆ ಎಂಬೊಬ್ಬ ಕಾರೀಗಾರನು ಒಂದು ವಿಮಾನವನ್ನು ಕಂಡುಹಿಡಿದು ಅದರ ಸಾಮರ್ಥ್ಯವನ್ನು ಪ್ರಕಾಶ ಪಡಿಸಿದನು. ಅದು ಗಂಟೆಗೆ ೫೦ ಮೈಲಿಯ ಪ್ರಕಾರ ಅಂತರಿಕ್ಷದಲ್ಲಿ ಸಂಚಾರ ಮಾಡಿಕೊಂಡು ಹೋ...ಯಿತು.

***

ಹ್ಯಾನೋವರ್ ರಾಜ್ಯದ ಗಾಟಿಂಜಾ ಪಟ್ಟಣದಲ್ಲಿ ಡಾಕ್ಟರ್ ...ಕ್ ಕೀಲ್ಹಾರ್ನ್ ಎಂಬ ಸಂಸ್ಕೃತ ಪಂಡಿತನು ಕಾಲವಾದನು. ...ನು ಬೊಂಬಾಯಿ ಅಧಿಕೃತದ ವಿದ್ಯಾಭ್ಯಾಸದ ಇಲಾಖೆಯಲ್ಲಿ ...ಕ ೧೮೬೬ ರಿಂದ ೧೮೮೧ನೇ ಇಸವಿಯ ತನಕ ಕೆಲಸಮಾಡಿ, ...ರುವಾಸಿಯನ್ನು ಪಡೆದಿದ್ದನು.

***

ಜರ್ಮನಿ ಚಕ್ರವರ್ತಿಯವರು ರಾಜಧಾನಿಯಲ್ಲಿ ದೇವರ ಪ್ರಾ...ನೆ ಮಾಡುವುದಕ್ಕಾಗಿ ದಯಮಾಡುತ್ತಿದ್ದ ಮಹಾ ಸುಂದರವಾದ ...ಲಯವು ಸುಟ್ಟು ಹೋಯಿತು. ಅನೇಕಾನೇಕ ಅಮೂಲ್ಯ ಪ...ಗಳು ನಾಶವಾದವು. ಬೆಂಕಿಯನ್ನು ಆರಿಸುವುದರಲ್ಲಿ ... ಬಹಳ ಶ್ರಮಪಟ್ಟು ಸಹಾಯ ಮಾಡಿದರು.

***

...ನಿಯಾಯಿತಿಯಲ್ಲಿರುವ ಡ್ಯೂಕ್ ಆಫ್ ಪೋರ್ಟ್‌ಲೆಂಡ್ ಎಂಬ ...ಪ್ಪ ಮನುಷ್ಯರ ಬಳಿ ಸೆಂಟ್ ಸ್ಟೀವರ್ ಎಂಬ ಕಂದರಿಯು ಇತ್ತು. ...ಕಾಲವಾಯಿತು. ಇದರಿಂದ ಡ್ಯೂಕರಿಗೆ ಅನೇಕಾನೇಕ ಜೂ...ಗಳಲ್ಲಿ ತುಂಬ ಲಾಭ ಬರುತ್ತಿತ್ತು. ಪ್ರತಿ ಸರಿಸುವಾಗ ಅದು ಜೂ...ಗಳನ್ನು ಗೆದ್ದು ತನ್ನ ಯಜಮಾನನಿಗೆ ಕಡೇ ಪಕ್ಷ ಒಂದೂವರೆ ಲಕ್ಷ ...ಯಿಯ ಸಂಪಾದನೆ ಮಾಡಿಕೊಡುತ್ತಿತ್ತೆಂದು ಪ್ರಕಟವಾಗಿದೆ.

***

ಜಪಾನ್ ಸೈನಿಕರು ಉಪಯೋಗಿಸುತ್ತಿರುವಂಥಾ ಸನೀನುಗಳನ್ನು ...ಯುತಿಯ ಸೈನಿಕರಿಗೂ ಮಾಡಿಸಿ ಕೊಡಬೇಕೆಂದು ಇಂಗ್ಲಿಷ್ ಗವರ್ನಮೆಂಟಿನ ಯುದ್ಧದ ಇಲಾಖೆಯವರು ಗೊತ್ತುಮಾಡಿ, ೫೫,೦೦೦ ಸನೀನುಗಳು ಬೇಕಾಗಿವೆ ಎಂದು ಕಾರ್ಖಾನೆಗೆ ಕಂಟ್ರಾಕ್ಟು ಕೊಟ್ಟಿದ್ದಾರೆ. ಈಗ ಇಂಗ್ಲಿಷ್ ಸೈನಿಕರು ಉಪಯೋಗಿಸುತ್ತಿರುವ ಸನೀನುಗಳಿಗಿಂತಲೂ ಜಪಾನಿನವರ ಸನೀನುಗಳು ಮೂರು ಅಂಗುಲ ಉದ್ದವಾಗಿಯೂ ಯುದ್ಧಕಾಲಗಳಲ್ಲಿ ತುಂಬಾ ಪ್ರಯೋಜನಕಾರವಾಗಿಯೂ ಇವೆ ಎಂದು ತಿಳಿದುಬಂದಿದೆ.

***

ಕೋರಿಯಾ ಗವರ್ನಮೆಂಟಿಗೆ ಸಹಾಯಮಾಡುತ್ತಿದ್ದ ಮಿ. ಸ್ಟೀವನ್ಸ್ ಎಂಬ ಅಮೇರಿಕದ ದೊಡ್ಡ ಮನುಷ್ಯನನ್ನು ಕೆಲವು ಕೋರಿಯಾ ಜನರು ಸೇರಿಸಿಕೊಂಡು ವಾಷಿಂಗ್‌ಟನ್ ಪಟ್ಟಣದಲ್ಲಿ ಕಡವಿ ಹೊಡೆದು ಕೊಂದುಹಾಕಿದರು. ಜಪಾನಿನವರನ್ನು ಕಂಡರಾಗದ ಒಂದು ಕೊರಿಯಾ ಸಂಘದವರು ಚಿತಾವಣೆ ಮಾಡಿದ್ದರಿಂದ ಈ ಕೊಲೆ ನಡೆಯಿತೆಂದು ತಿಳಿಯುತ್ತದೆ. ಜಪಾನ್ ಗವರ್ನಮೆಂಟಿನವರು ಒಂದೂವರೆ ಲಕ್ಷ ದ್ರವ್ಯವನ್ನೂ ಕೋರಿಯಾ ಗವರ್ನಮೆಂಟಿನವರು ಅರ್ಧಲಕ್ಷ ದ್ರವ್ಯವನ್ನೂ ಆತನ ಹೆಂಡತಿ ಮಕ್ಕಳಿಗೆ ಪರಿಹಾರ ಕೊಟ್ಟಿರುತ್ತಾರೆ.

***

ಅಮೇರಿಕಕ್ಕೆ ಸೇರಿದ ಪೋರ್ಟ್ಸ್ ಡಿಸ್ಟ್ರಿಕ್ಟ್ ಎಂಬ ಪಟ್ಟಣದಲ್ಲಿ ಕಸಬುಗಳು ನಡೆಯುತ್ತಿದ್ದ ಕಾರ್ಖಾನೆಗಳ ಮೊದಲ್ಗಾಗಿ ಬೆಂಕಿ ಬಿದ್ದು ಎಲ್ಲಾ ನಾಶವಾಯಿತು. ಅನೇಕ ಕಾರ್ಖಾನೆಗಳೂ, ಪಬ್ಲಿಕ್ ಬಂಗಲಿ ಆಫೀಸುಗಳೂ, ಚರಿತ್ರಾರ್ಹವಾದ ದೇವಾಲಯಗಳೂ ಸುಟ್ಟು ಹೋದವು. ಒಂದು ಚದರ ಮೈಲಿ ವಿಸ್ತಾರವಾದ ಪ್ರದೇಶವೆಲ್ಲಾ ಬಯಲಾಯಿತು. ಸುಮಾರು ೧೫—೨೦ ಕೋಟಿ ದ್ರವ್ಯ ನಷ್ಟವಾಯಿತೆಂದೂ ಹತ್ತು ಸಾವಿರ ಪ್ರಜೆಗಳು ಮನೆಮಠ ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ಕಷ್ಟಪಡುತ್ತಿದ್ದಾರೆಂದು ... ವರ್ತಮಾನ ಬಂದಿದೆ.

***

ಪ್ರಪಂಚದಲ್ಲಿ ಸುಂದರವಾದ ಗರಿ ಪುಕ್ಕಗಳನ್ನುಳ್ಳ ಪಕ್ಷಿ ಪಕ್ಷಿಗಳನ್ನು ಕೊಂದು, ಅವುಗಳ ಗರಿ ಪುಕ್ಕಗಳನ್ನು ಯೂರೋಪಿಯನ್ ಸ್ತ್ರೀಯರು ಉಡುಪುಗಳ ಅಲಂಕಾರಕ್ಕೆಂದು ಟೋಪಿ ಮಾಡುವುದೂ, ಬಹಳ ಹಣ ಖರ್ಚುಮಾಡಿ ಸ್ತ್ರೀಯರು ಕೊಂಡುಕೊಳ್ಳುವುದೂ ವಾಡಿಕೆಯಾಗಿದೆಯಷ್ಟೆ. ಹೀಗೆ ಉಡುಪುಗಳ ಸೌಂದರ್ಯಕ್ಕೆ ಸುಂದರವಾದ ಮತ್ತು ನಾನಾ ಜಾತಿಯ ಪಕ್ಷಿಗಳನ್ನು ಕೊಂದುಹಾಕ ಕೂಡದೆಂತಲೂ, ಇದು ತುಂಬಾ ಕಠೋರ್‍ಯವೆಂದೂ ಪ್ರಕಾಶಪಡಿಸುವುದೆಂತಲೂ ವಿಲಾಯಿತಿಯಲ್ಲಿ ಅನೇಕಾನೇಕ ದೊಡ್ಡ ಮನುಷ್ಯರು ಗೊತ್ತುಮಾಡಿದರು. ಈಗ ಅಂಥಾ ಗರಿ ಪುಕ್ಕಗಳನ್ನು ವಿಲಾಯಿತಿಗೆ ಯಾರೂ ರಫ್ತು ಮಾಡದಂತೆ ತಡೆಯುವದಕ್ಕಾಗಿ ಪಾರ್ಲಿಮೆಂಟಿನಲ್ಲಿ ಒಂದು ಹೊಸದೆ ಕಾನೂನನ್ನು ತಯಾರುಮಾಡಿ ಅದನ್ನು ಜಾರಿಗೆ ತರುವ ವಿಷಯದಲ್ಲಿ ಚರ್ಚೆ ನಡೆಸುತ್ತಿದ್ದಾರೆ. ಜರ್ಮನಿ ಚಕ್ರವರ್ತಿಯವರು ಕೂಡ ಈ ಅಭಿಪ್ರಾಯವನ್ನು ಅನುಮೋದಿಸಿರುತ್ತಾರೆ.

ನಿಮಗೆ ಸ್ವಸ್ಥವಿಲ್ಲವೋ?

ನಿನಗೆ ಸ್ವಸ್ಥವಿಲ್ಲವೆಂದು ತೋರಿದಾಗ ಎಂದರೆ ನಿನಗೆ ಯಾವ ನೋವೇ ಇಲ್ಲದಿರಲಿ "ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೋ" ಎಂದು ನಿನ್ನನ್ನು ನೀನೇ ಕೇಳಿಕೋ. ಹಾಗೆ ಆಗದಿದ್ದರೆ ಡೋನ್‌ವಾರ್ ಕೆಂಪಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿವಸ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನ್ನ ಮೈ

(ಆ ಆಕೆ ಬುದ್ಧಿ ಪಡೆವನು.)

ಸ್ವಸ್ಥವಾಗುವುದು. ಮಲಬದ್ಧತೆಯುಂಟಾದರೆ ಅಧಿಕಬಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೆಲ್ಲಕ್ಕೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು. ಮಲಬದ್ಧದಿಂದ ರೋಗಗಳಿಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ - ಪಿತ್ತಾಜೀರ್ಣ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ, ಅಶಕ್ತಿ, ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು, ಹೊಟ್ಟೆಯುಬ್ಬರ; ಹುಳಿತೇಗು ಹೊಟ್ಟೆನೋವು; ಚರ್ಮದ ವ್ಯಾಧಿಗಳು, ಇವೇ ಮೊದಲಾದುವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಬಿಡುವುದು.

ಡೋನ್‌ವಾರ ಜರ್ಮಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನು ಕಷ್ಟವಿಲ್ಲದೆ ವಾಯುವನ್ನು ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಆಹಾರವೆಲ್ಲಾ ಕುಡಿಯಾಗಿಯೂ ಹಿತವಾಗಿಯೂ ಇಟ್ಟು, ಶರೀರದ ಬೇಗ ಸೋಂಕನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [93-34]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೪ಂ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು. ಅಥವಾ, ಡೋನ್ಸ್ ಪಿ. ಓ. ಬಾಕ್ಸ್ ೫೦, ಬೊಂಬಾಯಿ. ಇವರಲ್ಲಿ ದೊರೆಯುವುವು.

ಕಬ್ಬಿಣದ ಅಲೆ ಕಾರ್ಖಾನೆ.

37-1

ದಿ ಬಿಸ್ಮಿಲ್ಲಾ ಅಂಡ್ ಬ್ರದರ್ಸ್ ಎಂಬುವ ಕಂಪನಿಯವರು ಮೇಲ್ಕಂಡ ಕಬ್ಬಿಣದ ಅಲೆಗಳನ್ನು, ಅದಕ್ಕೆ ಆಗಬೇಕಾದ ಯಾವತ್ತು ಸಾಮಾನುಗಳನ್ನು ಸಹಾ ಯಂತ್ರ ಸಹಾಯದಿಂದ ಅತಿ ಜಾಗ್ರತೆಯಾಗಿ ತಯಾರಾಗುವಂತೆಯೂ, ಸುಲಭಕ್ರಯದಲ್ಲಿ ದೊರೆಯುವಂತೆಯೂ ನವೀನವಾದ ಏರ್ಪಾಡು ಮಾಡಿರುತ್ತಾರೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಸಕಲ ಸಂದರ್ಭವನ್ನು ತಿಳಿದುಕೊಳ್ಳಬಹುದು — ದಿ ಬಿಸ್ಮಿಲ್ಲಾ ಅಂಡ್ ಬ್ರದರ್ಸ್, ಬೆಂಗಳೂರು ಡಿಸ್ಟ್ರಿಕ್ಟ್ ದೇವನಹಳ್ಳಿ ತಾಲ್ಲೋಕು ಕುಂದಾಣದ ಹೋಬಳಿ ಬೀರಸಂದ್ರ.

ಮೋಹಿನಿ ಸಹಿತವಾದ ಉಪಕರಣಗಳು.

39-1

ಅಕ್ಷರ ವಿಗ್ರಹ ಮುಂತಾದ್ದು ಕೆತ್ತಿ ಬಿಡಿಸುತ್ತವು, ರಬ್ಬರ್ ಸ್ಟಾಂಪು ತಯಾರಿ, ಫೋಟೋ ವಿಧಾನ, ಬಾದಾಮಿಯಸ್ಲೆ ಕೆಗೆಯುವಯಂತ್ರ), ಅಕ್ಷರ ತಯಾರಿ ಸಾಧನ, ಹಸ್ತಾ ವಿಮಗೆ ಬೇಕಾದದ್ದೆಲ್ಲಾ ಸಿದ್ಧ ಕಳುಹಿಸುತ್ತೇವೆ. ವಿಳಾಸ.—ಬಿ. ಸಿ. ಪಂಗೆ, ನಂ. ೯, ಬೊಂಬಾಯಿ.

ಇದನ್ನು ನೋಡಿದರೆ ಬಹು ಆಶ್ಚರ್ಯ ಪಡುವಿರಿ.

38-1

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಆಮೂ ಮನಸ್ಸನ್ನು ಆಕರ್ಷಿಸುವುದು. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಖರ್ಚು ಬೇರೆ. ೨—೩—೦. ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ನನ್ನ ರಚಿತ ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮೀಷನ್ ಕೊಡುತ್ತೇವೆ. ಜಾಗ್ರತೆ ನೋಡಿ.

ನಮ್ಮ ವಿಳಾಸ:— ಮ್ಯಾನೇಜರ್,
ಸಿ. ಎಲ್. ಎನ್. ಬುಕ್ ಡಿಪೋ, ಮೈಸೂರು.

ಮಹಾ ಬಾಧಾಪಹಾರಿಣಿಯು.

58-46

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಯಕ್ಷಿಣೀ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಅಧಿಕಾರಿ...ಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಿದ್ದಾರೆ. ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೆ ತಲೆನೋವು, ವಾಯುನೋವು, ಕಿವಿ, ಗಂಟ್ಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಕೀಲುರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳುಕಡಿದ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಸುಟ್ಟನ್ನೇ ಅಳಿಸಿಬಿಡುತ್ತದೆ. ಬಹುಪಾಲು ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ ಸೀಸೆ ೧ಕ್ಕೆ ೧೨ ಆಣೆ. ಪ್ಯಾಕಿಂಗ್ ೩ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಹತ್ತು ಅಂಗಡಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವವರಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಶೇಖರ ಮಾಡುತ್ತಾರೆ. ಮುಖ್ಯ ಏಜೆಂಟರ ವಿಳಾಸ—

ಎಸ್. ಪೀಟರ್ಸ್,
೩೩. ಪೆದ್ದನಾಯಕನ್ ಪೇಟೆ, ಪೋರ್ಟ್, ಮದರಾಸ್.

ಹೊಸಪಂಡಿತ ಭೀಮರಾಯರು ರಚಿಸಿರುವ

ವೈದ್ಯಸಂಗ್ರಹ.

36-2

ನಮ್ಮ ತಂದೆ ಹೊಸಪಂಡಿತ ಭೀಮರಾಯರು ಲೋಕೋಪಕಾರಾರ್ಥವಾಗಿ ಈ ವೈದ್ಯಸಂಗ್ರಹವನ್ನು ರಚಿಸಿ, ೫೦ ವರ್ಷಗಳ ಹಿಂದೆ ಸ್ಟೇಟ್ ಸೂರು ಗೌರ್ನಮೆಂಟ್ ಮುದ್ರಾಕ್ಷರಶಾಲೆಯಲ್ಲಿ ಅಚ್ಚುಹಾಕಿಸಿ, ಪ್ರಚುರಪಡಿಸಿರುತ್ತಾರೆ. ಕೆಲವು ಪ್ರತಿಗಳು ಮಾತ್ರ ಉಳಿದಿರುವ ಈ ಗ್ರಂಥದಲ್ಲಿ ನಮ್ಮ ತಂದೆ ವಿಶದಪಡಿಸಿರುವ ಕೆಳಗಿನಂಥ ಸಂಗತಿಯಿಂದ ಗ್ರಂಥಸಾರವೆಲ್ಲಾ ಅದ್ಯಂತವಾಗಿ ಬಾಲಕರಿಗೆ ವೇದ್ಯವಾಗುವುದು — "ವೈದ್ಯಸಂಗ್ರಹವೆಂಬ ಗ್ರಂಥವನ್ನು ಮುಂದೆ ವಿವರಿಸುತ್ತೇನೆ. ನನ್ನಲ್ಲಿ ವೈದ್ಯ ವಿದ್ಯಾಭ್ಯಾಸ ಮಾಡಿ. ಚಿಕ್ಕಂದಿನಲ್ಲಿಯೇ ಗುರುಮುಖದಿಂದ ಶಾಸ್ತ್ರಗಳನ್ನು ಪಠಿಸಿ ಆ ವಿಷಯವಾಗಿ ಬರೆದಿರುವ ಪುಸ್ತಕವನ್ನೂ ಅನಂತರ ನಾನು ಉತ್ತರದೇಶಕ್ಕೆ ಸಂಚಾರಹೋಗಿರುವಾಗ ಅನೇಕ ಸಂಸ್ಥಾನಗಳಲ್ಲಿ ಸಹವಾಸ ಮಾಡಿ ಅಲ್ಲಿ ವಿದ್ವತ್ಪರೀಕ್ಷೆಯಿಂದ ಪಡೆದ ಹೊಟ್ಟುವ ಮರ್ಯಾದೆಗಳನ್ನೂ ಇದರ ಕೆಳಗೆ ಸೇರಿಸಿ, ಲೋಕೋಪಕಾರಾರ್ಥವಾಗಿ ಇದರಲ್ಲಿ ಶಾರೀರಲಕ್ಷಣ, ದಿನಚರ್ಯ, ಋತುಚರ್ಯ, ನಾಡಿಯಿಂದ ಭೂತಭವಿಷ್ಯತ್ತರಿಗಳು, ರೋಗಪರೀಕ್ಷಾ, ಔಷಧ ಮಾಡುವ ಲಕ್ಷಣ, ಸ್ವಪ್ನವಿಚಾರ, ರೋಗಾರಿಷ್ಟ, ಸಾಸಿಯಿಂದ ಅರಿಷ್ಟ, ಸೂಚಕ, ಇವುಗಳನ್ನು ತಿಳಿದು ಔಷಧಿ ಕೊಡುವ ಲಕ್ಷಣವೇ ಮೊದಲಾದ ಅನೇಕ ವಿಷಯಗಳನ್ನು ಬಿಡದೆ ತಿಳಿಸಿದ್ದೇನೆ" ಎಂದು ಬರೆದಿರುತ್ತಾರೆ. ಈ ಅಪೂರ್ವ ಗ್ರಂಥವನ್ನು ಪಡೆಯಲಪೇಕ್ಷಿಸತಕ್ಕವರು ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ಮೊದಲು ಇದ್ದ ಕ್ರಯ ೩ ರೂಪಾಯಿ; ಈಗ ಕ್ರಯ ೧೫—೮—೦ ೧೯೦೫ ಪ್ರತಿ ತರಿಸುವವರಿಗೆ ೧ ಪ್ರತಿ ಇನಾಮು. ಈ ಪುಸ್ತಕದ ಕೊನೆಯಲ್ಲಿ ಹಿಂದ ೫ನೆ ಭಾಗ ತಯಾರಾಗಿಲ್ಲ. ನನ್ನ ವಿಳಾಸ.

ಹೊಸಪಂಡಿತ ಕೇಶಗಿರಿರಾವ್, ಕಿಲ್ಲೆ, ಮೈಸೂರು.

ಕೆನಡಾದಲ್ಲಿ ಪೆರೂನಾ ಸೇವನೆ ಮಾಡುವ ಒಂದಾನೊಂದು ಸಂಸಾರವು.

ಪೆರೂನಾವನ್ನು ಸಕಾಲದಲ್ಲಿ ಕೆಲವು ಹೊತ್ತು ಕೊಟ್ಟರೆ ದೊಡ್ಡ ಕಾಯಿಲೆಗಳನ್ನೆಲ್ಲಾ ಅದು ನಿವಾರಣೆ ಮಾಡಬಲ್ಲುದೆಂದು ಮಕ್ಕಳುಳ್ಳ ಅನೇಕ ಸ್ತ್ರೀಯರು ಕಂಡುಕೊಂಡಿರುತ್ತಾರೆ.

ಮಿಸೆಸ್ ಎಟ್ಟಾ ಬೂಕರ್, ಡಂಡರ್ಕ್, ಸಸ್ಕ., ಎನ್ ಡಬ್ಲ್ಯು ಟಿ, ಕ್ಯಾನ್, ಈಕೆ ಬರೆಯುವುದು :—"ನನ್ನ ದೇಹದೊಳಗೆ ಸ್ತ್ರೀರೋಗವು ಹುಟ್ಟಿ ನರಳಿದೆನು. ಕಡೆಗೆ ಡಾ|| ಹಾರ್ಟ್‌ಮನ್‌ರನ್ನು ಕರೆಸಿಕೊಂಡು, ಅವರು ಹೇಳಿದ ಔಷಧವನ್ನು ಸೇವನೆ ಮಾಡಿದ್ದರಿಂದ ನನ್ನ ಕೆಟ್ಟ ರೋಗವು ನಿವಾರಣೆಯಾಯಿತು ಇದಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞಳಾಗಿರುತ್ತೇನೆ ಸ್ತ್ರೀರೋಗಕ್ಕೆಲ್ಲಾ ಪೆರೂನಾ ಉತ್ತಮೋತ್ತಮವಾದ ಔಷಧವೆಂದು ನನಗೆ ತೋರುವುದು ಈಗ ನನಗಿರುವಷ್ಟು ಸೌಖ್ಯವು ಲವಲವಿಕೆಯೂ ಹಿಂದೆ ಯಾವಾಗಲೂ ಇರಲಿಲ್ಲ

ಮಿಸೆಸ್ ಬೂಕರ್ ಬರೆದಿರುವ ಇನ್ನೊಂದು ಕಾಗದದಲ್ಲಿ ಆಕೆ ಹೇಳುವುದೇನೆಂದರೆ :—"ಪೆರೂನಾ ಮಹಾ ಆಶ್ಚರ್ಯಕರವಾದ ಔಷಧವೆಂದು ಅನುಭವಪೂರ್ವಕವಾಗಿಯೂ ಯಥಾರ್ಥವಾಗಿಯೂ ಹೇಳಬಲ್ಲೆನು ನನ್ನ ಮಗಳು ಎಲ್ಸಿ ಬೂಕರಿಗೆ ಎಷ್ಟು ಮಟ್ಟಿಗೆ ಆರೋಗ್ಯವಾಗಬೇಕೆಂದು ನಾನು ನಿರೀಕ್ಷಿಸಿದ್ದೆನೋ ಅಷ್ಟು ಒಳ್ಳೇದಾಯಿತು ಆದ್ದರಿಂದ ಅದಕ್ಕೆ ಸಾಸಿಯಾದ ವಿಷಯವನ್ನು ನೀವು ಪ್ರಕಟಿಸಬಹುದೆಂದು ಧಾರಾಳವಾಗಿ ಹೇಳುತ್ತೇನೆ" [34-4]

"ಶೀತವಾಯುವಿನಿಂದ ನನ್ನ ಮಗು ನರಳಿತು ಇದನ್ನು ಸೇವಿಸಿದಾರಭ್ಯ ಅದಕ್ಕೆ ಆರೋಗ್ಯವಾಯಿತು. ಅದಕ್ಕೆ ಬಲ ಉಂಟಾಯಿತು. ಅದು ಬೆಳೆಯಲು ಪರಿಹರವಾಗಿ, ಈಗ ಮಗುವನ್ನು ನೋಡಿದರೆ ಚಿತ್ರಕ್ಕೆ ಯೋಗ್ಯವಾದ ಮಗುವಿನಂತೆ ಸುಖವಾಗಿದೆ"

ಅಜೀರ್ಣವಿದ್ದ ಮಗು

ಮಿಸೆಸ್ ಜೆ ಎಂ ಟೆಸ್ಕ್, ಡನ್ಕಿರ್ಕ್ ಮಿಚಿಗನ್, ಯು ಎಸ್ ಎ, ಈಕೆ ಬರೆಯುವುದು :—

"ಮೂರು ವರುಷದ ನನ್ನ ಹೆಣ್ಣುಮಗುವಿಗೆ ಶೀತದಿಂದ ಕೆಟ್ಟ ಕೆಮ್ಮಲು ಹುಟ್ಟಿ ಅದರ ಮೇಲೆ ಜ್ವರವೂ ಬಂದು, ರಾತ್ರಿ ಹೊತ್ತು ವಿಶೇಷವಾಗಿ ಬಹಳ ಸಂಕಟ ಪಡುತ್ತಿದ್ದಳು. ನಿದ್ರೆ ಮಾಡುತ್ತಿದ್ದ ಹಾಗೆ, ಎಚ್ಚರವಾಗಿ ಕೆಮ್ಮುವುದಕ್ಕಾರಂಭಿಸಿದರೆ ಅದರಲ್ಲೇ ಮಗು ಎಲ್ಲಿ ಪ್ರಾಣ ಬಿಡುವುದೋ ಎನ್ನುವಷ್ಟು ಕಷ್ಟಪಡುತ್ತಿತ್ತು. ನಾವು ಕೊಟ್ಟ ಯಾವ ಔಷಧದಿಂದಲೂ ಮಗುವಿಗೆ ವಾಸಿಯಾಗಲಿಲ್ಲ. ಆಗ ನಾನು ಡಾ|| ಹಾರ್ಟ್‌ಮನ್‌ರ 'ಜೀವಮಾನದಲ್ಲಿ ಬರುವ ರೋಗಗಳು' ಎಂಬ ಪುಸ್ತಕವನ್ನು ನೋಡಿ ತೋಚಿದಂತೆ ಕೇಳಿಕಳುಹಿಸಿದೆನು ಪುಸ್ತಕ ಬಂದಿತು ಆಗಲೇ ಪೆರೂನಾವನ್ನು ಮಗುವಿಗೆ ಕೊಡಲಾರಂಭಿಸಿದೆನು. ಒಂದೇ ಬಾಟ್ಲು ಔಷಧವನ್ನು ಕೊಟ್ಟೆನು ಇದರಿಂದ ಮಗುವು ಸಂಪೂರ್ಣಗುಣವಾಗಿದೆ

"ಈ ಮಗುವಿಗೆ ಹುಟ್ಟಿದಾರಭ್ಯ ಅಜೀರ್ಣ ರೋಗವಿತ್ತು ಆದರೆ ಪೆರೂನಾ ತೆಗೆದುಕೊಳ್ಳುತ್ತಾ ಬಂದಾರಭ್ಯ ಯಾವ ತರಹ ಆಹಾರವನ್ನು ತಿಂದರೂ ಅದಕ್ಕೆ ಅಜೀರ್ಣವಾಗುವುದಿಲ್ಲ ಈಗ ಈ ಮಗು ಚೆನ್ನಾಗಿ ಆರೋಗ್ಯವಾಗಿದೆ ನನ್ನ ಸ್ನೇಹಿತರು ನನ್ನ ಮಗು ಬಹಳ ಚೆನ್ನಾಗಿದೆ ಎಂದು ಹೇಳಿದರೆ ಅದೆಲ್ಲಾ ಪೆರೂನಾದಿಂದ ಆದದ್ದು ಎಂದು ನಾನು ಅವರಿಗೆ ತಿಳಿಸುತ್ತೇನೆ ಕೆಮ್ಮಲಿಗೂ, ಅಜೀರ್ಣಕ್ಕೂ ಪೆರೂನಾ ಬಿಟ್ಟರೆ ಇನ್ನಾವುದೂ ಪ್ರಯೋಜನಕರವಾದದ್ದಲ್ಲವೆಂದು ನನಗೆ ತೋರುತ್ತದೆ. ಮತ್ತು ಈ ರೋಗಗಳನ್ನು ಅನುಭವಿಸುವವರೆಲ್ಲಾ ಪೆರೂನಾವನ್ನೇ ಸೇವಿಸುವಂತೆ ಶಿಫಾರಸು ಮಾಡುತ್ತೇನೆ"

ಮಗುವಿಗೆ ಪೆರೂನಾ ಮಾಡಿದ್ದು.

ಮಿಸೆಸ್ ಫ್ರಿಟ್ಸ್‌ರೂಫ್, ಪಿಂಕ್ನಿವಿಲ್ಲೆ, ಇಲ್ಲಿನಾಯಸ್, ಯು ಎಸ್ ಎ, ಈಕೆ ಬರೆಯುವುದು :—

"ನಾನು ನಿಜವಾಗಿ ಆರೋಗ್ಯವಾಗಿದ್ದೇನೆ ಈ ಮಾತು ಹೇಳುವುದರಲ್ಲಿ ನನಗೆ ತುಂಬಾ ಸಂತೋಷ. ನನ್ನ ಒಂದು ಮಗು ಐದು ತಿಂಗಳು ಜ್ವರವನ್ನು ಅನುಭವಿಸಿತು ಏನು ಮಾಡಿದರೂ ವಾಸಿಯಾಗಲಿಲ್ಲ. ಅದು ಮಲೇರಿಯಾ ಎಂಬ ಶೀತಜ್ವರವೆಂದು ಡಾಕ್ಟರು ಹೇಳಿದರು ಆದರೆ ಅವರು ಕೊಟ್ಟ ಔಷಧದಿಂದ ಸ್ವಲ್ಪವೂ ಪ್ರಯೋಜನವಾಗಲಿಲ್ಲ.

"ಆಗ ನಾನು ಪೆರೂನಾ ಕೊಟ್ಟೆನು ಕೂಡಲೇ ಅದು ಮಗುವಿಗೆ ಗುಣಕೊಟ್ಟಿತು ಇದುವರೆಗೆ ಆ ಮಗು ಜ್ವರವನ್ನು ಕಾಣದು

"ನಾನು ಡಾ|| ಹಾರ್ಟ್‌ಮನ್‌ರಿಗೆ ಕಾಗದಾ ಬರೆದಾಗ ನಾನು ಮನೇ ಕೆಲಸಗಳನ್ನು ಮಾಡಲಾರದಷ್ಟು ಹೀನಸ್ಥಿತಿಯಲ್ಲಿದ್ದೆನು ಈಗ ನಾನು ಸಂಪೂರ್ಣವಾಗಿ ಆರೋಗ್ಯವುಳ್ಳವಳಾಗಿರುತ್ತೇನೆ"

ಅವರ ಹುಡುಗನ ಪ್ರಾಣವನ್ನು ಕಾಪಾಡಿತು.

ಮಿಸೆಸ್ ಆರ್ನೆಸ್ಟ್ ಹಾಕ್ಸ್, ೧೯೩೧ ಎಡಿಸನ್ ಬೀದಿ, ಡೆಸ್‌ಮಾಯಿನ್ಸ್, ಅಯೋವಾ, ಯು ಎಸ್ ಎ ಈಕೆ ಬರೆಯುವುದು :—

"ಎರಡು ವರುಷಗಳ ಹಿಂದೆ [illegible] ಎಂಬ ನನ್ನ ಚಿಕ್ಕ ಹುಡುಗನಿಗೆ ಕೆಟ್ಟ ಜ್ವರ ಬಂದು ಬಿದ್ದುಕೊಂಡನು. ಅದರ ಜತೆಗೆ [illegible] ಬೇಗ್ಗನೆ ಮೈಮೇಲೆ ಕಾಣಿಸಿಕೊಳ್ಳದೆ ಅವನ ಶ್ವಾಸಕೋಶಗಳಿಗೂ ಹೊಟ್ಟೆಗೂ ವ್ಯಾಪಿಸಿದವು ಕೆಲವು ವಾರಗಳ ವರಕ್ಕೆ ನಾವು ಪ್ರತಿ ಗಂಟೆಯಲ್ಲೂ ಬದುಕಲಾರನೆಂದು ನಿರೀಕ್ಷಿಸಿ, ಅವನ ಬಳಿಯಲ್ಲೇ ಕಾದಿದ್ದೆವು ಕಡೆಗೆ ಅವನಿಗೆ ಸ್ವಲ್ಪ ವಾಸಿಯಾಗಿ ಎದ್ದು ಕೆಲವು [illegible] ಆಗ ಅವನಿಗೆ ಕೆಮ್ಮು [illegible] ಮಾಡಿದರು [illegible] ಯಾವ ಔಷಧದಿಂದಲೂ ಗುಣವಾಗಲಿಲ್ಲ ಅವನ ಶ್ವಾಸಕೋಶವನ್ನು ಬಹಳ ಕೆಡಿಸಿತು. ಅವನಿಗೆ ಕ್ಷಯರೋಗವೆಂದು ಎಲ್ಲರೂ ಊಹಿಸಿದರು. ಆಗ ನಾವು ಇತರ ಔಷಧಗಳನ್ನು ಬಿಟ್ಟು ಪೆರೂನಾವನ್ನು ಕೊಟ್ಟು ನೋಡೋಣವೆಂದು ಒಂದು ಬಾಟ್ಲಿಯನ್ನು ಕೊಂಡು ತಂದು, ಅದರಲ್ಲಿ ಹೇಳಿರುವ ಕ್ರಮದಂತೆ ಕೊಡುತ್ತಾ ಬಂದೆವು ಎರಡು ಬಾಟ್ಲು ಪೆರೂನಾ ಸೇವಿಸಿದ ಮೇಲೆ ಅವನಿಗೆ ಚೆನ್ನಾಗಿ ವಾಸಿಯಾಯಿತು ಅದಿಲ್ಲದಿದ್ದರೆ ಅವನು ಒಂದು ದಿನವಾದರೂ ಶಾಲೆಯನ್ನು ಕಾಣನು ಆರೋಗ್ಯವಾಗಿಯೂ ಸಂತೋಷದಿಂದಲೂ ಬೆಳೆಯುತ್ತಿದ್ದಾನೆ ನಾವು ಸರ್ವದಾ ಪೆರೂನಾವನ್ನು ಹೊಗಳುತ್ತೇವೆ ಏಕೆಂದರೆ ಅದು ನಮ್ಮ ಹುಡುಗನ ಪ್ರಾಣವನ್ನು ಉಳಿಸಿತು

ಕಾಯಿಲೆ ಬೀಳುವ ಮಕ್ಕಳು.

ಮಿಸೆಸ್ ಷಾಫರ್, ೫೯೦ ಪ್ರೈರೀ ಅವೆನ್ಯೂ, ಸೇಂಟ್‌ಲೂಯಿಸ್, ಮಿಸ್ಸೂರಿ, ಯು ಎಸ್ ಎ ಈಕೆ ಬರೆಯುವುದು :—

"ಹೋದ ವರುಷ ಪ್ರಾರಂಭದಲ್ಲಿ ನನ್ನ ಸಣ್ಣ ವರ್ಷದ ಮಗಳು ಅಲಿಸ್ ವಿಷಯವನ್ನು ನಿಮಗೆ ಬರೆದು ನಿಮ್ಮ ಅಭಿಪ್ರಾಯವನ್ನು ಕೇಳಿದೆನು ಅವಳು ಹುಟ್ಟಿದಾರಭ್ಯ ಕಾಯಿಲೆ ಬೀಳುತ್ತಾ ಬಹಳ ಕೃಶವಾಗಿದ್ದಳು. ಅವಳಿಗೆ ಹಲ್ಲುಹುಟ್ಟುವುದು, [illegible] ನಾನು [illegible] ಆರೋಗ್ಯವಾಯಿತು, ಶಕ್ತಿ ಕೂಡಿಕೊಂಡಿತು ಪೆರೂನಾ ಬಳಕೆ [illegible] ಇಂದಿನ ಅದ್ಭುತ [illegible] ಯಾವಾಗಲೂ [illegible]

"ನಾನು [illegible] ಪೆರೂನಾ ಸೇವಿಸಲಾರಂಭಿಸಿ [illegible] ಹಿತದಿಂದ [illegible] ಔಷಧದ [illegible] ಆರೋಗ್ಯವನ್ನು ಕೊಟ್ಟಿದೆ ನನಗೆ ಇನ್ನಾವ ಔಷಧದ ಮೇಲೂ ಅಭಿಮಾನವಿಲ್ಲ

"ಪೆರೂನಾ ನನ್ನ ಎಳೇ ಮಗುವನ್ನು ಬದುಕಿಸಿತು ಅದಕ್ಕೆ ಚಳಿಯೂ ಜ್ವರವೂ ಬರುತ್ತಿತ್ತು ಈಗ ಆ ಮಗು ದೊಡ್ಡದಾಗಿ ಮೈತುಂಬಿಕೊಂಡು ಆರೋಗ್ಯವಾಗಿದೆ ಅವನಿಗೆ ಹುಟ್ಟಿದಾರಭ್ಯ ಪೆರೂನಾವನ್ನು ಆಗಾಗ್ಗೆ ಕೊಡುತ್ತಿದ್ದೇನೆ ಆದ್ದರಿಂದಲೇ ಅವನು ಇಷ್ಟು ಆರೋಗ್ಯವಾಗಿದ್ದಾನೆಂದು ನನಗೆ ತೋರುವುದು ಪೆರೂನಾವನ್ನು ಎಷ್ಟು ಹೊಗಳಿದರೂ ತೀರದು ಅದನ್ನು ಉಪಯೋಗಿಸುವುದಕ್ಕೆ ಪ್ರಾರಂಭಿಸಿದಂದಿನಿಂದ ಒಬ್ಬ ಡಾಕ್ಟರೂ ನಮ್ಮ ಮನೆಗೆ ಬಂದಿಲ್ಲ ಅದು ಬಹಳವಾಗಿ ಕೊಂಡಾಡತಕ್ಕದ್ದಾಗಿದೆ"

ಮಗು ಈಗ ಆರೋಗ್ಯವಾಗಿದೆ.

ಮಿಸೆಸ್ ಜೆ ಡಬ್ಲ್ಯು ಹರ್ಡ್ ಆಫ್ ಹಾಕ್, ಟೆಕ್ಸಾಸ್, ಯು ಎಸ್ ಎ, ಈಕೆ ತನ್ನ ಕೈಮಗು ರಾಬಿ ವಿಷಯದಲ್ಲಿ ಡಾ|| ಹಾರ್ಟ್‌ಮನ್‌ರಿಗೆ ಬರೆಯುವುದು :—

"ಇದೇ ದಿನವರೆಗೆ ನನ್ನ ಮಗುವಿಗೆ ಎರಡು ವರ್ಷ ತುಂಬಿತು ಈ ಮಗುವಿಗೆ ಮೂತ್ರಕೋಶವು ಕೆಟ್ಟುಹೋಗಿತ್ತು. ಮಗುವು ಬರೀ ಮೂಳೆ ಚಕ್ಕಳವಾಗಿದ್ದಳು ವಾಸಿಯಾದೀತೆಂದು ನಾವ್ಯಾರೂ ಯೋಚಿಸಿರಲಿಲ್ಲ ಈ ಮಗು ಮೂರು ನಾಲ್ಕು ತಿಂಗಳ ಕಾಲ ಕಾಯಿಲೆ ಬಿದ್ದಿತ್ತು ಒಂದು ಬಾಟ್ಲು ಪೆರೂನಾದಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಕೊಡುವಷ್ಟರಲ್ಲೇ ಆ ಮಗುವಿಗೆ ಆರೋಗ್ಯವಾಗಿದೆ

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದರೆ ಕಳುಹಿಸುತ್ತೇವೆ

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇಒಂದು ಸ್ಥಳವ್ಯಾವುದೆಂದರೆ:—
ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

4—4—1908 ರಿಂದ 10—4—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	5	1	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	*	*	0	1
ಮೈಸೂರು ,,	9	7	4	2
ಕೋಲಾರ್ ,,	14	14	0	0
ಕೋಲಾರ್ ಚಿನ್ನದ ಗಣಿಗಳು	2	5	0	0
ತುಮಕೂರು ಡಿಸ್ಟ್ರಿಕ್ಟು	3	2	0	1
ಹಾಸನ ,,	11	7	65	39
ಚಿತ್ರದುರ್ಗ ,,	0	0	0	0
ಕಡೂರ್ ,,	3	8	0	0
ಶಿವಮೊಗ್ಗ ,,	*	*	*	*
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	44	38	68	43

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಚೈತ್ರ ಬಹುಳ ಸಪ್ತಮಿ ಗುರುವಾರದಿಂದ ಚೈತ್ರ ಬಹುಳ ತ್ರಯೋದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಏಪ್ರಿಲ್

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ	ಚಂದ್ರನ ವಯಸ್ಸು
23	ಗುರು *	ಸಪ್ತಮಿ	17 1	ಉತ್ತರಾ	40 52	12
24	ಶುಕ್ರ †	ಅಷ್ಟಮಿ	11 11	ಪೂ	36 12	13
25	ಶನಿವಾರ ●	ನವಮಿ	5 9	ಧ	54 38	14
26	ರವಿ ‡	ದಶಮಿ	53 30	ಶ	28 48	15
27	ಸೋಮ	ಏಕಾದಶಿ	48 9	ಪೂಭಾ	25 15	16
28	ಮಂಗಳ ,	ದ್ವಾದಶಿ	43 33	ಉಭಾ	22-10	17
29	ಬುಧ ,	ತ್ರಯೋ	93 50	ರೇ	19 58	18

* ಅಷ್ಟಮಿ ತಿಥಿ † ಸಿದ್ಧಯೋಗ. ‡ ಅವಮ, ದಗ್ಧಯೋಗ ‡ ಮಹಾ ವ್ಯತೀಪಾತ, [illegible] ಏಕಾದಶಿ ಮೇಷ ಸಂಕ್ರಮಣ [illegible] ಶ್ರೀ [illegible] ಅಮೃತಯೋಗ. ಉತ್ಪತ್ತಿಯೋಗ [illegible] ಶ್ರೀರಂಗದ ರಂಗನಾಥರಥ

ಪೇಟೆ ಧಾರಣೆ

ದಿನಸಿ	ಮೈಸೂರು,	ಬೆಂಗಳೂರು
ಕನ್ನೇ ಅಕ್ಕಿ ಪಲ್ಲ ೧ಕ್ಕೆ ರೂ.	೧೪-೦-೦	೧[illegible]
ಕಂಬಳಿ ಅಕ್ಕಿ [illegible]	೧೩-೮-೦	೧[illegible]
[illegible]	೧೩-೮-೦	೧೪-೦-೦
ಜೀರಾ ಸಣ್ಣ ಅಕ್ಕಿ	೧೬-೪-೦	೧[illegible]
ಗಿಡ್ಡಕ್ಕಿ ಅವಲು	೧೬-೦-೦	[illegible]
,, ಮುರಿ	೧೫-೮-೦	೧೦-[illegible]
ತೊಗರಿ ಬೇಳೆ ಪಲ್ಲ ೧ಕ್ಕೆ	೧೮-೮-೦	[illegible]
[illegible]	೧೪-೮-೦	[illegible]
[illegible]	[illegible]	೬-೦-೦
ಕಾಳು	೬-೪-೦	೬-[illegible]
ಜೋಳ	೭-೦-೦	೮-೦-೦
ಹಲಸಂದೆ ಪಲ್ಲ ೧ಕ್ಕೆ	೧೦-೮-೦	೧೧-೦-೦
ಬಿಳೀ ಅವರೆ	೮-೦-೦	೮-೦-೦
ಹೆಸರು	೧೧-೫-೦	೧೨-೦-೦
ಉದ್ದು	೧೪-೮-೦	೧೨-೮-೦
ಕಡಲೆ	೧೨-೦-೦	೧೬-೮-೦
ಎಳ್ಳು ಸೇರು ೧ಕ್ಕೆ	೨೪-೮-೦	೨೫-೦-೦
ಹುರುಳಿ	೬-೮-೦	೭-೦-೦
ಹರಳು ಪಲ್ಲ ೧ಕ್ಕೆ	೧೧-೦-೦	೧[illegible]
ಸೀಗೆಕಾಯಿ ಮಣ ೧ಕ್ಕೆ	೧-೮-೦	೧-[illegible]
ಮೆಣಸಿನಕಾಯಿ	೨-೮-೦	೩-೦-೦
ಧನಿಯ	೨-೪-೦	೨-೧೨-೦
ಬೆಲ್ಲ ಪೆಟ್ಟು ೧ಕ್ಕೆ	೫-೦-೦	ಮ ೧ ೬-[illegible]
ಬಳ್ಳೆಣ್ಣೆ ಮಣ ೧ಕ್ಕೆ	೬-೦-೦	೬ ೪-[illegible]
ಹರಳೆಣ್ಣೆ	೪-೧೨-೦	೪ ೩ ೦
ಕೊಬ್ಬರಿ ಪಲ್ಲ ೧ಕ್ಕೆ	೫-೮-೦	೬ ೧೨ ೦
ಉಪ್ಪು	೪-೮-೦	೫ ೦ ೦
ಹುಣಸೇ ಹಣ್ಣು	೧-೪-೦	೧ ೦ ೦
,, ಹಳೇದು	೧-೦	೧ ೪ ೦
ತುಪ್ಪ ಮಣ ೧ಕ್ಕೆ	೧೪-೮-೦	೧೫ ೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೪ ೧೫-೦	೪ ೦ ೦
ತೆಂಗಿನಕಾಯಿ ೧೦೦ಕ್ಕೆ	೬ ೮-೦	೬ ೪ ೦
ಅಡಕೆ ಕಾಯಿ ಮಣ ೧ಕ್ಕೆ	೧-೦-೦	೧-೦-೦
ಅಂಟುವಾಳದ ಕಾಯಿ ಮಣ ೧ಕ್ಕೆ	೦-೧೨-೦	೦-೧೪-೦
ಚಿನ್ನ (ಪವನ್) ತೊಲ	೧೫-೬-೦	೧೫ [illegible]
,, ,, ಪಸಿಮೆ	೧೫-೧೦-೦	೧೫-[illegible]
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೪ ೩ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೬೫-೦-೦	೬೬-೦-೦

Printed and Published by the Rev E W THOMPSON, M A, Proprietor and Manager, Wesleyan Mission Press, Mysore 23/4/1908

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೮ ನೇ ಇಸವಿ ಏಪ್ರೆಲ್ ತಾರೀಖು ೩೦ ನೇ ಗುರುವಾರ. ಸಂಚಿಕೆ ೪೮

AMRUTANJAN DEPOT, 16 OAK-LANE, BOMBAY. [17-10]

ಗುಣ ಕಂಡುಬರುವದಿಲ್ಲವಾದರೆ ಹಣ ವರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ :-ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಳವು ಮತ್ತು ಘಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ. ಡಾಕ್ಟರುಗಳ ಅಭಿಪ್ರಾಯಗಳು:—

ಪಿ. ಆರ್. ಪಿಲ್ಗ್ರೀಗಾಂಕರ್, ಎಲ್ ಆರ್. ಸಿ. ಪಿ., ಎಂಡ್ ಎಸ್. ಎಲ್ ಎಮ್ ಮುಂಬಯಿ, ಇವರು ಬರೆಯುವದೇನಂದರೆ:—ತಲೆನೋವಿಗೆ ಮತ್ತು ಎಲ್ಲಾ ತರದ ನೋವಿಗೆ ಅಮೃತಾಂಜನವು ಅತಿ ಉತ್ತಮವಾದದ್ದು.

ಮ. ದಿನಾನಾಥ ಬಿ. ನಾಯರ್ ಡಾಂಡೇಕರ್, ಎಲ್ ಎಮ್., ಎಂಡ್ ಎಸ್., ಎಂಡ್ ಜೆ ಪಿ., ಮುಂಬಯಿ ವಾತದ ನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು.

ಮ. ದೇಸಾಯಿ ನರೋತ್ತಮ, ಹೈ ಕೋರ್ಟು ವಕೀಲ, ಮುಂಬಯಿ. ಇವರ ಅಭಿಪ್ರಾಯ: ತಲೆನೋವಿಗೂ ಮತ್ತು ಎಲ್ಲಾ ತರದ ನೋವಿಗೂ ಅಮೃತಾಂಜನವು ಉತ್ತಮವಾದದ್ದು.

ಮ ಇರ್ ಡಿಸೋಜಾ, ಮನೇಜರ್, ಕಾಫಿ ಎಸ್ಟೇಟು, ಮರಕಾರಾ, ಕೊಡಗು, ಇವರ ಅಭಿಪ್ರಾಯ ನಿಮ್ಮಲ್ಲಿನ ಅಮೃತಾಂಜನವು ಶೀತ, ಕಫ ಮತ್ತು ನೋವಿಗೂ ಸಹ ಉತ್ತಮವಾದದ್ದು. ನನ್ನ ಕೂಲಿಯ ಜನರಿಗೆ ಬಹಳವಾಗಿ ಗುಣಬಂದಿರುತ್ತದೆ.

ಮ॥ ರಾಜಾರಾಮ ತುಕಾರಾಮ, ವೈಸ್ ಪ್ರೆಸಿಡೆಂಟ್, ಬೊಂಬಾಯಿ ಮುನಿಸಿಪಾಲಿಟಿ, ಇವರ ಅಭಿಪ್ರಾಯ:—ನಿಮ್ಮ ಅಮೃತಾಂಜನವು ತಲೆನೋವಿಗೂ, ವಾತಕ್ಕೂ ಅತ್ಯುತ್ತಮವಾದದ್ದು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ. ಬಾಟ್ಲಿ ಒಂದಕ್ಕೆ ಕಿಮ್ಮತ್ತು ೦-೮-೦. ಪೋಸ್ಟು ಖರ್ಚು ೦ ೩ ೦. ಅಥವಾ ಮುಂಬಾಯಿಯಲ್ಲಿಯ ವಿಲಿಯಂ ಮತ್ತು ಕಂಪನಿಯಿಂದ ಸೀದಾ ತರಿಸಿಕೊಳ್ಳಬಹುದು.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು ವಿಳಾಸ: ಅಮೃತಾಂಜನ ಡಿಪೋ, ೧೬ ಓಕ್ ಲೇನು, ಮುಂಬಯಿ. ಟೆಲಿಗ್ರಾಫ್ ಅಡ್ರೆಸ್ಸು. "ಅಮೃತಾಂಜನ" ಮುಂಬಯಿ. ಏಜಂಟರು ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು —ಮೂರು ಸಾರಿ ಹಾಗಿಸುವವರೊಳಗೆ ಗಜಕರ್ಣ, ಕಜ್ಜಿ ವಗೈರೆ ನಾಶವಾಗುವದು. ಇದು ಉರಿಯುವದಿಲ್ಲ. ಡಬ್ಬಿ ಒಂದಕ್ಕೆ ಕಿಮ್ಮತ್ತು ೦-೬-೦.

ಪಾಳ್ಯದ ವೆಂಕಟಾಚಲ ಪಂಡಿತರ

16 11

೧. ಶ್ರೀಕರಾಂಬರ ಮಾತ್ರೆಯು:—ಈ ಮಾತ್ರೆಗಳು ಬಹಳ ಸುವಾಸನೆಯಾಗಿಯೂ ಬಾಯಿಯಲ್ಲಿ ತಾನಾಗಿ ಕರಗುವುದಾಗಿಯೂ ಒಳ್ಳೇ ಗುಣವುಳ್ಳದಾಗಿಯೂ ಇರುತ್ತವೆ.

ತಾಂಬೂಲದೊಡನೆಯಾಗಲಿ, ಹಾಗೆಯೆ ಅಗಲಿ ಎಷ್ಟು ತಿಂದರೂ ಉಷ್ಣ ಮಾಡುವುದಿಲ್ಲ. ಹಲ್ಲು ನೋವು, ಬಾಯಿವಾಸನೆ, ಮಲಬದ್ಧ, ಕೆಮ್ಮು, ನೆಗಡಿ, ನಿಶ್ಶಕ್ತಿ, ಹೊಟ್ಟೆಯುರಿ, ಅರೋಚಕ, ಅಗ್ನಿಮಾಂದ್ಯ, ಇವುಗಳನ್ನು ಹೋಗಲಾಡಿಸಿ ಒಳ್ಳೇ ಹಸಿವನ್ನೂ ಮನೋಲ್ಲಾಸವನ್ನೂ ಎಲ್ಲಾ ನರಗಳಿಗೂ ಬಲವನ್ನೂ ಉಂಟುಮಾಡುತ್ತದೆ. ಶಿಶುಗಳೂ ಗರ್ಭಿಣಿಯರೂ ನಿರಾಕ್ಷೇಪವಾಗಿ ಸೇವಿಸಬಹುದು. ಬೆಲೆ ೨೦೦ ಮಾತ್ರೆಯುಳ್ಳ ಕುಪ್ಪಿ ೧ಕ್ಕೆ ೪ ಆಣೆ. ೫ನು ಕುಪ್ಪಿಗಳಿಗೆ ಒಂದು ಹೆಚ್ಚು. ೧೮ ಕುಪ್ಪಿ ವರೆಗೂ ಪೋಸ್ಟೇಜು ೪ ಆಣಾ.

೨. ಲೋಕಾಮಯಹರ ಕಸ್ತೂರಿ ಮಾತ್ರೆ, ಅನುಪಾನ ಪತ್ರ ಸಹಿತ, ಕುಪ್ಪಿ ೧ಕ್ಕೆ ೪ ಆಣೆ.

ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹಾಸನದ ಟೋಪಿ ಬೇಕೇ?

117-27

ನಂಬರ್ ೧ ಹಾಸನ ಟೋಪಿ ದರ್ಜೆ ೧ಕ್ಕೆ ರೂ ೧೩—೨—೦ ಸಾದ ಕೆಂಪು ಕಪ್ಪು ಬಿಳಿ, ಕಾವಿ ನೀಲಿ ಟೋಪಿಗಳು ೧ಕ್ಕೆ ರೂ ೧—೬—೦, ೧—೪—೦ ಚುಕ್ಕೆಯುಳ್ಳ ಟೋಪಿಗಳು ೧ಕ್ಕೆ ರೂ. ೧—೪—೦, ೧—೨—೦ ಮೈಸೂರು ಟೋಪಿ ದರ್ಜೆ ೧ಕ್ಕೆ ರೂ. ೮—೨—೦ ಸಾದಾ ಟೋಪಿಗಳು ದರ್ಜೆಕ್ಕೆ ರೂ ೩—೬—೦ ಸಾದಾ Chaapir ದರ್ಜೆ ೧ಕ್ಕೆ ರೂ ೬—೬—೦ ೧೦ ಟೋಪಿ ಆಗುವ ಉಲ್ ಥಾನಕ್ಕೆ ರೂ. ೩—೮—೦. ನಮ್ಮ ವಿಳಾಸ:—

ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ಇದನ್ನು ನೋಡಿದರೆ ಬಹು ಆಶ್ಚರ್ಯ ಪಡುವಿರಿ.

38-2

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು ೧ ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು ಭಾರಿ ಪುಸ್ತಕ ಭಾಷೆಯು ಬಹು ಸರಳವಾಗಿದೆ ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ ವಿ ಪಿ. ಮೂಲಕ ರೂ. ೨—೩—೦ ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ನೋಡಿ.

ನಮ್ಮ ವಿಳಾಸ:— ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಕಾರ್ಡು ಸೈಜು ೪¼ × ೩¼.

ಫೋಟೋ ತೆಗೆಯುವ

ಫೋಟೋ ಕ್ಯಾಮೆರಾ.

84-87

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮೆರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿ ಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ :—

ಛೋಟಾಲಾಲ ಭಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ ಕಾಲಬಾದೇವಿ, ಮುಂಬಯಿ.

ಜ್ವ ರ ಹ ರಿ.

18-13



ಇದು ಸಾಧಾರಣ ಜ್ವರ, ಚಳೀಜ್ವರ, ಮೂರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ ; ೧—೮ ರೂ., ರೂ. ೨—೧೨ ಆ.; ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

❋❋❋❋❋❋❋❋❋

ಓ ಮಂ ಕರ್ಪೂ ರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ಶಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ರಿಯ ಓಮಂ ಕರ್ಪೂರವನ್ನು ನಾನು ನನ್ನ ಕಾಬೇಮರದ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಸಿಪ್ರಿಯಾನ ಗ್ರೇಟ್ ಇಂಡಿಯಾ ಔಷಧದ ಕಂಪನಿ,

ನೆಕೆಂಡ್ ಬೀಚ್ ಲೈನ್, ಮದರಾಸ್.

ಮಹಾ ಬಾಧಾಪಹಾರಿಣಿಯು.

58-49

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಯಕ್ಷಿಣೀ ಲೇಪನವು ಸಕಲ ವಿಧವಾದ ಬಾಧೆಗಳನ್ನು ಪರಿಹರಿಪತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಸ್ಪಷ್ಟ ಹೇಳುತ್ತಿದ್ದಾರೆ, ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಕಳತ, ಗಂಟ್ಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಉಳುಕಿದ ನೋವು, ಹಲ್ಲುನೋವು. ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಡಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ ಶೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕ್ರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ವೇದವಲ್ಲಿಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಹೊಸಪಂಡಿತ ಭೀಮರಾಯರು ರಚಿಸಿರುವ

ವೈದ್ಯಸಂಗ್ರಹ.

36 3

ನಮ್ಮ ತಂದೆ ಹೊಸಪಂಡಿತ ಭೀಮರಾಯರು ಲೋಕೋಪಕಾರಾರ್ಥವಾಗಿ ಈ ವೈದ್ಯಸಂಗ್ರಹವನ್ನು ರಚಿಸಿ, ೨೪ ವರ್ಷಗಳ ಹಿಂದೆ ಮೈಸೂರು ಗೌರ್ನಮೆಂಟ್ ಮುದ್ರಾಕ್ಷರಶಾಲೆಯಲ್ಲಿ ಉತ್ತಮ ಕಾಗದ, ಸ್ಪಷ್ಟಾಕ್ಷರಗಳಿಂದ ಮುದ್ರಿಸಿರುತ್ತಾರೆ. ಕೆಲವು ಪ್ರತಿಗಳು ಮಾತ್ರ ಉಳಿದಿರುವ ಈ ಗ್ರಂಥದಲ್ಲಿ ನಮ್ಮ ತಂದೆ ವಿಜ್ಞಾಪಿಸಿರುವ ಕೆಳಗೆ ಕಂಡ ಸಂಗತಿಯಿಂದ ಗ್ರಂಥವಿಚಾರವೆಲ್ಲಾ ಆದ್ಯಂತವಾಗಿ ವಾಚಕರಿಗೆ ವೇದ್ಯವಾಗುವದು :—" ವೈದ್ಯಸಂಗ್ರಹವೆಂಬ ಗ್ರಂಥವನ್ನು ಮುಂದೆ ವಿವರಿಸುತ್ತೇನೆ. ನನ್ನಲ್ಲಿ ವೈದ್ಯ ವಿದ್ಯಾಭ್ಯಾಸ ಮಾಡಿ, ಶಿಷ್ಯನಾದ ಕಾಮಶಾಸ್ತ್ರಿಯು ನನ್ನ ವಿಷಯವಾಗಿ ಬರೆದಿರುವ ಪುಸ್ತಕವನ್ನೂ ಅನಂತರ ನಾನು ಉತ್ತರ ದೇಶಕ್ಕೆ ಸಂಚಾರಹೋಗಿರುವಾಗ ಅನೇಕ ಸಂಸ್ಥಾನಗಳಲ್ಲಿ ಸಭೆಯಂ ಮಾಡಿ ಅಲ್ಲಿ ವಿದ್ವತ್ಪರೀಕ್ಷೆಯಂ ಮಾಡಿ ಕೊಟ್ಟಿರುವ ಮರ್ಯಾದೆಗಳನ್ನು ಇದರ ಕೆಳಗೆ ಸೇರಿಸಿ, ಲೋಕೋಪಕಾರಾರ್ಥವಾಗಿ ಇದರಲ್ಲಿ ಶಾರೀರಲಕ್ಷಣ, ದಿನಚರ್ಯ, ಋತುಚರ್ಯ, ನಾಡಿಯಿಂದ ಭೂತಭವಿಷ್ಯದ್ವರ್ತಮಾನ, ರೋಗಪರೀಕ್ಷಾ, ಔಷಧ ಮಾಡುವ ಕ್ರಮ, ಸ್ವಸ್ಥಾರಿಷ್ಟ, ರೋಗಾರಿಷ್ಟ, ನಾಡಿಯಿಂದ ಅರಿಷ್ಟ, ಸೂಚಕ, ಇವುಗಳನ್ನು ತಿಳಿದು, ಔಷಧಿ ಕೊಡುವ ಲಕ್ಷಣವೇ ಮೊದಲಾದ ಅನೇಕ ವಿಷಯಗಳನ್ನು ಲಲಿತವಾದ ಕನ್ನಡದಲ್ಲಿ ವಿವರಿಸಿದೇನೆ" ಎಂದು ಬರೆದಿರುತ್ತಾರೆ ಈ ಅಪೂರ್ವ ಗ್ರಂಥವನ್ನು ಪಡೆಯಲಪೇಕ್ಷಿಸತಕ್ಕವರು ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ಮೊದಲು ಇದ್ದ ಕ್ರಯ ೩ ರೂಪಾಯಿ, ಈಗ ಕ್ರಯ ರೂ. ೨-೮-೦ ೧೨ ಪ್ರತಿ ತರಿಸುವವರಿಗೆ ೧ ಪ್ರತಿ ಇನಾಮು ಈ ಪುಸ್ತಕದ ಕೊನೆಯಲ್ಲಿ ಕಂಡ ೨ನೆ ಭಾಗ ತಯಾರಾಗಲಿಲ್ಲ. ನನ್ನ ವಿಳಾಸ-

ಹೊಸಪಂಡಿತ ಶೇಷಗಿರಿರಾವ್, ಕಿಲ್ಲೆ, ಮೈಸೂರು.

☞ ವಿಕಟಪ್ರತಾಪವೆಂಬ ಮಾಸಪತ್ರಿಕೆಗೆ ಒಂದು ವರುಷ ಚಂದಾದಾರರಾಗುವವರಿಗೆ ಸ್ತ್ರೀಪಂಚಸಾಹಸವೆಂಬ ಐದು ಜನ ಯುವತಿಯರುಗಳ ವಿನೋದವಾದ ಕಥೆ ಪುಸ್ತಕವನ್ನು ಬಹುಮಾನವಾಗಿ ಕೊಡಲ್ಪಡುವದು. [41-1]

ವಿಕಟಪ್ರತಾಪ.

ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆ

ಪ್ರತಿ ತಿಂಗಳ ಮೊದಲನೆಯ ತಾರೀಖಿಗೆ ಪ್ರಕಟಿಸಲ್ಪಡುವುದು.

" ವಾಗ್ದಾನ :—ಅಧಮರಿಂದ ಉತ್ತಮರಿಗುಂಟಾಗುವ ತಾಪ, ಸಜ್ಜನರಲ್ಲಿ ವಿಪ್ರಲಾಪ, ಅನಾಥರ ವಿಲಾಪ, ಸೋಮಾರಿಗಳ ಪ್ರಲಾಪ, ರಸಿಕರ ಆಲಾಪ, ಮಾಸಿಸಿಗಳ ಕೋಪ, ಈ ಕಲಾಪಗಳ ಚಿತ್ರಗಳಿಂದೊಪ್ಪಿರುವುದು ನನ್ನ ವಿಕಟಪ್ರತಾಪ "

ವಾರ್ಷಿಕ ಚಂದಾ ಸ್ಥಳದವರಿಗೆ ೧—೧೨—೦

ಪರಸ್ಥಳದವರಿಗೆ (ಅಂಚೆಯ ವೆಚ್ಚ ಸೇರಿ) ೧—೦—೦

ಚಂದಾ ಹಣ ಮುಂಗಡವಾಗಿ ಬಂದ ಹೊರತು ಪತ್ರಿಕೆಯನ್ನು ಕಳುಹಿಸಲು ಆಗುವುದಿಲ್ಲ. ಅಥವಾ ವಿ. ಪಿ. ಮೂಲಕ ಪತ್ರಿಕೆಯನ್ನು ಕಳುಹಿಸುವಂತೆ ಕಾಗದ ಬರದರೆ ಅಗತ್ಯ ಕಳುಹಿಸಲಾಗುವುದು.

ಈ ವಿಕಟಪ್ರತಾಪ ಪತ್ರಿಕೆಯಲ್ಲಿ ಪ್ರತಿ ತಿಂಗಳಲ್ಲಿಯೂ ೩—೪ ಚಿತ್ರಗಳನ್ನೂ ಮತ್ತು ಹಾಸ್ಯ, ತಮಾಷೆ, ನಕಲಿ ಮೊದಲಾದ ಇವುಗಳನ್ನೂ ಪ್ರಕಟಿಸುತ್ತಿರುವೆವು. ಈ ಪತ್ರಿಕೆಯಲ್ಲಿ ಮೊದಲಿದ್ದುದಕ್ಕಿಂತ ಈಗ ಅನೇಕ ವಿಷಯಗಳನ್ನು ಬಹಳ ತಮಾಷೆಯಾಗಿ ಬರೆಯುತ್ತಿರುವೆವು

ಸೂಚನೆ :—ವಿಕಟಪ್ರತಾಪ ಪತ್ರಿಕೆಗೆ ಚಂದಾದಾರರನ್ನು ಕೂಡಿಸಿ ಕೊಡಲು ಪ್ರತಿಯೊಂದು ಡಿಸ್ಟ್ರಿಕ್ಟ್, ತಾಲ್ಲೂಕು, ಹೋಬಳಿಗಳಲ್ಲಿಯೂ ಏಜಂಟರುಗಳು ಬೇಕಾಗಿದೆ. ಏಜಂಟರುಗಳಿಗೆ ಬಹಳವಾದ ಕಮಿಷನ್ ಕೊಡಲ್ಪಡುವುದು. ಇಷ್ಟವಿರುವವರು ಕಾಗದ ಮುಖಾಂತ್ರ ಬರೆದು ತಿಳಿದುಕೊಳ್ಳಬಹುದು

☞ ನಮ್ಮ ವಿಳಾಸ:—ವಿಕಟಪ್ರತಾಪ ಆಫೀಸ್,

೮೩೩ ಅರಳೆ ಪೇಟೆ, ಬೆಂಗಳೂರು ಸಿಟಿ

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

1-18



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕರುಳುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧಿಯು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನು ಬಾಧೆಯನ್ನು ನಿವಾರಿಸಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ವಿಕ್ರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ಹೊಸವರ್ಷ ! ಹೊಸ ಮಾಸಪತ್ರಿಕೆ !

" ಕರ್ಣಾಟಕ ಚಂದ್ರಿಕೆ. "

31 4

ವಾರ್ಷಿಕ ಚಂದಾ ರೂ. ೧ ಅಂಚೆ ಕೂಲಿ ಸೇರಿ ರೂ. ೧-೪-೦

ಈ ಉತ್ಕೃಷ್ಟತರದ ಮಾಸಪತ್ರಿಕೆಯು ಪ್ರತಿ ಪೂರ್ಣಿಮೆಯೂ ಪ್ರಕಟಿಸಲ್ಪಡುವುದು. ಇದು ಬಾಲೆಯರಿಗೂ ಬಾಲಕರಿಗೂ ಮುಖ್ಯವಾಗಿ ಪ್ರತಿ ಒಬ್ಬ ಕುಟುಂಬಿಗಳಿಗೂ ಅತ್ಯಂತ ಶ್ರೇಯಸ್ಕರವಾದುದು. ಹೊಸಗನ್ನಡದ ನವೀನಕಾವ್ಯಗಳೂ, ನಾಟಕಗಳೂ, ಪ್ರಹಸನ, ನಕಲಿಗಳೂ ಕಾದಂಬರಿ (ಕಥೆ)ಗಳೂ ಸ್ತ್ರೀಯರಿಗೆ ಅತ್ಯವಶ್ಯಕವಾದ ಅನೇಕ ವಿಷಯಗಳೂ ಇದರಲ್ಲಿ ಅಡಕವಾಗಿವೆ ಆಯಾ ಗ್ರಂಥಗಳಿಗೆ ಬೇರೆ ಬೇರೆ ಪುಟಸಂಖ್ಯೆಯನ್ನು ಕೊಡುವುದರಿಂದ ಪ್ರತ್ಯೇಕವಾಗಿ ಬೈಂಡ್ ಕಟ್ಟಿಸಿಕೊಳ್ಳುವುದಕ್ಕೆ ಅನುಕೂಲವಾಗಿದೆ ಚಂದಾದಾರರಿಗೆ ೩ ಆಣೆಯ 'ಪ್ರಿಯದರ್ಶಿಕಾ' ಎಂಬ ನಾಟಕವನ್ನೂ, ೫ ಆಣೆಯ 'ಸತ್ಯವತೀ ಚರಿತ್ರೆ' ಎಂಬ ಹೊಸಗನ್ನಡದ ವಿಚಿತ್ರವಾದ ಕಥೆಯನ್ನೂ ೭ ಆಣೆಯ 'ಉತ್ತರರಾಮಚರಿತೆ'ಯನ್ನೂ ಉಚಿತವಾಗಿ ಕಳುಹಿಸುತ್ತೇವೆ

ಮೇ ೧೦ನೇ ತಾರೀಖಿನೊಳಗಾಗಿ ಚಂದಾದಾರರಾಗುವರಿಗೆ ನಗದು ಮೊದಲಿಂದ ಬಹುಮಾನಗಳು ಸಿಕ್ಕುವವು!! ಬೇಗ ಬೇಗ ಬರೆದುಕೊಳ್ಳಿರಿ! ನಮ್ಮ ವಿಳಾಸ—ಅರಮನೆ ಗುರು ವಿದ್ವಾಂಸ ನಂಜನಗೂಡು ಶ್ರೀಕಂಠಶಾಸ್ತ್ರಿ, ಕರ್ಣಾಟಕ ಚಂದ್ರಿಕೆ. ಎಡಿಟರ್, ಕೃಷ್ಣರಾಜ ಮೊಹಲ್ಲಾ, ಮೈಸೂರು

ಸರ್ಕಾರದ ಇಸ್ತಿಹಾರು.

32 4

1. ೧೯೦೮ನೇ ಇಸವಿ ಏಪ್ರಿಲ್ ೧ನೇ ತಾರೀಖು ಲಾಗಾಯಿತು ೧೯೦೮ನೇ ಇಸವಿ ಜೂನ್ ೩೦ರ ವರೆಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ತೆಗೆದುಕೊಳ್ಳುವದಕ್ಕೆ ಮೈಸೂರು ಶ್ರೀಮಯ ಶ್ರೀಮನ್ಮಹಾರಾಜಾ ಸರ್ಕಾರದ ಕಂಟ್ರೋಲರು ಸಿದ್ಧರಾಗಿರುತ್ತಾರೆ. ಪ್ರತಿ ಒಂದು ಅಪ್ಲಿಕೇಷನ್ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು:—

(೧) ಹುಂಡಿಯ ಮೊಬಲಗು.

(೨) ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು (೩) ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. ೫೦೦ ರೂಪಾಯಿಗಳಿಗೆ ಕಡಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫೀಸರಿಗೆ ಹುಂಡಿಯ ಮೊಬಲಗನ್ನೂ ಮತ್ತು ಕೆಳಗೆ ನಮೂದಿಸಿರುವ ದರದ ಮೇರೆ ಕಮಿಷನ್ ತೆಗೆದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿಕೊಡುವ ಖಜಾನೆ ಹೆಸರು	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ
ಸ್ಟೇಟ್ ಹುಜೂರು	ಕೋಲಾರ ತುಮಕೂರು ಶಿವಮೊಗ್ಗ ಕಡೂರು ಚಿತ್ರದುರ್ಗ ಮೈಸೂರು ಹಾಸನ	ಶೇಕಡ $\frac{೧}{೮}$

(Sd.) M. N. Krishna Rao,
Offg. Cmoptroller.

ಮಕ್ಕಳ ಹಿತಕಾರಿ

ಎಂದು

SCOTT'S EMULSION

33-5

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ. ಏಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು ; ಆರೋಗ್ಯವಾದ ಮಕ್ಕಳನ್ನು ಬಲಿಷ್ಟರನ್ನಾಗಿ ಮಾಡುವುದು.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕ್ರಿಯಾಗುತ್ತೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್,

ಈ ಮನುಷ್ಯ ಇರುವ ಔಷದವನ್ನೇ ಕೊಂಡುಕೊಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ... ತರಿಸಿಕೊಳ್ಳಿ.

2 18

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲೀ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾನೇ ನಿಂತು ಚನ್ನಾಗಿ ಹಾಕಿಸುತ್ತೇನೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ಹೂವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ. ಸಾದಾ, ಕೆಂಪು, ಕಪ್ಪು, ಬಿಳಿ, ಕಾಚ ಟೋಪಿಗಳು ೧ ರೂ ೮ ಆ; ೧ ರೂ ೪ ಆ; ೧ ರೂ. ೫ ಆ.

ರೇಷ್ಮೆ ಜಾಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ ದಾರದ ಟೋಪಿಗಳು ೧ ರೂ. ೧೨ ಆ ೧ ರೂ. ೮ ಆ.; ೧ ರೂ ೪ ಆ. ಉಸಾಕಿನ ಟೋಪಿಗಳು ೧ ರೂ ೮ ಆ ೧ ರೂ ೪ ಆ

ಕೂಸುಗಳ ಟೋಪಿ, ಸೂಫಿನ್ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ವೃತ್ತಾಂತ ಪತ್ರಿಕೆ.

———:o:———

೧೯೦೮ ನೇ ಇಸವಿ ಏಪ್ರಿಲ್ ತಾ| ೩೦ ನೇ ಗುರುವಾರ

ಕನ್ನಂಬಾಡಿ ಕೆರೆಯ ಏರ್ಪಾಡು.

ಶ್ರೀರಂಗಪಟ್ಟಣದಿಂದ ಮೇಲೆ ಕಾವೇರೀ ನದಿಗೆ ಅಡ್ಡ ಕಟ್ಟೆ ಹಾಕಿ, ಕನ್ನಂಬಾಡಿಯಲ್ಲಿ ಒಂದು ಭಾರೀ ಕೆರೆಯನ್ನು ನಿರ್ಮಾಣ ಮಾಡಿ, ಈ ಕೆರೆಗೆ ಪ್ರವಾಹಕಾಲದಲ್ಲಿ ನದಿಯ ನೀರನ್ನು ತುಂಬಿಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕೆಂದು ಮೈಸೂರು ಗವರ್ನಮೆಂಟಿನವರು ಕೆಲವು ಕಾಲದಿಂದ ಆಲೋಚನೆ ಮಾಡುತ್ತಿದ್ದಾರೆ. ಈ ಭಾರೀ ಕೆರೆಯಿಂದ ಎರಡು ವಿಧವಾದ ಪ್ರಯೋಜನವುಂಟೆಂದು ನಿರೀಕ್ಷಿಸಲ್ಪಟ್ಟಿದೆ. ಮೊದಲನೆಯದಾಗಿ, ಈಗ ಶಿವಸಮುದ್ರದ ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಗಿಂತಲೂ ಈ ಹೊಸ ಕೆರೆಯ ನೀರಿನಿಂದ ಬಹಳ ಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದು ; ಎರಡನೆಯದಾಗಿ ಈ ಕೆರೆಯ ದೆಸೆಯಿಂದ ಬಹಳ ವಿಸ್ತಾರವಾದ ಪ್ರದೇಶವು ತರೀ ಫಸಲು ಬೆಳೆಯುವಂತಾಗುವುದು. ಈಗ ಶಿವಸಮುದ್ರದ ಕಾರ್ಖಾನೆಯಿಂದ ಕೋಲಾರ್ ಚಿನ್ನದಗಣಿಗಳ ಕಂಪನಿಯವರು ಕ್ರಯಕೊಟ್ಟು ಪಡೆಯುತ್ತಿರುವ ವಿದ್ಯುಚ್ಛಕ್ತಿಗಿಂತಲೂ ಇನ್ನೂ ಹೆಚ್ಚಾಗಿ ಒದಗಿಸಿಕೊಡುವ ಪಕ್ಷದಲ್ಲಿ ಅದನ್ನೂ ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದೇವೆಂದು ಆ ಕಂಪನಿಯವರು ಅಪೇಕ್ಷೆ ಪಟ್ಟಿದ್ದಾರೆ. ಇದಲ್ಲದೆ ಮೈಸೂರು ಮತ್ತು ಬೆಂಗಳೂರು ಪುರಗಳಿಗೆ ಹೆಚ್ಚಾದ ವಿದ್ಯುಚ್ಛಕ್ತಿ ಬೇಕಾಗುವುದು ; ಇಷ್ಟೇ ಅಲ್ಲ, ಮದರಾಸ್ ಮತ್ತು ಕೊಯಮತ್ತೂರು ಪಟ್ಟಣಗಳವರೂ ಬಹಳ ವಿದ್ಯುಚ್ಛಕ್ತಿಯನ್ನು ಕೊಂಡು ತರಿಸಿಕೊಳ್ಳುವುದಕ್ಕೆ ಇಷ್ಟವುಳ್ಳವರಾಗಿದ್ದಾರೆ. ಅತ್ತಲಾಗಿ ಈ ಭಾರೀ ತಲಾವಿನಿಂದ ಸುಮಾರು ಎರಡು ಲಕ್ಷ ಎಕರೆ ಜಮೀನು ತರೀ ಸಾಗುವಳಿಯಾದೀತೆಂದು ನಿರೀಕ್ಷಿಸಲ್ಪಟ್ಟಿದೆ. ಅಡ್ಡ ಕಟ್ಟೆ ಹಾಕಿ ನೀರು ನಿಂತಾಗ್ಯೂ ಕಟ್ಟೆ ಕೆರೆಯನ್ನು ನಿರ್ಮಾಣ ಮಾಡುವುದಕ್ಕೂ ನಾಲೆಗಳನ್ನು ತೋಡಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಯಂತ್ರಸಾಮಗ್ರಿಗಳನ್ನು ಒದಗಿಸಿಕೊಂಡು ತಂತಿಗಳನ್ನು ಹಾಕಿ ಎಲ್ಲಾ ಸಿದ್ಧಪಡಿಸುವುದಕ್ಕೂ ಸುಮಾರು ಮೂರು ಕೋಟಿ ರೂಪಾಯಿ ಬೇಕಾಗುವುದೆಂತಲೂ ಹಣವನ್ನು ಸಾಲವಾಗಿ ಪಡೆದಲ್ಲಿ ಅದಕ್ಕೆ ಶೇಕಡಾ [illegible] ೧೦ ರೂಪಾಯಿನ ಪ್ರಕಾರ ಬಡ್ಡಿ ಉತ್ಪತ್ತಿಯಾಗುವುದರಲ್ಲಿ ಸಂಶಯವಿಲ್ಲವೆಂತಲೂ ಅಂದಾಜು ಕಟ್ಟಿದ್ದಾರೆ

ಇಂಥಾ ಭಾರಿ ಕಾಮಗಾರಿ ಮಾಡಿಸುವ ವಿಷಯದಲ್ಲಿ ಬಹಳ ಸೂಕ್ಷ್ಮವಾಗಿ ಪರ್ಯಾಲೋಚನೆ ಮಾಡಿ ಪ್ರಾರಂಭಿಸಬೇಕಾಗಿದೆ. ಅದರ ಸಾಧಕ ಬಾಧಕಗಳನ್ನು ಕುರಿತು ತಕ್ಕ ಅಭಿಪ್ರಾಯ ಹೇಳುವುದಕ್ಕೆ ಪ್ರವೀಣರಾದ ಇಂಜನಿಯರುಗಳೂ ವಿದ್ಯುಚ್ಛಕ್ತಿ ವಿದ್ಯೆಯನ್ನು ಕಲಿತವರೂ ಸಮರ್ಥರಾಗಿರುವರಲ್ಲದೆ ನಾವು ತಕ್ಕವರೆಂದು ಹೇಳಲು ಹಿಂತೆಗೆಯುತ್ತೇವೆ. ಶ್ರೀಮನ್ ಮಹಾರಾಜರವರು ಈ ಭಾಗದಲ್ಲಿ ಸಂಪೂರ್ಣವಾದ ಯೋಗ್ಯತೆಯನ್ನು ಪಡೆದಿರುವಂಥಾ ಕಾರ್ಯಗಾರರಿಗೆ ಈ ಕಾರ್ಯವನ್ನು ಒಪ್ಪಿಸಿ, ಅವರಿಂದ ನಿಧಾನವಾಗಿಯೂ ಜಾಗರೂಕತೆಯಿಂದಲೂ ಪರಿಶೋಧನೆ ಮಾಡಿಸಿ ಅಂಥವರ ಅಭಿಪ್ರಾಯವನ್ನು ತಿಳಿದುಕೊಂಡಾರೆಂದು ನಿರೀಕ್ಷಿಸುತ್ತೇವೆ. ಮೈಸೂರು ಗವರ್ನಮೆಂಟಿನವರು ಅಂಥವರ ಅಭಿಪ್ರಾಯದ ಪ್ರಕಾರ ನಂಬಿಕೆಯಿಟ್ಟು ಕಾರ್ಯವನ್ನು ನಡಿಸಬೇಕಲ್ಲದೆ ಬೇರೆ ಪ್ರಯೋಜನವಾಗಲಾರದು.

ಆದರೆ ಈ ವಿಚಾರವನ್ನು ಮೈಸೂರು ಪ್ರಜೆಗಳು ಚರ್ಚಿಸಿ ಅಭಿಪ್ರಾಯ ಹೇಳಬಾರದೇ ಎಂದು ಪ್ರಶ್ನೆ ಹುಟ್ಟಬಹುದು. ಈ ಕಾರ್ಯವು ಲಾಭಕರವಾದೀತೇ ಎಂದು ಯೋಚಿಸಿದರೆ ಸಾಕಾಗದೆ, ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ ವಿಕರಿ ಮಾಡುವುದರಿಂದಲೂ, ನಾಲೆಗಳ ಕೆಳಗೆ ಅಪಾರವಾದ ಜಮೀನುಗಳು ವ್ಯವಸಾಯವಾಗಿ ಸಾಗುವಳಿಯು ಅಭಿವೃದ್ಧಿಹೊಂದುವುದರಿಂದಲೂ ಸಂಸ್ಥಾನದ ಉತ್ಪತ್ತಿಯು ಹೆಚ್ಚುವುದಾದ ಪಕ್ಷದಲ್ಲಿ ಈ ಭಾರೀ ತಲಾವಿನ ಕಾಮಗಾರಿಯನ್ನು ಅಗತ್ಯವಾಗಿ ಮಾಡಿಸಬೇಕೆಂದು ಈ ಸಂಸ್ಥಾನದ ಪ್ರಜೆಗಳೆಲ್ಲಾ ಸಂತೋಷದಿಂದ ಒಪ್ಪಿಕೊಳ್ಳುವರು. ಹಾಗಿಲ್ಲದೆ ಗವರ್ನಮೆಂಟಿನವರು ಈ ಭಾರೀ ಸಾಲವನ್ನು ಹೊರುವಂತಾಗಿ, ಹಣಕ್ಕೆ ಸರಿಯಾದ ಪ್ರತಿಫಲ ದೊರಕದೆ ಹೋಗುವುದಾದರೆ ಇಂಥಾ ಕಾರ್ಯವೇ ಬೇಡವೆನ್ನುವರು. ಮೈಸೂರು ಗವರ್ನಮೆಂಟಿನವರು ಈ ಭಾಗವನ್ನು ಬಹು ಪುರಸ್ಕಾರವಾಗಿ ಯೋಚಿಸಬೇಕಾಗಿದೆ. ದಿವಾನರವರೂ ಕೌನ್ಸಿಲ್ ಮೆಂಬರುಗಳೂ ತಮ್ಮ ಹೆಸರು ಶಾಶ್ವತವಾದೀತೇ ಎಂದು ಮೊದಲಾಗಿ ಯೋಚಿಸದೆ, ಸಂಸ್ಥಾನದ ಪ್ರಯೋಜನಕ್ಕೆ ಮುಖಾಂತರಗಳನ್ನೇ ಪ್ರಾಮುಖ್ಯವಾಗಿಟ್ಟುಕೊಂಡು, ಈ ಭಾರೀ ಕಾಮಗಾರಿಯಿಂದ ಪ್ರಜೆಗಳಿಗೆ ಅನುಕೂಲವೂ ಗವರ್ನಮೆಂಟಿಗೆ ಲಾಭವೂ ಹಣಕ್ಕೆ ತಕ್ಕ ಬಡ್ಡಿಯೂ ಹುಟ್ಟುವಳಿಯಾಗುವವೆಂದು ಕಂಡುಬರುವ ಪಕ್ಷದಲ್ಲಿ ಅದನ್ನು ಸ್ಯಾಂಕ್ಷನ್ ಮಾಡಿಯಾರೆಂದು ಹಾರೈಸುತ್ತೇವೆ.

ಈ ಕಾಮಗಾರಿಯನ್ನು ಪ್ರಾರಂಭಿಸಿದರೆ ಅನೇಕ ಯೂರೊಪ್ಯಿಯನ್ನರೂ ಅಮೇರಿಕದವರೂ ನೇಮಕ ಮಾಡಲ್ಪಡುತ್ತಾರೆಂದು ಆಕ್ಷೇಪಣೆ ಹುಟ್ಟಿದೆ. ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಭಾಗಕ್ಕೆ ಪ್ರವೀಣರಾದ ಕೆಲವರನ್ನು ಅಮೇರಿಕದಿಂದಲೂ ವಿಲಾಯತಿಯಿಂದಲೂ ಕರೆಸಿ ಕೆಲವು ವರ್ಷದ ಮಟ್ಟಿಗಾದರೂ ನೇಮಿಸಿಕೊಳ್ಳಬೇಕಾಗುವುದು. ಈ ವಿದ್ಯುಚ್ಛಕ್ತಿಯ ಶಾಸ್ತ್ರ ವಿದ್ಯೆಯು ಈಗ ಯೂರೋಪಿಗೂ ಅಮೇರಿಕಕ್ಕೂ ಹೊಸದೇ ಆಗಿರುತ್ತದೆ. ಹಿಂದುಸ್ಥಾನದಲ್ಲಿ ಇನ್ನೂ ಅಂಥಾ ಸಮರ್ಥಶಾಲಿಗಳು ದೊರಕುವುದಿಲ್ಲ. ವಿಲಾಯತಿಯಲ್ಲೂ ಕೂಡ ಮೊದಲು ಅಮೇರಿಕದವರನ್ನೂ ಸ್ವಿಟ್ಸರ್ಲೆಂಡಿನವರನ್ನೂ ಕರೆಸಿ ನೇಮಿಸಿಕೊಂಡು, ಇಂಗ್ಲಿಷ್ ಜನರಿಗೆ ಈ ವಿದ್ಯೆಯಲ್ಲಿ ಪರಿಶ್ರಮವೂ ಅನುಭವವೂ ಉಂಟಾದ ಹಾಗೆಲ್ಲಾ ಅವರನ್ನು ವಾಪಸು ಕಳುಹಿಸಿಬಿಟ್ಟರು. ಇದ್ದರಿಂದ ನಾವು ಮೈಸೂರಿನಲ್ಲೂ ಅದೇ ಮೇಲ್ಪಂಕ್ತಿಯನ್ನು ಅನುಸರಿಸಬೇಕಾಗಿದೆ. ಈಗ ಮೈಸೂರು ಗವರ್ನಮೆಂಟಿನವರು ದಾಮೋದರದಾಸ್ ಧರ್ಮಫಂಡಿನಿಂದ ವೇತನಗಳನ್ನು ಕೊಟ್ಟು ಹೆಚ್ಚಾಗಿ ಯೌವನಸ್ಥರನ್ನು ಯೂರೋಪ್, ಅಮೇರಿಕಗಳಿಗೆ ಕಳುಹಿಸಿ ವಿದ್ಯುಚ್ಛಕ್ತಿ ವಿದ್ಯೆಯನ್ನು ಕಲಿಸಬೇಕೆಂದು ತೀರ್ಮಾನ ಮಾಡಿರುವ ಭಾಗದಲ್ಲಿ ನಾವು ತುಂಬಾ ಸಂತೋಷ ಪಟ್ಟೆವು. ಬಹುಮಂದಿ ಯೌವನಸ್ಥರು ಆ ರೀತಿ ವಿದ್ಯಾವಂತರಾಗಲು ಪ್ರಯತ್ನಪಟ್ಟಾರೆಂದು ನಿರೀಕ್ಷಿಸುತ್ತೇವೆ.

ಇಂಥಾ ಭಾರೀ ಕಾಮಗಾರಿಗಳನ್ನು ಮಾಡಿಸುವುದಕ್ಕೆ ಇಂಡಿಯಾ ಗವರ್ನಮೆಂಟಿನವರು ಯಾವ ರೀತಿ ಸಾಲ ತಂದು ಹಣವನ್ನು ಒದಗಿಸುತ್ತಿದ್ದಾರೆಯೋ ಅದೇ ರೀತಿ ನಮ್ಮ ಗವರ್ನಮೆಂಟಿನವರೂ ಸಾಲ ಮಾಡಬೇಕು. ಆದರೆ ಇವರು ೩ ಕೋಟಿ ರೂಪಾಯಿಗಳನ್ನು ಎಲ್ಲಿ ಸಾಲಮಾಡಬಹುದು? ಲಂಡನ್ ಪಟ್ಟಣದಿಂದ ತರಬೇಕೇ? ಅಥವಾ ಕೆಲವು ಹಣವನ್ನು ಇಂಡಿಯಾ ದೇಶದೊಳಗೂ ಇನ್ನು ಕೆಲವನ್ನು ಮೈಸೂರು ಸಂಸ್ಥಾನದೊಳಗೂ ಸಾಲ ಹುಟ್ಟಿಸಬಹುದೇ? ಮೈಸೂರು ಸಂಸ್ಥಾನದ ಪ್ರಜೆಗಳು ಚೈತನ್ಯವುಳ್ಳವರಾಗಿದ್ದಾರೆಯೇ? ಅಷ್ಟು ಹಣವನ್ನು ಸಾಲ ಕೊಡಲು ಇಷ್ಟಪಟ್ಟಾರೇ! ಗವರ್ನಮೆಂಟಿನವರು ಈ ಕಾಮಗಾರಿಯನ್ನು ಸ್ಯಾಂಕ್ಷನ್ ಮಾಡಿ, ಸಾಲ ಕೇಳುವ ಪಕ್ಷದಲ್ಲಿ ಈ ಸಂಸ್ಥಾನದವರೇ ಮುಂದಾಳುಗಳಾಗಿ ಒಂದು ಗವರ್ನಮೆಂಟಿಗೆ ಸಾಲವನ್ನು ಒದಗಿಸಿಕೊಟ್ಟಾರೆಂದು ನಾವು ಕುತೂಹಲ ಪೂರ್ವಕವಾಗಿ ನಿರೀಕ್ಷಿಸುತ್ತೇವೆ.

ಸ್ವಾರ್ಥತ್ವ

ಒಂದು ರಾಜ್ಯವನ್ನಾಗಲಿ ಅಥವಾ ಒಂದು ಸಮಾಜವನ್ನಾಗಲಿ ಮನುಷ್ಯನ ದೇಹಕ್ಕೆ ಹೋಲಿಸಬಹುದು. ಹೇಗೆ ಮನುಷ್ಯನ ದೇಹವು ಅನೇಕ ತರವಾದ ಅಂಗಗಳಿಂದ ಕೂಡಿದ್ದಾಗಿರುತ್ತದೋ ಅದೇ ರೀತಿಯಲ್ಲಿ ಒಂದು ರಾಜ್ಯವು ಕೂಡಾ ಅನೇಕ ವಿಧವಾದ ವ್ಯಕ್ತಿಗಳನ್ನು ವ್ಯಾಪಿಸಿರುವ ಜನಗಳಿಂದ ಕೂಡಿದ್ದಾಗಿರುತ್ತದೆ. ನೋಡುವುದಕ್ಕೆ ನೇತ್ರಗಳೂ, ಕೇಳುವುದಕ್ಕೆ ಕಿವಿಗಳೂ ಕೆಲಸ ಮಾಡುವುದಕ್ಕೆ ಹಸ್ತಗಳೂ ನಡೆಯುವುದಕ್ಕೆ ಕಾಲುಗಳೂ ದೇಹದಲ್ಲಿ ಇರುತ್ತವೆ. ಅದೇ ರೀತಿಯಲ್ಲಿ ಒಂದು ರಾಜ್ಯವನ್ನು ಯೋಚಿಸಿದರೆ ಅದರಲ್ಲಿಯೂ ಕೂಡ ರಾಜ್ಯಕ್ಕೆ ಸೇರಿದ ದೇಶ್ಯ ಮನುಷ್ಯರೂ ವ್ಯಾಪಾರಿಗಳೂ ಸೈನ್ಯದವರೂ ರೈತರೂ ಇವರೇ ಮೊದಲಾದ ವಿವಿಧ ವರ್ಗದ ಜನರು ರಾಜ್ಯಾಂಗಗಳಾಗಿರುವರು. ಹೇಗೆ ಆರೋಗ್ಯವಾದ ಸ್ಥಿತಿಯಲ್ಲಿ ದೇಹಕ್ಕಾದರೆ ಅದರ ಅಂಗಗಳು ತಮ್ಮ ತಮ್ಮ ಕೆಲಸಗಳನ್ನು ಯಾವ ಕುಂದಕವೂ ಬಾರದಂತೆ ನೆರವೇರಿಸಬೇಕಲ್ಲವೆ? ಹೇಗೆಯೇ ಒಂದು ರಾಜ್ಯವು ಉತ್ತಮ ಸ್ಥಿತಿಯನ್ನು ಹೊಂದಬೇಕಾದರೆ ಅದರಲ್ಲಿನ ವಿವಿಧ ಜಾತಿಯ ಜನರು ತಮ್ಮ ಸ್ವಪ್ರಯೋಜನವನ್ನು ಚಿಂತಿಸದೆ ದೇಶಾಭ್ಯುದಯಕ್ಕೆ ಸಹಕಾರಿಗಳಾದ ಕಾರ್ಯಗಳನ್ನು ಮಾಡುತ್ತಿರಲಿ. ಆಕಸ್ಮಾತ್ತಾಗಿ ರಸನೆ ಹಸ್ತವು ಒಂದು ವೇಳೆ ಕೋಪಿಸಿಕೊಂಡು ಕೆಲಸ ಮಾಡೆನೆಂದು ಹೇಳಿದರೆ ದೇಹದ ಪಾಡೇನಾಗುತ್ತದೆ ; ದೇಹವು ಮಲಿನವಾಗಿ ಸತ್ತುಹೋಗುವುದಲ್ಲವೇ ? ದೇಶವನ್ನಾಳುವ ಅರಸನು ಕೇವಲ ವಿಷಯಾಸಕ್ತನಾಗಿದ್ದುಕೊಂಡು ತನ್ನ ಪ್ರಜೆಗಳನ್ನು ನ್ಯಾಯವಾಗಿ ಪರಿಪಾಲಿಸದಿದ್ದರೆ ದೇಶವು ಕೆಟ್ಟುಹೋಗುವುದು. ಸಿಪಾಯಿಗಳು ದಂಗೆ ಎದ್ದು ರೈತಾಪಿ ಜನರನ್ನು ಹಿಂಸಿಸಿ ಕೊಲ್ಲುವರು. ದುರ್ಮಾರ್ಗತನವು ಹೆಚ್ಚುವುದು. ಕೊನೆಯಲ್ಲಿ ದೇಶವು ಕ್ಷಯಿಸಿ ಹೇಳಕೂಡದ ಕಷ್ಟಗಳಿಗೆ ಗುರಿಯಾಗುವುದು. ಆದ್ದರಿಂದ ರಾಜ್ಯವು ಆರೋಗ್ಯಕರವಾದ ಸ್ಥಿತಿಯಲ್ಲಿರಬೇಕಾದರೆ ಅದರಲ್ಲಿನ ಜನರು ತಮ್ಮ ಕರ್ತವ್ಯವನ್ನು ಎಡಬಿಡದೆ ನೆರವೇರಿಸುತ್ತಿರಬೇಕು.

ಈಗ ನಾವು ಹಿಂದೂ ದೇಶದ ಕ್ಷೀಣಗತಿಯ ಕಾರಣಗಳನ್ನು ಕುರಿತು ಸಂಕ್ಷೇಪವಾಗಿ ಪ್ರಸ್ತಾಪಿಸೋಣ. ಸ್ವಾರ್ಥತ್ವವೇ ನಮ್ಮ ದೇಶದ ಕ್ಷೀಣಗತಿಗೆ ಮುಖ್ಯಕಾರಣವಾಗಿರುತ್ತದೆ. ಸ್ವಾರ್ಥತ್ವವು ಎರಡು ರೀತಿಯಲ್ಲಿ ಇರಬಹುದು. ಮೊದಲನೇದು ಜಾತಿಯ ಅಥವಾ ಸಂಗಡದ ಸ್ವಾರ್ಥತೆ. ಉದಾಹರಣೆಯಾಗಿ ದೇಶದ ವ್ಯಾಪಾರಿಗಳು ಒಟ್ಟಾಗಿ ಸೇರಿ ಬಡವರನ್ನು ಸುಲಿದು ದ್ರವ್ಯಾರ್ಜನೆ ಮಾಡಲು ತೊಡಗಿದರೆ ಅಂಥಾ ಪ್ರಯತ್ನವೇ ಬಹು ಹೇಯವಾದ ಸ್ವಾರ್ಥತ್ವವಾಗಿ ಪರಿಣಮಿಸುವುದು. ಸೈನ್ಯದವರು ಒಟ್ಟಾಗಿ ಸೇರಿ ದೇಶವನ್ನು ಕಾಪಾಡುವುದಕ್ಕೆ ಬದಲು ಸ್ವಪ್ರಯೋಜನಕ್ಕಾಗಿ ದಂಗೆ ಎದ್ದರೆ ಅಂಥಾ ಪ್ರಯತ್ನವು ಸ್ವಾರ್ಥತ್ವವೆಂದೆನಿಸಿಕೊಳ್ಳುವುದು.

ಹಿಂದೂ ದೇಶದಲ್ಲಿ ಜಾತಿಯ ಅಥವಾ ಸಂಗಡದ ಸ್ವಾರ್ಥತ್ವವು ವಿಶೇಷವಾಗಿ ಹರಡಿಕೊಂಡಿರುವುದರಲ್ಲಿ ಸಂಶಯವೇನೂ ಇಲ್ಲ. ಒಂದು ಜಾತಿಗೆ ಸೇರಿದ ಕೆಲವರು ಸರ್ಕಾರದ ಒಂದೆರಡು ದೊಡ್ಡ ಉದ್ಯೋಗಗಳನ್ನು ಆಕ್ರಮಿಸಿಕೊಂಡಿದ್ದರೆ ಅಂಥವರು ತಮ್ಮ ಕೈಲಾದ ಮಟ್ಟಿಗೂ ಸ್ವಜಾತಿಯವರನ್ನೇ ಎಲ್ಲಾ ವಿಷಯಗಳಲ್ಲೂ ಪ್ರೋತ್ಸಾಹಪಡಿಸುವುದು ನಮ್ಮ ದೇಶಕ್ಕೆ ಅಪರೂಪವಾದ ಸಂಗತಿಯಲ್ಲ. ಇಂಥವರಿಗೆ ದೇಶಾಭ್ಯುದಯದ ಚಿಂತೆ ಇರುವುದೇ? ಎಂದಿಗೂ ಇಲ್ಲ. ಸ್ವಜಾತಿಯವರು ಚೆನ್ನಾಗಿದ್ದರೆ ಸಾಕೆನ್ನುವುದೇ ಅವರ ತಾತ್ಪರ್ಯವಾಗಿರುವುದು. ಇದಲ್ಲದೆ ಇನ್ನೊಂದು ವಿಧವಾದ ಸ್ವಾರ್ಥತ್ವವು ಇರುವುದು. ಒಬ್ಬನು ಸ್ವಪ್ರಯೋಜನವನ್ನೇ ಮುಂದಿಟ್ಟುಕೊಂಡು ತನ್ನಭಿಲಾಷೆಗಳನ್ನು ನೆರವೇರಿಸುವುದರಲ್ಲಿ ಯಾರನ್ನು ಹಾಳು ಮಾಡಿದರೂ ಸರಿ ತನ್ನ ಕಾರ್ಯವು ಮಾತ್ರ ಜಯಹೊಂದಬೇಕೆಂದು ಅಪೇಕ್ಷಿಸಿ ಕಾರ್ಯ ಸಾಧಿಸುತ್ತಾನೋ ಅಂಥವನು ಸ್ವಾರ್ಥಪರನಾಗಿರುತ್ತಾನೆ. ಜಾತಿಯ ಸ್ವಾರ್ಥತೆಯು ದೇಶದ ನಾನಾ ಬಗೆಯ ಜನರನ್ನು ಅಗಲಿಸಿ ಅವರು ಒಂದಾಗದಂತೆ ಮಾಡಿರುತ್ತದೆ. ಈ ದೇಶದಲ್ಲಿ ಒಂದು ಜಾತಿಯವರಿಗೂ ಮತ್ತೊಂದು ಜಾತಿಯವರಿಗೂ ಕಲಹಗಳು ಸಂಭವಿಸುವುದು ಹೊಸಸಂಗತಿಯಲ್ಲ. ಬ್ರಾಹ್ಮಣನಿಗೂ [illegible] ಮನಸ್ತಾಪಗಳು ಇದ್ದೇ ಇರುವವು. ಮಾದಿಗನನ್ನು ಕಂಡರೆ ಹೊಲೆಯನಿಗೆ ಆಗದು. ಅಂಥ ಜಾತಿಯವರು ತಮ್ಮ ಸ್ವಾರ್ಥತೆಯನ್ನು ತ್ಯಜಿಸದಿದ್ದರೆ ದೇಶದ ಮೇಲೆ ಸಮಾಧಾನವು ನೆಲೆಗೊಳ್ಳಲಾರದು. ಯಾವಾಗ್ಗೆ ಜನರು ಸ್ವಾರ್ಥತೆಯನ್ನು ತ್ಯಜಿಸಿ ಸಮಾಧಾನದಿಂದಲೂ ಐಕಮತ್ಯದಿಂದಲೂ ದೇಶಾಭಿವೃದ್ಧಿಯ ಕೆಲಸಗಳನ್ನು ಮಾಡುವರೋ ಆವಾಗಲೇ ದೇಶವು ಉನ್ನತಸ್ಥಿತಿಗೆ ಬರುವದು. ಜಾತಿಯ ಅಂಥಾ ವಿರಸ ಜನಕ ದೇಶವೆಂದಿಗೂ ಮುಂದಕ್ಕೆ ಬರುವುದಿಲ್ಲ

ದೇಶದೊಳಗೆಗೆ ಕ್ರೈಸ್ತಮತವು ಅಹಿತವಾಗಿದೆಯೆಂತಲೂ ಹಿಂದೂ ದೇಶೀಯರು ಪೂರ್ವದಿಂದಲೂ ಬಂದಿರುವ ಕಟ್ಟಳೆಗಳನ್ನು ಬಿಡಬಾರದೆಂತಲೂ ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ ಇವರ ಅಭಿಪ್ರಾಯವು ಸರಿಯಾದುದಲ್ಲವೆಂದು ಹಲವು ವಿಧಗಳಲ್ಲಿ ಸ್ಥಾಪಿಸಬಹುದು. ಹಿಂದೂ ದೇಶೀಯರೆಲ್ಲರೂ ಕ್ರೈಸ್ತಮತವನ್ನನುಸರಿಸುವುದಾದರೆ ಹಿಂದೂ ದೇಶವು ಈಗಿನ ಸ್ಥಿತಿಗಿಂತಲೂ ಎಷ್ಟೋ ಸಾವಿರ ಪಾಲು ಉತ್ತಮಸ್ಥಿತಿಗೆ ಬರುತ್ತದೆನ್ನುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಕ್ರೈಸ್ತಮತ ಒಂದರಲ್ಲೇ ಐಕಮತ್ಯವೂ ಲೌಕಿಕ ಪಾರಮಾರ್ಥಿಕ ಸುಖಗಳು ಲಭಿಸುವವು

ಒಂದಾನೊಂದು ದಿನ ತೆಲಗು ದೇಶದ ಒಬ್ಬ ಕ್ರೈಸ್ತ ಯೌವನಸ್ಥನು ದಾರಿಯಲ್ಲಿ ಬರುತ್ತಿದ್ದನು. ಇವನು ಕ್ರೈಸ್ತನಾಗುವುದಕ್ಕೆ ಮೊದಲು ಹೊಲೆಯರ ಜಾತಿಗೆ ಸೇರಿದ್ದನು. ಇವನು ಬರುತ್ತಿರುವಾಗ್ಗೆ ಇವನ ಇದಿರಾಗಿ ಒಬ್ಬ ಮಾದಿಗನು ಹೊರಲಾರದ ಒಂದು ದೊಡ್ಡ ಹೊರೆಯನ್ನು ಹೊತ್ತುಕೊಂಡು ಬರುತ್ತಿದ್ದನು. ಎಲ್ಲರೂ ಕಂಡ ಪ್ರಕಾರ ಹಿಂದೂ ದೇಶದಲ್ಲಿ ಚಕ್ಕಳದ ಕೆಲಸವನ್ನು ಮಾಡುವ ಮಾದಿಗನನ್ನು ತುಚ್ಛವಾಗಿ ಕಾಣುವುದು ವಾಡಿಕೆಯಷ್ಟೆ. ಅವನನ್ನು ಮುಟ್ಟುವುದಕ್ಕೆ ಇತರ ಜಾತಿಯವರು ಒಡಂಬಡುವುದಿಲ್ಲ. ಕ್ರೈಸ್ತ ಯೌವನಸ್ಥನು ಆ ಮಾದಿಗನ ಕಷ್ಟವನ್ನು ನೋಡಿದಾಗ್ಗೆ ತಾನು ಸಹ ಅವನಿಗೆ ಸಹಾಯ ಮಾಡಲು ಅಪೇಕ್ಷಿಸಲಿಲ್ಲ. ಆದರೆ ಆತನಿಗೆ ಆ ಸಮಯದಲ್ಲಿ ತನ್ನ ಗುರುವಾದ ಯೇಸು ಕ್ರಿಸ್ತನ ಬೋಧನೆಯು ಜ್ಞಾಪಕಕ್ಕೆ ಬಂತು. ಅವನು ತನ್ನ ಮನಸ್ಸಿನಲ್ಲಿ—ನಾನು ಯೇಸು ಕ್ರಿಸ್ತನ ಶಿಷ್ಯನಾಗಿದ್ದೇನೆ. ನನ್ನ ಗುರುವಿನ ಕಟ್ಟಳೆಯ ಪ್ರಕಾರ ನಾನು ಎಲ್ಲರನ್ನೂ ಯಾವ ಭೇದವಿಲ್ಲದೆ ಪ್ರೀತಿ ಮಾಡಬೇಕು. ಅವರನ್ನು ಪ್ರೀತಿ ಮಾಡುವುದಲ್ಲದೆ ಅವರಿಗೆ ಕೈಲಾದಷ್ಟು ಸಹಾಯವನ್ನೂ ಮಾಡಬೇಕು. ಆದ್ದರಿಂದ ಭಗವಂತನ ದೃಷ್ಟಿಯಲ್ಲಿ ಈ ಮಾದಿಗನು ಸಹ ನನ್ನ ಸಹೋದರನಾಗಿರುತ್ತಾನೆ, ಎಂದು ಯೋಚಿಸಿ ಅವನ ಹತ್ತಿರಕ್ಕೆ ಹೋಗಿ ಅವನು ಹೊತ್ತಿದ್ದ ಹೊರೆಯನ್ನು ಇಳಿಸಿ ಅದನ್ನು ತಾನು ಹೊತ್ತುಕೊಂಡು ಮಾದಿಗನ ಮನೆಯ ತನಕ ಹೋದನು. ವಾಚಕರೇ ಇದಲ್ಲವೇ ನಿಜವಾದ ಪ್ರೀತಿ. ಯೇಸುಕ್ರಿಸ್ತನನ್ನು ಹಿಂಬಾಲಿಸುವ ಪ್ರತಿಯೊಬ್ಬ ಭಕ್ತನಿಗೆ ಆತನು ಕೊಡುವ ವಿಶೇಷವಾದ ಪವಿತ್ರ ಪ್ರೀತಿಯೇ. ಹಿಂದೂ ದೇಶೀಯರೆಲ್ಲರೂ ಯೇಸುಕ್ರಿಸ್ತನನ್ನು ತಮ್ಮ ಗುರುವನ್ನಾಗಿ ಅಂಗೀಕರಿಸಿದರೆ ಆತನು ದೇಶದಲ್ಲಿ ನಿಬಿಡವಾಗಿ ನೆಲೆಗೊಂಡಿರುವ ಎಲ್ಲಾ ವಿಧವಾದ ಜಾತಿ ವೈರತ್ವಗಳನ್ನೂ ಮುಖ್ಯವಾಗಿ ದೇಶದೇಳಿಗೆಗೆ ಕಂಟಕಪ್ರಾಯವಾಗಿರುವ ಸ್ವಾರ್ಥತೆಯನ್ನೂ ಸಂಪೂರ್ಣವಾಗಿ ನೀಗಿಸಿ ಜನರೆಲ್ಲರೂ ಒಬ್ಬರನ್ನೊಬ್ಬರು ಪ್ರೀತಿಸುವಂತೆಯೂ ಪರೋಪಕಾರಿಗಳಾಗಿ ಬದುಕುವಂತೆಯೂ ಸಹಾಯ ಮಾಡುವನು

ಶ್ರೀ ಪೌಲನೆಂಬ ಕ್ರೈಸ್ತ ಮಹಾತ್ಮನು ಸಹೋದರ ಭಾವವನ್ನು ಕುರಿತು ಈ ರೀತಿಯಾಗಿ ತಿಳಿಸುತ್ತಾನೆ “ನಿಮ್ಮೆಲ್ಲರಲ್ಲಿ ಒಂದೇ ಪ್ರೀತಿಯಿರಲಿ; ಅನ್ಯೋನ್ಯಭಾವವುಳ್ಳವರಾಗಿಯೂ ಒಂದೇ ಗುರಿಯಿಟ್ಟುಕೊಂಡವರಾಗಿಯೂ ಇರಿ. ಪಕ್ಷಪಾತದಿಂದಾಗಲಿ ಒಣಹೆಮ್ಮೆಯಿಂದಾಗಲಿ ಯಾವದನ್ನೂ ಮಾಡದೆ, ಪ್ರತಿಯೊಬ್ಬನು ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಠರೆಂದು ಎಣಿಸಲಿ. ನಿಮ್ಮಲ್ಲಿ ಪ್ರತಿಯೊಬ್ಬನು ಸ್ವಹಿತವನ್ನು ಮಾತ್ರ ನೋಡದೆ ಪರಹಿತವನ್ನು ಸಹ ನೋಡಲಿ. ಕ್ರಿಸ್ತ ಯೇಸುವಿನಲ್ಲಿದ್ದಂಥಾ ಮನಸ್ಸು ನಿಮ್ಮಲ್ಲಿಯೂ ಇರಲಿ”

ಮೈಸೂರು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕುಗಳು.

೧೯೦೬—೦೭ ನೇ ಸಾಲಿನ ರಿಪೋರ್ಟು.

ಮೈಸೂರು ಗವರ್ನಮೆಂಟ್ ಕಂಟ್ರೋಲರವರು ಈ ಸಂಸ್ಥಾನದ ಸರ್ಕಾರಿ ಸೇವಿಂಗ್ಸ್ ಬ್ಯಾಂಕುಗಳ ವಾರ್ಷಿಕ ರಿಪೋರ್ಟನ್ನು ಕಳೆದ ಡಿಸೆಂಬರ್ ಎರಡನೇ ವಾರದಲ್ಲಿ ತಯಾರುಮಾಡಿ ಗವರ್ನಮೆಂಟಿಗೆ ಕಳು ಹಿಸಿದರು. ಈ ರಿಪೋರ್ಟಿನಲ್ಲಿ ಕಂಡ ಮುಖ್ಯ ಭಾಗಗಳನ್ನು ಇಲ್ಲಿ ಸೂಚಿಸುತ್ತೇವೆ.

೧೯೦೬ ನೆ ಜೂನ್ ಆಖೈರಿನಲ್ಲಿ ಸರ್ಕಾರಿ ಸೇವಿಂಗ್ಸ್ ಬ್ಯಾಂಕು ಗಳಲ್ಲಿ ೯೫,೫೯,೮೮೯ ರೂಪಾಯಿ ಉಳಿದುಕೊಂಡಿತ್ತು. ೧೯೦೭ ನೆ ಜೂನ್ ೩೦ ಕ್ಕೆ ಆಖೈರಾದ ಸಾಲಿನಲ್ಲಿ ಹೊಸದಾಗಿ ೨೬,೬೮,೩೧೯ ರೂಪಾಯಿ ಡಿಪಾಜಿಟ್ಟು ಇಡಲಾಯಿತು. ಮತ್ತು ಆ ಸಾಲಿನಲ್ಲಿ ೫೫,೫೬,೮೯೮ ರೂಪಾಯಿ ವಾಪಸು ಪಾವತಿಮಾಡಲಾಗಿದೆ. ಇದಲ್ಲದೆ ಈ ಸಾಲಿನಲ್ಲಿ ಮೇಲ್ಕಂಡ ಡಿಪಾಜಿಟ್ ಹಣಗಳಿಗೆ ೨,೩೩,೪೧೫ ರೂಪಾಯಿ ಬಡ್ಡಿ ದಾಖಲಾಗಿರುವುದು. ಈ ಸಾಲಾಖೈರಿನಲ್ಲಿ ೬೦,೧೬,೪೧೫ ರೂಪಾಯಿ ಡಿಪಾಜಿಟ್ ಹಣ ಉಳಿದಿತ್ತು. ಈ ಪೈಕಿ ೫,೦೦೦ ರೂಪಾಯಿಗಿಂತ ಹೆಚ್ಚು ಹಣ ಹಾಕಿದ್ದವರಿಗೆ ಸೇಕಡಾ ೪ ರೂಪಾಯಿ ಬಡ್ಡಿಯುಳ್ಳ ೨೦ ಲಕ್ಷ ರೂಪಾಯಿನ ಸಾಲವಾಗಿ ಬದಲಾಯಿಸಿ, ಸರ್ಕಾರಿ ಪತ್ರಗಳನ್ನು ಕೊಡಲಾಯಿತು.

ಈ ಸಾಲಿನಲ್ಲಿ ಒಟ್ಟು ೨,೫೦೬ ಹೊಸ ಖಾತೆಗಳು (ಅಂದರೆ, ಹಿಂದಿನ ಸಾಲಿಗಿಂತ ೫೩೩ ಕಡಮೆ) ಪ್ರಾರಂಭವಾದವು. ಈಗ ಒಟ್ಟು ನೋಡಿದಲ್ಲಿ ೧೫,೧೫೯ ಖಾತೆಗಳಿರುತ್ತವೆ. ಇವುಗಳ ಹಂಚಿಕೆ ಕ್ಯಾಗೆಂದರೆ—ಗವರ್ನಮೆಂಟ್ ಆಫೀಸರುಗಳ ಹೆಸರಿನಲ್ಲಿ (ಎಕ್ಸ್ ಆಫಿಷಿಯೋ) ೨,೫೩,೮೧೨ ರೂಪಾಯಿನ ೫೩೨ ಖಾತೆಗಳಿವೆ; ೧೬೯,೩೨೦ ರೂಪಾಯಿನ ೬೯೯ ಜಾಮೀನು ಹಣವಿದೆ; ಮೈಸೂರು ಗಳ ಹೆಸರಿನಲ್ಲಿ ೮,೧೫,೧೮೭ ರೂಪಾಯಿ ಉಳ್ಳ ೧,೦೭೯ ಖಾತೆಗಳು ಇರುವವು; ಉಳಿದ ೫೭,೪೬,೯೮೦ ರೂಪಾಯಿನ ೧೨,೬೪೯ ಸ್ವಂತ ಖಾತೆಗಳಿರುತ್ತವೆ. ಇದಲ್ಲದೆ ೨೮,೪೧೭ ರೂಪಾಯಿಯುಳ್ಳ ೮,೬೯೩ ಖಾತೆಗಳು ಬೇವಾರಸಾಗಿರುವವು.

ಬೇರೆಬೇರೆ ಡಿಸ್ಟ್ರಿಕ್ಟುಗಳ ಸೇವಿಂಗ್ಸ್ ಬ್ಯಾಂಕುಗಳಲ್ಲಿ ೧೯೦೭ ನೇ ಜೂನ್ ಆಖೈರಿನಲ್ಲಿ ಉಳಿದಿದ್ದ ಹಣಗಳೂ, ೧೯೦೬-೦೭ನೆ ಸಾಲಿ ನಲ್ಲಿ ಸರ್ಕಾರದಿಂದ ಪಾವತಿ ಆದ ಬಡ್ಡಿ ಹಣಗಳೂ ಎಷ್ಟೆಂದು ಕೆಳಗಿನ ಪಟ್ಟಿಯಿಂದ ತಿಳಿಯಬಹುದು

ಡಿಸ್ಟ್ರಿಕ್ಟು	ಡಿಪಾಜಿಟ್ಟು.	ಬಡ್ಡಿ.
ಬೆಂಗಳೂರು.	೬೨,೨೩,೮೧೨	೩೩,೧೬೩
ಕೋಲಾರ.	೫,೬೪,೩೯೧	೧೮,೮೦೬
ತುಮಕೂರು.	೪,೫೨,೩೮೧	೧೫,೬೩೩
ಶಿವಮೊಗ್ಗ.	೯,೮೯,೧೫೦	೩೨,೮೮೯
ಕಡೂರು.	೪,೨೮,೧೪೮	೧೩,೨೩೯
ಚಿತ್ರದುರ್ಗ.	೩,೬೩,೭೦೬	೧೨,೮೬೩
ಮೈಸೂರು	೨೩,೫೪,೧೯೦	೪೬,೧೨೮
ಹಾಸನ.	೫,೯೫,೨೦೧	೨೦,೭೩೨
ಜುಮ್ಲಾ ರೂ	೬೯,೮೫,೩೦೦	೨,೩೩,೪೧೫

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸೆಲರುಗಳು ಇಲ್ಲಿನ ಟವನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಲೆಯ ವಿಷಯಗಳನ್ನು ನಡೆಸಿದರು. ಕಳೆದ ಮಾರ್ಚಿ ತಿಂಗಳ ಮ್ಯುನಿಸಿಪಲ್ ಜಮಾ ಖರ್ಚು ಮೊದಲಾದ ರಿಪೋರ್ಟುಗಳು ಓದಲಾದವು. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ. ೧೧,೧೦೯-೧-೨-೮ ಸ್ಟು ಜಮಾ ಆಯಿತು; ಮತ್ತು ಅದೇ ತಿಂಗಳ ಖರ್ಚು ರೂ. ೮,೮೩೧-೫-೯ ಸ್ಟು ಆಯಿತು. ಮಾರ್ಚಿ ತಿಂಗಳಲ್ಲಿ ಜನನ ೧೨೩; ಮರಣ—ಪ್ಲೇಗ್ ೪, ವಾಂತಿಭೇದಿ ೮, ಜ್ವರ ೧೮, ಇತರ ಕಾರಣಗಳಿಂದ ೧೦೯, ಅಂತು ಒಟ್ಟು ೧೩೯.

ಸ್ಯಾನಿಟರಿ ಕಮಿಟಿಯವರು ಆಕ್ಟ್ರಾಯಿ ಉತ್ಪತ್ತಿಯ ಬಾಬುಗಳು ಈಗ ಅನೇಕವಾಗಿರುವುದನ್ನು ತಪ್ಪಿಸಿ, ಕೆಲವು ಮುಖ್ಯ ಸರಕುಗಳಿಗೆ ಮಾತ್ರ ಸುಂಕವನ್ನು ವಸೂಲ್ಮಾಡುವಂತಾದರೆ ಶಿಬ್ಬಂದಿಯ ಖರ್ಚು ಕಡಮೆಯಾಗುವುದಕ್ಕೂ ಆಕ್ಟ್ರಾಯಿ ಉತ್ಪತ್ತಿಯು ಈಗ್ಗಿಂತ ಹೆಚ್ಚುವುದಕ್ಕೂ ಅನುಮಾನವಿಲ್ಲವೆಂದು ಸೂಚಿಸಿದ್ದರು. ಕೌನ್ಸೆಲರುಗಳು ಈ ವಿಚಾರವನ್ನು ಕುರಿತು ಚರ್ಚೆಮಾಡಿ, ಒಂದು ಸಬ್ ಕಮಿಟಿಯನ್ನು ಗೊತ್ತುಮಾಡಿದಾರೆ. ಈ ಕಮಿಟಿಯವರು ಆಕ್ಟ್ರಾಯಿ ಇಲಾಖಾ ಶಿಬ್ಬಂದಿಯನ್ನೂ ಸುಂಕದ ಬಾಬುಗಳನ್ನೂ ಕಡಮೆ ಮಾಡುವ ವಿಷಯದಲ್ಲಿ ಕೌನ್ಸಿಲಿಗೆ ರಿಪೋರ್ಟು ಮಾಡತಕ್ಕದ್ದೆಂದು ತೀರ್ಮಾನ ಮಾಡಿದರು.

ರಾಜಧಾನಿಯ ಮ್ಯುನಿಸಿಪಲ್ ಸರಹದ್ದಿನೊಳಗೆ ಇರುವಂಥಾ ತರಿ, ಖುಷ್ಕಿ, ಬಾಗಾಯತು ಜಮೀನುಗಳ ರೆವಿನ್ಯು ಕಂದಾಯಗಳನ್ನು ಸರ್ಕಾರದವರೇ ವಸೂಲ್ಮಾಡಿಕೊಳ್ಳುತ್ತಾರೆ. ಈ ವರಮಾನವನ್ನು ಮ್ಯುನಿಸಿಪಾಲಿಟಿಗೆ ವಹಿಸಿಕೊಡುವ ಭಾಗದಲ್ಲಿ ಕೌನ್ಸೆಲರುಗಳು ಚರ್ಚೆ ಮಾಡಿ, ಈ ಸಂಗತಿಯನ್ನು ಗವರ್ನಮೆಂಟಿಗೆ ತಿಳಿಸಬೇಕೆಂತಲೂ, ಅವರ ಸ್ಯಾಂಕ್ಷನ್ ಪಡೆಯಬೇಕೆಂತಲೂ ಗೊತ್ತುಮಾಡಿದರು.

ಮೆ॥ ರಾಮಸ್ವಾಮಿ ಅಯ್ಯಂಗಾರ್ ಕಂಪನಿಯವರು ಸಕ್ಕರೆ ಕಾರ್ಖಾನೆಗೆ ಬೇಕಾಗುವ ಕುಡಿಯುವ ನೀರನ್ನು ಒದಗಿಸಿ ಕೊಡಬಹುದೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ. ಅಲ್ಲಿಗೆ ನಲ್ಲಿ ಹಾಕಿ ಮೀಟರ್ ಇಡುವುದಕ್ಕೆ ಎಷ್ಟು ಖರ್ಚಾಗುತ್ತದೋ ಕಾರ್ಖಾನೆಯ ಅಂದಾಜು ಪಟ್ಟಿಯನ್ನು ತಯಾರುಮಾಡಿ ಕಳುಹಿಸಬೇಕೆಂದು ಕೌನ್ಸೆಲರುಗಳು ತೀರ್ಮಾನ ಮಾಡಿದರು.

ಈಗ ಆಕ್ಟ್ರಾಯಿ ದರೋಗಿ ಕೆಲಸವನ್ನು ಬದಲಿ ನೋಡುತ್ತಿರುವ ಮೆ॥ ಕೃಷ್ಣಸ್ವಾಮಿಯವರಿಗೆ ಆ ಕೆಲಸಕ್ಕೋಸ್ಕರ ೧೨ ರೂಪಾಯಿ ಅಲೋವೆನ್ಸನ್ನೂ ೧೦ ರೂಪಾಯಿ ಬೈಸಿಕಲ್ ಅಲೋವೆನ್ಸನ್ನೂ ಕೊಡಬಹುದೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ.

ದೊಡ್ಡ ಮನುಷ್ಯರಿಗೂ ಅಧಿಕಾರಿಗಳಿಗೂ ಸರ್ಕಾರದವರು ಕೆಲವು ಗಾಡಿಗಳನ್ನೂ ಕುದುರೆಗಳನ್ನೂ ಇಟ್ಟು, ಅವರುಗಳಿಗೆ ಅಪೇಕ್ಷಿಸಿದಾಗ ಕೊಟ್ಟು, ಅವರಿಂದ ಬಾಡಿಗೆಗಳನ್ನು ವಸೂಲ್ಮಾಡುತ್ತಾರೆ. ಇಂಥಾ ಗಾಡಿ ಕುದುರೆಗಳಿಗೆ ಬೆಂಗಳೂರು ಮ್ಯುನಿಸಿಪಾಲಿಟಿಯಲ್ಲಿ ಮ್ಯುನಿಸಿಪಲ್ ಕಂದಾಯವನ್ನು ಹಾಕಿ ವಸೂಲ್ಮಾಡುವುದಿಲ್ಲವೆಂದು ತಿಳಿದು ಬಂದದ್ದರಿಂದ ಮೈಸೂರಿನಲ್ಲೂ ಆ ಬಾಬನ್ನು ಚರ್ಚಿಸಬೇಕಾದದ್ದಿಲ್ಲವೆಂದು ಕೌನ್ಸೆಲರುಗಳು ಒಪ್ಪಿಕೊಂಡರು.

ಈರನಗೆರೆ ಆಸ್ಪತ್ರೆಗೆ ಮ್ಯುನಿಸಿಪಾಲಿಟಿಯವರೇ ಒಂದು ನೀರಿನ ನಲ್ಲಿ ಇಡಿಸಿಕೊಡಬೇಕೆಂದು ಸಿವಿಲ್ ಸರ್ಜನರವರು ಶಿಫಾರಸು ಮಾಡಿದ್ದರ ಮೇಲೆ ಕೌನ್ಸೆಲರುಗಳು ಅದನ್ನು ಒಪ್ಪಿ, ಅದಕ್ಕೆ ಎಷ್ಟು ಖರ್ಚು ಬರುತ್ತದೋ ಅಂದಾಜುಪಟ್ಟಿ ತಯಾರ್ಮಾಡಿಸಬೇಕೆಂದು ಗೊತ್ತುಮಾಡಿದಾರೆ.

ರೋಮನ್ ಕ್ರಿಸ್ತರ ಗೋರಿಗಳಿರುವ ಪ್ರದೇಶಕ್ಕೆ ಒಂದು ನೀರಿನ ನಲ್ಲಿ ಇಡಿಸುವುದಕ್ಕೆ ಖರ್ಚೇನಾದೀತೆಂದು ಕೌನ್ಸೆಲರುಗಳು ಕೇಳಿದಾರೆ.

ರೈಲ್ ಸ್ಟೇಷನ್ ಬಳಿ ಇರುವ ನಂಜರಾಜಬಹದ್ದೂರ್ 'ಧರ್ಮಸತ್ರ'ದಲ್ಲಿ ಒಂದು ವಾರಕ್ಕಿಂತ ಹೆಚ್ಚಾಗಿ ವಾಸಮಾಡತಕ್ಕವರಿಂದ ಮೇಲ್ವಿಚಾರಣಾ ಕಮಿಟಿಯವರು ಬಾಡಿಗೆ ವಸೂಲ್ಮಾಡುತ್ತಾರೆಂತಲೂ, ಆ ಕಟ್ಟಡಕ್ಕೆ ಮ್ಯುನಿಸಿಪಲ್ ತೆರಿಗೆಯನ್ನು ಹಾಕಿ ವಸೂಲ್ಮಾಡಬೇಕೆಂತಲೂ ಹಿಂದೆ ಚರ್ಚೆಯಾಗಿತ್ತು. ಆ ಕಮಿಟಿಯವರು ತೆರಿಗೆ ಹಾಕುವುದು ತರವಲ್ಲವೆಂದು ಸಮಾಧಾನಗಳನ್ನು ಕೊಟ್ಟು ತಿಳಿಸಿದ್ದರು. ಅದರ ಮೇಲೆ ಸತ್ರದ ಕೊಠಡಿಗಳನ್ನು ಯಾರಿಗೂ ಒಂದು ತಿಂಗಳಿಗಿಂತ ಹೆಚ್ಚಾಗಿಗೆ ಕೊಡದೆ, ಪ್ರಯಾಣಿಕರಿಗೆ ಇಳಿದುಕೊಳ್ಳುವುದಕ್ಕೆ ವಸತಿ ಮಾಡಿಕೊಡುತ್ತಾ ಬಂದಪಕ್ಷದಲ್ಲಿ ತೆರಿಗೆಯನ್ನು ವಸೂಲ್ಮಾಡಬೇಕಾದದ್ದಿಲ್ಲವೆಂದು ಕೌನ್ಸೆಲರುಗಳು ತೀರ್ಮಾನಿಸಿದರು.

ಕೋಟೆಯಲ್ಲಿ ಶ್ರೀಮನ್ಮಹಾರಾಜರವರು ವಾಸಮಾಡುತ್ತಾರಾದ್ದರಿಂದ ಅಲ್ಲಿರುವ ಕೊಳಕಾದ, ಒತ್ತಾದ ಮತ್ತು ಅನಾರೋಗ್ಯಕರವಾದ ಮನೆಗಳನ್ನು ಒಡೆದು, ಬಯಲಾಗಿಯೂ ನಿರ್ಮಲವಾಗಿಯೂ ಮಾಡಿಡಬೇಕಾದದ್ದು ಅಗತ್ಯವಾಗಿದೆ ಎಂದು ಚೀಫ್ ಇಂಜನಿಯರವರು ಗವರ್ನಮೆಂಟಿಗೆ ಬರೆದರು. ಗವರ್ನಮೆಂಟಿನವರು ಮ್ಯುನಿಸಿಪಲ್ ಕೌನ್ಸೆಲರುಗಳಿಗೆ ತಿಳಿಸಿ ಅವರ ಅಭಿಪ್ರಾಯವೇನೆಂದು ಕೇಳಿದರು. ಮ್ಯುನಿಸಿಪಾಲಿಟಿಯವರು ಈ ವಿಚಾರವು ತಮಗೆ ಸಂಬಂಧಪಡುವುದಿಲ್ಲವೆಂತಲೂ ಟ್ರಸ್ಟ್ ಬೋರ್ಡಿನಿಂದ ನಡೆಯಬೇಕಾಗಿದೆ ಎಂತಲೂ ರಿಪೋರ್ಟು ಮಾಡಿದರು. ಇದಕ್ಕಾಗಿ ಗವರ್ನಮೆಂಟಿನವರು ಸುಮಾರು ೯೦ ಸಾವಿರ ರೂಪಾಯಿ ಸ್ಯಾಂಕ್ಷನ್ಮಾಡಿ, ಟ್ರಸ್ಟ್ ಬೋರ್ಡಿನವರು ನಾಳೆ ಜೂಲೈ ಗುರುವಾರದಿಂದ ಕೆಲಸ ಪ್ರಾರಂಭಿಸಬೇಕೆಂದು ಹುಕುಂ ಕೊಟ್ಟಿದಾರೆ.

ಮಳವಳ್ಳಿ ರೈತರೂ ಗೋಮಾಳವೂ.

ಮೈಸೂರು ಸರ್ಕಾರದ ಹುಕುಂನಾಮೆ.

ಫಾರೆಸ್ಟ್ ಕನ್ಸರ್ವೇಟರವರು ಮಳವಳ್ಳಿ ತಾಲ್ಲೂಕಿಗೆ ಸೇರಿದ ಧನಗೂರು, ಹಲಸನಹಳ್ಳಿ ಮೊದಲಾದ ಕೆಲವು ಗ್ರಾಮಗಳ ಹಿಡುವಳಿ ಜಮೀನುಗಳಲ್ಲೂ ಗೋಮಾಳಗಳಲ್ಲೂ ಬಹು ಭಾಗವನ್ನು ಸೇರಿಸಿಕೊಂಡು, ಧನಗೂರು ಸ್ಟೇಟ್ ಫಾರೆಸ್ಟ್ ಮಾಡಬೇಕೆಂದು ಗವರ್ನಮೆಂಟಿಗೆ ಶಿಫಾರಸು ಮಾಡಿದರು. ಮತ್ತು ಆ ಜಮೀನುಗಳನ್ನೂ ಗೋಮಾಳದ ಕೆಲವು ಭಾಗವನ್ನೂ ಹಾಗೆ ಸೇರಿಸದೆ ಹೋದರೆ ಸ್ಟೇಟ್ ಫಾರೆಸ್ಟ್ ವಕ್ರವಾಗುವುದೆಂತಲೂ ತಿಳಿಸಿದರು. ಅದರ ಮೇಲೆ ಆ ಗ್ರಾಮಗಳ ರೈತಪ್ರಜೆಗಳು ತಮ್ಮ ಗೋಕಾಯಿಗಳಿಗೆ ತಕ್ಕಷ್ಟು ಗೋಮಾಳ ದೊರಕುವುದಿಲ್ಲವೆಂತಲೂ, ಗೃಹಕೃತ್ಯ ಕೆಲಸಗಳಿಗೆ ಸೌದೆ ಮೊದಲಾದವು ಸಿಕ್ಕದೆ ಬಹಳ ಕಷ್ಟವಾದೀತೆಂತಲೂ, ಆದ್ದರಿಂದ ಕನ್ಸರ್ವೇಟರವರು ಶಿಫಾರಸು ಮಾಡಿರುವಂತೆ ಆ ಜಮೀನುಗಳನ್ನೂ ಗೋಮಾಳಗಳನ್ನೂ ಸ್ಟೇಟ್ ಫಾರೆಸ್ಟಿಗೆ ಸೇರಿಸಿಕೊಳ್ಳಕೂಡದೆಂತಲೂ ಗವರ್ನಮೆಂಟಿಗೆ ಅರ್ಜಿಯನ್ನು ಬರೆದುಕೊಂಡರು.

ರೆವಿನ್ಯು ಕಮಿಷನರವರು ಸೆಟ್ಲ್ಮೆಂಟ್ ಆಫೀಸರವರ ರಿಪೋರ್ಟು ಕಳುಹಿಸಿದ್ದಲ್ಲದೆ, ಧನಗೂರು, ಹಲಸನಹಳ್ಳಿಗಳಿಗೆ ಬಿಟ್ಟುಕೊಟ್ಟಿರುವ ಗೋಮಾಳದ ಜಮೀನು ಅಲ್ಲಿನ ರೈತಪ್ರಜೆಗಳ ಗೋಕಾಯಿಗಳಿಗೆ ಸಾಕಾಗುವುದಿಲ್ಲವೆಂತಲೂ, ಅವರ ಪ್ರಾರ್ಥನೆಯಂತೆ ಹೆಚ್ಚು ಜಮೀನು ಬಿಟ್ಟುಕೊಡಬೇಕೆಂತಲೂ ಗವರ್ನಮೆಂಟಿಗೆ ಶಿಫಾರಸು ಮಾಡಿದರು.

ಕನ್ಸರ್ವೇಟರವರು ಗವರ್ನಮೆಂಟಿಗೆ ತಿಳಿಸಿದ್ದೇನೆಂದರೆ—ಹಲಸನಹಳ್ಳಿಯ ರೈತರ ಗೋಕಾಯಿಗಳಿಗೆ ಅವಶ್ಯವಾದರೆ ವಿದ್ಯುಚ್ಛಕ್ತಿಯ ಕಂಬಗಳ ಲೈನಿನಿಂದ ಉತ್ತರಕ್ಕೆ ಕೆಲವು ಜಮೀನುಗಳನ್ನು ಫಾರೆಸ್ಟಿನಿಂದ ತೆಗೆದು ಕೊಡಬಹುದು. ಆದರೆ ಧನಗೂರು ರೈತರಿಗೆ ಫಾರೆಸ್ಟಿನಿಂದ ಜಮೀನು ಬಿಟ್ಟುಕೊಡುವುದು ಸಾಧ್ಯವಲ್ಲ. ಇದರಿಂದ ಸ್ಟೇಟ್ ಫಾರೆಸ್ಟು ನಿಷ್ಪ್ರಯೋಜಕವಾಗುವುದು. ಈ ಗ್ರಾಮಗಳ ರೈತರು ಗೋಕಾಯಿಗಳನ್ನು ವ್ಯಾಪಾರಕ್ಕಾಗಿ ಸಾಕತಕ್ಕವರಾಗಿದಾರೆ. ಆದ್ದರಿಂದ ಅವರ ಗೋಕಾಯಿಗಳಲ್ಲಿ ೫೦೦ ರಾಸುಗಳನ್ನು ಹಸು ಎತ್ತುಗಳಿಗೆ ತಲಾ ಮೂರು ಆಣೆಯಂತೆಯೂ, ಎಮ್ಮೆಗಳಿಗೆ ತಲಾ ಆರು ಆಣೆಯಂತೆಯೂ ರುಸುಂ ಕೊಡುವುದಾದರೆ ಫಾರೆಸ್ಟಿನೊಳಕ್ಕೆ ಬಿಟ್ಟು ಮೇಯಿಸುವಂತೆ ಅವಕಾಶಕೊಡಬಹುದು ಎಂಬೀ ರೀತಿಯಾಗಿ ತಿಳಿಸಿದರು.

ಇದನ್ನೆಲ್ಲಾ ಪರ್ಯಾಲೋಚಿಸಿ ಗವರ್ನಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ—ಈ ಎರಡು ಗ್ರಾಮಗಳಿಗೂ ಈಗ ಬಿಟ್ಟುಕೊಟ್ಟಿರುವ ಗೋಮಾಳಗಳು ರೈತರ ಗೋಕಾಯಿಗಳಿಗೆ ಸಾಕಾಗುವುದಿಲ್ಲವೆಂದು ಮೇಲ್ಕಂಡ ರಿಪೋರ್ಟುಗಳಿಂದ ತಿಳಿದು ಬರುತ್ತದೆ. ಆ ರೈತರು ಮಾರಿಕೆಗಾಗಿ ಗೋಕಾಯಿಗಳನ್ನು ಸಾಕತಕ್ಕವರಾದ ಮಾತ್ರಕ್ಕೇ ಅವರಿಗಿರುವ ಗೋಮಾಳವನ್ನು ಕಡಮೆಮಾಡಬೇಕೆಂಬ ಆಗತ್ಯ ಕಾಣುವುದಿಲ್ಲ. ಗೋಕಾಯಿಗಳನ್ನು ಸಾಕುವುದೂ ಅವುಗಳನ್ನು ಅಭಿವೃದ್ಧಿಗೆ ತರುವುದೂ ಒಂದು ಕಸಬಾಗಿರುತ್ತದೆ. ಆ ಕಸಬಿಗೆ ತಕ್ಕ ಪ್ರೋತ್ಸಾಹಗಳನ್ನು ಕಲ್ಪಿಸಬೇಕಾಗಿರುವುದು. ಮತ್ತು ಬಹು ಮಂದಿ ರೈತರುಗಳು ವ್ಯವಸಾಯಗಾರರಾಗಿರುವಲ್ಲಿ ಮಾರಿಕೆಗಾಗಿ ಸಾಕುವ ಗೋಕಾಯಿಗಳೆಂತಲೂ ವ್ಯವಸಾಯಕ್ಕಾಗಿ ಇಟ್ಟಿರುವ ರಾಸುಗಳೆಂತಲೂ ತಾರತಮ್ಯ ಮಾಡುವುದು ಸಾಧ್ಯವಲ್ಲ. ಆದ್ದರಿಂದ ತಕ್ಕಷ್ಟು ಮಾಫಿಯಾದ ಗೋಮಾಳವು ಇರಬೇಕಾದದ್ದು ಬಹಳ ಅವಶ್ಯವಾಗಿರುತ್ತದೆ.

ಧನಗೂರಿನಲ್ಲಿ ೧,೪೦೩ ಎಕರೆಗಳು ಹಿಡುವಳಿ ಜಮೀನಾಗಿಯೂ, ೧,೨೦೦ ಎಕರೆಯಷ್ಟು ಗೋಮಾಳವಾಗಿಯೂ ಇದೆ. ಈ ಪೈಕಿ ೮೮ ಎಕರೆ ಹಿಡುವಳಿ ಜಮೀನನ್ನೂ, ೧,೦೩೨ ಎಕರೆ ಗೋಮಾಳವನ್ನೂ ಫಾರೆಸ್ಟಿನೊಳಕ್ಕೆ ಸೇರಿಸಿಕೊಳ್ಳಬೇಕೆಂದು ಕನ್ಸರ್ವೇಟರವರು ತಿಳಿಸುತ್ತಾರೆ. ಇದಲ್ಲದೆ ಖರಾಬು ಜಮೀನು ೮೦ ಎಕರೆಯಷ್ಟಿರುವುದನ್ನು ಗೋಮಾಳಕ್ಕೆ ಬಿಟ್ಟರೂ ಅದು ದನಗಳ ಮೇವಿಗೆ ಯೋಗ್ಯವಾದದ್ದೆಂದು ಹೇಳಲಾಗದು. ಒಂದುವೇಳೆ ಅದನ್ನೂ ಗೋಮಾಳಕ್ಕೆ ಸೇರಿಸಿ ಕೊಟ್ಟರೂ ೨೫೦ ಎಕರೆ ಗೋಮಾಳವಾದೀತು. ಇದು ಆ ಗ್ರಾಮದಲ್ಲಿರುವಂಥಾ ೫೬೨ ರಾಸುಗಳಿಗೆ ಸಾಕಾಗುವುದಿಲ್ಲ. ಫಾರೆಸ್ಟನ್ನು ಇನ್ನೂ ಕಡಮೆ ಮಾಡಿ ಸರಿಯಾಗಿ ಎಲ್ಲೆ ಕಟ್ಟನ್ನು ಕಟ್ಟಿದರೆ ಇನ್ನೂ ೧೦೦ ಎಕರೆ ಜಮೀನು ದೊರಕುವುದು. ಇದನ್ನು ಗೋಮಾಳಕ್ಕೆ ಬಿಟ್ಟುಕೊಡತಕ್ಕದ್ದು.

ಹಲಸನಹಳ್ಳಿಯಲ್ಲಾದರೋ ೮೪೮ ಎಕರೆ ಹಿಡುವಳಿ ಜಮೀನೂ, ೧೮೧ ಎಕರೆ ಗೋಮಾಳದ ಜಮೀನೂ ಇರುತ್ತದೆ. ಈ ಗೋಮಾಳದಲ್ಲಿ ಗ್ರಾಮಸ್ಥರ ೫೪೩ ರಾಸುಗಳಿಗೆ ೬೬ ಎಕರೆಯಷ್ಟನ್ನು ಗೋಮಾಳನಾಗಿ ಬಿಟ್ಟುಕೊಟ್ಟು, ೧೧೫ ಎಕರೆಯನ್ನು ಫಾರೆಸ್ಟಿಗೆ ಸೇರಿಸಿಕೊಳ್ಳಬೇಕೆಂದು ಕನ್ಸರ್ವೇಟರವರು ತಿಳಿಸುತ್ತಾರೆ. ಇದರ ಜೊತೆಗೆ ಅಲ್ಲಿರುವ ಸುಮಾರು ೬೦ ಎಕರೆ ಖರಾಬ್ ಜಮೀನನ್ನು ಸೇರಿಸಿಕೊಟ್ಟರೂ ಗೋಮಾಳಕ್ಕೆ ಸಾಕೆಂದು ಹೇಳುವುದಕ್ಕಾಗುವುದಿಲ್ಲ. ವಿದ್ಯುಚ್ಛಕ್ತಿಯ ಲೈನಿನಿಂದ ಉತ್ತರ ಭಾಗದ ಜಮೀನನ್ನು ಫಾರೆಸ್ಟಿನಿಂದ ಬಿಡಿಸಿಕೊಡುವುದಾಗಿ ಕನ್ಸರ್ವೇಟರವರು ಸೂಚಿಸುತ್ತಾರೆ. ಅದನ್ನು ಗವರ್ನಮೆಂಟಿನವರು ಒಪ್ಪಿಕೊಳ್ಳುವರು. ಹೀಗೆ ಮಾಡಿದರೆ ಹಲಸನಹಳ್ಳಿಯಲ್ಲಿ ಇನ್ನೂ ೪೩೫ ಎಕರೆ ಜಮೀನು ರೈತರಿಗೆ ಗೋಮಾಳಕ್ಕಾಗಿ ದೊರಕುವುದು.

ಮೇಲ್ಕಂಡ ರೀತಿ ಸ್ಟೇಟ್ ಫಾರೆಸ್ಟಿನಲ್ಲಿ ಬದಲಾವಣೆ ಮಾಡಿ ಜಾರಿಗೆ ತರಬೇಕೆಂದು ಫಾರೆಸ್ಟ್ ಸೆಟ್ಲ್ಮೆಂಟ್ ಆಫೀಸರಿಗೆ ಗವರ್ನಮೆಂಟಿನಿಂದ ಹುಕುಂ ಆಗಿದೆ.

ಗತಿಸಿದ ಸರ್ ಹೆನ್ರಿ ಕ್ಯಾಂಬೆಲ್-ಬ್ಯಾನರ್ಮನ್ನರವರು.

ಇಂಗ್ಲಿಷ್ ಚಕ್ರಾಧಿಪತ್ಯದ ಮಂತ್ರಿ ಶ್ರೇಷ್ಠರಾಗಿದ್ದ ಸರ್ ಹೆನ್ರಿ ಕ್ಯಾಂಬೆಲ್-ಬ್ಯಾನರ್ಮನ್ನರವರು ಕಳೆದ ತಾ. ೨೨ನೇ ಬುಧವಾರ ಬೆಳಿಗ್ಗೆ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಈ ವಿಷಯದಲ್ಲಿ ಲಂಡನ್ ಪಟ್ಟಣದಿಂದ ಕಳೆದ ವಾರ ಬಂದಿರುವ ತಂತೀ ವರ್ತಮಾನಗಳೇನೆಂದರೆ—

ಲಂಡನ್, ಏಪ್ರಿಲ್ ೨೨ನೇ ಬುಧವಾರ—ಸರ್ ಹೆ. ಕ್ಯಾಂಬೆಲ್-ಬ್ಯಾನರ್ಮನ್ನರವರು ಈ ದಿನ ಬೆಳಿಗ್ಗೆ ೯ ೧೫ ಗಂಟೆಯಲ್ಲಿ ಕಾಲವಾದರು. ಅವರ ಹೃದಯವು ಕೆಲಸಮಾಡದೆ ನಿಂತದ್ದರಿಂದ ಮರಣ ಸಂಭವಿಸಿತು. ಅವರಿಗೆ ೩೬ ಗಂಟೆಗಳಿಂದ ಜ್ಞಾನ ತಪ್ಪಿಹೋಗಿತ್ತು. ಅವರ ಬಳಿ ಅವರ ಒಬ್ಬ ಬಂಧುವೂ, ಡಾಕ್ಟರ್ ಬರ್ನೆಟ್ ರವರೂ, ನರ್ಸ್ ಎಂಬ ಒಬ್ಬ ಶೈತ್ಯೋಪಚಾರಕ ಸ್ತ್ರೀಯೂ ಇದ್ದರು. ಸರ್ ಹೆನ್ರಿಯವರು ತಮ್ಮ ಶವವನ್ನು ಪರ್ತ್ ಡಿಸ್ಟ್ರಿಕ್ಟಿಗೆ ಸೇರಿದ ಬೆಲ್ಮಾಂಟ್ ಎಂಬ ಸ್ಥಳದಲ್ಲಿ ತಮ್ಮ ಪತ್ನಿಯ ಸಮಾಧಿಯ ಪಕ್ಕದಲ್ಲೇ ಗೋರಿಮಾಡಬೇಕೆಂದು ತಿಳಿಸಿದ್ದಾರೆ. ಅದರಂತೆ ಉತ್ತರ ಕ್ರಿಯೆಗಳು ನಡೆಯುವವು.

ವಿಲಾಯತಿಯ ವರ್ತಮಾನ ಪತ್ರಿಕೆಗಳೆಲ್ಲಾ ಅವರ ಜೀವ ಚರಿತ್ರೆಯನ್ನು ಬರೆದು ಅವರು ಕಾಲವಾದ ವಿಷಯದಲ್ಲಿ ವಿಷಾದವನ್ನು ಸೂಚಿಸಿರುತ್ತವೆ. ರಾಜತಂತ್ರಜ್ಞರಲ್ಲಿ ಮಂತ್ರಿಯವರ ಕಕ್ಷಿಯವರೂ ಅವರ ವಿರೋಧ ಪಕ್ಷದವರೂ ಒಂದೇ ಸಮನಾಗಿ ವ್ಯಸನ ಪಡುತ್ತಿದಾರೆ. ಗೌರವಾರ್ಥವಾಗಿ ಅನೇಕ ಬಾವುಟಗಳು ಅರ್ಧ ಇಳಿಸಲ್ಪಟ್ಟವು.

ಕೇಪ್ ಕಾಲನಿಯ ಪ್ರತಿನಿಧಿ ಸಮಾಜದಲ್ಲಿ ಮೆಂಬರುಗಳು ಬಹಳ ವ್ಯಸನಪಟ್ಟು, ಆ ಅರ್ಥಕ್ಕೆ ರೆಜಲ್ಯೂಷನ್ನುಗಳ್ ಮಾಡಿದ್ದಲ್ಲದೆ ಇಂಥಾ ಮಂತ್ರಿ ಶ್ರೇಷ್ಠರು ಕಾಲವಾದ್ದರಿಂದ ರಾಜ್ಯಕ್ಕೆ ತುಂಬಾ ನಷ್ಟವಾಯಿತೆಂದು ಹೇಳಿದರು. ಕೇಪ್ ಕಾಲನಿಯ ಮಂತ್ರಿಗಳಾದ ಮೆ॥ ಮೆರಿಮ್ಯಾನರವರು ಎದ್ದು ಸಭಿಕರನ್ನು ಕುರಿತು ದಕ್ಷಿಣ ಆಫ್ರಿಕವೆಲ್ಲಾ ಒಂದೇ ರಾಜ್ಯಾಂಗವಾದದ್ದು ಸರ್ ಹೆನ್ರಿಯವರಿಂದಲೇ ಎಂತಲೂ, ಆ ಕೀರ್ತಿಯು ಅವರಿಗೆ ಸಲ್ಲತಕ್ಕದೆಂತಲೂ, ಇದಕ್ಕಾಗಿ ದಕ್ಷಿಣ ಆಫ್ರಿಕವು ಆ ಪುರುಷನ ಉಪಕಾರವನ್ನು ಎಂದಿಗೂ ಮರೆಯಲಾರದೆಂತಲೂ ತಿಳಿಸಿದರು.

ಲಂಡನ್, ಏಪ್ರಿಲ್ ೨೩ ನೇ ಗುರುವಾರ—ತಾ ೨೭ ರಲ್ಲಿ ಸರ್ ಹೆನ್ರಿ ಕ್ಯಾಂಬೆಲ್-ಬ್ಯಾನರ್ಮನ್ನರವರ ಶವವನ್ನು ವೆಸ್ಟ್ ಮಿನಿಸ್ಟರ್ ಆಬಿ ಎಂಬ ರಾಜಭವನದ ದೇವಾಲಯಕ್ಕೆ ತೆಗೆದುಕೊಂಡು ಹೋಗಿ ಉತ್ತರಕ್ರಿಯೆಗಳು ನಡೆದ ಮೇಲೆ ಮರುದಿನ ಬೆಲ್ಮಾಂಟಿನಲ್ಲಿ ಸಮಾಧಿ ಮಾಡತಕ್ಕದ್ದೆಂದು ನಿಷ್ಕರ್ಷೆಯಾಗಿದೆ.

ಸರ್ ಹೆನ್ರಿಯವರ ಮರಣದಿಂದ ಅವರ ಪಕ್ಷದ ರಾಜತಂತ್ರಜ್ಞರಿಗೆ ಬಹಳ ನಷ್ಟವಾಯಿತು; ಅವರಿಂದ ಲಿಬರಲ್ ಪಕ್ಷದವರಿಗಿದ್ದ ಬಲವು ಬಹುಮಟ್ಟಿಗೆ ಕಡಮೆಯಾಗದೆ ಎಂಬದಾಗಿ ವಿಲಾಯತಿಯ ಪತ್ರಿಕೆಗಳೆಲ್ಲಾ ನುಡಿಯುತ್ತಿರುವವು ಎಂಬಿವೆ.

ಗತಿಸಿದ ಸರ್ ಹೆನ್ರಿ ಕ್ಯಾಂಬೆಲ್-ಬ್ಯಾನರ್ಮನ್ನರವರು ಲೇಟ್ ಸರ್ ಜೇಂಸ್ ಕ್ಯಾಂಬೆಲ್‌ರವರ ಎರಡನೆಯ ಮಗನಾಗಿ ಗ್ಲಾಸ್ಗೋ ಡಿಸ್ಟ್ರಿಕ್ಟಿಗೆ ಸೇರಿದ ಸ್ಟ್ರಾಕ್ಯಾಥ್ರೊ ಎಂಬ ಊರಿನಲ್ಲಿ ಕಳೆದ ೧೮೩೬ ನೆ ಇಸವಿಯಲ್ಲಿ ಜನಿಸಿ, ಗ್ಲಾಸ್ಗೊ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಗಳಲ್ಲಿ ೧೮೫೮ ನೇ ಇಸವಿಯ ತನಕ ವಿದ್ಯಾಭ್ಯಾಸ ಮಾಡಿ, ಬಿ. ಎ. ಪರೀಕ್ಷೆಯನ್ನು ಕೊಟ್ಟರು. ಇವರ ಚಿಕ್ಕಪ್ಪನ ಮರಣಶಾಸನದ ಪ್ರಕಾರ ಇವರು ಬ್ಯಾನರ್ಮನ್ ಎಂಬ ಹೆಸರನ್ನು ೧೮೭೨ರಲ್ಲಿ ಇಟ್ಟುಕೊಂಡರು. ೧೮೬೮ರಲ್ಲಿ ಇವರು ಸ್ಟರ್ಲಿಂಗ್‌ಬರೋನ ಪ್ರಜೆಗಳಿಂದ ಪಾರ್ಲಿಮೆಂಟ್ ಮೆಂಬರಾಗಿ ಚುನಾಯಿಸಲ್ಪಟ್ಟರು. ಆ ಲಾಗಾಯತು ಆಮರಣಾಂತವೂ ಅವರು ರಾಜಕೀಯ ವಿಚಾರಗಳಲ್ಲಿಯೇ ಮಗ್ನರಾಗಿದ್ದರು. ಇವರಿಗೆ ಎರಡು ಸಲ ವಿಲಾಯತಿ ರಾಜ್ಯದ ಖಜಾನಾ ಇಲಾಖೆಯವರ ಸೆಕ್ರೆಟರಿ ಕೆಲಸವಾಯಿತು. ತರುವಾಯ ೧೮೮೪ ರಲ್ಲಿ ಸರ್ ಹೆನ್ರಿಯವರು ಐರ್ಲಾಂಡಿನ ಛೀಫ್ ಸೆಕ್ರೆಟರಿಗಳಾದರು. ಅಲ್ಲಿನ ಪ್ರಜೆಗಳು ಇವರನ್ನು ಬಹಳ ಪ್ರೀತಿ ಗೌರವಗಳಿಂದ ಕಾಣುವಂತೆ ಕಾರ್ಯಗಳನ್ನು ನಡಿಸಿದರು. ಅನಂತರ ಲೇಟ್ ಗ್ಲಾಡ್‌ಸ್ಟನ್‌ರವರು ಮಂತ್ರಿಶ್ರೇಷ್ಠರಾಗಿದ್ದಾಗ ಎರಡು ವೇಳೆ ಸರ್ ಹೆನ್ರಿಯವರು ಯುದ್ಧದ ಇಲಾಖಾ ಸೆಕ್ರೆಟರಿಗಳಾಗಿದ್ದರು. ೧೮೯೦ ನೆ ಇಸವಿಯಿಂದೀಚೆಗೆ ಸರ್ ಹೆನ್ರಿ ಕ್ಯಾಂಬೆಲ್-ಬ್ಯಾನರ್ಮನ್ನರವರ ಹೆಸರು ತುಂಬಾ ಪ್ರಮುಖ್ಯತೆಗೆ ಬಂದಿತು. ಇವರು ಅಭಿಪ್ರಾಯ ಪಟ್ಟಂತೆ ಗವರ್ನಮೆಂಟಿನ ಕಾರ್ಯ ನಡಿಯದೆ ಹೋದಾಗ ಇವರ ಪ್ರೋತ್ಸಾಹದಿಂದಲೇ ಇವರ ಸಹೋದ್ಯೋಗಿಗಳೆಲ್ಲಾ ಅಧಿಕಾರಕ್ಕೆ ರಾಜೀನಾಮೆ ಕೊಟ್ಟುಬಿಟ್ಟರು. ಲಾರ್ಡ್ ರೋಸ್‌ಬರಿ, ಸರ್ ವಿಲ್ಯಂ ಹಾರ್ಕೋರ್ಟ್ ಎಂಬವರಿಗಿಂತಲೂ ಸರ್ ಹೆನ್ರಿಯವರೇ ಬಹಳ ಸಾಹಸಪಟ್ಟು ಲಿಬರಲ್ ಸಂಗಡದ ಪ್ರಧಾನಮನುಷ್ಯರಿಗೆಲ್ಲಾ ತಾವೇ ಮುಂದಾಳಾಗಿ ನಿಂತುಕೊಂಡರು. ಇವರ ಚಾರಿತ್ರ ಬುದ್ಧಿಯೂ, ಸಜ್ಜನಗುಣವೂ, ವಾಚಾಳಿತ್ವವೂ, ವಿಶೇಷ ಪರಿಶ್ರಮವೂ ಅಸಾಧಾರಣಗಳಾಗಿದ್ದವು. ದಕ್ಷಿಣ ಆಫ್ರಿಕಾದಲ್ಲಿ ಬೋಯರರ ಯುದ್ಧ ನಡೆದ ಈಚೆಗೆ ಸುಮಾರು ೨೩ ತಿಂಗಳಿಂದ ಲಿಬರಲ್ ಪಾರ್ಟಿಯವರು ಇಂಗ್ಲಿಷ್ ರಾಜ್ಯಭಾರವನ್ನು ನಡಿಸುವುದಕ್ಕೆ ಬಂದರು. ಅಂದಿನಿಂದ ಸರ್ ಹೆನ್ರಿಯವರು ಹೌಸ್ ಆಫ್ ಲಾರ್ಡ್ಸ್ ಎಂಬ ಸಭೆ ಮನೆಯನ್ನು ತೆಗೆದುಬಿಡಬೇಕೆಂದು ಪ್ರಯತ್ನಪಟ್ಟು, ಆ ಸಭೆಯವರ ಸ್ವಾತಂತ್ರ್ಯಗಳನ್ನು ಸ್ವಲ್ಪಮಟ್ಟಿಗೆ ಮಾತ್ರ ಕೋತಾ ಮಾಡುವುದಾಗಿ ತಿಳಿಸಿದರು. ವಿದ್ಯಾಭ್ಯಾಸವನ್ನು ಕ್ರಮಪಡಿಸುವ ಭಾಗದಲ್ಲಿ ಅವರ ಪ್ರಯತ್ನ ಪಟ್ಟದ್ದು ಆಚರಣೆಗೆ ಬರಲಿಲ್ಲ. ಪ್ರಪಂಚದ ಇತರ ರಾಜ್ಯಗಳವರೆಲ್ಲಾ ಯುದ್ಧದ ಇಲಾಖೆಯ ಖರ್ಚನ್ನು ಕಡಮೆ ಮಾಡಬೇಕೆಂದು ಸರ್ ಹೆನ್ರಿಯವರು ಎಲ್ಲರಿಗೂ ಸೂಚಿಸಿ ಅದಕ್ಕಾಗಿ ಸಾಹಸಪಟ್ಟರು. ಇದೂ ಸಾಧ್ಯವಾಗಲಿಲ್ಲ. ಅಂತು ಅವರು ಕಾಯಿಲೆ ಬಿದ್ದು ಖಿಲವಾಗದೆಹೋಗಿದ್ದರೆ ಮೇಲ್ಕಂಡ ವಿಷಯಗಳಲ್ಲಿ ಬಹುಭಾಗವು ನೆರವೇರಬಹುದಾಗಿತ್ತೆಂದು ಅವರ ಪಕ್ಷದವರು ನಿರೀಕ್ಷಿಸಿದ್ದರು.

ಗತಿಸಿದ ಮೆ॥ ಎಂ. ಎನ್. ಶ್ರೀನಿವಾಸರಾವ್. ಬಿ. ಎ. ಬಿ. ಎಂ. ಇ. ಯವರು.

ಹಿಂದೂಸ್ಥಾನವನ್ನು ದಾಸ್ಯವೃತ್ತಿಯಿಂದ ಉದ್ಧಾರಮಾಡಬಲ್ಲ ಮಹಾ ಸಾಮರ್ಥ್ಯಶಾಲಿಗಳಾದ ಬಹುಮಂದಿ ಪುತ್ರರು ಅಕಾಲಮೃತ್ಯುವಿನ ಬಾಯಿಗೆ ಗ್ರಾಸವಾಗುವರು. ನಮ್ಮ ಮೈಸೂರು ದೇಶವು ಈ ವಿಷಯದಲ್ಲಿ ಅತ್ಯಂತ ನಿರ್ಭಾಗ್ಯಶಾಲಿನಿಯಾಗಿದೆ. ಲೆಕ್ಕಹಾಕಿ ನೋಡಿದರೆ ಮೈಸೂರಿನಲ್ಲಿಯೂ ಬಹಳ ಸಮರ್ಥರಾಗಿ ಅಪ್ರತಿಮರಾಗಿ ಅತ್ಯಲ್ಪ ವಯಸ್ಸಿನಲ್ಲಿಯೇ ಅಸಾಧಾರಣ ಬುದ್ಧಿಯನ್ನು ತೋರ್ಪಡಿಸಿ, ವಿಶೇಷ ಯಶಸ್ಸು ಸಂಪಾದಿಸಿದ ಪುರುಷರನೇಕರು ಕ್ರೂರಕಾಲನ ಕೈಗೆ ಅಕಸ್ಮಾತ್ತಾಗಿ ಸಿಕ್ಕಿ, ತಮ್ಮ ರಾಜ್ಯದಲ್ಲಿಯೂ ಉಳಿದ ಕಡೆಗಳಲ್ಲೂ ಅಪಾರವಾದ ಶೋಕವನ್ನುಂಟುಮಾಡಿರುವರು. ಕಾಡ್ಯದ ದಾಸಪ್ಪನವರು, ಪದ್ಮನಾಭ ಐಯ್ಯಂಗಾರರು, ಕಸ್ತೂರಿ ಐಯಂಗಾರರು, ಈ ಮೊದಲಾದ ಅನೇಕಾನೇಕರು ತಮ್ಮ ಅದ್ಭುತಶಕ್ತಿಯನ್ನು ಅತಿ ಸ್ವಲ್ಪ ಜೀವಮಾನದಲ್ಲಿಯೇ ಬಹುವಾಗಿ ತೋರಿಸಿ ಹೋದರು.

ಈ ಏಪ್ರಿಲ್ ತಾ ೨೩ನೆಯ ಸೋಮವಾರ ಮೆ॥ ತಾತಾಸೇಟರ ಬಳಿಯ ಇಲೆಕ್ಟ್ರಿಕ್ ಮುಖ್ಯ ಅಧಿಪತಿಗಳಾಗಿದ್ದು ಹಿಂದೂಸ್ಥಾನದಲ್ಲೆಲ್ಲಾ ಮಹಾ ವಿಖ್ಯಾತರಾಗಿ ಅತ್ಯಂತ ಕೀರ್ತಿಯಿಂದ ಹೆಸರುಗೊಂಡಿದ್ದ ಮೆ॥ ಎಂ. ಎನ್. ಶ್ರೀನಿವಾಸರಾವ್‌ಯವರು ಬಂಗಾಳದ ಜರಿಯಾ ಎಂಬ ಸ್ಥಳದಲ್ಲಿ ಕಾಲರಾ ಉಪದ್ರದಿಂದ ಕಾಲವಶರಾದರು. ಇವರ ಮರಣವು ಅತ್ಯಂತ ಶೋಚನೀಯವಾದುದು. ಇಡೀ ಹಿಂದೂಸ್ಥಾನವು ತನ್ನ ವಿಮೋಚನೆಗಾಗಿ ಸಂಪೂರ್ಣ ಭರವಸೆಯನ್ನಿಟ್ಟುಕೊಂಡಿದ್ದ, ಅಸಾಧಾರಣ ಬುದ್ಧಿಶಾಲಿಯಾದ ಈ ಪುರುಷರತ್ನವನ್ನೂ, ಪ್ರಪಂಚದಲ್ಲೆಲ್ಲಾ ಪ್ರಸಿದ್ಧರಾದ ಮೆ॥ ತಾತಾಸೇಟರು ಮೊಟ್ಟಮೊದಲಿನಿಂದ ಪ್ರಿಯಮಿತ್ರನಾಗಿ ವಿಶ್ವಾಸಶಾಲಿಯಾಗಿ ಈಗ ಏರ್ಪಡಿಸಿರುವ ಕಬ್ಬಿಣದ ಕಂಪನಿಯ ಅತ್ಯುನ್ನತಸ್ಥಿತಿಗೆ ಬರಲು ಮುಖ್ಯ ಕಾರಣೀಭೂತನಾಗಿದ್ದ ಅಧಿಕಾರಿಯನ್ನೂ ಕಳೆದುಕೊಂಡರು.

ಗತಿಸಿದ ಮೆ॥ ಶ್ರೀನಿವಾಸರಾಯರು ಬೆಂಗಳೂರಿನಲ್ಲಿ ಜನ್ಮವೆತ್ತಿ ಕೋಲಾರದ ಹೈ ಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ವಿಶಾಲ ಬುದ್ಧಿಯನ್ನು ಬಾಲ್ಯದಲ್ಲಿಯೇ ತೋರಿಸಿ, ೧೮೯೦ ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉಚ್ಚಸ್ಥಾನದಲ್ಲಿ ಉತ್ತೀರ್ಣರಾಗಿ, ಬೆಂಗಳೂರು ಸೆಂಟ್ರಲ್ ಕಾಲೇಜು ಸೇರಿದರು. ಇವರ ಅಸಾಧಾರಣ ಬುದ್ಧಿಯನ್ನು ಇಂಗ್ಲಿಷ್ ಸಾಹಿತ್ಯದಲ್ಲಿ ಇವರಿಗಿದ್ದ ವಿಶೇಷ ಪರಿಶ್ರಮವನ್ನು ನೋಡಿ ಆಗಿದ್ದ ಅಲ್ಲಿನ ಪ್ರೊಫೆಸರ್ ಮೆ॥ ಟೇಟ್‌ಯವರು ಸಹಾಯ ಸಾಲದೆ ಇದ್ದ ಇವರಿಗೆ ವಿಶೇಷ ಔದಾರ್ಯದಿಂದ ಸಹಾಯ ಕೊಡುತ್ತಿದ್ದರು. ಸೆಂಟ್ರಲ್ ಕಾಲೇಜಿನಲ್ಲಿದ್ದ ನಾಲ್ಕು ವರುಷಗಳೂ ಎಲ್ಲಾ ಪರೀಕ್ಷೆಗಳಲ್ಲಿಯೂ ಮೊದಲನೆಯವರಾಗಿ ಪ್ರಥಮ ವರ್ಗದಲ್ಲಿ ತೇರ್ಗಡೆಯಾಗಿ ಖ್ಯಾತಿಗೊಂಡರು. ಮದ್ರಾಸ ಆಧಿಪತ್ಯಕ್ಕೆಲ್ಲ ಮೊದಲನೆಯವರಾಗಿ ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಸೆಂಟ್ರಲ್ ಕಾಲೇಜಿನಿಂದ ಒಂದೇ ವರುಷ ಅನೇಕ ಅಂಶಗಳೊಳಗೆ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗುವುದಕ್ಕೆ ಇವರೇ ಮೊದಲು. ಗ್ರಾಜುಯೇಟುಪಟ್ಟ ತೆಗೆದುಕೊಂಡ ಸಂಗಡಲೆ ೧೮೯೩ ರಲ್ಲಿ ಇವರ ಹಿತಚಿಂತಕರುಗಳಾಗಿದ್ದ ಮೆ॥ ಭಾಭಾಯವರು, ಪ್ರಿಯ ಗುರುಗಳಾದ ಮೆ॥ ಸಾಂಬಶಿವ ಐಯರವರು ಮತ್ತು ಕೃಷ್ಣಸ್ವಾಮಿ ಐಯಂಗಾರರು ಮೊದಲಾದವರು ಏರ್ಪಾಡು ಮಾಡಿ ಆಗತಾನೇ ಪ್ರಾರಂಭವಾಗಿದ್ದ ತಾತಾಯವರ ಲೋಹ ಕಾರ್ಖಾನೆಗೆ ಇವರನ್ನು ಸೇರಿಸಿದರು. ಅಂದಿನಿಂದ ತಾತಾಯವರಲ್ಲಿ ಕೇವಲ ವಿಶ್ವಾಸಕ್ಕೆ ಪಾತ್ರರಾಗಿ ಸಂಪೂರ್ಣ ಸ್ವತಂತ್ರಾಧಿಕಾರವನ್ನು ಪಡೆದು ಹಿಂದೂಸ್ಥಾನದ ಸಮಸ್ತ ದೇಶಗಳನ್ನೂ ನೋಡಿ ಬಂದರು. ಲೋಕದಲ್ಲೆಲ್ಲ ವಿಖ್ಯಾತರಾಗಿ ಆಗ ತಾತಾಸೇಟರ ಅಧಿಕಾರದಲ್ಲಿದ್ದ ಅಮೇರಿಕದ ಇಂಜನಿಯರು ಮೆ॥ ವೆಲ್ಡ್ ಸಾಹೇಬರವರು ಈ ಯುವಕನ ಅಪ್ರತಿಮ ಕೌಶಲ್ಯವನ್ನೂ ಖನಿಜಶಾಸ್ತ್ರದಲ್ಲಿ ಇವರಿಗೆ ಇದ್ದ ಅಭಿರುಚಿ ಮತ್ತು ಪರಿಶ್ರಮವನ್ನೂ ನೋಡಿ, ಅತ್ಯಂತ ಪ್ರೇಮದಿಂದ ಇವರಿಗೆ ಅನೇಕ ಉಪಯುಕ್ತ ವಿಷಯಗಳನ್ನು ಉಪದೇಶಿಸಿದರು. ಕಡೆಗೆ ಕಾರ್ಯ ಗೌರವದಿಂದ ಅಮೇರಿಕಕ್ಕೆ ಹೊರಡುವಾಗ ವಿಶೇಷ ಜವಾಬುದಾರಿಯುಳ್ಳ ತನ್ನ ಪದವಿಯನ್ನು ಈ ತನ್ನ ವಿಶ್ವಾಸ ಪಾತ್ರನಾಗಿದ್ದ ಶಿಷ್ಯನಿಗೇ ಕೊಟ್ಟರು. ಈ ಪದವಿಯನ್ನು ಚಿರಕಾಲ ಅನುಭವಿಸದಿದ್ದರೂ, ಬಹು ಕಾಲದಲ್ಲಿ ಮಾಡುವುದಕ್ಕೆ ಸಾಧ್ಯವಾದ ಕೆಲಸಗಳನ್ನು ಅತ್ಯಲ್ಪ ಕಾಲದಲ್ಲಿಯೇ ನೆರವೇರಿಸಿ, ಅನೇಕ ತಿದ್ದುಪಾಟುಗಳನ್ನು ಮಾಡಿದರು. ಪಶ್ಚಿಮ ಬಂಗಾಳದಲ್ಲೂ ಮಧ್ಯಪ್ರಾಂತಗಳಲ್ಲೂ ರಾಜಾ ಸಾಹೇಬರೆಂಬ ಉಪನಾಮದಿಂದ ಪ್ರಕಾಶಿತರಾಗಿದ್ದರು. ಇದನ್ನು ಕೇಳಿದ ಪ್ರಜೆಗಳೆಲ್ಲರೂ ತಮ್ಮ ರಾಜನು ಹೋದನೆಂದು ಗೋಳಾಡಿದರು. ಎರಡು ಮೂರು ತಿಂಗಳಿಂದ ಅವರು ಬಂಗಾಳದ ಮಾನ ಭೂಮಿಯಲ್ಲಿ ಕಲ್ಲಿದ್ದಲು ಗಣಿಯನ್ನು ಕೊಂಡು ಹಿಡಿದು, ಅಲ್ಲಿನ ಸರ್ವಾಧಿಕಾರವನ್ನೂ ನಡಿಸುತ್ತಿದ್ದರು. ೧೧ನೆಯ ತಾ. ಶನಿವಾರ ಅವರ ಅತ್ಯಂತ ಪ್ರಿಯಮಿತ್ರನೂ ಜರಿಯಾ ಎಂಬ ದೊಡ್ಡ ಕಲ್ಲಿದ್ದಲು ಗಣಿಗಳಿಗೆ ಯಜಮಾನನೂ ಆಗಿದ್ದ ಮೆ॥ ನಾರಾಯಣಭಾಯಿ ಎಂಬಾತನು ಇವರ ಸಮಕ್ಷದಲ್ಲಿಯೇ ಕಾಲರಾ ತಗಲಿ ಮೂರು ಗಂಟೆಗಳೊಳಗಾಗಿ ತೀರಿಹೋದನು. ಮಾರನೆದಿನ ಇವರು ತಮ್ಮ ಕ್ಯಾಂಪಿಗೆ ಬಂದು, "ಮನುಷ್ಯನ ಇಹಲೋಕದ ಜೀವನವು ಎಷ್ಟು ಅಸ್ಥಿರ! ಮೂರು ಗಂಟೆಗೆ ಮುಂಚಿತವಾಗಿ ಸಂಪೂರ್ಣ ಆರೋಗ್ಯಸ್ಥಿತಿಯಲ್ಲಿದ್ದವನು ಈಗ ಎಲ್ಲಿದಿರೊ!!" ಎಂದು ಮುಂತಾಗಿ ಪದೇ ಪದೇ ನುಡಿಯುತ್ತಿದ್ದರು. ಭಗವಂತನಲ್ಲಿ ವಿಶೇಷ ಭಕ್ತಿಯುಳ್ಳವರಾಗಿ ಯಾವ ಗಳಿಗೆಗೆ ಏನು ಬರುವುದೋ ಎಂದು ಹೇಳಿಕೊಳ್ಳುತ್ತ, ಮರಣಕ್ಕೆ ಸಜ್ಜು ಮಾಡಿಕೊಳ್ಳುವವಂತೆ ಕಾಣಬಂದರು. ಮರಣದ ದಿನ ಮಧ್ಯಾಹ್ನ ರೋಗಚಿಹ್ನೆ ಕಾಣಲಾಯಿತು. ಆದರೂ ಎಳ್ಳಷ್ಟೂ ಧೈರ್ಯಗುಂದಲಿಲ್ಲ. ಸಂಜೆ ೬ ಗಂಟೆಯವರಿಗೂ ಸಾಧಾರಣವಾಗಿದ್ದಿತು. ಅನಂತರ ಸಂಕಟಕ್ಕೆ ಮೊದಲುಗೊಂಡು, ಹೊತ್ತು ಮುಳುಗುವುದರೊಳಗಾಗಿ ನಿರಾಯಾಸದಿಂದ ಪ್ರಾಣಬಿಟ್ಟರು.

ಇವರು ವಿಶೇಷವಾಗಿ ಉದ್ಯೋಗ ಪರಾಯಣರಾಗಿದ್ದರು. ಸರ್ವದಾ ಉದ್ಯೋಗದಲ್ಲಿಯೇ ಇರುವರು. ವಿಶ್ರಾಂತಿಯನ್ನು ಕುರಿತು ಮಾತನಾಡಿದಾಗ "ಕೆಲಸವೇ ನನಗೆ ವಿಶ್ರಾಂತಿ" ಎಂದು ಹೇಳುವರು. ಮರಣಕ್ಕೆ ಕೆಲವೆ ಗಂಟೆಗಳ ಪೂರ್ವದಲ್ಲಿ ಸಹ ಇವರು ಧನಿಯ ಕೆಲಸ ಮಾಡುತ್ತಲೇ ಇದ್ದರು. ಇವರ ಅಭಿಲಾಷೆ "ಬಿಲ್ಲಿಯ ಮೇಲೆ ಸಹ ಜೀವದ ಪ್ರತಿ [illegible] ಸದಾ ಉದ್ಯೋಗದ ಮೇಲೆ ಇರಬೇಕು" ಎಂಬದಾಗಿ ಹೇಳುತ್ತಿದ್ದರು. ಸ್ವಾರ್ಥ ಖಂಡನ, ಪರೋಪಕಾರ ಮೊದಲಾದ ಸದ್ಗುಣಗಳು ಇವರಲ್ಲಿ ಪ್ರಕಾಶಿಸುತ್ತಿದ್ದುವು. ಈಚೆಗೆ ಇವರು ಅಮೇರಿಕದ ಮೈನಿಂಗ್ ಇಂಜನಿಯರುಗಳ ಇನ್ಸ್ಟಿಟ್ಯೂಟಿಗೂ, ಟೆಕ್ನಿಕಲ್ ಇಂಡಿಯಾ ಕ್ಲಬ್ಬಿಗೂ ಮೆಂಬರಾಗಿದ್ದರು. ಬೆಂಗಳೂರಿನ ಭಾರತ ಅಭ್ಯುದಯ ಸಂಸ್ಥೆಗೆ ಪ್ರಸಿಡೆಂಟರಾಗಿದ್ದರು. ಬಂಗಾಳದ ಅನೇಕ ಸಂಸ್ಥಾನಾಧಿಪತಿಗಳೂ, ಜಮೀನುದಾರರೂ, ದೊಡ್ಡ ದೊಡ್ಡ ಮನೆತನದವರೂ ಇವರಿಗೆ ಮಿತ್ರರಾಗಿದ್ದರು. ಮೈಸೂರು ಸೀಮೆಯಲ್ಲಿ ಸಹ ಇವರ ಸ್ನೇಹಿತರುಗಳು ಹೇರಳವಾಗಿ ಇರುವರು. ಇತ್ತಲಲ್ಲಿಯೆ ಇವರು ವಿಲಾಯತಿ, ಅಮೇರಿಕ ಮುಂತಾದ ದೇಶಗಳಿಗೆ ಹೋಗಿ, ಖನಿಜಗಳ ವಿಷಯಗಳನ್ನು ತಿಳಿದು ಬರಬೇಕೆಂದು ಯೋಚಿಸುತ್ತಿದ್ದರು. ಮೃತ್ಯು ಸಮಯದಲ್ಲಿ ಅವರ ಹೆಂಡತಿಯ ತಮ್ಮನೂ ಪತ್ನಿಯೂ ಸಂಗಡ ಇದ್ದರು. ಈ ಮಹಾ ದುಃಖವನ್ನು ಅವರ ವೃದ್ಧ ತಾಯಂದಿರುಗಳೂ, ಚಿಕ್ಕವರಾದ ಅರಕ್ಷಿತರಾದ ಒಡಹುಟ್ಟಿದವರೂ, ಪತ್ನಿಯೂ, ಎಲ್ಲೆಲ್ಲಿಯೂ ಇರುವ ಮಿತ್ರರೂ ಅನಂತವಾಗಿ ಅನುಭವಿಸುತ್ತಿದ್ದಾರೆ. ಇಂಥಾವರ ಜ್ಞಾಪಕಾರ್ಥವಾಗಿ ಮೈಸೂರು ದೇಶದಲ್ಲಿಯೂ ಇತರ ಕಡೆಗಳಲ್ಲಿಯೂ ಇರುವ ಅವರ ಮಿತ್ರರೇ ಮೊದಲಾದವರು ಏನಾದರೂ ಒಂದು ಸ್ಮಾರಕವನ್ನು ಏರ್ಪಾಡು ಮಾಡುವುದು ಎಲ್ಲಾ ದೇಶಾಭಿಮಾನಿಗಳ ಕರ್ತವ್ಯವಾಗಿದೆ.

ಬಂಧು.

ಹಿಂದುಸ್ಥಾನದ ವಾಯುವ್ಯ ಸರಹದ್ದಿನಲ್ಲಿ ಹೊಸ ಗಲಭೆಯು.

ಮಹಮಂಡ್ ಜನರ ಮೇಲೆ ಯುದ್ಧಕಾರ್ಯಗಳು:

ಹಿಂದುಸ್ಥಾನದ ವಾಯುವ್ಯ ಸರಹದ್ದು ಎಂದರೆ ಅಫ್ಘಾನಿಸ್ಥಾನ ಬೆಲೂಚಿಸ್ಥಾನಗಳಿಗೆ ಹಿಂದೂಸ್ಥಾನದಿಂದ ಹೋಗಿಬರುವ ಮಾರ್ಗಗಳು ಬೆಟ್ಟಗುಟ್ಟಗಳಿಂದಲೂ, ಕಣಿವೆಗಳಿಂದಲೂ, ಮತ್ತು ಸ್ವದೇಶಿಗಳಾದ ಶೀರೆಸೀಮೆ ಮಹಮಂಡೀಯ ವಂಶೀಕರಿಂದ ವಾಸಿಸಲ್ಪಟ್ಟಿರತಕ್ಕದ್ದು. ಈ ವಂಶೀಕರು ಕ್ರಮವಾಗಿ ವ್ಯವಸಾಯ ವ್ಯಾಪಾರಾದಿ ಸದ್ವೃತ್ತಿಗಳನ್ನು ಅವಲಂಬಿಸಿಕೊಂಡಿರತಕ್ಕವರಲ್ಲ. ಬೆಟ್ಟಗುಟ್ಟಗಳಲ್ಲಿ ಸಂಚರಿಸುತ್ತಾ, ಗೋಕಾಯಿಗಳನ್ನು ಮೇಯಿಸಿಕೊಂಡು ಅವುಗಳ ಹಾಲನ್ನು ಬಳಕೆಮಾಡುತ್ತಾ, ಆಗಾಗ್ಗೆ ಒಂದು ಗುಂಪಿನವರು ಮತ್ತೊಂದು ಗುಂಪಿನವರ ಮೇಲೆ ಬಿದ್ದು ಕಾದುತ್ತಾ, ಅನೇಕ ವೇಳೆ ಆ ಎಲ್ಲೆ ಕಟ್ಟುಗಳನ್ನು ದಾಟಿಬಂದು ಹಿಂದೂಸ್ಥಾನಕ್ಕೆ ಸೇರಿದ ಗ್ರಾಮಾಂತರಗಳನ್ನು ನುಗ್ಗಿ ಕೊಳ್ಳೆಹೊಡೆಯುತ್ತಾ ಕಾಲಕಳೆಯುವುದೇ ಆ ವಂಶೀಕರ ಉದ್ಯೋಗವೂ ಕಸುಬೂ ಆಗಿದೆ ಎಂದು ಹೇಳಬಹುದಾಗಿದೆ. ಒಂದೆರಡು ತಿಂಗಳ ಕೆಳಗೆ ಆ ಗುಂಪುಗಳ ಪೈಕಿ ಜಕ್ಕಾಖೇಲರೆಂಬ ವಂಶದವರು ಹಿಂದೂಸ್ಥಾನದ ಸರಹದ್ದಿನೊಳಕ್ಕೆ ಬಂದು ಇಂಗ್ಲಿಷ್ ಪ್ರಜೆಗಳಿಗೆ ಕಷ್ಟನಷ್ಟಗಳುಂಟುಮಾಡಿದ್ದೂ, ಇಂಗ್ಲಿಷ್ ಸೈನ್ಯಗಳು ಜನರಲ್ ಸರ್ ಜೇಂಸ್ ವಿಲ್ಕಾಕ್ಸ್‌ಯವರ ಕೈ ಕೆಳಗೆ ಕಳುಹಿಸಲ್ಪಟ್ಟದ್ದೂ, ಇವರು ಸುಮಾರು ಒಂದೆರಡು ವಾರಗಳೊಳಗಾಗಿ ಆ ವಂಶೀಕರನ್ನು ತಕ್ಕ ಹಾಗೆ ಶಿಕ್ಷಿಸಿ, ಅವರ ಪ್ರತಿನಿಧಿಗಳ ಮೂಲಕ ಕರಾರು ಮಾಡಿಕೊಂಡು ಬಂದದ್ದೂ ವಾಚಕರಿಗೆ ತಿಳಿದಿರುತ್ತದೆ.

ಅದೇ ಸಮಯದಲ್ಲಿ ಮಹಮಂಡರೆಂಬ ಇನ್ನೊಂದು ವಂಶದ ಜನರು ಜಕ್ಕಾಖೇಲರ ಸಹಾಯಾರ್ಥವಾಗಿ ಕೆಲವು ಜನರನ್ನು ಜಮಾಯಿಸಿ ಕಳುಹಿಸಿಕೊಟ್ಟರು. ಆದರೆ ಈ ಸಹಾಯವು ಒದಗುವುದು ಸಾವಕಾಶವಾಯಿತು. ಅಷ್ಟರೊಳಗೇ ಜಕ್ಕಾಖೇಲರು ಇಂಗ್ಲಿಷ್ ಸೈನ್ಯಾಧಿಪತಿಗಳ ಕೂಡ ಕಲಿತು ಒಪ್ಪಂದಗಳನ್ನು ಮಾಡಿಕೊಂಡುಬಿಟ್ಟಿದ್ದರು. ಈಗ ಈ ಮಹಮಂಡರೆಂಬ ಜನರು ಲಷ್ಕರುಗಳನ್ನು ಮಾಡಿಕೊಂಡು ಗಲಭೆಯನ್ನುಂಟುಮಾಡಿರುತ್ತಾರೆ. ಈ ಜನರು ಇರತಕ್ಕ ಪ್ರಾಂತ್ಯವು ಅದೇ ಬೆಟ್ಟಗುಡ್ಡಗಳಲ್ಲಿ ಜಕ್ಕಾಖೇಲರಿರುವ ಪ್ರಾಂತ್ಯಕ್ಕೆ ಸ್ವಲ್ಪ ಉತ್ತರದಲ್ಲಿರುತ್ತದೆ. ಅದರ ದಕ್ಷಿಣ ಭಾಗದ ಎಲ್ಲೆಯು ಜಲಾಲಾಬಾದಿನಿಂದ ಕಾಬೂಲ್ ನದಿಯ ಉದ್ದಕ್ಕೂ ಬಂದು ಇಂಗ್ಲಿಷರ ಎಂದರೆ ಹಿಂದುಸ್ಥಾನದ ಎಲ್ಲೆಕಟ್ಟಿನ ವರೆಗೂ ವ್ಯಾಪಿಸಿರುವುದು; ಉತ್ತರದಲ್ಲಿ ಬಿಜೌರ್ ಎಂಬ ಪ್ರದೇಶವಿರುತ್ತೆ, ಪೂರ್ವದಿಕ್ಕಿನಲ್ಲಿ ಮಹಮಂಡರ ಎಲ್ಲೆಯು ಪಿಷಾವರ್ ಪಟ್ಟಣದ ವರೆಗೂ, ಅಲ್ಲಿಂದ ಉತ್ಮಾನಖೇಲರ ಪ್ರದೇಶದ ವರೆಗೂ ಹಬ್ಬಿರುತ್ತದೆ. ಈ [illegible] ಮಧ್ಯೆ ಇರುವ ಪ್ರದೇಶವು ಕಣಿವೆಗಳಾಗಿಯೂ ಅಲ್ಪಸ್ವಲ್ಪ ವ್ಯವಸಾಯಕ್ಕೆ ಯೋಗ್ಯವಾಗಿಯೂ ವಿಶೇಷವಾಗಿ ಗೋಕಾಯಿಗಳ ಮೇವಿಗೆ ಅನುಕೂಲವಾಗಿಯೂ ಇರುತ್ತದೆ. ಮುಖ್ಯವಾದ ಕಣಿವೆಗಳನ್ನೇ ಪಿಲ್ಮಾರ್, ಗೊಂಡಾಬ್, ಪಂಡಿಯಾಲಿ ಎಂಬ ಗ್ರಾಮಗಳಾಗಿ ಮಾಡಿಕೊಂಡು, ಮಹಮಂಡ್ ಜನರು ಕೆಲವುಕಾಲ ಇಲ್ಲಿ ಕೆಲವುಕಾಲ ಬೆಟ್ಟಪ್ರಾಂತ್ಯಗಳಲ್ಲೂ ವಾಸಮಾಡುವರು. ಅಲ್ಲಿನ ಕೆಲವು ಪ್ರದೇಶಗಳು ಅಫ್ಘಾನಿಸ್ಥಾನದ ಅಮೀರರಿಗೂ ಕೆಲವು ಇಂಗ್ಲಿಷರಿಗೂ ಸೇರಿರುವವು. ಈ ಮಹಮಂಡ್ ಜನರು ಮೊದಲಿನಿಂದಲೂ ಇಂಗ್ಲಿಷ್ ಪ್ರಜೆಗಳ ಮೇಲೆ ಬಿದ್ದು ಅನೇಕ ವೇಳೆ ಕಷ್ಟನಷ್ಟಗಳನ್ನುಂಟುಮಾಡಿರುವುದೂ, ಅವರ ಹಾವಳಿಯನ್ನು ಇಂಗ್ಲಿಷರು ದಂಡುಕಳುಹಿಸಿ ಸುಮಾರು ೧೧—೧೨ ಸಲ ಅಣಗಿಸಿರುವುದೂ ಚರಿತ್ರೆಗಳಲ್ಲಿ ವಿವರಿಸಲ್ಪಟ್ಟಿವೆ.

ಈಗ ಪ್ರಾಪ್ತವಾಗಿರುವ ಗಲಭೆಗೆ ಕಾರಣಗಳು.

ಇಂಗ್ಲಿಷರು ಎಂದರೆ ಇಂಡಿಯಾ ಗವರ್ನಮೆಂಟಿನವರು ಈಚೆಗೆ ಆ ಪ್ರಾಂತ್ಯದಲ್ಲಿ ಮುಲ್ಲಗೋರಿ ರಸ್ತೆ, ಖೈಬರ್ ಕಣಿವೆಗೆ ಎರಡನೆಯ ರಸ್ತೆ, ಲಂಡೀಕೋಟಲ್ ರೈಲ್ ರಸ್ತೆ, ಇವನ್ನು ಹಾಕಿದರು. ಇದರಿಂದ ಕಾಬೂಲ್ ನದಿಯ ಬಳಿ ಇರುವ ಮಹಮಂಡರ ನಿವಾಸಸ್ಥಳಗಳು ಬಯಲಿಗೆ ಬಂದವು. ಇದು ಆ ಜನರ ಕೋಪವನ್ನು ರೇಗಿಸಿತು. ಅವರು ಹಗೆ ತೀರಿಸಿಕೊಳ್ಳಬೇಕೆಂದು ಬ್ರಿಟಿಷ್ ಸರ್ವೆ ಪಾರ್ಟಿಗಳ ಮೇಲೆ ಬಿದ್ದು ಅವರನ್ನು ಕಷ್ಟನಷ್ಟಗಳಿಗೆ ಗುರಿಮಾಡಿದರು. ಈಚೆಗೆ ಆ ಎಲ್ಲೆಕಟ್ಟಿನಲ್ಲಿ ಮೆ॥ ಎಲ್. ಎಂ. ಕ್ರಂಪ್ ಎಂಬ ಪೊಲಿಟಿಕಲ್ ಆಫೀಸರು ತಮ್ಮ ಸೇವಕರ ಕೂಡ ಸಂಚಾರ ಮಾಡುತ್ತಿದ್ದಾಗ ಅವರ ಗುಂಪಿನ ಮೇಲೆ ನುಗ್ಗಿ ಹಿಂಸೆ ಮಾಡಿದರು. ಕೂಡಲೇ ಇಂಗ್ಲಿಷರು ಪಿಷೇವರ್ ಸ್ಟೇಷನ್‌ನಲ್ಲಿದ್ದ ಸೈನ್ಯವನ್ನು ಕಳುಹಿಸಿ, ಮಹಮಂಡರ ೨೦೦ ಜನರನ್ನೂ ಅವರ ಬಾಬತು ೬೦೦ ಗೋಕಾಯಿಗಳನ್ನೂ ಕೈಸೆರೆಯಾಗಿ ಹಿಡಿದು ತಂದಿಟ್ಟುಕೊಂಡರು. ಇದರ ಮೇಲೆ ಆ ಜನರ ಪ್ರತಿನಿಧಿಗಳು ಛೀಫ್ ಕಮಿಷನರ್ ಸರ್ ಹೆರಾಲ್ಡ್ ಡೀನ್‌ರವರ ಬಳಿಗೆ ಬಂದು, ತಮ್ಮಲ್ಲಿದ್ದ ಅಪರಾಧಿಗಳನ್ನು ಅವರಿಗೆ ಒಪ್ಪಿಸಿ, ತಮ್ಮವರನ್ನೆಲ್ಲಾ ಬಿಡಿಸಿಕೊಂಡು ಹೋದರು. ಈ ವಿಚಾರಗಳೆಲ್ಲಾ ಆ ಮಹಮಂಡರ ಮನಸ್ಸನ್ನು ಕೊರೆಯುತ್ತಿದ್ದವು. ಈಗ ಅವರು ತಮ್ಮ ಎಲ್ಲೆಕಟ್ಟನ್ನು ದಾಟಿಬಂದು ಇಂಡಿಯಾ ದೇಶದೊಳಗಿರುವ ನೆರೆಹೊರೆ ಗ್ರಾಮಗಳ ಮೇಲೆ ಬಿದ್ದು, ಜನರನ್ನು ಕೊಲ್ಲುವುದು, ಕೊಳ್ಳೆ ಹೊಡೆಯುವುದು, ಜನ ಧನ ಗೋಕಾಯಿ ಮೊದಲಾದವನ್ನು ಎತ್ತಿಕೊಂಡು ಹೋಗುವುದು, ಹೀಗೆಲ್ಲಾ ಮಾಡುತ್ತಾ ಬಂದರು. ಅವರ ಈ ಕೃತ್ಯಗಳು ವಿಶೇಷವಾಗಿ ಹೆಚ್ಚುತ್ತಾ ಬಂದಿರುವುದನ್ನು ನೋಡಿ, ಗವರ್ನಮೆಂಟಿನವರು ಇಂಗ್ಲಿಷ್ ಸೈನ್ಯಗಳನ್ನು ಕಳುಹಿಸಿ ಆ ಎಲ್ಲೆಕಟ್ಟಿನಲ್ಲಿರುವ ಗ್ರಾಮಗಳಲ್ಲಿ ಇಟ್ಟರು. ಇದನ್ನು ನೋಡಿ ಆ ಪ್ರಾಂತ್ಯಗಳಲ್ಲಿರುವ ಮುಲ್ಲಾಗಳು ಗಲಭೆಯೆಬ್ಬಿಸುವುದಕ್ಕಾರಂಭಿಸಿದರು. ಅವರು ತಮ್ಮ ದೇಶವನ್ನು ಆಕ್ರಮಿಸಿಕೊಳ್ಳುವುದಕ್ಕಾಗಿ ಇಂಗ್ಲಿಷ್ ಸೈನ್ಯಗಳು ಬಂದಿವೆ ಎಂದು ತಮ್ಮ ಶಿಷ್ಯಮಂಡಲಿಗೆ ಸೇರಿದ ಮಹಮಂಡ್ ಜನರಿಗೆ ಸಾರುತ್ತಾ ಅವರನ್ನು ದಂಡು ಕಟ್ಟುವಂತೆ ಚಿತಾವಣೆಮಾಡುತ್ತಾ ಬಂದರು. ಈಗ ಈ ಮುಲ್ಲಾಗಳ ಸಹಾಯದಿಂದ ೧೦,೦೦೦ ಜನ ಮಹಮಂಡರ ಯುದ್ಧಭಟರು ಎಲ್ಲೆಕಟ್ಟಿಗೆ ಬಂದು ಜಮಾಯಿಸಿಕೊಂಡರು. ಇವರಲ್ಲೆಲ್ಲಾ ಬಹಳ ಪ್ರಸಿದ್ಧನಾಗಿರುವ ಹಜಾರಕ್ ಸಾಹೇಬ್ ಎಂಬೊಬ್ಬ ಅಫ್ಘಾನ್ ಮುಲ್ಲಾನು ಮುಖಂಡನಾಗಿ ನಿಂತು, ಯುದ್ಧಕಾರ್ಯಗಳನ್ನು ನಡಿಸುತ್ತಿರುವುದಾಗಿ ತಿಳಿದುಬಂದಿದೆ. ಈ ಮಹಮಂಡರು ಸಾಮಗ್ರಿಗಳ ಗಾಡಿಗಳನ್ನು ಇಟ್ಟುಕೊಂಡು, ತಮ್ಮ ಯುದ್ಧಭಟರಿಗೆ ಬಹಳ ಹುರುಪಾಗಿಯೂ ಅಚ್ಚುಕಟ್ಟಾಗಿಯೂ ಆಹಾರಸಾಮಾನು, ಮದ್ದು ಸಾಮಗ್ರಿ, [illegible] ಮುಂತಾದ್ದನ್ನೆಲ್ಲಾ ತಂದು ಒದಗಿಸುತ್ತಿದ್ದಾರೆ. ಕೆಲವು ಆಫ್ಘಾನರೂ ವಜೀರಿಗಳೂ ಈ ಮಹಮಂಡರಿಗೆ ಸಹಾಯಕರಾಗಿ ಬಂದಿರುವರು. ಅವರ ಸೈನ್ಯಗಳನ್ನು ಮುಖ್ಯ ಮುಖ್ಯರಾದ ಮುಲ್ಲಾಗಳು ಶೀಘ್ರ ನಡಿಸುತ್ತಿರುವರು. ಆಗಾಗ್ಗೆ ಪ್ರಸಿದ್ಧನಾದ ಮುಲ್ಲಾವು ಕೆಲವು ಸಾವಿರ ಅಫ್ಘಾನ್ ಜನರನ್ನು ಕಟ್ಟಿಕೊಂಡು ಕಾಬೂಲ್ ನದಿಯನ್ನು ಲಾಲ್ಪುರ ಎಂಬ ಸ್ಥಳದಲ್ಲಿ ದಾಟಿ, ಮಹಮಂಡರ ಸಹಾಯಕ್ಕಾಗಿ ಬಂದಿರುತ್ತಾನೆ. ಈಗ ಮಹ

ಮಂದರ ಕಡೆ ೧೫,೦೦೦ ಜನರ ತನಕ ಯುದ್ಧಭಟರಿರುತ್ತಾರೆಂದು ತಿಳಿಯುವುದು.

ಯುದ್ಧಕಾರ್ಯಗಳು.

ಇಂಗ್ಲಿಷ್ ಸೈನ್ಯಗಳು ಆ ಎಲ್ಲ ಕಟ್ಟುಗಳಿಗೆ ಬಹಳ ಸಾಗಿ ಹೋಗಿರುವವು. ಜನರಲ್ ವಿಲ್ಕಾಕ್ಸ್‌ಯವರೂ ಮೇಜರ್-ಜನರಲ್ ಅಂಡರ್ಸನರವರೂ ಇಂಗ್ಲಿಷ್ ಸೈನ್ಯಾಧಿಪತಿಗಳಾಗಿ ನಿಂತಿರುವರು. ಇಂಗ್ಲಿಷ್ ಸೈನ್ಯಗಳನ್ನು ನಾಲ್ಕಾರು ಕಡೆಗಳಿಗೆ ಕಳುಹಿಸಿ, ಎಲ್ಲಾ ಕಡೆಗಳಲ್ಲೂ ಶತ್ರುಗಳನ್ನು ಸೋಲಿಸಬೇಕೆಂದೂ ಅವರ ಹಾವಳಿಯನ್ನು ಅಡಗಿಸಬೇಕೆಂದೂ ಪ್ರಯತ್ನಪಟ್ಟಿದಾರೆ. ಇಂಗ್ಲಿಷರ ಕಡೆಯಲ್ಲೂ ಫಿರಂಗಿ ಸೈನ್ಯ, ಸವಾರ್ ಸೈನ್ಯ, ಕಾಲು ಸೈನ್ಯ, ಈ ಮೊದಲಾದವು ಸೇರಿ ಸುಮಾರು ೨,೦೦೦—೫,೫೦೦ ರ ವರೆಗೆ ಅಲ್ಲಿಗೆ ಹೋಗಿರುತ್ತವೆ.

ಕಳೆದವಾರ ಮೂರು ನಾಲ್ಕು ಕಡೆಗಳಲ್ಲಿ ಯುದ್ಧ ಕಾರ್ಯಗಳು ನಡೆದವು. ಮಹಮಂದರ ಕಡೆಯಲ್ಲಿ ಎಷ್ಟು ಮಂದಿ ನಷ್ಟಪಟ್ಟರೋ ಗೊತ್ತಾಗಲಿಲ್ಲ. ಅವರು ನಾಲ್ಕಾರು ಗ್ರಾಮಗಳ ಮೇಲೆ ನುಗ್ಗಿ ಲೂಟಿ ಮಾಡಿಕೊಂಡುಹೋದರೆಂದು ಗೊತ್ತಾಗಿದೆ, ಏಕೆಂದರೆ ಕೆಲ ಟೆಲಿಗ್ರಾಫ್ ತಂತಿಗಳನ್ನು ಕಿತ್ತುಹಾಕಿದರು. ಅಫ್ಘಾನಿಸ್ಥಾನದ ಸೋಜರುಗಳೂ ಬಹು ಮಂದಿ ಅವರ ಕೂಡ ಸೇರಿಕೊಂಡಿದ್ದಾರೆ. ಅಫ್ಘಾನಿಸ್ಥಾನದ ಕಾರ್ಖಾನೆಗಳಲ್ಲಿ ತಯಾರಾದ ಲೀ ಮೆಟ್‌ಫರ್ಡ್, ಮಾರ್ಟಿನಿ ಎಂಬ ಹೊಸತರದ ಬಂದೂಕು ಪಿಸ್ತೂಲುಗಳು ಆ ಯುದ್ಧ ಭಟರ ಬಳಿಯಲ್ಲಿರುತ್ತವೆಂದೂ, ಇವನ್ನೂ ಇವಕ್ಕೆ ಬೇಕಾದ ಮದ್ದು ಗುಂಡನ್ನೂ ಅಫ್ಘಾನಿಸ್ಥಾನದಿಂದ ಜನರು ತಂದು ಜಲಾಲಾಬಾದಿನಲ್ಲಿ ಅವರಿಗೆ ಬಹಿರಂಗವಾಗಿ ಬಿಕರಿಮಾಡುತ್ತಿದ್ದಾರೆಂದೂ ತಿಳಿದು ಬಂದಿದೆ. ಅಮೀರರ ಸರ್ಕಾರದವರಾದ ಸರ್ದಾರರು ನಸ್ರುಲ್ಲಾ ಖಾನರವರಿಗೆ ಈ ವಿಚಾರ ತಿಳಿದ ಕೂಡಲೇ ಅವರು ಆ ವರ್ತಕರನ್ನೆಲ್ಲಾ ವಾಪಸು ಕರೆಸಿಕೊಂಡು, ಯುದ್ಧ ಸಾಮಗ್ರಿಗಳನ್ನು ಮತ್ತು ಅವರಿಗೆ ಬಿಕರಿಮಾಡದಂತೆ ಆಜ್ಞೆ ಮಾಡಿರುವ ಹಾಗೂ ತಂತೀ ವರ್ತಮಾನ ಬಂದಿದೆ.

ತಾ. ೨೪ ನೇ ಶುಕ್ರವಾರ ಪೇಶಾವರ್ ಸಬ್ಡಿವಿಷನ್ ಪಕ್ಕದಲ್ಲಿ ಎರಡು ಮೈಲಿ ದೂರದಲ್ಲಿ ಇಂಗ್ಲಿಷ್ ಸೈನ್ಯಗಳು ಶತ್ರುಗಳನ್ನು ಅಟ್ಟಿಕೊಂಡು ಹೋಗುತ್ತಿರುವಾಗ ಒಂದು ಕಠಿಣವಾದ ಯುದ್ಧ ನಡೆಯಿತು. ಇಂಗ್ಲಿಷರ ಕಡೆ ೬ ಫಿರಂಗಿಗಳೂ, ಎರಡು ಸವಾರ್ ಸೈನ್ಯವೂ, ೧,೯೫೦ ಮಂದಿಯುಳ್ಳ ಇಂಗ್ಲಿಷ್ ಮತ್ತು ನೇಟಿವ್ ಕಾಲ್ಬಲವೂ ಇದ್ದವು. ಬ್ರಿಗೇಡಿಯರ್-ಜನರಲ್ ಆಂಡರ್ಸನ್ ಮತ್ತು ಕರ್ನಲ್ ಆರ್ಚರರವರೂ ಆ ಸೈನ್ಯವನ್ನು ಮುಖಂಡರಾಗಿದ್ದರು. ಮಹಮಂದರ ಕಡೆಯಲ್ಲಿ ಸುಮಾರು ೪,೦೦೦ ಯುದ್ಧಭಟರಿದ್ದರೆಂದು ತಿಳಿಯುವುದು. ಅವರವರಿಗೆ ಯುದ್ಧ ನಡೆದದ್ದರಲ್ಲಿ ಇಂಗ್ಲಿಷ್ ಸೈನ್ಯಗಳು ಬಹು ಪರಾಕ್ರಮದಿಂದ ಕಾದಾಡಿ, ಶತ್ರುಗಳಲ್ಲಿ ಬಹಳ ಮಂದಿಯನ್ನು ಕೊಂದು ಗಾಯಮಾಡಿ, ಅವರ ಸ್ಥಾನಗಳನ್ನು ಆಕ್ರಮಿಸಿಕೊಂಡು, ಅವರನ್ನೆಲ್ಲಾ ಹಿಮ್ಮೆಟ್ಟಿಸಿ ಓಡಿಸಿದರು. ಇಂಗ್ಲಿಷ್ ಸೈನಿಕರಲ್ಲಿಯೂ ಬಹುಮಂದಿ ನಷ್ಟವಾದರು. ಅಂದರೆ, ಸುಮಾರು ೫೦ ಮಂದಿ ಹತರಾದರೆಂತಲೂ, ೭೦ ಜನರು ಗಾಯಪಟ್ಟರೆಂತಲೂ ತಂತೀ ವರ್ತಮಾನ ಬಂದಿದೆ. ಶತ್ರುಗಳು ಈಗ ಚಕ್ದಾರಾದಿಂದ ಆಚೆ ಇರುವ ಮಲಕಂಡ್ ಕಣಿವೆಯ ಕಡೆ ನುಗ್ಗಿ ಹೋಗುತ್ತಿರುವಂತೆ ಸುದ್ದಿ ಬಂದದ್ದರಿಂದ ಅವರನ್ನು ಅಲ್ಲೇ ತಡೆದು ಹಿಂದಕ್ಕೆ ಓಡಿಸುವುದಕ್ಕೋಸ್ಕರ ಇಂಗ್ಲಿಷ್ ಸೈನ್ಯವನ್ನು ಕಳುಹಿಸಿ ಅಲ್ಲಿಗೆ ರವಾನೆ ಮಾಡಿದ್ದಾರೆ.

ಈಚೆಗೆ ಬಂದಿರುವ ತಂತೀ ವರ್ತಮಾನಗಳು.

ಮಹಮಂದ್ ಯುದ್ಧ ಬಯಲಲ್ಲಿ ಶುಕ್ರವಾರ ನಡೆದ ಯುದ್ಧದಲ್ಲಿ ೧೦೦ ಜನರು ಮೃತಪಟ್ಟರೆಂತೆ ತಿಳಿಯುವುದೆಂದು ಜನರಲ್ ವಿಲ್ಕಾಕ್ಸ್‌ಯವರು ಹೇಳುತ್ತಾರೆ. ಜಲಾಲಾಬಾದಿನ ನಾಯಬ್ ಕೊತ್ವಾಲನ ಸಹೋದರನು ಶತ್ರು ಮುಖಂಡನಾಗಿ ನಿಂತು ಯುದ್ಧಮಾಡಿ ಹತನಾದನು. ಸತ್ತವರ ಶವಗಳನ್ನೂ ಗಾಯಪಟ್ಟವರನ್ನೂ ಮಹಮಂದರು ಲಾಲ್ಪುರಾ ಮಾರ್ಗವಾಗಿ ಹೊತ್ತುಕೊಂಡು ಹೋದರು. ಅವರ ಹಿಂಬಾಲಕರ ಹೇಳಿಕೆಯ ಪ್ರಕಾರ ೩೫೦ ಮಂದಿಯು ತನಕ ನಷ್ಟ ಹೊಂದಿದಂತೆ ತಿಳಿಯುವುದು. ಮೇಲ್ಕಂಡ ನಾಯಬ್ ಕೊತ್ವಾಲನೂ ಗಾಯಪಟ್ಟು, ತನ್ನ ಸಹೋದರನ ಶವವನ್ನು ಹೊರಿಸಿಕೊಂಡು ಹೋದನು.

ಅಫ್ಘಾನಿಸ್ಥಾನದ ಯುದ್ಧಭಟರು ಇನ್ನೂ ಲಾಲ್ಪುರದಲ್ಲಿ ಕಾಬೂಲ್ ನದಿಯನ್ನು ದಾಟಿಕೊಂಡು ಯುದ್ಧ ಭೂಮಿಗೆ ಬರುತ್ತಲೇ ಇದ್ದಾರೆ. ಕೀರಾ ಎಂಬಲ್ಲಿ ಜನರನ್ನು ರೇಗಿಸಿ ಇಂಗ್ಲಿಷರ ಮೇಲೆ ಯುದ್ಧ ಮಾಡುವುದಕ್ಕೆ ಕರೆದು ತರುವಂತೆ ಬೋಧಕರನ್ನು ಅಲ್ಲಿಗೆ ಕಳುಹಿಸಿದರು. ಅಫ್ರಿದಿಗಳನ್ನು ಎತ್ತಿ ಕಟ್ಟಿ ಕರೆತರಬೇಕೆಂದು ಸಾಹಸ ನಡೆಯುತ್ತಿದೆ.

ಮಹಮಂದರು ಶಂಬಕ್ ಕಣಿವೆಯ ಬಳಿಗೆ ಇನ್ನೂ ನುಗ್ಗಿ ಬಂದಿಲ್ಲ. ಆದರೆ ಬಜೌರಿ ಜನರ ಗುಂಪು ಮಿಯರ್ಖೇಲಿ ಎಂಬ ರಾಜ್ಯಕ್ಕೆ ಬಂದಿರುತ್ತದೆ. ಇವರೇ ಆ ಕಣಿವೆಯ ಬಳಿಗೆ ಬರತಕ್ಕವರೋ ಏನೋ ತಿಳಿಯಲಿಲ್ಲ.

ಹಿಂದೆ ಇಂಗ್ಲಿಷ್ ಸೈನ್ಯದಲ್ಲಿ ಸತ್ತವರ ಮತ್ತು ಗಾಯಪಟ್ಟವರ ಸಂಖ್ಯೆಗೆ ಇನ್ನೂ ಹತ್ತು ಮಂದಿಯನ್ನು ಸೇರಿಸಬೇಕೆಂದೂ ಗಾಯಪಟ್ಟವರೆಲ್ಲಾ ಆರೋಗ್ಯವಾಗಿದ್ದಾರೆಂದೂ ಜನರಲ್ ವಿಲ್ಕಾಕ್ಸ್‌ಯವರು ತಿಳಿಸುತ್ತಾರೆ.

ಹಾಫಿಸ್ ಕೋರ್ ಎಂಬ ಗ್ರಾಮದ ಆಚೆಗೆ ಕೆಲವು ದೂರ ಜನರಲ್ ವಿಲ್ಕಾಕ್ಸ್‌ಯವರು ಹೋಗಿ ನುತ್ತಿಬಂದರು. ಶತ್ರುಗಳು ಸಬ್ಬಾದರ್—ಅಬಜಾಯಿ ಲೈನಿನ ಉತ್ತರಕ್ಕೂ ತಮ್ಮ ರಾಜ್ಯಗಳನ್ನು ಬಿಟ್ಟು ಬಹು ದೂರ ಬೋರ್ಖೈಡಾಗ್ ಕಡೆಗೆ ಹೋಗಿರಬೇಕೆಂದು ಕಾಣುತ್ತದೆ.

ಪೇಶಾವರ್ ರಾಜ್ಯದಲ್ಲಿದ್ದ ಕೆಲವು ಇಂಗ್ಲಿಷ್ ಸೈನ್ಯದ ಉದ್ಯೋಗದಾರರೂ ಸೋಜರುಗಳೂ ರಜಾ ಪಡೆದು ಹೋಗಿದ್ದಾರೆಂದು ತಿಳಿದುಬಂದದ್ದರಿಂದ ಗವರ್ನಮೆಂಟಿನವರು ಅವರಿಗೆಲ್ಲಾ ಕೂಡಲೇ ಬಂದು ಕೆಲಸದ ಮೇಲೆ ಹಾಜರಾಗಬೇಕೆಂದು ಹುಕುಂ ಕೊಟ್ಟಿದ್ದಾರೆ.

ತಂತೀ ವರ್ತಮಾನಗಳು.

ಅನಾಹುತಗಳೂ ಪ್ರಾಣನಷ್ಟವೂ.

ಲಂಡನ್, ತಾ. ೨೫ನೇ ಶನಿವಾರ—ವಿಲಾಯಿತಿಯ ಅನೇಕ ಕಡೆಗಳಲ್ಲಿ ಕಳೆದ ಗುರುವಾರದಿಂದ ವಿಶೇಷವಾಗಿ ಹಿಮಗಡ್ಡೆಗಳ ಮಳೆಯೂ ಬಿರುಗಾಳಿಯೂ ಪ್ರಾಪ್ತವಾಗಿ, ಕೆಲಸ ಕಾರ್ಯಗಳಿಗೆ ಬಹಳ ಅಡಚಣೆಯುಂಟಾಗಿದೆ. ರೈಲ್ ಗಾಡಿಗಳೂ ಮೋಟರ್ ಗಾಡಿಗಳೂ ಹಿಮದ ಮಳೆಗೆ ಸಿಕ್ಕಿ ಮುಂದೆ ಸಾಗದೆ ಅಲ್ಲಲ್ಲಿ ನಿಂತುಬಿಟ್ಟವೆ. ನೀದಲ್ಸ್ ಎಂಬ ಊರಿನ ಸಮುದ್ರ ತೀರದಲ್ಲಿ ಎರಡು ಹಡಗುಗಳು ಹಿಮದ ಮಳೆಯ ದೆಸೆಯಿಂದ ಎದುರು ಬದುರಾಗಿ ಸಿಕ್ಕಿ ಬಡಿದಾಡಿದವು. ಗ್ಲಾಡಿಯೇಟರ್ ಎಂಬ ಹಡಗಿನೊಳಗಿದ್ದವರಲ್ಲಿ ಮೂವತ್ತು ಮಂದಿ ಹತರಾದರು. ಅನೇಕರು ಸಮುದ್ರದೊಳಕ್ಕೆ ಧುಮುಕಿ, ಕೆಲವರು ಸತ್ತರು; ಕೆಲವರು ಈಜಿಕೊಂಡು ಹೋದರು. ಆ ಹಡಗು ನಾಲ್ಕಾಯಿತು. ನಾಲ್ಕು ಮಂದಿ ನೀರಿನ ಪಾಲಾದರು, ೩೫ ಜನ ಸಿಕ್ಕಿ ಇಲ್ಲ, ೬ ಜನರಿಗೆ ಗಾಯಗಳಾಗಿವೆ. ನೆನ್ನೆ ದಿನ ಇಂಗ್ಲಿಷ್ ಕಾಲುವೆಯಲ್ಲಿ ಪ್ರಾಪ್ತವಾದಂಥಾ ಉಗ್ರವಾದ ಮಳೆ ಗಾಳಿಯು ೫೫ ವರುಷಗಳಿಂದ ಕಂಡಿರಲಿಲ್ಲ. ಹಡಗುಗಳ ಸಂಚಾರವೇ ನಿಂತಿತು.

ಸೆರೆಯಾಳಿನ ಚಿಕಿತ್ಸೆಯಾದದ್ದು.

ದಕ್ಷಿಣ ಅಮೇರಿಕಕ್ಕೆ ಸೇರಿದ ಗಾಟಿಮಾಲಾ ಎಂಬ ಪ್ರಜಾಪ್ರಭುತ್ವದ ಪ್ರಸಿಡೆಂಟಾಗಿರುವ ಡಾನ್ ಮ್ಯಾನ್ಯುಯಲ್ ಕೆಬ್ರೇರಾ ಎಂಬಾತನನ್ನು ಕೊಂದುಹಾಕಬೇಕೆಂದು ಕೆಲವರು ಕೇವಿ ಫಿತೂರಿ ಮಾಡಿದ್ದು ಸಾಗಿ. ಅದು ಹೊರಬಿದ್ದದ್ದರಿಂದ ಮುಖಂಡರನ್ನೆಲ್ಲಾ ಹಿಡಿದು ಆ ವ್ಯಕ್ತಿ ೧೯ ಮಂದಿಯನ್ನು ಗಲ್ಲಿಗೆ ಹಾಕಿಸಿರುವಂತೆಯೂ, ಇನ್ನೂ ಕೆಲವರಿಗೆ ಜೀವ ಶಿಕ್ಷೆಯಾಗುವುದರಲ್ಲಿದ್ದಾರೆಂತಲೂ ಕಳೆದ ಶುಕ್ರವಾರ ತಂತೀ ವರ್ತಮಾನ ಬಂದಿರುವುದು.

ರೈಲ್ವೆ ಅನಾಹುತವು.

ಆಸ್ಟ್ರೇಲಿಯಕ್ಕೆ ಸೇರಿದ ಬ್ರೇಬ್ರೂಕ್ ಎಂಬ ಸ್ಥಳದಲ್ಲಿ ಎರಡು ರೈಲ್ ಗಾಡಿಗಳು ಕಳೆದ ಭಾನುವಾರ ರಾತ್ರಿ ಬಡಿದಾಡಿ ಅನಾಹುತವಾಯಿತು. ಆ ಎರಡು ಗಾಡಿಗಳಲ್ಲೂ ೧,೦೦೦ ಕ್ಕಿಂತಲೂ ಹೆಚ್ಚು ಜನರಿದ್ದರು. ೪೦ ಜನರು ಹತರಾದರು, ೪೦ ಜನರಿಗೆ ಗಾಯಗಳಾದವು. ಕಡೆಯಲ್ಲಿ ಗಾಡಿಗಳು ಹತ್ತಿಕೊಂಡು ಉರಿದದ್ದರಿಂದ ಅವುಗಳೊಳಗಿದ್ದ ಹಲವು ಮಂದಿ ಘೋರ ಗಾಯಪಟ್ಟರು. ಈ ಅನಾಹುತದಲ್ಲಿ ಒಟ್ಟು ೪೩ ಮಂದಿ ಪ್ರಾಣ ಕಳೆದುಕೊಂಡರೆಂದು ಈಚಿನ ತಂತೀ ವರ್ತಮಾನ ಬಂದಿದೆ.

ಕೆಲವು ಪಟ್ಟಣಗಳು ನಷ್ಟಪಟ್ಟವು.

ಕಳೆದ ಶನಿವಾರದಿಂದೀಚೆಗೆ ಅಮೇರಿಕಕ್ಕೆ ಸೇರಿದ ಮಿಸಿಸಿಪಿ, ಲೂಸಿಯಾನಾ, ಅಲಬಾಮಾ ಎಂಬೀ ಡಿಸ್ಟ್ರಿಕ್ಟುಗಳಲ್ಲಿ ಅಪಾರವಾದ ಮಳೆಯೂ ಸುಂಟರಗಾಳಿಯೂ ಪ್ರಾಪ್ತವಾದವು. ಹಲವು ಪಟ್ಟಣಗಳು ಸಂಪೂರ್ಣವಾಗಿ ನಾಶವಾದವು. ಅನೇಕ ಊರುಗಳಲ್ಲಿ ತುಂಬಾ ನಷ್ಟವಾಯಿತು. ೨೫೦ ಜನರು ಪ್ರಾಣಕಳೆದುಕೊಂಡಂತೆ ವರ್ತಮಾನ ಬಂದಿದೆ. ೬೦೦ ಜನರಿಗೆ ನಾನಾ ಗಾಯಗಳಾಗಿರುವವು.

ತಾ. ೨೬ನೇ ಭಾನುವಾರ—ಅಮೇರಿಕದಲ್ಲಿ ಮಳೆಗಾಳಿಗಳ ಅನಾಹುತದಿಂದ ೫೦೦ ಜನರು ಪ್ರಾಣಕಳೆದುಕೊಂಡರು. ನೆನ್ನೆ ಸುಂಟರಗಾಳಿಯು ಜಾರ್ಜಿಯಾ ಅಲಬಾಮಾ ಎಂಬ ಡಿಸ್ಟ್ರಿಕ್ಟುಗಳನ್ನು ಹಾಳುಕೆಡವಿರುತ್ತವೆ.

ತಾ. ೨೭ನೇ ಸೋಮವಾರ—ಈಚೆಗೆ ಮಾಡಿರುವ ತನಿಖೆಗಳಿಂದ ಮೇಲ್ಕಂಡ ಅನಾಹುತದಲ್ಲಿ ೩೦೦ ಜನರು ಮೃತಪಟ್ಟರೆಂತೆಯೂ, ಮಿಸಿಸಿಪಿ ಒಂದರಲ್ಲೇ ೧,೦೦೦ ಜನರಿಗೆ ಬಾಬಿ ಆಗಿದೆ ಎಂತಲೂ, ನೂರಾರು ಪಟ್ಟಣಗಳ ಜನರು ಸೇರಗಳನ್ನು ಕಳುಹಿಸಿಕೊಡಬೇಕೆಂದು ಕೇಳುತ್ತಿರುವುದಾಗಿಯೂ ತಿಳಿದುಬಂದಿದೆ.

ಟೆಕ್ಸಾಸಿನಲ್ಲಿ ಪ್ರವಾಹದ ಅನಾಹುತವು.

ತಾ. ೨೭ನೇ ಸೋಮವಾರ—ಟೆಕ್ಸಾ ರಾಜ್ಯಕ್ಕೆ ಸೇರಿದ ಹ್ಯೂಸ್ಟನ್ ಅಧಿಪತ್ಯದಲ್ಲಿ ಅಪಾರವಾದ ಮಳೆಗಳು ಸಂಭವಿಸಿದವು. ಪ್ರವಾಹಗಳ ದೆಸೆಯಿಂದ ಜನರ ಕಷ್ಟನಷ್ಟಗಳು ಇಷ್ಟೆಂದು ವಿವರಿಸಲಸಾಧ್ಯವಾಗಿವೆ. ಅನೇಕ ಹಡಗುಗಳು ಬಿರುಗಾಳಿಯಿಂದ ಕೊಚ್ಚಿಕೊಂಡು ಭೂಮಿಯಮೇಲೆ ಹೋಗಿ ನಿಂತುಬಿಟ್ಟವು. ಸುಮಾರು ನೂರು ಟಾರ್ಪೆಡೋ ದೋಣಿಗಳು ಸಮುದ್ರದಲ್ಲಿ ಮುಳುಗಿಹೋದವು.

ಭೂಪಾತವು.

ತಾ. ೨೭ನೇ ಸೋಮವಾರ—ಕ್ಯಾನಡಾ ರಾಜ್ಯದಲ್ಲಿ ಒಟ್ಟಾವಾ ಎಂಬ ಡಿಸ್ಟ್ರಿಕ್ಟಿಗೆ ಸೇರಿದ ನಲಟ್ಟ ಎಂಬ ಸ್ಥಳದಲ್ಲಿ ಭೂಮಿಯು ಎತ್ತರಪ್ರದೇಶದಿಂದ ಜಾರಿಬಂದು ಆ ಸ್ಥಳವನ್ನೇ ಮುಚ್ಚಿಕೊಂಡಿತು. ಈ ಅನಾಹುತದಲ್ಲಿ ೨೫ ಜನರು ಹತರಾದರು.

ತಾಲ್ಲೋಕು ವರ್ತಮಾನಗಳು.

ಹೊಳೆನರಸೀಪುರ. ಈಗಲಿನಲ್ಲಿ ಬಿಸಲಿನ ತಾಪವು ಸಹಿಸಲಸಾಧ್ಯವಾಗಿದೆ. ಈಚೆಗೆ ೩—೪ ಸಲ ಒಳ್ಳೇ ಮಳೆಯಾದದ್ದರಿಂದ ರೈತರೆಲ್ಲರೂ ಹೊಲವನ್ನು ಹಸನು ಮಾಡುತ್ತಾ ಬೀಜ ಬಿತ್ತುವದಕ್ಕಾಗಿ ಭರಣಿ ಮಳೆಯನ್ನು ಎದುರು ನೋಡುತ್ತಾ ಇದ್ದಾರೆ—ಕಳೆದ ವಾರ ಡೆಪ್ಯುಟಿ ಕಮಿಷನರ್ ಸಾಹೇಬರ ಸವಾರಿಯು ಈ ಊರಿಗೆ ದಯಮಾಡಿಸಿ, ನೋಡಬೇಕಾದ ಊರಿನ ಭಾಗಗಳನ್ನೆಲ್ಲಾ ಪರಾಂಬರಿಸಿ, ಜನಗಳ ಅನುಕೂಲಕ್ಕಾಗಿ ಅನೇಕ ಬದಲಾವಣೆ ಕಾರ್ಯಗಳನ್ನು ನಡಿಸಿದರು—ಈಗ್ಗೆ ಒಂದೆರಡು ವಾರಗಳಿಂದ ಇಲ್ಲಿ ಕಾಲರಾ ಉಪದ್ರವು ಪ್ರಾರಂಭವಾಗಿ ಈಗಾಗಲೇ ಸುಮಾರು ೧೦—೧೨ ಜನಗಳು ಸತ್ತರು. ಹಿಂದೆ ಕಾಲರಾವು ಬಂದು ಒಂದು ವರ್ಷವೇ ಆಗಲಿಲ್ಲ. ತಿರಿಗಿ ಅದು ಪ್ರಾರಂಭವಾಗಿರುವದನ್ನು ನೋಡಿ ಜನಗಳು ಬಹು ಭಯಭ್ರಾಂತರಾಗಿರುತ್ತಾರೆ. ಹೋದ ವರುಷ ಕಾಲರಾ ಕಾಲದಲ್ಲಿ ಅನೇಕ ಪುಣ್ಯಾತ್ಮರು ಔಷಧವನ್ನು ತರಿಸಿ ಜನಗಳಿಗೆ ಕೊಟ್ಟು ಕೀರ್ತಿ ಸಂಪಾದಿಸಿದ್ದ ರೀತಿ ಈ ಸಾರಿಯೂ ಮಾಡುವರೆಂದು ನಂಬಿದ್ದೇನೆ. ಅಲ್ಲದೆ ಈ ಊರಿನಲ್ಲಿ ಎಲ್ಲಿ ನೋಡಿದರೂ ಕೊಳೆಯೋ, ಅಮೇಧ್ಯವೋ ಬಹು ಪ್ರಬಲವಾಗಿವೆ. ಈಗಿನ ಗಲಾಟೆಯ ದೆಸೆಯಿಂದ ಹಳ್ಳಿಗಳಿಂದ ಊರಿಗೆ ಬರುತ್ತಿದ್ದ ಹಾಲು, ಮೊಸರು, ಬೆಣ್ಣೆ, ಸೌದೆ ಇವುಗಳು ನಿಂತುಹೋದವು. ಈ ಕಾಲದಲ್ಲಿ ಮ್ಯುನಿಸಿಪಾಲಿಟಿಯವರು ಶುಚಿತ್ವ ವಿಷಯದಲ್ಲಿ ಹೆಚ್ಚು ಮುತುವರ್ಜಿ ವಹಿಸುವದು ಕ್ಷೇಮಕರವಾಗಿದೆ.

ತುಂಕೂರು.—ಬಿಸಿಲಿನ ಧಗೆಯು ಸಹಿಸಲಶಕ್ಯವಾಗಿದೆ. ಬೇಸಿಗೆ ವೆಸೆಯಿಂದ ಎಲ್ಲಾ ಇಲಾಖೆಗಳಿಗೆ ರಜಾ ಕೊಡಲ್ಪಟ್ಟಿದೆ. ಧಾನ್ಯಾದಿಗಳು ಜಾಸ್ತಿಯಾಗಿದ್ದರೂ ನಮ್ಮ ಪ್ರಾಂತ್ಯ ಗತಸಾಲಿನಲ್ಲಿ ಫಸಲು ಕಡಮೆಯಾದ್ದರಿಂದ ಮಂಡಿಗಳಿಗೆ ದಿನಸಿ ಗಾಡಿಗಳು ಬರುವದು ಕೊಂಚವಾಗಿದೆ. ಊರಿನಲ್ಲಿ ನೀರಿನ ಅಭಾವವನ್ನು ಹೇಳತೀರದು. ಕೆರೆಯಲ್ಲಿ ಪಕ್ಷಿ ಕುಡಿಯಲು ಕೂಡಾ ಒಂದು ಬೊಟ್ಟು ನೀರೂ ಇಲ್ಲ. ಹಿಂದೆ ಫಸಲಿಟ್ಟಿದ್ದ ತರೀ ಫಸಲು ಸರಿಯಾಗಿ ನೀರು ಸರಬರಾಯಿ ಆಗಿದ್ದರೆ ಐದಾರು ಸಾವಿರ ಖಂಡುಗ ಭತ್ತ ಆಗುತ್ತಿತ್ತು. ಈಗ ತಿಂಗಳಿನ ಮುಂಚೆಯೇ ನೀರಿನ ಅಭಾವವುಂಟಾದ್ದರಿಂದ ಐನೂರು ಖಂಡುಗದಷ್ಟು ಕೂಡಾ ಫಸಲು ಆಗಲಿಲ್ಲ. ಭಾವಿಗಳ ಆಶ್ರಯವಿರುವವರು ಕಷ್ಟಪಟ್ಟು ಫಸಲು ಕೈ ಸೇರದಂತಾಗುತ್ತದಲ್ಲಾ ಎಂಬ ಸಂಕಟದಿಂದ ಕಟಿಕೆ ಹಾಕಿ ನೀರು ಹೊಡೆಯುವ ಶ್ರಮವು ಭಗವಂತನಿಗೆ ಗೊತ್ತಾಗಬೇಕು. ಇದಲ್ಲದೆ ನಮ್ಮ ತಾಲ್ಲೂಕಿನಲ್ಲಿ ದನಗಳಿಗೆ ನೋಮಾರೀ ಜಾಡ್ಯವುಂಟಾಗಿ ಪ್ಲೇಗಿನಿಂದ ಜನರು ಸಾಯುವಂತೆ ಅವುಗಳು ಲಯವಾಗುತ್ತಿವೆ. ಈ ಭಾಗದಲ್ಲಿ ಬಹು ಮಂದಿ ರೈತರು ಮುಣಿಗಿ ಹೋದರು. ಇನ್ನೂ ಕೊರಟಗೆರೆ, ಮಧುಗಿರಿ ಪ್ರಾಂತ್ಯ ದನಗಳ ಸಾವು ವಿಶೇಷವಾಗಿದೆ. ಅಂತಾ ಯಾವ ಮುಖದಲ್ಲೂ ಜನರಿಗೆ ಸೌಖ್ಯವು ಲೇಶಾಂಶವೂ ತೋರುವದಿಲ್ಲ.—ಇಲ್ಲಿನ ಡಿಸ್ಟ್ರಿಕ್ಟ್ ಆಫೀಸು ಸುಣ್ಣ ಮತ್ತು ರಿಪೇರಿಗಳಿಂದ ಅಲಂಕಾರವಾಗುತ್ತಿದೆ. ಇಗರಿಂದ ಊರಿಗೇನೇ ಲಕ್ಷಣವೆಂದು ಸಂತೋಷ ಪಡಬೇಕಾಗಿದೆ. ನಮ್ಮ ಮ್ಯುನಿಸಿಪಾಲಿಟಿಯವರು ಕೋಟೆಯ ಚಿಕ್ಕಪೇಟೆ ಚರಂಡೀ ನೀರನ್ನು ಊರಿನಾಚೆಗೆ ಸಾಗಿಸಲು ಕಲ್ಲಿನದಾಗಿ ಕಟ್ಟಿರುವ ಚರಂಡಿಯು ಪೂರ್ತಿಯಾಗುತ್ತಾ ಬಂದಿದೆ. ಇದು ಸರಿಯಾದ ಏರ್ಪಾಡೇ ಸರಿ. ಅದರಂತೆಯೇ ಹೊರಪೇಟೆಯಲ್ಲಿ ಕಿಗಳರಿರುವ ಭಾಗದಲ್ಲಿ ಬಹು ಗಲೀಜಾಗಿರುವಂಥಾ ಚರಂಡಿಗಳನ್ನು ಕ್ರಮಪಡಿಸುವದರಿಂದ ಪ್ರಜಾ ಸೌಕರ್ಯವೂ ಆರೋಗ್ಯವೂ ಬಹಳ ಮಟ್ಟಿಗೂ ಹೆಚ್ಚುತ್ತೆ.—ತಾ. ೨೩ ನೇ ಗುರುವಾರ ಇದೇ ತಾಲ್ಲೂಕಿಗೆ ಸೇರಿದ ಕೋರ ಹೋಬಳಿ ವೈಲನಹಳ್ಳಿ ಎಂಬ ಗೊಲ್ಲರ ಹಟ್ಟಿಯ ರಾತ್ರಿ ೧೦ ಘಂಟೆಯಲ್ಲೂ ಬೆಂಕಿ ಬಿದ್ದು, ಒಂದು ಮಾನೆ ಕೇರಿ. ಬಾಕಿ ಹತ್ತು ಪವಿತ್ರ ಮನೆಗಳು ಸಾಯಂಕಾಲದ ವರೆಗೂ ಬೆಂದು ನಿರ್ನಾಮವಾದವು. ಆದರೆ ಇದರಲ್ಲಿ ಪ್ರಾಣ ನಷ್ಟವೇನೂ ಆಗದಿದ್ದರೂ ನಾಲ್ಕೈದು ಸಾವಿರ ರೂಪಾಯಿನ ದವಸ ಧಾನ್ಯಗಳು ನಾಶಹೊಂದಿದವು. ಈಗ ಇಲ್ಲಿನ ಸಂಸಾರಿಗಳ ಕಷ್ಟ ಹೇಳತೀರದು.

ಚಿತ್ರದುರ್ಗ—ಸುತ್ತಮುತ್ತ ಕಡೆಗಳಲ್ಲಿ ಒಳ್ಳೇ ಹದವಾಗಿ ಮಳೆಯಾದವೆಂದು ಓದುತ್ತೇವೆ. ಆದರೆ ಇಲ್ಲಿ ಆಗಾಗ ಮೋಡಗಳಾಡುವುದೇ ಹೊರತು ಮಳೆ ಇಲ್ಲ. ಅಲ್ಪ ಸ್ವಲ್ಪವಾಗಿ ಬಂದ ಮಳೆ ಬಿಸಿಲಿನ ತಾಪವನ್ನು ಹೆಚ್ಚುಮಾಡಿತೇ ಹೊರತು ಕಮ್ಮಿಯಾಗಲಿಲ್ಲ. ದವಸಗಳ ಧಾರಣೆ ಜಾಸ್ತಿಯಾಗುತ್ತಲೇ ಇದೆ. ಸಂತೆಯಲ್ಲಿ ಈಚೀಚೆಗೆ ಗೋಧಿನೆಲೆ ಅರು ಪದು ಕೆಟ್ಟಿಗಿದೆ. ಇದರ ಪ್ರಂಡನ್ನು ಸರಕಾರದವರಾದರೂ ಪೋಲೀಸಿನವರಾದರೂ ಯಾಕೆ ವಿಚಾರಿಸಿ ನಿಲ್ಲಿಸುವದಿಲ್ಲವೋ ಗೊತ್ತಾಗುವದಿಲ್ಲ.—ಈಗ ಕೆಲವು ದಿನಗಳ ಮುಂಚೆ ಇಲ್ಲಿನ ಅಯರ್ನ ಸ್ಕೂಲೆಂಟ್ ಹೋಮಿನ ಮ್ಯಾನೇಜರಾದ ಮೇ॥ ಕನುಮಂತರಾಯರವರು ಟೌನ್ ಹಾಲಿನಲ್ಲಿ ಕಮನಾಟರೆಡ್ಡಿ, ವೆಲನಾಟರೆಡ್ಡಿ, ಪಟ್ಟರಾಜು ಎಂಬ ಪಂಗಡದ ಕೆಲವು ಮುಖಂಡರನ್ನು ಸೇರಿಸಿ, ರೆಡ್ಡಿ ಜನಗಳ ಪೂರ್ವಸ್ಥಿತಿ, ಈಗಿನ ಸ್ಥಿತಿ, ಮುಂದೆ ಅವರು ತಮ್ಮ ಏಳಿಗೆಗೋಸ್ಕರ ಮಾಡಬೇಕಾದ್ದು ಮುಂತಾದ ಕರ್ತವ್ಯಗಳನ್ನು ಕುರಿತು ಉಪನ್ಯಾಸ ಮಾಡಿದರು. ಮೇ॥ ಸಿ. ಕೃಷ್ಣರಾವ್, ರಿಟೈರ್ಡ್ ಹೆಡ್ ಕ್ವಾರ್ಟರ್ ಅಸಿಸ್ಟೆಂಟರು ಅಗ್ರಾಸನವನ್ನು ವಹಿಸಿದ್ದರು. ಉಪನ್ಯಾಸಕರು ರೆಡ್ಡಿ ಜನಗಳ ಪೂರ್ವಸ್ಥಿತಿಯನ್ನು ವಿವರಿಸಿ, ಅವರು ವಿಜಯನಗರದ ರಾಜ್ಯದ ಆಳಿಕೆಯಲ್ಲಿ ಚಿಕ್ಕ ಚಿಕ್ಕ ಸಂಸ್ಥಾನಾಧಿಪತಿಗಳಾಗಿದ್ದು, ವಿದ್ಯೆ, ಪರಾಕ್ರಮಾದಿಗಳಲ್ಲಿ ಹೆಸರುವಾಸಿಯಾಗಿದ್ದರೆಂತಲೂ ಈಚೆಗೆ ಮುಸಲ್ಮಾನರ ಹಾವಳಿಯಿಂದ ಹೀನಸ್ಥಿತಿಗೆ ಇಳಿದು ಈ ದೇಶಕ್ಕೆ ವಲಸೆ ಬಂದರೆಂತಲೂ ವಿವರಿಸಿ, ಈಗ ಅವರು ತಕ್ಕಮಟ್ಟಿಗೆ ಜಮೀನ್ದಾರರಾಗಿಯೂ ಸರ್ಕಾರಕ್ಕೆ ಉತ್ತಮ ಪ್ರಜೆಗಳಾಗಿಯೂ ಇದ್ದರೂ ಇಂಗ್ಲಿಷ್ ಮುಂತಾದ ಪ್ರೌಢವಿದ್ಯೆಕ್ಕೆ ತಕ್ಕ ಅನುಕೂಲಗಳಿಲ್ಲದೆ ಸಂಕಟಪಡುತ್ತಿರುವದರಿಂದ ಈಗ ಇಲ್ಲಿ ಸ್ಥಾಪಿಸಿರುವ ಸ್ಟೂಡೆಂಟ್ಸ್ ಹೋಮನ್ನು ಸರಕಾರದವರು ಮಹಘತ್ತಾಗಿ ಕೊಡತಕ್ಕ ಸ್ಥಳದಲ್ಲಿ ವಿಸ್ತಾರವಾದ ಮನೆಯನ್ನು ಕಟ್ಟಿಸಿ ನಡಿಸುವದು ಅಗತ್ಯವಾಗಿದೆ ಎಂತಲೂ ಪರಿಷ್ಕಾರವಾಗಿ ಮನೋರಂಜಕವಾಗಿಯೂ ಉಪನ್ಯಾಸಮಾಡಿದರು. ಅನಂತರ ಅಲ್ಲಿ ಹಾಜರಿದ್ದ ಪ್ರಖ್ಯಾತರಾದ ಮೇ॥ ಜಿ. ವೆಸ್ಲಿಯವರು ಎದ್ದು ಈ ವಿಷಯವು ಸ್ವದೇಶಾಭಿವೃದ್ಧಿಗೂ ಪರಕೀಯ ಜನಗಳಿಗೂ ಸರಕಾರಕ್ಕೂ ಉತ್ತಮೋತ್ತಮವಾದ ಕಾರ್ಯವಾದ್ದರಿಂದ ಬಿಡದೆ ಸಾಧಿಸಿ ನೆರವೇರಿಸಿ ಕೀರ್ತಿಪಡೆಯಬೇಕೆಂದು ಹೇಳಿದರು. ಅಗ್ರಾಸನರು ಈ ವಿಷಯವನ್ನು ಪ್ರಾರ್ಥಿಸುವದಕ್ಕೆ ಇದು ನಮ್ಮ ಎಡ್ವರ್ಡ್ ಸಾರ್ವಭೌಮರ ಮತ್ತು ನಮ್ಮ ಮಹಾರಾಜರ ಆಳಿಕೆಯಲ್ಲಿ ಸಕಾಲವಾಗಿದೆ ಎಂದು ಪ್ರೋತ್ಸಾಹಗೊಳಿಸಿದರು. ಈಗ ಈ ಮಹಾ ಕೆಲಸಕ್ಕಾಗಿ ಹಣ ಸಂಗ್ರಹದ ತಖವೀದು ನಡೆಯುತ್ತಾ ಇದೆ.

ಫ್ರೇಜರ್‌ಟೌನ್.—ಇಲ್ಲಿ ಸುಮಾರು ನಾಲ್ಕು ಹದ ಮಳೆಯಾದ್ದರಿಂದ ಬಿಸಿಲಿನ ಧಗೆಯು ಸ್ವಲ್ಪಮಟ್ಟಿಗೆ ಕಡಮೆಯಾಗಿದೆ. ಆದರೆ ಹವ ಲವಲಾವಣೆಯಿಂದಲೋ ಇಲ್ಲವೆ ಕುಡಿಯುವ ನೀರು ಕೆಟ್ಟುಹೋಗಿರುವದರಿಂದಲೋ ಜನರಿಗೆ ದೇಹಧಾರಾಢ್ಯ ಕಡಮೆಯಾಗಿ, ಜ್ವರ, ಭೇದಿ ಮುಂತಾದ ಕಾಯಿಲೆಯಿಂದ ನರಳುತ್ತಿದ್ದಾರೆ ಮತ್ತು ಊರಿ

ಕಲ್ಲಿ ಮೂರು ನಾಲ್ಕು ಕಾಲರಾ ಕೇಸುಗಳು ಆದಂತೆ ವರ್ತಮಾನ ಕೇಳುತ್ತೇನೆ. ಈ ಸ್ಥಳಕ್ಕೆ ಹೊಸದಾಗಿ ಬಂದಿರುವ ಆಸ್ಪತ್ರೆ ಅಸಿಸ್ಟೆಂಟರು ಮೂರು ನಾಲ್ಕು ಭಾವಿಗಳಿಗೆ ಔಷಧ ದ್ರಾವಕಗಳನ್ನು ಹಾಕಿ ನೀರನ್ನು ಶುದ್ಧಿ ಮಾಡಿದಾರೆ ಮತ್ತು ಪ್ರಜೆಗಳು ನೀರು ಕಾಯಿಸಿ ಕುಡಿಯುವಂತೆ ಬುದ್ಧಿವಾದಗಳನ್ನು ಹೇಳುತ್ತಿದಾರೆ. ಆದರೆ ಜನರು ಸರ್ವ ಸಾಧಾರಣವಾಗಿ ಕೆರೆಯ ನೀರನ್ನು ಹಾಗೇ ಉಪಯೋಗಿಸುವರು ಕೆರೆಯ ನೀರು ಬಹಳ ಮಟ್ಟಿಗೆ ಕೆಟ್ಟುಹೋಗಿದೆ. ನಮ್ಮ ಅಮಲ್ದಾರರು ಒಳಗಿರೆಯಲ್ಲಿರುವ ಭಾವಿಯನ್ನು ಶುಚಿಮಾಡಿಸಿ ಆ ನೀರನ್ನೂ ಮತ್ತು ಊರಿಗೆ ಸ್ವಲ್ಪ ದೂರದಲ್ಲಿರುವ ಇತರ ಭಾವಿಗಳ ಶುದ್ಧವಾದ ನೀರನ್ನೂ ಉಪಯೋಗಿಸುವಂತೆ ತಕ್ಕ ಏರ್ಪಾಡು ಮಾಡುವರೆಂದು ನಂಬಿದೇವೆ. ಮತ್ತು ಊರಿನಲ್ಲಿ ನಮ್ಮ ಡಾಕ್ಟರೂ, ಅಮಲ್ದಾರರೂ, ಸಬ್ ಡಿವಿಜನ್ ಸಾಹೇಬರೂ ಸಂಚಾರಮಾಡಿ, ಅಶುಚಿಯಾಗಿರುವ ಭಾಗಗಳನ್ನು ಶುಚಿಪಡಿಸಿ, ಪ್ರಜೆಗಳಿಗೆ ಹಿತೋಪದೇಶವನ್ನು ಮಾಡಿದರೆ ಒಳ್ಳೇದಾಗಿರುವದು.—ಇದೇ ತಾಲ್ಲೋಕಿಗೆ ಸೇರಿದ ಮೇಲುಕೋಟೆಯಲ್ಲಿ ಈಗ ಸುಮಾರು ಎಂಟು ಹತ್ತು ದಿನಗಳಿಂದಲೂ ವಾಂತಿಭೇದಿ ಪ್ರಾರಂಭವಾಗಿ ಸುಮಾರು ಇಪ್ಪತ್ತು ಜನರ ವರಿಗೂ ತಗಲಿತೆಂದು ವರ್ತಮಾನ. ತಾಲ್ಲೋಕು ಡೆಪ್ಟಿ ಅಮಲ್ದಾರರೂ ಆಸ್ಪತ್ರೆ ಅಸಿಸ್ಟೆಂಟರೂ ಆ ಸ್ಥಳಕ್ಕೆ ದಯಮಾಡಿಸಿ ತಕ್ಕ ಏರ್ಪಾಡುಗಳನ್ನು ಮಾಡಿ ಬಂದರೆಂದು ವದಂತಿ. ಅಲ್ಲಿನ ಕೊಳಗಳ ನೀರು ತುಂಬಾ ಕೆಟ್ಟು ಹೋಗಿರುವದರಲ್ಲಿ ಏನೂ ಸಂಶಯವಿಲ್ಲ. ಅಂಥಾ ನೀರನ್ನು ಕುಡಿಯುವದರಿಂದ ಯಾವ ಸಾಂಕ್ರಾಮಿಕ ರೋಗವಾದರೂ ಹುಟ್ಟುವದು ಆಶ್ಚರ್ಯವಲ್ಲ. ಮತ್ತು ಬೀಥಿಗಳು, ಚರಂಡಿಗಳ ರೊಚ್ಚು ಗಳಿಂದ ದುರ್ವಾಸನೆ ಬಡಿಯುತ್ತಿರುತ್ತದೆ. ಜಾಕ್ರೆ ನದಿಯುವ ಆ ಸ್ಥಳದಲ್ಲಿ ಸರ್ಕಾರದವರು ತಕ್ಕ ಏರ್ಪಾಡುಗಳನ್ನು ಮಾಡುವದು ಅವಶ್ಯವಾಗಿದೆ.—ಈ ಟವನಿಗೆ ಸುಮಾರು ಎರಡು ಮೈಲಿ ದೂರದಲ್ಲಿರುವ ದಾಮರಗಳ್ಳಿಯ ಸಮೀಪದಲ್ಲಿ ಒಬ್ಬ ಗಾಡಿಯವನು ರಸ್ತೆಯಲ್ಲಿ ಗಾಡಿ ಹೊಡೆದುಕೊಂಡು ಹೋಗುತ್ತಿರುವಾಗ ರಸ್ತೆ ಪಕ್ಕದಲ್ಲಿರುವ ಒಂದು ಮರದ ಕೊಂಬೆಯು ಗಾಳಿಯಿಂದ ಆಕಸ್ಮಿಕವಾಗಿ ಗಾಡಿಯವನ ಮೇಲೆ ಬೀಳಲು ಅವನು ಸತ್ತುಹೋದನಂತೆ, ಆದರೆ ಎತ್ತುಗಳಿಗೆ ಮಾತ್ರ ಯಾವ ಅಪಾಯವೂ ಆಗಲಿಲ್ಲವೆಂತಲೂ ವರ್ತಮಾನ ಕೇಳಿದೆವು.—ಕೆಲವು ದಿನಗಳ ಹಿಂದೆ ಸರ್ಕಲ್ ಇನ್ಸ್‌ಪೆಕ್ಟರವರು ಬಂದು ಈ ಊರಿನ ವರ್ನಾಕ್ಯುಲರ್ ಇಂಗ್ಲಿಷ್ ಸ್ಕೂಲನ್ನು ಪರೀಕ್ಷೆಮಾಡಿ, ನಂತರ ಊರಿನಲ್ಲಿರುವ ವರ್ನಾಕ್ಯುಲರ್ ಗರಲ್ ಸ್ಕೂಲನ್ನು ಗೌ॥ ಕನ್ನಡಾ ಸ್ಕೂಲನ್ನು ಪರೀಕ್ಷಿಸಿ ಹೋದರು. ಇತ್ತೀಚೆಗೆ ಹೊಸದಾಗಿ ಏರ್ಪಾಡಾಗಿರುವ ಒಂದು ಪ್ರೈವೆಟ್ ಸ್ಕೂಲಿಗೆ ಹೋದಾಗ್ಗೆ ಜನರು ನಾನಾ ವಿಧವಾಗಿ... ಗೌ॥ ಕನ್ನಡಾ ಸ್ಕೂಲಿನ ಹೆಡ್ ಮಾಸ್ಟರ ಮೇಲೆ ದೂರುಗಳನ್ನು ಹೇಳಿಕೊಂಡಪ್ಪರ ಮೇಲೆ ಇನ್ಸ್‌ಪೆಕ್ಟರ್ ಸಾಹೇಬರು ಸದರಿ ಹೆಡ್ ಮಾಸ್ಟರ ವಿಷಯದಲ್ಲಿ ತುಂಬಾ ಆಕ್ಷೇಪಿಸಿ ಬರೆದಿರುವಂತೆ ವರ್ತಮಾನ ಕೇಳುತ್ತೇವೆ.—ಕೆಲವು ದಿನಗಳ ಹಿಂದೆ ದಾಮರ ಹಳ್ಳಿಯಲ್ಲಿ ಮೂರು ಮಂದಿಗೆ ಜಗಳವಾಗಿ ಪೋಲೀಸಿಗೆ ರಿಪೋರ್ಟಾದಂತೆ ಕೇಳುತ್ತೇವೆ. ಈ ಕೇಸಿನ ನಿಜಾಂಶವನ್ನು ತಿಳಿಯುವದಕ್ಕೆ ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರು ಮಂಡ್ಯದ ತಾಲ್ಲೋಕು ಇನ್ಸ್‌ಪೆಕ್ಟರನ್ನು ಬರಮಾಡಿಕೊಂಡಿದ್ದಾರೆಂದೂ, ಇಲ್ಲಿನ ಏನೇದಾರರನ್ನು ಬಹಳ ದರ್ಬಾರಾಗಿ ಚಾಮರಾಜ ನಗರಕ್ಕೆ ವರ್ಗಾಯಿಸಿದರೆಂದೂ ವರ್ತಮಾನ.—ಈ ಊರಿನಲ್ಲಿ ಒಂದು ಫುಟ್ ಬಾಲ್ ಕ್ಲಬ್ ಎಂಬುವದು ಪ್ರಾರಂಭವಾಗಿ ಬಹಳ ಸ್ವಲ್ಪ ಕಾಲವಾದರೂ ಸದರಿ ಕ್ಲಬ್ಬಿನವರು ಬಹಳ ಕಾಲದಿಂದ ಪರಿಚಯವಾಗುತ್ತಿರುವ ಹೋಲಿಗ ಕ್ಲಬ್ಬ ಎ. ವಿ. ಸ್ಕೂಲಿನ ಕ್ಲಬ್ಬಿನವರೊಂದಿಗೆ ಸಮಾನಸ್ಕಂದರಾಗಿ ಮ್ಯಾಚ್ ಆಡಿದರೆಂದು ಕೇಳುತ್ತೇವೆ. ಈ ಕ್ಲಬ್ಬನ್ನು ಏರ್ಪಾಡುಮಾಡಿ, ಬಹಳ ಸಹಾಯಕಾರರಾಗಿದ್ದ ನಮ್ಮ ಡೆಪ್ಟಿ ಅಮಲ್ದಾರರ ತಮ್ಮಂದಿರಾದ ತಿಮ್ಮಪ್ಪನವರು ಈ ಸ್ಥಳವನ್ನು ಬಿಟ್ಟು ಬೆಂಗಳೂರಿಗೆ ಹೋಗಿಬಿಟ್ಟದ್ದರಿಂದ ಸದರಿ ಕ್ಲಬ್ಬಿನ ಮೆಂಬರುಗಳು ತುಂಬಾ ವ್ಯಸನಪಡುತ್ತಾರೆ.

ಬಾಹ್ಯದೇಶದ ವೃತ್ತಾಂತಗಳು.

ಕೋಲಾರದ ಗಣಿಗಳ ಪ್ರಾಂತ್ಯದಲ್ಲಿ ಪಿಚ್ಚಹಳ್ಳಿ ದೇವಸ್ಥಾನಕ್ಕೆ ಕಳ್ಳರು ಬಿದ್ದು ನಗನಾಣ್ಯಗಳನ್ನು ಕಳುವು ಮಾಡಿದಾರೆ.

***

ಸಂಪಿಗೆ ಹಳ್ಳಿಯಿಂದ ನೀಲಗಿರಿ ಬೆಟ್ಟಕ್ಕೆ ದಿನವಹಿ ಹೋಗಿಬರುವಂತೆ ಟಾಂಗಾಗಾಡಿಗಳನ್ನು ಇಟ್ಟು ನಡೆಸುತ್ತಾರೆಂದು ತಿಳಿಯುವುದು.

***

ಕಳೆದ ವಾರ ರಾಜಧಾನಿಯ ಕೋಟೆಯಲ್ಲಿ ಒಂದು ಮನೆಗೂ, ಕುರನಗೆರೆಯಲ್ಲಿ ಮೂರು ಮನೆಗಳಿಗೂ, ಕೃಷ್ಣರಾಜ ಮೊಹಲ್ಲೆಯಲ್ಲಿ ಮೂರು ಮನೆಗಳಿಗೂ ಕಳ್ಳರು ನುಗ್ಗಿ ಸಾಮಾನುಗಳನ್ನು ಅಪಹರಿಸಿದ್ದಾರೆ.

***

ರಾಜಧಾನಿಯಲ್ಲಿ ಮತ್ತೆ ಪ್ಲೇಗ್ ಪ್ರಾರಂಭವಾಗುವ ಸಮಯವು ಬಂದದ್ದರಿಂದ ಪ್ರಜೆಗಳಿಗೆ ಶೆಡ್ಡುಗಳು ಹಾಕುವುದರಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳು ಪ್ರೋತ್ಸಾಹ ಕೊಟ್ಟು, ಸರ್ಕಾರದವರಿಗೆ ಸಹಾಯ ಮಾಡಬೇಕೆಂದು ಡೆಪ್ಟಿ ಕಮಿಷನರವರು ಕಳೆದ ವಾರ ಮ್ಯುನಿಸಿಪಲ್ ಮೀಟಿಂಗಿನಲ್ಲಿ ತಿಳಿಸಿದರು.

***

ಕಳೆದ ೨೩ ವರುಷಗಳಿಂದ ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಲ್‌ರಾಗಿದ್ದ ಮೆ॥ ಜೆ. ಕುಕ್ ರವರಿಗೆ ಅವರ ವಿದ್ಯಾರ್ಥಿಗಳು ಸಭೆ ಸೇರಿ ದೀರ್ಘವಿಶ್ರಾಂತಿಸುಖವನ್ನು ಬಯಸಿ ಅಡ್ರೆಸ್ಸನ್ನು ಕಳೆದ ವಾರ ಒಪ್ಪಿಸಿದರು. ಸರ್ ಕೃಷ್ಣಮೂರ್ತಿಯವರು ಆ ದಿನ ಸಭೆಯ ಅಗ್ರಾಸನವನ್ನು ವಹಿಸಿದ್ದರು.

***

ಸರ್ಕಾರಿ ವ್ಯವಸಾಯ ಶಾಸ್ತ್ರಜ್ಞರಾದ ಡಾ॥ ಲಿಮ್ಮೆರರವರು ಕಳೆದ ಹತ್ತು ವರುಷಗಳಿಂದ ಅನೇಕ ಶಾಸ್ತ್ರಶೋಧನಾ ಕಾರ್ಯಗಳನ್ನು ನಡಿಸಿದ್ದರೂ, ಸದ್ಯಸ್ಥಿತಿಯಲ್ಲಿ ಅವುಗಳಿಂದ ವ್ಯವಸಾಯಾಭಿವೃದ್ಧಿಗೆ ಪ್ರಯೋಜನವಾಗುವಂತಿಲ್ಲವೆಂದು ಹೇಳಿ, ಗವರ್ನಮೆಂಟಿನವರು ಅವರನ್ನು ವರ್ಷಕ್ಕೆ ೩,೦೦೦ ರೂಪಾಯಿ ಪೆನ್ಷನ್ ಕೊಟ್ಟು ಈ ವರ್ಷಾಂತ್ಯದಿಂದ ಕೆಲಸಬಿಡಿಸುವವರಾಗಿದಾರೆ.

***

ಒಬ್ಬ "ಕನ್ಯಾರ್ಥಿ" ಯು ಬರೆಯುವುದೇನೆಂದರೆ—ಬಡಗನಾಡು ಕರ್ನಾಟಕ ಸ್ಮಾರ್ತ ಬ್ರಾಹ್ಮಣ, ವಶಿಷ್ಠ ಗೋತ್ರದವರಿಗೆ ದ್ವಿತೀಯ ಸಂಬಂಧ ವಿವಾಹಕ್ಕೆ ಸ್ಮಾರ್ತ ಅಥವಾ ವೈಷ್ಣವರಲ್ಲಿ ೧೧ ವರುಷಕ್ಕೆ ಮೇಲ್ಪಟ್ಟ ಸಲಕ್ಷಣವಾದ ಮತ್ತು ಸದ್ವಂಶದ ಕನ್ಯಾ ಬೇಕಾಗಿದೆ. ವರನ ವಯಸ್ಸು ೩೩-೩೪ ವರುಷ. ಕನ್ಯಾ ಕೊಡಲು ಇಚ್ಛೆಯುಳ್ಳವರು ಹೆಚ್ಚಿಗೆ ವಿಷಯಗಳಿಗೆ ಮಳವಳ್ಳಿ ತಾಲ್ಲೂಕು ನಾಗನಮಂಗಲ ಗ್ರಾಮದ ಶ್ಯಾನುಭೋಗ ಹನುಮಂತಪ್ಪನವರಿಗೆ ಬರೆದು ತಿಳಿದುಕೊಳ್ಳಬಹುದು.

ಮೈಸೂರು ಗೆಜೆಟ್ ಸಂಗ್ರಹ.

ಅಸಿಸ್ಟೆಂಟ್ ಸರ್ಜನ್ ಮೆ॥ ಟಿ. ಡಿ. ರಾಘವೇಂದ್ರರಾಯರಿಗೆ ಕೊಟ್ಟಿರುವ ಒಂದು ತಿಂಗಳು ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಹನ್ನೊಂದು ದಿನಗಳಿಗೆ ಜಾಸ್ತಿ ಮಾಡಿದಾರೆ.

ತಿಪ್ಟೂರು ತಾಲ್ಲೂಕು ಅಮಲ್ದಾರ್ ಮೆ॥ ಸಿ. ಗೋಪಾಲಾಚಾರ್ರಿಗೆ ಏಪ್ರಿಲ್ ೭ ರ ರಾಗಾಯತು ಆರು ವಾರಗಳ ಕಾಯಿಲೆ ರಜಾ ಕೊಟ್ಟಿದೆ.

ರಜದಿಂದ ವಾಪಸು ಬಂದಿರುವ ಅಮಲ್ದಾರ್ ಮೆ॥ ಮಹಮದ್ ಅಬ್ದುಲ್ಲಾ ಷರೀಫ್ ಯವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ತಿಪ್ಟೂರು ತಾಲ್ಲೋಕಿಗೆ ವರ್ಗಮಾಡಲ್ಪಟ್ಟಿದಾರೆ.

ತುಂಕೂರು ಡೆಪ್ಟಿ ಕಮಿಷನರ್ ಮೆ॥ ಕೆ. ದೊರಸಾಮಿ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ರಾಗಾಯತು ಮೂರು ವಾರಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮೆ॥ ಕೆ. ಪಾಂಡುರಂಗರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ತುಂಕೂರು ಡಿಸ್ಟ್ರಿಕ್ಟಿನ ಡೆಪ್ಟಿ ಕಮಿಷನರರಾಗಿಯೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ ಒದಲಿ ಕೆಲಸ ನೋಡತಕ್ಕದೆಂದು ನೇಮಿಸಲ್ಪಟ್ಟಿದಾರೆ.

ಅ. ಕಮಿಷನರ್ ಮೆ॥ ಪಿ. ತಿರುಮಲಚೆಟ್ಟಿಯವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಬೆಂಗಳೂರು ಡಿಸ್ಟ್ರಿಕ್ಟಿನ ಸಬ್ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು.

ಹಾಸನ ಡಿಸ್ಟ್ರಿಕ್ಟಿನ ಆಕ್ಟಿಂಗ್ ಸೀನಿಯರ್ ಅ॥ ಕಮಿಷನರ್ ಮೆ॥ ಎಂ. ಎ. ನಾರಾಯಣ ಐಯ್ಯಂಗಾರ್‌ವರ್ ಸರ್ವೆ ಇಲಾಖೆಯಲ್ಲಿ ಕೆಲಸ ಕಲಿಯುವುದು ಪೂರೈಸುವ ತಾರೀಖಿನಿಂದ ಒಂದು ತಿಂಗಳು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಅದರಾಗಾಯತು ಡಿಸೆಂಬರ್ ೩೧ ರಲ್ಲಿ ಇವರಿಗೆ ಸ್ವಾಂತ್ರ್ಯ ಆಗಿದ್ದ ಪ್ರಿವಿಲೆಜ್ ರಜವು ರದ್ದಾಗಿದೆ.

ಮೇಲೆ ಹೇಳಿದ ಅ॥ ಕಮಿಷನರರು ರಜಾ ಪಡೆದುಕೊಳ್ಳುವ ತನಕ ... ಸೀನಿಯರ್ ಅ॥ ಕಮಿಷನರ್ ಮೆ॥ ಕೆ. ಶ್ರೀನಿವಾಸರಾಯರು, ಕೋಲಾರದಿಂದ ಶಿವಮೊಗ್ಗ ಡಿಸ್ಟ್ರಿಕ್ಟ್ ಜನರಲ್ ಛಾರ್ಜಿನ, ಕೋಲಾರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

೭ ಜ. ಕಮಿಷನರ್ ಮೆ॥ ವಿ. ವೆಂಕಟದಾಸಯ್ಯಂಗಾರ್ ... ಶಿವಮೊಗ್ಗದಿಂದ ಕೋಲಾರದ ಡಿಸ್ಟ್ರಿಕ್ಟ್ ಜನರಲ್ ಛಾರ್ಜಿನ ಕೊಲಾರ್ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

೩॥ ಅ॥ ಕಮಿಷನರ್ ಮೆ॥ ವಿ. ... ಕೋಲಾರ್ ಡಿಸ್ಟ್ರಿಕ್ಟ್ ಜನರಲ್ ಛಾರ್ಜಿನಿಂದ ಕೋಲಾರ್ ಸಬ್ ಡಿವಿಜನ್ ಛಾರ್ಜಿಗೆ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು. ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಹಳ ಬಾಯಾರಿಕೆ; ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮರವು, ನಿಶ್ಶಕ್ತಿ, ಇಳೆ ಮೊದಲಾದುವು. ಇವುಕ್ಕೆ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಅರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳಿಂದ ಸಂಬಂಧಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ಸಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [93-35]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ. ೩—೦—೦, ಅಥವಾ ೬. ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೩೦, ಬೊಂಬಾಯಿ.—ಇವರಲ್ಲಿ ದೊರೆಯುವುದು.

"ಕನ್ನಡ ಲಾ ರಿಪೋರ್ಟರ್."

ವಿಶಿಷ್ಟ ಕೋರ್ಟಿನ ಕಚೇರಿಗಳಲ್ಲೂ ಸಾರ್ವದಾ ಉದಹರಿಸಲ್ಪಡುತ್ತಿರುವ ಪ್ರಿವಿ ಕೌನ್ಸಿಲ್, ಕಲ್ಕತ್ತ ಅಲಹಾಬಾದ್ ಬೊಂಬಾಯಿ ಮದ್ರಾಸ್ ಹೈಕೋರ್ಟುಗಳ, ಮೈಸೂರು ಚೀಫ್‌ಕೋರ್ಟಿನ ಫೈಸಲುಗಳು ಕನ್ನಡಕ್ಕೆ ಭಾಷಾಂತರಿಸಲ್ಪಟ್ಟು ಛಾಪಿಸಲ್ಪಡುವ "ಕನ್ನಡ ಲಾ ರಿಪೋರ್ಟರ್" ಎಂಬ ಮಾಸಪತ್ರಿಕೆಯು ಮುಂದಿನ ಜೂನ್ ರಾಗಾಯಿತು ಹೊರಡುತ್ತದೆ. ಇದಕ್ಕೆ ವರ್ಷದ ಚಂದಾ ೧ ರೂ. ಬಿಡಿಪತ್ರಿಕೆ ಜೂನ್ ತಿಂಗಳದುದಕ್ಕೆ ೧ ಆ. ೬ ಪೈ ಆ ಮುಂದಿನ ತಿಂಗಳವಕ್ಕೆ ೨ ಆಣೆ, ಚಂದಾಹಣವನ್ನು ಮುಂಗಡವಾಗಿ ಕೊಡಬೇಕು; ಅಥವಾ ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ಪೋಸ್ಟ್ ಸ್ಟ್ಯಾಂಪನ್ನು ಕಳುಹಿಸಬಹುದು. ಪತ್ರಿಕೆಯನ್ನು ಅಪೇಕ್ಷಿಸುವವರು ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು ಈ ವಿಳಾಸಕ್ಕೆ ಬರೆಯಬೇಕು.

[40-1]

ಇಲ್ಲಿ ನೋಡಿ.

8-18

ತುಮಕೂರು ವಿಜಯ ಇಲಾಖೆಯಲ್ಲಿ ಯೂರೋಪಿಯನ್ ದೇಶೀಯ ಕಾರಖಾನೆಯಿಂದ ಉತ್ತಮ ತರಹದ ಹಾಸಿಗೆ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ.

ಕ್ರಯ:—೩ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯ ವರಿಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಕಮಿಷನ್ ಅಂತ ಡಿಸ್ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮ್ಯಾನೇಜರ್,

ಹಾಸಿಗೆ ಟೋಪಿ ಕಾರ್ಖಾನೆ. ವಿಜಯ ಇಲಾಖೆ, ತುಮಕೂರು.

ದೇಶಬಾಂಧವರೇ! ಲಾಲಿಸಿ!!

123-23

ಸ್ವದೇಶೀ ಭಾವನೆಯು ಎಲ್ಲೆಲ್ಲಿಯೂ ಹರಡಿದೆ. ಇದರಿಂದ ಕರ್ನಾಟಕ ರಾಜ್ಯದವರೆಲ್ಲರು ಪ್ರಸಿದ್ಧವಾದ ಮಧುರೆಯಲ್ಲಿ ನೇಯ್ದು ಮಾಡಿಸಿದ ಗಟ್ಟಿ ಮತ್ತು ಗ್ಯಾರಂಟಿ ಬಣ್ಣದ ಎರಡುವರೆ ಮೊಳದಗಲ ಹದಿನಾರುವರೆ ಮೊಳಕ್ಕಿಂತ ಹೆಚ್ಚಾದ ಉದ್ದವುಳ್ಳ ಕೆಂಪು ಅಥವಾ ಕಪ್ಪು ಬಣ್ಣದ ಬಹು ಸೊಗಸಾದ ಮತ್ತು ನಯವಾದ ಬೇಸಿಗೆಗೂ ಸಹ ಬಹಳ ಉಪಯೋಗವಾದ ಮಧುರೆ ಸೀರೆಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತದಾದ್ದರಿಂದ ಕೂಡಲೆ ನಮಗೆ ಬರೆದು ತರಿಸಿಕೊಳ್ಳಿ. ವ್ಯಾಪಾರಸ್ಥರು ಸಹಾ ತರಿಸಿ ಮಾರುವಷ್ಟು ಸುಲಭಕ್ರಯ. ಸಾದಾ ಕ್ರಯ ರೂ. ೭—೮—೦ ಬೆಳೆಯ ಜುಳ್ಳೆ ಯಾ ಜುಪ್ಪೆಗಳಿಂದ ಕೂಡಿದ್ದು ರೂ. ೩—೮—೦ ಬಹಳ ನಯವಾದ ಮತ್ತು ನಾಜೋಕಾದದ್ದು ರೂ ೫, ರೂ ೬.

ಪ್ರಮುಖ್ಯ ಜರಿ ರೇಷ್ಮೆ ವಸ್ತ್ರಗಳು.

೭ ಮೊಳದಗಲ, ನಾಲ್ಕುಮೊಳದುದ್ದ. ರೂ. ೫. ಬೇಸಿಗೆಯ ಸೊಗಸಾದ ಬನೀನ್ ರೂ. ೭ ನಂಬ್ರೈ ಪಂಚೆ ೪ ಮೊಳದುದ್ದ ರೇಷ್ಮೆ ಅಂಚು ಜೋಡಿಗೆ ರೂ. ೩ ಸಾದಾ ರೂ. ೨॥, ರೂ ೩.

ವಿಳಾಸ —ರಾವ್ ಎಂಪ್ರೋರಿಯಂ ಸ್ಟೋರ್‌ಹಾಂ ರೋಡ್, ವೇಪೇರಿ, ಮದ್ರಾಸು.

ಬೌರಿಂಗ್ ಪೇಟೆಯ ಓರಿಯಂಟಲ್ ಟುಬ್ಯಾಕೋ ಕಂಪನಿ.

ಇಸ್ತಿಹಾರ್ನಾಮೆಯು

ಬೌರಿಂಗ್‌ಪೇಟೆ ಎಂ. ವಿ. ರಾಮಲಿಂಗಂ ಎಂಬ ನಾನು ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—ಬೌರಿಂಗ್‌ಪೇಟೆಯ ಮೆ॥ ಸ್ಕೆಯಡ್ ರಸೂಲ್ ಸಾಹೇಬ್‌ರವರೂ ನಾನೂ ಇದುವರೆಗೆ ಪಾಲುದಾರರಾಗಿ, ಬೌರಿಂಗ್‌ಪೇಟೆಯ "ದಿ ಓರಿಯಂಟಲ್ ಟುಬ್ಯಾಕೋ (ಹೊಗೆಸೊಪ್ಪು) ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ" ಎಂಬ ಕಾರ್ಖಾನೆಯನ್ನಿಟ್ಟು ನಡಿಸುತ್ತಾ ಬಂದೆವು. ನಮ್ಮನಮ್ಮ ಪಾಲುದಾರಿಕೆಯನ್ನು ಪರಿಹರಿಸಿಬಿಡಬೇಕೆಂದು ನಾವಿಬ್ಬರೂ ಒಪ್ಪಿ ತಾ ೧ ನೆ ಏಪ್ರಿಲ್ ೧೯೦೪ ರಲ್ಲಿ ಪಂಚಾಯಿತರ ಇತ್ಯರ್ಥಕ್ಕೆ ಒಪ್ಪಿಸಿದೆವು. ಅವರು ತೀರ್ಮಾನ ಮಾಡಿರುವ ಪ್ರಕಾರ ೧೯೦೪ ನೇ ಇಸವಿ ಮಾರ್ಚಿ ತಾ. ೨೫ ರ ರಾಗಾಯತು ನಾವಿಬ್ಬರೂ ಪ್ರತ್ಯೇಕರಾಗಿರುತ್ತೇವೆ. ಅಂದಿನಿಂದ ನಮ್ಮ ಪಾಲುದಾರಿಕೆಯು ಮುಕ್ತಾಯವಾಗಿರುತ್ತದೆಂದು ನಾನು ಆ ತೀರ್ಮಾನವನ್ನು ಈ ಪಬ್ಲಿಕ್ ನೋಟೀಸಿನ ಮೂಲಕ ತಿಳಿಯಪಡಿಸಿರುತ್ತೇನೆ. [43-1]

ಮೇಲ್ಕಂಡ ಮೆ॥ ಸ್ಯೆಯಡ್ ರಸೂಲ್ ಸಾಹೇಬರವರು ಒಳ್ಳೆಯ ಮತ್ತು ಯೋಗ್ಯವಾದ ಪ್ರತಿಫಲವನ್ನು ಪಡೆದು ಆ ಕಂಪನಿಯಲ್ಲಿ ತಮಗಿದ್ದ ಪಾಲುದಾರಿಕೆಯ ಸಮಸ್ತವಾದ ಹಕ್ಕು ಬಾಧ್ಯತೆಗಳನ್ನು ಮನಃಪೂರ್ವಕವಾಗಿ ತ್ಯಜಿಸಿ ಬಿಟ್ಟು ಇರುತ್ತಾರೆ. ಮತ್ತು ಎಂ. ವಿ. ರಾಮಲಿಂಗಂ ಎಂಬ ನಾನೇ ಮೇಲ್ಕಂಡ ತಾರೀಖು ರಾಗಾಯತು ದಿಓರಿಯಂಟಲ್ ಟುಬ್ಯಾಕೋ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿಯ ಪೂರ್ಣ ಸ್ವತಂತ್ರನೆಂದೂ, ಆ ಕಂಪನಿಯನ್ನು ಅದೇ ಹೆಸರಿನಲ್ಲಿ ನಾನೊಬ್ಬನೇ ನಿಂತು ನಡಿಸಲು ಸಮಸ್ತ ಹಕ್ಕು ಬಾಧ್ಯತೆಗಳನ್ನು ಪಡೆದಿರುತ್ತೇನೆಂದೂ ನಿರ್ಧರಿಸಲ್ಪಟ್ಟಿರುತ್ತೇನೆ.

ಇದಲ್ಲದೆ ಲೇಟ್ ಪಾಲುದಾರಿಕೆ ಇದ್ದಾಗ ಈ ಕಂಪನಿಯ ಲೇಣೆ ದೇಣೆಗಳಿಗೆಲ್ಲಾ ಕಳೆಗೆ ರುಜು ಮಾಡಿರುವ ನಾನೇ ಹಕ್ಕುದಾರನಾಗಿರುತ್ತೇನೆಂದೂ ತೀರ್ಮಾನಿಸಲ್ಪಟ್ಟಿದೆ. ಆದ್ದರಿಂದ ಈ ಕಂಪನಿಗೆ ಸಲ್ಲಬೇಕಾಗಿರುವ ಸಾಲಗಳನ್ನು ವಸೂಲ್ಮಾಡುವುದಕ್ಕೂ, ಈ ಕಂಪನಿಯಿಂದ ಇತರರಿಗೆ ಸಲ್ಲಬೇಕಾಗಿರುವ ಋಣಗಳನ್ನು ಕೊಟ್ಟು ತೀರಿಸುವುದಕ್ಕೂ ನಾನೊಬ್ಬನೇ ಪೂರ್ಣ ಅಧಿಕಾರವುಳ್ಳವನಾಗಿರುತ್ತೇನೆ.

ಎಂ. ವಿ. ರಾಮಲಿಂಗಂ, ಸೋಲ್ ಪ್ರೊಪ್ರೈಟರ್,
ಓರಿಯಂಟಲ್ ಟುಬ್ಯಾಕೋ ಮ್ಯಾ॥ ಕಂಪನಿ
ಬೌರಿಂಗ್‌ಪೇಟೆ.

ಕೆನಡಾದಲ್ಲಿ ಪೆರೂನಾ ಸೇವನೆ ಮಾಡುವ ಒಂದಾನೊಂದು ಸಂಸಾರವು.

ಪೆರೂನಾವನ್ನು ಸಕಾಲದಲ್ಲಿ ಕೆಲವು ಹೊತ್ತು ಕೊಟ್ಟರೆ ದೊಡ್ಡ ಕಾಯಿಲೆಗಳನ್ನೆಲ್ಲಾ ಅದು ನಿವಾರಣೆ ಮಾಡಬಲ್ಲದೆಂದು ಮಕ್ಕಳುಳ್ಳ ಅನೇಕ ಸ್ತ್ರೀಯರು ಕಂಡುಕೊಂಡಿರುತ್ತಾರೆ.

ಮಿಸಸ್ ಎಟ್ಟಾ ಬೂಕರ್, ಡಂಡರ್ಕ್, ಸಸ್ಕ್, ಎನ್ ಡಬ್ಲ್ಯು ಟಿ, ಕ್ಯಾನ್, ಈಕೆ ಬರೆಯುವುದು —"ನನ್ನ ದೇಹದೊಳಗೆ ಹೃದ್ರೋಗವು ಹುಟ್ಟಿ ನರಳಿದೆನು ಕಡೆಗೆ ಡಾ॥ ಹಾರ್ಟ್‌ಮೆನ್‌ರನ್ನು ಕರೆಸಿಕೊಂಡು, ಅವರು ಹೇಳಿದ ಔಷಧವನ್ನು ಸೇವನೆ ಮಾಡಿದ್ದರಿಂದ ನನ್ನ ಕೆಟ್ಟ ರೋಗವು ನಿವಾರಣೆಯಾಯಿತು ಇದಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞಳಾಗಿರುತ್ತೇನೆ ಹೃದ್ರೋಗಕ್ಕೆಲ್ಲಾ ಪೆರೂನಾ ಉತ್ತಮೋತ್ತಮವಾದ ಔಷಧವೆಂದು ನನಗೆ ತೋರುವುದು. ಈಗ ನನಗಿರುವಷ್ಟು ಸೌಖ್ಯವು ಲವಲೇಶವೂ ಹಿಂದೆ ಯಾವಾಗಲೂ ಇರಲಿಲ್ಲ.

ಮಿಸೆಸ್ ಬೂಕರ್ ಬರೆದಿರುವ ಇನ್ನೊಂದು ಕಾಗದದಲ್ಲಿ ಆಕೆ ಹೇಳುವುದೇನೆಂದರೆ —"ಪೆರೂನಾ ಮಹಾ ಆಶ್ಚರ್ಯವಾದ ಔಷಧವೆಂದು ಅನುಭವಪೂರ್ವಕವಾಗಿಯೂ ಯಥಾರ್ಥವಾಗಿಯೂ ಹೇಳಬಲ್ಲೆನು ನನ್ನ ಮಗಳು ಎಲ್ಸಿ, ಬೂಕರಿಗೆ ಎಷ್ಟು ಮಟ್ಟಿಗೆ ಆರೋಗ್ಯವಾಗಬೇಕೆಂದು ನಾನು ನಿರೀಕ್ಷಿಸಿದ್ದೆನೋ ಅಷ್ಟೂ ಒಳ್ಳೇದಾಯಿತು ಆದ್ದರಿಂದ ಅವಳಿಗೆ ವಾಸಿಯಾದ ವಿಷಯವನ್ನು ನೀವು ಪ್ರಕಟಿಸಬಹುದೆಂದು ಧಾರಾಳವಾಗಿ ಹೇಳುತ್ತೇನೆ" [34-5]

ಅವರ ಹುಡುಗನ ಪ್ರಾಣವನ್ನು ಕಾಪಾಡಿತು

ಮಿಸಸ್ ಅರ್ನೆಸ್ಟ್ ಹಾಕ್ಸ್, ೧೩೦೦ ಸೌತ್ ಲೋಕಸ್ಟ್ ಡೆಸ್‌ಮಾಯಿನೆಸ್, ಅಯೋವಾ, ಯು ಎಸ್. ಎ, ಈಕೆ ಬರೆಯುವುದು —

"ಎರಡು ವರುಷಗಳ ಹಿಂದೆ ಜಾರ್ಜ್ ಎಂಬ ನನ್ನ ಚಿಕ್ಕ ಹುಡುಗನಿಗೆ ಕೆಟ್ಟ ಜ್ವರ ಬಂದು ಬಿದ್ದುಕೊಂಡನು ಅದರ ಜೊತೆಗೆ ಚಳಿಯೂ ಹಿಂತ ಬೇನೆಗಳೂ ವೈದ್ಯರು ಕೂಡಿಸಿದ ಹಾಗೆಯೇ ಅವನ ಶ್ವಾಸಕೋಶಗಳಿಗೂ ಹೊಟ್ಟೆಗೂ ವ್ಯಾಪಿಸಿದವು ಕೆಲವು ವಾರಗಳ ತನಕ ನಾವು ಪ್ರತಿ ಗಂಟೆಯಲ್ಲೂ ಬದುಕಲಾರನೆಂದು ನಿರೀಕ್ಷಿಸಿ, ಅವನ ಬಳಿಯಲ್ಲೇ ಕಾದಿದ್ದೆವು ಕಡೆಗೆ ಅವನಿಗೆ ಸ್ವಲ್ಪ ವಾಸಿಯಾಗಿ ಎದ್ದು ಕೂತುಕೊಳ್ಳುವಂತಾದನು ಆಗ ಅವನಿಗೆ ಕೆಮ್ಮು ಕಾಣಿಸಿಕೊಂಡು, ಏನು ಮಾಡಿದರೂ ನಿಲ್ಲದೆ ಕ್ರಮಕ್ರಮವಾಗಿ ಬಂದನು ಆ ಕೆಮ್ಮು ಬಹಳ ಕಠಿಣವಾಗಿಯೂ ತುಂಬಾ ದೀರ್ಘವಾಗಿಯೂ ಹೆಚ್ಚಿ, ಅವನ ಶ್ವಾಸಕೋಶವನ್ನು ಬಹಳ ಕೆಡಿಸಿತು ಅವನಿಗೆ ಕ್ಷಯರೋಗವೆಂದು ಎಲ್ಲರೂ ಊಹಿಸಿದರು ಆಗ ನಾವು ಇತರ ಔಷಧಗಳನ್ನು ಬಿಟ್ಟು, ಪೆರೂನಾವನ್ನು ಕೊಟ್ಟು ನೋಡೋಣವೆಂದು ಒಂದು ಬಾಟ್ಲಿಯನ್ನು ಕೊಂಡು ತಂದು, ಅದರಲ್ಲಿ ಹೇಳಿರುವ ಕ್ರಮದಂತೆ ಕೊಡುತ್ತಾ ಬಂದೆವು ಎರಡು ಬಾಟ್ಲಿ ಪೆರೂನಾ ಸೇವಿಸಿದ ಮೇಲೆ ಅವನಿಗೆ ಚನ್ನಾಗಿ ವಾಸಿಯಾಯಿತು ಅಂದಿನಿಂದೀಚೆಗೆ ಅವನು ಒಂದು ದಿನವಾದರೂ ಕಾಯಿಲೆಯನ್ನು ಕಾಣನು ಆರೋಗ್ಯವಾಗಿಯೂ ಸಂತೋಷದಿಂದಲೂ ಬೆಳೆಯುತ್ತಿದ್ದಾನೆ ನಾವು ಸರ್ವದಾ ಪೆರೂನಾವನ್ನು ಹೊಗಳುತ್ತೇವೆ ಏಕೆಂದರೆ ಅದು ನನ್ನ ಹುಡುಗನ ಪ್ರಾಣವನ್ನು ಉಳಿಸಿತು

ಕಾಯಿಲೆ ಬೀಳುವ ಮಕ್ಕಳು

ಮಿಸೆಸ್ ಥಾಮ್ಸ್, ೫೯೩೦ ಪ್ರಿನ್ಸ್‌ಟನ್ ಅವ್ ಸೆಂಟ್‌ಲೂಯಿಸ್, ಮಿಸೌರಿ ಯು ಎಸ್ ಎ ಈಕೆ ಬರೆಯುವುದು —

"ಹೋದ ವರುಷ ಪ್ರಾರಂಭದಲ್ಲಿ ನನ್ನ ನಾಲ್ಕು ವರ್ಷದ ಮಗಳು ಆಲಿಸ್ ವಿಷಯವನ್ನು ನಿಮಗೆ ಬರೆದು, ನಿಮ್ಮ ಅಭಿಪ್ರಾಯವನ್ನು ಕೇಳಿದೆನು ಅವಳು ಹುಟ್ಟಿದಾರಭ್ಯ ಕಾಯಿಲೆ ಬೀಳುತ್ತಾ ಬಹಳ ಕೃಶವಾಗಿದ್ದಳು. ಅವಳಿಗೆ ಅಳ್ಳೆಕಟ್ಟಿ ಸೊಳ್ಳೆಯುವುದು, ಜ್ಞಾನ ತಪ್ಪುವುದು, ಶೀತದ್ಯಂಗಳು ಬರುವುದು ತಪ್ಪಲಿಲ್ಲ ನಾನು ಅವಳಿಗೆ ನಾನಾ ಔಷಧಗಳನ್ನು ಕೊಟ್ಟು ನೋಡಿ ನಿರಾಶಳಾದ್ದರಿಂದ ಕಡೆಗೆ ಪೆರೂನಾ ಕೊಡಲಾರಂಭಿಸಿದೆನು ಆವಾಗ **ಆರೋಗ್ಯವಾಯಿತು, ಶಕ್ತಿ ಕೂಡಿಕೊಂಡಿತು** ಪೆರೂನಾ ಬಲಕಾರಿಯಾದ ಔಷಧವಾಗಿರುತ್ತದೆ ಇಂಥಾ ಅದ್ಭುತವಾದ ಔಷಧವನ್ನು ನಾನು ಯಾವಾಗಲೂ ಉಪಯೋಗವಾಡಿದ್ದಿಲ್ಲ

"ನಾನು ಕೂಡಾ ಬಹಳ ದುರ್ಬಲಸ್ಥಿತಿಯಲ್ಲಿದ್ದೆನು ಆದ್ದರಿಂದ ಪೆರೂನಾ ಸೇವಿಸಲಾರಂಭಿಸಿದೆನು ನನ್ನ ದೇಹವೆಲ್ಲಾ ಶೀತದಿಂದ ನಡುಗುತಿತ್ತು ದೇವರ ದಯದಿಂದ ನಿಮ್ಮ ಔಷಧವು ನನಗೆ ಆರೋಗ್ಯವನ್ನು ಕೊಟ್ಟಿದೆ ನನಗೆ ಇನ್ಯಾವ ಔಷಧದ ಮೇಲೂ ಅಭಿಮಾನವಿಲ್ಲ

"ಪೆರೂನಾ ನನ್ನ ಮಗಳೇ ಮಗುವನ್ನು ಬದುಕಿಸಿತು ಅದಕ್ಕೆ ಚಳಿಯೂ ಜ್ವರವೂ ಬರುತ್ತಿತ್ತು ಈಗ ಈ ಮಗು ದೊಡ್ಡದಾಗಿ ವೈತುಂಬಿಕೊಂಡು ಆರೋಗ್ಯವಾಗಿದೆ ಅವನಿಗೆ ಹುಟ್ಟಿದಾರಭ್ಯ ಪೆರೂನಾವನ್ನು ಆಗಾಗ್ಗೆ ಕೊಡುತ್ತಿದ್ದೇನೆ ಆದ್ದರಿಂದಲೇ ಅವನು ಇಷ್ಟು ಆರೋಗ್ಯವಾಗಿದ್ದಾನೆಂದು ನನಗೆ ತೋರುವುದು ಪೆರೂನಾವನ್ನು ಎಷ್ಟು ಹೊಗಳಿದರೂ ತೀರದು ಅದನ್ನು ಉಪಯೋಗಿಸುವುದಕ್ಕೆ ಪ್ರಾರಂಭಿಸಿದಾಗಾಯಿತು ಒಬ್ಬ ಡಾಕ್ಟರಾದರೂ ನಮ್ಮ ಮನೆಗೆ ಬಂದಿಲ್ಲ. ಅದು ಬಹಳವಾಗಿ ಕೊಂಡಾಡತಕ್ಕದ್ದಾಗಿದೆ"

ಮಗು ಈಗ ಆರೋಗ್ಯವಾಗಿದೆ

ಮಿಸೆಸ್ ಜೆ ಡಬ್ಲ್ಯು ಹರ್ಡ್ ಆಫ್ ಹಾಕ್, ಟೆಕ್ಸಾಸ್, ಯು ಎಸ್ ಎ, ಈಕೆ ತನ್ನ ಕೈಮಗು ರೂಬಿ ವಿಷಯದಲ್ಲಿ ಡಾ॥ ಹಾರ್ಟ್‌ಮೆನ್‌ರಿಗೆ ಬರೆಯುವುದು —

"ಇದೇ ಜನವರಿಗೆ ನನ್ನ ಮಗುವಿಗೆ ಎರಡು ವರ್ಷ ತುಂಬಿತು ಈ ಮಗುವಿಗೆ ಮೂತ್ರಕೋಶವು ಕೆಟ್ಟುಹೋಗಿತ್ತು ಮಗುವು ಬದುಕುವಳೆ ಚಕ್ಕಳವಾಗಿದ್ದಳು ವಾಸಿಯಾದೀತೆಂದು ನಾವ್ಯಾರೂ ಯೋಚಿಸಿರಲಿಲ್ಲ ಈ ಮಗು ಮೂರು ನಾಲ್ಕು ತಿಂಗಳ ಕಾಲ ಕಾಯಿಲೆ ಬಿದ್ದಿತ್ತು ಒಂದು ಬಾಟ್ಲಿ ಪೆರೂನಾದಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಕೊಡುವಷ್ಟರಲ್ಲೇ ಈ ಮಗುವಿಗೆ ಆರೋಗ್ಯವಾಗಿದೆ

"ಕೇತವಾಯುವಿನಿಂದ ನನ್ನ ಮಗು ನರಳಿತು ಇದನ್ನು ಸೇವಿಸಿದಾರಭ್ಯ ಅದಕ್ಕೆ ಆರೋಗ್ಯವಾಯಿತು ಅದಕ್ಕೆ ಬಲ ಉಂಟಾಯಿತು ಅರುಚಿಯೆಲ್ಲಾ ಪರಿಹಾರವಾಗಿ, ಈಗ ಮಗುವನ್ನು ನೋಡಿದರೆ ಚಿತ್ರಕ್ಕೆ ಯೋಗ್ಯವಾದ ಮಗುವಿನಂತೆ ಸುಬವಾಗಿದೆ"

ಅಜೀರ್ಣವಿದ್ದ ಮಗು.

ಮಿಸೆಸ್ ಜೆ ಎಂ ಬ್ರೌನ್, ಡನ್ನೆಗನ್, ಮಿಸೌರಿ, ಯು ಎಸ್ ಎ, ಈಕೆ ಬರೆಯುವುದು —

"ಮೂರು ವರುಷದ ನನ್ನ ಹೆಣ್ಣುಮಗುವಿಗೆ ಶೀತದಿಂದ ಕೆಟ್ಟ ಕೆಮ್ಮು ಹುಟ್ಟಿ, ಅದರ ಮೇಲೆ ಜ್ವರವೂ ಬಂದು, ರಾತ್ರಿ ಹೊತ್ತು ವಿಶೇಷವಾಗಿ ಬಹಳ ಸಂಕಟ ಪಡುತ್ತಿದ್ದಳು ನಿದ್ದೆಮಾಡುತ್ತಿದ್ದ ಹಾಗೇ ಎಚ್ಚರವಾಗಿ ಕೆಮ್ಮುವುದಕ್ಕಾರಂಭಿಸಿದರೆ ಅದರಲ್ಲೇ ಮಗು ಎಲ್ಲಿ ಪ್ರಾಣ ಬಿಡುವುದೋ ಎನ್ನುವಷ್ಟು ಕಷ್ಟಪಡುತ್ತಿತ್ತು ನಾವು ಕೊಟ್ಟ ಯಾವ ಔಷಧದಿಂದಲೂ ಮಗುವಿಗೆ ವಾಸಿಯಾಗಲಿಲ್ಲ ಆಗ ನಾನು ಡಾ॥ ಹಾರ್ಟ್‌ಮೆನ್‌ರ 'ಜೀವಮಾನದಲ್ಲಿ ಬರುವ ರೋಗಗಳು' ಎಂಬ ಪುಸ್ತಕವನ್ನು ನೋಡೋಣವೆಂದು ಹೇಳಿಕಳಿಸಿದೆನು ಪುಸ್ತಕ ದೊರಕಿತು ಆಗಲೇ ಪೆರೂನಾವನ್ನು ಮಗುವಿಗೆ ಕೊಡಲಾರಂಭಿಸಿದೆನು ಒಂದೇ ಬಾಟ್ಲಿಯ ಔಷಧವನ್ನು ಕೊಟ್ಟೆನು ಇದರಿಂದ ಮಗುವು ಸಂಪೂರ್ಣಗುಣವಾಗಿದೆ

"ಈ ಮಗುವಿಗೆ ಹುಟ್ಟಿದಾರಭ್ಯ ಅಜೀರ್ಣ ರೋಗವಿತ್ತು ಆದರೆ ಪೆರೂನಾ ತೆಗೆದುಕೊಳ್ಳುತ್ತಾ ಬಂದಾರಭ್ಯ ಯಾವ ತರಹಾ ಆಹಾರವನ್ನು ತಿಂದರೂ ಅದಕ್ಕೆ ಅಜೀರ್ಣವಾಗುವುದಿಲ್ಲ ಈಗ **ಈ ಮಗು ಚನ್ನಾಗಿ ಆರೋಗ್ಯವಾಗಿದೆ,** ನನ್ನ ಸ್ನೇಹಿತರು ನನ್ನ ಮಗು ಬಹಳ ಚನ್ನಾಗಿದೆ ಎಂದು ಹೇಳಿದರೆ ಅದೆಲ್ಲಾ ಪೆರೂನಾದಿಂದ ಆದದ್ದು ಎಂದು ನಾನು ಅವರಿಗೆ ತಿಳಿಸುತ್ತೇನೆ ಕೆಮ್ಮಲಿಗೂ, ಅಜೀರ್ಣಕ್ಕೂ ಪೆರೂನಾ ಬಿಟ್ಟರೆ ಇನ್ಯಾವುದೂ ಪ್ರಯೋಜನಕರವಾದದ್ದಲ್ಲವೆಂದು ನನಗೆ ತೋರುತ್ತದೆ ಮತ್ತು ಈ ರೋಗಗಳನ್ನು ಅನುಭವಿಸುವವರಿಗೆಲ್ಲಾ ಪೆರೂನಾವನ್ನೇ ಸೇವಿಸುವಂತೆ ಶಿಫಾರಸು ಮಾಡುತ್ತೇನೆ"

ಮಗುವಿಗೆ ಪೆರೂನಾ ಮಾಡಿದ್ದು.

ಮಿಸೆಸ್ ಫ್ರಿಟ್ಸ್‌ರೂಥಿ, ಬಂಕ್ಸ್‌ವಿಲ್ಲೆ, ಇಲ್ಲಿನಾಯಿಸ್, ಯು ಎಸ್ ಎ, ಈಕೆ ಬರೆಯುವುದು —

"ನಾನು ವಿಶೇಷವಾಗಿ ಆರೋಗ್ಯವಾಗಿದೇನೆ ಈ ಮಾತು ಹೇಳುವುದರಲ್ಲಿ ನನಗೆ ತುಂಬಾ ಸಂತೋಷ. ನನ್ನ ಒಂದು ಮಗು ಐದು ತಿಂಗಳು ಜ್ವರವನ್ನು ಅನುಭವಿಸಿತು ಏನುಮಾಡಿದರೂ ವಾಸಿಯಾಗಲಿಲ್ಲ. ಅದು ಮಲೇರಿಯಾ ಎಂಬ ಶೀತಜ್ವರವೆಂದು ಡಾಕ್ಟರು ಹೇಳಿದರು ಆದರೆ ಅವರು ಕೊಟ್ಟ ಔಷಧದಿಂದ ಸ್ವಲ್ಪವೂ ಪ್ರಯೋಜನವಾಗಲಿಲ್ಲ

"ಆಗ ನಾನು ಪೆರೂನಾ ಕೊಟ್ಟೆನು ಕೂಡಲೇ ಅದು ಮಗುವಿಗೆ ಗುಣಕೊಟ್ಟಿತು ಇದುವರೆಗೆ ಆ ಮಗು ಜ್ವರವನ್ನು ಕಾಣದು

"ನಾನು ಡಾ॥ ಹಾರ್ಟ್‌ಮೆನ್‌ರಿಗೆ ಕಾಗದ ಬರೆದಾಗ ನಾನು ಮನೇ ಕೆಲಸಗಳನ್ನು ಮಾಡಲಾರದವನು ಹೀನಸ್ಥಿತಿಯಲ್ಲಿದ್ದೆನು ಈಗ ನಾನು ಸಂಪೂರ್ಣವಾಗಿ ಆರೋಗ್ಯಹೊಂದಿರುತ್ತೇನೆ"

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ ಇಂಗ್ಲೀಷು ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇಒಂದು ಸ್ಥಳವ್ಯಾವುದೆಂದರೆ:—
ಮೆಸ್ಸರ್ಸ್ ಹಿಂಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

10—4—1908 ರಿಂದ 17—4—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	1	0	1	0
ಬೆಂಗಳೂರು ಡಿಸ್ಟ್ರಿಕ್ಟು	14	8	0	0
ಮೈಸೂರು ,,	6	5	19	14
ಕೋಲಾರ್ ,,	9	5	0	0
ಕೋಲಾರ್ ಚಿನ್ನದ ಗಣಿಗಳು	0	1	*	*
ತುಮಕೂರು ಡಿಸ್ಟ್ರಿಕ್ಟು	0	0	*	*
ಹಾಸನ ,,	0	0	24	21
ಚಿತ್ರದುರ್ಗ ,,	0	0	0	0
ಕಡೂರ್ ,,	0	0	0	0
ಶಿವಮೊಗ್ಗ ,,	*	*	*	*
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	24	19	44	35

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಚೈತ್ರ ಬಹುಳ ಅಮಾವಾಸ್ಯೆ ಗುರುವಾರದಿಂದ ವೈಶಾಖ ಶುದ್ಧ ಷಷ್ಟಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಏಪ್ರೆಲ್ ಮತ್ತು ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ಚೈತ್ರ ಮಾಸ
30	ಗುರು *	ಅಮಾ	36 58	ಕೃ	19 12	19
1	ಶುಕ್ರ	ಪಾಡ್ಯ	35 20	ಭ	18 10	20
2	ಶನಿವಾ ¶	ಬಿದಿಗೆ	31 44	ಕೃ	13 22	21
3	ರವಿವಾ ‡	ತದಿಗೆ	35 46	ರೋ	21 31	22
4	ಚಂದ್ರ	ಚೌತಿ	38 2	ಮೃ	24 54	23
5	ಕುಜ ,,	ಪಂಚಮಿ	41 2	ಆರ್ದ್ರ	29 30	24
6	ಬುಧ	ಷಷ್ಟಿ	45 6	ಪುನ	35 2	25

* ಸರ್ವತ್ರ ಕರಗದ ಅಮಾವಾಸ್ಯೆ, ವೇಷತಿಗ್ರಹ ರಹಿತಂಬು ¶ ಚಂದ್ರೋದಯ ‡ ಅಕ್ಷಯತೃತೀಯ, ಅಗ್ನಿನಕ್ಷತ್ರಪ್ರವೇಶ, ಬಲರಾಮಜಯಂತಿ, ರಬ್ಬಿಸಾನಿ ಚಂ ೧ ,, ಪಗ್ಡಯೋಗ, ಲಾವಣ್ಯಗೌರೀವ್ರತ, ಶಂಕರಭಗವತ್ಪಾದರಿಗೆ ಆಶ್ರಮವಾದದ್ದು

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಸಣ್ಣ ಅಕ್ಕಿ ಪಲ್ಲಾ ೧ಕ್ಕೆ ರೂ	೧೪ ೮-೦	೧೫ ೮ ೦
ಕಂಬಳಿ ಅಕ್ಕಿ ಅವಲ್	೧೪-೦-೦	೧೫ ೦-೦
,, ಗುಂಡು	೧೩ ೮ ೦	೧೪-೦ ೦
ಜೀರಾಜ ಅಕ್ಕಿ	೧೩-೭ ೦	೧೫-೦-೦
ಸಣ್ಣಕ್ಕಿ ಅವಲ್	[illegible] ೦ ೦	೧೩ ೦-೦
,, ಮಂಡಿ	೧೫-೮-೦	೧೬-೦ ೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೬-೮-೦	೧೪-೮ ೦
,, ದಪ್ಪ	೧೪ ೮-೦	೧೪-೦-೦
ಹೈ ರಾಗಿ ಪಲ್ಲಾ ೧ಕ್ಕೆ	೬-೧೨ ೦	೩ ೦ ೦
ಕಾರಾಗಿ	೬ ೪-೦	೬ ೧೨ ೦
ಜೋಳ	೩-೦ ೦	೮-೦ ೦
ಹಲಸಂದೆ ಪಲ್ಲಾ ೧ಕ್ಕೆ	೧೦ ೯-೦	೧೧-೦ ೦
ಬಿಳೀ ಅವರೆ	೮-೦ ೦	೮ ೮ ೦
ಹೆಸರು	೧೧ ೯ ೦	೧೨ ೪-೦
ಉದ್ದು	೧೪-೮-೦	೧೨ ೮-೦
ಕಡಲೆ	೧೨-೪ ೦	೧೩ ೦ ೦
ಎಳ್ಳು ಸೇ ೧೨೩ಕ್ಕೆ	೨೩-೮-೦	೨೫-೦ ೦
ಹುರುಳಿ	೬-೮ ೦	೩ ೦ ೦
ಹರಳು ೧೨೩ ಸೇರಿಗೆ	೧೧-೦-೦	೧೨ ೮ ೦
ಸೀಗೇಕಾಯಿ ಮಣ ೧ಕ್ಕೆ	೧-೮-೦	೧ ೧೦ ೦
ಮೆಣಸಿನಕಾಯಿ	೨-೮-೦	೩ ೦ ೦
ದಂಡು	೨-೪-೦	೨-೧೦ ೦
ಬೆಲ್ಲ ದೊಡ್ಡ ಅಚ್ಚು	೫-೦ ೦	ಮ ೧ ೧೦ ೦
ಒಳ್ಳೆಣ್ಣೆ ಮಣ ೧ಕ್ಕೆ	೩-೧-೦	೬-೪-೦
ಹರಳೆಣ್ಣೆ ,,	೪-೧೨-೦	೪ ೬ ೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫-೮-೦	೬ ೧೨ ೦
ಉಪ್ಪು ,,	೪-೮-೦	೪ ೧೨ ೦
ಹುಣಸೇ ಹಣ್ಣು	೧-೪-೯	೧ ೦ ೦
,, ಹಳೇದು	೧-೦	೧ ೪ ೦
ತುಪ್ಪ ಮಣ ೧ಕ್ಕೆ	೧೪-೮ ೦	೧೫ ೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೪-೧೫-೦	೪ ೦ ೦
ತೆಂಗಿನಕಾಯಿ ೧೦೦ಕ್ಕೆ	೬ ೮-೦	೬ ೦ ೦
ಅಳಲೇಕಾಯಿ ಮಣ ೧ಕ್ಕೆ	೧-೦-೦	೧-೦ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	೦ ೧೪-೦
ಚಿನ್ನ (ತೊಲ) ಕೆಂಪು	೧೫-೯-೦	೧೫-೯ ೦
,, ,, ಪಸಿಮೆ	೧೫-೧೦-೦	೧೫ ೧ ೦
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೪ ೮-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೩೫-೦-೦	೬೮ ೦-೦

Printed and Published by the Rev. E W. Thompson, M. A, Proprietor and Manager, Wesleyan Mission Press, Mysore 30/4/1908.

REGISTERED M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೧ — ಮೈಸೂರು—ಸನ್ ೧೯೦೮ ನೇ ಇಸವಿ ಮೇ ತಾರೀಖು ೭ ನೇ ಗುರುವಾರ. — ಸಂಚಿಕೆ ೪೯

BASEL MISSION WEAVING ESTABLISHMENT, 59-15

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಶನ್ (ಬಟ್ಟೆ) ನೇಯ್ಗೆಯ ಕಾರಖಾನೆಯಲ್ಲಿ

ನಾನಾ ವಿಧದ (ವಿಕ್ಟರ್, ಸ್ಟ್ರೈಪ್ ನಮೂನೆಯ) [illegible] ಬಟ್ಟೆಗಳೂ, [illegible] ಬಟ್ಟೆಗಳೂ, [illegible] ಟೇಬಲ್ ಕ್ಲಾತ್ [illegible] ಇರುವ [illegible] ತಯಾರಾಗುತ್ತವೆ.

ವಿಶೇಷ ಲಕ್ಷ್ಯಸತಕ್ಕದ್ದು :— ಈ ನಮ್ಮ ವಸ್ತ್ರಗಳಿಗೆ ಇಲ್ಲಿ ಹಾಕಿಸಿರುವ "ಟ್ರೇಡ್ ಮಾರ್ಕ್" ಎಂಬ [illegible] ಲೇಬಲ್ [illegible] ಹಚ್ಚುತ್ತದೆ. ಈ ಗುರುತಿನ [illegible] ಇಲ್ಲದವುಗಳು [illegible] ವಸ್ತ್ರಗಳಲ್ಲವೆಂದು ತಿಳಿಯತಕ್ಕದ್ದು.

ಒಳ್ಳೇ ಕಮಿಶ್ಶನ್ :— ರೂಪಾಯಿ ೧೦೦ ರ ಮೇಲೆ ವಸ್ತ್ರಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ [illegible] ಕೊಡಲಾದೀತು. ಹೆಚ್ಚಿನ ವಿವರ [illegible] ಕಾಗದ ಮೂಲಕ ತಿಳಿಸಲ್ಪಡುವದು.

ನಮೂನೆ ಯಾ ಮಾದರಿಗಳು :— ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಕಳುಹಿಸಲ್ಪಡುವವು.

ಶರ್ತ :— ನಗದಾಗಿ ಇಲ್ಲವೆ ವಸ್ತ್ರಗಳು ವ್ಹಿ. ಪಿ. ಟಪ್ಪಾಲು ಮೂಲಕ ಕಳುಹಿಸಲ್ಪಡಬೇಕಾಗಿದ್ದಲ್ಲಿ ಕಾಲುಭಾಗ ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರಿಯತಕ್ಕದ್ದು.

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು "ಕೋಪಿರೈಟ್" ಪಡೆದಿರುವ ಲೇಬಲುಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಲುಗಳನ್ನಾಗಲೀ ಯಾವಾದರೂ ಇತರ ವಸ್ತ್ರಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು.

ವಿಳಾಸ:— BASEL MISSION WEAVING ESTABLISHMENT,
MANGALORE S CANARA

AMRUTANJAN DEPOT, 16 OAK-LANE, BOMBAY. [17-11]

ಗುಣ ಕಂಡುಬರುವದಿಲ್ಲವಾದರೆ ಹಣ ಮರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ :— ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮ್ ಮತ್ತು ಘಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ. ಡಾಕ್ಟರುಗಳ ಅಭಿಪ್ರಾಯಗಳು:—

ಪಿ. ಆರ್. ಪಿಲ್ಲೇಗಾಂಕರ್, ಎಲ್. ಆರ್. ಸಿ. ಪಿ., ಎಂಡ್ ಎಸ್. ಎಲ್. ಎಮ್., ಮುಂಬಯಿ, ಇವರು ಬರೆಯುವದೇನಂದರೆ:—ತಲೆನೋವಿಗೆ ಮತ್ತು ಎಲ್ಲಾ ತರದ ನೋವಿಗೆ ಅಮೃತಾಂಜನವು ಅತಿ ಉತ್ತಮವಾದದ್ದು.

ಮೆ॥ ದನಾನಾಥ ಬಿ. ನಾಯಿರ್ ಡಾಂಡೇಕರ್, ಎಲ್. ಎಮ್., ಎಂಡ್ ಎಸ್., ಎಂಡ್ ಜೆ. ಪಿ., ಮುಂಬಯಿ:—ವಾತದ ನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು.

ಮೆ॥ ದೇಸಾಯಿ ನಾರೋತ್ತಮ, ಹೈಕೋರ್ಟು ವಕೀಲ, ಮುಂಬಯಿ, ಇವರ ಅಭಿಪ್ರಾಯ:—ತಲೆನೋವಿಗೂ ಮತ್ತು ಎಲ್ಲಾ ತರದ ನೋವಿಗೂ ಅಮೃತಾಂಜನವು ಉತ್ತಮವಾದದ್ದು.

ಮೆ॥ ಆರ್. ಡಿಸೋಜಾ, ಮನೇಜರ್, ಕಾಫಿ ಎಸ್ಟೇಟು, ಮರಕಾರಾ, ಕೊಡಗು, ಇವರ ಅಭಿಪ್ರಾಯ:—ನಿಮ್ಮಲ್ಲಿನ ಅಮೃತಾಂಜನವು ಶೀತ, ಕಫ ಮತ್ತು ನೋವಿಗೂ ಸಹ ಉತ್ತಮವಾದದ್ದು. ನನ್ನ ಕೂಲಿಯ ಜನರಿಗೆ ಬಹಳವಾಗಿ ಗುಣಬಂದಿರುತ್ತದೆ.

ಮೆ॥ ರಾಜಾರಾಮ ತುಕಾರಾಮ, ವೈಸ್ ಪ್ರೆಸಿಡೆಂಟ, ಬೆಂಡರಾ ಮುನಿಸಿಪಾಲಿಟಿ, ಇವರ ಅಭಿಪ್ರಾಯ:—ನಿಮ್ಮ ಅಮೃತಾಂಜನವು ತಲೆನೋವಿಗೂ, ವಾತಕ್ಕೂ ಅತ್ಯುತ್ತಮವಾದದ್ದು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತವೆ. ಬಾಟ್ಲಿ ಒಂದಕ್ಕೆ ಕಿಮ್ಮತು ೦—೮—೦ ಪೋಸ್ಟು ಖರ್ಚು ೦—೩—೦. ಅಥವಾ ಮುಂಬಾಯಿಯಲ್ಲಿಯ ವಿಲಿಯಂ ಮತ್ತು ಕಂಪನಿಯಿಂದ ಕೀದಾ ತರಿಸಿಕೊಳ್ಳಬಹುದು.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು. ವಿಳಾಸ:—ಅಮೃತಾಂಜನ ಡಿಪೋ, ೧೬ ಓಕ್ ಲೇನು, ಮುಂಬಯಿ. ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ" ಮುಂಬಯಿ. ಏಜಂಟರು—ವಿಲಿಯಂ ಮತ್ತು ಕಂಪನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು:—ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ಕಜ್ಜಿ ವಗೈರೆ ನಾಶವಾಗುವದು. ಇದು ಉರಿಯುವದಿಲ್ಲ. ಡಬ್ಬಿ ಒಂದಕ್ಕೆ ಕಿಮ್ಮತು ೦—೬—೦.

ಕಾರ್ಡು ಸೈಜು ೪½ × ೩½.

ಫೋಟೋ ತೆಗೆಯುವ

ಫೊಟೊ ಕ್ಯಾಮರಾ. 84-38

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿಕೊಡುವೆವು. ಎಸ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರ್ಚು ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ :—

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಜ್ವರ ಪರಿ. 44-1

ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, [illegible], ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ [illegible] ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ [illegible] ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಬೀಗಸಿನ ಸೀಸೆಯು [illegible]. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು [illegible] ಗುಣ ಹೊಂದಿರುವರು. [illegible] ಇನ್ನೂ ೨೦ ಬೀಗಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ [illegible]—ಎಂದು ಬರೆದಿದಾರೆ.

ಕ್ರಯ :— ಸೀಸೆ ೧ ಕ್ಕೆ ೮ ಆಣೆ. ೧ ರೂ.; ೨—೮ ರೂ., [illegible] ಪೋಸ್ಟೇಜು ಮಾಫಿ [illegible].

****

ಓಮಂಕ ಪ್ರಕಾರ.



ಈ ಔಷಧವು ಅಜೀರ್ಣ, ಶೀತಭೇದಿ, [illegible] ನಾನಾತರದ [illegible] ನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, [illegible] ಗುಣ [illegible]. ಇದು ಹೆಂಗಸರು ತಿಂಗಳಿಗೆ [illegible] ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು [illegible] ಗುಣಪಡಿಸುತ್ತದೆ. [illegible] ಎಂಬ ಔಷಧಸಂಬಂಧ [illegible].

[illegible] ಅಸಿಸ್ಟೆಂಟ್ ಸರ್ಜನ್ [illegible]—[illegible] ನಾನು ನನ್ನ [illegible] ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ [illegible]. ಅಜೀರ್ಣಭೇದಿ, ಅಜೀರ್ಣ ರೋಗಿಗಳಿಗೆ [illegible]. [illegible] ಅವರ ರೋಗವು ಗುಣವಾಗುತ್ತಿದೆ. [illegible] ಬಹು ಒಳ್ಳೇ ಔಷಧವೆಂದು ಬರೆದಿದೆ.

ಈ ಎರಡು ಔಷಧಗಳೂ [illegible] ವೈದ್ಯರಾದವರಿಗೂ, ದೊಡ್ಡ ಸಾಹುಕಾರರಿಗೂ, ಔಷಧ ವ್ಯಾಪಾರಿಗಳಿಗೂ [illegible] ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ—

"ಕೆಮ್ರಿಯಾಗ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

[illegible] ವೃಸ್, ಮದರಾಸ್

ಮಹಾ ಬಾಧಾಪಹಾರಿಣಿಯು.

58-50

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಮಹೌಷಧಿ ತೈಲವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಿದಾರೆ. ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಚಳಿ, ಗಂಟುನೋವು, ಚರ್ಮವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳುಕಡಿದ ನೋವು, ಹಲ್ಲುನೋವು ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಮೂಲವನ್ನೇ ಅಡಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ ಸೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ವೇದಮುತ್ತುಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಹೊಸಪಂಡಿತ ಭೀಮರಾಯರು ರಚಿಸಿರುವ

ವೈದ್ಯಸಂಗ್ರಹ.

36-4

ನಮ್ಮ ತಂದೆ ಹೊಸಪಂಡಿತ ಭೀಮರಾಯರು ಲೋಕೋಪಕಾರಾರ್ಥವಾಗಿ ಈ ವೈದ್ಯಸಂಗ್ರಹವನ್ನು ರಚಿಸಿ, ೩೪ ವರ್ಷಗಳ ಹಿಂದೆ ಮೈಸೂರು ಗೌರ್ನಮೆಂಟ್ ಮುದ್ರಾಕ್ಷರಶಾಲೆಯಲ್ಲಿ ಉತ್ತಮ ಕಾಗದ, ಸ್ಫುಟಾಕ್ಷರಗಳಿಂದ ಮುದ್ರಿಸಿರುತ್ತಾರೆ. ಕೆಲವು ಪ್ರತಿಗಳು ಮಾತ್ರ ಉಳಿದಿರುವ ಈ ಗ್ರಂಥದಲ್ಲಿ ನಮ್ಮ ತಂದೆ ವಿಜ್ಞಾಪಿಸಿರುವ ಕೆಳಗೆಕಂಡ ಸಂಗತಿಯಿಂದ ಗ್ರಂಥವಿಚಾರವೆಲ್ಲಾ ಆದ್ಯಂತವಾಗಿ ಓದುಗರಿಗೆ ವೇದ್ಯವಾಗುವದು:—"ವೈದ್ಯಸಂಗ್ರಹವೆಂಬ ಗ್ರಂಥವನ್ನು ಮುಂದೆ ವಿವರಿಸುತ್ತೇನೆ. ನನ್ನಲ್ಲಿ ವೈದ್ಯ ವಿದ್ಯಾಭ್ಯಾಸ ಮಾಡಿ, ದಿವ್ಯವಾದ ಶಾಸ್ತ್ರಾಭ್ಯಾಸ ವಿಷಯವಾಗಿ ಬರೆದಿರುವ ಪುಸ್ತಕವನ್ನು ಅನಂತರ ನಾನು ಉತ್ತರದೇಶಕ್ಕೆ ಸಂಚಾರಹೋಗಿರುವಾಗ ಅನೇಕ ಸಂಸ್ಥಾನಗಳಲ್ಲಿ ಸಭೆಯಂ ಮಾಡಿ ಅಲ್ಲಿ ವಿದ್ವತ್ಪರೀಕ್ಷೆಯಂ ಮಾಡಿ ಕೊಟ್ಟಿರುವ ಮರ್ಯಾದೆಗಳನ್ನು ಇದರ ಕೆಳಗೆ ಸೇರಿಸಿ, ಲೋಕೋಪಕಾರಾರ್ಥವಾಗಿ ಇದರಲ್ಲಿ ಶರೀರಲಕ್ಷಣ, ದಿನಚರ್ಯ, ಋತುಚರ್ಯ, ನಾಡಿಯಿಂದ ಭೂತಭವಿಷ್ಯದ್ವರ್ತಮಾನ, ರೋಗಪರೀಕ್ಷಾ, ಔಷಧ ಮಾಡುವ ಲಕ್ಷಣ, ಸ್ವಪ್ನಾರಿಷ್ಟ, ರೋಗಾರಿಷ್ಟ, ನಾಡಿಯಿಂದ ಆಯುಷ್ಯ, ಸೂಚಕ, ಇವುಗಳನ್ನು ತಿಳಿದು, ಔಷಧಿ ಕೊಡುವ ಲಕ್ಷಣವೇ ಮೊದಲಾದ ಅನೇಕ ವಿಷಯಗಳನ್ನು ಉಚಿತವಾದ ಕನ್ನಡದಲ್ಲಿ ವಿವರಿಸಿದೇನೆ" ಎಂದು ಬರೆದಿರುತ್ತಾರೆ. ಈ ಅಪೂರ್ವ ಗ್ರಂಥವನ್ನು ಪಡೆಯಲಪೇಕ್ಷಿಸತಕ್ಕವರು ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ಮೊದಲು ಇದ್ದ ಕ್ರಯ ೩ ರೂಪಾಯಿ; ಈಗ ಕ್ರಯ ರೂ. ೨-೮-೦ ಪೋಸ್ಟೇಜ್ ಬೇರೆ. ೧೨ ಪ್ರತಿ ತರಿಸುವವರಿಗೆ ೧ ಇನಾಮು. ಈ ಪುಸ್ತಕದ ಕೊನೆಯಲ್ಲಿ ಕಂಡ ೨ನೆ ಭಾಗ ತಯಾರಾಗಲಿಲ್ಲ.

ವಿಳಾಸ—ಹೊಸಪಂಡಿತ ಶೇಷಗಿರಿರಾವ್, ಕಿಲ್ಲೆ, ಮೈಸೂರು.

☞ ವಿಕಟಪ್ರತಾಪವೆಂಬ ಮಾಸಪತ್ರಿಕೆಗೆ ಒಂದು ವರುಷ ಚಂದಾದಾರರಾಗುವವರಿಗೆ ಸ್ತ್ರೀಪಂಚಕೋಪಾಸವೆಂಬ ಐದು ಜನ ಯುವತಿಯರುಗಳ ವಿನೋದವಾದ ಕಥೆ ಪುಸ್ತಕವನ್ನು ಬಹುಮಾನವಾಗಿ ಕೊಡಲ್ಪಡುವದು. [41-2]

ವಿಕಟಪ್ರತಾಪ.

ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆ

ಪ್ರತಿ ತಿಂಗಳ ಮೊದಲನೆಯ ತಾರೀಖಿಗೆ ಪ್ರಕಟಿಸಲ್ಪಡುವುದು.

"ವಾಗ್ದಾನ:—ಅಧಮರಿಂದ ಉತ್ತಮರಿಗುಂಟಾಗುವ ತಾಪ, ಸಜ್ಜನರಲ್ಲಿ ವಿಪ್ರಲಾಪ, ಅನಾಥರ ವಿಲಾಪ, ಸೋಮಾರಿಗಳ ಪ್ರಲಾಪ, ರಸಿಕರ ಆಲಾಪ, ಮಾಸಿನಿಗಳ ಕೋಪ, ಈ ಕಲಾಪಗಳ ಚಿತ್ತರಗಳಿಂದೊಪ್ಪಿರುವುದು ನಮ್ಮ ವಿಕಟಪ್ರತಾಪ."

ವಾರ್ಷಿಕ ಚಂದಾ ಸ್ಥಳದವರಿಗೆ ೧—೧೨—೦

ಪರಸ್ಥಳದವರಿಗೆ (ಅಂಚೆಯ ವೆಚ್ಚ ಸೇರಿ) ೧—೦—೦

ಚಂದಾ ಹಣ ಮುಂಗಡವಾಗಿ ಬಂದ ಹೊರತು ಪತ್ರಿಕೆಯನ್ನು ಕಳುಹಿಸಲು ಆಗುವುದಿಲ್ಲ. ಅಥವಾ ವಿ. ಪಿ. ಮೂಲಕ ಪತ್ರಿಕೆಯನ್ನು ಕಳುಹಿಸುವಂತೆ ಕಾಗದ ಬರೆದರೆ ಆಗ್ಯ ಕಳುಹಿಸಲಾದೀತು.

ಈ ವಿಕಟಪ್ರತಾಪ ಪತ್ರಿಕೆಯಲ್ಲಿ ಪ್ರತಿ ತಿಂಗಳಲ್ಲಿಯೂ ೩—೪ ಚಿತ್ರಗಳನ್ನೂ ಮತ್ತು ಹಾಸ್ಯ, ತಮಾಷೆ, ಸರಳ ಘಟನೆ ಇವುಗಳನ್ನೂ ಪ್ರಕಟಿಸುತ್ತಿರುವೆವು. ಈ ಪತ್ರಿಕೆಯಲ್ಲಿ ಮೊದಲಿನ್ನುದ್ದಕ್ಕೂ ಈಗ ಅನೇಕ ವಿಷಯಗಳನ್ನು ಬಹಳ ಅಮೂಲ್ಯವಾಗಿ ಬರೆಯುತ್ತಿರುವೆವು.

ಸೂಚನೆ:—ವಿಕಟಪ್ರತಾಪ ಪತ್ರಿಕೆಗೆ ಚಂದಾದಾರರನ್ನು ಕೂಡಿಸಿ ಕೊಡಲು ಪ್ರತಿಯೊಂದು ಡಿಸ್ಟ್ರಿಕ್ಟು, ತಾಲ್ಲೂಕು, ಹೋಬಳಿಗಳಲ್ಲಿಯೂ ಏಜಂಟರುಗಳು ಬೇಕಾಗಿವೆ. ಏಜಂಟರುಗಳಿಗೆ ಬಹಳ ಮಾದ ಕಮಿಷನ್ ಕೊಡಲ್ಪಡುವುದು. ಇಷ್ಟವಿರುವವರು ಕಾಗದ ಮುಖಾಂತ್ರ ಬರೆದು ತಿಳಿದುಕೊಳ್ಳಬಹುದು.

☞ ನಮ್ಮ ವಿಳಾಸ:—ವಿಕಟಪ್ರತಾಪ ಆಫೀಸ್,

೧೩೩ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

CHAMBERLAIN'S COUGH REMEDY.

ಚೇಂಬರ್ಲೈನ್‌ಯವರು ಕಂಡು ಹಿಡಿದ ಕೆಮ್ಮಿನ ಔಷಧವು.

1-19

ಶೀತದ ಕೆಮ್ಮು, ಗಟ್ಲು ಗಾರೆನ್ನುವುದು, ಹುಡಿಕೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹು ಶ್ರೇಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸಿರು ಹೋಗುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಕಟ್ಟನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನಿದ್ರಾ ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಕ್ರಯಂದವುಟ್ಟಿನ ತಯಾರಾಗಿದೆ.

ಎಲ್ಲ ಅಂಗಡಿ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಹಾಸನದ ಟೋಪಿ ಬೇಕೇ?

117-28

ನಂಬರ್ ೧ ಸಾದಾ ಟೋಪಿ ಡಜನ್ ೧ ಕ್ಕೆ ರೂ. ೧೩—೨—೦ ಸಾದಾ ಕೆಂಪು ಕಪ್ಪು ಬಿಳಿ, ಕಾಫಿ ನೀಲಿ ಟೋಪಿಗಳು ೧ ಕ್ಕೆ ರೂ. ೧—೬—೧, ೧—೫—೦. ಚುಕ್ಕೆಯುಳ್ಳ ಟೋಪಿಗಳು ೧ ಕ್ಕೆ ರೂ. ೦—೬—೦, ೧—೨—೦ ಮೈಸೂರು ಟೋಪಿ ಡಜನ್ ೧ ಕ್ಕೆ ರೂ. ೪—೨—೦. ಸಾದಾ ಟೋಪಿಗಳು ಡಜನ್ಕ್ಕೆ ರೂ. ೭—೬—೦ ಸಾದಾ Chaapir ಡಜನ್ ೧ ಕ್ಕೆ ರೂ. ೬—೬—೦ ೧೦ ಟೋಪಿ ಆಗುವ ಉಲ್ ದಾರಕ್ಕೆ ರೂ. ೩—೮—೦. ನಮ್ಮ ವಿಳಾಸ:—

ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ಇದನ್ನು ನೋಡಿದರೆ ಬಹು ಆಶ್ಚರ್ಯ ಪಡುವಿರಿ.

38-3

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು. ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ನಿಮ್ಮನ್ನು ಆಕರ್ಷಿಸುವದು. ಇದರ ಕ್ರಯ ಏಳೇ ರೂಪಾಯಿ. ವಿ. ಪಿ. ಮೂಲಕ ರೂ. ೭—೩—೦. ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಶ್ರೀಮಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಇನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ನೋಡಿ.

ನಮ್ಮ ವಿಳಾಸ:— ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪ್ಪೋ, ಮೈಸೂರು.

ಬೌರಿಂಗ್ ಪೇಟೆಯ ಓರಿಯಂಟಲ್ ಟುಬ್ಯಾಕೋ ಕಂಪನೀ.

ಇಸ್ತಿಹಾರನಾಮೆಯು.

ಬೌರಿಂಗ್‌ಪೇಟೆಯ ಎ. ವಿ. ರಾಮಲಿಂಗಂ ಎಂಬ ನಾನು ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—ಬೌರಿಂಗ್‌ಪೇಟೆಯ ಮೆ॥ ಸೈಯದ್ ರಸೂಲ್ ಸಾಹೇಬ್‌ಯವರೂ ನಾನೂ ಇದುವರೆಗೆ ಪಾಲುದಾರರಾಗಿ, ಬೌರಿಂಗ್‌ಪೇಟೆಯ "ದಿ ಓರಿಯಂಟಲ್ ಟುಬ್ಯಾಕೋ (ಹೊಗೆಸೊಪ್ಪು) ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ" ಎಂಬ ಕಾರ್ಖಾನೆಯನ್ನಿಟ್ಟು ನಡಿಸುತ್ತಾ ಬಂದೆವು. ನಮ್ಮನಮ್ಮ ಪಾಲುದಾರಿಕೆಯನ್ನು ಪರಿಹರಿಸಿಬಿಡಬೇಕೆಂದು ನಾವಿಬ್ಬರೂ ಒಪ್ಪಿ ತಾ॥ ೧ ನೆ ಏಪ್ರೆಲ್, ೧೯೦೮ ರಲ್ಲಿ ಪಂಚಾಯಿತರ ಇತ್ಯರ್ಥಕ್ಕೆ ಒಪ್ಪಿಸಿದೆವು. ಅವರು ತೀರ್ಮಾನ ಮಾಡಿರುವ ಪ್ರಕಾರ ೧೯೦೮ ನೇ ಇಸವಿ ಮಾರ್ಚಿ ತಾ. ೧೫ ರ ಲಾಗಾಯಿತು ನಾವಿಬ್ಬರೂ ಪ್ರತ್ಯೇಕರಾಗಿರುತ್ತೇವೆ. ಅಂದಿನಿಂದ ನಮ್ಮ ಪಾಲುದಾರಿಕೆಯು ಮುಕ್ತಾಯವಾಗಿರುತ್ತದೆಂದು ನಾನು ಆ ತೀರ್ಮಾನವನ್ನು ಈ ಪಬ್ಲಿಕ್ ನೋಟೀಸಿನ ಮುಖಾಂತ್ರ ತಿಳಿಯಪಡಿಸಿರುತ್ತೇನೆ. [43-2]

ಮೇಲ್ಕಂಡ ಮೆ॥ ಸೈಯದ್ ರಸೂಲ್ ಸಾಹೇಬರವರು ಒಳ್ಳೆಯ ಮತ್ತು ಯೋಗ್ಯವಾದ ಪ್ರತಿಫಲವನ್ನು ಪಡೆದು ಆ ಕಂಪನಿಯಲ್ಲಿ ತಮಗಿದ್ದ ಪಾಲುದಾರಿಕೆಯ ಸಮಸ್ತವಾದ ಹಕ್ಕು ಬಾಧ್ಯತೆಗಳನ್ನು ಮನಃಪೂರ್ವಕವಾಗಿ ತ್ಯಜಿಸಿ ಬಿಟ್ಟು ಇರುತ್ತಾರೆ. ಮತ್ತು ಎಂ. ವಿ. ರಾಮಲಿಂಗಂ ಎಂಬ ನಾನೇ ಮೇಲ್ಕಂಡ ತಾರೀಖು ಲಾಗಾಯಿತು ಬಿಟೋ ಓರಿಯಂಟಲ್ ಟುಬ್ಯಾಕೋ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿಯ ಪೂರ್ಣ ಸ್ವತಂತ್ರನೆಂದೂ, ಆ ಕಂಪನಿಯನ್ನು ಅದೇ ಹೆಸರಿನಲ್ಲಿ ನಾನೊಬ್ಬನೇ ನಿಂತು ನಡಿಸಲು ಸಮಸ್ತ ಹಕ್ಕು ಬಾಧ್ಯತೆಗಳನ್ನು ಪಡೆದಿರುತ್ತೇನೆಂದೂ ನಿರ್ಧರಿಸಲ್ಪಟ್ಟಿರುತ್ತೇನೆ.

ಇದಲ್ಲದೆ ಲೇಟ್ ಪಾಲುದಾರಿಕೆ ಇದ್ದಾಗ ಈ ಕಂಪನಿಯ ದೇಣೆ ದೇಣಿಗಳಿಗೆಲ್ಲಾ ಕೆಳಗೆ ರುಜು ಮಾಡಿರುವ ನಾನೇ ಜವಾಬುದಾರನಾಗಿರುತ್ತೇನೆಂದೂ ತೀರ್ಮಾನಿಸಲ್ಪಟ್ಟಿದೆ. ಆದ್ದರಿಂದ ಈ ಕಂಪನಿಗೆ ಸಲ್ಲಬೇಕಾಗಿರುವ ಸಾಲಗಳನ್ನು ವಸೂಲ್ಮಾಡುವುದಕ್ಕೂ, ಈ ಕಂಪನಿಯಿಂದ ಇತರರಿಗೆ ಸಲ್ಲಬೇಕಾಗಿರುವ ಹಣಗಳನ್ನು ಕೊಟ್ಟು ತೀರಿಸುವುದಕ್ಕೂ ನಾನೊಬ್ಬನೇ ಪೂರ್ಣ ಅಧಿಕಾರವುಳ್ಳವನಾಗಿರುತ್ತೇನೆ.

ಎಂ. ವಿ. ರಾಮಲಿಂಗಂ, ಸೋಲ್ ಪ್ರೊಪ್ರೈಟರ್,

ಓರಿಯಂಟಲ್ ಟುಬ್ಯಾಕೋ ಮ್ಯಾ., ಕಂಪನಿ,

ಬೌರಿಂಗ್‌ಪೇಟೆ.

ಔಷಧಿ ತೆಕ್ಕೊಂಡು ಗುಣವಾಗುವದಕ್ಕಿಂತಲೂ

ಎಚ್ಚರಿಕೆಯಿಂದಿರುವದು ಉತ್ತಮ.

SCOTT'S EMULSION. 33-6

(ಸ್ಕಾಟ್ಸ್ ಇಮಲ್ಷನ್)

ಹೆಚ್ಚು ಪುಷ್ಟಿಯುಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಅಂಟುಕೊಳ್ಳುವ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ.

ಸ್ಕಾಟ್ಸ್ ಇಮಲ್ಷನ್ ದುರ್ಬಲರನ್ನು ಬೇಗನೆ ತಗಲಿ ಹಿಡಿಯುತ್ತದೆ.

ಆಸ್ತಮವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ವಿಗ್ರಹವುಳ್ಳ ಇರುವ ಔಷಧವನ್ನೇ ಕೊಂಡುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯು ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-19

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಕೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಶುದ್ಧವಾಗಿ ನಾನೇ ನಿಂತು ಚೆನ್ನಾಗಿ ಹಾಕಿಸುತ್ತೇನೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದವು ಚೆನ್ನಾಗಿಲ್ಲದವು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.; ೧ ರೂ. ೪ ಆ.

ಡೇಕ್ಕೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ.

ಉಸಾಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸು ಟೋಪಿ, ಸೂಕ್ಷ್ಮ ಮೇಜೋಡು, ಅರ್ಧ ಮೇಜೋಡು ಮಕ್ಮಲಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೦೮ ನೇ ಇಸವಿ ಮೇ ತಾ|| ೭ ನೇ ಗುರುವಾರ

ರಾಜದ್ರೋಹದ ನಡವಳಿಕೆಗಳು.

ಕಳೆದ ವಾರ ಕಲ್ಕತ್ತಾ ಪಟ್ಟಣದಲ್ಲಿ ಪೋಲೀಸ್ ಇಲಾಖೆಯವರು ಅನುಮಾನಾಸ್ಪದವಾದ ೩-೪ ಮನೆಗಳನ್ನು ಶೋಧನೆ ಮಾಡಿದರು. ಬಾಂಬ್ ಎಂಬ ಮರಣಕರವಾದ ಗುಂಡುಗಳನ್ನು ತಯಾರ್ಮಾಡುವುದಕ್ಕೆ ಅವಶ್ಯವಾದ ಪದಾರ್ಥಗಳು, ಪ್ರಯೋಗಕ್ಕೆ ಸಿದ್ಧವಾದ ಗುಂಡುಗಳು, ಅಪಾರವಾದ ಮದ್ದು, ತೋಟಾಗಳು, ಅಧಿಕಾರಿಗಳನ್ನು ಕೊಲ್ಲುವ ವಿಚಾರವಾದ ನಾನಾ ಕಾಗದಪತ್ರಗಳು, ಮದ್ದಿನಿಂದ ಮರಣಕರವಾದ ಆಯುಧಗಳನ್ನು ಮಾಡುವುದಕ್ಕೆ ಅನುಕೂಲಿಸುವ ಯಂತ್ರಸಾಧನಗಳು, ತರಹಾ ಪಿಸ್ತೂಲುಗಳು ಈ ಮೊದಲಾದವುಗಳೆಲ್ಲಾ ಸಿಕ್ಕಿರುತ್ತವೆ. ಈ ಕೃತ್ಯಗಳಿಗೆ ಸಂಬಂಧಪಟ್ಟವರೆಂದು ತಿಳಿದ ೩೦ ಮಂದಿಯನ್ನು ಪೋಲೀಸಿನವರು ದಸ್ತಗಿರಿ ಮಾಡಿದರು. ಆ ವ್ಯಕ್ತಿ "ಯುಗಾಂತರ" "ವಂದೇ ಮಾತರಂ," "ನವಶಕ್ತಿ" ಎಂಬ ಪತ್ರಿಕೆಗಳನ್ನು ನಡೆಸುತ್ತಿದ್ದ ಅರವಿಂದ ಘೋಸ್ ಎಂಬಾತನೂ ಒಬ್ಬನಾಗಿರುವನು. ಮತ್ತು ರಸಾಯನ (ಕೆಮಿಸ್ಟ್ರಿ) ಶಾಸ್ತ್ರವನ್ನು ಫ್ರಾನ್ಸಿನಲ್ಲಿ ಬಾಂಬ್ ಎಂಬ ಮರಣಕರವಾದ ಗುಂಡು ತಯಾರಿಯನ್ನು ಕಲಿತುಬಂದವನೂ ಸಿಕ್ಕಿರುತ್ತಾನೆ.

ಈಚೆಗೆ ಬಂಗಾಳದಲ್ಲಿ ಈ ರಾಜದ್ರೋಹಿಗಳ ಚೇಷ್ಟೆಯಿಂದ ಹಲವು ಕೊಲೆಗಳು ನಡೆದಿರುತ್ತವೆ. ಬಂಗಾಳಾ ಲೆಫ್ಟಿನೆಂಟ್ ಗವರ್ನರವರು ಪ್ರಯಾಣಮಾಡುತ್ತಿದ್ದ ಸ್ಪೆಷಲ್ ರೈಲಿನಲ್ಲಿ ಅವರನ್ನು ಕೊಲ್ಲಬೇಕೆಂದು ಮದ್ದಿನ ಗುಂಡು ಹಾಕಿದರು. ...ರ್ ಸ್ಟೇಷನಿನಲ್ಲಿ ಮ|| ಅಲೆನ್ ಎಂಬ ಕಲೆಕ್ಟರಿಗೂ, ...ಸ್ನೊಂದು ಕಡೆ ಮ|| ಹಿಕಿನ್‌ಬಾಥಂ ಯೆಂಬುವರಿಗೂ ಪಿಸ್ತೂಲುಗಳನ್ನು ಬಾರ್ಮಾಡಿ ಹೊಡೆದರು. ಚಂದ್ರನಗರದ ಮ್ಯುನಿಸಿಪಲ್ ಪ್ರೆಸಿಡೆಂಟರನ್ನು ಕೊಲ್ಲಬೇಕೆಂದು ಗುಂಡು ಎಸೆದರು. ತಿನ್ನವೆಲ್ಲಿಯಲ್ಲಿ ದಂಗೆಯಾಯಿತು. ಮುಜಫರ್‌ಪುರದ ...ಮ ಕೆನಡಿ ಎಂಬ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರನ್ನು ಕೊಲ್ಲುವುದಕ್ಕೆ ಅವರ ಗಾಡಿಗೆ ಗುಂಡು ಹಾಕಿದರು. ಅವರ ಸತಿಯೂ ಮಗಳೂ ಕೋಚ್ಮನ್ನನೂ ಮೃತಪಟ್ಟರು. ಇಷ್ಟೆಲ್ಲಾ ನಡೆಯುವುದಕ್ಕೆ ಸ್ವದೇಶೀ ಪತ್ರಗಳೆಂದು ಹೊಗಳಿಸಿಕೊಳ್ಳುವ ಪತ್ರಿಕೆಗಳೂ ಉಪನ್ಯಾಸಕರೂ ಅವರ ಭಾಷಣಗಳೂ ಕಾರಣಗಳಾಗಿವೆ ಎಂದೂ, ಅನೇಕರು ಸೇರಿ ಅಂತರಂಗವಾಗಿ ಪಿತೂರಿ ಮಾಡಿ ಗವರ್ನಮೆಂಟನ್ನು ತಲೆಕೆಳಗು ಮಾಡುವುದಕ್ಕಾಗಿ ...ಲ್ಲಿಂದ ಕಾರ್ಖಾನೆಯಲ್ಲಿ ಮರಣಕರವಾದ ಸಾಧನಗಳನ್ನು ತಯಾರ್ಮಾಡುತ್ತಿರುವರು ವೃತ್ತಾಂತವಾಗಿದೆ ಎಂಬುದು ಯಾವ ಅನುಮಾನ ಕಾಣುವುದಿಲ್ಲ. ಇದನ್ನು ನೋಡಿದವರು ಹಿಂದುಸ್ಥಾನದಲ್ಲಿ ರಾಜದ್ರೋಹವು ಹುಟ್ಟಿ ಬಬ್ಬುತ್ತಾ ಇಲ್ಲವೆಂದು ಹೇಳಿಸುವುದಕ್ಕಾಗುತ್ತದೆ? ಉಪನ್ಯಾಸಕರು ಸ್ವಾರಾಜ್ಯವನ್ನು ಕುರಿತು ಭಾಷಣಮಾಡುತ್ತಾ ಪತ್ರಿಕೆಗಳಲ್ಲಿ ಬರೆಯುತ್ತಾ ಬಂದದ್ದರಿಂದಲೇ ಅನೇಕಾನೇಕರ ಮನಸ್ಸು ಕೆಟ್ಟು ಹೋಗಿ ಇಂಥಾ ದ್ರೋಹ ಕೃತ್ಯಗಳು ನಡೆಯಲು ಸಹಾಯವೂ ಪ್ರೋತ್ಸಾಹವೂ ಆಯಿತೆಂದು ಸತ್ಪ್ರಜೆಗಳು ಒಪ್ಪಿಕೊಳ್ಳಬೇಕು.

ಸತ್ಯವೇದದ ಕೆಲವು ಸ್ವರ್ಣವಾಕ್ಯಗಳು.

ಕುಡುಕತನವನ್ನು ಕುರಿತು.

ಅಯ್ಯೋ ಎಂಬ ಕೂಗು ಯಾರಿಗೆ? ಅಂತ್ಯಯ್ಯೋ ಯಾರಿಗೆ? ಜಗಳಗಳು ಯಾರಿಗೆ? ಸಿಟ್ಟು ಸಂಕಟ ಯಾರಿಗೆ? ಕಾರಣವಿಲ್ಲದ ಗಾಯಗಳು ಯಾರಿಗೆ? ಕಣ್ಣುಗಳ ಕೆಂಪು ಯಾರಿಗೆ? ದ್ರಾಕ್ಷಾ ರಸದಲ್ಲಿ ಹೊತ್ತು ಕಳೆಯುವವರಿಗೂ, ಬೆರಸಿದ ದ್ರಾಕ್ಷಾ ರಸವನ್ನು ರುಚಿ ನೋಡುವುದಕ್ಕೆ ಹೋಗುವವರಿಗೂ ಅಲ್ಲವೇ? ದ್ರಾಕ್ಷಾ ರಸವನ್ನು, ಅದು ಕೆಂಪಾಗಿರುವಾಗಲೂ, ಪಾತ್ರೆಯಲ್ಲಿ ತನ್ನ ಹೊಳೆ ತೋರಿಸುವಾಗಲೂ, ಸುಲಭವಾಗಿ ಇಳಿಯುವಾಗಲೂ, ನೋಡಬೇಡ. ಕಡೆಯಲ್ಲಿ ಅದು ಹಾವಿನ ಹಾಗೆ ಕಚ್ಚುತ್ತದೆ. ನಿನ್ನ ಕಣ್ಣುಗಳು ಪರಸ್ತ್ರೀಯರನ್ನು ನೋಡುವುವು; ನಿನ್ನ ಹೃದಯವು ವಕ್ರವಾದವುಗಳನ್ನು ಮಾತಾಡುವುದು. ನೀನು ಸಮುದ್ರದ ಮಧ್ಯದಲ್ಲಿ ಮಲಗಿರುವವನ ಹಾಗೆಯೂ, ಹಡಗಿನ ಕಂಬದ ತುದಿಯಲ್ಲಿ ಮಲಗುವವನ ಹಾಗೆಯೂ ಇರುವಿ. ನನ್ನನ್ನು ಹೊಡೆದರು, ನನಗೆ ನೋವಾಗಲಿಲ್ಲ; ನನ್ನನ್ನು ಗುದ್ದಿದರು, ನನಗೆ ತಿಳಿಯಲಿಲ್ಲ; ಯಾವಾಗ ಎಚ್ಚರವಾಗುವೆನು? ಇನ್ನೂ ಹುಡುಕುವೆನು? ಎಂದು ಅನ್ನುವಿ.

ಸತ್ಸಂಗವನ್ನು ಕುರಿತು

ದುಷ್ಟರ ಆಲೋಚನೆಯಲ್ಲಿ ನಡೆಯದೆ, ಪಾಪಾತ್ಮರ ಮಾರ್ಗದಲ್ಲಿ ನಿಲ್ಲದೆ, ಪರಿಹಾಸ್ಯಗಾರರು ಕೂತುಕೊಳ್ಳುವಲ್ಲಿ ಕೂತುಕೊಳ್ಳದೆ, ದೇವರ ಕಟ್ಟಳೆಗಳಲ್ಲಿ ಸಂತೋಷಿಸಿ, ಆತನ ನ್ಯಾಯಶಾಸನವನ್ನೇ ರಾತ್ರಿ ಹಗಲು ಧ್ಯಾನಿಸುವ ಮನುಷ್ಯನೇ ಧನ್ಯನು. ಅವನು ತನ್ನ ಕಾಲದಲ್ಲಿ ತನ್ನ ಫಲ ಕೊಡುವಂಥ, ಎಲೆ ಬಾಡದಂಥ, ನೀರಿನ ಕಾಲುವೆಗಳ ಬಳಿಯಲ್ಲಿ ನೆಟ್ಟ ಮರದ ಹಾಗಿರುವನು, ಅವನು ಮಾಡುವುದೆಲ್ಲಾ ಸಫಲವಾಗುವುದು. ದುಷ್ಟರು ಹಾಗಲ್ಲ; ಗಾಳಿ ಬಡಿಸುವ ಹೊಟ್ಟಿನ ಹಾಗೆಯೇ ಇದ್ದಾರೆ. ಆದದರಿಂದ ದುಷ್ಟರು ನ್ಯಾಯತೀರ್ಪಿನಲ್ಲಿ, ಪಾಪಾತ್ಮರು ನೀತಿವಂತರ ಸಭೆಯಲ್ಲಿ ನಿಲ್ಲರು. ಯಾಕೆಂದರೆ ನೀತಿವಂತರ ಮಾರ್ಗವನ್ನು ದೇವರು ಅರಿತಿದ್ದಾನೆ; ಆದರೆ ದುಷ್ಟರ ಮಾರ್ಗವು ನಾಶವಾಗುವದು.

ರಾಜಭಕ್ತಿಯನ್ನು ಕುರಿತು.

ಮನುಷ್ಯರು ನೇಮಿಸಿರುವ ಯಾವ ಅಧಿಕಾರಕ್ಕೂ ದೇವರ ನಿಮಿತ್ತ ಅಧೀನರಾಗಿರಿ. ಅರಸನು ಸರ್ವಾಧಿಕಾರಿಯೆಂತಲೂ, ಬೇರೆ ಅಧಿಪತಿಗಳು ಕೆಟ್ಟ ನಡತೆಯುಳ್ಳವರನ್ನು ದಂಡಿಸುವದಕ್ಕೂ ಒಳ್ಳೇ ನಡತೆಯುಳ್ಳವರನ್ನು ಪ್ರೋತ್ಸಾಹಪಡಿಸುವದಕ್ಕೂ ಅರಸನಿಂದ ಕಳಿಸಲ್ಪಟ್ಟವರೆಂತಲೂ ತಿಳಿದು ಅವರಿಗೆ ಅಧೀನರಾಗಿರಿ. ಸಹೋದರರನ್ನು ಪ್ರೀತಿಸಿರಿ. ದೇವರಿಗೆ ಭಯಪಡಿರಿ. ಅರಸನನ್ನು ಸನ್ಮಾನಿಸಿರಿ.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಈ ಸಲ ಬೇಸಿಗೆಯು ತಾಪವು ಬಹಳ ಹೆಚ್ಚಾಗಿ ಕಾಣುತ್ತಿದೆ. ಕಳೆದ ವಾರವೂ ಎರಡು ಮೂರು ದಿನ ಚೆನ್ನಾಗಿ ಮಳೆ ಸುರಿಯಿತು. ಸದ್ಯ ವಾಂತಿಭೇದಿ ಉಪದ್ರವು ಆಲೆಯುತ್ತಿಲ್ಲ. ಪ್ಲೇಗ್ ಉಪದ್ರ ಕಾಣಿಸಿಕೊಳ್ಳುವ ಅವಧಿ ಸಮೀಪವಾಯಿತೆಂದು ಪ್ರಜೆಗಳು ಚಿಂತಿಸುತ್ತಾರೆ. ಧಾರಣೆವಾಸಿಗಳು ಬಹಳ ಹೆಚ್ಚಾಗಿಯೂ ಹೆಚ್ಚುತ್ತಲೂ ಇವೆ.

❦❦❦

ಕಳೆದ ಭಾನುವಾರ ಬೆಳಿಗ್ಗೆ ಬ್ರಿಟಿಷ್ ರೆಸಿಡೆಂಟರೂ ಅಸಿ ರೆಸಿಡೆಂಟರೂ ಮೋಟಾರ್ ಗಾಡಿಯಲ್ಲಿ ಕುಳಿತು ಬೆಂಗಳೂರಿಂದ ರಾಜಧಾನಿಗೆ ದಯಮಾಡಿ, ಇಲ್ಲಿನ ಗವರ್ನಮೆಂಟ್ ಹೌಸ್ ಬಂಗಲೆಯಲ್ಲಿ ಭೋಜನವನ್ನು ತೀರಿಸಿಕೊಂಡು, ಮೋಟಾರ್ ಗಾಡಿಯಲ್ಲಿ ಕುಳಿತು ಮಧ್ಯಾಹ್ನವೇ ನೀಲಗಿರಿಗೆ ಪ್ರಯಾಣಮಾಡಿದರು. ಗೌರವಾರ್ಥವಾದ ೧೩ ತೋಪುಗಳು ಹಾರಿಸಲ್ಪಟ್ಟವು.

❦❦❦

ಕಳೆದ ವಾರ ನೀಲಗಿರಿ ಬೆಟ್ಟದ ಮೇಲೆ ನಮ್ಮ ಶ್ರೀಮನ್ಮಹಾರಾಜರವರಿಗೂ ಮದರಾಸ್ ಗವರ್ನರವರಿಗೂ ಭೇಟಿ ಮರುಭೇಟಿಗಳು ನಡೆದವು. ಶ್ರೀಮನ್ಮಹಾರಾಜರವರು ಈ ತಿಂಗಳು ತಾ ೧೪ನೇ ಶುಕ್ರವಾರವೂ, ತಾ ೬ನೇ ಬುಧವಾರವೂ ತಮ್ಮ ಫರ್ನ್‌ಹಿಲ್ ಎಂಬ ರಾಜಭವನದಲ್ಲಿ ಯೂರೋಪ್ಯರ ಸರ್ದಾರರನ್ನು ದೊರೆಸಾನಿಗಳನ್ನು ಕರೆಸಿಕೊಂಡು, ಎರಡು ಔತಣಗಳನ್ನು ಮಾಡಿಸುವರು.

❦❦❦

ಮಹಾಮಾತೃಶ್ರೀಯವರು ಶ್ರೇಷ್ಠವಾದ ಶ್ವೇತ ಶಿಲೆಯಲ್ಲಿ ಶ್ರೀ ಶಂಕರಾಚಾರ್ಯರ ಚಿತ್ರಪ್ರತಿಮೆಯನ್ನು ತಯಾರ್ಮಾಡಿಸಿ, ಶೃಂಗೇರಿ ಶ್ರೀ ಶ್ವರದೇವಸ್ಥಾನದಲ್ಲಿ ಪ್ರತಿಷ್ಠೆ ಮಾಡಿಸುವಂತೆ ಅಪ್ಪಣೆಯನ್ನಿತ್ತರು. ಈ ಕಾರ್ಯವು ಕಳೆದ ಸೋಮವಾರದ ದಿನ ಯಥಾ ವಿಧಿಯಾಗಿ ಜರುಗಿಸಲ್ಪಟ್ಟಿತು. ಅಡ್ವೋಕೇಟ್ ಮ|| ಅನಂತ ರಾಮಣ್ಣನವರು ಆ ಪ್ರತಿಷ್ಠೆಯ ಸಿದ್ಧಿ ಕ್ಯಾರ್ಥವಾಗಿ ಆ ದಿನ ಸಂಸ್ಕೃತ ಪಾಠಶಾಲೆಯಲ್ಲಿ ಸುಮಾರು ಮೂರು ಸಾವಿರ ಜನರಿಗೆ ಸಂತರ್ಪಣೆ ಮಾಡಿಸಿದರು.

❦❦❦

ಬೆಂಗಳೂರಿನಲ್ಲಿ ಪಬ್ಲಿಕ್ ಆರೋಗ್ಯವಿಚಾರವನ್ನೂ ದೇಹಿಜಾಲದ ವಿಧಾನವನ್ನೂ ಕಲಿಸುವುದಕ್ಕೆ ಒಂದು ಪಾಠಶಾಲೆಯು ಏರ್ಪಾಡಾಗುತ್ತದೆಂದೂ, ವಿದ್ಯಾರ್ಥಿಗಳಾಗಿ ಬರತಕ್ಕವರು ಮೊದಲೇ ಅರ್ಜಿ ಕೊಡಬೇಕೆಂದೂ ಸೀನಿಯರ್ ಸರ್ಜನರವರು ಪ್ರಕಟಮಾಡಿದ್ದರು. ಈಗ ಅನೇಕಾನೇಕರು ಆ ಪಾಠಶಾಲೆಗೆ ಸೇರಿ ಓದುವುದಾಗಿ ಅರ್ಜಿ ಹಾಕುತ್ತಿರುವುದನ್ನು ನೋಡಿ, ಸೀನಿಯರ್ ಸರ್ಜನವರು ಪಾಠಶಾಲೆ ಪ್ರಾರಂಭವಾಗುವ ತಾರೀಖನ್ನು ತಿಳಿಸುವುದಾಗಿಯೂ, ಅರ್ಜಿ ಹಾಕಿಕೊಂಡಿರುವವರ ಪೈಕಿ ಕೆಲವರನ್ನು ಮಾತ್ರ ಸೇರಿಸಿಕೊಳ್ಳುವುದಾಗಿಯೂ ಸೂಚಿಸುತ್ತಾರೆ.

❦❦❦

ಈ ಸಂಸ್ಥಾನದಲ್ಲಿ ಅನೇಕ ವರುಷಗಳ ತನಕ ನೌಕರಿ ಮಾಡಿ, ಸರ್ಕಾರದಿಂದಲೂ ಹೊಗಳಿಸಿಕೊಳ್ಳುತ್ತಿದ್ದ ಕಾಲವಾದ ಮ|| ಟಿ ಆರ್ ಎ ತಂಬುಚೆಟ್ಟಿ, ಸಿ ಐ ಇ. ಯವರ ಹೆಸರನ್ನು ಶಾಶ್ವತ ಪಡಿಸಬೇಕೆಂದು ಕೆಲವು ದೊಡ್ಡ ಮನುಷ್ಯರು ಬೆಂಗಳೂರಿನಲ್ಲಿ ಪ್ರಯತ್ನಪಟ್ಟರು. ಈ ಸ್ಮಾರಕ ಫಂಡಿಗೆ ಕೆಲವರು ಚಂದಾ ಕೊಡುವುದಾಗಿ ವಾಗ್ದಾನ ಮಾಡಿದ್ದರಂತಲೂ, ಆ ಪೈಕಿ ೭೦೦ ರೂಪಾಯಿ ವಸೂಲೂ ಆಗಿದೆ ಎಂತಲೂ ತಿಳಿಯುವುದು. ಹ್ಯಾಗೂ ಈ ಕಾರ್ಯವನ್ನು ಇನ್ನು ತಾಮಸಮಾಡದೆ ಕೂಡಲೇ ನೆರವೇರಿಸುವ ಪ್ರಯತ್ನಗಳನ್ನು ನಡಿಸ್ಯಾರೆಂದು ಹಾರೈಸುತ್ತೇವೆ.

❦❦❦

ಕಳೆದ ಶನಿವಾರ ಬೆಳಿಗ್ಗೆ ಬ್ರಿಟಿಷ್ ರೆಸಿಡೆಂಟ್ ಮ|| ಎಸ್. ಎಂ. ಫ್ರೇಸರ್‌ರವರು ನೀಲಗಿರಿಯಿಂದ ಬೆಂಗಳೂರಿಗೆ ದಯಮಾಡಿದರು. ಕೋಲಾರ ಸಂಬಂಧ ಬಾಬು, ಸುಂದರರಾಜು, ನಲ್ಲತಂಬಿ, ಈ ಮೂವರೂ ಸೆಷನ್ಸ್ ಜಡ್ಜಿಯವರಿಂದ ಮರಣ ದಂಡನೆಯನ್ನು ಹೊಂದಿದ್ದು ಮೇಲೆ ರೆಸಿಡೆಂಟರ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದರು. ರೆಸಿಡೆಂಟರು ಶನಿವಾರ ಸಾಯಂಕಾಲದವರೆಗೆ ಈ ಮೊಕದ್ದಮೆಯಲ್ಲಿ ಲಾಯರುಗಳು ವಾದಿಸಿದ್ದನ್ನು ಲಾಲಿಸಿ, ಕಡೆಗೆ ಕೆಳ ಕೋರ್ಟಿನಲ್ಲಿ ವಿಧಿಸಲ್ಪಟ್ಟಿದ್ದ ಮರಣದಂಡನೆಯನ್ನೇ ಆ ಮೂವರು ಮಂದಿ ಅಪರಾಧಿಗಳ ವಿಷಯದಲ್ಲೂ ಖಾಯಂ ಮಾಡಿದರು.

❦❦❦

ರಾಜಸ್ಥಾನಿಯು ಎಂಡಿಮೋಹಲ್ಲಾ ಗಿಜಬಿಲ್ಲಿ ಮಸ್ಜೀದ್ ಬಳಿಯಲ್ಲಿ ಅಬ್ದುಲ್ ರಹೀಂ ಎಂಬುವನು ತನ್ನ ೭೦ ವರುಷ ವಯಸ್ಸಿನ ಫತ್ತಬೇ ಎಂಬ ಸಂಗತಿಯನ್ನು ಮೊನ್ನೆ ೨೭ ಗಳವಾರ ನಡುರಾತ್ರಿಯನ್ನು ಚಾಕು ವಿಸಿಂಡ ಕತ್ತರಿಸಿ ಕೊಂದು ಬಿಟ್ಟು, ಬಾಗಲು ಹಾಕಿಕೊಂಡು ಒಂದು ದಿನ ಬಾರ್ಮಾಡಿ ತನ್ನ ಮಗುವನ್ನು ಕಂಕುಳಿನಲ್ಲಿ ಎತ್ತಿಕೊಂಡು ಆತ್ಮಹತ್ಯ ಮಾಡಿಕೊಳ್ಳಬೇಕೆಂಬ ಪ್ರಯತ್ನದಲ್ಲಿದ್ದನು. ಪೋಲೀಸಿನವರು ಹೋಗಿ ಅವನನ್ನು ಸಮಾಧಾನ ಪಡಿಸಿ, ಅವನಿಂದಲೇ ಬಾಗಿಲು ತೆರೆಸಿ ಒಂದು ಕತ್ತಿ ತೆಗೆದುಕೊಂಡು, ಅವನನ್ನು ದಸ್ತಗಿರಿ ಮಾಡಿದರು. ಶವವನ್ನು ನೆನ್ನೆ ಬೆಳಿಗ್ಗೆ ಮಂಜರು ಅಪರಾಪಟ್ಟಿ ಮಾಡಿಸಿ, ದಫನ್ ಮಾಡಿಸಿರುತ್ತಾರೆ.

❦❦❦

ಬೆಂಗಳೂರು ಕೊಲೆಗಾರರಿಗೆ ಅವರಿಂದ ಲಂಚತಿಂದು ಸಹಾಯ ಮಾಡಿದರೆಂದು ಅಪರಾಧ ಹೊರಿಸಲ್ಪಟ್ಟಿದ್ದ ಸಬ್ ಇನ್ಸ್‌ಪೆಕ್ಟರ್ ಶೀನ ಕಾಶಿನಾಥರವರನ್ನು ಮದರಾಸ್ ಹೈಕೋರ್ಟಿನವರು ದಯಾನ್ವಿತರಾಗಿ, ಅಪರಾಧ ರುಜುವಾತಾಗಲಿಲ್ಲವೆಂದು ಹೇಳಿ ಬಿಟ್ಟುಬಿಟ್ಟರು. ಬೆಂಗಳೂರು ಸೆಷನ್ಸ್ ಜಡ್ಜಿಯವರು ಮೇಲ್ಕಂಡ ಅಪರಾಧಕ್ಕಾಗಿಯೇ ಸಬ್ ಇನ್ಸ್‌ಪೆಕ್ಟರ್ ವೆಂಕಟಸುಬ್ಬಯ್ಯ, ಹೆಡ್ ಕಾನ್ಸ್‌ಟೇಬಲ್ ರಾಜ ವೆಂಕಟಸ್ವಾಮಿ, ಭವಾನಿಸಿಂಗ್ ಎಂಬ ಮೂವರನ್ನೂ ದರ್ಯಾಫ್ತಿ ಮಾಡಿ, ಅವರು ಆ ಕೊಲೆಗಾರರಿಗೆ ಸಹಾಯಕರಾಗಿದ್ದರೆಂಬುವುದು ಸ್ಪಷ್ಟವಾಗಿ ರುಜುವಾತಾಗುವುದಿಲ್ಲವೆಂದು, ತೀರ್ಮಾನಿಸಿ, ಆ ಮೂರು ಮಂದಿಯನ್ನೂ ಖುಲಾಸ್ ಮಾಡಿಸಿದರು.

❦❦❦

ಅರಮನೆಯ ವಿದ್ವಾಂಸರಾದ ಮ|| ನಂಜನಗೂಡು ಶ್ರೀಕಂಠಶಾಸ್ತ್ರಿಗಳು "ಕರ್ಣಾಟಕ ಚಂದ್ರಿಕೆ" ಎಂಬ ಹೆಸರಿನ ಮಾಸಪತ್ರಿಕೆಯನ್ನು ಪ್ರಕಟಿಸಲಾರಂಭಿಸಿ, ಅದರ ಮೊದಲನೇ ಸಂಚಿಕೆಯನ್ನು ನಮ್ಮಲ್ಲಿಗೆ ಕಳುಹಿಸಿರುವ ಅದರಲ್ಲಿ ಹಿಂದಿನ ವಿವೇಕ ಕಲಿಸುವುದು, ದಯಾಮೂರ್ತಿ ಎಂಬೊಂದು ಅರ್ಥಗರ್ಭಿತವಾದ ಕಥೆ, ಸತೀಹಿತ ಬೋಧಿನಿ, ಸತ್ಯಸಂಜೀವಿನಿ ಎಂಬ ಸದ್ಗುಣಕಥಾಚರಿತ್ರೆಯನ್ನು ಬೋಧಿಸುವುದು, ಮಹಾಕವಿ ಕಾಳಿದಾಸರ ವಿಕ್ರಮೋರ್ವಶೀಯ ಅರ್ಥಗರ್ಭಿತವಾದ ಮತ್ತು ಆಹ್ಲಾದಕರವಾದ ನಾಟಕ, ಇವು ಶುದ್ಧವೂ ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿವೆ. ಈ ವಿದ್ವಾಂಸರು ರಚಿಸಿರುವ ಅನೇಕ ಪುಸ್ತಕಗಳನ್ನು ನಮ್ಮ ವಾಚಕರು ಓದಿರುತ್ತಾರಾದ್ದರಿಂದ ಅವರ ಬರವಣಿಗೆಯ ರಚನೆಯನ್ನಾಗಲಿ ಗಾಂಭೀರ್ಯವನ್ನಾಗಲಿ ನಾವು ವಿವರಿಸಬೇಕಾದದ್ದಿಲ್ಲ. ಮುಖ್ಯವಾಗಿ ಸ್ತ್ರೀಶಿಕ್ಷಣಕ್ಕೆ ಈ ಮಾಸಪತ್ರಿಕೆಯು ಬಹಳ ಉಪಕಾರಿಯಾಗಿರುವುದೆಂದು ಅಭಿಪ್ರಾಯ ಪಡುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

ಕೋಲಾರ್ ಚಿನ್ನದಗಣಿಗಳ ಅಸಿ ಸರ್ಜನ್ ಮ|| ಟಿ. ವಿ. ಶಾಸ್ತ್ರಿ ಸ್ವಾಮಿ ಮೊದಲಿಯಾರ್‌ರವರಿಗೆ ಮೇ ೩ರ ಲಾಗಾಯ್ತು ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಊರಿನ ಪ್ಲೇಗ್ ಆಸ್ಪತ್ರೆಯ ಸಬ್ ಅಸಿ ಸರ್ಜನ್ ಮ|| ಟಿ ಎಸ್ ಸಿದ್ಧಪ್ಪನವರು ತಮ್ಮ ಕೆಲಸಗಳೊಂದಿಗೆ ಮ|| ಶಾಸ್ತ್ರಿ ಸ್ವಾಮಿ ಮೊದಲಿಯಾರ್‌ರವರ ಕೆಲಸಗಳ ಚಾರ್ಜನ್ನು ವಹಿಸಿರತಕ್ಕದ್ದು.

ಮ|| ಪಿ ಎಸ್ ಅಚ್ಯುತರಾಯರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರಾಗಿರುವ ಕಾಲದಲ್ಲಿ ಮುಂದೆ ಹೇಳುವ ಹಂಗಾಮಿ ಬದ್ಲಿಗಳು ಖಾಯಂ ಮಾಡಲ್ಪಟ್ಟಿವೆ:—

ಮ|| ಎ. ಶೇಷಗಿರಿರಾಯರು ೨ನೇ ಕ್ಲಾಸ್ ಅಸಿ ಸರ್ಜನರಾಗಿಯೂ, ಮ|| ಕೆ ಕರುವಿಲ್ಲಾಯರವರು ೩ನೇ ಕ್ಲಾಸ್ ಸಬ್ ಅಸಿ ಸರ್ಜನರಾಗಿಯೂ ಇರತಕ್ಕದ್ದು.

ಚನ್ನಗಿರಿ ಸಬ್ ರಜಿಸ್ಟ್ರಾರ್ ಎನ್ ಲಕ್ಷ್ಮೀನರಸಿಂಹಪ್ಪನವರು ವರ್ಕ್ ಬಿಡದು ಕೆಲಸ ಬಿಟ್ಟದ್ದರಿಂದ ಮಾಲೂರಿನ ಸಬ್ ರಜಿಸ್ಟ್ರಾರ್ ಜಿ ರಾಮಾಚಾರ್ಯರನ್ನು ೭ನೇ ಕ್ಲಾಸಿನಲ್ಲಿ ಖಾಯಂ ಮಾಡಿದೆ.

ಅಸಿ ಕಮಿಷನರ್ ಮ|| ಸಿ ವೆಂಕಟಾಚಲ ಅಯ್ಯಂಗಾರರನ್ನು ಕಳೆದ ಫೆಬ್ರವರಿ ೧೮ ರಿಂದ ೩ ನೇ ಕ್ಲಾಸಿಗೆ ಬದ್ಲಿ ಮಾಡಿದೆ.

ಮುಂದೆ ಹೇಳುವ ವೈದ್ಯ ಇಲಾಖೆಯ ಅಧಿಕಾರಿಗಳನ್ನು ವರ್ಗ ಮಾಡಿದೆ:—ಟೆಂ|| ಸಬ್ ಅಸಿ ಸರ್ಜನ್ ಮ|| ಬಿ ಕೃಷ್ಣಮೂರ್ತಿ ರಾಯರು—ಮೈಸೂರಿನಿಂದ ಮಧುಗಿರಿಗೆ; ಸಬ್ ಅಸಿ ಸರ್ಜನ್ ಮ|| ಎಚ್ ನಾರಾಯಣರಾಯರು—ಮಧುಗಿರಿಯಿಂದ ಮೈಸೂರಿಗೆ.

ಚಳ್ಳಕೆರೆ ತಾಲ್ಲೂಕು ಅಮಲ್ದಾರ್ ಮ|| ಟಿ. ರಾಮಚಂದ್ರರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅರಕಲಗೂಡು ತಾಲ್ಲೂಕು ಅಮಲ್ದಾರ್ ಮ|| ಎಂ ಕೃಷ್ಣರಾಯರಿಗೆ ಏಪ್ರಿಲ್ ೧೩ ಲಾಗಾಯ್ತು ಇಪ್ಪತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಹಾಸನದ ಡೆಪ್ಟಿ ಕಮಿಷನರ್ ಆಫೀಸ್ ಎಂ. ನರಸಿಂಹಯ್ಯನವರು ಅರಕಲಗೂಡು ತಾಲ್ಲೂಕಿನ ಚಾರ್ಜನ್ನು ವಹಿಸಿರತಕ್ಕದ್ದು.

ಮುಂದೆ ಹೇಳುವ ಜನರು ವೈದ್ಯರನ್ನು ನೇಮಕಮಾಡಿದೆ. ಈ ಸ್ಥಳಗಳಲ್ಲಿ ಪಶುಗಳ ರೋಗ ಚಿಕಿತ್ಸಾ ಆಸ್ಪತ್ರೆಗಳನ್ನು ಮೇ ೧ ರಿಂದ ಪ್ರಾರಂಭಿಸಲ್ಪಡುವವು:—ಕೆ ಜಿ ರಂಗಣ್ಣನವರು ಮೈಸೂರಿಗೆ, ಆರ್ ಎಂ ಪರ್ತರವರು ಕೋಲಾರಕ್ಕೆ. ಕೆ ಎ ಶ್ರೀನಿವಾಸನವರು ಹೊಳೆನರಸೀಪುರ, ಬಿ. ವಿ. ವೆಂಕಟಾಚಾರ್ಯ, ಹಾಸನಕ್ಕೆ, ಕೆ ಕೃಷ್ಣಯ್ಯಂಗಾರರು ಚಿಕ್ಕಮಗಳೂರಿಗೆ

ಹಿಂದುಸ್ಥಾನದ ವಾಯವ್ಯ ಸರಹದ್ದಿನಲ್ಲಿ ಹೊಸ ಗಲಭೆಯು.

ಮೊಹಮಂಡ್ ಜನರ ಮೇಲೆ ಯುದ್ಧಕಾರ್ಯಗಳು

ಕಳೆದ ವಾರ ಮೊಹಮಂಡ್ ಜನರು ನಾನಾವಿಧವಾದ ಯುದ್ಧಕಾರ್ಯಗಳಲ್ಲದೆ ನಾಲ್ಕಾರು ದಿನಗಳ ತನಕ ಆ ಪ್ರಾಂತ್ಯವು ನೆಮ್ಮದಿಯಾಗಿತ್ತು. ಆದರೆ ಇಂಗ್ಲಿಷ್ ಸೈನ್ಯಗಳು ಮುಂಜಾಗ್ರತೆಯ ಏರ್ಪಾಡುಗಳನ್ನು ಮಾಡಿಕೊಳ್ಳುತ್ತಾ, ಶತ್ರುಗಳು ನುಗ್ಗಿ ಬಂದರೆ ಅವರನ್ನು ಹಿಮ್ಮೆಟ್ಟಿಸುವುದಕ್ಕೆ ತಕ್ಕ ಸನ್ನಾಹಗಳನ್ನು ಸಿದ್ಧಪಡಿಸಿಕೊಳ್ಳುತ್ತಾ, ಎದುರು ನೋಡುತ್ತಲೇ ಕಾದಿದ್ದರು. ಅವರು ನಿರೀಕ್ಷಿಸಿದಂತೆ ಮೊಹಮಂಡರ ಯುದ್ಧಭಟರು ಸುಮಾರು ೧೪,೦೦೦ ರಿಂದ ೨೦,೦೦೦ ದ ವರೆಗೆ ಕಳೆದ ಶನಿವಾರ ರಾತ್ರಿ ನಿಂಗ್ರಹಾರಿನಿಂದ ಶಬ್‌ಕದರ್, ಲಂಡಿಕೋಟಾಲ್ ಎಂಬ ಇಂಗ್ಲಿಷ್ ಠಾಣ್ಯವನ್ನು ಮುತ್ತಿಗೆ ಹಾಕುವುದಕ್ಕಾಗಿ ನುಗ್ಗಿ ಬಂದರು. ಮತ್ತು ಅವರು ಇನ್ನೊಂದು ಸೈನ್ಯದ ಜಮ್‌ರೂದ್ ಕಣಿವೆ ಮಾರ್ಗವಾಗಿ ನುಗ್ಗಿ ಬಂದು, ಮೊನ್ನೆ ಶಬ್‌ಕದರ್ ಎಂಬ ಇಂಗ್ಲಿಷ್ ಠಾಣ್ಯಕ್ಕೆ ಮುತ್ತಿಗೆ ಹಾಕಿತು. ಇದರೆ ಇಂಗ್ಲಿಷ್ ಸೈನಿಕರು ಪರಾಕ್ರಮದಿಂದ ಯುದ್ಧಮಾಡಿ ಶತ್ರುಗಳನ್ನು ಸೋಲಿಸಿ ಹಿಮ್ಮೆಟ್ಟಿಸಿದರು. ಈ ಯುದ್ಧದ ವಿವರ ಇನ್ನೂ ತಿಳಿಯಲಿಲ್ಲ. ಮೊಹಮಂಡರು ಬೆಟ್ಟ ಪ್ರಾಂತ್ಯಗಳಲ್ಲಿ ಸಂಚಾರ ಮಾಡುತ್ತಾ, ಜನರನ್ನು ಇಂಗ್ಲಿಷರ ಮೇಲೆ ಎತ್ತಿಕಟ್ಟಿ ಕರೆದು ತರುತ್ತಾ ಇದ್ದಾರೆ. ಈಗ ೭೦ ಸಾವಿರ ಯುದ್ಧ ಭಟರಲ್ಲಿ ಕೆಲವು ಸಾವಿರ ಜನರು ಆಫ್ಘಾನಿಸ್ತಾನದಿಂದ ಬಂದಿರುತ್ತಾರೆ. ಅಮೀರರ ಸರಕಾರದ ಸರ್ದಾರ್ ನಸ್ರುಲ್ಲಾಖಾನರು ಆಫ್ಘಾನಿಸ್ತಾನದ ಪ್ರಜೆಗಳನ್ನು ಇಂಗ್ಲಿಷರ ಮೇಲೆ ಯುದ್ಧಕ್ಕೆ ಕಳುಹಿಸುತ್ತಿದ್ದಾರೆನ್ನಲು, ಕಾಬೂಲಿನಲ್ಲೂ ಪೂರ್ವ ಆಫ್ಘಾನಿಸ್ಥಾನದಲ್ಲೂ ಜನರಿಗೆ ಇಂಗ್ಲಿಷರ ಮೇಲಿರುವ ದ್ವೇಷಾಸೂಯೆಗಳನ್ನು ಹೆಚ್ಚಿಸುವುದಕ್ಕಾಗಿ ನಾನಾ ವದಂತಿಗಳನ್ನು ಹಬ್ಬಿಸಿ ದೂರಿಗೆ ಹೋಗಿ ಸೇರುವಂತೆ ಮಾಡುತ್ತಿದ್ದಾರೆ. ಅಮೀರರಿಗೆ ಈ ಕಾರ್ಯ ತೋರದೆ ಇದೆ ಎಂದೂ ವರ್ತಮಾನ ಬಂದಿದೆ. ಇತ್ತಲಾಗಿ ಇಂಗ್ಲಿಷರು ಈಗ ಗಲಭೆ ಮಾಡುತ್ತಿರುವಂಥಾ ಮೊಹಮಂಡರ ಎಲ್ಲಾ ಪಂಗಡಗಳ ಮುಖಂಡರನ್ನು ಪೆಷಾವರಿಗೆ ಬಂದು ... ಎಲ್ಲಾ ವಿಷಯಗಳನ್ನೂ ಅರ್ಜಿಯಿಂದ ಇತ್ಯರ್ಥ ಪಡಿಸಿಕೊಳ್ಳಬೇಕೆಂದು ಹೇಳಿಕಳುಹಿಸಿದ್ದರು. ಆದರೆ ಕೆಲವರು ಬರುವುದಿಲ್ಲವೆಂದು ತಿಳಿಸಿರುವರು, ಇನ್ನು ಕೆಲವರು ಸಮಾಧಾನಕ್ಕೆ ಒಪ್ಪಿರುವರು, ಮತ್ತೆ ಕೆಲವರು ಬರುತ್ತೇವೆಂದು ಹೇಳಿ ಕಳುಹಿಸಿದರು

ಕೊಳ್ಳೇಗಾಲದ ರೇಷ್ಮೆ ಕಸಬು.

ಮದರಾಸಿನಲ್ಲಿ ನಡೆದ ಉಪನ್ಯಾಸವು.

ಮದರಾಸ್ ಪಟ್ಟಣದಲ್ಲಿ ಕೆಲವು ವಿದ್ಯಾವಂತರು ಸೇರಿ ರಾನೇಡ್ ಎಂಬ ದೇಶವತ್ಸಲರ ಹೆಸರಿನಲ್ಲಿ ಒಂದು ಸರಸ್ವತೀ ಭಂಡಾರವನ್ನು ಸ್ಥಾಪಿಸಿದಾರೆ. ಈ ಭಂಡಾರದ ನಿಲಯದಲ್ಲಿ ಕಳೆದ ಬುಧವಾರ ಸಾಯಂಕಾಲ ಮೆ॥ ಎಸ್. ಗೋಪಾಲಸ್ವಾಮಿ ಅಯ್ಯಂಗಾರರವರು ಒಂದು ಸಭೆಯನ್ನು ಸೇರಿಸಿ, ಕೊಳ್ಳೇಗಾಲದಲ್ಲಿ ನಡೆಯುವಂಥಾ ರೇಷ್ಮೆ ಕಸಬಿನ ವಿಚಾರವನ್ನು ಕುರಿತು ಒಳ್ಳೇ ಉಪನ್ಯಾಸವನ್ನು ಮಾಡಿದರು. ಮದರಾಸ್ ಪಟ್ಟಣದ ಗವರ್ನಮೆಂಟ್ ಮ್ಯೂಜಿಯಂ (ಸರ್ವವಸ್ತು ಪ್ರದರ್ಶನ ಶಾಲೆ) ಸೂಪರಿಂಟೆಂಡೆಂಟರಾದ ಮೆ॥ ಇ. ಥರ್ಸ್ಟನ್ ಸಾಹೇಬರು ಆ ದಿನ ಸಭೆಯ ಅಗ್ರಾಸನವನ್ನು ವಹಿಸಿದ್ದರು. ಉಪನ್ಯಾಸಕರು ಸಭಿಕರಿಗೆ ತಿಳಿಸಿದ ಮುಖ್ಯ ವಿಷಯಗಳ್ಯಾವವೆಂದರೆ.—

ಈ ರೇಷ್ಮೆ ಕಸಬು ಹಿಂದೂಸ್ಥಾನದ ಒಂದು ಗುಪ್ತ ಧನವೆಂದು ಹೇಳಬಹುದಾಗಿದೆ. ಈ ಕಸಬು ಹಿಂದೂಸ್ಥಾನದಲ್ಲೇ ಹುಟ್ಟಿತ್ತೋ ಅಥವಾ ಬೇರೆಯಿಂದ ಈ ರಾಷ್ಟ್ರಕ್ಕೆ ಬಂದದ್ದೋ ಎಂದು ಅನುಮಾನವಿದ್ದಿತು. ಆದರೆ ಬಂಗಾಳಾ ಅಧಿಪತ್ಯದಲ್ಲಿ ಮೆ॥ ಮುಖರ್ಜಿಯವರು ಈ ವಿಚಾರದಲ್ಲಿ ಅನೇಕ ಕಾಲ ತುಂಬಾ ಶ್ರಮಪಟ್ಟು ಅಜಮಾಯಿಷಿ ಮಾಡಿ, ಈ ಕಸಬು ಹಿಂದೂಸ್ಥಾನದೊಳಗೇ ಹುಟ್ಟಿ, ಇಲ್ಲಿನ ಜನರೇ ಅದನ್ನು ಮೊದಲು ಅವಲಂಬಿಸಿದ್ದರೆಂದು ಸಿದ್ಧಾಂತ ಮಾಡಿದಾರೆ. ದಕ್ಷಿಣ ದೇಶದಲ್ಲಿ ಟೀಪ್ ಸುಲ್ತಾನರವರೇ ಮೊದಲು ಈ ರೇಷ್ಮೆ ಕಸಬನ್ನು ತಮ್ಮ ಮೈಸೂರಿನಲ್ಲಿ ಪ್ರಾರಂಭಿಸಿದರು. ಅವರ ಕಾಲಾನಂತರ ಮಹಮ್ಮದೀಯರು ರೇಷ್ಮೆ ಹುಳಗಳನ್ನು ಸಾಕಿ, ರೇಷ್ಮೆಯನ್ನು ನೂಲುವ ಉದ್ಯೋಗವನ್ನು ಅವಲಂಬಿಸಿದರು. ಈಗಲೂ ಕೊಳ್ಳೇಗಾಲದ ತಾಲ್ಲೂಕಿನಲ್ಲಿ ಈ ಕಸಬು ಮಾಡತಕ್ಕವರು ವಿಶೇಷವಾಗಿ ಮಹಮ್ಮದೀಯರೇ ಆಗಿರುತ್ತಾರೆ. ಆ ತಾಲ್ಲೂಕಿನಲ್ಲಿ ರೇಷ್ಮೆ ಹುಳಗಳನ್ನು ಸಾಕುವುದಕ್ಕೆ ಬೇಕಾದ ಹಿಪ್ಪನೇರಲೇ ವ್ಯವಸಾಯವು ಕಳೆದ ಇಪ್ಪತ್ತು ವರುಷಗಳಿಂದೀಚೆಗೆ ಬಹಳವಾಗಿ ಕೆಟ್ಟಿರುತ್ತದೆ. ಕಳೆದ ೧೯೦೬-೦೭ ನೇ ಸಾಲಿನಲ್ಲಿ ೩,೦೦೦ ಎಕರೆ ಜಮೀನು ಹಿಪ್ಪನೇರಲೇ ವ್ಯವಸಾಯದಲ್ಲಿದ್ದಂತೆ ಸರ್ಕಾರಿ ಲೆಕ್ಕಗಳು ತಿಳಿಸುವವು. ರೇಷ್ಮೆಯ ಉತ್ಪತ್ತಿಯು ಕಡಿಮ್ಮೆಯಾಗುತ್ತಾ ಬಂದ ಹಾಗೆಲ್ಲಾ ಹಿಪ್ಪನೇರಲೇ ವ್ಯವಸಾಯವೂ ಅಭಿವೃದ್ಧಿ ಹೊಂದಿದೆ. ರೈತರು ರಾಗಿ, ಜೋಳ, ಮೊದಲಾದ ಆಹಾರಧಾನ್ಯಗಳನ್ನು ಬೆಳೆಯುವುದಕ್ಕಿಂತಲೂ ಹಿಪ್ಪನೇರಲೇ ವ್ಯವಸಾಯವನ್ನೇ ವಿಶೇಷವಾಗಿ ಮಾಡುತ್ತಿರೋಣದರಿಂದ ಈ ರೇಷ್ಮೆ ಕಸಬು ತುಂಬಾ ಲಾಭಕರವಾಗಿ ಕಂಡುಬಂದಿರುವಂತೆ ತೋರುವುದು. ಆದರೆ ಈ ಕಸಬನ್ನು ನಡಿಸತಕ್ಕವರು ಈ ಕಾಲಕ್ಕೆ ತಕ್ಕ ಸಲಕರಣೆಗಳನ್ನು ಒದಗಿಸಿಕೊಳ್ಳದೆ ಪೂರ್ವಕಾಲದಿಂದಲೂ ಬಂದಿರುವಂಥಾ ಕ್ರಮಗಳನ್ನೇ ಅನುಸರಿಸುತ್ತಿರುವರು. ಇದು ಈ ಉದ್ಯೋಗದ ಅಭಿವೃದ್ಧಿಗೆ ತುಂಬಾ ದೊಡ್ಡದಾದ ಕೊರತೆಯೆಂದೇ ಹೇಳಬಹುದು. ಈ ಕಸಬನ್ನು ಅವಲಂಬಿಸಿರತಕ್ಕ ರೈತರು ವಿದ್ಯಾವಂತರಾಗಿ, ಆ ಕಸಬನ್ನು ಅಭಿವೃದ್ಧಿಪಡಿಸುವುದಕ್ಕೆ ಈಗಿನ ಕಾಲದಲ್ಲಿ ಏರ್ಪಟ್ಟಿರುವ ವಿಧಾನಗಳನ್ನೂ ಸೌಲಭ್ಯಗಳನ್ನೂ ಕ್ರಮವಾಗಿಯೂ ಮುತುವರ್ಜಿಯಿಂದಲೂ ಕಲಿತುಕೊಳ್ಳಬೇಕಾದದ್ದು ಪರಮಾವಶ್ಯವಾಗಿದೆ. ಈಗ ಕೊಳ್ಳೇಗಾಲದಲ್ಲಿ ತಯಾರಾಗುವಂಥಾ ರೇಷ್ಮೆಯನ್ನು ಅಲ್ಲಿನ ನೇಯ್ಗೆಯವರೇ ಉಪಯೋಗಿಸುವುದು ಬಹಳ ಸ್ವಲ್ಪವೆಂದು ಹೇಳಬಹುದು. ರೇಷ್ಮೆಯನ್ನು ತಯಾರಾದ ಕೂಡಲೇ ಸಾಹುಕಾರರುಗಳೂ ಪಟ್ಟುನೂಲುಕಾರರೂ ಅಲ್ಲೇ ಕೊಂಡುಕೊಂಡು, ಕಂಚಿ, ಕುಂಭಕೋಣ, ಮಧುರೆ, ಬಳ್ಳಾರಿ ಮೊದಲಾದ ಕಡೆಗಳಿಗೆ ಬಹಳವಾಗಿ ಕಳುಹಿಸುತ್ತಾರೆ. ಇವರಲ್ಲದೆ ಬೆಂಗಳೂರಿಂದ ಕೆಲವರು ಬಂದು ಸೇರಿಕೊಂಡು, ರೇಷ್ಮೆಯನ್ನು ಯುರೋಪಿಗೆ ರವಾನೆಮಾಡುತ್ತಾರೆ. ಈಚೀಚೆಗೆ ರೇಷ್ಮೆ ನೂಲನ್ನು ರಫ್ತು ಮಾಡುವುದು ಕಡಮೆಯಾಗಿ, ನೂಲು ತೆಗೆಯುವಂಥಾ ಗೂಡುಗಳನ್ನೇ ಕೊಂಡುಕೊಳ್ಳುವುದೂ, ಅವನ್ನು ಬೆಂಗಳೂರಿಗೆ ಕಳುಹಿಸಿ ಅಲ್ಲಿನ ಕಾರ್ಖಾನೆಗಳಲ್ಲೇ ನೂಲು ಎಳೆದು ರಫ್ತು ಮಾಡುವುದೂ ಹೆಚ್ಚುತ್ತಾ ಬಂದಿದೆ. ಇದು ನಮ್ಮ ದೇಶದ ರೇಷ್ಮೇ ಕಸಬಿನವರಿಗೆ ಅಷ್ಟು ಕ್ಷೇಮಕರವಾದದ್ದೆಂದಾಗಲಿ, ಇದರಿಂದ ಈ ಕಸಬು ಅಭಿವೃದ್ಧಿಯಾದೀತೆಂದಾಗಲಿ ಹೇಳಲಾಗುವುದಿಲ್ಲ. ಯಾಕೆಂದರೆ ಈ ಕಸಬಿನವರು ಗೂಡುಗಳಿಂದ ನೂಲನ್ನು ಎಳೆಯುವ ಕ್ರಮಗಳು ತೃಪ್ತಿಕರವಾಗಿಲ್ಲ. ಇದನ್ನು ಕಂಡೇ ಯೂರೋಪಿಯನ್ನರು ಗೂಡುಗಳನ್ನೇ ಕ್ರಯಕ್ಕೆ ತೆಗೆದುಕೊಂಡು ಹೋಗುತ್ತಲಿ, ನಮ್ಮ ಕಸಬುದಾರರು ತೆಗೆಯುವುದಕ್ಕಿಂತಲೂ ಚೆನ್ನಾಗಿ ನೂತನ ಸಾಧನಗಳಿಂದ ನೂಲನ್ನು ಎಳೆಯುತ್ತಲೂ ಬಂದಿದಾರೆ. ಆ ವಿಧಾನಗಳನ್ನು ನಮ್ಮ ದೇಶದ ಕಸಬುದಾರರೂ ಜಾಗ್ರತೆಯಾಗಿ ಕಲಿತುಕೊಳ್ಳದಿದ್ದರೆ ಅವರಿಗೆ ತುಂಬಾ ನಷ್ಟವೂ, ಅನ್ಯದೇಶೀಯರಿಗೆ ತುಂಬಾ ಆದಾಯವೂ ಆಗುವುದರಲ್ಲಿ ಸಂಶಯ ಕಾಣುವುದಿಲ್ಲ. ನಮ್ಮ ಕಸಬುದಾರರು ಈ ವಿಚಾರಕ್ಕೆ ಕೂಡಲೇ ಗಮನ ಕೊಡಬೇಕಾಗಿರುವುದು.

ತರುವಾಯ ಸಭಾ ನಾಯಕರಾಗಿದ್ದ ಮೆ॥ ಥರ್ಸ್ಟನ್ ಸಾಹೇಬರು ಈ ರೇಷ್ಮೆ ಕಸಬಿನ ವಿಷಯದಲ್ಲಿ ತಮ್ಮ ಅನುಭವವನ್ನು ಹೇಳಿದ್ದಲ್ಲದೆ, ಕೊಳ್ಳೇಗಾಲದ ರೇಷ್ಮೆ ಕಸಬುದಾರರು ಮದರಾಸ್ ಪಟ್ಟಣದಲ್ಲಿರುವ ವಿಕ್ಟೋರಿಯಾ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಎಂಬ ನಿಲಯಕ್ಕೆ ರೇಷ್ಮೆ ನೂಲನ್ನು ಕಳುಹಿಸಿ ಕೊಡುವಹಾಗಿದ್ದರೆ ತಾವು ಅದನ್ನು ಅಲ್ಲಿ ಇಟ್ಟುಕೊಂಡು ಒಳ್ಳೇ ಬೆಲೆ ಬರುವಂತೆ ವಿಕರಿ ಮಾಡಿಸಲು ತಮ್ಮ ಕೈಲಾದದ್ದನ್ನೆಲ್ಲಾ ಮಾಡುತ್ತೇವೆಂದು ವಾಗ್ದಾನ ಮಾಡಿ, ಆ ದಿನದ ಸಭೆಯನ್ನು ಮುಕ್ತಾಯ ಮಾಡಿದರು.

ಮೈಸೂರು ಸರ್ಕಾರಿ ಹುಕುಮುಗಳು.

ರೆವಿನ್ಯೂ ಕಂದಾಯಕ್ಕೆ ನೋಟೀಸ್ ಕೊಡುವುದು.

ರೆವಿನ್ಯೂ ಕಮೀಷನರವರು ಮೇಲ್ಕಂಡ ವಿಷಯದಲ್ಲಿ ಗವರ್ನಮೆಂಟಿಗೆ ಕಳೆದ ಫೆಬ್ರವರಿಯಲ್ಲಿ ಬರೆದು ತಿಳಿಸಿದ್ದೇನೆಂದರೆ—ಮೈಸೂರು ತಾಲ್ಲೂಕಿನಲ್ಲಿ ಒಬ್ಬ ರೈತನು ಕಳೆದ ೧೯೦೬ ನೇ ಇಸವಿಯಲ್ಲಿ ಕಂದಾಯ ಪಾವತಿ ಮಾಡದೆಹೋದಾಗ ತಾಲ್ಲೂಕಿನ ಒಬ್ಬ ಜಮಾದಾರನು ನೋಟೀಸ್ ಜಾರಿಮಾಡಿ ಆ ರೈತನಿಂದ ಕೆಲವು ಹಣವನ್ನು ವಸೂಲ್ಮಾಡಿ, ತನ್ನ ಸ್ವಂತಕ್ಕೆ ಉಪಯೋಗಿಸಿಕೊಂಡದ್ದರ ಮೇಲೆ ಅವನಿಗೆ ಶಿಕ್ಷೆಯಾಯಿತು. ಈಚೆಗೆ ೧೯೦೭ ರಲ್ಲಿ ಈ ಕಂದಾಯದ ಬಾಕಿಯು ರೆವಿನ್ಯೂ ಕಮೀಷನರಿಗೆ ರಿಪೋರ್ಟಾದಾಗ ಅವರು ಆ ಜಮಾದಾರನಿಂದ ವಸೂಲ್ಮಾಡಲು ಅವನಿಗೆ ಆಸ್ತಿಯೇನೂ ಇರಲಿಲ್ಲವಾದ್ದರಿಂದ ಆ ಕಂದಾಯವನ್ನು ರಿಮಿಷನ್ ಮಾಡಿದರು. ಇನ್ನು ಮುಂದೆ ಜವಾಬ್ದಾರಿಯೇನೂ ಇಲ್ಲದ ನೌಕರರಿಗೆ ರೈತರು ಕಂದಾಯ ಪಾವತಿಮಾಡದಂತೆ ಕಂದಾಯದ ವಸೂಲಿಗಾಗಿ ರೈತರ ಮೇಲೆ ಜಾರಿ ಮಾಡುವಂಥಾ ನೋಟೀಸಿನಲ್ಲಿ "ಹತ್ತು ದಿನಗಳ ಮಾಯಿದೆಯೊಳಗೆ ಪಾವತಿ ಮಾಡಬೇಕು" ಎಂಬ ಮಾತುಗಳ ನಡುವೆ "ತಾಲ್ಲೂಕ್ ಖಜಾನೆಗೆ" ಎಂಬ ಮಾತನ್ನು ಕಾಣಿಸುವುದು ಆವಶ್ಯವೆಂದು ರೆವಿನ್ಯೂ ಕಮೀಷನರು ಶಿಫಾರಸು ಮಾಡಿದರು.

ಅದರ ಮೇಲೆ ಗವರ್ನಮೆಂಟಿನವರು ಕಳೆದ ಮಾರ್ಚಿ ತಾ॥ ೨೭ ರಲ್ಲಿ ಹುಕುಂ ಕೊಟ್ಟಿರುವುದೇನೆಂದರೆ—ತಗಾದೆ ನೋಟೀಸನ್ನು ಜಾರಿ ಮಾಡುವವನ ವಶಕ್ಕೆ ರೈತನು ಕಂದಾಯವನ್ನು ಪಾವತಿಮಾಡಬೇಕೆಂದು ರೆವಿನ್ಯೂ ರೂಲ್ಸಿನಲ್ಲಿ ಇರುವುದಿಲ್ಲ. ಇದಲ್ಲದೆ ೯೧ ನೇ ರೂಲನ್ನು ನೋಡಿದರೆ ರೈತನು ಕಂದಾಯವನ್ನು ಗ್ರಾಮದ ಪಟೇಲನಿಗೇ ಪಾವತಿ ಮಾಡತಕ್ಕದ್ದೆಂದೂ, ಮತ್ತು ತಾಲ್ಲೂಕ್ ಅಥವಾ ಡಿಸ್ಟ್ರಿಕ್ಟ್ ಖಜಾನೆಗಾದರೂ ಪಾವತಿ ಮಾಡಬಹುದೆಂದೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದರೆ ಕಂದಾಯದ ಬಾಕಿಗಾಗಿ ರೈತನ ಮೇಲೆ ಜಾರಿ ಮಾಡಲ್ಪಡುವ ನೋಟೀಸಿನಲ್ಲಿ ಮಾಯಿದೆ ಮಾತ್ರ ನಮೂದಾಗಿದೆಯೇ ವಿನಹಾ ಯಾರವರ ವಶಕ್ಕೆ ಪಾವತಿ ಮಾಡಬೇಕೆಂದು ಕಾಣಿಸಿರುವುದಿಲ್ಲ. ಕಂದಾಯವನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರ ಪಡೆದವರಲ್ಲದೆ ನೋಟೀಸ್ ಜಾರೀ ಮಾಡತಕ್ಕ ಇತರ್ಯಾರಿಗೂ ಕಂದಾಯವನ್ನು ರೈತನು ಪಾವತಿ ಮಾಡಕೂಡದೆಂಬುವುದು ಸ್ಪಷ್ಟವಾಗಿ ತಿಳಿಯುವುದಕ್ಕೋಸ್ಕರ ಆ ನೋಟೀಸ್ ಫಾರವಿನೊಳಗೆ "ಹತ್ತು ದಿನಗಳ ಮಾಯಿದೆಯೊಳಗೆ ಪಾವತಿ ಮಾಡಬೇಕು" ಎಂಬ ಮಾತುಗಳ ನಡುವೆ "೯೧ ನೇ ರೂಲ್ಸಿನಲ್ಲಿ ಕಂಡಪ್ರಕಾರ ಗ್ರಾಮದ ಪಟೇಲನಿಗಾಗಲಿ ಅಥವಾ ತಾಲ್ಲೂಕು ಇಲ್ಲವೇ ಡಿಸ್ಟ್ರಿಕ್ಟ್ ಖಜಾನೆಗಾಗಲಿ" ಎಂಬ ಮಾತುಗಳನ್ನು ಬರೆದು ಜಾರೀ ಮಾಡಬೇಕೆಂದು ಹುಕುಂ ಕೊಡಲಾಗಿದೆ.

ರೈತರ ಗೋಕಾಯಿಗಳಿಗೆ ಸರ್ಕಾರೀ ಬೀಜದ ಹೋರಿಗಳೂ.

ಈ ಸಂಸ್ಥಾನದಲ್ಲಿ ರೈತರ ಗೋಕಾಯಿಗಳ ಜಾತಿಯನ್ನೂ ಅವುಗಳ ಬೆಳವಣಿಗೆಯನ್ನೂ ಅಭಿವೃದ್ಧಿಗೆ ತರುವುದಕ್ಕಾಗಿ ಗವರ್ನಮೆಂಟಿನವರು ಅಮೃತಮಹಲ್ ಇಲಾಖೆಯಿಂದ ಬೀಜದ ಹೋರಿಗಳನ್ನು ಕೊಡಬೇಕೆಂದು ಆಗಿಂದಾಗ್ಗೆ ಮಾಡಿರುವ ಹುಕುಮುಗಳೇನೆಂದರೆ—

೧೮೯೧ನೇ ಸೆಪ್ಟೆಂಬರ್ ೧೬ನೇ ತಾರೀಖಿನ ಹುಕುಮಿನ ೩ನೇ ಪ್ಯಾರಾ.—ಗೋಕಾಯಿಗಳ ಜಾತಿಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಅಮೃತಮಹಲ್ ಇಲಾಖೆಯವರು ಪ್ರತಿ ಒಂದು ಡಿಸ್ಟ್ರಿಕ್ಟ್ ಬೋರ್ಡಿಗೂ ಮೂರು ಒಳ್ಳೇ ಬೀಜದ ಹೋರಿಗಳನ್ನು ಕ್ರಯಕ್ಕೆ ಕೊಡಬೇಕು. ಮತ್ತು ಡೆಪ್ಯುಟಿ ಕಮಿಷನರು ಶಿಫಾರಸು ಮಾಡುವಂಥಾ ಖಾಸ್ ಜನರಿಗೆ ಪ್ರತಿ ಡಿಸ್ಟ್ರಿಕ್ಟಿನಲ್ಲೂ ಐದು ಬೀಜದ ಹೋರಿಗಳಿಗಿಂತ ಹೆಚ್ಚಿಲ್ಲದಂತೆ ರಿಯಾಯಿತಿ ದರದಿಂದ ಅಂದರೆ ಅರ್ಧ ಕ್ರಯಕ್ಕೆ ಬೀಜದ ಹೋರಿಗಳನ್ನು ವಿಕರಿಮಾಡಬಹುದು. ಈ ರೀತಿ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಕೊಡುವ ಹೋರಿಗಳ ಪೂರಾ ಕ್ರಯದ ಮೊಬಲಗನ್ನೂ ಖಾಸ್ ಜನರಿಗೆ ಕೊಡುವ ಹೋರಿಗಳ ಅರ್ಧ ಮೊಬಲಗನ್ನೂ ಡಿಸ್ಟ್ರಿಕ್ಟ್ ಫಂಡುಗಳಿಂದ ಪಾವತಿ ಮಾಡತಕ್ಕದ್ದು. ೪ನೇ ಪ್ಯಾರಾ.—ಡೆಪ್ಯುಟಿ ಕಮಿಷನರು ಶಿಫಾರಸು ಮಾಡುವಂಥಾ ರೈತರು ಒಳ್ಳೆ ಗೋಕಾಯಿಗಳನ್ನು ಸಾಕುವಂಥವರಾಗಿಯೂ, ಅರ್ಧ ಕ್ರಯಕ್ಕೆ ಕೊಂಡುಕೊಳ್ಳುವಂಥಾ ಅಮೃತಮಹಲ್ ಬೀಜದ ಹೋರಿಗಳನ್ನು ಅವರು ಹಾರಿಸುವುದಕ್ಕಲ್ಲದೆ ಇನ್ಯಾವ ಕೆಲಸಕ್ಕೂ ಉಪಯೋಗಿಸುವುದಿಲ್ಲವೆಂದು ಬರೆದು ಕೊಡುವಂಥವರಾಗಿ ಇರಬೇಕು. ೫ನೇ ಪ್ಯಾರಾ.—ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಕೊಡುವಂಥಾ ಮೂರು ಬೀಜದ ರಾಸುಗಳಿಗೂ ಅವನ್ನು ಗುರುತುಹಿಡಿಯುವಂತೆ ಯಾವುದಾದರೊಂದು ಪ್ರತ್ಯೇಕವಾದ ಬರೆಯ ಗುರುತನ್ನು ಒತ್ತಿರಬೇಕು. ಆ ಪೈಕಿ ಒಂದು ಹೋರಿಯನ್ನು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ತಾಲ್ಲೂಕಿನಲ್ಲೇ ಸರ್ವದಾ ಇಟ್ಟಿರತಕ್ಕದ್ದು. ಉಳಿದ ಎರಡನ್ನೂ ಡೆಪ್ಯುಟಿ ಕಮಿಷನರಿಗೆ ಸೂಕ್ತ ತೋರುವಂಥಾ ಇತರ ಸ್ಥಳಗಳಲ್ಲಿ ಇಟ್ಟಿರಬೇಕು. ಯಾವನಾದರೂ ಯೋಗ್ಯನಾದ ರೈತನು ಅಂಥಾ ಬೀಜದ ಹೋರಿಯೊಂದನ್ನು ತನ್ನ ಬಳಿ ಇಟ್ಟುಕೊಂಡು ಸಾಕುವುದಾಗಿಯೂ, ಅದನ್ನು ಇನ್ಯಾವ ಕೆಲಸಗಳಿಗೂ ಉಪಯೋಗಿಸದೆ ಹಾರಿಸುವುದಕ್ಕೆ ಮಾತ್ರ ಉಪಯೋಗಿಸುತ್ತೇನೆಂದೂ, ಆ ಸರಹದ್ದಿನಲ್ಲಿರುವಂಥಾ ರೈತರ ಹಸುಗಳ ಮೇಲೆ ಒಂದು ಸಲ ಹಾರಿಸುವುದಕ್ಕೆ ರೈತರಿಂದ ಎರಡು ಆಣೆಯಂತೆ ರುಸುಂ ವಸೂಲ್ಮಾಡುತ್ತಾ ಬರುತ್ತೇನೆಂದೂ ಕರಾರು ಬರೆದು ಕೊಡುವ ಪಕ್ಷದಲ್ಲಿ ಒಂದು ಬೀಜದ ಹೋರಿಯನ್ನು ಅಂಥಾ ಯೋಗ್ಯನಾದ ರೈತನಿಗೆ ವಹಿಸಿ ಕೊಡಬಹುದು. ಈ ಕರಾರ್ ಅನುಸರಿಸಿ ವಹಿಸಿಕೊಳ್ಳತಕ್ಕ ರೈತರ್ಯಾರೂ ದೊರಕದೆ ಹೋದರೆ ಅವನ್ನು ಡಿಸ್ಟ್ರಿಕ್ಟ್ ಫಂಡುಗಳಿಂದಲೇ ಇಟ್ಟು ಸಾಕುತ್ತಾ ಇರಬೇಕು. ಮತ್ತು ಇಂಥಾ ಸಂದರ್ಭದಲ್ಲಿ ಈ ರಾಸುಗಳನ್ನು ಹಸುಗಳ ಮೇಲೆ ಹಾರಿಸುವ ರುಸುಮನ್ನು ನಾಲ್ಕಾಣೆಯಂತೆ ವಸೂಲ್ಮಾಡತಕ್ಕದ್ದಾಗಿದೆ. ೬ನೇ ಪ್ಯಾರಾ.—ಡಿಸ್ಟ್ರಿಕ್ಟ್ ಬೋರ್ಡ್ ಬೀಜದ ಹೋರಿಗಳನ್ನು ತಮ್ಮ ಛಾರ್ಜಿನಲ್ಲಿ ಇಟ್ಟುಕೊಂಡಿರುವಂಥಾ ಸರ್ಕಾರಿ ನೌಕರರಾಗಲಿ ರೈತರಾಗಲಿ ಒಂದು ರಿಜಿಸ್ಟರನ್ನು ಬರೆದಿಡಬೇಕು. ಈ ರಿಜಿಸ್ಟರಿನಲ್ಲಿ ಪ್ರತಿದಿನವೂ ಎಷ್ಟು ಹಸುಗಳು ಈ ಹೋರಿಗಳನ್ನು ತೆಗೆದುಕೊಂಡವು, ಅದರಿಂದಾದ ಪ್ರಯೋಜನವೇನು ಎಂಬೀ ವಿಚಾರಗಳನ್ನು ನಮೂದುಮಾಡುತ್ತಾ ಬರಬೇಕು. ಡಿಸ್ಟ್ರಿಕ್ಟ್ ಫಂಡುಗಳ ಸಾಲಿಯಾನೆಯ ರಿಪೋರ್ಟಿನಲ್ಲಿ ಈ ವಿಚಾರವನ್ನು ಕುರಿತು ಎಲ್ಲಾ ಸಂಗತಿಗಳನ್ನೂ ಗವರ್ನಮೆಂಟಿಗೆ ಬರೆದು ಕಳುಹಿಸಬೇಕಾಗಿದೆ.

೧೮೯೪ ನೇ ಮೇ॥ ೨೩ ನೇ ಮತ್ತು ಜೂನ್ ೨೮ ನೇ ತಾರೀಖುಗಳ ಹುಕುಮು.—ಗವರ್ನಮೆಂಟಿನಿಂದ ಯಾವ ಬೀಜದ ಹೋರಿಯನ್ನೂ ಕ್ರಯ ತೆಗೆದುಕೊಳ್ಳದೆ ಕೊಡಕೂಡದು. ಡಿಸ್ಟ್ರಿಕ್ಟ್ ಬೋರ್ಡುಗಳಿಗಾಗಲಿ, ಈ ರೂಲ್ಸ್‌ಪ್ರಕಾರ ರೈತರಿಗಾಗಲಿ ಕೊಡುವಂಥಾ ಬೀಜದ ಹೋರಿಗಳ ಕ್ರಯವು ರಾಸಿಗೆ ೭೫ ರೂಪಾಯಿಯಂತೆ ನಿಷ್ಕರ್ಷೆ ಮಾಡಲ್ಪಟ್ಟಿದೆ.

೧೮೯೮ ನೇ ಏಪ್ರಿಲ್ ೨೦ ನೇ ಮತ್ತು ಆಗಸ್ಟ್ ೧ ನೇ ತಾರೀಖುಗಳ ಹುಕುಮು.—ಡಿಸ್ಟ್ರಿಕ್ಟ್ ಬೋರ್ಡ್ ಬೀಜದ ಹೋರಿಗಳು ವಯಸ್ಸಾಗಿಯೋ ಅಥವಾ ಇತರ ಕಾರಣಗಳಿಂದಲೋ ಹಾರಿಸುವುದಕ್ಕೆ ಆಗದಂತೆ ನಿಷ್ಪ್ರಯೋಜನವಾದ ಹಾಗೆಲ್ಲಾ ಅದನ್ನು ಒಂದೊಂದಾಗಿ ಪಬ್ಲಿಕ್ ಹರಾಜಿನಲ್ಲಿ ವಿಕರಿ ಮಾಡಿ, ಹಣವನ್ನು ಡಿಸ್ಟ್ರಿಕ್ಟ್ ಬೋರ್ಡಿನವರೇ ತೆಗೆದುಕೊಳ್ಳಬಹುದು. ಈ ರೀತಿ ವಿಕರಿಮಾಡಿದ ರಾಸುಗಳಿಗೆ ಪ್ರತಿಯಾಗಿ ಬೇರೆ ಬೀಜದ ಹೋರಿಗಳನ್ನು ಅಮೃತಮಹಲ್ ಇಲಾಖೆಯಿಂದ ಕೊಂಡುಕೊಳ್ಳಬಹುದು.

೧೮೯೮ ನೇ ಆಗಸ್ಟ್ ೧ ನೇ ತಾರೀಖಿನ ಹುಕುಮು.—ಈ ಹೋರಿಗಳನ್ನು ಬೀಜಕ್ಕಾಗಿ ಉಪಯೋಗಿಸಬೇಕಾಗಿರೋಣದರಿಂದ ಅಮೃತಮಹಲ್ ಇಲಾಖೆಯವರು ಅದಕ್ಕೆ ಲಾಯಖಾದ ಒಳ್ಳೆ ಆರೋಗ್ಯವಾಗಿಯೂ ಚಟುವಟಿಕೆಯಾಗಿಯೂ ಇರುವಂಥಾ ರಾಸುಗಳನ್ನೇ ಆರಿಸಿ ಕೊಡುವ ವಿಷಯದಲ್ಲಿ ಸರಿಯಾದ ಏರ್ಪಾಡು ಮಾಡಬೇಕಾಗಿದೆ.

೧೯೦೦ ನೇ ಸೆಪ್ಟೆಂಬರ್ ೨೫ ನೇ ತಾರೀಖಿನ ಹುಕುಮು.—ಅಮೃತಮಹಲ್ ಗೂಳಿಗಳು ಚೆನ್ನಾಗಿ ವಯಸ್ಸಿಗೆ ಬರುವ ತನಕ ಮಂದೆಗಳಲ್ಲೇ ತಿರುಗಾಡುವವೆಂದೂ, ಗ್ರಾಮಾಂತರಗಳಲ್ಲಿ ಹಾರಿಸುವುದಕ್ಕೆ ಅವು ನಿಷ್ಪ್ರಯೋಜನವಾಗಿವೆ ಎಂದೂ ತಿಳಿದು ಬಂದಿರೋಣದರಿಂದ ದಸರಾ ಹಬ್ಬ ಕಾಲದಲ್ಲಿ ಮೈಸೂರು ಪಟ್ಟಣದೊಳಗೆ ಪ್ರತಿ ವರುಷವೂ ಅಮೃತಮಹಲ್ ದನಗಳ ಮಾರಾಟ ನಡೆಯುವಂತೆ ಏರ್ಪಾಡು ಮಾಡಲ್ಪಡುವುದು.

ಇದಲ್ಲದೆ ಈ ಸಂಸ್ಥಾನದ ಮುಖ್ಯ ಮುಖ್ಯ ಸ್ಥಳಗಳಲ್ಲಿ ಎರಡು ಅಥವಾ ಮೂರು ವರುಷದ ವಯಸ್ಸಿನ ಎಳೆಯ ಹೋರಿಗಳನ್ನು ಹರಾಜು ಮೂಲಕ ವಿಕ್ರಯಿಸುವಂತೆಯೂ ರೈತಪ್ರಜೆಗಳು ತಮಗೆ ಬೇಕಾದ ರಾಸುಗಳನ್ನು ಚುನಾಯಿಸಿ ಮೇಲ್ಕಂಡ ರಿಯಾಯಿತೀ ದರದ ಪ್ರಕಾರ ಕೊಂಡುಕೊಳ್ಳುವುದಕ್ಕೆ ಅನುಕೂಲಿಸುವಂತೆಯೂ ಏರ್ಪಾಡುಮಾಡಿ, ವಿಕರಿ ಆಗತಕ್ಕ ಸ್ಥಳ, ಕಾಲ ಮೊದಲಾದವನ್ನು ಸುತ್ತುಮುತ್ತಿನಲ್ಲಿರುವ ರೈತರಿಗೆಲ್ಲಾ ತಿಳಿಯಪಡಿಸಲಾಗುವುದು.

ಇಂಡಿಯಾ ದೇಶದ ವೃತ್ತಾಂತಗಳು.

ಪಿಷಾವರ್ ಪಟ್ಟಣದಲ್ಲಿ ಶಾಂತಿಭೇದ ಉಪದ್ರವುಟ್ಟಿ ಅಗಲೇ ೧೫ ಮಂದಿ ಕಾಲವಾದರು.

❖❖❖

ಕಲ್ಕತ್ತಾ ಪಟ್ಟಣದ ಚಿತ್ಪುರವೆಂಬ ಭಾಗದಲ್ಲಿದ್ದ ನಾರಿನ ಕಾರ್ಖಾನೆಗೆ ಬೆಂಕಿಬಿದ್ದು ೩ ಲಕ್ಷ ರೂಪಾಯಿನ ಸರಕು ನಷ್ಟವಾಯಿತು.

❖❖❖

ತಿರುವಾಂಕೂರು ಸಂಸ್ಥಾನದ ದಿವಾನ್ ಮೆ॥ ರಾಜಗೋಪಾಲಾಚಾರ್ರು ಕಳೆದ ವಾರ ಮದರಾಸಿಗೆ ಬಂದು ನಾಲ್ಕು ದಿನ ಇದ್ದು ವಾಪಸು ಹೋದರು.

❖❖❖

ಬರೋಡಾ ಸಂಸ್ಥಾನದ ಯುವರಾಜರಾದ ಫತ್ತೇಸಿಂಗ್ ಗ್ಯಾಕ್ವಾರ್ ರವರು ಕೊಸವಾ ಎಂಬ ಊರಿನ ಬಳಿ ೯ ಅಡಿ ೮ ಅಂಗುಲ ಪ್ರಮಾಣದ ಹುಲಿಯನ್ನು ಷಿಕಾರಿ ಮಾಡಿಕೊಂಡು ಬಂದರು.

❖❖❖

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ಇಷ್ಟರಲ್ಲೇ ಬೇಸಿಗೆ ಕಳೆಯುವುದಕ್ಕಾಗಿ ನೀಲಗಿರಿಗೆ ದಯಮಾಡುವವರಾಗಿದಾರೆ. ಅವರ ಸಂಸಾರಕ್ಕೆ ಸೇರಿದವರೆಲ್ಲಾ ಆಗಲೇ ಬಂದಿರುವರು.

❖❖❖

ಮದರಾಸ್ ಪಟ್ಟಣದಲ್ಲಿ ಮೂಗು ಪ್ರಾಣಿಗಳನ್ನಿಟ್ಟು ಸಾಕುವಂಥಾ ಪಂಜರಗಳ ಆಲಯದ ಫಂಡಿಗೆ ವಿಜಯನಗರದ ಮಹಾರಾಜರ ಕುಮಾರಿಕಾ ಸಾಹೇಬರವರು ಒಂದು ಲಕ್ಷ ರೂಪಾಯಿ ದಾನ ಮಾಡಿರುತ್ತಾರೆ.

❖❖❖

ಪ್ರಜಾಶಾಂತಿಯನ್ನು ಕಾಪಾಡುವುದಕ್ಕಾಗಿ ಮೈಮನ್‌ಸಿಂಗಿನಲ್ಲಿ ಬಂಗಾಳಾ ಗವರ್ನಮೆಂಟಿನವರು ಕಳೆದ ೮ ತಿಂಗಳಿಂದ ಇಟ್ಟಿದ್ದ ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ಇಷ್ಟರಲ್ಲೇ ವಜಾಮಾಡುವವರಾಗಿದಾರೆ.

❖❖❖

ಹೆಂಗಸರು ಆವಶ್ಯ ಯಾರೊಬ್ಬನವಳೇ ಆಗಿದ್ದಾಗ್ಯೂ ಬಂದೂಕು ಪಿಸ್ತೂಲುಗಳನ್ನು ಇಟ್ಟುಕೊಳ್ಳುವುದಕ್ಕೆ ಲೈಸೆನ್ಸು ಕೊಡಕೂಡದೆಂದು ಬನಾರ್ ಅಧಿಪತ್ಯದಲ್ಲಿ ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆ.

❖❖❖

ಕಲ್ಕತ್ತಾ ಪಟ್ಟಣದಲ್ಲಿ ಕಸಬುದಾರಿ ವಿದ್ಯಾಪ್ರೋತ್ಸಾಹಕ ಸಂಘದವರು ಕಳೆದ ವಾರ ಎಂಟು ಮಂದಿ ಯೌವನಸ್ಥರನ್ನು ವೇತನ ಕೊಟ್ಟು ವಿಲಾಯತಿ, ಅಮೇರಿಕ, ಜಪಾನ್, ಜರ್ಮನಿ ಮೊದಲಾದ ದೇಶಗಳಿಗೆ ಕಳುಹಿಸಿದರು.

❖❖❖

ಬರೋಡಾ ಸಂಸ್ಥಾನದ ಮಹಾರಾಣೀರವರು ರೀವಾ ಸಂಸ್ಥಾನದ ಜಂಗಲಿನಲ್ಲಿ ಸಂಚಾರ ಮಾಡುತ್ತಿದ್ದಾಗ ಕಳೆದ ವಾರ ಒಂದು ಹುಲಿ

ದನ್ನು ಶಿಕಾರಿ ಮಾಡಿದರು. ಅದು ೮॥ ಅಡಿ ಪ್ರಮಾಣವುಳ್ಳ ಭಾರೀ ಹುಲಿ ಎಂದು ತಿಳಿಯುವುದು.

•••

ಕಲ್ಕತ್ತೆಯ ಬಳಿ ಫ್ರೆಂಚರಿಗೆ ಸೇರಿದ ಚಂದ್ರನಗರವೆಂಬ ಪಟ್ಟಣದಲ್ಲಿ ಫ್ರೆಂಚ್ ಸರ್ಕಾರದವರು ಬಂದೂಕು ಹತ್ಯಾರು ಮುಂತಾದ ಆಯುಧಗಳನ್ನು ಪ್ರಜೆಗಳು ಲೈಸೆನ್ಸು ಪಡೆಯದೆ ಇಟ್ಟುಕೊಳ್ಳಬಾರದೆಂದು ಹುಕುಂ ಕೊಟ್ಟಿದ್ದಾರೆ.

•••

ಢಾಕ್ಕಾ ನವಾಬರಾಗಿಯೂ ನವಾಬ್ ಬಿ.ಹೆ. ಫಲ್ಲಿಖಾನರವರ ಮೊಮ್ಮಕ್ಕಳಾಗಿಯೂ ಇದ್ದ ಸೈಯದ್ ಸಫ್ದರ್ ಎಂಬಾತನು ಕಳೆದ ಶುಕ್ರವಾರ ಗೃಹಕೃತ್ಯದ ಮನೋವ್ಯಥೆಯಿಂದ ಆತ್ಮಹತ್ಯ ಮಾಡಿಕೊಂಡನೆಂದು ತಂತೀ ವರ್ತಮಾನ ಬಂದಿದೆ.

•••

ಅಫ್ಘಾನಿಸ್ಥಾನದ ಅಮೀರರು ಕಾಲವಾದರೆಂದು ಕಳೆದ ವಾರ ಪೇಷಾವರ್ ಪ್ರಾಂತ್ಯದಲ್ಲಿ ಸಮಾಚಾರ ಹುಟ್ಟಿತ್ತು. ಆದರೆ ಈಚೆಗೆ ವಿಚಾರಿಸುವಲ್ಲಿ ಕಳೆದ ೨೬ ನೇ ತಾ. ವರೆಗೆ ಅವರು ಆರೋಗ್ಯವಾಗಿ ಸ್ವಂತ ಅಲ್ಲಿಂದ ಕಾಗದ ಬಂದಿರುವುದು ಗೊತ್ತಾಯಿತು.

•••

ಸಿಂಲಾ ಡೆಪ್ಯುಟಿ ಕಮೀಷನರಾದ ಮೇಜರ್ ಡಗ್ಲಾಸ್‌ಯವರು ಭಾಗತ್ ಸಂಸ್ಥಾನದ ೧೭ ವಯಸ್ಸಿನ ರಾಜರಿಗೆ ಪಟ್ಟ ಕಟ್ಟುವುದಕ್ಕೆ ಹೋಗಿದ್ದಾರೆ. ಈ ರಾಜರಿಗೆ ಜುಬ್ಬಲ್ ಸಂಸ್ಥಾನದ ರಾಜಾರವರ ಇಬ್ಬರು ಸಹೋದರಿಯರನ್ನು ಕೊಟ್ಟು ಕಳೆದ ವಾರ ವಿವಾಹವಾಯಿತು.

•••

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಜರಿಯಾ ಎಂಬ ಪ್ರಾಂತ್ಯದಲ್ಲಿ ಗಣಿಗಳಲ್ಲಿ ಕೆಲಸ ಮಾಡುವವರಿಗೆ ಕಾಲರಾ ಉಪದ್ರ ತಗಲಿ ಅನೇಕರು ಕಾಲವಾದರು. ಡಾಕ್ಟರ್ ಹಾಫ್‌ಕಿನ್‌ರವರು ಅಲ್ಲಿಗೆ ಹೋಗಿ ಇತರರಿಗೆ ಆ ಉಪದ್ರ ತಗಲದಂತೆ ನೂರಾರು ಮಂದಿಗೆ ಟೀಕೆಯನ್ನು ಹಾಕಿರುತ್ತಾರೆ.

•••

ಬಿಹಾರದಲ್ಲಿ ಇಂಗ್ಲಿಷ್ ಸೈನ್ಯವನ್ನು ಬಿಟ್ಟು ಸೀಮೆಗೆ ಹೋಗುವುದಕ್ಕಾಗಿ ೩೦ ವರುಷಗಳಿಂದ ಕೂಡಿಹಾಕಿದ ತನ್ನ ಆಸ್ತಿಯನ್ನೆಲ್ಲಾ ಏಳು ಭಾರೀ ಪಟ್ಟಿಗೆಗಳಲ್ಲಿ ಭರ್ತಿಮಾಡಿ ರೈಲ್ ಗಾಡಿಯ ಮೂಲಕ ಕಳುಹಿಸಿದನು. ಈಗ ಆ ಏಳು ಪಟ್ಟಿಗೆಗಳೂ ಕಳುವಾಗಿರುತ್ತವೆಂದು ತಂತೀ ವರ್ತಮಾನ ಬಂದಿತೆ

•••

ಬಿಹಾರ್ ಅಧಿಪತ್ಯಕ್ಕೆ ಸೇರಿರುವ ನಾಯುಂಗ್‌ಮಯಾ ಎಂಬ ಊರಿನಲ್ಲಿ ಆರು ಮಂದಿ ಕಳ್ಳರು ಒಂದು ಮನೆಗೆ ನುಗ್ಗಿದರು. ಇವರಿಗೂ ಮನೆಯವರಿಗೂ ಕಾದಾಟವಾದದ್ದರಲ್ಲಿ ಹೆಂಗಸರೂ ಮಕ್ಕಳೂ ಒಬ್ಬ ಮುದುಕನೂ ಕೊಲ್ಲಲ್ಪಟ್ಟರು. ಕಳ್ಳರ ಪೈಕಿ ಕೆಲವರಿಗೆ ಗಾಯಗಳಾದರೂ ಅವರು ಸಿಕ್ಕದೆ ತಪ್ಪಿಸಿಕೊಂಡು ಹೋದರು.

•••

ಅಫ್ಘಾನಿಸ್ಥಾನದಲ್ಲಿ ಸರಕುಗಳ ಆಮದು ರಫ್ತಿನ ಮೇಲೆ ಅಮೀರರು ಹಾಕಿರುವಂಥಾ ಸುಂಕಗಳನ್ನು ಕಡಮೆಮಾಡಿಕೊಡುವುದಾಗಿ ಅವರಿಗೆ ಪಟ್ಟವಾದಾಗ ಅಪ್ಪಣೆ ಕೊಡಿಸಿದ್ದಾಗ್ಯೂ, ಇದುವರೆಗೆ ಆ ಕರಗಳನ್ನು ಕಡಮೆಮಾಡಲಿಲ್ಲವೆಂತಲೂ, ಇದರಿಂದ ವ್ಯಾಪಾರಗಾರರಿಗೂ ಪ್ರಜೆಗಳಿಗೂ ನಷ್ಟವಾಗಿರೋಣದರಿಂದ ಈಗಲಾದರೂ ಆ ರೀತಿ ನಡೆಸಿಕೊಡಬೇಕೆಂತಲೂ ಅಮೀರರನ್ನು ಬೇಡಿಕೊಂಡಿರುತ್ತಾರೆ.

•••

ಉತ್ತರ ದೇಶದಲ್ಲಿ ಕ್ಷಾಮಬಾಧೆಯು ಇನ್ನೂ ಕಠಿಣವಾಗಿಯೇ ಇರುತ್ತದೆ. ಹಿಂದೂಸ್ಥಾನದಲ್ಲೆಲ್ಲಾ ಒಟ್ಟು ೧೩,೦೮,೦೦೦ ಪ್ರಜೆಗಳು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿರುತ್ತಾರೆ; ಅಂದರೆ, ಬಂಗಾಳಾ ೨೫,೦೦೦, ಸಂಯುಕ್ತ ಅಧಿಪತ್ಯಗಳು ೧೧,೩೬,೦೦೦, ಪಂಜಾಬ್ ೧,೦೦೦, ಮಧ್ಯಪ್ರಾಂತ್ಯಗಳು ೨೧,೦೦೦, ಬೊಂಬಾಯಿ ೫,೦೦೦, ಮಧ್ಯ ಇಂಡಿಯಾ ೧,೩೦,೦೦೦ ಈ ರೀತಿ ಕ್ಷಾಮಪೀಡಿತರಿರುತ್ತಾರೆ.

•••

ಕಳೆದ ವಾರ ಹಿಂದೂಸ್ಥಾನದಲ್ಲೆಲ್ಲಾ ಪ್ಲೇಗ್ ಉಪದ್ರದಿಂದಾದ ಮರಣಗಳು ೫,೫೬೯ಕ್ಕೆ ಇಳಿದವು. ಈ ಪೈಕಿ ಪಂಜಾಬ್ ೩,೧೩೦, ಬೊಂಬಾಯಿ ಅಧಿಪತ್ಯ ೯೦೯, ಸಂಯುಕ್ತ ಅಧಿಪತ್ಯಗಳು ೭೮೧, ಬಿಹಾರದಲ್ಲಿ ೬೮, ವಾಯುವ್ಯ ಸರಹದ್ದಿನ ಪ್ರಾಂತ್ಯ ೫೭, ಮದರಾಸ್ ಅಧಿಪತ್ಯ ೪೯, ಮೈಸೂರು ಸಂಸ್ಥಾನ ೨೩, ಮಧ್ಯ ಪ್ರಾಂತ್ಯಗಳು ೧೭, ಮಧ್ಯ ಇಂಡಿಯಾ ೬, ಕಾಶ್ಮೀರ ೩, ಈ ರೀತಿ ಮರಣಗಳಾಗಿರುತ್ತವೆ.

•••

ಮಹಮದೀಯರ ಕೊರಾನ್ ಎಂಬ ವೇದಪುಸ್ತಕದಿಂದ ಘೋಷಾ ಪದ್ಧತಿಯನ್ನು ಇಟ್ಟಿರಬೇಕೆಂಬುವುದಕ್ಕೆ ಸರಿಯಾದ ವಚನಗಳನ್ನು ಕಂಡು ತೋರಿಸಿಕೊಟ್ಟವರಿಗೆ ೫೦೦ ರೂಪಾಯಿ ಬಹುಮಾನ ಕೊಡುತ್ತೇವೆಂದು ಮದರಾಸ್ ಪಟ್ಟಣದಲ್ಲಿರುವ ನಾಲ್ಕನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಮಿ॥ ವಿರಾಸ್ ಸುಲ್ತಾನ್ ಮೊಹಿದೀನ್ ಸಾಹೇಬ್ ಬಹದೂರ್‌ಯವರು ಪ್ರಕಟಿಸಿ ಒಂದು ವರುಷವಾಗಿದ್ದರೂ ಇದುವರೆಗೆ ಯಾರೂ ಅದನ್ನು ಹುಡುಕಿಕೊಡಲಿಲ್ಲವೆಂದು ಒಬ್ಬ ಜಾತ್ಮಿದಾರರು ಬರೆಯುತ್ತಾರೆ

•••

ರಂಗೂನ್ ಪಟ್ಟಣದಲ್ಲಿ ಜೇಕಬ್ ಎಂಬೊಬ್ಬ ದುಷ್ಟನಾದ ಗಂಡಸನು ಜಾರ್ಜ್ ಎಂಬ ೧೬ ವರುಷದ ಹುಡುಗನ ತಾಯಿಯನ್ನು ಇಟ್ಟುಕೊಂಡಿದ್ದು, ಅವಳನ್ನು ಆಗಾಗ್ಗೆ ಬಹಳ ಹಿಂಸೆ ಪಡಿಸುತ್ತಿದ್ದನು. ಆ ಹುಡುಗನು ಅದನ್ನು ಸೈರಿಸಲಾರದೆ ಅವನನ್ನು ಕೊಂದು ಹಾಕಿದನು. ಆ ಹುಡುಗನ ಮೇಲೆ ಕೊಲೆಯ ಅಪರಾಧ ಹೊತ್ತಿತು. ಸೆಷನ್ಸ್ ಕೋರ್ಟಿನಲ್ಲಿ ಈ ಮೊಕದ್ದಮೆ ದರ್ಯಾಪ್ತಿಯಾದಾಗ ಪಂಚಾಯತರು ಆ ಹುಡುಗನ ಮೇಲೆ ಅಪರಾಧ ಹೊರುವುದಿಲ್ಲವೆಂದೂ ಅವನನ್ನು ಖುಲಾಸ್ ಮಾಡಬೇಕೆಂದೂ ಏಕವಾಕ್ಯತೆಯಿಂದ ಹೇಳಿಬಿಟ್ಟರು. ಜಡ್ಜಿಯವರು ಅವರ ಅಭಿಪ್ರಾಯದಂತೆ ಅವನನ್ನು ಬಿಟ್ಟುಬಿಟ್ಟರು

•••

ನಾಲ್ಕು ಜನ ಅಣ್ಣ ತಮ್ಮಂದಿರು ಆಸ್ತಿಯನ್ನು ಪಾಲುಮಾಡಿಕೊಳ್ಳುವಾಗ್ಗೆ ಕಿರೀ ತಮ್ಮನ ಮದುವೆಗೆ ಮೂರು ಮಂದಿಯೂ ದ್ರವ್ಯ ಸಹಾಯ ಮಾಡಬೇಕೆಂದು ಕರಾರಾಯಿತು. ಹತ್ತು ವರುಷಗಳ ಮೇಲೆ ಆ ಕಿರೀ ತಮ್ಮನು ಆಸ್ತಿಯಲ್ಲಿ ೫೦೦ ರೂಪಾಯಿನ ಜಮೀನುಗಳನ್ನು ಕನ್ಯಾದಕ್ಷಿಣೆಯಾಗಿ ಮಾವನಿಗೆ ಕೊಟ್ಟು ಮದುವೆ ಮಾಡಿಕೊಂಡು, ಆ ೫೦೦ ರೂಪಾಯನ್ನು ತನ್ನ ಅಣ್ಣಂದಿರಿಂದ ಬರಮಾಡಿಕೊಳ್ಳಬೇಕೆಂದು ದಾವಾ ತಂದನು. ಮದರಾಸ್ ಹೈ ಕೋರ್ಟಿನ ಎಲ್ಲಾ ಜಡ್ಜಿಗಳೂ ಕುಳಿತು ಈ ಮೊಕದ್ದಮೆಯನ್ನು ದರ್ಯಾಪ್ತು ಮಾಡಿ, ಕನ್ಯೆಗಾಗಿ ಕೊಟ್ಟ ಕ್ರಯದ ಹಣವನ್ನು ಅಣ್ಣಂದಿರು ಪಾವತಿಮಾಡಬೇಕಾದದ್ದಿಲ್ಲವೆಂದು ತೀರ್ಮಾನ ಹೇಳಿದರು.

•••

ಬೊಂಬಾಯಿ ಪಟ್ಟಣದ ಮಲಬಾರ್ ಗುಡ್ಡದ ಮೇಲೆ ಕಳೆದ ಒಂದೂವರೆ ವರುಷದಲ್ಲಿ ತಾಯಬ್ ಅಲ್ಲಿ ಎಂಬೊಬ್ಬ ಬೋರಾ ಮಹಮ್ಮದೀಯನು ೧೨೫ ಕಳವುಗಳನ್ನು ನಡಿಸಿದ್ದೇನೆಂದು ಕೋರ್ಟಿನಲ್ಲಿ ಒಪ್ಪಿಕೊಂಡನು. ಮ್ಯಾಜಿಸ್ಟ್ರೇಟರ ವಿಚಾರಣೆಯಲ್ಲಿ ಆ ಪೈಕಿ ೧೫ ಮೊಕದ್ದಮೆಗಳು ಸರಿಯಾಗಿ ರುಜುವಾತಾದವು. ಮ್ಯಾಜಿಸ್ಟ್ರೇಟರು ಪ್ರತಿ ಒಂದು ಅಪರಾಧಕ್ಕೂ ಒಂದು ವರುಷ ಕಠಿಣಸಜೆಯನ್ನೂ ಒಂದು ದಿನ ಸಾದಾಸಜೆಯನ್ನೂ ವಿಧಿಸಿದರು. ಅಪರಾಧಿಯು ೧೫ ವರುಷ ಕಠಿಣಸಜಾ ಆಯಿತೆಂದು ಕೇಳಿ, ಗೊಳೋ ಎಂದು ಅಳುತ್ತಾ, ತನಗೆ ಸ್ವಲ್ಪ ಶಿಕ್ಷೆಯು ಮಾತ್ರ ಆಗುವುದೆಂಬ ಭರವಸೆಯ ಮೇಲೆ ತಾನು ಎಲ್ಲಾ ವಿವರಿಸಿದೇನೆಂತಲೂ, ಇಷ್ಟು ಸಜಾ ಅನುಭವಿಸುವುದಕ್ಕಿಂತಲೂ ಸಾಯುವುದೇ ಉತ್ತಮವೆಂತಲೂ ಹೇಳಿದನು

•••

ಕಲ್ಕತ್ತಾ ಪಟ್ಟಣದಲ್ಲಿ ಹಿಂದೂ ಪ್ರಾಚೀನ ಗ್ರಂಥ ಪ್ರಕಾಶಕ ಸಂಘದ ಪ್ರಸಿಡೆಂಟರಾದ ಬಾಬೂ ಮನ್ಮಥನಾಥ ದತ್ತರವರು ಸಾಯಣನ ವ್ಯಾಖ್ಯಾನ ಸಹಿತವಾಗಿಯೂ ಇಂಗ್ಲಿಷ್ ಭಾಷಾಂತರ ಯುಕ್ತವಾದ ಋಗ್ವೇದವನ್ನು ಪ್ರಕಟಿಸಲಾರಂಭಿಸಿದಾರೆ. ಕಾಶ್ಮೀರದ ಮಹಾರಾಜರವರು ಅದರ ಖರ್ಚಿಗೆ ೧೫ ಸಾವಿರ ರೂಪಾಯಿ ಸಹಾಯ ಮಾಡಿದರು. ಅದು ಮಾಸಿಕ ಪತ್ರಿಕೆಯಂತೆ ಪ್ರಕಟವಾಗುತ್ತಿದೆ ಆಗಲೇ ೨೪ ಸಂಚಿಕೆಗಳು ಅಚ್ಚಾಗಿ ಪ್ರಚಾರಕ್ಕೆ ಬಂದಿರುವವು. ಆ ಪೈಕಿ ಹಿಂದೂಸ್ಥಾನದಲ್ಲಿರುವಂಥಾ ವೈದಿಕರಿಗೂ ಪಂಡಿತರಿಗೂ ಕ್ರಯವಿಲ್ಲದೆ ಮುಫತ್ತಾಗಿ ಹಂಚುವುದಕ್ಕೆಂದು ೨,೦೦೦ ಪ್ರತಿಗಳನ್ನು ತೆಗೆದಿಟ್ಟಿದ್ದಾರೆ. ಹೀಗೆ ಮುಫತ್ತಾಗಿ ಪಡೆಯಬೇಕೆಂದು ಅಪೇಕ್ಷಿಸುವಂಥಾ ವೇದಪಾಠಕರೂ ಪಂಡಿತರೂ ಮುರ್ಶಿದಾಬಾದಿನಲ್ಲಿರುವ ಕಾಸಿಂಬಜಾರ್ ಮಹಾರಾಜರವರಿಗಾಗಲಿ, ಕಲ್ಕತ್ತಾ ಪಟ್ಟಣದ ೬೦ ನಾರಾಯಣ ಚಂದ್ ದತ್ತ ವೀಧಿಯಲ್ಲಿರುವ ಮೇಲ್ಕಂಡ ಎಡಿಟರ್ ಮಿ॥ ಮನ್ಮಥನಾಥ ದತ್ತರವರಿಗಾಗಲಿ ಕಾಗದ ಬರೆದರೆ ಪ್ರತಿಗಳನ್ನು ಅವರು ಕಳುಹಿಸುತ್ತಾರೆಂದು ಪ್ರಕಟವಾಗಿದೆ.

•••

ಅಲಹಾಬಾದ್ (ಪ್ರಯಾಗ) ಪಟ್ಟಣದ ಬಳಿ ಇರುವ ಮುಜಫರ್‌ಪುರದಲ್ಲಿ ಯೂರೋಪಿಯನ್ ಜನರು ವಿಹಾರ ಮಾಡುವುದಕ್ಕಾಗಿ ಒಂದು ಕ್ಲಬ್ ಎಂಬ ಸಂಘವನ್ನು ಮಾಡಿಕೊಂಡಿದ್ದಾರೆ. ಕಲ್ಕತ್ತಾ ಪಟ್ಟಣದ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮಿ॥ ಡಿ. ಎಚ್. ಕಿಂಗ್ಸ್‌ಫರ್ಡ್ ಯವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಬದಲಾಯಿಸಿಕೊಂಡು ಮುಜಫರ್‌ಪುರಕ್ಕೆ ಸಂಸಾರ ಸಹಿತ ಹೋದರು. ಇವರೂ ಇವರ ಪತ್ನಿಯೂ ಕುಮಾರ್ತೆಯೂ ಅಲ್ಲಿನ ಕ್ಲಬ್ಬಿಗೆ ಕಳೆದ ವಾರ ಹೋದರು. ಇವರು ಮಾತ್ರ ಕ್ಲಬ್ಬಿನಲ್ಲೇ ಉಳಿಕೊಂಡು, ಹೆಂಡತಿಯನ್ನೂ ಮಗಳನ್ನೂ ಗಾಡಿಯಲ್ಲಿ ಕೂರಿಸಿ ಮನೆಗೆ ಕಳುಹಿಸಿದರು. ದಾರಿಯಲ್ಲಿ ಕಾದಿದ್ದ ದುಷ್ಟರ್ಯಾರೋ ಬಾಂಬ್ ಎಂಬ ಮದ್ದಿನ ಗುಂಡನ್ನು ಆ ಗಾಡಿಯೊಳಕ್ಕೆ ಎಸೆದರು. ಮಿ॥ ಕಿಂಗ್ಸ್‌ಫರ್ಡ್ ಯವರನ್ನು ಕೊಲ್ಲಬೇಕೆಂಬುವುದೇ ಅವರ ಉದ್ದೇಶವೆಂದು ತೋರುತ್ತದೆ. ಆದರೆ ಅವರು ಆ ಗಾಡಿಯಲ್ಲಿ ಇರಲಿಲ್ಲ. ಅವರ ಮಗಳೂ ಕುದುರೆಯ ಆಳೂ ಸತ್ತು ಹೋದರು. ಅವರ ಹೆಂಡತಿಗೆ ಗಾಯಗಳಾಗಿವೆ. ಆ ಗುಂಡು ಎಸೆದವರು ಇಂಥವರೆಂದು ತಿಳಿಸಿದವರಿಗೆ ೫,೦೦೦ ರೂಪಾಯಿ ಬಹುಮಾನ ಕೊಡುತ್ತೇವೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ. ಮಿ॥ ಕಿಂಗ್ಸ್‌ಫರ್ಡರು ಕಲ್ಕತ್ತೆಯಿಂದ ಹೊರಟಾಗಲೇ ಇಬ್ಬರು ಬಂಗಾಳಿಗಳು ಅವರನ್ನು ಕೊಲ್ಲುವುದಕ್ಕಾಗಿ ಅವರ ಬೆನ್ನುಹತ್ತಿ ಹೋದರೆಂದು ಅವರಿಗೆ ಮೊದಲೇ ಎಚ್ಚರಿಕೆ ಕೊಡಲ್ಪಟ್ಟಿದ್ದ ಹಾಗೂ, ಪೋಲೀಸಿನವರು ೧೯ ವಯಸ್ಸಿನ ಇಬ್ಬರು ಬಂಗಾಳಿಗಳನ್ನು ತಲಾಷ್ ಮಾಡುತ್ತಿದ್ದಾರೆಂತಲೂ ತಂತೀ ವರ್ತಮಾನ ಬಂದಿದೆ. ಮುಜಫರ್‌ಪುರದಲ್ಲಿ ಮದ್ದಿನ ಗುಂಡನ್ನು ಎಸೆದವನೆಂದು ಹೇಳಿ ಒಬ್ಬನನ್ನು ಹಿಡಿದಿದ್ದಾರೆ. ಅಷ್ಟಲ್ಲದೆ ಕಲ್ಕತ್ತೆಯಲ್ಲಿ ಒಂದು ಕಡೆ ಮದ್ದಿನ ಗುಂಡುಗಳ ತಯಾರಿಗಾಗಿ ಇಟ್ಟಿದ್ದ ಕೆಲವು ಸರಕುಗಳು ಸಿಕ್ಕಿರುವುದಾಗಿಯೂ ಆ ಸಂಬಂಧದಲ್ಲಿ ಕೆಲವರನ್ನು ದಸ್ತಗಿರಿ ಮಾಡಿರುವುದಾಗಿಯೂ ಇನ್ನೊಂದು ತಂತೀ ವರ್ತಮಾನವು ತಿಳಿಸುತ್ತದೆ.

ವಿದೇಶ ವರ್ತಮಾನಗಳು.

ಕಳೆದ ವಾರ ಮಾತ್ಸುಷಿಮಾ ಎಂಬೊಂದು ಜಪಾನ್ ಜಹಜು ಮುಳುಗಿಹೋಯಿತು. ಅದರಲ್ಲಿದ್ದ ೨೦೩ ಜನರು ಸಮುದ್ರದಪಾಲಾದರು.

•••

ಜಪಾನ್ ರಾಜ್ಯದ ರಾಜಧಾನಿಯಾದ ಟೋಕಿಯೋ ಪಟ್ಟಣದಲ್ಲಿ ಒಂದು ದೊಡ್ಡ ವಿದ್ಯಾಶಾಲೆಯಲ್ಲಿ ಬಾಲಕರಿಗೆ ಹಿಂದುಸ್ಥಾನಿ ಭಾಷೆಯನ್ನು ಕಲಿಸಬೇಕೆಂದು ಹುಕುಂ ಆಗಿದೆ.

ನ್ಯೂಯಾರ್ಕ್ ನಗರದಲ್ಲಿ ಮಕ್ಕಳು ಓದುವಂಥಾ ಪಾಠಶಾಲೆಗಳಿಗೆ ಬೆಂಕಿ ಬೀಳದಂತೆ ಏರ್ಪಾಡು ಮಾಡಬೇಕೆಂದು ಸರ್ಕಾರದವರು ೩೬ ಲಕ್ಷ ರೂಪಾಯನ್ನು ಸ್ಯಾಂಕ್ಷನ್ ಮಾಡಿದಾರೆ.

•••

ವಿಲಾಯತಿಯಲ್ಲಿ ಪ್ರಕಟವಾಗುವ ಕೆಲವು ವರ್ತಮಾನ ಪತ್ರಿಕೆಗಳು ಹಿಂದೂಸ್ಥಾನದ ಕ್ಷಾಮವಿಚಾರವನ್ನು ಕುರಿತು ಬರೆದು, ಪ್ರಜೆಗಳಿಂದ ಧರ್ಮಫಂಡನ್ನು ಕೂಡಿಸಲಾರಂಭಿಸಿರುತ್ತವೆ.

•••

ಡಿಲಾಗ್ರಾಂಜ್ ಎಂಬ ಕಾರೀಗಾರನು ಅಂತರಿಕ್ಷದಲ್ಲಿ ಹಾರುವಂಥಾ ವಿಮಾನವನ್ನು ತಯಾರುಮಾಡಿರುತ್ತಾನೆ. ಇದನ್ನು ಹಾರಿಸಿ ಪರೀಕ್ಷೆ ಮಾಡಿದಾಗ ಅದು ೯ ನಿಮಿಷದಲ್ಲಿ ೬ ಮೈಲಿ ದೂರ ಸುತ್ತಿ ಬಂದಿತು.

•••

ಕ್ಯಾನಡಾ ಎಂಬ ಇಂಗ್ಲಿಷ್ ಸಾಮ್ರಾಜ್ಯಕ್ಕೆ ಸೇರಿದ ವಿಕ್ಟೋರಿಯಾ ಎಂಬ ಡಿಸ್ಟ್ರಿಕ್ಟಿನಲ್ಲಿ ರೈಲ್ವೆ ಅನಾಹುತ ನಡೆಯಿತೆಂದು ಕಳೆದ ವಾರ ತಿಳಿಸಿದೆವಷ್ಟೆ. ಈ ಅನಾಹುತದಿಂದ ಒಟ್ಟು ೩೬೦ ಜನರು ಪ್ರಾಣ ಕಳೆದುಕೊಂಡರೆಂದು ಈಚೆಗೆ ತಂತೀ ವರ್ತಮಾನ ಬಂದಿದೆ.

•••

ಫ್ರಾನ್ಸ್ ಸಂಸ್ಥಾನದಲ್ಲಿ ನಾಟಕಗಳನ್ನಾಡುವ ಕಂಪನಿಗಳು ತಮ್ಮ ಟಿಕೆಟ್ಟುವಸೂಲಿಯಲ್ಲಿ ಶೇಕಡಾ ಹತ್ತರಷ್ಟು ಕೂಡಿಸಿಟ್ಟು, ಅನ್ನವಿಲ್ಲದ ಬಡಬಗ್ಗರನ್ನು ಸಾಕುವ ಫಂಡಿಗೆ ಕಳುಹಿಸುತ್ತಾರೆ. ಹೀಗೆ ಕೊಡುವುದು ವರುಷಕ್ಕೆ ೬೫೧ ಲಕ್ಷ ರೂಪಾಯಿ ಆಗುವುದೆಂದು ತಿಳಿದು ಬಂದಿದೆ.

•••

ವಿಲಾಯತಿಯಲ್ಲಿ ಅನೇಕ ಭಾಗಗಳೊಳಗೆ ಕಳೆದ ವಾರ ಅಪಾರವಾದ ಮಳೆಗಳು ಸುರಿದು ನಾನಾವಿಧವಾದ ನಷ್ಟಗಳುಂಟಾಗಿರುತ್ತವೆ. ಥೇಮ್ಸ್ ನದಿಯ ಉತ್ತರ ಪಾರ್ಶ್ವದಲ್ಲಿ ವಿಶೇಷವಾಗಿ ಕೆಲವು ಗ್ರಾಮಗಳೊಳಗೆ ನೀರು ನಿಂತು, ಅನೇಕ ಮನೆಮಠಗಳನ್ನು ಕೆಡವಿಬಿಟ್ಟಿತೆಂದು ತಂತೀ ವರ್ತಮಾನ ಬಂದಿದೆ.

•••

ಅಮೇರಿಕದಲ್ಲಿ ಇಲ್ಲಿನಾಯಿಸ್ ಡಿಸ್ಟ್ರಿಕ್ಟಿಗೆ ಸೇರಿದ ವರ್ನಾನ್ ಪಟ್ಟಣದಲ್ಲಿ ಮಿ॥ ಫ್ರಾನ್ಸಿಸ್ ಬನಿಯರ್ ಎಂಬಾತನು ೧೦೭ ವರುಷ ಬದುಕಿದ್ದು ಕೆಲವು ದಿನಗಳ ಹಿಂದೆ ಕಾಲವಾದನು. ಈತನ ಸಂಸಾರದಲ್ಲಿ ೨೫ ಜನರಿರುತ್ತಾರೆ. ಅತನ ತಂದೆಯು ೧೦೬ ವರುಷವೂ, ತಾತನು ೧೧೦ ವರುಷವೂ ಬದುಕಿದ್ದರೆಂದು ತಿಳಿಯುವುದು.

•••

ಜಪಾನ್ ರಾಜ್ಯಕ್ಕೆ ಸೇರಿದ ಟಯೋಡಾ ಎಂಬ ಬ್ಯಾಂಕಿನಲ್ಲಿ ಹಣ ಹಾಕಿರುವ ಷೇರುದಾರರ ಪೈಕಿ ೧೩,೦೦೦ ಜನರು ತಮ್ಮ ಹಣವನ್ನು ವಾಪಸು ಪಡೆಯುವುದಕ್ಕಾಗದೆ ಹೋದದ್ದನ್ನು ನೋಡಿ, ಆ ಬ್ಯಾಂಕಿನ ಪ್ರಸಿಡೆಂಟಾಗಿರುವ ವೈಕೌಂಟ್ ಹೋರಿ ಎಂಬಾತನಿಗೆ ಕಾಗದ ಬರೆದು, ಕೂಡಲೇ ವಿಷ ಕುಡಿದು ಪ್ರಾಣ ಬಿಡಬೇಕೆಂದು ತಿಳಿಸಿದಾರೆ.

•••

ಅಮೇರಿಕದಲ್ಲಿ ಪ್ರೌಢ ವಿದ್ಯಾಭ್ಯಾಸದ ಪ್ರೋತ್ಸಾಹಕ್ಕೆ ಫಂಡಿನಲ್ಲಿ ನಾಲ್ಕೂವರೆ ಕೋಟಿ ರೂಪಾಯಿ ಇದ್ದದ್ದು ಸಾಲದೆಂದು ತಿಳಿದು ಬಂದದ್ದರಿಂದ ಪ್ರಸಿದ್ಧ ಕೋಟ್ಯಾಧೀಶ್ವರನೂ ಮಹಾ ಧರ್ಮಿಷ್ಠನೂ ಆದ ಮಿ॥ ಅಂಡ್ರು ಕಾರ್ನೆಗಿ ಎಂಬಾತನು ಆ ಫಂಡಿಗೆ ಇನ್ನೂ ಒಂದೂವರೆ ಕೋಟಿ ರೂಪಾಯಿ ಧರ್ಮ ಮಾಡಿ, ಈ ವಿದ್ಯಾಭ್ಯಾಸವು ಚಿರಕಾಲ ಶಾಶ್ವತವಾಗಿ ನಡೆಯಬೇಕೆಂದು ತಿಳಿಸಿರುತ್ತಾನೆ.

•••

ಮೆಡಿಟರೇನಿಯನ್ ಸಮುದ್ರದಲ್ಲಿರುವ ಸಿಸಿಲೀ ದ್ವೀಪದೊಳಗೆ ಎಟ್ನಾ ಎಂಬ ಭಯಂಕರವಾದ ಅಗ್ನಿ ಪರ್ವತವಿರುತ್ತದೆ. ಇದುವರೆಗೆ ಈ ಪರ್ವತದಲ್ಲಿ ಎಲ್ಲಾ ಸುರಕ್ಷಿತವಾಗಿತ್ತು. ಈಗ ಆ ಪರ್ವತದಲ್ಲಿ ಇನ್ನೊಂದು ಬಾಯಿ ಹುಟ್ಟಿ, ಈ ಬಾಯಿನಿಂದ ಮಂದವಾದ ಹೊಗೆ ಹೊರಡುತ್ತಿದೆ. ಪರ್ವತದ ತಪ್ಪಲಲ್ಲಿರುವಂಥಾ ಗ್ರಾಮಗಳಿಗೆ ಬೂದಿಯು ಹಾರಿಬಂದು ಸುರಿಯುತ್ತಿದೆ ಎಂದು ತಂತೀ ವರ್ತಮಾನ ಬಂದಿದೆ.

•••

ಬೆಲ್ಜಿಯಂ ರಾಜ್ಯಕ್ಕೆ ಸೇರಿದ ಟುಬಿಜೇ ಎಂಬ ಊರಿನಲ್ಲಿ ಕೃತಕ ರೇಷ್ಮೆಯನ್ನು ತಯಾರುಮಾಡುವುದಕ್ಕೆ ೧೩ ಲಕ್ಷ ದ್ರವ್ಯ ಮೂಲಧನವುಳ್ಳ ಒಂದು ಭಾರೀ ಕಾರ್ಖಾನೆ ಸ್ಥಾಪನೆಯಾಗಿ ಕೆಲಸ ನಡೆಯುತ್ತಿದೆ. ಕಳೆದ ವರುಷ ಈ ಕಾರ್ಖಾನೆಯೊಳಗೆ ೨೦ ಲಕ್ಷ ದ್ರವ್ಯದ ಕೃತಕ ರೇಷ್ಮೆಯನ್ನು ತಯಾರುಮಾಡಿ ಬಿಕರಿಮಾಡಿರುತ್ತಾರೆಂದೂ, ಇದರಿಂದ ಈ ಕಸಬು ತುಂಬಾ ಲಾಭಕರವಾಗಿರುತ್ತದೆಂದೂ ಆ ಕಂಪನಿಯ ಡೈರೆಕ್ಟರುಗಳು ತಿಳಿಸಿರುತ್ತಾರೆ

•••

ವಿಲಾಯತಿಗೆ ಸೇರಿದ ಬೋರ್ನ್‌ಮೌತ್ ಎಂಬ ಊರಿನಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಓಡುತ್ತಿದ್ದ ಒಂದು ಗಾಡಿಯು ರಸ್ತೆಯನ್ನು ಬಿಟ್ಟು, ಎತ್ತರವಾದ ಸ್ಥಳದಿಂದ ಕೆಳಕ್ಕೆ ಬಿದ್ದಿತು. ಅದರಲ್ಲಿದ್ದ ಪ್ರಯಾಣಸ್ಥರ ಪೈಕಿ ಕೆಲವರು ಅದು ಬಿದ್ದ ರಭಸಕ್ಕೆ ಎಸೆಯಲ್ಪಟ್ಟು, ಅವರ ಬಟ್ಟೆಗಳು ಸಮೀಪದಲ್ಲಿದ್ದ ಮರಗಳ ರೆಂಬೆಗಳಿಗೆ ಸಿಕ್ಕಿಕೊಂಡದ್ದರಿಂದ ಅವರು ನೇತಾಡುತ್ತಾ ಬದುಕಿಕೊಂಡರು. ಇದಲ್ಲದೆ ಏಳು ಮಂದಿ ಪ್ರಯಾಣಿಕರು ಹತರಾದರು; ಎಂಟು ಜನರಿಗೆ ಗಾಯಗಳಾದವು.

•••

ಚೀಣಾ ರಾಜ್ಯಕ್ಕೆ ಸೇರಿದ ಕಯಾಂಗ್ಸಿ ಅಧಿಪತ್ಯದಲ್ಲಿ ಪ್ರಜೆಗಳು ದಂಗೆಯೆದ್ದು ಗವರ್ನ್‌ಮೆಂಟ್ ಶಿಪಾಯಿಗಳ ಮೇಲೆ ಕಾದಾಡಿದಾಗ ಪ್ರಜೆಗಳ ಕಡೆ ಬಹಳ ಮಂದಿ ಸ್ತ್ರೀಯರೂ ಸೇರಿಕೊಂಡಿದ್ದರೆಂದು ತಿಳಿಯುವುದು. ಶಿಪಾಯಿಗಳು ದಂಗೆಕೋರರನ್ನು ಓಡಿಸಿ ಕಡೆಯಲ್ಲಿ ಸಿಕ್ಕಿದವರನ್ನು ಕೈಸೆರೆ ಹಿಡಿದರು. ಆ ಪೈಕಿ ಇಬ್ಬರು ಹೆಂಗಸರನ್ನು ದರ್ಯಾಪ್ತು ಮಾಡಿದಾಗ ಅವರು ದಂಗೆ ಮಾಡಿದವರೆಂದು ಒಪ್ಪಿಕೊಂ

ಪಡ್ಡರಿಂದ ಸರ್ಕಾರದವರು ೧೨ಳ ಕೊಟ್ಟು ಅವರ ತಲೆ ಕಡಿಸಿ ಹಾಕಿದರು.

* * *

ಟರ್ಕಿಗೂ ಪರ್ಷಿಯಾಗೂ ನಡುವೆ ಇರುವ ಉರೂಮಿಯಾ, ವಾನ್, ಮೊಸೂಲ್ ಎಂಬೀ ಸ್ಥಳಗಳಲ್ಲಿ ಕುರ್ದರೆಂಬ ಜನರು ಪರ್ಷಿಯಾ ರಾಜ್ಯದ ೩,೦೦೦ ಹೆಂಗಸರು ಮಕ್ಕಳುಗಳನ್ನು ನಾನಾ ತರದ ಕ್ರೂರ ಹಿಂಸೆಗಳಿಗೆ ಗುರಿಮಾಡಿದ್ದಾರೆ. ಈ ವರ್ತಮಾನವನ್ನು ಕೇಳಿ ಪರ್ಷಿಯಾ ಸರ್ಕಾರದವರು ೧೦,೦೦೦ ಸೈನ್ಯವನ್ನು ಜತೆಮಾಡಿ, ಆ ಕುರ್ದರ ಹಾವಳಿಯನ್ನು ಅಡಗಿಸುವ ಪ್ರಯತ್ನ ನಡಿಸಿದಾರೆ. ಟರ್ಕಿ ರಾಜ್ಯದವರು ಈ ಭಾಗದಲ್ಲಿ ಪರ್ಷಿಯಾದವರಿಗೆ ಯಾವ ಅಡಚಣೆಯನ್ನೂ ಕಲ್ಪಿಸುವುದಿಲ್ಲವೆಂದು ತಿಳಿಸಿದರು.

* * *

ಅಮೇರಿಕ ಸಂಸ್ಥಾನಗಳ ಪ್ರಸಿಡೆಂಟ್ ರೂಸ್‌ವೆಲ್ಟ್ ಯವರು ಕೋಟ್ಯಾಧೀಶ್ವರರ ವಿಷಯದಲ್ಲಿ—ಅವರನ್ನು ಎಲ್ಲರೂ ಹಗೆಮಾಡುತ್ತಾರೆ. ಅವರ ಮುಖವು ಕಠಿಣವಾಗಿಯೂ, ಅವರ ದೇಹವು ಮೆಂತವಾಗಿಯೂ, ಅವರ ಗಂಡುಮಕ್ಕಳು ಮಬ್ಬುಗಳಾಗಿಯೂ ಹೆಣ್ಣು ಮಕ್ಕಳು ಪರದೇಶಗಳಲ್ಲಿ ದಾಸೀರುಗಳಾಗಿಯೂ, ಅವರ ಸಂತೋಷಕಾರ್ಯಗಳು ಸಪ್ಪೆಯಾಗಿಯೂ ವಿಪರೀತ ಮಂದು ವೆಚ್ಚವುಳ್ಳದ್ದಾಗಿಯೂ, ಅವರ ಯಥಾರ್ಥವಾದ ಸಂತೋಷವು ಐಶ್ವರ್ಯವನ್ನು ಕೂಡಿಹಾಕುವುದಾಗಿಯೂ, ಇತರರನ್ನು ಕನಿಕರವಿಲ್ಲದೆ ನಷ್ಟಕಷ್ಟಗಳಿಗೆ ಗುರಿಮಾಡುವುದಾಗಿಯೂ ಇರುತ್ತದೆಂದು ಹೇಳಿದರು.

* * *

ವಿಲಾಯತಿಯ ಮಹಾರಾಜ್ಞೀ ಅಲೆಕ್ಸಾಂಡ್ರಾ ರಾಣಿಯವರ ಹೆಸರಿನ ಮೇಲೆ ಲಂಡನ್ ಪಟ್ಟಣದಲ್ಲಿ ಮಕ್ಕಳ ಆಸ್ಪತ್ರೆಯೊಂದಿರುವುದು. ಕಳೆದ ತಿಂಗಳ ಪ್ರಾರಂಭದಲ್ಲಿ ಮಹಾರಾಜ್ಞೀಯವರು ತಮ್ಮ ಸಹೋದರಿಯರ ಕೂಡ ಆ ಆಸ್ಪತ್ರೆಗೆ ದಯಮಾಡಿ, ಅಲ್ಲಿ ಚಿಕಿತ್ಸೆ ಹೊಂದುತ್ತಿರುವ ಮಕ್ಕಳನ್ನೆಲ್ಲಾ ಪರೀಕ್ಷಿಸಿ, ಪ್ರತಿ ಒಂದು ಮಗುವನ್ನೂ ಮಾತನಾಡಿಸಿ, ಅದರದರ ಯೋಗಕ್ಷೇಮವನ್ನು ವಿಚಾರಿಸಿ, ಪ್ರತಿ ಮಗುವಿಗೂ ಒಂದು ಪೆಟ್ಟಿಗೆಯ ಸಿಹಿಪದಾರ್ಥಗಳನ್ನು ಬಹುಮಾನವಾಗಿ ತಾವೇ ಹಂಚಿ ಕೊಟ್ಟರು. ರೋಗಿಗಳಲ್ಲಿ ನಾಲ್ಕಾರು ಚಿಕ್ಕ ಮಕ್ಕಳೂ ಇದ್ದದ್ದರಿಂದ ಮಹಾರಾಜ್ಞೀಯವರು ಆ ಮಕ್ಕಳಿಗೆ ತಿಂಡಿಯನ್ನು ತಮ್ಮ ಕೈಯಿಂದಲೇ ತಿನ್ನಿಸಿದರು. ಇಷ್ಟೆಲ್ಲಾ ಆಗುವಾಗ್ಗೆ ಒಂದು ಗಂಟೆ ಪೂರಾ ಆಯಿತು. ಕಡೆಯಲ್ಲಿ ಆಸ್ಪತ್ರೆಯವರು ಒಪ್ಪಿಸಿದ ಒಂದು ಲೋಟಾ ಟೀ (ಚಾನೀರು) ತೆಗೆದುಕೊಂಡು, ತುಂಬಾ ಸಂತೋಷಪಟ್ಟು ತೆರಳಿದರು.

* * *

ಜರ್ಮನಿಯ ಬಂದಿರುವ «ಹೆರಲ್ಡ್» ಎಂಬ ಪತ್ರಿಕೆಯಲ್ಲಿ ಮಾರ್ಚಿ ತಾ ೧೧ ರಲ್ಲಿ ಮಂಜುಗಡ್ಡೆಗಳ ಮಳೆಯು ಪ್ರಾರಂಭವಾದದ್ದು ಒಂದು ವಾರದ ತನಕ ಬಿಡಲೇ ಇಲ್ಲವೆಂದೂ ಇದರಿಂದುಂಟಾದ ಕಷ್ಟನಷ್ಟಗಳು ಬಾರವಿಲ್ಲದೆ ಹೋಗಿವೆ ಎಂದು ಬರೆದಿರುತ್ತದೆ. ಈ ಮಂಜುಗಡ್ಡೆಗಳ ಪ್ರವಾಹದಿಂದ ಉತ್ತರ ಏಷಿಯಲ್ಲಿರುವಂಥಾ ದ್ವೀಪಗಳು ಮುಳುಗಿ ಹೋದವು. ರೈಲ್ ರಸ್ತೆಗಳ ಮೇಲೆಲ್ಲಾ ಉದಕ್ಕೂ ೩೦ ಅಡಿ ಪ್ರಮಾಣದ ಮಂಜುಗಡ್ಡೆಗಳು ಸುರಿದು ನಿಂತವು. ರೈತರೂ, ಕುಂಬಾರರೂ, ಗಾಡಿಕೆಲಸಗಾರರೂ ಬಹಳ ಭಯಂಕರವಾಗಿ ನಷ್ಟಪಟ್ಟದ್ದಲ್ಲದೆ ಹೇಳಲಾರದ ಕಷ್ಟವನ್ನನುಭವಿಸಿದರು. ಅವರ ಮನೆಗಳೆಲ್ಲಾ ಮಂಜುಗಡ್ಡೆಗಳಲ್ಲಿ ಮುಳುಗಿ ಮುರಿದುಬಿದ್ದು ನೆಲಸಮವಾದವು. ಎಷ್ಟು ಮಂದಿ ಪ್ರಾಣ ಕಳೆದುಕೊಂಡರೋ ಇನ್ನೂ ಗೊತ್ತುಮಾಡಿಲ್ಲ. ಸರ್ಕಾರದವರು ರೈಲ್ ರಸ್ತೆಗಳನ್ನು ಬಿಡಿಸುವುದಕ್ಕೂ ಗ್ರಾಮಾಂತರಗಳಲ್ಲಿ ಪ್ರಜೆಗಳಿಗೆ ಸಹಾಯ ಮಾಡುವುದಕ್ಕೂ ಅನೇಕ ರೆಜಿಮೆಂಟುಗಳನ್ನು ಕಳುಹಿಸಿಕೊಟ್ಟಿದ್ದಾರೆ.

ಮೈಸೂರು ಪರಸ್ಪರ ಸಹಾಯಕ ಸಂಘವು.

ವಾರ್ಷಿಕ ರಿಪೋರ್ಟು.

ಕಳೆದ ವಾರ ಮೈಸೂರು ಪಟ್ಟಣದ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ, ಲಿಮಿಟೆಡ್, ಎಂಬ ಪರಸ್ಪರ ಸಹಾಯಕ ಸಂಘದ ಜನರಲ್ ಮೀಟಿಂಗು ನಡೆಯಿತು. ಆ ಸಂಘದಲ್ಲಿ ನಡೆದ ಕಾರ್ಯಗಳು, ಅದರ ಜಮಾಖರ್ಚು, ಅದರ ಸ್ಥಿತಿಗತಿ, ಷೇರುದಾರರಿಗೆ ಕೊಡಲ್ಪಡುವ ಬಡ್ಡಿ ಈ ಮೊದಲಾದ ವಿಷಯಗಳನ್ನು ಕುರಿತ ವಾರ್ಷಿಕ ರಿಪೋರ್ಟನ್ನು ಆ ಸೆಕ್ರೆಟರಿಯವರು ಮೆಂಬರುಗಳಿಗೆ ಓದಿ ತಿಳಿಸಿದರು. ಈ ರಿಪೋರ್ಟಿನಲ್ಲಿ ಕಂಡ ಮುಖ್ಯ ಭಾಗಗಳನ್ನು ಇಲ್ಲಿ ಪ್ರಕಟಿಸುತ್ತೇವೆ.

ಷೇರು, ಮೆಂಬರು, ಆಯವ್ಯಯಾದಿಗಳು.

ಹಿಂದಣ ಸಾಲಿನಲ್ಲಿ ಇದ್ದ ಮೆಂಬರುಗಳ ಸಂಖ್ಯೆ ೨೦೪ ಮಾರಿ ಹೋಗಿದ್ದ ಷೇರ್ ಸಂಖ್ಯೆ ೩,೩೧೯. ಷೇರ್ ಬಾಬತು ಕೇಳುದಿದ್ದ ಹಣ ರೂ ೬,೭೪೭-೪-೦. ಈ ಸಾಲಿನಲ್ಲಿರುವ ಮೆಂಬರುಗಳ ಸಂಖ್ಯೆ ೨೯೪. ಮಾರಿರುವ ಒಟ್ಟು ಷೇರ್ ಸಂಖ್ಯೆ ೪,೦೧೭. ಸಂದಾಯವಾದ ಒಟ್ಟು ಷೇರ್ ಮೊಬಲಗು ರೂ ೧೫,೯೪೮-೪-೦ ಸಂಘಕ್ಕೆ ಸೇರಿದವರಲ್ಲಿ ಈ ಸಾಲು ಆರು ಮಂದಿ ಬಿಟ್ಟುಬಿಟ್ಟರು. ಐದು ಮಂದಿ ದೈವಾಧೀನರಾದರು. ಈ ಪೈಕಿ ಸಂಘದ ಏಳಿಗೆಯಲ್ಲಿ ಕೇವಲ ಉತ್ಸಾಹಿಗಳಾಗಿದ್ದ ಮೆ॥ ಕಸ್ತೂರಿ ರಂಗೈಯಂಗಾರ್ಯ ಒಬ್ಬರು. ಇವರುಗಳ ವಿಯೋಗಕ್ಕಾಗಿ ತುಂಬಾ ವಿಷಾದಿಸುವೆವು. ಸಂಘವನ್ನು ಬಿಟ್ಟವರಿಗೆ ಸಲ್ಲಬೇಕಾಗಿದ್ದ ೬೭ ರೂ. ಈ ಸಂವತ್ಸರ ವಾಪಸು ಕೊಡಲಾಯಿತು. ಮೆಂಬರುಗಳಿಂದ ಸಂದಾಯವಾದ ಒಟ್ಟು ರೂ. ೧೫,೯೪೮-೪-೦ ನಲ್ಲಿ ೬೭ ರೂ ಷೇರ್ ವಾಪಸ್ ಹೋಗಿ ರೂ. ೧೫,೮೮೧-೪-೦ ಉಳಿಯಿತು. ಬಿಕರಿಗೆ ಸಿದ್ಧವಾಗಿರುವ ಸಾಮಾನಿನ ಮೇಲೆ ರೂ. ೯,೦೪೪-೯-೧೧ ಪೈ, ಬೀರು, ಮೇಜು, ಮುಂತಾದ ಸಾಮಾನುಗಳ ಮೇಲೆ ರೂ. ೧೫—೯—೭ ಪೈ, ಸ್ಥಿರಸ್ವತ್ತಿನ ಆಧಾರದ ಮೇಲೆ ೩,೨೦೪ ರೂಪಾಯಿಯೂ, ಕೈಸಾಲ ೨ ೬೫೯ ರೂಪಾಯಿಯೂ, ಸಾಮಾನು ತರಿಸಲು ಮುಂಗಡವಾಗಿ ಕೊಟ್ಟಿರುವುದು ರೂ. ೧೫೪೮—೯—೦ ಅಣೆಯೂ, ನಗದು ಹಾಜರಿ ರೂ. ೩,೧೩೪—೧—೨—೯ ಪೈಗಳೂ, ಒಟ್ಟು ರೂ. ೧೯,೬೯೦—೯—೩ ಪೈ ಆಸ್ತಿಯಾಗಿರುವುದು. ಇದಕ್ಕೆ ಸೊಸೈಟಿಯು ಸಿಬ್ಬಂದಿ ಖರ್ಚು, ಬಾಡಿಗೆ, ಬಿಕರಿಗೆ ಪದಾರ್ಥಗಳನ್ನು ಕಳುಹಿಸಿಕೊಟ್ಟ ಸಾಹುಕಾರರಿಗೆ ಕೊಡಬೇಕಾದುದು ಹಾಗಾ ಬಾಕಿ ಒಟ್ಟು ಆದಾಯ ರೂ ೧,೩೦೪—೦—೨ ಪೈ ಉಳಿಯುವುದು. ಈ ಲಾಭದಲ್ಲಿ ಷೇರ್ ಹೋಲ್ಡರುಗಳಿಗೆ ಶೇಕಡಾ ವರುಷಕ್ಕೆ ಆರೂ ಕಾಲು ರೂಪಾಯಿಯಂತೆ ಬಡ್ಡಿಯೂ, ಪದಾರ್ಥಗಳನ್ನು ಸೊಸೈಟಿಯಲ್ಲಿ ಕೊಂಡುಕೊಂಡ ಮೆಂಬರುಗಳಿಗೆ ಪ್ರತಿ ರೂಪಾಯಿಗೂ ಅರ್ಧ ಆಣೆಯಂತೆಯೂ, ರಿಸರ್ವ್ ಫಂಡಿಗೆ ೪೨ ರೂಪಾಯಿಯೂ ವಿನಿಯೋಗ ಮಾಡಬೇಕೆಂದು ಮ್ಯಾನೇಜಿಂಗ್ ಕಮಿಟಿಯವರು ನಿಶ್ಚಯಿಸಿರುವರು. ಇದಲ್ಲದೆ ಸೊಸೈಟಿಯಲ್ಲಿ ಸಿಬ್ಬಂದಿಯವರು ಸ್ವಾರ್ಥಯಿಂದಲೂ ರುಜುಮಾರ್ಗದಿಂದಲೂ ಕೆಲಸಮಾಡಿದ್ದಕ್ಕಾಗಿ ಅವರಿಗೆ ಮೆಂಬರಲ್ಲದವರು ಪದಾರ್ಥಗಳನ್ನು ಕೊಂಡುಕೊಂಡ ಮೊಬಲಗಿನ ಮೇಲೆ ಸೊಸೈಟಿಗೆ ಬರುವ ನಫೆಯಲ್ಲಿ ಶೇಕಡಾ ೭೫ ರಂತೆ ಬಹುಮಾನ ಕೊಡಬೇಕೆಂದೂ ನಿಶ್ಚಯಿಸಿರುವರು.

ಮ್ಯಾನೇಜಿಂಗ್ ಕಮಿಟಿ ಮುಂತಾದದ್ದು.

ಮ್ಯಾನೇಜಿಂಗ್ ಕಮಿಟಿಯವರು ಈ ಸಾಲಿನಲ್ಲಿ ಒಟ್ಟು ೨೪ ಸಾರಿ ಸೇರಿದ್ದರು. ಪ್ಲೇಗಿನ ಹಾವಳಿಯಿಂದ ಸೊಸೈಟಿಯ ವ್ಯಾಪಾರವು ನಿಂತ ಕಾರಣ ಸೊಸೈಟಿಗೆ ಇನ್ನೂ ಹೆಚ್ಚಾದ ಆದಾಯ ಬರುತ್ತಿತ್ತೆಂದೇ ಹೇಳಬೇಕು. ಆದಾಗ್ಯೂ ವ್ಯಾಪಾರವು, ಲೇವಾದೇವಿಯೂ ಇಷ್ಟುಮಟ್ಟಿಗೆ ಚೆನ್ನಾಗಿಯೇ ಉಂಟು. ಒಂಬತ್ತು ತಿಂಗಳು ನಡೆದುದರಿಂದ ಹೋದ ವರ್ಷದಂತೆಯೇ ಈ ವರ್ಷವೂ ನಫೆಯನ್ನು ತೇಲಿಸಲು ಅವಕಾಶವಾಯಿತು. ಇತಃಪರ ವರ್ಷಕ್ಕೊಂದಾವರ್ತಿ ಕ್ರಮಪ್ರಕಾರ ಲೆಕ್ಕ ನೋಡಿ, ನಫೆಯನ್ನು ಹಂಚುವ ಏರ್ಪಾಡು ಇರಬೇಕೆಂದು ಸೂಚಿಸಲಾಗಿದೆ. ಸೊಸೈಟಿಗೆ ಆಡಿಟರಿಗಳು ಆಸ್ತಿಯ ಬೆಲೆಯನ್ನು ನಿಶ್ಚಯಿಸುವುದರಲ್ಲಿ ನಿಸ್ಪೃಹರಾಗಿ ಶ್ರಮಪಟ್ಟ ಮೆಂಬರುಗಳನ್ನು ಸೊಸೈಟಿಯು ವಂದಿಸುವುದು.

ಹೊಸ ಏರ್ಪಾಡುಗಳ ಅನುಭವವೂ ಯೋಚನೆಗಳೂ.

ಈ ಸಂಘವು ಬಡ ಜನರಿಗೂ, ರೈತಾಪಿ ಜನರಿಗೂ, ಕಸುಬುದಾರರಿಗೂ ಎಷ್ಟರ ಮಟ್ಟಿಗೆ ಉಪಯೋಗವಾಗುವುದು ಎಂಬ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಕೊಡುವುದಕ್ಕೆ ಈ ಸಂಘದ ಮೂರು ವರ್ಷದ ಅನುಭವವು ಹಿಂದಣ ಸಂವತ್ಸರದಂತೆ ಈಗಲೂ ಸಾಕಾದಷ್ಟು ಇಲ್ಲವೆನ್ನಬಹುದು. ಸಂಘದಲ್ಲಿ ಶೇಖರವಾದ ಹಣವನ್ನು ಯಾವ ವಿಧದಲ್ಲಿ ಉಪಯೋಗಿಸಿದರೆ ದೇಶದ ಏಳಿಗೆಗೂ ಬಡವರ ಜೀವನಕ್ಕೂ ಕಾರಣವಾಗುವುದೆಂಬುದನ್ನು ನಿಶ್ಚಯಿಸಲು ಹಿಂದಣ ಜನರಲ್ ಮೀಟಿಂಗಿನಲ್ಲಿ ನೇಮಕವಾಗಿದ್ದ ಸ್ಪೆಷಲ್ ಕಮಿಟಿ ಮೆಂಬರುಗಳು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದರಲ್ಲಿ—(೧) ಬೆಂಕಿ ಪೆಟ್ಟಿಗೆಯ ಕಾರ್ಖಾನೆಯನ್ನು ಈ ಊರಲ್ಲಿ ಏರ್ಪಡಿಸುವುದು ಪ್ರಯೋಜನಕಾರಿ ಎಂಬುದು ಒಂದು. ಇದಕ್ಕಾಗಿ ನಾಲ್ಕು ಬಗೆ ಮರದ ದೊಡ್ಡ ದೊಡ್ಡ ತುಂಡುಗಳನ್ನು ಪರೀಕ್ಷಾರ್ಥವಾಗಿ ಬೊಂಬಾಯಿನಲ್ಲಿ ಬೆಂಕಿಕಡ್ಡಿ ಕಾರ್ಖಾನೆಗೆ ಕಳುಹಿಸಲಾಗಿದೆ. ಬರುವ ಮುಂದಿನ ಸಾಲಿನಲ್ಲಿ ಇದರ ವಿಚಾರವು ವ್ಯಕ್ತವಾಗಬಹುದು. (೨) ಅದೇ ಕಮಿಟಿಯ ಮೆ॥ ಅಣ್ಣಯ್ಯ ಪಂಡಿತರು ಇಲ್ಲಿನ ನೇಯಿಗೆಯವರಿಗೆ ಬೇಕಾದ ನೂಲನ್ನು ಸಾಧ್ಯವಾದಷ್ಟು ಸುಲಭವಾಗಿ ತರಿಸಿಕೊಡಬೇಕೆಂದು ಸೂಚಿಸಿದರು. ಇದಕ್ಕಾಗಿ ಬೇರೆ ಬೇರೆ ಸ್ಥಳಗಳಲ್ಲಿ ತಯಾರಾಗುವ ನೂಲು, ಅದರ ಬೆಲೆ ಮುಂತಾದ್ದನ್ನು ಸೊಸೈಟಿಯವರು ವಿಚಾರಿಸಿ, ನಮೂನೆಗಳನ್ನು ತರಿಸಿಟ್ಟಿದಾರೆ. (೩) ಕಬ್ಬಿಣವು ಸಾಮಾನ್ಯವಾಗಿ ಎಲ್ಲಾ ಕಸಬುದಾರರಿಗೂ, ಕೃಷಿವರ್ಗದವರಿಗೂ ಉಪಯುಕ್ತವಾದುದು. ಆದುದರಿಂದ ಕಬ್ಬಿಣದ ಬೆಲೆಯು ಸುಲಭವಾಗಿರುವಾಗ ಹೇರಳವಾಗಿ ಕಬ್ಬಿಣವನ್ನು, ಕಬ್ಬಿಣದ ಸಾಮಾನುಗಳನ್ನು, ಈ ಸೊಸೈಟಿಯವರು ಸೀಮೆಯಿಂದ ತರಿಸಿ, ಅಲ್ಲಲ್ಲಿ ಸ್ಥಾಪಿತವಾಗುತ್ತಿರುವ ಪರಸ್ಪರ ಸಹಾಯಕ ಕೃಷಿವಾಣಿಜ್ಯ ಸಂಘಗಳಿಗೆ ಬಹು ಸುಲಭವಾದ ನಫೆಯನ್ನು ಹಾಕಿ ವಿಕ್ರಯಿಸಬಹುದು. ಅಲ್ಲದೆ ಈಗ ಹೊಸದಾಗಿ ಸ್ಥಾಪಿತವಾಗಿರುವ ಮೈಸೂರು ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಇಂಡಸ್ಟ್ರಿಯಲ್ ಮತ್ತು ಅಗ್ರಿಕಲ್ಚರಲ್ ಅಸೋಸಿಯೇಷನವರು ಸಮ್ಮಿಂದ ಪಡೆದು ತಾಲ್ಲೋಕುಗಳಲ್ಲಿ ಕೋಠಿಯನ್ನು ಇರಿಸಿ ಅಲ್ಪವಾದ ಲಾಭವನ್ನಿಟ್ಟು ರೈತರಿಗೆ ವಿನಿಯೋಗಿಸಬಹುದು. ಮತ್ತು ಆ ಕೋಠಿಗಳಲ್ಲಿ ನಾನಾ ತರದ ಬೀಜಗಳನ್ನು, ಗೊಬ್ಬರಗಳನ್ನೂ ಸಿದ್ಧಪಡಿಸಬಹುದು. ಹೊಸದಾದ ಪೈರನ್ನು ಬೆಳೆಯುವ ರೀತಿಯನ್ನು ಸಹ ತಿಳಿಸಿ ದೇಶದ ಐಶ್ವರ್ಯಾಭಿವೃದ್ಧಿಯನ್ನು ಪ್ರೋತ್ಸಾಹ ಮಾಡಬಹುದು. ಇಂತಹ ಮಾರ್ಗವನ್ನು ಅನುಸರಿಸಿದರೆ ಈ ಸಂಘದಿಂದ ಜನರಿಗೆ ಉಪಯೋಗವಾಗಬಹುದೆಂಬುದನ್ನು ಮಾತ್ರ ಸದ್ಯ ಸೂಚಿಸಬೇಕಾಯಿತು. ಮುಂದಿನ ವರ್ಷ ಈ ವಿಷಯಗಳಲ್ಲಿ ಕೆಲವನ್ನಾದರೂ ಕೈಗೊಂಡು, ಅವುಗಳಿಂದ ಸೊಸೈಟಿಗೂ ಜನರಿಗೂ ಎಷ್ಟರ ಮಟ್ಟಿಗೆ ಪ್ರಯೋಜನವಾಯಿತೆಂಬುದನ್ನು ತಿಳಿಸಲು ಹಾರೈಸುವೆವು.

ನೆಯ್ಗೆಯವರೂ ಚಿಲ್ಲರೆ ವ್ಯಾಪಾರಗಾರರೂ.

ಮ್ಯಾನೇಜಿಂಗ್ ಕಮಿಟಿಯವರು ಕಲ್ಪಿಸಿರುವ ಇನ್ನೊಂದು ಅನುಕೂಲವು ಪರಸ್ಥಳದಿಂದ ಬರತಕ್ಕ ನೆಯ್ಗೆಯವರ ಸರಕುಗಳ ಬಿಕರಿಗೆ ಕೇವಲ ಸಹಾಯ ಕಾರಿಯಾಗಿರುತ್ತದೆ. ಈ ಸೊಸೈಟಿಯಲ್ಲಿ ಮಾರಲಿಕ್ಕೆ ನೇಕಾರಿಕೆಯಿಂದ ಜವಳಿಯನ್ನು ಕೆಲವರು ತಂದಿಡುತ್ತಿರುವರು. ಕಸಬುದಾರರು ಬೇಕಾದ ಸಾಮಾನನ್ನು ನೆಯ್ದು ತಮಗೆ ತೋಚಿದ ಬೆಲೆ ಹಾಕಿ ಸೊಸೈಟಿಯಲ್ಲಿ ಮಾರಲಿಕ್ಕೆ ಇಟ್ಟು ಆ ಸರಕುಗಳ ಬೆಲೆಯಲ್ಲಿ ಶೇಕಡಾ ೫೦-೬೦ರಷ್ಟು ಹಣವನ್ನು ತೆಗೆದುಕೊಂಡು ಹೋಗಿ ಮತ್ತೆ ಮತ್ತೆ ಸರಕುಗಳನ್ನು ಮಾಡಿ ತಂದಿಡುತ್ತಿರುವುದನ್ನು ನೋಡುವಲ್ಲಿ ಈ ಸಂಘದಿಂದ ಸ್ವಲ್ಪಮಟ್ಟಿಗೆ ಉಪಕಾರವು ಕಸಬುದಾರರಿಗೆ ಉಂಟೆಂಬುದು ತೋರಿಬರಬಹುದು.

ಇದೇ ರೀತಿ ಸ್ವಲ್ಪ ಬಂಡವಾಳವನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುವ ಈ ಸಂಘದ ಮೆಂಬರುಗಳು ತಮಗೆ ಬೇಕಾದ ಸಾಮಾನುಗಳನ್ನು ತರಿಸಿಕೊಡಬೇಕೆಂದು ಮುಂದಾಗಿ ಸೊಸೈಟಿಯಲ್ಲಿ ತಿಳಿಸಿ, ಅದು ಬಂದೊಡನೆ ಸೊಸೈಟಿಗೆ ಸ್ವಲ್ಪ ನಫೆಯನ್ನು ಕೊಟ್ಟು ನಗದು ಹಣಕ್ಕೆ ತಮಗೆ ಬೇಕಾದಷ್ಟು ಸಾಮಾನುಗಳನ್ನು ಪಡೆಯುತ್ತಿರುವರು. ಈ ಏರ್ಪಾಟಿನಿಂದ ಸಣ್ಣ ಸಣ್ಣ ವ್ಯಾಪಾರಿಗಳಿಗೆ ಲಾಭವುಂಟು. ಈ ಪ್ರಯೋಜನವನ್ನು ಮೆಂಬರುಗಳಾಗಿರುವ ಇತರ ವ್ಯಾಪಾರಿಗಳೂ ಪಡೆಯಬಹುದಾಗಿದೆ.

ಇತರ ಸಂಘಗಳಿಗೆ ಸಾಲಕೊಡುವ ವಿಚಾರವು.

ಗ್ರಾಮ ಸಂಘಗಳಿಗೆ ಬೇಕಾದಾಗ ಸರಿಯಾದ ಖಾತರೀ ಮೇಲೆ ಪಟ್ಟಣಗಳಲ್ಲಿ ಸ್ಥಾಪಿತವಾಗಿರುವ ಇಂಥಾ ಸೊಸೈಟಿಗಳು ದ್ರವ್ಯವನ್ನು ಒದಗಿಸಿ ಕೊಡುತ್ತಾ, ಇಂಥಾ ಗ್ರಾಮ ಸಂಘಗಳ ಅಧಿಕಾರ ಮೇಲ್ವಿಚಾರಣೆಯನ್ನು ಸಂಪಾದಿಸಿ ಕೊಳ್ಳುತ್ತಾ ಬರೋಣದರಲ್ಲಿ ದೇಶೋನ್ನತಿಗೆ ಬಹು ಸಹಕಾರಿಯಾದೀತು. ಈ ವಿಷಯವನ್ನು ಮೆಂಬರುಗಳು ಚರ್ಚಿಸಿ ಅನುಕೂಲ ಪ್ರತಿಕೂಲಗಳನ್ನು ಚೆನ್ನಾಗಿ ವಿಮರ್ಶಿಸಿ ಅಭಿಪ್ರಾಯವನ್ನು ತಿಳಿಸಬೇಕಾಗಿದೆ. ಗ್ರಾಮ ಸಂಘಗಳಿಗೆ ದ್ರವ್ಯವನ್ನು ಒದಗಿಸಿ ಕೊಡೋಣವೇ ಈ ತರನಾದ ಪಟ್ಟಣ ಸಂಘಗಳು ಕಲ್ಪಿಸುವ ದೊಡ್ಡ ಸಹಾಯವೆಂದು ನಮ್ಮ ಸಂಸ್ಥಾನದ ರಜಿಸ್ಟ್ರಾರೂ, ಕಲ್ಕತ್ತಾದಲ್ಲಿ ಸಭೆ ಸೇರಿದ್ದ ಇತರ ರಜಿಸ್ಟ್ರಾರುಗಳೂ ಅನುವಾದ ಮಾಡಿರುವರು.

ಸಿಡಿಲಿನಿಂದಾದ ಪ್ರಾಣನಷ್ಟಗಳು

ಕಡೂರು ತಾಲ್ಲೂಕು ಅಣಗೆರೆ ಗ್ರಾಮ

ತಾ ೧೭—೪—೦೮ ನೇ ಗುರುವಾರ ಕಡೂರು ತಾಲ್ಲೋಕು ಅಣಗೆರೆ ಹೊಳೆ ತಡ ದಿಬ್ಬೂರು ರಂಗನ ಮಗ ಸುಮಾರು ೧೮ ವರುಷ ವಯಸ್ಸುಳ್ಳ ಪಟ್ಟಗ ಎಂಬ ಹುಡುಗನಿಗೆ ಶ್ರೀರಂಗನಾಥಸ್ವಾಮಿ ರಥೋತ್ಸವದ ದಿವಸ ಸಾಯಂಕಾಲ ೬ ಘಂಟೆ ಸಮಯದಲ್ಲಿ ಅಕಸ್ಮಾತ್ ಮಳೆ ಗಾಳಿ ಹೆಚ್ಚಾಗಿ ಸಿಡಿಲೆರಗಿ ಮಿಂಚಿ ಒಂದು ಅವರೇ ಕಾಳು ಗಾತ್ರ ರವೆಯಂತೆ ತಗಲಿ ತಲೆಯೊಳಗೆ ಪ್ರವೇಶಿಸಿದ್ದರಿಂದ ಅವನು ಆ ಕೂಡಲೆ ಪ್ರಾಣ ಬಿಟ್ಟನು. ಇವನ ಜೊತೆಯಲ್ಲಿ ಇದ್ದ ಇನ್ನೊಬ್ಬ ಪಟ್ಟಗನೆಂಬವನು ಮೂರ್ಛೆಯಾಗಿ ಬಿದ್ದಿದ್ದ, ಸ್ವಲ್ಪ ಹೊತ್ತಿನಲ್ಲಿ ಹುಷಾರು ಆದನು. ಇವರಿಬ್ಬರೂ ಕುರಿಗಳನ್ನು ಕಾಯುವುದಕ್ಕೆ ಹೋಗಿದ್ದರು. ಅವನನ್ನು ಕಡೂರು ತಾಲ್ಲೋಕು ... ಬಂದು ಮಹಜರು ನಡಸಿದರು.

ತಿಪ್ಪೂರು.

ಕಳೆದ ತಿಂಗಳ ೨೫ ನೇ ತಾ ... ರಾತ್ರಿ ೭ ಗಂಟೆಗೆ ಆರಂಭವಾದ ಅತಿಕಲ್ಲು ಮಳೆ ... ಪ್ರಾರಂಭಿಸಿತು. ... ಒಂದು ಶಿಶು ... ಮೃತಪಟ್ಟಿತು. ... ಲಿಂಗಾಯಿತರ ... ಜನರೊಂದಿಗೆ ಇದ್ದರು ... ಬಾಗಲಲ್ಲಿ ... ಮಗನೊಂದಿಗೆ ... ಮಗನಿಗೆ ಕಾಲು ... ವ್ಯಾಪಾರಕ್ಕಾಗಿ ಬಂದಿದ್ದ ... ನು ಸತ್ತನು. ಇವನಿಗೆ ... ದಿನಗಳ ... ಲಿಂಗಾಯಿತರ ಮನೆಯಲ್ಲಿದ್ದ ... ಜನರನ್ನು ಸಂತೆಯವರಾದ ೭ ಜನರನ್ನು ಒಟ್ಟು ... ಜನರನ್ನು ... ರೀತಿಯಾಗಿ ಕಾಪಾಡಿದನು. ಇದಲ್ಲದೆ ಇನ್ನೊಬ್ಬನು ಸಿಡಿಲಿನ ಪೆಟ್ಟಿಗೆ ಸಮಾರಾಗಿ ಸಿಕ್ಕಿದ್ದರಿಂದ ಅವನು ... ದನು. ಅದೇ ಕ್ಷಣದಲ್ಲಿ ಅವನಿಗೆ ಘಳಿ ಬೀಸಿ ... ಈ ರಾತ್ರಿಯೂ ಅನೇಕರಿಗೆ ಪ್ರಾಣಭಯವನ್ನುಂಟುಮಾಡಿತು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

«ಸತ್ಯವಾದಿ,» ಅರಸೀಕೆರೆ:—ಈ ಬಾತ್ಮಿಯನ್ನು ಪ್ರಕಟಿಸಲಾರೆವು. ಬುದ್ಧಿವಂತರು, ಮೈಸೂರು—ನೀವು ಬರೆದಿರುವುದನ್ನು ಖಾತರ್ ಕೊಟ್ಟು ಪ್ರಸಿದ್ಧಿಪಡಿಸೇವು.

ಕರೆಸ್‌ಪಾಂಡೆನ್ಸ್.

ಕೊಳ್ಳೇಗಾಲದಲ್ಲಿ ಪ್ಲೇಗ್ ಉಪದ್ರವು

ಅಯ್ಯಾ

ಕೊಳ್ಳೇಗಾಲದಲ್ಲಿ ಫೆಬ್ರುವರಿ ತಾ ೨೩ ಲಾಗಾಯ್ತು ಪ್ಲೇಗ್ ಪ್ರಾರಂಭವಾಗಿ ಈ ತೇದಿ ವರೆಗೆ ೩೦೦-೪೦ ಜನರು ಮೃತಪಟ್ಟರು. ಮತ್ತು ಇಲ್ಲಿ ಎಲ್ಲರೂ ಗುಡಿಸಲು ಕಟ್ಟಿಕೊಂಡು ಹೊರಗಿದ್ದಾರೆ. ಇನ್ನು ಕೆಲವರು ಊರಲ್ಲಿ ಇದ್ದಾರೆ. ಎಲ್ಲರೂ ಊರನ್ನು ಖಾಲಿ ಬಿಟ್ಟು ಬಿಡುವುದು ಬಹಳ ಒಳ್ಳೇದು. ಪ್ಲೇಗ್ ಇನಾಕ್ಯುಲೇಷನ್ ಇಲ್ಲಿ ಸಾಗುತ್ತಾ ಇದೆ. ಸುಮಾರು ೨,೦೦೦ ಪ್ಲೇಗ್ ಸಿಡುಬು ಹಾಕಿಸಿದ್ದಾಯಿತು. ಮತ್ತು ಮಳೆ ಇಲ್ಲದೆ ಬಾವಿ ಕೆರೆಯಲ್ಲಿ ಕುಡಿ ನೀರು ದೊರೆಯುವುದು ದುರ್ಲಭ. ಹಣ ಕಾಸು ಕೊಟ್ಟರೂ ದೊರೆಯುವುದಿಲ್ಲ. ಕಾರಣ ಮುನಿಸಿಪಾಲಿಟಿಯಲ್ಲಿ ಹಣ ... ಇಲ್ಲ. ನೀರು ಇಲ್ಲದ್ದು ಒಂದು ಸಂಕಟ, ಪ್ಲೇಗ್ ಇದ್ದದ್ದು ಒಂದು ಸಂಕಟ,

ನಲಿನ ಧಗೆ ಒಂದು ಸಂಕಟ. ಸರ್ಕಾರದವರು ಇಂಥಾ ಕಾಲದಲ್ಲಿ ಕಡೆ ಬೇಟಾವರೂ ಕೊಟ್ಟು ಕಾಪಾಡುತ್ತಾರೆಂದು ನಂಬುತ್ತೇನೆ. ಇರಲ್ಲಿ ಇರತಕ್ಕವರನ್ನು ಜಾಗ್ರತೆಯಾಗಿ ಬಿಡಿಸುವದು ಉತ್ತಮ ಇಲ್ಲದ ಪಕ್ಷದಲ್ಲಿ ಕಳ್ಳತನ ನಡೆಯುವದಕ್ಕೆ ಆಸ್ಪದ ಯಾಕೆಂದರೆ ಪೋಲೀಸಿನವರು ರಾತ್ರಿಕಾಲದಲ್ಲಿ ಬೀಟು ಸುತ್ತುವಾಗ್ಗೆ ಕಳ್ಳ ಕಾದು ಇಲ್ಲ ಎಂಬುವದು ಗೊತ್ತಾಗುವದಿಲ್ಲ. ಗ್ರಾಮವನ್ನು ಬಿಟ್ಟ ಮೇಲೆ ಇಲ್ಲರೂ ಬಿಡಬೇಕು, ಇಲ್ಲದ ಪಕ್ಷಕ್ಕೆ ಎಲ್ಲರೂ ಗ್ರಾಮದಲ್ಲಿ ಇರಬೇಕು ಸರ್ಕಾರದವರು ಗಮನಿಸಿ ಬಾಕಿ ಇರತಕ್ಕ ಜನಗಳನ್ನು ಬಿಡಿಸುವದು ಉತ್ತಮ.—ನಿಮ್ಮ "ವೃತ್ತಾಂತ ಪತ್ರಿಕೆ" ಯನ್ನು ಪಡೆಯುತ್ತಿರುವವರು ದೊಡ್ಡ ಕೆರೆಯ ಬಳಿಯಲ್ಲಿ ಒಂದು ಪತ್ರಿಕೆ ಪಡೆಯುವದು. ನಾವು ಕಳುಹಿಸಲು ಆಗುವದಿಲ್ಲ

ನಿಮ್ಮ ಬಾತ್ಮೀದಾರ.

ಗತಿಸಿದ ಪಟೇಲರು ತಿಮ್ಮಪ್ಪಗೌಡರು

ಅಯ್ಯಾ,

ಕೋಳಿಗೆ ಪಟೇಲ್ ತಿಮ್ಮಪ್ಪಗೌಡರು ಈಗ ಸುಮಾರು ನಾಲ್ಕು ತಿಂಗಳಾಯಿತು ಕಾಯಿಲೆಯಾಗಿದ್ದು ಕಳೆದ ತಿಂಗಳು ೩೦ ನೇ ಭಾನುವಾರ ಸ್ವರ್ಗಸ್ಥರಾದರು. ಕಾಯಿಲೆ ಬಿದ್ದಲಾಗಾಯ್ತು ಇವರಿಗೆ ಔಷಧಿ ಚಿಕಿತ್ಸೆ ನಡಿಸುತ್ತಾ ಕಂಟ್ರಾಕ್ಟುಮಾಡಿ, ಭಾರಿಭಾರಿ ಪಂಡಿತರನ್ನು ಕರೆಸಿ ಚಿಕಿತ್ಸೆನಡಿಸುತ್ತಾ, ಸುಮಾರು ೨೦೦ ರೂಪಾಯಿ ಖರ್ಚುಮಾಡಿ, ಯಾವ ಪ್ರಯೋಜನಕ್ಕೂ ಬಾರದೆ, ದೇವರು ಕರಕೊಂಡನು. ಕಡೆಗೆ ತೀರ್ಥಹಳ್ಳಿಯಲ್ಲೂ ಘನಪಂಡಿತರೆಂದು ಹೆಸರುಗೊಂಡಿದ್ದ ಕೃಷ್ಣಪಂಡಿತನನ್ನು ಕರೆಸಿ ನೋಡಿಸಿ, ಸದರಿ ಪಂಡಿತರು ಧೈರ್ಯ ಹೇಳಿದ್ದರ ಮೇಲೆ ೧೫೦ ರೂಪಾಯಿ ಕಂಟ್ರಾಕ್ಟುಮಾಡಿ, ಔಷಧಿಕೊಟ್ಟರು. ಇವರು ಜೀವಂತರಾಗಿ ಬದುಕಿದ್ದರೆ ಔಷಧಿ ಕಂಟ್ರಾಕ್ಟು ಹಣವೆಲ್ಲಾ ಸೇರಿ ಸುಮಾರು ೩೦೦ ರೂಪಾಯಿ ಆಗುತ್ತಿತ್ತು. ಇವರು ಈ ನಾಲ್ಕೂರು ಗ್ರಾಮಕ್ಕೆ ಪಟೇಲರಾಗಿಯೂ, ತುಂಬಾ ಸತ್ಯವಂತರಾಗಿಯೂ ಇದ್ದರು. ಇವರ ಜೀವಮಾನಕಾಲದಲ್ಲಿ ಇವರನ್ನು ನಾಮಧಾರಿಗಳ ದೊಡ್ಡದೊಡ್ಡ ಸಭೆ ಕರೆಯಿಸಿಕೊಳ್ಳುತ್ತಿದ್ದರಂತಲೂ, ನ್ಯಾಯಪರವಾಗಿಯೇ ಮಾತಾಡುತ್ತಿದ್ದರೆಂತಲೂ, ನಾಮಧಾರಿಸಂಬಂಧಿ ವಿಷಯದಲ್ಲಿ ಒಳಗಡೆ ಲಂಚ ತೆಗೆದುಕೊಳ್ಳುವರನ್ನು ಕಂಡರೆ ಇವರಿಗೆ ಬಹಳ ಸಿಟ್ಟೆಂತಲೂ, ಆವ್ಯಸನ ಒಂದುಕಾಸಿಗೆ ಕೈಹಾಕದೇನೆ ಯಾರಾದರೂ ಸಂತೋಷದಿಂದ ಕೊಟ್ಟರೆ ಅವರಿಗೆ ಒಳ್ಳೆ ಬುದ್ಧಿವಾದವನ್ನು ಹೇಳಿ ವಾಪಸು ಕೊಡುತ್ತಿದ್ದರೆಂತಲೂ ಇಂಥಾ ದೊಡ್ಡಮನುಷ್ಯರೂ ಮತ್ತು ಪಟೇಲಿಗೆ ಯೋಗ್ಯವಾದವರೂ ಸುತ್ತುಮುತ್ತ ಗ್ರಾಮಗಳಲ್ಲಿ ಬಹಳ ವಿರಳವಿದ್ದರೆಂತ "ಲಂಚವಿಲ್ಲದೆ ಸಂಚ ಇಳಿಯ ಒಲ್ಲೆ" ಎಂಬ ಗಾದೆಗೆ ಸರಿಯಾಗಿದ್ದಾರೆಂತಲೂ, ಗತಿಸಿದ ಎಂ ಆರ್ ಗಿರಿಯಪ್ಪಗೌಡರನ್ನು ಮತ್ತು ಇವರನ್ನು ಬಿಟ್ಟರೆ ಬೇರೆ ಯಾರೂ ಈಗ್ಗೆ ಇಲ್ಲವೆಂಬುದಾಗಿಯೂ ಇನ್ನು ಮುಂದೆ ತಮ್ಮ ತಮ್ಮ ಸಣ್ಣ ಸಣ್ಣ ತಪ್ಪುಗಳ ತೀರ್ಮಾನದ ಬಗ್ಗೆ ಯಾರ ಸನ್ನಿಧಿಯಲ್ಲಿ ಮೊರೆಯಿಡಬೇಕೆಂತಲೂ, ಇವರ ಕಾಯಿಲೆ ಲಾಗಾಯ್ತು ಕೆಲವು ಜನರು ಮುಂಚಿತ ಅಥವಾ ಹಿಸ್ಸೆ ಮಾಡಿಕೊಳ್ಳದವರು ಸದರಿಯವರ ಕಾಯಿಲೆ ಗುಣವಾದ ತರುವಾಯ ತೀರಿಸಿಕೊಳ್ಳೋಣವೆಂದು ಹಾಗೆ ಬಾಕಿಯಲ್ಲಿ ಇಟ್ಟಿರುತ್ತಾರೆಂತಲೂ ಇಂಥಾ ಸತ್ಯವಂತರು ಈ ಪ್ರಾಂತ್ಯದಲ್ಲಿ ಹುಟ್ಟಿದ್ದಿಲ್ಲವೆಂತಲೂ ಯೋಚಿಸಿಕೊಂಡು, ಈ ಸುತ್ತುಮುತ್ತ ಗ್ರಾಮದವರೆಲ್ಲಾ ದುಃಖಪಡುತ್ತಿದ್ದಾರೆ. ಈ ಕಾಲಕ್ಕೆ ಸರಿಯಾಗಿ ಇವರಿಗೆ ೫೦ ವಯಸ್ಸಾಗಿತ್ತು. ಇವರ ಮೂರು ಜನ ಮಕ್ಕಳು, ಸದರಿಯವರ ಪತ್ನಿಯೂ, ನಾಲ್ಕು ಜನ ಅವರ ತಮ್ಮಂದಿರು ಇರುತ್ತಾರೆ. ಇವರು ದೊಡ್ಡ ಮನುಷ್ಯರಾಗಿಯೂ ಸಜ್ಜನ ಸೇವಿತರಾಗಿಯೂ ಇದ್ದರು. ಸದರಿ ಭಾನುವಾರ ನಾನು ಸಹ ಬಹಳ ಜನ ದೊಡ್ಡ ಮನುಷ್ಯರ ಜೊತೆಯಲ್ಲಿ ದಹನ ಮಾಡುವ ಸ್ಥಳಕ್ಕೆ ಹೋಗಿದ್ದೆನು ಆ ಕಾಲದಲ್ಲಿ ಜನರುಗಳ ದುಃಖವನ್ನು ವಿವರಿಸಲಶಕ್ಯವಾಗಿತ್ತು.

ಎಸ್. ಬಿ ಕಾಲಪ್ಪ.

ಗ್ರಾಮಾಂತರಗಳಲ್ಲಿ ನಡಿಯುವ ಆಶ್ಚರ್ಯಗಳು

ಅಯ್ಯಾ,

ನಾನು ಈಗ ಒಂದು ವಾರದಲ್ಲಿ ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಲಕ್ಷ್ಮೀ ತಾಲ್ಲೂಕು ಬೇಗೂರು ಹೋಬಳಿ ಆಸುಪಾಸು ಗ್ರಾಮಗಳಲ್ಲಿ ಸಂಚಾರ ಹೋಗಿದ್ದೆನು ಅಲ್ಲಿನ ಕೆಲವು ಸಂಗತಿಗಳನ್ನು ವಾಚಕರ ಅವಗಾಹನೆಗಾಗಿ ಬರೆಯುತ್ತೇನೆ —

ಅಲ್ಲಿನ ಜನರು ಸಾಧು ಪ್ರಕೃತಿಗಳಾಗಿಯೂ ವ್ಯವಸಾಯವೇ ಮುಖ್ಯ ಕಸುಬುಳ್ಳವರಾಗಿಯೂ ಇರುತ್ತಾರೆ ಹೀಗಿದ್ದರೂ ಕೋಲಗಳಿಗೆ ಸಾಕಾದಷ್ಟು ಗೊಬ್ಬರ ಮುಂತಾದ ಸಲಕರಣಗಳನ್ನು ಹಾಕದಿರುವದರಿಂದ ರೈತನು ಎಷ್ಟು ದೊಡ್ಡ ಜಮೀನ್ದಾರನಾದರೂ ಪುಷ್ಟನಾಗಿಲ್ಲ ಈ ಪ್ರಾಂತ್ಯದ ಫಸಲು ಜೋಳ, ರಾಗಿ ಇತರ ಕಾರು ಬೆಳೆಗಳೇ ವಿಶೇಷ. ಕೆಲವು ಕಡೆ ಹೊರತು ಬಾಕಿ ಕಡೆಗಳಲ್ಲಿ ದನಕರಗಳಿಗೂ ಜನರಿಗೂ ನೀರಿಗೆ ತುಂಬಾ ಕಷ್ಟವಾಗಿದೆ. ಕೆರೆಗಳು ನಾದುರಸ್ತಿನಲ್ಲಿವೆ. ಈ ಪ್ರಾಂತ್ಯ ತರೀ ವ್ಯವಸಾಯ ವೆಂಬುವದು ಜನರಿಗೆ ಸ್ವಪ್ನಪ್ರಾಯವಾಗಿದೆ. ಹೀಗೆಯೇ ಗ್ರಾಮಾಂತರಗಳನ್ನು ನೋಡಿಕೊಂಡು ಬೇಗೂರಿಗೆ ಎರಡು ಮೈಲಿ ದೂರದಲ್ಲಿರುವ ಭೋಗ್ಯಾಯನಹುಂಡಿ ಎಂಬ ಗ್ರಾಮಕ್ಕೆ ಹೋಗಿ ಅಲ್ಲಿ ಪ್ರೈವೇಟ್ ಸ್ಕೂಲನ್ನು ನೋಡುತ್ತಿರುವಾಗ.

ಒಬ್ಬ ಹುಡುಗನ ತಂದೆಯು ತನ್ನ ೯ ವರುಷದ ಮಗನು ಮನೆಯಲ್ಲಿದ್ದ ಒಡವೆಗನ್ನು ಕದ್ದು ಇನ್ನೆರಡು ರೂಪಾಯಿಗೆ ಅಡವು ಹಾಕಿ ಆ ಹಣವನ್ನು ಇಸ್ಪೀಟಿನವರೊಂದಿಗೆ ಸೇರಿ ಪರೇಲಾ ಎಂಬಾಟವನ್ನು ಆಡಿ ಸೋತಿರುವದರಿಂದ ಅದನ್ನು ಬಿಡಿಸಿಕೊಳ್ಳುವದಕ್ಕಾಗಿ ಮತ್ತೊಬ್ಬನಲ್ಲಿ ಪತ್ರ ಬರೆಮಾಕೊಟ್ಟು ಒಡವೆ ತೆಗೆದುಕೊಳ್ಳುತ್ತಿದ್ದನು ಈ ಸಂಗತಿಯನ್ನು ವಿಚಾರಿಸಿದಾಗ ಆ ಬಡಪಾಯಿಯು—"ಸ್ವಾಮಿ, ಈ ಗ್ರಾಮವು ಪರೇಲಾ ಆಟಕ್ಕೆ ತೌರುಮನೆಯಾಗಿರುವದಲ್ಲದೆ, ಸುತ್ತಲ ಗ್ರಾಮಾಂತರದವರು ಇಲ್ಲಿಗೆ ಬಹಳಜನಾಗಿ ಬಂದು ಸೇರಿ ಈ ರೀತಿ ಹುಡುಗರನ್ನೆಲ್ಲಾ ಕೆಡಿಸಿರುತ್ತಾರೆ ಅಲ್ಲದೆ ಸರ್ಕಾರದವರಿಗೆ ದೂರು ಕೊಡೋಣವೆಂದರೆ ಪೋಲೀಸಿನವರು ಈ ವಿಚಾರಕ್ಕೆ ಸರೀಕರಾಗಿ ಡೆಸ್ ತೆಗೆದು ಆಟಕ್ಕೆ ಕೂಡುತ್ತಾರೆ" ಎಂಬದಾಗಿ ಹೇಳಿದನು. ಅನಂತರ ಇತರರೂ ಅದೇ ರೀತಿ ಹೇಳಿದರು. ಸಣ್ಣ ಸಣ್ಣ ಗ್ರಾಮಾಂತರಗಳಲ್ಲಿ ಈ ರೀತಿ ದೂಜಾಟವು ಪ್ರಬಲಿಸಿ, ಅದಕ್ಕೆ ಪೋಲೀಸಿನವರು ಕುಮ್ಮಕ್ಕುಮಾಡುವದಾದರೆ ಪ್ರಜಾ ನೆಮ್ಮದಿ ಹ್ಯಾಗೆ ಉಂಟಾದೀತು

ಇದೂ ಅಲ್ಲದೆ ಮತ್ತೊಂದು ಆಶ್ಚರ್ಯ ಸಂಗತಿಯನ್ನು ಹೇಳಲು ಕುತೂಹಲಪಡುತ್ತೇನೆ. ಇಲ್ಲಿನ ಗ್ರಾಮಾಂತರದವರು ಕಳ್ಳರ ಗಂಪಿನವರಿಗೆ ವರುಷ ಒಂದಕ್ಕೆ ಕಾಳಿನಾರು ಇಷ್ಟೆಂದು ರುಸುಂ ಕೊಡಬೇಕಾಗಿದೆಯಂತೆ ಹಾಗೆ ಕೊಡದಿರುವವರ ಊರು ಅಥವಾ ಜನರ ಮನೆಗಳಿಗೆ ಕನ್ನಾಹಾಕಿ ದರೋಡೆ ಮಾಡುವರು ಹಾಗಲ್ಲದಿದ್ದರೆ ಊರ ಹೊರಗೆ ಎತ್ತರವಾದ ಮಂಗಳ ಮೇಲೆ ಹತ್ತಿ ದೊಡ್ಡ ಕಲ್ಲುಗಳನ್ನು ಕವಣೆಗಳಿಂದ ಬೀರಿ ಬೆಳಗಿನ ವರಿಗೂ ಹೊಡೆಯುವ ಸಂಪ್ರದಾಯವಿದೆಯಂತೆ ಈ ವಿಚಾರವನ್ನು ನಾನಿದ್ದ ಗ್ರಾಮದಲ್ಲಿ (ಹಗ್ಗಲೂರಿನಲ್ಲಿ) ಮುಖ್ಯವಾಗಿ ನೋಡಿದೆನು. ಈ ನವನಾಗರಿಕ ಕಾಲದಲ್ಲಿ ಪ್ರಜೆಗಳಿಗೆ ಈ ರೀತಿ ಕಿರುಕುಳವಾದರೆ ಪೂರೈಸುವದು ಹ್ಯಾಗೆ.

ಈ ಪ್ರಾಂತ್ಯ ಬರೀ ಕಾಡು ಪ್ರದೇಶವೇ ಅತಿಯಾಗಿದೆ. ಅದರಿಂದ ಸೇಂದಿ ಅಬಕಾರಿಗೆ ಈ ಪ್ರಾಂತ್ಯದಷ್ಟು ಉತ್ಪತ್ತಿಯು ಎಲ್ಲಿಯೂ ಕಾಣುವದಿಲ್ಲ. ಇಲ್ಲಿನ ಪ್ರತಿ ಗ್ರಾಮಗಳಲ್ಲೂ ಸರ್ಕಾರಿ ಪಾಠಶಾಲೆಗಳು ಇವೆ. ವಿದ್ಯಾಭಿವೃದ್ಧಿಯು ಈಗೀಗ ತಲೆ ಎತ್ತುತ್ತಿದೆ. ಜನರಲ್ಲಿ ನಾಗರಿಕತೆ ಕಡಮೆ

ಎ. ನಾಗಯ್ಯ.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೋ ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ, ಮಾರನೇ ದಿನಬೆಳಗ್ಗೆ ಸುಖವಾಗಿ ಕಾಲ ಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ.)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ಕಡೆಯಲ್ಪಟ್ಟು, ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧಕ್ಕೂ ಹೆಚ್ಚು ಮೂಲ ಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ ; ಪಿತ್ತ ; ಪಿತ್ತಜ್ವರ ; ಅಜೀರ್ಣ , ಅಗ್ನಿಮಾಂದ್ಯ ; ಗಾಬರಿ ; ಅರುಚಿ ; ಎದೆಯು ತಲ್ಲಣಿಸುವುದು ; ತಲೆತಿರುಗುವುದು ; ತಲೆನೋವು ; ಹೊಟ್ಟೆ ಉಬ್ಬರ ; ಹುಳಿತೇಗಿನ ಹೊಟ್ಟೆನೋವು ; ಹೆಂಗಸರ ವ್ಯಾಧಿಗಳು , ಇವು ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಬಿಡುವದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು, ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯನ್ನಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [93-36]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ, ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ, ಡೋನ್ಸ್ ಪಿ. ಒ. ಬಾಕ್ಸ್ ೨೦, ಬೊಂಬಾಯಿ,— ಇವರಲ್ಲಿ ದೊರೆಯುವುದು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-12

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಪಚ್ಚಬ್ರೈಳಿಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು ಮೈ ಕೈಕಾಲು ಕೊಡತ (ಭಾರ), ಮೈ ಸಡಿಲ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ವಿಕ್ಕಿಳು, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುವ ಈ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ವಾಯುವಿಗೂ ದಾರಿಕೊಡದೆ, ನೀರು ವಪಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಏಳುವು, ಜ್ವರ, ನಚ್ಚುಜ್ವರ, ಕೈಕಾಲ್ಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಂಗಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೭೦ ಮಾತ್ರೆಯುಳ್ಳ ಡಪ್ಪಿಗೆ ೩ ಆಣೆ; ೫ ಡಪ್ಪಿಗೆ ೧ ಡಪ್ಪಿ ಹೆಚ್ಚು. ೧ ರಿಂದ ೬ ಡಪ್ಪಿ ವರೆಗೆ ಪೋಸ್ಟೇಜು ೬ ಕಾಸು.

ವಿಳಾಸ :—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ಸುಲಭ ಖರೀದಿ ! ನೋಡಿ !!

46-1

ರಾಸ್ಕೋಫ್ ಸಿಸ್ಟಂ ಲೀವರ್ ವಾಚು ಸರಪಣಿ ಸಹಿತ ವಿ. ಪಿ. ಪಿ. ಚಾರ್ಜು ಸೇರಿ ೩-೮-೦. ಯಾರೂ ಇದುವರೆಗೂ ಈ ಖರೀದಿಗೆ ಕೊಟ್ಟಿಲ್ಲ ಮಾದ್ರಿಗೆ ಒಂದನ್ನು ತರಿಸಿ ನೋಡಿರಿ ನಮ್ಮ ವಿಳಾಸ—ಟಿ. ಸಿ. ಅಸ್ಸಯ್ಯಸೆಟ್ಟಿ ಅಂಡ್ ಸನ್, ಜನರಲ್ ಮರ್ಚೆಂಟ್, ನಂಬರು ೬೦, ಲಿಂಗಣ್ಣನ ಬೀದಿ, ಸಾಹುಕಾರ್ ಪೇಟೆ, ಮದ್ರಾಸು

ಹರಾಜ್ ಇಸ್ತಿಹಾರು.

45-1

ಸನ್ ೧೯೦೮ನೇ ಇಸವಿ ಮೇ ಮಾಹೆ ೧೮ನೇ ಮಕ್ಕಾಂನಲ್ಲಿ ಬೆಂಗಳೂರು-ಹರಿಹರ ರೈಲ್ವೆಯ ಆರಸೀಕೆರೆ ಡಿಪೋದಲ್ಲಿ ಸುಮಾರು ಹದಿನಾರು ಸಾವಿರ (೧೬,೦೦೦) ಮಣ ಅಳಲೇಕಾಯಿ ಮತ್ತು ಮೂರು (೩) ಮಣ ಯೇಲಕ್ಕಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಹೆಚ್ಚು ಸಂಗತಿ ತಿಳಿಯಲಪೇಕ್ಷೆಯುಳ್ಳವರು ಹಾಸನದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿಗೆ ಬರೆದುಕೊಳ್ಳಬಹುದು.

ಹಾಸನ, (ಸೈ) ಬಿ. ಐ. ಶಾಮರಾವ್,
೧-೫-೦೮. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು.

"ಕನ್ನಡ ಲಾರಿಪೋರ್ಟರ್."

ವಿಶಿಷ್ಟ ಕೋರ್ಟು ಕಚೇರಿಗಳಲ್ಲೂ ಸಾಮಾನ್ಯ ಉದಹರಿಸಲ್ಪಡುತ್ತಿರುವ ಪ್ರಿವಿ ಕೌನ್‌ಸಿಲಿನ, ಕಲ್ಕತ್ತ, ಅಲಹಾಬಾದ್ ಬೊಂಬಾಯಿ ಮದ್ರಾಸ್ ಹೈಕೋರ್ಟುಗಳ, ಮೈಸೂರು ಚೀಫ್ ಕೋರ್ಟಿನ ತೀರ್ಪುಗಳು ಕನ್ನಡಕ್ಕೆ ಭಾಷಾಂತರಿಸಲ್ಪಟ್ಟು ಪ್ರಕಟಿಸಲ್ಪಡುವ "ಕನ್ನಡ ಲಾರಿಪೋರ್ಟರ್" ಎಂಬ ಮಾಸಪತ್ರಿಕೆಯು ಮುಂದಣ ಜೂನ್ ಲಾಗಾಯತು ಹೊರಡುತ್ತದೆ. ಇದಕ್ಕೆ ವರ್ಷದ ಚಂದಾ ೧ ರೂ, ಬಿಡಿಪತ್ರಿಕೆ ಜೂನ್ ತಿಂಗಳದುದಕ್ಕೆ ೧ ಆ. ೬ ಪೈ. ಆ ಮುಂದಣ ತಿಂಗಳವಕ್ಕೆ ೨ ಆಣೆ, ಚಂದಾವನ್ನು ಮುಂಗಡವಾಗಿ ಕೊಡಬೇಕು ; ಅಥವಾ ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ಪೋಸ್ಟ್ ಸ್ಟಾಂಪನ್ನು ಕಳುಹಿಸಬಹುದು. ಪತ್ರಿಕೆಯನ್ನು ಅಪೇಕ್ಷಿಸುವವರು ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು ಈ ವಿಳಾಸಕ್ಕೆ ಬರೆಯತಕ್ಕದ್ದು.

[40-2]

ಇಲ್ಲಿ ನೋಡಿ.

8-12

ತುಮಕೂರು ಮಿಷನ್ ಇಲಾಖೆಯಲ್ಲಿ ಯುರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸಿಗೆ ಜೋಡಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ

ಕ್ರಯ:—೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯ ವರಿಗೆ

೧ ಡಜನ್ ಜೋಡಿಗಳನ್ನು ತೆಗೆದುಕೊಳ್ಳುವವರಿಗೆ ಕೇಳಿದಹಾಗೆ ಡಿಸ್‌ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮೇನೇಜರ್,

ಹಾಸಿಗೆ ಜೋಡಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ
ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) . . . . . . ರೂ. ೧—೮—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ
ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್
ಸೇರಿ . . . . . . ರೂ. ೨—೧೪—೦.
" " " " " ೨—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಳುಹುವಾಗಲೂ ತಮಗೆ ಬಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ದೇಶಬಾಂಧವರೇ ! ಲಾಲಿಸಿ !!

123-24

ಸ್ವದೇಶೀ ಭಾವನೆಯು ಎಲ್ಲೆಲ್ಲಿಯೂ ಹರಡಿದೆ. ಇದರಿಂದ ಕರ್ನಾಟಕ ದೇಶ್ಯದವರೆಲ್ಲರು ಪ್ರಸಿದ್ಧವಾದ ಮಧುರೆಯಲ್ಲಿ ಹೆಸರು ವಾಸಿಯಾದ ಗಟ್ಟಿ ಮತ್ತು ಗ್ಯಾರಂಟಿ ಬಣ್ಣದ ಎರಡುವರೆ ಮೊಳದಗಲ ಹದಿನಾರುವರೆ ಮೊಳಕ್ಕಿಂತ ಹೆಚ್ಚಾದ ಉದ್ದವುಳ್ಳ ಕೆಂಪು ಅಥವಾ ಕಪ್ಪು ಬಣ್ಣದ ಬಹು ಸೊಗಸಾದ ಮತ್ತು ನಯವಾದ ಬೇಸಿಗೆಗೂ ಸಹ ಬಹಳ ಉಪಯೋಗವಾದ ಮಧುರೆ ಸೀರೆಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತದಾದದರಿಂದ ಕೂಡಲೆ ನಮಗೆ ಬರೆದು ತರಿಸಿಕೊಳ್ಳಿ ವ್ಯಾಪಾರಸ್ಥರು ಸಹಾ ತರಿಸಿ ಮಾರುವಷ್ಟು ಸುಲಭಕ್ರಯ. ಸಾದಾ ಕ್ರಯ ರೂ. ೨—೮—೦. ಬಿಳಿಯ ಚೌಕ್ಕೆ ಯಾ ಪಟ್ಟೆಗಳಿಂದ ಕೂಡಿದ್ದು ರೂ ೩—೪—೦. ಬಹಳ ನಯವಾದ ಮತ್ತು ನಾಜೋಕಾದದ್ದು ರೂ. ೫, ರೂ. ೬.

ಪುದುಚ್ಚೇರಿ ರೇಷ್ಮೆ ವಸ್ತ್ರಗಳು.

೭ ಮೊಳಬಗಲ, ನಾಲ್ಕುಮೊಳದುದ್ದ, ರೂ. ೫. ಬೇಸಿಗೆಯ ಸೊಗಸಾದ ಚಿನೀಸ್ ರೂ. ೭. ಮುಂಚೆ ಪಂಚೆ ೮ ಮೊಳದುದ್ದ ರೇಷ್ಮೆ ಅಂಚು ಜೊತೆ ೧ ಕ್ಕೆ ರೂ. ೩ ಸಾದಾ ರೂ. ೭॥, ರೂ. ೩.

ವಿಳಾಸ :—ರಾವ್ ಎಂಪೋರಿಯಂ, ಸ್ಟರ್ಟ್‌ಹಾಂ ರೋಡ್,

ವೇಪೇರಿ, ಮದ್ರಾಸು.

ಅಲಾರ್ಕಾನ್ ಗವರ್ನರ್ ಮೊರೆಲಾಸ್ಅವರು.

ನೆ-ರೂ-ನಾ ಶೈತ್ಯದಿಂದುಂಟಾಗುವ ಸಮಸ್ತ ರೋಗಗಳಿಗೂ ತಕ್ಕ ಔಷಧವೆಂದೂ, ಸಂಪೂರ್ಣವಾದ ಆರೋಗ್ಯವನ್ನೂ ಸಹಜವಾದ ಕಾಯಪುಷ್ಟಿಯನ್ನೂ ಕೊಡತಕ್ಕ ಔಷಧವೆಂದೂ ಮೆಕ್ಸಿಕೋ ರಾಜ್ಯದಲ್ಲಿ, ಪೂರ್ವದಿಂದ ಪಶ್ಚಿಮಕ್ಕೂ ಉತ್ತರದಿಂದ ದಕ್ಷಿಣಕ್ಕೂ ಎಲ್ಲಾ ಪ್ರದೇಶಗಳಲ್ಲೂ ಪ್ರಖ್ಯಾತವಾಗಿದೆ.



ಘನ ಮ್ಯಾನ್ಯುಯಲ್ ಅಲಾರ್ಕಾನ್, ಮೊರೆಲಾಸ್ ಗವರ್ನರು, ಮೆಕ್ಸಿಕೊ

ಡಾ|| ಎಸ್. ಬಿ. ಹಾರ್ಟ್‌ಮನ್‌ರಿಗೆ, [34-6]

ಕೊಲಂಬಸ್, ಒಹಿಯೋ, ಅಮೇರಿಕ

ಅಯ್ಯ —ನಾನು ಅನೇಕ ಜನರನ್ನು ನಿಮ್ಮ ಔಷಧಿ ಸೇವಿಸುವಂತೆ ಪ್ರೋತ್ಸಾಹಪಡಿಸಿದೆನು. ಅವರಿಗೆ ಉಂಟಾದ ಲಾಭದ ವಿಷಯವನ್ನು ಧಾರಾಳವಾಗಿ ತಿಳಿಸುತ್ತೇನೆ. ಇಂಥಾ ಫಲವನ್ನು ನಿಮ್ಮ ಔಷಧವು ಕೊಟ್ಟಿರುವುದನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ.

ನಿಮ್ಮ ಪ್ರೀತಿಯುಳ್ಳ,
ಮ್ಯಾನ್ಯುಯಲ್ ಅಲಾರ್ಕಾನ್

ಮೊರೆಲಾಸ್.
ಡಿಸೆಂ. ೫. ೧೯೦೫

ಪೆರೂನಾವಿನ ದೊಡ್ಡ ಪರೀಕ್ಷೆ.

ಪ್ರತಿ ಒಂದು ದೇಶದ ಹವಾಸ್ಥಿತಿಯೂ ಅದದಕ್ಕೆ ಅನುಗುಣವಾಗಿಯೂ ವಿಜಾತೀಯವಾಗಿಯೂ, ಅದ್ದರಿಂದ ಅಲ್ಲಲ್ಲಿಗೆ ತಕ್ಕ ರೋಗಗಳನ್ನು ಕೃಷ್ಟಿಗಿಯೂ ಇದೆ.

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಯನ್ನು ಪಡೆದಿರುವ ಪೆರೂನಾವಿನ ಗುಣಗಳನ್ನು ಪರಿಷ್ಕಾರವಾಗಿ ಪರೀಕ್ಷೆಮಾಡುವುದಕ್ಕೆ ಮೆಕ್ಸಿಕೋ ರಾಜ್ಯ ಒಂದೇ ಸಾಕಾಗಿದೆ. ಆ ರಾಜ್ಯದಲ್ಲಿ ಅತ್ಯಂತ ಶೈತ್ಯವೂ, ಅತ್ಯಂತ ಉಷ್ಣವೂ, ಸಾಮಾನ್ಯವೂ ಮಧ್ಯಸ್ಥವೂ ಆದ ಹವಾಗುಣವುಳ್ಳ ಪ್ರದೇಶಗಳೆಲ್ಲಾ ವಿಶೇಷವಾಗಿರುತ್ತವೆ.

ಮೆಕ್ಸಿಕೋದಲ್ಲಿ ಬಹಳವಾಗಿ ಹುಟ್ಟುವ ಶೈತ್ಯರೋಗಗಳಿಗೂ ಉತ್ತರಧ್ರುವಪ್ರಾಂತ್ಯಗಳಲ್ಲಿ ಹುಟ್ಟುತಕ್ಕ ಶೈತ್ಯರೋಗಗಳಿಗೂ ತಾರತಮ್ಯವಿರುತ್ತದೆ.

ಚಳಿರಾಜ್ಯಗಳಲ್ಲಿ ಜನರಿಗೆ ವಿಶೇಷವಾಗಿ ಮೂಗು ಮತ್ತು ಗಂಟಲುಗಳಲ್ಲೇ ಶೀತ ಹುಟ್ಟಿ ಪ್ರಬಲವಾಗುವುದು. ಉಷ್ಣರಾಜ್ಯಗಳಲ್ಲಿ ಶೀತರೋಗಗಳೆಲ್ಲಾ ಮನುಷ್ಯನ ಹೊಟ್ಟೆಯೊಳಗಿರುವಂಥಾ ಅನ್ನಕೋಶ, ಪಿತ್ತಕೋಶ, ಮಲಕೋಶ, ಜಲಬಾಧೆಯಕೋಶ, ಈ ಮೊದಲಾದವುಗಳಿಗೆ ಶೈತ್ಯಹಿಡಿದು, ಅಂತರ್ಯವಾದ ನಾನಾ ರೋಗಗಳನ್ನು ಹುಟ್ಟಿಸುತ್ತೆ.

ಈ ಪ್ರಕಾರ ಅದರ ಲಕ್ಷಣಗಳು ನಾನಾ ಪ್ರಕಾರವಾಗಿದ್ದರೂ ರೋಗಕ್ಕೆ ಕಾರಣವೇನೋ ಒಂದೇ ಆಗಿದೆ. ಈ ಶೈತ್ಯವು ನೆತ್ತಿ ಹತ್ತಿ ರಟಿಸಬಹುದು, ಗಂಟಲು ಹಿಡಿದಿರಬಹುದು, ಒಳಹೊಟ್ಟೆ ಕಿವೆ ಪಟ್ಟೆಗಳನ್ನು ಅಂಟಿಕೊಂಡಿರಬಹುದು. ಆದರೂ ಶೀತವೇ ಅಷ್ಟಕ್ಕೂ ಕಾರಣವು.

ಶೀತರಾಜ್ಯಗಳಲ್ಲಿ ಹುಟ್ಟುತಕ್ಕ ಶೈತ್ಯರೋಗಗಳಿಗೆ ಪೆರೂನಾವು ಎಷ್ಟು ಖಚಿತ ಗುಣಕಾರಿಯಾಗಿ ಕಂಡುಬಂದಿರುವುದೋ ಅದೇ ರೀತಿ ಉಷ್ಣರಾಜ್ಯಗಳ ಶೀತರೋಗಗಳಿಗೂ ನಾನಾ ಗುಣಕಾರಿಯಾದ ಔಷಧವೆಂದು ಪ್ರಸಿದ್ಧಿಗೊಂಡಿದೆ.

ಪೆರೂನಾವು ಶೈತ್ಯರೋಗಗಳಿಗೆ ಪರಮೌಷಧವಾಗಿರುವುದು ಮಾತ್ರವೇ ಅಲ್ಲ; ಅದು ಮಹಾ ಬಲಕಾರಿಯಾದ ಮತ್ತು ಪುಷ್ಟಿ ಕೊಡುವ ಸೇವನಾ ಔಷಧವೆಂದೂ ಯಶಸ್ಸನ್ನು ಪಡೆದಿರುತ್ತದೆ.

ಪೆರೂನಾದಲ್ಲಿ ಬಲವನ್ನೂ ಕಾಯಪುಷ್ಟಿಯನ್ನೂ ಕೊಡುವಂಥಾ ಗುಣಗಳಿರೋದರಿಂದಲೇ ಉಷ್ಣರಾಜ್ಯಗಳವರು ಅದನ್ನು ವಿಶೇಷವಾಗಿ ಪ್ರೀತಿಸಿ ಉಪಯೋಗಿಸಿ ಕೊಳ್ಳುತ್ತಾರೆ.

ಪೆರೂನಾ ಸ್ವಭಾವಸಿದ್ಧವಾದ ಬಲಕೊಡುವ ಸೇವನಾ ಔಷಧವಾಗಿರುತ್ತದೆ. ಅದು ದೇಹದೊಳಗಿರತಕ್ಕ ನಾನಾ ಕೋಶಗಳ ಕಾರ್ಯಗಳನ್ನು ಕ್ರಮಕ್ಕೆ ತಂದಿಟ್ಟು ಪುಷ್ಟಿಮಾಡತಕ್ಕದ್ದಾಗಿದೆ.

ಅದು ರಕ್ತದ ಚಲನೆಗೆ ಚಟುವಟಿಕೆಯನ್ನು ಕೊಡುತ್ತದೆ. ತಿಂದ ಆಹಾರವನ್ನು ಚೆನ್ನಾಗಿ ಅರಗಿಸಿ, ಪರಿಪಕ್ವವಾಗಿ ದೇಹದ ಅಂಗಾಂಗಗಳಿಗೆ ವ್ಯಾಪಿಸುವಂತೆ ಅವನ್ನು ಬಲಪಡಿಸುವಂತೆಯೂ ಕೆಲಸಮಾಡುವುದು.

ಅದು ಬಲವನ್ನು ಕೊಟ್ಟು ಶರೀರ ಧರ್ಮವನ್ನು ವೃದ್ಧಿಮಾಡುವುದಲ್ಲದೆ ಜ್ಞಾನ ಮನಸ್ಸಿನ ಖಿನ್ನತೆಯನ್ನು ನಿವಾರಣೆ ಮಾಡುತ್ತದೆ. ಅದರ ಆದಿ ಮಧ್ಯಾಂತ್ಯಗಳಂತೆ ಕ್ಷಣಿಕವಾದ ಶಕ್ತಿಯನ್ನು ಕೊಡುವಂಥಾದ್ದಲ್ಲವು.

ಚಟುವಟಿಕೆಯೂ ಆರೋಗ್ಯವೂ.

ಮಿ|| ರಿಚರ್ಡ್ ಕ್ಯಾಲ್ವರ್ಟ್, ೩ ವಿಡಾಗ್ ಬೀದಿ, ಬ್ರೂಕ್ಲಿನ್, ನ್ಯೂಯಾರ್ಕ್, ಅಮೇರಿಕ, ಈತ ಬರೆಯುವುದು.—

"ಹಸಿದವನಿಗೆ ಆಹಾರ ಸ್ವಾಗೋ, ಬಾಯಾರಿದವನಿಗೆ ನೀರು ಸ್ವಾಗೋ, ಹಾಗೆ ಕಾಯಿಲೆಯವನಿಗೆ ಪೆರೂನಾವು ಇರುವುದೆಂದು ತಿಳಿಯುವಿರಿ.

"ಹಾಕ್ಸ್ಯವಾಗಳಿಂತಲೂ ಪೆರೂನಾವು ಅತಿಸೂಕ್ಷ್ಮವಾಗಿ ರೋಗವನ್ನು ವಾಸಿಮಾಡತಕ್ಕದ್ದೆಂದು ನನ್ನ ಮನಸ್ಸಿಗೆ ತೋರಿದೆ.

"ಅನೇಕ ವರುಷಗಳ ತನಕ ನನಗೆ ಆಹಾರ ಜೀರ್ಣವಾಗುತ್ತಿರಲಿಲ್ಲ; ನನ್ನ ಪಿತ್ತ ಕೋಶವು ಮಂದಗತಿಯಲ್ಲಿತ್ತು. ಆಗಾಗ್ಗೆ ಮಲವು ಸಾಗದೆ ಕಟ್ಟಿ ಭೇದಿಯಾಗುತ್ತಲೂ, ಕಿಬ್ಬೊಟ್ಟೆ ನೋಯುತ್ತಲೂ ಇದ್ದಿತು.

"ನಾನು ಅನುಭವವುಳ್ಳ ನಾಮಕಬೇಕೆಂದು ಡಾಕ್ಟರುಗಳು ತಮ್ಮ ಶಕ್ತಿಯಾದ ಮಟ್ಟಿಗೂ ಪ್ರಯತ್ನಪಟ್ಟರು. ಆದರೆ ನನಗಿದ್ದ ನೈಜವಾದ ರೋಗಲಕ್ಷಣವೇ ಅವರಿಗೆ ತಿಳಿಯದೆ ಹೋಯಿತೋ, ಅಥವಾ ಅವರು ಸರಿಯಾದ ಔಷಧವನ್ನು ಕೊಡದೆಹೋದರೋ.

"ಸನ್ನೊಂದು ವಾರಗಳಲ್ಲಿ ಪೆರೂನಾವು ನನಗೆ ವಾಸಿಮಾಡಿತು. ಅದು ನನ್ನನ್ನು ಚಟುವಟಿಕೆಯಾಗಿಯೂ ಆರೋಗ್ಯವಾಗಿಯೂ ಮಾಡಿತು. ನಿಜವಾಗಿಯೂ ನಿನಗೆ ನಾನು ಕೃತಜ್ಞನಾಗಿರುವೆನು."

ಸ್ನೇಹಿತನು ಪೆರೂನಾ ಸೇವಿಸೆಂದು ಹೇಳಿದನು

ಮಿ|| ಜಾರ್ಜ್ ಕ್ರಾಗ್, ಫೋರ್ಟ್ ನೆಲ್ ಪ ನ್ಸಿ, ಜನ್ ರಿಕ್, ಈತ ಬರೆಯುವುದು:—

"ಎರಡು ವರುಷಗಳು ನನ್ನ ನೆತ್ತಿಗೆ ಶೀತ ಹಿಡಿದಿತ್ತು. ಒಬ್ಬ ಸ್ನೇಹಿತನು ಪೆರೂನಾ ಸೇವಿಸು ಎಂದು ನನಗೆ ಹೇಳಿದನು. ಅದರಿಂದ ನನಗೆ ಸಂಪೂರ್ಣವಾಗಿ ವಾಸಿಯಾಯಿತೆಂದು ಕೃತಜ್ಞತೆಯಿಂದ ಹೇಳುತ್ತೇನೆ."

ಏಳು ವರುಷದ ಶೈತ್ಯರೋಗವು

ಮಿ|| ಅಂದಾಸ್‌ಕೆನ್, ೫೩೨ ಇ ೧೩ ನೇ ಬೀದಿ, ಕ್ಯಾನ್ಸಾಸ್ ಪಟ್ಟಣ, ಮಿಸೂರಿ, ಅಮೇರಿಕ. ಈತ ಬರೆಯುವುದು.—

"ನನಗೆ ವಾಸಿಯಾದದ್ದಕ್ಕೆ ನಿಮ್ಮನ್ನು ವಂದಿಸಿದರೆ ತೀರದು. ನಾನು ಏಳು ವರುಷಗಳ ವರೆಗೆ ಶೀತ ನೆಗಡಿ ಕೆಮ್ಮು ಅನುಭವಿಸಿ, ನಾನಾ ವೈದ್ಯರನ್ನು ಬದಲಾಯಿಸಿ ಔಷಧಿಗಳನ್ನು ಸೇವಿಸಿದೆನು. ಆದರೂ ನನ್ನ ಶೈತ್ಯರೋಗವು ಕೆಟ್ಟದ್ದಾಯಿತೇ ವಿನಹ ಕಡಮೆಯಾಗಲಿಲ್ಲ.

"ನನಗೆ ಔಷಧಿ ಕೊಡುತ್ತಿದ್ದವರಲ್ಲಿ ಕೆಲವರು ಡಾಕ್ಟರುಗಳು ಬಹಳ ಪ್ರಖ್ಯಾತಿಪಡೆದವರಾಗಿದ್ದರೂ ನನಗೆ ಅತಿ ಕಠಿಣವಾದ ಕೆಮ್ಮು ಇದ್ದೇ ಇದ್ದಿತು. ಈ ಕೆಮ್ಮಿನ ಕಷ್ಟವನ್ನು ನಾನು ವಾಸಿ ಮಾಡಿಕೊಂಡೇನೆಂಬ ಭರವಸೆ ಇರಲೇ ಇಲ್ಲ.

"ಆಗ ನಾನು ಒಂದು ಬಾಟ್ಲು ಪೆರೂನಾ ಕೊಂಡು ತಂದು, ಅದರಲ್ಲಿ ಹೇಳಿರುವ ಕ್ರಮಗಳ ಪ್ರಕಾರ ಆ ದಿನ ರಾತ್ರಿ ಸೇವಿಸಿದೆನು. ಮರುದಿನ ಬೆಳಗ್ಗೆಯೇ ನನಗೆ ಸ್ವಲ್ಪ ಗುಣವಾದಂತೆ ತೋರಿತು.

ಮೂರು ದಿನ ಸೇವಿಸಿದ ಮೇಲೆ ನನಗೆ ತುಂಬಾ ಆನುಕೂಲವಾಯಿತು. ಈಗಲಾದರೋ ನಾಲ್ಕನೆ ಸೀಸೆಯ ಔಷಧವನ್ನು ಮುಗಿಸಿದ ಮೇಲೆ ನಾನು ಸಂಪೂರ್ಣವಾಗಿ ಆರೋಗ್ಯಹೊಂದಿರುತ್ತೇನೆ.

"ಈ ಸರ್ವ ಶ್ರೇಷ್ಠವಾದ ಔಷಧಿವನ್ನು ಸೇವಿಸುವಂತೆ ಪ್ರತಿ ಒಬ್ಬನಿಗೂ ನಾನು ನಂಬಿಕೆಯಿಂದ ಶಿಫಾರಸು ಮಾಡುವೆನು."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯುತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೧೭—೪—೧೯೦೮ ರಿಂದ ೨೪—೪—೧೯೦೮ ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	1	1	0	0
ಮೈಸೂರು ,,	1	1	5	6
ಬೆಂಗಳೂರು ಡಿಸ್ಟ್ರಿಕ್ಟು	3	2	0	[illegible]
ಮೈಸೂರು ,,	12	6	55	36
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	5	8	44	32
ಚಿತ್ರದುರ್ಗ ,,	0	0	0	0
ಕಡೂರ್ ,,	0	0	0	0
ಶಿವಮೊಗ್ಗ ,,	0	0	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	24	15	104	73

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ವೈಶಾಖ ಶುದ್ಧ ಸಪ್ತಮಿ ಗುರುವಾರದಿಂದ ವೈಶಾಖ ಶುದ್ಧ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಮೇ.

ತಾ.	ವಾರ	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ	ತೇದಿ ವೈಯಾಶಿವನ
7	ಗುರು *	ಸಪ್ತಮಿ	49-48	ಪುಷ್ಯ	41-10	26
8	ಶುಕ್ರ ¶	ಅಷ್ಟಮಿ	55-2	ಶ್ಲೇ	47-52	27
9	ಶನಿ	ನವಮಿ	60-0	ಮ	51-11	28
10	ರವಿ	ನವಮಿ	0-10	ಪು	60-0	29
11	ಚಂದ್ರ	ದಶಮಿ	4-38	ಪು	0-22	30
12	ಮಂಗಳ ‡	ಏಕಾದಶಿ	8-8	ಉ	5-25	31
13	ಬುಧ ,,	ದ್ವಾದಶಿ	10-20	ಹ	9-19	1

* ಅಮೃತಸಿದ್ಧಿಯೋಗ, ಗಂಗೋತ್ಪತ್ತಿ. ¶ ಮಹಾಮೈತ್ರ, ಮೃತ್ಯುಯೋಗ, ದಗ್ಧಯೋಗ. ‡ ಸರ್ವತ್ರ ಏಕಾದಶಿ. ,, ಪರಶುರಾಮ ದ್ವಾದಶಿ, ವಿಷ್ಣುಪದಪುಣ್ಯಕಾಲ, ಪ್ರದೋಷ, ಶ್ರೀಕಂಠರಥಗಟ್ಟಾದರ ಅವತಾರಜಯಂತಿ

ಪೇಟೆ ಧಾರಣೆ.

ವಿನಸು		ಮೈಸೂರು	ಬೆಂಗಳೂರು
ಕಪ್ಪೇ ಅಕ್ಕಿ ಪಲ್ಲ ೧ಕ್ಕೆ	ರೂ.	೧೪ ೮-೦	೧೫ ೮-೦
ಸಾಧಾರಣ ಅಕ್ಕಿ [illegible]		೧೪ ೦-೦	೧೫ ೦-೦
,, [illegible]		೧೩ ೮-೦	೧೪-೦-೦
ಜೀರಸಾಲೆ ಅಕ್ಕಿ		೧೩-೪-೦	೧೫-೦-೦
ನೆಲ್ಲಕ್ಕಿ ಅವಲ್		೧೬-೦-೦	೧೬ ೦-೦
,, ಮಾಮೂಲು		೧೫-೮-೦	೧೬-೦-೦
ಕಡ್ಲೇ ಬೇಳೆ ಪಲ್ಲ ೧ಕ್ಕೆ		೧೫-೮-೦	೧೪ ೮ ೦
,, ಮಾಮೂಲು		೧೪-೮-೦	೧೪ ೦ ೦
[illegible] ಪಲ್ಲ ೧ಕ್ಕೆ		೬-೧೨-೦	೩-೦ ೦
ಕಾರಾಗಿ		೬ ೪-೦	೬ ೧೨-೦
[illegible]		೩ ೦-೦	೮-೦-೦
ಕುಸುಬೆ ಪಲ್ಲ ೧ಕ್ಕೆ		೧೧ ೮-೦	೧೧ ೦
ಬಿಳೀ ಅವರೆ		೮ ೦-೦	೮ ೮ ೦
ಕಡಲೆ		೧೦ ೦ ೦	೧೨-೪ ೦
ಉದ್ದು		೧೪ ೮-೦	೧೨ ೮-೦
ಅವರೆ		೧೨-೪-೦	೧೩ ೦ ೦
[illegible]		[illegible]	೨೫ ೦ ೦
[illegible]		[illegible]	೩ ೦ ೦
ಪರಳು [illegible]		೧೧-೦-೦	೧೨-೮ ೦
[illegible] ಪಲ್ಲ ೧ಕ್ಕೆ		೦-೮-೦	೧ ೧೦ ೦
ಮೆಣಸಿನಕಾಯಿ		[illegible]-೮-೦	೬ ೦-೦
ಮೆಣಸು		೨-೪-೦	೨ ೧೦-೦
[illegible]		೫-೦-೦	[illegible] ೧೦-೦
[illegible] ಮಣ ೧ಕ್ಕೆ		೬-೦-೦	೬ ೪-೦
[illegible] ,,		೪-೧೨-೦	೪ ೪ ೦
[illegible] ಪಲ್ಲ ೧ಕ್ಕೆ		೫-೮-೦	೬ ೧೨ ೦
[illegible] ,,		೪-೮-೦	೪-೧೨ ೦
[illegible]		೧-೪-೦	೧ ೦ ೦
,, [illegible]		೧-೦	೧ ೪ ೦
[illegible] ಮಣ ೧ಕ್ಕೆ		೧೪-೮ ೦	೧೫ ೦-೦
[illegible] ಪಟ್ಟ ೧ಕ್ಕೆ		೪ ೧೫-೦	೪ ೦ ೦
ತೆಂಗಿನಕಾಯಿ ೧೦೦ಕ್ಕೆ		೬ ೮-೦	೬ ೦ ೦
ಅಡಿಕೇಕಾಯಿ ಮಣ ೧ಕ್ಕೆ		೧-೦-೦	೧ ೦ ೦
ಅಂತಸ್ಥಳದ ಕಾಯಿ ಮಣ ೧ಕ್ಕೆ		೨-೦-೦	೨-೪-೦
ಸಕ್ಕರೆ (ಪೌಂಡ್) ಕೆಂಪು		೧೫ ೩-೦	೧೫-೯ ೦
,, ಬಿಳಿದು		೧೫-೧೦-೦	೧೫- ೧ ೦
,, ,, ಗಟ್ಟಿ ತೊಲ ೧ಕ್ಕೆ		೨೩-೧೦-೦	೨೪-೮ ೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೬೫-೦-೦	೬೮ ೦ ೦

Printed and Published by the Rev. E. W. Thompson, M. A., Proprietor and Manager, Wesleyan Mission Press, Mysore. 7/5/1908.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸ್ವರ್ಗ ೧೯೦೮ ನೇ ಇಸವಿ ಮೇ ತಾರೀಖು ೧೪ ನೇ ಗುರುವಾರ. ಸಂಚಿಕೆ ೫೦.

AMRUTANJAN DEPOT, 16 OAK-LANE, BOMBAY. [17-12]

ಗುಣ ಕಂಡುಬರುವದಿಲ್ಲವಾದರೆ ಹಣ ವರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ.—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮ್ ಮತ್ತು ಕ್ಷಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಅತ್ಯುತ್ತಮ ಡಾಕ್ಟರುಗಳ ಅಭಿಪ್ರಾಯಗಳು:—

ಪಿ. ಆರ್. ಸಿರ್ಲೋಗಾಂಕಾರ್, ಎಲ್. ಆರ್. ಸಿ. ಪಿ., ಎಂಡ್ ಎಸ್. ಎಲ್. ಎಮ್., ಮುಂಬಯಿ, ಇವರು ಬರೆಯುವದೇನಂದರೆ—ತಲೆನೋವಿಗೆ ಮತ್ತು ಎಲ್ಲಾ ತರದ ನೋವಿಗೆ ಅಮೃತಾಂಜನವು ಅತಿ ಉತ್ತಮವಾದದ್ದು.

ಮೆ॥ ದಿನಾನಾಥ ಬಿ. ನಾಯರ್ ಡಾಂಡೇಕರ್, ಎಲ್. ಎಮ್., ಎಂಡ್ ಎಸ್., ಎಂಡ್ ಜೆ. ಪಿ., ಮುಂಬಯಿ—ವಾತದ ನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು.

ಮೆ॥ ದೇಸಾಯಿ ನಾನೋತ್ತಮ, ಹೈಕೋರ್ಟು ವಕೀಲ ಮುಂಬಯಿ. ಇವರ ಅಭಿಪ್ರಾಯ:—ತಲೆನೋವಿಗೂ ಮತ್ತು ಎಲ್ಲಾ ತರದ ನೋವಿಗೂ ಅಮೃತಾಂಜನವು ಉತ್ತಮವಾದದ್ದು.

ಮೆ॥ ಆರ್. ಡಿಸೋಜಾ, ಮೆನೇಜರ್, ಕಾಫಿ ಎಸ್ಟೇಟು, ಮರಕಾರಾ, ಕೊಡಗು ಇವರ ಅಭಿಪ್ರಾಯ: ನಿಮ್ಮಲ್ಲಿನ ಅಮೃತಾಂಜನವು ಶೀತ, ಕಫ ಮತ್ತು ನೋವಿಗೂ ಸಹ ಉತ್ತಮವಾದದ್ದು. ನನ್ನ ಕೂಲಿಯ ಜನರಿಗೆ ಬಹಳವಾಗಿ ಗುಣಬಂದಿರುತ್ತದೆ.

ಮೆ॥ ರಾಜಾರಾಮ ತುಕಾರಾಮ, ವೈಸ್ ಪ್ರೆಸಿಡೆಂಟ, ಬೆಂಡರಾ ಮುನಿಸಿಪಾಲಿಟಿ, ಇವರ ಅಭಿಪ್ರಾಯ.—ನಿಮ್ಮ ಅಮೃತಾಂಜನವು ತಲೆನೋವಿಗೂ, ವಾತಕ್ಕೂ ಅತ್ಯುತ್ತಮವಾದದ್ದು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಎಲ್ಲಾ ಔಷಧ ವರ್ತಕರಿಂದ ಮಾರಲ್ಪಡುತ್ತದೆ. ಬಾಟ್ಲಿ ಒಂದಕ್ಕೆ ಕಿಮ್ಮತು ೦–೮–೦. ಪೋಸ್ಟು ಖರ್ಚು ೦–೪–೦. ಅಥವಾ ಮುಂಬಾಯಿಯಲ್ಲಿಯ ವಿಲಿಯಂ ಮತ್ತು ಕಂಪನಿಯಿಂದ ನೇರಾ ತರಿಸಿಕೊಳ್ಳಬಹುದು

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು. ವಿಳಾಸ—ಅಮೃತಾಂಜನ ಡಿಪೋ, ೧೬ ಓಕ್ ಲೇನು, ಮುಂಬಯಿ. ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ" ಮುಂಬಯಿ. ಏಜಂಟರು—ವಿಲಿಯಂ ಮತ್ತು ಕಂಪೆನಿ, ಫೋರ್ಟು, ಮುಂಬಯಿ.

ಗಜಕರ್ಣದ ಮುಲಾಮು.—ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ಕಜ್ಜಿ ವಗೈರೆ ನಾಶವಾಗುವದು. ಇದು ಉರಿಯುವದಿಲ್ಲ. ಡಬ್ಬಿ ಒಂದಕ್ಕೆ ಕಿಮ್ಮತು ೦–೬–೦

ಕಾರ್ಡು ಸೈಜು ೪¼ × ೩¼

ಫೋಟೋ ತೆಗೆಯುವ

ಫೋಟೋ ಕ್ಯಾಮೆರಾ.

84 39

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮೆರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕಾಗದದಲ್ಲಿಯೇ ಮಾಡಿ ಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ

ಇದು ಸಿಕ್ಕತಕ್ಕ ವಿಳಾಸ.—

ಛೋಟಾಲಾಲ ಭಗನಲಾಲ ಮಹಾಜನ. ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಜ್ವ ರ ಹ ರಿ. 44-2



ಇದು ಸಾಧಾರಣ ಜ್ವರ, ಚಳೀಜ್ವರ, ಮೂರ್ಛೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಾನ್ಯರಾದ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಬಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಆಶ್ಚರ್ಯಗುಣ ಹೊಂದಿರುವರು. ಇನ್ನೂ ಜನಗಳು ಕಾಯಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ; ೧–೮ ರೂ., ೩–೦–೦ ರೂ., ೧೦ ರೂ.; ಇನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

••••••••

ಓ ಮ ೦ ಕ ಪ್ರೂ ಣ ರ



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಬಂದಿಹವರ್ಜ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ವಿವರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಕಾಪೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಂಸದಾರರಲ್ಲಿ ವಿಶೇಷ:—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ನೆಲೆಂಡ್ ಬೀಚ್ ಲೈನ್, ಮದರಾಸ್

ಹಾಸನದ ಟೋಪಿ ಬೇಕೇ?

117 29

ನಂಬರ್ ೧ ಹಾಸನ ಟೋಪಿ ಡಜನ್ ೧ ಕ್ಕೆ ರೂ ೧೩–೦–೦ ನೀಲ ಕೆಂಪು ಕಪ್ಪು ಬಿಳಿಕ, ಕಾಟ ಸೀಲಿ ಟೋಪಿಗಳು ೧ ಕ್ಕೆ ರೂ ೧–೬–೦, ೧–೪–೦ ಚುಕ್ಕೆಯುಳ್ಳ ಟೋಪಿಗಳು ೧ ಕ್ಕೆ ರೂ ೧–೪–೦, ೧–೨–೦ ಮೈಸೂರು ಟೋಪಿ ಡಜನ್ ೧ ಕ್ಕೆ ರೂ ೮–೦–೦ ಸಾದಾ ಟೋಪಿಗಳು ಡಜನ್ಕ್ಕೆ ರೂ ೩–೬–೦ ಸಾದಾ Chaapir ಡಜನ್ ೧ ಕ್ಕೆ ರೂ ೬–೬–೦ ೧೦ ಟೋಪಿ ತಗೆದ ಉಲ್ ದಾರಕ್ಕೆ ರೂ. ೩–೮–೦. ನಮ್ಮ ವಿಳಾಸ.—

ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ಇದನ್ನು ನೋಡಿದರೆ ಬಹು ಆಶ್ಚರ್ಯ ಪಡುವಿರಿ.

38-4

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು ೧ ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು ಈ ಪುಸ್ತಕ ಭಾಷೆಯು ಬಹು ಸರಳವಾಗಿದೆ ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ ವಿ. ಪಿ. ಮೂಲಕ ರೂ. ೨–೩–೦ ಪತ್ತು ಅಥವಾ ಇಪ್ಪತ್ತೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂಬುದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ನೋಡಿ

ನಮ್ಮ ವಿಳಾಸ.— ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ

15-13

೧. ಶ್ರೀಕರಾಂಬರ ಮಾತ್ರೆಯು.—ಈ ಮಾತ್ರೆಗಳು ಬಹಳ ಸುವಾಸನೆಯಾಗಿಯೂ ಬಾಯಿಯಲ್ಲಿ ತಾನಾಗಿ ಕರಗುವುದಾಗಿಯೂ ಒಳ್ಳೇ ಗುಣವುಳ್ಳದುವಾಗಿಯೂ ಇರುತ್ತವೆ.



ತಾಂಬೂಲದೊಡನೆಯಾಗಲಿ, ಹಾಗೆಯೆ ಆಗಲಿ ಎಷ್ಟು ತಿಂದರೂ ಉಷ್ಣ ಮಾಡುವುದಿಲ್ಲ. ಹಲ್ಲುನೋವು, ಬಾಯಿವಾಸನೆ, ಮಲಬದ್ಧ, ಕೆಮ್ಮು, ನೆಗಡಿ, ನಿಶ್ಶಕ್ತಿ, ಹೊಟ್ಟೆಯುರಿ, ಅರೋಚಕ, ಅಗ್ನಿಮಾಂದ್ಯ, ಇವುಗಳನ್ನು ಹೋಗಲಾಡಿಸಿ ಒಳ್ಳೇ ಹಸಿವನ್ನೂ ಮನೋಲ್ಲಾಸವನ್ನೂ ಎಲ್ಲಾ ನರಗಳಿಗೂ ಬಲವನ್ನೂ ಉಂಟುಮಾಡುತ್ತದೆ ಶಿಶುಗಳೂ ಗರ್ಭಿಣಿಯರೂ ನಿರಾಕ್ಷೇಪವಾಗಿ ಸೇವಿಸಬಹುದು. ಬೆಲೆ ೫೦ ಮಾತ್ರೆಯುಳ್ಳ ಕುಪ್ಪಿ ೧ಕ್ಕೆ ೪ ಆಣೆ. ಐದು ಕುಪ್ಪಿಗಳಿಗೆ ಒಂದು ಹೆಚ್ಚು. ೯ ಕುಪ್ಪಿ ವರೆಗೂ ಪೋಸ್ಟೇಜು ೪ ಆಣೆ

೨ ಲೋಕಾನುಗ್ರಹರ ಕಸ್ತೂರಿ ಮಾತ್ರೆ, ಅನುಪಾನ ಪತ್ರ ಸಹಿತ, ಕುಪ್ಪಿ ೧ಕ್ಕೆ ೪ ಆಣೆ.

ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ದೇಶಬಾಂಧವರೇ! ಲಾಲಿಸಿ !!

123-25

ಸ್ವದೇಶೀ ಭಾವನೆಯು ಎಲ್ಲೆಲ್ಲಿಯೂ ಹರಡಿದೆ. ಇದರಿಂದ ಕಾರ್ಖಾನೆ ಗಾಣ್ಯಕಾರರೆಲ್ಲರು ಪ್ರಸಿದ್ಧವಾದ ಮಧುರೆಯನ್ನು ಹೆಸರು ವಾಸಿಯಾದ ಗಟ್ಟಿ ಮತ್ತು ಗ್ಯಾರಂಟಿ ಬಣ್ಣದ ಎರಡುವರೆ ಮೊಳದಗಲ ಜರಿನಾದವರೆ ಮೊಳಕ್ಕಿಂತ ಹೆಚ್ಚಾದ ಉದ್ದವುಳ್ಳ ಕೆಂಪು ಅಥವಾ ಕಪ್ಪು ಬಣ್ಣದ ಛಟು ಸೀರೆಗಳು ಮತ್ತು ನಯವಾದ ಜೇಸಿಗೆಗೂ ಸಹ ಬಹಳ ಉಪಯೋಗವಾದ ಸಾಧುರೆ ಸೀರೆಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತಾ ಇರುವುದರಿಂದ ಕೂಡಲೆ ನಮಗೆ ಬರೆದು ತರಿಸಿ ಕೊಳ್ಳಿ. ವ್ಯಾಪಾರಸ್ಥರು ಸಹಾ ತರಿಸಿ ನೋಡಬಹುದು. ಸುಲಭಕ್ರಯ ಸಾದಾ ಕ್ರಯ ರೂ. ೨—೮—೦. ಬೆಳೆಯ ಚುಕ್ಕೆ ಯಾ ಹುವ್ವಿ ಗಳಿಂದ ಕೂಡಿದ್ದು ರೂ. ೩—೬—೦. ಬಹಳ ನಯವಾದ ಮತ್ತು ನಾಜೋಕಾದದ್ದು ರೂ. ೫, ರೂ. ೬.

ಪುರುಷರ ಸೇರಿ ರೇಷ್ಮೆ ವಸ್ತ್ರಗಳು.

೨ ಮೊಳದಗಲ, ನಾಲ್ಕುಮೊಳದುದ್ದ, ರೂ. ೫. ಬೇಸಿಗೆಯ ಸೋಗಸಾದ ಬಾರ್ಡರ್ ರೂ. ೨. ಮುಂಬ್ಯೆ ಪಂಚೆ ೮ ಮೊಳದುದ್ದ ರೇಷ್ಮೆ ಅಂಚು ಜೋಡಿ ೧ಕ್ಕೆ ರೂ. ೬ ಸಾದಾ ರೂ. ೨॥, ರೂ ೩.

ವಿಳಾಸ:—ರಾವ್ ಎಂಪೋರಿಯಂ, ಸ್ಟಿರ್ಲಿಂಗ್ ರೋಡ್,

ವೇಲೂರಿ, ಮದ್ರಾಸು.

ಮಹಾ ಬಾಧಾಪಹಾರಿಣಿಯು.

58-51

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಮಹಾಶ್ರೇಷ್ಠ ಲೇಪನವು ಸಕಲ ವಿಧವಾದ ಬಾಧೆಗಳನ್ನು ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಶಾಸ್ತ್ರೀ ಪ್ಲೀಡರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಾರೆ. ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಕಳತ, ಗಂಟ್ಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಕ್ಷೀರರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಆಘಾತದ ನೋವು, ಹಲ್ಲುನೋವು. ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಬುಡಸಹಿತ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೇಲೆ ಸ್ವಲ್ಪ ಹಚ್ಚಿಬಿಟ್ಟು ಅದರ ಪ್ರಭಾವವನ್ನು ಅನುಭವಿಸಬಹುದು. ಬಹುಮಂದಿ ಪ್ರತಿಷ್ಠಿತರು ಇದಕ್ಕೆ ಸರಿಯಾದ ತೈಲವು ಬೇರೊಂದಿಲ್ಲವೆಂದು ಹೇಳುತ್ತಾರೆ.

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೭ ಆಣೆ. ಅದರ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ಪೇದಮಲೆಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಬೌರಿಂಗ್ ಪೇಟೆಯ ಓರಿಯಂಟಲ್ ಟುಬ್ಯಾಕೋ ಕಂಪನೀ.

ಇಸ್ತಿಹಾರ್ನಾಮೆಯು.

ಬೌರಿಂಗ್‌ಪೇಟೆಯ ಎ. ವಿ. ರಾಮಲಿಂಗಂ ಎಂಬ ನಾನು ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—ಬೌರಿಂಗ್‌ಪೇಟೆಯ ಮಿ॥ ಸ್ಯೆಯದ್ ರಸೂಲ್ ಸಾಹೇಬ್‌ಯವರೂ ನಾನೂ ಇದುವರೆಗೆ ಪಾಲುದಾರರಾಗಿ, ಬೌರಿಂಗ್‌ಪೇಟೆಯ "ದಿ ಓರಿಯಂಟಲ್ ಟುಬ್ಯಾಕೋ (ಹೊಗೆಸೊಪ್ಪು) ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ" ಎಂಬ ಕಾರ್ಖಾನೆಯನ್ನಿಟ್ಟು ನಡೆಸುತ್ತಾ ಬಂದೆವು. ನಮ್ಮನಮ್ಮ ಪಾಲುದಾರಿಕೆಯನ್ನು ಪರಿಹರಿಸಿಬಿಡಬೇಕೆಂದು ನಾವಿಬ್ಬರೂ ಒಪ್ಪಿ ತಾ. ೧ನೆ ಏಪ್ರೇಲ್, ೧೯೦೮ ರಲ್ಲಿ ಪಂಚಾಯಿತರ ಇತ್ಯರ್ಥಕ್ಕೆ ಒಪ್ಪಿಸಿದೆವು. ಅವರು ತೀರ್ಮಾನ ಮಾಡಿರುವ ಪ್ರಕಾರ ೧೯೦೮ ನೇ ಇಸವಿ ಮಾರ್ಚಿ ತಾ. ೨೫ ರ ಲಾಗಾಯತು ನಾವಿಬ್ಬರೂ ಪ್ರತ್ಯೇಕರಾಗಿರುತ್ತೇವೆ. ಆದಿನದಿಂದ ನನ್ನ ಪಾಲುದಾರಿಕೆಯು ಮುಕ್ತಾಯವಾಗಿರುತ್ತದೆಂದು ನಾನು ಆ ತೀರ್ಮಾನವನ್ನು ಈ ಪಬ್ಲಿಕ್ ನೋಟೀಸಿನ ಮುಖಾಂತ್ರ ತಿಳಿಯಪಡಿಸಿರುತ್ತೇನೆ. [43-3]

ಮೇಲ್ಕಂಡ ಮಿ॥ ಸ್ಯೆಯದ್ ರಸೂಲ್ ಸಾಹೇಬರವರು ಒಳ್ಳೆಯ ಮತ್ತು ಯೋಗ್ಯವಾದ ಪ್ರತಿಫಲವನ್ನು ಪಡೆದು ಆ ಕಂಪನಿಯಲ್ಲಿ ತಮಗಿದ್ದ ಪಾಲುದಾರಿಕೆಯ ಸಮಸ್ತವಾದ ಹಕ್ಕು ಬಾಧ್ಯತೆಗಳನ್ನು ಮನಃಪೂರ್ವಕವಾಗಿ ತ್ಯಜಿಸಿ ಬಿಟ್ಟು ಇರುತ್ತಾರೆ ಮತ್ತು ಎಂ. ವಿ. ರಾಮಲಿಂಗಂ ಎಂಬ ನಾನೇ ಮೇಲ್ಕಂಡ ತಾರೀಖು ಲಾಗಾಯತು ದಿಓರಿಯಂಟಲ್ ಟುಬ್ಯಾಕೋ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿಯ ಪೂರ್ಣಸ್ವತಂತ್ರನೆಂದೂ, ಆ ಕಂಪನಿಯನ್ನು ಅದೇ ಹೆಸರಿನಲ್ಲಿ ನಾನೊಬ್ಬನೇ ನೀಡು ನಡೆಸುವ ಸಮಸ್ತ ಹಕ್ಕು ಬಾಧ್ಯತೆಗಳನ್ನು ಪಡೆದಿರುತ್ತೇನೆಂದೂ ನಿರ್ಧರಿಸಲ್ಪಟ್ಟಿರುತ್ತೇನೆ.

ಇದಲ್ಲದೆ ಲೇಟ್ ಪಾಲುದಾರಿಕೆ ಇದ್ದಾಗ ಈ ಕಂಪನಿಯು ಲೇಣದೇಣಗಳೆಲ್ಲಾ ಕೆಳಗೆ ರುಜು ಮಾಡಿರುವ ನಾನೇ ಹಕ್ಕುದಾರನಾಗಿರುತ್ತೇನೆಂದೂ ತೀರ್ಮಾನಿಸಲ್ಪಟ್ಟಿದೆ. ಅದ್ದರಿಂದ ಈ ಕಂಪನಿಗೆ ಸಲ್ಲಬೇಕಾಗಿರುವ ಸಾಲಗಳನ್ನು ವಸೂಲ್ಮಾಡುವುದಕ್ಕೂ, ಆ ಕಂಪನಿಯಿಂದ ಇತರರಿಗೆ ಸಲ್ಲಬೇಕಾಗಿರುವ ಹಣಗಳನ್ನು ಕೊಟ್ಟು ತೀರಿಸುವುದಕ್ಕೂ ನಾನೊಬ್ಬನೇ ಪೂರ್ಣ ಅಧಿಕಾರವುಳ್ಳವನಾಗಿರುತ್ತೇನೆ.

ಎಂ. ವಿ. ರಾಮಲಿಂಗಂ, ಸೋಲ್ ಪ್ರೊಪ್ರೈಟರ್,

ಓರಿಯಂಟಲ್ ಟುಬ್ಯಾಕೋ ಮ್ಯಾ., ಕಂಪನಿ,

ಬೌರಿಂಗ್‌ಪೇಟೆ.

CHAMBERLAIN'S PAIN BALM

ಚೇಂಬರ್ಲೀನ್ ಯವರು ಮಾಡಿದ ನೋವುಹರ ಔಷಧವು.

1-20



ಬೆನ್ನು ಬಳುಕಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಗಾಯಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಜಂಪಿಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ರೆಬಾರದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೀನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ನೋವಿರುವ ಕಡೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಜಾಡ್ಯವನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವುದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ.

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೆ

SCOTT'S EMULSION. 33-7

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿಕೊಟ್ಟ ಕೂಡಲೆ ದೊಡ್ಡ ವ್ಯತ್ಯಾಸ ತೋರುವದು.

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖಚಿತ್ತವನ್ನು ತೋರಿಸುವದು.

ಕೈಯಿಂದ ಮುಟ್ಟ ತಯಾರಿಸಿದ್ದಲ್ಲ.

ಎಲ್ಲಾ ಔಷಧವ್ಯಾಪಾರಿಗಳಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ವಿಧಾನ, ಮನುಷ್ಯ ಇರುವ ಔಷಧ ವನ್ನೇ ತೆಗೆದುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-20

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು! ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನ ದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಮಾದರಿಯೆಲ್ಲಾ ಬೇರೆಯಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ತಿಳಿದುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ವಾದರಿಯೆಲ್ಲಾ ಸೆಟ್ಟಿಗೆ ವಿಲಾಯಿತಿಯಿಂದಲೇ ಬರುವವು. (೨) ಟೋಪಿಗಳನ್ನು ಬುದ್ಧಿಗೆ ಸಾಮ ನಿಂತಾ ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ಸ್ತಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೆದಾದ, ಚನ್ನಾಗಿ ಹೊಸದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದದ್ದು ಬೇಕಾದರೆ, ನಮ್ಮಲ್ಲಿ ದೊರೆಯುವುದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿಕೆ, ಕಾಫಿ ಟೋಪಿಗಳು ೧ ರೂ. ೪ ಆ.; ೧ ರೂ ೩ ಆ, ೧ ರೂ. ೬ ಆ.

ರೇಷ್ಮೆ ಜುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ ಜಾದರ ಟೋಪಿಗಳು ೧ ರೂ. ೧೨ ಆ.; ೧ ರೂ. ೪ ಆ.; ೧ ರೂ ೩ ಆ ಉಸುಕಿನ ಟೋಪಿಗಳು ೧ ರೂ. ೪ ಆ.; ೧ ರೂ. ೩ ಆ.

ಕೊನೆಗಾಗಿ ಟೋಪಿ, ಸೂಫಿ ಮೇಹೋಸು, ಅರ್ಧ ಚೇಹೋ ಮು ಕತ್ತಿನ ಪಟ್ಟಿ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿವಂಥವರಿಗೆ ಕೊಟ್ಟು ಕಳುಹಿಸುತ್ತೇವೆ.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಸುಲಭ ಖರೀದಿ! ನೋಡಿ !!

46-2

ರಾಸ್ಕೋಪ್ಸ್ ಸಿಸ್ಟಂ ಲೀವರ್ ವಾಚು ಸರಪಣಿ ಸಹಿತ ವಿ. ಪಿ. ಪಿ. ಚಾರ್ಜು ಸೇರಿ ೩—೮—೦ ಮಾತ್ರ. ಇದುವರೆಗೂ ಈ ಖರೀದಿಗೆ ಕೊಟ್ಟಿಲ್ಲ. ವಾಚಿಗೆ ಒಂದನ್ನು ತರಿಸಿ ನೋಡಿರಿ. ನಮ್ಮ ವಿಳಾಸ—ಟಿ. ಸಿ. ಕನ್ನ ಯ್ಯರೆಟ್ಟಿ ಅಂಡ್ ಸನ್, ಜನರಲ್ ಮರ್ಚೆಂಟ್, ನಂಬರು ೨೦, ಸಿಂಗನ್ನನ ಬೀದಿ, ಸಾಹುಕಾರ್ ಪೇಟೆ, ಮದ್ರಾಸು.

ಹರಾಜ್ ಇಸ್ತಿಹಾರು.

45-2

ಸದರಿ ೧೯೦೮ನೇ ಇಸವಿ ಮೇ ಮಾಹೆ ೧೮ನೇ ಮಧ್ಯಾಹ್ನ ಸಲ್ಲಿ ಬೆಂಗಳೂರು-ಹರಿಹರ ರೇಲ್ವೆಯ ಅರಸೀಕೆರೆ ಡಿಪ್ಪೋದಲ್ಲಿ ಸುಮಾರು ಹದಿನಾರು ಸಾವಿರ (೧೬,೦೦೦) ಮೊ॥ ಅಳಲೆಕಾಯಿ ಮತ್ತು ಮೂರು (೩) ಮೊ॥ ಯಾಲಕ್ಕಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಹೆಚ್ಚು ಸಂಗತಿ ತಿಳಿಯಬೇಕಾದ್ದು ಯುಳ್ಳವರು ಹಾಸನದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿಗೆ ಬರ ದುಕೊಳ್ಳಬಹುದು.

ಹಾಸನ, (ಸ್ಕ) ಬಿ. ಐ. ಚಾಮರಾವ್,

೧—೫—೦೮. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು.

"ಕನ್ನಡ ಲಾ ರಿಪೋರ್ಟರ್."

ಪಿಪ್ಪ ಕೋರ್ಟು ಕಚೇರಿಗಳಲ್ಲೂ ಸಾವಿದಾ ಉಪಯೋಗಿಸಲ್ಪಡುತ್ತಿರುವ ಪ್ರಿವಿಕೌನ್ಸಿಲಿನ, ಕಲ್ಕತ್ತ ಅಲಹಾಬಾದ್ ಬೊಂಬಾಯಿ ಮದ್ರಾಸ್ ಹೈಕೋರ್ಟುಗಳ, ಮೈಸೂರು ಚೀಫ್‌ಕೋರ್ಟಿನ ಫೈಸಲುಗಳು ಕನ್ನಡಕ್ಕೆ ಭಾಷಾಂತರಿಸಲ್ಪಟ್ಟು ಪ್ರಕಟಿಸಲ್ಪಡುವ "ಕನ್ನಡ ಲಾ ರಿಪೋರ್ಟರ್" ಎಂಬ ಮಾಸಪತ್ರಿಕೆಯು ಮುಂದಿನ ಜೂನ್ ಲಾಗಾಯತು ಹೊರಡುತ್ತದೆ ಇದಕ್ಕೆ ವರ್ಷದ ಚಂದಾ ೧ ರೂ. ಬಿಡಿಪತ್ರಿಕೆ ಇಜನ್ ತಿಂಗಳವರೆಗೆ ೧೦ ಆ. ಒಪ್ಪಿ ಆ ಮುಂದಿನ ತಿಂಗಳವರೆಗೆ ೨ ಆಣೆ, ಚಂದಾವನ್ನು ಮುಂಗಡವಾಗಿ ಕೊಡಬೇಕು; ಅಥವಾ ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ಪೋಸ್ಟ್ ಸ್ಟಾಂಪನ್ನು ಕಳುಹಿಸಬಹುದು. ಪತ್ರಿಕೆಯನ್ನು ಅಪೇಕ್ಷಿಸುವವರು ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು

[40-3] ಈ ವಿಳಾಸಕ್ಕೆ ಬರೆಯತಕ್ಕದ್ದು.

ಇಲ್ಲಿ ನೋಡಿ.

3-20

ತುಮಕೂರು ಮಿರ್ಜಾ ಇಲಾಖೆಯಲ್ಲಿ ಯಾನೋಬಿಯಾ ನೇಶೆಯವರಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠಮಾದ ಕುಲ ದಾರದಿಂದ ತಯಾರಾಗುತ್ತವೆ.

ಕ್ರಯ:—೧೦ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯವರೆಗೆ

೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಸೇಕಡ ೧೦ ರಂತೆ ಡಿಸ್ಕೌಂಟ್ ಕೊಡಲ್ಪಡುವದು.

ನಮ್ಮ ವಿಳಾಸ:—ಮೇನೇಜರ್.

ಹಾಸನದ ಟೋಪಿ ಕಾರ್ಖಾನೆ, ಮಿರ್ಜಾ ಇಲಾಖೆ, ತುಮಕೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . . . . . . ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ . . . . . . ರೂ. ೧—೧೦—೦

" " " " ೧—೧೪—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ವೃತ್ತಾಂತ ಪತ್ರಿಕೆ.

:o:

ಸನ್ ೧೯೦೮ ನೇ ಇಸವಿ ಮೇ ತಾ॥ ೧೩ ನೇ ಗುರುವಾರ.

ಸಿಡಿಮದ್ದಿನ ಕ್ರೂರಕೃತ್ಯಗಳು.

ಅಲಹಾಬಾದಿನ ಬಳಿ ಸಿಡಿಮದ್ದಿನ ಗುಂಡು ಎಸೆಯಲ್ಪಟ್ಟು ಇಬ್ಬರು ಇಂಗ್ಲಿಷ್ ಸ್ತ್ರೀಯರೂ ಒಬ್ಬ ಕಾನ್ಸ್ಟೇಬಲನೂ ಮೃತಪಟ್ಟ ವಿಚಾರವನ್ನೂ, ಇದೇ ಸಂದರ್ಭದಲ್ಲಿ ಹೊರಗೆ ತಿಳಿದುಬಂದಿರುವ ಭಯಂಕರವಾದ ಸಂಗತಿಗಳನ್ನೂ ಈ ಪತ್ರಿಕೆಯ ಇನ್ನೊಂದು ಕಡೆ ಸವಿಸ್ತಾರವಾಗಿ ಪ್ರಕಟಿಸಿದ್ದೇವೆ. ಆ ಮದ್ದಿನ ಗುಂಡು ಕಲ್ಕತ್ತೆಯಲ್ಲಿ ಮ್ಯಾಜಿಸ್ಟ್ರೇಟರಾಗಿದ್ದ ಮೆ॥ ಕಿಂಗ್ಸ್‌ಫರ್ಡ್‌ಯವರನ್ನು ಕೊಲ್ಲಬೇಕೆಂಬ ಉದ್ದೇಶದಿಂದ ಅವರೇ ಆ ಗಾಡಿಯಲ್ಲಿದ್ದಾರೆಂದು ಊಹಿಸಿ ಎಸೆಯಲ್ಪಟ್ಟಿತೆನ್ನುವುದಕ್ಕೆ ಸಂಶಯವಿಲ್ಲ. ಪೋಲೀಸಿನವರು ಪತ್ತೆ ಹಚ್ಚಿ ಶೋಧ ನಡಿಸಿದ್ದರಲ್ಲಿ ಕಲ್ಕತ್ತೆಯೊಳಗೆ ಸಿಡಿಮದ್ದಿನ ಗುಂಡುಗಳನ್ನು ತಯಾರುಮಾಡುವಂಥಾ ಒಂದು ಅಂತರಂಗದ ಸಂಘವು ಇರುವುದು ಬಯಲಿಗೆ ಬಂದಿತು. ಈ ಸಂಘದವರಿಗೂ ರಾಜಕೀಯ ವಿಷಯಗಳನ್ನು ಹಿಡಿದು ಗಲಭೆಮಾಡುತ್ತಿರುವ ಕೆಲವು ಜನರಿಗೂ ಸಂಬಂಧವಿದೆ ಎಂದು ಹೇಳಲು ಅನುಮಾನವಾಗುವುದಿಲ್ಲ. ಆದರೆ ಹಿಂದುಸ್ಥಾನದ ದೇಶೀಯ ಪತ್ರಿಕೆಗಳಲ್ಲೂ ಹಲವು ದೇಶೀಯ ಸಭೆಗಳಲ್ಲೂ ಮೇಲ್ಕಂಡ ಕ್ರೂರಕೃತ್ಯಗಳು ಸಹಜವಾದವುಗಳಲ್ಲವೆಂದು ಪ್ರತಿಭಟಿಸಿರುವುದನ್ನು ನೋಡಿ ಸಂತೋಷಪಡುತ್ತೇವೆ. ಮತ್ತು ಇಂಥಾ ದುಷ್ಟವಾದ ಸಂಘದ ಜೊತೆಗೆ ಸಜ್ಜನರ್‍ಯಾರೂ ಸೇರಲಾರರೆಂತಲೂ, ಹಿಂದುಸ್ಥಾನದವರೆಲ್ಲಾ ಆ ಸಂಘದವರನ್ನು ಅಸಹ್ಯಪಟ್ಟು ದೂರೀಕರಿಸುತ್ತಾರೆಂತಲೂ ನಂಬುವೆವು.

ಈ ಸಂದರ್ಭದಲ್ಲಿ ಎರಡು ವಿಷಯಗಳನ್ನು ನಮ್ಮ ವಾಚಕರೆಲ್ಲಾ ಚನ್ನಾಗಿ ತಿಳಿದುಕೊಳ್ಳಬೇಕಾಗಿದೆ. ಮೊದಲನೆಯದಾಗಿ, ಇಂಥಾ ಅಧರ್ಮಪ್ರವರ್ತನೆಗಳ ಮೂಲಕ ಯಾವ ದೇಶವನ್ನು ಅಭಿವೃದ್ಧಿಸ್ಥಿತಿಗೆ ತರುವುದು ಎಂದಿಗೂ ಸಾಧ್ಯವಿಲ್ಲ. ದೃಷ್ಟಾಂತವಾಗಿ, ಯೂರೋಪಿನ ಹಲವು ರಾಜ್ಯಗಳಲ್ಲಿ ಅಂತರಂಗ ಸಂಘಗಳು ಈಗಲೂ ಇರುವವು. ಈ ಸಂಘಗಳವರು ಆಗಿಂದಾಗ್ಗೆ ಸಿಡಿಮದ್ದಿನ ಗುಂಡುಗಳನ್ನು ಎಸೆದು ಭಯಂಕರವಾದ ನಾನಾ ಕ್ರೂರಕೊಲೆಗಳನ್ನೂ ಅನಾಹುತಗಳನ್ನೂ ನಡಿಸುವರು. ಅವರೇನು? ಅಂಥಾ ಯಾವ ಒಂದು ಕೃತ್ಯದಿಂದಲಾಗಲಿ ಯಾವ ದುಷ್ಟವಾದ ಗವರ್ನಮೆಂಟನ್ನೂ ನಿರ್ಮೂಲಮಾಡಲು ಸಾಧ್ಯವಾಗಲಿಲ್ಲ; ಅಥವಾ, ಈ ಕ್ರೂರಕೃತ್ಯಗಳನ್ನು ನಡಿಸಿದ್ದರಿಂದ ಗವರ್ನಮೆಂಟಿನ ದುಷ್ಕಾರ್ಯಗಳು ಪ್ರಜಾಹಿತಕರಗಳಾಗಿ ಮಾರ್ಪಡಲಿಲ್ಲ. ಅದಕಾರಣ ಹಿಂದುಸ್ಥಾನದ ಪ್ರಜೆಗಳು ಇಲ್ಲಿನ ಗವರ್ನಮೆಂಟು ಉತ್ತಮಸ್ಥಿತಿಗೆ ಬರಬೇಕೆಂದು ಕುತೂಹಲಪಡುವವರಾಗಿದ್ದರೆ ಅವರು ನ್ಯಾಯವೂ ಧರ್ಮವೂ ಆದ ಮಾರ್ಗಗಳಲ್ಲಿಯೇ ಕಾರ್ಯಸಾಧನೆಮಾಡಬೇಕಾಗಿರುತ್ತದೆ. ಎರಡನೆಯದಾಗಿ, ಅಂತರಂಗದಲ್ಲಾಗಲಿ ಬಹಿರಂಗದಲ್ಲಾಗಲಿ ಕ್ರೂರಕೃತ್ಯಗಳನ್ನು ನಡಿಸತಕ್ಕ ಜನರ ಮೂಲಕ ರಾಜ್ಯಭಾರಕಾರ್ಯಗಳಲ್ಲಿ ಜನರು ಬಯಸುವ ಸ್ವಾತಂತ್ರ್ಯಗಳು ಲಭಿಸುವುದಕ್ಕೆ ಅಡಚಣೆಯಾಗುವುದೇ ಹೊರತು ಎಷ್ಟುಮಾತ್ರಕ್ಕೂ ಸಹಾಯವಾಗುವುದಿಲ್ಲ. ಇಂಗ್ಲಿಷ್ ಜನಾಂಗದವರ ಪ್ರಸನ್ನತೆಯನ್ನೂ ಸಮ್ಮತಿಯನ್ನೂ ಸಂಪಾದಿಸಿಕೊಂಡಲ್ಲದೆ ಹಿಂದುಸ್ಥಾನದಲ್ಲಿ ಪ್ರಜೆಗಳಿಗೆ ಹೆಚ್ಚಾದ ಸ್ವತಂತ್ರಾಧಿಕಾರಗಳು ದೊರಕಲಾರವು. ಇಂಗ್ಲಿಷ್ ರಾಜ್ಯದ ಕ್ಯಾಬಿನೆಟ್ ಎಂಬ ಮಂತ್ರಿಸಭೆಯವರು ಹಿಂದುಸ್ಥಾನದ ದೇಶೀಯ ವಿದ್ಯಾವಂತರಿಗೆ ಇಲ್ಲಿನ ಕೆಲವು ದೊಡ್ಡ ಅಧಿಕಾರಗಳನ್ನು ಕೊಡಬೇಕೆಂಬ ವಿಚಾರವನ್ನು ಕುರಿತು ಚರ್ಚೆಮಾಡುತ್ತಿದ್ದಾರೆಂಬುವುದು ಎಲ್ಲರಿಗೂ ತಿಳಿದಿರುತ್ತದೆ. ಈಗ ವಿಲಾಯತಿಯಲ್ಲಿರುವ ಅನೇಕ ಇಂಗ್ಲಿಷ್ ದೊಡ್ಡಮನುಷ್ಯರು—"ಹಿಂದುಸ್ಥಾನದಲ್ಲಿ ವಿದ್ಯಾವಂತರಾಗಿರತಕ್ಕ ದೇಶೀಯರು ದೊಡ್ಡ ಅಧಿಕಾರಗಳನ್ನು ನಡಿಸುವಷ್ಟು ಸಾಮರ್ಥ್ಯವನ್ನು ಸಂಪಾದಿಸಿಕೊಂಡಿದ್ದಾರೆ. ಆ ರೀತಿ ಬದಲಾವಣೆಮಾಡಿ ಕೊಡಬೇಕೆಂದು ನ್ಯಾಯವಾದ ರೀತಿಯಲ್ಲಿ ಅವರು ಹೋರಾಡುತ್ತಲೂ ಇರುವರು. ಇದಲ್ಲದೆ ಅವರು ಇಂಗ್ಲಿಷ್ ಚಕ್ರವರ್ತಿಯವರ ವಿಷಯದಲ್ಲಿ ಭಯಭಕ್ತಿಯನ್ನು ಇಟ್ಟುಕೊಂಡು ನಿಷ್ಠ ಪ್ರಜೆಗಳಾಗಿಯೂ ಇರುವರು" ಎಂಬೀ ರೀತಿ ಹೇಳುತ್ತಿದ್ದಾರೆ. ಇಂಥಾದ್ದರಲ್ಲಿ ಈ ಸಿಡಿಮದ್ದುಗುಂಡಿನ ಕ್ರೂರಕೃತ್ಯದ ಫಲಪರಿಣಾಮವು ಏನಾಗಬೇಕು? ಇದು ಇಂಡಿಯಾ ಗವರ್ನಮೆಂಟನ್ನಾದರೂ ಇಂಗ್ಲಿಷ್ ಜನಾಂಗವನ್ನಾದರೂ ಸ್ವಲ್ಪವೂ ಹೆದರಿಸಲಾರದು. ಇದನ್ನು ನೋಡಿ ಅನೇಕಾನೇಕರು—"ಹಿಂದುಸ್ಥಾನದಲ್ಲಿ ರಾಜದ್ರೋಹಕೃತ್ಯಗಳು ನಡಿಯುತ್ತಿರುವುದರಿಂದ ಸ್ವದೇಶಿಗಳಿಗೆ ನಾವು ಹೆಚ್ಚು ಅಧಿಕಾರಗಳನ್ನು ಕೊಡಲಾರೆವು" ಎಂದು ಹೇಳಿಬಿಟ್ಟಾರು.

ಈ ವಿಷಯದಲ್ಲಿ ಯಾರೂ ಅನುಮಾನಪಡಬೇಕಾದದ್ದಿಲ್ಲ. ಇಂಗ್ಲಿಷ್ ಗವರ್ನಮೆಂಟು ಹಿಂದುಸ್ಥಾನವನ್ನು ಬಿಟ್ಟು ಹೋಗಬೇಕೆಂದು ಅಪೇಕ್ಷಿಸತಕ್ಕ ಪಾರ್ಟಿಯು ಈ ರಾಷ್ಟ್ರದಲ್ಲಿರುವುದಾದರೆ ಆ ಪಾರ್ಟಿಯವರು ಹಿಂದುಸ್ಥಾನದಲ್ಲಿರುವ ಇಂಗ್ಲಿಷರ ಮೇಲೆ ಯುದ್ಧಮಾಡಬೇಕಾಗಿರುವುದೊಂದೇ ಅಲ್ಲ. ಈ ರಾಜದ್ರೋಹದ ಸುದ್ದಿಯನ್ನು ಕೇಳಿದ ಕೂಡಲೇ ಇಂಗ್ಲಿಷ್ ಪ್ರಜೆಗಳೆಲ್ಲಾ ಪಕ್ಷ ಪರಪಕ್ಷಗಳನ್ನು ಬಿಟ್ಟು ಒಂದಾಗಿ ತಮ್ಮ ರಾಜ್ಯವನ್ನು ಉಳಿಸಿಕೊಳ್ಳುವುದಕ್ಕೆ ಸಾಹಸಪಡುವರು. ದೇಶವತ್ಸಲರೆಂದು ರಾಜಕೀಯ ವಿಚಾರಗಳನ್ನು ಹಿಡಿದು ಹೋರಾಡುತ್ತಿರುವಂಥಾ ಜನರ ಕುಯುಕ್ತಿಗಳನ್ನೂ ಅಬದ್ಧಗಳನ್ನೂ ಕೇಳಿ ಬುದ್ಧಿಹೀನರಾದ ಜನರು ಮೋಸಹೋಗುವರೆಂದು ನಮಗೆ ಸಂಶಯವೂ ಭೀತಿಯೂ ಉಂಟಾಗಿದೆ. ಇಂಗ್ಲಿಷ್ ಪ್ರಭುತ್ವದ ಪರಾಕ್ರಮವೂ ಇಂಗ್ಲಿಷ್ ಜನಾಂಗದ ಸಾಮರ್ಥ್ಯವೂ ಎಷ್ಟುಮಟ್ಟಿನವೆಂದು ಅವರು ತಿಳಿಯರು. ಮಸಲಾ, ಬರುವ ವಾರದಲ್ಲೇ ಇಲ್ಲಿರುವ ಇಂಗ್ಲಿಷರನ್ನೆಲ್ಲಾ ಓಡಿಸಿಬಿಟ್ಟ ಪಕ್ಷಕ್ಕೆ ಇನ್ನೆರಡು ತಿಂಗಳೊಳಗಾಗಿ ಇಂಗ್ಲಿಷ್ ಹಡಗುಗಳಲ್ಲಿ ಲಕ್ಷ ಸೈನ್ಯಗಳು ಬಂದಿಳಿಯುವವು. ಒಂದು ತೋಣವು ಮೈಸೂರು ಅರಮನೆಯನ್ನು ನಾಶಮಾಡುವುದು ಹ್ಯಾಗೆ ಅಸಾಧ್ಯವೋ ಹಾಗೆಯೇ ಅಲಹಾಬಾದಿನ ಸಿಡಿಮದ್ದಿನ ಗುಂಡು ಇಂಗ್ಲಿಷ್ ರಾಜ್ಯಭಾರವನ್ನು ಅಲ್ಲಾಡಿಸುವುದೂ ಅಸಾಧ್ಯವೆಂದು ತಿಳಿಯಬೇಕು.

ಸದ್ಯದಲ್ಲಿ ಯುದ್ಧದ ವಿಚಾರವನ್ನಾಗಲಿ ರಕ್ತಪ್ರವಾಹವನ್ನು ಕುರಿತಾಗಲಿ ನಾವು ಪ್ರಸ್ತಾಪಿಸಲು ಅಭಿಲಾಷೆಪಡುವವರಾಗಿಲ್ಲ. ಆದರೆ ರಾಜದ್ರೋಹಿಗಳನ್ನು, ಅವರ ಕೃತ್ಯಗಳು ಅನಾಹುತಕಾರಿಗಳಾಗುವವೆಂತಲೂ, ಕಡೆಗೂ ನಿಷ್ಪ್ರಯೋಜನವಾಗಿ ಪರಿಣಮಿಸುವವೆಂತಲೂ ಮೊದಲೇ ಎಚ್ಚರಿಸಬೇಕಾದದ್ದು ಅವಶ್ಯವಾಗಿದೆ. ನಮ್ಮ ವಾಚಕರಲ್ಲಿ ಅನೇಕಾನೇಕರು ರಾಜಭಕ್ತಿಪರಾಯಣರಾಗಿದ್ದಾರೆಂದು ಸಂತೋಷಪಡುತ್ತೇವೆ. ಅವರೂ ನಾವೂ ಹಾಗೇ ಇಂಗ್ಲಿಷ್ ಪ್ರಭುತ್ವದ ಅಂಗವಾಗಿರುವ ತನಕ ಹಿಂದುಸ್ಥಾನದ ಶ್ರೇಯೋಭಿವೃದ್ಧಿಗೆ ಯಾವ ಚ್ಯುತಿಯೂ ಉಂಟಾಗಲಾರದೆಂದು ನಂಬಿಕೆಯುಳ್ಳವರಾಗಿದ್ದಾರೆ. ಇಂಗ್ಲಿಷ್ ಪ್ರಜೆಗಳಾದರೋ ತಾವು ಹಿಂದುಸ್ಥಾನವನ್ನು ಗೆದ್ದವರೆಂದಾಗಲಿ, ಇಲ್ಲಿನ ಪ್ರಜೆಗಳು ತಮಗಿಂತ ಕೀಳಾದವರೆಂದಾಗಲಿ ಭಾವಿಸತಕ್ಕವರಲ್ಲ. ಇಂಗ್ಲಿಷರೂ ಹಿಂದುಸ್ಥಾನದವರೂ ಒಂದೇ ಪ್ರಭುತ್ವದ ಸಮಪ್ರಜೆಗಳೆಂದೇ ಪರಿಗಣಿಸಿ, ಉಭಯರೂ ಏಕೀಭವಿಸಿ ತಮ್ಮ ತಮ್ಮ ಜನ್ಮಭೂಮಿಯನ್ನು ನೆಮ್ಮದಿಸುಖಸಂತೋಷಸಾಮ್ರಾಜ್ಯವನ್ನಾಗಿ ಮಾಡಿಕೊಳ್ಳಬೇಕೆಂಬುವುದೇ ಅವರ ನೈಜವಾದ ಕುತೂಹಲವಾಗಿರುತ್ತದೆ. ಇಂಗ್ಲಿಷ್ ಪ್ರಜೆಗಳ ಅಭಿಪ್ರಾಯವೂ ಪಾರ್ಲಿಮೆಂಟಿನ ಉದ್ದೇಶವೂ ಇದೇ.

ಮದ್ಯಪ್ರಾಶಕಗಳ ವ್ಯಾಪಾರ.

ಬ್ರಿಟಿಷ್ ಪಾರ್ಲಿಮೆಂಟ್ ಎಂಬ ನ್ಯಾಯವಿಧಾಯಕ ಸಭೆಯವರು ಇಂಗ್ಲಂಡ್ ದೇಶದಲ್ಲಿ ಅನೇಕರನ್ನು ಹಾಳುಮಾಡುತ್ತಿರುವ ಮದ್ಯಪ್ರಾಶಕಗಳ ವ್ಯಾಪಾರವನ್ನು ನಿಲ್ಲಿಸಬೇಕೆಂದು ಅಸಾಧಾರಣವಾದ ಪ್ರಯತ್ನಗಳನ್ನು ಮಾಡುತ್ತಿರುವರು. ಈಗ್ಗೆ ಕಾನೆ ಸವರಿ ಪಾರ್ಲಿಮೆಂಟ್ ಸಭೆಯವರು ಇಂಗ್ಲಂಡ್ ದೇಶದಲ್ಲಿರುವ ಸಾರಾಯಿ ಅಂಗಡಿಗಳನ್ನು ಕ್ರಮೇಣವಾಗಿ ಮುಚ್ಚಿಬಿಡಬೇಕೆಂದು ಒಂದು ಕಾನೂನನ್ನು ಜಾರಿಗೆ ತರುವ ಪ್ರಯತ್ನದಲ್ಲಿರುತ್ತಾರೆ. ಈ ಕಾನೂನಿನಿಂದ ಮ್ಯಾಜಿಸ್ಟ್ರೇಟುಗಳು ಹದಿನಾಲ್ಕು ವರುಷಗಳು ಕಳೆದ ನಂತರ ಯಾವ ಸಾರಾಯಿ ಅಂಗಡಿಗಾದರೂ ಹೊಸ ಲೈಸೆನ್ಸ್‌ಗಳನ್ನು ಕೊಡಕೂಡದೆಂತಲೂ ಹಳೇ ಲೈಸೆನ್ಸ್‌ಗಳು ಅಲ್ಲಿಗೆ ನಿಂತುಹೋಗಬೇಕೆಂತಲೂ ಒಂದು ವೇಳೆ ಹಳೇ ಲೈಸೆನ್ಸ್‌ಗಳು ಅಲ್ಲಿಗೆ ನಿಂತುಹೋಗದಿದ್ದರೆ ಅವುಗಳಿಗೆ ಯಾವ ಪ್ರತಿಫಲ ತೋರಿಸದೆ ಅವುಗಳನ್ನು ಖಂಡಿತವಾಗಿ ರದ್ದುಮಾಡಬೇಕೆಂತಲೂ ಅಭಿಪ್ರಾಯಪಟ್ಟಿರುತ್ತಾರೆ. ಇಂಥಾ ಕಾನೂನನ್ನು ಜನರೆಲ್ಲರೂ ಒಂದೇ ಮನಸ್ಸಿನಿಂದ ಅನುಮೋದಿಸುವರೆಂದು ಯಾರೂ ತಿಳಿದುಕೊಳ್ಳಬಾರದು. ಅಗಲೇ ಸಾರಾಯಿ ವ್ಯಾಪಾರದಲ್ಲಿ ಬಹಳವಾಗಿ ಹಣ ಸಂಪಾದನೆ ಮಾಡುತ್ತಿದ್ದ ಜನರು ಈ ಕಾನೂನಿಗೆ ವಿರೋಧವಾಗಿ ನಿರುಗಿಬಿದ್ದಿರುವರು. ಅವರಲ್ಲಿ ಕೆಲವರು ಈ ನಿಬಂಧನೆಯನ್ನು ಅನ್ಯಾಯವೆಂತಲೂ ಇದು ಸುಲಿಗೆಗೆ ಸಮಾನವೆಂತಲೂ ಪ್ರತಿಭಟಿಸಿರುತ್ತಾರೆ. ಇವರ ವಾದ ಹ್ಯಾಗಾದರೂ ಇರಲಿ. ಈ ಹೊಸ ಕಾನೂನಿನ ಪ್ರತಿಯೊಂದು ಅಂಶವನ್ನು ತಿಳಿಸುವುದು ಇಲ್ಲಿ ಅನಾವಶ್ಯಕವಾಗಿರುತ್ತದೆ. ಅಂತು ಈ ಹೊಸ ಕಾನೂನಿನಿಂದ ಇಂಗ್ಲಂಡ್ ದೇಶದಲ್ಲಿ ಕುಡುಕತನವು ಬಹಳ ಮಟ್ಟಿಗೆ ಕಡಿಮೆಯಾಗಿ ಜನರು ಸುಖಿಗಳಾಗುವರೆಂದು ನಾವು ನಂಬಿ ಸಂತೋಷಪಡುತ್ತೇವೆ.

ಹಿಂದೂ ದೇಶದ ವಿಷಯ ಸ್ವಲ್ಪವಾಗಿ ಪ್ರಸ್ತಾಪಿಸೋಣ. ನಮ್ಮ ದೇಶದಲ್ಲಿ ಕುಡುಕತನವಿಲ್ಲವೆಂದು ಯಾರಾದರೂ ಹೇಳುವರೇ? ಅನೇಕ ಶತಮಾನಗಳಿಂದಲೂ ಶೂದ್ರರೇ ಮೊದಲಾದವರು ದೇಶದಲ್ಲಿ ತಯಾರಾಗುತ್ತಿರುವ ಹೆಂಡವನ್ನು ಕುಡಿಯುವ ಅಭ್ಯಾಸದಲ್ಲಿರುತ್ತಾರೆ. ಅಂಥವರು ಈ ದುರಭ್ಯಾಸವನ್ನು ಬಿಟ್ಟುಬಿಡಬೇಕೆಂಬುವದೇ ನಮ್ಮ ಕೋರಿಕೆಯಾಗಿರುತ್ತದೆ. ವೈದ್ಯಶಾಸ್ತ್ರದ ಪ್ರಕಾರ ಹೆಂಡ ಕುಡಿಯುವುದರಿಂದ ದೇಹಕ್ಕೆ ಯಾವ ಪ್ರಯೋಜನವೂ ಆಗುವದೇ ಇಲ್ಲವೆಂಬುವುದನ್ನು ನಾವು ತಿಳಿದುಕೊಳ್ಳಬಹುದು. ಪ್ರಯೋಜನವಾಗುವುದಕ್ಕೆ ಬದಲಾಗಿ ಹೆಂಡದ ದುಕಾನೆಗಳಲ್ಲಿ ಜಗಳಟಗಳೂ ಅನೇಕ ವೇಳೆಗಳಲ್ಲಿ ಮಾರಾಮಾರಿಗಳೂ ಆಗುವುದು ವಾಚಕರಿಗೆ ಹೊಸ ಸಂಗತಿಯಲ್ಲ.

ಹೆಂಡ ಕುಡಿಯುವ ಅಭ್ಯಾಸವು ಶೂದ್ರರೇ ಮೊದಲಾದವರಲ್ಲಿ ಹೆಚ್ಚೆಂದು ನಾವು ಮೇಲೆ ತಿಳಿಸಿದೆವಷ್ಟೆ? ಆದರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವವರ ಪಾಡನ್ನು ಹ್ಯಾಗೆ ವಿವರಿಸೋಣ. ಅಗಲೇ ಕೆಲವು ವಿದ್ಯಾವಂತರು ಪರದೇಶದಿಂದ ಬರುತ್ತಿರುವ ಬ್ರಾಂದಿ, ವೈನ್ ಮೊದಲಾದ ಬೆಲೆಯುಳ್ಳ ಅಮಲೇರುವ ಮದ್ಯಗಳನ್ನು ಸೇವಿಸುವುದರಲ್ಲಿ ಆಸಕ್ತರಾಗಿರುತ್ತಾರೆ. ದೇಶದಲ್ಲಿ ತಯಾರಾಗುವ ಸಾರಾಯಿಯನ್ನು ಕುಡಿಯುವ ಜನಗಳ ಸಂಖ್ಯೆಯು ಕೂಡ ಹೆಚ್ಚುತ್ತಿರುವುದು. ದೇಶಾಭಿಮಾನಿಗಳು ಸರ್ಕಾರದವರ ಮೇಲೆ ಆಕ್ಷೇಪಣೆಗಳನ್ನು ತರುವುದಕ್ಕೆ ಬದಲಾಗಿ ಕುಡುಕತನವನ್ನು ತಡೆಯುವ ಪ್ರಯುಕ್ತದಲ್ಲಿ ತಮ್ಮ ಕಾಲವನ್ನು ವಿನಿಯೋಗಿಸಿದರೆ ದೇಶಕ್ಕೆ ಬಹಳ ಪ್ರಯೋಜನವಾಗುವುದು.

ಹಿಂದೂ ದೇಶದ ಪೂರ್ವ ಚರಿತ್ರೆಯನ್ನು ಯೋಚಿಸಿದರೆ ಆಗಲೂ ಕೂಡ ಕುಡಿಯುವ ಅಭ್ಯಾಸದಿಂದ ಅನೇಕರು ಕೆಟ್ಟುಹೋದರೆಂಬುದು ನಾವು ತಿಳಿದುಕೊಳ್ಳಬಹುದು. ಇಲ್ಲಿ ನಾಲ್ಕು ಪ್ರಸಿದ್ಧ ಚಕ್ರವರ್ತಿಯಾಗಿದ್ದ ಅಕ್ಬರನ ಇಬ್ಬರು ಮಕ್ಕಳು ಬಹಳ ಕುಡುಕರಾಗಿದ್ದರು. ತನ್ನ ಮಕ್ಕಳು ಮದ್ಯವನ್ನು ಮುಟ್ಟದಂತೆ ಅಕ್ಬರನು ಅವರ ಮೇಲೆ ಬಲವಾದ ಕಾವಲನ್ನಿಟ್ಟರೂ ಆ ಮಕ್ಕಳು ತಮ್ಮ ಕಾವಲುಗಾರರಿಗೆ ಲಂಚವನ್ನು ಕೊಟ್ಟು ತುಬಾಕಿಯ ಕೊಳವೆಗಳಲ್ಲಿ ಸಾರಾಯಿಯನ್ನು ತರಿಸಿಕೊಳ್ಳುತ್ತಿದ್ದರು. ನೋಡಿದಿರಾ! ಈ ರಾಜಕುಮಾರರು ಎಷ್ಟರಮಟ್ಟಿಗೆ ಕುಡುಕರಾಗಿದ್ದರು.

ಕುಡುಕತನದಿಂದ ನಮ್ಮ ದೇಶಕ್ಕೆ ವಿಪರೀತವಾದ ಹಾನಿಯಾಗುತ್ತಿರುವಲ್ಲಿ ನಮ್ಮಗಳ ಕರ್ತವ್ಯವೇನಾಗಿರಬೇಕು. ನಾವು ಸುಮ್ಮನಿರುವುದು ನ್ಯಾಯವೋ? ಎಂದಿಗೂ ಇಲ್ಲ. ಸರ್ಕಾರದವರು ಜನರಲ್ಲಿ ಮದ್ಯಪಾನಾಭ್ಯಾಸವನ್ನು ಹೆಚ್ಚಿಸದಂತೆ ಅವರಿಗೆ ನಮ್ಮ ಅಭಿಪ್ರಾಯಗಳನ್ನು ಧೈರ್ಯದಿಂದಲೂ ನ್ಯಾಯದಿಂದಲೂ ತಿಳಿಸುತ್ತಿರಬೇಕು. ಸರ್ಕಾರದವರು ಕೂಡ ಹೆಂಡ ಬಾಬಿನಲ್ಲಿ ರಕಂ ಆದಾಯವನ್ನು ಬಹು ಮಟ್ಟಿಗೆ ಕಡಿಮೆ ಮಾಡಬೇಕೆಂದು ಅಭಿಪ್ರಾಯಪಡುವರು. ಕೆಲವರು ಜನರನ್ನು ಕುಡುಕರನ್ನಾಗಿ ಮಾಡಿ ಅವರ ನಷ್ಟದಿಂದ ಸರ್ಕಾರದ ಖಜಾನೆಗೆ ದುಡ್ಡನ್ನು ತುಂಬಿಸಿಕೊಳ್ಳುವುದು ಅನ್ಯಾಯವೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ಆದರೆ ವಿಷಯ ಸರ್ಕಾರದವರು ಹೆಚ್ಚಾದ ಗಮನವನ್ನು ಕೊಡುವರೆಂದು ಪ್ರಾರ್ಥಿಸುತ್ತೇವೆ.

ಈಗ್ಗೆ ಯೂರೋಪ್ ದೇಶದಲ್ಲಿ ಸಾರಾಯಿಗಳನ್ನು ನೂರದಂತೆ ಅಡ್ಡಿಮಾಡುವ ಪ್ರಯತ್ನಗಳು ನಡೆಯುತ್ತವೆ. ಅಮೇರಿಕ ದೇಶದ ಕೆಲವು ಸಂಸ್ಥಾನಗಳಲ್ಲಿ ಮದ್ಯಪ್ರಾಶಕಗಳನ್ನು ಮಾರಲೇಕೂಡದೆಂದು ಸರ್ಕಾರದವರು ವಿಧಾಯಕ ಮಾಡಿರುತ್ತಾರೆ.

ಹೋದವಾರ ಪೂನಾಪಟ್ಟಣದಲ್ಲಿ ಕೆಲವು ಯೌವನಸ್ಥರೂ ಮತ್ತು ಪ್ರಸಿದ್ಧರಾದ ಗೋಖಲೆ, ಬಂಡಾರಕರ್ ಮೊದಲಾದ ದೊಡ್ಡ ಮನುಷ್ಯರೂ ಒಂದು ಸಭೆಯನ್ನು ಮಾಡಿ ಮದ್ಯಪಾನದಿಂದಾಗುವ ನಷ್ಟಗಳನ್ನು ಕುರಿತು ಮಾತನಾಡಿದರು. ಆಗ್ಗೆ ಪೂನಾ ಪಟ್ಟಣದ ಅನೇಕ ಸಹಸ್ರ ಜನಗಳು ಸಭೆಗೆ ಬಂದಿದ್ದರು. ಉಪನ್ಯಾಸಕರ ಅಭಿಪ್ರಾಯಗಳನ್ನು ನಾವು ಶ್ಲಾಘಿಸುವೆವು. ಆದರೆ ಜನಗಳನ್ನು ಹಿಂಸಿಸಿ ಬಲಾತ್ಕಾರದಿಂದ ಅವರ ಮೇಲೆ ಬಿದ್ದು ಅವರನ್ನು ತಡೆಯುವುದು ಒಪ್ಪತಕ್ಕದ್ದಲ್ಲವೆಂದು ನಾವು ಅಭಿಪ್ರಾಯಪಡುವೆವು.

ಒಳದೇಶದ ವೃತ್ತಾಂತಗಳು.

ಗುಲಬರ್ಗಾನಿಯಲ್ಲಿ ವಾಂತಿಭೇದಿ ಉಪದ್ರವಿಂದ ಆಗಾಗ್ಗೆ ಮರಣಗಳು ಆಗುತ್ತಲೇ ಇರುವವು.

❖❖❖

ಸರ್ಕಾರದವರು ಬಿನ್ನಾಮಿನ ಬಳಿ ನದಿಗೆ ಸೇತುವೆ ಕಟ್ಟುವಂತೆ ಸ್ಯಾಂಕ್ಷನ್ ಮಾಡಿರುವುದಾಗಿ ಕೇಳುತ್ತೇವೆ.

❖❖❖

ಹೋದ ವಾರ ಇಲ್ಲಿನ ಬೇವಣ್ಣರಾಯನ ಕಟ್ಟೆಗೆ ಮಳೆಯ ನೀರು ಬತ್ತಿರುವಲ್ಲಿ ಮೂರು ಮಂದಿ ಹುಡುಗರು ಸೆಳವಿಗೆ ಸಿಕ್ಕಿ, ಆ ವ್ಯಕ್ತಿ ಒಬ್ಬನು ಮೃತಪಟ್ಟನು. ಇನ್ನಿಬ್ಬರನ್ನು ಪೋಲೀಸಿನವರು ಎಳೆದು ಹಾಕಿ ಬದುಕಿಸಿದರು.

❖❖❖

ದೇವರ ಸೇವೆಗೋಸ್ಕರ ಮೆ॥ ಪಳನಿಯ ದೇವರಾಜೇ ಅರಸಿನವರ ಕುಟುಂಬದವರೂ ಸರ್ದಾರ್ ಗೋಪಾಲರಾಜೇ ಅರಸಿನವರೂ ಮೋಟಾರ್ ಗಾಡಿಗಳಲ್ಲಿ ಗುಂಡ್ಲುಪೇಟೆ ತಾಲ್ಲೂಕು ಗೋಪಾಲಸ್ವಾಮಿಬೆಟ್ಟಕ್ಕೆ ಮೊನ್ನೆ ಪ್ರಯಾಣ ಮಾಡಿದರು.

❖❖❖

ಬೆಂಗಳೂರಿನಲ್ಲಿ ಸಿವಿಲ್ ಸರ್ಜನರಾಗಿರುವ ಮಿಸ್ ಗೋವಿಂದರಾಜುಲು ರವರ ತಾಯಿ ಕಾಲವಾದರು. ಅವರ ಬಂಧು ಮಿತ್ರರೆಲ್ಲಾ ಸೇರಿ ಶವವನ್ನು ರೈಲಿನ ಮೇಲೆ ರಾಜಧಾನಿಗೆ ತೆಗೆದುಕೊಂಡು ಬಂದು, ಮೊನ್ನೆ ಬೆಳಿಗ್ಗೆ ಇಲ್ಲಿ ದಹನಮಾಡಿ, ವಾಪಸು ಹೋದರು.

❖❖❖

ಸರ್ಕಾರಿ ಪಶುವೈದ್ಯ ಪಂಡಿತರಾದ ಮೆ॥ ಎ. ನರಸಿಂಹಯ್ಯಂಗಾರ್‍ರವರು ರಚಿಸಿರುವ "ಪಶುವೈದ್ಯಸಂಗ್ರಹ" ವೆಂಬ ಪುಸ್ತಕವನ್ನು ಮೈಸೂರು ಸರ್ಕಾರದವರು ೫೦೦ ರೂಪಾಯಿಗೆ ಕೊಂಡುಕೊಂಡು, ಸರ್ಕಾರಿಯಾಗಿ ಇನ್ನು ಮುಂದೆ ಪ್ರಕಟಿಸಬೇಕೆಂತಲೂ, ಅದರ ಕ್ರಯವನ್ನು ಪ್ರತಿ ಒಂದಕ್ಕೆ ಎಂಟು ಆಣೆಯಂತೆ ಇಟ್ಟು ಬಿಕರಿ ಮಾಡಬೇಕೆಂತಲೂ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ.

ಕರ್ನಾಟಕ ಗ್ರಂಥಕರ್ತರ ಎರಡನೇ ಸಮ್ಮೇಲನವು.

ಧಾರವಾಡದಲ್ಲಿ ನಡಿಯುವುದು

ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕ ಮಹೋತ್ಸವ ದೊಡನೆ ಕರ್ನಾಟಕ ಗ್ರಂಥಕರ್ತರ ಎರಡನೆಯ ಸಮ್ಮೇಲನವು ಧಾರವಾಡದಲ್ಲಿ ಇದೇ ೧೯೦೮ನೇ ಇಸವಿಯ ಮೇ ತಿಂಗಳ ೩೦ನೇ ತಾರೀಖು ಶನಿವಾರ ಮತ್ತು ತದುತ್ತರ ದಿನಗಳಲ್ಲಿ ಆಗಬೇಕೆಂದು ನಿಶ್ಚಯಿಸಲ್ಪಟ್ಟಿದೆ. ಕರ್ನಾಟಕ ಭಾಷಾಭಿಮಾನಿಗಳಾದ, ಕನ್ನಡದಲ್ಲಿ ಗ್ರಂಥಗಳನ್ನು ಬರೆಯಲು ಪ್ರಯತ್ನಿಸುವ, ಆ ಭಾಷೆಯ ಏಳ್ಗೆಯನ್ನು ಮನಃಪೂರ್ತಿಯಾಗಿ ಬಯಸುವ ಎಲ್ಲ ಜನರೂ ಒಂದೆಡೆಯಲ್ಲಿ ಸೇರಿ ಆ ಭಾಷೆಯ ಏಳ್ಗೆಯ ವಿಷಯದಲ್ಲಿ ವಿಚಾರಗಳನ್ನು ಮಾಡುವದಲ್ಲದೆ, ಪರಸ್ಪರರ ದರ್ಶನವಾಗಿ ಭಾಷಾಭಿಮಾನಿಗಳಲ್ಲರಲ್ಲಿಯೂ ಸ್ನೇಹವು ಹೆಚ್ಚುತ್ತ ಬರಬೇಕೆಂಬುದೇ ಈ ಸಮ್ಮೇಲನದ ಮುಖ್ಯೋದ್ದೇಶವು. ಹೋದ ವರುಷ ಈ ಪ್ರಕಾರದ ಮೊದಲನೆಯ ಸಮ್ಮೇಲನವಾಗಿತ್ತು. ಅದರಲ್ಲಿ ಕೆಲವು ಸಂಗತಿಗಳು ಚರ್ಚಿತಗಳಾಗಿ ನಿರ್ಣಯಿಸಲ್ಪಟ್ಟವು ಅವುಗಳಲ್ಲಿ ಮೊದಲನೆಯದಾದ ಬೇರೆ ಬೇರೆ ಭಾಗಗಳಲ್ಲಿಯ ಭಾಷಾಭೇದವು ನಷ್ಟವಾಗುವ ವಿಷಯದಲ್ಲಿ ಅನೇಕ ವಿದ್ವಾಂಸರಿಂದ ಸೂಚಿಸಲ್ಪಟ್ಟ ಹಲವು ಉಪಾಯಗಳಲ್ಲೊಂದಾದ ಪ್ರತ್ಯೇಕೋಪಯುಕ್ತವಾದ ಗ್ರಂಥರಚನೆಯ ಕೆಲಸವನ್ನು ಕರ್ನಾಟಕ ವಿದ್ಯಾವರ್ಧಕ ಸಂಘದವರು ಕೈಕೊಂಡಿದ್ದಾರೆ ಈ ಸಮ್ಮೇಲನದಲ್ಲಿ ಭಾಷಾ ಸೇವೆಯೇ ಚನ್ನಾಗಿ ಆಗಬೇಕೆಂಬ ಮುಖ್ಯೋದ್ದೇಶದ ಕಡೆಗೆ ವಿಶೇಷವಾಗಿ ಲಕ್ಷ್ಯಕೊಟ್ಟು, ವ್ಯರ್ಥವಾದ ವ್ಯಯಗಳನ್ನು ಆದಷ್ಟು ತೆಗೆದುಹಾಕಿರುತ್ತೇವೆ ಈ ಸಮ್ಮೇಲನಕ್ಕೆ ಮೈಸೂರು, ಮದ್ರಾಸು, ಮಂಗಳೂರು, ಕಾರವಾರ ಮುಂತಾದ ಸ್ಥಳಗಳಿಂದ ಅನೇಕ ವಿದ್ವಾಂಸರೂ ಕರ್ನಾಟಕ ಭಾಷಾಭಿಮಾನಿಗಳೂ ಬರುವರೆಂದು ನಾವು ನಂಬಿದ್ದೇವೆ ಅದಲ್ಲ ಕನ್ನಡ ನುಡಿಯ ವಿಷಯದಲ್ಲಿ ನಿಜವಾದ ಪ್ರೇಮವುಳ್ಳ ಪ್ರತಿಯೊಬ್ಬ ಕನ್ನಡಿಗನೂ ಈ ಸಮ್ಮೇಲನಕ್ಕೆ ಬಂದು ಭಾಷಾಸೇವೆಯ ಕೆಲಸವನ್ನು ತನ್ನಿಂದಾದಷ್ಟು ಕೈಕೊಳ್ಳಬೇಕೆಂದು ನಾವು ಅತ್ಯಾದರದಿಂದ ಬಿನ್ನವಿಸುವೆವು ಧಾರವಾಡದಲ್ಲಿ ಪರಿಚಯವಿಲ್ಲದ, ಈ ಸಮ್ಮೇಲನಕ್ಕೆ ಬರಲಿಚ್ಛಿಸುವ ಸರಸ್ಥಳದವರು, ಮೇ ತಿಂಗಳ ೨೫ನೇ ತಾರೀಖಿನ ಒಳಗಾಗಿ ತಿಳಿಸಿದಲ್ಲಿ ನಾವು ಅವರ ಭೋಜನಾದಿಗಳಿಗೆ ತಕ್ಕ ವ್ಯವಸ್ಥೆಯನ್ನು ಮಾಡುವೆವು ಈ ಸಮ್ಮೇಲನವು ಧಾರವಾಡದಲ್ಲಿ ಹೊಸದಾಗಿ ಕಟ್ಟುತ್ತಿರುವ ಕರ್ನಾಟಕ ವಿದ್ಯಾವರ್ಧಕ ಸಂಘದ ಮಂದಿರದ ಸಮೀಪದಲ್ಲಿರುವ ಚಿತ್ರಮಂಟಪದಲ್ಲಿ ಕೂಡುವದು ಹೋದ ವರುಷ ಅನೇಕ ವಿದ್ವಾಂಸರಿಂದ ಬೇರೆ ಬೇರೆ ವಿಷಯಗಳನ್ನು ಕುರಿತ ಅನೇಕ ನಿಬಂಧಗಳು ಕಳುಹಿಸಲ್ಪಟ್ಟಿದ್ದವು. ಅವುಗಳಲ್ಲಿ ಅವರು ಮಾಡಿದ ಸಂಗ್ರಹಯೋಗ್ಯವಾದ ಸೂಚನೆಗಳನ್ನು ತಕ್ಕಮಟ್ಟಿಗೆ ಪ್ರಚಾರದಲ್ಲಿ ತರಲು ಸಂಘದವರು ಪ್ರಯತ್ನಿಸುತ್ತಿರುವರು ಈ ವರ್ಷವೂ ಅನಿವಾರ್ಯಕಾರಣಗಳಿಂದ ಸಮ್ಮೇಲನಕ್ಕೆ ಬರಲಾಗದಿದ್ದಲ್ಲಿ ಅಂಥವರು ಈ ಕೆಳಗೆ ನಿರ್ದೇಶಿಸಿದ ವಿಷಯಗಳನ್ನು ಕುರಿತು ನಿಬಂಧನಗಳನ್ನಾದರೂ ಬರೆದು ಆ ಕಾಲಕ್ಕೆ ಕಳುಹಿಸುವಂತೆ ಮಾಡಬೇಕೆಂದು ವಿನಯದೊಡನೆ ಅರ್ಪಿಸುವೆವು ಕಳೆದ ವರುಷ ಮುಂಬಯಿ ಸರಕಾರದವರ ಕಡೆಯಿಂದಲೂ ಮೈಸೂರು ಸಂಸ್ಥಾನದವರ ಕಡೆಯಿಂದಲೂ ಈ ಸಮ್ಮೇಲನಕ್ಕೆ ವಿದ್ಯಾವಂತರಾದ ಪ್ರತಿನಿಧಿಗಳು ಬಂದಿದ್ದರು ಅದರಂತೆ ಈ ವರುಷವಾದರೂ ಪ್ರತಿನಿಧಿಗಳು ಬರುವರು. ಅಲ್ಲದೆ ಈ ಸಾರೆ ಮದ್ರಾಸ ಮತ್ತು ಹೈದರಾಬಾದ ಸರಕಾರದವರ ಕಡೆಯಿಂದಲೂ ಸಹ ಕೆಲವು ಪ್ರತಿನಿಧಿಗಳು ಬರುವರೆಂದು ನಂಬಿದ್ದೇವೆ. ಈ ಸಮ್ಮೇಲನದಿಂದ ಜನರಲ್ಲಿ ಭಾಷಾ ವಿಷಯದಲ್ಲಿ ಜಾಗ್ರತೆ ಹುಟ್ಟಿ, ಭಾಷಾ ಸೇವೆಯು ಚನ್ನಾಗಿ ಆಗಬೇಕಾದರೆ ಅದು ಭಾಷಾಭಿಮಾನಿಗಳ ಸಹಾಯವನ್ನು ಅವಲಂಬಿಸಿರುವದು ಮೇಲಿನ ಎಲ್ಲ ಸಂಗತಿಗಳಿಗೆ ಲಕ್ಷ್ಯಗೊಟ್ಟು, ಕನ್ನಡ ನುಡಿಯ ಏಳ್ಗೆಯನ್ನಿಚ್ಛಿಸುವ ಎಲ್ಲ ಸ್ತ್ರೀಪುರುಷರೂ ನಮ್ಮ ಆಮಂತ್ರಣವನ್ನು ಅನುಮೋದಿಸಿ, ಸಮ್ಮೇಲನಕ್ಕೆ ಅವಶ್ಯವಾಗಿ ಬಂದು, ಈ ಭಾಷಾ ಸೇವೆಯ ಪವಿತ್ರವಾದ ಕೆಲಸಕ್ಕೆ ಮನಃಪೂರ್ತಿಯಾಗಿ ಸಹಾಯ ಮಾಡುವರೆಂದು ನಂಬಿದ್ದೇವೆ

ಈ ವರ್ಷ ಸಮ್ಮೇಲನದಲ್ಲಿ ಚರ್ಚಿಸತಕ್ಕ ವಿಷಯಗಳು.

(೧) ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಕಂಡುಬರುವ ಭಾಷಾ ಭೇದಗಳ ಸವಿಸ್ತಾರ ವಿವೇಚನೆ. [ಟೀಕು:—ಈ ಬಗ್ಗೆ ನಿಬಂಧ ಬರೆಯತಕ್ಕವರು ಮ॥ ರಾ॥ ಬಿ ವೆಂಕಟಾಚಾರ್ಯರ "ಅಮೃತಪುಲಿನ" ವೆಂಬ ಕಾದಂಬರಿ ಮತ್ತು ಮಾ॥ ರಾ॥ ವೀರಭದ್ರ ಬಸಪ್ಪಾ ಸಾಲಭಾವಿ ಇವರ "ವಿಜಯನಗರದ ಇತಿಹಾಸ" ಇವೆರಡು ಪುಸ್ತಕಗಳನ್ನೋದಿ, ಅವುಗಳಲ್ಲಿ ಯಾವ ಸುಧಾರಣೆಗಳು ಇಷ್ಟವೆಂಬದನ್ನು ಸವಿಸ್ತರವಾಗಿ ವಿವೇಚಿಸತಕ್ಕದ್ದು] (೨) ಹಿಂದಿನ ಕಾಲದ ಮತ್ತು ಈಗಿನ ಯಾವ ಗ್ರಂಥಕರ್ತರ ಭಾಷಾಸರಣಿಯು ಈ ಕಾಲಕ್ಕೆ ಅನುಸರಿಸಲಿಕ್ಕೆ ತಕ್ಕದ್ದಾಗಿಯೂ ಸುಲಭವಾಗಿಯೂ ಇರುವದು, ಅಂದರೆ ಅನುಕರಣೀಯವಾದದ್ದು? ಕಟ್ಟಿಗರಕಾವ ಮುಂತಾದ ಶುದ್ಧ ಹಳಗನ್ನಡವನ್ನು ಉಪಯೋಗಿಸುವ ರೂಢಿಯನ್ನಿಡಬೇಕೋ? ಜೈಮಿನಿ, ಬಾಡಕೇಬರಗಳ ಭಾಷೆಯನ್ನು ಅನುಸರಿಸಬೇಕೋ? ಪುರಂದರದಾಸ, ಕನಕದಾಸ ಮುಂತಾದವರ ಭಾಷಾ ಶೈಲಿಯನ್ನು ಅನುಸರಿಸಬೇಕೋ? (೩) ಪ್ರಾಚೀನ ಮತ್ತು ಅರ್ವಾಚೀನ ಗ್ರಂಥಕರ್ತರ ಗ್ರಂಥಸಂಶೋಧನವೂ ಚರಿತ್ರ ಲೇಖನವೂ. (೪) ಕನ್ನಡ ರಂಗಭೂಮಿಯ ಸಧ್ಯಸ್ಥಿತಿಯೂ ಅದನ್ನು ಸುಧಾರಿಸುವ ಉಪಾಯಗಳೂ (೫) ಸಾಮಾನ್ಯ ಜನರೊಳಗೆ ವಿವಿಧ ವಿಷಯಗಳ ಜ್ಞಾನವು ಸುಲಭವಾಗುವಂತೆ ಮಾಡುವದಕ್ಕೆ ಉಪಾಯಗಳು (೬) ಕನ್ನಡಿಗರಲ್ಲಿ ಕಂಡುಬರುವ ಸ್ವಭಾವಜ ಔದಾಸೀನ್ಯವನ್ನು ಹೋಗಲಾಡಿಸಿ, ಜನರ ಅಭಿರುಚಿಯನ್ನು ಜಾಗ್ರತೆಗೊಳಿಸುವ ಉಪಾಯಗಳು (೭) ಕರ್ನಾಟಕದ ಸಾದ್ಯಂತ ಇತಿಹಾಸವನ್ನು ತಯಾರಿಸಲಿಕ್ಕೆ ಬೇಕಾಗುವ ಸಾಧನಗಳು. (೮) ಶಾಸ್ತ್ರೀಯ ವಿಷಯಗಳಲ್ಲಿ ಉಪಯೋಗಿಸುವದಕ್ಕೆ ಬೇಕಾಗುವ ಪಾರಿಭಾಷಿಕ ಶಬ್ದಗಳ ನಿರ್ಮಾಣವು (೯) ಮೇಲಿನ ೧—೭ ನೇ ಕಲಮುಗಳಿಗೆ ಅನುಸರಿಸಿ ಒಂದು ಕನ್ನಡ ಕೋಶವನ್ನು ಸಿದ್ಧಪಡಿಸುವದು.

ಕಾರ್ಯದರ್ಶಿ.—ನಾರಾಯಣರಾವ ಕರಗುದರಿ, ಬಿ ಎ, ಎಲ್ ಎಲ್. ಬಿ., ವಕೀಲ. ಸ ಕಾರ್ಯದರ್ಶಿಗಳು:—ನಾರಾಯಣ ರಾಘವೇಂದ್ರ ದೇಶಪಾಂಡೆ, ಬಿ. ಎ, ಎಲ್‌ಎಲ್ ಬಿ, ವಕೀಲ; ವೆಂಕಟೇಶ ಭೀಮರಾವ ಆಲೂರ, ಬಿ ಎ, ಎಲ್‌ಎಲ್. ಬಿ, ವಕೀಲ, ರಾಮರಾವ ಸರಗುಂದಕರ, ಬಿ. ಎ, ಎಲ್‌ಎಲ್. ಬಿ., ವಕೀಲ.

ವ್ಯಾಪಾರವೂ ವ್ಯವಸಾಯವೂ.

ಮಧರಾಸ್ ಪಟ್ಟಣದಲ್ಲಿ ವ್ಯಾಪಾರಾಭಿವೃದ್ಧಿಗಾಗಿ ದೇಶೀಯ ದೊಡ್ಡಮನುಷ್ಯರು ಒಂದು ಸಂಘವನ್ನು ಮಾಡಿಕೊಂಡಿದಾರೆ. ಈ ಸಂಘದಲ್ಲಿ ಸುಮಾರು ೩೦ ಮಂದಿ ವಿದ್ಯಾವಂತರೂ ವರ್ತಕರೂ ಮೆಂಬರಾಗಿದ್ದುಕೊಂಡು, ದೇಶೀಯ ಜನರಿಗೆ ವ್ಯಾಪಾರದಲ್ಲಿ ಅಭಿರುಚಿಯುಂಟಾಗುವ ರೀತಿಯಲ್ಲಿ ಉಪನ್ಯಾಸಗಳನ್ನು ಮಾಡುತ್ತಾ ಬಂದಿರುವರು ಕಳೆದ ವಾರ ಈ ಸಂಘದವರು ವಾರ್ಷಿಕ ಜನರಲ್ ಮೀಟಿಂಗ್ ನಡಸಿ ಬಹುಮಂದಿ ದೊಡ್ಡಮನುಷ್ಯರನ್ನೂ ಯುರೋಪ್ಯರ್ ಸರ್ದಾರರನ್ನೂ ಸಭೆಗೆ ಬರಮಾಡಿಕೊಂಡಿದ್ದರು. ಮಿ॥ ಡಿ. ಎ. ಸ್ಟುವರ್ಟ್ ಯವರು ಅಗ್ರಾಸನವನ್ನು ವಹಿಸಿಯೂ, ಮಿ॥ ಎ. ಜೆ. ಯೇಟ್ಸ್, ರಾಜಾ ಸರ್ ಎಸ್. ರಾಮಸ್ವಾಮಿಮೊದಲಿಯಾರ್ರೂ ಸಭಾಸದರಾಗಿಯೂ ಇದ್ದರು. ಸಂಘದ ಸೆಕ್ರೆಟರಿಯು ವಾರ್ಷಿಕ ರಿಪೋರ್ಟನ್ನೂ ಬನಾಬಿಚರ್ ಮುಂತಾದ್ದನ್ನೂ ಓದಿ ಸಭೆಗೆ ತಿಳಿಸಿದನಂತರ ಮಿ॥ ಸಿ. ಗೋಪಾಲ ಮೇನೋನವರೂ ಮಿ॥ ಪಿ. ಎಸ್. ರಾಮಪಿಳ್ಳೆಯವರೂ ಹಿಂದುಸ್ಥಾನದಲ್ಲಿ ಈಗಿನ ವ್ಯಾಪಾರದ ಸ್ಥಿತಿಗತಿಯನ್ನೂ ಜನರಿಗೆ ಅದರಲ್ಲಿ ಉಂಟಾಗುತ್ತಿರುವ ಅಭಿರುಚಿಯನ್ನೂ ಕುರಿತು ಉಪನ್ಯಾಸಮಾಡಿದರು ಆ ಉಪನ್ಯಾಸಗಳ ಮುಖ್ಯಾಭಿಪ್ರಾಯವನ್ನು ವಾಚಕರ ತಿಳವಳಿಕೆಗಾಗಿ ಇಲ್ಲಿ ಪ್ರಕಟಿಸುತ್ತೇವೆ

ಕೆಲವು ವರುಷಗಳಿಂದೀಚೆಗೆ ಹಿಂದುಸ್ಥಾನದಲ್ಲಿ ಜನರು ವ್ಯಾಪಾರಕ್ಕೆ ಹೆಚ್ಚು ಗಮನವನ್ನು ಕೊಡುತ್ತಿದಾರೆ ಸ್ವದೇಶೀ ಪರ್ಮಾಟು ಎಲ್ಲಾ ಕಡೆಗಳಲ್ಲೂ ಹರಡಿಕೊಂಡೂ ಹರಡಿಕೊಳ್ಳುತ್ತಲೂ ಇದೆ. ಸ್ವದೇಶೀ ಪರ್ಮಾಡೆಂದರೆ ದೇಶೀಯ ಕಸಬುಗಳನ್ನು ಅಭಿವೃದ್ಧಿಗೆ ತರುವುದು, ಸ್ವದೇಶಿಗಳಿಂದಲೇ ಕೆಲಸಗಳನ್ನು ಮಾಡಿಸಿ ಸ್ವದೇಶಿಗಳ ಹಣವನ್ನೇ ವಿನಿಯೋಗಿಸಿ ಸ್ವದೇಶದ ಚಾತುರ್ಬುದ್ಧಿ ಕಟುವಟಿಕೆಗಳನ್ನು ಪ್ರಯೋಗಿಸಿ ಸ್ವದೇಶದ ನಾನಾ ಬಗೆಯ ಬೆಳೆಗಳನ್ನೆಲ್ಲಾ ಬಹಳವಾಗಿ ಹೆಚ್ಚುವಂತೆ ಮಾಡುವುದು ಹಾಗಾದರೆ ಈಗ ಜನರು ನಡಿಸುತ್ತಿರುವ ಮಾರ್ಗಗಳು ಮೊದಲಿಗಿಂತಲೂ ಉತ್ತಮವಾದವುಗಳೋ ಎಂಬ ಪ್ರಶ್ನೆ ಹುಟ್ಟುತ್ತದೆ ಕಳೆದ ಎರಡು ಮೂರು ವರುಷಗಳಿಂದ ಜನರು ಅವಲಂಬಿಸುತ್ತಿರುವ ಮಾರ್ಗಗಳೂ ನಡಿಸುತ್ತಿರುವ ಕಾರ್ಯಗಳೂ ಉತ್ತಮಸ್ಥಿತಿಗೂ ಕ್ರಮಕ್ರಮ ಬರುತ್ತಲಿವೆ ಎಂದು ಹೇಳಬಹುದು. ಹ್ಯಾಗೆಂದರೆ, ಅನೇಕಾನೇಕ ಕಡೆಗಳಲ್ಲಿ ಈಚೆಗೆ ದೇಶೀಯ ಕಸಬುದಾರಿ ವಸ್ತುಪ್ರದರ್ಶನಗಳು ನಡಿಯುತ್ತಿರುವವು, ಕಸಬುಗಳ ಅಭಿವೃದ್ಧಿಗಾಗಿ ಸಭೆಗಳೂ ಸಮಾಜಗಳೂ ನಡಿಯುತ್ತಿರುವವು, ಸ್ವದೇಶೀ ಧನಾಲಯ (ಬ್ಯಾಂಕು)ಗಳು ಏರ್ಪಡುತ್ತಿರುವವು, ಇನ್ನೂ ಅನೇಕ ಪ್ರೋತ್ಸಾಹಕ ಕಾರ್ಯಗಳು ನಡೆಯಲಾರಂಭವಾಗಿವೆ ಹಿಂದುಸ್ಥಾನಕ್ಕೆ ಚಟುವಟಿಕೆಯುಂಟಾಗಿದೆ ಪ್ರಜೆಗಳು ಪೂರ್ವಕಾಲದಿಂದಲೂ ಅನುಸರಿಸುತ್ತಾ ಬಂದಿರುವ ಮಾರ್ಗಗಳನ್ನು ತ್ಯಜಿಸಿ ಫಲದಾಯಕವಾದ ಹೊಸ ಮಾರ್ಗಗಳನ್ನು ಅವಲಂಬಿಸುವುದೇ ಅವಶ್ಯವೆಂದು ಕಂಡುಕೊಳ್ಳುತ್ತಿದಾರೆ ವ್ಯಾಪಾರವೂ ಕಸಬೂ ಒಂದೇ ಎಂದು ಹೇಳಬಹುದು ಅದು ಬೇರೆ ಇದು ಬೇರೆ ಎಂದು ಹೇಳಿ, ಒಂದನ್ನು ಹಿಡಿದು ಇನ್ನೊಂದನ್ನು ಬಿಡುವುದು ತಕ್ಕದ್ದಲ್ಲ

ಹಿಂದುಸ್ಥಾನದಿಂದ ಸಮುದ್ರದ ಮೇಲೆ ಸಾಗಿಹೋಗತಕ್ಕ ಸರಕುಗಳ ಬೆಲೆಯು ಈಗ ೩೦೪ ಕೋಟಿ ರೂಪಾಯಿನಷ್ಟಾಗುವುದು ಆ ಸರಕುಗಳೆಲ್ಲಾ ಮುಕ್ಕಾಲು ಮೂರುವೀಸ ಪಾಲಿನಷ್ಟು ಬೆಳೆದದ್ದು ಬೆಳೆವಂತೆಯೇ ರವಾನೆಯಾಗುವವು ಆದರೆ ಈಚೆಗೆ ಈ ದೇಶದಲ್ಲಿ ಕಾರ್ಖಾನೆಗಾರರಿಂದ ತಯಾರಾಗತಕ್ಕ ಪದಾರ್ಥಗಳ ರಫ್ತು ಕೂಡ ಹೆಚ್ಚುತ್ತಿದೆ ಎಂದು ಗವರ್ನಮೆಂಟಿನವರು ತಿಳಿಸುತ್ತಾರೆ ಕಳೆದ ಸಾಲಿನಲ್ಲಿ ಇಂಥಾ ವಸ್ತುಗಳು ಸುಮಾರು ಒಂದೂವರೆ ಕೋಟಿ ರೂಪಾಯಿನಷ್ಟು ಈ ರಾಷ್ಟ್ರದಿಂದ ರಫ್ತಾಗಿರುತ್ತವೆ. ಹಿಂದುಸ್ಥಾನದ ಕಾರ್ಖಾನೆಗಳಲ್ಲಿ ಹತ್ತಿಯಿಂದ ಮಾಡಲ್ಪಡುವ ನೂಲನ್ನು ಪ್ರಪಂಚದ ಎಲ್ಲಾ ಕಡೆಗಳಿಗೂ ರವಾನೆ ಮಾಡುತ್ತಾರೆ. ಇದು ಸ್ವದೇಶೀ ಪರ್ಮಾಡಿನ ಫಲವೆಂತಲೇ ಖಂಡಿತವಾಗಿ ಹೇಳಬೇಕು. ಈ ಪರ್ಮಾಡೇ ಇನ್ನೂ ದಿನೇ ದಿನೇ ಹೆಚ್ಚುತ್ತಾ ಬಂದಪಕ್ಷದಲ್ಲಿ ಈ ರಾಷ್ಟ್ರವು ಅಭಿವೃದ್ಧಿ ಹೊಂದುವುದಕ್ಕೆ ಮಾರ್ಗವಾದೀತು. ಹೀಗೆ ಹಿಂದುಸ್ಥಾನದಲ್ಲಿ ಬೆಳೆಯಾಗತಕ್ಕ ವಸ್ತುಗಳನ್ನು ಕಾರ್ಖಾನೆಗಳವರು ತೆಗೆದುಕೊಂಡು, ಅವುಗಳಿಂದ ಪದಾರ್ಥಗಳನ್ನು ತಯಾರುಮಾಡಿ ಇತರ ಕಡೆಗಳಿಗೆ ರವಾನೆ ಮಾಡುವುದು ವರುಷೇ ವರುಷ ಹೆಚ್ಚುತ್ತಾ ಬಂದೀತೆಂದು ದೇಶವತ್ಸಲರೆಲ್ಲಾ ಕುತೂಹಲಪೂರ್ವಕವಾಗಿ ಹಾರೈಸುತ್ತಾರೆ ದಿನಸುಗಳನ್ನು ಬೆಳೆ ಮಾಡುವುದರಲ್ಲಿ ದೇಶೀಯ ರೈತಪ್ರಜೆಗಳಿಗೆ ಪ್ರಯೋಜನವಾಗುವುದು, ಬೆಳೆದ ದಿನಸುಗಳನ್ನು ಇಲ್ಲಿನ ಕಾರ್ಖಾನೆಗಳಲ್ಲಿ ಕಸಬುದಾರರು ಉಪಯೋಗಪಡಿಸಿ ಪ್ರಪಂಚದ ಇತರ ಕಡೆಗಳ ಜನರಿಗೆ ಬೇಕಾಗುವ ನಾನಾ ಬಗೆಯ ಪದಾರ್ಥಗಳನ್ನು ತಯಾರುಮಾಡುವುದರಲ್ಲಿ ಕಸಬುದಾರರಿಗೂ ಕಾರ್ಖಾನೆಗಾರರಿಗೂ ಪ್ರಯೋಜನವಾಗುವುದು; ಮತ್ತು ಅಂಥ ಪದಾರ್ಥಗಳನ್ನು ರಫ್ತುಮಾಡುವುದಕ್ಕೂ ಸ್ವದೇಶೀ ಹಡಗುಗಳ ಕಂಪನಿಗಳನ್ನು ದೇಶೀಯ ಧನವಂತರು ಇಟ್ಟುಕೊಳ್ಳುವುದಾದರೆ ಅದರ ಲಾಭಕ್ಕೆ ಅಪಾರವಾದ ಪ್ರತಿಫಲವೂ ಲಕ್ಷಾಂತರ ಜನರಿಗೆ ಜೀವನೋಪಾಯವೂ ದೊರಕುವವು. ಕಳೆದ ಸೆನ್ಸಸ್ ಲೆಕ್ಕಗಳನ್ನು ಆಧಾರಮಾಡಿ ನೋಡಿದಲ್ಲಿ ಹಿಂದುಸ್ಥಾನದ ಪ್ರಜಾ ಸಂಖ್ಯೆಯಲ್ಲಿ ಶೇಕಡಾ ಎರಡೂವರೆಯಷ್ಟು ಜನರು ಮಾತ್ರ ವ್ಯಾಪಾರವನ್ನು ಅವಲಂಬಿಸಿದಾರೆಂದು ತಿಳಿಯುವುದು. ಈ ರೀತಿ ನೋಡಿದರೆ ಈ ರಾಷ್ಟ್ರದ ಮೂವತ್ತು ಕೋಟಿ ಪ್ರಜೆಗಳ ಪೈಕಿ ನಾಲ್ವತ್ತು ಲಕ್ಷ ಜನರು ಮಾತ್ರವೇ ವ್ಯಾಪಾರದಲ್ಲಿ ಕೈ ಹಾಕಿರುವುದು ತೃಪ್ತಿಕರವಾಗಿರುವಂತೆ ಕಾಣುವುದೇ? ಎಂದಿಗೂ ಅಲ್ಲವು. ಆದರೆ ಮೊದಲಿಗಿಂತಲೂ ವ್ಯಾಪಾರವನ್ನವಲಂಬಿಸಿರುವವರ ಸಂಖ್ಯೆಯು ಈಗ ತುಂಬಾ ಹೆಚ್ಚಿದೆ ಎಂತಲೂ, ಹೀಗೆಯೇ ಕ್ರಮೇಣ ಜನರು ಈ ಉದ್ಯೋಗವನ್ನು ಹೆಚ್ಚುಹೆಚ್ಚಾಗಿ ಅವಲಂಬಿಸುತ್ತಾ ಬಂದಲ್ಲಿ ದೇಶೋನ್ನತಿಗೆ ವಿಶೇಷ ಸಹಾಯವಾಗುವುದೆಂತಲೂ ಖಂಡಿತವಾಗಿ ಹೇಳಬಹುದಾಗಿದೆ ಈಗ ತೋರುತ್ತಿರುವ ಸೂಚನೆಗಳು ಶುಭಸೂಚಕಗಳಾಗಿಯೂ ಸಂತೋಷಪ್ರದಗಳಾಗಿಯೂ ಇರುವವು

ಈ ರಾಷ್ಟ್ರದ ಜನರಲ್ಲಿ ವ್ಯಾಪಾರೇಚ್ಛೆಯು ಬಹಳ ಕಡಿಮೆಯಾಗಿರುವುದು. ಪ್ರಾಚೀನಕಾಲದಿಂದಲೂ ಜನರು ವ್ಯವಸಾಯವನ್ನು ಅವಲಂಬಿಸಿಕೊಂಡು ಬಂದಿರುವುದೇ ಬಹಳ ವಿಶೇಷವು ಹ್ಯಾಗೂ ಪೂರ್ವಕಾಲದ ತೊಡಕುಗಳೆಲ್ಲಾ ಕಾಲಕ್ರಮದಲ್ಲಿ ಸಡಿಲವಾಗಿ ಪರಿಹರವಾಗಲೇಬೇಕು ವ್ಯಾಪಾರಾಭಿವೃದ್ಧಿಗಾಗಿ ನಾನಾ ಸಂಘಗಳು ಈ ರಾಷ್ಟ್ರದ ಎಲ್ಲಾ ಭಾಗಗಳಲ್ಲೂ ಹುಟ್ಟಿ ಹಬ್ಬಬೇಕು ಇಷ್ಟಾದ ಹೊರತು ದೇಶದ ಐಶ್ವರ್ಯವೂ ಪ್ರಜೆಗಳ ಸಂತುಷ್ಟಿಯೂ ನೆಲೆಗೊಳ್ಳಲಾರವು ವ್ಯಾಪಾರಕ್ಕೂ ಕಸಬುಗಳಿಗೂ ಬೇಕಾದುದು ಅವಮಾನಕರವೆಂದೂ ಅಗೌರವವೆಂದೂ ಜನರು ದುರಭಿಮಾನವನ್ನಿಟ್ಟುಕೊಂಡಿರುವ ತನಕ ಈ ರಾಷ್ಟ್ರವು ಉಚ್ಛ್ರಾಯಸ್ಥಿತಿಯನ್ನು ಹತ್ತುವುದಿಲ್ಲ ವ್ಯಾಪಾರಾದಿಗಳನ್ನು ಚನ್ನಾಗಿ ಅಭಿವೃದ್ಧಿಗೆ ತರಬೇಕು ಜನರು ಅದಕ್ಕೆ ತಕ್ಕಂಥಾ ವಿದ್ಯಾದಿ ಸಾಮರ್ಥ್ಯಗಳನ್ನೂ ಪೂರ್ಣವಾದ ಅನುಭವವನ್ನೂ ಮೊದಲು ಸಂಪಾದಿಸಿಕೊಳ್ಳಬೇಕಾದದ್ದು ಪರಮಾವಶ್ಯವಾಗಿರುತ್ತವೆ.

ಕಡೆಯಲ್ಲಿ, ಸಭಾನಾಯಕರಾಗಿದ್ದ ಮಿ॥ ಡಿ ಎ ಸ್ಟುವರ್ಟ್ ಯವರು ತಿಳಿಸಿದ ಅಭಿಪ್ರಾಯವೇನೆಂದರೆ .—

ವ್ಯಾಪಾರವು ಸುಲಭಸಾಧ್ಯವಾದ ಕಸಬೆಂದು ಊಹಿಸುವುದು ತಪ್ಪು ಈ ಕಸಬಿನಲ್ಲಿ ಮೊದಲಿಗಿಂತಲೂ ಈಗೀಗ ಪೋಟಾಪೋಟಿಯೂ ಹೋರಾಟವೂ ಹೆಚ್ಚುತ್ತಾ ಬಂದಿದೆ ಹಿಂದುಸ್ಥಾನದ ಮುಖ್ಯ ನಗರಗಳಲ್ಲಿರುವಂಥಾ ವರ್ತಕರಿಗೂ, ವಿಶೇಷವಾಗಿ ಯುರೋಪ್ಯನ ವ್ಯಾಪಾರಸ್ಥರಿಗೂ ಈ ಕಸಬಿನಲ್ಲಿ ತುಂಬಾ ಲಾಭ ಬರುತ್ತಿದೆ ಎಂದು ಅನೇಕಾನೇಕರು ತಿಳಿದುಕೊಂಡಿದಾರೆ ಇದು ಯಥಾರ್ಥವೆಂದು ಹೇಳಬಾಗುವುದಿಲ್ಲ ನನ್ನ ಅನುಭವವನ್ನು ಕೇಳಿದರೆ ಯುರೋಪ್ಯರ ವರ್ತಕರು ಈ ದೇಶದಲ್ಲಿ ಕಮಿಷನ್ (ದಳ್ಳಾಳಿ) ಮಾತ್ರ ತೆಗೆದುಕೊಂಡು ವ್ಯಾಪಾರ ಮಾಡುತ್ತಾರೆಂತಲೂ, ಇಂಥಾ ದಳ್ಳಾಳಿ ವ್ಯಾಪಾರದಲ್ಲಿ ಈ ದೇಶೀಯರಿಗೆ ಅಭಿರುಚಿಯಿಲ್ಲವೆಂತಲೂ ಕೇಳಬಲ್ಲೆನು. ಹಿಂದುಸ್ಥಾನದ ಜನರು ಈ ಕಸಬನ್ನು ಹೆಚ್ಚು ಹೆಚ್ಚಾಗಿ ಅವಲಂಬಿಸಬೇಕು; ಪೋಟಾಪೋಟಿ ಹೆಚ್ಚಿರೋಣದರಿಂದ ಬಹಳ ಲಾಭವನ್ನು ನಿರೀಕ್ಷಿಸಬಾರದು ಹಿಂದುಸ್ಥಾನವು ದರಿದ್ರದೇಶವಾಗಿರುತ್ತದೆ. ಯಾಕೆಂದರೆ, ಜನರು ದುರಭಿಮಾನವನ್ನಿಟ್ಟುಕೊಂಡು ಪೂರ್ವಾಚಾರ ಪೂರ್ವಪದ್ಧತಿಗಳಲ್ಲೇ ಮಗ್ನರಾಗಿರುತ್ತಾರಲ್ಲದೆ ವ್ಯವಸಾಯ, ನೆಯ್ಗೆ, ವ್ಯಾಪಾರಾದಿ ಕಸಬುಗಳನ್ನು ಈಗಿನ ಕಾಲಕ್ಕೆ ತಕ್ಕ ಹಾಗೆ ಬದಲಾವಣೆ ಮಾಡಿಕೊಳ್ಳದೆಯೂ ನೂತನ ಸಾಧನಗಳನ್ನು ಒದಗಿಸಿಕೊಂಡು ಕಸಬುಗಳನ್ನು ಅಭಿವೃದ್ಧಿಪಡಿಸಿಕೊಳ್ಳದೆಯೂ ಇರುತ್ತಾರೆ. ಈಗಿನ ಕಾಲದ ಸಾಧನಗಳನ್ನು ಅವರು ಉಪಯೋಗಿಸುವುದಾದರೆ ಅವರು ಈಗ ಉತ್ಪತ್ತಿ ಮಾಡುವ ದವಸ, ಧಾನ್ಯ, ಮೊದಲಾದವುಗಳಿಗಿಂತ ಇನ್ನೂ ಎರಡರಷ್ಟು ಉತ್ಪತ್ತಿ ಮಾಡಿಕೊಳ್ಳಬಹುದಾಗಿದೆ ಹಿಂದುಸ್ಥಾನವು ಮೊದಲು ಹ್ಯಾಗೋ ಹಾಗೆ ಈಗಲೂ ವ್ಯವಸಾಯ ಪ್ರಧಾನವಾಗಿದೆ. ಜನರು ವ್ಯವಸಾಯಕ್ಕೆ ಹೆಚ್ಚು ಹೆಚ್ಚಾಗಿ ಗಮನಕೊಟ್ಟು ಅಭಿವೃದ್ಧಿಮಾಡಿಕೊಂಡರೆ ಇನ್ನೂ ಹತ್ತರಷ್ಟು ಉತ್ಪತ್ತಿಮಾಡಿ ಧನವಂತರಾದಾರೆನ್ನುವುದಕ್ಕೆ ಸಂಶಯವಿಲ್ಲ ವ್ಯಾಪಾರವಾದರೋ ಖಂಡಿತವಾಗಿಯೂ ಅಷ್ಟು ಲಾಭಕರವಾಗಿಲ್ಲವು. ಲಾಭನಷ್ಟಗಳೆರಡೂ ಈ ಕಸಬಿನ ಬೆನ್ನು ಹತ್ತಿರುವವು. ಆದಕಾರಣ ಖಂಡಿತವಲ್ಲದ ಕಸಬನ್ನು ಅಷ್ಟು ವಿಶೇಷವಾಗಿ ಅವಲಂಬಿಸುವುದಕ್ಕಿಂತಲೂ ಖಂಡಿತವಾದ ವ್ಯವಸಾಯವನ್ನು ಅನುವರ್ತಿಸುವುದೇ ಕ್ಷೇಮಕರವು ಮತ್ತು ಈ ಕಸಬೇ ಈ ರಾಷ್ಟ್ರದ ಭಾಗ್ಯಾಭ್ಯುದಯಕ್ಕೆ ಸಹಕಾರಿಯಾದದ್ದಾಗಿದೆ.

ಉತ್ತರ ದೇಶದಲ್ಲಿ ರಾಜದ್ರೋಹಕೃತ್ಯಗಳು.

ಅಪರಾಧಿಗಳ ಹೇಳಿಕೆ ಮುಂತಾದದ್ದು

ಮುಜಫರ್‌ಪುರದಲ್ಲಿ ಕೆನಡಿಯವರ ಪತ್ನಿಯನ್ನೂ ಪುತ್ರಿಯನ್ನೂ ಕಾಸ್ಟ್ಯರನನ್ನೂ ಮದ್ದಿನ ಗುಂಡುಹಾಕಿ ಕೊಂದಂಥಾ ಅಪರಾಧಿಗಳು ಇಬ್ಬರು. ಈ ಪೈಕಿ ಒಬ್ಬನ ಹೆಸರು ಖುದಿರಾಂ ಬೋಸ್ ಇವನನ್ನು ಪೋಲೀಸಿನವರು ದಸ್ತಗಿರಿ ಮಾಡಿದಾಗ ಭಾಮಾರ್ಜಿದ ಎರಡು ರಿವಾಲ್ವರ್ ಎಂಬ ಪಿಸ್ತೂಲುಗಳು ಅವನ ಬಳಿ ಸಿಕ್ಕಿದವು ಅವನು ಹೇಳಿದ್ದೇನೆಂದರೆ— ನಾನೂ ದಿನೇಶಚಂದ್ರರಾಯ ಎಂಬವನೂ ಕಲ್ಕತ್ತೆಯಿಂದ ಮಿ॥ ಕಿಂಗ್ಸ್‌ಫರ್ಡ್‌ಯವರನ್ನು ಕೊಲ್ಲುವುದಕ್ಕಾಗಿ ಮೂರು ರಿವಾಲ್ವರ್ ಎಂಬ ಪಿಸ್ತೂಲುಗಳನ್ನೂ ಒಂದು ಬಾಂಬ್ ಎಂಬ ಸಿಡಿಯುವ ಮದ್ದಿನ ಗುಂಡನ್ನೂ ತೆಗೆದುಕೊಂಡು ಐದು ದಿನಗಳ ಕೆಳಗೆ ಮುಜಫರ್‌ಪುರಕ್ಕೆ ಬಂದೆವು ಬಂಗಾಳದಲ್ಲಿ ದೇಶೀಯ ವರ್ತಮಾನಪತ್ರಿಕೆಗಳೊಳಗೆ ಬರೆದ ಬರವಣಿಗೆಗಳನ್ನು ಓದಿದ್ದರಿಂದಲೂ ಬಾಬು ಬಿಪಿನ್ ಚಂದ್ರ ಪಾಲ್ ಮೊದಲಾದವರ ಉಪನ್ಯಾಸಗಳನ್ನು ಕೇಳಿದ್ದರಿಂದಲೂ ಮಿ॥ ಕಿಂಗ್ಸ್‌ಫರ್ಡ್‌ಯವರನ್ನು ಕೊಂದುಬಿಡಬೇಕೆಂದು ನಮಗೆ ರೋಷ ಹುಟ್ಟಿತು

[ಕೊಲೆಗಾರರು ಎಸೆದ ಮದ್ದಿನ ಗುಂಡು ಒಡೆದು ಅನಾಹುತವಾಯಿತೆಂದೂ, ಕೆನ್ನಡಿಯವರ ಪತ್ನಿ, ಅವರ ಪುತ್ರಿ, ಅವರ ಕುದುರೆಯವನು ಕಾಲವಾದಾರೆಂದೂ ಕಳೆದ ವಾರ ತಿಳಿಸಿರುತ್ತೇವಷ್ಟೆ. ಇವರು ಆ ದಿನ ರಾತ್ರಿ ಕ್ಲಬ್ ಎಂಬ ವಿಹಾರಮಂದಿರದಿಂದ ಗಾಡಿಯಲ್ಲಿ ಕುಳಿತು ಮಿ॥ ಕಿಂಗ್ಸ್‌ಫರ್ಡ್‌ಯವರ ಮನೆಯನ್ನು ಹಾಸಿಹೋಗುತ್ತಿದ್ದರು.

ಗಾಡಿಯಲ್ಲಿ ಮಿ|| ಕಿಂಗ್ಸ್‌ಫರ್ಡ್‌ರವರೇ ಇರಬೇಕೆಂದು ಊಹಿಸಿ ಕೊಲೆಗಾರರು ಮದ್ದಿನ ಗುಂಡನ್ನು ಎಸೆದರು. ಈಚೆಗೆ ಮಿ|| ಕಿಂಗ್ಸ್‌ಫರ್ಡರು ಸಂಸಾರ ಸಹಿತ ಮುಜಫರ್‌ಪುರದಿಂದ ವಾಪಸು ಕಲ್ಕತ್ತೆಗೆ ಬಂದುಬಿಟ್ಟರೆಂದು ತಿಳಿಯುತ್ತದೆ. ಇವರು ಮುಜಫರ್‌ಪುರದ ಡಿಸ್ಟ್ರಿಕ್ಟ್ ಜಡ್ಜಿ ಕೆಲಸದ ಛಾರ್ಜನ್ನು ವಹಿಸುವುದಕ್ಕಾಗಿ ಹೋಗಿದ್ದರು.]

ಕೊಲೆಗಾರನು ಆತ್ಮಹತ್ಯ ಮಾಡಿಕೊಂಡದ್ದು

ಕೊಲೆಗಾರರ ಪೈಕಿ ಎರಡನೇ ದಿನೇಶ ಚಂದ್ರ ರಾಯ ಎಂಬವನು ದೊರೆಸಾನಿಗಳು ಕುಳಿತಿದ್ದ ಗಾಡಿಗೆ ಮದ್ದಿನಗುಂಡು ಎಸೆದ ಮೇಲೆ [illegible]ಯನ್ನು ಹಿಡಿದು ಸಮಾಸ್ತಿಪುರವನ್ನು ತಲಪಿ, ಅಲ್ಲಿಂದ ಮುಂದೆ ಹೊರಟು ಮೈನಿ ಎಂಬ ಸ್ಥಳವನ್ನು ಸೇರಿದನು. ಸಮಾಸ್ತಿಪುರದಿಂದ ಅವನು ಹೋಗುವಾಗ್ಗೆ ನಂದೋಲಾಲ್ ಬ್ಯಾನರ್ಜಿ ಎಂಬೊಬ್ಬ ಪೋಲೀಸ್ ಇನ್ಸ್‌ಪೆಕ್ಟರು ಅವನನ್ನು ಸಂಧಿಸಿದನು. ಇವರಿಬ್ಬರೂ ಮಾತನಾಡಿಕೊಂಡು ಬರುವಲ್ಲಿ ಕೊಲೆಗಾರನು ಇನ್ಸ್‌ಪೆಕ್ಟರ ಕೂಡ ಮುಜಫರ್‌ಪುರದ ಕೊಲೆಯ ವಿಚಾರವನ್ನೇ ಕುರಿತು ಬಹಳವಾಗಿ ಪ್ರಸ್ತಾಪ ಮಾಡುತ್ತಿದ್ದದ್ದೂ, ಅವನು ಮೊಕಾಮಾ ಸ್ಟೇಷನಿನಲ್ಲಿ ಮತ್ತೆ ಕಲ್ಕತ್ತೆಗೆ ಟಿಕೆಟ್ ಕೊಂಡುಕೊಂಡದ್ದೂ ಆ ಇನ್ಸ್‌ಪೆಕ್ಟರಿಗೆ ಸ್ವಲ್ಪ ಅನುಮಾನವನ್ನುಂಟುಮಾಡಿದವು. ಆಗ ಆ ಇನ್ಸ್‌ಪೆಕ್ಟರು ರೈಲ್ವೆ ಪೋಲೀಸಿನವರನ್ನು ಕರೆದು ಅವರಿಗೆ ತನ್ನ ಅನುಮಾನವನ್ನು ತಿಳಿಸಿ, ಆ ಮನುಷ್ಯನ ಮೇಲೆ ನಿಗಾ ಇಟ್ಟಿರಬೇಕೆಂದು ಹೇಳಿದನು. ಅನಂತರ ಮುಜಫರ್‌ಪುರದಿಂದ ಅವನನ್ನು ಹಿಡಿಯಬೇಕೆಂದು ತಂತೀ ವರ್ತಮಾನ ಬಂದಿತು. ಆಗ ದಿನೇಶ ಚಂದ್ರ ರಾಯನು ಸಿಕ್ಕದೆ ತಪ್ಪಿಸಿಕೊಂಡು, ಪ್ಲಾಟ್‌ಫಾರಂನಿಂದ ಕೆಳಕ್ಕೆ ಓಡಿ ಹೋಗಿ ನಿಂತುಕೊಂಡನು. ಅಷ್ಟರಲ್ಲೇ ಒಬ್ಬ ಪೋಲೀಸಿನವನು ನುಗ್ಗಿ ದಿನೇಶನನ್ನು ಹಿಡಿದನು. ದಿನೇಶನು ಅಂಗಿಯೊಳಗಿಂದ ಒಂದು ಪಿಸ್ತೂಲನ್ನು ಹಿರಿದು, ಎರಡಾವರ್ತಿ ಆ ಪೋಲೀಸಿನವನಿಗೆ ಹೊಡೆದನು. ಅದು ಗುರಿ ತಪ್ಪಿದ್ದರಿಂದ ಪೋಲೀಸಿನವನಿಗೆ ತಗಲಲಿಲ್ಲವಾದರೂ ಅವನು ಗಾಬರಿಬಿದ್ದು ಅಪರಾಧಿಯನ್ನು ಬಿಟ್ಟುಬಿಟ್ಟನು. ತರುವಾಯ ದಿನೇಶನು ಅದೇ ಪಿಸ್ತೂಲನ್ನು ತನ್ನ ದೇಹಕ್ಕೇ ಗುರಿಕಟ್ಟಿ ಹಾರಿಸಿ ಆತ್ಮಹತ್ಯಮಾಡಿಕೊಂಡನು.

ಕೊಲೆಗಾರನ ಶವದ ಪರೀಕ್ಷೆ.

ದಿನೇಶ ಚಂದ್ರನ ಶವವನ್ನು ಮೊಕಾಮಾ ಸ್ಟೇಷನಿನಿಂದ ಇಂಥವನೆಂದು ಗೊತ್ತು ಮಾಡುವುದಕ್ಕಾಗಿ ಮುಜಫರ್‌ಪುರದ ರೈಲ್ ಸ್ಟೇಷನ್ನಿಗೆ ತಂದು ಮಲಗಿಸಿದರು. ಈ ಸುದ್ದಿಯು ಪೇಟೆಯಲ್ಲಿ ಹರಡಿ ಸಾವಿರಾರು ಜನರನ್ನು ಸ್ಟೇಷನ್ನಿಗೆ ತಂದು ಕೂಡಿಹಾಕಿತು. ಶವವನ್ನು ಗಾಡಿಯಿಂದ ತೆಗೆದು ಡೋಲಿಯಲ್ಲಿ ಮಲಗಿಸಿ ಕೋಣೆಯೊಳಕ್ಕೆ ತರುವಲ್ಲಿ ಜನರ ಗುಂಪು ನೋಡಿ ಅಸಹ್ಯವನ್ನೂ ಭಯವನ್ನೂ ಪಟ್ಟರು. ಸುಮಾರು ಆಯುಧಧಾರಿಗಳಾದ ಪೋಲೀಸಿನವರು ಖುದಿರಾಂ ಬೋಸ್ ಎಂಬ ಇನ್ನೊಬ್ಬ ಕೊಲೆಗಾರನನ್ನು ಲಾಕಪ್ಪಿನಿಂದ ಸ್ಟೇಷನ್ನಿಗೆ ಕರೆದುತಂದು ಕೋಣೆಯೊಳಗಿಟ್ಟಿದ್ದ ಶವವನ್ನು ಮುಖದ ಮೇಲಣ ಬಟ್ಟೆ ತೆರೆದು ಅವನಿಗೆ ತೋರಿಸಿದರು. ಅವನು ಆ ಮನುಷ್ಯನೇ ತನ್ನ ಜತೆಯಲ್ಲಿದ್ದವನೆಂದು ಗುರುತುಹಿಡಿದು ಒಪ್ಪಿಕೊಂಡನು. ಆತ್ಮಹತ್ಯಮಾಡಿಕೊಂಡ ಆ ದಿನೇಶ ಚಂದ್ರನು ಸುಂದರ ಪುರುಷನಾಗಿದ್ದನು. ಅವನ ಅಂಗಾಂಗಗಳು ತಕ್ಕಮಟ್ಟಿಗೆ ಚನ್ನಾಗಿಯೂ ಪುಷ್ಟಿಯಾಗಿಯೂ ಇದ್ದವು. ಅವನ ಮನೋದಾರ್ಢ್ಯವು ಅಪಾರವಾಗಿದ್ದಿರಬೇಕೆಂಬುವುದು ಅವನ ಹಣೆಯಿಂದಲೂ ಗದ್ದದಿಂದಲೂ ಗೊತ್ತಾಯಿತು. ಅವನಿಗೆ ಸುಮಾರು ೨೧ ವರುಷವಾಗಿರಬಹುದು. ಅನಂತರ ಡಾಕ್ಟರ ಅಟಾಪ್ಸಿ ಮಹಜರು ಮುಂತಾದ ಕ್ರಮಗಳು ನಡೆದವು. ಪೂರ್ವಪ್ರಕಾರ ಶವದ ತಲೆಯನ್ನು ಕತ್ತರಿಸಿ, ಕೆಡದಂತೆ ದ್ರಾವಕಗಳಲ್ಲಿ ಮುಳುಗಿಸಿ ಭಾಂಗಿಮಾಡಿ ಕಲ್ಕತ್ತಾ ಪಟ್ಟಣಕ್ಕೆ ರವಾನೆಮಾಡಿದಾರೆ.

ಕಲ್ಕತ್ತೆಯಲ್ಲಿ ನಡೆದ ವಿದ್ಯಮಾನಗಳು.

ಮುಜಫರ್‌ಪುರದಲ್ಲಿ ಘೋರಕೃತ್ಯವು ನಡೆದದ್ದನ್ನು ಕೇಳಿದ ಮೇಲೆ ಕಲ್ಕತ್ತೆಯ ಪೋಲೀಸ್ ಇಲಾಖೆಯ ಮುಖ್ಯಾಧಿಕಾರಿಗಳು ಅಂತರಂಗದಲ್ಲೇ ಮೀಟಿಂಗುಗಳನ್ನು ನಡಸಿ, ಎಲ್ಲಾ ಏರ್ಪಾಡೂ ಮಾಡಿಕೊಂಡು ಸಮಾನಿಯಾದ ಮನೆಮಾರುಗಳಿಗೆ ಮುತ್ತಿಗೆ ಹಾಕಿ, ಶೋಧನೆ ಮಾಡಿ ಅನೇಕ ಮದ್ದುಗುಂಡುಗಳನ್ನೂ, ಬಾಂಬ್ ಎಂಬ ಮಾರಕವಾದ ಸಿಡಿಮದ್ದಿನ ಗುಂಡುಗಳ ತಯಾರಿಗಾಗಿ ಕೂಡಿಸಿಟ್ಟಿದ್ದ ದ್ರಾವಕಗಳೇ ಮೊದಲಾದ ಪದಾರ್ಥಗಳನ್ನೂ ದಸ್ತಗಿರಿ ಮಾಡಿದಲ್ಲದೆ, ಈ ರಾಜದ್ರೋಹಕೃತ್ಯಗಳನ್ನು ನಡಸುವುದಕ್ಕೆ ಸಂಕಲ್ಪ ಮಾಡಿಕೊಂಡಿದ್ದವರ ಪೈಕಿ ಸುಮಾರು ಮೂವತ್ತು ಮಂದಿಯನ್ನು ಹಿಡಿದುಕೊಂಡು ಬಂದರೆಂದು ಕಳೆದ ವಾರ ಸೂಕ್ಷ್ಮವಾಗಿ ಸೂಚಿಸಿರುತ್ತೇವಷ್ಟೆ. ಈಚೆಗೆ ಈ ಅಪರಾಧಿಗಳನ್ನು ಪೋಲೀಸ್ ಕಮಿಷನರ ಮುಂದೆ ನಿಲ್ಲಿಸಿದಾಗ ಅವರು ಹೇಳಿ ಬರೆಸಿರುವ ವಾಙ್ಮೂಲಗಳು ಬಹು ಭಯಂಕರವಾಗಿದ್ದವು. ಆ ವಾಙ್ಮೂಲಗಳ ಮುಖ್ಯಾಭಿಪ್ರಾಯವನ್ನು ಇಲ್ಲಿ ಸೂಚಿಸುತ್ತೇವೆ.

ಅಪರಾಧಿಗಳ ಕೈಫಿಯತ್ತುಗಳು.

ಅರವಿಂದ ಘೋಸ್ ಮತ್ತು ಇನ್ನು ಕೆಲವರು ಸದ್ಯದಲ್ಲಿ ಏನೂ ಹೇಳಿ ಬರೆಸುವುದಿಲ್ಲವೆಂದು ತಿಳಿಸಿ ಮೌನವನ್ನು ಧರಿಸಿರುತ್ತಾರೆ.

ಉಲ್ಲೇಸ್ಕರ್ ದತ್ ಎಂಬವನು ಬರೆಸಿರುವುದೇನೆಂದರೆ— ನನ್ನ ತಂದೆ ಶಿವಪುರದ ಇಂಜನಿಯರ್ ವಿದ್ಯಾಶಾಲೆಯಲ್ಲಿ ಉಪಾಧ್ಯಾಯರಾಗಿರುವರು. ಕಲ್ಕತ್ತೆಯಲ್ಲಿ ಈಚೆಗೆ ನಾನು ಅನೇಕ ತರದ ದ್ರಾವಕ ಮತ್ತು ಪದಾರ್ಥಗಳನ್ನು ಕೊಂಡು ತಂದಿರುವುದು ನಿಜ. ನೈಟ್ರಿಕ್, ಸಲ್ಫ್ಯೂರಿಕ್, ಪಿಕ್ರಿಕ್ ಆಸಿಡ್ ಎಂಬ ದ್ರಾವಕಗಳನ್ನು ನಾಲ್ಕು ಕಂಪನಿಯಿಂದ ೨೦—೩೦ ಪೌಂಡುಗಳಷ್ಟು ಕೊಂಡುಕೊಂಡೆನು. ಮೇಲ್ಕಂಡ ತೋಟದಲ್ಲಿ ಸಿಡಿಮದ್ದು ಮುಂತಾದ್ದನ್ನು ನಾನೂ ತಯಾರುಮಾಡಿದ್ದೇನೆ. ಅವಶ್ಯವಿದ್ದಾಗ ಬಾಂಬ್ ಎಂಬ ಮದ್ದಿನ ಗುಂಡುಗಳನ್ನು ಮಾಡುತ್ತಿದ್ದೆನು. ಇದಕ್ಕಾಗಿ ದತ್ ಬೀದಿಯಲ್ಲಿ ಬಾಡಿಗೆ ಮನೆಯನ್ನು ಮಾಡಿಕೊಂಡಿದ್ದೆವು. ಚಂದ್ರನಗರದಲ್ಲಿ ರೈಲ್‌ಗಾಡಿಯನ್ನು ಹಾರಿಸುವುದಕ್ಕೆ ಮೊದಲು ಸಿಡಿಮದ್ದಿನ ಗುಂಡು ಮಾಡಿದೆವು. ಅದು ಹಾಳಾದರೂ ಸಾರ್ಥಕವಾಗಲಿಲ್ಲ. ಮಿಡ್ನಪುರದ ನಡವಳಿಕೆ ವಿಷಯದಲ್ಲಿ ಗುಂಡನ್ನು ತಯಾರುಮಾಡಿಕೊಟ್ಟೆನು. ಆದರೆ ಅದನ್ನು ನಾನೇ ಹಾರಿಸಿದವನು ನಾನಲ್ಲ.

ಭೂಪತಿ ಭೂಷಣ ಸರ್ಕಾರ್ ಎಂಬವನು ಕೋರ್ಟಿನಲ್ಲಿ ಬಹಿರಂಗವಾಗಿ ವಾಙ್ಮೂಲವನ್ನು ಹೇಳುವುದಿಲ್ಲವೆಂತಲೂ, ಅಂತರಂಗದಲ್ಲಿ ಕೇಳಿದರೆ ಅನೇಕ ಗುಟ್ಟಿನ ಸಂಗತಿಗಳನ್ನು ತಿಳಿಸುವುದಾಗಿಯೂ ಹೇಳಿದನು.

ಶಚೀಂದ್ರ ಕುಮಾರನನ್ನು ಕರೆದು ಮುಜಫರ್‌ಪುರದವರಂತೆ ಯಾಕೆ ಬಟ್ಟೆ ಹಾಕಿಕೊಂಡಿದ್ದೆ ಎಂದು ಕೇಳಿದ್ದಕ್ಕೆ ಅದು ಅಗ್ಗವಾಗಿರುವುದರಿಂದ ಹಾಕಿಕೊಂಡೆನೆಂದು ಹೇಳಿದನು. ಅವನು ಇನ್ನೂ ಹೇಳಿದ್ದೇನೆಂದರೆ— ನನ್ನ ತಂದೆಗೆ ನಾನು ಎಲ್ಲಿ ಏನು ಮಾಡಿಕೊಂಡಿದ್ದೇನೆಂಬುವುದು ತಿಳಿಯದು. ಚಂದ್ರನಗರದ ಮ್ಯುನಿಸಿಪಲ್ ಸ್ಕೂಲಿನಲ್ಲಿ ನಾನು ಓದುತ್ತಿದ್ದು, ಹಿಂದೂ ತತ್ವಶಾಸ್ತ್ರವನ್ನು ಕಲಿಯುವುದಕ್ಕಾಗಿ ಕಲ್ಕತ್ತೆಗೆ ಬಂದೆನು. ಒಂದು ತಿಂಗಳ ಕೆಳಗೆ ಈ ಸಂಘಕ್ಕೆ ಸೇರಿಕೊಂಡೆನು. ನನಗೆ ೧೫ ವರುಷವಾಗಿದೆ. ನನ್ನನ್ನು ದಸ್ತಗಿರಿ ಮಾಡಿದಾರೆಂದು ತಿಳಿದರೆ ನಮ್ಮ ತಂದೆಗೆ ಗಾಬರಿಯಾದೀತು. ಹಿಂದೂ ತತ್ವವಿಚಾರವನ್ನು ಬಿಟ್ಟು ಇನ್ನಾವುದನ್ನೂ ನಾನು ಓದಿದವನಲ್ಲ. ಆ ಮನೆಯಲ್ಲಿ ನಡೆಯುತ್ತಿದ್ದ ಯಾವ ವಿಚಾರವೂ ನನಗೆ ತಿಳಿಯದು.

ಖುಲ್ನಾ ಡಿಸ್ಟ್ರಿಕ್ಟಿನ ಇಂದು ಭೂಷಣ ರಾಯ ಎಂಬ ಇನ್ನೊಬ್ಬ ಅಪರಾಧಿ ಹೇಳಿದ್ದು— ಈ ಸಂಘದ ತೋಟಕ್ಕೆ ನಾನು ಬಂದು ಸೇರಿ ಆರು ವಾರಗಳಾದವು. ಚಂದ್ರನಗರದ ಮ್ಯುನಿಸಿಪಲ್ ಪ್ರೆಸಿಡೆಂಟರು ನಮ್ಮ ಸಂಘದ ಮೀಟಿಂಗುಗಳು ನಡೆಯದಂತೆ ಅಡ್ಡಿಮಾಡಿದ್ದಕ್ಕಾಗಿ ಅವರನ್ನು ಕೊಲ್ಲಬೇಕೆಂದು ನಾನು ಅವರ ಮೇಲೆ ಮದ್ದಿನ ಗುಂಡು ಎಸೆದೆನು. ಆಗ [illegible] ಉಪೇಂದ್ರನಾಥ ಬ್ಯಾನರ್ಜಿ ಎಂಬವನು ನನ್ನ ಕೂಡ ಇದ್ದನು.

ಚಂದ್ರನಗರದ ಇನ್ನೊಬ್ಬ ಅಪರಾಧಿ ಹೇಳಿದ್ದು— ನನ್ನ ತಂದೆಗೆ ಸರ್ಕಾರದ ನೌಕರಿ ಇದೆ. ಈ ಸಂಘದ ಕಾರ್ಯಕ್ಕಾಗಿ ನಾನು ಸೇರಿದ್ದೆನು. ಹಿಂದುಸ್ಥಾನದ ಅನೇಕ ಕಡೆಗಳಿಗೆ ಹೋಗಿ ಬಂದಿದ್ದೇನೆ. ಆ ತೋಟದ ಮನೆಯೊಳಗೆ ನಾನು ಮದ್ದಿನ ಗುಂಡುಗಳನ್ನು ತಯಾರುಮಾಡಿದ್ದುಂಟು. ಈ ಸಂಘಕ್ಕೆಲ್ಲಾ ಬಾರೇಂದ್ರನೆಂಬವನು ಮುಖಂಡನಾಗಿದಾನೆ. ತತ್ವವಿಚಾರವನ್ನು ಬೋಧನೆ ಮಾಡುವುದೇ ನನ್ನ ಮುಖ್ಯ ಉದ್ಯೋಗವು. ಪಿಸ್ತೂಲು ಹಿಡಿದು ಗುರಿಕಟ್ಟಿ ಹೊಡೆಯುವುದಕ್ಕೆ ನನಗೆ ಬರುವುದಿಲ್ಲ. ಅಂತರಂಗ ಸಿಡಿಮದ್ದಿನ ಗುಂಡುಗಳನ್ನು ತಯಾರುಮಾಡುತ್ತಿದ್ದದ್ದನ್ನು ನೋಡಿದ್ದೇನೆ. ಗವರ್ನ್‌ಮೆಂಟಿಗೆ ವಿರೋಧವಾಗಿ ನಾವು ಒಂದು ದಂಗೆ ಎಬ್ಬಿಸಬೇಕೆಂದು ಸಂಕಲ್ಪ ಮಾಡಿದ್ದೆವು. ನಮ್ಮನ್ನು ದಸ್ತಗಿರಿಮಾಡದೆ ಹೋಗಿದ್ದರೆ ಇನ್ನು ಸ್ವಲ್ಪ ಕಾಲದೊಳಗಾಗಿ ಬಹು ಭಯಂಕರವಾದ ಕೃತ್ಯಗಳು ನಡೆಯುತ್ತಿದ್ದವು. ನಾವು ನಿಶ್ಚಯಿಸಿದ್ದ ಕೃತ್ಯಗಳನ್ನು ಕೆಲವರು ಸಮ್ಮತಿಸಿದ್ದರು. ನಮ್ಮ ಉದ್ದೇಶವನ್ನು ನೆರವೇರಿಸಬೇಕೆಂತಲೇ ನಿಶ್ಚಯಿಸಿಕೊಂಡಿದ್ದೆವು.

ಅತ್ತಲಾಗಿ, ಮಾಣಿಕ್ಯತೋಲಾ ಎಂಬ ಸ್ಥಳದಲ್ಲಿ ದಸ್ತಗಿರಿ ಮಾಡಲ್ಪಟ್ಟ ಅಪರಾಧಿಗಳು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಬಹು ಭಯಂಕರವಾದ ವಾಙ್ಮೂಲಗಳನ್ನು ಹೇಳಿ ಬರೆಸಿದಾರೆ. ಹ್ಯಾಗೆಂದರೆ—

ಬಾರೇಂದ್ರ ಕೃಷ್ಣ ಘೋಸ್ ಎಂಬವನು ಹೇಳಿದ್ದು— ನಾನು ಕೆಲವು ವರುಷಗಳಿಂದ ವಿದ್ಯಾಭ್ಯಾಸ ಮಾಡುವುದನ್ನು ಬಿಟ್ಟು, ರಾಜಕೀಯ ಕಾರ್ಯಗಳನ್ನು ನಡಸುತ್ತೇನೆ. [illegible]ಯಿಂದ ಬರೋಡೆಗೆ ಹೋಗಿದ್ದು ಒಂದು ವರುಷದ ಮೇಲೆ ಬಂಗಾಳಕ್ಕೆ ಬಂದೆನು. ಅಲ್ಲಿ ಸ್ವದೇಶೀ ಏರ್ಪಾಡೂ ಪರದೇಶೀ ಬಹಿಷ್ಕಾರವೂ ಜಾರಿಯಲ್ಲಿದ್ದವು. ಆದ್ದರಿಂದ ಆ ಕೆಲಸಕ್ಕೆ ಪ್ರಾಯಸ್ಥರನ್ನು ಕೂಡಿಸಿ ತರಪೇತು ಮಾಡಬೇಕೆಂದು ಪ್ರಾರಂಭಿಸಿದೆನು. "ಯುಗಾಂತರ" ಪತ್ರಿಕೆಯನ್ನು ಸ್ವಾಮ್ಯವಾಗಿ ನಡಸುತ್ತಿದ್ದು ೧೯೦೭ ನೇ ವರುಷದ ಆರಂಭದಲ್ಲಿ ಈಗ ನಡಸುತ್ತಿರುವವರಿಗೆ ವಹಿಸಿಬಿಟ್ಟೆನು. ಹದಿನೈದು ಮಂದಿ ಪ್ರಾಯಸ್ಥರನ್ನು ಕೂಡಿಸಿ, ಅವರಿಗೆ ರಾಜಕೀಯ ವಿಚಾರಗಳನ್ನು ಕಲಿಸಿ ರಿವಾಲ್ವರ್ ಎಂಬ ಪಿಸ್ತೂಲುಗಳನ್ನು ಕೊಟ್ಟೆನು. ಆ ಪೈಕಿ ಒಬ್ಬನು ವೈದ್ಯ ಕಲಿತವನು (ಡಾಕ್ಟರು); ಇವನೇ ಮೊದಲು ಮೊದಲು ಸಿಡಿಮದ್ದಿನ ಪದಾರ್ಥಗಳನ್ನು ತಯಾರುಮಾಡಿಕೊಟ್ಟವನು. ಇನ್ನೊಬ್ಬನು ಯಂತ್ರಸಾಧನಗಳ ವಿಚಾರವನ್ನೂ (ಮೆಕ್ಯಾನಿಕ್ಸ್), ಸಿಡಿಮದ್ದಿನ ಗುಂಡು ಮೊದಲಾದವುಗಳ ತಯಾರಿಯನ್ನೂ ಕಲಿತು ಬರುವುದಕ್ಕೆ ಫ್ರಾನ್ಸ್ ರಾಜ್ಯದ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರಕ್ಕೆ ಹೋದನು. ಲೆಫ್ಟಿನೆಂಟ್ ಗವರ್ನರ್ ಸರ್ ಆಂಡ್ರು ಫ್ರೇಸರ್ ಅವರು ಪ್ರಯಾಣ ಮಾಡುತ್ತಿದ್ದ ರೈಲ್ ಗಾಡಿಯನ್ನು ಹಾರಿಸಬೇಕೆಂದು ಮೊದಲು ಪ್ರಯತ್ನ ಮಾಡಿದೆವು. ನಮ್ಮ ಗುಂಪಿನವರು ಆ ಸಿಡಿಮದ್ದಿನ ಗುಂಡನ್ನು ರೈಲ್ ಕಂಬಿಗಳ ಬಳಿ ಹೂತಿಡುತ್ತಿದ್ದಾಗ ಜನರು ಆ ಮಾರ್ಗವಾಗಿ ಬಂದದ್ದರಿಂದ ಆ ನಮ್ಮ ಪ್ರಯತ್ನವು ಸಾರ್ಥಕವಾಗಲಿಲ್ಲ. ಎರಡನೇದಾಗಿ, ಮಿಡ್ನಪುರದಲ್ಲಿ ಮಾಡಿದ ಯತ್ನವು ಸ್ವಲ್ಪ ಮಾತ್ರ ನೆರವೇರಿತು. ಆ ಅಪರಾಧಕ್ಕೆ ಈಗ ಜೈಲಿನಲ್ಲಿ ಬಿದ್ದು ಸಜಾ ಅನುಭವಿಸುವವರು ಸಂಬಂಧಪಟ್ಟವರಲ್ಲ, ಅವರೆಲ್ಲಾ ನಿರಪರಾಧಿಗಳಾಗಿದಾರೆ. ತರುವಾಯ ಚಂದ್ರನಗರದ ಮ್ಯುನಿಸಿಪಲ್ ಪ್ರೆಸಿಡೆಂಟರನ್ನೂ ಅವರ ಪತ್ನಿಯನ್ನೂ ಕೊಲ್ಲಬೇಕೆಂದು ಪ್ರಯತ್ನಪಟ್ಟೆವು. ಆ ಮದ್ದಿನ ಗುಂಡಿನಲ್ಲಿ ಹಾಕಿದ್ದ ಪಿಕ್ರಿಕ್ ಆಸಿಡ್ ಎಂಬ ದ್ರಾವಕವು ಕೆಟ್ಟುಹೋಗಿತ್ತಾದ್ದರಿಂದ ಸಾರ್ಥಕವಾಗಲಿಲ್ಲ. ಮುಜಫರ್‌ಪುರದಲ್ಲಿ ನಡೆದ ಕಡೇ ಘಾತುಕಕೃತ್ಯ ಹ್ಯಾಗೆಂದರೆ— ಮಿ|| ಕಿಂಗ್ಸ್‌ಫರ್ಡ್‌ರವರು ನ್ಯಾಷನಲಿಸ್ಟ್ ಎಂಬ ಸ್ವದೇಶೀ ಸಂಘಕ್ಕೆ ಸೇರಿದ್ದವರನ್ನು ದರ್ಯಾಪ್ತಿ ಮಾಡಿ ಶಿಕ್ಷೆ ವಿಧಿಸಿದ್ದಕ್ಕಾಗಿ ಆ ಮ್ಯಾಜಿಸ್ಟ್ರೇಟರನ್ನು ಸಿಡಿಮದ್ದಿನ ಗುಂಡು ಹಾಕಿ ಕೊಲ್ಲಬೇಕೆಂದು ಪ್ರಫುಲ್ಲ ಚಂದ್ರನೆಂಬವನು ಹಟ ಹಿಡಿದನು. ಹೇಮಚಂದ್ರನೂ ಉಲ್ಲಾಸ್ ದತ್ತನೂ ಮದ್ದಿನ ಗುಂಡು ತಯಾರುಮಾಡಿ [illegible] ಕೊಟ್ಟು ಅವನ ಕೂಡ ಮಿಡ್ನಪುರದ ಖುದಿರಾಂ ಬೋಸ್ ಎಂಬುವನನ್ನು ಕಳುಹಿಸಿದರು. ಅವರು ಒಂದು ವೇಳೆ ಸಿಕ್ಕಿಬಿದ್ದರೆ ಆತ್ಮಹತ್ಯ ಮಾಡಿಕೊಳ್ಳುವುದಾಗಿ ಅಪೇಕ್ಷೆ ಪಟ್ಟದ್ದರಿಂದ ಅವರಿಬ್ಬರಿಗೂ ನಾವು ಎರಡು ರಿವಾಲ್ವರ್ ಎಂಬ ಪಿಸ್ತೂಲುಗಳನ್ನು ಕೊಟ್ಟೆವು. ನಾನು ಪ್ರಫುಲ್ಲನನ್ನು ಗವಿ [illegible] ಬೀದಿ ೧೫ನೇ ನಂಬರು ಮನೆಗೆ ಕರೆದುಕೊಂಡು ಹೋಗಿ ಗೋಣೀ ಚೀಲದಲ್ಲಿ ಮದ್ದಿನ ಗುಂಡನ್ನು ಕಟ್ಟಿಕೊಟ್ಟೆನು. ಪಿಸ್ತೂಲುಗಳನ್ನು ಎಲ್ಲಿಂದ ತಂದೆವೋ ಹೇಳುವುದಿಲ್ಲವೆಂದು ಭಾಷೆ ಕೊಟ್ಟುಕೊಂಡಿದ್ದೇನಾದ್ದರಿಂದ ಈಗ ತಿಳಿಸಲಾರೆನು. ನನ್ನ ಜೊತೆಯಲ್ಲಿದ್ದ ಬೇರೆ ಹದಿನಾಲ್ಕು ಜನರಿಗೂ ಮತಭಕ್ತಿ ವಿಚಾರವನ್ನೂ ರಾಜಕೀಯ ವಿಷಯಗಳನ್ನೂ ಕಲಿಸುತ್ತಿದ್ದೆನು. [ಈ ಜನರ ಹೆಸರನ್ನು ಅವನು ಗುರುತಾಗಿ ಹೇಳಿ ಬರೆಸಿರುತ್ತಾನೆ.] ಬೇರೆ ಬೇರೆ ಜನರಿಂದ ಹಣವನ್ನು ಎತ್ತಿ ನಾನು ಇಷ್ಟು ಜನರಿಗೂ ಜೀವನ ನಡಿಸುತ್ತಿದ್ದೆನು. ಅಲ್ಲನ್ ಮತ್ತು ಹಿಕ್ಕಿನ್‌ಬಾಥಂರನ್ನು ಕೊಲ್ಲಬೇಕೆಂದು ಪಿಸ್ತೂಲಿನಿಂದ ಗುಂಡು ಹೊಡೆದದ್ದಕ್ಕೆ ನಾವ್ಯಾರೂ ಜವಾಬ್ದಾರರಾಗಿಲ್ಲ. ನಮ್ಮ ಸಂಘದಲ್ಲಿ ವೈಸರಾಯ ಮತ್ತು ಲಾರ್ಡ್ ಕಿಚ್ನರ್ (ಹಿಂದುಸ್ಥಾನದ ಸೈನ್ಯಾಧಿಪತಿ)ಗಳನ್ನು ಮೊದಲುಗೊಂಡು ಹಲವರ ವಿಷಯವನ್ನು ಕುರಿತು ನಾವು ಆಲೋಚನೆ ಮಾಡಿದ್ದೇವೆ. ಹೀಗೆಲ್ಲಾ ಮಾಡುವುದು ಪ್ರಜೆಗಳಿಗೆ ಸಮ್ಮತವಾಗಿದೆ ಎಂತಲೂ, ಇವರಿಂದ ಜಸ್ಟಿಸ್ ಇಲ್ಲವೇ ನ್ಯಾಯ ಬೇಕು ಎಂಬುವುದು ಪ್ರಜೆಗಳಿಗೆ ಕಲಿಸಿಕೊಟ್ಟಂತಾಗುವುದು ಎಂತಲೂ ನಮಗೆ ತೋರಿತು. ನಿರಪರಾಧಿಗಳಾಗಿರತಕ್ಕವರಿಗೆ ಶಿಕ್ಷೆಯಾಗಬಾರದೆಂತಲೂ, ಇಂಥಾ ಕೃತ್ಯಗಳಿಂದ ನ್ಯಾಷನಲಿಸ್ಟ್ (ದೇಶೀಯ) ಸಂಘದ ಉದ್ದೇಶವು ಕೈಗೂಡುವುದಿಲ್ಲವೆಂಬುವುದು ನಮಗೆ ಖಚಿತವಾಗಿ ಗೊತ್ತಾದದ್ದರಿಂದಲೂ ಈಗ ನಾವು ಯಥಾರ್ಥವಾಗಿ ನಡೆದಿರುವ ಸಂಗತಿಗಳನ್ನೆಲ್ಲಾ ಮರೆಮಾಚದೆ ವಿವರಿಸಿರುತ್ತೇವೆ.

ಇತರ ಅಪರಾಧಿಗಳ ಕೈಫಿಯತ್ತುಗಳೂ ಮೇಲ್ಕಂಡ ರೀತಿಯನ್ನೇ ಅನುಸರಿಸಿದ್ದವು. ಒಬ್ಬ ಅಪರಾಧಿಯು ಸರ್ ಆಂಡ್ರು ಫ್ರೇಸರ್‌ರವರಿದ್ದ ರೈಲ್‌ಬಂಡಿಯನ್ನು ಹಾರಿಸುವುದಕ್ಕಾಗಿ ಮೊದಲು ಚಂದ್ರನಗರದಲ್ಲೂ ಅನಂತರ ಮಿಡ್ನಪುರದಲ್ಲೂ ಮದ್ದಿನ ಗುಂಡು ಹಾಕಿದ್ದಾಗಿ ಹೇಳಿದನು. ಇನ್ನೊಬ್ಬನು ಚಂದ್ರನಗರದ ಮ್ಯುನಿಸಿಪಲ್ ಪ್ರೆಸಿಡೆಂಟರ ಮೇಲೆ ಗುಂಡು ಎಸೆದದ್ದಾಗಿ ಹೇಳಿ ಒಪ್ಪಿಕೊಂಡನು.

ಉಪೇಂದ್ರನಾಥ ಬ್ಯಾನರ್ಜಿಯು ಹೇಳಿದ್ದು— ಇಂಗ್ಲಿಷ್ ಗವರ್ನ್‌ಮೆಂಟನ್ನು ತಲೆಕೆಳಗು ಮಾಡಬೇಕೆಂದು ಒಂದು ಸಂಘವು ಏರ್ಪಾಡಾಗಿತ್ತು. ಅದಕ್ಕಾಗಿ ನಾನು ಹಿಂದುಸ್ಥಾನಕ್ಕೆ ಬಂದೆನು. ಆದರೆ ಇಲ್ಲಿನ ಜನರು ಈ ಸಂಘದ ಉದ್ದೇಶಕ್ಕೆ ಒಪ್ಪದೆ ವಿರೋಧಿಗಳಾಗಿರುವಂತೆ ನನಗೆ ಕಂಡುಬಂತು. ಇನ್ನು ಮುಂದೆ ಇಂಥಾ ಕಾರ್ಯಗಳನ್ನು ನಡಸತಕ್ಕವರು ಬಹಳ ಎಚ್ಚರಿಕೆಯಾಗಿರಲೆಂದು ನಾನು ಈಗ ವಿಷಯಗಳನ್ನೆಲ್ಲಾ ಯಥಾರ್ಥವಾಗಿ ಹೇಳಿ ಬರೆಸಿರುತ್ತೇನೆ.

ಈಚೆಗೆ ಈ ಅಂತರಂಗವಾದ ಸಂಘಕ್ಕೆ ಸೇರಿದವರನ್ನೆಲ್ಲಾ ಪೋಲೀಸಿನವರು ತಲಾಷ್ ಮಾಡುತ್ತಿರುವುದಾಗಿಯೂ, ಹಲವರನ್ನು ಹಿಡಿದಿರುವರೆಂತಲೂ, ಅವರ ಬಳಿ ಆ ಸಂಘದ ಕಾರ್ಯಗಳಿಗೆ ಸಂಬಂಧಪಟ್ಟ ಕಾಗದ ಪತ್ರಗಳೂ ಮುಂತಾದ್ದೂ ಸಿಕ್ಕಿರುವುದಾಗಿಯೂ ತಂತೀ ವರ್ತಮಾನ ಬಂದಿದೆ. ಇವರ ಪೈಕಿ ನರೇಂದ್ರನಾಥ ಗೋಸಾಯಿ ಎಂಬವನನ್ನು ನಿದ್ದೆಹೋಗುತ್ತಿದ್ದಾಗ ಹಿಡಿದದ್ದೂ, ಅವನ ಬಳಿ ಸಿಕ್ಕಿರುವ ಕಾಗದ ಪತ್ರಗಳೂ ಬಹು ವಿಶೇಷವೆಂದು ಹೇಳುತ್ತಾರೆ. ಅಪರಾಧಿಗಳನ್ನೂ ಅವರ ಜಾಗೆಗಳನ್ನೂ ಇನ್ನೂ ಹುಡುಕುವುದು ನಿಂತಿಲ್ಲ. ಈ ಗೋಸಾಯಿಯು ಮೇಲ್ಕಂಡ ಕೃತ್ಯಗಳನ್ನು ಒಪ್ಪಿಕೊಂಡು ಕೈಫಿಯತ್ತು ಬರೆಸಿರುತ್ತಾನೆ. ಮುಜಫರ್‌ಪುರದ ಘೋರ ಕೃತ್ಯದ ವಿಷಯದಲ್ಲಿ ಸರ್ಕಾರದ ಪರವಾಗಿ ಮಿ|| ಎರ್ಡ್ಲಿ ನಾರ್ಟನ್ ಎಂಬ ಪ್ರಸಿದ್ಧ ವಕೀಲರನ್ನು ನೇಮಿಸಿದಾರೆ. ಕಲ್ಕತ್ತೆಯ ಮಾಣಿಕ್ಯತೋಲಾ ತೋಟದಲ್ಲಿ ಈ ಸಂಘದವರು ಮದ್ದಿನ ಗುಂಡುಗಳ ತಯಾರಿಗೆ ಮಾಡಿಕೊಂಡಿದ್ದ ಕಾರಖಾನೆಯು ಸಿಕ್ಕಿತು. ಅಲ್ಲಿರುವ ಐದು ಭಾರೀ ಕೆರೆ ಕೊಳಗಳನ್ನೆಲ್ಲಾ ಸರ್ಕಾರದವರು ಶೋಧನೆಮಾಡುತ್ತಿದಾರೆ. ಇದುವರೆಗೆ ಸಿಕ್ಕಿದ ಮದ್ದಿನ ಗುಂಡುಗಳನ್ನು ಸರ್ಕಾರದವರು ಒಡೆಸಿ ಹಾಕಿದರು. ಈಚೆಗೆ ಮುಜಫರ್‌ಪುರದಲ್ಲಿ ಇನ್ನಿಬ್ಬರನ್ನು ದಸ್ತಗಿರಿ ಮಾಡಿದಾರೆ.

ಕಲ್ಕತ್ತೆಯ ಮಾಣಿಕ್ಯತೋಲಾ ಬೀದಿಯ ಮನೆಯೊಳಗೆ ಸಿಕ್ಕಿದ ಒಂದು ಕಾಗದದಿಂದ ಆ ಮನೆಯು ಭಯಂಕರವಾದ ಮದ್ದಿನ ಗುಂಡು ಮೊದಲಾದ ಆಯುಧಗಳ ತಯಾರಿಯನ್ನು ಕಲಿಸುವಂಥಾ ವಿದ್ಯಾಶಾಲೆ ಎಂದು ಮಾಡಿಕೊಂಡಿದ್ದದ್ದು ಗೊತ್ತಾಗುತ್ತದೆ. ಈ ಸಂಘದವರು ಹಿಂದುಸ್ಥಾನದ ಪ್ರದೇಶವನ್ನೆಲ್ಲಾ ಕೆಲವು ಡಿವಿಜನ್‌ಗಳಾಗಿ ವಿಭಾಗ ಮಾಡಿ, ಪ್ರತಿ ಒಂದು ಡಿವಿಜನಿಂದಲೂ ಇಬ್ಬರಂತೆ ವಿದ್ಯಾರ್ಥಿಗಳು ಈ ವಿದ್ಯಾಶಾಲೆಗೆ ಬರುವಂತೆಯೂ, ಮೇಲ್ಕಂಡ ಆಯುಧಗಳ ತಯಾರಿ ಮುಂತಾದ್ದನ್ನು ಕಲಿತುಕೊಳ್ಳುವಂತೆಯೂ ಏರ್ಪಾಡಾಗಿತ್ತು. ಮಾರಕವಾದ ಮದ್ದಿನ ಗುಂಡುಗಳನ್ನು ಮೂರು ಜಾತಿ ಎಂದು ವಿಂಗಡಿಸಿ, ಪ್ರತಿ ಜಾತಿಯನ್ನೂ ವಿವರಿಸಿರುವಂಥಾ ಮತ್ತು ಹಿಂದುಸ್ಥಾನದವರೆಲ್ಲಾ ದಂಗೆಯೇಳುವುದಕ್ಕೆ ತಕ್ಕ ಸಲಕರಣೆಗಳನ್ನೂ ಪ್ಲಾನ್ ಮುಂತಾದ್ದನ್ನೂ ವಿವರವಾಗಿ ತಿಳಿಸುವಂಥಾ ಪುಸ್ತಕವು ಆ ಮನೆಯಲ್ಲಿ ಸಿಕ್ಕಿರುತ್ತದೆ.

ಕುಷ್ಟಿಯಾದಲ್ಲಿ ಒಬ್ಬ ಬಂಗಾಳಿ ಹುಡುಗನನ್ನು ಹಿಡಿದರು. ಅವನು ಮಿ|| ಹಿಕ್ಕಿನ್‌ಬಾಥಂರವರ ಮೇಲೆ ಗುಂಡು ಹೊಡೆದೆನೆಂದು ಒಪ್ಪಿಕೊಂಡು, ಅದಕ್ಕೆ ಸೇರಿದ್ದ ಇನ್ನು ಕೆಲವರ ಹೆಸರುಗಳನ್ನು ತಿಳಿಸಿದನು. ಪೋಲೀಸಿನವರು ಆ ಪೈಕಿ ಸದ್ಯ ಆರು ಮಂದಿಯನ್ನು ಮಾತ್ರ ದಸ್ತಗಿರಿ ಮಾಡಿದಾರೆ.

[illegible]ಪುರದಲ್ಲಿ ಒಬ್ಬ ಬಂಗಾಳಿ ಹುಡುಗನು ರೈಲ್‌ಗಾಡಿಯನ್ನು ಹತ್ತಬೇಕೆಂದು ಪ್ರಯತ್ನಪಟ್ಟನು. ಜನರು ವಿಶೇಷವಾಗಿದ್ದದ್ದರಿಂದ ಅವನಿಗೆ ಸ್ಥಳ ಸಿಕ್ಕಲಿಲ್ಲ. ಅವನಿಗೂ ಒಂದು ಗಾಡಿಯ ಜನರಿಗೂ ವಾಗ್ವಾದವಾಗುತ್ತಿತ್ತು. ಕಡೆಯಲ್ಲಿ ಆ ಹುಡುಗನು ಬಗಲಿನಿಂದ ಒಂದು [illegible] ಹಿರಿದು ಒಬ್ಬ [illegible]

ಹೋದನು. ಕೂಡಲೇ ಅವನನ್ನು ದಸ್ತಗಿರಿಮಾಡಿ, ಅವನ ಬಟ್ಟೆಯನ್ನು ಶೋಧನೆ ಮಾಡಿದಾಗ ಅವನ ಬಳಿ ಮದ್ದಿನ ಗುಂಡುಗಳೂ ಕಾರ್ಟ್ರಿಜ್‌ಗಳೂ ಸಿಕ್ಕಿದವು. ಇವನ ಪೂರ್ವೋತ್ತರವೇನೋ ತಿಳಿಯಲಿಲ್ಲ.

ಹೊಸ ತಂತೀ ವರ್ತಮಾನಗಳು.

ಕಲ್ಕತ್ತಾ, ತಾ. ೧೧ ನೇ ಸೋಮವಾರ.—ಬಂಗಾಳಾ ಲೆಫ್ಟಿನೆಂಟ್ ಗವರ್ನರ್ ಸರ್ ಆಂಡ್ರು ಫ್ರೇಸರ್‌ಯವರೂ ಅವರ ಛೀಫ್ ಸೆಕ್ರೆಟರಿಯವರೂ ಡಾರ್ಜಲಿಂಗ್ ಪಟ್ಟಣದಿಂದ ಕಲ್ಕತ್ತೆಗೆ ನೆನ್ನೆ ದಿನ ಬಂದು ಇರುತ್ತಾರೆ. ನೆನ್ನೆ ಮಧ್ಯಾಹ್ನ ಅವರೂ ಇನ್ನು ಕೆಲವು ಅಧಿಕಾರಿಗಳೂ ಸಭೆ ಸೇರಿ ಅಂತರಂಗವಾದ ಒಂದು ವಿಚಾರಣೆ ನಡಿಸಿ, ಈ ಸಿಡಿ ಮದ್ದಿನ ಗುಂಡುಗಳ ತಯಾರಿ ವಿಷಯದಲ್ಲಿ ದಂಗೇಕೋರರು ಮಾಡಿಕೊಂಡಿದ್ದ ಸಂಘದ ವಿಚಾರವನ್ನು ಕುರಿತು ಚರ್ಚೆ ನಡಿಸಿದರು.

ಮಧ್ಯಾಹ್ನಾನಂತರ "ವಂದೇ ಮಾತರಂ" ಪತ್ರಿಕಾ ಆಫೀಸನ್ನು ಬಹಳ ಹೊತ್ತಿನ ವರೆಗೆ ಸರ್ಕಾರದವರು ಶೋಧನೆ ಮಾಡಿದರು. ಮತ್ತು ಸುಬೋಧ ಚಂದ್ರ ಮಲಿಕ್ ಎಂಬ ಕೋಟ್ಯಾಧೀಶ್ವರನ ಮನೆಯನ್ನೂ ಶೋಧನೆ ಮಾಡಿದರು. ಎರಡು ಕಡೆಗಳಲ್ಲೂ ಬಹಳ ಕಾಗದಪತ್ರಗಳನ್ನು ಕೂಡಿಸಿ ಆಜಮಾಯಿಷಿಗಾಗಿ ತೆಗೆದುಕೊಂಡು ಹೋಗಿದ್ದಾರೆ. ಇನ್ನು ಕೆಲವು ಕಡೆಗಳಲ್ಲೂ ಸರ್ಕಾರದವರು ಶೋಧನೆ ಮಾಡುವುದರಲ್ಲಿರುತ್ತಾರೆ.

"ಯುಗಾಂತರ" ಎಂಬ ಪತ್ರಿಕೆಯು ಬಹು ಕಠಿಣವಾದ ಚಿತ್ರಗಳನ್ನು ಮತ್ತೆ ಪ್ರಕಟಿಸಲಾರಂಭಿಸಿರುವುದು. "ಇಂಗ್ಲಿಷ್‌ಮನ್" ಎಂಬ ಪತ್ರಿಕೆಯು ಎದುರಿಗೆ ಭಯೋತ್ಪಾತವನ್ನುಂಟುಮಾಡುವ ಕಲ್ಪನೆಯ ಕಾಗದವು ತಲುಪಿರುತ್ತದೆ.

ತಾಲ್ಲೋಕು ವರ್ತಮಾನಗಳು.

ಮಾಯಕೊಂಡ.—ದಾವಣಗೆರೆ ತಾಲ್ಲೋಕು ಮಾಯಕೊಂಡದಲ್ಲಿ ಮಳೆ ಆಗಿ ಇದೆ. ದಿನ ಒಂದಕ್ಕೆ ಧಾರಣೆ ಚೆನಾವ್ ಆಗುತ್ತಲೇ ಇದೆ. ರಾಗಿ ರೂ. ೧ ಕ್ಕೆ ೧೮-೧೮॥ ಸೇರು, ಜೋಳ ೧೬-೧೬॥ ಸೇರು, ಅಕ್ಕಿ ೭ ಸೇರು ಈ ಮೇರೆ ಧಾರಣೆ ಇದೆ. ರೈತಾಪಿ ಜನಗಳೆಲ್ಲಾ ಹೊಲಗಳಿಗೆ ನೇಗಿಲು ಹೂಡಿರುತ್ತಾರೆ.—ಇನ್ಸ್‌ಪೆಕ್ಟರು ಕಂಪನಿ ದಿನವೂ ಭರ್ತಿಯಾಗಿ ಇರುತ್ತೆ, ಇದನ್ನು ವಿಚಾರಣೆ ಮಾಡತಕ್ಕವರು ಯಾರೂ ಇಲ್ಲ. ಈಗಲಾದರೂ ಇನ್ಸ್‌ಪೆಕ್ಟರು ಕಂಪನಿಗೆ ಸರಸ್ವತಿಯಿಂದ ಬರತಕ್ಕ ಜನಗಳಿಗೆ ಬಂದೋಬಸ್ತು ಮಾಡಬೇಕು.—ಇಲ್ಲಿನ ರಿಜರ್ವಾಯರ್ ಕೆಲಸ ಬಹಳ ಮುತವರ್ಜಿಯಿಂದ ನಡಿಯುವ ಹಾಗೆ ಕಾಣುತ್ತದೆ. ಇಲ್ಲಿ ಅಗಸರ ಭಾವಿಯೊಳಗೆ ನೀರಿಲ್ಲ ಕುಡಿಯಲಿಕ್ಕೆ ನೀರಿಲ್ಲ. ಈ ಭಾವಿಗೆ ಸರ್ಕಾರದವರು ಹಣ ಸ್ಯಾಂಕ್ಷನ್ ಮಾಡಿದ್ದಾರಂತೆ. ಈ ಭಾವಿ ಕೆಲಸ ಯಾವಾಗ ಶುರು ಮಾಡುತ್ತಾರೋ ಗೊತ್ತಿಲ್ಲ.—ಇಲ್ಲಿಗೆ ಚಿತ್ರದುರ್ಗದ ತಾಲ್ಲೂಕು ಕಳ್ಳಿಹಾಳಿನವರು ಬಂದು ಬೈಲ್ ನಾಟಕ ಆಡಿದರು. ನಾಟಕವನ್ನು ನೋಡಲಿಕ್ಕೆ ಸುಮಾರು ಒಂದು ಸಾವಿರ ಜನರು ಸೇರಿದ್ದರು. ಈ ನಾಟಕಕ್ಕೆ ಸೇರಿದ ಚನ್ನ, ಬಸಣ್ಣ, ಇವರಿಬ್ಬರಿಗೂ ಸೇರಿದ್ದ ಸಭಾಸದರು ಬಹುಮಾನವನ್ನು ಕೊಟ್ಟರು.

ಮಂಗಳೂರು.—ತಾ ೫ ರಿಂದ ೭ ರ ವರೆಗೆ ಭಾರೀ ಮಳೆ ಬಂದು, ಈಗ ಸಮ ತಕ್ಕಮಟ್ಟಿಗೆ ಬಿಡಲಾಯಿಸಿದೆ. ಧಾರಣೆವಾಸಿಗಳು ಹೆಚ್ಚಿನಲ್ಲೇ ಇದೆ. ಬಡವರ ಕಷ್ಟವನ್ನು ಕೇಳತೀರದು.—ಪ್ರೊಫೆಸರ್ ದೇವಲೇಕರರು ತಮ್ಮ ಸರ್ಕಸ್ ಮಂಡಲಿಯನ್ನು ಇಲ್ಲಿಗೆ ತಂದು, ತಮ್ಮ ಆಟಗಳನ್ನು ವಿನೋದಕರವಾಗಿ ಜನರಿಗೆ ತೋರಿಸುತ್ತಾರೆ. ಆನೆ, ಸಿಂಹ, ಹುಲಿ, ಕುದುರೆ, ಕರಡಿ, ನಾಯಿ ಮೊದಲಾದ ಮೃಗಾದಿಗಳಿಂದ ತೋರಿಸುವ ವೈಚಿತ್ರ್ಯಗಳನ್ನು ನೋಡಿದರೆ, ಆಬಾಲವೃದ್ಧರ ಮನಸ್ಸು ಆಕರ್ಷಿಸುತ್ತೆ. ತಾ. ೧೧ ನೆ ವರೆಗೆ ತಮ್ಮ ವಿನೋದಕರವಾದ ಆಟಗಳು ತೋರಿಸಿ ೧೨ ಕ್ಕೆ ತಲಚೇರಿಗೆ ಹೋಗುವರು.—ಸ್ಟೀಮರಿನ ಗಲಾಟೆ ಇಲ್ಲದಿದ್ದರೂ ಇಲಿಗಳನ್ನು ಕೊಲ್ಲುತ್ತಾರೆ. ರೈಲು ಇಲ್ಲಿಗೆ ಬಂದನಂತರ ಈ ಊರು ಮೊದಲಿಗಿಂತಲೂ ಉರ್ಜಿತಸ್ಥಿತಿಗೆ ಬಂದಿರುವದು. ಪ್ರಯಾಣಿಕರು ಸಂಜೆ ೫ರ ಘಂಟೆಯಿಂದ ಇಲ್ಲಿಗೆ ಆಗಾಗ್ಗೆ ಬಂದು ಹೋಗುತ್ತಾರೆ. ಮಂಗಳಾದೇವಿ ರಸ್ತೆಯಲ್ಲಿ ೮ ಗಂಟೆ ಆದನಂತರ ಲಾಂದ್ರಗಳೇ ಕಾಣುವದಿಲ್ಲ. ಈ ವಿಷಯದಲ್ಲಿ ಮುನಿಸಿಪಾಲಿಟಿಯವರು ತಕ್ಕ ಮುತುವರ್ಜಿ ಇಡಬೇಕು.

ಚಿತ್ರದುರ್ಗ.—ಕಳೆದ ವಾರ ಇಲ್ಲಿ ಒಂದೇ ಹದದಲ್ಲಿ ಸುಮಾರು ಎರಡು ಅಂಗುಲಕ್ಕಿಂತಲೂ ಹೆಚ್ಚಾಗಿಯೇ ಮಳೆ ಸುರಿದದ್ದರಿಂದ ಬಿಸಿಲಿನ ಧಗೆಯು ಸ್ವಲ್ಪ ಮಟ್ಟಿಗೆ ಕಮ್ಮಿಯಾಗಿರುವದಲ್ಲದೆ, ಅಲ್ಲಲ್ಲಿ ದನಕರಗಳಿಗೂ ಸ್ವಲ್ಪ ನೀರು ನಿಂತಿದೆ. ರೈತರು ಮುತುವರ್ಜಿಯಿಂದ ಬೇಸಾಯ ಮಾಡುತ್ತಲಿದ್ದಾರೆ.—ಸುಮಾರು ೨-೩ ವಾರಗಳ ಕೆಳಗೆ ಆರಸೀಕೆರೆಯಿಂದ ಬಂದಿದ್ದು ವಾಪಸ್ ಹೋಗುತ್ತಿದ್ದವನಿಗೆ ಜಟಕಾ ಗಾಡಿಯವರಿಂದ ತೊಂದರೆ ಆಯಿತೆಂದು ಬರೆಕೊಂಡಿದ್ದದ್ದು ಪತ್ರಿಕೆಯಲ್ಲಿ ನಮೂದಿಸಿದ್ದಷ್ಟೆ. ಇದನ್ನು ವಿಚಾರಿಸುವಲ್ಲಿ ದಸ್ತಗಿರಿಸಾಬಿ ಹಾಗೆ ನಡಿಸಲಿಲ್ಲವೆಂತಲೂ, ಆತನ ಕಡೆಯ ಆಳು ಗಾಡಿ ಹೊಡಿಯುತ್ತಿದ್ದವನು ಗಾಡಿಯು ಮುರಿದುಹೋದ್ದರಿಂದ ಹಾಗೆ ತೊಂದರೆ ಮಾಡಿದ್ದರೆ ತಾನು ಬಹಳ ವ್ಯಸನಪಡುವದಾಗಿಯೂ, ಗಾಡಿ ಊರಿಂದ ಹೊರಡುವಾಗ ಚನ್ನಾಗಿದ್ದರೂ ಮಧ್ಯೆ ಮುರಿದು ಅಪಾಯವಾಗುವದು ಸಾಧಾರಣವೆಂತಲೂ, ಇನ್ನು ಮುಂದೆ ಗಾಡಿ ವಿಷಯದಲ್ಲಿಯೂ ಆಳಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರುವದಾಗಿಯೂ ಹೇಳಿಕೊಂಡಿದಾನೆ.—ನಮ್ಮ ರೆವಿನ್ಯೂ ಕಮಿಷನರ್ ಮೆ॥ ರಂಗಸ್ವಾಮಿಯ್ಯಂಗಾರ್ಯವರು ಇಲ್ಲಿಗೆ ಬಂದು, ಒಂದೆರಡು ದಿನಗಳಿದ್ದು ಹೋದರು.—ಗುಡ್ಡಗಳಲ್ಲಿ ಚಿರತೆಗಳ ಕಾಟ ಹೆಚ್ಚಿರುವದೆಂದು ತಿಳಿದಿದೆ. ಶಿಕಾರಿದಾರರೆಂದು ಹೆಸರು ಪಡೆದಿರುವವರು ತಮ್ಮ ಸಾಹಸವನ್ನು ತೋರಿಸಿ, ಇವುಗಳ ಕಾಟವನ್ನು ತಪ್ಪಿಸಬೇಕಾಗಿದೆ. ಬಿಸಿಲು ಕಾಲದ ರಜಾಕ್ಕೋಸ್ಕರ ಕೋರ್ಟು ಕಚೇರಿಗಳೂ ಸ್ಕೂಲುಗಳೂ ಮುಚ್ಚಲ್ಪಟ್ಟಿವೆ.

ಚಿಕ್ಕಮಗಳೂರು.—ಈ ಕಡೆಗೆ ಮಳೆ ಚನ್ನಾಗಿ ಆಗಿರುವ ಕಾರಣ ರೈತರು ತಮ್ಮ ಹೊಲಗಳಲ್ಲಿ ರಾಗಿ, ಭತ್ತ ಮುಂತಾದ ಬೀಜಗಳನ್ನು ಬಿತ್ತುತ್ತಾರೆ. ಜನರು ಶೀತಭೇದಿ, ಚಳಿ ಜ್ವರ ಮುಂತಾದ ಕಾಯಿಲೆಗಳಿಂದ ನರಳುತ್ತಿರುವರು. ಈ ಟವರಿಗೆ ಬಾಬಬುಡ್ಡ ಗಿರಿಯಿಂದ ಬರತಕ್ಕ ಶುದ್ಧವಾದ ನೀರನ್ನೇ ಇದುವರೆಗೆ ನಲ್ಲಿಗಳಿಗೆ ಬಿಡುತ್ತಿದ್ದರು. ಜನರಿಗೆ ಕ್ಷೇಮವೇ ಇತ್ತು. ಈಗ ೧-೨ ತಿಂಗಳಿಂದಲೂ, ಹಳ್ಳದ ನೀರನ್ನೇ ಸರಕಾರದವರು ನಲ್ಲಿಗಳಿಗೆ ಬಿಡುತ್ತಾರೆ. ಮಳೆ ಬಂದಾಗ ಕೆಸರಾದ ನೀರು ಬರುತ್ತದೆ. ಈ ಹಳ್ಳದ ನೀರಿನಿಂದ ಜನರಿಗೆಲ್ಲಾ ಕೊರತೆ ಇಲ್ಲದ ಹಾಗೆ ಸರಬರಾಯಿ ಆಗುತ್ತಾ ಬಂದರೂ ಇಂಥಾ ನೀರನ್ನು ಜನರು ಕುಡಿಯುವದರಿಂದ ಅನೇಕ ಕಾಯಿಲೆಗಳಿಗೆ ಆಸ್ಪದ ಉಂಟಾಗುತ್ತದೆ. ಈ ವಿಷಯವನ್ನು ಕುರಿತು ಮೇಲಿನ ಅಧಿಕಾರಿಗಳು ಗಮನಿಸಬೇಕಾಗಿದೆ.—ಬೆಂಗಳೂರು ಮೈಸೂರು ಪಟ್ಟಣಗಳಲ್ಲಿ ಮಾಡಿರುವ ಪ್ರಕಾರ ಈ ಊರಿನ ಕಸಾಬರು ತಮ್ಮ ಅಂಗಡಿಗಳಲ್ಲಿ ಜನರಿಗೆ ಹಿತಕರವಾದ ಮಾಂಸವನ್ನು ಮಾರಿದರೆ ಬಹಳ ಪ್ರಯೋಜನವಾದೀತು ಎಂಬದಾಗಿ ಜನರು ಹೇಳಿಕೊಳ್ಳುತ್ತಾರೆ. ಆದಕಾರಣ ಹಾಕ್ಮರವರು ಆಗಾಗ್ಗೆ ಈ ವಿಷಯವನ್ನು ತನಿಖೆಗೆ ಇಟ್ಟುಕೊಂಡರೆ ಪ್ರಯೋಜನವಾಗಿದ್ದೀತು.—ರೆವಿನ್ಯೂ ಕಮಿಷನರಾದ ಮೆ॥ ರಂಗಸ್ವಾಮಿಯ್ಯಂಗಾರ್ಯವರು ಏಪ್ರಲ್ ೨೬ ನೇ ಆದಿತ್ಯವಾರ ಹೊತ್ತಾರೆ ಸುಮಾರು ೧೦ ಘಂಟೆಗೆ ಕಡೂರು ಮಾರ್ಗವಾಗಿ ಇಲ್ಲಿಗೆ ದಯಮಾಡಿಸಿದರು. ಅದಕ್ಕೆ ಮುಂಚೆ ಮುನಿಸಿಪಲ್ ಮೆಂಬರುಗಳು ಅವರು ಬರತಕ್ಕ ಮಾರ್ಗಗಳನ್ನು ಅಲ್ಲಲ್ಲಿ ಮಾವಿನ ತೋರಣ ಚಪ್ಪರ ಮುಂತಾದವುಗಳಿಂದ ಅಲಂಕರಿಸಿದ್ದರು. ಡೆಪ್ಯುಟಿ ಕಮಿಷನರ್ ಸಾಹೇಬರೂ ಅ॥ ಕಮಿಷನರವರೂ ಇತರ ದೊಡ್ಡ ಮನುಷ್ಯರೂ ಅವರನ್ನು ಸನ್ಮಾನದೊಡನೆ ಎದುರುಗೊಂಡು ಡೆಪ್ಯುಟಿ ಕಮಿಷನರ್ ಸಾಹೇಬರ ಬಂಗಲೆಗೆ ಕರೆದುಕೊಂಡು ಬಂದರು. ತಾ. ೨೭ ನೇ ಸಾಯಂಕಾಲ ಸುಮಾರು ೪ ಘಂಟೆಗೆ ಈ ಊರಿನ ಲಾಲ್ ಬಾಗಿನಲ್ಲಿ ದೊಡ್ಡ ಅಧಿಕಾರಿಗಳೂ, ಇತರ ದೊಡ್ಡ ಮನುಷ್ಯರೂ ಸೇರಿದ್ದರು. ಇವರಿಗಾಗಿ ಟೀ ಪಾರ್ಟಿಯನ್ನು ನಡಿಸಿದರು. ಗ್ರಾಮೋಫೋನ್ ಎಂಬ ಸಂಗೀತವು ನಡೆಯಿತು. ಕಾಫಿ ಪ್ಲಾಂಟರ್ ಮೆ॥ ಶ್ರೀನಿವಾಸರಾಯರು ಕಾಫಿ ಬೆಳೆಯ ವಿಷಯದಲ್ಲಿ ಗವರ್ನಮೆಂಟಿನವರಿಂದ ಸಹಾಯವಾಗ ಬೇಕೆಂದು ಪ್ರಸ್ತಾಪ ಮಾಡಿದರು. ಇದಕ್ಕೆ ಮೆ॥ ರಂಗಸ್ವಾಮಿಯ್ಯಂಗಾರ್ಯ ಗವರ್ನಮೆಂಟಿನವರು ಸಹಾಯಮಾಡುವ ಸ್ವಲ್ಪವೇ. ನೀವೇ ಪ್ರಯತ್ನ ಮಾಡಿಕೊಳ್ಳುವದು ಉತ್ತಮವೆಂದು ಹೇಳಿದರು. ಮಾರನೆಯ ದಿವಸ ಸಾಯಂಕಾಲ ಸುಮಾರು ೭ ಘಂಟೆಗೆ ಅಂಜುಮಾನ್ ಇಸ್ಲಾಮಿಯಾ ೨ ನೇ ವಾರ್ಷಿಕೋತ್ಸವಕ್ಕೆ ಅವರು ದಯಮಾಡಿಸಿದರು. ಇವರ ಜೊತೆಯಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರು ಸರ್ವಸ್ ಹೆಡ್ ಮೆ॥ ಆರ್. ಜಿ. ಸ್ಟುವರ್ ಸಾಹೇಬರೂ ಇತರ ಅನೇಕ ದೊಡ್ಡ ಮನುಷ್ಯರೂ ಸೇರಿ ಬಂದಿದ್ದರು. ಈ ಅಂಜುಮಾನ್ ಸಭೆಯಲ್ಲಿ ಒಟ್ಟು ೨೦೬ ಮಂದಿ ಮೆಂಬರುಗಳು ಇರುತ್ತಾರೆ. ಈ ಪೈಕಿ ೧೭ ಹಿಂದುಗಳೂ, ೨೨ ಯೂರೋಪಿಯನ್ ಜನರೂ ಇರುತ್ತಾರೆ. ಈ ಸಭೆಯ ಸೆಕ್ರೆಟರಿ ಮೆ॥ ಅಬ್ದುಲ್ ಸಾಹೇಬರು ಇಂಗ್ಲೀಷಿನಲ್ಲಿ ರಿಪೋರ್ಟನ್ನು ಓದಿದರು. ಇಬ್ಬರು ವಿದ್ಯಾರ್ಥಿಗಳು ಇಂಗ್ಲೀಷಿನಲ್ಲಿ ಪ್ರಶ್ನೋತ್ತರ ನಡಿಸಿದರು. ಮೆ॥ ರಂಗಸ್ವಾಮಿಯ್ಯಂಗಾರ್ಯ ಅವರನ್ನು ಕುರಿತು—ಈ ಅಂಜುಮಾನ್ ಸಭೆಯು ೨ ವರುಷಗಳೊಳಗಾಗಿ ಇಷ್ಟು ಅಭಿವೃದ್ಧಿ ಸ್ಥಿತಿಗೆ ಬಂದಿರುವದು ಬಹಳ ಸಂತೋಷ. ಅಲ್ಲದೆ ಇಲ್ಲಿನ ಹಿಂದುಗಳೂ, ಮುಸಲ್ಮಾನರೂ ಏಕಮತ್ಯದಿಂದ ಈ ಸಭೆಯನ್ನು ಅಭಿವೃದ್ಧಿ ಸ್ಥಿತಿಗೆ ತಂದಿರುವದು ಮತ್ತಷ್ಟು ಸಂತೋಷವಾದದ್ದು ಎಂದು ಹೇಳಿದರು. ಅನಂತರ ಗಂಧ ಪುಷ್ಪ ತಾಂಬೂಲಗಳನ್ನು ಕೊಟ್ಟರು. ಸಭೆಯು ಬರಖಾಸ್ತಾಯಿತು. ತಾ. ೨೮ ರಲ್ಲಿ ಅವರು ಡಿಸ್ಟ್ರಿಕ್ಟು ಆಫೀಸ್ ಇನ್ಸ್‌ಪೆಕ್ಷನ್ ಮಾಡಿದರು. ಮಾರು ದಿನ ಅವರು ತಾಲ್ಲೋಕು ಆಫೀಸ್ ಇನ್ಸ್‌ಪೆಕ್ಷನ್ ಮಾಡಿ, ಗ॥ ಬಾಲಿಕೆಯರ ಸ್ಕೂಲಿಗೆ ದಯಮಾಡಿಸಿ, ಬಾಲಿಕೆಯರ ಸಂಗೀತದಿಂದಲೂ, ವೀಣಾಗಾನದಿಂದಲೂ ಸಂತೋಷಪಟ್ಟರು. ಮೇ ತಾ ೧ ರಲ್ಲಿ ಅವರು ಇಲ್ಲಿಂದ ಸಿಂಗ್ಸೇರಿ ಮಾರ್ಗವಾಗಿ ದಯಮಾಡಿಸಿದರು.—ಸರ್ವಸ್ ಜಡ್ಜಿಯವರು ಇಲ್ಲಿಗೆ ದಯಮಾಡಿಸಿ ಸರ್ವಸ್ ಕೇಸುಗಳನ್ನು ವಿಚಾರಣೆ ಮಾಡಿದ್ದರಲ್ಲಿ ಕಾಣವೆ ಕೇಸಿನ ವಿಚಾರದಲ್ಲಿ ಎಲ್ಲರಿಗೂ ಖುಲಾಸೆಯಾಯಿತೆಂತಲೂ, ಹರೀಬಿಮನೆ ಕಾಫಿ ಕಳ್ಳತನದ ವಿಚಾರದಲ್ಲಿ ಕೆಲವರಿಗೆ ಖುಲಾಸೆಯೂ, ಕೆಲವರಿಗೆ ಶಿಕ್ಷೆಯೂ ವಿಧಿಸಲ್ಪಟ್ಟಿತೆಂತಲೂ ವರ್ತಮಾನ.

ರೈತರು ಗಮನಿಸತಕ್ಕ ವಿಚಾರಗಳು.

ಕಬ್ಬು ಸಾಗುವಳಿಮಾಡತಕ್ಕವರಿಗೆ ಕೆಲವು ಉಪಯುಕ್ತವಾದ ಸೂಚನೆಗಳು.

ಬೀಜವನ್ನು ಆರಿಸುವುದು ಜಾಗರೂಕತೆಯಿಂದ ಪರಿಶೋಧಿಸಿ ನೋಡಬೇಕು. ಬೀಜವನ್ನು ಆರಿಸುವುದಕ್ಕೆ ಪ್ರಥಮದಲ್ಲಿ ಉತ್ತಮ ತರಹ ಕಬ್ಬನ್ನು ಆರಿಸಬೇಕು. ಕಬ್ಬಿನ ಪೈರಿನ ಉತ್ಪತ್ತಿಯು ಭೂಗುಣ, ಹವ ಮುಂತಾದ್ದರಿಂದ ಬದಲಾಯಿಸುತ್ತಾ ಇರುವುದರಿಂದ ಈ ವಿಷಯದಲ್ಲಿ ಭಿನ್ನಸ್ವಭಾವವುಳ್ಳ ಪ್ರದೇಶದಲ್ಲಿ ಹೆಚ್ಚಾಗಿ ಬೀಜ ತರಿಸಿ ಬಿತ್ತನೆಮಾಡುವುದರಿಂದ ಪೈರು ಕೆಟ್ಟುಹೋಗುವ ಸಂಭವವುಂಟು. ನಿರಂತರವೂ ಹೀಗೆ ಆಗದೆಹೋದಾಗ್ಯೂ ಸ್ವಲ್ಪಕಾಲಮಟ್ಟಿಗಾದರೂ ಕೆಟ್ಟುಹೋಗುವುದು. ಕಟಾವು ಮಾಡುವಾಗ ಕೆಟ್ಟುಹೋಗಿರುವ ಕಬ್ಬುಗಳನ್ನು ಬೀಜಕ್ಕಾಗಿ ಉಪಯೋಗಮಾಡಬಾರದು. ಹೀಗೆ ತಿರಸ್ಕರಿಸಿದ ಕಬ್ಬನ್ನು ಬಾಧಕವೇನೂ ಕಾಣದಿದ್ದಾಗ್ಯೂ ಅದರಿಂದೇ ಹಾಳೆ ಆದಿಸಬಹುದು. ಕಾಗಿಲ್ಲದ ಪಕ್ಷದಲ್ಲಿ ಪನಿಯಾಗಿಸಿ ಸುಟ್ಟುಬಿಡಬೇಕು. ಎಂಥಾ ಸಂದರ್ಭಗಳಲ್ಲಿಯೂ ಕೂಡ ಅವುಗಳನ್ನು ಹಾಗೇ ಬಿಡುವುದೇ ಆಗಲಿ ಅಥವಾ ಉಳೆಯಾಗ ಜಮೀನಿನಲ್ಲಿ ಕೊಳೆತುಹೋಗುವುದಕ್ಕೆ ಅವಕಾಶಕೊಡುವುದೇ ಆಗಲಿ ಮಾಡಬಾರದು. ರೋಗಗಳು ನೆಲೆಗೊಂಡಿರುವ ಪ್ರದೇಶಗಳಲ್ಲಿ ಬಿತ್ತನೆಗೆ ಕಬ್ಬಿನ ಕೆಳಗಿನ ಭಾಗವನ್ನು ಕತ್ತರಿಸಿ ಉಪಯೋಗಿಸುವುದಕ್ಕಿಂತ ಮೇಲಿನ ತುಂಡೆಗಳನ್ನು ಉಪಯೋಗಿಸುವುದು ಉತ್ತಮ. ತುಂಡೆಗಳಿಂದ ಉತ್ಕೃಷ್ಟವಾದ ಫಸಲು ಬರುವುದೆಂದು ಅನೇಕ ದೇಶಗಳಲ್ಲಿ ಅಭಿಪ್ರಾಯವುಂಟು. ಸಾಧಾರಣವಾಗಿ ಇಂಡಿಯಾ ದೇಶದಲ್ಲಿ ಕಬ್ಬಿನ ತುಂಡುಗಳನ್ನು ಕತ್ತರಿಸಿ ಬೀಜಕ್ಕಾಗಿ ಉಪಯೋಗಿಸುವ ವಾಡಿಕೆಯುಂಟು. ಸಾಮಾನ್ಯವಾಗಿ ಮೂರು ಗಿಣ್ಣುಗಳುಳ್ಳ ತುಂಡುಗಳನ್ನು ಕತ್ತರಿಸುತ್ತಾರೆ. ಕತ್ತರಿಸಲ್ಪಟ್ಟ ಕೊನೆಗಳು ಆದರದೆ ಸಾಫಾಗಿರಬೇಕಾಗಿರುವುದರಿಂದ ಅನುಭವಶಾಲಿಗಳೇ ಬೀಜಗಳನ್ನು ತಯಾರುಮಾಡಬೇಕು. ಬೀಜಗಳನ್ನು ಪರೀಕ್ಷೆ ಮಾಡುವುದರಲ್ಲಿ ಮುಖ್ಯವಾಗಿ ಕೊನೆಗಳನ್ನೇ ಕೇವಲ ಹುಷಾರಿಯಿಂದ ನೋಡಬೇಕು. ಇದು ಕತ್ತರಿಸಲ್ಪಟ್ಟ ಭಾಗವು ಸಮನಾಗಿದ್ದ ಹೊರತು ಸಾಧ್ಯವಾಗುವುದಿಲ್ಲ. ಇದೂ ಅಲ್ಲದೆ ಕತ್ತರಿಸಲ್ಪಟ್ಟ ಭಾಗಕ್ಕೂ ಕೊನೆಗಿಣ್ಣಿಗೂ ನಡುವೆ ಇರುವ ಪ್ರದೇಶವು ಕೂಡಿದಮಟ್ಟಿಗೂ ಪುಟ್ಟು ಬೀಳದೆ ಇರಬೇಕು. ಇಲ್ಲವಾದರೆ ಕಬ್ಬಿಗೆ ಆಶ್ರಿತವಾದ ಖೋಡು ಮುಂತಾದ ಜಾಡ್ಯಗಳಿಗೂ, ಗೆದ್ದಲುಹುಳುಗಳಿಗೂ ಅವಕಾಶ ಉಂಟಾಗುವುದು.

ಯಂತ್ರಸಹಾಯದಿಂದ ಸಾಗುವಳಿ ಮಾಡುವುದು.

ತುಮಕೂರು ಡಿಸ್ಟ್ರಿಕ್ಟು ಮಧ್ದಗಿರಿ ತಾಲ್ಲೋಕು ಓಬಳಾಪುರದ ಬಾಯಂಗುತ್ತಾ ಡಾರ್ ಕರಿಬಸಪ್ಪನವರು ಯಂತ್ರಯಿಂದ ನಡೆಯುವ ಒಂದು ಇಂಜಿನ್ ಉಪಯೋಗದಿಂದ ಜಮೀನಿಗೆ ನೀರು ಸರಬರಾಯಿ ಮಾಡಿ ಸಾಗುವಳಿ ಕೆಲಸ ನಡಿಸುತ್ತಿದ್ದಾರೆ. ಸದರಿ ಯಂತ್ರದ ರಚನೆಯನ್ನೂ ಕೆಲಸ ಮುಂತಾದ್ದನ್ನೂ ಖುದ್ದು ನೋಡಿ, ಮಧ್ದಗಿರಿ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮೆ॥ ಆನಂದರಾವ್ ಸಿಸ್ಟರ್‌ಯವರು ಬರೆದಿರುವುದೇನೆಂದರೆ.—ಯಂತ್ರವು ಸಾಧಾರಣ ಕೆರೋಸಿನ್ ಯೆಣ್ಣೆಯು (ಚಿಮ್ನಿಯೆಣ್ಣೆ) ಉಪಯೋಗದಿಂದ ನಡಿಯುತ್ತದೆ. ಯೆಣ್ಣೆಯು ಯಂತ್ರದ ಒಂದು ಕಾದ ಪಾತ್ರೆಯಲ್ಲಿ ಆವಿಯಾಗಿ ತನ್ಮೂಲಕ ಯಂತ್ರ ಕೆಲಸ ಮಾಡುವುದು. ಯಂತ್ರವು ಸುಲಭವಾಗಿಯೂ ತೊಡಕಿಲ್ಲದೆಯೂ ನಡಿಯುತ್ತದೆ. ಇದನ್ನು ನಡಿಸುವುದಕ್ಕೆ ಕೇವಲ ಚತುರನೇನೂ ಬೇಕಾಗುವುದಿಲ್ಲ. ಬುದ್ಧಿಶಾಲಿಯಾದ ಒಬ್ಬ ಕೂಲಿಯು ಕೆಲವು ಕಾಲ ತರಪೇತು ಆದರೆ ನಡಿಸಬಲ್ಲನು. ಒಬ್ಬನೇ ಯಂತ್ರವನ್ನು ನಡಿಸಿಕೊಂಡೂ ನಾಲ್ಕು ಜಮೀನಿಗೆ ನೀರು ಹಾಯಿಸಿಕೊಂಡೂ ಇರಬಹುದು. ಯಾಕೆಂದರೆ ಯಂತ್ರವು ನಡಿಯುತ್ತಿರುವಾಗ ಯಾವಾಗಲೂ ಅದರ ಸಮೀಪ ಕಾದಿರುವುದು ಅವಶ್ಯವಿಲ್ಲ. ಆಗಾಗ್ಗೆ ಕೆಲವು ಭಾಗಗಳಿಗೆ ಯೆಣ್ಣೆಯನ್ನು ಹಾಕುತ್ತಾ ಇದ್ದರೆ ಸಾಕು. ಕರಿಬಸಪ್ಪನವರಲ್ಲಿ ಇರತಕ್ಕ ಯಂತ್ರದಸಾಮಾನಿಗೆ ಸಾಲೀಯಾನಾ ೩೦ ರೂಪಾಯಿ ತಲಬು ಕೊಟ್ಟು ಅನ್ನ ಹಾಕುತ್ತಾರೆ. ಇದರಲ್ಲಿ ನೀರು ಹಾಕುವ ಬಾಯಿ ೨" (ಹಂತೆ) ಆಗಲಿ ಅಥವಾ ಸಾಬೆಯಾದರು ಕೊಳವೆಯಾಗಲಿ ಇಲ್ಲದಿರುವುದರಿಂದ ಯಾವುದಾದರೂ ಒರೆದುಹೋದೀತೆಂಬ ಭಯವೇನೂ ಇಲ್ಲ. ಮತ್ತು ಯೆಣ್ಣೆ ಮುಗಿದರ ಇಂಜಿನ್ ನಿಂತುಹೋಗುವುದು. ಆದಕಾರಣ ಸಾಧಾರಣ ಮಾಹಿತಿಯುಳ್ಳ ಕೂಲಿಯವನಿಗೆ ಇಂಜಿನಿನ ಜವಾಬ್ದಾರಿಯನ್ನು ವಹಿಸುವುದರಲ್ಲಿ ಯಾವ ಅಪಾಯವೂ ಇಲ್ಲ. ಇಂಜಿನ್ನಿನ ಸೇರಿದ ಹಾಗೆ ನೀರು ಎತ್ತುವ ಪಂಪು ಕೂಲಿ ಇರುವುದು. ಇದು ೩,೫೦೦ ರೂಪಾಯಿ ಬಾಳುವ "ಟ್ಯಾಂಗಿಸ್" ಎಂಬ ಕೆಲಸದ ಗಿಂತ ಗಟ್ಟಿ ತರಪೇದೆಂದು ತಿಳಿಯಬರುತ್ತದೆ. ಇದರಿಂದ ಗಂಟೆಯೊಂದಕ್ಕೆ ೬೦೦೦ ಗ್ಯಾಲನ್ ನೀರನ್ನು ಸುಮಾರು ೩೫ ಅಡಿ ಆಳದಿಂದ ಎತ್ತಬಹುದು. ಯಂತ್ರಸಾಹಿತ್ಯ ಯಾವತ್ತಕ್ಕೂ ಆಗುವದು ೨,೫೦೦ ರೂಪಾಯಿ ಆಗುತ್ತದೆ. ಸಕಾಲದಲ್ಲಿ ಕೂಲಿ ಜನರು ಒದಗದೆ ಹೋದದ್ದರಿಂದಲೂ ಇತರ ಅನಿವಾರ್ಯಗಳಿಂದಲೂ ಕರಿಬಸಪ್ಪನವರು ಈ ಸಲ ೫ ಎಕರೆ ಜಮೀನನ್ನು ಮಾತ್ರ ಯಂತ್ರಸಹಾಯದಿಂದ ಸಾಗುವಳಿ ಮಾಡಿದರು. ಇಂಜಿನ್ ಶಕ್ತಿಯಲ್ಲಿ ಮುಕ್ಕಾಲುವಾಸಿ ಮಾತ್ರ ಉಪಯೋಗಿಸಿಕೊಳ್ಳುತ್ತಾ ದಿನಂಪ್ರತಿಯಲ್ಲಿಯೂ ೬ ಗಂಟೆ ಹೊತ್ತು ಮಾತ್ರ ಕೆಲಸ ಮಾಡಿದರು. ಆದರೆ ಒಂದು ದಿನಕ್ಕೆ ೧೦ ಗಂಟೆಯಲ್ಲಿ ಇಂಜಿನಿನ ಪೂರಾ ಶಕ್ತಿಯಿಂದ ಸುಮಾರು ೨೦ ಎಕರೆ ಜಮೀನಿಗೆ ನೀರು ಸರಬರಾಯಿ ಮಾಡಬಹುದು. ನೇಲ್ಮಂಡ ೫೦ ಎಕರೆ ಜಮೀನಿನ ಸಾಗುವಳಿ ೩೪ ಟಿ ಯೆಣ್ಣೆ ಖರ್ಚು ಆಯಿತು. ಆದರೆ ಬೇಸಗೆ ಕಾಲದಲ್ಲಿಯೂ, ನಾಟಿ ಹಾಕುವ ಕಾಲದಲ್ಲಿಯೂ ಬಹಳ ನೀರು ಬೇಕಾದದ್ದಲ್ಲದೆ ಯಂತ್ರವೂ ಆಗ ನಡಿಸುತ್ತಲೇ ಇದ್ದಂತೆ ತೋರುತ್ತದೆ. ಇದರಿಂದ ಸುಮಾರು ೧೦ ಸೀಸೆ ಯೆಣ್ಣೆ ಜಾಸ್ತಿ ತಗಲಿರಬಹುದು. ಕ್ರಮೇಣ ಇನ್ನೂ ಅನುಭವವಾದ ಮೇಲೆ ಇಷ್ಟು ಯೆಣ್ಣೆಯನ್ನು ಖರ್ಚುಮಾಡದಿರಬಹುದು. ೮ ಟಿನ್ನು ಯೆಣ್ಣೆಯಿಂದ ೫೦ ಎಕರೆ ಜಮೀನಿನಗೆ ೭ ಗಂಟೆ ಹೊತ್ತಿನಲ್ಲಿ ನೀರು ಹಾಯಿಸಬಹುದು. ಯಂತ್ರಕ್ಕೂ ಮತ್ತು ಸಾಮಾನ್ಯ ಕಪಿಲೆಗೂ ತಗಲುವ ಬಾಗವಡಿನ ವಿಚಾರದಲ್ಲಿ ಲೆಕ್ಕಾಚಾರ ಮಾಡಿ ನೋಡುವಲ್ಲಿ ಯಂತ್ರಸಹಾಯದಿಂದ ೫೦ ಎಕರೆ ಜಮೀನಿಗೆ ನೀರು ಸರಬರಾಯಿ ಮಾಡಲಿಕ್ಕೆ ೨೨೦ ರೂಪಾಯಿ ಬಾಗವಡು ಬೇಕಾಗುತ್ತದೆ. ಇದೇ ಜಮೀನನ್ನು ಕಪಿಲೆಗಳ ಉಪಯೋಗದಿಂದ ಸಾಗು ಮಾಡಿದರೆ ೩೨೦ ರೂಪಾಯಿ ತಗಲುವುದು. ಬೆಂಗಳೂರಿನಲ್ಲಿ ೫,೫೦೦ ರೂಪಾಯಿಗಳನ್ನು ಪ್ರಥಮದಲ್ಲಿ ಮುಟ್ಟಿಸಿ, ಒಂದೇ ಕಡೆ ೫೦ ಎಕರೆ ಜಮೀನು ಇದ್ದಲ್ಲಿ ಯಂತ್ರಸಾಹಿತ್ಯದಿಂದ ಸಾಗುವಳಿ ಮಾಡಬಹುದು. ಅಲ್ಲದೆ ಯಂತ್ರಶಕ್ತಿಯು ಸಾಗುವಳಿಗೆ ಮಾತ್ರವಲ್ಲದೆ ಬತ್ತ ಕುಟ್ಟುವುದು, ಯೆಣ್ಣೆ ತೆಗೆಯುವುದು, ಇವೇ ಮೊದಲಾದ ಇತರ ಕೆಲಸಗಳಿಗೂ ಉಪಯೋಗಿಸಬಹುದು.

ಇಂಡಿಯಾ ದೇಶದ ವೃತ್ತಾಂತಗಳು.

ಹುಬ್ಬಳ್ಳಿಯಲ್ಲಿರುವ ಮೆ॥ ವಿಲ್ಸ ಕೋಯ ಎಂಬಾತನು ಆ ಪಟ್ಟಣದ ಪಕ್ಕದ ಜಂಗಲಿನಲ್ಲಿ ಎರಡು ದೊಡ್ಡ ಹುಲಿಗಳನ್ನು ಶಿಕಾರಿ ಮಾಡಿದನು.

***

ಸೌರಾ ಪಟ್ಟಣದ ಘೋಸರಿ ಎಂಬ ನಾವಿನ ಕಾರ್ಖಾನೆಗೆ ಕಳೆದ ಶುಕ್ರವಾರ ಬೆಂಕಿ ಬಿದ್ದು ಎರಡು ದಿನ ಉರಿದು ಸುಮಾರು ಮೂರು ಲಕ್ಷ ರೂಪಾಯಿಯ ಸರಕು ಹಾಳಾಯಿತು.

ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವದಿಂದಾದ ಮರಣಗಳ ಸಂಖ್ಯೆಯು ಕಳೆದ ವಾರ ೪,೫೩೪ಕ್ಕೆ ಇಳಿಯಿತು. ಆ ಪೈಕಿ ಪಂಜಾಬ್ ಅಧಿಪತ್ಯ ಒಂದರಲ್ಲೇ ೨,೩೪೮ ಜನರು ಕಾಲವಾಗಿದ್ದಾರೆ.

***

ಹಿಂದುಸ್ಥಾನದಿಂದ ರಂಗೂನ್ ಪಟ್ಟಣಕ್ಕೆ ಹೋಗಿ ಅಲ್ಲಿ ಪೋಸ್ಟ್ ಮಾಸ್ಟರುಗಳಾಗಿದ್ದವರಿಬ್ಬರು ಪೋಸ್ಟ್ ಆಫೀಸಿನ ಹಣವನ್ನು ತಿಂದು ಹಾಕಿ ತಲೆತಪ್ಪಿಸಿಕೊಂಡಿದ್ದಾರೆಂದು ತಂತೀವರ್ತಮಾನ ಬಂದಿದೆ.

***

ಚಕ್ರವರ್ತಿ ಸಾಮ್ರಾಟ್ಟರವರ ವರ್ಧಂತಿ ಉತ್ಸವದ ರಜವನ್ನು ಈ ವರುಷ ಜೂನ್ ತಿಂಗಳ ೨೬ ನೇ ತಾರೀಖು ಶುಕ್ರವಾರ ಹಿಂದುಸ್ಥಾನದಲ್ಲಿ ಆಚರಿಸತಕ್ಕದ್ದೆಂತಲೂ ಆ ದಿನ ಸರ್ವತ್ರ ರಜಾ ಕೊಡತಕ್ಕದ್ದೆಂತಲೂ ಇಂಡಿಯಾ ಗವರ್ನಮೆಂಟಿನವರು ಅಪ್ಪಣೆ ಕೊಡಿಸಿದ್ದಾರೆ.

***

ಮದರಾಸ್ ಪಟ್ಟಣದಲ್ಲಿರುವ ಪ್ರಸಿದ್ಧವಾದ ಕ್ರಿಶ್ಚಿಯನ್ ಕಾಲೇಜ್ ಎಂಬ ವಿದ್ಯಾಶಾಲೆಯನ್ನು ಬಡಾವಣೆ ಮಾಡಿ ಕಟ್ಟಬೇಕೆಂಬ ಉದ್ದೇಶಕ್ಕೆ ಅನಂತಶಯನದ ಮಹಾರಾಜರವರು ೯೦೦೦ ರೂಪಾಯಿ ಕೊಟ್ಟರು. ಈ ಫಂಡಿಗೆ ಇದು ವರೆಗೆ ೫೪ ಸಾವಿರ ರೂಪಾಯಿ ಚಂದಾ ಕೂಡಿರುವದು.

***

ಕನ್ನಡಿಯ ಮೇಲೆ ಕುಳಿತು ಓಡಿಸುತ್ತಾ ಆಡುವ ಪೋಲೋ ಎಂಬ ಆಟದಲ್ಲಿ ಮಧುರೆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಮೆ। ಬ್ಯಾಸ್ಟಿಯವರಿಗೆ ಏಟು ಬಿದ್ದು ಅದರಲ್ಲೇ ಕಾಲವಾದರೆಂತಲೂ, ಕಲ್ಕತ್ತೆಯಲ್ಲಿ ಅದೇ ಪೋಲೋ ಆಟವಾಡುತ್ತಿದ್ದಾಗ ಬ್ರಿಗೇಡಿಯರ್ ಜನರಲ್ ಕ್ಯಾಸರ್‌ಯವರಿಗೆ ಗಾಯವಾಗಿ ಅವರ ಕಣ್ಣು ಊನವಾಯಿತೆಂತಲೂ ತಂತೀವರ್ತಮಾನ ಬಂದಿದೆ.

***

ಮದರಾಸಿನಲ್ಲಿರುವ ಮೆ। ಗಂಟಿಕೋಟಾ ಸುಬ್ರಹ್ಮಣ್ಯಶೋಜು ಎಂಬುವರು ಈ ತಿಂಗಳಲ್ಲೂ ಮುಂದಿನ ಜೂನ್ ತಿಂಗಳಲ್ಲೂ ಸೋಡ ಬಾಷ್ಪಕ್ಕಿಂತ ಸೂರ್ಯ ಪೃಥ್ವಿಯು ಅತಿ ಶೀಘ್ರವಾಗಿರುತ್ತಾದ್ದರಿಂದ ದೊಡ್ಡ ದೊಡ್ಡ ಮಳೆಗಳು ಸುರಿಯುತ್ತವೆ ಎಂದು ತಿಳಿಸುತ್ತಾರೆ. ಈ ತಿಂಗಳ ತಾ ೧೩ ರಿಂದ ೧೮ ರ ವರೆಗೂ, ಜೂನ್ ತಿಂಗಳ ತಾ. ೧ ರಿಂದ ೬ ರ ವರೆಗೂ ಮಳೆ ಜೋರಾಗಿ ಬಂದೀತೆಂದು ಹೇಳುವರು.

***

ಸರಸಾಪುರದಲ್ಲಿ ಸಬ್ ಕಲೆಕ್ಟರವರ ಪತ್ನೀಯವರು ಅಲ್ಲಿನ ಮುಂಡೆದರ ಮನೆಗಳಲ್ಲಿರುವ ವಿಧ್ಯಾವತಿಯರನ್ನು ಎರಡು ಮೂರು ವೇಳೆ ಕರೆಸಿಕೊಂಡು ಅವರಿಗೆಲ್ಲಾ ನಾನಾ ಸ್ತ್ರೀಧರ್ಮ ವಿಚಾರಗಳನ್ನು ಕುರಿತು ಉಪನ್ಯಾಸಗಳನ್ನು ಮಾಡಿಸಿ ವಿವೇಕವನ್ನು ಕಲಿಸುತ್ತಾ ಬಂದರು. ಈಗ ಸುಮಾರು ೨೫ ಮಂದಿ ಸ್ತ್ರೀಯರು ಸೇರಿ ಒಂದು ಸಂಘವನ್ನು ಮಾಡಿಕೊಂಡು ಸಭ್ಯ ಲಕ್ಷಣಗಳನ್ನು ಕಲಿಯಲೂ ಕಲಿಸಲೂ ಸಾಹಸ ಪಡುತ್ತಿದ್ದಾರೆ.

***

ಕಾಲ್ಕತ್ತೆ ಸಾಗರಟ್ಟ್ಯಾಕ್ ಎಂಬ ಸರ್ಕಸ್ ಕಂಪನಿಯವರು ಕೇಳಿದರು. ಅಲ್ಲಿನ ಜನರಲ್ಲಿ ಸ್ವದೇಶೀ ಸ್ವೀಕಾರ, ವಿದೇಶೀ ಬಹಿಷ್ಕಾರ ಈ ವಿಚಾರಗಳ ಉಪನ್ಯಾಸಗಳೂ ಅನ್ಯಾಗಳ ಚಳವಳಿಯೂ ಹೆಚ್ಚಾಗಿ ಇರುವದರಿಂದ ಈ ಸರ್ಕಸ್ ಕಂಪನಿಯು ವಿದೇಶಿ ಎಂದು ಹೇಳಿ ಜನ ಧ್ಯಾರೂ ಹೋಗಿ ನೋಡದೆ ಇರುತ್ತಾರೆ. ಅತ್ತಲಾಗಿ ಅದೇ ಡಿಸ್ಟ್ರಿಕ್ಟಿನ ಕಲೆಕ್ಟರ ಬಂಗಲೆಗೂ ಪೋಲೀಸ್ ಸೂಪರಿಂಟೆಂಡೆಂಟರ ಬಂಗಲೆಗೂ ಕಳ್ಳರು ಬಿದ್ದು ಕೆಲವು ಮಾಲುಗಳನ್ನು ಎತ್ತಿಕೊಂಡು ಹೋದರು.

***

ಬೊಂಬಾಯಿ ಪಟ್ಟಣದಲ್ಲಿ ಪ್ಲೇಗ್ ಸಿಬ್ಬಂದಿನ ಹಾಲನ್ನು ತಯಾರು ಮಾಡತಕ್ಕ ಸರ್ಕಾರಿ ವೈದ್ಯಶೋಧನಾಲಯದೊಳಗಿಂದ ಕದ್ದು ತಂದು ಕೆಲವು ಪದಾರ್ಥಗಳನ್ನು ಸೇರಿಸಿ ನಾಟಿ ಗ್ಲಾಲ ಎಂಬೊಬ್ಬ ದೇಶೀಯ ವೈದ್ಯನು ಕ್ರಯಕ್ಕೆ ತೆಗೆದುಕೊಂಡದ್ದಕ್ಕಾಗಿ ಆತನಿಗೆ ಕಳೆದ ವಾರ ಎರಡು ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿತು. ಈತನು ಇಂಗ್ಲಿಷ್ ಓದಿ, ಅಮೇರಿಕಕ್ಕೆ ಸೇರಿದ ಚಿಕಾಗೋ ಎಂಬ ಪಟ್ಟಣಕ್ಕೆ ಹೋಗಿ ಅಲ್ಲಿ ವೈದ್ಯವನ್ನು ಕಲಿತು ಬಂದು, ಬೊಂಬಾಯಿನಲ್ಲಿ ವೈದ್ಯ ಮಾಡಿಕೊಂಡು ಜೀವನವನ್ನು ಸಂಪಾದಿಸಿಕೊಳ್ಳುತ್ತಿದ್ದನು.

***

ಹಿಂದುಸ್ಥಾನದ ಕ್ಷಾಮದ ವಿಷಯವನ್ನು ಕುರಿತು ವೈಸರಾಯರವರು ಸ್ಟೇಟ್ ಸೆಕ್ರಿಟರಿಯವರಿಗೆ ಕಳೆದ ವಾರ ತಿಳಿಸಿರುವ ತಂತೀವರ್ತಮಾನದ ಸಾರಾಂಶವೇನೆಂದರೆ—ರಿಲೀಫ್ ಕಾಮಗಾರಿಗಳಲ್ಲಿ ಕೆಲಸಮಾಡಿ ಜೀವನ ಮಾಡಿಕೊಳ್ಳುವವರ ಸಂಖ್ಯೆ ಈ ವಾರ ಬಹಳ ಕಮ್ಮಿಯಿತು. ಸಂಯುಕ್ತ ಆಧಿಪತ್ಯಗಳಲ್ಲೂ ಮಧ್ಯ ಪ್ರಾಂತ್ಯಗಳಲ್ಲೂ ಪೈರು ಸುಗ್ಗಿಯನ್ನು ತೀರಿಸಿಕೊಂಡು ಯಥಾ ಪ್ರಕಾರ ಸರ್ಕಾರದವರ ಕೆಲಸಗಳಿಗೆ ಬಂದರು. ಇತರ ಕಡೆಗಳಲ್ಲಿ ಕ್ಷಾಮದ ಸ್ಥಿತಿಯು ಒಂದೇ ರೀತಿಯಾಗಿದೆ. ಸರ್ಕಾರದ ರಿಲೀಫ್ ಪಡೆಯುತ್ತಿರುವವರ ಸಂಖ್ಯೆ ಏನೆಂದರೆ-ಬಂಗಾಳಾ ೨೩,೦೦೦, ಸಂಯುಕ್ತ ಆಧಿಪತ್ಯಗಳು ೨೪,೦೦೦. ಬೊಂಬಾಯಿ ೬,೦೦೦ ಈ ರೀತಿ ಇದೆ.

***

ಮುಂದಿನ ನವೆಂಬರ್ ತಿಂಗಳಲ್ಲಿ ಮಧ್ಯಪ್ರಾಂತ್ಯಗಳ ಮುಖ್ಯನಗರವಾದ ನಾಗಪುರದಲ್ಲಿ ಒಂದು ಪ್ರದರ್ಶನವು ನಡೆಯುವುದಾಗಿದೆ. ಪ್ರದರ್ಶನಶಾಲೆಯನ್ನು ಆರು ವಾರಗಳ ತನಕ ತೆರೆದಿಟ್ಟಿರುವಂತೆಯೂ, ಮಧ್ಯಪ್ರಾಂತ್ಯಗಳ ಮತ್ತು ಬೇರಾರಿನ ನಾನಾ ವಸ್ತುಗಳನ್ನು ಪ್ರದರ್ಶನ ಮಾಡುವಂತೆಯೂ ಏರ್ಪಾಡಾಗಿದೆ. ಅದಕ್ಕೆ ಬೇಕಾಗುವ ಎರಡು ಲಕ್ಷ ರೂಪಾಯನ್ನು ಸರ್ಕಾರಿಯಾಗಿಯೂ ಸಾಹುಕಾರಿಯಾಗಿಯೂ ಕೂಡಿ ಕೊಡಿಸಲಾರಂಭಿಸಿದ್ದಾರೆ. ಪ್ರದರ್ಶನಶಾಲೆಗೆ ಕಳುಹಿಸತಕ್ಕ ವಸ್ತುಗಳಿಗೆ ಸ್ಪೆಷಲ್ ರೈಲ್ವೆ ಏರ್ಪಾಡು ನಡೆಯುವುದು. ಮತ್ತು ರೈಲಿನ ಮೇಲೆ ಸಾಮಾನುಗಳನ್ನು ಪ್ರದರ್ಶನಶಾಲೆಯ ಬಾಗಿಲಿಗೆ ಸಾಗಿಸಿಕೊಂಡು ಹೋಗುವುದಕ್ಕೆ ಲೈಟ್ ಕಂಬಿಗಳನ್ನು ಬಡಾವಣೆ ಮಾಡಿದ್ದಾರೆ.

ಬೊಂಬಾಯಿ ಪಟ್ಟಣದಲ್ಲೆಲ್ಲಾ ಇಂಗ್ಲಿಷಿನಲ್ಲಿ ಬರೆದ ಒಂದು ನೋಟೀಸು ಜನರಿಗೆ ಹಂಚಲಾಗಿದೆ. ಅದನ್ನು ಅಚ್ಚುಹಾಕಿದವರಾಗಲಿ ಪ್ರಕಟಿಸಿದವರಾಗಲಿ ಬರೆದವರಾಗಲಿ ಇನ್ನೂ ಪತ್ತೆ ಆಗಲಿಲ್ಲ. ಅದರಲ್ಲಿ ಬರೆದಿರುವ ವಿಷಯವೇನೆಂದರೆ—ದೇಶೀಯರು ಯಾರ್ಯಾರೂ ಇಂಡಿಯಾ ಗವರ್ನಮೆಂಟಿನ ಸಾಲದ ಪತ್ರಗಳನ್ನು ಕೊಂಡುಕೊಳ್ಳಬಾರದು. ಮತ್ತು ಇದುವರೆಗೆ ಕೊಂಡಿಟ್ಟುಕೊಂಡಿರುವವರು ಅವುಗಳನ್ನೆಲ್ಲಾ ಕೂಡಲೇ ಬಿಕರಿಮಾಡಿ ಹಣವನ್ನು ಇಟ್ಟುಕೊಳ್ಳಬೇಕು. ಯಾಕೆಂದರೆ, ಇಷ್ಟರೊಳಗೇ ರಾಜ್ಯವು ಬ್ರಿಟಿಷ್ ನಷ್ಟವಾಗುವುದರಲ್ಲಿದೆ. ಗವರ್ನಮೆಂಟು ಹಠಕೆಳಗಾದ ಮೇಲೆ ಈ ಪತ್ರಗಳ ಪ್ರಯೋಜನವೇನೂ ಇಲ್ಲ. ಎಲ್ಲರೂ ಎಚ್ಚರಿಕೆಯಿಂದ ಬೇಗನೆ ತಮ್ಮ ಹಣವನ್ನು ಕೂಡಿಸಿಕೊಳ್ಳಲಿ ಎಂಬುವುದು.

***

ಮದರಾಸ್ ಹೈಕೋರ್ಟಿನಲ್ಲಿ ಜಡ್ಜರಾಗಿ ಹನ್ನೆರಡು ವರುಷ ಕೆಲಸ ಮಾಡಿ, ವಿಶ್ರಾಂತಿ ಸಂಬಳವನ್ನು ಸುಖವಿಸಬೇಕೆಂದು ಕೆಲಸಕ್ಕೆ ರಾಜೀನಾಮೆ ಕೊಟ್ಟ ಮ॥ ಎಚ್. ಟಿ. ಬಾಡಂಯವರು ಕಳೆದ ವಾರ ಸೀಮೆಗೆ ಹೋಗುವುದಕ್ಕಾಗಿ ಮದರಾಸಿನಿಂದ ರೈಲು ಹತ್ತಿ ಬೊಂಬಾಯಿಗೆ ಪ್ರಯಾಣಮಾಡಿದರು. ಅದರೆ ಆ ದಿನವೇ ಅವರು ರೈಲ್ ಗಾಡಿಯಲ್ಲಿ ಅಕಸ್ಮಾತ್ತಾಗಿ ಕಾಲವಾದರೆಂದು ತಿಳಿಸಲು ವಿಷಾದವಾಗುತ್ತದೆ. ಇವರು ಮದರಾಸಿನಲ್ಲಿರುವ ಎಲ್ಲಾ ಕೋಮುಗಳವರಿಂದಲೂ ಹೊಗಳಿಸಿಕೊಂಡು, ಹತ್ತಾರು ಸಂಘಗಳವರಿಂದ ವಿಶಷವನ್ನು ಮಾಡಿಸಿಕೊಂಡು ಪ್ರಯಾಣಮಾಡಿದರು. ಶವವನ್ನು ಸ್ಪೆಷಲ್ ರೈಲಿನಲ್ಲಿ ಮದರಾಸಿಗೆ ವಾಪಸು ತಂದು ಪದ್ಧತಿಯ ಪ್ರಕಾರ ಉತ್ತರಕ್ರಿಯೆಗಳನ್ನು ನಡಿಸಿದರು. ಮದರಾಸ್ ಪಟ್ಟಣದ ನೂರಾರು ಮಂದಿ ಯೂರೋಪ್ಯರೂ ದೇಶೀಯ ದೊಡ್ಡ ಮನುಷ್ಯರೂ ಶವಸಂಸ್ಕಾರಕ್ಕಾಗಿ ಹೋಗಿದ್ದು ಬಂದರು.

***

ಪೂನಾಪಟ್ಟಣದಲ್ಲಿ ದೇಶೀಯ ವಿದ್ಯಾವಂತರೂ ದೊಡ್ಡ ಮನುಷ್ಯರೂ ಪ್ರಜೆಗಳಲ್ಲಿ ಕುಡುಕುತನವನ್ನು ಹೆಚ್ಚದಂತೆ ನಿರೋಧಿಸುವುದಕ್ಕೆ ಬಹು ಸಾಹಸ ಪಡುತ್ತಿದ್ದಾರೆ. ಯೌವನಸ್ಥರು ಮದ್ಯಗಳ ಅಂಗಡಿ ಮುಂದೆ ನಿಂತು ಕುಡಿಯುವುದಕ್ಕಾಗಿ ಹೋಗತಕ್ಕವರಿಗೆ ವಿವೇಕ ಹೇಳುತ್ತಲೂ, ಯಾರೂ ಕುಡಿಯುವುದಕ್ಕೆ ಹೋಗದಂತೆ ಅಡ್ಡಿ ಮಾಡುತ್ತಲೂ ಬಂದಿದ್ದಾರೆ. ಇದರಿಂದ ಮದ್ಯದ ಅಂಗಡಿಗಳವರಿಗೆ ತುಂಬಾ ನಷ್ಟವಾಗುತ್ತಿರುವುದು. ಸರ್ಕಾರದವರು ಅಂಗಡಿಗಳ ಬಳಿ ಗಲಭೆಯಾಯಿತೆಂದು ಹೇಳಿ ಕೆಲವು ಯೌವನಸ್ಥರನ್ನು ದಸ್ತಗಿರಿ ಮಾಡಿ ಅವರಿಗೆ ಒಂದೊಂದು ರೂಪಾಯಿ ಜುಲ್ಮಾನೆ ಹಾಕಿದರು. ಆದಾಗ್ಯೂ ಈ ಪ್ರಯತ್ನವು ನಿಲ್ಲಲಿಲ್ಲ. ಈಗ ಈ ಮದ್ಯವಿಸರ್ಜನಾ ಕೂಟದವರು ಈ ಭಾಗದಲ್ಲಿ ಗವರ್ನರವರನ್ನು ಕಂಡು ಅವರಿಗೆ ಅರಿಕೆ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿ, ಬೊಂಬಾಯಿನಿಂದ ಅವರು ಪೂನಾಪಟ್ಟಣಕ್ಕೆ ದಯಮಾಡುವುದನ್ನೇ ಎದುರು ನೋಡುತ್ತಿದ್ದಾರೆ. ಗವರ್ನರವರು ಅವರಿಗೆ ಭೇಟಿ ಕೊಟ್ಟು ತಮ್ಮ ಅಭಿಪ್ರಾಯವನ್ನು ತಿಳಿಸುವುದಾಗಿ ಒಪ್ಪಿಕೊಂಡಿರುವರು.

***

ಹಿಂದುಸ್ಥಾನದ ರಣಜಿಟ್ಟಿ ಎಂದು ಹೆಸರು ಪಡೆದಿರುವ ರಾಮಮೂರ್ತಿಯು ಬೊಂಬಾಯಿ ಪಟ್ಟಣದಲ್ಲಿ ಬಹಳ ಸಾಮರ್ಥ್ಯವುಳ್ಳವನೆಂಬ ಕೀರ್ತಿಯನ್ನು ಸಂಪಾದಿಸಿಕೊಂಡನು. ಅಲ್ಲಿನ ಒಬ್ಬ ಪಾರ್ಸಿ ದೊಡ್ಡ ಮನುಷ್ಯನು ಆ ಜಟ್ಟಿಯನ್ನು ಕರೆದು, ಹತ್ತು ಕುದುರೆಗಳ ಬಲವುಳ್ಳಂಥಾ ಮೋಟಾರ್ ಗಾಡಿಯನ್ನು ಓಡುತ್ತಿರುವಾಗ ಹಿಡಿದು ನಿಲ್ಲಿಸಿದ ಪಕ್ಷಕ್ಕೆ ತಾನು ೧,೦೦೦ ರೂಪಾಯಿ ಬಹುಮಾನ ಕೊಡುತ್ತೇನೆಂದು ಬಾಜಿ ಕಟ್ಟಿಕೊಂಡನು. ರಾಮಮೂರ್ತಿ ಜಟ್ಟಿಯು ಬೊಂಬಾಯಿನಿಂದ ಹೊರಡುವುದಕ್ಕೆ ಸಿದ್ಧಪಡಿಸಿಕೊಂಡಿದ್ದದ್ದನ್ನು ಬಿಟ್ಟು, ಈ ಬಾಜಿಯ ಹೋರಾಟವನ್ನು ಪೂರೈಸುವುದಾಗಿ ಒಪ್ಪಿಕೊಂಡು ನಿಂತುಬಿಟ್ಟನು. ಕಳೆದ ಮಂಗಳವಾರ ಸಾಯಂಕಾಲ ಈ ಪಂದ್ಯವು ನಡೆಯಿತು. ಸಾವಿರಾರು ಜನರು ಅದನ್ನು ನೋಡುವುದಕ್ಕೆ ಕಾತರಪಟ್ಟು ಹೋಗಿದ್ದರು. ಎಲ್ಲಾ ಸಿದ್ಧವಾಯಿತು. ಹತ್ತು ಕುದುರೆ ಬಲದ ಮೋಟಾರ್ ಗಾಡಿಯನ್ನು ಸಂಪೂರ್ಣ ಶಕ್ತಿಯಿಟ್ಟು ಓಡಿಸುವುದಕ್ಕಾರಂಭಿಸಿದರು. ರಾಮಮೂರ್ತಿ ಜಟ್ಟಿಯು ಸ್ವಲ್ಪವೂ ಆಯಾಸವನ್ನು ತೋರಿಸದಂತೆ ಬಹು ಸುಲಭವಾಗಿ ಆ ಮೋಟಾರ್ ಗಾಡಿಯನ್ನು ಹಿಂದಿನಿಂದ ಹಿಡಿದು ನಿಲ್ಲಿಸಿಕೊಂಡು, ತನ್ನ ಅಪಾರವಾದ ಶಕ್ತಿಯನ್ನು ಪ್ರಕಾಶಪಡಿಸಿ, ನೋಟಕರೆಲ್ಲರೂ ಜಯಧ್ವನಿ ಮಾಡುತ್ತಿದ್ದಾಗ ಆ ಪಾರ್ಸಿ ದೊಡ್ಡ ಮನುಷ್ಯನಿಂದ ಒಂದು ಸಾವಿರ ರೂಪಾಯನ್ನು ಬಹುಮಾನ ಪಡೆದನು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್‌ಪಾಂಡೆನ್ಸ್.

ಕೆರೆಯ ಕೋಡಿ ಎತ್ತಿಸಿಕೊಡಬೇಕು.

ಅಯ್ಯಾ,

ಚಾಮರಾಜನಗರದ ತಾಲ್ಲೂಕು ದೊಡ್ಡರಾಯಪೇಟೆ ಕೆರೆಯು ಈಗ್ಗೆ ಸುಮಾರು ಅಂದರೆ ೧೮೯೪ ನೆ ಇಸವಿಯಲ್ಲಿ ರಿಪೇರಿ ಮಾಡಬೇಕೆಂದಲಿದ್ದ ಕೋಡಿಯನ್ನು ತೆಗೆದುಹಾಕಿ, ನಾಲ್ಕಾರು ಅಡಿ ಕೋಡಿಯನ್ನು ಕೆರೆಯ ಅಂಗಳದ ಮಟ್ಟಕ್ಕೆ ಕಟ್ಟಿರುತ್ತಾರೆ. ಅಲ್ಲದಿಂದ ಒಂದು ಫಸಲು ಆಗಬೇಕಾದರೆ ಎರಡಾವರ್ತಿ ಕೆರೆ ಭರ್ತಿ ಆಗಬೇಕು. ಈಗಿನ ಮಳೆಗಾಲವನ್ನು ನೋಡಿದರೆ ವರುಷಕ್ಕೆ ೧—೨—೩ ಮಳೆ ಆಗುವದೇ ಕಷ್ಟ. ಇಂಥಾ ಕಾಲದಲ್ಲಿ ಅನೇಕ ವೇಳೆ ಧರ್ಮ ಪ್ರಭುಗಳಾದಂಥಾ ಸಬ್ ಡಿವಿಜನ್ ಸಾಹೇಬರೂ, ಡೆಪ್ಯುಟಿ ಕಮಿಷನರ್ ಸಾಹೇಬರೂ ಚೀಫ್ ಇಂಜನೀರು ಸಾಹೇಬರೂ, ಮೊದಲ್ಗೊಂಡು, ಕೆರೆಯನ್ನು ಇದಕ್ಕೆ ಕಟ್ಟಿರತಕ್ಕ ಕೋಡಿಯನ್ನೂ ಸಹಾ ರೈತರ ಹೇಳಿಕೆ ಮೇರೆ ನೋಡಿಕೊಂಡು ಹೋದರು. ಕೆರೆ ಹತ್ತಿರ ಕೋಡಿ ಎತ್ತರಿಸುವಂತೆ ಹುಕುಂ ಮಾಡುತ್ತೇವೆಂತ ಹೇಳುವದೇ ಹೊರತು ಕೆಲಸವೇನು ನಡೆಯಲಿಲ್ಲ. ಈಗಲಾದರೋ ೩—೪ ವರುಷದಿಂದ ಈ ಕಡೆ ಫಸಲು ಆಗದೆ ಜೀವನ ಮಾಡುವದೇ ತುಂಬಾ ಕಷ್ಟವಾಗಿದೆ. ಇಂಥಾದ್ದರಲ್ಲಿ ಧರ್ಮ ಪ್ರಭುಗಳಾದ ಸರ್ಕಾರದವರು ಈ ವಿಚಾರವನ್ನು ತಮ್ಮ ದಿವ್ಯ ಚಿತ್ತಕ್ಕೆ ತಂದುಕೊಂಡು ಈಗಲಾದರೂ ಕೋಡಿ ಎತ್ತರಿಸಿ ಕೊಡುವಂತೆ ಅಪ್ಪಣೆ ದಯಪಾಲಿಸಬೇಕಾಗಿ ಪ್ರಾರ್ಥಿಸಿ ಕೊಳ್ಳುತ್ತೇವೆ. ಕೋಡಿ ಎತ್ತಿಸಿದರೆ ಕೆರೆಗೆ ಅಪಾಯವೇನಾದರೂ ಬಂದೀತೆಂಬ ಭಯ ಸ್ವಲ್ಪವೂ ಇಲ್ಲ. ಕೆರೆ ಏರಿ ನೀರು ಮಟ್ಟಕ್ಕೆ ಎರಡು ಗಜ ಎತ್ತರ. ಏರಿಯು ಕಲ್ಲು ಸಹಾ ಇದೆ. ಕೆರೆ ಅಪಾಯಕ್ಕೆ ಏನೂ ಭಯವಿಲ್ಲ.

ಪ್ರಜಾಹಿತಚಿಂತಕ

ಸ್ವಸ್ಥನಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ—ಬೆನ್ನಿನಲ್ಲಿ ಛಳುಕು ; ನಿದ್ರೆಯಿಲ್ಲದೆ ಇರುವುದು ; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು ; ಬಹಳ ಬಾಯಾರಿಕೆ ; ಬಳಲಿಕೆ ; ಎದೆ ಝಲ್ಲೆನಿಸುವುದು ; ತಲೆನೋವು, ಗಾಬರಿ ; ಕಣ್ಣು ಮೊಬ್ಬು ; ತಲೆ ತಿರುಗುವಿಕೆ ; ಮೈನೋವು ಕೀಲುನೋವು ; ಮರವು ; ನಿತ್ರಾಣ ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರಿಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [93-37]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು, ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ವಿಕಟಪ್ರತಾಪವೆಂಬ ಮಾಸಪತ್ರಿಕೆಗೆ ಒಂದು ವರುಷ ಚಂದಾದಾರರಾಗುವವರಿಗೆ ಸ್ತ್ರೀಪಂಚಸಾಹಸವೆಂಬ ಐದು ಜನ ಯುವತಿಯರುಗಳ ವಿನೋದವಾದ ಕಥೆ ಪುಸ್ತಕವನ್ನು ಬಹುಮಾನವಾಗಿ ಕೊಡಲ್ಪಡುವದು. [41-3]

ವಿಕಟಪ್ರತಾಪ.

ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆ.

ಪ್ರತಿ ತಿಂಗಳ ಮೊದಲನೆಯ ತಾರೀಖಿಗೆ ಪ್ರಕಟಿಸಲ್ಪಡುವುದು

" ವಾಗ್ವಿಲಾಸ:—ಅಧಮರಿಂದ ಉತ್ತಮರಿಗುಂಟಾಗುವ ಬಾಧೆ, ಸಜ್ಜನರಲ್ಲಿ ವಿಪ್ರಲಾಪ, ಅನಾಥರ ವಿಲಾಪ, ಸೋಮಾರಿಗಳ ಪ್ರಲಾಪ, ರಸಿಕರ ಆಲಾಪ, ಮಾನಿನಿಗಳ ಕೋಪ, ಈ ಕಲಾಪಗಳ ಚಿತ್ರಗಳಿಂದೊಪ್ಪಿರುವುದು ನಮ್ಮ ವಿಕಟಪ್ರತಾಪ "

ವಾರ್ಷಿಕ ಚಂದಾ ಸ್ಥಳದವರಿಗೆ ೬—೧೨—೦

ಪರಸ್ಥಳದವರಿಗೆ (ಅಂಚೆಯ ವೆಚ್ಚ ಸೇರಿ) ೧—೦—೦

ಚಂದಾ ಹಣ ಮುಂಗಡವಾಗಿ ಬಂದ ಹೊರತು ಪತ್ರಿಕೆಯನ್ನು ಕಳುಹಿಸಲು ಆಗುವುದಿಲ್ಲ. ಅಥವಾ ವಿ. ಪಿ. ಮೂಲಕ ಪತ್ರಿಕೆಯನ್ನು ಕಳುಹುವಂತೆ ಕಾಗದ ಬರೆದರೆ ಆಗತ್ಯ ಕಳುಹಿಸಲಾದೀತು

ಈ ವಿಕಟಪ್ರತಾಪ ಪತ್ರಿಕೆಯಲ್ಲಿ ಪ್ರತಿ ತಿಂಗಳಲ್ಲಿಯೂ ೩—೪ ಚಿತ್ರಗಳನ್ನೂ ಮತ್ತು ಹಾಸ್ಯ, ತಮಾಷೆ, ನಕಲಿ, ಧಾಂಧ್ಯ ಇವುಗಳನ್ನೂ ಪ್ರಕಟಿಸುತ್ತಿರುವೆವು. ಈ ಪತ್ರಿಕೆಯಲ್ಲಿ ಮೊದಲಿದ್ದದ್ದಕ್ಕಿಂತ ಈಗ ಅನೇಕ ವಿಷಯಗಳನ್ನು ಬಹಳ ತಮಾಷೆಯಾಗಿ ಬರೆಯುತ್ತಿರುವೆವು.

ಸೂಚನೆ —ವಿಕಟಪ್ರತಾಪ ಪತ್ರಿಕೆಗೆ ಚಂದಾದಾರರನ್ನು ಕೂಡಿಸಿ ಕೊಡಲು ಪ್ರತಿಯೊಂದು ಡಿಸ್ಟ್ರಿಕ್ಟು, ತಾಲ್ಲೋಕು, ಹೋಬಳಿಗಳಲ್ಲಿಯೂ ಏಜಂಟರುಗಳು ಬೇಕಾಗಿದೆ. ಏಜಂಟರುಗಳಿಗೆ ಹಾವಳಿ ಮಾದ ಕಮಿಷನ್ ಕೊಡಲ್ಪಡುವುದು. ಇಷ್ಟವಿರುವವರು ಕಾಗದ ಮುಖಾಂತ್ರ ಬರೆದು ತಿಳಿದುಕೊಳ್ಳಬಹುದು.

ನಮ್ಮ ವಿಳಾಸ:—ವಿಕಟಪ್ರತಾಪ ಆಫೀಸ್, ೧೩೭ ಅರಳೆ ಪೇಟೆ, ಬೆಂಗಳೂರು ಸಿಟಿ.

ಎಡಿಸನ್ಸ್ ಹೋಂ ಫೋನೋಗ್ರಾಫ್.

47-1

ದೊಡ್ಡ ಮತ್ತು ಚಿಕ್ಕ ಸಾರ್ವ ರಿಕಾರ್ಡ ಹಾರನ್ ಸ್ಟ್ಯಾಂಡ್; ೩೫ ಒಳ್ಳೇದಾದ ರಿಕಾರ್ಡ್ ; ಒಳ್ಳೇ ಪೆಟ್ಟಿಗೆ, ಮೂಲ ಬೆಲೆಗಿಂತ ೨೦ ರೂ. ಕಡಮೆ. ಹೊಸದು ಪತ್ರವ್ಯಾಪಾರ, ನಾ, ರೂಬರೂ. ತಪಶೀಲ್ ತಿಳಿಯಬಹುದು. ಟಿ. ಶ್ರೀಕಂಠಯ್ಯ ಸನ್ಸ್. ಮಾ ದಂಡಿಕೆಪದ್ಮಗುಪ್ತಿ ತಾಲ್ಲೂಕು.

ಅಲಾಸ್ಕಾನ್ ಗವರ್ನರ್ ಮೋರೆಲಾಸ್‌ಯವರು.

ಪೆ-ರೂ-ನಾ ಶೈತ್ಯದಿಂದುಂಟಾಗುವ ಸಮಸ್ತ ರೋಗಗಳಿಗೂ ತಕ್ಕ ಔಷಧವಂದೂ. ಶಾಶ್ವತವಾದ ಆರೋಗ್ಯವನ್ನೂ ಸಹಜವಾದ ಶರೀರಪುಷ್ಟಿಯನ್ನೂ ಕೊಡತಕ್ಕ ಔಷದವಂದೂ ಅಮೆರಿಕಾ ರಾಜ್ಯದಲ್ಲಿ ಪೂರ್ವದಿಂದ ಪಶ್ಚಿಮಕ್ಕೂ ಉತ್ತರದಿಂದ ದಕ್ಷಿಣಕ್ಕೂ ಎಲ್ಲಾ ಪ್ರದೇಶಗಳಲ್ಲಿ ಪ್ರಖ್ಯಾತವಾಗಿದೆ.



ಘನ ಮಾನ್ಯರಾದ ಅಲಾಸ್ಕಾ ಮೋರೆಲಾಸ್ ಗವರ್ನರು ಮುಕ್ತಿಕೂ

ಡಾ॥ ಎಸ್ ಬಿ ಹಾರ್ಟ್‌ಮನ್‌ರವರಿಗೆ | ಬರೆದಿ

ಕೊಲಂಬಸ್ ಒಹಿಯೋ, ಅಮೇರಿಕ

ಅಯ್ಯಾ —ನಿಮ್ಮ ಪೆರೂನ ಔಷಧಿ ನಮಗೆ ಮಹಾ ಉಪಕಾರವಾಯಿತೆಂದು ಪ್ರೀತಿಯಿಂದ ಹೇಳುತ್ತೇನೆ ಆದರಿಂದ ಈ ವಿಷಯವನ್ನು ಧಾರಾಳವಾಗಿ ಬರೆಯುತ್ತೇನೆ ಇಂಥಾ ಒಳ್ಳೆಯ ಔಷಧವನ್ನು ಕೊಟ್ಟ ನಿಮಗೆ ನಾವು ಬಹಳ ಕೃತಜ್ಞರಾಗಿದ್ದೇವೆ

ನಿಮ್ಮ ಪ್ರೀತಿಪಾತ್ರನಾದ

ಮೋರೆಲಾಸ್ ಗವರ್ನರ್ ಅಲಾಸ್ಕಾ

ಡಿಸೆಂ ೫ ೧೯೦೫

ಪೆರೂನಾವಿನ ದೊಡ್ಡ ಪರೀಕ್ಷೆ

ಪ್ರತಿ ಒಂದು ದೇಶದ ಹವಾಸ್ಥಿತಿಯೂ ಅದಕ್ಕೆ ಅನುಗುಣವಾಗಿಯೂ ವಿಜಾತೀಯವಾಗಿಯೂ, ಅದ್ದರಿಂದ ಅಲ್ಲಲ್ಲಿಗೆ ತಕ್ಕ ರೋಗಗಳನ್ನು ಕಲ್ಪಿಸುವುದಾಗಿಯೂ ಇದೆ

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಯನ್ನು ಹೊಂದಿರುವ ಪೆರೂನಾವಿನ ಗುಣಗಳನ್ನು ಸರಿಯಾಗಿ ಪರೀಕ್ಷೆ ಮಾಡುವುದಕ್ಕೆ ಮೆಕ್ಸಿಕೋ ರಾಜ್ಯ ಒಂದೇ ಸಾಕಾಗಿದೆ ಆ ರಾಜ್ಯದಲ್ಲಿ ಅತ್ಯಂತ ಶೈತ್ಯವೂ, ಅತ್ಯಂತ ಉಷ್ಣವೂ, ಸಮಶೀತೋಷ್ಣವೂ ಮಧ್ಯಸ್ಥವೂ ಆದ ಹವಾಗುಣವುಳ್ಳ ಪ್ರದೇಶಗಳೆಲ್ಲಾ ವಿಶೇಷವಾಗಿರುತ್ತವೆ

ಮೆಕ್ಸಿಕೋದಲ್ಲಿ ಬಹಳವಾಗಿ ಹುಟ್ಟುವ ಶೈತ್ಯರೋಗಗಳಿಗೂ ಉತ್ತರಧ್ರುವಪ್ರಾಂತ್ಯಗಳಲ್ಲಿ ಹುಟ್ಟತಕ್ಕ ಶೈತ್ಯರೋಗಗಳಿಗೂ ತಾರತಮ್ಯವಿರುತ್ತದೆ

ಚಳಿರಾಜ್ಯಗಳಲ್ಲಿ ಜನರಿಗೆ ವಿಶೇಷವಾಗಿ ಮೂಗು ಮತ್ತು ಗಂಟಲುಗಳಲ್ಲೇ ಶೀತ ಹುಟ್ಟಿ ಪ್ರಬಲವಾಗುವುದು ಉಷ್ಣರಾಜ್ಯಗಳಲ್ಲಿ ಶೀತರೋಗಗಳೆಲ್ಲಾ ಮನುಷ್ಯನ ಹೊಟ್ಟೆಯೊಳಗಿರುವಂಥಾ ಅನ್ನಕೋಶ ಪಿತ್ತಕೋಶ, ಮಲಕೋಶ, ಜಲಬಾಧೆಯಕೋಶ, ಈ ಮೊದಲಾದವುಗಳಿಗೆ ಶೈತ್ಯ ಹಿಡಿದು, ಅಂತರ್ಯವಾದ ನಾನಾ ರೋಗಗಳನ್ನು ಹುಟ್ಟಿಸುತ್ತೆ

ಈ ಪ್ರಕಾರ ಅವರ ಲಕ್ಷಣಗಳು ನಾನಾ ಪ್ರಕಾರವಾಗಿದ್ದರೂ ರೋಗಕ್ಕೆ ಕಾರಣವು ಮಾತ್ರ ಒಂದೇ ಆಗಿದೆ ಈ ಶೈತ್ಯವು ನೆತ್ತಿಯನ್ನು ಹಿಡಿಯಬಹುದು, ಗಂಟಲು ಹಿಡಿದಿರಬಹುದು, ಒಳಹೊಟ್ಟೆ ಕಿಬ್ಬೊಟ್ಟೆಗಳನ್ನು ಅಂಟಿಕೊಂಡಿರಬಹುದು ಆದರೂ ಶೀತವೇ ಅವುಗಳ್ಳಿಗೆ ಕಾರಣವು

ಶೀತರಾಜ್ಯಗಳಲ್ಲಿ ಹುಟ್ಟತಕ್ಕ ಶೈತ್ಯರೋಗಗಳಿಗೆ ಪೆರೂನಾವು ಎಷ್ಟು ಖಂಡಿತ ಗುಣಕಾರಿಯಾಗಿ ಕಂಡುಬಂದಿರುವುದೋ ಅದೇ ರೀತಿ ಉಷ್ಣರಾಜ್ಯಗಳ ಶೀತರೋಗಗಳಿಗೂ ಮಹಾ ಗುಣಕಾರಿಯಾದ ಔಷಧವೆಂದು ಪ್ರಸಿದ್ಧಿಗೊಂಡಿದೆ

ಪೆರೂನಾವು ಶೈತ್ಯರೋಗಗಳಿಗೆ ಪರಮೌಷಧವಾಗಿರುವುದು ಮಾತ್ರವೇ ಅಲ್ಲ ಅದು ಮಹಾ ಬಲಕಾರಿಯಾದ ಮತ್ತು ಪುಷ್ಟಿ ಕೊಡುವ ಸೇವನಾ ಔಷಧವೆಂದೂ ಯಶಸ್ಸನ್ನು ಪಡೆದಿರುತ್ತದೆ

ಪೆರೂನಾದಲ್ಲಿ ಬಲವನ್ನೂ ಶರೀರಪುಷ್ಟಿಯನ್ನು ಕೊಡುವಂಥಾ ಗುಣಗಳಿರೋದರಿಂದಲೇ ಉಷ್ಣರಾಜ್ಯಗಳವರು ಅದನ್ನು ವಿಶೇಷವಾಗಿ ಪ್ರೀತಿಸಿ ಉಪಯೋಗಿಸಿ ಹೊಗಳುತ್ತಾರೆ

ಪೆರೂನಾ ಸ್ವಭಾವಸಿದ್ಧವಾದ ಬಲ ಕೊಡುವ ಸೇವನಾ ಔಷಧವಾಗಿರುತ್ತದೆ. ಅದು ದೇಹದೊಳಗಿರತಕ್ಕ ನಾನಾ ಕೋಶಗಳ ಕಾರ್ಯಗಳನ್ನು ಕ್ರಮಕ್ಕೆ ತಂದಿಟ್ಟು ಪುಷ್ಟಿ ಮಾಡತಕ್ಕದ್ದಾಗಿದೆ

ಅದು ರಕ್ತದ ಚಲನೆಗೆ ಚುರುಕುತನವನ್ನು ಕೊಡುತ್ತದೆ ತಿಂದ ಆಹಾರವನ್ನು ಅದು ಚೆನ್ನಾಗಿ ಅರಗಿಸಿ ಪರಿಷ್ಕಾರವಾಗಿ ದೇಹದ ಅಂಗಾಂಗಗಳಿಗೆ ವ್ಯಾಪಿಸುವಂತೆಯೂ ಅದನ್ನು ಬಲಪಡಿಸ ಸಾಕಷ್ಟು ಕೆಲಸವಾಗುವುದು

ಅದು ಬಲವನ್ನು ಕೊಟ್ಟು ಶರೀರ ಧರ್ಮವನ್ನು ವೃದ್ಧಿಮಾಡುವುದಲ್ಲದೆ ಮೇಜಾದನ್ನೂ ಮನಸ್ಸಿನ ಚಿನ್ನತೆಯನ್ನೂ ನಿವಾರಿಸ್ಸ ಮಾಡುತ್ತದೆ ಆದರೆ ಇದು ಮಾದಕದ್ರವ್ಯಗಳಂತೆ ಕ್ಷಣಿಕವಾದ ಶಕ್ತಿಯನ್ನು ಕೊಡುವಂಥಾದ್ದಲ್ಲವು

ಚುರುಕುತನವೂ ಆರೋಗ್ಯವೂ

ಮಿ॥ ರಿಚರ್ಡ್ ಕ್ಯಾಲ್ವರ್ಟ್, ೭ ವಿಂಡಾಗ್ ಬೀದಿ, ಬ್ರೂಕ್ಲಿನ್, ನ್ಯೂಯಾರ್ಕ್, ಅಮೇರಿಕ, ಈತ ಬರೆಯುವುದು —

“ಹಸಿವವನಿಗೆ ಆಹಾರ ಹ್ಯಾಗೋ, ಬಾಯಾರಿದವನಿಗೆ ನೀರು ಹ್ಯಾಗೋ, ಹಾಗೆ ಕಾಣ ತಿಯಾನಿಗೆ ಪರೂನಾವು ಇರುವುದೆಂದು ತಿಳಿಯಿರಿ

“ಡಾಕ್ಟರುಗಳಿಗಿಂತಲೂ ಪೆರೂನಾವು ಅತಿ ಸೂಕ್ಷ್ಮವಾಗಿ ರೋಗವನ್ನು ವಾಸಿಮಾಡತಕ್ಕದ್ದೆಂದು ನನ್ನ ಮನಸ್ಸಿಗೆ ತೋರಿದೆ

“ಅನೇಕ ವರುಷಗಳ ತನಕ ನನಗೆ ಆಹಾರ ಜೀರ್ಣವಾಗುತ್ತಿರಲಿಲ್ಲ, ನನ್ನ ಪಿತ್ತ ಕೋಶವು ಮುಂದಗತಿಯಲ್ಲಿತ್ತು

ಆಗಾಗ್ಗೆ ಮಲಪ್ರ ಸಾಗದೆ ಕಟ್ಟು, ಭೇದಿಯಾಗುತ್ತಲೂ ಕಿಬ್ಬೊಟ್ಟೆ ನೋಯುತ್ತಲೂ ಇದ್ದಿತು

“ನನಗೆ ಅನುಕೂಲ ಮಾಡಬೇಕೆಂದು ಡಾಕ್ಟರುಗಳು ತಮ್ಮ ಕೈಲಾದ ಮಟ್ಟಿಗೂ ಪ್ರಯತ್ನ ಪಟ್ಟರು ಆದರೆ ನನಗಿದ್ದ ನೈಜವಾದ ರೋಗಲಕ್ಷಣವೇ ಅವರಿಗೆ ತಿಳಿಯದೆ ಹೋಯಿತೋ, ಅಥವಾ ಅವರು ಸರಿಯಾದ ಔಷಧವನ್ನು ಕೊಡದೆಹೋದರೋ

ಹನ್ನೆರಡು ವಾರಗಳಲ್ಲಿ ಪೆರೂನಾವು ನನಗೆ ವಾಸಿಮಾಡಿತು ಅದು ನನ್ನನ್ನು ಚುರುಕುತನವುಳ್ಳವನಾಗಿಯೂ ಆರೋಗ್ಯವಾಗಿಯೂ ಮಾಡಿತು ನಿಜವಾಗಿಯೂ ನಿಮಗೆ ನಾನು ಕೃತಜ್ಞನಾಗಿರುವೆನು ”

ಸ್ನೇಹಿತನು ಪೆರೂನಾ ಸೇವಿಸೆಂದು ಹೇಳಿದನು

ಮಿ॥ ಎಸ್ ಕ್ರಾಗ್ ಷೋಕ್‌ಮೇಲ್, ಚಿನ್ನಿಸಿ, ಆಗ್ನೇಯಿಕ್ ಈತ ಬರೆಯುವುದು —

ಎರಡು ವರುಷಕಾಲ ನನ್ನ ನೆತ್ತಿಗೆ ಶೀತ ಹಿಡಿದಿತ್ತು ಒಬ್ಬ ಸ್ನೇಹಿತನ ಪೆರೂನಾ ಸೇವಿಸು ಎಂದು ನನಗೆ ಹೇಳಿದನು ಆದರಿಂದ ನನಗೆ ಸಂಪೂರ್ಣವಾಗಿ ವಾಸಿಯಾಯಿತೆಂದು ಆಶ್ಚರ್ಯಪಡುತ್ತೇನೆ

ಏಳು ವರುಷದ ಶೈತ್ಯರೋಗವು

ಮಿ॥ ಅಂಬ್ರೋಸ್‌ಕಿಸ್, ೫೦೭ ಇಂಡಿಸ್ಟ್ರೀ ಬೀದಿ ಕ್ಯಾನ್ಸಾಸ್ ಪಟ್ಟಣ, ಮಿಸ್ಸೌರಿ, ಅಮೇರಿಕ ಈತ ಬರೆಯುತ್ತಾನೆ —

“ನನಗೆ ವಾಸಿಯಾದದ್ದಕ್ಕೆ ನಿಮ್ಮನ್ನು ಎಷ್ಟು ವಂದಿಸಿದರೂ ಸಾಲದು ನಾನು **ಏಳು ವರುಷಗಳ ವರೆಗೆ ಶೀತ ನೆಗಡಿ ಕೆಮ್ಮು** ಅನುಭವಿಸಿ, ನೂರಾರು ದ್ರವ್ಯವನ್ನು ಖರ್ಚುಮಾಡಿ ಔಷಧಿಗಳನ್ನು ಸೇವಿಸಿದೆನು ಆದರೂ ನನ್ನ ಶೈತ್ಯರೋಗವು ಹೆಚ್ಚಾಯಿತೇ ವಿನಹಾ ಕಡಮೆಯಾಗಲಿಲ್ಲ

“ನನಗೆ ಔಷಧಿ ಕೊಡುತ್ತಿದ್ದವರಲ್ಲಿ ಕೆಲವು ಡಾಕ್ಟರುಗಳು ಬಹಳ ಪ್ರಖ್ಯಾತಿಪಡೆದವರಾಗಿದ್ದರೂ ನನಗೆ ಅತಿ ಕಠಿಣವಾದ ಕೆಮ್ಮು ಇದ್ದೇ ಇದ್ದಿತು ಈ ಕೆಮ್ಮಿನ ಕಷ್ಟವನ್ನು ನಾನು ವಾಸಿ ಮಾಡಿಕೊಂಡೇನೆಂಬ ಭರವಸೆ ಇರಲೇ ಇಲ್ಲ

“ಆಗ ನಾನು **ಒಂದು ಬಾಟ್ಲು ಪೆರೂನಾ ಕೊಂಡು ತಂದು,** ಅದರಲ್ಲಿ ಬರೆದಿರುವ ಕ್ರಮಗಳ ಪ್ರಕಾರ ಆ ದಿನ ರಾತ್ರಿ ಸೇವಿಸಿದೆನು ಮಾರನೇದಿನ ಬೆಳಿಗ್ಗೆಯೇ ನನಗೆ ಸ್ವಲ್ಪ ಗುಣವಾದಂತೆ ತೋರಿತು

ಮೂರು ದಿನ ಸೇವಿಸಿದ ವೇಳೆ ನನಗೆ ತುಂಬಾ ಅನುಕೂಲವಾಯಿತು ಈಗಲಾದರೋ ಸುಮ್ಮನೆ ಕೇಸಿಯ ಔಷಧವನ್ನು ಮುಗಿಸಿದ ವೇಳೆ **ನಾನು ಸಂಪೂರ್ಣವಾಗಿ ಆರೋಗ್ಯಹೊಂದಿರುತ್ತೇನೆ**

“ಈ ಸರ್ವ ಶ್ರೇಷ್ಠವಾದ ಔಷಧವನ್ನು ಸೇವಿಸುವಂತೆ ಪ್ರತಿ ಒಬ್ಬನಿಗೂ ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುವೆನು ”

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ

ವಿಳಾಸು—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ:— ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೨೬—೪—1908 ರಿಂದ 1—5—1908 ರ ವರೆಗೆ

ಸ್ಥಳ	ಪ್ಲೇಗ್ ಆಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ಆಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	1	1
ಬೆಂಗಳೂರು ಡಿಸ್ಟ್ರಿಕ್ಟು	0	1	0	3
ಮೈಸೂರು ,,	*	*	*	*
ಕೋಲಾರ್ ,,	10	19	*	*
ಕೋಲಾರ್ ಚಿನ್ನದ ಗಣಿಗಳು	0	0	*	*
ತುಮಕೂರು ಡಿಸ್ಟ್ರಿಕ್ಟು	0	0	*	*
ಹಾಸನ ,,	0	0	19	54
ಚಿತ್ರದುರ್ಗ ,,	*	*	*	*
ಕಡೂರ್	0	*	0	0
ಶಿವಮೊಗ್ಗ ,,	*	0	*	*
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	10	19	?	5?

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ವೈಶಾಖ ಶುದ್ಧ ತ್ರಯೋದಶಿ ಗುರುವಾರದಿಂದ ವೈಶಾಖ ಬಹುಳ ಪಂಚಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ವೈಯಾಕಿಪಟ್ಟ
14	ಗುರು *	ತ್ರಯೋದಶಿ	11 38	ಚಿತ್ತ	12 18	2
15	ಶುಕ್ರ ¶	ಚತುರ್ದಶಿ	11 36	ಸ್ವಾತಿ	13 46	3
16	ಶನಿ ‡	ಪೌರ್ಣಮಿ	10 10	ವಿ	14 8	4
17	ರವಿ ,,	ಪಾಡ್ಯಮಿ	7 38	ಅ	13 24	5
18	ಚಂದ್ರ	ಬಿದಿಗೆ	4 4	ಜ್ಯೇಷ್ಠ	55 32	6
19	ಕುಜ ,,	ಚೌತಿ	54 30	ಮೂಲ	9-12	7
20	ಬುಧ	ಪಂಚಮಿ	18 48	ಪೂ	5 40	8

* ಶ್ರೀನೃಸಿಂಹಜಯಂತಿ ¶ ಕಾಂಚೀಪುರದ ಗರುಡೋತ್ಸವ ‡ ವ್ಯಾಸಪೂರ್ಣಿಮಾ, ಶ್ರೀರಂಗಪಟ್ಟಣದಲ್ಲಿ ಗರುಡೋತ್ಸವ, ದಧ್ಯನ್ನವ್ಯಂಜನದಿಂದ ,, ವ್ಯತೀಪಾತಯೋಗ, ಶ್ರೀಲಕ್ಷ್ಮೀರಮಣಸ್ವಾಮಿ ರಥ ,, ಕಾಂಚೀಪುರ ರಥೋತ್ಸವ, ಮಾರಹಳ್ಳಿ ನೃಸಿಂಹಸ್ವಾಮಿ ರಥ, ಸಂಕಷ್ಟಚತುರ್ಥಿ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಪ್ಪೇ ಅಕ್ಕಿ ಪಲ್ಲ ೧ಕ್ಕೆ	ರೂ	೧೪-೮-೦	೧೫-೮-೦
ಕಂಬಳಿ ಅಕ್ಕಿ ಅವರ		೧೨-೦-೦	೧೫-೦-೦
,, ...		೧೬-೯-೦	೧೪-೦-೦
ಜಾಪ್ರಾಹ ಅಕ್ಕಿ		೧೬-೪-೦	೧೭-೦-೦
ಸಣ್ಣಕ್ಕಿ ಅವಲ್		೧೭-೦-೦	೧೬-೦-೦
,, ದಪ್ಪ		೧೫-೮-೦	೧೭-೦-೦
ತೊಗರಿ ಬೇಳೆ ಪಲ್ಲ ೧ಕ್ಕೆ		೧೯-೮-೦	೧೫-೮-೦
,, ದಪ್ಪ		೧೪-೮-೦	೧೪-೦-೦
ಸ್ವರ್ಣ ರಾಗಿ ಪಲ್ಲ ೧ಕ್ಕೆ		೬-೧೨-೦	೭-೦-೦
ಕಾರ್ಗಿ		೬-೪-೦	೬-೧೨-೦
ಜೋಳ		೭-೦-೦	೮-೮-೦
ಹಲಸಂದೆ ಪಲ್ಲ ೧ಕ್ಕೆ		೧೧-೮-೦	೧೦-೦-೦
ಬಿಳೀ ಅವರೆ		೮-೦-೦	೮-೮-೦
ಹೆಸರು		೧೧-೮-೦	೧೨-೪-೦
ಉದ್ದು		೧೪-೮-೦	೧೨-೮-೦
ಕಡಲೆ		೧೨-೪-೦	೧೬-೦-೦
ಎಳ್ಳು ಸೆ ೧೨೭ಕ್ಕೆ		೨೭-೮-೦	೨೪-೮-೦
ಹುರುಳಿ		೬-೮-೦	೭-೪-೦
ಹರಳು ೧೨೭ ಸೇರಿಗೆ		೧೦-೦-೦	೧೨-೮-೦
ಸೀಗೇ ಪು ಮಣ ೧ಕ್ಕೆ		೧-೮-೦	೧-೮-೦
ಮೆಣಸಿನಕಾಯಿ		೨-೮-೦	೭-೦-೦
ದಪ್ಪ		೨-೪-೦	೨-೧೨-೦
ಬೆಲ್ಲ ದೊಡ್ಡ ಅಚ್ಚು		೫-೦-೦	ಮ ೧ ೧೦-೦
ಒಳ್ಳೆಣ್ಣೆ ಮಣ ೧ಕ್ಕೆ		೬-೦-೦	೬-೪-೦
ಹರಳೆಣ್ಣೆ ,,		೪-೧೨-೦	೪-೦-೦
ಕೊಬ್ಬರಿ ಪಲ್ಲ ೧ಕ್ಕೆ		೫-೮-೦	೭-೦-೦
ಉಪ್ಪು ,,		೪-೮-೦	೫-೦-೦
ಹುಣಸೇ ಹಣ್ಣು		೧-೪-೯	೧-೦-೦
,, ಹಳೇದು		೧-೦	೧-೩-೦
ತುಪ್ಪ ಮಣ ೧ಕ್ಕೆ		೧೪-೮-೦	೧೫-೦-೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ		೪-೧೫-೦	೪-೦-೦
ತೆಂಗಿನಕಾಯಿ ೧೦೦ಕ್ಕೆ		೬-೮-೦	೬-೪-೦
ಅಳಲೇಕಾಯಿ ಮಣ ೧ಕ್ಕೆ		೧-೦-೦	೧-೨-೦
ಅಂಟುವಾಳದ ಕಾಯಿ ಮಣ ೧ಕ್ಕೆ		೦-೧೨-೦	೦-೧೪-೦
ಚಿನ್ನ (ಪೌನ್) ತೊಲ		೧೪-೬-೦	೧೫-೯-೦
,, ,, ಪವನು		೧೫-೧೦-೦	೧೫-೧೨-೦
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೪-೧೦-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೫-೦-೦	೬೮-೦-೦

Printed and Published by the Rev E W Thompson, M A, Proprietor and Manager, Wesleyan Mission Press, Mysore 14/5/1908

REGISTERED M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸನ್ ೧೯೦೮ ನೇ ಇಸವಿ ಮೇ ತಾರೀಖು ೨೧ ನೇ ಗುರುವಾರ. ಸಂಚಿಕೆ ೫೧

AMRUTANJAN DEPOT, 16 OAK-LANE, BOMBAY. [17-13]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ :—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮ್ ಮತ್ತು ಘಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ ಕ್ಕೆ ಕಿಮ್ಮತು ೦-೮-೦. ಪೋಸ್ಟು ಖರ್ಚು ೦-೪-೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಖಜ್ಜಿ ವಗೈರೆ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦-೪-೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ—ಜೀರ್ಣಕ್ಕೆ ಡಬ್ಬಿ ೧ ಕ್ಕೆ.	೧—೪—೦	ಕುಮಾರಿಗುಟಿಕ—ಹೆಂಗಸರ ಹೊಟ್ಟೆನೋವಿಗೆ	೧—೦—೦
ವಜ್ರಗುಟಿಕೆ—ಧಾತುಪುಷ್ಟಿ ರಕ್ತಶುದ್ಧಿ	೧—೦—೦	ಪ್ರಮೇಹದ ಮಿಶ್ರಣ—ಪ್ರಮೇಹಕ್ಕೆ	೧—೦—೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ ಕ್ಕೆ	೦—೧೬—೦	ಕಫಹರಿ—ಕಫ, ಕೆಮ್ಮು, ಕ್ಷಯ, ಇತ್ಯಾದಿ	೧—೪—೦
ಉಳುಕಿನ ಮದ್ದು	೦—೮—೦	ಸುಂದರೀ ತೈಲ್ಯ—ಸೋರೆಗೆ	೦—೮—೦
ದಂತಶೂಲಹರಿ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಕರ್ಣಶೂಲಹಾರಿ—ಕಿವಿನೋವಿಗೆ	೦—೬—೦	ಉರಿನಾಶಕ ಎಣ್ಣೆ ಬಾಟ್ಲಿ ೧ ಕ್ಕೆ	೦—೮—೦
ಖಜ್ಜಿಯ ಮುಲಾಮು	೦—೨—೦	ವಾತದ ಮಿಶ್ರಣ ,,	೧—೦—೦
ದಂತಮಂಜನ—ಹಲ್ಲುಗಳಿಗೆ	೦—೩—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
ಕೇಶವರ್ಧಿನೀ ತೈಲ್ಯ—ಕೂದಲಿಗೆ	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
ಬಾಲಾಬು ಮಾತ್ರೆ—ಬಾಲಾಬಿಗೆ	೦—೮—೦	ರೋಮಹಾರಿ	೦—೮—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ.

ಕಾರ್ಡು ಸೈಜು ೪½ × ೩½.

ಫೋಟೋ ತೆಗೆಯುವ

ಫೋಟೋ ಕ್ಯಾಮೆರಾ.

84-40

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯು ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿ ಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ :—

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಜ್ವರಹರಿ. 44-3



ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಟಿಕ್ಕಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ತಡಮಾಡದೆ ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ :—ಸೀಸೆ ೧ ಕ್ಕೆ ೮ ಆಣೆ, ೧ ರೂ ; ೧—೮ ರೂ., ರೂ. ೨—೧೨ ಆ. ; ೧೧ ರೂ. ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಓಮಂಕರ್ಪೂರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯವು ದರಖ ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಾಕಡ ಅಸಿಸ್ಟೆಂಟ್ ಸರ್ಜನ್ ಗೋಪಾಲರಾಯರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದ ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಚಾರ :—

ಚೆನ್ನಪಟ್ಟಣ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಈಗಲೇ ಸೀಮೆಯಿಂದ ಬಂದಿದೆ.

117-30

೫,೦೦ ಹಾರ್ಸ್ ಶೋಪ್ ಹೊಲಿಯುವ ಸುಪೀರಿಯರ್ ಉಲ್ಲನ್ ದಾರ ಮಾತ್ರ ಇದೆ.—ಬಾರಿ, ಕಮ್ಮಿ ಕ್ರಯ.

೧ ಶೋಪಿಯಾಗುವ ಉಲ್ಲನ್ ದಾರಕ್ಕೆ	೦—೮—೦
೧೦ ಶೋಪಿಯಾಗುವ ಬಂಡಲ್‌ಗೆ ೧ ಕ್ಕೆ	೩—೮—೦
ಕೊಕ್ಕೆ ಸೂಜಿ ೧ ಕ್ಕೆ	೦—೧—೬
೬೦ ಇಂಚಿನ ಟೇಪ್ ೧ ಕ್ಕೆ	೦—೯—೦

ಒಂದಾಣೆ ಸ್ಟಾಂಪು ಕಳುಹಿಸಿ ೨೦ ಪೋಸ್ಟ್‌ಕಾರ್ಡು ಪಡಿರಿ.

ಹೆಂಪ್ರ ೧ನೇ ಹಾರ್ಸ್ ಶೋಪಿ ಡಜನ್ ೧ಕ್ಕೆ ೧೩—೨—೦

ವಿಳಾಸ:—

ಪ್ರೊಪ್ರೈಟರ್, ದಿ ಉಲ್ಲನ್ ಮಾರ್ಟ್, ಮಂಗಳೂರು.

ಇದನ್ನು ನೋಡಿದರೆ ಬಹು ಆಶ್ಚರ್ಯ ಪಡುವಿರಿ.

38-4

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು ; ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಈ ಪುಸ್ತಕದ ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಮೂಲಕ ರೂ. ೨—೩—೦. ಹತ್ತು ಅಥವಾ ಹದಿನೈದು ವರ್ಷದ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಮುದ್ರಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಕೊಡುತ್ತೇವೆ. ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಅವರಿಗೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ಮಾಡಿ.

ನಮ್ಮ ವಿಳಾಸ:— ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-14

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಕ್ಷಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿರುಚಿಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಣ್ಣಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ :—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

"ಕನ್ನಡ ಲಾ ರಿಪೋರ್ಟರ್."

ವಿಶಿಷ್ಟ ಕೋರ್ಟು ಕಚೇರಿಗಳಲ್ಲಿ ಸಾರ್ವದಾ ಉಪಯೋಗಿಸಲ್ಪಡುತ್ತಿರುವ ಪ್ರಿವಿ ಕೌನ್ಸಿಲಿನ, ಕಲ್ಕತ್ತ ಅಲಹಾಬಾದ್ ಬೊಂಬಾಯಿ ಮದ್ರಾಸ್ ಹೈಕೋರ್ಟುಗಳ, ಮೈಸೂರು ಚೀಫ್ ಕೋರ್ಟಿನ ತೀರ್ಪುಗಳು ಕನ್ನಡಕ್ಕೆ ಭಾಷಾಂತರಿಸಲ್ಪಟ್ಟು ಪ್ರಕಟಿಸಲ್ಪಡುವ "ಕನ್ನಡ ಲಾ ರಿಪೋರ್ಟರ್" ಎಂಬ ಮಾಸಪತ್ರಿಕೆಯು ಮುಂದಣ ಜೂನ್ ಮಾಸದಿಂದ ಹೊರಡುತ್ತದೆ ಇದಕ್ಕೆ ವರ್ಷದ ಚಂದಾ ೧ ರೂ. ಈ ಪತ್ರಿಕೆ ಜೂನ್ ತಿಂಗಳದುದಕ್ಕೆ ೧ ರೂ. ೬ ಪೈ. ಈ ಮುಂದಣ ತಿಂಗಳವಕ್ಕೆ ೨ ಆಣೆ, ಚಂದಾವನ್ನು ಮುಂಗಡವಾಗಿ ಕೊಡಬೇಕು; ಅಥವಾ ವಿ. ಪಿ. ಮೂಲಕ ಕಳುಹಿಸಿಕೊಳ್ಳಬಹುದು. ಪೋಸ್ಟ್ ಸ್ಟಾಂಪನ್ನು ಕಳುಹಿಸಬಹುದು ಪತ್ರಿಕೆಯನ್ನು ಅಪೇಕ್ಷಿಸುವವರು

ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು

[40-4] ಈ ವಿಳಾಸಕ್ಕೆ ಬರೆಯತಕ್ಕದ್ದು

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರು

ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) . . . ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ

ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್

ಸೇರಿ . . . . ರೂ. ೧—೧೪—೦

" " " " ೦—೧೪—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಹಾಸತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಕಾಣಿಸಿರುವಂಥ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಮಹಾ ಬಾಧಾಪರಿಹಾರಿಣಿಯು

58-32

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು

ಕ್ಲಿಮೆಂಟ್‌ಯವರ ಯುನಿಕ್ಕಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕಂಥ ದಿವ್ಯೌಷಧಿ. ತಲೆನೋವು, ಸಂಧುನೋವು, ಕೀಲುಗಳು ನೋವು, ವಾತರೋಗಗಳು, ... ನಾನಾವಿಧ ... ರೋಗಗಳು, ... ನೋವು, ಹಲ್ಲುನೋವು ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲಿಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೇಲೆ ಸ್ವಲ್ಪ ಸವರಿದರೆ ಆದರ ಗುಣವು ಕಂಡುಬರುತ್ತದೆ. ಬಳಸುವಂಥ ಪತ್ತೆಕಾರರು ಇದಕ್ಕೆ ಸಮಾನವಾದ ತೈಲವು ಬೇರೊಂದಿಲ್ಲವೆಂದು ಹೇಳುತ್ತಾರೆ.

ಕ್ರಯ ಸೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ವೇದಮೂರ್ತಿ ಬಿಳ್ಳಿ ಬೀದಿ, ವೇಪೇರಿ, ಮದರಾಸ್.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ ನಿನಗೆ ಯಾವ ನೋವೇ ಉಂಟಾಗಿರಲಿ— "ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ. ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ಹಿಡಿಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ.—ಪಿತ್ತಕೋಶ ರೋಗ; ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯು ಕಲ್ಲಣಿಸುವುದು; ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದುವು. ಹೀಗೆಯೇ ಹುಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಬಿಡುವದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕೆಟ್ಟದಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [93-38]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ, ೧೨ ಆಣೆ ಬುಡ್ಡಿಗಳಲ್ಲಿ ೩೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು. ಅಥವಾ, ಡೋನ್ಸ್ ಪ್ರೈ. ಓ. ಬಾಕ್ಸ್ ೨೦, ಬೊಂಬಾಯಿ,—ಇವರಲ್ಲಿ ದೊರೆಯುವುದು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

1-21



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರವ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಲ್ಪಟ್ಟಿಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುತ್ತದೆ ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವಾಗಿವೆಯೆಂದು. ಇದರಿಂದ ತೋರಿಬರುತ್ತದೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION. 33-8

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರಾಟಗಾರರಲ್ಲಿ ದೊರಕುತ್ತವೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನು ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2 31

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಟೊಳ್ಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಮಾಡಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಕಪ್ಪು, ಕೆಂಪು, ಹಳದಿ, ನೀಲಿ, ಕಾಫಿ ಟೋಪಿಗಳು ೧ ರೂ ೮ ಆ; ೧ ರೂ ೬ ಆ, ೧ ರೂ. ೪ ಆ.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ; ೨ ರೂ

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ; ೧ ರೂ. ೬ ಆ.

ಉಣ್ಣೆಯ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ

ಹೆಂಗಸರ ಟೋಪಿ, ಸೂಪರ್ ಮೇಜೋಡು, ಅರ್ಧ ಮೇಜೋಡು ಶಾಲು, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಸುಲಭ ಖರೀದಿ! ನೋಡಿ!!

46 3

ರಾಸ್ಕೋಪ್ ಸಿಸ್ಟಂ ಲಿವರ್ ವಾಚು ಸರಪಣಿ ಸಹಿತ ವಿ. ಪಿ. ಪಿ. ಚಾರ್ಜು ಸೇರಿ ೩-೮-೦. ರೂಪಾಯಿ ಇದುವರೆಗೂ ಈ ಖರೀದಿಗೆ ಕೊಟ್ಟಿಲ್ಲ. ಮಾದರಿಗೆ ಒಂದನ್ನು ತರಿಸಿ ನೋಡಿರಿ ನಮ್ಮ ವಿಳಾಸ—ಟಿ. ಸಿ. ಕನ್ನಯ್ಯಶೆಟ್ಟಿ ಅಂಡ್ ಸನ್, ಜನರಲ್ ಮರ್ಚೆಂಟ್, ನಂಬರು ೨೧, ಸಿಂಗಣ್ಣನ ಬೀದಿ, ಸಾಹುಕಾರ್ ಪೇಟೆ, ಮದ್ರಾಸು

ವೃತ್ತಾಂತ ಪತ್ರಿಕೆ

ಸನ್ ೧೯೦೮ ನೇ ಇಸವಿ ಮೇ ತಾ ೨೧ ನೇ ಗುರುವಾರ.

ವೈಸ್ರಾಯಿ ಲಾರ್ಡ್ ಲಾರೆನ್ಸ್‌ಯವರು.

ಈಗಲೂ ಪಂಜಾಬ್ ಆಧಿಪತ್ಯದಲ್ಲಿ ಜಾನ್ ಲಾರೆನ್ಸ್‌ಯವರ ಕೀರ್ತಿಯು ಸುಪ್ರಸಿದ್ಧವಾಗಿರುವುದು ಪ್ರಿಂಟರ್ ಪಟ್ಟಣಕ್ಕೆ ಮುತ್ತಿಗೆ ಹಾಕಿದ ಇಂಗ್ಲಿಷ್ ಸೈನ್ಯದಲ್ಲಿ ಅವರ ತಂದೆಯು ಒಬ್ಬ ಮುದ್ದೆದಾರನಾಗಿದ್ದನು ಮೊದಲು ಜಾನ್ ಲಾರೆನ್ಸ್‌ಯವರು ಈಸ್ಟ್ ಇಂಡಿಯಾ ಕಂಪನಿಯಲ್ಲಿ ನೌಕರಿಯನ್ನು ಸಂಪಾದಿಸಿಕೊಂಡು ಹಿಂದುಸ್ಥಾನಕ್ಕೆ ಬಂದು. ಪಂಜಾಬ್ ಸೀಮೆಯಲ್ಲಿ ಕೆಲಸಮಾಡುತ್ತಿದ್ದರು ಹಾಗೆ ಅವರು ಬಡ್ತಿ ಹೊಂದಿ ಪಂಜಾಬು ಇಂಗ್ಲಿಷರಿಗೆ ಸೇರಿಹೋದ ಮೇಲೆ ಅದಕ್ಕೆ ಗವರ್ನರಾದರು ತರುವಾಯ ಇನ್ನು ಕೆಲವು ಕಾಲದ ಮೇಲೆ ಅವರು ವೈಸ್‌ರಾಯಿ ಪದವಿಯನ್ನು ಹತ್ತಿ ೧೮೬೪ ರಿಂದ ೧೮೬೯ ನೇ ಇಸವಿಯ ತನಕ ಹಿಂದುಸ್ಥಾನವನ್ನು ಪರಿಪಾಲನ ಮಾಡಿದರು

ಜಾನ್ ಲಾರೆನ್ಸ್‌ಯವರು ದೇವರಲ್ಲಿ ಭಯಭಕ್ತಿಗಳನ್ನುಳ್ಳವರಾಗಿ, ಕ್ರಮವಾಗಿ ಪ್ರಾರ್ಥನೆ ಮಾಡುವುದರಲ್ಲೂ ಸತ್ಯವೇದವನ್ನು ಭಕ್ತಿಪುರಸ್ಸರವಾಗಿ ಪಾರಾಯಣ ಮಾಡುವುದರಲ್ಲೂ ಅದ್ವಿತೀಯರೆನಿಸಿ ಕೊಂಡಿದ್ದರು ಸರ್ವದಾ ಅವರು ಭಗವಂತನ ಚಿತ್ತವೃತ್ತಿಯಂತೆ ನಡೆಯುವುದರಲ್ಲೂ ಅಧರ್ಮವೂ ಅಸತ್ಯವೂ ಆದ ಕಾರ್ಯಗಳನ್ನು ತಡೆಯುವುದರಲ್ಲೂ ಪ್ರಯತ್ನಶೀಲರಾಗಿದ್ದರು. ಇಂಥಾ ಸತ್ಯವಂತರನ್ನು ನೋಡಿ ಪಂಜಾಬಿನ ಸಮಸ್ತ ಪ್ರಜೆಗಳೂ ಸಾಮಾನ್ಯವಾಗಿಯೂ ರೈತಾಪಿ ಜನರು ವಿಶೇಷವಾಗಿಯೂ ಅವರಲ್ಲಿ ಪೂರ್ಣವಾದ ಭಕ್ತಿ ಪ್ರೀತಿ ಭರವಸೆಗಳನ್ನುಳ್ಳವರಾಗಿದ್ದರು ಇದಕ್ಕೆ ದೃಷ್ಟಾಂತವಾಗಿ ಒಂದು ಸಂಗತಿಯನ್ನು ಸೂಚಿಸುತ್ತೇವೆ. ಜಾನ್ ಲಾರೆನ್ಸ್‌ಯವರು ವೈಸ್ರಾಯರಾಗಿ ಕಲ್ಕತ್ತೆಯಲ್ಲಿರುವಾಗ್ಗೆ ಒಬ್ಬ ರೈತನು ಎರಡು ಸಾವಿರ ಮೈಲಿ ದೂರದಿಂದ ಅವರ ಬಳಿಗೆ ಹೋಗಿ ಕಳುವಾಗಿದ್ದ ತನ್ನ ಹಸುವನ್ನು ಪತ್ತೆ ಮಾಡಿಸಿ ತನಗೆ ಕೊಡಿಸಬೇಕೆಂದು ಅವರನ್ನು ಬೇಡಿಕೊಂಡನಂತೆ. ಇದರಿಂದ ರೈತರಿಗೆ ಅವರಲ್ಲಿ ನಂಬಿಕೆಯೂ ಪ್ರೀತಿಯೂ ಎಷ್ಟುಮಟ್ಟಿಗೆ ಇದ್ದವೆಂಬುವುದು ಗೊತ್ತಾಗುತ್ತದೆ. ಈ ಪುಣ್ಯಪುರುಷರ ವಿಷಯದಲ್ಲಿ ಇನ್ನೊಂದು ಇತಿಹಾಸವಿರುವುದು. ಪಂಜಾಬ್ ಸೀಮೆಯು ಇಂಗ್ಲಿಷರಿಗೆ ಸೇರಿದ ಮೇಲೆ ೧೮೪೯ನೇ ಇಸವಿಯಲ್ಲಿ ಲಾಲ್ ಸಿಂಗ್ ಎಂಬೊಬ್ಬ ಸಿಕ್ ಜನರ ಮುಖಂಡನು ಪಿತೂರಿಮಾಡಿದನು. ಇಂಗ್ಲಿಷರು ಅವನನ್ನು ಹಿಡಿದು ಕ್ರಮವಾಗಿ ದರ್ಯಾಫ್ತು ಮಾಡಲಾರಂಭಿಸಿದರು ಈ ಮೊಕದ್ದಮೆಯು ನಡೆಯುತ್ತಿರುವಲ್ಲಿ ಇನ್ನೊಬ್ಬ ಮುಖಂಡನು ವೈಸ್ರಾಯರ ಬಳಿಗೆ ಹೋಗಿ ಅವರ ಕೂಡ ಸಂಭಾಷಣೆ ಮಾಡುತ್ತಾ, ಲಾಲ್ ಸಿಂಗನ ವಿಚಾರವನ್ನು ಎತ್ತಿ—"ಅವನ ವಿಷಯದಲ್ಲಿ

ಇನ್ನೊಂದು ಗಲಭೆ ಯಾಕೆ? ನಾನೊಂದು ಸುಲಭವಾದ ಮಾರ್ಗವನ್ನು ಸೂಚಿಸುವೆನು. ತಮ್ಮ ಅಪ್ಪಣೆಯಾಗುವ ಪಕ್ಷದಲ್ಲಿ ನಾನು ಈ ಕೆಲಸವನ್ನು ಪೂರೈಸಿಕೊಡುತ್ತೇನೆ" ಎಂದು ಹೇಳುತ್ತಾ, ತನ್ನ ನಡುವಿನಲ್ಲಿ ಕಟ್ಟಿಕೊಂಡಿದ್ದ ಭರ್ಜಿಯ ಹಿಡಿಗೆ ಕೈ ಹಾಕಿದನು. ವೈಸ್ರಾಯರು ಅತನ ಕೂಡ ಹಾಗೇ ಮಾತನಾಡುತ್ತಿದ್ದು ಸ್ವಲ್ಪ ಹೊತ್ತಿನ ಮೇಲೆ ಕೈ ನೀಡಿ ಅತನ ಸೊಂಟದಿಂದ ಭರ್ಜಿಯನ್ನು ಕಿರಿದುಕೊಂಡರು. ಆ ಮುಖಂಡನು ಅದನ್ನು ನೋಡಿ ಏನೂ ಹೇಳದೆ ಸುಮ್ಮನಿದ್ದನು. ಆಗ ಜಾರ್ಜ್ ಲಾರೆನ್ಸ್‌ಯವರು ಅತನನ್ನು ಕುರಿತು—"ಇತರರ ವಿಷಯದಲ್ಲಿ ಬಹಳ ಅಪನಂಬಿಕೆಯನ್ನಿಟ್ಟುಕೊಂಡಿರುವಂಥಾ ನೀನು, ನಾನು ನಿನ್ನ ಸೊಂಟದಿಂದ ಭರ್ಜಿಯನ್ನು ಸೆಳೆಕೊಂಡದ್ದನ್ನು ನೋಡಿಯೂ ಸುಮ್ಮನೆ ಇರುವೆಯಲ್ಲ?" ಎಂದು ಕೇಳಿದರು. ಅದಕ್ಕೆ ಅತನು— "ಇಂಗ್ಲೀಷರು ಈ ರೀತಿ ಕಡಿದಾಟಕ್ಕೆ ಹೊರಡತಕ್ಕವರಲ್ಲವೆಂದು ಚನ್ನಾಗಿ ಬಲ್ಲೆನು. ನೀವಲ್ಲದೆ ನಮ್ಮವರ್‍ಯಾರಾದರೂ ಹಾಗೆ ನನ್ನ ನಡುವಿಗೆ ಕೈ ಹಾಕಿದ್ದರೆ ನಾನು ಸುಮ್ಮನೆ ಬಿಡುತ್ತಿರಲಿಲ್ಲ" ಎಂದು ಹೇಳಿದನು. ಜಾರ್ಜ್ ಲಾರೆನ್ಸ್‌ಯವರು ಸುಳ್ಳಾಡತಕ್ಕವರೆಂದಾಗಲಿ, ಗುಟ್ಟಾಗಿ ವಿಶ್ವಾಸಘಾತಕರೆಂದಾಗಲಿ, ದ್ರೋಹತನದಿಂದ ಕೊಲ್ಲತಕ್ಕವರೆಂದಾಗಲಿ ಆ ಮುಖಂಡನಿಗೆ ಎಳ್ಳಷ್ಟೂ ಅನುಮಾನವಿರಲಿಲ್ಲ. ಅತನಿಗೆ ತನ್ನ ಮನೆಗಿಂತಲೂ ಜಾರ್ಜ್ ಲಾರೆನ್ಸ್‌ಯವರ ಗೃಹವೇ ಅತಿ ಕ್ಷೇಮಕರವೆಂದು ತಿಳಿದಿದ್ದನು. ಇಷ್ಟೇ ಅಲ್ಲ, ಇಂಗ್ಲಿಷ್ ಮುದ್ರೆದಾರರ ಘನತೆಯೂ ಅವರ ಶೀಲಸ್ವಭಾವಗಳೂ ಶ್ರೇಷ್ಠತರವಾದವುಗಳೆಂಬ ಭರವಸೆಯು ಅತನಲ್ಲಿ ವಿಶೇಷವಾಗಿದ್ದಿತು.

ಪ್ರಸ್ತಕಾಲದಲ್ಲಿ ನಮಗೆ ಹಿಂದುಸ್ಥಾನದೊಳಗೆ ಮುಖ್ಯವಾಗಿ ಬೇಕಾಗಿರುವುದೇನು? ಸತ್ಯವೂ ನಿರ್ದುಷ್ಟವೂ ಋಜುಗವೂ ಆದ ನಡವಳಿಕೆಯೇ ಈಗ ಬೇಕಾಗಿರುತ್ತದೆ. ಸುಳ್ಳು ಸುದ್ದಿಯನ್ನೂ ಮೋಸಕೃತ್ಯವನ್ನೂ ತುಚ್ಛವಾಗಿ ಎಣಿಸುವಂಥಾ ಸ್ವಭಾವವು ಜನರಲ್ಲಿ ಹುಟ್ಟಿ ಬೆಳೆಯಬೇಕು. ಹೆಸರಿಲ್ಲದ ಕಾಗದಗಳನ್ನು ಬರೆಯುವುದು, ಹೊಟ್ಟೆಕಿಚ್ಚು ತೀರಿಸಿಕೊಳ್ಳುವುದಕ್ಕೆ ಅಧಿಕಾರಿಗಳ ಅಥವಾ ಇತರ ಜನರ ಹೆಸರು ಕಾಣಿಸದೆ ಅವರ ಮೇಲೆ ಅಬದ್ಧ ಬಾತ್ಮಿಗಳನ್ನು ಬರೆಯುವುದು, ಎಲ್ಲಾ ತರದ ಮೋಸಕೃತ್ಯ, ಸುಳ್ಳು ಸುದ್ದಿಯುವುದು, ಪ್ರೋಷಚೆಂತನೆ, ಈ ಮೊದಲಾದವುಗಳ ವಿಷಯದಲ್ಲಿ ನಾಚಿಕೆಪಡುವಂಥಾ ಸಚ್ಚರಿತ್ರರಾದ ಜನರು ಈಗ ಬೇಕಾಗಿದೆ. ಈ ದುರ್ಗುಣಗಳುಳ್ಳವಂಥಾ ಜನರನ್ನುಳ್ಳ ಯಾವ ಸಂಸಾರವಾಗಲಿ, ಯಾವ ಜಾತಿಯಾಗಲಿ, ಯಾವ ಜನಾಂಗವಾಗಲಿ ಶಾಶ್ವತವಾಗಿಯೂ ಪ್ರಬಲವಾಗುವುದಿಲ್ಲ. ದೇವರು ಸತ್ಯವಂತನೂ ಸತ್ಯಪರರ ಸಹಾಯಕನೂ ಆಗಿರುತ್ತಾನೆ. ಅದ್ದರಿಂದ ಸಕಲರೂ ಮುಂದಿನ ವಾಕ್ಯವನ್ನು ಹಿಡಿ ಆಚರಣೆಗೆ ತರುವವರಾಗಲಿ.—

"ಸತ್ಯಂ ವದ, ಧರ್ಮಂ ಚರ, ನಾನೃತಂ ಬ್ರೂಯಾತ್"

ಸತ್ಯವೇದದ ಸ್ವರ್ಣವಾಕ್ಯಗಳು.

ವ್ಯಭಿಚಾರವನ್ನು ಕುರಿತು.

ವ್ಯಭಿಚಾರ ಮಾಡಬಾರದೆಂದು ಹೇಳಿಯದೆ ಎಂಬದಾಗಿ ನೀವು ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ—ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು.

ಇದಲ್ಲದೆ, ತನ್ನ ಹೆಂಡತಿಯನ್ನು ಬಿಟ್ಟುಬಿಡುವವನು ಆಕೆಗೆ ಬಿಡುಗಡೆ ಪತ್ರವನ್ನು ಕೊಡತಕ್ಕದ್ದೆಂದು ಹೇಳಿಯದೆಯಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ—ಹಾದರದ ಕಾರಣದಿಂದಲೇ ಹೊರತು ತನ್ನ ಹೆಂಡತಿಯನ್ನು ಬಿಟ್ಟುಬಿಡುವವನು ಅವಳು ವ್ಯಭಿಚಾರ ಮಾಡುವದಕ್ಕೆ ಕಾರಣನಾಗುತ್ತಾನೆ. ಮತ್ತು ಗಂಡ ಬಿಟ್ಟವಳನ್ನು ಮದುವೆಮಾಡಿಕೊಳ್ಳುವವನು ವ್ಯಭಿಚಾರಮಾಡಿದವನಾಗುತ್ತಾನೆ.

ಎಲ್ಲರಲ್ಲಿಯೂ ಸಮಾಧಾನವಾಗಿರುವದನ್ನು ಕುರಿತು

ನರಹತ್ಯ ಮಾಡಬಾರದು; ನರಹತ್ಯ ಮಾಡುವವನು ನ್ಯಾಯವಿಚಾರಣೆಗೆ ಗುರಿಯಾಗುವನೆಂದು ಹಿರಿಯರಿಗೆ ಹೇಳಿಯದೆ ಎಂದು ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ—ನಿನ್ನ ಸಹೋದರನ ಮೇಲೆ ಸಿಟ್ಟುಗೊಳ್ಳುವ ಪ್ರತಿ ಮನುಷ್ಯನು ನ್ಯಾಯವಿಚಾರಣೆಗೆ ಗುರಿಯಾಗುವನು; ತನ್ನ ಸಹೋದರನನ್ನು ನೋಡಿ—ಛೀ ಹೀನ ಅನ್ನುವವನು ನ್ಯಾಯಸಭೆಯ ವಿಚಾರಣೆಗೆ ಒಳಗಾಗುವನು; ಮೂರ್ಖ ಅನ್ನುವವನು ಅಗ್ನಿ ದಂಡನೆಗೆ ಗುರಿಯಾಗುವನು ಆದಕಾರಣ ನೀನು ನಿನ್ನ ಕಾಣಿಕೆಯನ್ನು ಯಜ್ಞವೇದಿಯ ಹತ್ತರಕ್ಕೆ ತಂದಾಗ ನಿನ್ನ ಸಹೋದರನ ಮನಸ್ಸಿನಲ್ಲಿ ನಿನ್ನ ಮೇಲೆ ಏನೋ ಮನಸ್ತಾಪ ಎಂಬುವದು ನಿನ್ನ ನೆನಪಿಗೆ ಬಂದರೆ, ನಿನ್ನ ಕಾಣಿಕೆಯನ್ನು ಆ ಯಜ್ಞವೇದಿಯ ಮುಂದೆಯೇ ಬಿಟ್ಟುಹೋಗಿ ಮೊದಲು ನಿನ್ನ ಸಹೋದರನ ಸಂಗಡ ಒಂದಾಗು; ಆ ಮೇಲೆ ಬಂದು ನಿನ್ನ ಕಾಣಿಕೆಯನ್ನು ಕೊಡು.

ಶತೃಗಳನ್ನು ಪ್ರೀತಿಯಾಗಿ ಕಾಣುವದನ್ನು ಕುರಿತು.

ನಿನ್ನ ನೆರೆಯವನನ್ನು ಪ್ರೀತಿಸಬೇಕು; ನಿನ್ನ ವೈರಿಯನ್ನು ಹಗೆಮಾಡಬೇಕೆಂದು ಹೇಳಿಯದೆ ಎಂಬದಾಗಿ ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ—ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ಪ್ರಾರ್ಥನೆ ಮಾಡಿರಿ ಹೀಗೆ ಮಾಡಿದರೆ, ನೀವು ಪರಲೋಕದಲ್ಲಿರುವ ನಿಮ್ಮ ತಂದೆಯಾದ ದೇವರಿಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ; ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಸುರಿಸುತ್ತಾನೆ. ನಿಮ್ಮನ್ನು ಪ್ರೀತಿಸುವವರನ್ನೇ ನೀವು ಪ್ರೀತಿಸಿದರೆ ನಿಮಗೆ ಫಲವೇನು? ಭ್ರಷ್ಟರೂ ಹಾಗೆ ಮಾಡುವದಿಲ್ಲವೇ? ನಿಮ್ಮ ಸಹೋದರರಿಗೆ ಮಾತ್ರ ನೀವು ಮರ್ಯಾದೆ ಕೊಟ್ಟರೆ ಏನು ಹೆಚ್ಚು ಮಾಡಿದಹಾಗಾಯಿತು? ಅನ್ಯ ಜನಗಳು ಸಹ ಹೀಗೆ ಮಾಡುವದಿಲ್ಲವೇ? ಆದದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯಾದ ದೇವರು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ

ಧರ್ಮಮಾಡುವದನ್ನು ಕುರಿತು.

ಜನರು ನೋಡಲಿ ಎಂದು ನಿಮ್ಮ ಧರ್ಮಕಾರ್ಯಗಳನ್ನು ಅವರ ಮುಂದೆ ಮಾಡಬಾರದು, ನೋಡಿರಿ, ಹಾಗೆ ಮಾಡಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯಾದ ದೇವರ ಹತ್ತಿರ ನಿಮಗೆ ಫಲ ದೊರೆಯದು.

ಆದದರಿಂದ ನೀನು ಧರ್ಮಕೊಡುವಾಗ ನಿನ್ನ ಮುಂದೆ ಕೊಂಬೂದಿಸಬೇಡ, ಜನರಿಂದ ಹೊಗಳಿಸಿಕೊಳ್ಳಬೇಕೆಂದು ಕಪಟಿಗಳು ಸಭಾಮಂದಿರಗಳಲ್ಲಿಯೂ ಬೀದಿಗಳಲ್ಲಿಯೂ ಹಾಗೆ ಮಾಡುತ್ತಾರೆ ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ನೀನಾದರೆ ಧರ್ಮ ಕೊಡುವಾಗ ನೀನು ಧರ್ಮ ಕೊಟ್ಟದ್ದು ಅಂತರಂಗವಾಗುವ ಹಾಗೆ ನಿನ್ನ ಬಲಗೈ ಮಾಡಿದ್ದು ಎಡಗೈಗೂ ತಿಳಿಯದಿರಲಿ. ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ದೇವರು ನಿನಗೆ ಫಲಕೊಡುವನು.

ಉಪವಾಸವನ್ನು ಕುರಿತು

ಇದಲ್ಲದೆ ನೀವು ಉಪವಾಸ ಮಾಡುವಾಗ, ಕಪಟಿಗಳಂತೆ ಮುಖವನ್ನು ಸಪ್ಪಗೆ ಮಾಡಿಕೊಳ್ಳಬೇಡಿರಿ. ಅವರು ತಾವು ಉಪವಾಸಿಗಳೆಂದು ಜನರಿಗೆ ತೋರುವದಕ್ಕಾಗಿ ತಮ್ಮ ಮುಖವನ್ನು ವಿಕಾರಮಾಡಿಕೊಳ್ಳುತ್ತಾರೆ ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ನೀನು ಉಪವಾಸ ಮಾಡುವಾಗ, ತಲೆಗೆ ಎಣ್ಣೆ ಹಚ್ಚಿಕೊಂಡು ಮುಖವನ್ನು ತೊಳೆಕೋ. ಹೀಗೆ ಮಾಡಿದರೆ ನೀನು ಉಪವಾಸಿಯೆಂದು ಜನರಿಗೆ ಕಾಣದೆಹೋದಾಗ್ಯೂ ಅಂತರಂಗದಲ್ಲಿರುವ ನಿನ್ನ ದೇವರಿಗೆ ಉಪವಾಸಿಯೆಂದು ಕಾಣಿಸಿಕೊಳ್ಳುವಿ. ಅಂತರಂಗದಲ್ಲಿ ನಡೆಯುವದನ್ನು ನೋಡುವ ಆ ನಿನ್ನ ತಂದೆಯು ನಿನಗೆ ಫಲಕೊಡುವನು

ಪ್ರಾರ್ಥನೆಯನ್ನು ಕುರಿತು

ಮತ್ತು ನೀವು ಪ್ರಾರ್ಥನೆ ಮಾಡುವಾಗ, ಕಪಟಿಗಳ ಹಾಗೆ ಮಾಡಬೇಡಿರಿ ಜನರು ನೋಡಬೇಕೆಂದು ಅವರು ಸಭಾಮಂದಿರಗಳಲ್ಲಿಯೂ ಬೀದಿ ಚೌಕಗಳಲ್ಲಿಯೂ ನಿಂತುಕೊಂಡು ಪ್ರಾರ್ಥನೆ ಮಾಡುವದಕ್ಕೆ ಇಷ್ಟಪಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಆದರೆ ನೀನು ಪ್ರಾರ್ಥನೆ ಮಾಡಬೇಕಾದರೆ, ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ, ಬಾಗಿಲನ್ನು ಮುಚ್ಚಿಕೊಂಡು, ಅಂತರಂಗದಲ್ಲಿಯೂ ಇರುವ ನಿನ್ನ ತಂದೆಯಾದ ದೇವರಿಗೆ ಪ್ರಾರ್ಥನೆ ಮಾಡು; ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ದೇವರು ನಿನಗೆ ಫಲಕೊಡುವನು

ಒಳದೇಶದ ವೃತ್ತಾಂತಗಳು.

ಶ್ರೀಮನ್ ಯುವರಾಜರವರ ೨೧ ನೇ ವರುಷದ ವರ್ಧಂತಿಯು ಮುಂದಿನ ಮಂಗಳವಾರ ನೀಲಗಿರಿಯಲ್ಲಿ ಆಚರಿಸಲ್ಪಡುವುದಾಗಿ ತಿಳಿದಿದೆ

❖❖❖

ಬರುವ ತಿಂಗಳ ಮೊದಲನೇ ವಾರದಲ್ಲಿ ಶ್ರೀಮನ್ ಮಹಾರಾಜರವರೂ ಮಹಾಮಾತೃಶ್ರೀಯವರೂ ಪರಿವಾರಸಹಿತ ನೀಲಗಿರಿಯಿಂದ ರಾಜಧಾನಿಗೆ ದಯಮಾಡುವವರಾಗಿದಾರೆಂದು ಕೇಳುತ್ತೇವೆ

❖❖❖

ರಾಜಧಾನಿಯಲ್ಲಿ ತಕ್ಕಮಟ್ಟಿಗೆ ಮಳೆ ಆಗಿದ್ದರೂ ಪ್ಲೇಗುಬೇದಿ ಉಪದ್ರವು ಇನ್ನೂ ಸಂಪೂರ್ಣವಾಗಿ ನಿಂತಿಲ್ಲವು. ಕಳೆದ ವಾರ ಮೂರು ನಾಲ್ಕು ಜನರು ಈ ರೋಗ ತಗಲಿ ಕಾಲವಾಗಿರುತ್ತಾರೆ.

❖❖❖

ಮಾಗಡಿ ಪ್ರಾಂತ್ಯ ಕೆಂಪಯ್ಯನೆಂಬೊಬ್ಬನು ತಾನು ಒಕ್ಕಲಿಗರ ಸಂಘದ ಏಜಂಟು ಎಂದು ಹೇಳುತ್ತಾ, ಜನರಿಂದ ಹಣ ವಸೂಲ್ಮಾಡಿದ್ದು ಪತ್ತೆ ಆದ್ದರಿಂದ ಅವನನ್ನು ಪೊಲೀಸ್ ಪೇಟೆಯಲ್ಲಿ ಪರ್ಯಾಪ್ತಿ ಮಾಡಿದ್ದರಲ್ಲಿ ಅವನಿಗೆ ಮೂರು ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿತು.

❖❖❖

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಉರಿಗಂದಲ್ಲಿ ಒಬ್ಬ ಹಿಂದುವು ಸ್ವದೇಶೀ ವಿಚಾರವನ್ನು ಕುರಿತು ಉಪನ್ಯಾಸಮಾಡುತ್ತಿದ್ದನು. ಇವನು ಆರ್ಕಾಟಿನಲ್ಲಿ ಯಾರಿಗೋ ಮೋಸಮಾಡಿದ ವಿಚಾರ ಗೊತ್ತಾದ್ದರಿಂದ ಪೊಲೀಸಿನವರು ಅವನನ್ನು ಹಿಡಿದು, ವಿಚಾರಣೆಗಾಗಿ ಅಲ್ಲಿಗೆ ಕಳುಹಿಸಿರುತ್ತಾರೆ

❖❖❖

ಜೂನ್ ತಿಂಗಳು ೧೧ನೇ ತಾರೀಖಿನಲ್ಲಿ ಶ್ರೀಮನ್ ಮಹಾರಾಜರವರ ವರ್ಷವರ್ಧಂತಿ ಉತ್ಸವಗಳು ನಡೆಯುವುದರಿಂದ ಅದಕ್ಕಾಗಿ ರಾಜಧಾನಿಯಲ್ಲಿ ವಿಶೇಷ ಏರ್ಪಾಡುಗಳನ್ನು ಮಾಡುತ್ತಿದ್ದಾರೆ. ಈ ಸಲ ಯೂರೋಪಿಯನ್ ಸರ್ದಾರರು ಹೆಚ್ಚಾಗಿಯೇ ಬಂದು ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುವರೆಂದು ತಿಳಿಯುವುದು.

ಬೆಂಗಳೂರು ಕೊಲೆಗಳ ಸೈಕಿ ಪೇಟೆಯಲ್ಲಿ ನಡಿಸಲ್ಪಟ್ಟ ಅಪ್ಪಯ್ಯನ ಮತ್ತು ಲಕ್ಷ್ಮಿಯ ಕೊಲೆ ಮೊಕದ್ದಮೆಗಳು ಚೀಫ್ ಕೋರ್ಟಿನಲ್ಲಿ ಫೈಸಲಾದವು ಮೊದಲನೇ ಮೊಕದ್ದಮೆಯಲ್ಲಿ ಬಾಬುವಿಗೂ ಸುಂದರರಾಜುವಿಗೂ ಮರಣದಂಡನೆಯೂ, ಲಕ್ಷ್ಮಿಯ ಕೊಲೆ ಮೊಕದ್ದಮೆಯಲ್ಲಿ ಶ್ರೀನಿವಾಸಲು ಎಂಬ ಅಪರಾಧಿಗೆ ಜೀವ ಸಜಾವೂ ವಿಧಿಸಲ್ಪಟ್ಟವು

❖❖❖

ಯಡತೊರೆ ತಾಲ್ಲೂಕು ಅಬ್ಬೂರುಕೊಪ್ಪಲ ಈರಣ್ಣ, ದೇವಣ್ಣ ಎಂಬವರಿಬ್ಬರು ಕೊಲೆ ಮಾಡಿದರೆಂದು ಮರಣದಂಡನೆ ವಿಧಿಸಲ್ಪಟ್ಟು ಮೈಸೂರು ಜೈಲಿನಿಂದ ತಪ್ಪಿಸಿಕೊಂಡುಹೋಗಿ ಸುಮಾರು ೩-೪ ತಿಂಗಳಮೇಲಾಯಿತು. ಇವರನ್ನು ಪತ್ತೇ ಮಾಡಿ ಕೊಡುವವರಿಗೆ ೨೦೦ ರೂಪಾಯಿ ಇನಾಮು ಕೊಡುತ್ತೇವೆಂದು ಪೊಲೀಸ್ ಇಲಾಖೆಯವರು ಪ್ರಕಟಸಿದಾರೆ.

❖❖❖

ಬೆಂಗಳೂರಲ್ಲಿ ಕೊಲೆಗಳನ್ನು ನಡಿಸಿದ ಅಪರಾಧಿಗಳಾದ ಬಾಬು, ಸುಂದರರಾಜು, ನಲ್ಲತಂಬಿ ಎಂಬೀ ಮೂವರು ಮಂದಿಯೂ ತಮಗೆ ವಿಧಿಸಲ್ಪಟ್ಟಿರುವ ಮರಣ ದಂಡನೆಯನ್ನು ತಪ್ಪಿಸಿಕೊಡಬೇಕೆಂದು ವೈಸ್‌ರಾಯಿ ಯವರಿಗೆ ಬರೆದುಕೊಂಡಿದ್ದದ್ದಕ್ಕೆ ಆ ಶಿಕ್ಷೆಯನ್ನು ಬದಲಾಯಿಸಲಾಗುವುದಿಲ್ಲವೆಂದು ಕಳೆದ ಭಾನುವಾರ ಜವಾಬು ಬಂದಿತು. ಆದ್ದರಿಂದ ಸೋಮವಾರ ಸರ್ಕಾರದವರು ಅವರ ಫೋಟೋಗ್ರಾಫ್‌ಗಳನ್ನು ತೆಗಿಸಿ, ಅವರ ನೆಂಟರಿಷ್ಟರ ಕೂಡ ಮಾತನಾಡುವುದಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದರು. ಮಂಗಳವಾರ ಬೆಳಿಗ್ಗೆ ಆ ಮೂರು ಜನರನ್ನೂ ಗಲ್ಲಿಗೆ ಹಾಕಿ, ಪ್ರಾಣಹೋದ ಮೇಲೆ ಶವಗಳನ್ನು ಬಂಧುಗಳಿಗೆ ಕೊಡಿಸಿದರು. ಆ ಸಮಯದಲ್ಲಿ ಜೈಲ್‌ಖಾನೆಯೊಳಗೆ ಅಧಿಕಾರಿಗಳೂ ಹಾಜರಾಗಿದ್ದರು.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಗವರ್ನಮೆಂಟ್ ಮಿಲಿಟರಿ ಸೆಕ್ರಿಟರಿಯಾದ ಲೆಫ್ಟಿನೆಂಟ್ ಕರ್ನಲ್ ಆರ್ ಜೆ. ಜೋನ್ಸ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜವನ್ನು ತರುವಾಯ ಒಂಬತ್ತು ತಿಂಗಳ ಫರ್ಲೋ ರಜವನ್ನೂ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿತ್ರದುರ್ಗದ ಪೊಲೀಸ್ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರ್ ಕೆ ನಾರಾಯಣ ಐಯ್ಯರವರು ಚಳ್ಳಕೆರೆ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಕುಣಿಗಲು ಅಮಲ್ದಾರ್ ಮೇ॥ ಬಿ ಕೇಸರ್‌ಸಿಂಗ್ ಯವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ.

ಅರಸಿಕೆರೆ ಅಮಲ್ದಾರ್ ಮೇ॥ ಕೆ ಶ್ರೀನಿವಾಸರಾಯರಿಗೆ ಕೊಟ್ಟಿರುವ ಕಾಯಿಲೆ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ

ಚಿತ್ರದುರ್ಗದ ತಾಲ್ಲೂಕ್ ಅಮಲ್ದಾರ್ ಮೇ॥ ಸಿ. ಮಾಚಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು

ತುಮಕೂರ್ ಪೊಲೀಸ್ ಸೂಪರಿಂಟೆಂಡೆಂಟ್ ಮೆ॥ ವೈ ವಿ. ಕೃಷ್ಣಮೂರ್ತಿಯವರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿಮಾಡಿದೆ.

ಹೆಗ್ಗಡದೇವನಕೋಟೆ ತಾಲ್ಲೂಕ್ ಅಮಲ್ದಾರ್ ಮೇ॥ ಬಿ ರಂಗರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶಿರಸ್ತೇದಾರ್ ಎ. ಎ. ನರಸಿಂಹಾಚಾರ್ರು ಆ ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಬೆಂಗಳೂರು ಸಬ್ ಡಿವಿಜನ್ ಆಫಿಸರ್ ಮೆ॥ ಸಿ. ರಾಮರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳೂ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೆ॥ ಟಿ. ರಾಯಲು ಚೆಟ್ಟಿಯವರು ಬೆಂಗಳೂರು ಸಬ್ ಡಿವಿಜನ್ ಛಾರ್ಜನ್ನೂ ಮೆ॥ ಎನ್ ಮಾಧವರಾಯರು ಬೆಂಗಳೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನೂ ವಹಿಸಿಗತಕ್ಕದ್ದು.

ಮೂಡಿಗೆರೆ ತಾಲ್ಲೂಕ್ ಅಮಲ್ದಾರ್ ಮೆ॥ ಕೆ ಕೇಶವಾಚಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕಡೂರು ಪೊಲೀಸ್ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರ್ ಸಿ. ರಾಮಚಂದ್ರರಾಯರು ಮೂಡಿಗೆರೆಯ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು

ಕುಣಿಗಲು ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ॥ ಎಸ್. ಶ್ರೀನಿವಾಸೈಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಇವರ ಗೈರುಹಾಜರಿಯಲ್ಲಿ ಶಿರಸ್ತೇದಾರ್ರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಅ॥ ಕಮಿಷನರ್ ಮೆ॥ ವೈ ವಿ ಕೃಷ್ಣಮೂರ್ತಿಯವರನ್ನು ಕಳೆದ ನವಂಬರ್ ತಾ. ೨೭ರಿಂದ ೨ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗವರ್ಗಿ ಹುಕುಂ ಮಾಡಿದೆ—ಮೆ॥ ಸಿ. ಗೋಪಾಲಚಾರ್ರು ತಿಪ್ಪೂರಿನಿಂದ ಮಾಲೂರಿಗೆ, ಮೆ॥ ಕೆ. ಕೆ ವೆಂಕಟಸ್ವಾಮಿ ಐಯ್ಯರವರು ಮಾಲೂರಿನಿಂದ ಮಳವಳ್ಳಿಗೆ ಮಳವಳ್ಳಿ ಆಕ್ಟಿಂಗ್ ಅಮಲ್ದಾರ್ ಮೆ॥ ಕೆ ನೇಜಾಂಶೈಯಂಗಾರ್ರು ತಮ್ಮ ಖಾಯಂ ಕೆಲಸಕ್ಕೆ ವಾಪಸು ಹೋಗತಕ್ಕದ್ದು.

ಕೋಲಾರ್ ಡಿವಿಜನ್ ಅ॥ ಇಂಜನಿಯರ್ ಮೆ॥ ಎನ್. ರಾಮರಾಯರಿಗೆ ಕೊಟ್ಟಿರುವ ಎರಡು ತಿಂಗಳ ಕಾಯಿಲೆ ರಜವನ್ನು ಇನ್ನೂ ಮೂರು ತಿಂಗಳಿಗೆ ಜಾಸ್ತಿ ಮಾಡಿದೆ.

ರಾಜಧಾನಿಯ ಪ್ರಜೆಗಳು ಗಮನಿಸತಕ್ಕ ವಿಷಯವು.

ಮೈಸೂರು ಪಟ್ಟಣದಲ್ಲಿ ಈಚೆಗೆ ಅನುಮಾನಾಸ್ಪದವಾದ ಕಾಲರಾದಿಂದ ಕೆಲವು ಮರಣಗಳಾಗಿವೆ ಈ ರೋಗವು ಹೆಚ್ಚುವ ಸೂಚನೆಯು ತೋರುತ್ತಲಿದೆ. ಬೇಸಿಗೇ ಕಾಲವಾದ್ದರಿಂದಲೂ ಶುದ್ಧವಾದ ನೀರಿಗೆ ಅವಕಾಶವು ಕಡಮೆಯಾಗಿರುವದರಿಂದಲೂ ಈ ರೋಗವು ಹೆಚ್ಚಬಹುದೆಂದು ತೋರುತ್ತದೆ ಈ ರೀತಿಯಾಗಿ ಪ್ರಾಪ್ತವಾಗಬಹುದಾಗಿರುವ ಈ ಅಪಾಯವನ್ನು ತಪ್ಪಿಸಲಿಕ್ಕೆ ಮೊದಲೇ ಎಚ್ಚರಿಕೆಯಾಗಿರುವುದು ಆವಶ್ಯಕವಾದದ್ದರಿಂದ ತಿಳವಳಿಕೆಯುಳ್ಳ ಪುರನಿವಾಸಿಗಳು ಈ ಅಪಾಯವನ್ನು ತಪ್ಪಿಸಿಕೊಳ್ಳಬೇಕಾಗಿದೆ.

ಕಾಯಿಸುವ ನೀರನ್ನು ೧೦, ೨೦ ನಿಮಿಷಗಳ ವರೆಗೂ ಕಾಯಿಸಿ ಚೆನ್ನಾಗಿ ತೊಳೆಯಲ್ಪಟ್ಟ ಪಾತ್ರೆಯಲ್ಲಿ ಮುಚ್ಚಿಟ್ಟು ಉಪಯೋಗಿಸಿಕೊಳ್ಳಬೇಕು ಪಾತ್ರೆಗಳನ್ನು ತೊಳೆಯುವುದಕ್ಕೂ, ಬಾಯಿ ಮುಕ್ಕಳಿಸುವುದಕ್ಕೂ ಮತ್ತು ಸ್ನಾನಕ್ಕೂ ಅಶುದ್ಧವಾದ ಯಾವ ನೀರನ್ನೂ ಉಪಯೋಗಿಸಬಾರದು ಹಾಲನ್ನು ಉಪಯೋಗಿಸುವುದಕ್ಕೆ ಮುಂಚೆ ಚೆನ್ನಾಗಿ ಕಾಯಿಸಬೇಕು ಏಕೆಂದರೆ ಹಾಲಿನವರು ಹಾಲಿಗೆ ನೀರನ್ನು ಮಿಶ್ರಮಾಡುವ ಸಂಭವವುಂಟು ಬೇಯಿಸಲ್ಪಡದೇ ಇರತಕ್ಕ ಕಾಯಿ ಪಲ್ಯಗಳನ್ನು ತಿನ್ನಬಾರದು ಅಪಕ್ವವಾದ ಅಥವಾ ಹೆಚ್ಚಾಗಿ ಪಕ್ವವಾದ ಹಣ್ಣುಗಳನ್ನಾಗಲೀ, ತಂಗಳು ಅನ್ನ ಮೊದಲಾದ ಪದಾರ್ಥಗಳನ್ನಾಗಲೀ ತಿನ್ನಬಾರದು ತಿನ್ನುವ ಸಾಮಾನುಗಳನ್ನು ನಿರ್ಮಲವಾಗಿ ತೊಳೆಯಲ್ಪಟ್ಟ ಪಾತ್ರೆಯಲ್ಲಿಟ್ಟು ಅದನ್ನು ಮುಚ್ಚಿಡಬೇಕು ಮೊಸರು ಅಥವಾ ಮಜ್ಜಿಗೆ ಹಾಕತಕ್ಕ ಪಾತ್ರೆಯನ್ನು ಚೆನ್ನಾಗಿ ಬಿಸಿನೀರಿನಿಂದ ತೊಳೆದು, ಅದರಲ್ಲಿ ಮೊಸರು ಅಥವಾ ಮಜ್ಜಿಗೆಯನ್ನು ಇಡಬೇಕು. ಮೊಸರನ್ನಾಗಲಿ ಮಜ್ಜಿಗೆಯನ್ನಾಗಲಿ ಆ ಕಾಲದಲ್ಲಿ ಆವಶ್ಯಕವಾಗಿ ಉಪಯೋಗಿಸಬೇಕು ಆದರೆ ಇಪ್ಪತ್ತು ನಾಲ್ಕು ಗಂಟೆಗಳಿಗಿಂತಲೂ ಹೆಚ್ಚಾಗಿಡಲ್ಪಟ್ಟ ಮಜ್ಜಿಗೆ ಅಥವಾ ಮೊಸರನ್ನು ಉಪಯೋಗಿಸಬಾರದು.

ವ್ಯವಸಾಯಕ್ಕೆ ಸಂಬಂಧಿಸುವ ವಿಷಯಗಳು

ವಿವಿಧ ವೃತ್ತಾಂತಗಳು

೧ ಇಂಡಿಯಾ ದೇಶದಲ್ಲಿ ದನಗಳು ಎಳೇ ಜೋಳವನ್ನು ತಿಂದು ಅನೇಕವಾಗಿ ಸೊಕ್ಕಿ ಸಾಯುತ್ತವೆ ಡಾಕ್ಟರ್ ಆವೇರಿಯವರು ಈ ವಿಚಾರದಲ್ಲಿ ಒಂದು ಸುಲಭವಾದ ಪರಿಹಾರವನ್ನು ಕಂಡುಹಿಡಿದಿರುತ್ತಾರೆ. ಅದೇನೆಂದರೆ, ಜೋಳದ ಸಪ್ಪೆಯನ್ನು ತಿಂದು ಸೊಕ್ಕಿರುವ ಜಾನುವಾರು ಇನ್ನೂ ಇಲಾಜು ಹೊಂದುವ ಸ್ಥಿತಿಯಲ್ಲಿದ್ದರೆ ಅದಕ್ಕೆ ಕಾಕಂಬಿಯನ್ನು ಕುಡಿಸಬೇಕು, ಅಥವಾ, ಹೆಚ್ಚಾಗಿ ಹಾಲನ್ನು ಕುಡಿಸಬೇಕು ಹೀಗೆ ಮಾಡುವದರಿಂದ ದನವು ಬದುಕಿಕೊಳ್ಳುವದಾಗಿ ಅಜಮಾಯಿಷಿಗಳಿಂದ ಕಂಡುಬಂದಿರುತ್ತೆ.

೨. ಎಲೆಗಳನ್ನು ಗೊಬ್ಬರವನ್ನಾಗಿ ಉಪಯೋಗಿಸುವದರಿಂದ ಬಹಳ ಅನುಕೂಲವುಂಟು ಮಣ್ಣು ಹುಳ ಮುಂತಾದ ಪ್ರಾಣಿಗಳು ಈ ಎಲೆಗಳನ್ನು ತಿಂದು ಜೀರ್ಣಿಸುತ್ತವೆ. ಈ ಹುಳುಗಳು ಮಣ್ಣಿನಲ್ಲಿ ಚಲಿಸುವದರಿಂದ ನೆಲವು ತೂತುತೂತಾಗಿಯೂ ಪುಡಿಪುಡಿಯಾಗಿಯೂ ಮೇಲ್ಗಡೆಯಲ್ಲಿಯೇ ಪುಷ್ಟಿಕರವಾದ ಧಾತು ಪದಾರ್ಥದಿಂದ ಕೂಡಿದ್ದಾಗಿಯೂ ಆಗುತ್ತದೆ ಇದೂ ಅಲ್ಲದೆ ಒಣಗಿದ ಎಲೆಗಳು ಅಂತರಿಕ್ಷದಲ್ಲಿರುವ ನೈಟ್ರೊಜನ್ ಎಂಬ ವಾಯುವನ್ನು ಆಕರ್ಷಿಸಿ, ಎಕರೆ ಒಂದಕ್ಕೆ ಸಾಲೀಯಾನಾ ೧೨ರಿಂದ ೨೦ ಪೌಂಡು ತೂಕದಷ್ಟು ಈ ವಾಯುವನ್ನು ಪೈರುಗಳ ಉಪಯೋಗದ ಬಗ್ಗೆ ಒದಗಿಸುತ್ತವೆ.

೩. ೧೨,೦೦೦ ಪೌಂಡು 'ಬನಿ' ಎಂಬ ಹತ್ತೀ ಬೀಜಗಳೂ ೭,೦೦೦ ಪೌಂಡು ಜಾರ್ಜಿಯಾ ದೇಶದ ಹತ್ತೀ ಬೀಜಗಳೂ ಮಾರಾಟಕ್ಕೆ ಸಿದ್ಧವಾಗಿವೆ ಎಂದು ಸೆಂಟ್ರಲ್ ಪ್ರಾವಿನ್ಸಸ್ ವ್ಯವಸಾಯ ಇಲಾಖೆಯವರು ಪ್ರಕಟಪಡಿಸಿರುತ್ತಾರೆ. ಈ ಬೀಜವನ್ನು ಸರ್ಕಾರಿ ಫಾರಂಗಳಲ್ಲಿ ಸರಿಯಾದ ಮೇಲುಸ್ತುವಾರಿಯಿಂದ ಬೆಳೆದಿರುತ್ತಾರೆ. ಈ ಬೀಜಗಳು ೨-೩ನೇ ದಫೆ ಬಿಡಿಸಿದ ಹತ್ತಿಯಿಂದ ತೆಗೆಯಲ್ಪಟ್ಟವಾಗಿರುತ್ತವೆ. ಮತ್ತು ಹತ್ತಿಯನ್ನು ರಾಟೆಯಿಂದ ಮೆಲ್ಲಗೆ ಬಿಡಿಸಿರುವದರಿಂದ ಬೀಜಕ್ಕೆ ಜಖಂ ಏನೂ ಆಗಿರುವದಿಲ್ಲ ಬೀಜವು ಚೆನ್ನಾಗಿ ಮೊಳೆಯುವ ಖಾತರಿ ಇರುವದಾಗಿ ತಿಳಿದುಬರುವದು ಮತ್ತು ಪೇಟೆ ಧಾರಣೆಗೇನೆ ಮಾರಲ್ಪಡುತ್ತವೆ ಬೀಜವನ್ನು ತರಿಸಲಪೇಕ್ಷಿಸುವವರು ಅಕೋಲಾ ಅಥವಾ ನಾಗಪುರದ ಎಕ್ಸ್‌ಪೆರಿಮೆಂಟಲ್ ಫಾರಂಗಳ ಸೂಪರಿಂಟೆಂಡೆಂಟರುಗಳಿಗೆ ಬರೆದು ತರಿಸಿಕೊಳ್ಳತಕ್ಕದ್ದು.

ಯಲಹಂಕದಲ್ಲಿ ಪ್ಲೇಗ್ ಹ್ಯಾಗೆ ನಿಂತಿತು ?

ಬೆಂಗಳೂರು ಡಿಸ್ಟ್ರಿಕ್ಟ್ ೨ ನೇ ಕ್ಲಾಸ್ ಆನರರಿ ಸಬ್ ಅ|| ಸರ್ಜನರಾಗಿಯೂ ಜನರಿಗೆ ಪ್ಲೇಗ್ ಸಿಡುಬನ್ನು ಹಾಕುವುದಕ್ಕಾಗಿ ನೇಮಿಸಲ್ಪಟ್ಟವರಾಗಿಯೂ ಇರುವ ಮೆ|| ಬಿ ಎಸ್. ರಾಮಚಂದ್ರೈಯರ್ ಯವರು ಬರೆಯುವುದೇನೆಂದರೆ —

ಕಳೆದ ಡಿಸೆಂಬರ್ ಮಾಹೆ ಲಾಗಾಯತು ಯಲಹಂಕವೆಂಬ ಸ್ಥಳದಲ್ಲಿ ಪ್ಲೇಗಿನ ಹಾವಳಿ ಹೇಳಲು ಸಾಧ್ಯವೇ ಇರಲಿಲ್ಲ ನೂರಾರು ಜನರು ಈ ಜಾಡ್ಯದಲ್ಲಿ ಸತ್ತಿರುತ್ತಾರೆ ಮೊದಲು ಮೊದಲು ಊರು ಬಿಟ್ಟು, ಊರೊಳಗೆಯೇ ಬಾರದೆ ಇದ್ದವರ ಪೈಕಿ ಅನೇಕರು ಪ್ಲೇಗಿಗೆ ತಪ್ಪಿಸಿಕೊಂಡು ಸೌಖ್ಯವಾಗಿದ್ದರು. ಆದರೆ ಅನೇಕ ಅನಿವಾರ್ಯಗಳಿಂದ ಊರು ಬಿಡದೆ ಇದ್ದವರು ಪ್ಲೇಗಿನ ಬಾಯಿಗೆ ತುತ್ತಾಗಿ, ಹೆಂಡರು ಮಕ್ಕಳುಗಳನ್ನೂ ತಂದೆತಾಯಿಗಳನ್ನೂ ಕಳೆದುಕೊಂಡರು. ಹೀಗಿರುತ್ತಾ ಸರಕಾರಕ್ಕೆ ಬಹಳ ವ್ಯಥೆಯುಂಟಾಗಿ ಇನಾಕ್ಯುಲೇಷನ್ ಆದರೂ ಮಾಡಿ ನೋಡೋಣವೆಂಬುದರ ಮೇಲೆ ನನಗೆ ಹುಕುಂ ಕೊಟ್ಟು ಕಳುಹಿಸಿದರು ನಾನೂ ಬೆಂಗಳೂರು ತಾಲ್ಲೂಕು ಅಮಲ್ದಾರ್ ಮೆ|| ಜೇಸ್ ಸಾಹೇಬರೂ ಹೋಗಿ ಆ ಸ್ಥಳದಲ್ಲಿ ಮೊಕ್ಕಾಂ ಮಾಡಿ, ಅಲ್ಲಿರತಕ್ಕ ದೊಡ್ಡ ಮನುಷ್ಯರ ಮತ್ತು ಮ್ಯುನಿಸಿಪಲ್ ಮೆಂಬರುಗಳ ಸಹಾಯದಿಂದ ಅನೇಕರಿಗೆ ಇನಾಕ್ಯುಲೇಷನ್ ಮಾಡಲಾಯಿತು ಇದರಲ್ಲಿ ಮುಖ್ಯ ಅಂಶವೇನೆಂದರೆ, ೫ರೊಳಗೆ ಇರುವವರಿಗೆ ಮಾತ್ರ ಬಹಳ ತರದೂದಿನಿಂದ ಇನಾಕ್ಯುಲೇಷನ್ ಮಾಡುವುದೇ ನಮ್ಮ ಕರ್ತವ್ಯವಾಗಿತ್ತು. ನಾವು ಅಲ್ಲಿಗೆ ಹೋದಾಗ ಪ್ಲೇಗ್ ಉಪದ್ರವು ಪರ್ಜಾಯವರನ್ನು ಬಿಡದೆ ಅವರನ್ನೇ ಆವರಿಸಿಕೊಂಡಿತ್ತು ಅಗ ಅವರೆಲ್ಲರಿಗೂ ಇನಾಕ್ಯುಲೇಷನ್ ಮಾಡಲು ೧೦—೧೫ ದಿವಸಗಳಿಂದಲೂ, ಪ್ಲೇಗ್ ತಲೆದೋರಲಿಲ್ಲ ಇದರಲ್ಲಿ ಒಂದು ನನಗೆ ಕಂಡ ಕಂಡ ಹಾಗೆ ಇನಾಕ್ಯುಲೇಷನ್ ಗುಣವು ತಿಳಿಯಬಂದಿತು ಅಲ್ಲಿನ ಡಾಕ್ಟರ ಮನೆಯಲ್ಲಿ ಒಂದು ದಿವಸ ಇಲಿ ಸತ್ತುಬಿದ್ದಿತ್ತು. ಅವರು ಬಹಳ ಭೀತರಾಗಿ ನನ್ನಲ್ಲಿ ಮನೆ ಬಿಡಬೇಕೇ ಅಥವ ಬೇಡವೇ ಎಂಬದಾಗಿ ವಿಚಾರ ಮಾಡಿದರು ಆದರೆ ಅವರ ಮನೆಯಲ್ಲಿ ಹೆಂಗಸರೂ, ಮಕ್ಕಳೂ ಸಹಾ ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದದ್ದರಿಂದ ಅವರನ್ನು ಮನೇ ಬಿಡಬೇಡವೆಂದು ಹೇಳಿದೆನು ಈಚೆಗೆ ಇನ್ನೊಂದು ಸಲ ನಾನು ಅಲ್ಲಿಗೆ ಹೋಗಿದ್ದಾಗ ಅವರ ಮನೆಯೊಳಗೆ ಮತ್ತೊಂದು ಇಲಿ ಸತ್ತದ್ದಾಗಿ ತಿಳುಹಿಸಿದರು ಆಗಲೂ ಮೇಲೆ ಹೇಳಿದಂತೆಯೇ ಹೇಳಿದೆನು. ಅವರ ಮನೆಯಲ್ಲಿ ಇದುವರಿಗೂ ಎಲ್ಲರೂ ಸೌಖ್ಯವಾಗಿರುತ್ತಾರೆ. ಇನಾಕ್ಯುಲೇಷನ್ ಗುಣಾತಿಶಯದ ವಿಷಯವಾಗಿ ಇದಕ್ಕಿಂತಲೂ ಇನ್ಯಾವ ದೃಷ್ಟಾಂತ ಬೇಕಾಗಿದೆ ?

ಮೈಸೂರು ಸರ್ಕಾರಿ ಹುಕುಮುಗಳು.

ರಾಂಪುರದಲ್ಲಿ ನಡೆದ ದನಗಳ ಜಾತ್ರೆಯು.

ಶಿವಮೊಗ್ಗೆಯ ಡೆಪ್ಟಿ ಕಮಿಷನರು ಹೊನ್ನಾಳಿ ತಾಲ್ಲೂಕಿಗೆ ಸೇರಿದ ರಾಂಪುರದಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ಹಾಲಸ್ವಾಮಿ ಜಾತ್ರೆ ಕಾಲದಲ್ಲಿ ನಡೆದ ದನಗಳ ಪ್ರದರ್ಶನಕ್ಕೆ ಹೋಗಿ ಅದರ ವಿವರವನ್ನು ಗವರ್ನಮೆಂಟಿಗೆ ರಿಪೋರ್ಟು ಮಾಡಿದರು ಆ ರಿಪೋರ್ಟಿನಲ್ಲಿ ಕಂಡ ಮುಖ್ಯ ಭಾಗಗಳೇನೆಂದರೆ—ಈ ಜಾತ್ರೆಯಲ್ಲಿ ದನಗಳ ಪ್ರದರ್ಶನ ನಡೆಯುವುದು ರೈತರೂ ವ್ಯವಸಾಯಗಾರರೂ ವಿಶೇಷವಾಗಿ ಈ ಜಾತ್ರೆಗೆ ಬರುತ್ತಾರೆ ದಕ್ಷಿಣ ಕನ್ನಡದಿಂದಲೂ ಬಹು ಜನ ವ್ಯವಸಾಯಗಾರರು ಗೋವುಗಳನ್ನು ಕೊಂಡುಕೊಳ್ಳುವುದಕ್ಕಾಗಿ ಬರುವುದೂ ಹೆಚ್ಚಾಗಿರುತ್ತದೆ. ಈ ಸಲ ಈ ಜಾತ್ರೆಯಲ್ಲಿ ಸುಮಾರು ೧೦,೦೦೦ ದನಗಳು ಬಂದಿದ್ದವೆಂದು ಹೇಳಬಹುದು ಆರು ಜನ ಪಟೇಲರುಗಳನ್ನು ಪ್ರದರ್ಶನಕ್ಕೆ ಲಾಯಖಾದ ರಾಸುಗಳನ್ನು ಚುನಾಯಿಸುವಂತೆ ನೇಮಿಸಿದ್ದರಲ್ಲಿ ಅವರು ೨೫ ದನಗಳನ್ನು ಉತ್ಕೃಷ್ಟವಾದವುಗಳೆಂದು ಹೇಳಿ ಆರಿಸಿ, ಒಂದು ಪ್ರತ್ಯೇಕವಾದ ಸ್ಥಳದಲ್ಲಿ ನಿಲ್ಲಿಸಿದರು. ಎರಡು ಜೋಡಿ ಉಳುವ ಎತ್ತುಗಳಿಗೆ ರೂ. ೨೦, ರೂ ೧೦ ರಂತೆ ಎರಡು ಬಹುಮಾನಗಳೂ, ಎರಡು ಜೋಡಿ ಗಾಡಿ ಎತ್ತುಗಳಿಗೆ ರೂ ೨೦, ರೂ ೧೦ ರಂತೆ ಎರಡು ಬಹುಮಾನಗಳೂ, ಒಂದು ಬೀಜದ ಹೋರಿಗೆ ೧೫ ರೂಪಾಯಿ ಬಹುಮಾನವೂ ಸರ್ಟಿಫಿಕೇಟುಗಳೂ ಕೊಡಲ್ಪಟ್ಟವು ಬಹುಮಾನಗಳನ್ನು ಪಡೆದ ರಾಸುಗಳ ಮಾಲೀಕರೆಲ್ಲ ಶಿವಮೊಗ್ಗೆ ಮತ್ತು ಚಿತ್ರದುರ್ಗದ ನಿವಾಸಿಗಳಾಗಿರುತ್ತಾರೆ ಮತ್ತು ಆ ರಾಸುಗಳ ಫೋಟೋ ತೆಗೆದಿದಾಗಿದೆ ಗ್ರಾಮಾಂತರಗಳಲ್ಲಿ ದನಗಳ ಜಾತಿಯನ್ನೂ ಸಂಖ್ಯೆಯನ್ನೂ ಅಭಿವೃದ್ಧಿ ಮಾಡಿಕೊಳ್ಳುವ ವಿಷಯದಲ್ಲೂ ಗೋವುಗಳ ಪ್ರದರ್ಶನಗಳನ್ನು ನಡಿಸುವುದರಿಂದಾಗುವ ಪ್ರಯೋಜನಗಳ ವಿಷಯದಲ್ಲೂ (ಡೆಪ್ಟಿ ಕಮಿಷನರಿಂದ) ಕನ್ನಡದಲ್ಲಿ ಉಪನ್ಯಾಸಮಾಡಲ್ಪಟ್ಟಿತು. ಹೊನ್ನಾಳಿ ತಾಲ್ಲೂಕು ಗೊಲ್ಲರ ಹಳ್ಳಿಯ ಹನುಮಪ್ಪನವರ ಒಂದು ಜೋಡಿ ಎತ್ತು ೩೦೦ ರೂಪಾಯಿಗೆ ವಿಕ್ರಯವಾಯಿತು ಒಂದು ಬೀಜದ ಹೋರಿಯನ್ನು ೪೦೦ ರೂಪಾಯಿ ತನಕ ಕೇಳಿದರೂ ಮಾಲೀಕನು ಕೊಡದೆ ಹೋದನು ಇದಲ್ಲದೆ ಹೋದ ವರುಷ ಅನೇಕಾನೇಕ ದನಗಳು ಮೃತಪಟ್ಟದ್ದರಿಂದ ಈ ಸಲ ರಾಸುಗಳಿಗೆ ಒಳ್ಳೇ ಕ್ರಯ ಕೊಟ್ಟು ಅನೇಕ ಜನರು ಕೊಂಡುಕೊಳ್ಳುವಂತಾಯಿತು. ಹಾಲು ಕರೆಯುವ ಹಸು ಅಥವಾ ಎಮ್ಮೆಗಳು ಈ ಪ್ರದರ್ಶನಕ್ಕೆ ಬಂದಿರಲಿಲ್ಲ. ಗೋವುಗಳ ರೋಗಚಿಕಿತ್ಸೆಯ ಇನ್ಸ್‌ಪೆಕ್ಟರಿಗೆ ಮೊದಲೇ ತಿಳಿಸಿದ್ದರೂ ಅವರು ಈ ಪ್ರದರ್ಶನಕ್ಕೆ ಬಾರದೆ ಹೋದರು

ಇದರ ಮೇಲೆ ಗವರ್ನಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ—ಪ್ರದರ್ಶನದಲ್ಲಿ ತೆಗೆದ ದನಗಳ ಫೋಟೋಗಳನ್ನು ಇನ್ನು ಮೇಲೆ ಗವರ್ನಮೆಂಟಿಗೆ ಕಳುಹಿಸಿ, ಅವುಗಳ ಹಿಂದೆಯೇ ಸಂಕ್ಷೇಪವಾದ ವಿವರವನ್ನು ಬರೆದು ತಿಳಿಸಬೇಕು

ಜಾಗ್ತಿಕಲ್ ಫಾರೆಸ್ಟು

ಶಿವಮೊಗ್ಗಾ ತಾಲ್ಲೂಕು ಬಿದರೆ ಹೋಬಳಿಯಲ್ಲಿ ೧,೩೯೫ ಎಕರೆ ಜಂಗಲನ್ನು ಸರ್ಕಾರದವರು ಪ್ರತ್ಯೇಕ ಮಾಡಿ, ರೈತ ಪ್ರಜೆಗಳು ಉಪಯೋಗಿಸದಂತೆ ರಿಸರ್ವ್ ಮಾಡಬೇಕೆಂದು ಫಾರೆಸ್ಟ್ ಕನ್ಸರ್ವೇಟರವರು ಗವರ್ನಮೆಂಟಿಗೆ ರಿಪೋರ್ಟು ಮಾಡಿದರು ಆ ಬ್ಲಾಕಿನ ಸುತ್ತಮುತ್ತಲೂ ಇರುವ ಐದು ಗ್ರಾಮಗಳ ರೈತ ಪ್ರಜೆಗಳಿಗೆ ವ್ಯವಸಾಯದ ಮುಟ್ಟುಗಳಿಗೂ ಸೌದೆಗೂ ಅನಾನುಕೂಲವಾಗದೆಯೂ ಗೋವುಗಳ ಮೇವಿಗೆ ತೊಂದರೆಯಿಲ್ಲದೆಯೂ ಹೋಗುವ ಪಕ್ಷಕ್ಕೆ ಆ ಬ್ಲಾಕನ್ನು ರಿಸರ್ವ್ ಮಾಡಬಹುದು ಎಂದು ರೆವಿನ್ಯೂ ಕಮಿಷನರೂ ಶಿವಮೊಗ್ಗೆಯ ಡೆಪ್ಟಿ ಕಮಿಷನರೂ ತಿಳಿಸಿದರು ಮತ್ತು ಆ ಗ್ರಾಮಗಳ ರೈತರಿಗೆ ವ್ಯವಸಾಯದ ಮುಟ್ಟುಗಳನ್ನು ಮಾತ್ರ ತಂದುಕೊಳ್ಳುವಂತೆ ಅವಕಾಶ ಕೊಡಬೇಕೆಂದು ರೆವಿನ್ಯೂ ಕಮಿಷನರು ಶಿಫಾರಸು ಮಾಡಿದರು. ಆದರೆ ಆ ಪ್ರದೇಶದಲ್ಲಿ ತೇಗದ ಮರಗಳು ವಿಶೇಷವಾಗಿ ಬೆಳೆಯುತ್ತಲಿರುವುದರಿಂದ ರೈತರಿಗೆ ಆ ರೀತಿ ಅವಕಾಶ ಕೊಡುವುದು ಸರ್ಕಾರದವರ ಉದ್ದೇಶವನ್ನೇ ಹಾಳುಮಾಡುತ್ತದೆ, ಮತ್ತು ಆ ಐದು ಗ್ರಾಮಗಳ ಉಪಯೋಗಕ್ಕಾಗಿ ಈಗ ಬಿಟ್ಟುಕೊಟ್ಟಿರುವ ೧,೨೪೩ ಎಕರೆ ಜಂಗಲು ಅವರ ಎಲ್ಲಾ ಕೆಲಸಗಳಿಗೂ ಸಾಕಾಗುವುದೆಂದು ಹೇಳಬಹುದಾಗಿದೆ ಅದಕಾರಣ ಕನ್ಸರ್ವೇಟರವರು ಬರೆದಿರುವ ಪ್ರಕಾರ ಆ ಬ್ಲಾಕನ್ನು ರಿಸರ್ವ್ ಫಾರೆಸ್ಟಾಗಿ ಪರಿಗಣಿಸತಕ್ಕದ್ದು.

ನಾಲೆಗಳ ಮೇಲೆ ಬೆಳೆಯುವ ಹುಲ್ಲಿನ ವಿಚಾರವು

ಕಳೆದ ೧೯೦೩ನೇ ವರುಷದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ನಾಲೆಗಳ ತೆವರಿ ಅಥವಾ ಏರಿಯ ಮೇಲೆ ಬೆಳೆಯುವಂಥಾ ಹುಲ್ಲನ್ನು ದನಗಳ ಮೇವಿಗಾಗಿ ಬಿಕರಿ ಮಾಡುವ ಪದ್ಧತಿಯನ್ನು ವಜಾಮಾಡಬೇಕೆಂತಲೂ, ಅಜೂಬಾಜೂ ಗ್ರಾಮಗಳ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವಂತೆ ರೈತರಿಗೆ ರಿಯಾಯತಿ ತೋರಿಸಬೇಕೆಂತಲೂ ಕೇಳಿಕೊಂಡರು ಆಗ ಗವರ್ನಮೆಂಟಿನವರು ತೆವರಿಗಳ ಮೇಲೆ ದನಗಳನ್ನು ಬಿಟ್ಟು ಮೇಯಿಸುವಂತೆ ರೈತರಿಗೆ ಅವಕಾಶ ಕೊಡುವುದು ತರವಲ್ಲವೆಂತಲೂ, ತೆವರಿಗಳ ಹುಲ್ಲನ್ನು ಕತ್ತರಿಸಿ ತೆಗೆದುಕೊಂಡು ಹೋಗುವ ಭಾಗದಲ್ಲಿ ಹುಕುಂ ಕೊಡುತ್ತೇವೆಂತಲೂ ಜವಾಬು ಕೊಟ್ಟರು ಅದರಂತೆಯೇ ೧೯೦೩ನೇ ಏಪ್ರಿಲ್ ೯ನೇ ತಾರೀಖಿನ ಹುಕುಮು ಡೆಪ್ಟಿ ಕಮಿಷನರುಗಳಿಗೆಲ್ಲಾ ಕೊಡೋಣವಾಯಿತು. ಇದರ ಮೇಲೆ ಚೀಫ್ ಇಂಜನಿಯರವರು ಗವರ್ನಮೆಂಟಿನವರನ್ನು ಈ ಹುಲ್ಲು ಹರಾಜಿನ ಮೂಲಕ ಈಗ ವಿಕ್ರಯವಾಗುತ್ತಿದೆ. ರೈತರು ಮಾಫಿಯಾಗಿ ಹುಲ್ಲನ್ನು ಕತ್ತರಿಸಿ ತೆಗೆದುಕೊಂಡು ಹೋಗತಕ್ಕದ್ದೇ ಹ್ಯಾಗೆ ? ನಾಲೆಗಳ ತೆವರಿ ಏರಿಗಳ ಮೇಲೆ ಹತ್ತುವುದಕ್ಕೆ ರೈತರಿಗೆ ಅವಕಾಶ ಕೊಟ್ಟರೆ ಅವುಗಳಿಗೆ ಅಪಾಯ ಸಂಭವಿಸುತ್ತದೆ ಆದ್ದರಿಂದ ಈ ಭಾಗದಲ್ಲಿ ಖಂಡಿತವಾದ ಹುಕುಂ ಕೊಡಬೇಕು ಎಂದು ಕೇಳಿದರು

ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಆಚರಣೆ ಹ್ಯಾಗಿದೆ ಎಂದು ವಿಚಾರಿಸಿದ್ದರಲ್ಲಿ ಡೆಪ್ಟಿ ಕಮಿಷನರುಗಳಿಂದ ತಿಳಿದು ಬಂದಿರುವ ವಿವರವೇನೆಂದರೆ --ಕೆರೆ ಮತ್ತು ನಾಲೆಗಳ ಏರಿ ಅಥವಾ ತೆವರಿಗಳ ಮೇಲಿನ ಹುಲ್ಲನ್ನು ಬಿಕರಿ ಮಾಡುವ ಪದ್ಧತಿಯು ಮೈಸೂರು ಡಿಸ್ಟ್ರಿಕ್ಟ ವಿನಹಾ ಇನ್ನೆಲ್ಲೂ ಆಚರಣೆಯಲ್ಲಿಲ್ಲ ಕೋಲಾರ್ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಸಾಲಾಬಾದು ಕಾಮಗಾರಿ ಮಾಡತಕ್ಕಂಥಾ ರೈತರು ಹುಲ್ಲನ್ನು ಕೊಯಿದು ಮಾಫಿಯಾಗಿ ಸಾಗಿಸಿಕೊಳ್ಳುತ್ತಾರೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಆಚರಣೆಯು ಒಂದೇ ರೀತಿಯಾಗಿಲ್ಲ ಶಿವಮೊಗ್ಗಾ ಮತ್ತು ನಗರ್ ತಾಲ್ಲೂಕುಗಳೊಳಗೆ ರೈತರು ತೆವರಿಗಳ ಮೇಲೆ ದನಗಳನ್ನು ಬಿಟ್ಟು ಮೇಯಿಸುತ್ತಾರೆ ಕುಂಸಿ ಮತ್ತು ಸೊರಬದ ತಾಲ್ಲೂಕುಗಳಲ್ಲಿ ಈ ಹುಲ್ಲು ವರುಷಕ್ಕೊಮ್ಮೆ ಬಿಕರಿ ಆಗಿ ರೈತರು ಕತ್ತರಿಸಿ ಸಾಗಿಸಿಕೊಂಡು ಹೋಗುವುದೇ ಪದ್ಧತಿಯಾಗಿದೆ ಉಳಿದ ತಾಲ್ಲೂಕುಗಳಲ್ಲಿ ರೈತರು ಮಾಫಿಯಾಗಿ ಹುಲ್ಲನ್ನು ಕತ್ತರಿಸಿ ತೆಗೆದುಕೊಂಡು ಹೋಗುವರು ಕಡೂರ್ ಡಿಸ್ಟ್ರಿಕ್ಟಿನೊಳಗೆ ರೈತರು ಗೋಮಾಳಗಳಲ್ಲೇ ದನಗಳನ್ನು ಮೇಯಿಸಿಕೊಳ್ಳುತ್ತಾರಾದ್ದರಿಂದ ಕೆರೆ ಮತ್ತು ನಾಲೆ ಏರಿಗಳ ಹುಲ್ಲನ್ನು ಉಪಯೋಗಿಸುವುದಿಲ್ಲ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಅಂಥಾ ದೊಡ್ಡ ನಾಲೆಗಳೇ ಇರುವುದಿಲ್ಲ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಾದರೋ ರೈತರು ಯಾವ ಅಡ್ಡಿ ಆತಂಕವೂ ಇಲ್ಲದೆ ಬಿಟ್ಟಿಯಾಗಿ ತಮ್ಮ ದನಗಳನ್ನು ಏರಿಗಳ ಮೇಲೆ ಬಿಟ್ಟು ಮೇಯಿಸಿಕೊಳ್ಳುವರು

ಇದನ್ನೆಲ್ಲಾ ಪರಾಂಬರಿಸಿ ಗವರ್ನಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ—ಕೆರೆಗಳ ಸಾಲಾಬಾದು ಕಾಮಗಾರಿಯನ್ನು ಸರಿಯಾಗಿ ಮಾಡುವಂಥಾ ರೈತರು ಅವುಗಳ ಏರಿಯ ಹುಲ್ಲನ್ನು ಮಾಫಿಯಾಗಿ ಕತ್ತರಿಸಿ ಸಾಗಿಸಿಕೊಳ್ಳಬಹುದಾಗಿದೆ ನದಿಯ ನಾಲೆಗಳ ವಿಷಯದಲ್ಲಿ ಹೂಳು ತೆಗೆಯುವುದೂ, ಮಟ್ಟಿ ಕಾಮಗಾರಿ, ಮುಂತಾದ್ದೆಲ್ಲಾ ಸರ್ಕಾರದವರೇ ನಡಿಸುತ್ತಾರಾದ್ದರಿಂದ ಆ ನಾಲೆಗಳ ತೆವರಿ ಮೇಲಣ ಹುಲ್ಲನ್ನು ಸಾಲೀಯಾನ ಬಿಕರಿಮಾಡಿ, ಕೊಂಡುಕೊಂಡವರು ಅದನ್ನು ಕೊಯಿದು ಸಾಗಿಸುವಂತೆ ಆಚರಣೆಯನ್ನು ಇಡತಕ್ಕದ್ದು. ರೈತರು ಸಾಲಾಬಾದು ಕಾಮಗಾರಿ ಮಾಡಬೇಕಾಗಿರುವಂಥಾ ತೋಳು (ಬ್ರಾಂಚ್) ನಾಲೆ ಅಥವಾ ಸಣ್ಣ ಹೊಳೆ ನಾಲೆಗಳ ತೆವರಿ ಮೇಲಣ ಹುಲ್ಲನ್ನು ಆಯಾ ರೈತರೇ ಕತ್ತರಿಸಿ ಮಾಫಿಯಾಗಿ ಸಾಗಿಸಿಕೊಳ್ಳಬಹುದು ಏರಿ ಅಥವಾ ತೆವರಿಗಳ ಹುಲ್ಲನ್ನು ಕೊಯಿದುಕೊಳ್ಳೋಣದರಲ್ಲಿ ಯಾವ ಅಪಾಯವೂ ಸಂಭವಿಸಲಾರದೆಂದು ಗವರ್ನಮೆಂಟನವರು ಅಭಿಪ್ರಾಯಪಡುತ್ತಾರೆ ಆದರೆ ಹುಲ್ಲನ್ನು ಅಗೆದು ತೆಗೆದುಕೊಳ್ಳುವುದಕ್ಕಾಗಲಿ ಕೆತ್ತಿ ಕೊಡಿಸುವುದಕ್ಕಾಗಲಿ ಯಾರಿಗೂ ಅವಕಾಶ ಕೊಡದಂತೆ ನೋಡಿಕೊಳ್ಳಬೇಕಾಗಿದೆ

ಬಾಲಿಕಾ ಪಾಠಶಾಲೆಗಳ ಮೇಲ್ವಿಚಾರಣೆಯು.

ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರು ಸೂಚಿಸಿರುವ ಮೈಸೂರು ಮಹಾರಾಣೀರವರ ಕಾಲೇಜಿನ ಲೇಡಿ ಸೂಪರಿಂಟೆಂಡೆಂಟರೂ ಗರಲ್ ಸ್ಕೂಲುಗಳ ಕಮಿಟಿಗಳೂ ವಿದ್ಯಾಭ್ಯಾಸದ ಇಲಾಖಾ ಮುಖ್ಯ ಅಧಿಕಾರಿಯ ಕೈ ಕೆಳಗಿರಬೇಕು. ಇನ್ನು ಮುಂದೆ ಇವರು ನೇರಾ ಗವರ್ನಮೆಂಟಿಗೆ ಕಾಗದ ಪತ್ರಗಳನ್ನು ಕಳುಹಿಸದೆ ಇಲಾಖೆಯ ಮುಖ್ಯ ಉದ್ಯೋಗಸ್ಥರ ಮುಖಾಂತರ ಕಳುಹಿಸಬೇಕು ಬಾಲಿಕಾ ಪಾಠಶಾಲೆಗಳ ಮೇಲ್ವಿಚಾರಣೆಗೆ ಏರ್ಪಟ್ಟ ಕಮಿಟಿ ಮೆಂಬರುಗಳು ಸಲಹೆಗಳನ್ನು ಮಾತ್ರ ಕೊಡತಕ್ಕವರಾಗಿರೋಣದರಿಂದ ಇನ್ನು ಮುಂದೆ "ಬೋರ್ಡ್ ಆಫ್ ವಿಜಿಟರ್ಸ್" ಎಂದು ಅವರನ್ನು ಕರೆಯಲ್ಪಡತಕ್ಕದ್ದು. ಈ ಬೋರ್ಡಿನ ಮೆಂಬರುಗಳ ಅಧಿಕಾರ ಮೊದಲಾದದ್ದು ಏರ್ಪಟ್ಟನದೆಂದರೆ—

(೧) ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿರತಕ್ಕ ಬಾಲಿಕಾ ಪಾಠಶಾಲೆಗಳ ಮೇಲ್ವಿಚಾರಣೆಗೆ ಈಗಿನಂತೆ ಗವರ್ನಮೆಂಟನವರೇ ಬೋರ್ಡ್ ಮೆಂಬರುಗಳನ್ನು ನೇಮಿಸುವರು (೨) ಮಹಾರಾಣೀರವರ ಕಾಲೇಜಿನ ಕೆಲಸ ಕಾರ್ಯಗಳನ್ನು ಹೋಗಿ ಆಗಿಂದಾಗ್ಗೆ ನೋಡತಕ್ಕ ವಿಜಿಟರುಗಳ ಸಂಖ್ಯೆಯು ಆರಾಗಿರತಕ್ಕದ್ದು. ಈ ಆರು ಮಂದಿಯ ಪೈಕಿ ಕಡೇ ಪಕ್ಷ ಇಬ್ಬರಾದರೂ ವೈದಿಕ ಪಂಡಿತರಾಗಿರತಕ್ಕದ್ದು. ಈ ವಿಜಿಟರುಗಳು ಪೂರಾ ಪುರುಷ ಮೆಂಬರಾಗಿರಬೇಕು ಮತ್ತು ಸಾಧ್ಯವಾದ ಮಟ್ಟಿಗೂ ಅವರು ಮೈಸೂರು ಪುರವಾಸಿಗಳೇ ಆಗಿರಬೇಕು.

(೩) ಸಂಸ್ಥಾನದ ಉತ್ಪತ್ತಿಯಿಂದ ನಡಿಸಲ್ಪಡುವ ಪ್ರತಿ ಒಂದು ಬಾಲಿಕಾ ಪಾಠಶಾಲೆಗೂ ವಿಜಿಟರುಗಳ ಒಂದು ಬೋರ್ಡನ್ನು ನೇಮಿಸತಕ್ಕದ್ದು. ಮೈಸೂರು ಮೊದಲ್ಗೊಂಡ ಪಾಠಶಾಲೆಗಳಲ್ಲದೆ ಇತರ ಎಲ್ಲಾ ಬಾಲಿಕಾ ಪಾಠಶಾಲೆಗಳಿಗೂ ಮೆಂಬರುಗಳನ್ನು ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್‌ರವರೇ ನೇಮಿಸಬಹುದು. ಪ್ರತಿ ಪಾಠಶಾಲೆಗೂ ನೇಮಿಸಲ್ಪಡುವ ವಿಜಿಟರುಗಳು ೬ ಮಂದಿಗಿಂತ ಹೆಚ್ಚಾಗಾಗಲಿ, ಇಬ್ಬರಿಗಿಂತ ಕಡಿಮೆಯಾಗಾಗಲಿ ಇರಕೂಡದು. (೪) ಈ ವಿಜಿಟರುಗಳು ಸ್ಕೂಲಿನ ಅಭಿವೃದ್ಧಿಗೂ ಕ್ರಮಕ್ಕೂ ಸಹಕಾರಿಗಳಾದ ಸಲಹೆಗಳನ್ನು ಕೊಡುವುದು, ಆಗಿಂದಾಗ್ಗೆ ಸ್ಕೂಲನ್ನು ಪರೀಕ್ಷೆ ಮಾಡುವುದು, ಮತ್ತು ಸ್ತ್ರೀ ವಿದ್ಯಾಭ್ಯಾಸವನ್ನು ತಮ್ಮ ಕೈಲಾಗುವ ಮಟ್ಟಿಗೂ ಪ್ರೋತ್ಸಾಹ ಪಡಿಸುವುದು. (೫) ಬಾಲಿಕಾ ಪಾಠಶಾಲೆಯ ಮುಖ್ಯ ಉಪಾಧ್ಯಾಯನು ವಿಜಿಟರುಗಳು ಕೇಳುವಂಥಾ ವಿಚಾರಕ್ಕೆಲ್ಲಾ ಸರಿಯಾದ ಸಮಾಧಾನವನ್ನು ಹೇಳಿ, ಆ ಪಾಠಶಾಲೆಯ ಕಾರ್ಯಗಳಿಗೆ ಸಂಬಂಧಪಡುವ ವಿಚಾರಗಳನ್ನು ತಿಳಿಸಬೇಕು. (೬) ವಿಜಿಟರುಗಳು ತಮಗೆ ತೋರುವಂಥಾ ಅಭಿಪ್ರಾಯಗಳನ್ನು ಪಾಠಶಾಲೆಯ ಒಂದು ಪುಸ್ತಕದಲ್ಲಿ ಬರೆದಿಡತಕ್ಕದ್ದು (೭) ಇಂಥಾ ಅಭಿಪ್ರಾಯಗಳನ್ನು ಮಹಾರಾಣೀ ಕಾಲೇಜಿನ ಲೇಡಿ ಸೂಪರೆಂಟೆಂಡರು ತಿಂಗಳಿಗೊಂದಾವರ್ತಿ ಅಥವ ಅವಶ್ಯವಿದ್ದರೆ ಇನ್ನೂ ಮುಂಚೆಯೇ ಇನ್‌ಸ್ಪೆಕ್ಟರ್ ಜನರಲ್‌ರವರಿಗೂ ಇತರ ಬಾಲಿಕಾ ಪಾಠಶಾಲೆಗಳ ಹೆಡ್ ಮಾಸ್ಟರುಗಳು ಆಯಾ ಇನ್‌ಸ್ಪೆಕ್ಟರುಗಳಿಗೂ ರಿಪೋರ್ಟು ಮಾಡತಕ್ಕದ್ದು. (೮) ಮಹಾರಾಣೀರವರ ಕಾಲೇಜಿನ ವಿಜಿಟರುಗಳು ಹೊಸದಾಗಿ ಬಾಲಕಿಯರನ್ನು ಸೇರಿಸಿಕೊಳ್ಳುವುದು, ಇರತಕ್ಕವರನ್ನು ವಜಾ ಮಾಡುವುದು, ಈ ವಿಷಯಗಳನ್ನು ನಿರ್ಧರಿಸಬಹುದಾಗಿದೆ ಇವರು ಮೂರು ತಿಂಗಳಿಗೊಂದಾವರ್ತಿ ಅಥವಾ ಅವಶ್ಯ ಬಿದ್ದಾಗಲೆಲ್ಲಾ ಸಭೆ ಸೇರಿ, ಕಾಲೇಜಿನ ಅಭಿವೃದ್ಧಿಗೆ ವಿಷಯಗಳನ್ನು ಚರ್ಚಿಸಿ ತಮ್ಮ ಅಭಿಪ್ರಾಯವನ್ನು ಸೂಚಿಸಬಹುದು. ಸದ್ಯ ರಾಯ ಬಹದ್ದೂರ್ ಮೆ॥ ವಿ ನರಸಿಂಹಯ್ಯಂಗಾರ್ಯರೇ ಆ ಕಾಲೇಜಿನ ಆನರರಿ ಸೆಕ್ರೆಟರಿಯಾಗಿ ಇದ್ದುಕೊಂಡು ಕೆಲಸ ನಡಿಸತಕ್ಕದ್ದು.

ನಗುವದನ್ನು ಕುರಿತು.

ಸ್ವಲ್ಪವಾಗಿಯಾಗಲೀ ಹೆಚ್ಚಿಗೆಯಾಗಿಯಾಗಲೀ ಘಟ್ಟಿಯಾಗಿಯಾಗಲೀ ನಿಲ್ಲಕ್ಕೆಯಾಗಿಯಾಗಲೀ ನಗಾಡದಂಥವರು ಮನುಷ್ಯರಲ್ಲಿ ಯಾರಾದರೂ ಇರುವದಿಲ್ಲ. ಹಾಗಾದರೆ ನಗುವದೆಂದರೇನು ? ನಗೆ ಹುಟ್ಟುವದು ಹ್ಯಾಗೆ ? ನಗುವಾಗ ನಮ್ಮ ಮೋರೆಯ ಆಕಾರ ವಿಕಾರಗಳು ಹ್ಯಾಗಾಗುತ್ತವೆ ? ಎಂಬೀ ವಿಷಯಗಳನ್ನು ಕುರಿತು ಆಲೋಚನೆ ಮಾಡುವವರು ಎಷ್ಟುಮಂದಿ ? ತ್ರಿದೋಷಗಳ ಸಲವಾಗಿ ಪಿತ್ತವು ಹೆಚ್ಚಿಗೆ ಇರುವಂಥವರು ಹೀ-ಹೀ-ಹೀ ಎಂತಲೂ, ಶ್ಲೇಷ್ಮ (ಕಫ) ಹೆಚ್ಚಿಗೆ ಇರುವಂಥವರು ಹಾ-ಹಾ-ಹಾ ಎಂತಲೂ, ವಾತ ರೋಗಿಷ್ಟರು ಹೋ-ಹೋ-ಹೋ ಎಂತಲೂ ನಗಾಡುವರು. ನಾನು ಬರೇ ಸಂಕಲ್ಪನೆಯಿಂದ ಹೀಗೆ ಹೇಳುತ್ತೇನೆಂದು ನೆನಸಬೇಡಿರಿ. ಆಯುರ್ವೇದದಲ್ಲಿ ಪ್ರಖ್ಯಾತರಾದ ವೈದ್ಯಶಾಸ್ತ್ರಿಗಳು ಹೀಗೆ ಹೇಳಿದ್ದಾರೆ. ನಗುವದನ್ನು ಕುರಿತು ನನ್ನ ಅಭಿಪ್ರಾಯವನ್ನು ಕೇಳಬೇಕಾದರೆ ಒಳ್ಳೇ ಬುದ್ಧಿ ಇಲ್ಲದವರು ಹೀ-ಹೀ-ಹೀ ಎಂತಲೂ, ನಗುವದಕ್ಕೆ ತಿಳಿಯದವರು ಹೋ-ಹೋ-ಹೋ ಎಂತಲೂ ನಗುತ್ತಾರೆ. ನಾನಾದರೆ ಹಾ-ಹಾ-ಹಾ ಎಂತಲೇ ನಗುತ್ತೇನೆ. ನಗೆಯೆಂಬುದು ಆಲೋಚನಾ ಶಕ್ತಿಯಿಂದಲೇ ಹುಟ್ಟಿಬರುತ್ತದೆಂತಲೂ, ಅದು ಸಂತೋಷದ ಫಲವಾಗಿದೆಯೆಂತಲೂ ಗ್ರೀಸ್ ದೇಶದ ಒಬ್ಬ ವಿದ್ವಾಂಸನು ಹೇಳುತ್ತಾನೆ. ರೋಮ್ ಪಟ್ಟಣದಲ್ಲಿರುವ ಮತ್ತೊಬ್ಬ ವಿದ್ವಾಂಸನು ಆ ಅಭಿಪ್ರಾಯವನ್ನು ಖಂಡನೆಮಾಡುತ್ತಾನೆ. ಕಟ್ಟು ಹ್ಯಾಗೋ ಹಾಗೆಯೇ ನಗೆ ಸಹ ಸ್ವಲ್ಪ ಹೊತ್ತು ತನಕ ನಿಲ್ಲುವಂಥಾ ಒಂದು ತರದ ಹುಚ್ಚಾಟವಾಗಿದೆಯೆಂದ ಮತ್ತೊಬ್ಬ ವಿದ್ವಾಂಸನು ಹೇಳುತ್ತಾನೆ. ಆತನ ಅಭಿಪ್ರಾಯವು ಸಹಜವೆಂತ ನನಗೆ ತೋರುತ್ತದೆ. ನಾನು ಬಹಳವಾಗಿ ನಗುವವನಲ್ಲ.

ನಗೆಗೂ ಸಂತೋಷಕ್ಕೂ ಕಾರ್ಯಕಾರಣವಾದಂಥ ಸಂಬಂಧವಿರುವದಾದರೆ ನಗಾಡದೆ ನಮಗೆ ಸಂತೋಷಪಡುವದಕ್ಕೆ ಆಗುವದಿಲ್ಲ. ಎಷ್ಟಕ್ಕೆ ಹೆಚ್ಚಾಗಿ ನಾವು ಸಂತೋಷಪಡುತ್ತೇವೋ ಅಷ್ಟಕ್ಕೆ ಹೆಚ್ಚಾಗಿ ನಾವು ನಗಾಡಬೇಕಾಗುತ್ತದೆ. ಒಬ್ಬ ಹುಡುಗನಿಗೆ ತಾನು ಪರೀಕ್ಷೆಯಲ್ಲಿ ಪ್ಯಾಸಾದೆನೆಂಬುವ ತಂತೀ ವರ್ತಮಾನ ತಲುಪಿದರೆ ಆತನು ಆ ಸಮಾಚಾರವನ್ನು ಓದಿದ ವೇಳೆ ತನ್ನ ಬಾಯಿ ತೆರೆದು ತ್ರಿದೋಷಗಳನುಸಾರವಾಗಿ ಹಾ-ಹಾ-ಹಾ, ಹೀ-ಹೀ-ಹೀ, ಹೋ-ಹೋ-ಹೋ, ಎಂದು ಒಂದು ತಾಸು ತನಕ ನಗುವದಾದರೆ ಏನೆನ್ನುವವು ? ತನ್ನ ಅರ್ಧಾಂಗಿಯಿಂದ ಒಂದು ಕಾಗದವನ್ನು ನಿರೀಕ್ಷಿಸುತ್ತಿರುವಂಥಾ ಗಂಡನಿಗೆ ಆಕೆಯಿಂದ ಕಾಗದವು ತಲುಪಿದರೆ ತನ್ನ ಬಾಯಿ ಅಗಲವಾಗಿ ತೆರೆದು ನಗುವನೇ ?

ನಗೆಯು ಗರ್ವದ ಅಥವಾ ಹೆಚ್ಚಳದ ಫಲವಾಗಿದೆಯೆಂದು ಹೇಳುವದು ಸಮವೆಂದು ತೋರಿದರೂ ಗರ್ವಕ್ಕೂ ಹೆಚ್ಚಳಕ್ಕೂ ಯಾವ ಸಂಬಂಧವೂ ಇರುವದಿಲ್ಲ. ನಗೆಯು ಶ್ರೇಷ್ಠತನದ ಫಲವಾಗಿದೆಯೆಂದು ಹೇಳುವದಕ್ಕೆ ಸಹ ಆಗುವದಿಲ್ಲ. ಯಾಕೆಂದರೆ, ವಿದ್ವಾಂಸರು ಪಂಡಿತರು ಎನ್ನಿಸಿಕೊಳ್ಳುವವರು ಸರ್ವಥೇಷ್ಟ ನಗುತ್ತಾರಲ್ಲ ! ನಾವು ಪರರ ವಿಷಯವಾಗಿ ನಗಬೇಕಾದರೆ ಅವರು ನಮಗಿಂತ ಕೀಳಸ್ಥಿತಿಯುವರಾಗಿದ್ದು, ಏನಾದರೂ ಹುಚ್ಚೋದ್ಯವಾದಂಥ ಕಾರ್ಯವನ್ನು ಮಾಡಿದವರಾಗಿರಬೇಕು. ಒಬ್ಬನು ಥಟ್ಟನೆ ಕಾಲು ಜಾರಿ ಬಿದ್ದರೆ ನಾವು ನಗುತ್ತೇವೆ. ಇದರ ಕಾರಣವೇನೆಂದರೆ, ನಾವು ಅವನ ಹಾಗೆ ಬೀಳಲಿಕ್ಕಿಲ್ಲ, ಮತ್ತು ಬೀಳುವ ಗಂಡಾಂತ ನಮಗಿರುವದಿಲ್ಲ, ನಾವು ಕ್ಷೇಮವಾಗಿದ್ದೇವೆ ಎಂದು ಭಾವಿಸುವದರಿಂದಲೇ ಅಲ್ಲವೋ ? ನಾವು ಸಹ ಬೀಳುವ ಗಂಡಾಂತ್ರದಲ್ಲಿದ್ದೇವೆಂದು ಕಂಡರೆ ನಗಾಡುವೆವೋ ? ಎಂದಿಗೂ ಇಲ್ಲ. ಒಬ್ಬನು ಮತ್ತೊಬ್ಬನನ್ನು ದೂರುವಾಗಲೇ ಆಗಲೀ ಮತ್ತೊಬ್ಬರ ವಿಷಯದಲ್ಲಿ ದುಃಖ ಮಾತುಗಳನ್ನು ಓದುವಾಗಲೀ ಆಗಲೀ ನಾವು ಘಟ್ಟಿಯಾಗಿ ನಗಾಡುತ್ತೇವಲ್ಲ ? ಕೆಲವರು ಕೂಡಿಕೊಂಡು ಇತರರನ್ನು ಗೇಲಿ ಮಾಡುತ್ತಿರುವಾಗ್ಗೆ ಅವರು ತನ್ನ ವಿಷಯವಾಗಿ ಹೀಗೆ ಪರಿಹಾಸ್ಯ ಮಾಡುತ್ತಾರೆಂಬ ಅನುಮಾನವು ಅವನಿಗುಂಟಾದರೆ ಆತನು ಮತ್ತೆ ನಗುವನೇ ? ನಗುವದಾದರೆ ಅದು ಎಂಥಾ ಮರಣದ ನಗೆಯಾಗಿರುವದು !

ನಗೆಯು ಹಲವು ತರವಾಗಿದೆ. ಕಿರುನಗೆ, ಹೊರನಗೆ, ಮುಗುಳ್ನಗೆ, ಮೇಲ್ನಗೆ, ಇತ್ಯಾದಿ. ನಾವು ಎಲ್ಲಿ ನಗಬೇಕು ? ಹ್ಯಾಗೆ ನಗಬೇಕು ? ಯಾಕೆ ನಗಬೇಕು ? ಎಂದು ವಿವೇಚನೆಮಾಡದೆ, ಕಂಡದ್ದಕ್ಕೆಲ್ಲಾ ನಗುವದು ಸಮವಲ್ಲ, ಒಳ್ಳೆ ಮರ್ಯಾದೆ ಸಹ ಅಲ್ಲ. ಸ್ವಾಭಿಮಾನದಿಂದ ಒಬ್ಬನು ನಕ್ಕರೆ ಅದಕ್ಕೆ ಮುಗುಳ್ನಗೆಯೆನ್ನುತ್ತಾರೆ. ಆಪತ್ತಿನಲ್ಲಿ ನಗುವಾಗ ಅದಕ್ಕೆ ಮರಣದ ನಗೆಯೆನ್ನಬಹುದು. ಒಂದಕ್ಕೊಂದು ವಿಪರೀತವಾದಂಥ ಎರಡು ವಿಷಯಗಳು ಒಂದೇ ಸರ್ತಿ ಒಬ್ಬನ ಮನಸ್ಸನ್ನು ಕಾಡಿಸಿದರೆ ಸಹ ನಗೆಬರುತ್ತದೆಂದು ಒಬ್ಬ ವಿದ್ವಾಂಸನು ಹೇಳುತ್ತಾನೆ. ಸಂತೋಷವೂ ಗರ್ವವೂ ಒಂದೇ ಸರ್ತಿ ಮನದಲ್ಲಿ ಹುಟ್ಟುವಾಗಲೂ ನಗೆಬರುತ್ತದೆಂದು ಅದೇ ಮನುಷ್ಯನು ಹೇಳುತ್ತಾನೆ. ನಗೆಯ ಕಾರಣಗಳನ್ನು ಹಲವರು ಹಲವು ವಿಧವಾಗಿ ಹೇಳುತ್ತಾರೆ. ಯಾರ ಮಾತೂ ಸಮವೆಂದು ಹೇಳಲಾಗದು ; ಒಂದು ವೇಳೆ ಎಲ್ಲರ ಮಾತೂ ಸರಿಯೆನ್ನಬಹುದು. "ನಕ್ಕರೆ ಕಾಯವು ಪುಷ್ಟವಾಗುವದು" ಎಂಬದೊಂದು ಇಂಗ್ಲೀಷ್ ಗಾದೆಯುಂಟಂತೆ. ಹಾಗಾದರೆ ದಪ್ಪವಾಗಲಿಕ್ಕೆ ಮನಸ್ಸುಳ್ಳವರು ನಗಾಡಬೇಕೆಂತಾಯಿತು.

ನಗೆಯ ಉತ್ಪತ್ತಿ, ಕಾರಣ ಮುಂತಾದವುಗಳನ್ನು ಕುರಿತು ಹೇಳಿದ ಮೇಲೆ ಅದರ ಪ್ರಯೋಗ, ದುಷ್ಪ್ರಯೋಗಗಳನ್ನು ಕುರಿತು ಸಹ ಕೆಲವು ಮಾತುಗಳನ್ನು ಹೇಳುವದು ಅಗತ್ಯವಾಗಿದೆ. ಮನುಷ್ಯ ಪ್ರಾಣಿಗಳು ಮಾತ್ರವೇ ನಗುವವರಾಗಿದ್ದಾರೆ. ದೇವರು ನಮಗೆ ಈ ಶಕ್ತಿಯನ್ನು ಕೊಟ್ಟಿದ್ದಾನೆ. ಆದಕಾರಣ ನಾವು ಆಗಾಗ್ಗೆ ನಗಬೇಕೆಂಬದೂ ಆತನ ಚಿತ್ತವಾಗಿದೆ. "ನಸುನಗೆ ಇಲ್ಲದವನ ಮೋರೆ ಬುಸುಬುಸು" ಎಂಬ ಗಾದೆಯಿದೆ. ಆದರೆ ಈ ವರವನ್ನು ದುಷ್ಪ್ರಯೋಗ ಮಾಡದಂತೆ ನಾವು ಜಾಗರೂಕತೆಯುಳ್ಳವರಾಗಿರುವದು ಅವಶ್ಯವಾಗಿರುವದರಿಂದ ಈ ವಿಷಯದಲ್ಲಿ ಕೆಲವು ನಿಯಮಗಳನ್ನು ಹೇಳುತ್ತೇನೆ.

ಯಾವದರಿಂದ ಪರರಿಗೆ ನೋವು ಆಗುವುದಿಲ್ಲವೋ ಅಥವಾ ಸ್ವಥೇವ ನಗುವವನಿಗೆಯೇ ನೋವು ಆಗುವುದಿಲ್ಲವೋ ಆ ನಗೆ ಒಳ್ಳೇದು. ಯಾವದರಿಂದ ತನಗೂ ಪರರಿಗೂ ನೋವೂ ಕರಕರೆಯೂ ಆಗುವುದೋ ಅದು ಕೆಟ್ಟದ್ದು. (೧) ಸತ್ಯವೇದದ ವಚನಗಳನ್ನು ಓದಿ ಅದರ ಶ್ಲೇಷಾರ್ಥ ತಕ್ಕೊಂಡು ಇಂದರೆ ಅನ್ಯಾಭಿಪ್ರಾಯಮಾಡಿ ಅಥವಾ ಅಪಾರ್ಥ ಮಾಡಿ ಎಂದಿಗೂ ನಗಬಾರದು. ಹೀಗೆ ಮಾಡುವವರು ಈಗಿನ ಕಾಲದಲ್ಲಿಯೂ ಅನೇಕರಿದ್ದಾರೆ. ಇದರಿಂದ ಬಹಳ ಕೇಡಾಗುತ್ತದೆ. ನಮಗೆ ಗೊತ್ತಾಗದೇ ಇರುವಂಥ ಸತ್ಯವೇದದ ಮಾತುಗಳ ವಿಷಯವಾಗಿ ನಾವು ಹಾಸ್ಯದ ಗೋಷ್ಟಿಗಳನ್ನು ಮತ್ತೊಬ್ಬರಿಗೆ ಹೇಳಬಾರದು. ಹೇಳಿದ್ದಾದರೆ ಆತ್ಮಕ್ಕೆ ಕಳಂಕ ಹತ್ತಿ, ತೊಳೆದು ತೆಗೆಯುವುದು ಕಷ್ಟವಾಗುತ್ತದೆ (೨) ನೀಚನಾದ ಕಿರುಕುಳದ ಕಾರ್ಯಗಳನ್ನು ಕುರಿತು ಎಂದೂ ನಗಬಾರದು. ಹಾಗಂದರೆ, ತಾಯಿತಂದೆಗಳ ಮುಂದೆ ಅಥವಾ ಮಾನ್ಯರಾದ ಗೃಹಸ್ತರ ಮುಂದೆ ಹೇಳಬಾರದಂಥ ಸಂಗತಿಗಳನ್ನು ಕುರಿತು ನಗಬಾರದು (೩) ಕುರುಡರು ಕುಂಟರು ಕುರೂಪಿಗಳು ಮುಂತಾದ ಅಂಗಹೀನರನ್ನು ಕುರಿತೂ ನಗಬಾರದು. ನಕ್ಕರೆ ಅವರಿಗೆ ಬಹಳ ನೋವಾಗುತ್ತದೆ. ಆಗಾಗ್ಗೆ ನಕ್ಕವರಿಗೂ ನೋವಾಗುವುದುಂಟು. ಇಂಥಾ ಒಬ್ಬ ಮನುಷ್ಯನನ್ನು ಕಂಡು ನಕ್ಕವನಿಗೆ ಅವನು ಸಮರ್ಪಕವಾದ ಉತ್ತರ ಕೊಟ್ಟನು. ಹ್ಯಾಗಂದರೆ ಒಬ್ಬ ಗೃಹಸ್ತನು ಕುದುರೆಯ ಮೇಲೆ ಕೂತುಕೊಂಡು ಹೋಗುತ್ತಿದ್ದನು. ಶರೀರದಲ್ಲಿ ಏನೋ ಅಸ್ವಸ್ಥವಿದ್ದ ಕಾರಣ ಅವನು ನೆಟ್ಟಗೆ ಕುಂದ್ರಲಾರದೆ ಇದ್ದನು. ಒಬ್ಬನು ಅವನನ್ನು ನೋಡಿ ನಗುತ್ತಾ—"ಎನ್ರಯ್ಯಾ, ನೀವು ಕುದುರೆ ಮೇಲೆ ಕೂತಿರುವಾಗ ಶ್ರೀಧರನು ನಿಮಗೆ ಭೇಟಿಯಾದನೋ ?" ಅನ್ನಲು; ಅವನು—"ಹೌದು, ಅವನು ನಮಗೂ ನಿಮಗೂ ಸಂಗಡಿಗನು ಹತ್ತರದಲ್ಲೇ ಸಿಕ್ಕುವನು ಎಂದು ಹೇಳಿದನು. ಅವನು ನೀನೇ !" ಎಂದು ಹೇಳಿದನು. ಇದನ್ನು ಕೇಳಿ ನಕ್ಕವನಿಗೆ ಕರಕರೆಯಾಯಿತು. ಆದರೆ ಇಂಥಾ ಉತ್ತರ ಕೊಡಲು ಅಂಗಹೀನರಿಗೆ ಎಲ್ಲಿಂದ ನೆನಪು ಬರುತ್ತದೆ ಎಂದು ಹೇಳಿ ನಗಬಾರದು.

ಆಗಾಗ್ಗೆ ನಗುವುದು ಬಹಳ ಪ್ರಯೋಜನಕ್ಕೆ ಬರುವುದುಂಟು. ಈ ವಿಷಯದಲ್ಲಿ ಒಂದು ಉದಾಹರಣೆ ಹೇಳುತ್ತೇನೆ. ಒಬ್ಬ ಗೃಹಸ್ತನು ತನ್ನ ಮನೆಯಲ್ಲಿ ಮಲಗಿದ್ದಾಗ್ಗೆ ಕಿಟಕಿಯಿಂದ ಒಬ್ಬ ಕಳ್ಳನು ಒಳಹೊಕ್ಕು, ಮನೆಯ ಒಡೆಯನು ಮಲಗಿದ್ದಾನೆಂದು ನೆನಸಿ, ಅಲ್ಲಲ್ಲಿ ತಿರುಗಾಡುವವನಾದನು. ಅಲ್ಲಿದ್ದ ಒಂದು ಪೆಟ್ಟಿಗೆಯ ಬೀಗವನ್ನು ಮೆಲ್ಲಗೆ ತೆರದು, ಅದರೊಳಗೇನುಂಟೆಂದು ನೋಡುತ್ತಿರುವಾಗ್ಗೆ ಮಲಗಿದ್ದ ಮನೇ ಯಜಮಾನನು ಘಟ್ಟಿಯಾಗಿ ನಗಾಡಿದನು. ಮನೆಯ ಯಜಮಾನನು ಎಚ್ಚರವಾಗಿದ್ದಾನೆಂದು ನೋಡಿ ಕಳ್ಳನು ಓಡಿಹೋಗಬೇಕೋ ಬೇಡವೋ ? ಆದರೆ ಅವನು ಧಾಬರಿಯಾಗಿ—"ನೀವ್ಯಾಕೆ ಇಷ್ಟು ಘಟ್ಟಿಯಾಗಿ ನಗಾಡಿದಿ ?" ಎಂದು ಕೇಳಿದನು. ಅದಕ್ಕವನು ಹೇಳಿದ್ದು—"ಎಲೋ, ಮನೆಯ ಯಜಮಾನನಿಗಾದರೂ ಏನೂ ಸಿಕ್ಕದ ಮನೆಯಲ್ಲಿ ಇಷ್ಟು ಅಪರಾತ್ರಿಗೆ ಧಾವತಿಪಟ್ಟು ಬಂದು ಹುಡುಕುತ್ತೀಯಲ್ಲ ! ಇದು ನನಗೆ ಆಶ್ಚರ್ಯವಾಗಿ ನಕ್ಕೆನು" ಅಂದನು. ಇಂಥಾ ನಗೆಯಿಂದ ಏನಾದರೂ ಉಪಯೋಗ ಬರುತ್ತದೆ. ಮಕ್ಕಳು ಕೆಟ್ಟ ಹಟ ಬಿಡಬೇಕೆಂದು ತಾಯಿತಂದೆಗಳೂ ಉಪಾಧ್ಯಾಯರೂ ನಗುವದುಂಟು. ಇದರಿಂದ ಹುಡುಗರು ತಿದ್ದುಪಾಟಾಗುತ್ತಾರೆ. ಇಂಥಾ ನಗೆಯು ಪ್ರಯೋಜನವಾದದ್ದು. ಆದರೆ ತನಗಿಂತ ಮಾನ್ಯನಾದ ಗೃಹಸ್ತನನ್ನು ನೋಡಿ ನಗುವದು ಬಹಳ ಕೆಟ್ಟದ್ದು. ನಗುವವನಿಗೇನೇ ಸ್ವಲ್ಪ ವೇಳೆಯಲ್ಲಿ ದುಃಖವಾದೀತು. ಕೆಲವರಿಗೆ ವಿನಾ ಕಾರಣವಾಗಿ ನಗಾಡುವ ಅಭ್ಯಾಸ ಉಂಟು, ಇದೂ ಒಳ್ಳೇದಲ್ಲ. ಇಂಥವರಿಗೆ ಪುರುಷತ್ವವಿಲ್ಲವೆಂದು ನೆನಸಬೇಕು. ಜನರ ಮುಂದೆ ಇಂಥವರು ಹೆಣ್ಣೆಂದು ಎಣಿಸಲ್ಪಡುವರು. "ನಗುವ ಗಂಡಸನ್ನೂ ಅಳುವ ಹೆಂಗಸನ್ನೂ ನಂಬಬಾರದು" ಎಂಬದೊಂದು ಗಾದೆಯಿದೆ.

ಬಿ. ಜೆ. ಬಿ

ಉತ್ತರ ದೇಶದಲ್ಲಿ ರಾಜದ್ರೋಹ ಕೃತ್ಯಗಳು.

ಕಳೆದ ವಾರದ ಸಮಾಚಾರವು.

ಕಲ್ಕತ್ತಾ, ೧೧ನೇ ತಾ. ಸೋಮವಾರ —ಪೋಲೀಸಿನವರು ಸುಧೀರ ಕುಮಾರ ಸರ್ಕಾರನನ್ನು ಖುಲ್ನಾ ಜಿಲ್ಲೆ ವಿವರ್ಣಚಂದ್ರ ಬೊಸ್ಸರನ್ನು ಚಂದ್ರನಗರದಲ್ಲೂ ದಸ್ತಗಿರಿ ಮಾಡಿದರು. ಕಲ್ಕತ್ತೆಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಮೆ॥ ಥಾರ್ನಹಿಲ್ ಯವರಿಗೆ ಅವರು ಕೆಲಸಕ್ಕೆ ರಾಜೀನಾಮೆ ಕೊಡದೇ ಹೋದರೆ ಸಿಡಿಮದ್ದಿನ ಗುಂಡಿನಿಂದ ಕೊಂಧು ಬಿಡುವುದಾಗಿ ಹೆದರಿಸುವ ಕಾಗದಗಳು ತಲುಬುತ್ತವೆ. "ವಂದೇ ಮಾತರಂ" ಪತ್ರಿಕೆಯ ಎಡಿಟರ ಮೇಲೆ ರಾಜದ್ರೋಹದ ಫಿರ್ಯಾದು ತರಲ್ಪಡುವುದು "ಯುಗಾಂತರ" ಪತ್ರಿಕೆಯು ಬಹು ಕಠಿಣವಾದ ವಾಕ್ಯಗಳನ್ನು ಪ್ರಕಟಿಸುತ್ತಿದೆ.

ಕಲ್ಕತ್ತಾ, ೧೨ ನೇ ತಾ. ಮಂಗಳವಾರ.—ಭವಾನಿಪುರದಲ್ಲಿ ಒಂದು ಕಡೆ ಸಿಡಿಮದ್ದಿನ ಗುಂಡುಗಳ ತಯಾರಿಗೆ ಮಾಡಿಕೊಂಡಿದ್ದ ಕಾರ್ಖಾನೆಯು ಸಿಕ್ಕಿತು. ಅದನ್ನು ಪೋಲೀಸಿನವರು ಪತ್ತೇ ಮಾಡಿ, ಯೂರೋಪ್ಯರ್ ಪೋಲೀಸಿನವರು ಸಮರಾತ್ರಿಯಲ್ಲಿ ಅದರೊಳಕ್ಕೆ ನುಗ್ಗಿದರು. ಅದೇ ಸಮಯದಲ್ಲಿ ಅಲ್ಲಿ ನಾಲ್ಕು ಸಿಡಿಮದ್ದಿನ ಗುಂಡುಗಳು ಜಾರಿದವು. ಇದರ ಫಲಿತಾಂಶ ತಿಳಿದು ಬರಲಿಲ್ಲ. ಇದಲ್ಲದೆ ನೆನ್ನೆ ರಾತ್ರಿ ಕಾಳಿಘಾಟಿಗೆ ಸೇರಿದ ಸಿಕದಪಾರಾ ಎಂಬಲ್ಲಿ ಪೋಲೀಸಿನವರು ಮೂರು ಸ್ಥಳಗಳನ್ನು ಪ್ರವೇಶಿಸಿ ಅಜಮಾಯಿಷಿ ಮಾಡಿದರು. ಪೋಲೀಸಿನವರ ನಡವಳಿಕೆಯನ್ನು ಜನರು ಬಹು ಎಚ್ಚರಿಕೆಯಿಂದ ನೋಡುತ್ತಿದ್ದಾರೆ. ಆ ಅಜಮಾಯಿಷಿಯಲ್ಲಿ ಕೆಲವು ಕಾಗದಪತ್ರಗಳೂ ಮದ್ದಿನ ೨—೩ ತೋಟಾಗಳೂ ಸಿಕ್ಕಿದವು.

ಕಲ್ಕತ್ತಾ, ೧೩ನೇ ತಾ. ಬುಧವಾರ —ಕಲ್ಕತ್ತೆಯ ಹಾರಿಸನ್ ಬೀದಿಯಲ್ಲಿ ಸಿಡಿಮದ್ದಿನ ಗುಂಡಿನ ಸಹಿತ ದಸ್ತಗಿರಿ ಮಾಡಲ್ಪಟ್ಟ ಆರು ಜನ ಬಂಗಾಳಿಗಳ ಮೇಲೆ ಪೋಲೀಸ್ ಕೋರ್ಟಿನಲ್ಲಿ ಫಿರ್ಯಾದು ಮಾಡಲಾಗಿದೆ. ಸರ್ಕಾರದ ತರಫು ಮೊಕದ್ದಮೆ ನಡಿಸುವುದಕ್ಕೆ ಮೆ॥ ನಾರ್ಟನ್ ಎಂಬ ಪ್ರಸಿದ್ಧ ವಕೀಲರನ್ನು ಗೊತ್ತುಮಾಡಿದಾರೆ. ಇನ್ನೂ ಯೌವನಸ್ಥರಾದ ಬಂಗಾಳಿಗಳನ್ನು ದಸ್ತಗಿರಿ ಮಾಡುತ್ತಲೂ, ಅವರನ್ನು ಮ್ಯಾಜಿಸ್ಟ್ರೇಟರ ಮುಂದೆ ಹಾಜರುಮಾಡಿ, ಅವರಿಂದ ಫಿತೂರಿ ವಿಷಯದಲ್ಲಿ ಕೈಫಿಯತ್ತುಗಳನ್ನು ಕೇಳಿಸಿ ಬರಸುತ್ತಲೂ ಬಂದಿದ್ದಾರೆ. ಬಂಗಾಳಾದಲ್ಲೂ ಪೂರ್ವ ಬಂಗಾಳಾದಲ್ಲೂ ಪೋಲೀಸಿನವರು ಅನೇಕ ಕಡೆಗಳಲ್ಲಿ ನುಗ್ಗಿ ಪತ್ತೆಮಾಡುತ್ತಾ, ಸಿಕ್ಕಿದ ಸಾಮಾನು ಕಾಗದ ಪತ್ರಗಳನ್ನು ತೆಗೆದುಕೊಂಡು ಹೋಗುತ್ತಾ ಇದ್ದಾರೆ. ಲೆಫ್ಟಿನೆಂಟ್ ಗವರ್ನರ್ ಸರ್ ಆಂಡ್ರು ಫ್ರೇಸರ್ ಯವರೇ ಮೊದಲಾದ ಮುಖ್ಯ ಅಧಿಕಾರಿಗಳು ಈ ಬೇಸಿಗೆಯಲ್ಲಿ ಬೆಟ್ಟದ ಮೇಲೆ ಇರುವುದು ತಪ್ಪಿ, ಎಲ್ಲಾ ಕಲ್ಕತ್ತೆಯಲ್ಲೇ ಇದ್ದುಕೊಂಡು ಅಂತರಂಗವಾದ ವಿಚಾರಗಳನ್ನು ಮಾಡುತ್ತಿದ್ದಾರೆ.

ಕಲ್ಕತ್ತಾ, ೧೪ನೇ ತಾ. ಗುರುವಾರ —ಹೈಕೋರ್ಟ್ ಜಡ್ಜರಾದ ಮೆ॥ ರಾಂಪಿನೀ ಯವರಿಗೆ ಅವರನ್ನು ಕೊಂದುಹಾಕುವುದಾಗಿ ಭೀತಿಯನ್ನುಂಟುಮಾಡುವ ಕಾಗದವು ನೆನ್ನೆ ತಲುಪಿತು. ಅದರ ಕೆಳಗೆ "ವಂದೇ ಮಾತರಂ" ಎಂದು ರುಜು ಮಾಡಿದೆ. ೧೨ನೇ ತಾ ನ "ವಂದೇ ಮಾತರಂ" ಪತ್ರಿಕೆಯಲ್ಲಿ ರಾಜದ್ರೋಹಕರವಾದ ವಾಕ್ಯಗಳನ್ನು ಪ್ರಕಟಿಸಿದ್ದು ತಪ್ಪಾಯಿತೆಂದು ಈಗ ಆ ಪತ್ರಿಕೆಯವರು ತಿಳಿಸಿ ಕ್ಷಮಾಪಣೆಯನ್ನು ಬೇಡಿದೆ. ಪೋಲೀಸಿನವರು ಆ ಪತ್ರಿಕಾ ಆಫೀಸನ್ನು ಶೋಧನೆ ಮಾಡಿದಾಗ್ಗೆ ಗಲಭೆಯಾಯಿತೆಂದೂ, ಈ ಗಲಭೆಯಲ್ಲಿ ದ್ವೇಷಿಗಳ್ಯಾರೋ ಆ ವಾಕ್ಯಗಳನ್ನು ಪತ್ರಿಕೆಯಲ್ಲಿ ಪ್ರಕಟವಾಗುವಂತೆ ಮಾಡಿದರೆಂದೂ, ಆ ಸಿಡಿಮದ್ದಿನ ಗುಂಡುಗಳ ಅನಾಹುತಗಳ ವಿಷಯದಲ್ಲಾಗಲಿ ಆ ಫಿತೂರಿ ಮಾಡಿದವರ ಗುಂಪಿನ ವಿಷಯದಲ್ಲಾಗಲಿ ತಾನು ಸ್ವಲ್ಪವಾದರೂ ಅನುಕೂಲಪಡುವುದಾಗಿಲ್ಲವೆಂದೂ ಆ ಪತ್ರಿಕೆಯು ವಾಕ್ಯಗಳನ್ನು ಬರೆದು ವಿಷಾದಪಟ್ಟಿರುತ್ತದೆ. ಹರೀಶ ಚಂದ್ರ ಕಾಂಜೀಲಾಲ್ ಎಂಬ ಅಪರಾಧಿಯು ಮ್ಯಾಜಿಸ್ಟ್ರೇಟರಿಗೆ ಹೇಳಿ ಬರಸಿರುವುದೇನೆಂದರೆ—"ಬಂಗಾಳಾ ಆಧಿಪತ್ಯವನ್ನು ವಿಭಾಗಮಾಡಿದ್ದು ಪ್ರಜೆಗಳಿಗೆ ಅಸಮ್ಮತವಾಗಿದೆ ಎಂದು ತಿಳಿದರೂ ಲಾರ್ಡ್ ಕರ್ಜನರವರು ಅವರ ಪ್ರಾರ್ಥನೆಯನ್ನು ತುಚ್ಛವಾಗಿ ಎಣಿಸಿದ್ದರಿಂದ ನಾನು ಈ ಜನ್ಮಭೂಮಿಯ ಸೇವೆಗೆ ನನ್ನ ಶರೀರವನ್ನು ಒಪ್ಪಿಸಬೇಕೆಂದು ನಿರ್ಧಾರ ಮಾಡಿಕೊಂಡೆನು. ಮಾಣಿಕ್ಯತೋಲ ಗುಂಪಿನವರ ಕೂಡ ಸೇರಿಕೊಂಡೆನು. ಲೆಫ್ಟಿನೆಂಟ್ ಗವರ್ನರಾದ ಸರ್ ಆಂಡ್ರು ಫ್ರೇಸರ್ ಯವರ ರೈಲ್ ಗಾಡಿಯನ್ನು ಹಾರಿಸುವ ಪ್ರಯತ್ನದಲ್ಲಿ ನಾನೂ ಭಾಗಿಯಾಗಿದ್ದೆನು."

ಕಲ್ಕತ್ತಾ ತಾ ೧೫ನೇ ಶುಕ್ರವಾರ —ಕಲ್ಕತ್ತೆಯ ಪೋಲೀಸಿನವರು ಮನೆ ಮನೆಗಳನ್ನು ಶೋಧನೆಮಾಡುತ್ತಲೇ ಬಂದಿದ್ದಾರೆ. ಆದರೆ ಇದುವರೆಗೆ ಹೊಸ ವಿಚಾರಗಳೇನೂ ಅವರಿಗೆ ತಿಳಿಯಲಿಲ್ಲ. ಅವರು ಡಾಕ್ಟರ್ ರಾಯ್ ಬಿಹಾರಿ ಘೋಸ್ ಯವರ ದೀಪಬಳಕ್ಕಿ ಕಾರ್ಖಾನೆಗೆ ನುಗ್ಗಿ ಅಜಮಾಯಿಷಿ ಮಾಡಿದರು. ಅಲ್ಲಿ ಏನೂ ಸಿಕ್ಕಲಿಲ್ಲ. ಕಾಂತಪಕ್ಷದವರಾದ ಆ ಡಾಕ್ಟರು ಈ ವಿಷಯದಲ್ಲಿ ಪೋಲೀಸಿನವರ ಮೇಲೆ ತುಂಬಾ ಸಿಟ್ಟಾಗಿದ್ದಾರೆ. ಕಾರ್ಖಾನೆಗಳ ಮೇಲ್ವಿಚಾರಣೆಗಾಗಿ ಸರ್ಕಾರದವರು ನೇಮಕಮಾಡಿರುವ ಇನ್‌ಸ್ಪೆಕ್ಟರು ಆ ಕಾರ್ಖಾನೆಗೆ ಹೋಗಿ ಪದ್ಧತಿಯ ಪ್ರಕಾರ ಅಜಮಾಯಿಷಿಮಾಡಿದರಲ್ಲದೆ ಪೋಲೀಸಿನವರು ಹೋಗಿ ಶೋಧನೆ ಮಾಡಲಿಲ್ಲವೆಂದು ಆ ಡಾಕ್ಟರವರೇ ಪತ್ರಿಕೆಗಳಿಗೆ ಬರೆದಿರುತ್ತಾರೆ. ಫಿತೂರಿಗಾರರು ಪತ್ಯಾಗು ಸಮೀಪ ಚಂದ್ರನಗರದಲ್ಲಿ ಹೋಗಿ ಸೇರಿಕೊಂಡಿದ್ದಾರೆಂತಲೂ, ಅದು ಫ್ರೆಂಚರ ಪಟ್ಟಣವಾದದ್ದರಿಂದ ಇಂಗ್ಲೀಷರು ಅದರೊಳಕ್ಕೆ ಪ್ರವೇಶಿಸಿ ಜನರನ್ನು ದಸ್ತ

ಗಿರಿ ಮಾಡುವುದು ಸಾಧ್ಯವಿಲ್ಲದೆ ಇದೆ ಎಂತಲೂ ತಿಳಿಯುವುದು. ಖುಲ್ನಾದಲ್ಲಿ ಪತ್ತೇ ತರದೂದು ತುಂಬಾ ನಡೆಯುತ್ತಿದೆ. ಜಸ್ಸೋರಿನಲ್ಲಿ ಅನುಮಾನ ಕಂಡುಬಂದ ಒಬ್ಬನು ಪೋಲೀಸಿಗೆ ಸಿಕ್ಕಿ ಬಿದ್ದನು. ಮಾಲ್ದಾದಲ್ಲಿ ಕೃಷ್ಣಜೀವನ ಸನ್ಯಾಳನೆಂಬ ಹುಡುಗನನ್ನು ಹಿಡಿದು ಕಲ್ಕತ್ತೆಗೆ ಕಳುಹಿಸಿದಾರೆ.

ಕಲ್ಕತ್ತಾ, ತಾ ೧೬ ನೇ ಶನಿವಾರ —ನೆನ್ನೆ ಬೆಳಗ್ಗೆ ರಾಜಬೀದಿಯಲ್ಲಿ ಒಂದು ಮದ್ದಿನ ಗುಂಡು ಒಡೆದು ಅನಾಹುತವಾಗಿ ನಾಲ್ಕು ಜನರಿಗೆ ಗಾಯಗಳಾದವು. ಈ ಪೈಕಿ ಒಬ್ಬನು ಬದುಕುವುದು ದುಸ್ತರವಾಗಿದೆ. ಒಬ್ಬ ಬೀದಿ ಗುಡಿಸುವವನು ಕಚರಾ ಗಾಡಿಯನ್ನು ಹೊಡೆದುಕೊಂಡು ಹೋಗುತ್ತಿರುವಲ್ಲಿ ಕಾಗದ ಸುತ್ತಿದ ಒಂದು ಉಂಡೆಯು ರಸ್ತೆಯಲ್ಲಿ ಬಿದ್ದಿತ್ತು. ಅದಕ್ಕೆ ಲಕ್ಷ್ಯಕೊಡದೆ ಅವನು ಅದರ ಮೇಲೆಯೇ ಗಾಡೀ ಚಕ್ರಗಳನ್ನು ಹರಿಸಿದನು. ಆ ಉಂಡೆಯು ಸಿಡಿಮದ್ದಿನ ಗುಂಡಾಗಿದ್ದರಿಂದ ದೊಡ್ಡ ಶಬ್ದದಿಂದ ಹಾರಿ ಒಡೆದು ಮೇಲ್ಕಂಡಂತೆ ಅನಾಹುತವಾಯಿತು ಅದರ ಯೋಗ್ಯತೆಯನ್ನು ಪರೀಕ್ಷೆ ಮಾಡುವುದಕ್ಕೆ ದುಷ್ಟರ್‍ಯಾರೋ ರಾತ್ರಿಯೇ ಅದನ್ನು ಬೀದಿಯಲ್ಲಿ ಇಟ್ಟಿದ್ದರೆಂದು ಗೊತ್ತಾಗುತ್ತದೆ ಆದರೆ ಅವರ್‍ಯಾರೋ ಪತ್ತೆ ಆಗಲಿಲ್ಲ. ಒಡೆದ ಆ ಗುಂಡಿನೊಳಗೆ ಸರಿತವಾದ ಅರ್ಧ ಅಂಗುಲ ಪ್ರಮಾಣದ ಕಬ್ಬಿಣದ ತುಂಡುಗಳೂ ರಸಾಯನ (ಕೆಮಿಕಲ್) ವಸ್ತುಗಳೂ ಇದ್ದವು ಸುಮಾರು ಒಂದು ವಾರದ ಹಿಂದೆ ಟ್ರಾಂಗಾಡಿಗಳ ಒಂದನೇ ಕ್ಲಾಸ್‌ನಲ್ಲಿ ಬಂಗಾಳಿಗಳ್ಯಾರೂ ಕುಳಿತುಕೊಳ್ಳಬಾರದೆಂದು ಹೆಸರಿಲ್ಲದ ನೋಟೀಸು ಕೂಗಿನಲ್ಲೆಲ್ಲಾ ಹಂಚಲ್ಪಟ್ಟಿತ್ತೆಂದು ತಿಳಿಯುವುದು. ಮಾಣಿಕ್ಯತೋಲಾ ಫಿತೂರಿ ಗುಂಪಿಗೆ ಸೇರಿದ ಉಲ್ಲಾಸ್ಕರ್ ಪತ್ತನ ತಂದೆಯು ಶಿವಪುರದ ಸರ್ಕಾರಿ ವ್ಯವಸಾಯದ ವಿದ್ಯಾಶಾಲೆಯಲ್ಲಿ ಉಪಾಧ್ಯಾಯ ಕೆಲಸವಿದೆ. ಸರ್ಕಾರದವರು ಆತನಿಗೆ ಸಸ್ಪೆನ್ಸನ್ನು ಹೊಸ್ಟ್ ಮಾಡುವುದಿಲ್ಲವೆಂದು ಆತನ ಅರ್ಜಿಯನ್ನು ತಿರಸ್ಕಾರ ಮಾಡಿದರು.

ಕಲ್ಕತ್ತಾ, ತಾ ೧೮ ನೇ ಸೋಮವಾರ —ಕಲ್ಕತ್ತೆಯಲ್ಲಿ ದೇಶೀಯ ಕ್ರೈಸ್ತ ದೇವಾಲಯದ ಮೆಟ್ಲಿನ ಮೇಲೆ ನೆನ್ನೆ ಬೆಳಗ್ಗೆ ಒಂದು ಸಿಡಿಮದ್ದಿನ ಗುಂಡು ಬಿದ್ದಿತ್ತು. ಪೋಲೀಸಿನವರು ಯಾರನ್ನೂ ಹಿಡಿಯಲ್ಲ ಮೂರು ದಿನಗಳ ಹಿಂದೆ ಆಲಿಪುರದ ಮ್ಯಾಜಿಸ್ಟ್ರೇಟರ ಮನೆಯೊಳಗೆ ಮೂರು ಜನ ಬಂಗಾಳಿಗಳು ಬಿತುಕೊಂಡಿದ್ದರು. ಆದ್ದರಿಂದ ಸರ್ಕಾರದವರು ಆ ಬಂಗಲೆಯ ಸುತ್ತಲೂ ಬಲವಾದ ಪೋಲೀಸ್ ಪಹರೆ ಇಟ್ಟಿದಾರೆ. ಲೆಫ್ಟಿನೆಂಟ್ ಗವರ್ನರ್ ಸರ್ ಆಂಡ್ರು ಫ್ರೇಸರ್ ಯವರು ಕಳೆದ ಭಾನುವಾರ ಕಲ್ಕತ್ತೆಯಿಂದ ಡಾರ್ಜಲಿಂಗ್ ಎಂಬ ಬೆಟ್ಟ ಪ್ರಾಂತ್ಯಕ್ಕೆ ದಯಮಾಡಿದರು ಸಿಲ್ಹಟ್‌ನಗರದ ಪೋಲೀಸಿನವರು ಶಶಿಕುಮಾರಸೇನನೆಂಬ ಹುಡುಗನನ್ನು ಅವನು ಮುಜಫರ್‌ಪುರದ ಕೇಸಿಗೂ ಸಂಬಂಧಪಟ್ಟವನೆಂದು ಹೇಳಿ ದಸ್ತಗಿರಿ ಮಾಡಿದಾರೆ ಹಿಂದೆ ಇವನಿಗೆ ಮೆ॥ ಕಿಂಗ್ಸ್‌ಫರ್ಡ್‌ಯವರು ಛಡಿ ಶಿಕ್ಷೆಯನ್ನು ವಿಧಿಸಿದ್ದರು

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಮೆಹತ್ತರ್ ಮಹಮದ್ ಉಸ್ಮಾನ್, ಯಳಂದೂರು —ನೀವು ತಿಳಿಯಬೇಕೆಂದಿರುವ ವಿಷಯವನ್ನು ಮದರಾಸಿನಲ್ಲಿರುವಷ್ಟು ದೊಡ್ಡ ಮನುಷ್ಯರಿಗೆ ಬರೆದರೆ ಅವರು ಜವಾಬು ಕೊಟ್ಟಾರೆಂದು ನಿರೀಕ್ಷಿಸುತ್ತೇವೆ.

ಪೆನ್ಷನ್ ಆಫೀಸರ್ —ನೀವು ಬರೆದಿರುವುದನ್ನು ಓದುವುದೇ ಕಷ್ಟ. ಅಕ್ಷರಗಳು ಸ್ಫುಟವಾಗಿಲ್ಲದ ಬಾತ್ಮಿಯನ್ನು ನಾವು ಅಂಗೀಕರಿಸಲಾರೆವು.

ಕರೆಸ್‌ಪಾಂಡೆನ್ಸ್

ದೈತರನ್ನು ನಿರ್ಬಂಧ ಪಡಿಸಿದ್ದು

ಅಯ್ಯಾ,

ಈ ತಿಂಗಳು ೧೪ ನೇ ತಾರೀಖಿನ ದಿವಸ ಕಾನಕಾನಹಳ್ಳಿ ತಾಲ್ಲೂಕು ಖಜಾನೆಯಿಂದ ಬೆಂಗಳೂರು ಡಿಸ್ಟ್ರಿಕ್ಟ್ ಖಜಾನೆಗೆ ಇರಸಾಲು ಸಾಗತಕ್ಕ ಚಕ್ರಗಾಡಿ ಜೊತೆಯಲ್ಲಿ ಹಾದರು ಇದ್ದ ಕೆಲವು ಜನ ಬಾಡು ಸಿಪಾಯಿಗಳು ಮತ್ತು ಇತರ ಜವಾನರು ಸಹಾ ಸಾಯಂಕಾಲ ಸುಮಾರು ೪ ಗಂಟೆ ಸಮಯದಲ್ಲಿ ಕಗ್ಗಲಹಳ್ಳಿ ಗ್ರಾಮಕ್ಕೆ ಬಂದು ಬಿಟ್ಟಿಯಾಗಿ ಹುಲ್ಲು ಸೌದೆ ತಿಂಡಿಯನ್ನು ಕೊಡಬೇಕೆಂದು ನಿರ್ಬಂಧ ಪಡಿಸಿ, ರಾತ್ರಿ ಬಂಗಲೆಯಲ್ಲಿ ಮಲಗಿಕೊಂಡು ಇದ್ದು ಸರಕಾರಕ್ಕೆ ಕೊಡಬೇಕಾದ ಬಂಗಲೆ ರುಸುಂ ಸಹಾ ಕೊಡದೆ ಬೆಳಗ್ಗೆ ಎದ್ದು ಹೊರಟುಹೋಗಿ ಇರುತ್ತಾರೆ. ಮೇಲೆ ಕಂಡ ವಿಷಯವನ್ನು ಸರಕಾರದವರು ಗಮನಕ್ಕೆ ತಂದು ಬಡವರಿಗೆ ತೊಂದರೆ ಉಂಟಾಗದಂತೆ ನೋಡಿಕೊಂಡು ತಕ್ಕ ಏರ್ಪಾಟು ಮಾಡಲು ಕೋರುತ್ತೇನೆ.

ಪ್ರತ್ಯಕ್ಷದರ್ಶಿ.

ತುಮಕೂರು ಸಮಾಚಾರ.

ಅಯ್ಯಾ,

ತುಂಕೂರು ಟವುನಿನಲ್ಲಿ ಕೆಲವು ದಿವಸಗಳಿಂದ ಕಾಂಫಡ ಕೇಮೆಯಿಂದ ಕಳವಿನಿಂದ ಗಾಂಜಾ ತಂದು ವಿಕರಿ ಮಾಡುತ್ತಿದ್ದ ಕಾರಣ ಸರ್ಕಾರದ ಕಂಟ್ರಾಕ್ಟರಿಗೂ ಲುಕ್ಸಾನು ಸಂಭವಿಸುತ್ತಿದ್ದದ್ದನ್ನು ಹಾಲಿ ಗುಬ್ಬಿ ತಾಲ್ಲೂಕಿನಿಂದ ತುಂಕೂರಿಗೆ ವರ್ಗವಾಗಿ ಬಂದ ಎಕ್ಸೈಜು ಅಸಿಸ್ಟೆಂಟ್ ಇನ್ಸ್‌ಪೆಕ್ಟರು ತುಂಬಾ ಮುತುವರ್ಜಿಯಿಂದ ನಿಗಾಇಟ್ಟಿದ್ದು ಶಿರಾದಿಂದ ಎಕ್ಸೈಜು ಇನ್ಸ್‌ಪೆಕ್ಟರನ್ನು ಬರಮಾಡಿಕೊಂಡು ಸದರಿಯವರ ಮೂಲಕ ಈ ಮಾಸ ೧೪ ನೇ ತಾರೀಖಿನಲ್ಲಿ ತುಂಕೂರು ಟವುನ್ ಕರಣೀಕರು ಒಂದು ಮನೆಯಲ್ಲಿ ಮಾಲುಸಹಿತ ಅಪರಾಧಿಯನ್ನು ಹಿಡಿದು, ಮ್ಯಾಜಿಸ್ಟ್ರೇಟರು ಅಪರಾಧಿಗೆ ಒಂದು ತಿಂಗಳು ಕಠಿಣ ಸಜಾ ೧೦೦ ರೂಪಾಯಿ ಜುಲ್ಮಾನೆ ವಿಧಿಸಿದರು. ಅಲ್ಲಾಬಿಯವರು ಈ ರೀತಿ ಮುತುವರ್ಜಿ ವಹಿಸಿ ಕೆಲಸವನ್ನು ನೋಡುವಲ್ಲಿ ಸರ್ಕಾರಕ್ಕೆ ನಷ್ಟಗಳಿಗೆ ಅವಕಾಶವಾಗುವದಿಲ್ಲವೆಂದು ನಂಬುತ್ತೇವೆ.

ಪಿ ಜಿ

ಆಶ್ಚರ್ಯಕರವಾದ ಮಗುವಿನ ವ್ಯಾಜ್ಯ.

ಅಯ್ಯಾ,

ಯುಲಿಕಟ್ಟೆಯಿಂದ ಕಾರುಬರ ಸಾಂತವ್ವ ಎಂಬುವಳು ತಾನು ಏಳು ತಿಂಗಳು ಬಸರು ಇದ್ದೇನೆ ಎಂಬದಾಗಿ ಹರಿಹರಕ್ಕೆ ಮೂರು ಮೈಲಿಯಲ್ಲಿರುವ ಎಟ್ಟೂರು ಗ್ರಾಮಕ್ಕೆ ಗಂಡನ ಮನೆಯಿಂದ ತವರುಮನೆಗೆ ಬಂದಳು ಇವಳು ಜನಗಳಲ್ಲಿ ಹೊಟ್ಟೆಗೆ ಬಟ್ಟೆ ಸುತ್ತಿಕೊಂಡು ಸೀರೆ ಮೇಲೆ ಉಟ್ಟು ಬಸರಿರುವಂತೆ ತೋರಿಸಿಕೊಂಡು ಇದ್ದಳು. ಹನ್ನೆರಡು ತಿಂಗಳು ಆದರೂ ಹಡಿಯಲಿಲ್ಲ. ತಾ ೧೧ನೇ ಭಾನುವಾರ ಲಿಂಗಾಯತರ ಕೊಟ್ರಪ್ಪನ ಹೆಂಡತಿ ಕೆಂಚವ್ವ ಎಂಬುವಳು ಹಡದು ಹದಿನೈದು ದಿನಗಳು ಆಗಿತ್ತು. ಸದರಿ ಸಾಂತವ್ವ ಎಂಬುವಳು ಸದರಿ ಕೆಂಚವ್ವನ ಮನೆಗೆ ಹೋಗಿ ಜೋಳ ಕ್ವಾಗಡವಾಗಿ ಕೊಡಿ ಎಂಬದಾಗಿ ಕೇಳಿದಳು. ಸದರಿ ಕೆಂಚವ್ವ ಇಲ್ಲ ಎಂಬದಾಗಿ ಹೇಳಿದಳು. ಮತ್ತು ಯಾರೂ ಕೆಂಚವ್ವನ ಮನೆಯಲ್ಲಿ ಇಲ್ಲದ ಕಾಲ ನೋಡಿ ಸಾಂತವ್ವ ಎಂಬುವಳು ತೊಟ್ಟಿಲಿನಲ್ಲಿ ಮಲಗಿದ್ದ ಮಗುವನ್ನು ಎತ್ತಿಕೊಂಡು ಬಂದು ತನ್ನ ಮನೆಯಲ್ಲಿಟ್ಟುಕೊಂಡಿದ್ದಳು. ಕೆಂಚವ್ವ ಎಂಬುವಳು ಮಗು ಮಲಗಿ ಬಹಳ ಹೊತ್ತು ಆಯಿತು ಹಾಲು ಕುಡಿಸಬೇಕೆಂದು ತೊಟ್ಟಿಲಿನಲ್ಲಿ ನೋಡಿದಳು. ಮಗು ಇರಲಿಲ್ಲ ಗಾಬರಿ ಆಗಿ ಹುಡುಕಲಿಕ್ಕೆ ಹತ್ತಿದರು. ಎಲ್ಲೂ ಪತ್ತೆ ಆಗಲಿಲ್ಲ. ಕೆಂಚವ್ವನನ್ನು ಪಂಚಾಯತದಾರರೂ ಪೋಲೀಸಿನವರೂ ನಿನ್ನ ಮನೆಗೆ ಯಾರು ಬಂದಿದ್ದರು ಎಂಬದಾಗಿ ಕೇಳಿದರು ನನ್ನ ಮನೆಗೆ ಕಾರುಬರ ಸಾಂತವ್ವ ಎಂಬುವಳು ಜೋಳಕ್ಕೆ ಮಾತ್ರ ಬಂದಿದ್ದಳು. ಮತ್ತು ಯಾರೂ ಬರಲಿಲ್ಲ ಎಂಬದಾಗಿ ಹೇಳಿದಳು. ಹಾಗಾದರೆ ಪಂಚಾಯತರೂ ಪೋಲೀಸಿನವರೂ ಸಾಂತವ್ವನನ್ನು ವಿಚಾರಿಸೋಣ ಎಂಬದಾಗಿ ಹೋಗಿ ಸಾಂತವ್ವ ಎಂಬದಾಗಿ ಕೂಗಿದರು ಸಾಂತವ್ವ ಎಂಬುವಳು ನಾನು ಹೊರಗೆ ಬರುವ ಹಾಗೆ ಇಲ್ಲ ಹಡದಿದ್ದೇನೆ. ನನ್ನ ತಾಯಿ ಹೊಲಕ್ಕೆ ಹೋಗಿದ್ದಾಳೆ ಎಂಬದಾಗಿ ಹೇಳಿದಳು. ಪೋಲೀಸಿನವರೂ ಪಂಚಾಯತರೂ ಕೆಂಚವ್ವನಿಗೆ ನೀನು ಒಳಗೆ ಹೋಗಿ ಸಾಂತವ್ವನ ಮಗು ಹ್ಯಾಗೆ ಇದೆ ಎಂದು ನೋಡಿಕೊಂಡು ಬಾ ಎಂಬದಾಗಿ ಹೇಳಿದರು. ಕೆಂಚವ್ವನು ಸಾಂತವ್ವನ ಮನೆಯೊಳಗೆ ಹೋಗಿ ನೋಡಿದಾಗ ತನ್ನ ಸ್ವಂತ ಮಗುವಾಗಿತ್ತು ಸದರಿ ಕೆಂಚವ್ವ ಅದು ತನ್ನ ಮಗು ಎಂದು ಎತ್ತಿಕೊಳ್ಳುವದಕ್ಕೆ ಹೋದಳು. ಅವರಿಬ್ಬರೂ ವ್ಯಾಜ್ಯವಾಡಿಕೊಳ್ಳುತ್ತಾ, ಮಗು ತೆಗೆದುಕೊಂಡು ಕೆಂಚವ್ವ ಹೊರಗೆ ಬಂದಳು. ಪ್ರಜ್ಞೆ ಇಲ್ಲದ ಹಾಗೆ ಸ್ವಲ್ಪ ಹೊತ್ತು ಬಿದ್ದಿದ್ದಳು ಅವರಿಬ್ಬರನ್ನೂ ಪೋಲೀಸಿನವರು ಕರೆದುಕೊಂಡು ಬಂದು ಡಾಕ್ಟರಿಂದ ಅಜಮಾಯಿಷಿ ಮಾಡಿಸಿ ಕೆಂಚವ್ವನಿಗೆ ಮಗು ಕೊಡಿಸಿದರು ಸಾಂತವ್ವನನ್ನು ಕಚೇರಿಯಲ್ಲಿ ಇಟ್ಟಿದಾರೆ. ಮುಂದೆ ಏನು ಆಗುವದೋ ತಿಳಿಯದು ಇವಳು ಬಾಣಂತಿಯ ಹಾಗೆ ತಲೆಗೆ ಬಟ್ಟೆ ಕಟ್ಟಿಕೊಂಡಿದ್ದಳು ಜನಗಳೆಲ್ಲಾ ಬಹಳ ಆಶ್ಚರ್ಯಪಟ್ಟುಕೊಂಡಿದಾರೆ

ವಾಚಕ.

ತಾಲ್ಲೂಕು ವರ್ತಮಾನಗಳು

ದೊಡ್ಡಬಳ್ಳಾಪುರ.—ಇಲ್ಲಿ ಈ ತಿಂಗಳಲ್ಲಿ ೨-೩ ಹದ ಮಳೆಯಾಯಿತು. ಕೆರೆ, ಕುಂಟೆಗಳಿಗೆ ೨-೩ ತಿಂಗಳ ನೀರು ಬಂದಿದೆ ದೇವರು ಒಳ್ಳೇ ಸಮಯದಲ್ಲಿ ಮಳೆಯನ್ನು ಕೊಟ್ಟನು —ಇಲ್ಲಿ ಚಿಕ್ಕ ಪೇಟೆಯ ಹತ್ತಿರ ಕೆಲವು ಜನರು ಸೇರಿ, ದನಕರಗಳ ನೀರಿಗಾಗಿ ಒಂದು ಭಾವಿಯನ್ನು ತೆಗಿಸಿ ಇದ್ದರು ಈಗ ಒಬ್ಬನು ಈ ಭಾವಿಯನ್ನು ದನಕರಗಳ ಉಪಯೋಗಕ್ಕೆ ಬಿಟ್ಟುಕೊಡದೆ ತನ್ನ ಸ್ವಂತ ವ್ಯವಸಾಯಕ್ಕೆ ಉಪಯೋಗಿಸಿಕೊಂಡಿದಾನಂತೆ. ಇದು ಇಲ್ಲಿನ ಕಚೇರಿಯಲ್ಲಿ ರಿಪೋರ್ಟ್ ಆಗಿದೆ. ಅವರು ಇದನ್ನು ಮೂಗು ಪ್ರಾಣಿಗಳ ಉಪಯೋಗಕ್ಕೆ ಬಿಡಿಸಿಕೊಡುವರೆಂದು ಕೋರುತ್ತೇವೆ —ಅಮಾಮು ವೆಂಕಟಪ್ಪನ ದೊಡ್ಡ ಹೆಂಡತಿಯು ಯಾವ ಕಾರಣದಿಂದಲೋ ಶಿವಪುರದ ಕೆರೆ ಹಿಂದೆ ಭಾವಿಯಲ್ಲಿ ಬಿದ್ದು ಸತ್ತಳು ಇದನ್ನು ಇಲ್ಲಿನ ದಫೇದಾರ್ ಹೋಗಿ ನೋಡಿ, ಆಸ್ಪತ್ರೆಗೆ ಅಜಮಾಯಿಷಿ ಬಗ್ಗೆ ಕಳುಹಿಸದೆ ದಫನ್‌ಗೆ ಅಪ್ಪಣೆ ಕೊಟ್ಟರಂತೆ. ಇದನ್ನು ನೋಡಿ ಅನೇಕ ಜನರು ಅನುಮಾನಪಟ್ಟುಕೊಂಡಿದಾರೆ.—೩೪ ವರ್ಷಗಳಿಂದ ಇಲ್ಲಿ ಸ್ಕೂಲ್ ಕೆಲಸವನ್ನು ಮುತುವರ್ಜಿಯಿಂದ ಮಾಡುತ್ತಾ ಇದ್ದ ಗರಲ್ ಸ್ಕೂಲ್ ಹೆಡ್ ಮಾಸ್ಟರ್ ಮೆ॥ ಗುಂಡಪ್ಪನವರಿಗೆ ಪೆನ್ಷನ್ ಆಯಿತು ಪೆನ್ಷನ್ ಸಂಬಳವನ್ನು ಅನುಭವಿಸುತ್ತಾ ಇರುವದಕ್ಕೆ ದೇವರು ದೀರ್ಘಾಯುಸ್ಸನ್ನು ಕೊಡಲಿ ಎಂದು ಕೋರುತ್ತೇವೆ. ಇವರ ಬದಲು ಎ. ವಿ. ಸ್ಕೂಲ್ ಅ॥ ಮಾಸ್ಟರ್ ಬೊಮ್ಮಯ್ಯನವರು ಬರುತ್ತಾರೆ ಇವರು ಇಲ್ಲಿಗೆ ಬರುವದು ಎಲ್ಲರಿಗೂ ಸಂತೋಷ. ಇವರು ಸ್ಕೂಲನ್ನು ಇನ್ನೂ ಅಭಿವೃದ್ಧಿಗೆ ತರುವರೆಂದು ನಂಬಿದಾರೆ —ಇಲ್ಲಿನ ಹೆಡ್ ಮಾಸ್ಟರ್ ಕೊಂಗಾಡಿಯಪ್ಪನವರ ತಮ್ಮ ಪುಟ್ಟಪ್ಪನವರು ಈ ಸಾರಿ ಡಾಕ್ಟರ್ ಪರೀಕ್ಷೆಯಲ್ಲಿ ಪೇಸ್ತಾಗಿರುವುದು ಇಲ್ಲಿನ ಜನರಿಗೆ ತುಂಬಾ ಸಂತೋಷ. ಈ ಊರಿಗೆ ಕೀರ್ತಿಯೂ ಉಂಟಾಯಿತೆಂದು ಹೇಳಬೇಕಾಗಿದೆ.

ಸ್ಲಿಯರ್.—ಈ ಪ್ರಾಂತ್ಯಗಳಲ್ಲಿ ಅನೇಕ ತಿಂಗಳುಗಳಿಂದ ಮಳೆ ಇಲ್ಲದೆ, ಕೆರೆ ಕುಂಟೆಗಳಲ್ಲಿ ನೀರಿಲ್ಲದೆ, ಜನಗಳಿಗೂ ಜೀವರಾಶಿಗಳಿಗೂ ಬಹಳ ಕಷ್ಟವೂ ಚಿಂತೆಯೂ ಉಂಟಾಗಿದ್ದವು ಭಾವಿಗಳಲ್ಲಿಯೂ ತಕ್ಕಷ್ಟು ನೀರಿಲ್ಲದೆ ಜಂಬುಗಳನ್ನು ಬಿಟ್ಟು ನೀರು ಸೇದಿಕೊಳ್ಳುತ್ತಿದ್ದರು ದೇವರ ದಯದಿಂದ ಈ ತಿಂಗಳ ಆದಿಭಾಗದಲ್ಲಿ ಎರಡು ಹದ ಒಳ್ಳೇ ಮಳೆ ಬಂದು, ಕೆರೆ ಕುಂಟೆಗಳಲ್ಲಿ ಒಂದೆರಡು ತಿಂಗಳ ನೀರು ನಿಂತಿದೆ ಇದರಿಂದ ಜನರಿಗೂ ಪ್ರಾಣಿಕೋಟಿಗಳಿಗೂ ಸಂತೋಷವೂ ಧೈರ್ಯವೂ ಉಂಟಾಗಿದೆ ಅಲ್ಲದೆ ರೈತರು ತಮ್ಮ ಹೊಲ, ಗದ್ದೆಗಳನ್ನು ಉತ್ತು ಹಸನುಮಾಡುತ್ತಿರುತ್ತಾರೆ —ಸೇಂದಿ ದುಕಾನುಗಳ ಹರಾಜು ಏಪ್ರಲ್ ೩೦ ರಲ್ಲಿ ತಾಲ್ಲೂಕ್ ಕಚೇರಿ ಮುಂದೆ ಅಬಕಾರಿ ಆಫೀಸರುಗಳ ಮೂಲಕ ನಡೆಯಿತು. ಕಳೆದ ಸಾಲಿಗಿಂತ ಈ ಸಾಲಿನಲ್ಲಿ ಸಾವಿರ ರೂಪಾಯಿಗಳ ಮೇಲೆ ಜಾಸ್ತಿ ಆದಾಯವಾಯಿತು ಈ ಪೈಕಿ ಕಳ್ಳಂಬೆಳ್ಳದ ಸಬ್ ರೇಂಜಿನಲ್ಲಿ ಜಾಸ್ತಿ ಆದಾಯ. ಇದಕ್ಕೆ ಅ॥ ಇನ್ಸ್‌ಪೆಕ್ಟರ್ ಗೋಪಾಲ್‌ರಾಯರ ಮುತುವರ್ಜಿಯೇ ಕಾರಣವೆಂದು ಹೇಳುತ್ತಾರೆ. ಯಾವ ಇಲಾಖೆಯಲ್ಲಿ ಆದಾಯ ಕಮ್ಮಿಯಾದರೂ ಸೇಂದಿ ಇಲಾಖೆಯಲ್ಲಿ ಕಮ್ಮಿಯಾದೀತೇ?—ಶ್ರೀರಾಮನವಮಿಯ ಕಡೇ ದಿನದಲ್ಲಿ ಭಜನೆಯೂ, ಕಡವಗೆರೆ ಪಟೇಲರಿಂದ ಬ್ರಾಹ್ಮಣರಿಗೆಲ್ಲಾ ಸಂತರ್ಪಣೆ, ಸಂತೋಷಾದಿಗಳೂ ನಡಿಸಲ್ಪಟ್ಟವು. ಕುಂಟಗಾನಹಳ್ಳಿ ಬಡೇಸಾಬರ ಮಂಡಿ ಮನೆಗೆ ಆಕಸ್ಮಿಕವಾಗಿ ಬೆಂಕಿಬಿದ್ದು ಮೂರು ಮಾಳಿಗೆ ಸುಟ್ಟುಹೋಯಿತು ಆ ಸಮಯದಲ್ಲಿ ಹಿಂದೂ ಮಹಮ್ಮದೀಯ ಜನರೆಲ್ಲಾ ಸೇರಿ ಕಾಲಂಜಿಯಿಂದ ನೀರು ತಂದು ಸುರಿದು ಬೆಂಕಿಯನ್ನು ಆರಿಸಿದರು ಮಾಲೀಕರಿಗೆ ಮನೆ ನಷ್ಟವೂ, ಅಪಾರ ಚಿಂತೆಯೂ ಉಂಟಾಗಿವೆ ಈ ಅನಾಹುತಕಾಲದಲ್ಲಿ ಅಮಲ್ದಾರರೂ ಹೋಗಿ ನಿಂತು ಸಹಾಯ ಮಾಡಿದರು —ಹಿಂದೂಸ್ಥಾನಿ ಬಾಲಕ ಬಾಲಕಿಯರಿಗೆ ಬಹುಮಾನ ಕೊಡಲು ಒಂದು ಸಭೆಯು ಮೇ ತಿಂಗಳು ೯ ರಲ್ಲಿ ಸೇರಿತು. ಅನೇಕ ಹಿಂದೂ ಮಹಮ್ಮದೀ ದೊಡ್ಡ ಮನುಷ್ಯರೂ, ಬಾಲಕರೂ ಸಭೆಯನ್ನು ಅಲಂಕರಿಸಿದ್ದರು ಅನಂತರ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರವರು ನಮ್ಮ ಅಮಲ್ದಾರರೂ ಬಂದು ಕ್ರೇಮಾ ಹಾರಗಳನ್ನು ಸ್ವೀಕರಿಸಿದರು ಸದರಿ ಇನ್ಸ್‌ಪೆಕ್ಟರು ಅಗ್ರಾಸನವನ್ನು ವಹಿಸಿದರು ಕೂಡಲೆ ಇಬ್ಬರು ಬಾಲಕರು ದೇವರ ಸ್ತೋತ್ರವನ್ನು ಗಾನಮಾಡಿ ಕುಳಿತುಕೊಂಡ ಬಳಿಕ ಸ್ಕೂಲಿನ ರಿಪೋರ್ಟನ್ನೂ ಬೇರೊಂದು ವಿಜ್ಞಾಪನಾ ಪತ್ರಿಕೆಯನ್ನೂ ಆದೆ ಸ್ಕೂಲಿನ ಕನ್ನಡ ಮಾಸ್ಟರ್ ಸಿದ್ದಪ್ಪನವರು ಓದಿದರು. ತರುವಾಯ ಹೆಡ್ ಮಾಸ್ಟರು ಉರ್ದು ಭಾಷೆಯಲ್ಲಿ ಒಂದು ಉಪನ್ಯಾಸವನ್ನು ಓದಿದರು ಇವುಗಳ ಸಾರಾಂಶವೇನೆಂದರೆ—ಮೊದಲಿಗಿಂತಲೂ ಈಗ ಪಾಠಶಾಲೆಯು ಬಾಲಕರ ಸಂಖ್ಯೆಯಲ್ಲಿಯೂ ವಿದ್ಯೆಯಲ್ಲಿಯೂ ಅಭಿವೃದ್ಧಿಯಾಗಿದೆ ಹಾಲಿ ನೂರಿಪ್ಪತ್ತೈದು ಬಾಲಕರಿದ್ದಾರೆ ಇವರಿಗೆ ಪಾಠ ಹೇಳಲು ಬಾಯಿಂ ಅ॥ ಮಾಸ್ಟರನ್ನು ನೇಮಿಸಿಕೊಡಬೇಕು ಸ್ಕೂಲಿಗೆ ಕಟ್ಟಾಗಿ ಮೇಜು, ಬೆಂಚು, ಸ್ಟೂಲುಗಳನ್ನು ದಯಮಾಡಿಸಬೇಕು ಅಲ್ಲದೆ ಹಿಂದುಸ್ಥಾನಿ ಭಾಷೆಯನ್ನು ದೊಡ್ಡ ಹುಡುಗರು ಕಲಿಯಲು ಒಂದು ಸ್ಟೇಟ್ ಸ್ಕೂಲನ್ನು ಇಡಿಸಿಕೊಡಬೇಕು ಈಗ ಇರುವ ೪೦ ಜನ ಬಾಲಕರು ಜಂಗುಮಿಯಾಗಿ ಎರಡು ತಿಂಗಳಿಂದಲೂ ಓದುತ್ತಿರುತ್ತಾರೆ ಇವರೆಲ್ಲಾ ಹಗಲಿನಲ್ಲಿ ಜೀವನಕ್ಕಾಗಿ ಕೆಲಸ ಮಾಡತಕ್ಕವರು ಹೆಡ್ ಮಾಸ್ಟರು ಉಪನ್ಯಾಸದಲ್ಲಿ ಪ್ರಜೆಗಳು ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಲು ಅಪೇಕ್ಷೆಯುಳ್ಳವರಾಗಿರಬೇಕೆಂದೂ, ಸರ್ಕಾರದವರು ಮಹಮ್ಮದೀ ಜನರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅನುಕೂಲ ಮಾಡಿರುತ್ತಾರೆಂದೂ, ಇವರ ಜೊತೆಗೆ ಬಕ್ಷ್ಯಾದ್ ಎಂಬ ಮಹಮ್ಮದೀಯರ ಧರ್ಮ ಫಂಡಿನಿಂದ ಸ್ವಲ್ಪ ಹಣವನ್ನು ಸಹಾಯ ಮಾಡಿದರೆ ಬಡವರ ಮಕ್ಕಳೂ ಸಹ ವಿದ್ಯಾವಂತರಾಗಬಹುದೆಂದೂ ಸೂಚಿಸಿದರು. ಅನಂತರ ಅಗ್ರಾಸನಾಸೀನರು ಬಾಲಕರಿಗೆ ಬಹುಮಾನಗಳನ್ನು ಕೊಡಲು ತೊಡಗಿ ಈಗ ಕೊಡುವ ಇನಾಮುಗಳು ನಮ್ಮ ಮೈಸೂರು ದಿವಾನ್ ಬಹದ್ದೂರ್ ಮೆ॥ ಮಾಧವರಾಯರು ನಿಮಗಾಗಿ ಕಳುಹಿಸಿಟ್ಟ ಇಪ್ಪತ್ತು ರೂಪಾಯಿಗಳನ್ನು ಡಿಸೆಂಬರ್ ತಿಂಗಳಲ್ಲಿ ದಯಪಾಲಿಸಿ ಹೋಗಿದ್ದರು ಆದ್ದರಿಂದ ಈಗ ಕೊಡುವ ಬಹುಮಾನವು ಅವರದೇ ಎಂದು ಹೇಳಿ, ಬಾಲಕರಿಗೆ ಇನಾಮುಗಳನ್ನು ಕೊಟ್ಟರು. ಆ ಬಳಿಕ ಅವರು ವಿದ್ಯಾಭ್ಯಾಸದ ವಿಷಯದಲ್ಲಿ ಅನೇಕ ಬುದ್ಧಿಮಾತುಗಳನ್ನು ಹೇಳಿದ್ದಲ್ಲದೆ, ಸ್ಕೂಲಿಗೆ ಕೊರತೆಯಾಗಿರುವ ಸಂಗತಿಗಳನ್ನು ನಿವಾರಣೆ ಮಾಡಲು ಯೋಚಿಸುತ್ತೇನೆಂದೂ, ಸ್ಟೇಟ್ ಸ್ಕೂಲ್ ಇಡಿಸುವಂತೆ ಮೇಲಕ್ಕೆ ಶಿಫಾರಸ್ಸು ಮಾಡುತ್ತೇನೆಂದೂ ಹೇಳಿದರು ಜಾಗ್ರತೆಯಾಗಿ ಸದರಿ ಕೊರತೆಗಳನ್ನು ನಿವಾರಣೆ ಮಾಡುತ್ತಾರೆಂದು ತುಂಬಾ ನಿರೀಕ್ಷೆಯಾಗಿರುತ್ತಾರೆ ಸ್ಟೇಟ್ ಸ್ಕೂಲ್ ದಯಪಾಲಿಸುವದರಿಂದ ಅನೇಕ ಬಾಲಕರಿಗೆ ವಿದ್ಯಾಲಾಭವೂ, ಬಾಲಕರನ್ನು ಕರೆಯುವ ಜವಾನನಿಗೆ ಬದಲಿಯೂ ಆಗುವದೆಂದು ನಂಬುತ್ತೇವೆ ಅನಂತರ ಅಮಲ್ದಾರರು ವಿದ್ಯಾಭ್ಯಾಸದ ವಿಷಯದಲ್ಲಿ ಹೇಳಿದ ಹಲವು ಬುದ್ಧಿವಾದಗಳನ್ನು ಕಿವಿಯಿಂದ ಕೇಳುವದು ಸಾಲದೆಂದೂ, ಮಕ್ಕಳ ವಿದ್ಯೆಯು ಅಭಿವೃದ್ಧಿಯಾಗಬೇಕಾದರೆ ತಂದೆತಾಯಿಗಳೂ ಮಾಸ್ಟರುಗಳೂ ಬಾಲಕರೂ ಪ್ರತಿದಿನವೂ ಚಿಂತೆ ಪ್ರಯಾಸಗಳನ್ನು ನಿತ್ಯ ಕರ್ಮಗಳಂತೆ ಸಾಧನೆಯಲ್ಲಿ ತರುತ್ತಿರಬೇಕೆಂದೂ ಹೇಳಿದರು. ಕಡೆಯಲ್ಲಿ ಮಹಮದ್ ಇಸ್ಮಾಯಿಲ್ ಸಾಬರು ಮಹಮ್ಮದೀಯರ ಪರವಾಗಿ ಇದು ವರ್ಷಕ್ಕೆ ಮುಂಚೆಯೂ ಸ್ಕೂಲ್ ಅಭಿವೃದ್ಧಿಯಲ್ಲಿತ್ತೆಂತಲೂ, ಮೊದಲಿದ್ದ ಸ್ಕೂಲ್ ವಿಚಾರಣೆ ಮೆಂಬರುಗಳು ಈಗ ಕಾಣುವದಿಲ್ಲವೆಂದೂ ಅವರನ್ನು ಪುನಃ ನೇಮಿಸಬೇಕೆಂದೂ ಅಮಲ್ದಾರರಿಗೆ ಅರಿಕೆ ಮಾಡಿದರು ಬಳಿಕ ಸಭೆಯು ಮುಕ್ತಾಯವಾಯಿತು.

ಇಂಡಿಯಾ ದೇಶದ ವೃತ್ತಾಂತಗಳು.

ಕಳೆದ ವಾರ ಹಿಂದುಸ್ಥಾನದಲ್ಲಿ ೧,೪೬೦ ಪ್ಲೇಗ್ ಮರಣಗಳಾದವು ಆದರೆ ಪಂಜಾಬ್ ಅಧಿಪತ್ಯದಲ್ಲಿ ಎಷ್ಟು ಮರಣಗಳಾದವೋ ತಿಳಿಯಲಿಲ್ಲ

* * *

ಕಳೆದ ವಾರ ಕಲ್ಕತ್ತಾ ಪಟ್ಟಣದಲ್ಲಿ ಆರು ಕಾರ್ಖಾನೆಗಳಿಗೆ ಬೆಂಕಿ ಬಿದ್ದು ಸುಮಾರು ೧೪ ಲಕ್ಷ ರೂಪಾಯಿನ ಸರಕು ಮುಂತಾದ್ದು ನಷ್ಟವಾಗಿದೆ.

ರಂಗೂನ್ ಪಟ್ಟಣದ ವರ್ತಕರ ಬೀದಿಯಲ್ಲಿ ಕಳೆದ ವಾರಗಳಲ್ಲಿ ಒಂದು ಹಳೇ ಮನೆಯು ಕಳಚಿ ಬಿದ್ದುಹೋಯಿತು. ಇಬ್ಬರು ಸತ್ತುಹೋದರು. ಕೆಲವರಿಗೆ ಗಾಯಗಳಾಗಿವೆ.

***

ಬರ್ಮಾ ಆಧಿಪತ್ಯಕ್ಕೆ ಸೇರಿದ ಕಾಸಿಮಾಸಿನಾ ಎಂಬ ಸ್ಥಳದಲ್ಲಿ ಹೋದ ಮಂಗಳವಾರ ಎರಡು ಸಲ ಚನ್ನಾಗಿ ಭೂಕಂಪನವಾಯಿತು. ಪ್ರಜೆಗಳು ತುಂಬಾ ಗಾಬರಿಬಿದ್ದರಾದರೂ ಅಪಾಯವೇನೂ ಸಂಭವಿಸಲಿಲ್ಲ.

***

ಪ್ಲೇಗು ಪೀಡಿತರ ಸಂಖ್ಯೆಯಲ್ಲಿ ೩೯,೦೦೦ ಜನರು ಕಡಮೆಯಾದರು. ಸಂಯುಕ್ತ ಆಧಿಪತ್ಯಗಳ ಎರಡು ಕ್ಯಾಂಪುಗಳಲ್ಲಿ ಪ್ಲೇಗು ಪೀಡಿತರ ನಾಂತಿಭೇದಿ ಉಪದ್ರ ತಗಲಿತು. ಕೆಲವರು ಕಾಲವಾದರು. ಉಳಿದವರು ಕ್ಯಾಂಪುಗಳನ್ನು ಬಿಟ್ಟು ಚದರಿ ಹೋದರು.

***

ಒಂದೇ ಸಂಸಾರಕ್ಕೆ ಸೇರಿದ ನಾಲ್ಕು ಮಂದಿ ರೈಲ್ವೇ ಕಳ್ಳರನ್ನು ಪೋಲೀಸಿನವರು ಕಳೆದ ವಾರ ಲಾಹೋರ್ ಪಟ್ಟಣದಲ್ಲಿ ದಸ್ತಗಿರಿ ಮಾಡಿದರು. ಇವರಿಗೆಲ್ಲಾ ಫಿರೋಜ್‌ಪುರ್ ಸ್ಟೇಷನಿನಲ್ಲಿ ನೌಕರಿ ಇತ್ತು. ಅವರ ಬಳಿಯಲ್ಲಿ ಸುಮಾರು ೧೦ ಸಾವಿರ ರೂಪಾಯಿನ ಕಳವು ಮಾಲು ಗಳು ಸಿಕ್ಕಿದವು.

***

ಬರೋಡಾ ಸಂಸ್ಥಾನದ ರಾಜಧಾನಿಯಲ್ಲಿ ಕಳೆದ ಶನಿವಾರ ಬೆಂಕಿಬಿದ್ದು ೫೩ ಮನೆಗಳು ಉರಿದುಹೋದವು. ೬೦೦ ಮಂದಿ ಬಡ ಜನರು ಎಲ್ಲಾ ಕಳೆದುಕೊಂಡು ಬೀದಿ ಕಷ್ಟಪಡುತ್ತಿದ್ದಾರೆಂದು ಶ್ರೀಮನ್ ಮಹಾರಾಜರವರು ೨,೦೦೦ ರೂಪಾಯಿಯನ್ನು ಮಹಾರಾಣಿಯವರು ೧,೦೦೦ ರೂಪಾಯನ್ನೂ ಧರ್ಮ ಮಾಡಿದ್ದಾರೆ.

***

ರಂಗೂನ್ ಪಟ್ಟಣದ ಅಸಿಸ್ಟೆಂಟ್ ಕಮೀಷನರ್ ಮಿ॥ ಡೇವಿಸ್ ಎಂಬಾತನ ಮೇಲೆ ಕೆಲವು ಬರ್ಮಿಯರು ಬಿದ್ದು ಹೊಡೆಯುವುದಕ್ಕೆ ಪ್ರಯತ್ನಪಟ್ಟರು. ಆಗ ಆತನು ಪೋಲೀಸಿನವರನ್ನು ಕರೆಯುವುದಾಗಿ ಹೆದರಿಸಿದನು. ಆ ಜನರು ಕಲ್ಲುಗಳನ್ನು ತೂರಿ ಆತನನ್ನು ಘಾಸಿಗೊಳಿಸಿ ಮಾಡಿದರು. ಆತ ಬದುಕುವುದು ಕಷ್ಟವೆಂದು ತಿಳಿದುಬಂದಿದೆ.

***

ಕಳೆದ ಮಂಗಳವಾರ ಸರಿರಾತ್ರಿಯಲ್ಲಿ ಬೊಂಬಾಯಿ ಪಟ್ಟಣದ ಎಲ್ಫಿನ್‌ಸ್ಟನ್ ಸರ್ಕಲ್ ಎಂಬ ಭಾಗದಲ್ಲಿ ಬೆಂಕಿ ಬಿದ್ದು ಸುಮಾರು ೫ ಲಕ್ಷ ರೂಪಾಯಿನ ಸಾಮಾನು ಸುಟ್ಟುಹೋಯಿತು. ಸೂರಜ್ ಕೇಸ್ ಎಂಬ ಔಷಧದ ಅಂಗಡಿಯೂ ಹತ್ತಿಕೊಂಡಿದ್ದ ದಾಸ್ತಾನುಗಳು ಉರಿಯುತ್ತಾ ಬಹು ಪ್ರಕಾಶ ಕೊಟ್ಟವು. “ಕಾಗದ” ಎಂಬ ಪತ್ರಿಕಾ ಕಾರ್ಯಾಲಯಕ್ಕೆ ಬೆಂಕಿ ತಗಲಿ “ಟೈಮ್ಸ್ ಆಫ್ ಇಂಡಿಯಾ ಪ್ರೆಸ್” ಎಂಬ ಪ್ರೆಸ್ಸಿನ ಒಂದು ಭಾಗ ಉರಿದುಹೋಗಿದೆ.

***

ಕೆಲವು ದಿವಸಗಳ ಹಿಂದೆ ಮದರಾಸಿನಲ್ಲಿ ವೈದ್ಯವನ್ನು ಕಲಿತು ಪ್ಯಾಸ್ ಮಾಡಿ, ಸರ್ಕಾರದ ವೇತನವನ್ನು ಪಡೆದು ವಿಲಾಯತಿಗೆ ಪ್ರಯಾಣಮಾಡಿದ ಸೌ॥ ಕಮಲಮ್ಮನೆಂಬಾಕೆಯು ಎಡಿನ್‌ಬರೋ, ಗ್ಲಾಸ್ಗೋ ಪಟ್ಟಣಗಳಲ್ಲಿ ಇದುವರೆಗೆ ಓದಿ ವೈದ್ಯಭಾಗವನ್ನು ಕಲಿತು ಉತ್ತೀರ್ಣಳಾಗಿ ತೇರ್ಗಡೆ ಹೊಂದಿರುತ್ತಾಳೆಂತಲೂ, ಈಗ ಆಕೆ ಹೆಂಗಸರ ಮತ್ತು ಮಕ್ಕಳ ರೋಗ ಚಿಕಿತ್ಸೆಯನ್ನು ಬಹಳ ಚನ್ನಾಗಿ ಕಲಿತುಕೊಳ್ಳುವುದಕ್ಕಾಗಿ ಲಂಡನ್ ಪಟ್ಟಣ ಇಲ್ಲವೆ ಡಬ್ಲಿನ್ ನಗರಕ್ಕೆ ಹೋಗುವವಳಾಗಿದ್ದಾಳೆಂತಲೂ ತಿಳಿದು ಬಂದಿದೆ.

***

ಮುಂದಿನ ವರುಷದ ಮಾರ್ಚಿ ತಿಂಗಳಲ್ಲಿ ಅಲಹಾಬಾದ್ ಪ್ರಯಾಗದಲ್ಲಿ ಕುಂಭಕೋಣದಲ್ಲಿ ದೊಡ್ಡ ಪರ್ವ ಸೇರುವುದು. ಲಕ್ಷಾಂತರ ಹಿಂದೂ ಯಾತ್ರಿಕರು ಸ್ನಾನಾರ್ಥವಾಗಿ ಹೋಗುತ್ತಾರೆ. ಅಲ್ಲಿನ ದೊಡ್ಡ ಮನುಷ್ಯರೂ ಸರ್ಕಾರಿ ಅಧಿಕಾರಿಗಳೂ ಕೆಲವು ದಿನಗಳ ಕೆಳಗೆ ಒಂದು ದೊಡ್ಡ ಸಭೆಯನ್ನು ನಡಿಸಿ, ಆ ಉತ್ಸವ ಕಾಲದಲ್ಲಿ ಪ್ರಜಾ ಆರೋಗ್ಯಕ್ಕೆ ಸಹಕಾರಿಗಳಾದ ಏರ್ಪಾಡುಗಳನ್ನು ಮಾಡಬೇಕೆಂದು ಗೊತ್ತುಮಾಡಿದರು. ಅದಕ್ಕಾಗಿ ಒಂದು ಸಂಘವು ಏರ್ಪಾಡಾಗಿದೆ. ಇವರು ಕಾರ್ಯಾರಂಭ ಮಾಡಿರುತ್ತಾರೆ.

***

ಬೊಂಬಾಯಿ ಪಟ್ಟಣದಲ್ಲಿ ಪುರುಷೋತ್ತಮ ದಾಸನೆಂಬಾತನು “ಹಿಂದ್ ಸ್ವಾರಾಜ್ಯ” ಎಂಬ ತನ್ನ ಗುಜರಾತಿ ವಾರಪತ್ರಿಕೆಯ ಏಪ್ರಿಲ್ ೬ ಮತ್ತು ೧೧ನೇ ತಾರೀಖುಗಳ ಎರಡು ಸಂಚಿಕೆಗಳಲ್ಲಿ “ಇಂಗ್ಲಿಷರು ಲೇಖನಿಗೆ ಹೆದರುತ್ತಾರೆ,” “ಭಯಂಕರವಾದ ಎಚ್ಚರಿಕೆ” ಎಂಬ ವಿಷಯಗಳನ್ನು ಕುರಿತು ಬಾತ್ಮೀಗಳನ್ನು ಪ್ರಕಟಿಸಿ, ಪ್ರಜೆಗಳನ್ನು ಇಂಗ್ಲಿಷ್ ಗವರ್ನಮೆಂಟಿನ ಮೇಲೆ ಎತ್ತಿಕಟ್ಟುವುದಕ್ಕೆ ಪ್ರಯತ್ನಪಟ್ಟನೆಂಬುದಾಗಿ ಸರ್ಕಾರದವರು ಆತನನ್ನು ದಸ್ತಗಿರಿ ಮಾಡಿಸಿ ಆತನ ಮೇಲೆ ರಾಜದ್ರೋಹದ ಅಪರಾಧ ಹೊರಿಸಿ ಮೊಕದ್ದಮೆ ಮಾಡಿದ್ದಾರೆ.

***

ಬರ್ಮಾ ಆಧಿಪತ್ಯಕ್ಕೆ ಸೇರಿದ ಬೆಸ್ಸೀನ್ ಪಟ್ಟಣದ ಬಳಿ ಒಂದು ಗ್ರಾಮದಲ್ಲಿ ಕಳೆದ ವಾರ ಒಂದು ದಿನ ರಾತ್ರಿ ಕಳ್ಳರು ಗ್ರಾಮಾಧಿಕಾರಿಯ ಮನೆಗೆ ನುಗ್ಗಿ ಅವನ ಮಗಳನ್ನು ಕಡಿದುಹಾಕಿ, ಮನೆಯನ್ನೆಲ್ಲಾ ಶೋಧನೆ ಮಾಡಿ, ೫೦೦ ರೂಪಾಯಿನ ಸಾಮಾನುಗಳು ಮಾತ್ರ ಸಿಕ್ಕಿದ್ದರಿಂದ ಅದನ್ನು ದೋಚಿಕೊಂಡು, ಮನೆಯೊಳಗಿದ್ದ ಕಸ್ನೂರಿನ ಜನರನ್ನು ಹೊರಡಿಸಿಕೊಂಡು ಹೋಗಿ ದೋಣಿ ಹತ್ತಿಸಿ ಸಮುದ್ರದ ವರೆಗೂ ನಡಿಸಿ ಅಲ್ಲಿ ದೋಣಿಯನ್ನು ಮಗುಚಿಬಿಟ್ಟು ಓಡಿಹೋದರು. ೮ ಜನರು ಸಮುದ್ರದ ಪಾಲಾದರು. ಈ ವಿಧವಾದ ಕ್ರೂರಕೃತ್ಯವನ್ನು ಇದುವರೆಗೆ ಕೇಳಿರಲಿಲ್ಲ.

***

ಹಿಂದುಸ್ಥಾನದ ವಾಯವ್ಯ ಸರಹದ್ದಿನಲ್ಲಿ ಇಂಗ್ಲಿಷ್ ಸೈನ್ಯಗಳು ಮಹಮಂಡ್ ಜನರನ್ನು ಹತೋಟಿಗೆ ತರಬೇಕೆಂದು ಪ್ರಯತ್ನ ಪಡುತ್ತಿವೆಯಷ್ಟೆ. ಕಳೆದ ವಾರ ಇಂಗ್ಲಿಷ್ ಸೈನಿಕರು ಎರಡು ಮೂರು ಗ್ರಾಮಗಳಿಗೆ ನುಗ್ಗಿ ಶತ್ರುಗಳ ಕೋಟೆಗಳನ್ನೂ ಗೋಪುರಗಳನ್ನೂ ಕೆಡವಿ ನೆಲಸಮ ಮಾಡಿ ಬಂದರು. ಕಳೆದ ತಾ. ೧೬ ನೇ ಶನಿವಾರ ಸಮರಾತ್ರಿಯಲ್ಲಿ ಮಹಮಂಡ್ ಜನರು ನುಗ್ಗಿ ಬಂದು ಶಬ್‌ಕದ್ರ ಘಾಯಿ ಎಂಬ ಇಂಗ್ಲಿಷರ ಠಾಣ್ಯವನ್ನು ಘೇರಾಯಿಸಿಕೊಂಡರು. ಅಲ್ಲಿ ಸಣ್ಣ ಕದನವಾಯಿತು. ಇಂಗ್ಲಿಷರು ಶತ್ರುಗಳನ್ನು ಸೋಲಿಸಿ ಓಡಿಸಿದರು. ಈ ಯುದ್ಧದಲ್ಲಿ ಇಂಗ್ಲಿಷರ ಕಡೆಯಲ್ಲಿ ಇಬ್ಬರು ಹುದ್ದೇದಾರರೂ ಏಳು ಮಂದಿ ದೇಶೀಯ ಸೈನಿಕರೂ ಮೃತಪಟ್ಟರು. ಒಬ್ಬ ಹುದ್ದೇದಾರನಿಗೂ ೨೩ ಜನ ಸೈನಿಕರಿಗೂ ಗಾಯಗಳಾಗಿವೆ ಎಂದು ತಂತೀ ವರ್ತಮಾನ ಬಂದಿದೆ.

***

ರಂಗೂನ್ ಪಟ್ಟಣದ ಹತ್ತಿರ ನಯಿಪಾಂಗ್ ಎಂಬ ಗ್ರಾಮದಲ್ಲಿ ಇಬ್ಬರು ಬರ್ಮಿಯರಿಗೂ ಗ್ರಾಮಸ್ಥರಿಗೂ ಕಾದಾಟವಾಗಿ, ಗ್ರಾಮಸ್ಥರು ಹೊಡೆದ ಏಟಿನಿಂದ ಆ ಇಬ್ಬರು ಬರ್ಮಿಯರೂ ಸತ್ತುಹೋದರು. ಪೋಲೀಸಿನವರು ನಾಲ್ಕು ಜನ ಅಪರಾಧಿಗಳನ್ನು ಕಂಡು ಹಿಡಿದು ಮೊಕದ್ದಮೆ ಮಾಡಿದರು. ವಿ. ಎಸ್. ಭಟ್ಟಾಚಾರ್ಯ ಎಂಬ ಡಾಕ್ಟರು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲೂ ಸೆಷನ್ಸ್ ಕೋರ್ಟಿನಲ್ಲೂ ಸಾಕ್ಷಿಯಿತ್ತು ಕೊಟ್ಟು, ಮೂಳೆಗಳು ಮುರಿದಿರಲಿಲ್ಲವೆಂದು ಸುಳ್ಳು ಹೇಳಿದ್ದರಿಂದ ಜಡ್ಜಿಯವರು ಆ ನಾಲ್ವರಿಗೂ ಸ್ವಲ್ಪ ಮಾತ್ರ ಶಿಕ್ಷೆ ವಿಧಿಸಿದರು. ಅನಂತರ ಮೇಲೆ ಹೆಣಗಳನ್ನು ಕೀಳಿಸಿ ನೋಡಿದಾಗ ತಲೆ ಬುರುಡೆಗಳು ಒಡೆದಿದ್ದದ್ದು ಗೊತ್ತಾಯಿತು. ಆಗ ಆ ಡಾಕ್ಟರು ಸುಳ್ಳಾಗಿ ಅಬದ್ಧ ಸಾಕ್ಷಿ ಹೇಳಿದನೆಂದು ಅಪರಾಧ ಹೊರಿಸಲ್ಪಟ್ಟು ವಿಚಾರಣೆಗೆ ಗುರಿಯಾಗಿ ಆತನಿಗೆ ಮೂರು ವರುಷ ಕಠಿಣಸಜಾ ವಿಧಿಸಲ್ಪಟ್ಟಿತು.

***

ಹಿಂದುಸ್ಥಾನದ ಉತ್ತರ ಪಾರ್ಶ್ವದಲ್ಲಿರುವ ಟಿಬೆಟ್ಟಿನಲ್ಲಿ ವ್ಯಾಪಾರ ನಡಿಸುವ ಭಾಗದಲ್ಲಿ ಇಂಗ್ಲಿಷರಿಗೂ, ಟಿಬೆಟ್ಟಿನವರಿಗೂ, ಚೀನೀಯರಿಗೂ ಕಳೆದ ಏಪ್ರಿಲ್ ೨೦ ರಲ್ಲಿ ಕಲ್ಕತ್ತಾ ಪಟ್ಟಣದಲ್ಲಿ ಒಂದು ಕರಾರು ನಡೆಯಿತು. ಈ ಕರಾರಿಗೆ ಈ ಮೂರು ರಾಜ್ಯಗಳ ಪ್ರತಿನಿಧಿಗಳೂ ರುಜು ಹಾಕಿದ್ದಾರೆ. ಅದರಲ್ಲಿ ಅಡಕವಾಗಿರುವ ಮುಖ್ಯ ಷರತ್ತುಗಳೇನೆಂದರೆ—ಗಯಾಂಟ್ಸಿ ಎಂಬುವುದೇ ಮುಖ್ಯ ವ್ಯಾಪಾರ ಸ್ಥಳವಾಗಿದೆ. ಅಲ್ಲಿ ಇಂಗ್ಲಿಷರು ಮನೆಮಠಗಳನ್ನು ಕಟ್ಟಿಕೊಳ್ಳಬಹುದು. ಹಿಂದುಸ್ಥಾನದಿಂದ ಗಯಾಂಟ್ಸಿ ವರೆಗೆ ಇಂಗ್ಲಿಷರು ಕಟ್ಟಿರುವ ಹನ್ನೊಂದು ಠಾಣ್ಯಗಳನ್ನು ಚೀನೀಯರು ತೆಗೆದುಕೊಳ್ಳತಕ್ಕದ್ದು. ಆದರೆ ಅಲ್ಲಿ ಉದ್ದಕ್ಕೂ ಹಾಕಿರುವ ಟೆಲಿಗ್ರಾಫ್ ತಂತಿಗಳನ್ನು ಚೀನೀಯರು ಸಂರಕ್ಷಣೆ ಮಾಡಬೇಕು. ಇಂಗ್ಲಿಷ್ ಅಧಿಕಾರಿಗಳಾಗಲಿ ಪ್ರಜೆಗಳಾಗಲಿ ಮೇಲ್ಕಂಡ ವ್ಯಾಪಾರದ ಠಾಣ್ಯಗಳಿಗೆ ಹೋಗಿಬರಬೇಕಾಗಿದೆಯೇ ಹೊರತು ಅವರು ಟಿಬೆಟ್ಟಿನಲ್ಲಿ ಅಪ್ಪಣೆ ಇಲ್ಲದೆ ಸಂಚಾರ ಮಾಡಕೂಡದು. ಈ ಮೊದಲಾದ ಕರಾರುಗಳು ಹತ್ತು ವರುಷ ಕಾಲ ಜಾರಿಯಲ್ಲಿದ್ದು, ಅನಂತರ ಆರು ತಿಂಗಳೊಳಗಾಗಿ ಮತ್ತೆ ಮೂರು ರಾಜ್ಯಗಳವರೂ ಒಪ್ಪಿದಂತೆ ನಡೆದುಕೊಳ್ಳತಕ್ಕದ್ದಾಗಿದೆ.

ವಿದೇಶ ವರ್ತಮಾನಗಳು.

ಉದ್ಯೋಗಕ್ಕೆ ಸಿದ್ಧನಾಗಿರುವಂಥಾ ಅಫೀಮನ್ನು ಯಾರೂ ಬೇಸಗೆಗೆ ಕಳುಹಿಸದಂತೆ ಆ ಗವರ್ನಮೆಂಟಿನವರು ಒಂದು ಕಾನೂನನ್ನು ಮಾಡಿ ಜಾರಿಗೆ ತರುವವರಾಗಿದ್ದಾರೆ.

***

ವಿಲಾಯತಿಗೆ ಸೇರಿದ ಗ್ಲಾಸ್ಗೋ ಯೂನಿವರ್ಸಿಟಿ ವಿದ್ಯಾ ಸಂಘದ ಪರೀಕ್ಷೆಗಳಲ್ಲಿ ಈ ಸಲ ೬೯ ಮಂದಿ ಗಂಡಸರ ಜೊತೆಗೆ ೫೦ ಮಂದಿ ಸ್ತ್ರೀಯರು ಕೂಡ ತೇರ್ಗಡೆ ಹೊಂದಿ ಎಂ. ಎ. ಎಂಬ ಬಿರುದನ್ನು ಸಂಪಾದಿಸಿಕೊಂಡಿದ್ದಾರೆ.

***

ಅಮೇರಿಕಕ್ಕೆ ಸೇರಿದ ಪಶ್ಚಿಮ ಲೌಸಿಯಾನಾ ಡಿಸ್ಟ್ರಿಕ್ಟಿನಲ್ಲಿ ಅಪಾರವಾದ ಮಳೆಯೂ ಬಿರುಗಾಳಿಯೂ ಉಂಟಾಗಿ ಗಿಲಿಯಾಂ ಎಂಬ ಪಟ್ಟಣವು ಕೊಚ್ಚಿಹೋಯಿತು. ಎಲ್ಲೆಯ ಭಾವಿಗಳೆಲ್ಲಾ ನಾಶವಾದವು. ನೂರು ಜನರು ಮೃತಪಟ್ಟಂತೆಯೂ ೩೦೦ ಜನರಿಗೆ ಗಾಯ ಆಗಿರುವಂತೆಯೂ ತಂತೀ ವರ್ತಮಾನ ಬಂದಿದೆ.

***

ಲಂಡನ್ ಪಟ್ಟಣದ ಉದ್ಯಾನ ವನದೊಳಗೆ ಮೃಗಾಲಯದಲ್ಲಿದ್ದ ಒಂದು ಆನೆಯು ಮೃತಪಟ್ಟಿತು. ಅದು ಬದುಕಿದ್ದಾಗ ಕಲ್ಲುಗಳನ್ನು ಎಲ್ಲಿ ಕಂಡರೂ ಕೊಂಡಲಿನಿಂದೆತ್ತಿ ನುಂಗಿಬಿಡುತ್ತಿತ್ತು. ಡಾಕ್ಟರು ಅದರ ಹೊಟ್ಟೆಯನ್ನು ಕೊಯಿದು ಪರೀಕ್ಷೆಮಾಡಿದಾಗ ೧೬೮ ಕಲ್ಲುಗಳು ಸಿಕ್ಕಿದವು. ಇದನ್ನು ಕೇಳಿ ಎಲ್ಲರೂ ಆಶ್ಚರ್ಯಪಡುತ್ತಾರೆ.

***

ಲಂಡನ್ ಪಟ್ಟಣದಲ್ಲಿ ರೈಟ್ ಎಂಬ ಸಹೋದರರು ಆಕಾಶವಿಮಾನವನ್ನು ರಚಿಸಿ, ಅದರಲ್ಲಿ ಕುಳಿತು ಕಳೆದ ವಾರ ಅಂತರಿಕ್ಷದಲ್ಲಿ ೩॥ ನಿಮಿಷದಲ್ಲಿ ೮ ಮೈಲಿ ದೂರ ಸಂಚಾರ ಮಾಡಿದರು. ಕಡೆಗೆ ಆ ಯಂತ್ರದಲ್ಲಿ ಕುಂದೇನೋ ಇದ್ದದ್ದರಿಂದ ಅದು ಕೆಟ್ಟುಹೋಗಿ ಬಿದ್ದು ಮುರಿದು ಹೋಯಿತು. ಆದರೆ ಅದರೊಳಗೆ ಕೂತಿದ್ದವರಿಗೆ ಅಪಾಯವೇನೂ ಸಂಭವಿಸಲಿಲ್ಲ.

***

ನೇಪಾಳದ ಮಂತ್ರಿಶ್ರೇಷ್ಠರು ವಿಲಾಯತಿಗೆ ದಯಮಾಡಿದ್ದಾರಷ್ಟೆ. ಇವರನ್ನು ಚಕ್ರವರ್ತಿಯವರು ತಮ್ಮ ಗಾಡಿ ಕೊಟ್ಟು, ರಾಜಭವನಕ್ಕೆ ಕರೆಸಿಕೊಂಡು, ತಮ್ಮ ಪಕ್ಕದಲ್ಲೇ ಪೀಠದ ಮೇಲೆ ಕೂಡಿಸಿ, ದರ್ಬಾರು ನಡಿಸಿದರು. ಅವರನ್ನು ಸನ್ಮಾನ ಮಾಡುವುದಕ್ಕಾಗಿ ಚಕ್ರವರ್ತಿಯವರು ಇಂಗ್ಲಿಷ್ ಸೈನ್ಯಗಳನ್ನು ಕರೆಸಿ ಅವರ ಸಾಹಸ ಚಮತ್ಕಾರಾದಿಗಳನ್ನು ಪ್ರದರ್ಶನ ಮಾಡಿದರು.

***

ಜಪಾನಿಂದ ಬೌದ್ಧ ಸನ್ಯಾಸಿಗಳು ದೇಶಾಟನೆಗೆಂದು ಚೀನಾ ರಾಜ್ಯಕ್ಕೆ ಬಂದು, ಬೌದ್ಧ ಮತತತ್ವಗಳನ್ನು ಚೀನೀಯರಿಗೆ ಬೋಧಿಸುತ್ತಿದ್ದಾರೆಂದು ಚೀನಾ ಅಧಿಕಾರಿಗಳು ಕಂಡು ಹಿಡಿದು, ಇನ್ನು ಮುಂದೆ ಜಪಾನವರು ಬೇಕಾದರೆ ದೇಶಾಟನೆಗಾಗಿ ಚೀನಕ್ಕೆ ಬರಬಹುದಲ್ಲದೆ ಬೌದ್ಧ ಮತವನ್ನು ಬೋಧಿಸಿದ್ದು ಗೊತ್ತಾದರೆ ಅಂಥವರನ್ನು ದೇಶದಿಂದ ಹೊರಕ್ಕೆ ಕಳುಹಿಸಿಬಿಡುತ್ತೇವೆಂದು ಇಸ್ತಿಹಾರು ಹಾಕಿಸಿರುತ್ತಾರೆ.

***

ಎಂ. ಅರ್ಮೆಂಗಾಡ್ ಎಂಬೊಬ್ಬ ಫ್ರೆಂಚ್ ಇಂಜನಿಯರೂ ಶಾಸ್ತ್ರಜ್ಞನೂ ಒಂದು ದೂರದರ್ಶಕ ಯಂತ್ರವನ್ನು ರಚಿಸಬೇಕೆಂದು ಪ್ರಯತ್ನಪಡುತ್ತಿದ್ದಾನೆ. ಅದರ ಶಕ್ತಿ ಎಂಥಾದ್ದೆಂದರೆ ಲಂಡನ್ ಪಟ್ಟಣದಲ್ಲಿ ಕುಳಿತು ಅದನ್ನು ಹಿಡಿದು ನೋಡಿದರೆ ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯಾರ್ಕ್ ನಗರದಲ್ಲಿ ನಡೆಯುವ ವಿದ್ಯಮಾನಗಳು ಕಂಡು ಬರಬೇಕು. ಇಂಥಾ ದೂರದರ್ಶಕ ಯಂತ್ರವನ್ನು ರಚಿಸುವುದು ಸಾಧ್ಯವೆಂತಲೂ, ಇನ್ನು ಕೆಲವು ಕಾಲದೊಳಗೇ ಅದನ್ನು ಸಿದ್ಧಪಡಿಸುವನೆಂತಲೂ ಈ ಶಾಸ್ತ್ರಜ್ಞನು ತಿಳಿಸಿರುವನು.

***

ಇಟಲಿ ರಾಜ್ಯದ ರಾಜಧಾನಿಯಾದ ರೋಮ್ ಪಟ್ಟಣದಲ್ಲಿ ಸುಮಾರು ಮೂರು ವಾರಗಳ ಹಿಂದೆ ಸ್ತ್ರೀಯರ ಸಮಾಜವೊಂದು ನಡೆಯಿತು. ಕೌಂಟೆಸ್ ಸ್ಪಲೆಟಿ ರಾಸ್ಪೊನಿ ಎಂಬ ಸ್ತ್ರೀಯು ಸಭಾನಾಯಕಿಯಾಗಿದ್ದಳು. ಪರೋಪಕಾರ ಮಹತ್ಕಾರ್ಯಗಳಿಂದ ಈಕೆ ಪ್ರಸಿದ್ಧಿ ಹೊಂದಿರುವಳು. ಈ ಸಮಾಜದಲ್ಲಿ ಸ್ತ್ರೀ ಪ್ರತಿನಿಧಿಗಳು ಸ್ತ್ರೀ ವಿದ್ಯಾಭ್ಯಾಸ, ಕಾರ್ಖಾನೆಗಳಲ್ಲಿ ಹೆಂಗಸರು ಕೆಲಸಮಾಡುವುದು, ಮನೆಗಳಲ್ಲಿ ಸಣ್ಣ ಪುಟ್ಟ ಕಸಬುಗಳನ್ನು ಸ್ತ್ರೀಯರು ಅವಲಂಬಿಸುವುದು, ಬಡಬಗ್ಗರೂ ಅನಾಥೆಯರೂ ಆದ ಸ್ತ್ರೀಯರಿಗೆ ಉಪಕಾರ ಕಾರ್ಯಗಳನ್ನು ಮಾಡುವುದು. ಈ ಮೊದಲಾದ ವಿಚಾರಗಳನ್ನು ಕುರಿತು ಚರ್ಚೆ ಮಾಡಿದರು.

***

ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಕಳೆದ ಗುರುವಾರ ಲಂಡನ್ ಪಟ್ಟಣದ ಷೆಫರ್ಡ್ಸ್ ಬುಷ್ ಎಂಬ ಭಾಗದಲ್ಲಿ ಸರ್ವವಸ್ತುಪ್ರದರ್ಶನ ಶಾಲೆಯನ್ನು ಪ್ರಾರಂಭ ಮಾಡಿದರು. ಫ್ರಾನ್ಸ್ ರಾಜ್ಯದ ಇಬ್ಬರು ಮಂತ್ರಿಗಳೂ ಹಾಜರಾಗಿದ್ದರು. ಈ ಪ್ರದರ್ಶನವು ಇಂಗ್ಲಿಷರಿಂದಲೂ ಫ್ರೆಂಚರಿಂದಲೂ ಏರ್ಪಡಿಸಿದ್ದಾಗಿರುತ್ತದೆ. ಪ್ರಿನ್ಸ್ ಆಫ್ ವೇಲ್ಸ್‌ರವರು ಪ್ರದರ್ಶನವನ್ನು ಪ್ರಾರಂಭಿಸುವ ಸಮಯದಲ್ಲಿ ಆರುಮಾಯ ನಡೆದ ಭಾರೀ ಬಿರುಗಾಳಿಯಲ್ಲೂ ಫ್ರೆಂಚರ ಸಹಾಯವನ್ನು ಕೊಂಡಾಡಿ, ಇಂಥಾ ಕಾರ್ಯಗಳಿಂದ ಇಂಗ್ಲಿಷ್ ಮತ್ತು ಫ್ರೆಂಚ್ ಗವರ್ನಮೆಂಟುಗಳ ಸ್ನೇಹಭಾವವೂ ಪರಸ್ಪರ ಪ್ರೀತಿಯೂ ಅಭಿವೃದ್ಧಿಯಾಗುವುದರಲ್ಲಿ ಸಂಶಯವಿಲ್ಲವೆಂದು ತಿಳಿಸಿದರು.

***

ಟಿಬೆಟ್ಟಿನ ಮುಖಂಡರಾದ ದಲಾಯಿಲಾಮಾ ತಾಷಿಲಾಮಾ ಎಂಬ ಗುರುಗಳು ಚೀನಕ್ಕೆ ಹೋಗಿಬರಬೇಕೆಂದು ಪ್ರಯಾಣ ಮಾಡುತ್ತಿದ್ದಾರೆ. ಚೀನೀಯರು ಇವರನ್ನು ವಿಶೇಷ ಆಡಂಬರದಿಂದ ಸತ್ಕಾರ ಮಾಡಿ, ಟಿಬೆಟ್ ರಾಜ್ಯವನ್ನು ಮತ್ತೆ ತಮ್ಮ ಅಧೀನಕ್ಕೆ ತಂದುಕೊಳ್ಳಬೇಕೆಂದು ಪ್ರಯತ್ನಪಟ್ಟಿರುವಂತೆ ತಿಳಿಯುವುದು. ಈ ಲಾಮಾ ಎಂಬ ಗುರುಗಳು ಚೀನಾ ರಾಜಧಾನಿಯಾದ ಪೀಕಿಂಗ್ ನಗರದಲ್ಲಿರುವ ಪರರಾಜ್ಯಗಳ ರಾಯಭಾರಿಗಳಿಗೆ ತಾವು ಬರುವುದನ್ನು ತಿಳಿಯಪಡಿಸಿದರು. ಜಪಾನಿನ ರಾಯಭಾರಿಯು ತನ್ನ ಚಕ್ರವರ್ತಿಯ ಭಾವಚಿತ್ರವನ್ನು ಲಾಮಾರವರಿಗೆ ಒಪ್ಪಿಸಿರುತ್ತಾರೆ. ಅಮೇರಿಕದ ರಾಯಭಾರಿಯು ಕೂಡ ಈ ಲಾಮಾ ಗುರುಗಳಿಗೆ ವಿಶೇಷವಾದ ಅಭಿಮಾನವಿರುವಂತೆ ತೋರಿಸುತ್ತಾರೆ.

***

ಅಮೇರಿಕಕ್ಕೆ ಸೇರಿದ ಚಿಕಾಗೋ ನಗರದಲ್ಲಿ ಹೆಣ್ಣುಮಕ್ಕಳು ಸಾಮಾನ್ಯವಾಗಿ ಓದು ಬರಹ ಲೆಕ್ಕಾಚಾರಗಳಲ್ಲಿ ಗಟ್ಟಿಗರೆನ್ನಿಸಿಕೊಂಡ ಮೇಲೆ ಬೇರೆ ವಿದ್ಯೆಯನ್ನು ಕಲಿಯುವುದಕ್ಕೆ ಒಂದು ನವೀನವಾದ ವಿದ್ಯಾಶಾಲೆಯು ಏರ್ಪಾಡಾಗಿದೆ. ಈ ವಿದ್ಯಾಶಾಲೆಯಲ್ಲೇ ಹುಡುಗಿಯರನ್ನು ಇಟ್ಟು ಊಟಮಾಡಿಸಿ ವಿದ್ಯೆ ಕಲಿಸುತ್ತಾರೆ. ಅಡಿಗೆ, ಹೊಲಿಗೆ, ಗೃಹಕೃತ್ಯವಿಚಾರ, ಆಟಗ, ಈ ವಿದ್ಯೆಗಳನ್ನೂ ಗಂಡನ ವಿಷಯದಲ್ಲಿ ಹೆಂಡತಿಯು ನಡೆದುಕೊಳ್ಳತಕ್ಕ ಕ್ರಮ, ಮಕ್ಕಳ ಪೋಷಣೆ ಈ ವಿಷಯಗಳನ್ನೂ ಹೇಳಿ ಕಲಿಸುವರು. ಇದಲ್ಲದೆ ಮದುವೆ ಮಾಡಿಕೊಳ್ಳುವುದಕ್ಕೆ ಕನ್ಯೆಯರು ಬೇಕೆಂದು ಅಪೇಕ್ಷಿಸುವವರು ಈ ವಿದ್ಯಾಶಾಲೆಯ ಮುಖ್ಯಾಧಿಕಾರಿಗೆ ಅರ್ಜಿಯನ್ನು ಬರೆದುಕೊಂಡರೆ ಆ ಅಧಿಕಾರಿಯು ಅರ್ಜಿದಾರರ ಸ್ಥಿತಿಗತಿಯನ್ನೂ ಯೋಗ್ಯತೆ ಶೀಲಸ್ವಭಾವಾದಿಗಳನ್ನೂ ವಿಚಾರಮಾಡಿ, ಆ ವಿದ್ಯಾಶಾಲೆಯೊಳಗಿರುವ ಹುಡುಗಿಯರ ಪೈಕಿ ಒಬ್ಬಳನ್ನು ವಿವಾಹಕ್ಕೆ ಗೊತ್ತುಮಾಡಿ ಕೊಡುವರು. ಇಂಥಾ ಏರ್ಪಾಡು ಪ್ರಪಂಚದಲ್ಲಿ ಅಪರೂಪವಾಗಿರುತ್ತದೆ. ಇದು ಎಷ್ಟುಮಟ್ಟಿಗೆ ಸಾರ್ಥಕವಾಗುವುದೋ ಹೇಳಲಾಗದು.

ಅಲಾರ್ಕಾನ್ ಗವರ್ನರ್ ಮೋರೆಲಾಸ್‌ಯವರು.

ಪೆ-ರೂ-ನಾ ಕೈತ್ಯದಿಂದುಂಟಾಗುವ ಸಮಸ್ತ ರೋಗಗಳಿಗೂ ತಕ್ಕ ಔಷಧವೆಂದೂ, ನಂಬಿಕೆಯಾದ ಆರೋಗ್ಯವನ್ನೂ ಸಹಜವಾದ ಕಾಯಪುಷ್ಟಿಯನ್ನೂ ಕೊಡತಕ್ಕ ಔಷಧವೆಂದೂ ಮೆಕ್ಸಿಕೋ ರಾಜ್ಯದಲ್ಲಿ ಪೂರ್ವದಿಂದ ಪಶ್ಚಿಮಕ್ಕೂ ಉತ್ತರದಿಂದ ದಕ್ಷಿಣಕ್ಕೂ ಎಲ್ಲಾ ಪ್ರದೇಶಗಳಲ್ಲೂ ಪ್ರಖ್ಯಾತವಾಗಿದೆ.

ಪೆರೂನಾವಿನ ದೊಡ್ಡ ಪರೀಕ್ಷೆ

ಪ್ರತಿ ಒಂದು ದೇಶದ ಹವಾಸ್ಥಿತಿಯೂ ಅದದಕ್ಕೆ ಅನುಗುಣವಾಗಿಯೂ ವಿಜಾತೀಯವಾಗಿಯೂ, ಅದ್ದರಿಂದ ಅಲ್ಲಲ್ಲಿಗೆ ತಕ್ಕ ರೋಗಗಳನ್ನು ಳ್ಳದ್ದಾಗಿಯೂ ಇದೆ

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಯನ್ನು ಪಡೆದಿರುವ ಪೆರೂನಾವಿನ ಗುಣಗಳನ್ನು ಪರಿಷ್ಕಾರವಾಗಿ ಪರೀಕ್ಷೆಮಾಡ-ವುದಕ್ಕೆ ಮೆಕ್ಸಿಕೋ ರಾಜ್ಯ ಒಂದೇ ಸಾಕಾಗಿದೆ ಆ ರಾಜ್ಯದಲ್ಲಿ ಅತ್ಯಂತ ಶೈತ್ಯವೂ, ಅತ್ಯಂತ ಉಷ್ಣವೂ ಸಾಮಾನ್ಯವೂ ಮಧ್ಯಸ್ಥವೂ ಆದ ಹವಾಗುಣವುಳ್ಳ ಪ್ರದೇಶಗಳೆಲ್ಲಾ ವಿಶೇಷವಾಗಿರುತ್ತವೆ

ಮೆಕ್ಸಿಕೋದಲ್ಲಿ ಬಹಳವಾಗಿ ಹುಟ್ಟುವ ಶೈತ್ಯರೋಗಗಳಿಗೂ ಉತ್ತರಧ್ರುವಪ್ರಾಂತ್ಯಗಳಲ್ಲಿ ಹುಟ್ಟತಕ್ಕ ಶೈತ್ಯರೋಗಗಳಿಗೂ ತಾರತಮ್ಯವಿರುತ್ತದೆ

ಚಳಿರಾಜ್ಯಗಳಲ್ಲಿ ಜನರಿಗೆ ವಿಶೇಷವಾಗಿ ಮೂಗು ಮತ್ತು ಗಂಟಲ ಗಳಲ್ಲೇ ಶೀತ ಹುಟ್ಟಿ ಪ್ರಬಲವಾಗುವುದು ಉಷ್ಣರಾಜ್ಯಗಳಲ್ಲಿ ಶೀತರೋಗಗಳೆಲ್ಲಾ ಮನುಷ್ಯನ ಹೊಟ್ಟೆಯೊಳಗಿರುವಂಥಾ ಅನ್ನಕೋಶ, ಪಿತ್ತಕೋಶ, ಮಲಕೋಶ, ಜಲಬಾಧೆಯಕೋಶ ಈ ಮೊದಲಾದವುಗಳಿಗೆ ಶೈತ್ಯಹಿಡಿದು, ಅಂತರ್ಯವಾದ ನಾನಾ ರೋಗಗಳನ್ನು ಹುಟ್ಟಿಸುತ್ತೆ.

ಈ ಪ್ರಕಾರ ಅವರ ಲಕ್ಷಣಗಳು ನಾನಾ ಪ್ರಕಾರವಾಗಿದ್ದರೂ ರೋಗಕ್ಕೆ ಕಾರಣವೇನೋ ಒಂದೇ ಆಗಿದೆ ಈ ಶೈತ್ಯವು ನೆತ್ತಿ ಹತ್ತಿ ರಬಹುದು, ಗಂಟಲು ಹಿಡಿದಿರಬಹುದು, ಒಳ ಹೊಟ್ಟೆ ಕಿಬ್ಬೊಟ್ಟೆಗಳನ್ನು ಅಂಟಿಕೊಂಡಿರಬಹುದು ಆದರೂ ಶೀತವೇ ಅವುಗಳಿಗೆ ಕಾರಣವು

ಶೀತರಾಜ್ಯಗಳಲ್ಲಿ ಹುಟ್ಟತಕ್ಕ ಶೈತ್ಯರೋಗಗಳಿಗೆ ಪೆರೂನಾವು ಎಷ್ಟು ಖಂಡಿತ ಗುಣಕಾರಿಯಾಗಿ ಕಂಡುಬಂದಿರುವುದೋ ಅದೇ ರೀತಿ ಉಷ್ಣರಾಜ್ಯಗಳ ಶೀತರೋಗಗಳಿಗೂ ಮಹಾ ಗುಣಕಾರಿಯಾದ ಔಷಧವೆಂದು ಪ್ರಸಿದ್ಧಿಗೊಂಡಿದೆ

ಪೆರೂನಾವು ಶೈತ್ಯರೋಗಗಳಿಗೆ ಪರಮೌಷಧವಾಗಿರುವುದು ಮಾತ್ರವೇ ಅಲ್ಲ, ಅದು ಮಹಾ ಬಲಕಾರಿಯಾದ ಮತ್ತು ಪುಷ್ಟಿಕೊಡುವ ಸೇವನಾ ಔಷಧವೆಂದೂ ಯಶಸ್ಸನ್ನು ಪಡೆದಿರುತ್ತದೆ

ಪೆರೂನಾದಲ್ಲಿ ಬಲವನ್ನೂ ಕಾಯಪುಷ್ಟಿಯನ್ನೂ ಕೊಡುವಂಥಾ ಗುಣಗಳಿರೋಣದರಿಂದಲೇ ಉಷ್ಣರಾಜ್ಯಗಳವರು ಅದನ್ನು ವಿಶೇಷವಾಗಿ ಪ್ರೀತಿಸಿ ಉಪಯೋಗಿಸಿ ಹೊಗಳುತ್ತಾರೆ

ಪೆರೂನಾ ಸ್ವಭಾವಸಿದ್ಧವಾದ ಬಲಕೊಡುವ ಸೇವನಾ ಔಷಧವಾಗಿರುತ್ತದೆ. ಅದು ದೇಹದೊಳಗಿರತಕ್ಕ ನಾನಾ ಕೋಶಗಳ ಕಾರ್ಯಗಳನ್ನು ಕ್ರಮಕ್ಕೆ ತಂದಿಟ್ಟು ಪುಷ್ಟಿಮಾಡತಕ್ಕದ್ದಾಗಿದೆ

ಅದು ಒಳ್ಳೆ ಹಸಿವೆ ಚಟುವಟಿಕೆಯನ್ನು ಕೊಡುತ್ತದೆ ತಿಂದ ಆಹಾರವನ್ನು



ಸಾನ ವ್ಯಾನುಯಲ್ ಅಲಾರ್ಕಾನ್ ಮೊರೆಲಾಸ್ ಗವರ್ನರು ಮೆಕ್ಸಿಕೊ

ಡಾ॥ ಎಸ್ ಬಿ ಹಾರ್ಟ್‌ಮನ್‌ರಿಗೆ ೧೩೧-೪

ಕೊಲಂಬಸ್ ಓಹಿಯೋ ಅಮೇರಿಕ

ಅಯ್ಯಾ —ನಾನು ಅನೇಕ ಜನರನ್ನು ನಿಮ್ಮ ಔಷಧಿ ಸೇವಿಸುವಂತೆ ಪ್ರೋತ್ಸಾಹಪಡಿಸಿದೆನು ಅವರಿಗೆ ಅನುಕೂಲವಾದ ವಿಷಯವನ್ನು ಧಾರಾಳವಾಗಿ ತಿಳಿಸುತ್ತೇನೆ ಇಂಥಾ ಫಲವನ್ನು ನಿಮ್ಮ ಔಷಧವು ಕೊಟ್ಟಿರ ಪ್ರಮಾಣ ನೋಡಿ ನನಗೆ ತುಂಬಾ ಸಂತೋಷವಾಗಿದೆ

ನಿಮ್ಮ ಪ್ರೀತಿಪಾತ್ರನಾದ

ಮ್ಯಾನ್ಯುಯಲ್ ಅಲಾರ್ಕಾನ್

ಮೋರೆಲಾಸ್,

ಡಿಸೆಂ ೫, ೧೯೦೫

ಅದು ಚನ್ನಾಗಿ ಅರಗಿಸಿ, ಪರಿಷ್ಕಾರವಾಗಿ ದೇಹದ ಅಂಗಾಂಗಗಳಿಗೆ ವ್ಯಾಪಿಸುವಂತೆಯೂ ಅವನ್ನು ಬಲಪಡಿಸುವಂತೆಯೂ ಕೆಲಸಮಾಡುವುದು

ಅದು ಬಲವನ್ನು ಕೊಟ್ಟು ಶರೀರ ಧರ್ಮವನ್ನು ವೃದ್ಧಿಮಾಡುವುದಲ್ಲದೆ ದೇಹವನ್ನೂ ಮನಸ್ಸಿನ ಖಿನ್ನತೆಯನ್ನೂ ನಿವಾರಣೆ ಮಾಡುತ್ತದೆ ಆದರೆ ಇದು ಮದಕಾರಕಗಳಂತೆ ಕ್ಷಣಿಕವಾದ ಶಕ್ತಿಯನ್ನು ಕೊಡತಕ್ಕಂಥಾದ್ದಲ್ಲವು

ಚಟುವಟಿಕೆಯೂ ಆರೋಗ್ಯವೂ

ಮಿ॥ ರಿಚರ್ಡ್ ಕ್ಯಾಲ್ವರ್ಟ್, ೩ ವಿಂಟಾಗ್ ಬೀದಿ, ಬ್ರೂಕ್ಲಿನ್, ನ್ಯೂಯಾರ್ಕ್, ಅಮೇರಿಕ, ಈತ ಬರೆಯುವುದು —

“ ಹಸಿದವನಿಗೆ ಆಹಾರ ಹ್ಯಾಗೋ ಬಾಯಾರಿದವನಿಗೆ ನೀರು ಹ್ಯಾಗೋ, ಹಾಗೆ ಶಾಖ್ಯಲೆಯುವನಿಗೆ ಪೆರೂನಾವು ಇರುವುದೆಂದು ತಿಳಿಯಿರಿ

“ ಡಾಕ್ಟರುಗಳಿಗಿಂತಲೂ ಪೆರೂನಾವು ಅತಿಸೂಕ್ಷ್ಮವಾಗಿ ರೋಗವನ್ನು ವಾಸಿಮಾಡತಕ್ಕದ್ದೆಂದು ನನ್ನ ಮನಸ್ಸಿಗೆ ತೋರಿದೆ

“ ಅನೇಕ ವರುಷಗಳ ತನಕ ನನಗೆ ಆಹಾರ ಜೀರ್ಣವಾಗುತ್ತಿರಲಿಲ್ಲ, ನನ್ನ ಪಿತ್ತ ಕೋಶವು ಮಂದಗತಿಯಲ್ಲಿತ್ತು.

ಆಗಾಗ್ಗೆ ಮಲವು ಸಾಗದ ಕಟ್ಟು, ಭೇದಿಯಾಗುತ್ತಲೂ, ಕಿಬ್ಬೊಟ್ಟೆ ನೋಯುತ್ತಲೂ ಇದ್ದಿತು

“ ನನಗೆ ಅನುಕೂಲ ಮಾಡಬೇಕೆಂದು ಡಾಕ್ಟರುಗಳು ತಮ್ಮ ಕೈಲಾದ ಮಟ್ಟಿಗೂ ಪ್ರಯತ್ನ ಪಟ್ಟರು ಆದರೆ ನನಗಿದ್ದ ನಿಜವಾದ ರೋಗಲಕ್ಷಣವೇ ಅವರಿಗೆ ತಿಳಿಯದೆ ಹೋಯಿತೋ, ಅಥವಾ ಅವರು ಸರಿಯಾದ ಔಷಧವನ್ನು ಕೊಡದೆಹೋದರೋ

“ ಹನ್ನೊಂದು ವಾರಗಳಲ್ಲಿ ಪೆರೂನಾವು ನನಗೆ ವಾಸಿಮಾಡಿತು ಅದು ನನ್ನನ್ನು ಚಟುವಟಿಕೆಯಾಗಿಯೂ ಆರೋಗ್ಯವಾಗಿಯೂ ಮಾಡಿತು ನಿಜವಾಗಿಯೂ ವಿವಾಗಿ ನಾನು ಕೃತಜ್ಞನಾಗಿರುವೆನು ”

ಸ್ನೇಹಿತನು ಪೆರೂನಾ ಸೇವಿಸೆಂದು ಹೇಳಿದನು

ಮಿ॥ ಬಾಸ್‌ಕ್ಯಾಗ್ ಫೋರ್ಸ್‌ನೇಲ್, ಟಿಸ್ಸಿ ಸಿ, ಅಮೇರಿಕ ಈತ ಬರೆಯುವುದು —

“ ಎರಡು ವರುಷಕಾಲ ನನ್ನ ನೆತ್ತಿಗೆ ಶೀತ ಹಿಡಿದಿತ್ತು ಒಬ್ಬ ಸ್ನೇಹಿತನು ಒಂದು ಪೆರೂನಾ ಸೇವಿಸು ಎಂದು ನನಗೆ ಹೇಳಿದನು ಅದರಿಂದ ನನಗೆ ಸಂಪೂರ್ಣವಾಗಿ ವಾಸಿಯಾಯಿತೆಂದು ಆಶ್ಚರ್ಯಪಡ ಕೀನೆ

ಏಳು ವರುಷದ ಶೈತ್ಯರೋಗವು

ಮಿ॥ ಅಂಬ್ರೋಸ್‌ಕಿಸ್, ೫೧೦ ಇ ೨೩ ನೇ ಬೀದಿ ಕ್ಯಾನ್‌ಸಾಸ್ ಪಟ್ಟಣ, ಮಿಸೌರಿ, ಅಮೇರಿಕ, ಈತ ಬರೆಯುವುದು —

“ ನನಗೆ ವಾಸಿಯಾದದ್ದಕ್ಕೆ ನಿಮ್ಮನ್ನು ಎಷ್ಟು ವಂದಿಸಿದರೂ ತೀರದು ನಾನು ಏಳು ವರುಷಗಳ ವರೆಗೆ ಶೀತ ನೆಗಡಿ ಕೆಮ್ಮು ಅನುಭವಿಸಿ, ನೂರಾರು ದ್ರವ್ಯವನ್ನು ಖರ್ಚುಮಾಡಿ ಔಷಧಿಗಳನ್ನು ಸೇವಿಸಿದೆನು ಆದರೂ ನನ್ನ ಶೈತ್ಯರೋಗವು ಕಟ್ಟಾಯಿತೇ ವಿನಹಾ ಕಡಮೆಯಾಗಲಿಲ್ಲ

“ ನನಗೆ ಔಷಧಿ ಕೊಡುತ್ತಿದ್ದವರಲ್ಲಿ ಕೆಲವು ಡಾಕ್ಟರ ಗಳು ಬಹಳ ಪ್ರಖ್ಯಾತಿಪಡೆದವರಾಗಿದ್ದರೂ ನನಗೆ ಅತಿ ಕಠಿಣವಾದ ಕೆಮ್ಮು ಇದ್ದೇ ಇದ್ದಿತು ಈ ಕಷ್ಟ ನ ಕಷ್ಟವನ್ನು ನಾನು ವಾಸಿಮಾಡಿಕೊಂಡೇನೆಂಬ ಭರವಸೆ ಇರಲೇ ಇಲ್ಲ

“ ಆಗ ನಾನು ಒಂದು ಬಾಟ್ಲು ಪೆರೂನಾ ಕೊಂಡು ತಂದು, ಅದರಲ್ಲಿ ಹೇಳಿರುವ ಕ್ರಮದ ಪ್ರಕಾರ ಆ ದಿನ ರಾತ್ರಿ ಸೇವಿಸಿದೆನು ಮರುದಿನ ಬೆಳಿಗ್ಗೆಯೇ ನನಗೆ ಸ್ವಲ್ಪ ಗುಣವಾದಂತೆ ತೋರಿತು

ಮೂರು ದಿನ ಸೇವಿಸಿದ ಮೇಲೆ ನನಗೆ ತುಂಬಾ ಅನುಕೂಲವಾಯಿತು ಈ ಗುಣವಾದರೋ ವಾಲ್ಕನೆ ಕೀಸೆಯ ಔಷಧವನ್ನು ಮುಗಿಸಿದ ಮೇಲೆ ನಾನು ಸಂಪೂರ್ಣವಾಗಿ ಆರೋಗ್ಯಹೊಂದಿರುತ್ತೇನೆ

“ ಈ ಸರ್ವ ಶ್ರೇಷ್ಠವಾದ ಔಷಧವನ್ನು ಸೇವಿಸುವಂತೆ ಪ್ರತಿ ಒಬ್ಬನಿಗೂ ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುವೆನು ”

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ

ವಿಳಾಸ:—ಹಿಂದೂಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ.—
ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೧—೫—೧೯೦೮ ರಿಂದ ೮—೫—೧೯೦೮ ರ ವರೆಗೆ

ಸ್ಥಳ	ಪ್ಲೇಗ್ ಆಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ಆಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	0	0	0
ಮೈಸೂರು ,,	0	0	5	5
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	*	*	*	*
ಕೋಲಾರ್ ,,	2	2	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	0	0	0	0
ಶಿವಮೊಗ್ಗ ,,	*	*	*	*
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	3	2	5	5

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ವೈಶಾಖ ಬಹುಳ ಷಷ್ಟಿ ಗುರುವಾರದಿಂದ ವೈಶಾಖ ಬಹುಳ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯಾತ್ ಮಾಸ
21	ಗುರು *	ಷಷ್ಟಿ	43 44	ಉತ್ತರಾ	1 58	9
22	ಶುಕ್ರ	ಸಪ್ತಮಿ	36 38	ಧ	54-2	10
23	ಶನಿವಾ	ಅಷ್ಟಮಿ	30 36	ಶ	19 38	11
24	ರವಿವಾ ,,	ನವಮಿ	24 32	ಪೂಭಾ	45 55	12
25	ಚಂದ್ರ ‡	ದಶಮಿ	19 30	ಉತ್ತಭಾ	42-48	13
26	ಕುಜ ,,	ಏಕಾದಶಿ	14 50	ರೆ	40-28	14
27	ಬುಧ ¶	ದ್ವಾದಶಿ	10 48	ಕೃ	38 56	15

* ದಗ್ಧಯೋಗ ,, ತಿಥಿದ್ವಯ ೦, ದತ್ತಾತ್ರೇಯ ಜಯಂತಿ ‡ ಏಕಾದಶೀ ತಿಥಿ ,, ಸರ್ವತ್ರಏಕಾದಶಿ, ದ್ವಾದಶೀ ತಿಥಿ, ಯುವರಾಜರವರ ವರ್ಧಂತಿ ಪ್ರಯುಕ್ತ ತೋಪ್ ೨೧ ¶ ಅಗ್ನಿನಕ್ಷತ್ರನಿವೃತ್ತಿ, ಪ್ರದೋಷ

ಪೇಟೆ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಕನ್ನೇ ಅಕ್ಕಿ ಪಲ್ಲ ೧ಕ್ಕೆ	ರೂ	೧೭ ೮-೦	೧೫ ೮ ೦
ಕಂಬುತಿ ಅಕ್ಕಿ ಅವಲ್		೧೪ ೦-೦	೧೫ ೦ ೦
,, ಪಾಯಂ		೧೩ ೮ ೦	೧೪-೦ ೦
ಜಂಬಾತ್ರ ಅಕ್ಕಿ		೧೩-೪-೦	೧೩-೦-೦
ಸಣ್ಣಕ್ಕಿ ಅವಲ್		೧೩-೦-೦	೧೩ ೦-೦
,, ದಾಯಂ		೧೫ ೮-೦	೧೭ ೦ ೦
ತೊಗರೀ ಬೇಳೆ ಪಲ್ಲ ೧ಕ್ಕೆ		೧೯-೮ ೦	೧೪ ೮ ೦
,, ಪಾಯಂ		೧೪ ೮ ೦	೧೪ ೦-೦
ಕೈರಾಗಿ ಪಲ್ಲ ೧ಕ್ಕೆ		೩-೧೨-೦	೩-೨-೦
ಕಾರ್ರಾಗಿ		೩-೪-೦	೩ ೧೨-೦
ಜೋಳ		೩ ೦-೦	೮-೮ ೦
ಹಲಸಂದೆ ಪಲ್ಲ ೧ಕ್ಕೆ		೧೧-೮-೦	೧೧ ೦ ೦
ಬಿಳೀ ಅವರೆ		೮-೦-೦	೮ ೮ ೦
ಹೆಸರು		೧೧-೯-೦	೧೨ ೪ ೦
ಉದ್ದು		೭೪ ೮-೦	೭೨ ೮ ೦
ಕಡಲೆ		೧೨-೪-೦	೧೩ ೦ ೦
ಎಳ್ಳು ಸೆ ೧೨೩ಕ್ಕೆ		೨೩-೮-೦	೨೪-೮ ೦
ಹುರುಳಿ		೩ ೮-೦	೩ ೬ ೦
ಹರಳು ೧ ಖಂಡಿ ಸೇರಿಗೆ		೧೧-೦-೦	೧೨-೮ ೦
ಸೀಗೇಕಾಯಿ ಮಣ ೧ಕ್ಕೆ		೧-೮-೦	೧ ೮ ೦
ಮೆಣಸಿನಕಾಯಿ		೨-೮-೦	೩-೦-೦
ದಾಯಂ		೨ ೪-೦	೨-೧೨ ೦
ಬೆಲ್ಲ ದೊಡ್ಡ ಅಚ್ಚು		೫ ೦-೦	ಮಾ ೧ ೧೦ ೦
ಒಳ್ಳೆಣ್ಣೆ ಮಣ ೧ಕ್ಕೆ		೩ ೦-೦	೩-೪-೦
ಕರಳೆಣ್ಣೆ ,,		೪-೧೨-೦	೪ ೦ ೦
ಕೊತ್ತುಂಬರಿ ಪಲ್ಲ ೧ಕ್ಕೆ		೫-೮-೦	೨ ೦ ೦
ಉಪ್ಪು ,,		೬-೮-೦	೫ ೦ ೦
ಹುಣಸೇ ಹಣ್ಣು		೧-೪-೯	೧ ೦ ೦
,, ಹಳೇದು		೧-೦	೭ ೪ ೦
ತುಪ್ಪ ಮಣ ೧ಕ್ಕೆ		೧೪-೮ ೦	೧೫ ೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೪-೧೫-೦	೪ ೦ ೦
ತೆಂಗಿನಕಾಯಿ ೧೦೦ಕ್ಕೆ		೩ ೮-೦	೩ ೪ ೦
ಅಳಲೇಕಾಯಿ ಮಣ ೧ಕ್ಕೆ		೧-೦-೦	೧-೨ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨-೦	೦-೧೪-೦
ಚಿನ್ನ (ಬಾರ್) ತೊಲ		೧೫-೩-೦	೧೫-೯-೦
,, ,, ಪಸಿಮೆ		೧೫-೧೦-೦	೧೫-೧೨ ೦
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೪ ೧೦ ೦
ಬೆಳ್ಳಿ ಗಟ್ಟಿ ೧೦೦ ತೊ ಕ್ಕೆ		೩೫-೦-೦	೩೮-೦-೦

Printed and Published by the Rev, E W THOMPSON, M A, Proprietor and Manager, Wesleyan Mission Press, Mysore 21/5/1908

REGISTERED]
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೧ ಮೈಸೂರು—ಸರ್ ೧೯೦೮ ನೇ ಇಸವಿ ಮೇ ತಾರೀಖು ೨೮ ನೇ ಗುರುವಾರ. ಸಂಚಿಕೆ ೫೩

AMRUTANJAN DEPOT, 16 OAK-LANE, BOMBAY. [17-14]

ಗುಣ ಕಂಡುಬರುವದಿಲ್ಲವಾದರೆ ಹಣ ವಾಪಸು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮ್ ಮತ್ತು ಗಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಬರುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ ಕ್ಕೆ ಕಿಮ್ಮತ್ತು ೦ ೮ ೦ ಪೋಸ್ಟು ಖರ್ಚು ೦ ೪ ೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಹುಣ್ಣು ವಗೈರೆ ನಾಶವಾಗುವದು, ಇದರಿಂದ ಬಟ್ಟೆಯು ಕಪ್ಪಾಗುವದಿಲ್ಲ, ಮತ್ತು ಉರಿಯುವದಿಲ್ಲ. ಡಬ್ಬಿ ೧ ಕ್ಕೆ ೦-೪-೦ ಪೋಸ್ಟು ಖರ್ಚು ೦ ೪ ೦

ಈ ಕಂಪನಿಯವರು ಹೆಚ್ಚು ಸಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ—ಅಜೀರ್ಣಕ್ಕೆ ಡಬ್ಬಿ ೧ ಕ್ಕೆ	೧—೪—೦	[illegible]—[illegible]	೧—೦—೦
ಪಚನಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧—೦—೦	ಪ್ರಮೇಹದ ಔಷಧ—ಪ್ರಮೇಹಕ್ಕೆ	೧—೦—೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ ಕ್ಕೆ	೦—೧೨—೦	ಕಫಹರಿ—ಕಫ [illegible], ಇತ್ಯಾದಿ	೧—೪—೦
[illegible]	೦—[illegible]	ಸುಂದರಿ ತೈಲ್ಯ—ಮೇರೆಗೆ	೦—೮—೦
ದಂತಶುದ್ಧಿ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
[illegible]—ಕಿವಿನೋವಿಗೆ	೦—೬—೦	ಉರಿನಾಶಕ ಎಂತೆ ಬಾಟ್ಲಿ ೧ ಕ್ಕೆ	೦—೮—೦
[illegible]	೦—೪—೦	[illegible] "	೧—೦—೦
[illegible]—[illegible]	೦—೨—೦	[illegible]	೦—೧೨—೦
[illegible] ತೈಲ್ಯ—[illegible]	೧—೨—೦	ತಾಂಬೂಲ ಗುಟಿಕೆ [illegible]	೧—೮—೦
[illegible]	೨—೮—೦	ರೋಗಹಾರಿ	೦—೮—೦

ವಿಳಾಸ:—ವಿಲಿಯಂ ಮತ್ತು ಕಂಪೆನಿ, ೧೬ ಓಕ್‌ಲೇನು ಪ್ರೋಪ್ರೈಟರ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು.—"ಅಮೃತಾಂಜನ," ಮುಂಬಯಿ.

ಕಾರ್ಡು ಸೈಜು ೩ × ೪.

ಫೋಟೋ ತೆಗೆಯುವ

ಫೋಟೋ ಕ್ಯಾಮರಾ.

84 41

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ಮೋಗದಿಂದ ಹಿಡಿದು ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕಾಗದಲ್ಲಿಯೇ ಮಾಡಿ ಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಹೇಳುತ್ತದೆ. ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲು ಖರ್ಚು ಅಣೆ.

ಇದು ಸಿಕ್ಕತಕ್ಕ ವಿಳಾಸ —

ಛೋಟಾಲಾಲ ಭಗನಲಾಲ ಮಹಾಜನ, ರಾಕೋರದ್ವಾರ ರೋಡ, ಪೋಸ್ಟು ಕಾಲಬಾದೇವಿ, ಮುಂಬಯಿ.

ಜ್ವರಹರಿ 41 4

ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಹಾಮಹಾ ಅಲಾಯಿ ಸಬ್ ಡಿವಿಜನ್ ಆಫೀಸರ್ ಎಸ್ ಓ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಬಾಟಲಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು, ಚೆನ್ನಾಗಿ ಗುಣ ಹೊಂದಿರುವರು. ಇನ್ನು ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಬಾಟಲಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಅಣೆ, ೦ ರೂ., ೦—೮ ರೂ. ೮ರೂ. ೨—೧೨ ಅ.; ೧೧ ರೂ., ಎನ್ನುವ ಸೀಸೆ ಡಜನಿಕ ಲೆಖ್ಖದ ಪೋಸ್ಟೇಜು ಮಾಫಿ ಬಿಡಲಾಗುವದು.

ಓ ನು ೦ ಕ ಪ್ಲೂ ರ ರ.

Onum Capsules

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ [illegible] ಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ [illegible] ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು [illegible] ಪ್ರಯೋಜನ ಬರವು ಜ್ವರಗಳ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಾರು [illegible]—ಕೆಲವು [illegible] ಓನಂ ಕರ್ಪೂರವನ್ನು ನಾನೂ ನನ್ನ [illegible] ಮುನ್ಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರ ಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇನೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೆ ಔಷಧವೆಂದು ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಚೆನ್ನಪಟ್ಟಣದ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಈಗಲೇ ಸೀಮೆಯಿಂದ ಬಂದಿದೆ.

117 31

[illegible]

[illegible]	೦—೮—೦
[illegible] ಬಂದಲಿಗೆ ೧ ಕ್ಕೆ	೩—೮—೦
[illegible]	೦—೯—೦
[illegible] ೧ ಕ್ಕೆ	೦—೯—೯
[illegible] ಪೋಸ್ಟ್ ಖರ್ಚು [illegible]	
[illegible] ೧ ಕ್ಕೆ	೧೩—೨—೦

ವಿಳಾಸ —

ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು

ಪಾಳ್ಯದ ವೆಂಕಟಾಚಲ ಪಂಡಿತರ

16-15

೧. ಶ್ರೀಕಂಠಾಂಬುರ ಮಾತ್ರೆಯು:—ಈ ಮಾತ್ರೆಗಳು ಬಹಳ ಸುವಾಸನೆಯಾಗಿಯೂ ಬಾಯಿಯಲ್ಲಿ ತಾನಾಗಿ ಕರಗುವದಾಗಿಯೂ ಒಳ್ಳೇ ಗುಣವುಳ್ಳದಾಗಿಯೂ ಇರುತ್ತವೆ

ತಾಂಬೂಲದೊಡನೆಯಾಗಲಿ, ಹಾಗೆಯೇ ಆಗಲಿ ಎಷ್ಟು ತಿಂದರೂ ಉಷ್ಣ ಮಾಡುವುದಿಲ್ಲ. ಹಲ್ಲು ನೋವು, ಬಾಯಿವಾಸನೆ, ಮಲಬದ್ಧ ಕೆಮ್ಮು, ನೆಗಡಿ, ಸಿಕ್ಕಿ, ಹೊಟ್ಟೆಯುರಿ, ಅರೋಚಕ, ಅಗ್ನಿಮಾಂದ್ಯ, ಇವುಗಳನ್ನು ಹೋಗಲಾಡಿಸಿ ಒಳ್ಳೇ ಹಸಿವನ್ನೂ ಮನೋಲ್ಲಾಸವನ್ನೂ ಎಲ್ಲಾ ನರಗಳಿಗೂ ಬಲವನ್ನೂ ಉಂಟುಮಾಡುತ್ತವೆ. ಶಿಸುಗಳೂ ಗರ್ಭಿಣಿಯರೂ ನಿರಾಕ್ಷೇಪವಾಗಿ ಸೇವಿಸಬಹುದು. ಬೆಲೆ ೨೦೦ ಮಾತ್ರೆಯುಳ್ಳ ಕುಪ್ಪಿ ೧ಕ್ಕೆ ೪ ಅಣೆ. ಐದು ಕುಪ್ಪಿಗಳಿಗೆ ಒಂದು ಹೆಚ್ಚು. ೧೫ ಕುಪ್ಪಿ ವರೆಗೂ ಪೋಸ್ಟೇಜು ೪ ಅಣೆ.

೨. ಲೋಕಾಮಯಹರ ಕಸ್ತೂರಿ ಮಾತ್ರೆ, ಅನುಪಾನ ಪತ್ರ ಸಹಿತ, ಕುಪ್ಪಿ ೧ಕ್ಕೆ ೪ ಅಣೆ.

ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಇದನ್ನು ನೋಡಿದರೆ ಬಹು ಆಶ್ಚರ್ಯ ಪಡುವಿರಿ.

೩೨-೨

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು. ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಸುಮಾರು ಎಪ್ಪತ್ತು ಭಾಗಗಳುಳ್ಳದ್ದು [illegible] ಪುಸ್ತಕ ಭಾಷೆಯು ಬಹಳ ಸರಳವಾಗಿದೆ ಪುಸ್ತಕವನ್ನು ಒಂದು ಸಾರಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ ವಿ. ಪಿ. ಪಿ. ಮೂಲಕ ರೂ ೨—೩—೦ [illegible] ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ವಿದ್ಯಾರ್ಥಿಗಳೂ ಕೊಳ್ಳುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಎನ್ನರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಅಂತಹವರಿಗೆ ಎಂದು ಅಣಿಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ಕೊಳ್ಳಿರಿ.

ನಮ್ಮ ವಿಳಾಸ:— ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟ್."

ವ್ಯವಹಾರನಿರ್ಣಯ—ಕೃತಿಗಳು ೫೪೫ ಹಿಂದೂ ಮಹಮ್ಮದೀಯ ಲಾಗಳು, ೨೯ ಶಾಸನಗಳು ಇವುಗಳ ಸಂಗ್ರಹವು, ೯೨ ದಸ್ತಾವೇಜು, ೬೩ ಅರ್ಜಿ ಇವುಗಳ ಸಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ. ಪಿ. ಸೇರಿ ೦ ರೂ. [40-5]

ಕನ್ನಡ ಲಾ ರಿಪೋರ್ಟ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ೧—೧—೦ ಮುಂಗಡ, ಯಾ, ವಿ. ಪಿ. ಬಿಡಿಪತ್ರಿಕೆ ಒಂದಕ್ಕೆ ೦—೨—೦

ಇವುಗಳನ್ನು ಸೇರಿಸುವವರು ಜಿ. ಎಂ. ನಲ್ಲುರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯುವುದು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರು ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) . . . ರೂ. ೧—೨—೦

ಹರಕ್ಕ ಕಡೆಯವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್

ಸೇರಿ . . . ರೂ. ೧—೧೫—೦

" " ೬ " " ೦—೧೪—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಮಹಾ ಬಾಧಾಪಹಾರಿಣಿಯು.

18-1

ಇದನ್ನು ಕೋಲಾರದ ಪ್ರಾಂತದಲ್ಲಿ ಇಲ್ಲವು

ಕ್ಲೇಮೆಂಟ್‌ಯವರ ಬಿ. ಕ್ಲೀಕ್ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಾರೆ. ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಚಳಿ, ಗಂಟಲುನೋವು, ಚರ್ಮವಾಯು, ನಾನಾವಿಧ ವಾಯುರೋಗಗಳು, ಕ್ಷತರೋಗಗಳು, ಬೆನ್ನುನೋವು, ಕೀಲುಗಳ ಸಂಧಿಕಟ್ಟುಗಳ ನೋವು, ಅಳ್ಳೆಕಡದ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೇಮೆಂಟ್‌ಯವರ ಈ ಅಮೋಘವಾದ ತೈಲವು ಸೋಂಕಿರುವ ಸ್ಥಳದ ಮಾಂಸಖಂಡವನ್ನು ಮೃದುಪಡಿಸಿ, ಅದರ ಕಟ್ಟನ್ನೇ ಅಲಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಸಮಾನ ತೈಲವು ಬೇರೊಂದಿಲ್ಲವೆಂದು ಹೊಗಳುತ್ತಾರೆ.

ಕ್ರಯ ಸೀಸೆ ೧ಕ್ಕೆ ೦—೨ ಆಣೆ ಪ್ಯಾಕಿಂಗ್ ೩ ಆಣೆ ಅದರ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮುರಿಯಲಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ವೇದಮಲೆಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಸಿಲಿಗೆ ಬಾಯಾರಿಕೆ, ಬಳಲಿಕೆ; ಎದೆ ಕಲ್ಲುಗಟ್ಟುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು, ತಲೆ ತಿರುಗುವಿಕೆ; ಮೈನೋವು ಕೀಲುನೋವು; ಮರವು, ನಿತ್ರಾಣ, ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉದರಬಾವು, ಮೂತ್ರಕೋಶದ ಕ್ಷಯ ಇವೇ ಮೊದಲಾದ ಶ್ರಯುಸುಶೋಕೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ತಿಳಿಯಲ್ಪಡುತ್ತಿರುವ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [93-39]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೩—೦—೦; ಅಥವಾ ೬ ಬುಡ್ಡಿಗಳಿಗೆ ರೂ ೧೧—೪—೦. ಔಷಧಗಳನ್ನು ಮಾರುವವರಲ್ಲೆಲ್ಲಿಯೂ ದೊರೆಯುವುವು. ಅಥವಾ ಡೋನ್ಸ್, ಪಿ. ೬. ಬಾಕ್ಸ್ ೨೦, ಬೊಂಬಾಯಿ.—ಇವರಲ್ಲಿ ದೊರೆಯುವುವು.

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡು ಹಿಡಿದ ಕೆಮ್ಮಿನ ಔಷಧವು.

1-22

ಶೀತದ ಕೆಮ್ಮು, ಗಂಟಲು ಗೂರಲು ಪ್ರದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ಸಲ್ಲಾ ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣದ ಪ್ರಯೋಗವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು, ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೋಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಕಫವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕಟ್ಟಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸಂಭವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ಆಯಾರಿ

ಕೈಯಿಂದಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣ ರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಿಗಿಕೊಂಡಿ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ.

SCOTT'S EMULSION 33-9

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು.

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲಿ ಬಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ವಿಜಾತಮನುಷ್ಯ ಇರುವ ಈ ಔಷಧದ ಗುರುತು. ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-22

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಪಾರವೆಲ್ಲಾ ೬ ನಾವದ್ದು, ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಪಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಶಾಶ್ವತಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಕಾಲಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಕಾಗದ ಬರೆದು ತರಿಸಿಕೊಳ್ಳಿ. ಅಗ್ಗವಾಗಿ ವಸ್ತ್ರ ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವುದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೪ ಆ.; ೧ ರೂ. ೬ ಆ.; ೧ ರೂ. ೩ ಆ.

ರೇಶ್ಮೆ ಜುಳ್ಳೆಯುಳ್ಳ ಟೋಪಿಗಳು ೧ ರೂ. ೪ ಆ.; ೨ ರೂ

ಜರದ ಟೋಪಿಗಳು ೧ ರೂ. ೧೨ ಆ.; ೧ ರೂ. ೪ ಆ.; ೧ ರೂ. ೬ ಆ.

ಉಸಿಕಿನ ಟೋಪಿಗಳು ೧ ರೂ. ೪ ಆ.; ೧ ರೂ. ೬ ಆ.

ಕಸುಗಳ ಟೋಪಿ, ಸೂಫಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುತ್ತೇವೆ.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಸುಲಭ ಖರೀದಿ! ನೋಡಿ!!

16-4

ರಿಸ್ಟ್‌ವಾಚು ಸಿಸ್ಟಂ ಲೀವರ್ ನಾಲ್ಕು ಸರಪಣಿ ಸಹಿತ ವಿ. ಪಿ. ಪಿ. ಚಾರ್ಜು ಸೇರಿ ೩—೪—೦. ಯಾರೂ ಇದುವರೆಗೂ ಈ ಖರೀದಿಗೆ ಕೊಟ್ಟಿಲ್ಲ. ಮಾದರಿಗೆ ಒಂದನ್ನು ತರಿಸಿ ನೋಡಿರಿ ನಮ್ಮ ವಿಳಾಸ—ಟಿ. ಪಿ. ಕನ್ನಯ್ಯಶೆಟ್ಟಿ ಅಂಡ್ ಸ. ಜನರಲ್ ಮರ್ಚೆಂಟ್, ನಂಬರು ೨೦, ಸಿಂಗಣ್ಣನ ಬೀದಿ, ಸೌಕಾರ್‌ಪೇಟೆ, ಮದ್ರಾಸು.

ವೃತ್ತಾಂತ ಪತ್ರಿಕೆ.

———:o:———

ಕ್ರಿ. ೧೯೦೪ ನೇ ಇಸವಿ ಮೇ ತಾ|| ೨೪ ನೇ ಗುರುವಾರ.

ವರ್ತಮಾನ ಪತ್ರಿಕೆಗಳ ಕಾನೂನು.

ಸುಮಾರು ಎರಡು ವಾರಗಳ ಹಿಂದೆ ವಿಲಾಯತಿಯ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಯಲ್ಲಿ ಒಬ್ಬ ಮೆಂಬರು ಇಮ್ಮ ಗವರ್ನ್‌ಮೆಂಟ್ ಅಧಿಕಾರಿಗಳನ್ನು ಕುರಿತು—ಹಿಂದುಸ್ಥಾನದೊಳಗೆ ವರ್ತಮಾನ ಪತ್ರಿಕೆಗಳನ್ನು ನಿರ್ಬಂಧಕ್ಕೆ ಗುರಿಮಾಡುವಂಥಾ ಯಾವುದಾದರೊಂದು ವಿಶೇಷವಾದ ಹೊಸ ಕಾನೂನನ್ನು ಇಂಡಿಯಾ ಗವರ್ನ್‌ಮೆಂಟಿನವರು ಮಾಡಿ ಜಾರಿಗೆ ತರಬೇಕೆಂದು ಸೂಚಿಸಿರುತ್ತಾರೆಯೋ? ಎಂದು ಪ್ರಶ್ನೆಮಾಡಿದರು. ಅದಕ್ಕೆ ಅಂಡರ್ ಸೆಕ್ರೆಟರಿ ಎಂಬ ಅಧಿಕಾರಿಯು ಇಂಡಿಯಾ ಗವರ್ನ್‌ಮೆಂಟಿನವರು ಇನ್ನೂ ಅಂಥಾ ಕಾನೂನನ್ನು ನಮ್ಮ ಮಂತ್ರಿಸಭೆಗೆ (ಕ್ಯಾಬಿನೆಟ್) ಕಳುಹಿಸಿ ಕೊಟ್ಟಿಲ್ಲವೆಂದು ಉತ್ತರಕೊಟ್ಟರು.

ಇತ್ತಲಾಗಿ, ನಮ್ಮ ಮೈಸೂರು ಗವರ್ನ್‌ಮೆಂಟಿನವರು ಈ ಸಂಸ್ಥಾನದಲ್ಲಿ ಪ್ರಕಟವಾಗುವಂಥಾ ವರ್ತಮಾನಪತ್ರಿಕೆಗಳನ್ನು ಕ್ರಮಕ್ಕೆ ತಂದಿಡುವ ಭಾಗದಲ್ಲಿ ಒಂದು ಕಾನೂನು ಮಾಡಿ ಜಾರಿಯಲ್ಲಿ ತರಬೇಕೆಂದು ಯೋಚಿಸುತ್ತಿದ್ದಾರೆಂದು ಹೇಳುತ್ತಾರೆ.

ಆದಕಾರಣ ವರ್ತಮಾನ ಪತ್ರಿಕೆಯ ಕರ್ತವ್ಯವ್ಯಾವುದು? ಅದನ್ನು ಯಾವ ರೀತಿಯಲ್ಲಿ ನಡಿಸತಕ್ಕದ್ದು? ಎಂಬೀ ವಿಚಾರಗಳನ್ನು ಕುರಿತು ಈ ಸಂದರ್ಭದಲ್ಲಿ ಪ್ರಸ್ತಾಪಮಾಡುವುದು ಯೋಗ್ಯವೆಂದು ಕಾಣುತ್ತದೆ. ಒಂದೇ ಮಾತಿನಲ್ಲಿ ಹೇಳಿ ಮುಗಿಸಬೇಕಾದರೆ ವರ್ತಮಾನ ಪತ್ರಿಕೆಗಳು ಗವರ್ನ್‌ಮೆಂಟಿನ ಕಾಯಿದೆ ಕಾನೂನುಗಳನ್ನೂ ಅವರ ಅಭಿಪ್ರಾಯ ಉದ್ದೇಶಗಳನ್ನೂ ತಮ್ಮ ವಾಚಕರಿಗೆ ತಿಳಿಯಪಡಿಸಿ, ಪ್ರಜೆಗಳ ಕುಂದು ಕೊರತೆಗಳನ್ನೂ ಇಂಗಿತಗಳನ್ನೂ ಗವರ್ನ್‌ಮೆಂಟಿನವರ ಗಮನಕ್ಕೆ ತರುವುದೇ ಅವುಗಳ ಕರ್ತವ್ಯವಾಗಿರುತ್ತದೆಂದು ಹೇಳಬಹುದು. ವರ್ತಮಾನ ಪತ್ರಿಕೆಯು ಸಂಸ್ಥಾನದ ಅಭ್ಯುದಯವನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು, ಇಷ್ಟನ್ನು ಮಾತ್ರ ಮಾಡುತ್ತಾ ಬರುವುದಾದರೆ ಅದರಿಂದ ಗವರ್ನ್‌ಮೆಂಟಿಗೂ ಪ್ರಜೆಗಳಿಗೂ ಪ್ರಯೋಜನವುಂಟಾಗುವುದು. ಇದಕ್ಕೆ ಪ್ರತಿಯಾಗಿ ಪತ್ರಿಕೆಯು ಗವರ್ನ್‌ಮೆಂಟಿನ ಕೆಲಸಕಾರ್ಯಗಳನ್ನೂ ಉದ್ದೇಶ ಅಭಿಪ್ರಾಯಗಳನ್ನೂ ಸರ್ವದಾ ಅಪಾರ್ಥಮಾಡಿ ವಿವರಿಸುತ್ತಲೂ, ನಿಷ್ಕಾರಣವಾಗಿ ಅಧಿಕಾರಿಗಳ ನಡೆನುಡಿಗಳನ್ನು ಎತ್ತಿ ಹೊಟ್ಟೆಕಿಚ್ಚಿನಿಂದಲೂ ಸುಳ್ಳು ಸುಳ್ಳಾಗಿಯೂ ಖಂಡಿಸುತ್ತಲೂ ಬಂದ ಪಕ್ಷದಲ್ಲಿ ಅಂಥಾ ಪತ್ರಿಕೆಯಿಂದ ಸಂಸ್ಥಾನಕ್ಕೆ ಕೆಡುಕೇ ಉಂಟಾಗುವುದು ಮತ್ತು ಸಾಮಾನ್ಯವಾಗಿ ಪ್ರಜಾಕೋಟಿಗೆ ಹಿತಕರವಾಗಿರತಕ್ಕಂಥಾ ವಿಚಾರಗಳನ್ನು ಸೂಚಿಸಿ ಪ್ರಸ್ತಾಪ ಮಾಡುವುದನ್ನು ಬಿಟ್ಟು, ತನ್ನ ಕಕ್ಷಿಗೋ ತನಗೆ ಬೇಕಾದ ಕೆಲವು ಜನರಿಗೋ ಪ್ರಯೋಜನವಾಗ

ಎಂಬ ಉದ್ದೇಶವುಳ್ಳ ವರ್ತಮಾನ ಪತ್ರಿಕೆಯಿಂದಲೂ ಉಕಾಗುತ್ತದೆ.

ಆದ್ದರಿಂದ ವರ್ತಮಾನ ಪತ್ರಿಕೆಗಳನ್ನು ನಡಿಸುವವರ ಕಡೆಗೆ ಮೂರು ಗುಣಗಳಾದರೂ ಅವಶ್ಯವಾಗಿರಬೇಕೆಂ ಗೊತ್ತಾಗುವುದು. ಮೊದಲನೆಯದು ತಿಳವಳಿಕೆಯು ಸಾರ್ವತ್ರಿಕವಾಗಿ ಅನ್ವಯಿಸುವಂಥಾ ವಿಷಯಗಳನ್ನು ಕುರಿ ಚರ್ಚೆಮಾಡುವುದಕ್ಕೆ ವಿದ್ಯಾಸಾಮರ್ಥ್ಯವು ಇರಬೇಕು ರವಣಿಗಸ್ತನು ತನ್ನ ದೇಶದ ಚರಿತ್ರೆ, ಗವರ್ನಮೆಂಟಿನ ನೂನುಗಳು, ಅದರ ನಡವಳಿಕೆಯ ಕ್ರಮಗಳು, ಇವುಗ ನ್ನೂ ಅನ್ಯದೇಶಗಳ ಚರಿತ್ರೆ, ಕಾಯಿದೆ ಕಾನೂಗಳು, ರಾಜ್ಯ ರಕ್ರಮಾದಿಗಳನ್ನೂ ಪರಿಷ್ಕಾರವಾಗಿ ತಿಳದವನಾಗಿರಬೇ ು ಯಥಾರ್ಥತ್ವವೇ ಎರಡನೆಯ ಗುಣವು ಎಡಿಟರಾದ ನು ತನ್ನಿಂದ ಸಾಧ್ಯವಾಗುವ ಮಟ್ಟಿಗೂ ಸತ್ಯವಾದ ವಿಷಯ ಳನ್ನೇ ಪ್ರಕಟಿಸುವ ಭಾಗದಲ್ಲಿ ತುಂಬಾ ಎಚ್ಚರಿಕೆಯುಳ್ಳ ನಾಗಿರಬೇಕು ಮೂರನೆಯ ಗುಣವು ಅಸ್ವಾರ್ಥತೆಯು ಥವಾ ಸ್ಥಿರವಾದ ಸ್ವದೇಶವಾತ್ಸಲ್ಯವಾಗಿರುತ್ತದೆ. ಈ ಗುಣ ವು ಎಲ್ಲಕ್ಕಿಂತಲೂ ಪ್ರಧಾನವಾದದ್ದೆಂದು ನಾವು ಎಣಿಸುತ್ತೇ ವೆ ಯಾಕೆಂದರೆ ಸ್ವಾರ್ಥತೆ ಇಲ್ಲದವನು ಸಂಸ್ಥಾನದ ಕ್ಷೇ ಮಾಭ್ಯುದಯಪರನಾಗಿಯೂ ಸತ್ಯವಂತನಾಗಿಯೂ ಇರುತ್ತಾ ನೆನ್ನುವುದಕ್ಕೆ ಸಂಶಯವಿಲ್ಲ ಸ್ವಪ್ರಯೋಜಕನಾಗಿಯ ಾಗಲಿ ಸ್ವಪಕ್ಷಾಭಿಮಾನಿಯಾಗಿಯೇ ಆಗಲಿ ಇರತಕ್ಕ ಎಡಿಟ ು ತನಗೇ ತನ್ನ ಪಕ್ಷದವರಿಗೇ ಆಗದೆ ಇರುವಂಥಾ ಅಧಿ ಕಾರಿಗಳ ಮೇಲೂ ದೊಡ್ಡ ಮನುಷ್ಯರ ಮೇಲೂ ದುಷ್ಟವಾದ ಮತ್ತು ನೀಚವಾದ ವಿಷಯಗಳನ್ನು ತನ್ನ ಪತ್ರಿಕೆಯಲ್ಲಿ ಪ್ರಕಟ ಮಾಡುತ್ತಾನೆ ಇಲ್ಲವೇ, ಪ್ರಕಟವಾಗಲು ಅವ ಕಾಶ ಕೊಡುತ್ತಾನೆ ಆದ್ದರಿಂದಲೇ ನಾವು ಪತ್ರಿಕೆಯನ್ನು ನಡಿಸುವವರಲ್ಲಿ ಬುದ್ಧಿಕೌಶಲ, ಸತ್ಯತೆ, ನಿರ್ದುಷ್ಟವಾದ ದೇಶಾ ಭಿಮಾನವೆಂಬೀ ಮೂರು ಗುಣಗಳೂ ಇರಬೇಕಾದದ್ದು ಪರ ಮಾವಶ್ಯಕವೆಂದು ಹೇಳುವೆವು.

ಆದ್ದರಿಂದ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಸಾಮಾನ್ಯ ವಾಗಿ ವರ್ತಮಾನ ಪತ್ರಿಕೆಗಳಿಗೆ ವಿಶೇಷವಾದ ಸ್ವಾತಂತ್ರ್ಯ ಇರುವವು ಪ್ರಪಂಚದ ಇತರ ರಾಜ್ಯಗಳಲ್ಲೆಲ್ಲೂ ಅಷ್ಟು ಮಟ್ಟಿನ ಸ್ವಾತಂತ್ರ್ಯವಿರುವುದಿಲ್ಲ ಗವರ್ನಮೆಂಟಿನವರು ವಿಶೇಷ ಶ್ರದ್ಧೆಯಿಂದ ನೋಡಿಕೊಳ್ಳುವ, ಎಡಿಟರುಗಳು ಸಾ ಮಾನ್ಯವಾಗಿ ಪಕ್ಷರಹಿತರೆಂದು ಭಾವಿಸಿ ಅವರು ದೇಶಾಭ್ಯುದಯಕ್ಕೆ ಸಹಕಾರಿಗಳಾಗಿರಾರೆಂದು ನಂಬಿಕೊಂಡಿರುವರು ಇಂಥಾ ವನು ಈಗಿನ ಕಾಲದಲ್ಲಿ ವಿಲಾಯತಿಯಲ್ಲಿ ಹಲವು ವರ್ತಮಾನ ಪತ್ರಿಕೆಗಳನ್ನು ನಡಿಸತಕ್ಕವರೆಂದು ನಾವು ಯಥಾರ್ಥವಾಗಿ ಹೇಳುವೆವು ಅವರೆಲ್ಲಾ ವಿದ್ಯಾವಂತರು, ಸತ್ಯವಂತರು, ದೇಶ ಭಕ್ತರು. ಹಿಂದುಸ್ಥಾನದಲ್ಲೂ ದೇಶೀಯರೂ ಯೂರೋಪಿ ಯರೂ ಆದ ಅಂಥಾವರು ಕೆಲವರು ಪತ್ರಿಕೆಗಳನ್ನು ನಡಿ ಸುತ್ತಿದ್ದಾರೆಂದು ಹೇಳಬಲ್ಲೆವು ಅಂಥಾ ಪತ್ರಿಕೆಗಳಲ್ಲಿ ಹೊಟ್ಟೆಕಿಚ್ಚನ್ನು ಪ್ರಕಾರ ಪಡಿಸುವ ಮಾತ್ರೆಯೊಂದಾದರೂ ಇರುವದಿಲ್ಲ ಆ ಪತ್ರಿಕೆಗಳು ಗವರ್ನಮೆಂಟಿನವರ ಕಾಯಿದೆ ಕಾನೂನುಗಳನ್ನೂ ಕಾರುಬಾರುಗಳನ್ನೂ ಆಕ್ಷೇಪಿಸುತ್ತವೆ, ಅಥವಾ ತಿರಸ್ಕಾರ ಮಾಡುತ್ತವೆ ಗವರ್ನಮೆಂಟ್ ಅಧಿಕಾರಿ ಗಳ ಗುಣ ನಡತೆಗಳನ್ನು ಎತ್ತಿ ಯಾವ ಪತ್ರಿಕೆಯೂ ಅಲ್ಲ ಗಳೆಯುವುದಿಲ್ಲ, ದೂರುವುದಿಲ್ಲ. ಸುಮಾರು ಐದು ವರುಷಗಳ ಹಿಂದೆ ಲಾರ್ಡ್ ಕರ್ಜನ್ ರವರು ಕಲ್ಕತ್ತಾ ಯೂನಿವರ್ಸಿಟಿ ವಿದ್ಯಾಸಭೆಯಲ್ಲಿ ಗ್ರಾಜುಯೇಟಾಗಿ ತೇರ್ಗಡೆ ಹೊಂದಿದ ಯೌವನಸ್ಥರನ್ನು ಕುರಿತು ಕೆಲವು ಬುದ್ಧಿವಾದಗಳನ್ನು ಹೇಳಿ ದರು ವರ್ತಮಾನ ಪತ್ರಿಕೆಯನ್ನು ನಡಿಸುವ ಉದ್ಯೋಗ ವನ್ನು ಕೈಗೊಳ್ಳಬೇಕೆಂದು ಕುತೂಹಲ ಪಡುತ್ತಿದ್ದವರಿಗೆ ಅವರು ತಿಳಿಸಿದ್ದೇನೆಂದರೆ.—

“ವರ್ತಮಾನ ಪತ್ರಿಕೆಯನ್ನು ನಡಿಸುವುದು ಮಹಾ ಘನವಾದ ಉದ್ಯೋಗವಾಗಿರುತ್ತದೆ ವಿಷಯವನ್ನು ಉತ್ಪ್ರೇಕ್ಷೆ ಮಾಡಬೇಕೆಂಬ ಹುಚ್ಚಾದ ಆಸೆಯನ್ನು ತ್ಯಜಿಸಬಿಡಿ ಎಂದು ಕೇಳಿಕೊಳ್ಳುತ್ತೇನೆ. ಸರ್ಕಾರಿ ಅಧಿಕಾರಿಯನ್ನು ಸೊಗಳಿ ಅವನ ಹೆಸರಿನಲ್ಲಿ ಚೆನ್ನಾದ ಪ್ರತಿ ಷೆಯನ್ನು ಮಾಡಿಸಬೇಕೆಂದು ಕೇಳಲಿಲ್ಲ ಅಥವಾ ನಿಮಗೆ ಬೇಡ ವಾದಾಗ ಅವನನ್ನು ನಿಂದಾಕ್ಷೇಪನೆಂದು ಹೇಳಿ ದೂಷಣೆಯನ್ನೂ ಮಾಡ ಬೇಡಿ.

“ಇಲ್ಲದೆ ಇಲ್ಲಿಬರೆಯಬೇಕೆಂದು ಹೇಳಿ ವಿವರಿಸುವುದಕ್ಕೆ ಹೊರಟಬೇಡಿ ಇಷ್ಟವಾಗಿ ಕಂಡು ಬಂದರೆ ಗವರ್ನಮೆಂಟಿಗೆ ಸಹಾ ಯಕರಾಗಿ ನಿಂತುಕೊಳಿ ಆದರೆ ಅವರಲಿ ರುಜ ಒಳ್ಳೆ ಉದ್ದೇಶವ ನ್ನು ಪ್ರಕಟವಾಡುವುದಕ್ಕೂ ಅವಕಾಶ ಕೊಡಿ ಸರ್ವದಾ ಆಕ್ಷೇಪ ಣೆಯನ್ನೂ ದೂಷಣೆಗಳನ್ನೂ ಮಾಡುತ್ತಾ ಇರಬೇಡಿ

“ಕಥಾರೂಪವಾಗಿಯೂ ಇತರ ವಿಧವಾಗಿಯೂ ಪೂಜನೆ ಮಾ ಡುವುದನ್ನು ಹೀಯಾಳಿಸಿ ಬರೆಯುವುದನ್ನು ವರ್ಜವಾಡಿ ನಿಮ್ಮ ಹೀಯಾಳಿಕೆಗೂ ದೂಷಣೆಗೂ ಗುರಿಯಾದವನು ನಿಮಗೆ ಪ್ರತಿಯನ್ನು ಹೇಳತಕ್ಕವನಾಗಿಲ್ಲವೆಂತಲೂ, ಅವನು ಸಾಮಾನ್ಯವಾಗಿ ನಿಮ್ಮಂತೆಯೇ ಒಳ್ಳೆಯವನೂ ಸತ್ಯಶೀಲನೂ, ಅನೇಕ ಸಂದರ್ಭಗಳಲ್ಲಿ ನಿಮಗಿಂತ ಲೂ ಬುದ್ಧಿಶಾಲಿಯಾಗಿಯೂ ಇರುತ್ತಾನೆಂತಲೂ ಖಚಿತವಾಗಿ ತಿಳಿದು ಕೊಳ್ಳಿ ಎಂದಿಗಾದರೂ ಪುರುಷರ ವಿಷಯವನ್ನೇ ಹಿಡಿದು ಚರ್ಚಿಸ ಬೇಡಿ. ತುಚ್ಛವೂ ಹೇಯವೂ ಆದ ವಿಚಾರಗಳನ್ನೂ, ಅಲ್ಪವೂ ನೀಚ ವೂ ಆದ ವಾಕ್ಯಗಳನ್ನೂ ದೂರಮಾಡಿ. ತುಚ್ಛ ವಿಷಯಗಳಲ್ಲಿ ಸಂತೋಷಪಡುವಂಥಾ ಜನರು ಇದ್ದೇ ಇರುತ್ತಾರೆ. ಇಂಥವರನ್ನು ಸಂತೋಷ ಪಡಿಸಬೇಕೆಂದು ಹೊರಡುವುದಕ್ಕೆ ಪ್ರತಿಯಾಗಿ ಅವರನ್ನು ಮೇಲಕ್ಕೆ ಎತ್ತಿ ನಿಮ್ಮ ಸರಿಸಮಾನಕ್ಕೆ ಬರುವಂತೆ ಮಾಡುವುದರಲ್ಲಿ ಉದ್ಯುಕ್ತರಾಗಿರಿ

“ವರ್ತಮಾನ ಪತ್ರಿಕೆಗಳ ಮೇಲೆ ಯಾವ ಜವಾಬ್ದಾರಿಯೂ ಇಲ್ಲವೆಂದು ಎಂದಿಗೂ ಯೋಚಿಸಬೇಡಿ. ಅದು ಜನಾಂಗದ ದುಸ್ವಭಾ ವಗಳನ್ನು ಅಡಗಿಸಿ ಜನಸಾಮಾನ್ಯದ ನಡೆ ನುಡಿ ಆಚಾರ ವ್ಯವಹಾರಗ ಳನ್ನು ಉತ್ತಮಸ್ಥಿತಿಗೆ ತರಬೇಕಾಗಿರುವುದು ಇದೆಲ್ಲಾ ಪತ್ರಿಕೆಗಳ ಜವಾಬ್ದಾರಿಯಾಗಿರುತ್ತದೆ.”

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಕೋಟೆಯಲ್ಲಿ ಮೇ ಹದಿನಾಲ್ಕನೆ ತಾರೀಖು ಆರಸಿನವ ರ ಪತ್ನಿಯರವರು ಕಳೆದ ವಾರ ಕಾಲವಾದರೆಂದು ತಿಳಿಸಲು ವಿಷಾದಿಸು ತ್ತೇವೆ ಅವರಿಗೆ ಸುಮಾರು ೩೫ ವರುಷವಾಗಿತ್ತು.

✱✱✱

ಈ ವರುಷ ರಾಜಧಾನಿಯಲ್ಲಿ ಇದುವರೆಗೆ ನಡೆದಷ್ಟು ಮದುವೆಗ ಳೂ ಉಪನಯನಗಳೂ ಹಿಂದೆ ಯಾವಾಗಲೂ ಇಲ್ಲವೆಂದು ಹೇಳು ತ್ತಾರೆ. ದಾಂಡಿನಾಯಿಗಳು ಇನ್ನೂ ಪ್ರಬಲವಾಗಿಯೇ ಇರುವವು ರೋಗಗಳಿಗೆ ಭೀತಿಯೇನೂ ಇರುವುದಿಲ್ಲ

✱✱✱

ಶ್ರೀಮನ್ಮಹಾರಾಜರವರು ಜೂನ್ ತಿಂಗಳ ೩ ನೇ ತಾ ಬುಧವಾ ರ ಮೋಟಾರ್ ಗಾಡಿಯಲ್ಲಿ ನೀಲಗಿರಿಯಿಂದ ರಾಜಧಾನಿಗೆ ದಯಮಾ ಡುವವರಾಗಿದ್ದಾರೆ ಮಹಾ ಮಾತೃಶ್ರೀಯವರು ಪರಿವಾರ ಸಹಿತ ತಾ ೫ ನೇ ಮಂಗಳವಾರ ಪಾರ್ಯಂಕರದ ಸ್ಪೆಷಲ್ ರೈಲಿನಲ್ಲಿ ಮೈಸೂರನ್ನು ತಲುಪುವರೆಂದು ತಿಳಿದುಬಂದಿದೆ.

✱✱✱

ಮೊನ್ನೆ ಮಂಗಳವಾರ ಸಂಜೆ ರಾಜಧಾನಿಯ ಅಗ್ರಹಾರ ಬೀದಿಯ ಲ್ಲಿ ಒಬ್ಬ ಮನುಷ್ಯನು, ಮದ್ಯ ಕುಡಿಯುತ್ತಿದ್ದಾಗ ಅದು ಹಾರಿ ಅವನ ಮುಖವೆಲ್ಲಾ ತುಂಬಾ ಗಾಯವಾಗಿ ಆಸ್ಪತ್ರೆಗೆ ಒಯ್ಯಲ್ಪ ಟ್ಟನು ಇದಲ್ಲದೆ ಅನೇಕ ದಿನ ಇಲ್ಲಿನ ಗವರ್ನಮೆಂಟ್ ಹೌಸಿನಲ್ಲಿದ್ದ ಒಂದು ಕುದುರೆ ಗಾಡಿಯನ್ನು ಕುದುರೆಗಳು ಸೈಸ್ ಸ್ವಾಧೀನದಿಂದ ಸ್ವೇಚ್ಛೆಯಾಗಿ ಎಳೆದುಕೊಂಡು ಬಂದು ಹಳೇ ಗಡಿಯಾರದ ಬಳಿ ಕೆಡ ವಿದ್ದರಿಂದ ಗಾಡಿಯು ಮುರಿದುಹೋಯಿತು.

ಮೈಸೂರು ಗೆಜೆಟ್ ಸಂಗ್ರಹ.

ಕೊಪ್ಪ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ವೆ. ಸಿ. ಸುಬ್ಬರಾಯರು ಬ್ರಿಟಿಷ್ ಆಫ್ ಕಂಟ್ರ್ಯಾಕ್ಟ್ ಆಕ್ಟಿನ ಪ್ರಕಾರ ಮೊಕದ್ದಮೆಗಳನ್ನು ಹಿಡಿದು ವಿಚಾರಣೆ ಮಾಡುವ ಅಧಿಕಾರ ಪಡಿಸಲ್ಪಟ್ಟಿದ್ದಾರೆ

ಸಬ್ ಅಸಿಸ್ಟೆಂಟ್ ಸರ್ಜನ್ ಸಿದ್ದಪ್ಪನವರಿಗೆ ಅವರು ಉಪ ಯೋಗಿಸಿಕೊಳ್ಳುವ ತಾರೀಖಿನಿಂದ ನಾಲ್ಕುತಿಂಗಳು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಮೈಸೂರು ಪಬ್ಲಿಕ್ ವರ್ಕ್ಸ್ ಮತ್ತು ರೈಲ್ವೆ ಇಲಾಖೆಗಳ ಚೀಫ್ ಇಂಜಿನಿಯರ್ ಮತ್ತು ಗವರ್ನಮೆಂಟ್ ಅಂಡರ್ ಸೆಕ್ರೆಟರಿ ಕ್ಯಾಪ್ಟನ್ ಎ. ಬಿ. ಡಾಸ್ ಯವರಿಗೆ ಮೇ ತಿಂಗಳ ೫ ನೇ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಕುಂಸಿ ಸಬ್ ತಾಲ್ಲೂಕು ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮೇ ೨ ರಾಮರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಶಿವಮೊಗ್ಗ ತಾಲ್ಲೂಕಿನ ಅಮಲ್ದಾರ್ ವೆ. ಟಿ ವೆಂಕಟರಾಮ್ಯ ಯ್ಯನವರು ಕುಂಸಿ ಸಬ್ ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು.

ಸಾಗರ ತಾಲ್ಲೂಕಿನ ಅಮಲ್ದಾರ್ ಮಿ. ಎಂ ಕೃಷ್ಣಸ್ವಾಮಿ ಅಯ್ಯಂಗಾರಿಗೆ ಏಪ್ರಿಲ್ ತಾ ೩೦ ರಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಶಿರಸ್ತೆದಾರ್ ಎ ಹಲ್ಲಪತಿ ನಾಯ್ಡುಯವರು ತಾಲ್ಲೂಕಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು

ಶಿಕಾರಿಪುರ ತಾಲ್ಲೂಕ್ ಅಮಲ್ದಾರ್ ಮಿ. ಗುಲಾಂಮಹಮದ್ ಮಿಲ್ಕೆಯವರಿಗೆ ಕೊಟ್ಟಿದ್ದ ಹದಿನೈದು ದಿನಗಳ ಪ್ರಿವಿಲೇಜ್ ರಜವನ್ನು ಇನ್ನೂ ಏಳು ದಿನಗಳಿಗೆ ಜಾಸ್ತಿ ಮಾಡಿದೆ.

ಅವರು ರಜದ ಮೇಲಿರುವಾಗ್ಗೆ ಶಿರಸ್ತೆದಾರ್ ಲಕ್ಷ್ಮಣರಾಯರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ವಿಶೇಷ ವಾರ್ತೆಗಳು.

ಈ ತಿಂಗಳ ೧೦ ನೇ ತಾ ಭಾನುವಾರ ಲಂಡನ್‍ಪಟ್ಟಣದ ಹೈಗೇ ಟ್ ಎಂಬ ಭಾಗದಲ್ಲಿರುವ ಒಂದು ಹೋಟೆಲಿನಲ್ಲಿ ಹಿಂದುಸ್ಥಾನದಿಂದ ವಿಲಾಯತಿಗೆ ವಿದ್ಯಾಸಂಪಾದನಾರ್ಥವಾಗಿ ಹೋಗಿರುವಂಥಾ ಸುಮಾರು ೧೦೦ ವಿದ್ಯಾರ್ಥಿಗಳು ಸೇರಿ ಅಂತರಂಗವಾದ ಕೂಟಗನ್ನು ನಡಿಸಿ, ಕಳೆದ ೧೮೫೭ ನೇ ಇಸವಿಯಲ್ಲಿ ಹಿಂದುಸ್ಥಾನದೊಳಗೆ ನಡೆದ ದೊಡ್ಡ ದಂಗೆಯ ವಾರ್ಷಿಕೋತ್ಸವವನ್ನು ನೆರವೇರಿಸಿದರು ಆ ಕಾಲ ದಲ್ಲಿ ಹಲವು ವಿದ್ಯಾರ್ಥಿಗಳು ಬ್ರಿಟಿಷ್ ರಾಜ್ಯಭಾರಕ್ಕೆ ಪ್ರತಿಕೂಲವಾದ ಭಾಷಣಗಳನ್ನು ಮಾಡಿದರು ಶಾಮಜಿ ಕೃಷ್ಣವರ್ಮರವರು ಪ್ಯಾರಿ ಸ್ ಪಟ್ಟಣದಲ್ಲಿ “ಇಂಡಿಯನ್ ಸೋಷಿಯಾಲಜಿಸ್ಟ್” ಎಂಬ ಮಾಸ ಪತ್ರಿಕೆಯನ್ನು ನಡಿಸುತ್ತಾ, ಅದರಲ್ಲಿ ರಾಜದ್ರೋಹಕರವಾದ ವಾರ್ತೆ ಗಳನ್ನು ಪ್ರಕಟಿಸುತ್ತಿದ್ದಾರೆ, ಇಂಡಿಯಾ ಗವರ್ನಮೆಂಟಿನವರು ಈ ಮಾಸಪತ್ರಿಕೆಯನ್ನು ಹಿಂದುಸ್ಥಾನದೊಳಕ್ಕೆ ಪ್ರವೇಶಿಸದಂತೆ ತಡೆದಿರು ತ್ತಾರಾದರೂ ಅದು ವಿಲಾಯತಿಯಲ್ಲಿ ಬಹಳ ಹೆಚ್ಚಾಗಿ ಪ್ರಚಾರವಾ ಗುತ್ತಿದೆ ಎಂಬದಾಗಿ ಲಂಡನ್ ಪಟ್ಟಣದ “ಟೈಮ್ಸ್” ಪತ್ರಿಕೆಯು ತಿಳಿಸುವುದು

———

ರಷ್ಯಾ ರಾಜ್ಯದ ರಾಜಧಾನಿಯಾದ ಸೆಂಟ್ ಪೀಟರ್ಸ್ ಬರ್ಗಿನಲ್ಲಿ ಕಳೆದ ೧೯೦೫ ನೇ ಇಸವಿಯಲ್ಲಿ ಕೆಲವು ಮುಖಂಡರು ಸೇರಿ, ರಾಜ್ಯ ಭಾರವನ್ನು ತಲೆಕೆಳಗು ಮಾಡಬೇಕೆಂದು ಪಿತೂರಿ ಮಾಡಿದ್ದರು ಈ ಪೈಕಿ ಹತ್ತು ಮಂದಿಯನ್ನು ಗವರ್ನಮೆಂಟಿನವರು ಹಿಡಿದು ಸಾಲ್ಕಾರು ತಿಂಗಳಿಂದಲೂ ವಿಚಾರಣೆ ಮಾಡುತ್ತಾ ಬಂದು, ಕಳೆದ ವಾರ ಅವರಿಗೆ ಲ್ಲಾ ಮುಂದೆ ಹೇಳುವಂತೆ ಶಿಕ್ಷೆಯನ್ನು ವಿಧಿಸಿದ್ದಾರೆ ಆ ಸಂಘದ ಮುಖಂಡನಾಗಿದ್ದ ಕಾರಲ್ ಎಂಬವನನ್ನು ಇನ್ನು ಮೂರುಮಂದಿಯ ನ್ನೂ ಗಲ್ಲಿಗೆ ಹಾಕಬೇಕೆಂದೂ, ೪ ಜನರಿಗೆ ಕಠಿಣ ಸಜಾ ವಿಧಿಸಬೇಕೆಂ ದೂ, ಇಬ್ಬರನ್ನು ಗಡೀಪಾರು ಮಾಡಿದೆ ಎಂದೂ ತೀರ್ಮಾನವಾಗಿದೆ

———

ಅಮೇರಿಕಕ್ಕೆ ಸೇರಿದ ಕ್ಯಾಲಿಫೋರ್ನಿಯಾದಲ್ಲಿ ಓಕ್ಲೆಂಡ್ ಎಂಬ ಪಟ್ಟಣದೊಳಗೆ ಸುಮಾರು ಇಪ್ಪತ್ತು ಜನರು ಹೆಚ್ಚಾಗಿ, ಆಕಾ ಶದಲ್ಲಿ ಸಂಚರಿಸುವಂಥಾ ವಿಮಾನಗಳನ್ನು ತಯಾರುಮಾಡುವುದಕ್ಕೆ ಒಂದು ಕಂಪನಿಯನ್ನು ಏರ್ಪಡಿಸಿದರು ಇವರಲ್ಲಿ ಮೋರೆಲ್ ಎಂಬು ತನೇ ಮುಖಂಡನು ಈತನು ತನ್ನ ಯುಕ್ತಿ ಸಾಮರ್ಥ್ಯಾದಿಗಳನ್ನು ವೆಚ್ಚಮಾಡಿ ಒಂದು ದೊಡ್ಡ ವಿಮಾನವನ್ನು ತಯಾರುಮಾಡಿದನು ಅದು ೪೫೦ ಅಡಿ ಉದ್ದವಾಗಿಯೂ ಐದು ಮೋಟಾರ್ ಇಂಜನ್ನುಗಳ ಸಹಾಯದಿಂದ ಅಂತರಿಕ್ಷದಲ್ಲಿ ಓಡಿ ಸಂಚರಿಸತಕ್ಕದ್ದಾಗಿಯೂ ರಚಿಸ ಲ್ಪಟ್ಟಿತ್ತು ಅದರಷ್ಟು ಭಾರೀ ವಿಮಾನವನ್ನು ಇದುವರೆಗೆ ಪ್ರಪಂಚದ ಲ್ಲಿ ಯಾರೂ ಮಾಡಿರಲಿಲ್ಲ. ಕಳೆದವಾರ ಈ ಕಂಪನಿಯ ಆಗಾಧವಾದ ವಿಮಾನದ ಲ್ಲಿ ಆ ಕಂಪನಿಯ ಪಾಲುದಾರರು ಹದಿನಾರು ಮಂದಿ ಕುಳಿತು ಪರಿ ಕ್ಷಾರ್ಥವಾಗಿ ಅದನ್ನು ಅಂತರಿಕ್ಷದಲ್ಲಿ ನಡಿಸಿ ಮೇಲೆ ಹೋಗುತ್ತಿದ್ದ ರು ದುರ್ದೈವಕ್ಕೆ ಅದು ೩೦ ಅಡಿ ಎತ್ತರದಿಂದ ಬಿದ್ದು ಒಳಗೆ ಕುಳಿತಿದ್ದವರಿಗೆಲ್ಲಾ ಭಾರೀ ಗಾಯಗಳನ್ನುಂಟುಮಾಡಿದೆ

———

ಇಟಲಿ ರಾಜ್ಯದ ರಾಜಧಾನಿಯಾದ ರೋಂ ನಗರದಲ್ಲಿ ವಿಕ್ಟರ್ ಇಮ್ಯಾನ್ಯುಯಲ್ ಯವರು ಕಳೆದ ವಾರ ವ್ಯವಸಾಯಾಭಿವೃದ್ಧಿಗಾಗಿ ಒಂದು ಇನ್ಸ್ಟಿಟ್ಯೂಟ್ ಎಂಬ ಕೇಂದ್ರ ಕಾರ್ಯಾಲಯವನ್ನು ಸ್ಥಾ ಪನೆ ಮಾಡಿದರು. ಈಗ ಪ್ರಪಂಚದ ನಾನಾ ಭಾಗಗಳಲ್ಲಿಯೂ ನಡೆ ಯುತ್ತಿರುವ ವ್ಯವಸಾಯ ಕಾರ್ಯಗಳನ್ನು ವಿಚಾರಣೆಮಾಡಿ, ಕೃಷಿ ಯನ್ನು ಅಭಿವೃದ್ಧಿ ಪಡಿಸಿ ಮಡಕ್ಕೆ ಸಹಕಾರಿಗಳಾದ ಹೊಸ ಸಾಧನ ಗಳನ್ನು ಕಂಡು ಹಿಡಿದು, ಪ್ರಪಂಚಕ್ಕೆಲ್ಲಾ ಉಪಕಾರ ಮಾಡಬೇಕೆಂ ಬುದೇ ಈ ಕಾರ್ಯಾಲಯದ ಮುಖ್ಯ ಉದ್ದೇಶವಾಗಿರುತ್ತದೆ ಕಳೆದ ವಾರ ನಡೆದ ಆ ಪ್ರತಿಷ್ಠಾಕಾರ್ಯಕ್ಕೆ ಪ್ರಪಂಚದ ಎಲ್ಲಾ ರಾಜ್ಯ ಗಳಿಂದಲೂ ಪ್ರತಿನಿಧಿಗಳೂ ರಾಯಭಾರಿಗಳೂ ಹೋಗಿದ್ದರು

———

ಐರ್ಲೆಂಡ್ ರಾಜ್ಯದಲ್ಲಿ ನಾರಿನ ವ್ಯಾಪಾರಾಭಿವೃದ್ಧಿಗಾಗಿ ಒಂದು ದೊಡ್ಡ ಸಂಘವು ಏರ್ಪಾಟಾಗಿರುತ್ತದೆ. ಆ ರಾಜ್ಯದಿಂದ ಪರದೇಶಗಳಿಗೆ ಅಲ್ಲಿನ ವರ್ತಕರು ನಾರನ್ನು ರಫ್ತುಮಾಡಿ, ಲಾಭಕರವಾಗಿ ಬೆಳಸ ಮಾಡಿ, ಆ ಕಸಬನ್ನು ಉಚ್ಛ್ರಾಯ ಸ್ಥಿತಿಗೆ ತರಲು ಸಹಾಯವಾಗಿ ಇಂಗ್ಲೆಂಡ್ ಸರಕಾರದವರು ತಮ್ಮ ಫಂಡಿನಿಂದ ಅವರಿಗೆಲ್ಲಾ ದ್ರವ್ಯ ಸಹಾಯ ಮಾಡುವುದಾಗಿ ಒಪ್ಪಿಕೊಂಡಿದಾರೆ. ಇದರಿಂದ ಐರ್ಲೆಂಡ್ ನಾರಿನ ವ್ಯಾಪಾರವು ಇತರ ಕಡೆಗಳಲ್ಲಿ ಹೆಚ್ಚಿ, ಐರ್ಲೆಂಡ್ ಕಸಬುದಾ ರರಿಗೆ ಅನುಕೂಲವಾಗುವುದಕ್ಕೆ ಸಂಶಯವಿಲ್ಲ.

———

ವಿಲಾಯತಿ ರಾಜ್ಯದ ಏಳನೇ ಎಡ್ವರ್ಡ್ ಚಕ್ರವರ್ತಿಗಳವರು ಜೂನ್ ತಿಂಗಳ ೫ನೇ ತಾ ವಿಲಾಯತಿಯಿಂದ ಪ್ರಯಾಣಮಾಡಿ ಶಾ ರ್ಕ್ಕೆ ರಷ್ಯಾ ರಾಜ್ಯಕ್ಕೆ ದಯಮಾಡಿ, ವಾಪಸು ತಾ ೧೫ಕ್ಕೆ ವಿಲಾಯ ತಿಯನ್ನು ಸೇರುವವರಾಗಿದ್ದಾರೆ. ಇವರ ಸಂಗಡ ಮಹಾರಾಜ್ಞೀ ಯ ವರೂ ವಿಕ್ಟೋರಿಯಾ ರಾಜಕುಮಾರಿಯೂ ಹೋಗುವರು. ಅವರ ಹಿಂದೆ ಎರಡು ಹಡಗುಗಳು ಗೌರವಾರ್ಥವಾಗಿ ಹೋಗುವವು ರೆವೆಲ್ ಎಂಬ ಸಮುದ್ರ ತೀರಪಟ್ಟಣದಲ್ಲಿ ಉಭಯ ಚಕ್ರವರ್ತಿಗಳು ವರೂ ಸಂಧಿಸಿ ಕುಶಲಪ್ರಶ್ನಾದಿಗಳನ್ನು ಬೆಳೆಸುವರು. ರಷ್ಯಾ ಚಕ್ರ ವರ್ತಿಯವರ ಸಂಗಡ ಅವರ ಮಹಾಪ್ರಧಾನಿಯವರೂ ಚಕ್ರವರ್ತಿನಿಯ ವರೂ ಎಂ ಇಸ್ವಾಲ್ಸ್ಕಿಯವರೂ ಹೋಗ ತಾ ರೆಂದು ತಿಳಿದು ಬಂ ದಿದೆ ಈಗಿನ ವಿಲಾಯತಿಯ ಮೊದೆ‍ಮಾರು ರಷ್ಯಾ ರಾಜರನ್ನು ಕಾಣುವುದಕ್ಕಾಗಿ ಹೋಗುವುದು ಇದೇ ಮೊದಲನೆಯ ಸಲವಾದ್ದರಿಂದ ಈ ಸಂಧಿಯಿಂದ ಇಂಗ್ಲೆಂಡಿಗೂ ರಷ್ಯಾಗೂ ಇರುವ ಸ್ನೇಹಸಂಬಂ ಧಾದಿಗಳು ಇನ್ನೂ ಹೆಚ್ಚುವುದಕ್ಕೆ ಸಂಶಯವಿಲ್ಲ

ವೈಶ್ಯಮಂಡಲಿಯ ಎರಡನೇ ಮಹಾಸಭೆಯು.

ಮಚಲೀಬಂದರಿನಲ್ಲಿ ನಡೆಯಿತು.

ಕೃಷ್ಣಾ ಜಿಲ್ಲೆಗೆ ಸೇರಿದ ಮಚಲೀಬಂದರೆಂಬ ಊರಿನಲ್ಲಿ ವೈಶ್ಯರ ಎರಡನೇ ಮಹಾ ಸಭೆಯು ಈ ತಿಂಗಳ ೧೧, ೧೨, ೧೩ ನೇ ತಾರೀಖುಗಳಲ್ಲಿ ನಡೆಯಿತು. ಕೊಯಮುತ್ತೂರಿನ ಮೆ|| ಟಿ. ಎಂ. ಚಕ್ರಪಾಣಿ ಶೆಟ್ಟರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಮದರಾಸ್ ಆಧಿಪತ್ಯ, ಹೈದರಬಾದ್ ಸಂಸ್ಥಾನ, ಮೈಸೂರು ಸಂಸ್ಥಾನ, ಈ ಪ್ರಾಂತ್ಯಗಳಿಂದ ವೈಶ್ಯ ಪ್ರತಿನಿಧಿಗಳು ಸುಮಾರು ೬೦೦ ಮಂದಿ ಸಭೆಯಲ್ಲಿ ಹಾಜರಾಗಿದ್ದರು. ಮೊದಲನೇ ದಿನ ವೈಶ್ಯ ಪ್ರಜೆಗಳು ಪ್ರೆಸಿಡೆಂಟರನ್ನು ಮೆರವಣಿಗೆಯಲ್ಲಿ ಸಭಾ ಮಂದಿರಕ್ಕೆ ಕರೆದುಕೊಂಡು ಹೋದರು. ರಿಸೆಪ್‌ಷನ್ ಕಮಿಟಿಯ ಮುಖ್ಯಸ್ಥರು ಉತ್ಸಾಹಯುಕ್ತವಾದ ವಚನಗಳಿಂದ ಕೂಡಿದಂಥಾ ಉಪನ್ಯಾಸ ಮಾಡಿ, ಪ್ರತಿನಿಧಿಗಳಿಗೆ ಸುಸ್ವಾಗಮನವನ್ನು ಬಯಸಿದರು. ತರುವಾಯ ಪ್ರೆಸಿಡೆಂಟ್ ಮೆ|| ಚಕ್ರಪಾಣಿ ಶೆಟ್ಟರವರು ಭಕ್ತಿ, ವಿದ್ಯೆ, ಜನಾಂಗ, ವ್ಯಾಪಾರ, ಉದ್ಯೋಗ, ಸಾಂಸರ್ಗಿಕ ವಿಚಾರಗಳನ್ನು ಕುರಿತು ಬಹು ಸ್ವಾರಸ್ಯವೂ ಪ್ರೋತ್ಸಾಹಕರವೂ ಆದ ಉಪನ್ಯಾಸವನ್ನು ಮಾಡಿದರು. ಇದಲ್ಲದೆ ಈ ಸಂಘದವರು ರಾಜಕೀಯ ವಿಷಯಗಳನ್ನು ಕುರಿತು ಎಳ್ಳಷ್ಟಾದರೂ ಈ ಸಭೆಯಲ್ಲಿ ಚರ್ಚೆ ಮಾಡುವವರಾಗಿಲ್ಲವೆಂದೂ ತಿಳಿಸಿದರು. ಅನಂತರ ಪ್ರತಿನಿಧಿಗಳು ವೈಶ್ಯ ಪ್ರಜೆಗಳ ಅಭಿವೃದ್ಧಿಗೆ ಸಹಕಾರಿಗಳಾದ ವಿಚಾರಗಳನ್ನು ಕುರಿತು ಚರ್ಚೆ ಮಾಡಿದರು. ಆ ಪೈಕಿ ಮುಖ್ಯವಾದ ವಿಷಯಗಳ್ಯಾವವೆಂದರೆ—ಬಾಲ್ಯ ವಿವಾಹವನ್ನು ಈ ಮಂಡಲಿಯವರ್ಯಾರೂ ಮಾಡಲೂ ಪ್ರೋತ್ಸಾಹಪಡಿಸಲೂ ಕೂಡದು. ವಿಧವೆಯರಿಗೆ ಪುನರ್ವಿವಾಹವನ್ನು ಮಾಡುವಂತೆ ಪ್ರೋತ್ಸಾಹ ಪಡಿಸಬೇಕು. ಶುಭ ಶೋಭನಾದಿಗಳು ನಡೆಯುವ ಕಾಲದಲ್ಲಿ ಮನೆಗಳಿಗೂ ಉತ್ಸವಾದಿಗಳಲ್ಲಿ ದೇವಸ್ಥಾನಗಳಿಗೂ ವೇಶ್ಯಾ ಸ್ತ್ರೀಯರನ್ನು ಬರಗೊಡಿಸಬಾರದು. ನಾನಾ ಪದಾರ್ಥಗಳ ತಯಾರಿಗಾಗಿ ಕಾರ್ಖಾನೆಗಳನ್ನೂ, ವ್ಯಾಪಾರಾಭಿವೃದ್ಧಿಗೋಸ್ಕರ ಪ್ರತಿ ಡಿಸ್ಟ್ರಿಕ್ಟಿನೊಳಗೂ ವರ್ತಕ ಮಂಡಲಿಗಳನ್ನೂ ಸ್ಥಾಪಿಸಿ ನಡಿಸಬೇಕು. ಮುಖ್ಯವಾಗಿ ಈ ಮಂಡಲಿಗೆ ಸೇರಿದವರೆಲ್ಲಾ ಸ್ವದೇಶೀ ವಸ್ತುಗಳನ್ನೇ ಎಲ್ಲಾ ಸಂದರ್ಭಗಳಲ್ಲೂ ಕೊಂಡು ಉಪಯೋಗಿಸುವುದು ದೇಶಾಭಿವೃದ್ಧಿಗೆ ಸಹಕಾರಿಯಾಗಿರುತ್ತದೆಂದೂ ಗೊತ್ತುಮಾಡಿದರು.

ಫೈಜಾಬಾದ್ ರೈಲ್ವೆ ಅನಾಹುತವು.

ಅಪಾರವಾದ ಪ್ರಾಣನಷ್ಟವು

ಅಯೋಧ್ಯಾ ನಗರದಿಂದ ರೋಹಿಲ್‌ಖಂಡಕ್ಕೆ ಹೋಗಿಬರುವ ರೈಲ್‌ರಸ್ತೆಯಲ್ಲಿ ಫೈಜಾಬಾದ್ ಸ್ಟೇಷನ್ನಿಂದ ಸುಮಾರು ಮೈಲಿಯ ದೂರದಲ್ಲಿ ಈ ತಿಂಗಳ ೬ ನೇ ತಾರೀಖು ಬುಧವಾರ ಸಾಯಂಕಾಲ ೭ ಗಂಟೆ ಸಮಯದಲ್ಲಿ ಚೆನ್ನಾಗಿ ಬೆಳಕಿರುವಾಗಲೇ ಭಯಂಕರವಾದ ರೈಲ್ವೆ ಅನಾಹುತವು ಸಂಭವಿಸಿತು. ಪ್ರಯಾಣಿಕರಿಂದ ಭರ್ತಿಯಾಗಿದ್ದ ಎರಡು ರೈಲ್‌ಗಾಡಿಗಳು ಎದುರುಬದುರಾಗಿ ಹೋಗಿ ಢಿಕ್ಕಿ ಹೊಡೆದವು. ಒಂದು ರೈಲಿನಲ್ಲಿ ೧೪ ಗಾಡಿಗಳ ತುಂಬಾ ಜನರು ಕುಳಿತಿದ್ದರು. ಈ ಗಾಡಿಯು ದಾಸನವೆಂಬ ಸ್ಟೇಷನ್ನಿನ ಸಾಯಂಕಾಲ ೫–೩೫ಕ್ಕೆ ಫೈಜಾಬಾದ್ ಸ್ಟೇಷನನ್ನು ಕುರಿತು ಹೊರಟಿತು. ಫೈಜಾಬಾದ್ ಸ್ಟೇಷನ್ನಿಂದ ೫–೪೫ ಕ್ಕೆ ದಾಸನವೆಂಬ ಸ್ಟೇಷನನ್ನು ಕುರಿತು ಹೊರಟ ರೈಲ್ ಗಾಡಿಯಲ್ಲಿ ೧೨ ಗಾಡಿಗಳ ತುಂಬಾ ಪ್ರಯಾಣಿಕರು ಇದ್ದರಲ್ಲದೆ ಎರಡು ವಾಗಿನ್ ತುಂಬಾ ಸಾಮಾನುಗಳೂ ಇದ್ದುವು. ಈ ಗಾಡಿಯು ಗಂಟೆಗೆ ೪೦ ಮೈಲಿ ರೇಟಿನಲ್ಲಿ ಹೋಗುತ್ತಾ ಇದ್ದಾಗ ಒಂದು ತಿರುವು ಸುತ್ತಿ ಹೋಗಬೇಕಾಗಿತ್ತು. ಆ ತಿರುವಿನ ಎರಡು ಪಕ್ಕಗಳಲ್ಲೂ ಗಿಡ ಮರಗಳು ಬಹಳ ಒತ್ತಾಗಿಯೂ ಎತ್ತರವಾಗಿಯೂ ಬೆಳೆದಿರುತ್ತವೆ. ಈ ಗಾಡಿಯು ತಿರುವು ಸುತ್ತಿಕೊಂಡು ಬಯಲಿಗೆ ಹೋಗುವುದಕ್ಕೂ ಮೇಲ್ಕಂಡ ದಾಸನಸ್ಟೇಷನ್ನಿಂದ ಬಂದ ಗಾಡಿಯು ಎದುರಾಗಿ ಬರುವುದಕ್ಕೂ ಸರಿಹೋಯಿತು. ಈ ಗಾಡಿ ಬರುವುದು ಅದಕ್ಕಾಗಲಿ, ಅದು ಬರುವುದು ಇದಕ್ಕಾಗಲಿ ಆ ತಿರುವಿದ್ದುದರಿಂದಲೂ ಮರಗಳ ಗುಂಪಿದ್ದುದರಿಂದಲೂ ಕಾಣಿಸಲಿ ಕೇಳಿಸಲಿ ಇಲ್ಲ. ಎರಡು ಗಾಡಿಗಳೂ ಢಿಕ್ಕಿ ಹೊಡೆದವು. ಎಂಜಿನುಗಳೂ ವ್ಯಾಗನ್ನುಗಳೂ ಅವುಗಳ ಹಿಂದೆಯೇ ತಗಲಿಕೊಂಡಿದ್ದ ಅರ್ಧಾರು ಗಾಡಿಗಳೂ ಬಿಡಿಬಿಡಿ ಸಂಪೂರ್ಣವಾಗಿ ನಾಶಕೊಂಡಿದವು. ಆ ಗಾಡಿಗಳ ಮುರಿದ ಚೂರು ಚಕ್ಕೆಗಳು ರಾಶಿಯಾದವು. ಗಾಡಿಗಳ ಕೆಳಭಾಗದಲ್ಲಿ ಅಡಕಿದ್ದ ಗ್ಯಾಸ್ ಎಂಬ ದೀಪದ ಗೆಗೆಯು ಹತ್ತಿಕೊಂಡು, ಆ ರಾಶಿಗೆ ವ್ಯಾಪಿಸಿ, ಎಲ್ಲಾ ಉರಿಯು ಹತ್ತಿತು. ಸೌದೆಗಳ್ಳಕ್ಕೆ ಎಂಜಿನುಗಳಲ್ಲಿ ತುಂಬಿದ್ದ ಕೋಲ್ ಎಂಬ ಕಲ್ಲಿದ್ದಲು ಕೂಡ ಹತ್ತಿಕೊಂಡು ಉರಿಯಲಾರಂಭಿಸಿತು. ಉರಿಗೆ ಸಹಾಯವಾದ ಬಿರುಸಾದ ಗಾಳಿ ಸುಟ್ಟು ಎಲ್ಲಾ ಹತ್ತಿಕೊಂಡು, ಉರಿ ನಾನಾ ಕಡೆಗಳಿಗೆ ಹರಡಿಕೊಂಡಿತು. ಅರ್ಜಿಗಳನ್ನು ನಡಿಸುತ್ತಿದ್ದವರೂ ಅವರ ಸೇವಕರೂ ಕಲ್ಲಿದ್ದಲ ಉರಿಯೊಳಗೆ ಸಿಕ್ಕಿ ಸುಟ್ಟು ಬೂದಿಯಾದರು. ಪ್ರಯಾಣಿಕರಲ್ಲಿ ಎಷ್ಟು ಮಂದಿ ಕೊಲ್ಲಲ್ಪಟ್ಟರೋ ಎಷ್ಟು ಜನರಿಗೆ ಏಟು ಆಯಿತೋ ಹೇಳುವುದು ಸಾಧ್ಯವಿಲ್ಲ. ಬೆಂಕಿಯನ್ನು ಬಿಡಿಸಿ ನೋಡಿದಾಗ ೩೦ ಶವಗಳು ಸಿಕ್ಕಿದವು. ಆದರೆ ಅನೇಕರು ಸುಟ್ಟು ಬೂದಿಯಾಗಿರಬೇಕೆಂದು ಕಾಣುತ್ತದೆ. ಗಾಡಿಗಳಲ್ಲೆಲ್ಲಾ ಜನರು ಭರ್ತಿಯಾಗಿ ಕುಳಿತಿದ್ದರು. ಬೆಂಕಿ ಬಿದ್ದು ಉರಿಯು ವ್ಯಾಪಿಸುತ್ತಾ ಬಂದಾಗ ತಪ್ಪಿಸಿಕೊಂಡು ಹೋಗುವುದಕ್ಕಾಗದೆ ಇದ್ದವರೆಲ್ಲಾ ಉರಿಯೊಳಗೆ ಸಿಕ್ಕಿ ಸುಟ್ಟುಹೋಗಿರಬೇಕು. ಸುಮಾರು ೧೦೦ ಮಂದಿ ಈ ರೀತಿ ಬಯವಾದರೆಂದು ಕೇಳಬರುತ್ತದೆ. ಗಾಯಪಟ್ಟವರಲ್ಲಿ ೪೦ ಮಂದಿ ಮಾತ್ರ ಗೊತ್ತಾದರು. ಉಳಿದವರಲ್ಲಿ ಎಷ್ಟು ಮಂದಿ ಗಾಯಪಟ್ಟವರಿದ್ದರೋ, ಅವರವರ ಜನರು ಕೂಡಲೇ ಸಾಗಿಸಿಕೊಂಡುಹೋಗಿಬಿಟ್ಟದ್ದರಿಂದ ಗೊತ್ತಾಗುವುದಿಲ್ಲ. ಗಾಡಿಗಳ ಪೈಕಿ ಒಬ್ಬನು ಮೃತಪಟ್ಟನು. ಉಳಿದ ಮೂರು ಮಂದಿಗೂ ಗಾಯಗಳಾಗಿವೆ.

ಈ ಅನಾಹುತಕ್ಕೆ ಒದಗಿದ ಕಾರಣವು.

ಒಂದು ಸ್ಟೇಷನ್ನಿಂದ ರೈಲನ್ನು ಬಿಡುವುದಕ್ಕೆ ಮೊದಲು ಸ್ಟೇಷನ್ ಮಾಸ್ಟರು ಲೈನ್ ಕ್ಲಿಯರ್ (ರಸ್ತೆಯು ನಿರಾತಂಕವಾಗಿದೆ) ಎಂದು ತಿಳಿಸುವ ಚೀಟಿಯನ್ನು ಬರೆದು ರೈಲ್ ಗಾರ್ಡಿಗೆ ಕೊಡಬೇಕು. ಈ ಗಾರ್ಡು ಅದನ್ನು ತೆಗೆದುಕೊಂಡುಹೋಗಿ ಗಾಡಿ ನಡಿಸುವ ಡ್ರೈವರಿಗೆ ಕೊಟ್ಟ ಮೇಲೆ ಅವನು ಗಾಡಿಯನ್ನು ಹೊರಡಿಸಿ ನಡಿಸುತ್ತಾನೆ. ಹೀಗೆ ಲೈನ್ ಕ್ಲಿಯರ್ ಚೀಟಿ ಕೊಡುವುದರಲ್ಲಿ ಅಪಾಯವುಂಟಾಗಬಾರದೆಂದು ಸನ ಮೇಲ್ಕಂಡ ರೈಲ್ವೆ ಕಂಪನಿಯವರು ಆ ಚೀಟಿ ಕೊಡುವುದನ್ನೇ ತಪ್ಪಿಸಿದರು. ಇದಕ್ಕೆ ಪ್ರತಿಯಾಗಿ ಅವರು ಮೇಲ್ಕಂಡ ರೈಲ್ವೆ ಲೈನಿನಲ್ಲಿ ೧೯೦೬ನೇ ಇಸವಿಯಿಂದ ಒಂದು ಹೊಸ ತರಹಾ ಏರ್ಪಾಡನ್ನು ಮಾಡಿದರು. ಅದರ ವಿವರವೇನೆಂದರೆ—ಸ್ಟೇಷನ್ ಬಳಿಯಲ್ಲಿ ಒಂದು ಯಂತ್ರವನ್ನು ಹೂತಿರುತ್ತಾರೆ. ಈ ಯಂತ್ರಕ್ಕೂ ಮುಂದಿನ ಸ್ಟೇಷನ್ ಸಮೀಪಕ್ಕೂ ತಂತಿಗಳನ್ನು ಹಾಕಿ, ವಿದ್ಯುಚ್ಛಕ್ತಿಯ ಸಹಾಯದಿಂದ ಕೆಲಸ ನಡೆಯುವಂತೆ ಮಾಡಿಕೊಂಡಿದ್ದಾರೆ. ಒಂದು ಯಂತ್ರವು ಗಾಡಿನಡಿಸುವವನಿಗೆ ರಸ್ತೆ ಸರಿಯಾಗಿದ್ದರೆ ಒಂದು ಮರದ ತುಂಡನ್ನು ಕೊಡುವುದು. ರಸ್ತೆ ಸುರಕ್ಷಿತವಾಗಿಲ್ಲದಿದ್ದರೆ ಅಂದರೆ ಮೊದಲೇ ಆ ರಸ್ತೆಯ ಮೇಲೆ ಎದುರು ಕಡೆಯಿಂದ ಗಾಡಿಯೇನಾದರೂ ಬರುತ್ತಿದ್ದರೆ ಆ ಯಂತ್ರವು ಆ ಮರದ ತುಂಡನ್ನು ತನ್ನ ಹಿಡಿಯಿಂದ ಬಿಟ್ಟುಕೊಡುವುದಿಲ್ಲ. ಇಂಥಾ ಮರದ ತುಂಡು ಕೊಡುವ ಏರ್ಪಾಡು ಮೇಲ್ಕಂಡ ರೈಲ್ವೆ ಲೈನಿನಲ್ಲಿ ಉದ್ದಕ್ಕೂ ಪ್ರತಿ ಒಂದು ಸ್ಟೇಷನ್ನಲ್ಲೂ ಇರುವುದು. ಕಳೆದ ಆರು ವರುಷಗಳಿಂದಲೂ ಸ್ವಲ್ಪವೂ ಅಪಾಯವೇನೂ ಆಗದೆ ಈ ಏರ್ಪಾಡಿನಿಂದ ಗಾಡಿಗಳು ಸರಾಗವಾಗಿ ಹೋಗಿ ಬರುತ್ತಿದ್ದುವು. ದುರ್ದೈವಕ್ಕೆ ಆ ದಿನ ಎರಡು ಸ್ಟೇಷನ್ನುಗಳಲ್ಲೂ ಇದ್ದ ಯಂತ್ರಗಳಲ್ಲಿ ಏನೋ ಕೆಟ್ಟುಹೋಗಿ, ಎರಡು ಕಡೆಗಳಿಂದ ಗಾಡಿಗಳನ್ನು ನಡಿಸತಕ್ಕವರಿಗೂ ಮರದ ತುಂಡುಗಳು ಸುಲಭವಾಗಿ ದೊರಕಿದುವು. ರಸ್ತೆಯು ಸುರಕ್ಷಿತವಾಗಿದೆ ಎಂದು ಎರಡು ಸ್ಟೇಷನ್ನುಗಳಿಂದಲೂ ಗಾಡಿ ನಡಿಸುವವರು ರೈಲ್ ಗಾಡಿಗಳನ್ನು ಎಂದಿನಂತೆ ನಿಶ್ಚಯವಾಗಿ ಅನುಮಾನ ಪಡದೆ ವೇಗವಾಗಿಯೇ ಓಡಿಸಿಕೊಂಡು ಹೋದರು. ಅದರ ಮೇಲೆ ವಿವರಿಸಿದಂತೆ ಬಹು ದುಃಖಕರವಾದ ಅನಾಹುತವು ಪ್ರಾಪ್ತವಾಯಿತು. ಮುರಿದು ಸುಟ್ಟು ಬಿದ್ದಿದ್ದ ರೈಲ್ ಗಾಡಿಗಳ ರಾಶಿಯಲ್ಲಿ ಹುಡುಕಿದಾಗ ಎರಡು ಸ್ಟೇಷನ್‌ಗಳಿಂದಲೂ ಗಾಡಿ ನಡಿಸುವವರಿಗೆ ಯಂತ್ರಗಳಿಂದ ಕೊಡಲ್ಪಟ್ಟ ಎರಡು ಮರದ ತುಂಡುಗಳೂ ಸಿಕ್ಕಿರುತ್ತವೆ. ಈಗ ರೈಲ್ವೆ ಅಧಿಕಾರಿಗಳು ಈ ಅನಾಹುತಕ್ಕೆ ಕಾರಣವೇನೆಂದು ತನಿಖೆಮಾಡುವುದಕ್ಕೆ ಒಂದು ಕಮಿಟಿಯನ್ನು ನೇಮಕಮಾಡಿದ್ದಾರೆ.

ಎಂಪೈರ್ ಡೇ.

ರಾಜಧಾನಿಯಲ್ಲಿ ನಡೆದ ಸಂತೋಷಕಾರ್ಯಗಳು.

ವಿಕ್ಟೋರಿಯಾ ಮಹಾರಾಣಿಯವರು ಜೀವಂತರಾಗಿದ್ದಾಗ್ಗೆ ಮೇ ತಿಂಗಳ ೨೪ನೇ ತಾರೀಖಿನ ದಿನವನ್ನು ಇಂಗ್ಲೆಂಡ್ ರಾಜ್ಯಭಾರದಲ್ಲಿಲ್ಲಾ ಪ್ರಜೆಗಳು ಆಕೆಯವರ ಜನ್ಮದಿನವಾಗಿ ಆಚರಿಸುತ್ತಿದ್ದರು. ಆಕೆಯವರು ಕಾಲವಾದಂದಿನಿಂದ ಆ ತಾರೀಖಿನ ದಿನವನ್ನು ಎಂಪೈರ್ ಡೇ ಎಂಬ ದಿನವೆಂದು ಕರೆಯಿಸಿ ಇಂಗ್ಲೆಂಡಿನಲ್ಲಿ ಸಕಲರೂ ಆಕೆಯವರ ಕೀರ್ತಿಯನ್ನು ಕೊಂಡಾಡುವರು. ಇದೇ ಉದ್ದೇಶದಿಂದ ರಾಜಧಾನಿಯಲ್ಲಿರುವ ಕೆಲವು ದೊಡ್ಡ ಮನುಷ್ಯರು ಸೇರಿ ಏರ್ಪಾಡುಗಳನ್ನು ಮಾಡಿ, ಕಳೆದ ೨೪ನೇ ತಾರೀಖು ಭಾನುವಾರವನ್ನು ಬಹು ಸಂಭ್ರಮ ಕಾರ್ಯಗಳಿಂದ ಆಚರಿಸಿದರು. ಅದರ ವೃತ್ತಾಂತವನ್ನು ವಾಚಕರ ತಿಳುವಳಿಕೆಗಾಗಿ ಸಂಕ್ಷೇಪವಾಗಿ ತಿಳಿಸುತ್ತೇವೆ.

ಹುಡುಗರಿಗೆ ಆಟಪಾಟಗಳು.

ಕಳೆದ ೨೩ ನೇ ತಾ. ಶನಿವಾರ ೩ ಗಂಟೆಯ ಮೇಲೆ ಇಲ್ಲಿನ ಮರಿಮಲ್ಲಪ್ಪನವರ ಸ್ಕೂಲ್ ಕಟ್ಟಡದ ಮೈದಾನದಲ್ಲಿ ಈ ಪಟ್ಟಣದ ಸಮಸ್ತ ಸ್ಕೂಲ್ ವಿದ್ಯಾರ್ಥಿಗಳನ್ನೂ ಸೇರಿಸಿ, ಅವರಿಂದ ಇಂಗ್ಲಿಷ್ ಮತ್ತು ದೇಶೀಯ ಆಟಗಳ ಪಂದ್ಯಗಳನ್ನು ಕಟ್ಟಿಸಿ ಆಡಿಸಿದರು. ಈ ವಿನೋದಗಳಲ್ಲಿ ಗೆದ್ದ ಬಾಲಕರಿಗೆ ಇಪ್ಪತ್ತೈದು ಬಹುಮಾನಗಳನ್ನು ಕೊಡಿಸಿದರು. ಮೈಸೂರು ಅರ್ಜಿಯನ್ ಸಂಘದವರು ಮೇಲ್ಕಂಡ ಆಟಗಳಲ್ಲಿ ಜೆಟ್ಟು ಬಹುಮಾನಗಳನ್ನು ಪಡೆದಂಥಾ ಹುಡುಗನಿಗೆ ಒಂದು ಬೆಳ್ಳಿಯ ಮೆಡಲನ್ನು ಕೊಟ್ಟರು. ಮೆ|| ವೆಂಕಟಕೃಷ್ಣಯ್ಯನವರು, ಮೆ|| ಗೋಸಾಯಿಯವರು ಮೊದಲಾದವರೆಲ್ಲಾ ಮೈದಾನದಲ್ಲಿ ಹಾಜರಾಗಿದ್ದು ಬಾಲಕರ ಆಟಪಾಟಗಳಲ್ಲಿ ಅವರಿಗೆ ಉತ್ತೇಜನ ಕೊಡುತ್ತಾ, ಗೆದ್ದವರ ಕೂಡ ಸಂತೋಷಪಡುತ್ತಾ, ಸೋತುಹೋದವರಿಗೆ ವಿವೇಕ ಹೇಳುತ್ತಾ ಇದ್ದರು.

ಟೌನ್ ಹಾಲ್ ಬಂಗಲೆಯಲ್ಲಿ ನಡೆದ ಉತ್ಸವಗಳು.

ತಾ. ೨೪ ನೇ ಭಾನುವಾರವೇ ಎಂಪೈರ್ ಡೇ ಎಂಬ ಸಂತೋಷೋತ್ಸವದ ದಿನವು. ಆ ದಿನ ರಾಜಧಾನಿಯ ದೊಡ್ಡ ಮನುಷ್ಯರು ಸೇರಿ ಟೌನ್ ಹಾಲ್ ಬಂಗಲೆಯಲ್ಲಿ ಕೆಲವು ಸಂತೋಷೋತ್ಸವಗಳು ನಡೆಯುವಂತೆಯೂ ಲೇಟ್ ಘನ ಚಕ್ರವರ್ತಿನಿಯವರ ಕೀರ್ತಿಯನ್ನು ಸ್ಮರಣೆ ಮಾಡುವಂತೆಯೂ ಏರ್ಪಾಡು ಮಾಡಿದರು. ಟೌನ್ ಹಾಲ್ ಬಂಗಲೆಯನ್ನು ತಕ್ಕಮಟ್ಟಿಗೆ ಅಲಂಕಾರ ಮಾಡಿದರು. ಸಾಯಂಕಾಲ ೬ ಗಂಟೆಯ ಹೊತ್ತಿಗೆ ಪಟ್ಟಣದಲ್ಲಿರುವ ಎಲ್ಲಾ ಕೋಮುಗಳ ಪ್ರಜೆಗಳೂ ದೊಡ್ಡ ಮನುಷ್ಯರೂ ಅಧಿಕಾರಿಗಳೂ ವಿದ್ಯಾರ್ಥಿಗಳೂ ಸುಮಾರು ಎರಡು ಸಾವಿರಕ್ಕಿಂತಲೂ ಹೆಚ್ಚಾಗಿಯೇ ಹಾಜರಾದರು. ಅಡ್ವೊಕೇಟ್ ಮೆ|| ವಿ. ರಾಮಣ್ಣನವರು ಸಭೆಯ ಅಗ್ರಾಸನವನ್ನು ವಹಿಸಿದರು.

ಕೆಲವು ಸ್ಕೂಲ್ ಬಾಲಕರು ಸಂಸ್ಕೃತ, ಕನ್ನಡ ಮತ್ತು ಹಿಂದುಸ್ಥಾನಿ ಭಾಷೆಗಳಲ್ಲಿ ದೇವರ ಸ್ತೋತ್ರಗಳನ್ನು ಪಠಿಸಿಯೂ, ಹಾಡಿಯೂ ಸಭಾ ಕಾರ್ಯಗಳನ್ನು ಪ್ರಾರಂಭಿಸಿದರು. ಅನಂತರ ಗಾಯಕ ಶಿಖಾಮಣಿ ಮೆ|| ಬಿಡಾರದ ಕೃಷ್ಣಪ್ಪನವರ ಮನೋಹರವಾದ ಹಾಡುಗಾರಿಕೆಯೂ, ಅರಮನೆ ಸಂಗೀತ ವಿದ್ವಾನ್ ಮೆ|| ಸುಬ್ಬಣ್ಣನವರ ಆಹ್ಲಾದಕರವಾದ ವೀಣಾ ಗಾನವೂ, ಗ್ರಾಮೊಫೋನ್ ಯಂತ್ರದ ಮೂಲಕ ಸಂಗ್ರಹಿಸಲ್ಪಟ್ಟ ಇಂಪಾದ ಹಿಂದುಸ್ಥಾನಿ ಹಾಡುಗಳೂ ಸಭೆಯವರ ಕರ್ಣಗಳನ್ನು ಬಹುಮಾಗಿ ಆಕರ್ಷಿಸಿದುವು. ತರುವಾಯ ಪಂಡಿತ ಮೆ|| ಎ. ವಿ. ವರದಾಚಾರ್ಯರವರ ಆರ್. ಟಿ. ಕಂಪನಿ ಮೆಂಬರುಗಳು "ವಿಪ್ರಲಂಭ ವಿಪ್ಲವ" "ಶಾಕುಂತಲ" ಎಂಬ ನಾಟಕಗಳಿಂದ ಎರಡು ಭಾಗಗಳನ್ನು ಎತ್ತಿ ಆಡಿ ತೋರಿಸಿದರು. ಈ ಕಂಪನಿಯ ಮೆಂಬರುಗಳು ನಾಟಕಗಳನ್ನು ಅಭಿನಯಿಸಿ ತೋರಿಸುವುದರಲ್ಲಿ ಬಹುಮಟ್ಟಿಗೆ ಪ್ರವೀಣರೆನಿಸಿಕೊಂಡಿರುವುದು ಈ ಸಂಸ್ಥಾನದ ಪ್ರಜೆಗಳಿಗಲ್ಲಾ ಸಾಮಾನ್ಯವಾಗಿ ತಿಳಿದೇ ಇರುತ್ತದೆಯಾದ್ದರಿಂದ ಅವರು ಆ ದಿನ ತಮ್ಮ ಅಭಿನಯಾದಿಗಳಿಂದ ಸಭಿಕರ ಮನಸ್ಸನ್ನು ವಿಶೇಷವಾಗಿ ಸೆಳೆದು ಅವರ ಮೆಚ್ಚಿಕೆಯನ್ನು ಸಂಪಾದಿಸಿದರೆಂದು ಹೇಳುವುದೇನೂ ಹೆಚ್ಚಲ್ಲವು. ಮತ್ತು ಈ ಕಂಪನಿಗೆ ಸೇರಿದ ಇಬ್ಬರು ಹುಡುಗರು ವಿಚಿತ್ರವಾದ ಹಾಡುಗಳನ್ನು ಹೇಳಿ ಸಭಿಕರಲ್ಲಿ ಬಹು ನಗೆಯನ್ನುಂಟುಮಾಡಿದರು.

ಸಭಾನಾಯಕರ ಉಪನ್ಯಾಸವು.

ಇಷ್ಟೆಲ್ಲಾ ವಿನೋದಗಳು ನಡೆದು ಪೂರೈಸಿದ ಮೇಲೆ ಸಭಾನಾಯಕರಾದ ಮೆ|| ರಾಮಣ್ಣನವರು ಎದ್ದು, ಇಂಗ್ಲಿಷ್ ಪ್ರಭುತ್ವದ ವಿಸ್ತೀರ್ಣ, ಆ ಜನಾಂಗದ ಅಘಟಿತಘಟನಾಶಕ್ತಿ ಸಾಮರ್ಥ್ಯಾದಿಗಳು, ಗತಿಸಿದ ವಿಕ್ಟೋರಿಯಾ ಮಹಾರಾಜ್ಞೀಯವರ ಜೀವನಾನದ ಸಂಕ್ಷೇಪ ವೃತ್ತಾಂತ, ಹಿಂದುಸ್ಥಾನವೆಂಬ ಭರತಖಂಡದ ಐಕ್ಯಯೋಗ ಭಿನ್ನವೃತ್ತಿ, ಇಲ್ಲಿನ ಪ್ರಜೆಗಳಿಗೆ ಆಕೆಯವರ ಆಳ್ವಿಕೆಯಲ್ಲಿ ದೊರೆತ ಅಪೂರ್ವ ಸೌಲಭ್ಯಗಳು, ಪ್ರಜಾಪಾಲನೆಯಲ್ಲಿ ಆಕೆಯವರಿಗಿದ್ದ ಭೂತದಯೆ, ಪಕ್ಷಪಾತ ರಾಹಿತ್ಯಾದಿಗಳು, ಈ ಮೊದಲಾದ ವಿಚಾರಗಳನ್ನು ಕುರಿತು ಬಹು ಸ್ವಾರಸ್ಯವಾಗಿಯೂ ಸ್ಫುಟವಾಗಿಯೂ ಉಪನ್ಯಾಸ ಮಾಡಿದರು. ಇನ್ನೂ ಅವರು ತಿಳಿಸಿದ ಮುಖ್ಯಾಂಶಗಳೇನೆಂದರೆ—ವಿಕ್ಟೋರಿಯಾ ಮಹಾರಾಜ್ಞೀಯವರು ೬೪ ವರುಷ ಏಕಪ್ರಕಾರವಾಗಿ ರಾಜ್ಯಭಾರ ಮಾಡಿ, ಚಕ್ರಾಧಿಪತ್ಯವನ್ನು ಎಲ್ಲಾ ಭಾಗಗಳಲ್ಲೂ ಅಭಿವೃದ್ಧಿ ಪಡಿಸಿದರು. ೧೮೫೮ ನೇ ಇಸವಿಯಲ್ಲಿ ಹಿಂದುಸ್ಥಾನದ ಆಳ್ವಿಕೆಯ ಲಕ್ಷಣವನ್ನು ಕುರಿತು ಪ್ರಜೆಗಳಿಗೆ ಪ್ರಸಿದ್ಧವಾದ ಇಸ್ತಿಹಾರನಾಮೆಯನ್ನು ದಯಪಾಲಿಸಿರುತ್ತಾರೆ. ಇಂಗ್ಲಿಷರು ಇಲ್ಲಿಗೆ ಬರುವುದಕ್ಕಿಂತ ಮುಂಚೆ ಹಿಂದುಸ್ಥಾನದಲ್ಲಿ ಅನೇಕರು ಚಕ್ರವರ್ತಿಗಳೆಂತಲೂ, ರಾಜಾಧಿರಾಜರೆಂತಲೂ ಹೇಳಿಸಿಕೊಳ್ಳುತ್ತಿದ್ದರೂ ಈಗಿನಷ್ಟು ನೆಮ್ಮದಿಯಾಗಿ ಸುಖಸಂತೋಷಗಳಿಂದ ಪ್ರಜೆಗಳಿಗೆ ಇರಲಿಲ್ಲ. ಒಂದೊಂದು ಊರಿಗೆ ಒಬ್ಬೊಬ್ಬ ರಾಜನು ಏರ್ಪಟ್ಟು, ಊರಿಂದೂರಿಗೆ ಹೋಗುವುದು ಅಸಾಧ್ಯವಾಗಿತ್ತು. ಇಂಗ್ಲಿಷ್ ಪ್ರಭುತ್ವದಲ್ಲಿ ಕಾಂಟಾಗಿರುವ ಸಕಲ ವಿಧವಾದ ಅನುಕೂಲ ಪ್ರಜಾಕೋಟಿಗಳಿಗೆ ಅನುಭವಸಿದ್ಧಗಳಾಗಿಯೇ ಇರುತ್ತವೆ. ಆದಕಾರಣ ಈ ರಾಜ್ಯದೊಳಗಿರುವ ಬೇರೆ ಬೇರೆ ಪಂಗಡಗಳ ಜನಾಂಗಗಳೆಲ್ಲಾ ಪರಸ್ಪರವಾದ ಮೈತ್ರತ್ವ, ಅನ್ಯೋನ್ಯಭಾವಗಳನ್ನು ಹೊಂದಿ, ಸಕಲರೂ ಏಕೀಭವಿಸಿ, ಬ್ರಿಟಿಷ್ ಗವರ್ನಮೆಂಟಿನವರು ವಹಿಸಿಕೊಂಡಿರುವ ಆಳ್ವಿಕೆಯ ಜವಾಬ್ದಾರಿ ಕೆಲಸದಲ್ಲಿ ಅವರಿಗೆ ಸಹಾಯಕರಾಗಬೇಕು. ದೇವರ ನಿಯಾಮಕವಿದ್ದುದರಿಂದಲೇ ಬ್ರಿಟಿಷ್ ಜನಾಂಗದವರು ನಮ್ಮನ್ನಾಳುವುದಕ್ಕೆ ಬಂದಿರುವರು. ಆದಕಾರಣ ನಾವು ಅಂಥಾ ಜನಾಂಗದವರಿಗೆ ವಿಧೇಯರಾಗಿ ನಡೆದುಕೊಳ್ಳುವುದರಿಂದ ನಮ್ಮ ದೇಶಕ್ಕೆ ಶ್ರೇಯಸ್ಸುಂಟಾಗುವುದು. ಇಂಗ್ಲಿಷರ ಗುರಿಯೂ ಸಹಾ ನಮ್ಮ ದೇಶವನ್ನು ಸಕಲ ವಿಷಯಗಳಲ್ಲೂ ಅಭಿವೃದ್ಧಿಗೆ ತರಬೇಕೆಂಬುದೇ ಆಗಿರುವುದರಿಂದ ನಾವುಗಳೆಲ್ಲಾ ನಮ್ಮ ನಮ್ಮ ಪರಸ್ಪರ ಭಿನ್ನಭೇದಗಳನ್ನು ವರ್ಜಿಸಿ ಅವರಿಗೆ ಬೆಂಬಲ ಕೊಡುತ್ತಾ ಬಾರದ ಹಿಂತೆಗೆಯುವುದು ಧರ್ಮವಲ್ಲ. ಸಕಲರೂ ಪ್ರೀತಿ ಸಹಿತ ಅನ್ಯೋನ್ಯ ಭಾವಾದಿಗಳನ್ನು ಪಡೆದು ಏಕೀಭವಿಸಿ ನಮ್ಮ ರಾಷ್ಟ್ರವನ್ನು ಉಚ್ಚಸ್ಥಿತಿಗೆ ತರುವ ಕಾರ್ಯಸಾಧನೆಯಲ್ಲಿ ನಿರತರಾಗಬೇಕು. ನಮ್ಮ ಶ್ರೀಮನ್ಮಹಾರಾಜರವರು ಬ್ರಿಟಿಷ್ ಚಕ್ರಾಧಿಪತ್ಯದ ಪರಮ ಮಿತ್ರರಾಗಿರುತ್ತಾರೆ. ನಾವು ಇವರ ಸತ್ಪ್ರಜೆಗಳಾಗಿರುವೆವು. ಆದ್ದರಿಂದ ಇಂಗ್ಲಿಷರಿಗೂ ಕೂಡ ನಾವು ಸತ್ಪ್ರಜೆಗಳಾಗಿಯೇ ಇರುತ್ತೇನೆ. ಇಂಥಾ ಸುದಿನವನ್ನು ಈ ರೀತಿ ಸಂತೋಷೋತ್ಸವಗಳಿಂದ ನಾವು ಆಚರಿಸುವುದಕ್ಕೆ ಅವಕಾಶವುಂಟಾದ ವಿಷಯದಲ್ಲಿ ನಾವುಗಳೆಲ್ಲಾ ಪರಮಾನಂದ ಭರಿತರಾಗಿರುತ್ತೇವೆ ಎಂಬ ರೀತಿಯಾಗಿ ಉಪನ್ಯಾಸ ಮಾಡಿದರು.

ಅನಂತರ ಮೆ|| ವೆಂಕಟಕೃಷ್ಣಯ್ಯನವರು ಮುಂದೆ ಬಂದು ಆ ದಿನದ ಉತ್ಸವಾದಿಗಳಿಗೆ ಸಹಾಯಮಾಡಿದ ಸಂಗೀತ ವಿದ್ವಾಂಸರನ್ನೂ ನಾಟಕದ ಕಂಪನಿಯವರನ್ನೂ ಸಭಿಕರ ಪರವಾಗಿ ವಂದಿಸಿದರು. ಮೆ|| ಪುರುಷೋತ್ತಮಾನಂದಗಿರಿ ಗೋಸಾಯಿಯವರು ಮೆ|| ಎ. ವಿ. ವರದಾಚಾರ್ಯರಿಗೆ ಗಾಯಕ ಶಿಖಾಮಣಿ ಮೆ|| ಬಿ. ಕೃಷ್ಣಪ್ಪನವರ ಕೈಯಿಂದ ಶಾಲ್ ಜೋಡಿಯನ್ನು ಬಹುಮಾನ ಕೊಡಿಸಿದರು. ತರುವಾಯ ಇಂಗ್ಲಿಷ್ ಸಲಾಂ ಬಾಜಾದಲ್ಲಿ ನಾದು ಹೇಳಲ್ಪಟ್ಟಾಗ ಸಭಿಕರೆಲ್ಲಾ ಎದ್ದು ನಿಂತುಕೊಂಡರು. ಕಡೆಯಲ್ಲಿ ಮೆ|| ವಿಜಯಬಾಬ್ ಬಾಕರನ್ನಿ ಬಾಕರವರು ಸೂಚಿಸಿದಂತೆ ಸಭಿಕರು ಚಕ್ರವರ್ತಿಯವರ, ವೈಸ್‌ರಾಯಿಯವರ, ಮತ್ತು ಶ್ರೀಮನ್ಮಹಾರಾಜರವರ ಹೆಸರುಗಳನ್ನು ಹೇಳಿ ಜಯಘೋಷವನ್ನು ಮಾಡುತ್ತಾ ಹರ್ಷಯುಕ್ತರಾಗಿ ತೆರಳಿದರು.

ಮೈಸೂರು ಸಂಸ್ಥಾನದ ರೆವಿನ್ಯೂ ಇಲಾಖೆಯು.

ಸರ್ ೧೯೦೬–೦೭ನೇ ಸಾಲಿನ ರೆವಿನ್ಯೂ ಕಮಿಷನರವರ ರಿಪೋರ್ಟು.

ಮೈಸೂರು ಸಂಸ್ಥಾನದ ರೆವಿನ್ಯೂ ಕಮಿಷನರಾದ ಮೆ|| ರಾವ್ ಬಹದ್ದೂರ್ ಪ್ರವೀಣ ಎ. ರಂಗಸ್ವಾಮಯ್ಯಂಗಾರ್ರವರು ಕಳೆದ ೧೯೦೬–೦೭ನೇ ಸಾಲಿನಲ್ಲಿ ಮೈಸೂರು ದೇಶೀಯ ರೆವಿನ್ಯೂ ಇಲಾಖೆಯ ರಿಪೋರ್ಟನ್ನು ೧೯೦೭ನೇ ನವಂಬರ್ ಮೊದಲನೇ ವಾರದಲ್ಲಿ ಗವರ್ನಮೆಂ

ಟಿಗೆ ಕಳುಹಿಸಿದರು. ಈ ರಿಪೋರ್ಟಿನಲ್ಲಿ ಕಂಡ ಸಂಸ್ಥಾನಾವಳಿ ಅನ್ವಯಿಸುವಂಥಾ ಮುಖ್ಯ ವಿಚಾರಗಳನ್ನು ತೆಗೆದು ವಿವರಿಸುತ್ತೇವೆ.

ವಿಶೇಷ ವಿಷಯವು

ಶ್ರೀಮನ್ಮಹಾರಾಜರವರಿಗೆ ಮಹಾ ಘನತರವಾದ ಜಿ ಸಿ ಎಸ್ ಐ ಎಂಬ ಬಿರುದು ಬಂದಿದ್ದು ಈ ಸಾಲಿನ ವಿಶೇಷವೂ ಪ್ರಾಮುಖ್ಯವೂ ಆದ ಸಂಗತಿಯಾಗಿರುತ್ತದೆ ಈ ಶುಭ ವರ್ತಮಾನವನ್ನು ಕೇಳಿ ಸಂಸ್ಥಾನದ ಸಮಸ್ತ ಪ್ರಜೆಗಳೂ ಅತ್ಯಾನಂದಭರಿತರಾಗಿ ನಾನಾ ಸಂತೋಷೋತ್ಸವಗಳನ್ನು ನಡಿಸಿ ಹರ್ಷಪಟ್ಟರು

ರಿವಿಜನ್ ಸರ್ವೆ ಸೆಟ್ಲ್‌ಮೆಂಟು

ಈ ಸಾಲಿನಲ್ಲಿ ಶೃಂಗೇರಿ ಜಹಗೀರಿಯಲ್ಲಿ ಮೊದಲನೆ ಸೆಟ್ಲ್‌ಮೆಂಟು ಮಾಡಲಾಯಿತು ಚಳ್ಳಕೆರೆ ತಾಲ್ಲೂಕಿನಲ್ಲೂ, ಹೊಸದುರ್ಗ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳ ಕೆಲವು ಭಾಗಗಳಲ್ಲೂ ಹೊಸ ಕಂದಾಯದ ದರಗಳು ಜಾರಿಗೆ ಬಂದವು ಚನ್ನಗಿರಿ, ಮೊಳಕಾಲ್ಮೂರು, ಬೆಂಗಳೂರು ತಾಲ್ಲೂಕುಗಳಲ್ಲಿ ಹೊಸ ಕಂದಾಯಗಳನ್ನು ತಯಾರಿಸಿ ಪ್ರಕಟಿಸಲಾಯಿತು ಬೇಲೂರು, ಶಿವಮೊಗ್ಗ, ಮಾಜಿ ಗುಡಿಬಂಡೆ ತಾಲ್ಲೂಕುಗಳಲ್ಲಿ ರೀಸರ್ವೆ ಕಾರ್ಯಗಳು ನಡೆಯುತ್ತಿದ್ದವು ಸಿರಾ ಮತ್ತು ತುಂಕೂರು ತಾಲ್ಲೂಕುಗಳಲ್ಲಿ ಇರಿ ಬಾಗಾಯಿತು ಜಮೀನುಗಳನ್ನು ಮತ್ತೆ ಕ್ಲಾಸ್ ಮಾಡಿ ವಿಂಗಡಿಸುವ ಕಾರ್ಯವು ಮುಕ್ತಾಯವಾಯಿತು

ರೆವಿನ್ಯೂ ಕಮಿಷನರ ಅಧಿಕಾರ ಬದಲಾವಣೆ.

ಈ ಸಾಲಿನಲ್ಲಿ ರೆವಿನ್ಯೂ ಕಮಿಷನರಿಗೆ ಹೆಚ್ಚು ಅಧಿಕಾರಗಳು ವಹಿಸಲ್ಪಟ್ಟವು. ರೆವಿನ್ಯೂ ಆಫೀಸುಗಳು, ಕೋ ಆಪರೇಟಿವ್ ಸೊಸೈಟಿಗಳು, ವ್ಯವಸಾಯದ ಬ್ಯಾಂಕುಗಳು, ಖಜಾನೆಗಳು, ಗ್ರಾಮನಿವಾರ ಹೋಬಾಯಿ, ಈ ಬಾಬುಗಳೆಲ್ಲಾ ರೆವಿನ್ಯೂ ಕಮಿಷನರವರಿಗೆ ವಹಿಸಲಾದವು. ಇದಲ್ಲದೆ ಹೊಸದಾಗಿ ಏರ್ಪಟ್ಟ ಲೆಜಿಸ್ಲೆಟಿವ್ ಕೌನ್ಸಿಲ್ಲಿಗೆ ಅವರನ್ನು ಮೆಂಬರಾಗಿ ಸೇರಿಸಿಕೊಂಡರು.

ವರ್ಷ ಕಾಲವು

ಹಿಂದಿನ ಎರಡು ಸಾಲುಗಳಲ್ಲೂ ಮಳೆಯಾಗದೆ ಇದ್ದದ್ದಕ್ಕೆ ಪ್ರತಿಯಾಗಿ ಈ ಸಾಲಿನಲ್ಲಿ ಸಂಸ್ಥಾನಾವಳಿ ಮಳೆಗಳು ಸುರಿದದ್ದು ತುಂಬಾ ಸಂತೋಷಪ್ರದವಾಗಿರುತ್ತದೆ ಪ್ರತಿ ಡಿಸ್ಟ್ರಿಕ್ಟಿನಲ್ಲೂ ಮಳೆಯು ತೃಪ್ತಿಕರವಾಗಿ ಆಗಿರುವುದು ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಮೊದಲು ಕೆಟ್ಟಗಿಯೂ ಆಗಗೆ ಅಪ್ಪಿಯಾಗಿಯೂ ಮಳೆಯಾಯಿತು. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮಳೆ ಹೆಚ್ಚಾಗಿ ಬಂದು ಪೈರನ್ನು ನಷ್ಟಪಡಿಸಿತು ಶಿಕಾರಿಪುರ ಸೊರಬ ತಾಲ್ಲೂಕುಗಳಲ್ಲಿ ಹಿಂಗಾರುಮಳೆ ಬರಲಿಲ್ಲ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಮುಂಗಾರುಮಳೆಯು ಕಾಲಕ್ಕೆ ಸರಿಯಾಗಿ ಬರಲಿಲ್ಲ ಕೆರೆಗಟ್ಟೆಗಳಿಗೆ ನೀರು ಸಮೃದ್ಧಿಯಾಯಿತು ಕಡೂರು, ಕೋಲಾರ, ತುಂಕೂರು ಡಿಸ್ಟ್ರಿಕ್ಟುಗಳಲ್ಲಿ ಮಳೆಗಳು ಕಾಲಕ್ಕೆ ಸರಿಯಾಗಿ ಬೇಕಾದಷ್ಟು ಬಂದಿರುತ್ತವೆ ಹಾಸನದ ಡಿಸ್ಟ್ರಿಕ್ಟಿನಲ್ಲಿ ಮಳೆ ಬಂದದ್ದು ಸ್ವಲ್ಪ ಸಾವಕಾಶವಾಯಿತು

ಹೊಸ ಜಮೀನ ಸಾಗುವಳಿಯು.

ಈ ಸಾಲಿನ ಪ್ರಾರಂಭದಲ್ಲಿ ಸಾಗುವಳಿಗೆ ಸಿದ್ಧವಾಗಿದ್ದ ಜಮೀನು ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ೧೪,೧೨,೭೮೪ ಎಕರೆ ಇತ್ತು ಈ ಪೈಕಿ ರೈತಪ್ರಜೆಗಳು ೧,೭೯,೪೩೩ ರೂಪಾಯಿಗಳ ಕಂದಾಯ ದಾಖಲಾದ ೧,೪೧,೭೪೫ ಎಕರೆ ಜಮೀನನ್ನು ಪಡೆದುಕೊಂಡು ಹೊಸ ಸಾಗುವಳಿ ಮಾಡಿದರು. ಮತ್ತು ರೈತರು ೯೬,೯೩೮ ರೂಪಾಯಿ ಕಂದಾಯವುಳ್ಳ ೯೯,೪೫೧ ಎಕರೆ ಜಮೀನನ್ನು ರಾಜೀನಾಮೆ ಕೊಟ್ಟು ಬಿಟ್ಟರು. ಅಂದರೆ, ಸಂಸ್ಥಾನಾವಳಿ ಒಟ್ಟು ೩೨,೪೯೫ ರೂಪಾಯಿ ಕಂದಾಯವುಳ್ಳ ೪೨,೧೯೪ ಎಕರೆ ಜಮೀನು ಹಿಂದಿನ ಸಾಲಿಗಿಂತ ಹೆಚ್ಚಾಗಿ ಸಾಗುವಳಿ ಆಗಿರುತ್ತದೆ ಹೀಗೆ ಹೆಚ್ಚಿರುವುದು ಪ್ರತಿ ಒಂದು ಡಿಸ್ಟ್ರಿಕ್ಟಿನಲ್ಲೂ ಉಂಟು. ಮಲೆನಾಡಿನಲ್ಲಿ ಅಂದರೆ ಮಂದಲಬಟ್ಟು ಒಂದರಲ್ಲಿ ಮಾತ್ರ ಕಾಫಿ ವ್ಯಾಪಾರ ಕಡಮೆಯಾದ್ದಕ್ಕೋಸ್ಕರ ೨೬೦ ಎಕರೆ ಜಮೀನು ರಾಜೀನಾಮೆ ಆಗಿರುತ್ತದೆ

ಹಿಡುವಳಿಯಲ್ಲಿರುವ ಜಮೀನೂ ಬೆಳೆಗಳೂ

ಈ ಸಾಲಿನಲ್ಲಿ ೩೧,೫೩,೪೫೧ ಎಕರೆ ಜಮೀನು, ಅಂದರೆ ಹಿಂದಿನ ಸಾಲಿಗಿಂತ ೨೩,೮೬೧ ಎಕರೆ ಜಮೀನು ಹೆಚ್ಚಾಗಿ, ಹಿಡುವಳಿಯಲ್ಲಿತ್ತು ಈ ಪೈಕಿ ೬೧,೩೧,೫೮೬ ಎಕರೆ ಜಮೀನಿನಲ್ಲಿ, ಅಂದರೆ ಹಿಂದಿನ ಸಾಲಿಗಿಂತ ೨,೪೦,೬೩೬ ಎಕರೆ ಜಮೀನು ಹೆಚ್ಚಾಗಿ, ಬೆಳೆಯನ್ನು ಕಟಾವುಮಾಡಿದರು. ಹಾಸನದ ಡಿಸ್ಟ್ರಿಕ್ಟಿನಲ್ಲಿ ಮಾತ್ರ ಮಳೆಯು ಕಾಲವಿಸಾರಿ ಬಂದದ್ದರಿಂದ ಬೆಳೆ ಕಟಾವಾದ ಜಮೀನು ಹಿಂದಿನ ಸಾಲಿಗಿಂತ ೧೬,೭೩೮ ಎಕರೆಯಷ್ಟು ಕಡಮೆಯಾಯಿತು. ಸಂಸ್ಥಾನಾವಳಿ ಮುಖ್ಯ ಧಾನ್ಯಗಳನ್ನು ಬೆಳೆದ ಜಮೀನು ಎಷ್ಟೆಂದರೆ—

ಮುಖ್ಯ ಧಾನ್ಯಗಳು	೧೯೦೫-೦೬ ಎಕರೆಗಳು	೧೯೦೬-೦೭ ಎಕರೆಗಳು
ಭತ್ತ	೩,೩೯,೭೩೭	೩,೮೮,೪೨೦
ರಾಗಿ	೨೨,೧೦,೩೩೦	೨೩,೬೨,೨೪೩
ಹುರಳಿ	೬,೯೭,೯೪೪	೬,೯೪,೯೩೩
ಜೋಳ	೪,೩೭,೮೬೪	೪,೫೪,೯೦೨
ಕಬ್ಬು	೭೦,೩೬೯	೭೧,೨೪೮

ಧಾರಣೆವಾಸಿಗಳು

ಸಾಮಾನ್ಯವಾಗಿ ಈ ಸಾಲಿನಲ್ಲಿ ಬೆಳೆಗಳೆಲ್ಲಾ ಸರ್ವತ್ರ ಚನ್ನಾಗಿ ಆಗಿದ್ದರೂ ಮೊದಲೇ ಏರಿದ್ದ ಕಾಳಿನ ಧಾರಣೆಗಳು ಇಳಿಯಲಿಲ್ಲ ಸಂಸ್ಥಾನಾವಳಿ ಧಾರಣೆಗಳು ಸರಾಸರಿ ನೋಡಿದರೆ ರೂಪಾಯಿಗೆ ಅಕ್ಕಿ ೮|| ಸೇರು, ರಾಗಿ ೧೬ ಸೇರು, ಜೋಳ ೧೪|| ಸೇರು, ಕಡಲೆ ೮||| ಸೇರು, ಈ ರೀತಿ ಇತ್ತು ಹಿಂದಿನ ಎರಡು ಸಾಲುಗಳಲ್ಲಿ ಮಳೆ ಬೆಳೆಗಳಾಗದೆ ಹೋಗಿದ್ದರಿಂದ ದಾಸ್ತಾನು ಇದ್ದ ಧಾನ್ಯಗಳು ಮುಗಿದುಹೋದವು; ಬೆಳೆದ ಧಾನ್ಯಗಳು ಈ ಸಲ ಸಾಗಿಸಲು ಸಹ ಸೌಲಭ್ಯಗಳಿದ್ದವು. ಮತ್ತು ಹೆಚ್ಚಾಗಿ ಧಾನ್ಯಗಳನ್ನು ಹೊರಗಡೆಗೆ ರಫ್ತು ಮಾಡಿದರು, ಈ ಕಾರಣಗಳಿಂದ ಈ ಸಾಲಿನಲ್ಲಿ ಕಾಳಿನ ಧಾರಣೆಗಳು ಕಡಮೆಯಾಗಲಿಲ್ಲ.

ಜನರ ಆಮದು ರಫ್ತು

ಬೆಂಗಳೂರು, ತುಂಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಿಗೆ ಹೊರಗಿನ ಜನರು ಬಂದು ನೆಲಸಲಿಲ್ಲ, ಅಲ್ಲಿನ ಪ್ರಜೆಗಳು ಇತರ ಕಡೆಗಳಿಗೆ ಹೋಗಲೂ ಇಲ್ಲ. ಕೋಲಾರದ ಚಿನ್ನದ ಗಣಿಗಳಿಗೆ ಕಂಪೆನೀ ಶೀಮೆಯಿಂದ ಜೀವನಕ್ಕಾಗಿ ೮೧೫ ಜನರು ಬಂದಿರುವರು ಹಾಸನ, ಕಡೂರು ಡಿಸ್ಟ್ರಿಕ್ಟುಗಳ ಕಾಫಿತೋಟಗಳಿಗೆ ದಕ್ಷಿಣ ಕೆನರಾ ಮೊದಲಾದ ಕಡೆಗಳಿಂದ ಮಾಮೂಲಾಗಿ ಬರುವಂತೆ ಕೂಲೀ ಜನರು ಬಂದರು. ನಂಜನಗೂಡು ತಾಲ್ಲೂಕಿಗೆ ಸೇರಿದ ಚನ್ನಂಬಳ್ಳಿಗೂ ಹೆಮ್ಮರಗಾಲಕ್ಕೂ ಕಂಪೆನೀ ಶೀಮೆಯ ಕೆಲವು ನೆಯ್ಗೆಯವರು ಬಂದು ಮನೆ ಮಠಗಳನ್ನು ಮಾಡಿಕೊಳ್ಳುತ್ತಿರುವಂತೆ ತಿಳಿದು ಬಂದಿದೆ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಮಲ್ನಾಡು ತಾಲ್ಲೂಕುಗಳ ಅಡಿಕೆ ತೋಟದ ಕೆಲಸಕ್ಕೆ ದಕ್ಷಿಣ ಕೆನರಾದಿಂದ ಸಾಮಾನ್ಯವಾಗಿ ಬರತಕ್ಕ ಜನರಲ್ಲದೆ ಮ್ಯಾಂಗನೀಸ್ ಗಣಿಗಳಲ್ಲಿ ಕೆಲಸ ಮಾಡುವುದಕ್ಕೋಸ್ಕರ ಕಂಪೆನೀ ಶೀಮೆಯಿಂದಲೂ ಹಾಸನ, ತುಂಕೂರು ಡಿಸ್ಟ್ರಿಕ್ಟುಗಳಿಂದಲೂ ಜನರು ಬಹಳ ಹೆಚ್ಚಾಗಿ ಬಂದಿರುತ್ತಾರೆ

ಕಸಬುಗಳೂ ಕೈಗಾರಿಕೆಗಳೂ

ಕಸಬುಗಳನ್ನೂ ಕೈಗಾರಿಕೆಗಳನ್ನೂ ಅಭಿವೃದ್ಧಿಗೆ ತರಬೇಕೆಂಬ ಕುತೂಹಲವು ಹಿಂದೂಸ್ಥಾನದ ಇತರ ಪ್ರದೇಶಗಳಲ್ಲಿ ಹ್ಯಾಗೋ ಹಾಗೆ ಈ ಸಂಸ್ಥಾನದೊಳಗೂ ದಿನೇ ದಿನೇ ಕಂಡುಬರುತ್ತಿರುವುದು. ಜನರು ಜೀವನೋಪಾಯಕ್ಕೆ ವ್ಯವಸಾಯ ಒಂದನ್ನೇ ನೆಚ್ಚಿಕೊಂಡಿರುವುದನ್ನು ಬಿಟ್ಟು, ಇತರ ಕಸಬುಗಳನ್ನೂ ಅವಲಂಬಿಸುವುದರಲ್ಲಿ ಪ್ರಯೋಜನವುಂಟೆಂದು ತಿಳಿದುಕೊಳ್ಳುತ್ತಿದ್ದಾರೆ. ಈ ಸಂಸ್ಥಾನದಲ್ಲಿ ಈಗ ರೂಢಿಯಲ್ಲಿರುವ ಮುಖ್ಯ ಕಸಬುಗಳ್ಯಾವವೆಂದರೆ—(೧) ಬೆಂಗಳೂರಿನಲ್ಲಿರುವ ಎರಡು ಕಾರ್ಖಾನೆಗಳಲ್ಲಿ ಹತ್ತಿಯ, ರೇಷ್ಮೆಯ ಮತ್ತು ತುಪ್ಪಟದ ಬಟ್ಟೆಗಳನ್ನು ತಯಾರುಮಾಡುತ್ತಾರೆ; (೨) ಕೋಲಾರ, ಶಿವಮೊಗ್ಗ, ಹಾಸನ ಡಿಸ್ಟ್ರಿಕ್ಟುಗಳಲ್ಲಿ ಚಿನ್ನ, ಮ್ಯಾಂಗನೀಸ್, ಕ್ರೋಮಿಯಂಗಳನ್ನು ತೆಗೆಯುತ್ತಾರೆ; (೩) ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಕೆಲವು ಸಣ್ಣಸಣ್ಣ ವರ್ತಕರು ಸಕ್ಕರೆ ತಯಾರುಮಾಡುತ್ತಾರೆ; (೪) ಬೌರಿಂಗ್ ಪೇಟೆಯಲ್ಲಿ ಸಿಗರೆಟ್ ಎಂಬ ಬೀಡಿಗಳನ್ನು ಕಾರ್ಖಾನೆಯಿಟ್ಟು ಮಾಡುತ್ತಾರೆ (೫) ದಾವಣಗೆರೆಯಲ್ಲಿ ಹತ್ತಿ ಬಿಡಿಸುವುದು, ಗಟ್ಟಿಗಳಾಗಿ ಕಟ್ಟುವುದು ದೊಡ್ಡ ಕಸಬಾಗಿದೆ, (೬) ಹುಣಸೂರಿನಲ್ಲೂ ಕೋಲಾರ್ ಚಿನ್ನದಗಣಿಗಳಲ್ಲೂ ತೊಲೆಗಳನ್ನು ಕೊಯ್ಯುವ ಕಾರ್ಖಾನೆಗಳಿರುತ್ತವೆ (೭, ಬೆಂಗಳೂರು, ಮೈಸೂರು, ತುಂಕೂರು, ಕೋಲಾರ ಡಿಸ್ಟ್ರಿಕ್ಟುಗಳ ಕೆಲವು ತಾಲ್ಲೂಕುಗಳಲ್ಲಿ ರೇಷ್ಮೆ ಕಸಬು ನಡೆಯುವುದು. ಕಸಬುಗಳನ್ನು ಡಿಸ್ಟ್ರಿಕ್ಟು ವಾರು ಹ್ಯಾಗಿದೆ ಎಂದು ವಿಚಾರಮಾಡಿ ನೋಡಿದಲ್ಲಿ—

ಬೆಂಗಳೂರು ಡಿಸ್ಟ್ರಿಕ್ಟು—ಬೆಂಗಳೂರು ಸಿಟಿಯೊಳಗೇ [illegible] ಕಾರ್ಖಾನೆ, ಬಿನ್ನಿ ಎಣ್ಣೆಯ ಕಾರ್ಖಾನೆ, ಹೆಂಚು ಇಟ್ಟಿಗೆ ಕಾರ್ಖಾನೆ, ತುಪ್ಪಟದ ಹತ್ತಿಯ ರೇಷ್ಮೆಯ ಕಾರ್ಖಾನೆ, ನೂಲುವ ಮತ್ತು ನೆಯ್ಯುವ ಸಹಕಾರಿಯ ಕಾರ್ಖಾನೆ, ಇವು ಕೆಲಸಮಾಡುತ್ತಿದ್ದವು ಹಿಂದಿನ ಸಾಲಿಗಿಂತ ಹತ್ತಿ ಬಟ್ಟೆಗಳು ಹೆಚ್ಚಾಗಿ ತಯಾರಾದವು. ವಿದ್ಯುಚ್ಛಕ್ತಿಯನ್ನು ಉಪಯೋಗಿಸುವುದರಿಂದ ಕೂಲಿ ಆಳುಗಳ ಸಂಖ್ಯೆ ಕಡಮೆಯಾಯಿತು. ಮಹಾರಾಜಾ ಕಾರ್ಖಾನೆಯಲ್ಲಿ ಈ ಸಾಲಿನಲ್ಲಿ ಧಾನ್ಯಗಳನ್ನು ಬೀಸಿ ಹಿಟ್ಟು ತಯಾರುಮಾಡುವುದನ್ನು ಪ್ರಾರಂಭಿಸಿದಾರೆ ಕಾರ್ಖಾನೆಗಳಲ್ಲಿ ಯಂತ್ರದ ಸಹಾಯದಿಂದ ಬಟ್ಟೆಗಳು ತಯಾರಾಗಿ ಹೊರಗೆ ಬಂದದ್ದರಿಂದ ಈ ಡಿಸ್ಟ್ರಿಕ್ಟಿನಲ್ಲಿ ಕೈಮಗ್ಗಗಳ ಸಂಖ್ಯೆಯು ೩,೪೨೬ ರಿಂದ ೩,೩೯೪ ಕ್ಕೆ ಇಳಿಯಿತು. ಚನ್ನಪಟ್ಟಣದಲ್ಲಿ ವಾದ್ಯದ ತಂತಿಗಳ ಕಸಬು ಪ್ರಸಿದ್ಧಿಯನ್ನು ಹೊಂದಿದ್ದರೂ ಮೊದಲಿನಷ್ಟು ಹೆಚ್ಚಾಗಿ ನಡೆಯುತ್ತಿಲ್ಲ.

ಕೋಲಾರ್ ಡಿಸ್ಟ್ರಿಕ್ಟು—ಚಿನ್ನದಗಣಿ ಕೆಲಸಗಳಿಂದ ೨೯,೪೦೦ ಜನರು ಜೀವನ ಸಂಪಾದಿಸಿಕೊಳ್ಳುತ್ತಿದ್ದರು ಈ ಸಾಲಿನಲ್ಲಿ ೩,೧೦,೭೮,೮೪೪ ರೂಪಾಯಿ ಬೆಲೆಯಾಗುವಷ್ಟು ಚಿನ್ನ ಉತ್ಪತ್ತಿಯಾಯಿತು ಹೋದ ಸಾಲಿನಲ್ಲಿ ಉತ್ಪತ್ತಿ ಮಾಡಲ್ಪಟ್ಟ ಚಿನ್ನದ ಬೆಲೆಯು ೩ ಕೋಟಿಯೂ ೧೨ ಲಕ್ಷ ರೂಪಾಯಿ ಮೇಲೆ ಹಾಜಿ ಇಸ್ಟ್ರಿಯಲ್ ಸೇಟರು ಚಿನ್ನದ ಗಣಿಗಳಲ್ಲಿ ವಿದ್ಯುಚ್ಛಕ್ತಿಯಿಂದ ಮರ ಕೊಯ್ಯುವ ಸಾಗುವಾನಿ ಕಾರ್ಖಾನೆಯನ್ನು ಈ ಸಾಲಿನಲ್ಲಿ ಬಿಡಾವಣೆ ಮಾಡಿ ಹೊಸ ಯಂತ್ರಗಳನ್ನು ತರಿಸಿರುತ್ತಾರೆ. ಹೋದ ವರುಷ ಪ್ರಾರಂಭವಾದ ಬೌರಿಂಗ್ ಪೇಟೆಯ ಸಿಗರೆಟ್ ಕಾರ್ಖಾನೆಯಿಂದ ಸಿಗರೆಟ್ಟುಗಳನ್ನು ತಯಾರುಮಾಡಿ ದೇಹಲಿ, ಆಗ್ರಾ, ಕಾನ್‌ಪೂರ್, ತಿನ್ನವೆಲ್ಲಿ, ತಿರುಚನಾಪಳ್ಳಿ, ಈ ಮೊದಲಾದ ಕಡೆಗಳಿಗೆ ರಫ್ತು ಮಾಡುತ್ತಿದ್ದಾರೆ. ಅದರ ಮಾಲೀಕರು ಇನ್ನು ೧೫,೦೦೦ ರೂಪಾಯಿನ ಯಂತ್ರ ಸಾಧನಗಳನ್ನು ತರಿಸಿ, ಕೆಲಸವನ್ನು ಹೆಚ್ಚಿಸಬೇಕೆಂದು ಯೋಚಿಸುತ್ತಿರುವರು. ಸಕ್ಕರೆ ತಯಾರಾಗತಕ್ಕ ಸ್ಥಳಗಳು ಮುಳಬಾಗಿಲಿನಲ್ಲಿ ಹೇರಳವಾಗಿಯೂ, ಸಿಡ್ಲಘಟ್ಟ, ಚಿಕ್ಕಬಳ್ಳಾಪುರ, ಶ್ರೀನಿವಾಸಪುರಗಳಲ್ಲಿ ಕೊಂಚವಾಗಿಯೂ ಇರುವವು ಹೊಸ ರೀತಿಯಲ್ಲಿ ಸಕ್ಕರೆ ತಯಾರುಮಾಡುವ ವಿಧಾನಗಳನ್ನು ಚನ್ನಾಗಿ ಕಲಿತು ಮಾಡಿದರೆ ಈ ಕಸಬು ಬಹಳ ಲಾಭಕರವಾದೀತೆಂದೂ ತುಂಬಾ ಹೆಚ್ಚಾದೀತೆಂದೂ ಹೇಳಬಹುದಾಗಿದೆ ಚಿಕ್ಕಬಳ್ಳಾಪುರದ ಕಬ್ಬಿಣದ ಕಾರ್ಖಾನೆಯಲ್ಲಿ ಕೆಲಸವು ನಿಂತಿತೆಂತಲೇ ಹೇಳಬೇಕು ಎಣ್ಣೆ ಬೀಜಗಳು ಹೇರಳವಾಗಿ ಸಿಕ್ಕದೆ ಹೋಗಿರೋಣದರಿಂದ ಚಿಂತಾಮಣಿಯ ಎಣ್ಣೆ ತೆಗೆಯುವ ಕಾರ್ಖಾನೆಗೆ ಕೆಲಸ ಸಾಲದು. ಆರ್ಬತ್‌ನಾಟ್ ಕಂಪನಿಯ ದಿವಾಳಿಯಾದ ಕಾರಣ ಗೌರಿಬಿದನೂರಿನ ಸಕ್ಕರೆ ಕಾರ್ಖಾನೆಯು ಮುಚ್ಚಲ್ಪಟ್ಟಿತು.

ತುಂಕೂರು ಡಿಸ್ಟ್ರಿಕ್ಟು—ತುರುವೇಕೆರೆ, ಮದ್ದಗಿರಿ ಚಿಕ್ಕನಾಯಕನ ಹಳ್ಳಿಗಳಲ್ಲಿ ರೇಷ್ಮೆ ಬಟ್ಟೆ ಜರಿಗಳು ಎಂದಿನಂತೆ ತಯಾರಾಗುತ್ತಿವೆ. ಚಿಕ್ಕನಾಯಕನ ಹಳ್ಳಿಯ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ಚಕ್ಕೆ ಬಟ್ಟೆ, ರೇಷ್ಮೆ ಅಂಚಿನ ಪಂಚೆ, ಪೇಟಾ, ಸೊಗ್ಗಲು ಹಾಸಿಗೆಗಳನ್ನು ಮಾಡುತ್ತಾರೆ ಚಿಕ್ಕನಾಯಕನ ಹಳ್ಳಿಯಲ್ಲೂ ಹುಳಿಯಾರದಲ್ಲೂ ಎಂದಿನಂತೆ ೧ ರಿಂದ ೩ ರೂಪಾಯಿ ವರೆಗೆ ಬೆಲೆಯಾಗುವಂಥಾ ಒರಟಾದ ತುಪ್ಪಟದ ಜೋಡಿಯುಳ್ಳ ಕಂಬಳಿ (ಬ್ಲಾಂಕೆಟ್) ಗಳು ತಯಾರಾಗುವುವು.

ಮೈಸೂರು ಡಿಸ್ಟ್ರಿಕ್ಟು:—ಇಂಗ್ಲಿಷ್ ಮೂಲಧನದಿಂದ ನಡಿಸುತ್ತಿರುವ ಹುಣಸೂರಿನ ಕಾರ್ಖಾನೆಯಲ್ಲಿ ೧೬೩ ಟನ್ ತೂಕದ ಕಾಫಿಯನ್ನು ಬಿಡಿಸಿದರು, ೨೫,೦೦೦ ರೂಪಾಯಿ ಬೆಲೆಯಾಗುವ ಮೂಳೆ ಗೊಬ್ಬರ ತಯಾರಾಯಿತು; ೪೮,೦೦೦ ಘನ ಅಡಿಯ ಮರವನ್ನು ಕೊಯ್ದಿರುತ್ತಾರೆ ಮಳವಳ್ಳಿಯಲ್ಲಿ ಚಾಕಿಕೆಕ್ಕೆ ಹಸ ಕೊಡುವುದು, ರೇಷ್ಮೆ ನೂಲುವುದು, ರೇಷ್ಮೆ ಮೊಟ್ಟೆಗಳನ್ನು ಹಬೆಗೆ ಕೊಡುವುದು, ಈ ಕಸಬಿಗಾಗಿ ಒಂದು ಕಾರ್ಖಾನೆ ಏರ್ಪಾಡಾಗಿ ನಡೆಯುತ್ತಿರುವಂತೆ ತಿಳಿಯಬರುತ್ತದೆ ಕಲಗೂಡಿನಲ್ಲಿ ಸಿಕ್ಕುವ ಮಣ್ಣಿನಿಂದ ಕಚ್ಚಿ ಸಾಮಾನುಗಳು ತಯಾರಾಗುತ್ತವೆ ತಿರುಮಕೂಡಲು ನರಸೀಪುರ ಮತ್ತು ನಾಗಮಂಗಲ ತಾಲ್ಲೂಕುಗಳು ಕಂಚಿನ ಮತ್ತು ಉಕ್ಕಿನ ಪಾತ್ರೆಪದಾರ್ಥಗಳ ತಯಾರಿಗೆ ಪ್ರಸಿದ್ಧವಾಗಿವೆ. ಕೃಷ್ಣರಾಜ ಪೇಟೆ ತಾಲ್ಲೂಕಿನಲ್ಲಿ ರೇಷ್ಮೆ ಪಟ್ಟೆಗಳೇ ಮೊದಲಾದವುಗಳನ್ನು ನೆಯ್ಯುತ್ತಾರೆ. ಶಾಲಿಗ್ರಾಮದಲ್ಲೂ ಮೇಲುಕೋಟೆಯಲ್ಲೂ ಹಾರುವ ಲಾಳಿಯುಳ್ಳ ಮಗ್ಗಗಳನ್ನು ಇಟ್ಟು ಬಟ್ಟೆಬರೆ ನೆಯ್ಯುವುದು ಈಗೀಗ ಪ್ರಾರಂಭವಾಗಿದೆ.

ಹಾಸನ ಡಿಸ್ಟ್ರಿಕ್ಟು—ಹಿತ್ತಾಳೆ ಕಂಚುಗಳ ಧಾರಣೆಯು ಹೆಚ್ಚಿರೋಣದರಿಂದ ಶ್ರವಣಬೆಳ್ಗೊಳದಲ್ಲಿ ಅವುಗಳಿಂದ ಪಾತ್ರೆಗಳನ್ನು ತಯಾರುಮಾಡುವುದು ಈಚೆಗೆ ಬಹಳ ಮಟ್ಟಿಗೆ ಕಡಮೆಯಾಗುತ್ತಾ ಬಂದಿದೆ ಅರಸೀಕೆರೆ ತಾಲ್ಲೂಕಿನಲ್ಲಿ ಕುರಂಗದ ಕಲ್ಲನ್ನೂ, ಹೊಳೆನರಸೀಪುರ ತಾಲ್ಲೂಕಿನಲ್ಲಿ ಅಸ್ಬೆಸ್ಟಸನ್ನೂ ಸ್ವಲ್ಪ ಸ್ವಲ್ಪ ತೆಗೆದಿರುತ್ತಾರೆ. ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ಈಚೆಗೆ ಕ್ರೋಮಿಯಂ ಲೋಹವನ್ನು ಕಂಡುಹಿಡಿದು, ಮದರಾಸಿನ ಮೈನಿಂಗ್ ಸಿಂಡಿಕೇಟ್ ಕಂಪನಿಯವರು ಕಳೆದ ಮೂರು ತಿಂಗಳಲ್ಲಿ ೨,೦೦೦ ಟನ್ ಭಾರದಷ್ಟು ಕ್ರೋಮಿಯಂ ತುಣ್ಕನ್ನು ಕಳುಹಿಸಿರುವುದಾಗಿ ತಿಳಿದು ಬಂದಿದೆ. ಹೊಳೇನರಸೀಪುರದ ನೆಯ್ಗೆ ಕಾರ್ಖಾನೆಯಲ್ಲಿ ಬಹಳ ಚನ್ನಾಗಿ ಕೆಲಸ ನಡೆಯುತ್ತಿದೆ ನೌರಾದ ಹತ್ತಿಯ ಮತ್ತು ರೇಷ್ಮೆಯ ನಾನಾ ತರದ ಸರಕುಗಳು ತಯಾರಾಗುತ್ತಿರುವವು. ಚಾಪೆ ಹೆಣೆಯುವುದೂ ಪ್ರಾರಂಭವಾಗಿದೆ ನಿರುಪಯೋಗವಾಗಿ ಬೆಳೆಯುವ ಹುಲ್ಲನ್ನು ಕೊಯ್ದು ತುಂಬ ಸುಂದರವಾದ ಚಾಪೆ, ದಿಂಬು, ಜೋಡು ಮುಂತಾದದ್ದನ್ನು ಮಾಡುವರು. ಕತ್ತಾಳೆ ನಾರನ್ನು ಬಿಡಿಸಿ ಅದರಿಂದ ಬಟ್ಟೆ ನೆಯ್ಯುವುದಕ್ಕೂ ನೂಲು, ರೇಷ್ಮೆ, ತುಪ್ಪಟಗಳಿಗೆ ಸಸ್ಯಾದಿಗಳಿಂದ ಬಣ್ಣ ಕಟ್ಟುವುದಕ್ಕೂ ಪ್ರಯತ್ನ ನಡೆದಿದೆ.

ಶಿವಮೊಗ್ಗ ಡಿಸ್ಟ್ರಿಕ್ಟು.—ಮೈಸೂರು ಮ್ಯಾಂಗನೀಸ್ ಕಂಪನಿಯವರು ೪೫,೦೩೦ ಟನ್‌ಗಳ ಮ್ಯಾಂಗನೀಸ್ ಲೋಹದ ತುಣ್ಕನ್ನು ತೆಗೆದು ೧೦ ಲಕ್ಷ ರೂಪಾಯಿಗೆ ವಿಕರಿ ಮಾಡಿದರು. ಇದರಿಂದ ಸರ್ಕಾರಕ್ಕೆ ೧೬,೦೦೦ ರೂಪಾಯಿ ರಾಜಾದಾಯ ಉತ್ಪತ್ತಿಯಾಗಿರುವುದು. ಸಾಗರ ನಗರ, ತೀರ್ಥಹಳ್ಳಿಗಳಲ್ಲಿ ಸಿನೆವರ್ಣ ಬೀಜದಿಂದ ಸ್ವಲ್ಪ ಎಣ್ಣೆ ತೆಗೆಯುತ್ತಾರೆ

ಕಡೂರು ಡಿಸ್ಟ್ರಿಕ್ಟು—"ಊರಿ" ನೊಟ್ಟುಗಳ ಕಸಬನ್ನು ಆಲ್ದೂರಿನಲ್ಲಿ ಸ್ವಲ್ಪ ಮಟ್ಟಿಗೆ ಮಾಡಿದರು ಹಣವಿಲ್ಲವೆಂದು ಈ ಕಸಬು ನಿಂತು ಹೋಗಿದೆ ಇದರ ಪೂರ್ವೋತ್ತರವನ್ನು ಡೆಪ್ಯುಟಿ ಕಮಿಷನರು ಇನ್ನೂ ಬರೆದು ತಿಳಿಸಿಲ್ಲ.

ಚಿತ್ರದುರ್ಗ ಡಿಸ್ಟ್ರಿಕ್ಟು.—ದಾವಣಗೆರೆಯಲ್ಲಿ ಬೊಂಬಾಯಿನ ಇಬ್ಬರು ಪಾರ್ಸಿ ಸಾಹುಕಾರರು ಹತ್ತಿಯನ್ನು ಬಿಡಿಸುವುದಕ್ಕೆ ಇಟ್ಟಿರುವ ಎರಡು ಕಾರ್ಖಾನೆಗಳಲ್ಲೂ ಮತ್ತು ಬಿನ್ನಿ ಕಂಪನಿಯವರು ಹತ್ತಿಯನ್ನು ಗಟ್ಟಿಗಳಾಗಿ ಕಟ್ಟುವುದಕ್ಕೆ ಇಟ್ಟಿರುವ ಕಾರ್ಖಾನೆಯಲ್ಲೂ ಲಾಭಕರವಾದ ಕೆಲಸಗಳು ನಡೆಯುತ್ತಿವೆ ಇದರಲ್ಲಿ ಲಾಭವಿರುವುದನ್ನು ದಾವಣಗೆರೆಯ ವರ್ತಕರು ಕೆಲವರು ನೋಡಿ ತಾವೂ ಅವರಂತೆಯೇ ಸ್ವಂತವಾದ ಹತ್ತಿ ಬಿಡಿಸುವ ಯಂತ್ರಗಳನ್ನಿಡಬೇಕೆಂದು ಯೋಚಿಸಿರುತ್ತಾರೆ ಮೊಳಕಾಲ್ಮೂರುವು ರೇಷ್ಮೆ ಸರಕುಗಳಿಗೆ ಇನ್ನೂ ಒಳ್ಳೇ ಹೆಸರನ್ನು ಪಡೆದಿರುವುದು ಸರಕುಗಳು ಈ ಸಂಸ್ಥಾನದೊಳಗೆ ಅಲ್ಲ ಮದರಾಸು ಬಳ್ಳಾರಿ ಮೊದಲಾದ ಕಡೆಗಳಿಗೂ ಹೋಗಿ ಚನ್ನಾಗಿ ವಿಕರಿ ಆಗುವವು ಅಲ್ಲಿ ೩೦೭ ಮಗ್ಗಗಳು ಇರುತ್ತವೆ ಕೆಲವು ನೆಯ್ಗೆಯವರು ಹಾರುವ ಲಾಳಿಯುಳ್ಳ ಮಗ್ಗಗಳನ್ನು ಇಟ್ಟುಕೊಂಡು ನೆಯ್ಯುತ್ತಿದ್ದಾರೆ. ಅಲ್ಲಿನ ಕಸಬುದಾರಿ ಪಾಠಶಾಲೆಯಲ್ಲಿ ಮರಗೆಲಸವನ್ನೂ ನೆಯ್ಗೆಯನ್ನೂ ಕಲಿಸುತ್ತಾ ಬರಲಾಗಿದೆ.

[ಸಶೇಷ]

ವಾಯುವ್ಯ ಸರಹದ್ದಿನಲ್ಲಿ ಯುದ್ಧಕಾರ್ಯಗಳು.

ಮಹಮಂದರನ್ನು ಹತೋಟಿಗೆ ತರುವ ಪ್ರಯತ್ನಗಳು.

ವಾಯುವ್ಯ ಸರಹದ್ದಿನ ಆಚೆ ಇರುವ ಮಹಮಂದ್ ಜನರು ಇಂಡಿಯಾ ಮೇರೆ ಎಲ್ಲೆಕಟ್ಟಿನೊಳಗಿರುವ ಇಂಗ್ಲಿಷ್ ಪ್ರಜೆಗಳ ಮೇಲೆ ಬಿದ್ದು ಆಗಾಗ್ಗೆ ಅವರಿಗೆ ಕಷ್ಟನಷ್ಟಗಳನ್ನುಂಟುಮಾಡುತ್ತಾ ಬಂದದ್ದರಿಂದ ಇಂಡಿಯಾ ಗವರ್ನಮೆಂಟಿನವರು ಆ ಜನರನ್ನು ತಕ್ಕ ಹಾಗೆ ಶಿಕ್ಷಿಸಿ ಹತೋಟಿಗೆ ತರಬೇಕೆಂದು ಇಂಗ್ಲಿಷ್ ಸೈನ್ಯಗಳನ್ನು ಜನರಲ್ ವಿಲ್ಕಾಕ್ಸ್‌ರವರ ಕೈ ಕೆಳಗೆ ಆ ಪ್ರಾಂತ್ಯಕ್ಕೆ ಕಳುಹಿಸಿದ್ದು, ಆ ಮಹಮಂದರ ಜೊತೆಗೆ ಅಫ್ಘಾನಿಸ್ಥಾನದ ಸೈನಿಕರೂ ಬಂದು ಸೇರಿಕೊಂಡು ಇಂಗ್ಲಿಷ್ ಸೈನ್ಯದ ಮೇಲೆ ಯುದ್ಧಕಾರ್ಯಗಳನ್ನು ನಡಿಸುತ್ತಾ ಬಂದುದರಿಂದ, ಇದಕ್ಕಾಗಿ ಇಂಗ್ಲಿಷ್ ಗವರ್ನಮೆಂಟಿನವರು ಅಫ್ಘಾನಿಸ್ಥಾನದ ಅಮೀರರವರಿಗೆ ಅವರ ಪ್ರಜೆಗಳನ್ನು ಯುದ್ಧ

ಭೂಮಿಯಿಂದ ಕೂಡಲೇ ವಾಪಸು ಕರೆಸಿಕೊಳ್ಳದಿದ್ದರೆ ಗವರ್ನ್‌ಮೆಂಟಿನವರು ಪ್ರತ್ಯೇಕವಾದ ಏರ್ಪಾಡು ಮಾಡಬೇಕಾಗಿರುತ್ತದೆಂದು ತಿಳಿಸಿದ್ದು, ಅಮೀರರವರು ಆ ಕೂಡಲೇ ತಮ್ಮ ರಾಜ್ಯದಲ್ಲಿ ಇಷ್ಟು ಹಾರುಗಳನ್ನು ಜಾಹಿರು ತಮ್ಮ ಪ್ರಜೆಗಳ್ಯಾರೂ ಇಂಗ್ಲಿಷರ ಮೇಲೆ ಯುದ್ಧ ಮಾಡುವುದಕ್ಕೆ ಮಹಮಂಡರಿಗೆ ಸಹಾಯಕರಾಗಿ ಹೋಗಕೂಡದೆಂದು ಎಚ್ಚರಿಸಿ, ತಮ್ಮ ಪ್ರಜೆಗಳೆನಿಸಿಕೊಂಡ ಯುದ್ಧ ಭಟರನ್ನೆಲ್ಲಾ ಯುದ್ಧ ಭೂಮಿಯಿಂದ ವಾಪಸು ಕರೆಸಿಕೊಂಡದ್ದೂ ನಮ್ಮ ವಾಚಕರಿಗೆ ಸವಿಸ್ತಾರವಾಗಿ ಈ ಮೊದಲೇ ತಿಳಿಸಿರುತ್ತೇವೆ.

ಈಚೆಗೆ ಮೋಹ್ಮಂಡ ಮಹಮಂಡ್ ವಂಶೀಕರಾದ ಜನರು ಮಾತ್ರವೇ ಒಗ್ಗಟ್ಟಾಗಿ ಇಂಗ್ಲಿಷರ ಮೇಲೆ ನುಗ್ಗಿಬಂದು ಸಣ್ಣಸಣ್ಣ ಕದನಗಳನ್ನು ಮಾಡುತ್ತಿರುವರು. ಈ ಕದನಗಳು ನಡೆದಿರುವ ವಿವರವನ್ನು ಈಗ ಸೂಚಿಸಲು ಪ್ರಯತ್ನ ಪಡುವೆವು.

ಕಳೆದವಾರದ ತಂತೀ ವರ್ತಮಾನ ಸಂಗ್ರಹವು

ಸಿಂಲಾ, ತಾ ೧೩ನೇ ಭಾನುವಾರ —ಜನರಲ್ ವಿಲ್ಕಾಕ್ಸ್‌ಯವರು ಸೈನ್ಯ ಸಹಿತ ನಾಹಕ್ಕಿ ಎಂಬ ಪ್ರಾಂತ್ಯದಲ್ಲಿ ಸಂಚರಿಸುವಾಗ್ಗೆ ಶತ್ರುಗಳು ಗುಂಡು ಹೊಡೆದದ್ದರಿಂದ ಮೂರು ಮಂದಿ ಸವಾರರಿಗೆ ಸ್ವಲ್ಪ ಗಾಯಗಳಾದವು. ಬಾಲಾಕ್ ಎಂಬ ಕಣಿವೆಯ ಬಳಿ ಶತ್ರುಗಳಿದ್ದಾರೆಂದು ವರ್ತಮಾನ ಬಂದದ್ದರಿಂದ ಜನರಲ್ ವಿಲ್ಕಾಕ್ಸ್‌ಯವರು ಸೈನ್ಯವನ್ನು ಆ ಕಡೆ ನಡಿಸಿಕೊಂಡು ಹೋದರು. ಇವರನ್ನು ನೋಡಿದ ಒಡನೆಯೇ ಶತ್ರುಗಳು ಹೆದರಿ ಚದರಿ ಹೋದರು. ಆಗ ಐದು ಮಂದಿ ಸೈನಿಕರು ಗಾಯಪಟ್ಟರು. ನೆನ್ನೆ ರಾತ್ರಿ ೩-೪ ಗಂಟೆಗಳ ಮಧ್ಯೆ ಮಹಮಂಡ್ ಯುದ್ಧಭಟರು ನುಗ್ಗಿಬಂದು ವರ್ಸಾಕ್ ಜಾಗಾಯಿ ರಾಜ್ಯಕ್ಕೆ ಸುತ್ತಿಗೆ ಹಾಕಿದರು. ಜನರಲ್ ಅಂಡರ್‌ಸನ್‌ರವರು ರಾತ್ರಿ ೧೧ ಗಂಟೆಯಿಂದ ಬೆಳಗಿನ ಝಾವ ೩ ಗಂಟೆಯ ತನಕ ರಾಕೆಟ್ ಬಿಟ್ಟು ಶತ್ರುಗಳನ್ನು ಹಿಂದಕ್ಕೆ ಓಡಿಸಿದರು. ಅವರ ಕಡೆ ಬಹುಮಂದಿ ಯುದ್ಧ ಭಟರು ಸತ್ತು ಬಿದ್ದಿದ್ದರು. ಇಂಗ್ಲಿಷ್ ಸೈನಿಕರಲ್ಲಿ ಇಬ್ಬರು ಹುದ್ದೇದಾರರೂ, ೭ ಮಂದಿ ಸೈನಿಕರೂ ಮೃತಪಟ್ಟರು; ಒಬ್ಬ ಹುದ್ದೇದಾರನಿಗೂ, ೨೩ ಮಂದಿ ಸೈನಿಕರಿಗೂ ಗಾಯಗಳಾಗಿವೆ.

ಸಿಂಲಾ, ತಾ ೧೯ನೇ ಸೋಮವಾರ —ನೆನ್ನೆ ಜನರಲ್ ವಿಲ್ಕಾಕ್ಸ್‌ಯವರು ಸೈನ್ಯ ಸಹಿತ ಶತ್ರುಗಳ ಗ್ರಾಮಗಳನ್ನು ನುಗ್ಗಿ ಅವರ ಗಡಿ ದುರ್ಗಗಳನ್ನು ಕೆಡವಿ ನೆಲಸಮ ಮಾಡಿದರು. ಪಾಹಾಡ್ ಏಜೆಂಟರ ಬಳಿ ಕೆಲವು ಮುಷ್ಟಜನರು ಮಿಲ್ಟರಿ ಪೋಲೀಸ್ ಠಾಣ್ಯದ ಮೇಲೆ ನುಗ್ಗಿಬಂದು, ಕೆಲವು ಬಂದೂಕಗಳನ್ನು ಅಪಹರಿಸಿಕೊಂಡು ಹೋದರು.

ಸಿಂಲಾ, ತಾ. ೧೯ನೇ ಮಂಗಳವಾರ.—ಜನರಲ್ ವಿಲ್ಕಾಕ್ಸ್‌ಯವರು ತಿಳಿಸುವದೇನೆಂದರೆ.—ಶತ್ರುಗಳು ತಾ ೧೯ನೇ ರಾತ್ರಿ ನಾಹಕ್ಕಿ ರಾಜ್ಯಕ್ಕೆ ಸುತ್ತಿಗೆ ಹಾಕಿದರು. ಉತ್ಮಾನ್‌ಜಾಯಿ ಮತ್ತು ದೊಮಾರಾಯ ಎಂಬ ವಂಶೀಕರು ೬೦೦೦ ಮಂದಿ ನೆರೆ ಬಂದು ಈ ಕಡೆಗಳಿಂದ ನುಗ್ಗಿ ಬಂದರು. ಆದರೆ ಅವರು ನಮ್ಮ ಸೈನ್ಯದ ಮೇಲೆ ಕೈ ಮಾಡಲಾರದೆ ಹಿಂತಿರುಗಬೇಕಾಯಿತು. ನಮ್ಮ ಕಡೆ ಇಬ್ಬರಿಗೆ ಸ್ವಲ್ಪ ಗಾಯಗಳಾದವು. ಕೆಲವು ಕುದುರೆಗಳಿಗೂ ಸೇವಕ ಕತ್ತೆಗಳಿಗೂ ಗುಂಡೇಟು ಬಿದ್ದಿದೆ.

ಹಜ್ರತಿನ ಮತ್ತು ಅಫ್ಘಾನರ ಮುಲ್ಲಾಗಳೆ ಮುಖ್ಯ ರಾಜ್ಯವಾದ ಖಾರ್ಡೇಗ್, ಕೋರ್ ಎಂಬ ಗ್ರಾಮಗಳನ್ನು ಸ್ವಾಧೀನಪಡಿಸಬೇಕೆಂದು ಜನರಲ್ ಬ್ಯಾರಟ್‌ಯವರು ಸೈನ್ಯಸಹಿತ ನೆನ್ನೇ ದಿನ ಬೋಹೋಮ ಘೋಗ್ ಎಂಬ ಕಣಿವೆಯನ್ನು ಹತ್ತಿ ಹೋದರು. ಅಂಪರ ಬ್ರಿಡ್ಜ್‌ಸ್, ಬ್ಯಾನ್‌ಸ್, ಮೊದಲಾದ ವಂಶೀಕರು ಗುಡ್ಡಗಳ ಮೇಲೆ ನಿಂತು ನಮ್ಮ ಸೈನ್ಯದ ಮೇಲೆ ಗುಂಡು ಹೊಡೆದರು. ಅವರನ್ನು ಆ ಸ್ಥಳಗಳಿಂದ ಬಹಳ ಕಷ್ಟಪಟ್ಟು ಓಡಿಸಿದ್ದಾಯಿತು. ಜನವರಿ ಚೌ‍ನಾವಲ್ಲಿ ಗಡಿ ದುರ್ಗಗಳನ್ನು ನಮ್ಮ ಸೈನಿಕರು ಕೆಡವಿಹಾಕುತ್ತಿರುವಲ್ಲಿ ೧೨ ಮಂದಿ ಘಾಜಿಗಳು ಅವರ ಮೇಲೆ ಬಿದ್ದು ಯುದ್ಧಮಾಡಿದರು. ನಮ್ಮ ಸೈನಿಕರು ಅವರನ್ನೆಲ್ಲಾ ಸಂಗೀನುಗಳಿಂದ ತಿವಿದು ಸಂಹಾರಿಸಿದರು. ನಮ್ಮ ಕಡೆಯಲ್ಲಿ ೭ ಜನ ಮೃತಪಟ್ಟರು; ಇಬ್ಬರಿಗೆ ಗಾಯಗಳಾದವು. ಆದರೂ ಕಡೆಯಲ್ಲಿ ಆ ಗ್ರಾಮವನ್ನು ನಾಶನಮಾಡಿ ಬಂದರು. ಇತ್ತ ತಂಗಿ ಎಂಬ ಗ್ರಾಮವನ್ನು ಸುಟ್ಟುಹಾಕಿದ್ದು ಆಯಿತು. ಸರ್ದಾರ್ ರೋಡಾ ಎಂಬ ಶತ್ರುಸೈನ್ಯದ ಒಬ್ಬ ಹುದ್ದೇದಾರರೂ, ಇನ್ನೊಬ್ಬನೂ ಕೈಸೆರೆ ಸಿಕ್ಕಿರುತ್ತಾರೆ. ಶತ್ರುಗಳು ಈ ಯುದ್ಧದಲ್ಲಿ ೩೦೦ ವರದವರೆಗೆ ಇದ್ದು ಬಹು ಪರಾಕ್ರಮದಿಂದ ಕಾದಿದರು. ಅವರ ಕಡೆ ೨೦ ಜನರು ಮೃತಪಟ್ಟಿದ್ದಾರೆ. ನಮ್ಮ ಸೈನ್ಯದಲ್ಲಿ ೭ ಜನ ಸತ್ತುಬಿದ್ದರು; ೧೫ ಮಂದಿಗೆ ಗಾಯಗಳಾದವು.

ಸಿಂಲಾ, ತಾ ೨೩ನೇ ಗುರುವಾರ.—ಜನರಲ್ ವಿಲ್ಕಾಕ್ಸ್‌ಯವರು ತಂತೀ ವರ್ತಮಾನಕೊಟ್ಟು ತಿಳಿಸುವುದೇನೆಂದರೆ —ತಾ ೧೯ನೇ ರಾತ್ರಿ ೯ ಗಂಟೆಯ ಮೇಲೆ ೧೨ ಗಂಟೆಯೊಳಗೆ ಶತ್ರುಗಳು ಮತ್ತೆ ನಾಹಕ್ಕಿ ಎಂಬ ನಮ್ಮ ರಾಜ್ಯವನ್ನು ಮುತ್ತಿಗೆ ಹಾಕಿದರು. ಈ ಯುದ್ಧದಲ್ಲಿ ಶತ್ರುಗಳ ಕಡೆ ಅನೇಕರು ಮೃತಪಟ್ಟರು. ನಮ್ಮ ಸೈನ್ಯದಲ್ಲಿ ಒಬ್ಬ ಸೈನಿಕನು ಮೃತಪಟ್ಟನು, ಒಬ್ಬನಿಗೆ ಗಾಯವಾಗಿದೆ. ನಮ್ಮ ಸೈನ್ಯವು ಕಾಂಗ್ ಎಂಬ ಶತ್ರುಗಳ ಮುಖ್ಯ ಸ್ಥಳಕ್ಕೆ ಹೋಗಿ ಅದನ್ನೂ ಅದರಲ್ಲಿದ್ದ ಕೋಟೆ ದುರ್ಗಗಳನ್ನೂ ಒಡೆದು ಹಾಕಿದರು. ಇದರಲ್ಲಿ ಇಬ್ಬರು ಮೃತಪಟ್ಟರು, ೭ ಜನಗಳಿಗೆ ಗಾಯಗಳಾಗಿವೆ.

ನೆನ್ನೆ ಜನರಲ್ ವಿಲ್ಕಾಕ್ಸ್ ಯವರು ಸೈನ್ಯ ಸಹಿತ ನಾಹಕ್ಕಿ ರಾಜ್ಯದಿಂದ ೭ ಮೈಲಿ ದೂರದಲ್ಲಿರುವ ಉಮ್ರಾಕಿಲ್ಲಿ ಎಂಬ ಸ್ಥಳವನ್ನು ಹಠಾತ್ ನುಗ್ಗಿಹೋದರು. ಅಲ್ಲಿ ಶತ್ರುಗಳು ಯುದ್ಧಕ್ಕೆ ಬಂದು ಕಾದಾಡಿದರು. ಈ ಯುದ್ಧದಲ್ಲಿ ಅವರ ಕಡೆ ೩೦೦ ಜನರು ಮೃತಪಟ್ಟರು ಅವರಲ್ಲಿ ಮಾಲಿಕಾಲುಗಳು, ಉತ್ಮಾನ್‌ಖೇಲರು, ಸಫೀಗಳು ಸೇರಿಕೊಂಡಿದ್ದಂತೆ ತಿಳಿಯುತ್ತದೆ. ಇಂಗ್ಲಿಷ್ ಸೈನ್ಯದಲ್ಲಿ ೫ ಮಂದಿ ಹುದ್ದೇದಾರರೂ ಸೈನಿಕರೂ ಮೃತಪಟ್ಟರು; ೧೭ ಜನರಿಗೆ ಗಾಯಗಳಾಗಿವೆ. ಮತ್ತು ಕೆಲವು ಕುದುರೆ ಹೇಸರಕತ್ತೆಗಳು ಕೊಲ್ಲಲ್ಪಟ್ಟವು.

ಸಿಂಲಾ, ತಾ ೨೩ನೇ ಶುಕ್ರವಾರ —ಕಾಬೂಲ್ ಮುದಮುಂದ್ ಜನರು ಅಫ್ಘಾನಿಸ್ಥಾನದ ಅಮೀರರವರಿಗೆ ಕಾಗದ ಬರೆದು ಅವರ ಎಲ್ಲೆ ಕಟ್ಟಿನ ಅಧಿಕಾರಿಗಳ ಚಿತಾವಣೆಯಿಂದ ತಾವು ಇಂಗ್ಲಿಷರ ಮೇಲೆ ಯುದ್ಧಕ್ಕೆ ಹೊರಟೆವೆಂತಲೂ, ಯುದ್ಧಕ್ಕೆ ಹೊರಟ ಮೇಲೆ ಆ ಅಧಿಕಾರಿಗಳು ತಮಗೆ ಸಹಾಯಕ್ಕೆ ಬಾರದೆ ಹೋದರೆಂತಲೂ, ಈಗಲಾದರೂ ಅವರ ಸಹಾಯ ದೊರಕದೆ ಹೋದಲ್ಲಿ ತಾವು ಆ ಪ್ರಾಂತ್ಯವನ್ನೆಲ್ಲಾ ಇಂಗ್ಲಿಷರಿಗೆ ಒಪ್ಪಿಸಬೇಕಾಗುವದೆಂತಲೂ ತಿಳಿಸಿರುತ್ತಾರೆಂದು ವರ್ತಮಾನ ಬಂದಿದೆ. ಅಫ್ಘಾನಿಗಳ ಕೆಲವು ಮುಲ್ಲಾಗಳ ಮುಖಂಡನಿಗೆ ಕಾಗದ ಬರೆದು ತಮ್ಮ ಐಕ್ಯಮತ್ಯವನ್ನು ಯಾವ ಮುಲ್ಲಾಗಳೂ ಇನ್ನು ಮುಂದೆ ಬಂದು ಇಂಗ್ಲಿಷರ ಮೇಲೆ ಯುದ್ಧಕ್ಕೆ ಹೊರಡಬೇಕೆಂದು ತಮ್ಮನ್ನು ಎತ್ತಿಕಟ್ಟಿ, ಯುದ್ಧವು ಪ್ರಾರಂಭವಾದ ಮೇಲೆ ಸಹಾಯಕ್ಕೆ ಬಾರದೆ ಹಿಂದೆ ಬಿಟ್ಟು ಹೋಗುತ್ತಾ ಈಗ ಮಹಮಂಡರಿಗೆ ಮಾಡಿದಂತೆ ಮಾಡಕೂಡದೆಂದು ತಿಳಿಸಿದಾರೆ.

ಸಿಂಲಾ, ತಾ ೨೪ನೇ ಶನಿವಾರ —ಜನರಲ್ ವಿಲ್ಕಾಕ್ಸ್‌ಯವರು ತಾ. ೨೦ ರಲ್ಲಿ ಕಾಂದಹಾರಿ ಸಾಫಿ ಜನರ ಪ್ರಾಂತ್ಯದಲ್ಲಿ ಇದ್ದು ಕೊಂಡು ಗಡಿದುರ್ಗಗಳನ್ನು ಕೆಡವುತ್ತಿದ್ದಾರೆ. ಇದುವರೆಗೆ ಅವರ ಸೈನಿಕರಲ್ಲಿ ಮೂರು ಮಂದಿಗೆ ಗಾಯಗಳಾಗಿವೆ.

ಈ ಶತ್ರು ಜನರ ಪ್ರತಿನಿಧಿಗಳು ಗುಂಪು ಸೇರಿ ಶರಣು ಹೋಗಿ ಕೊಳ್ಳಬೇಕೆಂದು ಜನರಲ್ ವಿಲ್ಕಾಕ್ಸ್‌ಯವರ ಬಳಿಗೆ ಬಂದರು. ಆದರೆ ಜನರಲ್ ವಿಲ್ಕಾಕ್ಸ್‌ರವರು ಸೂಚಿಸಿದ ಕಲಮುಗಳಿಗೆ ಅವರು ಒಪ್ಪಿಕೊಳ್ಳದೆ ವಾಪಸು ಹೋಗಿರುತ್ತಾರೆ. ಜನರಲ್ ವಿಲ್ಕಾಕ್ಸ್‌ಯವರು ಸೈನ್ಯ ಸಹಿತ ನೆನ್ನೆ ಶಕರಾಯಿ ಗ್ರಾಮದ ಕಡೆ ನುಗ್ಗಿಹೋದಾಗ ಶತ್ರುಭಟರು ಅಲ್ಲಿ ಬಹಳ ಏಳಾಗಿ ಗುಂಪು ಸೇರಿದ್ದರೂ ಯುದ್ಧಕ್ಕೆ ನಿಲ್ಲದೆ ಬಳಿಯ ಬಾಳ್ವೆಖಾನನ್ನು ತಮ್ಮ ಮುಂದೆ ಎತ್ತಿ ಕಟ್ಟಿದರು. ಈ ಬಗೆ ಕಾರ್ಯ ನಡೆಯುವ ವಿಷಯದಲ್ಲಿ ಚರ್ಚೆಯಾಗುತ್ತಿರುವುದು.

ಸಿಂಲಾ, ೨೫ನೇ ಭಾನುವಾರ.—ಜನರಲ್ ವಿಲ್ಕಾಕ್ಸ್‌ಯವರು ಮಿಶ್ರವಾಹನೀಯರ ಸುತ್ತು ಕಾಂದಹಾರ್ ಗ್ರಾಮಗಳ ಮುಖಂಡರುಗಳನ್ನು ಕರೆಸಿಕೊಂಡು, ಅವರನ್ನು ಇಂಗ್ಲಿಷರಿಗೆ ಒಪ್ಪಿಸಿ ಸ್ವಾಧೀನ ಮಾಡಿಕೊಂಡು ಅಲ್ಲಿಂದ ಅಂಬುಹಾರ್ ಉತ್ಮಾನ್ ಖೇಲವನ್ನು ಸಂಧಿ ಮಾಡುದಕ್ಕಾಗಿ ಹಾಲಿಜಾಯಿ ಪ್ರಾಂತ್ಯಕ್ಕೆ ಹೋದರು. ಲಾಕಾರಾಯಿ ಎಂಬ ಅವರ ರಾಜ್ಯಕ್ಕೆ ಮಹಮಂಡರೂ, ಹಾಲಿಜಾಯಿಗಳೂ ಇತರರೂ ನೆನ್ನೆ ಮೊನ್ನೆ ರಾತ್ರಿ ಗುಂಡು ಹೊಡೆದರು.

ಸಿಂಲಾ, ತಾ. ೨೬ನೇ ಸೋಮವಾರ —ಜನರಲ್ ವಿಲ್ಕಾಕ್ಸ್‌ಯವರು ಮುಂದೆ ನುಗ್ಗಿಹೋಗುತ್ತಾ, ದಾರಿಯಲ್ಲಿ ಸಿಕ್ಕಿದ ಇಸ್ಲಾರಾಯ ಗ್ರಾಮವನ್ನು ಪಾಳು ಕೆಡವಿದರು. ಇದು ಗೂಪ್ ಮುಲ್ಲಾ ಎಂಬ ಮುಖಂಡನ ಮುಖ್ಯ ರಾಜ್ಯವಾಗಿತ್ತೆಂದು ತಿಳಿಯುತ್ತದೆ.

ಜನರಲ್ ವಿಲ್ಕಾಕ್ಸ್‌ಯವರು ನುಗ್ಗಿ ಹೋಗುತ್ತಿರುವಲ್ಲಿ ಕಾರ್ಪಾ ಎಂಬ ಸ್ಥಳದ ಬಳಿ ಸುಮಾರು ೨,೦೦೦ ಉತ್ಮಾನ್ ಖೇಲರು ಕಾದಿಕೊಂಡಿದ್ದದ್ದನ್ನು ಕಂಡರು. ಬೆಂಗಳಿಗೆಯಿಂದ ಅವರ ಮೇಲೆ ಕೆಲವು ಸಾವಿರ ಗುಂಡುಗಳನ್ನು ಹೊಡೆಯುತ್ತಿರುವುದರಿಂದ ಶತ್ರುಗಳೆಲ್ಲಾ ಆ ಸ್ಥಳವನ್ನು ಬಿಟ್ಟು ಚದರಿ ಹೋದರು.

ಉತ್ತರ ದೇಶದಲ್ಲಿ ರಾಜದ್ರೋಹದ ಕೃತ್ಯಗಳು

ಕಳೆದವಾರದ ತಂತೀ ವರ್ತಮಾನ ಸಂಗ್ರಹವು

ಕಲ್ಕತ್ತಾ, ತಾ ೧೯ನೇ ಸೋಮವಾರ —ಕಳೆದ ಶುಕ್ರವಾರ ಗ್ರೇ ಬೀದಿಯ ಲ್ಯಾಂಗ್ಟನಿನ ಮೇಲೆ ಬಾಂಬ್ ಎಂಬ ಸಿಡಿಮದ್ದಿನ ಗುಂಡನ್ನು ಇಟ್ಟ ಒಬ್ಬ ಬಂಗಾಳಿಯು ದಸ್ತಗಿರಿ ಮಾಡಲ್ಪಟ್ಟನು. ಪೋಲೀಸಿನವರು ಅವನ ಮನೆಯಲ್ಲಿ ವಿಶೇಷ ಸಂಗತಿಗಳನ್ನು ತಿಳಿಯುವವರಾಗಿ ಶೋಧಿಸಿದಾಗ ಅವನ ಕಡೆಯವರನ್ನು, ಅವನು ವಾಸ್ತವ್ಯ ಮಾಡುವ ಬರೆಸಿರುವ ಪತ್ರಗಳು, ಇತರ ವಿಷಯಗಳನ್ನಾಗಲಿ ಯಾರಿಗೂ ಏನೂ ಹೇಳದೆ ಮೌನವಾಗಿರುತ್ತಾರೆ.

ಮಾಣಿಕ್ಯತೋಲಾದಲ್ಲಿ ಸಿಕ್ಕಿದ ಗುಂಪಿನವರ ವಿಚಾರಣೆಯು.

ಬಾಂಬ್ ಎಂಬ ಸಿಡಿಮದ್ದಿನ ಗುಂಡುಗಳನ್ನು ಅಂತರಂಗದಲ್ಲಿ ತಯಾರುಮಾಡಿ ರಾಜದ್ರೋಹದ ಕೃತ್ಯಗಳನ್ನು ನಡೆಸುವುದರಲ್ಲಿ ಉದ್ಯುಕ್ತರಾಗಿದ್ದ ೩೦ ಮಂದಿ ಪುತೂರಿಗಾರರನ್ನು ಅರವಿಂದ ಘೋಷರ ಸಹಿತ ಅಲಿಪುರದ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಲಾರಂಭಿಸಿದರು. ಬಂಗಾಳಿಗಳು ರಾಜದ್ರೋಹಿಗಳೆನ್ನುವ ಸಂಗತಿಯ ವಿಚಾರವನ್ನು ಕೇಳುವುದಕ್ಕಾಗಿ ಕೋರ್ಟಿನಲ್ಲಿ ಜನ ಕಿಕ್ಕಿರಿದಿತ್ತು. ಗಲಭೆಯಾಗದಂತೆ ನಿರೀಕ್ಷಿಸಿ ಯೂರೋಪ್ಯನ್ ಮತ್ತು ದೇಶೀಯ ಪೋಲೀಸಿನವರು ಆಯುಧಪಾಣಿಗಳಾಗಿ ಕಾವಲಿದ್ದರು. ಅವರ ಸ್ವಲ್ಪವೂ ಗಲಭೆಯಾಗಲಿಲ್ಲ. ಅಪರಾಧಿಗಳು ಸಂತೋಷದಿಂದ ಒಬ್ಬರ ಸಂಗಡೊಬ್ಬರು ಮಾತನಾಡಿಕೊಳ್ಳುತ್ತಾ ಇದ್ದರು. ಆದರೆ ಅರವಿಂದ ಘೋಷ್ ರವರು ಮಾತ್ರ ಮೌನವನ್ನು ಧರಿಸಿದ್ದರು. [ಅರವಿಂದ ಘೋಷ್ ರವರು ಈ ಫಿತೂರಿಗಾರರ ಗುಂಪಿಗೆ ಸೇರಿದವರೆಂದು ತಿಳಿದು ಬಂದದ್ದರಿಂದ ಪೋಲೀಸಿನವರು ಇವರನ್ನು ಸಹ ದಸ್ತಗಿರಿ ಮಾಡಿರುತ್ತಾರೆ. ಇವರ ಪೂರ್ವೋತ್ತರವೇನೆಂದರೆ — ಇವರು ನೆಲ್ಲಾ ವಿಷಯಗಳಲ್ಲೂ ಬಹಳ ಸಮರ್ಥರೆನಿಸಿಕೊಂಡಿರುವರು. ಮೊದಲು ವಿಲಾಯತಿಯಲ್ಲಿರುವ ಸೆಂಟ್ ಪಾಲ್ ಎಂಬ ವಿದ್ಯಾಶಾಲೆಯಲ್ಲಿ ಅರವಿಂದ ಘೋಷರು ವಿದ್ಯಾಭ್ಯಾಸಮಾಡಿ ಬಹು ಪ್ರಶಸ್ತವಾಗಿ ಪರೀಕ್ಷೆಗಳಲ್ಲಿ ತೇರಿದ ಮೋದಿ, ವೇತನಗಳನ್ನು ಸಂಪಾದಿಸಿಕೊಂಡು ಭಾಷಾಭಾಗದಲ್ಲಿ ಅದ್ವಿತೀಯರೆನಿಸಿಕೊಂಡರು. ತರುವಾಯ ಇಂಡಿಯನ್ ಸಿವಿಲ್ ಸರ್ವಿಸ್ ಎಂಬ ಸರ್ಕಾರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಆದರೆ ಇವರಿಗೆ ಕುದುರೆ ಸವಾರಿ ಬರುವುದಿಲ್ಲವೆಂಬುದರ ಮೇಲೆ ಅವರಿಗೆ ಗವರ್ನ್‌ಮೆಂಟಿನವರು ಅಧಿಕಾರವನ್ನು ಕೊಡಲಿಲ್ಲ. ಆಗ ಅರವಿಂದ ಘೋಷರು ಶೀಮೆಯಿಂದ ಹಿಂದೂಸ್ಥಾನಕ್ಕೆ ಹಿಂತಿರುಗಿ ಬಂದು, ಬರೋಡಾ ಸಂಸ್ಥಾನದಲ್ಲಿ ಕೆಲವು ಕಾಲ ನೌಕರಿ ನಿರ್ವಹಿಸುತ್ತಿದ್ದು ಅದನ್ನು ಬಿಟ್ಟು, ಬಂಗಾಳದಲ್ಲಿ ಪತ್ರಿಕೆಗಳನ್ನು ನಡಿಸುತ್ತಾ ಬಂದವರಾಗಿದ್ದಾರೆ] ಸರ್ಕಾರಿ ತರಫು ಮಿ ॥ ಎರ್ಡ್ಲಿ ನಾರ್ಟನ್ ಎಂಬ ಪ್ರಸಿದ್ಧ ವಕೀಲರು ಮೊಕದ್ದಮೆಯನ್ನು ಪ್ರಾರಂಭಿಸಿದರು. ಕಲ್ಕತ್ತಾ ಪಟ್ಟಣದ ಪೋಲೀಸ್ ಇಲಾಖೆಯ ಇನ್ಸ್‌ಪೆಕ್ಟರ್ ಫ್ರಿಡೋನಿಯವರು ಪಿರ್ಯಾದಿ ತರಫು ಮೊದಲನೇ ಸಾಕ್ಷಿಯಾಗಿ ಹೋಗಿ, ಮೇಲ್ಕಂಡ ಗುಂಪಿನವರು ಮಾಡಿದ ಕೃತ್ಯಗಳನ್ನೂ ಅವರ ಬಳಿ ಯುದ್ಧ ಸಾಮಗ್ರಿಗಳೇ ಮೊದಲಾದ ವಸ್ತುಗಳು ಸಿಕ್ಕಿದ್ದನ್ನೂ ವಿವರಿಸಿದರು. ಇವರ ಸಾಕ್ಷ್ಯವೇ ಎರಡು ದಿನಗಳು ಹಿಡಿದವು.

ಕಲ್ಕತ್ತಾ, ತಾ ೨೦ನೇ ಬುಧವಾರ —ಹೌರಾ ಪಟ್ಟಣದಲ್ಲಿ ಡಿಟೆಕ್ಟಿವ್ ಪೋಲೀಸಿನವರು ಆಶ್ಚರ್ಯಕರವಾದ ರೀತಿಯಲ್ಲಿ ೧೬ ವರುಷದ ಒಬ್ಬ ವಯಸ್ಸಿನ ಬಾಲಕನನ್ನು ದಸ್ತಗಿರಿ ಮಾಡಿದರು. ಇವನು ಒಂದು ಕಾರ್ಖಾನೆಯೊಳಗೆ ಕೆಲಸ ಮಾಡತಕ್ಕವನು. ಅವನು ಕಾರ್ಖಾನೆ ಬಿಟ್ಟಮೇಲೆ ಬರುತ್ತಿರುವಾಗ ಒಂದು ಉಂಡೆಯನ್ನು ಕಂಡು ಎತ್ತಿಕೊಂಡನು. ಮನೆಗೆ ತಂದು ನೋಡುವಾಗ್ಗೆ ಅದು ಬಾಂಬ್ ಎಂಬ ಸಿಡಿಮದ್ದಿನ ಗುಂಡಾಗಿತ್ತು. ಯಾಕೆಂದರೆ ಅದು ಒಡೆದು ಆ ಬಾಲಕನ ಕೈ ಗಾಯವಾಯಿತು. ಒಂದು ಬೆರಳು ಕತ್ತರಿಸಿ ಹಾಕಬೇಕಾಯಿತು. ಆಕಸ್ಮಿಕವಾಗಿ ಈ ವಿಷಯವು ಪೋಲೀಸಿಗೆ ತಿಳಿದು ಅವರು ಆ ಕ್ಷಣ ಹೋಗಿ ಆ ಹುಡುಗನನ್ನು ದಸ್ತಗಿರಿ ಮಾಡಿದರು. ಆ ಬಾಲಕನು ಈ ಫಿತೂರಿಗಾರರ ಗುಂಪಿಗೆ ಸೇರಿದವನಲ್ಲವೆಂದು ಸಾಧಿಸುತ್ತಾನೆ. ಹಾರಿಸನ್ ರಸ್ತೆಯ ಮನೆಯಲ್ಲಿ ಸಿಕ್ಕಿದ ಫಿತೂರಿ ಗುಂಪಿನ ಪೈಕಿ ಇಬ್ಬರನ್ನು ಮ್ಯಾಜಿಸ್ಟ್ರೇಟರು ತಲಾ ೧,೫೦೦ ರೂಪಾಯಿ ಜಾಮೀನು ತೆಗೆದುಕೊಂಡು ಬಿಟ್ಟಿದ್ದಾರೆ.

ಈ ಫಿತೂರಿಗಾರರ ಗುಂಪಿಗೆ ಸೇರಿದವರೆಂದು ಹೇಳಿ ಪೋಲೀಸಿನವರು ಗ್ರಾಮಾಂತರಗಳಿಂದ ಮೂರು ಮಂದಿಯನ್ನು ದಸ್ತಗಿರಿ ಮಾಡಿ ಕಲ್ಕತ್ತೆಗೆ ತಂದಿರುತ್ತಾರೆ.

“ಯುಗಾಂತರ” ಪತ್ರಿಕಾ ಎಡಿಟರನ್ನು ದಯಾರ್ಪತ್ತಿ ಮಾಡುತ್ತಿದ್ದಾಗ, ಆ ಪತ್ರಿಕಾ ಆಫೀಸಿನಲ್ಲಿ ಕೆಲಸಮಾಡುತ್ತಿದ್ದ ಹಾರಾವಾಕನೆಂಬ ಚೌಧರಿ ಎಂಬವನು ಕೋರ್ಟಿನ ಹೊರಭಾಗದಲ್ಲಿ ಕೂಗಿಕೊಂಡಿದ್ದನು. ಪೋಲೀಸಿನವರು ಅವನನ್ನು ಕೂಡಲೆ ದಸ್ತಗಿರಿಮಾಡಿ, ಮೆಜಿಯನ್ನು ಶೋಧನೆ ಮಾಡಿ ಬಿಟ್ಟು ಬಿಟ್ಟರು. ಸ್ವಲ್ಪ ಹೊತ್ತಿನ ಮೇಲೆ ಅವನ ಮನೆಗೆ ಹೋಗಿ ದಸ್ತಮಾಡಿದರು. ಅಲ್ಲಿ ಒಂದು ಟಿಣ ಪೆಟ್ಟಿಗೆ ಸಿಕ್ಕಿತು. ಅದರಲ್ಲಿ ೧,೫೦೦ ತೋಟಾಗಳೂ, ೫ ರಿವಾಲ್ವರ್ ಎಂಬ ಪಿಸ್ತೂಲುಗಳೂ ಸಿಕ್ಕಿದವು. ಕೂಡಲೇ ಅವನ ಮೇಲೆ ವಾರಂಟು ತಂದು ಅವನನ್ನು ದಸ್ತಗಿರಿ ಮಾಡಿದರು.

ಫಿತೂರಿ ಗುಂಪಿಗೆ ಸೇರಿದವರ ದಯಾರ್ಪತ್ತಿಯು ನಡೆಯುತ್ತಾ ಇದೆ. ಫಿರ್ಯಾದಿ ತರಫಿನವರು ಅನೇಕ ಸಾಕ್ಷಿಗಳನ್ನು ದಯಾರ್ಪತ್ತಿ ಮಾಡಿ, ಹಲವು ರಹಸ್ಯಗಳನ್ನು ಒದಗಿಸುತ್ತಿದ್ದಾರೆ.

ಕಲ್ಕತ್ತೆಯಲ್ಲಿ ಪ್ರಕಟವಾಗುತ್ತಿದ್ದ “ಸಂಧ್ಯಾ” ಎಂಬ ವರ್ತಮಾನ ಪತ್ರಿಕೆಯನ್ನು ಪ್ರಕಟಿಸತಕ್ಕದ್ದು ಸರ್ಕಾರದವರು ನಿರ್ಬಂಧಪಡಿಸಿರುತ್ತಾರೆ. ಹೀಗೆಯೇ ಇನ್ನು ಕೆಲವು ಪತ್ರಿಕೆಗಳನ್ನು ನಿಲ್ಲಿಸಬಹುದೆಂದು ಕಾಣುತ್ತದೆ.

ಕಲ್ಕತ್ತಾ, ೨೨ನೇ ಶುಕ್ರವಾರ —ಪಾಳ್ಯವರ್ ಪುರದ ಕೋಟೆ ಮೇಲೆ ಸಿಡಿಮದ್ದನ್ನು ನೆನ್ನೆ ಪ್ರಾರಂಭವಾಯಿತು. ಖುದಿರಾಮ್ ಬೋಸನು ಕೆನ್ನೆಡಿಯವರ ಪತ್ನಿಯನ್ನೂ ಪುತ್ರಿಯನ್ನೂ ಸಿಡಿಮದ್ದಿನ ಗುಂಡು ಎಸೆದು ಕೊಂದನೆಂದು ಅಪರಾಧ ಹೊರಿಸಲ್ಪಟ್ಟಿದ್ದಾನೆ. ಪೋಲೀಸ್ ಸೂಪರಿಂಟೆಂಡೆಂಟರೇ ಮೊದಲಾದವರು ಫಿರ್ಯಾದಿ ತರಫು ಬಂದು ಸಾಕ್ಷ್ಯ ಕೊಡುತ್ತಿದ್ದಾರೆ.

ಡಾರ್ಜಿಲಿಂಗ್ ಪಟ್ಟಣದಲ್ಲಿ ಲೆಫ್ಟಿನೆಂಟ್ ಗವರ್ನರವರ ಬಂಗಲೆ ಇರುವ ಉದ್ಯಾನವನದೊಳಗೆ ಇಬ್ಬರು ಬಂಗಾಳಿಗಳು ಸಂಚಾರ ಮಾಡುತ್ತಿದ್ದರು. ಇವರು ಏತಕ್ಕೋಸ್ಕರ ಅಲ್ಲಿಗೆ ಬಂದಿದ್ದರೆಂದು ಗೊತ್ತಾದದ್ದರ ಮೇಲೆ ಪೋಲೀಸಿನವರು ಅವರಿಬ್ಬರನ್ನೂ ದಸ್ತಗಿರಿಮಾಡಿಕೊಂಡು ಹೋದರು.

ಕಲ್ಕತ್ತೆ, ತಾ ೨೪ನೇ ಶನಿವಾರ — ಪುರಿ (ಜಗನ್ನಾಥ) ಕಡೆಯಿಂದ ನೆನ್ನೆ ರೈಲು ಗಾಡಿಯು ಹೌರಾ ಸ್ಟೇಷನ್ ಬಂದ ಕೂಡಲೇ ಒಂದು ಮೂರನೇ ಕ್ಲಾಸ್ ಗಾಡಿಯೊಳಗೆ ಎರಡು ಸಿಡಿಮದ್ದಿನ ಗುಂಡುಗಳಿದ್ದದ್ದು ಗೊತ್ತಾಯಿತು. ಅವು ಮೊದಲು ನೋಡುವಾಗ್ಗೆ ಚೆಂಬುಗಳ ತರಹವಾಗಿದ್ದವು. ಜಾಗರೂಕತೆಯಿಂದ ಪರೀಕ್ಷೆ ಮಾಡಿದಾಗ ಸಿಡಿಮದ್ದಿನ ಗುಂಡುಗಳೆಂದು ತಿಳಿಯಿತು. ಎರಡು ಚೆಂಬುಗಳಲ್ಲೂ ಬಾಯನ್ನು ಸೀಸದಿಂದ ಮುಚ್ಚಿತ್ತು. ಅವು ಮೇಲೆ ಮಣ್ಣು ಮೆತ್ತಿತ್ತು. ಆ ಗಾಡಿಯಲ್ಲಿ ಟಿಕೀಟುಗಳಿಲ್ಲದೆ ಪ್ರಯಾಣಮಾಡುತ್ತಿದ್ದ ಕೆಲವರು ಸಿಕ್ಕಿದವು. ಇವರಲ್ಲಿ ಒಬ್ಬ ಫಿತೂರಿಗಾರನು ಸೆಲ್ಲಿ ಗಾಡಿಯೊಳಗೆ ಇದ್ದು ಹೊರಟು ಹೋದ ದಾರಿಯ ಕಡೆಗೆ ಹೋಗುವ ಯೂರೋಪ್ಯನ್ ರೈಲ್ವೆ ನೌಕರರು ಪತ್ತೆ ಮಾಡಿ, ಪ್ರಕಾರ ಗಾಡಿಗಳನ್ನೆಲ್ಲಾ ಅರ್ಜೆಂಟಾಗಿ ಶೋಧಿಸಿದರು. ಅಲ್ಲಿ ಹೆಚ್ಚಿನ ಗುಂಡುಗಳು ಸಿಕ್ಕಿದವು.

ಮುಜಫರ್‌ಪುರ ಸಿಡಿಮದ್ದಿನ ಗುಂಪಿನ ಮೊಕದ್ದಮೆಯಲ್ಲಿ ಖುದಿರಾಮ್ ಬೋಸನು ತಾನು ಮೊದಲು ಹೇಳಿದ ಹೇಳಿಕೆ ಸತ್ಯವೆಂದು ಮ್ಯಾಜಿಸ್ಟ್ರೇಟರ ಮುಂದೆ ಹೇಳಿ ಒಪ್ಪಿಕೊಂಡನು. ಅವನ ಸಂಗಡ ದಸ್ತಗಿರಿ ಮಾಡಲ್ಪಟ್ಟ ರಾಮ ಕಿಶೋರಿಮೋಹನ ಬ್ಯಾನರ್ಜಿಯು ತಾನು ಈ ಕೆಲಸದಲ್ಲಿ ಸೇರಿದವನಲ್ಲವೆಂದೂ ನಿರಪರಾಧಿಯಾಗಿದೇನೆಂದೂ ಹೇಳುತ್ತಾ ಕೇಳಿಕೊಂಡನು.

ಬಾತ್ಮಿದಾರರಿಗೆ ನೋಟೀಸು.

ನೆಲದ ವಿಳಾಸಗಳಲ್ಲಿನ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದ ಕಳುಹತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂತಹವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಸಹಿತ ಜಾಹಿರಾತುಗಳಿಗೆ ನಾವು ಹೊಣೆಗಾರರು ಆಗುವುದಿಲ್ಲವೆಂಬುದನ್ನು ಸಹಾ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್.

ಎರಡು ವಿಷಯಗಳು

ಅಯ್ಯಾ,

ಕಳೆದ ವಾರ ವೃತ್ತಾಂತ ಪತ್ರಿಕೆಯಲ್ಲಿ ನೀರು ಎತ್ತುವ ಯಂತ್ರದ ವಿಷಯವನ್ನು ಕುರಿತು ಪ್ರಕಟಿಸಲ್ಪಟ್ಟಿದ್ದು ಇದ್ದದ್ದು ಸರಿಯಷ್ಟೆ. ನಮಗೆ ಅಂಥಾ ಮಾದರಿ ಒಂದು ಯಂತ್ರವು ಅವಶ್ಯಕವೆಂಬ ಕೋರಿಕೆ ಇದೆ. ಆದರೆ ನಮಗೆ ಅಷ್ಟು ಭಾರೀ ಯಂತ್ರ ಅಗತ್ಯವಿಲ್ಲ. ನೀರು ಒಂದು ಅಳತೆಯಷ್ಟು ಬಂದರೆ ಸಾಕಾಗಿರುತ್ತೆ. ಈ ಬಾವಿಗೆ ನೀರು ಎತ್ತುವ ಯಂತ್ರ ರೂ ೫೦೦—೬೦೦ ರ ವರೆಗಳಲ್ಲಿ ಇರಬೇಕು. ಇಂಥಾ ಯಂತ್ರಗಳು ಇರುವದೂ ಇಲ್ಲದ್ದೂ ಮತ್ತು ಯಾರಲ್ಲಿ ದೊರಕುವದನ್ನು ತಾವು ದಯವಿಟ್ಟು ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೋರುತ್ತೇನೆ. ಇಷ್ಟಲ್ಲದೆ ಮಂಜುಗುಲ್ ತಾಲ್ಲೂಕ್ ಮಲ್ಲಿ ನಾಯಕನ ಹಳ್ಳಿ ಹೋಬಳೀ ಮೋತಕಪಲ್ಲಿ ಗ್ರಾಮದಲ್ಲಿ ನನ್ನ

ಕೆಸರಿನ ಖಾತೆ ಸರ್ವೆ ೧೧ ನೇ ನಂಬರ್ ಜಮೀನನ್ನು ಇಂಜನಿಯರ್ ಇಲಾಖೆಯವರು ನನಗೆ ತಿಳಿಸದೆ ನನ್ನ ಅನುಮತಿ ಇಲ್ಲದೆ ಜಮೀನ ಯೊವತ್ತು ತಾಯಲೂರು ಅಮಾನಿಕೆರೆಗೆ ಸೇರಿಸಿಕೊಂಡು ೭ ವರ್ಷವಾಯಿತು. ಅನೇಕ ಅರ್ಜಿಗಳು ಅಮಲ್ದಾರ್ ಸ್ವಾಮಿಯವರಿಗೂ, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೂ ಬರೆದುಕೊಂಡಾಗ್ಯೂ ಇನ್ನೂ ಹುಕುಂ ಅಪ್ಪಣೆ ಆಗಲಿಲ್ಲ. ಕಂಪೆನ್ಸೇಷನ್ ಕೊಡಲಿಲ್ಲ. ಈ ವಿಷಯದಲ್ಲಿ ತ್ವರೆಗಮನಕೊಡಬೇಕು ತಿಳಿಸಬೇಕು

ಎ. ವೆಂಕಟರಮಣಯ್ಯ.

[ಬಾತ್ಮೀದಾರರು ಮೇಲ್ಕಂಡ ಎರಡು ವಿಚಾರಗಳಿಗೂ ರೆವಿನ್ಯು ಕಮಿಷನರಿಗೆ ಬರೆದುಕೊಂಡರೆ ಅನುಕೂಲವಾದೀತೆಂದು ನಿರೀಕ್ಷಿಸುತ್ತೇವೆ.—ಎಡಿ.]

ಶಿಕಾರಿಮಾಡಿದ್ದು.

ಅಯ್ಯಾ,

ಚಳ್ಳಕೆರೆ ತಾಲ್ಲೋಕು ಭೋಗನ ಹಳ್ಳಿ ಗ್ರಾಮದವರು ಮೇ ತಾ. ೧೭ ನೆ ಭಾನುವಾರ ಕಾಡುಹಂದಿ ಶಿಕಾರಿಗಾಗಿ ಹೊರಟು, ಹಂದಿಯನ್ನು ಎಬ್ಬಿಸಿ ಶಿಕಾರಿ ಆಡುವಲ್ಲಿ ಅದು ಇದೇ ತಾಲ್ಲೋಕು ಘಟ್ಟಪರ್ತಿ ನಲಬಿಗೆ ಬಂದು ಸೇರಿತು. ಹೋಗುವವರು ಪ್ರಸಂಗವನ್ನು ಕಂಡು ಊರಲ್ಲಿ ಬಂದು ಹೇಳಿದರು. ಆ ಕೂಡಲೆ ಪಟೇಲನು ಕಾನ್ಸ್ಟೇಬಲ್ ಆಯುಧಗಳು ಅಂದರೆ ಭರ್ಜಿ, ಕೊಡ್ಲಿ, ಗಂಡು ಕೊಡ್ಲಿ, ದೊಣ್ಣೆ, ಬಲೆ ಸಹಾ ತೆಗೆದುಕೊಂಡು ಹೋಗಿ ಸದರಿ ಎರಡು ಗ್ರಾಮದವರು ಶಿಕಾರಿ ಆಡಿದರು. ೧೨ ಘಂಟೆ ಸಮಯದಲ್ಲಿ ಘಟ್ಟಪರ್ತಿ ಮೆ॥ ಗೌಡಕೆರೆ ವೀರಭದ್ರಪ್ಪನವರ ಮಗ ಹೊನ್ನ ಕಾರ್ಯೆಯು ಎಂಬಾತನಿಗೆ ಸದರಿ ಹಂದಿಯು ಎತ್ತಿ ಹಾಕಿ ಬಲಗೈಗೆ ಅಂಗೈಗೆ ರಟ್ಟೆಗೂ ಎಡಕಾಲು, ಮೊಣಕಾಲು, ತೊಂಕಗಳಿಗೂ, ವಿಶಾಲ ಖಂಡಗಳಿಗೂ ಸಹಾ ಪ್ರಬಲ ಗಾಯ ಬಗಿದು ಮತ್ತು ಮಾನಕ್ಕೆ ಸಹಾ ಬಗಿಯುವಷ್ಟರಲ್ಲಿ ಜನಗಳು ಗಲಾಟೆಮಾಡಿಕೊಂಡು ಓಡಿ ಬಂದದ್ದರಿಂದ ಬಿಟ್ಟು ಓಡಿಹೋಯಿತು. ಇಲ್ಲದಿದ್ದರೆ ಪ್ರಾಣ ನಷ್ಟವಾಗಬೇಕಾಗಿತ್ತು. ಮಾನದಲ್ಲಿ ಮಾತ್ರ ಬೀಜಕ್ಕೆ ಗಾಯವಾಗಿ ಪೂರಾ ಕಟ್ಟಿಗಿದೆಯಂತೆ. ಅಷ್ಟಾದಾಗ್ಯೂ ಕೂಡ ಸದರಿ ಹಂದಿಯನ್ನು ಬಿಡದಂತೆ ಎರಡು ಗ್ರಾಮದವರು ತಿವಿದರು. ಇಂಥಾ ಸಲಗವನ್ನು ೫೦ ವರುಷಗಳಿಂದಾಯ್ತು ನೋಡಲಿಲ್ಲವೆಂತ ಕೊಂಡಾಡಿದರು. ಹಂದಿಯು ನಮಗೆ ನಮಗೆ ಎಂದು ಬಹಳ ಜಗಳವಾಡಿ ಭೋಗನ ಹಳ್ಳಿಯವರು ಘಟ್ಟಪರ್ತಿನಾಯ್ಕ ರಾಮಯ್ಯ, ಕಾಯಿಪಿನ ರಂಗ ಎಂಬುವನಿಗೂ ಸಹಾ ಜಾಸ್ತಿ ಕಟ್ಟಿಗೆಯಿಂದ ಹೊಡೆದಿರುತ್ತಾರೆ. ಘಟ್ಟಪರ್ತಿಯವರು ೪—೧೦ ಜನಕ್ಕೆ ಹೊಡೆದಿರುತ್ತಾರೆ. ಭೋಗನ ಹಳ್ಳಿಯವರು ಮಾತ್ರ ಊರು ಸೇರಿದರು. ಸದರಿ ಕಡಿದ ಕೊಡೆದ ದೊಡ್ಡ ಕಾರ್ಯೆಯು ಎಂಬಾತನನ್ನು ತೆಗೆದುಕೊಂಡು ಬಂದು, ಕಾಯಿಪಿನ ಸಾಲು ಮನೆ ತಿಪ್ಪಗನ ಚಪ್ಪರದಲ್ಲಿ ಹಾಕಿಕೊಂಡು ಅನ್ನ, ನೀರು, ೬೦—೭೦ ತೆಂಗಿನ ಕಾಯಿ, ೬ ಕುಂಬಳಕಾಯಿ ಹಾಕಿಕೊಟ್ಟು ತಂಗಲು ಬಿಟ್ಟಿದ್ದಾರೆ. ದುರ್ಗದ ಆಸ್ಪತ್ರೆಗೆ ಗಾಡಿಯಲ್ಲಿ ಹಾಕಿಕೊಂಡು ಹೋಗಿರುತ್ತಾರೆ. ಈ ದಿವಸ ಸಾಯಂಕಾಲದಲ್ಲಿ ವಿಚಿತ್ರವಾದ ಮೋಡಗಳು ಕಟ್ಟಿದ್ದವು ಸ್ವಲ್ಪ ಕಾಲ ಮಳೆ ಬಂತು. ಇಲ್ಲಿ ಜಾಸ್ತಿ ಮಳೆ ಆಗಲಿಲ್ಲ.

ಬಾತ್ಮೀದಾರ್.

ಗ್ರಾಮಾಂತರಗಳ ವಿಚಾರವು.

ಅಯ್ಯಾ,

ತೀರ್ಥಹಳ್ಳಿ ತಾಲ್ಲೂಕು ನಾಬಳದಲ್ಲಿ ಗದ್ದೆಗಳಲ್ಲಾ ಬೀಜಗಳನ್ನು ಹಾಕಿದ್ದಾರೆ. ನೋಡಲೇನೋ ಆದುತ್ತದೆಯೆ ಹೊರತು ಮಳೆಮಾತ್ರ ಇಲ್ಲ. ಬಿಸಿಲ ತಾಪ ಬಹಳವಿರುತ್ತದೆ.

ಇಲ್ಲಿನ ನಾಮಧಾರಿಗಳು ಗತಿಸಿದ ಮಾ. ರಾ. ಗಿರಿಯಪ್ಪ ಗೌಡರು ಇರುವವರಿಗೆ ಬಹಳ ಭಯದಿಂದ ಕಳ್ಳಿನ ದುಕಾನಿಗೆ ಹೋಗುತ್ತಾ ಇದ್ದರು. ಈಗ ನಿರ್ಭಯವಾಗಿ ಮದ್ಯ, ಕಳ್ಳು ಅಂಗಡಿಯಲ್ಲಿ ಎಷ್ಟಿದ್ದರೂ ಸಾಲದಾಗಿದೆ. ಗತಿಸಿದ ಮಾ. ರಾ. ಗಿರಿಯಪ್ಪಗೌಡರು ಪ್ರಥಮ ಘನ ಮಾದ್ರಿ ದೊರೆಗಳವರ ಸ್ನೇಹವನ್ನು ಬೆಳಸಿ, ಈ ಮಲೆನಾಡು ಪ್ರಾಂತ್ಯಕ್ಕೆ ಘನವಾದ ಬೆಳಕನ್ನು ತಂದು, ಈ ಕಾಡು ಜನಗಳನ್ನು ಉತ್ತಮಂತರಕ್ಕೆ ತರಬೇಕೆಂದು ಎಷ್ಟೋ ಪ್ರಯತ್ನಪಟ್ಟರು! ದೇವರ ಆಶೀರ್ವಾದದಿಂದ ಮುಂದೂ ಕೂಡಾ ಅವರೇ ಇದ್ದಿದ್ದರೆ ಇನ್ನೂ ವಿಶೇಷವಾಗಿ ತಮ್ಮಲ್ಲಿ ಅಡಕವಾಗಿದ್ದ ನೀತಿಯನ್ನು ಪ್ರಕಾಶಪಡಿಸಿ, ಈ ಪ್ರಾಂತ್ಯವನ್ನು ಉತ್ತಮ ಸ್ಥಿತಿಗೆ ತರುತ್ತಿದ್ದರೆಂದು ನಂಬಿಕೆಯಾಗಿತ್ತು. ಅಷ್ಟರೊಳಗಾಗಿ ದೇವರು ಅವರನ್ನು ಕರಕೊಂಡನು. ಈಗ ಕುಡುಕರ ಸಂಖ್ಯೆಯು ಬಹುಮಟ್ಟಿಗೆ ಹೆಚ್ಚುತ್ತಾ ಬಂದದ್ದಲ್ಲದೆ, ದುಕಾನದಾರನಿಗೆ ರಾತ್ರಿ ಹಗಲು ಕೂಡ ಪುರಸತ್ತು ಇಲ್ಲ. ಈ ವಿಧವಾಗಿ ಕುಡುಕತನವು ಹೆಚ್ಚುತ್ತಾ ಬಂದಲ್ಲಿ ಯಾರು ತಾನೇ ವಿವೇಕವನ್ನು ಹೇಳಿಯಾರು? ಅಥವಾ, ಹೇಳಿದರೂ—"ನಿಮಗೆ ಅದರ ರುಚಿ ಏನು ಗೊತ್ತು? ನಮಗೆ ಧೈರ್ಯ, ಬುದ್ಧಿಗಳನ್ನು ವಿಶೇಷಗೊಳಿಸಿ ಪ್ರಾಣದಾನ ಮಾಡುತ್ತದೆ" ಎಂಬದಾಗಿ ಹೇಳುತ್ತಾರೆ. ಇದರಲ್ಲಿರುವ ಮೂಢತನವು ಎಂದಿಗೆ ಬಯಲಾಗುವದೋ ಎಂಬ ಯೋಚನೆಯು ನನ್ನನ್ನು ತುಂಬಾ ಬಾಧಿಸುತ್ತಾ ಇದೆ. ಮುಖ್ಯ ನಮ್ಮ ಪರಮ ಅಂಶೆಯಾದ ದೇವರನ್ನು ನಮ್ಮಗಳ ಅನುದಿನದ ಪ್ರಾರ್ಥನೆಯಲ್ಲಿ ಬೇಡಿಕೊಳ್ಳಬೇಕಾಗಿ ಕೋರುತ್ತೇನೆ

ಗತಿಸಿದ ಕೊಳಿಗ ಪಟೇಲ್ ತಿಮ್ಮಪ್ಪ ಗೌಡರವರ ಪುತ್ರರಾದ ಸಿದ್ದಪ್ಪಗೌಡರು ಇಲ್ಲಿರುವ ಬಡ ಪ್ರಜೆಗಳಿಗೆಲ್ಲಾ ಸಣ್ಣ ಸಾಲಗಳನ್ನು ಕೊಟ್ಟು, ಜಿನಸಿಧಾರಣೆ ಅಗ್ಗವಾದ ಕಾಲದಲ್ಲಿಯೂ ಕೂಡ ಈ ಪೂರ್ವಕ್ಕಿದ್ದ ಧಾರಣೆಯಂತೆಯೇ ಲಾಭದ ಮೇಲೆ ಆಸೆ ಇಡದೆ ಬಡವರಿಗೆ ದವಸಧಾನ್ಯವನ್ನು ಕೊಟ್ಟು ಕಾಪಾಡುತ್ತಾ ಬರುವದನ್ನು ಕಂಡು ತುಂಬಾ ಸಂತೋಷಪಡಬೇಕಾಗಿದೆ. ಮುಂದೂ ಕೂಡ ಇದೇ ದೃಢ ಮನಸ್ಸನ್ನು ದೇವರು ಕೊಟ್ಟು ಇವರಲ್ಲಿರುವ ವ್ಯಸನವನ್ನು ಪರಿಹರಿಸಬೇಕಾಗಿ ಬೇಡಿಕೊಳ್ಳುತ್ತೇನೆ. ಸಿದ್ದಪ್ಪಗೌಡರು, ಇವರ ತಮ್ಮ ದೇವಪ್ಪಗೌಡರು, ಇವರುಗಳ ಆಶ್ರಯಕ್ಕಾಗಿ ಮಾ॥ ಮೋಗರವಳ್ಳಿ ರಾಮಪ್ಪ ಹೆಗ್ಗಡೇರವರು ಇರುತ್ತಾರೆಂದು ಕೇಳಿ ಸಂತೋಷ ಪಡುತ್ತೇನೆ

ಬಾತ್ಮೀದಾರ್.

ತಾಲ್ಲೂಕು ವರ್ತಮಾನಗಳು.

ಹೊಸೂರು.—ಹೊಸೂರಿಗೆ ಹೊಸದಾಗಿ ಬಂದಿರುವ ತಹಶೀಲ್ದಾರ್ ಮೆ॥ ಮಹಮದ್ ಗೌಸು ಸಾಹೇಬರವರು ಸ್ವಲ್ಪಕಾಲದಲ್ಲಿಯೇ ಈ ಊರಿನ ಪ್ರಜೆಗಳಿಂದ ಒಳ್ಳೇ ಕೀರ್ತಿಯನ್ನು ಹೊಂದಿದಾರೆ. ಈ ಊರಿನಲ್ಲಿ ನೀರು ಇಲ್ಲದೆ ಪ್ರಜೆಗಳು ಕಷ್ಟಪಡುವದನ್ನು ಇವರು ನೋಡಿ, ಹ್ಯಾಗಾದರೂ ಪ್ರಜೆಗಳ ಕಷ್ಟವನ್ನು ನಿವರ್ತಿ ಮಾಡಬೇಕೆಂದು ಯೋಚನೆಮಾಡಿ, ಬಹಳ ಪ್ರಯಾಸವನ್ನು ತೆಗೆದುಕೊಂಡು ಸರ್ಕಾರದವರಲ್ಲಿ ಹೋರಾಡಿ ಸ್ವಲ್ಪ ಹಣವನ್ನು ತರಿಸಿಕೊಂಡು, ಬಾಕಿದ್ದಕ್ಕೆ ಪ್ರಜೆಗಳಿಂದ ಸ್ವಲ್ಪ ಕೂಡಿಸಿ, ತಮ್ಮ ಸ್ವಂತ ಹಣವನ್ನು ಸಹಾ ಹಾಕಿ ದೇವರ ಕೆರೆಯಲ್ಲಿ ಒಂದು ಹೊಸ ಬಾವಿಯನ್ನು ತೆಗಿಸಿದರು. ದೇವರ ದಯದಿಂದ ಅವರ ಪ್ರಯಾಸವು ವ್ಯರ್ಥವಾಗಿ ಹೋಗದೆ, ನಾಲ್ಕು ಮಟ್ಟುಗಳಲ್ಲಿಯೇ ಒಳ್ಳೇ ನೀರು ಬಿದ್ದಿದೆ. ಊರಿನ ಜನಗಳೆಲ್ಲಾ ಹೊತ್ತಾರೆಯಿಂದ ಸಾಯಂಕಾಲದ ವರಿಗೂ ಸೇದಿದರೂ ಸಾಯಂಕಾಲದಲ್ಲಿ ನಾಲ್ಕು ಅಡಿ ನೀರು ಇದ್ದೇ ಇರುತ್ತದೆ. ಇದುಮಾತ್ರವಲ್ಲದೆ, ಈ ಊರಿನಲ್ಲಿ ಕೆಲವು ಹಳೇ ಬಾವಿಗಳನ್ನೆಲ್ಲಾ ಹೊಡಿಸಿರುತ್ತಾರೆ. ಅವುಗಳಲ್ಲಿ ಸಹಾ ನೀರು ಬಿದ್ದಿರುತ್ತದೆ. ಇವರು ಈ ಊರಿಗೆ ಬಂದು, ಈ ಕೆಲಸವನ್ನು ಮಾಡಿದ್ದಕ್ಕಾಗಿ ನಾವೆಲ್ಲರೂ ಬಹಳ ಸಂತೋಷ ಪಡುತ್ತೇವೆ. ಇವರು ಈ ಕೆಲಸಕ್ಕಾಗಿ ತೆಗೆದುಕೊಂಡ ಪ್ರಯಾಸವನ್ನು ವಿವರಿಸಿ ಹೇಳಲಿಕ್ಕೆ ನಮ್ಮಿಂದಾಗುವದಿಲ್ಲ. ಅಷ್ಟು ಪ್ರಯಾಸ ತೆಗೆದುಕೊಂಡು ನಮಗೋಸ್ಕರ ಈ ಕೆಲಸವನ್ನು ಮಾಡಿದ್ದಕ್ಕಾಗಿ ನಾವೆಲ್ಲರೂ ಬಹಳ ಕೃತಜ್ಞತೆಯಿಂದ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇವೆ ಇವರು ಇನ್ನೂ ಈ ಊರಿನಲ್ಲಿ ಬಡವರಿಗೆ ಒಳ್ಳೇ ಉಪಕಾರಗಳನ್ನು ಮಾಡ್ಯಾರೆಂದು ನಂಬಿ ಪ್ರಾರ್ಥಿಸುತ್ತೇವೆ.

ಚಾಮರಾಜನಗರ.—ಮಿಷನ್ ಇಲಾಖಾ ಸೂಪರಿಂಟೆಂಡೆಂಟರಾದ ಘನ ಮಾ॥ ಧೊರೆಗಳವರು ಕಳೆದ ಬೃಹಸ್ಪತಿವಾರ ಇಲ್ಲಿಗೆ ದಯಮಾಡಿಸಿ, ಇಲ್ಲಿನ ಮಿಷನ್ ಸ್ಕೂಲುಗಳನ್ನು ಪರೀಕ್ಷೆ ಮಾಡಿ, ಸ್ಕೂಲಿಗೆ ಬೇಕಾದ ಸಲಕರಣೆಗಳನ್ನು ಒದಗಿಸಿ ಕೊಟ್ಟದ್ದಲ್ಲದೆ, ಇಲ್ಲಿನ ಉಪಾಧ್ಯಾಯರ ಅಹವಾಲುಗಳನ್ನು ಚಿತ್ತಕ್ಕೆ ತಂದುಕೊಂಡು ಪ್ರಮೋಷನ್ ದಯಪಾಲಿಸಿದರು. ಮತ್ತು ಅಲ್ಲಲ್ಲಿ ನೆರೆದುಬಂದ ಜನರಿಗೆ ಕ್ರೈಸ್ತಮತದ ಉಪನ್ಯಾಸಗಳನ್ನು ಮಾಡಿ, ಮನುಷ್ಯರನ್ನೂ ದೇಶವನ್ನೂ ಕಾಪಾಡುವದು ಶಾಸನವೇ ಎಂಬ ಅಂಶವನ್ನು ಒತ್ತಿ ಹೇಳಿದರು. ಮತ್ತು ಇಲ್ಲಿನ ಕ್ರೈಸ್ತರ ಕೂಡ ಭಗವದಾರಾಧನೆಯನ್ನು ನೆರವೇರಿಸಿ ಪಾದಸು ದಯಮಾಡಿಸಿದರು.—ಡಾಕ್ಟರ್ ಜಗನ್ನಾಥಂ ಪಿಳ್ಳೆಯವರು ಈ ಪ್ರಾಂತ್ಯದಲ್ಲಿ ಅನುಕೂಲ್ಯೋಪಕಾರ ಮಾಡುತ್ತಾ ಇದಾರೆ. ಕೆಲವರು ದುಷ್ಟ ಕೊಡುತ್ತಾರೆಂಬ ಆಸೆಯಿಂದ ಕಾಣಿಸಿಕೊಳ್ಳುತ್ತಾ ಇರುವರು. ಹೀಗೆ ಕಾಣಿಸಿಕೊಂಡವರಿಗೆ ಯಾವ ನಷ್ಟವೂ ಆಗಲಿಲ್ಲವೆಂದು ಜನರಿಗೆ ತಿಳಿಯುವಂತೆ ಇನ್ನೂ ಅನೇಕರು ಧೈರ್ಯವಾಗಿ ಬಂದು ಚಿಕಿತ್ಸೆ ಮಾಡಿಸಿಕೊಳ್ಳುವದರಲ್ಲಿ ಸಂದೇಹವಿರಲಾರದು.—ಈ ಮಾಸದ ಕೊನೆವರೆಗೆ ಹೋಳಿದ ಮಳೆ ಉತ್ಕೃಷ್ಟವಾದ ಸ್ಥಿತಿಯಲ್ಲಿ ಇದ್ದರೂ ಸಕಾಲಕ್ಕೆ ಮಳೆ ಇಲ್ಲದೆ ಕುಂದಿರುವದಾಗಿದೆ. ಈ ಬೇಸಿಗೆಯಲ್ಲಿ ಇಲ್ಲಿನ ಬಾವಿಗಳಲ್ಲಿ ನೀರಿಲ್ಲದೆ ಜನರಿಗೆ ಬಹಳ ಕಷ್ಟವಾಗಿತ್ತು. ದೇವರ ಕೃಪೆಯಿಂದ ಈಚೀಚೆಗೆ ಆದ ಒಂದೆರಡು ಹದ ಮಳೆಗಳಿಂದ ಬಾವಿ ಕೊಳಗಳಲ್ಲಿ ಸ್ವಲ್ಪ ನೀರು ಬಂದಿದೆ. ನೀರನ್ನು ಕಾಯಿಸಿ ಕುಡಿಯುವದರಿಂದ ಉಂಟಾಗುವ ಪ್ರಯೋಜನವನ್ನು ಜನರು ತಿಳಿದು ಕೊಳ್ಳುವದು ಒಳ್ಳೇದು.—ಇಲ್ಲಿಗೆ ಒಬ್ಬ ನೇಟಿವ್ ಪಂಡಿತರನ್ನು ನೇಮಿಸಿಕೊಳ್ಳುವ ವಿಷಯದಲ್ಲಿ ಸರ್ಕಾರದಿಂದ ಹುಕುಂ ಬಂದಿದೆ ಎಂದು ತಿಳಿಯಬರುತ್ತೆ. ಈ ವಿಷಯದಲ್ಲಿ ಅನೇಕರು ಯುನಾನಿ ಹಕೀಂ ಅಬ್ದುಲ್ ಗಫೂರ್ ಸಾಹೇಬರನ್ನು ನೇಮಿಸಿಕೊಳ್ಳುವಂತೆ ಅಮಲ್ದಾರರಿಗೆ ಅರ್ಜಿಯ ಮೂಲಕ ವಿಜ್ಞಾಪಿಸಿಕೊಂಡಿದಾರೆಂದು ತಿಳಿಯಬರುವದು. ಸದರಿ ಹಕೀಂ ಸಾಹೇಬರು ಬಹು ದಿನಗಳಿಂದಲೂ ಸ್ವಂತ ಖರ್ಚಿನಿಂದ ತಮ್ಮ ಬಳಿಗೆ ಬರುವ ರೋಗಿಗಳಿಗೆ ಧರ್ಮಾರ್ಥವಾಗಿ ಔಷಧ ಕೊಡುತ್ತಾ ನಿರ್ಗತಿಕರಾಗಿದ್ದರೆ ಭತ್ಯ ಕೊಟ್ಟು ಉಪಚರಿಸುತ್ತಾ ಇದಾರೆಂದು ಕೇಳುತ್ತೇನೆ. ಅನೇಕ ಕಡೆಗಳಿಂದ ರೋಗಿಗಳು ಇವರ ಬಳಿಗೆ ಬರುವವರಾಗಿದಾರೆಂದು ತಿಳಿಯ ಬರುವದು. ಸರ್ಕಾರದವರು ಇವರನ್ನು ಆ ಕೆಲಸಕ್ಕೆ ನೇಮಿಸುವರೆಂದು ಜನರು ನಿರೀಕ್ಷಿಸುತ್ತಾರೆ.

ಹೊಸಕೋಟೆ.—ಈ ಊರಲ್ಲಿ ಕೆಲವು ದಿನಗಳ ಲಾಗಾಯಿತು ಕಣ್ಣುಬೇನೆ, ಜ್ವರಗಳಿಂದ ಜನರು ಬಾಧಿತರಾಗಿದ್ದು ಇಲ್ಲಿನ ಆಸ್ಪತ್ರೆಯಲ್ಲಿ ಇಂಬಿರುತ್ತಾರೆ. ಆಸ್ಪತ್ರೆ ಅಸಿಸ್ಟೆಂಟ್ ಮೆ॥ ಕೃಷ್ಣಪ್ಪನವರಲ್ಲಿ ಯಾರು ಹೊಸದಾಗಿ ಬಂದ ಕೆಲವು ದಿನಗಳಲ್ಲಿಯೇ ಆಸ್ಪತ್ರೆಗೆ ಬರುವ ರೋಗಿಗಳನ್ನು ಮಮತೆ ಉಪಚಾರಗಳಿಂದ ಸತ್ಕರಿಸಿ ಔಷಧ ಕೊಟ್ಟು ಕಳುಹಿಸುತ್ತಿದಾರೆ.—ಇದೇ ತಿಂಗಳು ತಾ. ೧೭ ರಲ್ಲಿ ರಥೋತ್ಸವವೂ ೧೭ ರಲ್ಲಿ ಸ್ಪೆಷಲ್ ವ್ಯವಸಾಯ ಸಂಘದ ಉತ್ಕೃಷ್ಟ ಬೆಳೆಯ ಪ್ರದರ್ಶನವೂ ಜರುಗಿದವು. ಪ್ರದರ್ಶನಕ್ಕೆ ಉತ್ಕೃಷ್ಟ ಉರುಳಿಗಡ್ಡೆ, ಕುಂಬಳಕಾಯಿ, ಗೆಣಸು, ಕಂಟೆ ಇತ್ಯಾದಿಯಲ್ಲದೆ, ಹಸನಾದ ರೇಷ್ಮೆ, ಒಂದು ಜೋಡು ಉತ್ತಮ ಎತ್ತು, ಮೂರು ಕಾಲಿನ ಕೋಳಿ ಬಂದಿದ್ದವು. ಬೆಂಗಳೂರಿನಿಂದ ಡೆಪ್ಯುಟಿ ಕಮಿಷನರ ಸವಾರಿಯೂ, ಇಂಜಿನಿಯರೂ, ಸಬ್ ಡಿವಿಜನ್ ಆಫೀಸರ ಸವಾರಿಯೂ ಬಿತ್ತೈಸಿ, ಡೆಪ್ಯುಟಿ ಕಮಿಷನರ್ ಸಾಹೇಬರು ಉತ್ಕೃಷ್ಟವಾದ ವಸ್ತುಗಳಿಗೆ ಇನಾಮು ಕೊಡಲು ಗೊತ್ತುಮಾಡಿದ್ದಲ್ಲದೆ ಬೆಳೆದವರಿಗೂ ಬಂದ ಜನರಿಗೂ ಕೆಲ ಮಾತುಗಳಿಂದ ಪ್ರೋತ್ಸಾಹಪಡಿಸಿದರು. ಇನ್ನೂ ಅದೇ ಸಾಯಂಕಾಲ ಶ್ರೀ ಕೃಷ್ಣರಾಜೇಂದ್ರ ಶಾಲಿನಲ್ಲಿ ಯಕ್ಷಿಣೀ ವಿದ್ಯೆಯು ಬಂದ ಆಫೀಸರುಗಳ ಮುಂದೆ ನಡೆಯಿತು. ಹೊಸಕೋಟೆ ಬಾಯ್ಸ್ ಯೂನಿಯನ್ನವರ ನಾಟಕಕ್ಕೆ ಮಳೆಯು ಸಲುವಾಗಿ ಅಭ್ಯಂತರವಾಯಿತು. ಇದೆಲ್ಲಕ್ಕಿಂತ ಪೋಲೀಸ್ ಬಸ್ತುವಾರಿಯದ್ದ ಪ್ರದರ್ಶನದ ಸ್ಥಳದಲ್ಲಿ ಕೆಲವು ಉರುಳಿಗಡ್ಡೆಗಳ ಮುಕ್ತರಿಗಳೇ ಮಾಯವಾದವೆಂದು ಕೇಳುತ್ತೇನೆ. ಉತ್ತಮ ಬೆಳೆ ಬೆಳೆದವರಿಗೆ ಇನಾಮೂ ಸರ್ಟಿಫಿಕೇಟೂ ಮುಂದೆ ಕೊಡೋಣಾಗುವದು. ಈ ಊರ ಮುನಿಸಿಪಾಲಿಟಿಯು ಕುಚಿಯ ವಿಷಯ ತುಂಬಾ ನಿಗಾಕೊಟ್ಟರೆ ಊರಿಗೆಲ್ಲಾ ಮೇಲುಮಾಡಿದಂತಾಗುತ್ತೆ. ಯಾಕೆಂದರೆ ಮುನಿಸಿಪಾಲಿಟಿ ಲಾಂದ್ರಗಳು ಕೆಲ ಕೆಲವು ಸಲ ಒಳ್ಳೇ ಕತ್ತಲು ಹೊತ್ತಿನಲ್ಲಿ ಕತ್ತಲೆಯಾಗಿಯೇ ಉರಿಯುತ್ತವೆ. ಮುನಿಸಿಪಾಲಿಟಿಗೆ ಎಣ್ಣೆಯಿಲ್ಲವೋ, ಬತ್ತಿಯಿಲ್ಲವೋ, ಅಥವಾ ದೀಪಹಚ್ಚುವವನಿಲ್ಲದೆ ಹೀಗಾಗುತ್ತದೆಯೋ ತಿಳಿಯದು ಎ ವಿ. ಸ್ಕೂಲಿನ ಮುಂದೆ ಕಚೇರಿ, ಆಸ್ಪತ್ರೆ ಮುಂತಾದ ಸ್ಥಳಗಳಿಗೆ ಹೋಗುವ ಮುನಿಸಿಪಲ್ ರಸ್ತೆಯ ಮಧ್ಯೆ ಇರುವ ಸೇತುವೆಯು ಕೆಳಗೆ ಜನಗಳು ಮಾಡುವ ಗಲೀಜಿನ ವಾಸನೆಯೂ ಚರಂಡಿಯ ದುರ್ವಾಸನೆಯೂ ತಿರುಗಾಡುವ ಜನಗಳು ಕಷ್ಟದಿಂದ ಹೋಗುವಂತೆ ಮಾಡುತ್ತವೆ. ಸದರಿ ಮುನಿಸಿಪಾಲಿಟಿ ಮೆಂಬರುಗಳಿಗೆ ಗೊತ್ತಿದ್ದರೂ ಸುಮ್ಮನೇ ಇದಾರೆ. ಈ ವಿಷಯವನ್ನು ಮೆಂಬರುಗಳು ಸಮನಾಗಿ ಗಮನಿಸಿ, ಸರಿಯಾದ ಸ್ಥಿತಿಗೆ ತಂದಾರೆಂದು ಕೋರುತ್ತೇವೆ.—ಇಲ್ಲಿ ಸರಕಾರಿ ಕಾಡಗೋಡಿಯು ಹೊಸಕೋಟೆಯ ದಟ್ಟ ಭಂಡಿಗಳು ಇಪ್ಪತ್ತು ಇವೆ. ಈ ಬಂಡಿಯವರಿಗೆ ಒಂದೂ ಕ್ರಮವಿಲ್ಲದೆ ಜನಗಳನ್ನು ಛರ್ತಿಮಾಡಿ, ಮನಸೋ ಇಚ್ಛೆ ಬಾಡಿಗೆ ಮಾಡಿ ಜನರನ್ನು ತೊಂದರೆಪಡಿಸುವರು. ಅವುಗಳಿಗೆ ನಂಬರಾಗಲೀ, ಲಾಂದ್ರಗಳಾಗಲೀ ಇಲ್ಲ. ಇದನ್ನು ಸರಕಾರದವರು ಗಮನಿಸಿ ನೋಡಿ ಜನಗಳಿಗೆ ತೊಂದರೆ ಇಲ್ಲದಂತೆ ಮಾಡಿದರೆ ಹೋಗಿ ಬರುವ ಜನಗಳಿಗೆ ತುಂಬಾ ಪ್ರಯೋಜನವಾಗುತ್ತದೆ

ಚಿಕ್ಕಬಳ್ಳಾಪುರ.—ಕಳೆದ ಸೋಮವಾರ ಬೆಳಗ್ಗೆ ೮ ಘಂಟೆ ಹೊತ್ತಿನಲ್ಲಿ ಈ ಊರಿನ ಸರ್ಕಾರಿ ಬಾಲಿಕಾ ಪಾಠಶಾಲೆಯಲ್ಲಿ ಎಂಪೈರ್ ಡೇ ಮಹೋತ್ಸವವು ವಿಜೃಂಭಣೆಯಾಗಿ ನಡೆಯಿತು. ಈ ಸ್ಕೂಲಿನ ಮತ್ತು ಬ್ರಾಂಚ್ ಸ್ಕೂಲಿನ ಹುಡುಗಿಯರೂ, ಉಪಾಧ್ಯಾಯರೂ, ಸ್ಕೂಲ್ ಕಟ್ಟಡದಲ್ಲಿ ಬಂದು ಸೇರಿದರು ಈ ಸ್ಕೂಲಿನ ಹೆಡ್ ಮಾಸ್ಟರು ಚಿಕ್ಕ ಹುಡುಗಿಯರಿಗೆ ತಕ್ಕಂತೆ ಒಂದು ಉಪನ್ಯಾಸವನ್ನು ಮಾಡಿದರು. ಇದರಲ್ಲಿ ಎಂಪೈರ್ ಡೇ ಎಂದರೆ ಅರ್ಥವೇನು? ಇದಕ್ಕೆ ಈ ಹೆಸರು ಏಕೆ ಬಂತು? ಇದನ್ನು ಮೇ ೨೪ನೇ ತಾ. ದಿವಸ ಏತಕ್ಕೆ ನಡಿಸಬೇಕು? ಎಂಬ ವಿಷಯಗಳು ವಿಚಾರ ಮಾಡಲ್ಪಟ್ಟವು. ನಮ್ಮನ್ನು ಆಳಿದ ಚಕ್ರವರ್ತಿನಿಯಾದ ಕ್ವೀನ್ ವಿಕ್ಟೋರಿಯಾ ಮಹಾರಾಜ್ಞಿಯವರ ಜನ್ಮೋತ್ಸವ ದಿವಸವನ್ನೇ ಎಂಪೈರ್ ಡೇ ಎಂಬದಾಗಿ ಹೆಸರಿಟ್ಟು ನಡಿಸುವಂತೆ ನಮ್ಮ ಚಕ್ರವರ್ತಿಯವರು ಮಾಡಿದ ಆಜ್ಞಾನುಸಾರವಾಗಿ ಈ ಚಕ್ರಾಧಿಪತ್ಯದ ಸಕಲ ದೇಶಗಳಲ್ಲಿಯೂ ಪ್ರಜೆಗಳು ಈ ಉತ್ಸವವನ್ನು ಬಹು ವಿಜೃಂಭಣೆಯಿಂದ ಬೆಳೆಯುತ್ತಿದಾರೆ. ಇಂಥಾ ದೊಡ್ಡ ಚಕ್ರಾಧಿಪತ್ಯ, ಇಷ್ಟು ವಿಶೇಷವಾದ ಮತ್ತು ವಿಜಯಶೋಭಿರುವ ಇಂಥಾ ಸಾಮ್ರಾಜ್ಯ ಮಾತ್ರ ಈ ರಾಜ್ಯಭಾರದ ವಿವೇಕ, ಇವುಗಳನ್ನು ಯೋಚಿಸಿದರೆ ಈ ಉತ್ಸವವನ್ನು ಎಷ್ಟು ವಿಜೃಂಭಣೆಯಿಂದ ಆಚರಿಸಿದರೂ ಸಾಲದೆಂದು ಕಾಣುತ್ತದೆ. ಇಂಗ್ಲಿಷ್ ಜನರು ಪುರಾತನ ಕಾಲದಲ್ಲಿ ಕಾಡು ಮನುಷ್ಯರಾಗಿದ್ದರು, ಚರ್ಮವನ್ನು ಹೊದಿಯುತ್ತಾ ಮೈಗೆ ಬಣ್ಣವನ್ನು ಬಳಿಯುತ್ತಾ ಬೇಟೆಯಾಡುತ್ತಾ ಇದ್ದರು. ಆದರೆ ಅವರ ಬುದ್ಧಿ, ವಿವೇಕ, ಸಾಹಸಗಳಿಂದ ಬಹಳ ವಿದ್ಯಾವಂತರಾಗಿ ಪ್ರಪಂಚದಲ್ಲಿ ಅನೇಕ ದೇಶಗಳನ್ನು ಜಯಿಸಿ ಬಹು ವಿವೇಕದಿಂದ ಆಳುತ್ತಿದಾರೆ ಇವರಿಗೆ ಇರುವ ಗುಣಗಳಲ್ಲಿ ಅತ್ಯಂತ ಮುಖ್ಯವಾದದ್ದು ದೇಶಾಭಿಮಾನ ಇಂಗ್ಲಿಷಿನವರಲ್ಲಿ ಪ್ರತಿ ಒಬ್ಬನಿಗೂ ದೇಶಾಭಿಮಾನವಿರುವದರಿಂದ ತಮ್ಮ ದೇಶದ ವಿಷಯದಲ್ಲಿ ಸಮಯ ಬಂದಾಗ ಎಷ್ಟು ಕಷ್ಟವನ್ನಾದರೂ ಪಡುತ್ತಾರೆ. ಇಂಗ್ಲಿಷಿನವರು ಯುದ್ಧಕ್ಕೆ ಹೋಗುವ ಸಮಯದಲ್ಲಿ ಮುಂದುಗಡೆ ಒಂದು ಬಾವುಟವನ್ನು ಹಿಡಿದುಕೊಂಡು ಹೋಗುವ ಪದ್ಧತಿಯುಂಟು. ಈ ಬಾವುಟಕ್ಕೆ "ಯೂನಿಯನ್ ಜಾಕ್" ಎಂದು ಹೆಸರು. ಇದನ್ನು ನೋಡುತ್ತಲೇ ಪ್ರತಿ ಸಿಪಾಯಿಗೂ ದೇಶಾಭಿಮಾನವೂ ವೀರರಸವೂ ಹೆಚ್ಚುತ್ತವೆ. ಈ ಯೂನಿಯನ್ ಜಾಕ್ ಬಾವುಟವೇ ಅನೇಕ ಯುದ್ಧಗಳಲ್ಲಿ ಜಯ ಹೊಂದಿ ಅನೇಕ ದೇಶಗಳನ್ನು ಗೆದ್ದಿತೆಂದು ಹೇಳಬೇಕಾಗಿದೆ. ನೂರು ವರುಷಗಳ ಹಿಂದೆ ನಮ್ಮ ದೇಶವು ಅನೇಕ ಚಿಕ್ಕ ಚಿಕ್ಕ ರಾಜ್ಯಗಳಾಗಿ ಇದ್ದುಕೊಂಡು ಕೆಲವು ರಾಜರುಗಳಿಂದಲೂ ಕೆಲವು ನವಾಬರುಗಳಿಂದಲೂ ಆಳಲ್ಪಡುತ್ತಿತ್ತು. ಇವರುಗಳ ಅಂತಃಕಲಹಗಳಿಂದ ಯಾವಾಗಲೂ ಯುದ್ಧಗಳೂ ಆಗುತ್ತಲೇ ಇದ್ದವು. ಯುದ್ಧದ ಫಲವಾದ ಜನನಾಶ, ಕ್ಷಾಮ, ಪ್ಲೇಗು, ಇವು ಉಂಟಾಗಿ ದೇಶದಲ್ಲಿ ನೆಮ್ಮದಿಯಿಲ್ಲದೆ, ಪ್ರಜೆಗಳಿಗೆ ಅತ್ಯಂತ ನಷ್ಟ ಕಷ್ಟಗಳು ಸಂಭವಿಸುತ್ತಿದ್ದವು. ಈ ದೇಶವನ್ನು ಇಂಗ್ಲಿಷಿನವರು ಜಯಿಸಿದ ಮೇಲೆ ಯುದ್ಧಗಳು ನಿಂತು ಹೋಗಿ, ದೇಶವು ಕ್ಷೇಮವಾಗಿದೆ. ಮತ್ತು ವಿದ್ಯೆಯು ಅಭಿವೃದ್ಧಿಯಾಗುತ್ತಾ ಇದೆ. ಇಂಥಾ ಚಕ್ರಾಧಿಪತ್ಯದ ಪ್ರಜೆಗಳಾಗಿರುವದು ನಮ್ಮ ಅದೃಷ್ಟವೇ ಸರಿ. ಈ ದಿವಸದ ಮಹೋತ್ಸವವು ಇಂಗ್ಲೆಂಡ್ ದೇಶದಲ್ಲಿಯೂ, ಅಮೇರಿಕಾದಲ್ಲಿಯೂ, ಆಫ್ರಿಕಾದಲ್ಲಿಯೂ, ಆಸ್ಟ್ರೇಲಿಯಾ ಖಂಡದಲ್ಲಿಯೂ ಹೀಗೆಯೇ ನಡಿಸಲ್ಪಡುತ್ತದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇರುವ ಸೈನ್ಯವೆಲ್ಲಾ ಸೇರಿ ಕವಾಯತ್ ಮಾಡಿ, ಚಕ್ರವರ್ತಿಯವರ ಗೌರವಾರ್ಥವಾಗಿ ನೂರು ಒಂದು ಗುಂಡುಗಳನ್ನು ಉಡಾಯಿಸುತ್ತಾರೆ. ಸಾಯಂಕಾಲದ ಹೊತ್ತಿನಲ್ಲಿ ಆಟಗಳು, ಸಂಗೀತ, ನಾಟ್ಯಗಳು ನಡೆಯುವವು. ದೀಪೋತ್ಸವ ಮೊದಲಾದವುಗಳಲ್ಲಿ ವಿನೋದ ಪಡುತ್ತಾರೆ ಚಕ್ರವರ್ತಿಯವರ ಧರ್ಮಪ್ರಭುತ್ವದಲ್ಲಿ ಸುಖವಾಗಿರುವ ಪ್ರಜೆಗಳಾದ ಕಾರಣ ನಾವುಗಳು ಅವರಿಗೆ ಕೃತಜ್ಞರಾಗಿರಬೇಕು, ಅವರನ್ನು ಪ್ರೀತಿಸಬೇಕು, ಅವರಿಗೆ ದೀರ್ಘಾಯುಸ್ಸನ್ನು ದಯಪಾಲಿಸಬೇಕೆಂದು ದೇವರನ್ನು ನಾವು ಬೇಡಿಕೊಳ್ಳಬೇಕು, ಮತ್ತು ಈ ಚಕ್ರಾಧಿಪತ್ಯವು ಶಾಶ್ವತವಾಗಿ ಬಾಳಲಿ ಎಂದು ಮನಃಪೂರ್ವಕವಾಗಿ ಬಯಸಬೇಕು. ನಮ್ಮ ಸಂತೋಷವನ್ನು ತೋರಿಸುವದಕ್ಕಾಗಿ ನಾವು "ಜಯ ಜಯ" ಎಂದು ಗಟ್ಟಿಯಾಗಿ ಕೂಗಿ ಚಪ್ಪಾಳೆ ತಟ್ಟೋಣ. ಹೀಗೆ ಎಲ್ಲಾ ಹುಡುಗಿಯರೂ ಚಪ್ಪಾಳೆ ಹೊಡೆದು ಗಂಭೀರವಾಗಿ ಕೂಗಿಕೊಂಡರು. ಆಗ ಅವರೆಲ್ಲರಿಗೂ ಸಕ್ಕರೆಯು ಹಂಚಲ್ಪಟ್ಟಿತು.

ಅಲಾರ್ಕಾನ್ ಗವರ್ನರ್ ಮೋರೆಲೋಸ್ [illegible]

ಪೆ-ರೂ-ನಾ ಶೈತ್ಯದಿಂದುಂಟಾಗುವ ಸಮಸ್ತ ರೋಗಗಳಿಗೂ ತಕ್ಕ ಔಷಧವೆಂದೂ, ನಂಬಿಕೆಯಾದ ಆರೋಗ್ಯವನ್ನೂ ಸಹಜವಾದ ಕಾಯಪುಷ್ಟಿಯನ್ನೂ ಕೊಡತಕ್ಕ ಔಷಧವೆಂದೂ ಮೆಕ್ಸಿಕೋ ರಾಜ್ಯದಲ್ಲಿ ಪೂರ್ವದಿಂದ ಪಶ್ಚಿಮಕ್ಕೂ ಉತ್ತರದಿಂದ ದಕ್ಷಿಣಕ್ಕೂ ಎಲ್ಲಾ ಪ್ರದೇಶಗಳಲ್ಲೂ ಪ್ರಖ್ಯಾತವಾಗಿದೆ.



ಘನ ಮ್ಯಾನ್ಯುಯಲ್ ಅಲಾರ್ಕಾನ್ ಮೋರೆಲೋಸ್ ಗವರ್ನರು ಮೆಕ್ಸಿಕೋ

ಡಾ॥ ಎಸ್ ಬಿ ಹಾರ್ಟ್‌ಮನ್ [illegible] [34-9]

ಕೊಲಂಬಸ್, ಓಹಿಯೋ ಅಮೇರಿಕ

ಅಯ್ಯಾ — ನಾನು ಅನೇಕ ಜನರನ್ನು ನಿಮ್ಮ ಔಷಧಿ ಸೇವಿಸುವಂತೆ ಪ್ರೋತ್ಸಾಹಪಡಿಸಿದೆನು. ಅವರಿಗೆ ಅನುಕೂಲವಾದ ವಿಷಯವನ್ನು ಸಂತೋಷವಾಗಿ ತಿಳಿಸುತ್ತೇನೆ. ಇಂಥಾ ಫಲವನ್ನು ನಿಮ್ಮ ಔಷಧವು ಕೊಟ್ಟಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ.

ನಿಮ್ಮ ಪ್ರೀತಿಪಾತ್ರನಾದ
ಮ್ಯಾನ್ಯುಯಲ್ ಅಲಾರ್ಕಾನ್

ಮೋರೆಲೋಸ್,
ಡಿಸೆಂ ೫, ೧೯೦೫

ಪೆರೂನಾವಿನ ದೊಡ್ಡ ಪರೀಕ್ಷೆ

ಪ್ರತಿ ಒಂದು ದೇಶದ ಸನ್ನಿವೇಶವೂ [illegible] ಅದರದಕ್ಕೆ ಅನುಗುಣವಾಗಿಯೂ ವಿಜಾತಿಯವಾಗಿಯೂ ಇದ್ದುದರಿಂದ ಅಲ್ಲಲ್ಲಿಗೆ ತಕ್ಕ ರೋಗಗಳನ್ನು [illegible] ಇದೆ.

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಯನ್ನು ಪಡೆದಿರುವ ಪೆರೂನಾವಿನ ಗುಣಗಳನ್ನು ಪರಿಪೂರ್ಣವಾಗಿ ಪರೀಕ್ಷೆ ಮಾಡುವುದಕ್ಕೆ ಮೆಕ್ಸಿಕೋ ರಾಜ್ಯ ಒಂದೇ ಸಾಕಾಗಿದೆ. ಆ ರಾಜ್ಯದಲ್ಲಿ ಅತ್ಯಂತ ಶೈತ್ಯವೂ, ಅತ್ಯಂತ ಉಷ್ಣವೂ, ಸಾಮಾನ್ಯವೂ ಸಮಸ್ಥಿತಿಯೂ ಆದ ಹವಾಗುಣವುಳ್ಳ ಪ್ರದೇಶಗಳೆಲ್ಲಾ ವಿಶೇಷವಾಗಿರುತ್ತವೆ.

ಮೆಕ್ಸಿಕೋದಲ್ಲಿ ಬಹಳವಾಗಿ ಹುಟ್ಟುವ ಶೈತ್ಯರೋಗಗಳಿಗೂ ಉತ್ತರ ಅಮೇರಿಕ ರಾಜ್ಯಗಳಲ್ಲಿ ಹುಟ್ಟತಕ್ಕ ಶೈತ್ಯರೋಗಗಳಿಗೂ ಬಹಳ ವ್ಯತ್ಯಾಸವಿರುತ್ತದೆ.

ಚಳಿರಾಜ್ಯಗಳಲ್ಲಿ ಜನರಿಗೆ ವಿಶೇಷವಾಗಿ ಮೂಗು ಮತ್ತು ಗಂಟಲುಗಳಲ್ಲಿ ಶೀತ ಹುಟ್ಟಿ ಪ್ರಬಲವಾಗುವುವು. ಉಷ್ಣರಾಜ್ಯಗಳಲ್ಲಿ ಶೀತರೋಗಗಳೆಲ್ಲಾ ಮನುಷ್ಯನ ಹೊಟ್ಟೆಯೊಳಗಿರುವಂಥಾ ಅನ್ನಕೋಶ, ಪಿತ್ತಕೋಶ, ಮಲಕೋಶ, ಜಲಬಾಧೆಯ ಕೋಶ, ಈ ಮೊದಲಾದವುಗಳಿಗೆ ಶೈತ್ಯ ಹಿಡಿದು, ಆಂತರ್ಯವಾದ ನಾನಾ ರೋಗಗಳನ್ನು ಹುಟ್ಟಿಸುತ್ತೆ.

ಈ ಪ್ರಕಾರ ಅದರ ಲಕ್ಷಣಗಳು ನಾನಾ ಪ್ರಕಾರವಾಗಿದ್ದರೂ ರೋಗಕ್ಕೆ ಕಾರಣವೇನೋ ಒಂದೇ ಆಗಿದೆ. ಈ ಶೈತ್ಯವು ನೆತ್ತಿ ಹತ್ತಬಹುದು, ಗಂಟಲು ಹಿಡಿದಿರಬಹುದು, ಒಳ ಹೊಕ್ಕು ಕರುಳುಗಳನ್ನು ಅಂಟಿಕೊಂಡಿರಬಹುದು, ಆದರೂ ಶೀತವೇ ಅದಕ್ಕೆ ಕಾರಣವು.

ಶೀತರಾಜ್ಯಗಳಲ್ಲಿ ಹುಟ್ಟತಕ್ಕ ಶೈತ್ಯರೋಗಗಳಿಗೆ ಪೆರೂನಾವು ಎಷ್ಟು ಖಂಡಿತ ಗುಣಕಾರಿಯಾಗಿ ಸಂಬಂಧಿಸಿರುವದೋ ಅದೇ ರೀತಿ ಉಷ್ಣರಾಜ್ಯಗಳ ಶೀತರೋಗಗಳಿಗೂ ಮಹಾ ಗುಣಕಾರಿಯಾದ ಔಷಧವೆಂದು ಪ್ರಸಿದ್ಧಿಗೆ ಬಂದಿದೆ.

ಪೆರೂನಾ ಶೈತ್ಯರೋಗಗಳಿಗೆ ಪರಮೌಷಧವಾಗಿರುವುದು ಮಾತ್ರವೇ ಅಲ್ಲ, ಅದು ಮಹಾ ಬಲಕಾರಿಯಾದ ಮತ್ತು ಪುಷ್ಟಿ ಕೊಡುವ ಸೇವನಾ ಔಷಧವೆಂದೂ [illegible] ಹೆಸರಿರುತ್ತದೆ.

ಪೆರೂನಾದಲ್ಲಿ ಬಲವನ್ನೂ ಕಾಯಪುಷ್ಟಿಯನ್ನೂ ಕೊಡುವ ಈ ಗುಣಗಳಿರುವುದರಿಂದಲೇ ಉಷ್ಣರಾಜ್ಯಗಳವರು ಅದನ್ನು ವಿಶೇಷವಾಗಿ ಪ್ರೀತಿಸಿ ಉಪಯೋಗಿಸಿಕೊಳ್ಳುತ್ತಾರೆ.

ಪೆರೂನಾ ಸ್ವಭಾವಸಿದ್ಧವಾದ ಬಲ ಕೊಡುವ ಸೇವನಾ ಔಷಧವಾಗಿರುತ್ತದೆ. ಅದು ದೇಹದೊಳಗಿರತಕ್ಕ ನಾನಾ ಕೋಶಗಳ ಕಾರ್ಯಗಳನ್ನು ಕ್ರಮಕ್ಕೆ ಬರುವಂತೆ ಪುಷ್ಟಿಮಾಡತಕ್ಕದ್ದಾಗಿದೆ.

ಅದು ಒಳ್ಳೆ ಚಲನೆಗ ಚಟುವಟಿಕೆಯನ್ನು ಕೊಡುತ್ತದೆ. ತಿಂದ ಆಹಾರವನ್ನು ಅದು ಚನ್ನಾಗಿ ಅರಗಿಸಿ ಪರಿಪಕ್ವವಾಗಿ ದೇಹದ ಅಂಗಾಂಗಗಳಿಗೆ ವ್ಯಾಪಿಸುವಂತೆಯೂ ಅವನ್ನು ಬಲಪಡಿಸುವಂತೆಯೂ ಕೆಲಸಮಾಡುವುದು.

ಅದು ಬಲವನ್ನು ಕೊಟ್ಟು ಶರೀರ ಧರ್ಮವನ್ನು ವೃದ್ಧಿಮಾಡುವುದಲ್ಲದೆ ಬೇಜಾರನ್ನೂ ಮನಸ್ಸಿನ ಖಿನ್ನತೆಯನ್ನೂ ನಿವಾರಣೆ ಮಾಡುತ್ತದೆ. ಆದರೆ ಇದು ಮದ್ಯಪಾನಗಳಂತೆ ಕ್ಷಣಿಕವಾದ ಶಕ್ತಿಯನ್ನು ಕೊಡುವಂಥಾದ್ದಲ್ಲವು.

ಚಟುವಟಿಕೆಯೂ ಆರೋಗ್ಯವೂ

ಮಿ॥ ರಿಚರ್ಡ್ ಕ್ಯಾಂಪ್ಬೆಲ್, [illegible] ಬೀದಿ, ಬ್ರೂಕ್ಲಿನ್, ನ್ಯೂಯಾರ್ಕ್ ಅಮೇರಿಕ, ಈತ ಬರೆಯುವುದು —

“ ಹಸಿದವನಿಗೆ ಆಹಾರ ಹ್ಯಾಗೋ, ಬಾಯಾರಿದವನಿಗೆ ನೀರು ಹ್ಯಾಗೋ ಹಾಗೆ ಕಾಯಿಲೆಯವನಿಗೆ ಪೆರೂನಾವು ಇರುವದೆಂದು ತಿಳಿಯಿರಿ.

“ ಡಾಕ್ಟರುಗಳಿಗಿಂತಲೂ ಪೆರೂನಾವು ಅತಿಶೀಘ್ರವಾಗಿ ರೋಗವನ್ನು ವಾಸಿಮಾಡತಕ್ಕದ್ದೆಂದು ನನ್ನ ಮನಸ್ಸಿಗೆ ತೋರಿದೆ.

“ ಅನೇಕ ವರುಷಗಳ ತನಕ ನನಗೆ ಆಹಾರ ಜೀರ್ಣವಾಗುತ್ತಿರಲಿಲ್ಲ ; ನನ್ನ ಪಿತ್ತ ಕೋಶವು ಮಂದಗತಿಯಲ್ಲಿತ್ತು.

ಆಗಾಗ್ಗೆ ಮಲವ ಸಾಗದೆ ಕಟ್ಟಿ, ಭೇದಿಯಾಗುತ್ತಲೂ, ಕಿಬ್ಬೊಟ್ಟೆ ನೋಯುತ್ತಲೂ ಇದ್ದಿತು.

“ ನನಗೆ ಅನುಕೂಲ ಮಾಡಬೇಕೆಂದು ಡಾಕ್ಟರುಗಳು ತಮ್ಮ ಶಕ್ತ್ಯಾನುಸಾರ ಪ್ರಯತ್ನಪಟ್ಟರು. ಆದರೆ ನನಗಿದ್ದ ವ್ಯಾಧಿಯಾದ ರೋಗಲಕ್ಷಣವೇ ಅವರಿಗೆ ತಿಳಿಯದೆ ಹೋಯಿತೋ, ಅಥವಾ ಅವರು ಸರಿಯಾದ ಔಷಧವನ್ನು ಕೊಡಲಿಲ್ಲವೋ.

“ ಇನ್ನೆರಡು ವಾರಗಳಲ್ಲಿ ಪೆರೂನಾವು ನನಗೆ ವಾಸಿಮಾಡಿತು. ಅದು ನನ್ನನ್ನು ಚಟುವಟಿಕೆಯಾಗಿಯೂ ಆರೋಗ್ಯವಾಗಿಯೂ ಮಾಡಿತು. ನಿಜವಾಗಿಯೂ ನಿಮಗೆ ನಾನು ಕೃತಜ್ಞನಾಗಿರುವೆನು ”

ಸ್ನೇಹಿತನು ಪೆರೂನಾ ಸೇವಿಸೆಂದು ಹೇಳಿದನು

ಮಿ॥ ಬಾಬ್‌ಕ್ರೇಗ್, ಫೋರ್ಟ್‌ನೇಲ್, ಟೆನ್ನಿಸಿ ಅಮೇರಿಕ, ಈತ ಬರೆಯುತ್ತಾನೆ —

‘ ಎರಡು ವರುಷಕಾಲ ನನ್ನ ನೆತ್ತಿಗೆ ಶೀತ ಹಿಡಿದಿತ್ತು. ಒಬ್ಬ ಸ್ನೇಹಿತನ ಬಂದು ಪೆರೂನಾ ಸೇವಿಸು ಎಂದು ನನಗೆ ಹೇಳಿದನು. ಅದರಿಂದ ನನಗೆ ಸಂಪೂರ್ಣವಾಗಿ ವಾಸಿಯಾಯಿತೆಂದು ಅತ್ಯಂತ ಸಂತೋಷಪಡುತ್ತೇನೆ ’

ಏಳು ವರುಷದ ಶೈತ್ಯರೋಗವು

ಮಿ॥ ಅಂಬ್ರೋಸ್, [illegible] ನೇ ಬೀದಿ, ಕ್ಯಾಸ್ಟನ್ ಪಟ್ಟಣ, ಮಿಸೂರಿ, ಅಮೇರಿಕ, ಈತ ಬರೆಯುತ್ತಾನೆ —

‘ ನನಗೆ ವಾಸಿಯಾದದ್ದಕ್ಕೆ ನಿಮ್ಮನ್ನು ಎಷ್ಟು ವಂದಿಸಿದರೂ ತೀರದು. ನಾನು ಏಳು ವರುಷಗಳ ವರೆಗೆ ಶೀತ ನೆಗಡಿ ಕೆಮ್ಮು ಅನುಭವಿಸಿ, ನೂರಾರು ದ್ರವ್ಯವನ್ನು ಖರ್ಚುಮಾಡಿ ಔಷಧಿಗಳನ್ನು ಸೇವಿಸಿದೆನು. ಆದರೂ ನನ್ನ ಶೈತ್ಯರೋಗವು ಹೆಚ್ಚಾಯಿತೇ ವಿನಾ ಕಡಮೆಯಾಗಲಿಲ್ಲ.

‘ ನನಗೆ ಔಷಧಿ ಕೊಡುತ್ತಿದ್ದವರಲ್ಲಿ ಕೆಲವು ಡಾಕ್ಟರುಗಳು ಬಹಳ ಪ್ರಖ್ಯಾತಿಪಡೆದವರಾಗಿದ್ದರೂ ನನಗೆ ಅತಿ ಕಠಿಣವಾದ ಕೆಮ್ಮು ಇದ್ದೇ ಇದ್ದಿತು. ಈ ಕೆಮ್ಮಿನ ಕಷ್ಟವನ್ನು ನಾನು ವಾಸಿಮಾಡಿಕೊಂಡೇನೆಂದು ಭರವಸೆ ಇರಲೇ ಇಲ್ಲ.

“ ಆಗ ನಾನು ಒಂದು ಬಾಟ್ಲು ಪೆರೂನಾ ಕೊಂಡು ತಂದು, ಅದರಲ್ಲಿ ಹೇಳಿರುವ ಕ್ರಮದ ಪ್ರಕಾರ ಆ ದಿನ ರಾತ್ರಿ ಸೇವಿಸಿದೆನು. ಮರುದಿನ ಬೆಳಿಗ್ಗೆಯೇ ನನಗೆ ಸ್ವಲ್ಪ ಗುಣವಾದಂತೆ ತೋರಿತು.

ಮೂರು ದಿನ ಸೇವಿಸಿದ ಮೇಲೆ ನನಗೆ ತುಂಬಾ ಅನುಕೂಲವಾಯಿತು. ಆಗಲಾದರೋ ನಾಲ್ಕನೆ ಸೀಸೆಯ ಔಷಧವನ್ನು ಮುಗಿಸಿದ ಮೇಲೆ ನಾನು ಸಂಪೂರ್ಣವಾಗಿ ಆರೋಗ್ಯಹೊಂದಿರುತ್ತೇನೆ.

‘ ಈ ಸರ್ವ ಶ್ರೇಷ್ಠವಾದ ಔಷಧವನ್ನು ಸೇವಿಸುವಂತೆ ಪ್ರತಿ ಒಬ್ಬನಿಗೂ ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುವೆನು ”

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ

ವಿಳಾಸ — ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್ ಡಿಪ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

[illegible] ೧೫ [illegible] ೧೯೦೮ [illegible]

ಸ್ಥಳ	ಪ್ಲೇಗು ಹೊಸ ಕೇಸು	ಪ್ಲೇಗು ಮರಣ	ಕಾಲರಾ ಹೊಸ ಕೇಸು	ಕಾಲರಾ ಮರಣ
ಬೆಂಗಳೂರು ಪಟ್ಟಣ	0	0	0	0
ಮೈಸೂರು ”	[illegible]	0	1	1
ಬೆಂಗಳೂರು ಡಿಸ್ಟ್ರಿಕ್ಟು	3	3	0	0
ಮೈಸೂರು ”	26	21	60	63
ಕೋಲಾರ್ ”	*	*	*	*
ಕೋಲಾರ್ ಚಿನ್ನದ ಗಣಿಗಳು	0	0	*	*
ತುಮಕೂರು ಡಿಸ್ಟ್ರಿಕ್ಟು	[illegible]	[illegible]	[illegible]	[illegible]
ಹಾಸನ ”	1	0	71	48
ಚಿತ್ರದುರ್ಗ	0	0	0	0
ಕಡೂರ್	3	1	0	0
ಶಿವಮೊಗ್ಗ	*	*	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	33	27	193	123

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ವೈಶಾಖ ಬಹುಳ ತ್ರಯೋದಶಿ ಗುರುವಾರದಿಂದ ಜ್ಯೇಷ್ಠ ಶುದ್ಧ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಮೇ ಮತ್ತು ಜೂನ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ವೈಶಾಖ ಮಾಸ
28	ಗುರು *	ತ್ರಯೋದಶಿ	7 52	ಭ	38 28	16
29	ಶುಕ್ರ ,,	ಚತುರ್ದಶಿ	3 30	ಕೃ	39 2	17
30	ಶನಿ •	ಅಮಾವಾಸ್ಯೆ	5 20	ರೋ	40 52	18
31	ರವಿ ↕	ಪಾಡ್ಯ	[illegible]	ಮೃ	44 4	19
1	ಚಂದ್ರ ,	ಬಿದಿಗೆ	7 56	ಆ	48 24	20
2	ಕುಜ ¶	ತದಿಗೆ	11 8	ಪು	53 39	21
3	ಬುಧ ⊤	ಚೌತಿ	15 15	ಪು	59 46	22

* ಮಾಸಶಿವರಾತ್ರಿ, , ಸರ್ವ ಅಮಾವಾಸ್ಯೆ ↕ ಚಂದ್ರೋದಯ, ಅಗ್ನಿನಕ್ಷತ್ರನಿವೃತ್ತಿ , [illegible] ¶ [illegible] ⊤ ಪಂಚಮಿ ವ್ರತ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಾಳ್ಗಿ ಅಕ್ಕಿ ಪಲ್ಲಾ ೧ಕ್ಕೆ ರೂ	[illegible]	[illegible]
ಕಂಬು ತಿ ಅಕ್ಕಿ ಅಗಲ	[illegible]	[illegible]
” [illegible]	[illegible]	[illegible]
ಜುಮ್ಲಾ ಅಕ್ಕಿ	[illegible]	[illegible]
ಸಣ್ಣಕ್ಕಿ ಅಗಲ	[illegible]	[illegible]
” ದುಂಡು	[illegible]	[illegible]
ತೊಗರಿ ಬೇಳೆ ಪಲ್ಲಾ ೧ಕ್ಕೆ	[illegible]	[illegible]
” ದುಂಡು	[illegible]	[illegible]
ಕೈ [illegible] ಪಲ್ಲಾ ೧ಕ್ಕೆ	[illegible]	[illegible]
ರಾಗಿ	[illegible]	[illegible]
ಜೋಳ	[illegible]	[illegible]
ಹುರುಳಿ ಪಲ್ಲಾ ೧ಕ್ಕೆ	[illegible]	[illegible]
ಬಿಳೇ ಅವರೆ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಕಡಲೆ	[illegible]	[illegible]
ಎಳ್ಳು [illegible] ೧ಕ್ಕೆ	[illegible]	[illegible]
ಹುರುಳಿ	[illegible]	[illegible]
[illegible] ಸೇರಿಗೆ	[illegible]	[illegible]
[illegible] ಮಣ ೧ಕ್ಕೆ	[illegible]	[illegible]
[illegible]	[illegible]	[illegible]
ದುಂಡು	[illegible]	[illegible]
ಬೆಲ್ಲ ದೊಡ್ಡ ಅಚ್ಚು	[illegible]	[illegible]
ಒಳ್ಳೆ [illegible] ಮಣ ೧ಕ್ಕೆ	[illegible]	[illegible]
[illegible] ”	[illegible]	[illegible]
ಕೊಬ್ಬರಿ ಪಲ್ಲಾ ೧ಕ್ಕೆ	[illegible]	[illegible]
ಉಪ್ಪು ”	[illegible]	[illegible]
ಹುಣಸೇ ಹಣ್ಣು	[illegible]	[illegible]
” ಹಳೇದು	[illegible]	[illegible]
ತುಪ್ಪ ಮಣ ೧ಕ್ಕೆ	[illegible]	[illegible]
ಸೀಮೆಯೆಣ್ಣೆ ಟಿನ್ ೧ಕ್ಕೆ	[illegible]	[illegible]
ತೆಂಗಿನಕಾಯಿ ೧೦೦ಕ್ಕೆ	[illegible]	[illegible]
ಅಳಲೇಕಾಯಿ ಮಣ ೧ಕ್ಕೆ	[illegible]	[illegible]
ಅಂಟುವಾಳದ ಕಾಯಿ ಮಣ ೧ಕ್ಕೆ	[illegible]	[illegible]
ಚಿನ್ನ (ಪವನ್) ತೊಲ	[illegible]	[illegible]
” ” ಪಸಿಡಿ	[illegible]	[illegible]
” ” [illegible] ೧ಕ್ಕೆ	[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	[illegible]	[illegible]

Printed and Published by the Rev E W Thompson, M A, Propriator and Manager, Wesleyan Mission Press, Mysore 28/5/1908







FLASHNO-
2









Vol. 7

6-6-1907

TO

28-5-1908

Vol. 7

6-6-1907

To

28-5-1908

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೯ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ | ಮೈಸೂರು—ಸನ್ ೧೯೦೮ ನೇ ಇಸವಿ ಜನೂ ತಾರೀಖು ೨ ನೇ ಗುರುವಾರ. | ಸಂಚಿಕೆ ೧

BASEL MISSION WEAVING ESTABLISHMENT, 59-16

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಶನ್ (ಬಟ್ಟೆ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ವೋರ್ಸ್ಟೆಡ್) ಟ್ವೀಡ್ ನಮೂನೆಯ ಕೋಟು ಇಜಾರುಗಳ ಚೌಕಳಿ ಬಟ್ಟೆಗಳೂ, ಶರ್ಟಿಂಗ್ ಯಾನೆ ಕಮೀಜಿನ ಬಟ್ಟೆಗಳೂ, ಕೋಟಿಂಗ್ ಯಾನೆ ಕವಿಸಾಕಿನ ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ, ಟೇಬಲ್ ಕ್ಲೋತ್ ಯಾನೆ ಮೇಜುವಸ್ತ್ರಗಳೂ, ಟುವಾಲು ವಗೈರೆಗಳೂ ಸಾಬೂನುಕಾಗಿ ತಯಾರಿಸಲ್ಪಟ್ಟು ಯಾವಾಗಲೂ ಚಿಲ್ಲರೆಯಾಗಿಯಾಗಲೀ ಸಗಟು ಆಗಿಯಾಗಲೀ ಮಾರಾಟಕ್ಕೆ ತಯಾರಿರುತ್ತವೆ.



ಒಳ್ಳೇ ಕಮಿಶ್ಶನ್ :—ರೂಪಾಯಿ ೧೦೦ ರ ಮೇಲೆ ವಸ್ತ್ರಗಳನ್ನು ತೆಗದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾದೀತು. ಹೆಚ್ಚಿನ ವಿವರ ಖುದ್ದಾಗಿ ಯಾ ಕಾಗದ ಮೂಲಕ ತಿಳುಕೊಳ್ಳಬಹುದು.

ನಮೂನೆ ಯಾ ಮಾದರಿಗಳು :—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಕಳುಹಿಸಲ್ಪಡುವವು.

ಶರ್ತ :—ನಗದಾಗಿ ಇಲ್ಲವೆ ವಸ್ತ್ರಗಳು ವ್ಹಿ. ಪಿ. ಟಪ್ಪಾಲ ಮೂಲಕ ಕಳುಹಿಸಲ್ಪಡಬೇಕಾಗಿದ್ದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು.

ವಿಶೇಷ ಲಕ್ಷಿಸತಕ್ಕದ್ದು :—ಈ ನಮ್ಮ ವಸ್ತ್ರಗಳಿಗೆ ಇಲ್ಲಿ ಕಾಣಿಸಿರುವ "ಟ್ರೇಡ್ ಮಾರ್ಕ್" ಎಂಬ ವ್ಯಾಪಾರದ ಗುರ್ತಿನ ಲೇಬಿಲ್ ಯಾನೆ ಚೀಟು ಹಚ್ಚಿರುತ್ತದೆ. ಈ ಗುರ್ತಿನ ಚೀಟುಗಳು ಇಲ್ಲದವುಗಳೆಲ್ಲಾ ಶಾಜಾ ವೋರ್ಸ್ಟೆಡ್ ವಸ್ತ್ರಗಳಲ್ಲವೆಂದು ತಿಳಿಯತಕ್ಕದ್ದು.

[illegible] ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ವಸ್ತ್ರಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು.

ವಿಳಾಸ:—BASEL MISSION WEAVING ESTABLISHMENT,
MANGALORE, S. CANARA.

AMRUTANJAN DEPOT, 16 OAK-LANE, BOMBAY. [17-15]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ :—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮ್ ಮತ್ತು ಘಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ ಕ್ಕೆ ಕಿಮ್ಮತು ೦-೮-೦. ಪೋಸ್ಟು ಖರ್ಚು ೦-೪-೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಖಜ್ಜಿ ವಗೈರೆ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ, ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦-೪-೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ—ಅಜೀರ್ಣಕ್ಕೆ ಹಪ್ಪು ೧ ಕ್ಕೆ	೧—೪—೦	ಬಾಲುಸುಮಾರಿಗುಟಿಕ—ಹೆಂಗಸರ ಹೊಟ್ಟೆನೋವಿಗೆ	೧—೦—೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧—೦—೦	ಪ್ರಮೇಹಹ ಮಿಶ್ರಣ—ಪ್ರಮೇಹಕ್ಕೆ	೧—೬—೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ ಕ್ಕೆ	೦—೧೨—೦	ಕಫಹರಿ—ಕಫ, ಕೆಮ್ಮು, ಕ್ಷಯ, ಇತ್ಯಾದಿ	೧—೪—೦
ಚೇಳುಕಡಿತದ ಮದ್ದು	೦—೮—೦	ಸುಂದರೀ ತೈಲ—ಮೋರಿಗೆ	೦—೮—೦
ದಂತಶೂಲಹರಿ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಕಣ್ಣುಗಳಿಗೆ	೦—೪—೦
ಕರ್ಣಶೂಲಹಾರಿ—ಕಿವಿನೋವಿಗೆ	೦—೬—೦	ಅರಿವಾಕಳ ಎಣ್ಣೆ ಬಾಟ್ಲಿ ೧ ಕ್ಕೆ	೦—೮—೦
ಬಚ್ಚೆಯ ಮುಲಾಮು	೦—೩—೦	ವಾತಹ ಮಿಶ್ರಣ	೧—೦—೦
ದಂತಮಂಜನ—ಹಲ್ಲುಗಳಿಗೆ	೦—೨—೦	ಕಸ್ತೂರಿ ಮಾತ್ರೆ ೩೦ ಗುಟಿಕೆ	೦—೧೦—೦
ಕೇಶವರ್ಧಿನೀ ತೈಲ—ಕೂದಲಿಗೆ	೦—೦—೦	ರುಂಬೂಲ ಗುಟಿಕೆ ೩೦ ಗುಟಿಕೆ	೦—೮—೦
ಬುದ್ಧಿಯ ಮಾತ್ರೆ—ಜ್ಞಾಪಕಕ್ಕೆ	೦—೮—೦	ರೋಗಹಾರಿ	೦—೮—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು ಪೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ.

ಕಾರ್ಡ್ ಸೈಜು ೪ × ೩.

ಫೋಟೋ ತೆಗೆಯುವ

ಫೋಟೋ ಕ್ಯಾಮೆರಾ.

84-42

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇವರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ :—

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟು ಕಾಲಬಾದೇವಿ, ಮುಂಬಯಿ.

ಜ್ವರಹರಿ. 44-5



ಇದು ಸಾಧಾರಣ ಜ್ವರ, ಹಳೇಜ್ವರ, ಮೋರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಬಿ. ವೆಂಕಟ್ಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೬೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೬೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ.; ೧—೮ ರೂ., ರೂ. ೨—೧೨ ಆ.; ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫ ಬಿಡಲಾಗುವದು.

ಓ. ಮಂಕಪೂರ್ಣಚ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗುಸರು ತಿಂಗಳಿಗೆ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. [illegible] ಜ್ವರಹರಿ ಎಂಬ ಔಷಧದಂತೆಯೇ [illegible] ಹೊಂದಿರುವದು.

[illegible] ಅಸಿಸ್ಟೆಂಟ್ ಸರ್ಜನ್ [illegible]—[illegible] ಬಹಳ [illegible] ನಾನೂ ನನ್ನ ಹಾಸ್ಪಿಟಲ್‌ನಲ್ಲಿ [illegible] ಅನೇಕ ವರುಷಗಳಿಂದಲೂ [illegible] ರೋಗಿಷ್ಠರಿಗೆ ಕೊಡುತ್ತೇನೆ. [illegible] ರೋಗವು ಗುಣವಾಗುತ್ತದೆ. [illegible] ಬಹು ಒಳ್ಳೇ ಔಷಧ [illegible] ಬರೆದಾರೆ.

ಈ ಎರಡು ಔಷಧಗಳೂ [illegible]
[illegible]

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟರ್."

ವ್ಯವಹಾರನಿರ್ಣಯ—ಪ್ರಕಟಗಳು ೫೦೦ ಹಿಂದೂ ಖಟಲೆಯ ಆಕ್ಟುಗಳು, ೬೫ ಖಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೬೩ ಅರ್ಜಿ ಇವುಗಳ ಮಾದರಿಗಳೂ ಉಳ್ಳ ಕನ್ನಡ ಲಾ ಪುಸ್ತಕ. ಕ್ರಯ ವಿ. ಪಿ. ಸೇರಿ ೧ ರೂ. ೧೨ ಆಣೆ. [40-6]

ಕನ್ನಡ ಲಾ ರಿಪೋರ್ಟರ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ೧—೨—೦ ಮುಂಗಡ, ಯಾ, ವಿ. ಪಿ. ಬಿಡಿಪತ್ರಿಕೆ ಒಂದಕ್ಕೆ ೦—೩—೦

ಇವುಗಳನ್ನು ಪೇಕ್ಷಿಸುವವರು « ಎಂ. ಮಲ್ಲಾರಿಯಪ್ಪ, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯುವುದು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ.	೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸ್ಟ್ ಸೇರಿ	ರೂ.	೧—೧೪—೦
" " " " "		೦—೧೪—೦

ಚಂದಾದಾರರುಗಳೆಲ್ಲರೂ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಮಹಾ ಬಾಧಾಪಹಾರಿಣಿಯು.

48-2

ಇದನ್ನು ಸೋಲಿಸುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆನೆಂಟ್‌ಯವರ ಯಷ್ಟೀಕ್ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ನರ್ಸುಗಳು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಾರೆ, ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಕಳತ ಗಂಟ್ಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಕೀಲರೋಗಗಳು, ಬೆನ್ನುನೋವು, ಕೀಲುಗಳ ಕಂಡುಕಟ್ಟುಗಳ ನೋವು, ಚಳಿಕಡಿದ ನೋವು, ಹಲ್ಲುನೋವು ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೇಲುಸ್ಥಾನವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಳಾಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಸಮಾನವಾದ ತೈಲವು ಬೇರೊಂದಿಲ್ಲವೆಂದು ಹೇಳಿರುತ್ತಾರೆ.

ಕ್ರಯ ಸೀಸೆ ೧ ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸನ್,

೩೩, ವೇದಮುಟಿಲ್ಲ ಬೀದಿ, ವೇಪೇರಿ, ಮದರಾಸ್.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ. ಹಾಗೆ ಆಗದಿದ್ದರೆ ಡೋನ್ಸ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿವಸ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ಹಿಡಿಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು, ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುವನ್ನು ಇದರಿಂದ ತಿಳಿಯಬಹುದು, ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ ; ಪಿತ್ತ ; ಪಿತ್ತಜ್ವರ ; ಅಜೀರ್ಣ ; ಅಗ್ನಿಮಾಂದ್ಯ ; ಗಾಬರಿ ; ಅಶಕ್ತಿ ; ಎದೆಯು ತಲ್ಲಣಿಸುವುದು ; ತಲೆತಿರುಗುವುದು ; ತಲೆನೋವು ; ಹೊಟ್ಟೆಯುಬ್ಬರ ; ಹುಳಿತೇಗಿನ ಹೊಟ್ಟೆನೋವು ; ಹೆಂಗಸರ ವ್ಯಾಧಿಗಳು ; ಇವೇ ಮೊದಲಾದುವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಬಿಡುವದು.



(೧೨ ಆಣೆ ಬುಡ್ಡಿ ಪರಿಮಾಣ.)

ಡೋನ್ಸ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನು ಕಕ್ಕಿಸುವುದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವಸ್ತ್ರಸ್ಥಾನಗಳನ್ನು ಹಿತವಾಗಿಯೂ ಹಿತವಾಗಿಯೂ ಇಟ್ಟು, ಶಸ್ತ್ರದ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [93-40]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ, ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು, ಅಥವಾ ಡೋನ್ಸ್ ಪಿ. ಓ. ಬಾಕ್ಸ್ ೫೦, ಬೊಂಬಾಯಿ.—ಇವರಲ್ಲಿ ದೊರೆಯುವುವು.

CHAMBERLAIN'S PAIN BALM

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.

1-23



ಬೆನ್ನೆಲುಬಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜುವ ಕಣೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲಿನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕ್ಯೊಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ

ಈಗಲೇ ಶೀಮೆಯಿಂದ ಬಂದಿದೆ.

117-82

೩,೦೦ ಹಾಸನ ಟೋಪಿ ಕೊಲಿಯರ್ ಸುಪೀರಿಯರ್ ಉಲನ್ ದಾರ ಮಾತ್ರ ಇವೆ.—ಬಾರಿ, ಕಮ್ಮಿ ಕ್ರಯ.

೧ ಟೋಪಿಯಾಗುವ ಉಲನ್ ದಾರಕ್ಕೆ	೦—೪—೦
೧೦ ಟೋಪಿಯಾಗುವ ಬಂಡಲಿಗೆ ೧ ಕ್ಕೆ	೩—೪—೦
ಕೋಕ್ಕೆ ಸೂಜಿ ೧ ಕ್ಕೆ	೦—೧—೩
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೦
ಒಂಬತ್ತು ಸ್ಟ್ಯಾಂಪು ಕಳುಹಿಸಿ ೫೦ ಪೋಸ್ಟ್ ಕಾರ್ಡು ಪಡೆರಿ	
ನಂಬರು ೧ನೇ ಹಾಸನ ಟೋಪಿ ಡಜನ್ ಒಂದಕ್ಕೆ	೧೩—೦—೦

ವಿಳಾಸ.—

ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ಇದನ್ನು ನೋಡಿದರೆ ಬಹು ಆಶ್ಚರ್ಯ ಪಡುವಿರಿ.

38-6

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು. ೩ ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಸಾವಿರಾರು ಏಕಸ್ತ್ರ ಪ್ರತಿಗಳಿಕ್ಕದ್ದು. ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಆದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವುದು. ಇದರ ಕ್ರಯ ಎರಡೇ ರೂಪಾಯಿ ವಿ. ಪಿ. ಮೂಲಕ ರೂ. ೨—೩—೦. ಇದು ಅಥವಾ ಪದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಓದಿದವರೂ, ಅಶ್ಚರ್ಯವಾನಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಎನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ನೋಡಿ.

ನಮ್ಮ ವಿಳಾಸ:— ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೊ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-16

೧. ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆನೋವು, ಸಂದುಗಳ ನೋವು, ಮೈ ಕೈಕಾಲು ಸೆಳತ (ಭಾರ), ಮೈ ಸಡಿಲು, ಶೀತವಾತಗಳ ಬಾಧೆ, ಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ಸಿಕ್ಕಿ, ಅರೋಚಕ, ಇವಲ್ಲಾ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಧೆಗಳೂ ಬಾರದೆ ಶರೀರ ಪುಷ್ಟಿಗಳ ಬಲವಾಗುತ್ತಾ ಇದ್ದು, ಶುಕ್ಲವನ್ನು ವೃದ್ಧಿಪಡಿಸಿ, ರಕ್ತದಲ್ಲಿ ದೋಷವನ್ನು ನೀಗಿ ಶುದ್ಧಿ ಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುದೋಷ, ಮಕ್ಕಳ ಎಳೆಪ್ಪು, ಜ್ವರ, ನಡ್ಡುಜ್ವರ, ಕೈಕಾಲುಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಕೊಂಡಿಗೆ ಗುರಿಯಾಗುವುದಿಲ್ಲ. ಬಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನವನ್ನು ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಶೀಶೆಗೆ ೪ ಆಣೆ; ೫ ಶೀಶೆಗೆ ೧ ಶೀಶೆ ಹೆಚ್ಚು. ೧ ರಿಂದ ೧೨ ಶೀಶೆ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

೧೯೦೬ ರಿಂದ ೧೯೦೭ ವರೆಗೆ,

ಕಾಲದ ಪರೀಕ್ಷೆ!

ಮೂವತ್ತೆ(೩೦) ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 33-10

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವ್ಯಾಧಿ ಪರಿಹಾರಕವೆಂದು, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ.

ಆದವರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಆಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ:—

ಶ್ವಾಸಕೋಶದ ಅಶಕ್ತತೆಗಳು ; ನಾನಾ ತರದ ಕೆಮ್ಮಲು ;

ಸಕಲವಿಧ ಕೃಶತ್ವಗಳು, ನಾನಾಸಬಂಧಗಳ ಕ್ಷೀಣತೆ ,

ಆಹಾರದಲ್ಲಿ ಅರುಚಿ,

ಇದಲ್ಲದೆ ತಂದೆಗೂ ಮಗುವಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ.

ಕೈಸೋಕದ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ

ಬಿಕರಿಯಾಗುವುದು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್ ಇಂಗ್ಲೆಂಡ್.

ಈ ಮನುಷ್ಯನ ಇರುವ ಔಷಧವನ್ನೇ ಕೊಂಡುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-23

ಒಳ್ಳೇ ಟೋಪಿಗಳು ಯಾವುವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ! ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅನೇಕ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಬುದ್ಧಿಗಾಗಿ ನಾವೇ ವಿಂತಾ ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ, ಕೆಂಪು, ಕಪ್ಪು, ಬೆರಕೆ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ. ೩ ಆ.; ೧ ರೂ. ೪ ಆ.

ರೇಶ್ಮೆ ಹುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ. ೨ ರೂ.

ದಾರದ ಟೋಪಿಗಳು ೦ ರೂ. ೧೨ ಆ.; ೧ ರೂ. ೪ ಆ., ೧ ರೂ. ೬ಆ.

ಉಸುಕಿನ ಟೋಪಿಗಳು ೧ ರೂ. ೪ ಆ. ೧ ರೂ. ೬ ಆ.

ಕೊಸುಗಳ ಟೋಪಿ, ಸೂರ್ಥಿ ವೇಹೋಡು, ಅಥವಾ ವೇಷಿಸುಡು ಕತ್ತಿನ ಪಟ್ಟಿ, ಇವುಗಳ ಕ್ರಯಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ವೃತ್ತಾಂತ ಪತ್ರಿಕೆ.

:o:

೨೯ ೧೯೦೮ ನೇ ಇಸವಿ ಜೂನ್ ತಾ|| ೪ ನೇ ಗುರುವಾರ

ನಮ್ಮ ಹೊಸ ವರ್ಷವು.

"ವೃತ್ತಾಂತ ಪತ್ರಿಕೆ" ಯು ೨೦ ನೇ ವರ್ಷವು ಈ ಸಂಚಿಕೆಯೊಡನೆ ಪ್ರಾರಂಭವಾಗಿದೆ. ಲಾಗಾಯಿತಿನಿಂದಲೂ ನಮಗೆ ಚಂದಾದಾರರಾಗಿಯೂ ಬಾತ್ಮಿದಾರರಾಗಿಯೂ ಇದ್ದುಕೊಂಡು, ವಿಶೇಷ ಪ್ರೀತಿಯನ್ನೂ ಉತ್ಸಾಹವನ್ನೂ ತೋರಿಸುತ್ತಾ ಬಂದಿರುವವರನ್ನು ಮನಃಪೂರ್ವಕವಾಗಿ ವಂದಿಸಿ, ಕಳೆದ ವರ್ಷಗಳಿಗಿಂತ ಈ ಹೊಸ ವರ್ಷದಲ್ಲಿ ಅಭಿವೃದ್ಧಿಯು ಕಡಮೆಯಾಗಲಾರದೆಂದು ನಂಬಿ ನಿರೀಕ್ಷಿಸುವವರಾಗಿದ್ದೇವೆ.

ಈ ಸಂದರ್ಭದಲ್ಲಿ ಈ ವರ್ತಮಾನಪತ್ರಿಕೆಯ ಕರ್ತವ್ಯವನ್ನೂ ಇದರ ಉದ್ದೇಶಗಳನ್ನೂ ಖಂಡಿತವಾಗಿಯೂ ಸ್ಪಷ್ಟವಾಗಿಯೂ ಪುನಃ ತಿಳಿಸಬೇಕೆಂದು ಕುತೂಹಲಪಡುವೆವು.

ಮೊದಲನೆಯದಾಗಿ, ಹಿಂದುಸ್ಥಾನವು ಐಶ್ವರ್ಯ ನೆಮ್ಮದಿ ಸುಖಸಂತೋಷಾದಿಗಳನ್ನು ಪಡೆದು ಅಭಿವೃದ್ಧಿಹೊಂದುತ್ತಾ ಬರಬೇಕಾದರೆ ಅದಕ್ಕೆ ಬ್ರಿಟಿಷ್ ಚಕ್ರಾಧಿಪತ್ಯದ ಸಂಬಂಧವು ಇದ್ದೇ ಇರಬೇಕು. ಕಾಲಾನುಕಾಲದಲ್ಲಿ ಹಿಂದುಸ್ಥಾನವು ಇಂಗ್ಲಿಷ್ ಪ್ರಭುತ್ವದಿಂದ ಪ್ರತ್ಯೇಕವಾಗಿ, ಸಂಪೂರ್ಣ ಸ್ವತಂತ್ರಾಧಿಕಾರವನ್ನು ಸಂಪಾದಿಸಿಕೊಳ್ಳುವಂತೆ ಆದೀತೋ ಇಲ್ಲವೋ ನಾವು ಹೇಳಲಾರೆವು. ಅಂಥಾ ಕಾಲವು ಬರಬಹುದಾದರೂ ಇನ್ನೂ ಅನೇಕ ವರ್ಷಗಳು ಕಳೆಯಬೇಕಾಗಿರುತ್ತವೆ. ಅವಕ್ಕೆ ಹಿಂದುಸ್ಥಾನವು ವಿಲಾಯತಿಯ ಸಹವಾಸ ಸಾಂಗತ್ಯಗಳಲ್ಲಿ ಇನ್ನೂ ಅನೇಕ ವರ್ಷಗಳು ಮತ್ತು ತಲೆಗಳು ಕಳೆಯುವ ತನಕ ಇದ್ದೇ ತೀರಬೇಕಾದ ಆವಶ್ಯಕತೆಯುಂಟು. ಮಸಲಾ, ಇಂಗ್ಲಿಷ್ ಜನರೆಲ್ಲಾ ನಾಳೆಯೇ ಹಿಂದುಸ್ಥಾನವನ್ನು ಬಿಟ್ಟುಹೋಗಿ, ಇಂಗ್ಲಿಷ್ ಪಾರ್ಲಿಮೆಂಟಿನವರು ಹಿಂದುಸ್ಥಾನವನ್ನು ಕುರಿತು—"ನಿಮಗೆ ತೋರಿದಂತೆ ನಡೆಯಿರಿ, ನಿಮ್ಮ ದೇಶವನ್ನು ನೀವೇ ಸ್ವತಂತ್ರವಾಗಿ ಆಳಿಕೊಳ್ಳಿರಿ, ಇನ್ನು ಮುಂದಕ್ಕೆ ನಾವು ನಿಮ್ಮ ಮೇಲೆ ಯಾವ ವಿಧವಾದ ಅಧಿಕಾರವನ್ನೂ ನಡಿಸುವುದಿಲ್ಲ" ವೆಂದು ಹೇಳುತ್ತಾರೆಂದು ಇಟ್ಟುಕೊಳ್ಳೋಣ. ಆಗ ಹಿಂದುಸ್ಥಾನದ ಪರಿಣಾಮವೇನಾಗುವುದೆಂದು ತಿಳಿಯಬೇಕು? ಈ ರಾಷ್ಟ್ರದ ಸ್ಥಿತಿಗತಿಯು ಮಹಾ ಘೋರವೂ ಪರಿತಾಪಕರವೂ ಆದೀತೆನ್ನುವುದಕ್ಕೆ ಸಂದೇಹವಿಲ್ಲ. ಗಲಿಬಿಲಿಯೂ ಕಚ್ಚಾಟಗಳೂ ಪ್ರಾರಂಭವಾಗುವವು. ಸಾಮಾನ್ಯಪ್ರಜೆಗಳ ವಿದ್ಯೆಗೆ ಭಂಗವೂ, ರೈತಪ್ರಜೆಗಳಿಗೆ ಅಪಾರವಾದ ಕಷ್ಟನಷ್ಟಗಳೂ ಸಂಭವಿಸುತ್ತವೆ.

ಇಷ್ಟೆಲ್ಲಾ ಅನರ್ಥಗಳುಂಟಾಗುವವೆಂದು ನಾವು ತಿಳಿದಿರುವದರಿಂದಲೇ ಹಿಂದುಸ್ಥಾನಕ್ಕೂ ಇಂಗ್ಲಿಷ್ ರಾಜ್ಯಕ್ಕೂ ಪರಸ್ಪರವಾದ ಪ್ರೀತಿಸ್ನೇಹಾದಿಸಂಬಂಧಗಳಿರಬೇಕೆಂದು ಕೋರುವವರಾಗಿದ್ದೇವೆ. ಎಂದರೂ ಅವಿವೇಕಿಗಳೂ ಕ್ರೂರಿಗಳೂ ಅಧಮರುಗಳೂ ಆಗಿರುವಂಥಾ ಇಂಗ್ಲಿಷ್ ಜನರು ಹಿಂದುಸ್ಥಾನದವರಲ್ಲಿ ಅಸೂಯೆ ಸ್ಪರ್ಧೆಯನ್ನು ಉಂಟುಮಾಡಿದರೂ, ಉತ್ತಮ ಸದ್ಗುಣಯುಕ್ತರೂ ಮಹನೀಯರೂ ಆದ ಇಂಗ್ಲಿಷ್ ರಾಜತಂತ್ರಜ್ಞರು ಈ ರಾಷ್ಟ್ರಕ್ಕೆ ಮಾಡುತ್ತಾ ಬಂದಿರುವ ನಾನಾ ಉಪಕಾರಗಳನ್ನು ಹಿಂದುಸ್ಥಾನದವರು ಸ್ಮರಿಸದೆ ಇಲ್ಲ—ಎಂದು, ಗವರ್ನ್‌ಮೆಂಟನ್ನು ದುರಾತ್ಮರ ದೌಷ್ಟ್ಯಕ್ಕನುಸಾರವಾಗಿ ನಾವು ದೂಷಿಸಲಾರೆವು. ಹಿಂದೆ ವೈಸರಾಯರಾಗಿದ್ದ ಲಾರ್ಡ್ ನಾರ್ತ್‌ಬ್ರೂಕ್‌ರವರು—"ವಿಲಾಯತಿಯು ಹಿಂದುಸ್ಥಾನವನ್ನು ಆಳುವುದು ಸ್ವಪ್ರಯೋಜನಾಪೇಕ್ಷೆಯಿಂದಲ್ಲ, ಇತರ ಕ್ಷೇಮಾಭ್ಯುದಯಕ್ಕಾಗಿಯೇ" ಎಂದು ಹೇಳಿರುವ ಮಾತು ಯಥಾರ್ಥವಾಗಿರುತ್ತದೆ. ಈ ರಾಷ್ಟ್ರದವರೆಲ್ಲಾ ಒಂದಾಗಬೇಕು. ಅವರು ಸ್ವರಾಜ್ಯಾಧಿಕಾರವನ್ನು ನಡಿಸುವುದಕ್ಕೆ ಯೋಗ್ಯತಾಸಿದ್ಧಿಯನ್ನು ಪಡೆಯಬೇಕು ಎಂಬುವುದು ಇಂಗ್ಲಿಷರ ಉದ್ದೇಶ; ಇದಕ್ಕಾಗಿಯೇ ಅವರು ಸಾಹಸಪಡುತ್ತಿರುವರು. ಈ ಅರ್ಥಕ್ಕೆ ಯಾವ ಕಾರ್ಯ ನಡೆದರೂ ನಾವು ಆನಂದಪಡುವೆವು. ಆದರೆ ಹಿಂದುಸ್ಥಾನಕ್ಕೆ ಸ್ವರಾಜ್ಯ ಹೊಂದುವುದು ಬಹಳ ದೂರದಲ್ಲಿರುತ್ತದೆಂಬುವುದನ್ನು ನಾವು ಮರೆಯಬಾರದು.

ಎರಡನೆಯದಾಗಿ, ಸರ್ವಪಿತನಾದ ದೇವರು ಒಬ್ಬನೇ ಎಂತಲೂ, ಆತನು ನೀತಿಯುಕ್ತನೂ ಪ್ರೀತಿಪರನೂ ಆಗಿದ್ದಾನೆಂತಲೂ, ಯೇಸುಕ್ರಿಸ್ತನು ದೇವರ ಚೈತನ್ಯಸ್ವಭಾವಾದಿಗಳನ್ನು ಮನುಷ್ಯರಿಗೆ ತಿಳಿಯಪಡಿಸಿರುವಂತೆ ಇನ್ನ್ಯಾರೂ ತಿಳಿಸಿರುವುದಿಲ್ಲವೆಂತಲೂ, ದುರಾತ್ಮಗಳನ್ನಾಗಲಿ ಅಧಿದೇವರುಗಳನ್ನಾಗಲಿ ಪೂಜಿಸಬೇಕೆಂದು ಬೋಧಿಸುವಂಥಾ ಮತ್ತು ದೇವರು ಅಯೋಗ್ಯವಾದ ಅಥವಾ ಪಾಪಕರವಾದ ಕೃತ್ಯಗಳನ್ನು ಮಾಡಿದನೆಂದು ತಿಳಿಸುವಂಥಾ ಮತಭಕ್ತಿಯಿಂದ ಜನರಿಗೂ, ಸಂಸಾರಗಳಿಗೂ, ಜನಾಂಗಗಳಿಗೂ ಕೇಡಲ್ಲದೆ ಮೇಲುಂಟಾಗಲಾರದೆಂತಲೂ, ಹಿಂದುಸ್ಥಾನದಲ್ಲಿ ಸಕಲರೂ ಪರಿಶುದ್ಧನಾದಂಥಾ ದೇವರೊಬ್ಬನೇ ಎಂಬ ಭಕ್ತಿಯನ್ನು ಪಡೆದು ಕಾರ್ಯತಃ ಪ್ರಕಾಶಪಡಿಸದೆ ಇರುವ ತನಕ ಐಕಮತ್ಯವು ಉಂಟಾಗಲಾರದೆಂತಲೂ ನಾವು ನಂಬಿರುತ್ತೇವೆ. ಇದಲ್ಲದೆ ಯೇಸುಕ್ರಿಸ್ತನು ತಿಳಿಸಿರುವಂಥಾ "ದೇವರನ್ನು ಪ್ರೀತಿಸು, ನಿನ್ನಂತೆಯೇ ನಿನ್ನ ನೆರೆಯವನನ್ನು ಕಾಣು" ಎಂಬೀ ಎರಡು ಆಜ್ಞೆಗಳನ್ನೂ ಹಿಂದುಸ್ಥಾನದವರು ಕಲಿತು ಆಚರಿಸುವತನಕ ಒಂದಾಗಲಾರರು.

ಈ ಪತ್ರಿಕೆಯು ನೀತಿಗೂ ಗೌರತೆಗೂ ವಿವೇಕಕ್ಕೂ ವಿರೋಧವಿಲ್ಲದಿರುವಂಥಾ ಸಮಸ್ತ ಬಾತ್ಮಿಗಳನ್ನೂ ಅಂಗೀಕರಿಸುವುದೆಂತಲೂ, ಬಾತ್ಮಿದಾರರು ಯಾವ ಮತದವರೇ ಆಗಿದ್ದರೂ ಎಂಥಾ ಅಭಿಪ್ರಾಯಗಳನ್ನು ಉಳ್ಳವರಾಗಿದ್ದರೂ ನಿರಾಕರಿಸುವುದಿಲ್ಲವೆಂತಲೂ ಸಂತೋಷದಿಂದ ತಿಳಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ತಿರುಮಕೂಡ್ಲು ನರಸೀಪುರದಲ್ಲಿ ಕೆಲವರು ರೇಷ್ಮೆ ಕೈಗಾರಿಕೆ ಸಂಘವೆಂಬ ಪರಸ್ಪರ ಸಹಾಯಕ ಕಂಪನಿಯನ್ನು ಮಾಡಿಕೊಂಡಿದ್ದಾರೆ.

***

ಬೆಂಗಳೂರು ಡಿಸ್ಟ್ರಿಕ್ಟಿನ ಸಿವಿಲ್ ಸರ್ಜನರಾಗಿರುವ ಮೆ|| ಅಪ್ಪಯ್ಯನವರು ಈ ತಿಂಗಳ ಆಖೈರಿಗೆ ಕೆಲಸವನ್ನು ಬಿಟ್ಟು ಪೆನ್‌ಷನ್ ಪಡೆಯುವರು.

***

ಡಾಕ್ಟರ್ ಮರ್ಸಿಫ್ ಎಂಬೊಬ್ಬ ಪಾರ್ಸಿಯವರನ್ನು ಸರ್ಕಾರದವರು ಕೋಲಾರ ಚಿನ್ನದ ಗಣಿಗಳ ಹೆಲ್ತ್ ಆಫೀಸರಾಗಿ ನೇಮಕ ಮಾಡಿರುತ್ತಾರೆ.

***

ಹುಣಸೂರು ತಾಲ್ಲೂಕಿಗೆ ಸೇರಿದ ಅಂಕನಹಳ್ಳಿಯಲ್ಲಿ ಒಬ್ಬ ಲಿಂಗಾಯಿತನನ್ನು ಕೊಂದುಹಾಕಿದರೆಂದು ಪೋಲೀಸಿನವರು ಗಂಡಸರಿಬ್ಬರನ್ನು ರಾಜಧಾನಿಗೆ ಹಿಡಿದುತಂದಿರುತ್ತಾರೆ.

***

ರಾಜಧಾನಿಯಲ್ಲಿ ಈ ಸಲ ನವರಾತ್ರಿ ಉತ್ಸವ ಬೆಳೆದ ವೇಳೆ ಪ್ರಜಾಪ್ರತಿನಿಧಿ ಸಭೆಯು ಅಕ್ಟೋಬರ್ ತಾ. ೮ ನೇ ಗುರುವಾರ ಪ್ರಾರಂಭವಾಗುವುದೆಂದು ಸರ್ಕಾರದವರು ಗೊತ್ತುಮಾಡಿದ್ದಾರೆ.

***

ಬೆಂಗಳೂರಿನಲ್ಲಿ ಕಳೆದ ವಾರ ೧೮ ವರ್ಷದ ಒಬ್ಬ ಹುಡುಗನು ಗಿಡಹತ್ತಿ ಬೀಳುವಂತಾದಾಗ, ಹತ್ತಿರವಿದ್ದ ವಿದ್ಯುಚ್ಛಕ್ತಿಯ ತಂತಿಯನ್ನು ಹಿಡುಕೊಂಡನು. ಆ ಕೂಡಲೆ ಮೃತಪಟ್ಟನೆಂದು ತಿಳಿದುಬಂದಿದೆ.

***

ಮೈಸೂರು ಸರ್ಕಾರದ ಎಕ್ಸೈಸ್ ಕಾನೂನಿಗೆ ವಿರೋಧವಾದ ಕೃತ್ಯ ನಡಿಸಿದವರೆಂದು ದಸ್ತಗಿರಿ ಮಾಡಲ್ಪಟ್ಟವರನ್ನು ಎಕ್ಸೈಸ್ ಅ' ಇನ್ಸ್‌ಪೆಕ್ಟರು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದೆಂಬ ಅಧಿಕಾರ ಕೊಡಲ್ಪಟ್ಟಿದೆ.

***

ರಜದ ಮೇಲೆ ಹೋಗಿದ್ದ ಕರ್ನಲ್ ಜೆ. ಸ್ಮಿತ್‌ರವರು ನಾಳೆ ಬೆಂಗಳೂರಿಗೆ ವಾಪಸು ಬಂದು, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಅಧಿಕಾರಗಳನ್ನು ಯಥಾಪ್ರಕಾರ ವಹಿಸಿಕೊಳ್ಳುವವರಾಗಿದ್ದಾರೆಂದು ತಿಳಿಯುವುದು.

***

ಕೋಲಾರ ಚಿನ್ನದ ಗಣಿಗಳ ಪೈಕಿ ಬಾಲಘಾಟ್ ಗಣಿಯ ಒಗಲ್ ಷಾಫ್ಟ್ ಎಂಬ ಗಣಿಯಲ್ಲಿ ಕಳೆದ ೩೧ ನೇ ತಾ. ಭಾನುವಾರ ಮಧ್ಯಾಹ್ನ ಭಯಂಕರವಾದ ಅಪಾಯವು ಜರುಗಿತು. ಇಬ್ಬರು ಕೂಲಿಯವರು ಮೃತಪಟ್ಟರು; ಏಳು ಜನರಿಗೆ ಏಟು ಆಗಿದೆ.

***

ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಕೋರಗೆರೆ ಗ್ರಾಮದಲ್ಲಿ ಒಬ್ಬ ಹೆಂಗಸು ಪ್ರಸವಕಾಲದಲ್ಲಿ ಎರಡು ಗಂಡು ಮಕ್ಕಳನ್ನೂ ಒಂದು ಹೆಣ್ಣು ಮಗುವನ್ನೂ ಹೆತ್ತಿರುವಂತೆಯೂ, ತಾಯಿಯೂ ಮಕ್ಕಳೂ ಸಂರಕ್ಷಿತವಾಗಿರುವಂತೆಯೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

***

ಕಳೆದ ತಿಂಗಳ ೨೪ನೇ ತಾ. ಭಾನುವಾರದ ದಿನ ಬೆಂಗಳೂರು ಪೇಟೆ ತರಗಿನಪೇಟೆ ಚಿಕ್ಕ ಮಂಡಿಪೇಟೆ ಸೇರಿ. ಹಿಂದೂ ವರ್ತಕರು ಹಿಂದೂ ಬಡಬಗ್ಗರಿಗೂ ಮಹಮ್ಮದೀಯ ಸಾಹುಕಾರರು ಮಹಮ್ಮದೀಯ ಬಡಬಗ್ಗರಿಗೂ ಅಂದರೆ ಸುಮಾರು ಎಂಟು ಸಾವಿರ ಮಂದಿಗೆ ಸುಖ ಭೋಜನ ಮಾಡಿಸಿದರೆಂದು ತಿಳಿಯುವುದು.

***

ಆನೇಕಲ್ ತಾಲ್ಲೂಕಿನಲ್ಲಿ ಬನ್ನೇರು ಘಟ್ಟದಿಂದ ರಾಗಿಹಳ್ಳಿ ಮೊದಲಾದ ಆಸ್‌ಪಾಸ್ ಗ್ರಾಮಗಳಲ್ಲಿ ಒಂದು ಹೆಣ್ಣು ಹುಲಿಯು ಎರಡು ಮರಿಗಳ ಸಹಿತ ಸಂಚಾರಮಾಡುತ್ತಾ ಜನರಿಗೂ ಗೋವುಗಳಿಗೂ ಗಾಬರಿಯನ್ನುಂಟುಮಾಡುತ್ತಿರುವುದರಿಂದ ಅದನ್ನು ಕೊಲ್ಲುವವರಿಗೆ ಇನಾಮು ಕೊಡುವುದಾಗಿ ಸರ್ಕಾರದವರು ತಿಳಿಸಿದ್ದಾರೆ.

***

ಶ್ರೀಮನ್ಮಹಾರಾಜರವರು ಪರಿವಾರ ಸಹಿತ ನೆನ್ನೆ ಸಾಯಂಕಾಲ ನೀಲಗಿರಿಯಿಂದ ನಂಜನಗೂಡು ಮಾರ್ಗವಾಗಿ ಮೋಟಾರ್ ಗಾಡಿಯಲ್ಲಿ ರಾಜಧಾನಿಯನ್ನು ತಲಪುವವರಾಗಿದ್ದರು. ಅರಸುಮಕ್ಕಳೂ ದರ್ಬಾರಿಗಳೂ ಸರ್ದಾರ್ ಸಹಿತ ಮಾರ್ಗಾರ್ಥವಾಗಿ ಕರೀಕಲ್ಲು ತೊಟ್ಟಿಯಲ್ಲಿ ೫ ಗಂಟೆಗೆ ಮುಂಚೆ ಕಾದಿರಬೇಕೆಂದು ತಾಕೀತು ಆಗಿದ್ದಿತು.

***

ರಾಜಧಾನಿಯಲ್ಲಿ ವಾಂತಿಭೇದಿ ಉಪದ್ರದ ಹಾವಳಿಯು ತಪ್ಪಲಿಲ್ಲ. ಹೆಲ್ತ್ ಆಫೀಸರು ಜನರ ಮನೆಗಳಿಗೆ ಪ್ರವೇಶಿಸಿ ಸೇದುವ ಬಾವಿಗಳಿಗೆಲ್ಲಾ ಸುಣ್ಣವನ್ನೂ ಕ್ರಿಮಿನಾಶಕವಾದ ಪುಡಿಗಳನ್ನೂ ಹಾಕಿಸಿದ್ದಲ್ಲದೆ ಬಚ್ಚಲಕ್ಕಾಗಿರುವ ಕೆರೆಕೊಳಗಳಿಗೂ ನೂರಾರು ರೂಪಾಯಿನ ಔಷಧ ಪುಡಿಗಳನ್ನೂ ಸುಣ್ಣವನ್ನೂ ಸುರಿಸಿ ಶುದ್ಧಿಮಾಡಿಸಿರುತ್ತಾರೆ. ಆದರೂ ವಾರಕ್ಕೆ ೪—೫ ಜನರು ಈ ರೋಗದಿಂದ ಮೃತಪಡುತ್ತಿರುವರು.

ರಾಜಧಾನಿಯ ಬೀದಿಗಳಲ್ಲಿ ರಾತ್ರಿಹೊತ್ತು ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವುದಕ್ಕೆ ಎಲ್ಲಾ ಕಡೆಗಳಲ್ಲೂ ತಂತೀ ಕಂಬಗಳನ್ನು ನೆಡುತ್ತಿದ್ದಾರೆ. ಕರ್ಜನ್ ಪಾರ್ಕಿನಲ್ಲಿ ಕಟ್ಟಿರುವ ವಿದ್ಯುಚ್ಛಕ್ತಿಯ ಮನೆಯೊಳಗೆ ಯಂತ್ರಗಳನ್ನು ತಂದು ಹೂಡಿಸುವ ಪ್ರಯತ್ನ ನಡೆಯುತ್ತಲಿದೆ. ಬಹುಶಾ ಸೆಪ್ಟೆಂಬರ್ ತಿಂಗಳಿಗಿಂತಲೂ ಮುಂಚೆಯೇ ಈ ದೀಪಗಳು ಹಚ್ಚುವುದಕ್ಕೆ ಪ್ರಾರಂಭವಾಗುವದೆಂದು ಕಾಣುವುದು.

***

ಮೊನ್ನೆ ಮಂಗಳವಾರ ಸಾಯಂಕಾಲ ಸುಮಾರು ೬ ಗಂಟೆಗೆ ಮಹಾಮಾತೃಶ್ರೀಯವರೂ, ಮಹಾರಾಣಿಯವರೂ, ರಾಜವರ್ಗದವರೂ ನೀಲಗಿರಿಯಿಂದ ಬೆಂಗಳೂರು ಮಾರ್ಗವಾಗಿ ಸ್ಪೆಷಲ್ ರೈಲಿನಲ್ಲಿ ರಾಜಧಾನಿಗೆ ದಯಮಾಡಿದರು. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು. ಅರಸುಗಳೂ ಅಧಿಕಾರಿಗಳೂ ಪುರಾಧ್ಯಕ್ಷರೇ ಮೊದಲಾದ ದೊಡ್ಡ ಮನುಷ್ಯರೂ ರೈಲ್ ಸ್ಟೇಷನಿನಲ್ಲಿ ಕಾದಿದ್ದು, ಅವರಿಗೆ ಸುಖಾಗಮನವನ್ನು ಬಯಸಿದರು.

***

ಹಿಪ್ಪೊಡ್ರೋಂ ಎಂಬೊಂದು ಸರ್ಕಸ್ ಕಂಪನಿಯು ಮುಂದಿನ ವಾರ ರಾಜಧಾನಿಗೆ ಬರುವುದರಲ್ಲಿದೆ. ಕಳೆದ ವಾರ ಬೆಂಗಳೂರಿನಲ್ಲಿ ಈ ಕಂಪನಿಯ ಮೃಗಾಲಯಕ್ಕೆ ಸೇರಿದ ಒಂದು ಹೇಸರಕತ್ತೆಯು ಬೋನಿನಿಂದ ತಪ್ಪಿಸಿಕೊಂಡು, ಹಿಡಿಯುವುದು ಬಹಳ ಶ್ರಮವಾಯಿತು. ಅದರ ಪಾಲಕನಾದ ಜೆ|| ಜಾರ್ಜ್ ಎಂಬಾತನು ಅದನ್ನು ಹಿಡಿದು ಬೋನಿನಲ್ಲಿ ಹಾಕಿದನು. ಆದರೆ ಅದು ಆತನ ಮೈಕೈಯನ್ನೆಲ್ಲಾ ಕಚ್ಚಿ ಗಾಯಮಾಡಿದ್ದರಿಂದ ಈಗ ಆತನು ಆಸ್ಪತ್ರೆಯೊಳಗೆ ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದಾನೆಂದು ತಿಳಿದುಬಂದಿದೆ.

***

ಮೈಸೂರಿನಲ್ಲಿರುವ ಸರ್ಕಾರಿ ಇಂಜಿನಿಯರ್ ಸ್ಕೂಲಿನಿಂದ ಈ ವರುಷ ಸಬ್ ಓವರ್‌ಸಿಯರ್ ಕೆಲಸಕ್ಕೆ ಯೋಗ್ಯರಾದವರು ೧೭ ಮಂದಿಯೂ, ತಾಲ್ಲೂಕ್ ಮೇಸ್ತ್ರಿ ಕೆಲಸಕ್ಕೆ ಯೋಗ್ಯರಾದವರು ೧೨ ಮಂದಿಯೂ ತೇರ್ಗಡೆಹೊಂದಿರುತ್ತಾರೆ. ಚಾಲ್ತಿ ವರುಷದಲ್ಲಿ ಅಂದರೆ ೧೯೦೮—೦೯ ನೇ ಸಾಲಿನಲ್ಲಿ ಮೇಲ್ಕಂಡ ಕೆಲಸಗಳಿಗೆ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುವುದಕ್ಕೆ ಸರ್ಕಾರದವರು ೨೦ ಮಂದಿಯನ್ನು ಆ ಸ್ಕೂಲಿಗೆ ಸೇರಿಸಿಕೊಂಡಿರುವರು.

***

ರಾಜಧಾನಿಯ ಟೌನ್ ಹಾಲ್ ಎದುರಿನಲ್ಲೂ, ಮಾರ್ಕೆಟ್ಟಿನ ಮುಂಭಾಗದಲ್ಲೂ ಬಹಳ ಹಣ ಮುಟ್ಟಿಸಿ ಕಟ್ಟಿಸಿರುವ ಎರಡು ದೊಡ್ಡ ಗಡಿಯಾರಗಳೂ ಅಲಂಕಾರಮಾತ್ರವಾಗಿ ನಿಂತಿರುವದಲ್ಲದೆ ಗಂಟೆ ಹೊಡೆಯುವದಾಗಲಿ, ನಡೆಯುವುದಾಗಲಿ ನೋಡುವುದು ಅಪರೂಪವಾಯಿತು. ಅವೆರಡೂ ಪುರಜನರು ನೋಡಿ ಪರಿಹಾಸ್ಯಮಾಡುವಂಥಾ ಸ್ಥಿತಿಯಲ್ಲಿರುವವು. ಈ ಸಂಗತಿಯು ಅಧಿಕಾರಿಗಳ ಕಣ್ಣಿಗೆ ಬಿದ್ದು ಮನಸ್ಸಿಗೆ ಹತ್ತದೇ ಹೋಗಿರುವುದಕ್ಕೆ ಕಾರಣವೇನೋ ತಿಳಿಯದು. ಈ ಪಟ್ಟಣದಲ್ಲಿ ಗಡಿಯಾರಗಳನ್ನು ಸರಿಮಾಡತಕ್ಕವರು ಇಲ್ಲವೆಂದು ಕೇಳಿಕೂಡದು.

***

ಮೆ|| ಎಸ್. ಎ. ಎಸ್. ಕೆಂದಪನ್, ೩೯ ದಂಡುಪಾಸಪೇಟೆ, ಬೆಂಗಳೂರು ಸಿಟಿ, ಇವರು ತಿಳಿಸುವುದೇನೆಂದರೆ—"ಮೆ|| ಬಿ. ನರಸಿಂಗರಾಯರ ದೇಹದಲ್ಲಿ ಅನಾರೋಗ್ಯ ಸಂಭವಿಸಿದ್ದರಿಂದ ಈಗ ಸುಮಾರು ೭ ವಾರಗಳಿಂದಲೂ 'ಸೂರ್ಯೋದಯ ಪ್ರಕಾಶಿಕೆ' ಎಂಬ ಪತ್ರಿಕೆಯನ್ನು ನಿಲ್ಲಿಸುವದಕ್ಕೆ ಕಾರಣ ಉಂಟಾಯಿತು. ಸದರಿ ಮೆ|| ನರಸಿಂಗರಾಯರು ಇನ್ನು ಮುಂದೆ ಮೇಲ್ಕಂಡ ಪತ್ರಿಕೆಯನ್ನು ನಡಿಸುವುದಕ್ಕೆ ಆವಶ್ಯಕವಾಗಿ ವಿಶಿಷ್ಟ ಅಧಿಕಾರವನ್ನು ಬಹುಮಾನಪೂರ್ವಕವಾಗಿ ನನಗೆ ವಹಿಸಿಕೊಟ್ಟಿರುವದರಿಂದ ನಾನು ಇನ್ನು ೩-೪ ವಾರಗಳೊಳಗಾಗಿ ಈ ವರ್ತಮಾನಪತ್ರಿಕೆಗಾಗಿ ಮುದ್ರಣಯಂತ್ರ ಮುಂತಾದ ವಿಶಿಷ್ಟ ಸಲಕರಣೆಗಳನ್ನು ಸಿದ್ಧಪಡಿಸಿಕೊಂಡು, ಚಂದಾದಾರರು ಮೊದಲಾದವರಿಗೆ ಪತ್ರಿಕೆಯನ್ನು ತಪ್ಪದೆ ಕಳುಹಿಸುವೆನು" ಎಂಬುದೇ.

***

ಈ ಸಲ ಶ್ರೀಮನ್ಮಹಾರಾಜರವರ ವರ್ಧಂತೀ ಉತ್ಸವವು ತಾ. ೧೦ ನೇ ಬುಧವಾರ ಜರುಗುವುದು. ಆ ದಿವಸ ಸ್ಪೆಷಲ್ ರೈಲಿನಲ್ಲಿ ಸುಮಾರು ೮೦ ಮಂದಿ ಯೂರೋಪಿಯನ್ ಸರ್ದಾರರೂ ದೊರೆಸಾನಿಗಳೂ ಶ್ರೀಮನ್ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುವುದಕ್ಕಾಗಿ ಬರುವರು. ಆ ದಿನ ಬೆಳಿಗ್ಗೆ ಅರಮನೆಯಲ್ಲಿ ಆರತಕ್ಷತೆಯೂ, ದರ್ಬಾರೂ, ದೇವಸ್ಥಾನಗಳಲ್ಲಿ ಅನೇಕ ಉತ್ಸವ ಶ್ರೇಯಃಪ್ರಾರ್ಥನಾದಿಗಳೂ, ಸಾಯಂಕಾಲ ಪರ್ಯಂತಿಕಟ್ಟೆಯ ಮೆರವಣಿಗೆ ಸೈನ್ಯದ ಕವಾತುಗಳೂ ನಡೆಯುವವು. ದಿವಾನರೇ ಮೊದಲಾದ ಅಧಿಕಾರಿಗಳೆಲ್ಲಾ ಸೋಮವಾರ ಮಂಗಳವಾರಗಳಲ್ಲಿ ಬರುವವರಾಗಿದ್ದಾರೆ. ಯೂರೋಪಿಯನ್ ಸರ್ದಾರರಿಗೆ ಪೋಲೋ ಮ್ಯಾಚ್, ಕುದುರೆ ಜೂಜು ಮೊದಲಾದ ವಿನೋದಗಳು ಏರ್ಪಡಿಸಿರುತ್ತವೆ. ಅವರೆಲ್ಲಾ ತಾ. ೨೦ ನೇ ಶನಿವಾರದ ತನಕ ರಾಜಧಾನಿಯಲ್ಲಿರುವರೆಂದು ತಿಳಿದುಬಂದಿದೆ.

***

ಬೆಂಗಳೂರು ಪಟ್ಟಣದ ಹಲಸೂರು ಕೋಟೆ ಮೊಕದ್ದಮೆಗಳನ್ನು ಉಸ್ತುವಾರಿ ಇಟ್ಟು ಪತ್ತೆಮಾಡದೆ ಅಲಕ್ಷ್ಯಮಾಡಿದರೆಂದು ಕೇಳಿ ಸರ್ಕಾರದವರು ಸಬ್ ಇನ್ಸ್‌ಪೆಕ್ಟರುಗಳಾಗಿದ್ದ ಶೇಕ್ ಹಾಜಿ ಮತ್ತು ವೆಂಕಟಸುಬ್ಬಯ್ಯ ಇವರನ್ನೂ, ಹೆಡ್ ಕಾನ್ಸ್‌ಟೇಬಲ್‌ಗಳಾದ ಡಾನಿಯಲ್ ಮತ್ತು ವೆಂಕಟಸುಬ್ಬರಾವ್ ಇವರನ್ನೂ, ಕಾನ್ಸ್‌ಟೇಬಲ್ ಶಿವಪ್ರಸಾದನನ್ನೂ ಉದ್ಯೋಗದಿಂದ ವಜಾಮಾಡಿರುತ್ತಾರೆ. ಮತ್ತು ಹೆಡ್ ಕಾನ್ಸ್‌ಟೇಬಲ್ ವೆಂಕಟಸ್ವಾಮಿ, ಮೂರು ಮಂದಿ ಕಾನ್ಸ್‌ಟೇಬಲ್‌ಗಳು, ಇವರ ವಿಷಯವನ್ನು ತನಿಖೆಮಾಡುತ್ತಿದ್ದಾರೆಂದು ಪ್ರಕಟವಾಗಿದೆ. ಆದರೆ ಈ ಪೈಕಿ ಹೆಡ್ ಕಾನ್ಸ್‌ಟೇಬಲ್ ಡಾನಿಯಲ್ ಎಂಬುವನು ತನಗೆ ಡಿಸ್ಮಿಸ್ ಆಯಿತೆಂದು ತಿಳಿದು ಕಳೆದ ಶುಕ್ರವಾರ ರಾತ್ರಿಯೇ ತನ್ನ ಹೆಂಡತಿಗೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೂ ಎರಡು ಕಾಗದಗಳನ್ನು ಬರೆದಿಟ್ಟು ಹೋಗಿ ಹಲಸೂರು ಕೆರೆಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡನು. ಆ ಕಾಗದಗಳನ್ನು ನೋಡಿದರೆ ಅವನು ತನ್ನ ಹೆಂಡತಿಗೆ ವಿಯೋಗದುಃಖ ಶಮನಾರ್ಥವಾದ ಕೆಲವು ಮಾತುಗಳನ್ನು ಬರೆದಿದ್ದನೆಂದೂ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ತಾನು ನಿರಪರಾಧಿಯಾಗಿದ್ದರೂ ತನ್ನ ಮೇಲೆ ಅಪಸಾಕ್ಷಿ ನುಡಿದದ್ದರಿಂದ ಹೀಗಾಯಿತೆಂದು ಬರೆದಿದ್ದನೆಂದೂ ತಿಳಿದುಬರುತ್ತೆ.

ಮೈಸೂರು ಕೃಷಿ ಶಿಲ್ಪಾಭಿವರ್ಧಕ ಸಂಘವು.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸ್ಥಾಪಿಸಲ್ಪಟ್ಟಿರುವ ಮೇಲ್ಕಂಡ ಸಂಘದ ಮೆಂಬರುಗಳು ಕಳೆದ ತಿಂಗಳ ೨೪ ನೇ ತಾ. ಭಾನುವಾರ ಬೆಳಿಗ್ಗೆ ಮೈಸೂರು ಪ್ರದರ್ಶನದ ಕಟ್ಟಡದಲ್ಲಿ ಸಭೆಸೇರಿ, ತೀರ್ಮಾನಮಾಡಿದ ವಿಷಯಗಳ್ಯಾವುವೆಂದರೆ.—

ರೀಡಿಂಗ್ ರೂಂ ಮತ್ತು ಸ್ಟೋರು ಕಾರ್ಖಾನೆಕ್ಕೆ ಎಗ್ಜಿಬಿಷನ್ ಬಿಲ್ಡಿಂಗಿನಲ್ಲೇ ಇರತಕ್ಕದ್ದು. ರೀಡಿಂಗ್ ರೂಮಿಗೋಸ್ಕರವಾಗಿ ಒಂದು ಟೇಬಲ್ ಲ್ಯಾಂಪನ್ನು ಕೊಂಡುಕೊಳ್ಳಬೇಕು. ರೈತರು ಮತ್ತು ಜನಸಾಮಾನ್ಯರು ಸಾಯಂಕಾಲ ೪ ಘಂಟೆ ಬಾಗಾಯಿತು, ೬॥ ಘಂಟೆ ವರಿವಿಗೂ ಯಗ್ಜಿಬಿಷನ್ ಬಿಲ್ಡಿಂಗಿನಲ್ಲಿರುವ ರೀಡಿಂಗ್ ರೂಮಿನಲ್ಲಿರಬೇಕು. ಮೈಸೂರು ಪಟ್ಟಣದ ಯಗ್ಜಿಬಿಷನ್ ಕಮಿಟಿಗೋಸ್ಕರ ಈ ಸಂಘದ ಮೆಂಬರುಗಳಾದ ಮ॥ ಎಂ. ಎಲ್. ವಾಸುದೇವಯ್ಯನವರು, ಮ॥ ಅಂಬಳೆ ಅಣ್ಣಯ್ಯಪಂಡಿತರು, ಮ॥ ಮಹಮದ್ ಜುಫರ್ ಸಾಹೇಬರವರು, ಮತ್ತು ಮ॥ ರಘುನಾಥಾಚಾರ್ಯರವರು ಚುನಾಯಿಸಲ್ಪಟ್ಟಿರುತ್ತಾರೆ. ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ತಾಲ್ಲೋಕುಗಳಲ್ಲಿ ಕಮಿಟಿಗಳನ್ನು ಏರ್ಪಡಿಸಲು ಸೂಕ್ತವಾದ ಪ್ರಯತ್ನಗಳನ್ನು ಮಾಡಬೇಕು. ಇದುವರಿಗಿನ ಅಂದರೆ ಫೆಬ್ರುವರಿ, ಮಾರ್ಚಿ, ಏಪ್ರಿಲ್, ಮೇ ಮಾಸ ೧೫ ನೇ ತಾರೀಖಿನ ವರಿಗಿನ ಜಮಾಖರ್ಚು ಲೆಕ್ಕಗಳ ಗೋಷ್ವಾರೆಯು ಓದಿ ಪ್ಯಾಸಾಯಿತು,

ಯಕ್ಸ್‌ಪೆರಿಮೆಂಟಲ್ ಫಾರಂ ವಿಷಯವನ್ನು ತೀರ್ಮಾನಿಸುವದಕ್ಕೆ ಮೆ॥ ಕೆ. ನರಸಿಂಹ ಅಯ್ಯಂಗಾರ್ರು, ಮ॥ ವಿ. ರಾಘವಾಚಾರ್ರು, ಮತ್ತು ಮ॥ ಪಟೇಲ್ ಲಿಂಗೇಗೌಡರು, ಇವರುಗಳನ್ನು ಸಬ್ ಕಮಿಟಿಯಾಗಿ ಚುನಾಯಿಸಲ್ಪಟ್ಟಿರುತ್ತೆ. ಇವರು ಜಮೀನು ಆಯಮಾಯಿಷಿ ಮಾಡಿ ಖರ್ಚು ವಗೈರೆ ತಪಶೀಲ್ ಅಂದಾಜುಮಾಡಿ ಕಮಿಟಿಗೆ ರಿಪೋರ್ಟ್ ಮಾಡತಕ್ಕದ್ದು.

ರೆವಿನ್ಯೂ ಕಮೀಷನರ್ ಸಾಹೇಬರವರು ದಯಮಾಡಿ ತೆಗೆದುಕೊಟ್ಟಿರುವ ಮಾರ್ಗದಲ್ಲಿ ಕೆಲಸಮಾಡುವದಕ್ಕೆ ಈ ಊರಿನಲ್ಲಿ ತಿಳಿದವರು ಯಾರೂ ಇಲ್ಲವಾದ್ದರಿಂದ ತಿಳಿದವರನ್ನು ಪರಸ್ಥಳದಿಂದ ಕರೆಸಿ ಇಲ್ಲಿರುವವರಿಗೆ ಕೆಲಸ ಕಲಿಸುವುದಕ್ಕೋಸ್ಕರ ಸೆಕ್ರೆಟರಿಯವರು ೭೫ ರೂಪಾಯಿಗೆ ಜಾಸ್ತಿ ಇಲ್ಲದೆ ಖರ್ಚುಮಾಡಬಹುದು.

೫ ಜನಕ್ಕೆ ಜಾಸ್ತಿ ಇಲ್ಲದೆ ಪ್ರತಿ ಒಬ್ಬ ಹುಡುಗನಿಗೂ ೧೫ ರೂಪಾಯಿಗೆ ಜಾಸ್ತಿ ಇಲ್ಲದಂತೆ ಸ್ಕಾಲರ್‌ಷಿಪ್ ಕೊಡಬಹುದು, ಸದರೀ ಹುಡುಗರು ಒಂದು ವರ್ಷ ಪರಿಯಂತರ ಅವರು ಮಾಡುವ ಕೆಲಸಕ್ಕೆ ಮಜೂರಿ ತೆಗೆದುಕೊಂಡು ಟೌನಿನಲ್ಲಿ ಅಸೋಸಿಯೇಷನ್ನಿನವರು ಹೇಳುವ ಕಡೆ ಕೆಲಸ ಮಾಡುವದಕ್ಕೆ ಒಪ್ಪಬೇಕು. ಹಾಗೆ ತಾವು ಒಪ್ಪಿ ಮಧ್ಯಕಾಲದಲ್ಲಿ ಬಿಟ್ಟು ಹೋಗುವ ಸಂದರ್ಭದಲ್ಲಿ ತಮಗೋಸ್ಕರ ಕೊಟ್ಟಿರತಕ್ಕ ಹಣಕ್ಕೆ ದ್ವಿಗುಣ ಅಂದರೆ ಎರಡರಷ್ಟು ಹಣಕೊಡಲು ಒಪ್ಪಿ ಕರಾರು ಕಾಗದವನ್ನು ಬರೆದುಕೊಡಬೇಕು. ಈ ರೀತಿ ಕರಾರುಗಳಿಂದ ಪರಸ್ಥಳಗಳಿಂದ ಬರತಕ್ಕವರನ್ನು ನೇಯಿಗೆ ಕೆಲಸದಲ್ಲಿ ತಯಾರುಮಾಡಿಸತಕ್ಕದ್ದು.

ಮ॥ ಕೆ. ನರಸಿಂಹ ಅಯ್ಯಂಗಾರ್ರವರು ಸಭೆಯಲ್ಲಿ ಎಲೆಬಿನ ಕೃಷಿ ಮತ್ತು ಪಟ್ಲಿಪ್ಪೆ ಇವುಗಳನ್ನು ಭೂಮಿಗೆ ಯಾವ ಕಾಲಗಳಲ್ಲಿ ಎಷ್ಟೆಷ್ಟು ಹಾಕಬೇಕೆಂಬುದನ್ನೂ, ಬೀಜವನ್ನು ಬಿತ್ತಿ ಎಷ್ಟೆಷ್ಟು ಅಂತರದಲ್ಲಿ ಪೈರುಗಳನ್ನು ನಾಟಿ ಹಾಕಿ ಎಷ್ಟರಮಟ್ಟಿಗೆ ಹುಲುಸಾದ ಬೆಳೆಯನ್ನು ತೆಗೆದು ಲಾಭಹೊಂದಬಹುದು ಎಂಬುವುದನ್ನು ಸಭಿಕರೆಲ್ಲರಿಗೂ ವಿಶದವಾಗಿ ತಿಳಿಯಪಡಿಸಿದರು.

ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವವು.

ಪುರನಿವಾಸಿಗಳ ಉತ್ಸಾಹವು.

ಈ ತಿಂಗಳ ೧೦ ನೇ ತಾ ಬುಧವಾರ ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರವರ ವರ್ಷ ವರ್ಧಂತಿ ಮಹೋತ್ಸವವು ನಡೆಯುವುದು. ಈ ಮಹೋತ್ಸವ ಕಾಲದಲ್ಲಿ ಪುರನಿವಾಸಿಗಳು ಕೆಲವು ಸಂತೋಷೋತ್ಸವಗಳನ್ನು ನಡಿಸಿ, ತಮ್ಮ ರಾಜಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಬೇಕೆಂದು ಯೋಚಿಸಿ, ಅದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವುದಕ್ಕೆ ಕಳೆದ ಭಾನುವಾರ ಸಾಯಂಕಾಲ ಇಲ್ಲಿ ಟೌನ್ ಹಾಲ್ ಬಂಗಲೆಯಲ್ಲಿ ಸೇರಿ ಒಂದು ದೊಡ್ಡ ಸಭೆಯನ್ನು ನಡಿಸಿದರು. ಈ ಸಭೆಯಲ್ಲಿ ರಾಜಧಾನಿಯ ಎಲ್ಲಾ ಕೋಮುಗಳ ಪ್ರತಿನಿಧಿಗಳೂ ಹಾಜರಾಗಿದ್ದರು. ಸಭಿಕರ ಅಪೇಕ್ಷೆಯಂತೆ ಧರ್ಮ ಪ್ರವರ್ತಕ ಮೆ॥ ಗುಂಜಾ ನರಸಿಂಹಯ್ಯನವರು ಅಗ್ರಾಸನವನ್ನು ವಹಿಸಿದರು. ಪೆನ್ಷನ್ ಡಿಸ್ಟ್ರಿಕ್ಟ್ ಜಡ್ಜಿರಾದ ಮೆ॥ ಬಿ. ತಿರುಮಲಾಚಾರ್ಯರು, ಮೆ॥ ಎಂ. ವೆಂಕಟಕೃಷ್ಣಯ್ಯನವರು, ಮೌಲ್ವಿ ಅಬ್ದುಲ್ ಹಮೀದ್ ಸಾಹೇಬರವರು ಕ್ರಮವಾಗಿ ಎದ್ದುನಿಂತು ತಿಳಿಸಿದ ಮುಖ್ಯಾಭಿಪ್ರಾಯಗಳೇನೆಂದರೆ—

ಮೈಸೂರು ಸಂಸ್ಥಾನವು ಹಿಂದುಸ್ಥಾನದ ದೇಶೀಯ ರಾಜ್ಯಗಳಲ್ಲೆಲ್ಲಾ ಪ್ರಮುಖವಾದದ್ದಾಗಿದೆ. ಉತ್ಪತ್ತಿ ವಿಸ್ತೀರ್ಣ, ಮುಂತಾದವುಗಳನ್ನು ನೋಡಿದರೆ ಈ ಸಂಸ್ಥಾನವೇ ಎರಡನೆಯದಾಗಿರುತ್ತದೆ. ಬ್ರಿಟಿಷ್ ಗವರ್ನಮೆಂಟಿನವರು ಈ ಸಂಸ್ಥಾನವನ್ನು ೫೦ ವರುಷಗಳವರೆಗೆ ಪರಿಪಾಲನೆಮಾಡಿ, ಅನೇಕ ಪ್ರಜೋಪಕಾರಕ ಕಾರ್ಯಗಳನ್ನೂ ನವೀನ ಏರ್ಪಾಡುಗಳನ್ನೂ ರೂಢಿಸಿ, ರಾಜ್ಯಾಧಿಕಾರವನ್ನು ಲೇಟ್ ಚಾಮರಾಜೇಂದ್ರ ಒಡೆಯರವರಿಗೆ ಒಪ್ಪಿಸಿದರು. ಅವರು ತಮ್ಮ ಆಳ್ವಿಕೆಯಲ್ಲಿ ಬಹು ವಿಚಕ್ಷಣೆಯಿಂದ ಪ್ರಜಾಪಾಲನೆ ಮಾಡಿ, ಪ್ರಜಾಸೌಕರ್ಯಕ್ಕಾಗಿ ಹಲವು ಹೊಸ ಶಿಸ್ತುಗಳನ್ನು ಮಾಡಿಟ್ಟು, ತಾಲ್ಲೂಕ್ ಬೋರ್ಡು, ಡಿಸ್ಟ್ರಿಕ್ಟ್ ಬೋರ್ಡು, ಮ್ಯುನಿಸಿಪಲ್ ಬೋರ್ಡು, ...ಬ್ಲಿ, ಈ ಮೊದಲಾದವುಗಳನ್ನು ಕಲ್ಪಿಸಿ, ಪ್ರಜೆಗಳಿಗೆ ರಾಜ್ಯ...ಲ್ಲಿ ಹೆಚ್ಚು ಸ್ವಾತಂತ್ರ್ಯಗಳನ್ನು ದಯಪಾಲಿಸಿದರು ಶ್ರೀಕೃಷ್ಣರಾಜೇಂದ್ರ ಒಡೆಯರವರು ರಾಜ್ಯಭಾರದಲ್ಲಿ ವಿಶೇಷವಾದ ಪ್ರೀತಿ ಉತ್ಸಾಹಗಳನ್ನು ಪ್ರಕಾಶಪಡಿಸುತ್ತಾ, ಈ ಸಂಸ್ಥಾನವನ್ನು ಇನ್ನೂ ಅಭಿವೃದ್ಧಿಗೆ ತರಬೇಕೆಂಬ ಕುತೂಹಲವುಳ್ಳವರಾಗಿ ನಾನಾ ಪ್ರಜೋಪಕಾರಕ ಕಾರ್ಯಗಳನ್ನು ನಡಿಸಿರುತ್ತಾರೆ. ಲೆಜಿಸ್ಲೇಟಿವ್ ಕೌನ್ಸಿಲ್ ಎಂಬ ನ್ಯಾಯವಿಧಾಯಕ ಸಭೆಯನ್ನು ನಮ್ಮ ಮಹಾರಾಜರವರು ಸ್ಥಾಪಿಸಿಕೊಟ್ಟಿರುವರು. ಚಕ್ರವರ್ತಿ ಸಾರ್ವಭೌಮರವರು ನಮ್ಮ ಮಹಾರಾಜರವರ ಇಂಗಿತವನ್ನೂ ಸಾಮರ್ಥ್ಯವನ್ನೂ ಅರಿತು, ಮಹಾಸ್ವಾಮಿಯವರಿಗೆ ಅತ್ಯಂತ ಘನತರವಾದ "ಜಿ. ಸಿ. ಎಸ್. ಐ" ಎಂಬ ಬಿರುದನ್ನು ದಯಪಾಲಿಸಿದರು. ಈ ಪುರನಿವಾಸಿಗಳು ಈ ವಿಷಯದಲ್ಲಿ ತಮ್ಮ ಆನಂದವನ್ನೂ ರಾಜಭಕ್ತಿಯನ್ನೂ ಇದೇ ಟೌನ್ ಹಾಲಿನಲ್ಲಿ ಪ್ರಕಾಶಪಡಿಸಿದರು. ಆಗ್ಗೆ ಮಹಾಸ್ವಾಮಿಯವರು ಪುರನಿವಾಸಿಗಳನ್ನು ಕುರಿತು—"ನಾವು ಮಾಡಿರುವ ಪ್ರಜಾರಂಜಕ ಕಾರ್ಯಗಳು ಹೆಚ್ಚಲ್ಲವು; ಇನ್ನೂ ವಿಶೇಷವಾದ ಕುತೂಹಲವಿರುತ್ತದೆ" ಎಂದು ಅಪ್ಪಣೆಕೊಡಿಸಿದರು. ನಮ್ಮ ಮಹಾಸ್ವಾಮಿಯವರಲ್ಲಿ ಪ್ರಜೆಗಳ ಮೇಲಣ ಪ್ರೀತಿ ವಾತ್ಸಲ್ಯಗಳು ಎಷ್ಟು ಹೆಚ್ಚಾಗಿರುವವೋ ವಿವರಿಸಲಶಕ್ಯವಾಗಿದೆ. ಇತರ ರಾಜ್ಯಗಳಲ್ಲಿ ಪ್ರಜೆಗಳು ತಮ್ಮ ಪ್ರಭುಗಳ ವರ್ಷವರ್ಧಂತಿ ಮಹೋತ್ಸವವನ್ನು ಅತ್ಯಂತ ವಿಶೇಷವಾದದ್ದನ್ನಾಗಿ ಪರಿಗಣಿಸಿ, ಆ ಕಾಲದಲ್ಲಿ ನಾನಾ ಸಂತೋಷ ಕಾರ್ಯಗಳನ್ನು ನಡಿಸಿ, ತಮ್ಮ ರಾಜಭಕ್ತಿಯನ್ನು ಪ್ರಕಾಶಪಡಿಸುವುದು ವಾಡಿಕೆಯಾಗಿದೆ. ನಾವು ಕೂಡ ಸಭಿಕರು ಈ ದಿನ ತೀರ್ಮಾನ ಮಾಡುವಂಥಾ ಸಂತೋಷ ಕಾರ್ಯಗಳನ್ನು ನಮ್ಮ ಮಹಾರಾಜರವರ ವರ್ಧಂತೀ ಕಾಲದಲ್ಲಿ ನಡಿಸುವುದು ನಮ್ಮ ಕರ್ತವ್ಯವಾಗಿರುವುದು. ಮಹಾಸ್ವಾಮಿಯವರಿಗೆ ಅರಮನೆಯಲ್ಲಿ ಆ ದಿನ ಪದ್ಧತಿಯ ಪ್ರಕಾರ ಅನೇಕ ಮರ್ಯಾದೆಗಳು ನಡೆಯುವವು. ದೇವಸ್ಥಾನಗಳಲ್ಲಿ ಅಭಿಷೇಕ ಉತ್ಸವ ಆರಾಧನೆಗಳೂ, ಅನ್ನದಾನವೂ ನಡೆಯುತ್ತವೆ. ನಮಗೂ ಆವರ ವರ್ಧಂತಿ ಉತ್ಸವವು ಸಂತೋಷಕರವಾಗಿದೆ ಎಂದು ತೋರ್ಪಡಿಸುವುದಕ್ಕೆ ನಾವು ಕೆಲವುಉತ್ಸವಗಳನ್ನು ನಡಿಸುವುದು ನಮ್ಮ ಕರ್ತವ್ಯವಾಗಿದೆ. ಸಭಿಕರೂ ಪುರನಿವಾಸಿಗಳೂ ಇಷ್ಟಪಟ್ಟು, ಸಹಾಯ ಸಂಪತ್ತುಗಳನ್ನು ಒದಗಿಸಿಕೊಡುವುದಾದರೆ ಈ ಪುರ ಜನರ ಉತ್ಸವವನ್ನು ಪ್ರತಿ ವರುಷವೂ ನಡಿಯುವಂತೆ ಮಾಡಬಹುದಾಗಿದೆ ಎಂಬುದೇ.

ತರುವಾಯ ಮೆ॥ ಪುರುಷೋತ್ತಮಾನಂದಗಿರಿ ಗೋಸಾಯಿಯವರು ಈ ಉತ್ಸವವನ್ನು ಪ್ರತಿವರುಷವೂ ಜರುಗಿಸಬೇಕೆಂದು ಒಪ್ಪಿರುವುದಾಗಿ ಸೂಚಿಸಿದರು. ಸಭಿಕರೆಲ್ಲಾ ಅದರಂತೆ ಅನುಮೋದಿಸಿದರು. ಚಂದಾ ಪಟ್ಟಿಯು ಸಭಿಕರ ಬಳಿಗೆ ಕಳುಹಿಸಿದಾಗ ಎಲ್ಲರೂ ತಮ್ಮ ಯೋಗ್ಯತಾನುಸಾರ ದ್ರವ್ಯಸಹಾಯ ಮಾಡುವುದಾಗಿ ವಾಗ್ದಾನ ಮಾಡಿದರು. ಪ್ರೆಸಿಡೆಂಟರಾಗಿದ್ದ ಮೆ॥ ನರಸಿಂಹಯ್ಯನವರು ೧೦೦ ರೂಪಾಯಿ ಕೊಡುವಂತೆ ತಿಳಿಸಿದರು. ಈ ಉತ್ಸವವನ್ನು ನಡಿಸುವುದಕ್ಕೆ ಒಬ್ಬ ಪ್ರೆಸಿಡೆಂಟರೂ ೨ ಮಂದಿ ಸೆಕ್ರೆಟರಿಗಳೂ, ಇಬ್ಬರು ಟ್ರೆಜರರುಗಳೂ, ಮೆಂಬರುಗಳೂ ಚುನಾಯಿಸಿ ನೇಮಿಸಲ್ಪಟ್ಟರು. ಈ ಕಮಿಟಿಯವರು ಸಭೆಸೇರಿ ಏರ್ಪಾಡುಗಳನ್ನು ಚರ್ಚಿಸಿ ಗೊತ್ತುಮಾಡುತ್ತಿದಾರೆ.

ಮೈಸೂರು ಸಂಸ್ಥಾನದ ರೆವಿನ್ಯೂ ಇಲಾಖೆಯು.

ಸನ್ ೧೯೦೬-೦೭ ನೇ ಸಾಲಿನ ರೆವಿನ್ಯೂ ಕಮಿಷನರವರ ರಿಪೋರ್ಟು.

ಮೈಸೂರು ಸಂಸ್ಥಾನದ ರೆವಿನ್ಯೂ ಕಮಿಷನರಾದ ರಾಜಕಾರ್ಯ ಪ್ರವೀಣ ಮೆ॥ ಎ. ರಂಗಸ್ವಾಮಯ್ಯಂಗಾರ್ರು, ಕಳೆದ ೧೯೦೬-೦೭ ನೇ ಸಾಲಿನಲ್ಲಿ ಮೈಸೂರು ಸೀಮೆಯ ರೆವಿನ್ಯೂ ಇಲಾಖೆಯ ರಿಪೋರ್ಟನ್ನು ಗವರ್ನಮೆಂಟಿಗೆ ಕಳುಹಿಸಿದರು. ಈ ರಿಪೋರ್ಟಿನಲ್ಲಿ ಕಂಡ ಸಂಸ್ಥಾನಾಮುಳ ಅನ್ವಯಿಸುವಂಥಾ ಮುಖ್ಯ ವಿಚಾರಗಳನ್ನು ತೆಗೆದು ವಿವರಿಸುತ್ತೇವೆ

ಆಮದುರಫ್ತು.

ಮೈಸೂರು ಸಂಸ್ಥಾನದೊಳಗೆ ಬೆಳೆಯುವ, ಉತ್ಪತ್ತಿಯಾಗುವ, ಮತ್ತು ತಯಾರಾಗುವ ಜಿನಸುಗಳೂ, ಪದಾರ್ಥಗಳೂ ಇತರ ಕಡೆಗಳಿಗೆ ಎಷ್ಟುಮಟ್ಟಿಗೆ ರಫ್ತಾಗುತ್ತವೆಯೋ, ಹೊರಗಡೆಯಿಂದ ಈ ಸಂಸ್ಥಾನದೊಳಕ್ಕೆ ಯಾವ ಯಾವ ಪದಾರ್ಥಗಳೂ ಜಿನಸುಗಳೂ ಎಷ್ಟೆಷ್ಟು ಆಮದಾಗಿ ಬರುತ್ತಿವೆಯೋ ಗೊತ್ತುಮಾಡಿ ಹೇಳುವುದಕ್ಕೆ ಈಗೀಗ ಸರ್ಕಾರದವರು ಏರ್ಪಾಡುಮಾಡಬೇಕೆಂದು ಆಲೋಚನೆ ಮಾಡುತ್ತಿದಾರೆ. ಸದ್ಯ ಈ ಭಾಗದಲ್ಲಿ ವಿಶೇಷವಾಗಿ ತಿಳಿಸುವುದು ಸಾಧ್ಯವಾಗಲಿಲ್ಲ. ಆದರೂ ಕೆಲವುಮಟ್ಟಿಗೆ ಸೂಚಿಸಬಹುದು. ಹ್ಯಾಗಂದರೆ—ಕಳೆದ ೧೯೦೬-೦೭ ನೇ ಸಾಲಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿನಿಂದ ವಿಶೇಷವಾಗಿ ರೇಷ್ಮೆಗೂಡುಗಳನ್ನು ಬರ್ಹಾಂಪುರದ ರೇಷ್ಮೆ ಕಾರ್ಖಾನೆಗೆ ರಫ್ತುಮಾಡಿದರು. ಇದಲ್ಲದೆ ಆ ಕಂಪನಿಯವರು ರೇಷ್ಮೆಯನ್ನು ಬಿಡಿಸುವುದಕ್ಕೆ ಕಾಲೇಸ್‌ಪೇಟೆಯಲ್ಲಿ ಒಂದು ಕಾರ್ಖಾನೆಯನ್ನು ಪ್ರಾರಂಭಮಾಡುವುದರಲ್ಲಿದ್ದರು. ಕೋಲಾರ್ ಡಿಸ್ಟ್ರಿಕ್ಟಿನಿಂದ ಚನ್ನಪಲ್ಲದ ಮುಳಬಾಗಲು, ಬಾಗೇಪಲ್ಲಿ, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ, ಈ ತಾಲ್ಲೂಕುಗಳಿಂದ ಹಿಂದೂಪುರ, ವೇಲೂರು, ಮದರಾಸ್ ಮೊದಲಾದ ಸ್ಥಳಗಳಿಗೆ ಬಹಳ ಬೆಲ್ಲವು ಸಾಗಿಹೋಗಿರುತ್ತದೆ. ಈ ಡಿಸ್ಟ್ರಿಕ್ಟಿಗೆ ಇತರ ಕಡೆಗಳಿಂದ ೧,೧೪,೪೨೧ ರೂಪಾಯಿನ ಭತ್ತವೂ, ೨೫,೨೫,೨೫೦ ರೂಪಾಯಿನ ಅಕ್ಕಿಯೂ, ೧,೦೨೩,೭೫ ರೂಪಾಯಿನ ರಾಗಿಯೂ ಬಂದು ಬಿಕರಿ ಆಗಿರುತ್ತದೆ. ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಸಿರಾ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಿಂದ ಮಲೆನಾಡು ಪ್ರಾಂತ್ಯಕ್ಕೂ ಸಿಲೋನ್ (ಲಂಕಾ) ದ್ವೀಪಕ್ಕೂ ಬಹಳ ಕಂಬಳಿಗಳನ್ನು ಕಳುಹಿಸಿದರು. ಹಾಸನ ಡಿಸ್ಟ್ರಿಕ್ಟಿನಿಂದ ಕಾಫಿ, ಯೇಲಕ್ಕಿ, ತೆಂಗಿನಕಾಯಿ, ಬೆಲ್ಲ, ಎಣ್ಣೇಬೀಜಗಳು, ಇವು ರಫ್ತಾಗುವವು. ಆ ಪೈಕಿ ಕಾಫಿಯೂ ಯೇಲಕ್ಕಿಯೂ ಮಂಗಳೂರಿಗೆ ಹೋಗಿ, ಅಲ್ಲಿಂದ ಅನ್ಯದೇಶಗಳಿಗೆ ರಫ್ತಾಗುತ್ತದೆ. ಅರಸಿಕೆರೆ ತಾಲ್ಲೋಕಿನಿಂದ ವರುಷಕ್ಕೆ ೩ ಲಕ್ಷ ರೂಪಾಯಿನ ತೆಂಗಿನಕಾಯಿ ಇತರ ಕಡೆಗಳಿಗೆ ರಫ್ತಾಗುವಂತೆ ತಿಳಿಯುತ್ತದೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನಿಂದ ವಿಶೇಷವಾಗಿ ಅಡಿಕೆ, ಭತ್ತ, ಎಳ್ಳು, ಇವು ರಫ್ತಾಗುತ್ತವೆ. ಅವುಗಳ ಬೆಲೆ ಎಷ್ಟಾಗಬಹುದೆಂದರೆ ೧೪ ಲಕ್ಷದ ೩೫ ಸಾವಿರ ರೂಪಾಯಿ, ೭ ಲಕ್ಷದ ೨೦ ಸಾವಿರ ರೂಪಾಯಿ, ೧೧ ಸಾವಿರದ ನೂರು ೫ ರೂಪಾಯಿ. ಕಡೂರು ಡಿಸ್ಟ್ರಿಕ್ಟಿನಿಂದ ಮುಖ್ಯವಾಗಿ ಒಂದೂವರೆ ಲಕ್ಷ ರೂಪಾಯಿನ ಕಾಫೀಬೀಜವೂ, ಒಂಬತ್ತು ಲಕ್ಷ ರೂಪಾಯಿನ ಅಡಿಕೆಯೂ ರವಾನೆಯಾಗಿರುತ್ತದೆ. ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ರೈಲಿನ ಮೇಲೂ ರಸ್ತೆಗಳ ಮೂಲಕವೂ ಧಾನ್ಯಗಳು ವಿಶೇಷವಾಗಿ ಸಾಗಿಹೋಗುವವು. ದಾವಣಗೆರೆಯಿಂದ ಬಹಳ ಹತ್ತಿಯನ್ನು ಬೊಂಬಾಯಿಗೆ ರವಾನೆಮಾಡುವರು. ಬಳ್ಳಾರಿಗೂ ರಾಯದುರ್ಗಕ್ಕೂ ರೈಲಾಗಿರುವುದರಿಂದ ಆ ಡಿಸ್ಟ್ರಿಕ್ಟಿನ ವ್ಯಾಪಾರವು ಬಹಳ ಹೆಚ್ಚಿರುವಂತೆ ತಿಳಿಯುತ್ತದೆ.

ಪ್ರಜೆಗಳ ಆರೋಗ್ಯಸ್ಥಿತಿಗತಿಗಳು.

ಈ ಸಾಲಿನಲ್ಲಿ ವ್ಯವಸಾಯಕಾರ್ಯಗಳು ಬಹಳ ತೃಪ್ತಿಕರವಾಗಿ ನಡೆದಿದ್ದರೂ ಹಿಂದಿನ ಸಾಲುಗಳ ಕಷ್ಟದೆಸೆಯಿಂದ ಪ್ರಜೆಗಳು ಚೇತರಿಸಿಕೊಳ್ಳುವಂತಾಯಿತೇ ಹೊರತು ಮತ್ತೆ ಬೇರೆ ಅಲ್ಲ. ಧಾರಣೆವಾಸಿಗಳು ಇಳಿಯಲಿಲ್ಲ, ಕೂಲಿಕಂಬಳಿಗಳ ದರವು ಹೆಚ್ಚಾಗಲಿಲ್ಲ. ಹಿಂದಿನ ಸಾಲಿನಲ್ಲಿ ೮೧,೪೯೫ ಜನರು ಕಾಲವಾದರು; ಈ ಸಾಲಿನ ಮರಣ ಸಂಖ್ಯೆಯು ೧,೧೩,೮೩೯ ಕ್ಕೆ ಹೆಚ್ಚಿತು. ಜನನದ ಸಂಖ್ಯೆಯೂ ಕೂಡ ೯೭,೫೪೩ ರಿಂದ ೮೮,೨೯೫ ಕ್ಕೆ ಇಳಿಯಿತು. ಬೆಂಗಳೂರು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಪ್ಲೇಗ್ ಉಪದ್ರವೂ, ಮೈಸೂರು ಶಿವಮೊಗ್ಗಾ ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ವಾಂತಿಭೇದಿ ಸಿಡುಬು ಮೊದಲಾದ ಉಪದ್ರವಗಳೂ ಬಹಳ ಕಷ್ಟನಷ್ಟಗಳನ್ನುಂಟುಮಾಡಿದವು. ಕಾಫಿ ಮತ್ತು ಯೇಲಕ್ಕಿ ಬೆಳೆಯು ಬಹಳ ಹೀನವಾಯಿತು. ಮಲೆನಾಡಿನಲ್ಲಿ ಎಂದಿನಂತೆ ಕೊಳೆ ರೋಗದಿಂದ ಅಡಿಕೆ ಫಸಲು ಕೆಟ್ಟಿತು. ಇದಲ್ಲದೆ ಕೃಷ್ಣರಾಜಪೇಟೆ, ಯಡತೊರೆ, ಹೆಗ್ಗಡದೇವನಕೋಟೆ ತಾಲ್ಲೂಕುಗಳಲ್ಲಿ ಬೆಂಕಿಯಿಂದ ಬಹಳ ದವಸಧಾನ್ಯಗಳು ನಷ್ಟವಾದವು. ಆದರೆ ಸರ್ಕಾರದವರು ನಷ್ಟಪಟ್ಟವರಿಗೆ ಕೂಡಿದಮಟ್ಟಿಗೆ ಸಹಾಯ ಮಾಡಿರುತ್ತಾರೆ. ಹಾಲಕ್ ಎಂಬ ಅಡಿಕೆ ಮೇಲಿನ ಸುಂಕವನ್ನು ವಜಾ ಮಾಡಿದ್ದರಿಂದ ಮಲೆನಾಡು ರೈತಪ್ರಜೆಗಳು ಚೇತರಿಸಿಕೊಳ್ಳುವುದಕ್ಕೆ ತುಂಬಾ ಸಹಾಯವಾಗಿರುತ್ತದೆ. ಮ್ಯಾಂಗನೀಸ್ ಲೋಹದ ಅದುರನ್ನು ತೆಗೆಯುವ ಕಸಬು ಪ್ರಾರಂಭವಾಗಿರುವುದು ದೇಶಾಭ್ಯುದಯಕ್ಕೆ ಸಹಕಾರಿಯಾಗಿದೆ. ಆದರೆ ಇಂಥಾ ಕೆಲಸಕ್ಕೆ ದೇಶೀಯ ಮೂಲಧನವು ಉಪಯೋಗಿಸಲ್ಪಡದೆ ಇರುವುದು ಕೊರತೆಯಾಗಿರುತ್ತದೆ. ಕಾಫಿ ವ್ಯವಸಾಯವು ತಲೆಯೆತ್ತುತ್ತಿರುವುದಾಗಿಯೂ ಹೆಚ್ಚು ...ವನ್ನು ಅದಕ್ಕೆ ಈಗೀಗ ಹಾಕುತ್ತಿದಾರೆಂತಲೂ ಕಡೂರು ಡೆಪ್ಯುಟಿ ಕಮಿಷನರು ತಿಳಿಸುತ್ತಾರೆ. ಸೇವಿಂಗ್ಸ್ ಬ್ಯಾಂಕುಗಳ ಲೆಕ್ಕದಿಂದ ಪ್ರಜಾಕ್ಷೇಮಾಭಿವೃದ್ಧಿಯನ್ನು ನಿರ್ಧರಿಸುವುದು ಕಷ್ಟವಾದರೂ ಸ್ವಲ್ಪ ಮಟ್ಟಿಗೆ ಊಹಿಸಿಕೊಳ್ಳಬಹುದಾಗಿರುತ್ತದೆ. ೧೯೦೬-೦೭ ನೆ ಸಾಲಿನ ಪ್ರಾರಂಭದಲ್ಲಿ ಮೈಸೂರು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಪ್ರಜೆಗಳು ೨೩,೬೮,೯೦೭ ರೂಪಾಯಿ ಡಿಪಾಜಿಟ್ಟು ಹಾಕಿದರು. ಆ ಸಾಲಿನಲ್ಲಿ ೫೭,೫೮,೨೨೨ ರೂಪಾಯಿ ವಾಪಸು ಪಡೆದುಕೊಂಡರು. ಸಾಲಾಖೈರಿನಲ್ಲಿ ಬ್ಯಾಂಕುಗಳೊಳಗೆ ೭೯,೩೩,೭೪೦ ರೂಪಾಯಿ ಡಿಪಾಜಿಟ್ಟು ಉಳಿದಿತ್ತು.

ಜಮಾಬಂದಿ ವರಮಾನದ್ದು.

ಮೈಸೂರು ಸಂಸ್ಥಾನದ ಜಮಾಬಂದಿ, ವಸೂಲಾತಿ, ಬಾಕಿ, ರಿಮಿಷನ್ ಮೊದಲಾದ ವಿಚಾರದ ಒಟ್ಟು ಲೆಕ್ಕಗಳನ್ನು ಕೆಳಗೆ ಕಂಡ ತಖ್ತೆಯಿಂದ ತಿಳಿಯಬಹುದಾಗಿದೆ

	೧೯೦೫-೦೬	೧೯೦೬-೦೭
ಗುದಸ್ತಾ ಬಾಕಿ. . . . ರೂ	೧೨,೦೪,೮೮೫. . ರೂ.	೧೯,೩೦,೬೮೪
ಒಟ್ಟು ಜಮಾಬಂದಿ. .	. ೯೯,೯೨ ೪೪೪	. . . ೧,೦೧,೨೮,೪೦೨
ಜುಮ್ಲಾ	೧,೧೨.೦೭,೩೨೯. .	೧,೨೦,೫೮,೪೮೬
ವಸೂಲಿ (ರಿಮಿಷನ್ ಸೇರಿ)	೯೨,೭೭,೦೪೫. . . .	. ೧,೦೧,೮೪,೧೨೬
ಜಾಹಾಬಾಕಿ	೧೯,೩೦,೦೮೪. . . .	. ೧೮,೭೪,೩೬೦
ರಿಮಿಷನ್ ಆಗಿರುವುದು	೪೫,೩೯೬. . . .	. . . ೧೨,೭೩೦
ರಿಮಿಷನ್ ಆಗುವುದು	೫,೫೮,೧೯೦. . . .	. ೩,೩೪,೭೨೭

ಮೈಸೂರು ಡಿಸ್ಟ್ರಿಕ್ಟಿನಲ್ಲಿ ನಾಲ್ಕು ಲಕ್ಷ ರೂಪಾಯಿ ವಸೂಲಾಗದೆ ಉಳಿದುಕೊಂಡಿತು. ಇದಕ್ಕೆ ಡೆಪ್ಯುಟಿ ಕಮಿಷನರು ತಿಳಿಸುವುದೇನೆಂದರೆ—ಹೋದ ಸಾಲಿಗಿಂತ ಈ ಸಾಲಿನ ಬೆಳಸು ತೃಪ್ತಿಕರವಾಗಿದ್ದರೂ ಕಂದಾಯದ ವಸೂಲಿಯು ಕಡಮೆಯಾಯಿತೆಂದು ತಿಳಿಸುವುದಕ್ಕೆ ವಿಷಾದವಾಗುವುದು. ಹಿಂದಿನ ಸಾಲಿನಲ್ಲಿ ಫಸಲು ಆಗದಿದ್ದರೂ ವಸೂಲಿಯು ಬಹಳ ಚನ್ನಾಗಿ ಆಯಿತು. ಪ್ರತಿ ತಿಂಗಳಲ್ಲೂ ಅಮಲ್ದಾರರುಗಳಿಗೆ ಎಷ್ಟು ಕಠಿಣವಾಗಿ ತಗಾದೆ ಮಾಡಿ ಬರೆಯುತ್ತಿದ್ದರೂ ಅವರು ಲಕ್ಷ್ಯಮಾಡದೆ ಅನಾದರಣೆಯಿಂದ ಕೆಲಸ ನಡಿಸಿರುವುದರಿಂದ ವಸೂಲಿಯು ಕಡಮೆಯಾಯಿತು.

ದೊಡ್ಡ ಸಣ್ಣ ಕೆರೆಗಳು.

ಈ ಸಂಸ್ಥಾನದಲ್ಲಿ ಒಟ್ಟು ೨,೪೩೩ ದೊಡ್ಡ ಕೆರೆಗಳೂ ೨೫,೭೯೪ ಸಣ್ಣ ಕೆರೆಗಳೂ ಇರುತ್ತವೆ. ಈ ಸಾಲಿನಲ್ಲಿ ಸರ್ಕಾರದವರು ೭,೬೧,೦೮೮ ರೂಪಾಯಿ ಖರ್ಚುಮಾಡಿ ೧೯೫ ದೊಡ್ಡ ಕೆರೆಗಳನ್ನೂ, ೬೪,೯೫೦ ರೂಪಾಯಿ ಖರ್ಚುಮಾಡಿ ೩೮೮ ಸಣ್ಣ ಕೆರೆಗಳನ್ನೂ ದುರಸ್ತುಮಾಡಿಸಿರುತ್ತಾರೆ. ಇದಲ್ಲದೆ ರೈತಪ್ರಜೆಗಳು ಈ ಕೆರೆಗಳ ಕಾಮಗಾರಿಗೆ ಒಟ್ಟು ೮೬,೮೮೪ ರೂಪಾಯಿನಷ್ಟು ಮಟ್ಟಿ ಕಾಮಗಾರಿ ಮಾಡಿರುವರು. ಸಂಸ್ಥಾನಾಮುಳ ಒಟ್ಟು ೩೧ ದೊಡ್ಡ ಕೆರೆಗಳಿಗೂ, ೪೪೦ ಸಣ್ಣ ಕೆರೆಗಳಿಗೂ ತುರ್ತು ಕಾಮಗಾರಿ ಆಗಬೇಕಾಗಿದೆ ಎಂಬು ಡೆಪ್ಯುಟಿ ಕಮಿಷನರುಗಳು ತಿಳಿಸುತ್ತಾರೆ.

ಮಾರೀಕಣಿವೆ ಕೆರೆಯು.

ಈ ಸಂಸ್ಥಾನದಲ್ಲಿರುವ ಕೆರೆಗಳ ಪೈಕಿ ಚಿತ್ರದುರ್ಗದ ಡಿಸ್ಟ್ರಿಕ್ಟಿನೊಳಗಿರುವ ಮಾರಿಕಣಿವೆ ಕೆರೆಯು ಅತ್ಯಂತ ಭಾರಿಯಾದದ್ದು. ಈ

ಕೆರೆಯ ಕಾಮಗಾರಿಯು ೧೯೦೯ನೇ ಇಸವಿಯಲ್ಲಿ ಪ್ರಾರಂಭವಾಗಿ ಈ ಸಾಲಿನಲ್ಲಿ ಪೂರೈಸಿರುತ್ತದೆ. ಕಾಮಗಾರಿಯು ಆರಂಭದಲ್ಲಿ ವೇದಾವತೀ ನದಿಯ ಪಶ್ಚಿಮ ಪಕ್ಕದಿಂದ ೩೦ ಮೈಲಿ ದೂರ ಒಂದು ನಾಲೆಯನ್ನು ತೆಗೆದಲ್ಲಿ ಅದರ ಕೆಳಗೆ ೯೦,೦೦೦ ಎಕರೆ ಜಮೀನು ತರೀಫಸಲಿಗೆ ಬರುವುದೆಂದು ಅಂದಾಜು ಮಾಡಿದ್ದಿತು. ಆದರೆ ಅಣೆಕಟ್ಟಿನಿಂದ ೫೫ ಮೈಲಿದೂರ ನಾಲೆಯನ್ನು ತೆಗೆದು ಸಿದ್ಧಪಡಿಸುವಾಗ್ಗೆ ಮೇಜರ್ ಡೋಬಿನಿಯರ್ ಎಂಬ ಇಂಜನಿಯರನವರು ಕೋಡಿಯಲ್ಲಿ ನಿಲ್ಲುವ ೩೦ ಅಡಿ ಪ್ರಮಾಣದ ನೀರನ್ನು ನದಿಯೊಳಕ್ಕೆ ಧುಮುಕುವಂತೆ ಮಾಡಿದರೆ ಅದರಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿಕೊಳ್ಳಬಹುದೆಂತಲೂ, ನದಿಯಲ್ಲಿ ಅಣೆಯನ್ನು ಕಟ್ಟಿ ಆ ಬಿದ್ದ ನೀರನ್ನು ಅಣೆಕಟ್ಟೆಯಿಂದ ನದಿಯ ಎರಡು ಪಕ್ಕಗಳಲ್ಲೂ ನಾಲೆಗಳನ್ನು ತೋಡಿ ಹಾಯಿಸಿದರೆ ತರೀಫಸಲಿಗೆ ಅನುಕೂಲಿಸುವುದೆಂತಲೂ ಅಭಿಪ್ರಾಯಪಟ್ಟರು ಗವರ್ನಮೆಂಟಿನವರು ಈ ಅಭಿಪ್ರಾಯವನ್ನು ಅನುಮೋದಿಸಿ, ಆ ನದಿಯ ಪಾತ್ರದಲ್ಲಿ ಕತ್ತರಿಕೆರೆಹಳ್ಳಿಯ ಸಮೀಪದಲ್ಲಿ ಅಣೆಯನ್ನು ಕಟ್ಟಿ, ಎರಡು ಕಡೆಗಳಲ್ಲೂ ೨೯ ಮೈಲಿ ದೂರ ನಾಲೆ ತೆಗೆಯಬಹುದೆಂದೂ ೧೨,೫೦೦ ಎಕರೆ ಜಮೀನು ತರೀಫಸಲಿಗೆ ತರಲ್ಪಡಬಹುದೆಂದೂ ಯೋಚಿಸಿ, ಕಾಮಗಾರಿ ಮಾಡಿಸಿದರು. ಈ ನಾಲೆಗಳೆರಡೂ ಪೂರೈಸಿರುತ್ತವೆ ನದಿಯ ಬಲಪಾರ್ಶ್ವದಲ್ಲಿ ನಾಲೆಯು ೩೦ ಮೈಲಿ ದೂರವೂ, ಎಡಪಾರ್ಶ್ವದಲ್ಲಿ ೨೯½ ಮೈಲಿ ದೂರವೂ ಬಿಡಾವಣೆಯಾಗಿರುವವು ಇವುಗಳ ಕೆಳಗೆ ಒಟ್ಟು ೭,೮೦೦ ಎಕರೆ ಜಮೀನು ತರೀಸಾಗಿಗೆ ಬರುತ್ತದೆ. ಕೆರೆಯೂ, ದೊಡ್ಡ ನಾಲೆಗಳೂ, ತೋಳು ನಾಲೆಗಳೂ, ತೂಬುಗಳೂ ಇಂಜನಿಯರ್ ಇಲಾಖೆಯವರ ಮೇಲ್ವಿಚಾರಣೆಯಲ್ಲಿರಬೇಕೆಂತಲೂ, ಜಮೀನುಗಳಿಗೆ ನಂಬಿಕೊಡುವ ಕೀಳುಗಳೆಲ್ಲಾ ರೆವಿನ್ಯೂ ಇಲಾಖೆಯವರ ಮೇಲ್ವಿಚಾರಣೆಯಲ್ಲಿರಬೇಕೆಂತಲೂ ತೀರ್ಮಾನವಾಗಿದೆ ಕಳೆದ ನವಂಬರಿನಿಂದ ಈಚೆಗೆ ಜನರು ಜಮೀನುಗಳನ್ನು ಪಡೆದುಕೊಂಡಿದಾರೆ. ವ್ಯವಸಾಯಕ್ಕೆ ನೀರು ಕೊಡಲ್ಪಟ್ಟಿದೆ. ಈ ಭಾರೀ ಕೆರೆಗೆ ನೀರು ಬರುವುದೊಂದೇ ಮುಖ್ಯ ವಿಷಯವಾಗಿದೆ ಈ ಸಲ ಒಳ್ಳೇ ಮಳೆಗಳು ಬಿದ್ದುದರಿಂದ ಕೆರೆಯಲ್ಲಿ ೧೨೮ ಅಡಿ ನೀರು ಶೇಖರವಾಯಿತು.

ಗೋಕಾಯಿಲೆಗಳ ಮರಣ.

ಗೋಕಾಯಿಲೆಗಳ ರೋಗ ಮತ್ತು ಅವುಗಳ ಮರಣದ ವಿಷಯದಲ್ಲಿ ಪ್ರತಿ ಸಾಲಿನಲ್ಲೂ ಏನನು ತಿಳಿಸಬೇಕೆಂದು ಡೆಪ್ಯುಟಿ ಕಮೀಷನರಿಗೆ ತಿಳಿಸಲ್ಪಟ್ಟಿದ್ದರೂ ಬೆಂಗಳೂರು, ಕೋಲಾರ, ಹಾಸನ, ಚಿತ್ರದುರ್ಗ, ಈ ಡಿಸ್ಟ್ರಿಕ್ಟುಗಳಿಂದ ಬಂದಿರುವ ರಿಪೋರ್ಟಿನಲ್ಲಿ ಈ ಸಂಗತಿಯನ್ನು ಕಾಣಿಸಿರುವುದಿಲ್ಲ. ಮತ್ತು ಗ್ರಾಮಾಂತರಗಳಲ್ಲಿ ಪಶುಗಳ ಮರಣ ಸಂಖ್ಯೆಯನ್ನು ಜಾಗರೂಕತೆಯಿಂದ ಬರೆದಿಡುತ್ತಾ ಬಂದಿಲ್ಲವೆಂದು ಹೇಳಬಹುದು. ಈ ಭಾಗದಲ್ಲಿ ಡಾಕ್ಟರರೂ ಅಮಲ್ದಾರರೂ ಚೆನ್ನಾಗಿ ಮೇಲ್ವಿಚಾರಣೆ ಮಾಡುತ್ತಾ ಬರಬೇಕಾಗಿದೆ. ಮೇಲ್ಕಂಡ ಡಿಸ್ಟ್ರಿಕ್ಟುಗಳ ಹೊರತು ಇತರ ಡಿಸ್ಟ್ರಿಕ್ಟುಗಳಲ್ಲಿ ರೋಗಾದಿಗಳಿಂದ ಮೃತಪಟ್ಟಿರುವ ದನಗಳ ಸಂಖ್ಯೆ ಎಷ್ಟೆಂದರೆ—

ಡಿಸ್ಟ್ರಿಕ್ಟು	೧೯೦೫-೦೬.	೧೯೦೬-೦೭.
ಮೈಸೂರು	೨೮,೬೨೯	೧೩,೯೭೨
ತುಮಕೂರು	೧೧,೪೧೧	೯,೭೧೧
ಶಿವಮೊಗ್ಗ	೧೮,೧೧೭	೨೭,೦೪೫
ಕಡೂರು	೧೩,೬೯೮	೯,೫೫೦

ದರಖಾಸ್ತುಗಳು

ಬೆಂಗಳೂರು ಡಿಸ್ಟ್ರಿಕ್ಟು ಹೊರತು ಸಂಸ್ಥಾನದ ಇತರ ಡಿಸ್ಟ್ರಿಕ್ಟುಗಳಲ್ಲಿ ವ್ಯವಸ್ಥೆಯಾಗದೆ ಬಾಕಿಯಿದ್ದ ದರಖಾಸ್ತುಗಳೂ, ಈ ಸಾಲಿನಲ್ಲಿ ದಾಯರ್ ಮಾಡಲ್ಪಟ್ಟ ದರಖಾಸ್ತುಗಳೂ ಸೇರಿ ೬,೦೧೯ ಆಗುತ್ತವೆ. ಈ ಪೈಕಿ ೧,೬೫೮ ದರಖಾಸ್ತುಗಳನ್ನು ಇತ್ಯರ್ಥಮಾಡಿದರು. ಕೋಲಾರದಲ್ಲಿ ದಾಯರ್ ಮಾಡಲ್ಪಟ್ಟ ಮತ್ತು ಇತ್ಯರ್ಥವಾದ ದರಖಾಸ್ತುಗಳು ಬಹಳ ಹೆಚ್ಚಾಗಿರುತ್ತವೆ. ಇತ್ಯರ್ಥವಾಗದೆ ಉಳಿದಿರುವ ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಬಹಳವಾಗಿರುತ್ತವೆ. ಮಂಡ್ಯ, ನಂಜನಗೂಡು, ಗುಂಡ್ಲುಪೇಟೆ, ನಾಗಮಂಗಲ ತಾಲ್ಲೂಕುಗಳಲ್ಲೇ ಇತ್ಯರ್ಥವಾಗದೆ ಬಹಳ ಉಳಿಸಿರುತ್ತವೆ. ಮೂರು ವರುಷಕ್ಕಿಂತಲೂ ಹೆಚ್ಚಾಗಿ ವ್ಯವಸ್ಥೆಯಾಗದೆ ಉಳಿದಿರುವ ದರಖಾಸ್ತುಗಳು ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ, ನಂಜನಗೂಡು ತಾಲ್ಲೂಕುಗಳ ಅಮಲ್ದಾರರುಗಳ ಜವಾಬ್ದಾರಿಗೆ ಒಳಪಟ್ಟಿರುತ್ತವೆ ರಬ್ಬರ್ ವ್ಯವಸಾಯಕ್ಕೆ ೧೬ ದರಖಾಸ್ತುಗಳನ್ನು ಒಪ್ಪಿ ೧,೯೬೮ ಎಕರೆ ಜಮೀನು ಕೊಟ್ಟಿದೆ

ಅಮಲ್ದಾರುಗಳು

ಚಟುವಟಿಕೆಯಾಗಿ ಮನಸ್ಸಿಟ್ಟು ಕೆಲಸ ಮಾಡತಕ್ಕ ಅಮಲ್ದಾರರ ಸಂಖ್ಯೆಯು ಬಹಳ ಸ್ವಲ್ಪವಾಗಿರುತ್ತದೆ. ಈಚೀಚೆಗೆ ಅಮಲ್ದಾರರಾಗಿ ನೇಮಕನಾಗಿರತಕ್ಕವರು ಚಟುವಟಿಕೆಯಾಗಿ ಕೆಲಸಮಾಡುವುದು ಬಹುತರ ಕೇಳಬರುತ್ತಿದೆ ಸಚ್ಚರಿತ್ರರೂ ಯೋಗ್ಯರೂ ಆಗಿರತಕ್ಕ ಅಮಲ್ದಾರರನ್ನು ಮೇಲ್ದರದ ಅಧಿಕಾರಗಳಿಗೆ ಬಡ್ತಿಮಾಡಲಾಗಿದೆ. ಅವರ ಸಂಗಡಿದ್ದ ಸರ್ವಿಸ್‌ದಾರರಾದ ಕೆಲವು ಅಮಲ್ದಾರರು ತಮಗೆ ಬಡ್ತಿ ದೊರೆಯಲಿಲ್ಲವೆಂದು ಅಸಮಾಧಾನ ಪಟ್ಟುಕೊಂಡು, ಕೆಲಸದಲ್ಲಿ ಶ್ರದ್ಧೆಯನ್ನು ತೋರಿಸಲೇ ಸಾಮರ್ಥ್ಯವಿಲ್ಲದವರಾಗಿಯೂ ಇದಾರೆ.

ಗ್ರಾಮಾಧಿಕಾರಿಗಳು.

ಶಾನುಭೋಗರಿಗೆ ಆ ನೌಕರಿಯನ್ನು ತೃಪ್ತಿಕರವಾಗಿ ಮಾಡುವ ಯೋಗ್ಯತೆಯನ್ನು ಪಡೆದುಕೊಳ್ಳುವುದಕ್ಕೆ ಒಂದು ಸುಲಭವಾದ ಪರೀಕ್ಷೆಯನ್ನು ವಿಧಾಯಿಸಿ, ೧೯೦೭ನೇ ಜೂಲೈ ಗುರ್ಜೆಟ್‌ನಲ್ಲಿಯೂ ಜಾರಿಗೆ ತರಲ್ಪಟ್ಟಿದೆ ಅದೇ ವರುಷ ನವಂಬರ್ ತಿಂಗಳಲ್ಲಿ ಪಟೇಲರು ಜನನ ಮರಣ ರಿಜಿಸ್ಟರನ್ನು ಬರೆಯುವುದು, ಕಂದಾಯ ವಸೂಲಾತಿಯಾದ [illegible] ರಶೀತಿ ಕೊಡುವುದು [illegible] ಳನ್ನು ಕುರಿತು ರಿಪೋರ್ಟುಗಳನ್ನು ಬರೆಯುವುದು, ಇವನ್ನು ಮಾಡುವುದಕ್ಕಾದರೂ ಸಾಮರ್ಥ್ಯ ಪಡೆಯದಿದ್ದರೆ ಪಟೇಲಿಯ ನೌಕರಿ ಬರದೆಂದು ಹುಕುಂಮಾಡಿ, ಆ ಆಜ್ಞೆಯು ಮೂರು ವರುಷದ ಅವಧಿಕೊಟ್ಟು, ತರುವಾಯ ಜಾರಿಯಲ್ಲಿ ತರುವಂತೆ ತಿಳಿಸಲಾಗಿದೆ.

ಎಂಪೈರ್ ಡೇ ಉತ್ಸವಗಳು.

ಕುಣಿಗಲು ತಾಲ್ಲೂಕು ನಿಡಸಾಲೆಗ್ರಾಮ.

ಎಂಪೈರ್ ಡೇ ದಿನ ಇಲ್ಲಿನ ಸ್ಕೂಲ್ ಮುಂಭಾಗದಲ್ಲಿ ಮಾವಿನ ತಳಿರುಗಳಿಂದಲೂ, ಎಳನೀರುಗಳಿಂದಲೂ, ಬಾಳೆಗಂಬಗಳಿಂದಲೂ ಅಲಂಕರಿಸಲ್ಪಟ್ಟಿದ್ದ ಚಪ್ಪರ ಹಾಕಲ್ಪಟ್ಟಿತು. ಪಾಠಶಾಲೆಯ ಒಳಗಡೆ ನಾನಾ ವಿಧವಾದ ಚಿತ್ರಗಳಿಂದ ಪೂರಿತವಾಗಿಯೂ, ಪರಿಮಳಯುಕ್ತವಾಗಿಯೂ ಮಾಡಲ್ಪಟ್ಟು ನೇತ್ರಾನಂದಕರವಾಗಿತ್ತು. ಸ್ಕೂಲಿನ ಮೇಲೆ ಬ್ರಿಟಿಷ್ ಬಾವುಟವು ಎತ್ತಿ ಕಟ್ಟಲ್ಪಟ್ಟಿತ್ತು. ಒಳಗಡೆ ಮತ್ತು ಹೊರಗಡೆಯೂ ಸಹಾ ವಿದ್ಯಾರ್ಥಿಗಳೂ, ಅವರ ಪೋಷಕರೂ, ಇತರರೂ ಸಹಾ ಕಿಕ್ಕಿರಿದು ನೆರೆದಿದ್ದರು. ಮೊದಲು ನಮ್ಮ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನಾರೂಪವಾದ ಒಂದು ಗಾನವು ವಿದ್ಯಾರ್ಥಿಗಳಿಂದ ಹಾಡಲ್ಪಟ್ಟು, ಇಂಡಿಯಾ ಚಕ್ರವರ್ತಿನಿಯವರ ಮತ್ತು ಈಗಿನ ಚಕ್ರವರ್ತಿಗಳ ಕೀರ್ತಿಪ್ರಶಂಸೆಯುಳ್ಳ ಒಂದು ಉಪನ್ಯಾಸವು ಮಾಡಲ್ಪಟ್ಟಿತು ಇದರಲ್ಲಿ ಹಿಂದಿನ ನಿರಂಕುಶಕಾಲದಲ್ಲಿ ಪ್ರಜೆಗಳ ಸುಖಸಮಾಧಾನಕ್ಕೆ ಅಸ್ಪದವಾದ ಹಿಂಸಾತಿಶಯವೂ, ಈಗಿನ ಇಂಗ್ಲೀಷ್ ರಾಜ್ಯಭಾರದಲ್ಲಿ ಸಮಸ್ತ ಪ್ರಜೆಗಳ ಮಾನ ಧನ ಪ್ರಾಣಗಳ ರಕ್ಷಣಾರೀತಿಯುಕ್ತವಾದ ಸೌಖ್ಯರಾಶಿಯೂ ಗರ್ಭೀಕರಿಸಲ್ಪಟ್ಟಿದ್ದುವು. ಈ ಉಪನ್ಯಾಸದ ಅಂತ್ಯದಲ್ಲಿ ಸಂತಸಘೋಷಗಳೂ, ಕರತಾಡನಗಳೂ ಮಾಡಲ್ಪಟ್ಟವು ಅನಂತರ ಬಾಲಕರಿಗೂ, ಸಭಿಕರಿಗೂ ಸಹ ಗಂಧ ಪುಷ್ಪ ಫಲಾಹಾರಗಳು ಹಂಚಲ್ಪಟ್ಟವು. ಇವುಗಳೆಲ್ಲವೂ ಪೂರೈಸಲು ಸಾಯಂಕಾಲ ೬ ಗಂಟೆಯಾಯಿತು. ಆಗ ವಿದ್ಯಾರ್ಥಿಗಳೆಲ್ಲರೂ ಮೈದಾನದಲ್ಲಿ ನಿಲ್ಲಿಸಲ್ಪಟ್ಟು ಅವರಿಂದ ಹಾರುವುದು, ಕುಸ್ತಿ, ಓಡುವುದು ಮೊದಲಾದ ಅಂಗಸಾಧನೆಗಳು ಮಾಡಿಸಲ್ಪಟ್ಟವು. ತರುವಾಯ ಅವರೆಲ್ಲರಿಗೂ ಪುನಃ ಫಲಾಹಾರವು ಕೊಡಲ್ಪಟ್ಟಿತು ಆ ಸಾಯಂಕಾಲಕ್ಕೆ ಜಯಘೋಷದೊಡನೆ ಸಭೆಯು ಬರಖಾಸ್ತಾಯಿತು ಆಗ ಸಭಿಕರೂ ವಿದ್ಯಾರ್ಥಿಗಳೂ ಸಹ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು ಈ ಕಾರಣದಿಂದ ಅವರ ಮನಸ್ಸು ತುಂಬಾ ಸಂತೋಷಭರಿತವಾಯಿತು.

ನಂದ್ಯಗಿರಿ.

ಕಳೆದ ತಾ. ೨೪ನೆ ಮಧ್ಯಾಹ್ನಕಾಲ ಎಂಪೈರ್ ಡೇ ಉತ್ಸವವು ಪ್ರಾರಂಭವಾಗಿ ೯ ಘಂಟೆಗೆ ಸಭೆ ಬರಖಾಸ್ತಾಯಿತು. ಆ ಕಾಲದಲ್ಲಿ ಈ ಊರಲ್ಲಿರತಕ್ಕ ದೊಡ್ಡ ಮನುಷ್ಯರು, ವರ್ತಕರು, ನೌಕರರು ದಯಮಾಡಿಸಿದ್ದರು. ಮೆ॥ ರಂಗರಾಯರು ಅಗ್ರಾಸನವನ್ನು ವಹಿಸಿದ್ದರು ಪ್ರಾತಃಕಾಲ ೭ ಘಂಟೆಗೆ ಸರಿಯಾಗಿ ಸಭಾ ಮುಂಭಾಗದಲ್ಲಿ ಬಾಲಕಿಯರು ಚಕ್ರವರ್ತಿಯವರ ಮತ್ತು ಶ್ರೀಮನ್ಮಹಾರಾಜರವರ ಪರವಾಗಿ ಕೀರ್ತನೆಗಳನ್ನೂ, ಶ್ರೀಮನ್ ಎಡ್ವರ್ಡ್ ದೊರೆಯವರಿಗೆ ಆಯುರಾರೋಗ್ಯಾಭಿವೃದ್ಧಿಯನ್ನು ದಯಪಾಲಿಸಲು ಕೀರ್ತನೆಯನ್ನೂ ಹಾಡಿದರು. ಮೆ॥ ರಂಗರಾಯರು ಇಂಗ್ಲೀಷರ ಪ್ರಭುತ್ವದಿಂದ ನಮ್ಮ ಹಿಂದೂಸ್ಥಾನಕ್ಕೆ ಉಂಟಾಗಿರುವ ಸೌಕರ್ಯಗಳನ್ನೂ ಪ್ರಜಾ ನೆಮ್ಮದಿಯನ್ನೂ ಕುರಿತೂ, ಒಂದೆ ಮನುಷ್ಯನು ನಗರಗಳಿಂದ ಮುಸಲ್ಮಾನರ ಆಳ್ವಿಕೆಗಿಂತಲೂ ರೈಲ್ವೆ ತಂತಿ ಮುಂತಾದ ಪ್ರಜಾ ಸೌಕರ್ಯಗಳು ಕಲ್ಪಿಸಿದ ವಿಷಯವನ್ನೂ ಕುರಿತೂ ಸುಮಾರು ಒಂದೂವರೆ ಘಂಟೆವರಿಗೂ ಉಪನ್ಯಾಸಮಾಡಿ, ನಮ್ಮನ್ನು ನಮ್ಮ ದೊರೆಗಳನ್ನೂ ಆಳುವ ಚಕ್ರವರ್ತಿಗಳಿಗೆ ಸುಖ ಸಾಂಬ್ರಾಜ್ಯವನ್ನು ಬಯಸಿ, ಸಕಲರೂ ಕರತಾಡನ ಮಾಡಲು ಅಪೇಕ್ಷಿಸಿದಂತೆ ಜಯಘೋಷದಿಂದ ಸಕಲರೂ ಕರತಾಡನಮಾಡಿದರು ಅನಂತರ ಬಂದಿದ್ದ ಮಹನೀಯರಿಗೆಲ್ಲಾ ಗಂಧ ಪುಷ್ಪ ತಾಂಬೂಲಗಳೂ ಬಾಲಕಿಯರಿಗೆ ಮಿಠಾಯಿಯೂ ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು. ಈ ಊರಲ್ಲಿರುವ ಆರ್ಯ ಬಾಲಿಕಾ ಪಾಠಶಾಲೆಯಲ್ಲಿಯೂ ಇದೇ ರೀತಿ ಸಾಯಂಕಾಲ ೭ ಘಂಟೆಯಿಂದ ೭ ಘಂಟೆವರಿಗೂ ಸಭಾ ಸೇರಿ ಶ್ರೀಮನ್ ಎಡ್ವರ್ಡ್ ಪ್ರಭುಗಳ ಸುಖ ಸಾಂಬ್ರಾಜ್ಯ ಪದವಿಯು ದಿನೇ ದಿನೇ ಹೆಚ್ಚುತ್ತಿರಲೆಂದೂ ನಮ್ಮ ಶ್ರೀಮನ್ಮಹಾರಾಜರವರ ಪರಮಪದವಿಯು ಶ್ರೀಮನ್ ಎಡ್ವರ್ಡ್ ಪ್ರಭುಗಳ ಮೂಲಕ ದಿನೇ ದಿನೇ ಅಭಿವೃದ್ಧಿಹೊಂದಿ ಆಯುರಾರೋಗ್ಯವನ್ನು ಭಗವಂತನು ದಯಪಾಲಿಸಲು ಗಾನಗಳ ಮೂಲಕ ಬಾಲಕಿಯರು ಬಯಸಿದ ತರುವಾಯ ಬಾಲಕಿಯರಿಗೆ ಬಹುಮಾನಗಳು ಹಂಚಲ್ಪಟ್ಟವು ಕಡೆಯಲ್ಲಿ ಫಲ ಪುಷ್ಪ ತಾಂಬೂಲವೂ ಬಾಲಕಿಯರಿಗೆ ಮಿಠಾಯಿಯೂ ಹಂಚಲ್ಪಟ್ಟು ಸಭೆ ಬರಖಾಸ್ತಾಯಿತು

ಶಿವಮೊಗ್ಗ ತಾಲ್ಲೂಕು ಆಯನೂರು.

ಆಯನೂರಿನಲ್ಲಿ ನಡಿಸುವಕ್ಕಾಗಿದ್ದ ಎಂಪೈರ್ ಡೇ ಉತ್ಸವಕ್ಕಾಗಿ ಈ ಸ್ಕೂಲಿನ ಉಪಾಧ್ಯಾಯರುಗಳೂ ಬಾಲಕರೂ. ಗರ್ಲ್ಸ್ ಸ್ಕೂಲ್ ಉಪಾಧ್ಯಾಯರು ಮತ್ತು ಬಾಲಕಿಯರೂ ಸಹಾ ಸೇರಿದ್ದರು. ಸದರಿ ಸ್ಕೂಲ್ ಕಟ್ಟಡದ ಒಂದು ಕೋಣೆಯಲ್ಲಿ ಸುಂದರವಾದ ಉನ್ನತಾಸನವನ್ನೇರ್ಪಡಿಸಿ, ಅದರ ಮೇಲ್ಭಾಗದಲ್ಲಿ, ಘನವನ್ನು ಹೊಂದಿದ ಶ್ರೀಮನ್ ವಿಕ್ಟೋರಿಯಾ ಮಹಾರಾಣಿಯವರ ಚಿತ್ರವೂ, ಇವರ ಜ್ಯೇಷ್ಠಪುತ್ರರಾಗಿ ಪ್ರಿನ್ಸ್ ಆಫ್ ವೇಲ್ಸರಾಗಿದ್ದು ಶ್ರೀಮದಿಂಡಿಯಾ ಚಕ್ರವರ್ತಿಗಳಾಗಿರುವ ಎಡ್ವರ್ಡರವರ ಮತ್ತು ಮೈಸೂರು ಪ್ರಭುಗಳಾದ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ ಯವರ ಭಾವಚಿತ್ರಗಳೂ ಜನಸ್ತೋಮದಲ್ಲಿ ಕಂಗೊಳಿಸುತ್ತಿದ್ದುವು ಕೋಣೆಯ ಗೋಡೆಗಳಲ್ಲಿ ಹಸ್ತ ಕೌಶಲ್ಯದಿಂದ ರಚಿಸಿದ ವಸ್ತುಪೂರಿತದ ನಕ್ಷೆಗಳೂ ನ್ಯಾಪುಗಳೂ ಮನಸ್ಸನ್ನಾಕರ್ಷಿಸುತ್ತಿದ್ದುವು. ಶ್ರೀಸ್ಥಾನದ ಉಭಯ ಪಾರ್ಶ್ವಗಳಲ್ಲಿಯೂ ಫಾರೆಸ್ಟ್ ರೇಂಜ್ ಆಫೀಸರೂ, ತಾಲ್ಲೂಕು ಮೇಸ್ತ್ರಿಗಳೂ, ಪೋಸ್ಟ್ ಮಾಸ್ಟರೂ, ರಹದಾರಿಯಲ್ಲಿರುವ ನಗ [illegible] ರವರೂ ಬಂದೂಕಿನಿಂದೊಡಗೂಡಿದ ಪೋಲೀಸು ಕಾನ್ಸ್ಟೇಬಲ್‌ಗಳಿಂದ ಕೂಡಿದವರಾದ ದಫೇದಾರರೂ ಇವರೇ ಆದಿಯಾದ ಸರ್ಕಾರಿ ನೌಕರರೂ ಸ್ಕೂಲ್ ಮೆಂಬರುಗಳೂ ಮತ್ತು ಇನ್ನೂ ಹಲವರು ದೊಡ್ಡ ಮನುಷ್ಯರೂ ಕ್ರಮಪರಿತು ಆಸನಗಳನ್ನು ಅಲಂಕರಿಸಿದ್ದರು. ಬ್ರಿಟಿಷ್ ಚಕ್ರಾಧಿಪತ್ಯದ ವಿಷಯವಾಗಿ ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದನಂತರ, ಬಾಲಕರಲ್ಲೊಬ್ಬನಿಂದ ಇಂಡಿಯಾ ಚಕ್ರವರ್ತಿನಿಯಾದಾಗಿದ್ದ ಶ್ರೀ ವಿಕ್ಟೋರಿಯಾ ಮಹಾರಾಣಿಯವರ ಚರಿತ್ರೆಯು ಓದಲ್ಪಟ್ಟಿತು ಬಾಲಕ ಬಾಲಕಿಯರ ಗಾನವು ಕರ್ಣಾನಂದವನ್ನುಂಟುಮಾಡಿತು ಪೋಲೀಸಿನವರಿಂದ ಪರೇಡ್ ಮಾಡಲ್ಪಟ್ಟನಂತರ ೩೫ ಗುಂಡುಗಳು ಹಾರಿಸಲ್ಪಟ್ಟವು. ಅನಂತರ ಸಭೆಯವರಿಗೆ ಗಂಧ ಪುಷ್ಪ ತಾಂಬೂಲವೂ, ಬಾಲಕ, ಬಾಲಕಿಯರಿಗೆ ಮಿಠಾಯಿ ಮೊದಲಾದ ತಿಂಡಿಪದಾರ್ಥಗಳೂ ಹಂಚಲ್ಪಟ್ಟವು. ಸರ್ವರೂ ಶ್ರೀಮದಿಂಡಿಯಾ ಚಕ್ರವರ್ತಿಗಳವರಿಗೂ, ನಮ್ಮ ಶ್ರೀಮನ್ಮಹಾರಾಜರವರಿಗೂ ಶ್ರೇಯಃ ಪ್ರಾರ್ಥನೆ ಮಾಡಿದನಂತರ ಸಭೆಯು ಪೂರೈಸಿತು.

ನೆಲಮಂಗಲ.

ನೆಲಮಂಗಲದ ಎ ವಿ. ಸ್ಕೂಲಿನಲ್ಲಿ ಎಂಪೈರ್ ಡೇ ಮಹೋತ್ಸವವನ್ನು ಮೆ॥ ಟಿ. ರಾಮಕೃಷ್ಣಯ್ಯನವರು ಹೆಡ್ ಮಾಸ್ಟರ್ ಛಾರ್ಜನ್ನು ವಹಿಸಿ, ಮೇ ೨೫ ನೇ ತಾ. ಸೋಮವಾರ ನಡಿಸಿದರು. ಆ ಕಾಲದಲ್ಲಿ ಮೆ॥ ಅಮಲ್ದಾರ್ ಕೃಷ್ಣಮೂರ್ತಿರಾಯರು, ಹಿಂದೂಸ್ಥಾನಿ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರಾದ ಮೆ॥ ಮಹಮದ್ ಬೇಗ್ ಸಾಹೇಬರು, ಡಾಕ್ಟರು, ಶಿರಸ್ತೇದಾರರು, ತಾಲ್ಲೂಕು ಕಚೇರಿಯ ಮತ್ತು ಸಬ್ ರಿಜಿಸ್ಟ್ರರ್ ಆಫೀಸ್ ನೌಕರರು ಮುನಿಸಿಪಲ್ ಮೆಂಬರುಗಳು, ಇನ್ನೂ ಅನೇಕ ದೊಡ್ಡ ಮನುಷ್ಯರು ಬಾಲಕ, ಬಾಲಕಿಯರು ಸಹ ಸೇರಿದ್ದರು. ತೋರಣ ಮೊದಲಾದವುಗಳಿಂದ ಸ್ಕೂಲನ್ನು ಅಲಂಕರಿಸಿದ್ದರು. ಪ್ರಾತಃಕಾಲ ೭ ಗಂಟೆಗೆ ಪ್ರಾರಂಭಿಸಿ ಸ್ಕೂಲ್ ಮೈದಾನಿನಲ್ಲಿ "ಯೂನಿಯನ್ ಜಾಕ್" ಬಾವುಟದ ಸಮೀಪದಲ್ಲಿ ಮೆ॥ ಬಿ. ಕೃಷ್ಣಪ್ಪನವರು ಬಾಲಕರಿಂದ ಡ್ರಿಲ್ಲನ್ನು ಮಾಡಿಸಿ, ಇಂಗ್ಲಿಷ್ ಪದ್ಯಗಳನ್ನು ಬಾಲಕರಿಂದ ಗಾನರೂಪವಾಗಿ ಹೇಳಿಸಿದರು. ಹೆಡ್ ಮಾಸ್ಟರು ಸಾಲಾಗಿ ನಿಲ್ಲಿಸಿದ್ದ ಬಾಲಕ ಬಾಲಕಿಯರಿಂದ ಸೆಲ್ಯೂಟ್ ಮಾಡಿಸಿ, ಎಡ್ವರ್ಡ್ ಚಕ್ರವರ್ತಿಗಳ ಶ್ರೇಯಃ ಪ್ರಾರ್ಥನೆಯನ್ನು ಮಾಡಿಸಿದರು. ತರುವಾಯ ಸ್ಕೂಲಿನಲ್ಲಿ ಏರ್ಪಡಿಸಿದ್ದ ಸಭೆಯು ಅಗ್ರಾಸನಾಧಿಪತ್ಯವು ಅಮಲ್ದಾರರಿಂದ ವಹಿಸಲ್ಪಟ್ಟಿತು ತಂಬೂರಿ, ಪಿಟೀಲ್ ಮೊದಲಾದ ವಾದ್ಯಗಳು ನಡೆದವು ಮೆ॥ ನಂಜುಂಡಯ್ಯನವರು ಬಾಲಕರಿಂದ ಶಾರದಾ ಮತ್ತು ಪರಮಾತ್ಮ ಸ್ತುತಿಗಳನ್ನು ಗಾನರೂಪವಾಗಿ ಹೇಳಿಸಿದರು. ಸಂಸ್ಕೃತ ಪಂಡಿತರು ಮೆ॥ ಲಕ್ಷ್ಮೀನರಸಿಂಹ ಶಾಸ್ತ್ರಿಗಳು ಸಂಸ್ಕೃತ ಪಂಚರತ್ನಮಾಲಿಕೆಯನ್ನು ನಿರ್ಮಿಸಿ, ಚಕ್ರವರ್ತಿಗಳ ಶ್ರೇಯಃ ಪ್ರಾರ್ಥನೆಯನ್ನು ಮಾಡಿದರು. ಹೆಡ್ ಮಾಸ್ಟರು ಬ್ರಿಟಿಷರ ಆಳ್ವಿಕೆಯಿಂದ ಉಂಟಾದ ಪ್ರಯೋಜನಗಳನ್ನು ಕುರಿತು ಉಪನ್ಯಾಸಮಾಡಿ ಕನ್ನಡ ಪದ್ಯಗಳನ್ನು ಹೇಳಿಸಿ ಶ್ರೇಯಃ ಪ್ರಾರ್ಥನೆಯನ್ನು ಮಾಡಿಸಿದರು. ಮೆ॥ ನಂಜುಂಡ ಶಾಸ್ತ್ರಿಗಳು ಎಡ್ವರ್ಡ್ ಚಕ್ರವರ್ತಿಗಳ ಚರಿತ್ರೆಯ ಉಪನ್ಯಾಸವನ್ನು ಹೇಳಿದರು. ತರುವಾಯ ಹಿಂದೂಸ್ಥಾನಿ ಹೆಡ್ ಮಾಸ್ಟರು ಮತ್ತು ಆ ಮಾಸ್ಟರುಗಳು ಹಿಂದೂಸ್ಥಾನಿ ಭಾಷೆಯಲ್ಲಿ ಅಡ್ರೆಸ್ಸನ್ನು ಹೇಳಿದರು ಗರಲ್ಸ್ ಸ್ಕೂಲ್ ಹೆಡ್ ಮಾಸ್ಟರು ಮೆ॥ ಸೂರಪ್ಪನವರು ಬಾಲಕಿಯರಿಂದ ಗಾನರೂಪವಾಗಿ ಚಕ್ರವರ್ತಿಗಳ ಶ್ರೇಯಃ ಪ್ರಾರ್ಥನೆಯನ್ನು ಮಾಡಿಸಿದರು. ಹಿಂದೂಸ್ಥಾನಿ ಬಾಲಕರ ಗಾನವೂ ಜರುಗಿತು. ಮೆ॥ ನಂಜುಂಡಯ್ಯನವರು ಬಾಲಕರಿಂದ ಚಕ್ರವರ್ತಿಗಳ ಮತ್ತು ಮೈಸೂರು ಮಹಾರಾಜರವರ ಶ್ರೇಯಃಪ್ರಾರ್ಥನೆಗಳನ್ನು ಗಾನರೂಪವಾಗಿ ಹೇಳಿಸಿ, ಮಂಗಳಗಾನವನ್ನು ಸಹಾ ಹಾಡಿಸಿದರು ಸಭೆಯವರೆಲ್ಲ ಪೂರ್ಣಾನಂದ ಹೊಂದಿದರು. ಬಾಲಕಬಾಲಕಿಯರಿಗೂ ಸಭಿಕರಿಗೂ ಗಂಧಪುಷ್ಪತಾಂಬೂಲಗಳನ್ನು ಕೊಟ್ಟದ್ದಲ್ಲದೆ ಸಕ್ಕರೆ ಹಣ್ಣು ಮೊದಲಾದವುಗಳು ಹಂಚಲ್ಪಟ್ಟಿತು. ಅನಂತರ ಸಭೆಯು ಪೂರ್ತಿಯಾಗಿ ಎಲ್ಲರೂ ತೆರಳಿದರು.

ಗುಬ್ಬಿ ತಾಲ್ಲೂಕು ಕಡಬ.

ಗುಬ್ಬಿ ತಾಲ್ಲೂಕು ಕಡಬದಲ್ಲಿರುವ ತಾಲ್ಲೂಕ್ ಬ್ರಾಂಚ್ ಗೌರ್ನಮೆಂಟ್ ಗರಲ್ ಸ್ಕೂಲಿನಲ್ಲಿ ತಾ. ೨೫ನೆ ಸೋಮವಾರ ಪ್ರಾತಃಕಾಲ ೭ ಘಂಟೆಯಿಂದ ೧೦ ಘಂಟೆವರಿಗೂ ಎಂಪೈರ್ ಡೇ ಉತ್ಸವವು ನಡಿಸಲ್ಪಟ್ಟಿತು. ಸ್ಕೂಲ್ ಬಾಗಲಿಗೆ ಕದಳೀ ಸ್ತಂಭಗಳೂ ತಳಿರೋರಣಗಳೂ ಕಟ್ಟಲ್ಪಟ್ಟಿದ್ದವು ಇಂಗ್ಲೀಷ್ ಬಾವುಟವು ಕಟ್ಟಲ್ಪಟ್ಟಿತು. ಗತಿಸಿದ ವಿಕ್ಟೋರಿಯಾ ಮಹಾರಾಜ್ಞಿಯವರ ಭಾವಚಿತ್ರವೂ, ಹಾಲೀ ಚಕ್ರವರ್ತಿಗಳಾದ ಎಡ್ವರ್ಡ್ ದೊರೆಗಳ ಭಾವ ಚಿತ್ರವೂ, ನಮ್ಮ ಮೈಸೂರು ಮಹಾರಾಜರವರ ಭಾವ ಚಿತ್ರವೂ ಪುಷ್ಪ ಮಾಲಿಕೆಗಳಿಂದಲೂ ಸುಗಂಧ ಪೂರಿತವಾದ ವಾಸನೆಯಿಂದಲೂ ಸ್ಕೂಲಿನ ಒಳಭಾಗವು ಬಹಳ ಶೋಭಾಯಮಾನವಾಗಿತ್ತು. ಸ್ಕೂಲ್ ಬಾಲಕಿಯರೆಲ್ಲ ವಸ್ತ್ರಾಭರಣಗಳಿಂದ ಅಲಂಕೃತರಾಗಿ ಬಂದಿದ್ದರು ಸ್ಕೂಲ್ ಕಮಿಟಿ ಅವರ ಸೆಕ್ರೆಟರಿ ಮೆ॥ ಕೆ. ರಾಮಾನುಜಯ್ಯಂಗಾರರು, ಮೆಂಬರುಗಳಾದ ಮೆ॥ ಕೃಷ್ಣಮೂರ್ತಿರಾಯರೂ, ಮೆ॥ ವೆಂಕಟದಾಸಪ್ಪನವರೂ, ಮೆ॥ ಪಟೇಲ್ ಪುಟ್ಟವೀರೇಗೌಡರೂ ಸ್ಕೂಲಿಗೆ ಹಾಜರಾಗಿ ಎಲ್ಲರನ್ನೂ ಬರಮಾಡಿಕೊಂಡರು. ಅನಂತರ ಬಾಲಕಿಯರಿಂದ ಸಂಗೀತವು ಹಾಡಿಸಲ್ಪಟ್ಟಿತು ಗತಿಸಿದ ವಿಕ್ಟೋರಿಯಾ ಮಹಾರಾಜ್ಞಿಯವರ ಜೀವಿತ ಚರಿತ್ರೆಯನ್ನು, ಭೂಪಟದ ಸಹಾಯದಿಂದ ಇಂಗ್ಲೀಷರಿಗೆ ಪ್ರಪಂಚದಲ್ಲಿ ಯಾವ ಯಾವ ಭಾಗಗಳು ಸೇರಿದೆ ಎಂಬುದನ್ನೂ, ಇಂಗ್ಲೀಷರಿಂದ ಈ ದೇಶಕ್ಕೆ ಉಂಟಾಗಿರುವ ಸಮಸ್ತ ಪ್ರಯೋಜನಗಳನ್ನೂ ಸ್ಕೂಲ್ ಹೆಡ್ ಮಾಸ್ಟರಿಂದ ಚೆನ್ನಾಗಿ ವಿವರಿಸಲ್ಪಟ್ಟಿತು. ಅನಂತರ ಎಡ್ವರ್ಡ್ ದೊರೆಗಳ ಕೀರ್ತಿ ಪ್ರಶಂಸೆ ಮಾಡಲ್ಪಟ್ಟಿತು. ತರುವಾಯ ನಮ್ಮ ಮಹಾರಾಜರವರ ಶ್ರೇಯಃ ಪ್ರಾರ್ಥನೆಯೂ ಮಾಡಲ್ಪಟ್ಟಿತು. ಬಳಿಕ ಬಾಲಕಿಯರಿಂದ ಮಂಗಳಾರತಿಯು ನಡಿಸಲ್ಪಟ್ಟಿತು. ಬಾಲಕಿಯರಿಗೆ ಹಣ್ಣು ಹಂಪಲೂ ತಿಂಡಿಪದಾರ್ಥಗಳೂ ಹಂಚಲ್ಪಟ್ಟವು. ತರುವಾಯ ಆ ಸೆಕ್ರೆಟರಿ ಮೆ॥ ಕೆ. ರಾಮಾನುಜಯ್ಯಂಗಾರರು [illegible] ಜನಗಳಿಗೂ

ಹೇಳಿದ್ದೇನೆಂದರೆ.—ಈಗ ೩೦—೪೦ ವರುಷಗಳಿಂದ ನಮ್ಮ ದೇಶದ ಜನಗಳನ್ನು ಮಕ್ಕಳೋಪಾದಿಯಲ್ಲಿ ಯಾವ ತೊಂದರೆಗಳಿಗೂ ಅವಕಾಶ ಕೊಡದಂತೆ ಏಕ ರೀತಿಯಾಗಿ ಕಾಪಾಡುತ್ತಿದ್ದ ಗತಿಸಿದ ವಿಕ್ಟೋರಿಯಾ ಮಹಾರಾಜ್ಞೀಯವರ ಜನ್ಮದಿನದ ಜ್ಞಾಪಕಾರ್ಥವಾಗಿಯೂ, ನಮ್ಮಗಳಿಗಿರುವ ರಾಜಭಕ್ತಿ ವಿಶ್ವಾಸಗಳನ್ನು ತೋರ್ಪಡಿಸುವದಕ್ಕಾಗಿಯೂ, ಮುಂದೆ ಪ್ರಬುದ್ಧಮಾನರಾಗತಕ್ಕ ಬಾಲಕ ಬಾಲಿಕೆಯರಿಗೆ ರಾಜಭಕ್ತಿ ವಿಶ್ವಾಸಗಳು ಹುಟ್ಟುವದಕ್ಕೆ ಅವಕಾಶವಿರುವದಕ್ಕಾಗಿಯೂ ಈ ಉತ್ಸವವು ಈ ದಿವಸ ಈ ಗ್ರಾಮದಲ್ಲಿ ಹಾಜರಾಗಿರುವ ಈ ಪ್ರಜೆಗಳಿಂದ ನಡಿಸಲ್ಪಟ್ಟಿರುತ್ತೆ ಎಂಬದಾಗಿ ಹೇಳಿದನಂತರ ಸಭೆಯು ಬರಖಾಸ್ತಾಯಿತು ಈ ಮೆಂಬರುಗಳು ಈ ಸ್ಕೂಲ್ ವಿಷಯದಲ್ಲಿ ತುಂಬಾ ಮುತುವರ್ಜಿಯನ್ನು ವಹಿಸಿ ಸ್ಕೂಲಿನ ಅಭಿವೃದ್ಧಿಗೆ ಸಹಾಯ ಮಾಡುತ್ತಿರುವದಕ್ಕಾಗಿ ಈ ಗ್ರಾಮನಿವಾಸಿಗಳೆಲ್ಲಾ ತುಂಬಾ ಸಂತೋಷ ಪಡುತ್ತಾರೆ. ಅನಂತರ ಇಲ್ಲಿಂದ ಎಲ್ಲರೂ ಹೊರಟು ಈ ಗ್ರಾಮಕ್ಕೆ ಮುಖ್ಯ ದೇವಸ್ಥಾನವಾದ ಜನಾರ್ದನ ಸ್ವಾಮಿಯ ಉತ್ಸವವನ್ನು ಮಾಡಲು ಪ್ರಯತ್ನಪಟ್ಟು ನೋಡಲು, ಈ ಮೆಂಬರುಗಳಿಗೆ ತಾಲ್ಲೂಕು ಬೋರ್ಡ್ ಮೀಟಿಂಗ್ ಹೀರಿಂಗು ಈ ದಿನವೇ ಇದ್ದುದರಿಂದ ಗುಬ್ಬಿಗೆ ಹೋಗಲು ತುಂಬಾ ಹೊತ್ತಾಯಿತಾಗಿ ಮಂಗಳಾರತಿಯನ್ನು ಮಾಡಿಸಿಕೊಂಡು, ಚಕ್ರವರ್ತಿಯವರ ಮತ್ತು ಮಹಾರಾಜರವರ ಆಯುರಾರೋಗ್ಯಾಭಿವೃದ್ಧಿಯನ್ನು ಬಯಸಿ ಪ್ರಾರ್ಥನೆ ಮಾಡಿ, ತರುವಾಯ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ದಯಮಾಡಿಸಿದರು.

ದೊಡ್ಡಬಳ್ಳಾಪುರ.

೨೪ ರಲ್ಲಿ ಇಲ್ಲಿನ ತಾಲ್ಲೂಕ್ ಕಚೇರಿಯಲ್ಲಿ ಅಧಿಕಾರಿಗಳೂ ಮೆಂಬರುಗಳೂ ಶೆಟ್ಟಿ ವರ್ತಕರೇ ಮುಂತಾದ ಪುರಜನರೂ ಸೇರಿ ಚಕ್ರವರ್ತಿಯವರ ಫೋಟೋವನ್ನು ಪಲ್ಲಕ್ಕಿಯಲ್ಲಿ ಇಟ್ಟು ಬೀದಿಯಲ್ಲಿ ಮೆರವಣಿಗೆ ಮಾಡಿಕೊಂಡು, ನಡುಪೇಟೆಯಲ್ಲಿರುವ ಸ್ಕೂಲಿಗೆ ಬಂದರು. ಗೌರವಾರ್ಥವಾದ ಬಂದೂಕು ಹಾರಿಸಲ್ಪಟ್ಟಿತು. ಶಿರಸ್ತೆದಾರ್ ಮ॥ ನರಹರಿರಾಯರು ಅಗ್ರಾಸನವನ್ನು ವಹಿಸಿದರು. ತರುವಾಯ ಕೆಲವರು ಉಪನ್ಯಾಸಗಳನ್ನು ಚನ್ನಾಗಿ ಮಾಡಿದರು. ಜನರಿಗೆ ತುಂಬಾ ಸಂತೋಷವಾಯಿತು ಅಲ್ಲಿಗೆ ಸಭೆಯು ಮುಕ್ತಾಯವಾಯಿತು. ತರುವಾಯ ಸಾಯಂಕಾಲ ೪ ಗಂಟೆಗೆ ನಮ್ಮ ಅಮಲ್ದಾರರೇ ಮೊದಲಾಗಿ ದೊಡ್ಡ ಮನುಷ್ಯರೆಲ್ಲಾ ಸೇರಿದರು. ಆಗ ನಡೆದ ಲಂಬಾಣಿ ಹೆಂಗಸರ ಮತ್ತು ಬೇರೆ ಗಂಡಸರ ಕೋಲಾಟವೂ ಪದಗಳೂ ನೋಡುವವರಿಗೆ ಬಹು ತಮಾಷೆಯಾಗಿತ್ತು. ಮತ್ತು ಗ್ರಾಮಫೋನ್ ಯಂತ್ರದ ಮೂಲಕ ಅನೇಕ ಪದಗಳನ್ನು ಹಾಡಿಸಿದರು. ಎಂದೂ ಕಾಣದ ಹಳ್ಳೀ ಜನರು ಇದನ್ನು ಕೇಳಿ ತುಂಬಾ ಆಶ್ಚರ್ಯಪಟ್ಟರು. ತರುವಾಯ ಬಾಲಕಿಯರು ಹಾಡುಗಳನ್ನು ಹೇಳುತ್ತಾ ಇರುವಾಗ ಸಭಿಕರೆಲ್ಲಾ ಎದ್ದು ನಿಂತು ಜಯಘೋಷಮಾಡಿದರು ಇಲ್ಲಿಂದ ರಾತ್ರಿ ೮ ಘಂಟೆವರಿಗೂ ಮೆರವಣಿಗೆ ಹೊರಟು, ತಮ್ಮ ಮನೆಗಳಿಗೆ ತೆರಳಿದರು. ತಾ. ೨೫ ರಲ್ಲಿ ಸ್ಕೂಲ್ ಮಕ್ಕಳಿಗೆ ಸಕ್ಕರೆ ಕೊಡಲ್ಪಟ್ಟಿತು.

ಅಜ್ಜಂಪುರ

ಕಳೆದ ಮೇ ತಾ ೨೪ನೇ ಸೋಮವಾರ ಎಂಪೈರ್ ಡೇ ಮಹೋತ್ಸವದ ಬಗ್ಗೆ ಗೌರ್ನಮೆಂಟ್ ಎ ಬಿ. ಸ್ಕೂಲು ಮನೋಹರವಾಗಿ ಅಲಂಕರಿಸಲ್ಪಟ್ಟಿತು. ಮುಂಭಾಗದಲ್ಲಿ ರಚಿತವಾದ ಚಪ್ಪರವು [illegible] ಸ್ತಂಭಗಳಿಂದಲೂ ತೋರಣಗಳಿಂದಲೂ, ಪುಷ್ಪಗುಚ್ಛಗಳಿಂದಲೂ, ಸಾಲಾಗಿಡಲ್ಪಟ್ಟ [illegible]ಗಳಿಂದಲೂ, ಮನೋಹರವಾದ ಚಿತ್ರಪಟಗಳಿಂದಲೂ, ಧ್ವಜಗಳಿಂದಲೂ, ಎತ್ತಿ ಕಟ್ಟಲ್ಪಟ್ಟ ಬಗೆ ಬಗೆ ಬಣ್ಣದ ಬಾವುಟಗಳಿಂದಲೂ, "ಯೂನಿಯನ್ ಜಾಕ್" ಎಂಬ ಇಂಗ್ಲೀಷ್ ಬಾವುಟದಿಂದಲೂ ಅಲಂಕರಿಸಲ್ಪಟ್ಟು ಎಲ್ಲವನ್ನು [illegible] ಸುತ್ತಿದ್ದು ಮಧ್ಯದಲ್ಲಿ ಉನ್ನತಾಸನವೇರ್ಪಡಿಸಿತ್ತು. ಇದರ ಮೇಲ್ಭಾಗದಲ್ಲಿ ನಮ್ಮ ಶ್ರೀಮನ್ಮಹಾರಾಜರವರ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ ಆಕೃತಿ ಪ್ರದರ್ಶಕ ಪಟವು ಶೋಭಿಸುತ್ತಿತ್ತು. ಇದರ ಕೆಳಭಾಗದಲ್ಲಿ ಇದೇ ಸ್ಕೂಲ್ ವಿದ್ಯಾರ್ಥಿ [illegible] ವೆಂಕಟರಮಣಾಚಾರ್ ಎಂಬಾತನಿಂದ ಚಿತ್ರಿತವಾದ ಬ್ರಿಟಿಷ್ ಸಾರ್ವಭೌಮನಾದ ಎಡ್ವರ್ಡರವರ ದಿವ್ಯರೂಪದ ಪಟವು [illegible] ಕಣ್ಮನಂಗಳನ್ನು ಸೆಳೆಯುತ್ತಿತ್ತು. [illegible] ಉಪಾಧ್ಯಾಯರಿಂದ ಆಹ್ವಾನಿತರಾದ ಸ್ಥಳೀಯ ಅಧಿಕಾರಿಗಳೂ ಮೆಂಬರುಗಳೂ, ವೈದಿಕ ಲೌಕಿಕ ಮಹಾಜನರೂ, ವರ್ತಕರೂ, ಸಾಹುಕಾರರೇ ಮೊದಲಾದ ಸಕಲರೂ ಆಹ್ವಾನಕ್ಕೆ [illegible] ಸಭಾಯೋಗ್ಯವಾದ ಉಡುಪುಗಳಿಂದಲೂ [illegible] ಉಚಿತಾಸನಗಳನ್ನಲಂಕರಿಸಿದರು. ಸರ್ವ ಸಮ್ಮತದಂತೆ ಮ॥ [illegible]ಯಪ್ಪನವರು ಅಗ್ರಾಸನಾಧೀನರಾದರು. [illegible] ಉಪಾಧ್ಯಾಯರು ಸಭೆಯ ಉದ್ದೇಶವನ್ನು ಈ ಉತ್ಸವದ ವಿಷಯದಲ್ಲಿ ಸಕಲರಿಗೂ ಇರಬೇಕಾದ ಆದರಕ್ಕೆ ಕಾರಣವನ್ನು ವ್ಯಕ್ತಗೊಳಿಸಿದರು. ಅನಂತರ ಮ॥ ನ್ಯೈ ಮೈಲಾರಯ್ಯನವರು ಬಿ ಟಿ ಮ ಆಳ್ವಿಕೆಯಲ್ಲಿ ತೋರಿಬರುವ ಅನುಕೂಲ್ಯಗಳನ್ನು ಕುರಿತು ಉಪನ್ಯಾಸವನ್ನು ಸರಸವಾಗಿ ಓದಿ ಹೇಳಿದರು ವಿದ್ಯಾರ್ಥಿ ಬಿ ಲಕ್ಷ್ಮೀಪತ್ಯೆಯನಿಂದ ಬರೆಯಲ್ಪಟ್ಟ ಪೂರ್ವಕಾಲದ ರಾಜರ ಮತ್ತು ಆಧುನಿಕರಾಜರ ಆಳ್ವಿಕೆಯ ವೈಲಕ್ಷಣ್ಯವನ್ನು ಸಂಕ್ಷೇಪಿಸಿ, ಈಗಿನ ಆಳ್ವಿಕೆಯು ಅತ್ಯುತ್ತಮವಾದದ್ದೆಂದು ವಿವರಿಸಿದ ಉಪನ್ಯಾಸವು ಓದಲ್ಪಟ್ಟಿತು. ಮುಖ್ಯೋಪಾಧ್ಯಾಯರಿಂದ ಇದೇ ಉತ್ಸವದ ಬಗ್ಗೆ ತಕ್ಕ ಸಂವಿಧಾನದಿಂದ ಬರೆಯಲ್ಪಟ್ಟದ್ದು "ಲಕ್ಷ್ಮೀಸರಸ್ವತಿಸಂವಾದ" ವೆಂಬ ಚಿಕ್ಕ ಪ್ರಬಂಧವು ಬಾಲಕರಿಂದ ಕಾಲಾನುಗುಣವಾದ ಅಭಿನಯಗಳಿಂದ ಪ್ರದರ್ಶನ ಮಾಡಲ್ಪಟ್ಟದು ಸರ್ವ ಜನಾನಂದ ದಾಯಕವಾಗಿದ್ದಿತು ಸಹಾಯೋಪಾಧ್ಯಾಯರು ಬಾಲಕರಿಂದ "ಡ್ರಿಲ್" ಮಾಡಿಸಿದರು. ಸಕಲರಿಂದ ಯೂನಿಯನ್ ಜಾಕ್ ಬಾವುಟಾವಿಗೆ ವಂದನೆ ಮಾಡಲ್ಪಟ್ಟಿರು. ಸ್ಪೋರ್ಟ್ಸ್ ಎಂಬ [illegible]ರೂಪವು ಪೈಪೋಟಿಯು ಬಹು ಚನ್ನಾಗಿ ನಡಿಯಿತು. ಇದರಲ್ಲಿ [illegible]ದಿದ ವಿದ್ಯಾರ್ಥಿಗಳಿಗೆ ಬಹುಮಾನಗಳು ಮ॥ ಡಿ. ಸುಬ್ಬ[illegible]ಯಯ[illegible]ರಿಂದ [illegible]ಚಿತವಾಗಿ ಕೊಡಲ್ಪಟ್ಟವು. ಎಸ್ಟೇಟ್ ಪ್ರಭುಗಳ ಮತ್ತು ನಮ್ಮ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನಾರೂಪವಾದ ಕಂದಪದ್ಯಗಳೂ ಹಾಡುಗಳೂ ದೇವರಪ್ಪನಿಂದ ಮನೋಹರವಾಗಿ ಹಾಡಲ್ಪಟ್ಟವು ಸಭಿಕರ ಕರತಾಡನ ಪೂರ್ವಕವಾದ ಶ್ರೇಯಃ ಪ್ರಾರ್ಥನಾ ಜಯಘೋಷವು ಬಹು ದೂರದ ಮನಿವಿಗೂ ವ್ಯಾಪಿಸಿತು ಸಭಾ ಅಧ್ಯಕ್ಷರು ಮ॥ ಶೆ ಶಂಕರಪ್ಪನವರ ಮತ್ತು ಸಹಾಯೋಪಾಧ್ಯಾಯರುಗಳ ಚಟುವಟಿಕೆಯನ್ನೂ, ಉತ್ಸಾಹವನ್ನೂ, ಏಕಮತ್ಯವನ್ನೂ, ಪ್ರದರ್ಶಿತ ಕಾರ್ಯಗಳನ್ನೂ ಶ್ಲಾಘಿಸಿದರು ಮ॥ ಹೇತಾರಾಮಯ್ಯಂಗಾರವರ ಸಂಗೀತವು ಹಿತವಾಗಿ ನಡಿಯಿತು ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳೊಂದಿಗೆ ಫಲಾಹಾರ ಪದಾರ್ಥಗಳು ವಿನಿಯೋಗ ಮಾಡಲ್ಪಟ್ಟವು. ಆನಂದದಿಂದ ಸಭೆಯು ಮುಕ್ತಾಯವಾಯಿತು. ಅನಂತರ ಸಮಾರಾಧನೆಯು ಬಹು ವಿಜೃಂಭಣೆಯಿಂದ ನಡಿಯಿತು. ಈ ಬಗ್ಗೆ ಕೆಲವರು ದೊಡ್ಡ ಮನುಷ್ಯರುಗಳ ದ್ರವ್ಯ ಸಹಾಯವು ದೊರೆತುದೂ ಅಲ್ಲದೆ, ಮ॥ ವರದಯ್ಯನವರ, ಮ॥ ವೆಂಕಟಕೃಷ್ಣಪ್ಪನವರ, ಮತ್ತು ಯಜಮಾನರು ಮ॥ ಮಂಗಳಪ್ಪನವರ, ಮ॥ ಕೃಷ್ಣಪ್ಪನವರ ಬಹು ವಿಧವಾದ ಸಹಾಯಸಂಪತ್ತು ದೊರಕಿದ್ದರಿಂದ ಅವರುಗಳನ್ನು ಶ್ಲಾಘಿಸುವುದು ಯುಕ್ತವೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆಸೇರಿ ತಿಂಗಳು ಕಳ್ಳಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು. ಕಳೆದ ಏಪ್ರಿಲ್ ತಿಂಗಳ ಜಮಾಖರ್ಚು ಮುಂತಾದ ಲೆಕ್ಕಗಳು ಓದಿದ್ದರಲ್ಲಿ ಮ್ಯುನಿಸಿಪಾಲಿಟಿಗೆ ಆ ತಿಂಗಳಲ್ಲಿ ಎಲ್ಲಾ ಬಾಬುಗಳಿಂದಲೂ ರೂ. ೧೩,೩೯೯—೧೧—೨ ಪೈ ಜಮಾ ಆಯಿತೆಂತಲೂ, ರೂ. ೯,೫೫೦—೧೪ ಆಣೆ ಖರ್ಚಾಯಿತೆಂತಲೂ ತಿಳಿಯಿತು ಮತ್ತು ಆ ತಿಂಗಳಲ್ಲಿ ಜನನ ೧೦೨; ಮರಣ—ಪ್ಲೇಗ್ ೧, ಸಾಂಕ್ರಾಮಿಕ ೧೧, ಜ್ವರ ೧೫. ಸಿಡುಬು ೧, ಇತರ ಕಾರಣಗಳು ೧೧೨, ಒಟ್ಟು ೧೩೯ ಏಪ್ರಿಲ್ ತಿಂಗಳಲ್ಲಿ ರಾಜಧಾನಿ [illegible] ೩ ಅಂಗುಲ, [illegible] ತಿಂಗಳ [illegible] ೩ . ಅಂಗುಲ ಪ್ರಮಾಣದ ಮಳೆ ಸುರಿದಿದೆ. ಜಮಾಖರ್ಚಿನ ತಖ್ತೆಯನ್ನು ಆಡಿಟರುಗಳು ತನಿಖೆ ಮಾಡಲಿಲ್ಲವಾದ್ದರಿಂದ ಆ ಬಾಬನ್ನು ಕೌನ್ಸಿಲರುಗಳು ಇತ್ಯರ್ಥ ಮಾಡಲಿಲ್ಲ.

ಆಕ್ಟ್ರಾಯಿ ಬಾಬಿನಲ್ಲಿ ಕೆಲವು ಪದಾರ್ಥಗಳ ಮೇಲೆ ಸುಂಕವನ್ನು ವಜಾಮಾಡಿ ಇನ್ನು ಕೆಲವಕ್ಕೆ ಜಾಸ್ತಿ ಮಾಡಬೇಕೆಂಬ ಮತ್ತು ಶಿಬ್ಬಂದಿಯನ್ನು ಕಡಿಮೆಮಾಡಬೇಕೆಂಬ ವಿಚಾರದಲ್ಲಿ ಹೆಲ್ತ್ ಆಫೀಸರಿಂದ ಬರಬೇಕಾಗಿದ್ದ ಸಲಹೆಗಳು ತಲಪಲಿಲ್ಲವಾಗಿ ಆ ವಿಷಯವನ್ನು ಇನ್ನೊಂದು ಮೀಟಿಂಗಿನಲ್ಲಿ ವ್ಯವಸ್ಥೆಮಾಡತಕ್ಕದ್ದೆಂದು ಕೌನ್ಸಿಲರುಗಳು ತೀರ್ಮಾನಮಾಡಿದರು.

ಬಾಲಿಹಾಕ್ ಶಿಬ್ಬಂದಿಯನ್ನು ನವರಾತ್ರಿ ಉತ್ಸವಾದಿಗಳು ಕಳೆಯುವ ತನಕ ಇಟ್ಟಿರಬೇಕೆಂತಲೂ, ನಾಯಿಗಳ ಮೇಲೆ ಕಂದಾಯ ಹಾಕಿ ವಸೂಲ್ಮಾಡಬೇಕೆಂಬ ವಿಚಾರದಲ್ಲಿ [illegible] ಸಲಹೆಯನ್ನು ನೋಡಿಕೊಂಡು ಅನಂತರ ಇಲ್ಲಿ ಯೋಚಿಸಬೇಕೆಂತಲೂ, ಮಾರ್ಕೆಟ್ಟಿನೊಳಗಿನ [illegible] ಆಸ್ಪತ್ರೆಯ [illegible] ರೂಪಾಯಿ [illegible] ರೂಪಾಯಿ ಅಲೋಯೆನ್ಸನ್ನು ಕೊಡಬೇಕೆಂತಲೂ. [illegible] ದಕ್ಷಿಣಭಾಗದಲ್ಲಿರುವ ಖಾಲಿ ನಿವೇಶನವನ್ನು [illegible] ಮ್ಯುನಿಸಿಪಾಲಿಟಿಗೆ [illegible] ಮೇಲೆ ಜೈಲ್ ಇಲಾಖೆ [illegible] ಕೊಡಬೇಕೆಂತಲೂ [illegible]

ಮ್ಯುನಿಸಿಪಲ್ ಲೆಕ್ಕದ [illegible] ಕೌನ್ಸಿಲರುಗಳು ಒಪ್ಪಿ ಸ್ಯಾಂಕ್ಷನ್ ಮಾಡಿದರು.

ಮ್ಯುನಿಸಿಪಲ್ ಶಿಲ್ಕಿನ [illegible] ಗವರ್ನಮೆಂಟಿನವರು [illegible] ಮಾಡಿದರು

ಮೈಸೂರು [illegible] ಸಂಸ್ಕೃತ ಕಾಲೇಜು [illegible] ರೂಪಾಯಿ [illegible] ಕಳುಹಿಸಿದರು. [illegible] ಈ ಸಲ್ಲಿ ಹಾಕಿಕೊಳ್ಳಬೇಕೆಂದು ಕೌನ್ಸಿಲರುಗಳಿಗೆ ತೋರಿಬಂದದ್ದರಿಂದ [illegible] ಬಿಲ್ಲನ್ನು [illegible] ಕಳುಹಿಸಬೇಕೆಂದು ತಿಳಿಸುವಂತೆ ತೀರ್ಮಾನ ಮಾಡಿದರು

ಮೈಸೂರು ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಗೆ ಸೇರಿದಂಥಾ ಖಾಲಿ ನಿವೇಶನಗಳೂ ಕಟ್ಟಡಗಳೂ ಟ್ರಸ್ಟ್ ಬೋರ್ಡಿಗೆ ಅವಶ್ಯವೇ ಎಂದು ಕೇಳಿದ್ದಕ್ಕೆ ಅವರು ತಮಗೆ ಅವಶ್ಯವಿಲ್ಲವೆಂದು ಹೇಳಿದರು. ಕೌನ್ಸಿಲರುಗಳು ಅದರ ಮೇಲೆ ಅಂಥಾ ಕಟ್ಟಡಗಳು ಮತ್ತು ನಿವೇಶನಗಳ ಮೊಹಲಾವಾರು ಪಟ್ಟಿ ತಯಾರಾಗಿ ಮ್ಯುನಿಸಿಪಲ್ ಬೋರ್ಡಿನ ಇತ್ಯರ್ಥಕ್ಕೆ ತರಲ್ಪಡಬೇಕೆಂದು ಗೊತ್ತುಮಾಡಿದಾರೆ

ರಾಜಧಾನಿಯಲ್ಲಿ ಪ್ರಜೆಗಳು ತಮ್ಮ ಮನೆಗಳಲ್ಲಿ ದಿನವೂ ಗುಡಿಸುವುದಕ್ಕೆ ಅರ್ಹವಾದ ಆರೋಗ್ಯಕರವಾದ ಪಾಯಖಾನೆಗಳನ್ನು ಕಟ್ಟಿಕೊಳ್ಳುವಂತೆ ಮ್ಯುನಿಸಿಪಾಲಿಟಿಯವರು ಬಲಾತ್ಕಾರಮಾಡಬೇಕೆಂದು ಹೆಲ್ತ್ ಆಫೀಸರು ಸೂಚಿಸಿ, ಅಂಥಾ ಹಿತ್ತಲುಮನೆಯ ನಕ್ಷೆಯನ್ನು ಬರೆದುಕಳುಹಿಸಿದರು ಅದನ್ನು ಕಟ್ಟುವುದಕ್ಕೆ ಸುಮಾರು ೫೦—೬೦ ರೂಪಾಯಿಯಾದರೂ ಆಗಬೇಕೆಂದು ಗೊತ್ತಾದದ್ದರಿಂದ ಬಡಬಗ್ಗರು ಕಟ್ಟಿಕೊಳ್ಳುವುದು ಸಾಧ್ಯವಲ್ಲವೆಂತಲೂ, ಬಲಾತ್ಕಾರಮಾಡುವುದು ಸಹಜವಲ್ಲವೆಂತಲೂ ತೀರ್ಮಾನಿಸಿ, ಈ ವಿಷಯವನ್ನು ಮ್ಯಾನೇಜಿಂಗ್ ಕಮಿಟಿಯಲ್ಲಿ ಚರ್ಚೆಮಾಡಬೇಕೆಂದು ತೆಗೆದಿಟ್ಟರು. ಇದಲ್ಲದೆ ನಜರ್ಬಾದು ಚಾಮರಾಜ ಮೊಹಲ್ಲೆಗಳಲ್ಲಿ ಪಾಯಖಾನೆಯನ್ನು ಮ್ಯುನಿಸಿಪಾಲಿಟಿಯವರೇ ದಿನವೂ ಗುಡಿಸುವುದಕ್ಕೆ ಏರ್ಪಾಡುಮಾಡಿ, ಪ್ರಜೆಗಳಿಂದ ಖರ್ಚಿಗೆ ತಕ್ಕಷ್ಟು ತೆರಿಗೆಯನ್ನು ಹಾಕಿ ವಸೂಲ್ಮಾಡಬೇಕು ಎಂಬದಾಗಿ ಬಂದಿದ್ದ ಗವರ್ನಮೆಂಟ್ ಹುಕುಮನ್ನೂ ಮ್ಯಾನೇಜಿಂಗ್ ಕಮಿಟಿಗೆ ತೆಗೆದಿಟ್ಟರು

ಕುಡಿಯುವ ನೀರನ್ನು ರಾಜಧಾನಿಗೆ ತಂದು ಹಂಚುವ ಬಾಬನ್ನು ಮೊದಲು ಮ್ಯುನಿಸಿಪಾಲಿಟಿಯವರೇ ವಹಿಸಿಕೊಂಡಿದ್ದರು. ಸುಮಾರು ಎರಡು ವರುಷಗಳ ಕೆಳಗೆ ಗವರ್ನಮೆಂಟಿನವರ ಅಭಿಪ್ರಾಯದಂತೆ ಮ್ಯುನಿಸಿಪಾಲಿಟಿಯವರು ಅದನ್ನು ಇಂಜನಿಯರ್ ಇಲಾಖೆಗೆ ಒಪ್ಪಿಸಿ, ಅದರ ಖರ್ಚಿಗೆ ವರುಷಕ್ಕೆ ೧೨,೦೦೦ ರೂಪಾಯಿಯಂತೆ ಆ ಇಲಾಖೆಗೆ ಕೊಡುತ್ತಾ ಬರುವುದಾಗಿ ತಿಳಿಸಿದರು. ಇಂಜನಿಯರ್ ಇಲಾಖೆಯವರು ಈ ನೀರಿನ ಬಾಬಿನಲ್ಲಿ ಖರ್ಚನ್ನು ಬಹಳವಾಗಿ ಹೆಚ್ಚಿಸಿ, ಹಗಲುಹೊತ್ತಿನಲ್ಲೇ ಪಟ್ಟಣಕ್ಕೆ ನೀರಿನ ಸರಬರಾಯಿ ಸಾಲದಂತೆ ಮಾಡಿದರು. ಗವರ್ನಮೆಂಟಿನವರು ಈ ನೀರಿನ ಸರಬರಾಯಿಬಾಬಿನ ಖರ್ಚನ್ನು ೧೨,೦೦೦ ದಿಂದ ೧೫,೦೦೦ ರೂಪಾಯಿಗೆ ಇಂಜನಿಯರ್ ಇಲಾಖಾ ಅಂದಾಜಾಪಟ್ಟಿಯಂತೆ ಒಪ್ಪಿ ಹೆಚ್ಚಿಸಿ, ಮ್ಯುನಿಸಿಪಾಲಿಟಿಗೆ ಹುಕುಂ ಕೊಟ್ಟ ಅಭಿಪ್ರಾಯವೇನೆಂದರೆ—ನೀರಿನ ಸರಬರಾಯಿಗೆ ಇನ್ನೂ ಮೂರು ಸಾವಿರ ರೂಪಾಯಿ ಜಾಸ್ತಿ ಕೊಡಬೇಕಾಗುವುದು. ಇದನ್ನು ಯಾವ ಬಾಬಿನಲ್ಲಿ ತೆಗೆದುಕೊಡುತ್ತೀರೋ ತಿಳಿಸಬೇಕು. ಇದಲ್ಲದೆ ಮ್ಯುನಿಸಿಪಲ್ ತೆರಿಗೆಯ ದರಗಳನ್ನು ಮೈಸೂರಿಗೂ ಬೆಂಗಳೂರಿಗೂ ಹೋಲಿಸಿ ನೋಡಿದರೆ ಬೆಂಗಳೂರಿನ ದರಗಳು ಹೆಚ್ಚಾಗಿಯೂ, ಮೈಸೂರಿನಲ್ಲಿ ಸ್ವಲ್ಪವಾಗಿಯೂ ಇರುತ್ತವೆ. ಆದಕಾರಣ ಮ್ಯುನಿಸಿಪಲ್ ತೆರಿಗೆ ಮೊದಲಾದ ಉತ್ಪತ್ತಿಯ ಬಾಬನ್ನು ಜಾಸ್ತಿ ಮಾಡಿಕೊಳ್ಳುವ ಏರ್ಪಾಡುಮಾಡಬೇಕು ಎಂಬುದೇ. ಈ ವಿಷಯವನ್ನು ಕೌನ್ಸಿಲರುಗಳು ಚರ್ಚೆಮಾಡಿ, ನೀರಿಗಾಗಿ ಮ್ಯುನಿಸಿಪಾಲಿಟಿಯಿಂದ ೧೨,೦೦೦ ರೂಪಾಯಿಗಿಂತ ಹೆಚ್ಚು ಕೊಡಲು ಇಷ್ಟವಿಲ್ಲವಾದಕಾರಣ, ಗವರ್ನಮೆಂಟಿನವರು ಆ ಇಲಾಖೆಯನ್ನು ಪುನಃ ಇಂಜನಿಯರ್ ಇಲಾಖೆಯಿಂದ ಮ್ಯುನಿಸಿಪಾಲಿಟಿಗೆ ಕೊಡಿಸಿಬಿಡುವಂತೆ ಕೇಳಿಕೊಳ್ಳಬೇಕೆಂದು ಗೊತ್ತುಮಾಡಿದರು.

ಬೆಳಗೊಳದಲ್ಲಿ ನೀರನ್ನು ಎತ್ತುವ ಯಂತ್ರಗಳಿಗೂ ಏರ್ಪಡೆ ಕೆಲಸಗಳಿಗೂ ೨೪,೧೩೭ ರೂಪಾಯಿ ಖರ್ಚುಮಾಡಿ, ಸರ್ಕಾರದವರು ಮ್ಯುನಿಸಿಪಲ್ ರಿಜರ್ವ್ ಫಂಡಿನಿಂದ ಆ ಹಣವನ್ನು ತೆಗೆದುಕೊಂಡಿದೆ ಎಂಬದಾಗಿ ತಿಳಿಸಿದ ಹುಕುಮನ್ನೂ, ಪ್ಲೇಗ್ ಸಿಡುಬು ಹಾಕುವ ಡಾಕ್ಟರ ಅಲೋಯೆನ್ಸನ್ನು ಗುಮಾಸ್ತನ ಮತ್ತು ಜವಾನನ ಸಂಬಳದಲ್ಲೂ ಒಂದು ಭಾಗವನ್ನು ಮ್ಯುನಿಸಿಪಲ್ ಫಂಡಿನಿಂದ ಕೊಡಬೇಕೆಂದು ಬಂದಿದ್ದ ಗವರ್ನಮೆಂಟ್ ಹುಕುಮನ್ನೂ ಕೌನ್ಸಿಲರುಗಳು ವಿಚಾರಮಾಡಿಕೊಂಡರು.

ರಾಜಧಾನಿಯ ಬೇರೆ ಬೇರೆ ಮೊಹಲ್ಲೆಗಳಲ್ಲಿ ಕಂದಾಯದ ಬಾಕಿ ಬಹುಕಾಲದಿಂದ ವಸೂಲಾಗದೆ ಉಳಿದಿದ್ದು, ಆ ಪೈಕಿ ೪,೫೪೪ ಚಿಲ್ಲರೆ ರೂಪಾಯಿ ವಸೂಲಾಗುವುದಿಲ್ಲವೆಂದು ತಿಳಿದುಬಂದದ್ದರಿಂದ ಆ ಕಂದಾಯವನ್ನು ವಜಾಮಾಡಬೇಕೆಂದು ಕೌನ್ಸಿಲರುಗಳು ಒಪ್ಪಿಕೊಂಡರು

ರಾಜಧಾನಿಯಲ್ಲಿ [illegible] ರಸ್ತೆಗಳಲ್ಲಿ [illegible] ಕಂಬಗಳು, [illegible] ಉದ್ದಕ್ಕೂ [illegible] ಕಂಬಗಳ [illegible] ಜನರು [illegible] ಸ್ವಲ್ಪ [illegible] ಉತ್ಸವ [illegible] ಕೌನ್ಸಿಲರುಗಳು ಗೊತ್ತುಮಾಡಿದೆ

[illegible] ಕೌನ್ಸಿಲರುಗಳು [illegible] ಆವಶ್ಯಕವಾಗಿದೆ

ತಾಲ್ಲೂಕು ವರ್ತಮಾನಗಳು.

ದೊಡ್ಡಬಳ್ಳಾಪುರ.—ಕೆಲವು ದಿನಗಳ ಹಿಂದೆ ಈ ಊರಿನ ಸುತ್ತುಮುತ್ತಲು ಸುಮಾರಾಗಿ ಮಳೆ ಆಯಿತು ಇಲ್ಲಿ ಮಳೆ ಬರುವಹಾಗಿದ್ದರೂ ಬರಲಿಲ್ಲವಾದಕಾರಣ ಬಿಸಲಿನ ತಾಪವು ಹೆಚ್ಚಾಗಿದೆ ನಮ್ಮ ಕೋಟೆಯ ಹತ್ತಿರ ಮುನಿಸಿಪ್ಲಿನ ಹಾಕ್ಟರ ಒಕ್ಕಲಿಗರ ಗಂಗ ಎಂಬವಳ ಬಸುರಾಗಿ, ಮುದ್ದು ಕುಡಿದು ಸತ್ತು ಹೋದಳೆಂತೆ ಜಮಾಯ ಬಗ್ಗೆ ಇಲ್ಲಿನ ಆಸ್ಪತ್ರೆಗೆ ತಂದಿಟ್ಟರು. ಫಲಿತಾಂಶವು ಇನ್ನೂ ಗೊತ್ತಾಗಲಿಲ್ಲ —ಈ ಪ್ರಾಂತ್ಯದಲ್ಲಿ ದನಗಳಿಗೆ ರೋಗವು ಇದ್ದ ಕಾರಣ ಕಳೆದ ವಾರ ಬೆಂಗಳೂರಿಂದ ಒಬ್ಬರು ಬಂದು ಕೆಲವು ದನಗಳಿಗೆ ಇನಾಕ್ಯುಲೇಷನ್ ಮಾಡಿ (ಸಿಡುಬು ಹಾಕಿ), ಹೋದರು —ವೈಕುಂಠಪುರಾಧಿಪನ ಸ್ವಾಮಿಯ ಪ್ರೀತ್ಯರ್ಥವಾಗಿ. ಆ ದೇವಸ್ಥಾನದ ಅರ್ಚಕರು. ಮ॥ ಪುರುಷೋತ್ತಮ ಭಟ್ಟರಿಗೆ ಆಲಂದಲ್ಲಿ ಮ॥ ನರಸಿಂಹಯ್ಯನವರು ಒಂದು ಸೊಗಸಾದ ಮನೆಯನ್ನು ಕಟ್ಟಿಸಿ, ತಾ. ೨೦ ರಲ್ಲಿ ಗೃಹಪ್ರವೇಶ ಮಾಡಿಸಿದ್ದಕ್ಕಾಗಿ ಅವರನ್ನು ಜನರು ಕೊಂಡಾಡುತ್ತಾರೆ.—ಕೆಂಪೆಗಾ ಹನುಮಂತಪ್ಪನು ದೀವನಹಳ್ಳಿಯವರಿಗೆ ತಾ. ೧೭ ರಲ್ಲಿ ೩೦ ರೂಯನ್ನು ಕೊಟ್ಟಿದ್ದರಲ್ಲಿ ೩೦ ಹಣ ಕಡಮೆ ಬಂತಂತೆ. ಸದರಿಯವರು ದಫೇದಾರರಲ್ಲಿ ಹೇಳಿಕೊಂಡದ್ದರಿಂದ ಕಡಮೆಯಾದದ್ದು ವಾಪಸು ಕೊಡಲ್ಪಟ್ಟಿತಂತೆ. ಇದರ ವ್ಯಾಜ್ಯವು ಪುಕಾರಿಲ್ಲದೆ ಅಷ್ಟಕ್ಕೆ ನಿಂತುಹೋಯಿತೇ ಎಂದು ಜನರು ಆಶ್ಚರ್ಯಪಡುತ್ತಾರೆ.

ಹೊಳೆನರಸೀಪುರ.—ಹಗಲಲ್ಲಿ ಬಿಸಲಿನ ತಾಪವು ಸಹಿಸಲಶಕ್ಯಗಿದೆ. ೧೫—೨೦ ದಿನಗಳಿಂದ ಮೋಡವಾದರೇ ಬಿಸಿಯಾಗಿದ್ದರೂ ಮಳೆಯೇ ಇಲ್ಲದೆ, ಬಿತ್ತಿದ ಪೈರೆಲ್ಲಾ ಒಣಗಿ ಹೋಯಿತು. ಇನ್ನು ೫—೧೦ ದಿನಗಳು ಮಳೆ ಬಾರದಿದ್ದರೆ, ಮತ್ತೊಂದು ಸಾರಿ ಬಿತ್ತನೆಯನ್ನು ಪ್ರಾರಂಭಿಸಬೇಕಾಗುತ್ತೆ.—ಊರಲ್ಲಿ ಕಾಲರಾ ಗಲಾಟೆಯು ಮೂರು ನಾಲ್ಕೈದು ದಿನಗಳಿಂದ ಏನೂ ಇಲ್ಲ. ಆದರೂ ಸುತ್ತುಮುತ್ತಿನ ಕೆಲವು ಹಳ್ಳಿಗಳಲ್ಲಿ ಅದರ ಗಲಾಟೆಯು ಬಹಳವಾಗಿದ್ದರಿಂದ ಹಳ್ಳಿಯವರು ಊರಿಗೆ ಬರುವದೇ ದುರ್ಲಭ. ಧಾರಣೆವಾಸಿಗಳು ಏರಿದಾಗಿದೆ. ಅಕ್ಕಿ ರೂಪಾಯಿಗೆ ೭-೯ ಸೇರೂ, ರಾಗಿ ೧೭—೨೦ ಸೇರೂ ಮಾರುವದು.—ಊರಲ್ಲಿ ಕತ್ತೆ, ಹಂದಿಗಳ ಅವಾಂತ್ರವನ್ನು ಹೇಳತೀರದು. ಮನೆಗಳ ಹಿತ್ತಲುಗಳಾದರೋ ಗೊಬ್ಬರದ ಮಂಟಪಗಳು. ಮುನಿಸಿಪಾಲಿಟಿಯವರು ಇವುಗಳ ವಿಷಯದಲ್ಲಿ ಮೌನವನ್ನು ವಹಿಸಿರುವದು ತುಂಬಾ ವಿಷಾದಕರವು. ಮೇಲಿನ ಅಧಿಕಾರಿಗಳು ಈ ವಿಷಯವನ್ನು ಸಿಗಾಕ್ಕೆ ತಂದುಕೊಂಡರೆ ಬಹುವಾಗಿ ಉಪಕಾರಮಾಡಿದಂತಾಗುವದು.—ಕಳೆದ ತಾ. ೨೫ ನೇ ಸೋಮವಾರ ಎಂಪೈರ್ ಡೇ ಉತ್ಸವವು ಇಲ್ಲಿ ತಕ್ಕಮಟ್ಟಿಗೆ ನಡಿಸಲಾಯಿತು.—ಮೊದಲಿದ್ದ ಪೋಸ್ಟು ಮಾಸ್ಟರು ರಜದ ಮೇಲಿರುವದರಿಂದ ಹೊಸದಾಗಿ ಬಂದಿರುವವರು ಬಹಳ ಮುತುವರ್ಜಿಯಿಂದ ಕೆಲಸಮಾಡುವರು ಮತ್ತು ಕಾರಡು, ಸ್ಟಾಂಪು ವಗೈರೆಗಳನ್ನು ಕಾಲಕ್ಕೆ ಸರಿಯಾಗಿ ಕೊಡುವದಲ್ಲದೆ ಮಣಿಯಾರ್ಡರು, ರಿಜಿಸ್ಟರ್, ಬ್ಯಾಂಗಿ ವಗೈರೆಗಳನ್ನು ಕೂಡಲೇ ತೆಗೆದುಕೊಳ್ಳುತ್ತಾರೆ. ಎಲ್ಲಾ ಜನಗಳು ಇವರನ್ನು ಬಹುವಾಗಿ ಹೊಗಳುತ್ತಿದ್ದಾರೆ

ಚಿತ್ರದುರ್ಗ.—ಈಗ ಸುಮಾರು ೨೫ ದಿನಗಳಿಗೆ ಮುಂಚೆ ಒಂದು ಸಲ ಮಳೆಯಾದದ್ದು ಈಚೆಗೆ ಅದರ ಹೆಸರೇ ಇಲ್ಲವಾಗಿದೆ ...ಯಲ್ಲಿ ನೀರು ಮುಗಿದುಹೋಗಿರುವದರಿಂದ ಹೊಂಡದ ನೀರನ್ನು ...ಗೆ ಸರಬರಾಯಿ ಮಾಡುತ್ತಾರೆ ಇದು ಸಹ ಬತ್ತಿಹೋಗಿ ನೀರು ...ದ್ದಿಯಾಗಿಯೂ ಕಶ್ಮಲವುಳ್ಳದ್ದಾಗಿಯೂ ಇದೆ. ಸಣ್ಣಗಳಲ್ಲಿ ಬರು ನೀರು ಎತ್ತರವಾಗಿರುವ ಕೇರಿ ಬೀದಿಗಳಿಗೆ ಹತ್ತುವದೇ ಕಷ್ಟವಾಗಿ ...ಗ್ಗ ಕೊಳಾಯಿಗಳು ಬರಿದಾಗಿಯೇ ಇರುತ್ತವೆ. ರೈತರು ಉತ್ತ ...ಲಗಳನ್ನು ಪುನಃಪುನಃ ಉತ್ತು ತಕ್ಕನಾಟಿಗೆ ಬೀಜಗಳನ್ನು ಸಮಪಾಡಿಕೆ ಒಂದು ಕಾದಿದ್ದಾರೆ. ಮಳೆ ಇಲ್ಲವೆಂದು ಎಲ್ಲರೂ ಎದುರುನೋಡುತ್ತಿದ್ದಾರೆ. ಊರಲ್ಲಿ 'ಡ.ಮ. ಪಾಳಿಪ್ಪರ ಕಲ್ಯಾಣೋತ್ಸವ' ದ ಜನಗಳು ಕಷ್ಟಪಡುತ್ತಿರುವರೆ —ಅಲ್ಲಿನ ಆರ್ಯ ಸ್ವಾಮಿ ...ರ್ಯಸಮಾಜದ ಕಾರ್ಯನಿರ್ವಾಹಕ ಸಭೆಯವರು ಒಂದು ವಿಶಾಲ ...ವಾದ, ಧರ್ಮದರ್ಶಿಗಳ ದರ್ಮಬೋಧಕರನ್ನು ನೇಮಿಸಿ, ಸ್ಟುಡೆಂಟ್ಸ್ ಹಾಸ್ಟಲ್ ಕಟ್ಟಡಕ್ಕಾಗಿ ಧನಸಂಗ್ರಹ ಮಾಡಬೇಕೆಂದು ನಿಶ್ಚಯಿಸಿದ್ದರು ಇದಕ್ಕನುಸಾರವಾಗಿ ಈ ಸೊಸೈಟಿಯ ...ನ್ಯಸ್ತರಾದ ಮೆ|| ಕಟುಮಂತರಾಜುಅಯ್ಯಂಗಾರ್ಯರು ಆಗಷ್ಟೇ ಮುದ್ರಿತವಾಗಿ ಬಂದಿದ್ದ ಈ ಸೊಸೈಟಿಯ ರಿಪೋರ್ಟುಗಳನ್ನು ಸರ್ಕಾರದ ಕಾಲಗಳಿಗೂ ಮುಖ್ಯ ಮುಖ್ಯರಾದ ಜನಗಳಿಗೂ ಕೊಟ್ಟದ್ದಲ್ಲದೆ ...ಸಿಗೆ ಟಪಾದಲ್ಲಿ ಗ್ರಾಮಾಂತರಗಳ ಮೇಲೆ ಸರ್ಕೀಟು ಹೊರಟು ಆ ...ರ್ಟನ್ನು ಪ್ರಚುರಪಡಿಸುತ್ತಾ ಹಾಸ್ಟಲ್ ಧನಸಂಗ್ರಹ ...ಡುತ್ತಾ ಬಂದರು ಆದರೆ ಈ ಅಲ್ಪಕಾಲದಲ್ಲಿ ಎಲ್ಲಾ ಗ್ರಾಮಗಳಿಗೂ ಒಬ್ಬರೇ ಸಂಚಾರಮಾಡುವದು ಅಸಾಧ್ಯವಾಯಿತು ಅವರು ಸಂಚರಿಸಿದ ಕೆಲವು ಗ್ರಾಮಗಳಲ್ಲೇ ಕೆಲವು ಮಹನೀಯರುಗಳಿಂದ ...ದರೂ ಈ ಮಹಾಕಾರ್ಯಕ್ಕೆ ಕಾಲವಾದ್ದರಿಂದ ವಿದ್ಯಾರ್ಥಿಗಳೂ ಧರ್ಮಬೋಧಕರೂ ಧರ್ಮದರ್ಶಿಗಳೂ ಚಿತ್ತಕ್ಕೆ ...ಕೊಂಡು ಪ್ರಯತ್ನಪಟ್ಟು ಧನಸಂಗ್ರಹ ಮಾಡಬೇಕಾಗಿದೆ. ...ರದವರು ಇದಕ್ಕೆ ತಕ್ಕ ಸಹಾಯ ಮಾಡುತ್ತೇವೆಂದು ವಾಗ್ದಾನ ...ದಿರುವುದು ವೇದ್ಯವೇ ಆಗಿದೆ ಇಲ್ಲಿನ ಪಾಠಶಾಲೆಗಳು ಪುನಃ ...ರಂಭವಾಗಿ ಪಾಠಗಳು ನಡಿಯುತ್ತಾ ಇವೆ.

ಹಗ್ಗದದೇವನಕೋಟೆ ತಾ, ಸರಗೂರು.—ಇಲ್ಲಿ ಆಗಾಗ್ಗೆ ...ಳೆ ಮಳೆಯಾಗುತ್ತಿದ್ದಾಗ್ಯೂ ಧಾರಣೆ ಇನ್ನೂ ಏರುವಾಗಿಯೇ ...ಬಡಬಗ್ಗರ ತೊಂದರೆ ಹೇಳಲಸಾಧ್ಯ ಪ್ರತಿ ದಿವಸವೂ ಮಧ್ಯಾಹ್ನದ ವೇಳೆ ಬಿಸಲು ಬಹಳ ಹೆಚ್ಚಾಗಿರುತ್ತದೆ. ಇದರಿಂದ ಸಹಿಸಲಶಕ್ಯವಾದ ಸೆಕೆ —ಮೇ ೧೬ ನೇ ತಾ. ಶನಿವಾರ ಈ ಗ್ರಾಮದ ಬಸವೇಶ್ವರಸ್ವಾಮಿಯ ರಥೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ...ಕ ಕಡೆಗಳಿಂದ ಸಹಸ್ರಾರು ಜನ ದಶಾದಿಗಳು ಬಂದು ಸೇವೆ ಮಾಡಿಕೊಂಡು ಹೋದರು ಇದೇ ಗ್ರಾಮದ ನಾಟಕ ಸಭಾ ಕಂಪನಿಯವರು ಮೇ ೧೬ ಮತ್ತು ೧೭ ರಲ್ಲಿ ವೀರಸೇನ ಚರಿತ್ರೆ ನಾಟಕವನ್ನಾಡಿದರು ಇದು ಬಹು ತೃಪ್ತಿಕರವಾಗಿದ್ದಿತು —ಇಲ್ಲಿನ ಎ. ವಿ ಸ್ಕೂಲು ಬಹಳ ಅಭಿವೃದ್ಧಿ ಸ್ಥಿತಿಯಲ್ಲಿರುತ್ತೆ ಇದಕ್ಕೆ ನಮ್ಮ ಹೆಡ್ ಮಾಸ್ಟರ ಮುತುವರ್ಜಿಯೇ ಕಾರಣ —ಈ ಊರಿನ ಮ್ಯುನಿಸಿಪಾಲಿಟಿಯ ... ಸ್ವಲ್ಪವೂ ತೃಪ್ತಿಕರವಾಗಿಲ್ಲ. ಈ ಸ್ಥಳದಲ್ಲಿ ೧೬ ಲಾಂದ್ರಗಳಿರುತ್ತವೆ. ರಾತ್ರಿಯ ಹೊತ್ತು ಒಂದರಲ್ಲಾದರೂ ಸರಿಯಾಗಿ ದೀಪ ಉರಿಯುವುದಿಲ್ಲ. ದೀಪ ಹಚ್ಚಿದ ಒಂದು ಘಳಿಗೆಯಲ್ಲೇ ಲಾಂದ್ರದಲ್ಲಾ ಹೊಗೆಸುತ್ತಿಕೊಂಡು ಆರಿಹೋಗುವುದು. ಗ್ರಾಮಪಂಚಾಯತಿ ...ಯಂತು ಹೇಳಲಸಾಧ್ಯವಾಗಿರುತ್ತೆ ಜಾಡಮಾಲಿಗಳು ಪ್ರಾತಃ ೮ ಘಂಟೆಗೆ ಬಂದು ೮॥—೯ ಘಂಟೆ ಹೊತ್ತಿಗೆ ಹೊರಟುಹೋಗುತ್ತಾರೆ. ...ತ್ತಿರೆಯೇ ಹೊರತು ಕೆಲಸ ಮಾತ್ರ ಸರಿಯಾಗಿ ನಡೆಯುವುದಿಲ್ಲ. ...ರಿಂದ ರಸ್ತೆಗಳಲ್ಲಿ ಗಲೀಜು ಇದ್ದಂತೆಯೇ ಇರುತ್ತೆ. ಈ ಗ್ರಾಮದ ಜನರು ತಮ್ಮ ಮನೆಯ ಹಿತ್ತಲಿನಲ್ಲಿಯೇ ಗೊಬ್ಬರವನ್ನು ...ಡುತ್ತಾರೆ. ಇದರಿಂದ ಅನೇಕ ಕಡೆಗಳಲ್ಲಿ ದುರ್ವಾಸನೆ ಹುಟ್ಟಿ ...ಯಲ್ಲಿ ತಿರುಗಾಡಲು ಅಸಹ್ಯವಾಗುತ್ತದೆ. ಹಿಂದೆ ಡಾಕ್ಟರ್ ಪಲ್ಪು ...ರವರು ಬಂದಿದ್ದಾಗ್ಗೆ ಈ ಗೊಬ್ಬರಗಳ ಸ್ಥಿತಿಯನ್ನು ನೋಡಿ, ಈ ...ಸ ಅಂಟು ವ್ಯಾಧಿಗಳ ತವರುಮನೆ ಎಂದು ಅನೇಕ ಜನಗಳ ...ದರೂ ಹೇಳಿರುವುದು ನಮ್ಮ ಮೆಂಬರುಗಳಿಗೆ ಜ್ಞಾಪಕವಿರಬಹುದು. ಇದೇ ರೀತಿ ಗ್ರಾಮ ಪಂಚಾಯತಿ ಸರಿಯಾಗಿಲ್ಲದಿದ್ದರೆ ಇನ್ನು ಸ್ವಲ್ಪ ದಿವಸಗಳಲ್ಲಿ ರೋಗಾದ್ಯುಪದ್ರವಗಳು ತಲೆ ಹಾಕಲು ಅಡ್ಡಿಯಿಲ್ಲ. ಈ ವಿಷಯಗಳನ್ನು ನಮ್ಮ ಅಮಲ್ದಾರರವರು ಮತ್ತು ಈ ಊರು ಮೆಂಬರುಗಳು ಮನಸ್ಸಿಗೆ ತಂದುಕೊಂಡು, ಈ ತೊಂದರೆಗಳನ್ನು ತಪ್ಪಿಸಿ ಕೊಡುವರೆಂದು ನಂಬುತ್ತೇನೆ

ಫ್ರೇಜರ್‌ಟೌನ್.—ಕಳೆದ ವಾರ ಇಲ್ಲಿ ಒಂದು ಹದ ಜೋರು ಮಳೆಯಾದ್ದರಿಂದ ಸುಮಾರು ಅರ್ಧಕೆರೆ ನೀರು ಬಂದಹಾಗೆ ಆಯಿತು. ಬಿಸಿಲು ತೀಕ್ಷ್ಣವಾಗಿದ್ದರೂ ಸಾಧಾರಣವಾಗಿ ಸಾಯಂಕಾಲದಲ್ಲಿ ಗಾಳಿ ಬೀಸುವದರಿಂದ ರಾತ್ರಿಕಾಲವು ತಂಪಾಗಿರುತ್ತದೆ. ಇಲ್ಲಿ ಸದ್ಯಕ್ಕೆ ಕಾಲರಾ ಭಯವು ಇಲ್ಲದ್ದರಿಂದ ಜನರು ಸಂತೋಷಭರಿತರಾಗಿದಾರೆ. ನಮ್ಮ ಅಮಲ್ದಾರರೂ ಡಾಕ್ಟರೂ ಆಗಾಗ್ಗೆ ಊರು ಸಂಚಾರ ಮಾಡಿ ಊರೊಳಗೆ ಇರುವ ತಿಪ್ಪೆ ಮುಂತಾದ ಗಲೀಜನ್ನು ತೆಗೆಸಿರುವದು ಮಾತ್ರವಲ್ಲದೆ, ಚರ್ಮದ ಮಂಡಿಯನ್ನು ಊರಿನ ಹೊರಗೆ ಇಡುವಂತೆ ಹುಕುಂ ಮಾಡಿಸಿದಾರೆಂದು ವರ್ತಮಾನ. ಮತ್ತು ಈ ಸ್ಥಳದಲ್ಲಿ ನಡಿಯುವ ಸಂತೆಗೆ ಆಗಾಗ್ಗೆ ದಯಮಾಡಿಸಿ, ಸುಂಕ ತೀರಿದ ಬಳಿಕ ಮುಂತಾದ ಸಾಮಾನುಗಳನ್ನು ಕಂಡುಹಿಡಿದು, ಕೆಲವು ಬಟ್ಟಗಳನ್ನು ಹರಾಜುಮಾಡಿಸಿ ತಕ್ಕ ಬಂದೋಬಸ್ತು ಮಾಡಿಸಿದಾರೆ. ಇದಲ್ಲದೆ ಕಮ್ಮಿ ಸೇರುಗಳಲ್ಲಿ ವ್ಯಾಪಾರ ಮಾಡುತ್ತಿದ್ದವರನ್ನು ದಸ್ತಗಿರಿಮಾಡಿ, ಇಲ್ಲಿನ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಫಿರ್ಯಾದು ದಾಖಲ್‌ಮಾಡಿಸಿದಾರೆ. ಇವರು ತಮ್ಮ ಸರ್ಕಾರಿ ಕೆಲಸಗಳನ್ನು ತುಂಬಾ ಖಂಡಿತವಾಗಿ ನಡಿಸುತ್ತಿರುವದರಿಂದ ಕೆಲವರಲ್ಲಿ ಅಸಮಾಧಾನ ಹುಟ್ಟಿರುವದೇನೂ ಆಶ್ಚರ್ಯವಲ್ಲ. ಇಲ್ಲಿರುವ ಇಂಜನಿಯರ್ ಮತ್ತು ಪೋಲೀಸ್ ಆಫೀಸುಗಳನ್ನೂ ಸಬ್ ಡಿವಿಜನ್ ಕೋರ್ಟನ್ನೂ ತೆಗೆದುಬಿಡುತ್ತಾರೆಂದು ವದಂತಿಯುಂಟು. ಈ ಸುದ್ದಿಯು ಜನರಲ್ಲಿ ಬಹಳ ವ್ಯಸನವನ್ನುಂಟುಮಾಡಿದೆ ಈ ಊರು ತಕ್ಕಮಟ್ಟಿಗೂ ಆರೋಗ್ಯಕರವಾದ ಸ್ಥಳವಾಗಿಯೂ, ಬಹಳ ಕಾಲದವರಿಗೂ ರಿಜಮೆಂಟ್ ಸೈನ್ಯವಿದ್ದ ಸ್ಥಳವಾಗಿಯೂ, ಚರಿತ್ರಾರ್ಹವಾದ ಸ್ಥಳವಾಗಿಯೂ ಇರುವದರಿಂದ ಈ ಬೇರೆ ಬೇರೆ ಆಫೀಸುಗಳನ್ನು ತೆಗೆದುಬಿಡುವದಾದರೆ ಸ್ಥಳವು ಹತಾಶವಾಗಿ, ಈ ಟವನ್ ಒಂದು ಸಾಧಾರಣ ಹಳ್ಳಿಯಂತೆ ಆಗುವದರಲ್ಲಿ ಏನೂ ಸಂದೇಹವಿಲ್ಲ.—ಇಲ್ಲಿ ಸುಮಾರು ಎಳೆಂಟು ತಿಂಗಳಿಂದ ಪೋಸ್ಟ್ ಮಾಸ್ಟರಾಗಿದ್ದ ಮೇ|| ಎಸ್. ವೆಂಕಟಸುಬ್ಬಯ್ಯನವರನ್ನು ಪಿರಿಯಾಪಟ್ಟಕ್ಕೆ ವರ್ಗಾಯಿಸಿದಾರೆಂದು ಕೇಳುತ್ತೇನೆ.—ಇಲ್ಲಿಗೆ ಸುಮಾರು ನಾಲ್ಕು ಮೈಲಿ ದೂರದಲ್ಲಿರುವ ಕಾತನಹಳ್ಳಿ ಎಂಬ ದೊಡ್ಡ ಗ್ರಾಮದಲ್ಲೂ, ಈ ಸಬ್ ತಾಲ್ಲೋಕಿಗೆ ಸೇರಿದ ಮೇಲುಕೋಟೆಯ ಟವನಲ್ಲೂ ಈಗ ಸುಮಾರು ಒಂದೆರಡು ತಿಂಗಳಿಂದ ಕೆಲವು ಕಾಲರಾ ಕೇಸುಗಳು ಆಗುತ್ತಿರುವಂತೆ ಕೇಳುತ್ತೇನೆ.—ದಾಸರಹಳ್ಳಿಯ ದೊಡ್ಡ ಶಾನುಭೋಗರ ಮೊಕದ್ದಮೆಯನ್ನು ಈ ಸಬ್ ಡಿವಿಜನ್ ಕೋರ್ಟಿನಿಂದ ಮೈಸೂರಿಗೆ ವರ್ಗಾಯಿಸಿಕೊಂಡಿದಾರೆಂದು ಕೇಳುತ್ತೇನೆ

ಹೊಸಕೋಟೆ.—ಇಲ್ಲಿ ಒಂದು ವಾರದಿಂದ ಮಳೆಯಿಲ್ಲ ಕಾಳಿನ ಧಾರಣೆ ಎಲ್ಲಾ ಕಡೆಯಲ್ಲಿದ್ದಂತೆ ನಮ್ಮಲ್ಲಿಯೂ ಜಡವಾಗಿದೆ. ಬಡಜನರು ಕಷ್ಟಪಡುವರು. ಬೀದಿಗಳಲ್ಲಿ ತಿರುಕರು ಹೆಚ್ಚಾಗಿ ಹೋದರು ಅದೂ ಅಲ್ಲದೆ ಕಳ್ಳತನಗಳು ಪ್ರಾರಂಭಿಸಿವೆ ಇದೇ ತಾಲ್ಲೋಕಿಗೆ ಸೇರಿದ ಮೋಂಬಾರು, ಕಾಡುಗೋಡಿ ಗ್ರಾಮಗಳಲ್ಲಿ ಕಳ್ಳತನದ ಕೇಸುಗಳನ್ನು ಪತ್ತೆಮಾಡುವದಕ್ಕಾಗಿ ನಮ್ಮಲ್ಲಿನ ಪೋಲೀಸ್ ಇನ್ಸ್‌ಪೆಕ್ಟರು ಹೋಗಿದಾರೆಂದು ಕೇಳುತ್ತೇನೆ. ಇಂಥಾದ್ದರಲ್ಲಿ ಇದೇ ಕಸಬಾದಲ್ಲಿಯೇ ತಾ. ೩೦ ನೇ ರಾತ್ರಿ, ಪೋಲೀಸ್ ಇನ್ಸ್‌ಪೆಕ್ಟರು ವಾಸಿಸುವ ಮನೆ ಹತ್ತರ ಬ್ರಾಹ್ಮಣರ ಬೀದಿಯಲ್ಲಿಯೂ ಇನ್ನೊಂದು ಕಡೆಯಲ್ಲೂ ಕಳ್ಳರು ಕನ್ನಾಕೊರೆದು, ನುಗ್ಗಿ ಸುಮಾರು ೩೦೦ ರೂಪಾಯಿ ಸಾಮಾನು ಕದ್ದೊಯ್ದರೆಂದು ಕೇಳುತ್ತೇನೆ ಕಳ್ಳರು ಊರಿನವರೋ ಪರ ಊರಿನವರೋ ಪೋಲೀಸಿನವರು ಬಹು ಮೆಹನತ್ತು ಮಾಡಿ ಪತ್ತೆ ಮಾಡಿದರೆ ಗೊತ್ತಾಗುವದು. ಆದರೂ ಈ ಊರಲ್ಲಿ ಪೋಲೀಸ್ ಸಿಬ್ಬಂದಿಯು ಕಮಿ ಸಾಲದು. ಕಸಬಾದಲ್ಲಿ ಪೋಲೀಸ್ ಜವಾನರಿಗೆ ಅನೇಕ ಕೆಲಸಗಳಿವೆ. ಟಪಾಗಸ್ತು ಅಂತು ದಿನಾಲು ಬಹು ಚನ್ನಾಗಿ ತಿರುಗುತ್ತದೆ. ಕಳ್ಳತನ ನಡೆದ ರಾತ್ರಿಯಲ್ಲಂತೂ ಪೋಲೀಸಿನವರು ಬಹು ಚುರುಕಾಗಿ ಬೀಟ್ ತಿರುಗಿದರೂ ಕಳ್ಳತನ ನಡೆದೇ ನಡಿಯಿತು. ಸರ್ಕಾರದವರು ಇಲ್ಲಿನ ಪೋಲೀಸ್ ಸಿಬ್ಬಂದಿಗೆ ಇನ್ನೂ ಹೆಚ್ಚಾದ ಕುಮಕು ಕೊಟ್ಟರೆ ಕಳ್ಳತನಗಳೂ ಇತರ ಕೇಸುಗಳೂ ಬೇಗನೆ ಪತ್ತೆಯಾಗುವದಲ್ಲದೆ ಬಡವರಾದ ನಾವು ಸೌಖ್ಯದಿಂದ ಬದುಕಲಾದೀತು.—ಹೊಸಕೋಟೆಯಿಂದ ಸೂಲಿಬೆಲೆಗೆ ಒಂದು ರಸ್ತೆ ಇದೆ. ೧೯೦೩ ನೇ ಇಸ್ವಿಯಲ್ಲಿ ಬಿದ್ದ ವಿಪರೀತ ಮಳೆಯಿಂದಲಾಗಿ, ರಸ್ತೆ ಕೋಡಿ ಬಳಿ ಇರುವ ಸೇತುವೆಯು ನಾಶವಾದವು. ಸದರಿ ಸೇತುವೆಯು ಇವತ್ತಿನವರಿಗೂ ಕಟ್ಟಲ್ಪಡಲಿಲ್ಲ. ಭಂಡಿಗಳು ಕೋಡಿಯ ಮೇಲೆ ಬಹು ಇಕ್ಕಟ್ಟಿನಿಂದ ಹಾದುಹೋಗಿ ಒಂದೆರಡು ಸಲ ಎತ್ತುಗಳ ಕಾಲು ಸಿಕ್ಕಿಕೊಂಡು ಬಹು ಅವಸ್ಥೆಪಟ್ಟದ್ದಾಯ್ತು. ಇದು ಅಲ್ಲದೆ ಮಳೆಗಾಲದಲ್ಲಿ ಕೋಡಿಯು ಭರ್ತಿಯಾಗಿ ಹರಿದರೆ ಭಂಡಿಗಳಿಗೆ ತಿರುಗಾಡುವ ಸ್ಥಳವೇ ಇಲ್ಲ. ಆ ಕಡೆ ಈ ಕಡೆ ಹೋಗಿಬರುವ ಜನಗಳಿಗೆ ೮ ದಿನಗಳಾದರೂ ಹಾದುಹೋಗದಂತೆ ಅಭ್ಯಂತರವಾಗುತ್ತದೆ. ಈ ವಿಷಯದಲ್ಲಿ ಪ್ರಜೆಗಳು ಸರ್ಕಾರದವರಿಗೆ ಎಷ್ಟು ವಿನಯವಾಗಿ ಬರೆದು ಬೇಡಿಕೊಂಡಾಗ್ಯೂ ಇದು ಅವರ ಗಮನಕ್ಕೆ ಬರಲೇ ಇಲ್ಲ. ಪ್ರಜಾಕ್ಷೇಮವನ್ನು ಕೋರುವ ಸರ್ಕಾರದವರು ಇನ್ನಾದರೂ ದಯವಿಟ್ಟು ಈ ಕೋರಿಕೆಯನ್ನು ಪೂರೈಸಿದರೆ ಪ್ರಜೆಗಳಿಗೆ ತುಂಬಾ ಮೇಲುಮಾಡಿದಂತಾಗುತ್ತದೆ.

ಮೈಸೂರು ಗೆಜೆಟ್ ಸಂಗ್ರಹ.

ಗವರ್ನಮೆಂಟ್ ಅಸಿಸ್ಟೆಂಟ್ ಸೆಕ್ರೆಟರಿ ಮೆ|| ಕೆ. ಮೈಲಾರಿ ರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ರೆವಿನ್ಯೂ ಸರ್ವೆ ಇಲಾಖಾ ಅ|| ಕಮಿಷನರ್ ಮೆ|| ಸಿ. ರಾಜಗೋಪಾಲಚಾರ್ರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಮಾಡಿದೆ.

ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ ಮೆ|| ವಿ. ಎಸ್. ರಾಜಗೋಪಾಲಾಚಾರ್ರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಏಳು ದಿನಗಳಿಗೆ ಜಾಸ್ತಿ ಮಾಡಿದೆ.

ತುಂಕೂರು ಡೆಪ್ಯುಟಿ ಕಮಿಷನರ್ ಮೆ|| ಕೆ. ಎಸ್. ದೊರೆಸ್ವಾಮಿ ಐಯ್ಯರವರಿಗೆ ಕೊಟ್ಟಿರುವ ಮೂರು ವಾರಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ತಿಂಗಳು ನಾಲ್ಕು ದಿನಗಳಿಗೆ ಜಾಸ್ತಿ ಮಾಡಿದೆ.

ಸಬ್ ಅ|| ಇಂಜನಿಯರ್ ಮೆ|| ಎಂ. ಎ. ಶ್ರೀನಿವಾಸಾಚಾರ್ರನ್ನು ಕಾವೇರಿ ತಲಾವಿನ ಪರ್ವಾಡಿನಿಂದ ನೀರಿನ ಸರಬರಾಯಿ ಮತ್ತು ಸ್ಟೋರ್ ಇಲಾಖೆಗೆ ವರ್ಗಮಾಡಿದೆ.

ಸೊರಬ ತಾಲ್ಲೂಕು ಅಕ್ಟಿಂಗ್ ಅಮಲ್ದಾರ್ ಮೆ|| ಜಿ. ಮುದ್ದಪ್ಪನವರಿಗೆ ಮೇ ೨೩ನೆ ತಾ. ಆಗಾಯಿತು ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರು ರಜದ ಮೇಲಿರುವಾಗ್ಗೆ ಶಿರಸ್ತೇದಾರ್ ಮೆ|| ಕೆ. ಹನುಮಂತರಾಯರು ತಾಲ್ಲೋಕಿನ ಛಾರ್ಜನ್ನು ವಹಿಸಿರತಕ್ಕದ್ದು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಎಡೆ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಎಡೆ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

[ದೇವನಹಳ್ಳಿ ಎ. ವಿ. ಸ್ಕೂಲಿನ ವಿಷಯವನ್ನೂ ಮತ್ತು ಹೊಸಕೋಟೆ ತಾಲ್ಲೂಕು ಜಡಿಗೇನಹಳ್ಳಿ ಹೋಬಳಿ ಕಟ್ಟಗೇನಹಳ್ಳಿಗೆ ಸ್ಕೂಲ್ ಇಟ್ಟುಕೊಡಬೇಕೆಂಬ ವಿಷಯವನ್ನೂ ಆಯಾ ಬಾತ್ಮಿದಾರರು ಸ್ಕೂಲ್ ಇಲಾಖಾ ಇನ್ಸ್‌ಪೆಕ್ಟರುಗಳಿಗೆ ಬರೆದುಕೊಂಡರೆ ಅನುಕೂಲವಾದೀತೆಂದು ನಂಬುತ್ತೇವೆ ಕುಂಬ್ಳೆ ಗೋಪಾಲ ರಾವ್ :— ಈ ಬಾತ್ಮಿಯನ್ನು ಪ್ರಕಟಿಸಲಾರೆವು. ಪೋಲೀಸ್ ಕೀಳುನೌಕರರ ದುರ್ನಡತೆ.—ಬಾತ್ಮಿದಾರರು ಈ ವಿಚಾರವನ್ನು ರುಜುವಾತು ಸಹಿತ ಮೊದಲು ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು. ಚನ್ನಪಟ್ಟಣದಲ್ಲಿ ಪೋಲೀಸಿನವರ ಕಾರುಬಾರುಗಳು.—ಬಾತ್ಮಿದಾರರು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಬರೆದುಕೊಂಡರೆ ಅವರು ಕ್ರಮಪಡಿಸುತ್ತಾರೆಂದು ನಂಬುತ್ತೇವೆ —ಎಡಿ.]

ಕರೆಸ್‌ಪಾಂಡೆನ್ಸ್.

ಸತ್ಪುರುಷ ಸಮಾಜವು.

ಅಯ್ಯಾ,

ಈ ಸಮಾಜದವರಾದ ಚಿತ್ರದುರ್ಗದ ಕಸಬಾದಲ್ಲಿ ಇರುವ ಯೋಗೀಶ್ವರ ಮುಖ್ಯಾಧಿಕಾರಿಗಳು ಇಲ್ಲಿನ ಪ್ರಜೆಗಳಿಗೆ ಕ್ಷೇಮಾರೋಗ್ಯ ಅನುಕೂಲತೆಗಳುಂಟಾಗಲೆಂದೂನ್ನೂ ನಮ್ಮನ್ನು ಪರಿಪಾಲಿಸುವ ಶ್ರೀಮನ್ಮಹಾರಾಜರವರಿಗೆ ಆಯುರಾರೋಗ್ಯಾಭಿವೃದ್ಧಿಯುಂಟಾಗಬೇಕೆಂದೂನ್ನೂ, ಸಕಾಲದಲ್ಲಿ ವೃಷ್ಟಿಯಾಗಿ, ಪಶುಗಳಿಗೂ ಸರ್ವಜನರಿಗೂ ಸುಖವನ್ನಿತ್ತು ಕಾಪಾಡಬೇಕೆಂದೂನ್ನೂ ಭಗವಂತನನ್ನು ಪ್ರಾರ್ಥಿಸಿ ಇದೇ ಕೀಲಕ ಸಂವತ್ಸರದ ಚೈತ್ರ ಶುದ್ಧ ೯ ಶ್ರೀರಾಮನವಮಿ ಆರಭ್ಯ ಬಹುಳ ೩ ರ ವರೆಗೆ ಚಿತ್ರದುರ್ಗದ ಕಸಬಾದಲ್ಲಿರುವ ಶ್ರೀಸುಬ್ರಹ್ಮಣ್ಯೇಶ್ವರದೇವಸ್ಥಾನದಲ್ಲಿ ರಾಮೋತ್ಸವವನ್ನು ಕಾಲದೇಶಾನುಗುಣ್ಯವಾಗಿ ನಡಿಸಿ ಸಂತರ್ಪಣೆಯೂ ದೇವರ ಉತ್ಸವವೂ ಹೋದವರುಷಕ್ಕಿಂತ ಬಹಳ ವಿಜೃಂಭಣೆಯಿಂದ ನಡಿಸಿರುತ್ತಾರೆ. ಬಹು ಜನರ ಸಹಾಯದಿಂದ ಈ ಭಗವದಾರಾಧನೆಯು ಅನೇಕ ವಿಘ್ನ ನಿವಾರಣೆಮಾಡಿ ಸುಲಲಿತವಾಗಿ ನಡೆದಿರುತ್ತೆಂಬ ಸಂತೋಷಕರವಾದ ವರ್ತಮಾನವು ಸತ್ಪುರುಷರ ಸಂತೋಷಾರ್ಥವಾಗಿಯೂ ಅಲ್ಲಲ್ಲಿ ಇಂಥಾ ಭಗವತ್ಕಾರ್ಯಗಳು ಸತ್ಪುರುಷರಿಂದ ನಡಿಯಬೇಕೆಂಬದಾಗಿಯೂ ಪ್ರಾರ್ಥಿಸಲಾಗಿಟ್ಟು ಇದೆ. ಮತ್ತು ಈ ಸಮಾಜದವರಾದ ಲಕ್ಷ್ಮೀನಾರಾಯಣಯೋಗೀಶ್ವರರೆಂಬ ಯೋಗಿಗಳು ಕರ್ನಾಟಕ ವೈದ್ಯದಲ್ಲಿ ತುಂಬಾ ಪರಿಶ್ರಮವುಳ್ಳವರಾಗಿ ದಾವಣಗೆರೆ ಕಸಬಾದಲ್ಲಿರುತ್ತಾರೆ. ಇವರು ಸಣ್ಣಮಕ್ಕಳಿಗೆ ಬರುವ ಕಾಯಿಲೆಗೆ ಔಷಧಿಖರ್ಚು ಸಹಾ ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಔಷಧಿಯನ್ನು ಕೊಡುತ್ತಾರೆ.

ಟಿ ವಿ ಕೃಷ್ಣಪ್ಪ.

ಸುಲಭ ಖರೀದಿ ! ನೋಡಿ !!

40-5

ದಾಸ್ಕೋಪು ಸಿಸ್ಟಂ ಲೀವರ್ ವಾಚು ಸರಪಣಿ ಸಹಿತ ವಿ. ಪಿ. ಪಿ. ಛಾರ್ಜ ಸೇರಿ ೩-೮-೦. ಯಾರೂ ಇದುವರಿಗೂ ಈ ಖರೀದಿಗೆ ಕೊಟ್ಟಿಲ್ಲ. ಮಾದ್ರಿಗೆ ಒಂದನ್ನು ತರಿಸಿ ನೋಡಿರಿ. ನಮ್ಮ ವಿಳಾಸ—ಟಿ. ಸಿ. ಕನ್ನಯ್ಯಶೆಟ್ಟಿ ಅಂಡ್ ಸನ್, ಜನರಲ್ ಮರ್ಚೆಂಟ್, ನಂಬರು ೨೯, ಸಿಂಗಣ್ಣನ ಬೀದಿ, ಸಾಹುಕಾರ್ ಪೇಟೆ, ಮದ್ರಾಸು.

"ವೃತ್ತಾಂತ ಪತ್ರಿಕೆ" ಚಂದಾದಾರರಿಗೆ.

"ವೃತ್ತಾಂತ ಪತ್ರಿಕೆ"ಯ ವರ್ಷವು ಕಳೆದ ಮೇ ತಿಂಗಳ್ ತಾ. ೩೧ ಕ್ಕೆ ಪೂರೈಸಿ, ಬಾಕಿ ವರುಷದ ಚಂದಾ ಹಣವು ಸಲ್ಲಬೇಕಾಗಿರುತ್ತದೆ. ಆದಕಾರಣ ನಮ್ಮ ಏಜಂಟರುಗಳ ಮೂಲಕ "ವೃತ್ತಾಂತ ಪತ್ರಿಕೆ"ಯನ್ನು ಪಡೆಯುವ ನಮ್ಮ ಚಂದಾದಾರರೆಲ್ಲಾ ಅವರಿಗೆ ಖಂಡಿತವಾಗಿ ಅಡ್ವಾನ್ಸಿನಲ್ಲಿ ಚಂದಾ ಕಟ್ಟಿ ಅವರಿಂದ ಕ್ರಮವಾದ ರಶೀತಿ ಪಡೆಯಬೇಕೆಂದು ಈ ಮೂಲಕ ಎಚ್ಚರಪಡಿಸಿದೆ. ಮ್ಯಾನೇಜರ್, "ವೃತ್ತಾಂತ ಪತ್ರಿಕೆ."

ಸುಶಿಕ್ಷಿತ ಸ್ತ್ರೀಯರು ಪೆರೂನಾವನ್ನು ಹೊಗಳುತ್ತಾರೆ

ಪೆರೂನಾ ಪ್ರಖ್ಯಾತಿಹೊಂದಿರುವುದು ಅದರ ಗುಣದಿಂದ, ಬರೀ ಮಾತಿನಿಂದಲ್ಲವು.

[11-10]

ಚಿಕ್ಕವರೂ ದೊಡ್ಡವರೂ ಒಂದೇ ರೀತಿ ಪೆರೂನಾವನ್ನು ಹೊಗಳುತ್ತಾರೆ. ಹೆಣ್ಣುಮಕ್ಕಳೂ ಹೆಂಗಸರೂ ಪೆರೂನಾವಿನ ಗುಣವನ್ನು ಕಂಡುಕೊಂಡಿದ್ದಾರೆ. ಹೆಣ್ಣುಮಕ್ಕಳೂ ಹೆಂಗಸರೂ ತಮ್ಮ ತಮ್ಮ ದೇಹಾನುಗುಣ್ಯವಾದ ಕಾಯಿಲೆಗಳಲ್ಲಿ ಬಿದ್ದು, ಪೆರೂನಾ ಸೇವನೆಯಿಂದ ಸೌಖ್ಯಹೊಂದಿರುತ್ತಾರೆ.

ಲಕ್ಷಣವಾಗಿರುವ ಹೆಣ್ಣುಮಕ್ಕಳೂ, ಸುಂದರಿಯರಾದ ಸ್ತ್ರೀಯರೂ, ಬಲಹೀನೆಯರಾದ ಹೆಣ್ಣುಮಕ್ಕಳೂ, ರೋಗಪೀಡಿತರಾದ ತಾಯಂದಿರೂ ಎಲ್ಲಾ ಪ್ರದೇಶಗಳಲ್ಲೂ ಪೆರೂನಾ ಸೇವಿಸಿ, ತಮ್ಮ ಸ್ವಭಾವಕ್ಕೆ ಅನುಗುಣವಾದ ಕಾಯಿಲೆಗಳನ್ನೆಲ್ಲಾ ನಿವಾರಣೆಮಾಡಿಕೊಂಡು, ಅದರ ಗುಣವನ್ನು ತಿಳಿದಿರುತ್ತಾರೆ. ಮುದಿ ಅಜ್ಜಿಯು ಮೊದಲುಗೊಂಡು ಎಳೇ ಹೆಣ್ಣುಮಗುವಿನ ತನಕ ಅಬಲೆಯರೆಲ್ಲಾ ಅನೇಕವಿಧಗಳಲ್ಲಿ ಪೆರೂನಾವಿಗೆ ಕೃತಜ್ಞರಾಗಿರುವರು.

MRS. FRED WEBBER.

MISS OLIVINE PERRAULT

ಇದೆಲ್ಲಾ ಯಥಾರ್ಥವಾಗಿರುತ್ತದೆ. ಗುಣಹೊಂದಿದ ಹೆಂಗಸು ಅದನ್ನು ಹೇಳುವುದಕ್ಕೆ ಹಿಂತೆಗೆಯುವುದಿಲ್ಲ. ಅವಳ ಮಾತು ಕೇಳಿ ಇತರ ಹೆಂಗಸರು ನಂಬುತ್ತಾರೆ. ಈ ರೀತಿ ಪೆರೂನಾವಿನ ಹೆಸರುವಾಸಿಯು ಮನೆಯಿಂದ ಮನೆಗೆ ಹಬ್ಬುತ್ತದೆ. ಹೀಗೆ ಲಕ್ಷಾಂತರ ಮನೆಗಳವರು ಪೆರೂನಾವು ಪ್ರೀತಿಪೂರ್ವಕನಾದಂಥಾ ನಂಬಿಕೆಗೆ ಅರ್ಹವಾದಂಥಾ ಕೈಕಂಡ ಔಷಧವೆಂದು ಒಪ್ಪಿಕೊಳ್ಳುತ್ತಾರೆ.

ಅನೇಕ ಸಣ್ಣ ಸಣ್ಣ ಕಾಯಿಲೆಗಳಿಗೆ ಪೆರೂನಾವು ಒಳ್ಳೇ ಔಷಧವಾಗಿರುತ್ತದೆ. ಶೀತದಿಂದ ಹುಟ್ಟುವ ಅನೇಕ ಕೆಟ್ಟ ಕಾಯಿಲೆಗಳನ್ನೂ, ಹೆಂಗಸರಿಗೆ ಸಾಮಾನ್ಯವಾಗಿ ಉಂಟಾಗುವ ಶರೀರದ ಅಕ್ರಮಗಳನ್ನೂ ಪೆರೂನಾವು ಹೋಗಲಾಡಿಸಬಲ್ಲದೆಂದು ನಂಬತಕ್ಕದ್ದಾಗಿದೆ. ಶೈತ್ಯದಿಂದ ಹುಟ್ಟುವ ಸಮಸ್ತವಾದ ರೋಗಗಳನ್ನೂ ಪೆರೂನಾದಲ್ಲಿರುವ ಗುಣದಿಂದ ವಾಸಿಮಾಡಿಕೊಳ್ಳಬಹುದು.

ದೇಹದೊಳಗಿನ ಶೀತವು.

ಮಿಸೆಸ್ ಫ್ರೆಡ್ ವೆಬ್ಬರ್, ೧೯ ವೆಲ್ಲಿಂಗ್ಟನ್ ಬೀದಿ, ಬ್ರಾಂಟ್‌ಫರ್ಡ್, ಓಂಟ್, ಎರಡನೇ ವೈಸ್ ಪ್ರೆಸಿಡೆಂಟ್, ಸ್ತ್ರೀಯರ ಕಸಬುದಾರಿ ಸಂಘ, ಈಕೆ ಬರೆಯುವುದು.

“ಈ ಸಲ ನಾನು ಕಾಯಿಲೆ ಬಿದ್ದಾಗ ನನಗೆ ಬಹಳ ಕಠಿಣವಾದ ಶೀತ ಹಿಡಿಯಿತು. ಅದರಿಂದ ನನ್ನ ದೇಹದ ಅಂಗಗಳು ರೇಗಿಸಲ್ಪಟ್ಟವು. ಬಹಳ ಕಠಿಣವಾದ ನೋವಾಗುತ್ತಿತ್ತು. ದಿನೇ ದಿನೇ ನನ್ನ ಸ್ಥಿತಿಯು ಕೆಡುತ್ತಾ ಬಂದು, ವಾಸಿಯಾದೀತೆಂಬ ಆಸೆಯೇ ಹೋಯಿತು.

“ಪೆರೂನಾದಿಂದ ಆಶ್ಚರ್ಯಕರವಾಗಿ ರೋಗಗಳು ಗುಣವಾಗಿರುವುದನ್ನು ನಾನು ಕೇಳಿ, ಅದನ್ನು ಎರಡು ತಿಂಗಳ ವರೆಗೆ ಸೇವಿಸಿ, ಅದರಿಂದ ನನಗೆ ಎಷ್ಟುಮಟ್ಟಿಗೆ ಒಳ್ಳೇದಾದೀತೆಂದು ನೋಡೋಣವೆಂದು ನಿಶ್ಚಯಿಸಿಕೊಂಡೆನು.

“ಒಂದು ತಿಂಗಳು ಸೇವಿಸುವುದರೊಳಗಾಗಿ ನನಗೆ ಬಹಳ ವಾಸಿಯಾಯಿತು. ಎರಡನೇ ತಿಂಗಳ ಅಂತ್ಯದಲ್ಲಿ ನಾನು ಹೊಸ ಹೆಂಗಸಾದೆನು. ಅದೇ ರೀತಿ ನಾನು ಕಾಯಪುಷ್ಟಿ ಹೊಂದುತ್ತಾ, ಸಂಪೂರ್ಣ ಆರೋಗ್ಯವನ್ನು ಹೊಂದಿದೆನು. ಅದನ್ನೇ ಸೇವಿಸುವಂತೆ ನನ್ನ ಅನೇಕ ಸ್ನೇಹಿತೆಯರಿಗೆ ಹೇಳಿದೇನೆ, ಎಲ್ಲರೂ ಅದರ ಪ್ರಯೋಜನವನ್ನು ನೋಡಿ ಸಂತೋಷಪಡುತ್ತಾರೆ.”

ತಲೆ, ಹೊಟ್ಟೆ, ಶ್ವಾಸಕೋಶಗಳು.

ಮಿಸ್ ಒಲಿವ್ಯನ್ ಪೆರ್ರಾಲ್ಟ್, ೩೩೫ ಡೇವಿಡ್ಸನ್ ಬೀದಿ, ಬೋಲಿವಾರ್ಡ್ ಸೆಂಟ್ ಪಾಲ್, ಮಾಂಟ್ರೀಲ್, ಕ್ವಾ., ಈಕೆ ಬರೆಯುವುದು.

“ನಿಮ್ಮ ಪ್ರಸಿದ್ಧವಾದ ಪೆರೂನಾವನ್ನು ಹೊಗಳಿ ಸಂತೋಷದಿಂದ ನಿಮಗೆ ಈ ಕಾಗದ ಬರೆಯುತ್ತೇನೆ. ನಾನು ಬೇರೆ ಔಷಧಗಳನ್ನು ಪರಿಕ್ಷೆಮಾಡಿದೆನು. ಆದರೆ ನನ್ನ ಶೀತವು ಸ್ವಲ್ಪವೂ ವಾಸಿಯಾಗಲಿಲ್ಲ. ನನಗೆ ಕ್ಷಯ ಹಿಡಿಯುವುದೋ ಎಂದು ಹೆದರಿಕೆಯುಂಟಾಗಿತ್ತು.

“ನನ್ನ ತಲೆಯು ಮತ್ತು ಹೊಟ್ಟೆಯ ಸ್ಥಿತಿಯು ನನಗೆ ಚಿಂತೆಯನ್ನುಂಟುಮಾಡಿತ್ತು. ಇದ್ದಕ್ಕಿದ್ದ ಹಾಗೇ ಹವಾ ಬದಲಾವಣೆಯಾದ್ದರಿಂದ ನನಗೆ ಶೀತವಾಗಿ ಮೂರು ತಿಂಗಳ ತನಕ ಹಗಲೂ ರಾತ್ರಿ ಕೆಮ್ಮಲುಂಟಾಗಿತ್ತು.

“ನನ್ನ ಸಹೋದರನಿಗೆ ಪೆರೂನಾದಿಂದ ವಾಸಿಯಾಗಿದ್ದದ್ದರಿಂದ ಅವನು ಅದನ್ನು ಸೇವಿಸೆಂದು ನನಗೆ ಹೇಳಿದನು. ಅದರಂತೆ ನಾನು ಕ್ರಮವಾಗಿ ಸೇವಿಸಿ, ದಿನೇ ದಿನೇ ಗುಣಹೊಂದುತ್ತಾ ಬಂದೆನು. ಈಗ ನಾನು ಮೂರು ಬಾಟ್ಲಿ ಔಷಧ ಸೇವಿಸಿ ಮುಗಿಯಿತು. ನಾನು ಸಂಪೂರ್ಣವಾಗಿ ಗುಣಹೊಂದಿರುತ್ತೇನೆ.”

ಕಾಯಿಲೆಯಾದ ಹೆಂಗಸರಿಗೆ.

“ಪೆರೂನಾದಿಂದ ನನಗೆ ಆಗಿರುವ ಪ್ರಯೋಜನವನ್ನು ತಿಳಿಸುವುದು ನನ್ನ ಕರ್ತವ್ಯವೆಂದು ತಿಳಿದಿದೇನೆ. ಸ್ವಲ್ಪ ಹೆಚ್ಚು ಕಡಮೆ ನಾನು ಆರುವರ್ಷಗಳ ಕಾಲ ನರಳಿದೆನು. ಹಲವು ಡಾಕ್ಟರುಗಳಿಂದ ಪರೀಕ್ಷೆ ಮಾಡಿಸಿ, ಅವರ ಔಷಧಗಳನ್ನು ಸೇವಿಸಿದೆನು. ಅದರಿಂದ ನನಗೆ ಸ್ವಲ್ಪಮಾತ್ರ ಉಪಶಮನವಾಯಿತಲ್ಲದೆ ಆ ಔಷಧಗಳು ನನ್ನ ರೋಗವನ್ನು ವಾಸಿಮಾಡಲಿಲ್ಲ. ನಾನು ಬಹಳ ಬಾಧೆಯನ್ನನುಭವಿಸಿದೆನು. ನನ್ನ ಔಷಧಕ್ಕಾಗಿ ನನ್ನ ಗಂಡನು ಬಹಳ ಹಣವನ್ನು ಖರ್ಚುಮಾಡಿರುತ್ತಾನೆ. ನಿರಾಶೆಯಾಗಿ ಕಡೆಯಲ್ಲಿ ಪೆರೂನಾವನ್ನು ತೆಗೆದುಕೊಂಡು ಪರಿಕ್ಷೆಮಾಡೋಣವೆಂದು ನೆನಸಿ, ಸೇವಿಸಲಾರಂಭಿಸಿದೆನು. ನಿಮ್ಮ ಹೇಳಿಕೆಯ ಪ್ರಕಾರ ಒಂದು ಬಾಟ್ಲಿ ಔಷಧ ಮುಗಿಯುವಷ್ಟರೊಳಗೆ ನನಗೆ ಸ್ವಲ್ಪ ಉಪಶಮನವಾಯಿತು. ಆಗಿನಿಂದ ನನಗೆ ಬೆನ್ನುನೋವು ಇಲ್ಲವೇ ಇಲ್ಲ. ಈಚೆಗೂ ಪೆರೂನಾ ಸೇವಿಸಿದ್ದೇನೆ. ಈಗ ನಮ್ಮ ಮನೆಗೆ ಡಾಕ್ಟರು ಬರುವುದು ಅಪರೂಪ. ಪೆರೂನಾದಿಂದ ನಮ್ಮ ಸಂಸಾರಕ್ಕೆ ಎಷ್ಟು ಉಪಕಾರವಾಗಿದೆಯೋ ವಿವರಿಸಿದರೆ ಒಂದು ಪುಸ್ತಕದಷ್ಟಾದೀತು. ನಾನು ತಮ್ಮನ್ನು ಅತ್ಯಂತ ವಿಶೇಷವಾಗಿ ಕೃತಜ್ಞತಾಭಾವದಿಂದ ವಂದಿಸುತ್ತೇನೆ. ಅನೇಕ ವೇಳೆ ನಿಮ್ಮ ಔಷಧವನ್ನು ಇತರರಿಗೆ ತೋರಿಸಿರುತ್ತೇನೆ. ಅವರೆಲ್ಲಾ ಸೇವಿಸಿ ಸಂತೋಷಪಡುತ್ತಾರೆ. ಕಾಯಿಲೆಯಾಗಿದ್ದೇನೆಂದು ಯಾವ ಹೆಂಗಸಾದರೂ ನನಗೆ ಬರೆದರೆ, ಅಥವಾ ನನ್ನ ಬಳಿಗೆ ಬಂದು ಕೇಳಿದರೆ ಅವರಿಗೆಲ್ಲಾ ಪೆರೂನಾವಿನ ಯೋಗ್ಯತೆಯನ್ನು ವಿವರಿಸಿ ಅದನ್ನು ಸೇವಿಸುವಂತೆ ಶಿಫಾರಸು ಮಾಡುತ್ತೇನೆ”—ಎಂಬದಾಗಿ ಮಿಸೆಸ್ ಮಾರ್ಥಾ ಫ್ರೆಡ್ರಿಕ್, ಸೆಂಟ್ರಲ್ ಪಾರ್ಕ್, ಲಾಂಗ್ ದ್ವೀಪ, ನ್ಯೂಯಾರ್ಕ್ ಸಿಟಿ, ಯು. ಎಸ್. ಎ ಎಂಬೀ ಹೆಂಗಸು ಬರೆದಿರುತ್ತಾಳೆ.

ಒಬ್ಬ ಹೆಂಗಸಿನ ಅನುಭವವು

“ಕೆಳ ಹೊಟ್ಟೆಯ ನಿಶ್ಶಕ್ತಿಯಿಂದ ನಾನು ತುಂಬಾ ಬಾಧೆ ಪಟ್ಟೆನು. ಅದರಿಂದ ನನ್ನ ಶಕ್ತಿಯೆಲ್ಲಾ ಕುಂದಿ, ನನ್ನ ಬುದ್ಧಿಯು ಕೆಟ್ಟುಹೋದೀತೆಂದು ಹೆದರಿಕೊಂಡೆನು. ನನ್ನ ಬೆನ್ನೆಲುಬು ಎಸಗಾಲಿನ ತನಕ ಬಹಳವಾಗಿ ಬಾಧೆಪಡಿಸುತ್ತಿತ್ತು. ಈ ಬಾಧೆಯನ್ನು ಅನುಭವಿಸುವುದಕ್ಕಿಂತ ಸಾಯುವುದೇ ಉತ್ತಮವೆನ್ನುವಂತಿತ್ತು. ಪೆರೂನಾವು ಈ ನನ್ನ ಕಾಯಿಲೆಯನ್ನು ವಾಸಿಮಾಡಿತು. ಆದ್ದರಿಂದ ಅದು ಉತ್ಕೃಷ್ಟವಾದ್ದೆಂದು ನಾನು ಹೇಳುವುದೇನೂ ಅತಿಶಯವಲ್ಲ. ಈ ನನ್ನ ರೋಗವು ನಿವಾರಣೆಯಾಗಿ ಈಗ ಎರಡು ವರುಷ ತುಂಬುವುದರಲ್ಲಿದೆ. ಮತ್ತೆ ಆ ರೋಗದ ನೆಳಲನ್ನೇ ಕಾಣೆನು.”

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

15—5—1908 ರಿಂದ 22—5—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	3	3
ಬೆಂಗಳೂರು ಡಿಸ್ಟ್ರಿಕ್ಟು	*	*	0	0
ಮೈಸೂರು ,,	60	44	170	90
ಕೋಲಾರ್ ,,	*	*	*	*
ಕೋಲಾರ್ ಚಿನ್ನದ ಗಣಿಗಳು	0	0	*	*
ತುಮಕೂರು ಡಿಸ್ಟ್ರಿಕ್ಟು	0	1	16	19
ಹಾಸನ ,,	1	2	126	77
ಚಿತ್ರದುರ್ಗ ,,	0	0	0	0
ಕಡೂರ್ ,,	1	1	0	0
ಶಿವಮೊಗ್ಗ ,,	0	0	0	0
* ಸಂಖ್ಯೆ ಕಾಣಿಸಿಲ್ಲ. ಜುಮ್ಲಾ	62	47	315	72

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಜ್ಯೇಷ್ಠ ಶುದ್ಧ ಪಂಚಮಿ ಗುರುವಾರದಿಂದ ಜ್ಯೇಷ್ಠ ಶುದ್ಧ ಏಕಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೮ನೇ ಜೂನ್.

ತಾ.	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ	ಶೇದಿ ವೈಯಾಶಿ ಮಾಸ
4	ಗುರು *	ಪಂಚಮಿ	20 16	ಪ್ಲು	60 0	23
5	ಶುಕ್ರ ,,	ಷಷ್ಟಿ	21 56	ಪ್ಲು	5 56	24
6	ಶನಿ	ಸಪ್ತಮಿ	29 58	ಮ	13-32	25
7	ರವಿ	ಅಷ್ಟಮಿ	34 12	ಪೂ	18 12	26
8	ಚಂದ್ರ	ನವಮಿ	37 36	ಉ	24 4	27
9	ಕುಜ ¶	ದಶಮಿ	40 2	ಹ	28-6	28
10	ಬುಧ †	ಏಕಾದ	41 21	ಚಿ	31-20	29

* ಕೂನ್ಯತಿಥಿ, ಸ್ಕಂದಷಷ್ಠಿ, † ಷಷ್ಠೀವ್ರತಂ ¶ ಶ್ರೀರಂಗಪಟ್ಟಣದಲ್ಲಿ ನರಸಿಂಹಸ್ವಾಮಿ ರಥ, ದಶಹರಾ ಆರಂಭ, † ನಿರ್ಜಲಾ ಏಕಾದಶಿ, ಶ್ರೀಮನ್ಮಹಾರಾಜರವರ ವರ್ಧಂತಿ ತೋಪು ೨೧

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಶಿಷ್ಟೀ ಅಕ್ಕಿ ಪಲ್ಲಾ ೧ಕ್ಕೆ	ರೂ.	೧೪-೮-೦	೧೬-೦-೦
ಕೆಂಬುತಿ ಅಕ್ಕಿ ಅಪಲ್		೧೫-೦-೦	೧೬-೦-೦
,, ಜಯಂ		೧೩-೮-೦	೧೫-೦-೦
ಬಾಪ್ರಾಂ ಅಕ್ಕಿ		೧೩-೪-೦	೧೭-೦-೦
ಸಣ್ಣಕ್ಕಿ ಅಪಲ್		೧೬ ೦-೦	೧೮ ೦-೦
,, ಜಯಂ		೧೫-೯-೦	೧೭-೦-೦
ತೊಗರಿ ಬೇಳೆ ಪಲ್ಲಾ ೧ಕ್ಕೆ		೧೭-೮-೦	೧೪-೮-೦
,, ದುಂಡು		೧೪-೮-೦	೧೫-೦-೦
ರಾಗಿ ಪಲ್ಲಾ ೧ಕ್ಕೆ		೬-೧೨-೦	೭-೦-೦
ಕಾರಾಗಿ		೬-೪-೦	೬-೧೨-೦
ಜೋಳ		೭-೦-೦	೯-೦-೦
ಹುರಳಿ ಪಲ್ಲಾ ೧ಕ್ಕೆ		೧೧-೧೦-೦	೧೧-೦-೦
ಬಿಳಿ ಅವರೆ		೮-೦-೦	೯-೦-೦
ಹೆಸರು		೧೧-೧೦-೦	೧೨-೮-೦
ಉದ್ದು		೧೪-೮-೦	೧೨-೦-೦
ಕಡಲೆ		೧೨-೪-೦	೧೪ ೦-೦
ಎಳ್ಳು ಸೇ ೧೨೦ ಕ್ಕೆ		೨೭-೮-೦	೨೬-೦-೦
ಹುರುಳಿ		೬-೮-೦	೭-೪-೦
ಹರಳು ೧೨೦ ಸೇರಿಗೆ		೧೧-೦-೦	೧೭-೦-೦
ಸೀಗೇಕಾಯಿ ಮಣ ೧ಕ್ಕೆ		೧-೮-೦	೧-೬-೦
ಮೆಣಸಿನಕಾಯಿ		೭-೪-೦	೬-೦-೦
,, ದುಂಡು		೨-೪-೦	೨-೧೨-೦
ಬೆಲ್ಲ ದೊಡ್ಡ ಅಚ್ಚು		೫-೦-೦	ಮ ೨-೦-೦
ಒಳ್ಳೆಣ್ಣೆ ಮಣ ೧ಕ್ಕೆ		೬-೦-೦	೬-೪-೦
ಹರಳೆಣ್ಣೆ ,,		೪-೧೨-೦	೪-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೬-೮-೦	೬-೦-೦
ಉಪ್ಪು ,,		೪-೮-೦	೪-೧೨-೦
ಹುಣಿಸೇ ಹಣ್ಣು		೧-೪-೦	೧-೦-೦
,, ಹಳೇದು		೧-೦	೧-೪-೦
ತುಪ್ಪ ಮಣ ೧ಕ್ಕೆ		೧೪-೮-೦	೧೫-೦-೦
ಸೀಮೆಯೆಂಣೆ ಟಿನ್ನು ೧ಕ್ಕೆ		೪-೧೫-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ		೬-೮-೦	೬-೮-೦
ಅಳಲೇಕಾಯಿ ಮಣ ೧ಕ್ಕೆ		೧-೦-೦	೧-೪-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨-೦	೦-೧೪-೦
ಚಿನ್ನ (ಪವನ್) ತೊಲ		೧೫-೬-೦	೧೫-೭-೦
,, ,, ಪಸಿಮೆ		೧೫-೧೦-೦	೧೫-೧೭-೦
,, ,, ಗಟ್ಟಿ ತೊಲ ೧ಕ್ಕೆ		೨೭-೧೨-೦	೨೪-೮-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೩೫-೦-೦	೩೮-೦-೦

Printed and Published by the Rev. E. W. Thompson, M. A., Proprietor and Manager, Wesleyan Mission Press, Mysore. 4/6/1908.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು--ಸರ್ ೧೯೦೮ ನೇ ಇಸವಿ ಜೂನ್ ತಾರೀಖು ೧೧ ನೇ ಗುರುವಾರ. ಸಂಚಿಕೆ ೨

AMRUTANJAN DEPOT, 16 OAK-LANE, BOMBAY. [17-16]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ :—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮು ಮತ್ತು ಘಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ಕ್ಕೆ ಕಿಮ್ಮತ್ತು ೦ ೮-೦. ಪೋಸ್ಟು ಖರ್ಚು ೦ ೪ ೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಖಜ್ಜಿ ವಗೈರೆ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦ ೪ ೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ—ಜೀರ್ಣಕ್ಕೆ ಡಬ್ಬಿ ೧ಕ್ಕೆ.	೧—೪—೦	ಕುಸುಮಾರಗುಟಿಕ—ಕೆಂಗಸದ ಹೊಟ್ಟೆನೋವಿಗೆ	೧—೦—೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧—೧—೦	ಪ್ರಮೇಹದ ಮಿಶ್ರಣ—ಪ್ರಮೇಹಕ್ಕೆ	೧—೦—೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ಕ್ಕೆ	೦—೧೨—೦	ಕಫಹರಿ—ಕಫ, ಕೆಮ್ಮು ಕ್ಷಯ, ಇತ್ಯಾದಿ	೧—೪—೦
ಬಾಲಕಾಲಿತದ ಮದ್ದು	೦—೮—೦	ಸುಂದರೀ ತೈಲ್ಯ—ಮೋರೆಗೆ	೦—೮—೦
ದಾಂತಶೂಲಹರಿ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಕರ್ಣಶೂಲಹಾರಿ—ಕಿವಿನೋವಿಗೆ	೦—೬—೦	ಉರಿನಾಶಕ ಎಂಟ ಬಾಟ್ಲಿ ೧ಕ್ಕೆ	೦—೮—೦
ಖಜ್ಜಿಯ ಮುಲಾಮು	೦—೩—೦	ವಾತದ ಮಿಶ್ರಣ ,,	೧—೦—೦
ದಂತಮಂಜನ—ಹಲ್ಲುಗಳಿಗೆ	೦—೨—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
ಕೇಶವರ್ಧಿನೀ ತೈಲ್ಯ—ಕೂದಲಿಗೆ	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
ಬಾಲಾಬು ಮಾತ್ರೆ—ಬಾಲರಿಗೆ	೨—೮—೦	ರೋಮಹಾರಿ	೦—೮—೦

ವಿಳಾಸ.—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು "ಅಮೃತಾಂಜನ," ಮುಂಬಯಿ

ಕಾರ್ಡು ಸೈಜು ೪| x ೩|.

ಫೋಟೋ ತೆಗೆಯುವ

ಫೋಟೋ ಕ್ಯಾಮರಾ.

84 43

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕಾಗದದಲ್ಲಿಯೇ ಮಾಡಿ ಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ :—

ಛೋಟಾಲಾಲ ಭಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಜ್ವರಹರಿ. 41-6



ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ನಾಶಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು--ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು, ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯಮಾಡಿ ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ ; ೧—೮ ರೂ., ರೂ ೨—೧೨ ಆ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಓಮಂಕರ್ಪೂರ.

Imam Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸರಿಯ ಓಮಂಕರ್ಪೂರವನ್ನು ನಾನೂ ನನ್ನ ಜವಾಬುದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾತ್ಮಲ್ಲಿ ವಿಶೇಷ.—

ಕೆವಿರಿಯಾದ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಈಗಲೇ ಸೀಮೆಯಿಂದ ಬಂದಿದೆ. 117 .33

೫,೦೦ ರಾಸನ ಟೋಪಿ ಕಲೆಯುವ ಸುಪೀರಿಯರ್ ಉಲ್ಲನ ದಾರ ಮಾತ್ರ ಇದೆ —ಬಾರಿ, ಕಮ್ಮಿ ಕ್ರಯ:

೧ ಟೋಪಿಯಾಗುವ ಉಲ್ಲನ ದಾರಕ್ಕೆ	೦—೪—೦
೧೨ ಟೋಪಿಯಾಗುವ ಬಂಡಲ್‌ಗೆ ೧ಕ್ಕೆ	೩—೮—೦
ಕೊಕ್ಕೆ ಸೂಜಿ ೧ಕ್ಕೆ	೦—೧—೬
೩೦ ಇಂಚಿನ ಬನಿಯನ್ ೧ಕ್ಕೆ	೦—೯—೦
ಒಂದಾಣೆ ಸ್ಟ್ಯಾಂಪು ಕಳುಹಿಸಿ ೨೦ ಫೋಟೋ ಕಾರ್ಡ ಪಡೆರಿ	
ನಂಬರ್ ೧ನೇ ಹಾಸನ ಟೋಪಿ ಪಬಿಜ ೧ಕ್ಕೆ	೧೩—೨—೦

ವಿಳಾಸ.—

ಪ್ರೊಪ್ರೈಟರ್, ದಿ ಉಲ್ ಮಾರ್ಟ, ಮಂಗಳೂರು.

ಇದನ್ನು ನೋಡಿದರೆ ಬಹು ಆಶ್ಚರ್ಯ ಪಡುವಿರಿ.

38-7

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು ಈ ಪುಸ್ತಕವು ಲೋಕಪ್ರಸಿದ್ಧವಾದದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಈ ಪುಸ್ತಕ ಭಾಷೆಯು ಬಹು ಸರಳವಾಗಿದೆ ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ ವಿ. ಪಿ. ಮೂಲಕ ರೂ. ೨—೩—೦. ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ ಜಾಗ್ರತೆ ನೋಡಿ.

ನಮ್ಮ ವಿಳಾಸ:— ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ

16-17

೧ ಶ್ರೀಕರಾಂಬಿನ ಮಾತ್ರೆಯು -ಈ ಮಾತ್ರೆಗಳು ಬಹಳ ಸುವಾಸನೆಯಾಗಿಯೂ ಬಾಯಿಯಲ್ಲಿ ತಾನಾಗಿ ಕರಗುವುದಾಗಿಯೂ ಒಳ್ಳೇ ಗುಣವುಳ್ಳದುದಾಗಿಯೂ ಇರುತ್ತವೆ

ತಾಂಬೂಲದೊಡನೆಯಾಗಲಿ, ಹಾಗೆಯೆ ಆಗಲಿ ಎಷ್ಟು ತಿಂದರೂ ಉಷ್ಣಮಾಡುವುದಿಲ್ಲ. ಹಲ್ಲುನೋವು, ಬಾಯಿವಾಸನೆ, ಮಲಬದ್ಧ, ಕೆಮ್ಮು, ನೆಗಡಿ, ನಿಶ್ಶಕ್ತಿ, ಹೊಟ್ಟೆಯುರಿ, ಅರೋಚಕ, ಅಗ್ನಿಮಾಂದ್ಯ, ಇವುಗಳನ್ನು ಹೋಗಲಾಡಿಸಿ ಒಳ್ಳೇ ಹಸಿವನ್ನೂ ಮನೋಲ್ಲಾಸವನ್ನೂ ಎಲ್ಲಾ ನರಗಳಿಗೂ ಬಲವನ್ನೂ ಉಂಟುಮಾಡುತ್ತದೆ. ಶಿಶುಗಳೂ ಗರ್ಭಿಣಿಯರೂ ನಿರಾಕ್ಷೇಪವಾಗಿ ಸೇವಿಸಬಹುದು. ಬೆಲೆ ೨೦೦ ಮಾತ್ರೆಯುಳ್ಳ ಕುಪ್ಪಿ ೧ಕ್ಕೆ ೪ ಆಣೆ. ಐದು ಕುಪ್ಪಿಗಳಿಗೆ ಒಂದು ಹೆಚ್ಚು. ೧೮ ಕುಪ್ಪಿ ವರೆಗೂ ಪೋಸ್ಟೇಜು ೪ ಆಣೆ.

೨. ಲೋಕಾಮಯಹರ ಕಸ್ತೂರಿ ಮಾತ್ರೆ, ಅನುಪಾನ ಪತ್ರ ಸಹಿತ, ಕುಪ್ಪಿ ೧ಕ್ಕೆ ೪ ಆಣೆ.

ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸುಲಭ ಖರೀದಿ! ನೋಡಿ!!

46-6

ದಾಸ್ಕೋ(ಪು ಸಿಸ್ಟಂ ಲೀವರ್ ವಾಚು ಸರಪಣಿ ಸಹಿತ ವಿ. ಪಿ. ಪಿ. ಚಾರ್ಜು ಸೇರಿ ೩-೮-೦. ಯಾರೂ ಇದುವರಿಗೂ ಈ ಖರೀದಿಗೆ ಕೊಟ್ಟಿಲ್ಲ. ಮಾದ್ರಿಗೆ ಒಂದನ್ನು ತರಿಸಿ ನೋಡಿರಿ. ನಮ್ಮ ವಿಳಾಸ—ಟಿ. ಸಿ. ಕನ್ನಯ್ಯಶೆಟ್ಟಿ ಅಂಡ್ ಕೋ, ಜನರಲ್ ಮರ್ಚಂಟ್, ನಂಬರು ೨೮, ಸಿಂಗಣ್ಣನ ಬೀದಿ, ಸಾಹುಕಾರ್ ಪೇಟೆ, ಮದ್ರಾಸು

ಪರಿಕ್ಷೆಮಾಡದೆ ಇರಬೇಡಿ.

ನಮ್ಮ ಪರಮಾಶ್ಚರ್ಯಯುಕ್ತವಾದ ಕಾಫಿ ಹೂವನ್ನು ಪ್ರತಿ ಒಬ್ಬರೂ ಒಂದು ಡಬ್ಬಾ ತರಿಸಬೇಕು.

49-1

ಈ ಹುವ್ವನ್ನು ಒಂದು ಸಾರಿ ಉಪಯೋಗಿಸಿದ ಕೂಡಲೆ ಬಹಳಾ ಆಶ್ಚರ್ಯವನ್ನುಂಟುಮಾಡುತ್ತೆ. ಮತ್ತು ನಮ್ಮಲ್ಲಿ ತರಿಸಿಕೊಂಡರೆ ಯಾವಾಗಲೂ ಇದರ ಸೇವನೆ ಮಾಡಬೇಕೆಂಬ ಇಚ್ಛೆಯನ್ನುಂಟುಮಾಡುತ್ತೆ. ಇದರಲ್ಲಿ ಸ್ವಲ್ಪವನ್ನು ತೆಗೆದುಕೊಂಡು ಹಾಲಿನಲ್ಲಿ ಹಾಕಿ ಚನ್ನಾಗಿ ಕಾದಿದ ಮೇಲೆ ಒಂದು ಬಟ್ಟೆ ಅಥವಾ ಒಂದು ಲೋಟಾದಲ್ಲಿ ಹಾಕಿಟ್ಟಿದ್ದರೆ ನೀರಾಗಿರತಕ್ಕಂತ ಹಾಲು ಗಟ್ಟಿಗೆ ಆಗುತ್ತೆ. ಇದರಂತೆ ಇದನ್ನು ಊಟ ಮಾಡುವವರ ದೇಹವು ಎಷ್ಟೇ ಬಲಹೀನನಾಗಿದ್ದರೂ ಭೀಮಸೇನನಂತೆ ಬಲಯುತರನ್ನಾಗಿ ಮಾಡಿ ಶರೀರದ ಕಾಂತಿಯನ್ನು ಹೆಚ್ಚಿಸುವದು. ಇದನ್ನು ಪ್ರತಿ ವಾಚಕರೂ ಪರೀಕ್ಷಿಸಬೇಕಾದ ಸಮಯವು. ಈ ಸಮಯ ತಪ್ಪಿದರೆ ಮುಂದೆ ದೊರೆಯಲಾರದು. ಇದರ ಕ್ರಯವು ಬಹು ಸ್ವಲ್ಪವು. ಡಬ್ಬಿ ೧ಕ್ಕೆ ರೂ ೦—೮—೦. ವಿ. ಪಿ. ಪಿ. ಚಾರ್ಜು ೦—೬—೦ ವಿಳಾಸ—ಟಿ. ಸಿ. ಕನ್ನೈಯ್ಯಶೆಟ್ಟಿ ಅಂಡ್ ಕೋ, ಜನರಲ್ ಮರ್ಚಂಟ್, ನಂಬರು ೨೮, ಸಿಂಗಣ್ಣನಬೀದಿ, ಸಾಹುಕಾರಪೇಟೆ, ಮದರಾಸು

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ.—ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡವೆ ಬಾಯಾರಿಕೆ, ಬಳಲಿಕೆ; ಎದೆ ತಲ್ಲಣಿಸುವುದು, ತಲೆನೋವು; ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ; ಮೈನೋವು ಕೀಲುನೋವು, ಮಂಪು, ಗತ್ರಾಣ, ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [93-41]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.

ರೂ. ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಜೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಮಹಾ ಬಾಧಾಪಹಾರಿಣಿಯು.

18-8

ಇದನ್ನು ಸೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಯಕ್ಷಿಣೀ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ಪರ್ತಕರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಿದ್ದಾರೆ, ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ಕಳತ, ಗಂಟ್ಲುನೋವು, ಚುಕ್ಕೆ ವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಉಳುಕಿದ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಪೂರ್ವವಾದ ತೈಲವು ನೋವಿರುವ ಸ್ಥಳದ ಮೇಲೆಲ್ಲಾ ಸವರಿ ನಿವಾರಿಸಿ, ಅದರ ಹುಟ್ಟನ್ನೇ ಅಣಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಅದರ ೩ ಅಥವಾ ಹೆಚ್ಚು ಬಾಟಲ್ಲ ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟಲ್ಲ ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ವೇದಮಲ್ಲೆಪ್ಪ ಬೀದಿ, ವೇಪೇರಿ, ಮದರಾಸ್.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

1-24



ಈ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ನಾಂತಿಭೇದಿ (ಕಾಲರಾ) ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳೆನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲಮಾಡಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕ್ರಯಂದ ಸ್ವಲ್ಪವೂ ಮುಟ್ಟದ್ದಲ್ಲ.

ಇದು ಎಲ್ಲಲ್ಲೂ ವಿಕರಿಯಾಗುತ್ತಿದೆ. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಮಕ್ಕಳ ಹಿತಕಾರಿ

ಎಂದು

SCOTT'S EMULSION 33-11

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನ ಔಷಧಕ್ಕೆ ಕೋಟ್ಯಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ. ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಹಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಆರೋಗ್ಯದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು.

ಕೈನೋಡಿ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲಿ ವಿಕರಿಯಾಗುತ್ತೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷದಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಒಂದು ತರಿಸಿಕೊಳ್ಳಿ.

2-21

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದುವು? ಎಲ್ಲಿಂದ ಇತರ ಅಂಗಡಿಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಅಂಗಡಿಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ಪಾಡವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಪಾಡವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ. ೩ ಆ.; ೧ ರೂ. ೪ ಆ.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ; ೨ ರೂ.

ಜಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೩ ಆ.

ಉಣ್ಣೆಯ ಟೋಪಿಗಳು ೧ ರೂ. ೮ ಆ.; ೧ ರೂ. ೩ ಆ.

ಹೊಸಗಳ ಟೋಪಿ, ಸೂರ್ಯ ಮೇಲೋಡು, ಅರ್ಧ ಮೇಲೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿಕೊಂಡವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟರ್."

ವ್ಯವಹಾರನಿರ್ಣಯ—ಪುಟಗಳು ೫೩೪ ಹಿಂದೂ ಮಾಕಮನೀಯ ಲಾಗಳು, ೬೯ ಶಾಸನಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೬೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ. ಪಿ. ಸೇರಿ ೧ ರೂ. ೧೨ ಆಣೆ. [40 7]

ಕನ್ನಡ ಲಾ ರಿಪೋರ್ಟರ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳು ಕನ್ನಡದಲ್ಲಿ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಂದಾವರ್ತಿ ಹೊರಡುತ್ತದೆ. ವರ್ಷದ ಚಂದಾ ೯—೦—೦ ಮುಂಗಡ, ಅಥವಾ, ವಿ. ಪಿ. ಪತ್ರಿಕೆಗೆ ೧ಕ್ಕೆ ೦—೨—೦

ಇವುಗಳನ್ನು ಪ್ರಕಟಿಸುವವರು "ಎಂ. ವಂಟ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯಬೇಕು.

ವೃತ್ತಾಂತ ಪತ್ರಿಕೆ

೧೯೦೮ನೇ ಇಸವಿ ಜೂನ್ ತಾ ೧೧ ನೇ ಗುರುವಾರ

ಬೆಂಗಳೂರು ಪೋಲೀಸು

ಬೆಂಗಳೂರು ಕೊಲೆಗಳ ವಿಚಾರಣೆಯು ಮುಗಿದು ಮೂವರು ಅಪರಾಧಿಗಳು ಪಕಕಾಲದಲ್ಲಿ ಗಲ್ಲಿಗೆ ಹಾಕಲ್ಪಟ್ಟರು. ಅಪರಾಧಿಗಳಿಗೆ ಸಹಾಯ ಮಾಡುತ್ತಿದ್ದರೆಂದು ಕೆಲವು ಪೋಲೀಸಿನವರನ್ನು ಡಿಸ್ಮಿಸ್ ಮಾಡಿ ರುಜುವಾತು ದೊರಕದೆ ಬಿಟ್ಟು ಬಿಟ್ಟರು. ಈ ಕೊಲೆ ಮೊಕದ್ದಮೆಗಳಲ್ಲಿ ಕಂಡುಬಂದ ಪೋಲೀಸಿನವರ ಚರ್ಯೆಯನ್ನು ಕುರಿತು ಸ್ವಲ್ಪ ಮಟ್ಟಿಗೆ ಈಗ ಪ್ರಸ್ತಾಪ ಮಾಡುವೆವು. ಫಾಸಿ ಸಜಾ ವಿಧಿಸಲ್ಪಟ್ಟವು ಬೈದಿಗಳು ಹೇಳಿದ ರುಜುವಾತಲ್ಲದೆ ಪೋಲೀಸಿನವರ ಮೇಲೆ ಇತರ ರುಜುವಾತುಗಳಾವುವೂ ತೃಪ್ತಿಕರವಾಗಿ ಇಲ್ಲವಾದ್ದರಿಂದ ಜಡ್ಜಿಯವರು ಅವರನ್ನು ಡಿಸ್ಮಿಸ್ ಮಾಡಬೇಕಾಯಿತು. ಅಂಥಾ ದೇಹಾಂತ ಶಿಕ್ಷೆಯ ಪಾತ್ರರು ಹುಟ್ಟಿಸಿ ಆದರ ಮೇಲೆ ಅಪಸಾಕ್ಷಿ ನುಡಿದರೇನೆಂದು ಪುನಃ ಜಡ್ಜಿಯವರು ಪೋಲೀಸರಾಗಲಿ ತಿಳಿಸಿ, ಅಂಥಾ ಸಾಕ್ಷ್ಯವನ್ನು ನಿರಾಕರಿಸುವುದು ಸಹಜವಾಗಿರುತ್ತದೆ. ಆತ್ಮಲಾಗಿ ಪೋಲೀಸಿನವರಿಗೂ ಆ ಕೊಲೆಗಾತುಕರಿಗೂ ತಕ್ಕಮಟ್ಟಿಗೂ ಸಂದಿಗ್ಧವಾದ ಅಂತರ್ಯ ಭಾವವಿತ್ತೆಂದು ಹೇಳದಿರಲಾರೆವು. ಈ ಅಂತರಂಗವು ಹೆಚ್ಚಾಗಿದ್ದದ್ದರಿಂದ ಪೋಲೀಸಿನವರನ್ನು ಇಲಾಖೆಯೊಳಗೆ ತೋರಿಕೆ ಮಾಡದೆ ಕೋರ್ಟಿನ ಡಿಸ್ಮಿಸ್ಸಿಗೆ ಕಳುಹಿಸಿಕೊಡಬೇಕಾಯಿತು. ಇದೂ ಅಲ್ಲದೆ ಅವರ ಚರ್ಯೆಯು ಅತೃಪ್ತಿಕರವಾಗಿ ಕಂಡುಬಂದದ್ದರಿಂದ ಅಂಥವರನ್ನು ಪೋಲೀಸ್ ಇಲಾಖೆಯಲ್ಲಿಟ್ಟುಕೊಳ್ಳದೆ ಮನೆಗೆ ಕಳುಹಿಸಿಬಿಟ್ಟರು. ಒಂದು ವೇಳೆ ಇವರು ಆ ಕೃತ್ಯಗಳನ್ನು ನಡೆಸಿದವರಾಗಿಲ್ಲದಿದ್ದರೂ ಅರಿಯರು; ಅವರ ಅಪರಾಧಿಗಳ ಅಂತರ್ಯಕ್ಕೆ ಸೇರಿದ್ದರೆಂದು ಕಾಣುತ್ತದೆ. ಪೋಲೀಸಿನವರ ಮೇಲೆ ಯಾವ ಅನುಮಾನವೂ ಉಂಟಾಗಬಾರದು. ಇವರ ಮೇಲೆಯೋ ಬಹಳ ಅನುಮಾನವಿರುವುದು. ಆದ್ದರಿಂದಲೇ ಅವರನ್ನು ಕೆಲಸದಿಂದ ತೆಗೆದುಹಾಕಿದ್ದು ಜನರಲ್ಲಿ ತೃಪ್ತಿಯನ್ನು ಉಂಟುಮಾಡಿದೆ. ಇದರಲ್ಲಿ ಒಂದು ವಿಷಯವು ಪ್ರಾಮುಖ್ಯವಾಗಿರುವುದು. ಮೊದಲು ಬೆಂಗಳೂರಿನಲ್ಲಿ ಕೆಲವು ಕೊಲೆಗಳನ್ನು ಬಹು ಒರಟುತನದಿಂದ ನಡೆಸಿದರು. ಅವುಗಳಲ್ಲಿ ಯುಕ್ತಿ ಚಮತ್ಕಾರಗಳೇನೂ ಇರಲಿಲ್ಲ. ಕೆಲವನ್ನು ಒಡ್ಡತನದಿಂದಲೂ ನಿರ್ಲಕ್ಷ್ಯಭಾವದಿಂದಲೂ ನಡೆಸಿದರು. ಆದಾಗ್ಯೂ ಆ ವ್ಯಕ್ತಿ ಒಂದನ್ನಾದರೂ ಪೋಲೀಸಿನವರು ಪತ್ತೆಮಾಡಲಿಲ್ಲ. ಇದನ್ನು ನೋಡಿದರೆ ಪೋಲೀಸಿನವರು ಸಾಮರ್ಥ್ಯವಿಲ್ಲದವರು, ಇಲ್ಲವೇ ದುಷ್ಟಚಾಲಿಸುವರು ಎನ್ನುವದು ಪ್ರಕಾಶವಾಗುತ್ತದೆ. ಈಗ ಕೆಲವರಿಗೆ ಕೆಲಸದಿಂದ ಮಜಾ ಆದುದು

ಪೊಲೀಸಿನವರನ್ನೆಲ್ಲಾ ಸಾಮಾನ್ಯವಾಗಿ ಎಚ್ಚರಿಸುವುದೆಂದು ನಂಬಿ ನಿರೀಕ್ಷಿಸುತ್ತೇವೆ.

ಪೊಲೀಸಿನವರನ್ನು ಹೀಯಾಳಿಸಿ ಅವರ ವಿಷಯದಲ್ಲಿ ಅಲ್ಪವಾದ ಮಾತುಗಳನ್ನು ಪ್ರಯೋಗಿಸುವುದಕ್ಕೆ ನಮಗೆ ಇಷ್ಟವಿಲ್ಲ. ಅವರು ಸಂಸ್ಥಾನದ ಪ್ರಜೆಗಳಿಗೆ ನಾನಾ ಉಪಕಾರಗಳನ್ನು ಮಾಡುವವರಾಗಿದ್ದಾರಾದಕಾರಣ ಅವರಿಗೆ ನಾವು ಕೃತಜ್ಞರಾಗಿರತಕ್ಕದ್ದು. ಪೊಲೀಸಿನವರಲ್ಲಿ ಲಂಚ ತೆಗೆದುಕೊಳ್ಳುವುದೂ, ಕ್ರೂರ ಹಿಂಸೆ ಮಾಡುವುದೂ, ಸುಳ್ಳು ಸಾಕ್ಷಿಯನ್ನು ಎತ್ತಿ ಕಟ್ಟುವುದೂ ಉಂಟೆಂದು ತಿಳಿದಿದೆ. ಆದರೂ ಕೆಲವರು ಹೇಳುವಂತೆ, ಪೊಲೀಸಿನವರೆಲ್ಲಾ ಅಂಥಾ ನೀಚ ಕೃತ್ಯಗಳನ್ನು ಮಾಡತಕ್ಕವರೆಂದು ತಿಳಿಯಕೂಡದು. ಪೊಲೀಸಿನವರ ಗುಣ ನಡೆ ನುಡಿಗಳು ಸಾಮಾನ್ಯವಾಗಿ ಇತರ ಜನರಂತೆಯೇ ಇರುತ್ತವೆ. ಹಾಗಾದರೆ ಪೊಲೀಸಿನವರನ್ನು ಒಳ್ಳೇ ಸ್ಥಿತಿಗೆ ತರುವುದಕ್ಕೆ ಏನು ಮಾಡಬಹುದು ? ಮೊದಲು ಅವರ ಸಂಬಳವನ್ನು ಹೆಚ್ಚಿಸಿ, ಉತ್ತಮತರದ ಜನರನ್ನು ಸೇರಿಸಿಕೊಳ್ಳಬೇಕು. ಇದಕ್ಕೆ ಖರ್ಚು ಹೆಚ್ಚುವುದು. ಈ ಹೆಚ್ಚು ಖರ್ಚನ್ನು ಈ ಸಂಸ್ಥಾನದ ಪ್ರಜೆಗಳು ವಹಿಸುವುದಕ್ಕೆ ಇಷ್ಟಪಡುವರೋ ? ಕಾನ್‌ಸ್ಟೆಬಲ್‌ರ ಸಂಬಳವನ್ನು ಹೆಚ್ಚಿಸಬೇಕೆಂದು ನಮಗೆ ತೋರುತ್ತಿದೆ. ಹೀಗೆ ಸಂಬಳವನ್ನು ಬಡ್ತಿ ಮಾಡುವುದೊಂದೇ ಸಾಲದು. ಕೆಲವರಿಗೆ ಸಂಬಳವನ್ನು ಎಷ್ಟು ಹೆಚ್ಚು ಮಾಡಿದರೂ ಸತ್ಯವಂತರಾಗುವುದಿಲ್ಲ. ಅಂಥವರಿಗೆ ೧೦ ರೂ. ಕೊಟ್ಟರೂ, ೧,೦೦೦ ರೂ. ಕೊಟ್ಟರೂ ತಮ್ಮ ದುರಾಶೆಯನ್ನು ಬಿಡರು, ವಿಷಯಾಸಕ್ತಿಯನ್ನು ತೊರೆಯರು, ಕ್ರೂರ ಹಿಂಸೆಯನ್ನು ನಿಲ್ಲಿಸರು, ಅಸತ್ಯತೆಯನ್ನು ತ್ಯಜಿಸರು.

ಸಂಸ್ಥಾನದಲ್ಲಿ ಪ್ರತಿ ಒಬ್ಬ ಪ್ರಜೆಯ ಶೀಲಸ್ವಭಾವಾದಿಗಳೂ ಉತ್ತಮವಾಹ ಹೊರತು ಪೊಲೀಸಿನವರ ನಡತೆಯನ್ನು ಸರಿಪಡಿಸುವುದು ಸಾಧ್ಯವಲ್ಲವೆಂದು ನಾವು ತಿಳಿದಿದ್ದೇವೆ. ಪ್ರತಿ ಒಬ್ಬ ತಂದೆಯೂ ತನ್ನ ಮಗನು ಚಮತ್ಕಾರವಾಗಿ ಹೇಳುವ ಸುಳ್ಳನ್ನು ಖಂಡಿಸಿ, ತಕ್ಕದಾಗಿ ಅವನನ್ನು ಶಿಕ್ಷಿಸದಿದ್ದಲ್ಲಿ ಪೊಲೀಸಿಗೆ ಸತ್ಯವಂತನು ದೊರಕಲಾರನು. ಸುಳ್ಳು ಹೇಳುವುದಕ್ಕಿಂತ ಮನೆಯನ್ನೇ ಸುಟ್ಟರೂ ಚಿಂತೆಯಿಲ್ಲವೆಂಬುದನ್ನು ಮಕ್ಕಳಿಗೆ ಚೆನ್ನಾಗಿ ಕಲಿಸಿ ಬೆಳೆಸಬೇಕು. ಮನೆಗಳಲ್ಲಿ ಮಕ್ಕಳ ಮುಂದೆ ಅಯೋಗ್ಯವಾದ ಅಥವಾ ಅಶ್ಲೀಲವಾದ ಯಾವ ಮಾತನ್ನು ದೊಡ್ಡವರು ಆಡದಂತೆ ನೋಡಿಕೊಳ್ಳಲಿ. ವರ್ತಕನಾಗಲೀ, ಉಪಾಧ್ಯಾಯನಾಗಲೀ, ವಕೀಲನಾಗಲೀ, ಸೇವಕನಾಗಲೀ ಪ್ರತಿಯೊಬ್ಬನೂ ಲಂಚ ತೆಗೆದುಕೊಳ್ಳುವುದನ್ನು ಕಠಿಣ ಸಜಾ ಅನುಭವಿಸುವುದಕ್ಕೆ ಸಮಸಮಾನವಾದುದೆಂದು ಎಣಿಸಿ ಅದನ್ನು ತ್ಯಜಿಸಬೇಕು. ಮನೆಗಳಲ್ಲಿ ಸತ್ಯವಂತರಾಗಿಯೂ ಪವಿತ್ರರಾಗಿಯೂ ಇರುವವರು ಹೆಚ್ಚಿದ ಹಾಗೆಲ್ಲಾ ಸರ್ಕಾರಿ ನೌಕರಿಗಳಲ್ಲೂ ಅಧಿಕಾರಗಳಲ್ಲೂ ಸತ್ಯವಂತರೂ ಪರಿಶುದ್ಧರೂ ಹೆಚ್ಚುತ್ತಾ ಬರುವರೆಂಬುದನ್ನು ಸಕಲರೂ ಪರಿಷ್ಕಾರವಾಗಿ ತಿಳಿಯಬೇಕು. ಪ್ರಜೆಗಳು ಸಾಮಾನ್ಯವಾಗಿ ದುರ್ನಡತೆಯುಳ್ಳವರಾಗಿರುವವರೆಗೂ ಪೊಲೀಸಿನವರಲ್ಲಿ ಅದು ಕಾಣಿಸಿಕೊಳ್ಳುವುದು. ಜನಾಂಗದಲ್ಲಿ ಪರಿಶುದ್ಧವಾದ ನಡೆನುಡಿಗಳು ಹುಟ್ಟಿ ಪ್ರಬಲಿಸಿದ ಪಕ್ಷದಲ್ಲಿ ಪೊಲೀಸಿನವರೂ ಒಳ್ಳೇ ಸತ್ಯವಂತರಾಗುವರು. ಆಗ್ಗೆ ಪ್ರಜೆಗಳಿಗೆ ಪೊಲೀಸಿನವರಲ್ಲಿ ಪೂರ್ಣ ಭರವಸೆಯುಂಟಾದೀತು. ಮತ್ತು ಪೊಲೀಸಿನವರೂ ಪ್ರಜೆಗಳ ಮಾನಪ್ರಾಣಧನಗಳನ್ನು ಸತತವಾಗಿ ಸಂರಕ್ಷಣೆ ಮಾಡುವರು.

ಒಳದೇಶದ ವೃತ್ತಾಂತಗಳು

ಹಿಂದಿನ ವಾರ ರಾಜಧಾನಿಯ ಕೃಷ್ಣರಾಜ ಮೊಹಲ್ಲಾದಲ್ಲಿ ಸಿಡಿಲು ಬಿದ್ದು ಒಂದು ಮರವು ಸೀಳಿಹೋಗಿ ಅದರಡಿ ಕಟ್ಟಿದ್ದ ಒಂದು ಎಮ್ಮೆಯು ಮೃತಪಟ್ಟಿತು

***

ಈ ವರುಷ ನಮ್ಮ ಮಹಾರಾಜರವರ ವರ್ಧಂತಿ ಉತ್ಸವಕ್ಕೆ ಯುರೋಪಿಯನ್ ಸರ್ದಾರರೂ ದೊರೆಸಾನಿಗಳೂ ಸುಮಾರು ೧೫ ಮಂದಿಯು ತನಕ ರಾಜಧಾನಿಗೆ ಬಂದಿರುವರು

***

ಶ್ರೀಮನ್ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್, ಜಿ. ಸಿ. ಎಸ್. ಐ. ಯವರ ೨೫ ನೇ ವರ್ಷವರ್ಧಂತಿಯು ನೆನ್ನೆಯದಿನ ರಾಜಧಾನಿಯಲ್ಲಿ ಅತ್ಯಂತ ವೈಭವದೊಡನೆ ನೆರವೇರಿಸಲ್ಪಟ್ಟಿತು

***

ರಾಜಧಾನಿಯಲ್ಲಿ ಕಳೆದ ವಾರ ಬಾಲ್ಯವಿವಾಹದ ಕಾನೂನಿಗೆ ವ್ಯತಿರಿಕ್ತವಾದಂಥಾ ಒಂದು ಮದುವೆಯು ನಡೆದಿರುವಂತೆ ಸರ್ಕಾರದವರಿಗೆ ವರ್ತಮಾನ ತಿಳಿದದ್ದರಿಂದ ಪೊಲೀಸ್ ಸೂಪರಿಂಟೆಂಡೆಂಟರು ಅದರ ಪರಿಸ್ಥಿತಿಯನ್ನು ಕುರಿತು ತನಿಖೆಮಾಡುತ್ತಿದ್ದಾರೆಂದು ಕೇಳುತ್ತೇವೆ

ಧಾರವಾಡದಲ್ಲಿ ಕಳೆದ ವಾರ ನಡೆದ ಕನ್ನಡ ಗ್ರಂಥಕರ್ತರ ಸಭೆಯಲ್ಲಿ ಮ|| ಕೆ. ಲಕ್ಷ್ಮೀನಾರಣಪ್ಪನವರು ಮಾಡಿದ ಭಾಷಣದ ಒಂದು ಭಾಗವನ್ನು ಈ ಪತ್ರಿಕೆಯ ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ.

***

ಕಳೆದ ವಾರ ಕಾಲೀಸ್ ಪೇಟೆಯ ಬಳಿ ಮೋಟಾರ್ ಗಾಡಿಯು ಹೋಗುತ್ತಾ ಒಂದು ಹೆಣ್ಣು ಮಗುವಿನ ಮೇಲೆ ಹರಿದು ಕೊಂದುಬಿಟ್ಟಿತೆಂತಲೂ, ಗಾಡಿಯಲ್ಲಿದ್ದ ಸಾಹೇಬ್ ಜನರು ಆ ಮಗುವಿನ ತಂದೆ ತಾಯಿಗಳಿಗೆ ಪ್ರತಿಫಲವನ್ನು ಕೊಟ್ಟು ಸಮಾಧಾನಪಡಿಸಿದರೆಂತಲೂ ಪ್ರಕಟವಾಗಿದೆ.

***

ನಮ್ಮ ಮಹಾರಾಜರವರ ವರ್ಧಂತಿ ಉತ್ಸವಕ್ಕೆ ದಿವಾನರವರೂ, ಕೌನ್ಸಿಲ್ ಮೆಂಬರುಗಳೂ, ಸೆಕ್ರಟರಿಗಳೂ, ಇಲಾಖೆಗಳ ಅಧಿಕಾರಸ್ಥರೂ, ಡೆಪ್ಟಿ ಕಮಿಷನರುಗಳೂ, ದೊಡ್ಡ ಉದ್ಯೋಗಗಳಲ್ಲಿದ್ದ ಪೆನ್ಷನ್‌ದಾರರೂ, ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರುಗಳೂ ಕಳೆದ ೨—೩ ದಿನಗಳಲ್ಲಿ ರಾಜಧಾನಿಗೆ ಬಂದಿರುತ್ತಾರೆ.

***

ಕೋಲಾರಕ್ಕೆ ಸೇರಿದ ಉರಿಗದಲ್ಲಿ ಸ್ಪೆನ್ಸರ್ ಅಂಗಡಿಯೊಳಗೆ ಗುಮಾಸ್ತೆಯಾಗಿದ್ದ ರಾಮಯ್ಯನೆಂಬಾತನು ಕೆಲವರಿಂದ ಸಾಲ ತೆಗೆದುಕೊಂಡು ಐದು ದಿನಗಳ ರಜಾ ಪಡೆದು ತನ್ನ ಊರಾದ ಕುಣಿಗಲು ತಾಲ್ಲೂಕು ಅಮೃತೂರಿಗೆ ಹೋಗಿಬರುವುದಾಗಿ ಹೇಳಿ, ಕಳೆದ ತಿಂಗಳ ೧೩ ನೇ ತಾ. ರಾತ್ರಿ ರೈಲುಹತ್ತಿದವನು ಎಲ್ಲಿಗೆ ಹೋದನೋ ಪತ್ತೆ ಆಗಲಿಲ್ಲ

***

ಬೆಂಗಳೂರಿನಲ್ಲಿ ಲಕ್ಷ್ಮಿ ಎಂಬವಳನ್ನು ಕೊಂದ ವೆಂಕಟಪ್ಪ ಮೊದಲಿ ಶ್ರೀನಿವಾಸಲು ಎಂಬ ಅಪರಾಧಿಗೆ ಚೀಫ್ ಕೋರ್ಟ್ ಸೆಷನ್ಸ್ ಜಡ್ಜಾದ ಮಿ|| ಜಸ್ಟಿಸ್ ಕೃಷ್ಣರಾಯರು [illegible] ಶಿಕ್ಷೆಯನ್ನು ವಿಧಿಸಿದರಷ್ಟೆ. ಗವರ್ನಮೆಂಟಿನವರು ಆ ಶಿಕ್ಷೆಯು ಸಾಲದೆಂದು ಚೀಫ್ ಕೋರ್ಟಿನ ಫುಲ್ ಬೆಂಚಿನಲ್ಲಿ ಅಪೀಲ್ ಮಾಡುವವರಾಗಿದ್ದಾರೆಂದು ಕೇಳುತ್ತೇವೆ.

***

ನಮ್ಮ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಮ|| ಇ. ಮೆಕ್ಕಾನಕಿಯವರು ಈ ವರುಷದ ಅಖೈರಿಗೆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೋಗುವರೆಂತಲೂ, ಅವರಿಗೆ ಬೊಂಬಾಯಿ ಗವರ್ನಮೆಂಟಿನಲ್ಲಿ ರೆವಿನ್ಯೂ ಇಲಾಖೆಯ ಇನ್ಸ್‌ಪೆಕ್ಟರ್ ಕೆಲಸವಾಗುವುದೆಂತಲೂ ವರ್ತಮಾನವಿದೆ. ಅವರ ಪತ್ನಿಯವರು ಮಕ್ಕಳನ್ನು ಕರೆದುಕೊಂಡು ಕಳೆದ ೬ ನೇ ತಾ. ಶನಿವಾರ ಶೀಮೆಗೆ ಪ್ರಯಾಣಮಾಡಿದರು

***

ತಂಜಾವೂರಿನ ಬಳಿ ಇರುವ ಪ್ರಸಿದ್ಧವಾದ ಸಿಟಿ ದೇವಸ್ಥಾನದೊಳಗೆ ಬಾಗಿ ಕಳುವು ನಡೆದು ಸುಮಾರು [illegible] ನಗನಾಣ್ಯಗಳು ಕಳುವಾಯಿತಷ್ಟೆ. ಇನ್ಸ್‌ಪೆಕ್ಟರ್ ಅಬ್ದುಲ್ ಗನಿಯವರು ಬಹು ಸಾಹಸಮಾಡಿ, ಆ ಕಳ್ಳತನವನ್ನು ಪತ್ತೆಮಾಡಿರುವುದಾಗಿಯೂ, ಕೆಲವು ಪದಾರ್ಥಗಳು ಸಿಕ್ಕಿಬಿದ್ದಿರುವುದಾಗಿಯೂ, ಇನ್ಸ್‌ಪೆಕ್ಟರು ಇನ್ನೂ ತನಿಖೆಮಾಡುತ್ತಾ ತಂಜಾವೂರಿನಲ್ಲೇ ಇರುವುದಾಗಿಯೂ ತಿಳಿದುಬಂದಿದೆ

***

ಕಳೆದ ಭಾನುವಾರ ಸೋಮವಾರಗಳ ಸಾಯಂಕಾಲ ರಾಜಧಾನಿಯಲ್ಲಿ ಸುಮಾರು ೨ ಗಂಟೆಯ ತನಕ ಬಿರುಸಾದ ದೊಡ್ಡ ಮಳೆ ಸುರಿಯಿತು ಆದರೂ ಬಿಸಿಲಿನ ತಾಪವು ಇನ್ನೂ ಶಮನವಾಗಿಲ್ಲ. ಸದ್ಯಕ್ಕೆ ರೋಗಾದಿಗಳ ಭೀತಿಯು ಸಮಾಪ್ತಿಯಾಗಿದೆ ಇಲ್ಲಿ ಇಲಿ, ಹೆಗ್ಗಣಗಳನ್ನು ಕೊಂದುತಂದು ಹೆಲ್ತ್ ಆಫೀಸರಿಗೆ ತೋರಿಸಿದರೆ ಇನಾಮು ಕೊಡುವುದಾಗಿ ಡೆಪ್ಟಿ ಕಮಿಷನರು ಪಟ್ಟಣವೆಲ್ಲಾ ಸಾರಿಸಿರುತ್ತಾರೆ

***

ಈ ಸಂಸ್ಥಾನದಲ್ಲಿ ಇಂಜಿನಿಯರಾಗಿದ್ದು ಮಾರೀಕಣಿವೆ ತಲಾವಿನ ಕಾಮಗಾರಿಯನ್ನು ಬಹುಮಟ್ಟಿಗೆ ಮಾಡಿಸಿ ನಮ್ಮ ಮಹಾರಾಜರವರಿಂದ “ರಾಜಭೂಷಣ” ಎಂಬ ಬಿರುದನ್ನು ಸಂಪಾದಿಸಿಕೊಂಡು ಹೋಗಿ ಈಗ ಬರೋಡಾ ಸಂಸ್ಥಾನದಲ್ಲಿ ಚೀಫ್ ಇಂಜಿನಿಯರಾಗಿರುವ ಮಿ|| ಸಿ. ಟಿ. [illegible]ಯವರು ಈ ಸಲ ನಮ್ಮ ಮಹಾರಾಜರವರ ವರ್ಧಂತಿ ಉತ್ಸವದ ಆತಿಥ್ಯವನ್ನು ಅಂಗೀಕರಿಸಿ ರಾಜಧಾನಿಗೆ ಬಂದಿರುತ್ತಾರೆ.

***

ಬೊಂಬಾಯಿನಲ್ಲಿ ಪ್ರಸಿದ್ಧ ಸಾಹುಕಾರರಾಗಿರುವ ಮಿ|| ನರೋತ್ತಮ ಮೊರಾರ್ಜಿ ಗೋಕುಲದಾಸ್ ಸೇಟರು ಕಳೆದ ವಾರ ನೀಲಗಿರಿಯಿಂದ ನಂಜನಗೂಡು ಮಾರ್ಗವಾಗಿ ಬೆಂಗಳೂರಿಗೂ, ಅಲ್ಲಿಂದ ಕೋಲಾರ್ ಚಿನ್ನದ ಗಣಿಗಳಿಗೂ, ತರುವಾಯ ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆಗೂ ಹೋಗಿ ನೋಡಿಕೊಂಡು, ಮೊನ್ನೆ ಭಾನುವಾರ ಬೆಳಿಗ್ಗೆ ರಾಜಧಾನಿಗೆ ಬಂದು ಜಗನ್ಮೋಹನ ಬಂಗಲೆಯಲ್ಲಿ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಾ ಇದ್ದಾರೆ

***

ಕಳೆದ ವಾರ ಚಿಂತಾಮಣಿಯಲ್ಲಿ ಪ್ರಜೆಗಳೂ ರೈತರಲ್ಲಿ ಮುಖಂಡರೂ ಸೇರಿ ಒಂದು ವಸ್ತುಪ್ರದರ್ಶನವನ್ನು ನಡಿಸಿದರು ಆಗ್ಗೆ ದಿವಾನ್ ಮಾಧವರಾಯರು ಅಲ್ಲಿಗೆ ದಯಮಾಡಿ ಪ್ರದರ್ಶನವನ್ನು ಪ್ರಾರಂಭಮಾಡಿದರೆಂದೂ, ಡೆಪ್ಟಿ ಕಮಿಷನರಾದ ಮಿ|| ಶ್ರೀಕಂಠೇಶ್ವರಯ್ಯನವರೂ ಇತರ ಅಧಿಕಾರಿಗಳೂ ಬಹು ಮಂದಿ ದೊಡ್ಡ ಮನುಷ್ಯರೂ ಹಾಜರಾಗಿದ್ದರೆಂದೂ, ಉತ್ಕೃಷ್ಟವಾದ ಪ್ರದರ್ಶನ ವಸ್ತುಗಳಿಗೆ ಪ್ರಜೆಗಳ ಮುಖಂಡರು ಬಹುಮಾನಗಳನ್ನು ಕೊಟ್ಟು ಸಂತೋಷಪಡಿಸಿದರೆಂದೂ ತಿಳಿದುಬಂದಿದೆ

***

ಕಾಠ್ಯವಾಡದ ದೇಶೀಯ ಸಂಸ್ಥಾನಗಳಲ್ಲಿ ಒಂದಾದ ಸಾಳ್ಯದ ಯುವರಾಜರು ಮಹಾರ್‌ಸಿಂಗ್‌ಜಿಯವರೂ ಕೆ. ಎಸ್. ಮೊರಂಬಾಯವರೂ ಪರಿವಾರ ಸಮೇತ ನಂಜನಗೂಡಿಗೆ ಬಂದು, ದೇವಸ್ಥಾನದಲ್ಲಿ ಸೇವಾದಿಗಳನ್ನು ಮಾಡಿಕೊಂಡು ಕಳೆದ ಗುರುವಾರ ಸಾಯಂಕಾಲ ರಾಜಧಾನಿಗೆ ಬಂದು ಮೂರು ದಿನಗಳ ತನಕ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ, ಇಲ್ಲಿ ನೋಡತಕ್ಕ ಕಟ್ಟಡಗಳನ್ನೂ ಪುರಭಾಗಗಳನ್ನೂ ನೋಡಿಕೊಂಡು, ಕಳೆದ ಭಾನುವಾರ ರಾಮೇಶ್ವರ ಯಾತ್ರೆಗೋಸ್ಕರ ಪ್ರಯಾಣಮಾಡಿದರು.

***

ಬೆಂಗಳೂರು ಪಟ್ಟಣದಲ್ಲಿ ಇದೇ ಜೂನ್ ತಿಂಗಳ ಲಾಗಾಯ್ತು “ಭಾರತಿ” ಎನ್ನುವ ಹೆಸರಿನ ಕನ್ನಡ ದಿನಪತ್ರಿಕೆಯು ಪ್ರಕಟವಾಗುವಂತೆ ತಿಳಿದುಬಂದಿದೆ. ಈ ಪತ್ರಿಕೆ ಉದ್ದೇಶವನ್ನು ಕುರಿತು ಮ್ಯಾನೇಜರು ನೋಟೀಸ್ ಮೂಲಕ ತಿಳಿಸಿರುವುದೇನೆಂದರೆ—“ಪ್ರಭುಗಳಿಗೆ ಪ್ರಜೆಗಳ ಕ್ಷೇಮ, ಪ್ರಜೆಗಳಿಗೆ ತಮ್ಮ ಕರ್ತವ್ಯ, ವ್ಯಾಪಾರಿಗಳಿಗೆ ವಸ್ತುಗಳ ವಿಚಾರ, ನಾಗರೀಕರಿಗೆ ನಾಗರಿಕಲೋಕದನುಭವ, ಭೀರುಗಳಿಗೆ ಭರ್ತರಲ್ಲಿರಬೇಕಾದ ಭಕ್ತಿ, ಭಾರತೀಯರಿಗೆ ಭಾರತದ ಸಮಾಚಾರ, ಇವುಗಳನ್ನು ಚ್ಯುತಿಯಿಲ್ಲದೆ ಸೂಚಿಸಲು ಭಾರತಿಯು ಮಾತುಕೊಡುವಳು” ಎಂಬುದೇ

***

ತರೀಕೆರೆಯ ಬಾತ್ಮೀದಾರರು ಬರೆಯುವುದು.—“ಇಲ್ಲಿನ ಇಂಗ್ಲಿಷ್ ಡಾಕ್ಟರ ವಿಷಯವಾಗಿ ಬಾತ್ಮೀದಾರ್ ಮಿ|| ಅಸಾದುಲ್ಲಾ ಹುಸೇನ್ ಸಾಹೇಬರು “ಮೈಸೂರು ಸ್ಟ್ಯಾಂಡರ್ಡ್” ಎಂಬ ಪತ್ರಿಕೆಯಲ್ಲಿ ಒಂದು ವರುಷಕ್ಕೆ ಮುಂಚೆ ಕೆಲವು ಸಂಗತಿಗಳನ್ನು ಬರೆದಿದ್ದರು. ಆ ಡಾಕ್ಟರು ಮಾನನಷ್ಟಕ್ಕೆ ದಾವಾ ಮಾಡಿದ್ದರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ, ಮಿ|| ಅಸಾದುಲ್ಲಾ ಹುಸೇನ್ ಸಾಹೇಬರಿಗೆ ೫೦ ರೂಪಾಯಿ, ಮತ್ತು “ಮೈಸೂರು ಸ್ಟ್ಯಾಂಡರ್ಡ್” ಪತ್ರಿಕೆಯ ಎಡಿಟರ್ ಮಿ|| ಶ್ರೀನಿವಾಸೈಯಂಗಾರ್ರಿಗೆ ೧೦ ರೂಪಾಯಿ ಈ ರೀತಿ ಜುಲ್ಮಾನೆಗಳನ್ನು ವಿಧಿಸಿರುತ್ತಾರೆ”

***

ರಾಜಧಾನಿಯ ರೈಲ್ವೆ ಸ್ಟೇಷನ್ ಬಳಿ ಇರುವ ಯಂಪೈರ್ ಹೋಟೆಲಿನಲ್ಲಿ ಸುಮಾರು ಎರಡು ತಿಂಗಳ ಕೆಳಗೆ ಬೆಸ್ಟ್ ಅಂಡ್ ಕಂಪನಿಯ ಏಜೆಂಟರು ಇಳಿದುಕೊಂಡಿದ್ದಾಗ್ಗೆ ಅವರ ಜಾಬಿನ ಕೈಪೆಟ್ಟಿಗೆಯು ಹಣಕಾಸು ಸಮೇತ ಕಳುವಾಯಿತೆಂದು ತಿಳಿಸಿದ್ದೆವಷ್ಟೆ. ಮೊನ್ನೆಯ ದಿನ ಈ ಕಳುವು ಪತ್ತೆಯಾಗಿರುವಂತೆ ತಿಳಿಯುವುದು ಒಬ್ಬ ಕಲಾಯಿ ಮಾಡುವ ಮಹಮ್ಮದೀಯನ ಬಳಿ ಸುಮಾರು ೫೦೦ ರೂಪಾಯಿನ ಸ್ವತ್ತು ಸಿಕ್ಕಿದೆ ಒಂದು ಇಂಗ್ಲಿಷ್ ನಾಣ್ಯವೂ ಅದರ ಜೊತೆಗೆ ಸವರಿನ್ ನಾಣ್ಯಗಳೂ ಇದ್ದುದರಿಂದ ಈ ಮೊಕದ್ದಮೆಯು ಪತ್ತೆಯಾಯಿತು. ಅವನನ್ನು ದಸ್ತಗಿರಿಮಾಡಿ, ಪೊಲೀಸಿನವರು ತನಿಖೆಮಾಡುತ್ತಿದ್ದಾರೆ.

***

ಒಬ್ಬ ಬಾತ್ಮೀದಾರರು ಬರೆಯುವುದು.—“ಎಲ್ಲಾ ಕಡೆಗಳಲ್ಲಿಯೂ ಮರು ಆದಂತೆ ಇದೇ ಕೊಡಗು ಜಿಲ್ಲೆಯಲ್ಲಿ ಸಹ ಮಡಿಕೇರಿ ಕರಣಿಕರು ಶಾಮಣ್ಣಯ್ಯನವರ ಪುತ್ರಿ ಸುಮಾರು ೨೦ ವರ್ಷ ಪ್ರಾಯದ ಸರಸ್ವತಿ ಎಂಬ ವಿಧವೆಯನ್ನು ಕಾಸರಗೋಡು ಸಮೀಪ ಇರುವ ಪುಂಜೂರು ರಾಮಕೃಷ್ಣ ಪುಳಿಂಚತ್ತಾಯರು ವಿವಾಹ ಮಾಡಿಕೊಳ್ಳುವದಾಗಿ ನಿಶ್ಚಯಿಸಿ, ಸದರಿ ವಿವಾಹದ ಖರ್ಚಿಗೋಸ್ಕರ ಸದರಿ ಕರಣಿಕರ ಶಾಮಣ್ಣನವರಿಗೆ ೧೦೦ ಪವನ್ ಕೊಟ್ಟಿರುತ್ತಾನೆ ಅದರಲ್ಲಿ ೧೦ ಪವನ್ ಬಡವರಿಗೆ ಅನ್ನದಾನಕ್ಕೂ, ೯೦ ಪವನು ಇತರ ಖರ್ಚಿಗೂ ವಿನಿಯೋಗಿಸುವಂತೆ ಗೊತ್ತಾಗಿದೆ. ಈ ವಿವಾಹಕ್ಕೆ ದೊಡ್ಡ ದೊಡ್ಡ ಮನುಷ್ಯರು ಸಹ ಬಂದು ವಿವಾಹವನ್ನು ಈ ತಿಂಗಳ ತಾ [illegible] ಮಾಡಿಕೊಡುವಂತೆ ನಿಶ್ಚಯಿಸಿದೆ”

***

ಮೈಸೂರು ಗವರ್ನಮೆಂಟಿನವರು ಈ ಸಂಸ್ಥಾನದಲ್ಲಿ ದೊರೆಯುವ ಅಮೂಲ್ಯವಾದ ಕಲ್ಲುಗಳ ಮಾದರಿಗಳನ್ನೂ, ಕಾಡುಗಳಲ್ಲಿ ಬೆಳೆಯುತಕ್ಕ ಬೇರೆ ಬೇರೆ ಜಾತಿಯ ಮರಗಳ ಮಾದರಿಗಳನ್ನೂ ತರಿಸಿ, ಅವುಗಳಲ್ಲಿ ಮಾಡಬೇಕಾದ ಚಿತ್ರ ಕೆಲಸಗಳನ್ನು [illegible] ಮೇಲ್ವಿಚಾರಣೆ ಇಟ್ಟು ಕಾರ್ಖಾನೆಯಿಂದ ಮಾಡಿಸಿ, ಬಹು ಅಲಂಕಾರವಾದ ಪೆಟ್ಟಿಗೆಯಲ್ಲಿಡಿಸಿ, ಲಂಡನ್ ಪಟ್ಟಣದಲ್ಲಿನ ಪ್ರದರ್ಶನ ಶಾಲೆಗೆ ಕಳುಹಿಸಿ ಕೊಟ್ಟರು ಇವಕ್ಕೆಲ್ಲಾ ಸುಮಾರು ೪—೫ ಸಾವಿರ ರೂಪಾಯಿ ಖರ್ಚಾಯಿತು. ವಿಲಾಯತಿಯ ಚಕ್ರವರ್ತಿಯವರೂ ಚಕ್ರವರ್ತಿನಿಯವರೂ ಆಚೇ ವಾರ ಆ ಪ್ರದರ್ಶನಶಾಲೆಗೆ ದಯಮಾಡಿದ್ದಾಗ್ಗೆ ಮೈಸೂರಿನಿಂದ ಕಳುಹಿಸಲ್ಪಟ್ಟಿದ್ದ [illegible] ಪದಾರ್ಥಗಳನ್ನು ನೋಡಿ ಬಹಳವಾಗಿ ಕೊಂಡಾಡಿದರೆಂದು ತಂತೀ ವರ್ತಮಾನ ಬಂದಿದೆ.

***

ಗುಂಡ್ಲುಪೇಟೆಯ ಶ್ರೀವಿಜಯನರಸಿಂಹಸ್ವಾಮಿ ರಥೋತ್ಸವದಲ್ಲಿ ಸಂತರ್ಪಣೆಮಾಡಿಸುವುದಕ್ಕೆ ಆ ತಾಲ್ಲೂಕಿನ ಪಟೇಲರೂ ಶ್ಯಾನುಭೋಗರೂ ಒಪ್ಪಿ, ತಮ್ಮ ಫೋಟಿಗೆ ಹಣದಲ್ಲಿ ಪ್ರತಿ ವರ್ಷವೂ ನಾಲ್ಕಾಣೆಯಂತೆ ಕಡಿತಾಯಿಸಿಕೊಳ್ಳಬಹುದೆಂದು ಗವರ್ನಮೆಂಟಿಗೆ ಬರೆದುಕೊಂಡರು ಮೈಸೂರು ಡೆಪ್ಟಿ ಕಮಿಷನರು ಅದರಂತೆ ಮಾಡಬಹುದೆಂದು ಶಿಫಾರಸುಮಾಡಿದರು ಆ ರೀತಿ ಸರ್ಕಾರದವರು ಕಡಿತಾಯಿಸಿಕೊಳ್ಳುವಂತೆ ಹುಕುಂ ಕೊಡುವುದು ಅಕ್ರಮವಾಗುವುದೆಂದು ಗವರ್ನಮೆಂಟಿನವರಿಗೆ ತೋರಿದ್ದರಿಂದ ಫೋಟಿಗೆ ಹಣವನ್ನು ಕ್ರಮವಾಗಿ ಸಲ್ಲಿಸಿಬಿಡಬೇಕೆಂತಲೂ, ಪಟೇಲ್ ಶ್ಯಾನುಭೋಗರು ಇಷ್ಟಪಟ್ಟು ಸಂತರ್ಪಣೆಗಾಗಿ ಎಷ್ಟು ಹಣವನ್ನು ಕೊಡಬಯಸುವರೋ ಅಷ್ಟನ್ನೂ ಅಮಲ್ದಾರರು ತೆಗೆದುಕೊಂಡು ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟು, ಅವರುಗಳ ಇಷ್ಟಾನುಸಾರ ಸಂತರ್ಪಣೆ ಮುಂತಾದದ್ದನ್ನು ನಡಿಸಬೇಕೆಂತಲೂ ಹುಕುಂ ಕೊಟ್ಟಿದ್ದಾರೆ.

ಮೈಸೂರು ಸರ್ಕಾರಿ ಹುಕುಮುಗಳು.

ಈಚಲು, ತಂಗಡಿ, ಸೀಗೇ ಗಿಡಗಳು.

ಈಚೆಗೆ ಅಂದರೆ ೧೯೦೭ನೆ ಇಸವಿ ಮೇ ತಾ ೪ ರಲ್ಲೂ ಗವರ್ನ್‌ಮೆಂಟನವರು ಫಾರೆಸ್ಟ್ ಗಿಡ ಜಾತಿಗಳನ್ನು ಕ್ಲಾಸಿಫೈಮಾಡಿದ ಪಟ್ಟಿಯಲ್ಲಿ ಈಚಲು, ತಂಗಡಿ, ಸೀಗೆ, ಈ ಮೂರನ್ನೂ ಸೇರಿಸದೆ ಬಿಟ್ಟಿರೋಣದರಿಂದ ಆ ಗಿಡಗಳನ್ನು ರೈತರು ಕಡಿದು ಸಾಗಿಸದಂತೆ ತಡೆಯುವುದು ಕಷ್ಟವಾಗಿದೆ ಎಂದು ಫಾರೆಸ್ಟ್ ಕನ್ಸರ್ವೇಟರವರು ಗವರ್ನ್‌ಮೆಂಟಿಗೆ ತಿಳಿಸಿದರು. ಹೀಗೆ ಮತ್ತು ಈಚಲು ಫಸಲುಗಳಿಂದ ಫಾರೆಸ್ಟಿನ ಉತ್ಪತ್ತಿಗೆ ತಕ್ಕನುಟ್ಟಿಗೆ ಸಹಾಯವಾಗುವುದರಿಂದ ಆವೆರಡನ್ನೂ ಮೇಲ್ಕಂಡ ಪಟ್ಟಿಗೆ ಪ್ರತ್ಯೇಕವಾಗಿ ಸೇರಿಸಬೇಕಾಗಿದೆ. ತಂಗಡಿಯು ತೊಗಟೆ ಧಾರಣೆ ಕೋಲಾರ, ಬೆಂಗಳೂರು, ತುಮಕೂರು, ಚಿತ್ರದುರ್ಗ, ಈ ಡಿಸ್ಟ್ರಿಕ್ಟುಗಳಲ್ಲಿ ಹೆಚ್ಚಾಗಿರೋಣದರಿಂದ ಅಲ್ಲಿ ಅದನ್ನು ಕ್ಲಾಸ್ ಪಟ್ಟಿಗೆ ಸೇರಿದ ಗಿಡವೆಂದು ಎಣಿಸಬೇಕು. ಉಳಿದ ಡಿಸ್ಟ್ರಿಕ್ಟುಗಳಲ್ಲಿ ಅದನ್ನು ಸಾಗಿಸುವುದಕ್ಕೆ ನಿರಬಂಧ ಸುಂಕ ವಸೂಲ್ಮಾಡಬೇಕು ಎಂಬದಾಗಿ ಹುಕುಂ ಕೊಟ್ಟಿದಾರೆ.

ಗ್ರಾಮ ಪಾಕೀಜಾ ರೂಲಸು.

ಕಳೆದ ೧೯೦೭ ನೇ ಇಸವಿಯ ಪ್ರಜಾಪ್ರತಿನಿಧಿ ಸಭೆಯಲ್ಲಿ ಕೆಲವು ಮೆಂಬರುಗಳು ೧೦೦ ಕ್ಕಿಂತಲೂ ಹೆಚ್ಚು ಮನೆಗಳಿರುವ ಗ್ರಾಮಗಳಲ್ಲೆಲ್ಲಾ ಗ್ರಾಮ ಪಾಕೀಜಾ ರೂಲಸು ಜಾರಿಯಲ್ಲಿದೆ ಎಂತಲೂ, ಆ ರೂಲಸನ್ನು ೫೦ ಮನೆಗಳಿರುವ ಗ್ರಾಮಗಳಲ್ಲೂ ಜಾರಿಗೆ ತರಬೇಕೆಂತಲೂ ಹೇಳಿಕೊಂಡದ್ದರ ಮೇಲೆ ಗವರ್ನಮೆಂಟನವರು ಈ ವಿಷಯವನ್ನು ಡಿಸ್ಟ್ರಿಕ್ಟ್ ಬೋರ್ಡುಗಳ ಪ್ರೆಸಿಡೆಂಟರುಗಳಿಗೆ ತಿಳಿಸಿ ಅವರ ಅಭಿಪ್ರಾಯಗಳನ್ನು ತರಿಸಿಕೊಂಡರು. ಬೆಂಗಳೂರು, ಮೈಸೂರು, ಕೋಲಾರ, ಇವು ವಿನಹಾ ಉಳಿದ ಡಿಸ್ಟ್ರಿಕ್ಟ್ ಬೋರ್ಡುಗಳವರು ಅದೇ ಪ್ರಕಾರ ೫೦ ಮನೆಗಳಿರುವ ಗ್ರಾಮಗಳಲ್ಲೂ ಜಾರಿಗೆ ತರಬೇಕೆಂದು ಒಪ್ಪಿಕೊಂಡರು. ಕಡೂರ್ ಡಿಸ್ಟ್ರಿಕ್ಟ್ ಬೋರ್ಡಿನವರು ಮಾತ್ರ ಮಲೆನಾಡು ಪ್ರದೇಶಗಳಲ್ಲಿ ೨೫ ಮನೆಗಳಿರುವಂಥಾ ಗ್ರಾಮಗಳಲ್ಲೂ ಆ ರೂಲಸನ್ನು ಜಾರಿಗೆ ತರಬೇಕೆಂದು ಸೂಚಿಸಿದಾರೆ. ಸ್ಯಾನಿಟರಿ ಕಮಿಷನರವರು ಬರದಿರೋ ಮನೆಗಳ ಸಂಖ್ಯೆಯನ್ನು ನೋಡದೆ ಈ ಸಂಸ್ಥಾನದ ಸಮಸ್ತ ಊರು ಗ್ರಾಮಗಳಲ್ಲೆಲ್ಲಾ ಜಾರಿಗೆ ತರಬೇಕೆಂದು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯಗಳನ್ನೆಲ್ಲಾ ನೋಡಿ ಗವರ್ನಮೆಂಟನವರು ತೀರ್ಮಾನಮಾಡಿರುವುದೇನೆಂದರೆ—ಈ ಗ್ರಾಮ ಪಾಕೀಜಾ ರೂಲಸನ್ನು ಸದ್ಯಕ್ಕೆ ೨೫ ಮನೆಗಳಿಗಿಂತ ಹೆಚ್ಚಾಗಿರುವ ಸಮಸ್ತ ಗ್ರಾಮಗಳಲ್ಲೂ ಬೇಗನೆ ಜಾರಿಗೆ ತರತಕ್ಕದ್ದು. ಜಾರಿಗೆ ಬಂದ ಮೇಲೆ ಅಂಥಾ ಗ್ರಾಮಗಳ ಹೆಸರನ್ನು ಡಿಸ್ಟ್ರಿಕ್ಟ್ ಬೋರ್ಡುಗಳ ಪ್ರೆಸಿಡೆಂಟರು ಗವರ್ನಮೆಂಟಿಗೆ ತಿಳಿಸಬೇಕು ಎಂಬುದೇ.

ಧರ್ಮಪ್ರವರ್ತ ಮಿ॥ ಗುಬ್ಬಿ ತೋಟದಪ್ಪಶೆಟ್ಟರು.

ಧರ್ಮಪ್ರವರ್ತ ಮಿ॥ ಗುಬ್ಬಿ ತೋಟದಪ್ಪಶೆಟ್ಟರವರು ಬೆಂಗಳೂರು ಪಟ್ಟಣದ ರೈಲ್ವೆ ಸ್ಟೇಷನ್ ಬಳಿಯಲ್ಲಿ ಬಹಳ ಹಣವನ್ನು ಮುಟ್ಟಿಸಿ ಒಂದು ದೊಡ್ಡ ಸತ್ರವನ್ನು ಕಟ್ಟಿಸಿ, ೭೦,೦೦೦ ರೂಪಾಯನ್ನು ಗವರ್ನಮೆಂಟನವರ ವಶಕ್ಕೆ ಫಂಡುಮಾತ್ರ ಒಪ್ಪಿಸಿರುತ್ತಾರೆ. ಮತ್ತು ಆ ಹಣಕ್ಕೆ ಗವರ್ನಮೆಂಟನವರು ಶೇಕಡಾ ವರುಷಕ್ಕೆ ನಾಲ್ಕು ರೂಪಾಯಿನಂತೆ ಬಡ್ಡಿ ಕೊಡಬೇಕೆಂತಲೂ, ಈ ಬಡ್ಡಿಯಲ್ಲಿ ಸತ್ರದ ರಿಪೇರಿಗೂ ಸತ್ರವನ್ನು ನಡಿಸುವುದಕ್ಕೂ ಕೆಲವು ವೀರಶೈವ ಬಡಪ್ರಯಾಣಿಕರಿಗೂ ವಿದ್ಯಾರ್ಥಿಗಳಿಗೂ ಅನ್ನ ಹಾಕುವುದಕ್ಕೂ ವಿನಿಯೋಗಿಸಬೇಕೆಂತಲೂ ಕೇಳಿಕೊಂಡಿರುತ್ತಾರೆ. ಅವರು ಮಾಡಿರುವ ಕಾರ್ಯವು ಪರೋಪಕಾರನಾದದ್ದು ಮತ್ತು ಪ್ರಶಂಸಾಕರವಾದದ್ದು. ವಿಧಾಯಕವಾದ ರೀತಿಯಲ್ಲಿ ಅವರು ಪತ್ರವನ್ನು ಬರೆದುಕೊಡುವವರಾಗಿದಾರೆ. ಈ ಸತ್ರಕ್ಕೆ ಬಹುಜನ ಪ್ರಯಾಣಿಕರು ಬಂದು ಇಳುಕೊಳ್ಳುವರು. ಆದಕಾರಣ ಇಂಥಾ ಧರ್ಮಕೆಲಸದ ಫಂಡಿಗೆ ಸರ್ಕಾರದವರು ಶೇಕಡಾ ವರ್ಷಕ್ಕೆ ನಾಲ್ಕು ರೂಪಾಯಿನಂತೆ ಬಡ್ಡಿ ಕೊಡಲು ಒಪ್ಪಿ ಸ್ಯಾಂಕ್ಷನ್‌ಮಾಡಿರುತ್ತಾರೆ. ಮಿ॥ ತೋಟದಪ್ಪ ಶೆಟ್ಟರು ತಮ್ಮ ಜೀವಮಾನವಿರುವ ತನಕ ತಾವೇ ಈ ಸತ್ರದ ಕಾರುಬಾರುಗಳನ್ನು ನೋಡಿಕೊಳ್ಳುತ್ತಾ ಬರುವುದಾಗಿಯೂ, ಆರಾರು ತಿಂಗಳಿಗೆ ಸತ್ರದ ಲೆಕ್ಕಗಳನ್ನು ಬರೆದಿಟ್ಟು ಸರ್ಕಾರಕ್ಕೆ ಒಪ್ಪಿಸುವುದಾಗಿಯೂ, ತಮ್ಮ ಕಾಲಾನಂತರ ಸತ್ರ ನಡಿಯತಕ್ಕ ವಿಚಾರದಲ್ಲಿ ಮುಂದೆ ತಮ್ಮ ಅಭಿಪ್ರಾಯವನ್ನು ತಿಳಿಸುವುದಾಗಿಯೂ ಅಪೇಕ್ಷೆ ಪಟ್ಟಿದಾರೆ. ಗವರ್ನಮೆಂಟನವರು ಅದೇ ರೀತಿ ಒಪ್ಪಿಕೊಂಡಿರುವರು.

ಈ ವರ್ಷದ ಪ್ರಜಾಪ್ರತಿನಿಧಿ ಸಭೆಯ ವಿಷಯಗಳು.

ಶ್ರಾವಣ ಶುದ್ಧ ಪೌರ್ಣಿಮಿ ಅಂದರೆ ಆಗೀಷ್ಟು ತಾ. ೧೨ ರೊಳಗಾಗಿ ಲೋಕಲ್‌ಫಂಡ್ ಬೋರ್ಡ್, ಮ್ಯುನಿಸಿಪಲ್ ಬೋರ್ಡ್, ಗೊತ್ತಾದ ಸಂಘಗಳು, ಇವುಗಳಲ್ಲಿ ಚುನಾಯಿಸಲ್ಪಟ್ಟ ಪ್ರತಿನಿಧಿಗಳ ಹೆಸರುಗಳನ್ನು ಡೆಪ್ಯುಟಿ ಕಮಿಷನರಿಗೆ ತಿಳಿಯಪಡಿಸಬೇಕು ಮತ್ತು ಈ ಮೆಂಬರುಗಳೆಲ್ಲಾ ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ತರಬೇಕೆಂದು ಅಪೇಕ್ಷಿಸುವ ವಿಷಯಗಳನ್ನು ಕ್ರೋಢೀಕರಿಸಿ ಡೆಪ್ಯುಟಿ ಕಮಿಷನರಿಗೆ ತಿಳಿಸಬೇಕು. (೨) ಶ್ರಾವಣ ಬಹುಳ ೫ ಅಂದರೆ ಆಗೀಷ್ಟು ತಾ. ೧೬ ರೊಳಗಾಗಿ ಡೆಪ್ಯುಟಿ ಕಮಿಷನರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿ ಮೆಂಬರುಗಳ ಸಭೆಯನ್ನು ಸೇರಿಸಿ, ಅವರು ಸೂಚಿಸಿದ ವಿಷಯಗಳನ್ನು ಚರ್ಚೆಮಾಡಿ, ಅವಶ್ಯವಾದ ಮತ್ತು ಮುಖ್ಯವಾದವುಗಳನ್ನು ಮಾತ್ರ ಗೊತ್ತುಮಾಡಿ, ಗವರ್ನಮೆಂಟಿನ ರೆವಿನ್ಯೂ ಜನರಲ್ ಸೆಕ್ರಿಟರಿಯವರಿಗೆ ಕಳುಹಿಸಿಕೊಡತಕ್ಕದ್ದು. (೩) ಶ್ರಾವಣ ಬಹುಳ ೧೧ ಅಂದರೆ ಆಗೀಷ್ಟು ತಾ. ೨೨ ರೊಳಗಾಗಿ ಪ್ರತಿನಿಧಿಗಳಾಗಿ ಚುನಾಯಿಸಲ್ಪಟ್ಟಿರುವಂಥಾ ಮೆಂಬರುಗಳ ಪಟ್ಟಿಗಳನ್ನು ಗವರ್ನಮೆಂಟ್ ಸೆಕ್ರಿಟರಿಯವರಿಗೆ ಕಳುಹಿಸಬೇಕು. ಮತ್ತು ಚುನಾಯಿಸಲ್ಪಟ್ಟ ತಾಲ್ಲೂಕು ಮೆಂಬರುಗಳ ಸರಿಯಾದ ಪಟ್ಟಿಯನ್ನೂ, ಖಾಲಿಯಾಗಿರುವ ಮೆಂಬರುಗಳ ಸ್ಥಾನಗಳನ್ನೂ, ಪ್ರತಿನಿಧಿ ಸಭೆಗೆ ಹಾಜರಾಗಬಹುದಾದ ಮೆಂಬರುಗಳ ಸಂಖ್ಯೆಯನ್ನೂ ಸೆಕ್ರಿಟರಿಯವರಿಗೆ ತಿಳಿಸಬೇಕು (೪) ಭಾದ್ರಪದ ಶುದ್ಧ ೧ ಅಂದರೆ ಆಗೀಷ್ಟು ತಾ. ೨೭ ರೊಳಗಾಗಿ ಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಡಬೇಕಾಗಿರುವ ವಿಷಯಗಳ ಪಟ್ಟಿಯನ್ನೂ, ಆ ಪ್ರತಿ ವಿಷಯದಲ್ಲೂ ಡೆಪ್ಯುಟಿ ಕಮಿಷನರ ಅಭಿಪ್ರಾಯವನ್ನೂ ಗವರ್ನಮೆಂಟ್ ಸೆಕ್ರಿಟರಿಯವರಿಗೆ ಕಳುಹಿಸಬೇಕು (೫) ಆಶ್ವೀಜ ಶುದ್ಧ ೧೧ ಅಂದರೆ ಅಕ್ಟೋಬರ್ ತಾ ೬ ರೊಳಗಾಗಿ ಪ್ರತಿನಿಧಿ ಸಭೆಯಲ್ಲಿ ಮೊದಲನೇ ದಿನ ಮೆಂಬರುಗಳು ದಿವಾನರವರಿಗೆ ಓದಿ ಒಪ್ಪಿಸಬೇಕಾಗಿರುವಂಥಾ ಅರ್ಜಿಗಳ ಮತ್ತು ಭಾಷಣಗಳ ನಕಲುಗಳನ್ನು ಗವರ್ನಮೆಂಟ್ ಸೆಕ್ರಿಟರಿಯವರಿಗೆ ತಲಪಿಸಬೇಕು. (೬) ಆಶ್ವೀಜ ಶುದ್ಧ ೧೩ ಅಂದರೆ ಅಕ್ಟೋಬರ್ ತಾ. ೮ನೇ ಗುರುವಾರ ಮಧ್ಯಾಹ್ನ ೧೨ ಗಂಟೆಗೆ ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಗುವುದು.

ಮೂರು ಕಾಸಿನ ಅರ್ಜಿ ಕಾಗದವು.

ಈಗ ಸರ್ಕಾರದವರು ಬಿಕರಿ ಮಾಡುವ ಮೂರು ಕಾಸಿನ ಅರ್ಜಿ ಕಾಗದವು ಚೆನ್ನಾಗಿಲ್ಲವೆಂತಲೂ, ಉದ್ದೇಶಪಟ್ಟ ಕಾರ್ಯಗಳಿಗೆ ಅಯೋಗ್ಯವಾಗಿರುವುದೆಂತಲೂ, ಅದಕ್ಕೆ ಬದಲಾಗಿ ಒಳ್ಳೇ ಕಾಗದವನ್ನು ತರಿಸಿ ಬಿಕರಿ ಮಾಡಬೇಕೆಂತಲೂ ಅನೇಕರು ಬಹುಕಾಲದಿಂದ ಆಕ್ಷೇಪಣೆ ಮಾಡಿ ಗವರ್ನಮೆಂಟನವರನ್ನು ಕೇಳಿಕೊಳ್ಳುತ್ತಿದಾರೆ. ಆ ಕಾಗದವಾದರೋ ಇನ್ನೂ ೧೫ ವರ್ಷಗಳ ವರೆಗೆ ಉಪಯೋಗಿಸಿದರೂ ಮುಗಿಯಲಾರದಷ್ಟು ಗವರ್ನಮೆಂಟ್ ಖಜಾನೆಯಲ್ಲಿ ದಾಸ್ತಾನ್ ಉಳಿದಿರುವುದು. ಗವರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟ್ ಮಿ॥ ಯೇಟ್ಸ್ ಎಂಬುವರು ಈಗ ಉಳಿದಿರುವ ಕಾಗದವನ್ನೆಲ್ಲಾ ಫಾರಂ, ರಿಜಿಸ್ಟರ್ ರಶೀತಿ ಮೊದಲಾದವನ್ನು ಅಚ್ಚುಹಾಕುವುದಕ್ಕೆ ಉಪಯೋಗಿಸಿಕೊಂಡು, ಹೊಸದಾದ ಒಳ್ಳೇ ತರದ ಕಾಗದವನ್ನು ಅರ್ಜಿ ಮುಂತಾದ್ದನ್ನು ಬರೆಯುವುದಕ್ಕೆ ತರಿಸಿ ಒದಗಿಸಬಹುದೆಂದು ಅಭಿಪ್ರಾಯಪಟ್ಟರು. ಅದರ ಮೇಲೆ ಈ ವಿಷಯವನ್ನು ಚರ್ಚೆಮಾಡಿ ಇತ್ಯರ್ಥಪಡಿಸುವುದಕ್ಕೆ ಗವರ್ನಮೆಂಟನವರು ಒಂದು ಕಮಿಟಿಯನ್ನು ನೇಮಕಮಾಡಿದರು. ಈ ಕಮಿಟಿಯವರು ಈಗ ಉಳಿದಿರುವ ಸುಮಾರು ೧೩,೧೨೫ ರೂಪಾಯಿನ ಕಾಗದವನ್ನು ಗವರ್ನಮೆಂಟ್ ಪ್ರೆಸ್ಸಿನಲ್ಲಿ ಪ್ರಿಂಟು ಕೆಲಸಗಳಿಗಾಗಿ ಕೊಟ್ಟುಬಿಟ್ಟು, ಪೌಂಡಿಗೆ ೪ ಆಣೆ ೬ ಪೈ ಬೆಲೆಯುಳ್ಳ ಬೇರೇ ತರದ ಒಳ್ಳೇ ಕಾಗದವನ್ನು ಅದಕ್ಕೆ ಬದಲು ತಂದು ಇಡಬೇಕೆಂದು ಸೂಚಿಸಿದರು. ಗವರ್ನಮೆಂಟನವರು ಈ ಸಲಹೆಯನ್ನು ಒಪ್ಪಿ, ಅದರಂತೆ ಜಾರಿಗೆ ತರಬೇಕೆಂದು ಸ್ಯಾಂಕ್ಷನ್ ಮಾಡಿದಾರೆ. ಈ ಹೊಸ ಕಾಗದವು ಪುದುಕೋಟೆ ಸಂಸ್ಥಾನದವರು ಉಪಯೋಗಿಸುವಂಥಾದ್ದಾಗಿಯೂ, ಆಕಾಶಬಣ್ಣವುಳ್ಳದ್ದಾಗಿಯೂ, ಮೈಸೂರು ಗಂಡಭೇರುಂಡದ ಚಿಹ್ನೆಯುಳ್ಳದ್ದಾಗಿಯೂ ಇರಬೇಕೆಂದು ಗೊತ್ತುಮಾಡಿದಾರೆ. ಈ ಕಾಗದದ ಕ್ರಯವು ಮೊದಲಿದ್ದಂತೆಯೇ ಇರತಕ್ಕದ್ದು. ಮೊದಲು ಈ ಹೊಸಕಾಗದವನ್ನು ೨,೦೦೦ ರೀಮು (ಕಟ್ಟು)ಗಳಷ್ಟು ತರಿಸಲ್ಪಡಬೇಕೆಂತಲೂ, ಈ ಹೊಸ ಕಾಗದವನ್ನು ಯಾವ ತಾರೀಖಿನಿಂದ ಈ ಸಂಸ್ಥಾನದಲ್ಲಿ ಉಪಯೋಗಿಸಬೇಕೆಂಬ ವಿಚಾರವನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಸಿದ್ಧಪಡಿಸಲ್ಪಡುವುದೆಂತಲೂ ಗವರ್ನಮೆಂಟನವರು ಹುಕುಂ ಕೊಟ್ಟಿದಾರೆ.

೧೯೦೭-೦೮ ನೇ ಸಾಲಿನ ಜಮಾಬಂದಿಯು.

ಮೈಸೂರು ಸಂಸ್ಥಾನದ ೧೯೦೭-೮ನೇ ಸಾಲಿನ ಜಮಾಬಂದಿ ಲೆಕ್ಕಗಳನ್ನೆಲ್ಲಾ ಒಟ್ಟು ಕೂಡಿಸಿ ನೋಡಿದರೆ ಖರ್ಚು ಉತ್ಪತ್ತಿಯು ೧,೭೭,೩೩,೫೯೮ ರೂಪಾಯಿ ಆಗುವುದು; ಅಂದರೆ, ಹೋದ ಸಾಲಿನ ವಸೂಲಿಗಿಂತ ೨,೨೨,೮೫೫ ರೂಪಾಯಿ ಕಡಮೆಯಾಗಿದೆ. ಇದಕ್ಕೆ ಆಡಿಕೆಯ ಮೇಲಣ ಹಾಲತ್ ಎಂಬ ಸುಂಕವನ್ನು ಮಜಾಮಾಡಿದ್ದರಿಂದ ೩,೬೪,೭೫೬ ರೂಪಾಯಿ ಕಡಮೆಯಾಗಿರುವುದೇ ಮುಖ್ಯ ಕಾರಣವಾಗಿರುವುದು. ಜಮಾಬಂದಿ ವಸೂಲಿ ಲೆಕ್ಕಗಳನ್ನು ಕುರಿತು ವಿಚಾರಮಾಡಿದಲ್ಲಿ ಕಂದಾಯವು ಹಾಸನವನ್ನು ಬಿಟ್ಟು ಇತರ ಡಿಸ್ಟ್ರಿಕ್ಟುಗಳಲ್ಲೆಲ್ಲಾ ಖರ್ಚು ೭೨,೦೮೨ ರೂಪಾಯಿ ಜಾಸ್ತಿಯಾಗಿರುತ್ತದೆ. ಹಾಸನ ಡಿಸ್ಟ್ರಿಕ್ಟಿನಲ್ಲಿ ಮಾತ್ರ ಹೋದ ಸಾಲಿಗಿಂತ ೭೪೮ ರೂಪಾಯಿ ಕಡಮೆ. ಹೀಗೆ ಜಮಾಬಂದಿ ಹೆಚ್ಚುವುದಕ್ಕೆ ಬೆಂಗಳೂರು, ಶಿವಮೊಗ್ಗ, ಕಡೂರು ಡಿಸ್ಟ್ರಿಕ್ಟುಗಳಲ್ಲಿ ಹೊಸ ಸೆಟ್ಲಮೆಂಟ್ ದರಗಳು ಈ ಸಾಲಿನಲ್ಲಿ ಜಾರಿಗೆ ತರಲ್ಪಡುವುದೂ, ಉಳಿದ ಡಿಸ್ಟ್ರಿಕ್ಟುಗಳಲ್ಲಿ ಹೊಸ ಕಂದಾಯದ ಜಮೀನುಗಳನ್ನು ದರಖಾಸ್ತು ಮೂಲಕ ಪಡೆದಿರುವುದೂ ಕಾರಣಗಳಾಗಿವೆ. ಫಾರೆಸ್ಟ್ ಬಾಬಿನಲ್ಲಿ ಹಾಸನ, ತುಮಕೂರು, ಮೈಸೂರು ಡಿಸ್ಟ್ರಿಕ್ಟುಗಳಲ್ಲಿ ಹೋದ ಸಾಲಿಗಿಂತ ೩೧,೬೧೭ ರೂಪಾಯಿ ಕಡಮೆಯಾಗಿದ್ದರೂ ಒಟ್ಟಿನಲ್ಲಿ ೬೧,೮೩೬ ರೂಪಾಯಿ ಜಾಸ್ತಿ ಕಂಡುಬಂದಿದೆ. ಇದಕ್ಕೆ ಈ ಸಾಲಿನಲ್ಲಿ ಶ್ರೀಗಂಧಕ್ಕೆ ಒಳ್ಳೇ ಧಾರಣೆ ದೊರೆತದ್ದೂ ಸಾಗುವಾನಿಯು ಬಹಳ ಹೆಚ್ಚಾಗಿ ಬಿಕರಿಯಾದದ್ದೂ ಕಾರಣಗಳಾಗಿರುವವು. ಹಾಸನದ ಡಿಸ್ಟ್ರಿಕ್ಟಿನಲ್ಲಿ ಈ ಸಲ ಬಿಕರಿಯಾದ ಶ್ರೀಗಂಧವು ೫೦ ಟನ್ ಕಡಮೆಯಾಯಿತಾದ್ದರಿಂದ ೨೫,೮೩೮ ರೂಪಾಯಿ ಕಡಮೆಯಾಗಿದೆ. ಅಬಕಾರಿ ಬಾಬಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ೫೬,೧೦೪ ರೂಪಾಯಿಯೂ, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ೭,೮೬೭ ರೂಪಾಯಿಯೂ ಕಡಮೆಯಾದರೂ ಒಟ್ಟು ಜಮಾಬಂದಿಯನ್ನು ನೋಡಿದರೆ ಹೋದ ಸಾಲಿನ ವಸೂಲಿಗಿಂತ ಈ ಸಾಲಿನಲ್ಲಿ ೮೧೭ ರೂಪಾಯಿ ಜಾಸ್ತಿ ಕಂಡುಬಂದಿದೆ. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಖಾಲೀ ನಿವೇಶನಗಳ ಕಂದಾಯವು ಕಡಮೆಯಾದ್ದರಿಂದ ಮೊಹತರ್ಫಾ ಬಾಬಿನಲ್ಲಿ ೭,೯೬೦ ರೂಪಾಯಿ ಕಮ್ಮಿಯಾಗಿದೆ. ಉಪ್ಪಿನ ಮೊಳೆಗಳ ಉತ್ಪತ್ತಿಯಲ್ಲೂ ೭,೪೦೧ ರೂಪಾಯಿ ಕಡಮೆಯಾಗಿರುವುದು. ಚಿಲ್ಲರೆ ಬಾಬುಗಳಲ್ಲಿ ೨೨,೪೯೧ ರೂಪಾಯಿ ಜಾಸ್ತಿ ಕಂಡುಬಂದಿರುತ್ತದೆ. ಹೋದ ಸಾಲಿನ ಮತ್ತು ಈ ಸಾಲಿನ ಖುಲ್ಲಾ ಜಮಾಬಂದಿ ಲೆಕ್ಕಗಳನ್ನು ಕೆಳಗಿನ ತಖ್ತೆಯಲ್ಲಿ ಡಿಸ್ಟ್ರಿಕ್ಟ್‌ವಾರಾಗಿ ವಿವರಿಸಿದೆ:—

ಡಿಸ್ಟ್ರಿಕ್ಟ್.	೧೯೦೬-೦೭ ನಿಶ್ಚಿತ	೧೯೦೭-೦೮ ಅಂದಾಜು.
ಬೆಂಗಳೂರು ರೂ.	೨೬,೮೦,೧೯೦	ರೂ. ೨೬,೧೬,೩೯೬
ಕೋಲಾರ	೨೫,೦೦,೧೯೭	೨೫,೩೦,೧೧೪
ತುಮಕೂರು	೨೦,೧೦,೧೧೦	೧೯,೯೦,೩೦೪
ಮೈಸೂರು	೩೬,೩೦,೩೮೨	೩೬,೮೬,೧೦೦
ಹಾಸನ	೧೬,೭೨,೮೫೨	೧೭,೩೮,೯೦೫
ಶಿವಮೊಗ್ಗ	೨೪,೭೯,೩೯೩	೨೨,೯೯,೧೫೦
ಕಡೂರು	೧೬,೫೯,೮೦೭	೧೬,೪೧,೫೦೮
ಚಿತ್ರದುರ್ಗ	೧೨,೩೩,೨೨೨	೧೨,೩೦,೧೧೦
ಜುಮ್ಲಾ ರೂ.	೧,೭೯,೫೬,೪೫೩	ರೂ. ೧,೭೭,೩೩,೫೯೮

ಇಂಡಿಯಾ ದೇಶದ ವೃತ್ತಾಂತಗಳು.

ಹಿಂದುಸ್ಥಾನದ ಕ್ಷಾಮನಿವಾರಣೆಯ ಧರ್ಮ ಫಂಡಿಗೆ ಹೈದರಾಬಾದ್ ಸಂಸ್ಥಾನದ ನೈಜಾಮರವರು ಒಂದು ಲಕ್ಷ ರೂಪಾಯನ್ನು ಧರ್ಮಾರ್ಥವಾಗಿ ಕಳುಹಿಸಿ ಕೊಟ್ಟಿದಾರೆ.

***

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಸೂಕೇತವೆಂಬ ಸಂಸ್ಥಾನದ ರಾಜರು ಕಳೆದ ವಾರ ಕಾಲವಾದರು. ಟಿಕ್ಕಾ ಸಾಹೇಬ್ ಎಂಬ ಯುವರಾಜರಿಗೆ ದೊರೆತನವಾಗುವುದು.

***

ಘಾಜಿಯಾಬಾದಿನ ಬಳಿ ಬಹು ದುಃಖಕರವಾದ ರೈಲ್ವೆ ಅನಾಹುತ ನಡಿಯಿತಷ್ಟೆ. ಪೋಲೀಸಿನವರು ಈಗ ಅನುಮಾನ ಉಂಟಾದದ್ದರಿಂದ ಎರಡು ಊರುಗಳ ಸ್ಟೇಷನ್ ಮಾಸ್ಟರುಗಳನ್ನು ದಸ್ತಗಿರಿಮಾಡಿರುತ್ತಾರೆ

***

ಕಲ್ಕತ್ತಾ ಪಟ್ಟಣದಲ್ಲಿ "ಯುಗಾಂತರ" ವೆಂಬ ವರ್ತಮಾನ ಪತ್ರಿಕೆಯನ್ನು ಅಚ್ಚು ಹಾಕಿ ಪಬ್ಲಿಷ್ ಮಾಡುತ್ತಿದ್ದ ಬಂಗಾಳಿ ಬಾಬುವಿಗೆ ಎರಡು ವರುಷ ಕಠಿಣ ಸಜಾವೂ ೧,೦೦೦ ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿವೆ

***

ಪಂಜಾಬಿನಲ್ಲಿ ಕರಿಯಾಪ ನದಿಯೊಳಗೆ ಈಜುವುದಕ್ಕೆಂದು ಹೋದ ಇಬ್ಬರೂ, ಅವರನ್ನು ದಡಕ್ಕೆ ಎಳೆಯಬೇಕೆಂದು ಪ್ರಯತ್ನ ಪಟ್ಟವರು ಇಬ್ಬರೂ ಅಂತು ನಾಲ್ವರು ಇಂಗ್ಲಿಷ್ ಸಿಪಾಯಿಗಳು ನೀರಿನಲ್ಲಿ ಮುಳುಗಿ ಕಾಲವಾದರು

***

ಕಲ್ಕತ್ತಾ ಪಟ್ಟಣದಲ್ಲಿ "ಸಂಧ್ಯಾ" ಎಂಬ ಪತ್ರಿಕೆಯನ್ನು ನಡಿಸುವ ನಾಗೇಂದ್ರನಾಥಗುಪ್ತ ಎಂಬಾತನು ಸುಳ್ಳುಹೆಸರನ್ನು ಸರ್ಕಾರಕ್ಕೆ ತಿಳಿಸಿದನೆಂದು ಮೊಕದ್ದಮೆ ಆಗಿ ವಿಚಾರಣೆ ನಡೆದು, ಕಡೆಗೆ ಮ್ಯಾಜಿಸ್ಟ್ರೇಟರು ಆತನಿಗೆ ವಾಗ್ದಂಡನೆ ಮಾಡಿ ಕಳುಹಿಸಿದರು.

***

ಹಿಂದುಸ್ಥಾನದಲ್ಲೆಲ್ಲಾ ಸಂಚಾರಮಾಡಿ ಹತ್ತಿ ವ್ಯವಸಾಯವನ್ನು ಪರೀಕ್ಷೆಮಾಡಿ ಒಳ್ಳೇ ಹತ್ತಿಯನ್ನು ಚೆನ್ನಾಗಿ ಬೆಳೆಯುವ ವಿಧಾನಗಳನ್ನು ಕಲಿಸಿಕೊಡುವುದಕ್ಕಾಗಿ ಸೀಮೆಯಿಂದ ಒಬ್ಬ ಪ್ರಸಿದ್ಧ ವ್ಯವಸಾಯಗಾರನನ್ನು ಗವರ್ನಮೆಂಟನವರು ಕರಸುವವರಾಗಿದಾರೆ.

***

ಕಳೆದ ಡಿಸೆಂಬರ್ ತಿಂಗಳಲ್ಲಿ ನಡೆದ ಮದರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಬಹಳ ಹೆಚ್ಚು ಮಂದಿ ವಿದ್ಯಾರ್ಥಿಗಳು ತೇರ್ಗಡೆಹೊಂದದೆ ಇದ್ದದ್ದಕ್ಕೆ ಕಾರಣವೇನೆಂದು ಒಂದು ಸಂಘದವರು ಈಗ ನೀಲಗಿರಿ ಬೆಟ್ಟದಮೇಲೆ ಸೇರಿ ವಿಚಾರಣೆಮಾಡುತ್ತಿದಾರೆ.

***

ಕಳೆದ ತಿಂಗಳ ೨೮ ನೇ ತಾರೀಖಿನ ದಿನ ಮದರಾಸ್ ಪಟ್ಟಣದ ಸರ್ ಸಾವಳ್ ರಾಮಸ್ವಾಮಿ ಮೊದಲಿಯಾರ್ರ ಸತ್ರದಲ್ಲಿ ಇಳುಕೊಂಡಿದ್ದ ಎನ್. ಕೆ. ಶ್ರೀನಿವಾಸ ಐಯಂಗಾರ್ ಎಂಬೊಬ್ಬ ಪ್ರಾಯಸ್ಥನನ್ನು ಅಲ್ಲಿನ ಪೋಲೀಸಿನವರು ದಸ್ತಗಿರಿಮಾಡಿ ಕಲ್ಕತ್ತೆಗೆ ಕಳುಹಿಸಿಕೊಟ್ಟರು. ಹೀಗೆ ದಸ್ತಗಿರಿಮಾಡಲು ಕಾರಣವೇನೋ ಇನ್ನೂ ಪ್ರಕಟವಾಗಲಿಲ್ಲ.

***

ಲಾಹಿತ್‌ಪುರದಲ್ಲಿ ಈಚೆಗೆ ಡೆಪ್ಯುಟಿ ಕಲೆಕ್ಟರಾಗಿದ್ದ ಸೈಯದ್ ಮಹಮದರಲ್ಲಿಯವರನ್ನು ಅಲ್ಲಿ ಮ್ಯುನಿಸಿಪಾಲಿಟಿಯಿಂದ ವಜಾ ಆಗಿದ್ದ ಒಬ್ಬ ನವಾಬನು ಮೇಲೆ ಬಿದ್ದು ಹೊಡೆದು ಬಹಳ ಗಾಯಮಾಡಿದ್ದರಿಂದ ಸಂಯುಕ್ತ ಆಧಿಪತ್ಯಗಳ ಗವರ್ನಮೆಂಟನವರು ಆ ಡೆಪ್ಯುಟಿ ಕಲೆಕ್ಟರಿಗೆ ತಿಂಗಳಿಗೆ ೭೫ ನಂತೆ ಪೆನ್ಷನ್ ಸಲ್ಲಿಸಬೇಕೆಂದು ಸ್ಯಾಂಕ್ಷನ್ ಮಾಡಿರುತ್ತಾರೆ.

***

ಪಾಲಕೋಟೆಯಲ್ಲಿ ಪೂನಾ ಪಟ್ಟಣದಿಂದ ಹೋಗಿದ್ದ ಗೋವಿಂದ ದಾಬೆ ಎಂಬಾತನು ಮೈದಾನಿನಲ್ಲಿ ಸ್ವದೇಶೀ ವಿಚಾರವಾಗಿ ಉಪನ್ಯಾಸ ಮಾಡಬೇಕೆಂದು ಪ್ರಯತ್ನಪಟ್ಟನು. ಸಾವಿರಾರು ಜನರು ಉಪನ್ಯಾಸವನ್ನು ಕೇಳುವುದಕ್ಕೆ ಕೂಡಿದ್ದರು. ಈ ವರ್ತಮಾನವು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ತಿಳಿದು, ಅವರು ಕೂಡಲೆ ಹುಕುಂ ಕೊಟ್ಟು ಉಪನ್ಯಾಸವನ್ನು ನಡಿಯಗೊಡದೆ ಜನರನ್ನೆಲ್ಲಾ ಚದರಿಸಿಬಿಟ್ಟರು.

***

ತಿನ್ನವೆಲ್ಲಿಯಲ್ಲಿ ರಾಜದ್ರೋಹಕರವಾದ ಉಪನ್ಯಾಸಗಳನ್ನು ಮಾಡಿದರೆಂದು ಹೇಳಿ ಸರ್ಕಾರದವರು ಸುಬ್ರಹ್ಮಣ್ಯಶಿವಾ ಎಂಬಾತನನ್ನೂ ಚಿದಂಬರಂಪಿಳ್ಳೆ ಎಂಬಾತನನ್ನೂ ಹಿಡಿದು ತನಿಖೆ ಮಾಡಿ, ಸೆಷನ್ ವಿಚಾರಣೆಗೆ ಗುರಿಮಾಡಿದರಷ್ಟೆ. ಸೆಷನ್ಸ್ ಜಡ್ಜ್ ಮಿ॥ ಪಿನ್ಹೇ ಯವರು ಕಳೆದ ಬುಧವಾರ ಈ ಮೊಕದ್ದಮೆಯ ಪರ್ಯಾಲೋಚನೆಯನ್ನು

ಪ್ರಾರಂಭ ಮಾಡಿದರು. ಫಿರ್ಯಾದೀ ತರಫು ಪಬ್ಲಿಕ್ ಪ್ರಾಸಿಕ್ಯೂಟರ್ ಮೆ॥ ಪೊವೆಲ್‌ಯವರು ವಾದಿಸುತ್ತಿದ್ದಾರೆ ಅಪರಾಧಿಗಳ ಕಡೆ ವಕೀಲ್ ಮೆ॥ ಷಡಗೋಪಾಚಾರ್ಯರೂ ಬ್ಯಾರಿಷ್ಟರ್ ಮೆ॥ ಪೀಟರ್ ಪಾಲ್ ಪಿಳ್ಳೆಯವರೂ ಮೊಕದ್ದಮೆಯನ್ನು ನಡಿಸುತ್ತಿರುವರು. ಗಲಭೆಗೆ ಅವಕಾಶವಾಗದಂತೆ ಪೊಲೀಸಿನವರು ಕೋರ್ಟಿನ ಒಳಗೂ ಹೊರಗೂ ಉಸ್ತುವಾರಿ ಮಾಡುತ್ತಿದ್ದಾರೆ.

***

ಗುರುದಾಸಪುರದ ಮಿರ್ಜಾ ಗುಲಾಂ ಖಾದಿಯಾನ್ ಎಂಬೊಬ್ಬ ಮಹಮ್ಮದೀಯನು ತಾನೇ ಪ್ರವಾದಿ ಎಂದು ಸಾರುತ್ತಾ ಅನೇಕ ಶಿಷ್ಯರನ್ನು ಮಾಡಿಕೊಂಡು ಬಂದು ಬೇರೆ ಮತವನ್ನೇ ಸ್ಥಾಪನೆಮಾಡಿದ್ದನು ಆತನು ಕಳೆದ ತಿಂಗಳ ಅಂತ್ಯಭಾಗದಲ್ಲಿ ಲಾಹೋರ್ ಪಟ್ಟಣದಲ್ಲಿ ವಾಂತಿಭೇದಿ ಉಪದ್ರ ತಗಲಿ ಕಾಲವಾಗಿರುತ್ತಾನೆ ಆತನ ಶಿಷ್ಯರ ಗಲಭೆಯು ಈಗೀಗ ಶಮನವಾಗುತ್ತಿದೆ.

***

ಹಿಂದಿನ ವಾರ ಲಕ್ನೋ ಪಟ್ಟಣದಲ್ಲಿ ಒಂದು ಮೆರವಣಿಗೆಯ ವಿಷಯವಾಗಿ ಮಹಮ್ಮದೀಯರ ಸುನ್ನಿಗಳಿಗೂ ಷಿಯಾಗಳಿಗೂ ಜಗಳವಾಯಿತು ಎರಡು ಕಡೆಗಳಲ್ಲೂ ಬಹು ಜನರು ನಿಂತು ದೊಣ್ಣೆಗಳಿಂದ ಹೊಡೆದಾಡಿದರು. ಒಬ್ಬ ಷಿಯಾ ಮಹಮ್ಮದೀಯನು ಸತ್ತುಹೋದನು ಅನೇಕರಿಗೆ ಗಾಯಗಳಾದವು. ಸರ್ಕಾರದವರು ಸುಮಾರು ೪೦ ಮಂದಿಯನ್ನು ದಸ್ತಗಿರಿಮಾಡಿದ್ದಾರೆ.

***

ಬಂಗಾಳಾ ಅಧಿಪತ್ಯದಲ್ಲಿ ಬಾಲ್ಯವಯಸ್ಸಿನ ಹುಡುಗರು ಅಪರಾಧಗಳನ್ನು ಮಾಡಿದರೆ ಅವರನ್ನು ಪ್ರತ್ಯೇಕವಾದ ಜೈಲ್‌ಖಾನೆಗಳಲ್ಲಿಟ್ಟು ಅವರಿಗೆ ವಿದ್ಯೆ ಕಸಬು ಮೊದಲಾದವುಗಳನ್ನು ಕಲಿಸಬೇಕೆಂದು ಗವರ್ನಮೆಂಟಿನವರು ಏರ್ಪಾಡುಮಾಡುತ್ತಿದ್ದಾರೆ. ಅಲಿಪುರ, ಭಾಗಲ್‌ಪುರ, ಹಜಾರಿಬಾಗ್, ಈ ಸ್ಥಳಗಳಲ್ಲಿ ಪ್ರತ್ಯೇಕವಾದ ಬಂದೀಖಾನೆಗಳನ್ನು ಚಿಕ್ಕವಯಸ್ಸಿನ ಅಪರಾಧಿಗಳಿಗೋಸ್ಕರ ಪ್ರಾರಂಭಿಸಿರುತ್ತಾರೆ.

***

ಉತ್ತರದೇಶದಲ್ಲಿ ಕ್ಷಾಮವು ಇನ್ನೂ ಇಳಿಮುಖವಾಗದೆ ಒಂದೇ ರೀತಿಯಲ್ಲಿದೆ ಹಿಂದೂಸ್ಥಾನದಲ್ಲೆಲ್ಲಾ ಕಳೆದ ವಾರ ೧೬,೨೧,೦೦೦ ಪ್ರಜೆಗಳು ಸರ್ಕಾರದವರ ಪೋಷಣೆಯಲ್ಲಿದ್ದರು ಆ ಪೈಕಿ ಬಂಗಾಳಾ ೩೦,೦೦೦, ಸಂಯುಕ್ತ ಅಧಿಪತ್ಯಗಳು ೧೧,೮೭,೦೦೦; ಪಂಜಾಬ್ ೨೭,೦೦೦; ಮಧ್ಯಪ್ರಾಂತ್ಯಗಳು ೩೮,೦೦೦, ಬೊಂಬಾಯಿ ೧೭,೦೦೦, ಮಧ್ಯ ಇಂಡಿಯಾ ೧,೫೦,೦೦೦ ಈ ರೀತಿ ಜನರು ಕ್ಷಾಮಪೀಡಿತರಾಗಿರುತ್ತಾರೆ.

***

ಹಿಂದಿನ ವಾರ ಕಲ್ಕತ್ತಾ ಪಟ್ಟಣದಲ್ಲಿ ಭಯಂಕರವಾದ ಧೂಳಿನೊಡನೆ ಕೂಡಿದ ಬಿರುಗಾಳಿಯು ಬೀಸಿತು. ಇದರ ಸೆಳೆಯಿಂದ ಎರಡು ರೈಲ್ ಗಾಡಿಗಳು ಕಂಬಿಗಳನ್ನು ಬಿಟ್ಟು ಬಿದ್ದು ಒಡೆದುಹೋದವು ಸಮುದ್ರದೊಳಗಿದ್ದ ಒಂದು ಪಡವು ದಡಸೇರಿಕೊಂಡು ನೆಲದ ಮೇಲೆ ಹೋಗಿ ನಿಂತಿತು. ಊರಿನಲ್ಲಿ ಒಂದು ಕಡೆ ಗೋಡೆ ಉರುಳಿಕೊಂಡು, ಅದರ ಅಡಿಯಲ್ಲಿ ಇಬ್ಬರು ಹುಡುಗಿಯರು ಸಿಕ್ಕಿ ಮೃತಪಟ್ಟರು

***

ಬೆಜ್ವಾಡಾ ಪಟ್ಟಣಕ್ಕೆ ಒಳ್ಳೇ ಕುಡಿಯುವ ನೀರನ್ನು ತಂದೊದಗಿಸುವುದಕ್ಕೆ ಕಾಮಗಾರಿ ಅಂದಾಜು ಪಟ್ಟಿಯು ತಯಾರಾಗಿ, ಮದರಾಸ್ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿರುತ್ತಾರೆ. ಈ ಕಾಮಗಾರಿಗೆ ಒಟ್ಟು ೩,೭೧,೭೯೦ ರೂಪಾಯಿ ಖರ್ಚಾಗುವುದು ಈ ಪೈಕಿ ಗವರ್ನಮೆಂಟಿನವರು ೯,೯೫,೭೦೦ ರೂಪಾಯನ್ನು ಉಚಿತವಾಗಿಯೂ, ೧,೭೫,೦೦೦ ರೂಪಾಯನ್ನು ೨೦ ವರ್ಷದಲ್ಲಿ ತೀರಿಸುವಂತೆ ಸಾಲವಾಗಿಯೂ ಕೊಡುತ್ತಾರೆ

***

ಬಂಗಾಳಾ ಲೆಪ್ಟಿನೆಂಟ್ ಗವರ್ನರಾದ ಸರ್ ಆಂಡ್ರ್ಯು ಫ್ರೇಸರ್‌ಯವರು ಕಳೆದ ೩೩ ವರುಷಗಳಿಂದಲೂ ಹಿಂದೂಸ್ಥಾನದಲ್ಲಿ ಸರ್ಕಾರಿ ನೌಕರಿಯಲ್ಲಿದ್ದು, ಮುಂದಿನ ನೋವೆಂಬರ್ ತಿಂಗಳಿಗೆ ಅವರ ಅವಧಿಯು ಪೂರೈಸುತ್ತಿದ್ದರಿಂದ ಪೆನ್ಷನ್ ಪಡೆದು ಸೀಮೆಗೆ ಹೊರಟುಹೋಗುವವರಾಗಿದ್ದಾರೆ. ಅವರ ಸ್ಥಾನಕ್ಕೆ ಮೆ॥ ಇ. ಎನ್. ಬೇಕರ್‌ಯವರು ನೇಮಕವಾಗಿರುವರು. ಇವರು ಕಳೆದ ಎರಡು ವರುಷಗಳಿಂದ ಇಂಡಿಯಾ ಗವರ್ನಮೆಂಟಿನ ಖಜಾನಾ ಭಕ್ಷಿಯ ಕೆಲಸವನ್ನು ನೋಡುತ್ತಾ ಬಂದಿದ್ದಾರೆ.

***

ರಂಗೂನ್ ಪಟ್ಟಣದಲ್ಲಿ ಬರ್ಮೀಯ ಬಾಲಕರು ಓದುತ್ತಿದ್ದ ಒಂದು ಶಾಲೆಗೆ ಕಳೆದ ವಾರ ಸಿಡಿಲು ಬಡಿಯಿತು. ಮೇಲಂತಸ್ತು ಒಡೆದು ಸಿಡಿಲು ಒಳಕ್ಕೆ ಪ್ರವೇಶಿಸಿ, ನೆಲವನ್ನೆಲ್ಲಾ ಸೀಳಿಬಿಟ್ಟಿತು. ಆಗ ಅಲ್ಲಿ ಓದುತ್ತಿದ್ದ ಹದಿನೈದು ಮಂದಿ ಬಾಲಕರು ಅದರ ಝಳವನ್ನು ಸೈರಿಸಲಾರದೆ ಸ್ಮರಣೆತಪ್ಪಿ ಬಿದ್ದುಬಿಟ್ಟರು. ಅವರನ್ನು ಒಂದು ದಿನವೆಲ್ಲಾ ಉಪಚಾರಮಾಡಿದ ಮೇಲೆ ಅವರು ಆರೋಗ್ಯಹೊಂದಿದರು. ಸಿಡಿಲೇಟಿನಿಂದ ಪಾಠಶಾಲೆಯಲ್ಲಿ ಸುಮಾರು ಒಂದು ಸಾವಿರ ರೂಪಾಯಿನ ಮಾಲುಗಳು ನಷ್ಟವಾದವು.

***

ಹಿಂದೂಸ್ಥಾನದ ರೈಲ್ವೆ ಇಲಾಖೆಯ ವಿಚಾರಗಳನ್ನು ಕುರಿತು ತನಿಖೆ ಮಾಡಿ, ಗವರ್ನಮೆಂಟಿಗೆ ಸಲಹೆಗಳನ್ನು ಕೊಡಬೇಕೆಂದು ಒಂದು ಕಮಿಟಿಯು ಏರ್ಪಾಡಾಯಿತು. ಇವರು ಈಗ ರಿಪೋರ್ಟನ್ನು ಬರೆದು ಸರ್ಕಾರಕ್ಕೆ ಒಪ್ಪಿಸಿದ್ದಾರೆ. ಪ್ರತಿ ವರುಷವೂ ಹಿಂದೂಸ್ಥಾನದಲ್ಲಿ ಹೊಸದಾಗಿ ರೈಲ್ ರಸ್ತೆಗಳನ್ನು ಹಾಕುವುದಕ್ಕೂ, ರೈಲ್ ಪ್ರಯಾಣಿಕರಿಗೆ ಅನುಕೂಲವಾದ ಹೊಸ ಏರ್ಪಾಡುಗಳನ್ನು ರೂಢಿಸುವುದಕ್ಕೂ ಗವರ್ನಮೆಂಟಿನವರು ಕೆಲವು ವರುಷಗಳ ತನಕ ೧೮ ಕೋಟಿಯೂ ೩೫ ಲಕ್ಷ ರೂಪಾಯಿನ ಪ್ರಕಾರ ಖರ್ಚುಮಾಡುತ್ತಾ ಬರಬೇಕಾಗಿದೆ ಎಂದು ಆ ಕಮಿಟಿಯವರು ಸೂಚಿಸಿದ್ದಾರೆ

***

ಹಿಂದೂಸ್ಥಾನದಿಂದ ದಕ್ಷಿಣ ಆಫ್ರಿಕಕ್ಕೆ ಸೇರಿದ ನಟಾಲಿಗೆ ಹೋಗಿ ಅಲ್ಲಿ ಲೈಸೆನ್ಸ್ ಪಡೆದು ಲಾಗಾಯಿತಿನಿಂದ ವ್ಯಾಪಾರ ಮುಂತಾದ್ದು ಮಾಡುತ್ತಿರುವವರ ಲೈಸೆನ್ಸನ್ನು ೧೯೧೮ನೇ ಇಸವಿ ಅಖೈರಿಗೆ ಅಂತ್ಯ ಮಾಡಿ, ಅಲ್ಲಿಂದಾಚೆಗೆ ಹಿಂದೂಸ್ಥಾನದವರ್ಯಾರೂ ಅಲ್ಲಿ ಯಾವ ಉದ್ಯೋಗವನ್ನೂ ನಡಿಸದಂತೆ ಮಾಡಬೇಕೆಂತಲೂ, ೧೯೦೮ನೇ ಇಸವಿ ಡಿಸೆಂಬರ್ ೩೧ ರಿಂದ ಆಚೆಗೆ ಹಿಂದೂಸ್ಥಾನದವರ್ಯಾರಿಗೂ ಯಾವ ಉದ್ಯೋಗ ನಡಿಸಲಿಕ್ಕೂ ಹೊಸದಾಗಿ ಲೈಸೆನ್ಸ್ ಕೊಡಕೂಡದೆಂತಲೂ ನಟಾಲ್ ಗವರ್ನಮೆಂಟಿನವರು ಎರಡು ಕಾನೂನುಗಳನ್ನು ಮಾಡಿ ಜಾರಿಗೆ ತರಬೇಕೆಂದು ಅಲ್ಲಿನ ಪಾರ್ಲಿಮೆಂಟಿನಲ್ಲಿ ಸೂಚಿಸಿದ್ದಾರೆ.

***

ಮಲಬಾರ್ ಪ್ರಾಂತ್ಯದಲ್ಲಿ ಫ್ರೆಂಚರಿಗೆ ಸೇರಿದ ಮಾಹಿ ಎಂಬ ಸಮುದ್ರತೀರ ಪಟ್ಟಣದಲ್ಲಿ ಫ್ರೆಂಚ್ ಸರ್ಕಾರದವರು ವಾಂತಿಭೇದಿ ಉಪದ್ರವನ್ನು ಶಮನಮಾಡುವುದಕ್ಕೆ ನವೀನವಾದ ಉಪಾಯವನ್ನು ಹುಡುಕಿದ್ದಾರೆ. ಈಗ ಧಾರಣಿವಾಸಿಗಳು ಹೆಚ್ಚಿರುವುದರಿಂದ ಬಹಳ ಬಡಬಗ್ಗರಾದ ಪ್ರಜೆಗಳಿಗೆಲ್ಲಾ ಸರ್ಕಾರದವರೇ ಆರೋಗ್ಯಕರವಾದ ರೀತಿಯಲ್ಲಿ ಅನ್ನವನ್ನೂ ಗಲ್ಯ ಮುಂತಾದ್ದನ್ನೂ ಮಾಡಿಸಿ ಹಂಚಿಕೊಡುತ್ತಿದ್ದಾರೆ ಆಯಂಜೇರಿ ರಾಜರುಗಳು ಈ ಕಾರ್ಯಕ್ಕೆ ಬಹಳವಾಗಿ ದ್ರವ್ಯಸಹಾಯ ಮಾಡಿರುವರು. ಬಡಪ್ರಜೆಗಳೆಲ್ಲಾ ಅವರನ್ನೂ ಸರ್ಕಾರದವರನ್ನೂ ಬಹಳವಾಗಿ ಕೊಂಡಾಡುತ್ತಿದ್ದಾರೆ.

***

ಕಳೆದ ವರುಷದ ಅಖೈರಿನಲ್ಲಿ ಹಿಂದೂಸ್ಥಾನದ ಸಮಸ್ತ ರೈಲ್ವೆ ಇಲಾಖೆಗಳಲ್ಲೂ ೫,೧೬,೩೫೬ ಜನರು ನೌಕರರಾಗಿದ್ದರು. ಆ ಪೈಕಿ ೩,೧೮೦ ಜನರು ಯೂರೋಪ್ಯನ್ನರು, ೯,೯೮೭ ಜನರು ಯೂರೇಷಿಯನ್ನರು, ೪,೦೯,೫೯೪ ಮಂದಿ ಹಿಂದೂಸ್ಥಾನದವರು. ರೈಲ್ವೆ ಸ್ಕೂಲುಗಳಲ್ಲಿ ೩,೧೪೦ ಮಂದಿ ಮಕ್ಕಳು ವಿದ್ಯೆ ಕಲಿಯುತ್ತಿದ್ದರು ೧೧,೩೩೮ ಮಂದಿ ಉಮೇದುವಾರರು ರೈಲ್ವೆ ಕೆಲಸಗಳನ್ನು ಕಲಿಯುತ್ತಿದ್ದರು. ಹೋದ ವರುಷ ನಡೆದ ರೈಲ್ವೆ ಅನಾಹುತಗಳಲ್ಲಿ ೮೩೪ ಜನರು ಪ್ರಾಣ ಕಳೆದುಕೊಂಡರು; ೧,೩೩೫ ಜನರಿಗೆ ಗಾಯಗಳಾದವು ಹಿಂದಿನ ವರುಷ ನಡೆದ ಅನಾಹುತಗಳಿಂದ ೧,೧೩೪ ಜನರು ಮೃತಪಟ್ಟರು, ೧,೪೯೪ ಜನರಿಗೆ ಗಾಯಗಳಾದವು.

***

ಈಚೀಚೆಗೆ ಕೆಲವು ವಾರಗಳಿಂದ ಪ್ಲೇಗ್ ಉಪದ್ರದ ಹಾವಳಿಯು ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲೂ ಕಡಮೆಯಾಗುತ್ತಲಿದೆ ಕಳೆದ ವಾರ ಮಧ್ಯಪ್ರಾಂತ್ಯಗಳು, ಬೀರಾರ್, ಮಧ್ಯ ಇಂಡಿಯಾ, ರಾಜಪುಟಾನಾ, ಬೆಲೂಚಿಸ್ಥಾನ, ಈ ಪ್ರಾಂತ್ಯಗಳಲ್ಲಿ ಪ್ಲೇಗ್ ಉಪದ್ರದಿಂದ ಒಬ್ಬರೂ ಕಾಲವಾಗಲಿಲ್ಲ ಉಳಿದ ಭಾಗಗಳಲ್ಲಿ ಒಟ್ಟು ೧,೯೯೧ ಜನರು ಮೃತಪಟ್ಟಿರುತ್ತಾರೆ. ಈ ಪೈಕಿ ಪಂಜಾಬ್ ಅಧಿಪತ್ಯದಲ್ಲಿ ೧,೧೮೦, ಬೊಂಬಾಯಿ ಅಧಿಪತ್ಯ ೩೨೯, ಸಂಯುಕ್ತ ಅಧಿಪತ್ಯಗಳು ೧೨೭, ಬರ್ಮಾ ೧೦೩, ಬಂಗಾಳಾ ೧೦೧, ವಾಯುವ್ಯಸರಹದ್ದಿನ ಪ್ರಾಂತ್ಯ ೫೮, ಮೈಸೂರು ಸಂಸ್ಥಾನ ೬೩, ಮದರಾಸ್ ಅಧಿಪತ್ಯ ೩೦, ಕಾಶ್ಮೀರ ೮, ಈ ರೀತಿ ಮರಣಗಳಾಗಿರುತ್ತವೆ.

***

ಕರಾಚಿ ಪಟ್ಟಣದಲ್ಲಿ ಪ್ಲೇಗ್ ಉಪದ್ರಕ್ಕೋಸ್ಕರ ಸಾವಿರಾರು ಜನರು ಮನೆಗಳನ್ನು ಬಿಟ್ಟು ವೈರಾನ್ ಪ್ರದೇಶದಲ್ಲಿ ಜೋಪಡಿಗಳನ್ನು ಹಾಕಿಕೊಂಡು ವಾಸಮಾಡುತ್ತಿದ್ದಾರೆ. ಒಂದು ಕಡೆಯಲ್ಲಿ ೩೫ ಜೋಪಡಿಗಳು ಒಟ್ಟಾಗಿ ಹಾಕಿದ್ದರು. ಆ ಪೈಕಿ ಒಂದು ಗುಡಿಸಲಿನಲ್ಲಿ ಒಬ್ಬ ಹೆಂಗಸು ಅಡಿಗೆ ಒಲೆಹೊತ್ತಿಸುವುದಕ್ಕೆ ಸೀಮೆಯೆಣ್ಣೆಯನ್ನು ಸುರಿದಳು ಅದು ಭುಗ್ಗೆಂದು ಹತ್ತಿಕೊಂಡು ಜೋಪಡಿಯ ಮೇಲ್ಛಾವಣಿಗೆ ತಗಲಿ ಸುಟ್ಟುಹಾಕಿದ್ದಲ್ಲದೆ ಸುತ್ತುಮುತ್ತು ಇದ್ದ ೩೩ ಜೋಪಡಿಗಳು ಉರಿದುಹೋದವು. ಎರಡು ಗುಡಿಸಲುಗಳು ಮಾತ್ರ ಉಳಿಕೊಂಡವು. ಈ ಅನಾಹುತದಿಂದ ೫೦,೦೦೦ ರೂಪಾಯಿಗೆ ಕಡಮೆಯಿಲ್ಲದೆ ನಷ್ಟವಾಗಿದೆ. ಈಗ ಆ ಜನರೆಲ್ಲಾ ಊರಿನಲ್ಲಿ ತಮ್ಮ ಮನೆಗಳಿಗೆ ಬಂದುಬಿಟ್ಟರು.

***

ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ದೇಶೀಯ ಪಕ್ಷದ ಮೆಂಬರಾಗಿರುವ ಮಿ॥ ಗೋಪಾಲ ಕೃಷ್ಣ ಗೋಖಲೆಯವರು ಹಿಂದೂಸ್ಥಾನದ ರಾಜಕೀಯ ವಿಚಾರಗಳನ್ನು ಕುರಿತು ವಿಲಾಯತಿಯಲ್ಲಿ ಹೋರಾಡುವುದಕ್ಕಾಗಿ ಲಂಡನ್ ಪಟ್ಟಣಕ್ಕೆ ಪ್ರಯಾಣ ಮಾಡಿ ಸುಮಾರು ಆರು ವಾರಗಳಾದವು. ಈಗ ಅವರಿಗೆ ಸಹಾಯ ಮಾಡಬೇಕೆಂದು ಮಿ॥ ಹರಿ ಸೀತಾರಾಮ ದೀಕ್ಷಿತರವರು ಈ ದಿನ ವಿಲಾಯಿತಿಗೆ ಪ್ರಯಾಣಮಾಡುವವರಾಗಿದ್ದಾರೆ. ಇವರು ಬೊಂಬಾಯಿನಲ್ಲಿ ಹೈಕೋರ್ಟ್ ಸಾಲಿಸಿಟರಾಗಿಯೂ, ಯೂನಿವರ್ಸಿಟಿ ಮೆಂಬರಾಗಿಯೂ, ಮ್ಯುನಿಸಿಪಲ್ ಮೆಂಬರಾಗಿಯೂ, ಮಂತ್ರಾಲೋಚನಾ ಸಭೆಯ ಮೆಂಬರಾಗಿಯೂ, ಪ್ರಸಿಡೆನ್ಸಿ ಅಸೋಸಿಯೇಷನ್ ಎಂಬ ಮಹಾಜನಕೂಟದ ಪ್ರಸಿಡೆಂಟರಾಗಿಯೂ ಇರುತ್ತಾರೆ.

***

ಹಿಂದೂಸ್ಥಾನದಲ್ಲಿ ಕಳೆದ ಮಾರ್ಚಿ ಅಖೈರಿನಲ್ಲಿ ೩೦,೭೦೩ ಮೈಲಿಗಳ ರೈಲ್ ರಸ್ತೆಗಳಿದ್ದವು. ಇದಲ್ಲದೆ ೭,೫೧೩ ಮೈಲಿ ದೂರ ಹೊಸ ರೈಲ್ ರಸ್ತೆಗಳು ಕಾಮಗಾರಿಯಾಗುತ್ತಿದ್ದವು. ೧೯೦೬ನೇ ಇಸವಿಯಲ್ಲಿ ರೈಲ್ ಕಂಪನಿಗಳವರು ಹೊಸದಾಗಿ ೭೭೯ ಇಂಜಿನ್ ಗಾಡಿಗಳನ್ನೂ, ಪ್ರಯಾಣಿಕರು ಕೂಡುವ ೩೩೬ ಗಾಡಿಗಳನ್ನೂ, ಸಾಮಾನು ಭರ್ತಿಮಾಡಿ ಸಾಗಿಸುವ ೬,೧೧೮ ವಾಗನ್ ಬಂಡಿಗಳನ್ನೂ ತರಿಸಿದರು. ಇದಲ್ಲದೆ ಈಚೆಗೆ ೬೦೩ ಇಂಜಿನ್ ಗಾಡಿಗಳನ್ನೂ, ೭,೭೮೫ ಗಾಡಿಗಳನ್ನೂ, ೨೦,೪೯೮ ವಾಗನ್ ಬಂಡಿಗಳನ್ನೂ ತರಿಸುವುದಕ್ಕೆ ವಿಲಾಯತಿಗೆ ಹೇಳಿ ಕಳುಹಿಸಿದ್ದಾರೆ. ಇತ್ತಲಾಗಿ ಪ್ರತಿ ಒಂದು ರೈಲ್ ಗಾಡಿಯಲ್ಲೂ ಪ್ರಯಾಣಿಕರು ಕೂಡುವ ಗಾಡಿಯಿಂದ ಇಂಜಿನ್ ನಡಿಸುವ ಗಾಡಿಗೂ ಗಾರ್ಡ್ ಇರುವ ಗಾಡಿಗೂ ವರ್ತಮಾನ ತಲಪುವಂಥಾ ಕಂತಿಗಳ ಏರ್ಪಾಡು ಇಡಬೇಕೆಂದು ರೈಲ್ವೆ ಬೋರ್ಡಿನವರು ಎಲ್ಲಾ ಕಂಪನಿಯವರಿಗೂ ತಿಳಿಸಿರುತ್ತಾರೆ.

***

ಮಲಬಾರ್ ಪ್ರಾಂತ್ಯದಲ್ಲಿ ಹಿಂದೂ ದೇವಸ್ಥಾನಗಳೊಳಗೆ ಅರ್ಚಕರಾಗಿರತಕ್ಕವರು ನಂಬೂದ್ರಿ (ನಂಬಿ)ಗಳು. ಸರ್ಕಾರದವರು ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಗಳು ಬಂದಾಗ ಅವರನ್ನು ದಸ್ತಗಿರಿ ಮಾಡಿ, ಜಾಮೀನ್ ಮೇಲೆ ಬಿಡದೆಹೋಗೋಣದರಿಂದ ದೇವಸ್ಥಾನಗಳಲ್ಲಿ ಪೂಜೆ ನೈವೇದ್ಯಾದಿ ಕಾರ್ಯಗಳು ನಿಂತುಹೋಗುವವು. ಇದನ್ನು ನೋಡಿ ಆ ಪ್ರಾಂತ್ಯದ ಸಮಸ್ತ ಜಮೀನ್ದಾರರೂ ದೊಡ್ಡಮನುಷ್ಯರೂ ಸೇರಿ ಒಂದು ದೊಡ್ಡ ಸಭೆಯನ್ನು ನಡಿಸಿ, ಇನ್ನು ಮುಂದೆ ಕ್ರಿಮಿನಲ್ ಮೊಕದ್ದಮೆಯಲ್ಲಿ ಸಿಕ್ಕುವ ಅರ್ಚಕರನ್ನು ಜಾಮೀನ್ ಮೇಲೆ ಬಿಟ್ಟು ಕೊಡಬೇಕೆಂದು ಗವರ್ನಮೆಂಟಿನವರಿಗೆ ಅರಿಕೆ ಮಾಡಿಕೊಂಡರು ಕೊಳ್ಳೆಂಗೋಡಿನ ರಾಜಾವಾಸುದೇವರವರು ಆ ಸಭೆಯಲ್ಲಿ ಹಾಜರಾಗಿದ್ದು, ಈ ವಿಚಾರವನ್ನು ಕುರಿತು ತಾವು ಮದರಾಸ್ ಗವರ್ನರವರಿಗೆ ಮೊಖಾತ್ತು ತಿಳಿಸಿ, ಅವರ ಅಪ್ಪಣೆಯನ್ನು ಪಡೆಯಲು ಸಾಹಸಪಡುತ್ತೇವೆಂದು ವಾಗ್ದಾನಮಾಡಿರುತ್ತಾರೆ.

***

ಬರೋಡಾ ಸಂಸ್ಥಾನದಲ್ಲಿ ಗಾಯಕವಾಡ ಮಹಾರಾಜರವರು ತಮ್ಮ ಪ್ರಜೆಗಳ ಕ್ಷೇಮಾಭ್ಯುದಯವನ್ನು ಬಯಸಿ, ಸಾಂಸರ್ಗಿಕ ವಿಚಾರಗಳಿಗೆ (ಪ್ರಜೆಗಳ ಆಚಾರವಿಚಾರಗಳಿಗೆ) ಸಂಬಂಧಪಟ್ಟ ಕೆಲವು ಶಿಸ್ತುಗಳನ್ನು ರೂಢಿಗೆ ತಂದಿರುತ್ತಾರೆ. ಆ ಪೈಕಿ ಕೆಲವನ್ನು ಇಲ್ಲಿ ಸೂಚಿಸುತ್ತೇವೆ. ಬಾಲ್ಯ ವಿವಾಹವನ್ನು ನಿಲ್ಲಿಸುವ ಕಾನೂನು, ಹೆಣ್ಣನ್ನು ಕ್ರಯ ತೆಗೆದುಕೊಂಡು ವಿವಾಹ ಮಾಡಿಕೊಡುವುದನ್ನು ನಿಲ್ಲಿಸುವ ಕಾನೂನು, ಮದುವೆಯಾಗಿರುವ ಹೆಂಗಸರ ಆಸ್ತಿಯನ್ನು ಕಾಪಾಡುವಂಥಾ ಕಾನೂನು, ಈ ಮೊದಲಾದವುಗಳಲ್ಲದೆ ಯೋಗ್ಯತೆ ಶಕ್ತಿ ಸಾಮರ್ಥ್ಯಾದಿಗಳನ್ನು ಸಂಪಾದಿಸಿಕೊಂಡಿರತಕ್ಕವರನ್ನೆಲ್ಲಾ ಅವರ ಜಾತಿ ಕುಲಗೋತ್ರ ಸ್ಥಿತಿಗಳನ್ನು ನೋಡದೆ ಸರ್ಕಾರಿ ನೌಕರಿಗಳಿಗೆ ಸೇರಿಸಿಕೊಳ್ಳಬೇಕೆಂದೂ, ಕೌನ್ಸಿಲ್‌ಮೆಂಬರಾಗತಕ್ಕವರೆಲ್ಲಾ ಜಾತಿಗೆ ಸಂಬಂಧಪಟ್ಟ ಒಬ್ಬರನ್ನೊಬ್ಬರು ಮುಟ್ಟಿದರೆ ಅಶುದ್ಧವಾಗುವುದೆಂಬಂಥಾ ಅಲ್ಪವಾದ ದುರಭಿಮಾನಗಳನ್ನಿಟ್ಟುಕೊಂಡಿರಕೂಡದೆಂದೂ ಮಹಾರಾಜರವರು ಕಾನೂನ್ ಮಾಡುವವರಾಗಿದ್ದಾರೆಂದು ತಿಳಿದು ಬಂದಿದೆ

***

ವಾಯುವ್ಯಪ್ರಾಂತ್ಯದ ಸರಹದ್ದಿನ ಆಚೆ ಮಹಮಂದರ ಮೇಲೆ ಇಂಗ್ಲಿಷ್ ಸೈನ್ಯಗಳು ಹೋಗಿ ನಡಿಸುತ್ತಿದ್ದ ಯುದ್ಧ ಕಳೆದ ವಾರ ಮುಕ್ತಾಯವಾಯಿತು ಆ ಮಹಮಂದರ ಮುಖಂಡರು ಇಂಗ್ಲಿಷ್ ಉದ್ಯೋಗಸ್ಥರ ಬಳಿಗೆ ಬಂದು, ಜುಲ್ಮಾನೆ ಹಣವನ್ನು ಕೊಡುವಂತೆ ಒಪ್ಪಿ ಕರಾರು ಮಾಡಿಕೊಂಡು ಹೋದರು. ಈಚೆಗೆ ಅದರಂತೆ ಕೆಲವು ಪಂಗಡದವರು ಜುಲ್ಮಾನೆ ಹಣವನ್ನು ತಂದು ಒಪ್ಪಿಸಿದ್ದೂ ಆಯಿತು. ಇನ್ನು ಕೆಲವರು ಹಣ ಪಾವತಿ ಮಾಡುವ ತನಕ ತಮ್ಮ ಕಡೆಯ ಪ್ರತಿನಿಧಿಗಳನ್ನು ಇಂಗ್ಲಿಷರಿಗೆ ಜಾಮೀನಾಗಿ ಒಪ್ಪಿಸಿರುತ್ತಾರೆ ಈಗ ಯುದ್ಧ ಕಾರ್ಯಗಳೆಲ್ಲಾ ಮುಕ್ತಾಯವಾಗಿ, ಅಲ್ಲಿಂದ ಇಂಗ್ಲಿಷ್ ಸೈನ್ಯಗಳೆಲ್ಲಾ ವಾಪಸು ಬರುತ್ತಲಿವೆ. ವೈಸ್‌ರಾಯಿಯವರೂ, ಸೈನ್ಯಾಧಿಪತಿಯೂ ಜನರಲ್ ವಿಲ್ಕಾಕ್ಸ್‌ಯವರನ್ನೂ ಅವರ ಕೈಕೆಳಗೆ ಹೋಗಿದ್ದ ಸೈನಿಕರನ್ನೂ ಅವರ ಯುಕ್ತಿ ಸಾಮರ್ಥ್ಯಾದಿಗಳಿಗಾಗಿ ಹೊಗಳಿ, ತಮ್ಮ ಸಂತೋಷವನ್ನು ತಿಳಿಸಿರುತ್ತಾರೆ. ಈ ಯುದ್ಧ ಕಾರ್ಯಗಳಿಗೆಲ್ಲಾ ಇಂಡಿಯಾ ಗವರ್ನಮೆಂಟಿಗೆ ಸುಮಾರು ೨೦ ಲಕ್ಷ ರೂಪಾಯಿ ಖರ್ಚಾಗಿರುವಂತೆ ಊಹಿಸಲ್ಪಟ್ಟಿದೆ

***

ಬರ್ಮಾ ಅಧಿಪತ್ಯಕ್ಕೆ ಸೇರಿದ ಲಮ್ಮಡ್ವಾ ಎಂಬ ಊರಿನಲ್ಲಿ ಇಬ್ಬರು ಕಳ್ಳರು ಪಿಸ್ತೂಲುಗಳನ್ನು ಹಿಡಿದು ಚುಟ್ಟಾ ತಯಾರ್ಮಾಡುವ ಒಂದು ಅಂಗಡಿ ಮನೆಗೆ ನುಗ್ಗಿ ಬಾಗಿಲು ಹಾಕಿಕೊಂಡು, ಮನೆಯ ಯಜಮಾನನನ್ನು ಹಣದ ಪೆಟ್ಟಿಗೆಯ ಬೀಗದಕೈಗಳನ್ನು ಕೇಳಿ ಕೊಡದೆ ತಂಟೆಮಾಡಿದಾಗ ಅವನನ್ನೂ ಅವನ ಮನೆಯವರನ್ನೂ ಹೊಡೆದು, ಪೆಟ್ಟಿಗೆಗಳಲ್ಲಿದ್ದ ಆಭರಣ ನಾಣ್ಯಗಳನ್ನು ತೆಗೆದುಕೊಂಡರು. ಅಷ್ಟರೊಳಗೆ ಪುಕಾರಾಗಿ ಪೊಲೀಸಿನವರೂ ಊರಿನವರೂ ಅನೇಕ ಮಂದಿ ಮನೆಯ ಸುತ್ತಾ ಸೇರಿ, ಅವರನ್ನು ಹಿಡಿಯಬೇಕೆಂದು ಬಹಳ ಸಾಹಸಪಟ್ಟರು. ಆದರೆ ಆ ಕಳ್ಳರಿಬ್ಬರೂ ಗುಂಡುಹೊಡೆಯುತ್ತಾ ಎಲ್ಲರಲನ್ನೂ ಅತ್ತಿತ್ತ ಓಡಿಸಿ ತಪ್ಪಿಸಿಕೊಂಡುಹೋದರು. ಆದರೆ ಒಬ್ಬನು ಸ್ವಲ್ಪ ದೂರ ಹೋಗುವಷ್ಟರಲ್ಲೇ ಸಿಕ್ಕಿಬಿದ್ದನು. ಇನ್ನೊಬ್ಬನು ಎಲ್ಲಿ ಹೋದನೋ ಗೊತ್ತಾಗಲಿಲ್ಲ. ಅವರ ಗುಂಡೇಟಿನಿಂದಲೂ ಕತ್ತಿಗಳ ಪೆಟ್ಟಿನಿಂದಲೂ ೮ ಜನರಿಗೆ ತುಂಬಾ ಗಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದಾರೆ ಒಬ್ಬ ಪೊಲೀಸಿನವನು ವಾಸಿಯಾಗದೆ ಮೃತಪಟ್ಟನು

ವಿದೇಶ ವರ್ತಮಾನಗಳು.

ಲಾರ್ಡ್ ಮೌಂಟ್ ಸ್ಟೀಫನ್ ಎಂಬಾತನು ಲಂಡನ್ ಪಟ್ಟಣದಲ್ಲಿ ಎಡ್ವರ್ಡ್ ದೊರೆಯವರ ಹೆಸರಿನ ಮೇಲೆ ಕಟ್ಟಿಸುವ ಆಸ್ಪತ್ರೆಯ ಫಂಡಿಗೆ ೩೫ ಲಕ್ಷ ರೂಪಾಯಿ ಧರ್ಮಮಾಡಿರುತ್ತಾನೆ.

***

ಹಿಂದೂಸ್ಥಾನದಿಂದ ರಫ್ತಾಗಿಹೋಗುತ್ತಿದ್ದ ಟೀಸೊಪ್ಪಿಗೆ ರಷ್ಯಾ ಸರ್ಕಾರದವರು ಆ ರಾಜ್ಯದಲ್ಲಿ ಸುಂಕಹಾಕುತ್ತಿದ್ದರು. ಅದನ್ನು ನಾಳೆ ಸೆಪ್ಟೆಂಬರ್ ಲಾಗಾಯಿತು ವಜಾಮಾಡುವುದಾಗಿ ತಿಳಿಸಿದ್ದಾರೆ.

ಆಸ್ಟ್ರೇಲಿಯಾದಿಂದಲೂ ನ್ಯೂಜಿಲೆಂಡಿನಿಂದಲೂ ಹಣ್ಣು ಹಂಪಲುಗಳನ್ನು ಒಣಗಿಸಿ ವಿಲಾಯತಿಗೆ ಕಳುಹಿಸಿ ಬಿಕರಿಮಾಡುತ್ತಾರೆ. ಈ ಹಣ್ಣುಗಳು ಬಹಳ ರುಚಿಯಾಗಿರುವವೆಂತಲೂ ಹೆಚ್ಚಾಗಿ ಮಾರಾಟವಾಗುತ್ತಿವೆ ಎಂತಲೂ ತಿಳಿಯುವುದು.

❦❦❦

ಅಮೇರಿಕಕ್ಕೆ ಸೇರಿದ ಇಂಡಿಯಾನಾ ಡಿಸ್ಟ್ರಿಕ್ಟಿನೊಳಗೆ ಲಾಫೋರ್ಟ್ ಎಂಬ ಊರಿನಲ್ಲಿ ಸರ್ಕಾರದವರು ತನಿಖೆಮಾಡಿದಾಗ ಒಂದು ಜಮೀನಿನಲ್ಲಿ ಹೂಳಿಟ್ಟಿದ್ದ ೧೬ ಶವಗಳು ದೊರಕಿರುತ್ತವೆ. ಅದಕ್ಕೆ ಕಾರಣ ಮುಂತಾದ್ದನ್ನು ಪೋಲೀಸು ಈಗ ತನಿಖೆಮಾಡುತ್ತಿದ್ದಾರೆ.

❦❦❦

ಅಮೇರಿಕಕ್ಕೆ ಸೇರಿದ ಅಲ್ಲಿಗಾನಿ ನ್ಯಾಷನಲ್ ಬ್ಯಾಂಕು ದಿವಾಳಿಯಾಯಿತು. ಅದರಲ್ಲಿ ಕ್ಯಾಷಿಯರ್ ಕೆಲಸ ನೋಡುತ್ತಿದ್ದ ನೌಕರನು ಬ್ಯಾಂಕಿನ ೬೦ ಲಕ್ಷ ರೂಪಾಯನ್ನು ತಿಂದುಹಾಕಿದನೆಂದೂ, ಈಗ ಅವನನ್ನು ಹಿಡಿದು ಜೈಲಿನಲ್ಲಿ ಹಾಕಿದರೆಂದೂ ತಂತೀ ವರ್ತಮಾನ ಬಂದಿದೆ

❦❦❦

ಆಫ್ರಿಕಾಖಂಡಕ್ಕೆ ಸೇರಿದ ಯುಗಾಂಡಾ ಪ್ರೊಟೆಕ್ಟರೇಟಿನೊಳಗೆ ಮುಸೋಗಾ ಎಂಬ ಡಿಸ್ಟ್ರಿಕ್ಟಿನಲ್ಲಿ ವಿಪರೀತ ಕ್ಷಾಮ ಪ್ರಾಪ್ತವಾಗಿ ೩,೦೦೦ ಜನರು ಹೊಟ್ಟೆಗಿಲ್ಲದೆ ಮೃತಪಟ್ಟರೆಂತಲೂ, ಗವರ್ನಮೆಂಟಿನವರು ೫೦,೦೦೦ ಜನರನ್ನು ಆಹಾರ ಕೊಟ್ಟು ಸಾಕುತ್ತಿದ್ದಾರೆಂತಲೂ ತಂತೀ ವರ್ತಮಾನ ಬಂದಿದೆ

❦❦❦

ಇಂಗ್ಲಿಷ್ ಚಕ್ರಾಧಿಪತ್ಯದ ಎಲ್ಲಾ ಭಾಗಗಳಲ್ಲೂ ಒಟ್ಟು ೭ ಲಕ್ಷವು ೯೦ ಸಾವಿರ ಇಂಗ್ಲಿಷ್ ಸೈನ್ಯವಿರುತ್ತದೆಂದೂ, ಈ ಸೈನ್ಯದ ಖರ್ಚು ವರುಷಕ್ಕೆ ೭೬ ಕೋಟಿಯೂ ೫೦ ಲಕ್ಷ ರೂಪಾಯಿ ಆಗುವುದೆಂದೂ ವಿಲಾಯತಿಯ ಸೈನ್ಯದ ಇಲಾಖೆಯ ಮಂತ್ರಿಯಾದ ಮಿ। ಹಾಲ್ಡೇನ್ ರವರು ತಿಳಿಸಿದ್ದಾರೆ.

❦❦❦

ಜರ್ಮನ್ ರಾಜಧಾನಿಯಾದ ಬರ್ಲಿನ್ ನಗರದಲ್ಲಿ ೧೯೧೦ ನೇ ಇಸವಿಯಲ್ಲಿ ಬಹು ವಿಸ್ತಾರವಾದ ದೊಡ್ಡ ಪ್ರದರ್ಶನ ನಡೆಯುವುದು. ಅದಕ್ಕೆ ಅಮೇರಿಕದಿಂದ ನಾನಾ ವಸ್ತುಗಳನ್ನು ಕಳುಹಿಸಬೇಕೆಂದು ಅಮೇರಿಕ ಸರ್ಕಾರದವರು ೩೫ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

❦❦❦

ಪರ್ಷಿಯಾ ರಾಜ್ಯದ ಎಲ್ಲೆಕಟ್ಟಿನ ಆಚೆ ಇರುವ ಕುರ್ದ್ ಎಂಬ ಜನರು ಪರ್ಷಿಯಾದೊಳಕ್ಕೆ ನುಗ್ಗಿಬಂದು ೩೮೭ ಮನೆಗಳನ್ನು ಸುಟ್ಟುಹಾಕಿ, ಮೂರು ಗ್ರಾಮಗಳನ್ನು ಹಾಳುಮಾಡಿ, ೫೩ ಜನರನ್ನು ಕೊಂದು, ೫೫ ಲಕ್ಷ ರೂಪಾಯನ್ನು ಲೂಟಿಮಾಡಿಕೊಂಡು ಹೋದರೆಂದು ತಂತೀ ವರ್ತಮಾನ ಬಂದಿದೆ

❦❦❦

ಜರ್ಮನರು ಕೊರಿಯಾ ರಾಜ್ಯವನ್ನು ಆಳುತ್ತಾ ಬಂದಿರುವುದು ಅಲ್ಲಿನ ಪ್ರಜೆಗಳಿಗೆ ಇಷ್ಟವಿಲ್ಲ. ಆಗಾಗ್ಗೆ ಆ ಪ್ರಜೆಗಳಿಗೂ ಜರ್ಮನ್ ಸೈನಿಕರಿಗೂ ಜಗಳ ಕದನಗಳು ಪ್ರಾಪ್ತವಾಗುತ್ತಲೇ ಬಂದಿವೆ. ಕಳೆದ ಮೇ ತಿಂಗಳಲ್ಲಿ ೫೭ ಸಲ ಇಂಥ ಕದನಗಳಾಗಿ ೩೦೯ ಮಂದಿ ಕೊರಿಯಾದವರೂ ೩೦ ಜನ ಜರ್ಮನರೂ ಮೃತಪಟ್ಟರು.

❦❦❦

ಈಜಿಪ್ಟ್ ರಾಜ್ಯದಲ್ಲಿ ಮಿ। ಸ್ಟಾಟ್‌ಮನ್ ಸ್ಮಿತ್ ಎಂಬೊಬ್ಬ ಇಂಗ್ಲಿಷನನ್ನು ಅಲ್ಲಿನವರು ಕೊಂದುಹಾಕಿದರೆಂದು ಆ ದೇಶದ ಸರ್ಕಾರದವರು ಹಿಡಿದು ವಿಚಾರಿಸಿ ೩ ಮಂದಿಯನ್ನು ಖುಲಾಸ್ ಮಾಡಿದರು. ಇನ್ನೆರಡು ಜನರನ್ನು ಗಲ್ಲಿಗೆ ಏರಿಸಬೇಕೆಂದೂ ಎಂಟು ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ ಎಂದೂ ತೀರ್ಮಾನ ಮಾಡಿದ್ದಾರೆ

❦❦❦

ಬೆಲ್ಜಿಯಂ ರಾಜ್ಯಕ್ಕೆ ಸೇರಿದ ಆಂಟ್ವರ್ಪ್ ನಗರದ ಬಳಿ ಕಾಂಟಿಚ್ ಎಂಬ ರೈಲ್ವೆ ಸ್ಟೇಷನ್ ಸಮೀಪದಲ್ಲಿ ಒಂದು ಎಕ್ಸ್‌ಪ್ರೆಸ್ ರೈಲ್ ಗಾಡಿಯು ಇನ್ನೊಂದು ಗಾಡಿಗೆ ಬಡಿದು ಅನಾಹುತವಾಯಿತು. ಜನರಿಂದ ಭರ್ತಿಯಾಗಿದ್ದ ಮೂರು ಗಾಡಿಗಳು ಚೂರುಚೂರಾಗಿ ೪೦ ಮಂದಿ ಪ್ರಯಾಣಿಕರು ಪ್ರಾಣ ಕಳೆದುಕೊಂಡರು. ೭೯ ಜನರಿಗೆ ಗಾಯ ತಗುಲಿವೆ

❦❦❦

ವಿಲಾಯತಿ ರಾಜ್ಯದ ಮಂತ್ರಿಶ್ರೇಷ್ಠರಾಗಿದ್ದು ಕೆಲವು ವಾರಗಳ ಕೆಳಗೆ ಕಾಲವಾದ ಸರ್ ಹೆನ್ರಿ ಕ್ಯಾಂಬೆಲ್ ಬ್ಯಾನರ್ಮನ್‌ರವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಲಂಡನ್ ಪಟ್ಟಣದ ವೆಸ್ಟ್‌ಮಿನಿಸ್ಟರ್ ಆಬಿ ಎಂಬ ಕಟ್ಟಡದಲ್ಲಿ ಅವರ ಒಂದು ಪ್ರತಿಮೆಯನ್ನು ಮಾಡಿಸಿ ಇಡಬೇಕೆಂದು ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಈಗಿನ ಮಂತ್ರಿಶ್ರೇಷ್ಠರಾದ ಮಿ। ಆಸ್ಕ್ವಿತ್‌ರವರು ಸೂಚಿಸಿದರು. ಮೆಂಬರುಗಳೆಲ್ಲಾ ಆ ಅಭಿಪ್ರಾಯವನ್ನು ಒಪ್ಪಿರುತ್ತಾರೆ

❦❦❦

ನೇಪಾಳ ಸಂಸ್ಥಾನದ ಮಂತ್ರಿಶ್ರೇಷ್ಠರು ಪರಿವಾರ ಸಹಿತ ವಿಲಾಯತಿಗೆ ಹೋಗಿರುತ್ತಾರೆ. ಇಂಗ್ಲಿಷ್ ಗವರ್ನಮೆಂಟಿನವರು ಅವರನ್ನು ಚಕ್ರವರ್ತಿಯ ಪರ ಅತಿಥಿಗಳೆಂದು ಎಣಿಸಿ ಅವರಿಗಾಗಿ ವಿಶೇಷವಾದ ನಾನಾ ಉತ್ಸವಗಳನ್ನೂ ಸಂತೋಷ ಕಾರ್ಯಗಳನ್ನೂ ಏರ್ಪಡಿಸಿರುತ್ತಾರೆ. ಈ ಖರ್ಚನ್ನೆಲ್ಲಾ ಇಂಗ್ಲಿಷ್ ಗವರ್ನಮೆಂಟಿನವರೇ ವಹಿಸತಕ್ಕದ್ದೆಂದು ತೀರ್ಮಾನವಾಗಿರುವುದು

❦❦❦

ಚೀನಾ ರಾಜ್ಯದಲ್ಲಿ ಪಿತೂರಿಮಾಡಿದಂಥಾ ೭೦ ಮಂದಿ ಚೀನೀಯರು ಫೈಸಾಂಗ್ ಎಂಬ ಫ್ರೆಂಚರ ಹಡಗಿನಲ್ಲಿ ಪ್ರಯಾಣಮಾಡಿ ಸಿಂಗಪುರಕ್ಕೆ ಬಂದಿಳಿದರು. ಅಲ್ಲಿಂದ ಅವರು ಸೈಗಾನಿಗೆ ಹೋಗಬೇಕೆಂದು ಪ್ರಯತ್ನಪಟ್ಟಾಗ ಫ್ರೆಂಚ್ ಸರ್ಕಾರದವರು ಅವರನ್ನು ತಡೆದುಬಿಟ್ಟರು. ಆ ದಂಗೆಕೋರರು ವಾಪಸು ಸಿಂಗಪುರಕ್ಕೆ ಹೋದರು. ಅಲ್ಲಿ ಪೋಲೀಸಿನವರು ಅವರನ್ನೆಲ್ಲಾ ದಸ್ತಗಿರಿಮಾಡಿ ಇಟ್ಟುಕೊಂಡಿದ್ದಾರೆ

❦❦❦

ವಿಲಾಯತಿಯ ನಾಟಕಶಾಲೆಗಳ ಕಂಪನಿ ಇಟ್ಟಿರುವವರೂ, ನಾಟಕಧಾರಿಗಳೂ, ನಾಟಕಗಳನ್ನು ಬರೆಯುವ ಕವಿಗಳೂ ಎಲ್ಲಾ ಲಂಡನ್ ಪಟ್ಟಣದಲ್ಲಿ ಸಭೆಸೇರಿ, ಷೇಕ್ಸ್‌ಪಿಯರ್ ಎಂಬ ಇಂಗ್ಲಿಷ್ ಕವಿಶ್ರೇಷ್ಠನ ಹೆಸರಿನ ಮೇಲೆ ಒಂದು ಯೋಗ್ಯವಾದ ನಾಟಕಮಂದಿರವನ್ನು ಕಟ್ಟಬೇಕೆಂತಲೂ, ಇದಕ್ಕೆ ಲಂಡನ್ ಪಟ್ಟಣದವರೂ ಇಂಗ್ಲಿಷ್ ಪಾರ್ಲಿಮೆಂಟಿನವರೂ ಸಹಾಯ ಮಾಡಬೇಕೆಂದು ಕೇಳಿಕೊಳ್ಳಬೇಕೆಂತಲೂ ತೀರ್ಮಾನಿಸಿರುತ್ತಾರೆ. ಲಾರ್ಡ್ ಲಿಟ್ಟನ್‌ರವರು ಆ ಸಭೆಯ ಅಗ್ರಾಸನವನ್ನು ವಹಿಸಿದ್ದರು

❦❦❦

ರಷ್ಯಾ ರಾಜ್ಯದಲ್ಲಿ ಭಾರೀ ಪಟ್ಟಣವಾದ ಮಾಸ್ಕೋ ನಗರದಲ್ಲಿ ಒಂದು ವಿಧವಾದ ಕೆಟ್ಟ ವಿಷಮಶೀತಜ್ವರವು ಕಾಣಿಸಿಕೊಂಡು, ಆ ಪಟ್ಟಣದ ಆಸ್ಪತ್ರೆಗಳೆಲ್ಲಾ ಈ ರೋಗಿಗಳಿಂದ ತುಂಬಿಹೋಗಿವೆ. ಇದುವರೆಗೆ ೩,೦೦೦ ಜನರು ಆಸ್ಪತ್ರೆಗಳಲ್ಲಿ ಚಿಕಿತ್ಸೆಹೊಂದುತ್ತಿದ್ದಾರೆಂತಲೂ, ದಿನ ಒಂದಕ್ಕೆ ೭೫ ರಿಂದ ೧೦೦ ರ ವರೆಗೆ ಹೊಸದಾಗಿ ಜನರು ಈ ರೋಗದಲ್ಲಿ ಬೀಳುತ್ತಿದ್ದಾರೆಂತಲೂ, ರೋಗಿಗಳನ್ನು ಇಟ್ಟು ಚಿಕಿತ್ಸೆ ಮಾಡುವುದಕ್ಕೆ ಸ್ಥಳವಿಲ್ಲದೆ ಮ್ಯುನಿಸಿಪಾಲಿಟಿಯವರು ಎಲಿಮೆಂಟರಿ ಶಾಲೆಗಳಿರುವ ಕಟ್ಟಡಗಳನ್ನೆಲ್ಲಾ ಹಿಡಿಸಿಕೊಂಡಿದ್ದಾರೆಂತಲೂ ತಂತೀ ವರ್ತಮಾನ ಬಂದಿದೆ

❦❦❦

ವಿಲಾಯತಿ ಗವರ್ನಮೆಂಟಿನವರು ಮದ್ಯಪಾನವನ್ನು ನಿರೋಧಿಸಬೇಕೆಂದು ಒಂದು ಕಾನೂನು ಮಾಡಿ ಜಾರಿಗೆ ತರುವ ವಿಷಯದಲ್ಲಿ ಚರ್ಚೆಮಾಡುತ್ತಿದ್ದಾರೆ. ಆ ಮಾದಕದ್ರವ್ಯಗಳನ್ನು ತಯಾರುಮಾಡುವುದಕ್ಕೆ ಅನೇಕ ಕಂಪನಿಗಳು ಇದ್ದು, ಜನರು ಅವರಲ್ಲಿ ಸೇರುಹಾಕಿರುತ್ತಾರಾದ್ದರಿಂದ ಅವರಿಗೆಲ್ಲಾ ನಷ್ಟವಾಗುವುದೆಂದು ಕೇಳಿ ಗವರ್ನಮೆಂಟಿನವರ ಮೇಲೆ ಆಕ್ಷೇಪಣೆ ಮಾಡುವರು. ಅಂಥಾ ಕಾನೂನು ಮಾಡಕೂಡದೆಂದು ಲಂಡನ್ ಪಟ್ಟಣದಲ್ಲಿರುವ ಎಲ್ಲಾ ಕಂಪನಿಗಳ ಪ್ರತಿಗಳೂ ದೊಡ್ಡಮನುಷ್ಯರೂ ರುಜುಹಾಕಿ ೩೦,೦೦೦ ಗಜಗಳುಳ್ಳ ಅರ್ಜಿಯನ್ನು ಪಾರ್ಲಿಮೆಂಟಿಗೆ ಒಪ್ಪಿಸಿದ್ದಾರೆ. ಈ ಅರ್ಜಿಗೆ ೬,೦೦,೦೦೦ ರುಜುಗಳು ಬಿದ್ದಿರುತ್ತವೆ. ಅಷ್ಟು ಗಜಗಳ ಕಾಗದವನ್ನು ಒಂದರ ಪಕ್ಕದಲ್ಲೊಂದು ಇಟ್ಟರೆ ಒಂಬತ್ತು ಮೈಲಿ ದೂರವಾಗುವುದು.

ಸತ್ಯವಾದುದನ್ನು ಮಾಡುವುದಕ್ಕೆ ಬೇಕಾಗಿರುವ ಶಕ್ತಿ

ಹೋದ ವಾರದ ಒಕ್ಕಲಿಗರ ಪತ್ರಿಕೆಯಲ್ಲಿ ವಿದ್ಯಾರ್ಥಿಗಳಿಗೆ ಮತಬೋಧನೆಯನ್ನು ಕೊಡುವ ವಿಷಯದಲ್ಲಿ ಒಂದು ಉತ್ಕೃಷ್ಟವಾದ ಟಿಪ್ಪಣಿಯು ಬರೆಯಲ್ಪಟ್ಟಿತ್ತು. ಟಿಪ್ಪಣಿಯ ಒಂದು ಕಡೆ ಟಿಪ್ಪಣಿದಾರರು ಈ ರೀತಿಯಾಗಿ ತಿಳಿಸಿರುತ್ತಾರೆ “ ಮತಬೋಧನೆಯಲ್ಲಿ ಒಂದು ವಿಶೇಷವೆಂದರೆ ಮಾತದ ತತ್ವಗಳನ್ನು ತಿಳಿದುಕೊಳ್ಳುವುದು ಸುಲಭವಾಗಿದ್ದರೂ ಸಹ ಅದರಿಂದ ಉಪಯೋಗವಿಲ್ಲ. ಆ ತತ್ವಗಳನ್ನು ಆಚರಣೆಗೆ ತರಬೇಕಾದರೇ ಮುಖ್ಯವು. ಇದೇ ಬಹಳ ಕಷ್ಟವಾದುದು ” ಸದರಿ ಟಿಪ್ಪಣಿದಾರರ ಮಾತುಗಳು ಸತ್ಯವಾಗಿರುವುದು. ನಾವು ಒಪ್ಪುವೆವು. ಧರ್ಮವನ್ನು ಚೆನ್ನಾಗಿ ತಿಳಿದುಕೊಂಡಿರುವ ಉಪಾಧ್ಯಾಯರು ಅದನ್ನು ತನ್ನ ನಡತೆಯಲ್ಲಿ ಆಚರಿಸದೆ ಕೆಟ್ಟದಾದ ದಾರಿಯನ್ನು ಹಿಡಿದುಕೊಂಡಿದ್ದರೆ ಅದರಿಂದ ಏನು ಪ್ರಯೋಜನವೇನು. ಅನೇಕ ಸಮಯಗಳಲ್ಲಿ ಮನೋವಿಕಾರದಿಂದ ತಾವು ಧರ್ಮವನ್ನು ಚೆನ್ನಾಗಿ ತಿಳಿದಿದ್ದರೂ ಅವಶ್ಯಕವಾದ ಸಮಯದಲ್ಲಿ ಅದನ್ನು ಆಚರಿಸಲು ಶಕ್ತಿಯಿಲ್ಲದೆ ಹೋಗುವ ವಿಷಯ ಪ್ರತಿಯೊಬ್ಬರಿಗೂ ತಿಳಿದಿರುವುದು. ಶಿಕ್ಷೆಯನ್ನು ಕೊಡುವ ವಿದ್ಯಾರ್ಥಿಗಳಿಗೆ ಕೂಡ ಅನೇಕ ಸಮಯಗಳಲ್ಲಿ ಅಧರ್ಮವನ್ನು ಆಚರಿಸುತ್ತಿರುವ

ಪರಲೋಕದಲ್ಲಿ ಮುಕ್ತಿಯಿಂದ ಕೆಲವರು ಪಂಚಕೃತ್ಯಗಳನ್ನು ನಡೆಸುತ್ತಿರುವರು. ಪಾಠವು ಏನೆಂಬುದನ್ನು ಪರಿಪೂರ್ಣವಾಗಿ ತಿಳಿದುಕೊಳ್ಳಬೇಕಾದರೆ ವಿದ್ಯೆಯು ಅವಶ್ಯಕವಾಗಿರುತ್ತದೆ. ವಿದ್ಯೆಯನ್ನು ಸರಿಯಾಗಿ ಗ್ರಹಿಸಿಕೊಂಡು ಅದನ್ನು ಉತ್ತಮರೀತಿಯಲ್ಲಿ ಉಪಯೋಗಿಸಿದರೆ ಮನುಷ್ಯನಿಗೆ ತನ್ನ ಕರ್ತವ್ಯಗಳು ಚೆನ್ನಾಗಿ ತಿಳಿಯುತ್ತವೆ. ಆದರೆ ಇದೊಂದು ಸಂಗತಿಯನ್ನು ವಾಚಕರು ಜ್ಞಾಪಕದಲ್ಲಿಡತಕ್ಕದ್ದು. ಅದೇನೆಂದರೆ ಮನುಷ್ಯನಲ್ಲಿ ಪುಸ್ತಕಬುದ್ಧಿಗೆ ಜ್ಞಾನ ಒಂದೇ ಸಾಕಾಗುವುದಿಲ್ಲ. ಅದರ ಜೊತೆಗೆ ಶಕ್ತಿಯು ಬೇಕಾಗಿರುತ್ತದೆ. ಪೂರ್ವಕಾಲದ ಒಬ್ಬ ತತ್ವಜ್ಞಾನಿಯು ಈ ರೀತಿಯಾಗಿ ತಿಳಿಸಿರುತ್ತಾನೆ “ ನನಗೆ ಸತ್ಯವೇನೆಂಬುದು ಗೊತ್ತಾಗಿದೆ. ನಾನು ಸತ್ಯವು ಸರಿಯೆಂದು ಒಪ್ಪುತ್ತೇನೆ. ಹೀಗೆ ನನಗೆ ತಿಳಿದಿದ್ದರೂ ಅಧರ್ಮವನ್ನೇ ಆಚರಿಸುವವನಾಗಿರುತ್ತೇನೆ ”

ನಮ್ಮ ಜೀವಮಾನದಲ್ಲಿ ಎರಡು ದಾರಿಗಳಿರುತ್ತವೆ. ಒಂದು ಧರ್ಮಮಾರ್ಗ ಮತ್ತೊಂದು ಅಧರ್ಮಮಾರ್ಗ. ಮನುಷ್ಯನು ಧರ್ಮಕ್ಕೂ ಅಧರ್ಮಕ್ಕೂ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳುವುದಕ್ಕೆ ಜ್ಞಾನವು ಅವಶ್ಯಕವಾಗಿರುತ್ತದೆ. ಧರ್ಮಮಾರ್ಗದ ಕಟ್ಟಳೆಗಳಿಗೂ ಅಧರ್ಮಮಾರ್ಗದ ಕಟ್ಟಳೆಗಳಿಗೂ ಇರುವ ತಾರತಮ್ಯವನ್ನು ಮನುಷ್ಯನು ಗ್ರಹಿಸಬೇಕಾದುದು ಅವನ ಕರ್ತವ್ಯವಾಗಿರಬೇಕು. ಧರ್ಮಾಧರ್ಮದ ಮಾರ್ಗಗಳನ್ನು ತಿಳಿಯತಕ್ಕ ಶಕ್ತಿಯು ಇದ್ದೇ ಇರುತ್ತದೆ. ಇದನ್ನು ಮನುಷ್ಯನು ನೋಡದೆ ಹೋದರೆ ಅಜ್ಞಾನದಿಂದ ಕುರುಡನಾಗಿ ದುಷ್ಕೃತ್ಯಗಳನ್ನು ಮಾಡುವನು

ಆದರೆ ಭೂಲೋಕದಲ್ಲಿ ಅನೇಕರು ಧರ್ಮವು ಯಾವುದು ಅಧರ್ಮವು ಯಾವುದು ಎಂಬ ಸಂಗತಿಗಳನ್ನು ತಿಳಿದುಕೊಂಡಿರುತ್ತಾರೆ. ಧರ್ಮಮಾರ್ಗವು ಪವಿತ್ರತ್ವಕ್ಕೂ ಸದಾಕಾಲದ ಸೌಭಾಗ್ಯಕ್ಕೂ ನಡಿಸುವದೆಂತಲೂ ಅಧರ್ಮಮಾರ್ಗವು ವ್ಯಸನಕ್ಕೂ ರೋಗಕ್ಕೂ ಅವಮಾನಕ್ಕೂ ಕಡೆಯಲ್ಲಿ ಮರಣಕ್ಕೂ ನಡಿಸುವದೆಂತಲೂ ಜನರು ತಿಳಿದಿರುತ್ತಾರೆ. ಹೀಗೆ ತಿಳಿದಿದ್ದರೂ ಅವರು ಪಾಪಮಾರ್ಗದಲ್ಲಿ ನಡಿಯುವ ಮಾತ್ರ ತಪ್ಪಿಲ್ಲ. ಅವರು ದೃಢಮನಸ್ಕರಾಗಿಲ್ಲ. ಅವರಿಗೆ ಜ್ಞಾನವು ಇರುತ್ತದೆ. ಆದರೆ ಅವರು ಧರ್ಮವನ್ನಾಚರಿಸುವ ಶಕ್ತಿಯನ್ನು ಪಡೆದಿಲ್ಲ.

ಹೋದ ಆದಿತ್ಯವಾರ ಕ್ರೈಸ್ತಮತಕ್ಕೆ ಸೇರಿದವರು “ ಪೆಂತೆಕೋಸ್ತ ಸಂಡೇ ” ಎಂಬ ಹಬ್ಬವನ್ನು ಆಚರಿಸಿದರು. ಕ್ರೈಸ್ತರಲ್ಲದ ವಾಚಕರು ಈ ಹಬ್ಬವೇನೆಂದು ಕೇಳಬಹುದು. ಯೇಸುಕ್ರಿಸ್ತನು ಪರಲೋಕವಾಸಿಯಾದ ನಂತರ ಆತನ ಶಿಷ್ಯರ ಮೇಲೆ ಪವಿತ್ರಾತ್ಮನೆಂಬ ವರದಾಯಕನು ಬಂದು ಅವರೊಳಗೆ ನೆಲಸಿದನು. ಈ ಸಂಗತಿಯನ್ನು ಜ್ಞಾಪಕಮಾಡಲೋಸುಗ ಕ್ರೈಸ್ತರು ಹೋದ ಆದಿತ್ಯವಾರವನ್ನು ಶುಭದಿನವನ್ನಾಗಿ ಆಚರಿಸಿದರು. ಯೇಸುಕ್ರಿಸ್ತನು ಶಿಷ್ಯರ ಸಂಗಡ ಮೂರು ವರ್ಷಗಳ ಕಾಲ ವಾಸವಾಗಿದ್ದನು. ಅವರಿಗೆ ಆ ಮೂರು ವರ್ಷಗಳ ಕಾಲ ಎಡೆಬಿಡದೆ ಉಪದೇಶಮಾಡುತ್ತಿದ್ದನು. ಶಿಷ್ಯರು ಮೂರು ವರ್ಷಗಳ ಕಾಲ ತಮ್ಮ ಗುರುವಿನ ಬೋಧನೆಯನ್ನು ಹೊಂದಿದ ಮೇಲೆ ಅವರು ಎಲ್ಲಾ ವಿಷಯಗಳಲ್ಲಿಯೂ ಸಂಪೂರ್ಣತೆಯನ್ನು ಪಡೆದರೆಂದು ನಾವು ಊಹಿಸಬಹುದಲ್ಲವೇ ? ಆದರೆ ಅವರು ಹಾಗಿರಲಿಲ್ಲ. ಯೇಸುಕ್ರಿಸ್ತನು ಪರಲೋಕಕ್ಕೆ ಹೋಗುವುದಕ್ಕೆ ಮೊದಲು ತನ್ನ ಶಿಷ್ಯರಿಗೆ—ನೀವು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲಿ (ಯೆರೂಸಲೇಮ್ ಪಟ್ಟಣದಲ್ಲಿ) ಕಾದುಕೊಂಡಿರ್ರಿ ಎಂದು ಹೇಳಿದನು. ಅವರಿಗೆ ಜ್ಞಾನವಿತ್ತು ಆದರೆ ಅವರಿಗೆ ಶಕ್ತಿ ಇರಲಿಲ್ಲ. ತಮ್ಮ ಗುರು ಹೇಳಿದ ಪ್ರಕಾರ ಅವರು ಯೆರೂಸಲೇಮ್ ಪಟ್ಟಣಕ್ಕೆ ಬಂದು ತಮ್ಮ ಕಾಲವನ್ನು ಪ್ರಾರ್ಥನೆಯಲ್ಲಿ ಕಳೆದರು. ಕೆಲವು ದಿನಗಳಾದ ಮೇಲೆ ಯೇಸುಕ್ರಿಸ್ತನು ವಾಗ್ದಾನಮಾಡಿದ ಪ್ರಕಾರ ಅವರ ಮೇಲೆ ಪವಿತ್ರಾತ್ಮನೆಂಬ ವರದಾಯಕನು ಬಂದಿಳಿದನು. ಪವಿತ್ರಾತ್ಮನು ಬಂದನೆಂಬುದಕ್ಕೆ ಆ ಸಾಕ್ಷಾತ್ ದೇವರೇ (ಪರಮಾತ್ಮನೇ) ಮನುಷ್ಯರ ಹೃದಯಗಳೊಳಗೆ ವಾಸಮಾಡುವುದಕ್ಕೆ ಬಂದನೆಂಬ ಅರ್ಥವಾಗುತ್ತದೆಂದು ಕ್ರೈಸ್ತರು ತಿಳಿದುಕೊಳ್ಳುವರು. ಈ ಪವಿತ್ರಾತ್ಮನಾದವನೇ ಭಕ್ತರ ಹೃದಯಗಳಲ್ಲಿ ಇಳಿದಿದ್ದುಕೊಂಡು ಸತ್ಯವಾದುದನ್ನು ಮಾಡುವುದಕ್ಕೆ ಶಕ್ತಿ ಕೊಡುವವನು

ಪೌಲನೆಂಬ ಒಬ್ಬ ಮಹಾ ಪುರುಷನು ಈ ಪವಿತ್ರಾತ್ಮನ ವಿಷಯ ಸಾಕ್ಷಿ ಕೊಡುವವನಾಗಿರುತ್ತಾನೆ. ಆತನು ಪ್ರತಿದಿನವೂ ಆಗೋಚರನಾದ ಆ ಆತ್ಮನ ಸಹಾಯದಿಂದ ನಡೆದುಕೊಳ್ಳುತ್ತಿದ್ದನು. ಅವನು ಒಂದಾನೊಂದು ಸಮಯದಲ್ಲಿ ಈ ರೀತಿಯಾಗಿ ಬರೆಯುತ್ತಾನೆ “ನಾನು ಹೇಳುವದೇನೆಂದರೆ ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ. ಆಗ ನೀವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವದಿಲ್ಲ. ಶರೀರಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಇವೆ, ಯಾವವೆಂದರೆ—ಜಾರತ್ವ ಬಂಡುತನ ನಾಚಿಕೆಗೇಡಿತನ ವಿಗ್ರಹಾರಾಧನೆ ಮಾಟ ಹಗೆತನ ಜಗಳ ಹೊಟ್ಟೆಕಿಚ್ಚು ಸಿಟ್ಟು ಪಕ್ಷಭೇದ ಭಿನ್ನಮತ ಮತ್ಸರ ಕುಡಿಕತನ ದುಂದೌತನ ಇಂಥವುಗಳೇ, ಇವುಗಳ ವಿಷಯದಲ್ಲಿ—ಇಂಥಾ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ. ಆದರೆ ದೇವರಾತ್ಮನಿಂದ ಉಂಟಾಗುವ ಫಲವೇನಂದರೆ—ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ದಮೆ ದಮೆ ಇಂಥವುಗಳೇ, ಇಂಥವುಗಳನ್ನು ಯಾವ ಧರ್ಮಶಾಸ್ತ್ರವೂ ಆಕ್ಷೇಪಿಸುವದಿಲ್ಲ

ಮೇಲ್ಕಂಡ ಶ್ರೀಪೌಲನ ಬೋಧನೆಯನ್ನು ನಾವು ಯೋಚಿಸಿದರೆ ಪವಿತ್ರಾತ್ಮನು ಆದಿ ಕ್ರೈಸ್ತರ ಮೇಲೆಯೂ ಬಂದನೆಂದು ಪವಿತ್ರಾತ್ಮನ ಗೊತ್ತಾಗುತ್ತದೆ. ಅವರ ಆತನನ್ನು ಭಕ್ತಿ ಪ್ರಾರ್ಥನೆಗಳ ಮೂಲಕ ಪಡೆದುಕೊಂಡರು. ಈಗಿನ ಕಾಲದಲ್ಲಿ ನಾವು ಸಹ ಭಕ್ತಿ ಪ್ರಾರ್ಥನೆಗಳ ಮೂಲಕ ಪವಿತ್ರಾತ್ಮನನ್ನು ಪಡೆದು ಕೊಳ್ಳಬೇಕು. ನಾವು ಈ ರೀತಿಯಲ್ಲಿ ಆತನನ್ನು ಹುಡುಕಿದರೆ ಆತನು ಖಂಡಿತವಾಗಿ ನಮ್ಮೊಳಗೆ ಬರುವನು. ವಾಚಕರೇ ನಿಮ್ಮಲ್ಲಿ ಯಾರಾದರೂ ಈ ಸಂದರ್ಭದಲ್ಲಿ ಶ್ರೇಷ್ಠರ ದಿವ್ಯಾತ್ಮ ಪ್ರಾರ್ಥನೆ ಮಾಡುತ್ತೀರಾ? ನಿಮ್ಮಲ್ಲಿರುವ ಪಾಪವನ್ನು ಜಯಿಸಿ ಸತ್ಯವಾದದ್ದನ್ನು ಮಾಡಿ ಮುಕ್ತರಾಗಬೇಕೆಂಬ ಆಶೆಯು ಇದೆಯೋ ? ಅಂಥಾ ಆಶೆಯು ಇರುವ ಪಕ್ಷದಲ್ಲಿ ಅಂಥವರಿಗೆ ನಾವು (ದೇವರು ನಿಮ್ಮ ಪಕ್ಷವಾಗಿರಲಿ) ಆತನನ್ನು ಭಕ್ತಿಯಿಂದ ಪೂಜಿಸಿ. ಆತನು ನಿಮ್ಮ ಸಹಾಯಕ್ಕೆ ಬರುವನು. ಪವಿತ್ರಾತ್ಮನೆಂಬುವನು ನಿಮ್ಮ ಮೇಲೆ ಬರುವಂತೆ ದಿವಾರಾತ್ರಿ ಪ್ರಾರ್ಥಿಸಿರಿ ” ಎಂಬುದಾಗಿ ತಿಳಿಸುವೆವು

ಮೈಸೂರು ಗೆಜೆಟ್ ಸಂಗ್ರಹ.

ಮ।। ಜಾಂಟೀಡ್ ಮರ್ಚೆಸನ್‌ರವರನ್ನು ಕೋಲಾರ್ ಚಿನ್ನದಗಣಿಗಳ ಕಲ್ಕ್ ಆಫೀಸರಾಗಿ ನೇಮಿಸಿದೆ

ಮೈಸೂರು ಡಿಸ್ಟ್ರಿಕ್ಟ್ ಎಕ್ಸೈಸ್ ಅ।। ಕಮಿಷನರ್ ಮ।। ಎಚ್. ಸೀತಾರಾಮಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅವರು ರಜದ ಮೇಲಿರುವಾಗ್ಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಖಜಾನಾ ಅ।। ಕಮಿಷನರ್ ಮ।। ಟಿ. ಕೆ. ಸುಂದರರಾಜಯ್ಯಂಗಾರರು) ಅವರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಗೆಟ್ಟಿ ಸೆಟ್ ಡಿವಿಜನ್ ಛಾರ್ಜಿನ ಅ।। ಕಮಿಷನರ್ ಮ।। ಸಿ. ನಾರಾಯಣರಾಯರು ರಜದಿಂದ ವಾಪಸು ಬಂದು ಏಪ್ರಿಲ್ ೭ ರಲ್ಲಿ ಕೆಲಸದ ಛಾರ್ಜನ್ನು ವಹಿಸಿದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದುಮಾಡಿದೆ

ಬೆಂಗಳೂರು ಡಿಸ್ಟ್ರಿಕ್ಟ್ ಅ।। ಕಮಿಷನರ್ ಮ।। ಟಿ. ತಿಮ್ಮಶೆಟ್ಟಿಯವರಿಗೆ ಒಂದನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನೂ, ಅ।। ಕಮಿಷನರ್ ಮ।। ಟಿ. ರಾಯಲು ಚೆಟ್ಟಿಯವರಿಗೆ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನೂ ಕೊಟ್ಟಿದೆ

ಮಿ॥ ಕೆ. ಎಸ್. ಚಂದ್ರಶೇಖರ ಅಯ್ಯರವರು ಮಿ॥ ಸಿ ಎಸ್. ಬಾಲಸುಂದರಂ ಅಯ್ಯರವರಿಂದ ಜೂನ್ ೧ ರಲ್ಲಿ ಗವರ್ನಮೆಂಟ್ ಜನರಲ್ ರೆವಿನ್ಯೂ ಸೆಕ್ರೆಟರಿ ಕೆಲಸದ ಛಾರ್ಜನ್ನು ವಹಿಸಿಕೊಂಡರು.

ಮಧುಗಿರಿ ಸಬ್ ಡಿವಿಜನ್ ಅ॥ ಕಮಿಷನರ್ ಮಿ॥ ಎಂ ಶ್ರೀನಿವಾಸಮೂರ್ತಿಯವರು ತುಂಕೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನೂ ವಹಿಸಿದ್ದರು

ಭೂಗರ್ಭ ಶೋಧನಾ ಇಲಾಖೆಯ ಅ॥ ಜಿಯಾಲಜಿಸ್ಟ್ ಮಿ॥ ಎಚ್. ಕೆ. ಸ್ಲೇಟರ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಆರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಗಣಿಗಳ ಇನ್ಸ್ಪೆಕ್ಟರ್ ಮಿ॥ ಆರ್ ಬೊಕೆಟ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಹೊಳೆ ನರಸೀಪುರದ ತಾಲ್ಲೂಕ್ ಅಮಲ್ದಾರ್ ಮಿ॥ ಎಸ್ ಕೃಷ್ಣ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಹಾಸನದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಆಫೀಸ್ ಆಕ್ಟಿಂಗ್ ಇಂಗ್ಲಿಷ್ ಹೆಡ್ ಕ್ಲಾರ್ಕ್ ಎಂಟಿ ನರಸಿಂಹಯ್ಯನವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹೊಳೆ ನರಸೀಪುರದ ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ತಾಲ್ಲೂಕು ವರ್ತಮಾನಗಳು.

ತೀರ್ಥಹಳ್ಳಿ.—ಕಳೆದ ತಿಂಗಳು ೨೪ ನೆ ತಾರೀಖಿನದಿನ ಇಲ್ಲಿನ ಗೌರ್ನಮೆಂಟ್ ಸ್ಕೂಲಿನಲ್ಲಿ ಎಂಪೈರ್ ಡೇ ಉತ್ಸವವನ್ನು ಸ್ಥಳಕ್ಕೆ ತಕ್ಕಹಾಗೆ ಬಹಳ ಸಂಭ್ರಮವಾಗಿ ಆಚರಿಸಿದರೆಂದೂ, ಇದರ ಏರ್ಪಾಡಿನ ವಿಷಯ ತಾಲ್ಲೋಕ್ ಅಮಲ್ದಾರರೂ ಸ್ಕೂಲಿನ ಹೆಡ್ ಮಾಸ್ಟರೂ ಸೇರಿ ಮಾಡಿದ ಏರ್ಪಾಡುಗಳು ಆ ದಿನದ ಸಂಭ್ರಮಕ್ಕೆ ತಕ್ಕವುಗಳಾಗಿದ್ದವೆಂದೂ, ಆ ದಿನ ಬೆಳಿಗ್ಗೆ ಇಂಗ್ಲೀಷ್ ಬಾವುಟವನ್ನು ಮೈದಾನಿನಲ್ಲಿ ನಿಲ್ಲಿಸಿ, ಅದಕ್ಕೆ ಬಾಯ್ ಸ್ಕೌಟುಗಳೂ ಪೋಲೀಸಿನವರೂ ಮಿಲಿಟೇರಿ ಕಟ್ಟಳೆ ಪ್ರಕಾರ ಸಲ್ಲಿಸಬೇಕಾದ ಮರ್ಯಾದೆಯನ್ನು ಸಲ್ಲಿಸಿ, ಸುತ್ತಾಟ ಮಾಡಿದರೆಂದೂ, ಅನಂತರ ಸಾಯಂಕಾಲದಲ್ಲಿ ಸರಕಾರಿ ಉದ್ಯೋಗಸ್ಥರೂ ಸಾಹುಕಾರರೂ ಇತರ ದೊಡ್ಡಮನುಷ್ಯರೂ ಸ್ಕೂಲ್ ಕಟ್ಟಡದಲ್ಲಿ ಸೇರಿದನಂತರ ತಾಲ್ಲೂಕ್ ಅಮಲ್ದಾರ್ ಮಿ॥ ನರಸಿಂಹಶಾಸ್ತ್ರಿಗಳು ಅಗ್ರಾಸನವನ್ನು ವಹಿಸಿ ಅವರೂ ಹೆಡ್ ಮಾಸ್ಟರ್ ಮಿ॥ ಸಂಜೀವಯ್ಯನವರೂ ಇನ್ನೊಬ್ಬ ದೊಡ್ಡಮನುಷ್ಯರೂ ಇಂಗ್ಲೀಷ್ ರಾಜ್ಯಭಾರದಲ್ಲಿ ಪ್ರಜೆಗಳಿಗಿರುವ ಸಮಾಧಾನ ಸಂತೋಷ ಸ್ವಾತಂತ್ರ್ಯಗಳೇ ಮೊದಲಾದ ವಿಷಯಗಳನ್ನು ಪ್ರಸ್ತಾಪವಾಗಿ ವಿವರಿಸಿದನಂತರ ಸ್ವಲ್ಪಹೊತ್ತು ಸಂಗೀತವಾಯಿತು. ತರುವಾಯ ಎಲ್ಲರಿಗೆ ತಿಂಡಿಗಳನ್ನು ಹಂಚಿ, ಬಂದಿದ್ದವರಿಗೆಲ್ಲಾ ಅತ್ತರ್ ಪಾನ್ ಸುಪಾರಿ ಕೊಟ್ಟು ಸಭೆಯನ್ನು ಮುಕ್ತಾಯಮಾಡಿದರೆಂದೂ ಕೇಳುತ್ತೇನೆ — ಇದೇ ತಿಂಗಳು ೧ ನೇ ತಾರೀಖು ಇಲ್ಲಿನ ಸಬ್ ರಿಜಿಸ್ಟ್ರಾರ್ ಮಿ॥ ಶ್ರೀನಿವಾಸಮೂರ್ತಿಯವರ ಪತ್ನಿಯು ಹೊಳೆಗೆ ಬಟ್ಟೆ ಒಗೆಯುವದಕ್ಕೆ ಹೋಗಿ ಕಾಲುಜಾರಿ ನೀರಿನಲ್ಲಿ ಬಿದ್ದು ಪ್ರಾಣ ಕಳೆದುಕೊಂಡರು. ಮಿ॥ ಶ್ರೀನಿವಾಸಮೂರ್ತಿಯವರ ದುಃಖವು ವಿವರಿಸಲಶಕ್ಯವಾಗಿದೆ.— ಇದೇ ತಿಂಗಳ ೪ ನೇ ತಾರೀಖಿನಲ್ಲಿ ಶಿವಮೊಗ್ಗ ಡೆಪ್ಯುಟಿ ಕಮಿಷನರ್ ಸಾಹೇಬರು ಒಂದು ಆಗುಂಬಿ ಟೋಲ್ ಗೇಟನ್ನು ಹರಾಜು ಮಾಡಿಸಿದ್ದರಲ್ಲಿ ೬,೩೯೮ ರೂಪಾಯಿಗೆ ನಿಂತಿತೆಂದೂ, ಇದು ಕಳೆದ ವರುಷಕ್ಕಿಂತ ಸುಮಾರು ಇನ್ನೂರು ರೂಪಾಯಿ ಜಾಸ್ತಿ ಎಂದೂ ಕೇಳುತ್ತಾರೆ ಈ ಪ್ರಾಂತ್ಯ ಇನ್ನೂ ಮಳೆ ಬಂದಿಲ್ಲ ಬಿಸಲು ಜಾಸ್ತಿಯಾಗಿದೆ.

ನಂಜನಗೂಡು.—ಹೋದ ಬುಧವಾರ ಶ್ರೀಮನ್ ಮಹಾರಾಜರವರ ಸವಾರಿಯು ನೀಲಗಿರಿಯಿಂದ ಈ ಮಾರ್ಗವಾಗಿ ಮೈಸೂರಿಗೆ ಚಿತ್ತೈಸಿತು. ಇಲ್ಲಿನ ಅಧಿಕಾರಸ್ಥರೂ ಮುನಿಸಿಪಲ್ ಮೆಂಬರುಗಳೂ ಸೇರಿ ರೆಸಿಡೆನ್ಸಿ ಬಂಗಲೆಯ ಮುಂದೆ ಒಂದು ಚಪ್ಪರವನ್ನು ಹಾಕಿ ಅಲಂಕರಿಸಿದ್ದರು ಮತ್ತು ಮಹಾರಾಜರು ಬರುವ ದಾರಿಯ ಉದ್ದಕ್ಕೂ ಪೋಲೀಸಿನವರು ಅಲ್ಲಲ್ಲಿ ಕಾದಿದ್ದು ತೋರಣಗಳಿಂದ ಅಲಂಕರಿಸಿದ್ದರು. ಸುಮಾರು ೨ ಘಂಟೆಯ ಸಮಯದಲ್ಲಿ ಸವಾರಿಯು ಮೋಟಾರ್ ಗಾಡಿಯಲ್ಲಿ ಚಿತ್ತೈಸಲು, ಚಪ್ಪರದ ಹತ್ತಿರ ಕಾದಿದ್ದ ಅಧಿಕಾರಿಗಳು ಮಹಾರಾಜರವರಿಗೆ ಸುಸ್ವಾಗತವನ್ನು ಬಯಸಿದರು ಹಾರ ಹಣ್ಣು ಹಂಪಲುಗಳನ್ನು ನಜರು ಒಪ್ಪಿಸಿದರು. ಮಹಾರಾಜರು ಸಂತೋಷದಿಂದ ಇಲ್ಲಿನ ರೆಸಿಡೆನ್ಸಿ ಬಂಗಲೆಗೆ ಬಿಜಮಾಡಿಸಿ ಫಲಾಹಾರ ಮಾಡಿ, ಕೊಂಚಹೊತ್ತು ವಿಶ್ರಮಿಸಿಕೊಂಡ ಮೇಲೆ ಮೈಸೂರಿಗೆ ಪ್ರಯಾಣ ಬೆಳೆಸಿದರು.—ಇಲ್ಲಿ ಜೋಳದ ಫಸಲು ಬಹಳ ಚೆನ್ನಾಗಿದೆ. ಆದರೆ ೧೫ ದಿನಗಳಿಂದ ಮಳೆಯು ಮಾಯವೇ ಇಲ್ಲ. ದಿನದಿನಕ್ಕೆ ಬಿಸಲು ಜೋರಾಗುತ್ತಾ ಜ್ವರಗಳನ್ನು ಬಾಧಿಸುತ್ತಾ ಇವೆ. ಆದರೆ ಮುಂಗಾರೆಯಲ್ಲಿ ಮಳೆಯು ಚೆನ್ನಾಗಿ ಆದದ್ದರಿಂದ ಕೆರೆ ಕುಂಟೆಗಳಿಗೆ ತಕ್ಕಮಟ್ಟಿಗೆ ನೀರು ಬಂದಿದೆ —ನೀಲಗಿರಿಗೆ ಹೋಗಿದ್ದ ಯೂರೋಪಿಯನ್ನರ ಕುದುರೆಗಳೂ ಗಾಡಿಗಳೂ ದಿನಾಲೂ ಬರುತ್ತಲೂ ರೈಲಿನ ಮೇಲೆ ಬೆಂಗಳೂರು ಮುಂತಾದ ಕಡೆಗಳಿಗೆ ಸಾಗಿ ಹೋಗುತ್ತಲೂ ಇವೆ ಈ ರೈಲ್ವೆ ಸ್ಟೇಷನಿಗೆ ಯಾವಾಗಲೂ ಸಾಮಾನು ಜಾಸ್ತಿ ಬರುತ್ತಲೇ ಇರುವವು. ಹೊಂಗೆ ಎಣ್ಣೆಯ ವ್ಯಾಪಾರ ಈ ಪ್ರಾಂತ್ಯ ಜೋರಾಗಿದೆ. ಆದಕಾರಣ ಸ್ಟೇಷನ್ ಹತ್ತಿರ ಒಂದು ಎಣ್ಣೆಯ ಭಾವಿಯನ್ನು ಕಟ್ಟಿಸಿದಾರೆ ಮತ್ತು ಜನರು ಇಲ್ಲಿಗೆ ವಿಶೇಷ ಬರುತ್ತಾ ಹೋಗುತ್ತಾ ಇದ್ದಾಗ್ಯೂ ಸ್ಟೇಷನ್ನಲ್ಲಿ ಕಳುವು ಮುಂತಾದ್ದು ನಡೆಯುತ್ತಿಲ್ಲ. ಇಲ್ಲಿನ ರೈಲ್ವೆ ಪೋಲಿಸಿನವರು ಉಸ್ತುವಾರಿ ಚೆನ್ನಾಗಿ ನೋಡಿಕೊಳ್ಳುತ್ತಾರೆ. ಪೋಲೀಸ್ ಕಾನ್ಸ್ಟೇಬಲ್ ರು ಯಾವ ಪ್ರಕಾರಗೂ ಸ್ಥಳ ಕೊಡದೆ ಕೆಲಸವನ್ನು ಚೆನ್ನಾಗಿ ಮಾಡುತ್ತಾ, ಮುಖ್ಯವಾಗಿ ಗಲಾಟೆ ಕಾಲಗಳಲ್ಲಿ ಹೆಂಗಸರು ಮಕ್ಕಳನ್ನು ಗಾಡಿಯಲ್ಲಿ ಸ್ಥಳಮಾಡಿ ಕೂರಿಸುತ್ತಾ ಬರುವದು ತುಂಬಾ ಸಂತೋಷಕರವಾಗಿದೆ.—ಈ ಊರಿಂದ ನೀಲಗಿರಿಗೆ ಈ ವರಿಗೂ ಗೌರ್ನಮೆಂಟ್ ಮೇಲ್ ಟಾಂಗಾ ಹೋಗುತ್ತಾ ಇತ್ತು. ಮತ್ತು ಪ್ರಯಾಣಿಕರು ಮೂವತ್ತು ರೂಪಾಯಿ ಕೊಟ್ಟು ನೀಲಗಿರಿಗೆ ಒಂದು ಗಾಡಿಯನ್ನು ಪಡೆಯುತ್ತಲೂ ಇದ್ದರು. ಇನ್ನು ಮೇಲೆ ಹೀಗೆಯೇ ನಡೆಯುವುದೋ ಅಥವಾ ವಜಾಮಾಡಿಬಿಡುತ್ತಾರೆಯೋ ಗೊತ್ತಿಲ್ಲ.

ಚನ್ನಪಟ್ಟಣ.—ಮೂರು ನಾಲಗಳಿಂದೀಚೆಗೆ ಈ ಪ್ರಾಂತ್ಯ ಎರಡು ಮೂರು ಹದ ಮಳೆಯಾಗಿ ಕೆರೆ ಕುಂಟೆಗಳಿಗೆ ತಕ್ಕಮಟ್ಟಿಗೂ ನೀರು ಶೇಖರವಾದದ್ದರಿಂದ ದನಕರಗಳಿಗೂ, ಜನರಿಗೂ ನೀರಿನ ವಿಷಯದ ಕ್ಲಿಷ್ಟ ಕಷ್ಟವು ತಪ್ಪಿ ಸೌಖ್ಯವಾಯಿತು. ಎತ್ತ ನೋಡಿದರೂ ರೈತರು ತಂತಮ್ಮ ಹೊಲಗದ್ದೆಗಳನ್ನು ಉಳುವದರಲ್ಲಿದ್ದಾರೆ. ಈ ಪ್ರಾಂತ್ಯ ರೋಗದಿಂದ ಸಾಯುತ್ತಿದ್ದ ಜಾನುವಾರುಗಳ ಸಂಖ್ಯೆ ಸ್ವಲ್ಪ ಕಡಮೆಯಾಗುತ್ತಾ ಬಂದಿದೆ. ಎಲ್ಲಿ ನೋಡಿದರೂ ಈ ವರುಷ ದೊಡ್ಡವರೂ ಸಣ್ಣವರೂ ಕಣ್ಣು ನೋವಿನಿಂದ ಕಷ್ಟಪಡುತ್ತಲಿರುವರು. ಈಚೀಚೆಗೆ ಇಲ್ಲಿನ ಆಸ್ಪತ್ರೆಗೆ ಬರುವ ಹಲವು ರೋಗಿಗಳ ಸಂಖ್ಯೆಯು ವೃದ್ಧಿಯಾಗಿದೆ. ಕೆಲವು ರೋಗಿಗಳು ಅಪಾಯಕಾಲದಲ್ಲಿ ಸಹಾಯ ದೊರೆಯದಾಗಿ, ಈ ಸ್ಥಳದಲ್ಲಿ ಸರ್ಕಾರದವರು ಒಬ್ಬ ಬುದ್ಧಿವಂತರಾದ ಕರುಣಾಳುಗಳಾದ ಮೆಡಿಕಲ್ ಆಫೀಸರನ್ನು ಇರಿಸಿದ್ದರೆ ಎಷ್ಟೋ ಪ್ರಯೋಜನವಾಗುತ್ತಿತ್ತಲ್ಲಾ ಎಂಬದಾಗಿ ಹಂಬಲಿಸುವವರಾಗಿರುವರು.—ಕಳೆದ ಏಪ್ರಿಲ್ ೨೩ ರಲ್ಲಿ ಇಲ್ಲಿನ ಚಮ್ಮಾರದ ಅಂಗಡಿ ಕಾಕಾ ಮಿಯಾ ಸಾಬರು ತಮ್ಮ ಕೈಕೆಳಗಿನ ಒಬ್ಬ ಮಾದಿಗನನ್ನು ಕೊಲೆಮಾಡಿದರೆಂಬ ಅಪರಾಧ ಹೊರಿಸಲ್ಪಟ್ಟು ಸಬ್ ಡಿವಿಜನ್ ಆಫೀಸರಲ್ಲಿ ವಿಚಾರಣೆ ನಡೆಯುತ್ತಿತ್ತು. ಈಚೆಗೆ ಮೃತಪಟ್ಟವನ ಸಂಬಂಧೀಕರ ಅನುಮಾನದಿಂದ ರೋಗ ಕ್ಯಾಗೋ ಅಪರಾಧಿಗಳು ಖುಲಾಸ್ ಮಾಡಲ್ಪಟ್ಟಿರುವದಾಗಿ ಜನರು ಆಡಿಕೊಳ್ಳುವರು —ಒಂದು ವಾರದ ಕೆಳಗೆ ಇಲ್ಲಿನ ಸಮೀಪ ಪೇಟೆಯಲ್ಲಿ ಪೋಲೀಸ್ ಸ್ಟೇಷನಿಗೆ ಅರ್ಧ ಫರ್ಲಾಂಗ್ ದೂರದಲ್ಲಿ ವೆಂಕಟನರಸಣ್ಣನವರ ಮಗ ನರಸಿಂಹಯ್ಯನ ಜವಳಿ ಅಂಗಡಿಗೆ ಕಳ್ಳರು ಕನ್ನಹಾಕಲು ಪ್ರಯತ್ನಿಸಿ, ಮನೆಯ ಛಾವಣಿಯಲ್ಲಿ ರಂಧ್ರಮಾಡಿ, ನಗದು ರೂ ೯೮ ನ್ನು, ಸುಮಾರು ೧೫೦ ರೂಪಾಯಿನ ಜವಳಿಯನ್ನು ಅಪಹರಿಸಿಕೊಂಡು ಹೋಗಿದಾರೆ ಪೋಲೀಸಿನವರು ಪತ್ತೆ ತರದೂದಿನಲ್ಲಿದಾರೆ. ಜನರು ಈಚೆಗೆ ಈ ತಾಲ್ಲೂಕಿನಲ್ಲಿ ನಡೆಯುತ್ತಿರುವ ಅಧರ್ಮಗಳನ್ನು ನೋಡಿ ಹಿಂದಿನ ಮಹನೀಯರಾಗಿದ್ದ ಅಧಿಕಾರಿಗಳನ್ನು ಸ್ಮರಿಸುತ್ತಿರುವರು —ಇಲ್ಲಿಗೆ ಸಮೀಪವಾದ ದೊಡ್ಡ ಮಳೂರು ಬಳಿ ಕಣ್ವ ಎಂಬದೊಂದು ಹೊಳೆಯು ಇರುವದು ಅದರಲ್ಲಿ ಒಂದು ವಿಸ್ತಾರವಾದ ಭಾವಿ ತೆಗೆದು ಬಹುಕಾಲದಿಂದಲೂ ಊರಿನ ಜನರೆಲ್ಲಾ ಆ ಭಾವಿಯ ಜಲವನ್ನೇ ಬಳಕೆಯಲ್ಲಿಟ್ಟುಕೊಂಡಿದ್ದರೆಂತಲೂ. ಈಗ ಈ ಭಾವಿಯನ್ನು ಬ್ರಾಹ್ಮಣರ ಹೊರತು ಉಳಿದ ಜನರು ಮುಟ್ಟಕೂಡದೆಂದು ಕಟ್ಟುಮಾಡಿ, ಊರಿನವರೆಲ್ಲಾ ಸಾರಿಸಿದಾರೆಂತಲೂ ತಿಳಿಯಬರುತ್ತೆ —ಕಳೆದ ವಾರ ಈ ಮಾರ್ಗದಲ್ಲಿ ಅನೇಕ ಮೋಟಾರ್ ಗಾಡಿಗಳು ಸಾಯಂಕಾಲದ ಆರೇಳು ಘಂಟೆಯ ನಡುವೆ ಬಹು ವೇಗವಾಗಿ ಹೋದವು. ಒಂದು ಗಾಡಿಯು ಕೀಲು ತಪ್ಪಿ ಮಧ್ಯಮಾರ್ಗದಲ್ಲಿ ನಿಂತುಹೋಯಿತು. ಮತ್ತೊಂದು ಗಾಡಿಯ ವೇಗದಿಂದ ಪೋಲೀಸ್ ಪೇಟೆಯಲ್ಲಿ ಒಂದು ಮಗುವಿಗೆ ಪ್ರಾಣಾಪತ್ತೇ ಸಂಭವಿಸಿತು.

ಕನ್ನಡ ಗ್ರಂಥಕರ್ತರ ೨ನೆಯ ಕೂಟವು.

ಧಾರವಾಡದಲ್ಲಿ ಕಳೆದ ವರ್ಷದ ಮೇ ತಿಂಗಳ ಕಡೆಯಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದವರು ಕನ್ನಡ ಗ್ರಂಥಕಾರರ ಮೊದಲನೆಯ ಸಭೆಯನ್ನು ನಡಿಸಿದರು. ಅದರಂತೆ ಈ ವರ್ಷವೂ ಕಳೆದ ಮೇ ತಿಂಗಳ ೩೦ ನೇ ತಾ॥ ಶನಿವಾರ ಎರಡನೆಯ ಸಭೆಯು ಆ ಪಟ್ಟಣದಲ್ಲಿ ಜರುಗಿತು. ಕನ್ನಡ ದೇಶಗಳ ಅನೇಕ ಪಂಡಿತರು ಹೋಗಿದ್ದರು ಮೊದಲು ಈ ಕೂಟದ ಸ್ವಾಗತ (ರಿಸೆಪ್ಷನ್) ಕಮಿಟಿಯ ಅಧ್ಯಕ್ಷರಾದ ಮಿ॥ ರೊಡ್ಡ, ಪ್ರಿನ್ಸಿಪಲ್, ಟ್ರೇನಿಂಗ್ ಕಾಲೇಜ್, ಇವರು ಬರೆದು ತಂದಿದ್ದ ಭಾಷಣವನ್ನು ಓದಿ. ಸಭಿಕರಿಗೆ ಸುಸ್ವಾಗತವನ್ನು ಬಯಸಿದರು ಮೈಸೂರು ಸಂಸ್ಥಾನದಿಂದ ಮಿ॥ ಕೆ. ಲಕ್ಷ್ಮೀನಾರಣಪ್ಪ. ಬಿ ಎ ಯವರೂ, ಅವರ ಸಹಾಯಕರಾಗಿ ಪಂಡಿತ ತಿಮ್ಮಪ್ಪಯ್ಯಶಾಸ್ತ್ರಿಗಳೂ ಹೋಗಿದ್ದರು ಸಭಿಕರ ಅಭಿಪ್ರಾಯವನ್ನು ಅನುಮೋದಿಸಿ, ಮಿ॥ ಕೆ ಲಕ್ಷ್ಮೀನಾರಣಪ್ಪನವರು ಆ ಕೂಟದ ಅಧ್ಯಕ್ಷಸ್ಥಾನವನ್ನು ಅಂಗೀಕರಿಸಿ, ಕನ್ನಡಭಾಷಾಭಿವೃದ್ಧಿಯ ವಿಚಾರವನ್ನು ಕುರಿತು ಬಹು ಸ್ವಾರಸ್ಯವಾದ ಭಾಷಣವನ್ನು ಮಾಡಿದರು ಅದರ ಉತ್ತರಾರ್ಧಭಾಗವನ್ನು ವಾಚಕರ ತಿಳಿವಳಿಕೆಯ ಬಗ್ಗೆ ತೆಗೆದು ಇಲ್ಲಿ ಪ್ರಕಟಿಸುವೆವು

" ಅನ್ಯದೇಶೀಯರ ಪಾಲನೆಯಿಂದ ದೇಶಭಾಷೆಗೆ ಬಾಧೆಯುಂಟೆಂಬುದು ಸ್ವಲ್ಪ ಮಟ್ಟಿಗೆ ನಿಜವಿದ್ದರೂ ಅದು ಅಷ್ಟು ಪ್ರಬಲವಾದ ದೋಷವಲ್ಲ. ಈ ಅನಿವಾರ್ಯವಾದ ದೋಷವು ಭರತವರ್ಷದಲ್ಲಿ ಈಗ ಪ್ರಚಲಿತವಾಗಿರುವ ಬೇರೆ ಭಾಷೆಗಳಿಗೂ ಉಂಟು ಅಂದ ಮೇಲೆ ಗುಜರಾಥಿ, ಬೆಂಗಾಳಿ, ಮರಾಠೀ ಭಾಷೆಗಳು ಕುಗ್ಗುವದಕ್ಕೆ ಬದಲು ಉನ್ನತಾವಸ್ಥೆಯನ್ನು ಪಡೆಯುತ್ತಿರುವುದನ್ನು ನಾವೆಲ್ಲರೂ ನೋಡುವುದಿಲ್ಲವೇ ? ಇದಕ್ಕೆಲ್ಲ ಆಯಾ ಭಾಷೆಗಳಲ್ಲಿ ಅಭಿಮಾನವುಳ್ಳವರು ಮಾಡುವ ಪ್ರಯತ್ನಗಳೇ ಕಾರಣಗಳು. ಸರಿಯಾಗಿ ಪರೀಕ್ಷಿಸಿದರೆ ನಮ್ಮನ್ನಾಳುವವರು ನಮಗಿಂತ ನಾಗರೀಕರೂ ಸುಧಾರಿಸಿದವರೂ ಆಗಿದ್ದು ಅವರ ಭಾಷೆಯು ಗ್ರಂಥಭಂಡಾರವು ಬಹು ದೊಡ್ಡದಾಗಿರುತ್ತದೆ ಅಂದ ಮೇಲೆ ಆ ಗ್ರಂಥಭಂಡಾರದ ಸಹಾಯವು ನಮಗೆ ಆಗೇ ಆಗುವದು. ಅವರಲ್ಲಿರುವ ಗ್ರಂಥಗಳನ್ನು ಕನ್ನಡದಲ್ಲಿ ಪರಿವರ್ತನೆ ಮಾಡಿಸಿ ಹೊಸ ಪುಸ್ತಕಗಳನ್ನು ಬರೆಸಿದರೆ ಸ್ವಲ್ಪ ದಿವಸಗಳಲ್ಲೇ ಸಾಮಾನ್ಯ ಜನರಲ್ಲಿ ವಿವಿಧ ವಿಷಯಜ್ಞಾನವು ಹಬ್ಬುವಂತೆ ಮಾಡಬಹುದು. ಮರಾಠಿ, ಗುಜರಾಥಿ, ಬಂಗಾಳೀ ಭಾಷೆಗಳಿಂದಲೂ ಗ್ರಂಥಗಳನ್ನು ಭಾಷಾಂತರಿಸತಕ್ಕದ್ದು. ನೂತನ ಅಭಿಪ್ರಾಯಗಳನ್ನು ಕನ್ನಡದಲ್ಲಿ ತಿಳಿಸುವದಕ್ಕೆ ಬಹು ಪ್ರಯಾಸವಾಗಬಹುದು. ಈ ಕಾರ್ಯದಲ್ಲಿ ಸಂಸ್ಕೃತ ಭಾಷೆಯಿಂದ ನಮಗೆ ಬಹಳ ಸಹಾಯವಾಗುವದು. ಇದಲ್ಲದೆ ಮರಾಠಿ, ಗುಜರಾಥಿ, ಬಂಗಾಳೀ ಜನರು ಹೊಸ ಹೊಸ ಶಾಸ್ತ್ರೀಯ ವಿಷಯಗಳ ಬಗ್ಗೆ ಯಾವ ಯಾವ ಶಬ್ದಗಳನ್ನು ಕಲ್ಪಿಸಿಕೊಂಡಿರುವರೋ ಅವುಗಳ ಸಹಾಯವನ್ನು ಸಹ ಪಡೆಯಬಹುದು. ಇನ್ನೂ ಕನ್ನಡದಲ್ಲಿರುವ ಅವಾಂತರ ಭೇದವನ್ನು ತಪ್ಪಿಸಿ ವ್ಯವಸ್ಥಿತ ಭಾಷೆಯನ್ನು ಏಕರೂಪವಾಗಿ ಮಾಡಬೇಕಾದರೆ ಅನೇಕ ಗ್ರಂಥಸಮ್ಮೇಲನದಂಥ ಸಭೆಗಳನ್ನೂ, ಉಪಸಭೆಗಳನ್ನೂ ಸ್ಥಾಪಿಸಿ, ಒಂದೇ ಉದ್ದೇಶ ಒಂದೇ ಮಾರ್ಗದಲ್ಲಿ ಪ್ರವರ್ತಿಸಿ ಒತ್ತಟ್ಟಿಗೆ ಕೂಡಿ ಪ್ರಯತ್ನಮಾಡಬೇಕು. ಕೆಲವು ಮಾರ್ಗದರ್ಶಕ ಗ್ರಂಥಗಳನ್ನು ಪ್ರಚಾರಕ್ಕೆ ಬರುವಂತೆ ಮಾಡಬೇಕು. ಅಂಥ ಪುಸ್ತಕಗಳನ್ನು ಶಾಲೆಗಳಲ್ಲಿ ಇಡಬೇಕು ; ಅಂದರೆ, ಅವು ಪ್ರಚಾರದಲ್ಲಿ ಒಂದು ಗ್ರಾಂಥಿಕ ಭಾಷೆಯು ಒಂದಾಗುವದು. ಗ್ರಾಂಥಿಕ ಭಾಷೆಯು ಒಂದಾಗದೆ ಯಾವದೂ ಸಾಧ್ಯವಾಗಲರಿಯದು ಆದರೆ ಇಂಥ ಗ್ರಂಥಗಳ ಭಾಷಾ ಸರಣಿಯು ಯಾವ ಪ್ರಕಾರದ್ದಿರಬೇಕೆಂಬದು ನಿಶ್ಚಯಿಸುವದು ಸ್ವಲ್ಪ ಕಷ್ಟ. ಈ ಕಾರ್ಯದಲ್ಲಿ ಸಹ ಹಿಂದಿನ ಗ್ರಂಥಗಳು ಮಾರ್ಗದರ್ಶಿಗಳೆಂದು ಹೇಳಿ, ಅನೇಕ ಗ್ರಂಥಕಾರರನ್ನು ವಿಮರ್ಶಿಸಿ, ಕಡೆಗೆ ಜೈಮಿನಿಕಾರನು ಬರೆದಿರುವ ಭಾಷೆಯನ್ನು ಈಗಿನ ಕಾಲದಲ್ಲಿ ಅನುಸರಿಸುವದು ಒಳ್ಳೇದೆಂದು ಅಭಿಪ್ರಾಯಪಟ್ಟರು. ಕನ್ನಡದಲ್ಲಿ ' ಬಾರದಿದ್ದ ಮಾತು ಭಾರತದಲ್ಲಿ ಕಲಿ ' ಎಂಬ ಗಾದೆಯಂತೆ ಅವನ ಮಾತು ಬಹು ಚಮತ್ಕಾರಿಕವಾಗಿರುವದು. ನಾವು ಸಾಮಾನ್ಯವಾಗಿ ನುಡಿವ ಮಾತನ್ನೇ ಅವನು ಬಹು ಚತುರತೆಯಿಂದ ಆಡಬಲ್ಲವನಾಗಿದ್ದನೆಂದು ಅವನ ಗ್ರಂಥದಿಂದಲೇ ತಿಳಿಯಬರುವದು ಆದುದರಿಂದ ಅತಿ ಪ್ರೌಢವೂ ಅತಿ ನಿಂದ್ಯವೂ ಅಲ್ಲದಿರುವ ಪ್ರಯೋಗಗಳನ್ನೊಳಗೊಂಡಿರುವ ಜೈಮಿನಿ ಭಾರತದ ಭಾಷೆಯಂಥ ಮಿಶ್ರಭಾಷೆಯನ್ನೇ ಅನುಸರಿಸುವದು ಸದ್ಯಕ್ಕೆ ಉತ್ತಮವೆಂದು ತೋರುವುದು. ಇದರಲ್ಲಿಯೂ ಕೆಲವು ಪ್ರಯೋಗಗಳನ್ನು ಇದ್ದಂತೆಯೇ ಪರಿಗ್ರಹಿಸುವದು ಕಷ್ಟವಾಗುವದು. ಅವುಗಳನ್ನು ಎಷ್ಟರಮಟ್ಟಿಗೆ ಪರಿಗ್ರಹಿಸಬಹುದೋ, ಈಗ ವ್ಯವಹಾರದಲ್ಲಿರುವ ಪ್ರಯೋಗಗಳಲ್ಲಿ ಯಾವುಗಳನ್ನು ಅನಿವಾರ್ಯಸಂದರ್ಭಗಳಿಂದ ಇಟ್ಟುಕೊಳ್ಳಬೇಕಾಗುವುದೋ, ಅನ್ಯದೇಶ್ಯ ಶಬ್ದಗಳನ್ನು ಕನ್ನಡದಲ್ಲಿ ಹೇಗೆ ಉಪಯೋಗಿಸಿಕೊಳ್ಳಬೇಕೋ, ಇವುಗಳನ್ನೆಲ್ಲ ಕನ್ನಡನಾಡಿನ ಎಲ್ಲ ಕಡೆಯ ಪಂಡಿತರೂ ಸೇರಿ ನಿಶ್ಚಯಿಸಬೇಕಾಗಿದೆ. ಹಿಂದಿನ ಕವಿಗಳ ಸಂಪೂರ್ಣ ಚರಿತ್ರೆಯೊಂದನ್ನು ಸಿದ್ಧಪಡಿಸಬೇಕು. ಪ್ರಾಚೀನ ಗ್ರಂಥ ವಿಮರ್ಶೆಯಾಗುವದು ಅವಶ್ಯವಿರುತ್ತದೆ ಮುಂದೆ ಅವುಗಳ ಮುದ್ರಣೆಯು ಅಷ್ಟೇ ಅವಶ್ಯವಾದದ್ದು. ಈ ಪ್ರಕಾರ ನೂತನ ಗ್ರಂಥಗಳಿಗೂ ಪ್ರೋತ್ಸಾಹಗಳನ್ನು ಈಗ ಕಲ್ಪಿಸದಿದ್ದರೆ ಕನ್ನಡಿಗರಲ್ಲಿ ಕಾಣುವ ಔದಾಸೀನ್ಯವು ತೊಲಗಲಾರದು. ಪ್ರಭು ಪೋಷಣೆ ತಪ್ಪಿದಂದಿನಿಂದ ಪ್ರೋತ್ಸಾಹವು ಕಡಮೆಯಾಯಿತು ಇದರಿಂದ ನೂತನ ಗ್ರಂಥರಚನೆಯು ಮೂಲೆಗೆ ಬಿತ್ತು. ಆದರೆ ಈಗ ಮಿ॥ ಭಾಭಾ ಸಾಹೇಬರ ಸಹಾಯದಿಂದ ಮೈಸೂರಲ್ಲಿ ಅನೇಕ ವರ್ತಮಾನಪತ್ರಗಳೂ, ಮಾಸಿಕ ಪುಸ್ತಕಗಳೂ ಶೋಧಕ ಸಂಸ್ಥೆಗಳೂ ಆಗಿರುವವು. ಪಂಡಿತ ಪರೀಕ್ಷೆಯನ್ನು ಮಾಡುವರು. ಇವೆಲ್ಲ ರಾಜಪೋಷಣೆಯಿಂದ ಉಂಟಾದ ಸುಫಲಗಳಾಗಿರುತ್ತವೆ. ಮುಂಬೈ ಮತ್ತು ಮದ್ರಾಸ್ ಸರ್ಕಾರದವರೂ ಭಾಷಾಭಿವೃದ್ಧಿಗೆ ಬೇಕಾದ ಸಹಾಯ ಮಾಡುತ್ತಿರುವರು ಮದ್ರಾಸ್ ಸರ್ವಕಲಾಶಾಲೆಯವರು ಭಾಷಾಭಿವೃದ್ಧಿಗೆ ಮಾಡಿರುವ ಏರ್ಪಾಡುಗಳು ಮುಂದೆ ಅಷ್ಟು ಫಲದಾಯಕವಾಗುವವೋ ಇಲ್ಲವೋ ಎಂಬ ಸಂಶಯ ಉಂಟಾಗಿರುವುದು ಈ ವಿಷಯವನ್ನು ಐಚ್ಛಿಕ ಮಾಡಿರುವುದರಿಂದ ಮೊದಲಿನಂತೆ ಜನಗಳು ಈ ಭಾಷಾಸೇವೆಯನ್ನು ಮಾಡುವಷ್ಟು ಭಾಷಾಭಿಮಾನವನ್ನು ಪಡೆಯುವರೋ ಇಲ್ಲವೋ ಎಂದು ಶಂಕೆಯುಂಟಾಗುವದು. ಆದರೆ ಈಗ ಅವರು ಮಾಡಿರುವ ಕ್ರಮದಿಂದ ವ್ಯವಹಾರದಲ್ಲಿರುವ ಭಾಷೆಗೆ ವಿಶೇಷ ಪ್ರಾಶಸ್ತ್ಯವುಂಟಾಗಬಹುದೆಂದು ತೋರುವದು ಇದು ಸ್ತುತ್ಯರ್ಹವೇ ಸರಿ. ಕರ್ನಾಟಕ ಭಾಷೆಯು ಇನ್ನಿಗೆ ಮೇಲೆ ಹೇಳಿದ ರಾಜಕೀಯ ಸಹಾಯವಿಲ್ಲದೆ ಮುತ್ತಾಗದಿರುವುದೆಂದು ಆಲೋಚಿಸಿದರೆ ಅನೇಕ ಮಾಸ, ಪಕ್ಷ, ವಾರ ಪತ್ರಿಕಾ ಕರ್ತರುಗಳು ರಾಜಕೀಯ ವಿಷಯಗಳನ್ನೂ, ಸಾಮಾಜಿಕ ವಿಷಯಗಳನ್ನೂ, ಮತ ಧರ್ಮಗಳನ್ನೂ, ನಾನಾ ಕಲಾ ವಿಷಯಗಳನ್ನು ಲೋಕೋಪಕಾರ ಬುದ್ಧಿಯಿಂದ ಪ್ರೇರಿತರಾಗಿ ಜನಗಳಿಗೆ ಪ್ರಪಂಚಸ್ವರೂಪವನ್ನು ತಿಳಿಯಪಡಿಸುತ್ತಿರುವರು ಇವರುಗಳು ಇಂಥ ಸಮ್ಮೇಲನಗಳಿಂದ ನಿರ್ಣೀತವಾದ ಭಾಷೆಯನ್ನೇ ಅನುಸರಿಸಿ ಬರೆಯುತ್ತ ಬಂದರೆ ಭಾಷೆಯು ಶೀಘ್ರದಲ್ಲಿಯೇ ಉತ್ತಮ ಸ್ಥಿತಿಯನ್ನೈದುವುದರಲ್ಲಿ ಸಂದೇಹವಿಲ್ಲ. ಭಾಷೆಯನ್ನು ಸರಿಗೊಳಿಸಿ ಏಕರೂಪತೆಯನ್ನುಂಟುಮಾಡಿ ಅಭಿವೃದ್ಧಿಪಡಿಸುವ ಮಹಾಕಾರ್ಯವು ಬಹುಕಾಲ ಅನೇಕರು ಪ್ರಯತ್ನಪಟ್ಟು ನೆರವೇರಿಸತಕ್ಕದ್ದಾಗಿರುವುದರಿಂದ ಈ ಮಹಾಕಾರ್ಯಕ್ಕೆ ಧೈರ್ಯದಿಂದ ಪ್ರವರ್ತಿಸುವ ಈ ವಿದ್ಯಾವರ್ಧಕ ಸಂಘದಂಥಾ ಸಂಘದವರೇ ಉತ್ತರ ಕರ್ನಾಟಕ ಭಾಗಗಳಲ್ಲೂ ಅಲ್ಲಲ್ಲಿ ಇಂತಹ ಗ್ರಂಥಕರ್ತರ ಸಮ್ಮೇಲನವು ನಡೆಯುವಂತೆಯೂ ಅವರೂ ತಾವೂ ಸೇರಿ ಈಗಿನ ಗ್ರಂಥಕರ್ತರುಗಳು ಮಾರ್ಗದರ್ಶಿಗಳಾದ ಗ್ರಂಥಗಳನ್ನು ನಿರ್ಮಾಣಮಾಡಿಸಿ, ಅವುಗಳನ್ನು ಕರ್ನಾಟಕ ಭಾಷೆಯನ್ನೊಳಗೊಂಡಿರುವ ಸರ್ಕಾರದವರೆಲ್ಲರೂ ತಮ್ಮ ತಮ್ಮ ಶಾಲೆಗಳಲ್ಲಿ ಪ್ರವಚನಮಾಡಿಸುವಂತೆ ಮಾಡುತ್ತ ಬಂದರೆ ಕೆಲವು ಕಾಲದಲ್ಲಿ ಕನ್ನಡಕ್ಕೆ ಬಂದಿರುವ ಈಗಿನ ದುರವಸ್ಥೆಯು ತಪ್ಪಿ ಅದಕ್ಕೆ ಉತ್ಕೃಷ್ಟಸ್ಥಿತಿಯುಂಟಾಗಿ ಕರ್ನಾಟಕರಿಗೆ ಪರಸ್ಪರ ಪ್ರೀತಿಯೂ ಮಮತೆಯೂ ಹೆಚ್ಚಿ ಕನ್ನಡನಾಡು ಏಳಿಗೆಗೆ ಬರುವದೆಂದು ತೋರುತ್ತದೆ. ಈ ವಿಷಯದಲ್ಲಿ ಇತರ ಕರ್ನಾಟಕರು ವರ್ತಿಸುವದಕ್ಕೆ ಮುಂಚೆ ಈ ಧಾರವಾಡ ಸಂಘದವರು ಉದಾರ ಮನಸ್ಸಿನಿಂದ ಮುಂದುವರಿದು ಪ್ರಯತ್ನಪಡುತ್ತಿರುವುದು ಅತ್ಯಂತ ಶ್ಲಾಘನೀಯವಾಗಿದೆ ಇದಕ್ಕೆ ಕನ್ನಡ ನಾಡಿನವರಾದ ನಾವೆಲ್ಲರೂ ಎಷ್ಟು ಕೃತಜ್ಞರಾದರೂ ತೀರದು. "

ಸುಶಿಕ್ಷಿತ ಸ್ತ್ರೀಯರು ಪೆರೂನಾವನ್ನು ಹೊಗಳುತ್ತಾರೆ

ಪೆರೂನಾ ಪ್ರಖ್ಯಾತಿಹೊಂದಿರುವುದು ಅದರ ಗುಣದಿಂದ, ಬರೀ ಖ್ಯಾತಿನಿಂದಲ್ಲವು.

'31-11]

ಚಿಕ್ಕವರೂ ದೊಡ್ಡವರೂ ಒಂದೇ ರೀತಿ ಪೆರೂನಾವನ್ನು ಹೊಗಳುತ್ತಾರೆ. ಹೆಣ್ಣುಮಕ್ಕಳೂ ಹೆಂಗಸರೂ ಪೆರೂನಾವಿನ ಗುಣವನ್ನು ಕಂಡುಕೊಂಡಿದ್ದಾರೆ. ಹೆಣ್ಣುಮಕ್ಕಳೂ ಹೆಂಗಸರೂ ತಮ್ಮ ತಮ್ಮ ಸ್ತ್ರೀಜಾತಿಗುಣ್ಯವಾದ ಕಾಯಿಲೆಗಳಲ್ಲಿ ಬಿದ್ದು, ಪೆರೂನಾ ಸೇವನೆಯಿಂದ ಸೌಖ್ಯಹೊಂದಿರುತ್ತಾರೆ.

ಲಕ್ಷಣವಾಗಿರುವ ಹೆಣ್ಣುಮಕ್ಕಳೂ, ಸುಂದರಿಯರಾದ ಸ್ತ್ರೀಯರೂ, ಬಲಹೀನೆಯರಾದ ಹೆಣ್ಣುಮಕ್ಕಳೂ ರೋಗಪೀಡಿತರಾದ ತಾಯಂದಿರೂ ಎಲ್ಲಾ ಪ್ರದೇಶಗಳಲ್ಲೂ ಪೆರೂನಾ ಸೇವಿಸಿ, ತಮ್ಮ ಸ್ವಭಾವಕ್ಕೆ ಅನುಗುಣವಾದ ಕಾಯಿಲೆಗಳನ್ನೆಲ್ಲಾ ನಿವಾರಣೆಮಾಡಿಕೊಂಡು, ಅದರ ಗುಣವನ್ನು ತಿಳಿಸುತ್ತಾರೆ. ಮುದಿ ಅಜ್ಜಿಯು ಮೊದಲುಗೊಂಡು ಎಳೇ ಹೆಣ್ಣುಮಗುವಿನ ತನಕ ಅಬಲೆಯರೆಲ್ಲಾ ಅನೇಕವಿಧಗಳಲ್ಲಿ ಪೆರೂನಾವಿಗೆ ಕೃತಜ್ಞರಾಗಿರುವರು.

ಇದೆಲ್ಲಾ ಯಥಾರ್ಥವಾಗಿರುತ್ತದೆ ಗುಣಹೊಂದಿದ ಹೆಂಗಸು ಅದನ್ನು ಹೇಳುವುದಕ್ಕೆ ಹಿಂತೆಗೆಯುತ್ತಿಲ್ಲ. ಅವಳ ಮಾತು ಕೇಳಿ ಇತರ ಹೆಂಗಸರು ನಡೆಯುತ್ತಾರೆ. ಈ ರೀತಿ ಪೆರೂನಾವಿನ ಹೆಸರುವಾಸಿಯು ಮನೆಯಿಂದ ಮನೆಗೆ ಹಬ್ಬುತ್ತದೆ. ಹೀಗೆ ಲಕ್ಷಾಂತರ ಮನೆಗಳವರು ಪೆರೂನಾವು ಸ್ತ್ರೀಜಾತಿಗೆ ಕೊಡತಕ್ಕ ನಂಬಿಕೆ ಅರ್ಹವಾದಂಥಾ ಏಕಮಾತ್ರ ಔಷಧವೆಂದು ಒಪ್ಪಿಕೊಳ್ಳುತ್ತಾರೆ.

ಅನೇಕ ಸಣ್ಣ ಸಣ್ಣ ಕಾಯಿಲೆಗಳಿಗೆ ಪೆರೂನಾವು ಒಳ್ಳೇ ಔಷಧವಾಗಿರುತ್ತದೆ. ಶೀತದಿಂದ ಹುಟ್ಟುವ ಅನೇಕ ಕೆಟ್ಟ ಕಾಯಿಲೆಗಳನ್ನು ಹೆಂಗಸರಿಗೆ ಸಾಮಾನ್ಯವಾಗಿ ಉಂಟಾಗುವ ಶರೀರದ ಅಕ್ರಮಗಳನ್ನು ಪೆರೂನಾವು ಕಾಪಾಡುವಾದ ಬಲ್ಲುದೆಂದು ನಂಬತಕ್ಕದ್ದಾಗಿದೆ. ಶೈತ್ಯದಿಂದ ಹುಟ್ಟುವ ಸನ್ನಿಪಾತ ರೋಗಗಳನ್ನು ಪೆರೂನಾದಲ್ಲಿರುವ ಗುಣಾತಿಶಯ ವಾಸಿಮಾಡಿಕೊಳ್ಳಬಹುದು.

ದೇಹದೊಳಗಿನ ಶೀತವು.

ಮಿಸೆಸ್ ಫ್ರೆಡ್ ವೆಬ್ಬರ್, ೧೯ ಪಲ್ಲಿಂಗ್ಟನ್ ಬೀದಿ, ಬ್ರಾಂಟ್‌ಫರ್ಡ್, ಒಂಟ್, ಎರಡನೇ ವೈಸ್ ಪ್ರೆಸಿಡೆಂಟ್, ಸ್ತ್ರೀಯರ ಕ್ರೈಸ್ತ ಸಂಘ, ಈಕೆ ಬರೆಯುತ್ತಾರೆ:

"ಈ ಸಲ ನಾನು ಕಾಯಿಲೆ ಬಿದ್ದಾಗ ನನಗೆ ಬಹಳ ಕಠಿಣವಾದ ಶೀತ ಹಿಡಿಯಿತು. ಅದರಿಂದ ನನ್ನ ದೇಹದ ಅಂಗಗಳು ರೋಗಿಸಲ್ಪಟ್ಟವು. ಬಹಳ ಕಠಿಣವಾದ ನೋವಾಗುತ್ತಿತ್ತು. ದಿನೇ ದಿನೇ ನನ್ನ ಸ್ಥಿತಿಯು ಕೆಡುತ್ತಾ ಬಂದು ವಾಸಿಯಾಗದೇ ಇರುವಂತೆ ತೋರಿಯಿತು.

"ಪೆರೂನಾದಿಂದ ಅಷ್ಟು ಚುರುಕಾಗಿ ರೋಗಗಳು ಗುಣವಾಗಿರುವುದನ್ನು ನಾನು ಕೇಳಿ, ಅದನ್ನು ಎರಡು ತಿಂಗಳ ವರೆಗೆ ಸೇವಿಸಿ, ಅದರಿಂದ ನನಗೆ ಎಷ್ಟು ಮಟ್ಟಿಗೆ ಒಳ್ಳೇದಾಗುತ್ತದೆಂದು ನೋಡತಕ್ಕದ್ದೆಂದು ನಿಶ್ಚಯಿಸಿಕೊಂಡೆನು.

"ಒಂದು ತಿಂಗಳು ಸೇವಿಸುತ್ತಿರುವಾಗಲೇ ನನಗೆ ಬಹಳ ವಾಸಿಯಾಯಿತು. ಎರಡನೇ ತಿಂಗಳ ಅಂತ್ಯದಲ್ಲಿ ನಾನು ಕ್ಷೇಮ ಹೊಂದಿದೆನು. ಅದೇ ರೀತಿ ನಾನು ಶಕ್ತಿಪುಷ್ಟಿ ಹೊಂದಿದೆನು, ಸಂಪೂರ್ಣ ಆರೋಗ್ಯವನ್ನು ಹೊಂದಿದೆನು. ಅದನ್ನೇ ಸೇವಿಸ ಬೇಕೆಂದು ನನ್ನ ಅನೇಕ ಸ್ನೇಹಿತೆಯರಿಗೆ ಹೇಳಿದೇನೆ, ಎಲ್ಲರೂ ಅದರ ಪ್ರಯೋಜನವನ್ನು ನೋಡಿ ಸಂತೋಷಪಡುತ್ತಾರೆ."

ತಲೆ, ಹೊಟ್ಟೆ, ಶ್ವಾಸಕೋಶಗಳು.

ಮಿಸ್ ಒಲಿವೈನ್ ಪೆರ್ರಾಲ್ಟ್, ೭೩೧ ಡೇವಿಡ್ಸನ್ ಬೀದಿ, ಸೇಂಟ್ ಲಿಯೊನಾರ್ಡ್ ಸೆಂಟ್ ಪಾಲ್, ಮಾಂಟ್ರಿಯಲ್, ಕ್ಯಾನ್, ಈಕೆ ಬರೆಯುವುದು:

"ನಿಮ್ಮ ಪ್ರಸಿದ್ಧವಾದ ಪೆರೂನಾವನ್ನು ಹೊಗಳಿ ಸಂತೋಷದಿಂದ ನಿಮಗೆ ಈ ಕಾಗದ ಬರೆಯುತ್ತೇನೆ. ನಾನು ಬೇರೆ ಔಷಧಗಳನ್ನು ಪರೀಕ್ಷೆಮಾಡಿದೆನು. ಆದರೆ ನನ್ನ ಶೀತವು ಸ್ವಲ್ಪವೂ ವಾಸಿಯಾಗಲಿಲ್ಲ. ನನಗೆ ಕ್ಷಯ ಹಿಡಿಯುವುದೋ ಎಂದು ಭಯವುಂಟಾಗಿತ್ತು.

"ನನ್ನ ತಲೆಯು ಮತ್ತು ಹೊಟ್ಟೆಯ ಸ್ಥಿತಿಯು ನನಗೆ ಚಿಂತೆಯನ್ನುಂಟುಮಾಡಿತ್ತು. ಇದ್ದಕ್ಕಿದ್ದ ಹಾಗೇ ಶ್ವಾಸ ಬಿಡಲಾಗದೆ ಇದ್ದುದರಿಂದ ನನಗೆ ಶೀತವಾಗಿ ಮೂರು ತಿಂಗಳವರೆಗೂ ರಾತ್ರಿ ಕೆಮ್ಮುತ್ತಿದ್ದೆನು.

"ನನ್ನ ಸಹೋದರನಿಗೆ ಪೆರೂನಾದಿಂದ ವಾಸಿಯಾಗಿದ್ದುದರಿಂದ ಅವನು ಅದನ್ನು ಸೇವಿಸೆಂದು ನನಗೆ ಹೇಳಿದನು. ಅದರಂತೆ ನಾನು ಕ್ರಮವಾಗಿ ಸೇವಿಸಿ, ದಿನೇ ದಿನೇ ಗುಣಹೊಂದುತ್ತಾ ಬಂದೆನು. ಈಗ ನಾನು ಮೂರು ಬಾಟ್ಲು ಔಷಧ ಸೇವಿಸಿ ಮುಗಿಯಿತು. ನಾನು ಸಂಪೂರ್ಣವಾಗಿ ಗುಣಹೊಂದಿರುತ್ತೇನೆ."

ಕಾಯಿಲೆಯಾದ ಹೆಂಗಸರಿಗೆ.

"ಪೆರೂನಾದಿಂದ ನನಗೆ ಆಗಿರುವ ಪ್ರಯೋಜನವನ್ನು ತಿಳಿಸುತ್ತೇನೆ. ನನ್ನ ಕಷ್ಟವನ್ನು ತಿಳಿಸಿದೇನೆ. ಸ್ವಲ್ಪ ಹೆಚ್ಚುಕಡಮೆ ನಾನು ಆರು ವರ್ಷಗಳ ಕಾಲ ನರಳಿದೆನು. ಕೆಲವು ಡಾಕ್ಟರುಗಳಿಂದ ಪರೀಕ್ಷೆ ಮಾಡಿಸಿ, ಅವರ ಔಷಧಗಳನ್ನು ಸೇವಿಸಿದೆನು. ಅದರಿಂದ ನನಗೆ ಸ್ವಲ್ಪಮಾತ್ರ ಉಪಶಮನವಾಯಿತಲ್ಲದೆ ಆ ಔಷಧಗಳು ನನ್ನ ರೋಗವನ್ನು ವಾಸಿಮಾಡಲಿಲ್ಲ. ನಾನು ಬಹಳ ಬಾಧೆಯನ್ನನುಭವಿಸಿದವಳು. ನನ್ನ ಔಷಧಕ್ಕಾಗಿ ನನ್ನ ಗಂಡನು ಬಹಳ ಹಣವನ್ನು ಖರ್ಚು ಮಾಡಿರುತ್ತಾನೆ. ನಿರಾಶೆಯಾಗಿ ಕಡೆಯಲ್ಲಿ ಪೆರೂನಾವನ್ನು ತೆಗೆದುಕೊಂಡು ಪರೀಕ್ಷೆಮಾಡೋಣವೆಂದು ನೆನಸಿ, ಸೇವಿಸಲಾರಂಭಿಸಿದೆನು. ನಿಮ್ಮ ಸಲಹೆಯ ಪ್ರಕಾರ ಒಂದು ಬಾಟ್ಲು ಔಷಧ ಮುಗಿಯುವಷ್ಟರೊಳಗೆ ನನಗೆ ಸ್ವಲ್ಪ ಉಪಶಮನವಾಯಿತು. ಆಗಿನಿಂದ ನನಗೆ ನೋವು ಇಲ್ಲವೇ ಇಲ್ಲ. ಈಚೆಗೂ ಪೆರೂನಾ ಸೇವಿಸಿದ್ದೇನೆ. ಈಗ ನಮ್ಮ ಮನೆಗೆ ಡಾಕ್ಟರು ಬರುವುದು ಅಪರೂಪ. ಪೆರೂನಾದಿಂದ ನಮ್ಮ ಸಂಸಾರಕ್ಕೆ ಎಷ್ಟು ಉಪಕಾರವಾಗಿದೆಯೋ ವಿವರಿಸಿದರೆ ಒಂದು ಪುಸ್ತಕವಷ್ಟಾದೀತು. ನಾನು ತಮ್ಮನ್ನು ಅತ್ಯಂತ ವಿಶೇಷವಾಗಿ ಕೃತಜ್ಞತಾಭಾವದಿಂದ ವಂದಿಸುತ್ತೇನೆ. ಅನೇಕ ವೇಳೆ ನಿಮ್ಮ ಔಷಧವನ್ನು ಇತರರಿಗೆ ತೋರಿಸಿರುತ್ತೇನೆ. ಅವರೆಲ್ಲಾ ಸೇವಿಸಿ ಸಂತೋಷಪಡುತ್ತಾರೆ. ಕಾಯಿಲೆಯಾಗಿದ್ದೇನೆಂದು ಯಾವ ಹೆಂಗಸಾದರೂ ನನಗೆ ಬರೆದರೆ, ಅಥವಾ ನನ್ನ ಬಳಿಗೆ ಬಂದು ಕೇಳಿದರೆ ಅವರಿಗೆಲ್ಲಾ ಪೆರೂನಾವಿನ ಯೋಗ್ಯತೆಯನ್ನು ವಿವರಿಸಿ ಅದನ್ನು ಸೇವಿಸುವಂತೆ ಶಿಫಾರಸು ಮಾಡುತ್ತೇನೆ."—ಎಂಬದಾಗಿ ಮಿಸೆಸ್ ಮಾರ್ಥಾ ಫ್ರಿಡ್ರಿಕ್, ಸೆಂಟ್ರಲ್ ಪಾರ್ಕ್, ಲಾಂಗ್ ದ್ವೀಪ, ನ್ಯೂಯಾರ್ಕ್ ಸಿಟಿ, ಯು ಎಸ್ ಎ ಎಂಬೀ ಹೆಂಗಸು ಬರೆದಿರುತ್ತಾಳೆ.

ಒಬ್ಬ ಹೆಂಗಸಿನ ಅನುಭವವು

"ಕಳೆ ಹೊಟ್ಟೆಯ ನಿಶ್ಶಕ್ತಿಯಿಂದ ನಾನು ತುಂಬಾ ಬಾಧೆಪಟ್ಟೆನು. ಅದರಿಂದ ನನ್ನ ಶಕ್ತಿಯೆಲ್ಲಾ ಕುಂದಿ, ನನ್ನ ಬುದ್ಧಿಯು ಕೆಟ್ಟು ಹೋದೀತೆಂದು ಹೆದರಿಕೊಂಡೆನು. ನನ್ನ ಬೆನ್ನು ಬುಡ ಎಡಗಾಲಿನ ತನಕ ಬಹಳವಾಗಿ ಬಾಧೆಪಡಿಸುತ್ತಿತ್ತು. ಈ ಬಾಧೆಯನ್ನು ಅನುಭವಿಸುವುದಕ್ಕಿಂತ ಸಾಯುವುದೇ ಉತ್ತಮವೆನ್ನುವಂತಿತ್ತು. ಪೆರೂನಾವು ಈ ನನ್ನ ಕಾಯಿಲೆಯನ್ನು ವಾಸಿಮಾಡಿತು. ಆದ್ದರಿಂದ ಅದು ಉತ್ಕೃಷ್ಟವಾದದ್ದೆಂದು ನಾನು ಹೇಳುವದೇನೂ ಅತಿಶಯವಲ್ಲ. ಈ ನನ್ನ ರೋಗವು ನಿವಾರಣೆಯಾಗಿ ಈಗ ಎರಡು ವರುಷ ತುಂಬುವುದರಲ್ಲಿದೆ. ಮತ್ತೆ ಆ ರೋಗದ ಸೆಲೆಯನ್ನೇ ಕಾಣೆನು."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೨೨—೫—೧೯೦೮ ರಿಂದ ೨೮—೫—೧೯೦೮ ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	5	5
ಬೆಂಗಳೂರು ಡಿಸ್ಟ್ರಿಕ್ಟು	0	1	7	1
ಮೈಸೂರು ,,	19	20	71	48
ಕೋಲಾರ್ ,,	*	*	*	*
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	7	3
ಹಾಸನ ,,	1	0	120	88
ಚಿತ್ರದುರ್ಗ ,,	0	0	3	1
ಕಡೂರ್ ,,	0	0	0	0
ಶಿವಮೊಗ್ಗ ,,	*	*	*	*
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	20	21	213	146

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಜ್ಯೇಷ್ಠ ಶುದ್ಧ ದ್ವಾದಶಿ ಗುರುವಾರದಿಂದ ಜ್ಯೇಷ್ಠ ಬಹುಳ ತದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಜೂನ್.

ತಾ.	ವಾರ	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ	ಸೌರ ಪ್ರಯೂಕ ದಿನ
11	ಗುರು *	ದ್ವಾದಶಿ	11-18	ಸ್ವಾತಿ	33-20	30
12	ಶುಕ್ರ ,,	ತ್ರಯೋ	39-56	ವಿ	31-4	31
13	ಶನಿವಾ ‡	ಚತುರ್ದಶಿ	37-27	ಅ	33-24	32
14	ರವಿವಾ ,,	ಪೌರ್ಣಮಿ	33-56	ಜ್ಯೇ	31-50	1
15	ಚಂದ್ರ	ಪಾಡ್ಯ	29-30	ಮೂಲ	29-19	2
16	ಕುಜ ¶	ಬಿದಿಗೆ	24-24	ಪೂಷಾ	26-11	3
17	ಬುಧ †	ತದಿಗೆ	18-36	ಉಷಾ	22-24	4

* ಶ್ರೀಮಹಾಲಕ್ಷ್ಮ್ಯಾದ್ವಾದಶಿ ,, ಪ್ರದೋಷ, ಸಾವಿತ್ರೀವ್ರತಂ, ‡ ಶ್ರೀನರಸಿಂಹಜಯಂತಿ ,, ಷಡಶೀತಿ ಪುಣ್ಯಕಾಲ, ಚತುರ್ದಶಿ ಪೂರ್ಣಿಮಾ . ವಟಸಾವಿತ್ರಿ ¶ ತಿಥಿದ್ವಯಂ − ಸಂಕಷ್ಟ ಚತುರ್ಥಿ

ಪೇಟೆ ಧಾರಣೆ.

ದಿನಸಿ.		ಮೈಸೂರು.	ಬೆಂಗಳೂರು
ಸಣ್ಣೇ ಅಕ್ಕಿ ಪಲ್ಲ ೧ಕ್ಕೆ	ರೂ.	೧೪-೮-೦	೧೭-೦-೦
ಕೆಂಬುತಿ ಅಕ್ಕಿ ಅವಲ್		೧೫-೦-೦	೧೬-೦-೦
,, ದಪ್ಪ		೧೩-೮-೦	೧೫-೦-೦
ಜಾಮ್ರಾಕ್ ಅಕ್ಕಿ	.	೧೩-೮-೦	೧೭-೦-೦
ಸಣ್ಣಕ್ಕಿ ಅವಲ್	.	೧೭-೦-೦	೧೮-೦-೦
,, ದಪ್ಪ	.	೧೫-೮-೦	೧೬-೦-೦
ಕೊಗರೀ ಬೇಳೆ ಪಲ್ಲ ೧ಕ್ಕೆ	.	೧೬-೮-೦	೧೩-೮-೦
,, ಮಧ್ಯ		೧೫-೦-೦	೧೩-೦-೦
ಕೈದ ರಾಗಿ ಪಲ್ಲ ೧ಕ್ಕೆ	.	೬-೧೨-೦	೭-೦-೦
ಹಾರಾಗಿ	..	೬-೪-೦	೬-೧೨-೦
ಹುರಳಿ	.	೭-೦-೦	೯-೦-೦
ಹಲಸಂದೆ ಪಲ್ಲ ೧ಕ್ಕೆ		೧೧-೮-೦	೧೧-೦-೦
ಬಿಳೀ ಅವರೆ	.	೮-೦-೦	೯-೦-೦
ಹೆಸರು	.	೧೧-೮-೦	೧೨-೮-೦
ಉದ್ದು	.	೧೨-೮-೦	೧೨-೧೨-೦
ಕಡಲೆ		೧೩-೪-೦	೧೪-೦-೦
ಎಳ್ಳು ಸೇ ೧೦೦ ಕ್ಕೆ	.	೨೩-೮-೦	೨೬-೦-೦
ಹುರುಳಿ	.	೬-೮-೦	೭-೪-೦
ಹರಳು ೧೦೦ ಸೇರಿಗೆ	.	೧೧-೦-೦	೧೩-೦-೦
ಸೀಗೇಕಾಯಿ ಮಣ ೧ಕ್ಕೆ	.	೧-೮-೦	೧-೬-೦
ನೆಲಗಡಲೆಕಾಯಿ	..	೩-೪-೦	೩-೦-೦
,, ದಪ್ಪ	.	೨-೪-೦	೨-೧೨-೦
ಬೆಲ್ಲ ದೊಡ್ಡ ಅಚ್ಚು	..	೫-೦-೦	೨-೧೨-೦
ಒಳ್ಳೆ ಸಕ್ಕರೆ ಮಣ ೧ಕ್ಕೆ	..	೬-೦-೦	೬-೪-೦
ಜರಿಸಕ್ಕರೆ ,,	..	೫-೮-೦	೪-೦-೦
ಕೊತ್ತುಂಬರಿ ಪಲ್ಲ ೧ಕ್ಕೆ	..	೬-೮-೦	೬-೦-೦
ಉಪ್ಪು ,,	..	೪-೧೨-೦	೪-೧೨-೦
ಹುಣಸೇ ಹಣ್ಣು	.	೧-೪-೦	೧-೦-೦
,, ಹಳೇದು	..	೧-೦	೧-೪-೦
ತುಪ್ಪ ಮಣ ೧ಕ್ಕೆ	..	೧೪-೮-೦	೧೫-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	..	೪-೧೫-೦	೪-೦-೦
ತೆಂಗಿನಕಾಯಿ ೧೦೦ಕ್ಕೆ	..	೬-೮-೦	೬-೮-೦
ಅಡಿಕೇಕಾಯಿ ಮಣ ೧ಕ್ಕೆ	..	೧-೧-೦	೧-೪-೦
ಅಂಬೊಡೆಯ ಕಾಯಿ ಮಣ ೧ಕ್ಕೆ	..	೦-೧೨-೦	೦-೧೪-೦
ಚಿನ್ನ (ಪೌನ್) ಕೆಂಪು	..	೧೫-೬-೦	೧೫-೬-೦
,, ಪಸಿಮೆ	..	೧೫-೧೧-೦	೧೫-೧೩-೦
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	೨೪-೮-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೬೫-೦-೦	೬೮-೦-೦

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore. 11/6/1908.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೮ ನೇ ಇಸವಿ ಜೂನ್ ತಾರೀಖು ೧೮ ನೇ ಗುರುವಾರ. ಸಂಚಿಕೆ ೩

AMRUTANJAN DEPOT, 16 OAK-LANE, BOMBAY. [17-17]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ :—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮ್ ಮತ್ತು ಗಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರಹ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ಕ್ಕೆ ಕಿಮ್ಮತ್ತು ೦-೮-೦. ಪೋಸ್ಟು ಖರ್ಚು ೦-೪-೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಖಜ್ಜಿ ವಗೈರೆ ನಾಶವಾಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦-೩-೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ ಚೂರ್ಣಕ್ಕೆ ಡಬ್ಬಿ ೧ಕ್ಕೆ.	೧—೦	ಕಾಮಿನೀಗುಟಿಕೆ—ಹೆಂಗಸರ ಹೊಟ್ಟೆನೋವಿಗೆ	೧—೦—೦
ನವ್ಯಗುಟಿಕೆ—ಧಾತುಪುಷ್ಟಿ ರಕ್ತಶುದ್ಧಿ	೧—೦—೦	ನವೀನದ ಮಿಶ್ರಣ—ದ್ರವೆ ೧ ಪಕ್ಕೆ	೧—೦—೦
ಜ್ವರಹರ—ಜ್ವರಕ್ಕೆ ಬಾಟ್ಲಿ ೧ಕ್ಕೆ	೧—೦—೦	ಕಫಹ—ಕಫ, ಕೆಮ್ಮು ಕ್ಷಯ, ಶ್ವಾಸ	೧—೪—೦
ಬಾಲ ಕಾಪ ದ ಮದ್ದು	೧—೦—೦	ಸುವಾಸ ತೈಲ್ಯ—ಮೈರಿಗೆ	೦—೮—೦
ದಂತ ಚೂರ್ಣ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಕರ್ಣಬಿಂದು—ಕಿವಿನೋವಿಗೆ	೦—೪—೦	ಉಪಯೋಗ ಎಂಟು ಬಾಟ್ಲಿ ೧ಕ್ಕೆ	೦—೮—೦
ಬಸ್ತಿ ಮಾತ್ರೆ	೦—೩—೦	ಮಧುಮೇಹ ಚೂರ್ಣ ,,	೧—೦—೦
ದಂತಮಂಜನ—ಹಲ್ಲುಗಳಿಗೆ	—೬—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
ಕೇಶವರ್ಧಿನೀ ತೈಲ್ಯ—ಕೂದಲಿಗೆ	೦—೬—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
ಬಾಲಬೋ ಮಾತ್ರೆ—ಬಾಲರಿಗೆ	೦—೮—೦	ರೋಗಹಾರಿ	೦—೮—೦

ವಿಳಾಸ—ವಿಲಿಯಂ ಮತ್ತು ಕಂಪನಿ. ೧೬ ಓಕ್‌ಲೇನು ಫೋರ್ಟು, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ," ಮುಂಬಯಿ.

ಈಗಲೇ ಸೀಮೆಯಿಂದ ಬಂದಿದೆ.

117-31

೫೦೦ ಗಾರ್ಸೆ ಬೋಟಿ ಕೋಲಿಯುದ ಸುಪೀರಿಯರ್ ಉಲ್‌ನ ದಿನ ಮಾತ್ರ, ಇದೆ—ಬಾಟ, ಕಮ್ಮಿ ಕ್ರಯ

೧ ಟೋಪಿಯನ್ನಾಗಲು ಉಲ್ಲನ್ ದಾರಕ್ಕೆ	೦—೪—೦
೧೦ ಟೋಪಿಯನ್ನಾಗಲು ಬಂಡಲ್‌ಗೆ ೧ಕ್ಕೆ	೩—೮—೦
ಕೋಕ್ಸ ಸೂಜಿ ೧ಕ್ಕೆ	೦—೦—೬
೩೦ ಇಂಚಿನ ಬರ್ಪಿಯರ್ ೧ಕ್ಕೆ	೦—೯—೦

ಒಂದಾಣೆ ಸ್ಟಾಂಪು ಕಳುಹಿಸಿ ೨೦ ಪೋಸ್ಟ್‌ಕಾರ್ಡ ಪಡೆ ನಂಬ ೧ನೇ ಗಾರ್ಸೆ ಟೋಪಿ ಪರ್ಜ ೧ಕ್ಕೆ ೧೩—೦—

ವಿಳಾಸ—

ಪ್ರೊಪ್ರೈಟರ್, ದಿ ಉಲ್ ಮಾರ್ಟ್, ಮಂಗಳೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) .. .. .. ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಟಪಾಲ್ ಸೇರಿ ರೂ ೧—೧೪—೦

,, ,, ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬಾಪತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-18

೧. ಶೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಕಾವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚುಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಗೂ ದಾರಿಕೊಡದೆ, ನೀರು ಮಲಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ದೃಷ್ಟಿ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಕೊಡ್ತೇವೆ. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಪಿ. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ಕಾರ್ಡ ಸೈಜು ೪|×೩|.

ಫೋಟೋ ತೆಗೆಯುವ

ಫೋಟೋಕ್ಯಾಮೆರಾ.

84 44

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ. ಆದರೆ ಇದರ ಖರೆ ಕಿಮ್ಮತ್ತು ೩ ರುಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ :—

ಛೋಟಾಲಾಲ ಛಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಜ್ವರಹರಿ.

44-7



ಇದು ಸಾಧಾರಣ ಜ್ವರ, ಚಳಿಜ್ವರ, ಮೈಲಿಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಪಾರುಪತ್ತೇ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯಮಾಡಿ ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ರೂ, ೧—೮ ರೂ., ರೂ. ೨—೧೨ ಆ.; ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಬಂದಿಯವರ್ಗ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪಟ್ಟಿ ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗೋಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಸ್ಥರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಸುಲಭ ಖರೀದಿ! ನೋಡಿ!!

16-7

ಡಾಸ್ಕೋಪು ಸಿಸ್ಟಂ ಲೀವರ್ ವಾಚು ಸರಪಣಿ ಸಹಿತ ವಿ. ಪಿ. ಪಿ. ಚಾರ್ಜ್ ಸೇರಿ ೩-೮-೦. ಯಾರೂ ಇದುವರೆಗೂ ಈ ಖರೀದಿಗೆ ಕೊಟ್ಟಿಲ್ಲ. ಪರಿಷ್ಕಾರಕ್ಕೆ ಒಂದನ್ನು ತರಿಸಿ ನೋಡಿರಿ. ನಮ್ಮ ವಿಳಾಸ—ಟಿ. ಸಿ. ಕನ್ನಯ್ಯಶೆಟ್ಟಿ ಅಂಡ್ ಕೋ, ಜನರಲ್ ಮರ್ಚೆಂಟ್, ನಂಬರು ೭೦, ಸಿಂಗಣ್ಣನ ಬೀದಿ, ಸಾಹುಕಾರ್ ಪೇಟೆ, ಮದ್ರಾಸು.

ಪರೀಕ್ಷೆಮಾಡದೆ ಇರಬೇಡಿ.

ನಮ್ಮ ಪರಮಾತ್ಯುತ್ತಮವಾದ ಕಾಫಿ ಪೊಡಿ, ಪುಡಿಯನ್ನು ಪ್ರತಿ ಒಬ್ಬರೂ ಒಂದು ಡಬ್ಬಾ ತರಿಸಬೇಕು.

40-2

ಈ ಪುಡಿಯನ್ನು ಒಂದು ಸಾರಿ ಉಪಯೋಗಿಸಿದ ಕೂಡಲೆ ಬಹಳಾ ಆಶ್ಚರ್ಯವನ್ನುಂಟುಮಾಡುತ್ತೆ. ಪಟ್ಟಣ ನಮ್ಮಲ್ಲಿ ತರಿಸಿಕೊಂಡವರ ಯಾಪಾಗಳೂ ಇದರ ಸೇವನೆ ಮಾಡಬೇಕೆಂಬ ಇಚ್ಛೆಯನ್ನುಂಟುಮಾಡುತ್ತೆ. ಇದರಲ್ಲಿ ಸ್ವಲ್ಪವನ್ನು ತೆಗೆದುಕೊಂಡು ಹಾಲಿನಲ್ಲಿ ಹಾಕಿ ಚೆನ್ನಾಗಿ ಕಾಯಿಸಿದ ಮೇಲೆ ಒಂದು ಬಟ್ಟಲು ಅಥವಾ ಒಂದು ಲೋಟದಲ್ಲಿ ಹಾಕಿಟ್ಟದ್ದರೆ ನೀರಿಗಿಂತಲೂ ಕಾಲು ಗಟ್ಟಿಗೆ ಆಗುತ್ತೆ. ಇದರಂತೆ ಇದನ್ನು ಊಟ ಮಾಡುವವರ ದೇಹವು ಎಷ್ಟೇ ಬಲಹೀನವಾಗಿದ್ದರೂ ಭೀಮಸೇನನಂತೆ ಬಲಯುತರನ್ನಾಗಿ ಮಾಡಿ ಶರೀರದ ಕಾಂತಿಯನ್ನು ಹೆಚ್ಚಿಸುವದು. ಇದನ್ನು ಪ್ರತಿ ವಾಚಕರೂ ಪರೀಕ್ಷಿಸಬೇಕಾದ ಸಮಯವು. ಈ ಸಮಯ ತಪ್ಪಿದರೆ ಮುಂದೆ ದೊರೆಯಲಾರದು. ಇದರ ಕ್ರಯವು ಬಹು ಸ್ವಲ್ಪವು. ಒಂದು ಡಬ್ಬಿ ರೂ ೦-೮-೦. ವಿ. ಪಿ. ಪಿ. ಚಾರ್ಜ್ ೦-೩-೦. ವಿಳಾಸ:—ಟಿ. ಸಿ. ಕನ್ನಯ್ಯಶೆಟ್ಟಿ ಅಂಡ್ ಕೋ, ಜನರಲ್ ಮರ್ಚೆಂಟ್, ನಂಬರು ೭೦, ಸಿಂಗಣ್ಣನ ಬೀದಿ, ಸಾಹುಕಾರ್‌ಪೇಟೆ, ಮದ್ರಾಸು.

ನಿನಗೆ ಮೈ ಸ್ವಸ್ಥವಿಲ್ಲವೋ?

ನನಗೆ ಮೈ ಸ್ವಸ್ಥವಿಲ್ಲವೆಂದು ಹೇಳಿದಾಗ—ಎಂದರೆ ನನಗೆ ಯಾವ ನೋವೇ ಉಂಟಾಗಿಲ್ಲ—"ನನಗೆ ನಿಶ್ಚಕ್ತಿ ಒಂದು ಸಲವಾದರೂ ಕಾಲವ್ಯತ್ಯಸ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ. ಹಾಗೆ ಆಗಿದ್ದರೆ ಡೋನ್ಸರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ದಿನಕ್ಕೆ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನವೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನನಗೆ ಮೈ



(೧೨ ಆಣೆ ಬುಡ್ಡಿ ಪರಿಮಾಣ.)

ಸ್ವಸ್ಥವಾಗುವದು. ಮಲಬದ್ಧವೆಂಬುವದು ಅರ್ಥವೇನೆಂದರೆ ಮಲಾಶಯವಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹುಕಾಲ ಉಳಿಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೆಲ್ಲಕ್ಕೆ ಮೂಲಕಾರಣವಾಗಿರುವದು. ಮಲಬದ್ಧದಿಂದ ರೋಗಗಳೇಳ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅರುಚಿ; ಎದೆಯು ಕಲ್ಲಿನಂತಾಗುವದು; ತಲೆತಿರುಗುವುದು; ತಲೆನೋವು; ಹೊಟ್ಟೆ ಉಬ್ಬರ; ಹೊಟ್ಟೆಯಲ್ಲಿ ಗಾಳಿ ಹೆಚ್ಚು ನೋವು; ಚರ್ಮದ ವ್ಯಾಧಿಗಳು; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಬಿಡುವದು.

ಡೋನ್ಸರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನು ಕಷ್ಟವಿಲ್ಲದೆ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗದ ನೈಲ್ಯ ಸುಖವೂ ಹಿತವಾಗಿಯೂ ಇಟ್ಟು, ಕಪ್ಪನೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವವು. [93-42]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ, ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು. ಅಥವಾ, ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ.—ಇವರಲ್ಲಿ ದೊರೆಯುವುವು.

ಮಹಾ ಬಾಧಾನಿವಾರಿಣೀಯು.

48-1

ಇದನ್ನು ಹೋಲುವದು ಪ್ರಪಂಚದಲ್ಲೇ ಇಲ್ಲವು.

ಜ್ವಿನ್‌ಮೆಂಟ್‌ವುವರ ಲೇಪನವು ಸಕಲ ವಿಧವಾದ ಬಾಧೆಗಳನ್ನು ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಇತರ ವ್ಯಾಪಾರಿಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳಿರುತ್ತಾರೆ. ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ಸಕಲ ನೋವು, ವಾತನೋವು, ಕಳಕ, ಗಂಟುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂಧುಕಟ್ಟುಗಳ ನೋವು, ಚೇಳುಕಡಿದ ನೋವು, ಹಲ್ಲುನೋವು. ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಜ್ವಿನ್‌ಮೆಂಟ್‌ರವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಣಗಿಸಿಬಿಡುತ್ತದೆ. ಇದಕ್ಕಿಂತ ಪರಿಣಾಮಕಾರಿಯಾದ ಇದಕ್ಕೆ ಸಮಾನವಾದ ತೈಲವು ಬೇರೊಂದಿಲ್ಲವೆಂದು ಹೇಳಬಹುದು.

ಕ್ರಯ ಬೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಅವರ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜ್ ವಸೂಲಾಗುವುದಿಲ್ಲ ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಳಿ ಮಾರುತ್ತಾರೆ. ಮುಖ್ಯ ಏಜಂಟರ ವಿಳಾಸ—

'ಎಸ್. ಮಿಟರ್',

೩೩, ವೇರಮಲೆಪೆಲ್ಲಿ ಬೀದಿ, ಪೇಪೆರಿ, ಮದರಾಸ್.

CHAMBERLAIN'S COUGH REMEDY.

ಚೇಂಬರ್ಲೇನವರು ಕಂಡು ಹಿಡಿದ ಕೆಮ್ಮಿನ ಔಷಧವು.

1-25



ಶೀತದ ಕೆಮ್ಮು, ಗಂಟಲು ಗೊರಗು, ಪುಡು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ಸಹ ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವೆಲ್ಲಾ ಈ ಔಷಧದಿಂದ ಬೇಗನೆ ಗುಣವಾಗುವುವು.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮುಂದೆ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಜೊತೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟಿರುವುದನ್ನು ಶ್ಲೇಷ್ಮ ಬೀಳುವುದನ್ನೂ ಖಚಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೋಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಸರಿ ಪಡಿಸುತ್ತದೆ. ಅಪಾಯಕರವಾದ ಕೆಮ್ಮಿನ ಚಿಹ್ನವನ್ನು ನಿಲ್ಲಿಸಿಬಿಡುತ್ತದೆ ಎನ್ನುವ ಖಂಡಿತವಾದ ಅಭಿಪ್ರಾಯವೇ ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ಅಮೆರಿಕಾದೇಶದಲ್ಲಿ ತಯಾರು

ಕೈಯಿಂದಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣಸೀಸೆಗೆ ೧ ರೂಪಾಯಿ. ದೊಡ್ಡಸೀಸೆಗೆ ೨ ರೂಪಾಯಿ.

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ ತಕ್ಕ ಕ್ರಮದಲ್ಲಿರುವುದು ಉತ್ತಮ.

SCOTT'S EMULSION. 33-12

(ಸ್ಕಾಟ್ಸ್ ಇಮಲ್ ಷನ್)

ಚಳಿಗಾಲದಲ್ಲಿ ಬರತಕ್ಕ ಕ್ಷಯ, ಮೊಣಕಾಲುನೋವು, ಮತ್ತು ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ.

ಈ ಔಷಧವು ಬಲಹೀನರನ್ನು ದುರ್ಬಲರನ್ನು ಬೇಗನೆ ಆಗಲಿ ಹಿಡಿಯುತ್ತದೆ.

ಅಸ್ವಸ್ಥತೆಯನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಿಗಳಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧ ವನ್ನೇ ಕೊಂಡುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯು ಬೋಳಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಒಬ್ಬರು ತರಿಸಿರಿ.

2-25

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾವದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಬಿಡ್ಡಾಗಿ ಮಾಡ್ತೇವೆ, ನಂತರ ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕದ್ದಾಗಿಯೇ ಅರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚೆನ್ನಾಗಿ ಸೇರಿದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಅನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ. ೩ ಆ.; ೧ ರೂ. ೭ ಆ.

ರೇಷ್ಮೆ ಜರಿಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.

ಜಾರದ ಟೋಪಿಗಳು ೧ ರೂ. ೦೩ ಆ; ೧ ರೂ. ೮ ಆ.; ೧ ರೂ. ೩ ಆ.

ಉಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೩ ಆ.

ಕಾಸುಗಳ ಟೋಪಿ, ಸೂಜಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿಕೊಂಡವರಿಗೆ ಕೊಡುತ್ತ ಕಳುಹಿಸುತ್ತೇವೆ.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟರ್."

ವ್ಯವಹಾರನಿರ್ಣಯ—ಈ ಪುಸ್ತಕಗಳು ಹಳೇ ಹಿಂದೂ ವ್ಯಾವಹಾರಿಕ ಶಾಸ್ತ್ರಗಳು, ಎಲ್ ಮಾನ್ಯುಯಲ್ ಇವುಗಳ ಸಂಗ್ರಹವು, ೧೨ ದಷ್ಟು ಮೇಲು, ಶಿಕ್ಷ ಅರ್ಜಿ ಇವುಗಳ ಬಗ್ಗೆ ವಿವರಗಳು ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ... ರೂ. ೧೨ ಆಣೆ. [40 8]

ಕನ್ನಡ ಲಾ ರಿಪೋರ್ಟರ್—ಪ್ರಿವಿಕೌನ್ಸಿಲ್, ಹೈಕೋರ್ಟ್, ಚೀಫ್‌ಕೋರ್ಟ್ ತೀರ್ಪುಗಳು ಕನ್ನಡದಲ್ಲಿ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ಹಿಂಗೆ ನಡೆದು ಬರುತ್ತದೆ. ವರ್ಷದ ಚಂದಾ ೬—೦—೦ ಮುಂಗಡ, ಪಡೆದ ನಂತರ ... ೬—೪—೦

ಇವುಗಳಿಗೆ ... ೨೦ ನಂಬರು ರಾಧ್ಯಾಯ, ಬಿಸ್ಕಟ್ ... ಈ ವಿಳಾಸಕ್ಕೆ ಬರೆಯುವದು.

ಇವನ್ನು ನೋಡಿದರೆ ಬಹು ಆಶ್ಚರ್ಯ ಪಡುವಿರಿ.

38-8

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು ... ಈ ಪುಸ್ತಕವು ಲೋಕಪ್ರಸಿದ್ಧವಾದುದೇನು ಎಲ್ಲರೂ ಒಪ್ಪಿಕೊಳ್ಳುತ್ತಾರೆ ... ಈ ಪುಸ್ತಕಗಳು ... ಬಹಳ ಶ್ರಮಪಟ್ಟು ಭಾಷಾಂತರಿಸಿ ಮುದ್ರಿಸಿದ್ದಾಗಿದೆ. ಪುಸ್ತಕವನ್ನು ಒಂದು ಸಾರಿ ಓದಿದ ಮೇಲೆ ಇದನ್ನು ಪೂರಾ ಪೂರಾ ಓದಬೇಕೆಂಬ ಆಸೆ ಹುಟ್ಟುವುದು. ಇದರ ಕ್ರಯ ಎರಡು ರೂಪಾಯಿ. ವಿ. ಪಿ. ಮೂಲಕ ರೂ ೨—೩—೦ ... ಅಥವಾ ... ಗಳಿಗೆ ಒಂದು ಇನ್ನೂ ... ಎಂದು ಹೇಳಿದರೆ ... ಇದನ್ನು ಬಿಸಿಕೊಂಡ, ಒಬ್ಬ ... ಓದುವಂತೆ ಪುಸ್ತಕ ... ಸುಲಭ ಕ್ರಯಕ್ಕೆ ... ಪುಸ್ತಕಗಳ ... ಒಟ್ಟಿಗೆ ... ಪುಸ್ತಕಗಳಿಗೆ ... ಜಾಗ್ರತೆ ನೋಡಿ.

ನಮ್ಮ ವಿಳಾಸ:— ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ದೇಶಬಾಂಧವರೇ! ಪ್ರೀತಿಯಿಂದ ಲಾಲಿಸಿ!!

50 1

ಸ್ವದೇಶೀ ಪ್ರೀತಿಗೆ ಯೋಗ್ಯವಾದ ಪ್ರಸಿದ್ಧ ಮಧುರೆಯಲ್ಲಿ ಕೆಸರು ಮಾಸದಿಂದ ತಯಾರಾಗುವ ಗಟ್ಟಿಯಾದ ಬಣ್ಣದ ಸದಿಗೇಳು ಮೊದಲಾದ ... ಕ್ಕಿಂತ ಹೆಚ್ಚು ಉದ್ದದ ಬಿಳಿಯ ಚುಕ್ಕೆಯೂ, ಹುಕ್ಕೆಗಳಿಂದ ಕೂಡಿ ಕಪ್ಪು ಅಥವಾ ಕೆಂಪುಬಣ್ಣದಲ್ಲಿ ಉತ್ತಮ ಮಧುರೆ ಸೀರೆಗಳು ಬಹಳ ಸುಲಭಕ್ರಯಕ್ಕೆ ಅಂದರೆ ೧೪ ಮೊ. ರೂ ೩—೮ ಆಣೆಗೆ ಮಾರುತ್ತೇವೆ. ಸಾದಾ ಸೀರೆಗಳು ರೂ ೨—೮ ಆ. ನಯವಾದ ಮತ್ತು ಸೆರಗು ಅಂಚುಗಳಲ್ಲಿ ಜರತಾರಿಯುಳ್ಳದ್ದು ೧೬ ಮೊ. ರಾಚಾ ಚೆಲ್ಲಿಯ ಕಲಬತ್ತಿನ ಸೀರೆಗಳು ರೂ. ೭, ರೂ. ೮, ರೂ. ೧೦

ಮೊಳಕಾಲ್ಮೂರು ಅಂಚಿನ ಪಂಚೆಗಳು!!!

ಹೊಸದಾಗಿ ತಯಾರಿಸಿರುವ ಈ ಪಂಚೆಗಳು ಶುದ್ಧ ರೇಷ್ಮೆ ಅಂಚಿನ ಪಂಚೆಗಳನ್ನು ವಿಚಾರಿಸಿರಿ. ಬಹು ಸೊಗಸಾಗಿದೆ. ೮ ಮೊಳದ ಜೊತೆ ೧ ಕ್ಕೆ ರೂ ೩. ಏಳು ಮೊಳದ ಜೊತೆಗೆ ರೂ ೨—೮ ಆ.

ಮುಂಬೈಯ ಕಲ್ಕತ್ತಾ ಅಂಚಿನ ಪಂಚೆ.

೩ ಮೊಳದವು, ೯ ಮೊಳದ ಜೊತೆಗೆ ರೂ ೭. ಆರು ಮೊಳದ ಜೊತೆಗೆ ರೂ ೨—೮ ಆ.

ಪುರುಷರ ರೇಷ್ಮೆಯ ವಸ್ತ್ರಗಳು! ೨ ಮೊಳದವುಗಳು!!

ಬಹು ಸೊಗಸಾದ ಕೆಂಪು ರೇಷ್ಮೆ ಮಟ್ಟು. ೩ ಮೊಳದುದ್ದ ರೂ ೫. ಐದು ಮೊಳದುದ್ದ ರೂ ೩.

ಶುದ್ಧ ಉಣ್ಣೆಯ ಹೊಸ ತರದ "ಬ್ಲಾಂಕೆಟ್"

ಬನಾತಮೆಂಟ ಬಾಬೀನಸುಗಳು ಅಗಲ ೩೯ ಉದ್ದ ೯೦ ಅಂಗುಲ, ರೂ ೬. ಎರಡನೆಯ ತರ ರೂ ೫. ತರಳೇವಾರಿ ಚೀಟಿಗಳು ಗಜ ೧ ಕ್ಕೆ ಆಣೆಗಳು ೩, ೫, ೬. ವಿಳಾಸ.—

ದಾಸ್ ಎಂಪೋರಿಯಂ, ಸ್ವದೇಶೀ ನಂ. ರೋಡ್, ಪೇಟೆ, ಮದ್ರಾಸು.

ವೃತ್ತಾಂತ ಪತ್ರಿಕೆ.

ಸನ್ ೧೯೦೮ ನೇ ಇಸವಿ ಜೂನ್ ತಾ|| ೧೮ ನೇ [illegible]

ಮೈಸೂರು ಪ್ರಜಾಪ್ರತಿನಿಧಿ ಸಭೆಯೂ, ನ್ಯಾಯ ವಿಧಾಯಕ ಸಭೆಯೂ.

ಮೈಸೂರು ಪ್ರಜಾಪ್ರತಿನಿಧಿ ಸಭೆಯಿಂದ ನ್ಯಾಯವಿಧಾಯಕ ಸಭೆಗೆ ಇಬ್ಬರು ಮೆಂಬರುಗಳನ್ನು ಚುನಾಯಿಸಿ ಕಳುಹಿಸಬಹುದೆಂದು ಗವರ್ನಮೆಂಟಿನವರು ಅಪ್ಪಣೆ ಕೊಡಿಸಿರುತ್ತಾರೆ. ಅವರೆ ಹಾಗೆ ಚುನಾವಣೆಯಾದ ಮೆಂಬರುಗಳನ್ನು ಗವರ್ನಮೆಂಟಿನವರು ಒಪ್ಪಿಕೊಂಡು ನೇಮಿಸಬೇಕಾಗಿರುವುದು.

ಗವರ್ನಮೆಂಟಿನವರು ನ್ಯಾಯವಿಧಾಯಕ ಸಭೆಯನ್ನು ಸ್ಥಾಪಿಸಿದಾಗ ಪ್ರಜಾಪಕ್ಷದ ಮೆಂಬರುಗಳನ್ನು ಆ ಸಭೆಯಲ್ಲಿ ಸೇರಿಸಿಕೊಳ್ಳುವುದಕ್ಕೆ ಅವಕಾಶಮಾಡಿ ಕೊಟ್ಟಿಲ್ಲವಲ್ಲ ಎಂದು ಆಕ್ಷೇಪಣೆಗಳು ಹುಟ್ಟಿದವು. ಆದರೆ ಆ ಸಭೆಯ ಕಾರ್ಯಗಳು ಕೆಲವು ಕಾಲ ನಡೆದು ತೃಪ್ತಿಕರವಾಗಿ ಕಂಡು ಬಂದಲ್ಲಿ ಗವರ್ನಮೆಂಟಿನವರು ಪ್ರಜೆಗಳಿಗೆ ಆ ರಿಯಾಯತಿಯನ್ನು ತೋರಿಸುವುದು ಸುಲಭವಾದೀತು ಎಂದು ಸೂಚಿಸಿದ್ದೆವು. ಈಗ ಗವರ್ನಮೆಂಟಿನವರು ಪ್ರಜಾಪ್ರತಿನಿಧಿ ಸಭೆಯಿಂದ ಇಬ್ಬರು ಮೆಂಬರುಗಳನ್ನು ನ್ಯಾಯವಿಧಾಯಕ ಸಭೆಗೆ ಕಳುಹಿಸಬಹುದೆಂದು ಅಪ್ಪಣೆ ಕೊಟ್ಟಿರುವುದನ್ನು ನೋಡಿ ತುಂಬಾ ಸಂತೋಷಪಡುತ್ತೇವೆ. ಪ್ರತಿನಿಧಿ ಸಭೆಯಲ್ಲಿ ಆ ಮೆಂಬರುಗಳ ಚುನಾವಣೆ ನಡೆಯತಕ್ಕ ಕ್ರಮಗಳನ್ನು ಈ ವಾರ ಇನ್ನೊಂದು ಕಡೆಯಲ್ಲಿ ಪ್ರಕಟಿಸಿರುವೆವು.

ಈ ವಿಚಾರದಲ್ಲಿ ಒಂದು ವಿಷಯಮಾತ್ರ ಚೆನ್ನಾಗಿ ಗೊತ್ತಾಗುವುದಿಲ್ಲ. ಪ್ರಜಾಪ್ರತಿನಿಧಿ ಸಭೆಯವರಿಂದ ಒಂದಾವರ್ತಿ ಚುನಾವಣೆ ಮಾಡಲ್ಪಟ್ಟ ಇಬ್ಬರು ಮೆಂಬರುಗಳು ನ್ಯಾಯವಿಧಾಯಕ ಸಭೆಯಲ್ಲಿ ಎಷ್ಟು ವರುಷಗಳ ತನಕ ಮೆಂಬರಾಗಿ ಇರತಕ್ಕವರೆಂದು ತಿಳಿಯುವುದಿಲ್ಲ. ಚುನಾಯಿಸಲ್ಪಟ್ಟವರನ್ನೇ ಮತ್ತೆ ಮತ್ತೆ ಪ್ರತಿವರುಷವೂ ಚುನಾಯಿಸುತ್ತಿದ್ದರೆ ಇಬ್ಬರೇ ಶಾಶ್ವತವಾಗಿ ನ್ಯಾಯವಿಧಾಯಕ ಸಭೆಯ ಮೆಂಬರಾಗಿರಬಹುದೋ ಏನೋ. ಈ ಭಾಗವು ಸ್ಪಷ್ಟವಾಗಿಲ್ಲ. ಮುಖ್ಯ ಪ್ರತಿನಿಧಿಗಳು [illegible] ಚುನಾಯಿಸಿದ ಮೆಂಬರು ಇನ್ನೊಂದು [illegible] ಪ್ರತಿನಿಧಿ ಸಭೆಗೆ ಮೆಂಬರಾಗಿ ಚುನಾಯಿಸಲ್ಪಡದೆ ತಪ್ಪಿಹೋದರೆ ಆತನು ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರಾಗಿ ಉಳಿಯುವನೋ ಅಥವಾ ಹೋಗುವನೋ ಗೊತ್ತಾಗುವುದಿಲ್ಲ. ಅಂತು ಈ ಮೆಂಬರುಗಳ ಚುನಾವಣೆ [illegible] ಪ್ರಕಟಿಸಿರುವ ರೂಲ್ಸು [illegible] ನಮ್ಮ ಅಭಿಪ್ರಾಯವೇನೆಂದರೆ ಒಂದಾವರ್ತಿ ಚುನಾಯಿಸಲ್ಪಟ್ಟ ಮೆಂಬರು ಕೆಲವು ವರ್ಷಗಳ ತನಕ ಮುಖ್ಯ [illegible] ವರುಷಗಳು ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರಾಗಿರುವಂತೆ ವಿಧಿಸಬೇಕಾಗಿದೆ. [illegible] ಪ್ರಜಾಪ್ರತಿನಿಧಿ ಸಭೆಯ ಮೆಂಬರ [illegible] ತಪ್ಪಿಹೋದಾಗ ನ್ಯಾಯವಿಧಾಯಕ ಸಭಾಮೆಂಬರ ಸ್ಥಾನವೂ ತಪ್ಪಿಹೋಗಬಾರದಾಗಿರಬೇಕೆಂದು ನಮಗೆ ತೋರುತ್ತದೆ. [illegible] ಪ್ರತಿನಿಧಿ ಸಭೆಯ ಇಬ್ಬರು ಮೆಂಬರುಗಳು ನ್ಯಾಯವಿಧಾಯಕ ಸಭೆಯ ಮೆಂಬರಾಗಿರುವುದಕ್ಕೆ ಅನುಕೂಲಿಸುತ್ತದೆ.

ಈ ಹೊಸ ಮರ್ಯಾದೆಯಿಂದ ಗವರ್ನಮೆಂಟಿನವರು ಪ್ರತಿನಿಧಿ ಸಭೆಯ ಅಧಿಕಾರ ಸ್ವಾತಂತ್ರ್ಯಗಳನ್ನು ಇನ್ನೂ ಹೆಚ್ಚಿಸಿರುತ್ತಾರೆಂದು ನಮಗೆ ತಿಳಿಯುವುದು. ಆ ಕಾರ್ಯ [illegible] ಪ್ರತಿನಿಧಿ ಸಭೆಯನ್ನು ಸಾಧ್ಯವಾದ ಮಟ್ಟಿಗೂ ಕ್ರಮಕ್ಕೆ ತರಬೇಕಾದದ್ದು ಅವಶ್ಯವಾಗಿರುತ್ತದೆ. ಆ ಸಭೆಯ ಘಟನೆಯನ್ನು ಇನ್ನೂ ಕ್ರಮ ಪಡಿಸಬೇಕಾಗಿದೆ. ಈ ಭಾಗದಲ್ಲಿ ಗವರ್ನಮೆಂಟಿನವರು ಮಾಡಬಹುದಾದ ಬದಲಾವಣೆಗಳು ಯಾವುವೆಂದರೆ—(೧) ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಪ್ರಜಾಪ್ರತಿನಿಧಿ ಸಭೆಗೆ ಮೆಂಬರನ್ನು ಚುನಾಯಿಸುವ ಓಟುದಾರರ ಪಟ್ಟಿಯು ಕ್ರಮವಾಗಿಲ್ಲ. ಚುನಾಯಿಸುವ ಹಕ್ಕು ಪಡೆದಿರುವವರ ಸರಿಯಾದ ಪಟ್ಟಿಗಳನ್ನು ತಯಾರಿಸಬೇಕಾಗಿದೆ (೨) ಅಂಥಾ ಓಟುದಾರರುಗಳನ್ನೆಲ್ಲಾ ಕ್ರಮವಾಗಿ ನೋಟೀಸು ಕಳುಹಿಸಿ, ಚುನಾವಣೆಯ ಸ್ಥಳಕ್ಕೆ ಎಲ್ಲರನ್ನೂ ಹಾಜರು ಪಡಿಸಿಕೊಳ್ಳುವಂತಾಗಬೇಕು. ಇವೆರಡು ವಿಚಾರಗಳಲ್ಲೂ ಕೆಲವು ಡಿಸ್ಟ್ರಿಕ್ಟ ಅಧಿಕಾರಿಗಳು ಅಲಕ್ಷ್ಯ ಮಾಡುವರು; ಓಟುಗಳು ಸೇರುವುದಾಗಲಿ, ಮೆಂಬರುಗಳ ಚುನಾವಣೆಯಾಗಲಿ ಅಷ್ಟು ತೃಪ್ತಿಕರವಾಗಿ ನಡೆಯುವುದಿಲ್ಲ.

ಇನ್ನು ಕೆಲವು ಭಾಗಗಳಲ್ಲಿ ಮೆಂಬರುಗಳು ಮುತುವರ್ಜಿಯನ್ನೂ ಉತ್ಸಾಹವನ್ನೂ ಪ್ರಕಾಶಪಡಿಸಿದಲ್ಲದೆ ಪ್ರಜಾಪ್ರತಿನಿಧಿ ಸಭೆಯ ಕಾರ್ಯಗಳು ಕ್ರಮಪಡಲಾರವೆಂದು ನಮಗೆ ತೋರುತ್ತದೆ. ಆ ಭಾಗಗಳ್ಯಾವುವೆಂದರೆ—(೧) ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ತರತಕ್ಕ ವಿಷಯಗಳು ಬಹಳ ಮಟ್ಟಿಗೆ ಕಡಮೆಯಾಗಬೇಕು. ಈಗ ಅನೇಕ ಅಲ್ಪ ವಿಚಾರಗಳನ್ನು ಆ ಮಹಾ ಸಭೆಯಲ್ಲಿ ಚರ್ಚೆಗೆ ತರೋಣದರಿಂದ ಅವುಗಳ ಚರ್ಚೆಯಲ್ಲೇ ಸಭೆಯ ಸಮಯ ವ್ಯರ್ಥವಾಗುವುದು; ಮುಖ್ಯ ಮುಖ್ಯ ಸಂಗತಿಗಳನ್ನು ಪರಿಷ್ಕಾರವಾಗಿ ಚರ್ಚಿಸುವುದಕ್ಕೆ ಅವಕಾಶವೇ ಇರುವುದಿಲ್ಲ. (೨) ಸಭೆಯಲ್ಲಿ ವಿಷಯಗಳನ್ನು ಹಿಡಿದು ಚರ್ಚೆಮಾಡುವುದಕ್ಕಾಗಿ ಸರ್ಕಾರದವರು ವಿಧಿಸಿರುವ ಕ್ರಮಗಳನ್ನು ಮೆಂಬರುಗಳು ತಿಳಿದುಕೊಂಡು ಅನುಸರಿಸಬೇಕಾದದ್ದು ಅವಶ್ಯಕವಾಗಿದೆ. ಇದರಿಂದ ಚರ್ಚೆಯು ತೃಪ್ತಿಕರವಾಗಿ ನಡೆಯುವುದಕ್ಕೂ, ಸಭೆಗೆ ಗೌರವವುಂಟಾಗುವುದಕ್ಕೂ ಸಹಾಯವಾದೀತು. ಈ ಪ್ರಕಾರ ಪ್ರಜಾಪ್ರತಿನಿಧಿ ಸಭೆಯನ್ನು ಕ್ರಮಪಡಿಸಿದಲ್ಲಿ ಈ ಸಭೆಯಿಂದ ಸಂಸ್ಥಾನಕ್ಕೆ ವಿಶೇಷ ಪ್ರಯೋಜನವಾಗುವುದು

ಸತ್ಯಮತದವರಿಗೆ ದೇವರು ಕೊಟ್ಟಿರುವ ನೀತಿಪ್ರಮಾಣಗಳು.

೧ ನಿನ್ನ ದೇವರಾದ ಏಕೋಭಗವಂತನು ನಾನೇ.

೨ ನನ್ನ ಮುಂದೆ ನಿನಗೆ ಬೇರೆ ದೇವತೆಗಳು ಇರಬಾರದು. ಮೇಲಿನ ಆಕಾಶದಲ್ಲಾಗಲಿ, ಕೆಳಗಿನ ಭೂಮಿಯಲ್ಲಾಗಲಿ, ಭೂಮಿಯ ಕೆಳಗಿನ ನೀರುಗಳಲ್ಲಾಗಲಿ ಇರುವಂಥವುಗಳ ಹಾಗೆ ವಿಗ್ರಹವನ್ನು ಯಾವ ರೂಪವನ್ನು ನಿನಗೆ ಮಾಡಿಕೊಳ್ಳಬೇಡ; ಅವುಗಳಿಗೆ ಅಡ್ಡಬೀಳಲೂ ಸೇವಿಸಲೂ ಬೇಡ; ಯಾಕೆಂದರೆ ನಿನ್ನ ದೇವರಾದ ನಾನು [illegible] ದೇವರಾಗಿದ್ದೇನೆ; ನನ್ನನ್ನು ಹಗೆಮಾಡುವವರಲ್ಲಿ ತಂದೆಗಳ ಅಕ್ರಮವನ್ನು ಮಕ್ಕಳ ಮೇಲೆ ಮೂರನೇ ನಾಲ್ಕನೇ ತಲೆಯ ವರೆಗೂ, ವಿಚಾರಿಸುತ್ತೇನೆ. ಆದರೆ ನನ್ನನ್ನು ಪ್ರೀತಿಮಾಡಿ, ನನ್ನ ಆಜ್ಞೆಗಳನ್ನು ಕೈಕೊಳ್ಳುವವರಿಗೆ ಸಾವಿರಗಳ ಪರ್ಯಂತರ ಕೃಪೆಯನ್ನು ತೋರಿಸುತ್ತೇನೆ

೩ ನಿನ್ನ ದೇವರ ಹೆಸರನ್ನು ವ್ಯರ್ಥವಾಗಿ ಎತ್ತಬೇಡ, ಯಾಕಂದರೆ ದೇವರು ತನ್ನ ಹೆಸರನ್ನು ವ್ಯರ್ಥವಾಗಿ ಎತ್ತುವವನನ್ನು ನಿರ್ದೋಷನೆಂದು ಎಣಿಸುವದಿಲ್ಲ.

೪ ಸಬ್ಬತ್ ದಿವಸವನ್ನು ಪರಿಶುದ್ಧಮಾಡುವ ಹಾಗೆ ಜ್ಞಾಪಕಮಾಡಿಕೋ. ಆರು ದಿನ ಕಷ್ಟಪಟ್ಟು, ನಿನ್ನ ಕೆಲಸವನ್ನೆಲ್ಲಾ ಮಾಡಬೇಕು, ಆದರೆ ಏಳನೇ ದಿವಸವು ನಿನ್ನ ದೇವರ ಸಬ್ಬತ್ ದಿವಸವಾಗಿದೆ.; ಅದರಲ್ಲಿ ನೀನೂ, ನಿನ್ನ ಮಗನೂ, ನಿನ್ನ ಮಗಳೂ, ನಿನ್ನ ದಾಸನೂ ನಿನ್ನ ದಾಸಿಯೂ, ನಿನ್ನ ದನವೂ, ನಿನ್ನ ಬಾಗಲುಗಳಲ್ಲಿರುವ ಪರದೇಶಿಯೂ ಯಾವ ಕೆಲಸವನ್ನಾದರೂ ಮಾಡಬಾರದು. ಯಾಕಂದರೆ ಆರು ದಿವಸಗಳಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಸಮುದ್ರವನ್ನೂ ಅವುಗಳಲ್ಲಿರುವ ಎಲ್ಲವುಗಳನ್ನೂ ಉಂಟುಮಾಡಿ, ಏಳನೇ ದಿವಸದಲ್ಲಿ ವಿಶ್ರಮಿಸಿಕೊಂಡನು; ಆದದರಿಂದ ದೇವರು ಸಬ್ಬತ್ ದಿವಸವನ್ನು ಆಶೀರ್ವದಿಸಿ, ಪರಿಶುದ್ಧಮಾಡಿದನು

೫ ನಿನ್ನ ದೇವರು ನಿನಗೆ ಕೊಡುವ ದೇಶದಲ್ಲಿ ನಿನ್ನ ಆಯುಷ್ಯವು ಹೆಚ್ಚಾಗುವ ಹಾಗೆ, ನಿನ್ನ ತಂದೆಯನ್ನೂ ನಿನ್ನ ತಾಯಿಯನ್ನೂ ಸನ್ಮಾನಿಸು.

೬ ನರಹತ್ಯ ಮಾಡಬೇಡ

೭ ವ್ಯಭಿಚಾರ ಮಾಡಬೇಡ

೮ ಕದಿಯಬೇಡ

೯ ನಿನ್ನ ನೆರೆಯವನಿಗೆ ವಿರೋಧವಾಗಿ ಸುಳ್ಳುಸಾಕ್ಷಿ ಹೇಳಬೇಡ

೧೦. ನಿನ್ನ ನೆರೆಯವನ ಮನೆ ಆಶಿಸಬೇಡ; ನಿನ್ನ ನೆರೆಯವನ ಹೆಂಡತಿಯನ್ನು, ಅವನ ದಾಸನನ್ನು, ಅವನ ದಾಸಿಯನ್ನು, ಅವನ ಎತ್ತನ್ನು, ಅವನ ಕತ್ತೆಯನ್ನು, ನಿನ್ನ ನೆರೆಯವನಿಗೆ ಇರುವ ಯಾವದನ್ನಾದರೂ ಆಶಿಸಬೇಡ

ಮೇಲ್ಕಂಡ ಆಜ್ಞೆಗಳನ್ನು, ಕ್ರಿಸ್ತರು ಈ ರೀತಿಯಾಗಿ ಸಂಕ್ಷೇಪಿಸಿ ಹೇಳಿರುತ್ತಾನೆ—

"ನಿನ್ನ ಪ್ರಭುವಾದ ದೇವರನ್ನು ನಿನ್ನ ಪೂರ್ಣ ಮನಸ್ಸಿನಿಂದ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು. ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಮಾಡಬೇಕು."

ಎಲ್ಲಾ ಮತಸ್ಥರಿಗೂ ಸಮವಾದ ಸ್ವರ್ಣವಿಧಿ.

ಜನರಿಂದ ನಿನಗೆ ಏನೇನು ಆಗಬೇಕೆಂದು ಅಪೇಕ್ಷಿಸುತ್ತೀಯೋ ನೀನು ಅದನ್ನೇ ಅವರಿಗೆ ಮಾಡು.

ಒಳದೇಶದ ವೃತ್ತಾಂತಗಳು.

ಕೋಲಾರ್ ಚಿನ್ನದ ಗಣಿಗಳ ಭಾಗದ ಮಾರ್ಗದಲ್ಲಿ ಉದ್ದಕ್ಕೂ ವಿದ್ಯುಚ್ಛಕ್ತಿಯ ದೀಪಗಳನ್ನು ಇಡುವುದಕ್ಕೆ ಏರ್ಪಾಡಾಗುತ್ತಿದೆ.

***

ಐವತ್ತು ರೂಪಾಯಿಕ್ಕಿಂತಲೂ ಕಡಮೆ ವರುಷ ವಾಯಿದೆಗೆ ಸೇರಿದ ಗುತ್ತಿಗೆ ಕರಾರುಗಳನ್ನು ರಿಜಿಸ್ಟರ್ ಮಾಡಿಸಬೇಕಾದದ್ದಿಲ್ಲವೆಂದು ವಿನಾಯಿತಿ ಮಾಡಲ್ಪಟ್ಟಿದೆ.

***

ಕಳೆದ ಗುರುವಾರದ ದಿನ ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವದ ಸಂತೋಷಾರ್ಥವಾಗಿ ದಿವಾನರಾದ ಮಿ|| ವಿ ಪಿ ಮಾಧವರಾಯರು ತಮ್ಮ ಬಂಗಲೆಯಲ್ಲಿ ಅಧಿಕಾರಸ್ಥರನ್ನು ಕರೆಸಿಕೊಂಡು ಔತಣ ಮಾಡಿಸಿದರು. ಭೋಜನಾನಂತರ ಸಂಗೀತಾದಿಗಳು ನಡೆದವು

***

೧೯೦೮ನೇ ಜೂಲೈ ೧ ರ ಆರಭ್ಯ ಮೈಸೂರು ಮತ್ತು ಬೆಂಗಳೂರು ಸಿಟಿ ಮ್ಯುನಿಸಿಪಲ್ ಸರಹದ್ದಿನಲ್ಲಿ ಬಲಾತ್ಕಾರದ ಲಸಿಕೆ [illegible] ಕಾನೂನನ್ನು ಅಜಮಾಯಿಷಿ ತರೀಖು ಒಂದು ವರುಷದ ವರೆಗೆ ಜಾರಿಯಲ್ಲಿ ತರಬೇಕೆಂದು ಹುಕುಂ ಮಾಡಲ್ಪಟ್ಟಿದೆ

***

ಹೆಗ್ಗಡದೇವನ ಕೋಟೆ ತಾಲ್ಲೂಕು ಬೆಳತೂರು ಹೋಬಳಿ ಯಡೂರು ಗ್ರಾಮದಲ್ಲಿ ಕೋದ ವರುಷ ಒಂದು ಬಾಲ್ಯ ವಿವಾಹವು ನಡೆಯಿತೆಂದು ಮೊಕದ್ದಮೆ ಆಗಿದೆ. ಇದನ್ನು ನೆನ್ನೆಯ ದಿನ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡುವವರಾಗಿದ್ದರೆಂದು ಕೇಳುತ್ತೇವೆ.

ರಾಜಧಾನಿಯಲ್ಲಿ ಒಂದು ವಾರದಿಂದ ಹವಾ ಬದಲಾವಣೆಯಾಗಿದೆ. ಮೋಡವಾಗುವುದು, ಬಿರುಸಾದ ಶೀತಗಾಳಿ ಬೀಸುವುದು, ಸೂರ್ಯರಶ್ಮಿಯನ್ನು ಕಾಣುವುದು ಅಪರೂಪ, ಆಗಾಗ್ಗೆ ಸಣ್ಣ ಮಳೆ ಸುರಿಯಲಾರಂಭವಾಗಿದೆ. ಆದರೆ ರೋಗಾದಿಗಳ ಭೀತಿಯೇನೂ ಇಲ್ಲ. ಧಾರಣೆ ವಾಸಿಗಳು ಪ್ರಿಯವಾಗಿಯೇ ಇವೆ

***

ಮೈಸೂರು ಮ್ಯಾಂಗನೀಸ್ ಕಂಪನಿ ಲಿಮಿಟೆಡ್ ಎಂಬ ಕಂಪನಿಯು ದಿವಾಳಿಯಾಯಿತು. ಮಿ|| ಫ್ರೇಸರ್, ಮಿ|| ರಾಸ್ ಎಂಬವರು ಲಿಕ್ವಿಡೇಟರಾಗಿ ನೇಮಕವಾಗಿದಾರೆ. ಈ ಕಂಪನಿಯ ಹೆಡ್ ಆಫೀಸು ಮದರಾಸಿನಲ್ಲಿರುವುದು. ಆ ಲಿಕ್ವಿಡೇಟರುಗಳಿಗೆ ಕಂಪನಿಯಿಂದ ೫,೦೦೦ ರೂಪಾಯಿ ರುಸುಂ ಸಲ್ಲಬೇಕೆಂದು ತೀರ್ಮಾನವಾಗಿದೆ

***

ಸರ್ಕಾರದವರು ಕೋಲಾರದ ರಾಬರ್ಟ್ಸನ್ ಪೇಟೆಗೆ ಕುಡಿಯುವ ನೀರು ಒದಗಿಸುವುದಕ್ಕೆ ೧೪,೩೬೦ ರೂಪಾಯಿಯನ್ನು, ಕೂಲಿ ಜನರು ವಾಸಮಾಡುವ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ೧೪,೫೦೦ ರೂಪಾಯಿಯನ್ನು, ರಾಬರ್ಟ್ಸನ್ ಪೇಟೆಯಲ್ಲಿ ಬಚ್ಚಲು ಚರಂಡಿ ಮುಂತಾದ್ದನ್ನು ಕಟ್ಟುವುದಕ್ಕೆ ೧೪,೦೧೦ ರೂಪಾಯಿಯನ್ನು ಸ್ಯಾಂಕ್ಷನ್ ಮಾಡಿದಾರೆ.

***

ಮೈಸೂರು ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವು ಮುಂದಿನ ಸೆಪ್ಟಂಬರ್ ತಾ ೩೦ನೇ ಬುಧವಾರ ಪ್ರಾರಂಭವಾಗಿ ಅಕ್ಟೋಬರ್ ತಾ ೧೪ನೇ ಬುಧವಾರದ ತನಕ ಅಂದರೆ ಆರು ವಾರಗಳ ತನಕ ರಾಜಧಾನಿಯಲ್ಲಿ ನಡೆಯುವುದು; ಗೋವುಗಳ ಪ್ರದರ್ಶನವು ಅಕ್ಟೋಬರ್ ತಾ. ೬ನೇ ಮಂಗಳವಾರ ಪ್ರಾರಂಭವಾಗಿ ತಾ. ೮ನೇ ಗುರುವಾರಕ್ಕೆ ಮುಕ್ತಾಯವಾಗುವುದೆ ಎಂಬದಾಗಿ ಎಗ್ಸಿಬಿಷನ್ ಸೆಕ್ರೆಟರಿಯವರು ತಿಳಿಸುತ್ತಾರೆ

***

ಬೆಂಗಳೂರು ಬಳೆ ಗರಡಿ ಉಸ್ತಾದ್ ವೆಂಕಟಸ್ವಾಮಿಯ್ಯನ ಶಾಗಿರ್ದ ಶೃಂಗನೂರು ಮುನಿಸ್ವಾಮಿಗೂ, ಕಾಕಿನಾಡದಿಂದ ಬಂದು ಬೆಂಗಳೂರು ಉಸ್ತಾದ್ ಮಾಂಧಾತನ ಬಳಿ ಇರುವ ಕಮ್ರುಕ್ ಪೈಲ್ವಾನನಿಗೂ ಈ ತಿಂಗಳ ೨೮ ನೇ ತಾ ಭಾನುವಾರ ಸಾಯಂಕಾಲ ರಾಜಧಾನಿಯ ಎತ್ತಿನ ಕರುತಟ್ಟೆ ಮೈದಾನದಲ್ಲಿ ಕುಸ್ತಿ ನಡೆಯುವುದು. ಇವರು ಅನೇಕ ಕಡೆಗಳಲ್ಲಿ ಕುಸ್ತಿಗಳನ್ನು ಮಾಡಿ, ಅನೇಕರಿಂದ ಬಹುಮಾನಗಳನ್ನು ಸಂಪಾದಿಸಿಕೊಂಡಿದಾರೆ. ಆದ್ದರಿಂದ ನೋಟಕರಿಗೆ ಈ ಕುಸ್ತಿಯು ತುಂಬಾ ಉತ್ಸಾಹಕರವಾಗಿದ್ದೀತು

***

ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವದ ಸಂತೋಷಾರ್ಥವಾಗಿ ರಾಜಧಾನಿಯ ಪ್ರಜೆಗಳು ಚಂದಾ ಎತ್ತಿ ಮೊನ್ನೆ ಮಂಗಳವಾರ ಬಹು ವಿನೋದವೂ ಸಂಭ್ರಮವೂ ಆದ ಉತ್ಸವವನ್ನು ನಡಿಸಿ ತಮ್ಮ ಕೃತಜ್ಞತೆ ರಾಜಭಕ್ತಿಗಳನ್ನು ಪ್ರಕಾಶಪಡಿಸಿದರು. ಸುಮಾರು ನಾಲ್ಕು ಸಾವಿರ ಬಡಬಗ್ಗರಿಗೆ ಸಂತರ್ಪಣೆ ಮಾಡಿಸಿದರು. ಟೌನ್ ಹಾಲ್ ಬಂಗಲೆಯಲ್ಲಿ ಪ್ರಜೆಗಳನ್ನೆಲ್ಲಾ ಕರೆಸಿಕೊಂಡು ವಿಶೇಷವಾದ ಉತ್ಸವವನ್ನು ಮಾಡಿದರು. ಇಂಥಾ ಸಂಭ್ರಮಯುಕ್ತವಾದ ಉತ್ಸವವನ್ನು ರಾಜಧಾನಿಯಲ್ಲಿ ಇದುವರೆಗೆ ಪ್ರಜೆಗಳು ಸೇರಿ ಮಾಡಿದ್ದನ್ನು ನೋಡಲಿಲ್ಲವೆಂದು ಕೇಳಿ ಎಲ್ಲರೂ ಸಂತೋಷಪಟ್ಟರು.

***

ಬೆಂಗಳೂರು ಸಿದ್ದಿಕಟ್ಟೆ [illegible] ಬೀದಿಯಲ್ಲಿರುವ [illegible] ಬರೆಯುವುದು. [illegible] ಅಪ್ಪ [illegible] ಜಿ [illegible] ತಪ್ಪಿಸಿ [illegible] ದವು ಆದವಿಯಪ್ಪನು ಕಳ್ಳಗಿವನ, [illegible] ಇದೆ, ಕೊಟ್ಟೆಯೊಳಗೆ [illegible] ದಪ್ಪವಾಗಿದೆ [illegible] ಗೆವೆ [illegible] ಬಳಿ [illegible] ಇದೆ [illegible] ಪತ್ತೆ ಮಾಡಿದವರಿಗೆ ಇಪ್ಪತ್ತು ರೂಪಾಯಿ [illegible] ಕೊಡುವೆನು ಎಂಬುದೇ

***

ನಾಲ್ಕನೆಯ ಪರ್ಣಕ್ಕೆ ಸೇರಿದ ಮಿ|| [illegible]ಲಿಂಗರೆಡ್ಡಿ ಎಂಬ [illegible] ವಿದ್ವಾಂಸರು ಕಳೆದ ವಾರ ರಾಜಧಾನಿಗೆ ಬಂದಿರುತ್ತಾರೆ. ಇವರು ವಿಲಾಯತಿ, ಅಮೇರಿಕ ಮುಂತಾದ ಕಡೆಗಳಲ್ಲಿ ಸಂಚಾರಮಾಡಿ, ಕೆಲವು ಕಾಲ ಜಪಾನ ಸಂಸ್ಥಾನದಲ್ಲಿ [illegible], ಈಗ ಅದನ್ನು ಬಿಟ್ಟು ರಾಜ್ಯಾದಿ ಅನೇಕ ಸ್ಥಳಗಳನ್ನು [illegible] ಅಲ್ಲಿನ ಪ್ರಜೆಗಳನ್ನು ನಾಗರೀಕರಾದಿಗಳನ್ನು [illegible] ಕಾರಣ ಇವರಿಗೆ ಹಿಂದುಸ್ಥಾನದ ಪ್ರಜೆಗಳಲ್ಲಿರುವ ಜಾತಿ ಪದ್ಧತಿ, ಆಚಾರವ್ಯವಹಾರ, ಭೋಜನಸತ್ಕಾರ, ಬಹಿಷ್ಕಾರ [illegible] ವೈಭವಗಳು [illegible] ದವನ್ನು [illegible] ಈ ಅರ್ಥವಾಗದೆ [illegible] ಭಾನುವಾರ ಸಾಯಂಕಾಲ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಒಂದು ಉಪನ್ಯಾಸವನ್ನು ಮಾಡಿದರು. ದಿವಾನರವರು ಅಗ್ರಾಸನವನ್ನು ವಹಿಸಿದ್ದರು. ನೂರಾರುಮಂದಿ ಅಧಿಕಾರಸ್ಥರೂ ವಿದ್ವಾಂಸರೂ ಸಭಾಸದರಾಗಿದ್ದರು

***

ಬಾಲಕರೂ ಬಾಲೆಯರೂ ಓದುವ ಎಲ್ಲಾ ಕನ್ನಡ ಮತ್ತು ಇಂಗ್ಲಿಷ್—ಕನ್ನಡ ಪಾಠಶಾಲೆಗಳಲ್ಲಿ ಮೂರನೇ ತರಗತಿಯಿಂದ ಹಿಡಿದು ಮೇಲ್ಪಟ್ಟ ತರಗತಿಗಳಲ್ಲಿ ಅಮರಕೋಶವನ್ನು ಬಾಯಿಪಾಠವಾಗಿ ಹೇಳಬೇಕೆಂದು ಗವರ್ನಮೆಂಟಿನವರು ನಿಶ್ಚಯಿಸಿರುತ್ತಾರಾದ್ದರಿಂದ ಆ ಪಾಠವನ್ನು ನಡಿಸುವುದರಲ್ಲಿ ಉಪಾಧ್ಯಾಯರುಗಳು ಗಮನಿಸಬೇಕಾದ ವಿಷಯಗಳೇನೆಂದರೆ—(೧) ಹುಡುಗರೂ ಹುಡುಗಿಯರೂ ಓದುವ ಎಲ್ಲಾ ಕನ್ನಡ ಮತ್ತು ಇಂಗ್ಲಿಷ್—ಕನ್ನಡ ಪಾಠಶಾಲೆಗಳ ೩ನೇ, ೪ನೇ, ೫ನೇ ಕನ್ನಡ ತರಗತಿಗಳಲ್ಲಿ ನೇಮಕವಾಗಿರುವ ಕನ್ನಡಪಾಠದಲ್ಲಿ ನಾರಾಯಣ ಪಂಡಿತ ಅಮರಕೋಶವನ್ನು ಬಾಯಿಪಾಠವಾಗಿ ಹೇಳಿಕೊಡಬೇಕು. ಪ್ರತಿದಿನದ ಪಾಠವು ಎಂದು ಶ್ಲೋಕಗಳಿಗಿಂತಲೂ, ೧೫ ನಿಮಿಷಕ್ಕಿಂತಲೂ ಹೆಚ್ಚಾಗಿ ನಡಿಸಲಪಕ್ಕವಿಲ್ಲ (೨) ಮೂರನೇ ತರಗತಿಗೆ ಪ್ರಥಮಕಾಂಡ ಅಮರವೂ, ನಾಲ್ಕನೇ ತರಗತಿಗೆ ೨ ನೇ, ೩ ನೇ, ೪ ನೇ ವರ್ಗಗಳನ್ನು ಳಿದ ದ್ವಿತೀಯಕಾಂಡ ಅಮರವೂ, ಐದನೇ ತರಗತಿಗೆ ಕಡೆಯ ವರ್ಗವನ್ನು ಳಿದ ತೃತೀಯಕಾಂಡ ಅಮರವೂ ಪಾಠ ನಡಿಸುವಂತೆ ನೇಮಕವಾಗಿದೆ. (೩) ಉಪಾಧ್ಯಾಯರು ಅಮರದಲ್ಲಿ ಪ್ರತಿ ಒಂದು ಶ್ಲೋಕದ ಸಾಮಾನ್ಯ ಅರ್ಥವನ್ನು ಸಂಕ್ಷೇಪವಾಗಿ ತಿಳಿಸಬೇಕು

ಚಿಂತಾಮಣಿಯಲ್ಲಿ ನಡೆದ ಯಗ್ಜಿಬಿಷನ್.

ಪ್ರದರ್ಶನಶಾಲೆಯು

ಕೋಲಾರ್ ಡಿಸ್ಟ್ರಿಕ್ಟಿನ ಮಧ್ಯಸ್ಥಾನವಾದ ಚಿಂತಾಮಣಿಯಲ್ಲಿ ಈ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಸಕಲವಸ್ತು ಪ್ರದರ್ಶನಶಾಲೆಯೊಂದು ಏರ್ಪಡಿಸಬೇಕೆಂದು ನಿಯಾಮಕವಾಗಿತ್ತಷ್ಟೆ. ಈ ಮಹಾಕಾರ್ಯಕ್ಕಾಗಿ ತಕ್ಕ ನಿವೇಶನಗಳು ಇಲ್ಲದ್ದರಿಂದ ಸದರಿ ತಾಲ್ಲೂಕಿನ ಅಮಲ್ದಾರರು ಮುತುವರ್ಜಿವಹಿಸಿ ನೂತನವಾದ ಕಟ್ಟಡಗಳನ್ನು ನಿರ್ಮಾಣ ಮಾಡಿದರು. ಹನ್ನೊಂದು ತಾಲ್ಲೂಕುಗಳಿಂದ ನಾನಾಬಗೆಯ ಧಾನ್ಯಾದಿಗಳು, ಆಯಾಸ್ಥಳಗಳಲ್ಲಿ ಬೆಳೆಯುವ ಉತ್ಕೃಷ್ಟವಾದ ವಿಶಿಷ್ಟ ಪದಾರ್ಥಗಳು, ನೇಯಿಗೆಯವರಿಂದ ತಯಾರಾದ ನಾನಾ ನಮೂನೆಯ ವಸ್ತ್ರಗಳು, ಸೀರೆಗಳು, ಕುರುಬರಿಂದ ಮಾಡಲ್ಪಟ್ಟ ಉತ್ಕೃಷ್ಟವಾದ ಕಂಬಳಿಗಳು, ಅಕ್ಕಸಾಲಿಗರಿಂದ ತಯಾರಾದ ಬೆಳ್ಳಿ ಬಂಗಾರದ ಆಭರಣಗಳು, ಕಬ್ಬಿಣ ಉಕ್ಕಿನಿಂದ ತಯಾರಾದ ಆಯುಧಗಳು, ವಿವಿಧ ಮಣ್ಣಿನಪಾತ್ರೆಗಳು, ನಾನಾವಿಧ ರೇಷ್ಮೆ, ನಾರುಗಳೂ, ಫಲಪುಷ್ಪಗಳೂ, ಇನ್ನೂ ಅನೇಕ ಸಾಮಾನುಗಳು ಹಾಜರಾದವು. ಎಲ್ಲಾ ಅಮಲ್ದಾರರುಗಳೂ, ಅ॥ ಕಮಿಷನರುಗಳೂ, ಡೆಪ್ಯುಟಿ ಕಮಿಷನರವರೂ ಆಯಾ ಇಲಾಖೆಯ ಎಲ್ಲಾ ಆಫೀಸರುಗಳೂ ಜೂನ್ ತಾ. ೬ಕ್ಕೆ ಹಾಜರಾದರು.

ಪ್ರದರ್ಶನ ವಸ್ತುಗಳು.

ಇತ್ತಲಾಗಿ ಬಹುವಿಧವಾಗಿ ಶೃಂಗರಿಸಿದ್ದ ಭವನದಲ್ಲಿ ಮೇಲ್ಕಂಡ ಸಾಮಾನುಗಳು ಕ್ರಮವಾಗಿ ಜೋಡಿಸಲ್ಪಟ್ಟವು. ಮೆ॥ ತಾತಾಯವರ ರೇಷ್ಮೆ ಕಾರ್ಖಾನೆಯಲ್ಲಿ ತರಪೇತಾದವರು ರೇಷ್ಮೆ ತೆಗೆಯುವ ವಿಧವನ್ನು ತೋರಿಸುತ್ತಾ, ನಾನಾಬಗೆಯ ರೇಷ್ಮೆಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ಮತ್ತೊಂದು ಕಡೆ ರೈತರಿಗೆ ಉಪಯುಕ್ತವಾದ ನೀರು ಹಾಯಿಸುವ ಯಂತ್ರ ತಯಾರಾಗಿತ್ತು. ಈ ಕಡೆ ದೊಡ್ಡಬಳ್ಳಾಪುರದ ಇಂಡಸ್ಟ್ರಿಯಲ್ ಸ್ಕೂಲ್ ಮ್ಯಾನೇಜರ್ ಮೆ॥ ಡೇವಿಡ್‌ಯವರು ಎರಡು ಮಗ್ಗಗಳನ್ನು ತಯಾರಿಸಿಟ್ಟು ಹುಡುಗರಿಂದ ನೇಯಿಸುತ್ತಾ ಇದ್ದರು. ಮತ್ತೊಂದು ಕಡೆ ಫಾರೆಸ್ಟಿನವರು ಬಗೆಬಗೆಯಾದ ಮರದ ತುಂಡುಗಳನ್ನೂ ಔಷದಕ್ಕೆ ಉಪಯುಕ್ತವಾದ ಗಿಡ ಮೂಲಿಕೆಗಳನ್ನು, ಗೋಂದುಗಳು, ತರಹೇವಾರಿ ನಾರುಗಳು, ಜೇನು, ಮೇಣ, ಕಾಡಿನಲ್ಲಿ ದೊರೆಯುವ ವಿಶಿಷ್ಟ ಪದಾರ್ಥಗಳನ್ನೂ ಪರಿಸೆಯಾಗಿಟ್ಟುಕೊಂಡಿದ್ದರು. ಭೂಗರ್ಭಶಾಸ್ತ್ರಜ್ಞರು ತರಹೇವಾರಿ ಕಲ್ಲುಗಳನ್ನು ತಂದು ಅವುಗಳಲ್ಲಿರುವ ಅಮೂಲ್ಯ ಲೋಹಪದಾರ್ಥಗಳನ್ನು ದುರ್ಬೀನುಗಳಿಂದ ತೋರಿಸಿ ವಿವರಿಸುತ್ತಾ ನಿಂತಿದ್ದರು. ಉತ್ತಮವಾದ ಭಾರಿ ಎತ್ತುಗಳು ಅವುಗಳಿಗೆ ನೇಮಕವಾದ ಸ್ಥಳದಲ್ಲಿ ಸೇರಿದ್ದವು. ಮೂರುಕಾಲಿನ ಆಡು, ವಿಚಿತ್ರವಾದ ಟಗರು, ಕೊಂಬುಗಳುಳ್ಳ ಕೋಳಿ ಹುಂಜ, ದೇಶೀಯ ಕುದುರೆಗಳು, ಕೋಲಾರ್ ಮಿಷನ್ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ತಯಾರಾಗಿದ್ದ ಗ್ರಾಮಾಫೋನ್ ಮುಂತಾದವುಗಳು ಪ್ರದರ್ಶನ ಮಾಡಲ್ಪಟ್ಟಿದ್ದವು.

ಅಧಿಕಾರಿಗಳ ಆಗಮನವು.

ತಾ ೬ರಲ್ಲಿ ರೆವಿನ್ಯೂ ಕಮಿಷನರ್ ಸಾಹೇಬರು ದಯಮಾಡಿದರು. ಅಧಿಕಾರಿಗಳೆಲ್ಲಾ ಕಾದಿದ್ದು ಹಾರ ತುರಾಯಿ ಒಪ್ಪಿಸಿದರು. ಮೈಸೂರು ದೇಶದ ಮಂತ್ರಿಶ್ರೇಷ್ಠರಾದ ಮೆ॥ ವಿ ಪಿ ಮಾಧವರಾಯರವರು ೬ನೇ ತಾ. ಬೆಳಿಗ್ಗೆ ೯॥ ಘಂಟೆಗೆ ಮೋಟಾರ್ ಕಾರಿನಲ್ಲಿ ದಯಮಾಡಿ, ಸ್ವಲ್ಪ ಹೊತ್ತು ಬಂಗ್ಲೆಯಲ್ಲಿದ್ದು ೧೦ ಘಂಟೆಗೆ ಮೋಟಾರ್ ಕಾರಿನಲ್ಲಿ ಪ್ರದರ್ಶನಶಾಲೆಗೆ ದಯಮಾಡಿಸುವಾಗ್ಗೆ ನಾಲ್ಕಾರು ಕಡೆಗಳಿಂದ ಬಂದಿದ್ದ ಪ್ರಜೆಗಳು ತಂಡೋಪತಂಡವಾಗಿ ಇಕ್ಕಡೆಗಳಲ್ಲಿ ಕಿಕ್ಕಿರಿಯುತ್ತ ಕೂಡಿದ್ದರು. ಪೋಲೀಸು ಸಿಬ್ಬಂದಿಯು ಆಯಾ ಸ್ಥಳಗಳಲ್ಲಿ ಕ್ರಮವಾಗಿ ನಿಂತಿದ್ದರು. ಅಧಿಕಾರಿಗಳು ದಕ್ಷಿಣಕಡೆಯಲ್ಲಿ ಬಹು ದೊಡ್ಡದಾಗಿ ಕಮಾನು ಹಾಕಿಸಿದ್ದ ದ್ವಾರದ ಬಳಿ ಕಾದಿದ್ದರು. ದಿವಾನ್ ಸಾಹೇಬರವರು ರೆವಿನ್ಯೂ ಕಮಿಷನರವರು ಡೆಪ್ಯುಟಿ ಕಮಿಷನರವರು ಕೂತಿದ್ದ ಮೋಟಾರ್ ಗಾಡಿಯು ಆ ದ್ವಾರಕ್ಕೆ ಬಂದು ನಿಂತಿತು. ಅಧಿಕಾರಿಗಳು, ಸಾಹುಕಾರರು, ಶೆಟ್ಟಿವರ್ತಕರು, ನಾಲ್ಕಾರು ಕಡೆಗಳಿಂದ ಬಂದಿದ್ದ ಭಾರಿ ರೆಡ್ಡಿಗಳು ಹಾಜರಿದ್ದು, ದಿವಾನ್ ಸಾಹೇಬರವರಿಗೆ ಹಾರ ತುರಾಯಿಗಳನ್ನೊಪ್ಪಿಸಿದರು. ದಿವಾನ್ ಸಾಹೇಬರವರು ಗಾಡಿಯಿಂದಿಳಿಯಲಾಗಿ ಪ್ಲೀಡರ್ ಮೆ॥ ಪಾರ್ಥಸಾರಥಿಯವರು ಇಂಗ್ಲೀಷಿನಲ್ಲಿ ಅಡ್ರಸ್ಸು ಓದಿ ಒಪ್ಪಿಸಿದರು. ದಿವಾನ್ ಸಾಹೇಬರವರು ಸಮಯೋಚಿತವಾದ ಕೆಲವು ಮಾತುಗಳನ್ನಾಡಿ, ಅಲ್ಲಿಂದ ಪೂರ್ವಕ್ಕೆ ಹೊರಟು ದೊಡ್ಡಬಳ್ಳಾಪುರದ ನೇಯಿಗೆಯ ವಿಧವನ್ನು ಪರಾಂಬರಿಸಿ, ಕೋಳಿ ಟಗರು ಎತ್ತುಗಳನ್ನು ನೋಡಿಕೊಂಡು, ಫಾರೆಸ್ಟ್ ಪದಾರ್ಥಗಳಿಟ್ಟಿದ್ದ ಕಟ್ಟಡಕ್ಕೆ ದಯಮಾಡಿ, ಅಲ್ಲಿ ವಿಶಿಷ್ಟಪದಾರ್ಥಗಳನ್ನೂ ಪರಾಂಬರಿಸಿ, ರೇಷ್ಮೆ ತಯಾರಿಯನ್ನೂ ಭತ್ತ ಕುಟ್ಟುವ ಯಂತ್ರವನ್ನೂ ನೋಡಿಕೊಂಡು, ತರಹೇವಾರಿ ಧಾನ್ಯಾದಿಗಳನ್ನು ಪರಾಂಬರಿಸುತ್ತಾ ಮಧ್ಯದಲ್ಲಿ ನೇತ್ರಾನಂದಕರವಾಗಿ ಶೃಂಗರಿಸಿದ್ದ ಪಶ್ಚಿಮದ್ವಾರದ ದೊಡ್ಡ ಚಪ್ಪರಕ್ಕೆ ದಯಮಾಡಿಸುವಷ್ಟರಲ್ಲಿ ಫೋಟೋ ತೆಗೆಯಲ್ಪಟ್ಟಿತು. ಅವರು ಅಲ್ಲಿಂದ ಮುಂದೆ ಸಾಗಿ ಉಳಿದ ಭಾಗವನ್ನೆಲ್ಲಾ ನೋಡಿಕೊಂಡು, ಕಾರೋನೇಷನ್ ಹಾಲ್ ಕಟ್ಟಡದಲ್ಲಿಟ್ಟಿದ್ದ ಅಮೂಲ್ಯಪದಾರ್ಥಗಳನ್ನು ಪರಾಂಬರಿಸಿದರು. ಅಲ್ಲಿಟ್ಟಿದ್ದ ಕೋಲಾರ್ ಮಿಷನ್ನಿನ ಗ್ರಾಮಾಫೋನ್ ಹಾಡುತ್ತಿತ್ತು. ಎಲ್ಲಾ ಪದಾರ್ಥಗಳನ್ನೂ ರೆ॥ ಕಮಿಷನರ್, ಡೆ॥ ಕಮಿಷನರ್‌ಗಳ ಕೂಡ ಮೋಟಾರ್ ಕಾರಿನಲ್ಲಿ ಕೂತಿರುವಾಗಲೇ ಮತ್ತೆ ಫೋಟೋ ತೆಗೆಯಲಾಯಿತು. ಕಡೆಯದಾಗಿ ಈ ಯಗ್ಜಿಬಿಷನ್ ಸೆಕ್ರೆಟರಿಗಳಾದ ಮೆ॥ ನಾರಾಯಣಸ್ವಾಮಿ ಶೆಟ್ಟಿಯವರು ಪ್ರಜೆಗಳಪರವಾಗಿ ಮುಂದೆ ಬಂದು ದಿವಾನರವರನ್ನು ಕುರಿತು— ತಾವು ಇಲ್ಲಿವರೆಗೂ ಚಿತ್ತೈಸಿ ಈ ಅಲ್ಪವಾದ ಯಗ್ಜಿಬಿಷನ್ ಪರಾಂಬರಿಸಿ ನಮ್ಮಗಳನ್ನು ಪ್ರೋತ್ಸಾಹಿಸಿದ್ದಕ್ಕಾಗಿ ನಾವುಗಳೆಲ್ಲರೂ ಕೃತಾರ್ಥರಾದೆವು. ಈ ನಮ್ಮ ಕೃತಜ್ಞತೆಯುಳ್ಳ ವಂದನೆಗಳನ್ನು ಶ್ರೀಮನ್ ಮಹಾರಾಜರವರಿಗೆ ಒಪ್ಪಿಸಬೇಕೆಂದು ಕೇಳಿಕೊಂಡರು. ಗಾಡಿಯು ಮುಂದಕ್ಕೆ ಹೊರಟಿತು. ಅದೇ ಸಾಯಂಕಾಲ ೪ ಘಂಟೆಗೆ ದಿವಾನ್ ಸಾಹೇಬರವರ ಸವಾರಿಯು ಬೆಂಗಳೂರಿಗೆ ದಯಮಾಡಿಸಿತು.

೭ನೇ ತಾ. ಬೆಳಗ್ಗೆ ರೆವಿನ್ಯೂ ಕಮಿಷನರ್ ಸಾಹೇಬರವರು, ಡೆಪ್ಯುಟಿ ಕಮಿಷನರ್ ಸಾಹೇಬರವರೇ ಮುಂತಾದ ಅಧಿಕಾರಿಗಳು ದಯಮಾಡಿ ಎಲ್ಲವನ್ನೂ ಪರೀಕ್ಷಿಸಿದರು. ಸಾಯಂಕಾಲ ದೊಂಬರರ ಆಟವಾಗುತ್ತಿತ್ತು. ಮ್ಯಾಜಿಕ್ ಲ್ಯಾಂಟರ್ನ್ ತೋರಿಸಲಾಯಿತು. ಗ್ರಾಮಫೋನ್ ಹಾಡಿಸಿ, ನೋಟಕರಿಗೆ ಮನೋಲ್ಲಾಸವನ್ನುಂಟುಮಾಡಿದರು.

ಉಪನ್ಯಾಸ ಮುಂತಾದ್ದು.

೮ನೇ ತಾ ರೇಷ್ಮೆ ವಿಚಾರದ ಉಪನ್ಯಾಸವೂ ಗೋಜಾತಿಗಳ ರೋಗಾದಿಗಳ ಉಪನ್ಯಾಸವೂ ಜರುಗಿದವು. ಕಡೆಯದಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರು ಅಗ್ರಾಸನಾಧಿಪತಿಗಳಾಗಿ ಯಡ್‌ವರ್ಡ್ ಚಕ್ರವರ್ತಿಗಳವರ ಶ್ರೀಮನ್ ಮಹಾರಾಜರವರ ಹೆಸರಿನಲ್ಲಿ ಜಯಘೋಷಮಾಡಿಸಿದರು. ಈ ಕಾಲದಲ್ಲಿ ಇಂಗ್ಲಿಷ್ ಬ್ಯಾಂಡು ಮೊದಲಾದ ವಾದ್ಯಗಳು ಘೋರ್ಗರೆಯುತ್ತಿದ್ದವು. ಶ್ರೇಷ್ಠವಾದ ಮತ್ತು ಅಪರೂಪವಾದ ದನಗಳಿಗೂ ಮೇಲ್ ತರವಾದ ಇತರ ಪದಾರ್ಥಗಳಿಗೂ ಬಹುಮಾನಗಳು ಹಂಚಲ್ಪಟ್ಟವು. ಈ ಸಂತೋಷಕಾರ್ಯಗಳಿಗೆಲ್ಲಾ ಮೂಲಕಾರಣರಾದ ಅಮಲ್ದಾರ್ ಮೆ॥ ರಾಘವಾಚಾರ್ಯರ ಪ್ರಯಾಸಗಳಿಗೂ ಸೆಕ್ರೆಟರಿ ಮೆ॥ ನಾರಾಯಣಸ್ವಾಮಿ ಶೆಟ್ಟರವರ ಪ್ರಯತ್ನಗಳಿಗೂ ಸಕಲರೂ ಕೃತಜ್ಞರಾಗಿರುತ್ತಾರೆ

ಇತರ ವಿಷಯಗಳು.

ಈ ಪ್ರದರ್ಶನದ ಸಂತೋಷಕ್ಕಾಗಿ ಕೂಡಿಬಂದಿದ್ದ ಸಾವಿರಾರು ಜನಗಳಿಗೆ ಅನ್ನೋದಕಗಳಿಗೆ ತಕ್ಕ ಏರ್ಪಾಡು ಇಲ್ಲದ್ದೊಂದೇ ಕೊರತೆಯು. ಕೆಲವು ತಿಂಗಳ ಕೆಳಗೆ ನಮ್ಮ ಶ್ರೀಮನ್ ಮಹಾರಾಜರವರ ಸವಾರಿಯು ಇಲ್ಲಿಗೆ ದಯಮಾಡಿಸಿದ್ದಾಗ್ಗೆ ಆಯಾ ಕೋಮುಗಳಿಗೆ ಅನ್ನಸತ್ರಗಳನ್ನು ಏರ್ಪಾಡು ಮಾಡಿದ್ದಂತೆಯೇ ಈ ಸಮಯದಲ್ಲೂ ಈ ಗ್ರಾಮಸ್ಥರಾದ ಸಾಹುಕಾರರು ಮಾಡಿಸಿದ್ದರೆ ಅನುಕೂಲವಾಗಿತ್ತು. ಇಷ್ಟು ಸ್ವಲ್ಪಕಾಲದಲ್ಲೇ ಆ ಧರ್ಮಾತ್ಮರ ಮನಸ್ಸು ಬದಲಾಯಿಸಿತು. ಸೆಕ್ರೆಟರಿ ಮೆ॥ ನಾರಾಯಣಸ್ವಾಮಿ ಶೆಟ್ಟರವರು ಚಿಕ್ಕಬಳ್ಳಾಪುರದ ವಾಸಸ್ಥರಾದರೂ ಇಲ್ಲಿ ಭತ್ತಕುಟ್ಟುವ ಮಿಷನ್ ತರಿಸಿ ಸ್ಥಾಪಿಸಿರುತ್ತಾರೆ. ಇವರ ಪ್ರಯತ್ನವು ಬಹು ಬೇಗ ಕೈಗೂಡಿ ತುಂಬಾ ಆದಾಯಕರವಾಗಿರುವದೆಂದು ನಂಬಿಕೆಯಿದೆ. ಇವರಂತೆಯೇ ನಮ್ಮ ದೇಶೀಯ ಧನಿಕರು ಬೇರೆಬೇರೆ ಕಾರ್ಯಗಳಲ್ಲಿ ಮುಂದಾಳುಗಳಾಗಿ, ಧೈರ್ಯದಿಂದ ತಮ್ಮ ಗುಪ್ತ ಹಣವನ್ನು ತೆಗೆದು ವಿನಿಯೋಗಪಡಿಸುವವರಾದರೆ ನಮ್ಮ ದೇಶವು ಬಹು ಬೇಗ ಊರ್ಜಿತಸ್ಥಿತಿಗೆ ಬರುವದಲ್ಲದೆ, ಬಡಬಗ್ಗರ ಜೀವನಕ್ಕೂ ಧಣಿಗಳ ಆದಾಯಕ್ಕೂ ಸಹಕಾರಿಯಾಗುವದು.

ರಾಜದ್ರೋಹಕ್ಕೆ ಎರಡು ಪ್ರತೀಕಾರ ಕಾರ್ಯಗಳು.

೧ ಸಿಡಿಮದ್ದಿನ ಕಾನೂನು

ಇಂಡಿಯಾ ಗವರ್ನಮೆಂಟಿನವರು ಈ ತಿಂಗಳ ೮ ನೇ ತಾರೀಖು ಸೋಮವಾರ ಸಿಂಲಾ ಪಟ್ಟಣದಲ್ಲಿ ಹಿಂದುಸ್ಥಾನದ ಮಂತ್ರಾಲೋಚನಾ ಸಭೆಯ ಮೆಂಬರುಗಳನ್ನು ಆತುರವಾಗಿ ಕರೆಸಿಕೊಂಡು, ಹಿಂದುಸ್ಥಾನದಲ್ಲಿ ಈಗ ಕಾಣಿಸಿಕೊಂಡಿರುವ ರಾಜದ್ರೋಹ ಕೃತ್ಯಗಳನ್ನು ಅಣಗಿಸುವುದಕ್ಕೆ ಎರಡು ಕಾನೂನುಗಳನ್ನು ಕುರಿತು ಚರ್ಚೆ ಮಾಡಿ, ಆ ದಿನವೇ ಪ್ಯಾಸ್ ಮಾಡಿದರು. ಆ ಮಂತ್ರಾಲೋಚನಾ ಸಭೆಯಲ್ಲಿ ಸರ್ಕಾರಿ ಮೆಂಬರುಗಳೂ ದೇಶೀಯ ಮೆಂಬರುಗಳ ಪೈಕಿ ನಭಾಸಂಸ್ಥಾನದ ಟಿಕ್ಕಾ ಸಾಹೆಬ್, ಮುನ್ಷಿ ಮಾಧವಲಾಲ್, ನವಾಬ್ ಸೈಯದ್ ಮಹಮದ್ ಎಂಬೀ ದೊಡ್ಡ ಮನುಷ್ಯರೂ ಹಾಜರಾಗಿದ್ದರು. ಸರ್ ಹಾರ್ವೆ ಆಡಂಸನ್‌ರವರು ಮೆಂಬರುಗಳನ್ನು ಕುರಿತು ಮೊದಲನೇ ಕಾನೂನನ್ನು ವಿವರಿಸಿ ಹೇಳಿದ ಮುಖ್ಯಾಭಿಪ್ರಾಯವೇನೆಂದರೆ—

ಬಾಂಬ್ ಎಂಬ ಸಿಡಿಮದ್ದಿನ ಗುಂಡುಗಳನ್ನು ತಯಾರುಮಾಡಿ ಆ ನಾಹುತಗಳನ್ನು ಕಲ್ಪಿಸುವುದು ಹಿಂದುಸ್ಥಾನದಲ್ಲಿ ಈಗ ಪ್ರಾರಂಭವಾಗಿರುವುದರಿಂದ ಅದನ್ನು ಮೊಳಕೆಯಲ್ಲೇ ಅಣಗಿಸಬೇಕಾಗಿರುತ್ತದೆ. ಮೊದಲನೆಯದಾಗಿ ಕ್ರೂರಾತ್ಮಗಳು ಬಂಗಾಳಾ ಲೆಫ್ಟಿನೆಂಟ್ ಗವರ್ನರವರನ್ನು ಕೊಲ್ಲಬೇಕೆಂದು ಅವರು ಪ್ರಯಾಣ ಮಾಡುತ್ತಿದ್ದ ರೈಲ್ ಗಾಡಿಗೆ ಸಿಡಿಮದ್ದನ್ನು ಇಟ್ಟರು. ತರುವಾಯ ಚಂದ್ರನಗರದ ಪುರಾಧ್ಯಕ್ಷರನ್ನು ಕೊಲ್ಲುವುದಕ್ಕೆ ಸಿಡಿಮದ್ದಿನ ಗುಂಡು ಎಸೆದರು. ಅನಂತರ ಮುಜಫರ್ ಪುರದಲ್ಲಿ ಇಬ್ಬರು ಸ್ತ್ರೀಯರನ್ನು ಬಹು ಭಯಂಕರವಾಗಿ ಸಿಡಿಮದ್ದು ಎಸೆದು ಕೊಂದುಹಾಕಿದರು. ಈಚೆಗೆ ಕಲ್ಕತ್ತೆಯಲ್ಲಿ ಸಂಚಾರ ಮಾಡುವ ಟ್ರಾಂಗಾಡಿಯನ್ನು ಹಾರಿಸಿ ಅನಾಹುತ ಮಾಡಬೇಕೆಂದು ಅದೇ ಮದ್ದನ್ನು ಪ್ರಯೋಗಿಸಿದರು. ಇದಲ್ಲದೆ ಇಂಗ್ಲಿಷ್ ದೇವಸ್ಥಾನದ ಮೆಟ್ಟಲುಗಳ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಇಟ್ಟಿದ್ದರು. ಈ ಸಿಡಿಮದ್ದಿನ ಗುಂಡುಗಳ ತಯಾರಿಗೆ ಕಲ್ಕತ್ತೆಯಲ್ಲಿ ಮಾಡಿಕೊಂಡಿದ್ದ ಅಂತರಂಗದ ಕಾರ್ಖಾನೆಯೂ ಫಿತೂರಿಗಾರರ ಗುಂಪೂ ಪತ್ತೆಯಾಗಿರುತ್ತದೆ. ಸಾಲದ್ದಕ್ಕೆ ಕೆಲವು ವರ್ತಮಾನ ಪತ್ರಿಕೆಗಳಲ್ಲಿ ಕೊಲೆಗಳನ್ನು ನಡಿಸಬೇಕೆಂದು ಜನರನ್ನು ಚಿತಾವಣೆ ಮಾಡುವಂಥಾ ಬಾತ್ಮಿಗಳು ಅನೇಕವಾಗಿ ಪ್ರಕಟವಾಗುತ್ತಿವೆ. ಆದಕಾರಣ ಈಗ ಹಿಂದುಸ್ಥಾನದಲ್ಲಿ ಕಾಣಿಸಿಕೊಂಡಿರುವ ಈ ಅಪಾಯವು ಎಷ್ಟು ಮಟ್ಟಿನದೋ ವಿವರಿಸಬೇಕಾದದ್ದಿಲ್ಲ. ಈ ದುಷ್ಕಾರ್ಯವನ್ನು ನಡಿಸತಕ್ಕವರು ಅಲ್ಪ ಜನರಲ್ಲ. ಅವರೆಲ್ಲಾ ಪ್ರಾಯಸಮರ್ಥರಾದ ವಿದ್ಯಾವಂತರಾಗಿರುತ್ತಾರೆ. ಇವರನ್ನು ಮನುಷ್ಯಕಂಟಕರೆಂದು ಕರೆಯಲು ಅನುಮಾನವಿಲ್ಲ. ಇಂಥಾ ಅಪಾಯವನ್ನು ಅಣಗಿಸುವುದಕ್ಕೆ ಗವರ್ನಮೆಂಟಿನವರು ಏಕಮನಸ್ಸಿನಿಂದ ಕಾರ್ಯಸಾಧನೆ ಮಾಡಿ, ಆ ಕ್ರೂರಾತ್ಮಗಳ ಏರ್ಪಾಡುಗಳನ್ನು ನಿರ್ಮೂಲ ಮಾಡತಕ್ಕಂಥಾ ಕಾನೂನುಗಳನ್ನು ಮಾಡಬೇಕಾಗಿದೆ. ವಿಲಾಯತಿಯಲ್ಲಿ ಕಳೆದ ೧೮೮೩ ನೇ ಇಸವಿಯಲ್ಲಿ ಇಂಥಾ ಸಿಡಿಮದ್ದಿನ ಗುಂಡುಗಳ ತಯಾರಿಗೆ ಒಂದು ಮನೆಯೊಳಗೆ ಕೆಲವು ಪದಾರ್ಥಗಳೂ ಪಾತ್ರೆಗಳೂ ಸಿಕ್ಕಿದವು. ಕೂಡಲೇ ಗವರ್ನಮೆಂಟಿನವರು ಪಾರ್ಲಿಮೆಂಟ್ ಸಭೆಗಳಲ್ಲಿ ಈ ವಿಷಯವನ್ನು ಚರ್ಚೆಗೆ ತಂದು, ಅದನ್ನು ಅಣಗಿಸುವುದಕ್ಕೆ ತಕ್ಕ ಕಾನೂನನ್ನು ಒಂದೇದಿನದಲ್ಲಿ ಮಾಡಿ ಒಡನೆಯೇ ಜಾರಿಗೆ ತಂದರು. ಹಿಂದುಸ್ಥಾನದಲ್ಲೂ ಅಂಥಾ ಅಪಾಯವನ್ನು ಅಣಗಿಸುವುದಕ್ಕೆ ಕಾನೂನು ಮಾಡಬೇಕಾಗಿದೆ. ಸಿಡಿಮದ್ದಿನ ತಯಾರಿಗೆ ಅವಶ್ಯವಾದ ಯಾವ ಪದಾರ್ಥವಾಗಲಿ ಯಾವನ ಬಳಿಯಲ್ಲಾದರೂ ಸಿಕ್ಕಿದರೆ ಅವನಿಗೆ ೨೦ ವರುಷದ ಬಂಕೋಟ್‌ಸಜಾ ಜುಲ್ಮಾನೆಗಳು ವಿಧಿಸಲ್ಪಡುವಂತೆ ಹೊಸ ಕಾನೂನು ಮಾಡಬೇಕಾಗಿರುವುದು. ಗುಂಡು ಹಾರಿ ಅಪಾಯ ಸಂಭವಿಸದಿದ್ದರೂ ಅದನ್ನು ಮಾಡಿದವನಿಗೂ ಅವನ ಸಹಾಯಕರಿಗೂ ಅದೇ ಶಿಕ್ಷೆ ವಿಧಿಸಲ್ಪಡುವುದು. ಸಿಡಿಮದ್ದನ್ನು ತಯಾರುಮಾಡುವುದಕ್ಕಾಗಿ ಆ ಪದಾರ್ಥಗಳನ್ನಾಗಲಿ ಪಾತ್ರೆಗಳನ್ನಾಗಲಿ ತನ್ನ ಸ್ವಾಧೀನದಲ್ಲಿ ಪಡೆದಿದ್ದನೆಂದು ರುಜುವಾತು ಬಂದ ಪಕ್ಷಕ್ಕೆ ಅಂಥವನಿಗೆ ೨೦ ವರುಷಗಳ ಬಂಕೋಲ್ ಶಿಕ್ಷೆಯೋ ಅಥವಾ ೭ ವರುಷಗಳ ಕಠಿಣ ಸಜಾವೋ ವಿಧಿಸುವುದು ಹೆಚ್ಚೆಂದು ಯಾರೂ ಯೋಚಿಸಲಾರರು. ಅಂಥಾ ಪಾತ್ರೆಗಳನ್ನಾಗಲಿ ಪದಾರ್ಥಗಳನ್ನಾಗಲಿ ತರಿಸಿಕೊಡುವವನೂ, ತರಿಸುವಂತೆ ಸಲಹೆ ಕೊಡುವವನೂ, ಸಹಾಯ ಮಾಡುವವನೂ, ಯಾವ ವಿಧದಲ್ಲಾಗಲಿ ಸಂಬಂಧಪಟ್ಟಿರುವವನೂ ಮೇಲ್ಕಂಡ ಶಿಕ್ಷೆಯನ್ನೇ ಅನುಭವಿಸಬೇಕೆಂದು ವಿಧಿಸಿದೆ. ಆದರೆ ಗವರ್ನಮೆಂಟಿನವರು ತನಿಖೆ ಮಾಡಿ ಹುಕುಂಕೊಟ್ಟಲ್ಲದೆ ಈ ಕಾನೂನಿಗೆ ಸಂಬಂಧಪಟ್ಟ ಅಪರಾಧಗಳನ್ನು ಯಾವ ಮ್ಯಾಜಿಸ್ಟ್ರೇಟರೂ ಹಿಡಿದು ದರ್ಯಾಫ್ತು ಮಾಡಕೂಡದು. ಇದರಿಂದ ಪೋಲೀಸಿನವರು ಯಾವನೊಬ್ಬನನ್ನೂ ಹಿಡಿದು ತೊಂದರೆ ಪಡಿಸದಂತೆ ಅಡ್ಡಿಯನ್ನುಂಟುಮಾಡಿದೆ. ಈ ಕಾನೂನಿನಲ್ಲಿ ಕಂಡ ಅಪರಾಧಗಳನ್ನು ಗವರ್ನಮೆಂಟಿನವರ ಸ್ಯಾಂಕ್ಷನ್ ಪಡೆದೇ ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡಬೇಕು. ಈ ಕಾನೂನನ್ನು ಕೂಡಲೇ ಹಿಂದುಸ್ಥಾನದಲ್ಲಿ ಜಾರಿಗೆ ತರಬೇಕೆಂದು ಸೂಚಿಸಿದರು.

ಪ್ರಜಾಪಕ್ಷದ ಮೆಂಬರುಗಳ ಅಭಿಪ್ರಾಯ.

ನವಾಬ್ ಸಯ್ಯದ್ ಮಹಮದ್ ಯವರು ಇಂಥಾ ಕಾನೂನು ಜಾರಿಗೆ ಬರಬೇಕಾಯಿತಲ್ಲಾ ಎಂದು ವ್ಯಸನಪಟ್ಟು, ಮುಜಫರ್‌ಪುರದ ಕೊಲೆಯ ವಿಷಯದಲ್ಲಿ ತುಂಬಾ ಗಾಬರಿಯನ್ನು ಪ್ರಕಾಶಪಡಿಸಿ, ಘೋರತರವಾದ ಈ ಹೊಸ ಕ್ರೂರಕೃತ್ಯವು ಕಾಣಿಸಿಕೊಂಡಿರುವುದರಿಂದ ಸರ್ಕಾರದವರು ಇಂಥಾ ಕಠಿಣತರವಾದ ಕಾನೂನ್ ಮಾಡಬೇಕಾಗಿದೆ ಎಂದು ತಿಳಿಸಿದರು. ಮತ್ತು ಹಿಂದುಸ್ಥಾನದಲ್ಲಿ ಸಮಸ್ತ ಪ್ರಜೆಗಳ ಅಭಿಪ್ರಾಯವೂ ಈ ಕ್ರೂರಕೃತ್ಯವನ್ನು ಅಣಗಿಸಬೇಕೆನ್ನುವುದೇ ಎಂದೂ ಹೇಳಿದರು. ಟಿಕ್ಕಾಸಾಹೇಬರೂ ಆ ಕ್ರೂರಕೃತ್ಯಗಳ ವಿಷಯದಲ್ಲಿ ಗಾಬರಿಯನ್ನು ಪ್ರಕಾಶಪಡಿಸಿದರೂ ಈ ಕಾನೂನು ಇಷ್ಟು ಆತುರವಾಗಿ ಜಾರಿಗೆ ತರಬೇಕಾಗಿರಲಿಲ್ಲವೆಂದೂ, ಎಂಥಾ ಮ್ಯಾಜಿಸ್ಟ್ರೇಟರು ಯಾವ ಕೋರ್ಟಿನವರು ಈ ಕಾನೂನಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ಹಿಡಿದು ದರ್ಯಾಫ್ತು ಮಾಡಬೇಕೆನ್ನುವದನ್ನು ನಮೂದು ಮಾಡಬೇಕೆಂದೂ ಸೂಚಿಸಿದರು. ಮುನ್ಷಿ ಮಾಧವಲಾಲ್ ಯವರು ರಾಜಭಕ್ತಿಯನ್ನು ಪಡೆದಿರುವಂಥಾ ಯಾವ ಪ್ರಜೆಯೂ ಈ ಕಾನೂನಿಗೆ ಪ್ರತಿ ಹೇಳಲಾರನೆಂದು ತಿಳಿಸಿದರು.

ತರುವಾಯ ಈ ಸಿಡಿಮದ್ದಿನ ಕಾನೂನನ್ನು ಕೂಡಲೇ ಜಾರಿಗೆ ಬರುವಂತೆ ಸಭಿಕರೆಲ್ಲಾ ಒಪ್ಪಿ ಪ್ಯಾಸ್ ಮಾಡಿದರು

೨ ವರ್ತಮಾನ ಪತ್ರಿಕೆಯ ಕಾನೂನು.

ಸಿಡಿಮದ್ದಿನ ಗುಂಡುಗಳನ್ನು ತಯಾರುಮಾಡುವುದು ಮೇಲ್ಕಂಡ ಕಾನೂನಿನಿಂದ ನಿಲ್ಲುವಂತೆ ಆಯಿತು. ಈಗ ಇನ್ನೊಂದು ವಿಧವಾದ ಅಪಾಯವುಂಟಾಗಿದೆ. ಕೆಲವರು ವರ್ತಮಾನ ಪತ್ರಿಕೆಗಳಲ್ಲಿ ಜನರಿಗೆ ಕ್ರೂರಕೃತ್ಯಗಳನ್ನು ನಡಿಸುವಂತೆ ಪ್ರೋತ್ಸಾಹ ಚಿತಾವಣೆಗಳನ್ನು ಮಾಡುವಂಥಾ ಬಾತ್ಮಿಗಳನ್ನು ಬರೆದು ಪ್ರಕಟಿಸುತ್ತಾ, ಪ್ರಜೆಗಳಿಗೆ ಸರ್ಕಾರದವರ ಮೇಲೆ ಅಪ್ರೀತಿ ಅವಿಧೇಯತೆ ಗೊಣಗಾಟಗಳನ್ನು ಕಲ್ಪಿಸಿಕೊಡುತ್ತಿದ್ದಾರೆ. ಈ ರೀತಿ ಚಿತಾವಣೆ ಮಾಡುವಂತೆ ದುಷ್ಟವಾದ ವರ್ತಮಾನ ಪತ್ರಿಕೆಗಳ ನಿರ್ಬಂಧನ ಮಾಡಬೇಕಾಗಿದೆ. ಇದಕ್ಕೋಸ್ಕರ ಕೂಡಲೇ ಒಂದು ಕಾನೂನು ಮಾಡಿ ಜಾರಿಯಲ್ಲಿ ತರಬೇಕಾಗಿರುವುದೆಂದು ಸರ್ ಹಾರ್ವೆ ಆಡಂಸನ್ ಯವರು ಅದೇ ದಿನ ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಸೂಚಿಸಿ, ಆ ಕಾನೂನಿನ ಮಸೂದೆಯನ್ನು ಮೆಂಬರುಗಳಿಗೆ ಓದಿ ಹೇಳಿದರು. ಆಗ ಅವರು ಇನ್ನೂ ಹೇಳಿದ್ದೇನೆಂದರೆ—ಈ ವಿಧವಾಗಿ ಪತ್ರಿಕೆಗಳ ಮೂಲಕ ಜನರಲ್ಲಿ ಅಸಮಾಧಾನವನ್ನು ಹುಟ್ಟಿಸಿ ರಾಜದ್ರೋಹಕೃತ್ಯಗಳನ್ನು ಮಾಡುವಂತೆ ಪ್ರೋತ್ಸಾಹಪಡಿಸತಕ್ಕವರನ್ನು ಸರ್ಕಾರದವರು ಹಿಡಿದು ಶಿಕ್ಷಿಸುವುದಕ್ಕೆ ಈಗ ಜಾರಿಯಲ್ಲಿರುವ ಕಾನೂನೇ ಸಾಕಾಗಿದೆ. ಆದರೂ ಮೊಕದ್ದಮೆ ತಂದು ದರ್ಯಾಫ್ತು ಮಾಡಿ ಜಡ್ಜಮೆಂಟ್ ಹೇಳುವ ತನಕ ಬಹಳ ಕಾಲಾವಕಾಶವಾಗುತ್ತದೆ. ಇಷ್ಟು ದೀರ್ಘಕಾಲ ಅಂಥಾ ಪತ್ರಿಕೆಗಳು ಪ್ರಕಟವಾಗುವಂತೆ ಅವಕಾಶ ಕೊಡುವುದು ಕ್ಷೇಮಕರವಲ್ಲವು. ಆದಕಾರಣ ಅಂಥಾ ಪತ್ರಿಕೆಗಳ ನಿರ್ಬಂಧವನ್ನು ಕೂಡಲೇ ಮಾಡುವುದು ಅವಶ್ಯವಾಗಿದೆ. ಇದು ಮಾಡದಿದ್ದರೆ ಕಾರಣವನ್ನು ಅಣಗಿಸದೆ ಕಾರ್ಯವನ್ನು ತಡೆದಂತಾಗುವುದು. ಈ ರಾಜದ್ರೋಹಕೃತ್ಯಗಳಿಗೆ ಪತ್ರಿಕೆಗಳ ಬಾತ್ಮಿಗಳೇ ಕಾರಣಗಳಾಗಿರುತ್ತವೆ. ಈ ಪತ್ರಿಕೆಗಳಿಂದ ಅನೇಕ ಉತ್ಪಾತಕಾರ್ಯಗಳು ನಡೆಯಲು ಅನುಮಾನವಿಲ್ಲ. ಈಗ ಸಿಕ್ಕಿರುವ ಘಾತುಕರು ತಮ್ಮ ವಾಯಿಮೂಲಗಳಲ್ಲಿ ಪತ್ರಿಕೆಗಳ ಬಾತ್ಮಿಗಳನ್ನು ಓದಿದ್ದರಿಂದಲೇ ಕೋಪಪಟ್ಟು ಅಂಥಾ ಕೃತ್ಯಗಳನ್ನು ನಡಿಸಿದೆವೆಂದು ಧಾರಾಳವಾಗಿ ಹೇಳಿರುತ್ತಾರೆ. ಈ ವರ್ತಮಾನ ಪತ್ರಿಕೆಗಳ ಕಾನೂನು ಏನೆಂದರೆ....

ಕೊಲೆ ಮಾಡುವಂತಾಗಲಿ, ಇತರ ಕ್ರೂರಕೃತ್ಯಗಳನ್ನು ನಡಿಸುವಂತಾಗಲಿ ಚಿತಾವಣೆ ಮಾಡುವಂಥಾ ವರ್ತಮಾನ ಪತ್ರಿಕೆಯನ್ನು ಸರ್ಕಾರದವರು ಅಣಗಿಸಿಬಿಡುತ್ತಾರೆ. ಗವರ್ನಮೆಂಟಿನವರು ಹುಕುಂ ಕೊಟ್ಟ ಮೇಲೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅಂಥಾ ವರ್ತಮಾನ

ಪತ್ರಿಕೆಯ ಆಫೀಸಿನ ಮುಂದೆ ನೋಟೀಸ್ ಬಿಗಿಮಾಯಿಸಿ, ಹಿಯರಿಂಗು ಇಟ್ಟು ಎಡಿಟರ್ ಮೊದಲಾದ ಪತ್ರಿಕಾ ಕರ್ತರುಗಳನ್ನು ಕೋರ್ಟಿಗೆ ಬರಮಾಡಿಕೊಳ್ಳುವರು. ಅವಶ್ಯವೆಂದು ತೋರಿದರೆ ಮೊಕದ್ದಮೆ ನಡಿಯುವುದಕ್ಕೆ ಮೊದಲೇ ಆ ಪತ್ರಿಕಾ ಆಫೀಸನ್ನು ಮುಚ್ಚಿಸಿ, ಒಳಗಿರುವ ಅಚ್ಚಿನ ಯಂತ್ರ, ಮೊಳೆ ಮೊದಲಾದ ಸಾಧನಗಳನ್ನೆಲ್ಲಾ ಜಪ್ತಿ ಮಾಡಿಸಿ ಕಿತ್ತುಕೊಳ್ಳುವರು. ಹಿಯರಿಂಗ್ ಕಾಲದಲ್ಲಿ ಅಪರಾಧಿಯ ನಾಯ್ಯ(?), ಸಾಕ್ಷಿಗಳ ಕೈಫಿಯತ್ತು, ಜಡ್ಜಮೆಂಟು ಮುಂತಾದ್ದೆಲ್ಲಾ ಕ್ರಿಮಿನಲ್ ಪ್ರಕಾರ ನಡಿಯುವುದು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ತೀರ್ಮಾನದ ಮೇಲೆ ಅಪರಾಧಿಯು ಹದಿನೈದು ದಿನಗಳೊಳಗಾಗಿ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಳ್ಳಬಹುದು. ಅಂಥಾ ವರ್ತಮಾನ ಪತ್ರಿಕೆಯನ್ನು ಪ್ರಿಂಟು ಮಾಡುವವನೂ, ಪ್ರಕಟ ಮಾಡುವವನೂ ಗವರ್ನಮೆಂಟಿನಲ್ಲಿ ಬರೆದುಕೊಟ್ಟಿರುವ ಡಿಕ್ಲರೇಷನ್ನನ್ನು ಗವರ್ನಮೆಂಟಿನವರು ರದ್ದು ಮಾಡುವರು. ಅಂದರೆ ಅವನು ಮತ್ತೆ ಯಾವ ಸ್ಥಳದಲ್ಲೂ ಪತ್ರಿಕೆಯನ್ನು ಪ್ರಿಂಟು ಮಾಡದಂತೆಯೂ, ಪ್ರಕಟಿಸದಂತೆಯೂ ಆಗಿ ಹೋಗುವದು. ಪ್ರಿಂಟಿಂಗ್ ಆಫೀಸಿಗೆ ಕೊಡುವ ವಾರಂಟನ್ನು ಸಬ್ ಇನ್ಸ್‌ಪೆಕ್ಟರಿಗಿಂತ ಹೆಚ್ಚಿನ ದರ್ಜೆಯ ಪೊಲೀಸ್ ಅಧಿಕಾರಿಯು ಜಾರಿಮಾಡುವನು.

ಸರ್ ಹಾರ್ವಿ ಆಡಂಸನ್‌ರವರು ನೇಟ್ಯಂಡ ಕೌನ್ಸಿಲ್ ಮೆಂಬರುಗಳನ್ನು ಕುರಿತು ಇನ್ನೂ ಹೇಳಿದ್ದೇನೆಂದರೆ—ವರ್ತಮಾನ ಪತ್ರಿಕೆಗಳಿಗಿರುವ ನೈಜವಾದ ಯಾವ ಸ್ವಾತಂತ್ರ್ಯಗಳೂ ಈ ಕಾನೂನಿನಿಂದ ಕಡಿಮೆಯಾಗುವುದಿಲ್ಲ. ಪ್ರಜೆಗಳಿಗೆ ಕೊಟ್ಟಿರುವಂಥಾ ಯಾವ ಹಕ್ಕಿಗೂ ಈ ಕಾನೂನು ಕುಂದಕ ಮಾಡುವುದಿಲ್ಲ. ಕೊಲೆ ಮಾಡಬೇಕೆಂದಾಗಲಿ ಇತರ ಕ್ರೂರಕೃತ್ಯಗಳನ್ನು ನಡಿಸಬೇಕೆಂದಾಗಲಿ ಬೋಧನೆ ಕೊಡುವಂಥಾದ್ದನ್ನು ಈ ಕಾನೂನು ಅಣಗಿಸುತ್ತದೆ. ಪ್ರಪಂಚದೊಳಗೆ ಯಾವ ರಾಜ್ಯದಲ್ಲೂ ಯಾವ ವರ್ತಮಾನ ಪತ್ರಿಕೆಗೂ ಹಾಗೆ ಬೋಧನೆ ಮಾಡತಕ್ಕ ಸ್ವಾತಂತ್ರ್ಯವಿರುವುದಿಲ್ಲ. ಈ ಕಾನೂನು ನ್ಯಾಯವಾಗಿಯೂ ಯೋಗ್ಯವಾಗಿಯೂ ನಡಿಸಲ್ಪಡುವಂಥಾ ವರ್ತಮಾನ ಪತ್ರಿಕೆಗಳ ಗೋಜಿಗೆ ಬರುವುದಿಲ್ಲ. ಅಯೋಗ್ಯವಾಗಿಯೂ ಹಾನಿಕರವಾಗಿಯೂ ನಡಿಸಲ್ಪಡುವ ಪತ್ರಿಕೆಗಳನ್ನೆಲ್ಲಾ ಅದು ಅಣಗಿಸುತ್ತದೆ.

ಆಕ್ಷೇಪಣೆಗಳು.

ಪ್ರಜಾಪಕ್ಷದ ಮೆಂಬರುಗಳ ಪೈಕಿ ನವಾಬ್ ಸೈಯದ್ ಮಹಮದ್‌ರವರು ಈ ಕಾನೂನಿನ ಮುಖ್ಯೋದ್ದೇಶವನ್ನು ಸರಿ ಎಂದು ಒಪ್ಪಿಕೊಂಡರೂ, ಅದರ ಕೆಲವು ಸೆಕ್ಷನ್‌ಗಳನ್ನು ಒಪ್ಪದೆಹೋದರು. ಈ ಕಾನೂನಿನ ಹದ್ದುಬಸ್ತು ಇಷ್ಟೇ ಎಂದು ವಿಧಿಸಲ್ಪಟ್ಟಿಲ್ಲವೆಂತಲೂ, ಇದರಿಂದ ಕೆಡುಕಿಗೆ ಅವಕಾಶವಾಗುವುದೆಂತಲೂ ಹೇಳಿದರು. ಇದಲ್ಲದೆ ಪ್ರಿಂಟಿಂಗ್ ಆಫೀಸನ್ನೇ ಜಪ್ತಿಮಾಡಿ ಸರ್ಕಾರದವರು ಕಿತ್ತುಕೊಳ್ಳುವುದು ತರವಲ್ಲವೆಂದೂ, ಅಪೀಲ್ ಕಾಲ ೧೫ ದಿನ ಕೊಟ್ಟಿರುವುದು ಬಹು ಸ್ವಲ್ಪವೆಂದೂ, ಮುಖ್ಯವಾಗಿ ಈ ಕಾನೂನು ವಿಷಯದಲ್ಲಿ ತಮಗೆ ತೋರುವ ಆಕ್ಷೇಪಣೆಗಳನ್ನೆಲ್ಲಾ ಯೋಚಿಸಿ ತಿಳಿಸುವುದಕ್ಕೆ ವ್ಯವಧಾನವೇ ಇಲ್ಲವೆಂದೂ ಆಕ್ಷೇಪಣೆ ಮಾಡಿದರೂ, ಕಾನೂನು ಆಗಬೇಕಾದ್ದೇನೋ ಅವಶ್ಯವೆಂದು ಹೇಳಿದರು.

ನಭಾ ಸಂಸ್ಥಾನದ ಟಿಕ್ಕಾ ಸಾಹೇಬ್‌ರವರು—ಈ ಕಾನೂನು ಬಹು ವಿಶೇಷವಾದದ್ದು. ಇಂಥಾದ್ದನ್ನು ಇಷ್ಟು ಆತುರವಾಗಿ ಈ ಸಿಂಲಾ ಪಟ್ಟಣದಲ್ಲಿ ಪ್ಯಾಸ್ ಮಾಡಕೂಡದು. ಅದರ ಪ್ರತಿ ಒಂದು ಭಾಗವನ್ನು ಚರ್ಚಿಸಿ ಆಕ್ಷೇಪಣೆ ಮಾಡುವುದಕ್ಕೆ ಸಮಯ ಸಾಲಲಿಲ್ಲ. ಇನ್ನೂ ಸ್ವಲ್ಪ ದೀರ್ಘಕಾಲ ಪರ್ಯಾಲೋಚಿಸದೆ ಗವರ್ನಮೆಂಟಿನವರು ಈ ಕಾನೂನನ್ನು ಪ್ಯಾಸ್ ಮಾಡಲಾರರೆಂದು ಊಹಿಸುತ್ತೇನೆ, ಎಂಬೀ ರೀತಿಯಾಗಿ ಹೇಳಿ, ತಮಗೆ ತೋರಿದ ಕೆಲವು ಬದಲಾವಣೆಗಳನ್ನು ಸೂಚಿಸಿದರು.

ಪಂಡಿತ್ ಮದನ ಮೋಹನ ಲಾಲ್‌ರವರು—ಸಿಡಿ ಮದ್ದಿನ ಗುಂಡನ್ನು ಯಾರೂ ತಯಾರು ಮಾಡದಂತೆ ಬೇಗ ಕಾನೂನು ಆಗ ಬೇಕಾದದ್ದೇನೋ ಸಹಜ. ಆದರೆ ಪತ್ರಿಕೆಗಳ ಪ್ರಾಗ್ಬಂಧನವನ್ನು ಉಂಟುಮಾಡುವ ಈ ಎರಡನೆಯ ಕಾನೂನು ಇಷ್ಟು ಅವಸರವಾಗಿ ಆಗಬೇಕಾದ ಅಗತ್ಯ ಕಾಣುವುದಿಲ್ಲ. ಇನ್ನೊಂದು ತಿಂಗಳ ತನಕಲಾದರೂ ಈ ಮಸೂದೆಯನ್ನು ಚರ್ಚೆಯಲ್ಲಿಟ್ಟಿದ್ದರೆ ಕೆಡುಕೇನೂ ಇಲ್ಲವೆಂದು ತೋರುತ್ತದೆ. ಆದರೂ ಕಾನೂನಿನ ಉದ್ದೇಶವನ್ನು ಒಪ್ಪಿಕೊಳ್ಳುತ್ತೇನೆ. ಪ್ರಜೆಗಳೆಲ್ಲಾ ಗವರ್ನಮೆಂಟಿನವರ ಪರವಾಗಿದ್ದಾರೆನ್ನುವುದಕ್ಕೆ ಸಂಶಯವಿಲ್ಲ ಎಂಬೀ ರೀತಿಯಾಗಿ ಹೇಳಿದರು.

ಕಡೆಯಲ್ಲಿ ವೈಸ್‌ರಾಯ್ ಪ್ರಭುಗಳು ಎರಡು ಕಾನೂನುಗಳ ಮುಖ್ಯಾಭಿಪ್ರಾಯವನ್ನೂ, ಈಗ ಹಿಂದೂಸ್ಥಾನದಲ್ಲಿ ಹುಟ್ಟಿರುವ ಗಲಿಬಿಲಿಯನ್ನೂ, ಕ್ರೂರ ಕೃತ್ಯಗಳನ್ನೂ, ಪ್ರಜಾ ನೆಮ್ಮದಿಯನ್ನು ಕಾಪಾಡುವುದೇ ಗವರ್ನಮೆಂಟಿನವರ ಪ್ರಥಮ ಧರ್ಮವೆಂಬುವುದನ್ನೂ ಕುರಿತು ಮಂತ್ರಾಲೋಚನಾ ಸಭೆಯ ಮೆಂಬರುಗಳಿಗೆ ವಿವರಿಸಿ ಹೇಳಿ, ಅವರೆಲ್ಲರ ಅಭಿಪ್ರಾಯದಂತೆ ಈ ಎರಡನೆಯ ಕಾನೂನನ್ನೂ ಪ್ಯಾಸ್ ಮಾಡಿ, ಜಾರಿಗೆ ತಂದಿರುತ್ತಾರೆ.

ಶ್ರೀಮನ್ಮಹಾರಾಜರವರ ವರ್ಧಂತಿಯು.

ರಾಜಧಾನಿಯಲ್ಲಿ ನಡೆದ ಉತ್ಸವಾದಿಗಳು.

ಅರಮನೆಯೊಳಗೆ ದರ್ಬಾರು.

ಕಳೆದ ತಾ. ೧೦ನೇ ಬುಧವಾರ ಶ್ರೀಮನ್ಮಹಾರಾಜರವರ ೨೫ನೇ ವರುಷದ ವರ್ಧಂತಿ ಉತ್ಸವವು ರಾಜಧಾನಿಯಲ್ಲಿ ಬಹು ಸಂಭ್ರಮವಾಗಿ ನೆರವೇರಿತು. ಆ ದಿನ ಬೆಳಿಗ್ಗೆ ಕೋಟೆ ಕೊತ್ತಲಗಳಿಂದ ಗೌರವಾರ್ಥವಾದ ೨೫ ತೋಪುಗಳು ಹಾರಿಸಲ್ಪಟ್ಟವು. ಅರಮನೆಯಲ್ಲಿ ಶ್ರೀಮನ್ ಮಹಾರಾಜರವರು ನಿತ್ಯಕಟ್ಟಳೆಯ ಸ್ನಾನಾಹ್ನಿಕಾದಿಗಳನ್ನು ತೀರಿಸಿಕೊಂಡು, ಕುಲದೇವತೆಯಾದ ಶ್ರೀಚಾಮುಂಡಾಂಬೆಯ ಪೂಜೆ ನಮಸ್ಕಾರಗಳನ್ನು ನಡಿಸಿ, ದಿವ್ಯವಾದ ವಸ್ತ್ರಭೂಷಣಾದ್ಯಲಂಕೃತರಾಗಿ ೧೦ ಗಂಟೆಗೆ ಅಂಬಾವಿಲಾಸವೆಂಬ ಕಳಕಳಿಸುವ ದರ್ಬಾರ್ ಮಂದಿರಕ್ಕೆ ಚಿತ್ತೈಸಿ, ವಾದ್ಯಘೋಷವಾಗುತ್ತಿರುವಲ್ಲಿ ಶ್ರೇಷ್ಠತರವಾದ ಭದ್ರಾಸನವನ್ನಲಂಕರಿಸಿದರು. ಕುಲಗುರುಗಳಾದ ಶ್ರೀಪರಕಾಲ ಮಠದ ಸ್ವಾಮಿಗಳು ದಯಮಾಡಿ, ವಿಧಿಪೂರ್ವಕವಾಗಿ ಶ್ರೀಮನ್ಮಹಾರಾಜರವರಿಂದ ಪಾದಪೂಜಾದಿಗಳನ್ನು ಸ್ವೀಕರಿಸಿ, ಆಶೀರ್ವಾದ ಮಾಡಿ ತೆರಳಿದರು. ತರುವಾಯ ವೈದಿಕ ಮಂಡಲಿಯವರು ಶ್ರೀಮನ್ಮಹಾರಾಜರವರಿಗೆ ಫಲಗಳನ್ನೊಪ್ಪಿಸಿ, ಆಶೀರ್ವಚನಪೂರ್ವಕವಾದ ಮಂಗಳಾಕ್ಷತೆಗಳನ್ನು ಹಾಕಿದರು. ಲೌಕಿಕರು ಅಂದರೆ ಸರ್ದಾರರು, ರಾಜಬಂಧುಗಳು(?), ದಿವಾನರವರು, ಕೌನ್ಸಿಲ್ ಮೆಂಬರುಗಳು, ಸರ್ಕಾರಿ ಇಲಾಖೆಗಳ ಮುಖ್ಯಸ್ಥರುಗಳು, ಛೀಫ್ ಕೋರ್ಟ್ ಜಡ್ಜುಗಳು, ಸೆಕ್ರೆಟರಿಗಳು, ಡೆಪ್ಯುಟಿ ಮತ್ತು ಅಸಿಸ್ಟೆಂಟ್ ಕಮಿಷನರುಗಳು, ಮುನಸೀಪರು(?), ಪೇಷ್ಕಾರರು, ಶೆಟ್ಟಿವರ್ತಕರೇ ಮೊದಲಾದ ಎಲ್ಲಾ ಕೋಮುಗಳ ದೊಡ್ಡ ಮನುಷ್ಯರು, ಮಿಲ್ಟ್ರಿ ಇಲಾಖೆಯ ಹುದ್ದೆದಾರರು ಮೊದಲಾದವರೆಲ್ಲಾ ಶ್ರೀಮನ್ ಮಹಾರಾಜರವರಿಗೆ ರಾಜಭಕ್ತಿ ಪೂರ್ವಕವಾಗಿ ಮುಜರೆಮಾಡಿ ಸಾಲುಸಾಲಾಗಿ ಕುಳಿತರು. ಸಂಗೀತಗಾರರ ಹಾಡುಗಾರಿಕೆಯೂ ನರ್ತಕಿಯರ ನಾಟ್ಯವೂ ಭಟರಾಜರ ಸ್ತುತಿಪಾಠಗಳೂ ಮನೋಜ್ಞವಾಗಿ ನಡೆಯುತ್ತಿರುವಲ್ಲಿ ರಾಜಪುರೋಹಿತರು ಶ್ರೀಮನ್ಮಹಾರಾಜರವರಿಂದ ಶಾಸ್ತ್ರೋಕ್ತರೀತಿಯಲ್ಲಿ ಫಲಪೂಜೆ ಫಲದಾನಾದಿಗಳನ್ನು ಮಾಡಿಸಿದರು. ಏಳುಮಂದಿ ಸುಮಂಗಲಿಯರು ಶ್ರೀಮನ್ಮಹಾರಾಜರವರಿಗೆ ಫಲಾದಿಮಂಗಳದ್ರವ್ಯಗಳನ್ನೊಪ್ಪಿಸಿ, ಮಂಗಳಾರತಿಯನ್ನು ಬೆಳಗಿದರು. ಸರ್ದಾರ್ ಕಾಂತರಾಜೇ ಅರಸಿನವರು ಶ್ರೀಮನ್ಮಹಾರಾಜರವರಿಗೆ ಹಾರ ತುರಾಯಿಗಳನ್ನೊಪ್ಪಿಸಿದ ಮೇಲೆ ವೈದಿಕರಿಗೂ ಲೌಕಿಕರಿಗೂ ಪುಷ್ಪಮಾಲಿಕೆ ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟು, ಮುಜರೆಗಳು ನಡೆದವು. ಸಲಾಂ ಬಾಜಾ ಆಗುತ್ತಿರುವಲ್ಲಿ ಶ್ರೀಮನ್ ಮಹಾರಾಜರವರು ದರ್ಬಾರನ್ನು ಮುಕ್ತಾಯ ಮಾಡಿ ಚಿತ್ತೈಸಿದರು. ರಾಜಧಾನಿಯ ಮಸೀದಿಗಳಲ್ಲೂ, ದೇವಸ್ಥಾನಗಳಲ್ಲೂ, ಈ ಸಂಸ್ಥಾನದ ಸಕಲನಾದ ಮುಜರಾಯಿ ದೇವಸ್ಥಾನ ಮಸೀದಿಗಳಲ್ಲೂ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನಾ ಪೂರ್ವಕಗಳಾದ ಅಭಿಷೇಕ ಅರ್ಚನೆ ಉತ್ಸವಾದಿಗಳು ನಡೆದವು. ಮರುದಿನ ರಾಜಧಾನಿಯಲ್ಲಿ ವರ್ಧಂತಿ ಕಟ್ಲೆಯ ಸಮಾರಾಧನೆಯು ಜರುಗಿತು. ಸಾವಿರಾರು ಬಡಬಗ್ಗರು ಸುಭೋಜನ ಮಾಡಿದರು.

ವರ್ಧಂತಿ ಕಟ್ಲೆಯ ಮೆರವಣಿಗೆಯು.

ಮಧ್ಯಾಹ್ನೋತ್ತರ ಸುಮಾರು ೫ ಗಂಟೆಗೆ ಶ್ರೀಮನ್ಮಹಾರಾಜರವರು ಸಕಲ ಸಮ್ಮಾನ ಬಿರುದು ಸೈನ್ಯಗಳೊಡನೆ ಮೆರವಣಿಗೆ ಹೊರಟರು. ರಸ್ತೆಗಳ ಉಭಯಪಾರ್ಶ್ವಗಳಲ್ಲೂ ಬಾವುಟಗಳೂ ತೋರಣಾದಿಗಳೂ ಕಟ್ಟಿ ಅಲಂಕಾರಮಾಡಲ್ಪಟ್ಟಿದ್ದವು. ವರ್ತಕರು ತಮ್ಮ ಅಂಗಡಿಗಳ ಮುಂದೆಯೂ ಮೇಲ್ಭಾಗದಲ್ಲೂ ನಾನಾ ಪ್ರಕಾರವಾಗಿ ಶೃಂಗಾರ ಮಾಡಿ, ನೇತ್ರಾನಂದಕರವಾಗಿ ಮಾಡಿದ್ದರು. ಉತ್ಸವವು ಅರಮನೆಯ ಕರೀಕಲ್ಲು ತೊಟ್ಟಿಯಿಂದ ಹೊರಟು, ಪಶ್ಚಿಮ ಕೋಟೆ ಬಾಗಿಲು ಮಾರ್ಗ ಬಂದು, ಕರ್ಜನ್ ಪಾರ್ಕಿನೊಳಕ್ಕೆ ದಕ್ಷಿಣ ದ್ವಾರದಿಂದ ಪ್ರವೇಶಿಸಿ, ವಿಕ್ಟರ್ ರಸ್ತೆಯಲ್ಲಿ ಹೊರಟು, ದೊಡ್ಡ ಗಡಿಯಾರದ ಬಳಿ ಪಾರ್ಕಿನಿಂದ ಹೊರಟು(?) ಪೇಟೆಯನ್ನು ಪ್ರವೇಶಿಸಿ, ನೆಟ್ಟಗೆ ಉದ್ದಕ್ಕೂ ಹೋಗಿ ಬಲಗಡೆಗೆ ತಿರುಗಿಕೊಂಡು, ಕಮಾನೀ ದರ್ವಾಜಾ ಎಂಬ ದ್ವಾರವನ್ನು ದಾಟಿ, ಗವರ್ನಮೆಂಟ್ ಹೌಸ್ ಬಂಗಲೆಯನ್ನು ತಲುಪಿತು. ಉತ್ಸವವು ಚತುರಂಗಬಲ ಸರ್ವೋತ್ತಮವಾದದ್ದಾಗಿತ್ತು. ಸಮಸ್ತ ಬಿರುದುಗಳೂ, ಜಲ್ಲೋಭಟ್ಟ(?) ರಾಜಬಂಧುಗಳೂ ಇಂಗ್ಲಿಷ್ ಮತ್ತು ಕರ್ನಾಟಕ್ ಬ್ಯಾಂಡು ಮತ್ತು ತಂಜಾವೂರು ಮಾಲಗದವರೂ ಇದ್ದರು. ಶ್ರೀಮನ್ಮಹಾರಾಜರವರು ದಿವ್ಯವಾದ ಕೆಂಪು ಅಂಗರೇಖು ಅಮೌಲ್ಯವಾದ ರುಮಾಲು ಶಿರಪೇಚು ಹಸ್ತಾಭರಣ ಕಂಠಾಭರಣಗಳೇ ಮೊದಲಾದವುಗಳಿಂದಲಂಕೃತರಾಗಿ ಶ್ರೇಷ್ಠವಾದ ಅಶ್ವವನ್ನು ಹತ್ತಿ ಶ್ವೇತಚ್ಛತ್ರಿ ಚಾಮರಗಳನ್ನು ಹಿಡಿಸಿಕೊಂಡು ಮೆರವಣಿಗೆಯ ಮಧ್ಯಭಾಗದಲ್ಲಿ ಬರುತ್ತಿದ್ದರು. ಕರ್ಜನ್ ಪಾರ್ಕಿನಲ್ಲಿ ಉತ್ಸವವು ಯೂರೋಪಿಯನ್ ಕ್ಲಬ್ಬಿನ ಬಳಿಗೆ ಬಂದ ಒಡನೆಯೇ ಅದರ ಬಿಸಲು ಮಾಳಿಗೆಯಲ್ಲಿ ನಿಂತಿದ್ದ ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಸರ್ದಾರರೂ ದೊರೆಸಾನಿಗಳೂ ಶ್ರೀಮನ್ ಮಹಾರಾಜರವರ ಮೇಲೆ ಪುಷ್ಪಗಳ ಮಳೆಗರೆದು, ಮಹೋದಾತ್ತ ಜಯಧ್ವನಿಗಳನ್ನು ಮಾಡಿ ತಮ್ಮ ಆನಂದಾತಿಶಯವನ್ನು ಪ್ರಕಾಶಪಡಿಸಿದರು. ಅಲ್ಲಿಂದ ಮುಂದಕ್ಕೂ ಅಂಗಡಿ ಬೀದಿಯಲ್ಲಿ ಅನೇಕ ವರ್ತಕ ದೊಡ್ಡ ಮನುಷ್ಯರು ಶ್ರೀಮನ್ಮಹಾರಾಜರವರಿಗೆ ಹಾರ ತುರಾಯಿಗಳನ್ನೊಪ್ಪಿಸಿ, ತಮ್ಮ ರಾಜಭಕ್ತಿಯನ್ನು ಪ್ರಕಾಶಮಾಡಿದರು. ಗವರ್ನಮೆಂಟ್ ಹೌಸ್ ಎಂಬ ಬಂಗಲೆಯ ಬಾಗಿಲಲ್ಲಿ ರೆಸಿಡೆಂಟರೇ ಮೊದಲಾದ ಸರ್ದಾರರೂ ದಿವಾನರೇ ಮುಂತಾದ ಅಧಿಕಾರಿಗಳೂ ಶ್ರೀಮನ್ ಮಹಾರಾಜರವರನ್ನು ಎದುರುಗೊಂಡು ಒಳಕ್ಕೆ ಬಿಜಮಾಡಿಸಿದರು. ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡ ಮೇಲೆ ಶ್ರೀಮನ್ಮಹಾರಾಜರವರು ಅಶ್ವಾರೂಢರಾಗಿ ಮೈದಾನಿಗೆ ದಯಮಾಡಿ, ದೀವಟಿಗೆಗಳ ಮತ್ತು ಹಗಲುಬತ್ತಿಗಳ ಬೆಳಕಿನಲ್ಲಿ ಸೈನಿಕರ ಕವಾತು ಮುಂತಾದ್ದನ್ನು ನೋಡಿ ಪರಾಂಬರಿಸಿದರು. ಅಲ್ಲಿ ಗೌರವಾರ್ಥವಾದ ತೋಪುಗಳೂ ಸಂತೋಷಸೂಚಕವಾದ ಸುರಟುಗಳೂ ಆದವು. ಸೈನಿಕರೆಲ್ಲಾ ಕ್ರಮವಾಗಿ ಎದುರಿಗೆ ಬಂದು ಶ್ರೀಮನ್ಮಹಾರಾಜರವರಿಗೆ ಪದ್ಧತಿಯ ಪ್ರಕಾರ ಮುಜರೆ ಮಾಡಿದರು. ಸಲಾಂ ಬಾಜಾ ಆದ ನಂತರ ಶ್ರೀಮನ್ಮಹಾರಾಜರವರು ಹಿಂತಿರುಗಿ ಬಂಗಲೆಗೆ ದಯಮಾಡಿ, ಯೂರೋಪಿಯನ್ ಜನರ ಕೂಡ ಸ್ವಲ್ಪ ಹೊತ್ತು ಸಂಭಾಷಣೆ ಮಾಡುತ್ತಿದ್ದು, ಮೆರವಣಿಗೆ ಹೊರಟು, ರಾತ್ರಿ ಸುಮಾರು ೧೦ ಗಂಟೆಗೆ ಅರಮನೆಗೆ ಚಿತ್ತೈಸಿ, ಶಾಸ್ತ್ರವತ್ತಾಗಿ ಆಗತಕ್ಷತೆ ನಡೆದ ಮೇಲೆ ಆ ದಿನದ ಉತ್ಸವಾದಿಗಳನ್ನು ಮುಕ್ತಾಯ ಮಾಡಿದರು.

ಈ ವರುಷ ಈ ಉತ್ಸವವು ತುಂಬಾ ಕೋಲಾಹಲದೊಡನೆ ನಡಿಯಿತು. ಮಳೆಯಾಗಲಿ ಮೋಡವಾಗಲಿ ಇಲ್ಲದೆ ಪಟ್ಟಣವೆಲ್ಲಾ ಕಳಕಳಿಸುತ್ತಿತ್ತು. ಸಾವಿರಾರು ಪ್ರಜೆಗಳು ರಾಜಭಕ್ತಿ ಪೂರಿತರಾಗಿ ರಾಜಬೀದಿಗಳಲ್ಲಿ ಕಿಕ್ಕಿರಿಯುವಂತೆ ನಿಂತು ಶ್ರೀಮನ್ಮಹಾರಾಜರವರನ್ನೂ ಈ ನೇತ್ರಾನಂದಕರವಾದ ಉತ್ಸವದ ವೈಭವವನ್ನೂ ನೋಡಿ ಮುದಾನ್ವಿತರಾದರು(?). ಆ ರಾತ್ರಿ ರಾಜಧಾನಿಯಲ್ಲಿ ನಡೆದ ದೀಪೋತ್ಸವವು ಬಹಳ ವಿಸ್ತರಣೆಯಾದದ್ದಾಗಿಯೂ ಅತ್ಯಂತ ರಮಣೀಯವಾದದ್ದಾಗಿಯೂ ಇತ್ತು. ಪೋಲೀಸ್ ಏರ್ಪಾಡು ತೃಪ್ತಿಕರವಾಗಿತ್ತು.

ಇತರ ವಿಷಯಗಳು.

ಮರುದಿನ ಅಂದರೆ ಗುರುವಾರ ಬೆಳಿಗ್ಗೆ ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವದ ಸಂಭ್ರಮಕ್ಕಾಗಿ ದಿವಾನ್ ಪೇ॥ ವಿ. ಪಿ. ಮಾಧವ ರಾವ್, ಸಿ. ಐ. ಇ. ಯವರು ಮುಖ್ಯ ಮುಖ್ಯವಾದ ದೊಡ್ಡ ಮನುಷ್ಯರನ್ನೆಲ್ಲಾ ಕರೆಸಿಕೊಂಡು, ತಮ್ಮ ಬಂಗಲೆಯಲ್ಲಿ ಬಹು ವಿಶೇಷವಾದ ಔತಣವನ್ನು ಮಾಡಿಸಿದರು. ಆ ರಾತ್ರಿಯೂ ಅಲ್ಲಿಂದೀಚೆಗೆ ಭಾನುವಾರದ ವರೆಗೆ ಪ್ರತಿ ರಾತ್ರಿಯೂ ಅರಮನೆಯ ಅಂಬಾವಿಲಾಸ ತೊಟ್ಟಿಯಲ್ಲಿ ಶ್ರೀಮನ್ಮಹಾರಾಜರವರು ಚಿತ್ತೈಸಿ ದರ್ಬಾರ್ ನಡಿಸಿದರು. ಆಗ್ಗೆ ಪದ್ಧತಿಯಂತೆ ನಜರುಮುಜರೆಗಳು ನಡೆದವು. ಶುಕ್ರವಾರ ರಾತ್ರಿ ದರ್ಬಾರ್ ಆದ ತರುವಾಯ ಮುಖ್ಯರಾದ ಅಧಿಕಾರಸ್ಥರಿಗೆಲ್ಲಾ ಅರಮನೆಯಲ್ಲೇ ಶ್ರೀಮನ್ಮಹಾರಾಜರವರ ವರ್ಧಂತೀ ಕಟ್ಲೆಯ ದಿವ್ಯವಾದ ಔತಣವು ಜರುಗಿತು.

ಅತಿಥಿ ಸತ್ಕಾರಾದಿಗಳು.

ಈ ವರ್ಧಂತಿ ಉತ್ಸವದ ನಿಮಿತ್ತ ಶ್ರೀಮನ್ಮಹಾರಾಜರವರು ಅನೇಕ ಯೂರೋಪಿಯನ್ ಸರ್ದಾರರಿಗೆ ಆಹ್ವಾನಪತ್ರಿಕೆಗಳನ್ನು ಕಳುಹಿಸಿದ್ದರು. ಆ ಪೈಕಿ ಸುಮಾರು ೧೫೫ ಮಂದಿ ಸಾಹೇಬ್ ಜನರು ರಾಜಧಾನಿಗೆ ಬಂದು ಗವರ್ನಮೆಂಟ್ ಹೌಸಿನಲ್ಲಿ ಶ್ರೀಮನ್ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದ್ದಾರೆ. ಇವರ ಸಂತೋಷಾರ್ಥವಾಗಿ ಕುದುರೆ ಜೂಜುಗಳು, ಪೋಲೋ ಎಂಬ ಚೆಂಡಾಟದ ಪಂದ್ಯ, ಗಾಲ್ಫ್, ಕ್ರಿಕೆಟ್ಸ್ ಎಂಬೀ ಆಟಗಳನ್ನು ಪಂದ್ಯಗಳನ್ನೂ ಕಲ್ಪಿಸಿರುತ್ತಾರೆ. ಯೂರೋಪಿಯನ್ ಅತಿಥಿಗಳಿಗೆಲ್ಲಾ ಶನಿವಾರ ರಾತ್ರಿ ಔತಣ ನಡಿಯಿತು. ಅವರು ೨೦ನೇ ತಾರೀಖು ಶನಿವಾರದ ದಿನ ಇಲ್ಲಿಂದ ಸ್ವಸ್ಥಳಗಳನ್ನು ಕುರಿತು ಪ್ರಯಾಣ ಮಾಡುವರಾಗಿದ್ದಾರೆ.

ಶ್ರೀಮನ್ ಮಹಾರಾಜರವರ ಔದಾರ್ಯವು.

ಪ್ರಜಾಪ್ರತಿನಿಧಿ ಸಭೆಗೆ ದಯಪಾಲಿಸಿದ ವಿಶೇಷ ಹಕ್ಕು.

ಮೈಸೂರ ಗೆಜೆಟ್ ವಿಶೇಷ ಪತ್ರಿಕೆ.

ನಂಬರ್ ೧೦೨, ಮೊಕ್ಕಾಂ ಮೈಸೂರು, ೧೦ ನೇ

ಜೂನ್ ೧೯೦೮ ನೇ ಇಸವಿ

ಮೈಸೂರು ನ್ಯಾಯವಿಧಾಯಕ ಸಭೆಗೆ ಕೆಲವು ಮೆಂಬರುಗಳನ್ನು ಚುನಾವಣೆಯಿಂದ ತೆಗೆದುಕೊಳ್ಳುವದರ ಮೂಲಕ ಆ ಸಭೆಯ ಅಸ್ತಿಭಾರವನ್ನು ವಿಸ್ತಾರಗೊಳಿಸಿ(?) ಬದಲಾವಣೆ ಮಾಡಬಹುದೆಂದು ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರ ಗೌರ್ನಮೆಂಟಿನವರು ಅಭಿಪ್ರಾಯಪಟ್ಟಿರುತ್ತಾರೆ. ಸಂಸ್ಥಾನದಲ್ಲಿರುವ ಲೋಕಲ್ ಮತ್ತು ಮ್ಯುನಿಸಿಪಲ್ ಬೋರ್ಡುಗಳ ಮತ್ತು ಸಾಮಾನ್ಯವಾಗಿ ಪ್ರಜೆಗಳ ಮನೋಭಿಪ್ರಾಯಗಳನ್ನು ಸೂಚಿಸುವ ಮತ್ತು ಚುನಾಯಿಸಲ್ಪಟ್ಟ ಮೆಂಬರುಗಳಿಂದಲೇ ಸಂಪೂರ್ಣವಾಗಿ ಕೂಡಿದ ಮೈಸೂರು ಪ್ರಜಾಪ್ರತಿನಿಧಿಸಭೆಯ ಸ್ವಭಾವವನ್ನೂ ಮತ್ತು ನ್ಯಾಯವಿಧಾಯಕ ಸಭೆಗೆ ಕೆಲವು ಮೆಂಬರುಗಳನ್ನು ಚುನಾಯಿಸಲು ಪ್ರಜಾಪ್ರತಿನಿಧಿ ಸಭೆಗೆ ಅಪ್ಪಣೆ ಕೊಡಬಹುದೆಂದು ಧಾರಾಳವಾಗಿ ಸೂಚಿಸಲ್ಪಟ್ಟ ಅಭಿಪ್ರಾಯವನ್ನೂ ಗಮನಕ್ಕೆ ತಂದು, ಗೌರ್ನಮೆಂಟಿನವರು, ಪ್ರಜಾಪ್ರತಿನಿಧಿ ಸಭೆಯವರಿಂದ ಚುನಾಯಿಸಲ್ಪಟ್ಟ ಇಬ್ಬರನ್ನು ನ್ಯಾಯವಿಧಾಯಕ ಸಭೆಗೆ ಮೆಂಬರುಗಳಾಗಿ ಸೇರಿಸಿಕೊಳ್ಳಲು ಅಪ್ಪಣೆಮಾಡಿರುತ್ತಾರೆ. ಈ ಉದ್ದೇಶವನ್ನಿಟ್ಟುಕೊಂಡು ನ್ಯಾಯವಿಧಾಯಕ ಸಭೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಇಬ್ಬರು ಮೆಂಬರುಗಳನ್ನು ಚುನಾವಣೆ ಮಾಡಬಹುದಾದ ವಿಷಯದಲ್ಲಿ ೧೯೦೭ನೇ ಇಸವಿಯ ಮೈಸೂರು ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನ್ ೫ ನೇ ಸೆಕ್ಷನ್ ಅನುಸರಿಸಿ, ಈ ಕೆಳಗೆ ನಮೂದಾಗುವ ನಿಬಂಧನೆಗಳನ್ನು ಗೌರ್ನಮೆಂಟಿನವರು ಮಾಡಿರುತ್ತಾರೆ.

ನ್ಯಾಯವಿಧಾಯಕ ಸಭೆಗೆ ಮೆಂಬರುಗಳ ಚುನಾವಣೆ ಬಗ್ಗೆ ನಿಬಂಧನೆಗಳು:—

೧. ನ್ಯಾಯವಿಧಾಯಕ ಸಭೆಗೆ ಇಬ್ಬರು ಮೆಂಬರುಗಳನ್ನು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಅಭಿಪ್ರಾಯದ ಮೇರೆ ಗೌರ್ನಮೆಂಟಿನವರು ನೇಮಿಸಬಹುದು.

೨. ಹಾಗೆ ನೇಮಿಸಲು ಶಿಫಾರಸ್ ಮಾಡಲ್ಪಡುವವರು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಾಗಿರಬೇಕು. ಅವರಲ್ಲಿ ಒಬ್ಬರು [ಮೈಸೂರು, ಹಾಸನ, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಿಂದ ಕೂಡಿದ] ಸಂಸ್ಥಾನದ ಪಶ್ಚಿಮ ಡಿವಿಜನ್ನಿಂದಲೂ, ಮತ್ತೊಬ್ಬರು [ಬೆಂಗಳೂರು, ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಿಂದ ಕೂಡಿದ] ಪೂರ್ವ ಡಿವಿಜನ್ನಿಂದಲೂ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟವರಾಗಿರಬೇಕು.

೩. (೧) ದಸರಾ ಮಹೋತ್ಸವಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆಯು ನೆರೆದಿರುವಾಗ, ಸದರೀ ಸಭೆಯವರು ನ್ಯಾಯವಿಧಾಯಕ ಸಭೆಗೆ ಮೆಂಬರುಗಳನ್ನು ಚುನಾಯಿಸುವ ಉದ್ದೇಶ್ಯ ಮೀಟಿಂಗು ಸೇರಿ ಅಂಥಾ ಮೀಟಿಂಗಿನಲ್ಲಿ ಹಾಜರಿದ್ದು ಮೆಂಬರುಗಳು ಕೊಡುವ ವೋಟುಗಳ ಸ್ಪಷ್ಟವಾದ ಆಧಿಕ್ಯವನ್ನು ಅನುಸರಿಸಿ ಶಿಫಾರಸ್ ಮಾಡಲ್ಪಡತಕ್ಕದ್ದು. (೨) ಪ್ರಜಾಪ್ರತಿನಿಧಿ ಸಭೆಯು ನೆರೆದಿರುವ ಕಾಲದಲ್ಲಿ ಗೌರ್ನಮೆಂಟಿನವರು ಗೊತ್ತುಮಾಡುವ ಕಾಲ ಮತ್ತು ಸ್ಥಳದಲ್ಲಿ ಅಂಥಾ ಮೀಟಿಂಗು ಸೇರತಕ್ಕದ್ದು. (೩) ಅಂಥಾ ಮೀಟಿಂಗಿನಲ್ಲಿ ಗೌರ್ನಮೆಂಟಿನವರಿಂದ ನೇಮಿಸಲ್ಪಟ್ಟ ಒಬ್ಬ ಆಫೀಸರು ಹಾಜರಿದ್ದು, ಮೆಂಬರುಗಳಿಂದ ಕೊಡಲ್ಪಡುವ ವೋಟುಗಳನ್ನು ಬರೆದುಕೊಂಡು ಚುನಾಯಿಸಲ್ಪಟ್ಟವರ ಹೆಸರುಗಳನ್ನು ಗೌರ್ನಮೆಂಟಿಗೆ ರಿಪೋರ್ಟ್ ಮಾಡತಕ್ಕದ್ದು.

೪. ಮೇಲೆ ಹೇಳಿದ ರೀತ್ಯಾ ಪ್ರಜಾಪ್ರತಿನಿಧಿ ಸಭೆಯವರ ಅಭಿಪ್ರಾಯದಂತೆ ನೇಮಕವಾದ ಮೆಂಬರಿನ ಸ್ಥಾನವು ಖಾಲಿಯಾದಲ್ಲದೆ

ಇತರಕಾರಣದಿಂದ ಖಾಲಿಯಾದಲ್ಲಿ ಪ್ರಜಾಪ್ರತಿನಿಧಿ ಸಭೆಯು ಪುನಃ ಸೇರಿದಾಗ ಮಾಡುವ ಶಿಫಾರಸಿನಂತೆ ಭರ್ತಿಯಾಗತಕ್ಕದ್ದು. ಅಂಥಾ ಖಾಲಿ ಸ್ಥಾನಕ್ಕೆ ನೇಮಿಸಲ್ಪಡುವ ಮೆಂಬರು, ಮೊದಲಿದ್ದ ಮೆಂಬರು ಪ್ರಜಾಪ್ರತಿನಿಧಿ ಸಭೆಗೆ ಯಾವ ಡಿವಿಜನ್ನಿಂದ ಚುನಾಯಿಸಲ್ಪಟ್ಟಿದ್ದರೋ ಆ ಡಿವಿಜನ್ನಿಂದಲೇ ಸದರಿ ಸಭೆಗೆ ಚುನಾಯಿಸಲ್ಪಟ್ಟಿರಬೇಕು.

೫ ನ್ಯಾಯವಿಧಾಯಕ ಸಭೆಗೆ ನೇಮಿಸಲು ಪ್ರಜಾಪ್ರತಿನಿಧಿ ಸಭೆಯಿಂದ ಶಿಫಾರಸು ಮಾಡಲ್ಪಟ್ಟವರಲ್ಲಿ ಯಾರನ್ನಾದರೂ ಗೌರ್ನಮೆಂಟಿನವರು ಒಪ್ಪದಿದ್ದಲ್ಲಿ ಇನ್ನೊಬ್ಬರನ್ನು ಮೇಲಿನ ನಿಬಂಧನೆಗಳನ್ನು ಅನುಸರಿಸಿ ಶಿಫಾರಸು ಮಾಡಲು ಪ್ರಜಾಪ್ರತಿನಿಧಿ ಸಭೆಗೆ ಅಪ್ಪಣೆ ಮಾಡಬಹುದು.

ಹುಕುಂ ಬಮೋಜಿಬ್,
ಕೆ. ಎಸ್. ಚಂದ್ರಶೇಖರ ಅಯ್ಯರ್,
ಜನರಲ್ ಮತ್ತು ರೆವಿನ್ಯು ಇಲಾಖಾ ಸೆಕ್ರೆಟರಿಯವರು.

ಯೂರೋಪ್ಯನರಿಗೆ ನಡೆದ ಔತನವು.

ಭೋಜನವಾದ ಮೇಲೆ ಬ್ರಿಟಿಷ್ ರೆಸಿಡೆಂಟರವರು ಶ್ರೀಮನ್ಮಹಾರಾಜರವರಿಗೆ ಆಯುರಾರೋಗ್ಯಾದಿಗಳನ್ನು ಬಯಸಿ ಒಂದು ಭಾಷಣವನ್ನು ಮಾಡಿದರು. ಮೈಸೂರು ಮಹಾರಾಜರುಗಳು ಅತಿಥಿಗಳನ್ನು ಬಹಳ ಧಾರಾಳವಾಗಿ ಸತ್ಕರಿಸುವದರಲ್ಲಿ ಹೆಸರು ಪಡೆದಿದ್ದಾರೆಂತಲೂ, ಮಹಾರಾಜರವರು ಬಂದಿರುವ ಅತಿಥಿಗಳಿಗೆ ಆಟಪಾಟಗಳನ್ನು ಕಲ್ಪಿಸಿ ಅವರಿಗೆ ಸ್ವಲ್ಪವೂ ಕೊರತೆಯಾಗದಂತೆ ನೋಡಿಕೊಳ್ಳುವದಕ್ಕೆ ಏರ್ಪಾಡು ಮಾಡಿ ಆ ಹೆಸರನ್ನು ಇನ್ನೂ ಶಾಶ್ವತಪಡಿಸಿರುತ್ತಾರೆಂತಲೂ, ಶ್ರೀಮನ್ಮಹಾರಾಜರು ಅತಿಥಿಗಳ ಸುಖಸಂತೋಷಗಳಿಗೋಸ್ಕರ ಎಷ್ಟು ಶ್ರದ್ಧೆಯುಳ್ಳ ಏರ್ಪಾಡುಗಳನ್ನು ಮಾಡಿಸಿರುತ್ತಾರೋ ತಮ್ಮ ಸಂಸ್ಥಾನವನ್ನು ಆಳುವದರಲ್ಲಿ ಪ್ರಜೆಗಳ ಕ್ಷೇಮಕ್ಕೋಸ್ಕರವಾಗಿಯೂ ಅದೇ ಶ್ರದ್ಧೆಯನ್ನು ತೋರಿಸಿ ತಾವೂ ಸಂತೋಷವಾಗಿ ತಮ್ಮ ಪ್ರಜೆಗಳನ್ನು ಸಂತೋಷಪಡಿಸಿರುತ್ತಾರೆಂತಲೂ ಮತ್ತು ಇತರ ಪ್ರದೇಶಗಳಲ್ಲಿ ಯೂರೋಪ್ಯನರಿಗೂ, ದೇಶೀಯರಿಗೂ ಅಂತರ್ಯಗಳು ಹ್ಯಾಗಾದರೂ ಇರಲಿ, ಮೈಸೂರು ಸಂಸ್ಥಾನದಲ್ಲಿ ಮಾತ್ರ ಉಭಯತ್ರರಿಗೂ ಅತ್ಯಂತ ಸ್ನೇಹಭಾವವಿರುತ್ತದೆಂತಲೂ ಹೇಳಿದರು.

ಶ್ರೀಮನ್ಮಹಾರಾಜರವರ ಉತ್ತರ

ಶ್ರೀಮನ್ಮಹಾರಾಜಾವರು ರೆಸಿಡೆಂಟರನ್ನು ಕುರಿತು ಹೇಳಿದ್ದೇನೆಂದರೆ:— ನಮ್ಮ ತಂದೆಯವರು ಮೈಸೂರು ಮಹಾಪ್ರಭುಗಳೂ ಅವರ ಯೂರೋಪ್ಯನ್ ಸ್ನೇಹಿತರಿಗೆ ಪರಸ್ಪರ ಪ್ರೀತಿಯು ಹುಟ್ಟುವಂತೆ ಮಾಡಿದರು. ಅವರು ಹಾಕಿಕೊಟ್ಟಿರುವ ಮೇಲ್ಪಂಕ್ತಿಯನ್ನು ನಾವು ಅನುಸರಿಸಿ ನಡೆಸಿಕೊಂಡು ಬರುವದು ನಮ್ಮ ಕರ್ತವ್ಯವೆಂದು ಭಾವಿಸುತ್ತೇವೆ. ಮೈಸೂರು ಸಂಸ್ಥಾನವು ಬ್ರಿಟಿಷ್ ಸರ್ಕಾರದಿಂದ ಉಪಕಾರವನ್ನು ಪಡೆದಿದೆ ಮತ್ತು ಆ ಉಪಕಾರವನ್ನು ಸಾರ್ಥಕಮಾಡಿಕೊಂಡಿದೆ. ಈ ಪ್ರಕಾರ ಮೈಸೂರು ಸಂಸ್ಥಾನಕ್ಕೂ ಬ್ರಿಟಿಷ್ ಸರ್ಕಾರಕ್ಕೂ ಉಂಟಾಗಿರುವ ಪರಸ್ಪರ ಸ್ನೇಹವು ಈಗ ೧೦೦ ವರ್ಷಗಳಿಂದಲೂ, ಕಷ್ಟಕಾಲದಲ್ಲಿಯೂ, ಸಂತೋಷಕಾಲದಲ್ಲಿಯೂ, ಸರ್ಕಾರಿ ಅಧಿಕೃತಗಳನ್ನು ಮಾಡುವಾಗಲೂ ಹೊರಗಡೆ ಆಟಪಾಟಗಳಲ್ಲಿ ಸೇರುವಾಗಲೂ ವೃದ್ಧಿಯಾಗಿ ಸ್ಥಾಪಿಸಲ್ಪಟ್ಟಿದೆ. ಈ ಸ್ನೇಹವು ನಿರಂತರದಲ್ಲಿಯೂ ಬೆಳೆಯಲಿ ಎಂಬುದೇ ಮೈಸೂರು ಸಂಸ್ಥಾನದ ಮತ್ತು ಅದರ ಅಧಿಪತಿಯ ಮುಖ್ಯ ಕೋರಿಕೆಯಾಗಿದೆ ಎಂಬುವೇ

ತಾಲ್ಲೂಕುಗಳಲ್ಲಿ ನಡೆದ ಉತ್ಸವಾದಿಗಳು.

ಸಿರಾ ತಾಲ್ಲೂಕು ಮಡಲೂರು

ಜೂನ್ ೧೦ನೇ ತಾ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ಸಂಭ್ರಮಕ್ಕಾಗಿ ಸಿರಾ ತಾಲ್ಲೂಕು ಮಡಲೂರು ಗ್ರಾಮದ ಪಟೇಲರು, ಶ್ಯಾನುಭೋಗರು, ವರ್ತಕರು, ರೈತರು ಮೊದಲಾದವರು ಸಭೆಯನ್ನು ಏರ್ಪಡಿಸಿದ್ದರು. ಶ್ರೀಮನ್ಮಹಾರಾಜರವರಿಂದಲೂ ಬ್ರಿಟಿಷ್ ರಾಜ್ಯಭಾರದಿಂದಲೂ ಪ್ರಜಾಸೌಖ್ಯಕ್ಕಾಗಿ ಉಂಟಾಗಿರುವ ವಿಷಯಗಳನ್ನು ಕುರಿತು ಸ್ಕೂಲ್ ಮಾಸ್ಟರ್ ಕೆ ವೆಂಕಟರಾಮಯ್ಯನವರಿಂದ ಉಪನ್ಯಾಸ ಮಾಡಲ್ಪಟ್ಟಿತು. ಬಾಲಕರೆಲ್ಲರೂ ಕರತಾಡನದೊಡನೆ ಮಹಾರಾಜರಿಗೆ ಜಯವಾಗಲಿ ಎಂಬ ಜಯಘೋಷವನ್ನು ಕೂಗಿದರು. ಅನಂತರ ಮೆ॥ ಶ್ಯಾನುಭೋಗ ಕೃಷ್ಣಪ್ಪನವರು, ವೈದಿಕ ಲೌಕಿಕ ಮಾನನೀಯರುಗಳು, ವರ್ತಕರು, ರೈತರು ಮೊದಲಾದವರು ದಿವ್ಯಾಭಿರಕ್ಷೆ ಯಾವಾಗಲೂ ಜಾಗ್ರತವಾಗುತ್ತಿರಲಿ ಎಂದು ಪಟ್ಟಿಯಾಗಿ ಕೂಗಿದರು. ತರುವಾಯ ಸ್ಕೂಲ್ ರಿಪೋರ್ಟ್ ಓದಲ್ಪಟ್ಟಿತು. ಯಥೋಚಿತವಾದ ಬಹುಮಾನಗಳು ಬಾಲಕರಿಗೆ ಹಂಚಲ್ಪಟ್ಟವಲ್ಲದೆ, ಸಭೆಯಲ್ಲಿ ಸೇರಿದ್ದವರಿಗೆ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟವು. ಸ್ಕೂಲ್ ಮುಂದೆ ಜಯಸೂಚಕವಾದ ಒಂದು ಬಾವುಟವು ಪ್ರಾತಃಕಾಲ ೬ ಗಂಟೆಯಿಂದ ಸಾಯಂಕಾಲ ೬ ಗಂಟೆಯ ವರೆಗೂ ನಿಲ್ಲಿಸಲ್ಪಟ್ಟಿತ್ತು.

ಚಿಕ್ಕಮಗಳೂರು ತಾಲ್ಲೂಕು ಬೆಳವಾಡಿಗ್ರಾಮ.

ಈ ಮಾಹೆ ತಾ. ೧೦ ನೇ ಬುಧವಾರ ಚಿಕ್ಕಮಗಳೂರು ತಾಲ್ಲೂಕು ಬೆಳವಾಡಿ ಗ್ರಾಮದಲ್ಲಿ ಮ॥ ಪಟೇಲ್ ವೆಂಕಟದಾಸಪ್ಪನವರಿಂದ ನಿರ್ಮಿತವಾದ ಶ್ರೀಮದಭಿನವ ಶ್ರೀ ಸಚ್ಚಿದಾನಂದ ವನದಲ್ಲಿ ರಚಿತವಾದ ಚಪ್ಪರವು ನಾನಾ ಪ್ರಕಾರವಾಗಿ ಅಲಂಕರಿಸಲ್ಪಟ್ಟು, ಅತಿ ಮನೋಹರವಾದ ಶ್ರೀಜಗದ್ಗುರು ಸಚ್ಚಿದಾನಂದ ಶಿವಾಭಿನವ ಶ್ರೀನೃಸಿಂಹ ಭಾರತಿ ಸ್ವಾಮಿಗಳವರ ಮತ್ತು ಶ್ರೀಮನ್ಮಹಾರಾಜಾ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಆಕೃತಿಪ್ರದರ್ಶಕ ಪಟಗಳು ಉಚಿತಾಸನದಲ್ಲಿ ಅಲಂಕರಿಸಿ ಇಡಲ್ಪಟ್ಟು ಸುಲಂಕೃತವಾಗಿ ರಾಜಿಸುತ್ತಾ ಇದ್ದವು. ಸ್ಥಳೀಯ ಅಧಿಕಾರಿಗಳಾದ ಮ॥ ಶ್ಯಾಮಾವಧಾನಿಗಳು, ಮ॥ ಮಲ್ಲಪ್ಪಯ್ಯನವರು, ಶ್ಯಾ॥ ವೆಂಕಣ್ಣಯ್ಯನವರು, ಶ್ಯಾ॥ ಹಿರಣ್ಣಯ್ಯನವರು, ನಾಗರಸಯ್ಯನವರು, ಕಂ ರಾಮಣ್ಣನವರು, ಮುಂತಾದ ವೈದಿಕಮಾನನೀಯರುಗಳೆಲ್ಲ ಅತ್ಯಾಸಕ್ತಿಯಿಂದ ಸಭಾಯೋಗ್ಯವಾದ ಉಡುಪುಗಳಿಂದಲೂ ಮೇಲ್ಕಂಡ ಮನೋಹರವಾದ ಮಂಟಪವನ್ನು ಸೇರಿ ಉಚಿತಾಸನಗಳನ್ನು ಅಲಂಕರಿಸಿದರು. ಸರ್ವಸಮ್ಮತದಂತೆ ಮೆ॥ ಗು ಮಲ್ಲಪ್ಪಯ್ಯನವರು ಅಗ್ರಾಸನಾಧೀನರಾಗಿ ನಮ್ಮ ಪ್ರಭುಗಳವರ ಈ ಉತ್ಸವದ ವಿಷಯದಲ್ಲಿ ಸಕಲರಿಗೂ ಇರಬೇಕಾದ ಆದರಕ್ಕೆ ಕಾರಣವನ್ನು ವ್ಯಕ್ತಗೊಳಿಸಿದರು. ಅನಂತರ ಪ್ರಭುಗಳವರ ಆಳ್ವಿಕೆಯಲ್ಲಿ ತೋರಿಬರುವ ಸೌಲಭ್ಯವನ್ನು ಕುರಿತು ಉಪನ್ಯಾಸವನ್ನು ಬಹು ಸಂತೋಷದಿಂದ ಓದಿ ಹೇಳಿದರು. ನೋಟಕರ ಮನವು ಅತಿ ಆನಂದವಾಗಿ ಮಹಾರಾಜರವರನ್ನು ಕೊಂಡಾಡುತಾ ಇದ್ದರು. ಅನಂತರ ಪ್ರಭುಗಳವರ ಶ್ರೇಯಃಪ್ರಾರ್ಥನಾರೂಪವಾದ ಕಂದಪದ್ಯಗಳು ಹಾಡಿಸಲ್ಪಟ್ಟು ಶ್ರೇಯಃಪ್ರಾರ್ಥನಾ ಜಯಘೋಷವು ಬಹು ದೂರದವರಿಗೂ ಆನಂದವಾಗಿ ಕೇಳಿಸುತ್ತಾ ಇತ್ತು. ನೆರೆದಿದ್ದ ಸಭಿಕರಿಗೆ ಗಂಧಪುಷ್ಪ ತಾಂಬೂಲಗಳೊಂದಿಗೆ ಫಲಾಹಾರ ಪದಾರ್ಥಗಳು ವಿನಿಯೋಗಿಸಲ್ಪಟ್ಟು, ದೇವಾಲಯಗಳಿಗೂ ದಯಮಾಡಿ, ದೇವರ ಸನ್ನಿಧಿಯಲ್ಲಿ ಸಂಗೀತ ವಾದ್ಯಗಳೊಂದಿಗೆ ಪ್ರಭುಗಳವರ ಆಯುರಾರೋಗ್ಯಗಳು ದಿನೇ ದಿನೇ ಅಭಿವೃದ್ಧಿಯಾಗಲೆಂದು ಸಕಲರೂ ಪ್ರಾರ್ಥನೆ ಮಾಡಿ, ಮಂಗಳಾರತಿಯನ್ನು ನಡಿಸಿ ಪ್ರಸಾದವನ್ನು ಸ್ವೀಕರಿಸಿ ಅತಿ ಸಂಭ್ರಮದಿಂದ ಎಲ್ಲರೂ ಗೃಹಗಳಿಗೆ ತೆರಳಿದರು.

ನಂಜನಗೂಡು

೧೦ನೇ ತಾ. ಬುಧವಾರ ಮಧ್ಯಾಹ್ನ ಚಾಮುಂಡಿ ದೇವಸ್ಥಾನದ ಹತ್ತಿರ ಇರುವ ಮೈದಾನದಲ್ಲಿ ಇಲ್ಲಿನ ಸರ್ಕಾರಿ ಅಧಿಕಾರಿಗಳೂ, ಮುಖಂಡರುಗಳೂ, ಸಾಹುಕಾರರೂ ಚಂದಾ ಹಣ ಕೂಡಿಸಿ ಸ್ಕೂಲ್ ಬಾಲಕ ಬಾಲಿಕೆಯರನ್ನು ಬಹಳ ಸಂತೋಷಪಡಿಸಿದರು. ಮೊದಲು ಮಹಾರಾಜರವರ ತಸ್ವೀರನ್ನು ಒಂದು ಕಡೆ ಇಟ್ಟು ಅದಕ್ಕೆ ಹೂವಿನ ಮಾಲೆಯನ್ನು ಹಾಕಿದರು. ಅನಂತರ ದೊಂಬರು ತಮ್ಮ ಚಮತ್ಕಾರದ ವಿದ್ಯೆಗಳನ್ನೂ ಶಕ್ತಿಸಾಮರ್ಥ್ಯಗಳನ್ನೂ ತೋರ್ಪಡಿಸಿದರು. ಈ ಮಧ್ಯೆ ಇಲ್ಲಿನ ಬ್ಯಾಂಡ್ ವಾದ್ಯಗಾರರು ಮತ್ತು ಶಿವಗಂಗೆಯಲ್ಲಿರುವ ಪಂಚವರ ಬ್ಯಾಂಡ್ ವಾದ್ಯಗಾರರು ಇಂಪಾದ ರಾಗಗಳನ್ನು ನುಡಿಸುತ್ತಾ ಇದ್ದರು. ಹುಡುಗರಿಂದ ಹಾರುವ ಓಡುವ ಆಟಗಳನ್ನು ಆಡಿಸಿದರು. ಕೆಲವರನ್ನು ಮಡಿಕೆಯಲ್ಲಿ ನೀರು ತುಂಬಿಸಿಕೊಟ್ಟು ಓಡಿಸಿದರು. ಇದಲ್ಲದೆ ಕುಸ್ತಿಯಾಟಗಳೂ ನಡೆದವು. ಈ ತಮಾಷೆಯನ್ನು ನೋಡಲು ನೂರಾರು ಜನರು ನೆರೆದಿದ್ದರು. ಆಟಗಳು ತೀರಿದ ಮೇಲೆ ಮಕ್ಕಳೆಲ್ಲರಿಗೂ ಮಿಠಾಯಿ, ಹಣ್ಣು ಮುಂತಾದ್ದನ್ನು ಹಂಚಿದರು. ಈ ಆಟಗಳನ್ನು ಮುನ್ಸಿಫರು, ಡಾಕ್ಟರು, ಅಮಲ್ದಾರರು, ಸಬ್ ರಿಜಿಸ್ಟ್ರಾರು ಮುತುವರ್ಜಿ ವಹಿಸಿ ನಡಿಸಿದರು. ಗೆದ್ದವರಿಗೆ ಸಬ್ ಡಿವಿಜನ್ ಸಾಹೇಬರು ಬಹುಮಾನಗಳನ್ನು ಕೊಟ್ಟರು. ಈ ವಿಧವಾದ ಸಂತೋಷವು ಈ ಊರಲ್ಲಿ ನಡೆದದ್ದು ಇದೇ ಮೊದಲು. ಇನ್ನು ಮುಂದೆ ಇದು ಇನ್ನೂ ಅಭಿವೃದ್ಧಿಯಾದೀತೆಂದು ನಂಬುತ್ತೇನೆ.

ಈ ಪ್ರಾಂತ್ಯ ಒಳ್ಳೆ ಮಳೆಯಾಯಿತು. ೩-೪ ದಿನಗಳಿಂದ ಜಡಿ ಮಳೆಯಾಗುತ್ತಾ ಇದೆ. ಹೋದ ವಾರ ದೇವಸ್ಥಾನದ ಹತ್ತಿರ ಒಬ್ಬ ಹುಡುಗನು ರೈಲಿಗೆ ಸಿಕ್ಕಿ ಸಾಯುತ್ತಿದ್ದನು. ಆದರೆ ಡ್ರೈವರು ಗಾಡಿಯನ್ನು ಕೂಡಲೆ ನಿಲ್ಲಿಸಿದ್ದರಿಂದ ಸ್ವಲ್ಪ ಗಾಯವಾಯಿತು. ನಷ್ಟವೇನೂ ಇಲ್ಲ.

ಚಾಮರಾಜನಗರ

ಇದೇ ಜೂನ್ ತಾ ೧೦ನೇ ಬುಧವಾರ ಶ್ರೀಮನ್ಮಹಾರಾಜರವರ ವರ್ಧಂತಿಯಾದದ್ದರಿಂದ ಆ ಉತ್ಸವದ ದಿವಸವನ್ನು ಸಂತೋಷವಾಗಿ ಕಳೆಯುವುದು ಅವಶ್ಯಕವೆಂದು ಗೊತ್ತು ಮಾಡಿ ಇಲ್ಲಿನ ಗವರ್ನಮೆಂಟ್ ಸ್ಕೂಲ್ ಕಟ್ಟಡದಲ್ಲಿ ಬಾಲಕರೂ ಬಾಲಿಕೆಯರೂ ಮಾಸ್ಟರುಗಳೂ ಸಾಯಂಕಾಲ ಸಭೆಸೇರಿದ್ದರು. ಸಭಾ ಮಧ್ಯೆ ಶ್ರೀಮನ್ಮಹಾರಾಜರವರ ಭಾವಚಿತ್ರವೂ, ಶ್ರೀಮದ್ಯುವರಾಜರವರ ಭಾವಚಿತ್ರವೂ ಪುಷ್ಪಹಾರಗಳಿಂದ ಅಲಂಕರಿಸಲ್ಪಟ್ಟು ಶೋಭಿಸುತ್ತಿದ್ದವು. ಮ॥ ಬಿ. ಎನ್ ರಾಮರಾಯರವರು ಸಭೆಯ ಅಗ್ರಾಸನವನ್ನು ವಹಿಸಿದರು. ಗರ್ಲ್ಸ್ ಸ್ಕೂಲ್ ಹೆಡ್ ಮಾಸ್ಟರ್ ಮೆ॥ ನರಸಿಂಹಯ್ಯನವರು ಸಭಿಕರಿಗೆ ರಾಜಭಕ್ತಿಪ್ರದರ್ಶಕವಾದ ಉಪನ್ಯಾಸವನ್ನು ಮಾಡಿದರು. ಗುಂಡಪ್ಪ ಚಿಕ್ಕಯ್ಯನವರು ವಿದ್ಯಾರ್ಥಿಗಳಿಗೂ ಮತ್ತು ವಿದ್ಯಾರ್ಥಿನಿಯರಿಗೂ ಉಪಯುಕ್ತವಾದ ಉಪನ್ಯಾಸವನ್ನು ಮಾಡಿ, ಆ ದಿವಸ ವರ್ಧಂತಿಯಾದ್ದರಿಂದ ಸಂತೋಷಸೂಚಕವಾಗಿ ಪ್ರದರ್ಶನ ಮಾಡಲು ೫ ಸೆಂಟರು ಬಾಲಕರಿಗೂ ಮತ್ತು ಬಾಲಿಕೆಯರಿಗೂ ಸಕ್ಕರೆ ಹಣ್ಣುಗಳನ್ನು ಹಂಚುವಂತೆ ಏರ್ಪಾಡು ಮಾಡಿದರು. ತರುವಾಯ ಮಹಾರಾಜರವರ ಶ್ರೇಯಃಪ್ರಾರ್ಥನಾರೂಪವಾದ ಹಾಡುಗಳು ಬಾಲಕರಿಂದಲೂ ಮತ್ತು ಬಾಲಿಕೆಯರಿಂದಲೂ ಮಧುರವಾಗಿ ಗಾನಮಾಡಲ್ಪಟ್ಟವು. ಸಭಾಧ್ಯಕ್ಷರಾದ ಮೆ॥ ರಾಮರಾವ್ ಬಿ ಎ ಯವರು ಎದ್ದು ಕಾಲೋಚಿತವಾದ ಕೆಲವು ವಾಕ್ಯಗಳನ್ನು ಗಂಭೀರಸ್ವರದಿಂದ ನುಡಿದರು, ಆ ದಿನ ಅವರು ವಿದ್ಯಾರ್ಥಿ ಸಂಘಕ್ಕೆ ತಿಂಡಿಯನ್ನು ಹಂಚುವುದರ ಮೂಲಕ ತಮ್ಮ ರಾಜಭಕ್ತಿಯನ್ನು ಪ್ರದರ್ಶನ ಮಾಡಲು ಕೆಲವು ಅನುಕೂಲವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ಹೆಡ್ ಮಾಸ್ಟರ್ ಮೆ॥ ಶ್ರೀನಿವಾಸರಾಯರಿಗೆ ವಂದನೆಯನ್ನು ಅರ್ಪಿಸಿದರು. ಕೂಡಲೆ ಹೆಡ್ ಮಾಸ್ಟರ ಪರವಾಗಿ ಒಬ್ಬ ಅ॥ ಮಾಸ್ಟರು ಎದ್ದು ಪ್ರತಿವಂದನೆಯನ್ನು ಅರ್ಪಿಸಿದರು. ಎ. ವಿ ಸ್ಕೂಲ್ ವಿದ್ಯಾರ್ಥಿಯೊಬ್ಬನಿಂದ ರಾಜರಿಗೂ ಮತ್ತು ರಾಜಕುಟುಂಬದವರಿಗೂ ತಪ್ಪಾಳೆ ತಟ್ಟುವುದರ ಮೂಲಕ ಶ್ರೇಯಃಪ್ರಾರ್ಥನೆ ಮಾಡಲ್ಪಟ್ಟಿತು. ಹೂವು, ಸಕ್ಕರೆ, ಬಾಳೆಹಣ್ಣುಗಳನ್ನು ವಿನಿಯೋಗಮಾಡಿದನಂತರ ಸಭೆಯು ಮುಕ್ತಾಯವಾಯಿತು. ಇಂಥಾ ಉತ್ಸವವು ವರ್ಧಂತಿಯ ದಿವಸ ನಡೆದದ್ದು ಈ ಊರಿಗೆ ಇದೇ ಮೊದಲು. ಮೆ॥ ರಾಮರಾಯರು ಮೊದಲು ಮಾಡಿದ್ದು ಮೇಲ್ಪಂಕ್ತಿಯಾಗಿದೆ.

ದಾವಣಗೆರೆ.

ಇದೇ ತಿಂಗಳು ೧೦ ನೇ ತಾ. ಬುಧವಾರ ನಮ್ಮ ಮಹಾರಾಜರವರ ೨೫ ನೇ ವರ್ಷದ ವರ್ಧಂತಿಯನ್ನು ಕೊಂಡಾಡುವ ಉದ್ದೇಶ್ಯವಾಗಿ ಇಲ್ಲಿನ ಅಮಲ್ದಾರರು ಊರಿನ ದೊಡ್ಡ ವರ್ತಕರನ್ನೂ, ಮ್ಯುನಿಸಿಪಲ್ ಮೆಂಬರುಗಳನ್ನೂ ಮತ್ತು ಅನೇಕ ಸರ್ಕಾರಿ ನೌಕರರನ್ನೂ ಬರಮಾಡಿಕೊಂಡು, ಆ ದಿನ ಹೊತ್ತಾರೆಯಿಂದ ಸಾಯಂಕಾಲ ೯ ಘಂಟೆಯವರೆಗೂ ಬಹು ಸಂತೋಷದಿಂದ ನಾನಾ ಉತ್ಸವಗಳನ್ನು ಮಾಡಿದರು. ಹ್ಯಾಗೆಂದರೆ, ೧೦ ನೇ ತಾ ಹೊತ್ತಾರೆ ೭ ಘಂಟೆಗೆ ಶ್ರೀಮನ್ಮಹಾರಾಜರವರ ಫೋಟೋವನ್ನು ಬ್ಯಾಂಡಿನೊಂದಿಗೆ ಎ. ವಿ ಸ್ಕೂಲಿನ ಚತ್ವರಕ್ಕೆ ತೆಗೆದುಕೊಂಡು ಬಂದು ಇಟ್ಟನಂತರ ಸ್ಕೂಲಿನ ಹುಡುಗರು ದೇವರ ಆಶೀರ್ವಾದವನ್ನು ಬೇಡಿಕೊಂಡದ್ದಲ್ಲದೆ ಬೇರೆ ಸೆಲ್ಯೂಟುಗಳನ್ನು ಮಾಡಿದರು. ತದನಂತರ ಮಿಷನ್ ಸ್ಕೂಲು ಬಾಲಿಕೆಯರು ಮಹಾರಾಜರವರ ಮೇಲಿನ ಹಾಡುಗಳನ್ನೂ, ಚಕ್ರವರ್ತಿಯವರ ಮೇಲೆ ಕಟ್ಟಿದ ಹಾಡುಗಳನ್ನೂ ದೇವರ ಸ್ತೋತ್ರಗಳನ್ನೂ ಸಂಗೀತದ ಸುಲಲಿತವಾಗಿ ಹಾಡಿ, ಅಲ್ಲಿ ಸೇರಿದ್ದ ಸಭೆಯವರ ಮನಸ್ಸನ್ನು ಸಂತೋಷಪಡಿಸಿದರು. ಇದಕ್ಕಾಗಿ ಮೇಲ್ಕಂಡ ಬಾಲಿಕೆಯರುಗಳಿಗೆ ಬಹುಮಾನವನ್ನು ಕೊಟ್ಟರು. ಎ. ವಿ ಸ್ಕೂಲಿನ ಹುಡುಗರುಗಳಿಂದ ಬೇರೆಬೇರೆ ಆಟಗಳನ್ನು ಆಡಿಸಿ, ಆಯಾ ತರಗತಿಯ ಮೇರೆಗೆ ಬಹುಮಾನಗಳನ್ನು ಕೊಟ್ಟರು. ಇದಾದ ಮೇಲೆ ಪೋಲೀಸಿನವರಿಗೂ ಬಾರ್ ಶಿಪಾಯಿಗಳಿಗೂ ಹಗ್ಗವನ್ನು ಕೊಟ್ಟು ಎಳೆದಾಡಿಸಿ ಗೆದ್ದವರಿಗೆ ಇನಾಂ ಕೊಟ್ಟರು. ಅದೇ ಸಾಯಂಕಾಲ ೬ ಘಂಟೆಗೆ ಎಲ್ಲಾ ಸ್ಕೂಲು ಬಾಲಕ ಬಾಲಿಕೆಯರುಗಳಿಗೆ ಮಿಠಾಯಿ ಮಸ್ಕಿರ ತಿಂಡಿ ಸಾಮಾನುಗಳನ್ನು ಯಥೇಚ್ಛವಾಗಿ ಕೊಟ್ಟರು. ಇದಾದ ಮೇಲೆ ಮಹಾರಾಜರವರ ಫೋಟೋವನ್ನು ಇಂಗ್ಲೀಷ್ ಬ್ಯಾಂಡಿನೊಂದಿಗೆ ಯೂರೋಪಿಯನ್ ಸಾಹೇಬರವರು ಮತ್ತು ಲೇಡಿಗಳೂ, ಅಧಿಕಾರಿಗಳೂ, ಸ್ಕೂಲು ಮಾಸ್ತರುಗಳೂ, ಮ್ಯುನಿಸಿಪಲ್ ಮೆಂಬರುಗಳೂ, ವರ್ತಕರೂ, ತಾಲ್ಲೂಕ್ ನೌಕರರೂ, ಪೋಲೀಸ್ ಇಲಾಖೆಯ ಸಿಬ್ಬಂದಿ, ಸ್ಕೂಲ್ ಬಾಲಕರು ಸಮೇತವಾಗಿ ಮೆರವಣಿಗೆಯ ಮೂಲಕ ಸ್ಕೂಲಿನಿಂದ ಚಾಮರಾಜವಡೆಯರವರ ಟೌನ್ ಹಾಲಿಗೆ ತೆಗೆದುಕೊಂಡು ಹೋಗಿ ಅಲಂಕರಿಸಿದ ಪೀಠದಲ್ಲಿ ಇಟ್ಟರು. ತದನಂತರ ಗೌರವಾರ್ಥವಾಗಿ ೨೧ ಗುಂಡುಗಳನ್ನು ಹಾರಿಸಿದರು. ಆ ಮೇಲೆ ಇಲ್ಲಿನ ಸಬ್ ಡಿವಿಜನ್ ಆಫೀಸರವರು ಅಗ್ರಾಸನವನ್ನು ವಹಿಸಿದರು. ಸದರಿ ಸಭೆಯಲ್ಲಿ ಮೆ॥ ಎಚ್. ಸುಬ್ಬರಾಯರು ನಮ್ಮ ಮಹಾರಾಜರವರ ಆಳ್ವಿಕೆಯನ್ನು ಉಪನ್ಯಾಸದ ಮೂಲಕ ಕೊಂಡಾಡಿದರು. ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು. ಇಲ್ಲಿಂದ ಮೆರವಣಿಗೆಯ ಮೂಲಕ ಈ ಸಭೆಯವರೆಲ್ಲಾ ಈ ಊರಿನಲ್ಲಿರತಕ್ಕ ದೇವಸ್ಥಾನಗಳಿಗೆ ಹೋಗಿ, ಮಂಗಳಾರತಿಯನ್ನು ಮಾಡಿಸಿ, ತಮ್ಮತಮ್ಮ ಮನೆಗಳಿಗೆ ತೆರಳಿದರು. ಮೇಲ್ಕಂಡ ಎಲ್ಲಾ ಕಾರ್ಯಗಳನ್ನೂ ಬಹು ವಿತರಣೆಯಿಂದ ನಡೆಯಿಸಿದ ಇಲ್ಲಿಯ ಅಮಲ್ದಾರರನ್ನೂ, ಡಾಕ್ಟರವರನ್ನೂ, ಮೆ॥ ಸುಬ್ಬರಾಯರನ್ನೂ ಇಲ್ಲಿನ ಪ್ರಜೆಗಳು ಬಹಳವಾಗಿ ಕೊಂಡಾಡುತ್ತಾರೆ.

ಚಳ್ಳಕೆರೆ

ಇದೇ ಜೂನ್ ೧೦ನೇ ತಾ ಬುಧವಾರ ಈ ಊರಿನಲ್ಲಿ ಮೈಸೂರು ಮಹಾರಾಜರವರ ವರ್ಷವರ್ಧಂತಿ ಉತ್ಸವವು ರಾಜಭಕ್ತಿ ವಿಶ್ವಾಸದಿಂದ ನಡೆಸಲ್ಪಟ್ಟಿತು. ಗೌರ್ನಮೆಂಟ್ ಎ ವಿ ಸ್ಕೂಲ್ ಕಟ್ಟಡದಲ್ಲಿ ಸಾಯಂಕಾಲ ೪ ಗಂಟೆಗೆ ಅಮಲ್ದಾರ್ ಮೆ॥ ಟಿ. ರಾಮಚಂದ್ರರಾಯರ [illegible] ಅನೇಕ ಸ್ಥಳವಂದಿಗರು ಸೇರಿದ್ದರು. ಪ್ರಧಾನವಾದ ಪೀಠವನ್ನು ಏರ್ಪಡಿಸಿ ಅಲ್ಲಿ ಶ್ರೀಚಾಮುಂಡೇಶ್ವರಿ ದೇವರ ಪಟವನ್ನೂ ಮಹಾರಾಜರವರ ತಸ್ವೀರನ್ನು ಇಟ್ಟು ಬಹಳವಾಗಿ ಅಲಂಕಾರ ಮಾಡಿದ್ದರು. ಪುಷ್ಪಹಾರಗಳು ಬಾಳೆಕಂಬ, ನಾಗರ ಕೆಂಪು ಪತಾಕೆಗಳು ಶೋಭಿಸುತ್ತಿದ್ದವು. ಸಭೆ ಸೇರಿದ ಕೂಡಲೆ ಕುಸ್ತಿ, ಗರಡಿ ಸಾಧನೆ ಮೊದಲಾದ ಆಟಗಳು ನಡೆದವು. ಅನಂತರ ಎ ವಿ ಸ್ಕೂಲ್ ಇಂಗ್ಲಿಷ್ ಮಾಸ್ಟರ್ ಮೆ॥ ಸಿ. ಗೋಪಾಲಕೃಷ್ಣರಾಯರು ಮಹಾರಾಜರವರ ಚರಿತ್ರೆಯನ್ನೂ ಅವರ ಗುಣಾತಿಶಯಗಳನ್ನೂ, ಅವರ ರಾಜ್ಯಭಾರ ವಿತರಣೆಯನ್ನೂ ಪ್ರಜೆಗಳ ಮೇಲೆ ಅವರಿಗಿರುವ ಪ್ರೀತಿ ಸಹಾನುಭೂತಿಗಳನ್ನೂ, ಬುದ್ಧಿವಂತಿಕೆಗಳ ಮೂಲಕ ಸಭಿಕರಿಗೆ ತಿಳಿಯಪಡಿಸುವುದಕ್ಕೂ, ರಾಜಭಕ್ತಿ ಎಂದರೇನು? ಪ್ರಭುವಿಗೂ ಪ್ರಜೆಗಳಿಗೂ ಇರುವ ಸಂಬಂಧ ಎಂಥಾದ್ದು ಎಂಬ ವಿಷಯವನ್ನು ಸೂಚಿಸುವುದಕ್ಕೂ ಒಂದು ಉಪನ್ಯಾಸವನ್ನು ಬರೆದು ಓದಿ ಹೇಳಿ, ಕೊನೆಯಲ್ಲಿ—ಸರ್ವಶಕ್ತನಾದ ದೇವರು ಮಹಾರಾಜರವರಿಗೆ ಆಯುರಾರೋಗ್ಯಾದಿಗಳನ್ನು ಕೊಟ್ಟು ಪುತ್ರಸಂತಾನವನ್ನು ಉಂಟುಮಾಡಲಿ ಎಂದು ಪ್ರಾರ್ಥಿಸುತ್ತೇನೆಂದು ಹೇಳಿದ ಇದು ಬಹಳ ಶ್ಲಾಘನೀಯವಾಗಿತ್ತು. ತರುವಾಯ ಬಾಲಕರ ಇಂಗ್ಲಿಷ್ ಮತ್ತು ಕನ್ನಡ ಸಂಭಾಷಣೆಗಳೂ, ರೆಸಿಟೇಷನ್‌ಗಳೂ, ಬಾಲಿಕೆಯರ ಗಾನಾದಿಗಳೂ, ಸಂಸ್ಕೃತ ಮುನ್ಷಿಗಳಾದ ಮೆ॥ ಕೆ ಗರುಡಾಚಾರರಿಂದ ಮಹಾರಾಜರವರ ಶ್ರೇಯಸ್ಸನ್ನು ಕೋರುವ ಸಂಸ್ಕೃತದ ಶ್ಲೋಕಗಳೂ, ಕೊನೆಯಲ್ಲಿ ಸಂಗೀತ ಸಾಮಗ್ರಿಗಳಿಂದ ಕೂಡಿದ ಭಜನೆ ಮುಂತಾದ ಕಾರ್ಯಗಳೂ ನಡೆದವು. ಆ ವೇಳೆ ಅಮಲ್ದಾರ್ ಮೆ॥ ಟಿ ರಾಮಚಂದ್ರರಾಯರು ಅಗ್ರಾಸನದಿಂದ ಎದ್ದು ರಾಜಭಕ್ತಿ ವಿಷಯವಾಗಿ ಸ್ವಲ್ಪ ಹೇಳುತ್ತಾ ನಾನಾತರಹ, ಚಳ್ಳಕೆರೆ ನಿವಾಸಿಗಳ ಕೃತಜ್ಞತೆಯನ್ನು ಮಹಾರಾಜರವರಿಗೆ ತಿಳಿಯಪಡಿಸುವುದಕ್ಕಾಗಿ ಒಂದು ತಂತಿಯ ವರ್ತಮಾನವನ್ನು ಬರೆದು ಸಭೆಯಲ್ಲಿ ಓದಿ ಹೇಳಿ ಸಭೆಗೆ ಬಂದಿದ್ದವರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿ ಮರ್ಯಾದೆಗಳೂ ಬಾಲಕ ಬಾಲಿಕೆಯರುಗಳಿಗೆ ತಿಂಡಿಗಳೂ ವಿನಿಯೋಗವಾದವು. ಈ ಉತ್ಸವವನ್ನು ಪ್ರಾರಂಭದಿಂದ ಕೊನೆಯವರೆಗೆ ಸರಿಯಾಗಿ ಆಗುವಂತೆ ಮಾಡಲು ಮೆ॥ ಬಿ ಡಿ ಸಿದ್ಧರಾಜೇಂದ್ರರಾಯರು ಬಹಳ ತುಂಬ ವರ್ಜಿ ವಹಿಸಿದರು. ಇವರಿಗೆ ಮೆ॥ ಕೆ ಸುಬ್ಬಣ್ಣನವರು ಸಹಾಯರಾದರು. ಈ ಊರಿನಲ್ಲಿ ರೀಡಿಂಗ್ ರೂಮ್ ಇರಲಿಲ್ಲವಾದ್ದರಿಂದ ಆ ದಿವಸವೇ ಒಂದನ್ನು ಸ್ಥಾಪಿಸಿದರು. ಸಭೆಯಲ್ಲಿ ಅದರ ಉದ್ದೇಶಗಳೂ ಅದರಿಂದ ಪ್ರಜೆಗಳಿಗೆ ಆಗುವ ಪ್ರಯೋಜನಗಳೂ ಸಹ ಸೂಚಿಸಲ್ಪಟ್ಟವು. ಆ ದಿವಸವೇ ಈ ರೀಡಿಂಗ್ ರೂಮ್ ಪ್ರಾರಂಭವಾಗಿದ್ದರಿಂದ ಪ್ರತಿವರ್ಷವೂ ಆ ದಿವಸ ಇದೇ ರೀತಿಯಾಗಿ ಜನಗಳು ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ರೀಡಿಂಗ್ ರೂ. ಸ್ಥಾಪಿತವಾದ ದಿವಸವನ್ನು ಜ್ಞಾಪಕಕ್ಕೆ ತಂದುಕೊಂಡು ಆ ದಿವಸವನ್ನು ಹೊಂದುತ್ತಾ ಬರುತ್ತಾರೆಂದು ನಂಬಿದ್ದೇನೆ.

ತಿಪ್ಟೂರು.

ಇದೇ ಮಾಹೆ ತಾ. ೧೦ ನೇ ಬುಧವಾರ ಮಧ್ಯಾಹ್ನ ೩ ಘಂಟೆಗೆ ತಾಲ್ಲೂಕು ಕಚೇರಿ ಬಳಿ ಹಾಕಿದ್ದ ದೊಡ್ಡ ಚಪ್ಪರದಲ್ಲಿ ಶ್ರೀಮನ್ ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರ ವರ್ಷ ವರ್ಧಂತಿ ಮಹೋತ್ಸವವು ಬಹಳ ವಿಜೃಂಭಣೆಯಿಂದ ನಡೆಸಲಾಯಿತು ನಮ್ಮ ಅಮಲ್ದಾರ್ ಮೆ॥ ಮಹಮ್ಮದ್ ಅಬ್ದುಲ್ಲಾ ಷರೀಫ್ ಸಾಹೇಬರು, ಸಬ್ ರೆಜಿಸ್ಟ್ರಾರ್ ಮೆ॥ ಲಕ್ಷ್ಮೀಕಾಂತಯ್ಯಂಗಾರ್ರು, ಪೊಲೀಸ್ ಇನ್ಸ್‌ಪೆಕ್ಟರ್ ಮೆ॥ ಅಬ್ದುಲ್ ರಜಾಕ್ ಸಾಹೇಬರು ಮಾಡಿದ ಏರ್ಪಾಡುಗಳು ಬಹಳ ಸಮರ್ಪಕವಾಗಿದ್ದವು. ಆ ಸಮಯದಲ್ಲಿ ತಾಲ್ಲೂಕು ಅಧಿಕಾರಿಗಳೂ ಮುನಿಸಿಪಲ್ ಮೆಂಬರುಗಳೂ ಸಾಹುಕಾರರೂ ವರ್ತಕರೂ ಮೊದಲಾದವರು ಸಭೆಯನ್ನು ಅಲಂಕರಿಸಿದರು. ರಾಜ ಮರ್ಯಾದೆ ಅನುಸರಿಸಿ ಅಮಲ್ದಾರ್ರು ಅಪ್ಪಣೆಯ ಮೇರೆಗೆ ಮೊದಲು ಬಾರ್ ಸಿಪಾಯಿಗಳೂ ಪೊಲೀಸಿನವರೂ ಹಾಗೆ ಆಫೀಸರುಗಳೂ ಸ್ಕೂಲ್ ಮಾಸ್ಟರುಗಳೂ ಮೆಂಬರುಗಳೂ ಸಾಹುಕಾರರೂ ವರ್ತಕರೂ ಮೊದಲಾದವರುಗಳೆಲ್ಲಾ ವಿಚಿತ್ರವಾಗಿ ಅಲಂಕರಿಸಿದ್ದ ಮಹಾರಾಣಿಯವರ ಸಮೇತರಾದ ಶ್ರೀಮನ್ಮಹಾರಾಜರವರ ತಸ್ವೀರಿನ ಎದುರಿಗೆ ಬಂದು ಸಾಲುಸಾಲಾಗಿ ನಿಂತು ಮುಜರೆ ಮಾಡಿದರು. ತರುವಾಯ ಗೌರವಾರ್ಥವಾದ ೨೧ ಸುರುಟು ಹಾರಿಸಲ್ಪಟ್ಟವು. ಕೂಡಲೆ ಅಮಲ್ದಾರ್ರು ಶ್ರೀಮನ್ಮಹಾರಾಜರವರ ಶ್ರೇಯೋಭಿವೃದ್ಧಿಯನ್ನು ಕುರಿತು ಉಪನ್ಯಾಸವನ್ನು ಮಾಡಿದರು. ನಂತರ ಹಿಂದೂಸ್ತಾನಿ ಮಿಡಲ್ ಸ್ಕೂಲ್ ಮಾಸ್ಟರು ಶ್ರೀಮನ್ಮಹಾರಾಜರವರ ಗುಣಕಥನವನ್ನು ಓದಿ ತಿಳಿಸಿದರು ತರುವಾಯ ವಿಮೆನ್ ಗರ್ಲ್ಸ್ ಸ್ಕೂಲ್ ಬಾಲಿಕೆಯರೂ ಆರ್ಯಬಾಲಿಕಾ ಪಾಠಶಾಲೆಯ ಬಾಲಿಕೆಯರೂ ಪ್ರತ್ಯೇಕ ಪ್ರತ್ಯೇಕವಾಗಿ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನಾರೂಪವಾದ ಕೀರ್ತನೆಗಳನ್ನು ಹಾಡಿದರು. ತರುವಾಯ ಸಭಾಸದರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳೂ ಬಾಲಿಕೆಯರಿಗೆ ಹಣ್ಣು ಮಿಠಾಯಿಯೂ ಹಂಚಲ್ಪಟ್ಟಿತು ಇದುಮಾತ್ರವಲ್ಲದೆ ಬಾಲಿಕೆಯರಿಗೆ ಬೊಂಬೆಗಳನ್ನು ಸಹ ತರಿಸಿ ಕೊಡುತ್ತೇವೆಂದು ವಾಗ್ದಾನ ಮಾಡಿದ್ದಾರೆ. ಆ ವೇಳೆ ಗವರ್ನಮೆಂಟ್ ಸ್ಕೂಲುಗಳ ಬಾಲಕರಿಗೆಲ್ಲಾ ಜಿಮ್ನಾಸ್ಟಿಕ್ ಆಟಗಳನ್ನು ಆಡಿಸಿ, ಗೆದ್ದವರಿಗೆ ತಕ್ಕ ಬಹುಮಾನಗಳನ್ನು ಕೊಟ್ಟರು ಅನಂತರ ಇಬ್ಬರಿಗೆ ಶಾಲು ಹೊದಿಸಿತು. ಬಹುಮಾನವು ಕೊಡಲ್ಪಟ್ಟಿತು ಕನ್ನಡ ಸ್ಕೂಲ್ ಬಾಲಕರಿಗೆಲ್ಲಾ ಮಿಠಾಯಿ ಹಂಚಲಾಯಿತು ಜನರೆಲ್ಲರೂ ಆನಂದಯುಕ್ತರಾಗಿ ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋದರು ... ಈ ತಾಲ್ಲೂಕಿನಲ್ಲಿ ಇಂದಿನ ವರೆಗೂ ನಡೆಯದೆ ಇದ್ದ ಈ ರೀತಿ ಏರ್ಪಾಡನ್ನು ಮಾಡಿ ನಡೆಸಿದುದಕ್ಕಾಗಿ ಎಲ್ಲರೂ ... ಸೇರಿಸಿ ನಮ್ಮ ಮಹಾರಾಜರವರ ಶ್ರೇಯೋಭಿವೃದ್ಧಿಯನ್ನು ಬಯಸಿದ ನಮ್ಮ ಅಮಲ್ದಾರರನ್ನು ಅವರ ಸಹಾಯಕರುಗಳ್ನ ವಿಶ್ವಾಸದವರನ್ನು ಇಲ್ಲಿ ನಾವು ಕೊಂಡಾಡುತ್ತೇವೆ

ಇಲ್ಲಿನ ... ಬಿಸಿಲು ಜಾಸ್ತಿ, ಮಳೆ ಬಂದಿಲ್ಲ ಧಾರಣೆಮಾಸಿ ಚಹಾವಾಗಿದೆ ನೀರಿಲ್ಲದೆ ಆಗಸರ ಕೆಲಸಕ್ಕೆ ತೊಂದರೆಯಾಗಿದೆ ಜನರು ರಾತ್ರಿ ವೇಳೆಯಲ್ಲೂ ಬಾವಿಗಳಲ್ಲಿ ನೀರನ್ನು ಸೇದಬೇಕಾಗಿದೆ ಇಲ್ಲಿಗೆ ಈಗ ಬಂದಿರುವ ಹೊಸ ಅಮಲ್ದಾರ್ ಮೆ॥ ಮಹಮ್ಮದ್ ಅಬ್ದುಲ್ಲಾ ಷರೀಫ್ ಅವರು ಎಲ್ಲರೊಡನೆ ಸರಳತೆಯಿಂದ ನಡೆದುಕೊಳ್ಳುತ್ತಾ, ಮಾತುಗಾರಿಕೆಯಾಗಿ ಕೆಲಸ ಮಾಡುತ್ತಾ ಬಂದಿದ್ದಾರೆ

ಮೈಸೂರು ಗೆಜೆಟ್ ಸಂಗ್ರಹ.

ಅಸಿಸ್ಟೆಂಟ್ ಕಮಿಷನರ್ ಮೆ॥ ಬಿ ಕೃಷ್ಣರಾಯರನ್ನು ಫೆಬ್ರವರಿ ೨೭ ರಿಂದ ಎರಡನೇ ಕ್ಲಾಸಿಗೆ ಬಡ್ತಿ ಮಾಡಿದೆ

ಮೆ॥ ಫಕೀರ್ ಸಾಬ್ ಅವರನ್ನು ಬಾಗಲೂರು ತಾಲ್ಲೂಕ್ ಬೋರ್ಡಿನ ಮೆಂಬರಾಗಿ ಚುನಾಯಿಸಿರುವುದನ್ನು ಗವರ್ನಮೆಂಟಿನವರು ಮಂಜೂರು ಮಾಡಿದ್ದಾರೆ.

ಮಧುಗಿರಿ ಸರ್ಜನ್ ಮೆ॥ ಪಿ ಎ. ಶಿವಪ್ರಕಾಶಂ ಪಿಳ್ಳೆಯವರಿಗೆ ಜೂನ್ ೬ ರಿಂದ ಎರಡು ತಿಂಗಳು ಕಾಯಿಲೆ ರಜಾ ಕೊಟ್ಟಿದೆ.

ಫಾರೆಸ್ಟ್ ರೇಂಜರ್ ಮೆ॥ ಬಿ. ಶ್ರೀಕಂಠಯ್ಯನವರನ್ನು ಮೇಲುಕೋಟೆ ಮುನ್ಸಿಪಲ್ ಬೋರ್ಡಿನ ಮೆಂಬರಾಗಿ ನೇಮಿಸಿದೆ.

ಜುಡಿಷಲ್ ಪ್ರೊಬೇಷನರ್ ಮೆ॥ ಎ ಕೆ. ಶ್ರೀನಿವಾಸರಾವ್‌ರವರು ನಂಜನಗೂಡು ಸಬ್ ಫೋರ್ಟ್ ಮುನ್ಸಿಫರಾಗಿ ಬದಲಿ ನೋಡತಕ್ಕದ್ದು.

ತುಮಕೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಅಸಿಸ್ಟೆಂಟ್ ಕಮಿಷನರ್ ಮೆ॥ ಕೆ ಶ್ರೀಕಂಠಯ್ಯನವರನ್ನು, ಗುಬ್ಬಿ ಸಬ್ ಡಿವಿಜನ್ ಆಫೀಸರಿಗೆ ಪ್ರತಿಯಾಗಿ, ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ನೇಮಕಮಾಡಿದೆ.

ತಾಲ್ಲೂಕು ವರ್ತಮಾನಗಳು.

ಚಿತ್ರದುರ್ಗ.—ಕಳೆದ ಜೂನ್ ೧ನೇ ತಾ ನಲ್ಲಿ ಒಬ್ಬೇ ಜಡ ಮಳೆಯೂ ಅನಂತರ ವಿಪರೀತ ಗಾಳಿಯೂ ಬೀಸಿದವು ಈ ವರೆಗೂ ಮುಸುಗಿಕೊಂಡಿರೆ ಮಳೆ ಮತ್ತು ಇಲ್ಲ. ಊರಲ್ಲಿ ಕಣ್ಣುನೋವು ಜ್ವರ ಮುಂತಾದ ಬೇನೆಗಳಿಂದ ಜನರು ನರಳುತ್ತಲಿರುವರು. ಟವನಿಗೆ ಸರಬರಾಯಿ ಆಗುವ ನೀರನ್ನು ವಿವರಿಸುವುದು ಕಷ್ಟ. ಇದರ ಒಂದು ಕೆಂಪಗೆ ಕಣ್ಣಿಗೆ ಕಾಣುತ್ತದೆ ನಾನಾ ವಿಧ ಹುಳಗಳು ಇವೆ ಎಷ್ಟು ಸಾರಿ ಸೋದಿಸಿದರೂ ನೀರು ಇದ್ದ ಹಾಗೆಯೇ ಇರುತ್ತದೆ. ಇದಕ್ಕೆ ಮುನಿಸಿಪಾಲಿಟಿಯವರು ಯಾವ ವಿಧವಾದ ಉಪಾಯವನ್ನು ಕಲ್ಪಿಸ ಬಾರದಿರುವರು —ಈ ತಿಂಗಳ ೧೦ನೇ ತಾ ನಲ್ಲಿ ನಮ್ಮ ಮಹಾರಾಜರ ವರ್ಷ ವರ್ಧಂತಿಯು ವಿಜೃಂಭಣೆಯಿಂದ ನಡೆಯಿತು. ಸ್ಕೂಲ್ ವಿದ್ಯಾರ್ಥಿಗಳಿಗೆ ನಾನಾವಿಧ ಆಟಗಳೂ ಸಂಗೀತವೂ ನೆರವೇರಿದವು. ಗೆದ್ದವರಿಗೆ ಇನಾಮುಗಳೂ ದೊರೆತವು. ನಮ್ಮ ಶ್ರೀಮನ್ಮಹಾರಾಜರಿಗೆ ಸಲ್ಲತಕ್ಕ ಗೌರವವು ಅವರ ರಕ್ಷಕರಾದ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸಲ್ಲಲಿಲ್ಲವೇ? ಎಂದು ಆಕ್ಷೇಪಕರಿಗೆ ಹೇಳಲ್ಪಟ್ಟಿತು —ನಮ್ಮ ಅಮಲ್ದಾರ್ ಮೆ॥ ಮಾಣಯ್ಯನವರು ಹದಿನೈದು ದಿನಗಳ ರಜದ ಮೇಲೆ ಹೋಗಿದ್ದು ಪುನಃ ಬಂದು ಛಾರ್ಜನ್ನು ವಹಿಸಿರುವುದು ಸರ್ವರಿಗೂ ಸಂತೋಷವಾಗಿದೆ. ಧಾರಣೆವಾಸಿಗಳು ಇನ್ನೂ ಚಹಾವಾಗಿವೆಯೇ ಹೊರತು ಇಳಿತರವಾಗಲಿಲ್ಲ. ಅಕ್ಕಿ ೭ ಸೇರು, ರಾಗಿ ೧೩ ಸೇರು, ಬೇಳೆ ೭ ಸೇರು, ಜೋಳ ೧೩ ಅಥವಾ ೧೮ ಸೇರು, ಹೀಗೆ ಮಾರುತ್ತೆ. ಬೇರೆ ಕಡೆಗಳಲ್ಲಿ ಆದ ಹಾಗೆ ಈ ಊರಲ್ಲಿಯೂ ಈ ವರುಷ ಮದುವೆ ಉತ್ಸವಗಳು ಬಹಳ ವಿಶೇಷವಾಗಿ ನೆರವೇರಿದವು ಈ ಪ್ರಾಂತ್ಯದಲ್ಲಿಯೂ ಜಾನುವಾರುಗಳಿಗೆ ಅಲ್ಲಲ್ಲಿ ಸ್ವಲ್ಪ ರೋಗವಾಗಿದ್ದರೂ ಬಹಳ ಮಟ್ಟಿಗೆ ಏನೂ ತೊಂದರೆ ಆಗಲಿಲ್ಲ.

ಹೊಸಕೋಟೆ.—ಈ ಊರಿಗೆ ಇದೇ ಜೂನ್ ತಾ. ೨ ರಲ್ಲು ಹಜರತ್ ರೆವಿನ್ಯೂ ಕಮಿಷನರ್ ಸಾಹೇಬ್ ಮೆ॥ ಎ. ರಂಗಸ್ವಾಮಿಯಂಗಾರ್ರು ಸವಾರಿಯು ಬೆಳಗ್ಗೆ ೯ ಘಂಟೆಗೆ ಚಿತ್ತೈಸಿತು. ಟ್ರಾವಲರ್ಸ್ ಬಂಗಲೆ ಮುಂದೆ ಹಾಕಿದ್ದ ಚಪ್ಪರದ ಬಳಿ ಮುನಿಸಿಪಲ್ ಮೆಂಬರುಗಳೂ ಲಾಯರುಗಳೂ ಶೆಟ್ಟಿ ವರ್ತಕರೂ ಅಮಲ್ದಾರರೇ ಮೊದಲಾದ ದೊಡ್ಡ ಮನುಷ್ಯರೂ ಕಾದಿದ್ದು ಅವರಿಗೆ ಸುಸ್ವಾಗತವನ್ನು ಬಯಸಿ ತಮ್ಮ ರಾಜಭಕ್ತಿ ವಿಶ್ವಾಸಗಳೊಡನೆ ಅವರನ್ನು ಎದುರುಗೊಂಡರು. ಅನಂತರ ಮಧ್ಯಾಹ್ನ ೩ ಘಂಟೆಗೆ ಅವರು ತಾಲ್ಲೂಕು ಕಛೇರಿ ಇನ್ಸ್‌ಪೆಕ್ಷನ್ ಮಾಡಿಕೊಂಡು, ಮೆಂಬರುಗಳ ಅಪೇಕ್ಷೆಯಂತೆ ಸವಾರಿಯು ೫ ಘಂಟೆಗೆ ಶ್ರೀ ಕೃಷ್ಣರಾಜೇಂದ್ರ ಹಾಲ್‌ನೊಳಕ್ಕೆ ದಯಮಾಡಿಸಿ, ಅಲ್ಲಿ ಸೇರಿದ್ದ ಸ್ಕೂಲ್ ಬಾಲಿಕೆಯರ ಗಾನವನ್ನು ಕೇಳಿ, ಜಹಗೀರ್ದಾರ್ ವಾಸುದೇವರಾಯರು ಕೆಲವು ವಿಷಯಗಳನ್ನು ಕುರಿತು ಉಪನ್ಯಾಸ ನಡೆಸಿದ ವೇಳೆ ಸಭಿಕರಿಗೆ ಆನಂದವುಂಟಾಗುವ ರೀತ್ಯಾ ಕೆಲವು ಉತ್ತರಗಳನ್ನಿತ್ತು, ಅಲ್ಲಿಂದ ಗೌರ್ನಮೆಂಟು ಎ ವಿ ಸ್ಕೂಲಿಗೆ ದಯಮಾಡಿಸಿ, ಅಲ್ಲಿ ಕೆಲವು ಬಾಲಕರನ್ನು ಪರೀಕ್ಷಿಸಿ ಪುಸ್ತಕಗಳನ್ನು ಇನಾಮು ಕೊಟ್ಟು. ಟವುನ್ ಇನ್ಸ್‌ಪೆಕ್ಷನಿಂದ ಸಾಯಂಕಾಲ ೭ ಘಂಟೆಗೆ ಟ್ರಾವಲರ್ಸ್ ಬಂಗಲೆಗೆ ದಯಮಾಡಿಸಿ, ಮಾರನೇ ದಿನ ಬೆಳಗ್ಗೆ ಚಿಂತಾಮಣಿಗೆ ಚಿತ್ತೈಸಿದರು —೮ ನೇ ತಾ ಗುರುವಾರದ ದಿನ ಪ್ರಾತಃಕಾಲ ೭ ಗಂಟೆಗೆ ನಮ್ಮ ಮೈಸೂರು ಸೀಮೆಯ ದಿವಾನರವರಾದ ಮೆ॥ ವಿ ಪಿ ಮಾಧವರಾಯರವರು ಮೋಟಾರ್‌ನಲ್ಲಿ ಈ ಊರಿನ ಟ್ರಾವಲರ್ಸ್ ಬಂಗಲೆಯ ಮುಂದೆ ಹಾಕಿದ್ದ ಚಪ್ಪರದ ಬಳಿಗೆ ಚಿತ್ತೈಸಿ ಅಲ್ಲಿ ನೆರೆದಿದ್ದ ಸಭಿಕರನೇಕರೊಡನೆ ಕೆಲವು ವಿಷಯಗಳನ್ನು ಕುರಿತು ಮಾತನಾಡಿಕೊಂಡು, ಚಿಂತಾಮಣಿಗೆ ದಯಮಾಡಿಸಿದರು —ಈ ಊರಿನಲ್ಲಿ ಈ ಮಧ್ಯೆ ... ಮಳೆಯಾಗಿ ಜನ ದನಗಳಿಗೆ ನೀರಿನ ವಸತಿ ಅನುಕೂಲವಾಗಿದೆ ಧಾರಣೆವಾಸಿಗಳು ಚಹಾವಾಗಿವೆ. ಇದರ ದೆಸೆಯಿಂದ ಬಡವರ ಜೀವನೋಪಾಯಕ್ಕೆ ಕೊರತೆಯುಂಟು. ಟವುನ್‌ನಲ್ಲಿ ಅಲ್ಲಲ್ಲಿ ಚಳಿ ಜ್ವರ ಕಣ್ಣಿನೋವು ಜನಗಳನ್ನು ಪೀಡಿಸುತ್ತಿದೆ ಆದರೆ ಇಲ್ಲಿಗೆ ... ಆಸ್ಪತ್ರೆ ... ಬಹು ಒಳ್ಳೆ ... ರೋಗಗಳನ್ನು ಚಿಕಿತ್ಸೆ ಮಾಡುತ್ತಾ ... ಔಷಧ ಕೊಡುತ್ತಾ ... ಜನಗಳಿಗೆ ಬಹಳ ಅನುಕೂಲವೂ ಸಂತೋಷವೂ ಆಗಿರುತ್ತದೆ.

ಕುಣಿಗಲ್ ತಾ ಹೆಬ್ಬೂರು.—ಸುಮಾರು ಎರಡು ತಿಂಗಳಿಂದ ಜಾನುವಾರುಗಳಿಗೆ ದೊಡ್ಡರೋಗವು ವ್ಯಾಪಿಸಿ ೧೫೦ರ ವರೆಗೆ ನಷ್ಟವಾಗಿದ್ದರೂ ನಿರ್ಗತಿಕರಾದ ಅನೇಕರು ದನಗಳನ್ನು ಕಳೆದುಕೊಂಡು ವ್ಯವಸಾಯ ಮಾಡಲು ಶಕ್ತಿಯಿಲ್ಲದೆ ಪೇಚಾಡುತ್ತಾರೆ. ಒಂದು ತಿಂಗಳಿಂದಲೂ ಮಳೆಯಿಲ್ಲದೆ ಜನರ ಧಾರಣೆಯು ಈಗಿನ ವಿಷಯಂತೆ ಏರುತ್ತಿದೆ —ಈ ಗ್ರಾಮದ ಕೆರೆಯು ಒಡೆದುಹೋಗಿ ೧೦-೧೨ ವರ್ಷವಾಯಿತು. ಆ ಭಾಗದ ಜನಗಳಿಗೂ ದನಗಳಿಗೂ ನೀರು ಸಿಕ್ಕದೆ ಇಲ್ಲದೆ ಶ್ರಮವಾಗಿತ್ತು. ಈ ಕಷ್ಟವನ್ನು ನೋಡಿ ಇದೇ ಊರು ಮೆ॥ ಅಂಚೆಮನೆ ನಂಜೇಗೌಡರು ಪರೋಪಕಾರ ಚಿತ್ತದಿಂದ ಯಾರ ಸಹಾಯವನ್ನೂ ಅಪೇಕ್ಷಿಸದೆ, ಜನಗಳಿಗೆ ಅನುಕೂಲಿಸುವ ಹಾಗೆ ೫೦೦ ರೂಪಾಯಿ ಖರ್ಚುಮಾಡಿ ಕಲ್ಲು ಕಟ್ಟಡದ ಸೇದುವ ಬಾವಿಯನ್ನೂ ೩೦೦ ರೂಪಾಯಿ ಖರ್ಚುಮಾಡಿ ಜಾನುವಾರುಗಳಿಗೆ ಅನುಕೂಲವಾಗಲು ಕಲ್ಲು ಕಟ್ಟಡದ ಸೋಪಾನದ ಕಲ್ಯಾಣಿಯನ್ನೂ ಕಟ್ಟಿಸಿ ಪೂರೈಸಿ, ಎರಡು ತಿಂಗಳಾಯಿತು. ಈ ಧರ್ಮ ಕಾರ್ಯವನ್ನು ನೋಡಿ ಪರೋಪಕಾರಿಗಳಾದ ಈ ಮಹನೀಯರಿಗೂ ಕುಟುಂಬದವರಿಗೂ ಶ್ರೇಯಸ್ಸನ್ನು ಕೋರುತ್ತೇವೆ —ಮೇ ತಾ. ೨೭ ನೇ ಸೋಮವಾರ ಯಜಮಾನರೇ ಉತ್ಸವವು ಇಲ್ಲಿನ ಮಾಸ್ಟರ್ ರುದ್ರಪ್ಪನವರ ಮೇಲ್ವಿಚಾರಣೆಯಿಂದ ವೀರಭದ್ರ ದೇವಸ್ಥಾನದ ಮುಂಭಾಗದಲ್ಲಿ ಚಪ್ಪರ ಹಾಕಿ ತೋರಣಾದ್ಯಲಂಕಾರ ಮಾಡಿ, ಪಟೇಲ್ ಗೌಡಪ್ಪನವರು, ಪಟೇಲ್ ಹೊನ್ನೇಗೌಡರು, ಅಂಚೇಮನೆ ನಂಜೇಗೌಡರು, ಕಾಳನಿಗೌಡರು, ನಂಜಪ್ಪನವರು, ಸ್ಕೂಲ್ ಬಾಲಕರೇ ಆದಿಯಾಗಿ ಸರ್ವರೂ ನೆರೆದು ಶ್ರೀಮದಿಂಡಿಯಾ ಚಕ್ರವರ್ತಿನಿಯವರ ಜನ್ಮೋತ್ಸವವನ್ನು ಸಂಭ್ರಮದಿಂದ ನೆರವೇರಿಸಿ, ತಿಪ್ಪಸಂದ್ರದ ನಾಗದೇವಪ್ಪನವರಿಂದ ಸೀಗಾಗಾನ ದಿಂದ ಸ್ತೋತ್ರಮಾಡಿಸಿ, ಸರ್ವರಿಗೂ ಪಾನಸುಪಾರಿ ಮಾಡಿಸಿ, ಶ್ರೀಮತ್ ವೀರಭದ್ರೇಶ್ವರ ದೇವರಿಗೆ ಪೂಜಾಭಿಷೇಕ ನಡೆಸಿ ಮಂಗಳಾರತಿ ಮಾಡಿಸಿ, ಚಕ್ರವರ್ತಿಯವರ, ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಶ್ರೇಯೋಭಿವೃದ್ಧಿಯನ್ನು ಬಯಸಿ ಪ್ರಾರ್ಥನೆಯನ್ನು ಮಾಡಿದನಂತರ ಸಭೆಯು ಉಪಸಂಹಾರ ಮಾಡಲ್ಪಟ್ಟಿತು. ರಾತ್ರಿ ೮ ಘಂಟೆಗೆ ಕುಶಲವರ ಕಾಳಗ ನಾಟಕ ನಾಗದೇವಪ್ಪನವರಿಂದ ಆಡಿಸಿ ಸರ್ವರೂ ಹರ್ಷಾನಂದ ಪಟ್ಟರು —ಈ ಊರ ಶೆಟ್ಟಿ ಹೊನ್ನನ ಮಗ ನಂಜನು ಜೂನ್ ತಾ. ೭ ನೇ ಶನಿವಾರ ಸುಮಾರು ೬ ಘಂಟೆಯಲ್ಲಿ ನೇಕೆಗಳಿಗೆ ಸೊಪ್ಪು ಕತ್ತರಿಸಿ ಹಾಕಲು ೭೦—೭೦ ಅಡಿ ಎತ್ತರವುಳ್ಳ ಮರವನ್ನು ಹತ್ತಿ ಆಕಸ್ಮಾತ್ ಬಿದ್ದು ಮೃತಪಟ್ಟನು ತಾ. ೩ ರಲ್ಲಿ ತಾಲ್ಲೋಕು ಜಮಾದಾರರು ಬಂದು ಅದಾಲತ್‌ಪೂರ್ವಕ ಶವವನ್ನು ದಫನ್ ಮಾಡಿಸಿದರು —ಸಿವಲ್ ಕೋರ್ಟಿನ ವ್ಯಾಜ್ಯಕ್ಕೆ ಈ ಊರು ತೌರುಮನೆಯಾಗಿದೆ. ಇಬ್ಬರ ಜಗಳ ಮೂರನೆಯವನಿಗೆ ಲಾಭವೆಂಬಂತೆ ವಕೀಲರಿಗೆ ಸಂಭ್ರಮ —ದೊಡ್ಡ ರೋಗವು ಸುತ್ತು ಮುತ್ತಣ ಗ್ರಾಮಗಳಿಗೆ ವ್ಯಾಪಿಸುತ್ತಾ ಇದೆ. ಈ ಊರಿಗೆ ಮೂರು ಫರ್ಲಾಂಗು ದೂರವಾದ ನಂಜುಂಡಗೌಡನ ಪಾಳ್ಯದಲ್ಲಿ ೬ ದಿನದಿಂದೀಚೆಗೆ ೪೦—೫೦ ರ ಮೇಲೆ ದನಗಳು ಮೃತಪಟ್ಟವು. ಈ ರೋಗಕ್ಕೆ ಔಷಧಿಯನ್ನು ತಿಳಿದ ಮಹಾಶಯರು ಈ ಪತ್ರಿಕಾ ಮುಖೇನ ಪ್ರಚುರ ಪಡಿಸಿದರೆ ಮೂಗು ಪ್ರಾಣಿಗಳನ್ನು ಉಳಿಸಿ ಕೊಳ್ಳಲು ಪ್ರಯತ್ನ ಮಾಡಬಹುದು. ಗ್ರಾಮದೇವತೆ ಮಾಡಿದರೆ ಈ ರೋಗ ಶಮನವಾಗುತ್ತೆಂಬ ಹಿರಿಯರ ಮಾತನ್ನಂಗೀಕರಿಸಿ ಪೂಜಿಸಲು ದಿನದಿನಕ್ಕೆ ೮—೧೦ ರಂತೆ ಸಾಯಲು ಶುರುವಾಯಿತು. ಈ ನವನಾಗರೀಕ ಕಾಲದಲ್ಲೂ ಅಜ್ಞಾನವು ತೊಲಗಿ ಸುಜ್ಞಾನವು ಇನ್ನೂ ಬಾರದಲ್ಲಾ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಎಡೆ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂತಹವುಗಳಿಗೆ ನಾವು ಎಡೆ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್.

ದಾವಣಗೆರೆ ಎ. ವಿ. ಸ್ಕೂಲ್ ವಿಚಾರವು

ಅಯ್ಯಾ,

ಬಹು ವರುಷಗಳಿಂದಲೂ ಈ ಊರಲ್ಲಿ ಗವರ್ನಮೆಂಟ್ ಎ. ವಿ. ಸ್ಕೂಲ್ ಇದೆ ವರ್ಷ ವರ್ಷಕ್ಕೂ ಈ ಸ್ಕೂಲಿನ ಅಭಿವೃದ್ಧಿಯು ಹೆಚ್ಚುತ್ತಲಿರುವುದು ಸರ್ಕಾರದವರ ದೃಷ್ಟಿಗೆ ಗೋಚರವಾಗದ ವಿಷಯವಲ್ಲ. ಪ್ರಜೆಗಳ ಅನುಕೂಲತೆಗೂ, ಒಂದೇ ಕಟ್ಟಡದಲ್ಲಿ ಊರಿನ ಎಲ್ಲಾ ಬಾಲಕರನ್ನು ಸೇರಿಸಲಾಗದ ತೊಂದರೆಗೂ ಸ್ಕೂಲನ್ನು ಎರಡು ಭಾಗವಾಗಿ ಮಾಡಿ, ಒಂದನ್ನು ಪೇಟೆ ... ದಲ್ಲಿರುವ ಸರ್ಕಾರಿ ಕಟ್ಟಡದಲ್ಲಿಯೂ ಮತ್ತೊಂದನ್ನು ಪೂರ್ವದಲ್ಲಿ ತಾಲ್ಲೂಕು ಆಫೀಸಾಗಿದ್ದ ಹಳೇ ಕಟ್ಟಡದಲ್ಲಿಯೂ ಇಟ್ಟರು ಈ ಉಭಯ ಸ್ಕೂಲುಗಳಲ್ಲಿಯೂ ಇರತಕ್ಕ ಉಪಾಧ್ಯಾಯರುಗಳು, ಒಂದು ಸ್ಕೂಲಿನಲ್ಲಿ ಇದ್ದ ಎಲ್ಲಾ ವಿಧವಾದ ತರಗತಿಗಳು ಮತ್ತೊಂದರಲ್ಲಿ ಇದ್ದುದರಿಂದ ಸಮಾನರಾದ ಶಕ್ತಿಯುಳ್ಳವರಾಗಿಯೂ, ವಿಶೇಷವಾದ ವಿದ್ಯಾಬೋಧಕರಾಗಿಯೂ ಇದ್ದರು ಈ ಉಭಯ ಕಟ್ಟಡಗಳಲ್ಲಿಯೂ ಬಾಲಕರ ಸಂಖ್ಯೆಯು ಸಮಾನವಾಗಿಯೇ ಇದ್ದಿತು. ಬಹಳ ಕಾಲಗಳವರೆಗೂ ಪ್ರಾಮುಖ್ಯತೆಯಲ್ಲಿಯೂ ಸಹಜವಾದ ಮೈತ್ರೀಭಾವದಲ್ಲಿಯೂ ಸಮಾನವಾಗಿದ್ದ ಈ ಎರಡು ಸ್ಕೂಲುಗಳೂ ಈಚೀಚೆಗೆ ಒಂದಕ್ಕೊಂದು ವೈಷಮ್ಯವನ್ನು ತೋರಿಸುತ್ತ ಬಂದಹಾಗೆ ಭಾವನೆಯಾಗುತ್ತೆ ಪೇಟೆ ... ಸ್ಕೂಲು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಾ, ... ಸ್ಕೂಲು ದಿನೇ ದಿನೇ ಕ್ಷೀಣದೆಸೆಯನ್ನು ಹೊಂದುತ್ತಾ ಬರುವುದಕ್ಕೆ ಕಾರಣವೇನು ಎಂಬುದನ್ನು ನಿಷ್ಪಕ್ಷಪಾತವಾಗಿ ಹೇಳಬೇಕಾಗಿರುವುದಿಲ್ಲ ಸರ್ಕಾರದವರು ಪೇಟೆ ಸ್ಕೂಲಿಗೆ ಕೊಟ್ಟ ಪ್ರೋತ್ಸಾಹದಿಂದ ಅದು ಅಭಿವೃದ್ಧಿಹೊಂದುತ್ತಲೂ, ... ಸ್ಕೂಲಿಗೆ ಕೊಟ್ಟ ಉದಾಸೀನದಿಂದ ಅದು ಕ್ಷೀಣದೆಸೆಯನ್ನು ಹೊಂದುತ್ತಲೂ ಇವೆ ಎಂದು ಹೇಳಬೇಕಾಗಿದೆ ಯಾತಕ್ಕೆಂದರೆ, ಸಮಾನವಾದ ಶಕ್ತಿಯುಳ್ಳ ... ಬೋಧಕರಲ್ಲಿ ಕೆಲವರನ್ನು ತೆಗೆದುಹಾಕಿ, ಈಗಿನ ಕಾಲಕ್ಕೆ ತಕ್ಕಂತೆ ನವೀನ ವಿದ್ಯಾಬೋಧಕರನ್ನು ಪೇಟೆ ಸ್ಕೂಲಿನಲ್ಲಿ ನೇಮಕ ಮಾಡಿರುವುದೊಂದು ಕಾರಣ ಪೇಟೆ ಸ್ಕೂಲಿನಲ್ಲಿಯೇ ಇಂಗ್ಲೀಷ್ ಮತ್ತು ಕನ್ನಡ ಲೋವರ್ ಸೆಕಂಡರಿ ಗ್ರೇಡುಗಳನ್ನು ಇಟ್ಟಿರುವುದು ಮತ್ತೊಂದು ಕಾರಣ. ಈ ಏರ್ಪಾಡಿನಿಂದ ಪೇಟೆ ಸ್ಕೂಲಿಗೆ ಬಾಲಕರನ್ನು ಕಳುಹಿಸತಕ್ಕ ಪೇಟೆ ಪ್ರಜೆಗಳು ಮಾತ್ರ ಸರ್ಕಾರದ ಪ್ರೋತ್ಸಾಹಕ್ಕೆ ಪಾತ್ರರಾಗಿಯೂ, ... ಸ್ಕೂಲಿಗೆ ಬಾಲಕರನ್ನು ಕಳುಹಿಸುವ ಪೇಟೆ ಪ್ರಜೆಗಳು ಅಪಾತ್ರರಾಗಿಯೂ ಇರುವಂತೆ ಭಾವನೆಯಾಗಿರುವುದೊಂದು ವಿಶೇಷಾಂಶ. ... ಸ್ಕೂಲಿನ ಪೇಟೆಗಳ ಬಾಲಕರು ಇಂಗ್ಲೀಷ್ ವಿದ್ಯಾಭ್ಯಾಸಕ್ಕೂ ಕನ್ನಡ ಲೋವರ್ ಸೆಕಂಡರಿಗೆ ಓದುವುದಕ್ಕೂ ದೂರ ಫಾಸಲೆಯಲ್ಲಿರುವ ಪೇಟೆ ಸ್ಕೂಲಿಗೆ ಹೋಗಲು ಸಾಧ್ಯವಿಲ್ಲ. ಪ್ಲೇಗ್ ಮುಂತಾದ ರೋಗ ಭಯದಿಂದ ಒಂದು ಬೀದಿಯಿಂದ ಮತ್ತೊಂದು ಬೀದಿಗೆ ಹೋಗುವುದೇ ಯುಕ್ತವಲ್ಲದಿರುವಾಗ ಹಲವು ಪೇಟೆಗಳನ್ನು ಸುತ್ತಿಕೊಂಡು ದೂರವಾಗಿ ಬಾಲಕರನ್ನು ಕಳುಹಿಸುವುದು ಸಾಹಸವೆಂದೇ ಎಲ್ಲರಿಗೂ ಆಯುಕ್ತವೆಂದೇ ತೋರುವುದರಲ್ಲಿ ಸಂದೇಹವಿಲ್ಲ ಈ ಕಾರಣಗಳಿಂದ ಸರ್ಕಾರದವರು ಘನವಾದ ಯೋಚನೆಯಿಂದ ಪೇಟೆ ಸ್ಕೂಲಿನಲ್ಲಿರತಕ್ಕ ಎಲ್ಲಾ ಅನುಕೂಲತೆಗಳನ್ನೂ ಅಂದರೆ ಕನ್ನಡ ಲೋವರ್ ಸೆಕಂಡರಿ ವರೆವಿಗೂ ತರಗತಿಗಳನ್ನು ಹಳೇ ಕಟ್ಟಡದಲ್ಲಿ ಏರ್ಪಡಿಸುವುದೂ, ಈಗಿನ ಕಾಲಕ್ಕೆ ತಕ್ಕಂತೆ ಹೊಸ ಬೋಧಕರನ್ನು ನೇಮಿಸುವುದೂ, ಕನಿಷ್ಠಪಕ್ಷ ಮೂರನೇ ತರಗತಿಯ ವರೆಗಾದರೂ ಇಂಗ್ಲೀಷ್ ವಿದ್ಯೆಯನ್ನು ಬೋಧಿಸುವ ಏರ್ಪಾಡು ಮಾಡುವುದೂ, ಈ ಮುಂತಾದವುಗಳಲ್ಲಿ ಉದಾರಭಾವನನ್ನು ಉಂಟುಮಾಡುವರೆಂದು ನಂಬಿರುತ್ತೇನೆ. ಬ ರ ರ.

"ವೃತ್ತಾಂತ ಪತ್ರಿಕೆ" ಚಂದಾದಾರರಿಗೆ.

"ವೃತ್ತಾಂತ ಪತ್ರಿಕೆ"ಯ ವರ್ಷವು ಕಳೆದ ಮೇ ತಿಂಗಳ ತಾ. ೩೧ ಕ್ಕೆ ಪೂರೈಸಿ, ಹಾಲಿ ವರುಷದ ಚಂದಾ ಹಣವು ಸಲ್ಲಬೇಕಾಗಿರುತ್ತದೆ. ಆದಕಾರಣ ನಮ್ಮ ಏಜಂಟರುಗಳ ಮೂಲಕ "ವೃತ್ತಾಂತ ಪತ್ರಿಕೆ"ಯನ್ನು ಪಡೆಯುವ ನಮ್ಮ ಚಂದಾದಾರರೆಲ್ಲಾ ಅವರಿಗೆ ಖಂಡಿತವಾಗಿ ಅಡ್ವಾನ್ಸಿನಲ್ಲಿ ಚಂದಾ ಕಟ್ಟಿ, ಅವರಿಂದ ಕ್ರಮವಾದ ರಶೀತಿ ಪಡೆಯಬೇಕೆಂದು ಈ ಮೂಲಕ ತಿಳಿಯಪಡಿಸಿದೆ. ಮ್ಯಾನೇಜರ್ "ವೃತ್ತಾಂತ ಪತ್ರಿಕೆ."

ಸುಖಪಟ್ಟ ಸ್ತ್ರೀಯರು ಪೆರೂನಾವನ್ನು ಹೊಗಳುತ್ತಾರೆ

ಪೆರೂನಾ ಪ್ರಖ್ಯಾತಿಹೊಂದಿರುವುದು ಅದರ ಗುಣದಿಂದ, ಬರೀ ಮಾತಿನಿಂದಲ್ಲ.

[1-12]

ಚಿಕ್ಕವರೂ ದೊಡ್ಡವರೂ ಒಂದೇ ರೀತಿ ಪೆರೂನಾವನ್ನು ಹೊಗಳುತ್ತಾರೆ ಹೆಣ್ಣುಮಕ್ಕಳೂ ಹೆಂಗಸರೂ ಪೆರೂನಾವಿನ ಗುಣವನ್ನು ಕಂಡುಕೊಂಡಿದ್ದಾರೆ ಹೆಣ್ಣುಮಕ್ಕಳೂ ಹೆಂಗಸರೂ ತಮ್ಮ ತಮ್ಮ ದೇಹಾಂಗ ಸ್ಥಾನದ ಕಾಯಿಲೆಗಳಲ್ಲಿ ಬಿದ್ದು, ಪೆರೂನಾ ಸೇವನೆಯಿಂದ ಸೌಖ್ಯಹೊಂದಿರುತ್ತಾರೆ

ಲಕ್ಷಣವಾಗಿರುವ ಹೆಣ್ಣುಮಕ್ಕಳೂ, ಸುಂದರಿಯರಾದ ಸ್ತ್ರೀಯರೂ, ಬಲಹೀನರಾದ ಹೆಣ್ಣುಮಕ್ಕಳೂ, ರೋಗಪೀಡಿತರಾದ ತಾಯಂದಿರೂ ಎಲ್ಲಾ ಪ್ರದೇಶಗಳಲ್ಲೂ ಪೆರೂನಾ ಸೇವಿಸಿ, ತಮ್ಮ ಸ್ವಭಾವಕ್ಕೆ ಅನುಗುಣವಾದ ಕಾಯಿಲೆಗಳನ್ನೆಲ್ಲಾ ನಿವಾರಣೆಮಾಡಿಕೊಂಡು, ಅದರ ಗುಣವನ್ನು ತಿಳಿದಿರುತ್ತಾರೆ ಮುದಿ ಅಜ್ಜಿಯು ಮೊದಲುಗೊಂಡು ಎಳೇ ಹೆಣ್ಣು ಮಗುವಿನ ತನಕ ಅವರೆಲ್ಲಾ ಅನೇಕವಿಧಗಳಲ್ಲಿ ಪೆರೂನಾವಿಗೆ ಕೃತಜ್ಞರಾಗಿರುವರು

ಇವೆಲ್ಲಾ ಯಥಾರ್ಥವಾಗಿರುತ್ತವೆ ಗುಣಹೊಂದಿದ ಹೆಂಗಸು ಅದನ್ನು ಹೇಳುವುದಕ್ಕೆ ಹಿಂತೆಗೆಯುವುದಿಲ್ಲ ಅವಳ ಮಾತು ಕೇಳಿ ಇತರ ಹೆಂಗಸರು ಸಹ ಈ ರೀತಿ ಪೆರೂನಾವಿನ ಹೆಸರು ಕೇಳಿದ ಮೊದಲೇ ಅದರ ಕಡೆ ಬರುತ್ತಾರೆ ಲಕ್ಷಾಂತರ ಜನಗಳವರ ಪೆರೂನಾವು ಪ್ರಶಂಸೆಗೆ ಅರ್ಹವಾದಂಥಾ ಕೈಕಂಡ ಔಷಧವೆಂದು ಒಪ್ಪಿಕೊಳ್ಳುತ್ತಾರೆ

ಅನೇಕ ಸಣ್ಣ ಸಣ್ಣ ಕಾಯಿಲೆಗಳಿಗೆ ಪೆರೂನಾವು ಒಳ್ಳೆ ಔಷಧವಾಗಿರುತ್ತದೆ ಶೀತದಿಂದ ಹುಟ್ಟುವ ಅನೇಕ ಕೆಟ್ಟ ಕಾಯಿಲೆಗಳನ್ನೂ ಹೆಂಗಸರಿಗೆ ಸಾಮಾನ್ಯವಾಗಿ ಉಂಟಾಗುವ ಶರೀರದ ಅಶಕ್ತತೆಗಳನ್ನೂ ಪೆರೂನಾವು ಕಡಿಮೆಮಾಡಬಲ್ಲದೆಂದು ನಂಬತಕ್ಕದ್ದಾಗಿದೆ ಶೈತ್ಯದಿಂದ ಹುಟ್ಟುವ ಸಮಸ್ತವಾದ ರೋಗಗಳನ್ನೂ ಪೆರೂನಾದಲ್ಲಿರುವ ಗುಣದಿಂದ ವಾಸಿಮಾಡಿಕೊಳ್ಳಬಹುದು

ದೇಹದೊಳಗಿನ ಶೀತವು

ಮಿಸೆಸ್ ಫ್ರೆಡ್ ವೆಬ್ಬರ್ ೧೯ ಬಿಲ್ಲಿಂಗ್ಸ್ ಬೀದಿ, ಪ್ರಾಂಟ್‌ಫರ್ಡ್, ಒಂಟ್, ಜೂನಿಯರ್ ಪ್ರೆಸಿಡೆಂಟ್, ಸ್ತ್ರೀಯರ ಕ್ರಿಸ್ತ[illegible] ಸಂಘ, ಹೀಗೆ ಬರೆಯುತ್ತಾಳೆ.

"ಈ ಸಲ ನಾನು ಕಾಯಿಲೆ ಬಿದ್ದಾಗ ನನಗೆ ಬಹಳ ಕಠಿಣವಾದ ಶೀತ ಹಿಡಿಯಿತು ... ನನ್ನ ದೇಹದ ಅಂಗಗಳು ರೋಗಿಸಲ್ಪಟ್ಟಿದ್ದು ... ಕ್ಷಣವಾದ ನೋವಾಗುತ್ತಿತ್ತು ದಿನೇ ದಿನೇ ನನ್ನ ಸ್ಥಿತಿಯು ಕೆಡುತ್ತಾ ಬಂದು ... ಆಸೆಯೇ ... ಇತ್ತು.

"ಹಿರಿಯನ ದಿಂದ ಅಷ್ಟುಗುಣಕರವಾಗಿ ರೋಗಗಳು ಗುಣವಾಗಿರುವುದನ್ನು ನಾನು ಕೇಳಿ, ಅದನ್ನು ಎರಡು ತಿಂಗಳ ವರೆಗೆ ಸೇವಿಸಿ, ಅದರಿಂದ ನನಗೆ ಎಷ್ಟುಮಟ್ಟಿಗೆ ಒಳ್ಳೇದಾಗಿದೆಯೆಂದು ನೋಡೋಣವೆಂದು ನಿಶ್ಚಯಿಸಿಕೊಂಡೆನು

"ಒಂದು ತಿಂಗಳು ಸೇವಿಸುವಷ್ಟರಲ್ಲಿ ಕಾಗಿ ನನಗೆ ಬಹಳ ವಾಸಿಯಾಯಿತು ಎರಡನೇ ತಿಂಗಳ ಅಂತ್ಯದಲ್ಲಿ ನಾನು ಹೊಸ ಹೆಂಗಸಾದೆನು ಅದೇ ರೀತಿ ನಾನು ಕಾಯತೃಪ್ತಿ ಹೊಂದುತ್ತಾ, ಸಂಪೂರ್ಣ ಆರೋಗ್ಯವನ್ನು ಹೊಂದಿದೆನು ಅದನ್ನೇ ಸೇವಿಸುವಂತೆ ನನ್ನ ಅನೇಕ ಸ್ನೇಹಿತೆಯರಿಗೆ ಹೇಳಿದ್ದೇನೆ, ಎಲ್ಲರೂ ಅದರ ಪ್ರಯೋಜನವನ್ನು ನೋಡಿ ಸಂತೋಷಪಡುತ್ತಾರೆ"

ತಲೆ, ಹೊಟ್ಟೆ, ಶ್ವಾಸಕೋಶಗಳು

ಮಿಸ್ ಒಲಿವೈನ್ ಪೆರ್ರಾಲ್ಟ್, ೩೩೫ ರೇಚೆಲ್ ಬೀದಿ, ಬೊಲಿವಾರ್ ಸೆಂಟ್ ಪಾಲ್, ಮಾಂಟ್ರಿಯಲ್, ಕ್ಯಾನಡಾ ಹೀಗೆ ಬರೆಯುವುದು

"ನಿಮ್ಮ ಪ್ರಸಿದ್ಧವಾದ ಪೆರೂನಾವನ್ನು ಸೇವಿಸಿದ ಸಂತೋಷದಿಂದ ನಿಮಗೆ ಈ ಕಾಗದ ಬರೆಯುತ್ತೇನೆ ನಾನು ಬೇರೆ ಔಷಧಗಳನ್ನು ಪರೀಕ್ಷೆ ಮಾಡಿದೆನು ಆದರೆ ನನ್ನ ಶೀತವು ಸ್ವಲ್ಪವೂ ವಾಸಿಯಾಗಲಿಲ್ಲ ನನಗೆ ಕ್ಷಯ ಹಿಡಿಯುವುದೋ ಎಂದು ಹೆದರಿಕೆಯುಂಟಾಗಿತ್ತು

"ನನ್ನ ತಲೆಯು ಮತ್ತು ಹೊಟ್ಟೆಯು ಸ್ಥಿತಿಯು ನನಗೆ ಚಿಂತೆಯನ್ನುಂಟುಮಾಡಿತ್ತು ಇದ್ದಕ್ಕಿದ್ದ ಹಾಗೇ ಹವಾ ಬದಲಾಯಿಸಿದ್ದರಿಂದ ನನಗೆ ಶೀತವಾಗಿ ಮೂರು ತಿಂಗಳವರೆಗೂ ಹಗಲೂ ರಾತ್ರಿ ಕೆಮ್ಮಲುಂಟಾಗಿತ್ತು

"ನನ್ನ ಸಹೋದರನಿಗೆ ಪೆರೂನಾದಿಂದ ವಾಸಿಯಾಗಿದ್ದದ್ದರಿಂದ ಅವನು ಅದನ್ನು ಸೇವಿಸೆಂದು ನನಗೆ ಹೇಳಿದನು ಅದರಂತೆ ನಾನು ಕ್ರಮವಾಗಿ ಸೇವಿಸಿ, ದಿನೇ ದಿನೇ ಗುಣಹೊಂದುತ್ತಾ ಬಂದೆನು ಈಗ ನಾನು ಮೂರು ಬಾಟ್ಲು ಔಷಧ ಸೇವಿಸಿ ಮುಗಿಯಿತು ನಾನು ಸಂಪೂರ್ಣವಾಗಿ ಗುಣಹೊಂದಿರುತ್ತೇನೆ"

ಕಾಯಿಲೆಯಾದ ಹೆಂಗಸರಿಗೆ.

"ಪೆರೂನಾದಿಂದ ನನಗೆ ಆಗಿರುವ ಪ್ರಯೋಜನವನ್ನು ತಿಳಿಸುವುದು ನನ್ನ ಕರ್ತವ್ಯವೆಂದು ತಿಳಿದಿದ್ದೇನೆ ಸ್ವಲ್ಪ ಹೆಚ್ಚು ಕಡಿಮೆ ನಾನು ಆರುವರ್ಷಗಳ ಕಾಲ ನರಳಿದೆನು ಹಲವು ಡಾಕ್ಟರುಗಳಿಂದ ಪರೀಕ್ಷೆ ಮಾಡಿಸಿ, ಅವರ ಔಷಧಗಳನ್ನು ಸೇವಿಸಿದೆನು ಅದರಿಂದ ನನಗೆ ಸ್ವಲ್ಪಮಾತ್ರ ಉಪಶಮನವಾಯಿತಲ್ಲದೆ ಆ ಔಷಧಗಳು ನನ್ನ ರೋಗವನ್ನು ವಾಸಿಮಾಡಲಿಲ್ಲ ನಾನು ಬಹಳ ಬಾಧೆಯನ್ನನುಭವಿಸಿದವಳು ನನ್ನ ಔಷಧಕ್ಕಾಗಿ ನನ್ನ ಗಂಡನು ಬಹಳ ಹಣವನ್ನು ಖರ್ಚುಮಾಡಿರುತ್ತಾನೆ ನಿರಾಶೆಯಾಗಿ ಕಡೆಯಲ್ಲಿ ಪೆರೂನಾವನ್ನು ತೆಗೆದುಕೊಂಡು ಪರೀಕ್ಷೆಮಾಡೋಣವೆಂದು ನೆನಸಿ, ಸೇವಿಸಲಾರಂಭಿಸಿದೆನು ನಿಮ್ಮ ಹೇಳಿಕೆಯ ಪ್ರಕಾರ ಒಂದು ಬಾಟ್ಲು ಔಷಧ ಮುಗಿಯುವಷ್ಟರೊಳಗೆ ನನಗೆ ಸ್ವಲ್ಪ ಉಪಶಮನವಾಯಿತು ಆಗಿನಿಂದ ನನಗೆ ಬೆನ್ನುನೋವು ಇಲ್ಲವೇ ಇಲ್ಲ ಈಚೆಗೂ ಪೆರೂನಾ ಸೇವಿಸಿದೆನೆ ಈಗ ನಮ್ಮ ಮನೆಗೆ ಡಾಕ್ಟರು ಬರುವುದು ಅಪರೂಪ ಪೆರೂನಾದಿಂದ ನಮ್ಮ ಸಂಸಾರಕ್ಕೆ ಎಷ್ಟು ಉಪಕಾರವಾಗಿದೆಯೋ ವಿವರಿಸುವದೆ ಒಂದು ಪುಸ್ತಕವಷ್ಟಾದೀತು ನಾನು ತಮ್ಮನ್ನು ಅತ್ಯಂತ ವಿಶೇಷವಾಗಿ ಕೃತಜ್ಞತಾಭಾವದಿಂದ ನಂಬಿಸುತ್ತೇನೆ ಅನೇಕ ಸಲ ನಿಮ್ಮ ಔಷಧವನ್ನು ಇತರರಿಗೆ ತೋರಿಸಿರುತ್ತೇನೆ ಅವರೆಲ್ಲಾ ಸೇವಿಸಿ ಸಂತೋಷಪಡುತ್ತಾರೆ ಕಾಯಿಲೆಯಾಗಿದ್ದೇನೆಂದು ಯಾವ ಹೆಂಗಸಾದರೂ ನನಗೆ ಬರೆದರೆ, ಅಥವಾ ನನ್ನ ಬಳಿಗೆ ಬಂದು ಕೇಳಿದರೆ ಅವರಿಗೆಲ್ಲಾ ಪೆರೂನಾವಿನ ಯೋಗ್ಯತೆಯನ್ನು ವಿವರಿಸಿ ಅದನ್ನು ಸೇವಿಸುವಂತೆ ಶಿಫಾರಸು ಮಾಡುತ್ತೇನೆ"—ಎಂಬದಾಗಿ ಮಿಸೆಸ್ ಪಾರ್ಥರ್ ಫ್ರೆಡ್ರಿಕ್, ಸೆಂಟ್ರಲ್ ಪಾರ್ಕ್ ಲಾಂಗ್ ವ್ಯೂ, ನ್ಯೂಯಾರ್ಕ್ ಸಿಟಿ, ಯು. ಎಸ್. ಎ ಎಂಬೀ ಹೆಂಗಸು ಬರೆದಿರುತ್ತಾಳೆ

ಒಬ್ಬ ಹೆಂಗಸಿನ ಅನುಭವವು

"ಕೆಳ ಹೊಟ್ಟೆಯ ನಿಶ್ಶಕ್ತಿಯಿಂದ ನಾನು ತುಂಬಾ ಬಾಧೆಪಟ್ಟೆನು ಆದರಿಂದ ನನ್ನ ಶಕ್ತಿಯೆಲ್ಲಾ ಕುಂದಿ, ನನ್ನ ಬುದ್ಧಿಯು ಕೆಟ್ಟುಹೋದೀತೆಂದು ಹೆದರಿಕೊಂಡೆನು ನನ್ನ ಬೆನ್ನೆಲುಬು ಎಡಗಾಲಿನ ತನಕ ಬಹಳವಾಗಿ ಬಾಧೆಪಡಿಸುತ್ತಿತ್ತು ಈ ಬಾಧೆಯನ್ನು ಅನುಭವಿಸುವುದಕ್ಕಿಂತ ಸಾಯುವುದೇ ಉತ್ತಮವೆನ್ನುವಂತಿತ್ತು ಪೆರೂನಾವು ಈ ನನ್ನ ಕಾಯಿಲೆಯನ್ನು ವಾಸಿಮಾಡಿತು ಅದ್ದರಿಂದ ಅದು ಉತ್ಕೃಷ್ಟವಾದದ್ದೆಂದು ನಾನು ಹೇಳುವದೇನೂ ಅತಿಶಯವಲ್ಲ ಈ ನನ್ನ ರೋಗವು ನಿವಾರಣೆಯಾಗಿ ಈಗ ಎರಡು ವರುಷ ತುಂಬುವುದರಲ್ಲಿದೆ ಮತ್ತೆ ಆ ರೋಗದ ಸೆಲೆಯನ್ನೇ ಕಾಣೆನು"

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೨೨—೫—೧೯೦೮ ರಿಂದ ೨೯—೫—೧೯೦೮ ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	5	5
ಬೆಂಗಳೂರು ಡಿಸ್ಟ್ರಿಕ್ಟು	0	1	7	1
ಮೈಸೂರು ,,	19	20	71	48
ಕೋಲಾರ್ ,,	*	*	*	*
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	7	3
ಹಾಸನ ,,	1	0	128	88
ಚಿತ್ರದುರ್ಗ ,,	0	0	1	1
ಕಡೂರ್ ,,	0	0	0	0
ಶಿವಮೊಗ್ಗ ,,	*	*	*	*
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ.	20	21	219	148

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಜ್ಯೇಷ್ಠ ಬಹುಳ ಚೌತಿ ಗುರುವಾರದಿಂದ ಜ್ಯೇಷ್ಠ ಬಹುಳ ಏಕಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಜೂನ್

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ	ತೇದಿ [illegible]
18	ಗುರು	ಚೌತಿ	12 10	ಶ್ರ	18 34	5
19	ಶುಕ್ರ	ಪಂಚಮಿ	6 ?	ಧ	11 28	6
20	ಶನಿ *	ಷಷ್ಠಿ	0 22	ಶತ	51 14	7
21	ರವಿ ,,	ಅಷ್ಟಮಿ	49 39	ಪೂಭಾ	6 36	8
22	ಸೋಮ ‡	ನವಮಿ	46 16	ಉಭಾ	3 10	9
23	ಮಂಗಳ ,,	ದಶಮಿ	41 20	ರೆ	0 18	10
24	ಬುಧ	ಏಕಾದಶಿ	37 46	ಅ	58-20	11

* ಅಮಾ ೩ ,, ತ್ರಿಲೋಚನಗೌರೀಪೂಜಾ ‡ ಲಿಂಗಾಂಬುಧಿ ವ್ರತ ,, ಕಟಕಾಯನ ಗತೇ ರವಿ ಸರ್ವತ್ರ ಏಕಾದಶಿ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಬ್ಬೇ ಅಕ್ಕಿ ಪಲ್ಲಾ ೧ಕ್ಕೆ	ರೂ	೧೪ ೮ ೦	೧೭ ೦-೦
ಕೆಂಬೂತಿ ಅಕ್ಕಿ ಅವಲ್	.	೧೫-೦-೦	೧೭ ೦-೦
,, ಸ ಯಂ		೧೩-೮-೦	೧೫-೦-೦
ಜಾಡ್ಯಾಜಿ ಅಕ್ಕಿ	.	೧೩-೮-೦	೧೬-೦-೦
ಸಣ್ಣಕ್ಕಿ ಅವಲ್	.	೧೭-೦-೦	೩೮ ೦ ೦
,, ದುಯಂ	. .	೧೬ ೮-೦	೧೬ ೦ ೦
ತೊಗರೀ ಬೇಳೆ ಪಲ್ಲಾ ೧ಕ್ಕೆ	.	೧೬-೦-೦	೧೪-೮-೦
,, ದುಯಂ		೧೫-೮-೦	೧೪-೦ ೦
ಹೈಕ ರಾಗಿ ಪಲ್ಲಾ ೧ಕ್ಕೆ	.	೬-೧೨ ೦	೭ ೦ ೦
ಕಾದ್ರಾಗಿ	.	೬-೪-೦	೬-೧೨-೦
ಜೋಳ		೭-೦-೦	೯-೦-೦
ಗಲಸಂಡೆ ಪಲ್ಲಾ ೧ಕ್ಕೆ		೧೧-೦ ೦	೧೧ ೦ ೦
ಬಿಳೀ ಅವರೆ		೮ ೦-೦	೯ ೦ ೦
ಹೆಸರು		೧೧ ೦-೦	೧೨-೯ ೦
ಉದ್ದು	.	೧೨-೮-೦	೧೨ ೧೨ ೦
ಕಡಲೆ		೧೩-೦-೦	೧೩-೮ ೦
ಎಳ್ಳು ಪ ೧೨ ಕ್ಕೆ		೨೩-೮-೦	೨೫-೮-೦
ಹುರುಳಿ	.	೬-೮-೦	೭-೪-೦
ಹರಳು ೧೦೦ ಸೇರಿಗೆ		೧೧ ೦-೦	೧೩ ೦-೦
ಸೀಗೇಕಾಯಿ ಮಣ ೧ಕ್ಕೆ	.	೨-೮-೦	೧ ೬-೦
ಮೆಣಸಿನಕಾಯಿ	.	೩-೪-೦	೩-೦ ೦
ದುಯಂ	.	೨-೪-೨	೨ ೧೨-೦
ಬೆಲ್ಲ ದೊಡ್ಡ ಅಚ್ಚು	. .	೫ ೦-೦	ಮಾ ೨ ೦ ೦
ಒಳ್ಳೆನ್ನೆ ಮಣ ೧ಕ್ಕೆ		೬-೦-೦	೬-೪-೦
ಹರಳೆಣ್ಣೆ ,,	.	೫ ೮-೦	೪ ೨ ೦
ಕೊತ್ತಂಬರಿ ಪಲ್ಲಾ ೧ಕ್ಕೆ	.	೬-೮-೦	೬ ೦ ೦
ಉಪ್ಪು ,,	. .	೪-೮-೦	೫ ೦ ೦
ಹುಣಸೇ ಹಣ್ಣು	.	೧-೪-೧	೧ ೦ ೦
,, ಹಳೇದು . .	. .	೧-೦	೧ ೪ ೦
ತುಪ್ಪ ಮಣ ೧ಕ್ಕೆ .	.	೧೪ ೮ ೧	೧೫ ೦-೦
ಸೀಮೆಯಿಂದ ಚಟ್ಟಿ ೧ಕ್ಕೆ	. .	೪-೧೫-೦	೪ ೪-೦
ತೆಂಗಿನಕಾಯಿ ೧೦೦ ಕ್ಕೆ	.	೬-೮ ೦	೬ ೮ ೦
ಅಳಲೇಕಾಯಿ ಮಣ ೧ಕ್ಕೆ	.	೧ ೦ ೦	೧-೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	. .	೦ ೧೨-೦	೦-೧೪-೦
ಚಿನ್ನ (ಪೌನ್) ಕೆಂಪು	.	೨೫ ೬ ೦	೧೫-೬ ೦
,, ,, ಪಸಿಮೆ	. .	೧೫-೧೦-೦	೧೫-೧೨-೦
,, ,, ಗಟ್ಟಿ ತೊಲ ೧ಕ್ಕೆ	. .	೨೩-೧೨-೦	೨೪ ೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	. .	೩೫-೦ ೦	೬೮-೦-೦

Printed and Published by the Rev E W. THOMPSON, M A, Proprietor and Manager, Wesleyan Mission Press, Mysore. 18/6/1908

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೮ ನೇ ಇಸವಿ ಜೂನ್ ತಾರೀಖು ೨೫ ನೇ ಗುರುವಾರ. ಸಂಚಿಕೆ ೪

AMRUTANJAN DEPOT, 16 OAK-LANE, BOMBAY. [17-18]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ :—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮ್ ಮತ್ತು ಘಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ ಬಾಟ್ಲಿ ೧ಕ್ಕೆ ಕಿಮ್ಮತ್ತು ೦-೮-೦. ಪೋಸ್ಟು ಖರ್ಚು ೦-೪-೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಹಿಜ್ಜಿ ವಗೈರೆ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦-೩-೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ—ಜೀರ್ಣಕ್ಕೆ ಡಬ್ಬಿ ೧ಕ್ಕೆ	೦—೪—೦	ಕಾಸನಾರಿಗುಟಿಕ—ಕೆಂಗಸರ [illegible]	೧—೦—೦
ಪದ್ಮಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧—೦—೦	ಪ್ರಮೇಹದ ವಿರೇಚ—ಪ್ರಮೇಹಕ್ಕೆ	೧—೦—೦
[illegible]—ಜ್ವರಕ್ಕೆ ಬಾಟ್ಲು ೧ಕ್ಕೆ	೦—೧೨—೦	ಕಫಹರಿ—ಕಫ, ಕೆಮ್ಮು ಕ್ಷಯ, ಇತ್ಯಾದಿ	೧—೪—೦
[illegible]	೦—೮—೦	ಸುಂದರೀ ತೈಲ—ಮೋರೆಗೆ	೦—೮—೦
[illegible]—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಕಣ್ಣಿನ ದಪ್ಪಟ್ಟಿಗೆ	೦—೪—೦
[illegible]	೦—೬—೦	[illegible] ಬಾಟ್ಲು ೧ಕ್ಕೆ	೦—೮—೦
[illegible]	೦—೪—೦	ನಾರದ ವಿರೇಚ ..	೧—೦—೦
[illegible]ಗಳಿಗೆ	೦—೨—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
[illegible] ತೈಲ—ಕೂದಲಿಗೆ	೧— —೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
[illegible]	೦—೮—೦	[illegible]	೦—೮—೦

ವಿಳಾಸ:—ವಿಲಿಯಂ ಮತ್ತು ಕಂಪೆನಿ, ೧೬ ಓಕ್‌ಲೇನು ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಆಡ್ರೆಸ್ಸು—"ಅಮೃತಾಂಜನ," ಮುಂಬಯಿ.

ಕಾರ್ಡು ಸೈಜು ೪।×೩।.

ಫೋಟೋ ತೆಗೆಯುವ

ಫೊಟೋ ಕ್ಯಾಮೆರಾ.

84-45

ಬೆಲೆ ಫಕ್ತ ಮೂರು ರೂಪಾಯಿ.

ಇದರಿಂದ ಬೇಕಾದ ಮನುಷ್ಯನ ಫೋಟೋ ಅವನಿಗೆ ತಿಳಿಯದಂತೆ ತೆಗೆಯಲಿಕ್ಕೆ ಬರುತ್ತದೆ. ವೇಗದಿಂದ ಓಡುವ ಗಾಡಿಯ ಮತ್ತು ಹಾರುವ ಪಕ್ಷಿಯ ಫೋಟೋ ಸಹ ತೆಗೆಯಬಹುದು. ಇದರಲ್ಲಿ ಕಲಿಯತಕ್ಕದ್ದೇನೂ ಇಲ್ಲ. ಈ ಕ್ಯಾಮರಾದ ಮಾಹಿತಿಯನ್ನು ಕೊಳ್ಳುವವರಿಗೆ ನಾವು ಕೂತಲ್ಲಿಯೇ ಮಾಡಿಕೊಡುವೆವು. ಎಷ್ಟೋ ಕಡೆಗೆ ಇದಕ್ಕೆ ೧೦ ರಿಂದ ೧೫ ರೂ. ಬೆಲೆ ಬೀಳುತ್ತದೆ ಆದರೆ ಇದರ ಖರೇ ಕಿಮ್ಮತ್ತು ೩ ರೂಪಾಯಿ ಮಾತ್ರ ಇರುವದು. ಟಪ್ಪಾಲ್ ಖರ್ಚು ೯ ಆಣೆ.

ಇದು ಸಿಕ್ಕತಕ್ಕ ವಿಳಾಸ :—

ಛೋಟಾಲಾಲ ಭಗನಲಾಲ ಮಹಾಜನ, ಠಾಕೂರದ್ವಾರ ರೋಡ, ಪೋಸ್ಟ್ ಕಾಲಬಾದೇವಿ, ಮುಂಬಯಿ.

ಜ್ವ ರ ಹ ರಿ. 44-8



ಇದು ಸಾಧಾರಣ ಜ್ವರ, ಜೀರ್ಣಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ನಾಶಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಬಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೬೦ ಡ್ರಾಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವ ಕಾರಣದಿಂದ ದಯವಿಟ್ಟು ಇನ್ನೊಂದು ೬೦ ಡ್ರಾಸಿನ ಸೀಸೆಯನ್ನು ವಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ :—ಸೀಸೆ ೧ಕ್ಕೆ ೮ ಆಣೆ. ೧ ಡ[illegible]; ೧—೮ ರೂ., ರೂ. ೨—೧೨ ಆ., ೧೧ ರೂ., [illegible] ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓ ಮ ೦ ಕ ರ್ಪೂ ರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಬಂಧವಾದರ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ ಗಣಪತಿಯವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಹಾಜೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಚೆನ್ನಿಯವರ ಗ್ರೇಟ್ ಇಂಡಿಯನ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ, ಮದರಾಸ್.

ವ್ಯವಹಾರ ನಿರ್ಣಯ. "ಕನ್ನಡ ಲಾ ರಿಪೋರ್ಟರ್."

ವ್ಯವಹಾರನಿರ್ಣಯ—ಘಟಗಳು ಆಳಿದ ಹಿಂದೂ ಮುಸಲ್ಮಾನರು ಬಾಗಳು, ೬೯ ಖಾನೂನುಗಳು ಇವುಗಳ ಸಂಗ್ರಹವು, ೧೨ ದಸ್ತವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡ ಪುಸ್ತಕ. ಕ್ರಯ ವಿ ಪಿ. ಸೇರಿ ೧ ರೂ. ೧೨ ಆಣೆ. [10-9]

ಕನ್ನಡ ಲಾ ರಿಪೋರ್ಟರ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ೧—೦—೦ ಮುಂಗಡ, ಯಾ, ವಿ ಪಿ. ಬಿಡಿಪತ್ರಿಕೆ ೧ಕ್ಕೆ ೦—೨—೦

ಇವುಗಳನ್ನು ಪೇಕ್ಷಿಸುವವರು "ಎಂ. ಮಲ್ಲಾರಾವ್, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯುವದು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) .. .. .. ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಸಾಸಲ್ ಸೇರಿ ರೂ ೧—೧೦—೦

" " ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ಸಮೂದಿಸತಕ್ಕದ್ದು.

ಪತ್ರ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-19

೧. ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು [illegible] ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಬಾಳುವ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ಊಟವಾದೊಡನೆ ಅಥವಾ ಹಾಲ್ ಉಪಯೋಗಿಸುತ್ತಿದ್ದರೆ ಬಹಳ ಜೊತ್ತು ಸುವಾಸನೆಯಾಗಿರುತ್ತ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿರುಚಿಗೂ ಹಾನಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಏಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಘಾತಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ :—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ಸುಲಭ ಖರೀದಿ! ನೋಡಿ!!

46-8

ರಾಸ್ಕೋಫ್ ಸಿಸ್ಟಂ ಲೀವರ್ ವಾಚು ಸರಪಣಿ ಸಹಿತ ವಿ. ಪಿ. ಪಿ. ಚಾರ್ಜು ಸೇರಿ ೩-೮-೦. ಯಾರೂ ಇದುವರೆಗೂ ಈ ಖರೀದಿಗೆ ಕೊಟ್ಟಿಲ್ಲ. ಮಾದರಿಗೆ ಒಂದನ್ನು ತರಿಸಿ ನೋಡಿರಿ. ನಮ್ಮ ವಿಳಾಸ—ಟಿ. ಸಿ. ಕೃಷ್ಣಯ್ಯಶೆಟ್ಟಿ ಅಂಡ್ ಸನ್, ಜನರಲ್ ಮರ್ಚೆಂಟ್, ನಂಬರು ೨೦, ಸಿಂಗಣ್ಣನ ಬೀದಿ, ಸಾಹುಕಾರ್ ಪೇಟೆ, ಮದ್ರಾಸು.

೨ ನೇ ಭಾಷೆ, ತಾವಾಗಿ ಇಂಗ್ಲೀಷು ಕಲಿಯುವಿಕೆ.

51 3

ಇದು ಪಟ್ಟಣಿಗರ ಭದ್ರವಾದ ಸ್ನೇಹಿತ. ಇಂಗ್ಲಿಷ್ ಭಾಷೆಯನ್ನು ಓದಲೂ, ಮಾತಾಡಲೂ ಉಪಾಧ್ಯಾಯರ ಸಹಾಯವಿಲ್ಲದೆ ಒಂದೆರಡು ತಿಂಗಳುಗಳಲ್ಲಿಯೇ ತಾವಾಗಿ ಕಲಿಸುವ ಅತ್ಯುತ್ತಮವಾದ ಪುಸ್ತಕ. ಸಸ್ಯಗಳ ಮತ್ತು ವಾಕ್ಯಗಳ ಸಮುದಾಯ, ಸಂಸಾರ ಗೃಹಕೃತ್ಯ ವ್ಯಾಪಾರ, ಭೋಜನಶಾಲೆ, ಮುಂತಾದವುಗಳಲ್ಲಿ ಬಳಸಬಹುದಾದ ಅನೇಕ ಅಪೂರ್ವ ಶಬ್ದಗಳು, ಕೋಷ್ಟಗಳು, ಗಾದೆಗಳು, ಮುಂತಾದ್ದು ಸೇರಿಸಿ ಇಂಗ್ಲೀಷು ಪ್ರತಿಶಬ್ದದ ಉಚ್ಚಾರಣೆಯನ್ನೂ ಅದರ ಅರ್ಥವನ್ನೂ ಕನ್ನಡದಲ್ಲಿ ಬರೆದಿರುವುದು ಕ್ರಯ ಒಂದು ರೂಪಾಯಿ ಮಾತ್ರ.

೩ ನೇ ಭಾಷೆ, ಪ್ರಶ್ನೋತ್ತರ ಲೇಖ್ಯಬೋಧಿನಿ

ಬರೆಯುವದಕ್ಕೆ ಮೊದಲಿರುವುದು, ಪೂರೈಸುವುದು, ಆಯಾಯ ಮಂಡಳಿಗಳ ನಿಗದಿಯಾದ ಬಳಕೆಗಳಿಂದ ಕೂಡಿರುವುದು ರೆವಿನ್ಯೂ ಫಾರಮ್ಸು, ರಾಜಿನಾಮೆ, ಬ್ಯಾಂಕ್ ರೆವಿನ್ಯೂ ರೂಲ್ಸ್ ಅನುಸರಿಸಿ ದೈವಿಗೆ ರಿಯಾಯಿತಿ ನೀಡುವ ಅನೇಕ ಸಂಗತಿಯುಳ್ಳ ನಾನಾತರ ದ ಅರ್ಜಿಗಳೂ, ವ್ಯವಹಾರ ವಿಷಯವಾದ ಅನೇಕ ವಿಷಯಗಳನ್ನು ಕೊಟ್ಟಿದೆ ಕ್ರಯ ೧—೪—೦ ಜಾಗ್ರತೆ ಮುಗಿದುಹೋಗಬಹುದಾದ ದರಿಂದ ಬೇಗ ತರಿಸಿಕೊಳ್ಳಿ ವಿಳಾಸ. "ಕರ್ನಾಟಕ ಪುಸ್ತಕ ಶಾಲಾ" ಲಕ್ಷ್ಮೀಪುರಂ ಪೋಸ್ಟ್ ಕೋಲಾರ್ ಡಿಸ್ಟ್ರಿಕ್ಟ್.

ಮಹಾ ಬಾಧಾಪಹಾರಿಣಿಯು.

18-5

ಇದನ್ನು ಕೇಳಲಾರದ ಪ್ರಪಂಚದಲ್ಲೇ ಇಲ್ಲವೆ.

ಕ್ಲೆಮೆಂಟ್ ಯವರ ಮಹತ್ತೀ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ಸರ್ಜನರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಿದಾರೆ, ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ಮಾಂಸನೋವು, ಕೆಳತ, ಗಂಟಿನೋವು, ಪಾರ್ಶ್ವವಾಯು, ನಾನಾ ವಿಧ ಮೂಲವ್ಯಾಧಿಗಳು, ಸಿರಬೇಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಕಾಲಿಗಾದ ನೋವು, ಹಲ್ಲುನೋವು ಮುಖ್ಯವಾಗಿ ಎಲ್ಲಾ ವಿಧವಾದ ನೋವು ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್ ಯವರ ಈ ಅನೇಕವಾದ ಹೈಲಿನ ಶೋಧಿಸಿರುವ ಸ್ಥಳದ ಮೂಲಸ್ಥಾನವನ್ನು ಮುಟ್ಟಿಸಿ. ಅದರ ಉಷ್ಣತೆಯೇ ಗುಣಗಿಸಿಬಿಡುತ್ತದೆ. ಬಳಸುವಂಥಿತಿ ಕಾಳತಗಳು ಇದಕ್ಕೆ ಸಮಾನವಾದ ತೈಲವು ಬೇರೊಂದಿಲ್ಲವೆಂದು ಹೊಗಳುತ್ತಾರೆ.

ಕ್ರಯ ಶೀಸೆ ೧ ಕ್ಕೆ ೧೨ ಆಣೆ. ಪ್ಯಾಕಿಂಗ್ ೬ ಆಣೆ. ಆದರೆ ೩ ಆಣೆಯ ಶೀಷೆ ಬಟ್ಟೆ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ವಜಾ ಮಾಡಲಾಗುವದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕ್ರಯ ಮಾಡುತ್ತಾರೆ. ಮುಖ್ಯ ಏಜೆಂಟರ ವಿಳಾಸ—

ಎಸ್. ಪೀಟರ್ಸ್,

೩೩, ವೇದವಲ್ಲಿಪಿಳ್ಳೆ ಬೀದಿ, ವೇಪೇರಿ, ಮದರಾಸ್.

ದೇಶಬಾಂಧವರೇ! ಪ್ರೀತಿಯಿಂದ ಲಾಲಿಸಿ!!

50 2

ಸ್ವದೇಶೀ ಪ್ರೀತಿಗೆ ಯೋಗ್ಯವಾದ ಪ್ರಸಿದ್ಧ ಮಧುರೆಯಲ್ಲಿ ಕೆಸರು ಮಣ್ಣಿನಿಂದ ತಯಾರಾಗುವ ಗಟ್ಟಿಯಾದ ಬಣ್ಣದ ಪದಿನೇಳು ಮೊಳ ಕ್ಕಿಂತ ಹೆಚ್ಚು ಉದ್ದದ ಸೀರೆಯು ಚೌಕ್ಕಳಿಯೂ, ಹುವ್ವಗಳಿಂದ ಕೂಡಿ ಕಪ್ಪು ಅಥವಾ ಕೆಂಪುಬಣ್ಣದಲ್ಲಿ ಉತ್ತಮ ಮಧುರೆ ಸೀರೆಗಳು ಬಹಳ ಸುಲಭಕ್ರಯಕ್ಕೆ ಅಂದರೆ ಕ್ರಯ ರೂ ೩—೬ ಅಣೆಗೆ ಮಾರುವೆವು. ಸಾದಾ ಸೀರೆಗಳು ರೂ ೨—೮ ಆ ನಯವಾದ ಮತ್ತು ಸೆರಗು ಅಂಚುಗಳಲ್ಲಿ ಜರತಾರಿಯುಳ್ಳದ್ದು ರೂ ೫. ಸಾದಾ ಬೆಳ್ಳಿಯ ಕಲಾಬತ್ತಿನ ಸೀರೆಗಳು ರೂ. ೩, ರೂ. ೮. ರೂ. ೧೦.

ಮೊಳಕಾಲ್ಮೂರು ಅಂಚಿನ ಪಂಚೆಗಳು!!!

ಹೊಸದಾಗಿ ತಯಾರಿಸಲ್ಪಟ್ಟ ಈ ಪಂಚೆಗಳು ಶುದ್ಧರೇಷ್ಮೆ ಅಂಚಿನ ಜರಿಗಳನ್ನು ವಿಜಾಪುರ ಬಹು ಸೊಗಸಾಗಿದೆ. ೮ ಮೊಳದ ಜೊತೆ ೧ ಕ್ಕೆ ರೂ ೩. ಏಳು ಮೊಳದ ಜೊತೆಗೆ ರೂ ೨—೮ ಆ.

ಮುಂಬೈಯಿ ಕಲ್ಕತ್ತಾ ಅಂಚಿನ ಪಂಚೆ.

೩ ಮೊಳದಗಲ, ೯ ಮೊಳದ ಜೊತೆಗೆ ರೂ ೬. ಆರು ಮೊಳದ ಜೊತೆಗೆ ರೂ ೨—೮ ಆ.

ಪುದುಚೇರಿ ರೇಷ್ಮೆಯ ವಸ್ತ್ರಗಳು! ೨ ಮೊಳದಗಲ!!

ಬಹು ಸೊಗಸಾದ ಕೆಂಪು ರೇಷ್ಮೆಯವು ೪ ಮೊಳದುದ್ದ. ರೂ ೫. ಆರು ಮೊಳದುದ್ದ ರೂ ೬.

ಶುದ್ಧ ಉಣ್ಣೆಯ ಹೊಸ ತರದ "ಬ್ಲ್ಯಾಂಕೆಟ್"

ಬಹುತವಾದ ಬುಸೀರ್ ಸುಗಳ ಅಗಲ ೪೮ ಉದ್ದ ೯೦ ಅಂಗುಲ, ರೂ ೬. ಎರಡನೆಯ ತರ ರೂ ೪. ತರಕಾರಿ ಟೇಬಲುಗಳು ಗಜ ೧ ಕ್ಕೆ ಆಣೆಗಳು ೪, ೫, ೬. ವಿಳಾಸ.—

ದಾಸ್ ಎಂಪೋರಿಯಂ, ಸ್ವದೇಶೀ, ಚೇಡ್, ವೆಂಬರಿ, ಮದ್ರಾಸು.

CHAMBERLAIN'S PAIN BALM

ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವು.

1-26



ಬೆನ್ನು ಎಲುಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೇ ಹಿತಕರವಾದ ಒಂದು ತರಹ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ. ಅವಸ್ಥೆ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕ್ರಿಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ವಿಕ್ರಯವಾಗುತ್ತದೆ. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವುದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ನೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION. 33-13

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು.

ಅದು ಸಂತೋಷವೂ ಆನಂದವೂ ಪ ತಹದಾಗಿ ಆಹಾರದ ರುಚಿ ಹೆಚ್ಚಿಸಿ ಸುಖ ಬಿಸ್ಸೆ ತೋರಿಸುವದು

ಕ್ರಿಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧವ್ಯಾಪಾರಿಗಳಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ವಿಧಾನ ಮನುಷ್ಯ ಇರುವ ಔಷಧ ವನ್ನೇ ಕೊಂಡುಕೊಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಒದೆಸು ತರಿಸಿಕೊಳ್ಳಿ.

2 20

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲೀಗ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನ ದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯವಾಗುತ್ತಿರುವ ಟೋಪಿಗಳ ದಾಂವೆಲ್ಲಾ ಬೇಗಾದಷ್ಟು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಹಟ್ಟಿಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಜಿದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದಿದ್ದು ಬೇಕಾದರೆ, ನಮ್ಮಲ್ಲಿ ಸಿಗುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ; ೧ ರೂ ೬ ಆ, ೧ ರೂ ೪ ಆ.

ರೇಷ್ಮೆ ಚಿತ್ರಿಯುಳ್ಳ ಟೋಪಿಗಳು ೧ ರೂ. ೮ ಆ; ೨ ರೂ ದಾರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ.; ೧ ರೂ. ೬ ಆ. ಉಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕನಸುಗಳ ಟೋಪಿ, ಸೂಫಿ ಮೇಹೋದು, ಅರ್ಧ ಮೇಕೋದು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

"ವೃತ್ತಾಂತ ಪತ್ರಿಕೆ" ಚಂದಾದಾರರಿಗೆ.

"ವೃತ್ತಾಂತ ಪತ್ರಿಕೆ"ಯ ವರ್ಷವು ಕಳೆದ ಮೇ ತಿಂಗಳ ತಾ. ೩೧ ಕ್ಕೆ ಪೂರೈಸಿ, ಬಾಕಿ ವರುಷದ ಚಂದಾ ಹೋವು ಸಲ್ಲಬೇಕಾಗಿರುತ್ತದೆ. ಆದಕಾರಣ ನಮ್ಮ ಏಜೆಂಟರುಗಳ ಮೂಲಕ "ವೃತ್ತಾಂತ ಪತ್ರಿಕೆ"ಯನ್ನು ಪಡೆಯುವ ನಮ್ಮ ಚಂದಾದಾರರೆಲ್ಲಾ ಅವರಿಗೆ ಶಾಂತಿತವಾಗಿ ಅಡ್ವಾನ್ಸಿನಲ್ಲಿ ಚಂದಾ ಕಟ್ಟಿ, ಅವರಿಂದ ಕ್ರಮವಾದ ರಶೀತಿ ಪಡೆಯಬೇಕೆಂದು ಈ ಮೂಲಕ ಪ್ರಾರ್ಥಿಸಿದೆ

ಮ್ಯಾನೇಜರ್, "ವೃತ್ತಾಂತ ಪತ್ರಿಕೆ."

ಇಲ್ಲಿ ನೋಡಿರಿ! ಬೇಗ ನೋಡಿರಿ!!

117 36

೧೦ ಸಾವಿರ ಟೋಪಿಯಾಗ ವ ಉಲ್ ಬಿಂಡ್ಲ ೧ ಕ್ಕೆ ೩—೮—೦. ಹಾರ್ಸ್ ಟೋಪಿ ದರ್ಜ ೧ ಕ್ಕೆ ೧೩—೨—೦ ಯಾರ್ಡ್ ೧೪. ನಡೆಸಿ. ಎರಡು ಕಲರಲ್ಲಿ ಬರೆಯುವ ಕಾರ್ಡ್ ೧೦೦೦ ಕ್ಕೆ ೧—೮—೦. ೧೨೦ ಇಂಗ್ಲಿಷ್ ಅಕ್ಷರಗಳಿರುವ ಪಟ್ಟಿಗೆ ೧ ಕ್ಕೆ ೧ ರೂ ಪ್ಲೇಗುಮೂಲ ಕ ತೈಲ ಶೀಶೆ ೧ ಕ್ಕೆ ೮ ಆಣೆ ತಾಂಬೂಲ ಸುವಾಸಿನಿ ಶೀಶೆ ೧ ಕ್ಕೆ ೭ ಆಣೆ. ಪರಿಮಳಾಂಜನ ಡಬ್ಬಿ ೧ ಕ್ಕೆ ೪ ಆಣೆ ಅಮೃತಾಂಜನ ಶೀಶೆ ೧ ಕ್ಕೆ ೯ ಆಣೆ ಸಮ್ಮ ವಿಶಿಷ್ಟ ಸುವಾಸಿನ ಕಟಲಾಗು ಪಡೆಯಿರಿ. ವಿಳಾಸ ಪ್ರೊಪ್ರೈಟರ್, ಬಿಜುಲಿ ಮಾರ್ಟ್, ಮಂಗಳೂರು.

ನೋಟೀಸ್.

25 1

ಬೆಂಗಳೂರು ಮಾವಳ್ಳಿ ಪೇಟೆಯಲ್ಲಿ ಇರುವ ಶೆಟ್ಟಿ ನಂಜಯ್ಯನವರ ನಾರಪ್ಪನ ಮಗ ಶೆಟ್ಟಿ ತಿಪ್ಪಯ್ಯನು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ನಾನು ಮತ್ತು ನಮ್ಮ ಅಣ್ಣ ಶೆಟ್ಟಿ ನಾರಿಯಪ್ಪನು ಸಹಾ ಏಕೋದರರು ನನ್ನ ಅಣ್ಣನಾದ ಸಿ ಮಾರಿಯಪ್ಪನು ನನ್ನ ಸಮ್ಮತಿಯನ್ನು ಬಾಬತು ಪಿತಾರ್ಜಿತವಾದ ಬೆಂಗಳೂರು ಮಾವಳ್ಳಿ ಪೇಟೆಯಲ್ಲಿ ಇರುವ ೧೫೦ ನೇ ನ ಎರಡು ಮನೆ ಒಂದು ಮತ್ತು ಕೆಂಪ ಅಲಸಿನ ಪೇಟೆಯಲ್ಲಿ ಇರುವ ೩೩ ನೇ ನಂಬರುಗಳ ಎರಡು ಮಳಿಗೆಗಳು, ಕುಂಬಾರ ಪೇಟೆಯಲ್ಲಿ ಇರುವ ೬ ನೇ ನಂಬರು ಮನೆಗಳು, ಬೇಲಿ ಮಠದ ಹಿಂಭಾಗದಲ್ಲಿ ಇರುವ ಚಿಲ್ಲರೆ ಅಂಗಡಿಗಳು ಸಹಾ ಪರಭಾರೆ ಮಾಡಬೇಕೆಂದು ಪ್ರಯತ್ನಿಸುತ್ತಿರುವುದಾಗಿ ನನಗೆ ತಿಳಿಯಬಂದಿದ್ದರಿಂದ ಇದರ ಸ್ವತ್ತುಗಳು ಯಾರಾದರೂ ನನ್ನ ಅನುಮತಿಯಿಲ್ಲದೆ ಖರೀದಿ ವಗೈರೆ ವ್ಯವಹಾರಗಳು ಮಾಡಿಕೊಂಡಲ್ಲಿ ಅದರಲ್ಲಿ ನನಗೆ ಇರತಕ್ಕ ಅರ್ಧ ಹಕ್ಕಿಗೆ ಜವಾಬ್ದಾರಿಯಾಗಿ ಇರಬೇಕೆಂದು ಇದರ ಮೂಲಕ ತಿಳಿಸಿ ಇರುತ್ತೆ.

ಬೆಂಗಳೂರು ಸಂಜೆ ಶೆ ತಿಪ್ಪಯ್ಯ ೧೯—೬—೦೮.

ಪರೀಕ್ಷೆಮಾಡದೆ ಇರಬೇಡಿ.

ನಮ್ಮ ಪರಮಾಶ್ಚರ್ಯಯುಕ್ತವಾದ ಕಾಫಿ ಪುಡಿಯನ್ನು ಪ್ರತಿ ಒಬ್ಬರೂ ಒಂದು ಡಬ್ಬಾ ತರಿಸಬೇಕು.

49-3

ಈ ಪುಡಿಯನ್ನು ಒಂದು ಸಾರಿ ಉಪಯೋಗಿಸಿದ ಕೂಡಲೆ ಬಹಳ ಆಶ್ಚರ್ಯವನ್ನುಂಟುಮಾಡುತ್ತೆ ಮತ್ತು ನಮ್ಮಲ್ಲಿ ತರಿಸಿಕೊಂಡರೆ ಯಾವಾಗಲೂ ಇದರ ಸೇವನೆ ಮಾಡಬೇಕೆಂಬ ಇಚ್ಛೆಯನ್ನುಂಟುಮಾಡುತ್ತೆ. ಇದರಲ್ಲಿ ಸ್ವಲ್ಪವನ್ನು ತೆಗೆದುಕೊಂಡು ಹಾಲಿನಲ್ಲಿ ಹಾಕಿ ಚನ್ನಾಗಿ ಕಾಯಿಸಿದ ಮೇಲೆ ಒಂದು ಬಟ್ಟಲು ಅಥವಾ ಒಂದು ಲೋಟದಲ್ಲಿ ಹಾಕಿಟ್ಟಿದ್ದರೆ ನೀರಾಗಿರತಕ್ಕಂತ ಹಾಲು ಗಟ್ಟಿಗೆ ಆಗುತ್ತೆ. ಇದರಂತೆ ಇದನ್ನು ಊಟ ಮಾಡುವವರ ದೇಹವು ಎಷ್ಟೇ ಬಲಹೀನವಾಗಿದ್ದರೂ ಭೀಮಸೇನನಂತೆ ಬಲವುಳ್ಳವರನ್ನಾಗಿ ಮಾಡಿ ಶರೀರದ ಕಾಂತಿಯನ್ನು ಹೆಚ್ಚಿಸುವದು. ಇದನ್ನು ಪ್ರತಿ ಸಾಹುಕಾರರೂ ಪರೀಕ್ಷಿಸಬೇಕಾದ ವಸ್ತು ಈ ಸಮಯ ತಪ್ಪಿದರೆ ಮುಂದೆ ದೊರೆಯಲಾರದು ಇದರ ಕ್ರಯವು ಬಹು ಸ್ವಲ್ಪವು ಡಬ್ಬಿ ೧ ಕ್ಕೆ ರೂ ೦—೮—೦ ವಿ. ಪಿ. ಪಿ. ಚಾರ್ಜ್ ೦—೩—೦ ವಿಳಾಸ —ಟಿ ಸಿ ಕೃಷ್ಣಯ್ಯಶೆಟ್ಟಿ ಅಂಡ್ ಸನ್, ಜನರಲ್ ಮರ್ಚೆಂಟ್, ನಂಬರು ೨೦, ಸಿಂಗಣ್ಣನಬೀದಿ, ಸಾಹುಕಾರಪೇಟೆ, ಮದರಾಸು.

ವೃತ್ತಾಂತ ಪತ್ರಿಕೆ.

ಸನ್ ೧೯೦೮ ನೇ ಇಸವಿ ಜೂನ್ ತಾ|| ೨೫ ನೇ ಗುರುವಾರ

ನ್ಯಾಯಬದ್ಧವಾದ ಗವರ್ನಮೆಂಟೂ, ಬಲಾತ್ಕಾರವುಳ್ಳ ಗವರ್ನಮೆಂಟೂ.

ಇಂಡಿಯಾ ಗವರ್ನಮೆಂಟಿನವರು ಜಾರಿಯಲ್ಲಿ ತಂದಿರುವ ಎರಡು ಹೊಸ ಕಾನೂನುಗಳನ್ನೂ, ಅವುಗಳ ವಿಷಯದಲ್ಲಿ ಮಂತ್ರಾಲೋಚನಾ ಸಭೆಯೊಳಗೆ ನಡೆದ ಚರ್ಚೆಗಳನ್ನೂ ಕಳೆದ ವಾರ ಪ್ರಕಟಿಸಿರುತ್ತೇವೆ. ಮೊದಲನೆಯದು ಸಿಡಿಮದ್ದನ್ನು ಮಾಡುವುದಕ್ಕಾಗಿ ಉಪಯುಕ್ತವಾದ ದ್ರಾವಕ ಪದಾರ್ಥಗಳು ವಿಚಾರವಾದದ್ದು. ಒಬ್ಬನ ಹತ್ತಿರ ಈ ಪದಾರ್ಥಗಳು ಸಿಕ್ಕಿ ಅವನು ಅದಕ್ಕೆ ತೃಪ್ತಿಕರವಾದ ಕಾರಣಗಳನ್ನು ತೋರಿಸದೆ ಹೋದರೆ ೧೪ ವರುಷಗಳ ಬ್ಲಾಕ್ ಪೋರ್ಟ್ ಸಜಾ ಅನುಭವಿಸಬೇಕಾಗುವುದು; ಮತ್ತು ಯಾವನಾದರೂ ಸಿಡಿಮದ್ದಿನ ಗುಂಡನ್ನು ಹಾರಿಸಿದಲ್ಲಿ ಅದರಿಂದ ಪ್ರಾಣನಷ್ಟವೇನೂ ಆಗದೆ ಹೋದರೂ ಅವನಿಗೆ ೨೦ ವರುಷಗಳ ಬ್ಲಾಕ್ ಪೋರ್ಟ್ ಶಿಕ್ಷೆಯಾಗುತ್ತದೆ. ಇತ್ತಲಾಗಿ, ಜನರನ್ನು ರೇಗಿಸಿ ಕೊಲೆ ಅಥವಾ ಇತರ ಕ್ರೂರಕೃತ್ಯಗಳನ್ನು ನಡಿಸುವಂತೆ ಚೇತಾವಣಿ ಮಾಡುವಂಥಾ ಬಾತ್ಮಿಗಳನ್ನು ಯಾವ ವರ್ತಮಾನ ಪತ್ರಿಕೆಯಾದರೂ ಬರೆದು ಪ್ರಕಟಿಸಿದರೆ ಅಂಥಾ ಪತ್ರಿಕಾ ಆಫೀಸನ್ನು ಜಫ್ತಿ ಮಾಡುವುದಕ್ಕೂ, ಮತ್ತೆ ಆ ಪತ್ರಿಕೆ ಹೊರಡದಂತೆ ಅಡಗಿಸುವುದಕ್ಕೂ ಎರಡನೆಯ ಕಾನೂನು ಗವರ್ನಮೆಂಟಿಗೆ ಅಧಿಕಾರ ಕೊಡುತ್ತದೆ. ಆದರೆ ಈ ಶಿಕ್ಷಾ ಕಾರ್ಯಗಳನ್ನು ಇಂಡಿಯಾ ಗವರ್ನಮೆಂಟಿನವರೇ ಮಾಡಬೇಕಲ್ಲದೆ ಕೆಳಗಿನ ದರ್ಜೆಯ ಮ್ಯಾಜಿಸ್ಟ್ರೇಟರಾಗಲಿ ಪೋಲೀಸಿನವರಾಗಲಿ ಪತ್ರಿಕೆ ನಡಿಸುವವರನ್ನು ತೊಂದರೆಪಡಿಸಬಹುದೆಂಬ ಭೀತಿಗೆ ಅವಕಾಶವಿಲ್ಲ.

ಎರಡು ಕಾನೂನುಗಳೂ ನ್ಯಾಯವಾದವುಗಳೆಂತಲೂ ಅವಶ್ಯವಾದವುಗಳೆಂತಲೂ ನಮ್ಮ ವಾಚಕರು ಒಪ್ಪಿಕೊಳ್ಳುವರೆಂದು ಭಾವಿಸುತ್ತೇವೆ. ಇಂಡಿಯಾ ಗವರ್ನಮೆಂಟನ್ನು ಕೆಲವು ವಾರಗಳಿಂದ ಎರಡು ತರವಾಗಿ ಆಕ್ಷೇಪಣೆ ಮಾಡುತ್ತಾ ಬಂದರು. ಗವರ್ನಮೆಂಟಿನ ವರ್ತನೆ ಸಡಿಲವಾದದ್ದರಿಂದ ಜನರು ರಾಜದ್ರೋಹಕೃತ್ಯಗಳನ್ನು ಮಾಡುವಂತಾಯಿತೆಂದೂ, ಗವರ್ನಮೆಂಟಿನವರು ಇನ್ನೂ ಕಠಿಣತರವಾದ ರೀತಿಯಲ್ಲಿ ಕಾರ್ಯಭಾಗ ನಡಿಸದೆ ಹೋದರೆಂದೂ ಒಂದು ಪಕ್ಷದವರು ಆಕ್ಷೇಪಣೆ ಮಾಡುತ್ತಾ ಬಂದಿದ್ದಾರೆ. ಎರಡನೇ ಪಕ್ಷದವರು ಅಂದರೆ ವಿಶೇಷವಾಗಿ ರಾಜದ್ರೋಹವನ್ನು ಸಾರುತ್ತಾ ಜನರಲ್ಲಿ ಅತೃಪ್ತಿಯನ್ನು ಕಲ್ಪಿಸುತ್ತಾ ಬಂದಿರುವ ವರ್ತಮಾನ ಪತ್ರಿಕೆಗಳವರು ತಮ್ಮ ದುಷ್ಪ್ರವರ್ತನೆಗಳನ್ನು ಗವರ್ನಮೆಂಟಿನವರು ತಡೆಯುವವರಾಗಿದ್ದಾರೆಂದು ತಿಳಿದು, ಗವರ್ನಮೆಂಟಿನವರು ಜುಲುಮಿನಿಂದಾಗಲಿ ಆಕ್ರೋಶದಿಂದಾಗಲಿ ಕಾರ್ಯಗಳನ್ನು ನಡಿಸಬಾರದೆಂದು ಹಿತೋಕ್ತಿಗಳನ್ನು ನುಡಿಯಲಾರಂಭಿಸಿದರು. ಗವರ್ನಮೆಂಟಿನವರಾದರೋ ಆ ಆಕ್ಷೇಪಣೆಗಳಿಗಾಗಲಿ ಹಿತೋಕ್ತಿಗಳಿಗಾಗಲಿ ಕಿವಿಗೊಡದೆ ನ್ಯಾಯವಾದ ಮಾರ್ಗವನ್ನು ಹಿಡಿದು, ಮಂತ್ರಾಲೋಚನಾ ಸಭೆಯನ್ನು ಕೂಡಿಸಿ ಕಾನೂನುಗಳನ್ನು ಸವಿಸ್ತಾರವಾಗಿ ವಿಮರ್ಶಿಸಿ, ಕ್ರಮವಾಗಿ ಚರ್ಚೆಗೆ ಅವಕಾಶ ಕೊಟ್ಟು, ಸನ್ಮತಿಯನ್ನು ಪಡೆದು ಪ್ರಜೆಗಳಿಗೆಲ್ಲಾ ಪ್ರಕಟಮಾಡಿರುತ್ತಾರೆ. ಅತ್ತಲಾಗಿ ವಿಲಾಯಿತಿಯಲ್ಲಿರುವ ಇಂಡಿಯಾ ಸ್ಟೇಟ್ ಸೆಕ್ರೆಟರಿ ಲಾರ್ಡ್ ಮಾರ್ಲೆಯವರು, ಹಿಂದುಸ್ಥಾನದಲ್ಲಿ ತಾವು ರೂಢಿಸಬೇಕೆಂದು ಉದ್ದೇಶಿಸಿಟ್ಟಿರುವ ಪ್ರಜಾರಂಜಕವಾದ ರಾಜನೀತಿಯ ರೀತಿಗಳನ್ನು ಮಾಡುವುದರಲ್ಲಿ ಎಳ್ಳಷ್ಟೂ ಹಿಂತೆಗೆಯುವುದಿಲ್ಲವೆಂದು ಖಂಡಿತವಾಗಿ ತಿಳಿಸಿರುತ್ತಾರೆ. ವೈಸ್‌ರಾಯಿ ಲಾರ್ಡ್ ಮಿಂಟೋರವರು ಮಂತ್ರಾಲೋಚನಾ ಸಭೆಯಲ್ಲಿ ಮೆಂಬರುಗಳನ್ನು ಕುರಿತು "ಗವರ್ನಮೆಂಟಿನವರ ಒಂದು ಮುಖ್ಯ ಕರ್ತವ್ಯ ಈ ರಾಜದ್ರೋಹಕೃತ್ಯಗಳನ್ನು ನಿರ್ಮೂಲ ಮಾಡುವುದಕ್ಕೆ ಸಾಕಾಗಿತ್ತು. ಆದರೆ ಹಿಂದುಸ್ಥಾನದಲ್ಲಿ ಇಂಗ್ಲಿಷ್ ರಾಜ್ಯಭಾರಕ್ಕೆ ಧರ್ಮವೇ ಅಸ್ತಿಭಾರವಾಗಿರೋಣವದರಿಂದ ನ್ಯಾಯಬದ್ಧವಾಗಿ ಈ ಕಾನೂನುಗಳನ್ನು ಮಾಡಿ ರೂಢಿಸಬೇಕಾಯಿತು" ಎಂದು ಅಪ್ಪಣೆ ಕೊಡಿಸಿರುತ್ತಾರೆ.

ಈ ಭರತಖಂಡದ ಪೂರ್ವಚರಿತ್ರೆಯನ್ನು ಸ್ವಲ್ಪ ನೋಡೋಣ. ಹಿಂದೂ ಮಹಮ್ಮದೀಯ ರಾಜರು ಸರ್ವಸ್ವತಂತ್ರರಾಗಿದ್ದರು. ಅವರ ಮನಸ್ಸಿಗೆ ತೋರಿದ್ದೇ ಕಾನೂನಾಯಿತು. ಅವರಿಗೆ ತೋರಿದಂತೆ ಪ್ರಜೆಗಳನ್ನು ಕೊಲ್ಲುತ್ತಿದ್ದರು; ಅವರ ಆಸ್ತಿಪಾಸ್ತಿಗಳನ್ನು ಕಿತ್ತುಕೊಳ್ಳುತ್ತಿದ್ದರು. ಬಾಲ್ಬನ್ ದೆಹಲಿ ಚಕ್ರವರ್ತಿಯಾಗಿದ್ದಾಗ ಬಂಗಾಳಾ ಅಧಿಪತ್ಯದಲ್ಲಿ ಒಂದು ದಂಗೆಯುಂಟಾಯಿತು. ಅದನ್ನು ಅಡಗಿಸುವುದಕ್ಕೆ ಆ ಚಕ್ರವರ್ತಿಯು ಅತಿ ಘೋರಕೃತ್ಯಗಳನ್ನು ನಡಿಸಿದನು. ಲಕ್ಷ್ಮಣಾವತೀ ಬೀದಿಯಲ್ಲಿ ದಂಗೆಕೋರರ ಮುಖಂಡರನ್ನೆಲ್ಲಾ ಸಾಲುಕಟ್ಟಿ ನಿಲ್ಲಿಸಿ, ಅವರನ್ನೂ ಅವರ ರಕ್ತಸಂಬಂಧಿಗಳನ್ನೂ ಗಲ್ಲಿಗೆ ಹಾಕಿಸಿದನು. ಅಂಥಾ ಕಾಲ ಬಂದೊದಗುವ ಪಕ್ಷದಲ್ಲಿ ಇಂಡಿಯಾ ಗವರ್ನಮೆಂಟಿನವರೂ ಕಾನೂನನ್ನು ಮರ್ಯಾದಿ ಕಾರ್ಯಭಾಗ ನಡಿಸಬಲ್ಲರು. ಆದರೆ ಅಂಥಾ ಅಧಿಕಾರವನ್ನು ಚಲಾಯಿಸುವುದಕ್ಕೆ ಅವರಿಗೆ ಇಷ್ಟವಿಲ್ಲ; ಈಗ ಕಾಣಿಸಿಕೊಂಡಿರುವ ಹುಲ್ಲುಕಡ್ಡಿಯಂಥಾ ಅಲ್ಪವಿಚಾರಕ್ಕೆ ಅಂಥಾ ಶಕ್ತಿಯನ್ನು ಪ್ರಯೋಗಿಸಬೇಕಾದ ಅಗತ್ಯವೂ ಕಾಣುವುದಿಲ್ಲ. ಇಂಡಿಯಾ ಗವರ್ನಮೆಂಟಿನವರ ಅಭಿಪ್ರಾಯಗಳೂ ಉದ್ದೇಶಗಳೂ ಅವರು ಪ್ರಕಟಪಡಿಸಿರುವಂಥಾ ಕಾನೂನುಗಳಿಂದ ವ್ಯಕ್ತಪಡುತ್ತವೆ. ಕಾನೂನಿನಲ್ಲಿ ವಿವರಿಸಿರುವ ಪ್ರಕಾರ ಗವರ್ನಮೆಂಟು ಕಾರ್ಯಗಳನ್ನು ನಡಿಸುತ್ತಾ ಬರುವುದು. ಇದರಿಂದ ಪ್ರಜೆಗಳ ಮಾನ ಪ್ರಾಣ ಧನಗಳಿಗೆ ಎಳ್ಳಷ್ಟೂ ಚ್ಯುತಿಯುಂಟಾಗುವುದಿಲ್ಲ.

ಕಡೆಯಲ್ಲಿ ಇನ್ನೊಂದು ವಿಷಯವನ್ನು ಹೇಳಿ ಮುಗಿಸುತ್ತೇವೆ. ಈ ರಾಷ್ಟ್ರವನ್ನು ಅಭಿವೃದ್ಧಿಗೆ ತರುತ್ತೇವೆಂದು ನಟಿಸುವವರು ಗವರ್ನಮೆಂಟಿನವರ ಕಾನೂನುಗಳನ್ನು ಮೀರಿಯೂ, ಸನಾತನ ಧರ್ಮಗಳಿಗೆ ವಿರುದ್ಧವಾಗಿಯೂ ಕಾರ್ಯಗಳನ್ನು ನಡಿಸುತ್ತಾ ಬಂದಪಕ್ಷದಲ್ಲಿ ಅಂಥವರು ಹಿಂದುಸ್ಥಾನದ ಯಥಾರ್ಥವಾದ ಅಭಿವೃದ್ಧಿಗೆ ನಿಜವಾಗಿಯೂ ಕಂಟಕರೇ ಆಗುತ್ತಾರೆನ್ನುವುದಕ್ಕೆ ಸಂಶಯವಿಲ್ಲ.

ಒಳದೇಶದ ವೃತ್ತಾಂತಗಳು.

ಛೀಫ್ ಜಡ್ಜರಾದ ಮೆ|| ಇರ್ವಿನ್‌ರವರು ಕಳೆದವಾರ ರಾಜಧಾನಿಯಲ್ಲಿದ್ದಾಗ್ಗೆ ಇಲ್ಲಿನ ಸಿವಿಲ್ ಕೋರ್ಟುಗಳಿಗೆ ದಯಮಾಡಿ ಕೆಲವು ನಡವಳಿಕೆಗಳನ್ನು ಖುದ್ದು ತನಿಖೆ ಮಾಡಿದರು.

***

ಮುಂದಿನ ತಿಂಗಳ ಮೊದಲನೇ ವಾರದಲ್ಲಿ ಶ್ರೀಮನ್ ಮಹಾರಾಜರವರು ಪರಿವಾರ ಸಹಿತ ನೀಲಗಿರಿಗೆ ದಯಮಾಡಿ ೩-೪ ವಾರಗಳ ತನಕ ಇದ್ದು, ಅಲ್ಲಿಂದ ಬೆಂಗಳೂರಿಗೆ ಚಿತ್ತೈಸುವರೆಂದು ಕೇಳುತ್ತೇವೆ.

***

ಬ್ರಿಟಿಷ್ ರೆಸಿಡೆಂಟರಾದ ಮೇ|| ಎಸ್. ಎಂ. ಫ್ರೇಸರ್‌ರವರು ಪತ್ನಿ ಪರಿವಾರ ಸಹಿತ ಕಳೆದ ಶನಿವಾರ ಬೆಳಿಗ್ಗೆ ರಾಜಧಾನಿಯಿಂದ ಬೆಂಗಳೂರಿಗೆ ಪ್ರಯಾಣ ಮಾಡಿದರು. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟುವು.

***

ವರ್ಕ್‌ಷಾಪ್ ಮೆ|| ಪಿ. ಎ. ಶಿವಸುಬ್ರಹ್ಮಣ್ಯಂ ಪಿಳ್ಳೆಯವರು ಅಜೀರ್ಣ ರೋಗದಿಂದ ಕಾಲವಾದರೆಂದು ವಿಷಾದಿಸುತ್ತೇವೆ. ಇವರು ೧೮೯೧ ನೇ ಡಿಸೆಂಬರ್ ಲಾಗಾಯ್ತು ವರ್ಕ್‌ಷಾಪರಾಗಿದ್ದರು. ಇವರಿಗೆ ೫೪ ವರುಷ ವಯಸ್ಸಾಗಿತ್ತು.

***

ಕಳೆದ ವಾರ ಬ್ರಿಟಿಷ್ ರೆಸಿಡೆಂಟರೂ ಅವರ ಪತ್ನಿಯವರೂ ಇಲ್ಲಿನ ಮಹಾರಾಣೀ ಕಾಲೇಜಿಗೆ ದಯಮಾಡಿ ಅಲ್ಲಿ ನಡೆಯುವ ಕೆಲಸಗಳನ್ನೂ ಸ್ಕೂಲಿನ ಅಭಿವೃದ್ಧಿಸ್ಥಿತಿಯನ್ನೂ ಪರೀಕ್ಷಿಸಿ ಸಂತೋಷಪಟ್ಟುಕೊಂಡರು.

***

ಮೈಸೂರಿನಿಂದ ಯಳಂದೂರು, ಕೊಳ್ಳೇಗಾಲ, ಹಾಸನಗಳ ಮಾರ್ಗ ಅರಸೀಕೆರೆಗೆ ರೈಲ್ ರಸ್ತೆ ಆಗಬಹುದೆಂದು ಪ್ರಸ್ತಾಪವಿದೆ. ಇದರಿಂದ ಈ ಸಂಸ್ಥಾನದ ಪಶ್ಚಿಮ ಭಾಗದಲ್ಲಿರುವ ಜನರಿಗೆ ಹೆಚ್ಚು ಉಪಯೋಗವಾಗುವುದು.

***

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾದ ಮೆ|| ವಿ. ಪಿ. ಮಾಧವರಾವ್‌ರವರು ಕಳೆದ ವಾರ ರಾಜಧಾನಿಗೆ ಬಂದು ಇಲ್ಲಿನ ಸ್ಟೇಷನ್‌ಗಳನ್ನು ತನಿಖೆ ಮಾಡಿದರೆಂತಲೂ, ಈ ವಾರ ಪಟ್ಟಣದ ಪಡಿಯೇರಿ ಪರವಾಗಿದ್ದಾರೆಂತಲೂ ಕೇಳುತ್ತೇವೆ.

***

ಬೆಂಗಳೂರಿನಲ್ಲಿ "ಭಾರತಿ" ಎಂಬ ದಿನವಹಿ ಪ್ರಕಟವಾಗುವ ಪತ್ರಿಕೆಯನ್ನು ಪ್ರಕಟಮಾಡಿದರೆ ಅದರ ಮೊದಲನೇ ಸಂಚಿಕೆಯು ಶೀಘ್ರದಲ್ಲಿಯೇ ಹೊರಡುವುದು. ಇದರ ವರ್ಷದ ಚಂದಾ ಬೆಂಗಳೂರಿನಲ್ಲಿರುವವರಿಗೆ ೪ ರೂಪಾಯಿಗಳೆಂತಲೂ ಪರಸ್ಥಳದಲ್ಲಿರುವವರಿಗೆ ೮ ರೂಪಾಯಿಗಳೆಂತಲೂ ತಿಳಿಯುತ್ತದೆ.

***

ಶಿವಮೊಗ್ಗೆಯ ಸಾಹುಕಾರ್ ವೆ. ನಂಜಪ್ಪ ಶೆಟ್ಟರವರು ಅಲ್ಲಿನ ಸ್ಪೆಷಲ್ ಸ್ಟೇಷನ್ ಸಮೀಪದಲ್ಲಿ ಒಂದು ಧರ್ಮ ಸತ್ರವನ್ನು ಕಟ್ಟಿಸಿ, ಮೊನ್ನೆ ತಾ|| ೨೨ನೇ ಸೋಮವಾರದ ದಿನ ಪ್ರವೇಶ ಮಹೋತ್ಸವವನ್ನು ನಡಿಸಿದರೆಂದೂ, ಅಲ್ಲಿ ಅನೇಕ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಸೇರಿ ಹಾಜರಾಗಿದ್ದರೆಂದೂ ತಿಳಿದು ಬಂದಿದೆ.

***

ಹೆಗ್ಗಡದೇವನ ಕೋಟೆ ತಾಲ್ಲೂಕಿನ ಒಂದು ಗ್ರಾಮದಲ್ಲಿ ನಡೆದ ಒಂದು ಬಾಲ್ಯವಿವಾಹದ ಮೊಕದ್ದಮೆಯನ್ನು ಕಳೆದ ಶನಿವಾರ ಡೆಪ್ಯುಟಿ ಕಮಿಷನರವರು ಫೈಸಲ್ಮಾಡಿ, ಮದುವೆ ಗಂಡು ಹೆಣ್ಣುಮಕ್ಕಳ ತಂದೆಗಳಿಬ್ಬರಿಗೂ ವಿವಾಹ ಮಾಡಿಸಿದ ಪುರೋಹಿತನಿಗೂ ತಲಾ ೨೦ ರೂಪಾಯಿನಂತೆ ಜುಲ್ಮಾನೆ ವಿಧಿಸಿದರೆಂದು ತಿಳಿಯುವುದು.

ಹಿಪ್ಪೊಡ್ರೋಂ ಎಂಬ ಸರ್ಕಸ್ ಕಂಪನಿಯವರನ್ನು ಶ್ರೀಮನ್ ಮಹಾರಾಜರವರು ಜಗನ್ಮೋಹನ ಬಂಗಲೆಗೆ ಕರೆಸಿ, ಅವರಿಂದ ಕಳೆದ ಗುರುವಾರವೂ ಶುಕ್ರವಾರವೂ ರಾತ್ರಿಕಾಲದಲ್ಲಿ ಆಟಗಳನ್ನು ಆಡಿಸಿ ಬಹುಮಾನಿಸಿದರು. ಅದನ್ನು ನೋಡುವುದಕ್ಕೆ ಯೂರೋಪಿಯನ್ ಸರದಾರರನ್ನೂ ಅರಸುಗಳನ್ನೂ ಅಧಿಕಾರಸ್ಥರನ್ನೂ ಕರೆಸಿದ್ದರು.

***

ರಾಜಧಾನಿಯ ಕರ್ಜನ್ ಪಾರ್ಕ್ ಎಂಬ ಉದ್ಯಾನವನದಲ್ಲಿ ಲೇಟ್ ಮಹಾರಾಜ ಚಾಮರಾಜೇಂದ್ರ ಒಡೆಯರವರ ಛಾಯಾ ಪ್ರತಿಮೆಯನ್ನು ಇಟ್ಟಿದ್ದಾರಷ್ಟೆ. ಈ ಪ್ರತಿಮೆಯ ಆಕೃತಿಯು ಸರಿಯಾಗಿಲ್ಲವೆಂದು ತೀರ್ಮಾನಿಸಿ, ಅದರ ಸ್ಥಾನದಲ್ಲಿ ಬೇರೊಂದು ಸಲಕ್ಷಣವಾದ ಲೋಹಪ್ರತಿಮೆಯನ್ನು ಮಾಡಿಸಬೇಕೆಂದು ಗೊತ್ತಾಗಿದೆ. ಈ ಹೊಸ ಪ್ರತಿಮೆಯು ವಿಲಾಯಿತಿಯಿಂದ ಇಷ್ಟರಲ್ಲೇ ಬರುವುದು. ಈಗ ನಿಲ್ಲಿಸಿರುವ ಪ್ರತಿಮೆಯನ್ನು ತೆಗೆಯಲು ಪ್ರಯತ್ನ ಮಾಡುತ್ತಿರುವರು.

***

ರಾಜಧಾನಿಯಲ್ಲಿ ಕಳೆದ ವಾರ ನಡೆದ ಪೋಲೋ ಎಂಬ ಕುದುರೇ ಚೆಂಡಾಟದ ಪಂದ್ಯದಲ್ಲಿ ಆಟಗಾರರಿಗೆ ಮೈಸೂರು ಹಿಂದೂಸ್ತಾನಿ ಮೆಂಬರುಗಳು ಜಯವನ್ನು ಹೊಂದಿ, ಬಹುಮಾನವಾಗಿ ಇಟ್ಟಿದ್ದ ಬೆಳ್ಳಿ ಬಟ್ಟಲುಗಳನ್ನು ಪಡೆದುಕೊಂಡರು. ಆ ಮೆಂಬರುಗಳು ಯಾರೆಂದರೆ — ಜಮೇದಾರ್ ಫೈಜುಲ್ಲಾ ಮಹಮದ್, ಕರ್ನಲ್ ದೇಶರಾಜೇ ಅರಸಿನವರು, ಕೆ|| ಬಸವಲಿಂಗರು, ಮೆ|| ಗೋಪಾಲರಾಜೇ ಅರಸಿನವರು.

***

ಮೈಸೂರು ಪಟ್ಟಣದಲ್ಲಿ ಮುಂದಿನ ಜೂಲೈ ತಿಂಗಳ ೨೦ನೇ ತಾರೀಖು ಸೋಮವಾರ ವೈಶ್ಯ ಪ್ರಜೆಗಳು ಸೇರಿ ಮಹಾ ಸಭೆಯನ್ನು ನಡಿಸುವವರಾಗಿದ್ದಾರೆಂತಲೂ, ಚಿತ್ರದುರ್ಗದ ಡೆಪ್ಯುಟಿ ಕಮಿಷನರಾಗಿರುವ ಮೆ|| ಎಂ. ವೆಂಕಟಕೃಷ್ಣಯ್ಯಶೆಟ್ಟರವರು ಸಭೆಯ ಅಗ್ರಾಸನವನ್ನು ವಹಿಸುವರೆಂತಲೂ, ಆಗ್ಗೆ ವೈಶ್ಯ ಜಂಗಮದ ಪ್ರತಿನಿಧಿಗಳು ಸಂಸ್ಥಾನದ ಎಲ್ಲಾ ಭಾಗಗಳಿಂದಲೂ, ಕೆಲವರು ಮದ್ರಾಸ್ ಸೀಮೆಯಿಂದಲೂ ರಾಜಧಾನಿಗೆ ಬರುವವರಾಗಿದ್ದಾರೆಂತಲೂ ಪ್ರಕಟವಾಗಿದೆ.

***

ಡಾಕ್ಟರ್ ಸ್ಮಿತ್‌ರವರು ಈ ತಿಂಗಳ ಆರಂಭದಲ್ಲಿ ವಾಪಸು ಬಂದು ಸೀನಿಯರ್ ಸರ್ಜನ್ ಕೆಲಸವನ್ನು ವಹಿಸಿಕೊಂಡರು. ಆ ಕೆಲಸವನ್ನು ಇದುವರೆಗೆ ಬದಲೀ ನೋಡುತ್ತಿದ್ದ ಮೇಜರ್ ಎಚ್. ಆ. ಡ್ರೇಕ್ ಬ್ರಾಕ್ಮನ್ ಎಂಬ ಡಾಕ್ಟರನ್ನು ಶ್ರೀಮನ್ ಮಹಾರಾಜರವರು ಅರಮನೆಯ ದರ್ಬಾರ್ ಸರ್ಜನ್ ಕೆಲಸಕ್ಕೆ ನೇಮಿಸಿಕೊಂಡಿದ್ದಾರೆಂದು ಕೇಳುತ್ತೇವೆ. ಈ ವಿಷಯದಲ್ಲಿ ಇಂಡಿಯಾ ಗವರ್ನಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಿದರೆಂದು ಪ್ರಕಟವಾಗಿದೆ.

***

ಬೆಂಗಳೂರಿನಲ್ಲಿ ಕಟ್ಟಲ್ಪಡುವ ಟೆಕ್ನಿಕಲ್ ವಿದ್ಯಾಶಾಲೆಗೆ ಮೈಸೂರು ಗವರ್ನಮೆಂಟಿನವರು ೧೯೦೭ನೇ ಇಸವಿಯಲ್ಲಿ ವಾಗ್ದಾನ ಮಾಡಿದ್ದ ಪ್ರಕಾರ ೫ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ಆ ಪೈಕಿ ಚಾಲ್ತಿ ಸಾಲಿನಲ್ಲಿ ೨ ಲಕ್ಷ ರೂಪಾಯಿ ಕೊಡತಕ್ಕದ್ದೆಂತಲೂ, ಉಳಿದ ೩ ಲಕ್ಷ ರೂಪಾಯಿಯನ್ನು ಮುಂದಿನ ವರುಷ ಬಟವಾಡೆ ಮಾಡುವುದಾಗಿಯೂ ಗೊತ್ತು ಮಾಡಿದ್ದಾರೆ. ಇಷ್ಟು ಹಣವನ್ನೂ ಆ ವಿದ್ಯಾಶಾಲೆಯ ಕಟ್ಟಡಗಳಿಗಾಗಿಯೇ ವಿನಿಯೋಗಿಸುವರು.

***

ಒಬ್ಬ ಬಾತ್ಮಿದಾರರು ಬರೆಯುತ್ತಾರೆ: — ಕೆ. ನಗರ ಮೆ|| ಅಪ್ಪಚ್ಚು ಎಂಬುವರು ಹುಣಸೂರು ತಾಲ್ಲೂಕು ಹನಗೋಡು ಹೋಬಳಿ ಒಡ್ಡಬಾಳು ಗ್ರಾಮದಲ್ಲಿ ಬಂದು ಒಂದು ಸ್ಕೂಲನ್ನು ಸ್ಥಾಪಿಸಿ ಅಲ್ಲಿನ ಸುಮಾರು ೧೫೦ ಮಂದಿ ಹುಡುಗರನ್ನು ಚನ್ನಾಗಿ ತರಬೇತು ಮಾಡಿದರು. ಇನ್ಸ್‌ಪೆಕ್ಟರು ಆ ಸ್ಕೂಲನ್ನು ಪರೀಕ್ಷೆ ಮಾಡಿ, ಸರ್ಕಾರದ ಸ್ಕೂಲಾಗಿ ಮಾಡಿಕೊಂಡು, ಅವರನ್ನು ಹೆಡ್ ಮಾಸ್ಟರ್ ಕೆಲಸಕ್ಕೆ ನೇಮಕ ಮಾಡಿರುತ್ತಾರೆ. ಈ ಅಪ್ಪಚ್ಚು ಅವರಿಗೆ ಲೋವರ್ ಸೆಕಂಡರಿ ಪರೀಕ್ಷೆಯೂ, ಟ್ರೇನಿಂಗ್ ಪರೀಕ್ಷೆಯೂ ಆಗಿದೆ ಎಂಬುದೇ.

***

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ನಂದಿದುರ್ಗವೆಂಬ ಗಣಿಯಲ್ಲಿ ಕಳೆದ ವಾರ ಎರಡು ಅನಾಹುತಗಳಾದವು. ಮೊದಲನೇ ಅನಾಹುತದಲ್ಲಿ ಮೂವರು ಮೃತಪಟ್ಟರು, ಐದು ಮಂದಿಗೆ ಪೆಟ್ಟು ಆಗಿದೆ. ಇದರಿಂದ ಈ ಪೈಕಿ ಒಬ್ಬನು ತೀರಿಹೋದನು. ಎರಡನೇ ಅನಾಹುತದಲ್ಲಿ ೩,೫೦೦ ಅಡಿ ಆಳವಾದ ಗಣಿಯೊಳಕ್ಕೆ ತೊಟ್ಟಿ ಹಗ್ಗ ಕಡಿದು ಬಿದ್ದುಬಿಟ್ಟಿತು. ಆದರೆ ಒಳಗಿದ್ದ ಕೂಲಿಗಾರರು ಆ ತೊಟ್ಟಿಯನ್ನು ಕೇಳಿ ದಿಕ್ಕು ಹೋದದ್ದರಿಂದ ಯಾರಿಗೂ ಅಪಾಯವಾಗಲಿಲ್ಲ. ಈ ಹಗ್ಗಗಳು ತಂತಿಗಳಿಂದ ಹೊಸೆದು ಬಹು ಗಟ್ಟಿಯಾಗಿ ಮಾಡಲ್ಪಟ್ಟಿರುತ್ತವೆ. ಒಂದೊಂದು ಹಗ್ಗಕ್ಕೆ ಕಂಪನಿಯವರು ೧೫,೫೦೦ ರೂಪಾಯಿ ಕ್ರಯ ಕೊಟ್ಟು ಸೀಮೆಯಿಂದ ತರಿಸುವರು.

***

ರಾಜಧಾನಿಯ ಟೌನ್ ಹಾಲಿನಲ್ಲಿ ಮೆ|| ರಾಮಲಿಂಗರೆಡ್ಡಿಯವರು ಕಳೆದ ಬುಧವಾರ ಸಾಯಂಕಾಲ ಇಂಗ್ಲೆಂಡಿನ ಪ್ರಜೆಗಳ ಸ್ಥಿತಿಗತಿ ಅವರ ವಿದ್ಯಾಭ್ಯಾಸ, ಅವರ ನಡೆನುಡಿ ಮುಂತಾದ್ದನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ಎರಡನೇ ಕೌನ್ಸಿಲರ್ ಮೆ|| ಕೆ. ಪಿ. ಪುಟ್ಟಣ್ಣಶೆಟ್ಟರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಶನಿವಾರ ಸಾಯಂಕಾಲ ಮೆ|| ರೆಡ್ಡಿಯವರು ಅಮೇರಿಕದ ಜನರ ಕಸಬುಗಳನ್ನೂ ಅವರ ಚಾಕಚಕ್ಯಗಳನ್ನೂ ಅವರ ವಿದ್ಯಾಭ್ಯಾಸ ಕ್ರಮಗಳನ್ನೂ ವಿವರಿಸಿ ಉಪನ್ಯಾಸ ಮಾಡಿದರು. ಮೆ|| ಎಂ. ವೆಂಕಟಕೃಷ್ಣಯ್ಯನವರು ಸಭೆಯಲ್ಲಿ ಅಗ್ರಾಸನವನ್ನು ವಹಿಸಿದ್ದರು. ಭಾನುವಾರ ಬೆಳಿಗ್ಗೆ ಇಲ್ಲಿನ ವಿದ್ಯಾರ್ಥಿಗಳ ತಿಳುವಳಿಕೆಗಾಗಿ ಅವರ ಪ್ರಾರ್ಥನೆಯ ಪ್ರಕಾರ ಮೆ|| ರೆಡ್ಡಿಯವರು ಇಂಗ್ಲೆಂಡಿನ ವಿದ್ಯಾಶಾಲೆಗಳ ನಡವಳಿಕೆಯನ್ನೂ ಕ್ರಮಗಳನ್ನೂ ವಿದ್ಯಾರ್ಥಿಗಳ ಉತ್ಸಾಹಾದಿಗಳನ್ನೂ ವಿವರಿಸಿ ಉಪನ್ಯಾಸ ಮಾಡಿದರು. ಅಡ್ವೊಕೇಟ್ ಮೆ|| ಎ. ರಾಮಣ್ಣನವರು ಸಭೆಯ ಅಗ್ರಾಸನವನ್ನು ವಹಿಸಿದ್ದರು.

ಈ ರಾಷ್ಟ್ರದ ಸ್ಥಿತಿಗತಿಗಳು ಹೇಗಿವೆ?

ಮೆ॥ ರಾಮಲಿಂಗ ರೆಡ್ಡಿಯವರ ಉಪನ್ಯಾಸವು.

ಮೆ॥ ಸಿ. ರಾಮಲಿಂಗರೆಡ್ಡಿಯವರು ರಾಜಧಾನಿಗೆ ಬಂದು, ತಮ್ಮ ಅನುಭವವನ್ನು ಕೆಲವು ಉಪನ್ಯಾಸಗಳ ಮೂಲಕ ವಿವರಿಸಿದರೆಂದು ಸಂಕ್ಷೇಪವಾಗಿ ಕಳೆದ ವಾರ ಸೂಚಿಸಿದೆವಷ್ಟೆ. ಅವರ ಅಭಿಪ್ರಾಯವನ್ನು ಈಗ ತಕ್ಕಮಟ್ಟಿಗೆ ಕ್ರೋಢೀಕರಿಸಿ ನಮ್ಮ ವಾಚಕರಿಗೆ ತಿಳಿಸಲು ಕಾತುರಪಡುವವರಾಗಿದ್ದೇವೆ. ಏನೆಂದರೆ—

ಪರದೇಶಗಳ ಮತವಿಚಾರಕ್ಕೂ ಜನರ ಸಾಂಸರ್ಗಿಕವಾದ ಆಚಾರ ವ್ಯವಹಾರಗಳಿಗೂ ಯಾವ ಸಂಬಂಧವೂ ಇಲ್ಲ. ಈ ದೇಶದಲ್ಲಿ ಮತಭಕ್ತಿಯೇ ಆಚಾರ, ಆಚಾರವೇ ಮತಭಕ್ತಿಯಾಗಿದೆ. ಮತವೆನ್ನುವುದು ಜನರನ್ನು ಈ ದೇಶದಲ್ಲಿ ಸತ್ತಮೇಲೂ ಕತ್ತು ಹಿಡಿದು ದಿನಗಳ ತನಕ ಬಿಡುವುದಿಲ್ಲ. ಸ್ತ್ರೀಯರನ್ನು ಬಲಾತ್ಕರಿಸಿ ಮೌಢ್ಯದಲ್ಲಿಟ್ಟಿರುವುದೂ ವಿಧವೆಯರನ್ನು ತಲೆ ಬೋಳಿಸಿ ನಾನಾ ಘೋರ ಹಿಂಸೆಗಳಿಗೆ ಗುರಿಮಾಡಿ ಕೊರಗಿಸುವುದೂ ಬಹು ಶೋಚನೀಯವಾಗಿರುತ್ತವೆ. ಜನರಲ್ಲಿ ಸ್ವಕೀಯವಾದ ಮನೋಸಾಮರ್ಥ್ಯವಿಲ್ಲ. ಮನೆಯಲ್ಲಿ ಹೆಂಡತಿ ಮಕ್ಕಳನ್ನು ಪ್ರೀತಿಸುವುದೇ ಸರ್ವಪ್ರೀತಿ ಎಂದು ತಿಳಿದಿದ್ದಾರೆ. ಸಮಸ್ತರನ್ನೂ ಒಂದೇ ರೀತಿಯಾಗಿ ಕಂಡು ಪ್ರೀತಿ ತೋರಿಸಬೇಕೆನ್ನುವುದೂ ಭೂತದಯೆ ಪಶ್ಚಾತ್ತಾಪಾದಿಗಳಿಂದ ಶೆನ್ನುವುದೂ ವೇದಾಂತ ಸಾರ್ಥ್ಯವಾಗಿದೆಯೇ ವಿನಹ ಆಚರಣೆಯಲ್ಲಿ ಕಾಣುವುದಿಲ್ಲ. ವೇದಾಂತವೂ ಗೀತೆಯೂ ಅಜ್ಜಿ ಅಜ್ಜಂದಿರ ಪಾಲಾಯಿತಲ್ಲದೆ ಜನರು ತಮ್ಮ ವ್ಯವಹಾರದಲ್ಲಿ ಇಟ್ಟುಕೊಂಡಿಲ್ಲ. ಸ್ವಾಮಿ ವಿವೇಕಾನಂದರವರು ಈ ರಾಷ್ಟ್ರದಲ್ಲಿ ಸಂಚಾರಮಾಡಿ, ಜನರನ್ನು ಸನ್ಮಾರ್ಗಕ್ಕೆ ತಿರುಗಿಸಿ ದೇಶವನ್ನು ಉಚ್ಛ್ರಾಯಸ್ಥಿತಿಗೆ ತರಬೇಕೆಂದು ಶ್ರಮಪಟ್ಟು, ಜನರು ತಮ್ಮ ಮಾರ್ಗಗಳನ್ನು ಬಿಡುವವರಲ್ಲವೆಂದು ತಿಳಿದು ಅಮೇರಿಕ, ಇಂಗ್ಲಾಂಡ್ ಮುಂತಾದ ಕಡೆಗಳಿಗೆ ಹೋಗಿಬಿಟ್ಟು, ನಾವಿನ್ನು ಇಲ್ಲಿ ಇದ್ದು ಏನು ಪಡೆದೆವು? ಇದಕ್ಕೆ ಕಾರಣವೇನೆಂದು ಜನರು ಯೋಚಿಸಿ ತಿಳಿದುಕೊಳ್ಳದೆ ಆರಂಭಾವಸ್ಥೆಯಲ್ಲಿಯೇ ಮುಳುಗುತ್ತಲಿದೆ. ಕಾವೇ ಪರಮಭಾಗವತರೆನ್ನುವವರು, ವಿಧವೆಯರ ಕಣ್ಣೀರು ಸುರಿಸುವುದೇನು? ಒಬ್ಬರಲ್ಲೊಬ್ಬರಿಗೆ ನಂಬಿಕೆ, ಭಾವನೆ, ಪ್ರೀತಿವಾತ್ಸಲ್ಯಾದಿಗಳು ಇಲ್ಲದೆ ಇರುವುದರಿಂದಲೇ ಮೇಲೆ ಬದ್ಧ ಶತ್ರುಗಳನ್ನು ಒಗ್ಗಟ್ಟಾಗಿ ಎದುರಿಸಲು ಸಾಧ್ಯವಿಲ್ಲ. ಪಶ್ಚಿಮ ರಾಜ್ಯದವರು ಖಂಡಗಳನ್ನೆಲ್ಲಾ, ಹಾಗಾದರೆ ಹಿಂದುಸ್ಥಾನದ ಪ್ರಜಾ ಕೋಟಿಗಳಲ್ಲಿ ಎಷ್ಟು ಮಂದಿ ಪರಮ ಭಕ್ತರೂ ಜ್ಞಾನಿಗಳೂ ಸೇರಿರುವರು? ಮಾತೆತ್ತಿದರೆ ವೈರಾಗ್ಯವೆನ್ನುವರು. ನಿಜವಾಗಿ ನೋಡಿದಲ್ಲಿ ವೈರಾಗ್ಯವೇ ಜನರನ್ನು ಬಿಟ್ಟಿರುವುದಲ್ಲದೆ ಜನರು ವೈರಾಗಿಗಳಾಗಿಲ್ಲ. ವೈರಾಗ್ಯವಿರುವ ಪಕ್ಷಕ್ಕೆ ಅದು ಇರುವ ತನಕ ಯಾವ ಜನಾಂಗವೂ ಅಭಿವೃದ್ಧಿಗೆ ಬರಲಾರದು. ಆಶಾರಹಿತನಾದ ಮನುಷ್ಯನಿಂದ ಪ್ರಪಂಚಕ್ಕೆ ಏನು ಉಪಯೋಗವಾದೀತು? ಆಶೆಯನ್ನೂ ಉದ್ದೇಶವನ್ನೂ ಇಟ್ಟುಕೊಂಡೇ ಇರಬೇಕೆಂದು ಸ್ವಾಮಿ ವಿವೇಕಾನಂದರವರು ಬೋಧಿಸಿಲ್ಲವೇ? ಮುಖ್ಯವಾಗಿ ಮತವು ಒಳ್ಳೆಯದಾಗಿದ್ದರೆ ಇಂಥಾ ದೋಷಗಳು ಹುಟ್ಟಲಾರವು. ಹಿಂದುಸ್ಥಾನದ ಮತಭಕ್ತಿಯು ಉತ್ಕೃಷ್ಟವಾದುದೆನ್ನುತ್ತಾರೆ. ಹಾಗಾದರೆ ಎರಡು ಸಹಸ್ರ ವರುಷಗಳಿಂದಲೂ ಆ ಮತಾವಲಂಬಿಗಳು ದಿನೇ ದಿನೇ ಕ್ಷೀಣಗತಿಗೆ ಬರಲು ಕಾರಣವೇನು? ಮತಾವಲಂಬಿಗಳ ಸ್ಥಿತಿಗತಿಯನ್ನೂ, ಆಚಾರ ವ್ಯವಹಾರಗಳನ್ನೂ, ಅಭಿಪ್ರಾಯ ಕ್ರಿಯೆಗಳನ್ನೂ ನೋಡಿದ ಮಾತ್ರಕ್ಕೇ ಮತದ ಯೋಗ್ಯತಾಸಿದ್ಧಿಯು ಪ್ರಕಾಶವಾಗುವುದಿಲ್ಲವೇ? ಆದಕಾರಣ ಸಕಲರೂ ಈ ವಿಚಾರವನ್ನು ಕುರಿತು ದೀರ್ಘವಾಗಿಯೂ ಸಮಾಧಾನದಿಂದಲೂ ಪರ್ಯಾಲೋಚಿಸಿ, ದೇಶಾಭಿವೃದ್ಧಿಗೆ ಸಹಕಾರಿಗಳಾದ ಏನಲ್ಲಾನಗಳನ್ನು ರೂಢಿಸಿ ಆಚರಣೆಗೆ ತಂದುಕೊಳ್ಳಬೇಕಾಗಿದೆ. ಹ್ಯಾಗೆಂದರೆ ಮತಭಕ್ತಿ ವಿಚಾರವನ್ನೂ ಸಾಂಸರ್ಗಿಕವಾದ ಆಚಾರ ವಿಚಾರಗಳನ್ನೂ ಪ್ರತ್ಯೇಕ ಪ್ರತ್ಯೇಕ ಮಾಡಬೇಕಾದದ್ದು ಪರಮಾವಶ್ಯವು. ಎರಡನೆಯದಾಗಿ, ಪ್ರಜಾಕೋಟಿಗೆ ನಾನಾವಿದ್ಯೆಯನ್ನು (ಪುಸ್ತಕ ವಿದ್ಯೆಯಲ್ಲ) ಅಂದರೆ ಲೌಕಿಕ ವಿದ್ಯೆ ವ್ಯವಹಾರಾದಿಗಳನ್ನು ಚನ್ನಾಗಿ ಕಲಿಸಿ, ಅವರನ್ನು ಮೌಢ್ಯಕೂಪದಿಂದ ಮೇಲಕ್ಕೆ ಎತ್ತಬೇಕು. ಮೂರನೆಯದಾಗಿ, ಅನ್ಯದೇಶಗಳಲ್ಲಿ ವಿಶೇಷವಾಗಿಯೂ ಧಾರಾಳವಾಗಿಯೂ ಸಂಚಾರಮಾಡಿ ಬುದ್ಧಿ ವಿವೇಕ ಸಾಮರ್ಥ್ಯಾದಿಗಳನ್ನು ಚುರುಕುಮಾಡಿಕೊಳ್ಳಬೇಕು. ನಾಲ್ಕನೆಯದಾಗಿ, ಅನ್ಯದೇಶಗಳವರನ್ನು ದ್ವೇಷಿಸದೆ, ದೂರಿಸಿ ಅಥವಾ ಅಪ್ರೀತಿಯಿಂದ ಕಾಣದೆ, ಅವರೊಡನೆ ಕಲೆತು ಅವರ ಪ್ರೀತಿ ಬುದ್ಧಿಮಾದ ಸಹಾಯಾದಿಗಳನ್ನು ಸಂಪಾದಿಸಿಕೊಂಡು ನಮ್ಮ ದೇಶವನ್ನು ಉಚ್ಛ್ರಾಯಸ್ಥಿತಿಗೆ ತರಬೇಕು. ಐದನೆಯದಾಗಿ, ಯಥಾರ್ಥವಾದ ವೇದಾಂತಮತವನ್ನು ಆಚರಣೆಗೆ ತಂದು ಧಾರಾಳವಾಗಿ ಬೋಧನೆಮಾಡಬೇಕು. ಕಡೆಯದಾಗಿ, ಜನರು ಗೌರವ ಸನ್ಮಾನಗಳನ್ನು ಕಲಿತು, ಸರ್ವಕಾಲಗಳಲ್ಲೂ ಸತ್ಯಮಾರ್ಗವನ್ನೇ ಅವಲಂಬಿಸುವಂತೆ ಎಲ್ಲರಿಗೂ ಹೇಳಿ, ಯಾರನ್ನೂ ದುರ್ಭಾಷೆಗಳಿಂದ ದ್ವೇಷಿಗಳನ್ನಾಗಿ ಮಾಡಿಕೊಳ್ಳದೆ, ಎಲ್ಲರನ್ನೂ ಏಕೋದರ ಪ್ರೀತಿ ವಾತ್ಸಲ್ಯಾದಿಗಳಿಂದ ಕಾಣುತ್ತ ಬರಬೇಕಾದದ್ದೇ ಉತ್ತಮೋತ್ತಮವೂ ಪರಮಾವಶ್ಯವೂ ಆದ ಮಾರ್ಗವಾಗಿದೆ.

ಮೈಸೂರು ಅಂಜುಮಾನಿ ಹಿಮಾಯತ್ ಇಸ್ಲಾಂ.

ಈ ಸಂಘದ ಎರಡನೇ ವಾರ್ಷಿಕೋತ್ಸವವು.

ಕಳೆದ ಶುಕ್ರವಾರ ಸಾಯಂಕಾಲ ಮೈಸೂರು ಅಂಜುಮಾನಿ ಸಂಘದ ಎರಡನೇ ವಾರ್ಷಿಕೋತ್ಸವವು ಸ್ವಂತ ಕಟ್ಟಡದಲ್ಲಿ ನಡೆಯಿತು. ದಿವಾನ್ ಮೆ॥ ವಿ. ಪಿ. ಮಾಧವರಾಯರೂ, ಹೈದರಾಬಾದಿನಿಂದ ಬಂದಿದ್ದ ಕ್ಯಾಪ್ಟನ್ ನವಾಬ್ ಮಂತಾಜ್ ಯಾರ್‌ಜಂಗ್ ದೌಲಾ ಬಹದೂರ್ ಯವರೂ ಅಗ್ರಾಸನವನ್ನು ವಹಿಸಿದ್ದರು. ಅನೇಕ ಮಂದಿ ಹಿಂದೂ ಮಹಮದೀಯ ದೊಡ್ಡ ಮನುಷ್ಯರೂ ಉದ್ಯೋಗಸ್ಥರೂ ಸಭೆಯಲ್ಲಿ ಹಾಜರಾಗಿದ್ದರು. ಸಭೆಯು ಪ್ರಾರಂಭವಾದೊಡನೆ ಸಂಘದ ಸೆಕ್ರೆಟರಿ ಮೆ॥ ಬಾಕರಲ್ಲಿ ಖಾನ್ ರವರು ಇಂಗ್ಲೀಷಿನಲ್ಲೂ, ಮೆ॥ ವಿಂಜರ್ ಪಾಸನಲ್ಲಿ ಬೇಗ್ ಯವರು ಹಿಂದುಸ್ಥಾನಿಯಲ್ಲೂ ವಾರ್ಷಿಕ ರಿಪೋರ್ಟನ್ನು ಓದಿ ತಿಳಿಸಿದರು. ಮಹಮದೀಯರಲ್ಲಿ ಸ್ತ್ರೀ ವಿದ್ಯಾಭ್ಯಾಸ ಮಾಡಿಸುವುದೂ, ಬಾಲಕರಿಗೆ ಮತವಿಚಾರಗಳನ್ನು ಕಲಿಸುವುದೂ, ನಿರ್ಗತಿಕರಾದ ಮತ್ತು ಅನಾಥರಾದ ಗಂಡಸರನ್ನೂ ಹೆಂಗಸರನ್ನೂ ಕಾಪಾಡುತ್ತಿರುವುದೂ, ಲೌಕಿಕ ವಿದ್ಯೆಯನ್ನು ಕಲಿಯುವ ಬಾಲಕರಿಗೆ ವೇತನ ಕೊಡುವುದೂ, ಜಾತಿ ಮತಗಳ ವ್ಯತ್ಯಾಸವಿಲ್ಲದೆ ವಿದ್ಯಾರ್ಥಿಗಳಲ್ಲಿ ಪೋಟಾಪೋಟಿಯನ್ನು ಕಲ್ಪಿಸಿ, ಉಪನ್ಯಾಸ ಬರವಣಿಗೆಗಳಲ್ಲಿ ಗಟ್ಟಿಗರಾದವರಿಗೆ ಬಹುಮಾನಗಳನ್ನು ಕೊಡುವುದೂ ಈ ಸಂಘದ ಕಾರ್ಯಗಳಾಗಿರುತ್ತವೆ. ಈ ಉದ್ದೇಶಕ್ಕೆ ಮಹಮದೀಯರೂ ಹಿಂದುಗಳೂ ಈ ಊರಿನವರೂ ಬೊಂಬಾಯಿ ಹೈದರಾಬಾದು ಬರೋಡಾ ಮೊದಲಾದ ಪರಸ್ಥಳಗಳವರೂ ದ್ರವ್ಯಸಹಾಯ ಮಾಡುತ್ತಿದ್ದನ್ನು ಮಾಡಿರುತ್ತಾರೆಂದು ತಿಳಿಯಿತು.

ಹೈದರಾಬಾದಿನ ನವಾಬ್ ಲಿಯಾಕತ್ ಜಂಗ್ ಬಹದೂರ್ ಯವರೂ, ಕ್ಯಾಪ್ಟನ್ ನವಾಬ್ ಮಂತಾಜ್ ಯಾರ್‌ಜಂಗ್ ದೌಲಾ ಬಹದೂರ್ ಯವರೂ, ಮೌಲ್ವಿ ದರ್ವೇಷ್ ಪೀರ್ ಯವರೂ ಒಟ್ಟಾದ ಮೇಲೊಬ್ಬರು ಶ್ರೀಮನ್ಮಹಾರಾಜರವರ ಗುಣಾದಿಗಳನ್ನೂ ಅವರ ರಾಜ್ಯಭಾರದ ವಿಚಕ್ಷಣೆಯನ್ನೂ ಅವರ ಪ್ರಜಾವಾತ್ಸಲ್ಯ ಶೀಲತೆಯನ್ನೂ ವರ್ಣಿಸಿ, ಅವರಿಗೆ ಆಯುರಾರೋಗ್ಯಾದಿಗಳು ಚಿರಕಾಲ ಲಭಿಸಲೆಂದು ಸಂಘದ ಪರವಾಗಿ ಕೋರಿದರು.

ಮೆ॥ ವಿಂಜರ್ ಪಾಸನಲ್ಲಿ ಬೇಗ್ ಯವರೂ ಮೆ॥ ಮಹಮದ್ ಬಿನ್ ಅಹಮದ್ ಸೇಟ್ ಯವರೂ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಈ ಸಂಘದಿಂದ ಇಬ್ಬರು ಮೆಂಬರುಗಳನ್ನು ಚುನಾಯಿಸಿ ಕಳುಹಿಸುವುದಕ್ಕೆ ಅವಕಾಶ ಕೊಡುವಂತೆ ಗವರ್ನಮೆಂಟನ್ನು ಬೇಡಿಕೊಳ್ಳಬೇಕೆಂದು ಸಂಘದ ಅಭಿಪ್ರಾಯವನ್ನು ತಿಳಿಸಿದರು.

ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವ ಬೆಳೆಯುವಾಗಲೇ ಪ್ರತಿ ಸಲವೂ ಈ ಸಂಘದ ವಾರ್ಷಿಕೋತ್ಸವವನ್ನು ಮಾಡಿ ಆ ಉತ್ಸವದ ಸಂತೋಷ ಮತ್ತು ಜ್ಞಾಪಕಾರ್ಥವಾಗಿ ವಿದ್ಯಾರ್ಥಿಗಳಿಗೆ ಬಂದ ಕೆಲ ಉಪನ್ಯಾಸಾದಿಗಳಲ್ಲಿ ಪರೀಕ್ಷೆಗಳನ್ನಿಟ್ಟು ತೇರ್ಗಡೆಯಾದವರಿಗೆ ಬಹುಮಾನಗಳನ್ನು ಕೊಡುತ್ತಾ ಬರಬೇಕೆಂಬ ಅರ್ಥಕ್ಕೆ ಮೆ॥ ಎಂ. ವೆಂಕಟಕೃಷ್ಣಯ್ಯನವರೂ ನವಾಬ್ ಬಿ. ಎಂ. ವಿಜಾರ್ ಸಜಾನಸ್ಪೀರ್ ಅಲ್ಲಿಖಾನ್ ಯವರೂ ಉಪನ್ಯಾಸ ಮಾಡಿ, ಶ್ರೀಮನ್ಮಹಾರಾಜರವರ ಹೆಸರಿನಲ್ಲಿ ಈ ಕಾರ್ಯಗಳನ್ನು ನಡಿಸುವುದು ಪ್ರಜೆಗಳ ರಾಜಭಕ್ತಿ ವಿಶ್ವಾಸಾದಿಗಳ ಚಿಹ್ನೆಯಾಗಿರುತ್ತದೆ ಎಂದು ತಿಳಿಸಿದರು. ಮಹಾರಾಜರವರು ರಾಜ್ಯಾಧಿಕಾರವನ್ನು ವಹಿಸಿಕೊಂಡಾರಭ್ಯ ಅವರು ಪ್ರಜೆಗಳಿಗೆ ನಾನಾತರದ ಸೌಕರ್ಯಗಳನ್ನು ಕಲ್ಪಿಸಿ ಕೊಟ್ಟು, ದೇಶಾಭ್ಯುದಯ ಕಾರ್ಯದಲ್ಲಿ ಮಹಾ ಉತ್ಸಾಹಿಗಳಾಗಿದ್ದಾರೆಂತಲೂ, ಇಂಥಾ ರಾಜೋತ್ತಮರನ್ನು ಪಡೆದ ಪ್ರಜೆಗಳು ಎಷ್ಟು ಕೃತಜ್ಞರಾಗಿ ನಡೆದು ಕೊಳ್ಳಬೇಕೆಂತಲೂ ಅವರು ಹೇಳಿದರು.

ಸಭೆಯಲ್ಲಿ ತೇರ್ಗಡೆ ಹೊಂದಿದ ಒಬ್ಬ ಹಿಂದೂ ಬಾಲಕನಿಗೂ ಇಬ್ಬರು ಮಹಮದೀಯ ಬಾಲಕರಿಗೂ ವರ್ಧಂತಿ ಉತ್ಸವದ ಸಂಭ್ರಮಕ್ಕಾಗಿ ಬಹುಮಾನಗಳನ್ನು ಪ್ರೆಸಿಡೆಂಟರ ಕೈಯಿಂದ ಕೊಡಿಸಿದರು.

ಮೆ॥ ಸಿ. ರಾಮಲಿಂಗರೆಡ್ಡಿಯವರು ಸಭಿಕರ ಅಭಿಪ್ರಾಯವನ್ನು ಅಂಗೀಕರಿಸಿ, ಮಹಮದೀಯ ಜನರಿಗೆಲ್ಲಾ ಬಹು ಶ್ರೇಷ್ಠವಾದ ಕೆಲವು ವಿಷಯಗಳನ್ನು ತಿಳಿಸಿದರು. ಅದರ ಮುಖ್ಯಾಭಿಪ್ರಾಯವೇನೆಂದರೆ:— ಮಹಮದೀಯರಲ್ಲಿ ಜನರು ಅಷ್ಟು ವಿದ್ಯಾವಂತರಾಗಿಲ್ಲ. ಸ್ತ್ರೀ ವಿದ್ಯಾಭ್ಯಾಸವು ಅಭಿವೃದ್ಧಿಯಾಗುತ್ತಾ ಇಲ್ಲ. ಹಿಂದುಸ್ಥಾನವೆಂಬ ಮನುಷ್ಯನಿಗೆ ಹಿಂದುಗಳೂ ಮಹಮದೀಯರೂ ಎರಡು ಕಾಲುಗಳೋಪಾದಿಯಲ್ಲಿದ್ದಾರೆ. ಹಿಂದುಗಳು ವಿದ್ಯಾವಂತರಾಗಿ ಅಭಿವೃದ್ಧಿ ಹೊಂದುವುದೂ ಮಹಮದೀಯರು ಅಭಿವೃದ್ಧಿ ಹೊಂದದೆ ಇರುವುದೂ ದೇಶದ ಆಕೃತಿಯನ್ನು ವಿಕಾರಮಾಡೀತು. ಆದಕಾರಣ ಎರಡು ಪಂಗಡದವರೂ ಪಕ್ಷಭೇದವಿಲ್ಲದೆ ಒಂದೇ ಸಮನಾಗಿ ಎಲ್ಲಾ ವಿಚಾರಗಳಲ್ಲೂ ಅಭಿವೃದ್ಧಿ ಹೊಂದುತ್ತಾ ಬರಬೇಕಾಗಿದೆ. ಉತ್ತರದೇಶದಲ್ಲೂ ಬೊಂಬಾಯಿ ಅಧಿಪತ್ಯದಲ್ಲೂ ಮಹಮದೀಯರು ತಮ್ಮ ಜನರ ಕೊರತೆಯನ್ನು ತಿಳಿದುಕೊಂಡು ಆ ದೋಷವನ್ನು ನಿವಾರಣೆಮಾಡಿಕೊಳ್ಳುವುದಕ್ಕೆ ನಾನಾ ಸಾಹಸಕಾರ್ಯಗಳನ್ನು ಮಾಡುತ್ತಾ ಬಂದಿದ್ದಾರೆ. ದಕ್ಷಿಣದೇಶದಲ್ಲಿ ಮಹಮದೀಯರು ಇನ್ನೂ ನಿದ್ದೆ ಮಾಡುತ್ತಿರುವರು. ಹೀಗಿರುವುದು ಕ್ಷೇಮಕರವಲ್ಲ. ಮೈಸೂರಿನ ಮುಸಲ್ಮಾನರು ಸಾಹಸಪಟ್ಟು, ದಕ್ಷಿಣದೇಶಕ್ಕೆ ಉಂಟಾಗಿರುವ ಈ ಅಪಕೀರ್ತಿಯನ್ನು ಹೋಗಲಾಡಿಸಬೇಕಾಗಿದೆ. ಮೌಲ್ವಿಗಳಾದ ವೈದಿಕರು ಈಗಿನ ನವನಾಗರಿಕವಾದ ಅಭಿಪ್ರಾಯಗಳನ್ನು ಒಪ್ಪಿಕೊಳ್ಳುವವರಾಗಿಯೂ ಆರ್ಷೇಯವಾಗಿ ಬಂದಿರುವ ವಿಚಾರಗಳನ್ನು ಕಾಲಾನುಗುಣ್ಯವಾಗಿ ತಿದ್ದುಪಾಟು ಮಾಡಿಕೊಳ್ಳುವುದಕ್ಕೆ ಹಿಂತೆಗೆಯದವರಾಗಿಯೂ ಇರುವುದರಿಂದ ಮಹಮದೀಯ ವಿದ್ಯಾವಂತರೂ ಅವರಿಗೆ ತಕ್ಕ ತಿಳುವಳಿಕೆ ಪ್ರೋತ್ಸಾಹಾದಿಗಳನ್ನು ಉಂಟುಮಾಡಿ, ಈ ಜನಾಂಗದವರನ್ನು ಕ್ರಮೇಣ ಏಳಿಗೆಗೆ ಬರುವಂತೆ ಮಾಡಿಕೊಳ್ಳಬೇಕು. ಈಗ ಸಂಸ್ಥಾನದಲ್ಲಿ ಹಿಂದುಗಳೂ ಮಹಮದೀಯರೂ ಅಣ್ಣತಮ್ಮಂದಿರಂತೆ ಒಬ್ಬರನ್ನೊಬ್ಬರು ಪ್ರೀತಿಸಿ ಪಕ್ಷಭೇದವಿಲ್ಲದೆ ಕಾರ್ಯಗಳನ್ನು ನಡಿಸುತ್ತಾ ಇರುವುದು ಪರಮಸಂತೋಷಕರವಾಗಿದೆ ಎಂಬುದೇ.

ದಿವಾನರಾದ ಮೆ॥ ಮಾಧವರಾಯರು ಸಭಿಕರನ್ನು ಕುರಿತು:— ಈ ಅಂಜುಮಾನ್ ಸಂಘದ ಏರ್ಪಾಡುಗಳೂ ಕಾರ್ಯಗಳೂ ಬಹು ತೃಪ್ತಿಕರವಾಗಿವೆ. ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವವನ್ನು ಈ ಸಂಘದವರು ತಮ್ಮ ವಾರ್ಷಿಕೋತ್ಸವದ ಮೂಲಕ ಆಚರಿಸುವುದು ತುಂಬಾ ಸ್ತೋತ್ರಾರ್ಹವಾದದ್ದು. ಆಯಾ ಪಂಗಡದವರು ತಮ್ಮ ತಮ್ಮ ಜನರ ಏಳಿಗೆಗಾಗಿ ಇಂಥಾ ಸಂಘಗಳನ್ನು ಮಾಡಿಕೊಂಡು, ಎಲ್ಲರೂ ಐಕಮತ್ಯದಿಂದ ಕಾರ್ಯಗಳನ್ನು ನಡಿಸುತ್ತಾ, ತಮ್ಮ ತಮ್ಮ ಜನರನ್ನು ಅಭಿವೃದ್ಧಿಗೆ ತರುವುದರ ಮೂಲಕ ದೇಶೋನ್ನತಿಗೆ ಸಹಾಯಕರಾಗುವುದು ಅಪೇಕ್ಷಣೀಯವಾಗಿದೆ. ಆಯಾ ಪಂಗಡದ ಜನರಿಗೆ ವಿದ್ಯೆ ಬುದ್ಧಿ ಭಕ್ತಿ ಮೊದಲಾದವುಗಳನ್ನು ಕಲಿಸಿ ಅಭಿವೃದ್ಧಿಗೆ ತರುವುದು ಇಂಥಾ ಸಂಘಗಳ ಕರ್ತವ್ಯವಾಗಿದೆ. ಶ್ರೀಮನ್ಮಹಾರಾಜರವರು ಎಲ್ಲಾ ಪಂಗಡದ ಪ್ರಜೆಗಳನ್ನು ಒಂದೇ ರೀತಿಯಾಗಿ ಭಾವಿಸಿ, ಅವರನ್ನು ಅಭಿವೃದ್ಧಿಗೆ ತರುವುದರಲ್ಲಿ ಸಂಪೂರ್ಣವಾದ ಕುತೂಹಲವುಳ್ಳವರಾಗಿದ್ದಾರೆ ಎಂಬೀ ರೀತಿಯಾಗಿ ಕೆಲವು ಮಾತುಗಳನ್ನು ಹೇಳಿ ಕುಳಿತುಕೊಂಡರು.

ಹೈದರಾಬಾದಿನ ಕ್ಯಾಪ್ಟನ್ ನವಾಬ್ ಮಂತಾಜ್ ಯಾರ್‌ಜಂಗ್ ದೌಲಾ ಬಹದೂರ್ ಯವರು ಎದ್ದುನಿಂತು— ಈ ಮಹಮದೀಯ ಸಂಘದ ಶ್ರೇಯೋಭಿವೃದ್ಧಿಗೆ ಅವಶ್ಯವಾದದ್ದನ್ನೆಲ್ಲಾ ಒದಗಿಸಿಕೊಡಲು ಮೆ॥ ಮಾಧವರಾಯರು ಸಿದ್ಧರಾಗಿದ್ದಾರೆಂದು ತಿಳಿಸಲು ಸಂತೋಷಪಡುತ್ತೇನೆ. ಇದಲ್ಲದೆ ಶ್ರೀಮನ್ಮಹಾರಾಜಾ ಸರ್ಕಾರದವರು ಇಷ್ಟರಲ್ಲೇ ಈ ಸಂಸ್ಥಾನದ ಸಮಸ್ತ ಪಾಠಶಾಲೆಗಳಲ್ಲೂ ಬಾಲಕ ಬಾಲಕಿಯರಿಗೆ ಪಾಕಶಾಸ್ತ್ರ, ಸದ್ಭಕ್ತಿ, ಸಚ್ಚರಿತ್ರೆ, ಮತವಿಚಾರ, ಈ ಮೊದಲಾದ ಭಾಗಗಳನ್ನು ಕಲಿಸುವುದಕ್ಕೆ ಏರ್ಪಾಡು ಮಾಡುವವರಾಗಿದ್ದಾರೆಂದು ಹೇಳಿ ಸಕಲರಿಗೂ ಸಂತೋಷಪಡಿಸಿದರು. ಮಹಮದೀಯರು ತಮ್ಮ ಗಂಡು ಹೆಣ್ಣು ಮಕ್ಕಳಿಗೆ ಸರಿಯಾಗಿ ವಿದ್ಯೆಯನ್ನು ಕಲಿಸಿ ತಮ್ಮ ಕರ್ತವ್ಯವನ್ನು ನೆರವೇರಿಸಬೇಕಾಗಿದೆ ಎಂದು ಮೊದಲಾಗಿ ಹೇಳಿದರು.

ಸಭಿಕರಿಗೆ ಗಂಧವಿಳ್ಯ ಹಂಚಿದ ಮೇಲೆ ಸಭೆಯು ಮುಕ್ತಾಯವಾಯಿತು.

ಇಂಡಿಯಾ ದೇಶದ ವೃತ್ತಾಂತಗಳು.

ಮಧ್ಯ ಇಂಡಿಯಾಕ್ಕೆ ಸೇರಿದ ಚಿಕ್ಕಾರಿ ಸಂಸ್ಥಾನದ ಮಹಾರಾಜರವರು ಕಳೆದ ಸೋಮವಾರ ತೀರಿಹೋದರು.

❦❦❦

ಮುಜಫರ್ ಪುರದಲ್ಲಿ ಸಿಡಿಮದ್ದಿನ ಗುಂಡನ್ನು ಎಸೆದು ಇಬ್ಬರು ಯುರೋಪಿಯನ್ ಸ್ತ್ರೀಯರನ್ನು ಕೊಂದು ಹಾಕಿದ ಕುದಿರಾಂ ಬೋಸ್ ಎಂಬ ಬಂಗಾಳಿ ಹುಡುಗನನ್ನು ಸೆಷನ್ಸ್ ಜಡ್ಜರು ವಿಚಾರಣೆ ಮಾಡಿ, ಅವನಿಗೆ ಮರಣ ದಂಡನೆಯನ್ನು ವಿಧಿಸಿದರು.

❦❦❦

ಹಿಂದುಸ್ಥಾನದ ವಾಯವ್ಯ ಸರಹದ್ದಿನ ಬಳಿ ಪಠಾಣ ಜನರ ಮೇಲೂ ಮೊಹಮಂಡ್ ಜನರ ಮೇಲೂ ಗವರ್ನಮೆಂಟಿನವರು ಸೈನ್ಯಗಳನ್ನು ಕಳುಹಿಸಿ ಯುದ್ಧಕಾರ್ಯಗಳನ್ನು ನಡಿಸಿ, ಅವರ ಗ್ರಾಮಗಳನ್ನೆಲ್ಲಾ ಸುಟ್ಟು ಹಾಕಿ ದುಷ್ಟ ಇದಕ್ಕೆಲ್ಲಾ ಇಂಡಿಯಾ ಗವರ್ನಮೆಂಟಿಗೆ ೩೦ ಲಕ್ಷ ರೂಪಾಯಿ ತನಕ ಖರ್ಚಾಯಿತೆಂದು ತಿಳಿಯುತ್ತದೆ.

❦❦❦

ಕಲ್ಕತ್ತಾ ಪಟ್ಟಣದಲ್ಲಿ ಪ್ರಕಟವಾಗುತ್ತಿದ್ದ "ಯುಗಾಂತರ" ಎಂಬ ಪತ್ರಿಕೆಯ ಅಚ್ಚಿನ ಮನೆ ಜಪ್ತಿಯಾಗಿರುವುದು ಸಿಂಹಾವಲೋಕನ ಮಾಡಿಕೊಂಡು ಬರದೆ ಹೋದರು. ಅದು ಮೊದಲು ಅಚ್ಚಾಗುತ್ತಿದ್ದ ಅಚ್ಚಿನ ಮೊಳೆಗಳನ್ನು ಸರ್ಕಾರದವರು ಸ್ವಾಧೀನಪಡಿಸಿಕೊಂಡು ನಾಶ ಮಾಡಬೇಕೆಂದು ಹುಕುಂ ಕೊಟ್ಟಿದ್ದಾರೆ.

❦❦❦

ಆಗ್ರಾ ಪಟ್ಟಣದ ವಿದ್ಯಾಶಾಲೆಯ ವಿದ್ಯಾನಿಲಯದಲ್ಲಿ ವಾಸ ಮಾಡುತ್ತಿದ್ದ ಹೀರಾಲಾಲ್ ಎಂಬುವನನ್ನು ಪೊಲೀಸಿನವರು ದಸ್ತಗಿರಿ ಮಾಡಿ, ಅವನು ಕಲ್ಕತ್ತಾ ಪಟ್ಟಣದ ಬಾಂಬ್ ಸಂಘಕ್ಕೆ ಸೇರಿದವನೆಂದು ಕಲ್ಕತ್ತೆಗೆ ಕರೆದುತಂದು ವಿಚಾರಣೆ ಮಾಡಿದ್ದಾರೆ. ಅವನ ಬಳಿಯಲ್ಲಿ ಕೆಲವು ವಿಶೇಷವಾದ ಕಾಗದಪತ್ರಗಳು ಸಿಕ್ಕಿರುತ್ತವೆ.

❦❦❦

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ೩೧೭ ಜನರು ಪ್ಲೇಗ್ ಉಪದ್ರದಲ್ಲಿ ಕಾಲವಾದರು. ಆ ಪೈಕಿ ಪಂಜಾಬಿನಲ್ಲಿ ೩೯೭, ಬೊಂಬಾಯಿ ಅಧಿಪತ್ಯ ೧೭೭, ಬಿಹಾರ್ ೧೯೭, ಮದರಾಸ್ ಅಧಿಪತ್ಯ, ಬಂಗಾಳ ಮತ್ತು ಮೈಸೂರು ಸಂಸ್ಥಾನಗಳಲ್ಲಿ ೫೬, ವಾಯುವ್ಯ ಸರಹದ್ದಿನ ಪ್ರಾಂತ್ಯ ೧೦, ಸಂಯುಕ್ತ ಅಧಿಪತ್ಯಗಳು ೧೦, ರಾಜಪುಟಾನಾ ೨, ಈ ರೀತಿ ಮರಣಗಳಾಗಿವೆ.

❦❦❦

ಕಾನ್ಪುರದಲ್ಲಿ ಇಂಗ್ಲಿಷ್ ವರ್ತಕಮಂಡಲಿಯವರು ಹತ್ತಿ ಬೀಜದಿಂದ ಎಣ್ಣೆ ತೆಗೆಯುವುದನ್ನು ಪರೀಕ್ಷಿಸಿ ಪ್ರಾರಂಭಿಸಬೇಕೆಂದು ಪ್ರಯತ್ನಪಟ್ಟು, ಗವರ್ನಮೆಂಟಿನವರ ಸಹಾಯವನ್ನು ಬೇಡಿಕೊಂಡರು. ಆ ಎಣ್ಣೆ ತೆಗೆಯುವುದಕ್ಕೆ ಅವಶ್ಯವಾದ ಯಂತ್ರಸಾಧನಗಳನ್ನು ಸೀಮೆಯಿಂದ ತರಿಸಿಕೊಳ್ಳುವುದಕ್ಕೆ ಸರ್ಕಾರದವರು ಆ ವರ್ತಕಮಂಡಲಿಯವರಿಗೆ ಸ್ವಲ್ಪಮಟ್ಟಿಗೆ ದ್ರವ್ಯಸಹಾಯ ಮಾಡುವರೆಂದು ಕಾಣುವುದು.

❦❦❦

ಕ್ವೆಟ್ಟಾ ಪಟ್ಟಣದ ಬಳಿ ಖೋಸ್ಟ್ ಎಂಬ ಸ್ಥಳದಲ್ಲಿರುವ ನಾದರ್ ಎಂಬ ಕಲ್ಲಿದ್ದಲ ಗಣಿಯಲ್ಲಿ ಹಿಂದಿನ ವಾರ ಒಂದು ಭಯಂಕರವಾದ ಅನಾಹುತ ನಡೆದು ಇಪ್ಪತ್ತು ಮಂದಿ ಗಣಿ ಕೆಲಸಗಾರರು ಸತ್ತುಹೋದರು. ಕಂಪನಿಯವರು ಶವಗಳನ್ನು ಹೊರಕ್ಕೆ ತೆಗೆಯುವುದಕ್ಕೆ ತುಂಬಾ ಸಾಹಸಪಡಬೇಕಾಯಿತು. ಕಲ್ಲಿದ್ದಲ ಧೂಳಿಗೂ ಅದರ ಹೊಗೆಯೂ ಬೆರೆದು ಬೆಂಕಿ ಹುಟ್ಟಿ ಈ ಅನಾಹುತವನ್ನುಂಟುಮಾಡಿತೆಂದು ತಿಳಿಯುವುದು.

❦❦❦

ಕಲ್ಕತ್ತಾ ಪಟ್ಟಣದ ಮಾಣಿಕ್ಯತೋಲಾ ಬೀದಿಯ ಒಂದು ತೋಟದ ಮನೆಯೊಳಗೆ ರಾಜದ್ರೋಹಕರವಾದ ಪಿತೂರಿ ಗುಂಪು ಪತ್ತೆ ಆಗಿ, ಅಲ್ಲಿ ಅವರು ತಯಾರುಮಾಡುತ್ತಿದ್ದ ಸಿಡಿಮದ್ದಿನ ಗುಂಡುಗಳೂ ಪಾತ್ರೆ ಮೊದಲಾದವುಗಳೂ ಕಾಗದಪತ್ರಗಳೂ ಸಿಕ್ಕಿದವೆಂತಲೂ ಸರ್ಕಾರದವರು ಅವರನ್ನು ದಸ್ತಗಿರಿ ಮಾಡಿದಾರೆಂತಲೂ ತಿಳಿಸಿದ್ದೆವಷ್ಟೆ. ಈ ಗುಂಪಿನ ೩೭ ಮಂದಿ ಬಂಗಾಳಿಗಳನ್ನು ದಸ್ತಗಿರಿಮಾಡಿ ಅಲಿಪುರದ ಪೊಲೀಸ್ ಕೋರ್ಟಿನಲ್ಲಿ ತನಿಖೆಯಾಗುತ್ತಿದೆ.

ಪೂನಾ ಪಟ್ಟಣದಲ್ಲಿ "ಕಾಳ್" ಎಂಬ ಮಹಾರಾಷ್ಟ್ರ ವಾರ ಪತ್ರಿಕೆಯಲ್ಲಿ ಎಡಿಟರಾದ ಶಿವರಾಮ ಮಹದೇವ ಪರಾಂಜಪೆ, ಎಂ. ಎ., ಎಂಬಾತನು ರಾಜದ್ರೋಹಕರವಾದ ಬಾತ್ಮಿಗಳನ್ನು ಬರೆದು ಪ್ರಕಟಿಸಿದನೆಂದು ಮೊಕದ್ದಮೆ ಆಗಿದೆ. ಸರ್ಕಾರದವರು ಆತನನ್ನು ದಸ್ತಗಿರಿ ಮಾಡಿ ಬೊಂಬಾಯಿಗೆ ಕರೆದುಕೊಂಡು ಹೋದರು. ಛೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಕೆಲವು ಭಾಗ ದರ್ಯಾಫ್ತು ಮಾಡಿ, ಅಪರಾಧಿಯನ್ನು ಸೆಷನ್ಸ್ ಕೋರ್ಟಿನ ವಿಚಾರಣೆಗೆ ಗುರಿಮಾಡಿದಾರೆ. ಹೈಕೋರ್ಟಿನವರು ಅಪರಾಧಿಯನ್ನು ಜಾಮೀನ್ ಮೇಲೆ ಬಿಡಲಾಗದೆಂದು ತೀರ್ಮಾನಮಾಡಿದರು.

***

ಕಲ್ಕತ್ತಾ ಪಟ್ಟಣದಲ್ಲಿ ಪೋಲೀಸ್ ಕಮಿಷನರರು ವಿಷಧ ಮುಂತಾದ್ದನ್ನು ವಿಕರಿ ಮಾಡುವಂಥಾ ಅಂಗಡಿಗಳಿಗೆಲ್ಲಾ ನೋಟಿಸ್ ಕೊಟ್ಟಿರುತ್ತಾರೆ. ಅದರಲ್ಲಿ ಅವರು ಅಂಗಡಿಯವರಿಗೆ ತಿಳಿಸಿರುವ ಅಭಿಪ್ರಾಯವೇನೆಂದರೆ—ಕ್ರೂರಕೃತ್ಯಗಳನ್ನು ನಡಿಸಬೇಕೆಂದು ಸಿದ್ಧಮಾಡುವ ಮುಂತಾದ ಮಾರಣಕರವಾದ ಪದಾರ್ಥಗಳನ್ನು ತಯಾರುಮಾಡುವ ಕೆಮಿಸ್ಟರ ಔಷಧಿಗಳ ಅಂಗಡಿಗಳಲ್ಲಿ ವಿಕರಿಗೆ ಇಟ್ಟಿರುವ ಗಂಧಕ ದ್ರಾವಕವೇ ಮೊದಲಾದವುಗಳನ್ನು ಯಾರಿಗೆ ಎಷ್ಟು ವಿಕರಿ ಮಾಡುತ್ತಾರೋ ಅವರ ಹೆಸರು ವಿಳಾಸ ಮುಂತಾದ್ದನ್ನು ಕ್ರಮವಾಗಿ ಅಂಗಡಿಯಲ್ಲಿ ಬರೆದಿಡಬೇಕು ಎಂಬುದೇ.

***

ಹಿಂದುಸ್ಥಾನದ ಅನೇಕ ಪ್ರಾಂತ್ಯಗಳಲ್ಲಿ ಕಳೆದ ಎರಡು ವಾರಗಳಿಂದಲೂ ಅಲ್ಪಸ್ವಲ್ಪ ಮಳೆಯಾಗುತ್ತಲಿದೆ. ಆದರೂ ಇನ್ನೂ ಕಟ್ಟಿಗೆ ಬರಬೇಕಾಗಿರುವುದು. ಕ್ಷಾಮ ಬಾಧೆಯು ಇನ್ನೂ ಇಳಿಮುಖವಾಗಲಿಲ್ಲ. ಹಿಂದುಸ್ಥಾನದಲ್ಲೆಲ್ಲಾ ಹೋದ ವಾರ ಒಟ್ಟು ೧೩,೦೧,೦೦೦ ಜನರು ಕ್ಷಾಮಬಾಧೆಗೆ ಸಿಕ್ಕಿ ಸರ್ಕಾರದವರ ಪೋಷಣೆಯಲ್ಲಿದ್ದರೆಂದು ತಿಳಿಯುತ್ತದೆ. ಆ ಪೈಕಿ ಬಂಗಾಳದಲ್ಲಿ ೪೬೭,೦೦೦, ಸಂಯುಕ್ತ ಆಧಿಪತ್ಯಗಳು ೧೦,೫೯,೦೦೦, ಪಂಜಾಬ್ ೨,೦೦೦, ಮಧ್ಯಪ್ರಾಂತ್ಯಗಳು ೩೮,೦೦೦, ಬೊಂಬಾಯಿ ೩,೦೦೦, ಮದರಾಸ್ ೧,೦೦೦, ಮಧ್ಯ ಇಂಡಿಯಾ ೧,೪೯,೦೦೦, ಈ ರೀತಿ ಪ್ರಜೆಗಳು ಕ್ಷಾಮಪೀಡಿತರಾಗಿದ್ದರು.

***

ಬೊಂಬಾಯಿ ಪಟ್ಟಣದಲ್ಲಿ ಪಾರ್ಸಿ ಜನರ ಮುಖಂಡರಾಗಿದ್ದ ಸರ್ ಜಾಮ್‌ಸೆಟ್‌ಜೀ ಜೀಜೀಭಾಯಿಯವರು ಕಳೆದ ವಾರ ಕಾಲವಾದರು. ಇವರಿಗೆ ೫೭ ವರುಷ ವಯಸ್ಸಾಗಿತ್ತು. ಆ ಪಟ್ಟಣದಲ್ಲಿ ಪಾರ್ಸಿ ಜನರು ಧರ್ಮಕಾರ್ಯಗಳನ್ನು ನೋಡಿಕೊಳ್ಳತಕ್ಕ [illegible] ಗೌರವವನ್ನು ಪಡೆದಿದ್ದರು. ಚಕ್ರವರ್ತಿಯವರಿಗೆ ಕಿರೀಟಧಾರಣೆಯಾದಾಗ್ಗೆ ಇವರನ್ನು ಬೊಂಬಾಯಿ ಗವರ್ನ್‌ಮೆಂಟಿನವರು ತಮ್ಮ ಪ್ರತಿನಿಧಿಯಾಗಿ ವಿಲಾಯಿತಿಗೆ ಕಳುಹಿಸಿದ್ದರು. ಇವರು ಅನೇಕ ಧರ್ಮಕಾರ್ಯಗಳನ್ನು ಮಾಡಿದರು. [illegible] ಸ್ವಭಾವವಾಗಿತ್ತು. [illegible] ಅವರು ಕಂಡರಿಯರು.

***

ಕಳೆದ ಶುಕ್ರವಾರ ಪುದುಕೋಟೆ ಸಂಸ್ಥಾನದ ಏಳನೇ ಪ್ರಜಾಪ್ರತಿನಿಧಿಸಭೆಯು ಪ್ರಾರಂಭವಾಯಿತು. ದಿವಾನರಾದ ದಿವಾನ್ ಬಹದೂರ್ ಎಸ್. ವೆಂಕಟರಾಮದಾಸ್ ನಾಯುಡುರವರು ಹಿಂದಿನ ವರುಷದ ದರಬಾರ್ ಮುಂತಾದ ವಿಚಾರಗಳನ್ನು ಕುರಿತು ಅಡ್ರೆಸ್ಸನ್ನು ಓದಿ ತಿಳಿಸಿದರು. ಪ್ರತಿನಿಧಿಗಳನ್ನು ಕುರಿತು ಹೇಳಿದ್ದೇನೆಂದರೆ—ಈ ಸಭೆಯಿಂದ ಬಹಳ ಪ್ರಯೋಜನವುಂಟಾಗುತ್ತಿರುವುದು. ಮೆಂಬರುಗಳು ಆಗಾಗ್ಗೆ ಸಭೆ ಸೇರಿ ಪ್ರಜೆಗಳಿಗೆ ಉಪಯುಕ್ತವಾದ ವಿಚಾರಗಳನ್ನು ಕುರಿತು ಚೆನ್ನಾಗಿ ಚರ್ಚೆಮಾಡಿ ತಮ್ಮ ಅಭಿಪ್ರಾಯಗಳನ್ನು ಗವರ್ನ್‌ಮೆಂಟಿಗೆ ತಿಳಿಸಬೇಕಾಗಿದೆ. ಇದರಿಂದ ಈ ಸಭೆಯ ಮೂಲಕ ಪ್ರಜೆಗಳಿಗೂ ಸರ್ಕಾರದವರಿಗೂ ಬಹಳ ಸಹಾಯವಾಗುವುದರಲ್ಲಿ ಸಂಶಯವಿಲ್ಲ ಎಂಬುದೇ.

***

ಪಟ್ನಾ ಪಟ್ಟಣದ "ಹಿತೈಷಿ" ಎಂಬ ಪತ್ರಿಕೆ ತಿಳಿಸುವುದೇನೆಂದರೆ—ಒಂದು ಹಸುವು ಒಂದು ಹುಲಿಯನ್ನು ಕೊಂದು ಹಾಕಿದೆ. ಹ್ಯಾಗೆಂದರೆ, ಹೊಲದಲ್ಲಿ ಹಸುಗಳ ಮಂದೆಯು ಮೇಯುತ್ತಿತ್ತು. ಅವುಗಳಲ್ಲೊಂದು ಹಸು ಮಂದೆಯನ್ನು ಬಿಟ್ಟು ದೂರವಾಗಿ ಹೋಗಿದ್ದಾಗ ಒಂದು ಹುಲಿ ಅದರ ಮೇಲೆ ಬಿದ್ದಿತು. ಆದರೆ ಹಸುವು ಓಡಿಹೋಗದೆ ರೋಷಪಟ್ಟು ತನ್ನ ಕೊಂಬುಗಳಿಂದ ಹುಲಿಯನ್ನು ತಿವಿಯಲಾರಂಭಿಸಿತು. ಹುಲಿಗೆ ಅದನ್ನು ಹಿಡಿಯುವುದು ಸಾಧ್ಯವಾಗಲಿಲ್ಲ. ಅಷ್ಟರಲ್ಲೇ ಮಂದೆಯಲ್ಲಿದ್ದ ಇನ್ನು ಕೆಲವು ಹಸುಗಳು ಹೋಗಿ ಆ ಹುಲಿಯನ್ನು ಸುತ್ತಿಕೊಂಡು ತಿವಿಯಲಾರಂಭಿಸಿದವು. ಸ್ವಲ್ಪ ಹೊತ್ತಿನೊಳಗಾಗಿ ಹುಲಿಗೆ ಸಾಕಾಗಿ ಬಿದ್ದುಬಿಟ್ಟಿತು. ಹಸುಗಳು ಚೆನ್ನಾಗಿ ತಿವಿದು ಹುಲಿಯನ್ನು ಕೊಂದೇ ಹಾಕಿದವು ಎಂಬುದೇ.

***

ಕಾಶ್ಮೀರ ಸಂಸ್ಥಾನದಲ್ಲಿ ಕಳೆದ ೧೯೦೭ನೇ ಇಸವಿಯಲ್ಲಿ ಉತ್ಪತ್ತಿಮಾಡಿದ ರೇಷ್ಮೆಯಿಂದ ಕಂಪನಿಯವರಿಗೆ ೬,೨೨,೧೦೦ ರೂಪಾಯಿ ಲಾಭ ಬಂತು; ಅಂದರೆ, ಅವರು ಹಾಕಿದ್ದ ಬಂಡವಾಳದ ಮೇಲೆ ಶೇಕಡಾ ೫೮ ರೂಪಾಯಿನಂತೆ ಬಡ್ಡಿ ಉತ್ಪತ್ತಿಯಾಗಿದೆ. ಆ ಕಂಪನಿಯ ಕಾರ್ಖಾನೆಗಳಲ್ಲಿ ೬೦,೦೦೦ ಜನರು ಕೆಲಸಮಾಡುತ್ತಾರೆ. ಇತ್ತಲಾಗಿ ಪೂಸಾ ಎಂಬ ಸ್ಥಳದಲ್ಲಿ ಸರ್ಕಾರದವರು ಪರೀಕ್ಷಾರ್ಥವಾಗಿ ಏರ್ಪಡಿಸಿರುವ ರೇಷ್ಮೆ ಕಾರ್ಖಾನೆಯಲ್ಲಿ ರೇಷ್ಮೆ ಹುಳುಗಳನ್ನು ಸಾಕುವುದಕ್ಕೆ ಉಪ್ಪುನೇರಳೇ ಸೊಪ್ಪಿಗೆ ಪ್ರತಿಯಾಗಿ ಹರಳು ಗಿಡದ ಸೊಪ್ಪನ್ನು ಹಾಕುತ್ತಿದಾರೆ. ಹುಳುಗಳು ಈ ಸೊಪ್ಪನ್ನು ತಿನ್ನುತ್ತವೆಂದೂ, ಇಂಥಾ ಹುಳುಗಳಿಂದ ತೆಗೆಯಲ್ಪಟ್ಟ ರೇಷ್ಮೆಗೆ ಕಲ್ಕತ್ತೆಯಲ್ಲಿ ಮಣಕ್ಕೆ ೮೦ ರೂಪಾಯಿನಂತೆ ಕ್ರಯ ಸಿಕ್ಕುತ್ತಿದೆ ಎಂದೂ ತಿಳಿಯುತ್ತದೆ.

***

ಕಲ್ಕತ್ತಾ ಪಟ್ಟಣದ ಹತ್ತಿರ ಯೋಧನಾಪನವೆಂಬ ಊರಿನಲ್ಲಿ ಒಬ್ಬ ಬಂಗಾಳಿಯು ಒಬ್ಬ ಹೆಂಗಸನ್ನು ಇಟ್ಟುಕೊಂಡಿದ್ದ. ಹೋದ ವರುಷ ಕಾರಣಾಂತರದಿಂದ ಅವಳನ್ನು ಕೊಂದುಹಾಕಿದನು. ಪೋಲೀಸಿನವರು ತನಿಖೆ ಮಾಡಿದ್ದರಲ್ಲಿ ಅವನೇ ಕೊಲೆ ಮಾಡಿದನೆಂಬುವುದಕ್ಕೆ ಸರಿಯಾದ ರುಜುವಾತುಗಳು ದೊರಕದೆ ಹೋದವು. ಆದ್ದರಿಂದ ಅವನನ್ನು ಬಿಟ್ಟುಬಿಟ್ಟರು. ಆ ಬಂಗಾಳಿಯು ಒಂದು ವರುಷದಿಂದಲೂ ಎಲ್ಲೆಲ್ಲೋ ಅಲೆದು ಮನಸ್ಸಮಾಧಾನಹೊಂದದೆ ಕಳೆದ ವಾರ ಪೋಲೀಸ್ ಕಮಿಷನರರ ಆಫೀಸಿಗೆ ಹೋಗಿ ತಾನೇ ಆ ಕೊಲೆಯನ್ನು ಮಾಡಿದನೆಂತಲೂ, ತನಗೆ ಆ ಲಾಗಾಯತು ಮನಸ್ಸು ನೆಮ್ಮದಿಯಾಗಿಲ್ಲವೆಂತಲೂ, ಅದಕ್ಕೆ ತಕ್ಕ ಶಿಕ್ಷೆಯನ್ನು ತನಗೆ ಮಾಡಿಸಬೇಕೆಂತಲೂ ಹೇಳಿಕೊಂಡನು. ಅದರ ಮೇಲೆ ಪೋಲೀಸಿನವರು ಅವನನ್ನು ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಕಳುಹಿಸಿದರು. ಈ ಮೊಕದ್ದಮೆಯು ಇನ್ನೂ ಇತ್ಯರ್ಥವಾಗಲಿಲ್ಲ.

***

ತಿನ್ನವೆಲ್ಲಿ ದಂಗೇ ಮೊಕದ್ದಮೆಯಲ್ಲಿ ಮೊದಲನೇ ಗುಂಪಿಗೆ ಸೇರಿದ ೨೬ ಜನ ಅಪರಾಧಿಗಳನ್ನು ಜಾಯಿಂಟ್ ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡಿ ಎಲ್ಲರಿಗೂ ಶಿಕ್ಷೆ ವಿಧಿಸಿದರು. ೨೦ ಮಂದಿಗೆ ತಲಾ ೧ ವರುಷ ಕಠಿಣ ಸಜ, ಸಜಾ ಅನುಭವಿಸಿದ ಮೇಲೆ ಮೂರು ವರುಷ ನೇಕಚಾಲಿಗೆ ಜಾಮೀನ್ ಕೊಡಬೇಕು; ೫ ಜನ ಅಪರಾಧಿಗಳಿಗೆ ಅದಕ್ಕಿಂತ ಕಮ್ಮಿ ಶಿಕ್ಷೆ ಮಾಡಲ್ಪಟ್ಟಿತು; ಒಬ್ಬ ಹುಡುಗನಿಗೆ ೮ ಛಡಿ ಏಟು ಕೊಡಿಸಿ ಬಿಟ್ಟುಬಿಟ್ಟರು. ಇತ್ತಲಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ೬೫ ಮಂದಿಯನ್ನು ತನಿಖೆ ಮಾಡಿ, ಈ ಪೈಕಿ ೧೩ ಜನರನ್ನು ಖುಲಾಸ್ ಮಾಡಿ, ಉಳಿದ ೫೨ ಜನರನ್ನು ಸೆಷನ್ಸ್ ದರ್ಯಾಫ್ತಿಗೆ ಗುರಿ ಮಾಡಿರುತ್ತಾರೆ. ಇವರಲ್ಲಿ ಗುರುನಾಥ ಅಯ್ಯರ್, ಲೋಕನಾಥ ಅಯ್ಯರ್, ಶಂಕರನಾರಾಯಣಪಿಳ್ಳೆ, ಕನಕಸಭಾಪತಿಪಿಳ್ಳೆ ಎಂಬೀ ಗಣ್ಯರಾದ ವಿದ್ಯಾವಂತರೂ ವಕೀಲರೂ ಸೇರಿರುವರು. ಅವರನ್ನೆಲ್ಲಾ ಪೋಲೀಸಿನವರು ಲಾಕಪ್ಪಿನಲ್ಲಿ ಇಟ್ಟಿದಾರೆ.

***

ಮದರಾಸ್ ಪಟ್ಟಣದ ಎಲಿಸ್ ರಸ್ತೆಯಲ್ಲಿ ಬಚ್ಚಲನ್ನು ಶುಚಿ ಮಾಡುವುದಕ್ಕೆ ಗುಡಿಸುವವನು ಒಳಕ್ಕೆ ಇಳಿದನು. ಅದರೊಳಗಿದ್ದ ವಿಷಕರವಾದ ದುರ್ಗಂಧವು ಅವನ ಉಸಿರನ್ನು ಕಟ್ಟಿ ಅಲ್ಲೇ ಕೊಂದುಬಿಟ್ಟಿತು. ಒಳಗಿಳಿದವನು ಏನಾದನೋ ಎಂದು ನೋಡುವುದಕ್ಕೆ ಇನ್ನೊಬ್ಬ ಗುಡಿಸುವವನು ಇಳಿದು ಹೋದನು. ಇವನೂ ಆ ದುರ್ಗಂಧ ಬಡಿದು ಮೃತಪಟ್ಟನು. ಅಷ್ಟರಲ್ಲೇ ಜನರ ಗುಂಪು ಸೇರಿತು. ಅವರಲ್ಲಿ ಒಬ್ಬನು ಧೈರ್ಯಮಾಡಿ ಅವರಿಬ್ಬರನ್ನೂ ನೋಡುತ್ತೇನೆಂದು ಇಳಿದು ಹೋದನು. ಆ ದುರ್ಗಂಧವು ಅವನನ್ನೂ ಕೊಂದುಬಿಟ್ಟಿತು. ಗುಡಿಸುವವರ ಮೇಲೆ ಉಸ್ತುವಾರಿ ಇದ್ದ ನೌಕರನು ಕೂಡಲೇ ಇತರ ಜನರನ್ನು ಕರೆದುತಂದು ನೋಡಿದಾಗ ಆ ಮೂರು ಜನರೂ ಸತ್ತು ಹೋಗಿದ್ದುದು ಗೊತ್ತಾಗಿ, ಶವಗಳನ್ನು ಹೊರಕ್ಕೆ ತೆಗಿಸಿದನು. ಇನ್ನು ಮುಂದೆ ಬಚ್ಚಲುಗಳ ಒಳಗೆ ಇಳಿಯತಕ್ಕವರು ಬಚ್ಚಲ ಬಾಗಿಲನ್ನು ತೆರೆದು ಸ್ವಲ್ಪ ಹೊತ್ತು ಗಾಳಿಯಾಡಿ ಒಳಗಿನ ದುರ್ಗಂಧ ಹೋದ ಮೇಲೆ ಇಳಿಯಬೇಕೆಂದು ಗೊತ್ತು ಮಾಡಿದಾರೆ.

***

ಮದರಾಸ್ ಪಟ್ಟಣದಲ್ಲಿ ಈಚೆಗೆ ಎರಡು ವಾರಗಳಿಂದ ಸ್ವದೇಶೀ ವಿಚಾರವಾದ ಉಪನ್ಯಾಸಗಳನ್ನು ಮಾಡಬೇಕೆಂದು ಕೆಲವರು ಪ್ರಯತ್ನಪಟ್ಟರು. ಪೋಲೀಸ್ ಕಮಿಷನರರು ಇಂಥಾ ಉಪನ್ಯಾಸಗಳಿಗೆ ಜನರ ಗುಂಪು ಸೇರಿ ಪ್ರಜಾನೆಮ್ಮದಿಗೆ ಭಂಗವುಂಟಾಗಬಹುದೆಂದು ತಿಳಿದು ಉಪನ್ಯಾಸ ನಡಿಯತಕ್ಕ ಸ್ಥಳಗಳಿಗೆ ಹೋಗಿ ಜನರ ಗುಂಪನ್ನು ಚದರಿಸಿ, ಉಪನ್ಯಾಸಕರಿಗೆ ಮ್ಯಾಜಿಸ್ಟ್ರೇಟರ ಕಡೆಯ ಹುಕುಮನ್ನು ತೋರಿಸಿದರು. ಇತ್ತಲಾಗಿ ಕೃಷ್ಣಸ್ವಾಮಿ ಶರ್ಮನೆಂಬೊಬ್ಬ ೧೯ ವರುಷದ ಯೌವನಸ್ಥನು ಸ್ವದೇಶೀಬೋಧಕನೆಂದು ಒಂದು ವರುಷದಿಂದ ಸಂಚಾರ ಹೊರಟು ಚಂಗಲ್ಪಟ್, ತಿರುಚನಾಪಲ್ಲಿ, ಕೋಯಮುತ್ತೂರು, ಕೋಯಮುತ್ತೂರು, ಈ ಮೊದಲಾದ ಜಿಲ್ಲೆಗಳಲ್ಲಿ ಉಪನ್ಯಾಸ ಮಾಡಿ, ಕಳೆದ ವಾರ ಮದರಾಸಿಗೆ ಬಂದು ಅಲ್ಲೂ ಉಪನ್ಯಾಸ ಮಾಡುತ್ತಿದ್ದನು. ಕರೂರಿನಲ್ಲಿ ಇವನು ರಾಜದ್ರೋಹಕರವಾದ ಉಪನ್ಯಾಸ ಮಾಡಿದನೆಂದು ಮೊಕದ್ದಮೆ ಹುಟ್ಟಿ, ಪೋಲೀಸಿನವರು ವಾರಂಟು ತಂದು ಅವನನ್ನು ಮದರಾಸಿನಲ್ಲಿ ದಸ್ತಗಿರಿ ಮಾಡಿ, ವಿಚಾರಣೆಗೋಸ್ಕರ ಕರೂರಿಗೆ ಕಳುಹಿಸಿರುತ್ತಾರೆ.

***

ತಿರುವಾಂಕೂರು (ಅನಂತಶಯನ) ಸಂಸ್ಥಾನದ ರಾಜಧಾನಿಯಲ್ಲಿ ಕೆಲವು ಕಾಲದಿಂದ ವರ್ತಕರಿಗೂ ಪೋಲೀಸಿನವರಿಗೂ ಮನಸ್ತಾಪಗಳುಂಟಾಗಿದ್ದವು. ಎರಡು ವಾರಗಳ ಹಿಂದೆ ಪೋಲೀಸಿನವರು ಜಟಕಿ ಗಾಡಿಯವರಿಂದ ತಮ್ಮ ರುಸುಂ ವಸೂಲಾಗಲಿಲ್ಲವೆಂದು ಗಾಡಿಯವರನ್ನು ಹೊಡೆದರಂತೆ. ಅದರ ಮೇಲೆ ವರ್ತಕರೆಲ್ಲಾ ಒಗ್ಗಟ್ಟಾಗಿ ಪೋಲೀಸಿನವರ ಮೇಲೆ ಜಿದ್ದುಕಟ್ಟಿ ಗುಂಪಾಗಿ ಹೊರಟು, ಪೋಲೀಸ್ ಸ್ಟೇಷನಿಗೆ ಬೆಂಕಿ ಹಾಕಿ ಸುಟ್ಟುಬಿಟ್ಟರು. ಅಲ್ಲಿಂದ ತಮ್ಮ ಅಹವಾಲನ್ನು ಮಹಾರಾಜರವರಿಗೆ ಖುದ್ದಾಗಿ ಅರಿಕೆ ಮಾಡಿಕೊಳ್ಳಬೇಕೆಂದು ಎಲ್ಲರೂ ಅರಮನೆಗೆ ಹೋದರು. ಅಷ್ಟು ಹೊತ್ತಿಗೆ ಸಿಪಾಯಿಗಳು ಬಂದು ಜನರ ಗುಂಪನ್ನು ಚದರಿಸಿಬಿಟ್ಟರು. ಮುಖಂಡರಾದ ಕೆಲವು ಜನರನ್ನು ವರ್ತಕರನ್ನೂ ಪೋಲೀಸ್ ಠಾಣಾದಲ್ಲಿ ಹಿಡಿದು ಇಟ್ಟುಕೊಂಡಿದಾರೆ. ವರ್ತಕರು ಮೂರು ದಿನಗಳ ತನಕ ಅಂಗಡಿಗಳನ್ನು ಮುಚ್ಚಿಬಿಟ್ಟಿದ್ದರು. ಕಡೆಗೆ ಅಧಿಕಾರಿಗಳು ಹೋಗಿ ಅವರಿಗೆ ಸಮಾಧಾನ ಹೇಳಿ ಅಂಗಡಿಗಳನ್ನು ತೆಗಿಸಿದರು. ಪೋಲೀಸಿನವರು ಹಿಂಸೆ ಮಾಡುತ್ತಾರೆಂತಲೂ ದುಂಡಾವರ್ತಿ ನಡಿಸುತ್ತಾರೆಂತಲೂ ಅನೇಕರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅರ್ಜಿಗಳನ್ನು ಹಾಕಿದಾರೆ. ಇದಲ್ಲದೆ ವಕೀಲರು ಏಕವಾಗಿ ಪೋಲೀಸಿನವರ ನಡವಳಿಕೆಯನ್ನು ಕುರಿತು ಗವರ್ನ್‌ಮೆಂಟಿಗೆ ವಿಜ್ಞಾಪನೆ ಮಾಡಿಕೊಳ್ಳಬೇಕೆಂತಲೂ, ಪೋಲೀಸಿನವರಿಂದ ಹಿಂಸೆ ಅಪಮಾನಪಟ್ಟ ಪ್ರಜೆಗಳ ಕಡೆ ನಿಂತು ರುಸುಂ ತೆಗದುಕೊಳ್ಳದೆ ವಾದಿಸುತ್ತೇವೆಂತಲೂ ಗೊತ್ತು ಮಾಡಿದಾರೆ.

ವಿದೇಶ ವರ್ತಮಾನಗಳು.

ಆಸ್ಟ್ರಿಯಾ ಹಂಗೆರಿ ರಾಜ್ಯದ ಚಕ್ರವರ್ತಿಯವರು ರಾಜಧಾನಿಯಾದ ವಿಯನ್ನಾ ಪಟ್ಟದಲ್ಲಿ ಕಳೆದವಾರ ಜೂಬಿಲಿ ಉತ್ಸವದ ಮೆರವಣಿಗೆ ಹೊರಟಿದ್ದರು. ಐದು ಲಕ್ಷ ಪ್ರಜೆಗಳು ರಾಜಬೀದಿಗಳಲ್ಲಿ ಸೇರಿ ಅಪೂರ್ವವಾದ ಆ ಉತ್ಸವವನ್ನು ನೋಡಿ ಆನಂದಪಟ್ಟರು.

***

ಫ್ರಾನ್ಸ್ ಸಂಸ್ಥಾನದ ಮುಖ್ಯಪಟ್ಟಣವಾದ ಪ್ಯಾರಿಸ್ಸಿನಲ್ಲಿ ನಾಯಿಗಳಿಗೆ ಸಣ್ಣಸಣ್ಣ ಕೆಲಸಗಳನ್ನು ಮಾಡುವಂತೆ ಕಲಿಸುವುದಕ್ಕೆ ಒಂದು ಪಾಠಶಾಲೆ ಇರುವುದು. ಅನೇಕ ದೊಡ್ಡಮನುಷ್ಯರು ತಮ್ಮ ನಾಯಿಗಳನ್ನು ಆ ಶಿಕ್ಷಾಶಾಲೆಗೆ ಕಳುಹಿಸಿ, ತರಬೇತು ಮಾಡಿಸುತ್ತಾರೆ.

***

ಕಳೆದ ವಾರ ಬಿರುಗಾಳಿಯೊಡನೆ ಕೂಡಿದ ಮಳೆಯು ಜಪಾನ್‌ನಲ್ಲಿ ಪ್ರಬಲವಾಗಿ ಕಾಗೊಷಿಮಾ ಎಂಬ ಪಟ್ಟಣದ ಸಮುದ್ರತೀರದಲ್ಲಿ ೫೦ ದೊಡ್ಡ ಅಂಬಿಗರ ದೋಣಿಗಳು ಬಡಿದಾಡಿ ಒಡೆದುಹೋದವೆಂತಲೂ, ಅವುಗಳಲ್ಲಿದ್ದ ೩೫೦ ಜನರು ಸಮುದ್ರದ ಪಾಲಾದರೆಂತಲೂ ತಂತೀ ವರ್ತಮಾನ ಬಂದಿದೆ.

***

ಪರ್ಷಿಯಾ ರಾಜ್ಯದಲ್ಲಿ ಪ್ರಜಾನೆಮ್ಮದಿಗೆ ಭಂಗವುಂಟಾಗಿದೆ. ಷಾ ಸುಲ್ತಾನರು ರಾಜಧಾನಿಯನ್ನು ಬಿಟ್ಟು ಹೊರಗೆ ಹೋಗಿ ಠಿಕಾಣಿ ಮಾಡಿಕೊಂಡಿದಾರೆ. ಪಾರ್ಲಿಮೆಂಟಿನವರು ಸುಲ್ತಾನರಿಂದ ರಿಯಾಯತಿಗಳನ್ನು ಕೇಳುತ್ತಿರುವರು. ಸೈನಿಕರೇ ಮೊದಲಾದ ನೌಕರರಿಗೆ ಸಂಬಳ ಪಾವತಿ ಆಗದೆ ಅಸಮಾಧಾನವುಂಟಾಗಿದೆ.

***

ಜಾಸೋವಿ ರಾಜ್ಯಕ್ಕೆ ಸೇರಿದ ಪರಧಾ ಎಂಬ ಸಣ್ಣ ಪಟ್ಟಣದಲ್ಲಿ ಒಂದು ಪ್ರಸಿದ್ಧವಾದ ಸರ್ಪಗಳ ದೇವಸ್ಥಾನವಿರುವುದು. ಅದನ್ನು ಬಹಳ ಉದ್ದವಾಗಿ ಕಟ್ಟಿದಾರೆ. ಅದರಲ್ಲಿ ಪೂಜಾರಿಗಳು ನಾನಾ ತರದ ೭,೦೦೦ ಸರ್ಪಗಳನ್ನು ಇಟ್ಟು ಸಾಕುವರು. ಭಕ್ತಾದಿಗಳು ತಂದು ಒಪ್ಪಿಸುವ ಸಣ್ಣ ಹಕ್ಕಿ ಪಕ್ಷಿಗಳನ್ನೂ ಕಪ್ಪೆಗಳನ್ನೂ ಆ ಸರ್ಪಗಳಿಗೆ ಆಹಾರವಾಗಿ ಹಾಕುತ್ತಾರೆ.

***

ಪೋರ್ಚುಗಲ್ ರಾಜ್ಯದ ಅನೇಕ ಡಿಸ್ಟ್ರಿಕ್ಟುಗಳಲ್ಲಿ ಮೂರು ತಿಂಗಳಿಂದ ಮಳೆಯಾಗಲಿಲ್ಲ. ಫಸಲುಗಳ ಧಾರಣೆ ಹೆಚ್ಚಿದೆ. ಆಹಾರ ಪದಾರ್ಥಗಳು ಸಿಕ್ಕುವುದು ಕಷ್ಟವಾಗಿದೆ. ರೊಟ್ಟಿಯ ಕ್ರಯ ಬಹಳವಾಗಿ ಹೆಚ್ಚಿರುವುದು. ತರಕಾರಿ ಸಿಕ್ಕುವುದೇ ದುರ್ಲಭ. ಗ್ರಾಮಾಂತರಗಳ ರಸ್ತೆಗಳ ಪಕ್ಕಗಳಲ್ಲಿ ರೈತರು ಹೊಟ್ಟೆಗಿಲ್ಲದೆ ಅಲೆಯುತ್ತಾರೆ. ಜೀವನಕ್ಕೆ ಬಹಳ ಕಷ್ಟವಾಗಿದೆ ಎಂದು ತಿಳಿಯುವುದು.

***

ಬೆಲ್ಜಿಯಂ ರಾಜ್ಯಕ್ಕೆ ಸೇರಿದ ಅಂಟ್ವರ್ಪ್ ಪಟ್ಟಣದಲ್ಲಿ ಒಬ್ಬ ಸ್ತ್ರೀಯು ಜನವರಿ ತಿಂಗಳಲ್ಲಿ ಮೂರು ಗಂಡು ಮಕ್ಕಳನ್ನೂ ಡಿಸೆಂಬರ್ ತಿಂಗಳಲ್ಲಿ ಮೂರು ಗಂಡು ಮಕ್ಕಳನ್ನೂ ಅಂತು ಒಂದೇ ವರುಷದಲ್ಲಿ ೬ ಮಕ್ಕಳನ್ನು ಹೆತ್ತಳು. ಸರ್ಕಾರದವರು ಈ ಆರು ಮಂದಿ ಅಣ್ಣತಮ್ಮಂದಿರನ್ನೂ ಸೈನ್ಯಕ್ಕೆ ಸೇರಿಸಿಕೊಳ್ಳಬೇಕೆಂದು ತನಿಖೆ ಮಾಡಿದಾಗ ಆ ಆಶ್ಚರ್ಯಕರವಾದ ವಿಷಯವು ಗೊತ್ತಾಯಿತು.

***

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ಫುಲ್‌ಮ್ಯಾನ್ ಎಂಬ ಗಾಡಿಗಳ ಕಂಪನಿಯವರು ತಮ್ಮ ಕಂಪನಿಯಲ್ಲಿ ನೌಕರಿ ಮಾಡುತ್ತಿರುವಂಥಾ ಜನರಲ್ಲಿ ವಿಶೇಷ ಸಭ್ಯರಾಗಿಯೂ ಮಾನಿಷ್ಠರಾಗಿಯೂ ಇರತಕ್ಕವರಿಗೆ ವರುಷಕ್ಕೊಂದಾವರ್ತಿ ಬಹುಮಾನಗಳನ್ನು ಕೊಡುವರು. ಕಳೆದ ವರುಷ ಈ ಕಂಪನಿಯವರು ಈ ಬಹುಮಾನಗಳಿಗೆ ೨೭ ಲಕ್ಷವೂ ೨೫ ಸಾವಿರ ರೂಪಾಯನ್ನು ವಿನಿಯೋಗಿಸಿದರು.

***

ಲಂಡನ್ ಪಟ್ಟಣದಲ್ಲಿ ಥೇಮ್ಸ್ ಎಂಬ ನದಿಯ ಕೆಳಗೆ ಭೂಮಿಯನ್ನು ಕೊರೆದು ಈ ದಡದಿಂದ ಆ ದಡಕ್ಕೆ ಭೂಮಿಯೊಳಗೇ ಗಾಡಿ ಮುಂತಾದ ವಾಹನಗಳ ಸಂಚಾರಕ್ಕೆ ಒಂದು ಸುರಂಗ ಮಾರ್ಗವನ್ನು ಸಿದ್ಧಮಾಡಿದರು. ಈ ಮಾರ್ಗವನ್ನು ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನೀಸಹಿತರಾಗಿ ದಯಮಾಡಿ ಪ್ರತಿಷ್ಠೆ ಮಾಡಿದರೆಂದೂ, ಆ ಮಾರ್ಗವನ್ನು ಕೊರೆದು ಸಿದ್ಧಪಡಿಸುವುದಕ್ಕೆ ಮೂರು ಕೋಟಿ ರೂಪಾಯಿ ಖರ್ಚಾಯಿತೆಂದೂ ತಿಳಿದು ಬಂದಿದೆ.

***

ಬೋಹೇಮಿಯಾ ಸಂಸ್ಥಾನದಲ್ಲಿ ಒಂದು ಇಲಾಖೆಯ ಮಂತ್ರಿ ಪದವಿಯಲ್ಲಿರುವ ಕೌಂಟ್ ವೆಕಲ್ ಕೌನಿಟ್ಸ್‌ರವರು ಕಳೆದ ತಿಂಗಳಲ್ಲಿ ತಮ್ಮ ೬೭ನೇ ಹುಟ್ಟಿದ ಹಬ್ಬದ ದಿನ ೨೫ ವರುಷದ ಸುಂದರಿಯಾದ ಒಬ್ಬ ರೈತ ಹುಡುಗಿಯನ್ನು ವರಿಸಿ ವಿವಾಹಮಾಡಿಕೊಂಡು, ಆ ಸಂತೋಷ ದಿನದ ಜ್ಞಾಪಕಾರ್ಥವಾಗಿ ಬರ್ನ್ ಪಟ್ಟಣದಲ್ಲಿದ್ದ ಅವರ ಬಾಬತು ೬,೨೦,೦೦೦ ರೂಪಾಯಿ ಬಾಳುವ ದಿವ್ಯವಾದ ಬಂಗಲೆಯನ್ನು ವಿದ್ಯಾಶಾಲೆಗಾಗಿ ಬಿಟ್ಟುಕೊಟ್ಟರು.

***

ವಿಲಾಯತಿಯಲ್ಲಿರುವ ಬಡಬಗ್ಗರ ಪೈಕಿ ೭೦ ವರುಷ ತುಂಬಿದವರಿಗೆ ಸರ್ಕಾರದವರು ಮುಪ್ಪಿನ ಪೆನ್ಷನ್ ಕೊಡಬೇಕೆಂದು ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುತ್ತಿದೆ. ಈ ಪೆನ್ಷನ್ ಕೊಡುವ ಏರ್ಪಾಡು ಬೆಲ್ಜಿಯಂ, ಜರ್ಮನಿ, ಹಾಲೆಂಡ್, ಫ್ರಾನ್ಸ್ ರಾಜ್ಯಗಳ ಏರ್ಪಾಡುಗಳಿಗಿಂತ ಉತ್ತಮವಾಗಿದೆ ಎಂತಲೂ, ಪ್ರಾರಂಭದಲ್ಲಿ ಸರ್ಕಾರಕ್ಕೆ ವರುಷಕ್ಕೆ ೧೯ ಲಕ್ಷ ರೂಪಾಯಿ ಖರ್ಚಾಗುವುದೆಂತಲೂ ಮಿ|| ಹಾಲ್ಡೇನ್ ಎಂಬ ಮೆಂಬರು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

***

ಲಂಡನ್ ಪಟ್ಟಣದಲ್ಲಿ ಎಡ್ವರ್ಡ್ ಪ್ರಭುಗಳ ಹೆಸರಿನ ಮೇಲೆ ಕಟ್ಟಿರುವ ಆಸ್ಪತ್ರೆಯ ಮೂಲಧನಕ್ಕೆ ಲಾರ್ಡ್ ಮೌಂಟ್ ಸ್ಟೀಫನ್ ಎಂಬ [illegible] ವರುಷಕ್ಕೆ ೧,೦೫,೦೦೦ ರೂಪಾಯಿ ಬಡ್ಡಿ ಉತ್ಪತ್ತಿ

ಯಾಗುವ ರೈಲ್ವೆ ಬಾಬತು ೫೧,೦೦೦ ಷೇರ್ ಪತ್ರಗಳನ್ನು ಧರ್ಮಾರ್ಥವಾಗಿ ಒಪ್ಪಿಸಿರುತ್ತಾನೆ. ಇದಲ್ಲದೆ ಈತನು ಆದೇ ಫಂಡಿಗೆ ಹಿಂದೆ ೧೯೦೭ ನೇ ಇಸವಿಯಲ್ಲಿ ೩೦ ಲಕ್ಷ ರೂಪಾಯನ್ನು, ೧೯೦೫ ರಲ್ಲಿ ೩೦ ಲಕ್ಷ ರೂಪಾಯನ್ನು ಧರ್ಮ ಮಾಡಿರುವನು

***

ಯೂರೋಪ್ ಖಂಡದಲ್ಲೆಲ್ಲಾ ಬರ್ಲಿನ್ ಎಂಬ ಪಟ್ಟಣವೇ ಬಹಳ ನಿಶ್ಶಬ್ದವಾದ್ದೆಂದು ಕಾಣುತ್ತದೆ. ರೈಲ್‌ಗಾಡಿಗಳು ಊರೊಳಗೆ ಶಿಳ್ಳು ಹಾಕಕೂಡದೆಂತಲೂ, ಇತರ ಗಾಡಿಗಳು ರಸ್ತೆಗಳಲ್ಲಿ ಶಬ್ದಮಾಡದಂತೆ ಸಂಚರಿಸಬೇಕೆಂತಲೂ, ಗೊತ್ತಾದ ಕಾಲ ವಿನಹ ಇತರ ಕಾಲಗಳಲ್ಲಿ ಪ್ರಜೆಗಳು ತಮ್ಮ ಮನೆಗಳೊಳಗೆ ಪಿಯಾನಾ ಮೊದಲಾದ ಸಂಗೀತಗಳನ್ನು ಕೂಡ ಬಾರಿಸಕೂಡದೆಂತಲೂ ವಿಧಿಸಿ, ಶಬ್ದಮಾಡಿದವರನ್ನು ಹಿಡಿದು ಜುಲ್ಮಾನೆ ವಿಧಿಸುವುದಾಗಿ ಕಾನೂನು ಮಾಡಿದ್ದಾರೆ

***

ವಿಲಾಯತಿಯಲ್ಲಿ ಪಾರ್ಲಿಮೆಂಟಿಗೆ ಮೆಂಬರುಗಳನ್ನು ಚುನಾಯಿಸುವ ಹಕ್ಕನ್ನು ಸ್ತ್ರೀಯರಿಗೂ ಕೊಡಬೇಕೆಂದು ಕೆಲವು ಕಾಲದಿಂದ ಹೋರಾಟ ನಡೆಯುತ್ತಿದೆ. ಕಸಬುಗಳನ್ನು ನಡಿಸುತ್ತಾ ಸ್ವತಂತ್ರ ಜೀವನವನ್ನು ಮಾಡಿಕೊಂಡಿರುವ ಸ್ತ್ರೀಯರೂ ದೊಡ್ಡ ಮನುಷ್ಯರ ಮನೆಗಳಲ್ಲಿರುವ ವಿದ್ಯಾವತಿಯರಾದ ಸ್ತ್ರೀಯರೂ ಸುಮಾರು ೧೦,೦೦೦ ಮಂದಿಯು ತಮ್ಮ ಸಭೆ ಸೇರಿ, ಕಳೆದ ವಾರ ಲಂಡನ್ ಪಟ್ಟಣದಲ್ಲಿ ಬಾವುಟಾ ಹಿಡಿದು ವಾದ್ಯಮಾಡಿಸಿಕೊಳ್ಳುತ್ತಾ ಮೆರವಣಿಗೆಯಾಗಿ ಹೋದರು.

***

ತುರ್ಕಿರಾಜ್ಯದ ಮುಖ್ಯಪಟ್ಟಣವಾದ ಕಾನ್‌ಸ್ಟಾಂಟಿನೋಪಲ್‌ನಲ್ಲಿ ವಾಸಮಾಡುತ್ತಿರುವ ಹಾಡಜಿ ರೋಷ್ ಎಂಬಾತನೇ ಪ್ರಪಂಚದಲ್ಲೆಲ್ಲಾ ಮುದುಕನಾದವನೆಂದು ತೋರುತ್ತದೆ. ಆತನಿಗೆ ೧೩೦ ವರುಷಗಳಾಗಿರುವವು ಈತನು ಕುದುರೆ ಮತ್ತು ಗಾಡಿಗಳಿಗೆ ಬೇಕಾದ ಪಂಥಾ ಜೇನು ಮುಂತಾದ್ದನ್ನು ಈಗಲೂ ಮಾಡುತ್ತಿದ್ದಾನೆ. ಇದುವರೆಗೆ ಅವನು ತನ್ನ ಮನೆಯನ್ನು ಬಿಟ್ಟು ಇತರ ಕಡೆಗಳಿಗೆ ಹೋದವನೇ ಅಲ್ಲವು. ಈತನ ತಂದೆಯು ೧೫೦ ವರುಷಗಳ ತನಕ ಬದುಕಿದ್ದನೆಂದು ಹೇಳುತ್ತಾರೆ.

***

ಸ್ವೀಡನ್ ರಾಜ್ಯಕ್ಕೆ ಸೇರಿದ ಆರ್ಸನ್ ಎಂಬ ಪಟ್ಟಣದಲ್ಲಿ ಪ್ರಜೆಗಳು ಸರ್ಕಾರಕ್ಕೆ ಯಾವ ತರದ ತೆರಿಗೆಯನ್ನೂ ಕೊಡುವುದಿಲ್ಲ. ರೈಲ್ ಗಾಡಿಗಳಲ್ಲಿ ಸಂಚಾರ ಮಾಡುವುದಕ್ಕೂ ಟೆಲಿಫೋನ್ ತಂತಿಗಳ ಮೂಲಕ ಸಂಭಾಷಣೆಮಾಡುವುದಕ್ಕೂ ಮಕ್ಕಳ ವಿದ್ಯಾಭ್ಯಾಸಕ್ಕೂ ಯಾವ ದ್ರವ್ಯವನ್ನೂ ಕೊಡಬೇಕಾದದ್ದಿಲ್ಲ. ಆ ಪಟ್ಟಣದಲ್ಲಿ ಬಹು ಬೆಲೆಯುಳ್ಳ ಗಿಡಮರಗಳು ಅಪಾರವಾಗಿ ಬೆಳೆದು, ಅವುಗಳ ವ್ಯಾಪಾರದಿಂದ ತುಂಬಾ ಹಣ ಉತ್ಪತ್ತಿಯಾಗುತ್ತಿರುವುದೇ ಆ ಸೌಲಭ್ಯಗಳಿಗೆ ಕಾರಣವೆಂದು ತಿಳಿದುಬಂದಿದೆ.

***

ಚೀನಾ ಚಕ್ರಾಧಿಪತ್ಯದಲ್ಲಿ ಮೂರನೇ ದರ್ಜೆಗೆ ಮೇಲ್ಪಟ್ಟ ಸಿವಿಲ್ ಮಿಲಿಟರಿ ಅಧಿಕಾರಿಗಳೆಲ್ಲಾ ಅಫೀಮು ಸೇವಿಸತಕ್ಕವರೇ ಅಲ್ಲವೇ ಎಂಬುದನ್ನು ಬರೆದು ಚಕ್ರವರ್ತಿಯವರಿಗೆ ತಿಳಿಸಬೇಕೆಂದು ಹುಕುಂ ಆಗಿದೆ ಇದುವರೆಗೆ ಆ ದುರಭ್ಯಾಸವನ್ನು ಬಿಡದೆ ಇದ್ದವರಿಗೆ ಇನ್ನೂ ಆರು ತಿಂಗಳ ವಾಯಿದೆ ಕೊಟ್ಟಿದೆ. ಅಲ್ಲಿಂದಾಚೆಗೂ ಅಫೀಮು ಸೇವನೆಯನ್ನು ವರ್ಜಮಾಡದೆ ಇರುವ ಅಧಿಕಾರಿಗಳನ್ನೆಲ್ಲಾ ಕೆಲಸದಿಂದ ವಜಾಮಾಡಿ, ಅವರ ಹೆಸರುಗಳನ್ನು ಸಾಮಾನ್ಯ ಪ್ರಜೆಗಳ ಪಟ್ಟಿಯಲ್ಲಿ ದಾಖಲ್ಮಾಡಬೇಕೆಂದು ಸೂಚಿಸಿರುವರು.

***

ಅಮೇರಿಕದಲ್ಲಿ ಸಂಯುಕ್ತ ಸಂಸ್ಥಾನಗಳ ಪ್ರಸಿಡೆಂಟರಾಗಿರುವ ರೂಸ್‌ವೆಲ್ಟ್‌ರವರು ಅವರ ಅಧಿಕಾರದ ಅವಧಿಯು ಪೂರೈಸುತ್ತಾ ಬಂದಿರುವುದನ್ನು ನೋಡಿ, ಮತ್ತೆ ಆ ಕೆಲಸವನ್ನು ವಹಿಸಿ ನಿರ್ವಹಿಸಲು ತಮಗೆ ಇಷ್ಟವಿಲ್ಲವೆಂದು ಹೇಳುತ್ತಾರೆ ಆದರೆ ಅಲ್ಲಿನ ಪ್ರಜೆಗಳೆಲ್ಲಾ ಇವರೇ ಆ ಅಧಿಕಾರವನ್ನು ವಹಿಸಬೇಕೆಂದು ಕೋರುತ್ತಲಿರುವರು. ಮಿ॥ ಟಾಫ್ಟ್ ಎಂಬ ದೊಡ್ಡಮನುಷ್ಯರು ಪ್ರಸಿಡೆಂಟ್ ಪದವಿಗೆ ನೇಮಿಸಲ್ಪಡಬೇಕೆಂದು ಸೂಚಿಸಲ್ಪಡುತ್ತಿದ್ದಾರೆ. ಪ್ರಜೆಗಳ ಚುನಾವಣೆಯಲ್ಲಿ ಯಾರಿಗೆ ಆ ಪದವಿ ದೊರಕುವುದೋ ಮುಂದೆ ತಿಳಿಯಬೇಕಾಗಿದೆ.

***

ಟ್ರಾನ್ಸ್‌ವಾಲ್ ಎಂಬ ಇಂಗ್ಲೀಷ್ ಸ್ವಾತಂತ್ರ್ಯದ ಸರ್ಕಾರದವರು ಇದುವರೆಗೆ ಅಲ್ಲಿದ್ದ ಚೀನಾದೇಶದ ಕೂಲಿ ೩೧,೦೫೩ ಮಂದಿಯನ್ನು ಅಲ್ಲಿಂದ ವಾಪಸು ಚೀನಾಕ್ಕೆ ಕಳುಹಿಸಿರುತ್ತಾರೆ ೯,೦೩೦ ಮಂದಿ ಹಿಂದುಸ್ಥಾನದ ಪ್ರಜೆಗಳು ಸರ್ಕಾರದವರ ಕಾನೂನಿನ ಪ್ರಕಾರ ತಮ್ಮ ಹೆಸರು ಮುಂತಾದ್ದನ್ನು ಬರೆಸಿ ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ ಅಲ್ಲಿ ಕೂಲಿ ಮುಂತಾದ ಕೆಲಸಗಳಿಗೆ ಸ್ವದೇಶಿಗಳೇ ಸಾಕಾದಷ್ಟು ಜನರು ಸಿಕ್ಕುತ್ತಾರೆಂತಲೂ, ಗಣಿಗಳ ಕೆಲಸಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತಿವೆ ಎಂತಲೂ ಲಾರ್ಡ್ ಸೆಲ್ಬೋರ್ನ್‌ರವರು ಪ್ರಿಟೋರಿಯಾ ಪಟ್ಟಣದ ಪಾರ್ಲಿಮೆಂಟಿನಲ್ಲಿ ಹೇಳಿದರು.

***

ಅಸ್ಕಟ್ ಎಂಬ ಪ್ರಸಿದ್ಧವಾದ ಕುದುರೆ ಜೂಜು ನಡೆಗಿದ ಮೇಲೆ ಎಡ್ವರ್ಡ್ ಮಹಾರಾಜಾ ಚಕ್ರವರ್ತಿಯವರು ಲಂಡನ್ ಪಟ್ಟಣದ ವಿಂಡ್ಸರ್ ಎಂಬ ರಾಜಭವನದಲ್ಲಿ ಬಹು ಶ್ರೇಷ್ಠವಾದ ಔತಣವನ್ನು ಮಾಡಿದರು. ಆ ಔತಣಕ್ಕೆ ಮಂತ್ರಿಗಳು, ಸೈನ್ಯಗಳ ಅಧಿಪತಿಗಳು, ಪಾರ್ಲಿಮೆಂಟ್ ಮೆಂಬರುಗಳು, ಮೇಲುದರ್ಜೆಯ ವೈದಿಕರು, ಎಲ್ಲಾ ಪಂಗಡಗಳ ಪ್ರತಿನಿಧಿಗಳು ಸುಮಾರು ೯,೦೦೦ ಮಂದಿ ಹೋಗಿದ್ದರು. ನೇಪಾಳದ ಮಂತ್ರಿಗಳೂ ಹಿಂದುಸ್ಥಾನದ ಕೆಲವು ರಾಜರುಗಳೂ ಬಂದಿರಾಗಿದ್ದರು. ಚಕ್ರವರ್ತಿಯವರು ಹಿಂದುಸ್ಥಾನದಿಂದ ತೆಗೆಸಿಕೊಂಡು ಹೋಗಿದ್ದ ದಿವ್ಯವಾದ ಡೇರಾದಲ್ಲಿ ಹಿಂದುಸ್ಥಾನದ ಅತಿಥಿಗಳಿಗೆ ದರ್ಶನವನ್ನು ಕೊಟ್ಟು ಎಲ್ಲರ ಸಂಗಡಲೂ ಬಹು ಪ್ರೀತಿಯಿಂದ ಸಂಭಾಷಣೆ ಮಾಡಿದರು.

ಮೈಸೂರು ಗೆಜೆಟ್ ಸಂಗ್ರಹ.

ಮಿ॥ ಕೆ ಎಸ್. ಚಂದ್ರಶೇಖರ ಅಯ್ಯರವರು ಜೂನ್ ೧ ರಲ್ಲಿ ರಜದಿಂದ ವಾಪಸು ಬಂದು ಗವರ್ನ್‌ಮೆಂಟ್ ರೆವಿನ್ಯೂ ಜನರಲ್ ಸೆಕ್ರೆಟರಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಆ॥ ಆ॥ ಸರ್ಜನ್ ಮಿ॥ ಡಿ ಎಂ ಜ್ಞಾನಪ್ರಿಯ ಪಿಳ್ಳೆಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ತುಂಕೂರು ಡೆಪ್ಯುಟಿ ಕಮಿಷನರ್ ಮಿ॥ ಕೆ ಎಸ್. ದೊರೆಸಾಮಿ ಅಯ್ಯರವರು ಜೂನ್ ೨ ರಲ್ಲಿ ರಜದಿಂದ ವಾಪಸು ಬಂದು ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ.

ಆ॥ ಕಂಟ್ರೋಲರ್ ಮಿ॥ ಬಿ. ಲಕ್ಷ್ಮೀನರಸಿಂಹಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಎಕ್ಸೈಸ್ ಕಮಿಷನರಾಗಿಯೂ, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್‌ರಾಗಿಯೂ ಕಂಪನಿಗಳ ರಿಜಿಸ್ಟ್ರಾರಾಗಿಯೂ, ಸ್ಟಾಂಪ್ ಕಮಿಷನರಾಗಿಯೂ ಇರುವ ಮಿ॥ ಎಚ್ ಎಚ್, ಸ್ಪಾರ್ಕ್‌ಸ್‌ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ಇಪ್ಪತ್ತೆಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿ॥ ಎಂ. ನಾರಾಯಣರಾಯರು ಅವರ ಕೆಲಸವನ್ನು ಬದಲಿ ನೋಡುವಂತೆ ನೇಮಿಸಲ್ಪಟ್ಟಿದ್ದಾರೆ

ಆಕ್ಟಿಂಗ್ ಆ॥ ಕಮಿಷನರ್ ಮಿ॥ ಎಂ. ಲಕ್ಷ್ಮಣ ಶಾಸ್ತ್ರಿಯವರು ಸಕಲೇಶಪುರದ ಸಬ್ ಡಿವಿಜನ್ ಛಾರ್ಜನ್ನು ಒಪ್ಪಿಸಿದ ಮೇಲೆ ಬೆಂಗಳೂರಿನ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸುವಂತೆ ವರ್ಗಮಾಡಲ್ಪಟ್ಟಿದ್ದಾರೆ

ಹೊಳೆನರಸೀಪುರದ ಅಮಲ್ದಾರ್ ಮಿ॥ ಎಸ್ ಕೃಷ್ಣಯ್ಯನವರು ರಜದ ಮೇಲಿರುವಾಗ್ಗೆ ಹಾಸನದ ಡೆಪ್ಯುಟಿ ಕಮಿಷನರ ಆಫೀಸ್ ಆಕ್ಟಿಂಗ್ ಇಂಗ್ಲೀಷ್ ಹೆಡ್ ಕ್ಲಾರ್ಕ್ ಎಂ. ನರಸಿಂಹಯ್ಯನವರು ಹೊಳೆನರಸೀಪುರದ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಆನರರಿ ಆ॥ ಸರ್ಜನ್ ಮಿ॥ ಡಿ ಎಂ ಜ್ಞಾನಪ್ರಿಯ ಪಿಳ್ಳೆಯವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗಮಾಡಿದೆ.

ಲೆಫ್ಟಿನೆಂಟ್ ಕರ್ನಲ್ ಜೆ॥ ಸ್ಮೈತ್ ಯವರು ಮೇಜರ್ ಎಚ್. ಇ. ಬ್ರೇಕ್ ಬ್ರಾಕ್‌ಮೆನ್ ಯವರಿಂದ ಜೂನ್ ತಾ ೫ ರಲ್ಲಿ ಸೀನಿಯರ್ ಸರ್ಜನ್, ಸ್ಯಾನಿಟರಿ ಕಮಿಷನರ ಮತ್ತು ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್‌ರ ಆಫೀಸುಗಳ ಛಾರ್ಜನ್ನು ವಹಿಸಿಕೊಂಡಿದ್ದಾರೆ.

ಮೈಸೂರು ಸರ್ಕಾರಿ ಹುಕುಮು.

ಇನಾಮತಿ ಕೆರೆಗಳೂ ಇನಾಂದಾರರ ಜವಾಬ್ದಾರಿಯೂ.

ಇನಾಂ ಗ್ರಾಮಗಳ ಕೆರೆಗಳನ್ನು ಇನಾಂದಾರರು ದುರಸ್ತು ಮಾಡದೆ ಅಸಡ್ಡೆ ಮಾಡುತ್ತಾ ಬಂದಿರುವುದರಿಂದ ಅವು ಹಾಳಾಗುತ್ತಾ ಬರುತ್ತಿವೆಯಾಗಿ ಇನಾಂ ಗ್ರಾಮಗಳಿಗೆ ನೀರಾವರಿ ಕಂದಾಯವನ್ನು ಹಾಕುವ ಪದ್ಧತಿಯನ್ನು ಪ್ರಚಾರ ಪಡಿಸಿ ತರಬೇಕೆಂತಲೂ ಅಂತಹ ಕೆರೆಗಳ ದುರಸ್ತನ್ನು ಸರ್ಕಾರದವರೇ ವಹಿಸಬೇಕೆಂತಲೂ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಪ್ರಾರ್ಥಿಸಿಕೊಂಡರು ಇನಾಂದಾರರು ತಮ್ಮ ಇನಾಂ ಗ್ರಾಮಗಳಲ್ಲಿ ಕೆರೆಗಳನ್ನು ಕ್ರಮವಾದ ಸ್ಥಿತಿಯಲ್ಲಿಟ್ಟಿರಬೇಕಾದದ್ದು ಅವರ ಕರ್ತವ್ಯವೆಂಬುದೂ ಅವಶ್ಯಕಬಿದ್ದಾಗ ಆ ಕರ್ತವ್ಯವನ್ನು ಅವರಿಂದ ನಿರ್ಬಂಧಮಾಡಿ ಮಾಡಿಸುವುದಕ್ಕೆ ಸರ್ಕಾರದವರಿಗೆ ಅಧಿಕಾರ ಉಂಟೆಂಬುದೂ ಬಹು ಕಾಲದಿಂದ ಸ್ಥಿರಪಟ್ಟ ಅಂಶವಾಗಿದೆ ಸುಮಾರು ೩೦ ವರುಷಗಳ ಹಿಂದೆ (೧೮೭೯ನೇ ಇಸವಿಯಲ್ಲಿ) ನೀರಾವರಿ ಕಾಮಗಾರಿಗಳಿಗೆ ಸಂಬಂಧಪಟ್ಟ ಅಂಶಗಳನ್ನು ಪರಿಶೀಲಿಸಿ ಅಭಿಪ್ರಾಯವನ್ನು ತಿಳಿಸಬೇಕೆಂದು ಒಂದು ಕಮಿಟಿಯನ್ನು ಛೀಫ್ ಕಮಿಷನರವರು ಏರ್ಪಾಟು ಮಾಡಿದರು ಸದರಿ ಕಮಿಟಿಯವರು ತಮ್ಮ ತೀರ್ಮಾನದಲ್ಲಿ ಬರೆದ ಅಭಿಪ್ರಾಯವೇನೆಂದರೆ— ಇನಾಂ ಕೆರೆಯು ಎಷ್ಟರಮಟ್ಟಿಗೆ ಒಳ್ಳೆ ಸ್ಥಿತಿಯಲ್ಲಿರಬೇಕೆಂದು ನಿಷ್ಕರ್ಷಿಸಲ್ಪಟ್ಟಿದೆಯೋ ಅಷ್ಟರ ಮಟ್ಟಿನ ಸ್ಥಿತಿಯಲ್ಲಿ ಇನಾಂದಾರನು ಅದನ್ನು ಇಟ್ಟಿರದೆ ತಪ್ಪಿದ ಪಕ್ಷದಲ್ಲಿ, ಅದನ್ನು ಅಷ್ಟರ ಸ್ಥಿತಿಗೆ ತಂದಿಡಬೇಕೆಂದು ಸರ್ಕಾರದವರು ಆತನಿಗೆ ಅಪ್ಪಣೆ ಮಾಡಬಹುದು ಆತನು ಹಾಗೆ ಮಾಡದೆ ಅಸಡ್ಡೆ ಮಾಡಿದ ಪಕ್ಷದಲ್ಲಿ ಸರ್ಕಾರದವರು ತಮ್ಮ ಖರ್ಚಿನಿಂದಲೇ ದುರಸ್ತು ಮಾಡಿಸಿ, ಸದರಿ ಖರ್ಚನ್ನು ಕಂದಾಯದ ಬಾಕಿಯಂತೆ ವಸೂಲ್ಮಾಡುವುದಕ್ಕೂ, ಅಥವಾ ಆ ಕೆರೆಯಿಂದ ಇತರ ಕೆರೆಗಳಿಗೆ ಅಪಾಯ ಸಂಭವಿಸದಂತೆ ಅದನ್ನು ಒಡೆಸಿಹಾಕುವುದಕ್ಕೂ ಅಧಿಕಾರವನ್ನು ಪಡೆದಿರುವರೆಂಬುದೇ. ಈಚೆಗೆ ಡಿಸ್ಟ್ರಿಕ್ಟ್ ಇರಿಗೇಷನ್ ಫಂಡಿನ ವಿನಿಯೋಗದ ವಿಚಾರವಾಗಿ ಡಿಸ್ಟ್ರಿಕ್ಟ್ ಕಮಿಟಿಯವರ ಸಹಾಯಕ್ಕೋಸ್ಕರ ವಿಧಿಸಲ್ಪಟ್ಟ ನಿಬಂಧನೆಗಳಲ್ಲಿ ಇನಾಂ ಮತ್ತು ಕಾಯಂಗುತ್ತಾ ಗ್ರಾಮಗಳ ಹಿಡುವಳಿದಾರರುಗಳು ತಮ್ಮ ಕೆರೆಗಳನ್ನು ಕ್ರಮವಾಗಿ ದುರಸ್ತು ಮಾಡಿಸಿಟ್ಟುಕೊಳ್ಳುವುದಕ್ಕಾಗಿ ಅವರು ಕೊಡುತ್ತಿರುವ ಪರಿಹಾರ ದ್ರವ್ಯಕ್ಕೆ ವಿಶೇಷವಾಗಿ ಮಿಕ್ಕಿಲಿಗನ್ನು ಕೊಡುವಂತೆ ನಿರ್ಧರಿಸಿರುತ್ತದೆ. ಇಷ್ಟೇ ಅಲ್ಲದೆ ಇನಾಂದಾರರು ಮಾಡಬೇಕಾದ ಕೆಲಸಗಳ ಅಂದಾಜು ಪಟ್ಟಿಗಳನ್ನು ತಯಾರುಮಾಡುವುದರಲ್ಲೂ, ಸದರಿ ಕೆರೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದರಲ್ಲೂ ಮೇಲ್ಕಂಡ ಫಂಡಿನ ಸಹಾಯದಿಂದ ಮೊಕರರ್ಮಾಡಲ್ಪಟ್ಟ ಇಲಾಖೆಯ ನೌಕರರೆಲ್ಲರೂ ಇನಾಂದಾರರಿಗೆ ಸಹಾಯಮಾಡಬೇಕೆಂದು ನಿರ್ಣಯಿಸಿದೆ ಇಷ್ಟು ಸೌಲಭ್ಯಗಳನ್ನು ಕಲ್ಪಿಸಿ ಕೊಟ್ಟರೂ ಕೂಡ ಜ್ಞಾಪನಾದರೊಬ್ಬ ಇನಾಂದಾರನು ತನ್ನ ಕರ್ತವ್ಯವನ್ನು ನಡಿಸದೆ ತಪ್ಪಿದಲ್ಲಿ, ಡಿಸ್ಟ್ರಿಕ್ಟ್ ಕಮಿಟಿಯವರು ಅವಶ್ಯಕವಾದ ಕಾಮಗಾರಿಯನ್ನು ಮಾಡಿಸಿ, ಅದಕ್ಕೆ ತಗಲುವ ಖರ್ಚನ್ನೆಲ್ಲಾ ಸದರಿ ಇನಾಂದಾರನಿಂದ ಕಂದಾಯದ ಬಾಕಿಯಂತೆ ವಸೂಲ್ಮಾಡಲು ಅಧಿಕಾರವುಳ್ಳವರಾಗಿದ್ದಾರೆ. ಹಳೇ ಇನಾಂ ಜಮೀನುಗಳು ಸರ್ಕಾರೀ ಜಲಾಶಯದಿಂದ ಯಾವ ಪ್ರಯೋಜನವನ್ನೂ ಪಡೆಯದೆ ಇರುವಾಗ ನೀರಾವರಿ ಕಂದಾಯಕ್ಕನುಗುಣವಾದ ತೆರಿಗೆಯನ್ನು ವಿಧಿಸುವುದರಿಂದ ತೊಂದರೆಯುಂಟೆಂದು ಕೆಲವು ಇನಾಂದಾರರು ಕೇಳಿಕೊಳ್ಳಲಾಗಿ ಸರ್ಕಾರದವರು ಹುಕುಂ ಕೊಟ್ಟು ಸದರೀ ತೆರಿಗೆಯನ್ನು ವಜಾಮಾಡಿದ್ದಲ್ಲದೆ ಇರಿಗೇಷನ್ ಫಂಡಿನ ವಿನಿಯೋಗದ ವಿಚಾರವಾದ ವಿಧಿಗಳಲ್ಲಿ ೬ನೇ ವಿಧಿಯನ್ನು ತದನುಸಾರವಾಗಿ ತಿದ್ದುಪಾಟು ಮಾಡಿದರು. ಪರಂತು ಇದರಿಂದ ಇನಾಂದಾರರು ತಮ್ಮ ಗ್ರಾಮಗಳ ಕೆರೆಗಳ ದುರಸ್ತು ಕೆಲಸವನ್ನು ಕಾಲಕಾಲಕ್ಕೆ ನಡಿಸಬೇಕೆಂಬ ಜವಾಬ್ದಾರಿಯೇನೋ ತಪ್ಪಲಿಲ್ಲ. ಅಲ್ಲದೆ ಹಾಗೆ ಮಾಡದೆ ತಪ್ಪಿದಲ್ಲಿ ಸರ್ಕಾರದವರು ತಾವೇ ದುರಸ್ತು ಮಾಡಿಸಿ, ಖರ್ಚನ್ನು ಇನಾಂದಾರರಿಂದ ವಸೂಲ್ಮಾಡುವುದಕ್ಕೂ ಅಧಿಕಾರವಿದ್ದೇ ಇತ್ತು.

ಈ ಕಾರಣಗಳಿಂದ ಇನಾಂದಾರರು ತಮ್ಮ ಕೆರೆಗಳನ್ನು ಅಸಡ್ಡೆ ಮಾಡಿಬಿಟ್ಟು, ಅವುಗಳಿಂದ ನೀರನ್ನು ಪಡೆಯುವ ರೈತಾಪಿ ಜನರಿಗೆ ನಷ್ಟವನ್ನುಂಟುಮಾಡುವುದನ್ನು ತಪ್ಪಿಸುವುದಕ್ಕೆ ಈಗ ಚಾಲ್ತಿಯಲ್ಲಿರುವ ನಿಬಂಧನೆಗಳಲ್ಲೇ ಸಾಕಾದಷ್ಟು ಷರತ್ತುಗಳು ಇರುವವೆಂದು ಸರ್ಕಾರದವರು ಭಾವಿಸುತ್ತಾರೆ ಇನಾಂ ಕೆರೆಗಳನ್ನು ಒಳ್ಳೇ ಸ್ಥಿತಿಗೆ ತರುವುದಕ್ಕೆ ಅನುಕೂಲವಾಗಿರುವಂತೆ ಸದರಿ ನಿಬಂಧನೆಗಳ ಷರತ್ತುಗಳನ್ನು ಜಾರಿಯಲ್ಲಿರುವುದಕ್ಕೆ ತಕ್ಕ ಕ್ರಮವನ್ನು ಜರುಗಿಸದೆ ಹೋದಲ್ಲಿ ಆ ತಪ್ಪು ಸ್ಥಳೀಯ ಅಧಿಕಾರಿಗಳದೇ ಆಗಿರುತ್ತದೆ. ಸದರೀ ಕೆರೆಗಳು ಎಲ್ಲೆಲ್ಲಿಯೂ ಹಾಳಾಗುತ್ತಾ ಇವೆ. ಎಂದು ಪ್ರತಿ ಒಂದು ಡಿಸ್ಟ್ರಿಕ್ಟಿನಿಂದಲೂ ಫಿರ್ಯಾದು ಬಂದಿರುವುದರಿಂದ ಮೇಲ್ಕಂಡ ನಿಬಂಧನೆಗಳನ್ನು ಇನ್ನು ಮುಂದೆ ಸರಿಯಾಗಿ ಜಾರಿಯಲ್ಲಿರತಕ್ಕದ್ದು ಅವಶ್ಯಕವೆಂಬುವುದಕ್ಕೆ ಡೆಪ್ಯುಟಿ ಕಮಿಷನರುಗಳೂ ಪಬ್ಲಿಕ್‌ವರ್ಕ್ಸ್ ಇಲಾಖೆಯವರೂ ಗಮನಿಸಿಕೊಡತಕ್ಕದ್ದು ಅವಶ್ಯವೆಂದು ಸರ್ಕಾರದವರು ಭಾವಿಸುತ್ತಾರೆ

ಹುಪ್ಪೆ ಜಮೀನು ಸಾಗುವಳಿ ಕ್ರಮ.

ಮದರಾಸ್ ವ್ಯವಸಾಯ ಇಲಾಖೆಯ ಡೆಪ್ಯುಟಿ ಡೈರೆಕ್ಟರು ಮಿ॥ ಬೆಂಜ್ಮಿನ್‌ರವರು ಮೇಲ್ಕಂಡ ವಿಷಯದಲ್ಲಿ ಬರೆದಿರುವುದೇನೆಂದರೆ— ಈ ಆಧಿಪತ್ಯದಲ್ಲಿ ನಡೆಯುವ ಹುಪ್ಪೆ ಸಾಗುವಳಿ ಕ್ರಮವನ್ನು ವಿಚಾರದಿಂದ ಇನ್ನೂ ಉತ್ತಮ ಪಡಿಸಲು ವಿಶೇಷ ಅವಕಾಶವಿದೆ ಈ ಆಧಿಪತ್ಯದ ಉತ್ತರ ಭಾಗದಲ್ಲಿ —ಅಂದರೆ ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು, ಗುಂಟೂರು ಮತ್ತು ನೆಲ್ಲೂರು ಜಿಲ್ಲೆಗಳಲ್ಲಿ ಉಪಯೋಗದಲ್ಲಿರುವ ವ್ಯವಸಾಯದ ಪದ್ಧತಿಗಳು ಹುಪ್ಪೆ ಸಾಗುವಳಿಗೆ ಬಹಳ ಅನುಕೂಲವಾಗಿವೆ ಆದರೆ ದಕ್ಷಿಣ ಪ್ರಾಂತ್ಯಗಳಲ್ಲಿ ನೇಗಿಲು, ಕುಂಟೆ, ಇವೆರಡು ವಿನಹ ಮತ್ತಾವ ಉಪಕರಣಗಳು ಸಾಮಾನ್ಯವಾಗಿ ಉಪಯೋಗದಲ್ಲಿಲ್ಲ.

ಹುಪ್ಪೆ ಸಾಗುವಳಿಯಲ್ಲಿ ನ್ಯಾಯಾಗಿ ಜಮೀನಿನಲ್ಲಿಯ ತನುವು ಆರಿ ಹೋಗದಂತೆ ನೋಡಿಕೊಳ್ಳಬೇಕು. ಈ ಆಧಿಪತ್ಯದ ಈಗಿನ ಸ್ಥಿತಿಯಲ್ಲಿ ಜಾಣತನದಿಂದ ಉಳುಮೆ ಕೆಲಸವನ್ನು ಮಾಡುವುದರಲ್ಲಿ ಎಷ್ಟು ಮಟ್ಟಿಗೆ ಈ ಅನುಕೂಲ್ಯವನ್ನು ಕಲ್ಪಿಸಬಹುದೆಂಬ ಅಂಶವು ಆಲೋಚಿಸತಕ್ಕದ್ದಾಗಿರುತ್ತದೆ ಜಮೀನಿನ ತನುವು ಅಂದರೆ ಭೂಮಿಯ ಮೇಲೆ ಬಿದ್ದ ಮಳೆ ನೀರೆಲ್ಲಾ ಬಸಿದು ಹೋದಮೇಲೆ ಜಮೀನಿನಲ್ಲಿ ಉಳಿಯುವ ನೀರು, ಬೆಳೆಯಲ್ಲಿಯ ಸಸ್ಯಾಹಾರದ ಪದಾರ್ಥಗಳನ್ನು ಕರಗಿಸಿ ಗಿಡಗಳ ಬೇರುಗಳಿಗೆ ಒದಗಿಸಿಕೊಡುವುದರಿಂದ ಅತ್ಯವಶ್ಯಕವಾಗಿರುತ್ತದೆ ಇದಕ್ಕೆ ಹೆಚ್ಚಾಗಿ ಜಮೀನಿನ ಮೇಲೆ ನಿಲ್ಲುವ ನೀರು ಭೂಮಿಯಲ್ಲಿ ಗಾಳಿಯಾಡುವುದನ್ನು ತಡೆಯುತ್ತದ್ದರಿಂದ ಗಿಡಗಳು ಸರಿಯಾಗಿ ಬೆಳೆಯುವುದಕ್ಕೆ ಅವಕಾಶ ಕೊಡುವುದಿಲ್ಲ. ಭೂಮಿಯಲ್ಲಿನ ತನುವಿಗೆ ಮಳೆ ಭೂಮಿಯೊಳಗಿನ ನೀರು ಮತ್ತು ಅಂತರಿಕ್ಷದಲ್ಲಿನ ತಂಪು, ಈ ಮೂರೂ ಕಾರಣಭೂತಗಳಾಗಿರುತ್ತವೆ. ಈ ಪೈಕಿ ಮಳೆಯೇ ಮುಖ್ಯವಾದ ಆಧಾರವು ಆದರೆ ಮಳೆಯ ನೀರು ಉಪಯೋಗವಾಗುವ ರೀತಿಯಲ್ಲಿ ಭೂಮಿಯನ್ನು ಹಸನು ಮಾಡಿಕೊಳ್ಳುವುದು ಅತ್ಯವಶ್ಯಕವು ಹೇಗೆಂದರೆ—(೧) ಹೆಚ್ಚು ಕಟ್ಟಿ ಗಟ್ಟಿಯಾಗಿರುವ ಭೂಮಿಯು ಬಹಳ ನೀರನ್ನು ಹೀರುವುದಿಲ್ಲವಾದಕಾರಣ ಮಳೆನೀರು ಭೂಮಿಯಲ್ಲಿ ಇಳಿಯುವಂತೆ ಜಮೀನನ್ನು ಉತ್ತು ಮೇಲ್ಭಾಗದ ಮಣ್ಣನ್ನು ಸಡಿಲಿಸಬೇಕು (೨) ಜಮೀನಿನ ಕೆಳಭಾಗವು ಮೇಲ್ಭಾಗದಲ್ಲಿ ಬೀಳುವ ಹೆಚ್ಚು ನೀರು ಭೂಮಿಯೊಳಗೆ ಇಳಿದು ಬಸಿದು ಹೋಗುವುದಕ್ಕೆ ಅವಕಾಶ ಕೊಡುತ್ತದಲ್ಲದೆ ಜಮೀನನ್ನು ಸರಿಯಾಗಿ ಸಾಗುವಳಿ ಮಾಡಿದ್ದೇ ಆದರೆ ಮೇಲ್ಭಾಗವು ಆರಿ ಹೋಗದ ರೀತಿ ತನುವನ್ನು ಕಾಪಾಡುತ್ತದೆ (೩) ಭೂಮಿಯು ಮಾಗಿ ಮಂಡಲದಲ್ಲಿರುವ ಹನಿಯು ರೂಪವಾದ ನೀರನ್ನು ಆಕರ್ಷಿಸುತ್ತದಲ್ಲದೆ, ಚೆನ್ನಾಗಿ ಉಳುಮೆಯನ್ನು ಮಾಡಿದ್ದೇ ಆದರೆ ಈ ರೀತಿ ಆಕರ್ಷಿಸಲ್ಪಟ್ಟ ತನುವನ್ನು ಆರಿ ಹೋಗದ ರೀತಿ ಇಟ್ಟುಕೊಳ್ಳುತ್ತದೆ. ಮದರಾಸ್ ಆಧಿಪತ್ಯದ ಕೆಲವು ಭಾಗಗಳಲ್ಲಿ ವಿಶೇಷವಾಗಿ ಬೀಳುವ ಹಿಮವು ಹುಪ್ಪೆ ಜಮೀನುಗಳಿಗೆ ಬಹಳ ಅನುಕೂಲವಾಗಿರುವುದಕ್ಕೆ ಇದೇ ಕಾರಣ. ಭೂಮಿಯ ಮೇಲ್ಭಾಗವನ್ನು ಉತ್ತು ಮಣ್ಣು ಸಡಲಿಸುವುದರ ಮೂಲಕ ಇದರಲ್ಲಿರುವ ತಂಪು ಆರಿ ಹೋಗದೇ ನಿಲ್ಲುವುದಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಗಟ್ಟಿಯಾದ ನೆಲವನ್ನು ಆಳವಾಗಿ ಉಳುವುದರಿಂದ ಮಣ್ಣು ಬತ್ತಿಸಿಕೊಂಡು ಭೂಮಿಯೊಳಗೆಲ್ಲಾ ತನುವು ಒಂದೇ ಸಮನಾಗಿ ವ್ಯಾಪಿಸುವುದಕ್ಕೆ ಅನುಕೂಲಿಸುತ್ತದೆ. ಮೇಲೆ ಹೇಳಿದ ಅಂಶಗಳು ಮದರಾಸ್ ಆಧಿಪತ್ಯದ ಹುಪ್ಪೆ ಸಾಗುವಳಿಯಲ್ಲಿ ಎಷ್ಟರಮಟ್ಟಿಗೆ ಆಚರಣೆಯಲ್ಲಿ ತರಲ್ಪಟ್ಟಿವೆ ಎಂಬುದು ವಿವರಿಸಲ್ಪಡುವುದು.

ಈ ಅಧಿಕಸ್ಯವನ್ನು ಎರಡು ವಿಸ್ತೀರ್ಣಗಳಾಗಿ ವಿಂಗಡಿಸಬಹುದು. ಒಂದು ವಿಸ್ತೀರ್ಣದಲ್ಲಿ ನೇಗಿಲುಗಳಲ್ಲದೆ ಅಲ್ಲದೆ ಎತ್ತುಗಳನ್ನು ಕಟ್ಟಿ ಇತರ ವ್ಯವಸಾಯದ ಮುಟ್ಟುಗಳಿಂದಲೂ ಕೆಲಸ ಮಾಡುತ್ತಾರೆ. ಮತ್ತೊಂದು ವಿಸ್ತೀರ್ಣದಲ್ಲಿ ಇಂಥಾ ವ್ಯವಸಾಯದ ಮುಟ್ಟುಗಳ ಬದಲಿ ನೇಗಿಲು ಒಂದೇ ಉಪಯೋಗಿಸಲ್ಪಡುತ್ತೆ. ಮೊದಲು ಹೇಳಿದ ವಿಸ್ತೀರ್ಣದಲ್ಲಿ ಬಳ್ಳಾರಿ, ಕಡಪ, ಅನಂತಪುರ, ಕರ್ನೂಲು, ಗುಂಟೂರು ಮತ್ತು ನೆಲ್ಲೂರಿನ ಒಂದು ಭಾಗದ ಕಪ್ಪು ನೆಲಗಳು, ಈ ಪ್ರಾಂತ್ಯಗಳ ಮತ್ತು ಕೃಷ್ಣಾ ಡಿಸ್ಟ್ರಿಕ್ಟಿನ ಬಿಡಿನೆಲಗಳೂ ಸಹ ಸೇರುತ್ತವೆ. ಈ ಪ್ರಾಂತ್ಯದ ಕಪ್ಪು ನೆಲಗಳಲ್ಲಿ ಒಂದು ಭಾರವಾದ ಮತ್ತೊಂದು ಹಗುರವಾದ ಮರದ ನೇಗಿಲುಗಳು ಉಪಯೋಗದಲ್ಲಿವೆ. ಈಚೆಗೆ ಭಾರವಾದ ಮರದ ನೇಗಿಲಿಗೆ ಬದಲಾಗಿ ಭಾರವಾದ ಕಬ್ಬಿಣದ ನೇಗಿಲನ್ನು ಉಪಯೋಗಿಸುತ್ತಾರೆ. ಈ ಭಾರವಾದ ನೇಗಿಲನ್ನು ೫—೬ ವರುಷಕ್ಕೊಮ್ಮೆ ಉಪಯೋಗಿಸುತ್ತಾರೆ. ಮತ್ತು ಆ ಕೂಡಲೇ ಅತಿ ಭಾರದ "ಬರ್ರಾಗಂಟಿಕಾ" ಎಂಬ ಕುಂಟೆಯನ್ನು ಎತ್ತುಗಳು ಕಟ್ಟಿ ಹೊಡೆಯುವರು. ನೇಗಿಲು ಎಷ್ಟು ಆಳವಾಗಿ ಇಳಿಯುತ್ತವೆಯೋ ಅಷ್ಟು ಆಳವಾಗಿ ಈ ಕುಂಟೆಯೂ ಇಳಿಯುತ್ತದೆ. ಹೀಗೆ ಕುಂಟೆ ಹೊಡೆಯುವುದರ ಪ್ರಯೋಜನವೇನೂ ಗೊತ್ತಾಗುವುದಿಲ್ಲ. ನೇಗಿಲು ಭೂಮಿಯಲ್ಲಿ ಒಂದು ಅಡಿ ಆಳವಾಗಿ ಹರಿಯುತ್ತದೆ, ಉಳುಮೆ ಕೆಲಸವನ್ನು ಬೇಸಿಗೆ ಕಾಲದಲ್ಲಿ ಮಾಡುತ್ತಾರಾದ್ದರಿಂದ ಮಣ್ಣು ಗಡ್ಡೆ ಗಡ್ಡೆಗಳಾಗಿ ಎದ್ದು ಗಾಳಿಯಾಡುವುದಕ್ಕೆ ಅವಕಾಶವಾಗುತ್ತದೆ. ಇತರ ಸ್ಥಳಗಳಲ್ಲಿ ಹಗುರವಾದ ನಾಡು ನೇಗಿಲಿನಿಂದಾಗಲೀ, ಗುಂಟಕವೆಂಬ ಎತ್ತು ಹೊಡೆಯುವ ಕುಂಟೆಯಿಂದಲಾಗಲೀ ಭೂಮಿಯನ್ನು ಹಸನು ಮಾಡುವುದುಂಟು

ಮೈಸೂರು ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವು.

ಈ ಸಲ ನವರಾತ್ರಿಯಲ್ಲಿ ನಡೆಯುವುದು.

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜಾ ಗವರ್ನಮೆಂಟಿನವರ ಅಪ್ಪಣೆಯನ್ನು ಅನುಸರಿಸಿ ಪ್ರದರ್ಶನದ ಕಮಿಟಿಯವರು ಮೈಸೂರು ಪಟ್ಟಣದಲ್ಲಿ ೧೯೦೮ನೇ ಇಸವಿ ಸೆಪ್ಟಂಬರ್ ತಿಂಗಳಲ್ಲಿ ನಡೆಯುವ ನವರಾತ್ರಿ ಉತ್ಸವದ ಕಾಲದಲ್ಲಿ ಕೈಗಾರಿಕೆಯ, ವ್ಯವಸಾಯದ ಮತ್ತು ದನಗಳ ಪ್ರದರ್ಶನವನ್ನು ನಡಿಸತಕ್ಕ ಬಗ್ಗೆ ಮುಂದೆ ವಿವರಿಸುವ ವಿಷಯಗಳನ್ನು ಸಂಸ್ಥಾನದ ಪ್ರಜೆಗಳ ತಿಳುವಳಿಕೆಗೋಸ್ಕರ ಪ್ರಕಟಿಸಿರುತ್ತಾರೆ. ಅವರ ಮುಖ್ಯಭಾಗಗಳೇನೆಂದರೆ—

ಪ್ರದರ್ಶನದ ಪ್ರಾರಂಭ — ಈ ವರುಷ ಪ್ರದರ್ಶನವು ಸೆಪ್ಟಂಬರ್ ತಾ. ೩೦ನೇ ಬುಧವಾರ ಪ್ರಾರಂಭವಾಗಿ ಅಕ್ಟೋಬರ್ ತಾ. ೧೪ನೇ ಬುಧವಾರ ಮುಕ್ತಾಯವಾಗುವುದು. ಗೋವುಗಳ ಪ್ರದರ್ಶನವು ಅಕ್ಟೋಬರ್ ತಾ. ೬ನೇ ಮಂಗಳವಾರ ಪ್ರಾರಂಭವಾಗಿ ತಾ. ೮ನೇ ಗುರುವಾರ ಮುಕ್ತಾಯವಾಗುತ್ತದೆ. ಮೈಸೂರು ಸೀಮೆಯ ಉತ್ತಮ ತರಹ ದನಗಳನ್ನು ಖರೀದಿಗೆ ತೆಗೆದುಕೊಳ್ಳಲು ಅಪೇಕ್ಷಿಸುವ ಜನಗಳಿಗೆ ಈ ಪ್ರದರ್ಶನ ಸಮಯವು ಅನುಕೂಲವಾದದ್ದೆಂದು ಕಳೆದ ವರುಷದ ಅನುಭವದಿಂದ ತಿಳಿದುಬಂದಿದೆ

ಪ್ರದರ್ಶನದ ಉದ್ದೇಶ — ಈ ಪ್ರದರ್ಶನದ ಮೂಲಕ ರೈತರು, ಶಿಲ್ಪಿಗಳು, ಮುಂತಾದ ಪ್ರಜೆಗಳ ಎದುರಿಗೆ ವಿಧವಿಧವಾದ ಪದಾರ್ಥಗಳನ್ನೂ, ಯಂತ್ರಗಳನ್ನೂ, ಮುಟ್ಟುಗಳನ್ನೂ ಪ್ರದರ್ಶಿಸಿಟ್ಟು, ಅವುಗಳ ಪ್ರಯೋಜನವನ್ನೂ ಅವುಗಳ ತಯಾರಿಯನ್ನೂ ತಿಳಿಸಿ, ನೋಟಕರನ್ನು ವ್ಯಾಪಾರಸ್ಥರನ್ನಾಗಿ ಮಾಡಬೇಕೆಂದು ಕಮಿಟಿಯವರು ಅಭಿಪ್ರಾಯಪಡುತ್ತಾರೆ. ಪ್ರದರ್ಶನದಲ್ಲಿ ಸಾಮಾನುಗಳ ಒಂದೊಂದೇ ನಮೂನೆಯನ್ನು ಇಟ್ಟರೆ ಅವುಗಳ ರಚನೆ ಉಪಯೋಗ ಮುಂತಾದ್ದನ್ನಾಗಿ ತಿಳಿಯಲಾರದೆಂದೂ ಜನರಂಜಕವಾಗಿರಲಾರದೆಂದೂ ಕಮಿಟಿಯವರು ತಿಳಿದು ಈ ವರುಷ ಪ್ರದರ್ಶನದಲ್ಲಿ ಬಿಕರಿಗೂ ಸಾಮಾನುಗಳನ್ನು ಇರಿಸಬೇಕೆಂದು ನಿಶ್ಚಯ ಮಾಡಿದ್ದಾರೆ

ಬಿಕರಿಯ ಸಾಮಾನು ಮತ್ತು ಅಂಗಡಿಗಳು —ಬಿಕರಿಯಾಗುವುದಕ್ಕೆ ಕಳುಹಿಸುವಂಥಾ ಸಾಮಾನುಗಳು ಬೇರೆ ಕೊಠಡಿಗಳಲ್ಲಿ ಪ್ರದರ್ಶಕರ ಅಥವಾ ಏಜಂಟರ ಸುಪರ್ದಿನಲ್ಲಿ ಇಡಲ್ಪಡುತ್ತವೆ. ಬಹುಮಾನಕ್ಕಾಗಿ ಕಳುಹಿಸಿದ ಸಾಮಾನುಗಳನ್ನು ಕೂಡ ಮಾರುವುದಕ್ಕೆ ಆಕ್ಷೇಪಣೆ ಇಲ್ಲ. ಆದರೆ ಅವುಗಳನ್ನು ಪ್ರದರ್ಶನ ಮುಗಿಯುವ ತನಕ ಸಾಗಿಸಕೂಡದು. ಮಾರಾಟಕ್ಕಾಗಿಯೇ ಕಳುಹಿಸುವ ಸಾಮಾನುಗಳನ್ನು ಮಾರಾಟವಾದ ಕೂಡಲೇ ಅಪ್ಪಣೆಯ ಚೀಟಿ ಪಡೆದು ತೆಗೆದುಕೊಂಡು ಹೋಗಬಹುದು

ಉಪನ್ಯಾಸಗಳು ಮತ್ತು ನಿದರ್ಶನಗಳು —ಇಂಗ್ಲೀಷು ಮತ್ತು ಕನ್ನಡ ಭಾಷೆಗಳಲ್ಲಿ ಹೆಚ್ಚು ಯೋಗ್ಯತಾ ಸಿದ್ಧಿಯನ್ನು ಪಡೆದಿರುವಂಥಾ ಜನರಿಂದ ವ್ಯವಸಾಯ, ಕೈಗಾರಿಕೆಯ ಯಂತ್ರಸಾಧನಗಳ ಉಪಯೋಗ, ಬೆಳೆ, ತಯಾರಿ, ರಿಪೇರಿ, ಈ ವಿಷಯಗಳನ್ನು ಕುರಿತು ಉಪನ್ಯಾಸಗಳು ನಡೆಯುವಂತೆ ಏರ್ಪಾಡಾಗುವುದು. ಉಳಿದ ಮತ್ತು ನೇಯ್ಗೆಯ ಕಸಬುಗಳಲ್ಲಿ ಒಂದು ಫೋಟೋಗ್ರಾಫಿಯ ಪ್ರದರ್ಶನವೂ ನಡೆಸಲಾಗುವುದು

ಬಹುಮಾನದ ಬಗ್ಗೆ ನಿಬಂಧನೆಗಳು —ಕೈಗಾರಿಕೆ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ನಾನಾ ಬಾಬಿನಲ್ಲಿಯೂ ಬಹುಮಾನಗಳನ್ನೂ ಪದಕಗಳನ್ನೂ ಕೊಡತಕ್ಕದಾಗಿ ಯೋಚಿಸಿದರೂ ಇಷ್ಟಪಟ್ಟು ಯಾವುದಾದರೂ ಕೊಡತಕ್ಕದಾದರೆ ಕಮಿಟಿಯವರು ಅದನ್ನು ಸಂತೋಷಪೂರ್ವಕವಾಗಿ ಅಂಗೀಕರಿಸುತ್ತಾರೆ

ಇತರ ಕಡೆಗಳ ವಸ್ತುಗಳು —ಕಮಿಟಿಯವರು ಈ ಸಂಸ್ಥಾನದ ಸಮಸ್ತ ಡಿಸ್ಟ್ರಿಕ್ಟುಗಳಿಂದಲೂ ಮತ್ತು ಹೊರಗಿನಿಂದಲೂ ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಿಕೊಡಬೇಕೆಂದು ಕೋರುತ್ತಾರೆ. ಅಲ್ಲದೆ ಇಂಡಿಯಾ, ಬರ್ಮಾ ಮತ್ತು ಸಿಲೋನ್ (ಲಂಕಾ) ಇಲ್ಲಿರುವ ಎಲ್ಲಾ ಸರ್ಕಾರದ ವ್ಯವಸಾಯ ಇಲಾಖೆಗಳೂ ಪ್ರಜಾ ಸಂಘಗಳೂ ಈ ಪ್ರದರ್ಶನಕ್ಕೆ ವಸ್ತುಗಳನ್ನೂ ಸಲಕರಣೆಗಳನ್ನೂ ಕಳುಹಿಸಿ ಪ್ರೋತ್ಸಾಹಪಡಿಸಬೇಕೆಂದು ಕಮಿಟಿಯವರು ಕೋರುತ್ತಾರೆ.

ನೋಟಕ್ಕೆ ರುಸುಂ —ಪ್ರದರ್ಶನವನ್ನು ನೋಡತಕ್ಕವರು ತಲಾ ೨ ಆಣೆಯಂತೆ ರುಸುಂ ಕೊಡಬೇಕು. ಮೂರು ವರ್ಷದೊಳಗಿರುವ ಮಕ್ಕಳಿಗೆ ರುಸುಂ ಕೊಡಬೇಕಾದದ್ದಿಲ್ಲ..

ಪ್ರದರ್ಶಕರಿಂದ ಅರ್ಜಿ.—ಪ್ರದರ್ಶಕರು ಪದಾರ್ಥಗಳನ್ನು ಕಮಿಟಿ ಸೆಕ್ರೆಟರಿಯವರಿಗೆ ಆಗಸ್ಟು ತಾ. ೧ ರೊಳಗಾಗಿ ತಲುಪುವಂತೆ ರವಾನಿಸಬೇಕು.

ಪ್ರದರ್ಶನಕ್ಕೆ ತೆರಿಗೆ.—ಪ್ರದರ್ಶನದಲ್ಲಿ ವಸ್ತುಗಳನ್ನು ಪ್ರದರ್ಶಿಸುವುದಕ್ಕಾಗಲಿ, ರಿಜಿಸ್ಟ್ರು ಮಾಡುವುದಕ್ಕಾಗಲಿ, ಅಥವಾ ಪ್ರದರ್ಶಿಸುವ ಕಟ್ಟಡದಲ್ಲಿ ಸ್ಥಳಕ್ಕಾಗಲಿ ತೆರಿಗೆಗಳೇನೂ ಹಾಕುವುದಿಲ್ಲ.

ಸಾಮಾನುಗಳ ಖರ್ಚು.—ಪ್ರದರ್ಶನದ ಸ್ಥಳಕ್ಕೆ ಸಾಮಾನುಗಳನ್ನು ರವಾನಿಸುವ ಛಾರ್ಜುಗಳಿಗೆ ಪ್ರದರ್ಶಕರೇ ಗುರಿಯಾಗಬೇಕು. ಛಾರ್ಜು ಪಾವತಿಮಾಡದೆ ಕಳುಹಿಸುವ ಸಾಮಾನನ್ನು ಕಮಿಟಿಯವರು ಅಂಗೀಕರಿಸುವುದಿಲ್ಲ.

ಬಹುಮಾನಕೊಡುವುದು —ಸನ್ ೧೯೦೬ ಮತ್ತು ೧೯೦೭ ನೇ ಇಸವಿಗಳ ಮೈಸೂರು ಪ್ರದರ್ಶನಗಳಲ್ಲಿ ಬಹುಮಾನಗಳನ್ನಾಗಲೀ ಪದಕಗಳನ್ನಾಗಲೀ ಪಡೆದಿರುವಂಥಾ ವಸ್ತುಗಳಿಗೆ ಈ ವರುಷ ಬಹುಮಾನ ಸಿಕ್ಕಲಾರದು. ಆದರೆ ಅಂಥವುಗಳನ್ನು ಪ್ರದರ್ಶಿಸುವುದಕ್ಕೂ ಬಿಕರಿಮಾಡುವುದಕ್ಕೂ ತರಲು ಅಭ್ಯಂತರವೇನೂ ಇಲ್ಲ.

ಅಪ್ಪಿರು ದಿನ — ಈ ವರುಷ ಸೆಪ್ಟಂಬರ್ ತಾ. ೧೦ ರಿಂದ ತಾ. ೨೩ ರೊಳಗೆ ಮೈಸೂರು ಪಟ್ಟಣದಲ್ಲಿ ಸೆಕ್ರೆಟರಿಯವರಿಗೆ ತಲುಪುವಂತೆ ಸಾಮಾನುಗಳನ್ನು ಕಳುಹಿಸಬೇಕು. ಅನಂತರ ಬರುವ ಸಾಮಾನುಗಳನ್ನು ಕಮಿಟಿಯವರ ಅಪ್ಪಣೆ ಪಡೆದು ಪ್ರದರ್ಶಿಸಬಹುದು. ಆದರೆ ಇವುಗಳಿಗೆ ಬಹುಮಾನಕೊಡುವುದಿಲ್ಲ. ಕಾಯಿ, ತರಕಾರಿ, ಹಣ್ಣು, ಬೆಣ್ಣೆ ಮುಂತಾದ ಬೇಗ ಕೆಡುವ ಪದಾರ್ಥಗಳನ್ನು ಸೆಪ್ಟಂಬರ್ ತಾ. ೨೯ ನೇ ಸಾಯಂಕಾಲ ೬ ಗಂಟೆ ತನಕ ಅಂಗೀಕರಿಸುತ್ತಾರೆ

ರುಸುಂ ಇಲ್ಲದೆ ಬಿಡುವುದು —ಮೈಸೂರು ಸಂಸ್ಥಾನದ ಅಥವಾ ಇತರ ದೇಶದ ರೈತರಾಗಲೀ ಅಥವಾ ಶಿಲ್ಪಿಗಳಾಗಲೀ ಬಡವರಾಗಿದ್ದು ರುಸುಂ ಕೊಟ್ಟು ಪ್ರದರ್ಶನಶಾಲೆಗೆ ಹೋಗುವುದಕ್ಕೆ ಅನುಕೂಲವಿಲ್ಲವಿದ್ದರೆ ಆಯಾ ತಾಲ್ಲೂಕು ಅಧಿಕಾರಿಗಳಿಂದ ಸರ್ಟಿಫಿಕೇಟು ತಂದಲ್ಲಿ ಅಂಥವರನ್ನು ಮುಫತ್ತಾಗಿ ನೋಡಲು ಬಿಡಲಾಗುವುದು. ಮತ್ತು ಸಾಮಾನುಗಳ ಮಾಲೀಕರೇ ಅವುಗಳನ್ನು ಪ್ರದರ್ಶಿಸುವ ಸಂದರ್ಭದಲ್ಲಿ ಅಂಥವರಿಗೂ ಮಾಫಿ ಟಿಕೆಟುಗಳು ದೊರೆಯುವುವು.

ಕಮಿಷನ್.—ಪ್ರದರ್ಶನಶಾಲೆಯಲ್ಲಿ ಮಾರಾಟವಾದ ಎಲ್ಲಾ ಸಾಮಾನುಗಳ ಬೆಲೆಯ ಮೇಲೆ ಕಮಿಟಿಯವರು ರೂಪಾಯಿಗೆ ಒಂದು ಆಣೆಯಂತೆ ಕಮಿಷನ್ ತೆಗೆದುಕೊಳ್ಳುವರು

ನಿರಾಕರಿಸುವ ವಸ್ತುಗಳು —ಚಿತ್ರಕೆಲಸ, ಹೊಲಿಗೆ, ಕಸೂತಿ ಮುಂತಾದ ಕುಶಲಕೆಲಸಗಳಿಗೆ ಸಂಬಂಧಪಟ್ಟ, ವಿಶೇಷ ಕೌಶಲ್ಯವನ್ನು ತೋರ್ಪಡಿಸುವ ವಸ್ತುಗಳನ್ನಾಗಲಿ, ಪೂರ್ವಕಾಲದ ನಾಗರೀಕತೆಯನ್ನು ತೋರಿಸುವಂಥಾ ವಸ್ತುಗಳನ್ನಾಗಲಿ ಪ್ರದರ್ಶನಕ್ಕೆ ಎರವಲಾಗಿ ಕಳುಹಿಸಬೇಕೆಂದು ಅಪೇಕ್ಷಿಸುವವರು ವಸ್ತು ಅಭಿಪ್ರಾಯವನ್ನು ಸೆಕ್ರೆಟರಿ ಅಥವಾ ಕಮಿಟಿಯವರಿಗೆ ತಿಳಿಸಿದಲ್ಲಿ ಅಂಥವುಗಳನ್ನು ಅಂಗೀಕರಿಸಿ ಪ್ರದರ್ಶಿಸುವುದಕ್ಕೆ ಏರ್ಪಾಡು ಮಾಡಲ್ಪಡುವುದು.

ಸರ್ಕಾರಿ ಇಲಾಖೆಗಳ ಪ್ರದರ್ಶನಗಳು —ಸರ್ಕಾರಿ ಇಲಾಖೆಗಳಿಂದ ಕಳುಹಿಸಲ್ಪಡುವ ವಸ್ತುಗಳಿಗೆ ಅವರು ರೂಢಿಗಳಿಗೆ ಹಾಗೆ ಬಹುಮಾನವಾಗಲಿ ಪದಕಗಳಾಗಲಿ ಕೊಡುವುದಿಲ್ಲ ಆದರೆ ಅವು ಪ್ರಶಂಸಾ ಕಾಗದ ಬಂದಲ್ಲಿ ಯೋಗ್ಯತಾಪತ್ರಗಳು ಕೊಡಲ್ಪಡುವುವು ಕೈಗಾರಿಕಾ ಪಾಠಶಾಲೆಗಳ ಸರ್ಕಾರಿ ಉದ್ಯೋಗಸ್ಥರಿಂದಲಾಗಲಿ ವಿದ್ಯಾರ್ಥಿಗಳಿಂದಲಾಗಲಿ ತಯಾರಾದಲ್ಪಟ್ಟ ವಸ್ತುಗಳಿಗೆ ಇತರ ವಸ್ತುಗಳಂತೆ ಬಹುಮಾನಗಳೂ ಪದಕಗಳೂ ಕೊಡಲ್ಪಡುವುವು

ಬಹುಮಾನಗಳ ವಿನಿಯೋಗ —ಪ್ರದರ್ಶನವು ಮುಕ್ತಾಯವಾದನಂತರ ಬಹುಮಾನಗಳೂ ಮತ್ತು ಪದಕಗಳೂ ಕೊಡಲ್ಪಡುವುವು. ಈ ವರುಷ ಅಕ್ಟೋಬರ್ ೧೫ ನೇ ತಾರೀಖು ಅಥವಾ ಆ ಸುಮಾರಿನಲ್ಲಿ ಬಹುಮಾನ ಕೊಡಲಾಗುವುದು

ಕಾಗದಗಳು —ಪ್ರದರ್ಶನಕ್ಕೆ ಸಂಬಂಧಪಟ್ಟ ಪದಾರ್ಥಗಳ ಪಟ್ಟಿ ಮುಂತಾದ ಕಾಗದಗಳನ್ನು ಮೈಸೂರು ಪ್ರದರ್ಶನದ ಕಮಿಟಿಯ ಸೆಕ್ರೆಟರಿಯವರಿಗೆ ಸೆಪ್ಟಂಬರ್ ೩೦ ನೇ ತಾ. ಪರ್ಯಂತರ ಅರ್ಜಿ ಬರೆದು ತರಿಸಿಕೊಳ್ಳಬಹುದು ಮೈಸೂರಿಗೂ ಕಳುಹಿಸತಕ್ಕದ್ದು

ತಾಲ್ಲೂಕು ವರ್ತಮಾನಗಳು.

ಮಂಡ್ಯ.—ಈಚೆಗೆ ಒಂದು ವಾರದಿಂದ ಇಲ್ಲಿ ಮಳೆ ಎನ್ನುವದೇ ಇಲ್ಲ. ಗಾಳಿ ಬಲವಾಗಿದೆ. ಬಿಸಿಲು ಕಮ್ಮಿಯಾಗಿದೆ. ರೈತರು ತಮ್ಮ ಹೊಲದಲ್ಲಿ ರಾಗಿ, ಜೋಳ ಮುಂತಾದ ಬೀಜಗಳನ್ನು ಬಿತ್ತಿದಾರೆ. ಧಾರಣೆವಾಸಿಗಳೆಲ್ಲಾ ಕ್ಷೇಮವಾಗಿಯೇ ಇರುತ್ತವೆ —ಇಲ್ಲಿನ ಮಿಡ್ಲ ಇಂಗ್ಲಿಷ್ ಸ್ಕೂಲಿನಲ್ಲಿ ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ವಿದ್ಯಾವರ್ಧಕ ಸಂಘವು ಸ್ಕೂಲ್ ಹೆಡ್ ಮಾಸ್ಟರವರಿಂದ ಕಳೆದ ವರುಷ ಸ್ಥಾಪಿಸಲ್ಪಟ್ಟಿತು. ಈ ಸಂಘದ ವಾರ್ಷಿಕೋತ್ಸವವು ಕಳೆದ ಸೋಮವಾರ ಸಾಯಂಕಾಲ ನಾನಾ ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಈ ಸಭೆಯಲ್ಲಿ ಗ॥ ಕನ್ನಡ ಸ್ಕೂಲ್ ಹೆಡ್ ಮಾಸ್ಟರವರು ಅಗ್ರಾಸನವನ್ನು ವಹಿಸಿದ್ದರು. ಈ ಸ್ಥಳದಲ್ಲಿ ಎಲ್ಲಾ ವರ್ತಕಮಂಡಲಿಯವರೂ ಸರ್ಕಾರದ ಉದ್ಯೋಗಸ್ಥರೂ ಬಹಳವಾಗಿ ಸಂಘಕ್ಕೆ ಬಂದಿದ್ದರು. ಆ ಸಮಯದಲ್ಲಿ ದೇವರಿಗೆ ಬಾಲಕರಿಂದ ಸ್ತೋತ್ರವನ್ನು ಪಾಡಿಸಿ ಹೆಡ್ ಮಾಸ್ಟರಿಂದ ಸಂಘದ ರಿಪೋರ್ಟು ಓದಲಾಯಿತು ತರುವಾಯ ಬಾಲಕರಿಂದ ಕನ್ನಡ ಸಂಭಾಷಣೆಯು ಎದುರುಬದುರಿಗೆ ನಡೆಯಿತು. ಗ್ರಾಮೋಫೋನ್ ಯಂತ್ರ ಗಾನವು ಮಿ॥ ಪ್ರೊಫೆಸರ್ ಕೃಷ್ಣಯ್ಯಂಗಾರ್ಯ ರವರಿಂದ ತೋರಿಸಲ್ಪಟ್ಟಿತು. ಅಧ್ಯಕ್ಷರು ವಿದ್ಯಾರ್ಥಿಗಳಿಗೆ ಬುದ್ಧಿವಾದವನ್ನು ಹಳಸಿದ ಮೇಲೆ ಸಭೆಯಲ್ಲಿ ಹಾಜರಾಗಿದ್ದ ಮಹನೀಯರಿಗೆ ಪುಷ್ಪ ತಾಂಬೂಲಾದಿಗಳನ್ನು ಹಂಚಿದರು. ಸಭೆಯು ಮುಕ್ತಾಯವಾಯಿತು.

ಹೊಳೆನರಸೀಪುರ.—ಈ ಪ್ರಾಂತ್ಯ ಏಪ್ರೀಲ್ ತಾ. ೧೮ ರ ಲಾಗಾಯ್ತು ಜೂನ್ ೩ ರವರೆಗೆ ಸುತರಾಂ ಮಳೆ ಇಲ್ಲವಾಗಿ ಈ ಪಟ್ಟಣವು ಮುಂಗಾರು ಪೈರು ಇಲ್ಲದಂತಾಗಿದೆ. ಈಚೆಗೆ ೧೫ ದಿವಸಗಳಿಂದ ಸ್ವಲ್ಪ ಸೋನೆ ಆಗುತ್ತಿದೆ. ಜನಗಳ ಧಾರಣೆಗಳಂತೂ ಬಡಬಗ್ಗರನ್ನು ಬಹಳವಾಗಿ ಕದರಿಸುತ್ತಿವೆ. ಅಲ್ಲದೆ ಕಾಲರಾ ಉಪದ್ರವು ಈ ಊರಿನಲ್ಲಿ ಎರಡು ತಿಂಗಳಿನಿಂದಲೂ ಇದ್ದುಕೊಂಡು, ಸುಮಾರು ೫೦—೬೦ ಜನಗಳವರೆಗೆ ಈ ಉಪದ್ರದಲ್ಲಿ ಕಾಲವಾದರು. ಈಚೆಗೆ ಈ ಊರು ಈ ರೋಗಕ್ಕೆ ತೌರುಮನೆ ಎಂದು ಖಂಡಿತವಾಗಿ ಹೇಳಬಹುದು. ಈ ಗ್ರಾಮದ ಮ್ಯುನಿಸಿಪಾಲಿಟಿ ವಿಚಾರವಂತೂ ಹೇಳತೀರದಷ್ಟು ದುಃಖಕರವಾಗಿದೆ. ಕೋಟೆಯು ನಾಲ್ಕು ಬೀದಿ ಪೇಟೆಯು ಹೈರೋಡು ವಿನಾ ಇವುಗಳ ಹಿಂಭಾಗದಲ್ಲಿರುವ ಸಣ್ಣ ಸಣ್ಣ ರಸ್ತೆಗಳಲ್ಲಿ ಚಿಕ್ಕ ಚಿಕ್ಕ ಗಲ್ಲಿಗಳಲ್ಲಿರುವ ಕೊಳಕು ಅಷ್ಟಿಷ್ಟೆಂದು ಹೇಳಲಾಗದು. ಆ ಸ್ಥಳಗಳಲ್ಲಿರುವ ಚರಂಡಿಗಳಂತೂ ಮುಚ್ಚಿಹೋಗಿರುವವು, ಬಿದ್ದ ನೀರು ಅಲ್ಲೇ ಇಂಗುವುದು. ಇದರಿಂದ ಬಡಿಯುವ ನಾತವು ಹೇಳತೀರದ್ದಾಗಿದೆ. ಹೀಗಿರುತ್ತಾ ಆ ಸ್ಥಳಗಳಲ್ಲಿ ವಾಸಿಸುವ ಜನಗಳ ಆರೋಗ್ಯವು ಎಷ್ಟರಮಟ್ಟಿನದೋ ಈ ವಿಚಾರವು ಎಂಥಹ ಚಿಕ್ಕಮಕ್ಕಳಿಗಾದರೂ ತಿಳಿದೀತು. ಅಲ್ಲದೆ ಕತ್ತೆಯು ಮತ್ತು ಹಂದಿಗಳ ಸಂಚಾರ ಕಾಟವಂತೂ ಬಹಳವಾಗಿ ಊರಿನ ಯಾವಭಾಗದಲ್ಲಿ ಯಾವಕಾಲದಲ್ಲಿ ಎಲ್ಲಿ ನೋಡಿದರೂ ಅವುಗಳ ಸಂಚಾರವು ಹೇರಳವಾಗಿರುತ್ತದೆ. ಇದೇ ತಿಂಗಳು ತಾ. ೧೩ ನೇ ಶನಿವಾರ ರಾತ್ರಿ ಭಜನೆ ಮಾಡಿಕೊಂಡು ಕೋಟೆಯು ಉತ್ತರಭಾಗದ ಬೀದಿಯಲ್ಲಿ ಬರುವಾಗ್ಗೆ ಮಿ॥ ಪ್ಲೀಡರ್ ಗರುಡಾಚಾರ್ಯರ ಮನೆಯಿಂದ ಒಂದು ಸಣ್ಣ ಹೆಣ್ಣು ಮಗುವು ದೀಪಸ್ತಂಭಕ್ಕೆ ಎಣ್ಣೆ ಹಾಕಲಿಕ್ಕೆ ಬರುವಾಗ್ಗೆ ೩—೪ ಕತ್ತೆಗಳು ನುಗ್ಗಿ ಮಗುವು ನೆಲಕಪ್ಪೆಯೇ ಬಿದ್ದುಕೊಂಡು, ಸ್ವಲ್ಪ ನೋವಿನಿಂದ ಅಳಲಾರಂಭಿಸಿತು. ಭಜನೆಯವರು ಮಗುವನ್ನು ಸಮಾಧಾನ ಮಾಡಿ ಮನೆಗೆ ಕಳುಹಿಸಿದರು. ಇದೆಲ್ಲಾ ಮ್ಯುನಿಸಿಪಾಲಿಟಿಯವರ ದೃಷ್ಟಿಗೆ ಕಾಣುವದಿಲ್ಲವೋ ಅಥವಾ ಕಂಡೂ ಕಾಣದಂತಾಗಿರುವರೋ ಎಂದು ಜನಗಳು ಗುಣುಗುಟ್ಟಿಕೊಳ್ಳುತ್ತಾರೆ. ಈ ಮುಂತಾದ ಕಾರಣಗಳಿಂದ ಗ್ರಾಮದ ಹವಾ ಕೆಟ್ಟುಹೋಗಿ ಜನಗಳ ಅಕಾಲ ಮರಣಕ್ಕೆ ದೊಡ್ಡ ಕಾರಣವೆಂದು ನಂಬುತ್ತೇವೆ. ಈ ಟವನ್ ಪೋಸ್ಟ್ ಮ್ಯಾನ್ ಸಿದ್ಧರಾಮಯ್ಯನು ತಾ. ೧೮ ನೇ ಗುರುವಾರ ರಾತ್ರಿ ೯ ಘಂಟೆಯವರಿಗೆ ಕಾಗದಗಳನ್ನು ಡಲಿವರಿ ಮಾಡಿ ಮನೆ ಸೇರಿದವನಿಗೆ ೧೨ ಘಂಟೆ ಸಮಯದಲ್ಲಿ ಕಾಲರಾ ತಗಲಿ ಬೆಳಗ್ಗೆ ೯ ಘಂಟೆಗೆ ಕಾಲವಾದನು. ಈತನು ತನ್ನ ಕೆಲಸವನ್ನು ಬಹಳ ಮುತುವರ್ಜಿಯಿಂದ ಮಾಡುತ್ತಾ ಜನಗಳ ಪ್ರೀತಿಗೆ ಪಾತ್ರನಾಗಿದ್ದನು. ಈತನು ಅಂಚೆ ಇಲಾಖೆಯಲ್ಲಿ ೧೦—೧೨ ವರ್ಷ ಪ್ರೀತಿಯಿಂದಲೂ ಗೌರವದಿಂದಲೂ ಕೆಲಸಮಾಡಿದವನು. ಈತನ ಚಿಕ್ಕಮಕ್ಕಳಿಗೆ ಆ ಇಲಾಖೆಯವರು ಸ್ವಲ್ಪ ರಿಯಾಯಿತಿ ತೋರಿಸುವರೆಂದು ನಂಬುತ್ತೇನೆ.

ಇದನ್ನು ನೋಡಿದರೆ ಬಹು ಆಶ್ಚರ್ಯ ಪಡುವಿರಿ.

38-9

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು. ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಸಾವಿರಾರು ಚಿತ್ರಪಟಗಳುಳ್ಳದ್ದು. ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವುದು. ಇದರ ಕ್ರಯ ಎರಡೇ ರೂಪಾಯಿ ವಿ. ಪಿ. ಮೂಲಕ ರೂ. ೨—೩—೦. ಸತ್ಯ ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಇನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ನೋಡಿ

ನಮ್ಮ ವಿಳಾಸ:— ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ. —ಬೆನ್ನಲ್ಲಿ ಛಳುಕು ; ನಿದ್ರೆಯಿಲ್ಲದೆ ಇರುವುದು ; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು ; ಬಿಡದೆ ಬಾಯಾರಿಕೆ ; ಬಳಲಿಕೆ ; ಎದೆ ಕಲ್ಲಿಸುವುದು ; ತಲೆನೋವು ; ಗಾಬರಿ, ಕಣ್ಣುಮೊಬ್ಬು : ತಲೆ ತಿರುಗುವಿಕೆ ; ಮೈನೋವು ಕೀಲುನೋವು ; ಮರವು ; ನಿತ್ರಾಣ ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರಿಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [93-43]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦ ; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೩೦, ಬೊಂಬಾಯಿ.—ಇವರಲ್ಲಿ ದೊರೆಯುವುದು.

ಸುಖಪಟ್ಟ ಸ್ತ್ರೀಯರು ಪೆರೂನಾವನ್ನು ಹೊಗಳುತ್ತಾರೆ

ಪೆರೂನಾ ಪ್ರಖ್ಯಾತಿಹೊಂದಿರುವುದು ಅದರ ಗುಣದಿಂದ, ಬರೀ [illegible]ನಿಂದಲ್ಲವು.

[31-13]

ಚಿಕ್ಕವರೂ ದೊಡ್ಡವರೂ ಒಂದೇ ರೀತಿ ಪೆರೂನಾವನ್ನು ಹೊಗಳುತ್ತಾರೆ. ಹೆಣ್ಣುಮಕ್ಕಳೂ ಹೆಂಗಸರೂ ಪೆರೂನಾವಿನ ಗುಣವನ್ನು ಕಂಡುಕೊಂಡಿದ್ದಾರೆ. ಹೆಣ್ಣುಮಕ್ಕಳೂ ಹೆಂಗಸರೂ ತಮ್ಮ ತಮ್ಮ ದೇಹಾನುಗುಣ್ಯವಾದ ಕಾಯಿಲೆಗಳಲ್ಲಿ ಬಿದ್ದು, ಪೆರೂನಾ ಸೇವನೆಯಿಂದ ಸೌಖ್ಯಹೊಂದಿರುತ್ತಾರೆ

ಲಕ್ಷಣವಾಗಿರುವ ಹೆಣ್ಣುಮಕ್ಕಳೂ, ಸುಂದರವಾದ ಸ್ತ್ರೀಯರೂ, ಬಲಹೀನರಾದ ಹೆಣ್ಣುಮಕ್ಕಳೂ ರೋಗಪೀಡಿತರಾದ ಹೆಂಗಸರೂ ಎಲ್ಲಾ ಪ್ರದೇಶಗಳಲ್ಲೂ ಪೆರೂನಾ ಸೇವಿಸಿ, ತಮ್ಮ ಸ್ವಭಾವಕ್ಕೆ ಅನುಗುಣವಾದ ಕಾಯಿಲೆಗಳನ್ನೆಲ್ಲಾ ನಿವಾರಣೆಮಾಡಿಕೊಂಡು, ಅದರ ಗುಣವನ್ನು ಹೊಗಳುತ್ತಾರೆ. ಮುದಿ ಅಜ್ಜಿಯು ಮೊದಲುಗೊಂಡು ಎಳೇ ಹೆಣ್ಣು ಮಗುವಿನ ತನಕ ಅಬಲೆಯರೆಲ್ಲಾ ಅನೇಕವಿಧಗಳಲ್ಲಿ ಪೆರೂನಾವಿಗೆ ಕೃತಜ್ಞರಾಗಿರುವರು

MRS FRED WEBBER

MISS OLIVINE PERRAULT

ಇದೆಲ್ಲಾ ಯಥಾರ್ಥವಾಗಿರುತ್ತದೆ ಗುಣಹೊಂದಿದ ಹೆಂಗಸು ಅದನ್ನು ಹೇಳುವುದಕ್ಕೆ ಹಿಂತೆಗೆಯುವುದಿಲ್ಲ. ಅವಳ ಮಾತು ಕೇಳಿ ಇತರ ಹೆಂಗಸರು ನಂಬುತ್ತಾರೆ. ಈ ರೀತಿ ಪೆರೂನಾವಿನ ಹೆಸರುವಾಸಿಯು ಮನೆಯಿಂದ ಮನೆಗೆ ಹಬ್ಬುತ್ತದೆ ಹೀಗೆ ಲಕ್ಷಾಂತರ ಮನೆಗಳವರು ಪೆರೂನಾವು ಸ್ತ್ರೀಶರೀರಕ್ಕೆ ತಕ್ಕಂಥಾ ನಂಬಿಕೆಗೆ ಅರ್ಹವಾದಂಥ ಕೈಕಂಡ ಔಷಧವೆಂದು ಒಪ್ಪಿಕೊಳ್ಳುತ್ತಾರೆ

ಅನೇಕ ಸಣ್ಣ ಸಣ್ಣ ಕಾಯಿಲೆಗಳಿಗೆ ಪೆರೂನಾವು ಒಳ್ಳೇ ಔಷಧವಾಗಿರುತ್ತದೆ. ಶೀತದಿಂದ ಹುಟ್ಟುವ ಅನೇಕ ಕೆಟ್ಟ ಕಾಯಿಲೆಗಳನ್ನೂ ಹೆಂಗಸರಿಗೆ ಸಾಮಾನ್ಯವಾಗಿ ಉಂಟಾಗುವ ಶರೀರದ ಅಕ್ರಮಗಳನ್ನೂ ಪೆರೂನಾವು ಕಡಿಮೆಮಾಡಬಲ್ಲದೆಂದು ನಂಬತಕ್ಕದ್ದಾಗಿದೆ ಶೈತ್ಯದಿಂದ ಹುಟ್ಟುವ ಸಮಸ್ತವಾದ ರೋಗಗಳನ್ನೂ ಪೆರೂನಾದಲ್ಲಿರುವ ಗುಣದಿಂದ ವಾಸಿಮಾಡಿಕೊಳ್ಳಬಹುದು.

ದೇಹದೊಳಗಿನ ಶೀತವು.

ಮಿಸೆಸ್ ಫ್ರೆಡ್ ವೆಬ್ಬರ್, ೧೯ ವೆಲ್ಲಿಂಗ್ಟನ್ ಬೀದಿ, ಬ್ರಾಂಡ್‌ಫರ್ಡ್, ಒಂಟ್., ಎರಡನೇ ವೈಸ್ ಪ್ರೆಸಿಡೆಂಟ್, ಸ್ತ್ರೀಯರ ಕೂಲಿಕಾರಿ ಸಂಘ ಈಕೆ ಬರೆಯುವುದು.

"ಈ ಸಲ ನಾನು ಕಾಯಿಲೆಯಾಗಿದ್ದಾಗ ನನಗೆ ಬಹಳ ಕಠಿಣವಾದ ಶೀತ ಹಿಡಿಯಿತು ಅದರಿಂದ ನನ್ನ ದೇಹದ ಅಂಗಗಳು ರೇಗಿಸಲ್ಪಟ್ಟವು ಬಹಳ ಕಠಿಣವಾದ ನೋವಾಗುತ್ತಿತ್ತು ದಿನೇ ದಿನೇ ನನ್ನ ಸ್ಥಿತಿಯು ಕೆಡುತ್ತಾ ಬಂದು ವಾಸಿಯಾದೀತೆಂಬ ಆಸೆಯೇ ಹೋಯಿತು

"ಪೆರೂನಾವಿನ ಆಶ್ಚರ್ಯಕರವಾಗಿ ರೋಗಗಳು ಗುಣವಾಗಿರುತ್ತವನ್ನು ನಾನು ಕೇಳಿ, ಅದನ್ನು ಎರಡು ತಿಂಗಳ ವರೆಗೆ ಸೇವಿಸಿ, ಅದರಿಂದ ನನಗೆ ಎಷ್ಟುಮಟ್ಟಿಗೆ ಒಳ್ಳೇದಾದೀತೆಂದು ನೋಡೋಣವೆಂದು ನಿಶ್ಚಯಿಸಿಕೊಂಡೆನು

"ಒಂದು ತಿಂಗಳು ಸೇವಿಸುವುದರ ಒಳಗಾಗಿ ನನಗೆ ಬಹಳ ವಾಸಿಯಾಯಿತು ಎರಡನೇ ತಿಂಗಳ ಅಂತ್ಯದಲ್ಲಿ ನಾನು ಹೊಸ ಹೆಂಗಸಾದೆನು ಅದೇ ರೀತಿ ನಾನು ಶಾಂತಬುದ್ಧಿ, ಶಕ್ತಿ, ಸಂಪೂರ್ಣ ಆರೋಗ್ಯವನ್ನು ಹೊಂದಿದೆನು. ಅದನ್ನೇ ಸೇವಿಸುವಂತೆ ನನ್ನ ಅನೇಕ ಸ್ನೇಹಿತೆಯರಿಗೆ ಹೇಳಿದೇನೆ. ಎಲ್ಲರೂ ಅದರ ಪ್ರಯೋಜನವನ್ನು ನೋಡಿ ಸಂತೋಷಪಡುತ್ತಾರೆ"

ತಲೆ, ಹೊಟ್ಟೆ, ಶ್ವಾಸಕೋಶಗಳು.

ಮಿಸ್ ಒಲಿವೈನ್ ಪೆರ್ರಾಲ್ಟ್, ೩೩೬ ಡೇವಿಡ್ಸನ್ ಬೀದಿ, ಬೊಲಿವಾರ್ ಸೆಂಟ್ ಪಾಲ್, ಮಾಂಟ್ರೀಲ್, ಕ್ವಿಬೆಕ್, ಈಕೆ ಬರೆಯುವುದು

"ನಿಮ್ಮ ಪ್ರಸಿದ್ಧವಾದ ಪೆರೂನಾವನ್ನು ಕುರಿತು ಸಂತೋಷದಿಂದ ನಿಮಗೆ ಈ ಕಾಗದ ಬರೆಯುತ್ತೇನೆ ನಾನು ಬೇರೆ ಔಷಧಗಳನ್ನು ಪರೀಕ್ಷೆಮಾಡಿದೆನು ಅದರೆ ನನ್ನ ಶೀತವು ಸ್ವಲ್ಪವೂ ವಾಸಿಯಾಗಲಿಲ್ಲ. ನನಗೆ ಕ್ಷಯ ಹಿಡಿಯುವುದೋ ಎಂದು ಹೆದರಿಕೆಯುಂಟಾಗಿತ್ತು.

"ನನ್ನ ತಲೆಯು ಮತ್ತು ಹೊಟ್ಟೆಯ ಸ್ಥಿತಿಯು ನನಗೆ ಚಿಂತೆಯನ್ನುಂಟುಮಾಡಿತ್ತು ಇದ್ದಕ್ಕಿದ್ದ ಹಾಗೇ ಹವಾ ಬದಲಾವಣೆಯಾದ್ದರಿಂದ ನನಗೆ ಶೀತವಾಗಿ ಮೂರು ತಿಂಗಳತನಕ ಹಗಲೂ ರಾತ್ರಿ ಕೆಮ್ಮಲುಂಟಾಗಿತ್ತು

"ನನ್ನ ಸಹೋದರನಿಗೆ ಪೆರೂನಾದಿಂದ ವಾಸಿಯಾಗಿದ್ದದ್ದರಿಂದ ಅವನು ಅದನ್ನು ಸೇವಿಸೆಂದು ನನಗೆ ಹೇಳಿದನು ಅದರಂತೆ ನಾನು ಕ್ರಮವಾಗಿ ಸೇವಿಸಿ, ದಿನೇ ದಿನೇ ಗುಣಹೊಂದುತ್ತಾ ಬಂದೆನು ಈಗ ನಾನು ಮೂರು ಬಾಟ್ಲು ಔಷಧ ಸೇವಿಸಿ ಮುಗಿಯಿತು. ನಾನು ಸಂಪೂರ್ಣವಾಗಿ ಗುಣಹೊಂದಿರುತ್ತೇನೆ"

ಕಾಯಿಲೆಯಾದ ಹೆಂಗಸರಿಗೆ.

"ಪೆರೂನಾದಿಂದ ನನಗೆ ಆಗಿರುವ ಪ್ರಯೋಜನವನ್ನು ತಿಳಿಸುವುದು ನನ್ನ ಕರ್ತವ್ಯವೆಂದು ತಿಳಿದಿದ್ದೇನೆ. ಸ್ವಲ್ಪ ಹೆಚ್ಚುಕಡಮೆ ನಾನು ಆರುವರ್ಷಗಳ ಕಾಲ ನರಳಿದೆನು. ಕೆಲವು ಡಾಕ್ಟರುಗಳಿಂದ ಪರೀಕ್ಷೆ ಮಾಡಿಸಿ, ಅವರ ಔಷಧಗಳನ್ನು ಸೇವಿಸಿದೆನು. ಅದರಿಂದ ನನಗೆ ಸ್ವಲ್ಪಮಾತ್ರ ಉಪಶಮನವಾಯಿತಲ್ಲದೆ ಆ ಔಷಧಗಳು ನನ್ನ ರೋಗವನ್ನು ವಾಸಿಮಾಡಲಿಲ್ಲ ನಾನು ಬಹಳ ಬಾಧೆಯನ್ನನುಭವಿಸಿದೆನು ನನ್ನ ಔಷಧಕ್ಕಾಗಿ ನನ್ನ ಗಂಡನು ಬಹಳ ಹಣವನ್ನು ಖರ್ಚು ಮಾಡಿರುತ್ತಾನೆ ನಿರಾಸೆಯಾಗಿ ಕಡೆಯಲ್ಲಿ ಪೆರೂನಾವನ್ನು ತೆಗದುಕೊಂಡು ಪರೀಕ್ಷೆಮಾಡೋಣವೆಂದು ನೆನಸಿ, ಸೇವಿಸಲಾರಂಭಿಸಿದೆನು ನಿಮ್ಮ ಹೇಳಿಕೆಯ ಪ್ರಕಾರ ಒಂದು ಬಾಟ್ಲು ಔಷಧ ಮುಗಿಯುವಷ್ಟರೊಳಗೆ ನನಗೆ ಸ್ವಲ್ಪ ಉಪಶಮನವಾಯಿತು ಆಗಿನಿಂದ ನನಗೆ ಬೇನೆ ನೋವು ಇಲ್ಲವೇ ಇಲ್ಲ ಈಚೆಗೂ ಪೆರೂನಾ ಸೇವಿಸಿದ್ದೇನೆ ಈಗ ನಮ್ಮ ಮನೆಗೆ ಡಾಕ್ಟರ ಬರುವುದು ಅಪರೂಪ ಪೆರೂನಾದಿಂದ ನಮ್ಮ ಸಂಸಾರಕ್ಕೆ ಎಷ್ಟು ಉಪಕಾರವಾಗಿದೆಯೋ ವಿವರಿಸಿದರೆ ಒಂದು ಪುಸ್ತಕವಾಗಬಹುದೀತು ನಾನು ತಮ್ಮನ್ನು ಅತ್ಯಂತ ವಿಶೇಷವಾಗಿ ಕೃತಜ್ಞತಾಭಾವದಿಂದ ವಂದಿಸುತ್ತೇನೆ. ಅನೇಕ ವೇಳೆ ನಿಮ್ಮ ಔಷದವನ್ನು ಇತರರಿಗೆ ತೋರಿಸುತ್ತೇನೆ ಅವರೆಲ್ಲಾ ಸೇವಿಸಿ ಸಂತೋಷಪಡುತ್ತಾರೆ ಕಾಯಿಲೆಯಾಗಿದ್ದೇನೆಂದು ಯಾವ ಹೆಂಗಸಾದರೂ ನನಗೆ ಬರದರೆ, ಅಥವಾ ನನ್ನ ಬಳಿಗೆ ಬಂದು ಹೇಳಿದರೆ ಅವರಿಗೆಲ್ಲಾ ಪೆರೂನಾವಿನ ಯೋಗ್ಯತೆಯನ್ನು ವಿವರಿಸಿ ಅದನ್ನು ಸೇವಿಸುವಂತೆ ಶಿಫಾರಸು ಮಾಡುತ್ತೇನೆ"—ಎಂಬದಾಗಿ ಮಿಸೆಸ್ ಮಾರ್ಥಾ ಫ್ರೆಡ್ರಿಕ್, ಸೆಂಟ್ರಲ್ ಪಾರ್ಕ್, ಲಾಂಗ್ ದ್ವೀಪ, ನ್ಯೂಯಾರ್ಕ್ ಸಿಟಿ, ಯು ಎಸ್ ಎ ಎಂಬೀ ಹೆಂಗಸು ಬರೆದಿರುತ್ತಾಳೆ

ಒಬ್ಬ ಹೆಂಗಸಿನ ಅನುಭವವು.

"ಕಳೆದ ಹೊಟ್ಟೆಯ ನಿಶ್ಶಕ್ತಿಯಿಂದ ನಾನು ತುಂಬಾ ಬಾಧೆಪಟ್ಟೆನು ಅದರಿಂದ ನನ್ನ ಶಕ್ತಿಯೆಲ್ಲಾ ಕುಂದಿ, ನನ್ನ ಬುದ್ಧಿಯು ಕೆಟ್ಟುಹೋದೀತೆಂದು ಹೆದರಿಕೊಂಡೆನು ನನ್ನ ಬೆನ್ನು ಬಾಬು ಎಡಗಾಲಿನ ಆಸಕ ಬಹಳವಾಗಿ ಬಾಧೆಪಡಿಸುತ್ತಿತ್ತು ಈ ಬಾಧೆಯನ್ನು ಅನುಭವಿಸುವುದಕ್ಕಿಂತ ಸಾಯುವುದೇ ಉತ್ತಮವೆನ್ನುವಂತಿತ್ತು ಪೆರೂನಾವು ಈ ನನ್ನ ಕಾಯಿಲೆಯನ್ನು ವಾಸಿಮಾಡಿತು. ಅದ್ದರಿಂದ ಅದು ಉತ್ಕೃಷ್ಟವಾದದ್ದೆಂದು ನಾನು ಹೇಳುವದೇನೂ ಅತಿಶಯವಲ್ಲ. ಈ ನನ್ನ ರೋಗವು ನಿವಾರಣೆಯಾಗಿ ಈಗ ಎರಡು ವರುಷ ತುಂಬುವುದರಲ್ಲಿದೆ. ಮತ್ತೆ ಆ ರೋಗದ ಸುಳಿಯನ್ನೇ ಕಾಣೆನು"

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

5 6—1908 ರಿಂದ 11—6—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	*	*	*	*
ಮೈಸೂರು ,,	30	28	35	20
ಕೋಲಾರ್ ,,	5	2	18	12
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟ್	0	0	31	18
ಹಾಸನ	0	0	103	65
ಚಿತ್ರದುರ್ಗ	0	0	0	0
ಕಡೂರ್	4	3	2	2
ಶಿವಮೊಗ್ಗ	*	*	*	*
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	39	31	189	117

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಜ್ಯೇಷ್ಠ ಬಹುಳ ದ್ವಾದಶಿ ಗುರುವಾರದಿಂದ ಆಷಾಢ ಶುದ್ಧ ಬಿದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಜೂನ್ ಮತ್ತು ಜುಲೈ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಚಂದ್ರ ಅಸ್ತಮಾನ
25	ಗುರು ‡	ದ್ವಾದಶಿ	36 36	ಕೃ	58 22	12
26	ಶುಕ್ರ ,,	ತ್ರಯೋದಶಿ	31 50	ರೋ	59-58	13
27	ಶನಿ *	ಚತುರ್ದಶಿ	35 20	ಮೃ	60 0	11
28	ರವಿ †	ಅಮಾವಾಸ್ಯೆ	37 6	ಮೃ	2 40	15
29	ಸೋಮ	ಪಾಡ್ಯ	10 1	ದ್ರಾ	6-50	16
30	ಕುಜ ,,	ಬಿದಿಗೆ	12 56	ಪು	12-2	17
1	ಬುಧ	ತದಿಗೆ	48 42	ಷ್ಯ	17-48	18

‡ ಶ್ರವಣದ್ವಾದಶಿ ,, ಪ್ರದೋಷ * ಮಾಸಶಿವರಾತ್ರಿ † [illegible] ಅಮಾವಾಸ್ಯೆ, ನಂಜನಗೂಡಿನಲ್ಲಿ [illegible] [illegible] ಚಂದ್ರ [illegible]

ಪೇಟೆ ಧಾರಣೆ

ಜಿನಸಿ	ಮೈಸೂರು,	ಬೆಂಗಳೂರು
ಕಪ್ಪೇ ಅಕ್ಕಿ ಪಲ್ಲ ೧ಕ್ಕೆ	ರೂ. ೧೪-೮-೦	೧೨-೬-೦
ಕೆಂಪುಕತ್ತಿ ಅಕ್ಕಿ ಅವಲ್ .	೧೫-೦-೦	೧೩-೦-೦
,, ದುಯಂ	೧೪-೮-೦	೧೫-೦-೦
ಜೀರಸಾಲ ಅಕ್ಕಿ	೧೯-೮-೦	೧೩-೦-೦
ನಲ್ಲಕ್ಕಿ ಅವಲ್	೧೭-೦-೦	೧೮-೦-೦
,, ದುಯಂ	೧೫-೮-೦	೧೩-೬-೦
[illegible] ರಾಗಿ ಪಲ್ಲ ೧ಕ್ಕೆ	೧೩-೧-೦	೧೪-೮-೦
,, ದುಯಂ	೧೫-೮-೦	೧೪-೦-೦
[illegible] ಪಲ್ಲ ೧ಕ್ಕೆ	೩-೧೨-೦	೩-೦-೦
ಕಾಡಿಗ್ರಿ	೩-೪-೦	೩-೧೨-೯
ಜೋಳ	೩-೦-೦	೯-೦-೦
ಹಲಸಂದೆ ಪಲ್ಲ ೧ಕ್ಕೆ	೧೧-೦-೦	೧೧-೦-೦
ಬಿಳೀ ಅವರೆ	೮-೦-೦	೯-೦-೦
ಹೆಸರು	೧೧-೦-೦	೧೨-೮-೦
ಉದ್ದು	೧೨-೮-೦	೧೨-೧೨-೦
ತೊಗರಿ	೧೩-೦-೦	೧೩-೮-೦
ಎಳ್ಳು [illegible]	೨೩-೮-೦	೨೫-೮-೦
ಹುರುಳಿ	೩-೮-೦	೩-೪-೦
ಕಡಲೆ [illegible]	೧೯-೦-೦	೧೩-೦-೦
ಸೀಗೆ [illegible] ಮಣ ೧ಕ್ಕೆ	೧-೮-೦	೧-೩-೦
ಮೆಣಸಿನಕಾಯಿ	೩-೪-೦	೩-೦-೦
,, ದುಯಂ	೨-೪-೦	೨-೧೨-೦
ಬೆಲ್ಲ ದೊಡ್ಡ ಅಚ್ಚು	೫-೦-೦	[illegible]
ಒಳ್ಳೆ [illegible] ಮಣ ೧ಕ್ಕೆ	೪-೦-೦	೪-೪-೦
[illegible] ,,	೫-೮-೦	೪-೦-೦
ಕೊತ್ತುಂಬರಿ ಪಲ್ಲ ೧ಕ್ಕೆ	೪-೮-೦	೪-೦-೦
ಉಪ್ಪು	೪-೮-೦	೫-೦-೦
ಹುಣಸೇ ಹಣ್ಣು	೧-೪-೯	೧-೦-೦
,, ಹಳೇದು	೧-೦	೧-೪-೦
ತುಪ್ಪ ಮಣ ೧ಕ್ಕೆ	೧೪-೮-೦	೧೫-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೪-೧೫-೦	೪-೪-೦
ತೆಂಗಿನಕಾಯಿ ೧೦೦ಕ್ಕೆ	೩-೮-೦	೩-೮-೦
ಅಳಲೇಕಾಯಿ ಮಣ ೧ಕ್ಕೆ	೧-೦-೦	೧-೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	೦-೧೪-೦
ಚಿನ್ನ (ಪೌನ್) ಕೆಂಪು	೧೫ ೩-೦	೧೫ ೩-೦
,, ,, ಪವನ್	೧೫-೧೧-೦	೧೫-೧೨-೦
,, ,, ಗಟ್ಟಿ ತೊಲ ೧ಕ್ಕೆ	೨೪-೧೨-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೬೫-೦-೦	೬೮-೦-೦

Printed and Published by the Rev. E. W. Thompson M. A., Proprietor and Manager, Wesleyan Mission Press, Mysore 25/6/1908

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸರ್ ೧೯೦೮ ನೇ ಇಸವಿ ಜೂಲೈ ತಾರೀಖು ೨ ನೇ ಗುರುವಾರ. ಸಂಚಿಕೆ ೫

BASEL MISSION WEAVING ESTABLISHMENT,

59-17

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಶನ್ (ಬಟ್ಟೆ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ವಿ.ಶ್ಶ್) ಟ್ವೀಡ್ ನಮೂನೆಯ ಕೋಟು ಇಜಾರುಗಳಿಗೆ ಚೆಕ್ಕು ಬಟ್ಟೆಗಳೂ, ಶಂಟಿಂಗ್ ಯಾನೆ ಶಿಕಾರಿ ಬಟ್ಟೆಗಳೂ, ಶರ್ಟಿಂಗ್ ಯಾನೆ ಅಂಗಿಗಳ ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ, ಟೇಬ್ಲ್ ಕ್ಲೋತ್ ಯಾನೆ ಮೇಜುವಸ್ತ್ರಗಳೂ, ಟುವಾಲು ವಗೈರೆಗಳ ನಾಜೂಕಾಗಿ ತಯಾರಿಸಲ್ಪಟ್ಟು ಯಾವಾಗಲೂ ಚಲ್ಲರೆಯಾಗಿಯಾಗಲೀ ಠೋಕ ಆಗಿಯಾಗಲೀ ಮಾರಾಟಕ್ಕೆ ತಯಾರಿರುತ್ತವೆ.

ಒಳ್ಳೇ ಕಮಿಶ್ಶನ್ :—ರೂಪಾಯಿ ೧೦೦ ರ ಮೇಲೆ ವಸ್ತ್ರಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾಗುವುದು. ಹೆಚ್ಚಿನ ವಿವರ ಖುದ್ದಾಗಿ ಯಾ ಕಾಗದ ಮೂಲಕ ತಿಳುಕೊಳ್ಳಬಹುದು

ನಮೂನೆ ಯಾ ಮಾದರಿಗಳು :—ಪರಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಕಳುಹಿಸಲ್ಪಡುವವು

ವಿಶೇಷ ಲಕ್ಷಿಸತಕ್ಕದ್ದು :—ಈ ನಮ್ಮ ವಸ್ತ್ರಗಳಿಗೆ ಇಲ್ಲಿ ಕಾಣಿಸಿರುವ "ಟ್ರೇಡ್ ಮಾರ್ಕ" ಎಂಬ ವ್ಯಾಪಾರಗುರ್ತು ಇರುವ ಲೇಬಿಲ್ ಯಾನೆ ಚೀಟು ಹಚ್ಚಿರುತ್ತದೆ. ಈ ಗುರ್ತಿನ ಚೀಟುಗಳು ಇಲ್ಲದವುಗಳೆಲ್ಲಾ ಖಾಸಾ ವಿ.ಶ್ಶ್ ವಸ್ತ್ರಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತ :—ನಗದಾಗಿ ಇಲ್ಲವೆ ವಸ್ತ್ರಗಳು ವಿ. ಪಿ. ಟಪ್ಪಾಲ ಮೂಲಕ ಕಳುಹಿಸಲ್ಪಡಬೇಕಾಗಿದ್ದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರಿಯತಕ್ಕದ್ದು.

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು "ಕೋಪಿರೈಟ್" ಪಡದಿರುವ ಲೇಬಿಲುಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ವಸ್ತ್ರಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು

ವಿಳಾಸ:—BASEL MISSION WEAVING ESTABLISHMENT,
MANGALORE S CANARA

AMRUTANJAN DEPOT, 16 OAK-LANE, BOMBAY.

[17-19]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ್. ಪ್ರಯತ್ನ ಮಾಡಿರಿ.

ಇದರಿಂದ :—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಪಕವ್ ಮತ್ತು ಗಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ಕ್ಕೆ ಕಿಮ್ಮತ್ತು ೦ ೮ ೦ ಪೋಸ್ಟು ಖರ್ಚು ೦ ೪ ೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಶಿಬ್ಬಿ ವಗೈರೆ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦ ೪ ೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ—ಜೀರ್ಣಕ್ಕೆ ಡಬ್ಬಿ ೧ಕ್ಕೆ.	೦—೪—೦	ಕುಸುಮಾರಿಗುಟಿಕ—ಹೆಂಗಸರ ಹೊಟ್ಟೆನೋವಿಗೆ	೧—೨—೦
ಪದ್ಮಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧—೦—೦	ಪ್ರಮೇಹದ ಮಿಶ್ರಣ—ಪ್ರಮೇಹಕ್ಕೆ	೧—೦—೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ಕ್ಕೆ	೦—೧೨—೦	ಕಫಹರಿ—ಕಫ, ಕೆಮ್ಮು ಕ್ಷಯ, ಇತ್ಯಾದಿ	೧—೪—೦
ಅಳಿಸುಹಚ್ಚತಕ್ಕ ಮದ್ದು	೦—೮—೦	ಸುಂಭರೀ ತೈಲ್ಯ—ಮೋರೆಗೆ	೦—೮—೦
ದಂತಶೂಲಹರಿ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಕರ್ಣಶೂಲಹಾರಿ—ಕಿವಿನೋವಿಗೆ	೦—೬—೦	ಉರಿನಾಶಕ ಎಂಣೆ ಬಾಟ್ಲಿ ೧ಕ್ಕೆ	೦—೮—೦
ಬಚ್ಚೆಯ ಮುಲಾಮು	೦—೩—೦	ವಾತದ ಮಿಶ್ರಣ ,,	೧—೦—೦
ದಂತಮಂಜನ—ಹಲ್ಲುಗಳಿಗೆ	೦—೨—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
ಕೇಶವರ್ಧನೀ ತೈಲ್ಯ—ಕೂದಲಿಗೆ	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
ಬಾಲಾಮೃತ ಮಾತ್ರೆ—ಬಾಲಕರಿಗೆ	೦—೮—೦	ರೋಗಹಾರಿ	೦—೮—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ.

ಪರೀಕ್ಷೆಮಾಡದೆ ಇರಬೇಡಿ.

ನಮ್ಮ ಪರಮಾಶ್ಚರ್ಯಯುಕ್ತವಾದ ಕಾಫಿ ಹೂವನ್ನು ಪ್ರತಿ ಒಬ್ಬರೂ ಒಂದು ಡಬ್ಬಾ ತರಿಸಬೇಕು.

49-4

ಈ ಹುವ್ವನ್ನು ಒಂದು ಸಾರಿ ಉಪಯೋಗಿಸಿದ ಕೂಡಲೆ ಬಹಳಾ ಆಶ್ಚರ್ಯವನ್ನುಂಟುಮಾಡುತ್ತೆ. ಮತ್ತು ನಮ್ಮಲ್ಲಿ ತರಿಸಿಕೊಂಡರೆ ಯಾವಾಗಲೂ ಇದರ ಸೇವನೆ ಮಾಡಬೇಕೆಂಬ ಇಚ್ಛೆಯನ್ನುಂಟುಮಾಡುತ್ತೆ. ಇದರಲ್ಲಿ ಸ್ವಲ್ಪವನ್ನು ತೆಗೆದುಕೊಂಡು ಹಾಲಿನಲ್ಲಿ ಕಾಫೀಕನ್ನಾಗಿ ಕಾದಿದ ಮೇಲೆ ಒಂದು ಬಟ್ಟೆ ಅಥವಾ ಒಂದು ಲೋಟದಲ್ಲಿ ಕಾಚಿಟ್ಟದ್ದರೆ ಪೀರಾಗಿರತಕ್ಕಂತ ಹಾಲು ಗಟ್ಟಿಗೆ ಆಗುತ್ತೆ. ಇದರಂತೆ ಇದನ್ನು ಊಟ ಮಾಡುವವರ ದೇಹವು ಎಷ್ಟೇ ಬಲಹೀನವಾಗಿದ್ದರೂ ಭೀಮಸೇನನಂತೆ ಬಲಯುತರನ್ನಾಗಿ ಮಾಡಿ ಶರೀರದ ಕಾಂತಿಯನ್ನು ಹೆಚ್ಚಿಸುವದು. ಇದನ್ನು ಪ್ರತಿ ವಾಚಕರೂ ಪರೀಕ್ಷಿಸಬೇಕಾದ ಸಮಯವು ಈ ಸಮಯ ತಪ್ಪಿದರೆ ಮುಂದೆ ದೊರೆಯಲಾರದು ಇದರ ಕ್ರಯವು ಬಹು ಸ್ವಲ್ಪವು. ಡಬ್ಬಿ ೧ಕ್ಕೆ ರೂ ೦—೮—೦. ವಿ. ಪಿ. ಪಿ. ಚಾರ್ಜು ೦—೪—೦. ವಿಳಾಸ.—ಟಿ ಸಿ. ಕನ್ನೈಯ್ಯ ಶೆಟ್ಟಿ ಅಂಡ್ ಸನ್, ಜನರಲ್ ಮರ್ಚಂಟ್, ನಂಬರು ೨೦, ಸಿಂಗಣ್ಣಚೆಟ್ಟಿವೀದಿ, ಸಾಹುಕಾರಪೇಟೆ, ಮದರಾಸು.

ಜ್ವರಹರಿ.

44-9

ಇದು ಸಾಧಾರಣ ಜ್ವರ, ಹಳೇಜ್ವರ, ಮೈಮೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ ; ೦—೮ ರೂ., ರೂ. ೨—೧೨ ಆ.; ೧೧ ರೂ.; ಕನ್ನರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಬಿ ಮ ಂ ಕ ಪ್ರೂ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ ಗಣಪತಿಯವರು—ಪೆನ್ನಿಯ ಬಿಮಂಕಪ್ರೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಡಿಪೊಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—
ಪೆನ್ನಿಯವರ ಗ್ರೇಟ್ ಇಂಡಿಯನ ಔಷಧಗಳ ಕಂಪನಿ,
ನೆಲ್ಸನ್ ಬ್ಲೇಕ್ ಸ್ಟ್ರೀ. ಮದರಾಸ್

ಮಹಾ ಬಾಧಾಪಹಾರಿಣಿಯು.

46-6

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಮಹಾಶ್ರೇಷ್ಠ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಾರೆ, ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಕಳತ, ಗಂಟ್ಲನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಉಳುಕಿದ ನೋವು, ಹಲ್ಲುನೋವು. ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಡಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ ಶೀಸೆ ೧ ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ವೇದಮಲೆಪಿಳ್ಳೆ ಬೀದಿ, ವೇಪೇರಿ, ಮದರಾಸ್.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

1-27



ಈ ಹೊಟ್ಟೆಯ ನೋವು, ನೀರೀ ಭೇದಿಯಾಗುವುದು, ಅಜೀರ್ಣ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ನಾಶಮಾಡುತ್ತದೆ. ಈ ಪರಮಶ್ರೇಷ್ಠವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲಮಾಡಿ ನಿಲ್ಲಿಸುತ್ತದೆ ಖಂಡಿತವಾಗಿ ನಾಶಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ದೇಶಬಾಂಧವರೇ! ಪ್ರೀತಿಯಿಂದ ಲಾಲಿಸಿ!!

50 8

ಸ್ವದೇಶೀ ಪ್ರೀತಿಗೆ ಯೋಗ್ಯವಾದ ಪ್ರಸಿದ್ಧ ಮಧುರೆಯಲ್ಲಿ ಕೈಮಗ್ಗದಿಂದ ತಯಾರಾಗುವ ಗಟ್ಟಿಯಾದ ಬಣ್ಣದ ಹದಿನೇಳು ಮೊಳಕ್ಕಿಂತ ಹೆಚ್ಚು ಉದ್ದದ ಬಿಳಿಯ, ಚೌಕ್ಕೆಯೂ, ಹೂವುಗಳಿಂದ ಕೂಡಿ ಕಪ್ಪು ಅಥವಾ ಕೆಂಪುಬಣ್ಣದಲ್ಲಿ ಉತ್ತಮ ಮಧುರೆ ಶೀರೆಗಳು ಬಹಳ ಸುಲಭಕ್ರಯಕ್ಕೆ ಅಂದರೆ ಕ್ರಯ ರೂ ೩—೪ ಆಣೆಗೆ ಮಾರುವೆವು. ಸಾದಾ ಶೀರೆಗಳು ರೂ ೨—೮ ಆ. ನಯವಾದ ಮತ್ತು ಸೆರಗು ಅಂಚುಗಳಲ್ಲಿ ಜರತಾರಿಯುಳ್ಳದ್ದು ರೂ ೫. ಸಾಚಾ ಬೆಳ್ಳಿಯ ಕಲಾಬತ್ತಿನ ಶೀರೆಗಳು ರೂ. ೭, ರೂ ೮, ರೂ. ೧೦

ಮೋಲುಕ್ಕೋಟೆ ಅಂಚಿನ ಪಂಚೆಗಳು!!!

ಹೊಸದಾಗಿ ತಯಾರಿಸಿರುವ ಈ ಪಂಚೆಗಳು ಶುದ್ಧರೇಷ್ಮೆ ಅಂಚಿನ ಪಂಚೆಗಳನ್ನು ವಿಾರಿಸುತ್ತೆ. ಬಹು ಸೊಗಸಾಗಿದೆ. ೮ ಮೊಳದ ಜೊತೆ ೧ ಕ್ಕೆ ರೂ ೩. ಏಳು ಮೊಳದ ಜೊತೆಗೆ ರೂ ೨—೮ ಆ.

ಮುಂಬೈಯಾ ಕಲ್ಕತ್ತಾ ಅಂಚಿನ ಪಂಚೆ.

೩ ಮೊಳದಗಲ, ೯ ಮೊಳದ ಜೊತೆಗೆ ರೂ ೪. ಆರು ಮೊಳದ ಜೊತೆಗೆ ರೂ ೨—೮ ಆ.

ಪುದುಚೇರಿ ರೇಷ್ಮೆಯ ವಸ್ತ್ರಗಳು! ೨ ಮೊಳದಗಲ!!

ಬಹು ಸೊಗಸಾದ ಕೆಂಪು ರೇಷ್ಮೆಯವು. ೪ ಮೊಳದುದ್ದ, ರೂ ೫. ಐದು ಮೊಳದುದ್ದ ರೂ ೬.

ಶುದ್ಧ ಉಣ್ಣೆಯ ಹೊಸ ತರದ „ಬ್ಲಾಂಕೆಟ್"

ಬನಾತವೆಂಬ ಬಾನೀರ್ ಸಾಗಳು ಅಗಲ ೩೮. ಉದ್ದ ೯೦ ಅಂಗುಲ, ರೂ ೬. ಎರಡನೆಯ ತರ ರೂ ೪. ತರಹೇವಾರಿ ಟೋಪಿಗಳು ಗಜ ೧ ಕ್ಕೆ ಆಣೆಗಳು ೪, ೫, ೬ ವಿಳಾಸ—

ಡವ್ ಎಂಪೋರಿಯಂ, ಸೈಕ್ ಗ್ರಾಂ, ರೋಡ್, ವೇಪೆರಿ, ಮದ್ರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-20

೧. ಲೋಕಾಮಯಹರ ಕಸ್ತೂರೀ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ಕಾಂಬೋಲಿದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಧೆಗೂ ದಾರಿಕೊಡದೆ, ನೀರು ಸಮಾಗಳ ಬಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವೆ, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರಿ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION. 33-14

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತವೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ನಿಶಾನಿ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2 27

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾವದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಬಿಗ್ಗಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬೂದು, ಕಾಫಿ ಟೋಪಿಗಳು ೧ ರೂ ೮ ಆ.; ೧ ರೂ ೬ ಆ.; ೧ ರೂ. ೪ ಆ.

ರೇಶ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ., ೨ ರೂ

ಜರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ; ೧ ರೂ. ೬ ಆ.

ಉಣ್ಣೆಯ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂಫಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

"ವೃತ್ತಾಂತ ಪತ್ರಿಕೆ" ಚಂದಾದಾರರಿಗೆ.

"ವೃತ್ತಾಂತ ಪತ್ರಿಕೆ"ಯ ವರ್ಷವು ಕಳೆದ ಮೇ ತಿಂಗಳ ತಾ. ೩೧ ಕ್ಕೆ ಪೂರೈಸಿ, ಬಾಕಿ ವರುಷದ ಚಂದಾ ಹೋವು ಸಲ್ಲಬೇಕಾಗಿರುತ್ತದೆ. ಆದಕಾರಣ ನಮ್ಮ ಏಜಂಟರುಗಳ ಮೂಲಕ "ವೃತ್ತಾಂತ ಪತ್ರಿಕೆ"ಯನ್ನು ಪಡೆಯುವ ನಮ್ಮ ಚಂದಾದಾರರೆಲ್ಲಾ ಅವರಿಗೆ ಖಂಡಿತವಾಗಿ ಅಡ್ವಾನ್ಸಿನಲ್ಲಿ ಚಂದಾ ಕಟ್ಟಿ, ಅವರಿಂದ ಕ್ರಮವಾದ ರಶೀತಿ ಪಡೆಯಬೇಕೆಂದು ಈ ಮೂಲಕ ತೃಪ್ತಪಡಿಸಿವೆ ಮ್ಯಾನೇಜರ್, "ವೃತ್ತಾಂತ ಪತ್ರಿಕೆ"

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

51 1

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೌಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ. ಒಳ್ಳೆ ಬಿಳಿ ಕಡವು ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ಐದು ಆಣೆಯಿಂದ ೬ ಆಣೆ ವರಿವಿಗೂ ಚಿಲ್ಲರೆಯಾಗಿ ಯಾರಿಗೇ ಆಗಲಿ ಯಾಗಲೀ ಮಾರಲ್ಪಡುತ್ತವೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪ್ಪೋ, ಮೈಸೂರು.

ಚನ್ನಪಟ್ಟಣದ ಪ್ರಕಟನೆ

51-1

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ —ಮದ್ದೂರು ಚನ್ನಪಟ್ಟಣದ ರೇಷ್ಮೆ ಸೌದಾಗರ್ ಮಹಮ್ಮದ್ ಹೈದರಸಾಬಿ ಎಂಬ ನಾನು ಇದೇ ಸನ್ ೧೯೦೮ ನೇ ಇಸವಿ ಜೂನ್ ತಾ. ೯ ರಲ್ಲು ಸರ್ಕಾರಿ ರಿಜಿಸ್ಟರ್ ಪತ್ರದಲ್ಲಿ ನಮೂದಿಸಿರುವ ಮೇರೆಗೆ ನನ್ನ ಆಸ್ತಿಯನ್ನು ನನ್ನ ಮಕ್ಕಳಾದ ೧ ನೇ ಮಹಮ್ಮದ್ ಅಬ್ದುಲ್ ಖಾದರ್ ಸಾಬ್, ೨ ನೇ ಮಹಮ್ಮದ್ ಅಬ್ದುಲ್ ಖುದ್ದುಸ್ ಸಾಬ್, ೩ ನೇ ಮಹಮ್ಮದ್ ಅಬ್ದುಲ್ ರಹಿಮಾನ್ ಸಾಬ್, ೪ ನೇ ಮಹಮ್ಮದ್ ಅಸದ್ ಅಲ್ಲಿ ಸಾಬ್, ೫ ನೇ ಮಹಮ್ಮದ್ ಅಮೀರ್ ಅಲ್ಲಿ ಸಾಬ್ ಎಂಬ ಐದು ಜನ ಗಂಡುಮಕ್ಕಳಿಗೂ ಭಾಗಿಸಿ ಕೊಟ್ಟಿರುತ್ತೇನಾದುದರಿಂದ ಇತ್ತು ಮುಂದೆ ನನ್ನ ಮೇಲೆ ೬. ೨ಳ ತಕ್ಕ ಏನೂ ಇರುವದಿಲ್ಲವೆಂತಲೂ, ಇವರುಗಳ ಸಾಲಾ ವಗೈರೆ ವಿಷಯಗಳಲ್ಲಿ ನಾನು ಜವಾಬ್ದಾರನಲ್ಲವೆಂತಲೂ ಈ ಮೂಲಕ ತಿಳಿಯಪಡಿಸಿದ್ದೇನೆ.

೨೫—೬—೦೮, ಮಹಮ್ಮದ್ ಹೈದರ್ ಸಾಬಿ,

ಚನ್ನಪಟ್ಟಣ ರೇಷ್ಮೆ ಸೌದಾಗರ್.

ನೋಟೀಸು.

55 1

೨೩ ನೇ ಜೂನ್ ೧೯೦೮ ನೇ ಇಸವಿ.

ರೆವಿನ್ಯೂ ಕಮಿಷನರವರ ಆಫೀಸು, ಬೆಂಗಳೂರು.

ಮೈಸೂರು ದಸರಾ ಕೈಗಾರಿಕೆ ಮತ್ತು ವ್ಯವಸಾಯ ಸಂಬಂಧವಾದ ಪ್ರದರ್ಶನವು ೧೯೦೮ನೇ ಸೆಪ್ಟೆಂಬರು ೩೦ನೇ ತಾರೀಖಿನ ದಿವಸ ಪ್ರಾರಂಭವಾಗಿ ಅಕ್ಟೋಬರ್ ೧೩ ನೇ ತಾರೀಖಿನ ದಿವಸ ಮುಕ್ತಾಯವಾಗುವದು. ಇಷ್ಟವುಳ್ಳ ಪ್ರದರ್ಶಕರು ಅನುಕೂಲವಾದಷ್ಟು ಶೀಘ್ರವಾಗಿ ಪ್ರದರ್ಶನಕ್ಕೆ ಸಂಬಂಧಪಟ್ಟ ಪ್ರಕಟನೆ ಮತ್ತು ಫಾರಂಗಳನ್ನು ತಾಲ್ಲೂಕು ಅಮಲ್ದಾರರುಗಳಿಂದಲಾಗಲೀ, ಅಥವಾ ಡೆಪ್ಯುಟಿ ಕಮಿಷನರವರಿಂದಲಾಗಲೀ ಪಡೆಯಬಹುದು.

ಕೆ. ಸುಬ್ಬರಾವ್,

ಸೆಕ್ರೆಟರಿ.

ವೃತ್ತಾಂತ ಪತ್ರಿಕೆ.

ಸ್ ೧೯೦೮ ನೇ ಇಸವಿ ಜೂಲೈ ತಾ|| ೨ ನೇ ಗುರುವಾರ

ಪರ್ಷಿಯಾ ರಾಜ್ಯದಲ್ಲಿ ಗಲಭೆಯು.

ಪರ್ಷಿಯಾ ರಾಜ್ಯದಲ್ಲಿ ಷಾ ಸುಲ್ತಾನರಿಗೂ ಪ್ರಜಾಪಕ್ಷದವರಿಗೂ ಉಂಟಾಗಿರುವ ಮನಸ್ತಾಪಗಳನ್ನೂ ಅದರಿಂದ ಪ್ರಾಪ್ತವಾದ ಕ್ರೂರ ಕೃತ್ಯಗಳನ್ನೂ ವಿಸ್ತಾರವಾಗಿ ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಷಾ ಸುಲ್ತಾನರು ಸ್ವೇಚ್ಛೆಯಾಗಿ ಕಾರ್ಯಗಳನ್ನು ನಡಿಸುತ್ತಾ ಬಂದರು. ಅವರ ಮಂತ್ರಿಗಳೇ ಮೊದಲಾದ ಅಧಿಕಾರಿಗಳು ಶ್ರದ್ಧೆಯಿಂದ ರಾಜ್ಯಪರಿಪಾಲನೆಯನ್ನು ಮಾಡದೆ ಲಂಚಕೋರರಾಗಿಯೂ ಪ್ರಜಾಹಿಂಸಕರಾಗಿಯೂ ಪರಿಣಮಿಸಿದರು. ರಾಜ್ಯದ ಸ್ಥಿತಿಗತಿಯೆಲ್ಲಾ ಕೆಟ್ಟು ಹೋಗಿತ್ತು. ರಾಜ್ಯಭಾರವನ್ನು ಕ್ರಮಕ್ಕೆ ತಂದಿಡಬೇಕೆಂದು ಸಂಘಗಳು ಏರ್ಪಾಟಾದವು. ಮುಖಂಡರಲ್ಲಿ ಪಲವರು ಉಲಾಮಾಗಳೂ ಸೇರಿದ್ದರು. ಇವರು ಷಿಯಾ ಧರ್ಮಗಳೇ ಗವರ್ನಮೆಂಟಿನವರಿಂದ ಬಲಾತ್ಕಾರವಾಗಿಯಾದರೂ ರಕ್ಷಿಸಲ್ಪಡಬೇಕೆಂದು ಹೇಳುತ್ತಾ ಬಂದರು. ಇವರೇ ಕಡೆಗೆ ಪ್ರಬಲರಾಗಿ ಷಾ ಸುಲ್ತಾನರಿಂದ ಪಾರ್ಲಿಮೆಂಟನ್ನು ಏರ್ಪಡಿಸುವಂತೆಯೂ ಪ್ರಜೆಗಳು ಮೆಂಬರುಗಳನ್ನು ಚುನಾಯಿಸಿ ಕಳುಹಿಸುವಂತೆಯೂ ಮಾಡಿದರು. ಈ ರೀತಿ ಪ್ರಾರಂಭವಾದ ಪಾರ್ಲಿಮೆಂಟು ಕೆಲವು ತಿಂಗಳಿಂದ ಕಾರುಬಾರುಗಳನ್ನು ನಡಿಸುತ್ತಾ ಬಂದಿದೆ. ಮೆಂಬರುಗಳು ದೀರ್ಘವಾದ ಚರ್ಚೆಗಳನ್ನು ನಡಿಸಿ, ರಕ್ಷಿಸುವುದಕ್ಕೆ ಅಸಾಧ್ಯವಾದ ಹಲವು ಬಿಲ್ಲುಗಳನ್ನು ಮಾಡಿಟ್ಟರು. ಈ ಮಧ್ಯೆ ಸುಲ್ತಾನರಿಗೂ ಪಾರ್ಲಿಮೆಂಟ್ ಮೆಂಬರುಗಳಿಗೂ ಒಂದು ವಾಗ್ವಾದ ಹುಟ್ಟಿತು. ಪಾರ್ಲಿಮೆಂಟಿನವರು ತಮಗೆ ಸರ್ವ ಸ್ವತಂತ್ರಾಧಿಕಾರವಿರುವುದೆಂದು ಭಾವಿಸಿ, ಷಾ ಸುಲ್ತಾನರನ್ನು ಸಿಂಹಾಸನದಿಂದ ಇಳಿಸಿ, ಹೊರಡಿಸಿ, ದೇಶಭ್ರಷ್ಟರನ್ನಾಗಿ ಮಾಡಬೇಕೆಂದು ಪ್ರಯತ್ನಪಟ್ಟಂತೆ ಕಾಣುತ್ತದೆ. ಸುಲ್ತಾನರವರು ರಾಜಧಾನಿಯನ್ನು ಬಿಟ್ಟು ಹೊರ ಪ್ರಾಕಾರದಲ್ಲಿ ಹೋಗಿ ಏಕಾಂತ ಮಾಡಿಕೊಂಡರು. ಈಗಲಾದರೋ ಪಾರ್ಲಿಮೆಂಟಿನವರ ಏರ್ಪಾಡೆಲ್ಲಾ ತಲೆಕೆಳಗಾಗಿರುತ್ತದೆ. ಷಾರವರು ಅಂತರಂಗದಲ್ಲೇ ಸೈನ್ಯಗಳನ್ನು ಕೂಡಿಸಿಕೊಂಡರು. ರಷ್ಯಾ ಕಸ್ಸೇಕಾದವನು ಅವರ ಅಧಿಪತಿಯಾಗಿ ನಿಂತಿದಾನೆ. ಸುಲ್ತಾನರು ಈ ಸೈನ್ಯವನ್ನು ಕಳುಹಿಸಿ ಪಾರ್ಲಿಮೆಂಟ್ ಮೆಂಬರುಗಳನ್ನು ಹಿಡಿಸಿದ್ದಲ್ಲದೆ ಸಭೆ ಮನೆಗಳನ್ನು ನಾಶ ಮಾಡಿಸಿದರು. ಈ ಸೈನಿಕರಿಗೆ ಸಂಬಳಗಳೇ ಹಾವತಿ ಆಗಿರಲಿಲ್ಲವಾದ್ದನ್ನು ನೋಡಿ, ಅವರು ರಾಜಾಜ್ಞೆಯನ್ನು ಭಕ್ತಿಯಿಂದ ನೆರವೇರಿಸಬಾರದೆಂದು ಷಾ ರವರಲ್ಲಿ ಸಂಶಯವುಂಟಾಗಿತ್ತು. ಆದರೆ ಸೈನಿಕರು ಈ ಸಮಯದಲ್ಲಿ ತಮ್ಮ ರಾಜಭಕ್ತಿಯನ್ನು ಶ್ರದ್ಧೆಯಿಂದ ಪ್ರಕಾಶಪಡಿಸಿ, ಸುಲ್ತಾನರ ಅಪ್ಪಣೆಯ ಪ್ರಕಾರ ಕೆಲಸವನ್ನು ನೆರವೇರಿಸಿರುತ್ತಾರೆ. ಪಾರ್ಲಿಮೆಂಟು ನಾಶವಾಯಿತು. ಬಹುಜನ ಮುಖಂಡರನ್ನು ಕೊಂದು ಹಾಕಿದರು. ಅನೇಕರನ್ನು ಹಿಡಿದು ಸೆರೆಯಲ್ಲಿ ಹಾಕಿಕೊಂಡಿದ್ದಾರೆ. ಸುಲ್ತಾನರು ಈಗ ರಾಜಧಾನಿಯಲ್ಲಿ ನಿಂತು ಕಾರ್ಯಗಳನ್ನು ನಡಿಸುತ್ತಿರುವರು.

ಆದರೆ ಟೇಬ್ರಿಜ್ ಪಟ್ಟಣದಲ್ಲಿ ಷಾ ಸುಲ್ತಾನರ ಸೈನ್ಯಗಳನ್ನು ಪ್ರಜಾಪಕ್ಷದವರು ಸಂಪೂರ್ಣವಾಗಿ ಸೋಲಿಸಿರುವಂತೆ ವರ್ತಮಾನ ಬಂದಿದೆ. ಸುಲ್ತಾನರಾದರೋ ರಾಜಧಾನಿಯಲ್ಲಿ ಇಸ್ತಿಹಾರು ಹಾಕಿಸಿ, ಯೋಗ್ಯರೂ ದೇಶವತ್ಸಲರೂ ಆದ ದೊಡ್ಡ ಮನುಷ್ಯರನ್ನು ಪಾರ್ಲಿಮೆಂಟ್ ಮೆಂಬರಾಗಿ ಗೊತ್ತು ಮಾಡುತ್ತೇವೆಂದು ತಿಳಿಸಿರುತ್ತಾರೆ. ಅಂತು ಪರ್ಷಿಯಾ ರಾಜ್ಯದ ಈಗಿನ ಸ್ಥಿತಿಗತಿಯು ತೃಪ್ತಿಕರವಾಗಿಲ್ಲವೆಂದೂ ಗಲಿಬಿಲಿಯಾಗಿರುತ್ತದೆಂದೂ ಹೇಳಬಹುದು. ಒಂದು ಕಡೆ ನೋಡಿದರೆ ಷಾ ಸುಲ್ತಾನರು ಪ್ರಜಾಪಾಲನೆಯಲ್ಲಿ ಸಮರ್ಥರಾಗಿರುವಂತೆ ಕಾಣುವುದಿಲ್ಲ. ಇನ್ನೊಂದು ಕಡೆ ನೋಡಿದರೆ ಪಾರ್ಲಿಮೆಂಟಿನವರೂ ಅಯೋಗ್ಯರಾಗಿ ರಾಜ್ಯಭಾರ ಕ್ರಮಗಳನ್ನು ಅರಿಯದವರಾಗಿದಾರೆ. ಅವರಿಗೆ ಅನುಭವವಾಗಲಿ ವಿವೇಕವಾಗಲಿ ಇಲ್ಲ. ಈಗ ಪರ್ಷಿಯಾ ರಾಜ್ಯಕ್ಕೆ ಸಮರ್ಥನಾಗಿಯೂ, ವಿವೇಕಶಾಲಿಯಾಗಿಯೂ, ಸತ್ವವಂತನಾಗಿಯೂ ಇರುವಂಥಾ ಒಬ್ಬ ರಾಜನು ಬೇಕಾಗಿರುವನು. ಅವನು ಪ್ರಜೆಗಳ ನ್ಯಾಯವಾದ ಮತ್ತು ದೇಶೋನ್ನತಿಗೆ ಸಹಕಾರಿಗಳಾದ ಇಂಗಿತಗಳನ್ನೂ ಅಭಿಪ್ರಾಯಗಳನ್ನೂ ಆದರದಿಂದ ಅಂಗೀಕರಿಸಿ, ರಾಜ್ಯಭಾರ ಕ್ರಮಗಳನ್ನು ಪ್ರಜಾರಂಜಕವಾದ ರೀತಿಯಲ್ಲಿ ಬದಲಾವಣೆ ಮಾಡಿ, ಪ್ರಜೆಗಳಿಗೆ ಪಾರ್ಲಿಮೆಂಟಿನ ಮೂಲಕ ಅವಶ್ಯವಾದ ಸ್ವಾತಂತ್ರ್ಯಗಳನ್ನು ಕೊಟ್ಟು, ರಾಜ್ಯವನ್ನು ಅಭಿವೃದ್ಧಿಗೆ ತರುವಂಥವನಾಗಬೇಕು. ಆದರೆ ಇಂಥಾ ಮನುಷ್ಯನು ಪರ್ಷಿಯಾದಲ್ಲಿ ಈಗ ದೊರಕುವುದು ಹೇಗೆ?

ಒಳದೇಶದ ವೃತ್ತಾಂತಗಳು.

ದಿವಾನ್ ಮೆ|| ವಿ. ಪಿ. ಮಾಧವರಾಯರವರು ಪರಿವಾರ ಸಮೇತ ಈ ದಿನವೋ ನಾಳೆಯೋ ಬೆಂಗಳೂರಿನಿಂದ ರಾಜಧಾನಿಗೆ ಬರುವವರಾಗಿದಾರೆಂದು ಕೇಳುತ್ತೇವೆ.

***

ನಾಳೆ ೬ನೇ ತಾ. ಸೋಮವಾರ ಬೆಳಗ್ಗೆ ಶ್ರೀಮನ್ಮಹಾರಾಜರವರು ಪರಿವಾರಸಹಿತ ಮೋಟಾರ್ ಗಾಡಿಯಲ್ಲಿ ರಾಜಧಾನಿಯಿಂದ ನೀಲಗಿರಿಗೆ ಚಿತ್ತೈಸುವರು.

***

ರಾಜಧಾನಿಯಲ್ಲಿ ಈ ತಿಂಗಳ ೧೮ನೇ ತಾ ಶನಿವಾರ ವೈಶ್ಯಮಂಡಲಿಯ ಮಹಾ ಸಭೆಯು ಪ್ರಾರಂಭವಾಗುತ್ತದೆ. ಇದಕ್ಕಾಗಿ ಪ್ರತಿನಿಧಿಗಳೆಲ್ಲಾ ಒಂದೆರಡು ದಿನ ಮುಂಚಿತವಾಗಿಯೇ ಬರುವವರಾಗಿದಾರೆ.

***

ಹುಣಸೂರು ತಾಲ್ಲೂಕು ಪಿರಿಯಾಪಟ್ಟ, ಬೆಟ್ಟದಪುರ, ಹಾರನಹಳ್ಳಿ ಹೋಬಳಿಗಳಲ್ಲಿ ಹೆರಿಗೆಗಳನ್ನು ನಡಿಸುವುದಕ್ಕೆ ಸರ್ಕಾರದವರು ಈ ತಿಂಗಳಿಂದ ಒಬ್ಬ ಸೂಲಗಿತ್ತಿಯನ್ನು ನೇಮಿಸಿಕೊಳ್ಳಬಹುದೆಂದು ಸ್ಯಾಂಕ್ಷನ್ ಮಾಡಿದಾರೆ.

***

ಕಳೆದ ಶುಕ್ರವಾರ ಚಕ್ರವರ್ತಿಯವರ ಜನ್ಮದಿನವಾದ್ದರಿಂದ ರಾಜಧಾನಿಯಲ್ಲಿ ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು. ದೇವಾಲಯಗಳಲ್ಲಿ ಚಕ್ರವರ್ತಿಯವರ ಶ್ರೇಯಃ ಪ್ರಾರ್ಥನಾದಿಗಳು ನಡೆದವು.

***

ರಾಜಧಾನಿಯಲ್ಲಿ ಇನ್ನೂ ಮೋಡವಾಡುವುದೂ, ಸೋನೆ ಮಳೆ ಸುರಿಯುವುದೂ, ಬಿರುಸಾದ ಶೀತಗಾಳಿ ಬೀಸುವುದೂ ತಪ್ಪಲಿಲ್ಲ. ಸೂರ್ಯರಶ್ಮಿಯನ್ನು ಕಾಣುವುದು ಅಪರೂಪವಾಗಿದೆ. ಪ್ರಜಾ ಆರೋಗ್ಯವು ತೃಪ್ತಿಕರವಾಗಿದೆ. ಧಾರಣೆವಾಸಿಗಳು ಇಳಿಯಲಿಲ್ಲ.

***

ಬೆಂಗಳೂರು ದಂಡಿನಲ್ಲಿ ಮೆ|| ಮೆಕ್ರೋ ಎಂಬವರು ಮೋಟಾರ್ ಗಾಡಿಯಲ್ಲಿ ಹೋಗುತ್ತಿದ್ದಾಗ್ಗೆ ದಾರಿಯಲ್ಲಿ ಮ್ಯುನಿಸಿಪಲ್ ಕಚರಾ ಗಾಡಿ ನಿಂತಿದ್ದರಿಂದ ಮೋಟಾರ್ ಗಾಡಿಯು ದೀಪದ ಕಂಬಕ್ಕೆ ಬಡಿದು ಸ್ವಲ್ಪ ಮುರಿದು, ಕೋಯಿತೆಂದೂ, ಇದಕ್ಕಾಗಿ ತಮಗೆ ೪೦೦ ರೂಪಾಯಿ ಡಾಮೇಜು ಕೊಡಿಸಬೇಕೆಂದೂ ದಂಡಿನ ಮ್ಯುನಿಸಿಪಾಲಿಟಿಯನ್ನು ಕೇಳಿರುತ್ತಾರೆ.

***

ಶ್ರೀಮನ್ನಾರಾಯಣರಾಜರವರು ಪರಿವಾರ ಸಹಿತ ತಾ ೬ನೇ ಸೋಮವಾರ ಬೆಳಗ್ಗೆ ಸ್ಪೆಷಲ್ ಟ್ರೈನಿನಲ್ಲಿ ಉತ್ತರ ದೇಶಕ್ಕೆ ದಯಮಾಡಿ, ಕೆಲವು ದಿನ ಬೊಂಬಾಯಿನಲ್ಲೂ, ಆರುವಾರ ಕಾಶ್ಮೀರ ಸಂಸ್ಥಾನದಲ್ಲೂ ಇದ್ದು, ದೇಹಾರೋಗ್ಯ ಹೊಂದಿ ವಾಪಸು ಸೆಪ್ಟಂಬರ್ ಎರಡನೇ ವಾರದಲ್ಲಿ ಬರತಕ್ಕವರಾಗಿದಾರೆ. ಇವರ ಕೂಡ ದರ್ಬಾರ್ ಸರ್ಜನ್ ಡಾ|| ಟ್ರೇಕ್ ಬ್ರಾಕ್ಮನ್‌ರವರು ಹೋಗುವರು.

***

ಮಂಡ್ಯ ತಾಲ್ಲೋಕು ಬಸರಾಳು ಗ್ರಾಮದಲ್ಲಿ ಕಳೆದ ಜೂನ್ ೨೦ನೇ ತಾರೀಖಿನ ದಿವಸ ಪಟ್ಟ ಕವಿರಾಜ ನಾರ್ಣಬರವರ ಸೂಕ್ತಂ ಪ್ರಕಾರ ಬಹಳ ವೈಭವಪೂರ್ಣ ಬ್ಯಾಂಡ್ ಮುಂತಾದ ವಾದ್ಯಗಳ ಸಮೇತ ನೂತನವಾಗಿ ಸಂತೆಯು ಪ್ರಾರಂಭಿಸಲ್ಪಟ್ಟಿತು. ಮತ್ತು ಈ ಗ್ರಾಮದ ಮೆ|| ಪರಮೇಶ್ವರಯ್ಯನವರ ಮಗಳ ಮದುವೆಯು ಬಹಳ ವಿಜೃಂಭಣೆಯಿಂದ ನಡಿಸಲ್ಪಟ್ಟಿತು. ಪ್ರತಿದಿನವೂ ನೂರಾರು ಜನಕ್ಕೆ ಸಂತರ್ಪಣೆಯು ಬಹಳ ವಿಚಕ್ಷಣೆಯಿಂದ ನಡಿಸಲ್ಪಟ್ಟಿತು ಎಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಮೈಸೂರು ಗೆಜೆಟ್ ಸಂಗ್ರಹ.

ಮಾಗಡಿ ತಾಲ್ಲೂಕ್ ಅಮಲ್ದಾರ್ ಮೆ|| ಎಸ್. ಗೋಪಾಲಕೃಷ್ಣಯ್ಯಂಗಾರ್ರಿಗೆ ಕೊಟ್ಟಿರುವ ಒಂದೂವರೆ ತಿಂಗಳ ಪ್ರಿವಿಲೇಜ್ ರಜವನ್ನು ಇನ್ನು ಹತ್ತು ದಿನಗಳಿಗೆ ಜಾಸ್ತಿ ಮಾಡಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಸಬ್ ಅ|| ಕನ್ಸರ್ವೇಟರ್ ಮೆ|| ಪಿ. ಎಸ್. ಗೋವಿಂದರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಸಬ್ ಅ|| ಸರ್ಜನ್ ಮೆ|| ಎಸ್. ಕೆ. ಹನುಮಂತರಾಯರಿಗೆ ಸ್ವಂತ ಕೆಲಸಕ್ಕಾಗಿ ಕೊಟ್ಟಿದ್ದ ನಾಲ್ಕು ತಿಂಗಳು ಹತ್ತು ದಿನಗಳ ರಜಾವನ್ನು ರದ್ದುಮಾಡಿ, ಕಳೆದ ನೊವೆಂಬರ್ ತಾ. ೯ ರಿಂದ ಐವತ್ತು ದಿನಗಳ ಪ್ರಿವಿಲೇಜ್ ರಜಾ ಮತ್ತು ಏಳು ತಿಂಗಳು ಹತ್ತು ದಿನಗಳ ಫರ್ಲೋ ರಜಾ ಕೊಟ್ಟಿದೆ.

ಶೃಂಗೇರಿ ಜಹಗೀರಿಯ ಶಿರಸ್ತೆದಾರ್ ಕೃಷ್ಣಯ್ಯನವರು ಶೃಂಗೇರಿಯ ಡೆಪ್ಯುಟಿ ಅಮಲ್ದಾರರಾಗಿ ಕೆಲಸ ನೋಡತಕ್ಕದ್ದು.

ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಸೀನಿಯರ್ ಅ|| ಕಮಿಷನರ್ ಮೆ|| ಕೆ. ಚಾಂಡಿಯವರು ಮೆ|| ಎಂ. ನಾರಾಯಣರಾಯರಿಗೆ ಬದಲಾಗಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಿಸಲ್ಪಟ್ಟಿದಾರೆ.

ಅಮಲ್ದಾರ್ ಮೆ|| ಸಿ. ವಿ. ನಾರಾಯಣರಾಯರನ್ನು ಅರಸೀಕೆರೆ ತಾಲ್ಲೂಕಿಗೆ ವರ್ಗಮಾಡಿದೆ.

ಅಮಲ್ದಾರ್ ಮೆ|| ಕೆ. ಶ್ರೀನಿವಾಸರಾಯರನ್ನು ದೇವನಹಳ್ಳಿ ತಾಲ್ಲೂಕಿಗೆ ವರ್ಗಮಾಡಿದೆ.

ಮೆ|| ಕೆ. ಎಂ. ಅಪ್ಪಯ್ಯನವರು ಜೂಲೈ ೧ ರಿಂದ ಪೆನ್ಷನ್ ಪಡೆದು ಕೆಲಸ ಬಿಡುತ್ತಾರಾದ್ದರಿಂದ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ಅ|| ಸರ್ಜನ್ ಮೆ|| ವಿ. ಮುತ್ತುಸ್ವಾಮಿಯವರು ಕಡೂರ್ ಡಿಸ್ಟ್ರಿಕ್ಟಿನ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರಾಗಿ ವರ್ಗಮಾಡಲ್ಪಟ್ಟಿದಾರೆ.

ಮೈಸೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನ ಅಮಿಲ್ದಾರ್ ರ್ಯಾಂಕಿನಲ್ಲಿ ಜಮಾದಾರ್ ಅಬ್ದುಲ್ ಗಫಾರ್‌ಯವರನ್ನು ಮಾರ್ಚಿ ತಾ ೧೧ರ ಲಾಗಾಯತು ೪ರಿಂದ ೩ನೆ ಗ್ರೇಡ್ ಟ್ರೂಪ್ ಕಮ್ಯಾಂಡರಾಗಿ ಬಡ್ತಿ ಮಾಡಿದೆ.

ಮೈಸೂರು ಅರಮನೆ ಡಿವಿಜನ್ ಎಕ್ಸಿಕ್ಯುಟಿವ್ ಇಂಜಿನಿಯರ್ ಮೆ|| ಬಿ. ಪಿ. ರಾಘವಲುನಾಯುಡುಯವರಿಗೆ ತಾ ೮ರಿಂದ ಒಂಬತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಕೋಲಾರ್ ಡಿವಿಜನ್ ಅ|| ಇಂಜಿನಿಯರ್ ಮೆ|| ಕೆ. ಕೃಷ್ಣಯ್ಯಂಗಾರ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಹದಿನಾರು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಕೋಲ್ಸ್‌ಪೇಟೆಯ ಸಬ್ ಡಿವಿಜನ್ ಆಫೀಸರ್ ಮೆ|| ಟಿ. ಜೋಶ್ಯನವರು ೨-೩ನೇ ಕ್ಲಾಸ್ ಕ್ರಿಮಿನಲ್ ಮೊಕದ್ದಮೆಗಳನ್ನು ತಮ್ಮ ಅಧಿಕಾರಕ್ಕೊಳಪಟ್ಟ ಮ್ಯಾಜಿಸ್ಟ್ರೇಟರುಗಳಿಗೆ ವರ್ಗಮಾಡುವ ಅಧಿಕಾರ ಕೊಡಲ್ಪಟ್ಟಿದಾರೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆಸೇರಿ ತಿಂಗಳು ಕಟ್ಟಳೆಯ ಮೀಟಿಂಗನ್ನು ನಡಿಸಿದರು. ಆಡಿಟರುಗಳ ರಿಪೋರ್ಟ್ ಓದಲಾಯಿತು. ಹೊಗೆಸೊಪ್ಪಿನ ಸುಂಕವನ್ನು ಕಡಮೆ ಮಾಡಿದರೆ ಇನ್ನು ಹೆಚ್ಚು ಉತ್ಪತ್ತಿಯಾಗುವುದೆಂತಲೂ, ಸಾಯರ್ ಕಟ್ಟೆಂದಿಗೆ ದಿರಸನ್ನು ಕೊಡಿಸಬೇಕೆಂತಲೂ, ಮೊಹತರ್ಫ ಕಂದಾಯದ ವಸೂಲಿ ತೃಪ್ತಿಕರವಾಗಿಲ್ಲವಾದ್ದರಿಂದ ಮುತ್ಸದ್ದಿಗಳನ್ನು ಬೇರೆ ಬೇರೆ ಮೊಹಲ್ಲಗಳಿಗೆ ವರ್ಗಮಾಡಬೇಕೆಂತಲೂ ಆಡಿಟರುಗಳು ತಿಳಿಸಿದರು. ತಂಬಾಕು ಮೇಲೆ ಬೆಂಗಳೂರಿನಲ್ಲಿ ಎಷ್ಟು ಸುಂಕಹಾಕಿ ವಸೂಲ್ಮಾಡುತ್ತಿದ್ದಾರೆಂಬುವುದನ್ನು ತಿಳಿದು ಮ್ಯಾನೇಜಿಂಗ್ ಕಮಿಟಿಯವರು ಇತ್ಯರ್ಥಮಾಡತಕ್ಕದ್ದೆಂತಲೂ, ಸಾಯರ್ ಕಟ್ಟೆಂದಿಯವರಿಗೆ ದಿರಸು ಕೊಡುವುದರಲ್ಲಿ ಅನುಕೂಲ ಕಾಣುವುದಿಲ್ಲವೆಂತಲೂ ಕೌನ್ಸಿಲರುಗಳು ತೀರ್ಮಾನ ಮಾಡಿದರು.

ಪಟ್ಟಣದಲ್ಲಿ ಜನರು ಆರೋಗ್ಯಕರವಾದ ರೀತಿಯಲ್ಲಿ ಪಾಯಖಾನೆ ಮನೆಗಳನ್ನು ಕಟ್ಟಿಸಿಕೊಳ್ಳಬೇಕೆಂಬುದನ್ನು ಬಲಾತ್ಕರಿಸುವುದಕ್ಕೆ ಕೆಲವು ಬೈಲಾ ಕಾನೂನುಗಳನ್ನು ಮಾಡಿದಾರೆ. ಇವನ್ನು ಜಾರಿಗೆ ತರಬೇಕೆಂತಲೂ, ಪ್ರಾಸಿಕ್ಯೂಷನ್ ಮಾಡುವ ಸಂದರ್ಭ ಬಂದಾಗ ಪ್ರೆಸಿಡೆಂಟರ ಅನುಮತಿಯನ್ನು ಪಡೆಯಬೇಕೆಂತಲೂ ಕೌನ್ಸಿಲರುಗಳು ತೀರ್ಮಾನ ಮಾಡಿದರು. ಈಗ ಪಟ್ಟಣದಲ್ಲಿ ಅನೇಕರು ಮನೆಗಳೊಳಗೆ ಪಾಯಖಾನೆ ಭಾವಿಗಳನ್ನು ಮಾಡಿಕೊಂಡಿರುವುದನ್ನು ಖಂಡಿತವಾಗಿ ಬಲಾತ್ಕರಿಸಿ ಮುಚ್ಚಿಸಿ ಹೊಸ ತರಹ ಹಿತ್ತಲು ಮನೆಗಳನ್ನು ಕಟ್ಟಿಸುವಂತೆ ಮಾಡಬೇಕೆಂಬುದಾಗಿಯೂ, ಮ್ಯುನಿಸಿಪಾಲಿಟಿಯವರೇ ಪಾಯಖಾನೆಯನ್ನು ಗುಡಿಸುವ ಏರ್ಪಾಡು ಇರುವಂಥಾ ಚಾಮರಾಜ ಮೊಹಲ್ಲ, ನಜರಬಾದು ಮೊಹಲ್ಲಗಳಲ್ಲಿ ಮನೆತೆರಿಗೆ ೧ ರೂಪಾಯಿನೊಳಗಿರತಕ್ಕವರಿಂದ ತಿಂಗಳಿಗೆ ೨ ಆಣೆಯಂತೆಯೂ, ೪ ರೂಪಾಯಿನೊಳಗೆ ಮನೆ ತೆರಿಗೆ ಕೊಡತಕ್ಕವರಿಂದ ತಿಂಗಳಿಗೆ ೪ ಆಣೆಯಂತೆಯೂ, ಅದಕ್ಕಿಂತ ಹೆಚ್ಚು ತೆರಿಗೆ ಕೊಡತಕ್ಕ ಭಾರಿ ಮನೆಗಳವರಿಂದ ತಿಂಗಳಿಗೆ ೮ ಆಣೆಯಂತೆಯೂ ಗುಡಿಸುವ ತೆರಿಗೆ ಹಾಕಿ ಒಪರೀಗಳ ಲಕ್ಷವಿಟ್ಟು ವಸೂಲ್ಮಾಡುತ್ತಾ ಬರಬೇಕೆಂದೂ ತೀರ್ಮಾನಮಾಡಿರುತ್ತಾರೆ.

ಇನ್ನು ಮುಂದೆ ರಾಜಧಾನಿಯಲ್ಲಿ ಕಟ್ಟುವ ಪಾಯಖಾನೆಗಳನ್ನು ಮಾಳವಳ್ಳಿಯಲ್ಲಿ ಕಟ್ಟಿರುವ ರೀತಿಯಲ್ಲಿ ಕಟ್ಟಬೇಕೆಂದು ಗೊತ್ತಾಯಿತು. ಹೈದರ್‌ಗುಂಟಾ ರೋಡಿನಲ್ಲಿ ಹಳೇ ಕಲ್ಲುಗಳಿಂದ ರೈಲ್ ಕಂಬಿಗಳನ್ನು ಹಾಕುವುದಕ್ಕೆ ೭೩೪ ರೂಪಾಯಿ ಖರ್ಚುಮಾಡಬಹುದೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದರು. ಮ್ಯುನಿಸಿಪಲ್ ಲಾಂದ್ರಗಳಿಗೆ ಸೀಮೆಯೆಣ್ಣೆಯನ್ನು ಒದಗಿಸುವುದಕ್ಕೆ ಮೆ|| ದಾಮೋದರಂ ಮೊದಲಿಯಾರ್ರು ಕಂಟ್ರಾಕ್ಟನ್ನು ಒಪ್ಪಿಕೊಳ್ಳಲಾಯಿತು. ಟ್ರಸ್ಟ್ ಬೋರ್ಡಿನವರು ಕೃಷ್ಣರಾಜ ಮೊಹಲ್ಲೆಯನ್ನು ಕ್ರಮಪಡಿಸಿದ ಮೇಲೆ ಅಲ್ಲಿ ಒಂದು ಮಾರ್ಕೆಟ್ಟು ಕಟ್ಟುವ ಏರ್ಪಾಡನ್ನು ಯೋಚಿಸಬೇಕೆಂದು ತೀರ್ಮಾನ ಮಾಡಿದರು. ಕುಕ್ಕರಹಳ್ಳಿಯ ನೀರು ಕೊಳಾಯಿಗಳಲ್ಲಿ ಬಾರದಂತೆ ತಡೆ ಕಲ್ಪಿಸಬೇಕಲ್ಲದೆ ಆ ನಲ್ಲಿಗಳನ್ನು ಕಿತ್ತುಹಾಕಬೇಕಾದ ಆಗತ್ಯವಿಲ್ಲವೆಂದು ಗೊತ್ತುಮಾಡಿದರು.

ಕೃಷ್ಣರಾಜಮೊಹಲ್ಲ ಯುನಾನಿ ಆಸ್ಪತ್ರೆಯ ನವಾಬ್ ವಿಕಾರ್ ಯೂಸುಫಲ್ಲಿ ಖಾನರವರಿಗೆ ಗ್ರ್ಯಾಂಟು ಕೊಡುವ ವಿಷಯವನ್ನು ಇನ್ನು ಕೆಲವು ಕಾಲದ ಮೇಲೆ ಆಲೋಚಿಸತಕ್ಕದ್ದೆಂದು ತೆಗೆದಿಟ್ಟರು.

ಜಲಪುರಿಯಲ್ಲಿರುವ ಕಸಾಯಿ ಮನೆಗೆ ನಲ್ಲೀ ಹಾಕಿ ರಿಪೇರಿ ಮಾಡುವುದಕ್ಕೆ ೧,೩೪೯ ರೂಪಾಯಿ ಖರ್ಚುಮಾಡಬಹುದೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ. ಈ ವರುಷದ ಪ್ರಜಾ ಪ್ರತಿನಿಧಿ ಸಭೆಗೆ ಮ್ಯುನಿಸಿಪಲ್ ಕೌನ್ಸಿಲರುಗಳ ಪೈಕಿ ಮೆ|| ಗಳಾದ ಎಂ. ವೆಂಕಟಕೃಷ್ಣಯ್ಯನವರೂ, ಅಡ್ವೊಕೇಟ್ ಎಂ. ಸಿ. ರಂಗೈಯಂಗಾರ್ರೂ, ಮಿರ್ಜಾ ಹಸನಲ್ಲಿ ಬೇಗ್‌ಯವರೂ, ಸಾಹುಕಾರ್ ಮೊದಪ್ಪನವರೂ ಮೆಂಬರುಗಳಾಗಿ ಹೋಗತಕ್ಕದ್ದೆಂದು ಚುನಾಯಿಸಲ್ಪಟ್ಟಿದಾರೆ. ದೇವರಾಜ ಮಾರ್ಕೆಟ್ಟಿನ ಬಳಿ ಬೈಲ್ ಪ್ರದೇಶಕ್ಕೆ ಕಂಪೌಂಡು ಗೋಡೆ ಹಾಕುವುದಕ್ಕೆ ೧,೨೪೦ ರೂಪಾಯಿ ಖರ್ಚು ಮಾಡಬಹುದೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ.

ರಾಜಧಾನಿಯಲ್ಲಿ ಮನೆಗಳ ಬಾಡಿಗೆ ದರದ ಮೇಲೆ ಶೇಕಡಾ ೩ ರೂಪಾಯಿಯಂತೆ ನೀರಿನ ತೆರಿಗೆಯನ್ನು ಹಾಕಿ ಎಲ್ಲಾ ಮನೆಗಳವರಿಂದಲೂ ವಸೂಲ್ಮಾಡಬೇಕೆಂದು ಕೌನ್ಸಿಲರುಗಳು ಒಪ್ಪಿಕೊಂಡಿದಾರೆ. ಮನೆಗಂದಾಯವನ್ನೂ ಶೇಕಡಾ ೫ ರಿಂದ ೬ಕ್ಕೆ ಹೆಚ್ಚಿಸಬೇಕೆಂದು ಚರ್ಚೆ ನಡೆಯಿತು. ದೊಡ್ಡಕೆರೆ ಏರಿ ಕೆಳಗಡೆ ಹೊಸದಾಗಿ ಇಟ್ಟಿರುವ ಪಶುವೈದ್ಯದ ಆಸ್ಪತ್ರೆಗೆ ಬೇಕಾಗುವ ಅನುಕೂಲಗಳನ್ನು ಮಾಡಿಕೊಡಬಹುದೆಂದು ಕೌನ್ಸಿಲರುಗಳು ಒಪ್ಪಿಕೊಂಡರು.

ಇಂಡಿಯಾ ದೇಶದ ವೃತ್ತಾಂತಗಳು.

ಹಿಂದುಸ್ಥಾನದಲ್ಲೆಲ್ಲಾ ಕಳೆದ ವಾರ ಒಟ್ಟು ೭೦೭ ಜನರು ಪ್ಲೇಗ್ ಉಪದ್ರವದಿಂದ ಕಾಲವಾದರೆಂದು ತಿಳಿದು ಬಂದಿದೆ.

❦❦❦

ಬರ್ಮಾ ಅಧಿಪತ್ಯದಲ್ಲಿ ರೈಲ್ವೆ ಬಿಡಾವಣೆಗೋಸ್ಕರ ಈ ಸರ್ಕಾರಿ ವರುಷದಲ್ಲಿ ೮೧ ಲಕ್ಷ ರೂಪಾಯಿ ಖರ್ಚು ಮಾಡುವವರಾಗಿದ್ದಾರೆ.

❦❦❦

ಮಲಬಾರ್ ಜಿಲ್ಲೆಯಲ್ಲಿ ಪ್ಲೇಗ್ ಉಪದ್ರವವನ್ನು ಅಣಗಿಸುವುದಕ್ಕೆ ಇಲಿಗಳನ್ನು ಹಿಡಿದು ಕೊಲ್ಲಬೇಕೆಂದು ಜನರು ತಮ್ಮ ಮನೆಗಳಲ್ಲಿ ಬೆಕ್ಕುಗಳನ್ನು ಸಾಕುವಂತೆ ಕಲೆಕ್ಟರಿ ಮ್ಯಾಜಿಸ್ಟ್ರೇಟರವರು ಇಸ್ತಿಹಾರು ಕೊಟ್ಟಿದ್ದಾರೆ.

❦❦❦

ಉತ್ತರ ದೇಶಕ್ಕೆ ಸೇರಿದ ರಸೂಲಾ ಬಾಪಿನಲ್ಲಿ ಕಳೆದ ವಾರ ಎರಡು ರೈಲ್‌ಗಾಡಿಗಳು ಢಿಕ್ಕಿಹೊಡೆದು ನಾಲ್ಕು ಮಂದಿ ಮೃತಪಟ್ಟರು. ೧೨ ಜನರಿಗೆ ಗಾಯಗಳಾದವು. ಈ ಪೈಕಿ ಕೆಲವರು ಬದುಕುವುದು ಕಷ್ಟವೆಂದು ತಿಳಿಯುತ್ತದೆ.

❦❦❦

ಸಿಕ್ ಜನರ ವಿದ್ಯಾರ್ಥಿಗಳು ವಿಲಾಯತಿಗೆ ಹೋಗಿ ಬ್ಯಾರಿಸ್ಟರ್ ಪರೀಕ್ಷೆಗಳಿಗೆ ಓದುವಾಗ್ಗೆ ಆ ವಿದ್ಯಾಶಾಲೆಗಳಲ್ಲಿ ಅವರು ಟೋಪಿಗಳನ್ನು ಹಾಕಿಕೊಂಡೇ ಇರಬೇಕೆಂಬ ವಿಧಿಯನ್ನು ತಪ್ಪಿಸಿಕೊಡಬೇಕೆಂದು ಪಂಜಾಬ್ ಗವರ್ನಮೆಂಟಿಗೆ ಬರೆದುಕೊಂಡಿದ್ದಾರೆ.

❦❦❦

ಪಟ್ನಾ ಪಟ್ಟಣದಲ್ಲಿ "ಯುಗಾಂತರ" ವೆಂಬ ಪತ್ರಿಕೆಯನ್ನು ಬಿಕರಿ ಮಾಡುತ್ತಿದ್ದ ಒಬ್ಬ ಬಂಗಾಳಿ ಹುಡುಗನನ್ನು ಅಲ್ಲಿನ ಮ್ಯಾಜಿಸ್ಟ್ರೇಟರು ಕರೆಸಿಕೊಂಡು, ಇನ್ನು ಮುಂದೆ ಆ ಪತ್ರಿಕೆಯನ್ನು ಬಿಕರಿ ಮಾಡಿದರೆ ಶಿಕ್ಷೆಯಾದೀತೆಂದು ಎಚ್ಚರಿಸಿ ಕಳುಹಿಸಿದರು.

❦❦❦

ಇಂಡಿಯಾ ಗವರ್ನಮೆಂಟಿನವರು ಮಿ॥ ವಿ. ಗೋವಿಂದ ನಾಯುಡ್ ಎಂಬ ವಿದ್ಯಾವಂತನಿಗೆ ಸರ್ಕಾರಿ ವೇತನವನ್ನು ಕೊಟ್ಟು ವಿಲಾಯತಿಗೆ ಕಳುಹಿಸಿದ್ದಾರೆ. ಈತನು ಅಲ್ಲಿ ನೂಲಿಗೆ ಬಣ್ಣ ಹಾಕುವುದನ್ನೂ ಇತರ ನೆಯ್ಗೆ ವಿಚಾರಗಳನ್ನೂ ಕಲಿತು ಬರುವವನಾಗಿದ್ದಾನೆ.

❦❦❦

ಬೊಂಬಾಯಿ ಪಟ್ಟಣದಲ್ಲಿ ಶೇಷಯ್ಯ ಸುಂದರ ಅಯ್ಯಂಗಾರ್ ಎಂಬ ಹದಿನೆಂಟು ವರುಷದ ಯೌವನಸ್ಥನು "ಪೇಟ್ರಿಯಟ್" ಎಂಬ ಇಂಗ್ಲಿಷ್ ವಾರ ಪತ್ರಿಕೆಯನ್ನು ಪ್ರಕಟಿಸುವುದಾಗಿ ಮ್ಯಾಜಿಸ್ಟ್ರೇಟರ ಮುಂದೆ ವಾಙ್ಮೂಲವನ್ನು ಬರೆಸಿ ಅಪ್ಪಣೆ ಪಡೆದುಕೊಂಡಿದ್ದಾನೆ.

❦❦❦

ಒಬ್ಬ ಬಂಗಾಳಿ ಸ್ತ್ರೀಯು ತನ್ನ ಸೇವಕಳ ಸಹಿತ ಕಳೆದ ವಾರ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದಾಗ ಗೋಲಂಡಾ ಸ್ಟೇಷನ್ ಬಳಿ ಒಬ್ಬ ಕಳ್ಳನು ಗಾಡಿಯೊಳಕ್ಕೆ ನುಗ್ಗಿ, ಆಕೆಯ ಬಳಿ ಇದ್ದ ಸುಮಾರು ೧೫,೦೦೦ ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿ, ಗಾಡಿಯಿಂದ ಧುಮುಕಿ ಓಡಿಹೋದನು.

❦❦❦

ಚಂದ್ರನಗರದ ಪೋಲೀಸಿನವರು ಚರಣದಾಸ ಗುಪ್ತ ಎಂಬ ಯೌವನಸ್ಥನನ್ನು ಅವನು ಕಲ್ಕತ್ತೆಯ ರಾಜದ್ರೋಹಕರ ಗುಂಪಿಗೆ ಸೇರಿದ್ದವನೆಂದು ದಸ್ತಗಿರಿ ಮಾಡಿದ್ದಾರೆ. ಈತನು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವನೆಂತಲೂ, ವಿದ್ಯಾಶಾಲೆಯ ಡೈರೆಕ್ಟರನ ಕುಮಾರನೆಂತಲೂ ತಿಳಿಯುತ್ತದೆ.

❦❦❦

ಮದರಾಸ್ ಅಧಿಪತ್ಯದಲ್ಲಿ ಬಹಳ ಹಿಂದಾಗಿರುವ ಜಾತಿ ಅಥವಾ ಕೋಮುಗಳ ಮಕ್ಕಳನ್ನು ಪಾಠಶಾಲೆಗಳಿಗೆ ಸೇರಿಸಿಕೊಂಡು ಓದು ಬರಹಗಳನ್ನು ಕಲಿಸಬೇಕೆಂತಲೂ, ಅಂಥಾ ಮಕ್ಕಳಿಂದ ಅರ್ಧ ಫೀಜನ್ನು ಮಾತ್ರ ಸ್ಕೂಲುಗಳಲ್ಲಿ ವಸೂಲ್ಮಾಡಬೇಕೆಂತಲೂ ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ.

❦❦❦

ಕಳೆದ ವಾರ ಕಲ್ಕತ್ತಾ ಪಟ್ಟಣದಲ್ಲಿ ಒಂದು ದಿನ ಬೆಳಿಗ್ಗೆ ಅಪಾರವಾದ ಮಳೆ ಸುರಿಯಲಾರಂಭಿಸಿ, ೮ ಗಂಟೆಯೊಳಗಾಗಿ ೧೨ ಅಂಗುಲ ಪ್ರಮಾಣದಷ್ಟು ನೀರು ಸುರಿಯಿತು. ಜೋರ ಸಾಂಕೊ ಎಂಬ ಬೀದಿಯಲ್ಲಿ ಒಂದು ಮನೆಯು ಕುಸಿದುಬಿದ್ದು ಇಬ್ಬರು ಹೆಂಗಸರೂ ಒಂದು ಮಗುವೂ ಕೆಳಗೆ ಸಿಕ್ಕಿ ಮೃತಪಟ್ಟರು.

❦❦❦

ಪೂರ್ವಬಂಗಾಳ ಎಂಬ ಅಧಿಪತ್ಯಕ್ಕೆ ಸೇರಿದ ಚೋಲಾ ಸಬ್ ಡಿವಿಜನ್ ಆಫೀಸರ್ ಮಿ॥ ಅಬ್ದುಲ್ ಅಜೀಜ್ ಎಂಬವರು ಹನ್ನೆರಡು ದಿನಗಳಿಂದ ಸಿಕ್ಕಿಯಿಲ್ಲ. ಅನೇಕರನ್ನು ಅವರ ಪತ್ತೆಗಾಗಿ ಕಳುಹಿಸಿದ್ದಾರೆ. ಆದರೆ ಆ ಪ್ರಾಂತ್ಯ ಪ್ರಾಪ್ತವಾದ ಅಪಾರವಾದ ಮಳೆ ಸುಂಟರಗಾಳಿಗಳಿಗೆ ಅವರು ಸಿಕ್ಕಿಬಿಟ್ಟರೋ ಏನೋ ಎಂದು ಕೆಲವರು ಊಹಿಸುತ್ತಾರೆ.

❦❦❦

ಸುಮಾರು ಮೂರು ವರುಷಗಳಿಂದೆ ಗವರ್ನಮೆಂಟಿನವರು ಕೆಲವು ಬಂಗಾಳಿ ಯೌವನಸ್ಥರನ್ನು ವೇತನಕೊಟ್ಟು ವಿಲಾಯತಿಗೆ ಕಳುಹಿಸಿ, ಅವರಿಗೆ ಅಲ್ಲಿ ವ್ಯವಸಾಯಶಾಸ್ತ್ರವನ್ನು ಕಲಿಸುತ್ತಿದ್ದರು. ಈ ಪೈಕಿ ಕೆಲವರು ತೇರ್ಗಡೆಹೊಂದಿ ವಾಪಸುಬಂದರು. ಗವರ್ನಮೆಂಟಿನವರು ಅವರಲ್ಲಿ ನಾಲ್ಕುಮಂದಿಗೆ ವ್ಯವಸಾಯದ ಇಲಾಖೆಯಲ್ಲಿ ನೌಕರಿಯನ್ನು ಕೊಡಿಸಿರುತ್ತಾರೆ.

❦❦❦

ಹಿಂದುಸ್ಥಾನದಿಂದ ಕನಡಾ ಎಂಬ ಇಂಗ್ಲೀಷ್ ಸ್ವಾಸ್ಥ್ಯಕ್ಕೆ ಹೋಗತಕ್ಕವರು ಅಲ್ಲಿ ಹಡಗಿನಿಂದ ಇಳಿಯುವಾಗ್ಗೆ ತಮ್ಮ ಬಳಿಯಲ್ಲಿ ೬೦೦ ರೂಪಾಯಿ ಶೇಖರಿ ತಂದಿರಬೇಕೆನ್ನುವುದನ್ನು ಅಲ್ಲಿನ ಸರ್ಕಾರಿ ನೌಕರರಿಗೆ ತಿಳಿಸಿ ತೋರಿಸಬೇಕೆಂತಲೂ, ಇಲ್ಲವಾದರೆ ಅವರು ಆ ದೇಶದಲ್ಲಿ ಸೇರಿಸಿಕೊಳ್ಳದೆ ವಾಪಸು ಕಳುಹಿಸಿ ಬಿಡುತ್ತಾರೆಂತಲೂ ಇಂಡಿಯಾ ಗವರ್ನಮೆಂಟಿನವರು ಪ್ರಕಟಮಾಡಿದ್ದಾರೆ.

❦❦❦

ಉತ್ತರ ದೇಶದಲ್ಲಿ ಕ್ಷಾಮದ ಭೀತಿಯು ಈಚೆಗೆ ಸ್ವಲ್ಪ ಕಡಮೆಯಾಗುವುದಕ್ಕೆ ಪ್ರಾರಂಭವಾಗಿದೆ. ಒಟ್ಟು ೧೨,೩೩,೦೦೦ ಪ್ರಜೆಗಳು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದ್ದರು. ಅದರ ವಿವರ ಹ್ಯಾಗೆಂದರೆ—ಬಂಗಾಳ ೫೦,೦೦೦; ಸಂಯುಕ್ತ ಅಧಿಪತ್ಯಗಳು ೧೧,೩೨,೦೦೦; ಪಂಜಾಬ್ ೨,೦೦೦; ಮಧ್ಯಪ್ರಾಂತ್ಯಗಳು ೩೮,೦೦೦; ಬೊಂಬಾಯಿ ೩,೦೦೦; ಮದರಾಸ್ ೧,೦೦೦; ಮಧ್ಯ ಇಂಡಿಯಾ ೧,೩೩,೦೦೦.

❦❦❦

ಕಲ್ಕತ್ತಾ ಪಟ್ಟಣದಲ್ಲಿ ಒಂದು ವರುಷದ ಕೆಳಗೆ "ಯುಗಾಂತರ" ಪತ್ರಿಕೆಯ ಎಡಿಟರಾಗಿದ್ದ ಭೂಪೇಂದ್ರನಾಥ ಬೋಸ್ ಎಂಬಾತನು ರಾಜದ್ರೋಹಕರವಾದ ವಾಕ್ಯವನ್ನು ಬರೆದನೆಂದು ಮೊಕದ್ದಮೆ ಆಗಿ ಅತನಿಗೆ ಒಂದು ವರುಷ ಸಜಾ ಆಗಿತ್ತು. ಕಳೆದ ವಾರ ಅತನನ್ನು ಜೈಲಿನಿಂದ ಖುಲಾಸ್ ಮಾಡಿದರು. ಆಗ್ಗೆ ಬಾಬು ಬಿಪಿನ ಚಂದ್ರ ಪಾಲ್ ಎಂಬವರು ಅತನನ್ನು ಸಂಧಿಸಿ, ಕರೆದುಕೊಂಡು ಹೋದರು. ವಿಶೇಷ ಗಲಭೆಯೇನೂ ಆಗಲಿಲ್ಲ.

❦❦❦

ಕಾಂಕಿನಾರಾ ಎಂಬ ಸ್ಥಳದಲ್ಲಿ ಒಂದು ರೈಲ್ ಗಾಡಿಯೊಳಗೆ ಕಳೆದ ವಾರ ಮೂರುಮಂದಿ ಯೂರೋಪ್ಯರು ಕಾರ್ಖಾನೆಗಾರರು ಕುಳಿತು ಪ್ರಯಾಣ ಮಾಡುತ್ತಿದ್ದಾಗ ಅವರನ್ನು ಕೊಲ್ಲಬೇಕೆಂದು ಸಿಡಿಮದ್ದಿನ ಗುಂಡನ್ನು ಎಸೆದರು. ಆ ಗುಂಡು ಒಡೆದು ಒಬ್ಬ ಯೂರೋಪ್ಯನಿಗೆ ಪೂರಾ ಗಾಯವಾಯಿತು. ಇನ್ನಿಬ್ಬರಿಗೂ ಸ್ವಲ್ಪ ಪೆಟ್ಟು ಆಗಿದೆ. ಗಾಡಿಯಿಂದ ಹಿಂದುಗಡೆ ಬಾಗಿಲು ದಾಟಿ ಹೋಗುತ್ತಿದ್ದ ಒಬ್ಬ ಬಂಗಾಳಿಯನ್ನು ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ.

❦❦❦

ಸ್ಟ್ರೇಟ್ಸ್ ಸೆಟ್ಲಮೆಂಟ್ ಪ್ರಾಂತ್ಯದಿಂದ ಜಾವಾ ಕಡೆ ರಾಟಾನ್ ವಿಂಗೂ ಹಲ್ಲಿ (ಪಲ್ಲಿ) ಯ ಚರ್ಮಗಳನ್ನು ಬಹಳವಾಗಿ ರಫ್ತುಮಾಡಿ ಸಂಪಾದನೆ ಮಾಡುತ್ತಿದ್ದಾರೆ. ಸಣ್ಣ ಹಲ್ಲಿಯ ಚರ್ಮಕ್ಕೆ ೮ ಆಣೆಯಿಂದ ೧೮ ಆಣೆ ವರೆಗೂ, ದೊಡ್ಡ ಹಲ್ಲಿಯ ಚರ್ಮಕ್ಕೆ ೩೦ ಆಣೆಯಿಂದ ೪೦ ಆಣೆಯ ವರೆಗೂ ಕ್ರಯ ದೊರಕುವುದು. ಹಿಂದುಸ್ಥಾನದೊಳಗೆ ಈ ಹಲ್ಲಿಗಳು ಲೆಕ್ಕವಿಲ್ಲದಷ್ಟು ದೊರಕುವುದರಿಂದ ಯಾರಾದರೂ ಈ ವ್ಯಾಪಾರವನ್ನು ಪ್ರಾರಂಭಿಸುವುದು ಒಳ್ಳೆಯದೆಂದು ಕೆಲವರು ಸೂಚಿಸುತ್ತಾರೆ.

❦❦❦

ಪೂನಾ ಪಟ್ಟಣದಲ್ಲಿ ಪ್ರಕಟವಾಗುತ್ತಿದ್ದ "ಕಾಲ್" ಎಂಬ ಪತ್ರಿಕೆಯ ಎಡಿಟರಾದ ಎಸ್. ಎಂ. ಪರಾಂಜಪೆ ಎಂಬಾತನ ಮೇಲೆ ರಾಜದ್ರೋಹದ ಮೊಕದ್ದಮೆ ಹುಟ್ಟಿ, ಸೆಷನ್ಸ್ ವಿಚಾರಣೆಗೆ ಗುರಿಮಾಡಿದ್ದಾರಷ್ಟೆ. ಸೆಷನ್ಸ್ ವಿಚಾರಣೆಯು ಕಳೆದ ಶನಿವಾರ ಪ್ರಾರಂಭವಾಯಿತು. ಅತನನ್ನು ೧೦,೦೦೦ ರೂಪಾಯಿನ ಸ್ವಂತ ಮುಚ್ಚಳಿಕೆಯ ಮೇಲೂ, ೩,೫೦೦ ರೂಪಾಯಿ ಬಾಬತು ಎರಡು ಜಾಮೀನುದಾರರ ಪತ್ರಗಳ ಮೇಲೂ ಹೈ ಕೋರ್ಟ್ ಜಸ್ಟಿಸ್ ಮಿ॥ ದಪಾರ್ ಎಂಬವರು ಖುಲಾಸ್ ಮಾಡಿರುತ್ತಾರೆ.

❦❦❦

ಬೊಂಬಾಯಿ ಪಟ್ಟಣದಲ್ಲಿ "ವಿಹಾರಿ" ಎಂಬ ಮರಾಟಿ ವರ್ತಮಾನ ಪತ್ರಿಕೆಯ ಎಡಿಟರಾದ ರಾಮಚಂದ್ರ ನಾರಾಯಣ ಮಂಡಲಿಕ್ ಎಂಬ ಬ್ರಾಹ್ಮಣನು ಆ ಪತ್ರಿಕೆಯಲ್ಲಿ ಪ್ರಜೆಗಳನ್ನು ಸರ್ಕಾರದವರ ಮೇಲೆ ಎತ್ತಿಕಟ್ಟುವಂಥಾ ವಾಕ್ಯಗಳನ್ನು ಬರೆದನೆಂದು ಮೊಕದ್ದಮೆ ಆಯಿತು. ಅಲ್ಲಿನ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ದರ್ಯಾಪ್ತಿಮಾಡಿ ಕಳೆದ ತಾ. ೨೩ ರಲ್ಲಿ ಆ ಅಪರಾಧಿಗೆ ಎರಡು ವರುಷ ಕಠಿಣಸಜಾ, ೧,೦೦೦ ರೂಪಾಯಿ ಜುಲ್ಮಾನೆ; ಜುಲ್ಮಾನೆ ವಸೂಲಾಗದಿದ್ದರೆ ಇನ್ನಾರು ತಿಂಗಳ ಕಠಿಣಸಜಾ ಎಂಬೀ ಶಿಕ್ಷೆಯನ್ನು ವಿಧಿಸಿದರು.

❦❦❦

ವಿರಾಜಪೇಟೆಯಲ್ಲಿರುವ ಶ್ರೀನೃಸಿಂಹ ಭಾರತೀ ಸ್ವಾಮಿಗಳು ರೆಸಿಡೆಂಟರ ಲೈಸೆನ್ಸ್ ಪಡೆಯದೆ ಕೆಲವು ಹತ್ಯಾರುಗಳನ್ನು ಇಟ್ಟುಕೊಂಡಿದ್ದಾರೆಂತಲೂ, ಬೆಳಗಾವಿಯ ಕಲೆಕ್ಟರವರು ಕೊಟ್ಟಿರುವ ಲೈಸೆನ್ಸು ಕುಂಪಣೀ ಸೀಮೆಗೆ ಮಾತ್ರ ಅನ್ವಯಿಸುವುದೆಂತಲೂ ಹೇಳಿ ಆ ಸ್ವಾಮಿಗಳನ್ನು ಕೊಲ್ಹಾಪುರದ ಮಹಾರಾಜರವರ ಪೋಲೀಸಿನವರು ದಸ್ತಗಿರಿ ಮಾಡಿ, ಕಾಲ್ನಡಿಗೆಯಲ್ಲೇ ರಾಜಧಾನಿಗೆ ಕರೆದುಕೊಂಡು ಹೋದರು. ಈ ವಿಷಯವು ಆ ಪ್ರಾಂತ್ಯದಲ್ಲಿ ಸ್ವಲ್ಪ ಗಲಭೆಯನ್ನುಂಟುಮಾಡಿದೆ. ಆ ಸ್ವಾಮಿಗಳು ಈ ಮೊಕದ್ದಮೆ ಇತ್ಯರ್ಥವಾಗುವ ತನಕ ತಾವು ಆಹಾರವನ್ನೇ ಮುಟ್ಟುವುದಿಲ್ಲವೆಂದು ನಿಶ್ಚಯಿಸಿಕೊಂಡಿರುವುದಾಗಿ ತಿಳಿದು ಬಂದಿದೆ.

ಕೆಲವು ಕಾಲ ಮೈಸೂರು ಸಂಸ್ಥಾನದ ರೆಸಿಡೆಂಟರಾಗಿಯೂ ತರುವಾಯ ೧೮೯೭ ರಿಂದ ೧೯೦೭ರ ವರೆಗೆ ಪಂಜಾಬ್ ಲೆಫ್ಟಿನೆಂಟ್ ಗವರ್ನರಾಗಿಯೂ ಇದ್ದು ಈಗ ವಿಲಾಯತಿಯಲ್ಲಿ ವಿಶ್ರಾಂತಿಸುಖವನ್ನನುಭವಿಸುತ್ತಿರುವ ಸರ್ ಮೆಕ್ವರ್ತ್ ಯಂಗ್ ಎಂಬವರು ಹಿಂದಿನ ವಾರ ವಿಲಾಯತಿಯಲ್ಲಿ ಒಂದು ಸಭೆಯಲ್ಲಿ ಉಪನ್ಯಾಸಮಾಡುತ್ತಿರುವಾಗ್ಗೆ ಹಿಂದುಸ್ಥಾನದಲ್ಲಿ ಈಗ ಉಂಟಾಗಿರುವ ಅತಿರೇಕ ಕಾರ್ಯಗಳನ್ನು ವಿವರಿಸುತ್ತಾ, ಹಿಂದುಸ್ಥಾನದಲ್ಲಿ ಈ ದುಷ್ಕಾರ್ಯಗಳನ್ನು ನಿರ್ಮೂಲಮಾಡಿದಾಗ್ಯೂ ಪ್ರಜಾಕೋಟಿಗಳಲ್ಲಿ ಹುಟ್ಟಲಾರಂಭವಾಗಿರುವ ನೂತನ ಉದ್ದೇಶ ಅಭಿಪ್ರಾಯಗಳನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ಗೋದಾವರೀ ಜಿಲ್ಲೆಯಲ್ಲಿ ತೆಂಗಿನ ಮರಗಳಿಗೆ ಒಂದು ವಿಧವಾದ ಹುಳ ಹಿಡಿದು ಫಸಲನ್ನು ಕೆಡಿಸುವುದಲ್ಲದೆ ಮರಗಳೇ ಒಣಗುವಂತೆ ಮಾಡುತ್ತಿದೆ. ಇದರಿಂದ ಅಲ್ಲಿನ ರೈತ ಪ್ರಜೆಗಳೂ ಜಮೀನ್ದಾರರೂ ಬಹಳ ನಷ್ಟವನ್ನನುಭವಿಸುತ್ತಿರುವರು. ಮದರಾಸ್ ಗವರ್ನಮೆಂಟಿನವರು ಆ ಹುಳಗಳನ್ನು ನಾಶ ಮಾಡುವುದಕ್ಕೋಸ್ಕರ ಕೆಲವು ರೆವಿನ್ಯೂ ಇನ್ಸ್ಪೆಕ್ಟರುಗಳನ್ನು ಸ್ಪೆಷಲ್ಲಾಗಿ ಅಲ್ಲಿಗೆ ಕಳುಹಿಸಿ, ಅವರು ಮಾಡುವ ಪ್ರಯತ್ನಗಳಿಗಾಗಿ ೨೫,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ವ್ಯವಸಾಯದ ಇಲಾಖಾ ಡೈರೆಕ್ಟರಾದ ಮಿ॥ ಎಂ. ಇ. ಕೌಚ್‌ಮನ್ ಎಂಬವರು ಅದರ ಫಲಿತಾಂಶವನ್ನು ತಿಳಿಸುವುದಕ್ಕೆ ಇನ್ನೂ ಕೆಲವು ಕಾಲವಾದೀತೆಂದು ಬರೆದಿದ್ದಾರೆ.

❦❦❦

ಕಲ್ಕತ್ತಾ ಪಟ್ಟಣದಲ್ಲಿ ಸಿಡಿಮದ್ದಿನ ಗುಂಡುಗಳನ್ನು ತಯಾರುಮಾಡಿ ಘಾತಕ ಕೃತ್ಯಗಳನ್ನು ನಡಿಸಬೇಕೆಂದು ಮಸಲತ್ತು ಮಾಡಿದ್ದ ಫಿತೂರಿ ಗುಂಪಿನವರನ್ನು ಸರ್ಕಾರದವರು ಹಿಡಿದು ದರ್ಯಾಪ್ತಿ ಮಾಡುತ್ತಿದ್ದಾರಷ್ಟೆ. ಅಪರಾಧಿಗಳ ಪೈಕಿ ಒಬ್ಬನಾದ ಗೋಸಾಯಿಯು ಫಿತೂರಿಗಾರರ ಮಸಲತ್ತುಗಳನ್ನೂ ಕಾರ್ಯಕರ್ತರುಗಳನ್ನೂ ಸರ್ಕಾರದವರಿಗೆ ವಿವರಿಸುವುದಾಗಿ ಮಾತುಕೊಟ್ಟಿದ್ದರಿಂದ ಸರ್ಕಾರದವರು ಅವನನ್ನು ತಮ್ಮ ಕಡೆಗೆ ಕರೆದುಕೊಂಡು ಅವನಿಗೆ ಕ್ಷಮಾಪಣೆ ಕೊಡುವುದಾಗಿ ವಾಗ್ದಾನ ಮಾಡಿದ್ದಾರೆ. ಈ ಗೋಸಾಯಿಯು ಫಿತೂರಿಗಾರರ ಪೂರ್ವೋತ್ತರವನ್ನು ವಿವರಿಸುತ್ತಿದ್ದಾನೆ. ಪೋಲೀಸಿನವರು ಅವನ ಹೇಳಿಕೆಯ ಪ್ರಕಾರ ಅನೇಕರನ್ನು ಹೊಸದಾಗಿ ದಸ್ತಗಿರಿ ಮಾಡಿರುವರು. ಈ ಫಿತೂರಿ ಗುಂಪಿಗೆ ಮುಖಂಡನೆಂದು ಹೇಳಿದ ಹೇಮೇಂದ್ರನಾಥ ಬ್ಯಾನರ್ಜಿಯನ್ನು ಬರ್ದ್ವಾನಿನ ಬಳಿ ಒಂದು ಗ್ರಾಮದಲ್ಲಿ ಹಿಡಿದಿದ್ದಾರೆ. ಅವನೂ ಕೈಫಿಯತ್ತು ಕೊಟ್ಟಿರುವಂತೆ ತಿಳಿಯುವುದು.

❦❦❦

ಪೂನಾ ಪಟ್ಟಣದಲ್ಲಿ ಮಿ॥ ಬಾಲಗಂಗಾಧರ ತಿಲಕರವರು "ಕೇಸರಿ" ಎಂಬ ಮರಾಟಿ ವಾರ ಪತ್ರಿಕೆಯ ಕಳೆದ ಮೇ ತಿಂಗಳ ೧೨ನೇ ತಾರೀಖಿನ ಸಂಚಿಕೆಯಲ್ಲಿ ರಾಜದ್ರೋಹಕರವಾದ ವಾಕ್ಯವನ್ನು ಬರೆದಿರುತ್ತಾರೆಂದು ಮೊಕದ್ದಮೆ ಆಗಿ, ಕಳೆದ ವಾರ ಮಿ॥ ತಿಲಕರನ್ನು ಬೊಂಬಾಯಿನಲ್ಲಿ ಪೋಲೀಸಿನವರು ದಸ್ತಗಿರಿ ಮಾಡಿದರು. ಅವರನ್ನು ಜಾಮೀನ್ ಮೇಲೆ ಬಿಡುವುದಿಲ್ಲವೆಂದು ಹೇಳಿ ಲಾಕಪ್ಪಿನಲ್ಲಿ ಇಟ್ಟಿದ್ದಾರೆ. ಅತ್ತಲಾಗಿ ಪೂನಾ ಪಟ್ಟಣದಲ್ಲಿ "ಕೇಸರಿ" ಪ್ರಕಟವಾಗುತ್ತಿದ್ದ ಅಚ್ಚಿನ ಕಾರ್ಖಾನೆಯನ್ನು ಪೋಲೀಸಿನವರು ಶೋಧಿಸಿ, ಬೀಗ ಮುದ್ರೆ ಹಾಕಿಬಿಟ್ಟಿದ್ದಲ್ಲದೆ ಮಿ॥ ತಿಲಕರ ಮನೆಯನ್ನೂ ಜಪ್ತಿ ಮಾಡಿ, ಕೆಲವು ಕಾಗದಪತ್ರಗಳನ್ನು ತೆಗೆದುಕೊಂಡು ಹೋದರು. ಅವರನ್ನು ದಸ್ತಗಿರಿ ಮಾಡಿದ ವರ್ತಮಾನವು ಸಾಮಾನ್ಯವಾಗಿ ಬೊಂಬಾಯಿ ಅಧಿಪತ್ಯದಲ್ಲೆಲ್ಲಾ ಸ್ವಲ್ಪ ಗಲಿಬಿಲಿಯನ್ನುಂಟುಮಾಡಿದೆ. ಪೂನಾ ಪಟ್ಟಣದಲ್ಲಿ ಆ ದಿನ ಜನರು ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಬಿಟ್ಟಿದ್ದರು.

❦❦❦

ಬಂಗಾಳ ನಾಗಪುರ ರೈಲ್ವೆಲೈನಿನಲ್ಲಿ ಪಿಂಡರೋಡ್ ಸ್ಟೇಷನಿನಿಂದ ಸುಮಾರು ಹತ್ತುಮೈಲಿ ದೂರದಲ್ಲಿ ಅಂದರೆ ಅಮರಕಂಟಕ ಬೆಟ್ಟಗಳ ಬಳಿ ರಾಣಿ ಬಕಾವಲಿ ಎಂಬ ಒಂದು ಪುರಾತನ ದುರ್ಗವಿರುತ್ತದೆ. ರೈಲ್ ಸ್ಟೇಷನಿಂದ ಆ ಕೋಟೆಯು ತನಕ ಜಂಗಲಾಗಿಯೂ, ಕೊಚ್ಚೆ ಭೂಮಿಯಾಗಿಯೂ ಇರುವುದು. ಆ ಕೋಟೆಗೆ ಸುತ್ತಲೂ ಗೋಡೆ ಇರುವುದಲ್ಲದೆ ಬಾಗಿಲು ಯಾವ ಕಡೆಯಲ್ಲೂ ಇಲ್ಲವೇ ಇಲ್ಲ. ಪೂರ್ವ ಕಾಲದಲ್ಲಿ ಆಕಾಶಬುಟ್ಟಿಗಳೊಳಗೆ ಕುಳಿತು ಈ ಕೋಟೆಗೆ ಹೋಗಿಬರುತ್ತಿದ್ದರೆಂದು ತಿಳಿಯುತ್ತದೆ. ಈಗ ಈ ಕೋಟೆಯೊಳಗೆ ಅಪಾರವಾದ ಚಿನ್ನ ದೊರಕುತ್ತದೆಂತಲೂ, ಇದಕ್ಕೆ ಹಿಂದುಗಳೂ ಮಹಮ್ಮದೀಯರೂ ಸೇರಿ ಒಂದು ಕಂಪನಿ ಮಾಡಿಕೊಂಡು ಆ ಚಿನ್ನವನ್ನು ಶೋಧಿಸಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂತಲೂ, ಎಷ್ಟು ಕಷ್ಟವಾದರೂ ಪ್ರತಿಫಲವು ಖಂಡಿತವಾಗಿ ಹೆಚ್ಚು ದೊರಕುವುದೆಂತಲೂ ಒಬ್ಬ ವಾತ್ಮದಾರನು "ಇಂಡಿಯನ್ ಮಿರರ್" ಎಂಬ ಪತ್ರಿಕೆಯಲ್ಲಿ ಬರೆದಿರುತ್ತಾನೆ.

❦❦❦

ಪ್ಲೇಗ್ ಸೋಂಕು ಇರುವ ಕೋಣೆಯನ್ನು ಬೆಂಕಿಯಿಂದಲಾಗಲಿ ದ್ರಾವಕಗಳಿಂದಲಾಗಲಿ ಶುದ್ಧಿಮಾಡುವುದು ಪ್ರಯೋಜನವಿಲ್ಲವೆಂತಲೂ, ಇನ್ನೊಂದು ರೀತಿಯಲ್ಲಿ ಶುದ್ಧಿಮಾಡಿದರೆ ಖಂಡಿತವಾಗಿಯೂ ಪ್ಲೇಗ್ ಸೋಂಕು ನಿರ್ನಾಮವಾಗುವುದೆಂತಲೂ ಪರೀಕ್ಷೆಗಳಿಂದ ತಿಳಿಸಿರುತ್ತಾರೆ. ಈ ಸಂಗತಿಯನ್ನು ಎಲ್ಲರೂ ತಿಳಿದು ಅದರಂತೆ ಮಾಡಿ, ಮನೆಮಠಗಳನ್ನು ಶುದ್ಧಿಮಾಡಿಕೊಳ್ಳುವುದರ ಮೂಲಕ ಪ್ಲೇಗ್ ರೋಗವನ್ನು ಅಣಗಿಸಬೇಕಾಗಿರುತ್ತದೆ. ಈ ಹೊಸ ವಿಧಾನದ ಶುದ್ಧಿ ಕ್ರಮವೇನೆಂದರೆ—ಬಟ್ಟೆಗೆ ಹಾಕುವ ಕಾರ್ಬೋಲಿಕ್ ಸೋಪ್ ಎಂಬ ಸಾಬೂನನ್ನು ಸ್ವಲ್ಪ ನೀರಿನಲ್ಲಿ ಕರಗಿಸಿ, ಈ ನೀರನ್ನು ಚನ್ನಾಗಿ ಕಾಯಿಸಬೇಕು. ಅದು ಕುದಿಯುತ್ತಿರುವಾಗ ಕೆರೋಸಿನ್ನು (ದೀಪದ ಎಣ್ಣೆ) ಯನ್ನು ಹೆಚ್ಚಾಗಿ ಆ ಪಾತ್ರೆಯೊಳಕ್ಕೆ ಸ್ವಲ್ಪಸ್ವಲ್ಪವಾಗಿ ಸುರಿಯುತ್ತಾ ಕಲಕುತ್ತಾ ಎಲ್ಲಾ ಬೆರಳೆಯಾಗುವಂತೆ ತಿರುವಬೇಕು. ಈ ನೀರನ್ನು ತೆಗೆದುಕೊಂಡು ಪ್ಲೇಗ್ ಸೋಂಕು ಇರುವಂಥಾ ಕೊಠಡಿಯ ನೆಲವನ್ನೂ ಗೋಡೆಗಳನ್ನೂ ಚನ್ನಾಗಿ ತೊಳೆದು ಆರಿಸಿದರೆ ಪ್ಲೇಗ್ ಕ್ರಿಮಿಗಳು ಖಂಡಿತವಾಗಿ ನಾಶವಾಗುವುವು. ಈ ನೀರನ್ನು ಬೊಂಬಾಯಿನ ಸರ್ಕಾರಿ ಪ್ಲೇಗ್ ಪರಿಶೋಧನಾ ಮಂದಿರದಲ್ಲಿ ಡಾಕ್ಟರುಗಳು ತಯಾರುಮಾಡಿ, ಕೆಲವು ಕಡೆಗಳಲ್ಲಿ ಉಪಯೋಗಿಸಿ ಪರೀಕ್ಷೆ ಮಾಡಿರುತ್ತಾರೆ. ಎಲ್ಲರೂ ಇದನ್ನು ಮಾಡುವುದು ಅನುಕೂಲವಾಗಿದೆ.

ವಿದೇಶ ವರ್ತಮಾನಗಳು.

ಫ್ರಾನ್ಸ್ ಸಂಸ್ಥಾನದಲ್ಲಿ ಕಳೆದ ವಾರ ಬಹು ಕಠಿಣವಾದ ಬಿರುಗಾಳಿಯೂ ಮಳೆಯೂ ಪ್ರಾಪ್ತವಾಗಿ ಪೈರು ಪಚ್ಚೆಯನ್ನು ಹಾಳುಮಾಡಿರುತ್ತದೆ.

ಈಜಿಪ್ಟಿನ ಖಡೈವ್‌ರವರು ಪರಿವಾರ ಸಹಿತ ಕಳೆದ ವಾರ ಲಂಡನ್ ಪಟ್ಟಣವನ್ನು ತಲಪಿದರು. ಸ್ಟೇಷನಲ್ಲಿ ಅಧಿಕಾರಿಗಳು ಕಾದಿದ್ದು ಅವರನ್ನು ಮರ್ಯಾದೆಗಳೊಡನೆ ಎದುರುಗೊಂಡರು.

* * *

ಇಟಲಿ ರಾಜ್ಯಕ್ಕೆ ಸೇರಿದ ಮಿಲ್ಯಾನ್ ಪಟ್ಟಣದಲ್ಲಿ ಎಂ. ಡಿಲಾ ಗ್ರಾಂಜೆ ಎಂಬಾತನು ಒಂದು ವಿಮಾನವನ್ನು ಕಟ್ಟಿ ಅದರಲ್ಲಿ ಕುಳಿತು ೧೬ ನಿಮಿಷದಲ್ಲಿ ೧೨ ಮೈಲಿದೂರ ಹೋಗಿ ಬಂದಿರುತ್ತಾನೆ.

* * *

೧೮೯೫ ರಿಂದ ೧೯೦೦ ನೇ ಇಸವಿಯವರೆಗೆ ಐದು ವರುಷ ಮದರಾಸ್ ಅಧಿಪತ್ಯದ ಗವರ್ನರಾಗಿದ್ದು, ಕೀರ್ತಿಗೆ ಪಡೆದುವಾಗಿದ್ದ ಸರ್ ಆರ್ಥರ್ ಹಾವೆಲಾಕ್‌ಯವರು ಕಳೆದ ವಾರ ಕಾಲವಾದರೆಂದು ತಂತೀ ವರ್ತಮಾನ ಬಂದಿದೆ.

* * *

ಆಫ್ಘನ್ ಸೈನಿಕರು ೬೦೦ ಮಂದಿ ಆಯುಧ ಸಮೇತರಾಗಿಯೂ ೭,೦೦೦ ಒಂಟೆಗಳ ಮೇಲೆ ತಮಗೆ ಬೇಕಾಗುವ ಸಾಮಗ್ರಿಗಳನ್ನು ಹೊರಿಸಿಕೊಂಡೂ ವೈನಾಬ್ ಎಂಬ ರಾಜ್ಯದಿಂದ ಹೊರಟು ಪರ್ಷಿಯಾಗೆ ಹೋಗುತ್ತಿದ್ದಾರೆಂದು ತಂತೀ ವರ್ತಮಾನ ಬಂದಿದೆ.

* * *

ಕುರ್ಡ್ ಎಂಬ ತುರ್ಕಿ ಸುಲ್ತಾನರ ಪ್ರಜೆಗಳು ಪರ್ಷಿಯ ಎಲ್ಲೆ ಕಟ್ಟಿನ ಪ್ರಾಂತ್ಯದಲ್ಲಿ ಕೆಲವು ಕಾಲದಿಂದ ನಾನಾ ಅಕೃತ್ಯಗಳನ್ನು ಮಾಡುತ್ತಿದ್ದಾರೆ. ಇವರ ದಾಂಧಲೆಯನ್ನು ಅಡಗಿಸಬೇಕೆಂದು ಇಂಗ್ಲಿಷ್ ಮತ್ತು ರಷ್ಯಾ ಗವರ್ನಮೆಂಟಿನವರು ತುರ್ಕಿ ಸುಲ್ತಾನರಿಗೆ ತಿಳಿಸಿರುತ್ತಾರೆ

* * *

ಅಮೇರಿಕಕ್ಕೆ ಸೇರಿದ ನ್ಯೂಯಾರ್ಕ್ ಎಂಬ ದೊಡ್ಡ ಪಟ್ಟಣದಲ್ಲಿ ಒಂದು ಸರಸ್ವತೀ ಭಂಡಾರಕ್ಕೆ ಬೆಂಕಿ ಬಿದ್ದು ಒಂದೂವರೆ ಲಕ್ಷ ಪುಸ್ತಕಗಳೂ ಬರವಣಿಗೆಗಳೂ ಸುಟ್ಟುಹೋದವು. ಈ ವಿಷಯವು ಅಲ್ಲಿನ ಗ್ರಂಥಕರ್ತರಲ್ಲೂ ವಿದ್ಯಾವಂತರಲ್ಲೂ ತುಂಬಾ ವ್ಯಸನವನ್ನುಂಟುಮಾಡಿದೆ.

* * *

ಬೊಂಬಾಯಿ ಪಟ್ಟಣದ ಪ್ರಸಿದ್ಧ ಪಾರ್ಸಿ ಸಾಹುಕಾರರಾದ ಸರ್ ಜಾಂಸೇಟ್‌ಜಿ ಜೀಜೀಭಾಯಿಯವರು ಕಾಲವಾದ ವರ್ತಮಾನವನ್ನು ಪಾರ್ಸಿ ದಿವ್ಯದಲ್ಲಿರುವ ಅಗ್ನಿಪೂಜಕರು ಬಹಳ ವ್ಯಸನಪಟ್ಟು, ತಮ್ಮ ಅಂಗಡಿ ಮುಂಗಟ್ಟುಗಳನ್ನು ಕೆಲಸಗಳನ್ನು ಒಂದು ದಿನ ಮೋಕೂಫ್ ಮಾಡಿದ್ದರು

* * *

ಚೀನಾ ರಾಜ್ಯದಲ್ಲಿ ಎಲ್ಲಾ ಪ್ರಜೆಗಳೂ ಅಫೀಂ ಸೇವಿಸುವವರಾಗಿದಾರೆಂಬ ಮಾತು ನಿಜವಲ್ಲವೆಂತಲೂ, ಕೇವಲ ಇಷ್ಟರು ಮಾತ್ರ ಆ ದುರಭ್ಯಾಸದಲ್ಲಿ ಬಿದ್ದಿದಾರೆಂತಲೂ, ಅಫೀಮಿನ ವ್ಯಾಪಾರವನ್ನು ಕಡಮೆ ಮಾಡುವುದು ತರವಲ್ಲವೆಂತಲೂ ಹಾಂಕಾಂಗಿನ ಮಂತ್ರಾಲೋಚನಾ ಸಭೆಯಲ್ಲಿ ಮಿ॥ ಕ್ಲೆಮೆಂಟ್ ಎಂಬ ಮೆಂಬರು ತಿಳಿಸಿದರು

* * *

ಡಿಮೋಯ್ನೆ ಎಂಬೊಬ್ಬ ಫ್ರೆಂಚ್ ಪ್ರಜೆಯು ತನಗೆ ತಿಳಿದಿರುವ ವಜ್ರಗಳನ್ನು ತಯಾರಿಸುವ ವಿಧಾನವನ್ನು ಹೇಳಿಕೊಡುತ್ತೇನೆಂದು ಸರ್ ಜೂಲಿಯಸ್ ವರ್ನರ್ ಎಂಬಾತನಿಗೆ ಆಸೆ ಹುಟ್ಟಿಸಿ, ಆತನಿಂದ ೯ ಲಕ್ಷ ರೂಪಾಯಿ ಕಸುಕೊಂಡು ಮೋಸಪಡಿಸಿದನು. ಅದರ ಮೇಲೆ ಆತನು ಫಿರ್ಯಾದು ತಂದಿದ್ದನು. ಈಗ ಆ ಫ್ರೆಂಚ್ ಮನುಷ್ಯನು ತಲೆ ತಪ್ಪಿಸಿಕೊಂಡು ಹೋಗಿಬಿಟ್ಟನೆಂದು ತಂತೀ ವರ್ತಮಾನ ಬಂದಿದೆ.

* * *

ಕ್ಯಾನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೆ ವಿದ್ಯಾಭ್ಯಾಸ ಮಾಡುವ ಪಕ್ಷಕ್ಕೋಸ್ಕರ ಹೋಗುವ ಚೀನಾ ವಿದ್ಯಾರ್ಥಿಗಳು ಮೊದಲು ಅಲ್ಲಿನ ಸರ್ಕಾರದಲ್ಲಿ ೧,೦೦೦ ರೂಪಾಯಿ ಠೇವಣಿ ಕಟ್ಟಬೇಕು. ವಿದ್ಯಾಭ್ಯಾಸವೆಲ್ಲ ಪೂರೈಸಿ ಅವರು ವಾಪಸು ಹೋಗುವಾಗ್ಗೆ ಸರ್ಕಾರದವರು ಆ ಠೇವಣೀ ಹಣವನ್ನು ಕೊಟ್ಟು ಕಳುಹಿಸುತ್ತೇವೆಂದು ತಿಳಿಸಿದಾರೆ. ಹೀಗೆ ಠೇವಣಿ ಕಟ್ಟದೆ ಹೋಗುವ ವಿದ್ಯಾರ್ಥಿಗಳನ್ನು ಅಲ್ಲಿಗೆ ಸೇರಿಸುವುದೇ ಇಲ್ಲ

* * *

ಸ್ಪೇಯಿನ್ ರಾಜ್ಯಕ್ಕೆ ಸೇರಿದ ಕೇಪ್ ಫಿನಿಸ್ಟರ್ ಎಂಬ ಭೂಶಿರದ ಬಳಿ ಲಾರಾವ್ ಎಂಬ ಒಂದು ಹಡಗು ಮಂಜಿನಲ್ಲಿ ದಾರಿ ಕಾಣದೆ ನುಗ್ಗಿ ಒಂದು ಬಂಡೆಗೆ ಬಡಿದು ಸಮುದ್ರದೊಳಗೆ ಮುಳುಗಿ ಹೋಯಿತು. ೨೫೦ ಜನರು ನೀರಿನ ಪಾಲಾದರೆಂದೂ, ದೋಣಿಗಳ ಮೂಲಕ ೩೦ ಜನರನ್ನು ಕರೆದುತಂದರೆಂದೂ ಕಾ ೨೫ರಲ್ಲಿ ತಂತೀ ವರ್ತಮಾನ ಬಂದಿತ್ತು. ಈಚೆಗೆ ಸಮುದ್ರದಲ್ಲಿ ಮುಳುಗಿ ಸತ್ತವರು ೩೮ ಮಂದಿ ಎಂದು ತಿಳಿಯುವುದು.

* * *

ಕಳೆದ ಭಾನುವಾರ ಲಂಡನ್ ಪಟ್ಟಣದ ಹೈಡ್ ಪಾರ್ಕ್ ಎಂಬ ಉದ್ಯಾನವನದಲ್ಲಿ ಸ್ತ್ರೀಯರ ದೊಡ್ಡ ಸಭೆ ನಡೆಯಿತು. ಸುಮಾರು ೩೦,೦೦೦ ಸ್ತ್ರೀಯರು ಮೆರವಣಿಗೆ ಮಾಡಿಕೊಂಡು ಹೋದರು. ಆ ಉದ್ಯಾನವನದಲ್ಲಿ ಪ್ರಮುಖ ಸ್ತ್ರೀಯರು ಉಪನ್ಯಾಸ ಮಾಡಿ ಸ್ತ್ರೀಯರಿಗೆ ಓಟ್ ಎಂಬ ಚುನಾವಣೆಯ ಹಕ್ಕನ್ನು ಕೊಡಬೇಕೆಂದು ಹೇಳಿದರು ಸುಮಾರು ೫ ಲಕ್ಷ ಪ್ರಜೆಗಳು ಆಗ ಅಲ್ಲಿ ಸೇರಿದ್ದರೆಂದು ತಿಳಿಯುವುದು.

* * *

ಚೀನಾ ರಾಜ್ಯದಲ್ಲಿ ಪಶ್ಚಿಮನದಿ ಎಂಬ ದೊಡ್ಡ ನದಿಯಲ್ಲಿ ಕಳೆದ ವಾರ ಅಪಾರವಾದ ಪ್ರವಾಹಗಳು ಬಂದು ಹಲವು ಪಟ್ಟಣಗಳೇ ನೀರಿನಲ್ಲಿ ಮುಳುಗಿ ಹೋಗಿವೆ ಎಂದೂ, ಆ ಪ್ರಾಂತ್ಯದಲ್ಲೆಲ್ಲಾ ಭತ್ತದ ಪೈರೂ ಇತರ ಪೈರುಗಳೂ ಕೊಚ್ಚಿ ಹೋದವೆಂದೂ, ನೀರು ಮುಂದಕ್ಕೆ ಹಾಯ್ದು ನಷ್ಟ ಮಾಡದಂತೆ ಅಡ್ಡ ಕಟ್ಟೆಗಳನ್ನು ಕಟ್ಟುವ ಕೆಲಸದಲ್ಲಿ ಸಾವಿರಾರು ಜನರು ಉದ್ಯುಕ್ತರಾಗಿದಾರೆಂದೂ ಹಾಂಕಾಂಗ್ ಪಟ್ಟಣದಿಂದ ವರ್ತಮಾನ ಬಂದಿದೆ.

* * *

ದಕ್ಷಿಣ ಆಫ್ರಿಕಕ್ಕೆ ಸೇರಿದ ಜೋಹಾನಸ್ ಬರ್ಗ್‌ನಲ್ಲಿ ಹಿಂದುಸ್ಥಾನದ ಜನರು ಸುಮಾರು ೧,೦೦೦ ಮಂದಿ ಸಭೆಯನ್ನು ನಡಿಸಿ, ಅಲ್ಲಿನ ಸರ್ಕಾರದವರು ಹಿಂದುಸ್ಥಾನದವರಿಂದ ಬರಿಸಿಕೊಂಡ ರಿಜಿಸ್ಟರಿನಂತೆ ಸರ್ಕಾರದವರು ನಡಿಸದೆ ತಪ್ಪಿರುತ್ತಾರೆಂತಲೂ, ಆದಕಾರಣ ಹಿಂದುಸ್ಥಾನದವರು ಇನ್ನು ಮುಂದೆ ತಮ್ಮ ಹೆಸರು ಮುಂತಾದ್ದನ್ನು ಬರಿಸಕೊಡದೆಂತಲೂ, ಇದಕ್ಕೋಸ್ಕರ ಸರ್ಕಾರದವರು ಏನು ಮಾಡಿದರೂ ಅದನ್ನು ಪ್ರತಿಭಟಿಸಬೇಕೆಂತಲೂ ತೀರ್ಮಾನಿಸಿಕೊಂಡಿದಾರೆ.

ಸನ್ ೧೯೦೭ನೇ ಇಸವಿಯಲ್ಲಿ ಫ್ರಾನ್ಸ್ ಸಂಸ್ಥಾನದಲ್ಲಿ ಸೆನ್ಸಸ್ ಲೆಕ್ಕಗಳನ್ನು ಎತ್ತಿದರು. ಜನನ ಸಂಖ್ಯೆಗಿಂತಲೂ ಮರಣ ಸಂಖ್ಯೆಯೇ ೨೦,೦೦೦ ಹೆಚ್ಚಾಯಿತೆಂದು ತಿಳಿಯುವುದು. ಅತ್ತಲಾಗಿ ಜರ್ಮನೀ ರಾಜ್ಯದೊಳಗೆ ಸತ್ತುಹೋದ ಪ್ರಜಾಸಂಖ್ಯೆಗಿಂತಲೂ ಜನನವಾದವರ ಸಂಖ್ಯೆಯು ೯,೦೦,೦೦೦ ಹೆಚ್ಚಾಯಿತು. ಫ್ರಾನ್ಸಿನೊಳಗೆ ಪ್ರತಿ ಸಾವಿರ ಪ್ರಜೆಗಳಲ್ಲೂ ೨೫ ಮಂದಿ ಪರರಾಜ್ಯಗಳವರೆಂತಲೂ, ಪರದೇಶಗಳಿಂದ ಫ್ರಾನ್ಸಿನಲ್ಲಿ ಹೋಗಿ ಸೇರಿಕೊಂಡಿರುವಷ್ಟು ಜನರು ಇತರ ಯಾವ ರಾಜ್ಯದಲ್ಲೂ ಇಲ್ಲವೆಂತಲೂ ಪ್ರಕಟವಾಗಿದೆ.

* * *

ಆಸ್ಟ್ರೇಲಿಯಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಸರ್ಕಾರದವರು ಬಡವರಾದ ಮುದುಕರಿಗೆ ಪೆನ್ಷನ್ ಕೊಡಬೇಕೆಂದು ಗೊತ್ತು ಮಾಡಿದಾರೆ. ಪೆನ್ಷನ್ ಪಡೆಯತಕ್ಕವನಿಗೆ ೬೫ ವರುಷಕ್ಕಿಂತ ಹೆಚ್ಚು ವಯಸ್ಸಾಗಿರಬೇಕು. ಅವನು ಇಪ್ಪತ್ತು ವರುಷಗಳಿಂದ ಅಲ್ಲಿ ವಾಸ ಮಾಡಿಕೊಂಡಿರಬೇಕು ಇಂಥವನಿಗೆ ಜೀವನಕ್ಕೆ ಮಾರ್ಗವಿಲ್ಲದಿದ್ದರೆ ಸರ್ಕಾರದವರು ವಾರ ಒಂದಕ್ಕೆ ೩೪ ರೂಪಾಯಿನಂತೆ ಪೆನ್ಷನ್ ಕೊಡುತ್ತಾರೆ. ಈ ಮುದುಕರ ಪೆನ್ಷನಿಗಾಗಿಯೇ ಗವರ್ನಮೆಂಟಿನವರು ವರುಷಕ್ಕೆ ೨೪೦ ಲಕ್ಷ ರೂಪಾಯಿ ವಿನಿಯೋಗಿಸಬೇಕಾಗುತ್ತದೆ.

* * *

ಹಿಂದುಸ್ಥಾನದ ಟೀಸೊಪ್ಪು ರಷ್ಯಾರಾಜ್ಯಕ್ಕೆ ರಫ್ತಾಗಿ ಹೋಗುತ್ತಲೂ, ಅಲ್ಲಿನ ಸಕ್ಕರೆಯು ಹಿಂದುಸ್ಥಾನಕ್ಕೆ ಬರುತ್ತಲೂ ಇರುವುದರಿಂದ ರಷ್ಯಾ ಗವರ್ನಮೆಂಟಿನವರು ಟೀಸೊಪ್ಪಿನ ಮೇಲೂ, ಇಂಡಿಯಾ ಗವರ್ನಮೆಂಟಿನವರು ಸಕ್ಕರೆಯ ಮೇಲೂ ಸುಂಕವನ್ನು ಹಾಕಿ ವಸೂಲ್ಮಾಡುತ್ತಿದಾರೆ ಆದರೆ ಇಂಗ್ಲೀಷ್ ಗವರ್ನಮೆಂಟಿನವರಿಗೂ ರಷ್ಯಾ ಸರ್ಕಾರಕ್ಕೂ ಕಾಗದ ಪತ್ರಗಳು ನಡೆದು ಉಭಯರೂ ಸಮ್ಮತಿಪಟ್ಟಿರುವುದರಿಂದ ಮುಂದಿನ ಸೆಪ್ಟಂಬರ್ ೧ರ ಲಾಗಾಯತು ರಷ್ಯದವರು ಹಿಂದುಸ್ಥಾನದ ಟೀಸೊಪ್ಪಿನ ಸುಂಕವನ್ನೂ, ಇಂಡಿಯಾ ಗವರ್ನಮೆಂಟಿನವರು ರಷ್ಯಾದ ಸಕ್ಕರೆಯ ಸುಂಕವನ್ನೂ ವಜಾಮಾಡುವುದಾಗಿ ತೀರ್ಮಾನವಾಗಿದೆ.

* * *

ಆಫ್ರಿಕದಲ್ಲಿ ಇಂಗ್ಲಿಷರಿಗೆ ಸೇರಿದ ಉತ್ತರ ಗಿನಿ ದೇಶದಲ್ಲಿ ನ್ಯಾಯಾಧಿಪತಿಯಾಗಿರುವ ಮಿ॥ ಚಾರಲ್ಸ್ ಮರ್ರೆ ಎಂಬಾತನು ಹೊಸ ಪ್ರಾಂತ್ಯಕ್ಕೆ ಹೋಗಿ ಬಂದನು. ಅಲ್ಲಿನ ಜನರು ನರಮಾಂಸ ಭಕ್ಷಕರಾಗಿದ್ದರು. ಈತನು ತನ್ನ ಪ್ರಾಣದ ಮೇಲೆ ಅಂಗೀಕರಿಸಿ ಅಲ್ಲಿಗೆ ಹೋಗಿ ಆ ಜನರು ಮನುಷ್ಯರ ಮಾಂಸವನ್ನು ಬೇಯಿಸಿ ತಿನ್ನುತ್ತಿದ್ದದ್ದನ್ನು ಕಣ್ಣಾರ ನೋಡಿದನು ಇದಲ್ಲದೆ ಆ ಜನರು ಸುಮಾರು ಏಳು ವರುಷಗಳ ಹಿಂದೆ ಟಾಮ್ಸನ್, ಟರ್ನರ್ ಎಂಬಿಬ್ಬರು ಪಾದ್ರಿಗಳನ್ನು ಹಿಡಿದು ಕೊಂದು ಅವರ ಮಾಂಸವನ್ನು ತಿಂದಿದ್ದರು. ಅವರಿಗೆ ಈ ನ್ಯಾಯಾಧಿಪತಿಯು ಬಹುಮಾನಗಳನ್ನು ಕೊಟ್ಟು ಯುಕ್ತಿಯ ಮಾತುಗಳನ್ನಾಡಿ, ಆ ಇಬ್ಬರು ಪಾದ್ರಿಗಳ ತಲೇ ಬುರುಡೆಗಳನ್ನೂ ಅವರಿಂದ ತೆಗೆದುಕೊಂಡು ಬಂದಿರುತ್ತಾನೆ. ಈತನ ಧೈರ್ಯವನ್ನು ಕೇಳಿ ಅನೇಕರು ಆಶ್ಚರ್ಯಪಡುತ್ತಿರುವರು.

* * *

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟ್ ಎಂಬ ಸರ್ವ ಸ್ವತಂತ್ರಾಧಿಕಾರವನ್ನು ಪಡೆದಿರುವ ಮಿ॥ ರೂಸ್‌ವೆಲ್ಟ್ ಯವರು ಮತ್ತೆ ಆ ಕೆಲಸವನ್ನು ತಾವು ಒಪ್ಪಿಕೊಳ್ಳುವುದಿಲ್ಲವೆಂದು ತಿಳಿಸಿರುತ್ತಾರಷ್ಟೆ. ಈಗ ಆ ಸ್ಥಾನಕ್ಕೆ ಮಿ॥ ಟಾಫ್ಟ್ ಎಂಬ ದೊಡ್ಡ ಮನುಷ್ಯರು ಪ್ರಜಾ ಸಮ್ಮತಿಯಿಂದ ಹತ್ತಬೇಕೆಂದು ಪ್ರಯತ್ನಪಡುತ್ತಿದಾರೆ. ಇವರ ಯೋಗ್ಯತಾಪತ್ರವನ್ನು ಕುರಿತು ಮಿ॥ ರೂಸ್‌ವೆಲ್ಟ್ ಯವರು ಹೇಳುವುದೇನೆಂದರೆ—“ನಾನು ಅನೇಕ ವರುಷಗಳಿಂದ ಮಿ॥ ಟಾಫ್ಟ್ ಯವರನ್ನು ಬಲ್ಲೆನು. ನಮ್ಮಿಬ್ಬರ ಅಭಿಪ್ರಾಯಗಳೂ ಉದ್ದೇಶಗಳೂ ಒಂದೇ ಆಗಿರುತ್ತವೆ. ಪ್ರೆಸಿಡೆಂಟ್ ಪದವಿಯನ್ನಲಂಕರಿಸುವುದಕ್ಕೆ ಅವರಷ್ಟು ಸಮರ್ಥರಾದವರು ಇನ್ಯಾರೂ ಇರುವುದಿಲ್ಲ. ಮಿ॥ ಟಾಫ್ಟ್ ಯವರು ಸ್ವಲ್ಪವಾದರೂ ಯಾರಿಗೂ ಹೆದರಿಕೊಳ್ಳತಕ್ಕವರಲ್ಲ. ಅವರು ಪಕ್ಷಪಾತವೆಂಬುದನ್ನು ಕಂಡರಿಯರು. ಮತ್ತು ಅವರ ಸತ್ಯಸ್ವಭಾವವೂ ಸಚ್ಚರಿತ್ರೆಯೂ ಅಪೂರ್ವ ಗುಣಗಳಾಗಿರುತ್ತವೆ” ಎಂಬುದೇ.

* * *

ಇಟಲಿ ರಾಜ್ಯದ ಪಾರ್ಲಿಮೆಂಟ್ ಸಭೆಯಲ್ಲಿ ಸೇನಾರ್ ಸಂತೀನಿ ಮತ್ತು ಸೇನಾರ್ ಬಾರ್ಜಿಲಾಯಿ ಎಂಬಿಬ್ಬರು ಮಂತ್ರಿಗಳು ಕಾರಣಾಂತರದಿಂದ ಹೋದವಾರ ವಾಗ್ವಾದ ನಡಿಸಿದರು. ಅಲ್ಲಿದ್ದ ವರ್ತಮಾನ ಪತ್ರಿಕೆಗಳ ಬಾತ್ಮೀದಾರರು ಅವರನ್ನು ಸಮಾಧಾನಪಡಿಸುವುದಕ್ಕೆ ಪ್ರಯತ್ನಪಟ್ಟರು. ಆಗ ಮೊದಲನೇ ಮಂತ್ರಿಯು ಆ ಬಾತ್ಮೀದಾರರನ್ನು ಹೇಡಿಗಳು ಎಂದು ಅಲ್ಲಗಳೆದನು ಅವರೂ ಕೂಡ ಪ್ರತಿಯಾಗಿ ಆ ಮಂತ್ರಿಗೆ ದುರ್ಭಾಷೆಯನ್ನು ಪ್ರಯೋಗ ಮಾಡಿದರು. ಈ ಗಲಭೆಯನ್ನು ನೋಡಿ ಮಂತ್ರಿಸಭಾ ಪ್ರಸಿಡೆಂಟರು ಸಭೆಯನ್ನು ಬರಖಾಸ್ತು ಮಾಡಿಬಿಟ್ಟರು. ಸೇನಾರ್ ಸಂತೀನಿ ಎಂಬ ಮಂತ್ರಿಯು ಎರಡನೇ ದಿನದ ಸಭೆಯಲ್ಲಿ ತನ್ನ ನಡತೆಯು ತನಗೇ ಸರಿಹೋಗಲಿಲ್ಲವೆಂದೂ, ಬಾತ್ಮೀದಾರರನ್ನು ಅಂದದಕ್ಕೆ ಅವರ ಕ್ಷಮಾಪಣೆ ಕೇಳಿಕೊಳ್ಳುವುದಕ್ಕೆ ಸಿದ್ಧನಾಗಿದೇನೆಂದೂ ತಿಳಿಸಿದನು. ಆದರೆ ಬಾತ್ಮೀದಾರರುಗಳೆಲ್ಲಾ ಒಂದಾಗಿ ಆ ಮಂತ್ರಿ ಸಭೆಗೆ ಹೋಗಕೂಡದೆಂದೂ, ಅಲ್ಲಿ ನಡೆಯುವ ಚರ್ಚೆಗಳನ್ನು ಪತ್ರಿಕೆಗಳಿಗೆ ಬರೆದು ಪ್ರಕಟಿಸುವುದಿಲ್ಲವೆಂದೂ ಕೆಲವುಕಾಲ ಹಟತಟ್ಟಿಕೊಂಡಿದ್ದರು.

ಚಕ್ರವರ್ತಿಯವರ ವರ್ಧಂತಿಯ ಬಿರುದುಗಳು.

ಕಳೆದ ಶುಕ್ರವಾರ ಹಿಂದುಸ್ಥಾನದಲ್ಲಿ ಎಡ್ವರ್ಡ್ ಚಕ್ರವರ್ತಿಯವರ ವರ್ಧಂತಿ ಕಲ್ಲಿಯನ್ನು ಆಚರಿಸಿದರು. ಆಗ್ಗೆ ಚಕ್ರವರ್ತಿಯವರ ಆಜ್ಞಾನುಸಾರವಾಗಿ ಈ ರಾಷ್ಟ್ರದಲ್ಲಿ ಬಹಳ ಮೆಚ್ಚುವಿಕೆಯಿಂದ ಕೆಲಸ ಮಾಡಿರುವ ಅಧಿಕಾರಿಗಳಿಗೂ, ಧರ್ಮಿಷ್ಠರಾದ ಐಶ್ವರ್ಯವಂತರಿಗೂ ಉಚಿತವಾದ ಬಿರುದುಗಳನ್ನು ಕೊಡುವುದು ವಾಡಿಕೆಯಾಗಿದೆ. ಈ ಪದ್ಧತಿಯನ್ನನುಸರಿಸಿ ಕಳೆದ ಶುಕ್ರವಾರ ಇಂಡಿಯಾ ಗವರ್ನಮೆಂಟ್ ಗೆಜೆಟ್ಟಿನಲ್ಲಿ ಈ ವರ್ಷದ ಬಿರುದುಗಳು ಪ್ರಕಟಿಸಲ್ಪಟ್ಟವು. ಆ ಪೈಕಿ ಮುಖ್ಯವಾದವುಗಳನ್ನು ಇಲ್ಲಿ ಪ್ರಕಟಿಸುತ್ತೇವೆ.

ಕೆ ಸಿ. ಎಸ್. ಐ. ಬಿರುದು:—ಮಿ॥ ಸಿ ಎಸ್. ಬೇಲಿ, ಸಿ. ಎಸ್. ಐ, ಆಕ್ಟಿಂಗ್ ಲೆಫ್ಟಿನೆಂಟ್ ಗವರ್ನರ್, ಪೂರ್ವಬಂಗಾಳ ಮತ್ತು ಆಸ್ಸಾಂ; ಮಿ॥ ಇ. ಎನ್. ಬೇಕರ್, ಬಂಗಾಳಾ ಲೆಫ್ಟಿನೆಂಟ್ ಗವರ್ನರಾಗಿ ಬರತಕ್ಕವರು; ಶ್ರೀಮಾನ್ ಜೋಧಪುರದ ಮಹಾರಾಜರವರು; ಜಲಾವಾಗ್ ರಾಣಾರವರು; ಅಯೋಧ್ಯೆಯ ರಾಜಾ ರಸೂಲ್ ಪೂರ್ ರವರು.

ಕೆ. ಸಿ. ಐ. ಇ. ಬಿರುದು:—ಕರ್ನಲ್ ನವಾಬ್ ಅಸ್ಲಂಖಾನ್, ಖೈಬರ್ ಶಿಪಾಯಿಗಳ ಕಮ್ಯಾಂಡೆಂಟರು; ಭೂಗರ್ಭಶೋಧನಾ ಇಲಾಖೆಯ ಡೈರೆಕ್ಟರ್ ಮಿ॥ ಟಿ. ಎಚ್. ಹಾಲೆಂಡ್; ಹೈದರಾಬಾದಿನ ನವಾಬ್ ಲೆಫ್ಟಿನೆಂಟ್ ಕರ್ನಲ್ ಮುಜಮುದ್ದೀನ್ ಬೇಗ್.

ಸಿ. ಐ ಇ. ಬಿರುದು:—ಮದರಾಸ್ ವಿದ್ಯಾ ಇಲಾಖೆಯ ಡೈರೆಕ್ಟರ್ ಡಾ॥ ಎ. ಜಿ. ಬೋರ್ನ್; ಕಾಶ್ಮೀರ ಮಹಾರಾಜರವರ ಪ್ರೈವೆಟ್ ಸೆಕ್ರಟರಿ ರಾಯ ಸಾಹೆಬ್ ಕಿರ್ಷ ಕಾಲ್.

ನೈಟ್ ಎಂಬ ಬಿರುದು:—ಬಂಗಾಳಾ ಛೀಫ್ ಜಡ್ಜಿ ಮಿ॥ ಆರ್. ಎಫ್. ರಾಂಪಿನಿಯವರು; ಬೊಂಬಾಯಿ ಗವರ್ನರವರ ಮಂತ್ರಾಲೋಚನಾ ಸಭೆಯ ಮೆಂಬರ್ ಮಿ॥ ವಿಠಲದಾಸ್ ದಾಮೋದರದಾಸ್ ಥ್ಯಾಕರ್ಸೆಯವರು

ಬ್ಯಾರೊನೆಟ್ ಬಿರುದು:—ಬೊಂಬಾಯಿನ ಸರ್ ಜಹಾಂಗೀರ್ ಕೊವಾಸ್ಜಿ ಜಹಾಂಗೀರ್ ಯವರು.

ರಾಯ ಬಹದೂರ್ ಬಿರುದು:—ಕಲ್ಕತ್ತೆಯ ಸಬ್ ಜಡ್ಜಿ ಬಾಬು ಬಿಪಿನ್ ಬಿಹಾರಿ ಮುಖರ್ಜಿ; ಸಂಬಾಲ್‌ಪುರದ ಜಮೀನ್‌ದಾರ್ ಮಿ॥ ಲಾಲ್ ರಾಜೇಂದ್ರ ಸಿಂಗ್ ಬಾರಿಕ್; ರಾಂಕಾ ಜಮೀನ್‌ದಾರ್ ಮಿ॥ ತತ್ತುರಾಯ ಯದುನಾಥಸಿಂಗ್; ಬಾಬು ಆನಂದಪ್ರಸಾದ್ ಬಸ್ಸು; ಬಾಬು ಉಪೇಂದ್ರ ಬ್ಯಾನರ್ಜಿ, ಬಾಬು ನರೇಂದ್ರನಾಥ ಸೇನ್, ಚೌದ್ರಿ ಮಹೇಂದ್ರ ಸಿಂಗ್, ಪಂಡಿತ ವಿಶ್ವಂಭರನಾಥ್, ಡಾಕ್ಟರ್ ಮನ್ನು ಲಾಲ್, ಲಾಲಾ ಗಂಗಾರಾಂ ಅರೋರಾ, ಮಂಡಿ ಸಂಸ್ಥಾನದ ವಜೀರ್ ಮಿ॥ ಜೀವನತಂಡ್, ಮಣಿಪುರದ ಸೂಪರಿಂಟೆಂಡೆಂಟ್ ಬಾಬೂ ನಾಮಚರಣ ಮುಖರ್ಜಿ, ಚಿತ್ತಗೊಂಡದ ಗವರ್ನಮೆಂಟ್ ಪ್ಲೀಡರ್ ಬಾಬು ದುರ್ಗಾದಾಸ್ ದಾಸ್, ಫಾರೆಸ್ಟ್ ಕನ್ಸರ್ವೇಟರ್ ಮಿ॥ ಭಾಯಿ ಸಾಧುಸಿಂಗ್, ಕಾಶ್ಮೀರದ ಗವರ್ನರ್ ಪಂಡಿತ ಮನಮೋಹನ ನಾಥ ಕೌಳ್, ಇಂಡಿಯಾ ಗವರ್ನಮೆಂಟ್ ಖಜಾನೆಗಳ ಇಲಾಖಾ ಸೂಪರಿಂಟೆಂಡೆಂಟ್ ಬಾಬೂ ಪ್ರಸನ್ನ ಕುಮಾರ ಮಿತ್ರ

ರಾವ್ ಬಹದೂರ್ ಬಿರುದು:—ಮಧುರೆ ಮ್ಯುನಿಸಿಪಲ್ ಕೌನ್ಸಿಲ್ ಛೇರ್ಮನ್ ಮಿ॥ ಸಿ. ಎಸ್. ಸುಬ್ರಹ್ಮಣ್ಯ ಐಯರ್, ತಿನ್ನವೆಲ್ಲಿ ಡಿಪ್ಟಿ ಕಲೆಕ್ಟರು ಮಿ॥ ಜಿ. ಟಿ. ರಂಗರಾಜು, ತಂಜಾವೂರು ಪ್ಲೀಡರ್ ಮತ್ತು ಮಿರಾಸೆದಾರ್ ಮಿ॥ ಕೆ. ಎಸ್. ಶ್ರೀನಿವಾಸಪಿಳ್ಳೆ, ದಕ್ಷಿಣ ಆರ್ಕಾಟ್ ಗವರ್ನಮೆಂಟ್ ಪ್ಲೀಡರ್ ಮಿ॥ ಕೆ. ಎಸ್. ಶ್ರೀನಿವಾಸ ರಾವ್, ಧಾರವಾಡದ ಟ್ರೇನಿಂಗ್ ಕಾಲೆಜ್ ಪ್ರಿನ್ಸಿಪಲ್ ಮಿ॥ ಶ್ರೀನಿವಾಸ ಕೊಣ್ಣೂರ್ ರಾಡ್ಡಿಯಾ.

ರಾವ್ ಸಾಹೆಬ್ ಬಿರುದು:—ಅಹಮದ್‌ನಗರ ಪ್ಲೀಡರ್ ಮಿ॥ ದೇವರಾವ್ ವಿನಾಯಕ್, ಬಾಲಘಾಟ್ ಪ್ಲೀಡರ್ ಮಿ॥ ನಾರಾಯಣರಾಯಣ ಕೆಲ್ಕರ್, ಬೊಂಬಾಯಿ ಪೋಸ್ಟ್ ಇಲಾಖಾ ಸೂಪರಿಂಟೆಂಡೆಂಟ್ ಮಿ॥ ಜಿ ದಾಮೋದರ ರಘುನಾಥ ಪುರಂಧರ್.

ಖಾನ್‌ಸಾಹೆಬ್ ಬಿರುದು:—ಆಸ್ಪತ್ರೆ ಅಸಿಸ್ಟೆಂಟ್ ಮಿ॥ ಸೈಯದ್ ಮುನಿಯುದ್ದೀನ್ ಸಾಹೆಬ್, ಪೋಲೀಸ್ ಇನ್ಸ್‌ಪೆಕ್ಟರ್ ಕಮುರುದ್ದೀನ್ ಅಬ್ದುಲ್ ರಹಿಮಾನ್, ಪೋಲೀಸ್ ಇನ್ಸ್‌ಪೆಕ್ಟರ್ ರಹಮತ್ ಉಲ್ಲಾಖಾನ್.

ರಾವ್ ಸಾಹೆಬ್ ಬಿರುದು:—ಟುಟಿಕೊರಿನ್ ಡಿಪ್ಟಿ ತಹಸೀಲ್ದಾರ್ ಮಿ॥ ಡಿ ಚಿನ್ನಯನಾಯುಡು, ಎಗ್ಜಿಕ್ಯುಟಿವ್ ಇಂಜನಿಯರ್ ಎ ವಿ. ರಾಮಲಿಂಗ ಐಯರ್, ಸಬ್ ಇಂಜನಿಯರ್ ಮಿ॥ ನಾರಾಯಣ ವಿಷ್ಣುಭಾವೆ

ತೋಪುಗಳು:—ಲಾಸ್ ಬೇಲಾ ಸಂಸ್ಥಾನದ ಜಾಂ ರಾಜರಾದ ಮಿರ್ ಕಮಾಲ್ ಖಾನರವರಿಗೆ ಗೌರವಾರ್ಥವಾದ ಒಂಬತ್ತು ತೋಪುಗಳು

ಬರ್ದ್ವಾನ್ ಮಹಾ ರಾಜಾಧಿರಾಜ ವಿಜಯಚಂದ್, ಮಹತಾಬ್ ಬಹದೂರ್ ಯವರಿಗೂ ಅವರ ವಂಶೀಕರಿಗೂ “ಮಹಾರಾಜಾಧಿರಾಜ ಬಹದೂರ್” ಎಂಬ ಬಿರುದು.

ಸೋನಪುರ ಸಂಸ್ಥಾನದ ರಾಜರಾದ ರಾಜಾ ವೀರ ಮಿತ್ರೋದಯ ಸಿಂಹ ದೇವರಿಗೆ “ಮಹಾರಾಜಾ” ಎಂಬ ಬಿರುದು.

ರಾಜಾ ಎಂಬ ಬಿರುದು:—ಪಶ್ಚಿಮಪುರದ ರಾಜಾ ಕಿರ್ಷ ಕುಮಾರ್, ಉತ್ತರ ಆರ್ಕಾಟ್ ಡಿಸ್ಟ್ರಿಕ್ಟ್ ಜಡ್ಜಿ ಮಿ॥ ಕೆ. ಸಿ ಮಾನವೇದನ್ ರಾಜಾ, ಅಜೀಮ್‌ಗಂಜ್ ಮ್ಯುನಿಸಿಪಾಲಿಟಿ ಛೇರ್ಮನ್ ಮಿ॥ ರುಕ್ಮಾಂಗದ ಸಿಂಹ ದುಹೂರಿ.

ಕಲ್ಕತ್ತೆಯ ಆಯುರ್ವೇದ ಪಂಡಿತ ಕವಿರಾಜ ವಿಜಯರತ್ನ ಸೇನರವರಿಗೂ, ಢಕ್ಕಾ ಸಾರಸ್ವತ ಸಮಾಜದ ಸೆಕ್ರಿಟರಿ ಪಂಡಿತ ಪ್ರಸನ್ನ ಚಂದ್ರ ವಿದ್ಯಾರತ್ನರವರಿಗೂ "ಮಹಾಮಹೋಪಾಧ್ಯಾಯ" ಎಂಬ ಬಿರುದು.

ದಿವಾನ್ ಬಹದೂರ್ ಎಂಬ ಬಿರುದು:—ಮದರಾಸು ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ಪಿ. ಎಸ್. ಶ್ರೀನಿವಾಸಾಚಾರ್, ಪಂಜಾಬ್ ಡೆಪ್ಯುಟಿ ಕಮಿಷನರ್ ಮೆ॥ ದಿವಾನ್ ನರೇಂದ್ರನಾಥ್.

ಖಾನ್‌ಬಹದೂರ್ ಬಿರುದು:—ತಂಜಾವೂರು ಸಬ್ ಜಡ್ಜ ಮೆ॥ ಸೈಯದ್ ಅಬ್ದುಲ್ ಸಾಹೇಬ್, ಬಂಗಾಳಾ ಪೋಲೀಸ್ ಇನ್‌ಸ್ಪೆಕ್ಟರ್ ಮೆ॥ ಇಬ್ರಾಯಿಂ ವಿತಲ ಬೇಗಿಸಾಹೇಬ್, ಬಂಗಾಳಾ ಡೆಪ್ಯುಟಿ ಕಲೆಕ್ಟರ್ ಮೆ॥ ಸಬಾನತ್ ಹುಸ್ಸೇನ್, ಶಾಹಪುರದ ವಕೀಲನಾದ ಅಬ್ದುಲ್ ಖಾದರ್, ಪೋಲೀಸ್ ಇನ್‌ಸ್ಪೆಕ್ಟರ್ ಸಯುದ್ ಸಬ್ಬೀರ್ ಹುಸ್ಸೇನ್, ಲಕ್ನೋ ಡೆಪ್ಯುಟಿ ಕಲೆಕ್ಟರ್ ಮೌಲ್ವಿ ಮಹಮದ್ ಜವಾದ್, ಪಟಿಯಾಲಾ ಸಂಸ್ಥಾನದ ರಿಜಿಸ್ಟ್ರಾರ್ ಜನರಲ್ ಮೌಲ್ವಿ ಮಹಮದ್ ಫಜ್ಲ ಖಾನ್.

ಕೈಸರಿಹಿಂದ್ ಚಿನ್ನದ ಪದಕ:—ದರ್ಭಾಂಗದ ಮ್ಯಾಜಿಸ್ಟ್ರೇಟ್ ಮೆ॥ ಎಗರ್ಟನ್, ಕಲ್ಕತ್ತೆಯಲ್ಲಿದ್ದ ಡಿ. ಕಿಂಗ್ ಎಂಬಾಕೆ, ವಿಜಯ ನಗರದ ಮಹಾರಾಣಿಯವರು.

ಕೈಸರಿಹಿಂದ್ ಬೆಳ್ಳಿಯ ಪದಕ:—ಡಿಯೋಲಿ ಮಿಸೆಸ್ ಗಾತ್ ಬಾಡಿ ಎಂಬಾಕೆ, ಕೊಲ್ಲಾಪುರದ ಡಾ॥ ಕೆ. ಕಿಲ್ವಾಲ್ಕರ್, ಮೆವಾಡದ ಡಾ॥ ಎ. ಲಾಂಕಾಸ್ಟರ್, ವಿಕ್ಟೋರಿಯಾ ಆಸ್ಪತ್ರೆ ಅಸಿಸ್ಟೆಂಟ್ ಡಾ॥ ನಬಿಬ ಕ್, ಲಾಹೋರಿನ ಡಾ॥ ಡಿ. ಆರ್. ರಂಜಿತ್‌ಸಿಂಗ್, ಬೆಸ್ಸೀನ್ ಮ್ಯಾಜಿಸ್ಟ್ರೇಟ್ ಮಿ॥ ಗ್ ತೆಕ್ ಪ್ಯೆಯೊ.

ಪರ್ಷಿಯಾ ರಾಜ್ಯದ ಗಲಭೆಯು.

ಸುಲ್ತಾನರಿಗೂ ಪಾರ್ಲಿಮೆಂಟಿಗೂ ಮನಸ್ತಾಪಗಳು
ತಂತೀ ವರ್ತಮಾನ ಸಾರ.

ಕಳೆದ ತಿಂಗಳ ಪ್ರಾರಂಭದಿಂದಲೂ ಪರ್ಷಿಯಾ ರಾಜ್ಯದಲ್ಲಿ ಷಾ ಸುಲ್ತಾನರಿಗೂ ಅವರ ರಾಜ್ಯದ ಪಾರ್ಲಿಮೆಂಟಿಗೂ ಮನಸ್ತಾಪಗಳುಂಟಾಗಿವೆ. ಷಾರವರು ತಮ್ಮ ಬಳಿ ಇದ್ದ ಕೆಲವು ಮುಖಂಡರನ್ನು ದೊಡ್ಡ ಮನುಷ್ಯರ ಸಲಹೆಯ ಪ್ರಕಾರ ಕೆಲಸದಿಂದ ವಜಾ ಮಾಡಿದರು. ಆ ವ್ಯಕ್ತಿ ಅಮೀರ್ ಬಹದೂರ್ ಎಂಬಾತನು ರಷ್ಯಾ ರಾಯಭಾರಿಯ ಬಂಗಲೆಯಲ್ಲಿ ಹೋಗಿ ಸೇರಿಕೊಂಡನು. ಷಾ ಸುಲ್ತಾನರು ಟೆಹರಾನ್ ರಾಜಧಾನಿಯನ್ನು ಬಿಟ್ಟು, ಒಂದು ಗ್ರಾಮದಲ್ಲಿ ಇರುತ್ತಾರೆ. ಅವರ ಸೈನ್ಯವೂ ಅವರ ಬಳಿಯಲ್ಲೇ ಅಂಗರಕ್ಷಣೆಗಾಗಿ ಹೋಗಿರುವುದು. ರಾಜಧಾನಿಯಲ್ಲಿ ರಾಜಕೀಯ ಸಂಘದವರು ಖಜಾನೆಯನ್ನೂ ಆಯುಧ ಶಾಲೆಯನ್ನೂ ಸ್ವಾಧೀನ ಪಡಿಸಿಕೊಳ್ಳಬೇಕೆಂದು ಹುಡುಕಿದರು. ಅವುಗಳಲ್ಲಿ ಏನೂ ಸಿಕ್ಕದೆ ಹೋಯಿತು. ಸುಲ್ತಾನರು ಪ್ರಜೆಗಳ ಬಳಿ ಇರುವ ಆಯುಧಗಳನ್ನೆಲ್ಲಾ ಕಿತ್ತುಕೊಳ್ಳಬೇಕೆಂದು ಹುಕುಂ ಮಾಡಿದ್ದಲ್ಲದೆ, ಅವರ ಚಿಕ್ಕಪ್ಪನನ್ನೂ ಆತನ ಮಗನನ್ನೂ ಇನ್ನೂ ಕೆಲವರನ್ನೂ ದಸ್ತಗಿರಿ ಮಾಡಿಸಿದ್ದರಿಂದ ರಾಜ್ಯದಲ್ಲಿ ತುಂಬಾ ಗಾಬರಿಯೂ ಕಳವಳವೂ ಉಂಟಾಗಿದೆ. ಕೆಲಸದಿಂದ ವಜಾ ಆಗಿದ್ದ ಅಮೀರ್ ಬಹದೂರ್ ಮುಂತಾದವರು ಮತ್ತೆ ಸುಲ್ತಾನರ ಬಳಿ ಕೆಲಸದ ಮೇಲೆ ಹಾಜರಾಗಿದ್ದಾರೆ. ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳಕೂಡದೆಂದು ಪ್ರತಿಭಟಿಸಿದ ಕೆಲವು ಮುಖಂಡರನ್ನು ಸುಲ್ತಾನರು ಹಿಡಿಸಿ, ರಾಜಧಾನಿಯಿಂದ ಹೊರಕ್ಕೆ ಸಾಗಿಸಿದರು.

ರಾಜಧಾನಿಯಲ್ಲಿ ಪ್ರಜಾಪಕ್ಷದ ಸಾವಿರಾರು ಜನರು ಆಯುಧ ಪಾಣಿಗಳಾಗಿ ಪಾರ್ಲಿಮೆಂಟಿನ ಸಂರಕ್ಷಣೆಗಾಗಿ ಕಾದಿ ಬಂದರು. ಸುಲ್ತಾನರ ನಡವಳಿಕೆಯು ಸರಿಯಾಗಿಲ್ಲವೆಂದು ಅಲ್ಲಗಳೆಯುವಂಥ ನೋಟೀಸುಗಳು ಹಂಚಲ್ಪಟ್ಟಿವೆ. ಸುಲ್ತಾನರು ಬಲಾತ್ಕಾರವಾಗಿ ದ್ವಂದ್ವ ಕ್ರೂರ ಕೃತ್ಯಗಳನ್ನು ನಡಸಲು ಅಸಮಾಧಾನಪಟ್ಟು, ಇಷ್ಟು ಹೊತ್ತಿನೊಳಗೆ ಪ್ರಜೆಗಳೆಲ್ಲಾ ಗಲಭೆ ಮಾಡುವುದನ್ನು ನಿಲ್ಲಿಸಿ ಚದರಿ ಹೋಗದಿದ್ದರೆ ಸೈನ್ಯಗಳನ್ನು ಕಳುಹಿಸುತ್ತೇವೆಂದು ಹುಕುಂ ಕೊಟ್ಟರು. ಅದನ್ನು ಓದಿದ ಕೂಡಲೇ ಜನರೆಲ್ಲಾ ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು. ರಾಜಧಾನಿಯಲ್ಲಿ ಎಲ್ಲಾ ತರದ ಕೆಲಸ ಕಾರ್ಯಗಳೂ ನಿಂತುಹೋದವು. ಸುಲ್ತಾನರ ಕ್ಯಾಂಪಿಗೆ ಜನರು ಹೋಗಿ ಸೇರುವುದು ಹೆಚ್ಚಿತು. ಷಾ ಸುಲ್ತಾನರು ಪ್ರಜೆಗಳಿಗೆ ಕೊಟ್ಟ ವಾಗ್ದಾನದ ಪ್ರಕಾರ ರಾಜ್ಯಭಾರವನ್ನು ನಡಿಸದೆ ಹೋಗಿರುವುದರಿಂದ ಬಹಳ ಅಸಮಾಧಾನ ಉಂಟಾಗಿದೆ ಎಂತಲೂ, ಈಗಲೂ ಆ ರೀತಿ ನಡಿಸಿ ರಾಜ್ಯದಲ್ಲಿ ನೆಮ್ಮದಿ ಸಮಾಧಾನಗಳನ್ನು ಕಾಪಾಡಬೇಕೆಂತಲೂ ಪಾರ್ಲಿಮೆಂಟಿನವರು ಸುಲ್ತಾನರಿಗೆ ಅರಿಕೆಮಾಡಿಕೊಂಡರು. ಅದಕ್ಕೆ ಪ್ರತಿಯಾಗಿ ಸುಲ್ತಾನರು ಪ್ರತಿನಿಧಿಗಳಿಗೆ ದೀರ್ಘವಾದ ಮತ್ತು ಕಠಿಣವಾದ ಉಪನ್ಯಾಸ ಮಾಡಿ, ತಮ್ಮ ಹಿರಿಯರು ಕತ್ತಿಯಿಂದ ಸಿಂಹಾಸನವನ್ನು ಸಂಪಾದಿಸಿದರೆಂತಲೂ, ಅಂಥಾ ಕತ್ತಿಯನ್ನು ಪ್ರಯೋಗಿಸದೆ ತಾವು ಸಿಂಹಾಸನವನ್ನು ಸುಮ್ಮನೆ ಬಿಡಲಾರೆವೆಂತಲೂ ತಿಳಿಸಿದರು.

ಮಂತ್ರಿಗಳು ರಾಜ್ಯದಲ್ಲಿ ಪ್ರಜಾ ನೆಮ್ಮದಿಯನ್ನು ಕಾಪಾಡಬೇಕೆಂದು ಪ್ರಯತ್ನ ಪಡುತ್ತಿದ್ದಾರೆ. ಆದರೆ ಸುಲ್ತಾನರು ಪ್ರಜೆಗಳ ಮುಖಂಡರನ್ನು ಹಿಡಿದು ಗಡೀಪಾರು ಮಾಡಬೇಕೆಂತಲೂ, ಅಂಜುಮನ್ ಸಂಘಗಳನ್ನೆಲ್ಲಾ ಮುಚ್ಚಿಡಬೇಕೆಂತಲೂ, ವರ್ತಮಾನ ಪತ್ರಿಕೆಗಳ ಸ್ವಾತಂತ್ರ್ಯವನ್ನು ರದ್ದಿಸಬೇಕೆಂತಲೂ, ಅರಮನೆಯ ಸಂರಕ್ಷಣೆಗಾಗಿ ೧೦,೦೦೦ ಸೈನ್ಯವನ್ನು ನೇಮಿಸಿ ಕೊಡಬೇಕೆಂತಲೂ ಕೇಳುತ್ತಿರುವುದರಿಂದ ಮಂತ್ರಿಗಳ ಕೆಲಸಗಳ್ಯಾವುವೂ ಸಾರ್ಥಕವಾಗದೆ ಇವೆ.

ಜೂನ್ ತಾ ೨೩.—ಈ ದಿನ ಕಾಸಕ್ ಸೈನಿಕರು ಪಾರ್ಲಿಮೆಂಟ್ ಸಭಾಮನೆಗೆ ಮುತ್ತಿಗೆ ಹಾಕಿ, ಕೆಲವು ಮೆಂಬರುಗಳನ್ನು ಕೈಸೆರೆ ಹಿಡಿಯಬೇಕೆಂದು ಪ್ರಯತ್ನಪಟ್ಟರು. ಪಾರ್ಲಿಮೆಂಟಿನವರು ಅವರನ್ನು ಹಿಡಿದುಕೊಡುವುದಿಲ್ಲವೆಂದು ತಿರಸ್ಕರಿಸಿದರು. ಯುದ್ಧಾರಂಭವಾಯಿತು. ಕೆಲವು ಕಾಸಕರು ಕೊಲ್ಲಲ್ಪಟ್ಟರು. ಹೊಸದಾಗಿ ಫಿರಂಗೀ ಸೈನ್ಯ ಬಂತು. ತರುವಾಯ ಒಂದು ಗಂಟೆ ಹೊತ್ತು ಯುದ್ಧ ನಡೆಯಿತು. ಪಾರ್ಲಿಮೆಂಟಿನಿಂದಲೂ ಮಸೀತಿಗಳಿಂದಲೂ ಸಿಡಿಮದ್ದಿನ ಗುಂಡುಗಳು ಸೈನಿಕರ ಮೇಲೆ ಎಸೆಯಲ್ಪಟ್ಟವು. ಫಿರಂಗಿಗಳು ನಿಶ್ಶಬ್ದವಾದವು. ಫಿರಂಗಿ ಹೊಡೆಯುವ ಸೈನಿಕರು ಕೊಲ್ಲಲ್ಪಟ್ಟರು. ಕೆಲವರಿಗೆ ಗಾಯಗಳಾದವು. ಮಧ್ಯಾಹ್ನ ಮೂರು ಘಂಟೆ ತನಕ ಪಾರ್ಲಿಮೆಂಟನ್ನು ಒಡೆದುಹಾಕಬೇಕೆಂದು ಗುಂಡು ಹೊಡೆಯಲ್ಪಟ್ಟಿತು. ಪಾರ್ಲಿಮೆಂಟ್ ಸಭಾಮನೆಗಳೂ ಮಸೀತಿಗಳೂ ನಾಶವಾದವು. ಸೈನಿಕರಲ್ಲಿ ಬಹು ಮಂದಿ ನಷ್ಟವಾದರು. ಪ್ರಜಾಪಕ್ಷದ ಮುಖಂಡರನ್ನೂ, ಪಾರ್ಲಿಮೆಂಟ್ ಮೆಂಬರುಗಳನ್ನೂ, ಮುಖ್ಯರಾದ ಮೌಲ್ವಿಗಳನ್ನೂ ಕೈಸೆರೆ ಹಿಡಿದದ್ದಾಯಿತು. ಸೈನಿಕರು ಮನೆಗಳನ್ನು ನುಗ್ಗಿ ಲೂಟಿ ಮಾಡುತ್ತಿದ್ದಾರೆ. ಯೂರೋಪಿಯನ್ ಜನರಿರುವ ಭಾಗವೂ ಲೂಟಿಯಾಗುತ್ತಿದೆ.

ಜೂನ್ ತಾ. ೨೪.—ಷಾ ಸುಲ್ತಾನರು ಜಯಶೀಲರಾಗಿದ್ದಾರೆ. ಲಯಾಕಾಫ್ ಎಂಬೊಬ್ಬ ರಷ್ಯಾ ಕರ್ನಲ್ ಹುದ್ದೇದಾರನು ಸೈನ್ಯದ ಮೇಲ್ವಿಚಾರಕನಾಗಿದ್ದಾನೆ. ಯುದ್ಧಕಾಲದ ಕಾನೂನು ರಾಜಧಾನಿಯಲ್ಲಿ ಜಾರಿಗೆ ತರಲ್ಪಟ್ಟಿದೆ. ರಾಜಧಾನಿಯಲ್ಲಿದ್ದ ದೊಡ್ಡ ದೊಡ್ಡ ಮುಖ್ಯ ಕಟ್ಟಡಗಳನ್ನೆಲ್ಲಾ ನಾಶಮಾಡಿದರು. ಬಹುಜನ ಮುಖಂಡರನ್ನೂ ಪತ್ರಿಕೆಗಳ ಎಡಿಟರುಗಳನ್ನೂ ಹಿಡಿದು ಸೆರೆಮನೆಯಲ್ಲಿ ಹಾಕಿದ್ದಾರೆ. ಸೈನಿಕರಲ್ಲಿ ೧೫ ಜನ ಮೃತಪಟ್ಟರು. ಮೂರುಮಂದಿ ಹುದ್ದೇದಾರರಿಗೂ ೨೦ ಜನ ಸೈನಿಕರಿಗೂ ಗಾಯಗಳಾಗಿವೆ. ಯುದ್ಧವಾದ ಮೇಲೆ ಪಟ್ಟಣವೆಲ್ಲಾ ಲೂಟಿಯಾಯಿತು. ಷಾ ಸುಲ್ತಾನರು ಪ್ರಜಾ ನೆಮ್ಮದಿಯನ್ನು ಕಾಪಾಡುವುದಾಗಿ ಇಂಗ್ಲೀಷ್ ಮತ್ತು ರಷ್ಯಾ ರಾಯಭಾರಿಗಳಿಗೆ ಮಾತುಕೊಟ್ಟಿದ್ದಾರೆ. ಸುಲ್ತಾನರ ಎದುರುಪಕ್ಷದ ಮುಖಂಡರೂ ಹತ್ತು ಮಂದಿ ಎಡಿಟರುಗಳೂ ಇಂಗ್ಲೀಷ್ ರಾಯಭಾರಿಯ ಆಶ್ರಯದಲ್ಲಿ ಇರುತ್ತಾರೆ. ಮಂಗಳವಾರ ಪಟ್ಟಣವು ನೆಮ್ಮದಿಯಾಗಿತ್ತು. ನೆನ್ನೆ ಮಧ್ಯಾಹ್ನ ೩ ಘಂಟೆಯ ಮೇಲೆ ರೆಷ್ಟಂಬ ಪ್ರಾಂತ್ಯದ ನಾಜ ಗವರ್ನರ ಬಂಗಲೆಗೆ ಗುಂಡು ಹೊಡೆದು ಕೆಡವಿ, ಲೂಟಿಮಾಡಿದರು. ಟೇಬ್ರಿಜ್ ಪಟ್ಟಣದಲ್ಲೂ ರಾಜಪಕ್ಷದವರಿಗೂ ಪ್ರಜಾಪಕ್ಷದವರಿಗೂ ಮಂಗಳವಾರವೆಲ್ಲಾ ಕಾಳಗವು ನಡೆಯಿತು. ವೈದಿಕರು ಪ್ರಜೆಗಳ ಕಡೆ ನಿಂತು ಯುದ್ಧ ಮಾಡಿದರು.

ಜೂನ್ ತಾ. ೨೫.—ನೆನ್ನೆ ಇನ್ನೂ ಬಹು ಜನರನ್ನು ಸುಲ್ತಾನರು ಹಿಡಿಸಿ ಬಂದೀಖಾನೆಗೆ ಕಳುಹಿಸಿದರು. ಕೆಲವು ಎಡಿಟರುಗಳನ್ನು ಹಿಡಿಸಿ ಕಡಿಸಿ ಹಾಕಿದರು. ಕೊಲೆಯವರನ್ನು ಬಿಟ್ಟು ಪಾರ್ಲಿಮೆಂಟ್ ಸಭಾಮನೆಗಳನ್ನು ನೆಲಸಮ ಮಾಡಿಸುತ್ತಿದ್ದಾರೆ. ಸೈನಿಕರು ಸರಿಯಾಗಿ ತಮ್ಮ ಬಂದಿಯಲ್ಲಿರುವರು. ಅಂಗಡಿಮುಂಗಟ್ಟುಗಳು ತೆರೆಯಲ್ಪಟ್ಟಿವೆ.

ಜೂನ್ ತಾ ೨೬.—ಟೇಬ್ರಿಜ್ ಪಟ್ಟಣದ ಯುದ್ಧದಲ್ಲಿ ೧೦೦ ಜನರ ತನಕ ಕೊಲ್ಲಲ್ಪಟ್ಟರು, ಇಲ್ಲವೇ ಗಾಯಪಟ್ಟರು. ಪ್ರಜಾಪಕ್ಷದವರೇ ಪಟ್ಟಣದಲ್ಲಿ ಸ್ವತಂತ್ರಿಗಳಾಗಿದ್ದಾರೆ. ರಾಜಧಾನಿಯಾದ ಟೆಹರಾನ್ ಪಟ್ಟಣದಲ್ಲಿ ಸುಲ್ತಾನರು ಸೈನಿಕರಿಗೆ ಪ್ರಜಾ ಮುಖಂಡರ ಹೆಸರುಳ್ಳ ಒಂದು ಪಟ್ಟಿಯನ್ನು ಒದೆದುಕೊಟ್ಟು, ಅವರ ಮನೆ ಮಠಗಳನ್ನು ಗುಂಡುಗಳಿಂದ ಒಡೆಸಿಹಾಕುತ್ತಿದ್ದಾರೆ.

ಪಾರ್ಲಿಮೆಂಟಿಗೆ ಹೊಸದಾಗಿ ಮೆಂಬರುಗಳನ್ನು ಚುನಾಯಿಸುವ ವಿಷಯದಲ್ಲಿ ಸುಲ್ತಾನರವರು ಹೊಸ ಕಾನೂನುಗಳನ್ನು ಮಾಡಿ ಪ್ರಕಟಿಸಿದ್ದಾರೆ. ರಾಜಧಾನಿಯಲ್ಲಿ ಗಲಭೆಯೆಲ್ಲಾ ಸಮಾಧಾನಕ್ಕೆ ಬಂತು. ಸರ್ಕಾರದವರು ಪ್ರಜೆಗಳ ಬಳಿ ಇರತಕ್ಕ ಆಯುಧಗಳನ್ನೆಲ್ಲಾ ಕಿತ್ತುಕೊಳ್ಳುತ್ತಿದ್ದಾರೆ. ಕಾಸಕ್ ಸೈನಿಕರು ಪ್ರಜಾ ನೆಮ್ಮದಿಯನ್ನು ಕಾಪಾಡುತ್ತಿದ್ದಾರೆ. ಟೇಬ್ರಿಜ್ ಪಟ್ಟಣದಲ್ಲಿ ಇನ್ನೂ ಸಣ್ಣ ಸಣ್ಣ ಬಗೆಯ ಕಾದನಗಳು ನಡಿಯುತ್ತಿರುವವು.

ಜೂನ್ ತಾ ೨೭.—ಪಾರ್ಲಿಮೆಂಟ್ ಸಭಾಮನೆಗಳನ್ನು ಕೆಡವುತ್ತಿದ್ದನ್ನು ನಿಲ್ಲಿಸಿದ್ದಾರೆ. ಸಿಪಾಯಿಸಾಲಾರ್ ಎಂಬ ಮಸೀದಿಯನ್ನು ಕೆಡವಲಿಲ್ಲ. ಸುಲ್ತಾನರು ಒಂದು ಇಸ್ತಿಹಾರನ್ನು ಪ್ರಕಟಿಸಿ ಅದರಲ್ಲಿ—ಅಂಜುಮನ್ ಸಭೆಗಳವರು ಗಲಭೆ ಎಬ್ಬಿಸಿದರು. ದುಷ್ಟ ಜನರು ಪ್ರಜಾ ನೆಮ್ಮದಿಗೆ ಭಂಗವನ್ನು ತಂದಾರೆಂದು ಬೀಕರಿಯುಂಟಾಯಿತು. ಪಾರ್ಲಿಮೆಂಟಿನವರು ಪ್ರತಿಬಟಿಸಲಾಗ್ಯೆ ಬಂದರು. ಆದ್ದರಿಂದ ಸುಲ್ತಾನರು ಪಾರ್ಲಿಮೆಂಟನ್ನು ಮೂರು ತಿಂಗಳ ತನಕ ಮೋಕೂಫ್ ಮಾಡಿದರು. ಆ ಕಾಲ ಕಳೆದ ಮೇಲೆ ಸುಲ್ತಾನರು ಸತ್ಯವಂತರಾಗಿಯೂ, ಸದ್ಭಕ್ತರಾಗಿಯೂ, ದೇಶವತ್ಸಲರಾಗಿಯೂ ಇರುವಂಥಾ ಪ್ರತಿನಿಧಿಗಳನ್ನು ಪಾರ್ಲಿಮೆಂಟಿಗೆ ಮೆಂಬರಾಗಿ ಚುನಾಯಿಸುವಂತೆ ಏರ್ಪಾಡುಮಾಡುವರು ಎಂದು ತಿಳಿಸಿರುತ್ತಾರೆ.

ಜೂನ್ ತಾ ೨೮.—ಸುಲ್ತಾನರವರು ಎಲ್ಲಾ ಅಪರಾಧಿಗಳಿಗೂ ಕ್ಷಮಾಪಣೆಯನ್ನು ಕೊಟ್ಟಿದ್ದಾರೆ. ಕೆಲವರನ್ನು ಮಾತ್ರ ಸ್ಪೆಷಲ್ ಕೋರ್ಟಿನಲ್ಲಿ ಕ್ರಮವಾಗಿ ವಿಚಾರಣೆ ನಡಿಸುವರು.—ನೆನ್ನೆ ರಾತ್ರೆ ಟೇಬ್ರಿಜ್ ಪಟ್ಟಣದಲ್ಲಿ ಗುಂಡು ಹಾರಿಸುವುದು ಪ್ರಾರಂಭವಾಯಿತು. ದೊರೆಯ ಪಕ್ಷದವರು ಎದುರು ಪಕ್ಷದವರಲ್ಲಿ ಇಬ್ಬರನ್ನು ಸುಟ್ಟುಕೊಂದುಹಾಕಿದರು. ಪಕ್ಷಗಳ ವೈರವು ಬಹಳ ತೀಕ್ಷ್ಣವಾಗಿದೆ.

ಜೂನ್ ತಾ ೨೯.—ಪ್ರಜಾಪಕ್ಷದವರು ಸರ್ವಸ್ವತಂತ್ರಿಗಳಾಗಿ ಟೇಬ್ರಿಜ್‌ನಲ್ಲಿ ಸರ್ಕಾರಿ ಆಯುಧ ಶಾಲೆಗೆ ನುಗ್ಗಿ ಕೊಳ್ಳೆಹೊಡೆದು ಬಂದೂಕು ತೋಟಾ ಮದ್ದು ಮುಂತಾದ್ದನ್ನು ಎತ್ತಿಕೊಂಡು ಹೋದರು. ರಾಜಧಾನಿಯಲ್ಲಿ ಮಂತ್ರಿಗಳು ಪ್ರಜೆಗಳ ಮುಖಂಡರೊಡನೆ ಕಲೆತು, ಪ್ರಜಾ ನೆಮ್ಮದಿಯನ್ನು ಕಾಪಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ತಾಲ್ಲೋಕು ವರ್ತಮಾನಗಳು.

ದೊಡ್ಡಬಳ್ಳಾಪುರ.—ಇಲ್ಲಿ ಛಳಿ ಬಹಳವಾಗಿದೆ. ಮಳೆಯು ಬರುವ ಹಾಗೆ ಮೋಡಗಳು ಕಾಣಿಸಿಕೊಂಡು ಬಾರದೆ ಇವೆ. ಒಂದೆರಡು ಸಾರಿ ಸುಮಾರಾಗಿ ಮಳೆ ಬಂತು. ಆದರೂ ಇದರಿಂದ ಬಿತ್ತುವದಕ್ಕೆ ಆಗದೆ ರೈತರು ಕಾದುಕೊಂಡಿದ್ದಾರೆ. ಈ ಸಾರಿ ಇಲ್ಲಿ ಕಣ್ಣುನೋವಿನ ಬಾಧೆಯು ಬಹಳವಾಗಿದೆ.—ಈ ತಿಂಗಳ ೩ನೇ ತಾ ಪತ್ರಿಕೆಯಲ್ಲಿ ದೇವನಹಳ್ಳಿಯವರಿಗೆ ಹನುಮಂತಪ್ಪನು ಹುಡಿ ಮಾರಿದರೆಂದು ಇತ್ತು. ಹನುಮಂತಪ್ಪನು ಅಲ್ಲ. ವೆಂಕಟರಾಮಪ್ಪ ಎಂಬುದಾಗಿ ಇರಬೇಕು.—ವೀರಭದ್ರನ ಪೇಟೆಯಲ್ಲಿರುವ ಕಿವಾಚಾರದ ಧಾರವಾರ ರುದ್ರಪ್ಪನವರ ಮಗ ಡಿ. ಮರಿಯಪ್ಪನು ತನ್ನ ಸ್ನೇಹಿತರ ಸಂಗಡ ಮಾತನಾಡುವ ಸಂದರ್ಭದಲ್ಲಿ ನನಗೆ ಒಂದು ಸೀರೆಯನ್ನು ಕೊಟ್ಟರೆ ಉಟ್ಟುಕೊಂಡು ಊರಿನಲ್ಲಿ ಎಲ್ಲಾ ತಿರುಗಿಕೊಂಡು ಬಂದು, ಸದರಿ ಸೀರೆಯನ್ನು ತಾನೇ ತೆಗೆದುಕೊಳ್ಳುತ್ತೇನೆಂದು ಹೇಳಿದರು. ಆದರೊಳಗೆ ತೆನಗು ದೇವಾಂಗದ ಕೊತ್ತೂರಪ್ಪನೆಂಬುವರು ೩॥ ರೂ. ಕ್ರಯದ ಸೀರೆಯನ್ನು ತಂದುಕೊಟ್ಟರು. ಆ ಸೀರೆಯನ್ನು ಮರಿಯಪ್ಪನು ಉಟ್ಟುಕೊಂಡು, ಸ್ನೇಹಿತರ ಮಂಡಲಿಯಿಂದ ಹೊರಟು (ತಾ. ೨-೬-೦೮) ಪೋಲೀಸ್ ಸ್ಟೇಷನ್ ಚೌಕ, ಸಂತೆಬೀದಿ, ಈ ಕಡೆಗಳಲ್ಲಿ ಮಧ್ಯಾಹ್ನ ೧೨ ಗಂಟೆಯಲ್ಲಿ ಸುತ್ತಿಕೊಂಡು ಬಂದು, ಆ ಸೀರೆಯನ್ನು ಮರಿಯಪ್ಪನವರೇ ತೆಗೆದುಕೊಂಡರು. ಇವನು ಹೀಗೆ ಉಟ್ಟುಕೊಳ್ಳಲಾರನೆಂದು ಭಾವಿಸಿ ಸೀರೆಯನ್ನು ಕೊಟ್ಟರು. ಈ ರೀತಿ ಮಾಡಿದ್ದಕ್ಕೆ ಎಲ್ಲರೂ ತುಂಬಾ ಆಶ್ಚರ್ಯಪಟ್ಟರು.

ತಿಪಟೂರು.—ಆಗಾಗ್ಗೆ ಮೋಡವಾಡುತ್ತಲಿದೆಯೇ ಹೊರತು ಮಳೆ ಇಲ್ಲ. ಧಾರಣೆಮಾಸಿಗೆ ತುಂಬಾ ಹೆಚ್ಚಾವು ಆಗಿ ಬಡಜನರಿಗೆ ಹಾ ಹಾ ಕಾರವಾಗಿದೆ. ರೂಪಾಯಿಗೆ ೬ ಸೇರು ಅಕ್ಕಿ, ೧೬ ಸೇರು ರಾಗಿ, ೧೬ ಸೇರು ಜೋಳ, ೬ ಸೇರು ತೊಗರಿಬ್ಯಾಳೆ, ಇನ್ನಿತರ ಪದಾರ್ಥಗಳೂ ಇದೇ ರೀತಿ ತುಂಬಾ ಪ್ರಿಯವಾಗಿ ಇವೆ. ಕೆರೆಯಲ್ಲಿ ಸುತ್ರಾಂ ಯಾವ ಕಡೆಯಲ್ಲೂ ಅಂಗಾಲು ನೆನಿಯುವಷ್ಟು ನೀರಿಲ್ಲ. ಬಾವಿಗಳಲ್ಲೂ ಸಹಾ ನೀರಿಲ್ಲದೆ ನೀರಿಗೆ ತುಂಬಾ ಅಭಾವವಾಗಿದೆ. ಸಧ್ಯ ತೆಂಗಿನಕಾಯಿ ೧,೧೦೦ಕ್ಕೆ ೨೫ರೂ. ಬೆಲ್ಲ ದೊಡ್ಡ ಮಣಕ್ಕೆ ೧। ರೂ. ರೂ. ಗೆ ೨೦ ಸೇರು ಉಪ್ಪು ಧಾರಣೆಯಾಗಿ ನೋಡುಯುತ್ತಲಿದೆ. ಈ ಕಾಲದಲ್ಲೂ ಕೂಡ ಸಂತೆಯಲ್ಲಿ ಪಚ್ಚ ಸೇರು, ೨೦ ರೂಪಾಯಿ ತೂಕದ ಬಟ್ಟುಗಳ ಓಡಾಟ ಜೋರಾಗಿದೆ. ಇದಕ್ಕಾಗಿ ಸಂತೆಯು ಒಂದು ದಿನವಾದರೂ ಮೇಲ್ಪಟ್ಟ ಆಫೀಸರು ನಿಗಾ ಇಡತಕ್ಕದ್ದು ತುಂಬಾ ಅವಶ್ಯಕ. ಇಲ್ಲಿಗೆ ಬಂದಿರುವ ಹೊಸ ಅಮಲ್ದಾರ್ ಮೆ॥ ಮಹಮದ್ ಅಬ್ದುಲ್ ಷರೀಫ್ ಸಾಹೇಬರು ತುಂಬಾ ಮುತುವರ್ಜಿಯಿಂದ ಕೆಲಸ ನೋಡುತ್ತಾರೆಂಬ ಇವರ ಕೀರ್ತಿಯು ಈ ಬಡಜನಗಳಲ್ಲಿ ತೋರಿಸಿ, ಇನ್ನೂ ಅಧಿಕ ಕೀರ್ತಿಯುತರಾಗಲೆಂದು ಹಾರೈಸುತ್ತೇವೆ.—ಇಲ್ಲಿನ ಮಂಡಿ ವರ್ತಕರು ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾದ ಮೆ॥ ಸಾಹುಕಾರ್ ಕಿಂಗ್ರಿ ನಂಜಪ್ಪನವರು ರೈಲ್ವೆ ಸ್ಟೇಷನ್ ಸಮೀಪದಲ್ಲಿ ಭಾರಿಯಾದ ನೂತನ ಶಿವದೇವಾಲಯವೂ ಪಕ್ಕದಲ್ಲೇ ಒಂದು ದೊಡ್ಡ ಸೋಪಾನದ ಬಾವಿಯೂ ಸಹಾ ಸುಮಾರು ೧೫ ಸಾವಿರ ರೂಪಾಯಿ ಖರ್ಚಿನಿಂದ ಕಟ್ಟಿಸಿರುತ್ತಾರೆ. ಇನ್ನೂ ಕಾಂಪೌಂಡು ಗೋಡೆ ವಗೈರೆ ಪೂರ್ತಿಯಾಗಲು ೫ ಸಾವಿರ ರೂಪಾಯಿ ಬೇಕಾದೀತು. ಕೆಲಸ ಪೂರೈಸಲು ೩-೪ ತಿಂಗಳು ಬೇಕಾದೀತು. ಆದರೆ ಮುಂದೆ ಇಷ್ಟು ಪ್ರಶಸ್ತವಾದ ದಿವಸ ಕೂಡಿಬರುವದಿಲ್ಲವೆಂದು ಜೂನ್ ತಾ. ೨೨ನೇ ಸೋಮವಾರ ಮಧ್ಯಾಹ್ನೋತ್ತರ ಲಿಂಗಪ್ರತಿಷ್ಠೆ ನಡಿಸಿದರು. ಅಗ್ನಿಷ್ಟಿಕೆ ಪರಸ್ಥಳದ ವೈದೀಕರೂ, ಸಾಹುಕಾರರೂ, ಶೆಟ್ಟಿ ವರ್ತಕರೂ, ನವ್ವಕರನಾಸೇರೂ, ಇನ್ನೂ ಇತರೆ ಹಳ್ಳಿಯ ಜನಗಳೂ ವಿಟೇಚ್ಛತವಾಗಿ ಇತ್ತು. ಇವರ ಬಂದುಮಿತ್ರರು ಸುಮಾರು ೯—೮ ಸಾವಿರ ರೂಪಾಯಿಗಳ ನಾಗಮತಿಯೂ ಮತ್ತು ೩ ಗದ್ದೆ ಜಮೀನುಗಳೂ ದೇವರ ನೈವೇದ್ಯಾರ್ಥವಾಗಿ ಮಾನ್ಯ ಬಿಡಿಸಿದರು. ತಾ ೨೨೦ ಲಾಗಾಯತು ೨೫ರ ವರಿವಿಗೆ ದಿನವಹಿ ಬೆಳಿಗ್ಗೆ ನೆರವಣಿಗೆ, ಗಿರಿಜಾಕಲ್ಯಾಣ, ಒಳ್ಳೆ ವಸ್ತ್ರಗಳುತ್ಸವಾದಿಗಳನ್ನೂ ವೈದೀಕರ ವೇದಘೋಷದಿಂದಲೂ, ನಾದಸ್ವರದ ಮಂಗಳಗೀತಗಳಿಂದಲೂ, ನಾನಾವಿಧವಾದ ಮಂಗಳ ವಾದ್ಯಗಳಿಂದಲೂ ಪ್ರೇಕ್ಷಕರ ಮನಮಾನಸಮಸಂತೆ ಸಾಂಗವಾಗಿ ನೆರವೇರಿಸಿದರು. ಇದಕ್ಕಾಗಿಯೇ ದೂರದೇಶವಾದ ಶೃಂಗನಗರದಿಂದ ಜಂಗಮರನ್ನು ಕರಸಿದ್ದರು. ಇದಕ್ಕಾಗಿ ಸಾವಿರಾರು ಜನರು ಬಂದು, ಒಂದು ವಾರದವರಿಗೆ ಇವರ ಅಥಿತಿಗಳಾಗಿದ್ದರು. ಬಂದ ಪ್ರೇಕ್ಷಕರಿಗೆಲ್ಲಾ ದಿನವಹಿ ಅವರವರ ಕೆಲಂಬಾರ್ ಅಟಾಹಿಡಾ ಕೊರತೆಯಿಲ್ಲದಂತೆ ಸಂತರ್ಪಣೆಗಳಾಗುತ್ತಿದ್ದವು. ಮತ್ತು ಸ್ಥಳ ಪರಸ್ಥಳದ ಬ್ರಾಹ್ಮಣರಿಗೆ ಒಂದು ವಾರದವರಿಗೆ ದಿನವು ವಿಧವಿಧವಾದ ಸಂತರ್ಪಣೆಯೂ ಮತ್ತು ದಿನವಹಿ ಭೋಜನಾನಂತರ ದಕ್ಷಿಣೆಯೂ ಕೊಡುತ್ತಿದ್ದರಲ್ಲದೆ ಆಖೈರು ದಿನ ದೊಡ್ಡ ಸಂತರ್ಪಣೆಯೂ ೪ ಆಣೆ, ೧ ರೂಪಾಯಿವರೆಗೆ ದಕ್ಷಿಣೆಯೂ, ಕೆಲವು ಶಾಸ್ತ್ರಿಗಳೂ, ಪಂಡಿತರುಗಳಿಗೆ ಅವರವರ ಯೋಗ್ಯತಾನುಸಾರ ಉಡುಗೆರೆಗಳು ಕೊಡಲ್ಪಟ್ಟವು. ತುಂಬಾ ಸಂತೋಷದೊಡನೆ ಮೆ॥ ನಂಜಪ್ಪನವರ ಔದಾರ್ಯವನ್ನು ಶ್ಲಾಘಿಸಿ ಆ ವರವರ ನಿವಾಸಸ್ಥಳಗಳಿಗೆ ತೆರಳಿದರು. —ಇಲ್ಲಿ ದನ ಚನ್ನಾಗಿಲ್ಲ, ಕೆರೆಯಲ್ಲಿ ನೀರಿಲ್ಲ. ಈ ವರುಷ ದೊಡ್ಡ ಮಳೆಗಳು ಬಾರದೆ ತುಂಬಾ ತೊಂದರೆಯಾಗಿದೆ. ಜನರಿಗೆ ನೀರಿಗೆ ತುಂಬಾ ತೊಂದರೆಯಾಗಿದೆ. ಕೆಲವು ಬಾವಿಗಳಲ್ಲಿ ರಾತ್ರಿವೇಳೆಯಲ್ಲಿ ನೀರು ಸೇದಿ ತುಂಬಿಸಿಕೊಳ್ಳಬೇಕಾಗಿದೆ.—ಇಲ್ಲಿನ ಮ್ಯುನಿಸಿಪಲ್ ಕಂಟ್ರಾಕ್ಟರ್ ಟಿ. ಗುರಪ್ಪಶೆಟ್ಟರ ಹತ್ತಿರ ಕಲ್ಲಿನ ಕೆಲಸ ಮಾಡುವ ಒಬ್ಬ ವೃದ್ಧನಿದ್ದಾನೆ. ಅವನ ಹೆಸರು ಮದಾರ್ ಸಾಬಿ. ಅವನ ವಯಸ್ಸು ೧೦೫. ಈಗಲೂ ಪ್ರತಿ ದಿನವೂ ೪ ಆಣೆ ಕೂಲಿಯಂತೆ ಕಲ್ಲಿನ ಕೆಲಸ ಮಾಡುತ್ತಾನೆ. ಕೆಲಸ ಮಾಡುವಾಗ ಸ್ವಲ್ಪವೂ ಆಯಾಸಪಡುವದಿಲ್ಲ. ಅಷ್ಟು ಮುಪ್ಪಿನ ಕಾಲದಲ್ಲಿ ಕಷ್ಟಕರವಾದ ಕಲ್ಲಿನ ಕೆಲಸ ಮಾಡುವದು ಆಶ್ಚರ್ಯವೇ ಸರಿ. ಇನ್ನೂ ೧೦ ವರ್ಷಗಳ ವರಿಗೂ ಇವನು ಕೆಲಸ ಮಾಡುವ ಅಂದಾಜು ಕಾಣುತ್ತದೆ. ಹಲ್ಲುಗಳು ಗಟ್ಟಿಯಾಗಿವೆ. ಒಂದೂ ಬಿದ್ದಿಲ್ಲ. ಇದು ಆಶ್ಚರ್ಯವೇ ಸರಿ.

ವಾರ್ತಾದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ವಾರ್ತೆಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ವಾರ್ತಾದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಪರೋಕ್ಷ ತಿಳಿಸತಕ್ಕದ್ದು.

ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥಪತ್ರಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ತೆಂಗಲಿ ವಡಗಲಿ ವ್ಯಾಖ್ಯ, ಹಾಸನ.—ಈ ಬಾತ್ಮಿಯನ್ನು ಪ್ರಕಟಿಸಲಾರೆವು.—ಎಡಿ.]

ಕರೆಸ್‌ಪಾಂಡೆನ್ಸ್.

ಶಿಕಾರಿಪುರದ ತಾಲ್ಲೂಕಿನ ರೈತರ ದುಸ್ಥಿತಿಯು.

ಅಯ್ಯಾ,

ಈ ತಾಲ್ಲೂಕಿನ ಮುಕ್ಕಾಲು ಪಾಲು ರೈತರುಗಳು ಕೇವಲ ಹೀನ ಸ್ಥಿತಿಯಲ್ಲಿ ಇರುತ್ತಾರೆ. ಇವರಲ್ಲಿ ಅನೇಕರು ಒಂದು ದಿವಸದ ಕಾಲಕ್ಷೇಪವನ್ನು ಮಾಡುವುದು ಬಹು ಕಷ್ಟವಾಗಿದೆ ಈ ಹಿಂದೆ ೩-೪ ವರುಷಗಳು ಕಾಲುವಾಸಿ ಬೆಳೆಯನ್ನು ಕೂಡ ಕಾಣದೆ ಜಮೀನ್ದಾರರು ಸರ್ಕಾರಿ ಕಂದಾಯವು ಕೂಡ ಕೈಯಿಂದಲೇ ಬೀಳುವ ಸ್ಥಿತಿಯಲ್ಲಿ ಇದ್ದುದರಿಂದ ಅನೇಕರು ತಮ್ಮ ತಮ್ಮ ಜಮೀನುಗಳನ್ನು ತಾವೇ ಸ್ವಂತಮಾಡಲು ಉಪಕ್ರಮಿಸಿರುವರು ಆದುದರಿಂದ ತಮಗೆ ಕಾಲಕ್ಷೇಪಕ್ಕೆ ಮಾರ್ಗವಿಲ್ಲದೆ ಕೂಲಿ ನಾಲಿ ಮಾಡಿ ಈ ವರಿಗೂ ಕಾಲವನ್ನು ದಬ್ಬಿದರು. ಹೋದ ವರುಷ ಅಲ್ಪಸ್ವಲ್ಪ ಮಳೆಯಾಗಿ ಕೆಲವು ಸಣ್ಣ ಸಣ್ಣ ಕೆರೆಗಳಲ್ಲಿ ಕೊಂಚ ನೀರು ನಿಂತದ್ದರಿಂದ ಇದರಲ್ಲಿ ಕಬ್ಬಿನ ಬೆಳೆಗೆ ಮನೆಯಲ್ಲಿ ಇಟ್ಟಿದ್ದ ಅಲ್ಪಸ್ವಲ್ಪ ದವಸವನ್ನೂ ಮಾರಿ ಹಾಕಿದ ಕಬ್ಬು ಈಗ ಮಳೆ ಇಲ್ಲದೆ ಒಣಗುತ್ತದೆ. ಇದುವರಿವಿಗಾದರೂ ಅನೇಕ ಜಮೀನುಗಳು ಬೀಜವನ್ನೇ ಕಂಡಿರುವುದಿಲ್ಲ. ಮತ್ತು ಕೆಲವರು ಈ ಹಿಂದೆ ಆದ ಅರೆ ಮಳೆಯಲ್ಲಿಯೇ ತಾವು ಊಟಕ್ಕೆ ಇಟ್ಟುಕೊಂಡ ಭತ್ತವನ್ನು ಸಹ ಬಿತ್ತಿ ಅವು ಸಸಿಯಾಗಿ ಮಳೆ ಇಲ್ಲದೆ ಒಣಗಿ, ಪುನಃ ಬಿತ್ತಿದ ಬೀಜಗಳು ಸಹ ಸಸಿಯಾಗಿ ಒಣಗುತ್ತಲಿವೆ

ಈ ತಾಲ್ಲೋಕಿನಲ್ಲಿಯೇ ಭಾರಿ ಕೆರೆಗಳಿವೆ ಎಂಬ ಹೆಸರು ಒಂದರಲ್ಲಾದರೂ ನೀರಿಲ್ಲ ಒಂದು ವರುಷ ಸ್ವಲ್ಪ ಮಾತ್ರ ಮಳೆ ಕಡಿಮೆಯಾದರೆ ಬೆಳೆಯೇ ಸೊನ್ನೆ. ಈ ಕಾಲದಲ್ಲಿ ಇಲ್ಲಿನ ರೈತರ ಸಂತಾಪವನ್ನು ನೋಡಿದರೆ ಪಶ್ಚಾತ್ತಾಪಪಡದಿರಲಾರದು ಸರ್ಕಾರದವರು ಇಲ್ಲಿಯ ನೀರಿನ ತೊಂದರೆಯನ್ನು ಸಾಧ್ಯವಾದಷ್ಟು ಕಡಮೆ ಮಾಡಿದರೆ ರೈತರುಗಳು ಹೇಗಾದರೂ ಬಾಳುವೆ ಮಾಡುವರು ಇಲ್ಲಿ ಇರುವ ಕುಮದ್ವತಿ ನದಿಗೆ ತಿರುಗಣೆಸುತ್ತಾ ನಲ್ಲಿ ಅಣೆಕಟ್ಟು ಹಾಕಿ ಕೆರೆಯನ್ನು ಮಾಡಿದರೆ ಸುಮಾರು ೩೦ ಗ್ರಾಮಗಳ ರೈತರುಗಳು ಬದುಕಿಕೊಳ್ಳುವರೆಂದು ಅನೇಕ ವರುಷಗಳಿಂದಲೂ ಅನೇಕ ಅರ್ಜಿಗಳನ್ನು ಕೊಟ್ಟು ಬೇಡಿಕೊಂಡರೂ ಪ್ಲಾನ್ ತಯಾರಾಗುವುದರಲ್ಲಿಯೇ ಮೊಬ್ಬಾಗಿ ನಿಂತುಬಿಟ್ಟಿದೆ. ಇದೂ ಅಲ್ಲದೆ ದಿವಾನ್ ಸಾಹೇಬರವರು ಇಲ್ಲಿಗೆ ದಯಮಾಡಿಸಿದ್ದಾಗ್ಯೂ ಖುದ್ದು ಕೇಳಿ ನೋಡಿಬಿದ್ದ ಅರ್ಜಿಯು ಹಾಕಿದ್ದೂ ಆಯಿತು ಅದು ಇನ್ನು ಯಾವಾಗ ಆಗುತ್ತದೆಯೋ' ಅಥವಾ, ಆಗುವುದೇ ಇಲ್ಲವೋ ತಿಳಿಯದು. ಕರುಣಾಶಾಲಿಗಳಾದ ಸರ್ಕಾರದವರು ಈಗಲಾದರೂ ಕಣ್ಣು ಬಿಚ್ಚಿ ನೋಡಿ, ಚಿತ್ರದುರ್ಗ, ಕೋಲಾರ, ಮೈಸೂರಿನ ಪ್ರಜೆಗಳಂತೆಯೇ ಇಲ್ಲಿಯ ಪ್ರಜೆಗಳನ್ನೂ ಕಾಪಾಡಬೇಕಾಗಿದೆ.

ಎಸ್ ಎಚ್. ಆರ್

ಉಪನ್ಯಾಸವು.

ಅಯ್ಯಾ,

ಶ್ರೀ ಕ್ಯಾಸನೂರು ಸಂಸ್ಥಾನದ ಪಂಡಿತ ಗುರುಬಸವ ಭಿಕ್ಷಾಪತಿ ಮಹಾಸ್ವಾಮಿಗಳವರು ಅರಕೆರೆಗೆ ದಯಮಾಡಿಸಲು ವೇ|| ಜಿ. ಚನ್ನವೀರಪ್ಪನವರೂ, ನಂಜಪ್ಪನವರೂ, ಜಿ. ತಿಮ್ಮಯ್ಯನವರೇ ಮೊದಲಾದ ವೀರಶೈವರುಗಳು ಶ್ರೀಗಳವರ ದರ್ಶನವನ್ನು ಕೊಂಡಿ ನಾಳಿನ ದಿವಸ ಸರ್ವರಿಗೂ ಕರ್ಣಾನಂದವನ್ನುಂಟುಮಾಡಬೇಕೆಂದು ಕೇಳಲು ಶ್ರೀಗಳವರು ಸಂತೋಷದೊಡನೆ ಒಪ್ಪಿದರು. ಮರು ದಿನ ಬೆಳಿಗ್ಗೆ ಊರಲ್ಲೆಲ್ಲಾ ಪ್ರಸಿದ್ಧ ಪತ್ರಿಕೆಗಳು ಹಂಚಲ್ಪಟ್ಟವು ತಾ. ೧೬ನೇ ಸಾಯಂಕಾಲ ೭ ಘಂಟೆಗೆ ರೇಂಗು ದಸಪಿನಲ್ಲಿ ಅತಿ ವೈಭವದಿಂದ ಸಭೆಯು ಸೇರಿತು ಈ ಸಭೆಗೆ ಇಲ್ಲಿನ ಬಹು ಜನ ದೊಡ್ಡ ಮನುಷ್ಯರು ಹಾಜರಾಗಿದ್ದರು. ವೇ|| ಶ್ರೀನಿವಾಸಯ್ಯನವರು ಅಧ್ಯಕ್ಷ ಸ್ಥಾನವನ್ನು ವಹಿಸಿದರು ಆ ವೇಳೆ ಶ್ರೀ ಭಿಕ್ಷಾಪತಿಗಳವರು ಪ್ರಸಿದ್ಧ ಪತ್ರಿಕೆಯಲ್ಲಿ ನಮೂದಿಸಿದ ಪ್ರಕಾರ ವೇದಲು ಅನೇಕ ಗ್ರಂಥಾಧಾರಗಳೊಡನೆ ನಾಸ್ತಿಕ ಮತ ಸಿದ್ಧಾಂತವನ್ನು ಸಭಿಕರೆಲ್ಲಾ ಚಿತ್ರಭಿತ್ತಿಗಳಂತೆ ಬೆರಗುಗೊಳ್ಳುವ ಹಾಗೆ ಪ್ರಸಂಗಿಸಿದರು. ಆ ವೇಳೆ ಶ್ರೀ ಶಂಕರಾಚಾರ್ಯರ ಅದ್ವೈತ ಮತವನ್ನೂ ಶ್ರೀ ನೀಲಕಂಠ ಶಿವಾಚಾರ್ಯರ ಶಕ್ತಿ ವಿಶಿಷ್ಟಾದ್ವೈತ ಮತವನ್ನೂ ಅನುಸರಿಸಿ, ಅನೇಕ ವೇದ ಗಮೋಪನಿಷತ್ತು ಪುರಾಣ ಪ್ರಮಾಣ ವಚನಗಳಿಂದ ತತ್ಕಾಲೋಚಿತಗಳಿಂದ ತರ್ಕಯುಕ್ತಿ ದೃಷ್ಟಾಂತಗಳಿಂದ ಪೂರ್ವಪಕ್ಷ ಸಮಾಧಾನಗಳೊಡನೆ ನಾಸ್ತಿಕವಾದ ಖಂಡನಾಪೂರ್ವಕವಾಗಿ ಆಸ್ತಿಕ ಸಿದ್ಧಾಂತವನ್ನು ವಿದ್ಯಾಪ್ರಯೋಜನವನ್ನು ಅತಿ ಚಾತುರ್ಯದಿಂದ ಪಾಂಡಿತ್ಯವನ್ನು ಪ್ರಕಟಿಸಿ, ಸಭಿಕರೆಲ್ಲಾ ಭಕ್ತಿ ಜ್ಞಾನ ವೈರಾಗ್ಯಗಳಿಂದ ಪರವಶರಾಗುವ ಹಾಗೆ ಭಾಷಣವನ್ನು ಮಾಡಿದರು. ಈ ಭಿಕ್ಷಾಪತಿಗಳವರ ಭಾಷಣವು ಮುಗಿಯುವ ವರಿವಿಗೂ ಸಭ್ಯರುಗಳು ಮಧ್ಯೆ ಮಧ್ಯೆ ತಮ್ಮ ಆನಂದವನ್ನು ಚಪ್ಪಾಳೆಗಳಿಂದ ಸೂಚಿಸಿದರು. ಅನಂತರ ಸಭಾಧ್ಯಕ್ಷರು— ಶ್ರೀ ಕ್ಯಾಸನೂರು ಸಂಸ್ಥಾನದ ಪಂಡಿತ ಗುರುಬಸವಭಿಕ್ಷಾಪತಿ ಸ್ವಾಮಿಗಳವರು ತಮ್ಮ ಸಂಸ್ಥಾನದ ವೈಭವಂಗಳನ್ನು ತ್ಯಜಿಸಿ, ಅನೇಕ ಸಂವತ್ಸರಗಳ ವರಿವಿಗೂ ಮೈಸೂರು ಕಾಶಿ ಮೊದಲಾದ ಸ್ಥಳಗಳಲ್ಲಿ ಅನೇಕ ಶ್ರಮದೊಡನೆ ವಿದ್ಯಾಸಾರಗಳನ್ನು ಅಭ್ಯಸಿಸಿ, ತರ್ಕವೇದಾಂತ ಸಾಂಖ್ಯ ಪೂರ್ವಮೀಮಾಂಸನೇ ಮೊದಲಾದ ಶಾಸ್ತ್ರಗಳಲ್ಲಿ ಅತ್ಯದ್ಭುತವಾದ ಪಾಂಡಿತ್ಯವನ್ನು ಸಂಪಾದಿಸಿ, ಇಲ್ಲಿಯ ವರಿವಿಗೂ ಬಂದು ನಮ್ಮೆಲ್ಲರನ್ನೂ ಬ್ರಹ್ಮಾನಂದ ರಸದಲ್ಲಿ ಮುಳಗಿಸಿದ್ದರಿಂದ ಅಭೇದಾನಂದರಂತೆ ವರ್ತಿಸುವ ಶ್ರೀ ಸ್ವಾಮಿಗಳವರ ವಿಷಯದಲ್ಲಿ ನಮ್ಮ ಕೃತಜ್ಞತೆಯನ್ನು ಚಪ್ಪಾಳೆ ಮೂಲಕ ತೋರಿಸಬೇಕೆಂದು ಹೇಳಲು ಸರ್ವರೂ ಏಕಕಾಲದಲ್ಲಿ ಸಂತೋಷದೊಡನೆ ಚಪ್ಪಾಳೆಯನ್ನು ಘೋರ್ಗರೆಸಿದರು.

ಚಂದಾದಾರ.

ಭರತಖಂಡದ ಈಗಿನ ಸ್ಥಿತಿ.

ಅಯ್ಯಾ,

ಈಗ್ಗೆ ಕೆಲವು ದಿವಸಗಳಿಂದ ವಿದ್ಯಾವಂತರಾದ ಕೆಲವರಿಗೆ ಯುಕ್ತಾಯುಕ್ತವೆಂಬ ವಿವೇಚನೆಯಿಲ್ಲದ ಅಕೋತ್ತರ ಹುಟ್ಟಿ ಮುಂದಕ್ಕೆ ತಾವೇ ಇಂಡ್ಯಾದೇಶದ ಸರ್ವಾಧಿಕಾರವನ್ನು ವಹಿಸಿ ಲೋಕೋದ್ಧಾರ ಮಾಡುತ್ತೇವೆಂತಲೂ, ಇಂಗ್ಲೀಷಿನವರ ರಾಜ್ಯಭಾರ ಬಂದನಂತರ ಅವರು ನಮ್ಮ ದೇಶದಲ್ಲಿರತಕ್ಕ ಐಶ್ವರ್ಯವನ್ನೆಲ್ಲಾ ತೆಗೆದುಕೊಂಡು ಹೋಗಿ ನಮ್ಮನ್ನು ಬಡವರನ್ನಾಗಿ ಮಾಡಿದಾರೆಂತಲೂ ವಗೈರೆಯಾ ದೂಷಣೆಗಳು ವರ್ತಮಾನ ಪತ್ರಿಕೆಗಳ ಮೂಲಕವೂ ಉಪನ್ಯಾಸಗಳಿಂದಲೂ ಪ್ರಜೆಗಳಿಗೆ ಬೋಧಿಸುತ್ತಾ ಅವರನ್ನು ತಮ್ಮ ಜೊತೆಗೆ ಸೇರಿಸಿಕೊಳ್ಳಬೇಕೆಂತ ಪ್ರಯತ್ನ ಪಡುತ್ತಾ ಇದಾರೆ. ಈ ಕೆಟ್ಟಪದ್ಧತಿಯಿಂದ ಪ್ರಜೆಗಳಲ್ಲಿ ನಿಜತ್ವ ತಿಳಿದಿರಲಿ, ತಿಳಿಯದೇ ಇರಲಿ, ಪ್ರತಿ ಒಬ್ಬರೂ ಅಂದರೆ ಮಕ್ಕಳು ಮೊದಲ್ಗೊಂಡು ಮುದುಕರ ವರಿವಿಗೂ ಅವರವರ ಸ್ವಕಾರ್ಯಸನ್ಮಾರ್ಗ ಸಹಾ ಬಿಟ್ಟು ಅಹೋರಾತ್ರಿಗಳಲ್ಲೂ ಈ ದುರ್ಬೋಧನೆ ಕೇಳುತ್ತಾ, ಅನ್ಯದೇಶದ ಪದಾರ್ಥಗಳನ್ನು ಕೊಂಡುಕೊಳ್ಳಕೂಡದೆಂಬ ಕಟ್ಟುಮಾಡಿಕೊಳ್ಳುತ್ತಿದಾರೆ. ಈ ನಡವಳಿಕೆಗಳಿಂದ ದೇಶಕ್ಕೆ ಅಸೌಖ್ಯವೂ ಪ್ರಜೆಗಳಿಗೆ ಕೆಡುಕೂ ಉಂಟಾಗುತ್ತದೆಯೋ ಹೊರತು ಅದರಿಂದ ಸುಖವೇನೂ ಕಾಣುವುದಿಲ್ಲ.

ಈ ನಮ್ಮ ಭರತಖಂಡದಲ್ಲಿ ೩,೦೦೦ ಚಿಲ್ಲರೆ ಜಾತಿಯವರಿದಾರೆ. ಅವರಲ್ಲಾದರೋ ಒಂದು ಜಾತಿಗೆ ಮತ್ತೊಂದು ಜಾತಿಯವರನ್ನು ಕಂಡರಾಗದು. ಸಾಧ್ಯವಿಲ್ಲದಷ್ಟು ಅಸೂಯೆಗಳಿವೆ. ಅದು ಪ್ರತಿ ಒಬ್ಬರ ಅನುಭವದಲ್ಲೂ ಇರತಕ್ಕದ್ದರಿಂದ ಹೆಚ್ಚಾಗಿ ಆ ವಿಷಯ ಹೇಳುವುದಿಲ್ಲ. ಇಂಗ್ಲೀಷಿನವರ ಆಧಿಪತ್ಯ ಈ ದೇಶದಲ್ಲಿ ಆರಂಭವಾಗುವುದಕ್ಕೆ ಮೊದಲು ನಮ್ಮವರೇ ನಮ್ಮನ್ನಾಳುತ್ತಿದ್ದರು ಆ ಕಾಲದಲ್ಲಿ ನಮಗಿದ್ದ ಸುಖ ಯೋಚಿಸಿದರೆ, ಇಲಿಗಳಿಗೆ ಬೆಕ್ಕು ದೊರೆಯಾದರೆ ಇಲಿಗಳಿಗೆ ಎಷ್ಟು ನಿರ್ಭಯ ಸೌಖ್ಯಗಳು ಇದ್ದೀತೋ ಅಷ್ಟೇನೇ ಆ ಕಾಲದಲ್ಲಿ ನಮಗೂ ಇತ್ತೆಂತಲೇ ಹೇಳಬೇಕಾಗಿ ಇದೆ.

ಇಂಗ್ಲೀಷ್ ದೌಲತ್ತು ಬಂದನಂತರ ಅವರು ಪ್ರಜೆಗಳ ಮಾನ, ಪ್ರಾಣ, ಧನಗಳನ್ನು ಸಂರಕ್ಷಿಸತಕ್ಕ ಅಧಿಕಾರ ಗೌರ್ನಮೆಂಟಿನವರು ವಹಿಸಿಕೊಂಡು ಮತಸಂಬಂಧದಲ್ಲಿ ತಾವು ಪ್ರವೇಶಿಸುವುದಿಲ್ಲವೆಂತ ಹೇಳಿ, ಅದರಂತೆ ರಾಜ್ಯಭಾರ ನಡಿಸುತ್ತಾ ಬಂದರು ಜಾತಿಭೇದ, ಅನ್ಯ ಜಾತಿಯಲ್ಲಿ ದ್ವೇಷ, ಈ ದುರ್ಗುಣಗಳು ಇಂಗ್ಲೀಷ್ ಜಾತಿಗೇನೇ ಇಲ್ಲ ಅವರು ಮನುಷ್ಯಮಾತ್ರನವರೆಲ್ಲಾ ಒಂದೇ ತೂಕವೆಂತ ಎಣಿಸತಕ್ಕವರು ಅವರವರ ಸನ್ಮಾರ್ಗ ದುರ್ಮಾರ್ಗಗಳಿಂದ ಪ್ರಜೆಗಳಲ್ಲಿ ಯೋಗ್ಯರು ಅಯೋಗ್ಯರು ಎಂತ ಎಣಿಸತಕ್ಕವರೇ ಹೊರತು ಜಾತಿಯಿಂದ ದೊಡ್ಡದು ಸಣ್ಣದು ಎಂತ ಎಣಿಸತಕ್ಕವರಲ್ಲ. ಇದಲ್ಲದೆ ಪ್ರಜೆಗಳೆಲ್ಲಾ ವಿದ್ಯಾವಂತರಾಗಿ ವಿವೇಕದಿಂದ ಬಾಳುವಂತೆ ಮಾಡಬೇಕೆಂಬ ಕಾರ್ಯದಲ್ಲಿ ಅವರು ಬದ್ಧಕಂಕಣರು

ಈ ದೌಲತ್ತು ಈಗ್ಗೆ ೨೦೦ ವರ್ಷಗಳಿಂದ ಅವಿಚ್ಛಿನ್ನವಾಗಿ ನಡೆಯುತ್ತಾ ಬಂದಿದ್ದರಲ್ಲಿ ಎಲ್ಲಾ ಪ್ರಜೆಗಳೂ ತಂದೆತಾಯಿಗಳ ಕೆಳಗೆ ಮಕ್ಕಳು ಸಂರಕ್ಷಣೆಯಾಗುವಂತೆ ಸೌಖ್ಯವಾಗಿದಾರೆ ಮತ್ತು ಬ್ರಾಹ್ಮಣರಲ್ಲಿ ಜಾಸ್ತಿಯಾಗಿಯೂ ಇತರ ಮತಸ್ಥರಲ್ಲಿ ಸಾಧಾರಣವಾಗಿಯೂ ಅಂತೂ ಎಲ್ಲಾ ಪ್ರಜೆಗಳೂ ವಿದ್ಯಾವಂತರಾಗಿ ತಮ್ಮ ಮತ್ತು ಗೌರ್ನಮೆಂಟಿನ ತಾರತಮ್ಯ ತಿಳಿದಿದಾರೆ ಆದರೆ ನಮ್ಮ ಇಂಡಿಯಾವನ್ನು ಮೊದಲಿನಿಂದ ಕೆಡಿಸಿರತಕ್ಕ ಜಾತಿಮತ್ಸರ, ಮಾತ್ಸರ್ಯ, ದುರಾಚಾರ, ಸೋಂಬೇರಿತನ, ಇವು ಮಾತ್ರ ಪ್ರಜೆಗಳಲ್ಲಿ ತಪ್ಪಲಿಲ್ಲ. ಅವು ಜಾಸ್ತಿಯಾಗುತ್ತಲೇ ಬಂದು ಇವೆ ಪೂರ್ಣವಿದ್ಯಾವಂತರು ಇತರರನ್ನು ಮೌಢ್ಯದಲ್ಲಿಟ್ಟರೋಣವೇ ತಮಗೆ ಕ್ಷೇಮವೆಂತ ಅಂತರಂಗದಲ್ಲಿ ಮಾಡಿಕೊಂಡು, ಅವರಿಗೆ ನಿಜತ್ವ ತಿಳಿಸದೇಲೂ, ತಾವು ಅದನ್ನು ಅನುಸರಿಸದೇಲೂ ಇರುತ್ತಾ, ಬಹಿರಂಗದಲ್ಲಿ ಮಾತ್ರ ತಾವು ನಿಷ್ಪಕ್ಷಪಾತಿಗಳೆಂತಲೂ ಎಲ್ಲಾ ಪ್ರಜೆಗಳೂ ಸಹೋದರಭಾವದಲ್ಲಿರಬೇಕೆಂತಲೂ ಉಪನ್ಯಾಸಮಾಡುತ್ತಾ ಬಂದಿದಾರೆ ಕಾರ್ಯದಲ್ಲಿ ಅದಕ್ಕೆ ವ್ಯತಿರಿಕ್ತ. ಈ ವಿಧವಾದ ನಡವಳಿಕೆ ನಮ್ಮವರ ವಿದ್ಯಾಭ್ಯಾಸಿಗಳಲ್ಲಿ ಎಲ್ಲರಿಗೂ ಕಾಣುತ್ತಾ ಇದೆ ಈ ಸ್ಥಿತಿಯಲ್ಲಿ ನಾವು ಇದೇ ಒಟ್ಟಾಗಿ ಯೋಚಿಸಿದರೆ ಗೌರ್ನಮೆಂಟ್ ಅಧಿಕಾರ ಬೇಕೆಂದು ಕೇಳತಕ್ಕ, ಅದಕ್ಕಾಗಿ ಪ್ರಜೆಗಳಿಗೆ ದುರ್ಬೋಧನೆ ಮಾಡಿ ರಾಜ್ಯಭಾರದ ಬಂದೋಬಸ್ತು ಪ್ರಜೆಗಳ ಸೌಖ್ಯ ಸಹಾ ಕೆಡಿಸತಕ್ಕ, ಈ ಗುಣಗಳಲ್ಲಿ ನಮ್ಮವರಿಗೆ ಪಾಂಡಿತ್ಯವೇ ಹೊರತು ತಾವು ಚೆನ್ನಾಗಿ ಬದುಕಿ, ಇತರರನ್ನು ಬದುಕಿಸತಕ್ಕ ಯಾವ ಕೃತಿ ಮಾಡತಕ್ಕದ್ದೂ ತಮಗೆ ತಿಳಿಯದು ನಮ್ಮ ಭೂಮಿಯಲ್ಲಿ ಬೇಕಾದಷ್ಟು ಐಶ್ವರ್ಯವಿದೆ. ಕಸ್ತಿಗಳೂ, ಚಿನ್ನದ ಖಾಣಿಗಳೂ ಇದ ಯೂರೋಪ್ ಖಂಡದವರು ಅದನ್ನು ತೆಗೆದುಕೊಂಡು ಗೌರ್ನಮೆಂಟಿಗೆ ರಾಜಾದಾಯ ಕೊಡುತ್ತಾ ಬಂದಿದಾರೆ ಆ ಕೆಲಸಕ್ಕೆ ನಾವೆ ಅರ್ಹರಾಗಲು ಪ್ರಯತ್ನಪಡಬೇಕೇ ಹೊರತು ದೂಷಿಸುವುದು ಪ್ರಯೋಜನವೇನು? ಈಗ ಅನ್ಯದೇಶದ ಪದಾರ್ಥಗಳಿಂದ ನಮಗೆ ಇಂತಹ ಸೌಕರ್ಯಗಳನ್ನು ಯೋಚಿಸಿದರೆ, ಅವು ನಮ್ಮ ಅನುಕೂಲಕ್ಕೆ ದೇಹದ ಪೋಷಣೆಗೆ ದೇಶದಲ್ಲಿ ಹುಟ್ಟಿರತಕ್ಕ ಚರ್ಮ ಕ್ಯಾಗೋಸ್ ಗಳಿಗೆ ಅದಕ್ಕೆ ಬಹಿಷ್ಕಾರವಂದರೇನು ' ಅದು ಪ್ರಜೆಗಳಲ್ಲಿ ಗಲಭೆಹುಟ್ಟಿಸಲಿಕ್ಕೇ ಹೊರತು ಅನುಕೂಲವೇನಾದರೂ ಅದರಿಂದ ನಮಗೆ ಉಂಟೇ?

ಮೇಲಿನ ಕಾರಣಗಳೆಲ್ಲಾ ಪ್ರಜೆಗಳು ಚೆನ್ನಾಗಿ ಯೋಚಿಸಿ, ಸೌಖ್ಯವಾಗಿರತಕ್ಕ ನಾವು ನಮಗೆ ಪರಮೋಪಕಾರಿಗಳಾದ ಇಂಗ್ಲೀಷ್ ಪ್ರಭುಗಳಲ್ಲಿ ರಾಜಭಕ್ತಿಯಿಟ್ಟುಕೊಂಡು ಸನ್ಮಾರ್ಗಿಗಳಾಗಿ ಬಾಳಬೇಕೆಂಬುವುದೇ ನನ್ನ ಕೋರಿಕೆ.

ರಿಟೈರ್ಡ್ ಆಫಿಸರ್.

ಈಗಲೇ ಸೀಮೆಯಿಂದ ಬಂದಿದೆ.

117-37

೫,೦೦ ಪಾಸರ್ ಬೋಟಿ ಕ್ಕೊಲಿಯುವ ಸುಪೀರಿಯರ್ ಉಲನ್ ದಾರ ಮಾತ್ರ ಇದೆ.—ಬಾರಿ, ಕವಿಷ್ಮ ಕ್ರಯ.

೧ ಪೋಟಿಯಾಗುವ ಉಲನ್ ದಾರಕ್ಕೆ	೦—೮—೦
೧೦ ಪೋಟಿಯಾಗುವ ಬಂಡಲ್‌ಗೆ ೧ಕ್ಕೆ	೩—೮—೦
ಕೊಕ್ಕೆ ಸೂಜಿ ೧ಕ್ಕೆ	೦—೧—೬
೩೦ ಇಂಚಿನ ಏನಿಯನ್ ೧ಕ್ಕೆ	೦—೯—೦

ಒಂದಾಣೆ ಸ್ಟಾಂಪು ಕಳುಹಿಸಿ ೨೦ ಪೋಸ್ಟ್ ಕಾರ್ಡು ಪಡಿರಿ.

ಪ್ರತಿ ೧ನೇ ಪಾಸರ್ ಪೋಟಿ ಜರ್ ೧ಕ್ಕೆ ೧೩—೨—೦

ವಿಳಾಸ.—

ಪೀಟಸ-ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟ್."

ವ್ಯವಹಾರನಿರ್ಣಯ—ಇದಲ್ಲಿ ೫೦೫ ಹಿಂದೂ ಮಹಮದೀಯ ಲಾಗಳು, ೨೯ ಖಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ ಪಿ. ಸೇರಿ ೧ ರೂ. ೧೨ ಆಣೆ. [40-10]

ಕನ್ನಡ ಲಾ ರಿಪೋರ್ಟ್—ಪ್ರಿವಿಕೌನ್ಸಿಲ್, ಹೈಕೋರ್ಟ್, ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ೧—೨—೦ ಮುಂಗಡ, ಯಾ, ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೦—೩—೦

ಇವುಗಳನ್ನಪೇಕ್ಷಿಸುವವರು ಜಿ. ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯುವುದು

ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು)	ರೂ.	೨—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ.	೧—೧೪—೦
.. ,, ೬ ,, ,,		೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದರೆ ಎಂದರೆ, ನಿನಗೆ ಯಾವ ರೋಗವುಂಟಾಗಿರಲಿ—" ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೊ. ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲ ದೇಹದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬದ್ಧದಿಂದ ರೋಗಗಳುಂಟಾಗುವವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ ಪಿತ್ತಕೋಶದ ರೋಗ; ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ, ಅರುಚಿ, ಎದೆಯು ತಲ್ಲಣಿಸುವುದು, ತಲೆತಿರುಗುವುದು, ತಲೆನೋವು; ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆ ನೋವು; ಹೆಂಗಸರ ವ್ಯಾಧಿಗಳು. ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು, ಆರೋಗ್ಯವೇ ನಾಶವಾಗಿ ಹೋಗುವುದು

೧೨ ಆಣೆ ಬುಡ್ಡಿ ಪರಿಮಾಣ

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ನಿಮ್ಮೊಳಿಕೆಗಳೆಂದರೇ ಶಾಯದಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ದೇಹದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [93-44]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ, ಡೋನ್ಸ್, ಪಿ ಒ. ಬಾಕ್ಸ್ ೨೦, ಬೊಂಬಾಯಿ —ಇವರಲ್ಲಿ ದೊರೆಯುವುದು

[illegible] ವರ್ಷಗಳ ತನಕ ಅನ್ನಕೋಶವು

[34-14]

ಅಕ್ರಮವಾಗಿ ಇತ್ತು.

ನಾನು ಆರು ಮಂದಿ ವೈದ್ಯರಿಂದ ಚಿಕಿತ್ಸೆ ಹೊಂದಿದೆನು.
ನಾನು ಎಂದಿಗಾದರೂ ವಾಸಿಯಾದೇನೆಂಬ ಆಸೆ ತೊರೆದೆನು.
ನಾನು ಈಗ ಹೊಸಮನುಷ್ಯನಂತಿದ್ದೇನೆ, ಪೆರೂನಾ ಮತ್ತು
ಮನಾಲಿನ್‍ಗಳನ್ನು ವಂದಿಸುತ್ತೇನೆ.

ಕಡೇಪಕ್ಷ ಹತ್ತರಲ್ಲಿ ಒಬ್ಬನಿಗಾದರೂ ಹೊಟ್ಟೆಯೊಳಗಣ ಅಕ್ರಮವಿದ್ದೇ ಇದೆ. ಈ ಹೊಟ್ಟೆಯ ಅಕ್ರಮದಿಂದಲೇ ಅನೇಕಾನೇಕ ಪ್ರಜೆಗಳು ನಾನಾ ಕಾಯಿಲೆಗಳಿಗೆ ಗುರಿಯಾಗಿರುವರೆಂದು ಧಾರಾಳವಾಗಿ ಹೇಳಬಹುದು. ಅಮೇರಿಕದಲ್ಲಿ ಜೀವನ ಕಷ್ಟವಾಗಿರೋಣದರಿಂದ ಜನರು ಬಹಳ ಆತುರಪಟ್ಟು ಕೆಲಸ ಮಾಡಬೇಕಾಗಿರುವುದೇ ಅದಕ್ಕೆ ಮುಖ್ಯ ಕಾರಣ. ಬೇಗ ಬೇಗ ಊಟಮಾಡಿದ ವೇಳೆ ಜಂಗುಪ್ಪ ಚಿಂತೆಗಳಿಗೆ ಗುರಿಯಾಗುವುದು ಹೊಟ್ಟೆಯಲ್ಲಿ ಖಂಡಿತವಾಗಿ ಅಕ್ರಮಗಳನ್ನು ಉಂಟುಮಾಡುತ್ತದೆ. ಹೊಟ್ಟೆಯಲ್ಲಿ ಅಕ್ರಮವನ್ನುಂಟುಮಾಡುವವರು ಪೆರೂನಾ ವಿಷಯವನ್ನು ತಿಳಿಕೊಂಡಿರಬೇಕು. ಪೆರೂನಾ ಸೌಖ್ಯಕೊಡದೆ ತಪ್ಪುವುದು ಅಪರೂಪ. ಕೆಲವು ಸಂದರ್ಭಗಳಲ್ಲಿ ಅದರ ಗುಣವು ಪರಮಾಶ್ಚರ್ಯವನ್ನುಂಟುಮಾಡುವುದು. ಹೊಟ್ಟೆಯ ರೋಗಗಳಿಗೆ ಪೆರೂನಾ ಒಳ್ಳೇ ಔಷಧವೆನ್ನುವುದಕ್ಕೆ ಅನೇಕರಿಂದ ಡಾಕ್ಟರ್ ಹಾರ್ಟ್‍ಮನ್‍ರಿಗೆ ಯೋಗ್ಯತಾ ಪತ್ರಗಳು ಬಂದಿರುವವು. ಮೆ॥ ಜಾರ್ಜ್ ಎಚ್. ಸಿಂಸನ್, ಒಂಟೇರಿಯೋ, ಕ್ಯಾನಡಾ ಇವರೂ ಒಂದು ಪತ್ರವನ್ನು ಬರೆದಿರುವರೆ

ಮೆ॥ ಜಾರ್ಜ್ ಎಚ್. ಸಿಂಸನ್, ಗ್ರಾಂಟ್, ಒಂಟ್, ಕ್ಯಾ, ಬರೆಯುವುದು —

"ನಾನು ಏಳುವರುಷ ಹೊಟ್ಟೆಯಲ್ಲಿ ಅಕ್ರಮವಾಗಿ ಕಾಯಿಲೆ ಅನುಭವಿಸಿದೆನು. ಆರು ಜನ ಡಾಕ್ಟರುಗಳಿಂದ ಚಿಕಿತ್ಸೆ ಮಾಡಿಸಿಕೊಂಡೆನು ಕೆಲವರಿಂದ ನನಗೆ ಸ್ವಲ್ಪ ಉಪಶಮನವಾಯಿತು. ಆದರೆ ರೋಗ ನಿವಾರಣೆಯಾಗಲಿಲ್ಲ. ನನಗೆ ಪಿತ್ತಕೋಶದ ರೋಗವೆಂದು ಕೆಲವರೂ, ಅಜೀರ್ಣರೋಗವೆಂದು ಕೆಲವರೂ ಹೇಳಿದರು. ಕಡೆಗೆ ನಾನು ಬಹಳ ರೋಗವನ್ನನುಭವಿಸಿ, ಅದು ಎಂದಿಗಾದರೂ ವಾಸಿಯಾದೀತೆಂಬ ಆಸೆಯೇ ತೊರೆದು ಬಿಟ್ಟೆನು. ನನಗೆ ತಲೆನೋವು, ಪಲ್ಲುನೋವು, ಈ ಮೊದಲಾದ ನಾನಾ ಕಷ್ಟಗಳು ವ್ಯಾಪ್ತವಾಗಿ ಅನುಭವಿಸಿದೆನು. ಆ ಸಮಯದಲ್ಲಿ ನನ್ನ ಹೆಂಡತಿಯು ಪೆರೂನಾ, ಮನಾಲಿನ್‍ಗಳನ್ನು ಸೇವಿಸುತ್ತಿದ್ದಳು. ಅವುಗಳನ್ನು ಸೇವಿಸುವಂತೆ ನನ್ನನ್ನು ಬಲಾತ್ಕಾರ ಮಾಡಿ ಹೇಳಿದಳು. ಆ ಔಷಧಗಳನ್ನು ಸೇವಿಸಿದೆನು ಆದರೆ ಅವರಿಂದ ವಾಸಿಯಾದೀತೆಂಬ ನಂಬಿಕೆ ಸ್ವಲ್ಪವೂ ಇರಲಿಲ್ಲ. ಸುಮಾರು ಒಂದು ವಾರವಾದ ಮೇಲೆ ನನಗೆ ಬಹಳ ಗುಣವಾಯಿತು. ಆದ್ದರಿಂದ ಬಿಡದೆ ಅವೆರಡನ್ನು ಸೇವಿಸುತ್ತ ಬಂದೆನು. ಹೀಗೆ ಎರಡು ಬಾಟ್ಲು ಪೆರೂನಾ, ಅರ್ಧ ಬಾಟ್ಲು ಮನಾಲಿನ್ ಸೇವಿಸುವಷ್ಟರಲ್ಲಿ ನನಗೆ ನಿಜವಾಗಿ ತುಂಬಾ ವಾಸಿಯಾಯಿತು. ಈಗ ನಾನು ಹೊಸ ಮನುಷ್ಯನಾಗಿದ್ದೇನೆ. ಪೆರೂನಾ, ಮನಾಲಿನ್‍ಗಳನ್ನು ಹೊಗಳುತ್ತೇನೆ."

ಇಪ್ಪತ್ತು ವರ್ಷದ ಅಜೀರ್ಣವು.

ಮೆ॥ ಸಿ. ನೆಲ್ಸನ್, ಮೆಫೋರ್ಡ್, ಒಂಟೇರಿಯೊ, ಕ್ಯಾನಡಾ, ಈತ ಬರೆಯುವುದು:— "ನಾನು ಇಪ್ಪತ್ತು ವರುಷಗಳಿಂದ ಅಜೀರ್ಣ ರೋಗವನ್ನು ಅನುಭವಿಸಿದೆನು ನಾನು ಅನೇಕ ಡಾಕ್ಟರುಗಳ ಔಷಧವನ್ನು ಸೇವಿಸಿದೆನು. ನನಗೆ ಯಾವುದರಿಂದಲೂ ತೃಪ್ತಿಕರವಾಗಿ ಗುಣವಾಗಲಿಲ್ಲ. ಅನೇಕ ವೇಳೆ ಜಂಗುಪ್ಪೆಯಾಗಿ ನಾಲ್ಕಾರು ವಾರ ಕೆಲಸವನ್ನೆಲ್ಲಾ ಬಿಟ್ಟಿರುವೆನು. ಕಾಲು ಕಾಡಿದರೂ ಪ್ರಾಣ ಉಳಿಸಿಕೊಳ್ಳುತ್ತಿದ್ದೆನು. ಇನ್ನೇನು ತಿಂದರೂ ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ. ನನಗೆ ಈ ರೋಗ ವಾಸಿಯಾಗುವುದಿಲ್ಲವೆಂದು ನಿರಾಶೆಯುಂಟಾಗುವಂತಾಯಿತು. ಆಗ ಪೆರೂನಾ ವಿಷಯವನ್ನು ಕೇಳಿ, ಅದನ್ನು ಸೇವಿಸಲಾರಂಭಿಸಿದೆನು. ಒಂದು ಬಾಟ್ಲಿಯನ್ನು ಸೇವಿಸುವದರಲ್ಲೇ ನನಗೆ ಅನುಕೂಲವಾಯಿತು. ಇನ್ನೊಂದು ಬಾಟ್ಲು ಮುಗಿಸುವಷ್ಟರಲ್ಲಿ ನನ್ನ ರೋಗವೆಲ್ಲಾ ನಿವಾರಣೆಯಾಯಿತು ಬಾಧೆ ಹೋಯಿತು. ಆಹಾರದಲ್ಲಿ ರುಚಿ ಹುಟ್ಟಿತು. ಸುಖವಾಗಿ ಸಂತೋಷದಿಂದ ಊಟಮಾಡುತ್ತೇನೆ. ಈ ಪ್ರಪಂಚದಲ್ಲಿ ಪೆರೂನಾ ಅದ್ಭುತವಾದ ಔಷಧವೆಂದು ನಾನು ನಂಬುತ್ತೇನೆ ಈಗ ನಾನು ೨೦೫ ಪೌಂಡು ತೂಗುತ್ತೇನೆ. ಪೆರೂನಾವನ್ನು ನಾನು ಹೊಗಳುವುದು ಆಶ್ಚರ್ಯವೇ?"

ಒಳಹೊಟ್ಟೆಯ ಶೀತವು.

ರೆವ್. ಜೆ ಟಿ ಟಿಲರ್, ಹೆಂಡ್ರಸನ್‍ವಿಲ್ಲೆ, ದಕ್ಷಿಣ ಕ್ಯಾರೊಲಿನ, ಯು ಎಸ್. ಎ, ಈತ ಬರೆಯುವುದು:— "ಪ್ರಪಂಚದ ಜನರೆಲ್ಲಾ ತಿಳಿಯುವಂತೆ ಪೆರೂನಾ ವಿಷಯದಲ್ಲಿ ನನ್ನ ಅನುಭವವನ್ನು ಹೇಳುತ್ತೇನೆ. ನನಗೆ ಹೊಟ್ಟೆಯೊಳಗಣ ಶೀತ ಮುಟ್ಟಿ ಅನುಭವಿಸಿದೆನು. ನಾನು ಅನೇಕ ಔಷಧಗಳನ್ನು ಮಾಡಿದೆನು. ಕೆಲವು ಡಾಕ್ಟರುಗಳಲ್ಲಿ ಹೇಳಿಕೊಂಡೆನು. ಎಲ್ಲಾ ನಿಷ್ಪ್ರಯೋಜನವಾಯಿತು ಪೆರೂನಾ ಇಲ್ಲದಿದ್ದರೆ ನಾನು ಇದುವರೆಗೆ ಸಮಾಧಿಯೊಳಗಿರುತ್ತಿದ್ದೆನು. ಈ ಹೊಟ್ಟೆಯ ಕೈತ್ಯಕ್ಕೆ ಪೆರೂನಾವು ಪ್ರಪಂಚದಲ್ಲೇ ಉತ್ತಮವಾದ ಔಷಧವೆಂದು ನಂಬುತ್ತೇನೆ. ಕಾಯಿಲೆಯಾದ ಅನೇಕರಿಗೆ ಈ ಸಂಗತಿಯನ್ನು ಹೇಳಿಯೂ ಹೇಳುತ್ತಲೂ ಬಂದಿದ್ದೇನೆ"

ಪೆರೂನಾ ಬಲಕಾರಿಯಾದದ್ದು.

ಮೆ॥ ಜೆ ಇ. ಕಾರ್ಸನ್, ೨೧೮ ಸೆಂಟ್ ಕ್ಲಾರೆನ್ಸ್ ಅವ್, ಟೊರೊಂಟೊ, ಕ್ಯಾನಡಾ, ಈತ ಬರೆಯುವುದು:—ಪೆರೂನಾವನ್ನು ನಾನು ಸೇವಿಸಿದೇನೆ. ಅದು ಪ್ರಸಿದ್ಧವಾದದ್ದು. ಅದು ಗುಣಕಾರಿಯಾದದ್ದು. ಅದರ ಹಾಗೆ ಬಲವನ್ನುಂಟುಮಾಡುವ ಔಷಧ ಇನ್ಯಾವುದೂ ಇಲ್ಲವೆಂದು ಹೇಳಬಲ್ಲೆನು."

ಇನ್ನು ಅಂಥಾ ಕೆಲವು ರೋಗಿಗಳು.

ಮೆ॥ ಎಚ್. ಜೆ ಹೆನ್ನೆಪರ್, ಒಕ್ಲೆಂಡ್, ನೆಬ್ರಾಸ್ಕ, ಯು ಎಸ್. ಎ, ಈತ ಬರೆಯುವುದು:— "ನನ್ನಗೆ ಒಂದು ವರುಷದಿಂದ ಹೊಟ್ಟೆಯ ಅಕ್ರಮವಿದ್ದು ಅನುಭವಿಸಿದೆನು ಅನೇಕರು ಈ ರೋಗ ನನಗೆ ವಾಸಿಯಾಗದೆಂದು ಹೇಳಿದರು. ಆದರೆ ನನಗೆ ಚನ್ನಾಗಿ ಗುಣವಾಗಿದೆ ಎಂದು ಹೇಳಬಲ್ಲೆನು. ಈಗ ಯಾವತರದ ಕಾಯಿಲೆಯೂ ಇಲ್ಲ ಆಹಾರ ಚನ್ನಾಗಿ ರುಚಿಸುತ್ತದೆ. ಈಗ ಮೈತುಂಬಿಕೊಂಡು ದಪ್ಪನಾಗುತ್ತಿದ್ದೇನೆ. ನನಗೆ ಸಂಪೂರ್ಣ ಗುಣವಾಗಿದೆ ಎಂದು ಎಲ್ಲರಿಗೂ ಹೇಳುತ್ತಿದ್ದೇನೆ. ಇನ್ನು ಮುಂದೆ ಪೆರೂನಾ ನಮ್ಮ ಮನೆಯ ಔಷಧ"

ಮೆ॥ ಎಚ್. ಡಬ್ಲಿಯು ನಾಗೆಲ್, ೩೩ ಗುಡಿಬೀದಿ, ಮೆರಿಡೆನ್, ಕನ್., ಯು ಎಸ್. ಎ., ಈತ ಬರೆಯುವುದು:— "ನಾನು ಹೊಟ್ಟೆಯೊಳಗಿನ ಅಕ್ರಮದಿಂದ ಅನೇಕ ವರುಷ ಅನುಭವಿಸಿದೆನು ಅನೇಕ ಇತರ ಔಷಧಗಳನ್ನು ಸೇವಿಸಿದೆನು ಕಡೆಗೆ ಪೆರೂನಾ ಸೇವಿಸುವಂತೆ ಸೂಚಿಸಿದರು ಕೆಲವು ಕಾಲ ನಾನು ಗಟ್ಟಿಯಾದ ಆಹಾರವನ್ನು ತಿನ್ನಲಾರದೆ ಇದ್ದೆನು ಈಗ ಏನು ದೊರೆತರೂ ಸಂತೋಷದಿಂದ ತಿನ್ನುತ್ತೇನೆ ನಾನು ಕೆಲವು ಬಾಟ್ಲಿ ಪೆರೂನಾ, ಮನಾಲಿನ್‍ಗಳನ್ನು ಸೇವಿಸಿದೆನು ಈಗ ನನಗೆ ಚನ್ನಾಗಿ ವಾಸಿಯಾಗಿದೆ ಇಂಥಾ ರೋಗಿಗಳೆಲ್ಲಾ ಅವೆರಡನ್ನು ಸೇವಿಸಬೇಕೆಂದು ಸಂತೋಷದಿಂದ ಶಿಫಾರಸು ಮಾಡುತ್ತೇನೆ."

ಮೆ॥ ಕ್ಯಾಲೆಬ್ ಎಚ್ [illegible]ಬೆಲ್, ಪೊಲೀಸ್ ಅಧಿಕಾರಿ, ೭೩೮ ನ್ [illegible] ಬಿ.ಎ. ಟಾಲ್ಬಿ ಪೆರೈಡ್, ಮೇರಿಲೆಂಡ್, ಯು. ಎಸ್. ಎ., ಈತನ ಕಾಗದ:— "ಅನೇಕ ವರುಷಗಳ ತನಕ ನನಗೆ ತಲೆ, ಗಂಟಲು, ಹೊಟ್ಟೆಗಳಲ್ಲಿ ಅಕ್ರಮವುಂಟಾಗಿ ಅನುಭವಿಸಿದೆನು. ಅನೇಕ ವೇಳೆ ಊಟಕ್ಕೆ ಮುಂಚೆಯೂ, ಊಟವಾದ ಮೇಲೂ ನನಗೆ ವಾಂತಿಯಾಗುತ್ತಿತ್ತು. ನಿನ್ನ ಪೆರೂನಾ ಹಳು ಬಾಟ್ಲಿಯನ್ನು ಸೇವಿಸಿದೆನು. ನನಗೆ ವಾಸಿಯಾಯಿತೆಂದು ಸಂತೋಷದಿಂದ ಹೇಳುತ್ತೇನೆ. ನಾನು ಕಷ್ಟಪಟ್ಟು ಸಂತೋಷದಿಂದ ಕೆಲಸ ಮಾಡಬಲ್ಲೆನು. ನನಗೆ ಹಳೇ ರೋಗಗಳ ಬಾಧೆ ಸ್ವಲ್ಪವೂ ಇಲ್ಲ. ಎಲ್ಲರೂ ಪೆರೂನಾ ಸೇವಿಸಿ ತಮ್ಮ ದೇಹದ ಅಕ್ರಮಗಳನ್ನು ಸರಿಮಾಡಿಕೊಳ್ಳಲೆಂದು ಶಿಫಾರಸು ಹೇಳುತ್ತೇನೆ. ನನ್ನ ಹಾಗೆ ರೋಗ ಅನುಭವಿಸಿ ಪೆರೂನಾದಿಂದ ಗುಣಹೊಂದಿದವರಲ್ಲದೆ ಇತರರು ಅದರ ಯೋಗ್ಯತೆಯನ್ನು ತಿಳಿಯಲಾರರು"

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—
ಮೆಸ್ಸರ್ಸ್. ಹಿಚ್‍ಕಾಕ್ ಅಂಡ್ ಸನ್ಸ್, ಬೆಂಗಳೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

12—6—1908 ರಿಂದ 19—6—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	1	1	0	0
ಬೆಂಗಳೂರು ಡಿಸ್ಟ್ರಿಕ್ಟ್	0	0	0	0
ಮೈಸೂರು ,,	32	38	23	13
ಕೋಲಾರ್ ,,	0	1	15	8
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟ್	0	0	14	3
ಹಾಸನ ,,	0	0	59	46
ಚಿತ್ರದುರ್ಗ ,,	0	0	0	0
ಕಡೂರ್ ,,	2	2	0	0
ಶಿವಮೊಗ್ಗ ,,	0	0	0	0
* ಸಂಖ್ಯೆ ಕಾಣಿಸಿಲ್ಲ. ಜುಮ್ಲಾ	35	32	104	70

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಆಷಾಢ ಶುದ್ಧ ಚೌತಿ ಗುರುವಾರದಿಂದ ಆಷಾಢ ಶುದ್ಧ ನೌಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೮ನೇ ಜೂಲೈ.

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ತೇದಿ ಆನಿ ಸಂ
2	ಗುರು ‡	ಚೌತಿ	53-34	ಪ್ಲ	24 14	19
3	ಶುಕ್ರ ,,	ಪಂಚಮಿ	58-40	ಮ	30-46	20
4	ಶನಿವಾ *	ಷಷ್ಟಿ	60 0	ಪ್ಹು	36-10	21
5	ರವಿವಾ †	ಷಷ್ಟಿ	3-3	ಉ	42-26	22
6	ಚಂದ್ರ	ಸಪ್ತಮಿ	6-22	ಹ	46-58	23
7	ಕುಜ	ಅಷ್ಟಮಿ	9-46	ಚಿ	50-20	24
8	ಬುಧ ::	ನೌಮಿ	10-12	ಸ್ವಾ	51-49	25

‡ ದೇವಾಂಬುಧೀಶ್ವರರಥ. ,, ಸ್ಕಂದಪಂಚಮಿ, ಪವಿಸಾಗೌರೀ ವ್ರತ, ನವಶೀತಿವುಂಬಂ. * ಪಶ್ಚಿಮದಸ್ತ್ರಂಶು, ಸೂರ್ಯಾಸ್ತ. † ಘಂಸ್ತ್ರೀಯೋಗ. :: ಅಮೃತಲಕ್ಷ್ಮೀವ್ರತ.

ಪೇಟೆ ಧಾರಣೆ.

ವಿನಸು.		ಮೈಸೂರು.	ಬೆಂಗಳೂರು.
ಕಣ್ಣೀ ಅಕ್ಕಿ ಪಲ್ಲ ೧ಕ್ಕೆ	ರೂ.	೧೪ ೮-೦	೧೭-೦-೦
ಕಂಬುತಿ ಅಕ್ಕಿ ಒದಲ್ ..		೧೫-೦-೦	೧೬-೦-೦
,, ಎರಡನೇ ಗುರು		೧೩-೮-೦	೧೫-೦-೦
ಜುವ್ವಾಸ ಅಕ್ಕಿ ..		೧೩-೮-೦	೧೨-೦-೦
ನೆಲ್ಲಕ್ಕಿ ಅವಲ್ ..		೧೩-೦-೦	೧೮-೦-೦
,, ಜುರುಗು ..		೧೬-೮-೦	೧೬-೦-೦
ತೊಗರೀ ಬೇಳೆ ಪಲ್ಲ ೧ಕ್ಕೆ		೧೬-೦-೦	೧೩-೮-೦
,, ಜುರುಗು .		೧೫-೮-೦	೧೪-೦-೦
ಕೈನ್ ದಾನಿ ಪಲ್ಲ ೧ಕ್ಕೆ		೬-೧೨-೦	೭-೦-೦
ಕಾರೆಗ ..		೬-೪-೦	೬-೧೨-೦
ಹುರುಳಿ .		೭-೦-೦	೯-೦-೦
ಕಲಸಂದಿ ಪಲ್ಲ ೧ಕ್ಕೆ .		೧೧-೦-೦	೧೧-೦-೦
ಬಿಳಿ ಅವರೆ		೮-೦-೦	೯-೦-೦
ಹೆಸರು ..		೧೧-೦-೦	೧೨-೮-೦
ಉದ್ದು ..		೧೨-೮-೦	೧೨-[illegible]
ಕಡಲೆ .		೧೩-೦-೦	೧೩-೮-೦
ಎಳ್ಳು ಸೆ ೧ಕ್ಕೆ .		೨೩-೮-೦	೨೫-[illegible]
ಹುರುಳಿ ..		೬-೮-೦	[illegible]
ಸರಳು ೧ ೩೩ ಸೇರ್ ..		೧೧-೦-೦	[illegible]
ಸೀಗೇಕಾಯಿ ಮಣ ೧ಕ್ಕೆ ..		೧-೮-೦	[illegible]
ಮೆಣಸಿನಕಾಯಿ ..		೩-೪-೦	[illegible]
,, ದುರುಗು ..		೨-೪-೦	[illegible]
ಬೆಲ್ಲ ದೊಡ್ಡ ಅಚ್ಚು ..		೫-೦-೦	[illegible]
ಒಳ್ಳೆಣ್ಣೆ ಮಣ ೧ಕ್ಕೆ ..		೬-೦-೦	[illegible]
ಹರಳೆಣ್ಣೆ ,, ..		೫ ೮-೦	[illegible]
ಕೊತ್ತುಂಬರಿ ಪಲ್ಲ ೧ಕ್ಕೆ ..		೬-೮-೦	[illegible]
ಉಪ್ಪು ,, ..		೪-೮-೦	[illegible]
ಹುಣಸೇ ಹಣ್ಣು .		೧-೪-೧	[illegible]
,, ಹಳೇದು ..		೧-೦	[illegible]
ತುಪ್ಪ ಮಣ ೧ಕ್ಕೆ ..		೧೪ ೮ ೦	[illegible]
ಸೀಮೆಯೆಂಣೆ ಪಟ್ಟಿ ೧ಕ್ಕೆ		೪-೧೫-೦	[illegible]
ತೆಂಗಿನಕಾಯಿ೧೦೦ ಕ್ಕೆ ..		೬ ೮-೦	[illegible]
ಅಳಲೇಕಾಯಿ ಮಣ ೧ಕ್ಕೆ ..		೧-೦-೦	[illegible]
ಅಂಟುವಾಳದ ಕಾಯಿ ಮಣ ೧ಕ್ಕೆ .		೦-೧-೨-೦	[illegible]
ಚಿನ್ನ (ಗಿನಿ) ತೊಲ ..		೧೫-೬-೦	೧೫-[illegible]
,, ,, ಪವನು .		೧೫-೧೦-೦	೧೫-[illegible]
,, ,, ಗಟ್ಟಿ ತೊಲ ೧ಕ್ಕೆ ..		೨೩-೧೨-೦	೨[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ .		೭೫-೦-೦	೬೮[illegible]

Printed and Published by the Rev. E. Thompson, M. A., Proprietor and Manager, Wesley Mission Press, Mysore. 2/7/1908.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೮ ನೇ ಇಸವಿ ಜೂಲೈ ತಾರೀಖು ೯ ನೇ ಗುರುವಾರ. ಸಂಚಿಕೆ ೬

AMRUTANJAN DEPOT, 16 OAK-LANE, BOMBAY. [17-20]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇವರಿಂದ :—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮ್ ಮತ್ತು ಘಾಯು, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ ಕ್ಕೆ ಕಿಮ್ಮತು ೦ ೮-೦ ಪೋಸ್ಟು ಖರ್ಚು ೦-೪-೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಹಜ್ಜೆ ವಗೈರೆ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಡಬ್ಬಿ ೧ ಕ್ಕೆ ೦-೬-೦ ಪೋಸ್ಟು ಖರ್ಚು ೦ ೪-೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ—ಜೀರ್ಣಕ್ಕೆ ಡಬ್ಬಿ ೧ ಕ್ಕೆ.	೧—೪—೦	ಕಾಮವರ್ಧಕ ಗುಟಿಕೆ—ಹೆಂಗಸರ ಹೊಟ್ಟೆನೋವಿಗೆ	೧—೦—೦
ನಪುಂಸಕ—ಧಾತು ವೃದ್ಧಿ [illegible]	೧—೦—೦	ಪ್ರಮೇಹದ ಮಿಶ್ರಣ—ಪ್ರಮೇಹಕ್ಕೆ	೧—೦—೦
ಜ್ವರಹರ—[illegible] ಬಾಟ್ಲಿ ೧ ಕ್ಕೆ	[illegible]	ಕಫಹರಿ—ಕಫ, ಕೆಮ್ಮು, ಕ್ಷಯ, ಇತ್ಯಾದಿ	೧—೪—೦
[illegible]	೧—೮—೦	ಸಂಜೀವಿನೀ ತೈಲ್ಯ—ವೀರ್ಯ	೦—೮—೦
[illegible]	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
[illegible]	೦—೩—೯	ಉದರಶೂಲ ಎಂಸ್ ಬಾಟ್ಲಿ ೧ ಕ್ಕೆ	೦—೮—೦
[illegible] ಮುಲಾಮು	೦—೩—೦	ವಾತದ ಮಿಶ್ರಣ ,,	೧—೦—೦
[illegible]	೧—೦—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
[illegible]	೧—೨—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
[illegible]	೨—೮—೦	ದಂತಧಾವನ	೦—೮—೦

ವಿಳಾಸ—ವಿಲಿಯಂ ಮತ್ತು ಕಂಪೆನಿ, ೧೬ ಓಕ್‌ಲೇನು ಫ್ರೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು :—"ಅಮೃತಾಂಜನ್," ಮುಂಬಯಿ.

'ವೃತ್ತಾಂತ ಪತ್ರಿಕೆ' ಚಂದಾದಾರರಿಗೆ.

ವೃತ್ತಾಂತ ಪತ್ರಿಕೆ ಯ ವರ್ಷವು ಕಳೆದ ಮೇ ತಿಂಗಳು ತಾ. ೩೧ ಕ್ಕೆ ಪೂರೈಸಿ, ಬಾಕಿ ವರುಷದ ಚಂದಾ ಹಣವು ಸಲ್ಲಬೇಕಾಗಿರುತ್ತದೆ. ಆದಕಾರಣ ನಮ್ಮ ಏಜೆಂಟರುಗಳ ಮೂಲಕ "ವೃತ್ತಾಂತ ಪತ್ರಿಕೆ"ಯನ್ನು ಪಡೆಯುವ ನಮ್ಮ ಚಂದಾದಾರರೆಲ್ಲಾ ಅವರಿಗೆ ಖಂಡಿತವಾಗಿ ಅಡ್ವಾನ್ಸಿನಲ್ಲಿ ಚಂದಾ ಕಟ್ಟಿ, ಅವರಿಂದ ಕ್ರಮವಾದ ರಶೀತಿ ಪಡೆಯಬೇಕೆಂದು ಈ ಮೂಲಕ ಕೃತಜ್ಞಾಪಿಸಿದೆ. ಮ್ಯಾನೇಜರ್, 'ವೃತ್ತಾಂತ ಪತ್ರಿಕೆ."

ನೋಟೀಸು.

32

೨೭ ನೇ ಜೂನ್ ೧೯೦೮ ನೇ ಇಸವಿ.

ರೆವಿನ್ಯೂ ಕಮೀಷನರವರ ಆಫೀಸು, ಬೆಂಗಳೂರು.

ಮೈಸೂರು ವಸ್ತು ಕೈಗಾರಿಕೆ ಮತ್ತು ವ್ಯವಸಾಯ ಸಂಬಂಧವಾದ ಪ್ರದರ್ಶನವು ೧೯೦೮ನೇ ಸಪ್ಟಂಬರು ೩೦ನೇ ತಾರೀಖಿನ ದಿವಸ ಪ್ರಾರಂಭವಾಗಿ ಅಕ್ಟೋಬರ್ ೧೬ ನೇ ತಾರೀಖಿನ ದಿವಸ ಮುಕ್ತಾಯಮಾಡಲ್ಪಡುವದು. ಇಷ್ಟವುಳ್ಳ ಪ್ರದರ್ಶಕರು ಅನುಕೂಲವಾದಷ್ಟು ಶೀಘ್ರವಾಗಿ ಪ್ರದರ್ಶನಕ್ಕೆ ಸಂಬಂಧಪಟ್ಟ ಪ್ರಕಟನೆ ಮತ್ತು ಫಾರಂಗಳನ್ನು ತಾಲ್ಲೂಕು ಅಮಲ್ದಾರರುಗಳಿಂದಲಾಗಲೀ, ಅಥವಾ ಡೆಪ್ಯುಟಿ ಕಮೀಷನರವರಿಂದಾಗಲೀ ಪಡೆಯಬಹುದು.

ಕೆ. ಸುಬ್ಬರಾವ್,
ಸೆಕ್ರೆಟರಿ.

"ಸ್ವಪ್ನ ಸಾರ ನಿರ್ಣಯ," "ಕನ್ನಡ ಲಾ ರಿಪೋರ್ಟರ್."

ಸ್ವಪ್ನಸಾರನಿರ್ಣಯ—[illegible] ಸಂಗ್ರಹವು, [illegible] ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ [illegible] ಕ್ರಯ [illegible] ೧ ರೂ. ೧೨ ಆಣೆ. [40-11]

ಕನ್ನಡ ಲಾ ರಿಪೋರ್ಟರ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ೧—೨—೦ ಮುಂಗಡ, ಇಲ್ಲ, ವಿ. ಪಿ. ಬಿ.ಪಿ.ಪತ್ರಿಕೆ ೧ಕ್ಕೆ ೦—೬—೦

ಇವುಗಳನ್ನು ಪ್ರಕಟಿಸುವವರು ಟಿ. ಎಂ. ಮಲ್ಲಪ್ಪಯ್ಯರು, ಪ್ರಾ. "ಲಾ ಪ್ರೆಸ್ ಮೈಸೂರು" ಈ ವಿಳಾಸಕ್ಕೆ ಬರೆಯುವದು

ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜೆಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು)	ರೂ. ೧—೯—[illegible]
ನಮ್ಮ ಕಡೆಯವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ ರೂ	೧—೧೪—೦
,, ,,	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬಾಪತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ :—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಮಹಾ ಬಾಧಾಪಹಾರಿಣಿಯು.

48-7

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಶ್ರೀ ವೆಂಕಟ್ ರವರ ಯುಕ್ತಿಯಿಂದ ದೇಹವನ್ನು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವಕೀಲರು, ಜಾಯಿಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳಿಕೆ ಕೊಟ್ಟು, ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ನಾಯುನೋವು, ಕಳಿಕ, ಗಂಟ್ಲುನೋವು, ಪಾರ್ಶ್ವವಾಯು, ನಾನಾವಿಧ ವಾಯುವಿರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಹೀಚಿಲದ ನೋವು, ಹಲ್ಲುನೋವು. ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಶ್ರೀ ವೆಂಕಟ್ ರವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೇಲೆ ಸ್ವಲ್ಪವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಡಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ ಸೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಅದರ ೩ ಅಥವಾ ಹೆಚ್ಚು ಬಾಟ್ಲಿ ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಖರ್ಚು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜೆಂಟರ ವಿಳಾಸ—

ಎಸ್. ಶಿಂಟಿಸರ್,

೩೩, ವೇದವಲ್ಲಿಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಜ್ವರಹರಿ. 44-10



ಇದು ಸಾಧಾರಣ ಜ್ವರ, ಇಳೀಜ್ವರ, ಮೋರೇಜ್ವರ ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜರಾಯಿ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಬೀಗಸಿನ ಸೀಸೆಯು ತಲುಪಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಹಿಡಿದರು. ಅನ್ನಾ ಗುಣ ಹೊಂದಿರುವರು ಇನ್ನು ಬರಗಳ ಕಾಲೀ ಬೀಳುತ್ತಿರುವ ದರಿಂದ ದಯವಿಟ್ಟು ಇನ್ನೊಂದು ೨೦ ಬೀಗಸಿನ ಸೀಸೆಯನ್ನು ವಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ :—ಸೀಸೆ ೧ ಕ್ಕೆ ೮ ಆಣೆ, ೧ ಡಜ ; ೧—೮ ರೂ. ೧೨ ದ. ; [illegible] ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯವೂ ಬಹಳ ಸ್ವಲ್ಪ ಎಂದು ಔಷಧದಂಗಡಿಯ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಡಾಕ್ಟರ್ ಓಮಂ ಕರ್ಪೂರವನ್ನು ನಾನು ನನ್ನ ಹಾಜೀ [illegible] ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪರುಷರೊಡನೆ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ ಕೊಟ್ಟು ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧ ವೆಂದು ಬರೆದಿದ್ದಾರೆ

ಈ ಎರಡು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ:—

ಸೌತ್ ಇಂಡಿಯನ್ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಚನ್ನಪಟ್ಟಣದ ಪ್ರಕಟನೆ.

54-2

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ.—ಮದ್ದೂ ರು ಚನ್ನಪಟ್ಟಣದ ರೇಷ್ಮೆ ಸೌದಾಗರ್ ಮಹಮ್ಮದ್ ಹೈದರಸಾಬಿ ಎಂಬ ನಾನು ಇದೇ ಸ ೧೯೦೪ ನೇ ಇಸವಿ ಜೂನ್ ತಾ. ೯ ರಲ್ಲಿ ಸರ್ಕಾರಿ ರಿಜಿಸ್ಟರ್ ಪತ್ರದಲ್ಲಿ ನಮೂದಿಸಿರುವ ಮೇರಿಗೆ ನನ್ನ ಆಸ್ತಿ ಯನ್ನು ನನ್ನ ಮಕ್ಕಳಾದ ೧ ನೇ ಮಹಮ್ಮದ್ ಅಬ್ದುಲ್ ಖಾದರ್ ಸಾಬ್, ೨ ನೇ ಮಹಮ್ಮದ್ ಅಬ್ದುಲ್ ಖುದೂಸ್ ಸಾಬ್, ೩ ನೇ ಮಹಮದ್ ಅಬ್ದುಲ್ ರಹೀಮಾನ್ ಸಾಬ್, ೪ ನೇ ಮಹಮ್ಮದ್ ಅಜ ಮದ್ ಅಲ್ಲಿ ಸಾಬ್, ೫ ನೇ ಮಹಮ್ಮದ್ ಅವಿದ್ ಅಲ್ಲಿ ಸಾಬ್ ಎಂಬ ಐದು ಜನ ಗಂಡುಮಕ್ಕಳಿಗೂ ಭಾಗಿಸಿ ಕೊಟ್ಟಿರುತ್ತೇನಾದು ದರಿಂದ ಇನ್ನು ಮುಂದೆ ನನ್ನ ಮೇಲೆ ಅವರುಗಳ ಹಕ್ಕು ಏನೂ ಇರು ವದಿಲ್ಲವೆಂತಲೂ, ಇವರುಗಳ ಸಾಲ ವಗ್ಯರೆ ವಿಷಯಗಳಲ್ಲಿ ನಾನು ಜವಾಬ್ದಾರನಲ್ಲವೆಂತಲೂ ಈ ಮೂಲಕ ತಿಳಿಯಪಡಿಸಿದ್ದೇನೆ.

೨೫—೬—೦೪, ಮಹಮ್ಮದ್ ಹೈದರ್ ಸಾಬಿ,
ಚನ್ನಪಟ್ಟಣ. ರೇಷ್ಮೆ ಸೌದಾಗರ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-21

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆ ಗಳನ್ನು ಸಕಲವಿಧ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊ ದಲಾದ ಬೆಲೆಬಾಳುವ ಪದಾರ್ಥಗಳಿಂದ ವಿಶೇಷದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಜೀರ್ಣಜ್ವರ, ಸಂದುಗಳ ನೋವು, ವೈ ಕ್ತಿಕಾಲ ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲಿನ ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ.

ಮಂದಬುದ್ಧಿಯೆನಿಸುವ ಅಧಮ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯೌವನ ಪ್ರಾಯದಲ್ಲಿ ದಾರ್ಢ್ಯವನ್ನು ಕೊಡುವ ಪದಾರ್ಥಗಳ ಬಲವನ್ನೂ ಕೊಡುತ್ತವೆ. ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ನಡುಕ್ಷಜ್ವರ, ಕೈಕಾಲುಗಳನ್ನು ಗುಣಪಡಿಸುತ್ತವೆ.

ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦೦ ಮಾತ್ರೆಯುಳ್ಳ ಕಾಟ್ಟಿಗೆ ೪ ಆಣೆ; ೫ ಕಾಟ್ಟಿಗೆ ೧ ರೂ. ೧ ರಿಂದ ೧೨ ಕಾಟ್ಟಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ :—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-21

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ತರಿಸಿಕೊಂಡರು? ಖಂಡಿತವಾಗಿಯೂ ಹಾಸನ ದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯಿಸಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಅದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿ ಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳಿಸು ತ್ತೇವೆ.

ಒಳ್ಳೇದಾದ, ಚನ್ನಾಗಿ ನೆಸೆದ, ಬಹಳ ಬಾಳಿಕೆ ಬರುವ ಟೋಪಿ ಗಳು ಬೇಕಾದರೆ, ನಮಗೆ ನೀವು ಬರೆದು ತರಿಸಿಕೊಳ್ಳಿ. ಅಗ್ಗವಾದ ವುಕ್ಕ ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ. ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೪ ಆ.; ೧ ರೂ. ೬ ಆ.; ೧ ರೂ. ೪ ಆ.

ರೇಷ್ಮೆ ಹುಕ್ಕೆಯುಳ್ಳ ಟೋಪಿಗಳು ೧ ರೂ. ೪ ಆ.; ೨ ರೂ. ಜರಿದ ಟೋಪಿಗಳು ೧ ರೂ. ೧೨ ಆ.; ೧ ರೂ. ೪ ಆ.; ೧ ರೂ. ೬ ಆ. ಉಣ್ಣೆಯ ಟೋಪಿಗಳು ೧ ರೂ. ೪ ಆ.; ೧ ರೂ. ೬ ಆ.

ಕೊಡುಗೆಗಳ ಟೋಪಿ, ಸೂಕ್ತಿ ಮೇಜೋದು, ಅರ್ಧ ಮೇಜೋ ಕು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇ ಳಿದಂಥವರಿಗೆ ಕೊಟ್ಟು ಕಳಿಸುವೆವು.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡು ಹಿಡಿದ ಕೆಮ್ಮಿನ ಔಷಧವು.

1-28



ಶೀತದ ಕೆಮ್ಮು, ಗಂಟಲು ಗೊರಕು ವುದು, ನಾಯಿಕೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ನಲ್ಲಿ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳೂ—ಇವಕ್ಕೆಲ್ಲಾ ಈ ಔಷಧವು ಬಾಣಾಂತ್ರಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಅಪಾಯಕರವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳು ವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೊಡಲೇ ಪರಿ ಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಕಷ್ಟವನ್ನು ಎಲ್ಲಿ ನೀಗಿಸುತ್ತದೆ. ಎದೆ ಒಣಗುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರು ವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಸ್ನೇಹಿತರಿಂದವುಟ್ಟದೆ ದಯಾರಾಗಿದೆ.

ಎಲ್ಲಾ ಕಡೆ ವಿಕ್ರಯವಾಗುವುದು.	ಸಣ್ಣಸೀಸೆಗೆ ೧ ರೂಪಾಯಿ.	ದೊಡ್ಡಸೀಸೆಗೆ ೨ ರೂಪಾಯಿ.

ಸ್ಟಾಂಡರ್ಡ್ ಅಮರಕೋಶ—ಪ್ರಥಮಕಾಂಡ.

56-1

ಸ್ಕೂಲ್ ಫೈನಲ್ ಪರೀಕ್ಷೆಗೆ ಬೇಕಾಗಿರುವ ಇಲ್ಲನ ಸಂಸ್ಕೃತ ತಿಳಿಯದ ರೂ ಸಹ ವಿದ್ಯಾರ್ಥಿಗಳಿಗೆ ಉಪಯೋಗವಾಗುವ ಹಾಗೆ ಶುದ್ಧವಾಗಿ ಪರಿಷ್ಕರಿಸಲ್ಪಟ್ಟ ಪ್ರಮಾಣಭೂತ (ಸ್ಟಾಂಡರ್ಡ್) ವಾದ ಪ್ರತಿ. ಕನ್ನಡ ಮತ್ತು ಎ. ವಿ. ಕ್ಲಾಸುಗಳ ವಿದ್ಯಾರ್ಥಿಗಳಿಗೆ ಉಪಯುಕ್ತ. ಸಂಪಾದಕರು ಟಿಪ್ಪಣಿ, ಗ್ಲೋಸ್ ಸಹಿತ. ಪ್ರತಿ ೧ ಕ್ಕೆ ೪ ಪೈ ೧೦ ಪ್ರತಿಗಳಿಗಿಂತ ಕಡಮೆ ವಿ. ಪಿ. ಮಾಡುವುದಿಲ್ಲ. ಕಬೀರನ ಚರಿತ್ರೆ.—ಭಕ್ತಿ ವಿಜಯದಲ್ಲಿಯ ಪಾದ ಭಕ್ತಾಗ್ರಗಣ್ಯನಾದ ಈ ಮಹನೀಯನ ಚರಿತ್ರೆಯು ಸವಿಸ್ತಾರವಾಗಿ ಬರೆದಿರುವುದು. ಕ್ರಯ ೩ ಆಣೆ. ಅಮರಕೋಶದ ಪ್ರಥಮಕಾಂಡದ ಒಂದೇ ಒಂದು ಕಾಪಿಯನ್ನು ಪಡೆಯುವವರು ಈ ಪುಸ್ತಕದ ಸಂಗಡ ತರಿಸಿಕೊಂಡಲ್ಲಿ ವಿ. ಪಿ. ಯಿಂದ ಕಳುಹಿಸಿಕೊಟ್ಟೇವು. ಅಮರಪುಸ್ತಕವು ಬೆಂಗಳೂರಿನಲ್ಲಿ ದೊರೆಯುವುದು.

ನನ್ನ ವಿಳಾಸ:—ವಿಕಟಪ್ರತಾಪ ಆಫೀಸ್, ಬೆಂಗಳೂರು. ಸಿ.; ಆಥವಾ, ಮರ್ಕೆಂಟೈಲ್ ಪ್ರೆಸ್ಸು, ಕೋಟೆ, ಮೈಸೂರು.

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

53-2

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ಸಾಮಾನ್ಯವಾಗಿ ತಯಾರಿಸಲ್ಪಟ್ಟ ಬಹಳ ಬಾಳಿಕೆ ಬರತಕ್ಕವುಗಳಾಗಿವೆ. ಬಣ್ಣವು ಹೋಗುವದಿಲ್ಲ. ನೀರಿನಿಂದ ಒಗೆಯಬಹುದು. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಅಗ್ಗ ಈ ಬಟ್ಟೆಗಳ ಕ್ರಯದ ಪಟ್ಟಿ ಬೇಕಾಗಿದ್ದರೆ ಅರ್ಧ ಆಣೆ ಸ್ಟಾಂಪು ಕಳಿಸಿ. ಒಂದು ಆಣೆ ಬೆಲೆ ಪತ್ರದ ಪ್ರಕಾರ ಬಟ್ಟೆಗಳನ್ನು ವಿ. ಪಿ. ಮೂಲಕ ಕಳುಹಿಸಲಾಗುವದು. ಅಲ್ಲದೆ ಬೇರೆ ಬಗೆಯ ಬಟ್ಟೆಗಳೂ, ಕಂಬಳಿಗಳೂ, ಪುಸ್ತಕಗಳೂ, ಪಾತ್ರೆಗಳೂ ಕೊಡಲ್ಪಡುವವು. ಇವೆಲ್ಲವೂ ನಮ್ಮಲ್ಲಿ ಬೇಕಾದ ಬೆಲೆ ಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಶೀತಪ್ರದೇಶದಲ್ಲಿ ಮಕ್ಕಳು

ಬಹಳ ಉಷ್ಣವಿದ್ಯಮಾನದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ನಿಮ್ಮ ಸ್ನಾಯುಗಳಿಗೂ ಮಾಂಸಖಂಡಗಳಿಗೂ ಸರಿಯಾಗಿ ಬಲಕೊಡುವ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ.

SCOTT'S EMULSION 33-15

(ಸ್ಕಾಟ್ಸ್ ಇಮಲ್‌ಷನ್)

ಎಂಬ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು.

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಿಗಳಲ್ಲೂ ವಿಕ್ರಯವಾಗುತ್ತಿದೆ.

ಮೀನನ್ನು ಹೊತ್ತಿರುವ ಮನುಷ್ಯ ಈ ಔಷಧದ ಗುರುತು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಇಲ್ಲಿ ನೋಡಿರಿ! ಬೇಗ ನೋಡಿರಿ!!

117-38

೧೦ ಸಾವಿರ ಟೋಪಿಗಳಾಗುವ ಉಲ್ ಬಂಡಲ್ ೧ ಕ್ಕೆ ೩—೮—೦. ಸಾವಿರ ಟೋಪಿ ವರೆಗೆ ೧ ಕ್ಕೆ ೧೩—೨—೦ ಯಿಂದ ೯ ರೂ. ವರೆಗೆ ಎರಡು ಕಡೆಯಲ್ಲಿ ಬರೆಯುವ ಕಾರ್ಡ್ ೧,೦೦೦ ಕ್ಕೆ ೧—೮—೦. ೧,೦೦ ಇಂಗ್ಲಿಷ್ ಅಕ್ಷರಗಳಿರುವ ಪಟ್ಟಿಗೆ ೧ ಕ್ಕೆ ೧ ರೂ. ಶೃಂಗಾರದ ಕನ್ನಡಿ ಕೇಸ್ ೧ ಕ್ಕೆ ೪ ಆಣೆ. ಕಾಂಬಿಸಿ ಸುವಾಸನೆ ಸೀಸೆ ೧ ಕ್ಕೆ ೭ ಆಣೆ. ಪರಿಮಳಗಂಧದ ಪೆಟ್ಟಿ ೧ ಕ್ಕೆ ೪ ಆಣೆ. ಅವಶ್ಯಕವಾದ ಶೀಶೆ ೧ ಕ್ಕೆ ೪ ಆಣೆ. ಇನ್ನೂ ವಿಶೇಷ ಸಾಮಾನಿನ ಪಟ್ಟಿಗಾಗಿ ಬರೆಯಿರಿ.

ವಿಳಾಸ—ಪ್ರೊಪ್ರೈಟರ್ ದಿ ಉರ್ಬನ್ ಸಪ್ಲೈ ಇಂಪೋರ್ಟರ್, ಮಂಗಳೂರು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಡಬಿಡದೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ದೇಹವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ರೋಗಕ್ಕೆ ಸಿಕ್ಕಬೇಕಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ: ಬೆನ್ನಿನಲ್ಲಿ ಭಗಟು, ಕಣ್ಣಿನ ಕೆಳಗೆ ಊತವು, ಮೂತ್ರವು ಕೆಂಪಾಗಿಯೋ ವಿಶೇಷವಾಗಿಯೋ ಬಿಳುಪಾಗಿಯೋ ಇರುವುದು, ಮೂತ್ರ ಬಾಧಕವಾಕೆ; ಬಳಲಿಕೆ, ಎದೆ ಹಲ್ಲೆಗೆ ನೋವು; ಶರೀರದಲ್ಲಿ ಸುರ; ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮಲಬದ್ಧತೆ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರಕ್ಷಯವು, ವಾಯು, ಮಧುಮೇಹ, ಉರುಮೂತ್ರ, ಮೂತ್ರಕೋಶದ ಕ್ಷಯ ಮೊದಲಾಗಿ ಪ್ರಾಣಾಂತಕವಾದ ಭಯಂಕರವಾದ ರೋಗಗಳು ಹುಟ್ಟುವವು.

ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಪುನಃ ಚೇತರಿಸಿ ಅದರ ಕೆಲಸವನ್ನು ಸರಿಯಾಗಿ ಮಾಡುವಂತೆ ಮಾಡುವುದರಿಂದ ರಕ್ತವು ಶುದ್ಧವಾಗಿ ದೇಹಕ್ಕೆ ಆರೋಗ್ಯವನ್ನುಂಟುಮಾಡುವುವು. [93-45]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೩ ೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦ ೮ ೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೫೦, ಬೊಂಬಾಯಿ — ಇವರಲ್ಲಿ ದೊರೆಯುವುವು.

ವೃತ್ತಾಂತ ಪತ್ರಿಕೆ.

೧೯೦೪ ನೇ ಇಸವಿ ಜೂಲೈ ತಾ. ೯ ನೇ ಶನಿವಾರ

ಮ. ರಾಮಲಿಂಗ ರೆಡ್ಡಿಯವರ ಉಪನ್ಯಾಸಗಳು.

ಮ. ರಾಮಲಿಂಗ ರೆಡ್ಡಿಯವರು ರಾಜಧಾನಿಯಲ್ಲಿ ಮಾಡಿದ್ದ ಉಪನ್ಯಾಸ ಮಾಡಿದ ವಿಚಾರಗಳನ್ನು ಸಂಕ್ಷೇಪವಾಗಿ ಆಗಲೇ ತಿಳಿಸಿರುತ್ತೇವೆ. ಈಚೆಗೆ ಅವರು ಬೆಂಗಳೂರಿನಲ್ಲೂ ಅಂಥಾ ಕೆಲವು ಉಪನ್ಯಾಸಗಳನ್ನು ಮಾಡಿರುತ್ತಾರೆ. ಅ ಪೈಕಿ ಒಂದು ದಿನ ಮೆ|| ರಾಮಲಿಂಗರೆಡ್ಡಿಯವರು ಪಶ್ಚಿಮ ರಾಜ್ಯಗಳ ವಿದ್ಯಾಸಿತಿಯಗಳನ್ನು ಕುರಿತು ಪ್ರಸ್ತಾಪ ಮಾಡಿದರು. ಬ್ರಿಟಿಷ್ ರೆಸಿಡೆಂಟರಾದ ಮೆ|| ಎಸ್. ಎಂ. ಫ್ರೇಸರ್ ಯವರು ಆ ದಿನ ಸಭೆಯಲ್ಲಿ ಅಗ್ರಾಸನವನ್ನು ವಹಿಸಿ, ಸಭಾಸದರನ್ನು ಕುರಿತು ಹೇಳಿದ ಕೆಲವು ಮುಖ್ಯ ಸಂಗತಿಗಳನ್ನು ಇಲ್ಲಿ ಪ್ರಕಟಿಸಬೇಕೆಂದು ಕುತೂಹಲಪಡುವೆವು. ಅವರು ತಿಳಿಸಿದ ಮುಖ್ಯಾಭಿಪ್ರಾಯಗಳೇನೆಂದರೆ.

"ಇಂಥಾ ಸಭೆಗಳಲ್ಲಿ ಬ್ರಿಟಿಷ್ ರೆಸಿಡೆಂಟರು ಬಂದು ಅಗ್ರಾಸನವನ್ನು ವಹಿಸುವುದು ಸಾಮಾನ್ಯವಾಗಿ ಅವರ ಕರ್ತವ್ಯವಾದದ್ದಲ್ಲವು. ಅವರೂ ಈ ಉಪನ್ಯಾಸಕರು ಇಂಗ್ಲಿಷ್ ಜನ

ರಿಗೂ ಹಿಂದುಸ್ಥಾನದವರಿಗೂ ಪರಸ್ಪರವಾದ ಪ್ರೀತಿ ವಿಶ್ವಾಸಗಳನ್ನು ಅಭಿವೃದ್ಧಿಗೆ ತರಬೇಕೆಂಬ ಉದ್ದೇಶ ಪಟ್ಟಿರುತ್ತಾರಾದ್ದರಿಂದ ಇಂಥಾ ಸಭೆಗೆ ನಾನು ಬಂದು ಅಗ್ರಾಸನವನ್ನು ವಹಿಸಲು ತುಂಬಾ ಸಂತೋಷಪಡುತ್ತೇನೆ.

ಮ॥ ರಾಮಲಿಂಗ ರೆಡ್ಡಿಯವರು ಇಂಗ್ಲಾಂಡಿನಲ್ಲಿರುವಾಗ್ಗೆ ವ್ಯರ್ಥವಾಗಿ ಸಮಯವನ್ನು ಕಳೆಯಲಿಲ್ಲವೆಂದು ಕಾಣುತ್ತದೆ. ಯಾಕೆಂದರೆ ಅವರು ಕೇಂಬ್ರಿಡ್ಜ್ ವಿದ್ಯಾನಿಲಯದ ನಾನಾ ಉಪಯುಕ್ತವಾದ ಸಂಘಗಳಲ್ಲಿ ಇಂಗ್ಲಿಷ್ ತರುಣರ ಕೂಡ ಬೆರೆಯುತ್ತಿದ್ದದ್ದು ಮಾತ್ರವೇ ಅಲ್ಲ; ಅವರು ತಮಗೆ ವಿದ್ಯಾಶಾಲೆಯಲ್ಲಿ ರಜಾ ದೊರೆತಾಗಲೆಲ್ಲಾ ತಮ್ಮ ಇಂಗ್ಲಿಷ್ ಸ್ನೇಹಿತರ ಆತಿಥ್ಯಗಳನ್ನು ಸ್ವೀಕರಿಸಿ, ಎಲ್ಲಾ ತರಗತಿಗಳ ಜನರ ಮನೆಗಳಲ್ಲೂ ಹೋಗಿ ಇದ್ದುಬರುತ್ತಿದ್ದರು. ಇಂಗ್ಲಿಷ್ ದೊಡ್ಡ ಮನುಷ್ಯರೂ ಸ್ತ್ರೀಯರೂ ಮ॥ ರಾಮಲಿಂಗ ರೆಡ್ಡಿಯವರನ್ನು ಸ್ವಲ್ಪವಾದರೂ ಹೊರಗಿನವರೆಂದು ಎಣಿಸದೆ ಅವರನ್ನು ಬಹು ಪ್ರೀತಿಯಿಂದಲೂ ಆದರಪೂರ್ವಕವಾಗಿಯೂ ಕಾಣುತ್ತಾ, ತಮ್ಮ ಮನೆಗಳಲ್ಲಿ ಸತ್ಕರಿಸುತ್ತಾ ಇದ್ದರೆಂದು, ಮ॥ ರೆಡ್ಡಿಯವರು ತಿಳಿಸಿರುತ್ತಾರೆ. ಇಂಗ್ಲಾಂಡ್ ದೇಶದ ಇಂಗ್ಲಿಷರಂತೆ ಈ ದೇಶದಲ್ಲಿ ವಾಸಮಾಡುವ ಇಂಗ್ಲೀಷ್ ಜನರು ಹಿಂದೂಸ್ಥಾನದವರನ್ನು ಪ್ರೀತಿಯಿಂದ ಕಾಣುವದಿಲ್ಲವೆಂದು ಕೆಲವರು ಆಕ್ಷೇಪಿಸುತ್ತಾರೆ. ಇದನ್ನು ನಾನು ಒಪ್ಪಲಾರೆನು. ಯಾಕೆಂದರೆ, ವಿಲಾಯತಿಯು ಹಿಂದುಸ್ಥಾನದಿಂದ ಹೋಗತಕ್ಕವನಿಗೆ ಹೊಸ ಸ್ಥಳವಾಗಿರುವದು. ಆದದರಿಂದ ಇಂಥವನನ್ನು ಪ್ರೀತಿಯಿಂದ ಕಾಣುವುದೂ ಆದರಿಸುವುದೂ ಇಂಗ್ಲಿಷರು ತಮ್ಮ ಕರ್ತವ್ಯವೆಂದು ಭಾವಿಸುತ್ತಾರೆ ಆದರೆ ಈ ದೇಶದಲ್ಲಿ ಹಿಂದೂಸ್ಥಾನದವರು ಸ್ವದೇಶದಲ್ಲಿರುತ್ತಾರೆ. ಅವರಿಗೆ ಇಂಗ್ಲೀಷರು ಆತಿಥ್ಯವನ್ನು ಕೊಡುವುದಕ್ಕೆ ಸಂದರ್ಭವೂ ಆವಶ್ಯಕತೆಯೂ ಅಷ್ಟರಮಟ್ಟಿಗೆ ಇರುವುದಿಲ್ಲ. ಹೀಗಿದ್ದರೂ ಇಲ್ಲಿಯೂ ಕೂಡ ಹಿಂದುಸ್ಥಾನದವರು ಇಂಗ್ಲಿಷರೊಡನೆ ಕಲೆತು ವ್ಯವಹರಿಸಬೇಕೆಂದು ಕುತೂಹಲ ಪಡುವ ಪಕ್ಷದಲ್ಲಿ ಇಂಗ್ಲಿಷರು ಬಹು ಸಂತೋಷದಿಂದ ಅವರನ್ನು ತಮ್ಮ ಮನೆಗಳಿಗೆ ಬರಮಾಡಿಕೊಂಡು ತಮ್ಮ ಪ್ರೀತಿವಿಶ್ವಾಸಗಳನ್ನು ತೋರಿಸುವವರಲ್ಲಿ ಕುತೂಹಲಪಡುವವರಾಗಿದ್ದಾರೆ.

ಇಂಗ್ಲಿಷರು ಹಿಂದುಸ್ಥಾನದವರ ಕೂಡ ಸ್ನೇಹಭಾವವನ್ನು ಬೆಳೆಸಬೇಕೆಂದು ಅಪೇಕ್ಷಿಸುವ್ರದು ಎಷ್ಟು ಅವಶ್ಯವೋ ಹಿಂದುಸ್ಥಾನದವರೂ ಇಂಗ್ಲಿಷರ ವಿಷಯದಲ್ಲಿ ಪ್ರೀತಿ ವಿಶ್ವಾಸಗಳನ್ನು ತೋರಿಸುತ್ತಾ ಬರಬೇಕೆಂಬುವುದೂ ಅಷ್ಟು ಅವಶ್ಯವೂ ಅಪೇಕ್ಷಣೀಯವೂ ಆಗಿರುತ್ತವೆ. ಆದರೆ ಸ್ನೇಹವೆಂದ ಮಾತ್ರಕ್ಕೆ ಒಬ್ಬನು ಯಾತ್ರದ ಕೆಟ್ಟದ್ದಾವುದು ಒಂಟಿಯಾಗಿ ವಿವೇಕಿಸಿ ನೋಡದೆ ಸ್ನೇಹಿತನಲ್ಲಿ ಕಂಡು ಬರುವ ಗುಣಗಳನ್ನೆಲ್ಲಾ ಹೊಗಳುವುದೇ ಮುಖ್ಯವೆಂದು ಎಣಿಸಕೂಡದು. ಸ್ನೇಹವೆಂಬುವುದು ಹೊಗಳಿಕೆಯಲ್ಲ. ಹಿಂದುಸ್ಥಾನದವರು ಇಂಗ್ಲಿಷರ ಸ್ನೇಹವನ್ನು ಪಡೆಯಬೇಕೆಂದು ಕುತೂಹಲಪಡುವ ಪಕ್ಷದಲ್ಲಿ ಅವರ ಹಿಂದುಸ್ಥಾನದವರಲ್ಲಿ ನೋಡುವ ಕೆಲವು ವಿಚಾರಗಳನ್ನು ತಿರಸ್ಕರಿಸುತ್ತಾರೆಂಬುವುದನ್ನು ನಿರೀಕ್ಷಿಸಬೇಕು. ಇದೇ ರೀತಿಯಲ್ಲಿ ಹಿಂದುಸ್ಥಾನದವರು ಇಂಗ್ಲಿಷರಲ್ಲಿ ಕಂಡುಬರುವಂಥಾ ಸಮಸ್ತವಾದ ಪದ್ಧತಿಗಳನ್ನೂ, ವ್ಯವಹಾರಗಳನ್ನೂ, ವಿಚಾರಗಳನ್ನೂ ವಿವೇಕಿಸದೆ ಹೊಗಳುತ್ತಾರೆಂದು ಇಂಗ್ಲಿಷರು ನಿರೀಕ್ಷಿಸುವುದಿಲ್ಲ. ದೃಷ್ಟಾಂತವಾಗಿ ಮ॥ ರಾಮಲಿಂಗ ರೆಡ್ಡಿಯವರು ಕೆಲವು ವಿಷಯಗಳಲ್ಲಿ ಇಂಗ್ಲಿಷರನ್ನು ಸ್ತೋತ್ರ ಮಾಡಿಯೂ, ಇನ್ನು ಕೆಲವು ವಿಚಾರಗಳಲ್ಲಿ ಅವರನ್ನು ಆಕ್ಷೇಪಿಸಿಯೂ ಇರುತ್ತಾರೆ ಇಂಗ್ಲಿಷರು ಅವರ ಆಕ್ಷೇಪಣೆಗಳಿಗಾಗಲಿ ಸ್ತೋತ್ರಗಳಿಗಾಗಲಿ ಚಂಚಲಪಡದೆ, ಗಂಭೀರವಾಗಿ ಕಿವಿಕೊಟ್ಟು ಕೇಳುವರು.

ವಿದ್ಯಾವಂತರಾದ ದೊಡ್ಡ ಮನುಷ್ಯರು ಈ ಸಮಯದಲ್ಲಿ ಹಿಂದುಸ್ಥಾನಕ್ಕೂ ಇಂಗ್ಲಾಂಡಿಗೂ ಇರತಕ್ಕ ಸ್ನೇಹವನ್ನೂ ಪ್ರೀತಿ ವಿಶ್ವಾಸಗಳನ್ನೂ ಅಭಿವೃದ್ಧಿಪಡಿಸುವ ಭಾಗದಲ್ಲಿ ಮನಸ್ಸಿಟ್ಟು ನಾಹಸಪಡಬೇಕಾಗಿರುತ್ತದೆ. ಇದೇ ಮ॥ ರೆಡ್ಡಿಯವರ ಮುಖ್ಯ ಉದ್ದೇಶವಾಗಿರೋಣವರಿಂದ ಇಂಥಾ ಸಭೆಯಲ್ಲಿ ನಾನು ಅಗ್ರಾಸನವನ್ನು ವಹಿಸಿದ್ದು ನನಗೆ ತುಂಬಾ ಸಂತೋಷವಾಗಿದೆ. ಇತರ ಕಡೆಗಳ ಸ್ಥಿತಿಗತಿಗಳು ಯಾವ ರೀತಿಯಲ್ಲಿದ್ದಾಗ್ಯೂ ಇದುವರೆಗೂ ಈ ಮೈಸೂರು ಸಂಸ್ಥಾನದೊಳಗೆ ಇಂಗ್ಲಿಷರಿಗೂ ದೇಶೀಯರಿಗೂ ಐಕಮತ್ಯ ಪ್ರೀತಿವಾತ್ಸಲ್ಯಗಳು ನೆಲೆಗೊಂಡಿರುವವೆಂದು ತಿಳಿಸಲು ಆನಂದಪಡುತ್ತೇನೆ.

ಒಳದೇಶದ ವೃತ್ತಾಂತಗಳು.

ನಕಲೇಶಪುರ ಪ್ರಾಂತ್ಯದಲ್ಲಿ ತುಂಬಾ ಹೆಸರುವಾಸಿಯನ್ನು ಪಡೆದಿದ್ದ ಮೆ॥ ಎಂ. ಎ. ಸುಬ್ರಹ್ಮಣ್ಯನವರು ಆಚೇ ವಾರ ಕಾಲವಾದರೆಂದು ತಿಳಿದುಬಂದಿದೆ.

❧❧❧

ಸಂಸ್ಥಾನದ ಹೊಸ ಕಂಟ್ರೋಲರಾದ ಮೆ॥ ಚಕ್ರವರ್ತಿಯವರು ಕಳೆದ ಗುರುವಾರ ಬೆಂಗಳೂರಿಗೆ ಬಂದು ಕೆಲಸದ ಭಾರವನ್ನು ವಹಿಸಿಕೊಂಡಿದ್ದಾರೆ

❧❧❧

ಶ್ರೀಮನ್ಮಹಾರಾಜರವರ ಭೇಟಿಗಾಗಿ ಕಳೆದ ಶನಿವಾರ ರಾಜಧಾನಿಗೆ ಬಂದಿದ್ದ ದಿವಾನ್ ಮೆ॥ ಮಾಧವರಾಯರು ನಾಳಿಗು ಬೆಂಗಳೂರಿಗೆ ಪ್ರಯಾಣ ಮಾಡಿದರು.

❧❧❧

ಕಳೆದ ಭಾನುವಾರ ಶ್ರೀಮನ್ಮಹಾರಾಜರವರೂ ಮಹಾಮಾತೃಶ್ರೀಯವರೇ ಮುಂತಾದ ರಾಜವರ್ಗದವರೂ ಚಾಮುಂಡೀ ಬೆಟ್ಟಕ್ಕೆ ದಯಮಾಡಿ, ದೇವರ ಸೇವೆಯನ್ನು ತೀರಿಸಿಕೊಂಡು ಬಂದರು

❧❧❧

ಬೆಂಗಳೂರು ಡೆಪ್ಯುಟಿ ಕಮೀಷನರ್ ಮೆ॥ ಬಿ ಜೆ ಕಾಮಾಂಸ್ವಾಮಿನಾಯಕರವರು ಕಳೆದ ಭಾನುವಾರ ಆನೇಕಲ್ಲಿನಲ್ಲಿ ವ್ಯವಸಾಯ ವಿಷಯವಾದ ಒಂದು ಪ್ರದರ್ಶನವನ್ನು ಪ್ರಾರಂಭಿಸುವವರಾಗಿದ್ದರು.

❧❧❧

ಕೋಲಾರದ ಚಿಕ್ಕಬಳ್ಳಾಪುರ ಪ್ರಾಂತ್ಯಕ್ಕೆ ಸೇರಿದ ಬಾಲಘಟ್ಟದಲ್ಲಿ ಒಂದು ಹೊಸ ತರಹ ರೋಗವು ಪ್ರಾರಂಭವಾಗಿ, ಮಾಟಕ್ಕಿಗಳು ಅದರಿಂದ ವ್ಯಾಸಕಪಡುತ್ತಿದ್ದಾರೆಂತಲೂ, ಡಾಕ್ಟರುಗಳು ಆ ರೋಗವನ್ನು ಪರಿಕ್ಷೆಮಾಡುತ್ತಿದ್ದಾರೆಂತಲೂ ತಿಳಿದು ಬಂದಿದೆ

❧❧❧

ಮೈಸೂರು "ರತ್ನಾವಳಿ" ನಾಟಕ ಸಂಘದವರು ಕಳೆದ ವಾರ ಶ್ರೀಮನ್ಮಹಾರಾಜರವರ ಆಜ್ಞಾನುಸಾರವಾಗಿ ಅರಮನೆಯೊಳಗೆ ಮೂರು ನಾಟಕಗಳನ್ನು ಆಡಿದರು. ಮಹಾರಾಜರವರೂ ರಾಜವರ್ಗದವರೂ ನೋಡಿ ತುಂಬಾ ಸಂತೋಷಪಟ್ಟುಕೊಂಡರೆಂದು ಕೇಳುತ್ತೇವೆ

❧❧❧

ಈ ಸಂಸ್ಥಾನದ ಅಸಿಸ್ಟೆಂಟ್ ರೆಸಿಡೆಂಟರಾದ ಮೆ॥ ಎಚ್ ಬಿ. ರೆಸ್ಸಿಯವರು ಮೂರು ತಿಂಗಳ ರಜಾ ಪಡೆದು ಮುಂದಿನ ಸೋಮವಾರ ಸೀಮೆಗೆ ಹೋಗಿ ಬರುವವರಾಗಿದ್ದಾರೆ ಅವರ ಗೈರುಹಾಜರಿಯಲ್ಲಿ ಮೆ॥ ಪಿ. ಎಲ್. ಮೂರ್ ಯವರು ಆ ರೆಸಿಡೆಂಟರಾಗಿಯೂ, ಮೆ॥ ಪಿ ಹ್ಯಾನ್ನಿಂಗ್ಟನ್‌ರವರು ದಂಡಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ ಕೆಲಸ ನೋಡುವರು

❧❧❧

ಕಳೆದ ಸೋಮವಾರ ಬೆಳಿಗ್ಗೆ ೭ ಗಂಟೆಯ ಹೊತ್ತಿಗೆ ಶ್ರೀಮನ್ಮಹಾರಾಜರವರು ಮೋಟಾರ್ ಗಾಡಿಯಲ್ಲಿ ರಾಜಧಾನಿಯಿಂದ ನೀಲಗಿರಿ ಬೆಟ್ಟಕ್ಕೆ ಪ್ರಯಾಣ ಮಾಡಿದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು ಅವರ ಸಂಗಡ ಮೆ॥ ಮೆಕಾನಕಿಯವರೂ, ಮೆ॥ ಚಾಮಪ್ಪಾಜಿ ಅರಸಿನವರೂ, ಮೆ॥ ಸುಬ್ರಹ್ಮಣ್ಯರಾಜೇ ಅರಸಿನವರೂ, ಡಾಕ್ಟರ್ ಎಸ್. ನಂಜಪ್ಪನವರೂ, ರಾಜಪುರೋಹಿತರೂ ಹೋಗಿದ್ದಾರೆ

❧❧❧

ಬೆಂಗಳೂರಿನಲ್ಲಿ ಸರ್ಕಾರಿ ಕೇಕ್ಹಾವಿ ಸ್ಕೂಲಿನಲ್ಲಿ ತಯಾರಾಗುವವರನ್ನು ಈ ತಿಂಗಳ ಆಖೈರಿಗೆ ಅವರವರ ಸ್ಥಳಕ್ಕೆ ವಾಪಸು ಕಳುಹಿಸುವುದಾಗಿಯೂ, ಹೊಸದಾಗಿ ಅಲ್ಲಿ ತಯಾರಾಗುವುದಕ್ಕೆ ಡೆಪ್ಯುಟಿ ಕಮಿಷನರುಗಳು ಕೇಂಡ್ಡಾದರನ್ನು ಆರಿಸಿ ಕಳುಹಿಸಿಕೊಡಬೇಕೆಂತಲೂ, ಆ ಸ್ಕೂಲು ಜೂಲೈ ೧೩ಕ್ಕೆ ಪ್ರಾರಂಭವಾಗುವದರಿಂದ ತಯಾರಾಗತಕ್ಕವರು ತಾ ೧೫ ರೊಳಗಾಗಿ ಅಲ್ಲಿಗೆ ತಲುಪುವಂತೆ ಮಾಡಬೇಕೆಂತಲೂ ರೆವಿನ್ಯೂ ಕಮಿಷನರವರು ತಿಳಿಸಿರುತ್ತಾರೆ.

❧❧❧

ಶ್ರೀಮಾನ್ ಯುವರಾಜರವರು ಕಾಶ್ಮೀರ ಸಂಸ್ಥಾನದಲ್ಲಿ ೮—೧೦ ವಾರಗಳ ತನಕ ಇದ್ದು ದೇಹಸ್ಥಿತಿಯನ್ನು ಕ್ರಮಪಡಿಸಿಕೊಂಡು ಬರುವುದಕ್ಕಾಗಿ ಕಳೆದ ಸೋಮವಾರ ಬೆಳಿಗ್ಗೆ ರಾಜಧಾನಿಯಿಂದ ಬೆಂಗಳೂರಿಗೆ ಮೋಟಾರ್ ಗಾಡಿಯಲ್ಲಿ ಪ್ರಯಾಣ ಮಾಡಿದರು ಅವರ ಕೂಡ ದರ್ಬಾರ್ ಸರ್ಜನರಾದ ಪ್ರೇಕ್ ಬ್ರಾಕ್ಮನ್ ರವರು, ಡಾಕ್ಟರ್ ಎಸ್ ರಂಗಣ್ಣನವರು, ಐಡಿಕಾಂಗ್ ಕಾಮಂಡಾಂಟ್ ಮೆ॥ ಎಚ್. ಲಿಂಗರಾಜೆ ಅರಸಿನವರು, ಮೆ॥ ಸಿಂಗ್ಲಾಚಾರ್ರು ಮೊದಲಾದವರು ಹೋಗಿರುತ್ತಾರೆ

❧❧❧

ರಾಜಧಾನಿಯಲ್ಲಿರುವ ಪೋಲೀಸ್ ಅಧಿಕಾರಿಗಳು ಪೋಲೀಸ್ ಇಲಾಖೆಯವರಿಗೆ ಕಸರತ್ತು ಮುಂತಾದ ಅಂಗಸಾಧನೆಗಳನ್ನು ಕಲಿಸುವುದಕ್ಕೆ ನೆನ್ನೆ ಸಾಯಂಕಾಲ "ಶ್ರೀ ಕೃಷ್ಣರಾಜ ಪೋಲೀಸ್ ಗರಡಿ" ಎಂಬ ಗರಡಿಯನ್ನು ವಿಶೇಷ ಸಂಭ್ರಮ ಪೂರ್ವಕವಾಗಿ ಪ್ರಾರಂಭಿಸಿದರು. ಆಗ್ಗೆ ಇಲ್ಲಿರುವ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ರವರೂ ಅನೇಕ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಕರೆಸಲ್ಪಟ್ಟಿದ್ದರು. ಪೋಲೀಸಿನವರಿಂದ ನಾನಾ ಕಸರತ್ತುಗಳನ್ನು ಮಾಡಿಸಿ ಸಂತೋಷ ಪಡಿಸಿದರು

❧❧❧

ರಾಜಧಾನಿಯ ಕರ್ಜನ್ ಪಾರ್ಕಿನಲ್ಲಿ ಲೇಟ್ ಮಹಾರಾಜ ಚಾಮರಾಜ ಒಡೆಯರವರ ಭವ್ಯ ಪ್ರತಿಮೆಯನ್ನು ಕುದುರೆಯ ಮೇಲೆ ಕುಳಿತಿರುವಂತೆ ಮಾಡಿಸಿಟ್ಟಿರುವುದನ್ನು ಚೆನ್ನಾಗಿಲ್ಲವೆಂದು ತೆಗೆದು ಬಿಡುವ ಪ್ರಯತ್ನ ನಡೆದಿದೆಯಷ್ಟೆ. ಆ ಸ್ಥಳದಲ್ಲಿ ಶ್ವೇತಶಿಲೆಯ ಅವರ ಪ್ರತಿಮೆಯನ್ನು ಇಡುವುದೆಂದು ಗೊತ್ತಾಗಿದೆ. ಈ ಪ್ರತಿಮೆಯು ಸೀಮೆಯಿಂದ ತಯಾರಾಗಿ ಬಂದು ಸುಮಾರು ವರುಷದ ಮೇಲಾಯಿತೆಂದೂ, ಅದನ್ನು ಅರಮನೆಯೊಳಗೆ ಇಟ್ಟುಕೊಂಡಿದ್ದಾರೆಂದೂ ತಿಳಿಯುತ್ತದೆ ಗತಿಸಿದ ರಾಜಾ ರವಿವರ್ಮರವರು ರಾಜಧಾನಿಗೆ ಬಂದಿದ್ದಾಗ್ಗೆ ಅವರಿಂದ ಚಾಮರಾಜ ಒಡೆಯರವರ ಸುಲಕ್ಷಣವಾದ ಚಿತ್ರ ಪಟವನ್ನು ತಯಾರುಮಾಡಿಸಿದ್ದಲ್ಲದೆ ಅವರ ಮುಖಭಾವ ಮುಂತಾದದ್ದು ಚೆನ್ನಾಗಿ ಗೊತ್ತಾಗುವಂತೆ ಒಂದು ಪ್ರತಿಮೆಯನ್ನು ಮಾಡಿಸಿ, ಇದರ ಹಸನ್ನೂ ವಿಲಾಯತಿಗೆ ಕಳುಹಿಸಿ, ಮೇಲ್ಕಂಡ ಬಿಳೀ ಕಲ್ಲಿನ ಪ್ರತಿಮೆಯನ್ನು ಮಾಡಿಸಿ ತರಿಸಿರುತ್ತಾರೆಂದು ಕೇಳುತ್ತೇವೆ. ಈಗಿರುವ ಲೋಹ ಪ್ರತಿಮೆಯನ್ನು ತೆಗೆದಮೇಲೆ ಅದೇಸ್ಥಳದಲ್ಲಿ ಜಯಪುರದ ಬಿಳೀ ಕಲ್ಲಿನಲ್ಲಿ ಒಂದು ಮಂಟಪವನ್ನು ಕಟ್ಟಿ, ಹೊಸದಾಗಿ ತರಿಸಿರುವ ಶ್ವೇತ ಶಿಲೆಯ ಪ್ರತಿಮೆಯನ್ನು ಪ್ರತಿಷ್ಠೆ ಮಾಡುವರು. ಈ ಮಂಟಪಕ್ಕೆ ಬೇಕಾಗುವ ಹೊಳಪುಳ್ಳ ಬಿಳಿಯ ಕಲ್ಲು ರಾಜಪುಟಾನಾ ಸಂಸ್ಥಾನಗಳಿಗೆ ಸೇರಿದ ಮಕ್ರಾನ್ ಎಂಬ ಸ್ಥಳದಲ್ಲಿ ದೊರೆಯುವುದರಿಂದ ಅರಮನೆಯ ಇಂಜನಿಯರ್ ಮೆ॥ ರಾಘವಲು ನಾಯ್ಡುಯವರು ಅದನ್ನು ನೋಡಿ ತರಿಸುವುದಕ್ಕಾಗಿ ಆ ಪ್ರಾಂತ್ಯ ಹೋಗಿರುತ್ತಾರೆ ಅವರು ನಾಳೆ ನಾಡಿದ್ದರಲ್ಲೇ ವಾಪಸು ಬರಬಹುದೆಂದು ವರ್ತಮಾನವಿದೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಮಹಾರಾಣಿ ಕಾಲೆಜ್ ಲೇಡಿ ಸೂಪರಿಂಟೆಂಡೆಂಟ್ ಮಿಸ್ ಜೆ. ಎಲ್. ಪ್ಯಾಟಿಕಾರ್ ಯವರಿಗೆ ಕೊಟ್ಟಿರುವ ಮೂರು ತಿಂಗಳ ಕಾಯಿಲೆ ರಜ, ಮೂರು ತಿಂಗಳ ಪ್ರಿವಿಲೆಜ್ ರಜಗಳನ್ನು ಅಕ್ಟೋಬರ್ ತಾ ೩೦ ರ ವರೆಗೆ ಜಾಸ್ತಿ ಮಾಡಿದೆ.

ಅವರು ವಾಪಸು ಬರುವ ತನಕ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಸೌಭಾಗ್ಯವತಿ ಕೆ. ಡಿ. ಲಕ್ಷ್ಮೀದೇವಮ್ಮನವರು ಲೇಡಿ ಸೂಪರಿಂಟೆಂಡೆಂಟರಾಗಿ ಬದಲಿ ನೋಡುತ್ತಾ ಬರತಕ್ಕದ್ದು.

ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ॥ ಮೊಹದೀನ್ ಷರೀಫ್ ಯವರಿಗೆ ಜೂಲೈ ೧೫ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸಾಗರದ ಸಬ್ ಡಿವಿಜನ್ ಅ॥ ಕಮಿಷನರ್ ಮೆ॥ ನಗರ್ ಸುಬ್ಬರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಸೀನಿಯರ್ ಅ॥ ಕಮಿಷನರ್ ಮೆ॥ ಕೆ. ಶ್ರೀನಿವಾಸರಾಯರು ತಮ್ಮ ಕೆಲಸಗಳೊಂದಿಗೆ ಸಾಗರದ ಸಬ್ ಡಿವಿಜನ್ ಭಾರವನ್ನು ವಹಿಸಿರತಕ್ಕದ್ದು.

ಪ್ರೊ॥ ಅ॥ ಕಮಿಷನರ್ ಮೆ॥ ಎಸ್ ಪಿ ರಾಜಗೋಪಾಲಾಚಾರ್ರನ್ನು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿಗೆ ವರ್ಗಮಾಡಿದೆ.

ಬಂಗಾಳದಲ್ಲಿ ಅ॥ ಅಕೌಂಟೆಂಟ್ ಜನರಲ್‌ರಾಗಿಯೂ ಲೋಕಲ್ ಫಂಡ್ ಲೆಕ್ಕಗಳ ಎಗ್ಸಾಮಿನರಾಗಿಯೂ ಇದ್ದ ಮೆ॥ ಜಿ. ಎಸ್. ಚಕ್ರಬಟ್ಟಿಯವರನ್ನು ಮೈಸೂರು ಗವರ್ನಮೆಂಟ್ ಕಂಟ್ರೋಲರಾಗಿ ನೇಮಕಮಾಡಿಕೊಳ್ಳಲಾಗಿದೆ.

ಮುಂದೆ ಹೇಳುವ ಪ್ರೊ॥ ಅ॥ ಕಮಿಷನರುಗಳ ವರ್ಗಾವರ್ಗಿ ಹುಕುಂ ಮಾಡಿದೆ:—ಮೆ॥ ಎಸ್. ಪಿ ರಾಜಗೋಪಾಲಾಚಾರ್ರನ್ನು ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಆಫೀಸಿಗೆ; ಮೆ॥ ಡಿ. ಶ್ರೀನಿವಾಸಯ್ಯಂಗಾರ್ರನ್ನು ತುಮಕೂರು ಡಿಸ್ಟ್ರಿಕ್ಟ್ ಆಫೀಸಿಗೆ; ಮೆ॥ ಜಿ. ಬಿ. ಹೆಬ್ಲೀಕರ್ ಯವರನ್ನು ಮೈಸೂರು ಡಿಸ್ಟ್ರಿಕ್ಟಿಗೆ.

ಮುಂದೆ ಹೇಳುವ ಫಾರೆಸ್ಟ್ ಆಫೀಸರುಗಳ ವರ್ಗಾವರ್ಗಿ ಹುಕುಂ ಮಾಡಲಾಗಿದೆ.—

ಅ॥ ಕನ್ಸರ್ವೇಟರ್ ಮೆ॥ ಎಚ್. ರಾಮಯ್ಯನವರನ್ನು ಹೆಗ್ಗಡದೇವನಕೋಟೆ ಸಬ್ ಡಿವಿಜನಿಂದ ಕೋಲಾರ್ ಡಿಸ್ಟ್ರಿಕ್ಟ್ ಛಾರ್ಜಿಗೆ (ಡೆಪ್ಯುಟಿ ಕನ್ಸರ್ವೇಟರ್ ಮೆ॥ ಎಸ್. ಎ ಬಾಪೂರಾಯರು ಜೂಲೈ ೧ ರಿಂದ ರಿಟೈರಾಗುವ ಸಬಬು).

ಸಬ್ ಅ॥ ಕನ್ಸರ್ವೇಟರ್ ಮೆ॥ ಪಿ ಎಸ್ ಗೋವಿಂದರಾಯರನ್ನು ಶಿವಮೊಗ್ಗೆಯಿಂದ ಹೆಗ್ಗಡದೇವನಕೋಟೆ ಸಬ್ ಡಿವಿಜನಿಗೆ.

ಸಬ್ ಅ॥ ಕನ್ಸರ್ವೇಟರ್ ಮೆ॥ ಜೆ ಕೃಷ್ಣಮೂರ್ತಿ ನಾಯ್ಡುಯವರನ್ನು ಮೈಸೂರಿನಿಂದ ಶಿವಮೊಗ್ಗಾ ಸಬ್ ಡಿವಿಜನ್ ಛಾರ್ಜಿಗೆ.

ಸಬ್ ಅ॥ ಕನ್ಸರ್ವೇಟರ್ ಮೆ॥ ವಿ ಯತಿರಾಜುಲು ನಾಯ್ಡುಯವರನ್ನು ಶಿವಮೊಗ್ಗೆಯಿಂದ ಹುಣಸೂರು ರೇಂಜ್ ಮತ್ತು ಸಂಡಲ್ ಕೋಠಿ ಛಾರ್ಜಿಗೆ.

ಸಬ್ ಅ॥ ಕನ್ಸರ್ವೇಟರ್ ಮೆ॥ ವಿ ರಾಜಾರಾಯರನ್ನು ಚಿಕ್ಕಗಿರಿ ರೇಂಜಿನಿಂದ ಸಾಗರದ ಸಬ್ ಡಿವಿಜನಿಗೆ

ಮೆ॥ ಕೆ. ಎಸ್ ಚಂದ್ರಶೇಖರ ಅಯ್ಯರವರು ಜೂಲೈ ತಾ ೧ ರಲ್ಲೂ ಮೆ॥ ಎಲ್ ಅನಂತಸ್ವಾಮಿ ರಾಯರಿಂದ ಮುಜರಾಯಿ ಸೆಕ್ರೆಟರಿ ಕೆಲಸದ ಭಾರವನ್ನು ವಹಿಸಿಕೊಂಡರು

ಮದ್ದಗಿರಿಯ ಆಕ್ಟಿಂಗ್ ಮುನಸೀಫರಾದ ಮೆ॥ ಎ ಕೆ. ಶ್ರೀನಿವಾಸರಾಘವಾಚಾರ್ರಿಗೆ ಮದ್ದಗಿರಿಯಲ್ಲಿ ಮುನಸೀಫರಾಗಿರುವ ತನಕ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ವಹಿಸಲ್ಪಟ್ಟಿವೆ.

ಗವರ್ನಮೆಂಟ್ ಸೆಕ್ರೆಟರಿ ಮೆ॥ ಕೆ ಎಸ್ ಚಂದ್ರಶೇಖರ ಅಯ್ಯರವರನ್ನು ಮೈಸೂರು ನ್ಯಾಯವಿಧಾಯಕ ಸಭೆಯ ಒಬ್ಬ ಮೆಂಬರಾಗಿ ಪುನಹಾ ನೇಮಕಮಾಡಿದೆ.

ಮೈಸೂರು ಇನ್‌ಫೆಂಟ್ರಿ ೨ ನೇ ಬೆಟಾಲಿಯನ್ ಕಮಿಷನ್ ರ್ಯಾಂಕಿಯಲ್ಲಿ ಸೈಯದ್ ನಿಸಾರ್ ಯವರನ್ನು ೧ ನೇ ಗ್ರೇಡ್ ಜಮಾದಾರಿಯಿಂದ ೨ನೇ ಗ್ರೇಡ್ ಸುಬೇದಾರ್‌ಗೆ ಮಾರ್ಚಿ ತಾ. ೫ ರ ಲಾಗಾಯತು ಬಡ್ತಿ ಮಾಡಿದೆ

ಶ್ರೀಮನ್ಮಹಾರಾಜಾವರು ಮೆ॥ ಆಗಾ ಮಹಮದ್ ಜಾಫರ್ ಯವರನ್ನು ಮೈಸೂರು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನಲ್ಲಿ ಪ್ರೊಬೇಷನರ್ ರ್ಯಾಂಕಿಗೆ ನೇಮಕಮಾಡುವಂತೆ ಸ್ವೀಕಾರ ಮಾಡಿದ್ದಾರೆ.

ಅರಮನೆ ಡಿವಿಜನ್ ಸಬ್ ಅ॥ ಇಂಜನಿಯರ್ ಮೆ॥ ಎಸ್ ಶ್ರೀನಿವಾಸ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ನಾಲೆಗಳ ಡಿವಿಜನ್ ಅ॥ ಇಂಜನಿಯರ್ ಮೆ॥ ಎಂ. ಎ. ಅಬ್ದುಲ್ ಖಾದರ್ ಯವರಿಗೆ ಹನ್ನೊಂದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿಗೆ

ಮೊದಲನೇ ವೈಶ್ಯಮಹಾಸಭೆಯು.

ನಿಮ್ಮ ತಾ. ೨೫ ನೇ ಜೂನ್ ಪತ್ರಿಕೆಯಲ್ಲಿ ಮೈಸೂರಿನಲ್ಲಿ ವೈಶ್ಯಮಹಾಸಭೆಯು ಜೂಲೈ ೧೮ ರಲ್ಲಿ ನಡಿಯುವದಾಗಿ ಬರಸೋಣ ವಾಗಿತ್ತಷ್ಟೆ. ಈಗ ಮೈಸೂರು ವೈಶ್ಯಮಹಾಸಭಾ ಸೆಕ್ರೆಟರಿಗಳವರಿಂದ ಮೈಸೂರು ದೇಶದಲ್ಲಿರತಕ್ಕ ವಿಶಿಷ್ಟ ವೈಶ್ಯಮಂಡಲಿಯವರಿಗೂ ಪ್ರತಿ ತಾಲೂಕಿಗೂ ಹತ್ತತ್ತು ಪ್ರೊಸೀಡಿಂಗ್ಸು ಬುಕ್ಕುಗಳನ್ನೂ ನೋಟೀಸು ಗಳನ್ನೂ ಫಾರಂಗಳನ್ನೂ ಸಹಾ ಕಳಿಸಿಕೊಟ್ಟರು. ಅದರಂತೆ ನಮ್ಮ ಅರಸೀಕೆರೆ ತಾಲೂಕು ಸಹಾ ನಮ್ಮ ಗ್ರಾಮಕ್ಕೂ ಕಳುಹಿಸಿ ಕೊಟ್ಟಿರುತ್ತಾರೆ. ಆ ನೋಟೀಸಿನಲ್ಲಿ ನಮೂದಿರುವ ಪ್ರಕಾರ ನಮ್ಮ ತಾಲೂಕು ಗ್ರಾಮಾಂತರಗಳಲ್ಲಿರತಕ್ಕ ವಿಶಿಷ್ಟ ವೈಶ್ಯಮಂಡಲಿಯವರನ್ನು ನಮ್ಮ ಗ್ರಾಮಕ್ಕೆ ಬರಮಾಡಿಕೊಂಡು, ಜೂನ್ ತಾ. ೨೯ ನೇ ಸೋಮವಾರ ಅರಸೀಕೆರೆ ಗ್ರಾಮದಲ್ಲಿರತಕ್ಕ ಶ್ರೀರಾಮಭವನೆ ದೇವಸ್ಥಾನದಲ್ಲಿ ಸಭೆಯನ್ನು ಮಾಡಿ, ಆ ಸಭೆಗೆ ರಾಜಮಾರ್ ಚಿಂಕ್ರಯ ಶೆಟ್ರು ಅಗ್ರಾಸನಾಧಿಪತಿಗಳಾಗಿದ್ದರು. ಸಭೆಯಲ್ಲಿ ಮ॥ ಡೆಪ್ಯುಟಿ ಕಮಿಷನರ್ ಯಂ ಚಂಗೈಯ್ಯಶೆಟ್ಟರು ರಚಿಸಿ ಕಳುಹಿಸಿದ್ದ ಪ್ರೊಸೀಡಿಂಗ್ಸನ್ನೂ ನೋಟೀಸನ್ನೂ ವಿಸ್ತಾರವಾಗಿ ಓದಲಾಯಿತು. ಓದಿದ ನಂತರ ಸಭೆಯವರೆಲ್ಲಾ ತುಂಬಾ ಸಂತೋಷಪಟ್ಟರು. ತರುವಾಯ ಮೈಸೂರಿನಲ್ಲಿ ನಡೆಯುವ ಮಹಾಸಭೆಗೆ ಹೋಗುವದಕ್ಕೋಸ್ಕರ ಹದಿನೆಂಟು ಮಂದಿ ಮೆಂಬರುಗಳನ್ನು ಚುನಾವಣೆಮಾಡಿರುತ್ತಾರೆ. ಈ ಮೆಂಬರುಗಳ ಹೆಸರುಗಳನ್ನೆಲ್ಲಾ ಫಾರಂಗಳಲ್ಲಿ ಬರೆದು ಮೈಸೂರಿಗೆ ಸಭಾ ಸೆಕ್ರೆಟರಿಗಳವರಿಗೆ ಕಳುಹಿಸಿಕೊಡಲಾಯಿತು. ಈ ಮಹಾಸಭೆಗೆ ಸಂಸ್ಥಾನದ ಸಾವಿರಾರು ಜನಗಳು ಸೇರಬಹುದಾಗಿ ಕಾಣುತ್ತೆ. ಅಲ್ಲದೆ ಇತರ ದೇಶ ಅಂದರೆ ಮದ್ರಾಸು, ಹೈದರಾಬಾದು, ಗುಂಟೂರು, ಮಚಲೀಬಂದರ್ ವಗೈರೆ ಸ್ಥಳಗಳಿಂದಲೂ ವಿಶೇಷವಾಗಿ ಮೆಂಬರುಗಳು ಬರಬಹುದು. ಈ ಅಪೂರ್ವವಾದ ಸಭೆ ನಡಿಯುವದರಿಂದ ಇದನ್ನು ಏರ್ಪಾಟುಮಾಡಿದ ಮ॥ ಡೆಪ್ಯುಟಿ ಕಮಿಷನರ್ ಯಂ ಚಂಗೈಯ್ಯಶೆಟ್ರವರಿಗೆ ವಿಶೇಷವಾದ ಕೀರ್ತಿ ಬರಲು ಯಾವ ಅಭ್ಯಂತರವೂ ಇಲ್ಲ. ಈ ಸಭೆ ನಡೆಯುವದರಿಂದ ನಮಗೆ ಉಂಟಾಗಿರತಕ್ಕ ಸಂತೋಷವನ್ನು ಜನಗಳಿಗೆ ತೋರ್ಪಡಿಸಲು ತಮ್ಮ ಪತ್ರಿಕೆಯ ಮೂಲಕ ಅರಿಕೆಮಾಡಿದೇನೆ.

ಅರಸೀಕೆರೆ ವಾಸಸ್ಥ

ಪರ್ಷಿಯಾ ರಾಜ್ಯದ ಗಲಭೆಯು.

ಈ ವಾರ ಬಂದಿರುವ ಮುಖ್ಯ ತಂತೀವರ್ತಮಾನಗಳು.

ಜೂನ್ ತಾ. ೨೯—ಪರ್ಷಿಯಾ ರಾಜಧಾನಿಯಾದ ಟೆಹರಾನ್ ನಗರದಲ್ಲಿ ಯಾವಾಗ ಏನು ಸಂಭವಿಸುವುದೋ ಎಂಬ ಸಂಶಯವೂ ಭೀತಿಯೂ ಹೆಚ್ಚುತ್ತಾ ಬಂದಿದೆ. ಪ್ರಜೆಗಳಲ್ಲಿ ನೆಮ್ಮದಿಗೆ ಭಂಗವುಂಟಾಗಿ, ಅನೇಕಾನೇಕರು ಅರಳೀಪಟ್ಟಿ ಊಟಮಾಡುತ್ತಿದ್ದಾರೆ. ಸೈನಿಕರು ಲೂಟಿಮಾಡುವುದರ ಮೇಲೆಯೇ ಕಣ್ಣೂ ಕಿವಿಯುಳ್ಳವರಾಗಿದ್ದಾರೆ; ಮತ್ತು ಬಹು ಕ್ರೂರತರವಾದ ಕೃತ್ಯಗಳನ್ನು ಮಾಡುತ್ತಿರುವರು. ಜನರಲ್ ಲಿಯಾಕಾಫ್ ಎಂಬ ಸೇನಾಪತಿಯು ಸರ್ವಸ್ವತಂತ್ರನಾಗಿ ನಾನಾ ಸ್ವೇಚ್ಛಾಕೃತ್ಯಗಳನ್ನು ನಡಿಸುವನು. ಸುಲ್ತಾನರ ಸೈನ್ಯವು ಹೆಚ್ಚುತ್ತಾ ಬಂದಿದೆ; ಈಗ ೧೧,೦೦೦ ಸೈನಿಕರು ಅವರ ಪಕ್ಷದಲ್ಲಿ ನಿಂತಿರುತ್ತಾರೆ. ಟೇಬ್ರಿಸ್ ಪಟ್ಟಣದಲ್ಲಿ ಸುಲ್ತಾನರ ಪಕ್ಷದವರೂ ಪ್ರಜೆಗಳ ಪಕ್ಷದವರೂ ರಷ್ಯ ರಾಯಭಾರಿಯನ್ನು ಮಧ್ಯಸ್ಥಗಾರರನ್ನಾಗಿ ಇಟ್ಟುಕೊಂಡು ಅವರ ಮಾತಿನ ಪ್ರಕಾರ ಯುದ್ಧಕಾರ್ಯಗಳನ್ನು ನಿಲ್ಲಿಸಿದಾರೆ.

ಜೂನ್ ತಾ. ೩೦—ಟೆಹರಾನ್ ಪಟ್ಟಣದಲ್ಲಿರುವ ಇಂಗ್ಲಿಷ್ ರಾಯಭಾರಿಯ ಬಂಗಲೆಯ ಸುತ್ತಾ ಸುಲ್ತಾನರು ತಮ್ಮ ಸೈನ್ಯವನ್ನು ನೇಮಿಸಿ, ಆ ಬಂಗಲೆಯಲ್ಲಿ ಹೋಗಿ ಸೇರಿಕೊಂಡಿರುವ ಪರ್ಷಿಯಾ ಪ್ರಜೆಗಳನ್ನು ಬಿಟ್ಟುಕೊಡಬೇಕೆಂದು ಕೇಳಿದಾರೆ. ಇಂಗ್ಲಿಷ್ ಗವರ್ನಮೆಂಟಿನವರು ತಮ್ಮ ಆಶ್ರಯದಲ್ಲಿರುವವರ ಪ್ರಾಣಸಂರಕ್ಷಣೆ ಮಾಡುವ ಉದ್ದೇಶದಿಂದ ಆ ಭಾಗದಲ್ಲಿ ತಕ್ಕ ಏರ್ಪಾಡು ಮಾಡಿ ಮಾತುಕೊಡದಿದ್ದರೆ ಅವರನ್ನು ಬಿಟ್ಟುಕೊಡುವುದಿಲ್ಲವೆಂದು ಪ್ರತಿಭಟಿಸಿ ಸುಲ್ತಾನರಿಗೆ ತಿಳಿಸಿದರು. ಟೇಬ್ರಿಸ್ ಪಟ್ಟಣದಲ್ಲಿ ಸುಲ್ತಾನರು ತಮ್ಮ ಸೈನ್ಯ ಸೋತುಹೋದದ್ದನ್ನು ಕೇಳಿ, ಹೊಸ ಸೈನ್ಯವನ್ನು ಅಲ್ಲಿಗೆ ಕಳುಹಿಸಿದರು.

ಜೂಲೈ ತಾ. ೧.—ಸುಲ್ತಾನರು ಸೈನ್ಯವನ್ನು ಟೇಬ್ರಿಸ್ ಪಟ್ಟಣಕ್ಕೆ ಕಳುಹಿಸಿದ ಮೇಲೆ ಅಲ್ಲಿನ ಸ್ಥಿತಿಯು ಇನ್ನೂ ದುಃಖಕರವಾಗಿ ಪರಿಣಮಿಸಿತು. ಪ್ರಜಾಪಕ್ಷದವರು ಸೈನ್ಯವನ್ನು ಊರೊಳಕ್ಕೆ ಪ್ರವೇಶಿಸಕೊಡದೆ ಅವರ ಮೇಲೆ ಗುಂಡುಹೊಡೆದರು. ಇನ್ನೂ ರಕ್ತಪಾತವಾಗಲಿಲ್ಲವೆಂದು ತಿಳಿಯುವುದು. ಈ ಪಟ್ಟಣದಲ್ಲಿ ಸುಮಾರು ೩೦ ಮಂದಿ ಯೂರೋಪ್ಯರು ಇರುತ್ತಾರೆಂದು ವರ್ತಮಾನ ಬಂದಿದೆ. ಪ್ರಜಾಪಕ್ಷದವರು ಸೋಲುತ್ತಾ ಬಂದಿರುವುದರಿಂದ ಪಟ್ಟಣದ ಕೆಲವು ಭಾಗಗಳು ಸೈನಿಕರ ವಶವಾಗಿರುತ್ತವೆ.

ಜೂಲೈ ತಾ. ೨.—ಇಂಗ್ಲಿಷ್ ರಾಯಭಾರಿಯು ಪಂಗೋಕೋರ ರಾಜ ಪ್ರಜೆಗಳಿಗೆ ಆಶ್ರಯಕೊಟ್ಟದ್ದಾರೆಂದು ಸುಲ್ತಾನರು ಇಂಗ್ಲಿಷ್ ದೊರೆಯವರಿಗೆ ಬರೆದು ತಿಳಿಸಿದರೆಂತಲೂ ಅದಕ್ಕೆ ಇಂಗ್ಲಿಷ್ ದೊರೆಯವರು—ಇಂಗ್ಲಿಷ್ ರಾಯಭಾರಿಯು ಹಾಗೆ ಆಶ್ರಯಕೊಟ್ಟಿರುವುದು ನ್ಯಾಯವಾಗಿದೆ ಎಂತಲೂ, ಸುಲ್ತಾನರು ಅನೇಕ ಪ್ರಜೆಗಳನ್ನು ವಿಚಾರಣೆ ಮಾಡಿಸದೆ ಹಿಡಿಸಿ ಕೊಲ್ಲಿಸಿದರೆಂತಲೂ, ಈ ರೀತಿ ಕಾರ್ಯಗಳನ್ನು ನಡಿಸುವುದು ಯೋಗ್ಯವಾದದ್ದಲ್ಲವೆಂತಲೂ ಪ್ರತ್ಯುತ್ತರವನ್ನು ಕೊಟ್ಟರೆಂದು ತಿಳಿದು ಬಂದಿದೆ.

ಜೂಲೈ ತಾ. ೩.—ಟೆಹರಾನ್ ಪಟ್ಟಣದಲ್ಲೆಲ್ಲಾ ಪ್ರಜೆಗಳು ನೆಮ್ಮದಿಯಾಗಿದ್ದಾರೆ. ಕ್ರೂರಕೃತ್ಯಗಳೂ ಗಲಭೆಯೂ ನಿಂತುಹೋಗುತ್ತಿವೆ. ಪ್ರಜೆಗಳು ಸುಲ್ತಾನರ ವಿಷಯದಲ್ಲಿ ಭಕ್ತಿವಿಶ್ವಾಸಗಳನ್ನು ಪ್ರಕಾಶಪಡಿಸುವುದಕ್ಕೆ ಸಂತೋಷೋತ್ಸವಗಳನ್ನು ಮಾಡುವವರಾಗಿದ್ದಾರೆ. ಶೇಖ್ ಷಾ ಸುಲ್ತಾನರ ಹಿರಿಯಮಗನಾದ ಪ್ರಿನ್ಸ್ ಜೆಲಿಸ್ ಸುಲ್ತಾನ ಎಂಬಾತನು ತೊಂದರೆಯಿಲ್ಲದೆ ಪರ್ಷಿಯಾ ರಾಜ್ಯವನ್ನೇ ಬಿಟ್ಟುಹೋಗುವ ಭಾಗದಲ್ಲಿ ಆತನಿಗೆ ಅನುಜ್ಞೆಯನ್ನು ಕೊಡಬಹುದೆಂದು ರಷ್ಯನವರೂ ಇಂಗ್ಲಿಷರೂ ಶಿಫಾರಸು ಮಾಡುತ್ತಿದಾರೆ. ಇಂಗ್ಲಿಷ್ ರಾಯಭಾರಿಯ ಬಂಗಲೆಯ ಸುತ್ತಲೂ ಘೇರಾಯಿಸಿಕೊಂಡಿದ್ದ ಸೈನಿಕರನ್ನು ಸುಲ್ತಾನರು ವಾಪಸು ಕರೆಸಿಕೊಂಡರು. ಆ ಬಂಗಲೆಯಲ್ಲಿ ಇಂಗ್ಲಿಷರ ಆಶ್ರಯವನ್ನು ಹೊಂದಿರುವ ಪ್ರಜೆಗಳ ನಾಯಕರಿಗೆ ಪ್ರಾಣಭಯವೇನೂ ಉಂಟಾಗಬಾರದೆಂತಲೂ, ಅವರಲ್ಲಿ ಯಾರ ಮೇಲಾದರೂ ರಾಜದ್ರೋಹದ ಅಪವಾದ ಹೊರಿಸುವ ಪಕ್ಷದಲ್ಲಿ ಅಂಥವರನ್ನು ಇಂಗ್ಲಿಷ್ ಪ್ರತಿನಿಧಿಯು ಸಮಕ್ಷಮದಲ್ಲಿ ಕಾನೂನ್ ಪ್ರಕಾರ ಕ್ರಮವಾಗಿ ದರ್ಯಾಫ್ತು ಮಾಡಬೇಕೆಂತಲೂ ಇಂಗ್ಲಿಷ್ ಸರ್ಕಾರದವರು ಸುಲ್ತಾನರಿಗೆ ತಿಳಿಸಿರುತ್ತಾರೆ. ಇದಕ್ಕೆ ಸುಲ್ತಾನರು ಒಪ್ಪಿಕೊಳ್ಳುವುದಾದರೆ ಆಶ್ರಯದಲ್ಲಿರುವವರನ್ನು ಹೊರಕ್ಕೆ ಕಳುಹಿಸುವುದಾಗಿ ಇಂಗ್ಲಿಷ್ ರಾಯಭಾರಿಯು ಹೇಳಿಕಳುಹಿಸಿರುವರು. ರಾಜಧಾನಿಯೊಳಗೆ ಯುದ್ಧಕಾಲದ ಕಠಿಣತರವಾದ ಕಾನೂನನ್ನು ಜಾರಿಗೆ ತಂದ ಲಾಗಾಯಿತು ಅಂದರೆ ಜೂನ್ ತಾ. ೨೪ ರಿಂದ ಈಚೆಗೆ ಲೂಟಿ, ಕಳವು ಮೊದಲಾದ ದುಷ್ಕೃತ್ಯಗಳೆಲ್ಲಾ ನಿಂತುಹೋಗಿರುತ್ತವೆ. ಸುಲ್ತಾನರ ಸೈನ್ಯಾಧಿಪತಿಯಾದ ಜನರಲ್ ಲಿಯಾಕಾಫ್ ಎಂಬ ರಷ್ಯ ಸರ್ದಾರನು ಪ್ರಜಾನೆಮ್ಮದಿಯನ್ನು ಕಾಪಾಡುವ ಭಾಗದಲ್ಲಿ ಬಹಳ ಉತ್ಕೃಷ್ಟವಾದ ಕೆಲಸಗಳನ್ನು ಮಾಡುತ್ತಿದ್ದಾನೆ.

ಅಮೆರಿಕ ದೇಶದಲ್ಲಿ ವ್ಯವಸಾಯಾಭಿವೃದ್ಧಿ.

ಅಮೆರಿಕ ದೇಶಕ್ಕೆ ಬಂದಂಥ ಯೂರೋಪ್ಯ ಪೂರ್ವಿಕರು ವ್ಯವಸಾಯಗಾರರಾಗಿದ್ದರು. ಇವರು ಅಮೆರಿಕ ದೇಶದಲ್ಲಿ ವಸತಿಯಾಗಿದ್ದು ಆ ದೇಶದ ವ್ಯವಸಾಯ ಕಸಬನ್ನು ಬಹಳವಾಗಿ ಅಭಿವೃದ್ಧಿಗೊಳಿಸಿದರು. ಈಗಿನ ಅಮೆರಿಕದವರೂ ಕೂಡ ತಮ್ಮ ಪೂರ್ವಿಕರ ಸಾಹಸವನ್ನು ನಡಿಸಿ ವ್ಯವಸಾಯ ಕಸಬನ್ನು ಬಹಳಮಟ್ಟಿಗೆ ಅಭಿವೃದ್ಧಿಗೊಳಿಸಿರುವರು. ಅಮೆರಿಕ ದೇಶದಲ್ಲಿ ವ್ಯವಸಾಯದಿಂದಾಗುವ ಉತ್ಪತ್ತಿಯು ಭೂಲೋಕದ ಬೇರೆ ಯಾವ ದೇಶದಲ್ಲಿಯೂ ಆಗುವದಿಲ್ಲವೆಂದು ಗೊತ್ತಾಗುತ್ತದೆ.

ಅಮೆರಿಕಾ ದೇಶದವರು ತಮ್ಮ ತಮ್ಮ ಮನೆಗಳ ಹಿಂಭಾಗದಲ್ಲಿ ಕೈತೋಟಗಳನ್ನು ಇಟ್ಟುಕೊಂಡಿರುವರು. ಹೊಸ ಸಂಗತಿಯಲ್ಲ. ಅಂಥಾ ತೋಟಗಳಲ್ಲಿ ಅವರು ತಮ್ಮ ಮನೆಗಳಿಗಾಗುವ ಪ್ರತಿ ದಿನದ ತರಕಾರಿಯನ್ನು ಬೆಳೆಯುವರು. ಕೋಳಿ ಕೊಕ್ಕರೆಗಳನ್ನು ಉತ್ತಮ ರೀತಿಯಲ್ಲಿ ಸಾಕುವರು. ವಿವಿಧವಾದ ಹೂಗಳನ್ನು ಬೆಳೆಯುವರು.

ಆದರೆ ಅಮೆರಿಕಾ ದೇಶದವರು ತಮಗಿರುವ ಸಣ್ಣ ತೋಟಗಳಲ್ಲಿ ತೃಪ್ತಿಪಡುವದಿಲ್ಲ. ಅವರು ವಿಸ್ತಾರವಾದ ಪ್ರದೇಶಗಳನ್ನು ತೆಗೆದುಕೊಂಡು ಅಲ್ಲಿ ವಿಶೇಷವಾದ ಧಾನ್ಯ ಫಲಪುಷ್ಪಾದಿಗಳನ್ನು ನವೀನ ವ್ಯವಸಾಯ ಶಾಸ್ತ್ರಾನುಸಾರವಾಗಿ ಬೆಳೆಯುವರು. ಆಯಾ ಪ್ರದೇಶದ ಮಣ್ಣಿನ ಗುಣಗಳನ್ನು ಚೆನ್ನಾಗಿ ಪರೀಕ್ಷಿಸಿ, ಅಲ್ಲಿ ಪುಷ್ಕಳವಾಗಿ ಬೆಳೆಯತಕ್ಕ ಸಸಿಗಳನ್ನೇ ನೆಡುವರು. ಒಂದು ಪ್ರದೇಶದಲ್ಲಿ ಸೇಬಿನ ಗಿಡಗಳನ್ನು ನೆಟ್ಟರೆ ಅಲ್ಲಿ ಆ ಗಿಡಗಳು ಪುಷ್ಕಳವಾಗಿ ಬೆಳೆದು ವಿಪರೀತವಾದ ಫಲಗಳನ್ನು ಕೊಡುತ್ತವೆ. ಮತ್ತೊಂದು ಪ್ರದೇಶದಲ್ಲಿ ಗೋಧಿಯನ್ನು ಸಾಕುವರು, ಒಳ್ಳೊಳ್ಳೆ ಗೊಬ್ಬರಗಳನ್ನು ತರಿಸಿ ಮಾರ್ಗದ ಹೊಲಗಳಿಗೆ ತಕ್ಕ ರೀತಿಯಲ್ಲಿ ಚೆಲ್ಲಿ ಬಹು ಸೊಗಸಾದ ಪೈರುಗಳನ್ನು ಕೊಯ್ಯುವರು. ಇನ್ನೊಂದು ಪ್ರದೇಶದಲ್ಲಿ ಕಿತ್ತಳೆ ಮತ್ತು ಬೇರೆ ಬೇರೆ ಹಣ್ಣುಗಳನ್ನು ಬೆಳಸುವರು.

ಅಮೆರಿಕ ದೇಶದಲ್ಲಿ ವ್ಯವಸಾಯ ಶಾಸ್ತ್ರಗಳನ್ನು ಓದಿ ಭಾರಿ ಪರೀಕ್ಷೆ ಕೊಟ್ಟಿರುವ ವಿದ್ಯಾವಂತರನ್ನು ಸರ್ಕಾರದವರು ಅಲ್ಲಲ್ಲಿ ನೇಮಿಸಿ ಅವರಿಂದ ವ್ಯವಸಾಯಗಾರರಿಗೆ ಶಾಸ್ತ್ರೋಕ್ತವಾದ ರೀತಿಯಲ್ಲಿ ವ್ಯವಸಾಯದ ಕಸಬನ್ನು ಬೋಧಿಸುವರು. ಈ ವ್ಯವಸಾಯ ಪಂಡಿತರು ಎಕ್ಸ್‌ಪೆರಿಮೆಂಟಲ್ ಫಾರಂಸ್ ಎಂಬ ಹೊಲಗಳನ್ನು ಮಾಡಿಕೊಂಡು ಅಲ್ಲಿ ಅನೇಕ ವಿಧವಾದ ಸಸ್ಯಾದಿಗಳನ್ನು ಬೆಳೆಯಿಸುವರು. ಒಳ್ಳೊಳ್ಳೆ ದನಕರುಗಳನ್ನು ಸಾಕುವ ವಿಧಾನವನ್ನು ಜನರಿಗೆ ತೋರಿಸುವರು.

ಗಿಡಗಳಲ್ಲಿ ಗಂಡುಗಿಡಗಳೆಂದೂ ಹೆಣ್ಣುಗಿಡಗಳೆಂದೂ ಭೇದಗಳುಂಟು. ಈ ಗಿಡಗಳ ಹೂಗಳಲ್ಲಿ ಒಂದು ವಿಧವಾದ ಪುಡಿಯಾದ ಪದಾರ್ಥವು ಇರುವದು. ವ್ಯವಸಾಯ ಶಾಸ್ತ್ರಜ್ಞರು ಒಂದು ಹೂವಿನ ಪುಡಿಯನ್ನು ತೆಗೆದು ಬೇರೆ ಯಾವದಾದರೂ ಒಂದು ಗಿಡದ ಹೂವಿನೊಂದಿಗೆ ಸೇರಿಸಿ ನೂತನವಾದ ಗಿಡವನ್ನು ಎಬ್ಬಿಸುವರು. ಹೀಗೆಯೇ ಅನೇಕ ಫಲವೃಕ್ಷಗಳಲ್ಲಿ ಅವರು ಬದಲಾವಣೆಗಳನ್ನು ಮಾಡಿ ಒಳ್ಳೊಳ್ಳೆ ಫಲಗಳನ್ನು ಎಬ್ಬಿಸುವರು.

ನಮ್ಮ ದೇಶದಲ್ಲಿ ಗಿಡಗಳನ್ನು ಕೆಲವು ಹುಳುಗಳು ನಾಶಪಡಿಸುವವು. ಅಡಿಕೆಯ ಮರದಲ್ಲಿ ಒಂದು ವಿಧವಾದ ಹುಳವು ಸೇರಿಕೊಂಡು ಅಡಿಕೆಯ ಫಸಲನ್ನು ಕೆಡಿಸುವದು ವಾಚಕರಿಗೆ ಹೊಸ ಸಂಗತಿಯಲ್ಲ. ತೆಂಗಿನ ಫಲವನ್ನು ಕೆಡಿಸತಕ್ಕ ಕೆಲವು ಹುಳಗಳು ಸಹ ಇರುವುವುಂಟು. ಅಮೆರಿಕ ದೇಶದವರಾದರೋ ಹುಳಗಳು ಗಿಡಗಳಲ್ಲಿ ಪ್ರವೇಶ ಮಾಡದಂತೆ ಆಯಾ ಗಿಡಗಳ ರಸಗಳನ್ನೇ ಹುಳಗಳಿಗೆ ಅಹಿತಗಳನ್ನಾಗಿ ಮಾಡಿರುವರು. ಇದು ಬಹು ಆಶ್ಚರ್ಯವಾದ ಸಂಗತಿಯಲ್ಲವೇ?

ನಮ್ಮ ದೇಶದಲ್ಲಿ ದನಕರುಗಳ ಆಹಾರದ ವಿಷಯದಲ್ಲಿ ಜನರು ಅಷ್ಟು ಪ್ರಯಾಸಕೆಗೆದುಕೊಳ್ಳುವುದಿಲ್ಲ. ಅವು ಸಿಕ್ಕಿದ ಹುಲ್ಲನ್ನುಮೇದು ಯಾವತರವಾದ ನೀರನ್ನಾದರೂ ಕುಡಿಯುವವು. ಸಿಕ್ಕಿದ ಸ್ಥಳದಲ್ಲಿ ಮಲಗುವವು. ಜನರು ಅವುಗಳ ಆಹಾರದ ವಿಷಯ ಎಚ್ಚರಿಕೆಯಾಗಿ ಇರುವುದಿಲ್ಲ. ಆದರೆ ಅಮೆರಿಕ ದೇಶದಲ್ಲಿ ರೈತರು ದನಕರುಗಳ ಆಹಾರದ ವಿಷಯದಲ್ಲಿ ಬಹು ಎಚ್ಚರಿಕೆಯುಳ್ಳವರಾಗಿರುತ್ತಾರೆ. ಇಂಥಾ ಆಹಾರವನ್ನು ಕೊಟ್ಟರೆ ಹಸು ಇಂಥಾ ಹಾಲನ್ನೇ ಕೊಡುವುದೆಂದು ರೈತನು ಚೆನ್ನಾಗಿ ಅರಿತಿರುವನು. ಕುರಿಗಳು ಕುರಿಗಳಿಗೆ ಯೋಗ್ಯವಾದ ಪದಾರ್ಥಗಳನ್ನು ತಿನ್ನಿಸಿ ಒಳ್ಳೇ ತುಪ್ಪಟವನ್ನು ಕತ್ತರಿಸುವರು.

ಅಮೆರಿಕ ದೇಶದ ವ್ಯವಸಾಯಶಾಸ್ತ್ರಜ್ಞರು ತಮ್ಮ ದೇಶದಲ್ಲಿ ಬೆಳೆಯುವ ಪದಾರ್ಥಗಳನ್ನು ಅಭಿವೃದ್ಧಿ ಮಾಡುವದಲ್ಲದೆ ಲೋಕದ ಬೇರೆ ಬೇರೆ ದೇಶಗಳಲ್ಲಿ ಬೆಳೆಯುವ ಉಪಯುಕ್ತವಾದ ಗಿಡಗಳನ್ನು ತಮ್ಮ ದೇಶಕ್ಕೆ ತಂದು ಅಲ್ಲಿ ಅವುಗಳನ್ನು ಬೆಳಸಿ ಪರೀಕ್ಷೆ ಮಾಡುವರು. ಅಮೆರಿಕ ದೇಶದಲ್ಲಿ ವ್ಯವಸಾಯಶಾಸ್ತ್ರವನ್ನು ಬೋಧಿಸುವದಕ್ಕೆ ದೊಡ್ಡ ದೊಡ್ಡ ಕಾಲೇಜುಗಳಿರುವುದಲ್ಲದೆ ರೈತರಿಗೆ ವ್ಯವಸಾಯವನ್ನು ಬೋಧಿಸಲು ಪ್ರಸಿದ್ಧರಾದ ಉಪನ್ಯಾಸಕರಿರುವರು. ವ್ಯವಸಾಯಶಾಸ್ತ್ರಕ್ಕೆ ಸಂಬಂಧಪಟ್ಟ ವರ್ತಮಾನ ಪತ್ರಿಕೆಗಳಿರುವವು. ರೈತರ ತಿಳುವಳಿಕೆಗೋಸ್ಕರ ಸರ್ಕಾರದವರು ಅಸಾಧಾರಣವಾದ ಪ್ರಯತ್ನಗಳನ್ನು ಮಾಡುತ್ತಿರುವರು.

ನಮ್ಮ ದೇಶದಲ್ಲಿ ವ್ಯವಸಾಯವು ಬಹು ಕನಿಷ್ಠವಾದ ರೀತಿಯಲ್ಲಿರುತ್ತದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಈ ದೇಶದ ನೇಗಿಲನ್ನು ಯಾರುತಾನೇ ಮೆಚ್ಚುವರು? ಅದು ಸುಮ್ಮನೇ ಭೂಮಿಯನ್ನು ಕೆರೆದುಕೊಂಡು ಹೋಗುವದು. ವ್ಯವಸಾಯಕ್ಕೆ ಉಪಯೋಗಿಸಲ್ಪಡುವ ಎತ್ತುಗಳನ್ನು ನೋಡಿದರೆ ಪರಿತಾಪವಾಗುವದು. ಅವುಗಳ ಆಹಾರದ ವಿಷಯ ರೈತನು ಅಷ್ಟು ಚಿಂತೆ ತೆಗೆದುಕೊಳ್ಳುವುದಿಲ್ಲ. ಅವು ಕೊಳೆಯ ನೀರನ್ನೇ ಕುಡಿಯುವವು. ಕುಚೇಲವಾಗಿರುವ ಕೊಟ್ಟಿಗೆಗಳಲ್ಲಿ ಅವುಗಳನ್ನು ಕಟ್ಟುವೆದು. ಅವರಾವ ರೈತನಂತೂ ಹೊಟ್ಟೆಯಿಂದ ಸಾಯಂಕಾಲದ ವರೆಗೂ ಕಷ್ಟಪಡುತ್ತಾನೆ. ಅವನೇನು? ತಿಳುವಳಿಕೆಯಿಲ್ಲದ ಕಷ್ಟ. ಈ ದೇಶದ ವಿದ್ಯಾವಂತರು ಸರ್ಕಾರದ ನೌಕರಿಗಳ ವಿಷಯ ಗುದ್ದಾಡದೆ ವ್ಯವಸಾಯಸಂಘಗಳನ್ನು ಏರ್ಪಡಿಸಿಕೊಂಡು ಬಡವರೈತರಿಗೆ ವ್ಯವಸಾಯ ವಿದ್ಯೆಯನ್ನು ಕಲಿಸಿದರೆ ಈ ಹಿಂದೂ ದೇಶವು ಉನ್ನತ ಪದವಿಗೆ ಬರುವುದರಲ್ಲಿ ಸಂಶಯವಿಲ್ಲ.

ಭರತಖಂಡದ ದುಸ್ಥಿತಿಯು.

ನಾವು ವಾಸಮಾಡುವ ಭೂಮಂಡಲವು ಅನಾದಿಕಾಲಕ್ಕೆ ಎಂಥ ನಿರ್ಜನಪ್ರದೇಶವಾಗಿದ್ದಿತು. ದೇವರು ಆದಂ ಎಂಬ ಮನುಷ್ಯನನ್ನೂ ಹವ ಎಂಬ ಮನುಷ್ಯಳನ್ನೂ ನಿರ್ಮಾಣಮಾಡಿ, ಅವರು ಸಂತೋಷಕರವಾದ ತೋಟದಲ್ಲಿ ವಾಸಮಾಡುವಂತೆ ಆಜ್ಞಾಪಿಸಿದನು. ತದನಂತರ ಮನುಷ್ಯಪ್ರೇರಿತರಾದ ಇಬ್ಲೀಸನ ಕೃತ್ರಿಮದಿಂದ ಇವರು ಮನ ಸದ್ವಿಚಾರ ಹೀನರಾಗಲು, ದೇವರು ಇವರನ್ನು ಆ ಸಂತೋಷ ತೋಟದಿಂದ ಹೊರಡಿಸಿಬಿಟ್ಟನು. ಆಗ ಇವರು ಬಹಳ ದುಃಖದಿಂದ ಸಂಸಾರ ಬಂಧನಕ್ಕೆ ಒಳಪಟ್ಟು ಅನೇಕ ಭೂಭಾಗಗಳಲ್ಲಿ ಸಂಚಾರಮಾಡುತ್ತಾ, ಅಲ್ಲಲ್ಲಿ ತಮ್ಮ ಸಂತತಿಯನ್ನು ಬಿಟ್ಟುಹೋಗಿದ್ದರು. ಇವರು ವಿಶೇಷವಾಗಿ ಮಧ್ಯ ಏಷ್ಯದಲ್ಲಿ ವಾಸಿಸಿದಂತೆ ಕಂಡುಬರುತ್ತದೆ. ಈ ರೀತಿ ಇವರು ಈ ಭರತಖಂಡದಲ್ಲಿಯೂ ತಮ್ಮ ಮಕ್ಕಳನ್ನು ಬಿಟ್ಟುಹೋಗಿದ್ದರು. ಇವರೇ ಈ ಖಂಡವನ್ನು ಕಾದುಕೊಂಡು ಜೀವಿಸುತ್ತಾ, ಕಾಡುನಿವಾಸಿಗಳಾಗಿದ್ದ ಪೂರ್ವದ ಜನರು. ಇತ್ತೀಚಿಗೆ ಮಧ್ಯ ಏಷ್ಯದಲ್ಲಿ ಜನಸಾಂದ್ರತೆ ಹೆಚ್ಚಿ, ಸಮುದ್ರ ದಿಗ್ಭಾಗಗಳಿಗೂ ಹರಡಿ ಹೋಗುವರು. ಈ ಭರತಖಂಡಕ್ಕೆ ವಾಯುವ್ಯದಿಕ್ಕಿನ ಮಾರ್ಗವಾಗಿ ಬಂದವರನ್ನು ಆರ್ಯರೆಂತಲೂ, ಈಶಾನ್ಯದಿಕ್ಕಿನ ಮಾರ್ಗವಾಗಿ ಬಂದವರನ್ನು ಟಾರ್ಟರರೆಂತಲೂ ಕರೆಯುತ್ತಾರೆ. ಈ ಆರ್ಯರು, ಟಾರ್ಟರರು, ಕಾಡುನಿವಾಸಿಗಳು, ಇವರೆಲ್ಲಾ ಕ್ರಮೇಣ ಮಿಶ್ರವಾಗಿ ಈಗ ಈ ಖಂಡದಲ್ಲಿ ವಾಸಿಸುತ್ತಾರೆ.

ಭರತಖಂಡದ ಮತಗಳ ಹೋರಾಟವು

ಈ ಪ್ರಪಂಚದ ಮನುಷ್ಯ ಜಾತಿಯಲ್ಲಿ ಮುಖ್ಯವಾಗಿ ಪಾಶ್ಚಾತ್ಯ ಮತವೆಂತಲೂ, ಪ್ರಾಚೀನ್ಯ ಮತವೆಂತಲೂ ಏರ್ಪಟ್ಟಿರುತ್ತವೆ. ಪಾಶ್ಚಾತ್ಯಮತವು ಪೈಗಂಬರರಿಂದಲೂ, ಪ್ರಾಚೀನ್ಯ ಮತವು ಋಷೀಶ್ವರರಿಂದಲೂ ಸ್ಥಾಪನೆಯಾದದ್ದು. ಈ ಉಭಯ ಮತಗಳಿಗೂ, ಜನರಿಗೂ ಪರಸ್ಪರ ವಿರೋಧಾಭಿಪ್ರಾಯವು ಅದ್ಯಂತದವರೆಗೂ ಉಳ್ಳದ್ದಾಗಿ ಇರುತ್ತೆ. ಈ ಭರತಖಂಡವು ಪ್ರಾಚೀನ್ಯದೇಶವಾದ್ದರಿಂದ ಇಲ್ಲಿ ಪ್ರಾಚೀನ್ಯ ಮತವಾದ ಹಿಂದೂ ಮತವೂ ಹಿಂದೂ ಜನರೂ ನೆಲೆಗೊಂಡರು. ಕ್ರಿಸ್ತಶಕಕ್ಕೆ ಪೂರ್ವದಲ್ಲಿಯೂ ಸಹ ಪಾಶ್ಚಾತ್ಯರು ಆಗಾಗ್ಗೆ ದಂಡೆತ್ತಿಕೊಂಡು ಬಂದು, ಹಿಂದೂ ರಾಜರನ್ನು ಧ್ವಂಸಿಸುತ್ತಿದ್ದರು. ಹಿಂದೂ ಮತವು ಕ್ರಮೇಣ ಅನೇಕ ಉಪಮತಗಳನ್ನುಳ್ಳದ್ದಾಗಿ ಆಯಾ ಪಂಗಡದ ರಾಜರಿಂದ ಜಗಳಗಳು ಸಂಭವಿಸುತ್ತಿದ್ದವು. ಬೌದ್ಧ, ಜೈನ ಮತಗಳು ಹಿಂದೂ ಮತವನ್ನು ನಾಶ ಮಾಡುತ್ತಿದ್ದವು. ಹಿಂದೂ ಮತವು ಪುನಹ ಬೌದ್ಧ, ಜೈನ ಮತಗಳನ್ನು ಹಾಳು ಮಾಡಿತು. ಈ ಹೋರಾಟದಲ್ಲಿ ಈ ಭರತಖಂಡದ ನಿವಾಸಿಗಳು ಬಹಳ ಮಟ್ಟಿಗೆ ಲಯವಾದರು. ಇತ್ತಲಾಗಿ, ಪಾಶ್ಚಾತ್ಯಮತವಾದ ಮಹಮ್ಮದೀ ಮತವು ಕೋಲಾಹಲಧ್ವನಿಯನ್ನು ಮಾಡುತ್ತಾ, ಕ್ರಿಸ್ತಶಕ ೭೧೧ ರಲ್ಲಿ ಈ ಖಂಡವನ್ನು ಪ್ರವೇಶಿಸಿ, ಶಕ ೧೦೨೨ ರಲ್ಲಿ ನೆಲೆಯಾಗಿ ನಿಂತು, ಅನೇಕ ಹಿಂದೂ ರಾಜರನ್ನು ಧ್ವಂಸಿಸಿ, ತನ್ನ ಮತವನ್ನು ವಿಸ್ತರಿಸಿ, ಹಿಂದೂ ರಾಜರೊಳಗಿದ್ದ ಅಹಂಭಾವವನ್ನೂ ಮತಗರ್ವವನ್ನೂ ತಗ್ಗಿಸುತ್ತಾ ಬಂದಿತು. ಮೊಗಲು ಮೊದಲು ಮಹಮ್ಮದೀಯರು ಒಳ್ಳೇ ರಾಜರಾಗಿದ್ದರೂ, ಬರಬರುತ್ತಾ ಬಹಳ ಗರ್ವಿಷ್ಠರಾಗಿಯೂ ಕ್ರೂರಿಗಳಾಗಿಯೂ ಅವರ್ಪರಿಂದ ರಾಜ್ಯಭಾರವು ಸರಿಯಾಗಿ ನಡಿಯ. ಹಿಂದೂ ಮಹಮ್ಮದೀಯ ರಾಜರುಗಳಿಗೆ ಪರಸ್ಪರ ಯುದ್ಧಗಳು ಜಗಲೂ ಇರಲೂ ಎಲ್ಲೆಲ್ಲಿಯೂ ನಡಿಯುತ್ತಾ ಬಂದವು. ಈ ರಾಜ್ಯವೇ ಪಿಶಾಚಪ್ರದೇಶವಾಗುವ ಹೊತ್ತು ಬಂದಿತು.

ಭರತಖಂಡಕ್ಕೆ ದೈವಕೃಪೆ ಬಂದದ್ದು.

ಈ ಭಾರತ ಮಾತೆಯಂತೂ ತನ್ನ ವಿಪತ್ತಿನೊಂದಿಗೆ ದುಃಖಾಕ್ರಾಂತಳಾಗಿ ಶೋಕಿಸುತ್ತಾ ತನ್ನನ್ನು ಸೃಷ್ಟಿಸಿದ ಭಗವಂತನ ಸ್ಮರಣೆ ಮಾಡುತ್ತಾ ಬಂದಳು. ಆಗ ಸಚರಾಚರ ಜೀವರಾಶಿಗಳಿಗೆ ಸಂಜೀವನ ದೋಹದಿಯಲ್ಲಿರುವ ವಸಂತಋತುವಿನ ಮಂದಮಾರುತವು ಪಶ್ಚಿಮ ದಿಕ್ಕಿನಿಂದ ಬಂದೊದಗುವಂತೆ ಕರುಣಾಭರಿತನಾದ ದೇವರ ಕೃಪೆಯೆಂಬ ಮಂದಮಾರುತವು ಪಶ್ಚಿಮ ದಿಗ್ದೇಶವಾದ ಯೂರೋಪ್ ಖಂಡದ ಬ್ರಿಟಿಷ್ ವ್ಯಾಪಾರದ ಹಡಗಿನೊಳಗೆ ಪೂರಿತವಾಗಿ, ೧೫೯೯ರಲ್ಲಿ ಎಲಿಜಬೆತ್ ರಾಣಿಯು ಸನ್ನದನ್ನು ಸ್ವೀಕರಿಸಿಕೊಂಡು ಹೊರಟಿತು. ಈ ಭರತಖಂಡಕ್ಕೆ ತಲಪಿದ ಕೂಡಲೆ ದೊಡ್ಡ ದೊಡ್ಡ ರಾಜಸ್ಥಾನಗಳಲ್ಲಿ ಮರ್ಯಾದೆಯನ್ನು ಹೊಂದುತ್ತಾ, ವ್ಯಾಪಾರದ ಕೋಠಿಗಳನ್ನು ಕಟ್ಟಿ ಪ್ರಖ್ಯಾತಿಯನ್ನು ಹೊಂದಿ, ಫೋರ್ಟ್ ಸೆಂಟ್ ಜಾರ್ಜ್, ಫೋರ್ಟ್ ವಿಲಿಯಂ, ಫೋರ್ಟ್ ಸೆಂಟ್ ಡೇವಿಡ್ ಮುಂತಾದ ಕೋಟೆಗಳು ಸ್ಥಾಪಿಸಲ್ಪಟ್ಟವು. ಈ ವ್ಯಾಪಾರದ ಕಂಪನಿಯಲ್ಲಿ ಗುಮಾಸ್ತನಾಗಿದ್ದ ರಾಬರ್ಟ್ ಕ್ಲೈವನು ಪ್ರಥಮದಲ್ಲಿ ಬ್ರಿಟಿಷ್ ರಾಜ್ಯಸ್ಥಾಪನೆಯನ್ನು ಮಾಡಿದನು. ವಾರನ್ ಹೇಸ್ಟಿಂಗ್ಸ್, ಲಾರ್ಡ್ ಕಾರ್ನವಾಲಿಸ್, ಮಾರ್ಕ್ವಿಸ್ ವೆಲ್ಲೆಸ್ಲಿ, ಲಾರ್ಡ್ ವೆಲ್ಲೆಸ್ಲಿ ಮುಂತಾದ ಯೂರೋಪಿಯನ್ ಸರದಾರರು ಘೋರವಾದ ಯುದ್ಧಗಳನ್ನು ಮಾಡಿ, ಅನೇಕವಾಗಿ ತಮ್ಮ ಜನರನ್ನು ಆಹುತಿಕೊಟ್ಟು ಈ ಭಾರತಮಾತೆಯ ವಿಪತ್ತನ್ನು ನೀಗಿಸಿದರು. ಈ ರೀತಿಯಾಗಿ ಭಗವಂತನು ಭಾರತಮಾತೆಯ ದುರ್ಘಟನಾ ವಿಪತ್ತನ್ನೆಲ್ಲಾ ಪರಿಹಾರ ಮಾಡಿ ಇದನ್ನು ಆಳುವುದಕ್ಕೆ ಯೋಗ್ಯಳಾಗಿಯೂ, ಕರುಣಾಭರಿತ ಹೃದಯಳಾಗಿಯೂ ಇದ್ದ ಶ್ರೀಮತಿ ವಿಕ್ಟೋರಿಯಾ ಮಹಾರಾಣಿಗೆ ಭಾರತ ರಾಜ್ಯಭಾರವನ್ನು ೧೮೫೮ ರಲ್ಲಿ ದಯಪಾಲಿಸಿದನು.

ಬ್ರಿಟಿಷ್ ಚಕ್ರಾಧಿಪತ್ಯವು ದೈವನಿಯಾಮಕವಾದದ್ದು.

ಈ ವಿಕ್ಟೋರಿಯಾ ಚಕ್ರವರ್ತಿನಿಯು ಇಂಗ್ಲೆಂಡಿನ ಶ್ರೀಮಂತರಾದ ತನ್ನ ಸ್ವಜನರನ್ನು ಯಾವರೀತಿ ಲಕ್ಷಿಸುತ್ತಿದ್ದಳೋ ಅದೇ ರೀತಿಯಲ್ಲಿ ಹಿಂದೂ ದೇಶದ ಕಾಡಿನ ಜನರನ್ನು ಕೂಡ ಪರಿಗಣಿಸುತ್ತಿದ್ದಳು. ಇಂಥಾ ಮಹಾತ್ಮಳಾದ ವಿಕ್ಟೋರಿಯಾ ಚಕ್ರವರ್ತಿನಿಯವರು ೧೯೦೧ ನೇ ಇಸವಿ ಜನವರಿ ೨೨ ರಲ್ಲಿ ಸ್ವರ್ಗಾರೋಹಣಮಂ ಗೈದರು. ಅನಂತರ ಅವರ ಜ್ಯೇಷ್ಠಪುತ್ರರಾದ ಏಳನೇ ಎಡ್ವರ್ಡ್ ಸಾರ್ವಭೌಮರು ಚಕ್ರವರ್ತಿಗಳಾಗಿ, ತಮ್ಮ ತಾಯಿಯ ಶ್ರೇಷ್ಠಭಾವಕ್ಕೆ ಅನುಗುಣವಾಗಿಯೂ, ಅವರ ಸಾಮ್ರಾಜ್ಞಿಯಂತೆಯೂ ನಮ್ಮನ್ನು ಆಳುತ್ತಾ ಬಂದಿದ್ದಾರೆ. ನಮ್ಮ ಪೂರ್ವಿಕರು ಸಿಕಂದರ್, ನೌಶೀರ್ವಾನ್, ನಳ, ಮಾಂಧಾತ ಹರಿಶ್ಚಂದ್ರ ಮುಂತಾದ ರಾಜರುಗಳ ಕಾಲದಲ್ಲಿ ಅನುಭವಿಸಿದ ಸುಖಸಂತೋಷಕ್ಕಿಂತಲೂ ಅತ್ಯಧಿಕವಾಗಿ ಈ ಬ್ರಿಟಿಷ್ ರಾಜ್ಯಾಧಿಪತ್ಯದಲ್ಲಿ ನಾವು ಅನುಭವಿಸುತ್ತೇವೆ. ಇದನ್ನು ಯೋಚಿಸಿದರೆ ಭಾರತಮಾತೆಯು ಪೂರ್ವಕಾಲದ ಹಿಂದೂ ರಾಜರಿಂದಲೂ, ಅನೇಕ ಉಪದ್ರವಗಳಿಂದಲೂ, ಕಷ್ಟಗಳಿಂದ ... ವ್ಯಾಧಿಯ ರಾಜರಿಂದಲೂ ಪಟ್ಟು ತಿಂದು, ಸಿರಿಭ್ರಷ್ಟಳಾಗಿ, ಕೊನೆಗೆ ಕಷ್ಟದ ಸೆರೆಸಿ ಮಾಡಲಾಗುವುದನ್ನು ಅನುಭವಿಸುತ್ತಿದ್ದದ್ದನ್ನು ಕರುಣಾಸಾಗರನಾದ ಜಗತ್ಕರ್ತನು ನೋಡಿ, ಈ ಬ್ರಿಟಿಷ್ ಚಕ್ರಾಧಿಪತಿಯನ್ನು ದಯಪಾಲಿಸಿರುವನು. ಆದದ್ದರಿಂದ ಭಗವಂತನು ಭರತಖಂಡವನ್ನು ಆಳುವುದಕ್ಕೆ ಕಳುಹಿಸಿರುವ ಬ್ರಿಟಿಷ್ ಚಕ್ರಾಧಿಪನನ್ನು ಸೇವಿಸತಕ್ಕದ್ದು. ಹೀಗಿರುವ ಪ್ರಯುಕ್ತ ನಾವುಗಳು "ವಂದೇ ಮಾತರಂ" ಎಂಬ ಪದದ ಜೊತೆಗೆ "ಪಿತರಂ" ಎಂಬ ಪದವನ್ನು ಸೇರಿಸಿ "ವಂದೇಮಾತರಂ ಪಿತರಂ" ಎಂದು ಸ್ಮರಣೆಮಾಡತಕ್ಕದ್ದು ಯುಕ್ತವಾಗಿಯೂ, ಸಜ್ಜನರು ಒಪ್ಪತಕ್ಕದ್ದಾಗಿಯೂ, ದೇವರು ಮೆಚ್ಚತಕ್ಕದ್ದಾಗಿಯೂ ಇರುತ್ತದೆ. ತಂದೆಯು ಸುಖವಾಗಿರುವವರೆಗೂ ತಾಯಿ ಮಕ್ಕಳು ಸುಖವಾಗಿರಬಹುದು. ತಂದೆಯನ್ನೇ ಮನೆಬಿಟ್ಟೋಡಿಸಿ ಬಾಳತಕ್ಕದ್ದು ತಾಯಿಯ ಪಾಪಕ್ಕೂ, ದೇವರ ಕೋಪಕ್ಕೂ ಗುರಿಯಾಗುವುದರಲ್ಲಿ ಸಂದೇಹವಿಲ್ಲವು. ತಾನು ಅಭಿವೃದ್ಧಿ ಹೊಂದಬೇಕು ಎಂಬ ಆಶೆಯನ್ನಿಟ್ಟುಕೊಂಡು ತಂದೆತಾಯಿಗಳ ಆಶೀರ್ವಾದದಿಂದ ಘನತರವಾದ ಕಾರ್ಯವನ್ನು ಸಾಧಿಸಿದಲ್ಲಿ ದೇವರು ಸಹಾಯಕನಾಗಿದ್ದೇ ಇರುವನು. ಈ ರೀತಿಯಲ್ಲಿ ಸ್ವದೇಶಾಭಿವೃದ್ಧಿಯಲ್ಲಿ ಆಸಕ್ತರಾಗಿರುವ ಮಹನೀಯರು ಸ್ವಪ್ರಯೋಜನಕಾಂಕ್ಷೆಯನ್ನು ತ್ಯಜಿಸಿ, ಸ್ವದೇಶೀಯರ ಮತ್ತು ಸ್ವಸೇನಾಧಿಪರ ಪ್ರೀತಿಯನ್ನು ಸಂಪಾದಿಸಿಕೊಂಡು, ಅವರಲ್ಲಿರಬೇಕಾದ ಭಕ್ತಿವಿಶ್ವಾಸಗಳೊಂದಿಗೆ ಸ್ವದೇಶವನ್ನು ಊರ್ಜಿತಸ್ಥಿತಿಗೆ ತರುವ ಮಹತ್ಕಾರ್ಯವನ್ನು ಸಾಧಿಸಿ, ತಮ್ಮ ಹೆಸರುಗಳನ್ನು ಆಚಂದ್ರಾರ್ಕವಾಗಿ ಶಾಶ್ವತಪಡಿಸಬೇಕು. ಇದನ್ನು ಯೋಚಿಸದೆ ಬಂಗಾಳಾ ದೇಶದ ಜನರು ದೇವರು ನಿಯಾಮಕಮಾಡಿದ ಇಂಗ್ಲಿಷ್ ರಾಜ್ಯಭಾರದಲ್ಲಿ ವಿಶ್ವಾಸವಿಲ್ಲದೆ, ಈಗಿನ ಸೌಕರ್ಯದಲ್ಲಿ ತೃಪ್ತಿಹೊಂದದೆ, ೧೮೫೭ ರಲ್ಲಿ ನಡೆಸಿದಂತೆ ನಾನಾಸಾಹೇಬನಂತೆಯೋ, ಸಿಂಧಿಯಾ, ಗ್ವಾಲಿಯರ ಮುಂತಾದ ಮರಾಠೀ ಪ್ರಭುಗಳಂತೆಯೋ, ತಾವೇ ರಾಜ್ಯವಾಳಬೇಕೆಂದು ರಾಜದ್ರೋಹಕಾರ್ಯಗಳನ್ನು ನಡೆಸುತ್ತಾ, ಇಂಗ್ಲೀಷಿನವರಲ್ಲಿ ವಿರೋಧವಿಡತಕ್ಕದ್ದು ಅತಿಶೋಚನೀಯವಾಗಿರುತ್ತೆ. ಭಗವಂತನು ತನ್ನ ಕೃಪಾಯುಕ್ತವಾದ ಇಂಗ್ಲಿಷ್ ರಾಜ್ಯಭಾರಕ್ಕೆ ಕಂಟಕರಾದ ದ್ರೋಹಿಗಳ ಪುಂಡನ್ನು ಜಾಗ್ರತೆ ಅಡಗಿಸಿ ಶಾಂತಿಯನ್ನು ನೆಲೆಗೊಳಿಸಲಿ.

ಬಚೇಸಾಬಿ.

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಕತ್ತಾನಗರದಲ್ಲಿರುವ ಬಂಗಾಳಾ ಬ್ಯಾಂಕಿನ ಸಂರಕ್ಷಣೆಗೆ ಫೌಜದಾರ ಸೈನಿಕರನ್ನು ಕೊಟ್ಟಿದ್ದಾರೆ.

❦❦❦

ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ "ಸ್ವರಾಜ್ಯ" ವೆಂಬ ಪತ್ರಿಕೆಯಲ್ಲಿ ರಾಜದ್ರೋಹಕರವಾದ ಬಾತ್ಮಿಗಳನ್ನು ಪ್ರಕಟಿಸಿದರೆಂದು ಆ ಪತ್ರಿಕೆಯ ಎಡಿಟರನ್ನು ಹಿಡಿದು ದರ್ಯಾಫ್ತು ಮಾಡಲಾರಂಭಿಸಿದ್ದಾರೆ.

❦❦❦

ಅಫ್ಘಾನಿಸ್ಥಾನದ ಅಮೀರರು ಸರಹದ್ದನ್ನು ತಿರುಗಿಕೊಂಡು, ಕಳೆದ ವಾರ ತಮ್ಮ ರಾಜಧಾನಿಯಾದ ಕಾಬೂಲ್ ಪಟ್ಟಣಕ್ಕೆ ವಾಪಸು ಬಂದಿರುತ್ತಾರೆ.

❦❦❦

ಕಲ್ಕತ್ತಾ ಪ್ರಾಂತ್ಯದಿಂದ ಭವಾನಿನಗರ ಸಂಸ್ಥಾನಕ್ಕೆ ಬಂದು ಬಹು ಕಠಿಣವಾದ ಉಪನ್ಯಾಸಗಳನ್ನು ಮಾಡುತ್ತಾ ಪ್ರಜೆಗಳ ಮನಸ್ಸನ್ನು ಕೆಡಿಸುತ್ತಿದ್ದ ಒಬ್ಬ ಸ್ವಾಮಿಯನ್ನು ಸರ್ಕಾರದವರು ಹಿಡಿದು ವರ್ಧಮಾನನಗರದಿಂದಾಚೆಗೆ ರವಾನೆ ಮಾಡಿಬಿಟ್ಟರು.

❦❦❦

ಕಲ್ಕತ್ತಾ ಪಟ್ಟಣದ ಪೋಲೀಸಿನವರು ಹರಿದಾಸ ದಾಸನೆಂಬ ಬಂಗಾಳಿಯನ್ನು ದಸ್ತಗಿರಿ ಮಾಡಿದರು. ಇವನ ತಂದೆ ಚಂದ್ರದಾಸ್ ಬಹದೂರ್ ಎಂಬಾತನು ಕೆಲವು ಕಾಲಕ್ಕೆ ಮುಂಚೆ ಮೈಸೂರು ಪ್ರಭುಗಳ ತೋಷೇಖಾನೆಯಲ್ಲಿ ಮುಖ್ಯ ನೌಕರನಾಗಿದ್ದನು.

❦❦❦

ಕಲ್ಕತ್ತಾ ಪಟ್ಟಣದ "ಯುಗಾಂತರ" ವೆಂಬ ಪತ್ರಿಕೆಯನ್ನು ಅಚ್ಚುಹಾಕಿ ಕೊಟ್ಟ ಮನುಷ್ಯನು ಮೂರು ವಾರಗಳಿಂದ ತಲೆತಪ್ಪಿಸಿಕೊಂಡು ಹೋಗಿದ್ದು ಈಗ ಸಿಕ್ಕಿಬಿದ್ದನು. ಇವನ ಮೇಲೆ ಈಗ ರಾಜದ್ರೋಹದ ಮೊಕದ್ದಮೆ ಪ್ರಾರಂಭವಾಗಿ ನಡೆಯುತ್ತಲಿದೆ.

❦❦❦

ಕಳೆದ ೨೯ನೇ ತಾ ಬೆಳಿಗ್ಗೆ ಮಂಗಳೂರಿಗೆ ಹೋಗುತ್ತಿದ್ದ ಮೆಯಿಲ್ ಗಾಡಿಯು ತಿರುಪತ್ತೂರಿನ ಸ್ಟೇಷನ್ ಬಳಿ ಒಂದು ಸಾಮಾನು ಬಂಡಿಗೆ ಡಿಕ್ಕಾ ಬಡಿದು, ಗಾಡಿ ನಡೆಸುವವನಿಗೂ, ಅಂಡರ್ ಗಾರ್ಡಿಗೂ, ಕೆಲವು ಪ್ರಯಾಣಿಕರಿಗೂ ಸ್ವಲ್ಪ ಸ್ವಲ್ಪ ಗಾಯಗಳಾದವು.

❦❦❦

ಬಿಹಾರ್ ಅಧಿಪತ್ಯಕ್ಕೆ ಸೇರಿದ ರಂಗೂರ್ ಪಟ್ಟಣದಲ್ಲಿ ಗವರ್ನಮೆಂಟಿನವರು ೪೦ ಲಕ್ಷ ರೂಪಾಯಿ ಖರ್ಚುಮಾಡಿ, ಒಂದು ಭಾರೀ ಆಸ್ಪತ್ರೆಯನ್ನು ಕಟ್ಟಿಸಲಾರಂಭಿಸಿದ್ದಾರೆಂತಲೂ, ಎಲ್ಲಾ ತಯಾರಾಗುವಷ್ಟರಲ್ಲಿ ಇನ್ನೂ ಹತ್ತು ಲಕ್ಷ ರೂಪಾಯಿ ಕರ್ಚು ಬೀಳಬಹುದೆಂತಲೂ ಅಲ್ಲಿನ ಪತ್ರಿಕೆಯು ಸೂಚಿಸುತ್ತದೆ.

❦❦❦

ಇದುವರೆಗೆ ಛಾಪು ಆಗಿರುವ ಬೆಳ್ಳಿ ನಾಣ್ಯಗಳು ಇನ್ನು ಎರಡು ವರುಷಗಳ ವರೆಗೆ ಚಲಾವಣೆಗೆ ಸಾಕಾಗುವವೆಂದು ಹಿಂದೂಸ್ಥಾನದ ಟಂಕಸಾಲೆಗಳಲ್ಲಿ ಕೆಲಸವನ್ನು ನಿಲ್ಲಿಸಿದ್ದಾರೆ. ಆದಕಾರಣ ಇನ್ನೊಂದು ವರುಷದ ತನಕ ಟಂಕಸಾಲೆಗಳಿಂದ ಗವರ್ನಮೆಂಟ್ ರೂಪಾಯಿ ಏನೂ ಹುಟ್ಟುವಳಿ ಆಗುವಂತೆ ಕಾಣುವುದಿಲ್ಲ.

❦❦❦

ಬೊಂಬಾಯಿ ಪಟ್ಟಣದಲ್ಲಿ "ಹಿಂದೂ ಸ್ವರಾಜ್ಯ" ವೆಂಬ ಪತ್ರಿಕೆಯಲ್ಲಿ ಅದರ ಎಡಿಟರಾದ ತ್ರಿಭುವನದಾಸ್ ಪುರುಷೋತ್ತಮದಾಸ್ ಮಾಂಗ್ರೋಳವಾಲಾ ಎಂಬಾತನು ಪ್ರಜೆಗಳನ್ನು ಗವರ್ನಮೆಂಟಿನ ಮೇಲೆ ಎತ್ತಿಕಟ್ಟುವಂಥಾ ಬಾತ್ಮಿಗಳನ್ನು ಬರೆದನೆಂದು ರುಜುವಾತಾದ್ದರಿಂದ ಮ್ಯಾಜಿಸ್ಟ್ರೇಟ್ ಮಿ॥ ಆಸ್ಟನ್‌ರವರು ಆಪಾದಿತಗೆ ಮೂರು ವರುಷ ಕಠಿಣಸಜಾ ವಿಧಿಸಿದರು.

❦❦❦

ಪಟಿಯಾಲಾ ಸಂಸ್ಥಾನದ ಯುವರಾಜರಾದ ಶ್ರೀಮಂತ ಭೂಪೀಂದರ್ ಸಿಂಗ್ ರವರಿಗೆ ಕಳೆದ ವಾರ ಪುತ್ರ ಜನನವಾಯಿತು. ಹಿಂದೂಸ್ಥಾನದ ದೇಶೀಯ ರಾಜರುಗಳಲ್ಲಿ ಮೊಮ್ಮಗನನ್ನು ಪಡೆದವರು ಗಾಯಕವಾಡಿ ಮಹಾರಾಜರೊಬ್ಬರೇ ಆಗಿರುತ್ತಾರೆ. ಮಹಾರಾಜರವರು ಸಂತೋಷ ಕೊಟ್ಟು ಆ ದಿನ ಸಂಸ್ಥಾನದ ಕೋರ್ಟ್ ಕಚೇರಿ ಸ್ಕೂಲುಗಳಿಗೆ ರಜಾ ಕೊಡಿಸಿದರು.

❦❦❦

ಸಿಲೋನ್ (ಲಂಕಾ) ದ್ವೀಪದಲ್ಲಿ ರೈತರ ಪ್ರಜೆಗಳ ಮಕ್ಕಳಿಗೆ ಗ್ರಾಮಾಂತರಗಳಲ್ಲಿ ವ್ಯವಸಾಯ ವಿಷಯವನ್ನು ದೃಷ್ಟಾಂತಪೂರ್ವಕವಾಗಿ ಕಲಿಸಿಕೊಡಬೇಕೆಂದು ಸರ್ಕಾರದವರು ತೀರ್ಮಾನಿಸಿ, ಪ್ರತಿ ಒಂದು ಗ್ರಾಮದ ಪಾಠಶಾಲೆಗೂ ಸೇರಿದಂತೆ ಒಂದೊಂದು ತೋಟವನ್ನು ಬಿಡಿಸಿಕೊಡುತ್ತಿದ್ದಾರೆ. ವ್ಯವಸಾಯವನ್ನು ಅನುಭವಪೂರ್ವಕವಾಗಿ ಕಲಿತಿರುವ ಉಪಾಧ್ಯಾಯರನ್ನೇ ಆ ಪಾಠಶಾಲೆಗಳಲ್ಲಿ ನೇಮಿಸುತ್ತಾ ಬಂದಿದ್ದಾರೆ.

❦❦❦

ಉತ್ತರ ದೇಶದಲ್ಲಿ ಕೈಗಾರಿಕೆ ನಡೆಯುವ ಕಾರ್ಖಾನೆಗಳವರು ಯಂತ್ರಗಳನ್ನು ನಡಿಸುವುದಕ್ಕೆ ಪರದೇಶಗಳಿಂದ ಚಕ್ಕಳದ ಪಟ್ಟಿಗಳನ್ನು ತರಿಸುತ್ತಾರೆ. ಇದಕ್ಕೆ ಸುಂಕವನ್ನು ಸರ್ಕಾರದವರು ವಜಾ ಮಾಡಿರುವರು. ಆದರೆ ಪರದೇಶಗಳಿಂದ ಹಗ್ಗಗಳನ್ನು ಅದೇ ಕೆಲಸಕ್ಕೆ ತರಿಸಿದರೆ ಅದಕ್ಕೆ ಸುಂಕ ಕೊಡಬೇಕಾಗಿದೆ. ಅದನ್ನೂ ವಜಾ ಮಾಡಿಕೊಡಬೇಕೆಂದು ವರ್ತಕಮಂಡಲಿಯವರು ಇಂಡಿಯಾ ಗವರ್ನಮೆಂಟಿಗೆ ಅರಿಕೆ ಮಾಡಿರುತ್ತಾರೆ.

❦❦❦

ಕಳೆದ ವಾರ ಪೂನಾ ಪಟ್ಟಣದ ಸೋಮವಾರ ಪೇಟೆಯಲ್ಲಿ ಒಂದು ಸಿಡಿಮದ್ದಿನ ಗುಂಡು ಹಾರಿತು. ಪೋಲೀಸಿನವರು ಹೋಗಿ ತನಿಖೆ ಮಾಡಿ, ಅನಂತರ ಗಣೇಶಕರ್ ಎಂಬೊಬ್ಬ ಬ್ರಾಹ್ಮಣ ಯುವಕನನ್ನು ಹಿಡಿದರು. ಅವನ ಮನೆಯನ್ನು ಶೋಧನೆ ಮಾಡಿದಾಗ ಸ್ವಲ್ಪ ಪೊಟ್ಯಾಷೂ ಗಂಧಕವೂ ಸಿಕ್ಕಿದವು. ಅವನು ಅವುಗಳನ್ನು ಅಲ್ಲಿನ ಆಸ್ಪತ್ರೆಯಿಂದ ತಂದನೆಂದು ಗೊತ್ತಾಯಿತು. ಪೋಲೀಸ್ ಸುಪರಿಂಟೆಂಡೆಂಟರು ತನಿಖೆಮಾಡುತ್ತಿದ್ದಾರೆ.

❦❦❦

ಹಿಂದಿನ ಭಾನುವಾರ ರಂಗೂನ್ ಪಟ್ಟಣದಲ್ಲಿ ಸುಂಟರಗಾಳಿಯೂ ಜಡಿ ಕೊಡಿದ ಮಳೆ ಪ್ರಾಪ್ತವಾಗಿ, ಜನರು, ಕಟ್ಟ; ಬಳಿ ಕೂದಲು ಗುಂಪುಗಳಾಗಿ ಮರ್ಗದು ಹೊಕ್ಕೆಯಲ್ಲಿ ಬಿದ್ದವು. ಈ ಕೂದಲು ೬ ಅಂಗುಲದಿಂದ ೬ ಅಡಿ ಉದ್ದದ ವರೆಗೂ ಇದ್ದವು. ಸುಂಟರಗಾಳಿಯಿಂದ ಎಲ್ಲಿಯೋ ಕಂಡದ್ದು ಕೂದಲು ಆಕಾಶಕ್ಕೆ ಒಯ್ಯಲ್ಪಟ್ಟು ಮಳೆಯೊಡನೆ ಬಿದ್ದಿತು. ಆದರೆ ಜನರು ಆ ರೀತಿ ನಂಬದೆ ನಾನಾ ಮಾತಿನ ಯೋಚನೆಗಳನ್ನು ಮಾಡುತ್ತಿದ್ದಾರೆ.

❦❦❦

ಮದರಾಸ್ ಅಧಿಪತ್ಯಕ್ಕೆ ಸೇರಿದ ಜಯಪುರ ಮತ್ತು ಕಟ್ಟಂಡಿ ಸಂಸ್ಥಾನಗಳ ನಡುವೆ ಇರುವ ಎಲ್ಲೆ ಕಟ್ಟಿನ ವ್ಯಾಜ್ಯವನ್ನು ಫೈಸಲ್ ಮಾಡುವುದಕ್ಕೆ ಮಿ॥ ಟೇಲರ್ ಎಂಬೊಬ್ಬ ಕಲೆಕ್ಟರನ್ನು ಮದರಾಸ್ ಗವರ್ನಮೆಂಟಿನವರು ಕಳುಹಿಸಿದರು. ಇವರು ಆ ಕೆಲಸವನ್ನು ಪೂರೈಸಿಕೊಂಡು ವಾಪಸು ಬರುವಾಗ್ಗೆ ಕಳೆದ ವಾರ ಕೋರಪುಟ್ ಎಂಬ ಸ್ಥಳದ ಸರಹದ್ದಿನಲ್ಲಿ ಹತ್ತು ನಿಮಿಷಗಳೊಳಗಾಗಿ ಮೂರು ಹುಲಿಗಳನ್ನು ಕೊಂದುಹಾಕಿದರೆಂದು ತಿಳಿಯುವುದು.

❦❦❦

ಬೊಂಬಾಯಿ ಪಟ್ಟಣದ ಪೋಲೀಸ್ ಕೋರ್ಟಿನಲ್ಲಿ ಮಿ॥ ತಿಲಕರನ್ನು ದರ್ಯಾಫ್ತು ಮಾಡುತ್ತಿದ್ದಾಗ ಕೋರ್ಟಿನ ಬಳಿ ಅನೇಕ ಜನರು ಗುಂಪು ಸೇರಿ ದೊಂಬಿ ಮಾಡಿದ್ದಲ್ಲದೆ ಪೋಲೀಸಿನವರ ಮೇಲೆ ಕಲ್ಲುಗಳನ್ನು ಎಸೆದರು. ಗ್ರಾಹಮ್ ಎಂಬ ಇನ್ಸ್‌ಪೆಕ್ಟರ ಕೆನ್ನೆಗೆ ಕಲ್ಲು ತಗಲಿ ಗಾಯವಾಯಿತು. ಪೋಲೀಸಿನವರು ಆ ಗುಂಪಿನಲ್ಲಿ ಕಲ್ಲು ಎಸೆದವನನ್ನೂ ಇನ್ನಾರು ಮಂದಿಯನ್ನೂ ಹಿಡಿದು, ಅವರ ಮೇಲೆ ಫಿರ್ಯಾದು ಮಾಡಿದರು. ಕಲ್ಲು ಎಸೆದ ವಿಷ್ಣು ಬಲವಂತನೆಂಬುವನಿಗೆ ಮೂರು ತಿಂಗಳ ಕಠಿಣ ಸಜಾ ಶಿಕ್ಷೆಯಾಯಿತು. ಉಳಿದ ಆರು ಜನರನ್ನು ದರ್ಯಾಫ್ತು ಮಾಡುತ್ತಿದ್ದಾರೆ.

❦❦❦

ಕಳೆದ ವಾರ ಹಿಂದೂಸ್ಥಾನದಲ್ಲಿ ಕ್ಷಾಮ ಪ್ರಾಪ್ತವಾಗಿದ್ದ ಕೆಲವು ಪ್ರದೇಶಗಳಲ್ಲಿ ಸ್ವಲ್ಪ ಮಳೆ ಸುರಿಯಿತು. ಕ್ಷಾಮಪೀಡಿತರ ಸಂಖ್ಯೆಯು ಹಿಂದಿನ ವಾರಕ್ಕಿಂತ ಸ್ವಲ್ಪ ಕಡಿಮೆಯಾಗಿದೆ. ಈಗ ಒಟ್ಟು ೧೧,೭೭,೦೦೦ ಜನರು ಸರ್ಕಾರದವರ ರಿಲೀಫ್ ಕಾಮಗಾರಿಗಳಲ್ಲೂ ಧರ್ಮದ ಅನ್ನಸತ್ರಗಳಲ್ಲೂ ಸೇರಿಕೊಂಡಿದ್ದರು. ಆ ರೀತಿ ಸೇರಿದ ಜನರ ಸಂಖ್ಯೆ ಎಷ್ಟೆಂದರೆ—ಬಂಗಾಳಾ ೪೦,೦೦೦; ಸಂಯುಕ್ತ ಅಧಿಪತ್ಯಗಳು ೯,೬೦,೦೦೦, ಪಂಜಾಬ್ ೧,೦೦೦, ಮಧ್ಯ ಪ್ರಾಂತ್ಯಗಳು ೪೦,೦೦೦, ಬೊಂಬಾಯಿ ೩,೦೦೦; ಮದರಾಸ್ ೧,೦೦೦, ಮಧ್ಯ ಇಂಡಿಯಾ ೧,೬೩,೦೦೦.

❦❦❦

ಹಿಂದೂಸ್ಥಾನದ ಸೈನ್ಯಗಳು ವಾಯವ್ಯ ಸರಹದ್ದಿನ ಆಚೆ ಇರುವ ಮಹಮಂಡ್ ಮೊದಲಾದ ಜನರ ದಾಂಧಲೆಯನ್ನು ಅಡಗಿಸುವುದಕ್ಕೆ ಕಳುಹಲ್ಪಟ್ಟಿದ್ದವಷ್ಟೆ. ಆ ಸೈನ್ಯಗಳ ಅಧಿಪತಿಯಾದ ಜನರಲ್ ವಿಲ್ಕಾಕ್ಸ್ ರವರು ಯುದ್ಧ ಕಾರ್ಯಗಳನ್ನು ಸಮಾಪ್ತಿಮಾಡಿ, ರಿಪೋರ್ಟ್ ಕಳುಹಿಸಿದ್ದಾರೆ. ಈ ಯುದ್ಧ ಕಾರ್ಯಗಳಲ್ಲಿ ಇಂಗ್ಲಿಷ್ ಸೈನ್ಯದಲ್ಲಿ ೭೦ ಜನ ಕೊಲ್ಲಲ್ಪಟ್ಟರು; ೧೯೫ ಮಂದಿಗೆ ಗಾಯಗಳಾದವು. ಶತ್ರುಗಳಲ್ಲಿ ೩೫೦ ಜನರು ಮೃತಪಟ್ಟರು. ಇಂಗ್ಲಿಷ್ ಸೈನಿಕರು ಶತ್ರುಗಳಲ್ಲಿ ೬೦ ಜನರನ್ನು ಕೈಸೆರೆ ಹಿಡಿದಿಟ್ಟುಕೊಂಡಿದ್ದು ಕೆಲವುಕಾಲದ ಮೇಲೆ ಬಿಟ್ಟುಬಿಟ್ಟರು. ಶತ್ರುಗಳು ಹೊಡೆದ ಗುಂಡಿನಿಂದ ೧೮೫ ಕುದುರೆ ಹೇಸರಕತ್ತೆಗಳು ಇಂಗ್ಲಿಷ್ ಕ್ಯಾಂಪುಗಳಲ್ಲಿ ಮೃತಪಟ್ಟವು.

❦❦❦

ಕೆಲವು ದಿನಗಳ ಹಿಂದೆ ವಿಜಯನಗರದಲ್ಲಿ ಭಯಂಕರವಾದ ಬೆಂಕಿ ಬಿದ್ದು ೩೦೦ ಮನೆಮಠಗಳು ಸುಟ್ಟುಹೋದವು. ಆ ಊರಿನಲ್ಲಿ ನೀರಿಗೇ ಬಹಳ ಕಷ್ಟವಾದ್ದರಿಂದ ಬೆಂಕಿಯನ್ನು ಆರಿಸುವುದಕ್ಕೆ ನೀರನ್ನು ಒದಗಿಸುವುದು ಸಾಧ್ಯವಾಗಲಿಲ್ಲ. ಈಗ ಮನೆಮಠಗಳನ್ನು ಕಳೆದುಕೊಂಡವರಿಗೆ ದೇವಸೇವೆಯು ನಡೆಯುವುದಕ್ಕೂ, ಹೊಸ ಮನೆ ಕಟ್ಟಿಕೊಳ್ಳುವುದಕ್ಕೂ ಒಂದು ಧರ್ಮದ ಫಂಡನ್ನು ಕೂಡಿಸಲಾರಂಭಿಸಿದ್ದಾರೆ. ಪ್ರಜೆಗಳೇ ಮುಂತಾದವರು ೩,೦೦೦ ರೂಪಾಯಿ ವರೆಗೆ ಕೂಡಿಸಿದರು. ಈ ಫಂಡಿನ ಉದ್ದೇಶವನ್ನು ಕೇಳಿ ವಿಜಯನಗರದ ರಾಜರು ೧೦,೦೦೦ ರೂಪಾಯಿ ಕೊಡುತ್ತೇವೆಂದು ವಾಗ್ದಾನ ಮಾಡಿದ್ದಾರೆ. ಈಗ ಫಂಡಿನ ಕಮಿಟಿ ಮೆಂಬರುಗಳು ಹೊಸ ನಿವೇಶನಗಳಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಏರ್ಪಾಡು ಮಾಡುತ್ತಿರುವರು.

❦❦❦

ತಿರುವಾಂಕೂರು ಸಂಸ್ಥಾನದ ಕುನ್ನತ್ತುನಾಡು ತಾಲೂಕಿಗೆ ಸೇರಿದ ಕಾಲಡಿ ಎಂಬ ಗ್ರಾಮವು ಶ್ರೀಶಂಕರಾಚಾರ್ಯರ ಜನ್ಮಸ್ಥಳವೆಂದು ಪ್ರಸಿದ್ಧವಾಗಿದೆ. ಆ ಗ್ರಾಮದಲ್ಲಿ ೮೫೦ ಮನೆಗಳೂ ಶ್ರೀಶಂಕರಾಚಾರ್ಯರ ಜನಕ ತಾಯಿಯ ಉತ್ತರ ಸಂಸ್ಕಾರ ನಡೆದ ಸ್ಥಳವೂ ಇರುತ್ತವೆ. ಮೈ॥ ಮಾಧವರಾಯರು ಅಲ್ಲಿ ದಿವಾನರಾಗಿದ್ದಾಗ ಆ ಗ್ರಾಮವನ್ನೂ ಆ ಸ್ಥಳವನ್ನೂ ಜೀರ್ಣೋದ್ಧಾರಮಾಡಬೇಕೆಂದು ವಿಚಾರಿಸು ಮಾಡಿದರು. ಈಗ ಮೈಸೂರು ಚೀಫ್ ಕೋರ್ಟಿನಲ್ಲಿ ಚೀಫ್ ಜಡ್ಜಿಯಾಗಿದ್ದು ಪೆನ್ಷನ್ ಪಡೆದು ನಿವೃತ್ತರಾಗಿರುವ ರಾಜಧರ್ಮಪ್ರವೀಣ ದಿವಾನ್ ಬಹದೂರ್ ಮಿ॥ ಎ. ರಾಮಚಂದ್ರ ಅಯ್ಯರವರು ಆ ಗ್ರಾಮವನ್ನು ಹೋಗಿ ನೋಡಿ, ಅಲ್ಲಿ ಒಂದು ಸಂಸ್ಕೃತ ವಿದ್ಯಾಶಾಲೆಯನ್ನೂ ಸ್ನಾನ ಘಟ್ಟವನ್ನೂ ಕಟ್ಟಿಸಬೇಕೆಂದು ಅಪೇಕ್ಷಿಸಿದರು. ತಿರುವಾಂಕೂರು ಸಂಸ್ಥಾನದವರು ಅಲ್ಲಿ ಜಮೀನು ಕೊಳ್ಳುವುದಕ್ಕೂ ಕಟ್ಟಡಗಳನ್ನು ಕಟ್ಟಿಸುವುದಕ್ಕೂ ೧೦,೦೦೦ ರೂಪಾಯಿ ವ್ಯಯಮಾಡುವುದಾಗಿ ತಿಳಿಸಿದರು. ಮಿ॥ ರಾಮಚಂದ್ರ ಅಯ್ಯರವರು ಈ ಕಾರ್ಯಕ್ಕೆ ಇದುವರೆಗೆ ೩೫,೦೦೦ ರೂಪಾಯಿ ಚಂದಾ ಕೂಡಿಸಿದ್ದಾರೆ. ಕಟ್ಟಡಗಳನ್ನು ಸರಿಯಾಗಿ ಕಟ್ಟಿಸುವುದಕ್ಕೆ ತಿರುವಾಂಕೂರು ಸರ್ಕಾರದವರು ಒಬ್ಬ ಇಂಜಿನಿಯರನ್ನು ಕಳುಹಿಸುವಂತೆ ಗೊತ್ತಾಗಿದೆ. ಇದಲ್ಲದೆ ಮಧುರೆಯಲ್ಲಿರುವ ಬ್ಯಾರಿಸ್ಟರ್ ಮಿ॥ ಆರ್. ಶಿವರ್ ಎಂಬ ದೊಡ್ಡ ಮನುಷ್ಯರು ಶ್ರೀಶಂಕರಾಚಾರ್ಯರ ಹೆಸರನ್ನು ಶಾಶ್ವತ ಪಡಿಸುವಂಥಾ ಒಂದು ಪ್ರತಿಮೆಯನ್ನು ಮಾಡಿಸಿಕೊಡುವುದಾಗಿಯೂ,

ಒಂದು ವಿದ್ಯಾರ್ಥಿನಿಲಯವನ್ನೂ ಅಲ್ಲೇ ಕಟ್ಟಿಸಿಕೊಡುವುದಾಗಿಯೂ ಮಾತುಕೊಟ್ಟಿದ್ದಾರೆ. ಮತ್ತು ಆ ಸ್ಥಳದಲ್ಲಿ ಒಂದು ಅಗ್ರಹಾರವನ್ನೂ ಒಂದು ಧರ್ಮಸತ್ರವನ್ನೂ ಏರ್ಪಡಿಸುವ ಯೋಚನೆಯುಂಟು

***

ಕಳೆದ ವಾರ ಎರಡು ದಿನ ದರ್ಭಾಂಗದ ಮಹಾರಾಜರವರು ವೈಸ್ ರಾಯಿಯವರ ಭೇಟಿ ತೆಗೆದುಕೊಂಡು, ಅವರ ಕೂಡ ಸ್ವಲ್ಪಹೊತ್ತು ಮಾತನಾಡಿ ಬಂದರು

***

ತಿರುನೆಲ್ವೇಲಿಯ ರಾಜದ್ರೋಹದ ಮೊಕದ್ದಮೆಯಲ್ಲಿ ಸಿಕ್ಕಿಬಿದ್ದ ಚಿದಂಬರಂ ಪಿಳ್ಳೆಯವರಿಗೆ ದ್ವೀಪಾಂತರ ಟಾಪ್ ಸಜಾ ಸುಬ್ರಹ್ಮಣ್ಯ ಶಿವ ಎಂಬವರಿಗೆ ಹತ್ತು ವರುಷಗಳ ದ್ವೀಪಾಂತರ ಟಾಪ್ ಸಜಾ ಸೆಷನ್ ಜಡ್ಜರಿಂದ ವಿಧಿಸಲ್ಪಟ್ಟದೆ ಅಪರಾಧಿಗಳು ಮದರಾಸ್ ಹೈಕೋರ್ಟಿಗೆ ಅಪೀಲ್ ಮಾಡುವುದಾಗಿ ವರ್ತಮಾನವಿರುವುದು

***

ಹಿಂದುಸ್ಥಾನದಲ್ಲೆಲ್ಲಾ ಪ್ಲೇಗ್ ಉಪದ್ರವ ಹಾವಳಿಯು ಕಡಮೆಯಾಗುತ್ತಾ ಬಂದಿದೆ ಕಳೆದ ವಾರ ಒಟ್ಟು ೫೦೩೩ ಜನರಿಗೆ ಆ ಉಪದ್ರ ತಗಲಿ ೪೮೯೩ ಜನರು ಕಾಲವಾದರು. ಆ ಪೈಕಿ ಬಹಾರ್‌ದಲ್ಲಿ ೧೨೩೩ ಮರಣಗಳಾದವು ಪಂಜಾಬ್ ೨೭೧, ಬೊಂಬಾಯಿ ಅಧಿಪತ್ಯ ೧೧೫, ಮೈಸೂರು ಸಂಸ್ಥಾನ ೩೩, ಮದರಾಸ್ ಅಧಿಪತ್ಯ ೨೩, ಬಂಗಾಳಾ ೧೪, ಸಂಯುಕ್ತ ಅಧಿಪತ್ಯಗಳು ೧೦, ವಾಯುವ್ಯಸರಹದ್ದಿನ ಪ್ರಾಂತ್ಯಗಳು ೯, ಕೊಡಗು ೧

***

ಹಿಂದುಗಳಲ್ಲಿ "ಕಾಶೀಯಾತ್ರೆ" ಎಂಬುವುದು ವಿವಾಹಕಾಲದಲ್ಲಿ ನಡಿಯುತ್ತದೆ ವರನು ಹೊಗುತ್ತಿಕೊಂಡು ದಂಡಕಮಂಡಲಾದಿಗಳನ್ನೂ ಕಾಳೆಪುಸ್ತಕಗಳನ್ನೂ ಹಿಡಿದುಕೊಂಡು ಹೆಣ್ಣಿನ ಮನೆಗೆ ಹೋಗುವುದುಂಟು. ಮದರಾಸಿನಲ್ಲಿ ಈ ಸಲ ನಡೆದ ಒಂದು ಮದುವೆಯಲ್ಲಿ ಮದುವೇ ಗಂಡು "ಕಾಶೀಯಾತ್ರೆ" ಹೊರಟಾಗ ಕಾಳೇ ಪುಸ್ತಕಕ್ಕೆ ಪ್ರತಿಯಾಗಿ ಇಂಗ್ಲೀಷು ಕವಿಯಾದ ಪ್ರಸಿದ್ಧ ಷೇಕ್ಸ್‌ಪಿಯರಿನ ನಾಟಕಗಳೆಂಬ ಇಂಗ್ಲಿಷ್ ಪುಸ್ತಕವನ್ನು ಹಿಡಿದುಕೊಂಡು ಹೋದನೆಂದು ತಿಳಿಯುವುದು

***

ಅನ್ಯದೇಶಗಳಿಂದ ೧೯೦೬ನೇ ಇಸವಿಯಲ್ಲಿ ೨೦,೯೭,೫೯೭ ಚತ್ರಿಗಳು ರಫ್ತಾಗಿ ಹಿಂದುಸ್ಥಾನಕ್ಕೆ ಬಂದು ಬಿಕರಿಯಾದವು ಅದರ ೧೯೦೭ನೇ ವರುಷದಲ್ಲಿ ೧೮,೭೧,೩೨೨ ಚತ್ರಿಗಳು ಮಾತ್ರ ಈ ರಾಷ್ಟ್ರಕ್ಕೆ ತರಿಸಲ್ಪಟ್ಟವು. ಇದರಿಂದ ಅನ್ಯದೇಶಗಳ ಚತ್ರಿಯನ್ನು ಈ ದೇಶಕ್ಕೆ ತರಿಸುವುದು ಕಡಮೆಯಾಗುತ್ತಿದೆ ಎಂದು ಗೊತ್ತಾಗುತ್ತದೆ. ಆದರೆ ಚತ್ರಿ ಕಡ್ಡಿಗಳನ್ನೂ ಇತರ ಭಾಗಗಳನ್ನೂ ಅನ್ಯ ದೇಶಗಳಿಂದ ತರಿಸುವುದು ವರುಷ ವರುಷ ಹೆಚ್ಚುತ್ತಿದೆ. ಹ್ಯಾಗಂದರೆ ೧೯೦೫ರಲ್ಲಿ ೮,೫೩,೫೭೫ ರೂಪಾಯಿನಷ್ಟು ಕಡ್ಡಿ ಮೊದಲಾದ ಚತ್ರಿಯ ಭಾಗಗಳನ್ನು ತರಿಸಿದರು. ಕಳೆದ ವರುಷವಾದರೋ ೨೫,೪೩,೩೪೦ ರೂಪಾಯಿನಷ್ಟು ತರಿಸಲ್ಪಟ್ಟಿರುತ್ತವೆ. ಈ ದೇಶದಲ್ಲಿ ಚತ್ರಿಗಳ ತಯಾರಿಯೂ ದಿನೇ ದಿನೇ ಹೆಚ್ಚುತ್ತಿರುವುದು. ಅನ್ಯದೇಶದಿಂದ ಇಲ್ಲಿಗೆ ಬರುವ ಚತ್ರಿ ೧ಕ್ಕೆ ಸರಾಸರಿ ನೋಡಿದರೆ ಕ್ರಯವು ೧೫ ಆಣೆ ೧೦ ಪೈಗಿಂತ ಹೆಚ್ಚಾಗುವುದಿಲ್ಲವೆಂದು ತಿಳಿದು ಬಂದಿದೆ

***

ಬಂಗಾಳಾ ಅಧಿಪತ್ಯದಲ್ಲೆಲ್ಲಾ ಭಟ್ಪಾರಾ ಎಂಬ ಸ್ಥಳವು ಸಂಸ್ಕೃತ ವಿದ್ಯಾಭಿವೃದ್ಧಿಗೂ ಪಂಡಿತ ಸಮಾಜಕ್ಕೂ ಪ್ರಸಿದ್ಧಿಹೊಂದಿರುವುದು ಆ ಪಟ್ಟಣದಲ್ಲಿ ಸಿಡಿಮದ್ದಿನ ಗುಂಡುಗಳ ತಯಾರಿಗೆ ಮಸಲತ್ತುಗಳೂ ಫಿತೂರಿಯೂ ನಡಿಯುತ್ತಲಿವೆ ಎಂದು ಅನುಮಾನ ಕಂಡು ಬಂದದ್ದರಿಂದ ಪೋಲೀಸಿನವರು ಅಂದರೆ ೨೦ ಮಂದಿ ಹುದ್ದೇದಾರರೂ ೧೫೦ ಮಂದಿ ಕಾನ್‌ಸ್ಟೆಬಲ್ಲರೂ ಸೇರಿ ಕಳೆದ ಮಂಗಳವಾರ ಸಮರಾತ್ರಿಯಲ್ಲಿ ಹೋಗಿ ಅನುಮಾನವಿದ್ದ ಹದಿಮೂರು ಮನೆಗಳನ್ನು ಪ್ರವೇಶಿಸಿ ಜಪ್ತಿಮಾಡಿ ಅನೇಕ ಕಾಗದಪತ್ರಗಳನ್ನು ಸಂಗ್ರಹಮಾಡಿದ್ದಲ್ಲದೆ ಏಳು ಮಂದಿ ಪಂಡಿತರನ್ನು ದಸ್ತಗಿರಿಮಾಡಿದರು ಆ ಪೈಕಿ ಕೆಲವರು ಬಹಳ ಹೆಸರುವಾಸಿಯನ್ನು ಪಡೆದಿರತಕ್ಕವರು ಪಂಡಿತ ಪಂಚಾನನ ತರ್ಕರತ್ನ, ಡಾಕ್ಟರ್ ಭೋಲಾನಾಥಘೋಷ್, ಬಾಬು ಹರಿದಾಸ ಭಟ್ಟಾಚಾರ್ಯ ಎಂಬವರೂ ದಸ್ತಗಿರಿಮಾಡಲ್ಪಟ್ಟಿದ್ದಾರೆ ಇವರೆಲ್ಲಾ ಈಗ ಕಲ್ಕತ್ತೆಯಲ್ಲಿ ಪೋಲೀಸಿನವರ ವಶದಲ್ಲಿರುವರು. ಸಂಸ್ಕೃತವಿದ್ಯೆಯಲ್ಲೂ ಶಾಸ್ತ್ರಗಳಲ್ಲೂ ಪಂಡಿತ ಪಂಚಾನನ ಎಂಬವರು ಬಹಳ ಯಶೋವಂತರಾಗಿ ಭಟ್ಪಾರಾ ಸಂಸ್ಕೃತ ಕಾಲೇಜಿನ ಪ್ರೊಫೆಸರಾಗಿ ಕೆಲಸಮಾಡುತ್ತಿದ್ದರು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್‌ಪಾಂಡೆನ್ಸ್.

ಪೋಲೀಸಿನವರ ಮೇಲೆ ಆಕ್ಷೇಪಣೆಯು.

ಅಯ್ಯಾ,

ಹರಿಹರದ ಸಬ್ ತಾಲ್ಲೋಕು ವಾಮೇನಹಳ್ಳಿ ಗ್ರಾಮದ ವಾಸಸ್ಥನಾದ ಕೃಷ್ಣಶಿಂಗೆಂಬಾತನು ಇಲ್ಲಿಗೆ ಸಮೀಪವಾದ ತೊಂಡಜ್ಜೀ ಪೋಲೀಸು ಸ್ಟೇಷನಿನಲ್ಲಿ ಕಾನ್‌ಸ್ಟೇಬಲ್ ಆಗಿ ಈಗ ೧೦ ವರ್ಷಗಳಿಂದಲೂ ಇದ್ದನು. ಈತನು ಹೋದ ತಿಂಗಳು ತಾ ೨೩ನೇ ಮಂಗಳವಾರ ರಾತ್ರಿ ಇದೇ ಗ್ರಾಮದಲ್ಲಿ ಬಡ ರೈತನಾದ ಹಾಲಪ್ಪನೆಂಬಾತನ ಮನೆಗೆ ನುಗ್ಗಿ ಆತನ ಹೆಂಡತಿಯು ತಡವಲು ಆಕೆಯು ಗಲಭೆಮಾಡಿದ್ದರ ಮೇಲೆ ಬಹುಶಃ ಆಕೆಯ ಗಂಡನು ಓಡಿಬಂದು ನೋಡುವಲ್ಲಿ ಮೇಲ್ಕಂಡ ಕಾನ್‌ಸ್ಟೇಬಲ್ ಕೃಷ್ಣಶಿಂಗಪ್ಪನೆಂಬಾತನು ಮನೆಯಲ್ಲಿ ಸಿಕ್ಕಿದನು. ಅಷ್ಟರಲ್ಲೇ ಗ್ರಾಮದಲ್ಲಿ ಬಹಳ ಗಲಭೆ ಆದ್ದರಿಂದ ಎಲ್ಲರೂ ಬಂದು ಬಿಡಿಸಿದರು ಅಷ್ಟರಲ್ಲೇ ಅವನು ಉಟ್ಟುಕೊಂಡ ಪಂಚೆ ಸಹಾ ಹರಿದು ಇವನ ಮನೆಯಲ್ಲಿ ಬಿಟ್ಟು ಓಡಿಹೋಗಿ ತನ್ನ ಮನೆಯಲ್ಲಿ ಹೊಕ್ಕುಕೊಂಡು ಬಾಗಿಲು ಹಾಕಿಕೊಂಡನು. ರೈತರೂ ಪಟೇಲ್ ಸಹಾ ಹೋಗಿ ಕೂಗಿದಾಗ್ಯೂ ಬಾಗಲು ತೆಗಿಯಲಿಲ್ಲ. ಅನಂತರ ಎಲ್ಲರೂ ಚಾವಡಿಗೆ ಬಂದ ಮೇಲೆ ಹಿತ್ತಲು ಬಾಗಿಲಿನಿಂದ ಹತ್ತಿರ ಇರುವ ಬೆಟ್ ಪೋಸ್ಟಾದ ಸಾರಥಿ ಗ್ರಾಮಕ್ಕೆ ಓಡಿಹೋಗಿ ಗೌಡನ ಮುಂದೆ ನಡದ ಸ್ಥಿತಿ ಹೇಳಿಕೊಳ್ಳುತ್ತಿದ್ದನು ಅಷ್ಟರಲ್ಲೇ ವಾಮೇನಹಳ್ಳಿಗ್ರಾಮದ ಪಟೇಲನು ಕೃಷ್ಣಶಿಂಗಪ್ಪನು ಈ ರೀತಿ ಇಲ್ಲಿ ಮನೆ ನುಗ್ಗಿ ಓಡಿಹೋಗಿರುವದಾಗಿ ಒಂದು ಕಾಗದ ಬರೆದು ಕಳುಹಿಸಿದನು ಅದರಂತೆ ರಾತ್ರಿಯೆಲ್ಲಾ ಉಸ್ತುವಾರಿ ಇಟ್ಟಿದ್ದನು ಮಾರನೇ ಬೆಳಗ್ಗೆ ಹಾಲಪ್ಪನು ದೆಪ್ಯೂಟಿ ಅಮಲ್ದಾರ್ರಲ್ಲಿ ಫಿರ್ಯಾದು ದಾಖಲ್ಮಾಡಿದನು. ಇದು ಆದ ೨ನೇ ದಿವಸ ಸಾರಥಿ ಗ್ರಾಮದ ಪಟೇಲನು ಅದನೂಲು ಮಾಡಿಸಲು ಹರಿಹರಕ್ಕೆ ಹೋಗಿ ಅಮಲ್ದಾರ್ರನ್ನು ನೋಡಲು, ವಾಮೇನಹಳ್ಳಿ ವಿಚಾರ ಏನೆಂಬದಾಗಿ ಕೇಳಲು, ಪಟೇಲನು ನಡದ ಸ್ಥಿತಿ ನಿಜವಾಗಿ ಹೇಳಿದನು. ಅನಂತರ ಅಮಲ್ದಾರ್ರು ಪೋಲೀಸು ಇನ್‌ಸ್ಪೆಕ್ಟರಿಗೆ ವಿಚಾರಿಸಿಕೊಂಡು ಬರಬೇಕಾಗಿ ಅಪ್ಪಣೆ ಕೊಡಿಸಿದರು. ಅವರು ಬಂದು ರಿಕಾರ್ಡು ಮಾಡಿಕೊಂಡು ಹೋದರು. ಅನಂತರ ಮೊದಲೇ ಅಮಲ್ದಾರ್ರಿಗೆ ನಿಜಸ್ಥಿತಿ ಗೊತ್ತು ಇದ್ದದ್ದರಿಂದ ತಾ. ೯ ರಲ್ಲಿ ಪುನಃ ತಾವು ಈ ಗ್ರಾಮಕ್ಕೆ ಬಂದು ಎಲ್ಲಾ ತನಿಖೆ ಮಾಡಿಕೊಂಡು ನಿಜಸ್ಥಿತಿಯೆಲ್ಲಾ ಗೊತ್ತುಮಾಡಿಕೊಂಡು ಹೊರಟು ಹೋದರು ಹೀಗಿದ್ದಾಗ್ಯೂ ಮನೆ ನುಗ್ಗಿದ ಕಾನ್‌ಸ್ಟೇಬಲ್‌ಗೆ ಯಾವ ತರಹಾ ಶಿಕ್ಷೆ ಮಾಡದೆ ಇರುವದು ತುಂಬಾ ಶೋಚನೀಯವಾಗಿರುತ್ತದೆ ಇನ್ನು ಮುಂದೆ ನಾದರೂ ಜಾಗ್ರತೆ ವಿಚಾರಣೆ ಮಾಡುತ್ಯರೆಂತ ನಂಬಿಕೊಂಡಿರುವೆ

ಯಥಾರ್ಥವಾದಿ.

ತಾಲ್ಲೋಕು ವರ್ತಮಾನಗಳು.

ನಂಜನಗೂಡು :—ಇಲ್ಲಿ ಆಗಾಗ್ಗೆ ಜಡಿಮಳೆ ಸುರಿಯುತ್ತಾ ಇದೆ ಇದರಿಂದ ಜೋಳದ ಪೈರುಗಳು ಚನ್ನಾಗಿ ಬೆಳೆದು ತೆನೆಯಾಗುತ್ತಾ ಇವೆ. ಹೊಳೆಯಲ್ಲಿ ನೀರು ದಿನ ದಿನ ಜಾಸ್ತಿಯಾಗುತ್ತಾ ಇದೆ. ರೋಗಾದಿ ಉಪದ್ರಗಳು ಸಧ್ಯಕ್ಕೆ ಕಾಣುವದು ಇಲ್ಲ —ಹಿಂದಿನ ವಾರ ಚಿಕ್ಕೀನ ಛತ್ರದ ಹತ್ತಿರವಿರುವ ಲಿಂಗಾಯತರ ಮಠದಲ್ಲಿ ಮೇ॥ ಶ್ರೀ ಕಂಬಳೆ ಸ್ವಾಮಿಗಳ ವಿವಾಹಾದಿ ಉತ್ಸವ ಅತ್ಯಂತ ಮಹೋತ್ಸವ ಬಹು ವಿಜೃಂಭಣೆಯೊಡನೆ ನಡಿಯಿತು. ಇದಕ್ಕಾಗಿ ಬೆಟ್ಟದ ಪುರದ ಶ್ರೀನಿರಂಜನಸ್ವಾಮಿಗಳು ದಯಮಾಡಿಸಿದ್ದರು ಮತ್ತು ಬೇರೆ ಬೇರೆ ಕಡೆಗಳಿಂದ ಎರಡು ಸಾವಿರ ಲಿಂಗವಂತರು ಸೇರಿ ಬಂದಿದ್ದರು. ಶಿವಪ್ಪ ಶಾಸ್ತ್ರಿಗಳಿಂದ ಶಿವಕಥೆಯೂ ನಡಿಸಲ್ಪಟ್ಟಿತು. ಸೇರಿ ಬಂದಿದ್ದ ಎಲ್ಲಾ ಶಿವಭಕ್ತರಿಗೂ ಭೋಜನಪಾನಾದಿಗಳೂ ಆನಂದವಾಗಿ ನಡಿಸಲ್ಪಟ್ಟಿತು. ದೇವನೂರಲ್ಲಿಯೂ ಪ್ರತಿವರ್ಷ ನಡಿಯುತ್ತಾ ಇರುವ ಮಹೇಶ್ವರ ಸ್ವಾಮಿಗಳವರ ಗಣಪರ್ತಕ್ಕೆ ನಡಿಯಿತು ಚಾಮರಾಜನಗರ, ಗುಂಡ್ಲುಪೇಟೆ, ಮೈಸೂರು ಮುಂತಾದ ಸ್ಥಳಗಳಿಂದ ಜನರು ಸೇರಿದ್ದರು ಅಲ್ಲಿಯೂ ಶಿವಭಕ್ತರಿಗೆಲ್ಲಾ ವಿಶೇಷ ಉತ್ಸವ ನಡಿಯಿತು ಅಲ್ಲಿನ ಸ್ವಾಮಿಗಳವರ ಪುತ್ರರನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಮೆರವಣಿಗೆ ಮಾಡಿದರು. ಅಲ್ಲದೆ ಬಹು ಬಿರುಸು ಮುಂತಾದ ತಮಾಷೆಗಳು ನಡೆದವೆ ಶಿವಪ್ಪ ಶಾಸ್ತ್ರಿಗಳು ಕೆಲವು ಉಪನ್ಯಾಸಗಳನ್ನು ಮಾಡಿ ಸಭಿಕರನ್ನು ಬಹು ಸಂತೋಷಪಡಿಸಿದರು

ಚಿತ್ರದುರ್ಗ.—ಕಳೆದ ವಾರವೆಲ್ಲಾ ಇಲ್ಲಿ ಶೀತಘಾಳಿ ಬೀಸುತ್ತಾ ಮೋಡ ಕವಿದುಕೊಂಡು ಸೂರ್ಯನ ಕಿರಣಗಳ ಸುಳಿವೇ ಇಲ್ಲದೆ ತುಂತುರು ಸೋನೆ ಬೀಳುತ್ತದೆ ಬಹಳ ಚಳಿ ಶೀತ ನೆಗಡಿ ಕೆಮ್ಮು ಜನರನ್ನು ಬಾಧಿಸುತ್ತಲಿವೆ. ಮಳೆಮಾತ್ರ, ಇಲ್ಲವಾಗಿದೆ ಕೆಲವು ಕಡೆ ಈ ತುಂತುರು ಹನಿಗೇನೇ ರೈತರು ಬೀಜ ಬಿತ್ತು ಮಾಡಿ ಮುಗಿಲನ್ನೇ ನೋಡುತ್ತಿದ್ದರು. ಆದರೆ ಅವರ ನಿರೀಕ್ಷೆಯು ಈ ಪರಿವಿಗೂ ಭಂಗವಾಗಿರುತ್ತದೆ. ಕೆಲವು ಜಮೀನುಗಳು ಮಳೆಗೆ ಸ್ವಲ್ಪ ಕಾದಿವೆ. ಈಗ ಕೆಲವು ದಿನಗಳಿಂದ ಕಟ್ಟಿಗೆ ತಲೆಹೊರೆಯ ಕತ್ತೆ ಕೋತಿಗೂ ಹಾಸಲು ಮಗುಚಿ ಮಾಡಿ ಲೈಸೆನ್ಸ್ ಚೀಟಿ ಪಡೆಯುವದು ಕಷ್ಟಕರವಾಗಿದೆ ದಾವಣೆವಾಸಿಗಳು ಬಹಳ ಮಟ್ಟಿಗೆ ಎರಿ ಮಳೆ ಇಲ್ಲದಿರುವಾಗ ಬಡಬಗ್ಗರು ಕಟ್ಟಿಗೆ ಮಾರಿಯಾದರೂ ಹೊಟ್ಟೆ ಹೊರೆಯೋಣವೆಂದರೆ ಇದಕ್ಕೂ ತೊಂದರೆಯಾಯಿತು ಮೇಲೆಷ್ಟು ಇಲಾಖೆಯವರು ದಯಾಳುಗಳಾಗಿ ಈ ವಿಷಯಕ್ಕೆ ಲಕ್ಷ್ಯಕೊಡುವರೆಂದು ನಂಬಿದ್ದೇವೆ.—ಕಳೆದವಾರ ಇಲ್ಲಿಗೆ ನೇಟಿವ್ ಸರ್ಕಸ್ಸಿನವರು ಬಂದು ಆಡುತ್ತಲಿದಾರೆ ಹುಲಿ, ಆನೆ, ಕಪಿಗಳಿಂದಲೂ, ವಿಚಿತ್ರವಾದ ಅಂಗಸಾಧನೆಯಿಂದಲೂ ಬಹು ಮೋಜನ್ನು ತೋರಿಸಿ ಆಡುತ್ತಿದ್ದಾರೆ —ಈಗ ಬೀಳುವ ಜಡಿಮಳೆಗೂ ಸಂದುಗೊಂದುಗಳಲ್ಲಿರುವ ಕೇಳಲಶಕ್ಯವಾದ ಕಶ್ಮಲಕ್ಕೂ ಸಣ್ಣ ಸಣ್ಣ ಗಲ್ಲಿಗಳಲ್ಲಿ ಮುಖವಿಡುವದಕ್ಕೆ ಆಗದಷ್ಟು ಅಸಹ್ಯವಾಗಿದೆ. ಕಸ ಗುಡಿಸುವವರು ಆ ಕಡೆಗೆ ಲಕ್ಷ್ಯ ಕೊಡುವಂತೆ ಕಾಣುವದಿಲ್ಲ. ಮುನಿಸಿಪಲ್ ಅಧಿಕಾರಿಗಳು ಈ ವಿಷಯಕ್ಕೆ ಲಕ್ಷ್ಯಕೊಟ್ಟು ಕಸವು ಸಾಗಿಸಿ ಪಾಕುಮಾಡಿಸಿದರೆ ಪ್ರಜೆಗಳ ಪ್ರೀತಿ ಗೌರವಗಳಿಗೆ ಪಾತ್ರರಾಗುವರು —ಶಿವಮೊಗ್ಗದಿಂದ ಸೆಷನ್ಸ್ ಜಡ್ಜರಾದ ಮೆ॥ ಫ್ಲಮರ್ ಯವರು ಇಲ್ಲಿಗೆ ಬಂದು ಕೆಲವು ಮೊಕದ್ದಮೆಗಳನ್ನು ತನಿಖೆಮಾಡುತ್ತಿದ್ದಾರೆ ಅವರು ಇನ್ನು ಕೆಲವು ದಿನಗಳು ಇಲ್ಲೇ ಇರುವದಾಗಿ ತೋರಿಬರುತ್ತೆ.—ವೈಶ್ಯ ಮಹಾ ಸಭೆಯು ಈ ತಿಂಗಳು ತಾ ೧೮—೧೯ನೇ ತಾರೀಖುಗಳಲ್ಲಿ ಮೈಸೂರು ರಾಜಧಾನಿಯಲ್ಲಿ ಸೇರಬೇಕೆಂಬ ವಿಷಯ ಎಲ್ಲರಿಗೂ ಗೊತ್ತಿದೆಯಷ್ಟೆ ಚಿತ್ರದುರ್ಗದ ಅಶೇಷ ವೈಶ್ಯ ಮಹಾ ಜನಗಳು ತಾ. ೫ನೇ ಭಾನುವಾರ ಇಲ್ಲಿರುವ ಅಡ್ವೊಕೇಟ್ ಮೆ॥ ಅನಂತಶೆಟ್ಟರ ಮನೆ ಮಾಳಿಗೆ ಮೇಲೆ ಸೇರಿ ಈ ಸಭಾ ವಿಷಯ ಚರ್ಚಿಸಿದರು. ಆ ಕಾಲದಲ್ಲಿ ಮೆ॥ ಅನಂತಶೆಟ್ಟರು ಈ ಮಹಾ ಸಭೆ ಸೇರತಕ್ಕ ಉದ್ದೇಶ್ಯ, ಅದರಿಂದ ವೈಶ್ಯ ಮಂಡಲಿಗೆ ಆಗತಕ್ಕ ಅನುಕೂಲವುಗಳನ್ನು ವಿಸ್ತಾರವಾಗಿ ವಿವರಿಸಿ ಹೇಳಿದರು. ಅದನ್ನು ಕೇಳಿ ಎಲ್ಲರೂ ಸಂತೋಷಪಟ್ಟು, ಸಭಾ ನಡಿಯತಕ್ಕ ಕಾಲಕ್ಕೆ ವೈಶ್ಯ ಮಹಾ ಸಭೆಗೆ ಮೆಂಬರಾಗಿ ಹೋಗಲು ಆರು ಮಂದಿ ದೊಡ್ಡ ಮನುಷ್ಯರು ಒಪ್ಪಿಕೊಂಡರು ಅನಂತರ ವೀಳ್ಯಗಳು ಬರಮಾಡಿತ್ತೂಯಿತು.

ಸಿರಿಯ್ಯ.—ಎ ವಿ. ಸ್ಕೂಲ್ ವಿದ್ಯಾರ್ಥಿಗಳು ೪ ನೇ ತಾ ಶನಿವಾರ ಸಾಯಂಕಾಲ ವರ್ಗವಾಗಿ ಹೋಗುವ ತಮ್ಮ ಹೆಡ್ ಮಾಸ್ಟರ್ ನರಸಿಂಹೈಯಂಗಾರರಿಗೋಸ್ಕರ ಒಂದು ಟೀ ಪಾರ್ಟಿಯನ್ನು ಏರ್ಪಡಿಸಿದ್ದರು. ಇವರಿಗೆ ವರ್ಗವಾಯಿತೆಂಬ ಸುದ್ದಿ ಹುಟ್ಟಿದ ಕೂಡಲೆ ಇಂಗ್ಲಿಷ್ ವಿದ್ಯಾರ್ಥಿಗಳೂ, ಬಾಲಕರ ಪೋಷಕರೂ ಚಿಂತಾಕ್ರಾಂತರಾಗಿ ಮೆ॥ ಭಾಭಾ ಸಾಹೇಬರಿಗೆ ಅರ್ಜಿ ಮೂಲಕವೂ, ತಂತಿ ಮೂಲಕವೂ ಅರಿಕೆ ಮಾಡಿಕೊಂಡರು ವಿದ್ಯಾರ್ಥಿಗಳ ಪರೀಕ್ಷೆ ಕಾಲ ಸಮೀಪವಾಗಿರುವದರಿಂದಲೂ, ಇವರು ಕಿಂಡರ್‌ಗಾರ್ಟನ್ ಕಲಿತು ಬಾಲಕರಿಗೆ ಅದನ್ನು ಕಲಿಸುತ್ತಾರೆಂಬ ಆಶೆಯಿಂದಲೂ ಸದರಿ ಮಾಸ್ಟರನ್ನು ವರ್ಷದ ಮಧ್ಯೆ ವರ್ಗ ಮಾಡಬಾರದೆಂದು ಪ್ರಾರ್ಥಿಸಿಕೊಂಡಿದ್ದರು. ಕಡೆಗೂ ಇವರ ಪ್ರಾರ್ಥನೆಯು ಸಾರ್ಥಕವಾಗದೆ ಬೆಂಗಳೂರಿಗೆ ವರ್ಗವಾಯಿತು. ಹೀಗಿದ್ದರೂ, ಸದರಿ ಬಾಲಕರು ತಮ್ಮ ಬೋಧಕರನ್ನು ಸಂತೋಷಪಡಿಸುವದಕ್ಕೂ, ತಮ್ಮ ಕೃತಜ್ಞತೆಯನ್ನು ಪ್ರೀತಿಪೂರ್ವಕವಾಗಿ ತೋರಿಸುವದಕ್ಕೂ ಈ ಟೀ ಪಾರ್ಟಿಯನ್ನು ಕಲ್ಪಿಸಿ, ತಮ್ಮ ಸಂತೋಷದಲ್ಲಿ ಭಾಗಿಗಳಾಗಿರುವಂತೆ ಅಮಲ್ದಾರರನ್ನೂ ಅನೇಕ ದೊಡ್ಡ ಮನುಷ್ಯರನ್ನೂ ಬರಮಾಡಿಕೊಂಡಿದ್ದರು. ಅಲ್ಲದೆ ಕೆಲವು ಸ್ಕೂಲ್ ಬಾಲಿಯರನ್ನೂ ಕರೆಸಿದ್ದರು ಸಭಾಸದರು ಕೂಡಿದನಂತರ, ಬಾಲಕರ ಪ್ರಾರ್ಥನೆ ಪ್ರಕಾರ ಅಮಲ್ದಾರರೂ, ಹೆಡ್ ಮಾಸ್ಟರೂ ಉಚಿತಾಸನಗಳನ್ನಲಂಕರಿಸಿದರು ಬಳಿಕ ಬಾಲಕರ ಪರವಾಗಿ ತಿಮ್ಮಪ್ಪನೆಂಬ ಇಂಗ್ಲಿಷ್ ವಿದ್ಯಾರ್ಥಿಯೂ, ಅ॥ ಮಾಸ್ಟರುಗಳ ಪರವಾಗಿ ಪ್ರಥಮ ಅ॥ ಮಾಸ್ಟರಾದ ಮೆ॥ ವೆಂಕಣ್ಣನವರೂ ನಿಂತು ೩॥ ವರ್ಷಗಳಲ್ಲಿ ಹೆಡ್ ಮಾಸ್ಟರಿಂದ ವಿದ್ಯಾಬುದ್ಧಿಗಳನ್ನು ಹೊಂದಿಕೊಂಡದ್ದಲ್ಲದೆ, ಪ್ರೀತಿಯಿಂದ ಕೂಡಿದ್ದ ಎಚ್ಚರಿಕೆ, ಗದರಿಕೆ ಮಾತುಗಳಿಂದ ತಮಗಾದ ಪ್ರಯೋಜನವನ್ನೂ ಮುಖ್ಯವಾಗಿ ಒಳ್ಳೇ ಮಾದರಿಯನ್ನು ಸಲಿಗೆಯನ್ನು ತೋರಿಸುತ್ತಾ ಇದ್ದದ್ದನ್ನೂ ಕುರಿತು ವಿವರಿಸಿದರು ಅನಂತರ ಮತ್ತೆ ಮುದ್ದೀಯರ ಪರವಾಗಿಯೂ ಇಬ್ಬರು ನಿಂತು ಸದರಿ ಮಾಸ್ಟರ ಗುಣ ನಡೆನುಡಿಗಳನ್ನು ಕುರಿತು ಮಾತನಾಡಿದರು ತರುವಾಯ ಹೆಡ್ ಮಾಸ್ಟರು ಎದ್ದು ಪ್ರೀತಿಯಿಂದ ಕೂಡಿದ ದುಃಖಸ್ವರದಲ್ಲಿ ಅಧಿಕ ಮಾತನಾಡಲಾರದಂತಾಗಿ—ತಾವುಗಳೆಲ್ಲಾ ನನ್ನನ್ನು ಹೊಗಳಿರುವಷ್ಟಕ್ಕೆ ನಾನು ಪಾತ್ರನಲ್ಲವೆಂದು ಸೂಚಿಸಿ, ಮುಖ್ಯ ತಮ್ಮಗಳ ಪ್ರೀತಿಗಾಗಿ ಸಂತೋಷಪಡುತ್ತೇನೆಂದೂ ಇದೇ ಪ್ರೀತಿ ವಿಶ್ವಾಸಗಳನ್ನು ತಮಗೆ ಬದಲಾಗಿ ಬರುವವರಲ್ಲಿಯೂ ಇಟ್ಟಿರಬೇಕೆಂದೂ ಕೇಳಿ ಕುಳಿತುಕೊಂಡರು. ಕಡೆಯಲ್ಲಿ ಅಮಲ್ದಾರರು ಸಭಿಕರನ್ನು ಕುರಿತು ಉಭಯಪಕ್ಷದವರು ಹೇಳಿದ ಹೊಗಳಿಕೆಯನ್ನೂ, ವರ್ಗವಾದ್ದರಿಂದ ಗುರುಶಿಷ್ಯರಲ್ಲಿರುವ ವ್ಯಸನವನ್ನೂ ತಿಳಿದವರಾಗಿ, ಗುರುಶಿಷ್ಯರಿಗೂ ಸಭಿಕರಿಗೂ ಕೆಲವು ಆದರಣೆ, ಧೈರ್ಯ ಬುದ್ಧಿವಾದಗಳನ್ನು ಕೇಳಿ, ಸರ್ಕಾರದ ಅಪ್ಪಣೆ ಸಕಲರೂ ಶಿರಸಾವಹಿಸಿ ನಡೆಯುವದು ನ್ಯಾಯವೆಂದು ತಿಳಿಸಿದರು. ಬಾಲಕಿಯರು ಒಟೀಲಿನ ಕೆಲವು ಪದಗಳನ್ನು ಹಾಡುತ್ತಿರಲು, ಸಭಿಕರಿಗೆ ಪುಷ್ಪತಾಂಬೂಲಗಳು ಹಂಚಲ್ಪಟ್ಟವು —ಈ ಪ್ರಾಂತ್ಯ ಈ ವರುಷ ಮುಂಗಾರು ಮಳೆ ತಿಂಗಳ ಕೆಳಗೆ ಒಂದೆರಡು ಸಲ ಬಂದದ್ದೇ ವಿನಃ ಈ ವರೆಗೂ ಮಳೆ ಇಲ್ಲವೇ ಇಲ್ಲ ದನಗಳೂ, ಜನಗಳೂ ತುಂಬಾ ಚಿಂತೆಯೂ, ಕೊರತೆಯೂ ಉಳ್ಳವರಾಗಿರುತ್ತಾರೆ ದಾವಣೆವಾಸಿಗಳು ರೂಪಾಯಿಗೆ ರಾಗಿ ೧೩—೧೪ ಸೇರು, ಅಕ್ಕಿ ೭ ಸೇರು ಮಾರಾಟವಾಗುತ್ತವೆ ಬಡ ಜನರೂ, ಅಲ್ಪ ಸಂಬಳಗಾರರೂ ಜೀವಿಸುವದು ಕಷ್ಟ ದನಕರಗಳಿಗೆ ಅಡವಿಯಲ್ಲಿ ಹುಲ್ಲಿಲ್ಲ ಮನೆಯಲ್ಲಿಯೂ ಸಾಕಾದಷ್ಟು ಹುಲ್ಲಿಗೆ ಮಾರ್ಗವಿಲ್ಲ ಒಂದು ಹೊರೆ ಹುಲ್ಲಿಗೆ ೧೨ ಆಣೆ ಕ್ರಯವಾಗಿದೆ ಈ ಪ್ರಕಾರ ಜನ, ದನಗಳ ಆಹಾರವು ಅತಿ ತುಟ್ಟಿಯಾಗಿರುತ್ತದೆ ಈ ಪ್ರಾಂತ್ಯದಲ್ಲಿ ಮೂರು ವರ್ಷಗಳಿಂದಲೂ, ಸರಿಯಾದ ಮಳೆ, ಬೆಳೆಗಳಿಲ್ಲದೆ ಕೊರತೆಯಲ್ಲಿಯೇ ಸಾಗಿಯೂ ಹೀಗೂ ಕಾಲ ಕಳೆದೆವು, ಈ ವರ್ಷವೂ ಮಳೆ ಬೆಳೆಗಳಾಗದೆ ಹೋದರೆ ವಿರಕ್ಷಾಮವೇ ಬರುವದೆಂದೂ ಹೇಳಿಕೊಂಡು ಜನರೆಲ್ಲಾ ಚಿಂತಾಕ್ರಾಂತರಾಗಿರುತ್ತಾರೆ.

ತಂತೀವರ್ತಮಾನ ಸಾರವು

ಅನ್ಯದೇಶಗಳ ವರ್ತಮಾನಗಳು

ಜೂಲೈ ತಾ. ೭ —ದಕ್ಷಿಣ ಆಫ್ರಿಕಾದಲ್ಲಿ ಏಷ್ಯಾ ಜನರು ತಮ್ಮ ಹೆಸರು ನಮೂದಾದದ್ದನ್ನು ಬರಿಸಿ, ಕೈ ಬೆರಳನ್ನು ಒತ್ತ ಬೇಕೆಂಬ ಕಾನೂನನ್ನು ರದ್ದು ಮಾಡಿಸಬೇಕೆಂತಲೂ, ಅದಕ್ಕಾಗಿ ಅಲ್ಲಿರುವ ಏಷ್ಯಾ ಜನರು ಎಷ್ಟು ಕಷ್ಟ ನಷ್ಟಗಳನ್ನಾದರೂ ಅನುಭವಿಸುವುದಕ್ಕೆ ಸಿದ್ಧರಾಗಿರಬೇಕೆಂತಲೂ ಮೆ॥ ಗಂಧಿಯವರು ತಿಳಿಸಿರುತ್ತಾರೆ.

ಪರ್ಷಿಯಾ ರಾಜ್ಯದಲ್ಲಿ ಮಂತ್ರಿ ಶ್ರೇಷ್ಠರಾದ ಮಾರ್ಕ್ವೆಸ್ ಸ್ಯಾಲಿಸ್‌ಬರಿ(?) ಯವರು ತಮ್ಮ ಶರೀರದ ಸ್ಥಿತಿ ಸರಿಯಾಗಿಲ್ಲವೆಂದು ಹೇಳಿ ಕೆಲಸಕ್ಕೆ ರಾಜೀನಾಮೆ ಕೊಟ್ಟರು ಆದರೆ ರಾಜಾದಾಯದ ವಿಷಯದಲ್ಲಿ ಅವರು ಮಾಡಿದ ಏರ್ಪಾಡು ಸರಿಹೋಗದೆ ಇದ್ದದ್ದಕ್ಕಾಗಿ ಅವರು ರಾಜೀನಾಮೆ ಕೊಟ್ಟರೆಂದು ಊಹಿಸಲ್ಪಟ್ಟಿದೆ ಅವರ ಕೂಡ ಮಂತ್ರಿಗಳಾಗಿದ್ದ ಇತರರೂ ದೊಡ್ಡಮನುಷ್ಯರೂ ಕೆಲಸವನ್ನು ಬಿಟ್ಟುಬಿಟ್ಟರು

ಬುಧವಾರದ ದಿನ ಕೌಂಟ್ ಜೆಪ್ಪೆಲಿನ್ ಎಂಬೊಬ್ಬ ಜರ್ಮನಿ ಕಾರೇಗಾರನು ಆಕಾಶದಲ್ಲಿ ಸಂಚರಿಸುವ ಹಡಗನ್ನು ಕಟ್ಟಿ ಹಾರಿಸಿ ತೋರಿಸಿದನು. ಜರ್ಮನಿ ಚಕ್ರವರ್ತಿಯವರು ತುಂಬಾ ಸಂತೋಷಪಟ್ಟು ಆತನಿಗೆ ತಂತೀ ವರ್ತಮಾನ ಕಳುಹಿಸಿದಾರೆ. ಈ ದಿನ ವುರ್ಟೆಂಬರ್ಗಿನ ದೊರೆಯೂ ರಾಣಿಯೂ ಜೆಪ್ಪೆಲಿನ್‌ಯವರ ವಿಮಾನದಲ್ಲಿ ಕುಳಿತು ಬಹಳ ಹೊತ್ತು ಅಂತರಿಕ್ಷದಲ್ಲಿ ಸಂಚಾರ ಮಾಡಿಕೊಂಡು ಬಂದರು.

ಜೂಲೈ ತಾ. ೪.—ಅಮೇರಿಕದ ಒಹಿಯೋ ಡಿಸ್ಟ್ರಿಕ್ಟಿಗೆ ಸೇರಿದ ಕ್ಲೀವ್‌ಲೆಂಡ್ ಪಟ್ಟಣದಲ್ಲಿ ನೆನ್ನೆ ಭಯಂಕರವಾದ ಮದ್ದಿನ ಅನಾಹುತ ನಡೆದು ಏಳು ಮಂದಿ ಮೃತಪಟ್ಟರು. ಅನೇಕರಿಗೆ ಗಾಯಗಳಾಗಿವೆ.

ನ್ಯೂಯಾರ್ಕ್ಸಿಕೋವಿಗೆ ಸೇರಿದ ಪೋರ್ಟ ಸಮ್ಮರ್ ಎಂಬ ಪಟ್ಟಣದಲ್ಲಿ ಅಪೂರ್ವವಾದ ಸುಂಟರಗಾಳಿ ಮಳೆಗಳು ಪ್ರಾಪ್ತವಾಗಿ ೪೫ ಜನರು ಲಯವಾದರು.

ಅಮೇರಿಕಕ್ಕೆ ಸೇರಿದ ಒಮ್ಮಾವಾ ಸ್ವಾಸ್ಥ್ಯದ ಗವರ್ನಮೆಂಟಿನವರು ಔಷಧಕ್ಕಲ್ಲದೆ ಇನ್ಯಾವ ಕೆಲಸಕ್ಕೂ ಅಫೀಮನ್ನು ಯಾರೂ ಹೊರಗಿನಿಂದ ತರಿಸಕೂಡದೆಂತಲೂ, ಆ ದೇಶದಲ್ಲಿ ಬೆಳೆಸಕೂಡದೆಂತಲೂ, ಬಿಕರಿ ಮಾಡಕೂಡದೆಂತಲೂ ವಿಧಾಯಕ ಮಾಡುವವರಾಗಿದ್ದಾರೆ.

ಪರ್ಷಿಯಾ ರಾಜ್ಯದ ಟೇಬ್ರಿಸ್ ಪಟ್ಟಣದಲ್ಲಿ ಕಳ್ಳಕಾಕರ ಗುಂಪು ಬಹಳ ಹೆಚ್ಚು ಉಪದ್ರವಾಗಿಯೂ, ಅವರ ದಾಂಧಲೆಯನ್ನು ಕೂಡಲೇ ನಿಲ್ಲಿಸಬೇಕಲ್ಲದೆ ಆವುದು ರಷ್ಯಾಗೆ ಯಾವ ಅಟಂಕವಾಗಲಿ ನಷ್ಟವಾಗಲಿ ಉಂಟಾಗದಂತೆಯೂ, ಯುರೋಪಿಯನ್ ನಿವಾಸಿಗಳಿಗೆ ಕಷ್ಟನಷ್ಟಗಳೇನೂ ಪ್ರಾಪ್ತವಾಗದಂತೆಯೂ ಜಾಗ್ರತೆ ಮಾಡಬೇಕೆಂದೂ ಅಜರ್‌ಬೈಜಾನ್ ಗವರ್ನರವರಿಗೆ ಪರರಾಜ್ಯಗಳ ರಾಯಭಾರಿಗಳು ಬರೆದು ತಿಳಿಸಿರುತ್ತಾರೆ.

ಫಿಲಿಪ್ಪೈನ್ ದ್ವೀಪಗಳ ಮುಖ್ಯ ಪಟ್ಟಣವಾದ ಮ್ಯಾನಿಲಾ ನಗರದಲ್ಲಿ ಫಿಲಿಪ್ಪೈನ್ ಜನರು ಸಭೆ ಸೇರಿ ಇನ್ನು ಮುಂದೆ ಅಲ್ಲಿಂದ ಅಮೇರಿಕಕ್ಕೆ ರಫ್ತುಮಾಡಲ್ಪಡುವ ಸರಕುಗಳಿಗೆ ಅಮೇರಿಕದವರು ಯಾವ ಸುಂಕವನ್ನೂ ಹಾಕಿ ವಸೂಲ್ಮಾಡಕೂಡದೆಂದು ಗೊತ್ತುಮಾಡಿ, ಈ ನಿಷ್ಕರ್ಷೆ ತೀರ್ಮಾನವನ್ನು ಅಮೇರಿಕದ ಗವರ್ನಮೆಂಟಿಗೆ ಅರಿಕೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿದರು.

ಜೂಲೈ ತಾ. ೫.—ಗೆಲೀಷಿಯಾ ದೇಶದಲ್ಲಿ ಬೋರಿಸ್ಲಾವ್ ಎಂಬ ಸ್ಥಳದೊಳಗೆ ಸಿಡಿಲು ಬಿದ್ದು ಸೀಮೆಯೆಣ್ಣೆಯ ಭಾವಿಗಳು ಹತ್ತಿಕೊಂಡು ಉರಿದುಹೋದವು. ಆರು ಭಾವಿಗಳಲ್ಲಿ ಯೆಣ್ಣೆ ಸುಟ್ಟುಹೋಗಿದೆ. ಜ್ವಾಲೆಗಳೂ ಸೆಕೆಯೂ ಅಪಾರವಾಗಿದ್ದುದರಿಂದ ಯಾರೂ ಅವುಗಳ ಬಳಿಗೆ ಹೋಗುವುದು ಅಸಾಧ್ಯವಾಗಿದೆ. ಉರಿಯುವ ಎಣ್ಣೆಯು ಭಾವಿಗಳೊಳಗಿಂದ ಮೇಲಕ್ಕೆ ಚಿಮ್ಮುವುದು ಬಹಳ ಭಯವನ್ನುಂಟುಮಾಡುತ್ತಿದ್ದುದನ್ನು ನೋಡಿ ಅಕ್ಕಪಕ್ಕದ ಭಾವಿ ಮುಚ್ಚಿನ ದಿಣ್ಣೆಗಳನ್ನು ಕಟ್ಟಿ ತಡೆದಿರುತ್ತಾರೆ.

ರಷ್ಯಾ ರಾಜ್ಯಕ್ಕೆ ಸೇರಿದ ಯೂಸೋವ್ಕಾ ಎಂಬ ಸ್ಥಳದಲ್ಲಿ ಕಲ್ಲಿದ್ದಲ ಗಣಿಗಳೊಳಗೆ ಸಂಭವಿಸಿದ ಅನಾಹುತದಿಂದ ಸತ್ತವರ ಸಂಖ್ಯೆಯು ಹೆಚ್ಚಾಗಿದ್ದರಲ್ಲಿ ಇನ್ನೂರ ಮೂವತ್ತು ಶವಗಳು ಕೈವಶಕ್ಕೆ ಸಿಕ್ಕಿ ತರಲ್ಪಟ್ಟವು. ಮೃತಪಟ್ಟವರ ಸಂಸಾರಗಳ ಕಷ್ಟನಿವಾರಣೆಗೋಸ್ಕರ ಜಾರ್ ಚಕ್ರವರ್ತಿಯವರು ೧೫,೦೦೦ ರೂಪಾಯಿಯನ್ನು ಕಳುಹಿಸಿಕೊಟ್ಟಿದ್ದಾರೆ.

ಸ್ವೀಡನ್ ದೇಶದ ಪ್ರಜೆಯಾದ ಡಾಕ್ಟರ್ ಸ್ವೆನ್ ಹೆಡಿನ್ ಎಂಬುವನು ಟಿಬೆಟ್ ರಾಜ್ಯದೊಳಗೆ ದೇಶಾಟನೆ ಮಾಡುತ್ತಿದ್ದನು. ಈಚೆಗೆ ಅವನ ವೃತ್ತಾಂತವೇ ತಿಳಿದುಬಂದಿಲ್ಲವೆಂದು ಸಂಶಯಪಟ್ಟು, ಸ್ವೀಡನ್ ಸರ್ಕಾರದವರು ಅವನ ವಿಷಯವನ್ನು ಪತ್ತೆ ಮಾಡಿ ತಿಳಿಸಬೇಕೆಂದು ಇಂಡಿಯಾ ಗವರ್ನಮೆಂಟಿನವರನ್ನು ಕೇಳಿರುತ್ತಾರೆ.

ಜೂಲೈ ತಾ. ೬.—ರಷ್ಯಾ ದೇಶದ ಚಕ್ರವರ್ತಿಯವರೂ ಚಕ್ರವರ್ತಿನಿಯವರೂ ಇಷ್ಟರೊಳಗಾಗಿ ವಿಲಾಯತಿಗೆ ಬರುವ ಹಾಗಿದೆ.

ಟರ್ಕಿಯ ಸುಲ್ತಾನರು ಬಾಗ್ದಾದ್ ಪಟ್ಟಣಕ್ಕೆ ಹೊಸ ರೈಲು ದಾರಿ ಹಾಕಿಸಬೇಕೆಂದು ಗೊತ್ತುಮಾಡಿ, ಸರಿಯಾದ ರಸ್ತೆಯನ್ನು ಕಟ್ಟಿಸಲು ಕೆಲವು ಇಂಜನಿಯರುಗಳನ್ನು ಅವರ ಸಂಬಳ ಸಹಿತ ಸ್ವಲ್ಪ ಹಣವನ್ನೂ ರವಾನೆ ಮಾಡಿದ್ದಾರೆ.

ಹಿಂದುಸ್ಥಾನದ ವರ್ತಮಾನಗಳು.

ಜೂಲೈ ತಾ. ೩.—ಪಾಂಡಿಚೇರಿಯ ಕೋಟೆಯಲ್ಲಿ ಸಿಡಿಮದ್ದಿನ ತಯಾರಿಯು ಪಿಸ್ತೂಲುಗಳನ್ನೂ ಬಂದೂಕುಗಳನ್ನೂ ಹಿಡಿಯುವುದು, ಗುರಿಕಟ್ಟಿ ಹೊಡೆಯುವುದು, ಈ ಸಂಗತಿಗಳನ್ನು ಶ್ರಮವಾಗಿ ಕಲಿಸಿಕೊಡುವುದಕ್ಕೆ ಏರ್ಪಾಡು ಮಾಡಿದ್ದರೆಂದು ಅರಬಿಂದೋ ಘೋಷನು ಹೇಳಿದಾನೆ. ಕಾಳಿಕಾ ಘಾಟಿನ ಹತ್ತಿರ ಒಬ್ಬ ಬಂಗಾಳಿಯನ್ನು ಪೊಲೀಸಿನವರು ದಸ್ತಗಿರಿ ಮಾಡಿದರು. ಅವನ ಹತ್ತಿರ ಸಿಡಿಮದ್ದಿನ ಗುಂಡುಗಳ ತಯಾರಿಗೆ ಅನುಕೂಲವಾದ ಕೆಲವು ಪದಾರ್ಥಗಳು ಸಿಕ್ಕಿರುತ್ತವೆ. ಮಾಂಟೀರನಲ್ಲಿ ಸಿಡಿಮದ್ದಿನ ಗುಂಪಿಗೆ ಸೇರಿದ್ದ ಒಬ್ಬ ಹುಡುಗನು ದಸ್ತಗಿರಿ ಮಾಡಲ್ಪಟ್ಟನು. ಸಾಧುಪುರದ ಬಳಿ ಇರುವ ಬಾಲ್ಹಾಟು ಎಂಬ ಸ್ಥಳದಲ್ಲಿ ಸಿಡಿಮದ್ದಿನ ಗುಂಡುಗಳ ತಯಾರಿಕೆಯ ಕಾರ್ಖಾನೆ ಇದೆ ಎಂದು "ಸಂಜೀವಿನಿ" ಎಂಬ ಪತ್ರಿಕೆಯು ಹೇಳುತ್ತದೆ.

ಕೃಷ್ಣನಗರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮಿ॥ ಎಜೆಕಿಯೆಲ್ ಅವರಿಗೆ ಅಂಚೆಯ ಮೇಲೆ ಒಂದು ಭಾಂಗಿಯು ಬಂದಿತು. ಅದರಲ್ಲಿ ಒಂದು ಸಿಡಿಮದ್ದಿನಗುಂಡು ಇಡಲ್ಪಟ್ಟಿತ್ತು. ಅದರ ಮೇಲೆ "ಸಿಡಿಮದ್ದಿನ ಮಾದರಿಯ ಗುಂಡು" ಎಂಬುದಾಗಿ ಬರೆದಿತ್ತು. ಅದಕ್ಕೆ ಮುಂಚೆ ಅವರನ್ನು ಹೆದರಿಸುವಂಥಾ ಒಂದು ಕಾಗದವು ಅವರಿಗೆ ತಲುಪಿತ್ತೆಂಬುದಾಗಿ "ಅಮೃತ ಬಜಾರ್ ಪತ್ರಿಕಾ" ಎಂಬ ಪತ್ರಿಕೆಗೆ ತಂತೀ ವರ್ತಮಾನ ಬಂದಿದೆ.

ಮಿ॥ ಬಾಲ ಗಂಗಾಧರ ತಿಲಕರ ಮೇಲೆ ಬಂದಿರುವ ರಾಜದ್ರೋಹ ಬರವಣಿಗೆಯ ಮೊಕದ್ದಮೆಯು ಬೊಂಬಾಯಿ ಹೈಕೋರ್ಟ ಸೆಷನ್ಸ್ ಕೋರ್ಟಿನಲ್ಲಿ ಈ ತಿಂಗಳು ತಾ. ೧೩ಕ್ಕೆ ವಿಚಾರಣೆಯಾಗಬೇಕೆಂದು ಗೊತ್ತುಮಾಡಿದ್ದಾರೆ.

ಜೂಲೈ ತಾ. ೫.—ಮಿ॥ ತಿಲಕರವರ ಮೇಲೆ ಬಂದಿರುವ ಮೊಕದ್ದಮೆಯನ್ನು ಬೊಂಬಾಯಿನ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡುತ್ತಿದ್ದಾಗ್ಗೆ ಹೊರಗಡೆ ದೊಂಬಿಮಾಡಿದರೆಂದು ಪೊಲೀಸಿನವರು ಆರು ಜನ ಸಾಬಂದರನ್ನು ದಸ್ತಗಿರಿ ಮಾಡಿದರಷ್ಟೆ. ಈಗ ಅವರ ವಿಚಾರಣೆಯು ಪ್ರಾರಂಭವಾಗಿ ನಡೆಯುತ್ತಿದೆ. ಮಣಿಲಾಲ್ ಎಂಬೊಬ್ಬನು ರಾಜದ್ರೋಹಕರವಾದ ಉಪನ್ಯಾಸಗಳನ್ನು ಮಾಡಿದನೆಂದು ಮೊಕದ್ದಮೆ ಆಗಿದೆ.

"ಅರುಣೋದಯ" ಎಂಬ ಪತ್ರಿಕೆಯ ಎಡಿಟರ ಮೇಲೆ ಬೊಂಬಾಯಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಫಿರ್ಯಾದು ಬಂದು ವಿಚಾರಣೆಯಾಗುತ್ತಿರುವುದು.

ಜೂಲೈ ತಾ. ೬.—ಶನಿವಾರ ರಾತ್ರಿ ಕಲ್ಕತ್ತಾ ಪಟ್ಟಣದ ಪೊಲೀಸಿನವರು ಸುಬೋಧ ಮಲಿಕ್ ಎಂಬ ದೊಡ್ಡ ಮನುಷ್ಯನ ಮನೆಯನ್ನು ಪ್ರವೇಶಿಸಿ ಶೋಧನೆ ಮಾಡಿದರು. ಆದರೆ ಅಲ್ಲಿ ಅವರಿಗೆ ಅನುಮಾನಾಸ್ಪದವಾದದ್ದೇನೂ ಸಿಕ್ಕಲಿಲ್ಲ.

ಕಂಕಿನಾರಾದಲ್ಲಿ ನಡೆದ ಸಿಡಿಮದ್ದಿನ ಗುಂಡಿನ ಅನಾಹುತದಲ್ಲಿ ಸೇರಿದವರೆಂದು ಪೊಲೀಸಿನವರು ದಸ್ತಗಿರಿ ಮಾಡಿದಂಥ ಏಳು ಮಂದಿಯನ್ನೂ ನೆನ್ನೆ ತಲಾ ೧೦೦ ರೂಪಾಯಿನ ಜಾಮೀನಿನ ಮೇಲೆ ಖುಲಾಸ್ ಮಾಡಿದರು.

ಮೂರು ತಿಂಗಳ ಕೆಳಗೆ ಕಂಕಿನಾರಾ ಕಾರ್ಖಾನೆಯೊಳಗೆ ಜಗಳವೂ ಗಲಭೆಯೂ ನಡೆದ ವಿಚಾರದಲ್ಲಿ ಕಾರ್ಖಾನೆಯ ಹತ್ತುಮಂದಿ ಕೆಲಸಗಾರರನ್ನು ಅಲಿಪುರದ ಸೆಷನ್ಸ್ ಜಡ್ಜರವರು ದರ್ಯಾಫ್ತು ಮಾಡಿದರು. ಆ ಜನಗಳ ಗಲಭೆಗಳಾದ ಮೇಲೆ ಕಾರ್ಖಾನೆಗೆ ಬೆಂಕಿಬಿದ್ದು ಸುಮಾರು ೨½ ಲಕ್ಷ ರೂಪಾಯಿನ ಸರಕುಗಳು ಸುಟ್ಟುಹೋದವು. ಮೊನ್ನೆ ಈ ಅಪರಾಧಿಗಳ ತನಿಖೆ ಮುಗಿಯಿತು. ಪಂಚಾಯಿತರು ಅಪರಾಧಿಗಳಿವರ ಮೇಲೂ ತಕ್ಸೀರು ರುಜುವಾತಾಗಲಿಲ್ಲವೆಂದೂ, ಅವರನ್ನೆಲ್ಲಾ ಖುಲಾಸ್ ಮಾಡಬೇಕೆಂದೂ ಅಭಿಪ್ರಾಯಪಟ್ಟರು. ಆದರೆ ಸೆಷನ್ಸ್ ಜಡ್ಜರವರು ಆ ಅಭಿಪ್ರಾಯದಂತೆ ಐದು ಮಂದಿ ಅಪರಾಧಿಗಳನ್ನು ಮಾತ್ರ ಖುಲಾಸ್ ಮಾಡಿಸಿ, ಉಳಿದ ಐದು ಮಂದಿಯ ವಿಚಾರವಾಗಿ ಹೈಕೋರ್ಟಿಗೆ ಬರೆದಿರುತ್ತಾರೆ.

ವಿಶೇಷ ವರ್ತಮಾನಗಳು.

ರಷ್ಯಾ ರಾಜ್ಯಕ್ಕೆ ಸೇರಿದ ಯೂಸೋವ್ಕಾ ಎಂಬ ಸ್ಥಳದಲ್ಲಿ ಕಲ್ಲಿದ್ದಲ ಗಣಿಗಳೊಳಗೆ ಕಳೆದ ವಾರ ಭಯಂಕರವಾದ ಅನಾಹುತ ನಡೆಯಿತೆಂತಲೂ, ೩೦೦ ಮಂದಿ ಕೂಲೀಜನರು ಗಣಿಗಳಲ್ಲಿ ಸಿಕ್ಕಿ ಮೃತಪಟ್ಟರೆಂತಲೂ ತಂತೀ ವರ್ತಮಾನ ಬಂದಿದೆ.

❦❦❦

ಪರ್ಷಿಯಾ ಪಟ್ಟಣದ ಒಬ್ಬ ವರ್ತಕನ ೧೦,೦೦೦ ರೂಪಾಯಿನ ವ್ಯಾಪಾರ ಸರಕುಗಳು ಜೋಡ್ಪುರ ಮುತ್ತು ಲಾಡಿಯಗಳಿಗೆ ರವಾನೆ ಮಾಡಲ್ಪಟ್ಟವು. ಕೊಡ್ಪುರದ ಬಳಿ ಸಮುದ್ರಕಳ್ಳರು ಆ ಹಡಗಿಗೆ ನುಗ್ಗಿ ಕೊಳ್ಳೆ ಹೊಡೆದು, ಸರಕನ್ನೆಲ್ಲಾ ತೆಗೆದುಕೊಂಡು ಹೋದರು.

❦❦❦

ಮುಂದಿನ ವರುಷ ರಷ್ಯಾ ರಾಜ್ಯದ ಹುಟ್ಟುವಳಿಯು ಖರ್ಚಿಗೆ ಸಾಕಾಗುವುದಿಲ್ಲವೆಂದೂ, ತಿಳಿಸುಬಂದದ್ದರಿಂದ ಡೂಮಾ ಪಾರ್ಲಿಮೆಂಟಿನವರು ೬೦ ಕೋಟಿ ಹಣವನ್ನು ರಷ್ಯಾ ರಾಜ್ಯದೊಳಗೇ ಸಾಲವಾಗಿ ಪಡೆಯಬೇಕೆಂದು ಗವರ್ನಮೆಂಟಿನವರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ.

❦❦❦

ಹೋಟೆಲ್ ಚೀನಾಕ್ಕೆ ಸೇರಿದ ಸ್ವಾಗಾವ್ ಪಟ್ಟಣದಲ್ಲಿ ಸಮುದ್ರಕಳ್ಳರು ದರೋಡೆಮಾಡಿ ಸಾಮಾನುಗಳನ್ನು ಪದಾರ್ಥಗಳನ್ನು ಹಾಕಿ ಅಲ್ಲಿನ ಯುರೋಪಿಯನ್ ಕಟ್ಟಡಗಳಿಗೆ ಕಿಚ್ಚಿಟ್ಟರೆಂತಲೂ, ೨೦೦ ಜನ ಸೈನಿಕರು ಅವರ ಹಿಡಿಯುವ ಅವಸ್ಥೆಯಲ್ಲಿ ಕಾದು ಬಿದ್ದಿರುತ್ತಾರೆಂತಲೂ, ಸರ್ಕಾರದವರು ಈ ವಿಷಯವನ್ನು ತನಿಖೆಮಾಡ ಪ್ರಾರಂಭಿಸಿದಾರೆಂತಲೂ ತಂತೀ ವರ್ತಮಾನ ಬಂದಿದೆ.

❦❦❦

ಕೇಪ್‌ಕಾಲನಿಯು ಪ್ರಿಟೋರಿಯಾವಿಗೆ ಸೇರಿದ ಮುಖ್ಯ ಅಧಿಕಾರವಾಗಿ ರಘುನಾಥ್ ಗಿದ್ದಿತು. ಆದರೆ ದಕ್ಷಿಣ ಆಫ್ರಿಕಾದಲ್ಲಿ ಕಾಡುರೋಗ ತಗಲಿದೆ ಎಂದು ಕೇಳಿ ವಿಕ್ಟೋರಿಯಾ ಸರ್ಕಾರದವರು ಕೇಪ್‌ಕಾಲನಿಯ ಮೇಲಿನ ಹುಲ್ಲನ್ನು ತೆಗೆದುಕೊಳ್ಳುವದಿಲ್ಲವೆಂದು ತಿರಸ್ಕರಿಸಿದರು. ಅದರ ಮೇಲೆ ಕೇಪ್‌ಕಾಲನಿಯ ಮುಖ್ಯ ಮಂತ್ರಿಗಳು ಅದನ್ನು ಪ್ರತಿಭಟಿಸಿ, ಹಾಗೆ ತಿರಸ್ಕರಿಸುವುದು ಸ್ನೇಹವಿರುದ್ಧವಾದುದೆಂದು ಖಂಡಿತವಾಗಿ ತಿಳಿಸಿದಾರೆ.

❦❦❦

ಫ್ರಾನ್ಸ್ ರಾಜ್ಯದ ಅಧಿಪತಿಯಾದ ಪ್ರೆಸಿಡೆಂಟ್ ಫ್ಯಾಲಿಯರೀಸ್ ಯವರು ರಷ್ಯಾ ರಾಜ್ಯಕ್ಕೆ ಹೋಗಿ, ಚಕ್ರವರ್ತಿಯವರನ್ನು ಕಂಡು, ಅವರ ಕೂಡ ಕೆಲವು ರಾಜಕೀಯ ವಿಷಯಗಳನ್ನು ಕುರಿತು ಮಾತನಾಡಿಕೊಂಡು ಬರುವುದಕ್ಕೂ, ಫ್ರಾನ್ಸಿಗೂ ರಷ್ಯಾವಿಗೂ ಸ್ನೇಹಭಾವವನ್ನು ವೃದ್ಧಿಪಡಿಸಿಕೊಂಡು ಬರುವುದಕ್ಕೂ ಸನ್ನಾಹ ಮಾಡಿದಾರೆ. ಅವರ ಖರ್ಚಿಗೆ ೨,೪೦,೦೦೦ ರೂಪಾಯನ್ನು ಫ್ರಾನ್ಸಿನ ಮಂತ್ರಿಸಭೆಯವರು ಸ್ವೀಕಾರ ಮಾಡಿದಾರೆ.

❦❦❦

ಪೋರ್ಚುಗಲ್ ರಾಜ್ಯದ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಮೊದಲಿನ ದೊರೆಗೆ ಬಾಕಿ ಹಣವನ್ನು ರಾಜಭಾಂಡಾರದಿಂದ ಕೊಟ್ಟಿಬಿಟ್ಟರೆಂದು ಆಕ್ಷೇಪಣೆ ಹುಟ್ಟಿ ವ್ಯಾಜ್ಯ ನಡೆಯುತ್ತಲಿದೆ. ವಿರೋಧಪಕ್ಷದವರು ಒಂದು ಸಭೆಯನ್ನು ನಡಿಸಿ ಈಗಿನ ಮತ್ತು ಹಿಂದಿನ ಮಂತ್ರಿಗಳ ನಡವಳಿಕೆಯನ್ನು ಬಹು ಕಠಿಣವಾಗಿ ಆಕ್ಷೇಪಣೆ ಮಾಡಿದರು. ವಿರೋಧ ಪಕ್ಷದ ಮುಖಂಡನಾದ ಕಾಸ್ಟ ಎಂಬಾತನು—ದೊರೆಯು ಕೂಡಾಗಿಯೇ ರಾಜ್ಯಪದವಿಯನ್ನು ತ್ಯಜಿಸಿ ಬಿಡಬೇಕೆಂದು ಬಹು ಖಂಡಿತವಾಗಿ ಹೇಳಿದನು.

❦❦❦

ಕಳೆದ ಬುಧವಾರ ಚೀನಾರಾಜ್ಯಕ್ಕೆ ಸೇರಿದ ಹಾಂಕಾಂಗಿನಿಂದ ಬಂದ ತಂತೀ ವರ್ತಮಾನವೇನೆಂದರೆ—ಈ ದಿನ ಮೊದಲೇ ಪರ್ಯಾದಾಗಿದ್ದಂತೆ ಕಾಂಟಾನ್ ಪಟ್ಟಣದಲ್ಲಿ ಆಫೀಂ ಬಿಕರಿ ಆಗುವ ಅಂಗಡಿಗಳಲ್ಲಿ ಕಾಲುಭಾಗ ಮುಚ್ಚಲ್ಪಟ್ಟವು. ಯಾವ ವಿಧವಾದ ತೊಂದರೆಯೂ ಉಂಟಾಗಲಿಲ್ಲ. ದಕ್ಷಿಣ ಚೀನಾಯಲ್ಲಿ ನದಿಗಳ ಪ್ರವಾಹದ ದೆಸೆಯಿಂದ ಸಾವಿರಾರು ಮೈಲಿ ಭೂಪ್ರದೇಶವು ನಾಶವಾಗಿ ನಾನಾವಿಧ ಕಷ್ಟನಷ್ಟಗಳುಂಟಾಗಿರುತ್ತವೆ. ಸಾವಿರಾರು ಜನರು ಪ್ರವಾಹದಲ್ಲಿ ಸಿಕ್ಕಿ ಮೃತಪಟ್ಟರು. ತಗ್ಗಿನಲ್ಲಿರುವ ಭಾಗವೆಲ್ಲಾ ನಿರ್ನಾಮವಾಯಿತು. ಇಂಥಾ ಕಷ್ಟವು ಮೂವತ್ತು ವರುಷಗಳಿಂದ ಪ್ರಾಪ್ತವಾಗಿರಲಿಲ್ಲ.

❦❦❦

ವಿಲಾಯತಿಯಲ್ಲಿ ಗತಿಸಿದ ಮಿ॥ ಜಾರ್ಜ್ ಹೆರ್ರಿಂಗ್ ಎಂಬಾತನು ಮಹಾ ಧರ್ಮಿಷ್ಠನೆಂದು ಕೀರ್ತಿ ಪಡೆದಿದ್ದನು. ಆತನು ಪ್ರಪಂಚಕ್ಕೆ ತಿಳಿಯದಂತೆ ಗುಟ್ಟಾಗಿ ಧರ್ಮಮಾಡುತ್ತಿದ್ದನು. ಲಂಡನ್ ಪಟ್ಟಣದ ಆಸ್ಪತ್ರೆ ಒಂದಕ್ಕೇ ಆತನು ಒಂದೂವರೆ ಕೋಟಿ ದ್ರವ್ಯವನ್ನು ಕೊಟ್ಟಿರುತ್ತಾನೆ. ಇದಲ್ಲದೆ ಅನೇಕ ಇತರ ಆಸ್ಪತ್ರೆಗಳಿಗೂ ಧರ್ಮಸತ್ರಗಳಿಗೂ ಪರೋಪಕಾರಕವಾದ ಆಲಯಗಳಿಗೂ ಬಹಳವಾಗಿ ಹಣ ಕೊಟ್ಟಿರುವನು. ಈ ರೀತಿಯಾಗಿ ಧರ್ಮಮಾಡಿದ ಜಾರ್ಜ್ ಹೆರ್ರಿಂಗನ ಪ್ರತಿಮೆಯನ್ನು ಲಂಡನ್ ಪಟ್ಟಣದ ಮ್ಯಾನ್ಷನ್ ಹೌಸ್ ಎಂಬ ಮಂದಿರದಲ್ಲಿ ಲಾರ್ಡ್ ಮೇಯರ್ ಎಂಬ ಪುರಾಧ್ಯಕ್ಷರು ಪ್ರತಿಷ್ಠೆ ಮಾಡಿದರು.

❦❦❦

ಯುರೋಪ್ ಖಂಡಕ್ಕೆ ಸೇರಿದ ಮಾಂಟಿನೀಗ್ರೋ ರಾಜ್ಯದಲ್ಲಿ ಕೆಲವರು ಪಿತೂರಿ ಮಾಡಿ ಅಲ್ಲಿನ ಪ್ರಿನ್ಸ್ ನಿಕೋಲಸ್ ಎಂಬ ರಾಜಕುಮಾರನನ್ನು ಕೊಲ್ಲಬೇಕೆಂದು ಪ್ರಯತ್ನಪಟ್ಟರು. ಈ ಪಿತೂರಿಯು ಪತ್ತೆಯಾಗಿ ೫೯ ಜನರು ದಸ್ತಗಿರಿ ಮಾಡಲ್ಪಟ್ಟು ವಿಚಾರಣೆಯಲ್ಲಿ ಅವರ ಮೇಲೆ ಅಪರಾಧವು ರುಜುವಾತಾದ್ದರಿಂದ ಆರು ಜನರನ್ನು ಗಲ್ಲಿಗೆ ಹಾಕಿದರು. ಮೂವರಿಗೆ ಸಾಯುವ ತನಕ ಕಠಿಣ ಸಜಾ ಶಿಕ್ಷೆಯಾಯಿತು. ಇಪ್ಪತ್ತೇಳು ಮಂದಿಗೆ ೬ ವರುಷದಿಂದ ೨೦ ವರುಷಗಳ ತನಕ ಕಠಿಣ ಸಜಾ ಅನುಭವಿಸುವಂತೆ ಶಿಕ್ಷೆ ವಿಧಿಸಿದರು. ಉಳಿದ ಹದಿಮೂರು ಜನ ಅಪರಾಧಿಗಳಿಗೆ ಅದಕ್ಕಿಂತ ಸ್ವಲ್ಪ ಕಡಮೆಯಾದ ಸಜಾ ಶಿಕ್ಷೆ ವಿಧಿಸಲ್ಪಟ್ಟಿತು.

❦❦❦

ಲಂಡನ್ ಪಟ್ಟಣದಲ್ಲಿ ಪ್ರಕಟವಾಗುವ "ವಿನ್ನಿಂಗ್ ಪೋಸ್ಟ್" ಎಂಬ ಪತ್ರಿಕೆಯ ಎಡಿಟರಾದ ಮಿ॥ ಆರ್. ಸೀವಿಯರ್ ಎಂಬಾತನು ಮಿ॥ ಜೆ. ಜೋಯೆಲ್ ಎಂಬೊಬ್ಬ ದಕ್ಷಿಣ ಆಫ್ರಿಕಾ ದೊಡ್ಡಮನುಷ್ಯನ ವಿಷಯವಾಗಿ ಏನೋ ಪ್ರಕಟಿಸುತ್ತೇನೆಂದು ಹೆದರಿಸಿದನು. ಅದಕ್ಕೆ ಆ ದೊಡ್ಡಮನುಷ್ಯನು ಭೀತಿಪಟ್ಟು, ತನ್ನ ವಿಷಯವಾದದ್ದೇನೂ ಆ ಪತ್ರಿಕೆಯಲ್ಲಿ ಪ್ರಕಟಿಸಕೂಡದೆಂದು ಆ ಎಡಿಟರಿಗೆ ಹೇಳಿ, ಅತನಿಗೆ ೭೫,೦೦೦ ರೂಪಾಯಿ ಲಂಚ ಕೊಡುವುದಾಗಿ ಒಪ್ಪಿ, ಆ ವ್ಯಕ್ತಿ ೬೦,೦೦೦ ರೂಪಾಯನ್ನು ಪಾವತಿ ಮಾಡಿದನು. ಈಚೆಗೆ ಅವನು ದಾವಾಮಾಡಿ, ಎಡಿಟರನ್ನು ದಸ್ತಗಿರಿ ಮಾಡಿಸಿರುತ್ತಾನೆ. ಆ ಎಡಿಟರನ್ನು ಜಾಮೀನಿನ ಮೇಲೆ ಬಿಡುವುದಿಲ್ಲವೆಂದು ಜಡ್ಜಿಯವರು ಹೇಳಿ, ಮೊಕದ್ದಮೆಯನ್ನು ದರ್ಯಾಫ್ತು ಮಾಡುತ್ತಿದ್ದಾರೆ.

❦❦❦

ವಿಲಾಯತಿಯ ಚಕ್ರವರ್ತಿಯವರು ರಷ್ಯಾ ರಾಜ್ಯಕ್ಕೆ ದಯಮಾಡಿ ಅಲ್ಲಿನ ಚಕ್ರವರ್ತಿಯವರನ್ನು ರೆವೆಲ್ ಎಂಬ ತೀರಪಟ್ಟಣದಲ್ಲಿ ಸಂಧಿಸಿ, ಯೋಗಕ್ಷೇಮಗಳನ್ನು ವಿಚಾರಿಸಿಕೊಂಡು ಬಂದು ಸುಮಾರು ನಾಲ್ಕು ವಾರಗಳಾದವು. ಉಭಯ ಚಕ್ರವರ್ತಿಗಳೂ ಅಲ್ಲಿ ಸೇರಿದಾಗ್ಗೆ ಘಾತುಕಕೃತ್ಯವನ್ನು ನಡಿಸಬೇಕೆಂದು ರಷ್ಯಾ ಪಿತೂರೀ ಗುಂಪಿನವರು ಏರ್ಪಾಡು ಮಾಡಿ, ಸ್ಕೂಲ್ ಉಪಾಧ್ಯಾಯಿನಿಯಾಗಿದ್ದ ಒಬ್ಬ ಹೆಂಗಸಿಗೆ ಆ ಕೆಲಸವನ್ನು ವಹಿಸಿದ್ದರು. ಆದರೆ ಆಕೆ ಮೊದಲು ಆ ಘೋರಕೃತ್ಯವನ್ನು ನಡಿಸುವುದಕ್ಕೆ ಒಪ್ಪಿಕೊಂಡರೂ, ಕೆಲವು ಕಾಲದಲ್ಲೇ ಆವಳ ಮನಸ್ಸು ಬಗ್ಗದೆ ಹೋಯಿತು. ವಿಲಾಯತಿಯ ದೊರೆಯವರು ರಷ್ಯಾವಿಗೆ ಹೋಗುವುದಕ್ಕೆ ಒಂದೆರಡು ದಿನ ಮೊದಲು ಆ ಹೆಂಗಸು ಅಂಥಾ ಘೋರಕೃತ್ಯ ನಡಿಸಿ ಬಿಡುತ್ತಿರುವುದಕ್ಕಿಂತಲೂ ಸಾಯುವುದೇ ಲೇಸೆಂದು ಎಕ್ಸ್‌ಪ್ರೆಸ್ ರೈಲ್ ಗಾಡಿಯ ಕೆಳಗೆ ಬಿದ್ದು ಆತ್ಮಹತ್ಯ ಮಾಡಿಕೊಂಡಳೆಂದು ತಿಳಿಯುತ್ತದೆ.

❦❦❦

ಉತ್ತರ ಅಮೇರಿಕಕ್ಕೆ ಸೇರಿದ ನೆಬ್ರಾಸ್ಕಾ ಎಂಬ ಡಿಸ್ಟ್ರಿಕ್ಟ್ ಸನ್ ೧೮೭೦ ನೇ ಇಸವಿಯ ವರೆಗೆ ಅಮೇರಿಕದ ಮರುಭೂಮಿ ಎಂತಲೂ, ಒಂದು ಗಿಡವಾದರೂ ಬೆಳೆಯತಕ್ಕ ಪ್ರದೇಶವಲ್ಲವೆಂತಲೂ ಹೆಸರುಗೊಂಡಿದ್ದಿತು. ಆ ಡಿಸ್ಟ್ರಿಕ್ಟಿಗೆ ಬಂದಿದ್ದ ಈ ಅಪಕೀರ್ತಿಯನ್ನು ತಪ್ಪಿಸಬೇಕೆಂದು ಜಾನ್ ಸ್ಟರ್ಲಿಂಗ್ ಮಾರ್ಟನ್ ಎಂಬೊಬ್ಬ ದೊಡ್ಡಮನುಷ್ಯನು ಸಾಹಸಪಟ್ಟು, ವರುಷಕ್ಕೆ ಒಂದು ದಿನ ಗಿಡವನ್ನು ಹುಟ್ಟಿ ಹಾಕುವುದಕ್ಕಾಗಿ ಪ್ರಜೆಗಳೆಲ್ಲಾ ಕಷ್ಟಪಡಬೇಕು ಎಂಬ ಆಜ್ಞೆಯನ್ನು ಸರ್ಕಾರದಿಂದ ಹೊರಡಿಸಿ, ಈ ಕೆಲಸಕ್ಕೆ ಸ್ಕೂಲುಗಳ ಸಹಾಯವನ್ನೇ ಅಪೇಕ್ಷಿಸಿದನು. ಸನ್ ೧೮೭೨ ನೇ ಏಪ್ರಿಲ್ ೧೦ ನೇ ತಾರೀಖಿನ ದಿನ ಸ್ಕೂಲ್ ಹುಡುಗರನ್ನೆಲ್ಲಾ ಕರೆಸಿಕೊಂಡು, ಒಂದೇ ದಿನ ಮೂವತ್ತು ಲಕ್ಷ ಗಿಡಗಳನ್ನು ರೆಂಬೆಗಳನ್ನು ಹುಟ್ಟಿಹಾಕಿಸಿದರು. ಅಲ್ಲಿಂದೀಚೆಗೂ ಎರಡು ಅರ್ಬುದಗಳಷ್ಟು ಗಿಡಗಳು ಅದೇ ರೀತಿ ಹುಟ್ಟಿಹಾಕಿರುತ್ತಾರೆ. ಈಗ ನೋಡಿದರೆ ಆ ಡಿಸ್ಟ್ರಿಕ್ಟೆಲ್ಲಾ ಗಿಡಗಳ ಮಯವಾಗಿರುವುದು.

❦❦❦

ಇಂಗ್ಲಾಂಡಿನಲ್ಲಿ ಸ್ವತಂತ್ರ ಜೀವನವನ್ನು ಮಾಡುತ್ತಿರುವ ಸ್ತ್ರೀಯರು ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆಯ ಹಕ್ಕನ್ನು (ಓಟನ್ನು) ಸಂಪಾದಿಸಿಕೊಳ್ಳಬೇಕೆಂದು ಬಹಳ ಮುತುವರ್ಜಿಯಾಗಿ ಕಾರ್ಯಸಂಘಟನೆ ಮಾಡುತ್ತಿದ್ದಾರೆ. ಕಳೆದ ವಾರ ಈ ವಿಷಯವನ್ನು ಕುರಿತು ಚರ್ಚೆ ಮಾಡುವುದಕ್ಕೆ ಸ್ತ್ರೀ ಪ್ರತಿನಿಧಿಗಳು ಮಂತ್ರಿಶ್ರೇಷ್ಠರಾದ ಮಿ॥ ಆಸ್ಕ್ವಿತ್ ಯವರ ಭೇಟಿಯಾಗಬೇಕೆಂದು ಹೇಳಿಕಳುಹಿಸಿದರು. ಮಂತ್ರಿಯವರು ಅವರಿಗೆ ಅವಕಾಶ ಕೊಡಲಿಲ್ಲ. ಆಗ ಸ್ತ್ರೀ ಸಮಾಜದವರು ವೆಸ್ಟ್‌ಮಿನಿಸ್ಟರಿನಲ್ಲಿ ಬಹಳ ಗಲಭೆ ಮಾಡಿ, ಮಂತ್ರಿಗಳ ಬಂಗಲೆಗೆ ಕಲ್ಲುಗಳನ್ನೆಸೆದು ಕಿಟಕಿಗಳನ್ನು ಒಡೆದುಹಾಕಿದರು. ಪೊಲೀಸಿನವರಿಗೆ ಆ ದೊಂಬಿಯನ್ನು ಅಡಗಿಸಿ ಚದರಿಸುವುದು ತುಂಬಾ ಕಷ್ಟವಾಯಿತು. ೨೯ ಮಂದಿ ಸ್ತ್ರೀಯರು ದಸ್ತಗಿರಿ ಮಾಡಲ್ಪಟ್ಟು, ದರ್ಯಾಫ್ತಿಯಿಂದ ಇಬ್ಬರಿಗೆ ತಲಾ ಎರಡು ತಿಂಗಳ ಸಜಾವೂ, ೨೫ ಮಂದಿಗೆ ನೇಕಚಾಲಿನ ಜಾಮೀನು ಅಥವಾ ಸಜಾವೂ ವಿಧಿಸಲ್ಪಟ್ಟವು. ಕೆಲವರು ದುಲ್ಮಾನೆ ಕೊಡದೆ ಸಜಾವನ್ನೇ ಅನುಭವಿಸುತ್ತೇವೆಂದು ಬಂದೀಖಾನೆಗೆ ಹೋದರು.

ಫೆರುವರ್ಣಗೇ ಜನಕ ಅನ್ನಕೋಶವು

[31-15]

ಅಕ್ರಮವಾಗಿ ಇತ್ತು

ನಾನು ಆರು ಮಂದಿ ವೈದ್ಯರಿಂದ ಚಿಕಿತ್ಸೆ ಹೊಂದಿದನು
ನಾನು ಎಂದಿಗಾದರೂ ವಾಸಿಯಾದೇನೆಂಬ ಆಸೆ ತೊರೆದೆನು
ನಾನು ಈಗ ಹೊಸಮನುಷ್ಯನಂತಿದ್ದೇನೆ ಪೆರೂನಾ ಮತ್ತು
ಮನಾಲೀನಗಳನ್ನು ವಂದಿಸುತ್ತೇನೆ

ಅನೇಕ ಪಕ್ಷ ಪತ್ರದಲ್ಲಿ ಒಳ್ಳೆ ವಿಗ್ರಹದರೂ ಹೊಟ್ಟೆಯೊಳಗಣ ಅಕ್ರಮ ವಿದ್ದೇ ಇದೆ ಈ ಹೊಟ್ಟೆಯ ಅಕ್ರಮದಿಂದಲೇ ಅನೇಕಾನೇಕ ವ್ಯಾಧಿಗಳು ನಾನಾ ಕಾಲಗಳಿಗೆ ಗುರಿಯಾಗಿರುವರೆಂದು ಧಾರಾಳವಾಗಿ ಹೇಳಬಹುದು ಅನೇಕರಲ್ಲಿ ಜೀವನ ಕಷ್ಟವಾಗಿರೋದರಿಂದ ಜನರು ಬಹಳ ಆಹಾರವನ್ನು ತಿಂದು ಮಾಡಬೇಕಾಗಿರುವುದೇ ಅವಶ್ಯ ಮುಖ್ಯ ಕಾರಣ ಬೇಗ ಬೇಗ ಊಟಮಾಡಿದ ವೇಳೆ ಬಾಗ ಷ್ಟ ಚಿಂತೆಗಳಿಗೆ ಗುರಿಯಾಗುವುದು ಹೊಟ್ಟೆಯಲ್ಲಿ ಖಂಡಿತವಾಗಿ ಅಕ್ರಮಗಳನ್ನು ಉಂಟು ಮಾಡುತ್ತದೆ ಹೊಟ್ಟೆಯಲ್ಲಿ ಅಕ್ರಮವನ್ನು [illegible] ವಿಷಯವನ್ನು ತಿಳಿಕೊಂಡಿರಬೇಕು ಪೆರೂನಾ [illegible] ವುದು ಅದರ ಅನೇಕ ಕೆಲವು ಸಂದರ್ಭಗಳಲ್ಲಿ [illegible] ಯವನ್ನುಂಟುಮಾಡುವುದು ಹೊಟ್ಟೆಯ ರೋಗಗಳಿಗೆ ಪೆರೂನಾ ಒಳ್ಳೇ ಔಷಧವೆನ್ನುವುದಕ್ಕೆ ಅನೇಕರಿಂದ ತಾಕ್ಷ್ಯ [illegible] ಯ ರೋಗ್ಯಕ್ಕಾಗಿ ಪತ್ರಗಳು ಬಂದಿರುವವು ಮಿ॥ ಜಾರ್ಜ್ ಎಚ್ [illegible], ಓಂಟೇರಿಯೋ, ಕ್ಯಾನಡಾ ಇವರೂ ಒಂದು ಪತ್ರವನ್ನು ಬರೆದಿದಾರೆ

ಮಿ॥ ಜಾರ್ಜ್ ಎಚ್ [illegible], ಓಂಟ್, ಕ್ಯಾ, ಬರೆಯುವುದು —

"[illegible] ಅಕ್ರಮವಾಗಿ [illegible] ಅನುಭವಿಸಿದೆನು ಆರು ಜನ [illegible] ಚಿಕಿತ್ಸೆ ಮಾಡಿ [illegible] ನನಗೆ ಸ್ವಲ್ಪ ಉಪಕಾರ [illegible] ರೋಗ [illegible] ರೋಗವೆಂದು [illegible] ಅಜೀರ್ಣ [illegible] ತುಂಬಾ [illegible] ಪೆರೂನಾ, ಮನಾಲೀನಗಳನ್ನು ಸೇವಿಸುತ್ತ [illegible] ಉಪಯೋಗಿಸಿದೆನು [illegible] ಔಷಧ [illegible] ಮನಾಲೀನಗಳನ್ನು [illegible]"

ಇಪ್ಪತ್ತು ವರ್ಷದ ಅಜೀರ್ಣವು

ಮಿ॥ [illegible] ಬರೆಯುತ್ತಾರೆ — "ನಾನು ಇಪ್ಪತ್ತು ವರ್ಷದ ಅಜೀರ್ಣ ರೋಗವನ್ನು ಅನುಭವಿಸಿದೆನು ಅನೇಕ ಡಾಕ್ಟರುಗಳ ಔಷಧಗಳನ್ನು ಸೇವಿಸಿದೆನು [illegible] ಕಾಡಿದ [illegible] ನನಗೆ ಈ ರೋಗ ವಾಸಿಯಾಗುವದಿಲ್ಲವೆಂದು [illegible] ಪೆರೂನಾ ವಿಷಯವನ್ನು ಕೇಳಿ, ಅದನ್ನು ಸೇವಿಸಲಾರಂಭಿಸಿದೆನು [illegible] ಸಾವಧಾನ [illegible] ರೋಗವೆಲ್ಲಾ [illegible] ಹೋಯಿತು [illegible] ಸುಖವಾಗಿ [illegible] ಈ ಪ್ರಪಂಚದಲ್ಲಿ ಪೆರೂನಾ ಅದ್ಭುತವಾದ ಔಷಧವೆಂದು ನಾನು ನಂಬುತ್ತೇನೆ ಈಗ ನಾನು [illegible] ಪೆರೂನಾವನ್ನು ನಾನು [illegible] ಅಕ್ಷಯವಾರ್ಗವೇ"

ಒಳಹೊಟ್ಟೆಯ ಶೀತವು

ರೆವ್ ಜೆ ಟಿ [illegible], ದಕ್ಷಿಣ ಕ್ಯಾರೋಲಿನ ಯು. ಎಸ್ ಎ, ಇತ ಬರೆಯುವದು — "[illegible] ನನ್ನ [illegible] ನನಗೆ ಹೊಟ್ಟೆ [illegible] ಅನುಭವಿಸಿದೆನು [illegible] ಪೆರೂನಾ [illegible] ಈ ಹೊಟ್ಟೆಯ ಶೈತ್ಯಕ್ಕೆ ಪೆರೂನಾ [illegible] ಉತ್ತಮವಾದ ಔಷಧ [illegible] ತ್ತೇನೆ"

ಪೆರೂನಾ ಬಲಕಾರಿಯಾದದ್ದು,

ಮಿ॥ ಜೆ [illegible], [illegible] ಸೆಂಟ್ ಕ್ಯಾಥರೀನ್ಸ್ ಆನ್, ಟೊರಾಂಟೋ, ಕ್ಯಾನಡಾ, ಇತ ಬರೆಯುವುದು —"ಪೆರೂನಾವನ್ನು ನಾನು ಸೇವಿಸಿದ್ದೇನೆ ಅದು [illegible] ಅದು ಗುಣಕಾರಿಯಾದದ್ದು ಅದರ ಹಾಗೆ ಬಲವನ್ನುಂಟುಮಾಡುವ ಔಷಧ ಇನ್ನೊಂದಿಲ್ಲವೆಂದು ಹೇಳಬಲ್ಲೆನು"

ಇನ್ನು ಅಂಥಾ ಕೆಲವು ರೋಗಿಗಳು

ಮಿ॥ ಎಚ್ ಜೆ ಕೆನ್ನೆಡಿ, [illegible], ನೆಬ್ರಾಸ್ಕ ಯು. ಎಸ್ ಎ, ಈತ ಬರೆಯುವದು —"ನನಗೆ ಬಂದ [illegible] ಹೊಟ್ಟೆಯ ಅಕ್ರಮವಿದ್ದು ಅನುಭವಿಸಿದೆನು. ಅನೇಕರು [illegible] ನನಗೆ ವಾಸಿಯಾಗಲಿಲ್ಲ [illegible] ಈಗ ಪೆರೂನಾ [illegible] ಆಹಾರ [illegible] ನನಗೆ ಸಂಪೂರ್ಣ ಗುಣವಾಗಿದೆ [illegible] ಬಿಡ"

ಮಿ॥ ಎಚ್ [illegible] ಬರೆಯುತ್ತಾರೆ —"ನಾನು ಹೊಟ್ಟೆಯೊಳಗಿನ ಅಕ್ರಮದಿಂದ ಅನೇಕ [illegible] ಅನುಭವಿಸಿದೆನು ಅನೇಕ ಇತರ ಔಷಧಗಳನ್ನು ಸೇವಿಸಿದೆನು ಕಡೆಗೆ ಪೆರೂನಾ ಸೇವಿಸಿದಂತೆ [illegible] ಆಹಾರವನ್ನು [illegible] ಈಗ ನಾನು [illegible] ಪೆರೂನಾ ಮನಾಲೀನಗಳನ್ನು ಸೇವಿಸಿದೆನು ಈಗ ನನಗೆ ಚೆನ್ನಾಗಿ ವಾಸಿಯಾಗಿದೆ [illegible]"

ಮಿ॥ ಕ್ಯಾಲೆಬ್ ಎಚ್ [illegible], ಪೋಲೀಸ್ ಅಧಿಕಾರಿ [illegible] ಎಸ್ ಎ, ಈತನ ಕಾಗದ —"ಅನೇಕ ವರ್ಷಗಳಿಂದ ನನಗೆ ತಲೆ, ಗಂಟಲು, ಹೊಟ್ಟೆಗಳಲ್ಲಿ ಅಕ್ರಮವುಂಟಾಗಿ ಅನುಭವಿಸಿದೆನು. ಅನೇಕ ವೇಳೆ ಊಟಕ್ಕೆ [illegible] ಊಟವಾದ [illegible] ಪೆರೂನಾ ಪತ್ರ [illegible] ಸೇವಿಸಿದೆನು. ನನಗೆ ವಾಸಿಯಾಯಿತೆಂದು ಸಂತೋಷದಿಂದ ಹೇಳುತ್ತೇನೆ [illegible] ಸಂತೋಷದಿಂದ ಹೇಳಬಲ್ಲೆನು. ನನಗೆ ಹಳೇ ರೋಗಗಳ ಔಷಧ ಸ್ವಲ್ಪವೂ ಇಲ್ಲ ಎಲ್ಲರೂ ಪೆರೂನಾ ಸೇವಿಸಿ ತಮ್ಮ ದೇಹದ ಅಕ್ರಮಗಳನ್ನು ಪರಿಹಾರಿಸಿಕೊಳ್ಳಲೆಂದು ಶಿಫಾರಸು ಹೇಳುತ್ತೇನೆ ನನ್ನ ಹಳೇ ರೋಗ ಅನುಭವಿಸಿ ಪೆರೂನಾ ದಿಂದ ಗುಣಹೊಂದಿದವರಲ್ಲದೆ ಇತರರು ಅದರ ಯೋಗ್ಯತೆಯನ್ನು ತಿಳಿಯಲಾರರು"

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ

ವಿಳಾಸ —ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ:—

ಮೆಸ್ಸರ್ಸ್. ಹಿಟ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೨೦—೬—೧೯೦೮ ರಿಂದ ೨೬—೬—೧೯೦೮ ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	*	*	0	0
ಮೈಸೂರು ,,	46	40	15	4
ಕೋಲಾರ್ ,,	0	0	1	2
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	12	4
ಹಾಸನ ,,	17	6	14	14
ಚಿತ್ರದುರ್ಗ ,,	0	0	0	0
ಕಡೂರ್ ,,	0	0	0	0
ಶಿವಮೊಗ್ಗ ,,	*	*	*	*
* ಸಂಖ್ಯೆ ಕಾಣಿಸಲ್ಲ ಒಟ್ಟು	63	46	42	26

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಆಷಾಢ ಶುದ್ಧ ದಶಮಿ ಗುರುವಾರದಿಂದ ಆಷಾಢ ಬಹುಳ ಬಿದಿಗೆ ಬುಧವಾರದ ವರೆಗೂ ಬಂದು ವಾರದ ಪಂಚಾಂಗ

೧೯೦೮ನೇ ಜೂಲೈ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿ.	ತೇದಿ ಆಷಾಢ
9	ಗುರು ‡	ದಶಮಿ	10 10	ವಿ	55 16	26
10	ಶುಕ್ರ ,,	ಏಕಾದಶಿ	9 1	ಅ	52 30	27
11	ಶನಿ *	ದ್ವಾದಶಿ	6 40	ಜೆ	50 44	28
12	ರವಿ †	ತ್ರಯೋ	1 2	ಉಷಾ	55 30	29
13	ಚಂದ್ರ	ಪೌರ್ಣಮಿ	53 29	ಪೂಷಾ	46 38	30
14	ಕುಜ ■	ಪಾಡ್ಯ	47 38	ಉಷಾ	50 20	31
15	ಬುಧ ,,	ಬಿದಿಗೆ	11 12	ಶ್ರ	38 58	1

‡ ಲಕ್ಷ್ಮೀವ್ರತಾರಂಭ ,, ಶಯನೈಕಾದಶಿ, ಗೋಪದ್ಮವ್ರತಾರಂಭ
* ಪಾಪೋಟಾಷ, ವಾಸುದೇವದ್ವಾದಶಿ, ಚಾತುರ್ಮಾಸ್ಯವ್ರತಾರಂಭ ಶನಿಪ್ರದೋಷ
† ಅಮೃತಯೋಗ ಚಾಮುಂಡೇಶ್ವರಿರಥ, ವ್ಯಾಸಪೂರ್ಣಿಮಾ
■ ಗ್ರಹದವಾಯೋಗ ದಕ್ಷಿಣಾಯನಪುಣ್ಯಕಾಲ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಸಾಧಾ ಅಕ್ಕಿ ಪಲ್ಲ ೧ಕ್ಕೆ	ರೂ	೧೪ ೮-೦	೧೩-೧೨ ೦
[illegible] ಅಕ್ಕಿ [illegible]		೧೫-೦-೦	೧೫ ೦-೦ ೦
,, [illegible]		೧೩ ೮ ೦	೧೫ ೮ ೦
[illegible] ಅಕ್ಕಿ		[illegible]	೧೪-೮-೧
[illegible]		೧೩-೦-೦	೧೩ ೦ ೦
,, [illegible]		೧೨ ೮ ೦	೦೨ ೦ ೦
[illegible]		೧೨ ೦-೦	೧೭-೮ ೦
[illegible]		೦೫ ೮-೦	೧೪ ೦ ೦
[illegible]		೩ ೧-೦-೦	೩ ೦-೦
[illegible]		೩ ೪ ೦	೩ ೧-೦ ೦
[illegible]		೩ ೦ ೦	೮ ೧-೦
[illegible]		೦೧-೦ ೦	೧೦-೦-೦ ೦
[illegible]		೮-೦ ೦	೯-೦ ೦
[illegible]		೦೧ ೦ ೦	೧-೦-೦ ೦
[illegible]		[illegible]	೦ ೦ ೧-೦ ೦
[illegible]		[illegible] ೦-೦	೦೩ ೮ ೦
[illegible]		[illegible]-೮-೦	೩ ೦
[illegible]		೩ ೮ ೦	೩-೪ ೦
[illegible]		೧ ೦-೦	೧ ೮ ೦
[illegible]		೦ ೮-೦	೧ ೩ ೦
[illegible]		೩ ೪-೦	೩-೮ ೦
[illegible]		[illegible]	[illegible]
[illegible]		೫ ೦ ೦	[illegible]
[illegible]		೩-೦-೦	೩-೦ ೦
[illegible]		೫ ೮-೦	೪ ೦-೦
[illegible]		೩ ೮-೦	೩ ೦ ೦
[illegible]		೪ ೧ ೦	೫ ೦ ೦
[illegible]		೧ ೪ ೦	೧ ೦ ೦
,, [illegible]		೧-೦	೦ ೭ ೦
[illegible]		೧೪-೮ ೦	೧೫ ೦ ೦
[illegible]		೪ ೧೫ ೦	೪ ೦ ೦
[illegible] ೧೦೦ ಕ್ಕೆ		೩ ೮-೦	೩ ೦ ೦
[illegible]		೧ ೦ ೦	೧ ೦ ೦
[illegible]		೦ ೧-೦-೦	೦ ೧೪-೦
ಚಿನ್ನ (ಪವನ್) ಕೆಂಪು		೧೫ ೩-೦	೧೫ ೩ ೦
,, ,, ಹಳದಿ		೧೫ ೧೦ ೦	೧೫ ೩ ೦
,, ,, ಗಟ್ಟಿ ತೊಲ ೧ಕ್ಕೆ		೨೩-೧-೦-೦	೨೪ ೮-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೭೫-೦-೦	೭೮ ೦-೦

Printed and Published by the Rev E W. Thompson, M A, Proprietor and Manager, Wesleyan Mission Press, Mysore 9/7/1908

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸರ್ಕ ೧೯೦೮ ನೇ ಇಸವಿ ಜೂಲೈ ತಾರೀಖು ೧೬ ನೇ ಗುರುವಾರ. ಸಂಚಿಕೆ ೭

AMRUTANJAN DEPOT, 16 OAK-LANE, BOMBAY. [17-21]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ —ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮು ಮತ್ತು ಗಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ ಬಾಟ್ಲಿ ೧ ಕ್ಕೆ ಕಿಮ್ಮತು ೦ ೮-೦. ಪೋಸ್ಟು ಖರ್ಚು ೦-೪-೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ತಜ್ಜಿ ನಗ್ಯೆರೆ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦ ೪ ೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ—ಜೀರ್ಣಕ್ಕೆ ಡಬ್ಬಿ ೧ ಕ್ಕೆ.	೦—೪—೦	ಕಾಸಸಮೀರಗುಟಿಕ—ಕೆಂಗನರ ಹೊಟ್ಟೆನೋವಿಗೆ	೧—೨—೦
ಪುಷ್ಟಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧—೦—೦	ಪ್ರಮೇಹದ ಮಿಶ್ರಣ—ಪ್ರಮೇಹಕ್ಕೆ	೧—೦—೦
ಜ್ವರಸಾರಿ—ಜ್ವರಕ್ಕೆ ಬಾಟ್ಲಿ ೧ ಕ್ಕೆ	೦—೧೨—೦	ಕಫ ಸರಿ—ಕಫ, ಕೆಮ್ಮು ಕ್ಷಯ, ಇತ್ಯಾದಿ	೧—೪—೦
ಚೇಳುಕಡಿತದ ಮದ್ದು	೦—೮—೦	ಸಂಜೀವಿ ತೈಲ್ಯ—ಮೋರೆಗೆ	೦—೮—೦
ದಂತಕುಲಹರಿ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಕರ್ಣಶೂಲಹಾರಿ—ಕಿವಿನೋವಿಗೆ	೦—೬—೦	ಉರಿನಾಶಕ ಎಂಣೆ ಬಾಟ್ಲಿ ೧ ಕ್ಕೆ	೦—೮—೦
ಬಿಚ್ಚಿದ ಮುಲಾಮು	೦—೩—೦	ವಾತದ ಮಿಶ್ರಣ ,,	೧—೨—೦
ದಂತಾಂಜನ—ಹಲ್ಲುಗಳಿಗೆ	೦—೨—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
ಕೇಶವರ್ಧಿನೀ ತೈಲ್ಯ—ಕೂದಲಿಗೆ	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
ಬಾಲಾಬು ಪತ್ರೆ—ಬಾಲರಿಗೆ	೨—೮—೦	ರೋಮಹಾರಿ	೦—೮—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು ಫೋರ್ಟು, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ.

"ವೃತ್ತಾಂತ ಪತ್ರಿಕೆ" ಚಂದಾದಾರರಿಗೆ.

"ವೃತ್ತಾಂತ ಪತ್ರಿಕೆ"ಯ ವರ್ಷವು ಕಳದ ಮೇ ತಿಂಗಳ ತಾ ೩೧ ಕ್ಕೆ ಪೂರೈಸಿ, ಚಾಲ್ತಿ ವರುಷದ ಚಂದಾ ಹಣವು ಸಲ್ಲಬೇಕಾಗಿರುತ್ತದೆ ಆದಕಾರಣ ನಮ್ಮ ಏಜಂಟರುಗಳ ಮೂಲಕ 'ವೃತ್ತಾಂತ ಪತ್ರಿಕೆ"ಯನ್ನು ಪಡೆಯುವ ನಮ್ಮ ಚಂದಾದಾರರೆಲ್ಲಾ ಅವರಿಗೆ ಖಚಿತವಾಗಿ ಅಡ್ವಾನ್ಸಿನಲ್ಲಿ ಚಂದಾ ಕಟ್ಟಿ ಅವರಿಂದ ಕ್ರಮವಾದ ರಶೀತಿ ಪಡೆಯಬೇಕೆಂದು ಈ ಮೂಲಕ ಕೃತಜ್ಞಾಪಿಸಿದ

ಮ್ಯಾನೇಜರ್, "ವೃತ್ತಾಂತ ಪತ್ರಿಕೆ"

ನೋಟೀಸು.

೨೩

೨೭ ನೇ ಜೂನ್ ೧೯೦೮ ನೇ ಇಸವಿ

ರೆವಿನ್ಯೂ ಕಮಿಷನರವರ ಆಫೀಸು, ಬೆಂಗಳೂರು.

ಮೈಸೂರು ದಸರಾ ಕೈಗಾರಿಕೆ ಮತ್ತು ವ್ಯವಸಾಯ ಸಂಬಂಧವಾದ ಪ್ರದರ್ಶನವು ೧೯೦೮ನೇ ಸಪ್ಟೆಂಬರು ೩೦ನೇ ತಾರೀಖಿನ ದಿವಸ ಪ್ರಾರಂಭವಾಗಿ ಅಕ್ಟೋಬರ್ ೧೨ ನೇ ತಾರೀಖಿನ ದಿವಸ ಮುಕ್ತಾಯಮಾಡಲ್ಪಡುವದು. ಇಷ್ಟವುಳ್ಳ ಪ್ರದರ್ಶಕರು ಅನುಕೂಲವಾದಷ್ಟು ಶೀಘ್ರವಾಗಿ ಪ್ರದರ್ಶನಕ್ಕೆ ಸಂಬಂಧಪಟ್ಟ ಪ್ರಕಟನೆ ಮತ್ತು ಫಾರಂಗಳನ್ನು ತಾಲ್ಲೂಕು ಅಮಲ್ದಾರರುಗಳಿಂದಲಾಗಲೀ, ಅಥವಾ ಡೆಪ್ಯುಟಿ ಕಮಿಷನರವರಿಂದಲಾಗಲೀ ಪಡೆಯಬಹುದು.

ಕೆ. ಸುಬ್ಬರಾವ್,
ಸೆಕ್ರೆಟರಿ.

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟರ್."

ವ್ಯವಹಾರನಿರ್ಣಯ—ಫಟಗಳು ಹಳೇ ಹಿಂದೂ ಮಹಮ್ಮದೀಯ ಲಾಗಳು, ೭೦ ಶಾಸನಗಳು ಇವುಗಳ ಸಂಗ್ರಹವೂ, ೯೦ ದಸ್ತಾವೇಜು, ೪೭ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ ಪಿ. ಸೇರಿ ೦ ರೂ. ೧೨ ಆಣೆ. [10-12]

ಕನ್ನಡ ಲಾ ರಿಪೋರ್ಟರ್—ಪ್ರಿವೀಕೌನ್ಸಿಲ್, ಹೈಕೋರ್ಟು ಚೀಫ್‌ಕೋರ್ಟು ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ೧—೨—೦ ಮುಂಗಡ, ಯಾ, ವಿ ಪಿ. ಬಿಡಿಪತ್ರಿಕೆ ೧ಕ್ಕೆ ೦—೨—೦

ಇವುಗಳನ್ನಪೇಕ್ಷಿಸುವವರು "ಎಂ. ವೆಂಕ್ಟಾಚಾರ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯತಕ್ಕದು

ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦

,, ,, ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಮಹಾ ಬಾಧಾಪಹಾರಿಣಿಯು.

೪೬-೭

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಪುಷ್ಕಳೀ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಾರೆ, ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಶಳತ, ಗಂಟ್ಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಉಳುಕಿದ ನೋವು, ಹಲ್ಲುನೋವು ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ತಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಶಕ್ತಿನ್ನೇ ಅಡಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳುತ್ತಾರೆ.

ಕ್ರಯ ಶೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸನ್,

೩೩, ಪೇದಮುತ್ತಪಿಳ್ಳೆ ಬೀದಿ, ಪೇಪೇರಿ, ಮದರಾಸ್.

ಜ್ವರಹರಿ.

೪೪-೧೧



ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯಮಾಡಿ ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ., ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಬಹಿಷ್ಠೆಯರು ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನು ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ನೇಕ ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್. ಮದರಾಸ್.

ಚನ್ನಪಟ್ಟಣದ ಪ್ರಕಟನೆ.

54-3

ಇದರಿಂದ ಸವಿಸ್ತರಿಗೂ ತಿಳಿಯಪಡಿಸುವದೇನಂದರೆ —ಮದ್ದೂರು ಚನ್ನಪಟ್ಟಣದ ರೇಶ್ಮೆ ಸೌದಾಗರ್ ಮಹಮ್ಮದ್ ಹೈದರಸಾಬಿ ಎಂಬ ನಾನು ಇದೇ ಸನ ೧೯೦೮ ನೇ ಇಸವಿ ಜೂನ್ ತಾ. ೯ ರಲ್ಲು ಸರ್ಕಾರಿ ರಿಜಿಸ್ಟರ್ ಪತ್ರದಲ್ಲಿ ನಮೂದಿಸಿರುವ ಮೇರಿಗೆ ನನ್ನ ಆಸ್ತಿಯನ್ನು ನನ್ನ ಮಕ್ಕಳಾದ ೧ ನೇ ಮಹಮ್ಮದ್ ಅಬ್ದುಲ್ ಖಾದರ್ ಸಾಬ್, ೨ ನೇ ಮಹಮ್ಮದ್ ಅಬ್ದುಲ್ ಖುದೂಸ್ ಸಾಬ್, ೩ ನೇ ಮಹಮದ್ ಅಬ್ದುಲ್ ರಹೀಮಾನ್ ಸಾಬ್, ೪ ನೇ ಮಹಮ್ಮದ್ ಅಹಮದ್ ಅಲ್ಲಿ ಸಾಬ್, ೫ ನೇ ಮಹಮ್ಮದ್ ಅಮೀರ್ ಅಲ್ಲಿ ಸಾಬ್ ಎಂಬ ಐದು ಜನ ಗಂಡುಮಕ್ಕಳಿಗೂ ಭಾಗಿಸಿ ಕೊಟ್ಟಿರುತ್ತೇನಾದುದರಿಂದ ಇನ್ನು ಮುಂದೆ ನನ್ನ ಮೇಲೆ ಅವರುಗಳ ಹಕ್ಕು ಏನೂ ಇರುವದಿಲ್ಲವೆಂತಲೂ, ಇವರುಗಳ ಸಾಲ ವಗೈರ ವಿಷಯಗಳಲ್ಲಿ ನಾನು ಜವಾಬ್‌ದಾರನಲ್ಲವೆಂತಲೂ ಈ ಮೂಲಕ ತಿಳಿಯಪಡಿಸಿದ್ದೇನೆ.

೨೫—೬—೦೮, ಮಹಮ್ಮದ್ ಹೈದರ್ ಸಾಬಿ,
ಚನ್ನಪಟ್ಟಣ. ರೇಶ್ಮೆ ಸೌದಾಗರ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-22

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚುಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿನೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡಕ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಸೊಗಸು ಸುವಾಸನೆಯಾಗಿರುತ್ತೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳೆವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕಾಪ್ಪಿಗೆ ೪ ಆಣೆ; ೫ ಕಾಪ್ಪಿಗೆ ೧ ಕಾಪ್ಪಿ ಹೆಚ್ಚು. ೧ ರಿಂದ ೧೨ ಕಾಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,
ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?
ಹಾಸನದ ಟೋಪಿ ಅಲ್ಲವೋ?
ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-29

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ನಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿಕೆ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ. ೨ ಆ.; ೧ ರೂ. ೪ ಆ.

ರೇಶ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ.

ಉಣ್ಣೆಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂರ್ಥಿ ಮೇಜೋಡು, ಅರ್ಧ ಮೇಜೋಡು ಅತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುತ್ತೇವೆ.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

1-29



ಬೆನ್ನೆಲುಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳೆಲ್ಲಾ ಮಾಂಸಖಂಡಗಳೆಲ್ಲಾ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇದೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಯೊಳಗೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಈಗಲೇ ಸೀಮೆಯಿಂದ ಬಂದಿದೆ.

117-39

೫,೦೦ ಹಾರ್ಸ ಟೋಪಿ ಹೊಲಿಯುವ ಸುಪೀರಿಯರ್ ಉಲನ್ ದಾರ ಮಾತ್ರ ಇದೆ.—ಟಾರಿ, ಕವಿಮ್ಮ ಕ್ರಯ.

೧ ಟೋಪಿಯಾಗುವ ಉಲನ್ ದಾರಕ್ಕೆ	೦—೮—೦
೧೦ ಟೋಪಿಯಾಗುವ ಬಂಡಲ್‌ಗೆ ೧ ಕ್ಕೆ	೩—೮—೦
ಕೊಕ್ಕೆ ಸೂಜಿ ೧ ಕ್ಕೆ	೦—೧—೬
೩೦ ಇಂಚಿನ ಬನಿಯನ್ ೧ ಕ್ಕೆ	೦—೯—೦

ಒಂದಾಣೆ ಸ್ಟಾಂಪು ಕಳುಹಿಸಿ ೨೦ ಪೋಸ್ಟ್ ಕಾರ್ಡ್ ಪಡಿರಿ.

ನಂಬ್ರ ೧ನೇ ಹಾರ್ಸ ಟೋಪಿ ಡಜನ್ ೧ಕ್ಕೆ ೧೩—೨—೦

ವಿಳಾಸ:—

ಪ್ರಾಸ-ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ದೇಶಬಾಂಧವರೇ 'ಪ್ರೀತಿಯಿಂದ ಲಾಲಿಸಿ'

57-1

ಮಧುರೆ ಸೀರೆಗಳು ಗಟ್ಟಿಯಾದ ಕೆಂಪು ಅಥವಾ ಕಪ್ಪು ಬಣ್ಣದ ೧೬ ಮೊಳದುದ್ದ ೨॥ ಮೊಳದಗಲ ಮಧ್ಯದಲ್ಲಿ ಬಿಳಿಯ ಚುಕ್ಕೆಯೂ ಹೂವ್ವುಗಳೆಂದ ಕೂಡಿದ್ದು ರೂ ೩—೪ ಆಣೆ. ಸಾದಾ ಸೀರೆ ರೂ ೨—೮ ಆಣೆ ಬಹಳ ನಯವಾದ ಮತ್ತು ಅಂಚು ಸೆರಗುಗಳಲ್ಲಿ ಸಾಟಾ ಬೆಳ್ಳಿಯ ಕಲಾಬತ್ತಿನ ಜರತಾರಿಯುಳ್ಳ ರೂ. ೮. ರೂ ೧೦ ಕೋಟಾ ಜರತಾರಿಯುಳ್ಳ ರೂ ೫ ಸಾದಾ ಸೀರೆಗಳು ಬಿಳಿಯ ರೇಷ್ಮೆಯ ೬ ರುದ್ರಾಕ್ಷಿ ಅಂಚು ಕೆಂಪು ಸಳಿದ ರೇಷ್ಮೆಗಳ ೧॥ ಮೊಳದ ೨ ಸೆರಗುಗಳು ಉದ್ದ ೧೮ ಮೊಳ, ಅಗಲ ೨॥ ಮೊಳ ಕಪ್ಪು ಅಥವಾ ಊದಾ (ಕೆಂಪು) ಬಣ್ಣದವು ರೂ ೩ ಬಹಳ ಉತ್ತಮ ನೂಲು ಅಸ್ಸಾಂ ಬಿಳಿಯ ರೇಷ್ಮೆಯ ಅಂಚು ೨ ಮೊಳದ ರೇಷ್ಮೆಯ ಸೆರಗುಗಳ ಬಹಳ ಜಾತರಿ ಬಣ್ಣ ೨ ಅಂಗುಲದಂಚಿನದಕ್ಕೆ ರೂ ೯॥. ೩ ಅಂಗುಲದಂಚು ರೂ ೧೧॥ ಮೇಲುಕೋಟೆ ೩ ಚೆಟ್ಟಗಲದಂಚಿನ ಪಂಚೆಗಳು. ಶುದ್ಧ ರೇಷ್ಮೆ ಅಂಚನ್ನು ಮಾರಿಸುತ್ತೆ. ೮ ಮೊಳದ ಜತೆ ರೂ ೩ ಪುದುಚೇರಿ ರೇಷ್ಮೆಯ ವಸ್ತ್ರಗಳು ೨ ಮೊಳದಗಲ ಸೊಗಸಾದ ಕೆಂಪು ರೇಷ್ಮೆಯವು ೪ ಮೊಳದ್ದು ರೂ ೫. ಶುದ್ಧ ಉಣ್ಣೆಯ ಹೊಸ "ಬ್ಲಾಂಕೆಟ್" ಬಾರ್ನೀಸ್ ಉದ್ದ ೯೦ ಅಗಲ ೬೮ ಅಂಗುಲ ರೂ ೬. ೨ನೆಯ ತರ ರೂ ೪. ವಿಳಾಸ ೨ರಾವ್ ಎಂಪೋರಿಯಂ, ಸೈದಹಾಂ ರೋಡ್, ವೇಪೇರಿ, ಮದ್ರಾಸು

ಸನ ೧೮೯೬ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 33-16

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ.

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ರಮಗಳು; ನಾನಾ ತರದ ಕೆಮ್ಮಲು;

ಸಕಲವಿಧ ಕ್ಷಯಗಳು, ನಾಂಸಖಂಡಗಳ ಕ್ಷೀಣತೆ,



ಆಹಾರದಲ್ಲಿ ಅರುಚಿ

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವೂ ಇದೇ.

ಕೈಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿ ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರು ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ಐದು ಆಣೆಯಿಂದ ೬॥ ಆಣೆ ವರೆಗೂ ಚಿಲ್ಲರೆಯಾಗಿ ಯಾಗಲೀ ಒಟ್ಟಾಗಿ ಯಾಗಲೀ ಮಾರಲ್ಪಡುತ್ತವೆ ಶಾಲುಗಳು, ಹಾಸನದ ಟೋಪಿಗಳು, ಮಸುಕಿನ ಟೋಪಿಗಳು, ಕೂಸುಗಳ ಟೋಪಿ, ಇನ್ನೆಲ್ಲವೂ ನಮ್ಮಲ್ಲಿ ಬಹಳ ಸ್ವಲ್ಪ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪ್ಪೋ, ಮೈಸೂರು

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ — ಎಂದರೆ, ನಿನಗೆ ಯಾವ ನೋವು ಉಂಟಾಗಿರಲಿ —" ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೋ? ಎಂದು ನಿನ್ನನ್ನು ನೀನೇ ಕೇಳಿಕೊ. ಹಾಗೆ ಆಗದಿದ್ದರೆ ಡೋನರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇದಿನ ಬೆಳಿಗ್ಗೆ ಸುಖವಾಗಿ



೧೨ ಆಣೆ ಬುಡ್ಡಿ ಪರಿಮಾಣ.

ಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ನಿಸರ್ಗ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮುಖ್ಯ ಕಾರಣವಾಗಿರುವುದು ಮಲಬಂಧದಿಂದ ರೋಗಗಳಿಗೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ: —ಪಿತ್ತಕೋಶ ರೋಗ, ಪಿತ್ತ; ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ; ಅಶಕ್ತಿ, ಎದೆಯ ಕಲ್ಲಣಿಸುವುದು, ತಲೆತಿರುಗುವುದು ತಲೆನೋವು; ಹೊಟ್ಟೆಯುಬ್ಬರ; ಹುಳುಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು. ಇವೇ ಮೊದಲಾದವು ಹೀಗೆ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ಆದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ ಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಸ್ವಲ್ಪ ರುಚಿಯಾಗಿಯೂ ಹಿತವಾಗಿಯೂ ಇಟ್ಟು ಕಷ್ಟದ ಬೇಗ ಸೋಪಿ ಹರಿಸಿ, ಆರೋಗ್ಯವನ್ನುಂಟುಮಾಡುವುವು.

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ... ಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ ಪಿ. ಓ. ಬಾಕ್ಸ್ ೨೦, ಬೊಂಬಾಯಿ — ಇವರಲ್ಲಿ ದೊರೆಯುವುದು.

ವೃತ್ತಾಂತ ಪತ್ರಿಕೆ.

ಸನ ೧೯೦೮ ನೇ ಇಸವಿ ಜೂಲೈ ತಾ॥ ೧೬ ನೇ ಗುರು...

ಕಾರ್ಖಾನೆಗಳ ಕಮಿಷನ್ ತೀರ್ಮಾನಗಳು.

ಇನ್ನು ಕೆಲವು ಕಾಲದೊಳಗಾಗಿ ಹಿಂದೂ... ಹತ್ತಿ, ಕಂಬಳಿ, ನಾರು, ಮರ, ಲೋಹ ಮೊದಲಾದ ಸಸಗುಗಳನ್ನೂ ಪದಾರ್ಥಗಳನ್ನೂ ತಯಾರುಮಾಡ... ಕಾರ್ಖಾನೆಗಳು ಅಧಿಕವಾಗಿ ಹೆಚ್ಚುತ್ತಾ ಬರು... ಧಾರಾಳವಾಗಿ ಹೇಳಬಹುದು. ಈ ಕಾರ್ಖಾನೆಗಳಲ್ಲಿ ...ಗಳನ್ನು ನಡಿಸುವುದಕ್ಕೆ ಬೇಕಾಗುವ ಕಲ್ಲಿದ್ದಲು ... ಸ್ಥಾನದೊಳಗೇ ಸಿಕ್ಕುವುದೆಂದು ಕಂಡು ಹಿಡಿ... ಕೆಲವು ಕಡೆಗಳಲ್ಲಿ ನೀರು ಧುಮುಕುವಂಥಾ ಸ್ಥ... ಯಂತ್ರಗಳನ್ನಿಟ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡು...ರುವರು. ಈ ರೀತಿ ಕಾರ್ಖಾನೆಗಳನ್ನೂ ಅವು... ಗಳನ್ನೂ ಹೆಚ್ಚಿಸೋಣವರಿಂದಲೇ ಈ ರಾಷ್ಟ್ರದ ...

ಭಿವೃದ್ಧಿಗೂ ಪರರಾಜ್ಯಗಳ ಕೂಡ ಸ್ಪರ್ಧೆಗೂ ಸಾಮರ್ಥ್ಯವುಂಟಾಗುವುದು

ಇದಲ್ಲದೆ ಅಂಥಾ ಕಾರ್ಖಾನೆಗಳನ್ನೆಲ್ಲಾ ಗವರ್ನಮೆಂಟಿನವರು ಮುತುವರ್ಜಿಯಿಂದ ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳಬೇಕಾದುದ್ದು ತುಂಬಾ ಅವಶ್ಯವಾಗಿರುತ್ತದೆ. ಇಲ್ಲವಾದರೆ ಕಾರ್ಖಾನೆಗಳ ಯಜಮಾನರೂ ಮಾಲೀಕರೂ ಸ್ವಪ್ರಯೋಜನದ ಮೇಲೆಯೇ ವಿಶೇಷ ದೃಷ್ಟಿ ಇಡುವುದಕ್ಕೂ, ಕೂಲಿಮಾಡತಕ್ಕವರ ಆಹಾರ, ಅವರ ದೇಹಾರೋಗ್ಯಾದಿಗಳಿಗೆ ಗಮನಕೊಡದೆ, ಬಹಳ ಸ್ವಲ್ಪ ಕೂಲಿಕೊಟ್ಟು ಅಪಾರ ಕೆಲಸವನ್ನು ಮಾಡಿಸಿಕೊಳ್ಳುವುದಕ್ಕೂ ಅವಕಾಶವಾದೀತು. ವಿಲಾಯತಿಯಲ್ಲೂ ಗವರ್ನಮೆಂಟಿನವರು ಕಾನೂನುಮಾಡಿ ಜಾರಿಗೆ ತರುವುದಕ್ಕೆ ಮೊದಲು ಕಾರ್ಖಾನೆಗಳಲ್ಲಿ ಬಹು ಪರಿತಾಪಕರವಾದ ಕೃತ್ಯಗಳು ನಡೆಯುತ್ತಲಿದ್ದುವು. ಸಣ್ಣ ಮಕ್ಕಳನ್ನು ಕೆಲಸಗಳಿಗೆ ನೇಮಿಸುವುದೂ, ಬಹಳ ದೀರ್ಘಕಾಲ ಅವರನ್ನು ದುಡಿಸುವುದೂ ಅಪರೂಪವಲ್ಲ. ಕಾರ್ಖಾನೆಗಳ ಒಳಗೂ ಹೊರಗೂ ಕೊಳಕೂ ಕಸಕಡ್ಡಿಗಳೂ ಬಚ್ಚಲ ಅಥವಾ ಇತರ ವಿಧವಾದ ರೊಚ್ಚೂ ಕೂಲಿಮಾಡತಕ್ಕ ಜನರ ಆರೋಗ್ಯಕ್ಕೆ ಹಾನಿಕರಗಳಾಗಿರುತ್ತವೆ. ಈಗಲಾದರೋ ಯೂರೋಪಿನ ರಾಜ್ಯಗಳೊಳಗಿರುವಂಥಾ ಕಾರ್ಖಾನೆಗಳ ಕೆಲಸ ಕಾರ್ಯಗಳ ವಿಷಯದಲ್ಲಿ ಆಯಾ ಗವರ್ನಮೆಂಟಿನವರು ಬಹು ಕಠಿಣವಾದ ಕಾನೂನುಗಳನ್ನು ಮಾಡಿಟ್ಟಿರುತ್ತಾರೆ. ಆ ಕಾರ್ಖಾನೆಗಳೊಳಗೆ ಚಿಕ್ಕ ವಯಸ್ಸಿನವರನ್ನು ಸೇರಿಸಕೂಡದೆಂತಲೂ, ಒಂದು ವೇಳೆ ಸೇರಿಸಿಕೊಂಡು ಕೆಲಸಮಾಡಿಸಿದಾಗ್ಯೂ ಕೆಲವು ಗಂಟೆಗಳ ಕಾಲ ಮಾತ್ರ ಅವರಿಂದ ಕೆಲಸ ತೆಗೆದುಕೊಳ್ಳಬೇಕೆಂತಲೂ ವಿಧಿಸಿರುತ್ತಾರೆ. ಕಾರ್ಖಾನೆಗಳಲ್ಲಿ ಹೆಂಗಸರನ್ನು ಕೆಲಸಕ್ಕೆ ಇಟ್ಟುಕೊಂಡರೂ ಮೇಲ್ಕಂಡ ಹಾಗೆಯೇ ಕಟ್ಟುನಿಟ್ಟುಗಳನ್ನು ಕಲ್ಪಿಸಿರುವರು. ಇವಲ್ಲದೆ ಸರ್ಕಾರದವರು ಇನ್ಸ್ಪೆಕ್ಟರುಗಳನ್ನು ವಿಶೇಷವಾಗಿ ನೇಮಿಸಿರುತ್ತಾರೆ. ಈ ಇನ್ಸ್ಪೆಕ್ಟರುಗಳು ಆಗಾಗ್ಗೆ ತಮ್ಮ ಅಧಿಕಾರಕ್ಕೊಳಪಟ್ಟ ಕಾರ್ಖಾನೆಗಳಿಗೆ ಹೋಗಿ ಅಲ್ಲಿ ನಡೆಯುವ ಕೆಲಸ ಕಾರ್ಯಗಳನ್ನು ಆಜಮಾಯಿಷಿ ಮಾಡುವುದೂ, ಸರ್ಕಾರದ ಕ್ರಮಗಳ ಪ್ರಕಾರ ನಡೆಯದೆ ತಪ್ಪಿದ ಪಕ್ಷದಲ್ಲಿ ಕಾರ್ಖಾನೆಯ ಮುಖಂಡರ ಮೇಲೆ ಮೊಕದ್ದಮೆ ಮಾಡಿ ಶಿಕ್ಷೆ ಮಾಡಿಸುವುದೂ ಅವರ ಕರ್ತವ್ಯಗಳಾಗಿರುತ್ತವೆ.

ಹಿಂದುಸ್ಥಾನದಲ್ಲಿಯೂ ಗವರ್ನಮೆಂಟಿನವರು ಕೆಲವು ಅಧಿಕಾರಿಗಳನ್ನೂ ದೊಡ್ಡ ಮನುಷ್ಯರನ್ನೂ ಒಂದು ಕಮಿಟಿಯಾಗಿ ನೇಮಿಸಿ, ಈ ರಾಷ್ಟ್ರದ ಕಾರ್ಖಾನೆಗಳ ಸ್ಥಿತಿಗತಿಗಳನ್ನು ಅವರಿಂದ ತನಿಖೆಮಾಡಿಸಿ, ಅವರ ಅಭಿಪ್ರಾಯಸಹಿತವಾದ ರಿಪೋರ್ಟನ್ನು ತರಿಸಿಕೊಂಡಿದ್ದಾರೆ. ಈ ರಿಪೋರ್ಟು ಬಹಳ ದೀರ್ಘವಾಗಿರುವುದರಿಂದ ಅದನ್ನೆಲ್ಲಾ ವಿವರಿಸುವುದು ಸಾಧ್ಯವಲ್ಲ. ಆದರೂ ಈ ಕಮಿಟಿಯವರು ಸೂಚಿಸಿರುವ ಒಂದೆರಡು ಮುಖ್ಯವಾದ ಅಭಿಪ್ರಾಯಗಳನ್ನು ತಿಳಿಸುವೆವು. ಈಗ ಹಿಂದುಸ್ಥಾನದ ಕಾರ್ಖಾನೆಗಳ ಮಾಲೀಕರು ಸರ್ಕಾರದ ಕಾನೂನುಗಳನ್ನು ಅಷ್ಟು ತೃಪ್ತಿಕರವಾಗಿ ಅನುಸರಿಸುತ್ತಾ ಇಲ್ಲ. ಸರ್ಕಾರದ ಇನ್ಸ್ಪೆಕ್ಟರುಗಳ ಸಂಖ್ಯೆಯು ಕಡಮೆಯಾಗಿರುವುದೇ ಇದಕ್ಕೆ ಕಾರಣವೆಂದು ತೋರುತ್ತದೆ. ಈ ಇನ್ಸ್ಪೆಕ್ಟರುಗಳನ್ನು ಇನ್ನೂ ಹೆಚ್ಚಾಗಿ ನೇಮಿಸಿ ಅವರು ಆಗಾಗ್ಗೆ ಕಾರ್ಖಾನೆಗಳನ್ನು ಆಜಮಾಯಿಷಿ ಮಾಡಿಸುತ್ತಿರಬೇಕು. ಇದಲ್ಲದೆ ಸಣ್ಣ ಮಕ್ಕಳನ್ನು ಕೆಲಸಕ್ಕೆ ಸೇರಿಸಿಕೊಂಡರೆ ಡಾಕ್ಟರುಗಳು ಹೋಗಿ ಅಂಥಾ ಮಕ್ಕಳ ಕಾಯಕಟ್ಟು ಮೊದಲಾದದ್ದನ್ನು ಪರೀಕ್ಷೆಮಾಡಿ, ಅವರು ಕೆಲಸಕ್ಕೆ ಅರ್ಹರಾಗಿದ್ದಾರೆಂಬ ವಿಷಯದಲ್ಲಿ ಸರ್ಟಿಫಿಕೇಟು ಕೊಡುವಂತೆ ಮಾಡಬೇಕಾಗಿದೆ.

ಹಿಂದುಸ್ಥಾನದ ಹವಾ ಇಲ್ಲಿನ ಜನರ ಆಚರಣೆ ಮೊದಲಾದವನ್ನು ನೋಡಿ ಮೇಲ್ಕಂಡ ಕಮಿಟಿಯವರು ವಿಲಾಯತಿಯಲ್ಲಿ ಜಾರಿಯಲ್ಲಿರುವಂಥಾ ನಿರ್ಬಂಧಗಳನ್ನೆಲ್ಲಾ ಇಲ್ಲಿಗೂ ಜಾರಿಗೆ ತರಬೇಕಾದದ್ದಿಲ್ಲವೆಂದು ತಿಳಿಸುವರು. ಹಿಂದುಸ್ಥಾನದವರು ಯೂರೋಪಿನ ಜನರಷ್ಟು ಕಷ್ಟಪಡುವುದಿಲ್ಲವಾದ್ದರಿಂದ ಇಲ್ಲಿ ಕೂಲಿಯವರನ್ನು ಕೆಲವು ಗಂಟೆಗಳ ಹೊತ್ತು ಹೆಚ್ಚಾಗಿ ದುಡಿಸಬಹುದು. ೧೪ ವರ್ಷದೊಳಗಿರುವವರಿಂದ ದಿನವೊಂದಕ್ಕೆ ೬ ಗಂಟೆಗಳ ಹೊತ್ತೂ, ೧೪ ವರ್ಷಕ್ಕೆ ಮೀರಿದವರಿಂದ ೧೨ ಗಂಟೆಗಳ ಹೊತ್ತೂ ಕೆಲಸ ಮಾಡಿಸಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ರಾತ್ರಿಹೊತ್ತು ಹೆಂಗಸರನ್ನು ದುಡಿಸಕೂಡದೆಂದೂ, ಭಾನುವಾರಗಳಲ್ಲಿ ಸಾಮಾನ್ಯವಾಗಿ ಕೂಲಿಯವರಿಗೆ ವಿರಾಮವಿರಬೇಕೆಂದೂ, ಈ ವಿಧಿಗಳನ್ನು ದೇಶೀಯ ಸಂಸ್ಥಾನಗಳಲ್ಲೂ ಜಾರಿಗೆ ತರಬೇಕೆಂದೂ ಸೂಚಿಸುವರು.

ಒಂದು ಮಹಾ ಉತ್ಸವ.

ಮೂರು ವಾರಗಳ ಹಿಂದೆ ಲಂಡನ್ ಪಟ್ಟಣದಲ್ಲಿ ಕ್ರೈಸ್ತಮತಕ್ಕೆ ಸಂಬಂಧಪಟ್ಟ ಒಂದು ದೊಡ್ಡ ಉತ್ಸವವು ನಡೆಯಿತು. ಇಂಗ್ಲಾಂಡ್ ದೇಶದಲ್ಲಿ ಕ್ರೈಸ್ತಮತದ ಅನೇಕ ಶಾಖೆಗಳು ಇವೆಯೆಂದು ವಾಚಕರಲ್ಲಿ ಕೆಲವರು ತಿಳಿದಿರುವರು. ಈ ವಿವಿಧ ಶಾಖೆಗಳಲ್ಲಿ ಆಂಗ್ಲಿಕನ್ ಸಂಗಡಕ್ಕೆ ಸೇರಿದವರು ಹೆಚ್ಚಾಗಿರುತ್ತಾರೆ. ಆಂಗ್ಲಿಕನ್ ಸಭೆಯು ಬಹು ಪುರಾತನವಾದದ್ದು. ಈ ಸಭೆಯು ಭೂಲೋಕದ ನಾಲ್ಕು ಕಡೆಗಳಲ್ಲಿ ಹರಡಿಕೊಂಡಿರುತ್ತದೆ. ಈ ಸಭೆಯವರು ಲಂಡನ್ ನಗರದಲ್ಲಿ ದೊಡ್ಡ ಉತ್ಸವವನ್ನು ನಡಿಸಿದರು. ಮತ್ತು ಇದರ ಪ್ರತಿನಿಧಿಗಳು ಇಂಗ್ಲಾಂಡ್ ದೇಶ, ಕನಡಾ, ಅಮೇರಿಕ, ಆಫ್ರಿಕ, ಆಸ್ಟ್ರೇಲಿಯಾ, ಇಂಡಿಯಾ, ಚೀಣಾ ಮತ್ತು ಜಪಾನ್, ಈ ಮೊದಲಾದ ದೇಶಗಳಿಂದ ಬಂದಿದ್ದರು. ಸಭೆಯಲ್ಲಿ ಜರುಗಿದ ಕೂಟಗಳಲ್ಲಿ ಬ್ರಿಟಿಷ್‌ಚಕ್ರಾಧಿಪತ್ಯದ ಈಗಿನ ಮಂತ್ರಿಗಳಾದ ಅಸ್ಕ್ವಿತ್‌ಯವರೂ ಹಿಂದೆ ಮಂತ್ರಿಗಳಾಗಿದ್ದ ಬಾಲ್ಫರವರೂ ಉಪನ್ಯಾಸಗಳನ್ನು ಮಾಡಿದರು. ಆಂಗ್ಲಿಕನ್ ಸಭೆಗೆ ಸೇರಿದವರು ದೇವರು ತಮಗೆ ಮಾಡಿರುವ ಮಹೋಪಕಾರಗಳಿಗಾಗಿ ಲಂಡನ್ ಪಟ್ಟಣದಲ್ಲಿರುವ ಪ್ರಸಿದ್ಧವಾದ ಸೆಂಟ್ ಪಾಲ್ಸ್ ಕಥೀಡ್ರಲ್ ಎಂಬ ದೇವಾಲಯದಲ್ಲಿ ಒಂದು ಕೃತಜ್ಞತಾ ಕೂಟವನ್ನು ನಡಿಸಿದರು. ಅಲ್ಲಿ ನೆರೆದಿದ್ದ ಕ್ರೈಸ್ತಭಕ್ತಾದಿಗಳು ಐವತ್ತು ಲಕ್ಷ ರೂಪಾಯಿಗಳನ್ನು ಕಾಣಿಕೆಯಾಗಿ ಅರ್ಪಿಸಿದರು.

ಈ ಕೂಟದಲ್ಲಿ ಕಂಡುಬಂದ ಆಡಂಬರ ಅಟ್ಟಹಾಸಗಳನ್ನು ಕುರಿತು ನಾವು ಇಲ್ಲಿ ಪ್ರಸ್ತಾಪಿಸುವುದಿಲ್ಲ. ಇದಕ್ಕೆ ಅನೇಕ ಸಹಸ್ರ ಜನಗಳು ಬಂದರೆಂತಾಗಲಿ ಅಥವಾ ಅನೇಕ ಲಕ್ಷ ರೂಪಾಯಿಗಳ ಕಾಣಿಕೆಯನ್ನು ಕೊಟ್ಟರೆಂತಾಗಲಿ ನಾವು ಹಿಗ್ಗುವುದಿಲ್ಲ. ನಾವು ಬರೀ ಲೌಕಿಕ ಪ್ರಯೋಜನಗಳ ಮೇಲೆ ವಿಶೇಷವಾಗಿ ಗಮನವಿಡುವುದು ಯೇಸು ಕ್ರಿಸ್ತನ ಬೋಧನೆಗೆ ವಿರೋಧವಾಗಿದೆ. ಆತನು—ಲೋಕದ ಎಲ್ಲಾ ಐಶ್ವರ್ಯಕ್ಕಿಂತ ಚಿತ್ತಶುದ್ಧಿ ಭಕ್ತಿ ಮತ್ತು ಪ್ರೀತಿ ಈ ಗುಣಗಳು ದೇವರ ದೃಷ್ಟಿಯಲ್ಲಿ ಮೆಚ್ಚಿಕೆಯಾದವುಗಳೆಂದು ತಿಳಿಸುತ್ತಾನೆ. ಮೇಲ್ಕಂಡ ಆಂಗ್ಲಿಕನ್ ಸಭೆಯ ಉತ್ಸವದಲ್ಲಿ ಭಾಗಿಗಳಾಗಿದ್ದವರು ಹಿಗ್ಗಿ ಆಡಂಬರವುಳ್ಳವರಾಗಿರದೆ ತಮ್ಮನ್ನು ದೇವರ ಸನ್ನಿಧಿಯಲ್ಲಿ ದೀನಭಾವದಿಂದ ತಗ್ಗಿಸಿಕೊಂಡರೆಂದು ಗೊತ್ತಾಗುವುದು.

ಸಭೆಯಲ್ಲಿ ಚರ್ಚಿಸಲ್ಪಟ್ಟ ಸಂಗತಿಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸೋಣ. ಲೋಕದ ಎಲ್ಲಾ ಜನಾಂಗಗಳಲ್ಲಿ ಸಮಾಧಾನವು ಹ್ಯಾಗೆ ನೆಲೆಗೊಳ್ಳತಕ್ಕದು, ಮದ್ಯಪಾನವನ್ನು ತಪ್ಪಿಸುವುದಕ್ಕೆ ಯಾವ ಪ್ರಯತ್ನಗಳನ್ನು ಮಾಡಬೇಕು, ಜನಗಳ ವಾಕ್‌ಕ್ರಿಯೆಗಳಲ್ಲಿ ಹ್ಯಾಗೆ ಶುದ್ಧತೆ ಇರಬೇಕು, ಐಶ್ವರ್ಯವಂತರಿಗೂ ಬಡವರಿಗೂ ಯಾವ ರೀತಿಯಲ್ಲಿ ಸ್ನೇಹವನ್ನು ಸ್ಥಾಪಿಸಬೇಕು, ಯಜಮಾನರಿಗೂ ಕೂಲಿಯವರಿಗೂ ಯಾವ ರೀತಿಯಲ್ಲಿ ಮೈತ್ರಿಭಾವವು ಹುಟ್ಟಬೇಕು, ಕ್ರೈಸ್ತಮತಕ್ಕೂ ಲೋಕದ ಬೇರೆ ಮತಗಳಿಗೂ ಇರುವ ಸಂಬಂಧವು ಯಾವುದು, ಮನುಷ್ಯರ ದೇಹಾಕ್ಷಗಳನ್ನು ಕೆಡಿಸತಕ್ಕ ಪುಸ್ತಕಗಳನ್ನೂ ವರ್ತಮಾನ ಪತ್ರಿಕೆಗಳನ್ನೂ ನಿಲ್ಲಿಸುವ ಉಪಾಯವು ಯಾವುದು, ಕ್ರೈಸ್ತರ ವೇದಗ್ರಂಥವಾದ ಬೈಬಲಿಗೂ ಭೌತಿಕ ಶಾಸ್ತ್ರಗಳ ಬೋಧನೆಗೂ ಇರುವ ಸಂಬಂಧವು, ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವ ವಿಧಾನಗಳು, ಕಿರಾತಕರಾದ ಜನಗಳಿಗೆ ವಿದ್ಯಾಭ್ಯಾಸ ಮಾಡಿಸುವ ರೀತಿ—ಈ ಮುಂತಾದ ಸಂಗತಿಗಳನ್ನು ಕುರಿತು ಪ್ರಸ್ತಾಪಿಸಿದರು.

ಅನೇಕ ಸಮಯಗಳಲ್ಲಿ ನಾವು ಲೋಕದ ನಡವಳಿಯನ್ನು ನೋಡಿ ಖಿನ್ನಮನಸ್ಕರಾಗುವುದುಂಟು. ಲೋಕದಲ್ಲಿ ದುಷ್ಟರಾದವರು ಶಿಷ್ಟರನ್ನು ಅಣಗಿಸುತ್ತಿರುವಂತೆ ನಾವು ಅನೇಕ ಸಮಯಗಳಲ್ಲಿ ಯೋಚಿಸಿ ವ್ಯಸನಪಡಬಹುದು. ಆದರೆ ನಿಜವಾಗಿಯೂ ಲೋಕದಲ್ಲಿ ಅನೇಕ ಒಳ್ಳೆಯವರು ಇರುತ್ತಾರೆ. ಇವರು ಸರ್ವದಾ ಲೋಕವನ್ನು ಉತ್ತಮಸ್ಥಿತಿಗೆ ತರುವುದರಲ್ಲಿ ಆಸಕ್ತರಾಗಿರುತ್ತಾರೆ. ಆಂಗ್ಲಿಕನ್ ಸಭೆಯ ಉತ್ಸವದಲ್ಲಿ ನೆರದು ಬಂದಿದ್ದ ಅನೇಕ ಸಹಸ್ರ ಭಕ್ತಾದಿಗಳು ಸತ್ಯವನ್ನು ಹುಡುಕುವವರಾಗಿಯೂ ಅದನ್ನು ಕಂಡುಕೊಂಡು ಅನುಸರಿಸುವವರಾಗಿಯೂ ಇರುತ್ತಾರೆ. ಈಗಿನ ಕಾಲದಲ್ಲಿ ಅವರ ಕರ್ತವ್ಯವೇನೆಂಬುದನ್ನು ಅವರು ತಿಳಿಯುವುದಕ್ಕೆ ಇಷ್ಟಪಟ್ಟರು. ಕ್ರೈಸ್ತನೆಂದರೆ ಅರ್ಥವೇನು? ಕ್ರೈಸ್ತನೆಂದಾಕ್ಷಣವೇ ಅವನು ಸಂಪೂರ್ಣನೆಂದು ಅವನಾಗಲೀ ಅಥವಾ ಬೇರೆಯವರಾಗಲೀ ತಿಳಿದುಕೊಳ್ಳಬಾರದು. ಯೇಸುಕ್ರಿಸ್ತನ ಬೋಧನೆಯನ್ನು ಅನುಸರಿಸತಕ್ಕವನು ತನ್ನಲ್ಲಿರುವ ಕೊರತೆಗಳನ್ನು ಯಾವಾಗಲೂ ತಿಳಿದುಕೊಳ್ಳುವನು. ಶ್ರೀ ಪೌಲನೆಂಬ ಮಹಾ ಪುರುಷನು ತಾನು ಬರೆದ ಒಂದು ಪತ್ರಿಕೆಯಲ್ಲಿ ತನ್ನನ್ನು ಒಬ್ಬ ಓಟಗಾರನಿಗೆ ಹೋಲಿಸಿ, ಈ ರೀತಿಯಾಗಿ ತಿಳಿಸುತ್ತಾನೆ "ನಾನು ಬಿರುವನ್ನು ಪಡಕೊಂಡು ಸಿದ್ಧಿಗೆ ಬಂದವನೆಂದು ಹೇಳುವುದಿಲ್ಲ, ನಾನು ಯಾವದನ್ನು ಹೊಂದುವದಕ್ಕಾಗಿ ಕ್ರಿಸ್ತಯೇಸುವನ್ನು ಹಿಡಿದುಕೊಂಡೆನೋ ಅದನ್ನು ಹಿಡಿದುಕೊಳ್ಳುವದಕ್ಕೋಸ್ಕರ ಓಡುತ್ತಾ ಇದ್ದೇನೆ. ಸಹೋದರರೇ ನಾನಂತೂ ಹಿಡಿದುಕೊಂಡೆನೆಂದು ನನ್ನನ್ನು ಈ ವರೆವಿಗೂ ಎಣಿಸಿಕೊಳ್ಳುವುದಿಲ್ಲ." ಕ್ರೈಸ್ತಸಭೆಯು ಯಾವುದು? ಅದರೊಳಗೆ ಸೇರಿದವರೆಲ್ಲರೂ ಸಂಪೂರ್ಣರಾದ ಭಕ್ತರೆಂದು ಹೇಳುವುದಕ್ಕಾಗುವುದಿಲ್ಲ. ಯಾರು ಯಾರು ದೈವ ಗುಣಸ್ವಭಾವಗಳನ್ನು ಜನರೊಳಗೆ ಹುಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತಾರೋ ಅಂಥಾ ಜನಗಳ ಸಮೂಹವೇ ಕ್ರೈಸ್ತಸಭೆಯೆಂದು ನಾವು ಹೇಳುವೆವು. ಸರ್ವಮನುಷ್ಯರು ಸಂಪೂರ್ಣತ್ವಕ್ಕೆ ಬರುವ ಹಾಗೆ ಪ್ರಯತ್ನಮಾಡುವುದು ಕ್ರೈಸ್ತಸಭೆಯ ಕರ್ತವ್ಯವಾಗಿದೆ.

ಒಳದೇಶದ ವೃತ್ತಾಂತಗಳು.

ಅಲಹಾಬಾದ್ (ಪ್ರಯಾಗ) ಪಟ್ಟಣದ ಹೈಕೋರ್ಟ್ ವಕೀಲರಾದ ಮಿ|| ದೇವೇಂದ್ರನಾಥ ಸೇನ್ ಎಂಬವರು ಕಳೆದ ವಾರ ರಾಜಧಾನಿಗೆ ಬಂದು, ಎರಡು ದಿನ ಇಲ್ಲಿನ ಟೌನ್ ಹಾಲ್ ಬಂಗಲಿಯಲ್ಲಿ ಉಪನ್ಯಾಸಗಳನ್ನು ಮಾಡಿದರು.

ಕಳೆದ ಶುಕ್ರವಾರ ಮೈಸೂರು ಡಿಸ್ಟ್ರಿಕ್ಟಿನ ಛಾರ್ಜನ್ನು ಮಿ|| ಎಂ. ಕಾಂತರಾಜೇ ಅರಸಿನವರು ಮಿ|| ಎಂ. ಸುಬ್ರಹ್ಮಣ್ಯ ಐಯರವರಿಗೆ ವಹಿಸಿ, ಒಂದು ತಿಂಗಳ ರಜಾ ಪಡೆದುಕೊಂಡಿದ್ದಾರೆ.

❦❦❦

ಕೋಲಾರ್ ಚಿನ್ನದ ಗಣಿಗಳ ಪೈಕಿ ಕಾರ್ವಿನ್‌ಕೇಲ್ಸ್ ಷಾಫ್ಟ್ ಎಂಬ ಗಣಿಯಲ್ಲಿ ಒಬ್ಬ ಕೂಲಿಯವನು ಕಳೆದ ಭಾನುವಾರ ಸುಮಾರು ೨,೦೦೦ ಅಡಿ ಎತ್ತರದಿಂದ ಒಳಕ್ಕೆ ಬಿದ್ದು ತಕ್ಷಣ ಮೃತಪಟ್ಟನು.

❦❦❦

ಮೊನ್ನೆ ಮಂಗಳವಾರ ಮಹಾಮಾತೃಶ್ರೀಯವರು ಲಕ್ಷ ಸಂಪಿಗೆಯ ಪೂಜೆಯನ್ನು ಪೂರೈಸಿ, ಚಾಮುಂಡೇಶ್ವರಿ ಬೆಟ್ಟಕ್ಕೆ ಪಯಣಮಾಡಿ ಸಂತರ್ಪಣೆ ಮಾಡಿಸಿ ದಾನಧರ್ಮ ಮಾಡಿದರು.

❦❦❦

ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಯಾವ ಯಾವ ಸ್ಥಳಗಳಲ್ಲಿ ತಾತ್ಕಾಲಿಕ ವೈದ್ಯಶಾಲೆಗಳನ್ನು ಇಟ್ಟುಕೊಡಬೇಕಾಗಿದೆಯೋ ಆಯಾ ತಾಲ್ಲೂಕಿನ ಅಮಲ್ದಾರರುಗಳು ಪಟ್ಟಿಗಳನ್ನು ತಯಾರುಮಾಡಿಸಿ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಿಗೆ ಕಳುಹಿಸಿಕೊಟ್ಟರೆ ಅನುಕೂಲವಾದ ಹಾಗೆಲ್ಲಾ ವೈದ್ಯಶಾಲೆಗಳನ್ನು ಏರ್ಪಡಿಸುವವರಾಗಿದ್ದಾರೆಂದು ತಿಳಿಯಬರುವುದು.

❦❦❦

ಉತ್ತರ ದೇಶಕ್ಕೆ ಸೇರಿದ ಮಿರಾಜ್ ಸಂಸ್ಥಾನದ ರಾಜಕುಮಾರರು ತಮ್ಮ ಪ್ರೈವೆಟ್ ಸೆಕ್ರೆಟರಿಯಾದ ಒಬ್ಬ ಸಾಹೇಬರೊಡನೆ ಕಳೆದ ಮಂಗಳವಾರ ರಾಜಧಾನಿಗೆ ಬಂದು, ಶ್ರೀಮನ್ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಾ ಇದ್ದಾರೆ. ಇವರು ಇಲ್ಲಿನ ಮುಖ್ಯಭಾಗಗಳನ್ನೆಲ್ಲಾ ನೋಡಿಕೊಂಡು, ನಾಡಿದ್ದು ವಾಪಸು ಪ್ರಯಾಣ ಮಾಡುವರೆಂದು ಕೇಳುತ್ತೇವೆ.

❦❦❦

ಕೋಲಾರ್ ಚಿನ್ನದ ಗಣಿಗಳ ಕೂಲಿಕಾರರಾದ ಮಾಪಿಳ್ಳೆಗಳಲ್ಲಿ ಒಂದು ಹೊಸ ತರಹ ರೋಗ ಹುಟ್ಟಿ ಮರಣವಾಗುತ್ತಿರುವುದನ್ನು ನೋಡಿ ಡಾಕ್ಟರುಗಳು ಅಲ್ಲಿಗೆ ರೈಲಿನ ಮೇಲೆ ಬಂದಿದ್ದ ೨—೩ ವಾಗಿನ್ ಉಪ್ಪುಮೀನನ್ನು ಜನರಿಗೆ ಬಿಕರಿ ಮಾಡದಂತೆ ತಡೆದು ನಾಶಪಡಿಸಿದರೆಂದೂ, ಈ ಉಪ್ಪುಮೀನನ್ನು ತಿಂದದ್ದರಿಂದಲೇ ಆ ವಿಜಾತಿಯಾದ ರೋಗ ಹುಟ್ಟಿತೆಂದೂ ಹೇಳುತ್ತಾರೆ.

❦❦❦

ಬೆಂಗಳೂರಿನಲ್ಲಿ ಕಳೆದ ವಾರ ಪೋಲೋ ಎಂಬ ಕುದುರೆ ಮೇಲೆ ಕುಳಿತು ಆಡುವ ಚೆಂಡಾಟದ ಪಂದ್ಯ ನಡೆಯಿತು. ಮೈಸೂರು ಖವಾಬಾನಾ ಎಂಬ ಕ್ಲಬ್ಬಿಗೆ ಸೇರಿದ ಕರ್ನಲ್ ದೇಶರಾಜೇ ಅರಸಿನವರು, ಸರ್ದಾರ್ ಗೋಪಾಲರಾಜೇ ಅರಸಿನವರು, ಜಮಾದಾರ್ ಫೈಯಾಜ್ ಮಹಮದ್‌ಯವರು, ಮೇ|| ಬಸ್ನೀಸಿಂಗ್‌ಯವರು ಜಯಪ್ರದವನ್ನು ಹೊಂದಿ, ಬಹುಮಾನಗಳನ್ನು ಪಡೆದುಕೊಂಡರು.

❦❦❦

ಸುಮಾರು ಏಳು ವರುಷಗಳ ಕೆಳಗೆ ಮೈಸೂರು ಸರ್ಕಾರದ ವೈದ್ಯ ಇಲಾಖೆಗೆ ಸೇರಿ, ಶಿವಮೊಗ್ಗೆಯಲ್ಲಿ ಆಸ್ಪತ್ರೆ ಅಸಿಸ್ಟೆಂಟರಾಗಿದ್ದ ಮಿ|| ಎಂ. ಜೆ. ಸ್ಯಾಮ್ಯುಯಲ್‌ಯವರು ಕಳೆದ ವಾರ ಸಿಲೋನ್ (ಲಂಕಾ)ದ್ವೀಪದ ಮಾರ್ಗವಾಗಿ ಜಹಜು ಹತ್ತಿ ವಿಲಾಯತಿಗೆ ಪ್ರಯಾಣಮಾಡಿದರು. ಇವರು ವಿಲಾಯತಿಯ ಪ್ರಸಿದ್ಧ ವೈದ್ಯಶಾಲೆಯಲ್ಲಿ ಔಷಧವಿದ್ಯೆಯನ್ನು ಕಲಿತು ಬರುವವರಾಗಿದ್ದಾರೆ. ಇವರು ತಮ್ಮ ಪ್ರಯಾಣಕ್ಕೂ ವಿದ್ಯಾಭ್ಯಾಸಕ್ಕೂ ಬೇಕಾಗುವ ಹಣವನ್ನೆಲ್ಲಾ ತಮ್ಮ ಕೈಯಿಂದಲೇ ಖರ್ಚುಮಾಡಿ, ವೈದ್ಯವನ್ನು ಚನ್ನಾಗಿ ಕಲಿತು ಬರಬೇಕೆಂದು ಪ್ರಯಾಣಮಾಡಿರುವುದು ಸಂತೋಷಕರವಾಗಿರುತ್ತದೆ.

❦❦❦

ಮಳವಳ್ಳಿಯಲ್ಲಿ ಈ ಸಲ ಶಾಮನ ಹಬ್ಬದ ನಿಮಿತ್ತ ಹಿಂದುಗಳಿಗೂ ಮಹಮ್ಮದೀಯರಿಗೂ ದೊಂಬೀ ಕಲಹವಾಯಿತೆಂದೂ, ಕೆಲವು ಪೋಲೀಸಿನವರಿಗೂ ಇತರರಿಗೂ ಗಾಯಗಳಾದವೆಂದೂ ಮೊಕದ್ದಮೆ ಆಗಿ, ಪೋಲೀಸಿನವರು ೨೧ ಮಂದಿ ಮಹಮ್ಮದೀಯರನ್ನು ದಸ್ತಗಿರಿ ಮಾಡಿದರು. ಇಲ್ಲಿನ ಟೌನ್ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡಿ, ಏಳು ಮಂದಿಗೆ ತಲಾ ೧ ವರುಷ ಸಜಾ, ೧೦೦ ರೂಪಾಯಿ ಜುಲ್ಮಾನೆಯನ್ನೂ, ಇನ್ನೇಳು ಮಂದಿಗೆ ತಲಾ ೬ ತಿಂಗಳ ಸಜಾ, ೫೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿ, ಉಳಿದ ಏಳು ಮಂದಿಯನ್ನು ಬಿಟ್ಟುಬಿಟ್ಟರು. ಆದರೆ ಶಿಕ್ಷೆ ಹೊಂದಿದ ೧೪ ಮಂದಿಯೂ ಬ್ಯಾರಿಸ್ಟರ್ ಮಿ|| ಲೂಬೆಕ್‌ಯವರನ್ನು ತಮ್ಮ ಲಾಯರಾಗಿ ನೇಮಿಸಿ, ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಅಪೀಲ್ ಮಾಡಿದರು. ಸರ್ಕಾರದ ತರಫು ಪಬ್ಲಿಕ್ ಪ್ರಾಸಿಕ್ಯೂಟರವರೂ ವಾದಿಸಿದರು. ಡಿಸ್ಟ್ರಿಕ್ಟ್ ಜಡ್ಜರವರು ಮೊಕದ್ದಮೆಯ ಸಾರಾಂಶವನ್ನು ತಿಳಿದು, ಕೆಳಕೋರ್ಟಿನ ಶಿಕ್ಷೆಯನ್ನು ಸಂಪೂರ್ಣವಾಗಿ ವಜಾಮಾಡಿ, ಆ ಮಹಮ್ಮದೀಯರನ್ನೆಲ್ಲಾ ಖುಲಾಸ್ ಮಾಡಿಸಿರುತ್ತಾರೆಂದು ಕೇಳುತ್ತೇವೆ.

❦❦❦

ಈ ಸಲ ಲಗ್ನಕಾಲದಲ್ಲಿ ಮೈಸೂರು ಡಿಸ್ಟ್ರಿಕ್ಟಿನೊಳಗೆ ಬಾಲ್ಯವಿವಾಹದ ಕಾನೂನಿಗೆ ವಿರೋಧವಾಗಿ ಆರು ಮದುವೆಗಳು ನಡೆದಿರುವಂತೆ ರಿಪೋರ್ಟಾಗಿದೆ. ಈ ಪೈಕಿ ಹೆಗ್ಗಡದೇವನ ಕೋಟೆ ತಾಲ್ಲೂಕು ಅರಹಳ್ಳಿಯಲ್ಲಿ ನಡೆದ ವಿವಾಹದಲ್ಲೂ, ಯಳಂದೂರು ತಾಲ್ಲೂಕು ಅಗರದಲ್ಲಿ ನಡೆದ ವಿವಾಹದಲ್ಲೂ ಹೆಣ್ಣುಗಂಡುಗಳ ತಂದೆಗಳಿಗೂ ಮದುವೆ ಮಾಡಿಸಿದ ಪುರೋಹಿತರಿಗೂ ತಲಾ ೧೦ ರೂ ನಿಂದ ೨೫ ರೂ ವರೆಗೆ ಜುಲ್ಮಾನೆಯಾಯಿತು. ಅಗರದ ಮದುವೆಯಲ್ಲಿ ಹೆಣ್ಣುಮಗುವಿಗೆ ೫|| ವರುಷ ವಯಸ್ಸಾಗಿತ್ತೆಂದು ತಿಳಿಯುವುದು. ತಿರುಮಕೂಡ್ಲು ನರಸೀಪುರದ ತಾಲ್ಲೂಕಿನಲ್ಲಿ ನಡೆದ ಬಾಲ್ಯವಿವಾಹದಲ್ಲಿ ಹೆಣ್ಣಿಗೆ ೮ ವರುಷ ತುಂಬಲು ೬ ದಿನ ಮಾತ್ರ ಉಳಿದಿದ್ದುದರಿಂದ ಈ ಮೊಕದ್ದಮೆಯನ್ನು ಸರ್ಕಾರದವರು ವಿಚಾರಣೆಗೆ ಗುರಿಮಾಡದೆ ಮಾಫಿ ಮಾಡುವಂತೆ ಅಪ್ಪಣೆ ಕೊಟ್ಟರೆಂದು ಕೇಳುತ್ತೇವೆ. ಹೆಗ್ಗಡದೇವನ ಕೋಟೆ ತಾಲ್ಲೂಕು ಕಟ್ಟೆಹುಣಸೂರಿನಲ್ಲೂ, ಹುಣಸೂರು ತಾಲ್ಲೂಕು ಕೆಂಬಲಾಪುರದಲ್ಲೂ, ಮೈಸೂರು ತಾಲ್ಲೂಕು ಕುರುಬರಲ್ಲೂ ನಡೆದ ಮೂರು ಬಾಲ್ಯವಿವಾಹಗಳನ್ನು ಪೋಲೀಸ್ ಇಲಾಖೆಯವರು ಇನ್ನೂ ತನಿಖೆಮಾಡುತ್ತಿರುವಂತೆ ತಿಳಿಯುವುದು.

ಮೊದಲನೇ ಆರ್ಯ ವೈಶ್ಯಮಹಾಸಭೆಯು.

ದೊಡ್ಡಬಳ್ಳಾಪುರದಲ್ಲಿ ನಡೆದ ಕೂಟವು.

ಮೈಸೂರು ಸಂಸ್ಥಾನದಲ್ಲಿ ಸ್ಥಾಪನೆ ಮಾಡಲ್ಪಡುವ ಆರ್ಯ ವೈಶ್ಯ ಮಹಾ ಸಭೆಯ ವಿಷಯದಲ್ಲಿ ಈ ತಿಂಗಳು ೧೬—೧೮ ನೇ ತಾರೀಖುಗಳಲ್ಲಿ ಮೈಸೂರಿನಲ್ಲಿ ನಡೆಯುವ ಕಾರ್ಯಕರ್ಗೆ ಮಹಾ ಸಭೆಗೆ ಬರಲು ಮೆ॥ ಡೆಪ್ಯುಟಿ ಕಮಿಷನರರವರಾದ ಎಂ. ಚಂಗಯ್ಯಶೆಟ್ರು, ಬಿ. ಎ ಯವರು ಈ ಸಭೆಗೆ ಪ್ರೆಸಿಡೆಂಟರಾಗಿ ಬರಿಸಿ ಇರುವ ಪತ್ರಿಕೆ ವಿಷಯದಲ್ಲಿ ಈ ದೊಡ್ಡಬಳ್ಳಾಪುರದಲ್ಲಿರುವ ಶ್ರೀವಾಸ್ತವ್ಯಕಾ ಪರಮೇಶ್ವರೀ ದೇವಾಲಯದಲ್ಲಿ ಈ ಟವರ್ ಮತ್ತು ತಾಲ್ಲೂಕು ಗ್ರಾಮಾಂತರಗಳಲ್ಲಿರುವ ಆರ್ಯ ವೈಶ್ಯರು ಈ ತಿಂಗಳು ೮ ನೇ ತಾ. ಬುಧವಾರ ಸಭೆಸೇರಿ ಮೀಟಿಂಗು ನಡಿಸಿದರು. ಈ ಮೀಟಿಂಗಿಗೆ ಮೆ॥ ಆಲಂಪಲ್ಲಿ ನರಸಿಂಹಯ್ಯ ಶೆಟ್ಟರವರು ಛೇರ್‌ಮೇನಾಗಿದ್ದರು. ಪ್ರೆಸಿಡೆಂಟರಾದ ಮೆ॥ ಚಂಗಯ್ಯಶೆಟ್ಟರವರು ಮೈಸೂರಿನಲ್ಲಿ ಮಾಡಿದ ಪ್ರೊಸೀಡಿಂಗ್ಸು ಉಪನ್ಯಾಸ ವಿಷಯಗಳನ್ನು ವಿಶದವಾಗಿ ಸಭಿಕರಿಗೆ ಛೇರ್‌ಮೇನರವರು ಓದಿ ಹೇಳಿದರು. ಸಭಿಕರೆಲ್ಲರೂ ಕೇಳಿ ಆನಂದಭರಿತರಾಗಿ ಮೆ॥ ಚಂಗಯ್ಯಶೆಟ್ಟರವರಿಗೂ, ಈ ಸಭೆಗೆ ಸಂಪೂರ್ಣವಾದ ವಿಶ್ವಾಸದೊಡನೆ ಕಾರ್ಯಗಳು ನೆರವೇರಿಸಲೂ ಇಚ್ಛೆಯುಳ್ಳ ಮೈಸೂರಿನಲ್ಲಿರುವ ಉತ್ತರ ಶತಗೋತ್ರ ಆರ್ಯ ವೈಶ್ಯ ಮಹಾ ಜನಗಳಿಗೂ ವಂದನೆಗಳು ಸಮರ್ಪಿಸಿ, ಈ ಸಭೆಯು ಅಚಂದ್ರಾರ್ಕ ಸ್ಥಾಯಿಯಾಗಿ ನೆಲೆಗೊಂಡು ಅಭಿವೃದ್ಧಿಯಲ್ಲಿರುವದಕ್ಕೆ ಭಗವಂತನನ್ನೇ ಪ್ರಾರ್ಥಿಸಿ ಜಯಘೋಷವಾದ ಅಹಂಕಾರವನ್ನು ಮಾಡಲ್ಪಟ್ಟಿತು. ಮೇಲ್ಕಂಡ ಸಭೆಗೆ ಈ ದೊಡ್ಡಬಳ್ಳಾಪುರ ತಾಲ್ಲೂಕಿನಿಂದ ಸುಮಾರು ಹತ್ತು ಜನಗಳವರೆಗೂ ಪಯಣಮಾಡಿಸಬೇಕೆಂದೂ, ಈ ಮಹಾ ಸಭೆಯ ಕಮಿಟಿಗೆ ನಮ್ಮಗಳ ಅಭಿಪ್ರಾಯಗಳನ್ನು ಕೃತಪಡಿಸುವ ಬಗ್ಗೆ ಒಂದು ಮೆಮೋ ಬರೆದು ಒಪ್ಪಿಸಬೇಕೆಂದೂ ತೀರ್ಮಾನಿಸಿ, ಸಭೆ ಬರಖಾಸ್ತು ಮಾಡಲ್ಪಟ್ಟಿತು. ಸಭೆಯವರು ಛೇರ್‌ಮೇನರವರಿಗೂ ಛೇರ್‌ಮೇನರವರು ಸಭೆಯವರಿಗೂ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಿದರು ಈ ಸಭೆಯು ನಡೆಯುವದರಿಂದ ನಮಗೆ ಉಂಟಾಗಿರತಕ್ಕ ಸಂತೋಷವನ್ನು ನಮ್ಮ ಸರ್ವವೈಶ್ಯರಿಗೂ ತಿಳಿಯತಕ್ಕ ಬಗ್ಗೆ ತಮ್ಮ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಬೇಕೆಂದು ಅರಿಕೆಮಾಡಿದೇನೆ.

ಆಲಂಪಲ್ಲಿ ವೆಂಕಟನಾರಣ್ಯಯ.

"ಶ್ರೀ ಕೃಷ್ಣರಾಜ ಪೊಲೀಸ್ ಗರಡಿ, ಮೈಸೂರು."

ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಪ್ರಾರಂಭಮಾಡಿದ್ದು.

ಕಳೆದ ಬುಧವಾರ ಸಾಯಂಕಾಲ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ಮೈದಾನಿನಲ್ಲಿ ಪೊಲೀಸ್ ಇಲಾಖೆಯವರ ಅಂಗಸಾಧನೆಗೋಸ್ಕರ ಕಸರತ್ತು ಮಾಡುವ ಗರಡಿಯನ್ನು ಪ್ರಾರಂಭಮಾಡಿದರು ಇಲ್ಲಿನ ಪೊಲೀಸ್ ಅಧಿಕಾರಿಗಳು ಅದಕ್ಕಾಗಿ ನಾನಾ ಪ್ರಕಾರವಾದ ಏರ್ಪಾಡುಗಳನ್ನು ಮಾಡಿ, ಅಲ್ಲಿಗೆ ರಾಜಧಾನಿಯಲ್ಲಿರುವ ಅಧಿಕಾರಿಗಳನ್ನು ದೊಡ್ಡ ಮನುಷ್ಯರನ್ನೂ ಕರೆಸಿಕೊಂಡಿದ್ದರು. ಮೈಸೂರು ಸಂಸ್ಥಾನದ ಪೊಲೀಸ್ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಮೆ॥ ದಳವಾಯಿ ದೇವರಾಜೇ ಅರಸಿನವರು ಸಭೆಯ ಅಗ್ರಾಸನವನ್ನು ವಹಿಸಿದರು ಡೆಪ್ಯುಟಿ ಕಮಿಷನರ್ ಮೆ॥ ಎಂ. ಕಾಂತರಾಜೇ ಅರಸಿನವರು, ರಾಜಾ ಸಾಹೇಬರು, ಡಾಕ್ಟರ್ ಭಕ್ಷಿ ಮೆ॥ ಎಚ್ ಲಿಂಗರಾಜೇ ಅರಸಿನವರೇ ಮೊದಲಾದ ರಾಜಬಂಧುಗಳೂ ಹಾಜರಾಗಿದ್ದರು ಮೈಸೂರು ಪೊಲೀಸ್ ಅಧಿಕಾರಿಗಳ ಪರವಾಗಿ ಪೊಲೀಸ್ ಸೂಪರಿಂಟೆಂಡೆಂಟರಾದ ಮೆ॥ ಜಹಿರುದ್ದೀನ್ ಮೆಕ್ಕಿಯವರು ಸಭಾ ಅಧ್ಯಕ್ಷರನ್ನೂ ಸಭಿಕರನ್ನೂ ಕುರಿತು ಪೊಲೀಸಿನವರ ಸ್ಥಿತಿಗತಿಯ ವಿಚಾರವಾಗಿ ಕೆಲವು ಸಮಯೋಚಿತವಾದ ಮಾತುಗಳನ್ನು ಹೇಳಿದರು ಅವರು ತಿಳಿಸಿದ ಮುಖ್ಯಾಭಿಪ್ರಾಯಗಳೇನೆಂದರೆ—

ಪೊಲೀಸ್ ಸೂಪರಿಂಟೆಂಡೆಂಟರು ಹೇಳಿದ್ದು

ತಾವುಗಳೆಲ್ಲಾ ಈ ದಿನ ದಯಮಾಡಿ ಸಭೆಯನ್ನಲಂಕರಿಸಿದ ವಿಷಯದಲ್ಲಿ ನನ್ನ ಸಹಪಾಟಿಗಳ ಪರವಾಗಿ ನಾನು ಮನಃಪೂರ್ವಕವಾಗಿ ವಂದಿಸುತ್ತೇನೆ. ಮೈಸೂರು ಪೊಲೀಸ್ ಇಲಾಖೆಯ ಮೊಖ್ತೇಸರರಾದ ಮೆ॥ ದಳವಾಯಿ ದೇವರಾಜೇ ಅರಸಿನವರು ಈ ದಿನ ಸಭೆಯ ಅಗ್ರಾಸನವನ್ನು ವಹಿಸಿ, ಈ ಕಸರತ್ತಿನ ಗರಡಿಯನ್ನು ಪ್ರಾರಂಭಿಸುವುದಕ್ಕೆ ಒಪ್ಪಿಕೊಂಡದ್ದು ಪರಮ ಸಂತೋಷವಾಗಿರುತ್ತದೆ, ಸಭಿಕರ ಅನುಜ್ಞೆಯನ್ನು ಪಡೆದು ಪೊಲೀಸ್ ನೌಕರರ ಸ್ಥಿತಿಗತಿಯನ್ನು ಕುರಿತು ಈ ಸಮಯದಲ್ಲಿ ಕೆಲವು ಮಾತುಗಳನ್ನು ತಿಳಿಸಬೇಕೆಂದು ಕುತೂಹಲಪಡುತ್ತೇನೆ.

ಪೊಲೀಸ್ ನೌಕರನ ಚಾಕರಿಯು ಸಂತೋಷಪ್ರದವಾದದ್ದಲ್ಲ. ಅವನ ವಿಷಯದಲ್ಲಿ ಸಾಮಾನ್ಯವಾಗಿ ಜನರು ಕನಿಕರ ಪ್ರೀತಿಗಳನ್ನು ತೋರಿಸುವುದು ಪ್ರಯಾಸ. ಸಂಸ್ಥಾನದಲ್ಲಿ ಸಿವಿಲ್ ಮತ್ತು ಮಿಲಿಟರಿ ಎಂಬ ಎರಡು ಇಲಾಖೆಗಳಿರುವವು. ಪೊಲೀಸಿನವನು ಇವೆರಡರ ಸ್ಕೀಮಿಯೂ ಯಾವುದರಲ್ಲೂ ಸೇರುವುದಿಲ್ಲ. ಸಿವಿಲ್ ಇಲಾಖೆಯವರು ಪೊಲೀಸಿನವನು ಮಿಲಿಟರಿ ಇಲಾಖೆಗೆ ಸೇರಿದವನೆಂತಲೂ, ಮಿಲಿಟರಿಯವರು ಅವನು ಸಿವಿಲ್ ಇಲಾಖೆಗೆ ಸೇರಿದವನೆಂತಲೂ ಹೇಳಿ ದೂರಮಾಡುತ್ತಾರೆ. ಸರ್ವಿಸಿನೊಳಗೇ ಅವನ ಸ್ಥಿತಿಯು ಹೀಗಿರುವಲ್ಲಿ ಅದರಿಂದ ಹೊರಗಡೆ ಅವನಿಗೆ ಯಾವ ಸ್ಥಾನಮಾನವೇ ದೊರಕೀತು ? ಆದಾಗ್ಯೂ ಇಷ್ಟಕ್ಕೆಲ್ಲಾ ಪೊಲೀಸಿನ ತಪ್ಪು ಲೇಶಮಾತ್ರವಾದರೂ ಇಲ್ಲವೆಂದು ನಾನು ಹೇಳಬಲ್ಲೆನು

ಆದರೆ ಪೊಲೀಸಿನವನ ಕೆಲಸವೇನು ಎಂದು ನಾನು ವಿವರಿಸಬೇಕಾದದ್ದಿಲ್ಲ. ಎಲ್ಲಾ ಕೆಲಸಗಳಿಗೂ ಅವನು ಇದ್ದೇ ಇರಬೇಕು. ಅವನು ಯಾವ ಕೆಲಸವನ್ನಾಗಲಿ ತನ್ನಿಂದಾಗದೆಂದು ಹೇಳಕೂಡದು. ಬುದ್ಧಿಕುಶಲತೆಯಲ್ಲೂ ಕಷ್ಟಪಡುವುದರಲ್ಲೂ ಅವನು ಹಿಂತೆಗೆಯಕೂಡದು. ಹದಿನೈದು ಇಪ್ಪತ್ತು ಮೈಲಿ ದೂರ ಬಿಸಿಲು ಮಳೆ ಎನ್ನದೆ ನಡೆದು ಹೋಗಿ ದಣಿದು, ಜಂಗಲುಗಳಲ್ಲಿ ರಾತ್ರಿ ನಿದ್ರೆಗೆಟ್ಟು ಕಾವಲಿದ್ದು ಕಾಯುತ್ತಾ ಚಳಿಯಲ್ಲಿ ನಡುಗಬೇಕಾದ ಸಂಭವಗಳೂ ಉಂಟು. ಆಸ್ವಾಸ್ಥವಾದರೂ ಮರುದಿನ ಅವನು ಯಥಾಪ್ರಕಾರ ಕಷ್ಟ ಕೆಲಸಕ್ಕೆ ಸಿದ್ಧನಾಗಿರಬೇಕು. ಕಳ್ಳನನ್ನೂ, ಸರೋಡೆ ಮಾಡುವವನನ್ನೂ, ದರೋಡೆ ನಡಿಸಿದವನನ್ನೂ ಚಮತ್ಕಾರವಾಗಿ ಹಿಡಿಯುವುದಕ್ಕೂ, ಅವನ ಬೆನ್ನು ಹತ್ತಿ ಓಡುವುದಕ್ಕೂ, ಸಮಯ ಬಿದ್ದರೆ ಅವನ ಕೂಡ ಮುಷ್ಟಾಮುಷ್ಟಿ ಹೋರಾಡಿ ಗುದ್ದಾಡುವುದಕ್ಕೂ, ಕಡೆಗೂ ಜಯ ಹೊಂದಿ ಬರುವುದಕ್ಕೂ ಚುರುಕು ಬುದ್ಧಿಯೂ, ಮನೋಧೈರ್ಯವೂ, ಕಾಯಪುಷ್ಟಿಯೂ ಪೊಲೀಸಿನವನಿಗೆ ಇರಬೇಕು. ಇತ್ತಲಾಗಿ ಅವನು ತುಂಬಾ ಬುದ್ಧಿವಂತನಾಗಿರಬೇಕು. ಪತ್ತೆ ಹಚ್ಚುವುದು ನಡಿಸಿ ಮೊಕದ್ದಮೆಯನ್ನು ಕೋರ್ಟಿಗೆ ಕಳುಹಿಸಿ, ಸಾಕ್ಷಿಗಳನ್ನು ದರ್ಯಾಫ್ತು ಮಾಡುವುದಕ್ಕೂ, ರುಜುವಾತನ್ನು ಒದಗಿಸುವುದರಲ್ಲಿ ಒಂದು ಕೊರತೆಯಾದರೂ ಸಡಿಲವಾಗದಂತೆ ಸಿದ್ಧಪಡಿಸಿಕೊಳ್ಳುವುದಕ್ಕೂ ಸಮರ್ಥನಾಗಿರಬೇಕು. ಇದಲ್ಲದೆ ನಿಷ್ಕಾರಣವಾಗಿ ಯಾರು ತಪ್ಪು ಹೊರಿಸಿದರೂ ಎಷ್ಟು ದಂಡಿಸಿದರೂ ಲಕ್ಷ್ಯ ಮಾಡದೆ ತಾಳ್ಮೆಯಿಂದ ತನ್ನ ಕೆಲಸವನ್ನು ಮಾಡಿಕೊಳ್ಳುತ್ತಾ ಹೋಗಬೇಕು

ಇಷ್ಟು ಕಷ್ಟ ಕೆಲಸಗಳನ್ನೆಲ್ಲಾ ನಾವು ನಿರ್ವಹಿಸುವುದಕ್ಕೆ ಯೋಗ್ಯರಾಗುವಂತೆ ಶ್ರೀಮನ್ಮಹಾರಾಜರವರ ಗವರ್ನಮೆಂಟಿನವರು ನಮಗೋಸ್ಕರ ಸಾಧ್ಯವಾದಷ್ಟು ಏರ್ಪಾಡುಗಳನ್ನೆಲ್ಲಾ ಮಾಡುತ್ತಾ ಬಂದಿದ್ದಾರೆ ಬೆಂಗಳೂರಿನಲ್ಲಿ ಪೊಲೀಸ್ ಟ್ರೈನಿಂಗ್ ಸ್ಕೂಲನ್ನು ಸ್ಥಾಪಿಸಿ ನಡಸುವರು. ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿ ಪೊಲೀಸ್ ಸ್ಕೂಲುಗಳನ್ನು ಇಟ್ಟಿರುವರು. ಇವುಗಳಲ್ಲಿ ಕಾನೂನು ಮುಂತಾದ್ದನ್ನೆಲ್ಲಾ ನಮಗೆ ಕಲಿಸಲು ಏರ್ಪಾಡು ಮಾಡಿದ್ದಾರೆ ಆದರೆ ಪೊಲೀಸ್ ಆಫೀಸರುಗಳೇ ಕಾನ್ಸ್‌ಟೇಬಲ್ಲುಗಳೇ ತಮ್ಮ ಕಾಯಪುಷ್ಟಿಯನ್ನು ಒಳ್ಳೇ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ ಪ್ರಯತ್ನಪಡುವುದಿಲ್ಲವೆಂತಲೂ, ಬಲಹೀನರಾಗುತ್ತಾ ಬಂದಿದ್ದಾರೆಂತಲೂ ಒಂದು ಅಪವಾದ ಉಂಟಾಗಿದೆ ನಮ್ಮ ಜನರು ಅನ್ಯದೇಶದ ಫುಟ್‌ಬಾಲ್, ಕ್ರಿಕೆಟ್, ಹಾಕಿ ಮೊದಲಾದ ಹೊಸ ಆಟಗಳನ್ನು ಕಲಿಯಲಿಲ್ಲ. ಒಳದೇಶದ ಗರಡಿಗಳಲ್ಲಿ ಮಾಡುತ್ತಿದ್ದ ಕಸರತ್ತುಗಳನ್ನು ಸಹ ಬಿಟ್ಟಿರುತ್ತಾರೆ ಇದು ದುಃಖಕರವಾದ ಸಂಗತಿಯಾಗಿದೆ ಪೊಲೀಸ್ ಇಲಾಖೆಯವರು ತಮಗೆ ಬಿಡುವಿದ್ದ ಸಮಯಗಳಲ್ಲಿ ಕಸರತ್ತುಗಳನ್ನು ಮಾಡದೆ, ದುಷ್ಟ ಜನರ ಸಹವಾಸದಲ್ಲಿ ಬಿದ್ದು, ಕಾಯಪುಷ್ಟಿಯಿಲ್ಲದೆ ಬಲಹೀನರಾಗುತ್ತಾ ತಮ್ಮ ಉದ್ಯೋಗದಲ್ಲಿ ಅಭಿವೃದ್ಧಿಗೆ ಬಾರದೆ ಹಿಂದೆ ಬೀಳುತ್ತಾ ಬರುತ್ತಿದ್ದಾರೆ ಇಂಥಾ ದುರ್ಗತಿಯನ್ನು ತಪ್ಪಿಸಬೇಕೆಂದು ಬಹು ಕಾಲದಿಂದ ಯೋಚನೆ ಇತ್ತು ಈಗ ಮೈಸೂರು ಡಿಸ್ಟ್ರಿಕ್ಟಿನ ಪೊಲೀಸ್ ಆಫೀಸರುಗಳು ಈ ಪೊಲೀಸ್ ಕಸರತ್ತಿನ ಗರಡಿಯನ್ನು ಪ್ರಾರಂಭಿಸಿ, ಅದರಲ್ಲಿ ಇಂಗ್ಲಿಷ್ ಮತ್ತು ದೇಶೀಯ ಕಸರತ್ತುಗಳನ್ನು ಪೊಲೀಸಿನವರಿಗೆ ಕಲಿಸಿ ಮಾಡಿಸಬೇಕೆಂದು ಗೊತ್ತು ಮಾಡಿದ್ದಾರೆ ಇದರಿಂದ ಪೊಲೀಸ್ ಆಫೀಸರುಗಳೂ ನೌಕರರೂ ಪರಸ್ಪರ ತಾರತಮ್ಯವಿಲ್ಲದೆ ಈ ಗರಡಿಯಲ್ಲಿ ಸೇರಿ ಪರಸ್ಪರ ಸ್ನೇಹ ಪ್ರೀತಿ ವಿಶ್ವಾಸಗಳನ್ನು ತೋರಿಸುವುದಕ್ಕೂ ಕಸರತ್ತುಗಳನ್ನು ಮಾಡಿ ಕಾಯಪುಷ್ಟಿಯನ್ನು ಚೆನ್ನಾಗಿ ಮಾಡಿಕೊಳ್ಳುವುದಕ್ಕೂ ತುಂಬಾ ಸಹಾಯವಾಗುವುದರಲ್ಲಿ ಸಂಶಯವಿಲ್ಲ ಇನ್ನು ಕೆಲವು ಕಾಲದೊಳಗಾಗಿ ಜಪಾನವರಲ್ಲಿರುವಂಥಾ ಜು‌ಜುತ್ಸು ಎಂಬ ಹೊಸ ತರದ ಕಸರತ್ತುಗಳನ್ನು ಈ ನಮ್ಮ ಗರಡಿಯಲ್ಲಿ ಪ್ರಾರಂಭಿಸಿ ನಮ್ಮ ಜನರಿಗೆ ಕಲಿಸಬೇಕೆಂದು ಯೋಚಿಸಿರುತ್ತೇವೆ

ಶ್ರೀಮನ್ ಮಹಾರಾಜರವರ ಇಪ್ಪತ್ತೈದನೇ ವರ್ಷ ವರ್ಧಂತಿಯಲ್ಲಿ ಈ ಗರಡಿಯನ್ನು ಪ್ರಾರಂಭಿಸಿರೋಣದರಿಂದ ಇದಕ್ಕೆ "ಶ್ರೀಕೃಷ್ಣರಾಜ ಪೊಲೀಸ್ ಗರಡಿ, ಮೈಸೂರು" ಎಂಬ ಹೆಸರನ್ನು ಇಟ್ಟು, ದೇವರು ಅವರಿಗೆ ಶಾಶ್ವತವಾದ ಆಯುರಾರೋಗ್ಯಗಳನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ

ಈ ಏರ್ಪಾಡಿಗೆ ನಮ್ಮ ಡೆಪ್ಯುಟಿ ಕಮಿಷನರವರ ಸಲಹೆಯೂ ಸಹಾಯವೂ ಪ್ರೋತ್ಸಾಹವೂ ದೊರೆಯದೆ ಹೋಗಿದ್ದರೆ, ನಡೆಸುವುದು ಕಷ್ಟವಾಗಿತ್ತು. ಅವರು ದಯಪಟ್ಟು ಮಾಡಿದ ಸಹಾಯಕ್ಕಾಗಿ ಅವರ ಉಪಕಾರವನ್ನು ಈ ಸಮಯದಲ್ಲಿ ಸ್ಮರಿಸದೆ ಇರಲಾರೆವು. ಇದಲ್ಲದೆ ನಮ್ಮ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರು ಈ ದಿನ ಇಲ್ಲಿಗೆ ದಯಮಾಡಿ, ಈ ಗರಡಿಯನ್ನು ಪ್ರತಿಷ್ಟಮಾಡುತ್ತೇವೆ ಎಂದು ಒಪ್ಪಿಕೊಂಡದ್ದು ನಮಗೆ ಪರಮ ಸಂತೋಷವನ್ನುಂಟುಮಾಡಿದೆ. ಇದಕ್ಕಾಗಿ ನಾವೆಲ್ಲಾ ಅವರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಈ ಸಂದರ್ಭದಲ್ಲಿ ಒಪ್ಪಿಸುವೆವು.

ಸಭಾಧ್ಯಕ್ಷರ ಭಾಷಣವು

ತರುವಾಯ ಸಭಾಧ್ಯಕ್ಷರಾದ ಮೆ॥ ಡಿ. ದೇವರಾಜೇ ಅರಸಿನವರು ತಮ್ಮ ಅಗ್ರಸ್ಥಾನದಿಂದೆದ್ದು, ಸಭಾಸದರನ್ನೂ ಪೊಲೀಸ್ ಇಲಾಖೆಯವನ್ನೂ ಕುರಿತು ಅಪ್ಪಣೆ ಕೊಡಿಸಿದ್ದೇನೆಂದರೆ —

"ಈ ದಿನ ಈ ರಾಜಧಾನಿಯಾದ ಮೈಸೂರು ಪಟ್ಟಣದಲ್ಲಿ ಶ್ರೀಕೃಷ್ಣರಾಜ ಪೊಲೀಸ್ ಗರಡಿ ಎಂಬ ಕಸರತ್ತಿನ ಗರಡಿಯನ್ನು ಪ್ರಾರಂಭಮಾಡುವ ಸಂತೋಷಕ್ಕಾಗಿ ನಾವೆಲ್ಲಾ ಇಲ್ಲಿ ಸೇರಿರುತ್ತೇವೆ. ಇಂಥಾ ಕಾರ್ಯದಲ್ಲಿ ನಾನು ಹಾಜರಾಗಿರುವಂತೆ ಅವಕಾಶ ಉಂಟಾದ ವಿಷಯದಲ್ಲಿ ನಾನು ತುಂಬಾ ಆನಂದಪಡುವೆನು ಇಂಥಾ ಗರಡಿ ಇರಬೇಕಾದದ್ದು ಅವಶ್ಯವೇ ಸರಿ. ಇದರಿಂದ ಪೊಲೀಸಿನವರಿಗೆ ಒಳ್ಳೇ ಚಟುವಟಿಕೆಯೂ ಕಾಯ ಪುಷ್ಟಿಯೂ ಉಂಟಾಗುವವು. ಅವರು ಬಹು ಕಷ್ಟಕರವಾದ ಮತ್ತು ಕೆಲವು ಸಂದರ್ಭಗಳಲ್ಲಿ ಮಿಲ್ಟರಿ ಇಲಾಖೆಯವರು ಮಾಡುವ ಕಾರ್ಯಗಳನ್ನು ನಿರ್ವಹಿಸಬೇಕಾಗುವುದು. ಪೊಲೀಸ್ ಇಲಾಖೆಯಲ್ಲಿ ಅಭಿವೃದ್ಧಿಗೆ ಬರಬೇಕಾದರೆ ಕಾಯಪುಷ್ಟಿ ಚೆನ್ನಾಗಿರಬೇಕು, ಸಂಪೂರ್ಣ ಆರೋಗ್ಯವಿರಬೇಕು, ಬುದ್ಧಿಕುಶಲತೆಯೂ ಇರಬೇಕು. ಪೊಲೀಸ್ ಕಸರತ್ತಿನ ಗರಡಿಯಿಂದ ಇವೆಲ್ಲಾ ಉಂಟಾಗುತ್ತವೆನ್ನುವುದರಲ್ಲಿ ಸಂಶಯವಿಲ್ಲ ಮತ್ತು ಇದರ ಪ್ರಯೋಜನಗಳು ನಿಮಗೆಲ್ಲಾ ಮಂದಟ್ಟಾಗಿರೋಣದರಿಂದ ಈ ವಿಚಾರವಾಗಿ ನಾನು ಹೆಚ್ಚು ಹೇಳಬೇಕಾಗಿಲ್ಲ. ಪೊಲೀಸ್ ಸೂಪರಿಂಟೆಂಡೆಂಟರಾದ ಮೆ॥ ಜಹಿರುದ್ದೀನ್ ಮೆಕ್ಕಿಯವರು ಪೊಲೀಸ್ ಇಲಾಖೆಯ ಕೆಲಸಗಳ ವಿಷಯದಲ್ಲಿ ಬಹಳ ಸ್ತೋತ್ರಾರ್ಹವಾದ ಚಟುವಟಿಕೆಯನ್ನೂ ಪ್ರಚುರವಾದ ಉತ್ಸಾಹವನ್ನೂ ಪ್ರಕಾಶಪಡಿಸುತ್ತಾ ಬಂದಿರುತ್ತಾರೆ. ಇದಲ್ಲದೆ ಪ್ರಜೆಗಳ ಪ್ರೀತಿ ಗೌರವಗಳನ್ನು ವಿಶೇಷವಾಗಿ ಸಂಪಾದಿಸಿಕೊಂಡಿರುವ ನಮ್ಮ ಡೆಪ್ಯುಟಿ ಕಮಿಷನರ್ ಮೆ॥ ಎಂ. ಕಾಂತರಾಜೇ ಅರಸಿನವರು ಈ ಗರಡಿಯನ್ನು ಪ್ರಾರಂಭಿಸುವ ವಿಷಯದಲ್ಲಿ ತುಂಬಾ ಪ್ರೋತ್ಸಾಹ ಕೊಟ್ಟಿರುತ್ತಾರೆ. ಇದಕ್ಕಾಗಿ ಅವರನ್ನು ನಾವೆಲ್ಲಾ ಮನಃಪೂರ್ವಕವಾಗಿ ವಂದಿಸುತ್ತೇವೆ. ಪೊಲೀಸ್ ಇಲಾಖೆಯವರು ಈ ಗರಡಿಯಿಂದ ವಿಶೇಷವಾದ ಪ್ರಯೋಜನವನ್ನು ಪಡೆಯದೆ ಇರಲಾರರೆಂದು ಹಾರೈಸುತ್ತೇನೆ. ಇಷ್ಟೇ ಅಲ್ಲದೆ ಈ ಗರಡಿಯು ಶಾಶ್ವತವಾಗಿ ನಡಿಯುತ್ತಾ ಅಭಿವೃದ್ಧಿಗೆ ಬಂದು, ಇತರ ಕಡೆಗಳ ಜನರಿಗೆ ಒಳ್ಳೇ ಮೇಲ್ಪಂಕ್ತಿಯಾಗಿ ಪರಿಣಮಿಸಬೇಕೆಂದು ಕೋರಿ, ಈಗ ಈ ಗರಡಿಯನ್ನು ನಿಮ್ಮ ಇಷ್ಟಾನುಸಾರ ಪ್ರಾರಂಭಿಸುತ್ತೇನೆ "

ಪೊಲೀಸ್ ವಿನೋದಗಳು

ತರುವಾಯ ದೊಡ್ಡ ಮನುಷ್ಯರಿಗೆಲ್ಲಾ ಪೊಲೀಸ್ ಇಲಾಖೆಯವರು ದಿನಸಾವರಿ ತಿಂಡಿ, ಹಣ್ಣುಹಂಪಲು, ಕಾಫಿ ಟೀ ಮೊದಲಾದ ಫಲಾಹಾರಗಳನ್ನು ಕೊಡಿಸಿದರು. ಮೈದಾನಿನಲ್ಲಿ ಪೊಲೀಸ್ ನೌಕರರು ಇಂಗ್ಲೀಷ್ ಕಸರತ್ತುಗಳನ್ನು ಮಾಡಿದರು. ಎರಡು ಜೋಡಿ ಕುಸ್ತಿಗಳಾದವು. ಗೊಣ್ಣೆಗಳ ಹೊಡೆದಾಟವಾಯಿತು ಪೊಲೀಸಿನವರ ಬಿರುಸನ್ನು ಕಳಚಿಟ್ಟು, ದೂರದಿಂದ ಓಡಿಸಿ, ಅವರು ಬಿರಸು ಹಾಕಿಕೊಂಡು ಬರುವಂತೆ ಓಡಿಸಿದರು. ಪೊಲೀಸ್ ಆಫೀಸರುಗಳಿಗೂ ಈ ತರದ ಪಂದ್ಯಗಳು ನಡೆದವು. ಆಫೀಸರುಗಳಿಗೆ ಬೈಸಿಕಲ್ ಮೇಲೆ ಹೋಗುವ ಪಂದ್ಯವಾಯಿತು ಆಫೀಸರುಗಳು ಬರಿಯ ಓಟದ ಪಂದ್ಯ ನಡಿಯಿತು ಆಫೀಸರುಗಳೇ ಎರಡು ಪಂಗಡವಾಗಿ ಒಂದಾವರ್ತಿಯೂ, ಪೊಲೀಸ್ ನೌಕರರೇ ಎರಡು ಕಕ್ಷಿಗಳಾಗಿ ಒಂದಾವರ್ತಿಯೂ ಹಗ್ಗವನ್ನು ಎಳೆಯುವ ಪಂದ್ಯವನ್ನು ನಡಿಸಿದರು.

ಬಹುಮಾನಗಳ ವಿನಿಯೋಗ

ಇವೆಲ್ಲಾ ಆದ ಮೇಲೆ ಮೈದಾನಿನಲ್ಲೇ ಬಂದಿದ್ದ ಮನುಷ್ಯರೆಲ್ಲಾ ಸಭೆ ಸೇರಿದರು. ಮೆ॥ ದೇವರಾಜೇ ಅರಸಿನವರು ಅಗ್ರಾಸನವನ್ನು ವಹಿಸಿದರು. ಮೇಲ್ಕಂಡ ವಿನೋದಗಳಲ್ಲಿ ಜಯಪ್ರದ ಹೊಂದಿದ ಪೊಲೀಸ್ ನೌಕರರಿಗೂ ಆಫೀಸರುಗಳಿಗೂ ಬಹುಮಾನಗಳು ವಿನಿಯೋಗಿಸಲ್ಪಟ್ಟವು ಕುಸ್ತಿಗಳಲ್ಲಿ ನಂಜುಂಡೈಯ, ಮಹಮದ್ ದಸ್ತಗೀರ್ ಸಾಬ್ ಇವರಿಗೂ; ಗೊಣ್ಣೆ ಹೊಡೆದಾಟದಲ್ಲಿ ತಿಮ್ಮಯ್ಯ, ಅಂತೋಣಿ ಇವರಿಗೂ; ಓಟದಲ್ಲಿ ಹಬಿಬುಲ್ಲಾಖಾನ್, ವೆಂಕಟರಾವ್ ಇವರಿಗೂ, ಆಫೀಸರುಗಳಾದ ಪಂದ್ಯದಲ್ಲಿ ಮೆ॥ ಗಳಾದ ಸಿರಾಜುದ್ದೀನ್ (ಇವರಿಗೆ ಎರಡು ಬಹುಮಾನಗಳು ದೊರೆತವು), ಹನುಮಂತನಾಯುಡು, ರಘೋತ್ತಮರಾವ್, ಫಕರುದ್ದೀನ್ ಇವರಿಗೂ, ಹಗ್ಗವನ್ನು ಎಳೆದ ಪಂದ್ಯದಲ್ಲಿ ೧೬ ಮಂದಿ ಪೊಲೀಸಿನವರಿಗೂ, ೧೦ ಮಂದಿ ಆಫೀಸರುಗಳಿಗೂ ಉಚಿತವಾದ ಬಹುಮಾನಗಳನ್ನು ಪ್ರೆಸಿಡೆಂಟರು ಕೊಡಿಸಿದರು ತರುವಾಯ ಪ್ರೆಸಿಡೆಂಟರಿಗೂ ಸಭಿಕರಿಗೂ ಹೂವಿನ ಹಾರ ಹಾಕಿ ತಾಂಬೂಲಗಳನ್ನು ಕೊಟ್ಟರು ಕಡೆಯಲ್ಲಿ ಶ್ರೀಮನ್ಮಹಾರಾಜರವರ ಹೆಸರನ್ನು ಹೇಳಿ ಸಭಿಕರೆಲ್ಲಾ ಜಯಧ್ವನಿ ಮಾಡಿ, ಆ ದಿನದ ಸಂತೋಷ ಕಾರ್ಯವನ್ನು ಆನಂದದಿಂದ ಮುಕ್ತಾಯಕ್ಕೆ ತಂದು, ಎಲ್ಲರೂ ಪೊಲೀಸ್ ಏರ್ಪಾಡನ್ನು ಕೊಂಡಾಡುತ್ತಾ ತೆರಳಿದರು

ಇಂಡಿಯಾ ದೇಶದ ವೃತ್ತಾಂತಗಳು.

ತಿನ್ನವೆಲ್ಲಿ ದಂಗೆ ಮೊಕದ್ದಮೆಯಲ್ಲಿ ಸರ್ಕಾರದವರು ದಸ್ತಗಿರಿ ಮಾಡಿರುವ ಕೆಲವು ವಕೀಲರನ್ನು ಕಳೆದ ಶನಿವಾರದಿಂದ ದರ್ಯಾಫ್ತು ಮಾಡಲಾರಂಭಿಸಿದ್ದಾರೆ

***

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಪೂರ್ಣಿಯಾದಲ್ಲಿ ಕಳೆದ ಮಂಗಳವಾರ ಸ್ವಲ್ಪ ಹೊತ್ತು ಭೂಕಂಪವಾಯಿತು ಆದರೆ ಅದರಿಂದ ಕಷ್ಟನಷ್ಟಗಳೇನೂ ಆಗಲಿಲ್ಲ

***

ಕಳೆದ ಶನಿವಾರ ಬೆಳಿಗ್ಗೆ ಪೂನಾ ಪಟ್ಟಣದಲ್ಲಿ ಒಂದು ಕಡೆ ಬಾಳೆ ಕಿತ್ತದೊಡನೆ ಮದ್ದಿನ ಗುಂಡು ಹಾರಿತು. ಪೊಲೀಸಿನವರು ಪತ್ತೆ ಹಚ್ಚುವುದು ನಡಿಸುತ್ತಿದ್ದಾರೆ

***

ಮದರಾಸ್ ಅಧಿಪತ್ಯದ ಸರ್ಜನ್ ಜನರಲ್‌ರಾಗಿರುವ ಡಾ॥ ಸಿ. ಎಚ್ ಬೇಕರ್ ರವರನ್ನು ವೈಸ್‌ರಾಯಿಯವರು ಪರ್ಸನಲ್ ಸರ್ಜನ್‌ರಾಗಿ ನೇಮಕ ಮಾಡಿಕೊಂಡಿದ್ದಾರೆ.

***

ಕಲ್ಕತ್ತಾ ಪೊಲೀಸ್ ಆಫೀಸಿನಲ್ಲಿ ಕ್ಯಾಷಿಯರಾಗಿದ್ದ ನೌಕರನು ಸರ್ಕಾರದ ಹಣದಲ್ಲಿ ೧೬,೦೦೦ ರೂಪಾಯಿ ದುರುಪಯೋಗಪಡಿಸಿರುತ್ತಾನೆಂದು ತಿಳಿದು ಅವನನ್ನು ದಸ್ತಗಿರಿ ಮಾಡಿದ್ದಾರೆ

***

ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರದ ಹಾವಳಿಯು ಈಗ ಬಹಳ ಕಡಮೆಯಾಗಿರುತ್ತದೆ ಕಳೆದ ವಾರ ಹಿಂದುಸ್ಥಾನದೊಳಗೆಲ್ಲಾ ೨೬೮ ಜನರೂ, ಬೊಂಬಾಯಿಯಲ್ಲಿ ೧೬೭ ಜನರೂ ಆ ಉಪದ್ರದಲ್ಲಿ ಕಾಲವಾಗಿರುತ್ತಾರೆ

***

ರಂಗೂನ್ ಛೀಫ್ ಕೋರ್ಟಿನ ಛೀಫ್ ಜಡ್ಜರಾದ ಇರ್ವಿನ್ ರವರು ಕಳೆದ ಶುಕ್ರವಾರ ಕುದುರೆ ಸವಾರಿ ಮಾಡಿಕೊಂಡು ಹೋಗುತ್ತಿದ್ದಾಗ ಕೆಸರಿನಲ್ಲಿ ಕುದುರೆಯ ಕಾಲು ಸಿಕ್ಕಿ ಮುಗ್ಗರಿಸಿದ್ದರಿಂದ

ಅವರು ನೆಲದ ಮೇಲೆ ಬಿದ್ದು ಕತ್ತಿನ ಮೂಳೆಯನ್ನು ಮುರಿದು ಕೊಂಡಿದ್ದಾರೆ.

♦♦♦

ಅನಂತಶಯನದ ಕೋಟೆಯೊಳಗೆ ತುಂಬಾ ಪ್ರಸಿದ್ಧನಾದ ಒಬ್ಬ ದೊಡ್ಡ ಮನುಷ್ಯನ ಮನೆಗೆ ಕಳೆದ ವಾರ ಕಳ್ಳರು ಬಿದ್ದು, ಸುಮಾರು ೩೫,೦೦೦ ರೂಪಾಯಿನ ನಗನಾಣ್ಯಗಳನ್ನು ಕಳುವು ಮಾಡಿಕೊಂಡು ಹೋದರು. ಪೋಲೀಸಿನವರು ಪತ್ತೇ ತರಹೂದು ನಡಿಸುತ್ತಿದ್ದಾರೆ.

♦♦♦

ಹಿಂದುಸ್ಥಾನದ ಕ್ಷಾಮನಿವಾರಣೆಯ ಧರ್ಮ ಫಂಡಿನಿಂದ ಆಯೋಧ್ಯೆಗೆ ಮೂರೂವರೆ ಲಕ್ಷ ರೂಪಾಯನ್ನು ಕ್ಷಾಮನಿವಾರಣೆಗೋಸ್ಕರ ಕಳುಹಿಸಿದರು. ಅವರು ಆ ಹಣವನ್ನು ಬನಾರಸ್, ಗೊಂಡಾ, ಬೇರಿ, ಸೀತಾಪುರ, ಹರ್ದಾಯಿ, ಬರಬಾಂಕಿ ಎಂಬೀ ಡಿಸ್ಟ್ರಿಕ್ಟುಗಳಿಗೆ ಹಂಚಿಕೆ ಮಾಡಿಕೊಟ್ಟಿದ್ದಾರೆ.

♦♦♦

ಮಿಡ್ನಪುರದಲ್ಲಿ ಪೋಲೀಸಿನವರು ಕಳೆದ ವಾರ ಎರಡು ದಿನಗಳ ತನಕ ಕೆಲವು ಗುಮಾನಿ ಮನೆಗಳನ್ನು ಶೋಧನೆ ಮಾಡಿದರು. ಪ್ಯಾರಿಮೋಹನದಾಸನ ಮನೆಯೊಳಗೆ ಒಂದು ಪಾಲಕ್ಕಿಯಲ್ಲಿ ಇಟ್ಟಿದ್ದ ಸಿಡಿಮದ್ದಿನ ಗುಂಡು ಸಿಕ್ಕಿತು. ಶಾಂತೀಶ ಕುಮಾರದಾಸನೆಂಬೊಬ್ಬ ವಿದ್ಯಾರ್ಥಿಯನ್ನು ದಸ್ತಗಿರಿ ಮಾಡಿದ್ದಾರೆ

♦♦♦

ಬಳ್ಳಾರಿ ಜಿಲ್ಲೆಗೆ ಸೇರಿದ ಯಮ್ಮಿಗನೂರಿನಲ್ಲಿ ಪ್ರಜೆಗಳು ಹೊಟ್ಟೆಗಿಲ್ಲದೆ ಬಹಳ ಕಷ್ಟಪಡುತ್ತಿದ್ದದ್ದನ್ನು ನೋಡಿ, ಅಲ್ಲಿನ ಅಧಿಕಾರಿಗಳೂ ಪ್ರಜೆಗಳ ಮುಖಂಡರೂ ಒಂದು ಫಂಡನ್ನು ಕೂಡಿಸಿ, ಬಡಬಗ್ಗರಿಗೆಲ್ಲಾ ಒಂದು ಸ್ಥಳದಲ್ಲಿ ದಿನವಹಿ ಎರಡು ಹೊತ್ತೂ ಅನ್ನ ಹಾಕಿ ಸಾಕುವಂತೆ ಏರ್ಪಾಡು ಮಾಡಿದ್ದಾರೆ. ಹೊತ್ತಿಗೆ ೨೦೦ ಜನಕ್ಕಿಂತಲೂ ಜಾಸ್ತಿಯಾಗಿ ಆ ಧರ್ಮಸತ್ರದಲ್ಲಿ ಭೋಜನ ಮಾಡುವರು.

♦♦♦

ಪೂನಾ ಪಟ್ಟಣದಲ್ಲಿ ಹೋದ ವಾರ ಆಸ್ಪತ್ರೆಯಲ್ಲಿದ್ದ ಅನಂತ ಗಣೇಶಕಾವೆ ಎಂಬೊಬ್ಬ ವಿದ್ಯಾರ್ಥಿಯು ತನ್ನ ಬಳಿಯಲ್ಲಿ ಸಿಡಿದೊಡನೆ ಹಾರುವ ಪದಾರ್ಥಗಳನ್ನು ಇಟ್ಟುಕೊಂಡಿದ್ದನೆಂದು ದಸ್ತಗಿರಿ ಮಾಡಲ್ಪಟ್ಟಿದ್ದನಷ್ಟೆ. ಸಿಟಿ ಮ್ಯಾಜಿಸ್ಟ್ರೇಟರು ಅವನನ್ನೂ ಅವನ ಮೇಲೆ ತರಲ್ಪಟ್ಟ ಸಾಕ್ಷಿಗಳನ್ನೂ ಸ್ವಲ್ಪದೂರ ದರ್ಯಾಫ್ತು ಮಾಡಿ ನೋಡಿ, ಸೆಷನ್ಸ್ ಕೋರ್ಟಿನಲ್ಲಿ ತನಿಖೆ ಆಗಬೇಕೆಂದು ತೀರ್ಮಾನವಾಯಿತು.

♦♦♦

ಉತ್ತರದೇಶದ ಅನೇಕ ಭಾಗಗಳಲ್ಲಿ ಕಳೆದ ವಾರ ಮಳೆ ಸುರಿದಿರುತ್ತದೆ. ಕ್ಷಾಮವು ವ್ಯಾಪ್ತವಾಗಿರುವ ಪ್ರಾಂತ್ಯಗಳಲ್ಲೂ ತಕ್ಕ ಮಟ್ಟಿಗೆ ಮಳೆಯಾದ್ದರಿಂದ ಕ್ಷಾಮ ಪೀಡಿತರಾಗಿದ್ದವರಲ್ಲಿ ಅನೇಕಾನೇಕರು ಸರ್ಕಾರಿ ರಿಲೀಫ್ ಕ್ಯಾಂಪುಗಳನ್ನು ಬಿಟ್ಟು ವ್ಯವಸಾಯದ ಕೆಲಸಗಳನ್ನು ಮಾಡುವುದಕ್ಕೆ ಹೊರಟು ಹೋಗುತ್ತಿದ್ದಾರೆ ಆದರೂ ಇನ್ನೂ ಹತ್ತು ಲಕ್ಷ ಪ್ರಜೆಗಳು ಅಲ್ಲಲ್ಲಿ ಸರ್ಕಾರದವರ ಪೋಷಣೆಯಲ್ಲಿರುವುದಾಗಿ ತಂತೀ ವರ್ತಮಾನ ಬಂದಿದೆ

♦♦♦

ಕಲ್ಕತ್ತಾ ಪಟ್ಟಣದ ಮಾಣಿಕ್ಯತೋಲಾ ತೋಟದಲ್ಲಿ ಸಿಡಿಮದ್ದಿನ ಗುಂಡುಗಳನ್ನು ತಯಾರುಮಾಡುತ್ತಿದ್ದನರೆಂದು ಪೋಲೀಸಿನವರು ಹಿಡಿದ ಎರಡನೇ ಗುಂಪನ್ನು ಅಲಿಪುರದ ಮ್ಯಾಜಿಸ್ಟ್ರೇಟರು ಕಳೆದ ಗುರುವಾರ ದರ್ಯಾಫ್ತು ಮಾಡಲಾರಂಭಿಸಿದರು. ಈ ಗುಂಪಿನಲ್ಲಿ ಲೆಫ್ಟಿನೆಂಟ್ ಕರ್ನಲ್ ಡಾಕ್ಟರ್ ನಂದಿಯವರ ಕುಮಾರನಾದ ನಂದಿ ಎಂಬುವನೂ ಅಂಟಿಕಾನಗರದ ರಾಜರೂ ಅಪರಾಧಿಗಳಾಗಿ ದಸ್ತಗಿರಿ ಮಾಡಲ್ಪಟ್ಟಿರುವರು

♦♦♦

ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ "ಸ್ವರಾಜ್ಯ"ವೆಂಬ ಪತ್ರಿಕೆಯ ಎಡಿಟರ ಮೇಲೆ ರಾಜದ್ರೋಹದ ಆಪಾದನೆ ಸಂಬಂಧವಾಗಿ ದರ್ಯಾಫ್ತಿಯಾಗುತ್ತಿದ್ದದ್ದು ಕಳೆದ ವಾರ ಪೂರೈಸಿತು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅಪರಾಧಿಯಾದ ಎಡಿಟರಿಗೆ ಮೂರೂವರೆ ವರುಷ ಕಠಿಣ ಸಜಾವನ್ನೂ, ೧,೦೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿ, ಜುಲ್ಮಾನೆ ವಸೂಲಾಗದಿದ್ದರೆ ಇನ್ನಾರು ತಿಂಗಳು ಸಜಾ ಅನುಭವಿಸುವಂತೆ ಆಜ್ಞೆ ಮಾಡಿದ್ದಾರೆ

♦♦♦

ಹಿಂದೂಸ್ಥಾನದ ಕ್ಷಾಮನಿವಾರಣೆಯ ಧರ್ಮ ಫಂಡಿಗೆ ಈ ರಾಷ್ಟ್ರದ ಎಲ್ಲಾ ಭಾಗಗಳಲ್ಲೂ ಪ್ರಜೆಗಳೂ ಪ್ರಜಾಪಾಲಕರೂ ದ್ರವ್ಯಸಹಾಯ ಮಾಡುತ್ತಾ ಬಂದಿದ್ದಾರೆ. ಮದರಾಸ್ ಅಧಿಪತ್ಯಕ್ಕೆ ಸೇರಿದ ಅನೇಕ ಡಿಸ್ಟ್ರಿಕ್ಟುಗಳಲ್ಲಿ ಫಂಡನ್ನು ಕೂಡಿಸುವುದಕ್ಕೆ ಸಂಘಗಳು ಏರ್ಪಟ್ಟು ಚಂದಾ ವಸೂಲಾಗುತ್ತಿರುವುದು. ಈ ಅಧಿಪತ್ಯದೊಳಗೆ ಇದುವರೆಗೆ ೨೦ ಸಾವಿರ ರೂಪಾಯಿ ತನಕ ಶೇಖರವಾಗಿ, ಕ್ಷಾಮಪೀಡಿತರಿಗೋಸ್ಕರ ಕಳುಹಿಸಲಾಯಿತೆಂದು ತಿಳಿದಿದೆ.

♦♦♦

ಭಾವಲ್ಪುರ ಸಂಸ್ಥಾನದ ಕೆಲವು ಪಾಳು ಬಿದ್ದ ಕೋಟೆಗಳೊಳಗೆ ಅನೇಕ ಪುರಾತನ ಚಿನ್ನ ಬೆಳ್ಳಿ ನಾಣ್ಯಗಳು ದೊರಕಿರುತ್ತವೆ. ಅವು ಮಹಮ್ಮದೀಯ ಚಕ್ರವರ್ತಿಗಳ ಕಾಲದ ನಾಣ್ಯಗಳೆಂತಲೂ ಅವುಗಳ ಬೆಲೆಯು ಇಷ್ಟೆಂದು ಗೊತ್ತು ಮಾಡುವುದಕ್ಕಾಗುವುದಿಲ್ಲವೆಂತಲೂ ಗವರ್ನಮೆಂಟಿಗೆ ತಿಳಿದುಬಂದದ್ದರಿಂದ ಪಂಜಾಬ್ ಗವರ್ನಮೆಂಟಿನವರು ನಾಣ್ಯಗಳ ಪರೀಕ್ಷೆಯಲ್ಲಿ ಪರಿಶ್ರಮವಿರುವಂಥಾ ಒಬ್ಬ ದೊಡ್ಡ ಮನುಷ್ಯನನ್ನು ಅಲ್ಲಿಗೆ ಕಳುಹಿಸಿಕೊಡುತ್ತಾರೆಂದು ಪ್ರಕಟವಾಗಿದೆ

♦♦♦

ರಂಗೂನ್ ಪಟ್ಟಣದಿಂದ ಆರು ಮೈಲಿ ದೂರದಲ್ಲಿರುವ ಕಾಮಾಯೂಟ್ ಎಂಬ ಭಾಗದಲ್ಲಿ ವಾಸಮಾಡುತ್ತಿರುವ ರೆಕಾರ್ಡ್ ಸೂಪರಿಂಟೆಂಡೆಂಟ್ ಮಿ|| ಸಿ ಪಿ ಟಾರೆನ್ಸ್ ಎಂಬ ಅಧಿಕಾರಿಯ ಮನೆಗೆ ಕಳೆದ ಸೋಮವಾರ ರಾತ್ರಿ ಹನ್ನೆರಡು ಮಂದಿ ಕಳ್ಳರು ನುಗ್ಗಿ ಆ ಅಧಿಕಾರಿಯನ್ನು ಹಿಡಿದು ಕಟ್ಟಿಹಾಕಿ ಬಾಯಿಗೆ ಬಟ್ಟೆ ತುರುಕಿ, ಕತ್ತಿಗಳಿಂದ ಮೊಣಕಾಲುಗಳು ಮತ್ತು ಕೈಗಳನ್ನು ಗಾಯಮಾಡಿದ್ದಲ್ಲದೆ ಸುಮಾರು ಮುನ್ನೂರು ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋಗಿದ್ದಾರೆ.

♦♦♦

ಒಂದೆರಡು ವಾರಗಳ ಕೆಳಗೆ ಕೊಯಮುತ್ತೂರಿನಿಂದ ಪೋದನೂರಿಗೆ ಹೋಗುವ ರೈಲ್ ರಸ್ತೆಯ ಮೇಲೆ ಯಾರೋ ಒಂದು ಹಳೆಯ ಕಬ್ಬಿಣದ ಕಂಬಿಯನ್ನು ತಂದು ಇಟ್ಟಿದ್ದರು. ರೈಲ್ ಗಾಡಿಯು ಅದರ ಮೇಲೆಯೇ ತಿಳಿಯದೆ ನುಗ್ಗಿ ಹೋಯಿತು. ಆ ಕಂಬಿಯು ಚಕ್ರಗಳ ಕೆಳಗೆ ಸಿಕ್ಕಿ ಮುರಿದು ಹೋದದ್ದೊಂದೇ ಫಲವಾಯಿತು. ಈಗ ಅದನ್ನು ಇಟ್ಟವರ್ಯಾರೆಂಬುವುದನ್ನು ಗೊತ್ತು ಮಾಡಿಕೊಡುವವರಿಗೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಬಹುಮಾನ ಕೊಡಿಸುವುದಾಗಿ ಇಸ್ತಿಹಾರು ಹಾಕಿಸಿದ್ದಾರೆ.

♦♦♦

ಪಂಜಾಬ್ ಲೆಫ್ಟಿನೆಂಟ್ ಗವರ್ನರವರು ಸ್ತ್ರೀಯರು ಘೋಷಾದಲ್ಲಿ ಇದ್ದುಕೊಂಡು, ಮನೆಗಳೊಳಗೇ ವ್ಯಾಸಂಗ ಮಾಡುವಪಕ್ಷಕ್ಕೆ ಪ್ರೋತ್ಸಾಹವನ್ನುಂಟುಮಾಡಬೇಕೆಂದೂ, ವ್ಯಾಸಂಗ ಮಾಡುವವರಿಗೆ ತಿಂಗಳಿಗೆ ೩—೪ ರೂಪಾಯಿನಂತೆ ವೇತನಗಳನ್ನು ಕೊಡುವುದಲ್ಲದೆ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಉಪಾಧ್ಯಾಯಿನಿಯರಾಗಿ ಕೆಲಸ ಮಾಡಲು ಒಪ್ಪಿಕೊಳ್ಳುವಂಥಾ ಸ್ತ್ರೀಯರಿಗೆ ಆಯಾ ಪರೀಕ್ಷೆಗೆ ತಕ್ಕಂತೆ ೫೦ ರೂಪಾಯಿ ಲಾಗಾಯಿತು ೭೫ ರೂಪಾಯಿನ ತನಕ ಬಹುಮಾನಗಳನ್ನು ಕೊಡುತ್ತೇವೆಂದು ಪ್ರಕಟಿಸಿರುತ್ತಾರೆ.

♦♦♦

ಕೊಚ್ಚಿ ಸಂಸ್ಥಾನದ ದಿವಾನರಾದ ಮಿ|| ಬ್ಯಾನರ್ಜಿಯವರು ಆ ಸಂಸ್ಥಾನದ ಮುಂದಿನ ವರುಷದ ಬಜೆಟಿನ ಅಂದಾಜು ಪಟ್ಟಿಯನ್ನು ಪ್ರಕಟಿಸಿದ್ದಾರೆ ಅದರಿಂದ ಆ ಸಂಸ್ಥಾನದಲ್ಲಿ ೩೫,೯೧,೩೬೦ ರೂಪಾಯಿ ರಾಜಾದಾಯವಾದೀತೆಂದೂ, ೨೧,೯೦,೬೩೦ ರೂಪಾಯಿ ಖರ್ಚಾದೀತೆಂದೂ ಅಂದಾಜು ಕಟ್ಟಲಾಗಿದೆ. ಈಗ ಆ ಸಂಸ್ಥಾನದ ಸಾಲವು ಸುಮಾರು ೨೪ ಲಕ್ಷ ರೂಪಾಯಿಯಾಗಿದೆ. ಇದನ್ನು ತೀರಿಸುವುದಕ್ಕೆ ದಿವಾನರವರು ರಾಜಾದಾಯದಲ್ಲಿ ವರುಷಕ್ಕೆ ಮೂರು ಲಕ್ಷ ರೂಪಾಯಿನಂತೆ ತೆಗೆದಿಡುವುದಾಗಿ ತಿಳಿಸುತ್ತಾರೆ

♦♦♦

ತಿರುವಾಂಕೂರಿನಲ್ಲಿ ವರ್ತಕರಿಗೂ ಪೋಲೀಸಿನವರಿಗೂ ಮನಸ್ತಾಪಗಳುಂಟಾಗಿ, ದಂಗೆ ನಡೆದದ್ದು ವಾಚಕರಿಗೆ ತಿಳಿಸಲಾಗಿದೆ ಈಗ ಸರ್ಕಾರದವರು ವರ್ತಕರಲ್ಲೂ ಇತರ ಜನರಲ್ಲೂ ಸುಮಾರು ೩೦-೪೦ ಮಂದಿಯನ್ನು ದಂಗೆಮಾಡಿದವರೆಂದು ಹಿಡಿದು ಇರುತ್ತಾರೆ ಈ ಮೊಕದ್ದಮೆಯನ್ನು ದರ್ಯಾಫ್ತುಮಾಡುವುದಕ್ಕೆ ಸರ್ಕಾರದವರು ಒಬ್ಬ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನು ನೇಮಕಮಾಡಿದರು ಅಪರಾಧಿಗಳು ವಿ. ಸಗಗೋಪಾಚಾರಿ ಎಂಬ ಪ್ರಸಿದ್ಧ ವಕೀಲರನ್ನು ತಮ್ಮ ಕಡೆಯವರಾಗಿ ನೇಮಿಸಿಕೊಳ್ಳಬೇಕೆಂದು ಪ್ರಯತ್ನ ಪಡುತ್ತಿದ್ದಾರೆ.

♦♦♦

ಕಲ್ಕತ್ತಾ ಪಟ್ಟಣದಲ್ಲಿ ಲೇಟ್ ಚಕ್ರವರ್ತಿನಿ ವಿಕ್ಟೋರಿಯಾರವರ ಹೆಸರಿನಲ್ಲಿ ಕಟ್ಟುವ ಕಟ್ಟಡದಲ್ಲಿ ಇಟ್ಟು ಪ್ರದರ್ಶನ ಮಾಡುವುದಕ್ಕಾಗಿ ಮೈಸೂರ್ ರಾಜರವರು ಬಹು ಸುಂದರವೂ ಅಪೂರ್ವವೂ ಆದ ಒಂದು ಬೆಳ್ಳಿಯ ಜಮಾಖಾನೆಯನ್ನು ಕಳುಹಿಸಿ ಕೊಟ್ಟಿದ್ದಾರೆ ಇದನ್ನು ಬಿಹಾರ್ ರಾಜ್ಯವನ್ನು ಗೆದ್ದಾಗ ಅಲ್ಲಿನ ಅರಮನೆಯಿಂದ ೧೮೧೮ ನೇ ಇಸವಿಯಲ್ಲಿ ಕಲ್ಕತ್ತೆಯ ಗವರ್ನಮೆಂಟ್ ಹೌಸ್ ಎಂಬ ಬಂಗಲೆಗೆ ತಂದರು ಅದು ಬಿಹಾರದಲ್ಲಿದ್ದಾಗ್ಯೆ ಒಮ್ಮೆ ಅರಸುಗಳನ್ನು ಅದರ ಮೇಲೆ ಕೂಡಿಸಿ ಪಟ್ಟಾಭಿಷೇಕ ಮಾಡುತ್ತಿದ್ದುದರಿಂದ ಇದು ಚರಿತ್ರಾರ್ಹವಾದ ಪದಾರ್ಥವಾಗಿರುತ್ತದೆ

♦♦♦

ಮುಜಫರ್‌ಪುರದಲ್ಲಿ ಸಿಡಿಮದ್ದಿನ ಗುಂಡನ್ನು ಎಸೆದು ಇಬ್ಬರು ಸ್ತ್ರೀಯರನ್ನು ಕೊಂದು ಹಾಕಿದರೆಂಬ ಮೊಕದ್ದಮೆಯಲ್ಲಿ ಖುದಿರಾಂಬೋಸ್ ಎಂಬ ಅಪರಾಧಿಯು ಸೆಷನ್ಸ್ ಕೋರ್ಟಿನಲ್ಲಿ ತನ್ನಿಂದಲೇ ಆ ಕೃತ್ಯ ನಡೆಯಿತೆಂದು ಒಪ್ಪಿಕೊಂಡದ್ದು ಅದರ ಮೇಲೆ ಜಡ್ಜರು ಅವನಿಗೆ ಫಾಸಿ ಶಿಕ್ಷೆಯನ್ನು ವಿಧಿಸಿದ್ದು ತಿಳಿಸಲಾಗಿದೆಯಷ್ಟೆ. ಈತನು ಈದಿನ ಹೈಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡು ತಾನು ಕೆಳಕೋರ್ಟಿನಲ್ಲಿ ಹೇಳಿ ಬರೆಸಿದ ವಾಙ್ಮೂಲವೆಲ್ಲಾ ಯಥಾರ್ಥವಾದದ್ದಲ್ಲವೆಂದೂ ನಿರ್ಬಂಧದಿಂದ ತಾನು ಹಾಗೆ ಹೇಳಿ ಒಪ್ಪಿಕೊಂಡೆನೆಂದೂ ತಿಳಿಸಿರುತ್ತಾನೆ. ಹೈಕೋರ್ಟಿನವರ ತೀರ್ಮಾನವು ಇನ್ನೂ ಪ್ರಕಟವಾಗಲಿಲ್ಲ.

♦♦♦

ಹಿಂದೂಸ್ಥಾನದ ವಾಯವ್ಯ ಸರಹದ್ದಿನಲ್ಲಿ ಇಂಗ್ಲಿಷ್ ಸೈನಿಕರು ಈಗ ತಾನೇ ಮೊಹಮಂಡರ ಮೇಲೂ ಜಕ್ಕಾಖೇಲರ ಮೇಲೂ ಯುದ್ಧವನ್ನು ತೀರಿಸಿಕೊಂಡು ವಾಪಸು ಬಂದರಷ್ಟೆ. ಶತ್ರುಗಳಲ್ಲಿ ಬಹು ಮಂದಿ ಅಫಘಾನಿಸ್ಥಾನದ ಸೈನಿಕರೂ ಪ್ರಜೆಗಳೂ ಸೇರಿ ಇಂಗ್ಲಿಷರ ಮೇಲೆ ಯುದ್ಧಮಾಡಿದ್ದು. ಅಮೀರರಿಗೆ ಇಂಡಿಯಾ ಗವರ್ನಮೆಂಟಿನವರು ಬರೆದು ತಿಳಿಸಿದ ಮೇಲೆ ಅವರು ಹುಕುಂ ಕೊಟ್ಟು ತಮ್ಮ ಸೈನಿಕರೇ ಮೊದಲಾದವರನ್ನೆಲ್ಲಾ ವಾಪಸು ಕರೆಸಿಕೊಂಡರು ಈಗ ಅಮೀರರವರು ಅಂಥಾ ಸೈನಿಕರ ಮತ್ತು ಪ್ರಜೆಗಳ ಹೆಸರುಗಳ ಪಟ್ಟಿ ಮಾಡಿಸಿ ತರಿಸಿಕೊಂಡು, ಅವರೆಲ್ಲಾ ಜುಲ್ಮಾನೆ ಮೊದಲಾದ ಶಿಕ್ಷೆಗಳನ್ನು ವಿಧಿಸುತ್ತಿದ್ದಾರೆಂದು ಪ್ರಕಟವಾಗಿದೆ

♦♦♦

ಬೆಂಗಾಳದಲ್ಲಿ ಕಸಬುಗಳ ಪ್ರೋತ್ಸಾಹಕ್ಕಾಗಿ ದೇಶೀಯ ಜನರು ಒಂದು ಸಂಘವನ್ನು ಮಾಡಿಕೊಂಡು, ವಿದ್ಯಾವಂತರಾದ ಯೌವನಸ್ಥರಿಗೆ ವೇತನಗಳನ್ನು ಕೊಟ್ಟು ಜರ್ಮನಿ ಮೊದಲಾದ ದೇಶಗಳಿಗೆ ಕಳುಹಿ, ಅಲ್ಲಿ ಕಸಬುಗಳನ್ನು ಕಲಿತುಕೊಂಡು ಬರುವುದಕ್ಕೆ ಸಹಾಯಮಾಡುತ್ತಿದ್ದಾರೆ. ಈಚೆಗೆ ಜರ್ಮನಿಗೆ ಹೋಗಿ ಬಂದ ಒಬ್ಬ ಯೌವನಸ್ಥನು ತನ್ನ ಪ್ರಯಾಣ ಮುಂತಾದದ್ದರ ಖರ್ಚಿಗೆ ಮೇಲ್ಕಂಡ ಸಂಘದವರಿಂದ ಹಣ ಬರಬೇಕೆಂದು ದಾವಾ ಮಾಡಿದನು. ಆ ಮೊಕದ್ದಮೆಯಲ್ಲಿ ಸಂಘದವರು ಆ ಯೌವನಸ್ಥನಿಗೆ ೩೦೦ ರೂಪಾಯಿ ಕೊಡಬೇಕೆಂದು ಕಳೆದ ವಾರ ಡಿಕ್ರಿ ಆಗಿರುತ್ತದೆ ಈ ಮೊಕದ್ದಮೆಯು ಅಲ್ಲಿನ ಜನರಲ್ಲಿ ತುಂಬಾ ಗಲಭೆಯನ್ನುಂಟುಮಾಡಿತ್ತು.

♦♦♦

ಪೂನಾ ಪಟ್ಟಣದಲ್ಲಿ ಮಹಾರಾಷ್ಟ್ರ ಭಾಷೆಯಲ್ಲಿ ಪ್ರಕಟವಾಗುತ್ತಿದ್ದ "ಕಾಳ" ಎಂಬ ಪತ್ರಿಕೆಯ ಎಡಿಟರ್, ಪ್ರಿಂಟರ್ ಮತ್ತು ಪಬ್ಲಿಷರಾಗಿದ್ದ ಶಿವರಾಮ ಮಹಾದೇವ ಪರಾಂಜಪೆ, ಎಂ. ಎ. ಎಂಬಾತನ ಮೇಲೆ ರಾಜದ್ರೋಹದ ಮೊಕದ್ದಮೆ ಬಂದು ಬೊಂಬಾಯಿ ಹೈಕೋರ್ಟಿನ ಸ್ಪೆಷಲ್ ಸೆಷನ್ಸ್ ಕೋರ್ಟಿನಲ್ಲಿ ಕಳೆದ ವಾರ ದರ್ಯಾಫ್ತು ಆಗಿ ತೀರ್ಮಾನವಾಯಿತು. ಹೈಕೋರ್ಟ್ ಜಡ್ಜರಾದ ಜಸ್ಟಿಸ್ ದಾವಾರ್ ಯವರು ಜೂರಿಯವರ ಅಭಿಪ್ರಾಯವನ್ನು ಅನುಮೋದಿಸಿ, ಅಪರಾಧಿಗೆ ಹತ್ತೊಂಬತ್ತು ತಿಂಗಳು ಕಠಿಣ ಸಜಾವನ್ನು ವಿಧಿಸಿದರು. ಆ ಪತ್ರಿಕೆ ಪ್ರಿಂಟಾಗುತ್ತಿದ್ದ ಅಚ್ಚಿನ ಕಾರ್ಖಾನೆಯನ್ನು ಕಿತ್ತುಕೊಂಡು ಸರ್ಕಾರದ ಸುಪರ್ದುಮಾಡಿಕೊಳ್ಳುವ ವಿಚಾರವನ್ನು ಪಬ್ಲಿಕ್ ಪ್ರಾಸಿಕ್ಯೂಟರವರು ಅರ್ಜಿ ಹಾಕಿದಾಗ್ಗೆ ಇತ್ಯರ್ಥ ಮಾಡುವುದಾಗಿ ಅಪ್ಪಣೆ ಕೊಡಿಸಿದರು.

♦♦♦

ದಕ್ಷಿಣ ದೇಶಕ್ಕೆ ಸೇರಿದ ತ್ರಿವಾಂಡ್ರಂ ಪಟ್ಟಣದ (ಅನಂತಶಯನದಲ್ಲಿ) ಮಹಾರಾಜರವರ ವಿದ್ಯಾಶಾಲೆಯಲ್ಲಿ ಕೆಮಿಸ್ಟ್ರಿ (ರಸಾಯನ ಶಾಸ್ತ್ರ) ಬೋಧಕರಾದ ಮಿ|| ಎನ್. ಕೃಷ್ಣಸ್ವಾಮಿ ಐಯ್ಯರವರಿಗೆ ಅಂಚೆಯ ಮೇಲೆ ಕೆಲವು ಕಾಗದಗಳ ಕಟ್ಟು ತಲುಪಿತು ಆ ಕಾಗದಗಳನ್ನು ನೋಡಿದಾಗ ಅವುಗಳಲ್ಲಿ ಬಾಂಬ್ ಎಂಬ ಸಿಡಿಮದ್ದಿನ ಗುಂಡುಗಳನ್ನು ತಯಾರುಮಾಡುವ ವಿಧಾನಗಳನ್ನೆಲ್ಲಾ ವಿವರಿಸಿ, ಆ ವಿಧಾನದಂತೆ ಸ್ಕೂಲಿನಲ್ಲಿ ಹುಡುಗರಿಗೆ ಮಾಡಿ ತೋರಿಸಬೇಕೆಂದು ಬರೆದು ಅಚ್ಚು ಹಾಕಿತ್ತು. ಓದಿ ನೋಡಿಕೊಂಡು ಮಿ|| ಐಯ್ಯರವರು ಅದನ್ನು ಆ ವಿದ್ಯಾಶಾಲೆಯ ಅಧ್ಯಕ್ಷರಿಗೆ ಕಳುಹಿಸಿಬಿಟ್ಟರು ಅದನ್ನು ಯಾರು ಯಾವ ಸ್ಥಳದಿಂದ ಅವರ ಹೆಸರಿಗೆ ಕಳುಹಿಸಿದರೆಂಬುವುದು ತಿಳಿಯಲಿಲ್ಲ. ಅದನ್ನು ಯಾವುದೋ ಒಂದು ರೈಲ್ ಸ್ಟೇಷನಿಂದ ರವಾನೆ ಮಾಡಿರಬೇಕೆಂದು ಅದರ ಮೇಲೆ ಒತ್ತಿದ್ದ ಮುದ್ರೆಯಿಂದ ಗೊತ್ತಾಯಿತು

♦♦♦

ಬೊಂಬಾಯಿ ಪಟ್ಟಣದ ಛೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹಿಂದಿನ ವಾರ ಮಿ|| ತಿಲಕರ ಮೊಕದ್ದಮೆಯನ್ನು ದರ್ಯಾಫ್ತು ಮಾಡುತ್ತಿದ್ದಾಗ ಕೆಲವು ಜನರು ದೊಂಬಿ ಮಾಡಿ, ಪೋಲೀಸಿನವರನ್ನು ಹೊಡೆದರಷ್ಟೆ ಪೋಲೀಸಿನವರು ಏಳು ಮಂದಿಯನ್ನು ದಸ್ತಗಿರಿ ಮಾಡಿದರು. ಮ್ಯಾಜಿಸ್ಟ್ರೇಟರು ಅವರಿಗೆಲ್ಲಾ ತಲಾ ೭ ದಿನಗಳು ಮೊದಲುಗೊಂಡು ಒಂದು ತಿಂಗಳ ತನಕ ಸಜಾ ವಿಧಿಸಿದರು. ಆ ಪೈಕಿ ಜಿತಶಂಕರನೆಂಬೊಬ್ಬ ಬ್ರಾಹ್ಮಣ ಅಪರಾಧಿಗೆ ೭ ದಿನಗಳ ಸಜಾ ಆದ ವಿಷಯದಲ್ಲಿ ಅವನ ಕಡೆ ಲಾಯರು—ಸಜಾ ಹಾಕಿದರೆ ಅವನ ಜಾತಿ ಕೆಡುತ್ತೆಂದೂ ಅವನಿಗೆ ಬೇರೆ ಶಿಕ್ಷೆಯನ್ನು ವಿಧಿಸಬೇಕೆಂದೂ ಬೇಡಿಕೊಂಡದ್ದರ ಮೇಲೆ ಮ್ಯಾಜಿಸ್ಟ್ರೇಟರು ಅವನಿಗೆ ೫೦ ರೂಪಾಯಿ ಜುಲ್ಮಾನೆಯನ್ನು ಹಾಕಿದರು. ಎಂಟನೇ ಅಪರಾಧಿಯಾದ ಒಬ್ಬ [illegible] ಬಹು ಕಠಿಣವಾದ ಉಪನ್ಯಾಸಗಳನ್ನು ಮಾಡಿ ಜನರ ಮನಸ್ಸನ್ನು ಕೆಡಿಸಬೇಕೆಂದು ಪ್ರಯತ್ನ ಪಟ್ಟದ್ದರಿಂದ ಅವನಿಗೆ ಆರು ತಿಂಗಳು ಕಠಿಣ ಸಜಾ ವಿಧಿಸಿದರು

♦♦♦

ಆಲಿಘಡದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮಿ|| ಟರ್ನರ್‌ಯವರು "ಇಮಾಮುಲ್ಲಾ" ಎಂಬ ಉರ್ದು ಪತ್ರಿಕೆಯ ಎಡಿಟರನ್ನು ಕಳೆದ ವಾರ ರಾಜದ್ರೋಹದ ಅಪರಾಧಕ್ಕಾಗಿ ದರ್ಯಾಫ್ತು ಮಾಡುತ್ತಿದ್ದಾಗ ಅಪರಾಧಿಯ ಲಾಯರು ಮ್ಯಾಜಿಸ್ಟ್ರೇಟರನ್ನು ಕುರಿತು—ಈ ಮೊಕದ್ದಮೆಯಲ್ಲಿ ನೀವೂ ಸಾಕ್ಷಿಯಾಗಿ ನಿಲ್ಲಬೇಕಾಗುವುದಾದ್ದರಿಂದ ಈ ಮೊಕದ್ದಮೆಯನ್ನು ಸೆಷನ್ಸ್ ವಿಚಾರಣೆಗೆ ಕಳುಹಬೇಕೆಂದು ಕೇಳಿಕೊಂಡರು. ಮ್ಯಾಜಿಸ್ಟ್ರೇಟರು—ನಾನೇಕೆ ಸಾಕ್ಷಿಯಾಗಬೇಕು ಎಂದು ಕೇಳಿದ್ದಕ್ಕೆ, ಲಾಯರು—ಕೆಲವು ಗೋಪ್ಯವಿಚಾರಗಳಿವೆ. ಅವನ್ನು ಅಂತರಂಗದಲ್ಲಿ ನಿಮಗೆ ಮಾತ್ರ ಅಪರಾಧಿಯು ತಿಳಿಸಬೇಕೆನ್ನುತ್ತಾನೆ ಎಂದು ಹೇಳಿದರು ಮ್ಯಾಜಿಸ್ಟ್ರೇಟರು ಕೋರ್ಟಿನಲ್ಲಿದ್ದವರನ್ನೆಲ್ಲಾ ಹೊರಕ್ಕೆ ಕಳುಹಿಸಿ, ತಾವೂ, ಸರ್ಕಾರಿ ತರಫಿನ ಲಾಯರೂ, ಅಪರಾಧಿಯೂ, ಅವನ ಲಾಯರೂ ಮಾತ್ರ ಉಳಿದುಕೊಂಡು, ಸ್ವಲ್ಪ ಹೊತ್ತು ಅಪರಾಧಿ ಹೇಳಿದ್ದನ್ನು ಕೇಳಿ, ತರುವಾಯ ಯಥಾಪ್ರಕಾರ ಕೋರ್ಟಿಗೆ ಎಲ್ಲರನ್ನೂ ಬರಮಾಡಿಕೊಂಡು, ಸೆಷನ್ಸ್ ಕೋರ್ಟಿಗೆ ಆ ಮೊಕದ್ದಮೆಯನ್ನು ಕಳುಹಿಸಲು ಕಾರಣವಿಲ್ಲವೆಂದು ತೀರ್ಮಾನಿಸಿ, ತಾವೇ ದರ್ಯಾಫ್ತಿಯನ್ನು ಪ್ರಾರಂಭಮಾಡಿರುತ್ತಾರೆ ಆ ಗೋಪ್ಯದ ವಿಚಾರವೇನಾಗಿರಬಹುದೋ ಎಂದು ಅನೇಕರಲ್ಲಿ ಸಂಶಯ ಉಂಟಾಗಿದೆ.

♦♦♦

ಕಲ್ಕತ್ತಾ ಪಟ್ಟಣದಲ್ಲಿ ಕೆಲವು ತಿಂಗಳ ಕೆಳಗೆ ಒಬ್ಬ ಡಿಪ್ಯುಟಿ ಮ್ಯಾಜಿಸ್ಟ್ರೇಟರು ಕೋರ್ಟಿನಿಂದ ಸಾಯಂಕಾಲ ವಾಪಸು ಗಾಡಿಯಲ್ಲಿ ಹೋಗುತ್ತಿದ್ದಾಗ ಯಾರೋ ಅವರ ಮುಖದ ಮೇಲೆ ನೈಟ್ರಿಕ್ ಆಸಿಡ್ ಎಂಬ ದ್ರಾವಕವನ್ನು ಎಸೆದರೆಂತಲೂ, ಅದರಿಂದ ಅವರಿಗೆ ಗಾಯಗಳಾಗಿ ಅವರಲ್ಲೇ ಸತ್ತುಹೋದರೆಂತಲೂ ತಿಳಿಸಿದೆಯಷ್ಟೆ ಪೋಲೀಸಿನವರು ಮೂರು ಮಂದಿಯನ್ನು ಆ ದ್ರಾವಕ ಎಸೆದವರೆಂದು ಹಿಡಿದು ಅವರ ಮೇಲೆ ಮೊಕದ್ದಮೆ ತಂದರು ಮೊದಲು ಮ್ಯಾಜಿಸ್ಟ್ರೇಟರು ತನಿಖೆಮಾಡಿ ಸೆಷನ್ಸ್ ಕೋರ್ಟಿಗೆ ಕಳುಹಿಸಿದರು. ಸೆಷನ್ಸ್ ಜಡ್ಜರು ದರ್ಯಾಫ್ತು ಮಾಡಿದಾಗ ಅಪರಾಧಿಗಳು ತಪ್ಪಿತಸ್ಥರಲ್ಲವೆಂತಲು ಜೂರಿಯವರು ತೀರ್ಮಾನ ಹೇಳಿದರು. ಜಡ್ಜರು ಅದನ್ನು ಅಂಗೀಕರಿಸದೆ ಅಪರಾಧಿಗಳನ್ನು ಇನ್ನೊಂದು ಸಲ ಸೆಷನ್ಸಿನಲ್ಲಿ ವಿಚಾರಣೆ

ಮಾಡಬೇಕೆಂದು ತೀರ್ಮಾನಿಸಿದರು. ಛೀಫ್ ಜಡ್ಜರು ದರ್ಯಾಫ್ತು ಮಾಡಿದರು. ಎರಡನೇ ಸಲವೂ ಪಂಚಾಯಿತರು ಅಪರಾಧಿಗಳ ಮೇಲೆ ತಪ್ಪು ರುಜುವಾತಾಗಲಿಲ್ಲವೆಂದು ಹೇಳಿದರು. ಜಡ್ಜರು ಅವರ ಅಭಿಮತವನ್ನು ಒಪ್ಪದೆ ಮೂರನೇ ಸಲ ಈ ಮೊಕದ್ದಮೆ ದರ್ಯಾಫ್ತು ಆಗಬೇಕೆಂದು ಗೊತ್ತು ಮಾಡಿದಾರೆ. ಆ ಅಪರಾಧಿಗಳ ಪೈಕಿ ಒಬ್ಬನ ಮೇಲೆ ರುಜುವಾತು ಸಾಲದೆಂದು ಹೇಳಿ ಅವನನ್ನು ಬಿಟ್ಟು, ಇಬ್ಬರನ್ನು ಮಾತ್ರ ಬಂಧನದಲ್ಲಿ ಇಟ್ಟುಕೊಳ್ಳುವಂತೆ ಅಪ್ಪಣೆ ಕೊಟ್ಟಿದಾರೆ

***

ಮದರಾಸ್ ಪಟ್ಟಣದ ಪೆರಿಯಾಂ ಪೇಟೆಯ ಒಂದು ಮನೆಯಲ್ಲಿ ಪೋಲೀಸಿನವರು ಯತಿರಾಜ ಸುರೇಂದ್ರನಾಥ ಆರ್ಯ ಎಂಬೊಬ್ಬ "ಸ್ವದೇಶೀ" ಬೋಧಕನನ್ನು ವಾರಂಟಿನ ಮೇಲೆ ದಸ್ತಗಿರಿ ಮಾಡಿದರು. ಮ್ಯಾಜಿಸ್ಟ್ರೇಟರು ಯತಿರಾಜನ ಮೊಕದ್ದಮೆಯನ್ನು ಈ ದಿನ ದರ್ಯಾಫ್ತು ಮಾಡುವುದಾಗಿ ತೆಗೆದಿಟ್ಟರು. ಯತಿರಾಜನು ಇಲ್ಲಿನ ಮೂರ್ ಮಾರ್ಕೆಟ್ ಮೈದಾನಿನಲ್ಲಿ ಕಳೆದ ಮಾರ್ಚಿ ತಾ ೯ ರಲ್ಲೂ ಮೇ ತಿಂಗಳ ತಾ. ೩ ರಲ್ಲೂ ತೆಲುಗು ಭಾಷೆಯಲ್ಲಿ ಎರಡು ಉಪನ್ಯಾಸಗಳನ್ನು ಮಾಡಿದನೆಂತಲೂ, ಆಗ ರಾಜದ್ರೋಹಕರವಾದ ಅಭಿಪ್ರಾಯಗಳನ್ನು ಹೇಳಿದನೆಂತಲೂ ಮೊಕದ್ದಮೆ ಆಗಿದೆ. ಈ ಯತಿರಾಜ ಸುರೇಂದ್ರನಾಥ ಆರ್ಯನು ಮದರಾಸ್ ಪಟ್ಟಣದವನೇ, ನಾಯ್ಡು ಜಾತಿಯವನು, ಬಂಗಾಳೀಗಳ ಹೆಸರನ್ನು ಇಟ್ಟುಕೊಂಡಿರತಕ್ಕವನು. ಅವನು ನಾಲ್ಕು ವರುಷ ಕಾಲ ಉತ್ತರ ದೇಶದಲ್ಲಿದ್ದು ಬ್ರಹ್ಮಸಮಾಜಕ್ಕೆ ಸೇರಿ ತತ್ವಶಾಸ್ತ್ರವನ್ನು ಕಲಿಯುತ್ತಿದ್ದನು. ಮ|| ಬಿಪಿನಚಂದ್ರಪಾಲ್ ಎಂಬವರು ಮದರಾಸಿಗೆ ಬಂದಿದ್ದಾಗ್ಗೆ ಜನರಲ್ಲಿ ಸ್ವಲ್ಪ ಪ್ರಾಶಸ್ತ್ಯವನ್ನು ಪಡೆದು, ಈಚೆಗೆ "ಸ್ವದೇಶೀ" ವಿಚಾರಗಳನ್ನು ಕುರಿತು ವಿಶೇಷವಾಗಿ ಬೋಧಿಸುತ್ತಾ ಇದ್ದನು. ಕಳೆದ ಶನಿವಾರ ಮಧ್ಯಾಹ್ನ ಹೈಕೋರ್ಟ್ ವಕೀಲ್ ಮ|| ಪಿ ತಿರುಮಲಾಚಾರ್ರು ಛೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಮುಂದೆ ಅರ್ಜಿಕೊಟ್ಟು, ಯತಿರಾಜನನ್ನು ಜಾಮೀನಿನ ಮೇಲೆ ಬಿಡಬೇಕೆಂದು ಕೇಳಿದರು. ಮ್ಯಾಜಿಸ್ಟ್ರೇಟರು ಬಿಡುವ ಅರ್ಜಿಯನ್ನು ವಜಾ ಮಾಡಿರುತ್ತಾರೆ

ಆನೇಕಲ್ ವ್ಯವಸಾಯ ಪ್ರದರ್ಶನವು

ಆನೇಕಲ್ ಶ್ರೀಕೃಷ್ಣವಿಲಾಸ ಅಗ್ರಿಕಲ್ಚರಲ್ ಅಸೋಸಿಯೇಷನವರ ವ್ಯವಸಾಯದ ಮತ್ತು ದನಗಳ ಪ್ರದರ್ಶನವೂ, ಶ್ರೀ ಕೃಷ್ಣವಿಲಾಸ ರೀಡಿಂಗ್ ರೂಮಿನ ಪ್ರಥಮ ವರ್ಷವರ್ಧಂತಿ ಮಹೋತ್ಸವವೂ

ಮೇಲೆ ಕಂಡ ಸಂಘಗಳಿಗೆ ಪ್ರೆಸಿಡೆಂಟರಾಗಿರುವ ಇಲ್ಲಿನ ಅಮಲ್ದಾರ್ ಮ|| ಸಿ. ಎಸ್. ಕುಪ್ಪುಸ್ವಾಮಯ್ಯಂಗಾರ್ರವರಿಂದ ಈ ಮಾಹೆ ೫ ನೇ ತಾ ಭಾನುವಾರದ ದಿನ ಮೇಲ್ಕಂಡ ಮಹೋತ್ಸವಗಳು ನಡೆಸಲ್ಪಟ್ಟವು. ಆ ದಿನ ಪ್ರಾತಃಕಾಲ ೯ ಘಂಟೆಗೆ ಆನೇಕಲ್ ಮುನಿಸಿಪಲ್ ಗಾರ್ಡನ್ನಿನಲ್ಲಿ ಇದಕ್ಕಾಗಿ ಏರ್ಪಡಿಸಿ ಅಲಂಕರಿಸಲ್ಪಟ್ಟಿದ್ದ ಮಂದಿರಕ್ಕೆ ಈ ಸಭೆಯವರಿಂದ ಆಹ್ವಾನ ಪತ್ರಿಕೆಗಳನ್ನು ಪಡೆದಿದ್ದ ಈ ಸಂಸ್ಥಾನದ ಸೀನಿಯರ್ ಸರ್ಜನರೂ ಸ್ಯಾನಿಟರಿ ಕಮಿಷನರೂ ಆದ ಡಾ|| ಸ್ಮಿತ್ ಸಾಹೇಬರವರೂ, ವ್ಯವಸಾಯದ ಕೆಮಿಸ್ಟ್ ಡಾ|| ಲೇಮನ್ ಸಾಹೇಬರವರೂ, ಡಾ|| ಕೋಲ್‌ಮನ್‌ರವರೂ, ಪಶುವೈದ್ಯದ ಇಲಾಖೆ ಮ|| ಎನ್ ನರಸಿಂಹಯ್ಯಂಗಾರ್ರೂ, ಅಸಿಸ್ಟೆಂಟ್ ಮ|| ಸಿ ಎಸ್ ರಾಮಚಂದ್ರಯ್ಯರವರೂ, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮ|| ಅಬ್ದುಲ್ ಕರೀಂ ರವರೂ, ಅಸಿಸ್ಟೆಂಟ್ ಕಮಿಷನರ್ ಮ|| ರಾಮಲಿಂಗಚೆಟ್ಟಿಯವರೂ, ಫಾರೆಸ್ಟ್ ರೇಂಜರವರೂ, ಇಲ್ಲಿನ ಸ್ಥಳಾಧಿಕಾರಿಗಳೂ, ಮುನಿಸಿಪಲ್ ಮೆಂಬರುಗಳೂ, ವರ್ತಕಮಂಡಲಿಯವರೂ, ಈ ತಾಲ್ಲೂಕಿನಲ್ಲಿ ಪ್ರಮುಖರಾದ ಒಕ್ಕಲಿಗರೂ, ಇವರೇ ಮೊದಲಾದ ಸಾವಿರಾರು ಜನರು ಬಂದು ಸೇರಿದ್ದರು. ಅಮಲ್ದಾರವರು ೯ ಘಂಟೆಗೆ ಡೆಪ್ಯೂಟಿ ಕಮಿಷನರ್ ಸಾಹೇಬರವರಾದ ಮ|| ಕೃಷ್ಣಸ್ವಾಮಿ ನಾಯಕರನ್ನು ಕರೆದುಕೊಂಡು ಬಂದರು. ಆಗ ಕಿವಿಗಿಂಪಾದ ವಾದ್ಯಗಳು ಘೋಷಿಸುತ್ತಿರಲು ಡೆಪ್ಯೂಟಿ ಕಮಿಷನರ್ ಸಾಹೇಬರವರು ಅಗ್ರಾಸನಾಸೀನರಾದರು. ಕೂಡಲೇ ಪ್ರೆಸಿಡೆಂಟರವರು ಈ ಪ್ರದರ್ಶನದ ಉದ್ದೇಶವನ್ನು ಕುರಿತು ಉಪನ್ಯಾಸ ಮಾಡಿದರು. ಅನಂತರ ಡೆ|| ಕಮಿಷನರವರು ಈ ವಿಧವಾದ ಪ್ರದರ್ಶನಗಳಿಂದುಂಟಾಗುವ ಅನೇಕ ವಿಧವಾದ ಪ್ರಯೋಜನಗಳನ್ನು ಕುರಿತು ಇಂಗ್ಲಿಷ್ ಭಾಷೆಯಲ್ಲಿ ವಿವರಿಸಿ ತಮ್ಮ ಆಸನವನ್ನಲಂಕರಿಸಿದೊಡನೆ, ಅಮಲ್ದಾರರವರು ಅಗ್ರಾಸನಾಧಿಪತಿಗಳಿಗೂ ಅಲ್ಲಿ ಸೇರಿದ್ದ ದೊಡ್ಡ ಮನುಷ್ಯರುಗಳಿಗೂ ಹಾರ ತುರಾಯಿಗಳನ್ನು ಒಪ್ಪಿಸಿದರು. ಕೂಡಲೇ ಅಮಲ್ದಾರರವರು ಪ್ರದರ್ಶನದ ಮಂದಿರದೊಳಕ್ಕೆ ಅವರುಗಳನ್ನೆಲ್ಲಾ ಕರೆದುಕೊಂಡು ಹೋಗಿ, ಈ ತಾಲ್ಲೂಕಿನ ರೈತರುಗಳ ಮುಖಾಂತರ ಶೇಖರಿಸಿ ತಂದು ಅವುಗಳ ಮೇಲೆ ವಿಳಾಸಗಳನ್ನು ಬರೆದು ಸಾಲು ಸಾಲಾಗಿ ಇಟ್ಟಿದ್ದ ವಿಧವಿಧವಾದ ಧಾನ್ಯಾದಿಗಳನ್ನೂ, ಕಬ್ಬು, ಬೆಲ್ಲ, ಬಾಳೇ ಹಣ್ಣು ಮುಂತಾದ ಪದಾರ್ಥಗಳನ್ನೂ ತೋರಿಸಿದರು. ಇದಲ್ಲದೆ ಇಲ್ಲಿನ ರೈತರು ನೋಡಿ ಕಲಿತುಕೊಳ್ಳುವುದಕ್ಕಾಗಿ ೨—೩ ತರಹ ಇಂಗ್ಲಿಷ್ ನೇಗಿಲುಗಳೂ, ಧಾನ್ಯವನ್ನು ಕಡ್ಡಿಗಳಿಂದ ಬಿಂಗಡಿಸುವ ಯಂತ್ರವೂ, ಒಂದು ತೂರುವ ಯಂತ್ರವೂ, ಒಂದು ಸಕ್ಕರೆ ಮಾಡತಕ್ಕ ಯಂತ್ರವೂ, ಒಂದು ಭತ್ತದಿಂದ ಅಕ್ಕಿ ಮಾಡತಕ್ಕ ಯಂತ್ರವೂ ಸಹಾ ತರಿಸಿ ಇಡಲ್ಪಟ್ಟಿದ್ದುವು. ಆ ಯಂತ್ರಗಳಿಂದ ಆಗಲೇ ಕೆಲವು ಮಾದರಿಗಳನ್ನು ಮಾಡಿ ತೋರಿಸಲ್ಪಟ್ಟುವು.

ಇದಾದ ಮೇಲೆ ಇದರ ಹಿಂಭಾಗದಲ್ಲಿ ಈ ತಾಲ್ಲೂಕಿನ ರೈತರುಗಳಿಂದ ಸುಮಾರು ೫೦ ಜೊತೆ ಎತ್ತುಗಳು ತಂದು ನಿಲ್ಲಿಸಲ್ಪಟ್ಟಿದ್ದವು. ಮ|| ಎನ್. ನರಸಿಂಹಯ್ಯಂಗಾರ್ರವರು ಅವುಗಳ ಲಕ್ಷಣಗಳನ್ನೂ ಗುಣದೋಷಗಳನ್ನೂ ತಿಳಿಸಿದರು. ಇದೆಲ್ಲಾ ನಡೆದ ಮೇಲೆ ಡೆ|| ಕಮಿಷನರ್ ಸಾಹೇಬರವರು ಬಹು ಸಂತೋಷದಿಂದ ಡಾ|| ಸ್ಮಿತ್ ಮುಂತಾದವರೊಡನೆ ಟ್ರಾವಲರ್ಸ್ ಬಂಗಲೆ ವರೆಗೂ ನಡೆದುಹೋಗಿ ಅಲ್ಲಿ ಅವರನ್ನು ಬಿಟ್ಟು ಗಾಡಿಯ ಮೇಲೆ ತಮ್ಮ ಬಿಡಾರಕ್ಕೆ ದಯಮಾಡಿಸಿದರು.

ಪುನಃ ಸಾಯಂಕಾಲ ೬ ಗಂಟೆಗೆ ಡಾ|| ಸ್ಮಿತ್ ಮೊದಲಾದ ಮೂವರು ವಿನಾ ಪ್ರಾತಃಕಾಲದಲ್ಲಿ ದಯಮಾಡಿಸಿದ್ದ ದೊಡ್ಡ ಮನುಷ್ಯರೆಲ್ಲರೂ ರೀಡಿಂಗ್ ರೂಂ ಕಟ್ಟಡದಲ್ಲಿ ಸೇರಿದರು. ಆಗಲೂ ಡೆ|| ಕಮಿಷನರ್ ಸಾಹೇಬರವರಿಂದ ಅಗ್ರಾಸನವು ಅಲಂಕರಿಸಲ್ಪಟ್ಟಿತು. ರೀಡಿಂಗ್ ರೂಂ ಸೆಕ್ರೆಟರಿ ಮ|| ಶ್ರೀನಿವಾಸಯ್ಯಂಗಾರ್ರು ಪ್ರಾರಂಭದಿಂದ ಇದರ ಚರಿತ್ರೆಯನ್ನು ತಿಳಿಸುವ ರಿಪೋರ್ಟನ್ನು ಓದಿದರು. ಕೂಡಲೇ ಸ್ವಲ್ಪ ಹೊತ್ತು ಸಂಗೀತವೂ ಓಲಗವೂ ಸಹ ಸರ್ವರಿಗೂ ಕರ್ಣಾನಂದವನ್ನು ಮಾಡಿದವು. ಅನಂತರ ಇಲ್ಲಿನ ಮೇಟಿ ಸುಬ್ರಾಯಶಾಸ್ತ್ರಿಗಳವರು ವ್ಯವಸಾಯ ಪ್ರದರ್ಶನದಿಂದಲೂ, ರೀಡಿಂಗ್ ರೂಂ ಸ್ಥಾಪನೆಯಿಂದಲೂ ಉಂಟಾಗತಕ್ಕ ಪ್ರಯೋಜನವನ್ನು ಕುರಿತು ಉಪನ್ಯಾಸ ಮಾಡಿದರು. ಅನಂತರ ಡೆ|| ಕಮಿಷನರ್ ಸಾಹೇಬರವರು ಪ್ರದರ್ಶನಕ್ಕೆ ಉತ್ಕೃಷ್ಟವಾದ ಎತ್ತುಗಳು ಮೊದಲಾದ ಪದಾರ್ಥಗಳನ್ನು ತಂದಿದ್ದ ರೈತರುಗಳಿಗೆಲ್ಲಾ ಬಹುಮಾನಗಳನ್ನು ಹಂಚಿ, ಇವುಗಳನ್ನೆಲ್ಲಾ ನೋಡಿ ತಮಗುಂಟಾದ ಅಪಾರವಾದ ಸಂತೋಷವನ್ನು ಸೂಚಿಸಿ, ಶ್ರೀಮಾನ್ ಮಹಾರಾಜರವರಿಗೆ ಶ್ರೇಯಃಪ್ರಾರ್ಥನೆಯನ್ನು ಮಾಡಿ ಕುಳಿತುಕೊಂಡರು. ಅಗ್ರಾಸನಾಧಿಪತಿಗಳಿಗೆ ಹಾರ ತುರಾಯಿಗಳನ್ನು ಒಪ್ಪಿಸಿದ ಕೂಡಲೇ ಸರ್ವರಿಗೂ ಗಂಧಪುಷ್ಪ ತಾಂಬೂಲಗಳು ಹಂಚಲ್ಪಟ್ಟು ಸರ್ವರೂ ಸಂತೋಷದಿಂದ ಜಯಘೋಷಮಾಡುತ್ತಾ ತೆರಳಿದರು.

ಇವುಗಳಿಗೆಲ್ಲಾ ಕಾರಣಭೂತರಾದ ಇಲ್ಲಿನ ಅಮಲ್ದಾರ್ ಮ|| ಸಿ ಎಸ್ ಕುಪ್ಪುಸ್ವಾಮಿ ಐಯ್ಯಂಗಾರ್ರು ಈ ತಾಲ್ಲೂಕಿಗೆ ಬಂದಿರುವುದು ಇಲ್ಲಿನವರ ಭಾಗ್ಯೋದಯವೆಂದೇ ಹೇಳಬೇಕು. ಇವರ ಗುಣಾತಿಶಯಗಳನ್ನು ವಾಚಕರು ಇವರು ನಡೆಸಿರತಕ್ಕ ಮೇಲ್ಕಂಡ ಕೆಲಸಗಳಿಂದಲೇ ಊಹಿಸಬಹುದಾದುದರಿಂದ ವಿಶೇಷ ಹೇಳಬೇಕಾದುದೇನೂ ಇಲ್ಲ. ಇವರು ಉತ್ತರೋತ್ತರ ಇತೋಪ್ಯತಿಶಯವಾದ ಅಧಿಕಾರಪದವಿಯನ್ನು ಹೊಂದಿ ಚಿರಕಾಲ ಪ್ರಜೆಗಳಿಗೆ ಅನೇಕ ಪ್ರಕಾರವಾದ ಪ್ರಯೋಜನಗಳನ್ನು ಮಾಡುತ್ತಿರಲೆಂದು ಹಾರೈಸುತ್ತೇವೆ

ಪತ್ರಿಕಾ ವಾಚಕ

ತಾಲ್ಲೂಕು ವರ್ತಮಾನಗಳು.

ಚಿಕ್ಕಮಗಳೂರು.—ಈ ಕಡೆ ಮಳೆ ಬೆಳೆ ಚನ್ನಾಗಿವೆ. ದಿನಸಿ ಧಾರಣೆಗಳು ಮಾತ್ರ ಇಳಿಯಲಿಲ್ಲ. ಸದ್ಯಕ್ಕೆ ಪ್ಲೇಗ್ ರೋಗದ ಭಯವು ಜನರಿಗೆ ಇಲ್ಲ. ಕಳೆದ ವರುಷ ಈ ಕಾಲದಲ್ಲಿ ಪ್ಲೇಗಿನ ಭಯ ಬಹಳವಾಗಿತ್ತು. ಈಗ ಸುತ್ತುಮುತ್ತು ಹಳ್ಳಿಗಳಲ್ಲಿ ದನಗಳಿಗೆ ದೊಡ್ಡ ರೋಗವು ತಗಲುತ್ತಾ ದನಗಳು ಸಾಯುತ್ತಾ ಇರುತ್ತವೆ. ಇದಕ್ಕಾಗಿ ಸರಕಾರದವರು ರೈತರ ಮೇಲೆ ದಯವನ್ನು ತೋರಿಸಿ ದನಗಳಿಗಾಗಿಯೇ ಒಂದು ಹೊಸದಾಗಿ ಆಸ್ಪತ್ರೆಯನ್ನು ಕಟ್ಟಿಸಿ ತಕ್ಕ ಚಿಕಿತ್ಸೆಯನ್ನು ಮಾಡುತ್ತಾ ಬರುತ್ತಾರೆ. ಕಾಯಿಲೆ ದನಗಳನ್ನೆಲ್ಲಾ ಇವರ ಗಮನಕ್ಕೆ ತಂದರೆ ಕ್ಷೇಮವಾಗ ಬಹುದು.—ಇಲ್ಲಿ ೧—೨ ವರುಷಗಳ ವರಿಗೂ ಬಹಳ ಮುತುವರ್ಜಿಯಿಂದ ಕೆಲಸ ಮಾಡಿ ಜನರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದ ಡಾಕ್ಟರ್ ಅಪ್ಪಯ್ಯನವರು ರಿಟೈರಾದರು. ಇವರು ಹೋಗುವಾಗ ಅನೇಕ ದೊಡ್ಡ ಮನುಷ್ಯರೂ, ಸ್ಕೂಲ್ ಮಾಸ್ಟರುಗಳೂ ಮೊದಲಾದವರು ಬಹಳ ಸನ್ಮಾನಪೂರ್ವಕ ಕಳುಹಿ ಕೊಟ್ಟರು. ಇವರಿಗೆ ಬದಲಾಗಿ ಇಲ್ಲಿನ ಸ್ಥಳವಾಸಿಗರಾದ ಮುತ್ತುಸ್ವಾಮಿ ಡಾಕ್ಟರ್ ಬಂದು ಬಹು ಚಟುವಟಿಕೆಯಿಂದ ಕೆಲಸ ಮಾಡುತ್ತಿದಾರೆ.—ಈ ತಾಲ್ಲೂಕಿಗೆಲ್ಲಾ ಈ ಊರಿನ ಸಂತೆ ಒಂದೇ ದೊಡ್ಡದಾಗಿದೆ. ವ್ಯಾಪಾರ ಚನ್ನಾಗಿ ನಡೆಯುತ್ತದೆ. ಸಂತೆಯಲ್ಲಿ ಹಳ್ಳಿಯವರಿಗೆ ಕೆಲವು ವರ್ತಕರು ತೂಕದಲ್ಲಿಯೂ, ಅಳತೆಯಲ್ಲಿಯೂ ಅನ್ಯಾಯ ಮಾಡುತ್ತಾರೆ. ಆದ್ದರಿಂದ ಪೋಲೀಸಿನವರು ಇವರ ಸೇರುಗಳನ್ನೂ ಬಟ್ಟುಗಳನ್ನೂ ಪತ್ತೆಮಾಡಿ ಶಿಕ್ಷೆಗೆ ಗುರಿಮಾಡಿದರೆ ಜನರಿಗೆಲ್ಲಾ ಕ್ಷೇಮವಾಗಬಹುದು.

ಹುಣಸೂರು.—ಬೆಟ್ಟದ ಪುರದ ಹೋಬಳಿ ನಾಗನಹಳ್ಳಿಯಲ್ಲಿ ವಾಸವಾಗಿರುವ ಶಿವಾಚಾರದ ಅಪ್ಪುದಿ ಎಂಬವನು ಒಬ್ಬ ಹೆಂಗಸನ್ನು ರಖಾವು ಮಾಡಿಕೊಂಡಿದ್ದನಂತೆ. ಅವಳು ಗರ್ಭಿಣಿಯಾದನಂತರ ಮನೆ ಬಿಟ್ಟು ಹೊರಡಿಸಲು ಪ್ರಯತ್ನಪಟ್ಟಾಗ ಅವಳು ಹೋಗದೆ ಮನೆಯ ಜಗಲಿಯ ಮೇಲೆಯೇ ವಾಸವಾಗಿದ್ದು, ಒಂದು ಹೆಣ್ಣು ಶಿಶುವನ್ನು ಹೆತ್ತಳು. ಕಳೆದ ತಿಂಗಳು ೨೬ ನೇ ತಾ ಸದರಿ ಅಪ್ಪುದಿಯು ಕೂಸನ್ನು ಕಾಲಿನಿಂದ ತುಳಿದು ಕೊಂದ ವಿಚಾರ ಪೋಲೀಸಿಗೆ ಫಿರ್ಯಾದಾಗಿ ಅಪರಾಧಿಯನ್ನು ದಸ್ತಗಿರಿ ಮಾಡಿ ಬೆಟ್ಟದಪುರದ ಲಾಕಪ್ಪಿನಲ್ಲಿ ಇಟ್ಟಿದ್ದರು. ಅವನು ಇದೇ ತಿಂಗಳು ೪ ನೇ ತಾ ರಾತ್ರಿ ಜಲಬಾಧೆಗೆಂದು ಹೊರಗೆ ಬಂದು ಪೋಲೀಸಿನವರ ಕಣ್ಣು ತಪ್ಪಿಸಿ ಕಾಲಿಗೆ ಬುದ್ಧಿ ಹೇಳಿ ಪರಾರಿಯಾದನು. ಈ ಆಸಾಮಿಯನ್ನು ಹುಣಸೂರು ಕಸಬಾದಲ್ಲಿ ಪೋಲೀಸಿನವರು ಪತ್ತೆಯಿಂದ ಹಿಡಿದು ಲಾಕಪ್ಪಿನಲ್ಲಿಟ್ಟಿದಾರೆ.—ಇಲ್ಲಿನ ಬಿನ್ನಿ ಮಾರ್ಕೆಟ್ ವಿಷಯದಲ್ಲಿ ಮ್ಯುನಿಸಿಪಲ್ ಮನೇಗರನಾಗಲಿ, ಮೆಂಬರುಗಳಾಗಲಿ ನಿಗಾ ಕೊಡುವದಿಲ್ಲವೆಂದು ತೋರುತ್ತದೆ. ಚರಂಡಿಗಳ ಮೇಲೆ ಹಾಕಿರುವ ಚಪ್ಪಡಿ ಕಲ್ಲುಗಳು ಕೆಲವು ಸ್ಥಳಗಳಲ್ಲಿ ಅಪಾಯಕರವಾದ ಸ್ಥಿತಿಯಲ್ಲಿವೆ. ಇವುಗಳ ರಿಪೇರಿ ಅವಶ್ಯವಾಗಿದೆ. ಇಲ್ಲದಿದ್ದರೆ ಗಾಡಿಗಳಿಗೂ, ದನಕರುಗಳಿಗೂ ತುಂಬಾ ಅಪಾಯವಾಗುವದೆಂಬುವದರಲ್ಲಿ ಯಾವ ಸಂದೇಹವಿರಲಾರದು.—ಸಂತೆಗೆ ಮಾರಾಟಕ್ಕೆ ಬರುವ ಬೆಲ್ಲದ ಮತ್ತು ತೆಂಗಿನಕಾಯಿನ ಗಾಡಿಗಳನ್ನು ಸುಂಕದ ಕಟ್ಟೆಯಲ್ಲೇ ಝಡ್ತಿ ಮಾಡಿ ಬಿಡುತ್ತಿದ್ದದ್ದು ಬಿಕರಿ ಮಾಡುವವರಿಗೂ ಕೊಳ್ಳುವವರಿಗೂ ತುಂಬಾ ಅನುಕೂಲವಾಗಿತ್ತು. ಈಗಲೋ ಸಂತೆ ಮಾಳದಲ್ಲೇ ಝಡ್ತಿ ಮಾಡುತ್ತಾರೆ. ಝಡ್ತಿ ನೋಡುವವರು ಕೆಲವು ಸಮಯಗಳಲ್ಲಿ ೩—೪ ಗಂಟೆ ಹೊತ್ತಿಗೆ ಬರುತ್ತಾರೆ. ಅವರು ಬರುವ ತನಕ ಬೆಲ್ಲದ ಗಾಡಿಗಳನ್ನಾಗಲಿ ತೆಂಗಿನ ಕಾಯಿಗಳನ್ನಾಗಲಿ ಬಿಚ್ಚಕೂಡದು. ಈಗ ಮಳೆಗಾಲವಾಗಿರುವದರಿಂದ ದೂರದಿಂದ ಸಂತೆಗೆ ಬರುವ ಜನಗಳಿಗೆ ತುಂಬಾ ತೊಂದರೆ. ಆದ್ದರಿಂದ ನಮ್ಮ ಅಮಲ್ದಾರ್ರವರು ಇದಕ್ಕೆ ಸರಿಯಾದ ಏರ್ಪಾಡು ಮಾಡುವರೆಂದು ನಂಬುತ್ತೇನೆ.—ಈ ಊರಿನಲ್ಲಿಯೂ ಸುತ್ತುಮುತ್ತು ಇರುವ ಗ್ರಾಮಗಳಲ್ಲಿಯೂ ದನಕರುಗಳ ರೋಗವು ಹರಡಿಕೊಂಡು, ಅನೇಕ ದನಗಳು ಸತ್ತುಹೋದ ಸಂಗತಿಯನ್ನೂ ಇನ್ನೂ ಅನೇಕ ರಾಸುಗಳು ಬಾಯಿಲೆಯಾಗಿರುವದನ್ನೂ ನಮ್ಮ ಅಮಲ್ದಾರ್ರವರು ತಿಳಿದು, ರೋಗ ಪ್ರಾರಂಭವಾದ ಕೂಡಲೆ ಯಾವ ಔಷಧವನ್ನು ಉಪಯೋಗಿಸಬೇಕೆಂಬುವದನ್ನೂ ಭೇದಿಯಾದನಂತರ ಯಾವ ಚಿಕಿತ್ಸೆ ಮಾಡಬೇಕೆಂಬುವದನ್ನೂ ಒಂದು ಕಾಗದದಲ್ಲಿ ಬರೆದು ಪ್ರಜೆಗಳಿಗೆಲ್ಲಾ ತಿಳಿಯಪಡಿಸುವಂತೆ ಹುಕುಂ ಮಾಡಿರುವದನ್ನು ಕೇಳಿ ತುಂಬಾ ಸಂತೋಷಪಡಬೇಕಾಗಿದೆ.

ದೊಡ್ಡಬಳ್ಳಾಪುರ.—ಇಲ್ಲಿ ಗಾಳಿಯು ಬಹಳವಾಗಿ ಬೀಸುತ್ತೆ. ಆಗಾಗ್ಗೆ ಮೋಡಗಳೂ ಗುಡುಗೂ ಕಾಣಿಸಿಕೊಂಡರೂ ಮಳೆ ಇಲ್ಲದೆ ಕೆರೆಯಲ್ಲಿ ನೀರು ಇಲ್ಲ. ರಾಗಿ ರೂಪಾಯಿಗೆ ೧೪—೧೫ ಸೇರೂ ಅಕ್ಕಿ ೬—೭ ಸೇರೂ ಮಾರುತ್ತಾರೆ. ಇದರಿಂದ ಬಡಜನರಿಗೆ ತುಂಬಾ ಕಷ್ಟ.—ಒಬ್ಬ ಮುಸಲ್ಮಾನರ ಅಂಗಡಿಗೆ ಕಳ್ಳರು ಬಿದ್ದು ಸುಮಾರು ೨೦—೨೫ ರೂಪಾಯಿ ಸಾಮಾನು ದೋಚಿಕೊಂಡು ಹೋದರು. ಹೊನ್ನಾಗಟ್ಟವೆಂಬ ಗ್ರಾಮದಲ್ಲಿ ತಾ ೧ ರಲ್ಲಿ ಒಕ್ಕಲಿಗರ ರುದ್ರಪ್ಪನ ಮನೆಗೆ ಕಳ್ಳರು ನುಗ್ಗಿ ಸುಮಾರು ಎರಡು ಸಾವಿರ ರೂಪಾಯಿನ ನಗನಾಣ್ಯ ಕಾಗದಪತ್ರಗಳನ್ನು ತೆಗೆದುಕೊಂಡು ಹೋದರು. ಇವರಲ್ಲಿ ಪತ್ರಗಳು ಸಿಕ್ಕಿದವಂತೆ. ಕಳ್ಳರು ಮಾತ್ರ ಸಿಕ್ಕಲಿಲ್ಲವಂತೆ.—ತಾ ೧೧ ರಲ್ಲಿ ನಡೆದ ಪರದ ಹಬ್ಬದಲ್ಲಿ ಒಂದು ದೊಡ್ಡ ಘಾಳೀ ಪಟವನ್ನು ಕಟ್ಟಿ ಆಡಿಸಿದರು. ಇದು ಎರಡಾಳು ಉದ್ದವೂ ಒಬ್ಬನು ಹೊರುವಷ್ಟು ಪ್ರೌಢಿ ಭಾರವೂ ಉಳ್ಳದ್ದಾಗಿ ಜನರು ನೋಡುವದಕ್ಕೆ ವಿನೋದವಾಗಿತ್ತು.—ತೂಬಗೆರೆ ಶಾನಭೋಗರ ಮ|| ಚಂದ್ರಶೇಖರಯ್ಯನವರು ತಂದೆ ತಾಯಿಗಳ ಪಾದಪೂಜೆ ಮುಂತಾದ ಆಚರಣೆಗಳನ್ನು ನಡೆಸಿ, ಬಡವರಾದ ನೂರಾರು ಜನರಿಗೆ ಅನ್ನದಾನ ಮಾಡಿಸಿರುವದು ಇಲ್ಲಿನ ಜನರಿಗೆ ತುಂಬಾ ಸಂತೋಷವಾಗಿದೆ. ಬೆಂಗಳೂರಿನಲ್ಲಿ ಅನಾಥರಾದ ಮಕ್ಕಳಿಗೂ, ವಿಧವೆಯರಿಗೂ ಒಂದು ಅನಾಥಶಾಲೆಯನ್ನು ಏರ್ಪಡಿಸಿ, ಅನ್ನಕ್ಕೆ ಮಾರ್ಗಮಾಡಿ, ಕಸಬುಗಳನ್ನು ಸಹ ಕಲಿಸುತ್ತಾರಂತೆ. ಈ ಕಾರ್ಯದ ಗ್ರಂಥಸಹಾಯಕ್ಕಾಗಿ ಮ|| ವೆಂಕಟವರದ ಐಯ್ಯಂಗಾರ್ರು ಬಂದು ತಾ. ೧೨ ರಲ್ಲಿ ಒಂದು ಸಭೆ ಸೇರಿಸಿದರು. ಇದಕ್ಕೆ ನಮ್ಮ ಅಮಲ್ದಾರರೂ, ಮುನಿಸಿಪಲ್ ಕಮಿಷನ್ನರೂ, ಶೆಟ್ಟಿ ವರ್ತಕರೇ ಮೊದಲಾದವರೂ ಸೇರಿದ್ದರು. ಸುಮಾರು ನೂರು ರೂಪಾಯಿ ವರೆಗೆ ಕೊಡಿಸಿದ ಹಾಗೆ ಕಾಣುತ್ತೆ.—ತಾ ೩ ರಲ್ಲಿ ಇದೇ ದೊಡ್ಡಬಳ್ಳಾಪುರದ ಎಕ್ಸೈಜು ಇನ್ಸ್ಪೆಕ್ಟರ್ ಮ|| ಶ್ರೀನಿವಾಸರಾಯರೂ, ಸಬ್ ಇನ್ಸ್ಪೆಕ್ಟರ್ ಮ|| ಸೂರಪ್ಪನವರು ಸಹ ದೇವನಹಳ್ಳಿ ರೋಡಿನಲ್ಲಿ ಪರ್ಮಿಟ್ಟಿನಲ್ಲಿ ನಮೂದಿಸುವದಕ್ಕಿಂತ ಜಾಸ್ತಿಯಾಗಿ ದೇವನಹಳ್ಳಿ ಕಂಟ್ರಾಕ್ಟರ್ ಮ|| ನುಟ್ಟಯ್ಯಶೆಟ್ಟಿ ಕಡೆಯ ಆಳುಗಳು ಕಳ್ಳತನದಿಂದ ಸಾಗಿಸುತ್ತಾ ಇದ್ದ ಶೇಂದಿ ಬಂಡಿಯನ್ನು ಹಿಡಿದು, ಆಳುಗಳ ಮೇಲೆ ಮೊಕದ್ದಮೆ ಮಾಡಿದರು. ಇದೇ ಕೋರ್ಟಿನಲ್ಲಿ ವಿಚಾರಣೆಯಾಗಿ ಅಪರಾಧಿಗಳಿಗೆ ೨೦ ರೂ. ಜುಲ್ಮಾನೆ, ತಪ್ಪಿದಲ್ಲಿ ೧೫ ದಿನ ಕಠಿಣಸಜಾ ಶಿಕ್ಷೆ ವಿಧಿಸಿದ್ದಲ್ಲದೆ, ಶೇಂದಿ ಒಳಪಟ್ಟ ಒಂದು ಬಂಡಿ, ಎತ್ತು, ಅದರಲ್ಲಿ ಮತ್ತಿಯಾಗಿದ್ದ ಶೇಂದಿ ಸಹ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಂಡರಂತೆ. ಹೀಗೆ ಮುತುವರ್ಜಿ ವಹಿಸಿದ ಇನ್ಸ್ಪೆಕ್ಟರುಗಳನ್ನು ಮೇಲ್ಪಟ್ಟ ಅಧಿಕಾರಿಗಳು ಪ್ರೋತ್ಸಾಹಿಸಿಯಾರೆಂದು ಜನರು ನಿರೀಕ್ಷಿಸುತ್ತಾರೆ

ಆನೇಕಲ್ ತಾ ದೊಮ್ಮಸಂದ್ರ.—ಇಲ್ಲಿನ ಲೋವರ್ ಮಿಡ್ಲ್ ಸ್ಕೂಲ್ ಉಪಾಧ್ಯಾಯರುಗಳೂ, ಸ್ಕೂಲ್ ಬಾಲಕ ಬಾಲಕಿಯರೂ ಮತ್ತು ಅವರ ಪೋಷಕರೂ ಸೇರಿ ೯ ನೇ ತಾ ಗುರುವಾರ ಸಾಯಂಕಾಲ ಇಲ್ಲಿಂದ ವರ್ಗವಾಗಿ ಹೋಗುವ ಉಪದೇಶಿಗಳಾದ ಪಬ್ಲೀ ಸ್ಟೀನ್‌ಯವರಿಗೆ ಒಂದು ಅಡ್ರೆಸ್ ಕೊಡಲು ಏರ್ಪಾಡು ಮಾಡಿದ್ದರು. ಇವರು ಇಲ್ಲಿಗೆ ಬಂದು ಸುಮಾರು ೨ ವರ್ಷಗಳಾಗುತ್ತಾ ಬಂತು. ಆಗ ಬಾಲಕರ ಮಿಡ್ಲ್ ಪಾಠಶಾಲೆ ಒಂದೇ ಇತ್ತು. ಇವರು ಬಂದ ಮೇಲೆ ಬಾಲಕಿಯರ ಪಾಠಶಾಲೆಯೂ, ಪಂಚಮರಿಗೋಸ್ಕರ ಒಂದು ಪಾಠಶಾಲೆಯೂ ಏರ್ಪಾಡಾಯಿತು. ಆದರೆ ಪಂಚಮರು ತಮ್ಮ ಸ್ವಾಭಾವಿಕವಾದ ಅವಿವೇಕದಿಂದ ಮಕ್ಕಳನ್ನು ಸ್ಕೂಲಿಗೆ ಸರಿಯಾಗಿ ಕಳುಹಿಸದೆ ಸ್ಕೂಲನ್ನು ಕಳೆದುಕೊಂಡರು. ಮಕ್ಕಳ ವಿದ್ಯಾಭ್ಯಾಸದಲ್ಲಿ ತುಂಬಾ ಮುತುವರ್ಜಿ ತೆಗೆದುಕೊಳ್ಳುತ್ತಿದ್ದುದಲ್ಲದೆ ತಮ್ಮ ಬೋಧಕೋದ್ಯೋಗವನ್ನು ಸರಿಯಾಗಿ ನಡಿಸುತ್ತಿದ್ದರು. ಇವರಿಗೆ ವರ್ಗವಾಯಿತೆಂಬ ಸುದ್ದಿ ಹುಟ್ಟಿದ ಕೂಡಲೆ ಬಾಲಕರ ಪೋಷಕರು ಮತ್ತು ಸ್ನೇಹಿತರು ಚಿಂತೆಪಟ್ಟು ಈ ಸರ್ಕಲ್ ಅಧ್ಯಕ್ಷರಾದ ಘನ ಡಬ್ಲ್ಯು ವಿಲ್ಕಿನ್ಸ್ ಸಾಹೇಬರಿಗೆ ಇನ್ನೂ ಕೆಲವುಕಾಲ ಇವರನ್ನು ಇಲ್ಲಿ ಇಟ್ಟಿರುವ ಹಾಗೆ ಅರ್ಜಿಯನ್ನು ಮೊಟ್ಟಾ ಕೊಟ್ಟರು. ಕಡೆಗೂ ಇವರ ಪ್ರಾರ್ಥನೆಯು ಸಾರ್ಥಕವಾಗದೆ ಆನೇಕಲ್ಲಿಗೆ ವರ್ಗವಾಯಿತು. ಹೀಗಿದ್ದರೂ ಸದರಿ ಉಪಾಧ್ಯಾಯರುಗಳೂ ಇವರ ಸ್ನೇಹಿತರೂ ತಮ್ಮ ಬೋಧಕರನ್ನು ಸಂತೋಷ ಪಡಿಸುವದಕ್ಕೋಸ್ಕರ ೯ ನೇ ತಾ ಗುರುವಾರ ಸಾಯಂಕಾಲ ಇಲ್ಲಿನ ರಂಗ ಬೀದಿಯ ಮೈದಾನವನ್ನು ಬಾವುಟಗಳಿಂದ ಅಲಂಕರಿಸಿ, ಮುನಿಸಿಪಲ್ ಮೆಂಬರುಗಳನ್ನೂ ಇತರ ದೊಡ್ಡ ಮನುಷ್ಯರನ್ನೂ ಕರೆಸಿಕೊಂಡು ಬಾಲಕರಿಗೆ ಅನೇಕ ವಿಧವಾದ ಆಟಪಾಟಗಳನ್ನು ಏರ್ಪಾಡು ಮಾಡಿ ಸಂತೋಷ ಪಡಿಸಿದ್ದಲ್ಲದೆ ಬಾಲಕಿಯರ ಪಾಠಶಾಲೆಯಲ್ಲಿ ಸದರಿ ಬೋಧಕರ ಗುಣಾತಿಶಯಗಳನ್ನು ಸೂಚಿಸಿ, ಒಂದು ಅಡ್ರೆಸ್ಸನ್ನು ಇಲ್ಲಿನ ಬ್ರಾಂಚ್ ಪೋಸ್ಟ್ ಮಾಸ್ಟರ್ ಮ|| ಡಿ ಎಂ ಸುಬ್ರಾಯರಿಂದ ಒಪ್ಪಿಸಲ್ಪಟ್ಟಿತು. ಇಲ್ಲಿನ ಬಾಲಕಿಯರ ಪಾಠಶಾಲೆಯ ಫೋಟೋವನ್ನೂ ಒಂದು ತಾಂಬೂಲ ತಟ್ಟೆಯನ್ನೂ ಸದರಿ ಬೋಧಕರಿಗೆ ಜ್ಞಾಪಕಾರ್ಥವಾಗಿ ಕೊಡಲಾಯಿತು. ಸದರಿ ಬೋಧಕರು ಇವುಗಳನ್ನು ತುಂಬಾ ವಂದನಾಪೂರ್ವಕವಾಗಿ ಅಂಗೀಕರಿಸಿ ಪ್ರೀತಿಯಿಂದ ಕೊಟ್ಟ ಪ್ರತ್ಯುತ್ತರದಲ್ಲಿ ಸಮುಚಿತವಾದ ಆದರಣೀಯ ಮಾತುಗಳನ್ನು ಹೇಳಿದರು. ಬಾಲಕಿಯರು ಮಂಗಳವನ್ನು ಹಾಡುತ್ತಿರಲು ಸಭಿಕರಿಗೆಲ್ಲಾ ಪುಷ್ಪ ತಾಂಬೂಲವೂ ಬಾಲಕರಿಗೆ ಮಿಠಾಯಿಯೂ ಹಂಚಲ್ಪಟ್ಟವು. ಇವರಿಗೆ ಬದಲು ಬಂದಿರತಕ್ಕ ಬೋಧಕರು ಇವರಂತೆಯೇ ಗ್ರಾಮಸ್ಥರಲ್ಲಿ ಪ್ರೀತಿ ವಿಶ್ವಾಸ ಪರರಾಗಿರುವರೆಂದು ನಿರೀಕ್ಷಿಸಲ್ಪಟ್ಟಿದೆ.

ಚಿತ್ರದುರ್ಗ.—ಇದೇ ಮಾಹೆ ೫ ನೇ ತಾರೀಖಿನಲ್ಲಿ ಸಂಜೆಬಾಗಲಿನಲ್ಲಿ ಸೈದರಲ್ಲಿ ಎಂಬ ಕಂಥಾರಿಗೂ ಹಗಲುದೀವಟಿಗೆ ಗರಡಿಯವನಾದ ಅಬ್ದುಲ್ ಅಜೀಂ ಎಂಬವನಿಗೂ ಇಲ್ಲಿ ಕುಸ್ತಿಯಾಗಿ ಅಬ್ದುಲ್ ಅಜೀಮನು ಗೆದ್ದನು. ಆ ದಿನ ಟಿಕೇಟಿನಿಂದ ಬಂದ ೧೮ ರೂಪಾಯಿನಲ್ಲಿ ೧೦ ರೂ. ಗೆದ್ದವನಿಗೂ, ೫ ರೂ. ಸೋತವನಿಗೂ ಹಂಚಿಕೆ ಆಯಿತು. ತರುವಾಯ ಮಂಗಳವಾರ ಇನ್ನೊಬ್ಬ ದೊಡ್ಡ ಕಂಥಾರಿಯು ಶಿವಮೊಗ್ಗದಿಂದ ಬಂದಿದ್ದ ಸೈದ್‌ಮೊಹಿದೀನ್ ಎಂಬವನನ್ನೂ, ಬುಧವಾರ ಇನ್ನೊಬ್ಬ ಬ್ರಾಹ್ಮಣ ದಬ್ಬೆಯನ್ನೂ, ಗುರುವಾರ ಚಿತ್ರದುರ್ಗದ ದೊಡ್ಡ ಗರಡಿಯ ಬುಡ್ಡೆ ಸಾಬಿಯನ್ನೂ ಸೋಲಿಸಿ, ಈ ಊರಲ್ಲಿ ಯಾರಾದರೂ ಬಂದು ನನ್ನ ಮೇಲೆ ಕುಸ್ತಿ ಮಾಡಿರಿ ಎಂದು ಧೈರ್ಯವಾಗಿ ಸಾರಿ ಹೇಳುತ್ತಿದ್ದ ಆ ದೊಡ್ಡ ಕಂಥಾರಿಯ ಮೇಲೆ ೫ ನೇ ತಾ ಕಂಥಾರಿಯ ಮೇಲೆ ಕುಸ್ತಿ ಮಾಡಿ ಗೆದ್ದಿದ್ದ ಹಗಲುದೀವಟಿಗೆ ಗರಡಿ ಅಬ್ದುಲ್ ಅಜೀಂ ಎಂಬವನು ಕೂಡಲೆ ಮುಂದೆ ಅದೇ ಸ್ಥಳದಲ್ಲಿ ಮೂವರನ್ನು ಗೆದ್ದಿದ್ದ ಕಂಥಾರಿಯ ಮೇಲೆ ಕುಸ್ತಿ ಮಾಡಿ ಅವನನ್ನು ಸಂಪೂರ್ಣವಾಗಿ ಸೋಲಿಸಿದನು. ಇವನು ಪಿಟ್ಟವರ್ ಆಫೀಸ್ ಪೈಲ್ವಾನ್ ವಸ್ತಾದ್ ಎಂಬವನಲ್ಲಿ ಸ್ವಲ್ಪ ಕಲಿತು ತಯಾರಾಗಿ ಬಂದವನು. ಬಹಳ ಘಟ್ಟಿಗನೆಂದು ತೋರುತ್ತದೆ ಇವನು ಕುಸ್ತಿ ಮಾಡುವಾಗ ಸರ್ಜನ್ ಜಡ್ಜರಾದ ಮೆ॥ ಸ್ಟುವರ್ಟ್ ಯವರೂ, ಅವರ ಪತ್ನಿಯವರೂ, ಬೇರೆ ಅಧಿಕಾರಿಗಳೂ, ಲಾಯರುಗಳೂ ಇದ್ದರು. ಇವನು ಗೆದ್ದದ್ದಕ್ಕಾಗಿ ಎಲ್ಲರೂ ಸಂತೋಷಪಟ್ಟು ಲಾಯರ್ ಮೆ॥ ಜೀನಪ್ಪರಾಯರು ಒಂದು ರೇಷ್ಮೆಯ ವಸ್ತ್ರವನ್ನೂ ಪೀತಾಂಬರವನ್ನೂ ಬಹುಮಾನ ಕೊಟ್ಟರು ಮತ್ತು ಮೆ॥ ಎಂ ಬಿ ಕೃಷ್ಣರಾಯರೂ ಇನ್ನೂ ಹಲವರೂ ಅದೇ ಪ್ರಕಾರ ಮರ್ಯಾದೆ ಮಾಡಿದರು ಮತ್ತು ಅದೇ ಸಾಯಂಕಾಲ ಗೆದ್ದವನನ್ನು ಗಾಡಿಯ ಮೇಲೆ ಕೂರಿಸಿ ಬಾಣಬಿರುಸು ಮುಂತಾದವುಗಳ ಸಮೇತ ಊರಲ್ಲಿ ಮೆರವಣಿಗೆ ಮಾಡಿದರು. ಇದಕ್ಕೆ ಲ್ಯಾಟೀನ್ ಮುಂತಾದ್ದು ಮಾಡಿಸಿ ಮುಂದಾಳಾಗಿ ನಿಂತಿದ್ದವರು ಮಹಮದ್ ಯಾದುರಸ್ ಮತ್ತು ಮೇಲ್ ಕಂಟ್ರ್ಯಾಕ್ಟರ್ ಮಹಮದ್ ಯೂಸುಫ್ ಇವರು.—ಗುಡ್ಡಗಳ ಅಡವಿಗಳಲ್ಲಿ ಚಿರತೆ ಮುಂತಾದ ದುಷ್ಟಮೃಗಗಳ ಕಾಟ ಈಚೆಗೆ ಹೆಚ್ಚಾಗಿ ಅವು ಈಗ ಕೆಲವು ದಿನಗಳಿಂದ ಸಮೀಪದಲ್ಲೇ ಮೂರು ನಾಲ್ಕು ದನಗಳನ್ನು ಕೊಂದಿವೆ. ಕಳೆದ ಶನಿವಾರ ಹಗಲಿನಲ್ಲೇ ಕರಿ ಅಂಗಳದಲ್ಲಿ ಒಂದು ಕರುವನ್ನು ಹಿಡಿದು ಎಳೆಯುತ್ತಿರುವಾಗ ಕೂಗಿಕೊಂಡದ್ದರಿಂದ ಬಿಟ್ಟು ಓಡಿ ಹೋದರೂ ಕರು ಸತ್ತು ಹೋಯಿತು.—ಇಲ್ಲಿನ ಸರಕಾರಿ ಕೋರ್ಟು ಕಚೇರಿಗಳಲ್ಲಿ ಮುಕ್ಕಾಲು ಭಾಗದ ಮೇಲೆ ಎಲ್ಲರೂ ಬರೇ ಬ್ರಾಹ್ಮಣರೇ ನೌಕರರಾಗಿಯೂ ಎರಡನೆ ಸಂಗಡದವರು ಸಮಾಧಾನವಾಗಿ ನೌಕರಿ ಸಿಗೋಣವದು ಕಷ್ಟವಾಗಿಯೂ ಪಡೆದರೂ ಅವನನ್ನು ಬಹಳ ದಿನ ಆ ಸ್ಥಳದಲ್ಲಿ ಇರಗೊಡಿಸುವದು ಕಷ್ಟವೆಂತಲೂ ಜನರು ಮಾತಾಡಿಕೊಳ್ಳುವರು ನ್ಯಾಯನಿಷ್ಠರಾದ ಅಧಿಕಾರಿಗಳು ಎಲ್ಲರನ್ನೂ ಒಂದೇ ಸಮನಾಗಿ ಭಾವಿಸುವದರಲ್ಲಿ ಸಂದೇಹವಿಲ್ಲ.

ಮಧುಗಿರಿ ತಾ॥ ಬಡವನಹಳ್ಳಿ.—ಮಳೆ ಪ್ರಾರಂಭವಾದ ಲಾಗಾಯತು ಈ ವರಿಗೆ ಒಂದೇ ಒಂದು ಪೂರಾ ಮಳೆಯಾಯಿತು. ಆಗ ಕೆಲವು ಹೊಲಗಳನ್ನು ಉತ್ತರು. ಇನ್ನು ಕೆಲವನ್ನು ಉಳಲೇ ಇಲ್ಲ ಒಂದು ತಿಂಗಳಿಂದಲೂ ಗಾಳಿ ಸಹಾ ಜಾಸ್ತಿಯಾಗಿದೆ ಮೋಡಗಳು ಯಾವಾಗಲೂ ಕವಿದುಕೊಂಡೇ ಇವೆ ಆದರೂ ಹನಿಗಳು ಬೀಳುತ್ತವೆ ಎಲ್ಲಾದರೂ ಕೊಂಚ ಜಾಸ್ತಿ ಹನಿಗಳು ಬಿದ್ದರೆ ಅಂಥಾ ಸ್ಥಳಗಳಲ್ಲಿ ಕೆಲವು ಹೊಲಗಳನ್ನು ಬಿತ್ತಿರುವರು ಇನ್ನು ಕೆಲವರು ಹೊಲಗಳನ್ನು ಹಸನು ಮಾಡುತ್ತಿರುವರು ಹೊಲಗಳನ್ನು ಬಿತ್ತಿರುವವರಿಗೂ, ಬಿತ್ತದೆ ಇರುವವರಿಗೂ ಮಳೆ ತುಂಬಾ ಅವಶ್ಯಕವಾಗಿದೆ. ಅನೇಕ ವರ್ಷಗಳಿಂದಲೂ ನೀರಿದ್ದ ಭಾವಿಗಳು ಈ ಸಾರಿ ಬತ್ತಿ ಹೋಗಿವೆ ಜಾನುವಾರುಗಳಿಗೆ ನೀರೂ ಮೇವೂ ಇಲ್ಲದ ಕಾರಣ ಗ್ರಾಮದವರು ನೀರು ಮೇವು ಇರುವ ಸ್ಥಳಗಳಿಗೆ ಬಂದಿರುವರು ಹೋದ ವರ್ಷ ಬೆಳೆಯಾಗದೆ ಇರುವದರಿಂದಲೂ, ಈ ಸಾರಿಯೂ ಬಿತ್ತನೆಯ ಕಾಲವು ಹಿಂದಾದ್ದರಿಂದಲೂ ಜನರು ಹೆದರಿ ಎಂದಿಗೆ ಮಳೆ ಬರುವದೋ ಎಂದು ಎದುರು ನೋಡಿಕೊಂಡಿರುವರು.—ನೌಲಿ ದಳನ ಹಳ್ಳಿಯಲ್ಲಿ ಕೆಲವು ತಿಂಗಳಿಗೆ ಮುಂಚೆ ಚೋರ ಆಯಿತೆಂದು ತಿಳಿಸಿದ್ದೆವು. ತಿರಿಗಿ ೭ ದಿನಗಳಿಗೆ ಮುಂಚೆ ಅಲ್ಲಿಯ ಹನುಮಂತರಾಯನ ಗುಡಿಯಲ್ಲಿ ಜೋಯಿಸರು ಇಟ್ಟಿದ್ದ ಸಾಮಾನುಗಳೂ ಬೆಳ್ಳಿಯ ಪಾತ್ರೆಗಳೂ ಅಡಿಗೆ ಪಾತ್ರೆಪದಾರ್ಥಗಳೂ ಕಳುವಾಗಿವೆ ಎಂದು ರಿಪೋರ್ಟು ಆದದ್ದರ ಮೇಲೆ ಕೊಡಿಗೇನಹಳ್ಳಿ ಸ್ಟೇಷನ್ ದಫೇದಾರರೂ ಮಧುಗಿರಿ ಜಮೇದಾರರೂ ಬಂದು ತನಿಖೆ ಮಾಡುತ್ತಿರುವರು ಕೆರೆ ಕಾಮಗಾರಿಗೆ ಬಂದಿರುವ ಒಡ್ಡರ ಗುಡಿಸಲುಗಳನ್ನೆಲ್ಲಾ ಪಕ್ಕೆ ಮಾಡುತ್ತಿರುವರು ಆದರೆ ಆಯಾ ಗ್ರಾಮಗಳಲ್ಲಿ ಗ್ರಾಮಗಸ್ತು ಕ್ರಮವಾಗಿಯೂ ವಿಚಾರಣೆಯಿಂದಲೂ ನಡೆಯುತ್ತಾ ಇದ್ದಲ್ಲಿ ಬೇರೆ ಮಟ್ಟಿಗೆ ಕಳ್ಳರಿಗೆ ಅವಕಾಶವಾಗುತ್ತಿರಲಿಲ್ಲ. ತೋಟಿ ತಳವಾರರು ಕಾವಲು ದೊಣ್ಣೆಗಳನ್ನು ಕ್ರಮವಾಗಿ ಪ್ರತಿ ಸಾಯಂಕಾಲ ಬಿಡುವಾಗ ತೂಗುವ ಕ್ರಮ ಮಾತ್ರ ಜಾರಿಯಾಗಿದೆ. ಗ್ರಾಮಗಸ್ತು ಸರಿಯಾಗಿ ನಡೆಯುವುದೋ ಇಲ್ಲವೋ ಎಂದು ವಿಚಾರಿಸಿ ಮಾಡುವ ಪಟೇಲರೂ ಷಾನಭೋಗರೂ ಕಣ್ಣಿನಿಂದ ನೋಡದಿದ್ದರೂ ಮೇಲುಕ್ಕೆ ನಡೆಸುವ ಡೈರಿಯನ್ನು ಜನಾಗಿ ನೋಡುತ್ತಿರೆನ್ನುವವರಲ್ಲಿ ಅನುಮಾನವಿಲ್ಲ ಅಭ್ಯಾಸವಿಲ್ಲದೆ ಗ್ರಾಮಾಂತರಗಳಲ್ಲಿ ಉದ್ಯೋಗಸ್ಥರ ಸಂಚಾರವು ಅಪರೂಪವಾಗಿ ಇರುವದರಿಂದ ಗ್ರಾಮ ಪೋಲೀಸು ವಿಷಯ ಗಮನಿಸುವವರೇ ಇಲ್ಲ ಸರ್ಕಾರದವರು ಈ ವಿಷಯದಲ್ಲಿ ಹೆಚ್ಚಿನ ನಿಗಾ ಕೊಡಬೇಕೆಂದು ಕೇಳಿಕೊಳ್ಳುತ್ತೇವೆ. ಶೇಕ್ದಾರರಿಗೂ ಪಬ್ಲಿಕ್ ಸರ್ಕಲ್ ಇನ್ಸ್‌ಪೆಕ್ಟರರು ಶೇಕ್ದಾರರೂ ಪಟೇಲರೂ ಗ್ರಾಮಗಳಿಗೆ ಹೋದರೂ ಇತರ ಬಾಬುಗಳು ಅವರಿಗೆ ಗೋಚರವಾಗುವವೇ ಹೊರತು ಗ್ರಾಮದ ಗಲೀಜು ಅವರ ದೃಷ್ಟಿಗೆ ಬೀಳುವುದಿಲ್ಲ. ಕಾಲಕ್ಕೆ ತಕ್ಕಂತೆ ಮಳೆಗಳು ಬಾರದಿರುವದರಿಂದ ಸಾಂಕ್ರಾಮಿಕ ಜಾಡ್ಯಗಳಿಗೆ ಇಂಥಾ ಹಳ್ಳಿಗಳು ತೌರುಮನೆಯಾಗದಂತೆ ಸರ್ಕಾರದವರು ಹೆಚ್ಚಿನ ಗಮನ ಕೊಡುವರೆಂದು ನಿರೀಕ್ಷಿಸುವೆವು ಒಂದೆರಡು ತಿಂಗಳ ಹಿಂದೆ ಸಿಡುಬಿನ ಅವಾಂತರವು ಗ್ರಾಮಾಂತರಗಳಲ್ಲಿ ಜಾಸ್ತಿಯಾಗಿತ್ತು. ಅಂಥಾ ಕಾಲದಲ್ಲಿ ಟೀಕೆ ಹಾಕಿಸುವದು ಸೂಕ್ತವಲ್ಲವೆಂದು ತಿಳಿದು ಟೀಕೆ ಹಾಕಿಸಲು ಪ್ರಯತ್ನ ಪಡಲಿಲ್ಲ. ಈಚೆಗೆ ಟೀಕೆ ಹಾಕಿಸಬೇಕೆಂದು ರೈತರು ಅಪೇಕ್ಷೆಯುಳ್ಳವರಾಗಿದ್ದರೂ ಪಂಡಿತರು ಮಾತ್ರ ಸಿಕ್ಕರು.

ಕ್ರೆಂಬಾಕ್ಸ್.—ಆಷಾಢಮಾಸದ ಗಾಳಿಯೊಂದಿಗೆ ಮೋಡವು ಕವಿಯುತ್ತಿರುವದರಿಂದ ಚಳಿ ಜಾಸ್ತಿಯಾಗಿ ಜನರು ನೆಗಡಿ ಕೆಮ್ಮಲು ಛಳಿ ಜ್ವರಗಳಿಂದ ಅಲ್ಲಲ್ಲಿ ನರಳುತ್ತಿರುತ್ತಾರೆ. ಹೊಲದಾಗಿ ಬಿತ್ತುವದಕ್ಕೆ ಅನುಕೂಲವಾದ ಮಳೆ ಇಲ್ಲದಿರುವದರಿಂದ ಜನರು ವ್ಯಸನಪಡುತ್ತಾರೆ. ಧಾರಣೆವಾಸಿಗಳು ತುಂಬಾ ಚಡಾವು ಸ್ಥಿತಿಯಲ್ಲಿವೆ ಅಕ್ಕಿ ರೂಪಾಯಿಗೆ ೬ ಸೇರು, ರಾಗಿ ೧೫ ಸೇರು, ಬೇಳೆ ೬ ಸೇರು, ಈ ಪ್ರಕಾರ ಮಾರುತ್ತಾರೆ. ಸಂತೆಯಲ್ಲೂ ಈ ಊರಿನ ಬಜಾರುಗಳಲ್ಲೂ ಜನರು ಕಮ್ಮಿ ಸೇರು ತೂಕಗಳನ್ನಿಟ್ಟು ಮಾರುತ್ತಿರುವದರಿಂದ ಜನಗಳ ನಷ್ಟಕಷ್ಟವನ್ನು ಇಮ್ಮಡಿ ಮಾಡುತ್ತಾರೆ. ನಮ್ಮ ಅಮಲ್ದಾರರು ಸಂತೆಯಲ್ಲಿ ಎರಡು ಮೂರು ಕಮ್ಮಿ ಸೇರುಗಳನ್ನು ಹಿಡಿದು ೧೦-೧೫ ರೂಪಾಯಿಗಳ ಪ್ರಕಾರ ಜುಲ್ಮಾನೆ ತೆರುವಂತೆ ಮಾಡಿದ್ದರೂ ಕೂಡ ವ್ಯಾಪಾರಿಗಳು ತಮ್ಮ ಕೃತ್ಯಗಳನ್ನು ಬಿಟ್ಟುಬಿಡದೆ ಇನ್ನೂ ಕೃತ್ರಿಮ ವ್ಯಾಪಾರವನ್ನೇ ನಡೆಸುತ್ತಾರೆ. ನಮ್ಮ ಅಮಲ್ದಾರರು ಈ ಟವನ್ನಿನ ಕೆಲವು ಅಂಗಡಿಗಳನ್ನು ಸಂದರ್ಭಾನುಸಾರವಾಗಿ ತನಿಖೆ ಮಾಡಿದರೆ ಒಂದೊಂದು ಅಂಗಡಿಯಲ್ಲಿ ಮೂರು ನಾಲ್ಕು ತರಹ ಸೇರುಗಳನ್ನು ಇಟ್ಟುಕೊಂಡು ಅಳೆಯುವದನ್ನು ಕಂಡುಹಿಡಿಯಬಹುದು.—ಈ ಊರಿಗೆ ಸುಮಾರು ಮೂರು ಮೈಲಿ ದೂರದಲ್ಲಿರುವ ನೆಲಮನೆ ಎಂಬ ಒಂದು ದೊಡ್ಡ ಗ್ರಾಮದಲ್ಲಿ ಪ್ಲೇಗ್ ಪ್ರಾರಂಭವಾಗಿ ದಿನಾ ಎರಡು ಮೂರು ಮರಣಗಳಾಗುತ್ತಿರುವದಾಗಿ ಕೇಳುತ್ತೇವೆ. ಈ ಊರಿನಲ್ಲಿಯೂ ಕೂಡ ಎರಡು ಮೂರು ಮನೆಗಳಲ್ಲಿ ಇಲಿ ಸತ್ತ ಸುದ್ದಿ ಹುಟ್ಟಿದ್ದರಿಂದ ಸರ್ಕಾರದವರು ಇಲಿ ಸತ್ತರೆ ಸರ್ಕಾರಕ್ಕೆ ತಿಳಿಸಬೇಕೆಂದು ಸಾರಿಸಿದರು.—ಕಳೆದ ವಾರ ಇಲ್ಲಿನ ಅ॥ ಪೋಲೀಸ್ ಸೂಪರೆಂಟೆಂಡರ ಅಕ್ಕಯ್ಯನವರು ಕೆಲವು ದಿನಗಳಿಂದ ಜ್ವರಪೀಡಿತರಾಗಿದ್ದು ಕಳೆದ ಆದಿತ್ಯವಾರ ರಾತ್ರಿ ಕಾಲವಾದರು. ಇಲ್ಲಿನ ಸಬ್ ಡಿವಿಜನ್ ಕೋರ್ಟಿನಲ್ಲಿ ಸಿರಸ್ತೇದಾರರಾಗಿದ್ದ ಮೆ॥ ನರಸಿಂಹಯ್ಯಂಗಾರ್ರು ಶಿವಮೊಗ್ಗೆಗೆ ಜುಡಿಷಿಯಲ್ ಹೆಡ್ ಮುನ್ಷಿಯಾಗಿ ವರ್ಗವಾದರು. ಅವರ ಬದಲು ಯಾರು ಬರುವರೋ ಇನ್ನೂ ಗೊತ್ತಾಗಲಿಲ್ಲ.—ಇಲ್ಲಿನ ಇಂಜನಿಯರ್ ನಾಲೆಗಳ ಡಿವಿಜನ್ ಆಫೀಸನ್ನು ವಜಾಮಾಡುವ ಸುದ್ದಿಯು ಈಗ ಬಹು ಬಲವಾಗಿದೆ. ಆದರೆ ನಿಜಾಂಶ ಇನ್ನೂ ಆರ್ಡರ್ ಮೂಲಕ ಗೊತ್ತಾಗಲಿಲ್ಲ. ಈ ವಿಷಯದಲ್ಲಿ ವ್ಯಾಪಾರಿಗಳೂ ಆ ಆಫೀಸಿನ ನೌಕರರೂ ತುಂಬಾ ಯೋಚನೆಯುಳ್ಳವರಾಗಿದ್ದಾರೆ.—ಇದು ಸಬ್ ತಾಲೂಕಾಗಿರುವದರಿಂದ ಇಲ್ಲಿ ಖಜಾನೆ ಇಲ್ಲ. ಈ ಕಡೆ ಪಟೇಲ್ ಷಾನುಭೋಗರಲ್ಲಿ ಕೆಲವರು ಶ್ರೀರಂಗಪಟ್ಟಣದ ಖಜಾನೆಗೆ ತಮ್ಮ ಪೋಟಿಗೆ ಹಣವನ್ನು ತೆಗೆದುಕೊಳ್ಳುವದಕ್ಕೆ ಹೋಗಿದ್ದಾಗ್ಗೆ ಅಲ್ಲಿನ ಕೆಲವು ಗುಮಾಸ್ತರ ಕಾಟವು ಬಹುವಂತವು ಜೋರಾಗಿ ಕಡೆಗೆ ಅವರು ತಮ್ಮ ಪೋಟಿಗೆ ಹಣವನ್ನು ಪಡೆಯದೆ ವಾಪಸು ಬಂದರೆಂದು ಹೇಳುತ್ತಾರೆ. ಮಾಸೋಯಾನಾ ಸಂಬಳ ಪಡೆಯುವ ನೌಕರರು ಮಾರ್ಗಕ್ಕೊಮ್ಮೆ ಅಲ್ಪ ಸ್ವಲ್ಪ ಸಂಬಳ ಪಡೆಯುವ ಬಡ ಪಟೇಲ್ ಷಾನುಭೋಗರನ್ನು ಈ ರೀತಿ ಕಾಡಿಸುವದು ತುಂಬಾ ಶೋಚನೀಯವಾದ್ದರಿಂದ ಈ ವಿಷಯಕ್ಕೆ ಅಮಲ್ದಾರರು ನಿಗಾಕೊಡುವದು ಅಗತ್ಯವಾಗಿದೆ.—ಈ ಕಡೆ ದನಗಳ ಜಾಡ್ಯವು ಇನ್ನೂ ಕಡಮೆಯಾಗದೇ ಇರುವದರಿಂದ ಇಲ್ಲಿ ದನಗಳಿಗೆ ಟೀಕಾ ಹಾಕುವದಕ್ಕೆ ಪ್ರಾರಂಭಿಸಿದ್ದಾರೆ.—ಪೋಸ್ಟ್ ಆಫೀಸುಗಳಲ್ಲಿ ಕೆಲಸ ಮಾಡುವ ಪೋಸ್ಟ್ ಮ್ಯಾನುಗಳ, ಮುಖ್ಯವಾಗಿ ಕಾಡು ಮೇಡುಗಳನ್ನು ಸುತ್ತಿಕೊಂಡು ಬರುವ ವಿಲೇಜ್ ಪೋಸ್ಟ್ ಮ್ಯಾನುಗಳ ಕಷ್ಟವೂ ಅಲೆದಾಟವೂ ಯೋಚಿಸತಕ್ಕದ್ದಾಗಿದೆ. ಅವರ ಕಷ್ಟಕ್ಕೆ ತಕ್ಕ ತಲಬು ಅವರಿಗೆ ಸಿಕ್ಕದೆ ಇರುವದರಿಂದ ಅವರು ಬಹಳ ನೋಯುತ್ತಾರೆ. ಪೋಸ್ಟಲ್ ಡಿಪಾರ್ಟುಮೆಂಟಿನಲ್ಲಿ ಉತ್ಪತ್ತಿಯು ವರ್ಷ ವರ್ಷ ಜಾಸ್ತಿಯಾಗುತ್ತಿರುವದರಿಂದ ಈ ಬಡ ನೌಕರರ ಕಷ್ಟವನ್ನು ತಮ್ಮ ಗಮನಕ್ಕೆ ತಂದುಕೊಳ್ಳುವರೆಂದು ಹಾರೈಸುತ್ತೇವೆ.

ವಿದೇಶ ವರ್ತಮಾನಗಳು.

ಪರ್ಷಿಯಾ ರಾಜ್ಯಕ್ಕೆ ಸೇರಿದ ಟೆಬ್ರಿಸ್ ಪಟ್ಟಣದಲ್ಲಿ ಸುಲ್ತಾನರ ಸೈನ್ಯಕ್ಕೂ ಪ್ರಜೆಗಳಿಗೂ ಯುದ್ಧಗಳು ನಡೆದದ್ದರಲ್ಲಿ ೧,೦೦೦ ಜನರು ಮೃತಪಟ್ಟರೆಂದು ತಂತೀವರ್ತಮಾನ ಬಂದಿದೆ.

***

ಇಂಗ್ಲಿಷ್ ಚಕ್ರವರ್ತಿಯವರು ಅವರ ಭೇಟಿಗಾಗಿ ಹೋಗಿರುವ ನೇಪಾಳ ಸಂಸ್ಥಾನದ ಮಂತ್ರಿಶ್ರೇಷ್ಠರಿಗೆ “ನೈಟ್ ಗ್ರಾಂಡ್ ಕ್ರಾಸ್ ಆಫ್ ದಿ ಬ್ಯಾತ್” ಎಂಬ ಬಿರುದನ್ನು ದಯಪಾಲಿಸಿರುತ್ತಾರೆ

***

ಚಿಲ್ಲಿ ರಾಜ್ಯದವರು ಮೂವತ್ತು ಭಾರೀ ಯುದ್ಧದ ಹಡಗುಗಳನ್ನು ವಿಲಾಯತಿಯಿಂದ ಮಾಡಿಸಿ ಕಳುಹಿಸುವಂತೆ ಅಲ್ಲಿನ ಕಂಪನಿಗಳಿಗೆ ಅಪ್ಪಣೆ ಕೊಟ್ಟಿದ್ದಾರೆ. ಅವುಗಳ ಬೆಲೆಯು ೬೦ ಕೋಟಿ ರೂಪಾಯಿ ಆಗುವುದೆಂದು ಅಂದಾಜಾಗಿದೆ

***

ಪ್ಯಾರಿಸ್ ಪಟ್ಟಣದಲ್ಲಿ ವಿಮಾನಗಳ ಜೂಜು ನಡೆಯಿತು. ಮೆ॥ ಫಾರ್ಮನ್ ಎಂಬಾತನ ವಿಮಾನವು ೨೦॥ ನಿಮಿಷಗಳಲ್ಲಿ ಹನ್ನೊಂದು ಮೈಲಿ ದೂರ ಸಂಚಾರ ಮಾಡಿ ಗೆದ್ದದ್ದರಿಂದ ಆತನಿಗೆ ೩೦,೦೦೦ ರೂಪಾಯಿ ಬಹುಮಾನ ಕೊಡಲಾಯಿತು.

***

ಜಪಾನ್ ರಾಜ್ಯಕ್ಕೆ ಸೇರಿದ ಕಾಗೋಷೀಮಾ ಎಂಬ ಊರಿನ ಸಮುದ್ರ ತೀರದಲ್ಲಿ ಮೀನುಗಳನ್ನು ಹಿಡಿದು ತರುವುದಕ್ಕಾಗಿ ಹೋಗಿದ್ದ ಐವತ್ತು ಭಾರೀ ದೋಣಿಗಳು ಬಂಡೆಗೆ ಬಡಿದು ನೀರಿನ ಪಾಲಾದವು. ದೋಣಿಗಳಲ್ಲಿದ್ದವರ ಪೈಕಿ ೩೫೦ ಮಂದಿ ಮೃತಪಟ್ಟರು,

***

ಚೀನಾ ರಾಜ್ಯಕ್ಕೆ ಸೇರಿದ ಚಾಂಗ್ ಎಂಬ ಪ್ರಾಂತ್ಯದಲ್ಲಿ ಒಂದು ಪರ್ವತದ ಬಳಿ ಭೂಮಿಯು ಕೆಲವು ಮೈಲಿಗಳ ವರೆಗೂ ಕೀಳಿಬಿಟ್ಟು, ಉದ್ದಕ್ಕೂ ಸುಮಾರು ಸಂಸಾರ ಮನೆ ಮಠಗಳನ್ನು ನುಂಗಿಕೊಂಡಿತು ಎಂಬದಾಗಿ ಷ್ಯಾಂಘಾಯಿ ಪಟ್ಟಣದಿಂದ ತಂತೀ ವರ್ತಮಾನ ಬಂದಿದೆ.

***

ಹೇಟಿದ್ವೀಪದಲ್ಲಿ ಮುಖ್ಯ ಸಮುದ್ರತೀರಪಟ್ಟಣವಾದ ಪೋರ್ಟ್ ಆಫ್ ಪ್ರಿನ್ಸ್ ನಗರದಲ್ಲಿ ಬೆಂಕಿ ಬಿದ್ದು ಒಂದು ವಾರದಿಂದ ಮನೆ ಮಠಗಳು ಉರಿಯುತ್ತಲಿವೆ. ಮೂರು ಸಾವಿರ ಕಟ್ಟಡಗಳು ನಾಶಹೊಂದಿದವು. ಸಾವಿರಾರು ಪ್ರಜೆಗಳು ನೆಲೆಯಾಗಲಿ ಆಹಾರವಾಗಲಿ ಇಲ್ಲದೆ ಕಷ್ಟಪಡುತ್ತಿದ್ದಾರೆ.

***

ಇಂಗ್ಲೆಂಡಿಗೆ ಸೇರಿದ ಆಕ್ಸ್‌ಫರ್ಡ್ ವಿದ್ಯಾನಿಲಯದಲ್ಲಿ ಬಾಲಕರಿಗೆ ವಿದ್ಯುಚ್ಛಕ್ತಿ ಶಾಸ್ತ್ರವನ್ನು ಕಲಿಸುವುದಕ್ಕೋಸ್ಕರ ಒಂದು ನಿಲಯವನ್ನು ಕಟ್ಟಿಸಿ ಅವಶ್ಯವಾದ ಯಂತ್ರಸಾಧನಗಳನ್ನು ತರಿಸಿಡುವುದಕ್ಕೆ ಡ್ರೇಪರ್ಸ್ ಎಂಬ ಕಂಪನಿಯವರು ಮೂರು ಲಕ್ಷ ರೂಪಾಯಿ ಕೊಟ್ಟದ್ದಾರೆ

***

ದಕ್ಷಿಣ ಅಮೇರಿಕಕ್ಕೆ ಸೇರಿದ ಪರಗ್ವೇ ಎಂಬ ಸ್ವತಂತ್ರರಾಜ್ಯದಲ್ಲಿ ರಾಜ್ಯಭಾರದ ವಿರೋಧ ಪಕ್ಷದವರು ಬಹು ಕಠಿಣವಾದ ಯುದ್ಧ ನಡಿಸಿ ಗವರ್ನಮೆಂಟನ್ನು ತಲೆಕೆಳಗು ಮಾಡಿದರು ಮಂತ್ರಿಗಳು ಅರ್ಜೆಂಟೈನ್ ರಾಜ್ಯದ ರಾಯಭಾರಿಯ ಬಂಗಲೆಯಲ್ಲಿ ಆಶ್ರಯವನ್ನು ಹುಡುಕಿಕೊಂಡು ಇರುತ್ತಾರೆ

***

ಕಳೆದ ಬುಧವಾರ ಅಮೇರಿಕಕ್ಕೆ ಸೇರಿದ ಬೋಸ್ಟನ್ ಪಟ್ಟಣದ ಕೊನಾರ್ಡ್ ಪಿಯರ್ ಎಂಬ ತೀರದಲ್ಲಿ ಬೆಂಕಿ ಹುಟ್ಟಿ, ಲವಿಲಾಂಡ್ ಡಾಕ್ ಎಂಬ ಭಾಗಕ್ಕೆ ಜ್ವಾಲೆಗಳು ಹಬ್ಬಿ, ಮೂವತ್ತು ಲಕ್ಷ ರೂಪಾಯಿನ ಸರಕು ಸುಟ್ಟು ಹೋಯಿತು. ಇಬ್ಬರು ಕಾಲವಾದರು ಎಂದು ತಂತೀ ವರ್ತಮಾನ ಬಂದಿದೆ.

***

ವಿಲಾಯತಿಯಲ್ಲಿ ಸರ್ ಹೆನ್ರಿ ಪಿಟ್ಮನ್ ಎಂಬ ಪ್ರಸಿದ್ಧ ವೈದ್ಯನು ಕಳೆದ ೧ ನೇ ತಾರೀಖಿನ ದಿನ ೧೦೦ ನೇ ವರುಷದ ಹುಟ್ಟಿದ ಹಬ್ಬವನ್ನು ಮಾಡಿಕೊಂಡನು. ವೈದ್ಯರಾಗಿರುವವರೆಲ್ಲಾ ಸೇರಿ ಆತನಿಗೆ ಆ ದಿನ ಒಂದು ಬಹುಮಾನವನ್ನು ಒಪ್ಪಿಸಿದರು. ಈಗಲೂ ಆತನಿಗೆ ಇಂದ್ರಿಯ ಪಾಟವಗಳೆಲ್ಲಾ ಚನ್ನಾಗಿರುವವು. ಆದರೆ ದೃಷ್ಟಿ ಮಾತ್ರ ಈಗೀಗ ಸ್ವಲ್ಪ ಮಂದವಾಗುತ್ತಿರುವುದು.

***

ವಿಲಾಯತಿಯಲ್ಲಿ ಎಪ್ಪತ್ತು ವರುಷ ವಯಸ್ಸಾಗಿರುವವರಿಗೆಲ್ಲಾ ಅವರು ನಿರ್ಗತಿಕರಾಗಿದ್ದ ಪಕ್ಷದಲ್ಲಿ ಸರ್ಕಾರದಿಂದ ಪೆನ್ಷನ್ ಕೊಡಬೇಕೆಂದು ಒಂದು ಮಸೂದೆ ಕಾನೂನಾಗಿ, ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಮೂರಾವರ್ತಿ ಪದ್ಧತಿಯ ಪ್ರಕಾರ ಚರ್ಚಿಸಲ್ಪಟ್ಟು, ಮೆಂಬರುಗಳ ಸಮ್ಮತಿಯನ್ನು ಪಡೆದಿರುತ್ತದೆ. ಈಗ ಈ ಮಸೂದೆಯು ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟಿಗೆ ರವಾನೆಯಾಗುವುದು

ಮೈಸೂರು ಗೆಜೆಟ್ ಸಂಗ್ರಹ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ॥ ಎಂ. ಹಂಪಯ್ಯ ಚೆಟ್ಟಿಯವರಿಗೆ ಜೂಲೈ ತಾ ೭ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹನ್ನೆರಡು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಮೇಲ್ಕಂಡ ಸಮಯದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅ॥ ಕಮಿಷನರ್ ಮೆ॥ ಎಂ ವೆಂಕಟ್ಯಯ್ಯನವರು ತಮ್ಮ ಇತರ ಕೆಲಸಗಳೊಂದಿಗೆ ಡೆಪ್ಯುಟಿ ಕಮಿಷನರ ಚಾರ್ಜಿ ಕೆಲಸಗಳ ಭಾರವನ್ನು ವಹಿಸಿರತಕ್ಕದ್ದು.

ಮೆ॥ ಲಕ್ಷ್ಮೀನರಸಿಂಹರಾಯರಿಗೆ ಕೊಟ್ಟಿದ್ದ ಹದಿಮೂರು ದಿನಗಳ ಪ್ರಿವಿಲೇಜ್ ರಜವನ್ನು ಅವರ ಇಷ್ಟಪ್ರಕಾರ ರದ್ದು ಮಾಡಿದೆ.

ಸೀನಿಯರ್ ಅ॥ ಕಮಿಷನರ್ ಮೆ॥ ಕೆ ಚಾಂಡಿಯವರು ಶಿವಮೊಗ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾಗಿರುವಾಗ್ಗೆ ಸಬ್ ಡಿವಿಜನ್ ಆಫೀಸರ್ ಮೆ॥ ಎಂ. ಎ. ನಾರಾಯಣ ಐಯ್ಯಂಗಾರರನ್ನು ಹಂಗಾಮಿಯಾಗಿ ಸಕಲೇಶಪುರದಿಂದ ದೊಡ್ಡಬಳ್ಳಾಪುರದ ಸಬ್ ಡಿವಿಜನಿಗೆ ವರ್ಗಮಾಡಿದೆ

ಮೆ॥ ಎಂ. ನಾರಾಯಣ ಐಯ್ಯಂಗಾರ್ರು ಮೇಲ್ಕಂಡಂತೆ ಬೇರೆ ಕೆಲಸದ ಮೇಲಿರುವಾಗ್ಗೆ ಮೆ॥ ಎಂ. ಲಕ್ಷ್ಮಣಶಾಸ್ತ್ರಿಯವರು ಅ॥ ಕಮಿಷನರಾಗಿ ಸಕಲೇಶಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸಿರತಕ್ಕದ್ದು.

ಮೆ॥ ವಿ ಮುತ್ತುಸ್ವಾಮಿದಾಸ್ ಯವರನ್ನೂ ಮೆ॥ ಎಂ ಜಗನ್ನಾಥಯ್ಯನವರನ್ನೂ ೪ ರಿಂದ ೩ನೇ ಕ್ಲಾಸ್ ಅ॥ ಸರ್ಜನರಾಗಿ ಬಡ್ತಿ ಮಾಡಲಾಗಿದೆ

ಮೆ॥ ಜೆ. ಎಸ್. ಚಕ್ರವರ್ತಿಯವರು ಜೂಲೈ ೩ನೇ ತಾರೀಖಿನಲ್ಲಿ ಕಂಟ್ರೋಲರ್ ಕೆಲಸದ ಛಾರ್ಜನ್ನು ಅ॥ ಕಂಟ್ರೋಲರ್ ಮೆ॥ ಎಂ. ಎನ್. ಕೃಷ್ಣರಾಯರಿಂದ ವಹಿಸಿಕೊಂಡಿದ್ದಾರೆ.

ಮೆ॥ ಎಂ ನಾರಾಯಣರಾಯರು ಜೂಲೈ ತಾ ೩ರಲ್ಲಿ ಎಕ್ಸೈಸ್ ಕಮಿಷನರ ಕೆಲಸದ ಛಾರ್ಜನ್ನು ಮೆ॥ ಎಚ್. ಎಚ್. ಸ್ಪಾರ್ಕ್ಸ್ ರವರಿಂದ ವಹಿಸಿಕೊಂಡರು.

ಶ್ರೀಮನ್ಮಹಾರಾಜರವರು ಮೈಸೂರು ಇಂಪೀರಿಯಲ್ ಸರ್ವಿಸ್ ಹೋರ್ಸಿನ ಕಮಿಷನ್ ದರ್ಜೆಯಲ್ಲಿ ಮುಂದೆ ಹೇಳುವ ಬಡ್ತಿಗಳನ್ನು ಜೂನ್ ತಾ ೨೫ ರಿಂದ ಹುಕುಂ ಮಾಡಿರುತ್ತಾರೆ:—

ಷೈದುಲ್ಲಾಖಾನರನ್ನು ಜಮೇದಾರಿಯಿಂದ ಡಿವಿಜನ್ ಕಮ್ಯಾಂಡರಾಗಿಯೂ, ದಾಗೋಜಿ ರಾಯರನ್ನು ದಫೇದಾರ್ ಮೇಜರಿಂದ ಜಮಾದಾರಿಗೂ ಬಡ್ತಿ ಮಾಡಿದೆ.

ಎರಡನೇ ಸ್ಟೇಟ್ ಜಿಯಾಲಜಿಸ್ಟ್ ಮೆ॥ ಇ. ಡಬ್ಲ್ಯು. ವೆದರೆಲ್ ರವರಿಗೆ ಕೊಟ್ಟಿರುವ ರಜಾ ಜೊತೆಗೆ ಇನ್ನೆರಡು ತಿಂಗಳ ಸಂಬಳವಿಲ್ಲದ ರಜಾ ಕೊಟ್ಟಿದೆ.

ಪೆರೂನಾ ಸರ್ವರೋಗ ನಿವಾರಕ ಅನ್ನಕೋಶವು

[31-16]

ಅಕ್ರಮವಾಗಿ ಇತ್ತು

ನಾನು ಹರು ಮಂದಿ ವೈದ್ಯರಿಂದ ಚಿಕಿತ್ಸೆ ಹೊಂದಿದೆನು
ನಾನು ಎಂದಿಗಾದರೂ ವಾಸಿಯಾದೇನೆಂಬ ಆಸೆ ತೊರೆದೆನು
ನಾನು ಈಗ ಹೊಸಮನುಷ್ಯನಾಗಿದ್ದೇನೆ ಪೆರೂನಾ ಮತ್ತು
ಮನಾಲಿನ್‌ಗಳನ್ನು ವಂದಿಸುತ್ತೇನೆ



ಕಾರ್ಯಪಕ್ಷ ಪತ್ರದಲ್ಲಿ ಒಬ್ಬನಿಗಾದರೂ ಹೊಟ್ಟೆಯೊಳಗಣ ಅಕ್ರಮವಿದ್ದೇ ಇದೆ ಈ ಹೊಟ್ಟೆಯ ಅಕ್ರಮದಿಂದಲೇ ಅನೇಕಾನೇಕ ವ್ಯಾಧಿಗಳ ನಾನಾ ಕಾಯಿಲೆಗಳಿಗೆ ಗುರಿಯಾಗಿರುವರೆಂದು ಧಾರಾಳವಾಗಿ ಹೇಳಬಹುದು ಅಮೇರಿಕದಲ್ಲಿ ಜೀವನ ಕಷ್ಟವಾಗಿರೋಣದರಿಂದ ಜನರು ಒಂದೇ ಸಮನೆ ಕೆಲಸ ಮಾಡಬೇಕಾಗಿರುವುದೇ ಅದಕ್ಕೆ ಮುಖ್ಯ ಕಾರಣ ವೇಗವೇಗ ಊಟಮಾಡಿದ ಮೇಲೆ ದುಗುಡು ಚಿಂತೆಗಳಿಗೆ ಗುರಿಯಾಗುವುದ ಹೊಟ್ಟೆಯಲ್ಲಿ ಖಂಡಿತವಾಗಿ ಅಕ್ರಮಗಳನ್ನು ಉಂಟುಮಾಡುತ್ತವೆ ಹೊಟ್ಟೆಯಲ್ಲಿ ಅಕ್ರಮವನ್ನುಳ್ಳವರು ಪೆರೂನಾ ವಿಷಯವನ್ನು ತಿಳಿಕೊಂಡಿರಬೇಕು. ಪೆರೂನಾ ಸೌಖ್ಯಕೊಡದೆ ತಪ್ಪುವುದು ಅಪರೂಪ ಕೆಲವು ಸಂದರ್ಭಗಳಲ್ಲಿ ಅದರ ಗುಣವು ಚಮತ್ಕಾರವನ್ನುಂಟು ಮಾಡುವುದು. ಹೊಟ್ಟೆಯ ರೋಗಗಳಿಗೆ ಪೆರೂನಾ ಒಳ್ಳೆ ಔಷಧವೆನ್ನುವುದಕ್ಕೆ ಅನೇಕರಿಂದ ಡಾಕ್ಟರ್ ಹಾರ್ಟ್‌ಮನ್‌ರಿಗೆ ಯೋಗ್ಯತಾ ಪತ್ರಗಳು ಬಂದಿರುವವು ಮಿ॥ ಜಾರ್ಜ್ ಎಚ್ ಸಿಂಸನ್ ಎಂಬುವರು ಸ್ವಂತವಾಗಿ ಇವರಿಗೆ ಒಂದು ಪತ್ರವನ್ನು ಬರೆದಿದ್ದಾರೆ

ಮಿ॥ ಜಾರ್ಜ್ ಎಚ್ ಸಿ ಸನ್, ಗ್ರಾಂಟ್ ... ಕ್ವಾರ್ ಬರೆಯುವುದು —

'ನಾನು ಹಲವರು ವರ್ಷ ಹೊಟ್ಟೆಯಲ್ಲಿ ಅಕ್ರಮವಾಗಿ ಕಾಯಿಲೆ ಅನುಭವಿಸಿದೆನು ಅರು ಜನ ಡಾಕ್ಟರುಗಳಿಂದ ಚಿಕಿತ್ಸೆ ಮಾಡಿಸಿಕೊಂಡೆನು. ಕೆಲವರಿಂದ ನನಗೆ ಸ್ವಲ್ಪ ಉಪಶಮನವಾಯಿತು ಆದರೆ ರೋಗ ನಿವಾರಣೆಯಾಗಲಿಲ್ಲ ನನಗೆ ಪಿತ್ತಕೋಶದ ರೋಗವೆಂದು ಕೆಲವರೂ ಅಜೀರ್ಣರೋಗವೆಂದು ಕೆಲವರೂ ಹೇಳಿದರು ಆಗ ನಾನು ಬಹಳ ರೋಗವನ್ನನುಭವಿಸಿ ಇನ್ನು ಎಂದಿಗೂ ವಾಸಿಯಾಗಲಾರೆನೆಂಬ ಆಸೆಯನ್ನು ತೊರೆದುಬಿಟ್ಟೆನು. ನನಗೆ ತಲೆನೋವು, ಪಲ್ಲೆನೋವು ಈ ಮೊದಲಾದ ನಾನಾ ಕಷ್ಟಗಳು ಜಾಸ್ತಿಯಾಗಿ ಅನುಭವಿಸಿದೆನು ಆ ಸಮಯದಲ್ಲಿ ನನ್ನ ಪತ್ನಿಯು ಪೆರೂನಾ ಮನಾಲಿನ್‌ಗಳನ್ನು ಸೇವಿಸುತ್ತಿದ್ದಳು ಅವುಗಳನ್ನು ಸೇವಿಸುವಂತೆ ನನ್ನನ್ನು ಬಲಾತ್ಕಾರ ಮಾಡಿ ಹೇಳಿದಳು ಆ ಔಷಧಗಳನ್ನು ಸೇವಿಸಿದೆನು ಆದರೆ ಅದರಿಂದ ವಾಸಿಯಾದೇನೆಂಬ ನಂಬಿಕೆ ಸ್ವಲ್ಪವೂ ಇರಲಿಲ್ಲ ನಾನು ಒಂದು ಬಾಟ್ಲನ್ನು ಸೇವಿಸಿದ ಮೇಲೆ ನನಗೆ ಬಹಳ ಗುಣವಾಯಿತು ಅದ್ದರಿಂದ ಬಿಡದೆ ಅವೆರಡನ್ನು ಸೇವಿಸುತ್ತಾ ಬಂದೆನು. ಹೀಗೆ ಎರಡು ಬಾಟ್ಲು ಪೆರೂನಾ, ಅರ್ಧ ಬಾಟ್ಲು ಮನಾಲಿನ್ ಸೇವಿಸಿದ ವರ್ಷದಲ್ಲಿ ನನಗೆ ನಿಜವಾಗಿ ತುಂಬಾ ವಾಸಿಯಾಯಿತು ಈಗ ನಾನು ರೋಗದ ಸಮ್ಯಕ್ ಪೆರೂನಾ ಮನಾಲಿನ್‌ಗಳನ್ನು ಹೊಗಳುತ್ತೇನೆ '

ಇಪ್ಪತ್ತು ವರ್ಷದ ಅಜೀರ್ಣವು

ಮಿ॥ ಸಿಡ್ನಿ ಪೆಲ್ಸ್ ಪೆರ್ರಿ, ಬರ್ಟ್ ಒಂಟೇರಿಯೊ, ಕ್ಯಾನಡಾ, ಈತ ಬರೆಯುವುದು — "ನಾನು ಇಪ್ಪತ್ತು ವರ್ಷಗಳು ಅಜೀರ್ಣರೋಗವನ್ನು ಅನುಭವಿಸಿದೆನು ನಾನು ಅನೇಕ ಡಾಕ್ಟರುಗಳ ಔಷಧವನ್ನು ಸೇವಿಸಿದೆನು ನನಗೆ ಯಾವುದರಿಂದಲೂ ತೃಪ್ತಿಕರವಾಗಿ ಗುಣವಾಗಲಿಲ್ಲ ಅನೇಕ ವೇಳೆ ಪಥ್ಯವಾಗಿ ಇಲ್ಲಾ ರುಚಿಯಾದ ಪದಾರ್ಥಗಳನ್ನೆಲ್ಲಾ ಬಿಟ್ಟಿರುವೆನು. ಹಾಲು ಕಾಡಿದ ದ್ರಾಕ್ಷಿ ಉಳಿಸಿಕೊಳ್ಳುತ್ತಿದ್ದೆನು. ಇನ್ನೇನು ತಿಂದರೂ ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ ನನಗೆ ಈ ರೋಗ ವಾಸಿಯಾಗುವುದಿಲ್ಲವೆಂದು ನಿರಾಶೆಯುಂಟಾಗುವಂತಾಯಿತು ಆಗ ಪೆರೂನಾ ವಿಷಯವನ್ನು ಕೇಳಿ ಅದನ್ನು ಸೇವಿಸಲಾರಂಭಿಸಿದೆನು. ಒಂದು ಬಾಟ್ಲಿಯನ್ನು ಸೇವಿಸುವುದರಲ್ಲೇ ನನಗೆ ಅನುಕೂಲವಾಯಿತು. ಇನ್ನೊಂದು ಬಾಟ್ಲು ಮುಗಿಸುವುದರಲ್ಲಿ ನನ್ನ ರೋಗವೆಲ್ಲಾ ನಿವಾರಣೆಯಾಯಿತು ಬಾಧೆ ಹೋಯಿತು ಆಹಾರದಲ್ಲಿ ರುಚಿ ಹುಟ್ಟಿತು ಸುಖವಾಗಿ ಸಂತೋಷದಿಂದ ಊಟಮಾಡುತ್ತೇನೆ ಈ ಪ್ರಪಂಚದಲ್ಲಿ ಪೆರೂನಾ ಅದ್ಭುತವಾದ ಔಷಧವೆಂದು ನಾನು ನಂಬುತ್ತೇನೆ ಈಗ ನಾನು ... ವರ್ಷದವನಾಗುತ್ತೇನೆ ಪೆರೂನಾವನ್ನು ನಾನು ಹೊಗಳದೆ ಇರುವುದು ಅಸಾಧ್ಯವೇ!"

ಒಳಹೊಟ್ಟೆಯ ಶೀತವು

ರೆವ್ ಜೆ ಟಿ ಬಿಲರ್ ಕೆಂಡ್ರಿಕ್ಸ್‌ವಿಲ್ಲ್, ದಕ್ಷಿಣ ಕ್ಯಾರೋಲಿನ ಯು ಎಸ್ ಎ, ಈತ ಬರೆಯುವುದು — 'ಪ್ರಪಂಚದ ಜನರೆಲ್ಲಾ ತಿಳಿಯುವಂತೆ ಪೆರೂನಾ ವಿಷಯದಲ್ಲಿ ನನ್ನ ಅನುಭವವನ್ನು ಹೇಳುತ್ತೇನೆ ನನಗೆ ಹೊಟ್ಟೆಯೊಳಗಣ ಕ್ರಮಕೆಟ್ಟು ಅನುಭವಿಸಿದೆನು ನಾನು ಅನೇಕ ಔಷಧಗಳನ್ನು ಮಾಡಿದೆನು. ಕೆಲವು ಡಾಕ್ಟರುಗಳಲ್ಲಿ ಕೇಳಿಕೊಂಡೆನು ಎಲ್ಲಾ ನಿಷ್ಪ್ರಯೋಜನವಾಯಿತು. ಪೆರೂನಾ ಇಲ್ಲದಿದ್ದರೆ ನಾನು ಇದುವರೆಗೆ ಸಮಾಧಿಯೊಳಗಿರುತ್ತಿದ್ದೆನು ಈ ಹೊಟ್ಟೆಯ ಕೃತ್ಯಕ್ಕೆ ಪೆರೂನಾವೇ ಪ್ರಪಂಚದಲ್ಲೇ ಉತ್ತಮವಾದ ಔಷಧವೆಂದು ನಂಬುತ್ತೇನೆ ಕಾಯಿಲೆಯಾದ ಅನೇಕರಿಗೆ ಈ ಸಂಗತಿಯನ್ನು ಹೇಳಿಯೂ ಕೇಳುತ್ತಲೂ ಬಂದಿದ್ದೇನೆ"

ಪೆರೂನಾ ಬಲಕಾರಿಯಾದದ್ದು

ಮಿ॥ ಜೆ ಇ ಕಾರ್ಸನ್, ೨೦೮ ಸೆಂಟ್ ಕ್ಲಾರೆನ್ಸ್ ಅವ್ ಟೊರಾಂಟೊ, ಕ್ಯಾನಡಾ, ಈತ ಬರೆಯುವುದು —ಪೆರೂನಾವನ್ನು ನಾನು ಸೇವಿಸಿದ್ದೇನೆ ಅದು ಪ್ರಸಿದ್ಧವಾದದ್ದು ಅದು ಗುಣಕಾರಿಯಾದದ್ದು ಅದರ ಹಾಗೆ ಬಲವನ್ನುಂಟುಮಾಡುವ ಔಷಧ ಇನ್ಯಾವುದೂ ಇಲ್ಲವೆಂದು ಹೇಳಬಲ್ಲೆನು"

ಇನ್ನು ಅಂಥಾ ಕೆಲವು ರೋಗಿಗಳು

ಮಿ॥ ಎಚ್ ಜೆ ಹೆನ್ನರ್ ಒಕ್ಲೆಂಡ್ ನೆಬ್ರಾಸ್ಕ ಯು ಎಸ್ ಎ ಈತ ಬರೆಯುವುದು —' ನನಗೆ ಒಂದು ವರ್ಷದಿಂದ ಹೊಟ್ಟೆಯ ಅಕ್ರಮ ವಿದ್ದು ಅನುಭವಿಸಿದೆನು. ಅನೇಕರು ಈ ರೋಗ ನನಗೆ ವಾಸಿಯಾಗದೆಂದು ಹೇಳಿದರು ಆದರೆ ನನಗೆ ಚನ್ನಾಗಿ ಗುಣವಾಗಿದೆ ಎಂದು ಹೇಳಬಲ್ಲೆನು ಈಗ ಯಾವತರದ ಕಾಯಿಲೆಯೂ ಇಲ್ಲ ಆಹಾರ ಚನ್ನಾಗಿ ರುಚಿಸುತ್ತದೆ ಈಗ ವೈಕುಂಠಕ್ಕೆ ಬಂದು ದನ್ನಾಗುತ್ತಿದ್ದೇನೆ ನನಗೆ ಸಂಪೂರ್ಣ ಗುಣವಾಗಿದೆ ಎಂದು ಎಲ್ಲರಿಗೂ ಹೇಳುತ್ತಿದ್ದೇನೆ ಇನ್ನು ಮುಂದೆ ಪೆರೂನಾ ನಮ್ಮ ಮನೆಯ ಔಷಧ

ಮಿ॥ ಎಚ್ ಡಬ್ಲ್ಯು ವಾಗೆಲ್ ೬೩ ಗ್ರಿಬೇಡಿ ಮೆರಿಡಿನ್ ಕ್ಯ ಯು ಎಸ್ ಎ ಈತ ಬರೆಯುವುದು — ನಾನು ಹೊಟ್ಟೆಯೊಳಗಿನ ಅಕ್ರಮದಿಂದ ಅನೇಕ ವರುಷ ಅನುಭವಿಸಿದೆನು ಅನೇಕ ಇತರ ಔಷಧಗಳನ್ನು ಸೇವಿಸಿದೆನು. ಕಡೆಗೆ ಪೆರೂನಾ ಸೇವಿಸುವಂತೆ ಸೂಚಿಸಿದರು. ಕೆಲವು ಕಾಲ ನಾನು ಗಟ್ಟಿಯಾದ ಆಹಾರವನ್ನು ತಿನ್ನಲಾರದೆ ಇದ್ದೆನು ಈಗ ಏನು ದೊರೆತರೂ ಸಂತೋಷದಿಂದ ತಿನ್ನುತ್ತೇನೆ ನಾನು ಕೆಲವು ಬಾಟ್ಲು ಪೆರೂನಾ, ಮನಾಲಿನ್‌ಗಳನ್ನು ಸೇವಿಸಿದೆನು ಈಗ ನನಗೆ ಚನ್ನಾಗಿ ವಾಸಿಯಾಗಿದೆ ಇಂಥಾ ರೋಗಿಷ್ಠರೆಲ್ಲಾ ಅದರನ್ನು ಸೇವಿಸಬೇಕೆಂದು ಸಂತೋಷದಿಂದ ಶಿಫಾರಸು ಮಾಡುತ್ತೇನೆ'

ಮಿ॥ ಸ್ಕಾರ್ಲೆಟ್ ಎಚ್ ಕ್ರೆಂಡಲ್, ಪೊಲೀಸ್ ಅಧಿಕಾರಿ ೨೦೭ ಎಸ್ ಪಿಕ್ಕಾಬೀಬಿ ಬುಲ್ವರ್ಡ್, ಕ್ಲೀವ್ಲೆಂಡ್, ಯು ಎಸ್ ಎ, ಈತನ ಹೇಗೆಂದ —" ಅನೇಕ ವರುಷಗಳ ತನಕ ನನಗೆ ತಲೆ, ಗಂಟಲು, ಹೊಟ್ಟೆಗಳಲ್ಲಿ ಅಕ್ರಮವುಳ್ಳವನಾಗಿ ಅನುಭವಿಸಿದೆನು ಅನೇಕ ವೇಳೆ ಊಟಕ್ಕೆ ಮುಂಚೆಯೂ ಊಟವಾದ ಮೇಲೂ ನನಗೆ ವಾಂತಿಯಾಗುತ್ತಿತ್ತು ನಿಮ್ಮ ಪೆರೂನಾ ಏಳು ಬಾಟ್ಲಿಯಷ್ಟು ಸೇವಿಸಿದೆನು ನನಗೆ ವಾಸಿಯಾಯಿತೆಂದು ಸಂತೋಷದಿಂದ ಹೇಳುತ್ತೇನೆ ನಾನು ಕಷ್ಟಪಟ್ಟು ಸಂತೋಷದಿಂದ ಕೆಲಸ ಮಾಡಬಲ್ಲೆನು. ನನಗೆ ಒಳ್ಳೇ ರೋಗಗಳ ಬಾಧೆ ಸ್ವಲ್ಪವೂ ಇಲ್ಲ ಎಲ್ಲರೂ ಪೆರೂನಾ ಸೇವಿಸಿ ತಮ್ಮ ದೇಹದ ಅಕ್ರಮಗಳನ್ನು ಸರಿಮಾಡಿಕೊಳ್ಳಲೆಂದು ಶಿಫಾರಸು ಹೇಳುತ್ತೇನೆ ನನ್ನ ಹಾಗೆ ರೋಗ ಅನುಭವಿಸಿ ಪೆರೂನಾದಿಂದ ಗುಣಹೊಂದಿದವರಲ್ಲದೆ ಇತರರು ಅದರ ಯೋಗ್ಯತೆಯನ್ನು ತಿಳಿಯಲಾರರು"

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ

ವಿಳಾಸ —ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೨೮-೬—೧೯೦೮ ರಿಂದ ೪—೭—೧೯೦೮ ರ ವರೆಗೆ

ಸ್ಥಳ	ಪ್ಲೇಗ್ ಆಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ಆಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	*	*	*	*
ಮೈಸೂರು ,,	87	77	14	9
ಕೋಲಾರ್ ,,	0	0	19	11
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	1	1	0	0
ಹಾಸನ ,,	6	9	23	19
ಚಿತ್ರದುರ್ಗ ,,	0	0	0	0
ಕಡೂರ್ ,	3	2	0	0
ಶಿವಮೊಗ್ಗ ,	0	0	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	97	89	56	39

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಆಷಾಢ ಬಹುಳ ತದಿಗೆ ಗುರುವಾರದಿಂದ ಆಷಾಢ ಬಹುಳ ನವಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಇಸವಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೋಲಾರ್ ಆನಿ ಮಾಸ
16	ಗುರು ‡	ತದಿಗೆ	35 33	ಧ	34 36	2
17	ಶುಕ್ರ ,	ಚೌತಿ	29 24	ಶ	30 36	3
18	ಶನಿವಾ *	ಪಂಚಮಿ	23 36	ಪೂಭಾ	26 48	4
19	ರವಿವಾ †	ಷಷ್ಠಿ	18 2	ಉಭಾ	26 52	5
20	ಚಂದ್ರ	ಸಪ್ತಮಿ	13 14	ರೇ	20 33	6
21	ಕುಜ ¶	ಅಷ್ಟಮಿ	9 9	ಅ	18-38	7
22	ಬುಧ ,	ನವಮಿ	5 54	ಭ	17 36	8

‡ ಸಂಕಷ್ಟಚತುರ್ಥಿ ಆದಿತ್ಯವಾರ * ತಿಥಿದ್ವಯಂ, ಶ್ರೀಕಾಂತ ಬಾಯರ ಪುಣ್ಯದಿನ † ಷಷ್ಠಿ ವಿಶಾಖಿ, ಮೇಲುಕೋಟೆ ಕೃಷ್ಣರಾಜಮುಡಿ ಉತ್ಸವ ಶ್ರೀ ಚಾಮುಂಡೇಶ್ವರಿ ವರ್ಧಂತ್ಯುತ್ಸವ ¶ ಅಮೃತಸಿದ್ಧಿಯೋಗ , ಮೇಲುಕೋಟೆ ಕೃಷ್ಣರಾಜಮುಡಿ ರಥ

ಪೇಟೆ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	ರೂ	೧೪ ೮-೦	೧೬-೦-೦
ಕೆಂಬತಿ ಅಕ್ಕಿ ಅವಲ್		೧೫-೦-೦	೧೫ ೧೨-೦
,, ದಪ್ಪ		೧೩ ೮ ೦	೧೫ ೮ ೦
ಜೋಳದ ಅಕ್ಕಿ		೧೩ ೮ ೦	೧೫ ೮-೦
ಸಣ್ಣಕ್ಕಿ ಅವಲ್		೧೨ ೦ ೦	೧೨ ೦ ೦
,, ದಪ್ಪ		೧೬ ೮ ೦	೧೬-೦ ೦
ತೊಗರಿ ಬೇಳೆ ಪಲ್ಲ ೧ಕ್ಕೆ		೧೬ ೦-೦	೧೪-೮-೦
,, ದಪ್ಪ		೧೫ ೮ ೦	೧೪-೦ ೦
ಕೈಬಾಗಿ ಪಲ್ಲ ೧ಕ್ಕೆ		೬ ೧೨ ೦	೭ ೦ ೦
ಕಾರಾಗಿ		೬ ೪ ೦	೬ ೧೨-೦
ಜೋಳ		೭ ೦-೦	೮ ೧೨ ೦
ಹುರುಳಿ ಪಲ್ಲ ೧ಕ್ಕೆ		೧೧-೦ ೦	೧೨-೧೨ ೦
ಬಿಳೀ ಅವರೆ		೮-೦-೦	೯-೦ ೦
ಹೆಸರು		೧೧ ೦ ೦	೧೨ ೦ ೦
ಉದ್ದು		೧೨-೮-೦	೧೨ ೧೨ ೦
ಕಡಲೆ		೧೩ ೦ ೦	೧೩ ೮ ೦
ಎಳ್ಳು ಸೆ ೧೦೦ ಕ್ಕೆ		೨೧-೮-೦	೨೬-೦ ೦
ಹುರುಳಿ		೬ ೮ ೦	೭-೪-೦
ಹರಳು ೧೦೦ ಸೇರಿಗೆ		೧೧ ೦-೦	೧೨ ೮ ೦
ಸೀಗೇಕಾಯಿ ಮಣ ೧ಕ್ಕೆ		೧ ೮-೦	೧ ೬ ೦
ಮೆಣಸಿನಕಾಯಿ		೩-೪ ೦	೩ ೮ ೦
,, ಪುಡಿ		೨-೪-೦	೨-೧೨-೦
ಬೆಲ್ಲ ದೊಡ್ಡ ಅಚ್ಚು		೫ ೦-೦	೫ ೨-೦ ೦
ಒಳ್ಳೆಣ್ಣೆ ಮಣ ೧ಕ್ಕೆ		೬ ೦ ೦	೬-೦-೦
ಹರಳೆಣ್ಣೆ ,,		೫-೮-೦	೪ ೦-೦
ಕೊಬ್ಬರಿ ಪಲ್ಲ ೧ಕ್ಕೆ		೬ ೮-೦	೬ ೦ ೦
ಉಪ್ಪು ,,		೪ ೮ ೦	೫ ೦ ೦
ಹುಣಸೇ ಹಣ್ಣು		೧-೪-೦	೧ ೦ ೦
,, ಹಳೇದು		೧-೦	೧ ೪ ೦
ತುಪ್ಪ ಮಣ ೧ಕ್ಕೆ		೧೪ ೮ ೦	೧೫ ೦ ೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ		೪ ೧೫-೦	೪ ೦-೦
ತೆಂಗಿನಕಾಯಿ ೧೦೦ ಕ್ಕೆ		೩ ೮-೦	೩ ೦ ೦
ಅಳಲೆಕಾಯಿ ಮಣ ೧ಕ್ಕೆ		೧ ೦-೦	೧-೦ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦ ೧೨-೧	೦-೧೪-೨
ಚಿನ್ನ (ಪವನ್) ಕೆಂಪು		೧೫ ೬-೦	೧೫-೭ ೦
,, ,, ಪಸುಪು		೧೫-೧೦ ೦	೧೫- ೩ ೦
,, ,, ಗಟ್ಟಿ ತೊಲ ೧ಕ್ಕೆ		೨೩ ೧೨ ೦	೨೪ ೮-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೩೫-೦-೦	೬೮ ೦-೦

Printed and Published by the Rev E W THOMPSON M A Proprietor and Manager, Wesleyan Mission Press Mysore 16/7/1908

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸರ್ ೧೯೦೮ ನೇ ಇಸವಿ ಜೂಲೈ ತಾರೀಖು ೨೩ ನೇ ಗುರುವಾರ. ಸಂಚಿಕೆ ೮

AMRUTANJAN DEPOT, 16 OAK-LANE, BOMBAY. [17-22]

೧೦೦ ಕಂಪುಪರುಪದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇವರಿಂದ—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಚಳಕಮ ಮತ್ತು ಗಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ಕ್ಕೆ ಕಿಮ್ಮತು ೦-೮-೦ ಪೋಸ್ಟು ಖರ್ಚು ೦ ೩ ೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ತುಜ್ಜಿ ವಗೈರೆ ನಾಶವಾಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦ ೩ ೦.

ಈ ಕಂಪನಿಯವರು ಹೆಚ್ಚು ಸಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು.

[illegible] ಪೇರ್ಮೆಂಟ್ಸ್ ಡಬ್ಬಿ ೧ಕ್ಕೆ	೦—೩—೦	[illegible]—ಕೆಂಗಸರ ಹೊಟ್ಟೆ ನೋವಿಗೆ	೧—೦—೦
[illegible] ಶುಭ್ರ ರಕ್ತ ಶುದ್ಧಿ	೧—೨—೦	ಪ್ರಮೇಹದ ಔಷಧ—ಪ್ರಮೇಹಕ್ಕೆ	೧—೦—೦
ಜ್ವರಹರ—ಜ್ವರಕ್ಕೆ ಬಾಟ್ಲಿ ೧ಕ್ಕೆ	೨—೧೨—೦	ಕಫಹರಿ—ಕಫ, ಕೆಮ್ಮು ಕ್ಷಯ, ಇತ್ಯಾದಿ	೧—೩—೦
[illegible]	೦—೮—೦	ಸುಂದರೀ ತೈಲ—ಮೋರೆಗೆ	೦—೮—೦
[illegible] ಸಿತ್ತಿವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೩—೦
[illegible] ಸೆನಿಕೆ ವಿಗೆ	೦—೬—೦	ಉಬಿನಾಶಕ ಎಂಟೆ ಡಬ್ಬಿ ೧ಕ್ಕೆ	೦—೮—೦
[illegible]	೦—೩—೦	ಮಾತಿನ ವಿಕಾರ	೧—೦—೦
[illegible] ಗಳಿಗೆ	೦—೨—೦	ಕಸ್ತೂರಿ ಮಾತ್ರೆ, ೫೦ ಗುಟಿಕೆ	೦—೧೦—೦
[illegible] ಶೂಲೆಗೆ	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
[illegible] ಬಾರಿಗೆ	೨—೮—೦	ರೋಮಹಾರಿ	೦—೮—೦

ವಿಳಾಸ—ವಿಲಿಯಂ ಮತ್ತು ಕಂಪನಿ. ೧೬ ಓಕ್‌ಲೇನು ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು :—"ಅಮೃತಾಂಜನ," ಮುಂಬಯಿ

ವೃತ್ತಾಂತ ಪತ್ರಿಕೆ" ಚಂದಾದಾರರಿಗೆ.

"ವೃತ್ತಾಂತ ಪತ್ರಿಕೆ" ಯ ವರ್ಷವು ಕಳೆದ ಮೇ ತಿಂಗಳ ತಾ. ೩೧ಕ್ಕೆ ಪೂರೈಸಿ, ಹಾಲಿ ವರುಷದ ಚಂದಾ ಹಣವು ಸಲ್ಲಬೇಕಾಗಿರುತ್ತದೆ ಅದಕಾರಣ ನಮ್ಮ ಏಜಂಟರುಗಳ ಮೂಲಕ "ವೃತ್ತಾಂತ ಪತ್ರಿಕೆ" ಯನ್ನು ಪಡೆಯುವ ನಮ್ಮ ಚಂದಾದಾರರೆಲ್ಲಾ ಅವರಿಗೆ ಖಂಡಿತವಾಗಿ ಅಡ್ವಾನ್ಸಿನಲ್ಲಿ ಚಂದಾ ಕಟ್ಟಿ, ಅವರಿಂದ ಕ್ರಮವಾದ ರಸೀತಿ ಪಡೆಯಬೇಕೆಂದು ಈ ಮೂಲಕ ಕೃತಜ್ಞತೆಯಿಂದ [illegible]. ಮ್ಯಾನೇಜರ್, ವೃತ್ತಾಂತ ಪತ್ರಿಕೆ"

ಸ್ಟಾಂಡರ್ಡ್ ಅಮರಕೋಶ ಪ್ರಥಮಕಾಂಡ.

56-3

ಸ್ವಾಭಿಪ್ರಾಯ ಕೆಂಪು [illegible] ಇಲ್ಲದೆ, ಸಂಸ್ಕೃತ ತಿಳಿಯದವರೂ ಸಹ ಹೋಲಿಕೆಯಿಂದ ಕಲಿಯಲು ಪಂಡಿತರಿಂದ ಪರಿಶೋಧಿಸಲ್ಪಟ್ಟ ಪ್ರಮಾಣಭೂತ (ಸ್ಟಾಂಡರ್ಡ್) ವಾದ ಪ್ರತಿ ಕನ್ನಡ ಮತ್ತು ಎ ವಿ ಸ್ಕೂಲುಗಳ ಪಾಠಕ್ಕೆ ಉಪಯುಕ್ತ ಸುಂದರಸ್ಫುಟಾಕ್ಷರ, ಗ್ಲೇಸ್ ಕಾಗದ. ಪ್ರತಿ ೧ಕ್ಕೆ ೮ ಪೈ ೧೦ ಪ್ರತಿಗಳಿಗಿಂತ ಕಡಮೆ ವಿ ಪಿ ಮಾಡುವುದಿಲ್ಲ. ಕಬೀರನ ಚರಿತ್ರೆ—ಭಕ್ತಿವಿಜಯದಲ್ಲೊಂದಾದ ಭಕ್ತಾಗ್ರಗಣ್ಯನಾದ ಈ ಮಹನೀಯನ ಚರಿತ್ರೆಯು ಸವಿಸ್ತಾರವಾಗಿ ಬರೆದಿರುವುದು ಕ್ರಯ ೩ ಆಣೆ. ಅಮರಕೋಶದ ಪ್ರಥಮಕಾಂಡದ ಒಂದೇ ಒಂದು ಕಾಪಿಯನ್ನಪೇಕ್ಷಿಸುವವರು ಈ ಪುಸ್ತಕದ ಸಂಗಡ ತರಿಸಿಕೊಂಡಲ್ಲಿ ವಿ ಪಿ. ಯಿಂದ ಕಳುಹಿಸಿಕೊಡ್ಲೇವು ಅಮರಪುಸ್ತಕವು ಬೆಂಗಳೂರಿನವರಲ್ಲಿ ದೊರೆಯಲಾರದು

ನಮ್ಮ ವಿಳಾಸ.—ವಿಕಟಪ್ರತಾಪ ಆಫೀಸ್, ಬೆಂಗಳೂರು ಸಿಟಿ, ಅಥವಾ, ಮರ್ಕಂಟೈಲ್ ಯೂನಿಯನ್, ಕೋಟೆ, ಮೈಸೂರು

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟ್."

ವ್ಯವಹಾರನಿರ್ಣಯ—ಫಿರ್ಯಾದಿಗಳ ಹಳೇ ಹಿಂದೂ ಮಹಮ್ಮದೀಯರ ಲಾಗಳು, ೬೫ ಶಾಸನಗಳು, ಇವುಗಳ ಸಂಗ್ರಹವೂ, ೯೦ ದಸ್ತಾವೇಜು, ೩೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ ಪಿ. ಸೇರಿ ೧ ರೂ. ೧೨ ಆಣೆ. [40-13]

ಕನ್ನಡ ಲಾ ರಿಪೋರ್ಟ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಂದ್ಸಲ ಹೊರಡುತ್ತದೆ. ವರ್ಷದ ಚಂದಾ ೧—೭—೦ ಮುಂಗಡ, ಯಾ, ವಿ ಪಿ ಬಿಡಿಪತ್ರಿಕೆ ೧ಕ್ಕೆ ೦—೨—೦

ಇವುಗಳನ್ನಪೇಕ್ಷಿಸುವವರು "ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯುವುದು

ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) . . . . . ರೂ. ೧—೨—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ ರೂ ೧—೧೩—೦

" " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬಾಪತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ :—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಮಹಾ ಬಾಧಾಪಹಾರಿಣಿಯು.

49-9

ಇದನ್ನು ಹೋಲುವುದು ಪ್ರಪಂಚದಲ್ಲಿ ಇಲ್ಲವು.

ಶ್ಲೋಮೆಂಟ್‌ಯವರ ಯುಕ್ತಿಯೀ ರಚನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಶಾಸ್ತ್ರಿಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಾರೆ, ಈ ರಸಾಯನವನ್ನು ಉಪಯೋಗಿಸಿದ ಮಾತ್ರಕ್ಕೇ ತಲೆನೋವು, ವಾಯುನೋವು, ಚಳಿ, ಗಂಟ್ಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಉಳುಕಿದ ನೋವು, ಹಲ್ಲುನೋವು ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಶ್ಲೋಮೆಂಟ್‌ಯವರ ಈ ಅಮೋಘವಾದ ತೈಲವು ರೋಗವಿರುವ ಸ್ಥಳದ ಮಾಂಸಖಂಡವನ್ನು ವ್ಯಾಪಿಸಿ, ಅದರ ಮುಟ್ಟುವಿಕೆಯೇ [illegible]. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ [illegible] ತೈಲವು ಬೇರೊಂದಿಲ್ಲವೆಂದು ಹೊಗಳುತ್ತಾರೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೩ ಆಣೆ. ಆದರೆ ೬ ಅಥವಾ ಹೆಚ್ಚು ಬಾಟ್ಲಿ [illegible] ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇಸಲ ತರಿಸಿಕೊಳ್ಳುವವರಿಗೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸನ್,

೩೩, ಪೇಚಮುಲಪಿಳ್ಳೆ ಬೀದಿ. ಪೇಟೆರಿ, ಮದರಾಸ್.

ಜ್ವರಹರಿ.

44 12

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಆನ್ನಾಸಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಟಲೇ ಬೇಳುತ್ತಿರುವುದರಿಂದ ದಯಮಾಡಿ ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ :—ಸೀಸೆ ೧ಕ್ಕೆ ೮ ಆಣೆ ೧ ರೂ ; ೧—೮ ರೂ., ರೂ ೨—೧೨ ಅ. ; ೧೧ ರೂ. ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಉಬ್ಬುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಮ್ಮ ಓಮಂ ಕರ್ಪೂರವನ್ನು ನಾನೂ ನನ್ನ ಜವಾನದಾರರೂ ಪ್ರ್ಯಾಕ್ಟಿಸಿಸಲು ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ :—

ಚೆನ್ನಿಯಾರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

58 4

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಶರ್ಟ್ಸ್ ಬಟ್ಟೆಗಳು ಸಾಬೂನಿಗಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂಥವುಗಳಾಗಿವೆ ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ಐದು ಆಣೆಯಿಂದ ೬॥ ಆಣೆ ವರಿವಿಗೂ ಟಿಲ್ಲರೆಯಾಗಿ ಯಾಗಲೀ ಟೋಕಾಗಿ ಯಾಗಲೀ ಮಾರಲ್ಪಡುತ್ತವೆ ಶಾಲುಗಳು, ಹಾಸನದ ಟೋಪಿಗಳು, ಮಖಮಲಿನ ಟೋಪಿಗಳು, ಜೋಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-23

೧ ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಕವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು. ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವೆ, ಜ್ವರ, ಸಣ್ಣಜ್ವರ, ಕೃಕ್ಷ್ಯಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನವತ್ತು ಔಷಧದ ಸಂಗಡಲೇ ಇರುತ್ತದೆ.

೨೦೦ ಮಾತ್ರೆಯುಳ್ಳ ಕುಪ್ಪಿಗೆ ೬ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೬ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2 80

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಖೋಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾಪದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರ ಬರೆದು ತರಿಸಿಕೊಳ್ಳಿ. ಅಗ್ಗವಾದ ದಪ್ಪ ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ.; ೧ ರೂ ೬ ಆ., ೧ ರೂ. ೪ ಆ.

ರೇಷ್ಮೆ ಪಟ್ಟಿಯುಳ್ಳ ಟೋಪಿಗಳು ೧ ರೂ. ೮ ಆ; ೨ ರೂ

ಜರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ.; ೧ ರೂ. ೬ ಆ.

ಉಣ್ಣೆಯ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಜೋಸುಗಳ ಟೋಪಿ, ಸೂರ್ಥಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

1-30



ಶೂಲೆ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನು ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಲ್ಪಟ್ಟಿಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ನಿಮಗೆ ಸುಪೀರಿಯರ್ ಉಲ್ ಬೇಕೇ?

ನಿಮಗೆ ದಪ್ಪದ ಉಲ್ ಬೇಕೇ?

117 10

೧೦ ಟೋಪಿ ಯಾಗುವ ಸುಪೀರಿಯರ್ ಉಲ್ ಬಂಡಲಿಗೆ	೩-೮-೦
ವಿಶಾಡಿಯಂ ಉಲ್ ಪೌಂಡು ೧ಕ್ಕೆ	೨-೮-೦
೧೦ ಟೋಪಿಯಾಗುವ ದಪ್ಪದ ಉಲ್ ಬಂಡಲಿಗೆ	೩-೬-೦
ಸತ್ಯಪಿಡಯು ಹೇರ್ ಆಯಿಲ್ ಸೀಸೆಗೆ	೧-೦-೦

ಪೇಕ್ಯಾಂಡವುಗಳನ್ನು ವಿ. ಪಿ. ಯಿಂದಲೂ ರವಾನಿಸುತ್ತೇವೆ.

ವಿಳಾಸ-ಪ್ರೊಪ್ರೈಟರ್, ದಿ ಉಲ್ಲನ್ ಮಾರ್ಟ್, ಮಂಗಳೂರು.

ದೇಶಬಾಂಧವರೇ! ಪ್ರೀತಿಯಿಂದ ಲಾಲಿಸಿ!

57-2

ನಾಗಪುರ ಸೀರೆಗಳು ಗಟ್ಟಿಯಾದ ಕೆಂಪು ಅಥವಾ ಕಪ್ಪು ಬಣ್ಣದ ೧೬ ಮೊಳದುದ್ದ ೨॥ ಮೊಳದಗಲ ಮಧ್ಯದಲ್ಲಿ ಬಿಳಿಯ ಚುಕ್ಕೆಯುಳ್ಳ ಹುವ್ವುಗಳಿಂದ ಕೂಡಿದ್ದು ರೂ ೩-೬ ಆಣೆ, ಸಾದಾ ಸೀರೆ ರೂ ೨-೮ ಆಣೆ ಬಹಳ ನಯವಾದ ಮತ್ತು ಅಂಚು ಸೆರಗುಗಳಲ್ಲಿ ಸಾಚಾ ಬೆಳ್ಳಿಯ ಕಲಾಬತ್ತಿನ ಪರಕಾರಿಯವು ರೂ. ೮. ರೂ ೧೦ ಕೋಟಾ ಜರತಾರಿಯವು ರೂ ೫ ಮದ್ರಾಸ್ ಸೀರೆಗಳು ಬಿಳಿಯ ರೇಷ್ಮೆಯ ೬ ರುಮಾಲು ಅಂಚು ಕೆಂಪು ಹಳದಿ ರೇಷ್ಮೆಗಳ ೧॥ ಮೊಳದ ೨ ಸೆರಗುಗಳು ಉದ್ದ ೧೮ ಮೊಳ, ಅಗಲ ೨॥ ಮೊಳ ಕಪ್ಪು ಅಥವಾ ಊದಾ (ಕೆಂಪು) ಬಣ್ಣದವು ರೂ ೬ ಬಹಳ ಉತ್ತಮ ನೂಲು ಆಸ್ಸಾಂ ಬಿಳಿಯ ರೇಷ್ಮೆಯ ಅಂಚು ೨ ಮೊಳದ ರೇಷ್ಮೆಯ ಸೆರಗುಗಳ ಬಹಳ ಖಾತರಿ ಬಣ್ಣ ೨ ಅಂಗುಲದಂಚಿನದಕ್ಕೆ ರೂ ೯।। ೩ ಅಂಗುಲದಂಚು ರೂ ೧೦।. ಮೇಲುಕೋಟೆ ೩ ಬೆಟ್ಟಗಲದಂಚಿನ ಪಂಚೆಗಳು ಶುದ್ಧ ರೇಷ್ಮೆ ಅಂಚನ್ನು ವಿಚಾರಿಸುತ್ತೆ ೮ ಮೊಳದ ಜತೆ ರೂ ೩ ಶುದ್ಧ ಚೀರಿ ರೇಷ್ಮೆಯ ವಸ್ತ್ರಗಳು. ೨ ಮೊಳದಗಲ ಸೊಗಸಾದ ಕೆಂಪು ರೇಷ್ಮೆಯವು ೬ ಮೊಳದ್ದು ರೂ ೫. ಶುದ್ಧ ಉಣ್ಣೆಯ ಹೊಸ "ಬ್ಲಾಂಕೆಟ್" ಬಾರ್ಡರ್ಸ್ ಉದ್ದ ೯೦ ಅಗಲ ೬೮ ಅಂಗುಲ ರೂ ೬ ೨ನೆಯ ತರ ರೂ ೬. ವಿಳಾಸ -ರಾವ್ ಎಂಪೋರಿಯಂ, ಸೈದರಾಬಾಂ ರೋಡ್, ವೇಪೇರಿ, ಮದ್ರಾಸು.

ಮಕ್ಕಳ ಹಿತಕಾರಿ

ಎಂದು

SCOTT'S EMULSION 33-17

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದಾರೆ ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು; ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಈ ವಿಶೇಷಮುದ್ರೆಯುಳ್ಳ ಔಷಧವನ್ನೇ ಕೇಳಿಕೊಳ್ಳಿ

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ—ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮನವು, ಸೆತ್ರಾಣ, ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರಶರ್ಕರವ, ವಾಯು ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [93-47]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವವು.



ರೂ ೨—೧—೦ ಅಥವಾ ೬ ಬುಡ್ಡಿಗಳಿಗೆ ರೂ. ೧೦ ೮ ೦, ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೩೦, ಬೊಂಬಾಯಿ ಇವರಲ್ಲಿ ದೊರೆಯುವುದು

ವೃತ್ತಾಂತ ಪತ್ರಿಕೆ

—.o:—

೨೯ ೧೯೦೮ ನೇ ಇಸವಿ ಜೂಲೈ ತಾ॥ ೨೩ ನೇ ಗುರುವಾರ

ಸತ್ಯವನ್ನು ನುಡಿಯುವುದು.

ಲಾರ್ಡ್ ಕ್ರೋಮರ್ ಎಂಬ ಇಂಗ್ಲಿಷ್ ಸರದಾರರು ಈಜಿಪ್ಟ್ ರಾಜ್ಯದಲ್ಲಿ ಅನೇಕ ವರುಷಗಳ ತನಕ ಗವರ್ನರಾಗಿದ್ದುಕೊಂಡು ಆ ದೇಶವನ್ನು ಪರಿಪಾಲನೆ ಮಾಡಿ, ಶಾಶ್ವತವಾದ ಕೀರ್ತಿಯನ್ನು ಪಡೆದು ವಿಲಾಯತಿಯಲ್ಲಿ ವಿಶ್ರಾಂತಿ ಸುಖವನ್ನು ಅನುಭವಿಸುತ್ತಲಿದಾರೆ. ಈ ಸರದಾರರಿಗೆ ಈಜಿಪ್ಟಿನ ಪ್ರಜೆಗಳು ಬಹಳ ಕೃತಜ್ಞರಾಗಿರತಕ್ಕದ್ದಾಗಿದೆ. ಯಾಕಂದರೆ ಅವರು ಗವರ್ನರಾಗುವುದಕ್ಕೆ ಮೊದಲು ಈಜಿಪ್ಟ್ ರಾಜ್ಯದಲ್ಲಿ ಪ್ರಜೆಗಳು ನೆಮ್ಮದಿಯನ್ನು ಕಾಣದವರಾಗಿದ್ದರು; ಜಗಳ ಕದನಗಳೂ ರಾಜೀಕಗಳೂ ರಕ್ತಪ್ರವಾಹಗಳೂ ಆಗಾಗ್ಗೆ ಪ್ರಾಪ್ತವಾಗುತ್ತಾ, ಜನಗಳ ಕ್ಷೇಮಾಭಿವೃದ್ಧಿಗೆ ತುಂಬಾ ಕುಂದಕವುಂಟಾಗಿತ್ತು ಆದರೆ ಲಾರ್ಡ್ ಕ್ರೋಮರ್ ಯವರು ಬಹಳ ಕಾಲ ತುಂಬಾ ಸಾಹಸಪಟ್ಟು ಪ್ರಜಾ ನೆಮ್ಮದಿಯನ್ನು ಸ್ಥಾಪಿಸಿದರು. ಪ್ರಜೆಗಳ ಮಾನ ಪ್ರಾಣ ಧನಗಳಿಗೆ ಯಾವ ಲೋಪವೂ ಉಂಟಾಗದಂತೆ ಕಟ್ಟಳೆ ಕಾನೂನುಗಳನ್ನು ರೂಢಿಗೆ ತಂದರು ಜಮೀನಿನ ಕಂದಾಯವನ್ನು ಇಷ್ಟೆಂದು ನಿರ್ಧರಮಾಡಿ ವಸೂಲ್ಮಾಡುವಂತೆಯೂ, ರೈತನು ದಿನೇ ದಿನೇ ಅಭಿವೃದ್ಧಿಗೆ ಬರುವಂತೆಯೂ ಏರ್ಪಾಡು ಮಾಡಿದರು. ಆ ರಾಜ್ಯದಲ್ಲಿ ನಿಷ್ಪ್ರಯೋಜನವಾಗಿ ಹರಿದುಹೋಗುತ್ತಿದ್ದ ನೈಲ್ ಎಂಬ ಮಹಾನದಿಗೆ ಅನೇಕ ಕಡೆಗಳಲ್ಲಿ ಲೋಕೋತ್ತರವಾದ ಅಣೆಕಟ್ಟುಗಳನ್ನು ಹಾಕಿ, ಸಾವಿರಾರು ಮೈಲಿಗಳ ದೂರ ನದಿಯ ನೀರನ್ನು ನಾಲೆಗಳ ಮೂಲಕ ಬಂಜರು ಭೂಮಿಗಳ ಮೇಲೆ ಹಾಯಿಸಿ, ಕಳಕಳಿಸುವ ಪೈರುಗಳನ್ನು

ಆಧಾರವಾಗಿ ಬೆಳೆಯುವಂತೆ ಮಾಡಿರುತ್ತಾರೆ. ಅದಕಾರಣ ಈಜಿಪ್ಟಿನ ಜನರು ಅವರ ಹೆಸರನ್ನು ಚಿರಕಾಲ ಕೊಂಡಾಡುವಂತಾಯಿತು.

ಇಂಥಾ ಮಹನೀಯರಾದ ಲಾರ್ಡ್ ಕ್ರೋಮರ್ ಯವರು ವಿಲಾಯತಿಯಲ್ಲಿ ಹಿಂದಿನ ವಾರ ಒಂದು ಪಾಠಶಾಲೆಗೆ ಹೋಗಿದ್ದಾಗ ಅಲ್ಲಿನ ವಿದ್ಯಾರ್ಥಿಗಳನ್ನು ಕುರಿತು ಒಂದು ಭಾಷಣವನ್ನು ಮಾಡಿದರು. ಅಗ್ಗ ಅವರು ಆ ಹುಡುಗರಿಗೆ ತಿಳಿಸಿದ ಮೂರು ವಿಷಯಗಳ್ಯಾವವೆಂದರೆ—"ಆಲಸ್ಯಪಡದೆ ಯಾವಾಗಲೂ ಚಟುವಟಿಕೆಯಾಗಿರಿ; ಸಭ್ಯರೂ ಸಂಯಮಿಯುಳ್ಳವರೂ ಆಗಿರಿ; ಮತ್ತು ಸರ್ವ ಕಾಲದಲ್ಲೂ ಸತ್ಯವನ್ನೇ ನುಡಿಯಿರಿ." ಈಗ ನಾವು ಈ ಮೂರನೆಯದಾದ ಯಥಾರ್ಥತ್ವವನ್ನು ಕುರಿತು ಸ್ವಲ್ಪ ಮಟ್ಟಿಗೆ ಪ್ರಸ್ತಾಪಮಾಡುವೆವು. ಯಾವ ಸಂದರ್ಭದಲ್ಲಾಗಲಿ ಸುಳ್ಳು ಹೇಳುವುದು ಒಳ್ಳೇದೆಂದು ಒಪ್ಪಬಹುದೇ? ಹಿಂದುಗಳ ಶಾಸ್ತ್ರ ವಚನಗಳನ್ನು ನೋಡಿದರೆ ಕೆಲವು ಸಂದರ್ಭಗಳಲ್ಲಿ ಸುಳ್ಳು ಹೇಳಿದರೂ ಚಿಂತೆಯಿಲ್ಲವೆಂದು ಅವು ತಿಳಿಸುತ್ತವಲ್ಲಾ! ನಾವಾದರೋ ಎಂಥಾ ಸಂದರ್ಭದಲ್ಲೂ ಸುಳ್ಳು ಹೇಳುವುದು ಎಷ್ಟು ಮಾತ್ರಕ್ಕೂ ಯೋಗ್ಯವಾದದ್ದಲ್ಲವೆಂದು ಖಂಡಿಸಿ ಹೇಳುವೆವು. ಜನರು ಸುಳ್ಳು ಹೇಳುವುದಕ್ಕೆ ಎರಡು ಮುಖ್ಯ ಕಾರಣಗಳಿರುತ್ತವೆ. ಹೆದರಿಕೆ ಅಥವಾ ಭೀತಿಯೇ ಮೊದಲನೆಯ ಕಾರಣ. ಹೊಡಿಯುತ್ತಾರೆಂಬ ಹೆದರಿಕೆಯಿಂದ ಮಗುವು ಸುಳ್ಳು ಹೇಳಲಾರಂಭಿಸುತ್ತದೆ; ದುಷ್ಕಾರ್ಯ ಮಾಡಿದವನನ್ನು ಹಿಡಿದು ವಿಚಾರಿಸ್ಟಿ ಮಾಡುವಾಗ್ಗೆ ಅವನು ಶಿಕ್ಷೆಯ ಭೀತಿಯಿಂದ ಸುಳ್ಳು ಹೇಳುವನು. ಎರಡನೆಯದಾಗಿ, ಯಾವುದೋ ಒಂದು ಅನುಕೂಲವೋ, ಪ್ರಯೋಜನವೋ, ಲಾಭವೋ ಉಂಟಾಗುವುದೆಂಬ ದುರಾಶೆಯಿಂದ ಜನರು ಸುಳ್ಳು ಹೇಳಲುಕ್ತಿಸುವರು.

ಅವರ ಯಾವ ಸಂಗಡ, ಜಾತಿ, ಅಥವಾ ಜನಾಂಗಗಳಲ್ಲಾಗಲಿ ಸುಳ್ಳು ಹೇಳುವುದು ಸಾಮಾನ್ಯವಾದ ಪಕ್ಷದಲ್ಲಿ ಅಂಥಾ ಸಂಗಡ, ಜಾತಿ, ಅಥವಾ ಜನಾಂಗಗಳು ಬಲಹೀನವಾಗಿ ಕ್ಷೀಣಗತಿಗೆ ಬರುವುದು ಖಂಡಿತ. ಅಗ್ಗ ಜನರು ಒಬ್ಬರನ್ನೊಬ್ಬರು ನಂಬುವುದಿಲ್ಲ. ಅಪನಂಬಿಕೆಯೂ ಸಂಶಯವೂ ಪ್ರಬಲವಾಗುವವು. ಸುಮಾರು ನೂರು ವರುಷಗಳ ಹಿಂದೆ ಜೋನಾಥನ್ ಶಿಷ್ಟಾಚಾರ ಸೇರಿದ ಮಹನೀಯರ ದೇಶದಲ್ಲಿ ಒಬ್ಬ ಇಂಗ್ಲಿಷ್ ಪಾದ್ರಿಯಾಗಿದ್ದನು. ಈತನು ಇಂಗ್ಲೆಂಡಿನಿಂದ ಅಲ್ಲಿಗೆ ಹೊಸ ಚಿಕ್ಕವಯಸ್ಸಿನ ಒಬ್ಬ ಮಿತ್ರನಿಗೆ ಹೇಳಿಕೊಟ್ಟ ಬುದ್ಧಿಮಾತುಗಳೇನೆಂದರೆ—"ಇಲ್ಲಿನ ಜನರ ವಿಷಯದಲ್ಲಿ ನೀವು ಯಾವಾಗಲೂ ಸತ್ಯವಂತರಾಗಿಯೂ ಮುಚ್ಚುಮರೆ ಇಲ್ಲದವರಾಗಿಯೂ ಇರಬೇಕು. ಯಾವ ಸಂದರ್ಭದಲ್ಲಾದರೂ ನಿಮ್ಮ ನಡವಳಿಕೆಯು, ಕೃತ್ರಿಮವಾದದ್ದಾಗಲಿ ಸಂಶಯಯುಕ್ತವಾದದ್ದಾಗಲಿ ತಿಳಿದುಬಂದರೆ ನಿಮ್ಮ ಕಾರ್ಯವೆಲ್ಲಾ ಕೆಟ್ಟುಹೋಯಿತು."

ಮಹಾಪುರುಷರ ಚರಿತ್ರೆಯನ್ನು ರಚಿಸಿರುವಂಥಾ ಕ್ಯಾಪ್ಟನ್ ಡಿ. ಎ. ಗಾರ್ನ್ "ಕೃತ್ರಿಮವೂ ಸುಳ್ಳೂ ಎಷ್ಟೇ ಸೂಕ್ಷ್ಮವಾದದ್ದಾಗಿಯೂ ಯುಕ್ತಿಯುಳ್ಳದ್ದಾಗಿಯೂ ಇದ್ದಾಗ್ಯೂ, ಮನಸ್ಸು ಮಾತು ಪಡತೆಗಳಲ್ಲಿ ಸತ್ಯವಾಗಿರುವುದಕ್ಕಿಂತಲೂ ಅವು ಬಲಹೀನವಾಗಿಯೂ ಕ್ಷುಲ್ಲಕವಾಗಿಯೂ ಇರುತ್ತವೆ ಎಂದು ಚರಿತ್ರೆಯು ಕಲಿಸಿಕೊಡುವುದಾಗಿದೆ ಎಂದು ತಿಳಿಸಿದ್ದಾನೆ. ಮತ್ತು ಇಂಗ್ಲೆಂಡಿನಲ್ಲಿ ಬಹಳ ರೂಢಿಗೆ ಬಂದಿರುವ ಒಂದು ಮಾತನ್ನು ಈ ಸಂದರ್ಭದಲ್ಲಿ ಸೂಚಿಸಿ ಮೈಸೂರು ಸಂಸ್ಥಾನದೊಳಗಿರುವ ಪ್ರತಿ ಒಬ್ಬ ಪೋಷಕನೂ ಬೋಧಕನೂ ಅದರಂತೆ ನಡೆಯುವವನಾಗಲಿ ಎಂದು ಹಾರೈಸುತ್ತೇವೆ — "ನಿಜ ಹೇಳುವುದನ್ನೇ ನಿಮ್ಮ ಮಕ್ಕಳಿಗೆ ಬಾಲ್ಯದಿಂದಲೂ ಕಲಿಸಿ ಅಭ್ಯಾಸಮಾಡಿಸಿ; ಸುಳ್ಳು ಹೇಳಿದ್ದನ್ನು ಕಂಡ ಒಡನೆಯೇ ಅವರನ್ನು ಶಿಕ್ಷಿಸುತ್ತಾ ಬನ್ನಿ." ಲಾರ್ಡ್ ಕ್ರೋಮರ್ ಯವರು ಇಟ್ಟುಕೊಂಡಿರುವ "ಯಾವಾಗಲೂ ನಿಜವನ್ನೇ ಹೇಳಬೇಕು" ಎಂಬ ಮೇಲ್ಪಂಕ್ತಿಯನ್ನು ನೀವೂ ಮೇಲ್ಪಂಕ್ತಿಯಾಗಿಟ್ಟುಕೊಂಡು ಅದರಂತೆ ಅನುಸರಿಸುತ್ತಾ ಬನ್ನಿ.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಕಳೆದ ವಾರದಿಂದ ಬಿರುಸಾದ ಶೀತಗಾಳಿ ಬೀಸುತ್ತಲೂ ಆಗಾಗ್ಗೆ ಸೋನೆ ಮಳೆ ಸುರಿಯುತ್ತಲೂ ಇದೆ. ಆದರೆ ಪ್ರಜಾ ಆರೋಗ್ಯವು ತೃಪ್ತಿಕರವಾಗಿರುವುದು.

***

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಉರಿಗದ ಗಣಿಯೊಳಗೆ ಒಬ್ಬ ಕೂಲಿಯವನು ಕಳೆದ ವಾರ ಕೆಲಸಮಾಡುತ್ತಿರುವಾಗ ಮೇಲಿನಿಂದ ಒಂದು ಮರದ ತುಂಡು ಬಿದ್ದು ತಕ್ಷಣ ಮೃತಪಟ್ಟನು.

***

ಬೆಂಗಳೂರು ಕೋಟೆಯೊಳಗೆ ಪೊಲೀಸ್ ಸೂಪರೆಂಟರ ಆಫೀಸಿಗೂ ಸೆಂಟ್ರಲ್ ಸ್ಟೇಷನಿಗೂ ಉಪಯೋಗವಾಗುವಂಥಾ ಒಂದು ಕಟ್ಟಡವನ್ನು ಕೂಡಲೇ ಕಟ್ಟಲಾರಂಭಿಸಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿರುತ್ತಾರೆ.

***

ಕೋಲಾರ್ ಚಿನ್ನದ ಗಣಿಗಳಲ್ಲಿ ಪೊಲೀಸ್ ಆಫೀಸರುಗಳಾಗಿರುವ ಯೂರೋಪಿಯನ್ನರೆಲ್ಲಾ ಎರಡು ವರ್ಷಗಳೊಳಗಾಗಿ ಕನ್ನಡ ಭಾಷೆಯನ್ನು ಕಲಿತುಕೊಳ್ಳಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

***

ಚಾಮರಾಜನಗರದ ತಾಲ್ಲೂಕು ಕುದೇರು ಗ್ರಾಮದಲ್ಲಿ ಕೆಲವರು ಸೇರಿ ಒಂದು ಪರಸ್ಪರ ಸಹಾಯಕ ಸಂಘವನ್ನು ಏರ್ಪಡಿಸಿಕೊಂಡಿದ್ದಾರೆ. ಈ ಸಂಘದವರು ಅಮೇರಿಕದ ಮೂರು ನೇಗಿಲುಗಳನ್ನು ಕೊಂಡು ತರಿಸಿ, ಅಲ್ಲಿನ ರೈತರಿಗೆ ಬಾಡಿಗೆಗೆ ಕೊಡುತ್ತಿರುವರು.

***

ಮಿಸ್ ಹಾರ್ಟ್ ಎಂಬೊಬ್ಬ ಅಮೇರಿಕದ ಸ್ತ್ರೀಯನ್ನು ಸರ್ಕಾರದವರು ಮೈಸೂರು ಮಹಾರಾಣಿಯವರ ಕಾಲೇಜಿನಲ್ಲಿ ಹೆಣ್ಣು ಮಕ್ಕಳಿಗೆ ಕಿಂಡರ್‌ಗಾರ್ಟನ್ ವಿದ್ಯೆಯನ್ನು ಕಲಿಸುವುದಕ್ಕೋಸ್ಕರ ಒಂದು ವರುಷದ ವರೆಗೆ ನೇಮಕ ಮಾಡಿದರು. ಆಕೆ ಈ ತಿಂಗಳ ಪ್ರಾರಂಭದಿಂದ ಪಾಠಗಳನ್ನು ಹೇಳಿಕೊಡುತ್ತಾ ಬಂದಿದ್ದಾರೆ.

***

ಕಳೆದ ಶನಿವಾರ ರಾತ್ರಿ ೧೦ ಗಂಟೆಯ ಹೊತ್ತಿನಲ್ಲಿ ಕೋಲಾರದಿಂದ ಅ॥ ಕವಿಯಾರ್ಯರವರು ಬೌರಿಂಗ್ ಪೇಟೆಗೆ ಹೋಗಲು ರೈಲ್ವೆ ಸ್ಟೇಷನಿಗೆ ಹೋಗುತ್ತಿದ್ದಾಗ ಏಳು ಜನ ಕಳ್ಳರು ಅವರನ್ನು ತಡೆದು ಕಳವು ಮಾಡಬೇಕೆಂದು ಕಲ್ಲು ಎಸೆಯುತ್ತಾ ಬಂದರು. ಆದರೆ ಅವರ ಬಳಿ ಇದ್ದ ಪಿಸ್ತೂಲನ್ನು ಟಾಮಾರ್ಡಿ ೨–೩ ಸಲ ಹೊಡೆದಾಗ ಕಳ್ಳರು ಚದರಿಹೋದರು.

***

ರಾಜಧಾನಿಯ ಪ್ಲೇಗ್ ಕ್ಯಾಂಪಿನಲ್ಲಿ ಕಳೆದ ಹತ್ತು ವರುಷಗಳಿಂದಲೂ ಪ್ಲೇಗ್ ರೋಗಿಗಳಿಗೆ ಚಿಕಿತ್ಸೆ ಮಾಡುತ್ತಿದ್ದ ನೌಕರನು ಕಳೆದ ವಾರ ಇಬ್ಬರು ರೋಗಿಗಳನ್ನು ಚಿಕಿತ್ಸೆ ಮಾಡುವಾಗ್ಗೆ ಅವನಿಗೇ ಆ ರೋಗ ತಗಲಿ, ಪ್ಲೇಗ್ ಗಡ್ಡೆ ಬಂದು ನಲ್ವತ್ತು ಗಂಟೆಯೊಳಗಾಗಿ ತೀರಿ ಹೋದನು. ಈಗ ಪಾಂಡ್ಯದ ಒಬ್ಬ ಪೊಲೀಸಿನವನು ಪ್ಲೇಗ್ ತಗಲಿ ಆ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾನೆ.

***

ಮಡಿಕೇರಿಯಲ್ಲಿರುವ ರಾಯಬಹದೂರ್ ಮೆ॥ ಸಿ. ಸೋಮಯ್ಯನವರು ಸುಮಾರು ೩,೫೦೦ ರೂಪಾಯಿ ಖರ್ಚುಮಾಡಿ ಅಲ್ಲಿ ಒಂದು ಉದ್ಯಾನವನವನ್ನೂ ಅದಕ್ಕೆ ಸುಂದರವಾದ ದ್ವಾರವನ್ನೂ ಮಾಡಿಸಿ ಕೊಟ್ಟಿದ್ದಾರೆ. ಇದಲ್ಲದೆ ಅಲ್ಲಿನ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿಗೆ ಮೆ॥ ಸೋಮಯ್ಯನವರು ೧೫,೦೦ ರೂಪಾಯಿ ಕೊಡುವವರಾಗಿದ್ದಾರೆಂದು ತಿಳಿದು ಬಂದಿದೆ.

***

ಬೆಂಗಳೂರು ಛೀಫ್ ಕೋರ್ಟ್ ಪ್ಯೂನಿ ಜಡ್ಜಿಯಾದ ಮಿ॥ ಪಿ. ಎಸ್. ಕೃಷ್ಣರಾಯರು ಮೂರು ತಿಂಗಳ ರಜಾ ಪಡೆದುಕೊಂಡದ್ದರಿಂದ ಮೈಸೂರು ಸರ್ಕಾರದವರು ಬೆಂಗಳೂರಿನಲ್ಲಿ ವಕೀಲರಾಗಿದ್ದ ಮೆ॥ ಸೆಟ್ಲೂರ್ ಶ್ರೀನಿವಾಸೈಯಂಗಾರ್ರನ್ನು ಕರಸಿ ಛೀಫ್ ಕೋರ್ಟಿನ ಪ್ಯೂನಿ ಜಡ್ಜಿಯ ಕೆಲಸಕ್ಕೆ ನೇಮಕ ಮಾಡಿದ್ದಾರೆಂದೂ, ಅವರು ಕಳೆದ ವಾರ ಬಂದು ಕೆಲಸದ ಭಾರವನ್ನು ವಹಿಸಿಕೊಂಡರೆಂದೂ ಕೇಳುತ್ತೇವೆ.

***

ಮೈಸೂರು ಸಂಸ್ಥಾನದಲ್ಲಿ ಕಳೆದ ೧೯೦೭ನೇ ವರುಷದಲ್ಲಿ ೧೭೮ ಸರ್ಕಾರಿ ಆಸ್ಪತ್ರೆಗಳಿದ್ದುವು. ಸರ್ಕಾರದವರು ಸಂಸ್ಥಾನಮೂಲ ನೇಮಿಸಿರುವ ೯೭ ಮಂದಿ ನೌಕರರಿಗೆ ಒಟ್ಟು ೪,೬೯೦ ಹೆರಿಗೆಗಳನ್ನು ಮಾಡಿಸಿರುತ್ತಾರೆ. ವೈದ್ಯ ಇಲಾಖೆಗೆ ಸರ್ಕಾರದವರು ಒಟ್ಟು ೩,೯೩,೭೮೧ ರೂಪಾಯಿ ಖರ್ಚುಮಾಡಿದರೆಂತಲೂ, ೧೯೦೬ನೇ ವರುಷದಲ್ಲಿ ೩,೭೩,೭೫೧ ರೂಪಾಯಿ ಖರ್ಚಾಗಿತ್ತೆಂತಲೂ ತಿಳಿದು ಬಂದಿದೆ.

***

ಮೈಸೂರು ಜಂಬೂಸವಾರಿ ಎಂಬ ಪೋಲೋ ಕ್ಲಬ್ಬಿನವರು ಬೆಂಗಳೂರಿನಲ್ಲಿ ಪಂದ್ಯ ನಡೆದು ಗೆದ್ದದ್ದರ ಸಂತೋಷಾರ್ಥವಾಗಿ ರಾಜಧಾನಿಯಲ್ಲಿ ಕರ್ನಲ್ ದೇಸರಾಜೇ ಅರಸಿನವರು ಕಳೆದ ಭಾನುವಾರ ರಾತ್ರಿ ತಮ್ಮ ಭವನದಲ್ಲೂ, ಸರ್ದಾರ್ ಗೋಪಾಲರಾಜೇ ಅರಸಿನವರು ಸೋಮವಾರ ರಾತ್ರಿ ತಮ್ಮ ಮಂದಿರದಲ್ಲೂ ಸೈನ್ಯದ ಆಫಿಸರುಗಳಿಗೂ ಕೆಲವು ಸ್ನೇಹಿತರಿಗೂ ಔತನ ಸಂಗೀತಾದಿಗಳನ್ನು ಮಾಡಿಸಿ ಸಂತೋಷಪಡಿಸಿದರು.

***

ನಮ್ಮ ಚಿತ್ರದುರ್ಗದ ಬಾತ್ಮಿದಾರರು ಬರೆಯುವುದು:—ಇಲ್ಲಿ ೧೫ನೇ ತಾ. ಸಾಯಂಕಾಲ ಒಳ್ಳೇ ಮಳೆ ಬಂತು; ತಾ ೧೬ ರಲ್ಲೂ ಸ್ವಲ್ಪ ಬಂತು. ರೈತರು ಹೊಲಕ್ಕೆ ಬೀಜ ಬಿತ್ತುವದರಲ್ಲಿ ಆಸಕ್ತರಾಗಿದ್ದಾರೆ.—ಮೊದಲಿದ್ದ ಓವರ್ಸಿಯರು ಬಿಮರಿಕ್ಕೆ ಮದರಾಸಿಗೆ ಹೋದ ಮೇಲೆ ಒಬ್ಬ ಮುಸಲ್ಮಾನರು ಬದಲಿ ಬಂದರು. ಆ ಲಾಗಾಯಿತು ಪ್ರಕಾರವಿಲ್ಲದಂತೆ ಎಲ್ಲಾ ನಲ್ಲಿಗಳಿಗೂ ಸರಿಯಾಗಿ ನೀರು ಸಪ್ಲೈ ಆಗುತ್ತಿದೆ. ಮತ್ತು ಗುಡಿಸುವವರು ಸಂದಿಗಳಲ್ಲಿ ಸಹಾ ಗುಡಿಸಿ ಶುಚಿ ಮಾಡುತ್ತಿದ್ದಾರೆ.—ಇಲ್ಲಿ ಮೆ॥ ಜನುಮಾಂತರಾಜು ಯವರು ರವ್ವಿ ಮತ್ತು ಭಟ್ಟರಾಜು ಹುಡುಗರನ್ನು ಸೇರಿಸಿ ಸ್ಟೂಡೆಂಟ್ಸ್ ಹೋಮನ್ನು ಸ್ಥಾಪಿಸಿ ಅವರನ್ನು ತರಬೇತುಮಾಡುತ್ತಿರುವುದು ಬಹಳ ಚನ್ನಾಗಿದೆ ಮತ್ತು ಅವರನ್ನು ಸ್ವಂತ ಮಕ್ಕಳಿಗಿಂತಲೂ ಹೆಚ್ಚಾಗಿ ಸಂರಕ್ಷಿಸುತ್ತಿದ್ದಾರೆ. ಇವರ ಪ್ರಯತ್ನವೂ ನಡವಳಿಕೆಯೂ ಶ್ಲಾಘನೀಯವಾಗಿರುವವು.—ಇಲ್ಲಿ ಲಾಡದ ರಾಮಣ್ಣನೆಂಬ ಭಾರೀ ಕುಟುಂಬಿಯು ಅಂಗಡಿ ಮುಂದಿಣ ಪಸಾರೆಯನ್ನು ಈಗ್ಗೆ ೫ ವರುಷಗಳ ಕೆಳಗೆ ಮ್ಯುನಿಸಿಪಾಲಿಟಿಯವರು ಕೀಳಿಸಿಬಿಟ್ಟರು. ಆದರಿಂದ ಆತನ ವ್ಯಾಪಾರ ಕೆಟ್ಟು ಗೋಳಾಡುತ್ತಿದ್ದಾನೆ. ಆ ಪಸಾರೆಯನ್ನು ಯಾತಕ್ಕಾಗಿ ಕೀಳಿಸಿದರೆಂಬ ವಿಷಯ ಗೊತ್ತಾಗುವದಿಲ್ಲ. ಆ ಸ್ಥಳ ಎಲ್ಲರ ದೃಷ್ಟಿಗೂ ಬೀಳತಕ್ಕ ಮಧ್ಯ ಬಜಾರದಲ್ಲಿದೆ. ಅದರಿಂದ ಆರೋಗ್ಯಕ್ಕಾಗಲಿ ರೋಡಿಗಾಗಲಿ ಯಾವ ಬಾಧೆಯೂ ಕಾಣುವದಿಲ್ಲ. ತನಗೆ ನ್ಯಾಯವೇ ಸಿಕ್ಕುವದಿಲ್ಲವಲ್ಲಾ ಎಂದು ಆ ವೃದ್ಧನಾದ ರಾಮಣ್ಣನು ಸಂಕಟಪಡುತ್ತಿದ್ದಾನೆ.

ಆರ್ಯ ವೈಶ್ಯ ಮಹಾ ಸಭೆಯು.

ಕಳೆದ ೧೮ನೇ ತಾ. ಶನಿವಾರ ರಾಜಧಾನಿಯಾದ ಮೈಸೂರು ಪಟ್ಟಣದಲ್ಲಿ ಮೊದಲನೇ ಆರ್ಯ ವೈಶ್ಯ ಮಹಾ ಸಭೆಯು ನಡಿಯಿತು. ಮೈಸೂರು ಪಟ್ಟಣದ ವೈಶ್ಯ ಸಂಗಡದ ಮುಖಂಡರು ಈ ಮಹಾ ಸಭೆಯನ್ನು ನಡಿಸುವುದಕ್ಕೂ, ಸಭೆಗಾಗಿ ಹೊರಗಿನಿಂದ ಬರತಕ್ಕ ಪ್ರತಿನಿಧಿಗಳಿಗೂ ಇತರರಿಗೂ ಸ್ಥಳವಸತಿ ಸತ್ಕಾರಾದಿಗಳು ಕ್ರಮವಾಗಿ ಜರುಗುವುದಕ್ಕೂ ಏರ್ಪಾಡು ಮಾಡಿದ್ದರು ವಾಲಂಟೀಯರೆಂಬ ಸ್ವಸೇವಕರು ರೈಲ್ವೆ ಸ್ಟೇಷನಿಗೂ ಉಪ್ಪಾರಗಳಿಗೂ ಹೋಗಿ ಆಹ್ವಾನಿತ ಪ್ರತಿನಿಧಿಗಳನ್ನು ಎದುರುಗೊಂಡು, ಅವರ ಸೌಕರ್ಯಗಳಿಗೆಲ್ಲಾ ಅವರೇ ಮುಂದೆ ನಿಂತು ನೋಡಿ ಒದಗಿಸಿಕೊಡುತ್ತಾ ಬಂದರು. ಶಿವಾರದವರು ಮರಿಮಲ್ಲಪ್ಪನವರ ಹೈಸ್ಕೂಲಿನ ಬಳಿ ಇರುವ ಕಪ್ಪು ಬಿಡಾರದ ಬಂಗಲೆಯನ್ನು ಮೇಲ್ಕಂಡ ಪ್ರತಿನಿಧಿಗಳೂ ಮೆಂಬರುಗಳೂ ಇಳಿದುಕೊಳ್ಳುವುದಕ್ಕೂ ಭೋಜನಾದಿಗಳನ್ನು ಮಾಡುವುದಕ್ಕೂ ಬಿಡಿಸಿಕೊಟ್ಟಿದ್ದರು.

ರಾಜಧಾನಿಯ ಮಹಾರಾಣೀ ಕಾಲೇಜಿನ ವಿಸ್ತಾರವಾದ ನಡುಮನೆಯೊಳಗೆ ಮೇಲ್ಕಂಡ ಸಭೆ ನಡಿಯುವುದಕ್ಕೋಸ್ಕರ ಕಟ್ಟಡವನ್ನು ಬಹು ನೇತ್ರಾನಂದಕರವಾಗಿಯೂ ವಿಚಿತ್ರವಾಗಿಯೂ ಅಲಂಕಾರ ಮಾಡಿದ್ದರು. ಕಳೆದ ಶನಿವಾರ ಮಧ್ಯಾಹ್ನ ೨ ಗಂಟೆ ೨೦ ನಿಮಿಷಕ್ಕೆ ಶುಭ ಲಗ್ನವನ್ನು ನಿರೀಕ್ಷಿಸಿ ಮಹಾ ಸಭೆಯನ್ನು ಪ್ರಾರಂಭ ಮಾಡಿದರು. ಮೈಸೂರು ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟುಗಳಿಂದಲೂ, ಸೇಲಂ ಕೊಳ್ಳೇಗಾಲ ಹಿಂದೂಪುರ ಪ್ರಾಂತ್ಯಗಳಿಂದಲೂ ಸುಮಾರು ೫೦೦ ವೈಶ್ಯ ಪ್ರತಿನಿಧಿಗಳೂ ೧,೦೦೦ ಕ್ಕಿಂತಲೂ ಹೆಚ್ಚಾಗಿ ಮೆಂಬರುಗಳೂ ಬಂದು ಮಹಾ ಸಭೆಯಲ್ಲಿ ಹಾಜರಾಗಿದ್ದರು ಕೆಲವು ವೈಶ್ಯ ಪ್ರಮುಖರಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿ ಕರೆಸಿಕೊಂಡಿದ್ದರು. ಮಹಾ ಸಭೆಯಲ್ಲಿ ಭಾಷಣಗಳೂ ಚರ್ಚೆಗಳೂ ಎಲ್ಲಾ ತೆಲುಗಿನಲ್ಲೇ ನಡೆದವು.

ಆರಂಭದಲ್ಲಿ ಮೈಸೂರಿನ ಮೆ॥ ಅಪ್ಪಾವು ಶೆಟ್ಟರು ತೆಲುಗಿನಲ್ಲೂ, ದಾವಣಗೆರೆಯ ಮೆ॥ ಅನಂತಸಿದ್ಧರಾಮ ಶೆಟ್ಟರು ಕನ್ನಡದಲ್ಲೂ ದೇವರ ಸ್ತೋತ್ರಗಳನ್ನು ಮಾಡಿದರು. ಮೈಸೂರಿನ ಮೆ॥ ಸಿ. ಸುಬ್ಬರಾಯ ಶೆಟ್ಟರು ಪೀಠಿಕೆಗಳನ್ನು ಹೇಳಿದರು. ತರುವಾಯ ಮೈಸೂರಿನ ಮೆ॥ ಕೆ. ಸಂಜೀವಶೆಟ್ಟಿ, ಬಿ. ಎ. ಯವರು ರಿಸೆಪ್ಷನ್ ಕಮಿಟಿಯ ಪರವಾಗಿ ಉಪನ್ಯಾಸ ಮಾಡಿ ಸಭಿಕರಿಗೆಲ್ಲಾ ಸುಸ್ವಾಗತವನ್ನು ಬಯಸಿದರು. ಕಾಲ್ಯದ ಮೆ॥ ವಿ. ಶಾಸ್ತ್ರಿ ಶೆಟ್ಟರು ಉಪನ್ಯಾಸ ಮಾಡಿ ಮೆ॥ ಎಂ. ಚಂಗೈಯ ಶೆಟ್ಟಿ, ಬಿ. ಎ. ಯವರಿಗೆ ಸಭೆಯ ಅಗ್ರಾಸನವನ್ನು ವಹಿಸಬೇಕೆಂದು ಸೂಚಿಸಿದರು. ಮೈಸೂರಿನ ಮೆ॥ ಶ್ರೇಷ್ಠಿ ಸ್ವಾಮಿ ಶೆಟ್ಟರು ಅದನ್ನು ಅನುಮೋದಿಸಿದರು. ಸಭಿಕರೆಲ್ಲಾ ಅದೇ ರೀತಿ ಅಭಿಪ್ರಾಯಪಟ್ಟರು ಆಗ ಮೆ॥ ಎಂ. ಚಂಗೈಯಶೆಟ್ಟರವರು ಸಭೆಯ ಅಗ್ರಾಸನವನ್ನು ವಹಿಸಿ, ಸಭಿಕರನ್ನು ಕುರಿತು, ಆ ಮಹಾ ಸಭೆಯ ಉದ್ದೇಶ ಕಾರ್ಯಾದಿಗಳನ್ನು ವಿವರಿಸಿ ಉಪನ್ಯಾಸ ಮಾಡಿದರು.

ತರುವಾಯ ಈ ಮಹಾ ಸಭೆಯವರೂ ವೈಶ್ಯಸಂಗಡದವರೂ ಶ್ರೀಮನ್ ಮಹಾರಾಜರವರಿಗೆ ತಮ್ಮ ರಾಜಭಕ್ತಿ ವಿಶ್ವಾಸಾದಿಗಳನ್ನು ಕೃತಜ್ಞತಾಪೂರ್ವಕವಾಗಿ ಸಮರ್ಪಿಸಬೇಕೆಂದು ನೆಲಮಂಗಲದ ಮೆ॥ ನಾರಾಯಣಮೂರ್ತಿ, ಬಿ. ಎ. ಯವರು ಸೂಚಿಸಿದ್ದನ್ನು ಮೈಸೂರಿನ ಮೆ॥ ಕೆ. ಧನಕೋಟಿಶೆಟ್ಟರು ಸೆಕೆಂಡು ಮಾಡಿದರು. ಸಭಿಕರೆಲ್ಲಾ ಏಕವಾಕ್ಯತೆಯಿಂದ ಒಪ್ಪಿಕೊಂಡರು. ಈ ಮಹಾ ಸಭೆಯ ಮೆಂಬರುಗಳಿಗೆ ದಿವಾನರವರು ತಮ್ಮ ಬಿಡಾರವನ್ನು ಬಿಡಿಸಿಕೊಟ್ಟದ್ದಲ್ಲದೆ ಇತರ ವಿಧವಾಗಿಯೂ ಸಹಾಯ ಪ್ರೋತ್ಸಾಹಾದಿಗಳನ್ನು ಮಾಡಿದ್ದಕ್ಕಾಗಿ ಅವರಿಗೆ ಸಭೆಯ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಬೇಕೆಂದು ಮೈಸೂರಿನ ಮೆ॥ ನಾಮಾ ಆದಿನಾರಾಯಣಶೆಟ್ಟರು ಸೂಚಿಸಿದ್ದನ್ನು ಸಭಿಕರೆಲ್ಲಾ ಬಹು ಸಂತೋಷದಿಂದ ಒಪ್ಪಿಕೊಂಡರು. ಈ ಅರ್ಥಕ್ಕೆ ಆ ದಿನವೇ ಶ್ರೀಮನ್ ಮಹಾರಾಜರವರಿಗೂ ದಿವಾನ್ ಸಾಹೇಬರಿಗೂ ತಂತೀವರ್ತಮಾನಗಳೂ ಕಳುಹಿಸಲ್ಪಟ್ಟವು.

ಎರಡನೆಯ ದಿನ ಅಂದರೆ ತಾ. ೧೯ ನೇ ಭಾನುವಾರ ಮಧ್ಯಾಹ್ನ ಪುನಃ ಮಹಾ ಸಭೆಯು ಅದೇ ಕಟ್ಟಡದಲ್ಲಿ ಕೂಡಿತು. ಮೆ॥ ಚಂಗೈಯಶೆಟ್ಟರವರು ಅಗ್ರಾಸನವನ್ನು ವಹಿಸಿದರು. ಈ ಸಭೆಯಲ್ಲಿ ತೀರ್ಮಾನ ಮಾಡಲ್ಪಟ್ಟಂತೆ ತಿಳಿದುಬಂದಿರುವ ಮುಖ್ಯ ವಿಚಾರಗಳೇನೆಂದರೆ:—

ವೈಶ್ಯ ಬಾಲಕರಿಗೆ ೧೨ ವರುಷದ ಮೇಲೆ ೧೬ ವರುಷ ತುಂಬುವುದರೊಳಗಾಗಿ ಉಪನಯನ ಕರ್ಮವನ್ನು ನಡಿಸಬಹುದು. ಉಪನಯನವಾದ ಮೇಲೆ ಸುಮಾರು ಮೂರು, ನಾಲ್ಕು ತಿಂಗಳಾಗುವ ತನಕಲಾದರೂ ವಿವಾಹ ಮಾಡಲಾಗದು. ಬಾಲಕರಿಗೆ ಕನ್ನಡ, ಸಂಸ್ಕೃತ, ಇಂಗ್ಲಿಷ್ ವಿದ್ಯೆಯನ್ನು ಕಲಿಸುವುದಕ್ಕೆ ಧರ್ಮದ ಪಾಠಶಾಲೆಗಳನ್ನೂ, ಬೋರ್ಡಿಂಗ್ ಸ್ಕೂಲುಗಳನ್ನೂ, ವಿದ್ಯಾರ್ಥಿವೇತನಗಳನ್ನೂ ಸಂಸ್ಥಾನದ ಮುಖ್ಯ ಮುಖ್ಯ ಸ್ಥಳಗಳಲ್ಲಿ ಸ್ಥಾಪಿಸಿ ನಡಿಸುವುದರ ಮೂಲಕ ವೈಶ್ಯರನ್ನು ವಿವೇಕಿಗಳನ್ನಾಗಿಯೂ ಸದ್ಗುಣ ಸಚ್ಚರಿತ್ರರನ್ನಾಗಿಯೂ ಸದ್ಭಕ್ತರನ್ನಾಗಿಯೂ ಮಾಡಬೇಕು. ಇದಕ್ಕಾಗಿ ವೈಶ್ಯ ಮಹಾ ಜನರೆಲ್ಲಾ ತಮ್ಮ ಶಕ್ತ್ಯನುಸಾರ ದ್ರವ್ಯ ಸಹಾಯ ಮಾಡಬೇಕು.

ಚಂದಾ ಪಟ್ಟಿಯನ್ನು ಮಹಾ ಸಭೆಯಲ್ಲಿ ಕಳುಹಿಸಲಾಯಿತು. ಕೆಲವು ಮುಖಂಡರು ತಲಾ ೧,೦೦೦ ರೂಪಾಯಿಯಂತೆಯೂ, ಇನ್ನು ಕೆಲವರು ತಲಾ ೫೦೦ ರೂಪಾಯಿಯಂತೆಯೂ ಚಂದಾ ಕೊಡುವುದಾಗಿ ವಾಗ್ದಾನ ಮಾಡಿದರೆಂದೂ, ಒಟ್ಟು ೨೫,೦೦೦ ರೂಪಾಯಿನ ತನಕ ಫಂಡಿಗೆ ಚಂದಾ ಕೊಡಲು ವಾಗ್ದಾನ ವಾಗಿದೆ ಎಂದೂ ತಿಳಿದು ಬಂದಿದೆ.

ಮುಂದಿನ ವರ್ಷ ಈ ಆರ್ಯ ವೈಶ್ಯ ಮಹಾ ಸಭೆಯನ್ನು ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಕ್ಯಾಮಗೊಂಡ್ಲಿನಲ್ಲಿ ನಡಿಸತಕ್ಕದೆಂದು ತೀರ್ಮಾನವಾಗಿ, ಸಭೆಯು ಬರಖಾಸ್ತು ಮಾಡಲ್ಪಟ್ಟಿತು

ಕಳೆದ ಭಾನುವಾರ ಮೈಸೂರಿನ ವೈಶ್ಯರು ಮೇಲ್ಕಂಡ ಸಭಾ ಪ್ರತಿನಿಧಿಗಳಿಗೆಲ್ಲಾ ದಿವ್ಯವಾದ ಔತನವನ್ನು ಮಾಡಿದರು. ವಾಲಂಟಿಯರುಗಳು ಬಹಳ ಉತ್ಸಾಹದಿಂದಲೂ, ಸಂತೋಷಕರವಾಗಿಯೂ ಕೆಲಸಗಳನ್ನು ಮಾಡಿದರೆಂದು ತಿಳಿಯುವುದು.

ಸೋಮವಾರ ಸಾಯಂಕಾಲ ಸಭೆಯ ಪ್ರೆಸಿಡೆಂಟರು ಮುಖಂಡರ ಮಂಡಲಿಯಲ್ಲಿ ಕುಳಿತು ರಾಜಧಾನಿಯಲ್ಲಿರುವ ಮೆ॥ ವರದಾಚಾರ್ಯರಿಂದ ಫೋಟೋ ತೆಗಿಸಿಕೊಂಡರು.

ಟೆಲಿಗ್ರಾಫ್ ಇಲಾಖೆಯ ಹೊಸ ನಿಬಂಧನೆಗಳು.

ಎಲ್ಲರೂ ತಿಳಿದುಕೊಳ್ಳಬೇಕಾದದ್ದು

೧೯೦೮ನೇ ಇಸ್ವಿ ಜೂಲೈ ೧೯ನೇ ತಾರೀಖು ಭಾನುವಾರದ ದಾಗಾಯತು ಇಂಡಿಯಾ ಗವರ್ನಮೆಂಟಿನವರು ತಂತೀವರ್ತಮಾನಗಳ ಆಫೀಸಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಜಾರಿಗೆ ತಂದಿರುತ್ತಾರೆ. ಅದರ ಮುಖ್ಯಭಾಗಗಳೇನೆಂದರೆ—

ಇನ್ನು ಮೇಲೆ ಮೈಸೂರು ಸಿಟಿ ಟೆಲಿಗ್ರಾಫ್ ಆಫೀಸು ಪ್ರತಿ ಭಾನುವಾರ, ಕ್ರಿಸ್ಮಸ್ ಹಬ್ಬದ ದಿನ, ಜನವರಿ ೧ನೇ ತಾರೀಖು, ಗುಡ್ ಫ್ರೈಡೆ (ಶುಭಶುಕ್ರವಾರ), ಚಕ್ರವರ್ತಿಯವರ ಹುಟ್ಟಿದ ಹಬ್ಬ, ಈ ದಿನಗಳಲ್ಲಿ ಬೆಳಗ್ಗೆ ೮ ರಿಂದ ೧೦ ಗಂಟೆ ವರೆಗೂ, ಸಾಯಂಕಾಲ ೪ ರಿಂದ ೬ ಗಂಟೆ ವರೆಗೂ ತೆರೆಯಲ್ಪಟ್ಟು ಕೆಲಸ ನಡೆಯುತ್ತದೆ ಈ ದಿನಗಳಲ್ಲಿ ಡಿಫರ್ಡ್ ಟೆಲಿಗ್ರಾಂ (೪ ಆಣೆಯ ತಂತೀವರ್ತಮಾನ) ಗಳನ್ನೂ, ವರ್ತಮಾನಪತ್ರಿಕೆಗಳಿಗೆ ಕಳುಹಿಸುವ ಡಿಫರ್ಡ್ ಟೆಲಿಗ್ರಾಂಗಳನ್ನೂ ಅಂಗೀಕರಿಸುವುದಿಲ್ಲ ಮತ್ತು ಈ ದಿನಗಳಲ್ಲಿ ಆಫೀಸ್ ಬಾಗಲು ಮುಚ್ಚಿರುವ ಸಮಯದಲ್ಲಿ ಯಾರಾದರೂ ಅರ್ಜೆಂಟ್ ವರ್ತಮಾನ ಕಳುಹಿಸಬೇಕೆಂದು ಅಪೇಕ್ಷಿಸಿದರೆ ಅದಕ್ಕಾಗಿ ನ್ಯಾಯವಾದ ಛಾರ್ಜನ್ನೂ, ಒಂದು ರೂಪಾಯಿ ಜಾಸ್ತಿ ರುಸುಮನ್ನೂ ಕೊಟ್ಟಲ್ಲಿ ಆಫೀಸಿನವರು ತಂತೀವರ್ತಮಾನವನ್ನು ಅಂಗೀಕರಿಸಿ ಕಳುಹಿಸುತ್ತಾರೆ. ಆದರೆ ಯಾವ ಊರಿಗೆ ಆ ತಂತೀವರ್ತಮಾನವನ್ನು ಕಳುಹಿಸಬೇಕೋ ಅಂಥಾ ಊರಿನ ತಂತೀ ಆಫೀಸು ಮುಚ್ಚಲ್ಪಟ್ಟಿದ್ದ ಪಕ್ಷದಲ್ಲಿ ಇನ್ನೊಂದು ರೂಪಾಯಿ ಜಾಸ್ತಿಯಾಗಿ ರುಸುಂ ಕೊಡಬೇಕು. ಒಂದೇ ಸ್ಥಳಕ್ಕೆ ಹೆಚ್ಚು ತಂತೀವರ್ತಮಾನಗಳನ್ನು ಕಳುಹಿಸುವಂತೆ ಬರೆದುಕೊಟ್ಟಲ್ಲಿ ಒಂದೇ ರೂಪಾಯಿ ರುಸುಂ ಕೊಡತಕ್ಕದ್ದು. ಒಂದು ವೇಳೆ ಹಾಗೆ ಬಾಗಲು ಮುಚ್ಚಿರುವ ಕಾಲದಲ್ಲಿ ತಂತೀವರ್ತಮಾನ ಕಳುಹಿಸುವುದಕ್ಕೆ ನೌಕರನನ್ನು ಕರೆದು, ಅವನು ಬಂದು ನೋಡುವಲ್ಲಿ ವರ್ತಮಾನ ಕಳುಹಿಸತಕ್ಕ ಊರಿನ ಆಫೀಸು ಮುಚ್ಚಲ್ಪಟ್ಟಿದೆ ಎಂದೂ, ವರ್ತಮಾನ ಕಳುಹಿಸಲಾಗುವುದಿಲ್ಲವೆಂದೂ ನಿರ್ಧರಿಸಿದಾಗ್ಯೂ ಆ ನೌಕರನಿಗೆ ಒಂದು ರೂಪಾಯಿ ರುಸುಮನ್ನು ಕೊಟ್ಟೇ ಕೊಡಬೇಕು

ಮೈಸೂರು ಪುರನಿವಾಸಿಗಳಲ್ಲಿ ವಿಜ್ಞಾಪನಾ.

ಪ್ರಕೃತ ಮೈಸೂರು, ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ಮುಖ್ಯವಾಗಿ ಸ್ವಲ್ಪ ದಿವಸದಿಂದ ದೈವವಶಾತ್ ಪ್ಲೇಗ್ ಭೀತಿಯಿಂದ ಬಿಡುಗಡೆಯಾಗಿದ್ದ ಮೈಸೂರು ಪಟ್ಟಣದ ಸುತ್ತಮುತ್ತಲಿರುವ ಹಳ್ಳಿಗಳಲ್ಲೂ ಪ್ಲೇಗಿನ ಚಿಹ್ನೆಗಳು ವ್ಯಕ್ತವಾಗಿವೆ. ಜಾಡ್ಯಗ್ರಸ್ತರಾದ ಅತಿಥಿಗಳ ದೆಸೆಯಿಂದ ಇದರ ಆಗಮನ ಪ್ರತ್ಯಕ್ಷವಾಗಲೀ ತಿಳಿಯಲು ಆಗುವದಿಲ್ಲ. ಪ್ಲೇಗ್ ಜಾಡ್ಯವು ತನ್ನ ಮಧ್ಯೆ ಪ್ರವೃತ್ತವಾದಾಗ ಎಷ್ಟು ಕಷ್ಟಗಳನ್ನು ಅನುಭವಿಸಬೇಕೋ, ಎಷ್ಟು ಚೇತರಿಸಿಕೊಳ್ಳಲಾಗದ ನಷ್ಟಗಳನ್ನು ಹೊಂದಬೇಕೋ ಅದನ್ನು ಜನಗಳಿಗೆ ಹೇಳಬೇಕಾದದ್ದೇ ಇಲ್ಲ. ಈಗ ನಾವು ಅದರ ವಿಷಯದಲ್ಲಿ ಅಲಕ್ಷ್ಯಮಾಡದೆ ತುಂಬಾ ನಿಗಾಕೊಡತಕ್ಕ ಕಾಲವಾಗಿದೆ ಕೇವಲ ಆಪ್ತ ಬಂಧು ವರ್ಗದವರನ್ನು ಕಳಕೊಳ್ಳುವಿಕೆಯು, ಮುಂದಕ್ಕೆ ಮುಂದಾಗಿಯೇ, ಅಪಾಯವನ್ನು ತಪ್ಪಿಸಿಕೊಳ್ಳಲು ಪುರುಷ ಪ್ರಯತ್ನ ಮಾಡಲಿಲ್ಲವೆಂಬ ತಿಳುವಳಿಕೆಯು ವ್ಯಥೆಕರವಾಗಿಯೇ ಇದೆ

ಈಗ ಸ್ವಲ್ಪ ದಿನಗಳ ಕೆಳಗೆ ದೇಬೂರು ಮತ್ತು ಯಲಚೆಕೊಳ (?) ಗ್ರಾಮಗಳಿಂದ ಮೂವರು ಪ್ಲೇಗ್ ರೋಗಿಗಳು ಬಂದಿದ್ದರು. ಸಕಾಲದಲ್ಲಿ ಕಂಡುಹಿಡಿದು, ಅವರನ್ನು ಕೂಡಲೇ ಪ್ಲೇಗ್ ಆಸ್ಪತ್ರೆಗೆ ಕಳುಹಿಸಿದ್ದಾಯಿತು ಅವರು ಇದ್ದ ವಾಸಸ್ಥಾನಗಳು ಶುದ್ಧಿ ಮಾಡಲ್ಪಟ್ಟವು. ಈ ರೀತಿ ಎಲ್ಲಾ ಕೇಸುಗಳಲ್ಲೂ ಮಾಡಲಸಾಧ್ಯವೆಂಬುವದು ವ್ಯಕ್ತವಾಗಿಯೇ ಇದೆ, ಆದ್ದರಿಂದ ಜನಗಳಲ್ಲಿ ವಿಜ್ಞಾಪಿಸಿಕೊಳ್ಳುವದೇನೆಂದರೆ, ಜಾಡ್ಯಗ್ರಸ್ತ ಪ್ರದೇಶದಿಂದ ಬರುವವರಿಗೆ ತಮ್ಮ ಮನೆಗಳಲ್ಲಿ ಇಳಿದುಕೊಳ್ಳಲು ಅವಕಾಶ ಕೊಡಕೂಡದು. ವ್ಯಾಧಿಗ್ರಸ್ತರಿಗೆ ಪ್ಲೇಗ್ ಆಸ್ಪತ್ರೆಯಲ್ಲೂ, ಸೋಂಕುಳ್ಳವರಿಗೆ ಹೆಲ್ತ್ ಕ್ಯಾಂಪುಗಳಲ್ಲೂ ಸ್ಥಳವಸತಿ ದೊರೆಯುತ್ತದೆ.

ಪ್ಲೇಗ್ ರೋಗವು ಮುಖ್ಯವಾಗಿ ಇಲಿಯ ಜಾಡ್ಯವಾಗಿದೆ. ಅದು ಅವಶಾತ್ ಇಲಿಗಳ ದೇಹದ ಮೇಲಿರುವ ಚಿಗಟಗಳ ಮೂಲಕ ಮನುಷ್ಯರಿಗೆ ಉಂಟಾಗುತ್ತದೆ. ಆದ್ದರಿಂದ ಸಾಧ್ಯವಾದಮಟ್ಟಿಗೂ ತಮ್ಮ ಮನೆಗಳಲ್ಲಿ ಇಲಿಗಳಿಲ್ಲದಂತೆ ಮಾಡುವದು ಉತ್ತಮ. ಬದುಕಿರುವ ಅಥವಾ ಸತ್ತಿರುವ ಇಲಿಗಳನ್ನು ಹಿಡಿದು ಹೆಲ್ತಾಫೀಸಿಗೆ ಕಳುಹಿಸಿಕೊಟ್ಟಲ್ಲಿ ಪರೀಕ್ಷೆಮಾಡಿ, ಕುತೂಹಲವುಳ್ಳವರಿಗೆ ಫಲಿತಾಂಶವನ್ನು ತಿಳಿಸಲಾಗುವದು. ವೈದ್ಯಕ್ಕಿಂತ ಜಾಡ್ಯ ಸಂಭವವನ್ನು ತಪ್ಪಿಸಿಕೊಳ್ಳುವದು ಉತ್ತಮ.

೧. ಸೋಂಕುಳ್ಳ ಮನುಷ್ಯ ಮತ್ತು ಅವನ ಬಟ್ಟೆ ಮೊದಲಾದವುಗಳನ್ನು ಮುಟ್ಟಿಸಿಕೊಳ್ಳಕೂಡದು

೨. ಮನೆಯಲ್ಲಿರುವ ಇಲಿಗಳನ್ನು ಹೊರಡಿಸುವ ಪ್ರಯತ್ನ ಮಾಡಬೇಕು.

೩. ಮನೆಯಲ್ಲಾಗಲೀ, ಅಥವಾ ಮನೆಯ ಸುತ್ತಮುತ್ತಲಾಗಲೀ ಸೋಂಕುಳ್ಳ ಇಲಿಯನ್ನು ಕಂಡ ಕೂಡಲೆ ಮನೆಯನ್ನು ಬಿಡಬೇಕು.

೪. ಇನಾಕ್ಯುಲೇಷನ್ ತಕ್ಕಮಟ್ಟಿಗೆ ಅಪಾಯ ಪರಿಹಾರಕವಾಗಿ ಇರುತ್ತದೆ.

ದೇವಿಡುಬಿನ ರೂಲುಸು.

ರಾಜಧಾನಿಯ ಪ್ರಜೆಗಳು ಗಮನಕೊಡಬೇಕಾದ ವಿಚಾರವು

ಮೈಸೂರು ಪಟ್ಟಣದ ಮ್ಯುನಿಸಿಪಲ್ ಪ್ರೆಸಿಡೆಂಟ್ ಮಿ॥ ಎಂ. ಕಾಂತರಾಜೇ ಅರಸಿನವರು ಇದರಿಂದ ಮೈಸೂರು ಪಟ್ಟಣವಾಸಿಗಳಿಗೆ ತಿಳಿಯಪಡಿಸುವದೇನಂದರೆ —೧೯೦೬ನೇ ಇಸವಿ ರೆಗ್ಯುಲೇಷನ್ ೧ನೇ ನಂಬರು ೨ನೇ ಸೆಕ್ಷನ್ ೧ನೇ ಕ್ಲಾಸ್ ಅನುಸರಿಸಿ, ಮೈಸೂರು ಸರಕಾರದವರು ೧೯೦೮ನೇ ಇಸವಿ ಜೂಲೈ ೧೫ರ ದಾಗಾಯತು ಒಂದು ವರುಷದ ವರೆಗೆ ಈ ಪಟ್ಟಣದಲ್ಲಿ ಸಿಡುಬುಹಾಕಿಸುವದು ನಿರ್ಬಂಧವಾಗಿರುತ್ತೆಂದು ೧೯೦೮ನೇ ಇಸವಿ ಜೂನ್ ೫ನೇ ತಾರೀಖಿನಲ್ಲಿ ೧-೨೬೯೮ ಮೆ ೬೭-೦೭-೧೧ನೇ ಆರ್ಡರ್ ಮಾಡಿರುತ್ತಾರೆ.

ಮೇಲ್ಕಂಡ ರೆಗ್ಯುಲೇಷನಲ್ಲಿ ಎಲ್ಲಾ ಮಕ್ಕಳಿಗೂ ೬ ತಿಂಗಳು ವಯಸ್ಸಿನ ಒಳಗಾಗಿ ಸಿಡುಬುಹಾಕಿಸುವದು ನಿರ್ಬಂಧನಾಗಿರುತ್ತೆ. ಮೇಲ್ಕಂಡ ರೆಗ್ಯುಲೇಷನ್ ಪ್ರಕಾರ ಸಿಡುಬು ಏಳದೆ ಆಗಲಿ, ಸಿಡುಬು ಹಾಕಿಸಿಕೊಳ್ಳದೆ ಆಗಲಿ, ಅಥವ ಸಿಡುಬು ಹಾಕಬೇಕಾದದ್ದು ಅವಶ್ಯಕವಿಲ್ಲವೆಂದು ಸರ್ಟಿಫಿಕೇಟು ಪಡೆಯದೆ ಆಗಲಿ ಇರುವ ಪ್ರತಿಯೊಬ್ಬ ಮನುಷ್ಯನೂ ಸಿಡುಬು ಹಾಕಿಸಿಕೊಳ್ಳಬೇಕು. ಮೇಲ್ಕಂಡಂತೆ ಇರುವವರು ಸಿಡುಬುಹಾಕಿಸಿಕೊಳ್ಳುವದು ನಿರ್ಬಂಧವಾಗಿರುವ ಸ್ಥಳಗಳಲ್ಲಿ ಒಂದು ತಿಂಗಳಿಗಿಂತ ಹೆಚ್ಚಾಗಿ ವಾಸವಾಗಿದ್ದಲ್ಲಿ ಅಂಥವರು ಸಿಡುಬುಹಾಕುವ ಡಿಪೋವಿಗೆ ಹೋಗಿ ಸಿಡುಬುಹಾಕಿಸಿಕೊಳ್ಳಬೇಕು, ಅಥವ ತಕ್ಕ ಏರ್ಪಾಡುಮಾಡಿಕೊಂಡು ಸಿಡುಬುಹಾಕಿಸಿಕೊಳ್ಳಬೇಕು. ಗೋಷಾ ಅಥವ ಘರಬಾದಲ್ಲಿರುವ ಹೆಂಗಸರಿಗೆ ಸಿಡುಬುಹಾಕತಕ್ಕ ಹೆಂಗಸಿನಿಂದಲೇ ಸಿಡುಬುಹಾಕಿಸಲ್ಪಡುವದು. ಸಿಡುಬಿನ ಸೂಪರಿಂಟೆಂಡೆಂಟರವರು ಯಾವ ಮನೆಗಾದರೂ ತನಿಖೆಗಾಗಿ ಹೋದಲ್ಲಿ ಆ ಮನೇ ಯಜಮಾನರು ಅವರ ಗೈರ್ಹಾಜರಿಯಲ್ಲಿ ಮನೆಯಲ್ಲಿರುವ ವಯಸ್ಕರಾದವರು ಮನೆಯಲ್ಲಿರುವ ಎಲ್ಲರನ್ನೂ ಅವರು ನೋಡಲು ಹಾಜರುಮಾಡಿ, ಅವರ ಹೆಸರು, ವಯಸ್ಸು ಮುಂತಾದ ಸಂಗತಿಗಳನ್ನು ಸರಿಯಾಗಿ ತಿಳಿಸಬೇಕು. ೧೨ ವಯಸ್ಸಿಗೆ ಮೇಲ್ಪಟ್ಟ ಹೆಂಗಸರನ್ನು ಮುಖ್ಯವಾಗಿ ಘೋಷಾ ಅಥವಾ ಘರಬಾ ಜನದಲ್ಲಿ ಸೂಪರಿಂಟೆಂಡೆಂಟರಿಗಾಗಿ ಲಾಯಖಾದ ಹೆಂಗಸಿನಿಂದ ಅಜಮಾಯಿಷಿ ಮಾಡಲ್ಪಡುವದು

ಮೇಲ್ಕಂಡ ಹುಕುಂ ಜಾರಿಯಲ್ಲಿ ತರಲು ಈ ಕೆಳಗೆ ಕಾಣಿಸಿರುವಂತೆ ಏರ್ಪಾಡು ಮಾಡಿರುತ್ತೆ —ಪ್ರತಿ ಸೋಮವಾರ, ಬುಧವಾರ, ಶುಕ್ರವಾರ ಜನರಲ್ ಆಸ್ಪತ್ರೆಯಲ್ಲೂ, ಪ್ರತಿ ಮಂಗಳವಾರ ಚಾಮರಾಜ ರೋಡಿನಲ್ಲಿರುವ ಮ್ಯುನಿಸಿಪಲ್ ಆಸ್ಪತ್ರೆಯಲ್ಲೂ, ಪ್ರತಿ ಗುರುವಾರ—ಮಿಷನ್ ಲೈನಿನ ಆಸ್ಪತ್ರೆಯಲ್ಲೂ, ಪ್ರತಿ ಶನಿವಾರ—ನಜರಬಾದ್ ಆಸ್ಪತ್ರೆಯಲ್ಲೂ ಬೆಳಗ್ಗೆ ೭ ಘಂಟೆ ದಾಗಾಯತು ೧೧ ಘಂಟೆ ವರಿವಿಗೆ ಸಿಡುಬುಹಾಕಲ್ಪಡುವದು ಅವರವರ ಮನೆಗಳಲ್ಲಿ ಸಿಡುಬುಹಾಕಿಸಿಕೊಳ್ಳಬೇಕೆಂದು ಇಷ್ಟಪಡುವವರು ಮೈಸೂರು ಸಿಟಿ ಹೆಲ್ತ್ ಆಫೀಸರವರ ಮೂಲಕ ಏರ್ಪಾಡುಮಾಡಿಕೊಳ್ಳಬಹುದು

ಮೇಲೆ ನಮೂದಿಸಿರುವ ರೆಗ್ಯುಲೇಷನ್ ಪ್ರಕಾರ ಸಿಡುಬುಹಾಕಿಸದೆ, ಯಾ ಹಾಕಿಸಿಕೊಳ್ಳದೆ, ಯಾ ಹಾಕಿಸಿಕೊಳ್ಳುವದು ಅನಾವಶ್ಯಕವೆಂದು ಸರ್ಟಿಫಿಕೇಟು ಪಡೆಯದವರು ಮ್ಯಾಜಿಸ್ಟ್ರೇಟರವರ ಮೂಲಕ ಶಿಕ್ಷೆಗೆ ಗುರಿಮಾಡಲ್ಪಡುವರು

ಚನ್ನಪಟ್ಟಣದ ಸರ್ಕಾರಿ ಇಂಡಸ್ಟ್ರಿಯಲ್ ಸ್ಕೂಲು.

ಕಸಬು ಕಲಿಯುವುದಕ್ಕೆ ಸೌಲಭ್ಯಗಳು.

ಮೈಸೂರು ಸರ್ಕಾರದವರು ಕಳೆದ ೧೯೦೬ ನೇ ಇಸವಿ ಫೆಬ್ರುವರಿ ೧೦ ರಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿ ದಕ್ಷಿಣ ಮರಾಠಾ ರೈಲ್ವೆ ಸ್ಟೇಷನ್ ಆದ ಚನ್ನಪಟ್ಟಣವೆಂಬ ಊರಿನಲ್ಲಿ ಕ್ಷೀಣಗತಿಗೆ ಬರುತ್ತಿದ್ದ ಕೆಲವು ವಿಶೇಷವಾದ ಕೈಗಾರಿಕೆಗಳನ್ನು ಹುಡುಗರಿಗೆ ಕಲಿಸಿಕೊಟ್ಟು ಆ ಕಸಬುಗಳನ್ನು ಅಭಿವೃದ್ಧಿಗೆ ತರುವುದರ ಮೂಲಕ ದೇಶೋನ್ನತಿಗೆ ಸಹಾಯ ಮಾಡಬೇಕೆಂದು ಸರ್ಕಾರಿಯಾಗಿ ಒಂದು ಇಂಡಸ್ಟ್ರಿಯಲ್ ಸ್ಕೂಲನ್ನು ಸ್ಥಾಪಿಸಿ ನಡಿಸುತ್ತಾ ಬಂದಿದ್ದಾರೆ ಈ ಸ್ಕೂಲಿನಲ್ಲಿ ಹುಡುಗರಿಗೆ ನೀಳೇ ತಂತಿ, ಅರಗಿನ ಕೆಲಸ, ಆಟದ ಸಾಮಾನು, ಬಣ್ಣದ ಹಣ್ಣುಹಂಪಲು ಮೊದಲಾದವುಗಳ ತಯಾರಿಯನ್ನು ಕಲಿಸುತ್ತಾರೆ. ಮರಕೆಲಸ, ನಕ್ಷೆ ಬರೆಯುವುದು, ಬಣ್ಣ ಹಾಕುವುದು, ಇವನ್ನು ಕಲಿಸಿಕೊಡುವರು. ಇದಲ್ಲದೆ ಅರಗನ್ನು ಶೋಧನೆ ಮಾಡಿ, ನಾನಾ ಬಣ್ಣಗಳನ್ನು ಕೊಟ್ಟು, ಕಡ್ಡಿಗಳಾಗಿ ಮಾಡುವುದನ್ನು ಹೇಳಿಕೊಡುತ್ತಾರೆ. ಅಕ್ಷರಸ್ಥರಲ್ಲದ ಬಾಲಕರಿಗೆ ರಾತ್ರಿಹೊತ್ತು ವಿದ್ಯೆ ಕಲಿಸುವುದಕ್ಕೂ ಏರ್ಪಾಡಾಗಿದೆ.

ಪ್ರತಿ ಒಂದು ಕಸುಬನ್ನು ಕಲಿಯುವುದಕ್ಕೂ ಮೂರು ವರುಷ ಅವಧಿಯನ್ನು ಕಲ್ಪಿಸಿರುತ್ತಾರೆ ಕಡೆಯಲ್ಲಿ ಪರೀಕ್ಷೆ ನಡೆದು ತೇರ್ಗಡೆ ಹೊಂದಿದವರಿಗೆ ಸರ್ಟಿಫಿಕೇಟುಗಳು ಕೊಡಲ್ಪಡುವವು. ಕಸಬುಗಳನ್ನು ಕಲಿಸುವುದಕ್ಕೆ ವಿದ್ಯಾರ್ಥಿಗಳು ಫೀಜೇನೂ ಕೊಡಬೇಕಾದದ್ದಿಲ್ಲ ಮತ್ತು ೨೪ ಮಂದಿ ಬಾಲಕರಿಗೆ ತಿಂಗಳಿಗೆ ತಲಾ ೧ ರಿಂದ ೩ ರೂಪಾಯಿನ ವರೆಗೆ ವೇತನಗಳನ್ನು ಸರ್ಕಾರದವರೇ ಕೊಡುತ್ತಾರೆ ಈ ಕಸಬುಗಳನ್ನು ಕಲಿಯುವುದಕ್ಕೆ ಈ ಪಾಠಶಾಲೆಗೆ ಸೇರಬೇಕೆಂದು ಅಪೇಕ್ಷಿಸುವ ಬಾಲಕರು ಎರಡನೇ ವರ್ನಾಕ್ಯುಲರ್ ಸ್ಟಾಂಡರ್ಡಿನಷ್ಟಾದರೂ ಓದು ಬರಹ ಲೆಕ್ಕಾಚಾರಗಳನ್ನು ಕಲಿತಿರಬೇಕು. ಅವರ ವಯಸ್ಸು ೧೨ ವರುಷಕ್ಕಿಂತ ಕಡಮೆಯಾಗಿರಕೂಡದು ಬಾಲಕರನ್ನು ಅವರ ತಂದೆಯಾಗಲಿ ಪೋಷಕರಾಗಲಿ ಮೂರು ವರುಷಗಳ ತನಕ ಸ್ಕೂಲಿನಲ್ಲಿಟ್ಟಿದ್ದು ಅಲ್ಲಿನ ಕ್ರಮಗಳಿಗೆ ಅನುಸಾರವಾಗಿ ಮಕ್ಕಳನ್ನು ಕಳುಹಿಸುತ್ತಾ ಬರುವ ಭಾಗದಲ್ಲಿ ಒಂದು ಕರಾರನ್ನು ಬರೆದುಕೊಡಬೇಕಾಗಿದೆ.

ಈಗ ಈ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ವರ್ಷಕ್ಕೆ ೨,೮೦೦ ರೂಪಾಯಿ ವರೆಗೆ ಸರ್ಕಾರದವರು ಖರ್ಚು ಇಟ್ಟಿದ್ದಾರೆ ಸದ್ಯ ೪೦ ಹುಡುಗರು ಅರಗಿನ ಕಸಬನ್ನೂ ೬ ಮಂದಿ ನೀಳೆ ತಂತಿಗಳನ್ನೂ ಮಾಡುವ ಕಸಬುಗಳನ್ನು ಕಲಿಯುತ್ತಿರುವರು ಇವರು ತಯಾರುಮಾಡಿದ ಪದಾರ್ಥಗಳನ್ನು ಬಿಕರಿ ಮಾಡುವುದಲ್ಲದೆ ಸ್ಕೂಲಿಗೆ ಮತ್ಯಾವ ವರಮಾನವೂ ಇಲ್ಲ. ಕಳೆದ ವರುಷ ಈ ಸ್ಕೂಲಿನಲ್ಲಿ ೧,೦೨೫ ರೂಪಾಯಿನ ಸಾಮಾನುಗಳು ತಯಾರಾದವು ಈ ಪೈಕಿ ೯೦೩ ರೂಪಾಯಿನಷ್ಟು ಬಿಕರಿಯಾಗಿರುತ್ತವೆ. ಇದುವರೆಗೆ ಅರಗಿನ ಕೆಲಸ ಮಾಡುವುದರಲ್ಲಿ ೧೨ ಮಂದಿ ಬಾಲಕರೂ, ತಂತಿಗಳನ್ನು ಮಾಡುವುದರಲ್ಲಿ ೫ ಮಂದಿಯೂ, ಮರಕೆಲಸದಲ್ಲಿ ೩ ಮಂದಿಯೂ ತೇರ್ಗಡೆ ಹೊಂದಿ, ಸ್ಕೂಲನ್ನು ಬಿಟ್ಟು ಹೋಗಿದ್ದಾರೆ. ಇವರೆಲ್ಲಾ ಸ್ವಂತ ಸಂಪಾದನೆಗಳನ್ನಿಟ್ಟುಕೊಂಡು ಕಸಬು ನಡಿಸುತ್ತಾ ಅಭಿವೃದ್ಧಿ ಹೊಂದುತ್ತಿರುವರು ಮೇಲ್ಕಂಡ ಪದಾರ್ಥಗಳನ್ನು ಎಲ್ಲಾ ಕಡೆಗಳ ಜನರು ಬಹಳವಾಗಿ ಅಪೇಕ್ಷಿಸುತ್ತಾರಾದ್ದರಿಂದ ಅವರಿಗೆ ತುಂಬಾ ಪ್ರಯೋಜನವಾಗುತ್ತಿದೆ ಎಂದು ಹೇಳಬೇಕಾದದ್ದಿಲ್ಲ. ಮೂರು ವರುಷ ಈ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿದ್ದು ಕಸಬನ್ನು ಕಲಿತ ಪಕ್ಷದಲ್ಲಿ ದಿನಕ್ಕೆ ಒಂದು ರೂಪಾಯಿನಂತೆ ಸಂಪಾದನೆ ಮಾಡಿಕೊಳ್ಳುವ ಯೋಗ್ಯತೆಯುಂಟಾಗುವುದು ಬಂಡವಾಳ ಹಾಕಿ ಕಸಬು ನಡಿಸಲಾರದವರನ್ನು ಸ್ಕೂಲಿನಲ್ಲೇ ಇಟ್ಟುಕೊಂಡು, ಅವರಿಂದ ಪದಾರ್ಥಗಳನ್ನು ಮಾಡಿಸಿ, ಕೂಲಿ ಕೊಡುವುದಕ್ಕೂ ಏರ್ಪಾಡು ಮಾಡಿದೆ. ಈ ಸ್ಕೂಲಿನಲ್ಲಿ ತಯಾರಾದ ಪದಾರ್ಥಗಳು ಉತ್ಕೃಷ್ಟವಾಗಿರುವ ಭಾಗದಲ್ಲಿ ಅನೇಕ ಪ್ರದರ್ಶನಗಳೊಳಗೆ ಬಂದಿರುವ ಮೆಡಲುಗಳೂ, ಸರ್ಟಿಫಿಕೇಟುಗಳೂ, ಬಹುಮಾನಗಳೂ ದೃಷ್ಟಾಂತಗಳಾಗಿರುತ್ತವೆ.

ಜಮೀನ್ದಾರರಿಗೆ ಉಪಯುಕ್ತವಾದ ಸಮಾಚಾರವು.

ಕೋಲಾರ ಡಿಸ್ಟ್ರಿಕ್ಟು ವ್ಯವಸಾಯಕ ಸಂಘ

ಕೋಲಾರ ಡಿಸ್ಟ್ರಿಕ್ಟಿನ ರೈತಾಪಿ ಜನರ ಪ್ರಯೋಜನಾರ್ಥವಾಗಿ ಒಂದು ವ್ಯವಸಾಯಕ ಸಂಘವನ್ನು ಸ್ಥಾಪಿಸುವ ಉದ್ದೇಶ್ಯ ಕಳೆದ ಜೂನ್ ೫ನೇ ತಾರೀಖಿನ ದಿನ ಚಿಂತಾಮಣಿಯಲ್ಲಿ ಒಂದು ಸಭೆ ಜರುಗಿತು. ಡಿಸ್ಟ್ರಿಕ್ಟಿನ ಎಲ್ಲಾ ಸರ್ಕಾರಿ ಉದ್ಯೋಗಸ್ಥರೂ, ಕೆಲವು ಮುಖಂಡರಾದ ವಕೀಲರೂ, ಜಮೀನ್ದಾರರೂ, ಪಟೇಲ್ ಶಾನುಭೋಗರೂ ಹಾಜರಿದ್ದರು ಡೆಪ್ಯುಟಿ ಕಮಿಷನರ್ ಮಿ॥ ಶ್ರೀಕಂಠೇಶ್ವರ ಅಯ್ಯರವರು ಅಗ್ರಾಸನವನ್ನು ವಹಿಸಿದ್ದರು ಕೋಲಾರ ಡಿಸ್ಟ್ರಿಕ್ಟಿನಲ್ಲಿ ವ್ಯವಸಾಯಾಭಿವೃದ್ಧಿಗೋಸ್ಕರ "ದಿ ಕೋಲಾರ್ ಡಿಸ್ಟ್ರಿಕ್ಟ್ ಅಗ್ರಿಕಲ್ಚರಲ್ ಅಸೋಸಿಯೇಷನ್" ಎಂಬ ಹೆಸರಿನಿಂದ ಒಂದು ಸಂಘವನ್ನು ಏರ್ಪಾಡುಮಾಡಿಕೊಳ್ಳಬೇಕೆಂದು ಸಭೆಯಲ್ಲಿ ನಿರ್ಣಯಮಾಡಲ್ಪಟ್ಟಿತು. ಈ ಸಂಘಕ್ಕೆ ಮೆಂಬರುಗಳಾಗಲು ೫೦ ರೂಪಾಯಿಗೆ ಮೇಲ್ಪಟ್ಟು ಕಂದಾಯಕೊಡತಕ್ಕ ಜಮೀನ್ದಾರರು ಅರ್ಹರಾಗಿರುತ್ತಾರೆ. ಮೆಂಬರುಗಳು ಸಾಲಿಯಾನಾ ೧ ರೂಪಾಯಿನಂತೆ ಚಂದಾವನ್ನು ಮುಂಗಡವಾಗಿ ಕೊಡಬೇಕಲ್ಲದೆ, ೫ ರೂಪಾಯಿಗೆ ಕಮ್ಮಿ ಇಲ್ಲದೆ ದೊನೇಷನ್ ಕೊಡಬೇಕೆಂದು ನಿರ್ಣಯಿಸಲ್ಪಟ್ಟಿದೆ ಈ ಸಂಘದ ಮುಖ್ಯೋದ್ದೇಶಗಳೇನೆಂದರೆ—(೧) ವ್ಯವಸಾಯಾಭಿವೃದ್ಧಿಗೆ ಸಂಬಂಧಿಸಿದ ನೂತನ ವಿಷಯಗಳನ್ನು ಪುಸ್ತಕಗಳ ಮೂಲಕವೂ ಉಪನ್ಯಾಸಗಳ ಮೂಲಕವೂ ರೈತಾಪಿ ಜನರಿಗೆ ಪ್ರಚುರಪಡಿಸುವುದು (೨) ನಾಸರಿ ಫಾರಂಗಳನ್ನು ಸ್ಥಾಪಿಸಿ, ಅಜಮಾಯಿಷಿ ತರೀಖು ವ್ಯವಸಾಯಮಾಡುವುದು, ನೂತನವಾದ ಮತ್ತು ಮೇಲಾದ ವ್ಯವಸಾಯಕ್ರಮಗಳನ್ನು ನಿದರ್ಶನಪೂರ್ವಕವಾಗಿ ತೋರಿಸಿಕೊಡುವುದು (೩) ಉತ್ತಮವಾದ ಮುಟ್ಟುಗಳು, ಬೀಜಗಳು, ಗೊಬ್ಬರ ಮತ್ತು ಕಾಳ್ನಡೆಗಳನ್ನು ಪರೀಕ್ಷಾರ್ಥವಾಗಿ ತರಿಸುವುದು, ಮತ್ತು ಸಂಘದ ಮೆಂಬರುಗಳು ಖಾಯಿಷ್ ಪಟ್ಟರೆ ಅವರಿಗೆ ಕೊಡುವುದು (೪) ಡಿಸ್ಟ್ರಿಕ್ಟಿನಲ್ಲಿ ಜಾತ್ರೆಗಳು ನಡೆಯುವ ಕಾಲಗಳಲ್ಲಿ ಆಗಾಗ್ಗೆ ದಿವಾಯತು (?) ಸಾಮಾನುಗಳು, ಮುಟ್ಟುಗಳು ಮತ್ತು ಕಾಳ್ನಡೆಗಳ ಪ್ರದರ್ಶನವನ್ನು ಏರ್ಪಡಿಸುವುದು (೫) ಬೇಸಾಯಗಾರರಲ್ಲಿ ಪರಸ್ಪರ ಸಹಾಯಕ ಸಂಘಗಳನ್ನು ಏರ್ಪಡಿಸಲು ಪ್ರೋತ್ಸಾಹಕೊಡುವುದು (೬) ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ವ್ಯವಸಾಯ ವಿಚಾರವಾದ ವರ್ತಮಾನ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ತರಿಸಿ ಮೆಂಬರುಗಳಿಗೆ ಓದಲಿಕ್ಕೆ ಕೊಡುವುದು

ಪ್ರದರ್ಶನಕ್ಕೆ ಗೂಳಿಗಳು ಬೇಕು.

ದ್ಯೂರ್ಗಸಿ (?) ಪಟ್ಟಣದಲ್ಲಿರುವ ಬಾಸಲ್‌ಖಂಡ್ (?) ಹಾಲ್ಸ್‌ಗಾಮಲಿನ (?) ಮೊಟ್ಟೇಸರರಾದ ಮಿ॥ ಜೆ ಡಬ್ಲ್ಯು ಅಬಟ್‌ರವರು ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್ ದೇಶಗಳಲ್ಲಿ ೧೯೦೯ನೇ ಇಸವಿಯಲ್ಲಿ ನಡೆಯುವ ಪ್ರದರ್ಶನಗಳಿಗೆ ಇಂಡಿಯಾ ದೇಶದಿಂದ ೪-೫ ವಿಶೇಷ ಉತ್ಕೃಷ್ಟ ಜಾತಿಯ ಗೂಳಿಗಳನ್ನು ತೆಗೆದುಕೊಂಡುಹೋಗಲು ಉದ್ದೇಶಪಟ್ಟಿರುತ್ತಾರೆ. ಈ ಪೈಕಿ ಮೈಸೂರು ನಾಡಿನ ಪ್ರಖ್ಯಾತವಾದ ಎರಡು ಜಾತಿಯ ದನಗಳನ್ನು ಪ್ರದರ್ಶಿಸಬೇಕೆಂದು ಅವರು ನಿರ್ಧರಿಸಿ, ಗೂಳಿಗಳನ್ನು ೧೯೦೯ನೇ ಇಸವಿ ಮಾರ್ಚಿ ತಿಂಗಳೊಳಗಾಗಿ ಒದಗಿಸಿಕೊಳ್ಳಲು ರೆವಿನ್ಯೂ ಕಮಿಷನರ್ ರವರ ಸಹಾಯವನ್ನು ಅಪೇಕ್ಷಿಸಿರುತ್ತಾರೆ. ಈ ಸಂಸ್ಥಾನದಲ್ಲಿ ಶ್ರೇಷ್ಠ ಜಾತಿಯ ದನಗಳನ್ನು ಸಾಕುವವರು ಮಿ॥ ಅಬಟ್‌ಯವರ ಕೋರಿಕೆಯಂತೆ ಸಹಾಯಮಾಡುವುದಾದರೆ ಈ ಭಾಗವಲ್ಲಿ ರೆವಿನ್ಯೂ ಕಮಿಷನರವರಿಗಾಗಲೀ, ಅಥವಾ ಅಮೃತಮಹಲ್ ಇಲಾಖಾ ಸೂಪರಿಂಟೆಂಡೆಂಟ್ ಮಿ॥ ಎಚ್. ನಂಜುಂಡರಾಜೇ ಅರಸಿನವರಿಗಾಗಲೀ ಬರೆದುಕೊಳ್ಳಬಹುದು.

ಜಮೀನಿಗೆ ಸುಣ್ಣವನ್ನು ಉಪಯೋಗಿಸುವುದು.

ಸುಣ್ಣವನ್ನು ಗೊಬ್ಬರಕ್ಕೆ ಬದಲಾಗಿ ಜಮೀನಿಗೆ ಉಪಯೋಗಿಸಲಾಗುವುದಿಲ್ಲ ಆದರೆ ಅದು ಗೊಬ್ಬರದೊಂದಿಗೆ ಉಪಯೋಗಿಸಿದರೆ ಬಹಳ ಅನುಕೂಲ ಕೊಳೆತ ಸೊಪ್ಪುಸೊದೆ ಜಮಾಯಿಸಿರುವ ಜೌಗು ಜಮೀನುಗಳಿಗೆ ಸುಣ್ಣವನ್ನು ಹಾಕಿದರೆ ಬಹಳ ಅನುಕೂಲ. ಗಟ್ಟಿಯಾದ ಜೇಡುಭೂಮಿಗಳಿಗೆ ಅವುಗಳಲ್ಲಿ ಸಸ್ಯ ಸಂಬಂಧವಾದ ಪದಾರ್ಥಗಳಿಲ್ಲದಿದ್ದರೂ ಕೂಡ ಸುಣ್ಣದಿಂದ ಬಹಳ ಪ್ರಯೋಜನವುಂಟು. ಹೇಗೆಂದರೆ, ಸುಣ್ಣವು ಭೂಮಿಯಲ್ಲಿರುವ ಧಾತುಪದಾರ್ಥಗಳನ್ನು ಬೇರೆಬೇರೆ ಮಾಡಿ, ಅವುಗಳಲ್ಲಿನ ಸಸ್ಯಾಹಾರಪದಾರ್ಥಗಳನ್ನು ಗಿಡಗಳಿಗೆ ಒದಗಿಸಿಕೊಡುತ್ತದೆ. ಭೂಮಿಯನ್ನು ಸಾಗುವಳಿಮಾಡುವುದು ಸಹ ಸುಲಭವಾಗುತ್ತದೆ ಸುಣ್ಣವನ್ನು ಜಮೀನಿನ ಮೇಲೆ ಅಲ್ಲಲ್ಲಿ ರಾಶಿಮಾಡಿ, ಮಣ್ಣು ಮುಚ್ಚಬೇಕು. ಭೂಮಿಯ ತನುವಿನಿಂದ ಸುಣ್ಣವು ಕರಗುತ್ತದೆ. ಅನಂತರ ಸುಣ್ಣವೆಲ್ಲಾ ಚೆನ್ನಾಗಿ ಪುಡಿ

ಯಾದ ಕೂಡಲೆ ಅದನ್ನು ಜಮೀನಿನ ಮೇಲೆ ಸಮನಾಗಿ ಹರವಿ, ಭೂಮಿಯಲ್ಲಿ ಸೇರಿಹೋಗುವಂತೆ ಕುಂಟೇ ಹೊಡೆಯಬೇಕು. ಜಮೀನು ಬಹಳ ಒಣಗಲಾಗಿದ್ದರೆ ಸುಣ್ಣವು ಕರಗುವಂತೆ ಅದರ ಮೇಲೆ ಸ್ವಲ್ಪ ನೀರನ್ನು ಸುರಿಯಬಹುದು. ಸುಣ್ಣವು ಜಮೀನಿನಲ್ಲಿ ಇಳಿಯುವ ಸ್ವಭಾವವುಳ್ಳದ್ದಾದಕಾರಣ ಅದನ್ನು ಭೂಮಿಯಲ್ಲಿ ಬಹಳ ಒಳಗೆ ಹಾಕಕೂಡದು. ಮತ್ತು ಹರವಿದ ಮೇಲೆ ಭಾರವಾದ ಕುಂಟೆಯಿಂದ ಉಕ್ಕಮಾಡಿದರೆ ಸುಣ್ಣವೆಲ್ಲಾ ಭೂಮಿಯಲ್ಲಿ ಬೆರೆತುಹೋಗುವುದು. ಸುಣ್ಣವು ಗಿಡಗಳಿಗೆ ಪ್ರಾಪ್ತವಾಗುವ ನಾನಾತರದ ಬೂದು ಜಾಡ್ಯಗಳನ್ನು ಪರಿಹರಿಸುತ್ತದೆ. ಇದು ಭೂಮಿಯಲ್ಲಿನ ಸಾರವತ್ ಪದಾರ್ಥಗಳನ್ನು ವೃದ್ಧಿಗೊಳಿಸುತ್ತದೆ.

ಇಂಡಿಯಾ ದೇಶದ ವೃತ್ತಾಂತಗಳು.

ರಂಗೂನ್ ಪಟ್ಟಣಕ್ಕೆ ೬೦ ಮೈಲಿ ದೂರದಲ್ಲಿರುವ ಒಕ್ಕರ್ ಎಂಬ ಸ್ಥಳದಲ್ಲಿ ಕಳೆದ ಭಾನುವಾರ ಮಳೆಯು ಜೋಕೆಯಲ್ಲಿ ರಂಗೂನಿನಲ್ಲಿ ಬಿದ್ದಂತೆಯೇ ಬಹಳ ಕಾಂದ್ರೇ ಜವಿಯು ಬಿದ್ದಿತು.

❖❖❖

ಬರ್ಮಾ ಆಧಿಪತ್ಯಕ್ಕೆ ಸೇರಿದ ಮೇಮಿಯೋ ಎಂಬ ಪಟ್ಟಣದಲ್ಲಿ ಹುಚ್ಚು ನಾಯಿ ನರಿ ಮೊದಲಾದ ಪ್ರಾಣಿಗಳಿಂದ ಕಡಿಸಿಕೊಂಡವರನ್ನು ಚಿಕಿತ್ಸೆ ಮಾಡುವಂಥಾ ಒಂದು ಆಸ್ಪತ್ರೆಯನ್ನು ಪ್ರಾರಂಭಮಾಡಿದಾರೆ. ಈ ಆಸ್ಪತ್ರೆಯ ನಿಬಂಧನಕ್ಕೆ ಬಹು ಜನರು ಸೇರಿ ಇದುವರೆಗೆ ೧,೯೦,೦೦೦ ರೂಪಾಯಿ ಚಂದಾ ಕೊಟ್ಟಿರುವರು.

❖❖❖

ಮದರಾಸ್ ಆಧಿಪತ್ಯಕ್ಕೆ ಸೇರಿದ ಬೆಜವಾಡಾದಲ್ಲಿ ಹರಿ ಸರ್ವೋತ್ತಮರಾವ್ ಎಂ. ಎ ಯವರನ್ನೂ ನಾರಾಯಣರಾವ್ ಎಂಬ ಸ್ವದೇಶೀ ಬೋಧಕರನ್ನೂ ಅವರು ಆ ಪ್ರಾಂತ್ಯದಲ್ಲಿ ಪ್ರಕಟವಾಗುತ್ತಿರುವ ಒಂದು ತೆಲುಗು ವರ್ತಮಾನ ಪತ್ರಿಕೆಯಲ್ಲಿ ರಾಜದ್ರೋಹಕರವಾದ ವಾಕ್ಯಗಳನ್ನು ಬರೆದರೆಂದು ಕಳೆದ ವಾರ ಪೋಲೀಸಿನವರು ದಸ್ತಗಿರಿ ಮಾಡಿದಾರೆ.

❖❖❖

ಮೈಲಾಪುರದ ಕೃಷ್ಣ ಐಯರ್ ಎಂಬ "ಸ್ವದೇಶೀ" ಬೋಧಕನನ್ನು ರಾಜದ್ರೋಹಕರವಾದ ಉಪನ್ಯಾಸ ಮಾಡಿದ್ದಕ್ಕಾಗಿ ಈರೋಡಿನ ಮ್ಯಾಜಿಸ್ಟ್ರೇಟ್ ಮಿ। ಸಾಂಬಶಿವ ಐಯರವರು ಸೆಷನ್ಸ್ ಕೋರ್ಟಿನ ವಿಚಾರಣೆಗೆ ಗುರಿಮಾಡಿದಾರೆ. ಅಪರಾಧಿಯು ತನ್ನ ಕಡೆ ೬೦ ಮಂದಿ ಸಾಕ್ಷಿಗಳಿಗೆ ಸಮನ್ ಕೊಡಬೇಕೆಂದು ಕೇಳಿಕೊಂಡನು. ಈ ಮೊಕದ್ದಮೆಯು ಮುಂದಿನ ತಿಂಗಳಲ್ಲಿ ವಿಚಾರಣೆಯಾಗುವುದು.

❖❖❖

ಹಿಂದುಸ್ಥಾನದ ದಕ್ಷಿಣ ಡಿಸ್ಟ್ರಿಕ್ಟುಗಳಿಂದ ಕಳೆದ ೧೯೦೭ ನೇ ವರುಷದಲ್ಲಿ ೭೦,೫೦೦ ಜನರು ಪೀನಾಂಗ್ ಎಂಬ ಪ್ರಾಂತ್ಯಕ್ಕೆ ಹೋಗಿ ನಿಂತರು. ಇಷ್ಟೊಂದು ಜನ ಇದುವರೆಗೆ ಹಿಂದೆ ಯಾವ ವರುಷದಲ್ಲೂ ಅಲ್ಲಿಗೆ ಹೋದದ್ದಿಲ್ಲ. ಆ ಪೈಕಿ ಅಲ್ಲಿನ ಸರ್ಕಾರದವರು ೨೩,೦೦೦ ಜನರಿಗೆ ಖರ್ಚಿಲ್ಲದೆ ಟಿಕೇಟುಗಳನ್ನು ಕೊಡಿಸಿ ಕರೆಸಿಕೊಂಡರು. ಕಳೆದ ವರುಷ ಅಲ್ಲಿಂದ ೨೯,೭೦೦ ಜನರು ದಕ್ಷಿಣ ದೇಶಕ್ಕೆ ವಾಪಸು ಬಂದಿರುತ್ತಾರೆ.

❖❖❖

ಬರ್ಮಾ ಆಧಿಪತ್ಯದಲ್ಲಿ ಸಂಚಾರಮಾಡಿ ಪರೀಕ್ಷೆಮಾಡಿ ನೋಡಿ ಬಂದಿರುವಂಥಾ ಮಿ। ಲೋರಿಂಗ್ ಎಂಬೊಬ್ಬ ಭೂಗರ್ಭ ಶಾಸ್ತ್ರಜ್ಞನು ಕಳೆದ ವಾರ ಶೀಮೆಗೆ ಪ್ರಯಾಣಮಾಡುವುದಕ್ಕೆ ಮೊದಲು ಒಬ್ಬ ವಾತ್ಮೀದಾರನ ಕೂಡ ಆ ಆಧಿಪತ್ಯದಲ್ಲಿ ಬೆಳ್ಳಿ, ಸೀಸ, ತಾಂಬ್ರ, ಈ ಲೋಹಗಳು ಅಪಾರವಾಗಿ ಸಿಕ್ಕುತ್ತವೆ ಎಂದು ತಿಳಿಸಿರುತ್ತಾನೆ. ಇದನ್ನು ತೆಗೆದು ರಪ್ತುಮಾಡಿ ಲಾಭಸಂಪಾದನೆ ಮಾಡುವುದಕ್ಕೆ ಆಗಲೇ ವಿಲಾಯತಿಯಲ್ಲಿ ಒಂದು ಕಂಪನಿಯು ಏರ್ಪಾಡಾಗಿರುವುದು.

❖❖❖

ಬೊಂಬಾಯಿ ವಿದ್ಯಾನಿಲಯ ಸಂಘದವರು ಸರ್ ಮಂಗಳದಾಸ್ ನಾಥೂಬಾಯಿ ಎಂಬ ಪುಣ್ಯಾತ್ಮನ ಹೆಸರಿನಲ್ಲಿ ಕೊಡಬೇಕಾದ ಎರಡು ವಿದ್ಯಾರ್ಥಿ ವೇತನಗಳನ್ನು ಈ ವರುಷ ಮಿ॥ ಎಸ್. ಬೋಸಾನ, ಮಿ। ಆರ್ ವಿ ಚಕ್ರಧರ ಎಂಬ ಇಬ್ಬರು ಯೌವನಸ್ಥರಿಗೆ ಕೊಟ್ಟಿದಾರೆ. ಪ್ರತಿ ಒಬ್ಬರಿಗೂ ತಿಂಗಳಿಗೆ ೧೫೦ ರೂಪಾಯಿ ವೇತನ ಸಿಕ್ಕುವುದು. ಇವರಿಬ್ಬರು ವಿಲಾಯತಿಗೆ ಹೋಗಿ ವಿದ್ಯುಚ್ಛಕ್ತಿ, ರಸಾಯನ ಶಾಸ್ತ್ರ, ಗಣಿಗಳ ವಿಚಾರ, ಈ ಮೊದಲಾದವುಗಳನ್ನು ಕಲಿತು ಬರುವಂತೆ ಗೊತ್ತಾಗಿದೆ.

❖❖❖

ಅನಂತಶಯನ ಸಂಸ್ಥಾನದಲ್ಲಿ ಪೋಲೀಸಿನವರ ಮೇಲೆ ಕೈ ಮಾಡಿ ಪೋಲೀಸ್ ಠಾಣಾವನ್ನು ಸುಟ್ಟು ದೊಂಬಿಮಾಡಿದರೆಂದು ಸರ್ಕಾರದವರು ೭೫ ಮಂದಿ ಪರ್ತಕರೇ ಮೊದಲಾದವರನ್ನು ದಸ್ತಗಿರಿ ಮಾಡಿರುವರಷ್ಟೆ. ಈ ಮೊದಲನೇ ಗುಂಪಿನ ಅಪರಾಧಿಗಳ ದರ್ಯಾಪ್ತಿಯು ಕಳೆದ ಬುಧವಾರ ಪ್ರಾರಂಭವಾಯಿತು. ಇನ್ನೂ ೧೬ ಮಂದಿ ಅಪರಾಧಿಗಳನ್ನು ಪೋಲೀಸಿನವರು ಹಿಡಿಯಲು ತಲಾಷ್ ಮಾಡುತ್ತಿದಾರೆ. ಮೇಲ್ಕಂಡ ಅಪರಾಧಿಗಳ ಪರವಾಗಿ ಅಲ್ಲಿನ ಸುಮಾರು ಹದಿನೈದು ಜನ ವಕೀಲರು ಮೊಕದ್ದಮೆಯನ್ನು ನಡಿಸುವರು. ಅಪರಾಧಿಗಳ್ಯಾರನ್ನೂ ಜಾಮೀನ್ ಮೇಲೆ ಬಿಡುವುದಿಲ್ಲವೆಂದು ಮ್ಯಾಜಿಸ್ಟ್ರೇಟರು ಹೇಳಿದರು.

❖❖❖

ಕಡಲೂರು ಜಿಲ್ಲೆಗೆ ಸೇರಿದ ತಿರುಕೋಯಿಲೂರಿನಲ್ಲಿ ಸಿ ಸಬೇಶ ಪಿಸುರೆಂಬವನು ಒಬ್ಬ ನಾಟುಕೋಟಿ ಶೆಟ್ಟಿಯ ಕಡೆ ಏಜಂಟಾಗಿ ಕೆಲಸ ಮಾಡುತ್ತಾ, ಆತನ ಹಣವನ್ನು ಲೇವಾದೇವಿ ಮಾಡುತ್ತಾ ಇದ್ದವನು ೨೧,೧೫೦ ರೂಪಾಯಿ ತನಗೆ ದುರುಪಯೋಗಪಡಿಸಿದನೆಂದು ಗೊತ್ತಾಯಿತು. ಅವನನ್ನು ಪೋಲೀಸಿನವರು ಹಿಡಿದು ಲಾಕಪ್ಪಿನಲ್ಲಿ ಹಾಕಿಕೊಂಡು ತನಿಖೆಮಾಡುತ್ತಿದ್ದರು. ಅವನು ಒಂದು ದಿನ ರಾತ್ರಿ ಜೈಲಿನಲ್ಲಿ ಭೋಜನಮಾಡುತ್ತಿರುವಾಗ ತಪ್ಪಿಸಿಕೊಂಡು ಓಡಿಹೋದನು. ಅವನ ಮೇಲೆ ಉಸ್ತುವಾರಿ ಇದ್ದ ಮೂರು ಮಂದಿ ಪೋಲೀಸಿನವರನ್ನು ಅವರ ಅಜಾಗರೂಕತೆಗೋಸ್ಕರ ಹಿಡಿದು ಬರ್ತರ್ಫು ಮಾಡುತ್ತಿದಾರೆ. ತಪ್ಪಿಸಿಕೊಂಡವನು ಮಾತ್ರ ಇನ್ನೂ ಸಿಕ್ಕಲಿಲ್ಲ.

❖❖❖

ಕಲ್ಕತ್ತಾ ಪಟ್ಟಣದಲ್ಲಿ ಗಾರ್ಡನ್ ಹೈಲೆಂಡರ್ಸ್ ಎಂಬ ರಿಜಿಮೆಂಟಿನಲ್ಲಿದ್ದ ಜೇಂಸ್ ಸ್ಟುವರ್ಟ್ ಎಂಬ ಇಂಗ್ಲಿಷ್ ಶಿಪಾಯಿಯು ಒಬ್ಬ ದೇಶೀಯ ಪೋಲೀಸ್ ಕಾನ್ಸ್ಟೆಬಲನ್ನು ಹೊಡೆದನು. ಛೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಅವನನ್ನು ಬರ್ತರ್ಫು ಮಾಡಿ ಮೂರು ತಿಂಗಳ ಸಜಾ ವಿಧಿಸಿ, ಹೇಳಿದ್ದೇನೆಂದರೆ—ಈ ರಿಜಿಮೆಂಟಿನ ಶಿಪಾಯಿಗಳು ಹಿಂದುಗಳನ್ನು ಹೊಡೆಯುವುದು ಈಚೆಗೆ ಸಾಮಾನ್ಯವಾಗುತ್ತಿರುವಂತೆ ಕಾಣುತ್ತದೆ. ಇದು ತುಂಬಾ ಅವಮಾನವೇ ಸರಿ. ಇದರಿಂದ ಹಿಂದುಸ್ಥಾನದವರ ದೃಷ್ಟಿಯಲ್ಲಿ ಇಂಗ್ಲಿಷ್ ಶಿಪಾಯಿಗಳು ಬಹಳ ಅಲ್ಪರಾಗಲು ಅವಕಾಶವಾಗುವುದು. ಇನ್ನು ಮುಂದೆ ಇಂಥಾ ಕೃತ್ಯಗಳೇನಾದರೂ ನಡೆದ ಪಕ್ಷದಲ್ಲಿ ಅವರಿಗೆ ಇನ್ನೂ ಹೆಚ್ಚು ಶಿಕ್ಷೆಯನ್ನು ವಿಧಿಸಲಾದೀತು ಎಂಬುದೇ.

❖❖❖

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಇಲಾಖೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಕ್ರಮಪಡಿಸುವುದಕ್ಕೆ ಗವರ್ನಮೆಂಟಿನವರು ಮುಂದಿನ ವರುಷ ಇನ್ನೂ ೫೦,೦೦೦ ರೂಪಾಯಿ ಹೆಚ್ಚಾಗಿ ಖರ್ಚುಮಾಡುವವರಾಗಿದಾರೆ. ಅಲ್ಲಿನ ಇಂಗ್ಲಿಷ್ ನಾರ್ಮಲ್ ಸ್ಕೂಲಿನಲ್ಲಿ ಉಪಾಧ್ಯಾಯರುಗಳಿಗೆ ಹಸ್ತ ಕೌಶಲ (ಮ್ಯಾನ್ಯುಯಲ್ ಟ್ರೈನಿಂಗ್) ವಿದ್ಯೆಯನ್ನು ಕಲಿಸುವುದಕ್ಕೋಸ್ಕರ ವಿಲಾಯತಿಯಿಂದ ಒಬ್ಬ ಬೋಧಕನನ್ನು ಕರೆಸಿ ನೇಮಿಸುವರು. ಈ ಬೋಧಕನು ಈ ವರುಷದ ಅಂತ್ಯಭಾಗದಲ್ಲಿ ಅನಂತಶಯನವನ್ನು ತಲಪುವವನಾಗಿದಾನೆ. ಇದಲ್ಲದೆ ಆ ಸಂಸ್ಥಾನದಲ್ಲಿರುವ ಬಾಲಿಕಾ ಪಾಠಶಾಲೆಗಳನ್ನು ಆಗಾಗ್ಗೆ ತನಿಖೆಮಾಡಿ ಅಭಿವೃದ್ಧಿಗೆ ತರುವುದಕ್ಕೋಸ್ಕರ ಮಿಸ್ ಜೋರಾ ವಾಟ್ಸ್ ಎಂಬ ವಿದ್ಯಾವತಿಯನ್ನು ಇನ್ಸ್ಪೆಕ್ಟರಾಗಿ ನೇಮಕಮಾಡಿದಾರೆ.

❖❖❖

ಕಲ್ಕತ್ತೆಯಲ್ಲಿ ಒಬ್ಬ ಕಾಬೂಲಿಯು ತುಲಸಿ ಎಂಬ ಹಿಂದುವಿಗೆ ೩೦ ರೂಪಾಯಿ ಸಾಲಕೊಟ್ಟು, ಅದಕ್ಕೆ ತಿಂಗಳಿಗೆ ೬ ರೂಪಾಯಿನಂತೆ ಬಡ್ಡಿ ತೆಗೆದುಕೊಳ್ಳುತ್ತಾ ಬಂದನು. ಅವನಿಗೆ ಬಡ್ಡಿಯೇ ೬೮ ರೂಪಾಯಿ ಪಾವತಿ ಆಯಿತು. ಅಸಲು ಹಣ ಇನ್ನೂ ವಸೂಲಾಗಲಿಲ್ಲ. ಆದರೆ ತುಲಸಿಯು ಕುಡುಕನಾಗಿ, ಒಂದು ದಿನ ಬಹಳ ಕುಡಿದು ಸತ್ತುಹೋದನು. ಪೋಲೀಸಿನವರು ಶವವನ್ನು ಡಾಕ್ಟರ ಅಜಮಾಯಿಷಿಗಾಗಿ ತೆಗೆದುಕೊಂಡು ಹೋಗಲು ಪ್ರಯತ್ನಪಡುತ್ತಿರುವಷ್ಟರಲ್ಲಿ ಆ ಕಾಬೂಲಿಯು ಹೋಗಿ, ತನ್ನ ಸಾಲದ ಹಣವನ್ನು ತನಗೆ ಕೊಡದೆ ಇರೋಣಗರಿಂದ ತುಲಸಿಯು ಸತ್ತಿಲ್ಲವೆಂದು ಕೂಗುತ್ತಾ, ಪೋಲೀಸಿನವರನ್ನು ಕುರಿತು— ಈ ತುಲಸಿಯು ಸತ್ತಿದಾನೆಂದು ನಾನು ನಂಬುವುದಿಲ್ಲ. ಅವನನ್ನು ನನ್ನ ದೊಣ್ಣೆಯಿಂದ ನಾಲ್ಕಾರು ಏಟು ಹೊಡೆದು ನೋಡುತ್ತೇನೆ ಎಂದು ಕೇಳಿದನು. ಆಗ ಪೋಲೀಸಿನವರು ಆ ಕಾಬೂಲಿಯನ್ನು ಅಲ್ಲಿಂದ ಹೊರಡಿಸಿ ಬಿಟ್ಟರು. ಅವನು ಪೋಲೀಸಿನವರನ್ನೂ ಸತ್ತ ತುಲಸಿಯನ್ನೂ ದೂಷಣೆ ಮಾಡುತ್ತಾ ಹೋದನು.

❖❖❖

ಬರೋಡಾ ಸಂಸ್ಥಾನದ ಮಹಾರಾಜರವರಿಗೆ ಮೊಮ್ಮಗನು ಜನಿಸಿದ ಹನ್ನೆರಡನೆಯ ದಿನ ನವಸಾರಿ ಪಟ್ಟಣದಲ್ಲಿ ಪ್ರಜೆಗಳು ಸೇರಿ ಅನೇಕ ಸಂತೋಷೋತ್ಸವಗಳನ್ನು ನಡಿಸಿದರು. ಮಿ। ರತನಜಿ ಫ್ರಾಂಜಿ ದಾಬು ಯವರು ಸುಮಾರು ೩,೦೦೦ ಸ್ಕೂಲ್ ಮಕ್ಕಳಿಗೆ ಮಿಠಾಯಿ ಕೊಡಿಸಿದರು. ಬ್ಯಾರಿಸ್ಟರ್ ಖಾನ್ ಬಹದೂರ್ ಯಾಸುಫಲ್ಲಿ ಯವರು ೧,೦೦೦ ರೂಪಾಯಿನ ಫಂಡು ಹಾಕಿ ಅದರ ಉತ್ಪತ್ತಿಯಿಂದ ಸರ್ ಕಾವಾಸ್ಜಿ ಜಹಂಗೀರ್ ಯವರ ಹೈಸ್ಕೂಲಿನಲ್ಲಿ ಉತ್ತಮೋತ್ತಮವಾಗಿ ತೇರ್ಗಡೆ ಹೊಂದುವ ಮಹಮದೀಯ ವಿದ್ಯಾರ್ಥಿಗೆ ಪ್ರತಿ ವರುಷವೂ ರಾಜಕುಮಾರನ ಹೆಸರಿನಲ್ಲಿ ಬಹುಮಾನ ಕೊಡತಕ್ಕದ್ದೆಂದು ತಮ್ಮ ಅಭಿಲಾಷೆಯನ್ನು ತಿಳಿಸಿದರು. ಮತ್ತು ಮಿ। ರತನಜಿ ಫ್ರಾಂಜಿ ದಾಬು ಯವರು ಮಹಾರಾಜರವರಿಗೆ ಮೊಮ್ಮಗನು ಜನಿಸಿದ ಸಂತೋಷದ ಜ್ಞಾಪಕಾರ್ಥವಾಗಿ ೧೦,೦೦೦ ರೂಪಾಯಿ ಫಂಡು ಹಾಕಿ ಮೇಲ್ಕಂಡ ಹೈಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳಿಗಾಗಿ ಒಂದು ಸ್ಟೂಡೆಂಟ್ಸ್ ಹೋಂ (ವಿದ್ಯಾರ್ಥಿ ನಿಲಯ) ವನ್ನು ಕಟ್ಟಿಸಿಕೊಡುವಂತೆ ಹೇಳಿದರು. ಇನ್ನು ಕೆಲವು ವರ್ತಕರೂ ದೊಡ್ಡ ಮನುಷ್ಯರೂ ಬಡಬಗ್ಗರಿಗೆಲ್ಲಾ ಸುಖಭೋಜನ ಮಾಡಿಸಿ, ಬಟ್ಟೆ ಬರೆಗಳನ್ನು ಧರ್ಮ ಮಾಡಿದರು.

ವಿದೇಶ ವರ್ತಮಾನಗಳು.

ಅಮೇರಿಕಕ್ಕೆ ಸೇರಿದ ಓಹಿಯೋ ಡಿಸ್ಟ್ರಿಕ್ಟಿನಲ್ಲಿ ಷೆಲ್ಬಿ ಎಂಬ ಊರಿನ ಒಂದು ಭಾರೀ ಕಾರ್ಖಾನೆಗೆ ಕಳೆದ ವಾರ ಬೆಂಕಿ ಬಿದ್ದು ೬೦ ಲಕ್ಷ ರೂಪಾಯಿನ ಸಾಮಾನುಗಳೂ ಯಂತ್ರಗಳೂ ಕಟ್ಟಡಗಳೂ ನಾಶಹೊಂದಿದವು.

❖❖❖

ಪೋರ್ಚುಗಲ್ ರಾಜ್ಯದ ಪಾರ್ಲಿಮೆಂಟಿನವರು ರಾಜಾದಾಯದಲ್ಲಿ ತಮ್ಮ ದೊರೆಯವರಿಗೆ ಪ್ರತಿ ತಿಂಗಳಿಗೂ ೩,೩೦೦ ರೂಪಾಯಿನಂತೆಯೂ, ಯುವರಾಜರವರಿಗೆ ವರುಷಕ್ಕೆ ೫೩,೨೫೦ ರೂಪಾಯಿನಂತೆಯೂ ಸಲ್ಲಿಸುತ್ತಾ ಬರಬೇಕೆಂದು ತೀರ್ಮಾನ ಮಾಡಿದಾರೆ.

❖❖❖

ಆಸ್ಟ್ರಿಯಾ ರಾಜ್ಯಕ್ಕೆ ಸೇರಿದ ಇನ್ಸ್‌ಬ್ರಕ್ ಎಂಬ ಪಟ್ಟಣದ ಬಳಿ ಜೈರಲ್ ಎಂಬ ಗ್ರಾಮವೇ ಕಳೆದ ವಾರ ಸುಟ್ಟುಹೋಯಿತು. ೨೦೧ ಮನೆಗಳು ನೆಲಸಮನಾದವು. ಇಬ್ಬರು ಉರಿಯಲ್ಲಿ ಸಿಕ್ಕಿ ಮೃತಪಟ್ಟರು. ೧೨ ಜನರಿಗೆ ಪೂರಾ ಗಾಯಗಳಾಗಿವೆ. ಅನೇಕರು ಏನಾದರೋ ಪತ್ತೆಯಾಗಲಿಲ್ಲ. ಒಟ್ಟು ೧,೩೦೦ ಪ್ರಜೆಗಳು ಮನೆಮಠಾದಿಗಳನ್ನು ಕಳೆದುಕೊಂಡು ಅಲೆಯುತ್ತಿದಾರೆ.

❖❖❖

ಸಯಾಂ ರಾಜ್ಯದ ದೊರೆಯವರು ಜಪಾನ್ ರಾಜ್ಯದಲ್ಲಿ ಹಡಗುಗಳನ್ನು ಕಟ್ಟಿ ತಯಾರುಮಾಡುತ್ತಿರುವ ಕಾರ್ಖಾನೆಗಳನ್ನು ನೋಡಿ ಬಂದು, ತಮ್ಮ ರಕ್ತಸಂಬಂಧಿಗಳಲ್ಲೂ ಆಪ್ತಸ್ನೇಹಿತರಲ್ಲೂ ಚಟುವಟಿಕೆಯಾಗಿರುವ ೧೬ ರಿಂದ ೨೩ ವಯಸ್ಸಿನೊಳಗಿರುವ ಒಂಬತ್ತು ಮಂದಿಯನ್ನು ಜಪಾನಿಗೆ ಕಳುಹಿಸಿಕೊಟ್ಟಿದಾರೆ. ಇವರು ಅಲ್ಲಿ ಜಪಾನ್, ಇಂಗ್ಲಿಷ್ ಭಾಷೆಗಳನ್ನೂ ಹಡಗು ಕಟ್ಟುವ ವಿಧಾನಗಳನ್ನೂ ಕಲಿಯುತ್ತಿದಾರೆ.

❖❖❖

ಇಂಗ್ಲಾಂಡಿಗೂ ಫ್ರಾನ್ಸಿಗೂ ನಡುವೆ ಇಂಗ್ಲೀಷ್ ಕಾಲುವೆ ಎಂಬ ೩೬ ಮೈಲಿ ವಿಸ್ತಾರವುಳ್ಳ ಸಮುದ್ರಶಾಖೆ ಇರುತ್ತದೆ. ಕಳೆದ ವಾರ ಈ ೩೬ ಮೈಲಿ ದೂರ ಈಜಿಕೊಂಡು ಬರುವುದಾಗಿ ಬಾಜಿ ಕಟ್ಟಿಕೊಂಡು ಹೊರಟ ಜೇಬೆಸ್ ವುಲ್ಫ್ ಎಂಬಾತನು ೩೫ ಮೈಲಿಯಷ್ಟು ಸಮುದ್ರಮಾರ್ಗವನ್ನು ೧೩॥। ಗಂಟೆ ಹೊತ್ತಿನಲ್ಲಿ ಈಜಿದನು. ದಡವು ಇನ್ನು ಒಂದು ಮೈಲಿ ದೂರದಲ್ಲಿ ಮಾತ್ರ ಇರುವಷ್ಟರಲ್ಲೇ ಅವನಿಗೆ ಸಾಕಾಗಿ ಬಿಟ್ಟುಬಿಟ್ಟನು.

❖❖❖

ಕ್ಯಾನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೆ ಸೇರಿದ "ಮೂರು ನದಿಗಳು" ಎಂಬ ಸ್ಥಳದಲ್ಲಿ ಹಿಂದಿನ ವಾರ ಭಯಂಕರವಾದ ಅಗ್ನಿಜ್ವಾಲೆಗಳು ಹುಟ್ಟಿ, ಒಂದು ರೋಮನ್ ದೇವಸ್ಥಾನ, ಸುಂಕದ ಮನೆ, ಅಂಗಡಿ ಲೈನುಗಳು, ಎಲ್ಲಾ ಬ್ಯಾಂಕುಗಳು, ಹತ್ತು ಹೋಟೇಲುಗಳು, ಸುಂದರವಾದ ಅನೇಕ ಮನೆಗಳು, ಈ ಮೊದಲಾದ ಕಟ್ಟಡಗಳು ಸುಟ್ಟುಹೋದವು. ಸಾವಿರಾರು ಜನರಿಗೆ ಮನೆಗಳು ಸುಟ್ಟುಹೋದರೂ ಸರ್ಕಾರದವರು ಬೇರೇ ಮನೆಗಳನ್ನು ಕೊಡಿಸಿ, ಆಹಾರ ಸಾಮಗ್ರಿಗಳನ್ನು ಒದಗಿಸಿದಾರೆ. ಈ ಬೆಂಕಿಯಿಂದ ೩೦ ಲಕ್ಷ ರೂಪಾಯಿನ ಆಸ್ತಿಗಳು ಹಾಳಾದವು.

❖❖❖

ಫ್ರಾನ್ಸ್ ಸಂಸ್ಥಾನದಲ್ಲಿ ಮುದುಕರೂ ಮತ್ತು ನಿರ್ಗತಿಕರೂ ಆದ ಪ್ರಜೆಗಳಿಗೆ ಸರ್ಕಾರಿ ಹುಟ್ಟುವಳಿ ಹಣದಿಂದ ಜೀವನಾರ್ಥವಾದ ಪೆನ್ಷನ್ ಕೊಡಬೇಕೆಂದು ಕೆಲವು ಅಧಿಕಾರಿಗಳು ಚರ್ಚೆಮಾಡುತ್ತಿದಾರೆ. ಈ ಅಧಿಕಾರಿಗಳ ಸಂಘಕ್ಕೆ ಪ್ರಧಾನ ಮಂತ್ರಿ ಎಂ. ಕ್ಲೆಮೆನ್ಸೋ ಯವರು ಬರೆದು ತಿಳಿಸಿರುವುದೇನೆಂದರೆ—ಈ ಪೆನ್ಷನ್ ಕೊಡತಕ್ಕ ವಿಚಾರವನ್ನು ಬೇಗನೆ ತೀರ್ಮಾನ ಮಾಡಬೇಕು. ೬೫ ವರುಷ ತುಂಬಿದ ಬಡವರಿಗೆಲ್ಲಾ ಪೆನ್ಷನ್ ದೊರಕುವ ಏರ್ಪಾಡಾಗಬೇಕು. ಪೆನ್ಷನ್ ಪ್ರತಿ ಒಬ್ಬ ಮುದುಕನಿಗೂ ವರ್ಷಕ್ಕೆ ೨೧೦ ರೂಪಾಯಿಗಿಂತ ಕಡಮೆಯಾಗಬಾರದು ಎಂಬುದೇ.

❖❖❖

ಫ್ರಾನ್ಸ್ ರಾಜ್ಯದ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರದಲ್ಲಿ ಎಂ. ಜೋಣೆ ಎಂಬಾತನು ಒಂದು ವಿಮಾನವನ್ನು ತಯಾರುಮಾಡುತ್ತಲಿದಾನೆ. ಇದರಲ್ಲಿ ೫೦ ಮಂದಿ ಆಯುಧಪಾಣಿಗಳಾದ ಸೈನಿಕರು ಕುಳಿತುಕೊಂಡು ಸಂಚರಿಸುವುದಕ್ಕೆ ಸ್ಥಳವಕಾಶವುಂಟಾಗುವುದು. ಈ ವಿಮಾನವು ಅಂತರಿಕ್ಷದಲ್ಲಿ ೧ ಗಂಟೆಗೆ ೬೦ ಮೈಲಿಯ ಪ್ರಕಾರ ಸಂಚಾರಮಾಡಬಲ್ಲದ್ದಾಗುತ್ತದೆ. ಇದಲ್ಲದೆ ಈ ವಿಮಾನವನ್ನು ಉಪಯೋಗಿಸಿದ ಪಕ್ಷದಲ್ಲಿ ಇದರಿಂದ ರೈಲ್ ರಸ್ತೆಯನ್ನಾಗಲಿ, ಫಿರಂಗಿ ಸೈನ್ಯವನ್ನಾಗಲಿ, ಒಂದು ಕೋಟೆಯನ್ನಾಗಲಿ ಒಡೆದು ಹಾರಿಸಿ ನಾಶಪಡಿಸಬಹುದೆಂದು ಆ ಕಾರೀಗಾರನು ತಿಳಿಸುತ್ತಾನೆ.

❖❖❖

ಆಫ್ರಿಕಾ ಖಂಡದ ಪಶ್ಚಿಮ ಸಮುದ್ರತೀರದಲ್ಲಿ ಕಳೆದ ಜೂನ್ ತಿಂಗಳ ಅಂತ್ಯಭಾಗದಲ್ಲಿ ಒಂದು ಹಡಗು ಸಂಚಾರಮಾಡುತ್ತಿದ್ದಾಗ ಸುಂಟರಗಾಳಿ ಪ್ರಾಪ್ತವಾಗಿ ಆ ಹಡಗು ಮಗುಚಿಕೊಂಡಿತು. ಒಳಗಿದ್ದ ಸುಮಾರು ೪೦ ಜನರು ದಡವನ್ನು ಹೋಗಿ ಸೇರಿಕೊಂಡರು. ಆದರೆ ಆ ದಡದಲ್ಲಿ ಕಾದಿದ್ದ ಅನೇಕಾನೇಕ ನರಮಾಂಸಭಕ್ಷಕರು ಅವರನ್ನೆಲ್ಲಾ ಹಿಡಿದು, ಕತ್ತರಿಸಿ ಹಾಕಿ ತಿಂದುಬಿಟ್ಟರು ಎಂದು ಅಲ್ಲಿಂದ ತಪ್ಪಿಸಿಕೊಂಡು ಬಂದಿರುವ ಒಬ್ಬ ಇಂಜನಿಯರು ತಿಳಿಸಿರುತ್ತಾನೆ. ಆತನಿಗೆ ಅಲ್ಲಿ ನಡೆದ ಆ ಕ್ರೂರಕೃತ್ಯಗಳನ್ನು ನೋಡಿ ಮನಸ್ಸು ಕಳವಳ ಹೊಂದಿ, ಬುದ್ಧಿಸ್ವಾಧೀನವಿಲ್ಲದೆ, ಈಗ ವಿಲಾಯತಿಯ ಆಸ್ಪತ್ರೆಯಲ್ಲಿ ಚಿಕಿತ್ಸೆಮಾಡಿಸಿಕೊಳ್ಳುತ್ತಿದಾನೆ

❖❖❖

ಆಸ್ಟ್ರಿಯಾ ರಾಜ್ಯದ ರಾಜಧಾನಿಯಾದ ವಿಯನ್ನಾ ನಗರದಲ್ಲೂ ಆಸ್ಟ್ರಿಯಾದ ವಿವಿಧ ಪ್ರಾಂತ್ಯಗಳಲ್ಲೂ ಹಿಂದಿನ ವಾರ ಅಪೂರ್ವವಾದ ಸೆಕೆಯುಂಟಾಯಿತೆಂದು ತಂತೀ ವರ್ತಮಾನ ಬಂದಿದೆ. ಅಂಥಾ ಸೆಕೆಯನ್ನು ೬೦ ವರುಷಗಳಿಂದ ಅಲ್ಲಿ ಯಾರೂ ಅನುಭವಿಸಿರಲಿಲ್ಲ. ಸೆಕೆಯು ಎರಡು ವಾರಗಳ ತನಕ ೯೦ ರಿಂದ ೯೫ ಡಿಗ್ರಿಯ ವರೆಗೆ ಹೆಚ್ಚಿತು. ಅನೇಕ ಜನರಿಗೂ ಪ್ರಾಣಿಗಳಿಗೂ ಬಿಸಿಲಿನ ಝಳ ಬಡಿದು ತಲ್ಲಣವನ್ನೂ ನಷ್ಟವನ್ನೂ ಉಂಟುಮಾಡಿತು. ಒಂದು ಬಾಲಿಕಾ ಪಾಠಶಾಲೆಯಲ್ಲಿ ೧೬ ಮಂದಿ ಬಾಲಿಕೆಯರು ಬಿಸಿಲಿನ ತಾಪವನ್ನು ಸಹಿಸಲಾರದೆ ಸೊಕ್ಕಿ ಮೂರ್ಛೆ ಹೋದರು. ಅದನ್ನು ನೋಡಿದ ಕೂಡಲೇ ಆ ಪಾಠಶಾಲೆಯನ್ನೇ ಮುಚ್ಚಿಬಿಟ್ಟರೆಂದು ತಿಳಿದು ಬಂದಿದೆ.

❖❖❖

ವಿಲಾಯತಿಯಲ್ಲಿ ಕಳೆದ ೧೮೫೯ ನೇ ಇಸವಿಯಲ್ಲಿ ದೇಶವತ್ಸಲರ ಸಂರಕ್ಷಣಾರ್ಥವಾಗಿ ಒಂದು ಫಂಡು ಕೂಡಿಸಲ್ಪಟ್ಟಿತು. ಈ ಫಂಡಿನ ಉತ್ಪತ್ತಿಯಿಂದ ಸಮುದ್ರ ಯುದ್ಧದಲ್ಲೂ ಭೂ ಯುದ್ಧದಲ್ಲೂ ಕಾದಾಡಿ ಪ್ರಾಣವನ್ನೊಪ್ಪಿಸಿದಂಥಾ ಇಂಗ್ಲಿಷ್ ಸೈನಿಕರ ಹೆಂಡರು ಮಕ್ಕಳು ಮೊದಲಾದವರನ್ನು ಸಂರಕ್ಷಣೆ ಮಾಡುವರು. ಕಳೆದ ೫೦ ವರುಷಗಳಲ್ಲಿ ೧೨,೦೭೩ ಮಂದಿ ವಿಧವೆಯರಿಗೂ, ೧೫,೭೪೮

ಮಂದಿ ಮಕ್ಕಳಿಗೂ, ೨,೭೧೬ ಮಂದಿ ಸಂಬಂಧಿಗಳಿಗೂ ಈ ಫಂಡಿನಿಂದ ದ್ರವ್ಯ ಸಹಾಯವಾಗಿರುವುದು. ಈಗ ಈ ಫಂಡಿನಲ್ಲಿ ೧,೬೯,೨೦,೦೦೦ ರೂಪಾಯಿ ಇರುತ್ತದೆಂತಲೂ, ಇದರಲ್ಲಿ ಬರುವ ಉತ್ಪತ್ತಿಯಿಂದ ೬,೧೫,೦೦೦ ರೂಪಾಯನ್ನು ವಿನಿಯೋಗಿಸಿ, ೮,೩೦೦೦ ಮಂದಿಯನ್ನು ಸಂರಕ್ಷಣೆಮಾಡುತ್ತಿದ್ದಾರೆಂತಲೂ ತಿಳಿಯುವುದು.

❖❖❖

ಅನ್ನಾಂ ಸಂಸ್ಥಾನದ ದೊರೆಯಾಗಿದ್ದ ಥ್ಯಾಗ್‌ಥಾಯಿ ಎಂಬಾತನು ಕೆಲವು ಕಾಲಕ್ಕೆ ಮುಂಚೆ ತನ್ನ ರಾಣೀವಾಸದ ಸ್ತ್ರೀಯರನ್ನು ಬಹು ಕ್ರೂರತರವಾದ ಹಿಂಸೆಗೆ ಗುರಿಮಾಡಿ ಕೊಲ್ಲಿಸಿದ್ದರಿಂದ ಫ್ರೆಂಚರು ಅತನಿಗೆ ದೊರೆತನವನ್ನು ತಪ್ಪಿಸಿ, ರಾಜಧಾನಿಯಾದ ಸೈಗಾನ್ ಪಟ್ಟಣದ ಹೊರಪಾರ್ಶ್ವದಲ್ಲಿ ಒಂದು ಬಂಗಲೆಯೊಳಗೆ ಆತನನ್ನು ಇಟ್ಟು ಪೋಷಣೆಮಾಡುತ್ತಾ ಬಂದಿದ್ದಾರೆ ಆದರೆ ಈತನು ಅಲ್ಲೂ ಮೇಲ್ಕಂಡ ರೀತಿಯಾದ ಹಿಂಸೆಗಳನ್ನು ನಡಿಸುತ್ತಾನೆಂದು ತಿಳಿದು ಬಂದಿರುವ ಕಾರಣ ಆತನ ಮೇಲೆ ಫ್ರೆಂಚರು ಕಾವಲಿನವರನ್ನು ನೇಮಿಸಿರುತ್ತಾರೆ. ಇದಲ್ಲದೆ ಇಷ್ಟರೊಳಗಾಗಿ ಆ ದೊರೆಯನ್ನು ಆ ದೇಶವನ್ನೇ ಬಿಡಿಸಿ, ಅಫ್ರಿಕಕ್ಕೆ ಸೇರಿದ ಅಲ್ಜೀರಿಯಾ ನಗರಕ್ಕೆ ಕರೆದುಕೊಂಡು ಹೋಗಿ ಇಡಬೇಕೆಂದು ತೀರ್ಮಾನ ಮಾಡಿರುವರೆಂದು ಪ್ರಕಟವಾಗಿದೆ

❖❖❖

ಹಿಂದುಸ್ಥಾನದಲ್ಲಿ ಇಂಗ್ಲಿಷ್ ಪ್ರಭುತ್ವವನ್ನು ಹರಡಿ ಅಭಿವೃದ್ಧಿಗೆ ತರುವುದರಲ್ಲಿ ತುಂಬಾ ಸಾಹಸಪಟ್ಟ ಲಾರ್ಡ್ ಕ್ಲೈವ್ ಎಂಬ ಇಂಗ್ಲಿಷ್ ಮಹನೀಯನ ಹೆಸರನ್ನು ವಿಲಾಯತಿಯಲ್ಲೂ ಹಿಂದುಸ್ಥಾನದಲ್ಲೂ ಶಾಶ್ವತಪಡಿಸುವುದಕ್ಕೆ ಯಾವ ಕಾರ್ಯವೂ ನಡೆದಿಲ್ಲವೆಂದು ಲಾರ್ಡ್ ಕರ್ಜನ್‌ರವರು ಸುಮಾರು ೩-೪ ತಿಂಗಳ ಕೆಳಗೆ ಪ್ರಕಟಿಸಿ ಅದಕ್ಕಾಗಿ ಒಂದು ಫಂಡನ್ನು ಕೂಡಿಸಬೇಕೆಂದು ಪ್ರಯತ್ನಪಟ್ಟರಷ್ಟೆ. ಈಗ ಈ ಫಂಡಿಗೆ ೩೫,೦೦೦ ರೂಪಾಯಿಗಿಂತಲೂ ಹೆಚ್ಚಾಗಿ ವಸೂಲಾಗಿರುತ್ತದೆ. ಈ ಹಣದಲ್ಲಿ ೫-೬೦೦೦ ರೂಪಾಯನ್ನು ವಿನಿಯೋಗಿಸಿ, ಲಾರ್ಡ್ ಕ್ಲೈವ್‌ಯವರ ಲೋಹಪ್ರತಿಮೆಯನ್ನು ಮಾಡಿಸಿ, ಲಂಡನ್ ಪಟ್ಟಣದಲ್ಲಿರುವ ಇಂಡಿಯಾ ಆಫೀಸಿನ ಮುಂಭಾಗದಲ್ಲಿ ನಿಲ್ಲಿಸಬೇಕೆಂತಲೂ, ಅದರಂತೆಯೇ ಇನ್ನೊಂದು ಪ್ರತಿಮೆಯನ್ನು ಮಾಡಿಸಿ ಕಲ್ಕತ್ತಾ ಪಟ್ಟಣದಲ್ಲಿ ಕಟ್ಟಲ್ಪಡುವ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಬಂಗಲೆಯ ಮುಂಭಾಗದಲ್ಲಿ ಇಡಿಸಬೇಕೆಂತಲೂ ಲಾರ್ಡ್ ಕರ್ಜನ್‌ರವರು ತೀರ್ಮಾನಮಾಡಿರುತ್ತಾರೆ

❖❖❖

ಪೂರ್ವ ಆಫ್ರಿಕಕ್ಕೆ ಸೇರಿದ ಯೂಗಾಂಡಾ ಪ್ರಾಂತ್ಯದಲ್ಲಿ ನಿದ್ರಾರೋಗವೆಂಬುದಿದೆಯಷ್ಟೆ. ಈ ರೋಗದ ಲಕ್ಷಣಗಳನ್ನೂ ಅದಕ್ಕೆ ಪರಿಹಾರಗಳನ್ನೂ ಕಂಡು ಹಿಡಿಯುವುದಕ್ಕೆ ಕಳೆದ ೧೯೦೨ ನೇ ಇಸವಿಯಲ್ಲಿ ಕೆಲವು ಡಾಕ್ಟರುಗಳು ಅಲ್ಲಿಗೆ ಹೋಗಿ ಮೂರು ವರುಷ ಕಾಲ ಆ ರೋಗವನ್ನು ಹಲವು ಪರಿಕ್ಷೆಗಳಿಂದ ಅಜಮಾಯಿಷಿ ಮಾಡಿದರು. ಅವರಲ್ಲಿ ಮುಖಂಡನಾಗಿದ್ದ ಲೆಫ್ಟಿನೆಂಟ್ ಟಲಕ್ ಎಂಬ ಡಾಕ್ಟರಿಗೆ ೧೯೦೫ ನೇ ಇಸವಿಯಲ್ಲಿ ಆ ರೋಗ ತಗಲಿ ಅವರಲ್ಲೇ ತೀರಿ ಹೋದನು ಆ ಲಾಗಾಯಿತು ಇದುವರೆಗೆ ಆ ರೋಗದ ಪರಿಕ್ಷಾಕಾರ್ಯವನ್ನು ನಿಲ್ಲಿಸಿದ್ದರು. ಈಗ ಮತ್ತೆ ಪರಿಶೋಧನಾ ಕಾರ್ಯವನ್ನು ನಡಿಸಬೇಕೆಂದು ಕೆಲವು ಡಾಕ್ಟರುಗಳು ಯೂಗಾಂಡಾ ಸೀಮೆಗೆ ಹೋಗಲು ಏರ್ಪಾಡುಮಾಡಿಕೊಂಡಿದ್ದಾರೆ ಕರ್ನಲ್ ಡೇವಿಡ್ ಬ್ರೂಸ್ ಎಂಬ ಡಾಕ್ಟರೇ ಅವರಲ್ಲಿ ಅಧ್ಯಕ್ಷರಾಗಿರುವನು ಇವರ ಕೂಡ ಇವರ ಪತ್ನಿಯವರೂ, ಕ್ಯಾಪ್ಟನ್ ಹಾಮಿಲ್ಟನ್‌ರವರೂ, ಕ್ಯಾಪ್ಟನ್ ಬೆಕ್‌ಮನ್ ರವರೂ ಪ್ರಯಾಣಮಾಡುವುದಾಗಿ ಗೊತ್ತಾಗಿದೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥಪತ್ರಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ದೇಶಾಭಿಮಾನಿ, ಮಂಡ್ಯ.—ನೀವು ಇತರ ಪತ್ರಸ್ಥರ ಆಚಾರ ವ್ಯವಹಾರಗಳನ್ನು ಕುರಿತು ಪ್ರಸ್ತಾಪಮಾಡುವಾಗ ಗಾಂಭೀರ್ಯ ಗೌರವ ಯುಕ್ತವಾದ ಮಾತುಗಳನ್ನು ಪ್ರಯೋಗಿಸಬೇಕೆಂದು ಕೋರುತ್ತೇವೆ.

ಅರಸೀಕೆರೆ ತಾಲ್ಲೋಕು ಜಾವಗಲ್ಲಿನ ಸ್ಕೂಲಿನಲ್ಲಿ ಕಾರ್ಯಗಳು ತೃಪ್ತಿಕರವಾದ ರೀತಿಯಲ್ಲಿ ನಡಿಯುತ್ತಾ ಇಲ್ಲವೆಂತಲೂ, ಈ ವಿಷಯದಲ್ಲಿ ಗ್ರಾಮಸ್ಥರೂ ಸ್ಕೂಲ್ ಕಮಿಟಿ ಮೆಂಬರುಗಳೂ ಡೆಪ್ಟಿ ಇನ್‌ಸ್ಪೆಕ್ಟರಿಗೆ ಅರ್ಜಿ ಬರೆದುಕೊಂಡರೂ ಅವರು ಇನ್ನೂ ಗಮನಕ್ಕೆ ತಂದುಕೊಳ್ಳಲಿಲ್ಲವೆಂತಲೂ ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ ಸ್ಕೂಲ್ ಇಲಾಖೆಯವರು ಇದನ್ನು ವಿಚಾರಮಾಡುವುದು ಹಿತಕರವಾಗಿದ್ದೀತು

ಕರೆಸ್‌ಪಾಂಡೆನ್ಸ್.

ಮೈಸೂರು ಪ್ರಾಂತ್ಯದ ಬಡರೈತರ ಕಷ್ಟವು

ಅಯ್ಯಾ,

ಧರ್ಮಪ್ರಭುಗಳಾದ ಸರ್ಕಾರದವರು ಪ್ರಜೆಗಳಿಗೆ ಗದ್ದೆ ಸಾಗುವಳಿಗಾಗಿ ನಾಲೆಗಳನ್ನು ಏರ್ಪಡಿಸಿ ಕೊಟ್ಟಿರುವುದು ಸರಿಯಷ್ಟೆ. ಈ ಪೈಕಿ ಉದ್ದೂರು ನಾಲಾ, ಬಾಚಹಳ್ಳಿ ಅಂತ್ಯದ ಬಳಿ ಒಂದು ನಾಲಾ ಉಂಟು. ಈ ಬಳಿ ಸರ್ಕಾರದವರು ಹೊಸದಾಗಿ ಒಂದು ದುಲ್ಲಾಗಾವಲನ್ನು ಏರ್ಪಡಿಸಿರುತ್ತಾರೆ. ಇಲ್ಲಿಯ ಕಾವಲುಗಾರರು ಗದ್ದೆ ಸಾಗುವಳಿಗಾಗಿ ಮಾಮೂಲ್ ದಾರಿಯಲ್ಲಿ ಹೋಗುವ ಬಡ ರೈತರಿಗೆ ತುಂಬಾ ತೊಂದರೆ ಕೊಡುತ್ತಾರೆ ಈ ದಾರಿ ಬಿಟ್ಟರೆ ರೈತರಿಗೆ ಬೇರೆ ದಾರಿ ಇಲ್ಲ. ಈಗ ಗದ್ದೆ ನಾಟಿ ಕಾಲ. ಈ ಕಾಲ ಮೀರಿಹೋದರೆ ಬಡವರ ಗತಿ ಏನು? ಸರ್ಕಾರಕ್ಕೆ ಕಂದಾಯ ಕಟ್ಟುವದು ಹ್ಯಾಗೆ? ಆದ್ದರಿಂದ ಘನವ್ಯಕ್ತರಾದ ಸರ್ಕಾರದವರು ಈ ಬಡವರ ಕಷ್ಟವನ್ನು ನಿವಾರಣೆ ಮಾಡಿ, ಉದ್ಧಾರಮಾಡುವರೆಂದು ಕೋರುವ ಪ್ರಜೆ

ಹಿತಚಿಂತಕ.

ಸುಪಥ ವಿಧವಾ ವಿವಾಹವು

ಅಯ್ಯಾ,

ಕೇವಲ ಚಿಕ್ಕ ವಯಸ್ಸಿನಲ್ಲಿಯೇ ಪತಿಗಳನ್ನು ಕಳೆದುಕೊಂಡು, ದುಃಖಿಸುತ್ತಿರುವ ಬಾಲಕಿಯರ ಅಗಾಧವಾದ ಶೋಕಾಗ್ನಿಯೂ, ಮತ್ತು ಚಿಕ್ಕಂದಿನಲ್ಲಿಯೇ ಪತ್ನಿಯರನ್ನು ಕಳೆದುಕೊಂಡು ಕೊರಗುತ್ತಲಿರುವ ಪುರುಷರ ವ್ಯಸನವೆಂಬ ಚಂಡಮಾರುತವೂ ಸೇರಿ, ನಮ್ಮ ರಾಜ್ಯವನ್ನು ದಹಿಸುತ್ತಲಿದ್ದರೂ, ಪರೋಪಕಾರಿಗಳಾದ ಮಹನೀಯರು ಈ ಜ್ವಾಲೆಯನ್ನು ಆರಿಸದೆ, ಸುಮ್ಮನಿರುವುದು ನ್ಯಾಯವೇ? ಸಜ್ಜನಾನುಮತಕ್ಕೆ ಇದು ಅತ್ಯಂತ ವಿರೋಧವಾದುದಲ್ಲವೇ? ಯಾರು ತಾನೇ ತಮ್ಮ ಮತಕ್ಕೆ ವಿರೋಧವಾಗಿ ಆಚರಿಸಲು ಸಮ್ಮತಿಸುವರು? ಹಾಗಾದರೂ ಪುನರ್ವಿವಾಹಾಪೇಕ್ಷೆಯುಳ್ಳ ಸ್ತ್ರೀ ಪುರುಷರುಗಳಾಗಲಿ, ಅವರ ಪೋಷಕರಾಗಲಿ ಅಂಥ ಸ್ತ್ರೀಪುರುಷರುಗಳ ಹೆಸರನ್ನೂ, ಅವರ ವಾಸಸ್ಥಳವನ್ನೂ, ಅವರ ಸಂಪೂರ್ಣವಾದ ಅಭಿಪ್ರಾಯಗಳನ್ನೂ ಪತ್ರಿಕಾ ಮೂಲಕ ಏತಕ್ಕೆ ಪ್ರಕಟಪಡಿಸಬಾರದು? ಇದರಲ್ಲಿ ತೊಂದರೆಯೇನು? ಇದು ಸುಲಭೋಪಾಯವಲ್ಲವೇ? ಇಲ್ಲವಾದರೆ ಅನೇಕ ಗ್ರಾಮಗಳ ದೂರ ಸಂಚರಿಸಿ, ವಿಶೇಷವಾಗಿ ಶರೀರಶ್ರಮ ಹೊಂದಿದಾಗ್ಯೂ ಒಬ್ಬರ ಅಭಿಪ್ರಾಯವು ಮತ್ತೊಬ್ಬರಿಗೆ ತಿಳಿಯದೆ, ಆಶಾಭಗ್ನರಾಗಿ, ಮುನ್ನಿನಂತೆಯೇ ಶೋಕಾಗ್ನಿಯಲ್ಲಿ ದಹಿಸುತ್ತಿರಬೇಕಾಗುವುದು. ಆದುದರಿಂದ ಪರೋಪಕಾರಿಗಳಾದ ಸರ್ವರೂ ಶೀಘ್ರದಲ್ಲಿಯೇ ಈ ಏರ್ಪಾಡನ್ನು ಅಭಿವೃದ್ಧಿಗೆ ತಂದು, ನಮ್ಮ ರಾಷ್ಟ್ರವನ್ನು ರಕ್ಷಿಸುವರೆಂದು ನಂಬಿದ್ದೇನೆ

ವಿ ಜಿ ಸ

ಶೈವರ ಉಪನ್ಯಾಸವು

ಅಯ್ಯಾ,

ಶ್ರೀ ಕಾಸನೂರು ಸಂಸ್ಥಾನದ ಪಂಡಿತ ಗುರುಬಸವಭಿಕ್ಷಾವೃತ್ತಿ ಸ್ವಾಮಿಗಳವರು ಹಾಸನಕ್ಕೆ ದಯಮಾಡಿಸಲು ಜುಲೈ ತಾ ೨೦ ರಲ್ಲಿ ಸಕಲ ಮತದ ವೈದಿಕ ಲೌಕಿಕ ಮುಖ್ಯ ಜನಗಳೊಡನೆ ಜನರವಹಳ್ಳಿ ಮಠದಲ್ಲಿ ಬೆಳಗಿನ ೮ ಗಂಟೆಗೆ ಸಭೆ ಸೇರಿತು ಸಾಹುಕಾರ್ ಮಲ್ಲಪ್ಪನವರು ಶ್ರೀಮಠದ ಶಾಂತವೀರ ಸ್ವಾಮಿಗಳವರು ಅಧ್ಯಕ್ಷ ಸ್ಥಾನವನ್ನು ವಹಿಸಬೇಕೆಂದು ಪ್ರಾರ್ಥಿಸಲು, ನಗರ ಮಹದೇವಪ್ಪನವರು ಅನುಮೋದಿಸಲು, ಶ್ರೀಗಳವರು ಸಮಾಧಾನಚಿತ್ತದಿಂದ ಅಗ್ರಾಸನವನ್ನು ವಹಿಸಿದರು. ನಂತರ ಸ್ವಾಮಿ ಸಂಪ ಭಿಕ್ಷಾವೃತ್ತಿಗಳವರು ಪ್ರಾಕೃತ ಸಂಸ್ಕೃತ ಪದಗಳ ಉತ್ಪತ್ತಿ, ವರ್ಣಕ್ರಮ ವಿಚಾರ, ದೀಕ್ಷೆ, ಗುರುಲಕ್ಷಣ, ಷಟ್‌ಸ್ಥಲ ವಿಚಾರ, ಶಿವದೀಕ್ಷೆ ಮೊದಲಾದ ವೇದೋಕ್ತ ಕರ್ಮಗಳನ್ನು ವೀರಶೈವರಲ್ಲಿ ಅಧಿಕಾರಿಗಳು ಅವಶ್ಯಕವಾಗಿ ಮಾಡಬೇಕೆಂಬುದೇ ಮೊದಲಾದ ವಿಷಯಗಳನ್ನು ಅನೇಕ ಶ್ರುತಿ ಸ್ಮೃತಿ ಪುರಾಣಗಳೇತಿಹಾಸ ಭಾಷ್ಯ ಸೂತ್ರಸಿದ್ಧಾಂತ ಪ್ರಮಾಣಗಳಿಂದ ಪಂಡಿತ ಪಾಮರರುಗಳ ಚಿತ್ತ ಪ್ರತಿಬಿಂಬಿಸುವಂತೆ ಅಸದೃಶವಾದ ವಿದ್ಯಾ ಪ್ರೌಢಿಮೆಯಿಂದ ಅತ್ಯದ್ಭುತವಾದ ಭಾಷಣವನ್ನು ಮಾಡಿದರು. ಅನಂತರ ನೇಗಿ ಸ್ವಾಮಿ [illegible] ಪ್ಪನವರು ಪಾರ್ಸ್ಯ ವಿಷಯವಾಗಿಯೂ, ಎಚ್. ಕೆ ಮಲ್ಲಪ್ಪನವರು ಶ್ರೀಗಳವರ [illegible] ವಿಷಯದಲ್ಲಿಯೂ ಭಾಷಣ ಮಾಡಲು ಆಪ್ಪಣೆಯಾಗಲು, ಶ್ರೀ [illegible] ಪಂಡಿತ ಭಿಕ್ಷಾವೃತ್ತಿಗಳವರು ಕಾಶೀ ಮೊದಲಾದ ಸ್ಥಳಗಳಲ್ಲಿ ಅನೇಕ ಶಾಸ್ತ್ರಗಳನ್ನು ಅಧ್ಯಯನಮಾಡಿ, ಇಲ್ಲಿ [illegible] ದಯಮಾಡಿ ಮತದವರುಗಳನ್ನು ಆತ್ಮೀಯರ ರೀತಿಯಿಂದ ಪ್ರೀತಿಸಿ, ಇಲ್ಲಿನ ಜನಗಳಿಗೆ ಸ್ವಧರ್ಮಾಭಿಮಾನಗಳನ್ನು ಹೆಚ್ಚಿಸಿದ್ದರಿಂದ ಇವರಿಗೆ ಕೃತಜ್ಞತೆಯನ್ನು ತೋರಿಸಬೇಕೆನಲು ಸರ್ವರೂ ಜಯಘೋಷದೊಡನೆ ಕರತಾಡನವನ್ನು ಮಾಡಿ, ಶ್ರೀಗಳವರ ಗುಣಕಥನವನ್ನು ಆನಂದದೊಡನೆ ಕೊಂಡಾಡುತ್ತಿರಲು ಅಷ್ಟರಲ್ಲೇ ೧೨ ಗಂಟೆಯಾದ್ದರಿಂದ ಸಭಾ ವಿಸರ್ಜನೆಯಾಯಿತು.

ಚಂದ್ರಾಧರ

ರೈತನ ಕಷ್ಟ.

ಅಯ್ಯಾ,

ಚಳ್ಳಕೆರೆ ತಾಲ್ಲೂಕು ಬೆಗತನಹಳ್ಳಿಲಿ ಒಂದು ಸಾವಿರ ರೂಪಾಯಿ ಮೇಲ್ಪಟ್ಟು ಕಂದಾಯ ಕೊಡತಕ್ಕ ಅಪ್ಪರಂಗಪ್ಪನೆಂಬ ರೆಡ್ಡೀರ ಜಾತಿಯವನಿದ್ದ. ಈಗ್ಗೆ ಕೆಲವು ದಿವಸಕ್ಕೆ ಹಿಂದೆ ಮೃತಪಟ್ಟ ಆತನ ಮಕ್ಕಳು ವಗೈರೇರು ಈಗ ಹಾಜರಿದ್ದಾರೆ

ಅಪ್ಪರಂಗಯ್ಯ ಜೀವಂತನಾಗಿದ್ದಾಗ ೩೦,೦೦೦ ರೂಪಾಯಿ ಮುಟ್ಟಿಸಿ ಸ್ವಂತ ಲಾಗಾಯಿತಿನಿಂದ ಕೆರೆ ಕಟ್ಟಿಸಿ ಅದರ ಕೆಳಗಿನ ೨೦೦ ಎಕರೆ ಜಮೀನಿಗೆ ಮುಷ್ಟಿ ಕಂದಾಯ ಕೊಟ್ಟು ಆ ಜಮೀನಿಗೆ ತನ್ನ ಸ್ವಂತ ಕೆರೆಯಿಂದ ನೀರು ಬಿಟ್ಟುಕೊಂಡು ತರಿ ಫಸಲು ಬೆಳೆ ಮಾಡುತ್ತಿದ್ದ ಮತ್ತು ಒಂದು ಸಾವಿರದ ದೊಡ್ಡ ದನಗಳನ್ನು ಇಟ್ಟುಕೊಂಡು ಅದರ ಪೋಷಣೆಗಾಗಿ ಅನೇಕ ಕಾವಲುಗಳನ್ನು ಮಾಡಿಕೊಂಡು ಅವುಗಳನ್ನು ಸಂರಕ್ಷಣೆಮಾಡುತ್ತಿದ್ದ ಅಂತು ಆ ರೈತನು ಜೀವಂತನಾಗಿದ್ದ ೪೦ ವರ್ಷ ವರಿಗೂ ಆತನ ಆದಾಯದಿಂದ ಆ ಕುಟುಂಬವೂ ಆತನ ಆಶ್ರಯದಲ್ಲಿ ನೂರಾರು ಜನ ಬಡವರು ಸಹಾ ಜೀವನಮಾಡಿಕೊಂಡಿದ್ದರು. ಬೆಗತನಹಳ್ಳಿ ಎಂಬ ಗ್ರಾಮವೇ ಆತನ ಸ್ವಜನ, ಆತನ ನೌಕರರು, ಪೋಷಕರು, ಇವರಿಂದ ತುಂಬಿದ್ದಾಗಿ ಇತ್ತು ಮತ್ತು ಆತನು ದಸರಾ ಮೀಟಿಂಗಿನಲ್ಲಿ ರೆಪ್ರಜೆಂಟೆಟಿವ್ ಮೆಂಬರಾಗಿಯೂ, ಲೋಕಲ್ ಫಂಡು ಮೆಂಬರಾಗಿಯೂ ಇದ್ದ ಈಗ್ಗೆ ೫ ವರ್ಷದ ಕೆಳಗೆ ಆತ ಮೃತಪಟ್ಟನು

ಅಪ್ಪ ರಂಗಯ್ಯ ಜೀವಂತನಾಗಿದ್ದ ಕಾಲದಲ್ಲಿ ಮೂವತ್ತಾರು ಸಾವಿರ ರೂಪಾಯಿ ಸಾಲ ಮಾಡಿದ್ದ ಆತ ಸತ್ತ ನಂತರ ಈಗ ಹಾಜರಿರತಕ್ಕ ಆತನ ಮಗ ರಂಗಪ್ಪನೆಂಬುವನು ತಂದೆಯ ಕಾರಖಾನೆ ತಾನೇ ವಹಿಸಿಕೊಂಡು ಅದರ ಆದಾಯ ನಡಿಸತಕ್ಕದ್ದರಲ್ಲಿ ಕ್ಷಾಮ ಪ್ರಾಪ್ತವಾಯಿತೆಂದರೆ ಸರಿಯಾಗಿ ಮಳೆಗಳು ನಡಿಸಲಿಲ್ಲ. ಆದ್ದರಿಂದ ಜಮೀನು ಜುಟ್ಟುವಳಿ ಕಮ್ಮಿ ಆಯಿತು. ಮೇವಿಗೂ ಅಭಾವವಾದ್ದರಿಂದ ೫-೬ ಸಾವಿರ ರೂಪಾಯಿ ಬಾಳತಕ್ಕ ದನಗಳು ಸತ್ತು ಹೋಯಿತು ಸಾಲಗಾರರ ತಗಾದೆ ಜಾಸ್ತಿ ಆಯಿತು. ಇದರಿಂದ ಈ ರೈತನು ತನ್ನ ಕಷ್ಟವನ್ನು ಗೌರ್ನಮೆಂಟು ಪರಿಹರಿಸಬೇಕೆಂತ ಕೇಳಿಕೊಂಡ. ಅಂದರೆ, ತನ್ನ ತಂದೆ ಸ್ವಂತ ಲಾಗಾಯಿತಿನಿಂದ ಕಟ್ಟಿಸಿರತಕ್ಕ ಕೆರೆ ಗೌರ್ನಮೆಂಟಿನವರು ವಹಿಸಿಕೊಂಡು ಅದರ ಬಾಗಾಯಿತು ಕೊಡಿಸಿಕೊಡಬೇಕೆಂತ ಡೆಪ್ಟಿ ಕಮಿಷನರ್ ಸಾಹೇಬರವರನ್ನು ಕೇಳಿಕೊಂಡ. ಅವರು ಒಬ್ಬ ಆ ಕೆರೆ ಅಜಮಾಯಿಷಿಮಾಡಿ ಅದರ ಅಂದಾಜು ತಿಳಿಸಬೇಕೆಂತ ಪಿ. ಡಬ್ಲ್ಯೂ. ಇಲಾಖೆಯವರನ್ನು ಕೇಳಿದರು ಅವರು ಅಜಮಾಯಿಷಿ ಮಾಡಿ ಈ ಕೆರೆ ೧೩ ಚಿಲ್ಲರೆ ಸಾವಿರ ರೂಪಾಯಿ ಬಾಳುತ್ತೆಂತ ಜವಾಬು ಕೊಟ್ಟರು. ಈ ವಿಷಯವನ್ನು ಗೌರ್ನಮೆಂಟಿಗೆ ಡಿಸ್ಟ್ರಿಕ್ಟಿನವರು ತಿಳಿಸಿದರು. ಅದರ ಮೇಲೆ ಗೌರ್ನಮೆಂಟಿನವರು ಈ ಕೆರೆಯನ್ನು ತೆಗೆದುಕೊಂಡರೆ ರೈತನು ಗೌರ್ನಮೆಂಟಿಗೆ ಏನು ರಿಯಾಯಿತಿ ತೋರಿಸುತ್ತಾನೆ ಎಂತ ಡಿಸ್ಟ್ರಿಕ್ಟಿನವರನ್ನು ಕೇಳಿದರು. ಅವರು ತಾಲ್ಲೂಕಿಗೆ ಹುಕುಂ ಕೊಟ್ಟರು

ತಾಲ್ಲೂಕು ಅಮಲ್ದಾರರು ಈ ರೈತನನ್ನು ಕರಿಸಿಕೊಂಡು ರಿಯಾಯಿತಿ ಅಂದರೆ ಅದರ ಕೆಳಗೆ ಇರತಕ್ಕ ಜಮೀನನ್ನು ಮುಫತ್ತಾಗಿ ಗೌರ್ನಮೆಂಟಿಗೆ ಬಿಟ್ಟು ಕೊಡಬೇಕೆಂಬುದೇ ಅದರ ಅರ್ಥವೆಂತ ಆತನಿಗೆ ತಿಳಿಸಿ, ಆ ಕೆರೆ ಕೆಳಗೆ ಇರತಕ್ಕ ಈ ರೈತನ ೨೦೦ ಎಕರೆ ಜಮೀನಿನಲ್ಲಿ ೩೦ ಎಕರೆ ರೈತ ಇಟ್ಟುಕೊಂಡು ಬಾಕಿ ೧೩೦ ಎಕರೆ ಜಮೀನ್ ಗೌರ್ನಮೆಂಟಿಗೆ ಬಿಟ್ಟು ಕೊಡುತ್ತೇನೆ ಎಂತ ಆತನ ಹೇಳಿಕೆ ತೆಗೆದುಕೊಂಡು ಡಿಸ್ಟ್ರಿಕ್ಟ್ ಆಫೀಸಿಗೆ ರಿಪೋರ್ಟ್ ಮಾಡಿದರು. ಅದನ್ನೆ ಮುಂಜೂರಿ ಬಗ್ಗೆ ಡೆಪ್ಟಿ ಕಮಿಷನರ್ ಸಾಹೇಬರು ಗೌರ್ನಮೆಂಟಿಗೆ ರವಾನಿಸಿ ಇದ್ದಾರೆ ಇದೇ ಈ ರೈತನ ಕಷ್ಟ. ಈ ರಿಪೋರ್ಟಾದ ನಂತರ ಈ ರೈತನಿಗೆ ತನ್ನ ನಷ್ಟ ಗೊತ್ತಾಗಿ, ತನ್ನ ಅಪೀಲ್ ಹೇಳಿಕೊಳ್ಳಬೇಕೆಂತ ಚಿತ್ರದುರ್ಗಕ್ಕೆ ಬಂದು ವಿಚಾರಿಸುವಲ್ಲಿ ಈ ರಿಪೋರ್ಟು ಗೌರ್ನಮೆಂಟಿಗೆ ರವಾನೆ ಆದಂತೆ ಕೇಳಿ ಗೋಳಾಡುತ್ತಿದ್ದಾನೆ

ಮೇಲಿನ ನಡವಳಿಕೆಯಿಂದ ಯೋಚಿಸಿದರೆ ಈ ಪ್ರಸಿದ್ಧ ರೈತ ಮೊದಲು ಸ್ವಲ್ಪ ಕೆಟ್ಟಿದ್ದ ಗೌರ್ನಮೆಂಟನ್ನು ಕೇಳಿಕೊಂಡ ನಂತರ ನಡದಿರತಕ್ಕ ನಡವಳಿಕೆ ಮುಂಜೂರಾಗುವುದಾದರೆ ಪೂರಾ ಕೆಟ್ಟನೆಂತಲೇ ಹೇಳಬೇಕಾಗುತ್ತೆ ಆದ್ದರಿಂದ ಈತನು ಉದ್ಧಾರ ಆಗತಕ್ಕ ಮಾರ್ಗ ಗೌರ್ನಮೆಂಟಿನವರು ಯೋಚಿಸಿ ಕೆಟ್ಟವರಕ್ಕೆ ಭಾರೀ ರೈತನನ್ನು ಉದ್ಧಾರ ಮಾಡ್ಯಾರೆಂದು ನಂಬಿದ್ದೇನೆ

ಜಮೀನ್ ಹೋದರೆ ಆತನ ಜೀವನವೇ ಹೋಯಿತು. ಕೆರೆ ಗೌರ್ನಮೆಂಟಿನದಾದರೆ ಅದರ ಕೆಳಗಿನ ೩೦೦ ಎಕರೆ ಜಮೀನ್ ತರಿ ಆಗಿ ಅದರ ಫಾಯಿದೆ ಗೌರ್ನಮೆಂಟಿಗೆ ಇದ್ದೇ ಇದೆ ಬೇರೆ ರಿಯಾಯಿತಿ ಯಾಕೆ ಬೇಕು? ಒಂದು ವೇಳೆ ಕೆರೆ ಮುಂದಿಯ ಒಟ್ಟು ಮೊಬಲಗಿನಲ್ಲಿ ೧–೨ ಸಾವಿರ ಕಮ್ಮಿ ಮಾಡಿ ಕೆರೆ ಗೌರ್ನಮೆಂಟಿಗೆ ವಹಿಸಿಕೊಂಡು ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟ್ ಪ್ರಕಾರ ೧೦ ಸಾವಿರ ರೂಪಾಯಿ ಈ ರೈತನಿಗೆ ಸಾಲ ಕೊಟ್ಟರೆ ಆತನ ಸಾಲವೂ ತೀರಿಸಿಕೊಳ್ಳುತ್ತಾನೆ. ಕೆಟ್ಟಿರತಕ್ಕ ಜಮೀನುಗಳನ್ನೆಲ್ಲಾ ಆಬಾದ್ ಮಾಡಿಕೊಂಡು, ಅವನು ಪೂರ್ವದಂತೆ ಅನುಕೂಲಸ್ಥಿತಿಗೆ ಬರುತ್ತಾನೆ. ನನಗಿಂತಕ್ಕೆ ಸ್ವತಃ ತಿಳಿಸಿದ್ದೇನೆ

ಪೆನ್ಷನ್ ಆಫೀಸರ್.

ತಾಲ್ಲೋಕು ವರ್ತಮಾನಗಳು.

ಹೊಳೆನರಸೀಪುರ —ಬಿಡಲಿಲ್ಲದೆ ಪ್ರತಿ ದಿನವೂ ಮೋಡವಾಗಿದ್ದು, ಸೋನೆ ಮಳೆ ಬರುತ್ತಿದೆ ಗದ್ದೆಗಳಿಗೆ ನಾಟಿ ಹಾಕುತ್ತಾ ಇದ್ದಾರೆ ಊರಲ್ಲಿ ವಾಂತಿಭೇದಿ ಉಪದ್ರವು ಶಾಂತವಾಗಿದೆ —ಮುನಿಸಿಪಾಲಿಟಿಯವರ ಗಳ ಪೈಕಿ ಗಲ್ಲಿಗಳಲ್ಲಿರುವ ಲಾಂದ್ರಗಳು ಮುನಿಸಿಪಲ್ ಬೆಳಕನ್ನು ಕಾಣದೆ, ಕೇಳುವವರಿಲ್ಲದೆ ಚಂದ್ರಗ್ರಹಣವನ್ನು ಹೊಂದಿವೆ ಊರಿನ ಪೂರ್ವ ಭಾಗದಲ್ಲಿರುವ ರಾಮಚೂಣದ ಕಾಲುವೆಯು ಕಳೆದ ವಾರ ದುರಸ್ತು ಮಾಡಲ್ಪಟ್ಟಿತು ರೈತರು ಗದ್ದೆಗೆ ನೀರು ಹೋಗುವ ಸ್ಥಳಗಳಿಗೆ ತೊಳಿವೆಗಳನ್ನು ಇಟ್ಟುಕೊಡಬೇಕೆಂದು ಎರಡು ವರುಷಗಳಿಂದ ಅರ್ಜಿ ಹಾಕಿದರೂ, ರೂಬರೂಬು ಅರಿಕೆ ಮಾಡಿಕೊಂಡರೂ ಯಾರೂ ಇದನ್ನು ಲಕ್ಷ್ಯಕ್ಕೆ ತರುವುದೇ ಇಲ್ಲ. ನಾಲಾಕ್ಕೆ ಸಮೀಪದ ಗದ್ದೆಯವರು ಇಷ್ಟ ಬಂದ ಹಾಗೆ ನೀರನ್ನೆಲ್ಲಾ ಬಿಟ್ಟುಕೊಳ್ಳುವರು. ದೂರದಲ್ಲಿರುವ ಗದ್ದೆಯವರು ದೇವೇಂದ್ರನನ್ನು ಮೊರೆಯಿಡಬೇಕು. ಕಂದಾಯದ ವಸೂಲಿಯ ಕಾಲದಲ್ಲಿ ಶಾನುಭೋಗರು ಕುಳವಾಡಿಗಳನ್ನು ಬೆಂಬಲವಾಗಿಟ್ಟುಕೊಂಡು, ಸಲೀಸಾಗಿ ವಸೂಲುಮಾಡುವ ಮೇರೆ ಯಾಕೆ ಈ ಕಾಲುವೆಯ ನೀರು ಎಲ್ಲಾ ಗದ್ದೆಗಳಿಗೂ ಸರಿಯಾಗಿ ಸರಬರಾಯಿ ಆಗುವಹಾಗೆ ಏರ್ಪಾಡುಮಾಡಬಾರದು? ಈ ವಿಷಯದಲ್ಲಿ ಮೇಲಿನ ಅಧಿಕಾರಿಗಳು ನಿಗಾ ಕೊಡುವದು ಅವಶ್ಯವಾದದ್ದು.—ಹಂದಿ ಕತ್ತೆಗಳ ಅವಾಂತ್ರವು ದಿನೇದಿನೇ ಹೆಚ್ಚುತ್ತಾ ಇದೆ ಕೇಳುವವರೇ ದಿಕ್ಕಿಲ್ಲ. ಈಗ ಹೊಸದಾಗಿ ಬರುವ ಅಮಲ್ದಾರರು ಈ ವಿಷಯವನ್ನು ಚಿತ್ತಕ್ಕೆ ತಂದು ಪ್ರಜೆಗಳಿಗೆ ಕ್ಷೇಮವನ್ನುಂಟುಮಾಡಿ, ಕೀರ್ತಿ ಸಂಪಾದಿಸುವರೆಂದು ನಿರೀಕ್ಷಿಸಲ್ಪಟ್ಟಿದೆ

ಚಿಕ್ಕಬಳ್ಳಾಪುರ.—ಇಲ್ಲಿ ಸುಮಾರಾಗಿ ಮಳೆ ಬಿತ್ತು ರೈತರೆಲ್ಲರೂ ಉಳುತ್ತಿದ್ದಾರೆ. ಕೆಲವರು ಬಿತ್ತನೆ ಹಾಕುತ್ತಾರೆ. ಕೆರೆಗಳಿಗೆ ಮಾತ್ರ ನೀರು ಬರಲಿಲ್ಲ ಧಾರಣೆಯು ರೂಪಾಯಿಗೆ ರಾಗಿ ೧೨ ಸೇರು, ಅಕ್ಕಿ ೬ ಸೇರು, ಜೋಳ ೧೦ ಸೇರು ಮಾರುತ್ತಾರೆ ಇಲ್ಲಿ ಕೈತೋಟಗಳು ಮಾಡುವವರಿಗೆ ಮಳೆ ಬಿದ್ದದ್ದರಿಂದ ಕೊಂಚ ಶ್ರಮ ತಪ್ಪಿತು ಮೊದಲು ಇವರು ಪಡುತ್ತಿದ್ದ ಶ್ರಮವು ವಿಶೇಷವಾಗಿತ್ತು

ಈಗ್ಗೆ ೨೦ ದಿವಸದ ಕೆಳಗೆ ಈ ಊರು ಪಿಳ್ಳಮ್ಮನೆಂಬ ಹೆಂಗಸು ಮಗುವನ್ನು ಹೆತ್ತು, ಮಗುವಿನ ಕೊರಳನ್ನು ಕೊಯಿದು ಪಾಳುಬಾವಿಯೊಳಕ್ಕೆ ಬಿಸಾಟಿದ್ದ ಹಾಗೂ, ಮಗುವನ್ನು ಊರಿನವರು ಕಂಡು ಪಟೇಲರಿಗೂ ಪೋಲೀಸಿಗೂ ತಿಳಿಸಿದಹಾಗೂ, ಇನ್ಸ್ಪೆಕ್ಟರೇ ಮುಂತಾದವರು ಕೇಳಿ ಅಜಮಾಯಿಷಿಯಿಂದ ಇಲ್ಲಿನ ಆಸ್ಪತ್ರೆಗೆ ಕರತಂದು ಚಿಕಿತ್ಸೆ ಮಾಡುತ್ತಿದ್ದಾರೆ — ಈ ಊರು ಸುಬ್ರಯನ ಪೇಟೆಯಲ್ಲಿ ಸುಮಾರು ೨೦ ದಿವಸದ ಕೆಳಗೆ ಎರಡು ಕನ್ನಾ ಚೋರಿಗಳಾಗಿ ಸುಮಾರು ೩೦೦ ರೂಪಾಯಿ ವರೆಗೂ ಕಳುವಾಯಿತು ಪೋಲೀಸಿನವರು ಈ ಕಾಲದಲ್ಲಿ ಕೊಂಚ ಶ್ರಮ ತೆಗೆದುಕೊಂಡು ಬೀಟು ತಿರುಗುತ್ತಿದ್ದರೆ ಇಷ್ಟು ಕಾರಣಕ್ಕೆ ಅವಕಾಶವಾಗಲಾರದು.—ಇಲ್ಲಿನ ಧರ್ಮಛತ್ರದಲ್ಲಿ ಇಸ್ಪೀಟು ಆಟವು ಜೋರಾಗಿದೆ. ಇದನ್ನು ಹೆಡ್ ಮಾಸ್ಟರು ತಪ್ಪಿಸಿ ಹುಡುಗರಿಗೆ ಕ್ರಿಕೆಟ್, ಫುಟ್‌ಬಾಲ್‌ನಲ್ಲಿ ಆಸಕ್ತಿಯನ್ನುಂಟುಮಾಡುವರೆಂದು ನಂಬಿದೇನೆ.—ಇಲ್ಲಿನ ಹೈ ಸ್ಕೂಲ್ ಚರಿತ್ರೆ ಬೋಧಕರು ಮೈಸೂರು ನಾರ್ಮಲ್ ಸ್ಕೂಲಿಗೆ ವರ್ಗವಾಗಿ ಹೋದರು. ಇವರ ಬದಲಿ ಇನ್ನೂ ಬರಲಿಲ್ಲ.—ಇಲ್ಲಿಗೆ ಅಮಲ್ದಾರಿ ಕೆಲಸಕ್ಕೆ ದೇವನಹಳ್ಳಿಯಿಂದ ಮೆ॥ ಕೆ. ಶ್ರೀನಿವಾಸರಾಯರು ಬರುತ್ತಾರೆ.

ತೀರ್ಥಹಳ್ಳಿ.—ಈ ಪ್ರಾಂತ್ಯದಲ್ಲಿ ಕಳೆದ ಜೂನ್ ೧೧ನೇ ತಾ. ನಿಂದ ಇದುವರೆಗೂ ಮಳೆಯು ಒಂದು ದಿನವಾದರೂ ವಿರಾಮವಿಲ್ಲದೆ ವಿಪರೀತವಾಗಿ ಸುರಿಯುತ್ತಲಿದೆ. ಮಳೆಯ ಪ್ರಮಾಣವನ್ನು ನೋಡಿದರೆ ಪ್ರತಿ ದಿವಸವೂ ಅರ್ಧ ಅಂಗುಲದಿಂದ ಮೂರು ಅಂಗುಲದ ವರೆಗೂ ಆಗಿರುವುದಾಗಿ ವರ್ತಮಾನ ಈ ಮಳೆಯು ನಿಲ್ಲುವುದಕ್ಕೆ ಇನ್ನೂ ಸಾಧಾರಣವಾಗಿ ಒಂದೂವರೆ ತಿಂಗಳು ಬೇಕೆಂದು ಹೇಳುತ್ತಾರೆ. ಮಳೆಯು ವಿಪರೀತವಾಗಿ ಸುರಿಯುತ್ತಲಿರುವದರಿಂದ ಭೂಮಿಯಲ್ಲಿ ನೀರು ಎಲ್ಲೆಲ್ಲಿಯೂ ಉಕ್ಕಿ ಮೇಲಕ್ಕೆ ಬರುತ್ತಿರುವದು. ಆ ರೀತಿ ಬರುವ ನೀರೂ ಮಳೆಯಿಂದ ಸುರಿಯುವ ನೀರೂ ಸೇರಿ ಭೂಮಿಯ ತಗ್ಗಿಗೆ ಇಳಿಯುವದರಿಂದ ತಗ್ಗಿನಲ್ಲಿರುವ ಹಳ್ಳಗಳು ತುಂಬಿ ಇಲ್ಲಿ ಹರಿಯುವ ತುಂಗಾನದಿಗೆ ಬೀಳುವವು. ಅದರಿಂದ ತುಂಗಾನದಿಯು ಸಾಧಾರಣವಾಗಿ ತುಂಬಿ ಹರಿಯುತ್ತಿರುವದು. ಈ ಕಾಲದಲ್ಲಿ ರೈತರು ವಿನಹ ಇತರ ಜನರು ತಮ್ಮ ಕೆಲಸಕಾರ್ಯಗಳನ್ನು ಹೊರಗೆ ಪ್ರಯಾಣಮಾಡಿ ನಡಿಸಿಕೊಳ್ಳುವದು ಸ್ವಲ್ಪ ಪ್ರಯಾಸವಾಗಿದೆ —ಇಂಥಾ ಕಾಲದಲ್ಲಿ ಈ ಊರಿನಲ್ಲಿರುವ ದೊಡ್ಡಿಗೆ ಸೇರಿಸಲ್ಪಡುವ ದನಗಳಿಗೆ ಮಳೆಯಲ್ಲಿ ನಿಲ್ಲಲು ಆಸರೆಯಿಲ್ಲದೆ ಇರುವದರಿಂದ ಅವುಗಳ ಸ್ಥಿತಿಯು ಪರಿತಾಪಕರವಾಗಿರುವದೆಂದೂ, ಅವುಗಳ ಮಾಲೀಕರು ಅವುಗಳನ್ನು ಬಿಡಿಸಿಕೊಂಡು ಹೋಗುವಾಗ ಸಾಯುವಸ್ಥಿತಿಯಲ್ಲಿರುವವೆಂದೂ ಹೇಳುತ್ತಾರೆ. ಈ ವಿಷಯವನ್ನು ಈ ತಾಲ್ಲೋಕಿನ ಅಮಲ್ದಾರರು ತಿಳಿದು, ಅಲ್ಲಿ ಆಸರೆಯನ್ನು ಮಾಡಿಸುವರಾದರೆ ಮೂಗುಪ್ರಾಣಿಗಳಿಗೆ ಉಪಕಾರವಾದಿತೆಂದಾಗುವದು —ಇದೇ ತಾ. ೧೩ನೇ ಶುಕ್ರವಾರ ಈ ತಾಲ್ಲೋಕಿನ ಮುಖ್ಯಸ್ಥರೆಲ್ಲಾ ತೀರ್ಥಹಳ್ಳಿ ಕಸಬಾದಲ್ಲಿರುವ ಮೆ॥ ಯಡೇಹಳ್ಳಿ ರಾಮಪ್ಪನವರ ಮನೆಯಲ್ಲಿ ಸಭೆಸೇರಿ, ದಸರಾ ಮೀಟಿಂಗಿನಲ್ಲಿ ಮಾತಾಡಬೇಕಾದ ವಿಷಯಗಳನ್ನು ಗೊತ್ತುಮಾಡುವವರಾಗಿದ್ದಾರೆಂದು ಕೇಳುತ್ತೇನೆ.

ದೊಡ್ಡಬಳ್ಳಾಪುರ.—ಇಲ್ಲಿ ಪ್ರತಿನಿತ್ಯವೂ ಸೂರ್ಯರಶ್ಮಿ ಇಲ್ಲದಂತೆ ಮೋಡವಾಗುವದು. ಸೋನೆ ಮಳೆಯಾಗುವದಲ್ಲದೆಯೇ ಜೋರು ಹದವಾಗಿ ಮಳೆಯಾಗದೆ, ಬಿತ್ತನೆ ಸರಿಯಾಗಿ ಬೀಳಲಿಲ್ಲ. ಬಿತ್ತಿರುವ ಪೈರುಗಳು ಮಾತ್ರ ಚನ್ನಾಗಿವೆ ಈ ಊರು ನಾಗರಕೆರೆಯಲ್ಲಿ ಸ್ವಲ್ಪವೂ ನೀರಿಲ್ಲದೆ, ಜನಗಳಿಗೆ ಇದ್ದರಿಂದ ನೀರಿಗೆ ತುಂಬಾ ಅಭಾವವಾಗಿದೆ.—ದೇವಾಂಗದವರಲ್ಲಿ ತಂಬಗೆರೆ ಚಂದ್ರಶೇಖರಪ್ಪನವರು ತಮ್ಮ ಮಾತಾಪಿತೃಗಳ ಪಾದಪೂಜೆಯನ್ನು ನಡಿಸಿದರಷ್ಟೆ. ಪೂಜಾ ಕರ್ತವ್ಯಗಳನ್ನು ಶಾಸ್ತ್ರೋಕ್ತವಾಗಿ ಮಾಡಿಸಲು ಕುಲಪುರೋಹಿತರಾದ ಚನ್ನಕೃಷ್ಣಶಾಸ್ತ್ರಿಗಳು ಬಂದಿದ್ದರು ಬಾಕಿ ಪುರೋಹಿತರು ಸಹ ಸೇರಿದ್ದರು. ಕುಲಸ್ಥರು ಸುಮಾರು ೩೦೦ ಜನಗಳ ವರಿಗೂ, ಪರಸ್ಥಳದ ಬಂಧುಗಳೂ ಈ ಪೂಜೆಗಾಗಿ ಸೇರಿದ್ದರು. ಪುರೋಹಿತರು ಶಾಸ್ತ್ರೋಕ್ತವಾದ ಪೂಜೆ ಹೋಮಾದಿಗಳನ್ನು ಮಾಡಿಸಿದರು ಆ ದಿನ ನಾನೂರು ಜನಗಳ ವರಿಗೆ ಸಮಾರಾಧನೆಯು ನಡೆಯಿತು. ಮರುದಿನ ದ್ವಿತೀಯ ಪೂಜೆಯನ್ನೂ ಪೂರ್ಣಾಹುತಿಯನ್ನೂ ಹಾಕಿಸಿ ಮಂಗಳಾರತಿಯನ್ನು ಮಾಡಿಸಿದರು. ನಂತರ ಪೂಜೆಗಾಗಿ ಇಟ್ಟಿದ್ದ ಪೂರ್ಣ ಕಲಶವನ್ನೂ ನವಗ್ರಹಗಳ ಧಾನ್ಯಗಳನ್ನೂ ಕೊಡಿಸುವ ಪದ್ಧತಿಯಂತೆ ಪುರೋಹಿತರು ಕೊಡಿಸದೆ ಆ ಕಲಶಗಳಲ್ಲಿದ್ದ ಹೆಚ್ಚು ದಕ್ಷಿಣೆಯನ್ನು ತಾವೇ ಉಪಯೋಗಿಸಿಕೊಂಡು ಬರೀ ಕಲಶಗಳನ್ನು ಮಾತ್ರ ಇತರರಿಗೆ ತಾವೇ ಕೊಟ್ಟರೆಂದು ಹೇಳಿ, ಬಾಕೀ ಪುರೋಹಿತರೂ, ಅರ್ಚಕರೂ ಅಸಮಾಧಾನಪಟ್ಟು ಹೇಳಲು, ಪಂಚಾಯಿತಿಯಿಂದ ಸಭೆ ಮಾಡಿ ವಿಚಾರಿಸುತ್ತಿದ್ದಾರೆ.—ಕೋಟೆ ಆಂಜನೇಯಸ್ವಾಮಿಯನ್ನು ತೆಗೆದು ಬೇರೆಕಡೆ ಇರಿಸಿ ನಂತರ ಆ ದೇವಸ್ಥಾನದ ಕಲ್ಲು ಕಂಭ ವಗೈರೆಗಳನ್ನು ಬೇರೆ ವಿಲೇ ಮಾಡುತ್ತಾರೆಂಬ ವದಂತಿಯನ್ನು ಊರಿನ ಅನೇಕ ಪ್ರಜೆಗಳು ಕೇಳಿ, ಅನೇಕ ರುಜುಗಳನ್ನು ಹಾಕಿ, ದೇವರನ್ನು ತೆಗೆಯಕೂಡದೆಂದು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೂ, ಮುಜರಾಯಿ ಸೂಪರಿಂಟ್ ಸಾಹೇಬರವರಿಗೂ, ತಾಲ್ಲೂಕು ಅಮಲ್ದಾರ್ರವರಿಗೂ ಕೃತಪಡಿಸಿಕೊಂಡಿರುವದಾಗಿದೆ.—ತಾ ೧೮ನೇ ಶನಿವಾರ ೪ ಗಂಟೆಯಲ್ಲಿ ಒಂದು ಹದ ಮಳೆಯಾಯಿತು.—ಸುಮಾರು ಒಂದು ತಿಂಗಳ ಹಿಂದೆ ತೊನ್ನು ಹಿಡಿದಿದ್ದ ಗೋಣಿಗರ ರಾಮೈಯ ಎಂಬವನು ಸತ್ತುಹೋದನು. ಈತನ ಶವವನ್ನು ಸುಡದೆ ಹೂಳಿಟ್ಟದ್ದರಿಂದ ಮಳೆಗೆ ಅಡ್ಡಿಯಾಗಿದೆ ಎಂದೂ, ಸರ್ಕಾರದವರು ಅದನ್ನು ತೆಗೆಸಿ ಸುಡಿಸಿದರೆ ಉತ್ತಮವೆಂದೂ ಹೇಳುತ್ತಾರೆ. ಇದು ಎಂಥಾ ವಿವೇಕವೋ ತಿಳಿಯದು

ಚನ್ನಪಟ್ಟಣ.—ಹವಾ ಆರೋಗ್ಯಕರವಾಗಿಯೂ, ಗಾಳಿ ಬಹಳವಾಗಿಯೂ, ಒಂದೆರಡು ವಾರಗಳಿಂದ ಮಳೆ ಕಡಮೆಯಾಗಿಯೂ ಇದೆ ಅನೇಕ ಕಡೆ ಇನ್ನೂ ಭೂಮಿಗೆ ಹದ ಸಾಲದ್ದರಿಂದ ಬಿತ್ತನೆ ಆಗಿಲ್ಲವು. ಮೋಡಗಳೇನೋ ಆಡುತ್ತಿರುವವು. ಧಾರಣೆವಾಸಿಗಳು ಮಾತ್ರ ದಿನೇ ದಿನೇ ಛದಾವಾಗುತ್ತದೆಯೇ ಹೊರತು ಇಳಿತರವಿಲ್ಲವು. ಬಡವರ ಜೀವನ ಕಷ್ಟಕ್ಕೆ ಬಂತು.—ಈ ತಾಲ್ಲೂಕಿನ ಕಾರುಬಾರುಗಳೂ ಗಮನಿಸತಕ್ಕವುಗಳೇ ಆಗಿವೆ. ತುಂಟರ ಗುಂಪುಗಳೂ, ಡೊಂಬಿ ವ್ಯಾಜ್ಯಗಳೂ, ಮನೆಮುರುಕತನಗಳೂ ಹೆಚ್ಚುತ್ತಾ ಬರುವವು. ಕೆಲವು ಮಂದಿ ದುರ್ಜನರು ಮನೆಯನ್ನು ನುಗ್ಗಿ ಹೊಡೆದರೆಂಬ ಒಂದು ದೊಂಬಿ ಕೇಸೂ, ಮತ್ತೊಂದು ಫೋರ್ಜರಿ ಕೇಸೂ ಕೋರ್ಟಿನ ವಿಚಾರದಲ್ಲಿವೆ. ಸರ್ಕಾರದ ಅಧಿಕಾರಿಗಳು ನೀತಿಪರರಾಗಿ, ಸತ್ಯಾಸತ್ಯಗಳನ್ನು ಸೂಕ್ಷ್ಮ ದೃಷ್ಟಿಯಿಂದ ಗ್ರಹಿಸಿ, ದುಷ್ಟನಿಗ್ರಹ ಮಾಡಿಯಾರೆಂದು ನಂಬಿದೇನೆ —ಇಲ್ಲಿನ ನಮ್ಮ ಅಮಲ್ದಾರ್ ಮೆ॥ ರಂಗನಾಥರಾವ್ ಸಾಹೇಬರವರು ಈಗ್ಗೆ ಒಂದು ವರುಷದಿಂದಲೂ ಈ ತಾಲ್ಲೋಕಿನಲ್ಲಿದ್ದು ಮಾಡಿದ ಕಾರ್ಯಗಳೂ, ಪ್ರಜಾಭಿವೃದ್ಧಿಯ ಪ್ರಯತ್ನಗಳೂ ಅನೇಕವಾಗಿವೆ. ಈ ಮಹನೀಯರಿಂದ ಈ ನಮ್ಮ ತಾಲ್ಲೂಕಿಗೆ ಇನ್ನೂ ಅನೇಕ ಪ್ರಯೋಜನಗಳಾಗಬೇಕಾಗಿದೆ. ಇಷ್ಟರಲ್ಲೇ ಇವರು ಪೋಲೀಸ್ ಸೂಪರಿಂಟೆಂಡೆಂಟರ ಅಧಿಕಾರಕ್ಕೆ ತೆರಳುವದಾಗಿ ವರ್ತಮಾನವಿದೆ —ಈ ತಾಲ್ಲೂಕಿಗೆ ಸೇರಿದ ದೊಡ್ಡ ಮಳೂರು ಗ್ರಾಮವನ್ನು ಯೂನಿಯನ್ನಾಗಿ ಮಾಡಿ ನಾಲ್ಕಾರು ತಿಂಗಳಾಗುತ್ತಾ ಬಂತು. ಮನೆ ಕಂದಾಯಗಳಿಗೆ ತಗಾದೆಯಾಗುತ್ತಾ ಇದೆಯಲ್ಲದೆ, ಗ್ರಾಮದ ಚರಂಡಿ ವಗೈರೆ ಕಾಮಗಾರಿಗಳೇನೂ ಇಲ್ಲ. ಮುನಿಸಿಪಲ್ ಜಾಡಮಾಲಿಗಳು ಕ್ರಮವಾಗಿ ಗ್ರಾಮ ಚಾಕರಿ ಮಾಡುವ ಹಾಗೂ ಇಲ್ಲ —ಮತ್ತು ಈ ಊರಿನ ಪೂರ್ವ ಭಾಗದಲ್ಲಿ ನದೀ ತೀರದಲ್ಲಿದ್ದ ಹೆಬ್ಬಾಗಿಲು ಮಂಟಪವು ಪ್ರವಾಹದ ರಭಸದಿಂದಲೇ ಬಿದ್ದುಹೋಗಿತ್ತು. ಸುಮಾರು ಮೂರು ತಿಂಗಳ ಕೆಳಗೆ ತಾಲ್ಲೋಕ್ ಅಮಲ್ದಾರರು ಗ್ರಾಮಸ್ಥರ ಪ್ರಮುಖರೊಡನೆ ಸದರಿ ಮಂಟಪವನ್ನು ಪರಾಂಬರಿಸಿ, ಗ್ರಾಮಸ್ಥರ ಕೋರಿಕೆಯ ಪ್ರಕಾರ ಆ ಮಂಟಪದ ಕಲ್ಲುಗಳನ್ನು ಉಪಯೋಗಿಸಿ ನದೀಗೆ ಹೋಗುವ ಜನರ ಅನುಕೂಲಕ್ಕೋಸ್ಕರ ಸೋಪಾನಗಳನ್ನು ಕಟ್ಟುವಂತೆ ಏರ್ಪಾಡು ಮಾಡಿ, ಅದಕ್ಕಾಗಿ ೪೦ ರೂಪಾಯಿ ಸ್ಯಾಂಕ್ಷನ್ ಮಾಡಿಸಿದರು. ಕಂಟ್ರಾಕ್ಟರು ಈಗ ಕಟ್ಟಿಸಿರುವ ಸೋಪಾನಗಳ ರೀತಿಯು ಮೇಲ್ಕಂಡವರ ಅಭಿಪ್ರಾಯ ಮತ್ತು ತೀರ್ಮಾನಗಳಿಗೆ ಅನುಸಾರವಾಗಿಲ್ಲದ್ದರಿಂದ ಅಮಲ್ದಾರರು ಅಜಮಾಯಿಷಿಯಿಂದ್ದು ಕ್ರಮಪಡಿಸಿಯಾರೆಂದು ಹಾರೈಸುತ್ತೇವೆ.

ಕುಣಿಗಲ್ ತಾಲ್ಲೂಕು ಹೆಟ್ಟಗೆರೆ.—ಈಗ್ಗೆ ೧೫ ದಿವಸದಲ್ಲಿ ಸುಮಾರಾಗಿ ಒಂದು ಹದ ಮಳೆ ಆದದ್ದರಿಂದ ಹೊಲಕ್ಕೆ ರಾಗಿ ಪೈರು ಮಾಡಿದರು ರಾಗಿ ಮೊಳಕೆಯಾಗುವುದರೊಳಗಾಗಿ, ಹಾಲಿ ಮಳೆಯಿಲ್ಲದೆ ಆಕಾಶವನ್ನು ನೋಡುತ್ತಾ, ತಹತಹಪಡುತ್ತಿದ್ದಾರೆ. ರಾಗಿ ರೂಪಾಯಿಗೆ ೧೩ ಸೇರು, ಅಕ್ಕಿ ೭ ಸೇರು ಮಾರುತ್ತೆ. ಧಾರಣೆಯು ಪ್ರತಿದಿನದ ಸ್ಥಿತಿಯಲ್ಲಿದೆಯೇ ಹೊರತು ಇಳಿಯುವಂತೆ ಕಾಣಲಿಲ್ಲ.—ಈ ಗ್ರಾಮದಲ್ಲಿ ಒಂದು ಪಾಠಶಾಲೆಯನ್ನು ಏರ್ಪಡಿಸಬೇಕೆಂದು ಸಭಾಸದರೆಲ್ಲರ ಹಾರೈಕೆಯು ಇದೇ ಊರು ಮೆ॥ ರುದ್ರಪ್ಪನವರಿಂದ ಹೊಸ ಹರಹವಾಗಿ ಶೆಟ್ಟಿಪುರಿ, ವರ್ತಕಪುರಿ, ವಾಣಿಜ್ಯಪುರಿ ಎಂಬಭಿಧಾನದಿಂದ ರಚಿಸಲ್ಪಟ್ಟಿರುವ ಚೌರೀಹಟ್ಟಿಯಲ್ಲಿ ಮೆ॥ ತಿಪ್ಪಸಂದ್ರದ ಮುದ್ದೀರಪ್ಪನವರೂ, ಮಹದೇವಪ್ಪನವರಿಂದ ಎರಡು ಅಂಕದ ಮನೆಗಳು ಆದಿಸಿ, ಕರ್ನಾಟಕ ನಂಬಿಪಟ್ಟರು. ಮೆ॥ ರುದ್ರಪ್ಪನವರು ಭಕ್ತಿ ವಿಚಾರವನ್ನು ಕುರಿತು ಒಂದು ಉಪನ್ಯಾಸವನ್ನು ಮಾಡಿದರು. ಅನಂತರ ಗಂಧ ಪುಷ್ಪ ತಾಂಬೂಲಾದಿಗಳು ವಿನಿಯೋಗವಾದವು ಬಳಿಕ ಪಿಟೋ ಮಂದಿರವನ್ನು ಸ್ಥಾಪಿಸಿ ಶ್ರೀ ಮನ್ಮಹಾರಾಜರವರ ನಾಮವನ್ನು ಹರ್ಷ ಧ್ವನಿಯಿಂದ ಉಚ್ಚಾರಣೆ ಮಾಡಿ ಕರತಾಡನಮಂಗೈದು, ಸಭೆಯು ಬರಖಾಸ್ತುಮಾಡಲ್ಪಟ್ಟಿತು — ಈ ಊರಿಗೆ ವ್ಯಾಪಿಸಿರತಕ್ಕ ದೊಡ್ಡರೋಗವು ಸ್ವಲ್ಪ ಇಳಿಮುಖವಾದಂತೆ ಕಾಣುತ್ತೆ. ಸರಾಸರಿ ದಿನ ಒಂದಕ್ಕೆ ೧—೨ ರಂತೆ ದನಕರುಗಳು ಮೃತಪಡುತ್ತಾ ಇವೆ. ಈ ರೋಗ ನಿವಾರಣೆಗಾಗಿ ಗ್ರಾಮದೇವತೆ ಪ್ರತಿಷ್ಠೆ ಮಾಡಿದ್ದರು. ತಾ. ೧೪ ನೇ ಮಂಗಳವಾರ ಹಬ್ಬವನ್ನೇರ್ಪಡಿಸಿ, ಮೃತ್ತಿಕೆಯಲ್ಲಿ ಎರಡೂವರೆ ಅಡಿ ಪ್ರಮಾಣ ವಿಗ್ರಹವನ್ನು ದೊಡ್ಡಾಚಾರಪ್ಪನವರಿಂದ ಮಾಡಿಸಿ, ಆಭರಣಂಗಳಿಂದ ಅಲಂಕರಿಸಿ, ಕೋಣ ಕುರಿ ಮುಂತಾದ ಪ್ರಾಣಿಗಳನ್ನು ಛೇದಿಸಿ, ಆಸಾದಿಗಳ ನಾದುಗಾರಿಕೆಗಳಿಂದಲೂ, ನೋಟಕರ ಜನಸಂದಣಿಯಿಂದಲೂ ಈ ಗ್ರಾಮಕ್ಕೆ ಈಶಾನ್ಯ ದಿಕ್ಕಿಗೆ ಎರಡು ಮೈಲಿ ಇರತಕ್ಕ ದಿಗರು ಗ್ರಾಮದ ಎಲ್ಲೆಗೆ ಸಾಗಹಾಕಿದರು ಈ ರೋಗವು ವ್ಯಾಪಿಸಿದಾರಭ್ಯ ಈ ತಾರೀಖಿನವರೆಗೆ ೪೦ ಮನೆ ಮಾತ್ರವೇ ಇರತಕ್ಕ ಈ ಸಣ್ಣ ಊರಿನಲ್ಲಿ ಜಾನುವಾರುಗಳು ೨೩೦ ಮೃತಪಟ್ಟಂತಾಯಿತು. ಹಾಲಿ ವ್ಯವಸಾಯ ಮಾಡಲು ಎತ್ತುಗಳಿಲ್ಲದ ನಿರ್ಗತಿಕರು ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ ೧೯೪ ನೇ ಪ್ರಕರಣವನ್ನನುಸರಿಸಿ, ಕಡಗಳಿಗಾಗಿ ತಕಾವಿ ಮೊಬಲಗು ಕೊಡಿಸಿಕೊಡಬೇಕೆಂದು ತಾಲ್ಲೋಕು ಅಮಲ್ದಾರ್ರವರಲ್ಲಿ ಅರ್ಜಿಗಳನ್ನು ಜಾಹೀರು ಮಾಡಿಕೊಂಡರು ಒಂದು ವರುಷದಲ್ಲಿ ಅಸಲು ಬಡ್ಡಿ ಸಹ ಹಿಂದಕ್ಕೆ ಟ್ರೇಜರೀಗೆ ಪಾವತಿ ಮಾಡುವದಾಗಿದ್ದರೆ ಕಡಾ ಕೊಡಲ್ಪಡುತ್ತೆಂತಲೂ, ಹಾಗಿಲ್ಲದೆ ಮುಂದೆ ವಾಯಿದೆಗೆ ಅವಕಾಶ ಕೇಳಿದರೆ ದೊರೆಯಲಾರದೆಂತಲೂ ಅಮಲ್ದಾರ್ರವರು ಅಪ್ಪಣೆ ಕೊಡಿಸಿದರು ಸದರಿ ಕಡದ ಮೊಬಲಗು ತೆಗೆದುಕೊಂಡವರು ಟ್ರೇಜರೀಗೆ ಪಾವತಿ ಮಾಡಲು ಒಂದೇ ಒಂದು ವರುಷವಾಯಿತೆಯೋ? ವರ್ಷ ಪ್ರತಿ ವರ್ಷವೂ ಬಡ್ಡಿ ಪಾವತೀ ಮಾಡುತ್ತಾ ಬಂದರೆ, ೫—೬ ವರ್ಷ ವಾಯಿದೆಗೆ ಅವಕಾಶವೇನಾದರೂ ಉಂಟೇ? ಹ್ಯಾಗೆ! ಮಾಟಕ ಮಹನೀಯರ್‍ಯಾರಾದರೂ ಈ ಪತ್ರಿಕೆಯ ಮೂಲಕ ದಯವಿಟ್ಟು ತಿಳಿಯಪಡಿಸಿದರೆ, ಬಡ ಪ್ರಜೆಗಳು ಕಡವನ್ನು ತಂದು, ಎತ್ತು ವಗೈರೆ ಸಲಕರಣೆಯನ್ನೊದಗಿಸಿಕೊಂಡು, ವ್ಯವಸಾಯವನ್ನಾಡಲು ಪ್ರಯತ್ನ ಮಾಡಬಹುದು.—ಮೂರು ಅಡಿ ಪ್ರಮಾಣವುಳ್ಳ ಒಂದು ಹಸುವು ಎರಡು ಕರುಗಳನ್ನು ಪ್ರಸವಿಸಿರುತ್ತದೆ ಕರುಗಳು ಪೃಥಕ್ಕಾಯವಾಗಿ ಸುಂದರವಾಗಿವೆ —ಜೂನ್ ೨೦ ನೇ ತಾ ಸೋಮವಾರ ವೀರಭದ್ರೇಶ್ವರ ದೇವರ ಸಂತರ್ಪಣೆ ನಡಿಸಲು ಮೆ॥ ಅಂಚೀ ಮನೆ ನಂಜೇಗೌಡರೇ ಮುಂತಾದ ಗೌಡಗಳು ಏರ್ಪಾಟು ಮಾಡುತ್ತಿದ್ದಾರೆ.

ಮೈಸೂರು ಗೆಜೆಟ್ ಸಂಗ್ರಹ.

ಮದ್ದಗಿರಿ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ॥ ಎಚ್. ಬಸವರಾಜೇ ಅರಸಿನವರಿಗೆ ಜೂಲೈ ತಾ. ೧೫ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರು ರಜದ ಮೇಲಿರುವಾಗ್ಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಡೆಪ್ಯುಟಿ ಅಮಲ್ದಾರ್ ಟಿ. ಟಿ. ರಾಮಚಂದ್ರರಾಯರು ಮದ್ದಗಿರಿ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲೀ ನೋಡುವುದಲ್ಲದೆ, ಕೊರಟಗೆರೆ ಸಬ್ ತಾಲ್ಲೂಕಿನ ಛಾರ್ಜನ್ನೂ ವಹಿಸಿರತಕ್ಕದ್ದು.

ಸಬ್ ಅ॥ ಸರ್ಜನ್ ಮೆ॥ ಎಫ್. ನೊರೋನಾ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಆಕ್ಟಿಂಗ್ ಅಮಲ್ದಾರ್ ಮೆ॥ ಮೊಹದೀನ್ ಷರೀಫ್ ಯವರು ರಜದ ಮೇಲಿರುವಾಗ್ಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸಬ್ ರೆಜಿಸ್ಟ್ರಾರ್ ಮೆ॥ ಇ. ಎಸ್. ವೆಂಕಟರಮಣ ಅಯ್ಯರವರು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಹಿರಿಯೂರು ತಾಲ್ಲೂಕ್ ಅಮಲ್ದಾರ್ ಮೆ॥ ಎಂ. ಎಸ್. ರಾಮಚಂದ್ರರಾಯರಿಗೆ ಜೂಲೈ ತಾ. ೧೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರು ರಜದಮೇಲಿರುವಾಗ್ಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶಿರಸ್ತೇದಾರರು ತಾಲ್ಲೂಕಿನ ಖಾಲ್ತೀ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗವರ್ಗಿ ಹುಕುಂ ಮಾಡಿದೆ:—ಮೆ॥ ಗಳಾದ ಕೆ. ಶ್ರೀನಿವಾಸರಾಯರು—ದೇವನಹಳ್ಳಿಯಿಂದ ಚಿಕ್ಕಬಳ್ಳಾಪುರಕ್ಕೆ; ಬಿ ನಾರಾಯಣರಾಯರು—ಶಿಡ್ಲಘಟ್ಟದಿಂದ ಹೊನ್ನಾಳಿಗೆ; ಎ. ಕೃಷ್ಣೇ ಅರಸಿನವರು—ಗುಂಡ್ಲುಪೇಟೆಯಿಂದ ಗುಬ್ಬಿಗೆ; ಎಸ್. ಕೃಷ್ಣ ಐಯರವರು—ಹೊಳೇನರಸೀಪುರದಿಂದ ಗುಂಡ್ಲುಪೇಟೆಗೆ; ಎಸ್. ರಾಮಸ್ವಾಮಿ ಐಯ್ಯಂಗಾರ್ರು—ಮಂಜರಾಬಾದಿನಿಂದ ಕೊಪ್ಪಕ್ಕೆ; ಪಿ ಆರ್. ನಾರಾಯಣಸ್ವಾಮಿ ಮೊದಲಿಯಾರ್ರು—ದಾವಣಗೆರೆಯಿಂದ ಮಂಜರಾಬಾದಿಗೆ; ಎಂ. ಕೃಷ್ಣಸ್ವಾಮಿ ಐಯ್ಯಂಗಾರ್ರು—ಸಾಗರದಿಂದ ಶಿವಮೊಗ್ಗೆಗೆ; ಟಿ. ವೆಂಕಟಪ್ರಮೈಯನವರು—ಶಿವಮೊಗ್ಗೆಯಿಂದ ದಾವಣಗೆರೆಗೆ, ಗುಲಾಂ ಮಹಮದ್ ಮೆಕ್ಕಿಯವರು—ಶಿಕಾರಿಪುರದಿಂದ ಮೂಡಿಗೆರೆಗೆ; ಕೆ ಕೇಶವಾಚಾರ್ರು—ಮೂಡಿಗೆರೆಯಿಂದ ಶಿಡ್ಲಘಟ್ಟಕ್ಕೆ; ಸಿ. ನಾರಾಯಣರಾಯರು—ಗುಬ್ಬಿಯಿಂದ ಹೊಳೆನರಸೀಪುರಕ್ಕೆ; ಪಿ. ಸುಬ್ಬರಾಯರು—ಕೊಪ್ಪದಿಂದ ದೇವನಹಳ್ಳಿಗೆ, ಬಲಿ ಕೃಷ್ಣರಾಯ—ಅರಸೀಕೆರೆಯಿಂದ ಸಾಗರಕ್ಕೆ; ಕೆ ಕೆ. ವೆಂಕಟಸ್ವಾಮಿ ಐಯರವರು—ಮುಳಬಾಗಲಿನಿಂದ ಶಿಕಾರಿಪುರಕ್ಕೆ, ಕೋಲಾರ್ ಡಿಸ್ಟ್ರಿಕ್ಟ್ ಆಫೀಸ್ ಹೆಡ್ ಕ್ಲಾರ್ಕ್ ಕೆ. ವೇದಾಂತ ಐಯ್ಯಂಗಾರ್ರು ಮುಳಬಾಗಲ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿನೋಡತಕ್ಕದ್ದು.

ಮುಂದೆ ಹೇಳುವ ಡೆಪ್ಯುಟಿ ಅಮಲ್ದಾರ್ರುಗಳ ವರ್ಗವರ್ಗಿ ಹುಕುಂ ಮಾಡಿದೆ —ಎಸ್ ಅನಂತರಾಮೈಯ್ಯಂಗಾರ್ರು—ಗುಡಿಬಂಡೆಯಿಂದ ಫ್ರೆಂಚ್‌ರಾಕ್ಸಿಗೆ, ಎಂ ಅಹೋಬಲಶಾಸ್ತ್ರಿಯವರು—ತುರುವೇಕೆರೆಯಿಂದ ಗುಡಿಬಂಡೆಗೆ, ಬಿ. ಲಿಂಗೈಯನವರು—ಫ್ರೆಂಚ್ ರಾಕ್ಸಿನಿಂದ ತುರುವೇಕೆರೆಗೆ

ಮದ್ದಗಿರಿ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಅ॥ ಕಮಿಷನರ್ ಮತ್ತು ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮೆ॥ ಎಂ. ಶ್ರೀನಿವಾಸ ಮೂರ್ತಿಯವರು ಅಪರಾಧಿಗಳನ್ನು ಸೆಷನ್ಸ್ ವಿಚಾರಣೆಗೆ ಗುರಿಮಾಡುವ ಅಧಿಕಾರ ವಹಿಸಲ್ಪಟ್ಟಿರುತ್ತಾರೆ

ಪ್ರೊ॥ ಅ॥ ಕಮಿಷನರ್ ಮೆ॥ ಬಿ ಶ್ರೀನಿವಾಸ ಐಯ್ಯಂಗಾರ್ರನ್ನು ಮತ್ತೊಂದು ಹುಕುಂ ಕೊಡಲ್ಪಡುವ ತನಕ ತುಮಕೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ ವರ್ಗಮಾಡಿದೆ.

ಮುಂದೆ ಹೇಳುವ ಆಸ್ಪತ್ರೆ ಅಸಿಸ್ಟೆಂಟರನ್ನು ೨ ರಿಂದ ೧ ನೇ ಕ್ಲಾಸಿಗೆ ಬಡ್ತಿ ಮಾಡಲಾಗಿದೆ:—ಟಿ ಜೆ. ವೆಂಕಟಾಚಲಂ ನಾಯ್ಡು ಯವರು, ಟಿ ಶಿವಪ್ರಗಾಶ ಮೊದಲಿಯಾರ್ರು, ಬಿ ಅಣ್ಣಾಪ್ಪನವರು, ಜಿ. ಡಿದಿಯಪ್ಪನವರು, ಸಿ. ರಾಮಾನುಜಂ ಪಿಳ್ಳೆಯವರು, ಜೆ ಚಿಕ್ಕಣ್ಣಯ್ಯನವರು, ಬಿ. ಶ್ರೀಕಂಠೈಯನವರು, ವಿ ಸಿದ್ದಣ್ಣನವರು, ಬಿ. ಸುಬ್ಬರಾಯರು.

ಮುಂದೆ ಹೇಳುವ ಆಸ್ಪತ್ರೆ ಅಸಿಸ್ಟೆಂಟರನ್ನು ೩ ರಿಂದ ೨ ನೇ ಕ್ಲಾಸಿಗೆ ಬಡ್ತಿ ಮಾಡಲಾಗಿದೆ—ಬಿ ಬಾಲಕೃಷ್ಣರಾಯರು, ಎಫ್. ಎ. ಜಯಶೀಲರಾಯರು ಪಿಳ್ಳೆಯವರು, ಎಚ್. ಕೃಷ್ಣಮೂರ್ತಿಯವರು, ಎ. ಮಾಸಿಲಾಮಣಿ ಮೊದಲಿಯಾರ್ರು, ಎಸ್. ರಾಮಸ್ವಾಮಿ ಐಯರವರು

ಮೆ॥ ಬಿ. ವಿ ರಾಘವೇಂದ್ರ ರಾಯರನ್ನು ಜೂಲೈ ತಾ. ೧ ರಿಂದ ಸಿವಲ್ ಸರ್ಜನ್ ಗ್ರೇಡಿನಲ್ಲಿ ೩ ನೇ ಕ್ಲಾಸಿಗೆ ಬಡ್ತಿ ಮಾಡಲಾಗಿದೆ.

ಡೆಪ್ಯುಟಿ ಕಮಿಷನರ್ ಮೆ॥ ಎಂ. ನಾರಾಯಣರಾಯರು ಜೂಲೈ ತಾ. ೧ರಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಛಾರ್ಜನ್ನು ಸೀನಿಯರ್ ಅ॥ ಕಮಿಷನರ್ ಮೆ॥ ಕೆ. ಶ್ರೀನಿವಾಸರಾಯರಿಗೆ ವಹಿಸಿಕೊಟ್ಟರು

ಅ॥ ಇಂಜನಿಯರ್ ಮೆ॥ ಕೆ. ಶ್ರೀನಿವಾಸ ಐಯ್ಯಂಗಾರ್ರನ್ನು ಕಾವೇರೀ ರಿಜರ್ವಾಯರ್ ಪ್ರಾಜೆಕ್ಟಿನಿಂದ ವಾಟರ್ ಸಪ್ಲೈ ಮತ್ತು ಸ್ಯೂರೇಜ್ ಡಿವಿಜನಿಗೆ ವರ್ಗಮಾಡಿದೆ. ಕಾವೇರೀ ರಿಜರ್ವಾಯರ್ ಪ್ರಾಜೆಕ್ಟಿನ ಲೆಕ್ಕಾಚಾರವನ್ನೆಲ್ಲಾ ಮುಗಿಸಿದ ಮೇಲೆ ಅವರು ಹೊಸ ಕೆಲಸದ ಮೇಲೆ ಹಾಜರಾಗತಕ್ಕದ್ದು

ಏಳು ವರ್ಷಗಳ ತನಕ ಅನ್ನಕೋಶವು

[34-17]

ಅಕ್ರಮವಾಗಿ ಇತ್ತು

ನಾನು ಆರು ಮಂದಿ ವೈದ್ಯರಿಂದ ಚಿಕಿತ್ಸೆ ಹೊಂದಿದೆನು
ನಾನು ಎಂದಿಗಾದರೂ ವಾಸಿಯಾದೀತೆಂಬ ಆಸೆ ತೊರೆದೆನು
ನಾನು ಈಗ ಹೊಸಮನುಷ್ಯನಂತಿದ್ದೇನೆ, ಪೆರೂನಾ ಮತ್ತು
ಮನಾಲಿನ್‌ಗಳನ್ನು ವಂದಿಸುತ್ತೇನೆ

ಆರೋಗ್ಯ ಪತ್ತರಲ್ಲಿ ಒಬ್ಬನಿಗಾದರೂ ಹೊಟ್ಟೆಯೊಳಗಣ ಅಕ್ರಮವಿದ್ದೇ ಇದೆ ಈ ಹೊಟ್ಟೆಯ ಅಕ್ರಮದಿಂದಲೇ ಅನೇಕಾನೇಕ ವ್ಯಾಧಿಗಳು ನಾನಾ ಕಾಲುಗಳಿಗೆ ಗುರಿಯಾಗಿರುವರೆಂದು ಧಾರಾಳವಾಗಿ ಹೇಳಬಹುದು. ಅಮೇರಿಕದಲ್ಲಿ ಜೀವನ ಕಷ್ಟವಾಗಿರೋಣದರಿಂದ ಜನರು ಬಹಳ ಆತುರಪಟ್ಟು ಕೆಲಸ ಮಾಡಬೇಕಾಗಿರುವುದೇ ಅದಕ್ಕೆ ಮುಖ್ಯ ಕಾರಣ. ಬೇಗ ಬೇಗ ಊಟಮಾಡಿದ ಮೇಲೆ ಬಹುಪ್ಪ ಚಿಂತೆಗಳಿಗೆ ಗುರಿಯಾಗುವುದು ಹೊಟ್ಟೆಯಲ್ಲಿ ಖಂಡಿತವಾಗಿ ಅಕ ಮನಗಳನ್ನು ಉಂಟುಮಾಡುತ್ತದೆ ಹೊಟ್ಟೆಯಲ್ಲಿ ಅಕ್ರಮವನ್ನು ಉಳ್ಳವರು ಪೆರೂನಾ ವಿಷಯವನ್ನು ತಿಳಿದುಕೊಂಡಿರಬೇಕು ಪೆರೂನಾ ಸೌಖ್ಯಕೊಡದೆ ತಪ್ಪುವುದು ಅಪರೂಪ ಕೆಲವು ಸಂದರ್ಭಗಳಲ್ಲಿ ಅದರ ಗುಣವು ಪರಮಾಶ್ಚರ್ಯವನ್ನುಂಟುಮಾಡುವುದು ಹೊಟ್ಟೆಯ ರೋಗಗಳಿಗೆ ಪೆರೂನಾ ಒಳ್ಳೆ ಔಷಧವೆನ್ನುವುದಕ್ಕೆ ಅನೇಕರಿಂದ ಡಾಕ್ಟರ್ ಹಾರ್ಟ್‌ಮನ್‌ರಿಗೆ [illegible] ಪತ್ರಗಳು ಬಂದಿರುವವು ಮೆ॥ ಜಾರ್ಜ್ ಎಚ್ ಸಿಂಸನ್, [illegible], ಕ್ಯಾನಡಾ ಇವರು ಒಂದು ಪತ್ರವನ್ನು ಬರೆದಿದಾರೆ

ಮೆ॥ ಜಾರ್ಜ್ ಎಚ್ ಸಿಂಸನ್, ಗ್ರಾಂಟ್, ಓಟ್, ಕಾರ್, ಬರೆಯುತ್ತಾರೆ —

"ನಾನು ಏಳುವರುಷ ಹೊಟ್ಟೆಯಲ್ಲಿ ಅಕ ಮನಾಲಿ ಕಾಲ ಅನುಭವಿಸಿದೆನು. ಆರು ಮಂದಿ ಡಾಕ್ಟರುಗಳಿಂದ ಚಿಕಿತ್ಸೆ ಮಾಡಿಸಿಕೊಂಡೆನು ಕೆಲವರಿಂದ ನನಗೆ ಸ್ವಲ್ಪ ಉಪಕಾರವಾಯಿತು ಆದರೆ ರೋಗ ನಿವಾರಣೆಯಾಗಲಿಲ್ಲ ನನಗೆ ಪಿತ್ತಕೋಶದ ರೋಗವೆಂದು ಕೆಲವರು ಅಜೀರ್ಣರೋಗವೆಂದು ಕೆಲವರು ಹೇಳಿದರು ಆಗ ನಾನು ಬಹಳ ರೋಗವನ್ನನುಭವಿಸಿ ಅದು ಎಂದಿಗಾದರೂ ವಾಸಿಯಾದೀತೆಂಬ ಆಸೆಯನ್ನು ತೊರೆದು ಬಿಟ್ಟೆನು ನನ ಆಲಸ್ಯವು, ತಲೆನೋವು, ಈ ಮೊದಲಾದ ನಾನಾ ಕಷ್ಟಗಳು ವಿಸ್ತಾರವಾಗಿ ಅನುಭವಿಸಿದೆನು ಆ ಸಮಯದಲ್ಲಿ ನನ್ನ ಪತ್ನಿಯ ಪೆರೂನಾ ಮನಾಲಿನ್‌ಗಳನ್ನು ಸೇವಿಸುತ್ತಿದ್ದಳು ಅವುಗಳನ್ನು ಸೇವಿಸುವಂತೆ ನನ್ನನ್ನು ಬಲಾತ್ಕಾರ ಮಾಡಿ ಹೇಳಿದಳು ಆ ಔಷಧಗಳನ್ನು ಸೇವಿಸಿದೆನು ಆದರೆ ಅವುಗಳಿಂದ ವಾಸಿಯಾದೀತೆಂಬ ನಂಬಿಕೆ ಸ್ವಲ್ಪವೂ ಇರಲಿಲ್ಲ. ಸುಮಾರು ಒಂದು ವಾರವಾದ ಮೇಲೆ ನನಗೆ ಬೇಗ [illegible] ಆದ್ದರಿಂದ ಬಿಡದೆ ಅವುಗಳನ್ನು ಸೇವಿಸುತ್ತ ಬಂದೆನು ಹೀಗೆ ಎರಡು ಬಾಟ್ಲಿ ಪೆರೂನಾ, ಅರ್ಧ ಬಾಟ್ಲಿ ಮನಾಲಿನ್ ಸೇವಿಸುವಷ್ಟರಲ್ಲಿ ನನಗೆ ನಿಜವಾಗಿ ತಂಬಾ ವಾಸಿಯಾಯಿತು ಈಗ ನಾನು ಹೊಸ ಮನುಷ್ಯನಾಗಿದ್ದೇನೆ ಪೆರೂನಾ ಮನಾಲಿನ್‌ಗಳನ್ನು ಹೊಗಳುತ್ತೇನೆ"

ಇಪ್ಪತ್ತು ವರ್ಷದ ಅಜೀರ್ಣವು

ಮೆ॥ ಸಿಸ್ಲಿ ಮೆ[illegible], ಮೆಂಟ್ರಿಯಲ್ ಒಂಟಾರಿಯೊ, ಕ್ಯಾನಡಾ ಈತ ಬರೆಯುತ್ತಾರೆ —

"ನಾನು ಇಪ್ಪತ್ತು ವರುಷಗಳ ವರೆಗೆ ಅಜೀರ್ಣರೋಗವನ್ನು ಅನುಭವಿಸಿದೆನು ಅನೇಕ ಡಾಕ್ಟರುಗಳ ಔಷಧಗಳನ್ನು ಸೇವಿಸಿದೆನು ನಾನು ಊಟ ಮಾಡುವುದರಿಂದಲೂ ತೃಪ್ತಿಕರವಾಗಿ ಗುಣವಾಗಲಿಲ್ಲ ಅನೇಕ ವೇಳೆ ಪಥ್ಯವಾಗಿ ನಾಲ್ಕು ರಾತ್ರಿ ನಿದ್ರೆಯನ್ನೇ ಬಿಟ್ಟಿದ್ದೆನು, ಕಾಲು ಕಾಡಿದ ಪ್ರಾಣ ಉಳಿಸಿಕೊಳ್ಳುತ್ತಿದ್ದೆನು ಇನ್ನೇನು ತಿಂದರೂ ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ ನನಗೆ ಈ ರೋಗ ವಾಸಿಯಾಗುವದಿಲ್ಲವೆಂದು ನಿರಾಶೆಯುಂಟಾಗುತ್ತಾ ಇತ್ತು ಆಗ ಪೆರೂನಾ ವಿಷಯವನ್ನು ಕೇಳಿ ಅದನ್ನು ಸೇವಿಸಲಾರಂಭಿಸಿದೆನು ಒಂದು ಬಾಟ್ಲಿಯನ್ನು ಸೇವಿಸುವದರೊಳಗೆ ನನಗೆ ಅನುಕೂಲವಾಯಿತು. ಇನ್ನೊಂದು ಬಾಟ್ಲಿ ಮುಗಿಸುವಷ್ಟರಲ್ಲಿ ನನ್ನ ರೋಗವೆಲ್ಲಾ ನಿವಾರಣೆಯಾಯಿತು ಬಾಧೆ ಹೋಯಿತು ಆಹಾರದಲ್ಲಿ ರುಚಿ ಹುಟ್ಟಿತು ಸುಖವಾಗಿ ಸಂತೋಷದಿಂದ ಊಟಮಾಡುತ್ತೇನೆ ಈ ಪ್ರಪಂಚದಲ್ಲಿ ಪೆರೂನಾ ಅದ್ಭುತವಾದ ಔಷಧವೆಂದು ನಾನು ನಂಬುತ್ತೇನೆ ಈಗ ನಾನು [illegible] ತೂಗುತ್ತೇನೆ ಪೆರೂನಾವನ್ನು ನಾನು ಹೊಗಳುವುದು ಆಶ್ಚರ್ಯವೇ ?"

ಒಳಹೊಟ್ಟೆಯ ಶೀತವು.

ರೆವ್ ಜೆ ಸಿ ಪಿಲರ್, ಹೆಡ್ರಸ್‌ವಿಲ್ಲ, ದಕ್ಷಿಣ ಕ್ಯಾರೊಲಿನ ಯು. ಎಸ್ ಎ, ಈತ ಬರೆಯುವುದು — "ಪ್ರಪಂಚದ ಜನರೆಲ್ಲಾ ತಿಳಿಯುವಂತೆ ಪೆರೂನಾ ವಿಷಯದಲ್ಲಿ ನನ್ನ ಅನುಭವವನ್ನು ಹೇಳುತ್ತೇನೆ ನನಗೆ ಹೊಟ್ಟೆ [illegible] ಕ್ರಮತಪ್ಪಿ ಅನುಭವಿಸಿದೆನು ನಾನು ಅನೇಕ ಔಷಧಗಳನ್ನು ಮಾಡಿದೆನು ಕೆಲವು ಡಾಕ್ಟರರಲ್ಲಿ ತೋರಿಸಿಕೊಂಡೆನು, ಎಲ್ಲಾ ನಿಷ್ಪ್ರಯೋಜನವಾಯಿತು ಪೆರೂನಾ ಇಲ್ಲದಿದ್ದರೆ ನಾನು ಇದುವರೆಗೆ ಸಮಾಧಿಯೊಳಗಿರುತ್ತಿದ್ದೆನು ಈ ಹೊಟ್ಟೆಯ ಕ್ರಮಕ್ಕೆ ಪೆರೂನಾವು ಪ್ರಪಂಚದಲ್ಲೇ ಉತ್ತಮವಾದ ಔಷಧವೆಂದು ನಂಬುತ್ತೇನೆ ಕಾಯಿಲೆಯಾದ ಅನೇಕರಿಗೆ ಈ ಸಂಗತಿಯನ್ನು ಹೇಳಿಯೂ ಹೇಳುತ್ತಲೂ ಬಂದಿದ್ದೇನೆ"

ಪೆರೂನಾ ಬಲಕಾರಿಯಾದದ್ದು.

ಮೆ॥ ಜೆ ಆ ಕಾರ್ಸರ್, ೩೧೮ ಸೆಂಟ್ ಕ್ಲಾರೆನ್ಸ್ ಅವ್, ಟೊರಾಂಟೊ, ಕ್ಯಾನಡಾ, ಈತ ಬರೆಯುವುದು —ಪೆರೂನಾವನ್ನು ನಾನು ಸೇವಿಸಿದ್ದೇನೆ ಅದು ಪ್ರಸಿದ್ಧವಾದದ್ದು ಗುಣಕಾರಿಯಾದದ್ದು ಅದರ ಹಾಗೆ ಬಲವನ್ನುಂಟುಮಾಡುವ ಔಷಧ ಇನ್ನಾವುದೂ ಇಲ್ಲವೆಂದು ಹೇಳಬಲ್ಲೆನು."

ಇನ್ನು ಅಂಥಾ ಕೆಲವು ರೋಗಿಗಳು

ಮೆ॥ ಎಚ್ ಜೆ ಕೆನ್ನೆಸ್, ಒಕ್ಲೆಂಡ್ ನೆಬ್ರಾಸ್ಕ ಯು ಎಸ್ ಎ ಈತ ಬರೆಯುವದು —"ನನಗೆ ಒಂದು ವರುಷದಿಂದ ಹೊಟ್ಟೆಯ ಅಕ್ರಮವಿದ್ದು ಅನುಭವಿಸಿದೆನು ಅನೇಕರು ಈ ರೋಗ ನನಗೆ ವಾಸಿಯಾಗದೆಂದು ಹೇಳಿದರು ಆದರೆ ನನಗೆ ಚನ್ನಾಗಿ ಗುಣವಾಗಿದೆ ಎಂದು ಹೇಳಬಲ್ಲೆನು ಈಗ ಯಾವತರದ ಕಾಯಿಲೆಯೂ ಇಲ್ಲ ಆಹಾರ ಚನ್ನಾಗಿ ರುಚಿಸುತ್ತದೆ ಈಗ ಪುಷ್ಟಿ ತುಂಬಿಕೊಂಡು ದಪ್ಪನಾಗುತ್ತಿದ್ದೇನೆ ನನಗೆ ಸಂಪೂರ್ಣ ಗುಣವಾಗಿದೆ ಎಂದು ಎಲ್ಲರಿಗೂ ಹೇಳುತ್ತಿದ್ದೇನೆ ಇದಕ್ಕೆ ಮುಂದೆ ಪೆರೂನಾ ನನ್ನ ಮನೆಯ ಔಷಧ"

ಮೆ॥ ಎಚ್ ಪಬ್ಲಿಯಸ್ ವಾಗೆಲ್, [illegible] ಮೆರಿಕ್, [illegible], ಯು ಎಸ್ ಎ ಈತ ಬರೆಯುವುದು — "ನಾನು ಹೊಟ್ಟೆಯೊಳಗಿನ ಅಕ್ರಮದಿಂದ ಅನೇಕ ವರುಷ ಅನುಭವಿಸಿದೆನು ಅನೇಕ ಇತರ ಔಷಧಗಳನ್ನು ಸೇವಿಸಿದೆನು ತರುವಾಯ ಪೆರೂನಾ ಸೇವಿಸುವಂತೆ ಸೂಚಿಸಿದರು ಕೆಲವು ಕಾಲ ನಾನು ಗಟ್ಟಿಯಾದ ಆಹಾರವನ್ನು ತಿನ್ನಲಾರದೆ ಇದ್ದೆನು ಈಗ ಏನು ದೊರೆತರೂ ಸಂತೋಷದಿಂದ ತಿನ್ನುತ್ತೇನೆ. ನಾನು ಕೆಲವು ಬಾಟ್ಲಿ ಪೆರೂನಾ, ಮನಾಲಿನ್‌ಗಳನ್ನು ಸೇವಿಸಿದೆನು ಈಗ ನನಗೆ ಚನ್ನಾಗಿ ವಾಸಿಯಾಗಿದೆ ಇಂಥಾ ರೋಗಿಷ್ಠರೆಲ್ಲಾ ಅವೆರಡನ್ನೂ ಸೇವಿಸಬೇಕೆಂದು ಸಂತೋಷದಿಂದ ಶಿಫಾರಸು ಮಾಡುತ್ತೇನೆ"

ಮೆ॥ ಕ್ಯಾಲಬ್ ಎಚ್ ಬೆಕ್ರಲ್, ಪೊಲೀಸ್ ಅಧಿಕಾರಿ, ೩೧೩ ಎನ್ ಪಕಾ ಬೀದಿ ಬಾಲ್ಟಿಮೋರ್, ಮೇರಿಲೆಂಡ್, ಯು ಎಸ್ ಎ, ಈತನ ಕಾಗದ — "ಅನೇಕ ವರುಷಗಳ ತನಕ ನನಗೆ ಶಿರ, ಗಂಟಲು, ಹೊಟ್ಟೆಗಳಲ್ಲಿ ಅಕ್ರಮವುಂಟಾಗಿ ಅನುಭವಿಸಿದೆನು ಅನೇಕ ವೇಳೆ ಊಟಕ್ಕೆ ಮುಂಚೆಯೂ, ಊಟವಾದ ಮೇಲೂ ನನಗೆ ವಾಂತಿಯಾಗುತ್ತಿತ್ತು ನಿಮ್ಮ ಪೆರೂನಾ ಏಳು ಬಾಟ್ಲಿಯಷ್ಟು ಸೇವಿಸಿದೆನು ನನಗೆ ವಾಸಿಯಾಯಿತೆಂದು ಸಂತೋಷದಿಂದ ಹೇಳುತ್ತೇನೆ ನಾನು ಕಷ್ಟಪಟ್ಟು ಸಂತೋಷದಿಂದ ಕೆಲಸ ಮಾಡಬಲ್ಲೆನು ನನಗೆ ಹಳೇ ರೋಗಗಳ ಬಾಧೆ ಸ್ವಲ್ಪವೂ ಇಲ್ಲ ಎಲ್ಲರೂ ಪೆರೂನಾ ಸೇವಿಸಿ ತಮ್ಮ ದೇಹದ ಅಕ್ರಮಗಳನ್ನು ಸರಿಮಾಡಿಕೊಳ್ಳಲೆಂದು ಶಿಫಾರಸು ಹೇಳುತ್ತೇನೆ ನನ್ನ ಹಾಗೆ ರೋಗ ಅನುಭವಿಸಿ ಪೆರೂನಾದಿಂದ ಗುಣಹೊಂದಿದವರಲ್ಲದೆ ಇತರರು ಅದರ ಯೋಗ್ಯತೆಯನ್ನು ತಿಳಿಯಲಾರರು"

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ:—

ಮೆಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

3 7—1908 ರಿಂದ 10—7—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಸತ್ತದ್ದು	ಕಾಲರಾ ತಗಲಿದ್ದು.	ಸತ್ತದ್ದು
ಬೆಂಗಳೂರು ಪಟ್ಟಣ	8	1	0	0
ಮೈಸೂರು ,,	2	1	0	0
ಬೆಂಗಳೂರು ಡಿಸ್ಟ್ರಿಕ್ಟು	*	*	*	*
ಮೈಸೂರು ,,	58	38	32	18
ಕೋಲಾರ್ ,,	1	1	3	3
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	18	19	0	0
ಹಾಸನ ,,	6	3	22	21
ಚಿತ್ರದುರ್ಗ ,,	0	0	0	0
ಕಡೂರ್ ,,	*	*	*	*
ಶಿವಮೊಗ್ಗ ,,	*	*	*	*
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	87	56	57	40

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಆಷಾಢ ಬಹುಳ ದಶಮಿ ಗುರುವಾರದಿಂದ ಶ್ರಾವಣ ಶುದ್ಧ ಪಾಡ್ಯಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಜುಲೈ.

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ	ತೇದಿ [illegible]
23	ಗುರು ‡	ದಶಮಿ	3 58	ಕೃ	17 47	9
24	ಶುಕ್ರ ,,	ಏಕಾದಶಿ	3 28	ರೋ	19 2	10
25	ಶನಿ *	ದ್ವಾದಶಿ	3 38	ಮೃ	21 42	11
26	ರವಿ	ತ್ರಯೋ	5 20	ಆ	25 46	12
27	ಚಂದ್ರ	ಚತುರ್ದಶಿ	8 13	ಪು	30 0	13
28	ಕುಜ ¶	ಅಮಾವಾ	12 8	ಪ್ಯ	35 56	14
29	ಬುಧ ,,	ಪಾಡ್ಯ	17 38	ಶ್ಲೇ	42-16	15

‡ ಮಾತಾಭಾವ ,, ಸರ್ವತ್ರ ಏಕಾದಶೀ, [illegible] * ಶನಿಪ್ರದೋಷ ಸರ್ವತ್ರ, ಅಮಾವಾಸ್ಯೆ ಜ್ಯೋತಿರ್ಭೀಮೇಶ್ವರವ್ರತ ¶ ದರ್ಶ[illegible], ಭೀಮೇಶ್ವರವ್ರತ, ಕಟಕಬಾಹುಗ್ರ[illegible], [illegible], ದ್ವಿತೀಯಾತಿಥಿ, ಚಂದ್ರೋದಯ.

ಪೇಟೆ ಧಾರಣೆ

ವಿನಸಿ		ಮೈಸೂರು	ಬೆಂಗಳೂರು
ಕಲ್ಲು ಅಕ್ಕಿ ಪಲ್ಲ ೧ಕ್ಕೆ	ರೂ	೧೫ ೦-೦	೧೩-೦ ೦
ಕೆಂಪು [illegible] ಅಕ್ಕಿ ಅವಲ್		೧೫-೮-೦	೧೫ ೮-೦
" ಮಧ್ಯಮ		೧೪ ೧ ೨	೧೫ ೪-೦
ಜವಾರಿ ಅಕ್ಕಿ		೧೬ ೮-೦	೧೫ ೦-೦
ಗಟ್ಟಿಕ್ಕಿ ಅವಲ್		೧೩ ೦-೦	೧೩ ೦-೦
" ಮಧ್ಯಮ		೧೨ ೮ ೦	೧೨ ೦ ೦
ತೊಗರಿ [illegible] ಪಲ್ಲ ೧ಕ್ಕೆ		೧೨-೦-೦	೧೧ ೦ ೦
" ಮಧ್ಯಮ		೧೧ ೮ ೦	೧೪-೮ ೦
[illegible] ಪಲ್ಲ ೧ಕ್ಕೆ		೭ ೪-೦	೭ ೮ ೦
ಕಾರಾಗಿ		೬ ೪ ೦	೭ ೪ ೦
ಜೋಳ		೬ ೦-೦	೮ ೧೦ ೦
ಹುರುಳಿ ಪಲ್ಲ ೧ಕ್ಕೆ		೧೦ ೮ ೦	೧೦ ೧೨-೦
ಬಿಳಿ ಅವರೆ		೮-೮-೦	೯-೦ ೦
ಹೆಸರು		೧೧ ೦-೦	೧೨ ೮
ಉದ್ದು		೧೨-೮ ೦	೧೨ ೮ ೦
ಕಡಲೆ		೧೩-೪ ೦	೧೪ ೮ ೦
ಎಳ್ಳು [illegible] ೧ಕ್ಕೆ		೨೦ ೮-೦	೨೪ ೦
ಹುರುಳಿ		೬ ೮-೦	೭-೪ ೦
ಹರಳು [illegible]		೧೧ ೦-೦	೧೨ ೮ ೦
ಸೀಗೆ[illegible] ಮಣ ೧ಕ್ಕೆ		೧ ೮-೦	೧ ೬ ೦
[illegible]		೪-೪-೦	೬-೮-೦
ಮಧ್ಯಮ		೩-೪-೧	೩-೪-೦
ಬೆಲ್ಲ ದೊಡ್ಡ ಅಚ್ಚು		೪ ೦-೦	[illegible]
ಒಳ್ಳೆನ್ನೆ ಮಣ ೧ಕ್ಕೆ		೫ ೮-೦	೬-೦-೦
ಹರಳೆಣ್ಣೆ ,,		೫-೮-೦	೪ ೦ ೦
ಕೊತ್ತಂಬರಿ ಪಲ್ಲ ೧ಕ್ಕೆ		೬-೦-೦	೬ ೦ ೦
ಉಪ್ಪು ,,		೪ ೮-೦	೫ ೦ ೦
ಹುಣಿಸೇ ಹಣ್ಣು		೧-೪-೦	೧ ೪ ೦
" ಹಳೇದು		೧ ೦	೧ ೬ ೦
ತುಪ್ಪ ಮಣ ೧ಕ್ಕೆ		೧೩ ೮-೦	೧೧ ೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೪-೧೫-೦	೪ ೦-೦
ತೆಂಗಿನಕಾಯಿ ೧೦೦ಕ್ಕೆ		೪ ೮-೦	೬ ೦ ೮
ಅಡಿಕೆಲೆಕಾಯಿ ಮಣ ೧ಕ್ಕೆ		೧-೦-೦	೧-೦-೦
ಅಂಟುವಾಳದ ಕಾಯಿ ಮಣ ೧ಕ್ಕೆ		೦-೧೬-೦	೦-೧೪-೦
ಚಿನ್ನ (ಪೌನ್) ತೊಲ		೧೫-೬-೦	೧೫ ೬ ೦
" " ಪವನ್		೧೧-೧೦-೦	೧೧-೧೦-೦
" " ಗಟ್ಟಿ ತೊಲ ೧ಕ್ಕೆ		೨೩-೧೨-೦	೨೪-೮-೦
ಬೆಳ್ಳಿ ಗಟ್ಟಿ [illegible] ೧೦೦ಕ್ಕೆ		೬೫-೦-೦	೬೮-೦-೦

Printed and Published by the Rev. E W. Thompson, M. A., Proprietor and Manager, Wesleyan Mission Press, Mysore. 23/7/1908.

REGISTERED M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೮ ನೇ ಇಸವಿ ಜೂಲೈ ತಾರೀಖು ೩೦ ನೇ ಗುರುವಾರ. ಸಂಚಿಕೆ ೯

AMRUTANJAN DEPOT, 16 OAK-LANE, BOMBAY. [17-23]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ್. ಪ್ರಯತ್ನಮಾಡಿರಿ.

ಇದರಿಂದ:—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮು ಮತ್ತು ಘಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ ಬಾಟ್ಲಿ ೧ ಕ್ಕೆ ಕಿಮ್ಮತ್ತು ೦-೮-೦. ಪೋಸ್ಟು ಖರ್ಚು ೦-೪-೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಚಿಪ್ಪೆ ವಗೈರೆ ನಾಶವಾಗುವವು, ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦-೪-೦.

ಈ ಕಂಪೆನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು

ಜೀರ್ಣರಸಾಯನ—ಅಜೀರ್ಣಕ್ಕೆ ಡಬ್ಬಿ ೧ ಕ್ಕೆ.	೧-೪-೦	ಕಾಮವಾರಿಗುಟಿಕ—ಹೆಂಗಸರ ಹೊಟ್ಟೆನೋವಿಗೆ	೧-೦-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦	ಪ್ರಮೇಹದ ಮಿಶ್ರಣ—ಪ್ರಮೇಹಕ್ಕೆ	೧-೦-೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ ಕ್ಕೆ	೬-೧೨-೦	ಕಫಹರಿ—ಕಫ, ಕೆಮ್ಮು, ಕ್ಷಯ, ಇತ್ಯಾದಿ	೧-೪-೦
ಅಜೀರ್ಣತನದ ಮದ್ದು	೦-೮-೦	ಸುಂದರೀ ತೈಲ್ಯ—ಮೋರೆಗೆ	೦-೮-೦
ದಂತಶೂಲಹರಿ—ಹಲ್ಲುನೋವಿಗೆ	೦-೮-೦	ನೇತ್ರಾಂಜನ—ಮಂದದೃಷ್ಟಿಗೆ	೦-೪-೦
ಕರ್ಣಶೂಲಹಾರಿ—ಕಿವಿನೋವಿಗೆ	೦-೬-೦	ಲಿರಿನಾಶಕ ಎಣ್ಣೆ ಬಾಟ್ಲಿ ೧ ಕ್ಕೆ	೦-೮-೦
ಬಿಚ್ಚಿಯ ಮುಲಾಮು	೦-೩-೦	ವಾತದ ಮಿಶ್ರಣ ,,	೧-೦-೦
ದಂತಮಂಜನ—ಹಲ್ಲುಗಳಿಗೆ	೦-೨-೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦-೧೦-೦
ಕೇಶವರ್ಧಿನೀ ತೈಲ್ಯ—ಕೂದಲಿಗೆ	೧-೦-೦	ತಾಂಬೂಲ ಗುಟಿಕೆ ೫೦ ಗುಟಿಕೆ	೦-೮-೦
ಬಾಲಬೋ ಮಾತ್ರೆ, ಬಾಲರಿಗೆ	೦-೮-೦	ರೋಗಹಾರಿ	೦-೮-೦

ವಿಳಾಸ:—ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನು ಫ್ಲೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ.

"ವೃತ್ತಾಂತ ಪತ್ರಿಕೆ" ಚಂದಾದಾರರಿಗೆ.

'ವೃತ್ತಾಂತ ಪತ್ರಿಕೆ'ಯ ವರ್ಷವು ಕಳೆದ ಮೇ ತಿಂಗಳ ೩೧ ಕ್ಕೆ ಪೂರೈಸಿ, ಬಾಕಿ ವರುಷದ ಚಂದಾ ಹಣವು ಸಲ್ಲಬೇಕಾಗಿರುತ್ತದೆ ಆದಕಾರಣ ನಮ್ಮ ಏಜಂಟರುಗಳ ಮೂಲಕ 'ವೃತ್ತಾಂತ ಪತ್ರಿಕೆ'ಯನ್ನು ಪಡೆಯುವ ನಮ್ಮ ಚಂದಾದಾರರೆಲ್ಲಾ ಅವರಿಗೆ ಖಂಡಿತವಾಗಿ ಅಡ್ವಾನ್ಸಿನಲ್ಲಿ ಚಂದಾ ಕಟ್ಟಿ, ಮುಂದೆ ಕ್ರಮವಾದ ರಶೀತಿ ಪಡೆಯಬೇಕೆಂದು ಈ ಮೂಲಕ ಜ್ಞಾಪಿಸಿದೆ. ಮ್ಯಾನೇಜರ್. 'ವೃತ್ತಾಂತ ಪತ್ರಿಕೆ.'

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

33 3

ನಮ್ಮಲ್ಲಿ ಈಗ ನಾನಾಬಟ್ಟೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ಮೈಸೂರಿನಲ್ಲಿ ತಯಾರಿಸಲ್ಪಟ್ಟ ಬಹಳ ಬಾಳಿಕೆ ಬರುವಂತವುಗಳಾಗಿವೆ. ... ಹೋಗುವದಿಲ್ಲ ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಮೈಸೂರಿನಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಬಟ್ಟೆಗಳನ್ನು ತರಿಸಿ ನೋಡಿ. ಅಗ್ಗ ಈ ಬಟ್ಟೆಗಳ ಪ್ರಯೋಜನ ನಿಮಗೆ ಗೊತ್ತಾಗುವದು ಗಜ ಒಂದಕ್ಕೆ ಐದು ಆಣೆಯಿಂದ ಆರು ಆಣೆ ವರೆವಿಗೂ ಚಿಲ್ಲರೆಯಾಗಿ ಯಾಗಲೀ ಒಟ್ಟಾಗಿ ಯಾಗಲೀ ಮಾರಲ್ಪಡುತ್ತವೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಜರಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟರ್."

ವ್ಯವಹಾರನಿರ್ಣಯ—ಪ್ರಕಟಗಳು ೫೦೦ ಹಿಂದೂ ಮಹಮ್ಮದೀಯ ಲಾಗಳು, ೬೫ ಶಾಸನಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ. ಸೇರಿ ೧ ರೂ. ೧೨ ಆಣೆ. [40-14]

ಕನ್ನಡ ಲಾ ರಿಪೋರ್ಟರ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ೧-೨-೦ ಮುಂಗಡ, ಯಾ, ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೦-೨-೦

ಇವುಗಳನ್ನ ಪೇಕ್ಷಿಸುವವರು ಬಿ. ಎಂ. ಮಲ್ಲಾರಾಧ್ಯರು, ಫಸ್ಟ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯುವದು

ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) . . .	ರೂ. ೧-೨-೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ ರೂ	೧-೧೪-೦
,, ,, ೬ ,, ,,	೦-೧೫-೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಮಹಾ ಬಾಧಾಪಹಾರಿಣಿಯು.

48-19

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲಮೆಂಟ್‌ರವರ ಯಾತ್ರೀಕರ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಾರೆ, ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಕಳಕ, ಗಂಟ್ಲುನೋವು, ಕುರ್ಚಿವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಕೀಳುಕಾಡ ನೋವು, ಹಲ್ಲುನೋವು. ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲಮೆಂಟ್‌ರವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೇಲುಸ್ತರವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಡಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ ಶೀಸೆ ೧ ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಖರ್ಚು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಳಸಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ವೇದಮುಲಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಜ್ವರಹರಿ.

44-13



ಇದು ಸಾಧಾರಣ ಜ್ವರ, ಚಳಿಜ್ವರ, ಮರೀಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮ. ರಾ. ರಾ. ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಅನ್ಯಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ; ೧-೮ ರೂ, ರೂ ೨-೧೨ ಆ.; ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಬಂದಿರುವಾಗ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಶ್ರೀಯುತ ಓಮಂ ಕರ್ಪೂರವನ್ನು ನಾನೂ ನನ್ನ ಹಾಸ್ಪಿಟಲ್‌ನಲ್ಲಿ ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ. ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇನೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಪ್ರೊಪ್ರೈಯಟರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಲೇನ್ ಲೈನ್, ಮದರಾಸ್

RUBBER TYPES.

ರಬ್ಬರ್ ಟೈಪ್ಸ್.

ಒಳ್ಳೆ ಸಮಯ! ಜನಾ. ದಾರಿಗಳ
ಬೆಲೆ ಸುಲಭ!! ...ಕ್ಕಳ ಲಾಭವು.

M. G. ಗಣೇಶನ್ ಅಂಡ್ ಕೋ.,
ರಬ್ಬರ್ ಸ್ಟ್ಯಾಂಪು ಮೇಕರ್ಸ್ ಪಾರ್ಕ್ ಟವನ್
No. 42, ಮದರಾಸ್

ಕನ್ನಡ ರಬ್ಬರ್ ಅಕ್ಷರಗಳು 62-1

ಬೇರೆಬೇರೆಯಾಗಿ ರಬ್ಬರಿನಲ್ಲಿ ಮಾಡಿದ
ಕನ್ನಡ ಅಚ್ಚು ಅಕ್ಷರಗಳು.

ಅವರವರಿಗೆ ಬೇಕಾದ ಕಾಲದಲ್ಲಿ ಟಿಕೆಟು ರೆಡ್ಡಿಂಗುಗಳು ವಿಳಾಸ ಪು ಊರು ಹೆಸರು ಇನ್ನೂ ಅನೇಕ ಕಾರ್ಯಗಳಿಗೆ ಸುಲಭವಾಗಿ ಅಕ್ಷರಗಳು ಕೂಡಿಸಿ ಮುದ್ರಿಸಲ್ಪಡುವಂತ ಇಂಥಾ ಒಂದು ಬಂದು ಕಂಪ್ಯೂಲ್ಲಿ ಬಿದ್ದ ರಬ್ಬರ್ ಮುದ್ರೆಗಳಿಗಾದರೂ ಅಚ್ಚು ಆಫೀಸಿಗಾದರೂ ಹೋಗತಕ್ಕ ಅವಶ್ಯವಿಲ್ಲವೆ. ಒಂದೊಂದು ಪೆಟ್ಟಿಗೆಯಲ್ಲಿಯೂ ಅಂದವಾಗಿ ಇರತಕ್ಕ ಕೈಪಿಡಿಯೊಳಗೆ ಅಕ್ಷರಗಳು ಅಡಗುವ ಹಾಗೆ ಇರುವಂತೆ ಅಯುಧ ಅಕ್ಷರಗಳನ್ನು ಎತ್ತಿ ಕೂಡಿಸುವುದಕ್ಕೆ ಕಟಿಂಗ ಕ್ರಾಪು, ಮಸಿಪೆಟ್ಟಿಗೆ, ಈ ಮೂರೂ ಸೇರಿಸಿ ಕಳಿಸುತ್ತೇವೆ.

೫೦೦ ಅಕ್ಷರಗಳು ಅಡಗಿದ ಪೆಟ್ಟಿಗೆ ಒಂದಕ್ಕೆ ಬೆಲೆ ರೂ. ೧-೨-೦-೦ ಬೇಕಾದವರು ಮುಂದಾಗಿ ರೂ. ೩-೦-೦ ಅಡ್ವಾನ್ಸಾಗಿ ಕಳುಹಿಸಬೇಕು

ಅ ಆ ಇ ಈ ಉ ಊ ಎ ಏ ಐ ಒ ಓ ಔ
ಕ ಖ ಗ ಘ ಚ ಛ ಜ ಝ ಟ ಠ ಡ ಢ ಣ

ಘುಕ್ಕೆಯಾದ ರಬ್ಬರ್ ಶೀಲು ಮುದ್ರೆಗಳು.

ಮೇಲೆ ಕಂಡಂತೆ ನೂತನ ವಿಧವಾದಂತ ರಬ್ಬರು ಶೀಲುಗಳಿಗೆ ಇದ್ದರೆ ರೂ. ೧—೪—೦ಕ್ಕೆ ಮಾಡಿಕೊಡುತ್ತೇವೆ. ಒಂದೇ ಕಾಲದಲ್ಲಿ ಮೂರು ಶೀಲುಗಳು ಮಾಡಿಸಿಕೊಳ್ಳುವ ಪಕ್ಷದಲ್ಲಿ ಒಂದು ಶೀಲು ಇನಾಮಾಗಿ ಮಾಡಿಕೊಡುತ್ತೇವೆ. ಅರವ, ತೆಲುಗು, ಇಂಗ್ಲೀಷು ಭಾಷೆಯಲ್ಲಿ ಮಾಡುತ್ತೇವೆ ರಬ್ಬರ್ ಶೀಲಿನ ಕೂಡ ಪ್ಯಾಡ್, ಇಂಕ್, ಬ್ರಷ್, ಪೆಟ್ಟಿಗೆ ಕೊಡುತ್ತೇವೆ ಯಾವ ಭಾಷೆಯಲ್ಲಿ ಕೈಬರಹವು ಶೀಲೂ ಮಾಡಿಸಿಕೊಂಡರೂ ರೂ. ೨ ಏ ಬಿ ಚಾರ್ಜ ೪ ಆಣೆ.

M. G. GANASEN & Co.,
Rubber Stamp Manufacturers, PARK TOWN,
No. 42, MADRAS.

ಸತ್ಯವಾದ ಅಗ್ಗದ ಅಂಗಡಿ.

59-1

ಕೊಳ್ಳುವವರಿಗೆ ಬಹಳ ಅನುಕೂಲವಾದ ಸಮಯ ಜಾಗ್ರತೆ ಗಮನಕೊಡದಿದ್ದರೆ ಇನ್ನೊಂದು ವೇಳೆ ಸಿಕ್ಕಲಾರದು ಹಿಂದುಸ್ಥಾನದಲ್ಲಿ ಎಲ್ಲೆಲ್ಲೂ ಪ್ರಕಟನೆಗಳು ತುಂಬಿವೆ. ಅಂಗಡಿಯವರಿಂದ ಕೆಲವರು ಮೋಸಹೋಗಿದ್ದಾರೆ. ಇದರಿಂದ ಜನರು ಪ್ರಕಟನೆಗಳನ್ನು ಅಲಕ್ಷ್ಯದಿಂದ ಎಸೆದುಬಿಡುವರು ಆದರೂ ಎಲ್ಲರೂ ಒಂದೇ ರೀತಿ ಇರಾರೆಂದು ತಿಳಿಯಬೇಡಿ. ನಮ್ಮ ಷಾಪಿನಲ್ಲಿ ಪಾಲಕರು ಒಂದಾವರ್ತಿ ಸಾಮಾನ್ ತರಿಸಿ ನೋಡಲಿ ನಮ್ಮ ಅಂಗಡಿಯ ಮೇಲೆ ಎಲ್ಲರಿಗೂ ವಿಶ್ವಾಸವುಂಟಾಗಬೇಕೆನ್ನುವುದೇ ನಮ್ಮ ಅಭಿಲಾಷೆ ನಾವು ನಂಬಿಗಸ್ತರೆಂಬುವುದೂ, ನಮ್ಮ ಸಾಮಾನ್ ಅಗ್ಗವೆಂಬುವುದೂ ಪರೀಕ್ಷೆಯಿಂದ ಗೊತ್ತಾದೀತು.

(೧) ಬಲವಾದ ಕೀಲೆಸ್ ಲೀವರ್ ವಾಚ್—ಒಂದಾವರ್ತಿ ಕೀಲಿಕೊಟ್ಟರೆ ೩೦ ಗಂಟೆ ನಡೆಯುತ್ತೆ. ಹಿಂದೆ ಎರಡು ಮುಚ್ಚಳವಿದೆ. ಎನಾಮಲ್ ಡೈಲ್, ದಪ್ಪಮುಳ್ಳು, ಪರೀಕ್ಷೆಮಾಡಿದ್ದು, ಐದು ವರುಷ ಜಾಮೀನ್ ಪತ್ರ ಉಳ್ಳದ್ದು ಒಂದು ಕೈ ಪೆಟ್ಟಿಗೆ, ಒಂದು ಸೊಗಸಾದ ಸರಪಣಿ, ೩ ವರ್ಷ ಜಾಮೀನ್ ಉಳ್ಳ ೩ ಗಂಟೆ ನಡೆಯುವ ಒಂದು ಟೇಬಲ್ ಗಡಿಯಾರ, ೧೦೦ ಸುಂದರ ಪೋಸ್ಟ್ ಕಾರ್ಡುಗಳು; ಕ್ರಯ—ಪೋಸ್ಟೇಜ್, ಪ್ಯಾಕಿಂಗ್ ಮಣಿಆರ್ಡರ್ ಕಮಿಷನ್ ಮುಂತಾದ್ದು ಸೇರಿ ರೂಪಾಯಿ ೯ ಮಾತ್ರ.

(೨) ಬಲವಾದ ತೆರದ ಟೊಳ್ಳುಬೆಳ್ಳಿ ವಾಚ್ —ಸಿಲಿಂಡರ್ ಚಲನೆ, ಕೆಂಪುಸಹಿತ, ನೊಡ್ಡಸ್ಟೀಲು, ಹಿಂದೆ ಎರಡು ಟೊಳ್ಳುಬೆಳ್ಳಿ ಮುಚ್ಚಳ, ಸೆಕೆಂಡ್‌ಹ್ಯಾಂಡ್, ಖರಾರು ಟೈಂ ತೋರಿಸುತ್ತೆ, ಪರೀಕ್ಷೆ ಮಾಡಿದೆ, ಬಹಳ ಘಟ್ಟಿ, ಸ್ಪ್ರಿಂಗ್, ಗ್ಲಾಸ್ ಸಹಿತ, ಮಖಮಲ್ ಪೆಟ್ಟಿಗೆ, ೧೦ ವರುಷ ಜಾಮೀನ್ ಪತ್ರ, ಸೊಗಸಾದ ಸರಪಣಿ, ೫ ವರುಷ ಜಾಮೀನ್ ಉಳ್ಳ ೩೦ ಗಂಟೆ ನಡೆಯುವ ಸೊಗಸಾದ ಮತ್ತು ಬಲವಾದ ಒಂದು ಅಲಾರಂ ಗಡಿಯಾರ, ೧೦೦ ಸೊಗಸಾದ ಪೋಸ್ಟ್ ಕಾರ್ಡುಗಳು; ಕ್ರಯ—ಪೋಸ್ಟೇಜ್, ಪ್ಯಾಕಿಂಗ್, ಮಣಿಆರ್ಡರ್ ಕಮಿಷನ್ ಮುಂತಾದ್ದು ಸೇರಿ ರೂಪಾಯಿ ೬—೮—೦ ಮಾತ್ರ.

(೩) ಬಲವಾದ ಕೀಲೆಸ್ ಲೀವರ್ ವಾಚ್.—ಒಂದಾವರ್ತಿ ಕೀಲಿಕೊಟ್ಟರೆ ೩೦ ಗಂಟೆ ನಡೆಯುತ್ತೆ. ದಪ್ಪ ಮುಳ್ಳುಗಳು, ಪರೀಕ್ಷೆಮಾಡಿ ಸರಿಪಡಿಸಿದ್ದು ಸುಂದರವಾದ ಮಖಮಲ್ ಕೈಪೆಟ್ಟಿಗೆ, ೧೦ ವರುಷ ಜಾಮೀನ್ ಪತ್ರ, ಒಂದು ಸುಂದರವಾದ ಸರಪಣಿ, ೧೦೦ ಸೊಗಸಾದ ಪೋಸ್ಟ್ ಕಾರ್ಡುಗಳು; ಕ್ರಯ—ಪೋಸ್ಟೇಜ್, ಪ್ಯಾಕಿಂಗ್, ಮಣಿ ಆರ್ಡರ್ ಕಮಿಷನ್ ಮುಂತಾದ್ದು ಸೇರಿ ರೂಪಾಯಿ ೩ ಮಾತ್ರ.

ಅರ್ಧ ಹಣ ಮುಂಗಡ ಬಂದರೆ ಬಾಕಿಗೆ ವಿ ಪಿ ಮಾಡುತ್ತೇವೆ ವಿಶೇಷ ಸಂಗತಿ ನೋಡಿ—ನೀವು ಕೂಡಲೇ ಅರ್ಧ ಹಣವನ್ನು ಮಣಿ ಆರ್ಡರು ಕಳುಹಿಸಿದಲ್ಲಿ ಪೋಸ್ಟೇಜು, ಪ್ಯಾಕಿಂಗು, ಮಣಿಆರ್ಡರ್ ಕಮಿಷನ್ ಮುಂತಾದ್ದನ್ನೆಲ್ಲ (ಇದು ೮ ಆಣೆ ಆದೀತು) ನಾವೇ ವಹಿಸಿಕೊಂಡು ಗಡಿಯಾರವನ್ನು ಕಳಿಸುತ್ತೇವೆ

ಪದಾರ್ಥ ಒಪ್ಪದಿದ್ದರೆ ಖಂಡಿತ ಹಣ ವಾಪಸ್ ಮಾಡೇವು.

ವಿಳಾಸ:—ಎಂ. ವಿ. ಘಟವಾಲಾ ಅಂಡ್ ಕೋ.,
ಚಿತ್ರಪುರು, ಉತ್ತರ ಆರ್ಕಾಟು.

CHAMBERLAIN'S COUGH REMEDY.

ಚೇಂಬರ್ಲೇನಯವರು ಕಂಡು ಹಿಡಿದ ಕೆಮ್ಮಿನ ಔಷಧವು.

1-31

ಶೀತದ ಕೆಮ್ಮು, ಗಂಟಲು ನೋವು ಪುಪ್ಪುಸ, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ಸಲು ನೆಗಡಿಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವೆಲ್ಲಕ್ಕೂ ಈ ಔಷಧವು ಖಚಿತವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಚಿತವಾಗಿ ನಿವಾರಣೆಮಾಡುತ್ತದೆ ಉಸುರು ಹೋಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಕಟ್ಟವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿಲ್ಲವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಕ್ರಯಿಂದಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕ್ರಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ ರೋಗ ಬಾರದ ಕ್ರಮದಲ್ಲಿರುವದು ಉತ್ತಮ.

SCOTT'S EMULSION. 33-18

(ಸ್ಕಾಟ್ಸ್ ಇಮಲ್ಷನ್)

ಘಟ್ಟಿ ಶರೀರವುಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಕ್ಷಯರೋಗದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ವಿಶಾನುಮಾನಸ್ಯ ಇರುವ ಔಷಧವನ್ನೇ ತೊಂಡುಕೊಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-81

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಆಕಾರವೆಲ್ಲಾ ಬೇರೆಬೇರೆ. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೀವು ಬರೆದು ತರಿಸಿಕೊಳ್ಳಿ. ಅಗ್ಗವಾದ ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಕಾಪಿ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ., ೧ ರೂ. ೪ ಆ.

ರೇಷ್ಮೆ ಜಾಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ

ಜಾರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ.; ೧ ರೂ. ೩ ಆ.

ಉಣ್ಣೆಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂರ್ಯ ಮೋಹೋಡು, ಅರ್ಧ ಮೇಹೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ನಿಮಗೆ ಸುಪೀರಿಯರ್ ಉಲ್ ಬೇಕೇ?

ನಿಮಗೆ ದಪ್ಪದ ಉಲ್ ಬೇಕೇ?

117-41

೧೦ ಟೋಪಿ ಯಾಗುವ ಸುಪೀರಿಯರ್ ಉಲ್ ಬಂಡಲಿಗೆ	೩-೮-೦
ವಿಪಾಡಿಯಂ ಉಲ್ ಪೌಂಡು ೧ಕ್ಕೆ	೨-೮-೦
೧೦ ಟೋಪಿಯಾಗುವ ದಪ್ಪದ ಉಲ್ ಬಂಡಲಿಗೆ	೩-೩-೦
ಸತ್ಯವಿಜಯ ಹೇರ್ ಆಯಿಲ್ ಸೀಸೆಗೆ	೧-೦-೦

ಬೇಕಾದವುಗಳನ್ನು ವಿ. ಪಿ. ಯಿಂದಲೂ ರವಾನಿಸುತ್ತೇವೆ.

ವಿಳಾಸ-ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ಜರ್ಮನ್ ಸಿಲ್ವರ್ ಒಡವೆಗಳು.

58-1

ಕಾಲಿಗೆ ಹಾಕುವ ರುಳಿ ೧ನೇ ನಂಬರು ರೂ. ೧—೮—೦, ೨ನೇ ನಂ. ರೂ. ೧—೬—೦, ೩ನೇ ನಂ ರೂ. ೧—೪—೦, ೪ನೇ ನಂ. ರೂ. ೧—೨—೦, ಬಾಡಿಮಿ ನಟಾಟ ಜಾಲೀಕಾಯಿ ಗೊಲಸು ೧ನೇ ನಂಬರು ರೂ. ೨—೪—೦, ೨ನೇ ನಂ ರೂ. ೨. ೩ನೇ ನಂ. ರೂ. ೧—೧೨—೦, ತಾಯಿತು ಜಾಲೀಕಾಯಿ ಗೊಲಸು ೧ನೇ ನಂಬರು ರೂ ೨, ೨ನೇ ನಂ ರೂ ೧—೧೨—೦, ೩ನೇ ನಂ ರೂ. ೧—೧೦—೦, ೪ನೇ ನಂ ರೂ ೧—೪—೦, ಮೈಸೂರು ಡಾಬು ರೂ. ೧—೮—೦, ಗೆಜ್ಜೆ ಕಟ್ಟಿದ ಡಾಬು ರೂ ೩. ಮಲ್ಲಿಗೆ ಮೊಗ್ಗಿನ ಡಾಬು ರೂ. ೩—೮—೦, ಕೈ ಕಡಗ ಜೊತೆ ೧ಕ್ಕೆ ರೂ ೧—೪—೦.

ಎಲೆಕ್ಟ್ರಿಕ್ ಭಂಗಾರದ ನಗಗಳು.

ಅರೆಸಾಗರು ರೂ ೧—೧೨—೦, ತಾಳೀಸೂವಾ ೧೦ ಆಣೆ, ರೋಜಾಹೂವು ೧೨ ಆಣೆ, ಮಲ್ಲಿಗೇಹೂವು ೧೨ ಆಣೆ, ಹಸರುಕಲ್ಲು ಇಟ್ಟ ದ್ಯಾಗಡಿ ರೂ. ೧—೮—೦, ಚೌರೀಕಟ್ಟು ರೂ ೧, ಘುಮುಟೇರಿ ಅಡ್ಡಿಕೆ ರೂ ೩—೮—೦, ಗಜ್ಜೆಅಡ್ಡಿಕೆ ರೂ ೩, ಚಂದ್ರಹಾರ ರೂ ೨, ಚಂದ್ರಹಾರ ಮೇಲು ಇಟ್ಟದ್ದು ರೂ. ೨—೮—೦, ಕೈ ಕೀಲುಬಳೆ ಜೋಡಿಗೆ ರೂ ೨, ಗಟ್ಟಿಬಳೆ ಜೋಡಿಗೆ ರೂ. ೧—೧೨—೦, ಕೈಗೆ ಹಾಕುವ ಘುಮುಟೇರಿ ಗೊಲಸು ಜೊತೆಗೆ ರೂ. ೨—೪—೦

ವಿಳಾಸ:—ಶ್ರೀನಾರಾಯಣ ಅಂಡ್ ಕೋ,
೨೪೬, ಮಿಂಟ್ ಬೀದಿ, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-24

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಕವಳದ ಬಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂಧುಗಳ ನೋವು. ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ಊಟವಾದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿದ್ದು ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಬೆಗೂ ಪಾರಿಕೊಡದೆ, ನೀರು ಪಡಾಗಳ ಬಡಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಕತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಡಬ್ಬಿಗೆ ೪ ಆಣೆ; ೫ ಡಬ್ಬಿಗೆ ೧ ಡಬ್ಬಿ ಹೆಚ್ಚು. ೧ ರಿಂದ ೧೨ ಡಬ್ಬಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,
ಎಸ್. ಎಸ್. ಆರ್. ವೈದ್ಯಶಾಲಾ,
ಲಕ್ಷ್ಮೀವಿಲಾಸ ರೋಡ್, ಮೈಸೂರು.

ವೃತ್ತಾಂತ ಪತ್ರಿಕೆ.

ಸ್ರ ೧೯೦೮ ನೇ ಇಸವಿ ಜೂಲೈ ತಾ॥ ೩೦ ನೇ ಗುರುವಾರ.

ತಿಲಕರಿಗಾದ ಶಿಕ್ಷೆಯು.

ಬೊಂಬಾಯಿ ಹೈಕೋರ್ಟಿನ ಜಸ್ಟಿಸ್ ದಾವಾರ್‌ಯವರು ಮೆ॥ ಬಾಲ ಗಂಗಾಧರ ತಿಲಕರಿಗೆ ಕಳೆದ ವಾರ ಆರು ವರುಷಗಳ ದ್ವೀಪಾಂತರ ಸಜಾ ಶಿಕ್ಷೆಯನ್ನು ವಿಧಿಸುವಾಗ್ಗೆ ಅವರು ಮೆ॥ ತಿಲಕರನ್ನು ಕುರಿತು ಹೇಳಿದ ಮಾತುಗಳನ್ನು ಸಂಪೂರ್ಣವಾಗಿ ಭಾಷಾಂತರಮಾಡಿ ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಮೆ॥ ತಿಲಕರ ಮೊಕದ್ದಮೆಯನ್ನು ನ್ಯಾಯಬದ್ಧವಾಗಿಯೂ ಸಹಜವಾಗಿಯೂ ದರ್ಯಾಪ್ತಿ ಮಾಡಲ್ಪಡಲಿಲ್ಲವೆಂದು ಹೇಳುವುದು ಅಸಾಧ್ಯ. ಮೊಕದ್ದಮೆಯು ಎಂಟು ದಿನಗಳ ತನಕ ನಡೆಯಿತು. ಮೆ॥ ತಿಲಕರು ಐದೂವರೆ ದಿನಗಳ ವರೆಗೆ ತಮ್ಮ ಪಕ್ಷವನ್ನು ಹಿಡಿದು ವಾದಿಸಿರುತ್ತಾರೆ. ಅವರು ಸ್ವತಹಾ ಲಾಯರಾಗಿದ್ದು ತಮ್ಮ ಮೊಕದ್ದಮೆಯನ್ನು ತಾವೇ ನಡಿಸಿಕೊಂಡರು. ಆದರೂ ಅವರಿಗೆ ಎಂಟು ಮಂದಿ ವಕೀಲರು ಅವಶ್ಯವಾದ ಸಲಹೆಗಳನ್ನು ಹೇಳಿಕೊಟ್ಟು ಸಹಾಯ ಮಾಡಿರುತ್ತಾರೆ. ಜಡ್ಜಿಯವರೂ ಜೂರಿಪಂಚಾಯಿತರೂ ಮೆ॥ ತಿಲಕರು ೨೧ ಗಂಟೆ ೧೦ ನಿಮಿಷಗಳ ತನಕ ಹೇಳಿದ ವಾದಗಳನ್ನೆಲ್ಲಾ ಸಾವಧಾನದಿಂದ ಕೇಳಿದರು.

ಜೂರಿ ಪಂಚಾಯಿತರಲ್ಲಿ ಏಳು ಮಂದಿ ಇಂಗ್ಲಿಷರಾಗಿಯೂ ಇಬ್ಬರು ಪಾರ್ಸಿಗಳಾಗಿಯೂ ಇದ್ದರು. ಇಂಥಾ ಪಂಚಾಯಿತರನ್ನು ತಮ್ಮ ಮೊಕದ್ದಮೆಗೆ ನೇಮಿಸಕೂಡದೆಂದು ಮೆ॥ ತಿಲಕರು ಮೊದಲು ಆಕ್ಷೇಪಣೆ ಮಾಡಿದರು. ಆದರೆ ರಾಜಕೀಯ ವಿಷಯದಲ್ಲಿ ಎಷ್ಟುಮಟ್ಟಿಗೆ ಸ್ವಾತಂತ್ರ್ಯವಿರಬೇಕೆಂಬುವುದೂ, ರಾಜ್ಯಭಾರದಲ್ಲಿ ಪ್ರಜಾ ಹಿತಕರವಾದ ಬದಲಾವಣೆಗಳಾಗಬೇಕೆಂದು ಹೋರಾಡತಕ್ಕವನ ವಿಷಯದಲ್ಲಿ ಎಷ್ಟುಮಟ್ಟಿಗೆ ಪ್ರೀತಿ ಸಹನಗಳನ್ನು ತೋರಿಸಬೇಕೆಂಬುವುದೂ ಇಂಗ್ಲಿಷರಿಗೆ ತಮ್ಮ ಸ್ವಂತ ಅನುಭವದಿಂದ ಚನ್ನಾಗಿ ತಿಳಿದಿರುವಕಾರಣ ಇಂಗ್ಲಿಷರೇ ಹೆಚ್ಚಾಗಿ ಈ ಪಂಚಾಯಿತರಲ್ಲಿ ನೇಮಕವಾಗಿರುವುದು ತಮಗೆ ತುಂಬಾ ಅನುಕೂಲವಾಯಿತು ಎಂಬದಾಗಿ ಮೆ॥ ತಿಲಕರು ಹೇಳಿ ಸಂತೋಷದಿಂದ ಒಪ್ಪಿಕೊಂಡರು.

ಮೆ॥ ತಿಲಕರು ವಾದಿಸಿದ ವಿಷಯಗಳೆಲ್ಲಾ ಇಂಗ್ಲಿಷ್ ವರ್ತಮಾನಪತ್ರಿಕೆಗಳಲ್ಲಿ ಬಹಳ ದೀರ್ಘವಾಗಿ ಪ್ರಕಟವಾಗಿರುತ್ತವೆ. ನಾವು ಅವನ್ನೆಲ್ಲಾ ಆದ್ಯಂತವಾಗಿ ಓದಿ, ನಮ್ಮ ವಾಚಕರ ತಿಳುವಳಿಕೆಗೋಸ್ಕರ ಮುಖ್ಯವಾದ ವಿಚಾರಗಳನ್ನು ತೆಗೆದು ಕ್ರೋಢೀಕರಿಸಿ ಕೂಡಿದಮಟ್ಟಿಗೂ ಸ್ಪಷ್ಟವಾಗಿ ವಿವರಿಸಲು ಪ್ರಯತ್ನಪಟ್ಟಿದ್ದೇವೆ. ಇದು ಕಷ್ಟವೇ ಸರಿ. ಯಾಕೆಂದರೆ, ಮೆ॥ ತಿಲಕರು ಅನೇಕ ವಿಷಯಗಳನ್ನು ಒಟ್ಟುಕೂಡಿಸಿ ಬಹು ದೀರ್ಘವಾಗಿಯೂ ಗಲಿಬಿಲಿಯಾಗಿಯೂ ವಾದಿಸಿರುವರು. ಅನೇಕ ವೇಳೆ ಹೇಳಿದ್ದನ್ನೇ ಮತ್ತೆಮತ್ತೆ ಹೇಳಿರುವರು. ಅವನ್ನೆಲ್ಲಾ ಓದಿದ್ದರಲ್ಲಿ ಇದು ಮುಖ್ಯಭಾಗಗಳೆಂದು ನಮಗೆ ತಿಳಿಯುವುದು.

(೧) 'ಕೇಸರಿ' ಪತ್ರಿಕೆಯ ಎರಡು ಸಂಚಿಕೆಗಳಲ್ಲಿದ್ದ ಎರಡು ಬಾತ್ಮಿಗಳು ರಾಜದ್ರೋಹಕರವಾದವುಗಳೆಂದು ಸರ್ಕಾರದವರು ಮೊಕದ್ದಮೆಯನ್ನು ತಂದರಷ್ಟೆ. ಮರಾಟೀ ಭಾಷೆಯಲ್ಲಿದ್ದ ಆ ಬರವಣಿಗೆಗಳನ್ನು ಇಂಗ್ಲೀಷಿಗೆ ಭಾಷಾಂತರ ಮಾಡಿದ್ದರು. ಸರ್ಕಾರದವರು ಮಾಡಿಸಿದ್ದ ಭಾಷಾಂತರವು ಸರಿಯಾಗಿಲ್ಲವೆಂದು ಮೆ॥ ತಿಲಕರು ಆಕ್ಷೇಪಣೆ ಮಾಡಿ, ಭಾಷಾಂತರ ಮಾಡಿದ ಸರ್ಕಾರೀ ಅಧಿಕಾರಿಯನ್ನು ಒಂದು ದಿನ ವೆಲ್ಲಾ ಛಾಟೀ ಸವಾಲು ಮಾಡಿದ್ದಲ್ಲದೆ, ಮರಾಟೀ ಮಾತಿಗೆ ಸರಿಯಾದ ಇಂಗ್ಲಿಷ್ ಪದವನ್ನು ಉಪಯೋಗಿಸಿಲ್ಲವೆಂದು ಅನೇಕ ವೇಳೆ ಎದುರು ವಾದಿಸಿದರು. ಸರ್ಕಾರಿ ತರಫಿನಲ್ಲಿ ಮೊಕದ್ದಮೆಯನ್ನು ನಡಿಸಿದ ಅಡ್ವೊಕೇಟ್ ಜನರಲ್ ಮೆ॥ ಬ್ರಾನ್ಸನ್ ಯವರೂ ಜಡ್ಜಿಯವರೂ—"ಈ ಮೊಕದ್ದಮೆಯಲ್ಲಿ ಮೆ॥ ತಿಲಕರು ಹೇಳುವ ಇಂಗ್ಲಿಷ್ ಪದಗಳನ್ನೇ ಸಹ ಜವಾಬುಗಳೆಂದು ಒಪ್ಪಿಕೊಳ್ಳಬಹುದು. ಇದರಿಂದ ವ್ಯತ್ಯಾಸವೇನೂ ಏನಂತೆ ಕಂಡುಬರುವುದಿಲ್ಲ" ಎಂದು ಹೇಳಿದರು.

(೨) ಮೆ॥ ತಿಲಕರು ತಮ್ಮ ಮೇಲೆ ಆಪಾದನೆಮಾಡಲ್ಪಟ್ಟ ಪೀನಲ್ ಕೋಡಿನ ಸೆಕ್ಷನ್‌ಗಳಲ್ಲಿರುವಂಥಾ ಕೆಲವು ಪದಗಳ ವಿಚಾರವಾಗಿ ಬಹಳ ಹೊತ್ತು ಚರ್ಚೆಮಾಡಿ, ಅವುಗಳ ಅರ್ಥವನ್ನು ವಿವರಿಸಿದರು. ಈ ಮೊಕದ್ದಮೆಯನ್ನು ನಡಿಸಿದ ಕ್ರಮವು ಸರಿಯಾಗಲಿಲ್ಲವೆಂದು ಆಕ್ಷೇಪಣೆಮಾಡಿ, ಜಡ್ಜಿಯವರಿಗೂ ಪಂಚಾಯಿತರಿಗೂ ಕಾನೂನಿನ ಅಭಿಪ್ರಾಯವನ್ನು ವಿವರಿಸಲಾರಂಭಿಸಿದರು. ಇದಿಷ್ಟೂ ಬರಿಯ ಮಾತಾಗಿಯೂ ವ್ಯರ್ಥಕಾಲಹರಣೆಯಾಗಿಯೂ ಪರಿಣಮಿಸುವುದಾಯಿತು. ಕಾನೂನಿನ ಪದಗಳ ಅರ್ಥವು ಸಾಮಾನ್ಯರಿಗೂ ಕೂಡ ಸ್ಪಷ್ಟವಾಗಿ ತಿಳಿಯುವುದು ; ಮತ್ತು ಹಿಂದೆ ನಡೆದಿರುವ ಮೊಕದ್ದಮೆಗಳಲ್ಲಿ ಜಡ್ಜಿಗಳಿಂದ ಇನ್ನೂ ಚನ್ನಾಗಿ ವಿವರಿಸಲ್ಪಟ್ಟಿವೆ. ಇದಲ್ಲದೆ ಈ ಮೊಕದ್ದಮೆಯನ್ನು ದರ್ಯಾಪ್ತಿಮಾಡಿದ ಜಡ್ಜಿಯವರೂ ಕೂಡ ಅಂಥಾ ಕ್ರಮವು ಮೊದಲೇ ವಿಧಾಯಕಮಾಡಲ್ಪಟ್ಟಿದೆ ಎಂದು ಖಂಡಿತವಾಗಿ ಹೇಳಿದರು.

(೩) ಮೆ॥ ತಿಲಕರು ಅಂಥಾ ಬರವಣಿಗೆಗಳನ್ನು ಬರೆದದ್ದಕ್ಕೆ ಕಾರಣವಾಗಿ ಹೇಳಿದ್ದೇನೆಂದರೆ,—ಹಿಂದುಸ್ಥಾನದಲ್ಲಿ ಪತ್ರಿಕೆಗಳನ್ನು ನಡಿಸುವ ಇಂಗ್ಲಿಷ್ ಜನರು, ರಾಜಕೀಯ ವಿಷಯಗಳನ್ನು ಹಿಡಿದು ಹೋರಾಡುತ್ತಿರುವಂಥಾ ದೇಶೀಯ ಜನರ ದೆಸೆಯಿಂದ ಸಿಡಿಮದ್ದಿನ ಗುಂಡುಗಳ ಕ್ರೂರ ಕೃತ್ಯಗಳು ನಡೆಯುವವೆಂತಲೂ, ಆ ದೇಶೀಯರ ವಿಷಯದಲ್ಲಿ ಗವರ್ನಮೆಂಟಿನವರು ಕಠಿಣವಾದ ಕಾನೂನು ಮಾಡಿ ನಿರ್ಬಂಧಪಡಿಸಬೇಕೆಂತಲೂ ಇಂಗ್ಲಿಷ್ ಪತ್ರಿಕೆಗಳಲ್ಲಿ ಬರೆಯುತ್ತಾ ಬಂದರು. ಇಂಥಾ ಬರವಣಿಗೆಗಳಿಗೆ ಜವಾಬಾಗಿ ತಾವು (ಮೆ॥ ತಿಲಕರು) ಆ ಬಾತ್ಮಿಗಳನ್ನು ಬರೆದಿರುವಂತೆ ಹೇಳಿದರು. ಅಂಥಾ ಜವಾಬು ಬರೆಯುವುದಕ್ಕೆ ಅದು ಸಾಕಾದ ಕಾರಣವಲ್ಲವೆಂದು ತಿಳಿಸಲಾಯಿತು. ಮೆ॥ ತಿಲಕರು ತಮ್ಮ ಬರವಣಿಗೆಗಳಲ್ಲಿ ಗವರ್ನಮೆಂಟಿನವರಿಗೆ ಅಪಮಾನಕರವಾಗಿಯೂ ರಾಜದ್ರೋಹವನ್ನು ಪ್ರೋತ್ಸಾಹಿಸುವಂತೆಯೂ ಬರೆದದ್ದರಿಂದಲೇ ಅವರ ಮೇಲೆ ಈ ಮೊಕದ್ದಮೆ ತರಲ್ಪಟ್ಟಿತು. ಒಬ್ಬ ವಿದ್ಯಾರ್ಥಿಯು ತನ್ನ ಸಹಪಾಠಿಯನ್ನು ದೂಷಿಸಿದರೆ ಆ ಸಹಪಾಠಿಯು ಅದಕ್ಕೆ ಪ್ರತಿಯಾಗಿ ತನ್ನ ಉಪಾಧ್ಯಾಯನನ್ನು ದೂಷಣೆ ಮಾಡುವುದು ನ್ಯಾಯವಾಗಿರಲಾರದು.

(೪) ಮೆ॥ ತಿಲಕರು—ತಾವು ದೇಶವತ್ಸಲರು, ಗವರ್ನಮೆಂಟಿನ ಕ್ರಮಗಳು ಬದಲಾಯಿಸಲ್ಪಡಬೇಕು ಎಂಬ ಉದ್ದೇಶದಿಂದ ಆ ಬಾತ್ಮಿಗಳನ್ನು ಬರೆದಿರುವುದಾಗಿಯೂ, ಕೋರ್ಟಿನವರು ಆ ತಮ್ಮ ಉದ್ದೇಶವನ್ನು ಕುರಿತು ಪರ್ಯಾಲೋಚಿಸಬೇಕೆಂತಲೂ ವಾದಿಸಿದರು. ಆದರೆ ಗವರ್ನಮೆಂಟಿನಲ್ಲಿ ಹಿಂದುಸ್ಥಾನದವರಿಗೆ ಇನ್ನೂ ಹೆಚ್ಚಾಗಿ ಅಧಿಕಾರಗಳು ಕೊಡಲ್ಪಡಬೇಕೆಂಬುವುದು ತಮ್ಮ ಅಭಿಮತವೋ, ಅಥವಾ ಇಂಗ್ಲಿಷರೆಲ್ಲಾ ಈ ರಾಷ್ಟ್ರವನ್ನೇ ಬಿಟ್ಟು ಹೊರಟುಹೋಗಬೇಕೆಂಬುವುದು ತಮ್ಮ ಅಭಿಪ್ರಾಯವೋ ಮೆ॥ ತಿಲಕರು ತಮ್ಮ ಉಪನ್ಯಾಸದಲ್ಲಿ ತೋರಿಸಿಲ್ಲ.

(೫) ವರ್ತಮಾನ ಪತ್ರಿಕೆಗಳಿಗೆ ಸ್ವಾತಂತ್ರ್ಯವಿರಬೇಕೆಂದು ಹೋರಾಡುವುದರಲ್ಲಿ ತಾವು ಪ್ರಮುಖರೆಂದು ಮೆ॥ ತಿಲಕರು ಹೇಳಿದರು. ಈ ಕಡೆಯ ವಿಷಯವನ್ನು ಚನ್ನಾಗಿ ಪರಿಶೀಲನೆಮಾಡಿ ತಮ್ಮನ್ನು (ಮೆ॥ ತಿಲಕರನ್ನು) ನಿರಪರಾಧಿಗಳೆಂದು ಹೇಳಿ ಬಿಡುಗಡೆ ಮಾಡಿಸಬೇಕೆಂದು ಪಂಚಾಯಿತರಿಗೆ ಬಹಳವಾಗಿ ಹೇಳಿಕೊಂಡರು. ಆದರೆ ಹಿಂದುಸ್ಥಾನದಲ್ಲಿ ಪತ್ರಿಕೆಗಳಿಗೆ ಇರುವಷ್ಟು ಸ್ವಾತಂತ್ರ್ಯವು ಪ್ರಪಂಚದ ಇನ್ಯಾವ ರಾಜ್ಯದಲ್ಲೂ ಇರುವುದಿಲ್ಲವೆಂದು ಹೇಳಬೇಕು. ಇಂಗ್ಲಾಂಡಿನಲ್ಲಿ ಪತ್ರಿಕೆಗಳಿಗಿರುವ ಸ್ವಾತಂತ್ರ್ಯಕ್ಕೂ ಹಿಂದುಸ್ಥಾನದಲ್ಲಿ ಪತ್ರಿಕೆಗಳಿಗಿರುವ ಸ್ವಾತಂತ್ರ್ಯಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲ. ಒಂದು ನಿರ್ಬಂಧವನ್ನು ಮಾತ್ರ ಇಟ್ಟಿದ್ದಾರೆ. ಎಡಿಟರಾದವನು ಸಾಮಾನ್ಯ ಪ್ರಜೆಯ ಮೇಲೆ ಅವಮಾನಕರವಾಗಿ ಬರೆದರೆ, ಮಾನನಷ್ಟದ ಮೊಕದ್ದಮೆಗೆ ಒಳಗಾಗುವನು ; ಮತ್ತು ಪ್ರಜೆಗಳಲ್ಲಿ ಒಂದು ಪಂಗಡದವರನ್ನು ಕಂಡರೆ ಇನ್ನೊಂದು ಪಂಗಡದವರಿಗಾಗದಂತೆಯೋ ಅಥವಾ ರಾಜದ್ರೋಹಕರವಾದ ಬರವಣಿಗೆಗಳಿಂದ ಜನರನ್ನು ಗವರ್ನಮೆಂಟಿನ ಮೇಲೆ ತಿರಿಗಿ ಬೀಳುವ ರೀತಿ ಎತ್ತಿ ಕಟ್ಟುವಂತೆಯೋ ಬಾತ್ಮಿಗಳನ್ನು ಎಡಿಟರು ಬರೆದ ಪಕ್ಷದಲ್ಲಿ ಗವರ್ನಮೆಂಟಿನವರು ಅಂಥವನನ್ನು ಹಿಡಿದು ಶಿಕ್ಷಿಸುವರು. ಇಂಥಾ ನಿರ್ಬಂಧವನ್ನು ತಗುಲಿಸಬೇಕೆಂದು ಯಾವ ಬುದ್ಧಿಶಾಲಿಯಾದರೂ ಹೇಳುವನೇ ? ವಿಲಾಯತಿಯಲ್ಲಿಯೂ ಕೂಡ ಯಾವ ಇಂಗ್ಲಿಷನೂ ಹಾಗೆ ಹೇಳುವುದಿಲ್ಲ. ವರ್ತಮಾನ ಪತ್ರಿಕೆಗಳಿಗೆ ಇರುವ ಇಂಥಾ ನಿರ್ಬಂಧವನ್ನು ಲಕ್ಷ್ಯಮಾಡದೆ ಹೋದದ್ದರಿಂದಲೇ ಮೆ॥ ತಿಲಕರನ್ನು ಹಿಡಿದು ದರ್ಯಾಪ್ತಿ ಮಾಡಿದರು.

ಮೇಲ್ಕಂಡ ಜೂರಿ ಪಂಚಾಯಿತರು "ಕೇಸರಿ"ಯ ಬರವಣಿಗೆಗಳು ಪ್ರಜೆಗಳಲ್ಲಿ ರಾಜದ್ರೋಹವನ್ನು ಹುಟ್ಟಿಸತಕ್ಕವುಗಳಾಗಿದ್ದವೇ ಇಲ್ಲವೇ ಎಂದು ಗೊತ್ತುಮಾಡುವುದು ಅವರ ಮುಖ್ಯ ವಿಚಾರವಾಗಿತ್ತು. ಆದರೆ ಮೆ॥ ತಿಲಕರು ಕೋರ್ಟಿನಲ್ಲಿ ಹೀಗೆ ಹೇಳಬಹುದಾಗಿತ್ತು :— ನಾನು ಬ್ರಿಟಿಷ್ ಸಾರ್ವಭೌಮರಲ್ಲಿ ಸಂಪೂರ್ಣವಾದ ಭಯಭಕ್ತಿಯನ್ನು ಇಟ್ಟುಕೊಂಡಿದ್ದೇನೆ. ಇಂಗ್ಲೀಷ್ ಗವರ್ನಮೆಂಟು ಇಲ್ಲಿ ಇರಕೂಡದೆಂಬುವುದು ನನ್ನ ಅಭಿಮತವಲ್ಲ : ಆದರೆ ರಾಜ್ಯಭಾರಕ್ರಮಗಳು ಕೊಂಚಮಟ್ಟಿಗೆ ಬದಲಾವಣೆಯಾಗಬೇಕಾಗಿವೆಯೆಂದು ಕೋರುವೆನು. ಇದು ಹಿಂದುಸ್ಥಾನದ ಶ್ರೇಯೋಭಿವೃದ್ಧಿಗೆ ಅವಶ್ಯವಾಗಿರುವುದು." ಮೆ॥ ತಿಲಕರು ಈ ರೀತಿ ಹೇಳಕೂಡದಾಗಿತ್ತೆಂದು ನಮಗೆ ತೋರುತ್ತದೆ. ಯಾಕೆಂದರೆ ಅವರು "ಕೇಸರಿ"ಯಲ್ಲಿ ಬರೆದಿರುವ ಅಭಿಪ್ರಾಯಗಳನ್ನೂ, ಅವರ ಇತರ ಬರವಣಿಗೆಗಳನ್ನೂ, ಅವರ ಹಿಂದಿನ ನಡವಳಿಕೆಯನ್ನೂ ನೋಡಿದರೆ ಅದೆಲ್ಲಾ ಮೇಲ್ಕಂಡ ಮಾತುಗಳಿಗೆ ವ್ಯತಿರಿಕ್ತವಾಗಿರುವುದು. ಸೂರತ್ತಿನಲ್ಲಿ ಕಾಂಗ್ರೆಸ್ ಮಹಾ ಸಭೆಯ ಅಭಿಪ್ರಾಯವು ತಾವು ಇಂಗ್ಲಿಷ್ ಸಾರ್ವಭೌಮರ ಸತ್ಪ್ರಜೆಗಳಾಗಿದ್ದು ರಾಜಕೀಯ ಬದಲಾವಣೆಗಳ ವಿಷಯದಲ್ಲಿ ತಾವು ನ್ಯಾಯವಾಗಿಯೂ ತಾಳ್ಮೆಯಿಂದಲೂ ಕಾರ್ಯಸಾಧನೆ ಮಾಡಬೇಕಾಗಿದೆ ಎನ್ನುವುದಾಗಿತ್ತು. ಈ ಅಭಿಮತವನ್ನು ಮಹಾ ಸಭೆಯಲ್ಲಿ ಹೇಳಿದಾಗ ಮೆ॥ ತಿಲಕರು ಅದನ್ನು ಕೂಡಲೇ ಕೂಡದೆಂದು ಆಕ್ಷೇಪಣೆ ಮಾಡಿ, ವಿರೋಧವಾಗಿ ನಿಂತದ್ದರಿಂದ ಆ ಮಹಾ ಸಭೆಯು ನಡೆಯಲಿಲ್ಲ. ಎರಡನೆಯದಾಗಿ ಮೆ॥ ತಿಲಕರು ಕೋರ್ಟಿನಲ್ಲಿ ಇನ್ನೊಂದು ರೀತಿ ಸ್ಪಷ್ಟವಾಗಿ ಹೇಳಬಹುದಾಗಿತ್ತು. ಏನೆಂದರೆ—"ನಾನು ಇಂಗ್ಲಿಷ್ ರಾಜರಲ್ಲಿ ಭಕ್ತಿಯನ್ನಿಟ್ಟುಕೊಂಡಿಲ್ಲವೆಂಬುವುದು ನಿಜ. ಇಂಗ್ಲಿಷ್ ಗವರ್ನಮೆಂಟಿನಿಂದ ಹಿಂದುಸ್ಥಾನಕ್ಕೆ ಕೇಡುಂಟಾಗಲು ಕಾರಣವಾಗಿದೆ ಎಂದು ನಾನು ತಿಳಿದಿರುತ್ತೇನೆ. ಇಂಗ್ಲಿಷ್ ಗವರ್ನಮೆಂಟನ್ನು ಹಿಂದುಸ್ಥಾನದಿಂದ ಹೊರಡಿಸಿಬಿಡಬೇಕು." ಈ ಪ್ರಕಾರ ಅವರು ಸ್ಪಷ್ಟವಾಗಿ ಹೇಳಿಬಿಟ್ಟಿದ್ದರೆ ಇಂಗ್ಲಿಷರಾದರೂ—ಈತ ನಮ್ಮ ಗವರ್ನಮೆಂಟಿಗೆ ವಿರೋಧಿಯಾಗಿದ್ದಾಗ್ಯೂ ಬಹಳ ಧೈರ್ಯಸನಾಗಿಯೂ ಸತ್ಯವಾಗಿ ತನ್ನ ಅಭಿಮತವನ್ನು ನುಡಿಯುತಕ್ಕವನಾಗಿಯೂ ಇದ್ದಾನೆಂದು ಆತನನ್ನು ಗೌರವದಿಂದ ಕಾಣುತ್ತಿದ್ದರು. ಆದರೆ ಅವರು ಒರಿಯ ವಾಗ್ಜಾಲದಿಂದ ಮೂರು ದಿನವನ್ನು ತುಂಬಿದರಲ್ಲದೆ ಹಾಗೇನೂ ಮಾಡಲಿಲ್ಲ. ದೇಶವತ್ಸಲನ ಲಕ್ಷಣವೂ ಕಾರ್ಯವೂ ಮಾತೂ ಇದಲ್ಲ ; ಅವನು ತನ್ನ ಅಭಿಮತವನ್ನು ಸಂಕ್ಷೇಪವಾಗಿಯೂ ಸ್ಫುಟವಾಗಿಯೂ ಹೇಳತಕ್ಕವನಾಗಿರಬೇಕು. ಮೆ॥ ತಿಲಕರ ಸ್ನೇಹಿತರೂ ಕೂಡ ಅವರು ವಾದಿಸಿದ್ದನ್ನು ಸರಿ ಎಂದು ಒಪ್ಪಿಕೊಳ್ಳಲಾರರೆಂಬದಾಗಿ ನೆನಸುತ್ತೇವೆ. ಅವರ ಮಾತೆಲ್ಲಾ ಗಲಿಬಿಲಿಯಾದದ್ದು, ಕಾರ್ಯಕಾರಣವಿಲ್ಲದ್ದು, ಕ್ರಮರಹಿತವಾದದ್ದು ; ಮನಸ್ಸಾಕ್ಷಿಗೆ ಒಪ್ಪಿತವಾಗಿಯೂ ರಂಜಕವಾಗಿಯೂ ಇರಲಿಲ್ಲವೆಂದು ಹೇಳಬಹುದು.

ಮೆ॥ ತಿಲಕರಿಗೆ ಆದ ಶಿಕ್ಷೆಯು ಹೆಚ್ಚೆಂತಲೇ ಹೇಳುತ್ತೇವೆ ; ಆದರೆ ಅವರು ಮಾಡಿರುವ ಅಪರಾಧವು ಘೋರವಾದದ್ದನ್ನುವುದಕ್ಕೆ ಸಂಶಯವಿಲ್ಲ. ಈಗ ಹಿಂದುಸ್ಥಾನದಲ್ಲಿ ಪ್ರಜಾನೆಮ್ಮದಿ ಸುಖ ಸಂತೋಷಗಳಿಗೂ ದೇಶಾಭ್ಯುದಯಕ್ಕೂ ಇಂಗ್ಲಿಷ್ ಗವರ್ನಮೆಂಟು ಇರಬೇಕಾದದ್ದು ಅವಶ್ಯವೆಂದು ನಾವು ನಂಬುತ್ತೇವೆ. ಆ ಗವರ್ನಮೆಂಟಿಗೆ ಕೇಡನ್ನುಂಟುಮಾಡಬೇಕೆನ್ನುವವರು ಅಲ್ಲಿನ ದೇಶೀಯ ರಾಜರುಗಳಿಗೂ ಪ್ರಜಾಕೋಟಿಗಳಿಗೂ ಕೇಡನ್ನುಂಟುಮಾಡತಕ್ಕವರಾಗಿದ್ದಾರೆ.

ಈ ರೀತಿಯಾಗಿ ಬರೆಯಲು ನಾವು ತುಂಬಾ ವಿಷಾದಪಡುತ್ತೇವೆ. ವಾಚಕರು ನಿಧಾನವಾಗಿ ಯೋಚಿಸಿ ತಿಳಿದುಕೊಳ್ಳಲೆಂದು ಈ ವಿಷಯವನ್ನು ಇಷ್ಟು ವಿಸ್ತಾರವಾಗಿ ಬರೆದಿರುವೆವು. ಜೂರಿ ಪಂಚಾಯಿತರು ಹೇಳಿದ ತೀರ್ಮಾನವೇ ನ್ಯಾಯವಾದದ್ದೆಂದು ನಾವೇನೋ ತಿಳಿದಿರುತ್ತೇವೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಛೀಫ್ ಕೋರ್ಟಿನಲ್ಲಿ ಹೊಸದಾಗಿ ಜಡ್ಜಿ ಕೆಲಸಕ್ಕೆ ನೇಮಕವಾಗಿರುವ ಮೆ॥ ಶ್ರೀನಿವಾಸೈಯ್ಯಂಗಾರು ಕಳೆದ ವಾರ ಎರಡು ದಿನಗಳ ಮಟ್ಟಿಗೆ ರಾಜಧಾನಿಗೆ ಬಂದಿದ್ದು ವಾಪಸು ಹೋದರು.

❦❦❦

ಶ್ರೀಮಾನ್ ಮಹಾರಾಜರವರು ರಾಜಧಾನಿಯಲ್ಲಿರುವ ಮೆ॥ ಎ. ವಿ. ಸುಬ್ರಹ್ಮಣ್ಯರಾಜೇ ಅರಸಿನವರನ್ನು ಮೈಸೂರು ಅಲಾಹಿದಲ್ಲಿ ತಾರಪತ್ರ ಬರುವುದಕ್ಕೋಸ್ಕರ ಬೆಂಗಳೂರಿಗೆ ಕಳುಹಿರುತ್ತಾರೆಂದು ಕೇಳುತ್ತೇವೆ.

❦❦❦

ರಾಜಧಾನಿಯಲ್ಲಿ ಮಹಮದೀಯರು ಪ್ರಜೆಗಳು ಮಾಡಿಕೊಂಡಿರುವ ಅಂಜುಮಾನ್ ಹಿಮಾಯತ್ ಇಸ್ಲಾಂ ಎಂಬ ಸಂಘದ ಸೆಕ್ರೆಟರಿಯವರು ತಮ್ಮ ಸಂಘದಿಂದ ಒಬ್ಬ ಪ್ರತಿನಿಧಿಯನ್ನು ಚುನಾಯಿಸಿ ಪ್ರಜಾಪ್ರತಿನಿಧಿ ಸಭೆಗೆ ಕಳುಹಿಸುವಂತೆ ಅಪ್ಪಣೆ ಆಗಬೇಕೆಂದು ಗವರ್ನಮೆಂಟಿನವರನ್ನು ಪ್ರಾರ್ಥಿಸಿಕೊಂಡಿದ್ದರು. ಗವರ್ನಮೆಂಟಿನವರು ಅವರ ಪ್ರಾರ್ಥನೆಯಂತೆ ಈ ಸಂಘದಿಂದ ಒಬ್ಬ ಮೆಂಬರನ್ನು ಚುನಾಯಿಸಿ ಪ್ರತಿನಿಧಿ ಸಭೆಗೆ ಕಳುಹಿಸಬಹುದೆಂದು ಅಪ್ಪಣೆ ಕೊಡಿಸಿರುತ್ತಾರೆ.

❦❦❦

ಈ ವರುಷ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ನಡಿಸುವುದಕ್ಕೆ ಸರ್ಕಾರದವರು ಒಂದು ಕಮಿಟಿಯನ್ನು ನೇಮಿಸಿರುತ್ತಾರೆ. ಮೆಂಬರುಗಳ್ಯಾರೆಂದರೆ—ಮೆ॥ ಆ ಮೆಕಾನಕಿಯವರು (ಪ್ರೆಸಿಡೆಂಟ್), ಮೆ॥ ಎಚ್ ಜೆ ಭಾಭಾಯವರು (ಸೆಕ್ರೆಟರಿ), ಮೆ॥ ಜೆ. ಎಚ್. ಸ್ಟೋನ್‌ಯವರು (ಮದರಾಸ್ ಗವರ್ನಮೆಂಟಿನವರು ಸ್ವೀಕರಿಸ ಮಾಡಿದರೆ), ರೆವ್ ಡಾಕ್ಟರ್ ಸ್ಪೆನ್ಸರ್‌ಯವರು, ರೆವ್ ಎ. ಮೋಘಾಟ್‌ಯವರು. ಮೆ॥ ಜೆ ವಿಯರ್‌ಯವರು, ಮೆ॥ ಜೆ. ಜಿ. ಟೇಟ್‌ಯವರು.

❦❦❦

ಆಗಸ್ಟು ೧ನೇ ತಾ. ಶನಿವಾರ ಮಧ್ಯಾಹ್ನ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದ ಕೌನ್ಸಿಲ್ ಹಾಲಿನಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯು ನಡೆಯುವುದಾಗಿದೆ ಈ ಸಂಸ್ಥಾನದಲ್ಲಿ ಪ್ರಕಟವಾಗುವ ವರ್ತಮಾನ ಪತ್ರಿಕೆಗಳ ಬರವಣಿಗೆ ವಿಷಯದಲ್ಲಿ ಕೆಲವು ನಿರ್ಬಂಧಗಳನ್ನು ಕಲ್ಪಿಸಿ ಕ್ರಮಪಡಿಸುವುದಕ್ಕೋಸ್ಕರ ಒಂದು ಕಾನೂನನ್ನು ಮಾಡಬೇಕೆಂದು ಗವರ್ನಮೆಂಟಿನವರು ಯೋಚಿಸಿರುವಂತೆಯೂ, ಈ ವಿಚಾರವು ಆ ದಿನ ಸಭೆಯಲ್ಲಿ ಚರ್ಚೆಯಾಗಬಹುದೆಂತಲೂ ಕಾಣುವುದು

❦❦❦

ಕಳೆದ ಮಾರ್ಚಿ ತಾ ೩೧ ಕ್ಕೆ ಮುಗಿದ ವರುಷದ ತಿಂಗಳಲ್ಲಿ ಮೈಸೂರು ಸಂಸ್ಥಾನದಲ್ಲಿ ರೋಗಗಳ ದೆಸೆಯಿಂದ ೩,೭೫೩ ರೋಗಿಗಳು ಮೃತಪಟ್ಟರೆಂತಲೂ, ಹೋದ ವರುಷ ಅದೇ ಮೂರು ತಿಂಗಳಲ್ಲಿ ೧೩,೫೭೮ ಜನಗಳು ಸತ್ತು ಹೋದರೆಂತಲೂ ತಿಳಿಯುವುದು. ಆದರೆ ಸರ್ಕಾರಿ ಪಶುವೈದ್ಯರಾದ ಮೆ॥ ನರಸಿಂಹಯ್ಯಂಗಾರ್ರು ಅಂಟುಜಾಡ್ಯಗಳಿದ್ದ ಪ್ರದೇಶಗಳಲ್ಲಿ ವಿಶೇಷವಾಗಿ ಸಂಚಾರ ಮಾಡಿ, ಜನರಿಗೆ ತಕ್ಕ ಚಿಕಿತ್ಸೆ ಪಾಲನೆ ಮುಂತಾದ್ದನ್ನು ತಿಳಿಸಿ, ಅಂಟು ರೋಗಗಳು ಹರಡದಂತೆ ೧,೬೦೮ ಗೋಕಾಯಿಗಳಿಗೆ ಟೀಕಾ (ವಾಕ್ಸಿನೇಷನ್) ಹಾಕಿರುತ್ತಾರೆಂದು ಪ್ರಕಟವಾಗಿದೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಗಟ್ಟಳೆಯ ಮೀಟಿಂಗನ್ನು ನಡಿಸಿದರು. ಜಮಾ ಖರ್ಚಿನ ಲೆಕ್ಕಗಳನ್ನು ಕೌನ್ಸಿಲರುಗಳು ನೋಡಿದ್ದ ಕಾರಣ ಅವನ್ನು ಓದಿಸದೆ, ಸರಿಯಾಗಿದೆ ಎಂದು ಒಪ್ಪಿಕೊಂಡರು. ಆಡಿಟರುಗಳು ಲೆಕ್ಕಗಳನ್ನು ಆಡಿಟು ಮಾಡಿ, ಕೆಲವು ಕಡೆ ಕಂಡುಬಂದ ಲೋಪಗಳನ್ನು ರಿಪೋರ್ಟು ಮಾಡಿದರು. ಅದಕ್ಕೆ ಸಾಲ್ಯಾಂಶವಾದ್ದರಿಂದ ಆ ರೀತಿ ಮಾಡಬೇಕಾಯಿತೇ ಹೊರತು ಮತ್ತೇನೂ ಕಾರಣವಿಲ್ಲವೆಂದು ವೈಸ್ ಪ್ರೆಸಿಡೆಂಟರು ಸಮಾಧಾನ ಹೇಳಿದರು. ಈಗಿರುವ ಆಡಿಟರುಗಳೇ ಇನ್ನೂ ಮೂರು ತಿಂಗಳ ತನಕ ಮ್ಯುನಿಸಿಪಲ್ ಲೆಕ್ಕಗಳನ್ನು ತನಿಖೆ ಮಾಡತಕ್ಕದ್ದೆಂದು ಕೌನ್ಸಿಲರುಗಳು ಗೊತ್ತು ಮಾಡಿದರು.

ಮ್ಯುನಿಸಿಪಲ್ ಕಂದಾಯದ ಬಾಕಿಯನ್ನು ವಸೂಲ್ಮಾಡುವುದಕ್ಕೆ ಈಗ ನೇಮಕವಾಗಿರುವ ನಾಲ್ವರು ಹಂಗಾಮಿ ಕೆಲಸದಾರರನ್ನು ಇನ್ನೂ ಮೂರು ತಿಂಗಳ ತನಕ ನೇಮಿಸಿಕೊಂಡು, ಅವರು ಮಾಡುವ ವಸೂಲಾತಿಯನ್ನು ಚೆನ್ನಾಗಿ ಮೇಲ್ವಿಚಾರಣೆಯಿಟ್ಟು ನೋಡಿಕೊಂಡು ಎಲ್ಲಾ ಹಣವನ್ನೂ ಅಷ್ಟರೊಳಗೆ ವಸೂಲ್ಮಾಡಿಸುವುದಕ್ಕೆ ಪ್ರಯತ್ನಪಡಬೇಕೆಂದು ಕೌನ್ಸಿಲರುಗಳು ಗೊತ್ತು ಮಾಡಿದರು.

ಪ್ರಜಾ ಸಂಖ್ಯೆಯನ್ನು ಗೊತ್ತುಮಾಡುವುದಕ್ಕೂ, ಮನೆಗಳಿಗೂ ಖಾಲೀ ನಿವೇಶನಗಳಿಗೂ ನಂಬರು ಕೊಟ್ಟು ಲೆಕ್ಕಗಳನ್ನು ಕ್ರಮಪಡಿಸುವುದಕ್ಕೂ ಕೆಲವು ಗುಮಾಸ್ತರನ್ನು ಮ್ಯುನಿಸಿಪಾಲಿಟಿಯವರು ನೇಮಕಮಾಡಿದಾರೆ. ಇವರು ಮಾಡುತ್ತಿರುವ ಕೆಲಸಗಳು ಇನ್ನೂ ಪೂರೈಸಲಿಲ್ಲವಾದ್ದರಿಂದ ಅದು ಪೂರೈಸುವ ತನಕ ಆ ಹಂಗಾಮಿ ಸಿಬ್ಬಂದಿಯನ್ನು ನೇಮಕಮಾಡಿಕೊಳ್ಳುವಂತೆ ಅವಕಾಶವಾಗಬೇಕೆಂದು ವೈಸ್ ಪ್ರೆಸಿಡೆಂಟರು ಸೂಚಿಸಿದರು. ಕೌನ್ಸಿಲರುಗಳು ಈ ವಿಷಯವನ್ನು ಮ್ಯಾನೇಜಿಂಗ್ ಕಮಿಟಿಗೆ ತಿಳಿಸಿ ಅವರ ಅಭಿಪ್ರಾಯವನ್ನು ಪಡೆಯತಕ್ಕದ್ದೆಂದು ತೀರ್ಮಾನ ಮಾಡಿದರು.

ಕುಕ್ಕರ ಹಳ್ಳಿ ಕೆರೆ ಮತ್ತು ಅದರ ನಾಲೆ, ಸಿಬ್ಬಂದಿ ಮುಂತಾದ್ದನ್ನು ಇಂಜನಿಯರ್ ಇಲಾಖೆಯವರು ವಹಿಸಿಕೊಂಡು ಮೇಲ್ವಿಚಾರಣೆ ನೋಡಿಕೊಳ್ಳುವುದಾಗಿ ಛೀಫ್ ಇಂಜನಿಯರವರಿಂದ ಬಂದಿದ್ದ ಕಾಗದವನ್ನು ಓದಿಸಿ ರಿಕಾರ್ಡು ಮಾಡಿಕೊಂಡರು.

ರಾಜಧಾನಿಯ ನೀರಿನ ಸರಬರಾಯಿಗೋಸ್ಕರ ಸ್ಯಾಂಕ್ಷನ್ ಆಗಿದ್ದ ೨೪,೦೩೭ ರೂಪಾಯಿನಲ್ಲಿ ೨,೦೦೦ ರೂಪಾಯನ್ನೂ, ವಿದ್ಯುಚ್ಛಕ್ತಿಯ ದೀಪದ ಏರ್ಪಾಡಿಗೆ ಕಳೆದ ವರುಷ ಸ್ಯಾಂಕ್ಷನ್ ಆಗಿದ್ದ ೨೫,೦೦೦ ರೂಪಾಯನ್ನೂ ಕಳೆದ ಸಾಲಿನಲ್ಲಿ ಉಪಯೋಗಿಸಿಕೊಳ್ಳಲಿಲ್ಲವೆಂದೂ, ಮ್ಯುನಿಸಿಪಾಲಿಟಿಗೆ ವಾಪಸು ಮಾಡಿದೆ ಎಂದೂ ಗವರ್ನಮೆಂಟಿನವರು ಅಪ್ಪಣೆ ಕೊಟ್ಟಿದ್ದನ್ನು ಕೌನ್ಸಿಲರುಗಳು ಒಪ್ಪಿ ರೆಕಾರ್ಡು ಮಾಡಿಕೊಂಡರು.

ಮ್ಯುನಿಸಿಪಲ್ ಕೌನ್ಸಿಲ್ ಮೀಟಿಂಗುಗಳಲ್ಲಿ ಚರ್ಚೆ ನಡೆಯತಕ್ಕ ಕ್ರಮದ ವಿಷಯದಲ್ಲಿ ಗವರ್ನಮೆಂಟಿನವರು ಕೆಲವು ಮಸೂದೆ ರೂಲಸನ್ನು ಮಾಡಿ, ಅದರ ಮೇಲೆ ಕೌನ್ಸಿಲರುಗಳ ಅಭಿಪ್ರಾಯವನ್ನು ತಿಳಿಸಬೇಕೆಂದು ಕೇಳಿದ್ದರು. ಕೌನ್ಸಿಲರುಗಳು ಈ ರೂಲಸನ್ನು ಮೊದಲು ಮ್ಯಾನೇಜಿಂಗ್ ಕಮಿಟಿಯವರು ಚರ್ಚೆಮಾಡಿ ತಮ್ಮ ಅಭಿಪ್ರಾಯವನ್ನು ಕೌನ್ಸಿಲಿಗೆ ತಿಳಿಸಬೇಕೆಂದು ಗೊತ್ತು ಮಾಡಿದರು.

ಬಳೆಪಾಯ ಸ್ಕೂಲಿನ ಹೆಡ್ ಮಾಸ್ಟರು ಆ ಸ್ಕೂಲನ್ನು ಕಟ್ಟುವುದಕ್ಕೆ ಶ್ರೀನಿವಾಸಶೆಟ್ಟಿ ಎಂಬ ನಿವೇಶನವನ್ನು ಕೊಡಿಸಿಕೊಡಬೇಕೆಂದು ಅರ್ಜಿ ಬರೆದಿದ್ದರು. ಈ ವಿಷಯವನ್ನು ಟ್ರಸ್ಟ್ ಬೋರ್ಡಿಗೆ ತಿಳಿಸಿ, ಅವರನ್ನು ಕೇಳಬೇಕೆಂದು ಕೌನ್ಸಿಲರುಗಳು ಅಭಿಪ್ರಾಯಪಟ್ಟರು.

ರಾಜಧಾನಿಯಲ್ಲಿರುವ ಕೆಲವು ಸರ್ಕಾರಿ ಕಟ್ಟಡಗಳಿಗೆ ಮ್ಯುನಿಸಿಪಲ್ ತೆರಿಗೆಯನ್ನು ಪಜಾಮಾಡಿಸಿ ಕೊಡಬೇಕೆಂದು ಛೀಫ್ ಇಂಜನಿಯರವರು ಗವರ್ನಮೆಂಟಿಗೆ ಬರೆದಿದ್ದರು. ಅವರು ಈ ವಿಷಯವನ್ನು ಮ್ಯುನಿಸಿಪಾಲಿಟಿಯವರಿಗೆ ತಿಳಿಸಿ, ಅಭಿಪ್ರಾಯವನ್ನು ಕೇಳಿದ್ದರು. ಕೌನ್ಸಿಲರುಗಳು ಚರ್ಚೆಮಾಡಿ, ಇದುವರೆಗೆ ವಸೂಲಾಗದೆ ಬಾಕಿಯಾಗಿರುವ ಕಂದಾಯವನ್ನು ಪಜಾಮಾಡಬೇಕೆಂತಲೂ, ಇನ್ನು ಮುಂದೆ ಅಂಥಾ ಕಟ್ಟಡಗಳಿಗೆ ಕಂದಾಯ ಹಾಕಬೇಕಾದದ್ದಿಲ್ಲವೆಂತಲೂ ಗೊತ್ತು ಮಾಡಿದರು.

ಚಾಮರಾಜ ಮೊಹಲ್ಲೆಯಲ್ಲಿ ಹುಡುಗರಿಗೂ ಹುಡುಗಿಯರಿಗೂ ಪ್ರೈಮರಿ ಪಾಠಶಾಲೆಗಳನ್ನು ಕಟ್ಟಬೇಕೆಂದು ಮೊದಲೇ ಮ್ಯುನಿಸಿಪಾಲಿಟಿಯವರು ತೀರ್ಮಾನಿಸಿ, ಗವರ್ನಮೆಂಟಿನವರ ಸ್ಯಾಂಕ್ಷನ್ ಬಗ್ಗೆ ಕಳುಹಿಸಿಕೊಟ್ಟಿದ್ದರು. ಗವರ್ನಮೆಂಟಿನವರು ಈಗ ಸದ್ಯ ಮ್ಯುನಿಸಿಪಾಲಿಟಿಯಲ್ಲಿ ಹಣವಿಲ್ಲದೆ ಇರೋಣದರಿಂದ ಇದನ್ನು ಸ್ಯಾಂಕ್ಷನ್ ಮಾಡಲಾಗುವುದಿಲ್ಲವೆಂದು ಅಪ್ಪಣೆ ಕೊಟ್ಟಿದಾರೆ.

ಶಾರನಗೆರೆ ಆಸ್ಪತ್ರೆಯ ಲೇಡಿ ಸೂಪರಿಂಟೆಂಡೆಂಟರು ತಮಗೆ ಅಲೋವೆನ್ಸನ್ನೂ ವಾಸಸ್ಥಳವನ್ನೂ ಕೊಡಿಸಬೇಕೆಂದು ಕೇಳಿಕೊಂಡಿದ್ದರು. ಈ ವಿಷಯವನ್ನು ಸೀನಿಯರ್ ಸರ್ಜನರಿಗೆ ತಿಳಿಸಿ ಅವರ ಅಭಿಪ್ರಾಯವನ್ನು ಕೇಳಬೇಕೆಂದು ಕೌನ್ಸಿಲರುಗಳು ತೀರ್ಮಾನಿಸಿದರು.

ನೀರಿನ ಇಲಾಖೆಯವರು ಅನೇಕ ಕಡೆಗಳಲ್ಲಿ ನೀರಿನ ಕೊಳಾಯಿಗಳನ್ನು ಮುಚ್ಚಿಬಿಟ್ಟಿರೋಣದರಿಂದ ಅವುಗಳ ಸಾಮಾನುಗಳನ್ನು ಅವರು ಯಾವ ರೀತಿ ವಿನಿಯೋಗ ಮಾಡಿದಾರೆಯೋ ತಿಳಿಯಬೇಕೆಂದು ಮೆ॥ ಶ್ರೀಕಂಠಯ್ಯನವರು ಸೂಚಿಸಿದಂತೆ ಕೌನ್ಸಿಲರುಗಳು ಒಪ್ಪಿ ನೀರಿನ ಇಲಾಖೆಯವರನ್ನು ಕೇಳಬೇಕೆಂದು ಗೊತ್ತು ಮಾಡಿದರು.

ಶಹರಿನಲ್ಲಿ ಮ್ಯುನಿಸಿಪಾಲಿಟಿಗೆ ಸೇರಿರುವ ತೆಂಗಿನ ಮರಗಳ ಫಸಲನ್ನು ಖಾಯಮಾಗಿ ಅನುಭವಿಸುವಂತೆ ಜನರಿಗೆ ಕ್ರಯಕ್ಕೆ ಕೊಡಬೇಕೆಂತಲೂ, ಖಾಲೀ ನಿವೇಶನಗಳ ಮಾಲೀಕರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಲೈಸೆನ್ಸು ಕೊಡದಿರುವ ಸಂದರ್ಭದಲ್ಲಿ ಅಂಥಾ ನಿವೇಶನಗಳಿಗೆ ಕಂದಾಯ ಪಜಾ ಮಾಡಬೇಕೆಂತಲೂ ಮೆ॥ ಶ್ರೀಕಂಠಯ್ಯನವರು ಸೂಚಿಸಿದರು. ಇವೆರಡು ವಿಷಯಗಳನ್ನೂ ಕೌನ್ಸಿಲರುಗಳು ಚರ್ಚೆ ಮಾಡಿ, ಪ್ರಜೆಗಳು ಈ ಭಾಗದಲ್ಲಿ ಅರ್ಜಿ ಬರೆದುಕೊಂಡರೆ ಸಂದರ್ಭಾನುಸಾರ ಇತ್ಯರ್ಥ ಮಾಡಬಹುದೆಂದು ತೀರ್ಮಾನ ಮಾಡಿದರು.

ಮೈಸೂರು ಪಟ್ಟಣದಲ್ಲಿ ಅಂಟು ಜಾಡ್ಯಗಳನ್ನು ತಡೆಯುವುದಕ್ಕೆ ಜನರನ್ನು ಬಲಾತ್ಕರಿಸಿ ನಿರ್ಬಂಧ ಪಡಿಸುವ ಭಾಗದಲ್ಲಿ ಗವರ್ನಮೆಂಟಿನವರು ಮಾಡಿರುವ ರೂಲಸುಗಳನ್ನು ಚಲಾಯಿಸತಕ್ಕ ಅಧಿಕಾರಗಳನ್ನು ಮ್ಯುನಿಸಿಪಾಲಿಟಿಗೆ ವಹಿಸಬೇಕೆಂದು ಸ್ಯಾನಿಟರಿ ಕಮಿಷನರವರು ಶಿಫಾರಸು ಮಾಡಿದ್ದರು. ಕೌನ್ಸಿಲರುಗಳು ಈ ಸಂಗತಿಯನ್ನು ಮ್ಯಾನೇಜಿಂಗ್ ಕಮಿಟಿಯಲ್ಲಿ ಮೊದಲು ಚರ್ಚೆಯಾಗಬೇಕೆಂದು ತೆಗೆದಿಟ್ಟರು.

ಕೋಟೆ ಬಾಲಬೋಧಿನಿ ಸ್ಕೂಲಿಗೆ ಕೌನ್ಸಿಲರುಗಳು ತಿಂಗಳಿಗೆ ೧೫ ರೂಪಾಯಿನಂತೆ ಮ್ಯುನಿಸಿಪಲ್ ಗ್ರಾಂಟು ಕೊಡಬೇಕೆಂದು ತೀರ್ಮಾನ ಮಾಡಿದ್ದರು. ಆದರೆ ಹಾಲಿ ಸಾಲಿನ ಬಡ್ಜೆಟ್ಟಿನಲ್ಲಿ ಹಣವಿಲ್ಲವೆಂದು ವೈಸ್ ಪ್ರೆಸಿಡೆಂಟರು ಸೂಚಿಸಿದರು. ಅದರ ಮೇಲೆ ಕೌನ್ಸಿಲರುಗಳು ಈ ಗ್ರಾಂಟನ್ನು ಬಾಬು ಹೊರಳೆ ಮಾಡಿ ಪಾವತಿ ಮಾಡತಕ್ಕದ್ದೆಂದು ಇತ್ಯರ್ಥ ಮಾಡಿರುತ್ತಾರೆ.

ಮೆ॥ ಲಕ್ಷ್ಮಣರಾಯರು ಮ್ಯುನಿಸಿಪಲ್ ಇಂಜನಿಯರಾಗಿದ್ದಾಗ ಮ್ಯುನಿಸಿಪಾಲಿಟಿಯಿಂದ ಅವರಿಗೆ ೨೦ ರೂಪಾಯಿ ಅಲೋವೆನ್ಸು ಸಲ್ಲುತ್ತಿತ್ತು. ಆದರೆ ಅವರು ಇಂಜನಿಯರ್ ಇಲಾಖೆಯಲ್ಲೇ ಇರುತ್ತಿದ್ದರೆ ತಿಂಗಳಿಗೆ ೩೦ ರೂಪಾಯಿ ಅಲೋವೆನ್ಸು ಸಲ್ಲುತ್ತಿತ್ತೆಂತಲೂ, ಮ್ಯುನಿಸಿಪಾಲಿಟಿಯಿಂದ ಸಲ್ಲುತ್ತಿದ್ದ ೨೦ ರೂಪಾಯಿ ಸಾಲದೆಂತಲೂ, ಜಾಸ್ತಿ ಕೊಡಿಸಿಕೊಡಬೇಕೆಂತಲೂ ಅರ್ಜಿ ಬರೆದುಕೊಂಡಿದ್ದರು. ಕೌನ್ಸಿಲರುಗಳು ಈ ವಿಷಯವನ್ನು ಚರ್ಚೆಮಾಡಿ, ಬಹು ಮಂದಿಯ ಅಭಿಪ್ರಾಯದ ಪ್ರಕಾರ ಅವರಿಗೆ ಜಾಸ್ತಿ ಅಲೋವೆನ್ಸನ್ನು ಕೊಡತಕ್ಕದ್ದೆಂದು ತೀರ್ಮಾನ ಮಾಡಿದರು.

ಮನೆಗಳಲ್ಲಿ ನೀರಿನ ನಲ್ಲಿ ಇಡಿಸಿಕೊಂಡಿರುವವರು ನಲ್ಲಿ ಕೆಟ್ಟುಹೋಗಿದೆ ಎಂದು ನೀರಿನ ಇಲಾಖೆಯವರಿಗೆ ತಿಳಿಸಿದ ಕೂಡಲೇ ಅವರು ಸರಿಮಾಡಿಕೊಟ್ಟು, ಅದಕ್ಕೆ ತಗಲಿದ ಖರ್ಚನ್ನು ಮನೆಯ ಯಜಮಾನರಿಂದ ವಸೂಲ್ಮಾಡಿಕೊಳ್ಳಬೇಕೆಂತಲೂ, ಸಾವಕಾಶವಾದಲ್ಲಿ ನೀರು ನಷ್ಟವಾಗುವುದಕ್ಕೂ ಮನೆಯವರಿಗೆ ತೊಂದರೆಯಾಗುವುದಕ್ಕೂ ಅವಕಾಶವಾಗುತ್ತದೆಂತಲೂ ಕೌನ್ಸಿಲರುಗಳು ಅಭಿಪ್ರಾಯಪಟ್ಟರು.

ರಾಜಧಾನಿಯಲ್ಲಿ ಪ್ರತಿ ೨೦೦ ಮನೆಗಳಿಗೂ ಒಂದು ಪ್ರೈಮರಿ ಸ್ಕೂಲಿನಂತೆ ಇಡಿಸಬೇಕೆಂದೂ, ಮ್ಯುನಿಸಿಪಾಲಿಟಿಯವರು ವಿದ್ಯಾಭ್ಯಾಸಕ್ಕಾಗಿ ಈಗ ಖರ್ಚುಮಾಡುವ ೯,೩೦೦ ರೂಪಾಯಿಗೆ ಇನ್ನೂ ೨,೫೦೦ ರೂಪಾಯಿ ಸೇರಿಸಿ ಎಲ್ಲಾ ಹಣವನ್ನೂ ಪ್ರೈಮರಿ ವಿದ್ಯಾಪ್ರೋತ್ಸಾಹಕ್ಕೇನೇ ವಿನಿಯೋಗಿಸುವಂತೆ ಆಗಬೇಕೆಂದೂ, ಈಗ ಸ್ಕೂಲುಗಳಿಗೆ ಮ್ಯುನಿಸಿಪಾಲಿಟಿಯಿಂದ ಸಲ್ಲುತ್ತಿರುವ ಗ್ರಾಂಟನ್ನೆಲ್ಲಾ ಗವರ್ನಮೆಂಟಿನವರೇ ವಹಿಸಿಕೊಂಡು ಪಾವತಿಮಾಡುವಂತೆ ಆಗಬೇಕೆಂದೂ, ಹೀಗೆ ಮಾಡಿದಲ್ಲಿ ಒಟ್ಟು ೩೬ ಪ್ರೈಮರಿ ಹುಡುಗರ ಸ್ಕೂಲುಗಳೂ ೧೦ ಬಾಲಿಕಾ ಪಾಠಶಾಲೆಗಳೂ ಏರ್ಪಾಡಾಗಿ, ಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬಾ ಸಹಾಯವಾಗುವುದೆಂದೂ ಸ್ಕೂಲ್ ಮ್ಯಾನೇಜಿಂಗ್ ಕಮಿಟಿಯವರು ಸೂಚಿಸಿದರು. ಈ ವಿಚಾರವನ್ನು ಗವರ್ನಮೆಂಟಿಗೆ ಅರಿಕೆಮಾಡಬೇಕೆಂಬದಾಗಿ ಕೌನ್ಸಿಲರುಗಳು ತೀರ್ಮಾನ ಮಾಡಿದರು.

ಕನ್ನಡ ಸಚಿತ್ರವರ್ಣಮಾಲೆಗಳ ೧೦೦ ಪ್ರತಿಗಳನ್ನು ಮ್ಯುನಿಸಿಪಾಲಿಟಿಯವರು ಕೊಂಡು ತರಿಸಿ, ಪ್ರೈಮರಿ ಸ್ಕೂಲುಗಳಿಗೆ ಹಂಚಿಕೊಡಬೇಕೆಂದೂ, ಕೃಷ್ಣವಿಲಾಸ ಅಗ್ರಹಾರದ ಹಿಂಭಾಗದಲ್ಲಿ ಒಂದು ನೀರಿನ ಕೊಳಾಯಿ ಇಡಿಸಿ ಕೊಡಬೇಕೆಂದೂ, ಚಾಮರಾಜ ಪೇಟೆ ಅಂಗಡೀ ಬೀದಿಯಲ್ಲಿ ನರಸಿಂಗರಾಯರು ಕೇಳಿದ್ದ ಖಾಲೀ ನಿವೇಶವನ್ನು ಅವರಿಗೆ ಕ್ರಯಕ್ಕೆ ಕೊಡತಕ್ಕದ್ದೆಂದೂ ಮ್ಯಾನೇಜಿಂಗ್ ಕಮಿಟಿಯವರು ಶಿಫಾರಸುಮಾಡಿದ್ದಂತೆ ಕೌನ್ಸಿಲರುಗಳು ಒಪ್ಪಿಕೊಂಡರು.

ಹೊಗೆಸೊಪ್ಪಿನ ಸುಂಕವನ್ನು ಕಡಮೆಮಾಡಿ, ಇತರ ಬಾಬುಗಳ ಸುಂಕವನ್ನು ಬದಲಾವಣೆ ಮಾಡಬಹುದೆಂದು ಮ್ಯಾನೇಜಿಂಗ್ ಕಮಿಟಿಯವರು ತಿಳಿಸಿದ ಅಭಿಪ್ರಾಯವನ್ನು ಮೆಂಬರುಗಳೆಲ್ಲಾ ಅನುಮೋದಿಸಿರುತ್ತಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಬಿಕಾನೀರ್ ಸಂಸ್ಥಾನದಲ್ಲಿ ಗವರ್ನಮೆಂಟಿನವರು ಸಿಡಿಮದ್ದನ್ನು ಯಾರೂ ತಯಾರ್ಮಾಡದಂತೆ ಒಂದು ಹೊಸ ಕಾನೂನನ್ನು ಮಾಡಿ ಜಾರಿಗೆ ತಂದಿರುತ್ತಾರೆ.

***

ಬಳ್ಳಾರಿ ಟವ್ನಿನಲ್ಲಿ ಪ್ರಜಾ ಆರೋಗ್ಯಕರವಾದ ಏರ್ಪಾಡುಗಳನ್ನು ಮಾಡುವುದಕ್ಕೆ ಮದರಾಸ್ ಗವರ್ನಮೆಂಟಿನವರು ೫೦,೦೦೦ ರೂಪಾಯಿ ಗ್ರಾಂಟನ್ನು ಸ್ಯಾಂಕ್ಷನ್ ಮಾಡಿದಾರೆ.

***

ಉದಯಪುರದ ಮಹಾರಾಜರವರು ಇಂಡಿಯಾ ಗವರ್ನಮೆಂಟಿನವರಿಗೆ ಒಪ್ಪಿಸುವುದಕ್ಕಾಗಿ ಅವರ ಅನುಮತಿಯನ್ನು ಪಡೆದು ಒಂದು ಸೈನ್ಯವನ್ನು ತರಪೇತುಮಾಡಿ ಸಿದ್ಧಪಡಿಸಲಾರಂಭಿಸಿದಾರೆ.

***

ಖುಲ್ನಾದಲ್ಲಿ ಒಂದು ದಂಗೆ ಮೊಕದ್ದಮೆಯಲ್ಲಿ ಪೋಲೀಸಿನವರು ಅಪರಾಧಿಗಳಿಗೆ ಶಿಕ್ಷೆ ಮಾಡಿಸಬೇಕೆಂಬ ಉದ್ದೇಶದಿಂದ ಸಾಕ್ಷಿಯವರಿಗೆ ಲಂಚಕೊಡುವುದಕ್ಕೆ ಪ್ರಯತ್ನಪಟ್ಟರು. ಇದು ಪತ್ತೆಯಾಗಿ ಆ ಪೋಲೀಸ್ ಇನ್ಸ್ಪೆಕ್ಟರನ್ನು ಹಿಡಿದು ಆಲಿಪುರದ ಮ್ಯಾಜಿಸ್ಟ್ರೇಟರು ದರ್ಯಾಫ್ತುಮಾಡುತ್ತಿದಾರೆ.

ಜಹಂಗೀರಾಬಾದಿನ ರಾಜರು ಅಲಿಘರ್ ಕಾಲೇಜಿನಲ್ಲಿ ಓದುವ ವಿದ್ಯಾರ್ಥಿಗಳಿಗಾಗಿ ಒಂದು ಹೊಸ ಬೋರ್ಡಿಂಗ್ ಹೌಸ್ (ವಿದ್ಯಾರ್ಥಿ ನಿಲಯವನ್ನು) ಕಟ್ಟಿಸಿಕೊಡುವುದಕ್ಕೆ ೨೫,೦೦೦ ರೂಪಾಯಿ ಕೊಟ್ಟಿದಾರೆ.

***

ಮುಂದೆ ಸೆಪ್ಟಂಬರ್ ತಿಂಗಳಲ್ಲಿ ಪ್ರಜಾ ಆರೋಗ್ಯ ವಿಚಾರಗಳನ್ನು ಕುರಿತು ಚರ್ಚೆಮಾಡುವುದಕ್ಕಾಗಿ ಸಂಯುಕ್ತ ಆಧಿಪತ್ಯಗಳ ಸರ್ಕಾರದವರು ಒಂದು ದೊಡ್ಡ ಸಭೆಯನ್ನು ನಡಿಸಬೇಕೆಂದು ಗೊತ್ತು ಮಾಡಿದಾರೆ.

***

ಮಂಗಳೂರಿನ ಹತ್ತಿರ ಮಂತ್ರಾಡಿ ಗ್ರಾಮದಲ್ಲಿ ಕೆಲವರ ಚಿತಾವಣೆಯಿಂದ ಆರು ಜನರು ಒಬ್ಬ ಐಶ್ವರ್ಯವಂತನನ್ನು ಕೊಂದುಹಾಕಿದರು. ಈಗ ದರ್ಯಾಫ್ತು ಆಗಿ ಆ ಆರು ಜನರಿಗೂ ಮರಣ ದಂಡನೆ ವಿಧಿಸಲ್ಪಟ್ಟಿದೆ.

***

ಕಳೆದ ೧೮ನೇ ತಾ. ಶನಿವಾರ ಪೂನಾ ಪಟ್ಟಣದಲ್ಲಿ ಕೆಲವು ದೇಶೀಯ ವಿದ್ಯಾವಂತರು ಮೆ॥ ಬಾಲಗಂಗಾಧರ ತಿಲಕರ ೫೩ನೇ ವರುಷದ ಹುಟ್ಟಿದ ಹಬ್ಬವನ್ನು ಆಚರಿಸಿ, ಒಂದು ಸಭೆ ಸೇರಿಸಿ ಅವರಿಗೆ ಕ್ಷೇಮವನ್ನು ಬಯಸಿದರು.

***

ಕಳೆದ ವಾರ ಹಿಂದೂಸ್ಥಾನದಲ್ಲಿ ೩೮೧ ಜನರು ಪ್ಲೇಗ್ ಉಪದ್ರದಲ್ಲಿ ಕಾಲವಾದರು. ಈ ಪೈಕಿ ಬರ್ಮಾದಲ್ಲಿ ೧೫೩, ಮೈಸೂರು ಸಂಸ್ಥಾನದಲ್ಲಿ ೩೨, ಬೊಂಬಾಯಿನಲ್ಲಿ ೩೮, ಮದರಾಸ್ ಆಧಿಪತ್ಯದಲ್ಲಿ ೪೮ ಮರಣಗಳಾಗಿರುತ್ತವೆ.

***

ಅಕೋಲಾ ಸ್ಟೇಷನ್ನಿನಲ್ಲಿ ೩ನೇ ಕ್ಲಾಸ್ ರೈಲ್ ಗಾಡಿಯ ಕೆಳಗೆ ಒಂದು ಸಿಡಿಮದ್ದಿನ ಗುಂಡು ಕಳೆದ ವಾರ ಹಾರಿತು. ಅದರಲ್ಲಿ ಅನೇಕ ಕಬ್ಬಿಣದ ಮೊಳೆಗಳಿದ್ದುವೆಂದೂ ಆದರೆ ಯಾರಿಗೂ ಅಪಾಯ ಸಂಭವಿಸಲಿಲ್ಲವೆಂದೂ ತಿಳಿದು ಬಂದಿದೆ.

***

ಕಲ್ಕತ್ತಾ ಪಟ್ಟಣದಲ್ಲಿ ವರುಷಕ್ಕೆ ಪಾರ್ಸಿ ಜನಗಳಲ್ಲಿ ೩—೮ ಮರಣಗಳಾಗುವವು. ಈ ಶವಗಳ ಉತ್ತರ ಕ್ರಿಯೆಗೋಸ್ಕರ ಪಾರ್ಸಿ ಜನರು ಸೇರಿ ೩೫,೦೦೦ ರೂಪಾಯಿ ಮಟ್ಟಿಸಿ ಒಂದು ಅಗಾಧವಾದ ಸ್ಮಶಾನಗಟ್ಟವನ್ನು ಕಟ್ಟಿಸಲಾರಂಭಿಸಿದಾರೆ.

***

ನೇಪಾಳ ಸಂಸ್ಥಾನದ ಪ್ರಧಾನ ಮಂತ್ರಿಯವರು ಈಗ ವಿಲಾಯಿತಿಯಲ್ಲಿರುತ್ತಾರಷ್ಟೆ. ಇವರು ಲಂಡನ್ ಪಟ್ಟಣದ ಕೆಲವು ದವಾಖಾನೆಗಳಿಗೆ ೨೩ ಸಾವಿರ ರೂಪಾಯಿ ಹಂಚಿಕೊಟ್ಟರೆಂದೂ, ಇಷ್ಟರಲ್ಲೇ ಅಲ್ಲಿಂದ ವಾಪಸು ಬರುವವರಾಗಿದಾರೆಂದೂ ಪ್ರಕಟವಾಗಿದೆ.

***

ಅನಂತಶಯನದ ಮಹಾರಾಜರವರು ದಕ್ಷಿಣ ದೇಶದಲ್ಲಿ ಸಂಚರಿಸಿಕೊಂಡು ಬರುವುದಕ್ಕೆ ಕಳೆದ ಶುಕ್ರವಾರ ರಾಜಧಾನಿಯಿಂದ ಹೊರಟರು. ಅವರು ಕನ್ಯಾಕುಮಾರಿ ಮೊದಲಾದ ಸ್ಥಳಗಳನ್ನು ಸುತ್ತಿಕೊಂಡು ಈ ವಾರದ ಅಂತ್ಯದಲ್ಲಿ ವಾಪಸು ಬರುವವರಾಗಿದಾರೆ.

***

ಕಾಂಡಾಪುರದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಗುಮಾಸ್ತೆಯಾಗಿರುವ ವಿಠಲರಾಯನು ಕಕ್ಷಿಗಾರರಿಂದ ಲಂಚ ತೆಗೆದುಕೊಂಡನೆಂದು ಅವನನ್ನು ಹಿಡಿದು ಮೊಕದ್ದಮೆ ಮಾಡಿದಾರೆ. ಈತನು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ವಿದ್ಯಾವಂತನೆನಿಸಿಕೊಂಡಿದ್ದನು.

***

ಕರಾಚಿ ಪಟ್ಟಣದಿಂದ ದೋಣಿಗಳಲ್ಲಿ ಕುಳಿತು ಕೌಜಿ ಎಂಬ ದ್ವೀಪಕ್ಕೆ ಹೋಗಿ ಅಲ್ಲಿ ಉತ್ಸವಾದಿಗಳನ್ನು ನೋಡಿಕೊಂಡು ವಾಪಸು ಬರುತ್ತಿರುವಾಗ್ಗೆ ಯಾತ್ರಾರ್ಥಿಗಳ ಒಂದು ದೋಣಿಯು ಸಮುದ್ರದಲ್ಲಿ ಮಗುಚಿಕೊಂಡಿತು. ಹೆಂಗಸರು ಮಕ್ಕಳು ಸೇರಿ ೩೦ ಮಂದಿಗಿಂತಲೂ ಹೆಚ್ಚಾಗಿ ಸಮುದ್ರದ ಪಾಲಾದರು.

***

ನದ್ದಿಯಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಮೆ॥ ಎಚಿಕೇಲ್ ಯವರಿಗೆ ಒಂದು ಸಿಡಿಮದ್ದಿನ ಗುಂಡು ಇದ್ದ ಒಂದು ಖಾಂಗಿಯ ಅಂಚೆಯ ಮೂಲಕ ತಲುಪಿತಷ್ಟೆ. ಅದನ್ನು ಯಾರು ಕಳಿಸಿದರೋ ಎಂದು ಪೋಲೀಸಿನವರು ಪತ್ತೇದಾರದೂಡು ನಡಿಸಿ, ಕಳೆದ ವಾರ ಅಮೃತಲಾಲ್ ಪಾಲ್ ಎಂಬುವನನ್ನು ದಸ್ತಗಿರಿ ಮಾಡಿದಾರೆ.

***

ಕಳೆದ ವಾರ ಉತ್ತರ ದೇಶದ ಅನೇಕ ಭಾಗಗಳಲ್ಲಿ ತಕ್ಕಮಟ್ಟಿಗೆ ಮಳೆಯಾಯಿತು. ಸರ್ಕಾರದವರ ಪೋಷಣೆಯಲ್ಲಿದ್ದ ಕ್ಷಾಮಪೀಡಿತರ ಪೈಕಿ ೯೩,೦೦೦ ಜನರು ವ್ಯವಸಾಯಕ್ಕಾಗಿ ತಮ್ಮ ಸ್ಥಳಗಳಿಗೆ ಹೋಗಿ ಸೇರಿಕೊಂಡರು. ಇನ್ನೂ ೮,೮೮,೮೬೧ ಜನರು ಸರ್ಕಾರದವರ ರಿಲೀಫ್ ಕಾಮಗಾರಿಗಳಲ್ಲೂ ಅನ್ನಸತ್ರಗಳಲ್ಲೂ ಸೇರಿಕೊಂಡಿದಾರೆ.

***

ತಂಜಾವೂರು ಜಿಲ್ಲಾ ಡಿಸ್ಟ್ರಿಕ್ಟ್ ಬೋರ್ಡಿನವರು ಹಾರುವ ಲಾಳಿ ಮಗ್ಗಗಳ ರಚನೆಯನ್ನೂ ಅವುಗಳಲ್ಲಿ ನೆಯ್ಗೆ ಮಾಡುವ ವಿಧಾನವನ್ನೂ ಕಲಿಸಿಕೊಡಬೇಕೆಂದು ಐಯಂಪೇಟೆಯಲ್ಲಿ ಒಂದು ಮಗ್ಗದ ಸ್ಕೂಲನ್ನು ಪ್ರಾರಂಭಿಸಿದರು. ನೆಯ್ಗೆಗಾರರೇ ಆ ಊರಿನ ತುಂಬಾ ಇರುವುದರಿಂದ ಅವರು ಬಹು ಬೇಗನೆ ಈ ಹೊಸ ಮಗ್ಗಗಳ ರಚನೆ ಮತ್ತು ಉಪಯೋಗಗಳನ್ನು ತಿಳಿದುಕೊಂಡು, ಅನೇಕರು ಅವುಗಳನ್ನೇ ಇಟ್ಟು ನೆಯ್ಯುತ್ತಲೂ ಇದಾರೆ. ಈಗ ಈ ಪಾಠಶಾಲೆಯನ್ನು ತೆಗೆದುಬಿಡಬಹುದೇ ಎಂದು ಸರ್ಕಾರದವರು ಸ್ಥಳೀಯ ಅಧಿಕಾರಿಗಳನ್ನು ಕೇಳಿರುವರು.

ಪೂನೆಯ ಹತ್ತಿರ ಕ್ಯಾಸಲ್ ರಾಕ್ ಎಂಬ ಪೋರ್ಚುಗೀಸರ ಸ್ವಾಸ್ಥ್ಯದ ಬಳಿ ರಾಮಚಂದ್ರನೆಂಬೊಬ್ಬ ಹಿಂದುವು ಸ್ಕೂಲು ಇಟ್ಟು ಕೊಂಡು, ಅಂತರಂಗದಲ್ಲೇ ಸಿಡಿಮದ್ದಿನ ಗುಂಡುಗಳನ್ನು ತಯಾರ್ಮಾಡುತ್ತಿದ್ದನೆಂದು ಅವನನ್ನು ಹಿಡಿದು ತಯಾರ್ಕ್ತು ಮಾಡುತ್ತಿದ್ದಾರೆ ಇವನ ಮನೆಯಲ್ಲಿ ಕೆಲವು ಗುಟ್ಟಿನ ಕಾಗದ ಪತ್ರಗಳು ದೊರಕಿವೆ ಎಂದು ಪೋಲೀಸಿನವರು ತಿಳಿಸುವರು.

❖❖❖

ಮುಂದಿನ ವರುಷ ಮಾರ್ಚಿ ತಿಂಗಳಲ್ಲಿ ಬರುವ ಮಹಾ ಮಾಘವ ಕೂಟಕ್ಕೆ ಕುಂಭಕೋಣದಲ್ಲಿ ಹಿಂದೂ ಯಾತ್ರಾರ್ಥಿಗಳು ಸುಮಾರು ನಾಲ್ಕು ಲಕ್ಷದವರೆಗೆ ಸೇರಬಹುದೆಂದು ಅಲ್ಲಿನ ಅಧಿಕಾರಿಗಳು ತಕ್ಕ ಆರೋಗ್ಯಕರವಾದ ಏರ್ಪಾಡುಗಳನ್ನು ಮಾಡಲಾರಂಭಿಸಿದಾರೆ. ರೈಲ್ ಕಂಪನಿಯವರು ಸಹ ಹೊಸ ಸ್ಟೇಷನ್ ಮುಂತಾದ್ದನ್ನು ಕಟ್ಟಿಸಿ ಪ್ರಯಾಣೀಕರಿಗೆ ಸೌಕರ್ಯವನ್ನು ಕಲ್ಪಿಸುತ್ತಲಿದಾರೆ

❖❖❖

ಕಳೆದ ೧೯೦೭ನೇ ಇಸವಿಯಲ್ಲಿ ಹಿಂದುಸ್ಥಾನದೊಳಗೆ ೧,೮೩೪ ಜನರು ರೈಲ್ವೆ ಅಪಘಾತಗಳಲ್ಲಿ ಸಿಕ್ಕಿ ಮೃತಪಟ್ಟರು; ೧,೬೩೫ ಜನರಿಗೆ ಗಾಯಗಳಾದವು. ಮೃತಪಟ್ಟವರಲ್ಲಿ ೧೯೫ ಜನರು ಪ್ರಯಾಣಿಕರು; ೬೬೫ ಜನರು ರೈಲ್ ಕಂಪನಿಯ ನೌಕರರು. ಇದಲ್ಲದೆ ರೈಲ್ ಸ್ಟೇಷನ್ ಆವರಣಗಳೊಳಗೆ ೩೫ ಜನರು ಮೃತಪಟ್ಟರೆಂತಲೂ ೩೬೭ ಮಂದಿಗೆ ಗಾಯಗಳಾದವೆಂತಲೂ ಪ್ರಕಟವಾಗಿದೆ.

❖❖❖

ಬರ್ಮಾ ಅಧಿಪತ್ಯಕ್ಕೆ ಸೇರಿದ ಮಾಂಡಲೇ ಪಟ್ಟಣದಲ್ಲಿ ತಾಯಂದಿರು ಮಕ್ಕಳನ್ನು ಚನ್ನಾಗಿ ಸಾಕಿ ಬೆಳಿಸುವುದಕ್ಕೆ ಪ್ರೋತ್ಸಾಹ ಮಾಡಬೇಕೆಂದು ಮಕ್ಕಳ ಪ್ರದರ್ಶನವನ್ನು ಈ ದಿನ ನಡಿಸುವವರಾಗಿದಾರೆ ಬಹಳ ಚನ್ನಾಗಿ ಬೆಳೆದಿರುವ ಐದು ಮಕ್ಕಳಿಗೆ ಬಹುಮಾನಗಳು ಕೊಡಲ್ಪಡುವವು ಐರೋಪ್ಯರೂ ಚೀನಾಬಾದಿ ಜನರೂ ತಮ್ಮ ಮಕ್ಕಳನ್ನು ಈ ಪ್ರದರ್ಶನಕ್ಕೆ ಕಳುಹಿಸತಕ್ಕದ್ದೆಂದು ವಿಧಾಯಕವಾಗಿದೆ.

❖❖❖

ಬರೋಡಾ ಸಂಸ್ಥಾನದ ರಾಜಧಾನಿಯಲ್ಲಿ ಒಂದು ವಾರದ ಕೆಳಗೆ ವ್ಯಾಪಾರಾಭಿವೃದ್ಧಿಗೋಸ್ಕರ ಒಂದು ದೊಡ್ಡ ಬ್ಯಾಂಕನ್ನು ಸ್ಥಾಪನೆ ಮಾಡಿದರು. ಅದನ್ನು ಪ್ರಾರಂಭಿಸಿದ ಸಮಯದಲ್ಲಿ ಶ್ರೀಮನ್ಮಹಾರಾಜರವರು, ಬ್ರಿಟಿಷ್ ರೆಸಿಡೆಂಟರು, ಸರ್ ವಿಟ್ಠಲದಾಸ್ ಯವರು, ದಿವಾನ್ ಅಂಬಾಲಾಲರು, ಮೊದಲಾದವರೆಲ್ಲಾ ಸಭೆಯಲ್ಲಿ ಹಾಜರಾಗಿದ್ದು ಪ್ರೋತ್ಸಾಹಕರವಾದ ಉಪನ್ಯಾಸಗಳನ್ನು ಮಾಡಿದರು

❖❖❖

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಥಾಣಾದಲ್ಲಿ ಪ್ರಕಟವಾಗುವ "ಅರುಣೋದಯ" ಪತ್ರಿಕೆಯ ಎಡಿಟರಾದ ಧೋಂಡೊ ಕಾಶೀನಾಥ ಫಾಳ್ಕೆ ಎಂಬಾತನು ರಾಜದ್ರೋಹಕರವಾದ ಬಾತ್ಮಿಯನ್ನು ಆ ಪತ್ರಿಕೆಯಲ್ಲಿ ಪ್ರಕಟಿಸಿದನೆಂದು ಸರ್ಕಾರದವರು ಆತನನ್ನು ದಸ್ತಗಿರಿಮಾಡಿ, ಬೊಂಬಾಯಿ ಪ್ರಸಿಡೆನ್ಸಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆ ಮಾಡಿದರು ಕಳೆದ ಬುಧವಾರ ಮ್ಯಾಜಿಸ್ಟ್ರೇಟರು ಆತನಿಗೆ ಹದಿನಾಲ್ಕು ತಿಂಗಳ ಕಠಿಣಸಜಾ ವಿಧಿಸಿರುತ್ತಾರೆ

❖❖❖

ಈ ತಿಂಗಳ ೫ನೇ ತಾರೀಖಿನಲ್ಲಿ ಮದರಾಸಿನಿಂದ ಕಲ್ಕತ್ತೆಗೆ ಹೋಗುತ್ತಿದ್ದ ರೈಲ್ ಗಾಡಿಯು ಪಾಲೇರು ಸೇತುವೆಯ ಬಳಿ ಕಂಬಿ ತಪ್ಪಿ ನೆಲದ ಮೇಲೆ ಹರಿಯಿತು ಅಲ್ಲಿ ಪರೀಕ್ಷೆ ಮಾಡಿ ನೋಡಿದಾಗ ಯಾರೋ ಮೊದಲೇ ರೈಲ್ ಕಂಬಿಗಳೆರಡನ್ನೂ ಉದ್ದೇಶಪೂರ್ವಕವಾಗಿ ಕಿತ್ತು ಹಾಕಿದ್ದರೆಂದು ಗೊತ್ತಾಯಿತು ಈ ದುಷ್ಟ ಕೃತ್ಯ ಮಾಡಿದವರು ಪತ್ತೆ ಆಗಲಿಲ್ಲ ಅವರನ್ನು ಹಿಡಿದು ಕೊಡುವವರಿಗೆ ೧,೦೦೦ ರೂಪಾಯಿ ಬಹುಮಾನ ಕೊಡುತ್ತೇವೆಂದು ಮದರಾಸ್ ಸರ್ಕಾರದವರು ಇಸ್ತಿಹಾರು ಹಾಕಿಸಿದಾರೆ

❖❖❖

ಬೊಂಬಾಯಿ ಪಟ್ಟಣದಲ್ಲಿರುವ ಜೈನ ಶ್ವೇತಾಂಬರ ಸಮಾಜದ ಅ॥ ಸೆಕ್ರೆಟರಿ ಯವರು ಹಿಂದುಸ್ಥಾನದ ಸಕಲ ಪ್ರಜೆಗಳಿಗೂ ತಿಳಿಸಿರುವುದೇನೆಂದರೆ—ಯಾವ ಜಾತಿಯ ಜನರಲ್ಲಾಗಲಿ ಮತಕೃತ್ಯವೆಂಬ ನೆಪದಿಂದ ಪ್ರಾಣಿ ಹಿಂಸೆಯು ನಡಿಯುತ್ತಿರುವ ಪಕ್ಷದಲ್ಲಿ ಅದನ್ನು ಈ ಸೆಕ್ರೆಟರಿಯವರಿಗೆ ತಿಳಿಸಬೇಕು. ಅವರು ಅದರ ಪೂರ್ವೋತ್ತರವನ್ನೆಲ್ಲಾ ವಿವರವಾಗಿ ಬರೆದು ಪ್ರಕಟಿಸಿ ಅಂಥಾ ಕ್ರೂರ ಕೃತ್ಯಗಳನ್ನು ಇನ್ನು ಮುಂದೆ ನಡಿಸದಂತೆ ಶಾಸನಪಡಲು ಸಾಧ್ಯವಾಗುವುದು ಎಂಬುದೇ

❖❖❖

ಸಿಂಧು ನದಿಯಲ್ಲಿ ಈ ಸಲ ಪ್ರವಾಹಗಳು ವಿಶೇಷವಾಗಿ ಬರುತ್ತಾ, ಡೇರಾ ಇಸ್ಮೇಲ್ ಖಾನ್ ಎಂಬ ಊರನ್ನು ಕೊಚ್ಚಿಬಿಡುವಂತೆ ಕಾಣುತ್ತಿದೆ. ನೀರು ಊರಿನೊಳಕ್ಕೆ ಹೊರಳಿ ಬಾರದಂತೆ ಗವರ್ನಮೆಂಟಿನವರು ನೂರು ಗಜಗಳ ದೂರ ಒಂದು ಭಾರೀ ಕಲ್ಲಿನ ಕಟ್ಟೆಯನ್ನು ಹಾಕಿಸಿದ್ದರು ಪ್ರವಾಹವು ಈ ಭಾರೀ ಕಟ್ಟೆಯನ್ನು ಕೆಡವಿ ಕೊಚ್ಚಿಕೊಂಡು ಹೋಗಿದೆ ಅದಕಾರಣ ಸರ್ಕಾರದವರು ಆ ಊರಿನಲ್ಲಿರುವ ಖಜಾನೆಯನ್ನೂ ಬಂದೀಖಾನೆಯನ್ನೂ ಬೇರೇ ಕಡೆಗೆ ಸಾಗಿಸಬೇಕೆಂದು ಪ್ರಯತ್ನಪಡುತ್ತಿದಾರೆ.

❖❖❖

ಮೇ॥ ಬಾಲಗಂಗಾಧರ ತಿಲಕರಿಗೆ ಸಜಾ ಶಿಕ್ಷೆಯಾದ ಮರುದಿನ ಬೊಂಬಾಯಿ ಪಟ್ಟಣದಲ್ಲಿ ಬಹಳ ಗಲಭೆಯಾಯಿತು. ದೇಶೀಯ ವರ್ತಕರು ತಮ್ಮ ಅಂಗಡಿಗಳನ್ನು ಮುಚ್ಚಿದರು. ಕಾರ್ಖಾನೆಗಳಿಗೆ ಕೂಲಿಯವರು ಹೋಗದೆ ನಿಂತುಬಿಟ್ಟರು ಗಲಭೆಯನ್ನು ಅಡಗಿಸುವುದರಲ್ಲಿ ಪೋಲೀಸಿನವರೂ ಸೋಜರುಗಳೂ ಗುಂಡು ಹೊಡೆಯಬೇಕಾಯಿತು. ೧೨ ಮಂದಿ ಮೃತಪಟ್ಟರೆಂತಲೂ ಸುಮಾರು ೫೦ ಮಂದಿಗೆ ಗಾಯಗಳಾಗಿವೆ ಎಂತಲೂ ತಿಳಿದು ಬಂದಿದೆ ಪೂನಾ ಪಟ್ಟಣದಲ್ಲೂ ಅಂಗಡಿ ಮುಂಗಟ್ಟುಗಳು ಮುಚ್ಚಲ್ಪಟ್ಟಿದ್ದವು ಆದರೆ ದೊಂಬಿಯೇನೂ ಆಗಲಿಲ್ಲವೆಂದು ತಿಳಿದು ಬಂದಿದೆ

ಹೈದರಾಬಾದಿನಿಂದ ಆರು ಮೈಲಿ ದೂರದಲ್ಲಿರುವ ಸುರೂನಗರ್ ಎಂಬಲ್ಲಿ ಕಳೆದ ವಾರ ಒಂದು ಮನೆಯಿಂದ ಬೆಂಕಿ ಸೋರುತ್ತಿತ್ತು. ಜನರು ಹೋಗಿ ನೋಡುವಲ್ಲಿ ಬಾಗಿಲಲ್ಲಾ ಒಳಗಿನಿಂದ ಭದ್ರಮಾಡಿತ್ತು. ಬಾಗಿಲನ್ನು ಒಡೆದು ನುಗ್ಗಿದರು. ಒಳಗೆ ಗಂಡ ಹೆಂಡಿರಿಬ್ಬರು ಸತ್ತು ಉರಿಯುತ್ತಿದ್ದರು ಇದನ್ನು ನೋಡಿ ಪೋಲೀಸಿನವರು ಹೇಳುವುದೇನೆಂದರೆ—ಹೆಂಡತಿಯು ಗಂಡನನ್ನು ಹೊಡೆಯುತ್ತಿದ್ದಳು. ಆ ರಾತ್ರಿಯೂ ಅವಳು ಅವನನ್ನು ಹೊಡೆದು ಕೊಂದುಹಾಕಿದಳು ತರುವಾಯ ತನ್ನ ಕೃತ್ಯಕ್ಕೆ ತಾನೇ ಹೆದರಿ ಮನೆ ಕಡಗಳನ್ನು ಭಸ್ಮವಾಗಿ ಹಾಕೊಂಡು, ತನ್ನ ಶೀರೆಗೆ ಶೀಮೆಯೆಣ್ಣೆ ಸುರಿದು ದೀಪಹಚ್ಚಿ ತಾನೂ ಆತ್ಮಹತ್ಯ ಮಾಡಿಕೊಂಡಳು ಎಂಬುದೇ.

❖❖❖

ಸಂಯುಕ್ತ ಅಧಿಪತ್ಯಗಳಲ್ಲಿ ಸ್ತ್ರೀ ವಿದ್ಯಾಭ್ಯಾಸವನ್ನು ಹೆಚ್ಚಿಸುವುದಕ್ಕೋಸ್ಕರ ಸರ್ಕಾರದವರು ಈ ಸಾಲಿನಲ್ಲಿ ಒಂದು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಖರ್ಚುಮಾಡುವವರಾಗಿದಾರೆ ಸ್ತ್ರೀಯರನ್ನು ಉಪಾಧ್ಯಾಯನಿಯರಾಗಿ ತರಬೇತು ಮಾಡುವುದು, ಒಳ್ಳೇ ಶಕ್ತರಾದ ಉಪಾಧ್ಯಾಯರನ್ನು ಬಾಲಿಕಾ ಪಾಠಶಾಲೆಗಳಿಗ ನೇಮಿಸುವುದು, ವಿದ್ಯಾರ್ಥಿನಿಯರಿಗೆ ವೇತನ ಕೊಡುವುದು, ಸ್ತ್ರೀ ಇನ್ಸ್ಪೆಕ್ಟರುಗಳ ಸಂಖ್ಯೆಯನ್ನು ಹೆಚ್ಚಿಸುವುದು, ಈ ಮೊದಲಾದವುಗಳಿಗೆ ಗಮನ ಕೊಡಬೇಕೆಂದು ಹುಕುಂ ಕೊಟ್ಟಿದಾರೆ ಇದಲ್ಲದೆ ಆಯಾ ಪಟ್ಟಣದಲ್ಲಿರುವ ಹಿಂದೂ ಮತ್ತು ಯೂರೋಪಿಯನ್ ಸ್ತ್ರೀಯರನ್ನು ಸೇರಿಸಿ ಒಂದು ಸಂಘವನ್ನು ಮಾಡಿ, ಇವರಿಂದ ಬಾಲಿಕಾ ಪಾಠಶಾಲೆಗಳನ್ನು ಆಗಾಗ್ಗೆ ತನಿಖೆ ಮಾಡಿಸುವುದಕ್ಕೂ ಶಾಸನಪಡಬೇಕೆಂದು ಸೂಚಿಸಿದಾರೆ

❖❖❖

ಕಳೆದ ೨೦ ನೇ ತಾ ಸೋಮವಾರ ಮದರಾಸ್ ಪಟ್ಟಣದಲ್ಲಿ ಒಬ್ಬ ಪೋಲೀಸಿನವನು ಸುಮಾರು ಹತ್ತು ವರುಷದ ಇಬ್ಬರು ಹಿಂದೂ ಹುಡುಗರನ್ನು ಹಿಡಿದು, ಅವರು ಬೀದಿಯಲ್ಲಿ ಜಗಳವಾಡುತ್ತಿದ್ದರೆಂದು ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಮಾಡಿದನು. ಮ್ಯಾಜಿಸ್ಟ್ರೇಟರು ಅವರನ್ನು ಪ್ರಶ್ನೆ ಮಾಡಿದಾಗ ಆ ಹುಡುಗರು—ನಾವು ಬೀದಿಯಲ್ಲಿ ಆಟವಾಡುತ್ತಿದ್ದೆವು, ಜಗಳವಾಡುತ್ತಿರಲಿಲ್ಲ ಎಂದು ಹೇಳಿದರು. ಆಗ ಫಿರ್ಯಾದು ತಂದ ಪೋಲೀಸಿನವನನ್ನು ಮ್ಯಾಜಿಸ್ಟ್ರೇಟರು ಕೇಳಿದಾಗ ಅವನು ಹೇಳಿದ್ದೇನೆಂದರೆ—ಪ್ರತಿ ತಿಂಗಳಲ್ಲೂ ಪೋಲೀಸ್ ಕಾನ್ಸ್ಟೆಬಲಾದವನು ೮—೧೦ ಮೊಕದ್ದಮೆಗಳನ್ನು ಪತ್ತೆಮಾಡಿ ಮ್ಯಾಜಿಸ್ಟ್ರೇಟರ ಮುಂದೆ ಹಾಜರ್ಮಾಡಬೇಕೆಂದು ನಮ್ಮ ಇಲಾಖೆಯವರು ವಿಧಿಸಿದಾರೆ. ಹಾಗೆ ಮೊಕದ್ದಮೆ ತರದೆ ಹೋದರೆ ಶಿಕ್ಷಿಸುತ್ತಾರೆ ನಾನು ಇದುವರೆಗೆ ಒಂದು ಮೊಕದ್ದಮೆಯನ್ನು ಮಾತ್ರ ಹಿಡಿದಿರುತ್ತೇನೆ ಎಂದನು. ಆಗ ಮ್ಯಾಜಿಸ್ಟ್ರೇಟರು ಆ ಇಬ್ಬರು ಹುಡುಗರನ್ನೂ ಖುಲಾಸ್ ಮಾಡಿ, ಪೋಲೀಸಿನವರ ನಡವಳಿಕೆಯನ್ನು ಇಲಾಖೆಯವರು ಚನ್ನಾಗಿ ತನಿಖೆ ಮಾಡಬೇಕೆಂತಲೂ, ಈ ಪೋಲೀಸಿನವನು ಹೇಳುವಂಥಾ ರೂಲಸು ಆ ಇಲಾಖೆಯಲ್ಲಿರುವುದಾದರೆ ಅದನ್ನು ವಜಾಮಾಡಬೇಕೆಂತಲೂ ಜಡ್ಜಮೆಂಟಿನಲ್ಲಿ ಬರೆದು ಇರುತ್ತಾರೆ.

ವಿದೇಶ ವರ್ತಮಾನಗಳು.

ರಷ್ಯಾ ಗವರ್ನಮೆಂಟಿನವರು ತಮ್ಮ ರಾಜ್ಯದೊಳಗಿರುವ ಸಾಹುಕಾರರಿಂದಲೇ ೩೦ ಕೋಟಿ ರೂಪಾಯಿ ಸಾಲ ಪಡೆದುಕೊಳ್ಳಬೇಕೆಂದು ಗೊತ್ತುಮಾಡಿದಾರೆ

❖❖❖

ನಾರ್ವೆ ರಾಜ್ಯಕ್ಕೆ ಸೇರಿದ ಫ್ರೆಡ್ರಿಕ್ ಸ್ಟಾಡ್ ಎಂಬ ಊರಿನಲ್ಲಿ ವ್ಯಾಪಾರ ಮುಂತಾದ್ದು ನಡಿಯುತ್ತಿದ್ದ ದೊಡ್ಡ ಬೀದಿಯು ಬೆಂಕಿಬಿದ್ದು ಸುಟ್ಟುಹೋಯಿತು. ಇದರಿಂದ ೧೭ ಲಕ್ಷ ರೂಪಾಯಿನ ಮಾಲುಗಳು ನಷ್ಟವಾಗಿರುತ್ತದೆ

❖❖❖

ಚೀನಾ ಚಕ್ರವರ್ತಿಯವರಿಗೆ ಆಮಶಂಕೆ ಉಪದ್ರವಾಗಿರುವುದರಿಂದ ವೃದ್ಧ ಚಕ್ರವರ್ತಿನಿಯವರು ಅಧಿಪತ್ಯಗಳ ವೈಸ್‌ರಾಯಿಯವರಿಗೂ ಗವರ್ನರುಗಳಿಗೂ ವೈದ್ಯರನ್ನು ರಾಜಧಾನಿಗೆ ಕಳುಹಿಸಿಕೊಡಬೇಕೆಂದು ಹುಕುಂ ಕೊಟ್ಟಿದಾರೆ.

❖❖❖

ರಷ್ಯಾ ರಾಜ್ಯದಲ್ಲಿ ಪ್ರಕಟವಾಗುವ ರಸ್ಕೀ ಎಂಬ ಪತ್ರಿಕೆಯಲ್ಲಿ ಮಂತ್ರಿಯಾದ ಎಂ. ಸ್ಟೋಲಿಪಿನ್ಯವರ ಮೇಲೆ ಆಕ್ಷೇಪಣೆ ಮಾಡಿ ಬಾತ್ಮಿ ಬರೆದಿದ್ದದ್ದಕ್ಕೋಸ್ಕರ ಸರ್ಕಾರದವರು ಆ ಪತ್ರಿಕೆಯ ಆಫೀಸನ್ನು ಮುಚ್ಚಿಸಿಬಿಟ್ಟರು

❖❖❖

ತುರ್ಕಿ ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್‌ನೊಳಗೂ ಅದರ ಸುತ್ತುಮುತ್ತಿನ ಪ್ರಾಂತ್ಯಗಳಲ್ಲೂ ಅಪಘಾತಗಳನ್ನು ತಪ್ಪಿಸುವುದಕ್ಕಾಗಿ ಯಾರೂ ಮೋಟಾರ್ ಗಾಡಿಗಳಲ್ಲಿ ಸಂಚಾರ ಮಾಡಲೇ ಕೂಡದೆಂದು ಸುಲ್ತಾನರು ಹುಕುಂ ಕೊಟ್ಟಿದಾರೆ

❖❖❖

ಪೋಲಾಂಡಿಗೆ ಸೇರಿದ ಕಾಲೀಸ್ ಡಿಸ್ಟ್ರಿಕ್ಟಿನಲ್ಲಿ ಸುಮಾರು ಹದಿನೈದು ದಿನಗಳ ಹಿಂದೆ ಓಪಾಟೋವ್ ಎಂಬ ಪಟ್ಟಣವೆಲ್ಲಾ ಬೆಂಕಿಬಿದ್ದು ಸುಟ್ಟುಹೋಯಿತು. ಇನ್ನೂರು ಮನೆಗಳೂ, ಎರಡು ಭಾರೀ ದೇವಾಲಯಗಳೂ ನಾಶವಾದವು. ಐದುಮಂದಿ ಉರಿಯೊಳಗೆ ಸಿಕ್ಕಿ ಮೃತಪಟ್ಟರು

❖❖❖

ನಟಾಲ್ ಗವರ್ನಮೆಂಟಿನವರು ದಿನಿಜೂಲೂ ಎಂಬ ಜನರ ಮುಖಂಡನಿಗೆ ಕೊಡುತ್ತಿದ್ದ ಪೆನ್ಷನ್ನನ್ನು ಆತನು ದ್ರೋಹಮಾಡಿದನೆಂದು ಹೇಳಿ ಕೊಡದೆ ತಡೆದುಬಿಟ್ಟರು ಇಂಗ್ಲಿಷ್ ಗವರ್ನಮೆಂಟಿನವರು ಆತನಿಗೆ ಕಾವೇ ಆ ಪೆನ್ಷನ್ ಸಲ್ಲಿಸುತ್ತೇವೆಂದು ಒಪ್ಪಿಕೊಂಡಿದಾರೆ

ಡಾಕ್ಟರ್ ಪಿಯರಿಯವರು ಉತ್ತರಧ್ರುವ ಪ್ರಾಂತ್ಯವನ್ನು ನೋಡಿಕೊಂಡು ಬರುವುದಕ್ಕೆ ನೋವಸ್ಕೋಷಿಯಾದಲ್ಲಿರುವ ಕೇಪ್ ಬ್ರಿಟನ್ ಭೂಶಿರದಿಂದ ಆರ್ಟಿಕ್ ಪ್ರದೇಶಕ್ಕೆ ಪ್ರಯಾಣಮಾಡಿದರು ಇವರು ಇನ್ನು ಮೂರು ವರುಷಗಳ ತನಕ ಆ ಪ್ರಾಂತ್ಯದಲ್ಲಿ ಭೂಶೋಧನೆ ಮಾಡಿಕೊಂಡು ಬರುವವರಾಗಿದಾರೆ

❖❖❖

ಮುಂದಿನ ವರುಷ ಮೇ ತಿಂಗಳಲ್ಲಿ ಲಂಡನ್ ಪಟ್ಟಣದೊಳಗೆ ವರ್ತಮಾನ ಪತ್ರಿಕಾ ಕರ್ತರುಗಳ ಸಮಾಜ ಒಂದು ನಡಿಯುವುದಾಗಿದೆ ಆಗ್ಗೆ ಹಿಂದುಸ್ಥಾನದಿಂದಲೂ ಕೆಲವು ದೇಶೀಯ ವರ್ತಮಾನ ಪತ್ರಿಕಾ ಕರ್ತರುಗಳನ್ನು ಕರೆಸಿಕೊಂಡು, ಅವರ ಇಂಗಿತ ಅಭಿಪ್ರಾಯಗಳನ್ನೂ ತಿಳಿದುಕೊಳ್ಳಬೇಕೆಂದು ಪ್ರಯತ್ನಪಟ್ಟಿದಾರೆ.

❖❖❖

ಹಾರ್ವರ್ಡ್ ವಿದ್ಯಾಶಾಲೆಯಲ್ಲಿ ಪಂಡಿತರಾಗಿರುವ ಮೆಲ್ವಿನ್ ಇ. ಹೇಗರ್ ಎಂಬ ವಿದ್ವಾಂಸರು ಬ್ರಾಂಜ್ ಪಾರ್ಕ್ ಉದ್ಯಾನವನದಲ್ಲಿದ್ದುಕೊಂಡು, ಅಲ್ಲಿಟ್ಟಿರುವ ಕೋತಿಗಳನ್ನೂ ಅವುಗಳ ಭಾಷೆಯನ್ನೂ ಪರೀಕ್ಷೆ ಮಾಡಬೇಕೆಂದೂ, ಕಡೆಯಲ್ಲಿ ಆ ಭಾಷೆಯನ್ನು ವಿವರಿಸಿ ಒಂದು ಪುಸ್ತಕವನ್ನು ಪ್ರಕಟಿಸಬೇಕೆಂದೂ ಪ್ರಯತ್ನಪಟ್ಟಿದಾರೆ.

❖❖❖

ಪರ್ಷಿಯಾ ರಾಜಧಾನಿಯಾದ ಟೆಹೆರಾನಿನಲ್ಲೂ ಮುಖ್ಯ ವ್ಯಾಪಾರಪಟ್ಟಣವಾದ ಟೇಬ್ರಿಸ್‌ನಲ್ಲೂ ಇನ್ನೂ ಪ್ರಜಾನೆಮ್ಮದಿಯುಂಟಾಗಲಿಲ್ಲ. ರಾಜಪಕ್ಷದವರಿಗೂ ಪ್ರಜಾಪಕ್ಷದವರಿಗೂ ಕಳೆದ ವಾರವೆಲ್ಲಾ ಕಾದಾಟಗಳು ಪ್ರಾಪ್ತವಾದವು. ಟೇಬ್ರಿಸ್ ಪಟ್ಟಣದಲ್ಲಿ ಹಿಂದಿನ ಸೋಮವಾರ ಯುದ್ಧವಾಯಿತು. ೬೦೦ ಮಂದಿಯ ವರೆಗೆ ಮೃತಪಟ್ಟರೆಂದು ತಿಳಿಯುವುದು.

❖❖❖

ಲಂಡನ್ ಪಟ್ಟಣದಲ್ಲಿ ಕಾಲವಾದ ಮೇ॥ ಎಂ. ಇ. ಸಾಂಡರ್ಸನ್ ಎಂಬ ದೊಡ್ಡ ವರ್ತಕನು ೧೩॥ ಲಕ್ಷ ರೂಪಾಯಿ, ಬ್ಯಾತ್ ಪಟ್ಟಣದ ಮಿಸ್ ಇ ಸಿ. ಅಗ್ನಿವ್ ಎಂಬಾಕೆಯು ೩॥ ಲಕ್ಷ ರೂಪಾಯಿ, ಮಿಸ್ ಲೈಯಲ್ ಎಂಬಾಕೆಯು ೩೦ ಸಾವಿರ ರೂಪಾಯಿ, ಈ ಪ್ರಕಾರ ಅವರು ತಮ್ಮ ಆಸ್ತಿಯಿಂದ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾರೆ.

❖❖❖

ಟ್ರಾನ್ಸ್‌ವಾಲ್ ದೇಶದಲ್ಲಿ ಹಿಂದುಸ್ಥಾನದ ಎಂಟು ಮಂದಿ ವರ್ತಕರು ಅಲ್ಲಿನ ಸರ್ಕಾರದಿಂದ ಲೈಸೆನ್ಸು ಪಡೆದುಕೊಳ್ಳದೆ ಬೀದಿಗಳ ಮೇಲೆ ಹೋಗಿ ಸಾಮಾನು ವಿಕರಿಮಾಡುತ್ತಿದ್ದರು ಅದಕ್ಕಾಗಿ ಸರ್ಕಾರದವರು ಅವರಿಗೆ ತಲಾ ೩೦ ರೂಪಾಯಿ ಜುಲ್ಮಾನೆ ಅಥವಾ ನಾಲ್ಕು ದಿನಗಳ ಸಜಾ ಎಂಬ ಶಿಕ್ಷೆಯನ್ನು ವಿಧಿಸಿದರು, ಆ ವರ್ತಕರು ಜುಲ್ಮಾನೆ ಕೊಡದೆ ಸಜಾ ಅನುಭವಿಸುವುದಕ್ಕೆ ಒಪ್ಪಿಕೊಂಡರು.

❖❖❖

ಚೀನಿಯವರು ಕೆಲವು ಕಾಲದಿಂದೀಚೆಗೆ ಜಪಾನ್ ರಾಜ್ಯದಲ್ಲಿ ತಯಾರಾಗಿ ಬಿಕರಿಗೆ ಬರುವ ಪದಾರ್ಥಗಳನ್ನು ಕೊಂಡುಕೊಳ್ಳಕೂಡದೆಂದು ಹಟತಟ್ಟಿಕೊಂಡಿದಾರೆ. ಕ್ಯಾಂಟನ್ ಮತ್ತು ಶಾಂಘಾಯ್ ಪಟ್ಟಣಗಳಲ್ಲಿರುವ ಚೀನಿಯರು ಸಭೆಸೇರಿ, ಬಹಳ ಹಣವನ್ನು ಕೂಡಿಸಿ, ಶಾಂಘಾಯಿನಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಿ, ದೀಪದ ಕಡ್ಡಿಗಳನ್ನು ಅಪಾರವಾಗಿ ತಯಾರ್ಮಾಡಲಾರಂಭಿಸುವವರಾಗಿದಾರೆ

❖❖❖

ಲಂಡನ್ ಪಟ್ಟಣ ಒಂದರಲ್ಲೇ ಧರ್ಮದ ಹಣದಿಂದ ೧,೮೦೦ ಶಾಲೆಗಳನ್ನು ನಡಿಸುತ್ತಾರೆ. ಈ ಧರ್ಮ ಶಾಲೆಗಳಿಗೆ ವರುಷಕ್ಕೆ ೧೫ ಕೋಟಿ ರೂಪಾಯಿ ಖರ್ಚಾಗುವುದು ಈ ಧರ್ಮವನ್ನು ಕೊಡತಕ್ಕ ಪುಣ್ಯಾತ್ಮರೆಲ್ಲಾ ಸೇರಿ ಒಂದು ಸಂಘವನ್ನು ಮಾಡಿಕೊಂಡು, ತಮ್ಮ ಹಣವನ್ನು ಆ ಶಾಲೆಗಳಲ್ಲಿ ನ್ಯಾಯವಾದ ಖರ್ಚುಗಳಿಗೆ ವಿನಿಯೋಗಿಸುವಂತೆಯೂ ದುರ್ವಿನಿಯೋಗವಾಗದಂತೆಯೂ ತನಿಖೆ ಮಾಡುತ್ತಾ ಬರಬೇಕೆಂದು ತೀರ್ಮಾನಿಸಿರುತ್ತಾರೆ.

❖❖❖

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಮುಖ್ಯ ಪಟ್ಟಣವಾದ ನ್ಯೂಯಾರ್ಕ್ ನಗರದಲ್ಲಿ ಮೆಟ್ರೊಪಾಲಿಟನ್ ಎಂಬ ಕಟ್ಟಡವೂ, ಸಿಂಗರ್ ಎಂಬ ಕಟ್ಟಡವೂ ಅತ್ಯಂತ ಎತ್ತರವಾದವುಗಳೆಂದು ಗೊತ್ತಾಗಿದೆ. ಮೊದಲನೆಯದು ೪೬ ಅಂತಸ್ತುಗಳುಳ್ಳದ್ದಾಗಿಯೂ ಎರಡನೆಯದು ೪೭ ಅಂತಸ್ತುಗಳುಳ್ಳದ್ದಾಗಿಯೂ ಕಟ್ಟಲ್ಪಟ್ಟಿರುವವು. ಈಗ ಇವೆರಡಕ್ಕಿಂತಲೂ ಇನ್ನೂ ಎತ್ತರವಾಗಿ ಅಂದರೆ ೬೨ ಅಂತಸ್ತುಗಳುಳ್ಳ ಬಂಗಲೆಯನ್ನು ಈಕ್ವಿಟಬಲ್ ಲೈಫ್ ಎಂಬ ವಿಮಾ ಕಂಪನಿಯವರು ಕಟ್ಟಲಾರಂಭಿಸಿದಾರೆ. ಈ ಕಟ್ಟಡವು ೯೦೦ ಅಡಿ ಎತ್ತರವುಳ್ಳದ್ದಾಗುವುದು

❖❖❖

ಚೀನಾ ರಾಜ್ಯಕ್ಕೆ ಸೇರಿದ ಲೀಚೆಂಗಿನಲ್ಲಿ ಒಬ್ಬ ಚೀನಾ ಸೈನಿಕನು ಅಫೀಮನ್ನು ಸೇವಿಸುತ್ತಾನೆನ್ನುವುದು ಸೈನ್ಯಾಧಿಪತಿಗೆ ತಿಳಿದ ಕೂಡಲೆ ಆ ಸೈನಿಕನ ಕತ್ತು ಕತ್ತರಿಸಬೇಕೆಂದು ಹುಕುಂ ಕೊಟ್ಟನು. ಆದರೆ ಆ ರಿಜಿಮೆಂಟಿಗೆ ಸೇರಿದ ಸೈನಿಕರೆಲ್ಲಾ ಕೂಡಿ ಅವನು ಔಷಧಕ್ಕಾಗಿ ಅಫೀಮು ಉಪಯೋಗಿಸಿದನೆಂದೂ ಅವನನ್ನು ಕ್ಷಮಿಸಬೇಕೆಂದೂ ಸೈನ್ಯಾಧಿಪತಿಗೆ ಹೇಳಿಕೊಂಡರು ಆಗ ಸೈನ್ಯಾಧಿಪತಿಯು ಅಪರಾಧಿಗೆ ಮರಣದಂಡನೆಯನ್ನು ತಪ್ಪಿಸಿ, ೩,೬೦೦ ಏಟು ಹೊಡೆಯಬೇಕೆಂದು ಹುಕುಂ ಕೊಟ್ಟು, ಇನ್ನು ಮುಂದೆ ಯಾವ ಸೈನಿಕನಾದರೂ ಅಫೀಮ ಸೇವಿಸಿದಲ್ಲಿ ಮರಣದಂಡನೆಯೇ ವಿಧಿಸಲ್ಪಡುವುದೆಂದು ತಿಳಿಸಿರುತ್ತಾನೆ

❖❖❖

ಫ್ರೆಂಚ್ ಗವರ್ನಮೆಂಟಿನವರು ಇನ್ನು ಮೇಲೆ ಖಾಸೇ ಜನ

ಒಂದು ಕಾನೂನಿನ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ತಳ್ಳಿಹಾಕಿದರು. ಪ್ರಜಾಪ್ರತಿನಿಧಿಗಳೂ ಸರ್ಕಾರ ಅಧಿಕಾರಿಗಳೂ ಈ ವಿಷಯವನ್ನು ಚರ್ಚೆಮಾಡಿ, ಪ್ರಾನ್ಸಿನಲ್ಲಿ ಈಗಲೇ ಕೊಲೆ ಮುಂತಾದ ಕ್ರೂರಕೃತ್ಯಗಳು ಹೆಚ್ಚುತ್ತಾ ಬಂದಿರೋಣದರಿಂದ ಸರ್ಕಾರದವರು ಮರಣದಂಡನೆಯನ್ನೇ ತೆಗೆದು ಹಾಕುವುದು ಸರಿಯಲ್ಲವೆಂದು ತೀರ್ಮಾನಮಾಡಿದರು. ಆದರೆ ಈಗಿನಂತೆ ಬಹಿರಂಗವಾಗಿ ಗಲ್ಲಿಗೆ ಹಾಕುವುದನ್ನು ತಪ್ಪಿಸಿ, ಜೈಲ್‌ಖಾನೆಗಳೊಳಗೆ ಗಟ್ಟಿಗೆ ನಡಿಸುವುದು ಉತ್ತಮವೆಂದು ಸೂಚಿಸಿದಾರೆ

ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗಾ ಡಿಸ್ಟ್ರಿಕ್ಟು ಪೊಲೀಸ್ ಅ। ಸೂಪರಿಂಟೆಂಡೆಂಟ್ ಮೆ॥ ಬಿ ಎಸ್ ರಾಮೋಜಿರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಶಿವಮೊಗ್ಗಯ ಡಿಸ್ಟ್ರಿಕ್ಟು ಪ್ರಜರಿ ಅ। ಕಮಿಷನರವರು ಪೊಲೀಸ್ ಆಫೀಸ್ ಚಾಲ್ತಿ ಕೆಲಸಗಳ ಛಾರ್ಜನ್ನೂ ವಹಿಸಿರತಕ್ಕದ್ದು

ಮದ್ದಗಿರಿ 'ಸಬ್' ಡಿವಿಜನ್ ಅ॥ ಕಮಿಷನರ್ ಮೆ। ಎಂ ಶ್ರೀನಿವಾಸಮೂರ್ತಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಗುಬ್ಬಿ ಸಬ್ ಡಿವಿಜನ್ ಅ। ಕಮಿಷನರ್ ಮೆ॥ ಸಿ ನಾರಾಯಣರಾಯರು ಮದ್ದಗಿರಿ ಸಬ್ ಡಿವಿಜನ್ ಛಾರ್ಜನ್ನೂ ವಹಿಸಿರತಕ್ಕದ್ದು

ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಮೆ॥ ಎಂ ಕಾಂತರಾಜೇ ಅರಸಿನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಸೀನಿಯರ್ ಅ। ಕಮಿಷನರ್ ಮೆ॥ ಎ ಸುಬ್ರಹ್ಮಣ್ಯ ಅಯ್ಯರವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಮೈಸೂರು ಛೀಫ್ ಕೋರ್ಟಿನ ಜಡ್ಜರಾದ ಮೆ। ಪಿ ಎಸ್ ಕೃಷ್ಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಶ್ರೀಮನ್ಮಹಾರಾಜರವರು ಬೊಂಬಾಯಿ ಹೈ ಕೋರ್ಟಿನ ಅಡ್ವೊಕೇಟ್ ಮೆ॥ ಶ್ರೀನಿವಾಸ ಅಯ್ಯಂಗಾರ್ ಎಸ್ ಸೇಟ್ಲೂರ್ ಅವರನ್ನು ಛೀಫ್ ಕೋರ್ಟ್ ಜಡ್ಜರನ್ನಾಗಿ ನೇಮಕಮಾಡಿರುತ್ತಾರೆ

ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಕೆ ವೆಂಕಟ್ರಾಮಯ್ಯನವರು ರಜದಿಂದ ವಾಪಸು ಬಂದು ಜುಲೈ ತಾ ೧೧ ರಲ್ಲಿ ಕೆಲಸಕ್ಕೆ ದಾಖಲಾದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಮೈಸೂರು ಡಿಸ್ಟ್ರಿಕ್ಟು ಪ್ರೊ॥ ಅ॥ ಕಮಿಷನರ್ ಮೆ॥ ಜೆ ಬಿ ಹೆಬ್ಳೀಕರ್ ಅವರಿಗೆ ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿದೆ

ಡೆಪ್ಯುಟಿ ಅಮಲ್ದಾರ್ ಮೆ॥ ಎಸ್ ಅನಂತರಾಮಯ್ಯಂಗಾರರನ್ನು ಹೊನ್ನಾಳಿ ತಾಲ್ಲೂಕ್ ಅಮಲ್ದಾರರಾಗಿ ಬದಲಿ ನೇಮಿಸುವಂತೆ ನೇಮಿಸಿದೆ.

ನೆಲಮಂಗಲದ ತಾಲ್ಲೂಕ್ ಶಿರಸ್ತೇದಾರ್ ಪಿ ಕಾಶೀನಾಥರಾಯರನ್ನು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡುವಂತೆ ನೇಮಿಸಿದೆ

ಮೈಸೂರು ಜನರಲ್ ಆಸ್ಪತ್ರೆ ಯಲ್ಲಿ ಕೆಲಸಮಾಡುವ ಅ॥ ಸರ್ಜನ್ ಮೆ॥ ಎಂ ಜಗನ್ನಾಥಂ ಪಿಳ್ಳೆಯವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗಮಾಡಿದೆ ಅವರ ಜಾಗಕ್ಕೆ ಪೋಸ್ಟ್ ಗ್ರಾಜುಯೇಟ್ ಎಂಬ ಪರೀಕ್ಷೆಯಲ್ಲಿ ತೇರ್ಗಡೆಯಾಗತಕ್ಕದ್ದು

ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮೆ॥ ಎಂ ಎ ನರಸಿಂಹಾಚಾರ್ಯರನ್ನು ಮೈಸೂರು ಡಿಸ್ಟ್ರಿಕ್ಟ್ ಗುಂಡ್ಲುಪೇಟೆ ರೇಂಜಿನಿಂದ ಕಡೂರು ಡಿಸ್ಟ್ರಿಕ್ಟ್ ಲಕ್ಕವಳ್ಳಿ ರೇಂಜಿಗೆ ವರ್ಗಮಾಡಿದೆ

ಮುಂದೆ ಹೇಳುವ ಅಮಲ್ದಾರುಗಳ ವರ್ಗವನ್ನು ಹುಕುಂ ಮಾಡಿದೆ —ಮೆ॥ ಎಂ ಕೃಷ್ಣಸ್ವಾಮಯ್ಯಂಗಾರ್ಯ—ಶಿವಮೊಗ್ಗದಿಂದ ತರೀಕೆರೆಗೆ ಮೆ॥ ಜಿ ನಾರಾಯಣರಾಯರನ್ನು ಹೊನ್ನಾಳಿಯಿಂದ ಶಿವಮೊಗ್ಗಗೆ

ಮುಂದೆ ಹೇಳುವ ಪ್ರೊಬೇಷನರಿ ಬಡ್ತಿಗಳು ಹುಕುಂ ಮಾಡಲ್ಪಟ್ಟಿವೆ.—ಮೆ॥ ಎನ್ ಟಿ. ಗೋಪಾಲೈಯಂಗಾರು)—೧ನೇ ಕ್ಲಾಸಿಗೆ ಮೆ॥ ಕೆ ಲಕ್ಷ್ಮೀನಾರಾಯಣಪ್ಪನವರು—೨ನೇ ಕ್ಲಾಸಿಗೆ ಮೆ॥ ಎನ್ ಹಿರಿಯಣ್ಣಪ್ಪನವರು ೩ನೇ ಕ್ಲಾಸಿಗೆ, ಜುಡಿಷಿಯಲ್ ಪ್ರೊಬೇಷನರ್ ಮೆ॥ ಎ ಕೆ ಶ್ರೀನಿವಾಸರಾಘವಾಚಾರ್ ೪ನೇ ಕ್ಲಾಸ್ ಮುನ್ಸೀಫರಾಗಿ ನೇಮಿಸಲ್ಪಟ್ಟಿದಾರೆ

ಸೀನಿಯರ್ ಅ॥ ಕಮಿಷನರ್ ಮೆ॥ ಎ ಸುಬ್ರಹ್ಮಣ್ಯ ಅಯ್ಯರವರು ಅ॥ ಡೆಪ್ಯುಟಿ ಕಮಿಷನರಾಗಿರುವಾಗ್ಗೆ ಅ॥ ಕಮಿಷನರ್ ಮೆ॥ ಬಿ ಕೆ ಸುಂದರರಾಜ ಅಯ್ಯಂಗಾರು ಮೈಸೂರು ಡಿವಿಜನ್ ಛಾರ್ಜನ್ನೂ ಪ್ರೊ॥ ಅ॥ ಕಮಿಷನರ್ ಮೆ॥ ಜೆ ಬಿ ಹೆಬ್ಳೀಕರ್‌ಯವರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನೂ ವಹಿಸಿರತಕ್ಕದ್ದು

ಅ॥ ಡೆಪ್ಯುಟಿ ಕಮಿಷನರ್ ಮೆ॥ ಕೆ ಚಾಮುಂಡಿಯವರು ಸೀನಿಯರ್ ಅ॥ ಕಮಿಷನರ್ ಮೆ॥ ಕೆ ಶ್ರೀನಿವಾಸರಾಯರಿಂದ ಜುಲೈ ತಾ ೯ ರಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಛಾರ್ಜನ್ನು ವಹಿಸಿಕೊಂಡರು.

ಅ॥ ಕಮಿಷನರ್ ಮೆ॥ ಎ ವೆಂಕಟೇಶಯ್ಯ ಅಯ್ಯರವರು ಡೆಪ್ಯುಟಿ ಕಮಿಷನರ್ ಮೆ॥ ಎಂ ಚೆಂಗಯ್ಯ ಚೆಟ್ಟಿಯವರಿಂದ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಛಾರ್ಜನ್ನು ಜುಲೈ ತಾ ೯ ರಲ್ಲಿ ವಹಿಸಿಕೊಂಡರು.

ಶ್ರೀಮನ್ಮಹಾರಾಜರವರು ಮೈಸೂರು ಲೋಕಲ್ ಸರ್ವಿಸ್ ರೆಜಿಮೆಂಟಿನ ಕಮಿಷನ್ ರ್‍ಯಾಂಕಿಯಲ್ಲಿ ದಫೇದಾರ್ ಗೋಪಾಲರಾಯರನ್ನು ದಫೇದಾರಿಯಿಂದ ೪ ನೇ ಗ್ರೇಡ್ ಜಮೇದಾರ್ ಟ್ರೂಪ್ ಕಮ್ಯಾಂಡರ್ ರ್‍ಯಾಂಕಿಗೆ ಬಡ್ತಿ ಮಾಡಿರುತ್ತಾರೆ

ಎಗ್ಸಿಕ್ಯುಟಿವ್ ಇಂಜಿನಿಯರ್ ಮೆ॥ ವಿ ಐಯಾಸಾಮಿ ಐಯರವರಿಗೆ ಜುಲೈ ತಾ ೩ ರಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಸೊರಬದ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ॥ ಜಿ ಮುನಿಯಪ್ಪನವರಿಗೆ ಕೊಟ್ಟಿದ್ದ ೨೩ ದಿನಗಳ ಪ್ರಿವಿಲೇಜ್ ರಜವನ್ನು ಇನ್ನು ೩೦ ದಿನಗಳಿಗೆ ಜಾಸ್ತಿ ಮಾಡಿದೆ

ದಾದು ಎಂಬ ಮಹಾತ್ಮರ ಚರಿತ್ರೆ

ಹಿಂದೂ ದೇಶದ ಮತ ಪರಿಷ್ಕಾರಕರಲ್ಲಿ ಗೌತಮಋಷಿಯು ಪ್ರಥಮ ಸ್ಥಾನವನ್ನು ಹೊಂದಿರುವನೆಂದು ಎಲ್ಲರೂ ತಿಳಿದಿದ್ದಾರೆ ಈತನೇ ಬೌದ್ಧಮತ ಸ್ಥಾಪಕನು ಈತನು ಕಾಲವಾಗಿ ಅನೇಕ ಶತಮಾನಗಳಾದನಂತರ ಈ ದೇಶದಲ್ಲಿ ಇನ್ನು ಕೆಲವು ಮತಪರಿಷ್ಕಾರಕರು ಹುಟ್ಟಿದರು ಬಂಗಾಳ ದೇಶದಲ್ಲಿ ಚೈತನ್ಯ ಎಂಬುವರೂ ಕಾಶಿಯಲ್ಲಿ ಕಬೀರರೂ ಪಂಜಾಬ್ ದೇಶದಲ್ಲಿ ನಾನಕ್ ಎಂಬುವರೂ ಅಲ್ವಾರ್ ಸಂಸ್ಥಾನದಲ್ಲಿ ಲಾಲ್‌ದಾಸರೂ ಜಯಪುರದಲ್ಲಿ ದಾದುಮಹಾತ್ಮರೂ ಮಹಾರಾಷ್ಟ್ರ ದೇಶದಲ್ಲಿ ತುಕಾರಾಮರೂ ಇವರೇ ಮೊದಲಾದ ಮಹಾತ್ಮರು ಕಾಣಿಸಿಕೊಂಡು ಹಿಂದೂ ದೇಶದ ಚರಿತ್ರೆಯಲ್ಲಿ ಪ್ರಸಿದ್ಧಿಯನ್ನು ಪಡೆದಿರುತ್ತಾರೆ ಈ ಬಾತ್ಮಿಯಲ್ಲಿ ದಾದು ಎಂಬ ಮಹಾಪುರುಷರ ಚರಿತ್ರೆಯನ್ನು ಸಂಕ್ಷೇಪವಾಗಿ ವಿವರಿಸ ಬೇಕೆಂದಿರುತ್ತೇವೆ

ದಾದು ಎಂಬುವರು ಕ್ರಿ ಶ ೧೫೪೪ ರಲ್ಲಿ ಜನಿಸಿದರು ಇವರು ಹುಟ್ಟಿದ ಊರು ಅಹಮದಾಬಾದು. ಇವರು ಹುಟ್ಟುವುದಕ್ಕೆ ಕೆಲವು ಕಾಲಕ್ಕೆ ಮುಂಚೆ ಉತ್ತರ ಹಿಂದೂ ದೇಶದಲ್ಲಿ ವಿಪರೀತವಾದ ಬದಲಾವಣೆಗಳಾಗುತ್ತಿದ್ದವು ಅದೇ ಕಾಲದಲ್ಲಿ ಯೂರೋಪ್ ಖಂಡದಲ್ಲಿ ಯೂ ಪ್ರಾಟೆಸ್ಟೆಂಟೆಂಬ ಒಂದು ಹೊಸ ಪಂಗಡದ ಕ್ರೈಸ್ತರೆದ್ದು ಮತಾಚರಣೆಗಳಲ್ಲಿ ಅನೇಕ ನೂತನವಾದ ಬದಲಾವಣೆಗಳನ್ನು ತಂದರು ಮತಪರಿಷ್ಕಾರಕರಿಂದ ನಮ್ಮ ದೇಶದಲ್ಲಿ ಹಾನಿಯುಂಟು ಮಾಡುತ್ತಿದ್ದ ಅನೇಕ ದುಷ್ಟ ಪದ್ಧತಿಗಳು ತೊಲಗಿ ಹೋದುದಲ್ಲದೆ ಸದಾಚರಣೆಯು ನೆಲೆಗೊಳ್ಳುವುದಕ್ಕೆ ಅನುಕೂಲವಾಯಿತು. ದಾದುಮಹಾತ್ಮರು ಬಾನಿ ಎಂಬ ಪುಸ್ತಕವನ್ನು ಬರೆದಿರುತ್ತಾರೆಂದು ಕಂಡು ಬರುತ್ತದೆ ಈ ಪುಸ್ತಕದಲ್ಲಿ ಐದುಸಾವಿರ ಪದ್ಯಗಳಿರುತ್ತವೆ ಇವರ ಜೀವಮಾನ ಚರಿತ್ರೆಯನ್ನು ಜನಗೋಪಾಲನೆಂಬುವನು ಬರೆದಿರುವನು. ದಾದುಯವರ ತಂದೆಯ ಹೆಸರು ಲೋಧಿರಾಮ್. ಇವರ ಜನನದ ವಿಷಯ ಅನೇಕ ಕಟ್ಟುಕಥೆಗಳು ರೂಢಿಯಲ್ಲಿರುತ್ತವೆ ಇವರು ಕೂಸಾಗಿರುವಾಗ ಸಮುದ್ರದ ಮೇಲೆ ತೇಲಿಕೊಂಡು ಬಂದರೆಂತಲೂ ಇವರಿಗೆ ಹನ್ನೊಂದು ವರುಷವಾದಾಗ್ಗೆ ಬುದ್ಧ ಎಂಬ ವೃದ್ಧ ಬ್ರಾಹ್ಮಣರು ಇವರ ಹತ್ತಿರಕ್ಕೆ ಬಂದು ಇವರ ಬಾಯಿಯಲ್ಲಿ ವೀಳ್ಯವನ್ನಿಟ್ಟು ಅಕಸ್ಮಾತ್ತಾಗಿ ಮಾಯವಾದರೆಂತಲೂ ಜನರು ಆಡಿಕೊಳ್ಳುತ್ತಾರೆ

ದಾದುಯವರು ಬ್ರಾಹ್ಮಣಜಾತಿಗೆ ಸೇರಿದ್ದರು ಇವರ ತಂದೆಯು ವ್ಯಾಪಾರ ಮಾಡುತ್ತಾ ಇರುವಲ್ಲಿ ಇವರ ಮಗನಾದ ದಾದುವಿಗೆ ತನ್ನ ತಂದೆಯ ಉದ್ಯೋಗದಲ್ಲಿ ಕೊಂಚವೂ ಅಭಿರುಚಿ ಇರಲಿಲ್ಲ. ಭಿಕ್ಷಾರ್ಥವಾಗಿ ಮನೆಗೆ ಬಂದ ಸಾಧುಗಳಿಗೆ ದಾದುವು ಧಾರಾಳವಾಗಿ ದಾನ ಕೊಡುತ್ತಿದ್ದರು. ಇವರ ಉದಾರಗುಣವನ್ನು ಕೃಪಣನಾದ ತಂದೆಯು ನೋಡಿ ಇವರನ್ನು ಮನೆಯಿಂದ ಹೊರಡಿಸಿ ಬಿಟ್ಟದ್ದನು ಹೀಗಿರುವಲ್ಲಿ ಇವರಿಗೆ ಒಂದು ಆಕಾಶವಾಣಿಯಾಯಿತಂತೆ ಆ ವಾಣಿಯು ದಾದುವಿಗೆ, ದಾದುವೇ ನೀನು ಆರ್ಜಿಸಿಲ್ಪಟ್ಟವನು. ನಿನ್ನನ್ನು ಲೋಕವೆಲ್ಲಾ ತಿಳಿಯಲಿ ಎಂಬುದಾಗಿ ನುಡಿಯಿತೆಂದು ಇವರ ಚರಿತ್ರೆಯನ್ನು ಬರೆದವನು ತಿಳಿಸುತ್ತಾನೆ ಇದು ನಿಜತ್ವವೇ ಹೇಗಾದರೂ ಇರಲಿ ಇವರು ೩ ಒಂದು ಪುಷ್ಕರಿಣಿಯ ಸಮೀಪದಲ್ಲಿ ತಮ್ಮ ಕಾಲವನ್ನು ಕಳೆಯುವುದಕ್ಕೆ ತೊಡಗಿದರು ಇವರ ಅನ್ನವಸ್ತ್ರಾದಿಗಳ ವಿಷಯ ಜನರು ಸಹಾಯ ಮಾಡುತ್ತಿದ್ದರು. ಇವರು ಇಪ್ಪತ್ತೊಂಭತ್ತು ವಯಸ್ಸು ಆಗುವ ತನಕ ಅಹಮದಾಬಾದಿನಲ್ಲಿಯೇ ಕಾಲವನ್ನು ಕಳೆದರು

ಇವರು ಹಿಂದುಗಳ ಮತ್ತು ಮುಸಲ್ಮಾನರ ಮತ ಗ್ರಂಥಗಳನ್ನು ಚೆನ್ನಾಗಿ ಓದಿ ಅವುಗಳಿಂದ ಜ್ಞಾನವನ್ನು ಸಂಪಾದಿಸಿದ್ದರು. ಇವರ ಚರಿತ್ರೆಯಿಂದ ಕಂಡು ಬರುತ್ತದೆ ಪೂಜಾರಿಗಳ ಮತ್ತು ಸಾಧುಗಳ ಕಾವಿ ಬಟ್ಟೆಯು ಇವರಿಗೆ ಸರಿಬೀಳಲಿಲ್ಲ. ಏಕೋ ಭಗವಂತನ ಆರಾಧನೆಯೇ ಸತ್ಯವೆಂತಲೂ ವಿಗ್ರಹಾರಾಧನೆಯು ಪಾಪವೆಂತಲೂ ಬೋಧಿಸ ತೊಡಗಿದರು. ತೀರ್ಥ ಯಾತ್ರೆಗಳಿಂದಲೂ ಉಪವಾಸಗಳಿಂದಲೂ ಆತ್ಮಕ್ಕೆ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ತಿಳಿಸುತ್ತಾ ಬಂದರು. ಇವರ ನೂತನ ಬೋಧನೆಯನ್ನು ಕೇಳಿ ಹಿಂದುಗಳೂ ಮುಸಲ್ಮಾನರೂ ಇವರನ್ನು ದ್ವೇಷಿಸುವುದಕ್ಕೆ ತೊಡಗಿದರು. ಹೀಗಿದ್ದಾಗ್ಯೂ ಜನರು ಇವರ ಬೋಧನೆಯ ಮೆಚ್ಚಲು ಪ್ರಾರಂಭಿಸಿದರು ಕೊನೆಗೆ ವಿಶೇಷವಾಗಿ ಯಾರಾದರೂ ದಾದುಯವರ ಹತ್ತಿರಕ್ಕೆ ಹೋದದ್ದೇ ಆದರೆ ಅವರಿಗೆ ಬಹಿಷ್ಕಾರದ ಶಿಕ್ಷೆಯಾಗುತ್ತಿದ್ದಿತು. [illegible]

ಕೆಲವು ವರುಷಗಳಾದ ನಂತರ ದಾದುಯವರ ಜಯಪುರ ಸಂಸ್ಥಾನಕ್ಕೆ ಬಂದರು ಆಗ್ಗೆ ಜಯಪುರ ಸಂಸ್ಥಾನಕ್ಕೆ ಭಗವಂತದಾಸರು ರಾಜರಾಗಿದ್ದರು ಇವರು ದಾದುಯವರನ್ನು ತಮ್ಮ ರಾಜಧಾನಿಗೆ ಕರೆಯಿಸಿ ಕೆಲವು ವಿಶೇಷವಾದ ಬಹುಮಾನಗಳನ್ನು ಕೊಡಲು ದಾದುಯವರು ಅವುಗಳನ್ನು ಅಂಗೀಕರಿಸಲು ಒಪ್ಪಿಕೊಳ್ಳಲಿಲ್ಲ ಅವರು ಕಷ್ಟದಿಂದ ನೂಲುವ ಉದ್ಯೋಗವನ್ನು ಮಾಡಿ ಜೀವಿಸುತ್ತಿದ್ದರು ಇವರ ಕೀರ್ತಿಯನ್ನು ಬೇರೆ ಬೇರೆ ದೇಶದ ಜನರು ಕೇಳಿ ಇವರ ಶಿಷ್ಯವರ್ಗಕ್ಕೆ ಸೇರಲು ತೊಡಗಿದರು

ಆಗಿನ ಕಾಲದಲ್ಲಿ ಮೊಗಲಾಯಿ ರಾಜ್ಯವನ್ನು ಅಕ್ಬರ್ ಚಕ್ರವರ್ತಿಯು ಆಳುತ್ತಿದ್ದನು ಅಕ್ಬರನು ಸಹ ದಾದುಯವರ ಕೀರ್ತಿಯನ್ನು ಕೇಳಿ ಅವರನ್ನು ದೆಹಲಿಗೆ ಕರೆಯಿಸಿಕೊಂಡು ಅವರ ಸಂಗಡ ಮತಸಂಭಾಷಣೆ ಮಾಡುತ್ತಿದ್ದನಂತೆ

ದಾದುಯವರ ಜೀವಮಾನ ಕಾಲದಲ್ಲಿ ಅವರ ಶಿಷ್ಯವರ್ಗಕ್ಕೆ ಸುಮಾರು ೧೫೨ ಮಂದಿ ಸೇರಿದ್ದರು ಬಾನಿಗ್ರಂಥವನ್ನು ದಾದುಯವರೇ ಬರೆದರೆಂದು ಕೆಲವರು ನಂಬುತ್ತಾರೆ ಮತ್ತೆ ಕೆಲವರು ಅವರ ಬೋಧನೆಯನ್ನೆಲ್ಲಾ ಅವರ ಶಿಷ್ಯರು ಸಂಗ್ರಹಿಸಿ ಮೇಲೆ ಹೇಳಿದ ಗ್ರಂಥದಲ್ಲಿ ಬರೆದಿರುವರೆಂದು ಹೇಳುವರು ಬಾನಿಗ್ರಂಥದಲ್ಲಿ ಇಪ್ಪತ್ತು ಸಾವಿರ ಪಂಕ್ತಿಗಳಿರುವವು ಇವುಗಳು ಮೂವತ್ತೇಳು ಅಧ್ಯಾಯಗಳಲ್ಲಿ ಅಡಗಿರುತ್ತವೆ ಇವು ಪರಮಗುರು, ಸ್ಮರಣೆ, ಮನಸ್ಸು, ಜನನ, ಮರಣ, ಸತ್ಯ, ಸಾಧು, ಜಪತಪ, ಉಪಾಯ ಇವುಗಳ ವಿಷಯ ತಿಳಿಸುತ್ತವೆ ದಾದುಯವರ ಬೋಧನಾಸಾರಾಂಶವನ್ನು ಬರುವ ವಾರದ ಸಂಚಿಕೆಯಲ್ಲಿ ಪ್ರಕಟಿಸಬೇಕೆಂದುದ್ದೇಶ ಪಟ್ಟಿರುತ್ತೇವೆ

ಮಿ॥ ತಿಲಕರ ಮೊಕದ್ದಮೆಯು.

ಮೆ॥ ತಿಲಕರ ಮೇಲೆ ಬಂದ ರಾಜದ್ರೋಹದ ಮೊಕದ್ದಮೆಯನ್ನು ಬೊಂಬಾಯಿ ಹೈ ಕೋರ್ಟಿನ ಜಡ್ಜರಾದ ಮೆ॥ ದಾವರ್‌ಯವರು ದಿಯರ್ಮಾಸ್ತು ಮಾಡಿ, ಪಂಚಾಯತರ ಅಭಿಪ್ರಾಯವನ್ನು ತಿಳಿದ ಮೇಲೆ ಜಡ್ಜಿಯವರು ಮೆ॥ ತಿಲಕರಿಗೆ ಶಿಕ್ಷೆಯನ್ನು ವಿಧಿಸುವುದಕ್ಕಿಂತ ಮುಂಚೆ ಅವರನ್ನು ಕುರಿತು ಕೆಲವು ಮಾತುಗಳನ್ನು ಹೇಳಿದರು ಏನೆಂದರೆ—

ಬಾಲ ಗಂಗಾಧರ ತಿಲಕರೇ,—ಈಗ ನಾನು ನಿಮಗೆ ಶಿಕ್ಷೆ ವಿಧಿಸಬೇಕಾದದ್ದು ನನ್ನ ಕರ್ತವ್ಯವಾಗಿದ್ದರೂ ಈ ಭಾಗದಲ್ಲಿ ನಾನು ವ್ಯಥೆಪಡುತ್ತೇನೆ ನಿಮ್ಮನ್ನು ಈ ಸ್ಥಿತಿಯಲ್ಲಿ ನೋಡುವುದಕ್ಕೆ ನನಗೆ ತುಂಬಾ ದುಃಖವುಂಟಾಗಿದೆ ನೀವು ಬಹಳ ಸಮರ್ಥರು, ಬುದ್ಧಿಶಾಲಿಗಳು, ಜನದಲ್ಲಿ ವಿಶೇಷ ಗೌರವ ಪ್ರೀತಿ ವಿಶ್ವಾಸಗಳನ್ನು ಪಡೆದಿರತಕ್ಕವರು ಎನ್ನುವುದಕ್ಕೆ ಸಂಶಯವಿಲ್ಲ ಇಂಥಾ ನಿಮ್ಮ ಶಕ್ತಿ ಸಾಮರ್ಥ್ಯಾದಿಗಳನ್ನು ನಿಮ್ಮ ದೇಶದ ಹಿತಕ್ಕಾಗಿ ಪ್ರಯೋಗಮಾಡಿದ್ದರೆ ಅದು ಈ ದೇಶದ ಪ್ರಜೆಗಳ ಸುಖಸಂತೋಷಾದಿಗಳನ್ನು ವೃದ್ಧಿಗೆ ತರಬಹುದಾಗಿತ್ತು. ಹತ್ತು ವರುಷಗಳ ಹಿಂದೆ ನಿಮಗೆ ಶಿಕ್ಷೆಯಾಗಿತ್ತು ಆಗ ಕೋರ್ಟಿನವರು ನಿಮಗೆ ಬಹಳ ಸುಲಭವಾದ ಶಿಕ್ಷೆಯನ್ನು ವಿಧಿಸಿದ್ದರು ಗತಿಸಿದ ಚಕ್ರವರ್ತಿನಿಯವರು ಅದಕ್ಕಿಂತಲೂ ಕಟ್ಟಾಗಿ ನಿಮ್ಮ ವಿಷಯದಲ್ಲಿ ರಿಯಾಯಿತಿ ತೋರಿಸಿದ್ದರು ನೀವು ಒಂದು ವರುಷ ಆರು ತಿಂಗಳ ಮಾತ್ರ ಸಾಧಾರಣ ಶಿಕ್ಷೆ ಅನುಭವಿಸಿದ ಮೇಲೆ ನೀವು ಮುಂದೆ ನಿಮ್ಮ ಬರವಣಿಗೆಯ ವಿಷಯದಲ್ಲಿ ತುಂಬಾ ಎಚ್ಚರಿಕೆಯಾಗಿರುವಂತೆ ಒಪ್ಪಿಕೊಂಡದ್ದರಿಂದ ಗವರ್ನಮೆಂಟಿನವರು ಉಳಿದ ಶಿಕ್ಷೆಯನ್ನು ಕ್ಷಮಿಸಿಬಿಟ್ಟರು ರಾಜಕೀಯ ವಿಷಯಗಳನ್ನು ಕುರಿತು ಹೊಡೆದಾಡುವುದಕ್ಕೆ ನೀವು ಪ್ರಯೋಗಿಸಿರುವ ಬರವಣಿಗೆಗಳು ಸರಿಯಾದ ಆಯುಧಗಳೆಂದು ಹೇಳುವಂಥವರ ಮನಸ್ಸು ಕೆಟ್ಟುಹೋದದ್ದಾಗಿಯೂ, ಅಂತಃಕರಣ ವಿಕಾರಹೊಂದಿದ್ದಾಗಿಯೂ ಇರಬೇಕೆಂದು ನನಗೆ ತೋರುತ್ತದೆ ನಿಮ್ಮ ಬರವಣಿಗೆಗಳು ರಾಜದ್ರೋಹದಿಂದ ತುಂಬಿವೆ, ಕ್ರೂರಕೃತ್ಯಗಳನ್ನು ಉಜ್ಜಳಿಸುತ್ತಿವೆ, ಕೊಲೆಗಳನ್ನು ಮೆಚ್ಚಿಕೊಂಡಂತೆ ಹೇಳುತ್ತವೆ, ಸಿಡಿಮದ್ದಿನ ಗುಂಡುಗಳನ್ನು ಪ್ರಯೋಗಿಸಿದ ಹೇಡಿತನವುಳ್ಳ ದ್ರೋಹಕರವಾದ ಕೊಲೆಗಳನ್ನು ನೀವು ಮೆಚ್ಚುವುದಲ್ಲದೆ, ಸಿಡಿಮದ್ದಿನ ಗುಂಡುಗಳು ಹಿಂದುಸ್ಥಾನಕ್ಕೆ ಬಂದದ್ದರಿಂದ ಈ ರಾಷ್ಟ್ರಕ್ಕೆ ಒಳ್ಳೆಯದೇ ಆಯಿತೆಂದು ನೀವು ಸಂತೋಷಪಡುವವರಾಗಿದ್ದೀರಿ

ನಾನು ಮೇಲೆ ಹೇಳಿದಂತೆ ಸಿಡಿಮದ್ದಿನ ಗುಂಡುಗಳ ಪ್ರಯೋಗದಿಂದ ರಾಜಕೀಯ ಸ್ವಾತಂತ್ರ್ಯಗಳನ್ನು ಸಂಪಾದಿಸಿಕೊಳ್ಳುವುದಕ್ಕೆ ಪ್ರಯತ್ನಪಡುವುದು [illegible] ವಿಕಾರಹೊಂದಿದವರ ಕೃತ್ಯವಲ್ಲದೆ ಮತ್ತೇನೂ ಅಲ್ಲ ನೀವು ಬರೆದಿರತಕ್ಕ ಬರವಣಿಗೆಗಳು ನ್ಯಾಯವಾದ ಬರವಣಿಗೆಗಳೆಂದು ಎನ್ನುವ [illegible] ಮನೋವಿಕಾರ ಹೊಂದಿದವರಲ್ಲದೆ ಮತ್ತಾರೂ ಅಲ್ಲ ರಾಜದ್ರೋಹ ನಡೆಸುವವರ ಮೇಲೆ [illegible] ದ್ವೇಷವೂ [illegible] ವರುಷಗಳಿಂದ ನಿಮ್ಮನ್ನು ಬಿಡಲಿಲ್ಲ ಈ ಮೊಕದ್ದಮೆ ಯಲ್ಲಿ ಹಾಜರ್ ಮಾಡಿರುವ ಬಾತ್ಮಿಗಳನ್ನು [illegible] ಆಕಾರದಿಂದ ಬರೆದಿರುವೆನೆಂದು ನೀವು ಹೇಳುತ್ತೀರಿ. ಆದರೆ ನಿಜವಾಗಿ ನೀವು ರಾಜ್ಯಾಧಿಕಾರವನ್ನು ಉಲ್ಲಂಘಿಸಿ [illegible] ಬಾತ್ಮಿಗಳನ್ನು ಬರೆದಿರಿ. [illegible] ಸಿಡಿಮದ್ದಿನ ಗುಂಡಿನ ದೆಸೆಯಿಂದ [illegible] ಮಾಡಿದ ಕೊಲೆ [illegible] ದಿನಗಳ ಮೇಲೆ ನೀವು ಆ ಗುಂಡುಗಳ ವಿಚಾರವನ್ನು ಕುರಿತು [illegible] ಬದಲಾಯಿಸುವುದರಲ್ಲಿ [illegible] ಬರೆದಿರುತ್ತೀರಿ ಇಂಥಾ ಪತ್ರಿಕಾ ಬರವಣಿಗೆಗಳು ದೇಶಕ್ಕೆ ಅತ್ಯಂತ ಕೇಡು. ತಂತಕ್ಕೆ [illegible] ನಿಮಗೆ ಶಿಕ್ಷೆ ವಿಧಿಸುವುದಕ್ಕೆ ನಾನು ಬಹಳ ವ್ಯಥೆಪಡುತ್ತೇನೆ ಪಂಚಾಯತರು ನಿಮ್ಮನ್ನು ಅಪರಾಧಿ ಎಂಬುದಾಗಿ ಅಭಿಪ್ರಾಯವನ್ನು ಹೇಳಿದರೆ ನಾನು ನಿಮಗೆ ಯಾವ ರೀತಿಯಾದ ಶಿಕ್ಷೆಯನ್ನು ವಿಧಿಸಲಿ ಎಂದು ಬಹಳ ಚೆನ್ನಾಗಿ ಪೂರ್ವಕವಾಗಿ ಆಲೋಚಿಸುತ್ತಿದ್ದೆನು. ಈಗ ನಾನು ನಿಮಗೆ ವಿಧಿಸುವ ಶಿಕ್ಷೆಯನ್ನು ಎಲ್ಲರೂ ತುಂಬಾ ಸುಲಭವಾದದ್ದು ಎನ್ನುತ್ತಾರೆಂದು ನೆನಸುತ್ತೇನೆ ನನ್ನ ನ್ಯಾಯವಾದ ಕರ್ತವ್ಯವನ್ನು ನಿಮ್ಮ ಅಪರಾಧದ ವಿಶೇಷತೆಯನ್ನು ಯೋಚನೆಮಾಡಿದಲ್ಲಿ ಈಗ ನಾನು ಹೇಳುವ ಶಿಕ್ಷೆಗಿಂತ ಕಡಮೆಯಾದ ಶಿಕ್ಷೆಯನ್ನು ಹೇಳುವುದು ಒಪ್ಪತಕ್ಕದ್ದಾಗಿರಲಾರದು ನಿಮ್ಮ ಸ್ಥಿತಿಯನ್ನು ಈಗಿನ ಸಂದರ್ಭವನ್ನು ನೋಡಿದರೆ ನಾನು ಹೇಳುವ ಶಿಕ್ಷೆಯು ಧರ್ಮಕ್ಕೂ ನ್ಯಾಯಕ್ಕೂ ಒಪ್ಪತಕ್ಕದಾಗಿದ್ದೀತೆಂದು ತೋರುತ್ತದೆ ಮೊದಲನೆಯ ಅಪರಾಧಕ್ಕೆ ನಿಮ್ಮನ್ನು ಜೀವಾವಧಿ ಟ್ರಾನ್ಸ್‌ಪೋರ್ಟ್ ಶಿಕ್ಷೆಗೆ ಗುರಿಮಾಡಬಹುದಾಗಿದೆ ನಿಮ್ಮನ್ನು ನೀರಿನ ಮೇಲೆ ಕಳುಹಿಸಬೇಕೇ ಅಥವಾ ಸಜಾ ಹಾಕಬೇಕೇ ಎಂದು ಯೋಚನೆ ಮಾಡಿದೆನು ನಿಮ್ಮ ವಯಸ್ಸನ್ನೂ ಸಂದರ್ಭವನ್ನೂ ಯೋಚಿಸಿದರೆ, ಯಾವ ದೇಶವನ್ನು ನೀವು ಪ್ರೀತಿಸುತ್ತಿರುವಿರೆಂದು ಹೇಳುವಿರೋ ಅದೇ ದೇಶದ ಹಿತಕ್ಕಾಗಿಯೂ ಪ್ರಜಾ ನೆಮ್ಮದಿಗಾಗಿಯೂ, ನೀವು ಕೆಲವು ಕಾಲ ಹೊರಗಿದ್ದು ಬರುವುದು ಒಳ್ಳೆಯದೆಂದು ನನಗೆ ತೋರಿದೆ ಕಾನೂನು ಪ್ರಕಾರ ನಿಮಗೆ ದ್ವೀಪಾಂತರ ಶಿಕ್ಷೆಯನ್ನು ಜೀವಾವಧಿಯೇ, ಕೆಲವು ಕಾಲದ ವರೆಗೋ ವಿಧಿಸಬಹುದಾಗಿದೆ ನಿಮ್ಮ ಮೇಲೆ ಹೊತ್ತಿರುವ ಎರಡು ಅಪರಾಧಗಳಿಗೂ

ತಲಾ ಮೂರು ವರುಷದಂತೆ ನಿಮಗೆ ದ್ವೀಪಾಂತರಶಿಕ್ಷೆಯನ್ನು ವಿಧಿಸಿದೇನೆ. ಅಂದರೆ, ನೀವು ಆರು ವರುಷ ಟ್ರಾಪ್ ಸಜಾ ಅನುಭವಿಸಬೇಕು. ಮೂರನೇ ಅಪರಾಧಕ್ಕೆ ಟ್ರಾಪ್ ಸಜಾ ವಿಧಿಸಲಾಗದು; ಜುಲ್ಮಾನೆಯನ್ನೇ ಸಜಾವನ್ನೇ ವಿಧಿಸಬೇಕು. ಆದರೂ ನಿಮಗೆ ಇನ್ನು ಹೆಚ್ಚಿನ ಸಜಾ ಶಿಕ್ಷೆಯನ್ನು ವಿಧಿಸುವುದಿಲ್ಲ. ಒಂದು ಸಾವಿರ ರೂಪಾಯಿ ಜುಲ್ಮಾನೆಯನ್ನು ನಿಮಗೆ ಹಾಕಿರುತ್ತೇನೆ ಮತ್ತು ನಿಮ್ಮ ಮೇಲೆ ಬಂದಿರುವ ನಾಲ್ಕನೇ ಅಪರಾಧದ ವಿಷಯದಲ್ಲಿ ನಿಮ್ಮನ್ನು ಖುಲಾಸ್ ಮಾಡಿರುತ್ತೇನೆ ಎಂಬುವುದೇ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುಂಶವನ್ನು ಸಕಲರೂ ತಿಳಿಯತಕ್ಕದ್ದು. —ಎಡಿಟರ್.

ಕರೆಸ್‌ಪಾಂಡೆನ್ಸ್.

ತುಂಕೂರಿನಿಂದ ಕುಣಿಗಲ್ ಮಾರ್ಗವಾಗಿ ಮೈಸೂರಿಗೆ ರೈಲ್ ಆಗಬೇಕು

ಅಯ್ಯಾ,

ನಮ್ಮ ರಾಜಧಾನಿಯಾದ ಮೈಸೂರು ಪಟ್ಟಣಕ್ಕೆ ಇದುವರೆಗೂ ಒಂದೇ ಒಂದು ರೈಲ್ ಮಾರ್ಗವು ಬೆಂಗಳೂರು ಕಡೆಯಿಂದ ಇರುವುದು ಸರಿಯಷ್ಟೆ. ಈಗ ಇನ್ನೊಂದು ಮಾರ್ಗವು ಅರಸೀಕೆರೆಯಿಂದ ಹಾಸನ, ಹೊಳೆನರಸೀಪುರ, ಎಡತೊರೆ—ಈ ಮಾರ್ಗವಾಗಿ ತಯಾರಾಗುವುದರಲ್ಲಿದೆ. ಅದರಂತೆ ನಮ್ಮ ಸರ್ಕಾರದವರು ತುಂಕೂರು ಕಡೆಯಿಂದ ಕುಣಿಗಲು, ಎಡಿಯೂರು, ನೆಲ್ಲೀಗೆರೆ, ನಾಗಮಂಗಲ, ಮೇಲುಕೋಟೆ—ಇವುಗಳ ಮಾರ್ಗವಾಗಿ ಫ್ರೆಂಚ್‌ರಾಕ್ (ಹಿರೋಡೆ) ಸ್ಟೇಷನ್ ವರೆಗೆ ಒಂದು ರೈಲ್ ರಸ್ತೆಯನ್ನು ಮಾಡಿಸಿದಲ್ಲಿ ವ್ಯಾಪಾರಕ್ಕೂ, ಪ್ರಯಾಣಿಕರಿಗೂ ಅತ್ಯಂತ ಸೌಕರ್ಯ ಉಂಟಾಗುತ್ತದೆ. ಮೇಲುಕೋಟೆ ಕುಣಿಗಲು ಮೊದಲಾದ ಸ್ಥಳಗಳೆಲ್ಲವೂ ಈ ದೇಶದಲ್ಲಿ ಬಹಳ ಪ್ರಸಿದ್ಧವಾದವುಗಳಾಗಿರುವುದರಿಂದ ಈ ಮಾರ್ಗವಾಗಿ ರೈಲ್ ಆಗತಕ್ಕದ್ದು ಅತ್ಯಾವಶ್ಯಕವಾಗಿರುತ್ತದೆ ಮತ್ತು ಈ ಮಾರ್ಗದಲ್ಲಿ ಅಮೃತ ರಸ್ತೆ ಬರಲಾಗಿ ನಡೆಯುವ ಕಾರಣ ಸರ್ಕಾರಕ್ಕೂ ಬಹಳ ಲಾಭವಿದೆ ಉಂಟು.

ದೇಶಾಭಿಮಾನಿ

ಮರಾಟಾ ಮಂಡಲಿಯ ಬಾಲಕರ ವಿದ್ಯಾಭ್ಯಾಸವು

ಅಯ್ಯಾ,

ಬೆಂಗಳೂರು ಸಿಟಿಯಲ್ಲಿ ಡೇಟ್ ಸ್ಟ್ರೀಟ್ ನಂಬ್ರಿನಲ್ಲಿರುವ ಮರಾಟಾ ಮಂಡಳಿ ಬಡ ವಿದ್ಯಾರ್ಥಿಗಳಿಗೆ ಬೋರ್ಡಿಂಗು ಅಂದರೆ, ಅನ್ನೋದಕಗಳನ್ನು ವಾಸಕ್ಕೆ ಸ್ಥಳವನ್ನು ಅನುಕೂಲಿಸಿ, ಸ್ಕೂಲ್ ಫೀ ವಗೈರೆ ಕೊಟ್ಟು ಅವರಿಗೆ ವಿದ್ಯಾಭ್ಯಾಸ ಮಾಡಿಸುವುದಕ್ಕಾಗಿ ನಾಲ್ಕತ್ತು ಸಾವಿರ ರೂಪಾಯಿಗಳನ್ನು ಇದೇ ಮಂಡಳಿಯು ಕೆಲವು ದೊಡ್ಡ ಮನುಷ್ಯರನ್ನು ಟ್ರಸ್ಟಿಗಳನ್ನಾಗಿ ಮಾಡಿ ಇವರ ವಶಕ್ಕೆ ಕೊಟ್ಟಿರುತ್ತಾರೆ. ಈ ವಿಷಯದಲ್ಲಿ ಈ ಮರಾಟಾ ಮಂಡಳಿಯ ಪ್ರಮುಖರು ೧—೨ ಮೀಟಿಂಗು ಮಾಡಿ, ಮೈಸೂರು ಸೀಮೆಯಲ್ಲಿರತಕ್ಕ ಸ್ಕೂಲುಗಳಲ್ಲಿ ಎಷ್ಟು ಮರಾಟಾ ಹುಡುಗರು ವಿದ್ಯಾಭ್ಯಾಸ ಮಾಡುತ್ತಾರೆ ಮತ್ತು ಬೆಂಗಳೂರಲ್ಲಿ ಬೋರ್ಡಿಂಗು ಕೊಟ್ಟಲ್ಲಿ ಎಷ್ಟು ವಿದ್ಯಾರ್ಥಿಗಳು ಬರಲು ಇಷ್ಟವುಳ್ಳವರಾಗಿದ್ದಾರೆ ಎಂಬುವ ಸಂಗತಿಯನ್ನು ತಿಳಿದುಕೊಳ್ಳುವುದಕ್ಕಾಗಿ ವಿದ್ಯಾಭ್ಯಾಸದ ಇಲಾಖೆ ಇನ್ಸ್‌ಪೆಕ್ಟರ್ ಜನರಲ್‌ರವರನ್ನು ಪತ್ರ ಮೂಲಕ ಕೇಳಿದಾರೆ.

ಬೆಂಗಳೂರು, ಎಂ ರಾಮಚಂದ್ರರಾವ್ ಸಿಂಧೆ.

೨೭ನೇ ಜುಲೈ, ೦೮

ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಪ್ರದರ್ಶನವು.

ಅಯ್ಯಾ,

ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ೩—೧೦—೧೯೦೭ನೇ ಮಾರ್ಚಿ ೧೭ನೇ ನಂಬರ್ ಹುಕುಂ ಅನುಸರಿಸಿ "ಈ ವರ್ಷ (ಅಂದರೆ, ಕಳೆದ ವರ್ಷ) ದಸರಾದಲ್ಲಿ ಮೈಸೂರಿನಲ್ಲಿ ೧೪—೧೦—೧೯೦೭ ಲಾಗಾಯತು ೨೭—೧೦—೧೯೦೭ ವರಿಗೆ ಒಂದು ವಾರ ಪ್ರಾಕಾರ್ ಪ್ಯಾಲೆಸಿನಲ್ಲಿ ಕಟ್ಟಡದಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವಸ್ತು ಪ್ರದರ್ಶನವು ನಡೆಯುತ್ತದೆ. ಎಲ್ಲಾ ಸ್ಕೂಲು ಮಾಸ್ಟರುಗಳೂ ಸದರಿ ಪ್ರದರ್ಶನವನ್ನು ನೋಡುವುದಕ್ಕೆ ಮೈಸೂರಿಗೆ ಹೋಗಬೇಕು. ಇದಕ್ಕಾಗಿ ದಸರಾ ರಜಾವನ್ನು ಈ ಮಾಹೆ ೧೯ರ ಲಾಗಾಯತು ೩೦ರ ವರಿಗೆ ಬದಲಾಗಿ ೧೪ರ ಲಾಗಾಯತು ೨೭ರ ವರಿಗೆ ಕೊಟ್ಟಿರುತ್ತೆ" ಎಂಬುದಾಗಿ ಎಲ್ಲಾ ಸ್ಕೂಲ್ ಮಾಸ್ಟರುಗಳಿಗೆ ಡೆಪ್ಯುಟಿ ಇನ್ಸ್‌ಪೆಕ್ಟರ್ ಸಾಹೇಬರವರ ಆಫೀಸಿನಿಂದ ಹುಕುಂ ದೊರೆದಂತೆಯೂ, ಸದರಿ ಹುಕುಂ ಅನೇಕ ಗ್ರಾಮ ಸ್ಕೂಲ್ ಮಾಸ್ಟರುಗಳಿಗೆ ಸಕಾಲಕ್ಕೆ ಪೋಸ್ಟು ಮೂಲಕ ಜಾಹಿರಾತಿಯಾಗದೆ ಪ್ರಸ್ತಾಪದ ಕಾಲವು ಮೀರಿದ ನಂತರ ಜಾಹಿರಾತಿಯಾದಂತೆಯೂ ತಿಳಿಯಬರುತ್ತದೆ.

ಆಗ ನಡೆದ ಸದರಿ ಪ್ರದರ್ಶನದ ಫಲವನ್ನು ಕಳೆದುಕೊಂಡ ಹೋಬಳಿ ಸ್ಕೂಲ್ ಮಾಸ್ತರುಗಳು ಒಳಗೊಳಗೆ ವ್ಯಥೆಪಡುತ್ತಿರುವುದನ್ನು ಕಂಡೆನು. ಅದ್ದರಿಂದ ಈಗ ನಡೆಯುತ್ತಿರುವ ಟೂಲ್ಡ್ ೧೯೦೮ನೇ ಸಾಲಿನಲ್ಲಿ ಈ ಪ್ರದರ್ಶನವು ನಡೆಯತಕ್ಕದ್ದಿದ್ದು, ಎಲ್ಲಾ ಸ್ಕೂಲು ಮಾಸ್ತರುಗಳೂ ನೋಡುವ ಬಗ್ಗೆ ಹೋಗಲು ಹುಕುಂ ಹೊಂದಿಯತಕ್ಕದ್ದಾಗಿದ್ದರೆ, ಕೃಪ್ತ ಕಾಲಕ್ಕೆ ಕೆಲವು ದಿವಸಗಳ ಮುಂಚಿತವಾಗಿಯೇ ಈ ಸಂಬಂಧಪಟ್ಟ ಹುಕುಮನ್ನು ವಿದ್ಯಾಭ್ಯಾಸದ ಇಲಾಖಾ

ಖಾವಂದರವರು ದಯಪಾಲಿಸಿ ಕಾಪಾಡುವರಾಗಿ ನಂಬಿರುತ್ತೇನೆ. ಈ ಪ್ರಕಾರ ಹುಕುಂ ದಯಪಾಲಿಸಿದಲ್ಲಿ ಹೋಗಲು ಇಷ್ಟ ಉಳ್ಳ ಮಾಸ್ಟರುಗಳು ಖರ್ಚಿನ ಬಗ್ಗೆ ಹಣವಿನ ತರದೂದು ಇಟ್ಟುಕೊಳ್ಳಲು ಅನುಕೂಲ ಉಂಟುಮಾಡಿಕೊಟ್ಟಂತಾಗುವುದೆಂದು ಪ್ರಾರ್ಥಿಸುತ್ತೇನೆ.

ವೀರಪ್ಪ ಗೌಡ, ಪಟೇಲ್

ದಾವಣಗೆರೆಯ ಅಮಲ್ದಾರರು

ಅಯ್ಯಾ,

ಈ ತಾಲ್ಲೂಕಿನಲ್ಲಿ ತಕ್ಕ ಮಟ್ಟಿಗೂ ಮಳೆಯೂ ಆಗಿ ರೈತರು ಹೊಲಗಳನ್ನು ಬಿತ್ತುತ್ತಾ ಇದಾರೆ. ಧಾನ್ಯ ಧಾನ್ಯಗಳು ತಕ್ಕ ಮಟ್ಟಿಗೂ ಇಳಿದಿದೆ. ಇಲ್ಲಿನ ಮುನಿಸಿಪಲ್ ಕೆಲಸವು ತಕ್ಕ ಮಟ್ಟಿಗೂ ಚೆನ್ನಾಗಿ ನಡೆಯುತ್ತದೆ.

ಆದರೆ ಈ ತಾಲ್ಲೂಕಿನ ಅಮಲ್ದಾರರಾದ ಮೆ॥ ನಾರಾಯಣಸ್ವಾಮಿ ಮೊದಲಿಯಾರ್ರನ್ನು ಮುಂಜರಾಬಾದಿಗೆ ವರ್ಗ ಮಾಡಿದಾರೆಂಬುವ ಸಂಗತಿಯನ್ನು ಇಲ್ಲಿನ ಟವರ್ನಿನ ಜನರು ಮತ್ತು ಗ್ರಾಮಸ್ಥರು ಕೇಳಿ ತುಂಬಾ ವ್ಯಥೆ ಪಡುತ್ತಾ ಇದಾರೆ. ಈ ಮಹನೀಯರು ಈ ತಾಲ್ಲೂಕಿಗೆ ಬಂದು ಕೆಲವು ತಿಂಗಳು ಮಾತ್ರ ಆಯಿತು. ಇಷ್ಟು ಸ್ವಲ್ಪ ಕಾಲದಲ್ಲಿ ಟವನ್ನಿಗೂ ಗ್ರಾಮಕ್ಕೂ ಅವರು ಮಾಡಿರುವ ಕೆಲಸವನ್ನು ನೋಡುವದಾದರೆ ತುಂಬಾ ಆಶ್ಚರ್ಯ ಪಡಬೇಕಾಗಿದೆ. ಯಾಕೆಂದರೆ ಹಿಂದೆ ಇದ್ದ ಅನೇಕ ಅಮಲ್ದಾರರ ಕಾಲದಲ್ಲಿ ನಡಿಯದೆ ಇದ್ದ ಕೆಲಸವನ್ನು ಈ ಮಹನೀಯರು ಮಾಡಿದಾರೆ. ೧೦—೧೨ ವರ್ಷದಿಂದಲೂ ನಿಂತು ಇದ್ದ ಕಂದಾಯವನ್ನು ಇವರು ಸ್ವಲ್ಪ ದಿನದಲ್ಲಿಯೇ ಪ್ರಜೆಗಳಿಗೆ ತೊಂದರೆ ಇಲ್ಲದಂತೆ ವಸೂಲ್ಮಾಡಿ ಟವನ್ನಿನಲ್ಲಿ ಅನೇಕ ಹೊಸ ಕೆಲಸಗಳನ್ನು ಮಾಡಿಸಿದರು ಮತ್ತು ಕಚೇರಿಯಲ್ಲಿದ್ದ ಎಲ್ಲಾ ಅಕ್ರಮಗಳನ್ನೂ ತಕ್ಕ ಮಟ್ಟಿಗೂ ಕಮ್ಮಿಮಾಡಿ, ಅರ್ಜಿದಾರರ ಅರ್ಜಿಗಳನ್ನು ತಾವೇ ಖುದ್ದಾಗಿ ನೋಡಿ, ತತ್‌ಕ್ಷಣದಲ್ಲಿಯೇ ಬದಲುತ್ತರವನ್ನು ಕೊಡುತ್ತಾ ಇದ್ದರು. ಗ್ರಾಮಗಳಲ್ಲಿ ಸಂಚಾರ ಮಾಡಿ, ಅಲ್ಲಿದ್ದ ಎಲ್ಲಾ ಕಲ್ಮಲವನ್ನೂ ಹೋಗಲಾಡಿಸಿದ್ದು ಮಾತ್ರವಲ್ಲದೆ, ಇವರು ಅನೇಕ ಉಪಕಾರಗಳನ್ನೂ ಗ್ರಾಮಸ್ಥರಿಗೆ ಮಾಡಿದರು. ಇಂಥಾ ಚಟುವಟಿಕೆಯುಳ್ಳ ಅಮಲ್ದಾರರನ್ನು ಇಷ್ಟು ಶೀಘ್ರದಲ್ಲಿ ವರ್ಗ ಮಾಡಿದ್ದನ್ನು ನೋಡಿದರೆ ತುಂಬಾ ವ್ಯಸನ ಪಡಬೇಕಾಗಿದೆ. ಇನ್ನು ಕೆಲಂಚ ಕಾಲ ಈ ಮಹನೀಯರನ್ನು ಇದೇ ಸ್ಥಳದಲ್ಲಿಯೇ ಇಡುವದಾದರೆ ತುಂಬಾ ಅನುಕೂಲವಾಗಿತ್ತು.

ಇನ್ನೊಂದು ವಿಶೇಷವಾದ ಕೆಲಸವನ್ನು ಇವರು ಬಹು ಮುತುವರ್ಜಿಯಿಂದ ನಡಿಸಿದ್ದಕ್ಕೋಸ್ಕರ ಜನಗಳು ತುಂಬಾ ಸಂತೋಷಪಡುತ್ತಾರೆ. ಅದೇನೆಂದರೆ, ಸಂತೆಯಲ್ಲಿ ಬಿಚ್ಚ ಸೇರುಗಳನ್ನು ಇಟ್ಟುಕೊಂಡಿದ್ದರು. ಈ ಮಹಾನುಭಾವರು ತಕ್ಕಮಟ್ಟಿಗೂ ಅದನ್ನು ಕಮ್ಮಿ ಮಾಡಿದರು. ಈ ವಿಷಯದಲ್ಲಿ ಅವರನ್ನು ಎಷ್ಟು ಕೊಂಡಾಡಿದಾಗ್ಯೂ ಸ್ವಲ್ಪವೆ. ಇವರ ಮೇಲಿನ ಅಧಿಕಾರಿಗಳು ಇವರ ವಿಷಯದಲ್ಲಿ ತುಂಬಾ ಸಂತೋಷವುಳ್ಳವರಾಗಿದ್ದರು ಮತ್ತು ಇವರನ್ನು ಇಲ್ಲಿಯೇ ನಿಲ್ಲಿಸಬೇಕೆಂದು ಬಹು ಪ್ರಯತ್ನಪಟ್ಟಾಗ್ಯೂ ಪ್ರಯೋಜನವಾಗಲಿಲ್ಲ. ಆದರೂ ಇವರ ಹೋಗುವ ಸ್ಥಳದಲ್ಲಿಯೂ ಇದೇ ಒಳ್ಳೇ ಹೆಸರನ್ನು ಪಡೆಯುವರೆಂದು ನಾನು ನಂಬುತ್ತೇನೆ. ಬೇರೆ ಅಮಲ್ದಾರರು ಇವರ ಮೇಲ್ಪಂಕ್ತಿಯನ್ನು ಅನುಸರಿಸಿ, ಪ್ರಜೆಗಳಿಗೂ ಸರ್ಕಾರಕ್ಕೂ ಪ್ರಯೋಜಕರಾಗಿ ಕೆಲಸ ಮಾಡುವವರಾದರೆ ನಮ್ಮ ದೇಶವು ತುಂಬಾ ಅಭಿವೃದ್ಧಿಗೆ ಬರುವುದೆಂಬುವುದಕ್ಕೆ ಸಂದೇಹವಿಲ್ಲ.

ಬಾತ್ಮಿದಾರ್

ತಾಲ್ಲೂಕು ವರ್ತಮಾನ.

ನಾಗಮಂಗಲ.—ಇಲ್ಲಿ ಹತ್ತು ಹದಿನೈದು ದಿನದಿಂದ ಮಳೆಯು ಇಲ್ಲವಾಗಿ, ಧಾನ್ಯಗಳು ದಿನೇ ದಿನೇ ಜಾಸ್ತಿಯಾಗುತ್ತಾ ಇವೆ. ಇಲ್ಲಿಗೆ ಹನ್ನೆರಡು ಮೈಲಿ ಫಾಸಲೆಯಲ್ಲಿರುವ ಬೆಳ್ಳೂರು ಎಂಬ ಗ್ರಾಮದಲ್ಲಿ ಮಳೆಯು ಇಲ್ಲದೆ ಬಡವರ ಜೀವನಕ್ಕೂ, ಜನಗಳ ಹುಲ್ಲಿಗೂ ಬಹಳ ತೊಂದರೆಯಾಗಿದೆ. ರೈತರು ದನಗಳಿಗೋಸ್ಕರ ಪ್ರತಿ ದಿನವೂ ಸುಂಟಿಯ ಗಸ್ತಿಗಳನ್ನು ಕಿತ್ತು ಹಾಕುತ್ತಾರೆ.—ಈ ಬೆಳ್ಳೂರು ಗ್ರಾಮಕ್ಕೆ ಪೂರ್ವದಿಕ್ಕಿನಲ್ಲಿ ಬಹಳ ಪುರಾತನವಾದ ಗ್ರಾಮದೇವತೆಯ ದೇವಸ್ಥಾನವು ಕೇವಲ ಶಿಥಿಲವಾಗಿರುವುದರಿಂದಲೂ ಮತ್ತು ಬಹಳ ಚಿಕ್ಕದಾಗಿರುವುದರಿಂದಲೂ ಇದನ್ನು ಹೊಸದಾಗಿ ಕಟ್ಟುವುದಕ್ಕೆ ಪಂಡಿತ ಅಂಕಯ್ಯನವರು ಗ್ರಾಮದ ಕೆಲ್ಲಡಿಗಳ ಹತ್ತರ ಹಣವನ್ನು ಎತ್ತಿ ಒಂದು ಫಂಡನ್ನು ಏರ್ಪಡಿಸಿ, ಈ ದೇವಸ್ಥಾನವನ್ನು ಹೊಸದಾಗಿ ಕಟ್ಟಲು ಏರ್ಪಾಡು ಮಾಡಿದಾರೆ. ಈ ಫಂಡಿಗೆ ಒಂದು ಸಾವಿರ ರೂಪಾಯಿ ವಸೂಲಾಗಿದೆ. ಇದನ್ನು ಎರಡು ತಿಂಗಳಲ್ಲಿ ಕಟ್ಟಿ ಮುಗಿಸುತ್ತೇನೆಂದು ಕಂಟ್ರಾಕ್ಟ್‌ದಾರ್ ತಿಮ್ಮಪ್ಪನವರು ಒಪ್ಪಿಕೊಂಡಿರುತ್ತಾರೆ.—ಇದೇ ಗ್ರಾಮದಲ್ಲಿ ಸಾಹುಕಾರ್ ಪಟ್ಟಣಶೆಟ್ಟಿ ಎಯ್ಯನವರು ಕಾಗದದ ಟಪ್ಪಾಲು ಇಡಲು ಪ್ರಯತ್ನಪಟ್ಟಿದಾರೆ. ಈ ಗ್ರಾಮದಲ್ಲಿ ಇನ್ನೂ ಟಪ್ಪಾಲು ಪೆಟ್ಟಿಗೆ ಇಲ್ಲ. ಈ ಗ್ರಾಮದ ಗವರ್ನಮೆಂಟ್ ಕನ್ನಡ ಸ್ಕೂಲ್ ಹೆಡ್ಮಾಸ್ಟರು ಮತ್ತು ಕೆ ಸುಬ್ಬರಾಯರವರೂ ಮಹತ್ ಸರ್ವರಿಂದ ವಿಶ್ವಕೀರ್ತಿ ಹೇಳುತ್ತಾರೆ

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ. ಹಾಗೆ ಆಗದಿದ್ದರೆ ಡೋನ್‌ರವರ ಮೇಲ್ಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವದು. ಮಲಬಂಧವೆಂಬುವದು ಅಥವಾ ಏನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೆ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ,



೧೨ ಆಣೆ ಬುಡ್ಡಿ ಪರಿಮಾಣ

ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು. ಮಲಬಂಧದಿಂದ ರೋಗಗಳೇ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ಕಲ್ಲಣಿಸುವುದು, ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಮುಳಿಸೀಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಸುಖಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [93-46]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆಯ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ, ಡೋನ್ಸ್, ಪಿ. ಓ. ಬಾಕ್ಸ್ ೩೦, ಬೊಂಬಾಯಿ—ಇವರಲ್ಲಿ ದೊರೆಯುವುದು.

"ಶ್ರೀದುರ್ಗಾಪ್ರಬಂಧಿನಿ."

63-1

ವಾರಪತ್ರಿಕೆ ! ವಾರಪತ್ರಿಕೆ !!

"ಶ್ರೀದುರ್ಗಾಪ್ರಬಂಧಿನಿ" ಎಂಬ ಅಭಿಧಾನದಿಂದ ಲಲಿತವಾದ ಶೈಲಿಯಲ್ಲಿ ಪ್ರತಿ ಶನಿವಾರವೂ ಶಿರಾದಲ್ಲಿ ೧೯೦೮ ನೇ ಇಸವಿ ಅಕ್ಟೋಬರ್ ೩ ನೇ ತಾರೀಖು (ದುರ್ಗಾಷ್ಟಮಿ) ಲಾಗಾಯತು ಪ್ರಕಟಿಸಲ್ಪಡುವುದು. ಇದರಲ್ಲಿ ರಾಜಕೀಯ, ಮತವಿಚಾರ, ವೇದಾಂತ, ಥಿಯಾಸಫಿ, ಮೊದಲಾದ ಅನೇಕ ಉಪಯುಕ್ತ ವಿಷಯಗಳು ಅಡಗಿರುತ್ತವೆ. ಈ ಪತ್ರಿಕೆಗೆ ೧೯೦೮ ನೇ ಇಸವಿ ಸೆಪ್ಟೆಂಬರು ೩೦ ನೇ ತಾರೀಖು ಒಳಗಾಗಿ ಚಂದಾ ಹಣ ಮುಂಗಡ ರವಾನಿಸತಕ್ಕವರಿಗೆ ೧೦೦ ಒಳ್ಳೆ ಮಸಿ ಪಟ್ಟಿಗಳನ್ನೂ, ಅವರು ಚಂದಾದಾರರಾಗಿರುವ ವರೆಗೂ ಪ್ರತಿ ವರ್ಷವೂ ೧ ಕ್ಯಾಲಂಡರಿನೊಂದಿಗೆ ಇನಾಮವಾಗಿ ಕೊಡಲ್ಪಡುವುದು.

ಚಂದಾವಿವರ —

ಸ್ಥಳದವರಿಗೆ ವರ್ಷ ೧ ಕ್ಕೆ ರೂ. ೧—೦—೦

ಪರಸ್ಥಳದವರಿಗೆ ಟಪ್ಪಾಲ್ ಹಾಸಲ್ ಸಹಿತ ೧—೧೪—೦

೧೦ ಅಥವ ಇದಕ್ಕೆ ಮೇಲ್‌ಪಟ್ಟ ಚಂದಾದಾರರನ್ನೊದಗಿಸಲು ಪಿಡುಂಬಾಗುವವರಿಗೆ ಒಂದು ಸುಂದರವಾದ ಹೊಸ ಲೇಡೀ ವಾಚನ್ನು ಇನಾಮವಾಗಿ ಕೊಡುವೆವು.

ನಮಗೆ ಏಜಂಟರು ಬೇಕು. ಹೆಚ್ಚಿನ ಸಂಗತಿ ಪತ್ರದ್ವಾರ ತಿಳಿಯಬಹುದು. ವಿಳಾಸ —ಕೆ. ಎ. ಉಮ್ಮಾಜಿರಾವ್, ಮ್ಯಾನೇಜರ್,

ಶ್ರೀದುರ್ಗಾಪ್ರಬಂಧಿನಿ ಆಫೀಸ್, ಶಿರಾ, ತುಂಕೂರ್ ಡಿ॥.

ತ್ವರವಾಗಿ ಇಂಗ್ಲೀಷ್ ಕಲಿಯುವಿಕೆ.

61-1

ಇಂಗ್ಲಿಷ್ ಭಾಷೆಯನ್ನು ಬರೆಯುವುದಕ್ಕೂ, ಓದುವುದಕ್ಕೂ, ಮಾತಾಡುವುದಕ್ಕೂ, ಬೋಧಕರ ಸಹಾಯ ಸ್ವಲ್ಪವೂ ಇಲ್ಲದೆ ಒಂದೆರಡು ತಿಂಗಳುಗಳಲ್ಲಿಯೇ ಕಾನಾಗಿ ಕಲಿಸುವ ಅತ್ಯುತ್ತಮವಾದ ಪುಸ್ತಕ. ಕ್ರಯ ರೂ ೧—೭—೦

ಪ್ರಶ್ನೋತ್ತರ ಲೇಖ್ಯಬೋಧಿನಿ.

ಸ್ವಲ್ಪ ಪ್ರತಿಗಳೇ ಉಳಿದಿವೆ ೩೦೦ ಪುಟಗಳು. ಆಯಾ ಮತಪದ್ಧತಿಯನ್ನನುಸರಿಸಿ ಬರೆಯುವ ಮುಯಾರಾದೆ, ಒಕ್ಕಾಲಗಳು, ಸಿವಿಲ್, ಮೆಜಿಸ್ಟ್ರೇಟ್, ರೆವಿನ್ಯೂ ಪೋಲೀಸ್ ಇಂಜನಿಯರ್, ಫಾರೆಸ್ಟು ಮುನ್ಸೀಫ್, ವಿದ್ಯಾಭ್ಯಾಸ, ಮತ್ತು ಇನ್ನೂ ಇತರ ಇಲಾಖೆಗಳ ಬಗೆಬಗೆ ಸಂಗತಿಗಳು, ರೈತರಿಗೆ ಉಪಯುಕ್ತ ದೊರೆಯುವ ಬಗೆಬಗೆ ಅರ್ಜಿಗಳೂ, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಹಿಂದೂ ಲಾ. ಸಾಕ್ಷಿಯ ಲಾ, ಕಂಪನೀಸ್ ಆಕ್ಟ್, ಲ್ಯಾಂಡ್ ಅಕ್ವಿಜಿಷನ್, ದೊಸ್ತು, ಆರಂಗು ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳೂ, ಕೋರ್ಟುಗಳಿಗೂ ಪೋಲೀಸಿಗೂ ಇರುವ ಅಧಿಕಾರ, ವರ್ತಕರಿಗುಪಯೋಗವಾದ ಎಲ್ಲಾ ರೋಜು ವರ್ಗ ಲೆಕ್ಕಗಳು, ಬಾನಭಾವಿಗೆ ಲೆಕ್ಕ ಬರೆಯುವ ರೀತಿ. ಇವುಗಳ ಸಾರಾಂಶವನ್ನೆಲ್ಲಾ ವಿವರಿಸಿದೆ ಪುಸ್ತಕದಲ್ಲಿರುವ ಸಂಗತಿಗಳನ್ನೆಲ್ಲಾ ವಿವರಿಸಲು ಸ್ಥಳ ಸಂಕೋಚದಿಂದ ಇಲ್ಲ ಸಂಕ್ಷೇಪವಾಗಿ ತಿಳಿಸಿದೆ. ಕ್ರಯ ೧—೭—೦ ವಿಳಾಸ —ಮ್ಯಾನೇಜರ್ ಕರ್ನಾಟಕ ಪುಸ್ತಕಶಾಲಾ, ಲಕ್ಕೂರ್ ಪೋಸ್ಟ್, ತಾ॥ ಮಾಲೂರು ಕೋಲಾರ್ ಡಿಸ್ಟ್ರಿಕ್ಟ್

ನೋಟೀಸ್.

60-1

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :—

೧೯೦೩ ನೇ ಇಸವಿ ಮೈಸೂರು ೩ ನೇ ಮ್ಯುನಿಸಿಪಲ್ ರೆಗ್ಯುಲೇಷನಿಗೆ ಒಳಪಟ್ಟ ೬೮ ನೇ (೧) G ಸೆಕ್ಷನ್ ಮೇರಿಗೆ ೧೯೦೮ ನೇ ಇಸವಿ ಆಗಸ್ಟ್ (೧) ನೇ ತಾರೀಖು ಲಾಗಾಯಿತು ಬೆಂಗಳೂರು ಸಿಟಿಯಲ್ಲಿ ಪ್ರತಿಯೊಂದು ಕೂಸಿನ ಜನನದ ಮತ್ತು ಪ್ರತಿಯೊಬ್ಬ ಮನುಷ್ಯನ ಮರಣದ ವಿವರವಾಗಿ ಆಯಾಯ ಡಿವಿಜನ್ ಸಂಬಂಧಪಟ್ಟ ಸಬ್ ರಿಜಿಸ್ಟ್ರಾರಿಗೆ ಜನನವುಂಟಾದ ತಾರೀಖು ಲಾಗಾಯಿತು ಹದಿನೈದು ದಿವಸದೊಳಗಾಗಿಯೂ ಮತ್ತು ಮರಣವುಂಟಾದ ಕಾಲದಿಂದ ೨೪ ಘಂಟೆಗಳ ಒಳಗಾಗಿಯೂ ತಿಳುವಳಿಕೆಯನ್ನು ಕೊಡಬೇಕು. ಅಥವಾ ಕೊಡಿಸಬೇಕು. ಸದರಿ ಸಮಾಚಾರವನ್ನು ಕೊಡುವದು ಕರ್ತವ್ಯವಾಗಿರತಕ್ಕ ಯಾವ ಮನುಷ್ಯನು ಕೊಡಲು ತಪ್ಪುತ್ತಾನೋ ಅಂಥಾವನು ಪ್ರಾಸಿಕ್ಯೂಷನಿಗೆ ಒಳಪಟ್ಟು ೧೦ ರೂಪಾಯಿಗಳಿಗೆ ಕಡಮೆಯಿಲ್ಲದೆ ಜುಲ್ಮಾನೆಗೆ ಗುರಿಯಾಗುತ್ತಾನೆ.

Sd. B. J. KUMARASWAMI NAIK,

President,

City Municipal Council,

22-7 08. Bangalore.

ಒಂದು ಕಾನೂನಿನ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ತಳಹಿಸಿದರು. ಪ್ರಜಾಪ್ರತಿನಿಧಿಗಳೂ ಸರ್ಕಾರಿ ಅಧಿಕಾರಿಗಳೂ ಈ ವಿಷಯವನ್ನು ಚರ್ಚೆಮಾಡಿ, ಫ್ರಾನ್ಸಿನಲ್ಲಿ ಈಗಲೇ ಕೊಲೆ ಮುಂತಾದ ಕ್ರೂರಕೃತ್ಯಗಳು ಹೆಚ್ಚುತ್ತಾ ಬಂದಿರೋಣದರಿಂದ ಸರ್ಕಾರದವರು ಮರಣದಂಡನೆಯನ್ನೇ ತೆಗೆದು ಹಾಕುವುದು ಸರಿಯಲ್ಲವೆಂದು ತೀರ್ಮಾನಮಾಡಿದರು. ಆದರೆ ಈಗಿನಂತೆ ಬಹಿರಂಗವಾಗಿ ಗಲ್ಲಿಗೆ ಹಾಕುವುದನ್ನು ತಪ್ಪಿಸಿ, ಜೈಲ್‌ಖಾನೆಗಳೊಳಗೆ ಗುಟ್ಟಾಗಿ ನಡೆಯುವುದು ಉತ್ತಮವೆಂದು ಸೂಚಿಸಿದಾರೆ

ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ॥ ಬಿ ಎಸ್ ರಾಜೋಜಿರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶಿವಮೊಗ್ಗಾ ಡಿಸ್ಟ್ರಿಕ್ಟ್ ಟ್ರೆಜರಿ ಅ॥ ಕಮಿಷನರವರು ಪೋಲೀಸ್ ಆಫೀಸ್ ಚಾರ್ಜಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು

ಮಂಡ್ಯಗಿರಿ ಸಬ್ ಡಿವಿಜನ್ ಅ॥ ಕಮಿಷನರ್ ಮೆ॥ ಎಂ ಶ್ರೀನಿವಾಸಮೂರ್ತಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿವಗಳ ಪ್ರಿವಿಲೆಜ್ ರಜಾ ಕೊಟ್ಟಿದ

ಗುಬ್ಬಿ ಸಬ್ ಡಿವಿಜನ್ ಅ॥ ಕಮಿಷನರ್ ಮೆ॥ ಸಿ ನಾರಾಯಣರಾಯರು ಮಂಡ್ಯಗಿರಿ ಸಬ್ ಡಿವಿಜನ್ ಛಾರ್ಜನ್ನೂ ವಹಿಸಿರತಕ್ಕದ್ದು

ಮೈಸೂರು ಡಿಸ್ಟ್ರಿಕ್ಟ್ ಶೆಟ್ಲ್‌ಮೆಂಟ್ ಕಮಿಷನರ್ ಮೆ॥ ಎಂ ಕಾಂತರಾಜೇ ಅರಸಿನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸೀನಿಯರ್ ಅ॥ ಕಮಿಷನರ್ ಮೆ॥ ಎ ಸುಬ್ರಹ್ಮಣ್ಯ ಐಯರವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮೈಸೂರು ಡಿಸ್ಟ್ರಿಕ್ಟ್ ಶೆಟ್ಲ್‌ಮೆಂಟ್ ಕಮಿಷನರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಮೈಸೂರು ಚೀಫ್ ಕೋರ್ಟಿನ ಜಡ್ಜರಾದ ಮೆ॥ ಪಿ ಎಸ್ ಕೃಷ್ಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶ್ರೀಮನ್ಮಹಾರಾಜರವರು ಬೊಂಬಾಯಿ ಹೈ ಕೋರ್ಟಿನ ಅಡ್ವೊಕೇಟ್ ಮೆ॥ ಶ್ರೀನಿವಾಸ ಐಯಂಗಾರ್ ಎಸ್ ಸೇಟ್ಲೂರ್ ಯವರನ್ನು ಚೀಫ್ ಕೋರ್ಟ್ ಜಡ್ಜರನ್ನಾಗಿ ನೇಮಕಮಾಡಿರುತ್ತಾರೆ

ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಕೆ ಮುತ್ತಯ್ಯನವರು ರಜದಿಂದ ವಾಪಸು ಬಂದು ಜೂಲೈ ತಾ ೧೧ ರಲ್ಲಿ ಕೆಲಸಕ್ಕೆ ದಾಖಲಾದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಮೈಸೂರು ಡಿಸ್ಟ್ರಿಕ್ಟ್ ಪ್ರೊ॥ ಅ॥ ಕಮಿಷನರ್ ಮೆ॥ ಜೆ ಬಿ ಹೆಬ್ಲಿಕರ್ ಯವರಿಗೆ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿದೆ

ಡೆಪ್ಯುಟಿ ಅಮಲ್ದಾರ್ ಮೆ॥ ಎಸ್ ಅನಂತರಾಮೈಯಂಗಾರನ್ನು ಹೊನ್ನಾಳಿ ತಾಲ್ಲೂಕ್ ಅಮಲ್ದಾರರಾಗಿ ಬದಲಿ ನೇಮಿಸುವಂತೆ ನೇಮಿಸಿದ

ನೆಲಮಂಗಲದ ತಾಲ್ಲೂಕ್ ಶಿರಸ್ತೆದಾರ್ ಸಿ ಕಾಶೀನಾಥರಾಯರನ್ನು ಫ್ರಂಟಿಯರ್ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸುವಂತೆ ನೇಮಿಸಿದೆ

ಮೈಸೂರು ಜನರಲ್ ಆಸ್ಪತ್ರೆ ಯಲ್ಲಿ ಕೆಲಸಮಾಡುವ ಅ॥ ಸರ್ಜನ್ ಮೆ॥ ಎಂ ಜಗನ್ನಾಥಂ ಪಿಳ್ಳೆಯವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗಮಾಡಿದೆ. ಅವರು ಇಲ್ಲಿ ಪ್ರೊಫೆಸರ್ ಎಂಬ ಉ... ವಿ ... ತರಪೇತಾಗತಕ್ಕದ್ದು

ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮೆ॥ ಎಂ ಎ ವರದಾಚಾರ್ಯರನ್ನು ಮೈಸೂರು ಡಿಸ್ಟ್ರಿಕ್ಟ್ ಗೆ ... ರೇಂಜಿನಿಂದ ಕಡೂರು ಡಿಸ್ಟ್ರಿಕ್ಟ್ ಲಕ್ಕವಳ್ಳಿ ರೇಂಜಿಗೆ ವರ್ಗಮಾಡಿದೆ

ಮುಂದೆ ಹೇಳುವ ಅಮಲ್ದಾರರುಗಳ ವರ್ಗಾವರ್ಗ ಹುಕುಂ ಮಾಡಿದೆ — ಮೆ॥ ಎಂ ಕೃಷ್ಣಸ್ವಾಮೈಯಂಗಾರ್ರು — ಶಿವಮೊಗ್ಗೆಯಿಂದ ತರೀಕೆರೆಗೆ ಮೆ॥ ಜಿ ನಾರಾಯಣರಾಯರನ್ನು ಹೊನ್ನಾಳಿಯಿಂದ ಶಿವಮೊಗ್ಗೆಗೆ

ಮುಂದೆ ಹೇಳುವ ಮುನ್ಸೀಫರ ಬಡ್ತಿಗಳ ಹುಕುಂ ಮಾಡಲ್ಪಟ್ಟಿವೆ — ಮೆ॥ ಎನ್ ಟಿ ಗೋಪಾಲೈಯಂಗಾರ್ರು — ೧ನೇ ಕ್ಲಾಸಿಗೆ ಮೆ॥ ಕೆ ಲಕ್ಷ್ಮೀನಾರಣಯ್ಯನವರು — ೨ನೇ ಕ್ಲಾಸಿಗೆ ಮೆ॥ ... ಹಿರಿಯಣ್ಣಯ್ಯನವರು ೩ನೇ ಕ್ಲಾಸಿಗೆ, ಜುಡಿಷಲ್ ಪ್ರೊಬೇಷನರ್ ಮೆ॥ ಎ ಕೆ ಶ್ರೀನಿವಾಸರಾಘವಾಚಾರ್ ೪ ನೇ ಕ್ಲಾಸ್ ಮುನ್ಸೀಫರಾಗಿ ನೇಮಿಸಲ್ಪಟ್ಟಿದಾರೆ

ಸೀನಿಯರ್ ಅ॥ ಕಮಿಷನರ್ ಮೆ॥ ಎ ಸುಬ್ರಹ್ಮಣ್ಯ ಐಯರವರು ಅ॥ ಶೆಟ್ಲ್‌ಮೆಂಟ್ ಕಮಿಷನರಾಗಿರುವವರೆಗೆ ಅ॥ ಕಮಿಷನರ್ ಮೆ॥ ಟಿ ಕೆ ಸುಂದರರಾಜ ಐಯಂಗಾರು ಮೈಸೂರು ಡಿವಿಜನ್ ಛಾರ್ಜನ್ನೂ ಪ್ರೊ॥ ಅ॥ ಕಮಿಷನರ್ ಮೆ॥ ಜೆ ಬಿ ಹೆಬ್ಲಿಕರ್ ಯವರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನೂ ವಹಿಸಿರತಕ್ಕದ್ದು

ಅ॥ ಶೆಟ್ಲ್‌ಮೆಂಟ್ ಕಮಿಷನರ್ ಮೆ॥ ಕೆ ಚಾಂದಿಯವರು ಸೀನಿಯರ್ ಅ॥ ಕಮಿಷನರ್ ಮೆ॥ ಕೆ ಶ್ರೀನಿವಾಸರಾಯರಿಂದ ಜೂಲೈ ತಾ ೯ ರಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಛಾರ್ಜನ್ನು ವಹಿಸಿಕೊಂಡರು

ಅ॥ ಕಮಿಷನರ್ ಮೆ॥ ಎ ವ್ಯಾಸರಾಯರು ಐಯರವರು ಶೆಟ್ಲ್‌ಮೆಂಟ್ ಕಮಿಷನರ್ ಮೆ॥ ಎಂ ಚೆಂಗೈಯ ಚೆಟ್ಟಿಯವರಿಂದ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಛಾರ್ಜನ್ನು ಜೂಲೈ ತಾ ೯ ರಲ್ಲಿ ವಹಿಸಿಕೊಂಡರು.

ಶ್ರೀಮನ್ಮಹಾರಾಜರವರು ಮೈಸೂರು ಲೋಕಲ್ ಸರ್ವಿಸ್ ರೆಜಿಮೆಂಟಿನ ಕಮಿಷನ್ ರ್‍ಯಾಂಕಿಯಲ್ಲಿ ದಫೇದಾರ್ ಗೋಪಾಲರಾಯರನ್ನು ದಫೇದಾರಿಯಿಂದ ೪ ನೇ ಗ್ರೇಡ್ ಜಮಾದಾರ್ ಟ್ರೂಪ್ ಕಮ್ಯಾಂಡರ್ ರ್‍ಯಾಂಕಿಗೆ ಬಡ್ತಿ ಮಾಡಿರುತ್ತಾರೆ

ಎಗ್ಸಿಕ್ಯೂಟಿವ್ ಇಂಜನಿಯರ್ ಮೆ॥ ವಿ ಐಯಸ್ವಾಮಿ ಐಯರವರಿಗೆ ಜೂಲೈ ತಾ ೩ ರಿಂದ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸೊರಬದ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ॥ ಜಿ ಮುದ್ದಪ್ಪನವರಿಗೆ ಕೊಟ್ಟಿದ್ದ ೧೩ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೆಂಟು ದಿನಗಳಿಗೆ ಜಾಸ್ತಿ ಮಾಡಿದೆ

ದಾದು ಎಂಬ ಮಹಾತ್ಮರ ಚರಿತ್ರೆ

ಹಿಂದೂ ದೇಶದ ಮತ ಪರಿಷ್ಕಾರಕರಲ್ಲಿ ಗೌತಮಬುದ್ಧನು ಪ್ರಥಮಸ್ಥಾನವನ್ನು ಹೊಂದಿರುವನೆಂದು ಎಲ್ಲರೂ ತಿಳಿದಿರುತ್ತಾರೆ ಈತನೇ ಬೌದ್ಧಮತ ಸ್ಥಾಪಕನು. ಈತನು ಕಾಲವಾಗಿ ಅನೇಕ ವರುಷಗಳಾದನಂತರ ಈ ದೇಶದಲ್ಲಿ ಇನ್ನೂ ಕೆಲವು ಮತಪರಿಷ್ಕಾರಕರು ಹುಟ್ಟಿದರು. ಬಂಗಾಳ ದೇಶದಲ್ಲಿ ಚೈತನ್ಯ ಎಂಬುವರೂ ಕಾಶಿಯಲ್ಲಿ ಕಬೀರರೂ ಪಂಜಾಬ್ ದೇಶದಲ್ಲಿ ನಾನಕ್ ಎಂಬುವರೂ ಆಲ್ವಾರ್ ಸಂಸ್ಥಾನದಲ್ಲಿ ಲಾಲ್‌ದಾಸರೂ ಜಯಪುರದಲ್ಲಿ ದಾದುಮಹಾತ್ಮರೂ ಮಹಾರಾಷ್ಟ್ರ ದೇಶದಲ್ಲಿ ತುಕಾರಾಮರೂ ಇವರೇ ಮೊದಲಾದ ಮಹಾತ್ಮರು ಕಾಣಿಸಿಕೊಂಡು ಹಿಂದೂ ದೇಶದ ಚರಿತ್ರೆಯಲ್ಲಿ ಪ್ರಸಿದ್ಧಿಯನ್ನು ಪಡೆದಿರುತ್ತಾರೆ. ಈ ಬಾತ್ಮಿಯಲ್ಲಿ ದಾದು ಎಂಬ ಮಹಾಪುರುಷರ ಚರಿತ್ರೆಯನ್ನು ಸಂಕ್ಷೇಪವಾಗಿ ವಿವರಿಸ ಬೇಕೆಂದಿರುತ್ತೇವೆ

ದಾದು ಎಂಬುವರು ಕ್ರಿ ಶ ೧೫೪೪ ರಲ್ಲಿ ಜನಿಸಿದರು. ಇವರು ಹುಟ್ಟಿದ ಊರು ಅಹಮದಾಬಾದು. ಇವರು ಹುಟ್ಟುವುದಕ್ಕೆ ಕೆಲವು ಕಾಲಕ್ಕೆ ಮುಂಚೆ ಉತ್ತರ ಹಿಂದೂ ದೇಶದಲ್ಲಿ ವಿಪರೀತವಾದ ಬದಲಾವಣೆಗಳಾಗುತ್ತಿದ್ದವು. ಅದೇ ಕಾಲದಲ್ಲಿ ಯೂರೋಪ್ ಖಂಡದಲ್ಲಿಯೂ ಸಹ ಪ್ರಾಟೆಸ್ಟೆಂಟರೆಂಬ ಒಂದು ಹೊಸ ಪಂಗಡದ ಕ್ರೈಸ್ತರೆದ್ದು ಮತಾಚರಣೆಗಳಲ್ಲಿ ಅನೇಕ ನೂತನವಾದ ಬದಲಾವಣೆಗಳನ್ನು ತಂದರು. ಮತಪರಿಷ್ಕಾರಕರಿಂದ ನಮ್ಮ ದೇಶದಲ್ಲಿ ಹಾನಿಯನ್ನುಂಟುಮಾಡುತ್ತಿದ್ದ ಅನೇಕ ದುಷ್ಟ ಪದ್ಧತಿಗಳು ತೊಲಗಿ ಹೋದುದಲ್ಲದೆ ಸದಾಚರಣೆಯು ನೆಲಗೊಳ್ಳುವುದಕ್ಕೆ ಅನುಕೂಲವಾಯಿತು. ದಾದು ಮಹಾತ್ಮರು ಬನಿ ಎಂಬ ಪುಸ್ತಕವನ್ನು ಬರೆದಿರುತ್ತಾರೆಂದು ಕಂಡು ಬರುತ್ತದೆ. ಈ ಪುಸ್ತಕದಲ್ಲಿ ಐನೂರು ಪದ್ಯಗಳಿರುತ್ತವೆ. ಇವರ ಜೀವಮಾನ ಚರಿತ್ರೆಯನ್ನು ಜ್ಞಾನಗೋಪಾಲನೆಂಬವನು ಬರೆದಿರುವನು. ದಾದುಯವರ ತಂದೆಯ ಹೆಸರು ಲೋಧಿರಾಮ್. ಇವರ ಜನನದ ವಿಷಯ ಅನೇಕ ಕಟ್ಟುಕಥೆಗಳು ರೂಢಿಯಲ್ಲಿರುತ್ತವೆ. ಇವರು ಕೂಸಾಗಿರುವಾಗ ಸಮುದ್ರದ ಮೇಲೆ ತೇಲಿಕೊಂಡು ಬಂದರೆಂತಲೂ ಇವರಿಗೆ ಹನ್ನೊಂದು ವರುಷವಾದಾಗ್ಗೆ ಬುದ್ಧ ಎಂಬ ವೃದ್ಧಾಪ್ಯರು ಇವರ ಹತ್ತಿರಕ್ಕೆ ಬಂದು ಇವರ ಬಾಯಿಯಲ್ಲಿ ವೀಳ್ಯವನ್ನಿಟ್ಟು ಅಕಸ್ಮಾತ್ತಾಗಿ ಮಾಯವಾದರೆಂತಲೂ ಜನರು ಆಡಿಕೊಳ್ಳುತ್ತಾರೆ

ದಾದುಯವರು ಬ್ರಾಹ್ಮಣಜಾತಿಗೆ ಸೇರಿದ್ದರು. ಇವರ ತಂದೆಯು ವ್ಯಾಪಾರ ಮಾಡುತ್ತಾ ಇರುವಲ್ಲಿ ಇವರ ಮಗನಾದ ದಾದುವಿಗೆ ತನ್ನ ತಂದೆಯ ಉದ್ಯೋಗದಲ್ಲಿ ಕೊಂಚವೂ ಅಭಿರುಚಿ ಇರಲಿಲ್ಲ. ಭಿಕ್ಷಾರ್ಥವಾಗಿ ಮನೆಗೆ ಬಂದ ಸಾಧುಗಳಿಗೆ ದಾದುವು ಧಾರಾಳವಾಗಿ ಧರ್ಮ ಕೊಡುತ್ತಿದ್ದರು. ಇವರ ಉದಾರಗುಣವನ್ನು ಕೃಪಣನಾದ ತಂದೆಯು ನೋಡಿ ಇವರನ್ನು ಮನೆಯಿಂದ ಹೊರಡಿಸಿ ಬಿಟ್ಟದ್ದನು. ಹೀಗಿರುವಲ್ಲಿ ಇವರಿಗೆ ಒಂದು ಆಕಾಶವಾಣಿಯಾಯಿತಂತೆ. ಆ ವಾಣಿಯು ದಾದುವಿಗೆ ದಾದುವೇ ನೀನು ಆರಿಸಲ್ಪಟ್ಟವನು. ನಿನ್ನನ್ನು ಲೋಕವೆಲ್ಲಾ ತಿಳಿಯಲಿ ಎಂಬುದಾಗಿ ನುಡಿಯಿತೆಂದು ಇವರ ಚರಿತ್ರೆಯನ್ನು ಬರೆದವನು ತಿಳಿಸುತ್ತಾನೆ. ಇದರ ನಿಜಸ್ವರೂಪ ಹೇಗಾದರೂ ಇರಲಿ. ಇವರಂತೂ ಬಹುಕಾಲದವರೆಗೂ ಧ್ಯಾನದಲ್ಲಿಯೂ ತಮ್ಮ ಕಾಲವನ್ನು ಕಳೆಯುವುದಕ್ಕೆ ತೊಡಗಿದರು. ಇವರ ಅನ್ನವಸ್ತ್ರಾದಿಗಳ ವಿಷಯ ಜನರು ಸಹಾಯ ಮಾಡುತ್ತಿದ್ದರು. ಇವರಿಗೆ ಇಪ್ಪತ್ತೊಂಬತ್ತು ವಯಸ್ಸು ಆಗುವ ತನಕ ಅಹಮದಾಬಾದಿನಲ್ಲಿಯೇ ಕಾಲವನ್ನು ಕಳೆದರು.

ಅವರು ಹಿಂದೂಗಳ ಮತ ಮುಸಲ್ಮಾನರ ಮತ ಗ್ರಂಥಗಳನ್ನು ಚೆನ್ನಾಗಿ ಓದಿ ಅವುಗಳಿಂದ ಮನಸ್ಸಿಗೆ ಪರಮಶಾಂತಿ ಲಭಿಸಲಾರದೆಂದು ತಿಳಿದುಕೊಂಡದರಿಂದ ಅವರ ಚರಿತ್ರೆಯಿಂದ ಕಂಡು ಬರುತ್ತದೆ. ಪೂಜಾರಿಗಳ ಮತ್ತು ಗುರುಗಳ ಕಾಪಿ ಒಟ್ಟಿಗೆ ಅವರ ಗೌರವಿಸಲಿಲ್ಲ. ಏಕೋ ಭಗವಂತನ ಆರಾಧನೆಯೇ ಸತ್ಯವೆಂತಲೂ ವಿಗ್ರಹಾರಾಧನೆಯು ಪಾಪವೆಂತಲೂ ಬೋಧಿಸ ತೊಡಗಿದರು. ತೀರ್ಥಯಾತ್ರೆಗಳಿಂದಲೂ ಉಪವಾಸಗಳಿಂದಲೂ ಆತ್ಮಕ್ಕೆ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ತಿಳಿಸುತ್ತಿದ್ದರು. ಇವರ ನೂತನ ಬೋಧನೆಯನ್ನು ಕೇಳಿ ಹಿಂದೂಗಳೂ ಮುಸಲ್ಮಾನರೂ ಇವರನ್ನು ದ್ವೇಷಿಸುವುದಕ್ಕೆ ತೊಡಗಿದರು. ಹೀಗಿದ್ದಾಗ್ಯೂ ಜನರು ಇವರ ಬೋಧನೆಗೆ ಮೆಚ್ಚಲು ಬ್ರಾಹ್ಮಣರು ಕೋಪೋದ್ರೇಕರಾಗಿ ಯಾರಾದರೂ ದಾದುಯವರ ಹತ್ತಿರಕ್ಕೆ ಹೋದದ್ದೇಯಾದರೆ ಅವರಿಗೆ ಬಹಿಷ್ಕಾರದ ಶಿಕ್ಷೆಯಾಗ ಬೇಕೆಂದು ಬೆದರಿಸುತ್ತಿದ್ದರು.

ಕೆಲವು ವರುಷಗಳಾದ ನಂತರ ದಾದುಯವರ ಜಯಪುರ ಸಂಸ್ಥಾನಕ್ಕೆ ಬಂದರು. ಆಗ್ಗೆ ಜಯಪುರ ಸಂಸ್ಥಾನಕ್ಕೆ ಭಗವಂತದಾಸರು ರಾಜರಾಗಿದ್ದರು. ಇವರು ದಾದುಯವರನ್ನು ತಮ್ಮರಮನೆಗೆ ಕರೆಯಿಸಿಕೊಂಡು ವಿಶೇಷವಾದ ಬಹುಮಾನಗಳನ್ನು ಕೊಡಲು ದಾದುಯವರು ಅವುಗಳನ್ನು ಅಂಗೀಕರಿಸಲು ಒಪ್ಪಲಿಲ್ಲ. ಅವರು ಕಷ್ಟದಿಂದ ನೇಯುವ ಉದ್ಯೋಗವನ್ನು ಮಾಡಿ ಜೀವಿಸುತ್ತಿದ್ದರು. ಇವರ ಕೀರ್ತಿಯನ್ನು ಬೇರೆ ಬೇರೆ ದೇಶದ ಜನರು ಕೇಳಿ ಇವರ ಶಿಷ್ಯವರ್ಗಕ್ಕೆ ಸೇರಲು ತೊಡಗಿದರು

ಆಗಿನ ಕಾಲದಲ್ಲಿ ಮೊಗಲಾಯಿ ರಾಜ್ಯವನ್ನು ಅಕ್ಬರ್ ಚಕ್ರವರ್ತಿಯು ಆಳುತ್ತಿದ್ದನು. ಅಕ್ಬರನು ಸಹ ದಾದುಯವರ ಕೀರ್ತಿಯನ್ನು ಕೇಳಿ ಅವರನ್ನು ದೇಹಲಿಗೆ ಕರೆಯಿಸಿಕೊಂಡು ಅವರ ಸಂಗಡ ಮತಸಂಭಾಷಣೆ ಮಾಡುತ್ತಿದ್ದನಂತೆ

ದಾದುಯವರ ಜೀವಮಾನ ಕಾಲದಲ್ಲಿ ಅವರ ಶಿಷ್ಯವರ್ಗಕ್ಕೆ ಸುಮಾರು ೧೫೨ ಮಂದಿ ಸೇರಿದ್ದರು. ಬನಿಗ್ರಂಥವನ್ನು ದಾದುಯವರೇ ಬರೆದರೆಂದು ಕೆಲವರು ನಂಬುತ್ತಾರೆ. ಮತ್ತೆ ಕೆಲವರು ಅವರ ಬೋಧನೆಯನ್ನೆಲ್ಲಾ ಅವರ ಶಿಷ್ಯರು ಸಂಗ್ರಹಿಸಿ ಮೇರೆ ಹೇಳಿದ ಗ್ರಂಥದಲ್ಲಿ ಬರೆದಿರುವರೆಂದು ಹೇಳುವರು. ಬನಿಗ್ರಂಥದಲ್ಲಿ ಇಪ್ಪತ್ತು ಸಾವಿರ ಪಂಕ್ತಿಗಳಿರುವವು. ಇವುಗಳು ಮೂವತ್ತೇಳು ಅಧ್ಯಾಯಗಳಲ್ಲಿ ಅಡಗಿರುತ್ತವೆ. ಇವು ಪರಮಗುರು, ಸ್ಮರಣೆ, ಮನಸ್ಸು, ಜನನ, ಮರಣ, ಸತ್ಯ, ಸಾವು, ಜಗತ್ತು ಉಪಾಖ್ಯ ಇವುಗಳ ವಿಷಯ ತಿಳಿಸುತ್ತವೆ. ದಾದುಯವರ ಬೋಧನಾಸಾರಾಂಶವನ್ನು ಬರುವ ವಾರದ ಸಂಚಿಕೆಯಲ್ಲಿ ಪ್ರಕಟಿಸಬೇಕೆಂದುದ್ದೇಶ ಪಟ್ಟಿರುತ್ತೇವೆ

ಮೆ॥ ತಿಲಕರ ಮೊಕದ್ದಮೆಯು

ಮೆ॥ ತಿಲಕರ ಮೇಲೆ ಬಂದ ರಾಜದ್ರೋಹದ ಮೊಕದ್ದಮೆಯನ್ನು ಬೊಂಬಾಯಿ ಹೈ ಕೋರ್ಟಿನ ಜಡ್ಜರಾದ ಮೆ॥ ದಾವರ್ ಯವರ ದರ್ಯಾಪ್ತು ಮಾಡಿ, ಪಂಚಾಯಿತರ ಅಭಿಪ್ರಾಯವನ್ನು ತಿಳಿದ ಮೇಲೆ ಜಡ್ಜಿಯವರು ಮೆ॥ ತಿಲಕರಿಗೆ ಶಿಕ್ಷೆಯನ್ನು ವಿಧಿಸುವುದಕ್ಕಿಂತ ಮುಂಚೆ ಅವರನ್ನು ಕುರಿತು ಕೆಲವು ಮಾತುಗಳನ್ನು ಹೇಳಿದರು. ಏನೆಂದರೆ.

ಬಾಲ ಗಂಗಾಧರ ತಿಲಕರೇ, — ಈಗ ನಾನು ನಿಮಗೆ ಶಿಕ್ಷೆ ವಿಧಿಸಬೇಕಾದದ್ದು ನನ್ನ ಕರ್ತವ್ಯವಾಗಿದ್ದರೂ ಈ ಭಾಗದಲ್ಲಿ ನಾನು ವ್ಯಸನಪಡುತ್ತೇನೆ. ನಿಮ್ಮನ್ನು ಈ ಸ್ಥಿತಿಯಲ್ಲಿ ನೋಡುವುದಕ್ಕೆ ನನಗೆ ತುಂಬಾ ಸಂಕಟವಾಗುತ್ತದೆ. ನೀವು ಬಹಳ ಸಮರ್ಥರು, ಬುದ್ಧಿಶಾಲಿಗಳು, ಜನದಲ್ಲಿ ವಿಶೇಷ ಗೌರವ ಪ್ರೀತಿ ವಿಶ್ವಾಸಗಳನ್ನು ಪಡೆದಿರತಕ್ಕವರು ಎನ್ನುವುದಕ್ಕೆ ಸಂಶಯವಿಲ್ಲ. ಇಂಥಾ ನಿಮ್ಮ ಶಕ್ತಿ ಸಾಮರ್ಥ್ಯಾದಿಗಳನ್ನು ನಿಮ್ಮ ದೇಶದ ಹಿತಕ್ಕಾಗಿ ಪ್ರಯೋಗಮಾಡಿದ್ದರೆ ಅದು ಈ ದೇಶದ ಪ್ರಜೆಗಳ ಸುಖಸಂತೋಷಾದಿಗಳನ್ನು ವೃದ್ಧಿಗೆ ತರುವುದಾಗಿತ್ತು. ಹತ್ತು ವರುಷಗಳ ಹಿಂದೆ ನಿಮಗೆ ಶಿಕ್ಷೆಯಾಗಿತ್ತು. ಆ ಕೋರ್ಟಿನವರು ನಿಮಗೆ ಬಹಳ ಸುಲಭವಾದ ಶಿಕ್ಷೆಯನ್ನು ವಿಧಿಸಿದ್ದರು. ಗತಿಸಿದ ಚಕ್ರವರ್ತಿನಿಯವರು ಅದಕ್ಕಿಂತಲೂ ಹೆಚ್ಚಾಗಿ ನಿಮ್ಮ ವಿಷಯದಲ್ಲಿ ದಯೆಯನ್ನು ತೋರಿಸಿದ್ದರು. ನೀವು ಒಂದು ವರುಷ ಆರು ತಿಂಗಳ ವರೆಗೆ ... ಅನುಭವಿಸಿದ ಮೇಲೆ ನೀವು ... ನಿಮ್ಮ ಬರವಣಿಗೆಯ ವಿಷಯದಲ್ಲಿ ತುಂಬಾ ಎಚ್ಚರಿಕೆಯಾಗಿರ ಬೇಕೆಂದು ಒಪ್ಪಿಕೊಂಡದ್ದರಿಂದ ಗವರ್ನಮೆಂಟಿನವರು ಉಳಿದ ಶಿಕ್ಷೆಯನ್ನು ಕ್ಷಮಿಸಿಬಿಟ್ಟರು. ರಾಜಕೀಯ ವಿಷಯಗಳನ್ನು ಹಿಡಿದು ಹೊರಡುವ ದಕ್ಕೆ ನೀವು ಪ್ರಯೋಗಿಸಿರುವ ಬರವಣಿಗೆಗಳು ಸಹಜವಾದ ಆಯುಧಗಳೆಂದು ಹೇಳುವಂಥವರ ಮನಸ್ಸು ಕೆಟ್ಟುಹೋದದ್ದಾಗಿಯೂ, ಅತ್ಯಂತ ವಿಕಾರಹೊಂದಿದ್ದಾಗಿಯೂ ಇರಬೇಕೆಂದು ನನಗೆ ತೋರುತ್ತದೆ. ನಿಮ್ಮ ಬರವಣಿಗೆಗಳು ರಾಜದ್ರೋಹದಿಂದ ತುಂಬಿವೆ, ಕ್ರೂರಕೃತ್ಯಗಳನ್ನು ಉಕ್ಕಳಿಸುತ್ತಿವೆ, ಕೊಲೆಗಳನ್ನು ಮೆಚ್ಚಿಕೊಂಡಂತೆ ಹೇಳುತ್ತವೆ, ಸಿಡಿಮದ್ದಿನ ಗುಂಡುಗಳನ್ನು ಪ್ರಯೋಗಿಸಿದ ಹೇಡಿತನವುಳ್ಳ ದ್ರೋಹಕರವಾದ ಕೊಲೆಗಳನ್ನು ನೀವು ಮೆಚ್ಚುವದಲ್ಲದೆ, ಸಿಡಿಮದ್ದಿನ ಗುಂಡುಗಳು ಹಿಂದುಸ್ಥಾನಕ್ಕೆ ಬಂದದ್ದರಿಂದ ಈ ರಾಷ್ಟ್ರಕ್ಕೆ ಒಳ್ಳೇದೇ ಆಯಿತೆಂದು ನೀವು ಸಂತೋಷಪಡುವವರಾಗಿದ್ದೀರಿ

ನಾನು ಮೊದಲು ಹೇಳಿದಂತೆ ಸಿಡಿಮದ್ದಿನ ಗುಂಡುಗಳ ಪ್ರಯೋಗದಿಂದ ರಾಜಕೀಯ ನ್ಯಾಯಗಳನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಪಡುವುದು ... ಮತ್ತು ... ವಿಕಾರ ಹೊಂದಿದವರ ಕೃತ್ಯವಲ್ಲದೆ ಮತ್ತೆ ... ನೀವು ಬರೆದಿರತಕ್ಕ ಬರವಣಿಗೆಗಳು ನ್ಯಾಯವಾದ ಬರವಣಿಗೆಗಳು ... ವಿಕಾರ ಹೊಂದಿದವರಲ್ಲದೆ ... ರಾಜ್ಯಭಾರ ... ನಿಮಗಿರುವ ದ್ವೇಷವೂ ... ವರುಷಗಳಿಂದ ನಿಮ್ಮನ್ನು ಬಿಡಲಿಲ್ಲ. ಈ ಮೊಕದ್ದಮೆ ... ಸಂದರ್ಭದ ... ನೀವು ಹೇಳುತ್ತೀರಿ. ಆದರೆ ನಿಜವಾಗಿ ನೀವು ... ಉಲ್ಲಂಘಿಸಿ ... ಬಾತ್ಮಿಗಳನ್ನು ಬರೆದಿರುವಿರಿ ... ಸಿಡಿಮದ್ದಿನ ಗುಂಡಿನ ... ನೀವು ಆ ಗುಂಡುಗಳ ವಿಚಾರವನ್ನು ಕುರಿತು ಅದೇ ರಾಜಕೀಯ ... ಗಳನ್ನು ಬಿಡಲಾಯಿಸುವುದರಲ್ಲಿ ... ಬರೆದಿರುತ್ತೀರಿ. ಇಂಥಾ ಪತ್ರಿಕಾ ಬರವಣಿಗೆಯು ದೇಶಕ್ಕೆ ಅತ್ಯಂತ ಕೇಡು ತರತಕ್ಕದ್ದು ... ನಿಮಗೆ ಶಿಕ್ಷೆ ವಿಧಿಸುವುದಕ್ಕೆ ನಾನು ಬಹಳ ವ್ಯಥೆಪಡುತ್ತೇನೆ. ಪಂಚಾಯಿತರು ನಿಮ್ಮನ್ನು ಅಪರಾಧಿ ಎಂಬುದಾಗಿ ಅಭಿಪ್ರಾಯವನ್ನು ಹೇಳಿದರೆ ನಾನು ನಿಮಗೆ ಯಾವ ರೀತಿಯಾದ ಶಿಕ್ಷೆಯನ್ನು ವಿಧಿಸಲಿ ಎಂದು ಬಹಳ ಚೆನ್ನಾಗಿ ಪೂರ್ವಕವಾಗಿ ಆಲೋಚಿಸುತ್ತಿದ್ದೆನು. ಈಗ ನಾನು ನಿಮಗೆ ವಿಧಿಸುವ ಶಿಕ್ಷೆಯನ್ನು ಎಲ್ಲರೂ ತುಂಬಾ ಸುಲಭವಾದದ್ದು ಎನ್ನುತ್ತಾರೆಂದು ನೆನೆಯುತ್ತೇನೆ. ನನ್ನ ನ್ಯಾಯವಾದ ಕರ್ತವ್ಯವನ್ನು ನಿಮ್ಮ ಅಪರಾಧದ ತೀವ್ರತೆಯನ್ನು ಯೋಚನೆಮಾಡಲಿಲ್ಲ. ಈಗ ನಾನು ಹೇಳುವ ಶಿಕ್ಷೆಗಿಂತ ಕಡಮೆಯಾದ ಶಿಕ್ಷೆಯನ್ನು ಹೇಳುವುದು ಒಪ್ಪತಕ್ಕದ್ದಾಗಿರಲಾರದು. ನಿಮ್ಮ ಸ್ಥಿತಿಯನ್ನು ಈಗಿನ ಸಂದರ್ಭವನ್ನು ನೋಡಿದರೆ ನಾನು ಹೇಳುವ ಶಿಕ್ಷೆಯು ಧರ್ಮಕ್ಕೂ ನ್ಯಾಯಕ್ಕೂ ಒಪ್ಪಿತವಾಗಿದ್ದಿತೆಂದು ತೋರುತ್ತದೆ. ಮೊದಲನೆಯ ಅಪರಾಧಕ್ಕೆ ನಿಮ್ಮನ್ನು ಜೀವಾವಧಿ ಟ್ರಾನ್ಸ್‌ಪೋರ್ಟ್ ಸಜಾ ಶಿಕ್ಷೆಗೆ ಗುರಿಮಾಡ ಬಹುದಾಗಿದೆ. ನಿಮ್ಮನ್ನು ನೀರಿನ ಮೇಲೆ ಕಳುಹಬೇಕೇ ಅಥವಾ ಸಜಾ ಹಾಕಬೇಕೇ ಎಂದು ಯೋಚನೆ ಮಾಡಿದೆನು. ನಿಮ್ಮ ವಯಸ್ಸನ್ನೂ ಸಂದರ್ಭವನ್ನೂ ಯೋಚಿಸಿನರೆ, ಯಾವ ದೇಶವನ್ನು ನೀವು ಪ್ರೀತಿಸುತ್ತಿರುವಿರೆಂದು ಹೇಳುವಿರೋ ಅದೇ ದೇಶದ ಹಿತಕ್ಕಾಗಿಯೂ ಪ್ರಜಾ ನೆಮ್ಮದಿಗಾಗಿಯೂ, ನೀವು ಕೆಲವು ಕಾಲ ಹೊರಗಿದ್ದು ಬರುವುದು ಒಳ್ಳೆಯದೆಂದು ನನಗೆ ತೋರಿದೆ. ಆದ್ದರಿಂದ ನಿಮಗೆ ದ್ವೀಪಾಂತರ ಶಿಕ್ಷೆಯನ್ನು ಜೀವಾವಧಿಯಲ್ಲ, ಕೆಲವು ಕಾಲದ ವರೆಗೂ ವಿಧಿಸಬೇಕಾದಾಗಿದೆ. ನಿಮ್ಮ ಮೇಲೆ ಹೊತ್ತಿರುವ ಎರಡು ಅಪರಾಧಗಳಿಗೂ

ತಲಾ ಮೂರು ವರುಷದಂತೆ ನಿಮಗೆ ದ್ವೀಪಾಂತರಶಿಕ್ಷೆಯನ್ನು ವಿಧಿಸಿದೇನೆ, ಅಂದರೆ, ನೀವು ಆರು ವರುಷ ಟ್ರಾಪ್ ಸಜಾ ಅನುಭವಿಸಬೇಕು. ಮೂರನೇ ಅಪರಾಧಕ್ಕೆ ಟ್ರಾಪ್ ಸಜಾ ವಿಧಿಸಲಾಗದು; ಜುಲ್ಮಾನೆಯನ್ನೇ ಸಹ ನನಗೆ ವಿಧಿಸಬೇಕು. ಆದರೂ ನಿಮಗೆ ಇನ್ನು ಹೆಚ್ಚಾದ ಸಜಾ ಶಿಕ್ಷೆಯನ್ನು ವಿಧಿಸುವುದಿಲ್ಲ. ಒಂದು ಸಾವಿರ ರೂಪಾಯಿ ಜುಲ್ಮಾನೆಯನ್ನು ನಿಮಗೆ ಹಾಕಿರುತ್ತೇನೆ ಮತ್ತು ನಿಮ್ಮ ಮೇಲೆ ಬಂದಿರುವ ನಾಲ್ಕನೇ ಅಪರಾಧದ ವಿಷಯದಲ್ಲಿ ನಿಮ್ಮನ್ನು ಖುಲಾಸ್ ಮಾಡಿರುತ್ತೇನೆ ಎಂಬುವುದೇ

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್.

ಕರೆಸ್‌ಪಾಂಡೆನ್ಸ್.

ತುಂಕೂರಿನಿಂದ ಕುಣಿಗಲ್ ಮಾರ್ಗವಾಗಿ ಮೈಸೂರಿಗೆ ರೈಲ್ ಆಗಬೇಕು.

ಅಯ್ಯಾ,

ನಮ್ಮ ರಾಜಧಾನಿಯಾದ ಮೈಸೂರು ಪಟ್ಟಣಕ್ಕೆ ಇದುವರೆಗೂ ಒಂದೇ ಒಂದು ರೈಲ್ ಮಾರ್ಗವು ಬೆಂಗಳೂರು ಕಡೆಯಿಂದ ಇರುವುದು ಸರಿಯಷ್ಟೆ. ಈಗ ಇನ್ನೊಂದು ಮಾರ್ಗವು ಅರಸೀಕೆರೆಯಿಂದ ಹಾಸನ, ಹೊಳೆನರಸೀಪುರ ಎಡತೊರೆ—ಈ ಮಾರ್ಗವಾಗಿ ತಯಾರಾಗುವುದರಲ್ಲಿದೆ. ಅದರಂತೆ ನಮ್ಮ ಸರ್ಕಾರದವರು ತುಂಕೂರು ಕಡೆಯಿಂದ ಕುಣಿಗಲು, ಎಡಿಯೂರು, ನೆಲ್ಲಿಗೆರೆ, ನಾಗಮಂಗಲ, ಮೇಲುಕೋಟೆ— ಇವುಗಳ ಮಾರ್ಗವಾಗಿ ಫ್ರೆಂಚ್‌ರಾಕ್ (ಹಿರೋಡೆ), ಸ್ಟೇಷನ್ ವರೆಗೆ ಒಂದು ರೈಲ್ ರಸ್ತೆಯನ್ನು ಮಾಡಿಸಿದಲ್ಲಿ ವ್ಯಾಪಾರಕ್ಕೂ, ಪ್ರಯಾಣಿಕರಿಗೂ ಅತ್ಯಂತ ಸೌಕರ್ಯ ಉಂಟಾಗುವುದಲ್ಲದೆ ಮೇಲ್ಕಂಡ ಕ್ಷೇತ್ರಗಳು ಮೊದಲಾದ ಸ್ಥಳಗಳೆಲ್ಲವೂ ಈ ದೇಶದಲ್ಲಿ ತುಂಬಾ ಪ್ರಸಿದ್ಧವಾದವುಗಳಾಗಿರುವುದರಿಂದ ಈ ಮಾರ್ಗವಾಗಿ ರೈಲ್ ಆಗತಕ್ಕದ್ದು ಅತ್ಯಾವಶ್ಯಕವಾಗಿರುತ್ತದೆ ಮತ್ತು ಈ ಮಾರ್ಗದಲ್ಲಿ ಅದು ರಸ್ತು ಬಹಳ ನಡೆದು ಸರ್ಕಾರಕ್ಕೆ ತುಂಬಾ ಫಾಯಿದೆ ಉಂಟು.

ದೇಶಾಭಿಮಾನಿ

ಮ್ಯುನಿಸಿಪಲ್ ಮಂಡಲಿಯ ಬಾಲಕರ ವಿದ್ಯಾಭ್ಯಾಸವು

ಅಯ್ಯಾ,

ಬೆಂಗಳೂರು ಸಿಟಿಯಲ್ಲಿ ಪೇಟೆ ಸ್ಕೂಲು ವೆಂಕಟಾಚಲ... ಮುನಿಸಿಪಲ್ ಮಂಡಳಿ ಈ ವಿದ್ಯಾರ್ಥಿಗಳಿಗೆ ... ಅಂದರೆ, ಅನೇಕ ಬಡಗಳನ್ನು ನಾನಕ್ಕೆ ಸ್ಥಳವನ್ನು ಅನುಕೂಲಿಸಿ, ಸ್ಕೂಲ್ ಫೀ ವಗೈರೆ ಕೊಟ್ಟು ಅವರಿಗೆ ವಿದ್ಯಾಭ್ಯಾಸ ಮಾಡಿಸುವದಕ್ಕಾಗಿ ನಾಲ್ಕತ್ತು ಸಾವಿರ ರೂಪಾಯಿಗಳನ್ನು ಇದೇ ಮಂಡಳಿಯು ಕೆಲವು ದೊಡ್ಡ ಮನುಷ್ಯರನ್ನು ಟ್ರಸ್ಟಿಗಳನ್ನಾಗಿ ಮಾಡಿ ಅವರ ವಶಕ್ಕೆ ಕೊಟ್ಟು ಇರುತ್ತಾರೆ. ಈ ವಿಷಯದಲ್ಲಿ ಆ ಮುನಿಸಿಪಲ್ ಮಂಡಳಿಯ ವರುಷ ... ಮಾಟಂಗ... ಮೈಸೂರು ಸೀಮೆಯಲ್ಲಿರತಕ್ಕ ಸ್ಕೂಲುಗಳಲ್ಲಿ ಎಷ್ಟು ಮುನಿಸಿಪಲ್ ಹುಡುಗರು ವಿದ್ಯಾಭ್ಯಾಸ ಮಾಡುತ್ತಾರೆ ಮತ್ತು ಬೆಂಗಳೂರಲ್ಲಿ ... ಕೊಟ್ಟಲ್ಲಿ ಎಷ್ಟು ವಿದ್ಯಾರ್ಥಿಗಳು ಬರಲು ಇಷ್ಟವುಳ್ಳವರಾಗಿದಾರೆ ಎಂಬುವ ಸಂಗತಿಯನ್ನು ತಿಳಿದುಕೊಳ್ಳುವದಕ್ಕಾಗಿ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರನ್ನು ಬರೆ ಮೂಲಕ ಕೇಳಿದಾರೆ.

ಬೆಂಗಳೂರು, ... ರಾಮಚಂದ್ರರಾವ್ ಸಿಂಧೆ.

...ನೇ ಜುಲೈ, ೦೮

ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಪ್ರದರ್ಶನವು

ಅಯ್ಯಾ,

ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖಾ ... ಜನರಲ್ ಸಾಹೇಬರವರ ... ನೇ ಮಾರ್ಚಿ ... ನೇ ನಂಬರ್ ಹುಕುಂ ಅನುಸಾರ 'ಈ ವರ್ಷ, ಅಂದರೆ, ಕಳೆದ ವರ್ಷ ದಸರಾದಲ್ಲಿ ಮೈಸೂರಿನಲ್ಲಿ ... ಆಗಾಯಿತು. ... ವರೆಗೆ ಒಂದು ವಾರ ಪುರಭಾರ ಜ್ಯೂಬಿಲಿ ಕಟ್ಟಡದಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವಸ್ತುಪ್ರದರ್ಶನವು ನಡೆಯುತ್ತದೆ. ಎಲ್ಲಾ ಸ್ಕೂಲು ಮಾಸ್ತರುಗಳೂ ಸದರಿ ಪ್ರದರ್ಶನವನ್ನು ನೋಡುವ ಸಲುವಾಗಿ ಮೈಸೂರಿಗೆ ಹೋಗಬೇಕು. ಇದಕ್ಕಾಗಿ ದಸರಾ ರಜಾವನ್ನು ಈ ವಾರ... ಆಗಾಯಿತು. ... ವರೆಗೆ ಕೊಟ್ಟಿರುತ್ತೆ' ಎಂಬುದಾಗಿ ಎಲ್ಲಾ ಸ್ಕೂಲ್ ಮಾಸ್ತರುಗಳಿಗೆ ಡೆಪ್ಯುಟಿ ಇನ್ಸ್‌ಪೆಕ್ಟರ್ ಸಾಹೇಬರವರ ಆಫೀಸಿನಿಂದ ಹುಕುಂ ಸೇರಿದಂತೆಯೂ, ಸದರಿ ಹುಕುಂ ಅನೇಕ ... ಸ್ಕೂಲ್ ಮಾಸ್ತರುಗಳಿಗೆ ಸಕಾಲಕ್ಕೆ ಪೋಸ್ಟ್ ಮೂಲಕ ಬಾರದೆಯಾಗದೆ ಕ್ಲಪ್ತವಾದ ಕಾಲವು ಮೀರಿದ ನಂತರ ಬಾವತಿಯಾದಂತೆಯೂ ತಿಳಿಯಬರುತ್ತದೆ.

ಆಗ ನಡೆದ ಸದರಿ ಪ್ರದರ್ಶನದ ಫಲವನ್ನು ಕೇಳಬೇಕೆಂದು ಹೋಬಳಿ ಸ್ಕೂಲ್ ಮಾಸ್ತರುಗಳು ... ತ್ವರೆಯಿಂದ ... ದವನ್ನು ಕಂಡೆನು. ಅದ್ದರಿಂದ ಆಗ ನಡೆಯುತ್ತಿದ್ದ ... ನೇ ಸಾಲಿನಲ್ಲಿ ಆ ಪ್ರದರ್ಶನವು ನಡೆಯತಕ್ಕದ್ದಿದ್ದು, ಎಲ್ಲಾ ಸ್ಕೂಲು ಮಾಸ್ತರುಗಳೂ ನೋಡುವ ... ತಕ್ಕದ್ದಾಗಿದ್ದರೆ ಕ್ಲಪ್ತ ಕಾಲಕ್ಕೆ ಕೆಲವು ದಿವಸಗಳ ... ಗಿರುವ ಈ ಸಂಬಂಧಪಟ್ಟ ... ವನ್ನು ವಿದ್ಯಾಭ್ಯಾಸದ ಇಲಾಖಾ

ಖಾವಂದರವರು ದಯಪಾಲಿಸಿ ಕಾಪಾಡುವರಾಗಿ ನಂಬಿರುತ್ತೇನೆ. ಈ ಪ್ರಕಾರ ಹುಕುಂ ದಯಪಾಲಿಸಿದಲ್ಲಿ ಹೋಗಲು ಇಷ್ಟವುಳ್ಳ ಮಾಸ್ತರುಗಳು ಖರ್ಚಿನ ಬಗ್ಗೆ ಹಣವಿಡುವ ತರದೂದು ಇಟ್ಟುಕೊಳ್ಳಲು ಅನುಕೂಲ ಉಂಟುಮಾಡಿಕೊಟ್ಟಂತಾಗುವುದೆಂದು ಪ್ರಾರ್ಥಿಸುತ್ತೇನೆ.

ವೀರಪ್ಪಗೌಡ, ಪಟೇಲ್

ದಾವಣಗೆರೆಯ ಅಮಲ್ದಾರರು

ಅಯ್ಯಾ,

ಈ ತಾಲ್ಲೂಕಿನಲ್ಲಿ ತಕ್ಕ ಮಟ್ಟಿಗೂ ಮಳೆಯೂ ಆಗಿ ರೈತರು ಹೊಲಗಳನ್ನು ಬಿತ್ತುತ್ತಾ ಇದಾರೆ. ಧಾಣಿ ಮಾಸಿಗಳು ತಕ್ಕ ಮಟ್ಟಿಗೂ ಇಳಿದಿದೆ. ಇಲ್ಲಿನ ಮುನಿಸಿಪಲ್ ಕೆಲಸವು ತಕ್ಕ ಮಟ್ಟಿಗೂ ಚೆನ್ನಾಗಿ ನಡೆಯುತ್ತದೆ.

ಆದರೆ ಈ ತಾಲ್ಲೂಕಿನ ಅಮಲ್ದಾರರಾದ ಮಿ॥ ನಾರಾಯಣಸ್ವಾಮಿ ಮೊದಲಿಯಾರರನ್ನು ಮುಂಜರಾಬಾದಿಗೆ ವರ್ಗ ಮಾಡಿದಾರೆಂಬುವ ಸಂಗತಿಯನ್ನು ಇಲ್ಲಿನ ಟೌನಿನ ಜನರು ಮತ್ತು ಗ್ರಾಮಸ್ಥರು ಕೇಳಿ ತುಂಬಾ ವ್ಯಥೆ ಪಡುತ್ತಾ ಇದಾರೆ. ಈ ಮಹನೀಯರು ಈ ತಾಲ್ಲೂಕಿಗೆ ಬಂದು ಕೆಲವು ತಿಂಗಳು ಮಾತ್ರ ಆಯಿತು. ಇಷ್ಟು ಸ್ವಲ್ಪ ಕಾಲದಲ್ಲಿ ಟವನ್ನಿಗೂ ಗ್ರಾಮಕ್ಕೂ ಅವರು ಮಾಡಿರುವ ಕೆಲಸವನ್ನು ನೋಡುವಹಾದರೆ ತುಂಬಾ ಆಶ್ಚರ್ಯ ಪಡಬೇಕಾಗಿದೆ. ಯಾತಕ್ಕೆಂದರೆ ಹಿಂದೆ ಇದ್ದ ಅನೇಕ ಅಮಲ್ದಾರರ ಕಾಲದಲ್ಲಿ ನಡೆಯದೆ ಇದ್ದ ಕೆಲಸವನ್ನು ಈ ಮಹನೀಯರು ಮಾಡಿದಾರೆ. ೧೦—೧೨ ವರ್ಷದಿಂದಲೂ ನಿಂತು ಇದ್ದ ಕಂದಾಯವನ್ನು ಇವರು ಸ್ವಲ್ಪ ದಿನದಲ್ಲಿಯೇ ಪ್ರಜೆಗಳಿಗೆ ತೊಂದರೆ ಇಲ್ಲದಂತೆ ವಸೂಲ್ಮಾಡಿ ಟವನ್ನಿನಲ್ಲಿ ಅನೇಕ ಹೊಸ ಕೆಲಸಗಳನ್ನು ಮಾಡಿಸಿದರು. ಮತ್ತು ಕಚೇರಿಯಲ್ಲಿದ್ದ ಎಲ್ಲಾ ಅಕ್ರಮಗಳನ್ನೂ ತಕ್ಕ ಮಟ್ಟಿಗೂ ಕಡಿಮ್ಮೆಮಾಡಿ, ಅರ್ಜಿದಾರರ ಅರ್ಜಿಗಳನ್ನು ತಾವೇ ಖುದ್ದಾಗಿ ನೋಡಿ, ತಕ್ಷಣದಲ್ಲಿಯೇ ಜವಾಬನ್ನು ಕೊಡುತ್ತಾ ಇದ್ದರು. ಗ್ರಾಮಗಳಲ್ಲಿ ಸಂಚಾರ ಮಾಡಿ, ಅಲ್ಲಿದ್ದ ಎಲ್ಲಾ ಕಶ್ಮಲವನ್ನೂ ಹೋಗಲಾಡಿಸಿದ್ದು ಮಾತ್ರವಲ್ಲದೆ, ಇವರು ಅನೇಕ ಉಪಕಾರಗಳನ್ನು ಗ್ರಾಮಸ್ಥರಿಗೆ ಮಾಡಿದರು. ಇಂಥಾ ಚಟುವಟಿಕೆಯುಳ್ಳ ಅಮಲ್ದಾರರನ್ನು ಇಷ್ಟು ಶೀಘ್ರದಲ್ಲಿ ವರ್ಗ ಮಾಡಿದ್ದನ್ನು ನೋಡಿದರೆ ತುಂಬಾ ವ್ಯಸನ ಪಡಬೇಕಾಗಿದೆ. ಇನ್ನು ಕೆಲಂಬಕಾಲ ಈ ಮಹನೀಯರನ್ನು ಇದೇ ಸ್ಥಳದಲ್ಲಿಯೇ ಇಡುವದಾದರೆ ತುಂಬಾ ಅನುಕೂಲವಾಗಿತ್ತು.

ಇನ್ನೊಂದು ವಿಶೇಷವಾದ ಕೆಲಸವನ್ನು ಇವರು ಬಹು ನೂತನವಾಗಿಯಿಂದ ನಡಿಸಿದ್ದಕ್ಕೋಸ್ಕರ ಜನಗಳು ತುಂಬಾ ಸಂತೋಷಪಡುತ್ತಾರೆ. ಅದೇನೆಂದರೆ, ಸಂತೆಯಲ್ಲಿ ಚಿಕ್ಕ ಸೇರುಗಳನ್ನು ಇಟ್ಟುಕೊಂಡಿದ್ದರು. ಈ ಮಹಾನುಭಾವರು ತಕ್ಕಮಟ್ಟಿಗೂ ಅದನ್ನು ಕಡಿಮೆ ಮಾಡಿದರು. ಈ ವಿಷಯದಲ್ಲಿ ಅವರನ್ನು ಎಷ್ಟು ಕೊಂಡಾಡಿದಾಗ್ಯೂ ಸ್ವಲ್ಪವೇ. ಇವರ ಮೇಲಿನ ಅಧಿಕಾರಿಗಳು ಇವರ ವಿಷಯದಲ್ಲಿ ತುಂಬಾ ಸಂತೋಷವುಳ್ಳವರಾಗಿದ್ದರು. ಮತ್ತು ಇವರನ್ನು ಇಲ್ಲಿಯೇ ನಿಲ್ಲಿಸಬೇಕೆಂದು ಒಂದು ಪ್ರಯತ್ನಪಟ್ಟಾಗ್ಯೂ ಪ್ರಯೋಜನವಾಗಲಿಲ್ಲ. ಆದರೂ ಇವರು ಹೋಗುವ ಸ್ಥಳದಲ್ಲಿಯೂ ಇದೇ ಒಳ್ಳೇ ಹೆಸರನ್ನು ಪಡೆಯುವರೆಂದು ನಾನು ನಂಬುತ್ತೇನೆ. ಬೇರೆ ಅಮಲ್ದಾರರು ಇವರ ಮೇಲ್ಪಂಕ್ತಿಯನ್ನು ಅನುಸರಿಸಿ, ಪ್ರಜೆಗಳಿಗೂ ಸರ್ಕಾರಕ್ಕೂ ಪ್ರಯೋಜಕರಾಗಿ ಕೆಲಸ ಮಾಡುವದಾದರೆ ನಮ್ಮ ದೇಶವು ತುಂಬಾ ಅಭಿವೃದ್ಧಿಗೆ ಬರುವುದೆಂಬುವುದಕ್ಕೆ ಸಂದೇಹವಿಲ್ಲ.

ಬಾತ್ಮೀದಾರ್

ತಾಲ್ಲೂಕು ವರ್ತಮಾನ

ನಾಗಮಂಗಲ — ಇಲ್ಲಿ ಹತ್ತು ಹದಿನೈದು ದಿನದಿಂದ ಮಳೆಯು ಇಲ್ಲವಾಗಿ, ದನಗಳು ದಿನೇ ದಿನೇ ಬಡವಾಗುತ್ತಾ ಇವೆ. ಇಲ್ಲಿಗೆ ಇನ್ನೂರು ಮೈಲಿ ಫಾಸಲೆಯಲ್ಲಿರುವ ಬೆಳ್ಳೂರು ಎಂಬ ಗ್ರಾಮದಲ್ಲಿ ಮಳೆಯು ಇಲ್ಲದೆ ಬಡವಂ ಬೇಸಾಯಕ್ಕೂ, ದನಗಳ ಹುಲ್ಲಿಗೂ ಬಹಳ ತೊಂದರೆಯಾಗಿದೆ. ರೈತರು ದನಗಳಿಗೋಸ್ಕರ ಪ್ರತಿ ದಿನವೂ ಸುಂಟೆಯ ಗಡ್ಡೆಗಳನ್ನು ಕಿತ್ತು ಹಾಕುತ್ತಾರೆ — ಈ ಬೆಳ್ಳೂರು ಗ್ರಾಮಕ್ಕೆ ಪೂರ್ವದಿಕ್ಕಿನಲ್ಲಿ ಬಹಳ ಪುರಾತನವಾದ ಗಂಗಾಧರೇಶ್ವರ ದೇವಸ್ಥಾನವು ಕೇವಲ ಶಿಥಿಲವಾಗಿರುವದರಿಂದಲೂ ಮತ್ತು ಬಹಳ ಚಿಕ್ಕದಾಗಿ... ವದರಿಂದಲೂ ಇದನ್ನು ಹೊಸದಾಗಿ ಕಟ್ಟುವುದಕ್ಕೆ ಪಂಡಿತ ... ನವರು ... ಹಳ್ಳಿಗಳ ಹತ್ತಿರ ಹಣವನ್ನು ಎತ್ತಿ ಒಂದು ಫಂಡನ್ನು ಏರ್ಪಡಿಸಿ, ಈ ದೇವಸ್ಥಾನವನ್ನು ಹೊಸದಾಗಿ ಕಟ್ಟಲು ಏರ್ಪಾಡು ಮಾಡಿದಾರೆ. ಈ ಫಂಡಿಗೆ ಒಂದು ಸಾವಿರ ರೂಪಾಯಿ ವಸೂಲಾಗಿದೆ. ಇದನ್ನು ಎರಡು ತಿಂಗಳಲ್ಲಿ ಕಟ್ಟಿ ಮುಗಿಸುತ್ತೇನೆಂದು ಕಂಟ್ರಾಕ್ಟದಾರ್ ತಿಮ್ಮಪ್ಪನವರು ಒಪ್ಪಿಕೊಂಡಿರುತ್ತಾರೆ — ಇದೇ ಗ್ರಾಮದಲ್ಲಿ ... ಪದ್ಧತಿಯ ... ಪ್ರಾರಂಭಿಸಲ್ಪಟ್ಟಿದಾರೆ. ಈ ಗ್ರಾಮದಲ್ಲಿ ... ಈ ಗ್ರಾಮದ ಗವರ್ನಮೆಂಟ್ ಕನ್ನಡ ಸ್ಕೂಲ್ ಹೆಡ್ಮಾಸ್ಟರೂ ಮತ್ತು ಕೆ. ಸುಬ್ಬರಾಯನವರೂ ... ಪಿರ್ಯಾದು ಕೇಳುತ್ತಾರೆ.

ನಿಮಗೆ ಮೈ ಸ್ವಸ್ಥವಿಲ್ಲವೋ !

ನಿಮಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ ಎಂದರೆ ನಿಮಗೆ ಯಾವ ನೋವೇ ಉಂಟಾಗಿರಲಿ — ನಿಮಗೆ ದಿನಕ್ಕೆ ಒಂದು ಸಲವಾದರೂ ಮಲಪ್ರವೃತ್ತಿಯಾಗುತ್ತಿದೆಯೇ? ಎಂದು ನಿನ್ನನ್ನು ನೀನೇ ಕೇಳಿಕೋ. ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿಮಗೆ ಮೈ ಸ್ವಸ್ಥವಾಗುವುದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ಕಟ್ಟಲ್ಪಟ್ಟು ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ.—ಪಿತ್ತಕೋಶ ರೋಗ; ಪಿತ್ತ, ಪಿತ್ತಜ್ವರ, ಅಜೀರ್ಣ; ಅಗ್ನಿಮಾಂದ್ಯ; ಗಾಬರಿ, ಅಶಕ್ತಿ, ಎದೆಯು ಕಲ್ಲಡೆಸುವುದು, ತಲೆತಿರುಗುವುದು, ತಲೆನೋವು; ಹೊಟ್ಟೆಯುಬ್ಬರ; ಮೂತ್ರಕೋಶದ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.



೭ ಆಣೆ ಬುದ್ದಿ ಪರಿಮಾಣ

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವೈಕಲ್ಯ ಖಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವವು. [93-46]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ, ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ, ಡೋನ್ಸ್ ಪಿ. ಓ. ಬಾಕ್ಸ್ ೨೧, ಬೊಂಬಾಯಿ —ಇವರಲ್ಲಿ ದೊರೆಯುವುವು.

"ಶ್ರೀದುರ್ಗಾಪ್ರಬಂಧಿನಿ."

63-1

ವಾರಪತ್ರಿಕೆ ! ವಾರಪತ್ರಿಕೆ !!

"ಶ್ರೀದುರ್ಗಾಪ್ರಬಂಧಿನಿ" ಎಂಬ ಅಭಿಧಾನದಿಂದ ಲಲಿತವಾದ ಶೈಲಿಯಲ್ಲಿ ಪ್ರತಿ ಶನಿವಾರವೂ ಕಿರಾವಲ್ಲಿ ೧೯೦೮ ನೇ ಇಸವಿ ಅಕ್ಟೋಬರ್ ೩ ನೇ ತಾರೀಖು (ದುರ್ಗಾಷ್ಟಮಿ) ಆಗಾಯಿತು ಪ್ರಕಟಿಸಲ್ಪಡುವುದು. ಇದರಲ್ಲಿ ರಾಜಕೀಯ, ಸಂತತಿಶಾಸ್ತ್ರ, ವೇದಾಂತ, ಧರ್ಮಶಾಸ್ತ್ರ, ಮೊದಲಾದ ಅನೇಕ ಉಪಯುಕ್ತ ವಿಷಯಗಳು ಅಡಗಿರುತ್ತವೆ. ಈ ಪತ್ರಿಕೆಗೆ ೧೯೦೮ ನೇ ಇಸವಿ ಸೆಪ್ಟೆಂಬರು ೩೦ ನೇ ತಾರೀಖು ಒಳಗಾಗಿ ಚಂದಾ ಹಣ ಮುಂಗಡ ರವಾನಿಸತಕ್ಕವರಿಗೆ ೧೦೦ ಒಳ್ಳೆ ... ಪಟ್ಟಗಳನ್ನೂ, ಅವರು ಚಂದಾದಾರರಾಗಿರುವ ವರೆಗೂ ಪ್ರತಿ ವರ್ಷವೂ ೧ ಕ್ಯಾಲಂಡರಿನೊಂದಿಗೆ ಇನಾಮಾಗಿ ಕೊಡಲ್ಪಡುವುದು.

ಚಂದಾವಿವರ —

ಸ್ಥಳದವರಿಗೆ ವರ್ಷ ೧ ಕ್ಕೆ ರೂ ೧—೦—೦

ಪರಸ್ಥಳದವರಿಗೆ ಟಪ್ಪಾಲ್ ಹಾಸಲ್ ಸಹಿತ ೧—೧೬—೦

... ಅಥವ ಇದಕ್ಕೆ ಮೇಲ್‌ಪಟ್ಟು ಚಂದಾದಾರರನ್ನೊದಗಿಸಲು ಏಜಂಟರಾಗುವವರಿಗೆ ಒಂದು ಸುಂದರವಾದ ಹೊಸ ಲೇಡೀ ವಾಚನ್ನು ಇನಾಮಾಗಿ ಕೊಡುವೆವು.

ನಮಗೆ ಏಜಂಟರು ಬೇಕು. ಹೆಚ್ಚಿನ ಸಂಗತಿ ಪತ್ರದ್ವಾರ ತಿಳಿಯಬಹುದು. ವಿಳಾಸ —ಕೆ. ... ರಾಮಾಜಿರಾವ್, ಮ್ಯಾನೇಜರ್, ಶ್ರೀದುರ್ಗಾಪ್ರಬಂಧಿನಿ ಆಫೀಸ್, ಕಿರಾ, ತುಂಕೂರ್ ಡಿ॥

ತಾವಾಗಿ ಇಂಗ್ಲೀಷ್ ಕಲಿಯುವಿಕೆ.

61-1

ಇಂಗ್ಲಿಷ್ ಭಾಷೆಯನ್ನು ಬರೆಯುವದಕ್ಕೂ, ಓದುವದಕ್ಕೂ, ಮಾತಾಡುವದಕ್ಕೂ, ಬೋಧಕರ ಸಹಾಯ ಸ್ವಲ್ಪವೂ ಇಲ್ಲದೆ ಒಂದೆರಡು ತಿಂಗಳುಗಳಲ್ಲಿಯೇ ತಾನಾಗಿ ಕಲಿಸುವ ಅತ್ಯುತ್ತಮವಾದ ಪುಸ್ತಕ ಕ್ರಯ ರೂ ೧—೮—೦

ಪ್ರಶ್ನೋತ್ತರ ಲೇಖ್ಯಬೋಧಿನಿ.

ಸ್ವಲ್ಪ ಪ್ರತಿಗಳೇ ಉಳಿದಿವೆ ೩೦೦ ಪುಟಗಳು. ಅಯಾ ಬಾಕಿ ಪದ್ಧತಿಯನ್ನನುಸರಿಸಿ ಬರೆಯುವ ಮರ್ಯಾದೆ, ಒಕ್ಕಣೆಗಳು, ಸಿವಿಲ್, ಮೆಜಿಸ್ಟ್ರೇಟ್, ರೆವಿನ್ಯೂ ಪೋಲೀಸ್ ಇಂಜನಿಯರ್, ಫಾರೆಸ್ಟ್, ಮೆಡಿಕಲ್, ವಿದ್ಯಾಭ್ಯಾಸ, ಮತ್ತು ಇನ್ನೂ ಇತರ ಇಲಾಖೆಗಳ ಬಗೆಬಗೆ ಸಂಗತಿಗಳೂ, ರೈತರಿಗೆ ಉಪಯೋಗಕ್ಕೆ ಬರುವ ಬಗೆಬಗೆ ಅರ್ಜಿಗಳೂ, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಹಿಂದೂ ಲಾ, ಮಹಮ್ಮದೀಯ ಲಾ, ಕಂಪನೀಸ್ ಆಕ್ಟ್, ಲ್ಯಾಂಡ್ ಅಕ್ವಿಜಿಷನ್, ದೇವಸ್ಥ, ಅರಮನೆ ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳೂ, ಕೋರ್ಟುಗಳಿಗೂ ಪೋಲೀಸಿಗೂ ಇರುವ ಅಧಿಕಾರ ವರ್ತಕರಿಗೆ ಉಪಯೋಗವಾದ ಎಲ್ಲಾ ರೋಜ ವರ್ಗ ಲೆಕ್ಕಗಳು, ಕಾನೂನಿಗೆ ಲೆಕ್ಕ ಬರೆಯುವ ರೀತಿ, ಇವುಗಳ ಸಾರಾಂಶವನ್ನೆಲ್ಲಾ ವಿವರಿಸಿದೆ. ಪುಸ್ತಕದಲ್ಲಿರುವ ಸಂಗತಿಗಳನ್ನೆಲ್ಲಾ ವಿವರಿಸಲು ಸ್ಥಳ ಸಂಕೋಚದಿಂದ ಇಲ್ಲಿ ಸಂಕ್ಷೇಪವಾಗಿ ತಿಳಿಸಿದೆ. ಕ್ರಯ ೧—೮—೦ ವಿಳಾಸ —ಮ್ಯಾನೇಜರ್ ಕರ್ನಾಟಕ ಪುಸ್ತಕಶಾಲಾ, ಲಕ್ಷ್ಮೀ ಪೋಸ್ಟ್, ಶ್ರೀ॥ ಮಾಲೂರು ಕೋಲಾರ್ ಡಿಸ್ಟ್ರಿಕ್ಟ್.

ನೋಟೀಸ್.

60 1

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ —

೧೯೦೭ ನೇ ಇಸವಿ ಮೈಸೂರು ೭ ನೇ ಮ್ಯುನಿಸಿಪಲ್ ರೆಗ್ಯುಲೇಷನ್ ಗೆ ಒಳಪಟ್ಟ ೪೮ ನೇ (೧) ( ) ಸೆಕ್ಷನ್ ಮೇರಿಗೆ ಬಾಕಿ ಇಸವಿ ಆಗಸ್ಟ್ (೧) ನೇ ತಾರೀಖು ಆಗಾಯಿತು ಬೆಂಗಳೂರು ಸಿಟಿಯಲ್ಲಿ ಪ್ರತಿಯೊಂದು ಕೂಸಿನ ಜನನದ ಮತ್ತು ಪ್ರತಿಯೊಬ್ಬ ಮನುಷ್ಯನ ಮರಣದ ವಿವರವಾಗಿ ಜನನ ಮರಣ ರಿಜಿಸ್ಟರ್‌ಗೆ ಸಂಬಂಧಪಟ್ಟ ಸರ್ ರಿಜಿಸ್ಟ್ರಾರಿಗೆ ಜನನವುಂಟಾದ ತಾರೀಖು ಆಗಾಯಿತು ಒಂದು ವಾರದೊಳಗಾಗಿಯೂ ಮತ್ತು ಮರಣವುಂಟಾದ ಕಾಲದಿಂದ ೨೪ ಘಂಟೆಗಳ ಒಳಗಾಗಿಯೂ ತಿಳುವಳಿಕೆಯನ್ನು ಕೊಡತಕ್ಕದ್ದು. ಅಥವಾ ಕೊಡಬೇಕು. ಸದರಿ ಸಮಾಚಾರವನ್ನು ಕೊಡುವದು ಕರ್ತವ್ಯವಾಗಿರತಕ್ಕ ಯಾವ ಮನುಷ್ಯನು ಕೊಡಲು ತಪ್ಪುತ್ತಾನೋ ಅಂಥವನು ಪ್ರಾಸಿಕ್ಯೂಷನ್‌ಗೆ ಒಳಪಟ್ಟು ೧೦ ರೂಪಾಯಿಗಳಿಗೆ ಕಡಮೆಯಿಲ್ಲದೆ ಜುಲ್ಮಾನೆಗೆ ಗುರಿಯಾಗುತ್ತಾನೆ.

Sd / B. J. KUMARASWAMI NAIK,

City Municipal Council,

22 7 08. Bangalore.

ಪಿಲ್ಸು ವರ್ಷಗೇ ತನಕ ಅನ್ನಕೋಶವು

[34-18]

ಅಕ್ರಮವಾಗಿ ಇತ್ತು.



ನಾನು ಆರು ಮಂದಿ ವೈದ್ಯರಿಂದ ಚಿಕಿತ್ಸೆ ಹೊಂದಿದೆನು
ನಾನು ಎಂದಿಗಾದರೂ ವಾಸಿಯಾದೇನೆಂಬ ಆಸೆ ತೊರೆದೆನು
ನಾನು ಈಗ ಹೊಸಮನುಷ್ಯನಂತಿದ್ದೇನೆ, ಪೆರೂನಾ ಮತ್ತು
ಮನಾಲಿನಗಳನ್ನು ವಂದಿಸುತ್ತೇನೆ.

ಅನೇಕಪತ್ತು ಪತ್ತಾಂಲ್ಲಿ ಒಬ್ಬನಿಗಾದರೂ ಹೊಟ್ಟೆಯೊಳಗಣ ಅಕ್ರಮವಿದ್ದೇ ಇದೆ. ಈ ಹೊಟ್ಟೆಯ ಅಕ್ರಮದಿಂದಲೇ ಅನೇಕಾನೇಕ ವ್ಯಕ್ತಿಗಳು ನಾನಾ ಕಾಯಿಲೆಗಳಿಗೆ ಗುರಿಯಾಗಿರುವರೆಂದು ಧಾರಾಳವಾಗಿ ಹೇಳಬಹುದು. ಅಮೇರಿಕದಲ್ಲಿ ಜೀವನ ಕಷ್ಟವಾಗಿರೋಣದರಿಂದ ಜನರು [illegible] ಆತುರಪಟ್ಟು ಕೆಲಸ ಮಾಡಬೇಕಾಗಿರುವುದೇ ಅದಕ್ಕೆ ಮುಖ್ಯ ಕಾರಣ. ಬೇಗ ಬೇಗ ಊಟಮಾಡಿದ ವೇಳೆ ಬಾಗುಪ್ಪು ಚಿಂತೆಗಳಿಗೆ ಗುರಿಯಾಗುವುದು ಹೊಟ್ಟೆಯಲ್ಲಿ ಖಂಡಿತವಾಗಿ ಅಕ್ರಮಗಳನ್ನು ಉಂಟುಮಾಡುತ್ತದೆ. ಹೊಟ್ಟೆಯಲ್ಲಿ ಅಕ್ರಮವನ್ನುಂಟಾಗಿರುವವರು ಪೆರೂನಾ ವಿಷಯವನ್ನು ತಿಳಿದುಕೊಂಡಿರಬೇಕು. ಪೆರೂನಾ ಸೌಖ್ಯಕೊಡದೆ ತಪ್ಪುವುದು ಅಪರೂಪ. ಕೆಲವು ಸಂದರ್ಭಗಳಲ್ಲಿ ಅದರ ಗುಣವು ಪರಮಾಶ್ಚರ್ಯವನ್ನುಂಟುಮಾಡುವುದು. ಹೊಟ್ಟೆಯ ರೋಗಗಳಿಗೆ ಪೆರೂನಾ ಒಳ್ಳೇ ಔಷಧವೆನ್ನುವುದಕ್ಕೆ ಅನೇಕರಿಂದ ಡಾಕ್ಟರ್ ಹಾರ್ಟ್‌ಮನ್ನರಿಗೆ ಪ್ರಶಂಸಾಪತ್ರಗಳು ಬಂದಿರುವವು. ಮಿ॥ ಜಾರ್ಜ್ ಎಚ್ ಸಿಂಸರ್, ಟೋರಂಟೋ, ಕ್ಯಾನಡಾ ಇವರು ಒಂದು ಪತ್ರವನ್ನು ಬರೆದಿದ್ದಾರೆ.

ಮಿ॥ ಜಾರ್ಜ್ ಎಚ್ ಸಿಂಸರ್, ಗ್ರಾಂಟ್, ಒಂಟ್, ಕ್ಯಾನ, ಬರೆಯುವುದು:—"ನಾನು ಹಳೆಯದಾದ ಹೊಟ್ಟೆಯಲ್ಲಿ ಅಕ್ರಮವಾಗಿ ಕಾಯಿಲೆ ಅನುಭವಿಸಿದೆನು. ಆರು ಜನ ಡಾಕ್ಟರರಿಂದ ಚಿಕಿತ್ಸೆ ಮಾಡಿಸಿಕೊಂಡೆನು. ಕೆಲವರಿಂದ ನನಗೆ ಸ್ವಲ್ಪ ಉಪಶಮನವಾಯಿತು. ಆದರೆ ರೋಗ ನಿವಾರಣೆಯಾಗಲಿಲ್ಲ. ನನಗಿದ್ದ ರೋಗವೆಂದು ಕೆಲವರು ಅಜೀರ್ಣರೋಗವೆಂದು ಕೆಲವರು ಹೇಳಿದರು. ಈಗ ನಾನು ಬಹಳ ರೋಗವನ್ನನುಭವಿಸಿದ ಎಂದಿಗಾದರೂ ವಾಸಿಯಾದೇನೆಂಬ ಆಸೆಯೆ ತೊರೆದು ಬಿಟ್ಟೆನು. ನನಗೆ ಆಲಿವೇ [illegible] ಈ ಮೊದಲಿಂದ ನಾನಾ ಕಷ್ಟಗಳು ಬಹಳವಾಗಿ ಅನುಭವಿಸಿದೆನು. ಆ ಸಮಯದಲ್ಲಿ ನನ್ನ ಸ್ನೇಹಿತರು ಪೆರೂನಾ ಮನಾಲಿನಗಳನ್ನು ಸೇವಿಸುತ್ತಿದ್ದರು. ಅವುಗಳನ್ನು ಸೇವಿಸ ನಂತೆ ನನ್ನನ್ನು ಬಲಾತ್ಕಾರ ಮಾಡಿ ಹೇಳಿದರು. ಆ ಔಷಧಗಳನ್ನು ಸೇವಿಸಿದೆ. ಆದರೆ ಅದರಿಂದ ವಾಸಿಯಾದೀತೆಂಬ ನಂಬಿಕೆ ಸ್ವಲ್ಪವೂ ಇರಲಿಲ್ಲ. ಸ್ವಲ್ಪ ಕಾಲದ ಮೇಲೆ ನನಗೆ ಬಹಳ ಗುಣವಾಯಿತು. ಆದ್ದರಿಂದ ಬಿಡದೆ ಆವೆರಡನ್ನು ಸೇವಿಸುತ್ತಾ [illegible] ಹೀಗೆ ಎರಡು ಬಾಟ್ಲು ಪೆರೂನಾ, ಅರ್ಧ ಬಾಟ್ಲು ಮನಾಲಿನ ಸೇವಿಸಿದ ಬಳಿಕ ನನಗೆ ಪೂರಾಗಿ ಗುಣವಾಯಿತು. ಈಗ ನಾನು ಹೊಸ ಮನುಷ್ಯನಾಗಿದ್ದೇನೆ. ಪೆರೂನಾ ಮನಾಲಿನಗಳನ್ನು ವಂದಿಸುತ್ತೇನೆ."

ಇಪ್ಪತ್ತು ವರ್ಷದ ಅಜೀರ್ಣವು

ಮಿ॥ ಸಿಡ್ನಿ ಮೇಲರ್, [illegible] ಒಂಟೇರಿಯೊ, ಕ್ಯಾನಡಾ ಈತ ಬರೆಯುವದು:—"ನಾನು ಇಪ್ಪತ್ತು ವರ್ಷಗಳಿಂದ ಅಜೀರ್ಣರೋಗವನ್ನನುಭವಿಸಿದೆನು. ನಾನು ಅನೇಕ ಡಾಕ್ಟರುಗಳ ಔಷಧವನ್ನು ಸೇವಿಸಿದೆನು. ನನಗೆ ಯಾವುದರಿಂದಲೂ ತೃಪ್ತಿಕರವಾಗಿ ಗುಣವಾಗಲಿಲ್ಲ. ಅನೇಕ ವೇಳೆ ಊಟವಾಗಿದ ಬಳಿಕ ಬಹಳ ಹೊತ್ತಿನವರೆಗೆ ಹೊಟ್ಟೆ ಉಬ್ಬರಿಸಿ ನಾನು ಕುಳಿತಿದ್ದ ಸ್ಥಳದಲ್ಲಿ ಏಳಲಾರದೆ ಇದ್ದೆನು. ನಾನು ಸ್ವಲ್ಪ ತಿಂದರೂ ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ. ನನಗೆ ಈ ರೋಗ ವಾಸಿಯಾಗುತ್ತದಿಲ್ಲವೆಂದು ನಿರಾಶೆಯುಂಟಾಗ ಪೆರೂನಾ ವಿಷಯವನ್ನು ಕೇಳಿ ಅದನ್ನು ಸೇವಿಸಲಾರಂಭಿಸಿದೆನು. ಒಂದು ಬಾಟ್ಲುವನ್ನು ಸೇವಿಸಿದಾಗಲೇ ನನಗೆ ಅನುಕೂಲವಾಯಿತು. ಇನ್ನೊಂದು ಬಾಟ್ಲು ಮುಗಿಸುವಷ್ಟರಲ್ಲಿ ನನ್ನ ರೋಗವೆಲ್ಲಾ ನಿವಾರಣೆಯಾಯಿತು. ಬಾಧೆ ಇಲ್ಲದೆ ಆಹಾರದಲ್ಲಿ ರುಚಿ ಹುಟ್ಟಿತು. ಬಹಳವಾಗಿ ಸಂತೋಷದಿಂದ ಊಟಮಾಡುತ್ತೇನೆ. ಈ ಪ್ರಪಂಚದಲ್ಲಿ ಪೆರೂನಾ ಅದ್ಭುತವಾದ ಔಷಧವೆಂದು ನಾನು ನಂಬುತ್ತೇನೆ. ಈಗ ನಾನು ಎಂಟು ಪೌಂಡು ತೂಗುತ್ತೇನೆ. ಪೆರೂನಾವನ್ನು ಎನು ಹೊಗಳಿದರೂ ಅಲ್ಪವೇ."

ಒಳಹೊಟ್ಟೆಯ ಶೀತವು

ರೆವ್ ಜೆ ಟಿ ಪಿಲರ್, ಕೇತ್ರಸ್‌ವಿಲ್ಲೆ, ದಕ್ಷಿಣ ಕ್ಯಾರೊಲಿನ, ಯು ಎಸ್ ಎ, ಈತ ಬರೆಯುವದು:—"ಪ್ರಪಂಚದ ಜನರೆಲ್ಲಾ ತಿಳಿಯುವಂತೆ ಪೆರೂನಾ ವಿಷಯದಲ್ಲಿ ನನ್ನ ಅನುಭವವನ್ನು ಹೇಳುತ್ತೇನೆ. ನನಗೆ ಹೊಟ್ಟೆ ಶೀತದಿಂದ ಕಷ್ಟಪಟ್ಟು ಅನುಭವಿಸಿದೆನು. ನಾನು ಅನೇಕ ಔಷಧಗಳನ್ನು ಮಾಡಿದೆನು. ಪಟ್ಟಣದ ಡಾಕ್ಟರುಗಳಲ್ಲಿ ಕೇಳಿಕೊಂಡೆನು. ಎಲ್ಲಾ ನಿಷ್ಪ್ರಯೋಜನವಾಯಿತು. ಪೆರೂನಾ ಇಲ್ಲದಿದ್ದರೆ ನಾನು ಇದುವರೆಗೆ ಸಮಾಧಿಯೊಳಗಿರುತ್ತಿದ್ದೆನು. ಈ ಹೊಟ್ಟೆಯ ಶೈತ್ಯಕ್ಕೆ ಪೆರೂನಾವೆ ಪ್ರಪಂಚದಲ್ಲೇ ಉತ್ತಮವಾದ ಔಷಧವೆಂದು ನಾನು ಹೇಳುತ್ತೇನೆ. ಕಾಯಿಲೆಯಾದ ಅನೇಕರಿಗೆ ಈ ಸಂಗತಿಯನ್ನು ಹೇಳಿಯೂ ಹೇಳುತ್ತಲೂ ಬಂದಿದ್ದೇನೆ."

ಪೆರೂನಾ ಉಪಕಾರಿಯಾದದ್ದು.

ಮಿ॥ ಜೆ ಇ ಕಾರ್ಸ, ೬೧ ಸೆಂಟ್ ಕ್ಲಾರೆನ್ಸ್ ಅವ್, ಟೊರಾಂಟೋ, ಕ್ಯಾನಡಾ, ಈತ ಬರೆಯುವುದು:—"ಪೆರೂನಾವನ್ನು ನಾನು ಸೇವಿಸಿದೇನೆ. ಅದು ಪ್ರಸಿದ್ಧವಾದದ್ದು. ಅದು ಗುಣಕಾರಿಯಾದದ್ದು. ಅದರ ಹಾಗೆ ಬಲವನ್ನುಂಟುಮಾಡುವ ಔಷಧ ಇನ್ಯಾವುದೂ ಇಲ್ಲವೆಂದು ಹೇಳಬಲ್ಲೆನು."

ಇನ್ನು ಅಂಥಾ ಕೆಲವು ರೋಗಿಗಳು

ಮಿ॥ ಎಚ್ ಜೆ ಹೆನ್ಸರ್ಸ್, ೬ ಕ್ಲೆಂಟ್ ರೆಟ್ರಸ್ಸ, ಯು ಎಸ್ ಎ, ಈತ ಬರೆಯುವದು:—"ನನಗೆ ಒಂದು ವರುಷದಿಂದ ಹೊಟ್ಟೆಯ ಅಕ್ರಮವಿದ್ದು ಅನುಭವಿಸಿದೆನು. ಅನೇಕರು ಈ ರೋಗ ನನಗೆ ವಾಸಿಯಾಗದೆಂದು ಹೇಳಿದರು. ಆದರೆ ನನಗೆ ಚೆನ್ನಾಗಿ ಗುಣವಾಗಿದೆ ಎಂದು ಹೇಳಬಲ್ಲೆನು. ಈಗ ಯಾವತರದ ಕಾಯಿಲೆಯೂ ಇಲ್ಲ. ಆಹಾರ ಚೆನ್ನಾಗಿ ರುಚಿಸುತ್ತದೆ. ಈಗ ವೃತ್ತಾಂತಪತ್ರಿಕೊಂಡು ಪುಷ್ಟನಾಗುತ್ತೇನೆ. ನನಗೆ ಸಂಪೂರ್ಣ ಗುಣವಾಗಿದೆ ಎಂದು ಎಲ್ಲರಿಗೂ ಹೇಳುತ್ತೇನೆ. ಇನ್ನು ಮುಂದೆ ಪೆರೂನಾ ನನ್ನ ಮನೆಯ ಔಷಧ."

ಮಿ॥ ಎಚ್ ಡಬ್ಲ್ಯು ನಾಗೆಲ್, ೬೩೧ ಗ ವಿಬೇರಿ ಮೆಂಬಿಸ್, ಕ್ರ್, ಯು ಎಸ್ ಎ, ಈತ ಬರೆಯುವದು:—"ನಾನು ಹೊಟ್ಟೆಯೊಳಗಿನ ಅಕ್ರಮದಿಂದ ಅನೇಕ ವರುಷ ಅನುಭವಿಸಿದೆನು. ಅನೇಕ ಇತರ ಔಷಧಗಳನ್ನು ಸೇವಿಸಿದೆನು. ಕಡೆಗೆ ಪೆರೂನಾ ಸೇವಿಸ ನಂತೆ ಸೂಚಿಸಿದರು. ಕೆಲವ ಕಾಲ ನಾನು ಗಟ್ಟಿಯಾದ ಆಹಾರವನ್ನು ತಿನ್ನಲಾರದೆ ಇದ್ದೆನು. ಈಗ ಏನು ದೊರೆತರೂ ಸಂತೋಷದಿಂದ ತಿನ್ನುತ್ತೇನೆ. ನಾನು ಕೆಲವು ಬಾಟ್ಲು ಪೆರೂನಾ, ಮನಾಲಿನಗಳನ್ನು ಸೇವಿಸಿದೆನು. ಈಗ ನನಗೆ ಚೆನ್ನಾಗಿ ವಾಸಿಯಾಗಿದೆ. ಇಂಥಾ ರೋಗಿಷ್ಟರೆಲ್ಲಾ ಅದರ ನ್ನು ಸೇವಿಸಬೇಕೆಂದು ಸಂತೋಷದಿಂದ ಶಿಫಾರಸು ಮಾಡುತ್ತೇನೆ."

ಮಿ॥ ಕ್ವಾರ್ಲೆಟ್ ಎಚ್ ಬ್ರೋಚೆಲ್, ಪೊಲೀಸ್ ಅಧಿಕಾರಿ, ೬೦೬ ಎಸ್ ಪಿಕ್ಕ್ಯಾ ಬೀದಿ, ಬಾಲ್ಟಿಮೋರ್, ಮೇರಿಲೆಂಡ್, ಯು ಎಸ್ ಎ, ಈತನ ಬರೆದ:—"ಅನೇಕ ವರುಷಗಳ ತನಕ ನನಗೆ ತಲೆ, ಗಂಟಲು, ಹೊಟ್ಟೆಗಳಲ್ಲಿ ಅಕ್ರಮವುಂಟಾಗಿ ಅನುಭವಿಸಿದೆನು. ಅನೇಕ ವೇಳೆ ಊಟಕ್ಕೆ ಮುಂಚೆಯೂ, ಊಟವಾದ ಮೇಲೂ ನನಗೆ ವಾಂತಿಯಾಗುತ್ತಿತ್ತು. ವಿಷ್ಣು ಪೆರೂನಾ ಹಲವು ಬಾಟ್ಲುಗಳನ್ನು ಸೇವಿಸಿದೆನು. ನನಗೆ ವಾಸಿಯಾಯಿತೆಂದು ಸಂತೋಷದಿಂದ ಹೇಳುತ್ತೇನೆ. ನಾನು ಕಷ್ಟಪಟ್ಟ ಸಂತೋಷದಿಂದ ಹೇಳುವ ಮಾಡಬಲ್ಲೆನು. ನನಗೆ ಹಳೇ ರೋಗಗಳ ಬಾಧೆ ಸ್ವಲ್ಪವೂ ಇಲ್ಲ. ಎಲ್ಲರೂ ಪೆರೂನಾ ಸೇವಿಸಿ ತಮ್ಮ ದೇಹದ ಅಕ್ರಮಗಳನ್ನು ಸರಿಮಾಡಿಕೊಳ್ಳಲೆಂದು ಶಿಫಾರಸು ಹೇಳುತ್ತೇನೆ. ನನ್ನ ಹಾಗೆ ರೋಗ ಅನುಭವಿಸಿ ಪೆರೂನಾದಿಂದ ಗುಣಹೊಂದಿದವರಲ್ಲದೆ ಇತರರು ಅದರ ಯೋಗ್ಯತೆಯನ್ನು ತಿಳಿಯಲಾರರು."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ.—ಹಿಂದುಸ್ಥಾನದಲ್ಲೆಲ್ಲಾ ಈ ಔಷದ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—
ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

10—7—1908 ರಿಂದ 17—7—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	1	2	0	0
ಬೆಂಗಳೂರು ಡಿಸ್ಟ್ರಿಕ್ಟ	11	9	0	0
ಮೈಸೂರು ,,	59	38	14	11
ಕೋಲಾರ್ ,,	4	2	4	1
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	4	3
ಚಿತ್ರದುರ್ಗ ,,	0	0	0	0
ಕಡೂರ್ ,,	10	12	11	11
ಶಿವಮೊಗ್ಗ ,,	6	4	0	0
ಜುಮ್ಲಾ	91	65	33	26

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಶ್ರಾವಣ ಶುದ್ಧ ಬಿದಿಗೆ ಗುರುವಾರದಿಂದ ಶ್ರಾವಣ ಶುದ್ಧ ಅಷ್ಟಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಜೂಲೈ ಮತ್ತು ಆಗಸ್ಟ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇದ ಕಟಕ ಮಾಸ
30	ಗುರು ‡	ಬಿದಿಗೆ	21 50	ಮ	48 46	16
31	ಶುಕ್ರ ,,	ತದಿಗೆ	26 11	ಪು	55-2	17
1	ಶನಿ *	ಚೌತಿ	31 11	ಉ	60 0	18
2	ರವಿ –	ಪಂಚಮಿ	34 50	ಉ	1 10	19
3	ಚಂದ್ರ	ಷಷ್ಟಿ	37 32	ಹ	5 50	20
4	ಕುಜ ¶	ಸಪ್ತಮಿ	39 9	ಚಿ	9 18	21
5	ಬುಧ	ಅಷ್ಟಮಿ	39 5	ಸ್ವಾ	11-56	22

‡ ಶೂನ್ಯತಿಥಿ, ಪಟ್ಟೀಲಾಲ್ ಜಾದ
,, ಆಷಾಢಮಾಸ, ಸಂಪದ್ಗೌರೀವ್ರತ, ಸಂಪತ್ ಶುಕ್ರವಾರ
* ಪಟ್ಟದಸ್ತಂಬೂರು ನಾಗರಚತುರ್ಥಿ, ಮ ವಾಣಿಶನಿವಾರ
– ಗರುಡಪಂಚಮಿ
¶ ಮಂಗಳಗೌರೀವ್ರತ

ಪೇಟೆ ಧಾರಣೆ

ವಿವರ		ಮೈಸೂರು	ಬೆಂಗಳೂರು
ಕದ್ರೀ ಅಕ್ಕಿ ಪಲ್ಲ ೧ಕ್ಕೆ	ರೂ	೧೫ ೦-೦	೧೬-೬-೦
ಕೆಂಬೂತಿ ಅಕ್ಕಿ ಅದೇ		೧೫-೮-೦	೧೫ ೮ ೦
,, ದುಯಂ		೧೩ ೮ ೧	೧೫ ೪-೦
ದಪ್ಪಾಣ ಅಕ್ಕಿ		೧೩-೮-೦	೧೫-೦-೦
ಸಣ್ಣಕ್ಕಿ ಅಸಲ್		೧೭-೦ ೦	೧೭ ೦-೦
,, ದುಯಂ		೧೬ ೮ ೦	೧೬-೦-೦
ತೊಗರೀ ಬೇಳೆ ಪಲ್ಲ ೧ಕ್ಕೆ		೧೬ ೦ ೦	೧೫-೦ ೧
,, ದುಯಂ		೧೫ ೮ ೦	೧೪-೮-೦
ಹೈ ರಾಗಿ ಪಲ್ಲ ೧ಕ್ಕೆ		೭ ೪-೦	೭ ೮ ೦
ಕಾರಾಗಿ		೬ ೪ ೦	೭ ೪ ೦
ಜೋಳ		೬ ೦-೦	೮ ೧೨ ೦
ಹಲಸಂದೆ ಪಲ್ಲ ೧ಕ್ಕೆ		೧೧ ೮ ೦	೧೦-೧೨ ೦
ಬಿಳೀ ಅವರೆ		೮-೮ ೦	೯-೦-೦
ಹೆಸರು		೧೧ ೦-೦	೧೨ ೮ ೦
ಉದ್ದು		೧೨-೮-೦	೧೨ ೮ ೦
ಕಡಲೆ		೧೩-೪-೦	೧೩ ೮ ೦
ಎಳ್ಳು ೫ ೧೦೦ ಕ್ಕೆ		೨೦ ೮ ೦	೨೪ ೦ ೦
ಹುರುಳಿ		೬-೮-೦	೭-೪-೦
ಹರಳು ೧೨೭ ಸೇರಿಗೆ		೧೧ ೦-೦	೧೨-೮-೦
ಸೀಗೇಕಾಯಿ ಮಣ ೧ಕ್ಕೆ		೧ ೮-೦	೧ ೬-೦
ಮೆಣಸಿನಕಾಯಿ		೬ ೪-೦	೩-೮-೦
ದುಯಂ		೩-೪-೦	೩-೪-೦
ಬೆಲ್ಲ ದೊಡ್ಡ ಅಚ್ಚು		೪ ೦-೦	೩ ೨-೦-೦
ಒಳ್ಳೆಣ್ಣೆ ಮಣ ೧ಕ್ಕೆ		೫ ೮ ೦	೬-೦-೦
ಹರಳೆಣ್ಣೆ ,,		೫-೮-೦	೪ ೦ ೦
ಕೊತ್ತುಂಬರಿ ಪಲ್ಲ ೧ಕ್ಕೆ		೬ ೦ ೦	೬ ೦ ೦
ಉಪ್ಪು		೪ ೮-೦	೫ ೦ ೦
ಹುಣಸೇ ಹಣ್ಣು		೧-೪-೧	೧ ೪ ೦
,, ಹಳೇದು		೧ ೦	೧ ೬ ೦
ತುಪ್ಪ ಮಣ ೧ಕ್ಕೆ		೧೩ ೮-೦	೧೫ ೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೪ ೧೫-೦	೪ ೦ ೦
ತೆಂಗಿನಕಾಯಿ ೧೦೦ ಕ್ಕೆ		೪-೮-೦	೬ ೦ ೦
ಅಳಲೇಕಾಯಿ ಮಣ ೧ಕ್ಕೆ		೧ ೦ ೦	೧-೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨-೦	೨-೧೪-೦
ಚಿನ್ನ (ಪೌನ್) ಕೆಂಪು		೧೫ ೬ ೦	೧೫-೭ ೦
,, ,, ಹಸಿಮೆ		೧೫-೧೧-೦	೧೫- ೧ ೦
,, ,, ಗಟ್ಟಿ ತೊಲ ೧ಕ್ಕೆ		೨೩ ೧೨-೦	೨೪-೮-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೭೫-೦-೦	೭೮ ೦-೦

Printed and Published by the Rev E W THOMPSON, M A, Proprietor and Manager, Wesleyan Mission Press Mysore 30/7/1908

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೨ | ಮೈಸೂರು—ಸನ್ ೧೯೦೮ ನೇ ಇಸವಿ ಆಗಸ್ಟ್ ತಾರೀಖು ೬ ನೇ ಗುರುವಾರ. | ಸಂಚಿಕೆ ೧೦

BASEL MISSION WEAVING ESTABLISHMENT, 59-18

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಿಳಿತ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ ವಿಕ್ಟೋರಿ ಟ್ವೀಡ್ ನಮೂನೆಗಳು ಕೋಟು ಕಾಲುಚೀಲ ಬಟ್ಟೆ ಒಟ್ಟಿಗಳೂ, ಶಂಟಿಂಗ್ ಯೂನಿ ಫಾರಂ ಬಟ್ಟೆಗಳು, ಶರ್ಟಿಂಗ್ ಮೂವೆ ಕಾಮೂನಿನ ಬಟ್ಟೆಗಳೂ, ... ಬಟ್ಟೆಗಳೂ ಟೇಬಲ್ ಕ್ಲೋತ್ ಮತ್ತು ನೇಪ್ ಕಿನ್ ಗಳೂ, ಟುವಾಲು ಮತ್ತು ರೆಗ್ ... ಮಾಡಲಾಗಿ ಇರುವಲ್ಲದೆ ಬಟ್ಟೆ ಮೊದಲಾದ ... ಎಲ್ಲ ರೀತಿಯಾಗಿಯೂ ... ಆಗಿಯೂಗಲೀ ಮಾರಾಟಕ್ಕೆ ತಯಾರಾಗಿದ್ದಾವೆ

ವಿಶೇಷ ಲಕ್ಷಿಸತಕ್ಕದ್ದು :—ಈ ನಮ್ಮ ಮ್ಯಾಲುಗಳಿಗೆ ಇಲ್ಲಿ ಕಾಣಿಸಿರುವ "ಟ್ರೇಡ್ ಮಾರ್ಕ್" ಎಂಬ ಮಾದರಿಗುರುತುಳ್ಳ ಇರುವ ಲೇಬಿಲ್ ಯಾವಾಗಲೂ ಹಚ್ಚಿರುತ್ತದೆ. ಈ ಗುರ್ತಿನ ಲೇಬಿಲ್ ಇಲ್ಲದವುಗಳು ... ನಮ್ಮ ಮ್ಯಾಲುಗಳಲ್ಲವೆಂದು ತಿಳಿಯತಕ್ಕದ್ದು.

ಒಳ್ಳೇ ಕಮಿಶ್ಯನ್.—ರೂಪಾಯಿ ೧೦೦ ರ ಮೇಲೆ ಮ್ಯಾಲುಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾಗುತ್ತದೆ. ಹೆಚ್ಚಿನ ವಿವರ ಖುದ್ದಾಗಿ ಯಾ ಕಾಗದ ಮೂಲಕ ತಿಳಿಯಲ್ಪಡುವದು

ನಮೂನೆ ಯಾ ಮಾದರಿಗಳು :—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಕಳುಹಿಸಲ್ಪಡುವವು

ಶರ್ತ :—ನಗದಾಗಿ ಇಲ್ಲವೆ ಮ್ಯಾಲುಗಳು ವ್ಹಿ. ಪಿ. ಟಪ್ಪಾಲು ಮೂಲಕ ಕಳುಹಿಸಲ್ಪಡಬೇಕಾಗಿದ್ದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು

☞ ಈ "ಟ್ರೇಡ್ ಮಾರ್ಕ್"ನ್ನಾಗಲೀ ನಾವು "ಕೋಪಿರೈಟ್" ಪಡೆದಿರುವ ಲೇಬಿಲುಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾವರೂ ಇತರ ಮ್ಯಾಲುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು

ವಿಳಾಸ:—BASEL MISSION WEAVING ESTABLISHMENT,
MANGALORE S CANARA

AMRUTANJAN DEPOT, 16 OAK-LANE, BOMBAY. [17-24]

ಗುಣ ಕಂಡುಬಾರದಿದ್ದಲ್ಲಿ ಹಣ ಮರಳಿ ಕೊಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮು ಮತ್ತು ಘಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ಕ್ಕೆ ಕಿಮ್ಮತ್ತು ೦—೮—೦ ಪೋಸ್ಟು ಖರ್ಚು ೦—೪—೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಇಜ್ಜಿ ವಗೈರೆ ನಾಶವಾಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦—೬—೦ ಪೋಸ್ಟು ಖರ್ಚು ೦ ೪ ೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವವು

ಬೋರ್ಗದಸ್ವಾಯನ—ಜೀರ್ಣಕ್ಕೆ ಡಬ್ಬಿ ೧ಕ್ಕೆ.	೧—೪—೦	ಕಾಮುವಾರಿಗುಟಿಕ—ಹೆಂಗಸರ ಹೊಟ್ಟೆನೋವಿಗೆ	೧—೦—೦
ಸದ್ಗುಟಿಕ—ಧಾತು ಪುಷ್ಟಿ ರಕ್ತಶುದ್ಧಿ	೧—೦—೦	ಪ್ರಮೇಹದ ಮಿಶ್ರಣ—ಪ್ರಮೇಹಕ್ಕೆ	೧—೦—೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ಕ್ಕೆ	೦—೧೨—೦	ಕಫಹಾರಿ—ಕಫ, ಕೆಮ್ಮು ಶ್ವಾಸ, ಇತ್ಯಾದಿ	೧—೪—೦
ಚೇಳುಕಚ್ಚಿದ ಮದ್ದು	೦—೮—೦	ಸುಂದರೀ ತೈಲ್ಯ—ಮೋರೆಗೆ	೦—೮—೦
ದಂತಶೂಲಹರಿ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಕರ್ಣಶೂಲಹಾರಿ—ಕಿವಿನೋವಿಗೆ	೦—೬—೦	ಉರಿನಾಶಕ ಎಣ್ಣೆ ಬಾಟ್ಲಿ ೧ಕ್ಕೆ	೦—೮—೦
ಬಿಜ್ಜಿಯ ಮುಲಾಮು	೦—೩—೦	ಪಾಕದ ಮಿಶ್ರಣ ,,	೧—[illegible]—೦
ದಂತಮಂಜನ—ಹಲ್ಲುಗಳಿಗೆ	೦—೨—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
ಕೇಶವರ್ಧಿನೀ ತೈಲ್ಯ—ಕೂದಲಿಗೆ	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
ಧಾತು ಮಾತ್ರೆ—ಬಾಲಕರಿಗೆ	೦—೮—೦	ರೋಮಹಾರಿ	೦—೮—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್ ಲೇನು ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ.

ಮಹಾ ಬಾಧಾಪಹಾರಿಣಿಯು. 48-11

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಯುಕ್ತಿಗೆ ಬಂದ ಪ್ರಕಾರ ನಾನಾವಿಧ ರೋಗಗಳನ್ನು ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಕಾಫಿ ಪ್ಲಾಂಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಾರೆ, ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೆ ತಲೆನೋವು, ವಾಯುನೋವು, ಕಳಿತ, ಗಂಟ್ಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೇಲೆ ಸ್ವಲ್ಪವನ್ನು ವ್ಯಾಪಿಸಿ, ಅದರ ಶಕ್ತಿಯನ್ನೇ ಅನುಭವಿಸುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೬ ಅಥವಾ ಹೆಚ್ಚು ಬಾಟ್ಲಿ ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇಸಲ ತರಿಸಿಕೊಂಡರೆ ಪ್ರಮಾಣದ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್ ಕ್ಲೆಮೆಂಟ್ಸ್,

೩೩, ಮೇದರಪಾಳ್ಯ ಬೀದಿ, ವೇಪೇರಿ, ಮದರಾಸ್

ಜ್ವರಹರಿ 64-1

ಇದು ಸಾಧಾರಣ ಜ್ವರ, ಚಳೀಜ್ವರ ಸಂನ್ನಿಜ್ವರ ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು. ... ಎಲ್ಲಾ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ... ಇಲಾಖಾ ಸಬ್ ಡಿವಿಜನ್ ಆಫೀಸರ್ ... ವೆಂಕಟಪತಿ ಅಯ್ಯರವರು—ನೀವು ಕಳುಹಿಸಿದ ... ಬಾಟ್ಲಿ ... ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ... ಗುಣ ಹೊಂದಿರುವರು. ಇನ್ನೂ ಜನರಿಗೆ ... ದಯವಿಟ್ಟು ಇನ್ನೊಂದು ... ಸೀಸೆಯನ್ನು ... ಮೂಲಕ ಕಳುಹಿಸಿದರೆ ಉಪಕಾರವಾಗುವದು—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ ೬ ರ ೬, ೧—೮ ರೂ., ರೂ ... ೧೦ ರೂ., ಜಾಸ್ತಿ ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂ ಕರ್ಪೂರ

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ ಗೋಪಾಲಯ್ಯವರು—ಜೆನ್ನಿಯ ಓಮಂ ಕರ್ಪೂರವನ್ನು ನಾನೂ ನನ್ನ ಹಾಸ್ಪಿಟಲ್ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಚಿನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ವೃತ್ತಾಂತ ಪತ್ರಿಕೆ.

:o:

ಸ್ರ ೧೯೦೮ ನೇ ಇಸವಿ ಆಗಸ್ಟ್ ತಾ॥ ೬ ನೇ ಗುರುವಾರ

ತುರ್ಕೀ ರಾಜ್ಯದ ಕಾರುಬಾರುಗಳು.

ಕಳೆದ ವಾರ ತುರ್ಕೀ ರಾಜ್ಯಭಾರದಲ್ಲಿ ಆಕಸ್ಮಿತ್ತಾದ ಬದಲಾವಣೆಗಳುಂಟಾದವು. ಸೈನ್ಯದ ಅಧಿಪತಿಗಳೂ ಇತರ ಮುಖಂಡರೂ ಸೇರಿ ಕೇಳಿಕೊಂಡ ಪ್ರಕಾರ ಸುಲ್ತಾನರು ತಮ್ಮ ರಾಜ್ಯದಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು (ಪಾರ್ಲಿಮೆಂಟನ್ನು) ಪ್ರಾರಂಭಿಸುವುದಾಗಿ ಅಪ್ಪಣೆ ಕೊಡಿಸಿದಾರೆ. ಇದು ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಮತ್ತು ಮ್ಯಾಸಿಡೋನಿಯಾಗಳಲ್ಲಿ ಅಪಾರವಾದ ಸಂತೋಷವನ್ನುಂಟುಮಾಡಿದೆ ಕ್ರೂರಿಗಳಾಗಿದ್ದ ಹಲವು ಮಂತ್ರಿಗಳು ಕೂಡಲೇ ತಲೆ ತಪ್ಪಿಸಿಕೊಂಡು ಓಡಿಹೋದರು. ಇಜತ್ ಪಾಷಾ ಯವರೂ ಇಂಗ್ಲಿಷ್ ವರ್ತಕರ ಹಡಗು ಹತ್ತಿ ಹೋದರೆಂದು ತಿಳಿಯುತ್ತದೆ. ಆದರೆ ಈ ಪಾರ್ಲಿಮೆಂಟ್ ಏರ್ಪಾಡಾಗುವುದರಲ್ಲಿ ಏಡ್ರಿಯಾನೋಪಲ್ ಪಟ್ಟಣದ ಸೈನಿಕರು ಸಮ್ಮತಿಸದೆ ರಾಜ್ಯಭಾರ ಕ್ರಮದಲ್ಲಿ ಬದಲಾವಣೆ ಏನೂ ಆಗಬೇಕಾದದ್ದಿಲ್ಲವೆಂದು ಹೇಳುತ್ತಿದಾರೆ ಬರುವ ವಾರ ಈ ವಿಚಾರಗಳನ್ನೆಲ್ಲಾ ವಿಸ್ತಾರವಾಗಿ ಬರೆದು ತಿಳಿಸುವೆವು.

ಮೈಸೂರು ಗವರ್ನಮೆಂಟೂ ವಿದ್ಯಾಭ್ಯಾಸವೂ

ಮೈಸೂರು ಸರ್ಕಾರದವರು ಕಳೆದ ೧೯೦೬ನೇ ಅಕ್ಟೋಬರ್ ತಿಂಗಳಿಂದ ಈ ಸಂಸ್ಥಾನದ ಗ್ರಾಮಾಂತರಗಳಲ್ಲಿರುವ ಪಾಠಶಾಲೆಗಳಲ್ಲಿ ಫೀಜು ತೆಗೆದುಕೊಳ್ಳದೆ ಮಕ್ಕಳಿಗೆ ವಿದ್ಯೆ ಕಲಿಸಬೇಕೆಂದು ಪ್ರಾರಂಭಮಾಡಿದರು. ಆದರೆ ಬಾಲ್ಯ ವಿದ್ಯಾಭ್ಯಾಸವನ್ನು ಎಲ್ಲಾ ಕಡೆಗಳಲ್ಲೂ ಫೀಜು ಇಲ್ಲದೆ ಮಾಡಿಸಬೇಕೆಂಬುವುದು ಅವರ ಉದ್ದೇಶವಾಗಿದ್ದರೂ ಇದುವರೆಗೆ ಅದನ್ನು ರೂಢಿಸುವುದು ಸಾಧ್ಯವಾಗಲಿಲ್ಲ. ಈಗ ಹುಕುಂ ಕೊಟ್ಟಿರುವ ಪ್ರಕಾರ ಸಂಸ್ಥಾನದ ಸಮಸ್ತ ಸರ್ಕಾರಿ ಸ್ಕೂಲುಗಳಲ್ಲೂ ಇದೇ ಆಗಸ್ಟು ತಿಂಗಳ ಪ್ರಾರಂಭದಿಂದ ಫೀಜನ್ನು ಮಾಫಿ ಮಾಡಿರುತ್ತಾರೆ ಮುಂದೆ ಹೇಳುವ ತರಗತಿಗಳಲ್ಲಿ ಈ ತಿಂಗಳಿಂದ ಫೀಜು ತೆಗೆದುಕೊಳ್ಳದೆ ದೇಶಭಾಷೆಯನ್ನು ಕಲಿಸಬೇಕೆಂದು ಹುಕುಂ ಆಗಿರುವುದು ಆ ತರಗತಿಗಳು ಯಾವುವೆಂದರೆ (೧) ಸರ್ಕಾರಿ ಎಲಿಮೆಂಟರಿ ಸ್ಕೂಲುಗಳ ೪ನೇ ಮತ್ತು ೫ನೇ ತರಗತಿಗಳು (೨) ಸರ್ಕಾರಿ ತಾಲ್ಲೂಕ್ ಕನ್ನಡ ಸ್ಕೂಲುಗಳ ಮಕ್ಕಳ ೧ನೇ ೨ನೇ ಮತ್ತು ೩ನೇ ತರಗತಿಗಳು (೩) ಸರ್ಕಾರಿ ಆಂಗ್ಲೋ ವರ್ನಾಕ್ಯುಲರ್ ಸ್ಕೂಲುಗಳ ಮಕ್ಕಳ ೧ನೇ ಮತ್ತು ೨ನೇ ತರಗತಿಗಳು ಈ ತರಗತಿಗಳಲ್ಲಿ ಸರ್ಕಾರದವರು ಫೀಜನ್ನು ಮಾಫಿ ಮಾಡಿರುತ್ತಾರೆ ಇವಲ್ಲದೆ ಸಮಸ್ತ ಸರ್ಕಾರಿ ಸ್ಕೂಲುಗಳಲ್ಲೂ ಯಾವ ಉಪಾಧ್ಯಾಯರ ಸಂಬಳವೂ ೧೦ ರೂಪಾಯಿಗೆ ಕಡಮೆಯಾಗಿರಕೂಡದೆಂದು ವಿಧಿಸಿ ಬಿತ್ತಿ ಮಾಡಿರುತ್ತಾರೆಂದು ತಿಳಿದು ಬಂದದ ಮೈಸೂರು ಗವರ್ನಮೆಂಟಿನವರು ಈ ರೀತಿ ಕ್ರಮೇಣ ಬಾಲ್ಯ ವಿದ್ಯಾಭ್ಯಾಸವನ್ನು ಹರಡಿ, ಸಕಲ ಪ್ರಜೆಗಳೂ ಅಕ್ಷರಸ್ಥರಾಗುವಂತೆ ಏರ್ಪಾಡು ಮಾಡಿರುವುದು ಸ್ತೋತ್ರಾರ್ಹವಾಗಿರುತ್ತದೆ ಪ್ರಜೆಗಳು ಗವರ್ನಮೆಂಟಿನವರ ಉದ್ದೇಶವನ್ನು ಸಾರ್ಥಕ ಪಡಿಸಿ ವಿದ್ಯೆ ಕಲಿತು ಅಭಿವೃದ್ಧಿ ಹೊಂದುವರೆಂದು ಹಾರೈಸುತ್ತೇವೆ

ಬಹುದೇಶದ ವೃತ್ತಾಂತಗಳು.

ಕೋಲಾರ್ ಜಿಲ್ಲೆಯ ಹಳ್ಳಿಗಳಲ್ಲಿ ಕಳೆದ ವಾರ ಅಮಾನುಷವಾಗಿ ಇಬ್ಬರು ಕೊಲೆಯಾದವರು ಸತ್ತರು

ಈ ದಿನ ಮಧ್ಯಾಹ್ನ ೩॥ ಗಂಟೆಗೆ ಬೆಂಗಳೂರು ಲಾಲ್ ಬಾಗ್ ಉದ್ಯಾನವನದಲ್ಲಿ ಫಲಪುಷ್ಪಗಳ ಪ್ರದರ್ಶನವು ಪ್ರಾರಂಭವಾಗುವುದು

ನೀಲಗಿರಿ ಬೆಟ್ಟದ ನೀಲಿ ಫರ್ನಹಿಲ್ ಅರಮನೆಯಲ್ಲಿ ಶ್ರೀಮನ್ ಮಹಾರಾಜರವರು ಮುಂದಿನ ಗುರುವಾರ ಯೂರೋಪಿಯನ್ನರಿಗೆ ಔತಣ ಮಾಡಿಸುವರೆಂದು ಪ್ರಕಟವಾಗಿದೆ

ಕಳೆದ ಗುರುವಾರ ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರವರ ಘನತೆಗೆ ಯೋಗ್ಯವಾಗುವಂತೆ ಜನ್ಮದಿನದ ಉತ್ಸವವನ್ನು ಆಚರಿಸಿ, ಮೆರವಣಿಗೆ ಮುಂತಾದದ್ದು ನಡಿಸಿದರು.

ಶ್ರೀರಂಗಪಟ್ಟಣ ನಂಜನಗೂಡುಗಳಲ್ಲಿ ಕಾವೇರಿ ಕಪಿಲಾ ಹೊಳೆಗಳು ಪ್ರವಾಹ ಹೆಚ್ಚಾಗಿ ಬಂದಿರುವುದರಿಂದ ಅನೇಕರು ಹೋಗಿ ನೋಡುತ್ತಿದಾರೆ

ಬೆಂಗಳೂರಿನಲ್ಲಿ ಜನನ ಮರಣಗಳನ್ನು ಪ್ರಜೆಗಳೇ ಸರ್ಕಾರದವರಿಗೆ ತಿಳಿಯಪಡಿಸುವಂತೆಯೂ, ತಪ್ಪಿದವರಿಗೆ ಜುಲ್ಮಾನೆ ವಿಧಿಸಲ್ಪಡುವಂತೆಯೂ ಅಲ್ಲಿನ ಮ್ಯುನಿಸಿಪಲ್ ಪ್ರೆಸಿಡೆಂಟರು ಕೊಟ್ಟಿರುವ ಇಸ್ತಿಹಾರನ್ನು ಇನ್ನೊಂದು ಕಡೆ ಪ್ರಕಟಿಸಿದೇವೆ

ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಇಬ್ಬರು ಯೌವನಸ್ಥರನ್ನು ಸರ್ಕಾರದವರು ತಮ್ಮ ಪ್ರಿಂಟಿಂಗ್ ಆಫೀಸಿನಲ್ಲಿ ಉಮೇದುವಾರರನ್ನಾಗಿ ನೇಮಿಸಿಕೊಂಡು ತರಪೇತು ಮಾಡುತ್ತೇವೆಂದೂ, ಅವರಿಗೆ ಮೊದಲು ತಿಂಗಳಿಗೆ ೫೦ ರೂಪಾಯಿಯಂತೆ ಸಂಬಳ ಕೊಡುವುದಾಗಿಯೂ ಪ್ರಕಟಿಸಿದಾರೆ

ಮೈಸೂರು ಸಂಸ್ಥಾನದಲ್ಲಿ ಆ॥ ರೆಸಿಡೆಂಟರಾಗಿದ್ದ ಮಿ॥ ಎಚ್. ಟಿ. ರೆನ್ನಿಯವರಿಗೆ ವಾಯವ್ಯ ಸರಹದ್ದಿನಲ್ಲಿರುವ ಕೋಹಾಟ್ ಎಂಬ ರಾಜ್ಯಕ್ಕೆ ವರ್ಗವಾಯಿತು. ಮಿ॥ ಕೋಲ್‌ಲೆಂಡ್‌ಯವರು ಆ॥ ರೆಸಿಡೆಂಟರಾಗಿ ನೇಮಿಸಲ್ಪಟ್ಟಿದಾರೆ ಇವರು ಕೆಲಸದ ಮೇಲೆ ಹಾಜರಾಗಲು ಇನ್ನೂ ಎರಡು ತಿಂಗಳಾದೀತೆಂದು ತಿಳಿಯುವುದು

ಕಳೆದ ವಾರವೆಲ್ಲಾ ರಾಜಧಾನಿಯಲ್ಲಿ ಮೋಡ ಕವಿದುಕೊಂಡು ಆಗಾಗ್ಗೆ ಮಳೆ ಸುರಿಯುತ್ತಲೇ ಬಂದು ಸೂರ್ಯ ರಶ್ಮಿಯನ್ನು ನೋಡುವುದು ಅಪರೂಪ. ಶೀತಗಾಳಿ ಸೋನೆ ಮಳೆಗಳಿಂದ ಕೆಮ್ಮಲು ನೆಗಡಿ ಜ್ವರಾದಿ ಶೀತ ರೋಗಗಳು ಹರಡುತಿರುತ್ತವೆ ಆದರೆ ಅಂಟುಜಾಡ್ಯದ ಭೀತಿಯು ಸದ್ಯಕ್ಕೆ ಇಲ್ಲವೆಂದು ಸಂತೋಷಪಡಬೇಕಾಗಿದೆ

ನೆನ್ನೆ ಮಧ್ಯಾಹ್ನ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನ್ಯಾಯವಿಧಾಯಕ ಸಭೆ ಜರುಗುವುದಾಗಿತ್ತು. ರಾಜಧಾನಿಯಿಂದ ಮಿ॥ ಕಾಂತರಾಜೇ ಅರಸಿನವರೂ ಅಡ್ವೊಕೇಟ್ ಮಿ॥ ರಂಗಯ್ಯಂಗಾರರೂ ಹೋಗಿರುತ್ತಾರೆ ವರ್ತಮಾನ ಪತ್ರಿಕೆಗಳ ವಿಷಯದಲ್ಲಿ ಸರ್ಕಾರದವರು ರೂಢಿಸಬೇಕೆಂದಿರುವ ಕಾನೂನು ಈ ಸಭೆಯಲ್ಲಿ ಚರ್ಚೆಯಾಗುವಂತೆ ಪ್ರಕಟವಾಗಿದೆ

ಬೆಂಗಳೂರು ಕೋಲೆಗಳ ಮೊಕದ್ದಮೆಯಲ್ಲಿ ಶ್ರೀನಿವಾಸಲು ಎಂಬವನಿಗೆ ಸೆಷನ್ಸ್ ಜಡ್ಜರು ಜೀವಾವಧಿ ಕಠಿಣ ಸಜವನ್ನು ವಿಧಿಸಿದ ರಷ್ಟು ಅಪರಾಧಿಯು ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿರುತ್ತಾನೆ. ಈ ತಿಂಗಳ ೧೩ ಕ್ಕೆ ಹಿಯರಿಂಗಿರುವುದು. ಅವನ ಕಡೆ ಬ್ಯಾರಿಸ್ಟರ್ ಮಿ॥ ನೇಪಿಯರ್ ಯವರೂ ಮೆ॥ ಶ್ರೀನಿವಾಸಯ್ಯಂಗಾರ್ರೂ ವಾದಿಸುವವರಾಗಿದಾರೆ

ಬೆಂಗಳೂರು ಸಿಟಿ ವೈಸ್ ಪ್ರೆಸಿಡೆಂಟರಾದ ಮೆ॥ ಕೃಷ್ಣಸ್ವಾಮಿರಾಯರನ್ನು ಸರ್ಕಾರದವರು ಮೈಸೂರಿಗೆ ವರ್ಗಮಾಡಿದ್ದರಿಂದ ಅಲ್ಲಿನ ಪ್ರಜೆಗಳು ಅವರಿಗೆ ಔತನಾದಿಗಳನ್ನು ಮಾಡುತ್ತಿದಾರೆ ಅವರು ತುಂಬಾ ಚಟುವಟಿಕೆಯುಳ್ಳವರಾಗಿಯೂ ಉತ್ಸಾಹದಿಂದಲೂ ಪ್ರಜಾರಂಜಕರಾಗಿಯೂ ಅಲ್ಲಿ ಕೆಲಸ ಮಾಡುತ್ತಿದ್ದದ್ದೇ ಅದಕ್ಕೆ ಕಾರಣ ರಾಜಧಾನಿಯಲ್ಲೂ ಅವರು ಹೀಗೆಯೇ ಪ್ರಜೆಗಳ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಾರೆಂದು ಹಾರೈಸುತ್ತೇವೆ.

ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾಜರವರ ಸಂಸ್ಕೃತ ವಿದ್ಯಾಶಾಲೆಯೊಳಗೆ ಇದೇ ತಿಂಗಳು ತಾ ೨೬ರಿಂದ ವರ್ಷೇ ವರ್ಷೆ ನಡೆಯುವ ವಿದ್ವತ್ ಪರೀಕ್ಷೆಗಳು ಪ್ರಾರಂಭವಾಗುವವು ಮೂರು ವೇದಗಳು, ವೇದಭಾಷ್ಯ, ಯಾಜ್ಞಿಕ ಪ್ರಯೋಗ, ಧರ್ಮಶಾಸ್ತ್ರ, ಜ್ಯೋತಿಷ, ವೈದ್ಯ, ವ್ಯಾಕರಣ, ನವೀನನ್ಯಾಯಶಾಸ್ತ್ರ, ಪ್ರಾಚೀನನ್ಯಾಯಶಾಸ್ತ್ರ, ಸಾಂಖ್ಯ, ಪೂರ್ವೋತ್ತರ ಮೀಮಾಂಸೆಗಳು, ಸಾಹಿತ್ಯ. ಈ ವಿಷಯಗಳಲ್ಲಿ ಪರೀಕ್ಷೆಗಳು ನಡೆಯುವವೆಂದು ಮುಜರಾಯಿ ಸೂಪರಿಂಟೆಂಡೆಂಟರು ಪ್ರಕಟಿಸಿರುತ್ತಾರೆ

ಹಿಂದಿನ ವಾರ ಇಲ್ಲಿನ ಹಳೇ ಅಗ್ರಹಾರದಲ್ಲಿ ಒಂದು ಹಸು ಗಬ್ಬವಾಗಿ ಈಯದೆ ಬಹಳ ಕಷ್ಟಪಟ್ಟಿತು. ಪರೀಕ್ಷಿಸುವುದರಲ್ಲಿ ಕರುವು ಹೊಟ್ಟೆಯಲ್ಲಿ ಸತ್ತು, ತೆಗೆಯುವುದೇ ಅಸಾಧ್ಯವೆಂದು ಗೊತ್ತಾಯಿತು ಹಸುವೂ ಸತ್ತುಹೋಯಿತೆಂದು ನಿರಾಶೆಯಾದಾಗ, ಕಾರೋನೇಷನ್ ಯಸ ಸಾಲಂತ್ರಿ, ಕೆಂಪಮಾಕ್ಕೈಯ. ದಫೇದಾರ್ ಕಾಳೈಯ, ಸಿದ್ಧೈಯ, ಈ ಮೂರು ಮಂದಿಯೂ ಹೋಗಿ ಹಸುವಿನ ಹೊಟ್ಟೆಯಿಂದ ಸತ್ತ ಕರುವನ್ನು ಬಹು ಚಮತ್ಕಾರವಾಗಿ ಹೊರಕ್ಕೆ ತೆಗೆದು, ಚಿಕಿತ್ಸೆ ಮಾಡಿ ಹಸುವನ್ನು ಬದುಕಿಸಿ, ಅದರ ಯಾತನೆಯನ್ನು ನಿವಾರಣೆಮಾಡಿದರೆಂದು ಕೇಳುತ್ತೇವೆ

ಮುಂದೆ ಹೇಳುವ ಪುಸ್ತಕಗಳನ್ನು ಆದರದಿಂದ ಸ್ವೀಕರಿಸಿ, ಗ್ರಂಥಕರ್ತರನ್ನು ವಂದಿಸುತ್ತೇವೆ —ಕೊಡಗು ಡಾಕ್ಟರ್ ಕೆ. ಎಂ. ಅಪ್ಪಯ್ಯನವರು ರಚಿಸಿದ "ದೇಹತತ್ವ," ಶಿವಮೊಗ್ಗಾ ಮೆ॥ ಎಸ್ ಲಿಂಗರಾಜರವರು ರಚಿಸಿದ "ನಂದಪಟ್ಟ ಹೆಗ್ಗಡಿಯ ಚರಿತ್ರೆ." ಚಿತ್ರದುರ್ಗದ ಆರ್ಯ ಸ್ಟೂಡೆಂಟ್ಸ್ ಹೋಮಿನ ಕಾರ್ಯನಿರ್ವಾಹಕ ಸಭೆಯವರಿಂದ ಪ್ರಕಟಿಸಲ್ಪಟ್ಟ ರಿಪೋರ್ಟು, ಅರಮನೆ ವಿದ್ವಾಂಸರಾದ ಮೆ॥ ನಂಜನಗೂಡು ಶ್ರೀಕಂಠಶಾಸ್ತ್ರಿಗಳು ರಚಿಸಿರುವ "ಉತ್ತರರಾಮಚರಿತ್ರೆ" (?) "ಅಲೋಪಮಾಲಿ" ಎಂಬ ಲಲಿತವಾದ ಕನ್ನಡ ನಾಟಕ, ಮೆ॥ ಆನವಟ್ಟಿ ರಾಮರಾಯರು ರಚಿಸಿರುವ ಪ್ರಸಿದ್ಧ ಷೇಕ್ಸ್‌ಪಿಯರ್ ಮಹಾಕವಿಯ ಜೀವಚರಿತ್ರೆ

ರಾಜಾ ರವಿವರ್ಮರವರ ಚಿತ್ರಗಳ ಮೈಸೂರು ಏಜೆಂಟರಾಗಿರುವ ಮಿ॥ ಕೆ. ಜಿ ಸಿದ್ಧಲಿಂಗಪ್ಪನವರು ರಚಿಸಿರುವ "ಸಚಿತ್ರ ಕರ್ನಾಟಕ ವರ್ಣಮಾಲೆ" ಯನ್ನು ನೋಡಿದೆವು ನೇತ್ರಾನಂದವುಂಟಾಗುವಂತೆ ನೂರಾರು ವಸ್ತುಗಳೂ ಪ್ರಾಣಿಗಳೂ ಪಟದಲ್ಲಿ ಮನೋಹರವಾದ ಬಣ್ಣಗಳಿಂದ ಚಿತ್ರಿಸಲ್ಪಟ್ಟಿರುವವು. ಅಕಾರದಿಂದ ಳಕಾರದ ವರೆಗೆ ಅಕ್ಷರಗಳನ್ನು ಮಕ್ಕಳಿಗೆ ಕಲಿಸುವುದಕ್ಕೆ ಈ ಸಚಿತ್ರ ಪಟವು ತುಂಬಾ ಶ್ಲಾಘ್ಯವಾಗಿರುತ್ತದೆ ಬಾಲಕರ ಮನಸ್ಸನ್ನು ಸೆಳೆದು ಅಕ್ಷರ ಮತ್ತು ವಸ್ತು ಜ್ಞಾನವನ್ನು ಬಹು ಸುಲಭವಾಗಿ ಉಂಟುಮಾಡುವುದಕ್ಕೆ ಮೆ॥ ಸಿದ್ಧಲಿಂಗಪ್ಪನವರು ರಚಿಸಿರುವ ಈ ವರ್ಣಮಾಲೆಯು ಅವರ ಉದ್ದೇಶವನ್ನು ಸಾರ್ಥಕಪಡಿಸಿರುವುದು. ಬಾಲಬೋಧೆಯ ತರಗತಿಗಳಿಗೆ ಇದು ಬಹಳ ಉತ್ತಮವೂ ಅವಶ್ಯವೂ ಆಗಿದೆ ಎಂದು ಸಂತೋಷದಿಂದ ಹೇಳುವೆವು

ಮೈಸೂರು ಗೆಜೆಟ್ ಸಂಗ್ರಹ.

ಮುಂದೆ ಹೇಳುವ ಪ್ರೊ॥ ಆ॥ ಕಮಿಷನರುಗಳು ಸರ್ಕಾರಿ ಕನ್ನಡ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ.—ಮೆ॥ ಗಳಾದ ಡಿ. ಶ್ರೀನಿವಾಸಯ್ಯಂಗಾರ್ರು, ಎಗ. ಮಾಧವರಾಯರು, ಬಿ ಟಿ. ಹೆಬ್ಬಾರ್ ಯವರು, ಎಸ್. ಪಿ ರಾಜಗೋಪಾಲಾಚಾರ್ರು

ಮೈಸೂರು ಗವರ್ನಮೆಂಟ್ ಮಿಲಿಟರಿ ಅಸಿಸ್ಟೆಂಟ್ ಲೆಫ್ಟಿನೆಂಟ್ ಕರ್ನಲ್ ಆರ್. ಜಿ. ಜೋನ್ಸ್ ಯವರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜವನ್ನೂ ಅದರ ಜೊತೆಗೆ ಒಂಬತ್ತು ತಿಂಗಳ ಫರ್ಲೋ ರಜವನ್ನೂ ಕೊಟ್ಟಿದೆ.

ಮೈಸೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಮತ್ತು ಸಿವಿಲ್ ಸರ್ಜನರಾದ ಮಿ॥ ಇ. ಎಸ್. ಕೃಷ್ಣಸ್ವಾಮಿ ಐಯರವರಿಗೆ ಜೂಲೈ ತಾ. ೧ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಸಬ್ ಅ॥ ಸರ್ಜನ್ ಮಿ॥ ಎಸ್. ಜಿ ಆಶೀರ್ವಾದಂ ಯವರು ಮಿ॥ ಕೃಷ್ಣಸ್ವಾಮಿ ಐಯರವರ ಕೆಲಸಗಳ ಛಾರ್ಜನ್ನೂ ವಹಿಸಿದ್ದರು.

ಕೋಲಾರ್‌ಗೋಲ್ಡ್ ಸಬ್ ಡಿವಿಜನ್ ಛಾರ್ಜಿನಲ್ಲಿರುವ ಮೆ॥ ಟಿ. ಚೊಕ್ಕಣ್ಣನವರಿಗೆ ಮೇ ತಾ. ೧೮ ರಿಂದ ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಅಮಲ್ದಾರ್ ಮೆ॥ ಎಂ. ಎಸ್. ಪುಟ್ಟಣ್ಣನವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಮೂರು ದಿವಗಳಿಗೆ ಜಾಸ್ತಿ ಮಾಡಿದೆ.

ಶ್ರೀರಂಗಪಟ್ಟಣದ ತಾಲ್ಲೂಕ್ ಅಮಲ್ದಾರ್ ಮಿ॥ ಷೇಕ್ ಅಬ್ದುಲ್ಲಾ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ರೆವಿನ್ಯೂ ಜನರಲ್ ಸೆಕ್ರಟರಿ ಆಫೀಸಿನ ಅ॥ ಸೂಪರಿಂಟೆಂಡೆಂಟ್ ಮಿ॥ ಎಚ್. ವೆಂಕಟಪತಯ್ಯನವರು ಶ್ರೀರಂಗಪಟ್ಟಣದ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ತುಂಕೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಪ್ರೊ॥ ಅ॥ ಕಮಿಷನರ್ ಮೆ॥ ಡಿ. ಶ್ರೀನಿವಾಸಯ್ಯಂಗಾರ್ರಿಗೆ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿದೆ.

ಶ್ರೀಮನ್ಮಹಾರಾಜರವರು ಮೆ॥ ಎಸ್ ವೆಂಕಟರಂಗಂ ಯವರನ್ನು ಪ್ರೊಬೇಷನರಿ ಅ॥ ಕಮಿಷನರಾಗಿ ನೇಮಕ ಮಾಡಿರುತ್ತಾರೆ

ಮುಂದೆ ಹೇಳುವ ವರ್ಗಾವರ್ಗಿ ಹುಕುಂ ಮಾಡಿದೆ.—ಬೆಂಗಳೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾದ ಮಿ॥ ಎಂ. ಜಿ. ಕೃಷ್ಣಸ್ವಾಮಿ ರಾಯರು ಮೈಸೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾಗಿರತಕ್ಕದ್ದು

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಅಸಿಸ್ಟೆಂಟರಾದ ಮೆ॥ ನಾಡಿಗ ಸುಬ್ಬರಾಯರು ಬೆಂಗಳೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾಗಿರತಕ್ಕದ್ದು.

ಅಮಲ್ದಾರ್ ಮೆ॥ ಗುಲಾಂ ಮಹಮದ್ ಮೆಕ್ಕಾಯಿ ಯವರನ್ನು ಶಿಕಾರಿಪುರದಿಂದ ಮೂಡಿಗೆರೆಗೆ ವರ್ಗಮಾಡಿದ್ದದ್ದನ್ನು ರದ್ದುಮಾಡಿದೆ

ಆಕ್ಟಿಂಗ್ ಅಮಲ್ದಾರ್ ಮಿ॥ ಕೆ ಕೆ ವೆಂಕಟಸ್ವಾಮಿ ಐಯರವರನ್ನು ಶಿಕಾರಿಪುರಕ್ಕೆ ಪ್ರತಿಯಾಗಿ ಮೂಡಿಗೆರೆಗೆ ವರ್ಗಮಾಡಿದೆ

ಡೆಪ್ಟಿ ಕಮಿಷನರ್ ಮಿ॥ ಎಂ. ಕಾಂತರಾಜೇ ಅರಸಿನವರು ಜೂಲೈ ತಾ ೧೩ರಲ್ಲಿ ಮೈಸೂರು ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಛಾರ್ಜನ್ನು ಸೀನಿಯರ್ ಅ॥ ಕಮಿಷನರ್ ಮಿ॥ ಎ ಸುಬ್ರಹ್ಮಣ್ಯ ಐಯರವರಿಗೆ ವಹಿಸಿರುತ್ತಾರೆ

ಮುಂದೆ ಹೇಳುವ ಪ್ರೊ॥ ಅ॥ ಕಮಿಷನರುಗಳ ವರ್ಗಾವರ್ಗಿಯನ್ನು ಹುಕುಂಮಾಡಿದೆ.—

ಮಿ॥ ಎಗ ಮಾಧವರಾಯರು ಬೆಂಗಳೂರು ಡೆಪ್ಟಿ ಕಮಿಷನರರ ಕೈ ಕೆಳಗೆ ಕೆಲಸಮಾಡತಕ್ಕದ್ದು; ಮಿ॥ ಎಸ್ ರಾಮಣ್ಣನವರನ್ನು ರೆವಿನ್ಯೂ ಕಮಿಷನರರವರ ಆಫೀಸಿಗೆ ವರ್ಗಮಾಡಿದೆ

ಸೀನಿಯರ್ ಅ॥ ಕಮಿಷನರ್ ಮೆ॥ ಪಿ ಆರ್ ತ್ಯಾಗರಾಜ ಐಯರವರು ಜೂಲೈ ತಾ. ೨೭ ರಲ್ಲಿ ರಜದಿಂದ ವಾಪಸು ಕೆಲಸದ ಮೇಲೆ ಹಾಜರಾದದ್ದರಿಂದ ಅವರನ್ನು ರೆವಿನ್ಯೂ ಜನರಲ್ ಸೆಕ್ರಟರಿಯವರ ಆಫೀಸಿಗೆ ವರ್ಗಮಾಡಿದೆ

ಜಸ್ಟಿಸ್ ಮೆ॥ ಬಿ ಎಸ್ ಕೃಷ್ಣರಾಯರು ಚೀಫ್ ಕೋರ್ಟಿನಲ್ಲಿ ಜಡ್ಜಿಯ ಕೆಲಸದ ಛಾರ್ಜನ್ನು ಮಿ॥ ಎ ಎಸ್ ಸೇಟ್ಲೂರ್ ಯವರಿಗೆ ಜೂಲೈ ತಾ ೨೩ರಲ್ಲಿ ವಹಿಸಿಕೊಟ್ಟರು

ಹಾಸನದ ಡಿವಿಜನ್ ಅ॥ ಇಂಜನಿಯರ್ ಮಿ॥ ಟಿ ಎಸ್ ರಾಘವಾಚಾರ್ರಿಗೆ ಮೇ ತಾ. ೧೯ ರಿಂದ ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಕಡೂರ್ ಡಿವಿಜನ್ ಅ॥ ಇಂಜನಿಯರ್ ಮಿ॥ ಟಿ. ಗರುಡಾಚಾರ್ಯರಿಗೆ ಜೂಲೈ ತಾ. ೧೦ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ॥ ಜಿಯಾಲಜಿಸ್ಟ್ ಮಿ॥ ಬಿ. ಸಂಪತ್ತಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಗುಬ್ಬಿಯಿಂದ ಹೊಳೆನರಸೀಪುರದ ತಾಲ್ಲೂಕಿಗೆ ವರ್ಗಾಯಿಸಲ್ಪಟ್ಟಿರುವ ಆಕ್ಟಿಂಗ್ ಅಮಲ್ದಾರ್ ಮಿ॥ ಸಿ ನಾರಾಯಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಆಲೂರು ಸಬ್ ತಾಲ್ಲೂಕು ಆಕ್ಟಿಂಗ್ ಡಿಪ್ಟಿ ಅಮಲ್ದಾರ್ ಮಿ॥ ಮಹಮದ್ ಸೈಯದ್ ಷರೀಫ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಹಾಸನದ ಡಿಸ್ಟ್ರಿಕ್ಟ್ ಆಫೀಸ್ ಇಂಗ್ಲಿಷ್ ಹೆಡ್ ಕ್ಲಾರ್ಕ್ ಮೆ॥ ಜಿ ಎಸ್. ರಾಮಸ್ವಾಮಯ್ಯಂಗಾರ್ರು ಆಲೂರ್ ಸಬ್ ತಾಲ್ಲೂಕಿನ ಡಿಪ್ಟಿ ಅಮಲ್ದಾರರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ದಾದು ಮಹಾತ್ಮರ ಬೋಧನಾ ಸಾರಾಂಶ.

(ಮುಂದೆ ಸಾಗಿದ್ದು)

(೧) ವಿಗ್ರಹಾರಾಧನೆ.—ಅವರು ವಿಗ್ರಹಾರಾಧನೆಯನ್ನು ತ್ಯಜಿಸಿದ್ದರು "ಕಲ್ಲನ್ನು ದೇವರೆಂದು ಭಾವಿಸಿ ಅದನ್ನು ಪೂಜಿಸುವವರೆಲ್ಲರೂ ಅದರಂತೆಯೇ ಮೂಕರೂ ವಿವೇಕರಹಿತರೂ ಆಗಿರುತ್ತಾರೆ. ವಿಗ್ರಹಾರಾಧಕರು ಸತ್ಯವನ್ನರಿತುಕೊಳ್ಳುವುದು ಕಷ್ಟ. ಅರೂಪಿಯೂ ಅಗೋಚರನೂ ಆಗಿರುವ ದೇವರು ಕಲ್ಲಿನೊಳಗೆ ವಾಸಮಾಡಲಾರನು. ಆತನು ಮನುಷ್ಯನ ಹೃದಯಗಳೊಳಗೆ ವಾಸಮಾಡುವವನಾಗಿರುತ್ತಾನೆ ಸಾಧಾರಣವಾದ ಕಲ್ಲನ್ನು ತೆಗೆದುಕೊಂಡು ಅದು ರತ್ನವೆಂದು ಹೇಳಿದರೆ ಯಾರು ತಾನೇ ಒಪ್ಪುವರು. ಸರ್ವಜ್ಞಾನಿಯಾದ ದೇವರು ಎಲ್ಲವನ್ನೂ ಪರೀಕ್ಷಿಸಿ ಒಳ್ಳೇದನ್ನು ಕೆಟ್ಟದ್ದರಿಂದ ವಿಂಗಡಿಸಬಲ್ಲನು. ಪುರದಲ್ಲಿ ಪಶುವನ್ನು ಮಾಡಿಸಿ ಅದನ್ನು ಕಾಮಧೇನು ಎಂದು ಭಾವಿಸಿ ಅದರಲ್ಲಿ ಕ್ಷೀರವನ್ನು ಬಯಸುವವನು ಮೂರ್ಖನಲ್ಲವೇ? ಹೆಂಡತಿಯಾದವಳು ತಾನು ಕಳೆದುಕೊಂಡ ಗಂಡನ ಭಾವಚಿತ್ರವನ್ನು ಇಟ್ಟುಕೊಂಡು ಆತನನ್ನು ಸ್ಮರಿಸುವಳೇ ವಿನಾ ಆ ಚಿತ್ರಕ್ಕೆ ತನ್ನ ಮನೋಗತಗಳನ್ನು ತಿಳಿಸಿ ತನಗಿರುವ ತೊಂದರೆಗಳನ್ನು ಪರಿಹರಿಸಿಕೊಳ್ಳಬಲ್ಲಳೇ? ದೇವರು ಅರೂಪಿಯಾಗಿರುವುದರಿಂದ ಆತನನ್ನು ಪ್ರೀತಿಯಿಂದಲೂ ಭಕ್ತಿಯಿಂದಲೂ ಸೇವಿಸಬೇಕು"

(೨) ಜಾತಿ.—ಅವರು ಜಾತಿಯನ್ನು ಸಂಪೂರ್ಣವಾಗಿ ತ್ಯಜಿಸಿದ್ದರು. ಯಾರೋ ಒಬ್ಬರು ಅವರನ್ನು ಜಾತಿಯ ವಿಷಯ ಪ್ರಶ್ನೆ ಮಾಡಿದಾಗ್ಗೆ ಅವರು—ನನ್ನ ಜಾತಿಯೂ ದೇವರ ಜಾತಿಯೂ ಒಂದೇ ಎಂದು ತಿಳಿಸಿದರು "ಮನುಷ್ಯರೆಲ್ಲರೂ ದೇವರ ಮಕ್ಕಳಾಗಿರುವುದರಿಂದ ಒಬ್ಬರಿಗೊಬ್ಬರು ಅಣ್ಣತಮ್ಮಂದಿರೂ ಅಕ್ಕತಂಗಿಯರೂ ಆಗಿರುತ್ತಾರೆ"

(೩) ಮಾಯೆ.—"ಮಾಯೆಯೆಂಬುದು ಕೇವಲ ಲೌಕಿಕಾಪೇಕ್ಷೆಯೇ ವಿನಾ ಮತ್ತೇನೂ ಅಲ್ಲ. ಈ ಲೌಕಿಕಾಪೇಕ್ಷೆಯು ಮನಸ್ಸನ್ನು ದೇವರಿಂದ ದೂರಮಾಡಿ ಮನುಷ್ಯನಲ್ಲಿರುವ ದೇವರ ಮೇಲಣ ಪ್ರೀತಿಯನ್ನು ಸಂಪೂರ್ಣವಾಗಿ ಹಾಳುಮಾಡುವದು ಎಲೈ ಮಾನವನೇ ಲೋಕವನ್ನು ಯಾಕೆ ಪ್ರೀತಿ ಮಾಡುವಿ ನೀನು ಬಹಳವಾಗಿ ಪ್ರೀತಿ ಮಾಡುವ ಹೆಂಡತಿ ಮಕ್ಕಳೂ ತಂದೆತಾಯಿಗಳೂ ಇಷ್ಟಮಿತ್ರರೂ ನಿನ್ನ ಮರಣಕಾಲದಲ್ಲಿ ನಿನ್ನ ಸಂಗಡ ಬರುವರೋ? ಧನವು ಮಾಯವಾಗಿ ಹೋಗುತ್ತದಲ್ಲ ಆದ್ದರಿಂದ ಪರಮಾತ್ಮನಾಗಿರುವ ಏಕೋಭಗವಂತನ ಸ್ಮರಣೆಯಲ್ಲಿ ನಿರತನಾಗಿರು"

(೪) ತೀರ್ಥಯಾತ್ರೆ.—"ಅನೇಕರು ಯಾತ್ರಾರ್ಥವಾಗಿ ದ್ವಾರಕಾಪುರಿಗೂ ಮಥುರೆಗೂ ಕಾಶಿಗೂ ಹೋಗುತ್ತಾರೆ ದೇವರು ಆಯಾ ಪುಣ್ಯಕ್ಷೇತ್ರಗಳಲ್ಲಿ ಮಾತ್ರ ಸಿಕ್ಕುವನೋ? ಎಂದಿಗೂ ಇಲ್ಲ. ಆತನು ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ವಾಸವಾಗಿರುತ್ತಾನೆ ದೇಹವನ್ನು ದಣಿಸಿಕೊಂಡು ದೂರದಲ್ಲಿರುವ ಯಾತ್ರಾಸ್ಥಳಗಳಿಗೆ ಹೋದರೂ ಅನೇಕ ಯಾತ್ರಿಕರು ದೇವರನ್ನು ನೋಡಲಾರರು. ಆತನು ನಮ್ಮ ಹತ್ತಿರದಲ್ಲೇ ಇರುತ್ತಾನೆ ಆತನನ್ನು ಸ್ಮರಿಸಿ ಪ್ರೀತಿ ಮಾಡುವವರೆಲ್ಲರ ಹೃದಯಗಳೊಳಗೆ ಆತನು ವಾಸವಾಗಿರುವನು."

(೫) ರುದ್ರಾಕ್ಷಿ ಮಾಲೆಗಳು.—"ಸತ್ಯವಂತನಾದ ಬೋಧಕನಿಗೆ ತನ್ನ ಸ್ವಂತ ಮನಸ್ಸೇ ಮಾಲೆಯಾಗಿರುವುದು ದಿವಾರಾತ್ರಿಯ ದೇವಧ್ಯಾನವೇ ಆ ಮಾಲೆಗೆ ಪ್ರಯೋಗಿಸಲ್ಪಟ್ಟಿರುವ ದಾರವಾಗಿರುವುದು ಇಂಥಾ ಮಾಲೆಯನ್ನು ಯಾವನು ರಾತ್ರಿಯೂ ಹಗಲೂ ಧರಿಸಿರುವನೋ ಅವನೇ ಧನ್ಯನು."

(೬) ಕಾವೀಬಟ್ಟೆಯೂ ಭಿಕ್ಷಾಪಾತ್ರೆಯೂ.—"ಭಂಗಾರದ ಬಟ್ಟಲಿನಲ್ಲಿ ವಿಷವನ್ನು ತುಂಬಿದರೆ ಪ್ರಯೋಜನವೇನು? ಅದಕ್ಕಿಂತಲೂ ತೊಗಲಿನ ಚೀಲದಲ್ಲಿ ಅಮೃತವನ್ನು ತುಂಬಿಸುವುದು ಲೇಸಲ್ಲವೇ. ಲೋಕವನ್ನು ತ್ಯಜಿಸಿರುತ್ತೇವೆಂದು ಬಿಡಾಯ ಕೊಟ್ಟುಕೊಳ್ಳುವವರು ವ್ಯರ್ಥವಾಗಿ ಆ ರೀತಿಯಲ್ಲಿ ಹೇಳುತ್ತಾರೆ. ಸ್ವಾರ್ಥವನ್ನು ತುಳಿದು ಧ್ವಂಸಮಾಡಿ ದೇವರನ್ನು ಮಹಿಮೆಪಡಿಸುವವರು ಕೆಲವರೇ ಆಗಿರುತ್ತಾರೆ ಲೋಕದಲ್ಲಿ ಅನೇಕ ವಿಧವಾದ ಕಾವಿಶಾಟಿಗಳಿರುವವು ಆದರೆ ದೇವರನ್ನು ಪ್ರೀತಿಸುವವರು ಕೆಲವರೇ ಆಗಿರುತ್ತಾರೆ. ಹುಚ್ಚನೇ ಲೋಕವನ್ನು ಮೆಚ್ಚಿಸಬೇಕೆಂದು ಯಾಕೆ ಪ್ರಯತ್ನಪಡುವಿ. ಎಲ್ಲರಿಗೂ ರಕ್ಷಕನಾಗಿರುವ ದೇವರನ್ನು ನೀನು ಆಭರಣವಾಗಿ ಧರಿಸಿಕೋ 'ತಿಲಕವನ್ನಾಗಲಿ' ಮಾಲೆಯನ್ನಾಗಲೀ ಧರಿಸುವುದರಿಂದ ಪ್ರಯೋಜನವೇನು? ಭಗವಂತನ ಸ್ಮರಣೆಯೇ ಒಳ್ಳೇದನ್ನು ಕೊಡುವದು"

(೭) ಜನ್ಮಾಂತರ.—"ತೀರಿಹೋದ ಮನುಷ್ಯನು ಎಂಭತ್ತುನಾಲ್ಕುಲಕ್ಷ ಜನ್ಮಗಳನ್ನು ಎತ್ತುವನೇ? ಎಂದಿಗೂ ಇಲ್ಲ. ಮನಸ್ಸಿನ ಗುಣಗಳು ಯಾವ ರೀತಿಯಲ್ಲಿ ಬದಲಾಗುವವೋ ಅದೇ ರೀತಿಗನುಸಾರವಾಗಿ ಮನುಷ್ಯನು ಬದಲಾಗುವನು. ಚಪಲಚಿತ್ತನಾದವನು ಇಹದಲ್ಲಿಯೇ ಜನ್ಮಾಂತರವನ್ನೆತ್ತುವದು ಸಹಜ ದೇವರ ಮೇಲೆ ಮನಸ್ಸನ್ನು ನೆಲಸಿ ಆತ್ಮವನ್ನು ರಕ್ಷಿಸಿಕೊಳ್ಳದವನು ಒಂದು ಸಮಯದಲ್ಲಿ ಆನೆಯಂತಿರುವನು, ಮತ್ತೊಂದು ಸಮಯದಲ್ಲಿ ಇರುವೆಯಂತಾಗುವನು. ಮನುಷ್ಯನು ಕಂದಿಯೂ ನಾಯಿಯೂ ನರಿಯೂ ಹುಲಿಯೂ ಸರ್ಪವೂ ಆಗುವುದುಂಟು ಯಾವಾಗೆಂದರೆ ಆತನು ಆಯಾ ಮೃಗಗಳ ಗುಣಗಳನ್ನು ಧರಿಸಿಕೊಂಡಾಗ"

(೮) ವೇದಗಳೂ ಖುರಾನೂ.—"ಇವುಗಳೊಳಗೆ ಮಾತ್ರ ದೇವಜ್ಞಾನವು ಅಡಗಿದೆಯೆಂದು ಹೇಳುವದು ನ್ಯಾಯವಲ್ಲ ಯಾಕೆಂದರೆ ಪ್ರತಿಯೊಬ್ಬ ಮನುಷ್ಯನಲ್ಲಿ ದೇವಜ್ಞಾನವು ಅಡಗಿರತಕ್ಕದ್ದು"

(೯) ಬ್ರಹ್ಮ, ವಿಷ್ಣು, ಶಿವ.—"ಬ್ರಹ್ಮ, ವಿಷ್ಣು, ಶಿವ ಮೊದಲಾದವರು ದೇವರ ಸೇವಕರಾಗಿದ್ದರೇ ವಿನಾ ಮತ್ತೇನೂ ಅಲ್ಲ ಅವರು ದೇವರನ್ನು ಪೂಜಿಸಿದ್ದರಿಂದಲೇ ಲೋಕದಲ್ಲಿ ಮಾನನೀಯರೆಂಬ ಹೆಸರು ಪಡೆದರು. ಲೋಕದೊಳಗೆ ಯಾರ್ಯಾರು ದೇವಭಕ್ತರಾಗಿರುವರೋ ಅವರೆಲ್ಲರೂ ಮಾನನೀಯರು ಕಾಮ ಸ್ತ್ರೀ ಮೋಹದಿಂದಲೂ ಧನದಾಶೆಯಿಂದಲೂ ಅನೇಕರು ಕೆಟ್ಟುಹೋಗಿರುತ್ತಾರೆ. ಬ್ರಹ್ಮ, ವಿಷ್ಣು, ಶಿವ ಇವರು ಸಹ ಇದೇ ಗತಿಗೆ ಸಿಕ್ಕಿದವರು"

(೧೦) ಗುರುಗಳು.—"ಸುಳ್ಳು ಗುರುಗಳು ಎಷ್ಟೊ ಜನರನ್ನು ಮೋಸಪಡಿಸಿ ಅವರಿಗೆ ತಪ್ಪು ಮಾರ್ಗವನ್ನು ತೋರಿಸುವವರಾಗಿರುತ್ತಾರೆ. ಅವರ ಬೋಧನೆಗಳು ಅನೇಕಾವರ್ತಿ ವಿಷಯಾಶಕ್ತಿಯಿಂದ ಕೂಡಿದವುಗಳಾಗಿರುತ್ತವೆ. ಅವರೇ ಮಾಯಬಂಧನದಲ್ಲಿ ಸಿಕ್ಕಿಕೊಂಡಿರುತ್ತಾರೆ. ಅಂಥವರು ದೇವರ ಹೆಸರನ್ನು ಪದೇ ಪದೇ ಉಚ್ಚರಿಸಿದರೂ ಸತ್ಯವಾದ ಮತವನ್ನೆಂದಿಗೂ ಅರಿತುಕೊಳ್ಳಲಾರರು ಅವರು ಕನಸಿನಲ್ಲಿಯೂ ಕೂಡ ದೇವರನ್ನರಿಯರು. ಅವರಿಗೆ ಹೊಟ್ಟೆಯೇ ದೇವರಾಗಿರುವದು. ಮೃಗಗಳಿಗೂ ಅವರಿಗೂ ವ್ಯತ್ಯಾಸವೇನಿರುವುದು? ಅವರು ಮತ್ತೇರುವ ಪದಾರ್ಥಗಳನ್ನು ಕುಡಿಯುವದು ಇಲ್ಲವೇ ಸೇದುವರು ಇಂಥಾ ಸೇವನೆಯಿಂದ ಜ್ಞಾನವಿಕಲ್ಪವಾದರೆ ತಮ್ಮನ್ನು ಜ್ಞಾನಿಗಳೆಂದು ಕರೆಸಿಕೊಳ್ಳುವರು"

ವಾಚಕರೇ ದಾದು ಮಹಾತ್ಮರ ಬೋಧನಾ ಸಾರಾಂಶವನ್ನು ಮೇಲೆ ತಿಳಿಸಿದ್ದಾಯಿತು ಕ್ರಿಸ್ತ ಮತವು ಮೇಲ್ಕಂಡ ಬೋಧನೆಯನ್ನು ಬಹಳಮಟ್ಟಿಗೆ ಅನುಮೋದಿಸುವುದು ಕ್ರಿಸ್ತ ಮತದಲ್ಲಿ ಅಡಗಿರುವ ಅನೇಕ ಉತ್ಕೃಷ್ಟವಾದ ಬೋಧನೆಗಳನ್ನು ಹಿಂದೂ ದೇಶದ ಕೆಲವು ಮಹನೀಯರು ಪೂರ್ವದಲ್ಲಿಯೇ ಬೋಧಿಸಿದ್ದರು. ಆದರೆ ಅಂಥಾ ಬೋಧನೆಗಳನ್ನು ಸಾಧಿಸುವುದಕ್ಕೆ ಕ್ರಿಸ್ತ ಮತವು ಸಹಾಯಮಾಡುತ್ತದೆ

ಹಿಂದೂ ದೇಶದ ಸ್ಥಿತಿಯು.

(ಬರೆದು ಬಂದದ್ದು.)

"ವೃತ್ತಾಂತ ಪತ್ರಿಕೆ"ಯ ೧೨ನೇ ಸಂಚಿಕೆಗಳಲ್ಲಿ ರಿಟೈರ್ಡ್ ಆಫೀಸರೆಂಬವರು ಬರೆದಿದ್ದ ಬರವಣಿಗೆಯನ್ನೂ, ಆ ಪ್ರಕಾರ ಮುದ್ರಿತವಾದ ಜೂಲೈ ೨ನೇ ತಾ ಪತ್ರಿಕೆ ೩ನೇ ಪುಟದಲ್ಲಿ ವಿಶದಪಡಿಸಿರುವ ಅವರ ಕೋರಿಕೆಯನ್ನೂ ನೋಡಿದರೆ ಆ ಅಭಿಪ್ರಾಯಗಳು ಇಂಡಿಯಾ ದೇಶದ ಪ್ರಜೆಗಳ ಪುರೋಭಿವೃದ್ಧಿಗೆ ಅತ್ಯಂತ ಸಾಧಕವಾದ್ದೆಂದು ಸರ್ವರೂ ಒಪ್ಪಿ, ಅದರಂತೆ ನಡೆಯತಕ್ಕದ್ದಾಗಿರುತ್ತೆಂಬುವದರಲ್ಲಿ ಯಾವ ಸಂಶಯವೂ ಇರುವದಿಲ್ಲ ಮತ್ತು ಅದೇ ಜೂಲೈ ೧ನೇ ತಾ ಪತ್ರಿಕೆಯ ೫ನೇ ಪುಟದಲ್ಲಿ ಭರತಖಂಡಕ್ಕೆ ದೈವಕೃಪೆ ಬಂದದ್ದೆಂಬ ಹೆಸ್ರಿನ ಕೆಳಗೆ ಬರೆಯಬಹುದಾದ ಅಂಶಗಳಲ್ಲಾ ಅನುಭವಸಿದ್ಧವಾದ ಕಾರಣ ಅಷ್ಟರಮಟ್ಟಿನ ತಾಳ್ಮೆಯಿಂದ ನಿಜಸ್ಥಿತಿಯನ್ನು ಕಂಡುಹಿಡಿದು ಪಕ್ಷಪಾತವಿಲ್ಲದೆ, ಈ ದೇಶದ ಪುರೋಭಿವೃದ್ಧಿಗಾಗಿ ಪ್ರಾರ್ಥಿಸಿರುವ ಬಾಬ್ತು ಅವರಿಗೆ ಸರ್ವರೂ ವಂದನೆಮಾಡಬೇಕಾಗಿರುತ್ತೆ

ಇಂಡಿಯಾ ದೇಶದ ಪ್ರಕೃತಿ ಒಂದಾದ ಈ ಮೈಸೂರು ದೇಶದ ಹಿಂದಣ ಪ್ರಭುಗಳಿಗೂ ಅವರ ಪ್ರಜೆಗಳಿಗೂ ಘೋರಗಳ ನೌಕರರಾದ ನವಾಬ್ ಹೈದರಲ್ಲಿ ಖಾನ್ ಬಹದ್ದೂರ್ ಮತ್ತು ಇವರ ಮಕ್ಕಳಾದ ಟಿಪ್ಪುಸುಲ್ತಾನರವರಿಂದ ಒದಗಿದ್ದ ವಿಪತ್ತು ಪರಿಹಾರವಾಗಿ ಇಂಗ್ಲೀಷರ ಆಶ್ರಯದಿಂದ ಮಹಾರಾಜರ ವಂಶದವರೂ ಅವರ ಪಾಲನೆಗೆ ಒಳಪಟ್ಟ ಪ್ರಜೆಗಳೂ ಸುಖ ಸಂಪತ್ತುಗಳನ್ನು ನೂರು ವರುಷಗಳಿಂದಲೂ ಅನುಭವಿಸುತ್ತಾ ಬಂದಿರುವದನ್ನು ಕೇಳಿದವನಾಗಿಯೂ, ಈಗ ಅರವತ್ತು ವರುಷಗಳಿಂದ ನೋಡಿ ಅನುಭವಿಸಿದವನಾಗಿಯೂ ಇರುವ ವೃದ್ಧನಾದ ನಾನು, ನನ್ನ ಹಿಂದಣ ಪುರಾಣಗಳಿಗೆ ಹೋಲಿಸಿ ನೋಡುವುದರಲ್ಲಿ ಈಗಿನ ಆಳ್ವಿಕೆಯು ಶ್ರೀರಾಮನ ಕಾಲದ ಚರಣಕ್ಕೆ ಸಮಾನವಾದದ್ದಾಗಿರುತ್ತೆಂದು ನಿಸ್ಸಂಶಯವಾದ ಪ್ರಮಾಣದಿಂದ ಧೈರ್ಯವಾಗಿ ಹೇಳುತ್ತೇನೆ. ಈ ಹೇಳಿಕೆಯನ್ನು ಈಗಿನ ವಿದ್ಯಾವಂತರಾದ ಯೌವನಸ್ಥರ ಪೈಕಿ ಕೆಲವರು ಮಾತ್ರ ಒಪ್ಪದೆ ಹೋದರೆ ಅವರು ಕೊಂಚ ತಾಳ್ಮೆಯಿಂದ ಹಿಂದೆ ಪ್ರಜೆಗಳ ಮಾನ ಪ್ರಾಣ ಧನಗಳು ಈ ರಾಜ್ಯವನ್ನು ವಿಭಾಗಮಾಡಿಕೊಂಡು ಪರಿಪಾಲಿಸುತ್ತಿದ್ದ ಪಾಳ್ಯೇಗಾರರ ಕ್ರೂರ ಅಪಚಾರಗಳಿಂದಲೂ, ಅನಂತರ ದೇಶೀಯ ರಾಜರ ಅಶಕ್ತತೆಯ ಕಾರಣದಿಂದಲೂ, ಈಚಿನ ಮುಸಲ್ಮಾನ ಪ್ರಭುಗಳ ದವಲತ್ತಿನ ಅಘೋರ ನಡವಳಿಕೆಗಳಿಂದಲೂ ಎಷ್ಟರಮಟ್ಟಿಗೆ ನಾಶವಾಗುತ್ತಿದ್ದುವೆಂಬುವದನ್ನು ಪೂರ್ವಿಕರಿಂದ ಕೇಳಿ ಚರಿತ್ರೆಗಳನ್ನು ಓದಿದರೆ ವ್ಯಕ್ತವಾಗುತ್ತೆ.

ಹರಿಶ್ಚಂದ್ರ ರಾಮಾದಿಗಳ ರಾಜ್ಯಭಾರಗಳಲ್ಲಿ ಅವರು ಮತಾಂತರಗಳ ತಾರತಮ್ಯ ವಿಷಯದಲ್ಲಿ ಪ್ರೋತ್ಸಾಹಕೊಡುತ್ತಿದ್ದರೆಂತಲೂ, ಈಗ ಇಲ್ಲವೆಂತಲೂ ಕೆಲವು ಜನರು ಹೇಳುವದಾದರೆ, ಜನಗಳ ಸ್ವತಂತ್ರವನ್ನು ಸರ್ವಪ್ರಕಾರದಿಂದಲೂ ಕಾಪಾಡಬೇಕೆಂಬ ಧರ್ಮಸಂಕಲ್ಪವುಳ್ಳ ಇಂಗ್ಲಿಷ್ ಪ್ರಭುತ್ವದಲ್ಲಿ ಯಾವ ವಿಧದ ಬಲಾತ್ಕಾರವೂ ಇಲ್ಲದೆ, ಅವರವರ ಇಷ್ಟಾನುಸಾರವಾದ ಮತವನ್ನು ಅಂಗೀಕರಿಸಬಹುದೆಂಬ ನಿಯಾಮಕವೇ ವಿನಹಾ ಅವರವರ ಮತಾನುಸಾರ ಪಾರ ಲೌಕಿಕ ಕೃತ್ಯಗಳನ್ನೂ ಧರ್ಮಗಳನ್ನೂ ಆಚಾರಗಳನ್ನೂ ಬಿಡಬೇಕೆಂದು ಯಾರಾದರೂ ನಿರ್ಬಂಧಪಡಿಸುವದಕ್ಕೆ ಅವಕಾಶ ಕೊಡದಂತೆ ಕಾನೂನುಗಳನ್ನು ಏರ್ಪಡಿಸಿರುವ ಈಗಿನ ಪ್ರಭುತ್ವವೂ ಸರ್ವೋತ್ಕೃಷ್ಟವಾದದ್ದೆಂದು ನಿರ್ಧರಿಸಲು, ಈ ದೇಶದಲ್ಲಿ ಹಿಂದೆ ಯಾವ ಮತದವರು ಪ್ರಬಲರಾದರೆ ಇನ್ನೊಂದು ಮತದ ಜನರನ್ನೂ ಅವರ ಗ್ರಂಥಗಳನ್ನೂ ಧರ್ಮಗಳನ್ನೂ ಸಾಧ್ಯಂಗವಾಗಿ ನಾಶಮಾಡಿ ಬಿಡುತ್ತಿದ್ದರೆಂಬ ಅಂಶವು ದೃಷ್ಟಾಂತವಾಗಿರುತ್ತೆ

ಇನ್ನೂ ದೃಷ್ಟಾಂತವಾಗಿ ಸ್ವದೇಶವಾತ್ಸಲ್ಯಕ್ಕಾಗಿ ನಾವು ಈಗ ಮಹತ್ಪ್ರಯತ್ನ ಮಾಡಬೇಕೆಂದು ಪ್ರಜೆಗಳನ್ನೂ, ಅವರ ಪ್ರಯತ್ನವನ್ನೂ ಸ್ಥಾಪಿಸುತ್ತಾ ಇರುವ ಈ ದೇಶದ ವರ್ತಮಾನ ಪತ್ರಿಕೆಗಳ ಬರವಣಿಗೆಯು ಯುಕ್ತವಾದದ್ದು ಇದನ್ನು ಸರ್ವರೂ ಒಪ್ಪತಕ್ಕದ್ದಾಗಿದೆ ಇದಕ್ಕೆ ಇಂಗ್ಲೀಷರು ಸಹಾ ತಕ್ಕ ಪ್ರೋತ್ಸಾಹ ಕೊಡುತ್ತಾ ಸಹಾಯಮಾಡುತ್ತಾ ಇದ್ದಾರೆಂಬುವದನ್ನು ಅನೇಕ ದೃಷ್ಟಾಂತಗಳಿಂದ ತೋರ್ಪಡಿಸಬಹುದು ಆದರೆ ಸದ್ಯದಲ್ಲಿ ಈ ದೇಶೀಯರಿಗೆ ಸ್ವಜನರಿಂದ ಪ್ರಯೋಜನವಾಗುವದು ಕಷ್ಟವೆಂದು ಕಾಣುತ್ತದೆ. ದೃಷ್ಟಾಂತವಾಗಿ ಬೆಂಗಳೂರು "ಭಾರತಿ" ಎಂಬ ಜೂಲೈ ೧೪ನೇ ತಾ. ಪತ್ರಿಕೆಯ ೫ನೇ ಪೇಜಿನ ಕೊನೇ ಭಾಗದಲ್ಲಿ ಬೆಂಗಳೂರು ಲಷ್ಕರ್ ಮುನಿಸಿಪಲ್ ಬಿಡ ನೌಕರರಿಗೆ ಕ್ಷಾಮದ ಅಲೋವೆನ್ಸು ಕೊಡಬೇಕೆಂಬ ಚರ್ಚೆ ಉಂಟಾದಾಗ ದೇಶೀಯ ಮೆಂಬರುಗಳು ಮೀಟಿಂಗಿನಲ್ಲಿ ನಿಷೇಧಿಸಿ ಬಿಟ್ಟು ಹಾಕಿದರೆಂತಲೂ, ಇತರ ಇಂಗ್ಲೀಷ್ ಮೆಂಬರೊಬ್ಬರು ಹಟ ಹಿಡಿದು ವಾದಿಸಿ ಮೀಟಿಂಗಿನಲ್ಲಿ ಈ ಸಹಾಯ ಕೊಡುವಂತೆ ಮಂಜೂರ್ಮಾಡಿಸಿದರೆಂತಲೂ ಬರೆದಿರುವದನ್ನು ಓದಿದೆನು ಇದು ನಮ್ಮ ದೇಶೀಯರು ಅನಾಥರನ್ನು ತಾಕಿಸು ಹಿಡಿಸುವ ದುರಭಿಪ್ರಾಯದ ಅನಾದಿ ರೋಗಕ್ಕೆ ಇಂಗ್ಲೀಷರ ದಯಾರಸವೆಂಬ ಚಿಕಿತ್ಸೆ ಇಲ್ಲವಾದರೆ ಈ ದೇಶದ ಕಷ್ಟಜೀವಿಗಳ ಗತಿ ಏನಾಗುತ್ತಿತ್ತೆಂಬುವದನ್ನು ತೋರ್ಪಡಿಸುವದು ಈ ಆಷಾಢಶುದ್ಧ ದ್ವಾದಶೀ ಶನಿವಾರದ "ಸಡೆಗನ್ನಡಿ"ಯ ೨ನೇ ಪೇಜಿನ ಮೊದಲನೇ ಭಾಗದಲ್ಲಿ ಧರ್ಮಕಾರ್ಯಗಳ ಬಾಬನ್ನೇ ವಿವರಿಸಿ, ಈ ದೇಶೀಯ ಹಣಗಾರರಿಗಿಂತ ಯುರೋಪ್ಯರೇ ಹೆಚ್ಚಾಗಿ ಸಹಾಯ ಮಾಡುವರೆಂತಲೂ, ಸ್ಥಾನಿಕರ ಸಹಾಯಕ್ಕೆ ಎತ್ತಿ ಹಿಡಿಗ ಅದಕ್ಕೆ ಮೊದಲು ಯೂರೋಪ್ಯರೇ ಕಈ ಕೊಟ್ಟರಲ್ಲದೆ ನಮ್ಮ ದೇಶೀಯರು ಕೊಡಲಿಲ್ಲವೆಂತಲೂ ಬರೆದಿರುವದನ್ನು ನೋಡಿ, ನಿಷ್ಪಕ್ಷಪಾತವಾಗಿ ಯೋಚಿಸಿದರೆ ನಮ್ಮ ದೇಶದ ಹಣಗಾರರಿಗಿಂತಲೂ ಇಂಗ್ಲೀಷರ ಕನಿಕರವೂ, ತ್ಯಾಗಮಾಡುವ ಧಾರಳವೂ ಹೆಚ್ಚೆಂದು ಯಾರು ತಾನೇ ಹೊಗಳದೇ ಇದ್ದಾರು! ಮತ್ತು ಅದೇ ಪತ್ರಿಕೆಯ ೪ನೇ ಪೇಜಿನ ಮಧ್ಯ ಕಲಮಿನಲ್ಲಿ ವಿಲಾಯತಿಯಲ್ಲಿ ವೃದ್ಧರ ಜೀವನಕ್ಕಾಗಿ ಸರ್ಕಾರದವರೇ ವರ್ಷ ಕೊಡುವಂಥಾ ಉದಾರವಾದ ಏರ್ಪಾಡನ್ನು ಮಾಡಿರುವಂತೆಯೂ, ಇತರ ಯಾವ ಸರ್ಕಾರದವರೂ ಮಾಡಿಲ್ಲವೆಂತಲೂ ನಮೂದಿಸಿ ಇರುವದು

ಇಂಥಾ ನೈಜವಾದ ಅನೇಕ ದೃಷ್ಟಾಂತಗಳಿಂದ ಇಂಗ್ಲೀಷ್ ಪ್ರಭುತ್ವವನ್ನು ಸ್ಥಾಪಿಸಿ, ನಮ್ಮ ದೇಶದ ತರುಣರು ರಾಜಭಕ್ತಿಯುಕ್ತರಾಗಿ, ಇಂಗ್ಲೀಷರಿಂದ ಕಲಿತಿರುವ ವಿದ್ಯೆಯನ್ನು ವಿವೇಕದಿಂದ ಉಪಯೋಗಿಸುತ್ತಾ, ತಮ್ಮ ದೇಶಕ್ಕೂ, ತಮಗೂ ಮೇಲುಂಟಾಗುವಂತೆಯೂ, ಇದು ಪರಕ್ಕೆ ಸಾಧಕವಾಗುವಂತೆಯೂ ನಡೆಯಬೇಕೆಂದು ಬೋಧಿಸುವದಕ್ಕೆ ನಮ್ಮ ದೇಶೀಯ ಪತ್ರಿಕೆಗಳೂ, ತಾಳ್ಮೆಯಿಂದ ಕೂಡಿದ ಮಹನೀಯರೂ ಪ್ರಯತ್ನಿಸಿ, ಸ್ವದೇಶವನ್ನು ವೃದ್ಧಿಪಡಿಸುವಂತೆ ಅವರಿಗೆ ಭಗವಂತನು ಬುದ್ಧಿ ಕೊಡಬೇಕೆಂಬುವದೇ ನಮ್ಮಗಳ ಪ್ರಾರ್ಥನೆಯಾಗಿರಬೇಕೆಂದು ಸಭ್ಯ ಜನರು ಕೋರುತ್ತಾ ಇದ್ದಾರೆ

ಇಂಡಿಯಾ ಚಕ್ರವರ್ತಿಯವರ ಪ್ರತಿನಿಧಿಯಾಗಿ ಬಂದ ಅನೇಕ ವೈಸ್‌ರಾಯ್ ಸಾಹೇಬರುಗಳಲ್ಲಿ ಲಾರ್ಡ್ ಕರ್ಜನ್ ಪ್ರಭುಗಳೇ ಪ್ರಬಲವಾದ ಯೋಚನಾಪರರಾದ ಬುದ್ಧಿಶಾಲಿಗಳೆಂದೂ ಎಲ್ಲರೂ ಒಪ್ಪತಕ್ಕದ್ದಾಗಿದ್ದಾಗ್ಯೂ, ಅವರ ಕೃತ್ಯಗಳನ್ನು ನಿಂದಿಸುತ್ತಾ, ಅವರಿಂದಲೇ ಅಸಮಾಧಾನಕ್ಕೆ ಆಸ್ಪದವುಂಟಾಯಿತೆಂದು ದೇಶೀಯ ಪತ್ರಿಕೆಗಳು ಬರೆಯುವದನ್ನು ನೋಡಿ ನಾನು ಬಹಳ ಸಂಕಟಪಡುತ್ತೇನೆ ಅವರ ಏರ್ಪಾಡುಗಳೆಲ್ಲಾ ಯೋಚಿಸಿ ನೋಡುವದರಲ್ಲಿ ಇಂಡಿಯಾ ದೇಶದ ಸಮಸ್ತರಿಗೂ ಒಳ್ಳೇದಾಗಬೇಕೆಂಬುವದೇ ಅವರ ದೃಢಸಂಕಲ್ಪವಾಗಿತ್ತೆಂದು ನಿಶ್ಚಯಿಸುವದಕ್ಕೆ ಅನೇಕ ದೃಷ್ಟಾಂತಗಳು ಇರುವದರ ಪೈಕಿ ಒಂದಾದ ಉಪ್ಪಿನ ತೆರಿಗೆಯನ್ನು ಕಡಮೆ ಮಾಡಿ ಸರ್ಕಾರದ ಆದಾಯಕ್ಕೆ ಕುಂದಕ ಪಡಿಸಿದರು. ಪ್ರತಿ ಮನುಷ್ಯನ ಜೀವನಾಧಾರವಾಗಿ ಉಪಯೋಗಿಸುವ ಆಹಾರ ವಸ್ತುಗಳಲ್ಲಿ ಮುಖ್ಯವಾದ ಉಪ್ಪೆಂಬ ಪದಾರ್ಥವು ಮಾಗು ಪ್ರಾಣಿಗಳಿಗೆ ಸದಾ ಉಪಯೋಗವಾಗುತ್ತಿರುವದರಿಂದ ಇಂಥಾ ಉಪ್ಪು ರೂಪಾಯಿಗೆ ೧೦ ಸೇರಿನೊಳಗೆ ಸಿಕ್ಕುತ್ತಿದ್ದದ್ದು ಇಷ್ಟಕ್ಕೆ ಸೇರಿನ ವರೆಗೂ ಅಗ್ಗವಾಗಿ ಮಾರುವಂತೆ ಮಾಡಿದಾರೆ ಈ ಮಹದುಪಕಾರವು ಐಶ್ವರ್ಯವಂತರಿಗೆ ತೋರದೆ ಅವಕಾಶವಿಲ್ಲವಾದರೂ ಈ ದೇಶದ ಜನರಲ್ಲಿ ಅರ್ಧ ಭಾಗಕ್ಕಿಂತಲೂ ಹೆಚ್ಚಾಗಿರುವ ಬಡ ಪ್ರಜೆಗಳ ಅಪಾರವಾದ ಸಂತೋಷದ ಸ್ಥಾಪನೆಗೆ ವಿಷಯವಾಗಿರುತ್ತದೆ ಈ ಮಹನೀಯರ ಸುಗುಣಗಳನ್ನು ಯಾರು ತಾನೇ ಕೊಂಡಾಡದೆ ಇದ್ದಾರು!

ತಾಲ್ಲೋಕು ವರ್ತಮಾನಗಳು.

ಚಿತ್ರದುರ್ಗ.—ಈಗ್ಗೆ ತಿಂಗಳಿಂದ ಮೋಡ ಮುಚ್ಚಿಕೊಂಡು ಗಾಳಿ, ಸೋನೇ ಮಳೆಗಳಿಂದ ಶೀತ ಜಾಸ್ತಿಯಾಗಿ ಜನರಲ್ಲಿ ನೆಗಡಿ, ಕೆಮ್ಮು, ಛಳಿ, ಜ್ವರ ಇವು ಉಂಟಾಗಿವೆ—ಸ್ವಲ್ಪ ದಿವಸದಿಂದ ಮ್ಯುನಿಸಿಪಾಲಿಟಿಯವರು ಸಂದಿಗಳು ಮೊದಲ್ಗೊಂಡು ಕೈರೋಡುಗಳು ಸಹ ಚನ್ನಾಗಿ ಶುಚಿಮಾಡಿಸುತ್ತಿದ್ದಾರೆ ವಿಶೇಷವಾಗಿ ಡೆಪ್ಯುಟಿ ಕಮೀಷನರವರು ಟೌನಿನಲ್ಲಿ ದಯಮಾಡಿಸಿ ಪ್ರಜೆಗಳ ಸೌಖ್ಯ, ಆರೋಗ್ಯ ಸ್ಥಿತಿಗಳನ್ನು ವಿಚಾರಿಸುವರು. ಆದರೆ ಎಲ್ಲಾ ಜನಗಳ ಪಾನಕ್ಕೆ ಉಪಯೋಗವಾಗಿರತಕ್ಕ ನಲ್ಲಿಗಳ ಬಳಿ ಮುಸರೆ ತೊಳೆಯುವುದೂ, ಬಟ್ಟೆ ಒಗೆಯುವುದೂ ಮಾತ್ರ ತಪ್ಪಲಿಲ್ಲ — ಮ್ಯುನಿಸಿಪಲ್ ಆಫೀಸರುಗಳು ವರ್ತಕರ ಮನೆಗಳಲ್ಲಿ ದಾಸ್ತಾನ್ ಇರತಕ್ಕ ತಂಬಾಕು ಮುಂತಾದ ಮ್ಯುನಿಸಿಪಲ್ ಹಸಲಿಗೆ ಸಂಬಂಧಪಟ್ಟ ಪದಾರ್ಥಗಳಿಗೆ ಮೊಹರು ಮಾಡಿ ಜಾಮೀನು ತೆಗೆದುಕೊಳ್ಳುವುದರ ದ್ವಾರ ಮೊಹರಾದ ಗಂಟು ಅವರವರ ಪಾಳ್ಯಕ್ಕೇನೇ ಕೊಟ್ಟು ಹೋಗುತ್ತಾರೆಂದು ಜನಗಳು ಹೇಳಿಕೊಳ್ಳುತ್ತಾರೆ — ಭಾರೀ ರೈತನಾದ ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ, ಜಗಳೂರು ಹಳ್ಳಿ ವಾಸಸ್ಥ ರೆಡ್ಡಿಗರ ಅಷ್ಟರಂಗಪ್ಪನ ಮಗ ರಂಗಪ್ಪನೂ ಈತನ ಬಂಧುಗಳು ಸಹ ೮—೧೦ ದಿನ ಬೆಂಗಳೂರಿಗೆ ಹೋಗಿ ದಿವಾನರವರನ್ನೂ ಕೌನ್ಸಿಲರನ್ನೂ ಕಂಡು ಅಹವಾಲ್ ಹೇಳಿಕೊಂಡು ಅರ್ಜಿಕೊಟ್ಟದ್ದಕ್ಕೆ ಸೆಕ್ರೆಟರಿಯವರು ರಿಕಾರ್ಡು ನೋಡಿ ಹುಕುಂ ಕಳುಹಿಸುತ್ತೇವೆಂತ ಅಪ್ಪಣೆ ಕೊಡಿಸಿದ್ದರಿಂದ ಅವರು ವಾಪಸು ಬಂದುಬಿಟ್ಟರು.

ಹೊಸಕೋಟೆ.—ಹೊಸಕೋಟೆಯಲ್ಲಿದ್ದ ಪೋಸ್ಟ್ ಮಾಸ್ಟರ್ ಸಿ. ಸುಬ್ರಹ್ಮಣ್ಯಯ್ಯರು ಇಲ್ಲಿಗೆ ಬಂದು ಎರಡು ವರುಷ ಆರು ತಿಂಗಳಾಯಿತು. ಇವರು ಈ ಊರಿನ ಜನಗಳಲ್ಲಿ ಪ್ರೀತಿಯುಳ್ಳವರಾಗಿಯೂ ಸ್ನೇಹಪರರಾಗಿಯೂ ವಿಶ್ವಾಸವುಳ್ಳವರಾಗಿಯೂ ಇದ್ದರು ಇವರಿಗೆ ಕೋಲಾರಕ್ಕೆ ವರ್ಗವಾಯಿತೆಂಬ ಸುದ್ದಿ ಕೇಳಿದ ಕೂಡಲೇ ಗ್ರಾಮಸ್ಥರಿಗೂ ಸ್ನೇಹಿತರಿಗೂ ವ್ಯಸನ ಉಂಟಾಯಿತು ಇವರ ಸ್ನೇಹಿತರಲ್ಲಿ ಓವರ್ಸಿಯರ್, ಡಾಕ್ಟರ್, ತಾಲ್ಲೂಕು ಮೇಜಿಸ್ಟ್ರೇಟ್‌ರವರು ಇವರನ್ನು

ಸಂತೋಷಪಡಿಸುವದಕ್ಕೋಸ್ಕರ ಜೂಲೈ ೩೦ ನೇ ತಾ. ಶುಕ್ರವಾರ ಸಾಯಂಕಾಲ ಟೌನ್ ಹಾಲನ್ನು ಅಲಂಕರಿಸಿ ನೇಟಿವ್ ಬ್ಯಾಂಡಿನಿಂದ ಅವರನ್ನು ಮನೆಯಿಂದ ಕರೆದುಕೊಂಡು ಬಂದು ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು. ಈ ಸಭೆಗೆ ಸರ್ಕಾರಿ ಉದ್ಯೋಗಸ್ಥರು ಕೂಡಿ ಬಂದಿದ್ದರು. ಕೂಡಲೇ ಗ್ರಾಮೊಫೋನಿಂದ ಸಂಗೀತವು ಹಾಡಲ್ಪಟ್ಟು ಸರ್ವರಿಗೂ ಕರ್ಣಾನಂದವಾಯಿತು. ಅನಂತರ ಫಲಹಾರಗಳು ಹಂಚಲ್ಪಟ್ಟವು. ಪೋಸ್ಟು ಮಾಸ್ಟರಿಗೆ ತಟ್ಟೆಯಲ್ಲಿ ತಾಂಬೂಲವನ್ನು ಕೊಟ್ಟು ಪುಷ್ಪಮಾಲೆಯನ್ನು ಹಾಕಿದರು. ಮತ್ತು ಸಭೆಯಲ್ಲಿದ್ದ ಸರ್ವರಿಗೂ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟವು. ಅನಂತರ ಅವರ ಸ್ನೇಹಿತರಲ್ಲಿ ಒಬ್ಬರು ಅವರ ಗುಣ ನಡತೆ ವಿಷಯವಾಗಿ ಸ್ವಲ್ಪ ತಿಳಿಸಿದರು. ಸಬ್ ಓವರ್ಸಿಯರು ಸ್ವಲ್ಪ ಮಾತನಾಡಿದರು. ಆ ಮೇಲೆ ಪೋಸ್ಟು ಮಾಸ್ಟರು ಎದ್ದು "ನನ್ನಲ್ಲಿ ಏನಾದರೂ ತಪ್ಪು ಇದ್ದರೆ ತಾವು ಎಲ್ಲರು ದಯಮಾಡಿ ಕ್ಷಮಿಸಬೇಕು" ಎಂದು ಕೇಳಿಕೊಂಡರು. ಇವರಿಗೆ ಬದಲಿ ಬಂದಿರತಕ್ಕ ಪೋಸ್ಟು ಮಾಸ್ಟರ್ ಆರ್. ವೆಂಕಟರಾಮರು ಇವರಂತೆಯೇ ಗ್ರಾಮಸ್ಥರಲ್ಲಿ ಒಳ್ಳೇ ಹೆಸರನ್ನು ಹೊಂದಿ ಪ್ರೀತಿ ವಿಶ್ವಾಸಪಾತ್ರರಾಗಿದ್ದಾರೆಂದು ನಂಬುತ್ತೇವೆ.

ಚನ್ನಪಟ್ಟಣ.—ಇಲ್ಲಿನ ಹವಾ ತಕ್ಕಮಟ್ಟಿಗೂ ಆರೋಗ್ಯಕರವಾಗಿದೆ. ಕೆಲವು ದಿನಗಳಿಂದಲೂ ಸೂರ್ಯ ರಶ್ಮಿಯು ಕಾಣದೆ ಮೋಡಗಳಾಡುತ್ತಾ, ಆಗಾಗ್ಗೆ ಜಡಿಯಂಥಾ ಮಳೆಯು ಬರುತ್ತಾ ಇದೆ.— ಕಳೆದ ೩೦ನೇ ಸಾಯಂಕಾಲ ಇಲ್ಲಿನ ಇಂಗ್ಲಿಷ್ ಹೈ ಸ್ಕೂಲಿನಲ್ಲಿ, ಚನ್ನಪಟ್ಟಣದ ಸರ್ಕಾರಿ ಇಂಡಸ್ಟ್ರಿಯಲ್ ಸ್ಕೂಲ್ ಬಾಲಕರಿಗೆ ಬಹುಮಾನಗಳನ್ನು ಕೊಡುವದಕ್ಕಾಗಿ ಒಂದು ಮೀಟಿಂಗ್ ಮಾಡಲಾಯಿತು. ಸಬ್ ಡಿವಿಜನ್ ಆಫೀಸರ್ ಮ॥ ಚಾಕ್ಕಣ್ಣನವರು ಸಭೆಯ ಅಗ್ರಾಸನವನ್ನು ಅಲಂಕರಿಸಿದರು. ತಾಲ್ಲೋಕ್ ಅಮಲ್ದಾರರೂ, ಶ್ಕೋನ್ಸ್ ಪಟ್ಟಿ ಡೆಪ್ಯುಟಿ ಅಮಲ್ದಾರರೂ, ಹೈ ಸ್ಕೂಲ್ ಹೆಡ್ ಮಾಸ್ಟರವರೂ, ಲಾಯರುಗಳೂ, ಸರ್ಕಾರಿ ಉದ್ಯೋಗಸ್ಥರೂ, ವರ್ತಕ ಸಾಹುಕಾರರುಗಳೂ, ಜನಾನ ಆಸ್ಪತ್ರೆಯ ಲೇಡಿ ಡಾಕ್ಟರುಗಳೂ ಬಹು ಜನ ಸಭೆಯನ್ನಲಂಕರಿಸಿದ್ದರು. ಇಂಡಸ್ಟ್ರಿಯಲ್ ಸ್ಕೂಲ್ ಸೂಪರಿಂಟೆಂಡೆಂಟರಾದ ಮ॥ ಭಾಷಾಸಾಬ್ ವಿನಯಕರವಾದ ಸದರಿ ಸ್ಕೂಲ್ ರಿಪೋರ್ಟನ್ನು ಓದಿ ಈ ಸ್ಕೂಲಿನಿಂದ ಈ ತಾಲ್ಲೋಕಿಗೂ, ದೇಶಕ್ಕೂ ಉಂಟಾಗಿರುವ ಪ್ರಯೋಜನಗಳನ್ನೂ ಮುಂದೆಯೂ ಈ ಸ್ಕೂಲಿಗೆ ಸೇರುವ ಹುಡುಗರಿಗಿರುವ ಸೌಕರ್ಯಗಳನ್ನೂ ವಿವರವಾಗಿ ತಿಳಿಸಿ, ಮುಂದೆ ಸರ್ಕಾರದವರ ಪ್ರೋತ್ಸಾಹ ಸಹಾಯಗಳಿಂದ ಸ್ಕೂಲಿಗೆ ಅನುಕೂಲವಾದ ಒಂದು ಹೊಸ ಕಟ್ಟಡವನ್ನು ನಿರ್ಮಿಸುವದಾಗಿ ತಿಳಿದರು. ಅನಂತರ ತೇರ್ಗಡೆಯಾದ ಬಾಲಕರಿಗೆ ಅವರವರ ಕೆಲಸಕ್ಕನುಕೂಲವಾದ ವಸ್ತುಗಳನ್ನೇ ಅಗ್ರಾಸನಾಧಿಕಾರಿಗಳಿಂದ ಬಹುಮಾನವಾಗಿ ಕೊಡಲ್ಪಟ್ಟವು. ಗ್ರಾಮಫೋನ್ ಯಂತ್ರದಿಂದ ಇಂಪಾದ ಗಾನವಾಯಿತು. ತರುವಾಯ ಅಗ್ರಾಸನರಿಂದ ಸಭಿಕರಿಗೂ ಬಾಲಕರಿಗೂ ಯುಕ್ತವೂ ಪ್ರೋತ್ಸಾಹಕರವೂ ಆದ ಭಾಷಣವಾಯಿತು. ಪುಷ್ಪಹಾರಗಳು ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು.— ಈ ತಾಲ್ಲೋಕಿನ ನಮ್ಮ ಪೋಲೀಸ್ ಇನ್ಸ್‌ಪೆಕ್ಟರಿಗೆ ಪೆನ್ಷನ್ ಆಗಿರುವದಾಗಿಯೂ, ಪೂರ್ವದಲ್ಲಿದ್ದ ಮ॥ ಸುಬ್ರಹ್ಮಣ್ಯಯ್ಯರ್ ಎಂಬವರೇ ಇಲ್ಲಿನ ಪೋಲೀಸ್ ಅಧಿಕಾರಿಗಳಾಗಿ ಬರುವರೆಂಬುದಾಗಿಯೂ ತಿಳಿದು ಬರುತ್ತೆ.

ಅರಸೀಕೆರೆ. ಈ ಪ್ರಾಂತ್ಯದಲ್ಲಿ ಚಿತ್ತನೆ ಪ್ರಾರಂಭವಾಗಿದೆ. ಸೋನೆ ಪ್ರಕೃತಿಯ ಸ್ವಲ್ಪವಾಗಿ ಬೀಳುತ್ತದೆ. ಪ್ರಜಾ ಆರೋಗ್ಯ ಸುಮಾರಾಗಿದೆ. ಹೊಸದಾಗಿ ಬಂದಿರುವ ಅಮಲ್ದಾರವರು ಬಹು ಚಟುವಟಿಕೆಯಾಗಿ ತಮ್ಮ ಕಾರ್ಯಗಳನ್ನು ನೋಡುತ್ತಿರುವರಲ್ಲದೆ ಆಗಾಗ್ಗೆ ಮುನಿಸಿಪಲ್ ಕೆಲಸಗಳನ್ನೂ ಪೂರಾ ನಿಗಾಕೊಡುವಂತೆ ತೋರುತ್ತೆ. ಇವರ ಕಾಲದಲ್ಲಿ ಅರಸೀಕೆರೆಯ ಕೊಳಕು ನಿವಾರಣೆಯಾಗುವದೆಂಬ ನಿರೀಕ್ಷೆಯುಂಟು.— ಈ ಅರಸೀಕೆರೆಯು ಹೆಂಡ ಕುಡಿಯುವವರಿಗೆ ಬಹು ಮುಖ್ಯವಾದದ್ದು. ಆದ್ದರಿಂದ ಅನೇಕರು ಅದನ್ನು ಪ್ರೀತಿಸುತ್ತಾರೆ. ಆದರೆ ಹೆಂಡದಂಗಡಿ ಬಳಿ ಯಾವಾಗಲೂ ಕಲಹಗಳುಂಟು. ಪೋಲೀಸಿನವರ ದೃಷ್ಟಿಯನ್ನು ಅತ್ತಲಾಗಿ ಸ್ವಲ್ಪ ತಿರುಗಿಸಿದರೆ ವಾಸಿ. ಧಾರಣೆವಾಸಿ ಯಥಾಪ್ರಕಾರವಾಗಿದೆ. ರಾಗಿ ರೂಪಾಯಿಗೆ ೧೬ ಸೇರು, ಅಕ್ಕಿ ೬ ಸೇರು ಮಾರುತ್ತೆ.— ಈ ಊರಲ್ಲಿರುವ ಸರ್ಕಾರಿ ಬಾಲಿಕಾ ಪಾಠಶಾಲೆಯಲ್ಲಿ ಹುಡುಗಿಯರಿಗೆ ಹೊಲಿಗೆ ಕಲಿಸುವದಕ್ಕೆ ಒಬ್ಬ ಹೆಂಗಸನ್ನು ಸರ್ಕಾರದವರು ನೇಮಿಸುವರಾದರೆ ತುಂಬಾ ಅನುಕೂಲ.—ಸ್ಥಳಿಕ ದೊಡ್ಡಮನುಷ್ಯರು ಮುಖ್ಯವಾಗಿ ಮ್ಯಾನೇಜಿಂಗ್ ಕಮಿಟಿಯವರು ದಯಮಾಡಿ ಇದಕ್ಕೆ ಗಮನಕೊಡುವದು ವಾಸಿ.— ಈ ಊರಿನ ಸಂತೆ ದೊಡ್ಡದು. ಆದರೆ ಪಸಿಕ್ ಎತ್ತುವವರ ಕಾಟ ಜಾಸ್ತಿಯಾಗಿದೆ. ಎಂತಲೂ ಹೊಸದಾಗಿ ಅಂಗಡಿ ಇಟ್ಟುಕೊಂಡಿರುವ ಕೆಲವು ವರ್ತಕರಲ್ಲಿ ಎರಡು ವಿಧ ಸೇರುಗಳೂ ಕಮ್ಮಿ ಬೊಟ್ಟುಗಳೂ ಉಂಟೆಂತಲೂ ಸ್ವಲ್ಪ ಪುಕಾರಿಗೆ ಬಂದಿದೆ. ಶೀಘ್ರವಾಗಿ ವರ್ತಕರು ಕಮ್ಮಿ ದೊಡ್ಡ ಸೇರುಗಳ ವಿಷಯ ಎಚ್ಚರಿಕೆ ತಂದುಕೊಳ್ಳದೆ ಹೋದರೆ ಅಕಸ್ಮಾತ್ ಪೋಲೀಸಿನವರ ದೃಷ್ಟಿ ಬೀಳಬಹುದು.—ಮುನಿಸಿಪಲ್ ಲಾಂದ್ರಗಳಿಗೆ ಕಮ್ಮಿ ತರದ ಕೆಂಪು ಎಣ್ಣೆ ಉಪಯೋಗಿಸುವದರಿಂದ ಚಿಮಣಿಗಳೆಲ್ಲಾ ಶೀಘ್ರವಾಗಿ ಕಪ್ಪಾಗಿ ಹೊಗೆ ತುಂಬಿ ಪ್ರಕಾಶ ಬಹು ಮಬ್ಬಾಗುತ್ತದೆ. ಆದ್ದರಿಂದ ಬಿಳೀ ಎಣ್ಣೆಯನ್ನು ಉಪಯೋಗಿಸುವದು ವಾಸಿ.—ಕೆಲವು ವಾರಗಳಿಂದಲೂ ಇಲ್ಲಿ ಜಡಿ ಮಳೆ ಪ್ರಾರಂಭಿಸಿ ಫಸಲುಗಳೆಲ್ಲಾ ಕಾಣಿದಮಟ್ಟಿಗೆ ಚನ್ನಾಗಿವೆ.— ಈ ಸಾರಿ ನಡೆದ ತಿರುಪತಿ ಜಾತ್ರೆಯಲ್ಲಿ ಪೋಲೀಸಿನವರು ತುಂಬಾ ಬಂದೋಬಸ್ತು ಮಾಡಿದರಲ್ಲದೆ ಅಲ್ಲಿ ಸೇರಿದ್ದ ವೈಶ್ಯರಿಗೂ ಬ್ರಾಹ್ಮಣರಿಗೂ ಅನುಕೂಲವಾಗಿ ಸಂತರ್ಪಣೆಗಳು ನಡೆದವು. ಅಲ್ಲಿಗೆ ಮೂವರು ವೈರಾಗಿಗಳು ಬಂದಿದ್ದರು.

ಗುಬ್ಬಿ.—ನೆನ್ನೆ ಶುಕ್ರವಾರ ಪ್ರಾತಃಕಾಲ ೪ ಘಂಟೆಗೆ ಇಲ್ಲಿ ಮಿಷನ್ ಸ್ಕೂಲ್ ಬಾಲಕಿಯರಿಗೆ ಬಹುಮಾನಗಳನ್ನು ಹಂಚಲು ಇಲ್ಲಿನ ಮಿಷನ್ ಎ. ವಿ ಸ್ಕೂಲ್ ಹಾಲಿನಲ್ಲಿ ಒಂದು ಸಭೆಯು ಸೇರಿತು. ಮಿಷನ್ ಸ್ಕೂಲುಗಳ ಸೂಪರಿಂಟೆಂಡೆಂಟ್ ಘನ ಟ್ರಿವೆಲ್ಲಾ ದೊರೆಯವರು ಮತ್ತು ಸದರಿ ಬಾಲಿಕಾ ಪಾಠಶಾಲೆಯ ಲೇಡಿ ಸೂಪರಿಂಟೆಂಡೆಂಟರಾಗಿರುವ ಮಿಸೆಸ್ ಟ್ರಿವೆಲ್ಲಾ ದೊರೆಸಾನಿಯವರು, ಸ್ಥಳೀಯ ಸರ್ಕಾರಿ ಮುಖ್ಯಾಧಿಕಾರಿಗಳು, ಶೆಟ್ಟರು, ಲಿಂಗಾಯತರು, ಮೊದಲಾದ ವರ್ತಕ ಮಹಾ ಜನಾಂಗಗಳು, ಇನ್ನು ವಿದ್ಯಾರ್ಥಿನಿಯರ ತಂದೆತಾಯಿಗಳು ಇವರೆಲ್ಲರೂ ಹಾದ್ಯ ಸಮೇತನಾದ ಉತ್ಸಾಹತೆಯಿಂದ ಬಾಲಕಿಯರು ಇಲ್ಲಿಗೆ ಬರಮಾಡಲ್ಪಟ್ಟು, ಸಭೆಯನ್ನಲಂಕರಿಸಿದ್ದರು. ಅಮಲ್ದಾರರವರು ತಮ್ಮ ಕಾರ್ಯ ಗೌರವದಿಂದ ಈ ಸಭೆಗೆ ದಯಮಾಡಿಸಲು ಕಾಲವು ದೊರೆಯಲಿಲ್ಲವಾಗಿ ಪ್ರೊ. ಇನ್. ಮ॥ ವೆಂಕಟವರದಾಚಾರ್ಯ ಈ ಸಭೆಯ ಅಗ್ರಾಸನವನ್ನು ವಹಿಸಿದ್ದರು. ರೆವ್. ಜೆಟ್. ಪ್ರೇಮಾಕಯ್ಯನವರು ದೇವರ ಪ್ರಾರ್ಥನೆ ಮಾಡಿ ಸಭಾ ಕಾರ್ಯವನ್ನು ಆರಂಭಿಸಿದರು. ಹೆಡ್ ಮಾಸ್ಟರು ಸ್ಕೂಲಿನ ರಿಪೋರ್ಟನ್ನು ಓದಿದ ನಂತರ ಕೆಲವು ಮಂದಿ ಬಾಲಕಿಯರು ಇಂಪಾಗಿ ಹಾಡಿದರು. ಬಾಲಕಿಯರ ಪರವಾಗಿ ಮಿಸೆಸ್ ಪ್ರೈಸ್‌ಮೆನ್ ದೊರೆಸಾನಿಯವರ ಸೂಚನೆಯ ಉತ್ತಮವಾದ ಒಂದು ಅಡ್ರೆಸ್ಸು ಒಬ್ಬ ವಿದ್ಯಾರ್ಥಿನಿಯಿಂದ ಓದಲ್ಪಟ್ಟು ಇವರಿಗಾಗಿ ತಮ್ಮ ಕೃತಜ್ಞತೆಯನ್ನು ತೋರಿಸಲು ತಾವು ಕಸೂತಿಕೊಂಡಿದ್ದ ಮೊಬಲಗನ್ನು ಅವರಿಗೆ ಕಳುಹಿಸಿಕೊಡುವುದಕ್ಕಾಗಿ ಮಿಸೆಸ್ ಟ್ರಿವೆಲ್ಲಾ ದೊರೆಸಾನಿಯವರ ವಶಕ್ಕೆ ಒಪ್ಪಿಸಿದರು. ಮಿಷನ್ ಸಂಘದವರು ಸ್ಕೂಲುಗಳನ್ನು ಸಂಸ್ಥಾಪನೆ ಮಾಡಿರುವುದರಲ್ಲಿ ತಮಗಿರುವ ಸದುದ್ದೇಶವನ್ನು ಕುರಿತು ಸಭಿಕರ ಮನಸ್ಸಿಗೆ ಚನ್ನಾಗಿ ಪರಿಷ್ಕಾರವಾಗುವ ಹಾಗೆ ಘನ ಟ್ರಿವೆಲ್ಲಾ ದೊರೆಯವರು ಸ್ವಲ್ಪ ಕಾಲ ಉಪನ್ಯಾಸ ಮಾಡಿದರು. ಕಡೆಗೆ ಸಭಾಧ್ಯಕ್ಷರು ತಮ್ಮ ಉಪನ್ಯಾಸವನ್ನು ಹೇಳಿದ ನಂತರ ಸ್ಕೂಲಿನ ಪಟ್ಟಿಯಲ್ಲಿರುವ ೩೦೪ ಮಂದಿ ಪೈಕಿ ಪ್ರತಿಯೊಬ್ಬ ಬಾಲಕಿಗೂ ಆಟದ ಸಾಮಾನು ಹೊಲಿಗೆ ಸಾಮಾನು ವಗೈರೆ ಬಹುಮಾನಗಳು ಕೊಡಲ್ಪಟ್ಟವು. ಹೊಲಿಗೆ ಕೆಲಸದಲ್ಲಿ ಮೇಲ್ತರವಾಗಿ ಉತ್ತೀರ್ಣವಾಗಿದ್ದ ೭ ಮಂದಿ ವಿದ್ಯಾರ್ಥಿನಿಯರಿಗೆ ವಿಶೇಷ ಬಹುಮಾನಗಳು ಸಹ ಕೊಡಲ್ಪಟ್ಟವು. ಬಂದಿದ್ದ ಸಭಿಕರಿಗೆಲ್ಲ ಗಂಧ ಪುಷ್ಪ ತಾಂಬೂಲಾದಿಗಳೂ, ಬಾಲಕಿಯರಿಗೆಲ್ಲ ಮಿಠಾಯಿ, ಹಣ್ಣು ಹಂಪಲೂ ಹಂಚಲ್ಪಟ್ಟು, ವಾದ್ಯದ ಮಂಗಳ ಸ್ವರದಿಂದ ಸಭೆಯು ಬರಖಾಸ್ತಾಯಿತು. ಸೂಪರಿಂಟೆಂಡೆಂಟರಾದ ಘನ ದೊರೆ ಮತ್ತು ದೊರೆಸಾನಿಯವರು ಮಕ್ಕಳುಗಳ ವಿದ್ಯಾಭಿವೃದ್ಧಿ, ನೀತಿ, ಧರ್ಮಾಚರಣೆ ಮೊದಲಾದವುಗಳಲ್ಲಿ ಸುಶಿಕ್ಷಿತರಾಗಬೇಕೆಂಬ ಸದುದ್ದೇಶದಿಂದ ಕೂಡಿದವರಾಗಿ ಈ ತಮ್ಮ ಸಂಕಲ್ಪವನ್ನು ನೆರವೇರಿಸಲು ಎಲ್ಲಾ ಪ್ರಯೋಜನಗಳನ್ನೂ ಮಾಡುತ್ತಾ ಬಂದಿರುತ್ತಾರೆ.

ಚಾಮರಾಜನಗರ.—ಕಳೆದ ೨೯ನೇ ತಾ ಬುಧವಾರ ಮದರಾಸ್ ಗೌರ್ನರ್ ಸಾಹೇಬರವರು ಗುಂಡ್ಲುಪೇಟೆ ಮಾರ್ಗವಾಗಿ ಕಾಲಮಾಡಿಪ್ರಾಂತ್ಯ ಹೋಗಲು ಮೋಟಾರ್ ಗಾಡಿಯಲ್ಲಿ ಮಧ್ಯಾಹ್ನ ೧ ಘಂಟೆಗೆ ಚಾಮರಾಜನಗರಕ್ಕೆ ಚಿತ್ತೈಸಿ, ಇಲ್ಲಿನ ತಾಲ್ಲೋಕ್ ಕಚೇರಿ, ಪೋಸ್ಟ್ ಆಫೀಸ್, ದೇವಸ್ಥಾನ ಮುಂತಾದ ಸ್ಥಳಗಳನ್ನೆಲ್ಲಾ ಬಹಳ ಸಂತೋಷದಿಂದ ಪರಿಕಾಂಬರಿಸಿ, ನಂತರ ಟ್ರಾವಲರ್ಸ್ ಬಂಗಲೆಯ ಮುಂಭಾಗದ ರಸ್ತೆಯಲ್ಲಿ ಸರ್ಕಾರದವರು ಮತ್ತು ಪುರಜನರು ಏರ್ಪಡಿಸಿದ್ದ ಪೆಂಡಾಲಿನಲ್ಲಿ ಸುಮಾರು ೪—೫೦ ನಿಮಿಷಗಳ ವರೆಗೂ ಗಾಡಿಯನ್ನು ನಿಲ್ಲಿಸಿದರು. ಅಲ್ಲಿ ಕಾದಿದ್ದ ಸುಜನಗೂಡಿ ಸಬ್ ಡಿವಿಜನ್ ಸಾಹೇಬರೂ, ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರೂ, ತಾಲ್ಲೋಕ್ ನೌಕರರೂ, ಪುರನಿವಾಸಿಗಳೂ ಅವರಿಗೆ ಸುಸ್ವಾಗತವನ್ನು ಬಯಸಿದರು. ವಾದ್ಯಗಳು ಭೋರ್ಗರೆಯುತ್ತಿದ್ದವು. ಗೌರ್ನರವರು ಮೋಟಾರ್ ಕಾರಿನಲ್ಲಿ ಕುಳಿತಿದ್ದ ಹಾಗೆಯೇ ಸುಜನಗೂಡು ಸಬ್ ಡಿವಿಜನ್ ಸಾಹೇಬರ ಸಂಗಡಲೂ ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರ ಸಂಗಡಲೂ ಕೆಲವು ಕುಶಲಪ್ರಶ್ನೆಗಳನ್ನು ಮಾಡಿ, ಹಸನ್ಮುಖಿಗಳಾಗಿ ಮೊಕ್ಕಾಂ ಸ್ಥಳಕ್ಕೆ ಚಿತ್ತೈಸಿದರು.—ಇಲ್ಲಿ ಎಕ್ಸೈಸ್ ಇನ್ಸ್‌ಪೆಕ್ಟರಾಗಿದ್ದ ಮ॥ ರಾಮರಾಯರಿಗೆ ವರ್ಗವಾಗಿ ಹಾಸನಕ್ಕೆ ಹೊರಟು ಹೋದರು. ಇವರನ್ನು ಇಲ್ಲೇ ನಿಲ್ಲಿಸಿಕೊಳ್ಳಬೇಕೆಂದು ಕೆಲವರು ಅರ್ಜಿಗಳ ಮೂಲಕವೂ ಬಲಿಗಾ ಮೂಲಕವೂ ಸರ್ಕಾರದವರನ್ನು ಪ್ರಾರ್ಥಿಸಿಕೊಂಡರು. ಅವರ ಯತ್ನವೇನೂ ನಡೆಯಲಿಲ್ಲ. ಈಗ ಇವರಿಗೆ ಬದಲಿ ಬಂದಿರುವ ಮ॥ ಕೃಷ್ಣಯ್ಯಂಗಾರ್ಯರು ತುಂಬಾ ವಿದ್ಯಾವಂತರಾಗಿಯೂ, ದೊಡ್ಡಮನುಷ್ಯರಾಗಿಯೂ, ಚನ್ನಾಗಿ ಕೆಲಸ ಮಾಡತಕ್ಕವರಾಗಿಯೂ ಇದ್ದಾರೆಂದು ಕೇಳುತ್ತೇನೆ.—ಇಲ್ಲಿನ ಗರ್ಲ್ ಸ್ಕೂಲ್ ಹೆಡ್ ಮಾಸ್ಟರಾಗಿದ್ದ ಮ॥ ನರಹರಿಶಾಸ್ತ್ರಿಗಳಿಗೆ ಗರ್ಗೇಶ್ವರಿಗೆ ವರ್ಗವಾಗಿ ಈ ದಿನ ಹೊರಟುಹೋದರು. ಇವರು ಒಳ್ಳೇ ವಿದ್ಯಾವಂತರಾಗಿಯೂ ಯೋಗ್ಯರಾಗಿಯೂ ಇದ್ದು ಸ್ಕೂಲಿನ ವಿಷಯದಲ್ಲಿ ತುಂಬಾ ಮುತುವರ್ಜಿಯನ್ನು ವಹಿಸಿದ್ದವರಾಗಿದ್ದರು. ಇಂಥವರು ವರ್ಗವಾಗಿ ಹೊರಟುಹೋದದ್ದಕ್ಕಾಗಿ ಅನೇಕರು ವ್ಯಸನಪಡುವವರಾಗಿದ್ದಾರೆಂದು ಕೇಳುತ್ತೇನೆ.—ಈ ಪ್ರಾಂತ್ಯ ಸರಿಯಾದ ಮಳೆ ಇಲ್ಲದೆ ಬಾವಿಗಳಲ್ಲಿ ನೀರಿಗೆ ಅಭಾವವಾಗಿದೆ. ತುಂತುರುಮಳೆಯೊಡನೆ ಕೂಡಿದ ಶೀತಗಾಳಿಯು ಜನರನ್ನು ಹಿಂಸಿಸುತ್ತಾ ಇದೆ. ಈ ಪ್ರಾಂತ್ಯ ಜೋಳದ ಫಸಲು ಕೆಲವು ಕಡೆ ಬಹಳ ಮಟ್ಟಿಗೆ ಕೆಟ್ಟುಹೋಯಿತು. ಧಾರಣೆವಾಸಿಗಳಂತೂ ಕೇಳತೀರದು.—ಇಲ್ಲಿ ಕಟ್ಟುತ್ತಿದ್ದ ಸಂತೆಯು ನಿಂತುಹೋಗಿರುವದರಿಂದ ಈ ಪ್ರಾಂತ್ಯದ ಜನರೆಲ್ಲಾ ಬಹಳ ವ್ಯಸನಪಡುತ್ತಾರೆ. ಸಂತೆ ಆಗುವಂತೆ ಸರ್ಕಾರದಿಂದ ತಾಲ್ಲೋಕಿಗೆ ಹುಕುಂ ಬಂದಿದೆ ಎಂದು ಕೇಳುತ್ತೇನೆ. ಹೀಗಿದ್ದ ಪಕ್ಷದಲ್ಲಿ ನಮ್ಮ ಅಮಲ್ದಾರರು ಸಂತೆ ಕಟ್ಟುವಂತೆ ಜಾಗ್ರತೆಯಾಗಿ ಪ್ರಯತ್ನ ಮಾಡಿ ಬಡವರಿಗೆ ಅನುಕೂಲಪಡಿಸಿಕೊಟ್ಟಾರೆಂದು ಇಲ್ಲಿನ ಬಹುಜನರು ಹಾರೈಸುತ್ತಾ ಇದ್ದಾರೆ.— ಈ ಪ್ರಾಂತ್ಯ ಸ್ವಲ್ಪ ದೂರವಾಗಿ ಕೆಲವು ಗ್ರಾಮಗಳಲ್ಲಿ ಪ್ಲೇಗು ಆವರಿಸಿಕೊಂಡಿದೆ. ಜನರು ಮನೆಗಳನ್ನು ಬಿಟ್ಟು ಜೋಪಡಿಗಳಲ್ಲಿ ವಾಸ ಮಾಡುತ್ತಾ ಇದ್ದಾರೆ.

ತೀರ್ಥಹಳ್ಳಿ ತಾ.—ಈ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ತೀರ್ಥಹಳ್ಳಿಗೆ ಸಮೀಪವಾಗಿರುವ ಮೇಗರವಳ್ಳಿಗೆ ನಾಲ್ಕು ಮೈಲಿ ದೂರದಲ್ಲಿರುವ ಗುಡ್ಡೆಕೆರೆ ಎಂಬುದೊಂದು ಗ್ರಾಮವಿರುವದು. ಇಲ್ಲಿ ವೆಂಕಪ್ಪ ಹೆಗ್ಗಡೆ ಎಂಬುವರು ಸುಮಾರು ಒಂದು ಸಾವಿರ ರೂಪಾಯಿ ಕಂದಾಯ ಕೊಡತಕ್ಕ ಆಸ್ತಿವಂತರಾಗಿಯೂ ಧರ್ಮಿಷ್ಠರಾಗಿಯೂ ಒಳ್ಳೇ ಮನೆತನದವರಾಗಿಯೂ ಮಂಜಪ್ಪ ಹೆಗ್ಗಡೆ, ಚೆನ್ನಪ್ಪ ಹೆಗ್ಗಡೆ ಮತ್ತು ಪುಟ್ಟಪ್ಪ ಹೆಗ್ಗಡೆ ಎಂಬ ಮೂವರು ಪುತ್ರರನ್ನು ಪಡೆದು ಈಗ ಸುಮಾರು ಮೂರು ನಾಲ್ಕು ವರ್ಷದಲ್ಲಿ ದೈವಾಧೀನವಾದರು. ಇವರು ಮೃತರಾದ ನಂತರ ಇವರ ಮರಣದಿಂದಲೇ ಇವರ ಮನೆಯ ಸಿರಿಯು ನಷ್ಟವಾಯಿತೋ ಎಂಬಂತೆ ಆ ಬಳಿಕ ಇವರ ಮೊದಲನೆಯ ಮಗನಾದ ಮಂಜಪ್ಪ ಹೆಗ್ಗಡೆಯವರು ದೀರ್ಘಕಾಲ ಕಾಯಿಲೆಯನ್ನನುಭವಿಸಿ ಇನ್ನೂ ಮೂವತ್ತೆರಡು ವರ್ಷ ವಯಸ್ಸಿನಲ್ಲಿಯೇ ಕಳೆದ ಮೇ ತಾ ೧೯ ರಲ್ಲಿ ಕಾಲವಾದರು. ಇವರು ಕಾಲವಾದ ಒಂದು ತಿಂಗಳಲ್ಲಿಯೇ ಎಂದರೆ ಕಳೆದ ಜೂನ್ ತಾ ೧೯ ರಲ್ಲಿ ಅತಿ ಚಿಕ್ಕ ವಯಸ್ಸಿನವರಾಗಿಯೂ ತಕ್ಕಮಟ್ಟಿಗೆ ವಿದ್ಯಾ ವಿನಯ ಸಂಪನ್ನರಾಗಿಯೂ ಇನ್ನೂ ಸುಮಾರು ಇಪ್ಪತ್ತು ವರ್ಷ ವಯಸ್ಕರಾಗಿಯೂ ಇದ್ದ ಇವರ ತಮ್ಮ ಚೆನ್ನಪ್ಪ ಹೆಗ್ಗಡೆಯವರು ಕಾಲವಾದರು. ಇವರಿಗೆ ಶೃಂಗೇರಿಯಲ್ಲಿರುವ ಅಣ್ಣಯ್ಯ ಹೆಗ್ಗಡೆಯವರ ಮಗಳನ್ನು ಕೊಟ್ಟು ವಿವಾಹವಾಗಿ ಸಂಸಾರಿಕರಾಗಿದ್ದದ್ದರಿಂದ ಈ ಅಪಾರವಾದ ದುಃಖಕ್ಕೆ ಅವರೂ ಭಾಗಿಗಳಾಗಿ ಅವರ ಕುಟುಂಬವೆಲ್ಲಾ ಗೋಳಾಡುತ್ತಿರುವದು. ಇವರ ಯಜಮಾನರ ಕಾಲದ ಬಳಿಕ ಇವರ ಮನೆಯವರು ಸತ್ಯವಂತರಾಗಿಯೂ ಧರ್ಮಿಷ್ಠರಾಗಿಯೂ ಇದ್ದ ಇವರಿಗೆ ಇಂಥಾ ದುಃಖ ಸಂಭವಿಸಿದ್ದು ನೋಡಿದರೆ ತುಂಬಾ ವ್ಯಸನವಾಗುತ್ತೆ. ಇಂಥಾವರನ್ನು ಕಳೆದುಕೊಂಡದ್ದು ನಮ್ಮಗಳ ದೌರ್ಭಾಗ್ಯವೇ ಸರಿ. ಭಗವಂತನು ಬಾಲ್ಯದಶೆಯಲ್ಲಿರುವ ಇವರ ಕುಟುಂಬಕ್ಕೆ ಸಂಪೂರ್ಣ ಅನುಗ್ರಹವನ್ನಿಟ್ಟು ಸಲಹಲೆಂದು ಹಾರೈಸುತ್ತೇನೆ.— ಈ ಮಲೆನಾಡು ಆದ ಕವಲೇದುರ್ಗದಲ್ಲಿ ಸುಯ್ಯುವಷ್ಟು ಮಳೆ ಈ ತಾಲ್ಲೂಕಿನ ಮತ್ತಾವ ಪ್ರದೇಶದಲ್ಲಿಯೂ ಬೀಳುವದಿಲ್ಲ. ದನಕರುಗಳು ಹೊರಗೆ ಮೇಯುವದಕ್ಕಾಗಲೀ ಜನಗಳು ತಿರುಗಾಡುವದಕ್ಕಾಗಲೀ ಅವಕಾಶವಿಲ್ಲದಂತೆ ಮಳೆ ಸುರಿಯುತ್ತಲೇ ಇದೆ. ಬೀದಿಯಲ್ಲಿನ ಅವ್ಯವಸ್ಥೆ ಹೇಳತೀರದು. ಸ್ವಲ್ಪವೂ ಅವಕಾಶವಿಲ್ಲದೇ ಓಡುತ್ತಿರುವ ನೀರಿನಲ್ಲಿ ಜನಗಳು ಮಲಮೂತ್ರಾದಿಗಳಿಂದ ಕೆಡಿಸಿ ಹಾಳುಮಾಡುತ್ತಿರುವರು. ಇದರಿಂದ ಆರೋಗ್ಯಕ್ಕೆ ಹಾನಿಯುಂಟಾಗುವದರಿಂದ ಸರ್ಕಾರದವರ ದೃಷ್ಟಿಗೆ ಬಿದ್ದರೆ ಒಳ್ಳೇದು.— ಈಚೆಗೆ ೭—೮ ದಿನಗಳಲ್ಲಿ ಈ ಊರು ಪಟೇಲ್ ದೇವಪ್ಪನಾಯ್ಕರವರ ಮನೆಯಲ್ಲಿನ ಸುಮಾರು ೫೦ ರೂಪಾಯಿ ಬೆಲೆ ಬಾಳತಕ್ಕ ಹೋರಿಯನ್ನು ಮನೆಯ ಸಮೀಪದಲ್ಲೇ ಹುಲಿಯು ತಿಂದುಹಾಕಿ ಬಿಟ್ಟಿತು. ಹುಲಿಯ ಕಾಟ ಇನ್ನೂ ನಿಂತಿಲ್ಲ.—ಕೆರೆ ಕಾಲುವೆಗಳಲ್ಲಿ ನೀರು ಸಮೃದ್ಧಿಯಾಗಿದೆ. ಪೈರು ತಕ್ಕಮಟ್ಟಿಗೆ ಚನ್ನಾಗಿದೆ. ಆದರೆ ಈಗ ಉಂಟಾಗಿರುವ ಬಿಸಲು ಮಳೆಯನ್ನು ನೋಡಿದರೆ ತೋಟದಲ್ಲಿ ಕೊಳೆಯ ರೋಗಕ್ಕೆ ಆಸ್ಪದವುಂಟಾಗಿದೆ.—ಸರ್ಕಾರದವರು ದಯವಿಟ್ಟು ಒಂದು ಸ್ಕೂಲನ್ನು ಕೊಟ್ಟಿರುವರು. ಆದರೆ ಯಾವ ಕಾರಣದಿಂದಲೋ ಸ್ಕೂಲು ಸರಿಯಾಗಿ ನಡೆಯುವದಿಲ್ಲ. ಆದರೆ ಆಫೀಸರು ಬಂದ ಕಾಲದಲ್ಲಿ ಏನೂ ಲೋಪವಿಲ್ಲದಿದ್ದರೆ ಸರಿ ಎಂತ ತಿಳಿಯಲು ಅಸ್ಪದವಾಗಿದೆ. ನೆರೆಯ ಹಳ್ಳಿಗಳಿಂದ ಜಾಸ್ತಿಯಾಗಿ ಹುಡುಗರು ಬರುತ್ತಲೇ ಇರುವರು. ಸರ್ಕಾರದವರು ಪ್ರಸಿದ್ಧಿಯಾದ ಇಂಥಾ ಸ್ಥಳಕ್ಕೆ ಬುದ್ಧಿವಂತರಾದ ಮಾಸ್ಟರನ್ನು ಕೊಟ್ಟು ಬಾಲಕರನ್ನು ವಿದ್ಯಾವಂತರನ್ನಾಗಿ ಮಾಡಲೆಂದು ಹಾರೈಸುತ್ತೇನೆ.

ಫ್ರೇಸರ್‌ಪೇಟ್.—ಪೈರಿಗೆ ತಕ್ಕಷ್ಟು ಮಳೆಯಿಲ್ಲದೆ, ತುಂತುರು ಮಳೆ ಮಾತ್ರ ಬೀಳುತ್ತದೆ. ಕಾವೇರೀ ನದಿಯಲ್ಲಿ ಸುಮಾರು ಆಡು ಅಡಿ ನೀರಿನ ಮಟ್ಟಿಗೂ ಪ್ರವಾಹ ಬಂದಿದೆ. ಈ ಊರಿನಲ್ಲಿ ಪ್ಲೇಗಿನ ಗಲಾಟೆ ಏನೂ ಇಲ್ಲದೇ ಇದ್ದಾಗ್ಯೂ, ನೆಲಮನೆ, ಅರಕೆರೆ, ಗಂಜಾಮ್ ಮುಂತಾದ ಸ್ಥಳಗಳಲ್ಲಿ ಪ್ಲೇಗಿನ ಗಲಾಟೆಯು ಇನ್ನೂ ಉಂಟು.—ಅರಕೆರೆ ಗ್ರಾಮದ ಸಮೀಪದಲ್ಲಿ ಒಂದು ಖೂನಿಯಾಗಿರುವಂತೆ ವರ್ತಮಾನ ಕೇಳುತ್ತೇವೆ.—ಇಲ್ಲಿದ್ದ ಇಂಜನಿಯರ್ ನಾಲಾ ಡಿವಿಜನ್ ಆಫೀಸನ್ನು ವಜಾ ಮಾಡಿದರಷ್ಟೆ. ಆ ಆಫೀಸಿನ ನೌಕರರು ಕಳೆದ ಸೋಮವಾರ ಸಾಯಂಕಾಲ ಇಲ್ಲಿನ ವೆಸ್ಲಿಯನ್ ಮಿಷನ್ ಗರಲ್ ಸ್ಕೂಲಿನಲ್ಲಿ ಸಭೆ ಸೇರಿ, ತಮ್ಮ ಮಧ್ಯೆ ಬಹಳ ಕಾಲದಿಂದ ಕೆಲಸ ನಡೆಸಿದ, ಎಗ್ಜಿಕ್ಯೂಟಿವ್ ಇಂಜನಿಯರ್ ಮ॥ ಅಯ್ಯಾಸ್ವಾಮಿ ಐಯರವರಿಗೆ ತಮ್ಮ ವಿಶ್ವಾಸ ಪ್ರೀತಿಯನ್ನು ತೋರಿಸಿದರು. ಅಗ್ಗಿ ಪೋಲೀಸ್ ಅ॥ ಸೂಪರಿಂಟೆಂಡೆಂಟರಾದ ಮ॥ ಬಸವರಾಜೇ ಅರಸಿನವರೂ, ಡೆಪ್ಯುಟಿ ಅಮಲ್ದಾರ್ ಮ॥ ಲಿಂಗಯ್ಯನವರೂ, ಆಸ್ಪತ್ರೆ ಅಸಿಸ್ಟೆಂಟರಾದ ಮ॥ ಪಾಪಯ್ಯನಾಯ್ಡುರವರೂ, ಸದರಿ ಇಲಾಖೆಯ ಅಸಿಸ್ಟೆಂಟ್ ಇಂಜನಿಯರ್ ಮ॥ ಆನಂದಾಳ್ವಾರ್‌ರವರೂ, ಇತರ ದೊಡ್ಡ ಮನುಷ್ಯರೂ, ಆಫೀಸುಗಳ ನೌಕರರೂ ಸಭೆಯಲ್ಲಿ ಹಾಜರಾಗಿದ್ದರು. ಮ॥ ಟಿ ಕೃಷ್ಣಪ್ಪನವರೂ ಅವರ ಕಂಪನಿಯವರೂ ಮೈಸೂರಿನಿಂದ ಬಂದು ತಮ್ಮ ಸಂಗೀತ ಪಾಂಡಿತ್ಯದ ಶಕ್ತಿಯನ್ನು ಬಹುತರವಾಗಿ ತೋರ್ಪಡಿಸಿ ಸಂತೋಷಪಡಿಸಿದರು. ಇದು ಮಾತ್ರವಲ್ಲದೆ ಗ್ರಾಮೋಫೋನ್ ಎಂಬ ಯಂತ್ರ ಸಂಗೀತ ಗಾನವೂ ಕೂಡ ನಡೆಸಲ್ಪಟ್ಟಿತು. ಅ॥ ಇಂಜನಿಯರ್ ಮ॥ ಆನಂದಾಳ್ವಾರ್‌ರವರು ಸದರಿ ಆಫೀಸರವರ ಗುಣಕಥನವನ್ನು ಕೆಲವು ರಸಯುಕ್ತವಾದ ಮಾತುಗಳಿಂದ ಮಾಡಿದರು. ಇನ್ನು ಕೆಲವರು ತಮ್ಮ ವಿಶ್ವಾಸವನ್ನು ಬೇರೆ ಮಾತುಗಳಿಂದ ತೋರಿಸಿದ ಮೇಲೆ, ಪುಷ್ಪ ಗಂಧ ತಾಂಬೂಲಗಳು ಹಂಚಿದರು. ರಾತ್ರಿ ಸುಮಾರು ೮ ಘಂಟೆಗೆ ಸಭೆಯು ಮುಕ್ತಾಯಕ್ಕೆ ಬಂತು. ಮೇಲ್ಕಂಡ ಇಂಜನಿಯರ್ ಸಾಹೇಬರು ಬೆಂಡಾಮನೆ ಎಂಬ ಸ್ಥಳಕ್ಕೆ ಸಬ್ ಡಿವಿಜನ್ ಆಫೀಸರಾಗಿ ಹೋಗುತ್ತಾರೆಂದು ಕೇಳಿ ಎಲ್ಲರೂ ಆಶ್ಚರ್ಯಪಡುತ್ತಾರೆ. ಆ ಆಫೀಸಿನ ಇತರ ನೌಕರರೂ ನಾನಾ ಕಡೆಗೆ ವರ್ಗವಾದ ವಿಷಯ, ಆರ್ಡರುಗಳು ಬಂದಿರುವವಾಗಿ ವರ್ತಮಾನ. ಸದರಿ ಇಂಜನಿಯರ್ ಆಫೀಸು ಹೋದದ್ದರಿಂದ ಇಲ್ಲಿನ ವರ್ತಕರು ಮುಂತಾದವರಿಗೆ ತುಂಬಾ ನಷ್ಟವೂ ವ್ಯಸನವೂ ಆಗಿದೆ.—ಶ್ರೀರಂಗಪಟ್ಟಣದ ಮುನ್ಸಿಫ್ ಕೋರ್ಟನ್ನು ಇಲ್ಲಿಗೆ ವರ್ಗಾಯಿಸಿ ಕೊಡುತ್ತಾರೆಂಬ ವದಂತಿಯುಂಟು. ಹಾಗೆ ಸರ್ಕಾರದವರು ನಡೆಸಿಕೊಟ್ಟರೆ ಇಲ್ಲಿನ ವರ್ತಕರು ಮುಂತಾದವರು ಬದುಕಿಕೊಂಡಾರು. ನಮ್ಮ ಡೆಪ್ಯುಟಿ ಅಮಲ್ದಾರರಾದ ಮ॥ ಬಿ. ಲಿಂಗಯ್ಯನವರು ತರೀಕೆರೆಗೆ ವರ್ಗವಾದದ್ದರಿಂದ ಈ ಊರಿನ ಜನರೆಲ್ಲಾ

ತುಂಬಾ ವ್ಯಸನಪಡುತ್ತಾರೆ. ಇವರು ಇಲ್ಲಿದ್ದ ಕೆಲವು ದಿನಗಳೊಳಗೆ ಎಲ್ಲಾ ಬಾಬುಗಳಲ್ಲೂ ತುಂಬಾ ಚಟುವಟಿಕೆಯಿಂದ ಕೆಲಸಮಾಡಿ ಮುನಿಸಿಪಾಲಿಟಿಯಲ್ಲೂ, ರೆವಿನ್ಯೂ ಬಾಬಿನಲ್ಲೂ ವಸೂಲಾಗದೆ ಇದ್ದ ಅನೇಕ ಸುಂಕ ಕಂದಾಯಗಳನ್ನು ವಸೂಲ್ ಮಾಡಿಸಿದಾರೆ. ಮತ್ತು ಊರಿನಲ್ಲಿದ್ದ ತಿಪ್ಪೆ ಮುಂತಾದ ಕಚರಾವನ್ನೂ ಊರಿನ ಹೊರಗೆ ಸಾಗಿಸುವಂತೆಯೂ, ಚರ್ಮದ ಮಂಡಿಯನ್ನು ಊರಾಚೆ ಇಡುವಂತೆಯೂ ಏರ್ಪಾಡುಮಾಡಿದರೂ, ಸಂತೆ ನಡೆಯುವ ಸ್ಥಳಕ್ಕೆ ಅಗಾಗ್ಗೆ ದಯಮಾಡಿಸಿ ಜವಳಿ ಮುಂತಾದದ್ದನ್ನು ಸುಂಕ ಕೊಡದೆ ಮಾರಿದ್ದನ್ನು ಕಂಡು ಹಿಡಿದು, ಸರ್ಕಾರಕ್ಕೆ ಸಲ್ಲಿಸಬೇಕಾಗಿದ್ದ ಸುಂಕವನ್ನು ಕೊಡುವಂತೆಯೂ, ಕಪ್ಪು ಸೇರು ಮುಂತಾದವುಗಳನ್ನು ಕಂಡು ಹಿಡಿದು, ಶಿಕ್ಷೆ ವಿಧಿಸುವಂತೆ ಮಾಡಿ ಆ ಅಕ್ರಮಗಳೂ ನಡೆಯದಂತೆಯೂ ಮಾಡಿದ್ದರು. ಇಂಥವರು ನಮ್ಮಗಳನ್ನು ಬಿಟ್ಟು ಹೋಗುವದು ತುಂಬಾ ವ್ಯಸನಕರವೇ. ಈ ಮಹನೀಯರು ಈ ಊರನ್ನು ಬಿಡುವದಕ್ಕೆ ಮುಂಚೆ ಪೊಲೀಸ್ ಸೂಪರೇಂಟರೂ, ಮತ್ತು ಸ್ಟೇಷನಲ್ಲಿ ಪೊಲೀಸ್ ನೌಕರರೂ, ತಾಲ್ಲೋಕ್ ಆಫೀಸಿನವರೂ, ಮುನಿಸಿಪಲ್ ಮೆಂಬರುಗಳೂ ಇತರ ವ್ರಜೆಗಳೂ ಕೂಡ ಟೀಪಾರ್ಟಿ ಮುಂತಾದವುಗಳಿಂದಲೂ ಬೇರೆಬೇರೆ ರೀತಿಯಲ್ಲೂ ತಮ್ಮ ಪ್ರೀತಿ, ವಿಶ್ವಾಸವನ್ನು ತೋರ್ಪಡಿಸಿ, ಅವರನ್ನು ಬಹು ದೂರದವರಿಗೂ, ಬಹುಜನ ಸಮೂಹದೊಡನೆ ಸಾಗ ಕಳುಹಿಸಿದರು. ಅವರ ಬದಲಿ ಬರುವವರು ಅದೇ ರೀತಿ ನಡೆದುಕೊಂಡು ಹೆಸರುವಾಸಿ ಪಡೆಯುವರೆಂದು ಹಾರೈಸುತ್ತೇವೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್.

ನಾಲಾ ಬಿಡಾವಣೆಯು

ಅಯ್ಯಾ,

ಸೀರಾ ತಾಲೂಕು ಕಳ್ಳಂಬೆಳ್ಳ ಸಮ್ಮತು ಕಡವಿಗೆರೆ ಗ್ರಾಮದವರು ಕಳ್ಳಂಬೆಳ್ಳದ ಕೆರೆಯ ಸಮೀಪದಲ್ಲಿರುವ ನೀರಗಸ್ಮಾನ ಕಟ್ಟೆಯನ್ನು ಬಿಡಾಯಿಸಿಕೊಡಬೇಕೆಂತ ಈಗ್ಗೆ ಸುಮಾರು ೨೦ ವರುಷಗಳಿಂದಲೂ ಸರ್ಕಾರಿ ಅಧಿಕಾರಿಗಳಿಗೆ ಅನೇಕ ವೇಳೆ ಅರ್ಜಿಮೂಲಕವೂ, ಮುಖಾಮುಖಿಯಾಗಿಯೂ ವಿಜ್ಞಾಪನೆ ಮಾಡಿಕೊಂಡಾಗ್ಯೂ ಈ ವರಿಗೂ ಸದರಿ ಕೆರೆಯನ್ನು ಬಿಡಾಯಿಸಿಕೊಟ್ಟು, ನಮ್ಮಗಳಿಗೆ ಆಧಾರವಾಗಿರುವ ಕಷ್ಟನಷ್ಟಗಳನ್ನು ಪರಿಹರಿಸಿಕೊಡಲಿಲ್ಲವೆಂದು ಪೇಚಾಡುತ್ತಾರೆ. ಹಾಲಿ ದಿವಾನ್ ಬಹದ್ದೂರ್‌ರವರು ಸೀರೆಕ್ಕೆ ಸರ್ಕೀಟು ದಯಮಾಡಿಸಿರುವಾಗ್ಗೆ ನಮ್ಮ ದುಃಖಗಳನ್ನು ರೂಬರೂಬು ಅರಿಕೆ ಮಾಡಿಕೊಂಡು ಅರ್ಜಿ ಸಹಾ ಕೊಟ್ಟದ್ದಾಯಿತು. ಆ ಅರ್ಜಿಯ ಮೇಲೆ ಇಂಡಾರಸಿನಲ್ಲಿ ನಿಮ್ಮ ಕಷ್ಟವನ್ನು ನಿವಾರಣೆಮಾಡುವಂತೆ ಛೀಫ್ ಇಂಜನಿಯರ್ ಸಾಹೇಬರಿಗೆ ವ್ಯವಸ್ಥೆ ಬಗ್ಗೆ ಕಳುಹಿಸಿರುತ್ತೇವೆಂದು ಅಪ್ಪಣೆಯಾಗಿತ್ತು. ಈ ಪರಿಯಂತರಕ್ಕೂ ಯಾವದೊಂದು ವ್ಯವಸ್ಥೆಯಾದದ್ದನ್ನು ಕಾಣದೆ ಪೇಚಾಡುತ್ತಲೇ ಇರುತ್ತಾರೆ. ಮಹಾಸ್ವಾಮಿಗಳಾದ ವ್ಯಾಸರಾವ್ ಗೌನ್ಮೆಂಟಿನವರು ಸದರಿ ಕಟ್ಟೆಯನ್ನು ಬಿಡಾಯಿಸಿ ಕಟ್ಟು ಬಿಡಸಿ ತತ್ತೆಲ್ಲರನ್ನು ಉದ್ಧಾರಮಾಡಬೇಕೆಂದು ಪ್ರಾರ್ಥಿಸಿಕೊಳ್ಳುವವನಾಗಿರುತ್ತಾನೆ.

ಚಂದಾದಾರ

ಸರ್ಜಾಪುರದಲ್ಲಿ ವಿದ್ಯಾರ್ಥಿ ನಿಲಯವು

ಅಯ್ಯಾ,

ಆನೆಕಲ್ ತಾಲ್ಲೋಕು ಸರ್ಜಾಪುರದಲ್ಲಿರುವ ಗವರ್ನಮೆಂಟ್ ಎ. ವಿ. ಸ್ಕೂಲು ಮೊದಲಿಂದಲೂ ವಿದ್ಯಾಭಿವೃದ್ಧಿಯಲ್ಲಿ ಪ್ರಸಿದ್ಧವಾಗಿರುವುದು. ಇಲ್ಲಿ ಅನೇಕ ಮಂದಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಮುಂದೆ ಪ್ರೌಢವಿದ್ಯಾಭ್ಯಾಸದಲ್ಲಿ ಕೆಲವರೂ, ಬೇಸಿಕವೃತ್ತಿಯಲ್ಲಿ ಕೆಲವರೂ ತೊಡಗಿರುವರು. ಇದು ಎಲ್ಲರಿಗೂ ತಿಳಿದೇ ಇದೆ. ಈ ಗ್ರಾಮದಲ್ಲಿ ೭-೮ ವರ್ಷಗಳಿಂದ ಪ್ಲೇಗ್ ಬಾಧೆಯುಂಟಾಗಿ ಪರಸ್ಥಳದ ವಿದ್ಯಾರ್ಥಿಗಳು ಬಂದು ಸೇರಲು ಅನುಕೂಲ ತಪ್ಪಿಹೋಯಿತು. ಆದ್ದರಿಂದ ಹಿಂದೆ ಇಲ್ಲಿಯೇ ಹೆಡ್ ಮಾಸ್ಟರಾಗಿದ್ದು ಅನೇಕ ಮಂದಿಯನ್ನು ಲೋಯರ್ ಸೆಕೆಂಡರಿಯಲ್ಲಿ ತೇರ್ಗಡೆ ಮಾಡಿಸಿರುವ ಮೆ॥ ಸಭಾಪತಿ ಅಯ್ಯರವರೇ ಪುನಃ ಇಲ್ಲಿಗೆ ಹೆಡ್ ಮಾಸ್ಟರಾಗಿ ಬಂದಿರುವರು. ಇವರು ಈ ಸ್ಕೂಲನ್ನು ಪೂರ್ವ ಸ್ಥಿತಿಗೆ ತರಬೇಕೆಂದು ತಕ್ಕ ಪ್ರಯತ್ನವನ್ನೆಸಗುತ್ತಿರುವರು. ಪರಸ್ಥಳದ ವಿದ್ಯಾರ್ಥಿಗಳಿಗೆ ಅನ್ನೋದಕಗಳಿಗಾಗಿ ತಿಂಗಳು ೧ಕ್ಕೆ ೩ ರೂಪಾಯಿಯನ್ನು ಗೊತ್ತುಮಾಡಿರುವರು. ವಿದ್ಯಾರ್ಥಿಗಳ ಆರೋಗ್ಯಕ್ಕೂ ವಾಸಕ್ಕೂ ತಕ್ಕ ಅನುಕೂಲವನ್ನು ಏರ್ಪಡಿಸಿ, ಇದಕ್ಕಾಗಿ ಒಂದು ಮ್ಯಾನೇಜಿಂಗ್ ಕಮಿಟಿಯನ್ನು ಏರ್ಪಡಿಸಿರುವರು. ವಿದ್ಯಾರ್ಥಿಗಳಲ್ಲಿ ಕೆಲವರು ಧರ್ಮಾರ್ಥವಾಗಿ ಸಹಾಯ ಮಾಡಿಕೊಂಡು ಬಂದಾದರೂ ಸೇರಬಹುದು. ೨೦ ಮಂದಿಗಳಿಗಿಂತ ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸುವುದಿಲ್ಲ. ೧೯೦೭ನೇ ಇಸವಿ ಅಗಸ್ಟು ತಿಂಗಳಾದ ಮೇಲೆ ಬರುವ ವಿದ್ಯಾರ್ಥಿಗಳು ಮಾಹೆಯಾನಾ ೪ ರೂ ನಂತೆ ಕೊಡಬೇಕೆಂದು ಗೊತ್ತು ಮಾಡಿದಾರೆ. ಇದು ಶ್ಲಾಘ್ಯವಾದ ಏರ್ಪಾಡಾಗಿದೆ. ದೊಡ್ಡ ಪಟ್ಟಣದಲ್ಲಿ ಇಷ್ಟು ಸುಲಭ ವೆಚ್ಚದಿಂದ ನಡೆಯುವುದಿಲ್ಲವೆಂಬುದು ಸರ್ವವೇದ್ಯವಾಗಿದೆ. ಇದು ಬಡವರಿಗೂ ಪುಣ್ಯವಂತರಿಗೂ ಅನುಕೂಲವಾದ ಸಂಗತಿಯಾಗಿದೆ. ಈ ಸ್ಕೂಲಿನಲ್ಲಿರುವ ಮಾಸ್ಟರುಗಳು ಇಂಗ್ಲಿಷ್‌ನಲ್ಲಿಯೂ ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ತುಂಬಾ ತಿಳುವಳಿಕೆಯುಳ್ಳವರು. ಅಲ್ಲದೆ ಉತ್ಸಾಹದಿಂದ ಕೆಲಸ ಮಾಡತಕ್ಕವರಾಗಿದಾರೆ. ದೊಡ್ಡ ದೊಡ್ಡ ಸ್ಕೂಲಿನಲ್ಲಿ ಇಷ್ಟರಮಟ್ಟಿನ ಉಪಾಧ್ಯಾಯರ ಅನುಕೂಲತೆಗಳಿಲ್ಲ. ಈ ಸರ್ಜಾಪುರದ ಸಮೀಪದಲ್ಲಿರುವ ಬಾಗಲೂರು, ಹೊಸೂರು, ಮತ್ತಿಗೆರೆ ಮೊದಲಾದ ಮದ್ರಾಸ್ ಪ್ರಾಂತ್ಯದವರೂ ಬಂದು ಸೇರಬಹುದು. ಪ್ರಾರಂಭದಲ್ಲಿ ಇಲ್ಲಿರುವಷ್ಟು ವಿದ್ಯೆಯನ್ನು ಕಲಿಸಿ, ಮುಂದೆ ಹೆಚ್ಚು ವಿದ್ಯಾಭ್ಯಾಸಕ್ಕೆ ದೊಡ್ಡ ಪಟ್ಟಣಕ್ಕೆ ಕಳುಹಿಸಲು ಅನುಕೂಲವಾಗಿರುವುದು. ಈ ಪ್ರಯತ್ನವನ್ನು ಬಾಲಕರ ಪೋಷಕರೇ ಮಾಡಬೇಕಾಗಿತ್ತು. ಅಂಥಾದ್ದರಲ್ಲಿ ಹೆಡ್ ಮಾಸ್ಟರೇ ಯತ್ನಿಸಿರುವುದರಿಂದ ವಿದ್ಯಾಭಿಮಾನಿಗಳಾದ ತಂದೆತಾಯಿಗಳು ತಮ್ಮ ಮಕ್ಕಳನ್ನು ಕಳುಹಿಸಿ ಮೆ॥ ಸಭಾಪತಿ ಅಯ್ಯರವರ ಪ್ರಯತ್ನವನ್ನು ಸಫಲಗೊಳಿಸುವರೆಂದು ನಂಬುತ್ತೇನೆ. ಇಂಗ್ಲಿಷ್, ಕನ್ನಡ, ಸಂಸ್ಕೃತ ಮೂರು ಭಾಷೆಗಳಲ್ಲಿಯೂ ಇಲ್ಲಿ ಪಾಠ ನಡೆಯುವುದು.

ವಿದ್ಯಾಭಿಮಾನಿ

ಇಂಡಿಯಾ ದೇಶದ ವೃತ್ತಾಂತಗಳು.

ಕೆಲವು ದಿನಗಳ ಕೆಳಗೆ ಕನ್ನಾನೂರು ಜೈಲ್‌ಖಾನೆಯಲ್ಲಿ ನಾಲ್ವರು ಬಂದೀಖಾನರು ತಪ್ಪಿಸಿಕೊಂಡು ಹೋದರು. ಅವರನ್ನು ಹಿಡಿಸುವುದಕ್ಕೆ ಸರ್ಕಾರದವರು ತರಹೂದು ಮಾಡಿರುತ್ತಾರೆ.

❦❦❦

ಪಾಲಂಕೋಟೆಯ ಡಿಸ್ಟ್ರಿಕ್ಟ್ ಜೈಲಿನಲ್ಲಿ ಕೆಲವು ಬಂದೀಖಾನರು ಕಳೆದ ವಾರ ಕಾವಲುಗಾರರ ಮೇಲೆ ತಿರುಗಿಬಿದ್ದು ಜೈಲರ್ ಮೊದಲಾದವರನ್ನು ಹೊಡೆದು ಗಾಯ ಮಾಡಿದರು. ಅವರನ್ನು ತನಿಖೆ ಮಾಡುತ್ತಿದಾರೆ.

❦❦❦

ಬಂಗಾಳಾ ಲೆಫ್ಟಿನೆಂಟ್ ಗವರ್ನರಾದ ಸರ್ ಅಂಡ್ರ್ಯೂ ಫ್ರೇಸರ್ ಯವರು ಈ ತಿಂಗಳ ೧೭ ನೇ ತಾ ಸೋಮವಾರ ಕಲ್ಕತ್ತೆಯಲ್ಲಿ ಒಂದು ಭಾರೀ ವ್ಯವಸಾಯ ಶಾಸ್ತ್ರ ಬೋಧನಾ ವಿದ್ಯಾಶಾಲೆಯ ಕಟ್ಟಡಕ್ಕೆ ತಳಪಾಯಿಯನ್ನು ಹಾಕುವವರಾಗಿದಾರೆ.

❦❦❦

ಹಿಂದುಸ್ಥಾನದ ವಾಯವ್ಯ ಸರಹದ್ದಿನ ಆಚೆ ಇರುವ ಮಾಸೂದ್ ಜನರ ಮುಖಂಡರು ಅಫ್ಘಾನಿಸ್ಥಾನದ ಅಮೀರರ ಬಳಿಗೆ ಹೋಗಿದಾರೆಂತಲೂ, ಅವರಿಂದ ಯುದ್ಧದ ಆಯುಧಗಳನ್ನು ಪಡೆದುಕೊಳ್ಳಬೇಕೆಂದೂ ಅಮೀರರ ಬೆಂಬಲವನ್ನು ಸಂಪಾದಿಸಿಕೊಳ್ಳಬೇಕೆಂದೂ ಪ್ರಯತ್ನ ಪಡುತ್ತಿದಾರೆಂತಲೂ ತಿಳಿದು ಬಂದಿದೆ.

❦❦❦

ಹೈದರಾಬಾದ್ ಸಂಸ್ಥಾನದವರು ಅಲ್ಲಿನ ಆಸಿಫಪುರ್ ಮತ್ತು ಗೋಷಾಲ್‌ರಾವ್ ಎಂಬವರನ್ನು ವಿಲಾಯತಿಗೆ ಕಳುಹಿಸಿ, ಯಾವುದಾದರೂ ಕಸಬನ್ನು ಕಲಿತು ಬರುವಂತೆ ಗೊತ್ತು ಮಾಡಿ, ಅವರಿಗೆ ತಲಾ ೩,೦೦೦ ರೂಪಾಯಿ ವರುಷಾಶನವನ್ನು ಸ್ಯಾಂಕ್ಷನ್ ಮಾಡಿದಾರೆ. ಇವರಿಬ್ಬರೂ ಈ ತಿಂಗಳಲ್ಲಿ ಸೀಮೆಗೆ ಪ್ರಯಾಣ ಮಾಡುವರು.

❦❦❦

ಉತ್ತರ ದೇಶದ ಎಲ್ಲಾ ಭಾಗಗಳಲ್ಲಿ ಚನ್ನಾಗಿ ಮಳೆ ಸುರಿದಿದೆ. ಕಾಲಸ್ಥಿತಿಯು ಸಂತೋಷಕರವಾಗುತ್ತಿದೆ. ಬೇಹಾರ್ ಪ್ರಾಂತ್ಯ ಒಂದರಲ್ಲೇ ಮಳೆ ಸಾಲದು. ನೀರಿಗೆ ಬಹಳ ಕಷ್ಟವಾಗಿದೆ. ಧರ್ಮಶಾಲೆಗಳು ಸ್ವಲ್ಪ ಮಟ್ಟಿಗೆ ಇಳಿದಿರುವವು. ಕಳೆದ ವಾರ ಹ್ಲಾಪು ಜಿಲ್ಲೆಯಲ್ಲಿ ೩೩,೦೦೦ ಜನರು ರಿಲೀಫ್ ಕಾಮಗಾರಿಗಳನ್ನು ಬಿಟ್ಟು, ತಮ್ಮ ವ್ಯವಸಾಯಗಳನ್ನೂ ಮನೆ ಮಠಗಳನ್ನೂ ಕುರಿತು ತೆರಳಿದರು. ಈಗ ಇನ್ನೂ ೬೦,೦೦೦ ಪ್ರಜೆಗಳು ಸರ್ಕಾರದವರ ಪೋಷಣೆಯಲ್ಲಿರುತ್ತಾರೆ.

❦❦❦

ಕಲ್ಕತ್ತಾ ಪಟ್ಟಣದ ಡಾಲ್ಹೌಸಿ ಫುಟ್‌ಬಾಲ್ ಕ್ಲಬ್ಬಿನವರು ಕಳೆದ ವಾರ ಪಂದ್ಯ ಕಟ್ಟಿ ಆಡುತ್ತಿದ್ದಾಗ ನೂರಾರು ಮಂದಿ ಬಂಗಾಳಿ ಹುಡುಗರು ಗಲಾಟೆ ಮಾಡಿ ಕಲ್ಲೆಸೆದಿದ್ದರು. ಪೊಲೀಸಿನವರು ಅವರನ್ನು ಹಿಡಿದು ದಸ್ತಗಿರಿ ಮಾಡಿಸಿದರು. ಆ ನೂರಾರು ಹುಡುಗರೂ ಜಗಳವಾಡಿದ್ದುಂಟೆಂದು ಒಪ್ಪಿಕೊಂಡರು. ಮ್ಯಾಜಿಸ್ಟ್ರೇಟರು ಅವರಿಗೆ ತಲಾ ೩ ರೂಪಾಯಿ ಜುಲ್ಮಾನೆ ವಿಧಿಸಿ ಕಳುಹಿಸಿದರು. ಆ ಹುಡುಗರು ಮರೋ ಜುಲ್ಮಾನೆಯನ್ನು ಪಾವತಿ ಮಾಡಿ, "ಇನ್ನು ಮುಂದೆ ಎಂದಿಗೂ ನಾವು ಫುಟ್‌ಬಾಲ್ ಮೈದಾನಕ್ಕೆ ಹೋಗುವುದಿಲ್ಲ" ಎಂದು ಹೇಳುತ್ತಾ ಕೋರ್ಟಿಗೆ ನಮಸ್ಕಾರ ಮಾಡಿ ಹೊರಟುಹೋದರು.

❦❦❦

ಸಿಂಲಾ ಪಟ್ಟಣದಿಂದ ೪ ಮೈಲಿ ದೂರದಲ್ಲಿರುವ ಮಶೋಬ್ರಾ ಎಂಬ ಉಪ್ಪರದಲ್ಲಿ ಒಬ್ಬ ಮುಸಲ್ಮಾನನು ಎಲ್ಲಿ ಸಾರ್ ಎಂಬ ೧೩ ವರುಷದ ಹೆಣ್ಣನ್ನು ಕೆಡಿಸಬೇಕೆಂದು ಆವಳು ಮಲಗಿದ್ದಾಗ ಹೋಗಿ ಬಲಾತ್ಕಾರ ಮಾಡಿದನು. ಆ ಹೆಂಗಸು ಅವನ ವಶವಾಗದೆ ಹೋದಾಗ ಅವನು ಅವಳನ್ನು ಅಕ್ಲೇ ಗುಂಡಿನಿಂದ ಹೊಡೆದು ಕೊಂದುಬಿಟ್ಟನು. ಪೊಲೀಸಿನವರು ಅವನನ್ನು ಹಿಡಿಯುವುದಕ್ಕೆ ಹೋದಾಗ ಅವನು ಒಂದು ಕಮರಿಯಲ್ಲಿ ಬಿದ್ದು ಗಾಯಪಟ್ಟನು. ಆದರೂ ಪೊಲೀಸಿನವರು ಅವನನ್ನು ಹಿಡಿದು ತಂದು ಆಸ್ಪತ್ರೆಯಲ್ಲಿಟ್ಟು ವಾಸಿ ಮಾಡಿಸುತ್ತಿದಾರೆ. ವಾಸಿಯಾದ ಮೇಲೆ ಆ ಘಾತುಕನನ್ನು ದಯಾರ್ಪಣೆಗೆ ಗುರಿಮಾಡುವರು.

❦❦❦

ಉತ್ತರ ದೇಶಕ್ಕೆ ಸೇರಿದ ಚಾಬುಗಾರಿ ಸಂಸ್ಥಾನದ ಮಹಾರಾಜಾಧಿರಾಜ ಸರ್ ಮಲ್ಖಾನ್‌ಸಿಂಗ್ ಬಹದೂರ್, ಕೆ ಸಿ ಐ ಇ. ಯವರು ಕಾಲವಾದರು. ಇವರಿಗೆ ೩೮ ವರುಷವಾಗಿತ್ತು. ಇವರ ಸಂಸ್ಥಾನವು ೯೦೦ ಚದರ ಮೈಲಿ ವಿಸ್ತಾರವುಳ್ಳದ್ದಾದರೂ ಬಹಳ ಅಭಿವೃದ್ಧಿ ಸ್ಥಿತಿಯಲ್ಲಿದೆ ಎಂದು ತಿಳಿಯುವುದು. ಅವರು ೧೬ ವರುಷ ಸಂಸ್ಥಾನವನ್ನು ಬಹಳ ಉತ್ಸಾಹ ಪೂರ್ವಕವಾಗಿಯೂ, ಪ್ರಜಾ ಪ್ರೀತಿಯಿಂದಲೂ ಆಳಿ, ತಮ್ಮ ಪ್ರಜೆಗಳಲ್ಲೂ ಇಂಡಿಯಾ ಗವರ್ನ್‌ಮೆಂಟಿನವರಲ್ಲೂ ವಿಶೇಷವಾದ ಯಶಸ್ಸನ್ನೂ ಭಕ್ತಿಯನ್ನೂ ಸಂಪಾದಿಸಿಕೊಂಡಿದ್ದರು. ಕಳೆದ ೧೮೯೭ ರಲ್ಲೂ ೧೯೦೦ ರಲ್ಲೂ ಅವರ ಸಂಸ್ಥಾನದಲ್ಲಿ ಕ್ಷಾಮ ಪ್ರಾಪ್ತವಾದಾಗ ಮಹಾರಾಜರವರು ಎಲ್ಲಾ ಭಾಗಗಳಲ್ಲೂ ಸಂಚಾರಮಾಡುತ್ತಾ, ಪ್ರಜೆಗಳಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುತ್ತಾ, ಬಹಳ ಸಾಹಸ ಪಟ್ಟರು.

ವಿದೇಶ ವರ್ತಮಾನಗಳು.

ಚೀಣಾ ರಾಜಧಾನಿಯಾದ ಪೀಕಿಂಗ್ ನಗರದಲ್ಲಿ ಜರ್ಮನಿ ಗವರ್ನ್‌ಮೆಂಟಿನವರು ತಮ್ಮ ಭಾಷೆಯನ್ನು ಕಲಿಸುವಂಥಾ ಒಂದು ಪಾಠಶಾಲೆಯನ್ನು ಏರ್ಪಾಡು ಮಾಡಬೇಕೆಂದು ತೀರ್ಮಾನ ಮಾಡಿದಾರೆ.

❦❦❦

ವಿಲಾಯತಿಗೆ ಸೇರಿದ ಮಾರ್ಲಿಬೋನ್ ಪಟ್ಟಣದಲ್ಲಿ ಅಗಸ್ಟ್ಯಸ್ ಎಂಬೊಬ್ಬ ಮಹಾತ್ಮನು ಇಬ್ಬರು ಸ್ತ್ರೀಯರನ್ನು ಅವಮಾನಪಡಿಸಿದನೆಂದು ಮೊಕದ್ದಮೆ ಆಗಿ, ಮ್ಯಾಜಿಸ್ಟ್ರೇಟರು ಆತನಿಗೆ ನಾಲ್ಕು ತಿಂಗಳ ಕಠಿಣ ಸಜಾ ವಿಧಿಸಿದರು.

❦❦❦

ಅಮೇರಿಕಕ್ಕೆ ಸೇರಿದ ಬೋಸ್ಟನ್ ಪಟ್ಟಣದಲ್ಲಿ ಕೆನಾರ್ಡ್ ಎಂಬ ದೊಡ್ಡ ಕಂಪನಿಯ ಸರಕುಗಳ ಉಗ್ರಾಣಕ್ಕೆ ಬೆಂಕಿ ಬಿದ್ದು ೬೦ ಲಕ್ಷ ರೂಪಾಯಿನ ಮಾಲುಗಳು ನಷ್ಟವಾದವು. ಜತ್ತಾರು ಹಡಗುಗಳೂ ಭಾರೀ ದೋಣಿಗಳೂ ಉರಿದು ಹೋದವು. ಇಬ್ಬರು ಉರಿಯಲ್ಲಿ ಸಿಕ್ಕಿ ಮೃತಪಟ್ಟರು.

❦❦❦

ಡಾಕ್ಟರ್ ಡಾಯರ್ ಎಂಬೊಬ್ಬ ವೈದ್ಯ ಪರಿಶೋಧಕನು ನಾರುಹುರಿಣ್ಣನ್ನು ಕೆಲವು ಕಾಲದಿಂದ ಪರೀಕ್ಷೆಮಾಡುತ್ತಿದ್ದು, ಅದು ಒಂದು ಕ್ರಿಮಿಯಿಂದ ಹುಟ್ಟುವುದೆಂದು ಗೊತ್ತುಮಾಡಿ, ಅದರ ಲಕ್ಷಣವನ್ನೂ ಅದರ ಪ್ರಬಲಕಾರ್ಯಗಳನ್ನೂ ಕುರಿತು ಒಂದು ವಿವರಣೆಯನ್ನು ಬರೆದು ಪ್ಯಾರಿಸ್ ನಗರದ ವೈದ್ಯಸಭೆಗೆ ಕಳುಹಿಸಿರುತ್ತಾನೆ.

❦❦❦

ಕೆನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೆ ಸೇರಿದೆ ಮಾಂಟ್ರಿಯಲ್ ಪಟ್ಟಣದಿಂದ ಜಾರ್ಜಿಯಾ ಕೊಲ್ಲಿಗೆ ಭಾರೀ ದೋಣಿಗಳೂ ಹಡಗುಗಳೂ ಹೋಗಿಬರುವಂತೆ ೨೦ ಅಡಿ ಆಳವುಳ್ಳ ಜಲಮಾರ್ಗವನ್ನು ಕಟ್ಟಿಸಬೇಕೆಂದು ಗವರ್ನ್‌ಮೆಂಟಿನವರು ಗೊತ್ತು ಮಾಡಿದಾರೆ. ಈ ನಾಲೆಯ ಕಾಮಗಾರಿಗೆ ೨೯ ಕೋಟಿಯ ೬೦ ಲಕ್ಷ ರೂಪಾಯಿ ಖರ್ಚಾಗಬಹುದೆಂದು ಅಂದಾಜಾಗಿರುತ್ತದೆ.

❦❦❦

ಅಫೀಮಿನ ವ್ಯಾಪಾರ ಅನುದಿನ ರಫ್ತು ಮುಂತಾದದ್ದನ್ನು ಕ್ರಮಪಡಿಸುವುದಕ್ಕೆ ಚೀಣಾ ರಾಜ್ಯಕ್ಕೆ ಸೇರಿದ ಷಾಂಘಾಯ್ ಪಟ್ಟಣದಲ್ಲಿ ಮುಂದಿನ ವರುಷ ಒಂದು ವಿಶೇಷವಾದ ಸಭೆ ನಡೆಯುವುದು. ಈ ಸಭೆಗೆ ಜರ್ಮನಿ, ಫ್ರಾನ್ಸ್, ಜಪಾನ್, ಹಾಲೆಂಡ್, ಚೀಣಾ, ಇಂಗ್ಲಿಷ್ ರಾಜ್ಯ, ಈ ಮೊದಲಾದ ಸರ್ಕಾರದವರು ತಮ್ಮ ರಾಯಭಾರಿಗಳನ್ನು ಕಳುಹಿಸಿಕೊಡುವವರಾಗಿದಾರೆ.

❦❦❦

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ಒಂಬತ್ತು ಆಕಾಶ ಬುಟ್ಟಿಗಳನ್ನು ಹಾರಬಿಟ್ಟರು. ಇಂಗ್ಲಿಷರು, ಕೆನಡಾದವರು, ಫ್ರೆಂಚರು ಇವರೂ ತಮ್ಮ ಆಕಾಶ ಬುಟ್ಟಿಗಳನ್ನು ತೆಗೆದುಕೊಂಡು ಹೋಗಿದ್ದರು. ಇವುಗಳಲ್ಲಿ ಕೆನಡಾದ ಆಕಾಶಬುಟ್ಟಿಯು ೮೦೦ ಮೈಲಿ ದೂರ ಸಮುದ್ರದ ಮೇಲೆ ಸಂಚರಿಸಿಕೊಂಡು ಹೋಗಿ ಮೊದಲನೇ ಬಹುಮಾನವನ್ನು ಪಡೆಯಿತು.

❦❦❦

ಅಮೇರಿಕಕ್ಕೆ ಸೇರಿದ ಮೆಕ್ಸಿಕೋ ರಾಜ್ಯದಲ್ಲಿ ಪೋರ್ಟ್ ಸಮ್ಮರ್ ಎಂಬ ಪಟ್ಟಣದ ಬಳಿ ಅಪೂರ್ವವಾದ ಮಳೆಯೂ ಗಾಳಿಯೂ ಪ್ರಾಪ್ತವಾಗಿ ನೂರಾರು ಮನೆಗಳೂ ಭಾರೀ ಕಟ್ಟಡಗಳೂ ಮುರಿದು ಬಿದ್ದವು. ಐದು ಜನ ಸತ್ತರು. ೩೦ ಮಂದಿಗೆ ಗಾಯಗಳಾದವು. ಅನೇಕ ಪ್ರಜೆಗಳು ಮನೆಮಠಗಳನ್ನೂ ಆಸ್ತಿಯನ್ನೂ ಕಳೆದುಕೊಂಡು ಜೀವನಕ್ಕೆ ಮಾರ್ಗವಿಲ್ಲದೆ ಅಲೆಯುತ್ತಿದಾರೆ.

❦❦❦

ರಷ್ಯಾ ಜಪಾನ್ ಯುದ್ಧದಲ್ಲಿ ಪೋರ್ಟ್ ಆರ್ಥರ್ ಕೋಟೆಯ ಬಳಿ ಮಡಿದು ಹೋದ ರಷ್ಯಾ ಪರಾಕ್ರಮಿಗಳ ಹೆಸರನ್ನು ಶಾಶ್ವತಪಡಿಸುವುದಕ್ಕೆ ಜಪಾನರು ಶ್ವೇತಶಿಲೆಯ ಕಂಬವನ್ನು ಕೆತ್ತಿಸಿ ನಿಲ್ಲಿಸಿದಾರೆ. ಅದರ ಮೇಲೆ ಇಂಗ್ಲಿಷ್ ಮತ್ತು ಜಪಾನ್ ಭಾಷೆಗಳಲ್ಲಿ ಅಂಕಿತಗಳನ್ನು ಬರೆಸಿರುವರು. ಕೆಲವು ದಿನಗಳ ಕೆಳಗೆ ಜಪಾನ್, ರಷ್ಯಾ ಸೇನಾನಾಯಕರು ಸೇರಿ ಆ ಸ್ತಂಭವನ್ನು ಪ್ರತಿಷ್ಠೆ ಮಾಡಿದರು.

❦❦❦

ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳ ಪ್ರಜೆಗಳು ನ್ಯೂಯಾರ್ಕ್ ಎಂಬ ಮಹಾ ಪಟ್ಟಣದಲ್ಲಿ ಲಕ್ಷಗಟ್ಟಲೆ ಸೇರಿ ಕಳೆದ ವಾರ ಒಂದು ಮಹೋತ್ಸವವನ್ನು ನಡಿಸಿದರು. ಆಗ್ಗೆ ಉಂಟಾದ ಗಲಭೆಯಲ್ಲಿ ೬೦ ಮಂದಿ ಮೃತಪಟ್ಟರೆಂತಲೂ ೨,೬೩೩ ಜನರಿಗೆ ಏಟು ಬಿದ್ದಿತೆಂತಲೂ ತಿಳಿಯುವುದು. ಇದರಿಂದ ಆ ದಿನದ ಉತ್ಸವವು ಎಷ್ಟು ವಿಶೇಷವಾದದ್ದಾಗಿತ್ತೋ ವಾಚಕರೇ ಊಹಿಸಿಕೊಳ್ಳಬಹುದು.

❦❦❦

ಫ್ರೆಂಚರಿಗೆ ಸೇರಿದ ಹಿಂದೂ ಚೀನಾದಲ್ಲಿ ಹಾನೋಯ್ ಎಂಬ ರಾಜ್ಯದಲ್ಲಿ ೨೦೦ ಯೂರೋಪಿಯನ್ ಸೋಲ್ಜರುಗಳಿಗೆ ಯಾರೋ ವಿಷ ಹಾಕಿ ಬಿಟ್ಟರು. ದೇವರ ದಯದಿಂದ ಅವರನ್ನು ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿ ಬದುಕಿಸಿದರು. ಈಚೆಗೆ ಈ ಘಾತುಕ ಕೃತ್ಯವನ್ನು ನಡಿಸಿದವರನ್ನು ಸರ್ಕಾರದವರು ದಸ್ತಗಿರಿ ಮಾಡಿಸಿ, ಸುಮಾರು ೩೦—೩೫ ಜನರನ್ನು ಗಲ್ಲಿಗೆ ಹಾಕಿಸಿದ್ದಲ್ಲದೆ ಬಹು ಮಂದಿಯನ್ನು ಸಜಾ ಶಿಕ್ಷೆಗೆ ಗುರಿಮಾಡಿರುತ್ತಾರೆ.

❦❦❦

ದಕ್ಷಿಣ ಆಫ್ರಿಕಕ್ಕೆ ಸೇರಿದ ಕಿಂಬರ್ಲಿ ವಜ್ರಗಳ ಗಣಿ ಕಂಪನಿಯವರಿಗೆ ವಜ್ರಗಳ ಖರೀದಿ ಬಹಳ ಕಡಮೆಯಾದದ್ದರಿಂದ ತುಂಬಾ ನಷ್ಟವಾಗಿರುತ್ತದೆ. ಒಬ್ಬ ಡೈರೆಕ್ಟರು ೧೫ ಲಕ್ಷ ರೂಪಾಯಿ ಕಳೆದುಕೊಂಡನು. ಈಗ ಕಂಪನಿಯವರು ವಜ್ರಗಳನ್ನು ಗಣಿಗಳಿಂದ ತೆಗೆಯುವುದನ್ನು ಬಹಳ ಕಡಮೆಮಾಡಿದಾರೆ. ಕೂಲಿಕಾರರ ಪೈಕಿ ೨,೦೦೦ ಬಿಳಿಯ ಜನರನ್ನೂ ೧೬,೦೦೦ ಸ್ವದೇಶಿಗಳನ್ನೂ ಕಂಪನಿಯವರು ವಜಾ ಮಾಡಿಬಿಟ್ಟರೆಂದು ತಿಳಿದು ಬಂದಿದೆ.

❦❦❦

ವಿಲಾಯತಿಗೆ ಸೇರಿದ ಹಲ್ ಎಂಬ ಪಟ್ಟಣದಲ್ಲಿ ಪೊಲೀಸಿನವರು ಕಳ್ಳರನ್ನು ಹಿಡಿಯುವುದಕ್ಕೆ ನಾಯಿಗಳನ್ನು ತರಬೇತು ಮಾಡಿಟ್ಟು

ಕೊಂಡಿದ್ದಾರೆ ಕಳ್ಳರು ಅಂಗಡಿಗಳನ್ನು ಮುರಿದು ಸಾಮಾನು ಎತ್ತಿಕೊಂಡು ಓಡಿಹೋಗುತ್ತಿರುವಾಗ ಪೊಲೀಸಿನವರು ತಮ್ಮ ಕೈಲಿರುವ ತಮ್ಮ ನಾಯಿಯನ್ನು ಬಿಟ್ಟರೆ ನಾಯಿಗಳು ಓಡಿಹೋಗಿ ಆ ಕಳ್ಳರ ಅಂಗಿಯನ್ನು ಕಚ್ಚಿ ಮುಂದಕ್ಕೆ ಬಿಡದೆ ನಿಲ್ಲಿಸಿಕೊಳ್ಳುತ್ತವೆ ಪೊಲೀಸಿನವರು ಹೋಗಿ ಅವರನ್ನು ದಸ್ತಗಿರಿಮಾಡುವರು. ಬೈಸಿಕಲ್ ಮೇಲೆ ಹೋಗ ತಕ್ಕವರನ್ನು ಆ ನಾಯಿಗಳು ಹೋಗಿ ಹಿಡಿದು ಬೈಸಿಕಲ್ ಕೆಡಹಿ ಅವರ ಬಟ್ಟೆ ಕಚ್ಚಿ ನಿಲ್ಲಿಸಿಕೊಳ್ಳುತ್ತವೆ.

* * *

ಕಳೆದ ಜೂನ್ ತಾ. ೨೭ ರಲ್ಲಿ ಲಂಡನ್ ಪಟ್ಟಣದಲ್ಲಿ ಒಟ್ಟು ೧,೦೭,೩೪೧ ಜನರು ಜೀವನಕ್ಕೆ ಮಾರ್ಗವಿಲ್ಲದೆ ಭಿಕ್ಷುಕರಾಗಿದ್ದರು ಇವರಲ್ಲಿ ೭೬,೯೭೩ ಜನರನ್ನು ಆ ಪಟ್ಟಣದ ಧರ್ಮಸತ್ರಗಳಲ್ಲಿ ಇಟ್ಟು ಅವರಿಂದ ಕೆಲಸ ಮಾಡಿಸಿ ಜೀವನ ನಡಿಸುತ್ತಿದ್ದರು ಧರ್ಮಿಷ್ಠರಾದ ಐಶ್ವರ್ಯವಂತರು ಉಳಿದವರನ್ನು ಸಾಕುತ್ತಿದ್ದರು ಆ ಪಟ್ಟಣದಲ್ಲಿ ಯಾರೂ ಹೊಟ್ಟೆಗಾಗಿ ಭಿಕ್ಷ ಬೇಡಕೂಡದೆಂದು ವಿಧಿ ಇರುತ್ತದೆ ಮ್ಯುನಿಸಿಪಾಲಿಟಿಯವರು ಪ್ರಜೆಗಳಿಂದ ಬಡವರ ಜೀವನಕ್ಕೋಸ್ಕರ ಒಂದು ಕಂದಾಯವನ್ನು ವಸೂಲ್ಮಾಡಿ, ಈ ಹಣದಿಂದ ಧರ್ಮಸತ್ರಗಳಲ್ಲಿ ಬಡವರುಗಳಿಗೆ ಜೀವನ ನಡಿಸುತ್ತಾರೆ.

* * *

ರಷ್ಯಾ ಚಕ್ರಾಧಿಪತ್ಯಕ್ಕೆ ಸೇರಿದ ಪಸ್ಕೊವ್ ಎಂಬ ಊರಿನಲ್ಲಿ ಸರ್ಕಾರದವರು ವ್ಯವಸಾಯದ ಪಾಠಶಾಲೆಯಲ್ಲಿ ವಿದ್ಯೆ ಕಲಿಯುತ್ತಿದ್ದ ೭೫ ಮಂದಿ ಬಾಲಕರನ್ನು ದಸ್ತಗಿರಿ ಮಾಡಿ ಲಾಕಪ್ಪಿನಲ್ಲಿ ಇಟ್ಟು ಕೊಂಡಿದ್ದಾರೆಂತಲೂ, ಫೆಬ್ರವರಿ ಭಾಗಾಯಿತು ಅವರನ್ನು ದರ್ಯಾಫ್ತು ಮಾಡಿಸದೆ ಇರೋಣದರಿಂದ ಅವರಲ್ಲಿ ಕೆಲವರು ಕಾಯಿಲೆ ಬಿದ್ದು ಕೊಂಡಿದ್ದಾರೆಂತಲೂ ಬಹು ಮಂದಿ ತಾಯಿತಂದೆಗಳೂ ಅವರ ರಕ್ತ ಸಂಬಂಧಿಗಳೂ ಅರ್ಜಿ ಬರೆದುಕೊಂಡಿದ್ದಾರೆ. ಆ ವಿದ್ಯಾರ್ಥಿಗಳಲ್ಲಿ ಹಲವರು ೧೫ ವರುಷದ ಹುಡುಗರೆಂದು ತಿಳಿಯುವುದು. ಆ ಬಾಲಕರು ಅಪರಾಧವೇನೆಂದು ತನಿಖೆ ಮಾಡದೆ ಆ ರೀತಿ ಸುಮ್ಮನೆ ಲಾಕಪ್ಪಿನಲ್ಲಿ ಇಟ್ಟುಕೊಂಡಿರುವುದನ್ನು ನೋಡಿ ಬಹು ಜನ ಕೊರಗುವರು

* * *

ರಷ್ಯಾ ಚಕ್ರಾಧಿಪತ್ಯದಲ್ಲಿ ಗಲ್ಲಿಗೆ ಹಾಕುವ (ಫಾಸೀ ಸಜಾ) ಶಿಕ್ಷೆಯನ್ನು ವಜಾ ಮಾಡಬೇಕೆಂದು ಡೂಮಾ ಪಾರ್ಲಿಮೆಂಟಿನ ಮೆಂಬರುಗಳು ಒಂದು ಕಾನೂನಿನ ಮಸೂದೆ ಮಾಡಿ ಚರ್ಚಿಸುತ್ತಿದ್ದಾರೆ ಆ ರಾಜ್ಯದಲ್ಲಿ ಫಾಸೀ ಸಜಾ ಅನುಭವಿಸಿದವರು ಕಳೆದ ೧೯೦೬ ರಿಂದ ೧೯೦೭ ನೇ ಇಸವಿ ತನಕ ಸರಾಸರಿ ವರುಷಕ್ಕೆ ೧೫ ಜನರು ಆದರೆ ೧೯೦೬ನೇ ಆಗೋಷ್ಟಿನಿಂದ ೧೯೦೭ ನೇ ಫೆಬ್ರವರಿ ವರೆಗೆ ೯೫೦ ಜನರನ್ನು ಗಲ್ಲಿಗೆ ಹಾಕಿದರೆಂತಲೂ, ೧೯೦೬ ನೇ ಇಸವಿಯಲ್ಲಿ ಒಟ್ಟು ೧,೭೩೦ ಜನರು ಮರಣ ದಂಡನೆಯನ್ನು ಅನುಭವಿಸಿದರೆಂತಲೂ ತಿಳಿಯುವುದು ಇಂಥಾದ್ದರಲ್ಲಿ ಸರ್ಕಾರದವರು ಫಾಸೀ ಸಜವನ್ನು ವಜಾ ಮಾಡುವುದು ಎಷ್ಟು ಮಟ್ಟಿಗೆ ಸಾಧ್ಯವೋ ನಮಗೆ ತೋರುವುದಿಲ್ಲ.

* * *

ಚೀನಾ ರಾಜ್ಯದಲ್ಲೂ ಜನರು ಮೂಢ ಭಕ್ತಿಯನ್ನು ಇನ್ನೂ ಬಿಟ್ಟಿಲ್ಲವೆಂದು ಕಾಣುವುದು. ಸಾಮಾನ್ಯವಾಗಿ ಒಂದು ಸೇತುವೆಯಾಗಲಿ, ಇನ್ಯಾವ ಭಾರೀ ಕಾಮಗಾರಿಯಾಗಲಿ ನಡೆಯಬೇಕಾಗಿದ್ದರೆ ಮೊದಲು ಅದರ ಅಡಿಪಾಯಕ್ಕೆ ನರಬಲಿಯನ್ನು ಕೊಡುತ್ತಾರೆಂದು ಹಿಂದುಸ್ಥಾನದವರು ಹೇಳುವುದುಂಟು. ಚೀನೆಯೊಳಗೆ ಫೂಸಿ ಎಂಬ ಸ್ಥಳದಲ್ಲಿ ಒಂದು ಹತ್ತಿ ಬಟ್ಟೆಯ ಕಾರ್ಖಾನೆಯನ್ನು ಕಟ್ಟಿದರು. ಅದರ ತಳಪಾಯಿಗೂ ಒಂದು ಮಗುವನ್ನು ಬಲಿಕೊಟ್ಟಂತೆ ಚೀನೆಯವರು ಹೇಳುತ್ತಿದ್ದಾರೆ ಎಂಬದಾಗಿ ಅಲ್ಲಿನ ಪತ್ರಿಕೆಯು ತಿಳಿಸಿರುತ್ತದೆ. ಆ ಕಾರ್ಖಾನೆಯನ್ನು ಕಟ್ಟಿದವರು ಸುಮಾರು ೧,೦೦೦ ರೂಪಾಯಿ ಕ್ರಯಕೊಟ್ಟು ಒಂದು ಮಗುವನ್ನು ಕೊಂಡು ತಂದು, ಕೆಲವು ಕಾಲ ಅದನ್ನು ಪುಷ್ಟಿಯಾಗಿ ಸಾಕಿ, ಕೊನೆಗೆ ಬಲಿಕೊಟ್ಟು, ರಕ್ತವನ್ನೂ ಶವವನ್ನೂ ತಳಪಾಯಿಯಲ್ಲಿ ಸೇರಿಸಿ, ಅದರ ಮೇಲೆ ಕಟ್ಟಡವನ್ನು ಎಬ್ಬಿಸಿದಾರೆಂದು ಹೇಳುವರು

* * *

ಪ್ಯಾರಿಸ್ ಪಟ್ಟಣದಲ್ಲಿ ವರುಷಕ್ಕೆ ೭೦,೦೦೦ ಮಕ್ಕಳು ಹುಟ್ಟುವವು ಹೆತ್ತವರು ಈ ಪೈಕಿ ೧೩,೦೦೦ ಮಕ್ಕಳನ್ನು ಇತರರಿಗೆ ಸಾಕುವುದಕ್ಕೆ ಕಳುಹಿಸಿಬಿಡುತ್ತಾರೆ ಇದಲ್ಲದೆ ೫೫,೦೦೦ ಮಕ್ಕಳನ್ನು ದಾದಿಯರ ವಶಕ್ಕೆ ಒಪ್ಪಿಸಿ ಅವರಿಂದ ಸಾಕಿಸುತ್ತಾರೆ ಹೀಗೆ ಮಾಡುವುದರಿಂದ ಅನೇಕಾನೇಕ ಮಕ್ಕಳು ಸತ್ತುಹೋಗಲು ಕಾರಣವಾಗಿದೆ ಇದನ್ನು ತಪ್ಪಿಸುವುದಕ್ಕಾಗಿ ಕೆಲವು ವಿದ್ಯಾವತಿಯರಾದ ಸ್ತ್ರೀಯರು ಹೆಂಗಸರಿಗೆಲ್ಲಾ ತಮ್ಮ ಮಕ್ಕಳನ್ನು ತಾವೇ ಇಟ್ಟುಕೊಂಡು ಸಾಕಬೇಕೆಂತಲೂ, ದಾದಿಯರ ವಶಕ್ಕೆ ಒಪ್ಪಿಸಕೂಡದೆಂತಲೂ ವಿವೇಕವನ್ನು ಹೇಳುತ್ತಿರುವರು ಆದರೆ ನಿರ್ಗತಿಕರಾದ ಮತ್ತು ದಿಕ್ಕಿಲ್ಲದ ಸ್ತ್ರೀಯರು ತಮ್ಮ ಮಕ್ಕಳನ್ನು ಸಾಕುವುದು ಕಷ್ಟವೆಂದು ಕೆಲವು ದೊಡ್ಡಮನುಷ್ಯರಿಗೆ ಗೊತ್ತಾದ್ದರಿಂದ ಅವರು ಎರಡು ವಾರಗಳ ಕೆಳಗೆ ಅಂಥವರಿಗಾಗಿ ಒಂದು ಅನಾಥಶಾಲೆಯನ್ನು ಪ್ರಾರಂಭಿಸಿದಾರೆ ಅಲ್ಲಿ ಸದ್ಯ ೧೦೦ ಮಕ್ಕಳಿದ್ದು ಪೋಷಣೆ ಹೊಂದುವುದಕ್ಕೆ ಅವಕಾಶವಿರುವುದು. ಮಕ್ಕಳ ತಾಯಂದರಿಂದ ಸ್ವಲ್ಪ ಕೆಲಸ ಮಾಡಿಸಿ, ಅವರಿಗೆ ಹಣವನ್ನು ಕೊಡುತ್ತಾರೆ. ಈ ಹಣವನ್ನು ಅವರು ಕೂಡಿಸಿಟ್ಟುಕೊಂಡು ಜೀವನಮಾಡಲು ಸಹಾಯವಾಗುವುದು.

* * *

ಫ್ರಾನ್ಸ್ ರಾಜ್ಯದ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರದಲ್ಲಿ ಎರಡು ವಾರಗಳ ಹಿಂದೆ ಸ್ತ್ರೀಯರ ಒಂದು ದೊಡ್ಡ ಸಭೆ ನಡೆಯಿತು. ನಾಲ್ಕಾರು ಸಾವಿರ ಸ್ತ್ರೀಯರು ಎಲ್ಲಾ ಕಡೆಗಳಿಂದಲೂ ಹೋಗಿ ಸಭೆಯನ್ನಲಂಕರಿಸಿದ್ದರು ಬಹುಮಂದಿ ವಿದ್ಯಾವತಿಯರೂ ದೊಡ್ಡಮನೆತನದವರೂ ಸ್ತ್ರೀಸಾಮಾನ್ಯಕ್ಕೆ ಅನುಕೂಲವಾದ ವಿಷಯಗಳನ್ನು ಕುರಿತು ಉಪನ್ಯಾಸ ಪೂರ್ವಕವಾಗಿ ಚರ್ಚೆಮಾಡಿದರು. ಅಂಥಾ ಮುಖ್ಯವಿಷಯಗಳ್ಯಾವವೆಂದರೆ—ಗಂಡಹೆಂಡರಿಬ್ಬರೂ ಸಮ್ಮತಿಪಟ್ಟು ಒಬ್ಬರನ್ನೊಬ್ಬರು [illegible] ಗಂಡನು ಹೆಂಡತಿ ಸೇರದೆ ಹೋದ ಹಾಗೂ ಬಿಟ್ಟು ಕೊಳ್ಳಬೇಕೆಂಬುದನ್ನು ತಪ್ಪಿಸಬೇಕೆಂದು ಚರ್ಚೆಮಾಡಿದರು, ಗಂಡಹೆಂಡರು ಬೇರೆ ಬೇರೆ ಇರುವುದು ತರವಲ್ಲ ; ಹಾಗೆ ಬೇರೆ ಇರುವಂಥವರು ಅವರ ಇಷ್ಟಪ್ರಕಾರ ಇನ್ನೊಂದು ವಿವಾಹವನ್ನು ಮಾಡಿಕೊಳ್ಳಬಹುದಾಗಿದೆ, ಪಾರ್ಲಿಮೆಂಟಿಗೆ ಮೆಂಬರುಗಳನ್ನು ಚುನಾಯಿಸುವ ಹಕ್ಕನ್ನು ಹೆಂಗಸರಿಗೂ ಕೊಟ್ಟೇ ಕೊಡಬೇಕು, ಮದುವೆ ಮಾಡಿಕೊಳ್ಳದೆ ಇರುವವರನ್ನೂ ಮಕ್ಕಳಿಲ್ಲದವರನ್ನೂ ಸ್ವಸ್ವದ ಇಲಾಖೆಗಳ ಆಫೀಸುಗಳಲ್ಲಿ ನೌಕರಿಗೆ ಸೇರಿಸಿಕೊಳ್ಳುವಂತೆ ಆಗಬೇಕು ; ಹೀಗೆ ಮಾಡಿದರೆ ಅಂಥಾ ನೌಕರಿಗಳಲ್ಲಿರುವ ಗಂಡಸರು ಸೈನ್ಯದಲ್ಲಿ ಸೇರಿ ತರಪೇತಾಗಿ ಸಿಪಾಯಿಗಳಾಗಲು ಅನುಕೂಲಿಸುವುದು ಎಂಬುದೇ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು, ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು ; ನಿದ್ದೆಯಿಲ್ಲದೆ ಇರುವುದು ; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು ; ಬಿಡದೆ ಬಾಯಾರಿಕೆ ; ಬಳಲಿಕೆ ; ಎದೆ ತಲ್ಲಣಿಸುವುದು ; ತಲೆನೋವು ; ಗಾಬರಿ ; ಕೈಕಾಲು ಊದುವಿಕೆ ; ತಲೆ ತಿರುಗುವಿಕೆ ; ಮೈನೋವು ಕೀಲುನೋವು ; ಮರವು ; ನಿಸ್ತ್ರಾಣ ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ, ಮೂತ್ರೇಂದ್ರಿಯಗಳನ್ನೂ, ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [93-49]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು, ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.

ರೂ. ೨ ೦—೮, ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೫೦, ಬೊಂಬಾಯಿ.—ಇವರಲ್ಲಿ ದೊರೆಯುವುದು.

ಮೇಲುಕೋಟೆ ಅಂಚಿನ ಪಂಚೆಗಳು ಜೊತೆ ರೂ. ೩.

57-3

೮ ಮೊಳದುದ್ದ, ೩ ಮೊಳದಗಲ (೫೦ ಅಂಗುಲ ಅಗಲ) ಶುದ್ಧ ಕೆಂಪು ನೇಕೆ ಅಂಚಿನ ಸ್ವಲ್ಪವೂ ನ್ಯೂನ್ಯತೆಯಿಲ್ಲದ ೩ ಬೆಟ್ಟಗಳು ದಿಂಡು [illegible] ನಯವಾದ ನೂಲಿನಲ್ಲಿ ತಯಾರಿಸಿ ದೊಡ್ಡಮನುಷ್ಯರೆಲ್ಲರೂ ಉಡುತ್ತಾರೆ.

ಬುಕ್ಕಿಂಗ್ ' 'ಬ್ಲಾಂಕೆಟ್ ' ಎಂಬ ಹೊಸ ಬನಾತು ' ರೂ ೬.

ಹಿಡಿ ಉಕ್ಕೆಯು ಕೆಂಪಿಯಲು ಮಖಮಲಿನಂತೆ ನೆತ್ತಗೆ ಇರುವಿಗೆ ಬೆಚ್ಚಗಿರುವ ಇವೆ ಉದ್ದ ೯೦, ಅಗಲ ೬೮ ಅಂಗುಲ ಕ್ರಯ ರೂ ೬.

ರೇಷ್ಮೆಯ (ಕೆಂಪು) ವಸ್ತ್ರಗಳು ! ೨ ಮೊಳವಗಲ ' ರೂ. ೫೪.

ಕೆಂಪು ಪುದುಚೇರಿ ತರದ ಗಟ್ಟಿ ಕೆಂಪುಬಣ್ಣದ್ದು. ಉದ್ದ ೩ ಮೊಳ.

ಮಧುರೆ ಸೀರೆ ' ಗಟ್ಟಿ ಬಣ್ಣ ೧೬ ಮೊಳದುದ್ದ ''

ಬಿಳಿಯ ಚುಕ್ಕೆಯಿಲ್ಲದ ಕೆಂಪು ಅಥವಾ ಕಪ್ಪು ಬಣ್ಣದ್ದು ೧೩, ೩೩ ಆ ನಯವಾಗಿ ಅಂಚು ಸೆರಗಿನಲ್ಲಿ ಜರತಾರಿಯುಳ್ಳ ರೂ ೫ ಬೆಳ್ಳಿಯ ಕಲಾಬತ್ತು ಸೀರೆ, ರೂ ೭, ೧೨ ೮, ರೂ ೧೦ ಹೆಚ್ಚು ಖರೀದಿಗೆ ಉತ್ತಮ ಮಾಲು ದೊರೆಯುತ್ತೆ.

ವಿಳಾಸ.—ರಾವ್ ಎಂಪೋರಿಯಂ, ಸ್ಪರ್ಟ ಟ್ಯಾಂಕ್ ರೋಡ್,

ವೇಪೇರಿ. ಮದ್ರಾಸು.

ನೋಟೀಸ್.

60 2

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :—

೧೯೦೩ನೇ ಇಸವಿ ಮೈಸೂರು ೭ನೇ ಮ್ಯುನಿಸಿಪಲ್ ರೆಗ್ಯುಲೇಷನ್‌ಗೆ ಒಳಪಟ್ಟ ೩೮ ನೇ (೧) (G) ಸೆಕ್ಷನ್ ಮೇರಿಗೆ ಚಾಲ್ತಿ ಇಸವಿ ಆಗಸ್ಟ್ (೧) ನೇ ತಾರೀಖು ಲಾಗಾಯಿತು ಬೆಂಗಳೂರು ಸಿಟಿಯಲ್ಲಿ ಪ್ರತಿಯೊಂದು ಕೂಸಿನ ಜನನದ ಮತ್ತು ಪ್ರತಿಯೊಬ್ಬ ಮನುಷ್ಯನ ಮರಣದ ವಿಷಯವಾಗಿ ಆಯಾಯ ಡಿವಿಜನ್‌ಗೆ ಸಂಬಂಧಪಟ್ಟ ಸಬ್ ರಿಜಿಸ್ಟ್ರಾರಿಗೆ ಜನನವುಂಟಾದ ತಾರೀಖು ಲಾಗಾಯಿತು ಒಂದು ವಾರದೊಳಗಾಗಿಯೂ ಮತ್ತು ಮರಣವುಂಟಾದ ಕಾಲದಿಂದ ೨೪ ಘಂಟೆಗಳ ಒಳಗಾಗಿಯೂ ತಿಳುವಳಿಕೆಯನ್ನು ಕೊಡತಕ್ಕದ್ದು ಅಥವಾ ಕೊಡಬೇಕು. ಸದರೀ ಸಮಾಚಾರವನ್ನು ಕೊಡುವದು ಕರ್ತವ್ಯವಾಗಿರತಕ್ಕ ಯಾವ ಮನುಷ್ಯನು ಕೊಡಲು ತಪ್ಪುತ್ತಾನೋ ಅಂಥಾವನು ಪ್ರಾಸಿಕ್ಯೂಷನ್‌ಗೆ ಒಳಪಟ್ಟು ೧೦ ರೂಪಾಯಿಗಳಿಗೆ ಕಡಮೆಯಿಲ್ಲದೆ ಜುಲ್ಮಾನೆಗೆ ಗುರಿಯಾಗುತ್ತಾನೆ.

(Sd.) B. J. KUMARASWAMI NAIK,
President
City Municipal Council,
22-7-08. Bangalore

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

63-6

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ಸಾಧಾರಣವಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ಐದು ಆಣೆಯಿಂದ ೬ ಆಣೆ ವರಿವಿಗೂ ಚಿಲ್ಲರೆಯಾಗಿ ಯಾಗಲೀ ಒಟ್ಟಾಗಿ ಯಾಗಲೀ ಮಾರಲ್ಪಡುತ್ತವೆ. ಶಾಲುಗಳು, ಹಾಸಿನ ಜಮಖಾನೆಗಳು, ಮುಸುಕಿನ ಜೋಡಿಗಳು, ಕೂಸುಗಳ ಜೋಡಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪ್ಪೋ, ಮೈಸೂರು.

ಯಾವ ತರವಾದ ಮೋಸವೂ ಇಲ್ಲ. ದರಗಳು ಬಹಳ ಸುಲಭ. ವಿಪರೀತವಾಗಿ ಮಾರಾಟವಾಗುತ್ತಿವೆ ಜಾಗ್ರತೆ ನೋಡಿ.

ಲೋಕದಲ್ಲೆಲ್ಲಾ ಅತ್ಯಂತ ಆಶ್ಚರ್ಯವಾದುದು.

69-2

ಬಹು ಸೊಗಸಾದ ಮತ್ತು ಮೇಜಿನ ಮೇಲಿಡುವುದಕ್ಕೆ ಉಪಯುಕ್ತವಾದ ದೊಡ್ಡ ಗಡಿಯಾರ ಮತ್ತು ಜೇಬಿನಲ್ಲಿಡುವುದಕ್ಕೆ ಯೋಗ್ಯವಾದ ವಾಚ್ ಗಡಿಯಾರ ಎರಡು ಗಡಿಯಾರಗಳು ಸಿಕ್ಕುತ್ತವೆ.

ಮಾನ್ಯರುಗಳೇ,

ನಮ್ಮ ಹಿಂದೂ ದೇಶದ ವರ್ತಕರನೇಕರು ತಾವು ಮಾರುವ ಪದಾರ್ಥಗಳ ವಿಷಯ ವಿಪರೀತವಾಗಿ ಹೊಗಳಿ, ಸುಳ್ಳು ಸಂಗತಿಗಳನ್ನು ಪ್ರಕಟಿಸುವವರಾಗಿದ್ದಾರೆ. ಅಂಥಾ ವರ್ಣನೆಯನ್ನು ಓದುವವರು ಪದಾರ್ಥಗಳನ್ನು ಕೊಂಡ ಮೇಲೆ ಮೋಸ ಹೋಗುವರು. ಆದರಿಂದಲೇ ಜನರು ಕ್ರಯದ ಪಟ್ಟಿಗಳನ್ನು ಓದುವುದಿಲ್ಲ ಆದರೆ ನೀವೆಂದಿಗೂ ನಮ್ಮ ಅಂಗಡಿಯ ವಿಷಯ ಯಾವ ಸಂಶಯವನ್ನೂ ಇಡಬಾರದು. ನಮ್ಮ ಅಂಗಡಿಯಲ್ಲಿ ನೀವು ಒಂದಾವರ್ತಿ ವ್ಯಾಪಾರ ಮಾಡಿದರೆ ಇನ್ನೆಂದಿಗೂ ನಮ್ಮನ್ನು ಬಿಟ್ಟು ಬೇರೆ ಅಂಗಡಿಗಳಿಗೆ ಹೋಗಲಾರಿರಿ. ನೋಡಿರಿ ಜೇಬಿನಲ್ಲಿ ಇಡುವ ಒಂದು ಸೊಗಸಾದ ಗಡಿಯಾರವನ್ನು ಕೊಂಡರೆ ಅದರ ಜೊತೆಯಲ್ಲಿ ೫೦೬ ಪದಾರ್ಥಗಳನ್ನು ಕಳುಹಿಸುತ್ತೇವೆ. ಗಡಿಯಾರಕ್ಕೆ ಒಂದಾವರ್ತಿ ಕೀಗ ಕೊಟ್ಟರೆ ೩೦ ಗಂಟೆಗಳ ಕಾಲ ನಡೆಯುತ್ತವೆ. ಸೊಗಸಾದ ಮುಳ್ಳುಗಳು, ಬಿಳೀ ಗಾಜಿನ ಮೇಲೆ ಬರೆಯಲ್ಪಟ್ಟ ಗಂಟೆಗಳ ಅಂಕೆಗಳು ಇವುಗಳು ಅದರಲ್ಲಿರುತ್ತವೆ. ಇದಕ್ಕೆ ಐದು ವರ್ಷಗಳು ಗ್ಯಾರಂಟಿ ಕೊಡುತ್ತೇವೆ. ಈ ಗಡಿಯಾರವನ್ನು ಕಳುಹಿಸುವುದಕ್ಕೆ ಮೊದಲು ಅದನ್ನು ನಾವು ಚೆನ್ನಾಗಿ ಪರೀಕ್ಷೆ ಮಾಡಿಯೇ ಕಳುಹಿಸುವೆವು. ಅದರ ಜೊತೆಯಲ್ಲಿ ಕೆಳಗೆ ಕಂಡ ಪದಾರ್ಥಗಳನ್ನು ಕಳುಹಿಸುವೆವು.— ಒಂದು ಸೊಗಸಾದ ಗಡಿಯಾರದ ಸರಪಣಿ, ಮೇಜಿನ ಮೇಲೆ ಇಡುವ ದೊಡ್ಡ ಗಡಿಯಾರ ಒಂದು, ವಿಲಾಯಿತಿಯಲ್ಲಿ ಮಾಡಿದ ಮುದ್ರಿನ ಪೆಟ್ಟಿಗೆಯೊಂದು, ಇದಕ್ಕೆ ಅರಗಿನ ಬೀಗದ ಕೈಗಳೂ ಇರುವವು. ಒಂದು ಉತ್ಕೃಷ್ಟವಾದ ಮುಖ್ಯ, ತಿಂಗಳಿಗೆಲ್ಲಾ ಒಂದೇ ಆಣೆಯ ಎಣ್ಣೆ ಕುಡಿಯುವ ಸೊಗಸಾದ ಲ್ಯಾಂಪ್ ದೀಪ, ಒಂದು ಸೊಗಸಾದ ಫೌಂಟೆನ್ ಪೇನಾ, ಒಂದು ಜೊತೆ ಬಾಳಿಕೆ ಬರುವ ಮೇಜೋಡು, ದಂತದ ಹಿಡಿ ಇರುವ ಒಂದು ಚಾಕು, ಒಂದು ಬಲವಾದ ಚರ್ಮದಿಂದ ಮಾಡಿದ ದುಡ್ಡು ಹಾಕುವ ಚೀಲ, ಒಂದು ಸೊಗಸಾದ ಬಾಚಣಿಗೆ, ಒಂದು ದರ್ಪಣ (ಕನ್ನಡಿ), ಸೊಗಸಾದ ಕತ್ತರಿ, ರಾತ್ರಿಯಲ್ಲಿ ಹಾಕಿಕೊಳ್ಳುವ ಕಂಬಳಿ ಟೋಪಿ, ಷರ್ಟ್ ಜಾಕೆಟ್ಟಿಗೆ ಉಪಯೋಗವಾದ ಸೊಗಸಾದ ಗುಂಡಿಗಳು, ಒಂದು ಕನ್ನಡಕ, ಒಂದು ಸೊಗಸಾದ ಪೆಟ್ಟಿಗೆಯಲ್ಲಿ ಸೋಪು, ಒಂದು ಉತ್ಕೃಷ್ಟವಾದ ಸೈಪಸ್ಟ್ರ, ಥಳಥಳಿಸುವ ಸೌಟು, ರಬ್ಬರು, ಸೊಗಸಾದ ಮಸೀ ಕುಡಿಕೆ, ಸೀಸದ ಕಡ್ಡಿ, ಹೋಲಿಯುವ ಯಂತ್ರ, ಹನ್ನೆರಡು ಪೇನಾ ಕಡ್ಡಿಗಳು, ಆರು ಸೀಸದ ಕಡ್ಡಿಗಳು, ನೂರೈವತ್ತು ಸೊಗಸಾದ ಅರಿವೆ ಲೋಪುಗಳು (ಲಕೋಟೆಗಳು), ನೂರೈವತ್ತು ಲೆಟರ್ ಕಾಗದಗಳು, ನೂರು ಪೋಸ್ಟ್ ಕಾರ್ಡುಗಳು, ಎಪ್ಪತ್ತೈದು ಪೇನಾ ಮುಳ್ಳುಗಳು, ಇವೆಲ್ಲವುಗಳಿಗೆ ಏಳು ರೂಪಾಯಿ ಎಂಟೇ ಆಣೆ (Rs. 7-8-0). ಅಪೇಕ್ಷಿಸತಕ್ಕವರು ಅರ್ಧ ಮೊಬಲಗನ್ನು ಮುಂಗಡವಾಗಿ ಮನಿಯಾರ್ಡರ್ ಮೂಲಕ ರವಾನಿಸಬೇಕು

(ಪದಾರ್ಥಗಳನ್ನು ಕೊಂಡ ಮೇಲೆ ಅವುಗಳನ್ನು ನೀವು ಅಪೇಕ್ಷಿಸದಿದ್ದರೆ ನಿಮ್ಮ ದುಡ್ಡನ್ನು ವಾಪಸು ಕಳುಹಿಸುತ್ತೇವೆ.)

ಆರ್ಡರ್ ಫಾರಂ.

ಅಯ್ಯಾ,

ದಯಮಾಡಿ ಮುರುಟಿಬಾಲಿನಲ್ಲಿಯೋ ಜೇಬಿನಲ್ಲಿಡುವ ಒಂದು ಗಡಿಯಾರವನ್ನೂ ಮೇಜಿನ ಮೇಲಿಡುವದಕ್ಕೆ ಒಂದು ಸೊಗಸಾದ ದೊಡ್ಡ ಗಡಿಯಾರವನ್ನೂ ಇವುಗಳ ಸಂಗಡ ೫೦೬ ಬಹುಮಾನಗಳನ್ನೂ ಕಳುಹಿಸಿಕೊಡಿರಿ. ಅದಕ್ಕಾಗುವ ಖರೀದಿ ರೂ. ೭—೮—೦ (Rs. 7—8—0) ಯಲ್ಲಿ ಅರ್ಧ ಮೊಬಲಗನ್ನು ಅಂದರೆ ೩—೧೨—೦ ನ್ನು ಮನಿಯಾರ್ಡರ್ ಮೂಲಕ ರವಾನಿಸಿರುತ್ತೇನೆ ಬಾಕಿ ಮೊಬಲಗನ್ನು ನೀವು ದಯವಿಟ್ಟು ವಿ. ಪಿ. ಪಿ ಮೂಲಕ ತೆಗೆದುಕೊಳ್ಳಿ.

ಹೆಸರು . . . .
ವಿಳಾಸ . . . .
ಪೋಸ್ಟ್ ಆಫೀಸ್ . . . .
ಹತ್ತಿರದಲ್ಲಿರುವ ರೈಲ್ವೆ ಸ್ಟೇಷನ್ . . . .

ಇಂತಿ

. . . .

ಈ ಆರ್ಡರ್ ಫಾರಮನ್ನೂ ಇದರ ಸಂಗಡ ಅರ್ಧ ಮೊಬಲಗಾದ ರೂ. ೩—೧೨—೦ ನ್ನೂ ಕಳುಹಿಸುವಂಥವರಿಂದ ನಾವು ರೂ 7-8-0 ಬಾಳುವ ಪದಾರ್ಥಗಳನ್ನು ಕಳುಹಿಸುವಲ್ಲಿ ಯಾವ ಪೋಸ್ಟೇಜ್ ಖರ್ಚನ್ನೂ ತೆಗೆದುಕೊಳ್ಳುವುದಿಲ್ಲ. ನಾವೇ ಪೋಸ್ಟ್ ಖರ್ಚನ್ನು ವಹಿಸುತ್ತೇವೆ. ನಮ್ಮ ವಿಳಾಸ :—

ಎಂ. ಎ. ಘಟಾಲಾ ಅಂಡ್ ಕಂಪನಿ,

[illegible]

ಎದೆಯಲ್ಲಿ ಹುಟ್ಟುವ ಕ್ಷಯರೋಗಗಳು.

[34-19]

ಅನೇಕ ವೇಳೆ ಶೀತವು ತಿಳಿಯದ ಹಾಗೆ ಕ್ರಮೇಣ ಪ್ರಬಲಿಸಿ ಕ್ಷಯರೋಗವಾಗುವುದು.

ಶೀತಗಾಳಿ ದೇಹಕ್ಕೆ ಬಡಿದು ನರಗಳನ್ನು ಅಂಟಿಕೊಳ್ಳುವದರಿಂದ ಶ್ವಾಸರೋಗಗಳು ಹುಟ್ಟುತ್ತವೆ. ಶೀತವು ವಿಶೇಷವಾಗಿ ಮೂಗಿನಲ್ಲೂ ಗಂಟಲಿನಲ್ಲೂ ಕಾಣಿಸಿಕೊಳ್ಳುತ್ತದೆ. ಆದರೂ ಅನೇಕ ವೇಳೆ ಅದು ಶರೀರವನ್ನು ಹಿಡಿಯುವುದುಂಟು. ಗಂಟಲು ಶೀತವು ಶ್ವಾಸಕೋಶಗಳ ನಾಳಗಳ ಮೂಲಕ ಹಿಂದೆ ಮುಂದೆ ವ್ಯಾಪಿಸಿ, ಶ್ವಾಸಕೋಶಗಳನ್ನೇ ಹಿಡಿದು ಕ್ಷಯರೋಗ ಬಂದಂತೆ ಮಾಡುತ್ತದೆ. ಕೆಲವು ಖಿರವೆ(?)ಗನ್ನರು ಅದನ್ನೇ ಕ್ಷಯರೋಗವೆಂದು ಎಣಿಸುತ್ತಾರೆ.

ಕ್ಷಯವು ಶ್ವಾಸಕೋಶವನ್ನು ಪ್ರವೇಶಿಸಿದ ಕೂಡಲೇ ಆಕಾರ ರುಚಿಸುತ್ತದಿಲ್ಲ, ಶಕ್ತಿ ಕುಂದುತ್ತದು, ದೇಹವು ಕೃಶವಾಗುವುದು. ಅಂತು ಕ್ಷಯರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಆದರೆ ಅದು ಕ್ಷಯದಿಂದ ಪ್ರಾರಂಭವಾದದ್ದೆಂದು ತೋರುವುದಿಲ್ಲ. ಇಂಥಾ ಖಾಯಿಲೆಯನ್ನು ನಿವಾರಣೆಮಾಡುವದಕ್ಕೆ ಒಂದೇ ಒಂದು ಮಾರ್ಗವುಂಟು. ಏನೆಂದರೆ ಅದಕ್ಕೆ ಕಾರಣವಾದ ಕ್ಷಯವನ್ನು ಹೋಗಲಾಡಿಸುವ ಪ್ರಯತ್ನವೇ.

ಕ್ಷಯರೋಗವನ್ನು ಹೋಗಲಾಡಿಸುವುದಕ್ಕೆ ಪೆರೂನಾ ಚೆನ್ನಾಗಿ ಪರೀಕ್ಷೆ ಮಾಡಲ್ಪಟ್ಟ ಒಳ್ಳೆ ಔಷಧ. ತಲೆ, ಗಂಟಲು, ಶ್ವಾಸಕೋಶ, ಅಥವಾ ದೇಹದ ಇತರ ಅಂಗಗಳಿಗೆ ಹಿಡಿಯುವ ಕ್ಷಯರೋಗಗಳೆಲ್ಲಕ್ಕೂ ಈ ಔಷಧವನ್ನೇ ಉಪಯೋಗಿಸತಕ್ಕದ್ದಾಗಿದೆ. ದೇಹದ ಒಳಭಾಗದಲ್ಲಿ ಹುಟ್ಟುವ ರೋಗಗಳನ್ನು ನಿವಾರಣೆ ಮಾಡುವುದರಲ್ಲಿ ಪೆರೂನಾ ಬಹು ಪ್ರಸಿದ್ಧವಾದ ಔಷಧವಾಗಿದೆ. ಪೆರೂನಾ ಲಕ್ಷಾಂತರ ರೋಗಿಗಳಿಗೆ ಸೌಖ್ಯವನ್ನು ಕೊಟ್ಟಿರುವುದು. ಈ ಔಷಧದ ಸೇವನೆ ಪಥ್ಯ ಮುಂತಾದದ್ದನ್ನು ವಿವರವಾಗಿ ಬರೆದ ಕಾಗದವು ಆ ಶೀಸೆಯ ಜೊತೆಯಲ್ಲೇ ಇಟ್ಟಿದೆ. ಇದಲ್ಲದೆ ಪೆರೂನಾ ವಿಚಾರವನ್ನು ವಿವರಿಸಿರುವ ಸಣ್ಣ ಪುಸ್ತಕವನ್ನು ಔಷಧದ ಅಂಗಡಿಗಳಲ್ಲಿ ಕೇಳಿದರೆ ಸುಮ್ಮನೆ ಕೊಡುತ್ತಾರೆ.

ನೆತ್ತಿ, ಗಂಟಲು, ಶ್ವಾಸಕೋಶ, ಅನ್ನಕೋಶಗಳಲ್ಲಿ ಕ್ಷಯರೋಗವುಂಟಾಗಿರುವ ವೇಳೆಯಲ್ಲಿ ಪೆರೂನಾವನ್ನು ಒಂದಾವರ್ತಿ ಪರೀಕ್ಷಿಸಿ ನೋಡಿದಲ್ಲಿ ಒಂದು ಸಲ ಸೇವಿಸಿ ನೋಡಿದರೆ ಅದರ ಗುಣವು ಮಂದಟ್ಟಾಗುವುದು. ಅದರ ಗುಣವು ಬೇಗ ಅನುಭವಕ್ಕೆ ಬಂದಿತೆನ್ನುವದಕ್ಕೆ ಅನುಮಾನ ಕಾಣುವದಿಲ್ಲ.

ಮಿಸೆಸ್ ಎಲಿಸಬೆತ್ ಹಂಟ್, ಮೆಲ್ಬೋರ್ನ್, ವಿಕ್ಟೋರಿಯಾ

ಇತರ ಔಷಧಗಳಿಂದ ನನಗೆ ವಾಸಿಯಾಗಲಿಲ್ಲ. ಪೆರೂನಾ ವಾಸಿಮಾಡಿತು.

ಮಿಸೆಸ್ ಎಲಿಸಬೆತ್ ಹಂಟ್, ೫೪ ಪ್ಲೆಸಿಂಗ್ಟನ್ ಬೀದಿ, ಸೆಂಟ್ ಕಿಲ್ಡಾ, ಮೆಲ್ಬೋರ್ನ್, 'ವಿಕ್ಟೋರಿಯಾ ಲ್ಯಾಬೊರೇಟರಿ ಸೊಸೈಟಿ'ಯ ಮೆಂಬರು, ಈಕೆ ಬರೆಯುವುದು:—"ಶ್ವಾಸಕೋಶದ ಕ್ಷಯಕ್ಕೆ ಪೆರೂನಾ ಸೇವಿಸುವದೇ ಉತ್ತಮವೆಂದು ಸಂತೋಷದಿಂದ ಹೇಳುತ್ತೇನೆ. ನನಗೆ ಇತರ ಔಷಧಗಳಿಂದ ವಾಸಿಯಾಗಲಿಲ್ಲ. ಪೆರೂನಾ ವಾಸಿ ಮಾಡಿತು. ಕೆಲವು ವರುಷಗಳ ತನಕ ಈ ರೋಗವು ನನ್ನನ್ನು ಪೀಡಿಸಿತು. ನಾನು ತುಂಬಾ ಇಳಿದು ಹೋಗಿದ್ದೆನು. ನನಗೆ ಆಹಾರ ರುಚಿ ಸುತ್ತಾ ಇರಲಿಲ್ಲ. ರಾತ್ರಿ ಹೊತ್ತು ನಿದ್ರೆ ಬರುತ್ತಿರಲಿಲ್ಲ. ತುಂಬಾ ಕೃಶಳಾಗಿದ್ದೆನು. ನನ್ನ ಸ್ನೇಹಿತರು ನನಗಾಗಿ ತುಂಬಾ ಚಿಂತೆಪಟ್ಟರು. ಡಾಕ್ಟರುಗಳು ನನಗೆ ಆಶೆ ಇಲ್ಲವೆಂದು ಹೇಳಿದರು. ನನ್ನ ಶ್ವಾಸಕೋಶದಲ್ಲಿ ಕ್ಷಯವಾಗಿ ಪರೂನಾಗಳು ಕೆಟ್ಟು ಹೋಗಿದ್ದವು. ಕಡೆಗೆ ನಿರಾಶೆಯಾಗಿ ಬಿಟ್ಟಿದ್ದೆ. ಆಗ ಪೆರೂನಾ ಸೇವಿಸಬೇಕೆಂದು ನನಗೆ ಹೇಳಿದರು. ಕೆಲವು ದಿನ ತೆಗೆದುಕೊಳ್ಳುವುದರೊಳಗಾಗಿ ನನಗೆ ಆಹಾರ ರುಚಿಯು ಹೆಚ್ಚಾಗುತ್ತ ಬಂದಿತು. ನನಗೆ ನನ್ನ ಶ್ವಾಸಕೋಶಗಳು ಬಹಳ ಚೆನ್ನಾಗಿವೆ. ನಾನು ಪೆರೂನಾವಿನ ಉಪಕಾರವನ್ನು ಸರ್ವದಾ ಸ್ಮರಿಸುತ್ತೇನೆ."

ಬಹಳ ದುರ್ಬಲವುಂಟಾಗಿರುವುದು.

ಮಿಸೆಸ್ ಆಲಿಸ್ ಬ್ರಾಡ್ಲಿ, ಫಾರೋಲ್ಡ್, ಒಂಟೇರಿಯೋ, ಕೆನಡಾ, ಈಕೆ ಬರೆಯುವುದು:—"ಎರಡು ವರುಷಗಳ ಕೆಳಗೆ ನನಗೆ ಶಕ್ತಿ ಕುಂದಿ ಬಹಳ ಹೀನಸ್ಥಿತಿಯಲ್ಲಿದ್ದೆನು. ಆಗ ನನಗೆ ಹಾಸ್ಪತ್ರೆಯಾಯಿತು. ಬಿಂಬವೊಂದುಂಟಾದುದರಿಂದ ನನ್ನ ದೇಹದ ಒಂದು ಪಕ್ಕೆ ಬಿದ್ದುಹೋಗಿ, ವಿಹಾರವದೆ ಹೋದೆನು. ಡಾಕ್ಟರುಗಳನ್ನು ಕರೆಸಿ ಚಿಕಿತ್ಸೆ ಮಾಡಿಸಿಕೊಂಡರು. ಕ್ರಮೇಣ ಹೀನಸ್ಥಿತಿಗೆ ಬರುತಾ ಬಂದಿತು. ಮತ್ತೆ ನಾನು ಹಾಸಿಗೆಯಿಂದ ಏಳಲಾರದೆಂದು ನಿಶ್ಚಯಿಸಿಕೊಂಡೆನು. ಆದರೆ ಪೆರೂನಾವನ್ನು ನನಗೆ ಕೊಡುತ್ತಾ ಬಂದರು. ನಾಲ್ಕು ಬಾಟ್ಲಿಯ ಔಷಧ ಸೇವಿಸಿ ಪತ್ಯದಲ್ಲೇ ನಾನು ಹಾಸಿಗೆಬಿಟ್ಟೇ ಮನೆಯೊಳಗೆ ತಿರುಗಾಡುವಂತೆಯಾಯಿತು. ನನ್ನ ಸ್ಥಿತಿಯನ್ನು ನೋಡಿದ ನನಗೂ ನನ್ನ ಸ್ನೇಹಿತರಿಗೂ ಪರಮಾಶ್ಚರ್ಯವಾಯಿತು. ರೋಗಿಗಳಿಗೆ ಪೆರೂನಾ ಬಹು ಉಪಕಾರವುಳ್ಳ ಔಷಧವೆಂದು ನೆನಸುತ್ತೇನೆ. ಇದಲ್ಲದೆ ನನ್ನ ಮಗಳಿಗೂ ಪೆರೂನಾ ತೆಗೆದುಕೊಂಡು ಅಭ್ಯಾಸವಾಗಿದೆ. ಅವಳ ಶರೀರ ಸ್ಥಿತಿ ಬಹಳ ಪುಷ್ಟಿಯಾಗಿಯೂ ಆರೋಗ್ಯವಾಗಿಯೂ ಇದೆ. ನನ್ನ ಪ್ರಾಣಗಳನ್ನು ಪೆರೂನಾವು ಬದುಕಿಸಿತೆಂದು ನಂಬುತ್ತೇನೆ."

ಹೊಟ್ಟೆ ನೋವಿತ್ತು—ಈಗಹೋಯಿತು.

ಮಿಸೆಸ್ ಡಾನಿಯಲ್ ಹಾಸ್ಕಿಂಗ್, ಪರ್ಲಿಂಗ್, ಒಂಟೇರಿಯೋ, ಕೆನಡಾ, ಈಕೆ ಬರೆಯುವುದು:—"ಎರಡು ವರುಷಗಳ ತನಕ ನನ್ನ ಹೊಟ್ಟೆಯಲ್ಲಿ ಅಕ್ಕ ರಾಜ್ಯ(?) ಅನುಭವಿಸಿದೆನು. ಒಂದೊಂದು ಸಲ ಕೆಲವು ದಿನಗಳ ವರೆಗೆ ನಾನು ಏನೂ ತಿನ್ನಲಾರದೆ ಇದ್ದೆನು. ನನ್ನ ನಾಲಿಗೆ ಬಿಳುಪಾಗಿ, ಕ್ಷಯವಾಯ್ತು, ತಲೆನೋವು ಹಿಡಿಯಿತು, ನಿರಾಶೆಯುಂಟಾಯಿತು. ಮೂರುವರೆ ಡಾಕ್ಟರುಗಳು ನನಗೆ ಚಿಕಿತ್ಸೆ ಮಾಡಿದರು. ಆದರೆ ನನಗೆ ಸ್ವಲ್ಪವೂ ಅನುಕೂಲವಾಗಲಿಲ್ಲ. ಕಡೆಗೆ ಪೆರೂನಾ ಸೇವಿಸಲಾರಂಭಿಸಿದೆನು. ಕೂಡಲೇ ಸ್ವಲ್ಪ ಸ್ವಲ್ಪವಾಗಿ ವಾಸಿಯಾಗುತ್ತಾ ಬಂತು. ಮೂರು ಬಾಟ್ಲು ಮುಗಿಸಿದ ಮೇಲೆ ಊಟ ರುಚಿ ಸುವಹಾಗಾಯಿತು; ಏನು ಬೇಕಾದರೂ ಚೆನ್ನಾಗಿ ತಿನ್ನುವಂತಾಯಿತು. ಈಗ ನಾನು ಆರೋಗ್ಯವಾಗಿಯೂ ಶಕ್ತಿಯುಕ್ತಳಾಗಿಯೂ ಇದ್ದೇನೆ. ಪೆರೂನಾ ನನ್ನ ಪ್ರಾಣವನ್ನು ಬದುಕಿಸಿತೆಂದು ನಂಬುತ್ತೇನೆ. ಯಾವಾಗಲೂ ಅದನ್ನು ಕೊಂಡಾಡುತ್ತೇನೆ."

ಕ್ಷಯ ಹಿಡಿಯುವ ರೀತಿಯುಂಟಾಯಿತು.

ಮಿಸ್ ಆಲಿವಿ ಪರ್ರಾಲ್ಟ್, ೩೩೩ ಬ್ರೇಡ್ವರ್ ಬೀದಿ, ಸೆಂಟಿವಾಯ್ಲ್ ಸೆಂಟ್ ಪಾಲ್, ಮಾಂಟ್ರಿಯಲ್, ಕೆನಡಾ, ಈಕೆ ಬರೆಯುವುದು:—"ನಿಮ್ಮ ಪೆರೂನಾ ಎಂಬ ಪ್ರಖ್ಯಾತವಾದ ಔಷಧದ ವಿಷಯವಾಗಿ ಸಂತೋಷವಾಗಿ ಹೇಳುವನ್ನು ಬರೆಯುತ್ತೇನೆ. ನಾನು ಇತರ ಔಷಧಗಳನ್ನು ಸೇವಿಸಿದೆನು. ನನ್ನ ಕ್ಷಯರೋಗದ ನಿವಾರಣೆಯಾಗಲಿಲ್ಲ. ನನಗೆ ಕ್ಷಯದ ಕಾಯಿಲೆ ತುಂಬಾ ಬಂತು. ನನ್ನ ತಲೆಯಲ್ಲೂ ಹೊಟ್ಟೆಯಲ್ಲೂ ಅಕ್ಕರಾ ಗಟ್ಟಿ ಜಿಗುಟಾಗ ಸ್ವಲ್ಪ ರಾತ್ರಿ ಹೊತ್ತು ನಾನು ಬದುಕಲಾರದವಳಾಗಿ ನನಗೆ ಶೀತ ಹಿಡಿದು ನಿದ್ರೆ ಬಾರದೆ ಬಹಳ ಕಷ್ಟಪಟ್ಟೆ. ಕಡೆಗೆ ಪೆರೂನಾ ತೆಗೆದುಕೊಳ್ಳಲು ಆರಂಭಿಸಿದೆನು. ಅದನ್ನು ನಾನು ಕ್ರಮವಾಗಿ ತೆಗೆದುಕೊಳ್ಳುತ್ತಾ ಬಂದದ್ದರಿಂದ ದಿನೇ ದಿನೇ ಆರೋಗ್ಯವಾಯಿತು. ಈಗ ನಾನು ಮೂರು ಬಾಟ್ಲು ಸೇವಿಸಿದೇನೆ. ನನ್ನ ರೋಗವು ಸಂಪೂರ್ಣವಾಗಿ ವಾಸಿಯಾಗಿರುತ್ತದೆ."

ಪೆರೂನಾದಿಂದ ಬೇಗ ಗುಣಕಂಡಿತು.

ಮಿಸ್ ಶೆರ್ಲಿ ಬ್ರೌನ್, ೩೩೦೧ ಫ್ರಾಂಕ್ಲಿನ್ ಬೀದಿ, ರಿಚ್ಮಂಡ್, ವರ್ಜೀನಿಯ, ಯು. ಎಸ್. ಏ., ಈಕೆ ಬರೆಯುವುದು:—"ನಾನು ಪೆರೂನಾ ಗಿಡಕ್ಕಾಗ ನನಗೆ ಕ್ಷಯ ಹಿಡಿಯಿತು. ಹಲವು ಒಳ್ಳೆಳ್ಳೆ ಡಾಕ್ಟರುಗಳು ನನಗೆ ಔಷಧ ಕೊಟ್ಟರು. ಆದರೆ ಯಾರಿಂದಲೂ ನನಗೆ ಗುಣವಾಗಲಿಲ್ಲ. ಅಲ್ಲಿ ನನ್ನ ತಾಯಿ ಪೆರೂನಾ ಸೇವಿಸುತ್ತಿದ್ದಳು. ನನಗೂ ಅದನ್ನೇ ಕೆಲವು ಕಾಲ ಕೊಡುತ್ತಾ ಬಂದಳು. ನಾನು ದಿನೇ ದಿನೇ ಚೆನ್ನಾಗುತ್ತಾ ಬಂದೆ. ಈಗ ಆರೋಗ್ಯವಾಗಿಯೂ ಪುಷ್ಟಿಯಾಗಿಯೂ ಬೆಳೆದಿರುವೆನು. ನನಗೆ ಈಗ ೧೯ ವರುಷ. ಡಾಕ್ಟರುಗಳು ನನಗೆ ಕ್ಷಯ ಹಿಡಿದಿದೆ ಎಂದು ಹೇಳಿದರು. ಆದರೆ ನನಗೆ ಸ್ವಲ್ಪ ಶೀತ ಹಿಡಿದಿತ್ತಲ್ಲದೆ ಬೇರೇನೂ ಇಲ್ಲ."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

17—7—1908 ರಿಂದ 24—7—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	*	*	0	0
ಮೈಸೂರು ,,	92	61	0	1
ಕೋಲಾರ್ ,,	8	6	2	0
ಕೋಲಾರ್ ಚಿನ್ನದ ಗಣಿಗಳು	0	0	*	*
ತುಂಕೂರು ಡಿಸ್ಟ್ರಿಕ್ಟು	*	*	0	0
ಹಾಸನ ,,	9	3	19	14
ಚಿತ್ರದುರ್ಗ ,,	0	0	1	0
ಕಡೂರ್ ,,	26	15	10	5
ಶಿವಮೊಗ್ಗಾ ,,	6	4	*	*
ಜುಮ್ಲಾ	141	89	32	20

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಶ್ರಾವಣ ಶುದ್ಧ ಸಪ್ತಮಿ ಗುರುವಾರದಿಂದ ಶ್ರಾವಣ ಶುದ್ಧ ಪೌರ್ಣಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಆಗಸ್ಟು

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ	ತೇದಿ ಶ್ರಾವಣ ಮಾಸ
6	ಗುರು ‡	ಸಪ್ತಮಿ	37-46	ಚಿ	12 56	23
7	ಶುಕ್ರ ,,	ದಶಮಿ(?)	35 30	ಅ	13-30	24
8	ಶನಿ *	ಏಕಾದಶಿ	31 54	ಜ್ಯೇ	11-32	25
9	ರವಿ †	ದ್ವಾದಶಿ	27 47	ಮೂ	9 36	26
10	ಚಂದ್ರ .	ತ್ರಯೋ	22 52	ಪೂಷಾ	6 50	27
11	ಕುಜ ¶	ಚತುರ್ದಶಿ	17 12	ಉಷಾ	3-23	28
12	ಬುಧ ,	ಪೌರ್ಣಮಿ	12 20	ಧ	55 10	29

‡ ಮಹಾವೈಧೃತಿ ,, ವರಮಹಾಲಕ್ಷ್ಮೀವ್ರತ * ಸರ್ವತ್ರ ಏಕಾದಶಿ, ಶ್ರಾವಣಶನಿವಾರ † ಪ್ರದೋಷ, ದಾಮೋದರದ್ವಾದಶಿ, ದಗ್ಧಯೋಗ ತಿಥಿದ್ವಯಂ, ಉತ್ಪಾತಯೋಗ ¶ ಪೂರ್ಣಿಮಾ ತಿಥಿ, ಅಶ್ವಲಾಯನೋಪಾಕರ್ಮ, ಋಗ್ವೇದೋಪಾಕರ್ಮ ಅನಸ್ತಂಬ(?)ಪಾಕರ್ಮ, ಗಾಯತ್ರಿಜಪ

ಪೇಟೆ ಧಾರಣೆ.

ದಿನಸಿ		ಮೈಸೂರು.	ಬೆಂಗಳೂರು
ಅಕ್ಕಿ ಅಕ್ಕಿ ಪಲ್ಲಾ ೧ಕ್ಕೆ	ರೂ.	೧೫ ೦-೦	೧೪-೦ ೦
[illegible]		೧೫ ೮ ೦	೧೫-೮ ೦
[illegible]		೧೩ ೮ ೦	೧೩ ೩-೦
ಜವಾರಿ ಅಕ್ಕಿ		೩ ೮ ೦	೧೧ ೦-೦
ಸಣ್ಣಕ್ಕಿ ಜವಾರಿ		೧೭ ೦-೦	೧೭ ೦-೦
,, ದಪ್ಪ		೧೬ ೮ ೦	೧೬ ೩ ೦
ತೊಗರಿ ಬೇಳೆ ಪಲ್ಲಾ ೧ಕ್ಕೆ		೧೯ ೦	೧೭-೦ ೦
,, ದಪ್ಪ		೧೯ ೮-೦	೧೯ ೮
ಸ್ವೀಟ್ ರಾಗಿ ಪಲ್ಲಾ ೧ಕ್ಕೆ		೭ ೩-೦	೭ ೮-೦
ಕಾರಾಗಿ		೬ ೩ ೦	೭ ೩-೦
ಜೋಳ		೬-೦-೦	೮-೧೨-೦
ಹುಲಸಂದೆ ಪಲ್ಲಾ ೧ಕ್ಕೆ		೧೧-೦ ೦	೧೦-೧೨ ೦
ಬಿಳೀ ಅವರೆ		೮ ೮-೦	೯-೦ ೦
ಹೆಸರು		೧೧ ೮-೦	೧೨-೮-೦
ಉದ್ದು		೧೨-೮-೦	೧೨ ೮ ೦
ಕಡಲೆ		೧೩-೮-೦	೧೩ ೮ ೦
ಎಳ್ಳು ಸೆ ೧೨ ಕ್ಕೆ		೨೦-೮-೦	೨೩-೮ -
ಹುರುಳಿ		೬-೮-೦	೭-೩-೦
ಹರಳು ೧೨ ಸೇರಿಗೆ		೧೧ ೮-೦	೧೨-೮-೦
ಸೀಗೇಕಾಯಿ ಮಣ ೧ಕ್ಕೆ		೧ ೮-೦	೧.೬-೦
ಮೆಣಸಿನಕಾಯಿ		೪ ೪-೦	೩-೮ ೦
,, ದಪ್ಪ		೩-೪-೦	೩-೪-೦
ಬೆಲ್ಲ ದೇಶ್ಯ ಅಚ್ಚು		೪ ೦ ೦	೫ ೨-೦-೦
ಒಳ್ಳೆಣ್ಣೆ ಮಣ ೧ಕ್ಕೆ		೫ ೮-೦	೬-೦-೦
ಹರಳೆಣ್ಣೆ ,,		೪-೧೨ ೦	೪.೦.೦
ಕೊತ್ತುಂಬರಿ ಪಲ್ಲಾ ೧ಕ್ಕೆ		೬-೦-೦	೬ ೪ ೦
ಉಪ್ಪು ,,		೪-೮-೦	೫ ೦ ೦
ದುಣಸೇ ಹಣ್ಣು		೦-೮ ೦	೧ ೪ ೦
,, ಕಡೆದು		೧-೪ ೦	೧ ೫ ೦
ತುಪ್ಪ ಮಣ ೧ಕ್ಕೆ		೧೩ ೮ ೦	೧೫ ೪.೦
ಸೀಮೆಯೆಣ್ಣೆ ಟಿನ್ನು ೧ಕ್ಕೆ		೪-೧೫-೦	೪ ೦ ೦
ತೆಂಗಿನಕಾಯಿ ೧೦೦ ಕ್ಕೆ		೪ ೦-೦	೬ ೦ ೦
ಅಡಿಕೆಕಾಯಿ ಮಣ ೧ಕ್ಕೆ		೦-೦-೦	೧-೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨-೦	೦-೧೪-೦
ಚಿನ್ನ (ಪವನ್) ಕೆಂಪು		೧೫-೬-೦	೧೫-೭-೬
,, ,, ಪಸಿಮೆ		೧೫-೧೦-೦	೧೫-೧೨ ೦
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೪ ೯-
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೭೫-೦-೦	೬೭-೦-೦

Printed and Published by the Rev. E. W. Thompson, M. A., Proprietor and Manager, Wesleyan Mission Press, Mysore. 6/8/1908.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸಲ ೧೯೦೮ ನೇ ಇಸವಿ ಆಗಸ್ಟ್ ತಾರೀಖು ೧೩ ನೇ ಗುರುವಾರ. ಸಂಚಿಕೆ ೧೧

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,

ಠಾಕುರದ್ವಾರ, ಮುಂಬೈ.

[66-1]

'ಜ್ವರದ ಗುಳಿಗೆಗಳು.'

೧ ಬಾಟ್ಲಿಯ ಕ್ರಯ	೧ ರೂಪಾಯಿ	ಟಪಾಲ ಖರ್ಚು ಕೂಡಿ	ರೂ ೧—೩—೦.
೨ ,,	.. ೩ ,, ...	,,	,, ೩—೫—೦.
೧೨ ,,	.. ೮ ,, ...	,,	,, ೮—೧೧—೦.

ನೋಟ್ :—ಈ ವಾರದಿಂದ ಇನ್ನು ಕೆಲವು ವಾರಗಳ ವರೆಗೆ ಇದೇ ಕಾಲಮಿನಲ್ಲಿ ಕರ್ಕಿ ಕಂಪನಿಯವರ ಜಗತ್ ಪ್ರಸಿದ್ಧವಾದ ಜ್ವರದ ಗುಳಿಗೆಗಳ ಬಗ್ಗೆ ಅನೇಕ ಜಗತ್ ಪ್ರಸಿದ್ಧ ಡಾಕ್ಟರುಗಳ ಅಭಿಪ್ರಾಯಗಳು ಪ್ರಕಟಿಸಲ್ಪಡುವವು.

AMRUTANJAN DEPOT, 16 OAK-LANE, BOMBAY. [17-25]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ್. ಪ್ರಯತ್ನ ಮಾಡಿರಿ.

ಇದರಿಂದ —ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮು ಮತ್ತು ಗಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ ಕ್ಕೆ ಕಿಮ್ಮತು ೦-೮-೦. ಪೋಸ್ಟು ಖರ್ಚು ೦-೪-೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಖಜ್ಜಿ ವಗೈರೆ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦-೪-೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ—ಅಜೀರ್ಣಕ್ಕೆ ಡಬ್ಬಿ ೧ ಕ್ಕೆ	೦—೪—೦	ಕಾಮಸುಧಾವಟಿಕ—ಹೆಂಗಸರ ಹೊಟ್ಟೆನೋವಿಗೆ	೧—೦—೦
ಪದ್ಮಗುಟಿಕ—ಧಾತು ಪುಷ್ಟಿ ರಕ್ತಶುದ್ಧಿ	೧—೦—೦	ಪ್ರಮೇಹದ ಮಿಶ್ರಣ—ಪ್ರಮೇಹಕ್ಕೆ	೧—೦—೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ ಕ್ಕೆ	೦—೧೨—೦	ಕಫಹರಿ—ಕಫ, ಕೆಮ್ಮು, ಕ್ಷಯ, ಇತ್ಯಾದಿ	೧—೪—೦
ಅತಿಸಾರದ ಮದ್ದು	೦—೮—೦	ಸುಂದರೀ ತೈಲ—ಮೋರೆಗೆ	೦—೮—೦
ದಂತಶೂಲಹರಿ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಕರ್ಣಶೂಲಹಾರಿ—ಕಿವಿನೋವಿಗೆ	೦—೬—೦	ಕ್ರಿಮಿನಾಶಕ ಎಣ್ಣೆ ಬಾಟ್ಲಿ ೧ ಕ್ಕೆ	೦—೮—೦
ಖಜ್ಜಿಯ ಮುಲಾಮು	೦—೩—೦	ವಾತದ ಮಿಶ್ರಣ ,,	೧—೦—೦
ದಂತಮಂಜನ—ಹಲ್ಲುಗಳಿಗೆ	೦—೨—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
ಕೇಶವರ್ಧಿನೀ ತೈಲ—ಕೂದಲಿಗೆ	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
ಬಾಲಾಮೃತ ಮಾತ್ರೆ—ಬಾಲರಿಗೆ	೦—೮—೦	ರೋಮಹಾರಿ	೦—೮—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ.

ಮಹಾ ಬಾಧಾಹಾರಿಣಿಯು.

46-12

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಶ್ರೀ ಪೆಂಟರ್‌ರವರ ಯೂಕ್ಯಾಲಿಪ್ಟಸ್ ತೈಲವು ಸಕಲ ವಿಧವಾದ ಬಾಧೆಗಳನ್ನು ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಕಾಂಪೌಂಡರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಾರೆ, ಈ ರಸಾಯನವನ್ನು ಉಪಯೋಗಿಸಿದ ಮಾತ್ರಕ್ಕೆ ತಲೆನೋವು, ಮಾಂಸನೋವು, ಕಳಕು, ಗಂಟ್ಲುನೋವು, ಪಾರ್ಶ್ವವಾಯು, ನಾನಾವಿಧ ಚರ್ಮರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂಧುಕಟ್ಟುಗಳ ನೋವು, ಅಜೀರ್ಣದ ನೋವು, ಹಲ್ಲುನೋವು. ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಶ್ರೀ ಪೆಂಟರ್‌ರವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮಾಂಸಖಂಡಗಳನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಡಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ: ಸೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಆರನ್ನು ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜೆಂಟರ ವಿಳಾಸ—

ಎಸ್. ಪೆಂಟರ್,

೩೩, ವೇಪನಮುಟ್ಟಿ ಬೀದಿ, ವೇಪೇರಿ, ಮದರಾಸ್.

ಜ್ವರಹರಿ. 64-2



ಇದು ಸಾಧಾರಣ ಜ್ವರ, ಚಳೀಜ್ವರ, ಮರುಜ್ವರ, ಪಿತ್ತಜ್ವರ, ಶೀತಜ್ವರ, ನಾಡಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿನಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಆರೋಗ್ಯ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯಮಾಡಿ ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ ; ೧—೮ ರೂ., ೨—೧೨ ಆ.; ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಭೀಮಸೇನ ಕರ್ಪೂರ.

... Camphor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಕೆಮ್ಮು ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು— ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರೆಯುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಭೀಮಸೇನ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ಎಂದು ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಔಷಧ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದಿದ್ದರೆ ಕೆಳಗಿನ ವಿಳಾಸದಲ್ಲಿ ವಿಚಾರಿಸಿ:—

ಕನ್ನಿಂಗಮ್ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸಲೀಂ ಬೇಗ್ ಸ್ಟ್ರೀಟ್, ಮದರಾಸ್

ಮನೆಗಳು ಕ್ರಯಕ್ಕೆ ಸಿಕ್ಕುತ್ತವೆ.

67-1

೧. ಮೈಸೂರು ಸಂತೆಪೇಟೆಯಲ್ಲಿರುವ ಮಹಡಿ ಮನೆ.

೨. ಮೈಸೂರು ದೇವಪಾರ್ಥಿವರ ಅಗ್ರಹಾರದ ಎದುರಿಗಿರುವ ಬಂಗಲೆ. ವಿಳಾಸ:—

ಎಂ. ಡಿ. ನಾರಣಯ್ಯಂಗಾರ್, ಅಡ್ವೊಕೇಟ್, ಮೈಸೂರು.

ಗೃಹಕೃತ್ಯದ ನೋಟೀಸ್.

68-1

ನಾಗಮಂಗಲ ತಾಲ್ಲೂಕು ಬೆಳ್ಳೂರಲ್ಲಿರುವ ಪಟೂರು ಶೆಟ್ಟಿ ಪ್ಪನ ಬಳಿ ನಾಲ್ಕು ನೂರು ರೂಪಾಯಿ ನನ್ನ ತಂದೆ ದಸ್ತಗಿರಿ ಸಾಬರು ಸಾಲ ಪಡೆದು ನನ್ನ ಹಿಸ್ಸೆಗೆ ಬರತಕ್ಕ ಜಮೀನುಗಳು ಆಧಾರ ಮಾಡಿದಾರೆ. ಈ ಪೊಬಲಿಗೆ ನನ್ನ ಹಿಸ್ಸೆ ಜಮೀನೂ ಸದರಿಯವರು ಕೊಟ್ಟಿರತಕ್ಕ ಸಾಲಕ್ಕೂ ನಾನು ಜವಾಬ್ದಾರನಲ್ಲ. ಮುಂದೆ ಯಾರಾದರೂ ಸಾಲ ವಗೈರೆ ಕೊಟ್ಟು ನನ್ನ ತಂದೆಯಿಂದ ನನ್ನ ವಿಭಾಗವಿಲ್ಲದ ಸ್ವತ್ತುಗಳನ್ನು ಆಧಾರ ಕ್ರಯ ಭೋಗ್ಯ ವಗೈರೆ ಮಾಡಿಕೊಂಡರೆ ಅದಕ್ಕೆ ಅಂಥಾವರು ಜವಾಬ್ದಾರರಾಗಬೇಕಾಗಿ ತಿಳಿಸಿದೆ. ಶೆಟ್ಟಪ್ಪನವರು ಬರೆಸಿಕೊಂಡಿರುವದಕ್ಕೆ ನನ್ನ ತಕರಾರು ಇದ್ದೇ ಇದೆ.

ಬೆಳ್ಳೂರು ಪಕ್ರೋದೀನ್ ಸಾಬಿ

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

58-7

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ್ ಬಟ್ಟೆಗಳು ಹಾಬೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣ ತೆಗೋಗುವದಿಲ್ಲ. ಬರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ಐದು ಆಣೆಯಿಂದ ೬೩ ಆಣೆ ವರಿವಿಗೂ ಚಲ್ಲರೆಯಾಗಿ ಯಾಗಲೀ ಒಟ್ಟಾಗಿ ಯಾಗಲೀ ಮಾರಲ್ಪಡುತ್ತವೆ. ಶಾಲುಗಳು, ಹಾಸನದ ಟೋಪಿಗಳು, ಮಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಮೊಲಕಾಲ್ಮೂರು ಅಂಚಿನ ಪಂಚೆಗಳು ಜೊತೆ ರೂ. ೩.

57-4

೮ ಮೊಳದುದ್ದ, ೩ ಮೊಳದಷ್ಟು (೫೦ ಅಂಗುಲ) ಅಗಲ. ಶುದ್ಧ ಕೆಂಪು ರೇಷ್ಮೆ ಅಂಚಿಗೆ ಸ್ವಲ್ಪವೂ ವ್ಯತ್ಯಾಸವಾಗದ ೩ ಬೆಟ್ಟಗಲ ದಂಚು. ಬಹು ನಯವಾದ ನೂಲಿನಲ್ಲಿ ತಯಾರಿಸಿ ದೊಡ್ಡಮನುಷ್ಯರೆಲ್ಲರೂ ಉಡುತ್ತಾರೆ.

ಬುರ್ಲಿನೆಸ್ ! "ಬ್ಲಾಂಕೆಟ್" ಎಂಬ ಹೊಸ ಬನಾತು ! ರೂ ೬.

ಶುದ್ಧ ಉಣ್ಣೆಯ ತೇಪಿದಬಲು ನಯವಾಗಿನಂತೆ ಮೆತ್ತಗೂ ಛಳಿಗೆ ಬೆಚ್ಚಗೂ ಇದೆ ಉದ್ದ ೨೧, ಅಗಲ ೬೮ ಅಂಗುಲ. ಕ್ರಯ ರೂ. ೬.

ರೇಷ್ಮೆಯ (ಕೆಂಪು) ವಸ್ತ್ರಗಳು ! ೨ ಮೊಳದಗಲ ! ರೂ. ೫.

ಹೊಸ ಪೀತಾಂಬರಿ ತರದ ಗಟ್ಟಿ ಕೆಂಪುಬಣ್ಣದ್ದು. ಉದ್ದ ೩।।। ಮೊಳ.

ಮಧುರೆ ಸೀರೆ ! ಗಟ್ಟಿ ಬಣ್ಣ ೧೬।। ಮೊಳಮುದ್ದ !!

ಬಿಳಿಯ ಚುಕ್ಕೆ ಯಾ ಹೂವುಗಳಿಂದ ಕೂಡಿದ ಕೆಂಪು ಅಥವಾ ಕಪ್ಪು ಬಣ್ಣದ್ದು ರೂ. ೩-೬ ಆ. ನಯವಾಗಿ ಅಂಚು ಸೆರಗಿನಲ್ಲಿ ಜರತಾರಿಯದು ರೂ. ೫. ಚಿಳ್ಳೆಯ ಕಲಾಬತ್ತು ಸೀರೆ, ರೂ. ೭, ರೂ ೮, ರೂ. ೧೦ ಹೆಚ್ಚು ಖರೀದಿಗೆ ಉತ್ತಮ ಪಾಲು ದೊರೆಯುತ್ತೆ.

ವಿಳಾಸ.—ರಾವ್ ಎಂಪೋರಿಯಂ, ಸ್ಟರ್ನ್ ಹಾಂ ರೋಡ್,

ವೇಪೇರಿ, ಮದ್ರಾಸು.

ನೋಟೀಸ್.

60-3

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

೧೯೦೬ನೇ ಇಸವಿ ಮೈಸೂರು ೩ನೇ ಮ್ಯುನಿಸಿಪಲ್ ರೆಗ್ಯುಲೇಷನ್‌ಗೆ ಒಳಪಟ್ಟ ೪೮ನೇ (೧) (G) ಸೆಕ್ಷನ್ ಮೇರೆಗೆ ಟಾಲ್ಪಿ ಇಸವಿ ಆಗಸ್ಟ್ (೧) ನೇ ತಾರೀಖು ಲಾಗಾಯಿತು ಬೆಂಗಳೂರು ಸಿಟಿಯಲ್ಲಿ ಪ್ರತಿಯೊಂದು ಕೂಸಿನ ಜನನದ ಮತ್ತು ಪ್ರತಿಯೊಬ್ಬ ಮನುಷ್ಯನ ಮರಣದ ವಿಷಯವಾಗಿ ಆಯಾಯ ಡಿವಿಜನ್‌ಗೆ ಸಂಬಂಧಪಟ್ಟ ಸಬ್ ರಿಜಿಸ್ಟ್ರಾರಿಗೆ ಜನನವುಂಟಾದ ತಾರೀಖು ಲಾಗಾಯಿತು ಒಂದು ವಾರದೊಳಗಾಗಿಯೂ ಮತ್ತು ಮರಣವುಂಟಾದ ಕಾಲದಿಂದ ೨೪ ಘಂಟೆಗಳ ಒಳಗಾಗಿಯೂ ತಿಳುವಳಿಕೆಯನ್ನು ಕೊಡಬೇಕು ಅಥವಾ ಕೊಡಬೇಕು. ಸದರೀ ಸಮಾಚಾರವನ್ನು ಕೊಡುವದು ಕರ್ತವ್ಯವಾಗಿರತಕ್ಕ ಯಾವ ಮನುಷ್ಯನು ಕೊಡಲು ತಪ್ಪುತ್ತಾನೋ ಅಂಥಾವನು ಪ್ರಾಸಿಕ್ಯೂಷನ್‌ಗೆ ಒಳಪಟ್ಟು ೧೦ ರೂಪಾಯಿಗಳಿಗೆ ಕಡಮೆಯಿಲ್ಲದೆ ಜುಲ್ಮಾನೆಗೆ ಗುರಿಯಾಗುತ್ತಾನೆ.

(Sd.) B. J. KUMARASWAMI NAIK,
President,
City Municipal Council,
22-7-08. Bangalore.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

1-33



ಕಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಬ್ಬರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿಲ್ಲ

ಇದು ಎಲ್ಲೆಲ್ಲಿಯೂ ವಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION. 33-20

(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲಿ ದೊರಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನು ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2 33

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಪೀಳುದಾರ. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಕಾಗದ ಬರೆದು ತರಿಸಿಕೊಳ್ಳಿ. ಅಗ್ಗವಾದ ಮತ್ತು ಚೆನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ. ೮ ಆ., ೧ ರೂ ೬ ಆ.; ೧ ರೂ. ೪ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ

ದಾರದ ಟೋಪಿಗಳು ೯ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ.

ಮಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂರ್ಯ ಮೋಹೋದು, ಅರ್ಧ ಮೋಹೋದು ಕಶೀದ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ನಿಮಗೆ ಸುಪೀರಿಯರ್ ಉಲ್ ಬೇಕೇ?

ನಿಮಗೆ ದಪ್ಪದ ಉಲ್ ಬೇಕೇ?

117-43

೧೦ ಟೋಪಿ ಯಾಗುವ ಸುಪೀರಿಯರ್ ಉಲ್ ಬಂಡಲಿಗೆ	೩-೮-೦
ವಿಕ್ಟೋರಿಯಂ ಉಲ್ ಪೌಂಡು ೧ಕ್ಕೆ	೭-೮-೦
೧೦ ಟೋಪಿಯಾಗುವ ದಪ್ಪದ ಉಲ್ ಬಂಡಲಿಗೆ . .	೩-೬-೦
ಸತ್ಯವಿಜಯ ಹೇರ್ ಆಯಿಲ್ ಸೀಸೆಗೆ	೧-೦-೦

ಮೇಲ್ಕಂಡವುಗಳನ್ನು ವಿ ಪಿ ಯಿಂದಲೂ ರವಾನಿಸುತ್ತೇವೆ.

ವಿಳಾಸ-ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ಜರ್ಮನ್ ಸಿಲ್ವರ್ ಒಡವೆಗಳು.

68 3

ಕಾಲಿಗೆ ಹಾಕುವ ರುಳಿ ೧ನೇ ನಂಬರು ರೂ ೧—೯—೦, ೨ನೇ ನಂ. ರೂ. ೧—೩—೦, ೩ನೇ ನಂ ರೂ ೧—೬—೦, ೪ನೇ ನಂ. ರೂ ೧—೨—೦, ಬಾಪಾಪಿ ಮಾಟ ಜಾಲೀಕಾಯಿ ಗೊಲಸು ೧ನೇ ನಂಬರು ರೂ. ೨—೬—೦, ೨ನೇ ನಂ ರೂ. ೨, ೩ನೇ ನಂ. ರೂ. ೧—೧೨—೦, ಹಾಂಡಿ ಜಾಲೀಕಾಯಿ ಗೊಲಸು ೧ನೇ ನಂಬರು ರೂ ೨, ೨ನೇ ನಂ ರೂ ೧—೧೨—೦, ೩ನೇ ನಂ ರೂ ೧—೧೦—೦, ೪ನೇ ನಂ ರೂ ೧—೬—೦, ಮೈಸೂರು ಪಾಪು ರೂ. ೧—೮—೦, ಗೆಜ್ಜೆ ಕಟ್ಟಿದ ಪಾಪು ರೂ ೩. ಮಲ್ಲಿಗೆ ಮೊಗ್ಗಿನ ಪಾಪು ರೂ. ೩—೮—೦, ಕೈ ಕಡಗ ಜೊತೆ ೧ಕ್ಕೆ ರೂ ೧—೬—೦

ಎಲೆಕ್ಟ್ರಿಕ್ ಭಂಗಾರದ ನಗಗಳು.

ತಲೆನಾಗರ ರೂ ೧—೧೨—೦, ಪಾಲೇಹೂವು ೬೦ ಆಣೆ, ರೋಜಾಹೂವು ೧೨ ಆಣೆ, ಮಲ್ಲಿಗೇಹೂವು ೧೨ ಆಣೆ, ಜಡೆಬಿಲ್ಲೆ ಇಟ್ಟ ರ್‍ಯಾಗಟೆ ರೂ. ೧—೯—೦, ಬೋರೀಕಟ್ಟು ರೂ ೧, ಪುದು ಚೇರಿ ಅಡ್ಡಿಕೆ ರೂ ೩—೮—೦, ಗೆಜ್ಜೆಅಡ್ಡಿಕೆ ರೂ ೩, ಚಂದ್ರಹಾರ ರೂ. ೨, ಚಂದ್ರಹಾರ ಮುತ್ತು ಇಟ್ಟದ್ದು ರೂ. ೨—೮—೦, ಕೈ ಕೀಲುಬಳೆ ಜೋಡಿಗೆ ರೂ. ೨, ಗಟ್ಟಿಬಳೆ ಜೋಡಿಗೆ ರೂ. ೧—೧೨—೦, ಕೈಗೆ ಹಾಕುವ ಪುದುಚೇರಿ ಗೊಲಸು ಜೊತೆಗೆ ರೂ. ೨—೬—೦.

ವಿಳಾಸ:—ಶ್ರೀನಾರಾಯಣ ಅಂಡ್ ಕೋ,

೨೫೬, ಮಿಂಟ್ ಬೀದಿ, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-26

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂಧುಗಳ ನೋವು, ಮೈ ಕೈ ಕಾಲು ಕೊಡತ (ಭಾರ), ಮೈ ಸಡಿಲ, ಶೀತವಾತಗಳ ಬಾಧೆ, ಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿರೋಗ ದಾರಿಸೊಡನೆ, ನೀರು ಜನಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಜ್ಜಾಜ್ವರ, ಕೃಕತ್ಯಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಕೋಶಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಡಬ್ಬಿಗೆ ೪ ಆಣೆ; ೫ ಡಬ್ಬಿಗೆ ೧ ಡಬ್ಬಿ ಹೆಚ್ಚು. ೧ ರಿಂದ ೧೨ ಡಬ್ಬಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ವೃತ್ತಾಂತ ಪತ್ರಿಕೆ.

ಸ್ ೧೯೦೮ ನೇ ಇಸವಿ ಆಗಸ್ಟ್ ತಾ ೧೩ ನೇ ಗುರುವಾರ

ತುರ್ಕಿ ರಾಜ್ಯದ ಆಳ್ವಿಕೆಯ ರೂಪಾಂತರವು.

ತುರ್ಕಿ ರಾಜ್ಯದಲ್ಲಿ ಪ್ರಜಾ ಪಕ್ಷದವರ ಕೋರಿಕೆಯನ್ನು ಸುಲ್ತಾನರವರು ಒಪ್ಪಿ ಅವರ ಇಷ್ಟಾನುಸಾರ ಪಾರ್ಲಿಮೆಂಟನ್ನು (ಪ್ರಜಾಪ್ರತಿನಿಧಿ ಸಭೆಯನ್ನು) ಪ್ರಾರಂಭಿಸುವುದಾಗಿಯೂ, ಹಳೆಯ ಮಂತ್ರಿಗಳನ್ನೆಲ್ಲಾ ಕೆಲಸದಿಂದ ವಜಾ ಮಾಡಿರುವುದಾಗಿಯೂ ಇಸ್ತಿಹಾರು ಕೊಟ್ಟರೆಂದು ಕಳೆದ ವಾರ ಸಂಕ್ಷೇಪವಾಗಿ ತಿಳಿಸಿದೆವಷ್ಟೆ. ತುರ್ಕಿ ರಾಜ್ಯದಲ್ಲಿ ವಿದ್ಯಾವಂತರಾದ ಪ್ರಜೆಗಳು ಏಕವಾಗಿ ಕೆಲವು ಕಾಲದಿಂದ ತುರ್ಕಿ ರಾಜ್ಯದೊಳಗೂ ಇತರ ರಾಜ್ಯಗಳಲ್ಲಿರುವಂತ ರಾಜ್ಯಭಾರ ಕ್ರಮಗಳನ್ನು ರೂಪಿಸಬೇಕಾದದ್ದು ಅವಶ್ಯವೆಂದು ಹೋರಾಡುತ್ತಾ ಬಂದಿದ್ದಾರೆ. ಇವರು ತುರ್ಕಿಯೊಳಗೆ ಇದ್ದ ಪಕ್ಷಕ್ಕೆ ಇವರನ್ನು ಗವರ್ನ್ಮೆಂಟಿನವರು ಹಿಡಿದು ಸೆರೆಮನೆಗೆ ಕಳುಹುತ್ತಿದ್ದರಾದ್ದರಿಂದ ಅವರಲ್ಲಿ ಮುಖಂಡರಾಗಿದ್ದವರೆಲ್ಲಾ ಆ ರಾಜ್ಯವನ್ನೇ ತ್ಯಜಿಸಿ ದೂರ ಪ್ರದೇಶಗಳಲ್ಲಿದ್ದುಕೊಂಡು ತಮ್ಮ ಉದ್ದೇಶವು ನೆರವೇರುವುದಕ್ಕೆ ಸಾಹಸ ಪಡುತ್ತಿದ್ದರು. ಇವರ ಕಾರ್ಯಸಾಧನೆಯಿಂದ ಈಚೆಗೆ ತುರ್ಕಿ ಸೈನ್ಯದ ಪಲವು ಹುದ್ದೇದಾರರು ಅವರ ಪಕ್ಷವನ್ನು ವಹಿಸುವಂತೆ ಮಾಡಿಕೊಂಡರು. ಕೆಲವು ದಿವಸಗಳ ಹಿಂದೆ ಮ್ಯಾಸಿಡೋನಿಯಾ ಸೀಮೆಯೊಳಗೆ ಕೆಲವು ಕಾರ್ಯಗಳು ನಡೆದು, ಅಲ್ಲಿನ ಸೈನಿಕರಿಗೆ ತುರ್ಕಿಯ ರಾಜ್ಯಭಾರ ಕ್ರಮಗಳು ತೃಪ್ತಿಕರವಾಗಿಲ್ಲವೆಂದೂ, ಆ ಸೈನಿಕರು ತಮ್ಮ ಪಕ್ಷವನ್ನು ವಹಿಸುವ ಹಾಗಿಲ್ಲವೆಂದೂ ಸುಲ್ತಾನರವರಿಗೆ ಪರಿಷ್ಕಾರವಾಗಿ ಗೊತ್ತಾಯಿತು.

ಸುಲ್ತಾನ್ ಅಬ್ದುಲ್ ಹಾಮಿದ್ ಯವರು ಕಳೆದ ೧೮೭೬ ರಲ್ಲಿ ತುರ್ಕಿಯ ರಾಜ್ಯಭಾರವನ್ನು ವಹಿಸಿಕೊಂಡಾಗ, "ನನ್ನ ಸಂಸ್ಥಾನದಲ್ಲಿ ಪಾರ್ಲಿಮೆಂಟನ್ನು ಸ್ಥಾಪನೆ ಮಾಡಿ, ಪ್ರತಿನಿಧಿಗಳ ಸಹಾಯವನ್ನು ಪಡೆದು ರಾಜ್ಯಭಾರ ಮಾಡುವೆನು" ಎಂಬದಾಗಿ ಅಪ್ಪಣೆ ಕೊಡಿಸಿದರು. ಆದರಂತೆ ಕೂಡಲೇ ಒಂದು ಪಾರ್ಲಿಮೆಂಟೂ ಕೂಡಿತು. ಆದರೆ ಪ್ರಜಾಪ್ರತಿನಿಧಿಗಳು ಮಂತ್ರಿಗಳನ್ನು ಬಹಳವಾಗಿ ದೂರಿ ಆಕ್ಷೇಪಣೆ ಮಾಡುತ್ತಾ ಬಂದದ್ದರಿಂದ ಮಂತ್ರಿಗಳು ಸುಲ್ತಾನರಿಗೆ ಸಲಹೆ ಕೊಟ್ಟು, ಆ ಸಭೆಯನ್ನೇ ನಿರ್ನಾಮಮಾಡಿಸಿ ಬಿಟ್ಟರು. ಇದಕ್ಕೆ ಸುಲ್ತಾನರು ಸೈನ್ಯವನ್ನು ಬಿಟ್ಟು, ಮೆಂಬರುಗಳನ್ನು ಸಭಾಮನೆಯಿಂದ ಹೊರಡಿಸಿದ್ದಲ್ಲದೆ, ಕೆಲವರನ್ನು ಗಡೀಪಾರು ಮಾಡಿಸಿದರು; ಕೆಲವರು ಬಂದೀಖಾನೆಯಲ್ಲಿ ಹಾಕಲ್ಪಟ್ಟರು; ಕೆಲವರನ್ನು ಮರಣದಂಡನೆಗೆ ಗುರಿಮಾಡಿದರು. ಅಂದಿನಿಂದೀಚೆಗೆ ರಾಜ್ಯಭಾರ ಸ್ವಾತಂತ್ರ್ಯವೆಲ್ಲಾ ಸುಲ್ತಾನರೊಬ್ಬರೇ ವಹಿಸಿಕೊಂಡು ಆಳುತ್ತಾ ಬಂದಿದ್ದಾರೆ. ಇವರ ಹಿಂದೆ ಇದ್ದ ಸುಲ್ತಾನರ ಕಾಲದಲ್ಲಿ ಮಂತ್ರಿಗಳು "ಪೋರ್ಟ್" ಎಂಬ ಸಭೆ ಮಾಡಿಕೊಂಡು ರಾಜ್ಯಭಾರ ನಡೆಸುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಈ ಮಂತ್ರಿಗಳೂ, ಸುಲ್ತಾನರೂ ಅವರ ಪಕ್ಷದ ಅಧಿಕಾರಿಗಳೂ ರಾಜ್ಯಭಾರದ ವಿಷಯದಲ್ಲಿ ವಾಗ್ವಾದಗಳೂ ಹೋರಾಟಗಳೂ ಜನನಕಾರ್ಯಗಳೂ ಹುಟ್ಟುತ್ತಿದ್ದವು. ಅಬ್ದುಲ್ ಹಾಮಿದ್ ಖಾನರ್ ರಾಜ್ಯಾಭಿಷೇಕವಾದ ಮೇಲೆ ಅವರು ಆ ಮಂತ್ರಿಸಭೆಯಿಂದ ಸ್ವಾತಂತ್ರ್ಯವನ್ನೆಲ್ಲಾ ಕಿತ್ತುಕೊಂಡು, ತಮ್ಮ ಅಪ್ಪಣೆ ಅಭಿಪ್ರಾಯಾನುಸಾರ ನಡೆಯತಕ್ಕವರನ್ನೇ ರಾಜ್ಯದಲ್ಲಿ ಸಮಸ್ತ ಅಧಿಕಾರಗಳಿಗೂ ನೇಮಕಮಾಡಿಕೊಂಡರು. ಅಂದಿನಿಂದ ಇವರ ಕಾಲದ ಮಂತ್ರಿಗಳ ಸಭೆಯು ಅವರ ಅಧೀನದಲ್ಲೇ ಇರತಕ್ಕ ಸಭೆಯಾಯಿತು. ಇದಲ್ಲದೆ ಸುಲ್ತಾನರು ಗೂಢಚಾರರ ಒಂದು ಸೈನ್ಯವನ್ನು ಸೃಷ್ಟಿಸಿ ನೇಮಕಮಾಡಿದರು. ಈ ಗುಂಪಿನವರಲ್ಲಿ ಸಾವಿರಾರು ಜನರು ಸೇರಿಕೊಂಡರು. ರಾಜ್ಯದ ಸಕಲ ಪ್ರದೇಶಗಳಲ್ಲಿ, ವಿಶೇಷವಾಗಿ ಯೂರೋಪಿಯನ್ ಅಧಿಪತ್ಯಗಳಲ್ಲಿ ನಡೆಯತಕ್ಕ ವಿಚಾರಗಳನ್ನೆಲ್ಲಾ ಈ ಗೂಢಚಾರರು ತಿಳಿದು ಸುಲ್ತಾನರಿಗೆ ಅರಿಕೆ ಮಾಡುವುದೇ ಅವರ ಕೆಲಸವಾಗಿತ್ತು. ಇಷ್ಟೇ ಅಲ್ಲ, ಈ ಸುಲ್ತಾನರು ತಮ್ಮ ಪ್ರಜಾ ವರ್ಗಕ್ಕೆ ಸೇರಿದ ಗ್ರೀಕ್ ಮತ್ತು ಅರ್ಮೀನ್ಯ ಪ್ರಜೆಗಳ ಪಕ್ಷಪಾತ್ರತೆಗಳಿಗೆ ಲೋಪವನ್ನುಂಟುಮಾಡಿ ಆ ಜನರಿಗೆ ಮನಸ್ತಾಪ ಕಷ್ಟನಷ್ಟಗಳನ್ನು ತಂದಿಟ್ಟರು. ರಾಜಧಾನಿಯಿಂದ ದೊಡ್ಡ ದೊಡ್ಡ ಸರ್ಕಾರಿ ಅಧಿಕಾರಿಗಳು ನಾನಾ ಲಂಚಕೋರರಾದರು. ಆಳ್ವಿಕೆಯು ಅಕ್ರಮಕ್ಕೆ ಬಿದ್ದಿತು. ಸೈನ್ಯಕ್ಕೆ ಸಂಬಳ ಬಟವಾಡೆಯಾಗದೆ ಬಾಕಿ ನಿಂತಿತು. ಅವರು ದರಕು ಬಟ್ಟೆಗಳನ್ನೇ ಧರಿಸು ಹಾಕಿಕೊಂಡಿರುವಂತಾಯಿತು. ಆಗಿಂದಾಗ್ಗೆ ತುರ್ಕಿ ರಾಜ್ಯದಲ್ಲಿ ಸಂಭವಿಸುತ್ತಿದ್ದ ಅನಾಯಕತ್ವದ ಕಾರ್ಯಗಳನ್ನು ನೋಡಿ, ವಿಲಾಯತಿ, ಫ್ರಾನ್ಸ್, ಆಸ್ಟ್ರಿಯಾ, ರಷ್ಯಾ, ಜರ್ಮನಿ ಮೊದಲಾದ ರಾಜ್ಯಾಧಿಪತಿಗಳು ಸುಲ್ತಾನರಿಗೂ ಅವರ ಗವರ್ನ್ಮೆಂಟಿಗೂ ವಿವೇಕ ಕಲಿಸಿರುತ್ತಾರೆ. ಗವರ್ನ್ಮೆಂಟಿನ ದರ್ಪವು ಸಡಿಲವಾದದ್ದನ್ನು ನೋಡಿ, ಕೆಲವು ಅಧಿಪತ್ಯಗಳು ಸ್ವತಂತ್ರಾಧಿಕಾರವನ್ನು ಸಂಪಾದಿಸಿಕೊಂಡವು. ಕ್ರೀಟ್ ಎಂಬ ದ್ವೀಪವು ಗ್ರೀಕರ ಅಧಿಪತ್ಯಕ್ಕೆ ವಹಿಸಲ್ಪಟ್ಟಿತು. ಈಗಲಾದರೋ ಮ್ಯಾಸಿಡೋನಿಯಾದಲ್ಲಿ ಪ್ರಜಾಸಮೃದ್ಧಿಯನ್ನು ಕಾಪಾಡುವುದಕ್ಕೆ ಇಂಗ್ಲೀಷ್ ಮತ್ತು ರಷ್ಯಾ ಗವರ್ನ್ಮೆಂಟುಗಳವರು ಸೇರಿ ಒಂದು ಏರ್ಪಾಡನ್ನು ಮಾಡಬೇಕೆಂದಿದ್ದರು. ಯಾಕಂದರೆ ಈ ಮ್ಯಾಸಿಡೋನಿಯಾ ಎಂಬ ತುರ್ಕಿ ಅಧಿಪತ್ಯದಲ್ಲಿ ಕೆಲವು ವರುಷಗಳಿಂದ ಕಡಿದಾಟಗಳು ಇದ್ದೇ ಇವೆ; ಪ್ರಜೆಗಳ ಸ್ಥಿತಿಯು ತುಂಬಾ ಪರಿತಾಪಕರವಾಗಿದೆ.

ಇದನ್ನೆಲ್ಲಾ ನೋಡಲಾಗಿ ಈಗ ತುರ್ಕಿ ರಾಜ್ಯದೊಳಗೆ ಪ್ರಜೆಗಳಿಗೆ ಮೂರು ಮುಖ್ಯವಾದ ಕೊರತೆಗಳಿರುವವೆಂದು ಗೊತ್ತಾಗುವುದು: (೧) ಸಕಲ ಪ್ರಜೆಗಳೂ—ಇವರಲ್ಲಿ ಮಹಮ್ಮದೀಯರೂ ಸೇರಿರುತ್ತಾರೆ—ಈ ಗೂಢಚಾರರನ್ನು ದೂಷಿಸಿ ಹಗೆಮಾಡುತ್ತಾರೆ. ಇವರು ಇಲ್ಲದ ಸ್ಥಳವೇ ಇಲ್ಲ. ಇವರ ಚಾಡಿಕೋರ ನಡವಳಿಕೆಗಳಿಂದ ಪ್ರಜೆಗಳ ಮಾನ ಪ್ರಾಣ ಧನಗಳಿಗೆ ಉಳಿಗಾಲವಿಲ್ಲ. (೨) ಕ್ರೈಸ್ತ ಪ್ರಜೆಗಳಾದರೋ ಸುಲ್ತಾನರ ಸೈನಿಕರು ತಮ್ಮ ಮನೆ ಮಠಗಳಿಗೆ ನುಗ್ಗಿ ತಮ್ಮನ್ನು ಕೊಲ್ಲುತ್ತಾರೆಂತಲೂ, ಆಸ್ತಿಯನ್ನು ಕೊಳ್ಳೆ ಹೊಡೆಯುತ್ತಾರೆಂತಲೂ ಮೊರೆಯಿಡುವರು. (೩) ಸೈನಿಕರನ್ನು ನೋಡಿದರೆ ಅವರು—ನಮಗೆ ಸಂಬಳವನ್ನು ಕೊಡದೆ ಜೀವ ಶವಗಳನ್ನಾಗಿ ಮಾಡಿದಾರೆಂತಲೂ, ಅರಮನೆಯಲ್ಲೂ ಅಧಿಕಾರಿಗಳ ಮನೆಗಳಲ್ಲೂ ಅಪಾರವಾದ ದುಂದು ಖರ್ಚುಗಳಾಗುತ್ತಿವೆ ಎಂತಲೂ ಕೊರಗುತ್ತಲಿದ್ದಾರೆ. ಈ ರೀತಿಯಾದ ಮೂರು ಗುಂಪುಗಳವರೂ ಏಕವಾಗಿ ಸೇರಿ, ರಾಜ್ಯದಲ್ಲಿ ಪಾರ್ಲಿಮೆಂಟು ಏರ್ಪಾಡಾಗಬೇಕೆಂದೂ, ಪ್ರಜೆಗಳ ಮಾನ ಪ್ರಾಣ ಧನಗಳಿಗೆ ಚ್ಯುತಿಯುಂಟಾಗದ ರೀತಿಯಲ್ಲಿ ರಾಜ್ಯಭಾರ ಕ್ರಮಗಳು ಬದಲಾವಣೆಯಾಗಬೇಕೆಂದೂ ಕೇಳುವರು.

ಈ ರೀತಿಯಾದ ಕುತೂಹಲವು ಹುಟ್ಟಿದಾರಭ್ಯ ಮ್ಯಾಸಿಡೋನಿಯಾ ಸೀಮೆಯಲ್ಲಿ ಕ್ರೈಸ್ತರೂ ಮಹಮ್ಮದೀಯರೂ ಸ್ನೇಹಿತರಾದರು. ಅವರ ಉದ್ದೇಶವು ನೆರವೇರಬೇಕಾದರೆ ಅವರವರಿಗೆ ಜಾತಿಮತಗಳ ತಾರತಮ್ಯವು ನಿರ್ನಾಮವಾಗಬೇಕಾಗಿದೆ. ಸಕಲ ಪ್ರಜೆಗಳನ್ನೂ ಏಕರೀತಿಯಾಗಿ ಪರಿಪಾಲಿಸುವಂಥಾ ಕಾನೂನುಗಳೂ, ಸಾರ್ವತ್ರಿಕವಾಗಿ ಅನುಭವಿಸುವಂಥಾ ರಿಯಾಯತಿಗಳೂ ರೂಪಿಸಲ್ಪಡಬೇಕಾಗುವವು. ಹೀಗೆ ರಾಜ್ಯಭಾರಕ್ರಮಗಳಲ್ಲಿ ಬದಲಾವಣೆಗಳಾಗಬೇಕೆಂದು ಅಪೇಕ್ಷಿಸುವವರಲ್ಲಿ ಷೇಕ್ ಉಲ್ ಇಸ್ಲಾಂ ಮೊದಲಾದ ಅನೇಕ ಮುಲ್ಲಾಗಳು ಸೇರಿರುವರೆಂದು ಸಂತೋಷಪಡುವೆವು. ಪ್ರತಿನಿಧಿಗಳು ಜಾತಿಮತಗಳ ತಾರತಮ್ಯವನ್ನು ಹಗೆತನವನ್ನು ವರ್ಜ್ಯಮಾಡಿ, ೧೮೭೬ ನೇ ಇಸವಿಯಲ್ಲಿ ಮಾಡಿದಂತೆ ಮಂತ್ರಿಗಳ ಕಾರುಬಾರುಗಳನ್ನೆಲ್ಲಾ ಮಿತಿಮೀರಿ ಆಕ್ಷೇಪಿಸಿ ದೂರ ನೆಕೋರದೆ ತುರ್ಕಿ ರಾಜ್ಯಕ್ಕೆ ಎಷ್ಟೋ ಕ್ಷೇಮವುಂಟಾಗಿ, ಈಗಿನ ದರಿದ್ರಾವಸ್ಥೆಯೂ ಪಕ್ಷ ಪರಪಕ್ಷಗಳೂ ತೊಲಗಿ ಹೋಗುವವೆಂದು ಹೇಳಬಹುದಾಗಿದೆ. ಈಗ ಉಂಟಾಗಿರುವ ಗಲಭೆಯಿಂದ ತುರ್ಕಿ ರಾಜ್ಯಕ್ಕೆ ಸಮೃದ್ಧಿ ಸುಖ ಸಂತೋಷಾದಿಗಳು ಬೇಗನೆ ದೊರಕುವಂತಾಗಲೆಂದು ಹಾರೈಸುತ್ತೇವೆ.

ಯಥಾ ದೇವಃ ತಥಾ ಜನಃ

ಲಂಡನ್ ಪಟ್ಟಣದಲ್ಲಿ ಪ್ರಕಟಿಸಲ್ಪಡುವ ಟೈಂಸ್ ಎಂಬ ಲೋಕಪ್ರಖ್ಯಾತವಾದ ಪತ್ರಿಕೆಯಲ್ಲಿ ಡಾಕ್ಟರ್ ರಿಚರ್ಡ್ ಎಂಬ ಪ್ರಸಿದ್ಧ ಪುರುಷರು ಕಳೆದ ವರ್ಷ ತಿಂಗಳಲ್ಲಿ ಚೀನಾ ದೇಶದಲ್ಲಿ ಸಂಚಾರ ಮಾಡಿದ ವರ್ತಮಾನವನ್ನು ಕುರಿತು ಒಂದು ಪತ್ರಿಕೆಯು ಪ್ರಕಟಿಸಲ್ಪಟ್ಟಿರು. ಡಾ. ರಿಚರ್ಡ್ ಯವರು ಆಂಗ್ಲೇಯರು ಮತ್ತು ಕ್ರೈಸ್ತ ಪಾದ್ರಿಗಳು. ... ಚೀನಾ ದೇಶದಲ್ಲಿ ... ಅನೇಕ ... ಚೀನಾ ದೇಶದ ಮಹಾ ... ಚೀನಾ ದೇಶದ ... ಕಾರಣಭೂತಗಳಾಗಿವೆ. ಚೀನಾ ... ಅವರನ್ನು ... ಅವರಿಗೆ ... ಚೀನಿಯರ ಸರಕಾರದವರಿಂದ ... ಭಾರೀ ಸಂಬಳಗಳುಳ್ಳ ದೊಡ್ಡ ದೊಡ್ಡ ಉದ್ಯೋಗಗಳು ಕೊಡಲ್ಪಟ್ಟವು. ಇವರು ಅವುಗಳನ್ನು ಅಂಗೀಕರಿಸದೆ ಸಾಧಾರಣವಾದ ಪಾದ್ರಿಗಳಂತಿದ್ದು ... ರಾಗಿಯೇ ಇದ್ದಾರೆ.

ಕಳೆದ ವರ್ಷ ತಿಂಗಳಲ್ಲಿ ಡಾ. ರಿಚರ್ಡ್ ಯವರು ಸಂಚಾರ ಹೊರಟಾಗ್ಗೆ ಅವರು ಚೀನಾ ದೇಶದ ಅಭಿವೃದ್ಧಿಗೆ ಸಹಕಾರಿಗಳಾದ ಸಲಹೆಗಳನ್ನು ಒಳಗೊಂಡಿರುವ ಒಂದು ಪುಸ್ತಕವನ್ನು ರಚಿಸಿ, ಸದರಿ ಪುಸ್ತಕದ ಕೆಲವು ಪ್ರತಿಗಳನ್ನು ಚೀನಾ ದೇಶದ ಅಲ್ಲಲ್ಲಿನ ಮುಖ್ಯಾಧಿಕಾರಿಗಳಿಗೆ ಕಳುಹಿಸುತ್ತಾ ಬಂದರು. ಅವರು ಪ್ರಯಾಣದಲ್ಲಿ ನಾನ್‌ಕಿಂಗ್ ಪಟ್ಟಣಕ್ಕೆ ಹೋದರು. ನಾನ್‌ಕಿಂಗ್ ಪ್ರಾಂತ್ಯವು ಬಹು ದೊಡ್ಡದು. ಅದರಲ್ಲಿ ಸುಮಾರು ೪೦೦ ಲಕ್ಷ ಜನಗಳು ವಾಸವಾಗಿರುತ್ತಾರೆ. ಈ ಪ್ರಾಂತ್ಯದ ವೈಸ್‌ರಾಯ್ ಯವರು ಡಾ. ರಿಚರ್ಡ್ ಯವರನ್ನು ಬರಮಾಡಿಕೊಂಡು, ಅವರಿಂದ ಐವತ್ತು ಜನ ದೊಡ್ಡ ದೊಡ್ಡ ಉದ್ಯೋಗಸ್ಥರಿಗೆ ಉಪನ್ಯಾಸ ಮಾಡಿಸಿದರು. ಅವರು ನಾನ್‌ಕಿಂಗಿನಿಂದ ಹ್ಯಾಂಚೌಂಗ್ ಪ್ರಾಂತ್ಯಕ್ಕೆ ಹೋದರು. ಆ ಪ್ರಾಂತ್ಯದ ವೈಸ್‌ರಾಯರು ಇವರನ್ನು ಭೇಟಿಮಾಡಿ, ತಮ್ಮ ಕೈಕೆಳಗಿನ ಉದ್ಯೋಗಸ್ಥರು ಸತ್ಯಸಂಧರೂ ವಿದ್ಯಾವಂತರೂ ಆಗಬೇಕಾಗಿದೆ ಎಂಬಭಿಪ್ರಾಯವನ್ನು ತಿಳಿಸಿದರು. ಹ್ಯಾಂಚೌಂಗ್ ಪ್ರಾಂತ್ಯವನ್ನು ಬಿಟ್ಟ ಮೇಲೆ ಡಾಕ್ಟರವರು ಟೀಂಶೀನ್ ಪಟ್ಟಣದಿಂದ ರೈಲಿನಲ್ಲಿ ಹನ್ನೆರಡು ಘಂಟೆಗಳ ಪ್ರಯಾಣ ಮಾಡಿ ಥೈಯು ಎನ್ನು ಎಂಬ ಸ್ಥಳಕ್ಕೆ ಬಂದರು. ಪೂರ್ವದಲ್ಲಿ ಇದೇ ದೂರದ ಪ್ರಯಾಣವನ್ನು ಮಾಡಬೇಕಾದರೆ ಹದಿನಾಲ್ಕು ದಿವಸಗಳು ಹಿಡಿಯುತ್ತಿತ್ತು. ಮೂವತ್ತು ವರುಷಗಳ ಕೆಳಗೆ ಇದೇ ಪ್ರಾಂತ್ಯದಲ್ಲಿ ಘೋರವಾದ ಕ್ಷಾಮವು ಪ್ರಾಪ್ತವಾಯಿತು. ಆಗ್ಗೆ ಡಾ. ರಿಚರ್ಡ್ ಯವರು ವಿಲಾಯಿತಿಯಿಂದ ಕಳುಹಿಸಲ್ಪಟ್ಟ ಧರ್ಮದ ಹಣವನ್ನು ಜನಗಳಿಗೆ ಹಂಚುತ್ತಿದ್ದರು. ಇದಲ್ಲದೆ ಅವರು ಈ ಪ್ರಾಂತ್ಯದಲ್ಲಿ ಕೆಲವು ವರುಷಗಳು ನೆಲಸಿ, ಅಲ್ಲಿನ ಜನರಿಗೆ ಸತ್ಯಮತದ ವಿಷಯ ಬೋಧನೆ ಮಾಡುತ್ತಾ, ಜನರು ತಮ್ಮ ವಿದ್ಯಾಭ್ಯಾಸದ ತಪ್ಪುದೋಷಗಳನ್ನು ತಿದ್ದಿ ಸರಿಪಡಿಸಿಕೊಳ್ಳುವಂತೆಯೂ ಬೋಧಿಸುತ್ತಿದ್ದರು. ಇವರು ಬರೀ ಮತಬೋಧನೆಯನ್ನು ಮಾತ್ರ ಜನರಿಗೆ ಕೊಡುತ್ತಿದ್ದರೆಂದು ಯಾರೂ ಭಾವಿಸಕೂಡದು. ಅವರು ನಾನಾ ಸಂಗತಿಗಳ ವಿಷಯ ಜನರಿಗೆ ಬೋಧಿಸುತ್ತಿದ್ದರು. ರೈಲ್ ಮಾರ್ಗಗಳನ್ನು ಹಾಕುವುದರಿಂದಾಗುವ ಫಲಗಳು ಗಣಿಗಳನ್ನು ತೋಡುವುದರಿಂದಾಗುವ ಪ್ರಯೋಜನ ಇವೇ ಮೊದಲಾದ ಸಂಗತಿಗಳನ್ನು ಕುರಿತು ಚರ್ಚಿಸುತ್ತಿದ್ದರು. ಆಗ್ಗೆ ಅವರ ಮಾತುಗಳನ್ನು ಕೇಳಿದವರು ಅವರನ್ನು ಅಲ್ಲಗಳೆದು ಅವರು ಪರದೇಶಿಯಾದ್ದರಿಂದ ಅವರನ್ನು ತಿರಸ್ಕರಿಸಿದ್ದರು. ಆದರೆ ಅವರು ಈ ಸಲ ಸಂಚಾರ ಹೊರಟಾಗ್ಗೆ ಪ್ರಸಿದ್ಧರಾದ ಅನೇಕ ಮುಖ್ಯಾಧಿಕಾರಿಗಳು ರೈಲ್ವೆ ಸ್ಟೇಷನಿಗೆ ಬಂದು ಅವರನ್ನು ಎದಿರುಗೊಂಡು ಅವರನ್ನು ಪಟ್ಟಣದ ಬೀಳ್ಕಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನೆರೆದು ಬಂದಿದ್ದ ಎರಡು ಸಾವಿರ ವಿದ್ಯಾರ್ಥಿಗಳಿಗೆ ಉಪನ್ಯಾಸ ಮಾಡಿಸಿದರು. ಇಷ್ಟು ಮಂದಿ ವಿದ್ಯಾರ್ಥಿಗಳು ಪಾಶ್ಚಿಮಾತ್ಯರ ವಿದ್ಯೆಯನ್ನು ಬಹಳ ಆದರದಿಂದ ಕಲಿಯುತ್ತಿರುವರು. ಉಪನ್ಯಾಸವು ಮುಗಿದ ನಂತರ ಆ ಪಟ್ಟಣದ ಪ್ರಸಿದ್ಧರಾದ ಶ್ರೀಮಂತರು ಮುಂದೆ ನಿಂತು ಡಾಕ್ಟರವರನ್ನು ನೋಡಿ—ಅಯ್ಯಾ, ತಾವು ಈಗ ಮೂವತ್ತು ವರುಷಗಳ ಹಿಂದೆ ಇಲ್ಲಿದ್ದಾಗ್ಗೆ ತಮ್ಮ ಮಾತುಗಳನ್ನು ಜನರು ವಿಶೇಷವಾಗಿ ಲಕ್ಷಿಸಲಿಲ್ಲ. ನಿಮ್ಮ ಮಾತುಗಳಿಂದ ಯಾವ ಪ್ರಯೋಜನವು ಆಗಲಿಲ್ಲವೆಂದು ನೀವು ಒಂದು ವೇಳೆ ನಂಬಿರಬಹುದು. ನಿಮ್ಮ ಮಾತುಗಳು ನಿಷ್ಪ್ರಯೋಜನವಾಗಲಿಲ್ಲ. ನೋಡಿರಿ. ನಿಮ್ಮ ದಯೆಯಲ್ಲಿ ಕಾಣುವ ಈ ವಿದ್ಯಾರ್ಥಿಗಳೇ ನೀವು ಮಾಡಿದ ಕೆಲಸಕ್ಕೆ ಸಾಕಾದ ಸಾಕ್ಷಿಗಳಾಗಿರುತ್ತಾರೆ. ನಿಮಗೂ ನಿಮ್ಮ ಜೊತೆ ಕೆಲಸದವರಾದ ಇತರ ಪಾದ್ರಿಗಳಿಗೂ ಚೀನಾ ದೇಶವು ಯಾವಜ್ಜೀವವೂ ಕೃತಜ್ಞತೆಯುಳ್ಳದ್ದಾಗಿದೆಯೆಂದು ತಿಳಿಸಿದರು. ಆ ವೇಳೆ ಡಾಕ್ಟರವರು ಒಂದು ಕ್ರೈಸ್ತ ದೇವಾಲಯದೊಳಕ್ಕೆ ಪ್ರವೇಶ ಮಾಡಿದರು. ಅಲ್ಲಿ ಅವರನ್ನು ಕಾಣಲು ಅನೇಕ ಮಂದಿ ದೇಶೀಯ ಕ್ರೈಸ್ತರು ಕೂಡಿ ಬಂದಿದ್ದರು. ಯೇಸು ಕ್ರಿಸ್ತನ ಮತವನ್ನು ಅವಲಂಬಿಸಿ ಬಿಟ್ಟರನ್ನೂ ... ಪ್ರೀತಿಪೂರ್ವಕ ಬೇಕೆಂಬುವುದೇ ಅಲ್ಲಿ ನೆರೆದಿದ್ದ ಕ್ರೈಸ್ತರ ಘನವಾದ ಉದ್ದೇಶವಾಗಿತ್ತು.

ಕೆಲವು ವರುಷಗಳ ಕೆಳಗೆ ಚೀನಿಯರು ಬಹು ಅಹಂಭಾವವುಳ್ಳವರಾಗಿದ್ದರು. ಅವರು ಅವಿವೇಕದಿಂದ ಕೂಡಿದ ಹಟವಾದಿಗಳಾಗಿದ್ದರು. ಎಲ್ಲಾ ಪರದೇಶಿಯರನ್ನು ದೂಷಿಸಿ ದೂರ ಮಾಡುವುದೇ ಅವರ ಕೆಲಸವಾಗಿತ್ತು. ಪರದೇಶಿಯರನ್ನು (ಅಂದರೆ, ಹಿಂದೂ ದೇಶೀಯರನ್ನೂ ಮತ್ತು ಐರೋಪ್ಯರನ್ನೂ) ಕಿರಾತಕರೆಂದು ಕರೆಯುವುದು ಅವರಲ್ಲಿ ಸಾಧಾರಣವಾದ ಪದ್ಧತಿಯಾಗಿತ್ತು. ಅಲ್ಲಲ್ಲಿ ತಮಗೆ ಸಿಕ್ಕುತ್ತಿದ್ದ ಪರದೇಶಿಯರನ್ನು ಕೊಲ್ಲುತ್ತಲೂ ಬರುತ್ತಿದ್ದರು. ಆದರೆ ಈಗ ಚೀನಾ ದೇಶದಲ್ಲಿ ಬಹಳ ಬದಲಾವಣೆಗಳಾಗುತ್ತಿವೆ. ಚೀನಿಯರು ತಮ್ಮ ಕಣ್ಣುಗಳನ್ನು ತೆರೆದು ತಮ್ಮಲ್ಲಿರತಕ್ಕ ಕೊರತೆಗಳನ್ನು ನೋಡುತ್ತಿರುತ್ತಾರೆ. ಮತಾಚಾರಗಳು ಬದಲಾಗಬೇಕು, ವಿದ್ಯೆಯು ಅಭಿವೃದ್ಧಿಯಾಗಬೇಕು ಎಂಬದಾಗಿ ಅವರು ಮಾತನಾಡಿಕೊಳ್ಳುವರು.

ಕ್ರೈಸ್ತ ಮತವು ಚೀನಾ ದೇಶವನ್ನು ಅಭಿವೃದ್ಧಿಗೆ ತರುವುದೆಂದು ಚೀನಿಯರು ದೃಢವಾಗಿ ನಂಬಿರುತ್ತಾರೆ. ಇಂಥಾ ನಂಬಿಕೆಯಿಂದಲೇ ಅವರು ಕ್ರೈಸ್ತಪಾದ್ರಿಗಳನ್ನು ಸನ್ಮಾನದಿಂದ ಕಾಣುವರು. ಸದರಿ ಕ್ರೈಸ್ತಪಾದ್ರಿಗಳು ವಿದೇಶಿಯರಾದರೂ ಪ್ರೀತಿಯಿಂದ ಚೀನಾದೇಶದ ಮೇಲನ್ನು ಬಯಸಿ ಕೆಲಸಮಾಡುವರೆಂಬುದು ಚೀನಿಯರೆಲ್ಲರಿಗೆ ತಿಳಿದ ಸಂಗತಿಯಾಗಿರುತ್ತದೆ.

ಗೋದಾವರಿ ಹಿಂದೂದೇಶದ ವರ್ತಮಾನಪತ್ರಿಕೆಗಳಲ್ಲಿ ಒಂದು ದುಃಖಕರವಾದ ಸಮಾಚಾರವು ಪ್ರಕಟಿಸಲ್ಪಟ್ಟಿತು. ಪಂಢರಪುರದಲ್ಲಿ ಕೆಲವು ದುಷ್ಟರು ಗುಂಪುಕಟ್ಟಿಕೊಂಡು ಬಂದು, ಇಬ್ಬರು ಕ್ರೈಸ್ತ ಸ್ತ್ರೀ ಬೋಧಕರಿದ್ದ ಬಂಗಲೆಗೆ ನುಗ್ಗಿ ಅಲ್ಲಿದ್ದ ಆ ಸ್ತ್ರೀಯರನ್ನು ಭಯಂಕರವಾಗಿ ಹೊಡೆದು ಈ ಸಮಾಚಾರ ಬಂದಿರುತ್ತದೆ. ಮನಸ್ತಾಪಕ್ಕೆ ಕಾರಣಗಳಿರಲಿಲ್ಲ. ಅಬಲೆಯರಾದ ಹೆಂಗಸರನ್ನು ಹೊಡೆದದ್ದು ಹೇಡಿತನವೂ ... ಆದ ಕೃತ್ಯವಾಗಿದೆಯೆಂದು ವಾಚಕರೆಲ್ಲರೂ ಒಪ್ಪಬೇಕಾಗಿದೆ. ... ಪ್ರಕಟವಾಗುವ ಒಂದು ಪತ್ರಿಕೆಯ ಸಂಪಾದಕರು (ಇವರು ಹಿಂದೂಗಳು)—ಈ ಕೃತ್ಯವನ್ನು ಪಂಢರಪುರ ದೇವಸ್ಥಾನಕ್ಕೆ ಸಂಬಂಧಪಟ್ಟ ಜನರು ಮಾಡಿರುತ್ತಾರೆ. ಸಾಧಾರಣವಾಗಿ ಪಂಢರಪುರ ದೇವಸ್ಥಾನದ ಜನರು ಈ ದೇಶದಲ್ಲೆಲ್ಲಾ ಕೇವಲ ಅಯೋಗ್ಯರು ... ಎಂದು ತಿಳಿಸುವರು. ... ಆದರೆ ಇದು ವಿಠೋಬಾ, ಕಾಳಿ, ... ಮುಂತಾದ ಆರಾಧ್ಯಗಳು ಈ ದೇಶವನ್ನೆಂದಿಗೂ ಉಚ್ಛ್ರಾಯಸ್ಥಿತಿಗೆ ತರಲಾರವು. ಮೇಲ್ಕಂಡ ದೇವತೆಗಳ ಪೂಜೆಯು ಹಿಂದೂದೇಶವನ್ನು ಉನ್ನತಸ್ಥಿತಿಗೆ ತರುವದೆಂದು ಹೇಳುವ ಜನರು ಈ ದೇಶಕ್ಕೆ ನಿಜವಾದ ಸ್ನೇಹಿತರಲ್ಲ. ಅವರ ದೇಶಾಭಿಮಾನವು ಅಬದ್ಧವಾದದು. ಮತ್ತು ಅವರು ದೇಶವನ್ನು ನಾಶನದ ಹಾದಿಯಲ್ಲಿ ನಡಿಸುವವರಾಗಿರುತ್ತಾರೆ. ಮೇಲೆ ಹೇಳಿದ ದೇವತೆಗಳ ಪೂಜೆಯು ಜನರನ್ನು ಕಾಮಾತುರರನ್ನಾಗಿಯೂ ಅಳ್ಳರನ್ನಾಗಿಯೂ ಕೊಲೆಪಾತಕರನ್ನಾಗಿಯೂ ಮಾಡುವುದೇ ವಿನಾ ಅವರನ್ನು ಯೋಗ್ಯರನ್ನಾಗಿಯೂ ಸತ್ಯಾಪೇಕ್ಷಿಗಳನ್ನಾಗಿಯೂ ಮಾಡುವುದೇ ಇಲ್ಲ.

ಪ್ರತಿಯೊಬ್ಬರೂ ಈ ಸಂಗತಿಗಳನ್ನು ಚೆನ್ನಾಗಿ ಪರೀಕ್ಷಿಸಿ ಮನನ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಯೇಸು ಕ್ರಿಸ್ತನೇ ಹಿಂದೂದೇಶದ ನಿಜವಾದ ಸ್ನೇಹಿತನಾಗಿದ್ದಾನೆ. ಪವಿತ್ರನೂ ನೀತಿವಂತನೂ ಆದ ದೈವರನ್ನು ಪೂಜಿಸುವುದೇ ದೇಶೋನ್ನತಿಗೆ ಮುಖ್ಯವಾದ ಅಸ್ತಿಭಾರವಾಗಿರುತ್ತದೆ.

ಪರ್ಷಿಯಾ ರಾಜ್ಯದಲ್ಲಿ ಗಲಭೆಗಳು.

ಕಳೆದ ವಾರ ಬಂದಿರುವ ತಂತೀ ವರ್ತಮಾನಗಳು

ಪರ್ಷಿಯಾ ರಾಜ್ಯದಲ್ಲಿ ರಾಜ ಪಕ್ಷದವರಿಗೂ ಪ್ರಜೆಗಳ ಮುಖಂಡರಿಗೂ ಕಲಹಗಳುಂಟಾಗಿ ನಾನಾ ಘೋರ ಕೊಲೆಗಳು ನಡೆದು, ಕೆಲವು ಕಾಲ ಎಲ್ಲಾ ಶಮನವಾಗಿತ್ತಷ್ಟೆ. ಈಚೆಗೆ ತುರ್ಕಿ ರಾಜ್ಯದಲ್ಲಿ ಸುಲ್ತಾನರವರು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿಕೊಡುವುದಾಗಿ ಪ್ರಜೆಗಳಿಗೆ ವಾಗ್ದಾನ ಮಾಡಿದರು. ಈ ವರ್ತಮಾನವು ಪರ್ಷಿಯಾ ರಾಜಧಾನಿಯಾದ ಟೆಹರಾನ್ ಪಟ್ಟಣಕ್ಕೆ ತಲುಪಿತು. ಆಗಿನಿಂದಲೂ ಆ ರಾಜ್ಯದಲ್ಲಿ ಮತ್ತೆ ಪ್ರಜಾ ನೆಮ್ಮದಿಗೆ ಭಂಗವುಂಟಾಗುವಂಥಾ ಕೃತ್ಯಗಳು ನಡೆಯಲಾರಂಭವಾಗಿವೆ. ಈ ವಿಚಾರವಾಗಿ ಕಳೆದ ವಾರ ಬಂದಿರುವ ತಂತೀ ವರ್ತಮಾನಗಳನ್ನು ಕ್ರೋಢೀಕರಿಸಿ ಇಲ್ಲಿ ಪ್ರಕಟಿಸುವೆವು

ಅಗಸ್ಟ್ ತಾ. ೩ನೇ ಭಾನುವಾರ.—ತುರ್ಕಿ ಸುಲ್ತಾನರವರು ಪಾರ್ಲಿಮೆಂಟನ್ನು ಸ್ಥಾಪನೆ ಮಾಡುವುದಾಗಿ ಅಪ್ಪಣೆಕೊಡಿಸಿರುವ ವಿಷಯವು ಪರ್ಷಿಯಾ ರಾಜಧಾನಿಯಾದ ಟೆಹರಾನ್ ಪಟ್ಟಣದಲ್ಲಿ ತುಂಬಾ ಗಲಭೆಯನ್ನುಂಟುಮಾಡಿ, ಮತ್ತೆ ಪ್ರಜಾ ನೆಮ್ಮದಿಗೆ ಭಂಗವುಂಟಾಗುವಂತೆ ಕಳವಳ ಹುಟ್ಟಿರುವುದು. ೧೦೦ ಮಂದಿ ವರ್ತಕರೇ ಮುಂತಾದವರು ಟೆಹರಾನ್ ಪಟ್ಟಣದಲ್ಲಿರುವ ತುರ್ಕಿ ರಾಯಭಾರಿಯ ಬಂಗಲೆಯಲ್ಲಿ ಆಶ್ರಯವನ್ನು ಪಡೆದು, ತಮ್ಮ (ಪರ್ಷಿಯಾ) ಷಾ ಸುಲ್ತಾನರನ್ನು ಬೇಗನೆ ಪಾರ್ಲಿಮೆಂಟನ್ನು ಪ್ರಾರಂಭಿಸುವಂತೆ ಕೋರುತ್ತಿದ್ದಾರೆ.

ಅಗಸ್ಟ್ ತಾ. ೪ನೇ ಮಂಗಳವಾರ.—ನೆನ್ನೆ ಬೆಳಗ್ಗಿನಿಂದ ಟೆಬ್ರಿಸ್ ಪಟ್ಟಣದಲ್ಲಿ ಗುಂಡು ಹೊಡೆಯುತ್ತಿದ್ದಾರೆಂದು ತಿಳಿದಿದೆ ತುರ್ಕಿಯ ರಾಯಭಾರಿಯು ಈ ಒಳ ಕಾದಾಟಗಳನ್ನು ಕೂಡಲೇ ನಿಲ್ಲಿಸಬೇಕೆಂದೂ, ಇಲ್ಲವಾದರೆ ಗಾಯಪಟ್ಟ ತುರ್ಕಿ ಪ್ರಜೆಗಳನ್ನು ಕಾಪಾಡುವುದಕ್ಕೋಸ್ಕರ ತುರ್ಕಿ ಗವರ್ನಮೆಂಟಿನವರು ಪ್ರವೇಶ ಮಾಡಬೇಕೆಂದೂ ತಿಳಿಸಿದ್ದಾರೆ ಉತ್ತರವಾಗಿ ಷಾ ಸುಲ್ತಾನರವರು ತಮ್ಮ ಪ್ರಜೆಗಳನ್ನು ವಿಶೇಷವಾಗಿ ತುರ್ಕಿ ರಾಯಭಾರಿಗಳು ಆಶ್ರಯ ಕೊಟ್ಟು ತಮ್ಮ ಬಂಗಲೆಯಲ್ಲಿ ಇಟ್ಟುಕೊಳ್ಳುವುದು ತರವಲ್ಲವೆಂತಲೂ, ಈ ಭಾಗದಲ್ಲಿ ರಾಯಭಾರಿಗಳು ತಲೆಹಾಕ ಕೂಡದೆಂತಲೂ, ಹಾಗೆ ಸೇರಿಸಿಕೊಳ್ಳಲು ಕಾರಣವಿಲ್ಲವೆಂತಲೂ ಪ್ರತಿಭಟಿಸಿ ಕಾಗದ ಬರೆದರು. ಅದರಂತೆ ಆ ತುರ್ಕಿ ರಾಯಭಾರಿಯು ತಮ್ಮ ಆಶ್ರಯವನ್ನು ಹೊಂದಿದ್ದ ಪರ್ಷಿಯಾ ಪ್ರಜೆಗಳನ್ನೆಲ್ಲಾ ತಮ್ಮ ಬಂಗಲೆಯಿಂದ ಹೊರಟು ಹೋಗುವಂತೆ ಆಜ್ಞೆ ಮಾಡಿದರು ಆದರೆ ಅವರು ಹಾಗೆ ಹೋಗುವುದಿಲ್ಲವೆಂದು ತಿರಸ್ಕಾರ ಮಾಡಿದ್ದಾರೆ

ಅಗಸ್ಟ್ ತಾ. ೬ ನೇ ಗುರುವಾರ.—ತುರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿ ಪರ್ಷಿಯಾ ಪ್ರಜೆಗಳೂ ಪರ್ಷಿಯಾ ರಾಯಭಾರಿಯೂ ಇದ್ದಾರೆ ಈ ಪ್ರಜೆಗಳು ತಮ್ಮ ರಾಯಭಾರಿಯ ಬಂಗಲೆಗೆ ಹೋಗಿ ಅವರನ್ನು ಕುರಿತು—ನಮ್ಮ ರಾಜ್ಯದಲ್ಲಿ ಷಾ ಸುಲ್ತಾನರವರು ಕೂಡಲೇ ಪಾರ್ಲಿಮೆಂಟ್ ಸಭೆಯನ್ನು ಪ್ರಾರಂಭಿಸುವಂತೆ ಬೇಡಿಕೊಳ್ಳುತ್ತೇವೆ ಎಂದೂ, ಇಲ್ಲವಾದರೆ ನಾವೆಲ್ಲಾ ತುರ್ಕಿ ಪ್ರಜೆಗಳಾಗಿ ನಿಂತುಬಿಡುತ್ತೇವೆ ಎಂದೂ ತಿಳಿಸಿದರು ಅದರ ಮೇಲೆ ಆ ರಾಯಭಾರಿಯು ಪರ್ಷಿಯಾ ಷಾ ಸುಲ್ತಾನರಿಗೆ ತಂತೀ ವರ್ತಮಾನ ಕಳುಹಿಸಿ ಕೇಳಿದಾಗ ಸುಲ್ತಾನರವರು—ನಾವು ಮೊದಲೇ ಗೊತ್ತುಮಾಡಿರುವ ದಿವಸದಿಂದ ಪಾರ್ಲಿಮೆಂಟು ಏರ್ಪಾಡಾಗುವುದು ಎಂದು ಜವಾಬುಕೊಟ್ಟರು. ಟೆಬ್ರಿಸ್ ಪಟ್ಟಣದಲ್ಲಿ ದೊಂಬಿ ಕಲಹ ಕಾದಾಟಗಳನ್ನು ಅಡಗಿಸಿ, ಪ್ರಜಾನೆಮ್ಮದಿಯನ್ನು ಕಾಪಾಡುವುದಕ್ಕೋಸ್ಕರ ಸುಲ್ತಾನರವರು ಕೆಲವು ಸೈನ್ಯವನ್ನು ಕಳುಹಿಸಿದ್ದಾರೆ.

ಅಗಸ್ಟ್ ತಾ ೭ ನೇ ಶುಕ್ರವಾರ.—ಟೆಹರಾನ್ ಪಟ್ಟಣದಲ್ಲಿ ತುರ್ಕಿ ರಾಯಭಾರಿಯ ಬಂಗಲೆಯೊಳಗೆ ಆಶ್ರಯವನ್ನು ಪಡೆದಿದ್ದ ಪರ್ಷಿಯಾ ಪ್ರಜೆಗಳನ್ನು ಬಲಾತ್ಕಾರಮಾಡಿ ಅಲ್ಲಿಂದ ಓಡಿಸಿಬಿಟ್ಟರು.

ಮೈಸೂರು ಸಂಸ್ಥಾನದ ವರ್ತಮಾನ ಪತ್ರಿಕೆಗಳ ಕಾನೂನು.

ವರ್ತಮಾನ ಪತ್ರಿಕೆಗಳ ಮತ್ತು ವರ್ತಮಾನಗಳನ್ನೊಳಗೊಂಡಿರುವ ಅಚ್ಚಾದ ಇತರ ಪುಸ್ತಕಗಳ ಪ್ರಚಾರವನ್ನು ಬಲವತ್ತರವಾದ ಅಂಕೆಯಲ್ಲಿಡುವುದು ಅವಶ್ಯವೆಂದು ತೋರಿದುದರಿಂದ ಶ್ರೀಮನ್ಮಹಾರಾಜರವರು ಈ ಕೆಳಗೆ ಕಂಡ ನಿಯಮಗಳನ್ನು ಮಾಡಿ ಜಾರಿಗೆ ತರಲು ಇಚ್ಛೈಸುತ್ತಾರೆ —

(೧) ಈ ನಿಯಮವು ೧೯೦೮ನೇ ಇಸವಿಯ ಮೈಸೂರು ಸೀಮೆಯ ವರ್ತಮಾನ ಪತ್ರಿಕೆಗಳ ನಿಯಮವು (ಕಾನೂನು) ಎಂದು ಕರೆಯಲ್ಪಡತಕ್ಕದ್ದು

(೨) ಇದು ಮೈಸೂರು ಸೀಮೆಯಲ್ಲಿ ಸರ್ವತ್ರ ಅನ್ವಯಿಸುತ್ತದೆ; ಮತ್ತು

(೩) ಇದು ಸರ್ಕಾರದ ಗೆಜೆಟ್ಟಿನಲ್ಲಿ ಪ್ರಕಟವಾದ ೩೦ ದಿನಗಳನಂತರ ಜಾರಿಗೆ ಬರತಕ್ಕದಾಗಿದೆ.

೨ ಶ್ರೀಮನ್ಮಹಾರಾಜರವರ ಸರ್ಕಾರದಿಂದ ಲಿಖಿತಮೂಲಕವಾದ ಅನುಜ್ಞೆಯನ್ನು ಪಡೆಯದೆ ದೇಶದ ಸಮಾಚಾರಗಳನ್ನಾಗಲಿ ಅಥವಾ ಅವುಗಳ ಮೇಲಣ ವ್ಯಾಖ್ಯಾನವನ್ನಾಗಲಿ ಒಳಗೊಂಡಿರುವ ಯಾವ ಪತ್ರಿಕೆಗಳಾಗಲಿ ಅಥವಾ ಪುಸ್ತಕಗಳಾಗಲಿ ಮೈಸೂರು ದೇಶದಲ್ಲೆಲ್ಲೂ ಮುದ್ರಣವಾಗಿ ಪ್ರಕಟವಾಗಕೂಡದು

(೩) ಮೇಲೆ ಹೇಳಿದಂಥ ವರ್ತಮಾನ ಪತ್ರಿಕೆಗಳನ್ನು ಅಥವಾ ಪುಸ್ತಕಗಳನ್ನು ಮುದ್ರಣ ಮಾಡಿ ಪ್ರಕಟಿಸಲು ಮಹಾರಾಜಾ ಸರ್ಕಾರದವರು ಲಿಖಿತ ಮೂಲಕವಾಗಿ ಕೊಟ್ಟಿದ್ದ ಅಪ್ಪಣೆಯನ್ನು ಯಾವಾಗಬೇಕಾಗಿದ್ದರೂ ಹಿಂದಕ್ಕೆ ತೆಗೆದುಕೊಳ್ಳಬಹುದು.

(೪) ಯಾವ ಮನುಷ್ಯನಾದರೂ ಮೇಲೆ ಹೇಳಿದಂಥ ಅಪ್ಪಣೆಯನ್ನು ಪಡೆಯದೆಯಾಗಲಿ ಅಥವಾ ಅಪ್ಪಣೆಯನ್ನು ಸರ್ಕಾರದವರು ಕಿತ್ತುಕೊಂಡಮೇಲಾಗಲಿ ಮೇಲೆ ಹೇಳಿದಂಥ ವರ್ತಮಾನ ಪತ್ರಿಕೆಗಳನ್ನು ಅಥವಾ ಪುಸ್ತಕಗಳನ್ನು ಮೈಸೂರು ದೇಶದೊಳಗೆ ಮುದ್ರಣ ಮಾಡಿ ಪ್ರಕಟಮಾಡಿದರೆ ಸರ್ಕಾರದವರು ಜನರಲ್ ಮತ್ತು ರೆವಿನ್ಯೂ ಶಾಖೆಯಲ್ಲಿ ಸರ್ಕಾರಕ್ಕೆ ಸೆಕ್ರೆಟರಿಯಾದವರ ಬರಹಮೂಲಕವಾದ ಆಜ್ಞೆಯಿಂದ—

(*a*) ಅಂಥಾ ಮನುಷ್ಯನು ಆ ಆಜ್ಞೆಯು ಹುಟ್ಟಿದಂದಿನಿಂದ ೬ ದಿನಗಳೊಳಗೆ ಮೈಸೂರು ದೇಶವನ್ನು ಬಿಟ್ಟು ಹೋಗಬೇಕೆಂದಪೇಕ್ಷಿಸಬಹುದು, ಅಲ್ಲದೆ

(*b*) ಅವನು ಸರ್ಕಾರದ ಅನುಮತಿಯಿಲ್ಲದೆ ಮೈಸೂರು ದೇಶವನ್ನು ಹಿಂತಿರುಗಿ ಪ್ರವೇಶಿಸಲು ಅಡಚಣೆ ಮಾಡಬಹುದು; ಮತ್ತು

(*c*) ಮೇಲೆ ಹೇಳಿದಂಥ ವರ್ತಮಾನ ಪತ್ರಿಕೆಗಳನ್ನು ಅಥವಾ ಪುಸ್ತಕಗಳನ್ನು ಮುದ್ರಣ ಮಾಡಿ ಪ್ರಕಟಿಸಲು ಉಪಯೋಗಿಸಲ್ಪಟ್ಟಿರುವ ಅಥವಾ ಉಪಯೋಗಿಸಬೇಕಿರುವ ಎಲ್ಲ ಮುದ್ರಣದ ಯಂತ್ರಗಳು, ಅಕ್ಷರಗಳು, ಕಲ್ಲುಗಳು, ಕಾಗದ, ಪತ್ರಗಳು ಮೊದಲಾದ ಸಾಮಗ್ರಿಗಳು ಮೇಲ್ಕಂಡ ಪತ್ರಿಕೆಗಳು ಮುದ್ರಣವಾದ ಮನೆಯೊಳಗೆ ಅಥವಾ ಅದರ ಸಮೀಪದಲ್ಲಿ ಎಲ್ಲಿ ದೊರೆತರೂ ಅವುಗಳನ್ನು ಮತ್ತು ಮೇಲೆ ಹೇಳಿದಂಥ ವರ್ತಮಾನ ಪತ್ರಿಕೆಗಳು ಅಥವಾ ಅಂಥಾ ಇತರ ಪುಸ್ತಕಗಳು ಎಲ್ಲಿ ಕಂಡು ಬಂದರೂ ಅವುಗಳನ್ನೂ ಸರ್ಕಾರದವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು, ತಮಗೆ ಯುಕ್ತ ತೋರಿದ ರೀತಿಯಲ್ಲಿ ವಿನಿಯೋಗ ಮಾಡುವರು

೫. ಈ ಕಡೆಯ ವಿಧಿಯ (*a*) ಮತ್ತು (*b*) ವಾಕ್ಯಾಂಗ (ಕ್ಲಾಜು) ಗಳಲ್ಲಿ ಹೇಳಿರುವಂತೆ ಅಪ್ಪಣೆಯನ್ನುಲ್ಲಂಘಿಸಿ ನಡೆಯುವಂಥವನು ಮೈಸೂರು ದೇಶದಿಂದ ಹೊರಗೆ ಬಲವಂತದಿಂದ ಕಳುಹಲ್ಪಡುವನು.

೬. (i) ೧೮೭೮ನೇ ವರ್ತಮಾನ ಪತ್ರಿಕೆಗಳ ನಿಯಮದ (ಆಕ್ಟಿನ) ೭ನೇ ವಿಧಿಯನ್ನನುಸರಿಸಿ ಬ್ರಿಟಿಷ್ ಇಂಡ್ಯಾದಲ್ಲಿ ಪ್ರಕಟವಾಗದಂತೆ ನಿಷೇಧಿಸಲ್ಪಟ್ಟಿರುವ ವರ್ತಮಾನ ಪತ್ರಿಕೆಗಳು ಮೈಸೂರು ದೇಶದಲ್ಲಿ ಹಂಚಲ್ಪಡಕೂಡದು.

೭ ೬ನೆಯ ವಿಧಿಯಲ್ಲಿ ಹೇಳಿರುವಂಥ ಯಾವ ವರ್ತಮಾನ ಪತ್ರಿಕೆಗಳಾಗಲಿ ಅಥವಾ ಅಂಥಾ ಇತರ ಪುಸ್ತಕಗಳಾಗಲಿ ಮೈಸೂರು ದೇಶದೊಳಗೆ ಹಂಚಲ್ಪಟ್ಟಿದ್ದ ಪಕ್ಷದಲ್ಲಿ,

(i) ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅಂಥಾ ಪತ್ರಿಕೆಗಳು ಎಲ್ಲಿ ದೊರೆತಾಗ್ಯೂ ಅವುಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಬಹುದಲ್ಲದೆ ಅಂಥಾ ಪತ್ರಿಕೆಗಳು ಮಾರಾಟಕ್ಕಾಗಲಿ, ಪ್ರಕಟನೆಗಾಗಲಿ, ಪ್ರದರ್ಶನಕ್ಕಾಗಲಿ ಮತ್ತಾವ ಕಾರಣಕ್ಕಾಗಲಿ ಇಡಲ್ಪಟ್ಟಿರುವ ಅಥವಾ ಇಡಲ್ಪಟ್ಟಿವೆಯೆಂದು ಊಹಿಸಲ್ಪಟ್ಟಿರುವ ಸ್ಥಳಗಳಿಗೆ ನುಗ್ಗಿ ಎಲ್ಲವನ್ನು ಕಿತ್ತುಕೊಂಡು ಹೋಗಲು ಸಬ್ ಇನ್ಸ್‌ಪೆಕ್ಟರ ಅಧಿಕಾರಕ್ಕೆ ಕಡಮೆ ಇಲ್ಲದ ಪೋಲೀಸು ಅಧಿಕಾರಿಗೆ ವಾರಂಟ್ ಮೂಲಕ ಅಪ್ಪಣೆಯನ್ನು ಕೊಡಬಹುದು

(ii) ಮೇಲೆ ಹೇಳಿದಂಥ ವರ್ತಮಾನ ಪತ್ರಿಕೆಗಳನ್ನು ಅಥವಾ ಪುಸ್ತಕಗಳನ್ನು ಮೈಸೂರು ದೇಶದಲ್ಲಿ ಹಂಚುವವನು ಅಥವಾ ಹಂಚಲು ಪ್ರಯತ್ನಿಸುವವನು, ಅಥವಾ ಹಂಚಲು ಸಹಾಯಕನಾಗುವವನು, ೪ ಮತ್ತು ೫ನೇ ವಿಧಿಗಳ (ಸೆಕ್ಷನ್ನುಗಳ) (*a*) ಮತ್ತು (*b*) ವಾಕ್ಯಾಂಗಗಳಲ್ಲಿ (ಕ್ಲಾಜುಗಳಲ್ಲಿ) ಹೇಳಿರುವ ಪ್ರಕಾರ, ಸರ್ಕಾರದ ಅಪ್ಪಣೆಯನ್ನು ಪಡೆಯದೆ ಮೈಸೂರು ದೇಶದಲ್ಲಿ ವರ್ತಮಾನ ಪತ್ರಿಕೆಗಳನ್ನು ಅಥವಾ ಅಂಥಾ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸಿದವನೆಂದು ಗಣಿಸಲ್ಪಟ್ಟು ಶಿಕ್ಷಿಸಲ್ಪಡುವನು

೮ ಈ ವಿಧಿಗಳಲ್ಲಿ "ಮುದ್ರಿಸುವ," "ಮುದ್ರಿಸಲ್ಪಟ್ಟ," ಮತ್ತು "ಮುದ್ರಿಸುವ" ಎಂಬ ಪ್ರಯೋಗಗಳು ಮುದ್ರಣಕ್ಕೆ ಮಾತ್ರವಲ್ಲದೆ ಶಿಲಾಮುದ್ರಣಕ್ಕೂ, ಅಕ್ಷರಗಳನ್ನು ಕೆತ್ತುವುದಕ್ಕೂ, ಛಾಯಾಪಟವನ್ನು ತೆಗೆಯುವುದಕ್ಕೂ ಅನ್ವಯಿಸುವವು

ಮೈಸೂರು ಸರ್ಕಾರಿ ಹುಕುಮುಗಳು.

ಸಾಕ್ಷಿಗಳ ಕೈಫಿಯತ್ತಿಗೆ ಅವರ ರುಜು.

ಮೇಜಿಸ್ಟ್ರೇಟ್ ಕೋರ್ಟುಗಳಲ್ಲಿ ಕೈಫಿಯತ್ತುಗಳನ್ನು ಕನ್ನಡದಲ್ಲಿಯೇ ಬರೆದುಕೊಳ್ಳಬೇಕೆಂಬ ಮತ್ತು ಅವುಗಳಿಗೆ ಸಾಕ್ಷಿಗಳ ರುಜುಗಳನ್ನು ಹಾಕಿಸಬೇಕೆಂಬ ವಿಚಾರವಾಗಿ ೧೯೦೭ನೇ ಇಸವಿಯ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಟ್ಟ ವಿಷಯವನ್ನೂ, ಅದಕ್ಕೆ ಸರ್ಕಾರದವರು ಕೊಟ್ಟ ಉತ್ತರವನ್ನೂ, ಮೇಜಿಸ್ಟ್ರೇಟ್ ಕೋರ್ಟುಗಳಲ್ಲಿ ಕೈಫಿಯತ್ತುಗಳಿಗೆ ಸಾಕ್ಷಿಗಳ ರುಜುಗಳನ್ನು ತೆಗೆದುಕೊಳ್ಳುವದರ ವಿಚಾರವಾಗಿ ಹಾಲೀ ಜಾರಿಯಲ್ಲಿರುವ ಕಾನೂನನ್ನು ಬದಲಾಯಿಸಲು ಚೀಫ್ ಕೋರ್ಟಿನ ಜಡ್ಜಿಗಳಿಗೆ ಯಾವ ಕಾರಣವೂ ಕಂಡು ಬರುವದಿಲ್ಲವೆಂದು ತಿಳಿಸುವ ಮೈಸೂರು ಚೀಫ್ ಕೋರ್ಟ್ ರಿಜಿಸ್ಟ್ರಾರವರ ಲೆಟರನ್ನೂ ಓದಲಾಯಿ ಮೇಜಿಸ್ಟ್ರೇಟರುಗಳ ರೂಬರೂಬು ಕೊಡಲ್ಪಡುವ ಕೈಫಿಯತ್ತುಗಳಿಗೆ ಸಾಕ್ಷಿಗಳ ರುಜುಗಳನ್ನು ತೆಗೆದುಕೊಳ್ಳಬೇಕಾದುದಿಲ್ಲವೆಂಬದಾಗಿ ಹಾಲೀ ಜಾರಿಯಲ್ಲಿರುವ ಕಾನೂನನ್ನು ಬದಲಾಯಿಸಲು ಯುಕ್ತವಾದ ಕಾರಣವು ಕಂಡು ಬರುವದಿಲ್ಲವೆಂದು ಚೀಫ್ ಕೋರ್ಟಿನವರು ತಿಳಿಸಿರುವ ಅಭಿಪ್ರಾಯವನ್ನು ಸರ್ಕಾರದವರು ಅನುಮೋದಿಸಿ ಮೇಲ್ಕಂಡ ಕಾಗದ ಪತ್ರಗಳನ್ನು ರೆಕಾರ್ಡು ಮಾಡಿರುತ್ತಾರೆ.

ವಿದ್ಯುಚ್ಛಕ್ತಿಯ ಅಪಾಯ

ಶಿವನ ಸಮುದ್ರದಿಂದ ವಿದ್ಯುಚ್ಛಕ್ತಿಯು ಬರುವ ತಂತಿಗಳ ತಂಟೆಗೆ ಯಾರೂ ಹೋಗಕೂಡದೆಂದು ಎಚ್ಚರಿಸಿ ೧೯೦೧ನೇ ಇಸವಿ ಜನವರಿ ಮಾಹೆ ೨೫ನೇ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ನೋಟೀಸು ಪ್ರಚುರಪಡಿಸಿರುವುದು ಸರಿಯಷ್ಟೆ. ಇದನ್ನು ಸ್ಪಷ್ಟವಾಗಿ ಎಚ್ಚರಿಕೆ ಕೊಟ್ಟಿದ್ದರೂ ಕೆಲವು ಅಪಾಯಗಳು ಸಂಭವಿಸಿರುವುವಲ್ಲದೆ ಕೆಲವು ಸಂದರ್ಭಗಳಲ್ಲಿ ಪ್ರಾಣನಷ್ಟವೂ ಕೂಡಾ, ಉಂಟಾಗಿರುವುದು ಬಹಳ ವಿಷಾದಕರವಾಗಿರುತ್ತದೆ. ಕಳೆದ ಮೇ ೩೧ನೇ ತಾರೀಖಿನ ದಿವಸ ೧೮ ವರುಷ ವಯಸ್ಸಿನ ಒಬ್ಬ ಹುಡುಗನು ಬೆಂಗಳೂರು ಸಿಟಿ ಬುಲ್ ಟಾಗ್ ರಸ್ತೆಯಲ್ಲಿ ಮರದ ಮೇಲಿನಿಂದ ಆಕಸ್ಮಿಕವಾಗಿ ಜಾರಿ ಒಂದು ಬಂಗಲೆಗೆ ಸಂಬಂಧಪಟ್ಟ ವಿದ್ಯುಚ್ಛಕ್ತಿಯ ತಂತಿಯನ್ನು ಹಿಡಿದದ್ದರಿಂದ ತತ್ ಕ್ಷಣವೇ ಮೃತನಾದನು ಮೈಸೂರು ಪಟ್ಟಣದಲ್ಲಿ ವಿದ್ಯುಚ್ಛಕ್ತಿಯ ದೀಪವನ್ನಿಡಲು ಶಿವನ ಸಮುದ್ರದಿಂದ ಮತ್ತೊಂದು "ಟ್ರಾನ್ಸ್‌ಮಿಷನ್ ಲೈನ್" (ವಿದ್ಯುಚ್ಛಕ್ತಿಯನ್ನು ಒಯ್ಯುವ ತಂತಿ) ಇಷ್ಟರಲ್ಲೇ ಸ್ಥಾಪಿಸಲ್ಪಡುವದರಲ್ಲಿದೆಯಾದಕಾರಣ ಈ ತಂತಿಗಳ ತಂಟೆಗೆ ಹೋಗುವುದರಿಂದುಂಟಾಗುವ ಅಪಾಯವನ್ನು ಕುರಿತು ಸಕಲರಿಗೂ ತತ್ರಾಪಿ ತಂತಿಗಳು ಸ್ಥಾಪಿಸಲ್ಪಡುವ ಗ್ರಾಮಗಳಲ್ಲಿ ವಾಸವಾಗಿರುವ ಜನರಿಗೆ ಹುಷಾರಿ ಕೊಡುವದು ಆವಶ್ಯಕ ತೋರಿ ಇದರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುವದೇನೆಂದರೆ:—ಎಲೆಕ್ಟ್ರಿಕ್ ಟ್ರಾನ್ಸ್‌ಮಿಷನ್ ತಂತಿಗಳನ್ನು ಟೆಲಿಗ್ರಾಫ್ ತಂತಿಗಳಂತೆ ಭಾವಿಸ ಕೂಡದು. ಟೆಲಿಗ್ರಾಫ್ ತಂತಿಗಳಲ್ಲಿರುವ ವಿದ್ಯುಚ್ಛಕ್ತಿಯು ಅಷ್ಟು ಎಷ್ಟು ಬಲವಾಗಿರುವದಿಲ್ಲ. ಎಲೆಕ್ಟ್ರಿಕ್ ಟ್ರಾನ್ಸ್‌ಮಿಷನ್ ತಂತಿಗಳಲ್ಲಾದರೋ ಅತಿ ಬಲವತ್ತರವಾದ ಶಕ್ತಿ ಇರುತ್ತಾದ ಪ್ರಯುಕ್ತ, ಬರೀ ಕೈಯಿಂದಲಾಗಲೀ ಕೋಲಿನಿಂದಲಾಗಲೀ ಅಥವಾ ಗಾಳಿಪಟಮಾಡಿಸುವ ದಾರದಿಂದಲಾಗಲೀ ಮುಟ್ಟಿದ ಕೂಡಲೆ ಮನುಷ್ಯನು ತತ್ ಕ್ಷಣವೇ ಮರಣವನ್ನು ಹೊಂದುವನು. ಒಂದು ವೇಳೆ ತಂತಿಯು ಕಡಿದು ನೆಲದ ಮೇಲೆ ಬಿದ್ದರೆ ಇದನ್ನು ಸ್ವಲ್ಪವಾದರೂ ಮುಟ್ಟಬಾರದು, ಮತ್ತು ಆ ಸಂಗತಿಯನ್ನು ಸಮೀಪದ ಅಧಿಕಾರಿಗಳಿಗೆ ತಕ್ಷಣವೇ ತಿಳಿಸತಕ್ಕದ್ದು ಯಾವ ವಿಧದಲ್ಲಿಯೂ ಕಂಬ, ತಂತಿ, ಅಥವಾ ತಂತಿಗಳನ್ನು ತಾಯಿಸುವ ಗಾಜಿನ ಇನ್ಸುಲೇಟರ್‌ಗಳ ಗೊಡವೆಗೆ ಯಾರೂ ಹೋಗ ಕೂಡದು ಹೀಗೆ ಹೋಗುವ ಪ್ರಯತ್ನವು ಕಂಡು ಬಂದಲ್ಲಿ ಅಂಥವರು ಸರ್ಕಾರದ ಸಖತ್ ಶಿಕ್ಷೆಗೆ ಗುರಿಯಾಗುತ್ತಾರೆ

೧೯೦೬—೦೭ ನೇ ಸಾಲಿನ ವ್ಯವಸಾಯ ವಿಚಾರವು

ಮೈಸೂರು ಸಂಸ್ಥಾನದಲ್ಲಿ ೧೯೦೬—೦೭ ನೇ ಸಾಲಿನಲ್ಲಿ ವ್ಯವಸಾಯವಿಚಾರ, ಮಳೆ, ಬೆಳೆ, ಕಂದಾಯ ಈ ಮೊದಲಾದ ವಿಷಯಗಳನ್ನು ಸರ್ಕಾರದವರು ಪ್ರಕಟಿಸಿರುತ್ತಾರೆ ಆ ಪೈಕಿ ಮುಖ್ಯವಾದ ಭಾಗಗಳನ್ನು ತೆಗೆದು ವಿವರಿಸುವೆವು

ಈ ಸಂಸ್ಥಾನವು ಸುಮಾರು ೧ ಕೋಟಿಯೂ ೯೦ ಲಕ್ಷ ಎಕರೆ ಜಮೀನು ಉಳ್ಳದ್ದಾಗಿದೆ ಸುಮಾರು ೧೩೪ ಲಕ್ಷ ಎಕರೆ ಜಮೀನು ಇನಾಮತಿ ಮತ್ತು ಜಾಗೀರ ಗ್ರಾಮಗಳಲ್ಲಿ ರುವುದು ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‌ಗಳು ೧೯,೩೪,೦೦೦ ಎಕರೆಯಷ್ಟಾಗುತ್ತದೆ ಗೋಮಾಳಗಳ ಮೇವಿಗೂ ಹುಲ್ಲುಬನ್ನಿಗೂ ಸರ್ಕಾರದವರು ಪ್ರಜೆಗಳಿಗೆ ಬಿಟ್ಟುಕೊಟ್ಟಿರುವ ಪ್ರದೇಶವು ೪೯,೩೧,೦೦೦ ಎಕರೆಯಾಗುತ್ತದೆ. ೪,೦೨,೦೦೦ ಎಕರೆಗಳು ಸ್ಟೇಟ್ ಅನ್ಕ್ಲಾಸ್ಡ್ ಕಾವಲಿನಲ್ಲಿ ಸೇರಿರುವುದು ಅಂತು ಫಾರೆಸ್ಟ್ ಇಲಾಖೆಯವರ ಕೈಕೆಳಗೆ ೭೨ ಲಕ್ಷವೂ ೫೦ ಸಾವಿರ ಎಕರೆಗಳು ಸೇರಿಕೊಂಡಿವೆ ಈ ಸಂಸ್ಥಾನದಲ್ಲಿ ೧೯೦೫—೦೬ ನೇ ಸಾಲಿನಲ್ಲಿ ೨೬ ೩೩ ಅಂಗುಲ ಮಳೆಯಾಯಿತು. ಆದರೆ ೧೯೦೬—೦೭ ನೇ ಸಾಲಿನ ಮಳೆಯು ೪೪ ೪೨ ಅಂಗುಲದಷ್ಟು ಸುರಿದು ವಿಶೇಷ ಅನುಕೂಲವನ್ನುಂಟುಮಾಡಿತು ಕಳೆದ ೧೮೭೦ ನೇ ಇಸವಿಯಿಂದ ೧೯೦೬ ನೇ ಇಸವಿಯ ವರೆಗೆ ಸಂಸ್ಥಾನದ ಸರಾಸರಿ ವರುಷದ ಮಳೆಯು ೩೬ ೯೧ ಅಂಗುಲದಷ್ಟು ಮಾತ್ರ ಆಗುತ್ತದೆ ೧೯೦೬—೦೭ ನೇ ಸಾಲಿನಲ್ಲಿ ೬೦,೩೦,೪೯೬ ಎಕರೆಗಳಲ್ಲಿ ಫಸಲು ಕುಯಲಾಯಿತು, ಅಂದರೆ ಹಿಂದಿನ ಸಾಲಿಗಿಂತ ೨,೫೦,೦೦೦ ಎಕರೆ ಹೆಚ್ಚಿತು ಹೀಗೆ ಕುಯಲಾದ ಜಮೀನುಗಳು ಚಿತ್ರದುರ್ಗ, ಶಿವಮೊಗ್ಗ, ತುಮಕೂರು, ಕೋಲಾರ್ ಡಿಸ್ಟ್ರಿಕ್ಟುಗಳಲ್ಲಿ ಹೆಚ್ಚಾಗಿಯೂ, ಹಾಸನದಲ್ಲಿ ಕಡಮೆಯಾಗಿಯೂ ಇದ್ದವು ಕೆರೆಗಳ ಕೆಳಗೆ ಫಸಲಾದ ಜಮೀನುಗಳು ೪೫,೧೨೧ ಎಕರೆಯಷ್ಟಾಗುವುದು ಇದರಲ್ಲಿ ಅರ್ಧಭಾಗ ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಸೇರಿರುತ್ತದೆ ಈ ಸಾಲಿನಲ್ಲಿ ಬೇರೆ ಬೇರೆ ಬೆಳೆಗಳನ್ನಿಟ್ಟ ಜಮೀನುಗಳು ಎಷ್ಟೆಂದರೆ — ರಾಗಿ—೩,೩೨೬ ಎಕರೆಗಳು, ಭತ್ತ—೫೩,೮೯೪, ಹುರುಳಿ—೩೧,೯೮೯, ಕಂಬು—೨೦,೯೦೨, ಕಾಳು ಮುಂತಾದ ಆಹಾರಧಾನ್ಯಗಳು—೯೮,೬೮೪, ಚಿಲ್ಲರೆ ಆಹಾರಪದಾರ್ಥಗಳು—೭೦,೩೯೩ ಎಕರೆಗಳು. ಆದರೆ ಎಣ್ಣೆಬೀಜಗಳ ಬೆಳೆಯು ೧೩,೪೮೯ ಎಕರೆಗಳಷ್ಟು, ಮಸಾಲೆ ಪದಾರ್ಥಗಳ ಬೆಳೆಗಳು ೧೨,೪೭೧ ಎಕರೆಗಳಷ್ಟು, ಹೊಗೆಯ ಬೆಳೆಯು ೧೦,೬೩೬ ಎಕರೆಗಳಷ್ಟು ಹಿಂದಿನ ಸಾಲಿಗಿಂತ ಕಡಮೆಯಾಗಿರುವುದು ಬೇರೆ ಬೇರೆ ಸೆಸ್ಸುಗಳನ್ನು ಬಿಟ್ಟು ಕಂದಾಯವನ್ನು ಹಂಚಿಹಾಕಿದರೆ ಈ ಸಂಸ್ಥಾನದ ಪ್ರತಿ ಒಬ್ಬ ಪ್ರಜೆಗೂ ರೂ. ೧-೧-೨-೯ ಪೈ ಕಂದಾಯ ಕೊಟ್ಟಂತಾಗುವುದು; ಅಂದರೆ ಹಿಂದಿನ ಸಾಲಿನ ದರಕ್ಕಿಂತ ೫ ಪೈ ಹೆಚ್ಚಾಗಿದೆ. ಹಿಡುವಳಿದಾರರ ೧೯೦೫—೦೬ ನೇ ಸಾಲಿನಲ್ಲಿ ೧೦,೨೦,೬೬೮ ಇದ್ದದ್ದು ೧೯೦೬—೦೭ ನೇ ಸಾಲಿನಲ್ಲಿ ೧೦,೪೬,೯೫೮ ಕ್ಕೆ ಹೆಚ್ಚಿತು ಅಂದರೆ ಅವರ ಹಿಡುವಳಿಯಲ್ಲಿದ್ದ ಜಮೀನು ೬೮,೦೨,೩೨೧ ಎಕರೆ, ಇದ್ದದ್ದು ಈ ಸಾಲಿನಲ್ಲಿ ೬೮,೪೭,೫೨೫ ಎಕರೆಗೆ ಹೆಚ್ಚಿರುತ್ತದೆ. ಪ್ರತಿ ಒಬ್ಬ ಹಿಡುವಳಿದಾರನೂ ಸರಾಸರಿ ೬॥ ಎಕರೆ ಜಮೀನನ್ನು ಪಡೆದಿದ್ದನೆಂದೂ, ಅದಕ್ಕೆ ಸುಮಾರು ೮ ರೂಪಾಯಿ ಕಂದಾಯ ಬೀಳುವುದೆಂದೂ ತಿಳಿಯುವುದು ಮತ್ತು ಸಿಂಕೋನಾ (ಕ್ವೈನಾ ಎಂಬ ಜ್ವರದ ಪುಡಿ ತಯಾರಾಗುವ) ಗಿಡಗಳು ೧೦೨ ಎಕರೆಗಳಲ್ಲಿ ಮೊದಲಿನಂತೆ ಬೆಳೆಯುತ್ತಿದ್ದವು. ೧೯೦೬—೦೭ ನೇ ಸಾಲಿನಲ್ಲಿ ತರೀ ಫಸಲು ಹುಲುಸಾದ್ದರಿಂದಲೂ, ಹೆಚ್ಚು ಜಮೀನು ತರಿಯಾದ್ದರಿಂದಲೂ ಹಿಂದಿನ ಸಾಲಿಗಿಂತ ೩ ಲಕ್ಷದ ೪೬ ಸಾವಿರ ಖಂಡಿ ಭತ್ತ ಬೆಳೆಯಲ್ಪಟ್ಟಿರುತ್ತದೆ. ಸರಾಸರಿ

ಪರ್ಷಿಯಾ ರಾಜ್ಯದಲ್ಲಿ ಗಲಭೆಗಳು.

ಕಳೆದ ವಾರ ಬಂದಿರುವ ತಂತೀ ವರ್ತಮಾನಗಳು

ಪರ್ಷಿಯಾ ರಾಜ್ಯದಲ್ಲಿ ರಾಜ ಪಕ್ಷದವರಿಗೂ ಪ್ರಜೆಗಳ ಮುಖಂಡರಿಗೂ ಕಲಹಗಳುಂಟಾಗಿ ನಾನಾ ಕ್ರೂರ ಕೊಲೆಗಳು ನಡೆದು, ಕೆಲವು ಕಾಲ ಎಲ್ಲಾ ಶಮನವಾಗಿತ್ತಷ್ಟೆ. ಈಚೆಗೆ ತುರ್ಕಿ ರಾಜ್ಯದಲ್ಲಿ ಸುಲ್ತಾನರವರು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿಕೊಡುವುದಾಗಿ ಪ್ರಜೆಗಳಿಗೆ ವಾಗ್ದಾನ ಮಾಡಿದರು. ಈ ವರ್ತಮಾನವು ಪರ್ಷಿಯಾ ರಾಜಧಾನಿಯಾದ ಟಿಹರಾನ್ ಪಟ್ಟಣಕ್ಕೆ ತಲುಪಿದ ಆಗಿನಿಂದಲೂ ಆ ರಾಜ್ಯದಲ್ಲಿ ಮತ್ತೆ ಪ್ರಜಾ ನೆಮ್ಮದಿಗೆ ಭಂಗವುಂಟಾಗುವಂಥಾ ಕೃತ್ಯಗಳು ನಡೆಯಲಾರಂಭವಾಗಿವೆ. ಈ ವಿಚಾರವಾಗಿ ಕಳೆದ ವಾರ ಬಂದಿರುವ ತಂತೀ ವರ್ತಮಾನಗಳನ್ನು ಕ್ರೋಢೀಕರಿಸಿ ಇಲ್ಲಿ ಪ್ರಕಟಿಸುವೆವು

ಅಗಸ್ಟ್ ತಾ. ೨ನೇ ಭಾನುವಾರ.—ತುರ್ಕಿ ಸುಲ್ತಾನರವರು ಪಾರ್ಲಿಮೆಂಟನ್ನು ಸ್ಥಾಪನೆ ಮಾಡುವುದಾಗಿ ಒಪ್ಪಿಕೊಂಡಿರುವ ವಿಷಯವು ಪರ್ಷಿಯಾ ರಾಜಧಾನಿಯಾದ ಟಿಹರಾನ್ ಪಟ್ಟಣದಲ್ಲಿ ತುಂಬಾ ಗಲಭೆಯನ್ನುಂಟುಮಾಡಿ, ಮತ್ತೆ ಪ್ರಜಾ ನೆಮ್ಮದಿಗೆ ಭಂಗವುಂಟಾಗುವಂತೆ ಕಳವಳ ಹುಟ್ಟಿರುವುದು. ೧೦೦ ಮಂದಿ ವರ್ತಕರೇ ಮುಂತಾದವರು ಟಿಹರಾನ್ ಪಟ್ಟಣದಲ್ಲಿರುವ ತುರ್ಕಿ ರಾಯಭಾರಿಯ ಬಂಗಲೆಯಲ್ಲಿ ಆಶ್ರಯವನ್ನು ಪಡೆದು, ತಮ್ಮ (ಪರ್ಷಿಯಾ) ಷಾ ಸುಲ್ತಾನರನ್ನು ಬೇಗನೆ ಪಾರ್ಲಿಮೆಂಟನ್ನು ಪ್ರಾರಂಭಿಸುವಂತೆ ಕೋರುತ್ತಿದಾರೆ.

ಅಗಸ್ಟ್ ತಾ ೪ನೇ ಮಂಗಳವಾರ—ನೆನ್ನೆ ಬೆಳಿಗ್ಗಿನಿಂದ ಟೇಬ್ರಿಸ್ ಪಟ್ಟಣದಲ್ಲಿ ಗುಂಡು ಹೊಡೆಯುತ್ತಿದಾರೆಂದು ತಿಳಿದಿದೆ ತುರ್ಕಿಯ ರಾಯಭಾರಿಯು ಈ ಒಳ ಕಾದಾಟಗಳನ್ನು ಕೂಡಲೇ ನಿಲ್ಲಿಸಬೇಕೆಂದೂ, ಇಲ್ಲವಾದರೆ ಗಾಯಪಟ್ಟ ತುರ್ಕಿ ಪ್ರಜೆಗಳನ್ನು ಕಾಪಾಡುವುದಕ್ಕೋಸ್ಕರ ತುರ್ಕಿ ಗವರ್ನಮೆಂಟಿನವರು ಪ್ರವೇಶ ಮಾಡಬೇಕೆಂದೂ ತಿಳಿಸಿದಾರೆ ಅತ್ತಭಾಗ ಷಾ ಸುಲ್ತಾನರವರು ತಮ್ಮ ಪ್ರಜೆಗಳನ್ನು ವಿಶೇಷವಾಗಿ ತುರ್ಕಿ ರಾಯಭಾರಿಗಳು ಆಶ್ರಯ ಕೊಟ್ಟು ತಮ್ಮ ಬಂಗಲೆಯಲ್ಲಿ ಇಟ್ಟುಕೊಳ್ಳುವುದು ತರವಲ್ಲವೆಂತಲೂ, ಈ ಭಾಗದಲ್ಲಿ ರಾಯಭಾರಿಗಳು ತಲೆಹಾಕ ಕೂಡದೆಂತಲೂ, ಹಾಗೆ ಸೇರಿಸಿಕೊಳ್ಳಲು ಕಾರಣವಿಲ್ಲವೆಂತಲೂ ಪ್ರತಿಭಟಿಸಿ ಕಾಗದ ಬರೆದರು. ಅದರಂತೆ ಆ ತುರ್ಕಿ ರಾಯಭಾರಿಯು ತನ್ನ ಆಶ್ರಯವನ್ನು ಹೊಂದಿದ್ದ ಪರ್ಷಿಯಾ ಪ್ರಜೆಗಳನ್ನೆಲ್ಲಾ ತನ್ನ ಬಂಗಲೆಯಿಂದ ಹೊರಟು ಹೋಗುವಂತೆ ಆಜ್ಞೆ ಮಾಡಿದರು ಆದರೆ ಅವರು ಹಾಗೆ ಹೋಗುವುದಿಲ್ಲವೆಂದು ತಿರಸ್ಕಾರ ಮಾಡಿದ್ದಾರೆ

ಅಗಸ್ಟ್ ತಾ. ೬ ನೇ ಗುರುವಾರ.—ತುರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿ ಪರ್ಷಿಯಾ ಪ್ರಜೆಗಳೂ ಪರ್ಷಿಯಾ ರಾಯಭಾರಿಯೂ ಇದ್ದಾರೆ ಈ ಪ್ರಜೆಗಳು ತಮ್ಮ ರಾಯಭಾರಿಯ ಬಂಗಲೆಗೆ ಹೋಗಿ ಅವರನ್ನು ಕುರಿತು—ನಮ್ಮ ರಾಜ್ಯದಲ್ಲಿ ಷಾ ಸುಲ್ತಾನರವರು ಕೂಡಲೇ ಪಾರ್ಲಿಮೆಂಟ್ ಸಭೆಯನ್ನು ಪ್ರಾರಂಭಿಸುವಂತೆ ಕೇಳಿಕೊಳ್ಳುತ್ತೇವೆ ಎಂದೂ, ಇಲ್ಲವಾದರೆ ನಾವೆಲ್ಲಾ ತುರ್ಕಿ ಪ್ರಜೆಗಳಾಗಿ ನಿಂತುಬಿಡುತ್ತೇವೆ ಎಂದೂ ತಿಳಿಸಿದರು ಅದರ ಮೇರೆ ಆ ರಾಯಭಾರಿಯು ಪರ್ಷಿಯಾ ಷಾ ಸುಲ್ತಾನರಿಗೆ ತಂತೀ ವರ್ತಮಾನ ಕಳುಹಿಸಿ ಕೇಳಿದಾಗ ಸುಲ್ತಾನರವರು—ನಾವು ಮೊದಲೇ ಗೊತ್ತುಮಾಡಿರುವ ದಿನದಿಂದ ಪಾರ್ಲಿಮೆಂಟು ಏರ್ಪಾಡಾಗುವುದು ಎಂದು ಜವಾಬುಕೊಟ್ಟರು ಟೇಬ್ರಿಸ್ ಪಟ್ಟಣದಲ್ಲಿ ದೊಂಬಿ ಕಲಹ ಕಾದಾಟಗಳನ್ನು ಅಡಗಿಸಿ, ಪ್ರಜಾನೆಮ್ಮದಿಯನ್ನು ಕಾಪಾಡುವುದಕ್ಕೋಸ್ಕರ ಸುಲ್ತಾನರವರು ಕೆಲವು ಸೈನ್ಯವನ್ನು ಕಳುಹಿಸಿದಾರೆ

ಅಗಸ್ಟ್ ತಾ ೭ ನೇ ಶುಕ್ರವಾರ—ಟಿಹರಾನ್ ಪಟ್ಟಣದಲ್ಲಿ ತುರ್ಕಿ ರಾಯಭಾರಿಯ ಬಂಗಲೆಯೊಳಗೆ ಆಶ್ರಯವನ್ನು ಪಡೆದಿದ್ದ ಪರ್ಷಿಯಾ ಪ್ರಜೆಗಳನ್ನು ಬಲಾತ್ಕಾರಮಾಡಿ ಅಲ್ಲಿಂದ ಓಡಿಸಿಬಿಟ್ಟರು.

ಮೈಸೂರು ಸಂಸ್ಥಾನದ ವರ್ತಮಾನ ಪತ್ರಿಕೆಗಳ ಕಾನೂನು.

ವರ್ತಮಾನ ಪತ್ರಿಕೆಗಳ ಮತ್ತು ವರ್ತಮಾನಗಳನ್ನೊಳಗೊಂಡಿರುವ ಬಿಟ್ಟಾದ ಇತರ ಪುಸ್ತಕಗಳ ಪ್ರಚಾರವನ್ನು ಬಲವತ್ತರವಾದ ಹಂಕೆಯಲ್ಲಿಡುವುದು ಅವಶ್ಯವೆಂದು ತೋರಿದುದರಿಂದ ಶ್ರೀಮನ್ ಮಹಾರಾಜರವರು ಈ ಕೆಳಗೆ ಕಂಡ ನಿಯಮಗಳನ್ನು ಮಾಡಿ ಜಾರಿಗೆ ತರಲು ಇಚ್ಛೈಸುತ್ತಾರೆ —

(೧) ಈ ನಿಯಮವು ೧೯೦೮ನೇ ಇಸವಿಯ ಮೈಸೂರು ಸೀಮೆಯ ವರ್ತಮಾನ ಪತ್ರಿಕೆಗಳ ನಿಯಮವು (ಕಾನೂನು) ಎಂದು ಕರೆಯಲ್ಪಡತಕ್ಕದ್ದು

(೨) ಇದು ಮೈಸೂರು ಸೀಮೆಯಲ್ಲಿ ಸರ್ವತ್ರ ಅನ್ವಯಿಸುತ್ತದೆ; ಮತ್ತು

(೩) ಇದು ಸರ್ಕಾರದ ಗೆಜೆಟ್ಟಿನಲ್ಲಿ ಪ್ರಕಟವಾದ ೩೦ ದಿನಗಳನಂತರ ಜಾರಿಗೆ ಬರತಕ್ಕದಾಗಿದೆ.

೨ ಶ್ರೀಮನ್ ಮಹಾರಾಜರವರ ಸರ್ಕಾರದಿಂದ ಲಿಖಿತಮೂಲಕವಾದ ಅನುಜ್ಞೆಯನ್ನು ಪಡೆಯದೆ ದೇಶದ ಸಮಾಚಾರಗಳನ್ನಾಗಲಿ ಅಥವಾ ಅವುಗಳ ಮೇಲಣ ವ್ಯಾಖ್ಯಾನವನ್ನಾಗಲಿ ಒಳಗೊಂಡಿರುವ ಯಾವ ಪತ್ರಿಕೆಗಳಾಗಲಿ ಅಥವಾ ಪುಸ್ತಕಗಳಾಗಲಿ ಮೈಸೂರು ದೇಶದಲ್ಲೆಲ್ಲೂ ಮುದ್ರಣವಾಗಿ ಪ್ರಕಟವಾಗಕೂಡದು

(೩) ಮೇಲೆ ಹೇಳಿದಂಥ ವರ್ತಮಾನ ಪತ್ರಿಕೆಗಳನ್ನು ಅಥವಾ ಪುಸ್ತಕಗಳನ್ನು ಮುದ್ರಣ ಮಾಡಿ ಪ್ರಕಟಿಸಲು ಮಹಾರಾಜಾ ಸರ್ಕಾರದವರು ಲಿಖಿತ ಮೂಲಕವಾಗಿ ಕೊಟ್ಟದ್ದ ಅಪ್ಪಣೆಯನ್ನು ಯಾವಾಗಬೇಕಾಗಿದ್ದರೂ ಹಿಂದಕ್ಕೆ ತೆಗೆದುಕೊಳ್ಳಬಹುದು.

(೪) ಯಾವ ಮನುಷ್ಯನಾದರೂ ಮೇಲೆ ಹೇಳಿದಂಥ ಅಪ್ಪಣೆಯನ್ನು ಪಡೆಯದೆಯಾಗಲಿ ಅಥವಾ ಅಪ್ಪಣೆಯನ್ನು ಸರ್ಕಾರದವರು ಕಿತ್ತುಕೊಂಡಮೇಲಾಗಲಿ ಮೇಲೆ ಹೇಳಿದಂಥ ವರ್ತಮಾನ ಪತ್ರಿಕೆಗಳನ್ನು ಅಥವಾ ಪುಸ್ತಕಗಳನ್ನು ಮೈಸೂರು ದೇಶದೊಳಗೆ ಮುದ್ರಣ ಮಾಡಿ ಪ್ರಕಟಮಾಡಿದರೆ ಸರ್ಕಾರದವರು ಜನರಲ್ ಮತ್ತು ರೆವಿನ್ಯೂ ಶಾಖೆಯಲ್ಲಿ ಸರ್ಕಾರಕ್ಕೆ ಸೆಕ್ರೆಟರಿಯಾದವರ ಬರಹಮೂಲಕವಾದ ಆಜ್ಞೆಯಿಂದ—

(*a*) ಅಂಥಾ ಮನುಷ್ಯನು ಆ ಆಜ್ಞೆಯು ಹುಟ್ಟಿದಂದಿನಿಂದ ೭ ದಿನಗಳೊಳಗೆ ಮೈಸೂರು ದೇಶವನ್ನು ಬಿಟ್ಟು ಹೋಗಬೇಕೆಂದಪೇಕ್ಷಿಸಬಹುದು, ಅಲ್ಲದೆ

(*b*) ಅವನು ಸರ್ಕಾರದ ಅನುಮತಿಯಿಲ್ಲದೆ ಮೈಸೂರು ದೇಶವನ್ನು ಹಿಂತಿರುಗಿ ಪ್ರವೇಶಿಸಲು ಅಡಚಣೆ ಮಾಡಬಹುದು; ಮತ್ತು

(*c*) ಮೇಲೆ ಹೇಳಿದಂಥ ವರ್ತಮಾನ ಪತ್ರಿಕೆಗಳನ್ನು ಅಥವಾ ಪುಸ್ತಕಗಳನ್ನು ಮುದ್ರಣ ಮಾಡಿ ಪ್ರಕಟಿಸಲು ಉಪಯೋಗಿಸಲ್ಪಟ್ಟಿರುವ ಅಥವಾ ಉಪಯೋಗಿಸಲಿಕ್ಕಿರುವ ಎಲ್ಲ ಮುದ್ರಣದ ಯಂತ್ರಗಳು, ಅಕ್ಷರಗಳು, ಕಲ್ಲುಗಳು, ಕಾಗದ, ಪತ್ರಗಳು ಮೊದಲಾದ ಸಾಮಗ್ರಿಗಳು ಮೇಲ್ಕಂಡ ಪತ್ರಿಕೆಗಳು ಮುದ್ರಣವಾದ ಮನೆಯೊಳಗೆ ಅಥವಾ ಅದರ ಸಮೀಪದಲ್ಲಿ ಎಲ್ಲಿ ದೊರೆತರೂ ಅವುಗಳನ್ನು ಮತ್ತು ಮೇಲೆ ಹೇಳಿದಂಥ ವರ್ತಮಾನ ಪತ್ರಿಕೆಗಳು ಅಥವಾ ಅಂಥಾ ಇತರ ಪುಸ್ತಕಗಳು ಎಲ್ಲಿ ಕಂಡು ಬಂದರೂ ಅವುಗಳನ್ನೂ ಸರ್ಕಾರದವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು, ತಮಗೆ ಯುಕ್ತ ತೋರಿದ ರೀತಿಯಲ್ಲಿ ವಿನಿಯೋಗ ಮಾಡುವರು

೫. ಈ ಕಡೆಯ ವಿಧಿಯ (*a*) ಮತ್ತು (*b*) ವಾಕ್ಯಾಂಗ (ಕ್ಲಾಜು) ಗಳಲ್ಲಿ ಹೇಳಿರುವಂತೆ ಅಪ್ಪಣೆಯನ್ನುಲ್ಲಂಘಿಸಿ ನಡೆಯುವಂಥವನು ಮೈಸೂರು ದೇಶದಿಂದ ಹೊರಗಡೆ ಬಲವಂತದಿಂದ ಕಳುಹಲ್ಪಡುವನು.

೬. (i) ೧೯೦೮ನೇ ವರ್ತಮಾನ ಪತ್ರಿಕೆಗಳ ನಿಯಮದ (ಆಕ್ಟಿನ) ೭ನೇ ವಿಧಿಯನ್ನನುಸರಿಸಿ ಬ್ರಿಟೀಷ್ ಇಂಡ್ಯಾದಲ್ಲಿ ಪ್ರಕಟವಾಗದಂತೆ ನಿಷೇಧಿಸಲ್ಪಟ್ಟಿರುವ ವರ್ತಮಾನ ಪತ್ರಿಕೆಗಳು ಮೈಸೂರು ದೇಶದಲ್ಲಿ ಹಂಚಲ್ಪಡಕೂಡದು.

೭ ೬ನೆಯ ವಿಧಿಯಲ್ಲಿ ಹೇಳಿರುವಂಥ ಯಾವ ವರ್ತಮಾನ ಪತ್ರಿಕೆಗಳಾಗಲಿ ಅಥವಾ ಅಂಥಾ ಇತರ ಪುಸ್ತಕಗಳಾಗಲಿ ಮೈಸೂರು ದೇಶದೊಳಗೆ ಹಂಚಲ್ಪಟ್ಟದ್ದೆಯಾದರೆ,

(i) ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅಂಥಾ ಪತ್ರಿಕೆಗಳು ಎಲ್ಲಿ ದೊರೆತಾಗ್ಯೂ ಅವುಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಬಹುದಲ್ಲದೆ ಅಂಥಾ ಪತ್ರಿಕೆಗಳು ಮಾರಾಟಕ್ಕಾಗಲಿ, ಪ್ರಕಟನೆಗಾಗಲಿ, ಪ್ರದರ್ಶನಕ್ಕಾಗಲಿ ಮತ್ತಾವ ಕಾರಣಕ್ಕಾಗಲಿ ಇಡಲ್ಪಟ್ಟಿರುವ ಅಥವಾ ಇಡಲ್ಪಟ್ಟಿವೆಯೆಂದು ಊಹಿಸಲ್ಪಟ್ಟಿರುವ ಸ್ಥಳಗಳಿಗೆ ನುಗ್ಗಿ ಎಲ್ಲವನ್ನು ಕಿತ್ತುಕೊಂಡು ಹೋಗಲು ಸಬ್ ಇನ್ಸ್‌ಪೆಕ್ಟರ ಅಧಿಕಾರಕ್ಕೆ ಕಡಮೆ ಇಲ್ಲದ ಪೋಲೀಸು ಅಧಿಕಾರಿಗೆ ವಾರಂಟ್ ಮೂಲಕ ಅಪ್ಪಣೆಯನ್ನು ಕೊಡಬಹುದು

(ii) ಮೇಲೆ ಹೇಳಿದಂಥ ವರ್ತಮಾನ ಪತ್ರಿಕೆಗಳನ್ನು ಅಥವಾ ಪುಸ್ತಕಗಳನ್ನು ಮೈಸೂರು ದೇಶದಲ್ಲಿ ಹಂಚುವವನು ಅಥವಾ ಹಂಚಲು ಪ್ರಯತ್ನಿಸುವವನು, ಅಥವಾ ಹಂಚಲು ಸಹಾಯಕನಾಗುವವನು, ೪ ಮತ್ತು ೫ನೇ ವಿಧಿಗಳ (ಸೆಕ್ಷನ್ನುಗಳ) (*a*, ಮತ್ತು (*b*) ವಾಕ್ಯಾಂಗಗಳಲ್ಲಿ (ಕ್ಲಾಜುಗಳಲ್ಲಿ) ಹೇಳುವ ಪ್ರಕಾರ, ಸರ್ಕಾರದ ಅಪ್ಪಣೆಯನ್ನು ಪಡೆಯದೆ ಮೈಸೂರು ದೇಶದಲ್ಲಿ ವರ್ತಮಾನ ಪತ್ರಿಕೆಗಳನ್ನು ಅಥವಾ ಅಂಥಾ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸಿದವನೆಂದು ಗಣಿಸಲ್ಪಟ್ಟು ಶಿಕ್ಷಿಸಲ್ಪಡುವನು

೮ ಈ ವಿಧಿಗಳಲ್ಲಿ „ಮುದ್ರಿಸುವ,” „ಮುದ್ರಿಸಲ್ಪಟ್ಟ,” ಮತ್ತು „ಮುದ್ರಿಸುವ’ ಎಂಬ ಪ್ರಯೋಗಗಳು ಮುದ್ರಣಕ್ಕೆ ಮಾತ್ರವಲ್ಲದೆ ಶಿಲಾಮುದ್ರಣಕ್ಕೂ, ಅಕ್ಷರಗಳನ್ನು ಕೆತ್ತುವುದಕ್ಕೂ, ಛಾಯಾಪಟವನ್ನು ತೆಗೆಯುವುದಕ್ಕೂ ಅನ್ವಯಿಸುವವು

ಮೈಸೂರು ಸರ್ಕಾರಿ ಹುಕುಮುಗಳು.

ಸಾಕ್ಷಿಗಳ ಕೈಫಿಯತ್ತಿಗೆ ಅವರ ರುಜು.

ಮೇಜಿಸ್ಟ್ರೇಟ್ ಕೋರ್ಟುಗಳಲ್ಲಿ ಕೈಫಿಯತ್ತುಗಳನ್ನು ಕನ್ನಡದಲ್ಲಿಯೇ ಬರೆದುಕೊಳ್ಳಬೇಕೆಂಬ ಮತ್ತು ಅವುಗಳಿಗೆ ಸಾಕ್ಷಿಗಳ ರುಜುಗಳನ್ನು ಹಾಕಿಸಬೇಕೆಂಬ ವಿಚಾರವಾಗಿ ೧೯೦೭ನೇ ಇಸವಿಯ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಟ್ಟ ವಿಷಯವನ್ನೂ, ಅದಕ್ಕೆ ಸರ್ಕಾರದವರು ಕೊಟ್ಟ ಉತ್ತರವನ್ನೂ, ಮೇಜಿಸ್ಟ್ರೇಟ್ ಕೋರ್ಟುಗಳಲ್ಲಿ ಕೈಫಿಯತ್ತುಗಳಿಗೆ ಸಾಕ್ಷಿಗಳ ರುಜುಗಳನ್ನು ತೆಗೆದುಕೊಳ್ಳುವದರ ವಿಚಾರವಾಗಿ ಹಾಲೀ ಜಾರಿಯಲ್ಲಿರುವ ಕಾನೂನನ್ನು ಬದಲಾಯಿಸಲು ಚೀಫ್ ಕೋರ್ಟಿನ ಜಡ್ಜಿಗಳಿಗೆ ಯಾವ ಕಾರಣವೂ ಕಂಡು ಬರುವದಿಲ್ಲವೆಂದು ತಿಳಿಸುವ ಮೈಸೂರು ಚೀಫ್ ಕೋರ್ಟ್ ರಿಜಿಸ್ಟ್ರಾರವರ ಲೆಟರನ್ನೂ ಓದಲಾಯಿತು ಮೇಜಿಸ್ಟ್ರೇಟರುಗಳ ರೂಬರೂಬು ಕೊಡಲ್ಪಡುವ ಕೈಫಿಯತ್ತುಗಳಿಗೆ ಸಾಕ್ಷಿಗಳ ರುಜುಗಳನ್ನು ತೆಗೆದುಕೊಳ್ಳಬೇಕಾದುದಿಲ್ಲವೆಂಬದಾಗಿ ಹಾಲೀ ಜಾರಿಯಲ್ಲಿರುವ ಕಾನೂನನ್ನು ಬದಲಾಯಿಸಲು ಯುಕ್ತವಾದ ಕಾರಣವು ಕಂಡು ಬರುವದಿಲ್ಲವೆಂದು ಚೀಫ್ ಕೋರ್ಟಿನವರು ತಿಳಿಸಿರುವ ಅಭಿಪ್ರಾಯವನ್ನು ಸರ್ಕಾರದವರು ಅನುಮೋದಿಸಿ ಮೇಲ್ಕಂಡ ಕಾಗದ ಪತ್ರಗಳನ್ನು ರೆಕಾರ್ಡು ಮಾಡಿರುತ್ತಾರೆ.

ವಿದ್ಯುಚ್ಛಕ್ತಿಯ ಅಪಾಯ

ಶಿವನ ಸಮುದ್ರದಿಂದ ವಿದ್ಯುಚ್ಛಕ್ತಿಯು ಬರುವ ತಂತಿಗಳ ಹಂಟಿಗೆ ಯಾರೂ ಹೋಗಕೂಡದೆಂದು ಎಚ್ಚರಿಸಿ ೧೯೦೧ನೇ ಇಸವಿ ಜನವರಿ ಮಾಹೆ ೨೪ನೇ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ನೋಟೀಸು ಪ್ರಕಟಿಸಲ್ಪಟ್ಟಿರುವುದು ಸರಿಯಷ್ಟೆ. ಇದನ್ನು ಸ್ಪಷ್ಟವಾಗಿ ಎಚ್ಚರಿಕೆ ಕೊಟ್ಟಿದ್ದರೂ ಕೆಲವು ಅಪಾಯಗಳು ಸಂಭವಿಸಿರುವವಲ್ಲದೆ ಕೆಲವು ಸಂದರ್ಭಗಳಲ್ಲಿ ಪ್ರಾಣನಷ್ಟವೂ ಕೂಡಾ, ಉಂಟಾಗಿರುವದು ಬಹಳ ವಿಷಾದಕರವಾಗಿರುತ್ತದೆ ಕಳೆದ ಮೇ ೩೧ನೇ ತಾರೀಖಿನ ದಿವಸ ೧೮ ವರುಷ ವಯಸ್ಸಿನ ಒಬ್ಬ ಹುಡುಗನು ಬೆಂಗಳೂರು ಸಿಟಿ ಲಾಲ್ ಬಾಗ್ ರಸ್ತೆಯಲ್ಲಿ ಮರದ ಮೇಲಿನಿಂದ ಆಕಸ್ಮಿಕವಾಗಿ ಜಾರಿ ಒಂದು ಬಂಗಲೆಗೆ ಸಂಬಂಧಪಟ್ಟ ವಿದ್ಯುಚ್ಛಕ್ತಿಯ ತಂತಿಯನ್ನು ಹಿಡಿದದ್ದರಿಂದ ತತ್ ಕ್ಷಣವೇ ಮೃತನಾದನು ಮೈಸೂರು ಪಟ್ಟಣದಲ್ಲಿ ವಿದ್ಯುಚ್ಛಕ್ತಿಯ ದೀಪವನ್ನಿಡಲು ಶಿವನ ಸಮುದ್ರದಿಂದ ಮತ್ತೊಂದು „ಟ್ರಾನ್ಸ್ಮಿಷನ್ ಲೈನ್” (ವಿದ್ಯುಚ್ಛಕ್ತಿಯನ್ನು ಒಯ್ಯುವ ತಂತಿ) ಇಷ್ಟರಲ್ಲೇ ಸ್ಥಾಪಿಸಲ್ಪಡುವದರಲ್ಲಿದೆಯಾದಕಾರಣ ಈ ತಂತಿಗಳ ಹಂಟಿಗೆ ಹೋಗುವುದರಿಂದುಂಟಾಗುವ ಅಪಾಯವನ್ನು ಕುರಿತು ಸಕಲರಿಗೂ ತತ್ರಾಪಿ ತಂತಿಗಳು ಸ್ಥಾಪಿಸಲ್ಪಡುವ ಗ್ರಾಮಗಳಲ್ಲಿ ವಾಸವಾಗಿರುವ ಜನರಿಗೆ ಹುಷಾರಿ ಕೊಡುವದು ಅವಶ್ಯಕ ತೋರಿ ಇದರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುವದೇನೆಂದರೆ.—ಎಲೆಕ್ಟ್ರಿಕ್ ಟ್ರಾನ್ಸ್ಮಿಷನ್ ತಂತಿಗಳನ್ನು ಟೆಲಿಗ್ರಾಫ್ ತಂತಿಗಳಂತೆ ಭಾವಿಸ ಕೂಡದು. ಟೆಲಿಗ್ರಾಫ್ ತಂತಿಗಳಲ್ಲಿರುವ ವಿದ್ಯುಚ್ಛಕ್ತಿಯು ಅಷ್ಟು ಎಷ್ಟೂ ಬಲವಾಗಿರುವದಿಲ್ಲ. ಎಲೆಕ್ಟ್ರಿಕ್ ಟ್ರಾನ್ಸ್ಮಿಷನ್ ತಂತಿಗಳಲ್ಲಾದರೋ ಅತಿ ಬಲವತ್ತರವಾದ ಶಕ್ತಿ ಇರುತ್ತಾದ ಪ್ರಯುಕ್ತ, ಬರೀ ಕೈಯಿಂದಲಾಗಲೀ ಕೋಲಿನಿಂದಲಾಗಲೀ ಅಥವಾ ಗಾಳಿಪಟವಾಡಿಸುವ ದಾರದಿಂದಲಾಗಲೀ ಮುಟ್ಟಿದ ಕೂಡಲೆ ಮನುಷ್ಯನು ತತ್ ಕ್ಷಣವೇ ಮರಣವನ್ನು ಹೊಂದುವನು. ಒಂದು ವೇಳೆ ತಂತಿಯು ಕಡಿದು ನೆಲದ ಮೇಲೆ ಬಿದ್ದರೆ ಅದನ್ನು ಸ್ವಲ್ಪವಾದರೂ ಮುಟ್ಟಬಾರದು, ಮತ್ತು ಆ ಸಂಗತಿಯನ್ನು ಸಮೀಪದ ಅಧಿಕಾರಿಗಳಿಗೆ ತಕ್ಷಣವೇ ತಿಳಿಸ ತಕ್ಕದ್ದು ಯಾವ ವಿಧದಲ್ಲಿಯೂ ಕಂಬ, ತಂತಿ, ಅಥವಾ ತಂತಿಗಳನ್ನು ಹಾಯಿಸುವ ಗಾಜಿನ ಇನ್ಸುಲೇಟರ್‌ಗಳ ಗೊಡವೆಗೆ ಯಾರೂ ಹೋಗ ಕೂಡದು ಹೀಗೆ ಹೋಗುವ ಪ್ರಯತ್ನವು ಕಂಡು ಬಂದಲ್ಲಿ ಅಂಥವರು ಸರ್ಕಾರದ ಸಖತ್ ಶಿಕ್ಷೆಗೆ ಗುರಿಯಾಗುತ್ತಾರೆ

೧೯೦೬—೦೭ ನೇ ಸಾಲಿನ ವ್ಯವಸಾಯ ವಿಚಾರವು

ಮೈಸೂರು ಸಂಸ್ಥಾನದಲ್ಲಿ ೧೯೦೬—೦೭ ನೇ ಸಾಲಿನಲ್ಲಿ ವ್ಯವಸಾಯವಿಚಾರ, ಮಳೆ, ಬೆಳೆ, ಕಂದಾಯ ಈ ಮೊದಲಾದ ವಿಷಯಗಳನ್ನು ಸರ್ಕಾರದವರು ಪ್ರಕಟಿಸಿರುತ್ತಾರೆ ಅದರ ಮುಖ್ಯವಾದ ಭಾಗಗಳನ್ನು ತೆಗೆದು ವಿವರಿಸುವೆವು

ಈ ಸಂಸ್ಥಾನವು ಸುಮಾರು ೧ ಕೋಟಿಯ ೯೦ ಲಕ್ಷ ಎಕರೆ ಜಮೀನು ಉಳ್ಳದ್ದಾಗಿದೆ ಸುಮಾರು ೧೩೪ ಲಕ್ಷ ಎಕರೆ ಜಮೀನು ಇನಾಮತಿ ಮತ್ತು ಜಾಗೀರು ಗ್ರಾಮಗಳಲ್ಲಿರುವುದು ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‌ಗಳು ೧೯,೩೪,೦೦೦ ಎಕರೆಯಷ್ಟಾಗುತ್ತವೆ ಗೋಕಾವಲುಗಳ ಮೇವಿಗೂ ಹುಲ್ಲುಬನ್ನಿಗೂ ಸರ್ಕಾರದವರು ಪ್ರಜೆಗಳಿಗೆ ಬಿಟ್ಟುಕೊಟ್ಟಿರುವ ಪ್ರದೇಶವು ೪೯,೩೧,೦೦೦ ಎಕರೆಯಾಗುತ್ತದೆ. ೪,೧೨,೦೦೦ ಎಕರೆಗಳು ಸ್ಟೇಟ್ ಅಮೃತಮಹಲ್ ಕಾವಲಿನಲ್ಲಿ ಸೇರಿರುವುದು ಅಂತು ಫಾರೆಸ್ಟ್ ಇಲಾಖೆಯವರ ಕೈಕೆಳಗೆ ೭೨ ಲಕ್ಷವೂ ೫೦ ಸಾವಿರ ಎಕರೆಗಳು ಸೇರಿಕೊಂಡಿವೆ ಈ ಸಂಸ್ಥಾನದಲ್ಲಿ ೧೯೦೫—೦೬ ನೇ ಸಾಲಿನಲ್ಲಿ ೨೭ ೩೭ ಅಂಗುಲ ಮಳೆಯಾಯಿತು. ಆದರೆ ೧೯೦೬—೦೭ ನೇ ಸಾಲಿನ ಮಳೆಯು ೪೪ ೪೨ ಅಂಗುಲದಷ್ಟು ಸುರಿದು ವಿಶೇಷ ಅನುಕೂಲವನ್ನುಂಟುಮಾಡಿತು ಕಳೆದ ೧೮೭೦ ನೇ ಇಸವಿಯಿಂದ ೧೯೦೬ ನೇ ಇಸವಿಯ ವರೆಗೆ ಸಂಸ್ಥಾನದ ಸರಾಸರಿ ವರುಷದ ಮಳೆಯು ೩೬ ೯೧ ಅಂಗುಲದಷ್ಟು ಮಾತ್ರ ಆಗುತ್ತದೆ ೧೯೦೬—೦೭ ನೇ ಸಾಲಿನಲ್ಲಿ ೬೦,೩೦,೪೮೬ ಎಕರೆಗಳಲ್ಲಿ ಫಸಲು ಕುಯಿಲಾಯಿತು, ಅಂದರೆ ಹಿಂದಿನ ಸಾಲಿಗಿಂತ ೨,೫೦,೦೦೦ ಎಕರೆ ಹೆಚ್ಚಿತು ಹೀಗೆ ಕುಯಿಲಾದ ಜಮೀನುಗಳು ಚಿತ್ರದುರ್ಗ, ಶಿವಮೊಗ್ಗ ತುಮಕೂರು, ಕೋಲಾರ್ ಡಿಸ್ಟ್ರಿಕ್ಟುಗಳಲ್ಲಿ ಹೆಚ್ಚಾಗಿಯೂ, ಹಾಸನದಲ್ಲಿ ಕಡಮೆಯಾಗಿಯೂ ಇದ್ದವು ಕೆರೆಗಳ ಕೆಳಗೆ ಫಸಲಾದ ಜಮೀನುಗಳು ೪೫,೧೨೧ ಎಕರೆಯಷ್ಟಾಗುವುದು ಇದರಲ್ಲಿ ಅರ್ಧಭಾಗ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಸೇರಿರುತ್ತದೆ ಈ ಸಾಲಿನಲ್ಲಿ ಬೇರೆ ಬೇರೆ ಬೆಳೆಗಳನ್ನಿಟ್ಟ ಜಮೀನುಗಳು ಎಷ್ಟೆಂದರೆ — ರಾಗಿ—೩,೩೨೬ ಎಕರೆಗಳು, ಭತ್ತ—೫೩,೮೯೪, ಹುರುಳಿ—೩೧,೯೮೯, ಕಂಬು—೨೦,೯೦೨, ಕಾಳು ಮುಂತಾದ ಆಹಾರಧಾನ್ಯಗಳು—೯೮,೬೮೪, ಚಿಲ್ಲರೆ ಆಹಾರಪದಾರ್ಥಗಳು—೨೦,೭೯೩ ಎಕರೆಗಳು ಆದರೆ ಎಣ್ಣೆಬೀಜಗಳ ಬೆಳೆಯು ೧೭,೪೮೯ ಎಕರೆಗಳಷ್ಟು, ಮಸಾಲೆ ಪದಾರ್ಥಗಳ ಬೆಳೆಗಳು ೧೨,೪೨೧ ಎಕರೆಗಳಷ್ಟೂ, ಜೋಳದ ಬೆಳೆಯು ೧೦,೬೩೭ ಎಕರೆಗಳಷ್ಟು ಹಿಂದಿನ ಸಾಲಿಗಿಂತ ಕಡಮೆಯಾಗಿರುವುದು ಬೇರೆ ಬೇರೆ ಸೆಸ್ಸುಗಳನ್ನು ಬಿಟ್ಟು ಕಂದಾಯವನ್ನು ಹಂಚಿಹಾಕಿದರೆ ಈ ಸಂಸ್ಥಾನದ ಪ್ರತಿ ಒಬ್ಬ ಪ್ರಜೆಗೂ ರೂ. ೧-೧-೨-೯ ಪೈ ಕಂದಾಯ ಕೊಟ್ಟಂತಾಗುವುದು; ಅಂದರೆ ಹಿಂದಿನ ಸಾಲಿನ ದರಕ್ಕಿಂತ ೫ ಪೈ ಹೆಚ್ಚಾಗಿದೆ. ಹಿಡುವಳಿದಾರರ ೧೯೦೫—೦೬ ನೇ ಸಾಲಿನಲ್ಲಿ ೧೦,೨೧,೬೬೮ ಇದ್ದದ್ದು ೧೯೦೬—೦೭ ನೇ ಸಾಲಿನಲ್ಲಿ ೧೦,೪೭,೯೫೮ ಕ್ಕೆ ಹೆಚ್ಚಿತು ಅಂದರೆ ಅವರ ಹಿಡುವಳಿಯಲ್ಲಿದ್ದ ಜಮೀನು ೬೮,೧೨,೭೨೧ ಎಕರೆ ಇದ್ದದ್ದು ಈ ಸಾಲಿನಲ್ಲಿ ೬೮,೪೩,೫೨೫ ಎಕರೆಗೆ ಹೆಚ್ಚಿರುತ್ತದೆ. ಪ್ರತಿ ಒಬ್ಬ ಹಿಡುವಳಿದಾರನೂ ಸರಾಸರಿ ೬॥ ಎಕರೆ ಜಮೀನನ್ನು ಪಡೆದಿದ್ದನೆಂದೂ, ಅದಕ್ಕೆ ಸುಮಾರು ೮ ರೂಪಾಯಿ ಕಂದಾಯ ಬೀಳುವುದೆಂದೂ ತಿಳಿಯುವುದು ಮತ್ತು ಸಿಂಕೋನಾ (ಕ್ವೈನಾ ಎಂಬ ಜ್ವರದ ಪುಡಿ ತಯಾರಾಗುವ) ಗಿಡಗಳು ೧೧೨ ಎಕರೆಗಳಲ್ಲಿ ಮೊದಲಿನಂತೆ ಬೆಳೆಯುತ್ತಿದ್ದವು ೧೯೦೬—೦೭ ನೇ ಸಾಲಿನಲ್ಲಿ ತರೀ ಫಸಲು ಹುಲುಸಾದ್ದರಿಂದಲೂ, ಹೆಚ್ಚು ಜಮೀನು ತರಿಯಾದ್ದರಿಂದಲೂ ಹಿಂದಿನ ಸಾಲಿಗಿಂತ ೭ ಲಕ್ಷದ ೪೬ ಸಾವಿರ ಖಂಡಿ ಭತ್ತ ಬೆಳೆಯಲ್ಪಟ್ಟಿರುತ್ತದೆ. ಸರಾಸರಿ

ಕಳೆದ ವಾರ ಕ್ಷಾಮ ಪ್ರದೇಶಗಳಿಂದ ತಿಳಿದು ಬರುವುದೇನೆಂದರೆ— ಸಂಯುಕ್ತ ಪ್ರಭುತ್ವಗಳಲ್ಲಿ ಕ್ಷಾಮ ಪೀಡಿತರಲ್ಲಿ ಈ ವಾರ ಇನ್ನೂ ೩೦,೦೦೦ ಜನರು ರಿಲೀಫ್ ಕೆಲಸಗಳನ್ನು ಬಿಟ್ಟು ತೆರಳಿದರು ಬಂಗಾಳಾ ಮಧ್ಯಪ್ರಾಂತ್ಯಗಳೆಲ್ಲ ಸ್ವಲ್ಪ ಸ್ವಲ್ಪ ಕ್ಷಾಮ ಭೀತಿ ಕಡಿಮೆಯಾಗಿದೆ. ಬುಂದಲ್ ಖಂಡದಲ್ಲಿ ಮಳೆ ಬಿಟ್ಟರೆ ಸಾಕು ಎನ್ನುವಂತಾಯಿತು. ಕಾಶಿ, ಗೋರಖ್‌ಪುರ, ಅಯೋಧ್ಯೆ, ಈ ಪ್ರಾಂತ್ಯಗಳಿಗೆ ಇನ್ನೂ ಸ್ವಲ್ಪ ಮಳೆ ಬೇಕಾಗಿರುವುದು. ಆಹಾರ ದಿನಸುಗಳ ಧಾರಣೆಯು ಇನ್ನೂ ತಕ್ಕಮಟ್ಟಿಗೆ ಇಳಿಯಲಿಲ್ಲ.

❖❖❖

ಅಲಿಘಡದಲ್ಲಿ ಫಸಲ್ ಹಸನ್ ಎಂಬ ಮಹಮ್ಮದೀಯನು "ಉರ್ದು ಇ ಮುಅಲ್ಲ" ಎಂಬ ಮಾಸಿಕ ಪತ್ರವನ್ನು ನಡಿಸುತ್ತಾ ಇದ್ದನು, ಕಳೆದ ಏಪ್ರಿಲ್ ತಿಂಗಳ ಸಂಚಿಕೆಯಲ್ಲಿ ಇಂಗ್ಲಿಷರು ಈಜಿಪ್ಟಿನಲ್ಲಿ ಇಂಗ್ಲಿಷ್ ವಿದ್ಯೆಯನ್ನು ಕಲಿಸುವ ವಿಚಾರವನ್ನು ಕುರಿತು ಒಂದು ವಾರ್ತೆಯನ್ನು ಬರೆದಿದ್ದನು. ಇದಕ್ಕಾಗಿ ಆತನನ್ನು ಹಿಡಿದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ, ಆತನಿಗೆ ಎರಡು ವರುಷ ಕಠಿಣ ಸಜಾವನ್ನೂ ೫೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ. ಆ ಮಹಮ್ಮದೀಯನು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವನು.

❖❖❖

ಇಂಡಸ್ (ಸಿಂಧು) ನದಿಯಲ್ಲಿ ಡೇರಾಘಾಜೀಖಾನ್ ಎಂಬ ಪಟ್ಟಣದ ಬಳಿ ವಿಶೇಷ ಪ್ರವಾಹ ಬಂದಿರುತ್ತದೆ. ಊರೊಳಗೆ ನೀರು ನುಗ್ಗಿ ಬರದಂತೆ ಸರ್ಕಾರದವರು ಎತ್ತರವಾದ ಅಡ್ಡಕಟ್ಟೆಗಳನ್ನು ಹಾಕಿಸಿದ್ದಾಗ್ಯೂ ಕೆಲವು ಕಡೆ ಈ ಕಟ್ಟೆಯನ್ನು ಪ್ರವಾಹವು ಕೊಚ್ಚಿಬಿಟ್ಟದೆ ಈಗ ನೀರು ಮನೆಗಳಿಗೆ ನುಗ್ಗಿ ಸುಮಾರು ೧೫೦ ಬಿದ್ದುಹೋದವು. ಪತ್ತೆ ರಕ್ತ ಒತ್ತಿಬಂದಿರುವುದು ಇನ್ನೂ ಮಳೆ ಸುರಿಯುತ್ತಿರುವ ಕಾರಣ ನೀರಿನ ಮಟ್ಟ ಪ್ರವಾಹ ವಿಶೇಷ ಹೆಚ್ಚಲು ಅನುಮಾನ ಕಾಣುವದಿಲ್ಲ. ಅದರಿಂದ ಪ್ರಜೆಗಳು ಮನೆಮಠಗಳನ್ನು ಬಿಟ್ಟು ದಿಣ್ಣೆಯ ಮೇಲೆ ಹೋಗಿ ಸೇರಿಕೊಳ್ಳುತ್ತಿದ್ದಾರೆ

❖❖❖

ಕಳೆದ ಬುಧವಾರ ಬೆಳಗಿನ ಝಾವ ೩ ಗಂಟೆಯಲ್ಲಿ ಬೊಂಬಾಯಿ ಪಟ್ಟಣದ "ಅಕ್ಬರಿ ಸೌದಾಗರ್" ಎಂಬ ಪತ್ರಿಕೆಯ ಆಫೀಸಿನಲ್ಲಿ ಆ ಪತ್ರಿಕೆಯನ್ನು ಯಂತ್ರದ ಮೇಲಿಟ್ಟು ಅಚ್ಚು ಮಾಡುವಾಗ್ಗೆ ದೀಪಗಳು ಒಡೆದು ಹಾರಿ ಕಟ್ಟಡಕ್ಕೆ ಬೆಂಕಿ ಹತ್ತಿಕೊಂಡು ಉರಿಯಿತು. ಯಂತ್ರಗಳೂ ಮೊಳೆಗಳೂ (ಅಕ್ಷರಗಳು) ಮಾತ್ರ ಉಳಿದುಕೊಂಡವು. ಆ ದಿನ ಪತ್ರಿಕೆಯನ್ನು ಪ್ರಕಟಿಸುವುದಕ್ಕಾಗಲಿಲ್ಲ. ಮೆ॥ ಎಚ್. ಆರ್. ಚಟ್‌ಗರ್ ಎಂಬಾತನು ಈ ಬೆಂಕಿಯ ಅನಾಹುತದಿಂದ ಕಟ್ಟಡವು ಹಾಳಾದದ್ದಲ್ಲದೆ ಸುಮಾರು ೩೫,೦೦೦ ರೂಪಾಯಿ ನಷ್ಟವಾಗಿರುತ್ತದೆ ಎಂದು ತಿಳಿಸುತ್ತಾನೆ.

❖❖❖

ಪಂಡರಾಪುರದಲ್ಲಿ ಕಳೆದ ವಾರ ಒಂದು ಗುಂಪಿನ ಜನರು ಸೇರಿಕೊಂಡು ಪಾದ್ರಿಗಳ ಸ್ತ್ರೀಯರು ವಾಸಮಾಡುವ ಬಂಗಲೆಗೆ ನುಗ್ಗಿ ಕಲ್ಲು ಎಸೆಯುತ್ತಾ ಬಂದರು. ಮಿಸ್ ಸ್ಟೀಲ್ ಎಂಬಾಕೆಯು ಆ ಜನರನ್ನು ಸಮಾಧಾನಪಡಿಸುವುದಕ್ಕೆಂದು ಹೊರಕ್ಕೆ ಬಂದಾಗ ಜನರು ಆಕೆಯ ಮೇಲೆ ಕಲ್ಲು ತೂರಿದರು. ದೊಣ್ಣೆಗಳಿಂದ ಬಡಿದು ನೂಕಿದರು. ಆಕೆ ಸ್ಮರಣೆ ತಪ್ಪಿ ಬಿದ್ದುಹೋದಾಗ ಜನರು ಪ್ರಾಣ ಹೋಯಿತೆಂದು ಊಹಿಸಿ, ಎಲ್ಲಾ ಚದರಿಹೋದರು. ಅಷ್ಟರಲ್ಲೇ ಅಧಿಕಾರಿಗಳೆಲ್ಲಾ ಅಲ್ಲಿಗೆ ಹೋಗಿ, ಆ ದೊಂಬಿ ಜನರಲ್ಲಿ ಕೆಲವರನ್ನು ದಸ್ತಗಿರಿ ಮಾಡಿರುತ್ತಾರೆ. ಆ ಪೈಕಿ ಒಬ್ಬನು ತಾನು ಆ ಗುಂಪಿನಲ್ಲಿ ಇದ್ದದ್ದೂ, ಆ ಕೃತ್ಯ ನಡಿಸಿದ್ದೂ ಉಂಟೆಂದು ಒಪ್ಪಿಕೊಂಡಿರುತ್ತಾನೆ.

❖❖❖

ಬಂಗಾಳದಲ್ಲಿ ರಾಂಪುರ್ ಬೋಲಿಯಾ ಪಟ್ಟಣದಿಂದ ಸಾರ್ದಲಿಂಗಿಗೆ ಅಂಚೆ ಬಸ್ತಿಗಳನ್ನು ಸಾಗಿಸಿಕೊಂಡು ಹೋಗುತ್ತಿದ್ದ ಮೇಯಿಲ್ ಟಾಂಗಾ ಗಾಡಿಗೆ ನವಾಬ್ ಎಂಬ ಸ್ಟೀಮರ್ ಬಳಿ ಕಳ್ಳರ ಗುಂಪು ನುಗ್ಗಿ ಕಳೆದ ಸೋಮವಾರ ಗಾಡಿ ಹೊಡೆಯುವವನನ್ನೂ ಇಬ್ಬರು ಪ್ರಯಾಣಿಕರನ್ನೂ ಹೊಡೆದು ಕೆಡಹಿದರು. ಅಂಚೆ ಬಸ್ತಿಗಳನ್ನು ಒಡೆದು ಅವುಗಳಲ್ಲಿದ್ದ ರಿಜಿಸ್ಟರ್ ಕಾಗದಗಳನ್ನೂ ಭಾಂಗಿಗಳನ್ನೂ ಹಣವನ್ನೂ ಅಪಹರಿಸಿಕೊಂಡು ಹೋದರೆಂದು ಕಲ್ಕತ್ತೆಯಿಂದ ತಂತೀ ವರ್ತಮಾನ ಬಂದಿದೆ. ಅದೇ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಮೂರನೆಯವನು ಹ್ಯಾಗೋ ಆ ಕಳ್ಳರ ಕೈಗೆ ಸಿಕ್ಕದೆ ತಪ್ಪಿಸಿಕೊಂಡು ಬಂದು, ನಡೆದ ವೃತ್ತಾಂತವನ್ನು ಕಲ್ಕತ್ತೆಯಲ್ಲಿ ತಿಳಿಸಿದನು. ಇದುವರೆಗೆ ಆ ಕೊಳ್ಳೆಗಾರರು ಯಾರೆಂಬುವದು ಪತ್ತೆಯಾಗಲಿಲ್ಲ.

❖❖❖

ಕಲ್ಕತ್ತೆಯ ಹತ್ತಿರ ಸೋದಪು ಎಂಬ ಊರಿನಲ್ಲಿ ಸುಮಾರು ಹತ್ತು ವರುಷಗಳಿಂದಲೂ ದೇಶೀಯ ವರ್ತಕರು ಒಂದು ಗಾಜಿನ ಕಾರ್ಖಾನೆಯನ್ನು ಇಟ್ಟು ನಡಿಸುತ್ತಾ ಬಂದರು. ಮೊದಲು ನಾಲ್ಕು ವರುಷಗಳವರೆಗೆ ಷೇರುದಾರರಿಗೆ ಒಂದು ಕಾಸಾದರೂ ಬಡ್ಡಿ ಸಿಕ್ಕಲಿಲ್ಲ. ಉಳಿದ ಐದು ವರುಷಗಳಿಗೂ ಒಟ್ಟು ಶೇಕಡಾ ವರುಷಕ್ಕೆ ೧೮॥ ರೂಪಾಯಿನಂತೆ ಬಡ್ಡಿ ಪಾವತಿಮಾಡಿದರು. ಕಳೆದ ವರುಷ ಯೂರೋಪ್ಯನ್ನರು ಅಲ್ಲಿ ನಿಂತು ಕಾರ್ಖಾನೆಯನ್ನು ನಡಿಸಿ ಎಲ್ಲಾ ಕ್ರಮಪಡಿಸಿದ್ದರಿಂದ ಒಂದು ವರುಷಕ್ಕೆ ಶೇಕಡಾ ೧೦ ರೂಪಾಯಿನಂತೆ ಷೇರುದಾರರಿಗೆ ಬಡ್ಡಿ ಪಾವತಿಮಾಡಿರುತ್ತಾರೆ. ಇದಲ್ಲದೆ ಈ ವರುಷದ ಹುಟ್ಟುವಳಿಯಲ್ಲಿ ಕೆಲವು ಹೊಸ ಏರ್ಪಾಡುಗಳನ್ನು ಮಾಡಿ ಕಾರ್ಖಾನೆಯನ್ನು ಅಭಿವೃದ್ಧಿಪಡಿಸುವುದಕ್ಕೂ ಹಣವನ್ನು ತೆಗೆದಿಟ್ಟಿದ್ದಾರೆ. ಕಳೆದ ಜೂನ್ ಗುರ್ರ್ಗೆ ಆಖೈರಾದ ಆರು ತಿಂಗಳಲ್ಲಿ ಈ ಕಾರ್ಖಾನೆಯ ಹುಟ್ಟುವಳಿಯು ಖರ್ಚು ಹೋಗಿ ೩೩,೧೧೩ ರೂಪಾಯಿಗಳೆಂದು ತಿಳಿಯುವುದು. ದೇಶೀಯ ಜನರ ಚಟುವಟಿಕೆಗೂ ಯೂರೋಪ್ಯನ್ನರ ಸಾಹಸಕ್ಕೂ ಇರುವ ವ್ಯತ್ಯಾಸವು ಇದರಿಂದ ಸ್ವಲ್ಪ ಮಟ್ಟಿಗಾದರೂ ಗೊತ್ತಾದೀತು

ಪೂನಾ ಪಟ್ಟಣದಲ್ಲಿ ಪ್ರಕಟನಾಗುವ "ಮರಾಠಾ" ಎಂಬ ಇಂಗ್ಲಿಷ್ ವಾರ ಪತ್ರಿಕೆಯು ತಿಳಿಸುವುದೇನೆಂದರೆ—ಮೆ॥ ತಿಲಕರವರು ಅಹಮದಾಬಾದಿನಲ್ಲಿರುವ ಸಬರ್ಮತಿ ಜೈಲ್‌ಖಾನೆಯೊಳಗೆ ಇರುತ್ತಾರೆ. ಜುಲೈ ೨೯ ರಲ್ಲಿ ಒಬ್ಬ ಬಂಧುವೂ ಅವರ ಅಳಿಯನೂ ಅಲ್ಲಿಗೆ ಹೋಗಿ ಜೈಲ್ ಅಧಿಕಾರಿಗಳ ಅಪ್ಪಣೆಯನ್ನು ಪಡೆದು, ಬಂದೀಖಾನೆಯಲ್ಲಿ ಮೆ॥ ತಿಲಕರ ಕೂಡ ಮಾತನಾಡಿದರು. ಮೆ॥ ತಿಲಕರು ತಮ್ಮ ಮೊಕದ್ದಮೆಯನ್ನು ಅಪೀಲ್ ಮಾಡುವ ವಿಷಯದಲ್ಲಿ ಅವರಿಗೆ ಕೆಲವು ಸೂಚನೆಗಳನ್ನು ಹೇಳಿಕೊಟ್ಟರು. ಆದರೆ ಅವರ ಗೃಹಕೃತ್ಯ, ಪ್ರೆಸ್ ಆಫೀಸು, ಕಾಗದ ಪತ್ರಗಳು, ಈ ಮೊದಲಾದ ವಿಷಯಗಳನ್ನು ಕುರಿತು ಮೆ॥ ತಿಲಕರು ಅವರ ಕೂಡ ಮಾತನಾಡುವುದಕ್ಕೆ ಸಮಯವಿರಲಿಲ್ಲ. ಗವರ್ನಮೆಂಟಿನವರು ತಮ್ಮನ್ನು ಎಲ್ಲಿಡುತ್ತಾರೆಂಬುವುದು ಮೆ॥ ತಿಲಕರಿಗೆ ತಿಳಿಯದು. ಈಗ ಅವರನ್ನು ಸಾಮಾನ್ಯ ಖೈದಿಯಂತೆ ಇಟ್ಟುಕೊಂಡಿದ್ದಾರೆ. ಬಂದೀಖಾನೆಗೆ ಸಾಮಾನ್ಯವಾಗಿ ಹಾಕುವ ಆಹಾರವನ್ನು ಮೆ॥ ತಿಲಕರು ತಿನ್ನುವುದಿಲ್ಲವೆಂದು ನಿರಸ್ಕರಿಸಿದ್ದರಿಂದ ಅವರಿಗೆ ಆಸ್ಪತ್ರೆಯಲ್ಲಿ ರೋಗಿಗಳಿಗೆ ಕೊಡುವಂಥಾ ಉತ್ತಮತರದ ಆಹಾರ ಪದಾರ್ಥಗಳನ್ನು ಕೊಡಿಸುತ್ತಿದ್ದಾರೆ ಎಂಬುವುದೇ. ಮೆ॥ ತಿಲಕರ ಪಕ್ಷದವರು ಅವರ ಮೊಕದ್ದಮೆಯ ಅಪೀಲನ್ನು ವಿಲಾಯತಿಯಲ್ಲಿರುವ ಪ್ರಿವಿ ಕೌನ್ಸಿಲ್ ಎಂಬ ಕೋರ್ಟಿನಲ್ಲಿ ದಾಖಲ್ ಮಾಡಿ ನಡಿಸುವುದಕ್ಕೋಸ್ಕರ ಪ್ರಯತ್ನ ಪಡುತ್ತಿದ್ದಾರೆ. ಹೀಗೆ ಅಪೀಲ್ ಮಾಡಿಕೊಳ್ಳಬಹುದೆನ್ನುವ ವಿಷಯದಲ್ಲಿ ಬೊಂಬಾಯಿ ಹೈಕೋರ್ಟ್ ಜಡ್ಜಿಗಳು ಮೆ॥ ತಿಲಕರಿಗೆ ಅಪ್ಪಣೆ ಕೊಡಬೇಕಾಗಿದೆ. ಅವರ ಕಡೆಯವರು ಇದಕ್ಕೋಸ್ಕರ ಬೊಂಬಾಯಿ ಹೈಕೋರ್ಟಿಗೆ ಅರ್ಜಿ ಕೊಡುವುದರಲ್ಲಿದ್ದಾರೆ

ಬಹುದೇಶದ ವೃತ್ತಾಂತಗಳು.

ಕಳೆದ ವಾರ ರಾಜಧಾನಿಯಲ್ಲಿ ಎರಡು ಹೊಸದಾಗಿ ಪ್ಲೇಗ್ ಕಾಯಿಲೆಗಳನ್ನು ಸರ್ಕಾರದವರು ಕಂಡುಹಿಡಿದು, ಪ್ಲೇಗ್ ಕ್ಯಾಂಪಿಗೆ ಕಳುಹಿಸಿದರು

❖❖❖

ಚಾಮರಾಜನಗರದ ತಾಲ್ಲೂಕಿನಲ್ಲಿ ಶಿಕಾರಿಯನ್ನು ತೀರಿಸಿಕೊಂಡು ಮದರಾಸ್ ಗವರ್ನರವರು ಕಳೆದ ಗುರುವಾರ ವಾಪಸು ನೀಲಗಿರಿಗೆ ದಯಮಾಡಿದರು.

❖❖❖

ಮೆ॥ ಎಂ ಜಿ ಕೃಷ್ಣಸ್ವಾಮಿರಾಯರು ತಾ ೧೯ ಕ್ಕೆ ರಾಜಧಾನಿಗೆ ಬಂದು, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಕೆಲಸದ ಛಾರ್ಜನ್ನು ವಹಿಸಿಕೊಳ್ಳುವರೆಂದು ಕೇಳುತ್ತೇವೆ

❖❖❖

ಕಳೆದ ಬುಧವಾರ ಮೆ॥ ಎಂ. ಕಾಂತರಾಜೇ ಅರಸಿನವರು ನಂಜನಗೂಡು ರೆಸಿಡೆನ್ಸಿ ಬಂಗಲೆಗೆ ಅರಮನೆಯವರೆಲ್ಲರನ್ನೂ ಕರೆಸಿಕೊಂಡು ಒಂದು ಔತಣವನ್ನು ಮಾಡಿಸಿದರು. ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮೆ॥ ಡಿ. ದೇವರಾಜೇ ಅರಸಿನವರೂ ಬಂದಿದ್ದರೆಂದು ಕೇಳುತ್ತೇವೆ

❖❖❖

ಕಳೆದ ೮ ನೇ ತಾ ಶನಿವಾರ ಶ್ರೀಮನ್ಮಹಾರಾಜರವರಿಗೆ ರಾಜ್ಯಾಭಿಷೇಕವಾದ ದಿನವಾದ್ದರಿಂದ ರಾಜಧಾನಿಯಲ್ಲಿ ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು. ಮುಖ್ಯ ದೇವಸ್ಥಾನಗಳಲ್ಲಿ ಮಹಾರಾಜರವರ ಶ್ರೇಯಸ್ಸಿಗಾಗಿ ಪ್ರಾರ್ಥನೆಗಳೂ ಉತ್ಸವಗಳೂ ನಡೆದವು. ಸಾಯಂಕಾಲ ದೀಪೋತ್ಸವ ಮಾಡಲ್ಪಟ್ಟಿತು.

❖❖❖

ತೀರ್ಥಹಳ್ಳಿ ತಾಲ್ಲೂಕಿನ ಮಳೆಗೆರೆ ಮಠದ ಶ್ರೀ ಕೃಷ್ಣಾನಂದ ತೀರ್ಥ ಸ್ವಾಮಿಗಳವರು ಮೈಸೂರು ಸಂಸ್ಥಾನದೊಳಗೆ ಸಂಚಾರ ಮಾಡುವಾಗ್ಗೆ ಲೈಸೆನ್ಸು ಇಲ್ಲದೆ ೨ ಬಂದೂಕು, ೪ ಕತ್ತಿ, ೩ ದೊಡ್ಡ ಕತ್ತಿ, ೪ ಪಿಸ್ತೂಲು, ೮ ಬರ್ಜಿ, ಈ ಆಯುಧಗಳನ್ನು ಇಟ್ಟುಕೊಳ್ಳಬಹುದೆಂದು ಸರ್ಕಾರದವರು ರಿಯಾಯಿತಿ ತೋರಿಸಿರುತ್ತಾರೆ

❖❖❖

ನಗರ್ ತಾಲ್ಲೂಕಿನ ನೆಂಪನಕಟ್ಟೆ ಮಠದ ಶ್ರೀ ನರಸಿಂಹ ಭಾರತೀ ಸ್ವಾಮಿಗಳು ಮುಪ್ಪಿನ ದೆಸೆಯಲ್ಲಿರುವುದರಿಂದ ಮತ್ತಿಗೆ ಗ್ರಾಮದ ಗವಡ ರಾಮಭಟ್ಟರ ಕುಮಾರ ೧೩ ವರುಷದ ಮಹಾಬಲ ಭಟ್ಟರನ್ನು ತಮ್ಮ ಪೀಠಕ್ಕೆ ಉತ್ತರಾಧಿಕಾರಿಯನ್ನಾಗಿ ನೇಮಿಸಿಕೊಳ್ಳಬೇಕೆಂದು ಅಪೇಕ್ಷೆಪಟ್ಟದ್ದನ್ನು ಮೈಸೂರು ಗವರ್ನಮೆಂಟಿನವರು ಒಪ್ಪಿ, ಅದರಂತೆ ಸ್ಯಾಂಕ್ಷನ್ ಮಾಡಿರುತ್ತಾರೆ

❖❖❖

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಮೈಸೂರ್ ಮೈನ್ ಎಂಬ ಗಣಿಯಲ್ಲಿ ದೊಡ್ಡ ಅಧಿಕಾರವನ್ನು ಪಡೆದಿದ್ದ ವಿಂಟ್ಸರ್ ಪೇರ್ ಎಂಬೊಬ್ಬ ಯೂರೋಪ್ಯನನು ಗಣಿಯ ಬಾಬತು ೭,೦೦೦ ರೂಪಾಯಿನ ಚಿನ್ನವನ್ನು ಬಚ್ಚಿಟ್ಟುಕೊಂಡಿದ್ದದ್ದನ್ನು ಕಳೆದ ವಾರ ಪೋಲೀಸ್ ಸೂಪರಿಂಟೆಂಡರು ಪತ್ತೆ ಮಾಡಿದರು. ಮ್ಯಾಜಿಸ್ಟ್ರೇಟ್ ಮೆ॥ ಬೌರಿಂಗ್ ಯವರು ವಿಚಾರಣೆ ಮಾಡಿ, ಮದರಾಸ್ ಹೈಕೋರ್ಟ್ ಸೆಷನ್ಸ್ ವಿಚಾರಣೆಗೆ ಗುರಿಮಾಡಿ, ಅಪರಾಧಿಯನ್ನು ಅಲ್ಲಿಗೆ ರವಾನೆ ಮಾಡಿದರು

ಮೈಸೂರು ಗೆಜೆಟ್ ಸಂಗ್ರಹ.

ಮುಂದೆ ಹೇಳುವ ಮ್ಯಾಜಿಸ್ಟ್ರೇಟರಿಗೆ ಸಾಕ್ಷಿಗಳ ಹೇಳಿಕೆಯನ್ನು ಸ್ವಹಸ್ತ ಇಂಗ್ಲಿಷಿನಲ್ಲಿ ಬರೆದುಕೊಳ್ಳುವಂತೆ ಅಧಿಕಾರ ಕೊಡಲ್ಪಟ್ಟಿದೆ:—ಮೆ॥ ಗಳಾದ ಮಿರ್ ಹಂಜಾ ಹುಸೇನ್ ಯವರು (ಕೋಲಾರ), ನಗರದ ಸುಬ್ಬರಾಯರು (ಸಾಗರ) ಟಿ ತಂಬುಚೆಟ್ಟಿಯವರು (ಬೆಂಗಳೂರು), ಎ ವೇದಾಂತ ದೇಶಿಗಂ ಐಯಂಗಾರ್ರು (ಕೋಲಾರ), ಬಿ. ಎಸ್. ಕೃಷ್ಣಸ್ವಾಮಿ ಐಯಂಗಾರ್ರು (ಮೈಸೂರು)

ಬೆಂಗಳೂರು ಸಬ್ ಜಡ್ಜರಾದ ಮೆ॥ ಜೆ. ಎಚ್. ಭಾಭಾಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ವರುಷಗಳ ಸಂಬಳವಿಲ್ಲದ ರಜಾ ಕೊಟ್ಟಿದೆ

೧ನೇ ಕ್ಲಾಸ್ ಮುನ್ಸಿಫ್ ಮೆ॥ ಟಿ. ಆ ಬಿಯ್ಯರಾಮ ಐಯರವರನ್ನು ೨ನೇ ಕ್ಲಾಸ್ ಅ॥ ಕಮಿಷನರಾಗಿ ಬದಲಿ ನೇಮಿಸಿದೆ. ಇವರು ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಬೆಂಗಳೂರು ಸಬ್ ಜಡ್ಜರಾಗಿ ಕೆಲಸ ಮಾಡತಕ್ಕದ್ದು.

ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಮೈಸೂರು ಅಡ್ವೊಕೇಟ್ ಮೆ॥ ಬಿ. ರಂಗೈಯಂಗಾರ್ರು ಅದೇ ಕ್ಲಾಸಿನ ಮುನ್ಸಿಫರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಮುಂದೆ ಹೇಳುವ ಸಬ್ ರಿಜಿಸ್ಟ್ರಾರುಗಳ ವರ್ಗಾವರ್ಗಿ ಹುಕುಂ ಮಾಡಿದೆ.—ಎಚ್ ಪಿ. ಕೃಷ್ಣರಾಯರನ್ನು ವಿದ್ಯಾಭ್ಯಾಸದ ಇಲಾಖೆಗೆ ವರ್ಗಮಾಡಿದ್ದರಿಂದ ಕೆ ವೆಂಕಟಾಚಾರ್ರನ್ನು ೩ನೇ ಕ್ಲಾಸ್ ಸಬ್ ರಿಜಿಸ್ಟ್ರಾರಾಗಿ ಖಾಯಂ ಮಾಡಿದೆ, ಸಿ. ಕೃಷ್ಣಮೂರ್ತಿ ಶಾಸ್ತ್ರಿಗಳನ್ನು ಶಿವಮೊಗ್ಗೆಯಿಂದ ಹುಣಸೂರಿಗೆ ವರ್ಗಮಾಡಿದೆ, ಸುಬ್ಬರಾವ್ ವಿ. ಬಾಪತ್‌ಯವರು ಶಿವಮೊಗ್ಗೆಯ ಸಬ್ ರಿಜಿಸ್ಟ್ರಾರಾಗಿ ನೇಮಿಸಲ್ಪಟ್ಟಿದ್ದಾರೆ.

ಮುಂದೆ ಹೇಳುವ ಸಬ್ ರಿಜಿಸ್ಟ್ರಾರುಗಳನ್ನು ವರ್ಗಮಾಡಿದೆ:—ಎಂ. ವೆಂಕಟಾಚಲ ಐಯಂಗಾರ್ರು—ಯಡತೊರೆಯಿಂದ ಕಡೂರಿಗೆ; ಮಿರ್ ಕಾಸಿಂ ಅಲ್ಲಿಯವರು—ಕಡೂರಿನಿಂದ ಆನೇಕಲ್ಲಿಗೆ; ಟಿ ಆ ವೆಂಕಟಾಚಾರ್ರು—ಆನೇಕಲ್ಲಿನಿಂದ ಚಿತ್ರದುರ್ಗಕ್ಕೆ; ಟಿ ವಿ ಕೃಷ್ಣನವರು—ಚಿತ್ರದುರ್ಗದಿಂದ ಗುಂಡ್ಲುಪೇಟೆಗೆ; ಕೆ. ವೆಂಕಟಾಚಾರ್ರು—ಗುಂಡ್ಲುಪೇಟೆಯಿಂದ ಅರಕಲಗೂಡಿಗೆ, ಬಿ. ಶ್ರೀನಿವಾಸಾಚಾರ್ರು—ಅರಕಲಗೂಡಿನಿಂದ ಯಡತೊರೆಗೆ, ಸಿ. ಶ್ರೀನಿವಾಸಾಚಾರ್ರು—ಮಾಗಡಿಯಿಂದ ಟಿ.-ನರಸೀಪುರಕ್ಕೆ; ಎಸ್. ಎ. ಸುಬ್ರಹ್ಮಣ್ಯ ಐಯರವರು—ಟಿ.-ನರಸೀಪುರದಿಂದ ಅರಸೀಕೆರೆಗೆ, ಬಿ ಎಂ ರಂಗೈಯ ನಾಯ್ಡುರವರು—ಅರಸೀಕೆರೆಯಿಂದ ತೀರ್ಥಹಳ್ಳಿಗೆ; ಎಂ ಶ್ರೀನಿವಾಸ ಮೂರ್ತಿಯವರು—ತೀರ್ಥಹಳ್ಳಿಯಿಂದ ಮಾಗಡಿಗೆ

ಮುಂದೆ ಹೇಳುವ ಅ॥ ಕಮಿಷನರ ವರ್ಗಾವರ್ಗಿ ಹುಕುಂ ಮಾಡಿದೆ —ಮೆ॥ ಎ. ಕೃಷ್ಣಸ್ವಾಮಿ ಐಯಂಗಾರ್ರು—ಕಡೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿನಿಂದ ಹಾಸನದ ಡಿಸ್ಟ್ರಿಕ್ಟ್ ಸಕಲೇಶಪುರದ ಸಬ್ ಡಿವಿಜನ್ ಛಾರ್ಜಿಗೆ, ಮೆ॥ ಜಿ ಹನುಮಂತರಾಯರು—ಕಡೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ.

ಟಿ. ನರಸೀಪುರದ ತಾಲ್ಲೂಕ್ ಅಮಲ್ದಾರ್ ಮತ್ತು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮೆ॥ ಎನ್. ರಾಮರಾಯರು ಅಪರಾಧಿಗಳಿಗೆ ಛಡಿ ಸಜವನ್ನು ವಿಧಿಸುವ ಅಧಿಕಾರ ವಹಿಸಲ್ಪಟ್ಟಿದ್ದಾರೆ

ಅ॥ ಕಮಿಷನರ್ ಮೆ॥ ಎಂ ಲಕ್ಷ್ಮಣಶಾಸ್ತ್ರಿಗಳನ್ನು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಆಫೀಸಿಗೆ ಹೆಡ್ ಕ್ವಾರ್ಟರ್ ಅಸಿಸ್ಟೆಂಟ್ ಕೆಲಸಕ್ಕಾಗಿ ವರ್ಗಮಾಡಿದೆ

ಅ॥ ಕಮಿಷನರ್ ಮೆ॥ ಎಂ. ಶ್ರೀನಿವಾಸ ಮೂರ್ತಿಯವರು ತುಮಕೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿಕೊಂಡದರಿಂದ ಸೀನಿಯರ್ ಅ॥ ಕಮಿಷನರ್ ಮೆ॥ ಎ ಆರ್ ತ್ಯಾಗರಾಜ ಐಯರವರನ್ನು ತುಮಕೂರು ಸಬ್ ಡಿವಿಜನ್ನಿಗೆ ವರ್ಗಮಾಡಿದೆ

ಆಫೀಸಿಂಗ್ ಅಮಲ್ದಾರ್ ಮೆ॥ ಸಿ. ನಾರಾಯಣರಾಯರು ರಜದಿಂದ ವಾಪಸು ಬರುವ ತನಕ ಮೆ॥ ಎಂ. ನರಸಿಂಹೈಯನವರು ಹೊಳೇನರಸೀಪುರದ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಮೆ॥ ಆರ್. ಬೊಕೆಟ್‌ಯವರು ರಜದ ಮೇಲೆ ಹೋಗಿರುವುದರಿಂದ ಮೆ॥ ಎಲ್. ಎಚ್ ಬೈಸ್ವೆತ್‌ಯವರು ಗಣಿಗಳ ಇನ್ಸ್‌ಪೆಕ್ಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ನಾಲಗಳ ಡಿವಿಜನ್ ರದ್ದುಮಾಡಿದ ಕಾರಣ ಮುಂದೆ ಹೇಳುವ ಇಂಜಿನಿಯರುಗಳ ವರ್ಗಾವರ್ಗಿ ಹುಕುಂ ಮಾಡಿದೆ —

ಮೆ॥ ವಿ ಬಿಯ್ಯಾಸಾಮಿ ಐಯರವರನ್ನು ಚಿಂತಾಮಣಿ ಸಬ್ ಡಿವಿಜನ್ಗೆ; ಅ॥ ಇಂಜಿನಿಯರ್ ಮೆ॥ ಎಂ. ಎ ಅನಂದಾಳ್ವಾರ್ ಯವರನ್ನು ಮೈಸೂರು ಡಿಸೈನ್ ಆಫೀಸಿಗೆ, ಸಬ್ ಅ॥ ಇಂಜಿನಿಯರ್ ಮೆ॥ ಎನ್ ಅನಂದಸ್ವಾಮಿಯವರನ್ನು ಕೊಪ್ಪದ ಸಬ್ ಡಿವಿಜನ್ಗೆ

ಕುಣಿಗಲ್ ಸಬ್ ತಾಲ್ಲೂಕಿನ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮೆ॥ ಎ ರಾಜಾರಾಯರಿಗೆ ಕೊಟ್ಟಿದ್ದ ೩ ತಿಂಗಳ ದಿನಗಳ ಪ್ರಿವಿಲೇಜ್ ರಜವನ್ನು ರದ್ದುಮಾಡಿದೆ

ತಾಲ್ಲೂಕು ವರ್ತಮಾನಗಳು.

ದೇವನಹಳ್ಳಿ.—ಬಿರ್ರನೆ ಕಷ್ಟ ನಾಟಿ ಆಗಿ ರೈತರು ಬಿತ್ತನೆ ಮಾಡುತ್ತಾ ಬಂದಿರುತ್ತಾರೆ. ಕೆರೆಗಳಿಗೆ ನೀರು ಬರುವಷ್ಟು ಮಳೆ ಇನ್ನೂ ಆಗಲಿಲ್ಲ. ರಾಗಿ ರೂಪಾಯಿಗೆ ೧೨ ಸೇರು, ಅಕ್ಕಿ ೬ ಸೇರು ಮಾರುತ್ತಿದೆ. ಕೆಲವು ಸಮಯಗಳಲ್ಲಿ ರಾಗಿ ಸಿಕ್ಕುವುದೇ ಕಷ್ಟವಾಗುತ್ತದೆ, ಬಡವರು ಜೀವನ ಮಾಡುವುದು ಬಹಳ ಕಷ್ಟ. ಸಾಧಾರಣವಾಗಿ ಬಡವರಿಗೆ ಒಪ್ಪೊತ್ತಿನ ಊಟವೇ ಎಂದು ಹೇಳಿದರೂ ಅದೂ ಕಷ್ಟಕರವಾಗಿದೆ.—ಸಂತೆಯಲ್ಲಿ ಬಹು ಹೀನಸ್ಥಿತಿಯಲ್ಲಿ ನಡೆಯುತ್ತದೆ ಈ ಗೋಳಾಟವನ್ನು ಈ ವರಿಗೂ ವಿಚಾರಿಸುವವರು ಯಾರೂ ಇಲ್ಲದೆ ಜನಗಳಿಗೆ ಚಿಂತೆಗೆ ಕಾರಣವಾಗಿದೆ. ಯಾವ ಬಾಬಿಗೆ ಸುಂಕ ಕೊಡಬೇಕೋ, ಯಾವ ಬಾಬಿಗೆ ಸುಂಕ ಇಲ್ಲವೋ ಸಂತೆಯಲ್ಲಿ ಯಾರಿಗೂ ತಿಳಿಯದು. ಮೂರು ದುಡ್ಡಿನ ವ್ಯಾಪಾರ ಒಬ್ಬನು ತಂದರೆ ಒಂದು ರೂಪಾಯಿ ಸುಂಕ ವಸೂಲಿ ಮಾಡುತ್ತಾರಂತೆ. ಅವನು ತಿರಿಗಿ ಪರುಷವೆಲ್ಲಾ ಸಂತೆಗೆ ವ್ಯಾಪಾರ ತಾರದಿದ್ದರೂ ಚಿಂತೆಯಿಲ್ಲ, ಸುಂಕ ಕೊಟ್ಟೇ ಹೋಗಬೇಕು. ಈ ಕಾಲವು ಪ್ರಜೆಗಳು ಅಲ್ಪ ಸ್ವಲ್ಪ ಕಾಯಿಪಲ್ಯ ಬೆಳೆದುಕೊಳ್ಳುವ ಕಾಲವಾದ್ದರಿಂದ ಸರಕಾರದವರು ಈ ಸುಂಕದ ವಿಚಾರವನ್ನು ಕ್ರಮಪಡಿಸಿ, ಯಾವ ಬಾಬಿಗೆ ಸುಂಕ ಕೊಡಬೇಕೆಂಬುವದನ್ನು ಪ್ರಜೆಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸಿದರೆ ಹಳ್ಳಿಗಳ ಜನರು ತಮ್ಮ ಸಾಮಾನನ್ನು ಸಂತೆಗೆ ತರಲು ಧೈರ್ಯ

ಗೀಂಟಾರು, ಮತ್ತು ಸಂತೆಯೂ ಈಗಿನ ಹೀನಸ್ಥಿತಿಯಿಂದ ಉತ್ತಮ ಸ್ಥಿತಿಗೆ ಬಂದೀತು ಎನ್ನುವದಕ್ಕೆ ಸಂದೇಹವಿಲ್ಲ.—ಒಂದು ಭಾರಿ ಕಳ್ಳತನ ನಡೆದು ೫—೬ ತಿಂಗಳಾಯಿತು ಈ ಊರು ಪೋಲೀಸ್ ಇನ್ಸ್‌ಪೆಕ್ಟರವರು ಬಹು ಪ್ರಯತ್ನದಿಂದ ಪತ್ತೆ ಮಾಡಿ, ವಿಚಾರಣೆಗೆ ಗುರಿಮಾಡಿದ್ದರು. ಈ ವರೆವಿಗೂ ಅದರ ತೀರ್ಮಾನವಿಲ್ಲದೆ ಇರುವದಕ್ಕೆ ಏನು ಕಾರಣವೋ ತಿಳಿಯದೆ ಇರುತ್ತದೆ.

ತಿಪ್ಟೂರು.—ಇಲ್ಲಿ ಮೂರು ತಿಂಗಳುಗಳಿಂದಲೂ ಸರಿಯಾದ ಮಳೆ ಇಲ್ಲ, ಒಂದು ಹದವಾದರೂ ಬರಲಿಲ್ಲ. ರೈತರು ಇನ್ನೂ ರಾಗಿ ಬಿತ್ತಿಲ್ಲ. ಭಾವಿಗಳಲ್ಲಿ ನೀರಿಲ್ಲ. ಧಾರಣೆಮಾತ್ರ ಚಾಸ್ತಿಯಾಗಿದೆ.—ಈಗ ಇಲ್ಲಿನ ಅಮಲ್ದಾರ್ ಮೆ॥ ಮಹಮ್ಮದ್ ಅಬ್ದುಲ್ಲಾ ಷರೀಫ್ ಸಾಹೇಬರವರು ಇಲ್ಲಿಗೆ ಬಂದಲಾಗಾಯಿತು ಪ್ರಜಾ ಅನುರಾಗಿಗಳಾಗಿ ತೋರಿಬರುವದಕ್ಕೆ ಎಲ್ಲೆಲ್ಲಿಯೂ ಜನಗಳ ಬಾಯಿಯಿಂದ ಹೊರಡುವ ಮಾತುಗಳೇ ಸಾಕ್ಷಿಗಳಾಗಿವೆ.—ಇಲ್ಲಿನ ಮ್ಯುನಿಸಿಪಾಲಿಟಿ ಚರಂಡಿಗಳು ಬಹಳ ಗಲೀಜಾಗಿಯೂ ಬಚ್ಚಲು ನೀರು ಸರಿಯಾಗಿ ಹೋಗದೆ ಇದ್ದ ಸ್ಥಳಗಳಲ್ಲಿ ಸರಿಯಾದ ಓಟವನ್ನು ಇರಿಸಿ ಅಲ್ಲಲ್ಲಿ ಚರಂಡಿಗಳನ್ನು ತೋಡಿಸಿ ಪಾಕೀಜು ಮಾಡಿಸುತ್ತಾರೆ. ಈಗ ಇಲ್ಲಿನ ಪಟೇಲರಾದ ಮೆ॥ ನಂಜೇಗೌಡರಿಗೆ ಅಮಲ್ದಾರರು ಮ್ಯುನಿಸಿಪಾಲಿಟಿ ಮೇಲ್ವಿಚಾರಣೆಯನ್ನು ಕೊಟ್ಟಲಾಗಾಯಿತು ಟವುನಿನಲ್ಲಿ ಎಲ್ಲಿ ನೋಡಿದರೂ ಪಾಕೀಜಾಗಿದೆ. ಆದರೆ ಮೊಹಸಿನಕಾಯಿಬೀದಿ ಲಾಂದ್ರ ಹಚ್ಚುವದಿಲ್ಲ.—ಇಲ್ಲಿ ಬಹಳ ದಿವಸಗಳಿಂದಲೂ ಮ್ಯುನಿಸಿಪಾಲಿಟಿಗೆ ಹೊಗೆಸೊಪ್ಪಿನ ಸುಂಕವು ಕಮ್ಮಿಯಾಗಿಯೂ, ಹೊಗೆಸೊಪ್ಪಿನ ಮಾರಾಟ ಜಾಸ್ತಿಯಾಗಿಯೂ ಇತ್ತು. ಆದರೆ ಗವರ್ನಮೆಂಟಿಗೆ ಹೀಗೆ ನಷ್ಟವಾಗುತ್ತಿದ್ದಾಗ್ಯೂ ಯಾರೂ ನಿಗಾ ಕೊಡದೆ ಇದ್ದರು. ಈಗಿನ ಅಮಲ್ದಾರರು ಕಸಬಾ ಪಟೇಲರ ಮುಖಾಂತ್ರ ಹಿಡಿಸಿ ತಪ್ಪಿತಸ್ಥರಿಗೆ ಜುಲ್ಮಾನೆಯಾಯಿತು ಎಂದು ಕೇಳುತ್ತೇನೆ. ಇನ್ನು ಮುಂದೆ ಇಂಥಾ ಕೃತ್ಯ ನಡಿಸುವವರಿಗೆ ಎಚ್ಚರಿಕೆಯಾಯಿತು.—ಇನ್ನು ಸುಮಾರು ೮—೧೦ ದಿನಗಳಲ್ಲಿ ಇಲ್ಲಿಗೆ ಶ್ರೀಮಾನ್ ನಿರಂಜನ ಜಗದ್ಗುರು ಮುರುಘರಾಜೇಂದ್ರ ಸ್ವಾಮಿಗಳ ಸವಾರಿಯು ದಯಮಾಡಿಸುವದರಿಂದ ಇಲ್ಲಿನ ಕಸಬಾ ಪಟೇಲ್ ನಂಜೇಗೌಡರೂ, ಸಾಹುಕಾರ್ ಮೆ॥ ಕೊಟ್ಟೂರಯ್ಯನವರೂ, ಉರುದ್ರಾಂಡೆ ಮಲ್ಲೇಶಪ್ಪನವರೂ, ಪಲ್ಲಾಪಟ್ಟಿ ಚನ್ನವೀರಪ್ಪನವರೂ, ಪಾಟಿನ ಬಸವಣ್ಣನವರೂ, ಗ॥ ಗಿರಿಯಪ್ಪನವರೂ ಇನ್ನೂ ಕೆಲವರು ಆತುರದಿಂದ ಚಪ್ಪರ ನಗ್ಗರ ಸಲಕರಣೆಗಳನ್ನು ಮಾಡಿಸುತ್ತ ಇದ್ದಾರೆ. ಗುರುಗಳ ದರ್ಶನಕ್ಕಾಗಿ ಅನೇಕರು ಬೇರೆ ಬೇರೆ ಸ್ಥಳಗಳಿಂದ ಬರುತ್ತಾರೆಂಬುವದಕ್ಕೆ ಯಾವ ಸಂದೇಹವಿಲ್ಲ. ಆದರೆ ಅವರುಗಳಿಗೆ ಅಶನ ಶಯನ ಮುಂತಾದವುಗಳಿಗೆ ಅನಾನುಕೂಲವಾಗದಂತೆ ಮೇಲ್ಕಂಡವರು ತಕ್ಕ ಏರ್ಪಾಡು ಮಾಡ್ಯಾರೆಂದು ನಂಬಿದೇನೆ.

ಸಿರಾ.—ಕಳೆದ ಸಾಲಿನ ಡಿಸೆಂಬರ್ ಅಂತ್ಯಭಾಗದಲ್ಲಿ ದಿವಾನ್ ಸಾಹೇಬರವರು ಇಲ್ಲಿಗೆ ದಯಮಾಡಿಸಿದ್ದಾಗ್ಯೆ ಇಲ್ಲಿನ ಸಂತೆಯನ್ನು ಆಸ್ಪತ್ರೆ ಬಳಿಯಲ್ಲಿ ಇಡಿಸಬೇಕೆಂತಲೂ, ಇದನ್ನು ನಡಿಸಿಕೊಡುವದಕ್ಕೆ ಆಗದೆಹೋದ ಪಕ್ಷಕ್ಕೆ ಪೋಲೀಸ್ ಸ್ಟೇಷನ್ನಾದರೂ ಆಸ್ಪತ್ರೆ ಅಥವಾ ಮೇಲಿನ ಪೇಟೆಯ ಯಾವ ಭಾಗದಲ್ಲಿ ಇಡಿಸಿಕೊಡಬೇಕೆಂತಲೂ ಪ್ರಾರ್ಥಿಸಿಕೊಂಡಾಗ ಅವುಗಳ ವಿಷಯದಲ್ಲಿ ಯೋಚಿಸುತ್ತೇವೆಂದು ಅಪ್ಪಣೆ ಆಯಿತು. ಜನರು ಕೇಳಿಕೊಂಡ ಈ ಎರಡು ಸಂಗತಿಗಳಲ್ಲಿ ಒಂದನ್ನಾದರೂ ಮೇಲಿನ ಪೇಟೆ ಕಡೆಯಲ್ಲಿ ಅನುಕೂಲಪಡಿಸದೆ ಇರುವದರಿಂದ ಸದರಿ ಪೇಟೆಯ ಸ್ಥಿತಿಯು ದಿನದಿನಕ್ಕೂ ಕ್ಷೀಣಸ್ಥಿತಿಗೇ ಬರುತ್ತಿದೆ ಈಗಲಾದರೂ ಈ ವಿಷಯಗಳನ್ನು ನಮ್ಮ ಅಮಲ್ದಾರರೂ, ಮೇಲ್ಪಟ್ಟ ಅಧಿಕಾರಿಗಳೂ ಯೋಚಿಸಿ, ಇವೆರಡರಲ್ಲೊಂದನ್ನು ಅನುಕೂಲ ಮಾಡಿಸಿಕೊಡಬೇಕೆಂದು ಪ್ರಾರ್ಥನೆಯಾಗಿದೆ.—ಕಳೆದ ವಾರ ಈ ಪತ್ರಿಕೆಯಲ್ಲಿ ಎಲ್ಲಾ ಸ್ಕೂಲ್ ಮಾಸ್ತರುಗಳಿಗೂ ೧೦ ರೂ. ತಿಳಬು ಈ ಆಗೋಸ್ಟು ೧ ತಾ ನಿಂದ ಬತ್ತಿಯಾಗಿದೆ ಎಂದೂ, ಗೌರ್ನಮೆಂಟು, ಲೋಕಲ್, ತಾಲ್ಲೂಕ್ ಕನ್ನಡ ಸ್ಕೂಲುಗಳ ಬಾಲಕರಿಗೆ ೧ನೇ, ೨ನೇ, ೩ನೇ ಕ್ಲಾಸ್ ವಿದ್ಯಾರ್ಥಿಗಳಿಗೆ ಫೀಜು ಇಲ್ಲವೆಂದೂ ಪ್ರಕಟಿಸಿದೆ. ಆದರೆ ಹಿಂದೂಸ್ಥಾನಿ ಸ್ಕೂಲ್ ವಿಷಯ ಏನೂ ಬರೆದಿಲ್ಲ. ಮೇಲೆ ಒಟ್ಟಾಗಿ ಸರ್ಕಾರಿ ಸಮಸ್ತ ಸ್ಕೂಲುಗಳು ಎಂದು ಬರೆದಿದ್ದರೂ, ತಪ್ಸೀಲಿನಲ್ಲಿ ಸರ್ಕಾರಿ, ತಾಲ್ಲೂಕ್ ಕನ್ನಡ ಸ್ಕೂಲುಗಳೆಂದು ವಿವರಿಸಿರುವದರಿಂದ ಹಿಂದೂಸ್ಥಾನಿ ಜನಗಳಿಗೆ ಇದರ ವಿಷಯದಲ್ಲಿ ಸಂಶಯವಾಗಿದೆ. ಆದ್ದರಿಂದ ಇದರ ನಿಜಸ್ಥಿತಿ ಏನೆಂದು ಈ ಪತ್ರಿಕೆಯಲ್ಲಿಯೇ ಪ್ರಕಟಿಸಬೇಕೆಂದು ಪ್ರಾರ್ಥಿಸುತ್ತೇನೆ. [ಸರ್ಕಾರದ ಹಣದಿಂದ ಸಂಪೂರ್ಣವಾಗಿ ನಡಿಸಲ್ಪಡುತ್ತಿರುವ ಹಿಂದೂಸ್ಥಾನಿ ಮತ್ತು ಕನ್ನಡ ಸ್ಕೂಲುಗಳಿಗೆಲ್ಲಾ ಆ ಹುಕುಮು ಅನ್ವಯಿಸುತ್ತದೆ.—ಎಡಿಟರ್.]—ಈ ಪ್ರಾಂತ್ಯ ಮಳೆ ಬಹಳ ದಿನಗಳಿಂದಲೂ ಸುತರಾಂ ಇಲವೇ ಇಲ್ಲ. ಕೆರೆ ಕುಂಟೆಗಳಲ್ಲಿ ಪಕ್ಷಿಗಳಿಗೂ ಕೂಡ ನೀರಿಲ್ಲದೆ ಇರುವದರಿಂದ ಜಾನುವಾರುಗಳ, ಮನುಷ್ಯರ ಕಷ್ಟ, ಚಿಂತೆಗಳನ್ನು ಏನೆಂದು ಹೇಳಲಿ. ಅನೇಕರಿಗೆ ತಿನ್ನುವದಕ್ಕಿಲ್ಲದೆ, ಒಣಗಿದ ಕೆರೆಗಳಲ್ಲಿ ಗ್ರಾಮಸ್ಥರು ಗೆಣ್ಣೆ ಗೆಣಸುಗಳನ್ನು ಅಗೆದು ತಿನ್ನುತ್ತಾರೆ. ಇಂಥಾ ಕಾಲದಲ್ಲಿ ಸರ್ಕಾರದವರು ಬಡಬಗ್ಗರಿಗೂ ಅಲ್ಪ ಸಂಬಳಗಾರರಿಗೂ ಯಾವ ರೀತಿಯಲ್ಲಿಯಾದರೂ ಸ್ವಲ್ಪ ಸಹಾಯ ಮಾಡಿದರೆ ತುಂಬಾ ಕೃತಜ್ಞತೆಯುಳ್ಳವರಾಗಿರುವರು. ಅಲ್ಲದೆ ಸಂತೆ ದಿನ ಬರುವ ದಿನಸುಗಳನ್ನು ಸ್ಥಿತಿವಂತರು ದಳ್ಳಾಳಿಗಳ ಮುಖಾಂತರ ಒಟ್ಟಾಗಿ ತೆಗೆದುಕೊಂಡು, ಚಿಲ್ಲರೆಯಾಗಿ ಲಾಭಕ್ಕೆ ಮಾರುತ್ತಾರೆ ಇದರಿಂದ ಬಡವರು ಹೆಚ್ಚಿನ ಕ್ರಯ ಕೊಟ್ಟು ಕೊಂಡುಕೊಳ್ಳುವದು ಕಷ್ಟವಾಗಿದೆ ಇದರ ವಿಷಯದಲ್ಲಿ ನಮ್ಮ ಅಮಲ್ದಾರರು ಏನಾದರೂ ಒಂದು ಒಳ್ಳೇ ಏರ್ಪಾಟು ಮಾಡಿದರೆ ಸಕಲರಿಗೂ ಧಾನ್ಯವು ತಕ್ಕ ಕ್ರಯಕ್ಕೆ ಸಿಕ್ಕಬಹುದೆಂದು ಜನರು ಅಂದುಕೊಳ್ಳುತ್ತಾರೆ.

ಹೊಳೆಹೊನ್ನೂರು.—ಈ ತಿಂಗಳು ತಾ. ೨ರಲ್ಲಿ ನೆರೆಯ ಗ್ರಾಮ ಕಿಬ್ಬೇಪುರದಲ್ಲಿ ಒಬ್ಬಾನೊಬ್ಬನು ತನ್ನ ಮೇಲೆ ಆಂಜನೇಯ ದೇವರು ಆವೇಶ ರೂಪವಾಗಿ ಬಂದಂತೆ ನಟಿಸಿ, ಸವಿಪಾವಸ್ಥನಾದ ಭೈರನ ಬೆಟ್ಟದ ಅಡಿಯಲ್ಲಿ ಮರುಳುಗಳಂತೆ ನೆರೆದಿದ್ದ ಸಾವಿರಾರು ಜನರ ಮಧ್ಯೆ, ಪ್ರತಿ ಸಾಂವತ್ಸರಿಕದಂತೆ ಬಂದು, "ಸುಳಿಗಾಳಿ ಸುಳಿದೀತು—ಕಮಲ ಅರಳೀತು—ಕಮಂಡಲ ಕವಿದೀತು" ಎನ್ನುವ ಈ ವರುಷದ ಭವಿಷ್ಯವನ್ನು ಹೇಳಿದ್ದನ್ನು ಕೇಳಿದವರೆಲ್ಲರೂ ನಾನಾರ್ಥ ಕಲ್ಪನೆಗಳಿಂದ ಸ್ವಸ್ಥಚಿತ್ತರಾದರು. ಈ ರೀತಿಯಾದ ಮೌಢ್ಯವು ಇನ್ನೂ ನಿರ್ನಾಮವಾಗದೆ ನೆಲೆಕೊಂಡಿರುವುದು ವಿಸ್ಮಯವೇ.—ಈ ಗ್ರಾಮದ ಸ್ಥಿತಿಯು ಗವರ್ನಮೆಂಟಿನವರ ದಿವ್ಯಾಲೋಚನೆಗೊಳಪಟ್ಟಿರುವುದಾಗಿದ್ದರೆ ನಿಸ್ಸಂದೇಹವಾಗಿ ಸಬ್ ತಾಲ್ಲೂಕು ಇರಬೇಕಾದ ಸ್ಥಳವು ಜನಭರಿತವಾಗಿಯೂ, ವರಮಾನ ಪೂರಿತವಾಗಿಯೂ, ವ್ಯಾಪಾರ ಸ್ಥಳವಾಗಿಯೂ ಇರುವಲ್ಲಿ, ವಿನಾಕಾರಣವಾಗಿ "ಯೂನಿಯನ್" ಮಾಡಿ, ಅಕ್ರಾಯ, ವ್ಯಾಪಾರ, ತೆರಿಗೆಗಳನ್ನು ಪಟ್ಟಿ ಮಾಡಿಸಿರುವ ಪ್ರಯುಕ್ತ ಸುಮಾರು ಒಂದು ಸಾವಿರ ರೂಪಾಯಿ ಹುಟ್ಟುವಳಿ ಕಮ್ಮಿ. ಆದರೆ ದೊಡ್ಡ ಪಟ್ಟಣಗಳಿಗಿಂತ ಖಾನೆ ಕಂದಾಯ ಮಾತ್ರ ಜಾಸ್ತಿ ಇರೋಣದರ ದೆಸೆಯಿಂದ ಬಡಬಗ್ಗರಾದಿಯಾಗಿ ಎಲ್ಲರೂ ಒದ್ದಾಡುವರು. ಗೌರ್ನಮೆಂಟಿನವರನ್ನು ಇಲ್ಲಿ ಪುನಹ ಮ್ಯುನಿಸಿಪಾಲಿಟಿಯನ್ನು ಸ್ಥಾಪಿಸಿ ಕೊಡೋಣವಾಗಬೇಕಾಗಿ ಪ್ರಜೆಗಳು ಪ್ರಾರ್ಥನೆ ಮಾಡುವರು. ಭದ್ರಾನದಿಯ ಟೋಲಿನಿಂದ ಸಾಲಿಯಾನಾ ಉತ್ಪತ್ತಿಯನ್ನು ಗ್ರಾಮದುತ್ಪತ್ತಿಗೆ ಸೇರಿಸಿಕೊಡುವಂತೆ ಮೆಂಬರುಗಳು ಯಾಕೆ ಆಲೋಚನೆ ತರಬಾರದು?—ಶಿವಮೊಗ್ಗಾ ರಸ್ತೆಯಲ್ಲಿ, ಮಳೆಗಾಲದಲ್ಲಿ ಬೆನವಳ್ಳಿ ಊರು ಮುಂಭಾಗ ಪೂರ್ಣ ಪ್ರವಾಹದ ಹಳ್ಳ ಒಂದೂ, ಜಾವಳ್ಳಿ ಸಮೀಪ ಒಂದು ಫರ್ಲಾಂಗು ಫಾಸಲೆ ಮುರುಟೆನೆಲ ಒಂದೂ ಇದ್ದು ಜನರ, ದನಕರುಗಳ ತಿರುಗಾಟಕ್ಕೇ ಅಪಾಯಕರವಾಗಿವೆ ಎನ್ನುವುದು ಆ ದಾರಿಯಲ್ಲಿ ಸಂಚರಿಸಿದವರಿಗೆ ಸ್ಮೃತಿಪಥಕ್ಕೆ ಬಂದೇ ಬರುವುದು. ಮತ್ತು ಬೆಂಕಿಪುರದ ಮಾರ್ಗ ೫೦—೬೦ ಗಜ ದೂರ ಸದಾ ೫—೬ ಅಡಿ ಆಳ ಬುರುದೆಯುಳ್ಳ ಕಾವೇಸರವೆನ್ನುವ ಪ್ರದೇಶದಲ್ಲಿ ಬಂಡಿಗಳು ದಾಟುವಿಕೆಯಲ್ಲಿ ಮೂಗುದಾರಿಗಳ ಹಿಂಸೆಯನ್ನು ನೋಡಲು ಕಣ್ಣೀರು ಸುರಿಯುವುದು. ಎಷ್ಟೋ ಸಾರಿ ಈ ಕಷ್ಟವನ್ನು ಪರಿಹರಿಸಿಕೊಡಬೇಕೆಂದು ಮೊರೆಯಿಟ್ಟರೂ ಫಲಿತಾರ್ಥವಾಗದೆ ಇದೆ. ಈಗಲೂ ಪ್ರಯಾಣಕ್ಕನಾನುಕೂಲವಾದ ಈ ಉಭಯ ಮಾರ್ಗಗಳನ್ನು ಕೂಡಲೆ ಸರಿಪಡಿಸಿ ಕೊಡುವ ಯೋಜನೆಯನ್ನು ಮಾಡಿ ಪೂರ್ತಿಮಾಡಿ ಕೊಡೋಣವಾಗಬೇಕಾಗಿ ವಿಜ್ಞಾಪನೆ. ಇದರಿಂದ ಈ ಗ್ರಾಮವು ಪುನರುಜ್ಜೀವಿಸಿ, ಪೂರ್ವ ಪ್ರಖ್ಯಾತ ನಾಮವನ್ನು ಪಡೆಯುವುದು ಎಂದು ನಿರೀಕ್ಷಣೆ.—ಇಲ್ಲಿನ ಬಾಲಿಕೆಯರ ಪಾಠಶಾಲೆಯು ತೃಪ್ತಿಕರವಾಗಿ ನಡಿಯುತ್ತಿರುವಂತೆ ಕಾಣುವುದಿಲ್ಲ. ಈ ವಿಷಯಕ್ಕೆ ವಿದ್ಯಾ ಇಲಾಖೆಯವರು ಬೇಗ ಗಮನಕೊಟ್ಟು ಕ್ರಮಪಡಿಸದೆ ಹೋದರೆ ಸ್ಕೂಲು ಹೀನಸ್ಥಿತಿಗೆ ಬರಲು ಅನುಮಾನ ಕಾಣುವುದಿಲ್ಲ.—ಶ್ರೀ ಸತ್ಯಧರ್ಮ ಸ್ವಾಮಿಗಳ ಶಿಥಿಲವಾದ ಮಠವು ಮಹಾರಾಯರಿಂದ ಜೀರ್ಣೋದ್ಧಾರ ಕಲ್ಪಿಸಲ್ಪಟ್ಟು ಸುತ್ತ್ಯರ್ಹವಾಯಿತು. ಈ ಮಠದ ಬೃಂದಾವನ ಪೂಜೆಗೂ, ಅತಿಥಿಗಳ ಅನ್ನೋದಕಗಳಿಗೂ ಮಾಸಾಶನ ಸುಮಾರು ೩೬ ರೂಪಾಯಿ ಸರ್ಕಾರದ ತಸ್ತೀಕು ಇರುವುದು ಅಲ್ಲದೆ ಸಾಲಿಯಾನ ೧,೦೦೦ ರೂಪಾಯಿ ವರಮಾನವುಳ್ಳ ಕೆಲವು ಜಮೀನುಗಳೂ ಬಿಡಲ್ಪಟ್ಟಿರುವವು. ಮುಜರಾಯಿ ಇಲಾಖೆಯ ಮೇಲ್ವಿಚಾರಣೆಗೊಳಪಟ್ಟರೆ ಸರಿಯಾದ ವಿನಿಯೋಗ ನಡೆಯಲವಕಾಶ ದೊರೆಯುವುದು. ಈ ತಿಂಗಳು ತಾ ೨೩ರಲ್ಲಿ ಶ್ರೀ ಸ್ವಾಮಿಗಳ ಆರಾಧನೆಯು ಆರಂಭವಾಗಿ ಮೂರು ದಿನಗಳು ಅತಿ ವಿಜೃಂಭಣೆಯಿಂದ ಸಂತರ್ಪಣೆ ಉತ್ಸವಾದಿಗಳು ನಡೆಯುವವು. ಉತ್ಸವಾದಿಗಳನ್ನು ನೋಡುವ ಉದ್ದೇಶ್ಯ ಅನೇಕ ಪ್ರಜೆಗಳು ಬಂದು, ಸೇರುತ್ತಾರಾಗಿ, ಪ್ಲೇಗ್ ಸೋಂಕಿನ ಸ್ಥಳಗಳಿಂದ ಯಾರೂ ಬರದಂತೆ ಮಾಡುವ ಏರ್ಪಾಟು ಇಡುವುದಕ್ಕೆ, ಕಾಲ ಸಮೀಪಿಸಿರುವ ಕಾರಣ ಈಗ ಅರಿಕೆ ಮಾಡಿಕೊಂಡಿದೆ.—ಜನರು ಬಳಸುವ ನದಿಯ ಬಳಿ ಮಂಡೆಯ ಸ್ನಾನಗಳು ನದಿಯ ಪಾತ್ರದಲ್ಲಿಯೇ ಮಲಮೂತ್ರ ವಿಸರ್ಜನೆಗಳನ್ನು ಮಾಡುವುದರಿಂದ, ನೀರೂ ಗಾಳಿಯೂ ಸೇವನೆಗೆ ಅನನುಕೂಲವಾಗುವುದಲ್ಲದೆ, ಪ್ಲೇಗ್ ರೋಗಕ್ಕೆ ಸಹಕಾರಿಯಾದೀತು.—ಊರಿನಲ್ಲಿ ಪಾಳುಗಳಲ್ಲಿರುವ ಲಾಂಟಾನಾ ಗಿಡಗಳು ಕೊಳೆತು ದುರ್ಗಂಧ ಬಡಿಯುತ್ತದೆ ಇದನ್ನು ತಪ್ಪಿಸುವ ಯೋಚನೆ ಒಳ್ಳೆಯದು.—ಈ ಸ್ಥಳದಿಂದ ಚುನಾಯಿಸಿದ ತಾಲ್ಲೂಕು, ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ಮಾಗ್ಗಿಗಳೂ, ಧೈರ್ಯಸ್ಥರೂ, ವಿದ್ವತ್ತಿನವರೂ ಅಲ್ಲದೆ ಇರುವುದು ಚಿಂತೆಗೆ ಕಾರಣವಾಗಿದೆ.—ಇದು ದೊಡ್ಡ ಗ್ರಾಮವಾಗಿ, ವರ್ತಕರೂ, ಎಲ್ಲಾ ಇಲಾಖಾ ನೌಕರರೂ, ಮುಖ್ ಬಾಬ್ ಜನರೂ ಇರುವುದರಿಂದ ಇಲ್ಲಿಯ ಪೋಸ್ಟು ಮಾಸ್ಟರಿಗೆ ವಿ ಪಿ ಮತ್ತು ಸೇವಿಂಗ್ಸ್ ಬ್ಯಾಂಕ್ ಅಧಿಕಾರ ಕೊಡುವಲ್ಲಿ ಜನರಿಗೆ ತುಂಬಾ ಅನುಕೂಲವಾಗಿ, ಶಿವಮೊಗ್ಗೆಗೆ ಈ ಕೆಲಸಕ್ಕೆ ಹೋಗುವ ಶ್ರಮೆಯು ತಪ್ಪಿಸಲ್ಪಟ್ಟಂತಾಗುವುದು. ಆಫೀಸಿಗೆ ಆದಾಯವೂ ಆಗುವುದು

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ. ಹಾಗೆ ಆಗದಿದ್ದರೆ ಡೋನ್ಸ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ



(೧೨ ಆಣೆ ಬುಡ್ಡಿ ಪರಿಮಾಣ.)

ಸ್ವಸ್ಥವಾಗುವುದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ಹಾಯಲ್ಪಟ್ಟು ವಿಷವಾಗಿ, ಪಂಚಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಗಳಿಗೆ ಮೂಲ ಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ೮ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ತಲ್ಲಣಿಸುವದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಮೂಳೆಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ಸ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [93-50]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ, ಡೋನ್ಸ್ ಪಿ. ಓ. ಬಾಕ್ಸ್ ೩೦, ಬೊಂಬಾಯಿ.—ಇವರಲ್ಲಿ ದೊರೆಯುವುದು.

ಸತ್ಯವಾಗಿಯೂ ಅಗ್ಗದ ಅಂಗಡಿ.

59-8

ಆಶ್ಚರ್ಯದ ಸಮಯ! ಆಶ್ಚರ್ಯದ ಸಮಯ!!

ಅಗ್ಗದ ಬೆಲೆರಿ ಸಮಯ. ಕ್ರಯ ಮೂರರಲ್ಲಿ ಒಂದೇ ಪಾಲು.



ಗಡಿಯಾರಗಳೆಲ್ಲಾ ಅಚ್ಚ ಹೊಸದಾದವು ಚೆನ್ನದಂಥಾ ಸಮಯ. ಇದಕ್ಕಿಂತ ಅಗ್ಗವಾಗಿ ಮತ್ತೆ ಸಿಕ್ಕಲಾರವು. ಸಾವಕಾಶ ಮಾಡಬೇಡಿ! ಕಾಲವಿಪರೀತ!!

ನಂ ೧೦೦—೧೮ ಓ. ಎಫ್. ಸುಂದರವಾದ ಲೋಹಗಡಿಯಾರ, ಸೆಕೆಂಡ್ ಹ್ಯಾಂಡ್ ಸಹಿತ, ಸಿಲಿಂಡರ್ ಚಲನೆ, ೩೬ ಗಂಟೆ ಹೊತ್ತು ನಡಿಯುವುದು. ಮೊದಲಿನ ಕ್ರಯ ರೂ. ೧೩—೮—೦; ಈಗಿನ ಕ್ರಯ ರೂ. ೩—೮—೦. ಐದು ವರ್ಷ ಜಾಮೀನ್.

ನಂ. ೧೦೧ ಎ—ಕ್ರೊನೊಗ್ರಾಫ್ ವಾಚ್ ಸೆಕೆಂಡ್ ಹ್ಯಾಂಡ್ ಸಹಿತ. ಮೊದಲಿನ ಕ್ರಯ ರೂ. ೧೫; ಈಗ ರೂ. ೪. ಐದು ವರ್ಷ ಜಾಮೀನ್.

ನಂ. ೧೦೨ ೧೮ ಓ. ಎಫ್. ಸಿಲಿಂಡರ್ ಚಲನೆ, ೩೬ ಗಂಟೆ ನಡಿಯುವುದು. ಮೊದಲಿನ ಕ್ರಯ ರೂ. ೧೧—೭—೦, ಈಗ ರೂ. ೩—೧೨—೦ ಐದು ವರ್ಷ ಜಾಮೀನ್ ನಂ. ೧೦೩—೧೮. ಓ ಎಫ್. ರೈಲ್ವೆ ರೆಗ್ಯುಲೇಟರ್ ಲೀವರ್ ವಾಚ್. ೩೬ ಗಂಟೆ ನಡಿಯುವುದು. ಮೊದಲಿನ ಕ್ರಯ ರೂ. ೧೦—೧೩—೦, ಈಗ ರೂ. ೩—೮—೦. ಐದು ವರ್ಷ ಜಾಮೀನ್. ೧೦೪—ರಾಸ್ಕೋಫ್ ಲೀವರ್ ವಾಚ್. ಇದು ಬಹು ಶಾಶ್ವತವಾದದ್ದು ಹತ್ತು ವರ್ಷ ಜಾಮೀನ್. ಮೊದಲು ರೂ. ೧೮; ಈಗ ರೂ ೫—೮—೦. ೧೦೫—ಬೆಳ್ಳಿ ರಾಸ್ಕೋಫ್ ಲೀವರ್ ವಾಚ್. ರತ್ನಗಳುಳ್ಳದ್ದು. ೧೨ ವರ್ಷ ಜಾಮೀನ್. ಮೊದಲು ರೂ. ೩೦; ಈಗ ರೂ. ೧೦ ೧೦೬—ಬೆಳ್ಳಿ ಲೇಡಿ ಅಥವಾ ಕೈವಾಚ್ ಸಿಲಿಂಡರ್, ರತ್ನವುಳ್ಳದ್ದು ಗಿಲ್ಟ್ ಚಲನೆ. ೬ ವರ್ಷ ಜಾಮೀನ್. ಕ್ರಯ ರೂ. ೨೨—೮; ಈಗ ರೂ ೭—೮—೦. ೧೦೭—ಬೆಳ್ಳಿ ಓ. ಎಫ್. ಕೈ ಸಹಿತ. ಪಾಲಿಷ್ ಚಲನೆ. ರೂ. ೨೧; ಈಗ ರೂ. ೬. ಆರು ವರ್ಷ ಜಾಮೀನ್ ೧೦೮—ಬೆಳ್ಳಿ ಓ. ಎಫ್. ಗಂಡಸರ ಲೀವರ್ ರೂ ೩೦ ಈಗ ರೂ. ೧೦ ಹತ್ತು ವರ್ಷ ಜಾಮೀನ್ ೧೦೮ ಎ—ಅದೇ ಹಂಟರ್, ರೂ ೩೩, ಈಗ ರೂ. ೧೧. ೧೦೮ ಬಿ—ಅದೇ ಅರ್ಧ ಹಂಟರ್ ರೂ ೩೬, ಈಗ ರೂ. ೧೨ ೧೦೯—ಬೆಳ್ಳಿ ೮ ದಿನ ನಡಿಯುವುದು ರೂ ೬೦, ಈಗ ರೂ. ೧೮ ವಾರಕ್ಕೊಮ್ಮೆ ಕೀಲಿ ಕೊಡುವುದು. ಲೀವರ್ ಚಲನೆ. ೧೦ ವರ್ಷ ಜಾಮೀನ್ ೧೦೯ ಎ—೨೬ ದಿನ ನಡಿಯುವ ಚೊಕ್ಕಬೆಳ್ಳಿ ಗಡಿಯಾರ. ರತ್ನಗಳುಳ್ಳದ್ದು. ಸೆಕೆಂಡ್ ಹ್ಯಾಂಡ್. ೧೫ ವರ್ಷ ಜಾಮೀನ್ ರೂ. ೧೫೦. ಈಗ ರೂ. ೫೦. ೧೦೯ ಬಿ.—ಚೊಕ್ಕಬೆಳ್ಳಿ ಕ್ಯಾಲೆಂಡರ್ ಲೀವರ್ ವಾಚ್ ದಿನ, ತಾರೀಖು ತಿಂಗಳು, ಚಂದ್ರ, ಇವನ್ನು ತೋರಿಸುತ್ತೆ. ೧೨ ವರ್ಷ ಜಾಮೀನ್. ಕ್ರಯ ರೂ. ೬೨—೮—೦; ಈಗ ರೂ. ೧೭—೮—೦ ೧೧೦—ಚೊಕ್ಕ ಬಂಗಾರ ರತ್ನಗಳುಳ್ಳದ್ದು ಕ್ರಯ ರೂ ೩೨ ಈಗ ರೂ. ೨೬. ಹದಿನೈದು ವರ್ಷ ಜಾಮೀನ್ ೧೧೧—ಎಂಟು ದಿನಗಳ ಚಿನ್ನದ ಗಡಿಯಾರ ತುಂಬಾ ರತ್ನಗಳು ೧೨ ವರ್ಷ ಜಾಮೀನ್. ಕ್ರಯ ರೂ. ೧೬೯, ಈಗ ರೂ ೫೩.

ಒಟ್ಟಿಗೆ ತರಿಸುವವರಿಗೆ ಸ್ಪೆಷಲ್ ದರಗಳು: ೩ ಗಡಿಯಾರ ಒಂದೇ ಸಲ ತರಿಸುವವರಿಗೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ
೬ ಗಡಿಯಾರ ಒಂದೇ ಸಲ ತರಿಸುವವರಿಗೆ ಒಂದು ಗಡಿಯಾರ ಇನಾಂ. ಕ್ರಯದಲ್ಲಿ ಕಾಲುಭಾಗ ಅಡ್ವಾನ್ಸು ಬರಬೇಕು; ಉಳಿದದ್ದಕ್ಕೆ ವಿ. ಪಿ ಪಿ ಯಿಂದ ಕಳುಹಿಸುತ್ತೇವೆ. ಗಡಿಯಾರಗಳನ್ನು ಸುಂದರವಾದ ಮಕಮಲ್ ಪೆಟ್ಟಿಗೆಯಲ್ಲಿ ಸ್ಪ್ರಿಂಗ್, ಗ್ಲಾಸ್ ಸಹಿತ ಕಳುಹಿಸುವೆವು. ಇದಲ್ಲದೆ ಪ್ರತಿ ವಾಚಿಗೂ ಸೊಗಸಾದ ಒಂದೊಂದು ಸರಪಣಿಯನ್ನು ನಾವು ಇನಾಮಾಗಿ ಕಳುಹುತ್ತೇವೆ ನಮ್ಮ ವಿಳಾಸ—

ಎಂ. ಎ. ಫಾರೂಕಿ ಮತ್ತು ಕಂಪೆನಿ, ಜೆತ್ಪೂರು.

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟರ್."

ವ್ಯವಹಾರನಿರ್ಣಯ—ಪುಟಗಳು ೫೬೫ ಹಿಂದೂ ಮಹಮದೀಯ ಲಾಗಳು, ೨೯ ಖಾನೂನುಗಳು ಇವುಗಳ ಸಂಗ್ರಹವು, ೯೨ ದಸ್ತಾವೇಜು, ೬೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ. ಪಿ. ಸೇರಿ ೧ ರೂ. ೧೨ ಆಣೆ. [40-16]

ಕನ್ನಡ ಲಾ ರಿಪೋರ್ಟರ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ೧—೨—೦ ಮುಂಗಡ, ಯಾ, ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೦—೨—೦

ಇವುಗಳನ್ನು ಪೇಕ್ಷಿಸುವವರು "ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯುವುದು

ಎದೆಯಲ್ಲಿ ಹುಟ್ಟುವ ಶೈತ್ಯರೋಗಗಳು.

[34-20]

ಅನೇಕ ವೇಳೆ ಶೀತವು ತಿಳಿಯದ ಹಾಗೆ ಕ್ರಮೇಣ ಪ್ರಬಲಿಸಿ ಕ್ಷಯರೋಗವಾಗುವುದು.

ಇತರ ಔಷಧಗಳಿಂದ ನನಗೆ ವಾಸಿಯಾಗಲಿಲ್ಲ. ಪೆರೂನಾ ವಾಸಿಮಾಡಿತು.

ಮಿಸೆಸ್ ಎಲಿಸಬೆತ್ ಹಂಟ್, ಮಲ್ಬೋರ್ನ್, ವಿಕ್ಟೋರಿಯಾ.

ಶೀತಗಾಳಿ ದೇಹಕ್ಕೆ ಬಡಿದು ಪರಗಳನ್ನು ಅಂಟಿಕೊಳ್ಳೋಣದರಿಂದ ಶೈತ್ಯರೋಗಗಳು ಹುಟ್ಟುತ್ತವೆ. ಶೀತವು ವಿಶೇಷವಾಗಿ ಮೂಗಿನಲ್ಲೂ ಗಂಟ್ಲಿನಲ್ಲೂ ಕಾಣಿಸಿಕೊಳ್ಳುತ್ತದೆ. ಆದರೂ ಅನೇಕ ವೇಳೆ ಅದು ಶರೀರವನ್ನು ಹಿಡಿಯುವುದುಂಟು. ಗಂಟ್ಲು ಶೀತವು ಶ್ವಾಸಕೋಶಗಳ ನಾಳಗಳ ಮೂಲಕ ಹಿಂದೆ ಮುಂದೆ ವ್ಯಾಪಿಸಿ, ಶ್ವಾಸಕೋಶಗಳನ್ನೇ ಹಿಡಿದು ಕ್ಷಯರೋಗ ಬಂದಂತೆ ಮಾಡುತ್ತದೆ. ಕೆಲವು ಬರವಣಿಗೆಗಾರರು ಅದನ್ನೇ ಕ್ಷಯಜಾಡ್ಯವೆಂದು ಎಣಿಸುತ್ತಾರೆ.

ಶೈತ್ಯವು ಶ್ವಾಸಕೋಶವನ್ನು ಪ್ರವೇಶಿಸಿದ ಕೂಡಲೇ ಆಹಾರ ರುಚಿಸುವುದಿಲ್ಲ, ಶಕ್ತಿ ಕುಂದುವುದು, ದೇಹವು ಕೃಶವಾಗುವುದು. ಅಂತು ಕ್ಷಯರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಆದರೆ ಅದು ಶೈತ್ಯದಿಂದ ಪ್ರಾರಂಭವಾದದ್ದೆಂದು ತೋರುವುದಿಲ್ಲ. ಇಂಥಾ ಕಾಯಿಲೆಯನ್ನು ನಿವಾರಣೆಮಾಡುವುದಕ್ಕೆ ಒಂದೇ ಒಂದು ಮಾರ್ಗವುಂಟು, ಏನೆಂದರೆ ಅದಕ್ಕೆ ಕಾರಣವಾದ ಶೈತ್ಯವನ್ನು ಹೊಡೆಯುವ ಪ್ರಯತ್ನವೇ.

ಶೈತ್ಯರೋಗವನು ಹೊಡೆಯುವುದಕ್ಕೆ ಪೆರೂನಾ ಚನ್ನಾಗಿ ಪರೀಕ್ಷೆ ಮಾಡಲ್ಪಟ್ಟ ಹಳೇ ಔಷಧ. ತಲೆ, ಗಂಟಲು, ಶ್ವಾಸಕೋಶ, ಅಥವಾ ದೇಹದ ಇತರ ಅಂಗಗಳಿಗೆ ಹಿಡಿಯುವ ಶೈತ್ಯರೋಗಗಳೆಲ್ಲಾ ಈ ಔಷಧವನ್ನೇ ಉಪಯೋಗಿಸತಕ್ಕದ್ದಾಗಿದೆ. ದೇಹದ ಒಳಭಾಗದಲ್ಲಿ ಹುಟ್ಟುವ ರೋಗಗಳನ್ನು ನಿವಾರಣೆ ಮಾಡುವುದರಲ್ಲಿ ಪೆರೂನಾ ಬಹು ಪ್ರಸಿದ್ಧವಾದ ಔಷಧವಾಗಿದೆ. ಪೆರೂನಾ ಲಕ್ಷಾಂತರ ರೋಗಿಗಳಿಗೆ ಸೌಖ್ಯವನ್ನು ಕೊಟ್ಟಿರುವುದು. ಈ ಔಷಧದ ಸೇವನೆ ಪಥ್ಯ ಮುಂತಾದದ್ದನ್ನು ವಿವರವಾಗಿ ಬರೆದ ಕಾಗದವು ಆ ಶೀಸೆಯ ಜೊತೆಯಲ್ಲೇ ಇಟ್ಟಿದೆ. ಇದಲ್ಲದೆ ಪೆರೂನಾ ವಿಚಾರವನ್ನು ವಿವರಿಸಿರುವ ಸಣ್ಣ ಪುಸ್ತಕವನ್ನು ಔಷಧದ ಅಂಗಡಿಗಳಲ್ಲಿ ಕೇಳಿದರೆ ಸುಮ್ಮನೆ ಕೊಡುತ್ತಾರೆ.

ನೆತ್ತಿ, ಗಂಟಲು, ಶ್ವಾಸಕೋಶ, ಅನ್ನಕೋಶದಲ್ಲಿ ಶೈತ್ಯವುಂಟಾಗಿರುವ ರೋಗಿಗಳು ಪೆರೂನಾವನ್ನು ಒಂದಾವರ್ತಿ ಪರೀಕ್ಷಿಸಿ ನೋಡಲಿ. ಒಂದು ಸಲ ಸೇವಿಸಿ ನೋಡಿದರೆ ಅದರ ಗುಣವು ಮುಂಚಿತವಾಗುವುದು. ಅದರ ಗುಣವು ಬೇಗ ಅನುಭವಕ್ಕೆ ಬಂದೀತೆನ್ನುವುದಕ್ಕೆ ಅನುಮಾನ ಕಾಣುವುದಿಲ್ಲ.

ವಿಸೆಸ್ ಎಲಿಸಬೆತ್ ಹಂಟ್, ೩೩ ಫ್ಲೆಮಿಂಗ್ಟನ್ ಬೀದಿ ಸೆಂಟ್ ಕಿಲ್ಡಾ, ವಿಕ್ಟೋರಿಯ, ವಿಕ್ಟೋರಿಯಾ, ಪ್ರೆಸ್‌ಬಿಟೇರಿಯನ್ ದೇವಾಲಯದ ಮೆಂಬರು, ಈಕೆ ಬರೆಯುವುದು:—"ಶ್ವಾಸಕೋಶಗಳ ಶೈತ್ಯಕ್ಕೆ ಪೆರೂನಾ ಸೇವಿಸುವುದೇ ಉತ್ತಮವೆಂದು ಸಂತೋಷದಿಂದ ಹೇಳುತ್ತೇನೆ. ನನಗೆ ಇತರ ಔಷಧಗಳಿಂದ ವಾಸಿಯಾಗಲಿಲ್ಲ. ಪೆರೂನಾ ವಾಸಿ ಮಾಡಿತು. ಹಲವು ವರುಷಗಳ ತನಕ ಈ ರೋಗವು ನನ್ನನ್ನು ಪೀಡಿಸಿತು. ನಾನು ತುಂಬಾ ಇಳಿದು ಹೋಗಿದ್ದೆನು. ನನಗೆ ಆಹಾರ ರುಚಿ ಸುತ್ತಿರಲಿಲ್ಲ. ರಾತ್ರಿ ಹೊತ್ತು ನಿದ್ರೆ ಬರುತ್ತಿರಲಿಲ್ಲ. ತುಂಬಾ ದುರ್ಬಲಳಾಗಿದ್ದೆನು. ನನ್ನ ಸ್ನೇಹಿತರು ನನಗಾಗಿ ತುಂಬಾ ಚಿಂತೆಪಟ್ಟರು. ಡಾಕ್ಟರುಗಳು ನನಗೆ ಗುಣಕೊಡಲಾರದೆ ಹೋದರು. ನನ್ನ ಶ್ವಾಸಕೋಶದಲ್ಲಿ ಹುಣ್ಣಾಗಿ ಯಾವಾಗಲೂ ಕೆಮ್ಮುತ್ತಿದ್ದೆನು. ಆಗೆಗೆ ನಿರಾಶೆಯಾಗಿ ಬಿಟ್ಟೆನು. ತನ ಸ್ನೇಹಿತರು ಕೇಳಿ ಒಂದು ಬಾಟ್ಲ್ ಪೆರೂನಾ ಕೊಂಡುತಂದರು. ಕೆಲವು ದಿನ ತೆಗೆದುಕೊಳ್ಳುವುದರೊಳಗಾಗಿ ನನಗೆ ಅದರ ಗುಣವು ಪರಮಾಶ್ಚರ್ಯವನ್ನುಂಟುಮಾಡಿತು. ನನಗೆ ನನ್ನ ಶ್ವಾಸಕೋಶಗಳು ಬಹಳ ಚನ್ನಾಗಿವೆ. ನಾನು ಪೆರೂನಾವಿನ ಉಪಕಾರವನ್ನು ಸರ್ವದಾ ಸ್ಮರಿಸುತ್ತೇನೆ."

ಬಹಳ ದುರ್ಬಲವುಂಟಾಗಿರುವುದು.

ವಿಸೆಸ್ ಆಲಿಸ್ ಬ್ರಿಡ್ಲಿ, ಥಾರೋಲ್ಡ್, ಒಂಟೇರಿಯೋ, ಕೆನಡಾ, ಈಕೆ ಬರೆಯುವುದು:—"ಎರಡು ವರುಷಗಳ ಕೆಳಗೆ ನನಗೆ ಶಕ್ತಿ ಕುಂದಿ ಬಹಳ ಹೀನಸ್ಥಿತಿಯಲ್ಲಿದ್ದೆನು. ಆಗ ನನಗೆ ಜ್ವರವಾಯು ಉಂಟಾಯಿತು. ಅದರಿಂದ ನನ್ನ ದೇಹದ ಒಂದು ಪಕ್ಕೆಯು ಬಿದ್ದುಹೋಗಿ, ಏಳಲಾರದೆ ಹೋದೆನು. ಡಾಕ್ಟರುಗಳನ್ನು ಕರೆಸಿ ಚಿಕಿತ್ಸೆ ಮಾಡಿಸಿಕೊಂಡರೂ ಕ್ರಮೇಣ ಹೀನಸ್ಥಿತಿಗೆ ಬರುತಿದ್ದೆನು. ಆತು ಮತ್ತೆ ನಾನು ಹಾಸಿಗೆಯಿಂದ ಏಳಲಾರನೆಂದು ನಿಶ್ಚಯಿಸಿಕೊಂಡೆನು. ಆಪರ ಪೆರೂನಾವನ್ನು ನನಗೆ ಕೊಡುತ್ತಾ ಬಂದರು. ನಾಲ್ಕು ಬಾಟ್ಲು ಔಷಧಿ ಸೇವಿಸುವಷ್ಟರಲ್ಲೇ ನಾನು ಹಾಸಿಗೆಬಿಟ್ಟೇಳುವಂತೆಯೂ ಹೊರಗೆ ತಿರುಗಾಡುವಂತೆಯೂ ಆಯಿತು. ನನ್ನ ಸ್ಥಿತಿಯನ್ನು ನೋಡಿದ ನನಗೂ ನನ್ನ ಸ್ನೇಹಿತರಿಗೂ ಪರಮಾಶ್ಚರ್ಯವಾಯಿತು. ರೋಗಿಗಳಿಗೆ ಪೆರೂನಾ ಬಹು ಉಪಕಾರವುಳ್ಳ ಔಷಧವೆಂದು ನೆನಸುತ್ತೇನೆ. ಇದಲ್ಲದೆ ನನ್ನ ಮಗಳು ಕೂಡ ಪೆರೂನಾ ತೆಗೆದುಕೊಂಡು ಅಭ್ಯಾಸವಾಗಿದೆ. ಅವಳ ಶರೀರಸ್ಥಿತಿ ಬಹಳ ಪುಷ್ಟಿಯಾಗಿಯೂ ಆರೋಗ್ಯವಾಗಿಯೂ ಇದೆ. ನಮ್ಮ ಪ್ರಾಣಗಳನ್ನು ಪೆರೂನಾ ಉಳಿಸಿತೆಂದು ನಂಬುತ್ತೇನೆ."

ಹೊಟ್ಟೆ ನೋವಿತ್ತು—ಈಗಹೋಯಿತು.

ವಿಸೆಸ್ ಡಾನಿಯಲ್ ಪಾಸ್ಮೋರ್, ವೆಲ್ಲಂಡ್, ಒಂಟೇರಿಯೋ, ಕೆನಡಾ, ಈಕೆ ಬರೆಯುವುದು:—"ಮೂರು ವರುಷಗಳ ತನಕ ನನ್ನ ಹೊಟ್ಟೆಯಲ್ಲಿ ಅಜೀರ್ಣವುಂಟಾಗಿ ಅನುಭವಿಸಿದೆನು. ಒಂದೆರಡು ಸಲ ಕೆಲವು ದಿನಗಳವರೆಗೆ ನಾನು ಏನೂ ತಿನ್ನಲಾರದೆ ಇದ್ದೆನು. ನನ್ನ ಮಾಂಸಖಂಡಗಳು ಕೃಶವಾದವು, ತಲೆನೋವು ಹುಟ್ಟಿತು, ನಿರಾಶೆಯುಂಟಾಯಿತು. ಮೂವರು ಡಾಕ್ಟರುಗಳು ನನಗೆ ಚಿಕಿತ್ಸೆ ಮಾಡಿದರು. ಆದರೆ ನನಗೆ ಸ್ವಲ್ಪವೂ ಅನುಕೂಲವಾಗಲಿಲ್ಲ. ಕಡೆಗೆ ಪೆರೋನಾ ಸೇವಿಸಲಿಕ್ಕಾರಂಭಿಸಿದೆನು. ಕೂಡಲೇ ಸ್ವಲ್ಪ ಸ್ವಲ್ಪವಾಗಿ ವಾಸಿಯಾಗುತ್ತಾ ಬಂತು. ಮೂರು ಬಾಟ್ಲ್ ಮುಗಿಸಿದ ಮೇಲೆ ಊಟ ರುಚಿಸುವಹಾಗಾಯಿತು. ಏನುಬೇಕಾದರೂ ಚನ್ನಾಗಿ ತಿನ್ನುವಂತಾಯಿತು. ಈಗ ನಾನು ಆರೋಗ್ಯವಾಗಿಯೂ ಶಕ್ತಿಶಾಲಿನಿಯಾಗಿಯೂ ಇದ್ದೇನೆ. ಪೆರೋನಾ ನನ್ನ ಪ್ರಾಣವನ್ನು ಬದುಕಿಸಿತೆಂದು ನಂಬುತ್ತೇನೆ. ಯಾವಾಗಲೂ ಅದನ್ನು ಕೊಂಡಾಡುತ್ತೇನೆ."

ಕ್ಷಯ ಹಿಡಿಯುವ ಭೀತಿಯುಂಟಾಯಿತು.

ವಿಸೆಸ್ ಆಲಿವರ್ ಪಾರ್ರಿಲ್ಟ್, ೩೩೫ ದೇವಿಡ್ಸನ್ ಬೀದಿ, ಬೊಲಿವಾರ್ಡ್ ಸೆಂಟ್ ಪಾಲ್, ಮಾಂಟ್ರೀಲ್, ಕೆನಡಾ, ಈಕೆ ಬರೆಯುವುದು:—"ನಿಮ್ಮ ಪೆರೂನಾ ಎಂಬ ಸುಪ್ರಸಿದ್ಧವಾದ ಔಷಧದ ವಿಷಯದಲ್ಲಿ ಸಂತೋಷವಾರ್ತೆಯೊಂದನ್ನು ಬರೆಯುತ್ತೇನೆ. ನಾನು ಇತರ ಔಷಧಗಳನ್ನು ಸೇವಿಸಿದೆನು. ನನ್ನ ಶೈತ್ಯರೋಗವು ನಿವಾರಣೆಯಾಗಲಿಲ್ಲ. ನನಗೆ ಕ್ಷಯ ಹಿಡಿಯುತ್ತೆಂಬ ಭೀತಿಯುಂಟಾಯಿತು. ನನ್ನ ಎಲೆಯಲ್ಲೂ ಹೊಟ್ಟೆಯಲ್ಲೂ ಅಕ್ರಮ ಹುಟ್ಟಿ ಬಹಳ ದುರ್ಬಲಳಾಗಿತ್ತು. ಜಪಾ ಬದಲಾವಣೆಯಾದಾಗ ನನಗೆ ಶೀತ ಹಿಡಿದು ಮೂರು ತಿಂಗಳ ತನಕ ಹಗಲೂ ರಾತ್ರಿ ಕೆಮ್ಮುತ್ತಿದ್ದೆನು. ನನ್ನ ಸಹೋದರನು ಪೆರೂನಾ ಸೇವಿಸೆಂದನು. ಹೇಳಿದಂತೆ ಪ್ರಾರಂಭಿಸಿದೆನು. ಅವನಿಗೆ ಅದು ರೋಗವನ್ನು ವಾಸಿ ಮಾಡಿತ್ತು. ಅದನ್ನು ನಾನು ಕ್ರಮವಾಗಿ ತೆಗೆದುಕೊಳ್ಳುತ್ತಾ ಬಂದದ್ದರಿಂದ ದಿನೇ ದಿನೇ ಆರೋಗ್ಯವಾಯಿತು. ಈಗ ನಾನು ಮೂರು ಬಾಟ್ಲ್ ಸೇವಿಸಿದೇನೆ. ನನ್ನ ರೋಗವು ಸಂಪೂರ್ಣವಾಗಿ ವಾಸಿಯಾಗಿರುತ್ತದೆ."

ಪೆರೂನಾದಿಂದ ಬೇಗ ಗುಣಕಂಡಿತು.

ವಿಸೆಸ್ ಪೆರ್ಟಬೌನ್, ೩೦೮ ಫ್ರಾಂಕ್ಲಿನ್ ಬೀದಿ, ರಿಚ್ಮಂಡ್, ವರ್ಜಿನಿಯ, ಯು. ಎಸ್. ಎ., ಈಕೆ ಬರೆಯುವುದು:—"ನಾನು ಮಗುವಾಗಿದ್ದಾಗ ನನಗೆ ಶೈತ್ಯ ಹಿಡಿಯಿತು. ಹಲವು ಒಳ್ಳೊಳ್ಳೇ ಡಾಕ್ಟರುಗಳು ನನಗೆ ಔಷಧ ಕೊಟ್ಟರು. ಆದರೆ ಯಾರಿಂದಲೂ ನನಗೆ ಗುಣವಾಗಲಿಲ್ಲ. ಆಗ್ಗೆ ನಮ್ಮ ತಾಯಿ ಪೆರೂನಾ ಸೇವಿಸುತ್ತಿದ್ದಳು. ನನಗೂ ಅದನ್ನೇ ಕೆಲವು ಕಾಲ ಕೊಡುತ್ತಾ ಬಂದಳು. ನಾನು ದಿನೇ ದಿನೇ ಚನ್ನಾಗುತ್ತಾ ಬಂದು ಈಗ ಆರೋಗ್ಯವಾಗಿಯೂ ಪುಷ್ಟಿಯಾಗಿಯೂ ಬೆಳೆದಿರುವೆನು. ನನಗೆ ಈಗ ೧೬ ವರುಷ. ಡಾಕ್ಟರುಗಳು ನನಗೆ ಕ್ಷಯ ಹಿಡಿದಿದೆ ಎಂದು ಹೇಳಿದರು. ಆದರೆ ನನಗೆ ಸ್ವಲ್ಪ ಶೀತ ಹಿಡಿದಿತ್ತಲ್ಲದೆ ಬೇರೇನೂ ಇಲ್ಲ."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೨೪—೭—೧೯೦೮ ರಿಂದ ೩೧—೭—೧೯೦೮ ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	25	21	0	0
ಮೈಸೂರು ,,	68	51	1	1
ಕೋಲಾರ್ ,,	*	*	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	5	5	13	43
ಹಾಸನ ,,	1	2	0	0
ಚಿತ್ರದುರ್ಗ ,,	0	0	13	4
ಕಡೂರ್ ,,	18	11	9	6
ಶಿವಮೊಗ್ಗಾ ,,	11	3	*	*
ಜುಮ್ಲಾ	117	93	66	54

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಶ್ರಾವಣ ಬಹುಳ ಪಾಡ್ಯಮಿ ಗುರುವಾರದಿಂದ ಶ್ರಾವಣ ಬಹುಳ ಅಷ್ಟಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಆಗಸ್ಟ್

ತಾ	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ	ವೇದಸಿದ್ಧ ಮಾಸ
13	ಗುರು	ಪಾಡ್ಯ	4 48	ಉಪರು	54 58	30
14	ಶುಕ್ರ	ಬಿದಿಗೆ	53 12	ಪೂಭಾ	47-2	31
15	ಶನಿ *	ಚೌತಿ	47 46	ಉಭಾ	13 26	32
16	ರವಿ †	ಪಂಚಮಿ	42 52	ರೇ	40 40	1
17	ಚಂದ್ರ	ಷಷ್ಠಿ	38-48	ಅ	38-28	2
18	ಕುಜ ¶	ಸಪ್ತಮಿ	35-00	ಭ	37-5	3
19	ಬುಧ	ಅಷ್ಟಮಿ	33 38	ಕೃ	37 2	4

ಅದಿಶುಕ್ರವಾರ * ಸಂಕಷ್ಟ ಚತುರ್ಥಿ, ಶ್ರಾವಣಶನಿವಾರ. † ವಿಷ್ಣುಪದಪುಣ್ಯಕಾಲ ¶ ಮಹಾವ್ಯತಿಪಾತ, ಶ್ರೀಕೃಷ್ಣಜನ್ಮಾಷ್ಟಮಿ, ಮಂಗಳಗೌರೀ ವ್ರತ, ಪ್ರಸನ್ನ ಕೃಷ್ಣಸ್ವಾಮಿ ರಥ, ಮನ್ನಾರ್ ಸ್ವಾಮಿ ದಾಸ ಕೃಷ್ಣಜಯಂತಿ

ಪೇಟೆ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	ರೂ	೧೫ ೦-೦	೧೩-೦-೦
ಕಾಟುಸಿ ಅಕ್ಕಿ ಅವಲ್		೧೫-೮-೦	೧೫-೮-೦
,, ಗುಯಂ		೧೭ ೮-೦	೧೪-೪-೦
ಜಾಪಾನ್ ಅಕ್ಕಿ		೧೬ ೮ ೦	೧೫-೦-೦
ಸಣ್ಣಕ್ಕಿ ಅವಲ್		೧೭-೦-೦	೧೭ ೦-೦
,, ದುಯಂ		೧೩ ೮-೦	೧೩-೪-೦
ತೆಂಗಿನ ಬೇಳೆ ಪಲ್ಲ ೧ಕ್ಕೆ		೧೩-೦-೦	೧೩-೦-೦
,, ದುಯಂ		೧೫ ೮-೦	೧೫-೮-೦
ರಾಗಿ ಧಾರಿ ಪಲ್ಲ ೧ಕ್ಕೆ		೬ ೪-೦	೬ ೮-೦
ಕಾಬ್ರಾಗಿ		೩ ೪-೦	೭-೪-೦
ಜೋಳ		೩ ೦ ೦	೮-೧೨-೦
ಹುರುಳಿ ಪಲ್ಲ ೧ಕ್ಕೆ		೧೧-೦-೦	೧೦-೧೨-೦
ಬಿಳೀ ಅವರೆ		೮-೮-೦	೯-೦-೦
ಹೆಸರು		೧೧ ೮-೦	೧೨-೮-೦
ಉದ್ದು		೧೨-೮-೦	೧೨ ೮-೦
ಕಡಲೆ		೧೩-೮ ೦	೧೩ ೮-೦
ಎಳ್ಳು ಮೌ ೧ಕ್ಕೆ		೨೦-೮-೦	೨೩-೮-೦
ತೊಗರಿ		೩-೮-೦	೭-೪-೦
ಕರಿಮೆಣಸು ಮೌ ೧ಕ್ಕೆ		೧೯ ೮-೦	೧೨-೮-೦
ಸೀಗೆಕಾಯಿ ಮಣ ೧ಕ್ಕೆ		೧ ೮ ೧	೧-೩-೦
ನೆಲಗಡಲೆ		೪ ೪-೦	೩-೮-೦
,, ದುಯಂ		೩-೪-೦	೩-೪-೦
ಹಿಪ್ಪೆ ಮೊಗ್ಗು ಚಕ್ಕೆ		೪ ೦-೦	೫ ೨-೦-೦
ಬೆಲ್ಲ ಮಣ ೧ಕ್ಕೆ		೫ ೮-೦	೩-೦-೦
ಸಕ್ಕರೆ		೪-೧೨-೦	೪-೦-೦
ಕೊಬ್ಬರಿ ಪಲ್ಲ ೧ಕ್ಕೆ		೩-೧-೦	೩ ೪ ೦
ಉಪ್ಪು		೪ ೮-೦	೫ ೦ ೦
ಹುಣಸೇ ಹಣ್ಣು		೧-೮ ೦	೧ ೪ ೦
,, ಹಳೇದು		೧-೪ ೦	೧ ೫ ೦
ತುಪ್ಪ ಮಣ ೧ಕ್ಕೆ		೧೩ ೮ ೦	೧೫ ೪-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೪ ೧೫-೦	೪ ೦ ೦
ತೆಂಗಿನಕಾಯಿ ೧೦೦ ಕ್ಕೆ		೪ ೦-೦	೩ ೦ ೦
ಎಳೆಲೆ ಕಾಯಿ ಮಣ ೧ಕ್ಕೆ		೧-೦-೦	೧-೦-೦
ಅಂಟುವಾಳದ ಕಾಯಿ ಮಣ ೧ಕ್ಕೆ		೦-೧೨-೦	೦-೧೪-೦
ಚಿನ್ನ (ಪೌನ್) ಒಂದು		೧೫ ೩-೦	೧೫-೩-೩
,, ,, ಪವನು		೧೫ ೧೦-೦	೧೫-೧೨-೦
,, ,, ಗಟ್ಟಿ ತೊ ೧ಕ್ಕೆ		೨೩-೧೨-೦	೨೪ ೯-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೭೫-೦-೦	೭೭-೨-೦

Printed and Published by the Rev E W THOMPSON, M. A., Proprietor and Manager, Wesleyan Mission Press, Mysore. 13/8/1908.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೨ | ಮೈಸೂರು—ಸರ್ ೧೯೦೮ ನೇ ಇಸವಿ ಆಗಸ್ಟ್ ತಾರೀಖು ೨೦ ನೇ ಗುರುವಾರ. | ಸಂಚಿಕೆ ೧೨

AMRUTANJAN DEPOT, 16 OAK-LANE, BOMBAY. [17-26]

ಗುಣ ಕಂಡುಬರುವದಿಲ್ಲವಾದರೆ ಹಣ ಮರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ :—ವಾತ, ಸಂಧಿವಾತ, ತಲೆನೋವು ಶಿರೋಭ್ರಾಂತಿ, ಅರ್ಧಾಂಗವಾಯು, ಜಕಮ್ ಮತ್ತು ಗಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ ಕ್ಕೆ ಕಿಮ್ಮತ್ತು ೦ ೮-೦ ಪೋಸ್ಟು ಖರ್ಚು ೦-೪-೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಬಜ್ಜೆ ವಗೈರೆ ನಾಶವಾಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦ ೪-೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ—ಜೀರ್ಣಕ್ಕೆ ಡಬ್ಬಿ ೧ ಕ್ಕೆ.	೧—೪—೦	ಕಾಮವರ್ಧಿಗುಟಿಕೆ—ಹೆಂಗಸರ ಹೊಟ್ಟೆನೋವಿಗೆ	೧—೦—೦
ವಜ್ರಗುಟಿಕೆ—ಧಾತು ಪುಷ್ಟಿ ರಕ್ತಶುದ್ಧಿ	೧—೦—೦	ಪ್ರಮೇಹದ ಮಿಶ್ರಣ—ಪ್ರಮೇಹಕ್ಕೆ	೧—೦—೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ ಕ್ಕೆ	೦—೧೨—೦	ಕಫಹರಿ—ಕಫ, ಕೆಮ್ಮು ಕ್ಷಯ, ಇತ್ಯಾದಿ	೧—೪—೦
ಜೀಳುಕಟುಕದ ಮದ್ದು	೦—೮—೦	ಸುಂದರೀ ತೈಲ್ಯ—ಮೋರೆಗೆ	೦—೮—೦
ದಂತಶೂಲಹರಿ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಕರ್ಣಶೂಲಹಾರಿ—ಕಿವಿನೋವಿಗೆ	೦—೬—೦	ಉರಿನಾಶಕ ಎಂಜೆ ಬಾಟ್ಲಿ ೧ ಕ್ಕೆ	೦—೮—೦
ಬಜ್ಜೆಯ ಮುಲಾಮು	೦—೩—೦	ವಾತದ ಮಿಶ್ರಣ ,,	೧—೦—೦
ದಂತಮಂಜನ—ಹಲ್ಲುಗಳಿಗೆ	೦—೨—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
ಕೇಶವರ್ಧಿನೀ ತೈಲ್ಯ—ಕೂದಲಿಗೆ	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
ಬಾಲಾಮೃತ ಮಾತ್ರೆ,—ಬಾಲಕರಿಗೆ	೦—೮—೦	ರೋಗಹಾರಿ	೦—೮—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೭ ಓಕ್‌ಲೇನು ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು :—"ಅಮೃತಾಂಜನ," ಮುಂಬಯಿ.

ಮಹಾ ಬಾಧಾಪಹಾರಿಣಿಯು.

48-13

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಯುಕ್ತಿಶೀಲ ರೇಖನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ಪರ್ತಕರು, ಸಾಧುಸ್ಥಾಪಕರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಾರೆ, ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಕಳಕು, ಗಂಟ್ಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಉಳುಕಾದ ನೋವು, ಹಲ್ಲುನೋವು ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಡಗಿಸಿಬಿಡುತ್ತದೆ ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳುತ್ತಾರೆ

ಕ್ರಯ ಶೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಅಥವಾ ೬ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಳಕೆ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್ ಪಿಂಟಸ್,

೩೭, ಪೆದಮುಟಿಬಳ್ಳ ಬೀದಿ, ವೇಪೇರಿ, ಮದರಾಸ್.

ಜ್ವರಹರಿ

64-3



ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು. ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟು ಚಳ್ಳಕೆರೆಯಲ್ಲಿರುವ ಮಲಾಮುತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಬುಡ್ಡಿಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಚಳಿಜ್ವರ ಪೀಡಿತರು ಆರೋಗ್ಯ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವ ದರಿಂದ ದಯವಿಟ್ಟು ಇನ್ನೊಂದು ೨೦ ಬುಡ್ಡಿಸಿನ ಸೀಸೆಯನ್ನು ವಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ :—ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ , ೨ರೂ. ೩—೧೨ ಆ. ; ೧೧ ರೂ. , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂಕರ್ಪೂರ

Omum-Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಡಮಾಪಳಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯಾಂತ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗೋಪಾಲಯ್ಯನವರು—ನೀವು ಕೊಟ್ಟ ಓಮಂ ಕರ್ಪೂರವನ್ನು ನಾನೂ ನನ್ನ ಕಾರ್ಯದಾರರೂ ಉಪಯೋಗಿಸಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಸ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಚಾರಿಸಿ —

ಸೌತ್ ಇಂಡಿಯಾ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೇಂಟ್ ಜಾರ್ಜ್ ಫೋರ್ಟ್ ಮದರಾಸ್

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

53 3

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಕು ಬಟ್ಟೆಗಳು ನಾಡೂರಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ಐದು ಆಣೆಯಿಂದ ೬ ಆಣೆ ವರೆವಿಗೂ ಬೆಲೆಯಾಗಿ. ಯಾಗಲೀ ಬಟ್ಟಾಗಿ ಯಾಗಲೀ ಮಾರಲ್ಪಡುತ್ತವೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ
ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) . . . . ರೂ ೧—೨—೦
ಪಸ್ತ್ಕಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ
ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಡಾಕ್ ಸೇರಿ ರೂ ೧—೧೪—೦
" " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-27

೧. ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು. ಮೈ ಕೈಕಾಲು ಕೂಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ತಲೆನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅತಿಸಾರ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿದ್ದು ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಧೆಗೂ ದಾರಿಕೊಡದೆ, ನೀರು ಬಾಯಿಗೆ ಬಿಡಲಾವನೆಯನ್ನು ಪರಿಹರಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಪುಷ್ಟಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಬ್ರಾತ, ಸಚ್ಚೂಜ್ವರ ಕೃಶತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ರೂಪಾಯಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ :—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ತ್ವರಾಗಿ ಇಂಗ್ಲಿಷ್ ಕಲಿಯುವಿಕೆ.

61-2

ಇಂಗ್ಲಿಷ್ ಭಾಷೆಯನ್ನು ಬರೆಯುವುದಕ್ಕೂ, ಓದುವುದಕ್ಕೂ, ಮಾತಾಡುವುದಕ್ಕೂ, ಬೋಧಕರ ಸಹಾಯ ಸ್ವಲ್ಪವೂ ಇಲ್ಲದೆ ಒಂದೆರಡು ತಿಂಗಳುಗಳಲ್ಲಿಯೇ ತಾನಾಗಿ ಕಲಿಸುವ ಅತ್ಯುತ್ತಮವಾದ ಪುಸ್ತಕ. ಕ್ರಯ ೧—೪—೦

ಪ್ರಶ್ನೋತ್ತರ ಲೇಖ್ಯಬೋಧಿನಿ.

ಸ್ವಲ್ಪ ಪ್ರತಿಗಳೇ ಉಳಿದಿವೆ. ೩೬೦ ಪುಟಗಳು ಆಯಾ ಮತ ಪದ್ಧತಿಯನ್ನು ನುಸರಿಸಿ ಬರೆಯುವ ಮಯರ್ಖಾದೆ, ಒಕ್ಕಲುಗಳು, ಸಿವಿಲ್, ಮೇಜಿಸ್ಟ್ರೇಟ್, ರೆವಿನ್ಯೂ, ಪೊಲೀಸ್, ಇಂಜನಿಯರ್, ಫಾರೆಸ್ಟ್, ಯಕ್ಸೈಜು, ವಿದ್ಯಾಭ್ಯಾಸ, ಮತ್ತು ಇನ್ನು ಇತರ ಇಲಾಖೆಗಳ ಬಗೆಬಗೆ ಸಂಗತಿಗಳೂ, ರೈತರಿಗೆ ರಿಯಾಯತಿ ದೊರೆಯುವ ಬಗೆಬಗೆ ಅರ್ಜಿಗಳೂ, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಹಿಂದೂ ಲಾ, ಮಹಮದೀಯ ಲಾ, ಕಂಪನೀಸ್ ಆಕ್ಟ್, ಲ್ಯಾಂಡ್ ಅಕ್ವಿಜೆಷನ್, ದೊಡ್ಡಿ, ಅರಂಸು ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳೂ, ಕೋರ್ಟುಗಳಿಗೂ ಪೋಲೀಸಿಗೂ ಇರುವ ಅಧಿಕಾರ, ವರ್ತಕರಿಗುಪಯೋಗದಾದ ಎಲ್ಲಾ ರೋಜು ವರ್ಗ ಲೆಕ್ಕಗಳು, ಖಾನುಭಾವಿಗೆ ಲೆಕ್ಕ ಬರೆಯುವ ರೀತಿ, ಇವುಗಳ ಸಾರಾಂಶವನ್ನೆಲ್ಲಾ ವಿವರಿಸಿದೆ ಪುಸ್ತಕದಲ್ಲಿರುವ ಸಂಗತಿಗಳನ್ನೆಲ್ಲಾ ವಿವರಿಸಲು ಸ್ಥಳಸಂಕೋಚದಿಂದ ಇಲ್ಲಿ ಸೂಕ್ಷ್ಮವಾಗಿ ತಿಳಿಸಲಾಗಿದೆ ಕ್ರಯ ೧—೪—೦. ವಿಳಾಸ —ಮ್ಯಾನೇಜರ್ ಕರ್ನಾಟಕ ಪುಸ್ತಕ ಶಾಲಾ, ಲಕ್ಷ್ಮೀರ್ ಪೋಸ್ಟ್, ತಾ॥ ಮಾಲೂರು, ಕೋಲಾರ್ ಡಿಸ್ಟ್ರಿಕ್ಟ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಲ್ಲಿ ಛಳುಕು ; ನಿದ್ರೆಯಿಲ್ಲದೆ ಇರುವುದು , ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು ; ಬಿಡದೆ ಬಾಯಾರಿಕೆ ; ಬಳಲಿಕೆ ; ಎದೆ ತಲ್ಲಣಿಸುವುದು , ತಲೆನೋವು ; ಗಾಬರಿ ; ಕಣ್ಣು ಮೊಬ್ಬು ; ತಲೆ ತಿರುಗುವಿಕೆ ; ಮೈನೋವು ಕೀಲುನೋವು , ಮರವು ; ನಿತ್ರಾಣ ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [93-51]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦ , ಅಥವಾ ೬ ಬುಡ್ಡಿಗಳಿಗೆ ರೂ. ೧೦ ೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಒ. ಬಾಕ್ಸ್ ೨೦, ಬೊಂಬಾಯಿ.—ಇವರಲ್ಲಿ ದೊರೆಯುವುದು.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಗೊಂಡು ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಆವಶ್ಯಕ

SCOTT'S EMULSION 33-21

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವುವು.

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿದೆ.

ಮೀನುಮನುಷ್ಯ ಇರುವ ಈ ಔಷಧದ ಗುರುತು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲಂಡ್.

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡು ಹಿಡಿದ ಕೆಮ್ಮಿನ ಔಷಧವು.

1-35



ಶೀತದ ಕೆಮ್ಮು, ಗಂಟಲು ಗಾರೆಗಟ್ಟುವುದು, ಮುದಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ಕಡೆಯಾಗಿ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನು ಶ್ಲೇಷ್ಮ ಬೀಳುವುದನ್ನು ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಕೊಳ್ಳುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

'ಜ್ವರದ ಗುಳಿಗೆಗಳು.'

೧ ಬಾಕ್ಸಿಗೆ ೧ ರೂಪಾಯಿ. ೪ ಬಾಕ್ಸಿಗೆ ೩ ರೂಪಾಯಿ, ೧೨ ಬಾಕ್ಸಿಗೆ ೮ ರೂಪಾಯಿ

ಡಾಕ್ಟರ ಸರ್ ಬಾಲಚಂದ್ರ ಕೃಷ್ಣ ನಾಯಿಟ್. ಎಂ ಏ. [illegible] ಪ್ರೆಸಿಡೆಂಟ್ ಮುಂಬಯಿ ಮುನಿಸಿಪಾಲ್ ಕಾರ್ಪೋರೇಶನ್, [illegible] ಮುಂಬಯಿ ಕಾಯಿದೇ ಕೌನ್ಸಿಲಿನ ಆನರೇಬಲ್ ಮೆಂಬರ. [illegible] ಸಂಸ್ಥಾನದ ಮಾಜೀ ಮುಖ್ಯ ಮೆಡಿಕಲ್ ಆಫೀಸರ್, ಇವರ ಅಭಿಪ್ರಾಯ:—

[illegible] ಭಾಗಗಳಲ್ಲಿ [illegible] ಬಿಟ್ಟು ಬಿಟ್ಟು ಬರುವ ಎಲ್ಲ ಪ್ರಕಾರದ ಜ್ವರಗಳ ಮೇಲೆ [illegible] ನನಗೆ [illegible] ಈ ಗುಳಿಗೆಗಳಲ್ಲಿರುವ ಔಷಧಿಗಳು ಬಿಟ್ಟು ಬಿಟ್ಟು ಬರುವ [illegible] ಜ್ವರಗಳ ಮೇಲೆ [illegible] ಉಪಯೋಗಿಸಲ್ಪಡುತ್ತವೆ. [illegible] ಉಪಯೋಗಿಸಬಹುದು. ಮುಂಬಯಿ ತಾ. —೯— ೦೮

ಡಾಕ್ಟರ [illegible] ಎಮ್. ಡಿ. [illegible] ಮುಂಬಯಿ [illegible] ಕೇಂಬ್ರಿಜ್. ಫೆಲೋ [illegible] ಮುಂಬಯಿ ಯುನಿವರ್ಸಿಟಿ.

Late Special Plague Medical Officer. Bombay and Calcutta: Lecturer on Public Health and Surgery, Zenana Medical College, London: Assistant Medical Officer, Shoreditch Infirmary and Work-house, London, Examiner in Medical Jurisprudence and Hygiene to the University of Bombay: Tutor in Chemistry and Medical Jurisprudence, Grant Medical College: Public Health Scholar and Medallist, University College, London. &c, &c.

ಇವರ ಅಭಿಪ್ರಾಯ:—

ಗಣೇಶ ರಾಮಚಂದ್ರ ಕರ್ಶೆ ಮತ್ತು ಕಂಪನಿ ಇವರ ಜ್ವರದ ಗುಳಿಗೆಗಳು [illegible] ಪರೀಕ್ಷಿಸುವ [illegible] ನನ್ನ ಕಡೆಗೆ ಬಂದಿದ್ದವು. ನಾನು ಈ ಗುಳಿಗೆಗಳನ್ನು ಪರೀಕ್ಷಿಸಿದೆನು. ನನಗೆ [illegible] ಔಷಧದ್ರವ್ಯಗಳು ಈ ಗುಳಿಗೆಗಳಲ್ಲಿ ಇರುತ್ತವೆ. ಮತ್ತು ಅವು ಒಂದೇ ಪ್ರಮಾಣದಲ್ಲಿವೆ ಈ ಔಷಧದ್ರವ್ಯಗಳ ಗುಣ ಮತ್ತು ಅವುಗಳ ಪ್ರಮಾಣ ಇವುಗಳ ಮೇಲಿಂದ ನಾನು ಅಭಿಪ್ರಾಯಪಡುವದೇನಂದರೆ:—ಈ ಗುಳಿಗೆಗಳು ಎಲ್ಲಾ ಪ್ರಕಾರದ ಜ್ವರಗಳ ಮೇಲೂ ಮುಖ್ಯವಾಗಿ ಬಿಟ್ಟು ಬಿಟ್ಟು ಬರುವ ಎಲ್ಲ ಪ್ರಕಾರದ ಜ್ವರಗಳ ಮೇಲೂ [illegible] ಕಾರಿಯಾಗಲಿಕ್ಕೆ ಬೇಕು ತಾ. ೩೧—೧೦— ೯೦೮

ಡಾಕ್ಟರ [illegible] ಎಲ್. ಎಂ. ಎಸ್. [illegible] ಲಂಡನ್. ಎಲ್. ಎಮ್. ಎಸ್. ಮುಂಬಯಿ. ಅಸಿಸ್ಟೆಂಟ್ ಸರ್ಜನ್. ಫಸ್ಟ್ ಕ್ಲಾಸ್. ಬಿ. ಎಮ್. ಎಸ್. [illegible], ಇವರ ಅಭಿಪ್ರಾಯ:—

[illegible] ಮೇಲೆ ನಾನು ಮುಖ್ಯಾಧಿಕಾರಿಯಾಗಿದ್ದು [illegible] ಬಿಟ್ಟು ಬಿಟ್ಟು ಬರುವ ಎಲ್ಲ ಪ್ರಕಾರದ ಜ್ವರಗಳ ಮೇಲೆ ಈ ಗುಳಿಗೆಗಳನ್ನು ಉಪಯೋಗಿಸಿ [illegible] ಈ ಗುಳಿಗೆಗಳು ಬಹಳ [illegible] ಕಂಡುಬಂದವು.

ಈ ಗುಳಿಗೆಗಳಲ್ಲಿ [illegible] ಔಷಧಗಳ [illegible] ನಾನು ಬಲ್ಲೆನು ಈ ಔಷಧದ್ರವ್ಯಗಳು ಪೂರ್ಣವಾಗಿ [illegible] ಯಾಗಿವೆ

ಡಾಕ್ಟರ [illegible] ಎಲ್. ಎಮ್. ಎಸ್. ಮುಂಬಯಿ, ಎಫ್. ಆರ್. ಸಿ. ಎಸ್. ಎಡಿಂಬರ್ಗ, ಡಿ. ಪಿ. ಎಚ್. ಲಂಡನ್, ಇವರ ಅಭಿಪ್ರಾಯ:—

[illegible] ಕರ್ಶೆ [illegible] ಜ್ವರದ ಗುಳಿಗೆಗಳ ಔಷಧಗಳ [illegible] ಇವು ಕ್ವಿನೈನ್ ಯುಕ್ತವಾದ ಮತ್ತು ಗುಣಕಾರಕ ಔಷಧಗಳಿಂದ [illegible] ನಾನು [illegible] ಮಲೇರಿಯಾ [illegible] ಉಂಟಾಗುವ [illegible] ಔಷಧಗಳ [illegible] ಇರುವ ಅನೇಕ ಜನರಿಗೆ ಈ ಗುಳಿಗೆಗಳು ಒಳ್ಳೇ ಗುಣಯುಕ್ತವಾದವುಗಳೆಂದು ನಾನು [illegible] [66-2]

ಮುಂಬಯಿ ತಾ. ೧೯—೧೦—೯೦೦

ಡಾಕ್ಟರ [illegible] ಎಮ್. ಡಿ. [illegible], ಇವರ ಅಭಿಪ್ರಾಯ.—

ಮೆಸರ್ಸ್ ಕರ್ಶೆ [illegible] ಇವರ ಜ್ವರದ ಗುಳಿಗೆಗಳನ್ನು ನಾನು [illegible] ಅವುಗಳೊಳಗಿನ ದ್ರವ್ಯಗಳು [illegible] ಔಷಧಗಳು [illegible] ಅವುಗಳನ್ನು ನಾನು ಉಪಯೋಗಿಸಲಿಕ್ಕೆ [illegible] ಬಿಟ್ಟು ಬಿಟ್ಟು ಬರುವ ಜ್ವರಗಳಲ್ಲಿ [illegible] ಜ್ವರಗಳ ಮೇಲೆ [illegible] ಮತ್ತು ಈ ಪ್ರಕಾರದ [illegible] ಮೇಲೂ, ಅವು ಎಲ್ಲಿ [illegible] ಕಡೆಗಳಲ್ಲಿಯೂ ಗುಣಕಾರಿಯಾಗಿ ಕಂಡುಬಂದವು [illegible] ಈ ಯಥಾರ್ಥವಾದ ಸಂಗತಿಗಳನ್ನು ಎಲ್ಲ ಜನರಲ್ಲಿ ಪ್ರಸಿದ್ಧಪಡಿಸಲಿಕ್ಕೆ ನನಗೆ ಆನಂದವಾಗುತ್ತದೆ.

ವಿಳಾಸ —ಗಣೇಶ ರಾಮಚಂದ್ರ ಕರ್ಶೆ ಮತ್ತು ಕಂಪನಿ. ಠಾಕುರದ್ವಾರ. ಮುಂಬೈ.

ನಿಮಗೆ ಸುಪೀರಿಯರ್ ಉಲ್ ಬೇಕೇ?

ನಿಮಗೆ ದಪ್ಪದ ಉಲ್ ಬೇಕೇ ?

117-44

೧೦ ಟೋಪಿ ಆಗುವ ಸುಪೀರಿಯರ್ ಉಲ್ ಬಂಡಲಿಗೆ	೩-೮-೦
ವಿಲಾಯಿತಿ ಉಲ್ ಪೌಂಡು ಒಕ್ಕೆ	೨-೮-೦
೧೦ ಟೋಪಿಯಾಗುವ ದಪ್ಪದ ಉಲ್ ಬಂಡಲಿಗೆ	೩-೩-೦
ಸತ್ಯವಿಜಯ ಹೇರ್ ಆಯಿಲ್ ಶೀಸೆಗೆ . . .	೧-೦-೦

ಮೇಲ್ಕಂಡವುಗಳನ್ನು ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ-ಪ್ರೊಪ್ರೈಟರ್, ದಿ ಉಲ್ ಮಾರ್ಟ್, ಮಂಗಳೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

2 31

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ; ೧ ರೂ ೬ ಆ.; ೧ ರೂ. ೪ ಆ.

ರೇಶ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ., ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ. ೮ ಆ., ೧ ರೂ. ೬ ಆ.

ಕೂಸುಗಳ ಟೋಪಿ, ಸೂಟ್ಟರ್ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುತ್ತೇವೆ.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ವೃತ್ತಾಂತ ಪತ್ರಿಕೆ.

ಸ್ ೧೯೦೮ ನೇ ಇಸವಿ ಅಗಸ್ಟ್ ತಾ॥ ೨೦ ನೇ ಗುರುವಾರ

ಮೈಸೂರು ವರ್ತಮಾನ ಪತ್ರಿಕೆಗಳ ಕಾನೂನು.

ಮೈಸೂರು ಸಂಸ್ಥಾನದ ನ್ಯಾಯವಿಧಾಯಕ ಸಭೆಯವರು ಒಪ್ಪಿ ಪ್ಯಾಸ್‌ಮಾಡಿದ ವರ್ತಮಾನ ಪತ್ರಿಕೆಗಳ ಕಾನೂನಿನ ಭಾಷಾಂತರವನ್ನು ಕಳೆದ ವಾರ ವಾಚಕರಿಗೆ ತಿಳಿಸಿರುತ್ತೇವೆ. ಆ ಕಾನೂನಿನಲ್ಲಿ ವಿವರಿಸುವ ನಿರ್ಬಂಧಗಳು ಅವಶ್ಯವಾಗಿರುತ್ತವೆಂದೂ, ಅವುಗಳಿಂದ ಮೈಸೂರು ಗವರ್ನಮೆಂಟಿಗೂ ಇಲ್ಲಿನ ಪ್ರಜೆಗಳಿಗೂ ಪ್ರಯೋಜನವಾಗುವುದೆಂದೂ ನಾವು ನಂಬುತ್ತೇವೆ.

ಮೇಲ್ಕಂಡ ನ್ಯಾಯವಿಧಾಯಕ ಸಭೆಯಲ್ಲಿ ನಡೆದ ಚರ್ಚೆಗಳನ್ನು ನೋಡಲಾಗಿ ಮೆಂಬರುಗಳು ತಿಳಿಸಿರುವ ಅಭಿಪ್ರಾಯಗಳೇನೆಂದರೆ—ಈ ಸಂಸ್ಥಾನದ ಕೆಲವು ಪತ್ರಿಕೆಗಳು ಬಹು ಕಾಲದಿಂದಲೂ ಗವರ್ನಮೆಂಟಿನವರ ಕಾರುಬಾರುಗಳನ್ನೂ ಹುಕುಮುಗಳನ್ನೂ ನ್ಯಾಯವಾದ ರೀತಿಯಲ್ಲಿ ವಿವರಿಸದೆ, ಅಪಾರ್ಥವಾಗುವಂತೆ ಅಭಿಪ್ರಾಯಗಳನ್ನು ಕಲ್ಪಿಸಿ ಪ್ರಕಟಿಸುತ್ತಾ, ತಿಳುವಳಿಕೆ ಸಾಲದಂಥಾ ವಾಚಕರನ್ನು ಮೋಸಪಡಿಸುತ್ತಾ ಬಂದಿರುತ್ತವೆ. ಇದರಿಂದ ಪ್ರಜೆಗಳಲ್ಲಿ ಸಾರ್ವಭೌಮ ಇಂಗ್ಲಿಷ್ ಪ್ರಭುತ್ವದ ಮೇಲೂ, ಈ ಸಂಸ್ಥಾನವನ್ನಾಳುವ ಶ್ರೀಮನ್ಮಹಾರಾಜರವರ ಮೇಲೂ ಇರುವಂಥಾ ನ್ಯಾಯವಾದ ರಾಜಭಕ್ತಿ ವಿಶ್ವಾಸಾದಿಗಳಿಗೆ ಕಳಂಕವುಂಟಾಗುವುದೆಂಬ ಮಹಾ ಅಪಾಯಕರವಾದ ಶಂಕೆ ಹುಟ್ಟಿರುವುದು. ಇಷ್ಟೇ ಅಲ್ಲ, ಪತ್ರಿಕೆಗಳು ಮನಸ್ಸನ್ನು ಕೊರೆಯುವಂಥಾ ಅಬದ್ಧ ದೋಷಾರೋಪಣೆಗಳನ್ನು ಮಾಡುತ್ತಾ ಬಂದಿರುವುದರಿಂದ ಪ್ರಜೆಗಳಿಗೆ ಗವರ್ನಮೆಂಟ್ ಅಧಿಕಾರಿಗಳ ಮೇಲೆ ಇರಬೇಕಾದ ಭಯಭಕ್ತಿ ವಿಶ್ವಾಸಾದಿಗಳು ಕಡಮೆಯಾಗುವುದಕ್ಕೂ ಸರ್ಕಾರದ ವರ್ಚಸ್ಸು ಸಡಿಲವಾಗುವುದಕ್ಕೂ ಅಸ್ಪದವಾಗುತ್ತಲಿದೆ. ಇಂಥಾ ಸಂದರ್ಭದಲ್ಲಿ ಮೈಸೂರು ಗವರ್ನಮೆಂಟಿನವರು ಏನಾದರು ಕಾರ್ಯಗಳನ್ನು ಮಾಡಬೇಕಾಗಿತ್ತು. ಮೊದಲನೆಯದಾಗಿ, ಗವರ್ನಮೆಂಟಿನವರು "ಮೈಸೂರು ಸ್ಟ್ಯಾಂಡರ್ಡ್" ಪತ್ರಿಕೆಗೆ ಮಾಡಿದಂತೆ ಹುಕುಂ ಕೊಟ್ಟು, ಹದ್ದುಮೀರಿ ಹೋದಂಥಾ ಪತ್ರಿಕೆಯನ್ನು ನಿಲ್ಲಿಸಿಬಿಡಬಹುದು. ಈ ಸಂಸ್ಥಾನದಲ್ಲಿ ಅಂಥಾ ಹುಕುಂ ಕೊಡಲು ಶ್ರೀಮನ್ಮಹಾರಾಜರವರಿಗೆ ಸ್ವಾತಂತ್ರ್ಯವಿರುತ್ತದೆ. ಇಂಥಾ ಸ್ವಾತಂತ್ರ್ಯವಿರುವುದರಿಂದಲೇ ನೈಜಾಮರವರ ಹೈದರಾಬಾದ್ ಸಂಸ್ಥಾನದಲ್ಲಿ ಪತ್ರಿಕೆಯನ್ನು ಪ್ರಕಟಿಸುವುದಕ್ಕೆ ಯಾರಿಗೂ ಅವಕಾಶಕೊಡುವುದಿಲ್ಲ. ಅದರೆ ಹೀಗೆ ಮಾಡೋಣವರಲ್ಲಿ ಅನೇಕ ಕೊರತೆಗಳು ಉಂಟಾಗುವವು. ಗವರ್ನಮೆಂಟಿನವರು ಎಲ್ಲಿ ಹಾಗೆ ಮಾಡುವರೋ, ಅಥವಾ ಯಾವಾಗ ಅಂಥಾ ಹುಕುಂ ಕೊಡುವರೋ ಎಂದು ಎಡಿಟರುಗಳಿಗೆ ಸಂದೇಹವಿದ್ದೇ ಇರುತ್ತದೆ. ಎರಡನೆಯದಾಗಿ, ದುಷ್ಟವಾದ ವಾರ್ತೆಗಳನ್ನು ಪ್ರಕಟಿಸಿದಂಥಾ ಪತ್ರಿಕೆಯನ್ನು ಗವರ್ನಮೆಂಟಿನವರು ಕ್ರಿಮಿನಲ್ ಕೋರ್ಟಿನ ಸೆಕ್ಷನುಗಳಿಗೆ ಗುರಿಪಡಿಸಿ ಕೋರ್ಟಿನಲ್ಲಿ ಫಿರ್ಯಾದು ಮಾಡಬಹುದು. ಎಡಿಟರು ರಾಜದ್ರೋಹ ಜಾತಿ ಜಾತಿಗಳಿಗೆ ವಿರೋಧ ... ಅವಮಾನಕರವಾದ ಇವೇ ಮೊದಲಾದ ಅಪರಾಧಗಳನ್ನು ಮಾಡಿರುತ್ತಾನೆಂದು ಅವನ ಮೇಲೆ ಮೊಕದ್ದಮೆ ತಂದು ಶಿಕ್ಷೆಗೆ ಗುರಿಮಾಡಬಹುದು. ಹೀಗೆ ಮಾಡಿದ ಪಕ್ಷದಲ್ಲಿ ಮೊಕದ್ದಮೆಗಳು ದೀರ್ಘವಾಗಿ ನಡೆಯುವುದಕ್ಕೆ ಅವಕಾಶವಾದೀತು. ಅಂಥಾ ಎಡಿಟರು ಮತ್ತೆ ಆ ರೀತಿಯಾದ ಕ್ಷುದ್ರ ಬರವಣಿಗೆಗಳನ್ನು ಬರೆದು ಪ್ರಕಟಿಸದಂತೆ ಗವರ್ನಮೆಂಟಿನವರು ಅಚ್ಚಿನ ಮೊಳೆ ಯಂತ್ರಗಳನ್ನು ಕಿತ್ತು ಸ್ವಾಧೀನಪಡಿಸಿಕೊಳ್ಳ ಬಾರದುವುದಿಲ್ಲ. ಶ್ರೀಮನ್ಮಹಾರಾಜರವರು ಇವೆರಡಕ್ಕೂ ಮಧ್ಯಸ್ಥವಾದ ಮಾರ್ಗವನ್ನು ಅವಲಂಬಿಸಿ, ಪತ್ರಿಕೆಗಳನ್ನು ನಡಿಸತಕ್ಕವರು ಮೊದಲು ಸರ್ಕಾರದವರನ್ನು ಕೇಳಿ ಅಪ್ಪಣೆ ಪಡೆಯಬೇಕೆಂದು ವಿಧಿಸಿದ್ದಾರೆ. ಅದರಿಂದ ಗವರ್ನಮೆಂಟಿನವರು ಒಪ್ಪುವ ರೀತಿಯಲ್ಲಿ ಪತ್ರಿಕೆಯನ್ನು ನಡಿಸುತ್ತಾ ಇರುವ ತನಕ ತನ್ನ ಲೈಸೆನ್ಸಿಗೆ ಯಾವ ಕ್ಷತಿಯೂ ಉಂಟಾಗಲಾರದೆಂದು ಎಡಿಟರು ತಿಳಿದುಕೊಳ್ಳುತ್ತಾನೆ. ಅವನೇನಾದರೂ ಗವರ್ನಮೆಂಟಿನವರನ್ನು ರೇಗಿಸಿದ ಪಕ್ಷದಲ್ಲಿ ಅವರು ಅವನ ಅಚ್ಚಿನ ಮೊಳೆ ಯಂತ್ರಾದಿಗಳನ್ನು ಕಿತ್ತುಕೊಂಡು, ಅವನನ್ನು ಗಡೀಪಾರು ಮಾಡುವರು. ಈ ಕಾನೂನು ವರ್ತಮಾನ ಪತ್ರಿಕೆಗಳನ್ನು ಗವರ್ನಮೆಂಟಿನವರ ಕರುಣೆಗೂ ಅವರ ಧರ್ಮನಿರತತ್ವ ಸತ್ಯತೆಗಳಿಗೂ ಪಾತ್ರವಾಗಿರುವಂತೆ ಮಾಡುವುದೆಂದು ಕಾಣುತ್ತದೆ. ಗವರ್ನಮೆಂಟು ಕ್ರೂರವಾಗಿಯೂ ಅಧರ್ಮವಾಗಿಯೂ ಇರುವ ಪಕ್ಷದಲ್ಲಿ ನ್ಯಾಯವಾಗಿಯೂ ಸುಭಗವಾದ ರೀತಿಯಲ್ಲೂ ನಡಿಸಲ್ಪಡುತ್ತಿರುವಂಥಾ ಪತ್ರಿಕೆಯನ್ನು ಕೂಡ ಅದು ಅಡಗಿಸಿಬಿಡುವುದಕ್ಕೆ ಸಂಶಯವಿಲ್ಲ.

ಇನ್ನು ಮೇಲೆ ಮೈಸೂರು ಗವರ್ನಮೆಂಟಿನ ಕಾರುಬಾರುಗಳನ್ನು ಯಾವ ವರ್ತಮಾನ ಪತ್ರಿಕೆಯೂ ಧೈರ್ಯವಾಗಿ ಆಕ್ಷೇಪಣೆ ಮಾಡುವ ಹಾಗಿಲ್ಲವೆಂದು ಹೇಳುತ್ತಿದ್ದಾರೆ. ಈ ಕಾನೂನಿನಿಂದ ಅಂಥಾ ಸ್ಥಿತಿಯು ಪ್ರಾಪ್ತವಾಗುವುದಾದರೆ ಈ ಕಾನೂನು ಇದದ್ದು ದೊಡ್ಡ ತಪ್ಪೆಂತಲೂ, ಅದರಿಂದ ಸಂಸ್ಥಾನಕ್ಕೆ ಬಹಳ ಕೇಡುಂಟಾದೀತೆಂತಲೂ ಹೇಳಬೇಕಾಗುವುದು. ಆದರೆ ಗವರ್ನಮೆಂಟಿನವರು ಆಕ್ಷೇಪಣೆಗಳನ್ನು ನಿರೀಕ್ಷಿಸುತ್ತಾರೆ; ಎವರ್ಬ್ಬರೂ ಆಕ್ಷೇಪಣೆ ಮಾಡಲಿ ಎಂದು ಹೇಳುವರು. ಈ ಗವರ್ನಮೆಂಟು ಎಷ್ಟು ಮಾತ್ರವೂ ನಿರ್ದುಷ್ಟವಾದದ್ದಲ್ಲ; ಅದರ ಕಾರ್ಬಾರರು ದುರ್ಗುಣರಹಿತರಾಗಿಲ್ಲ. ಬಹು ಪ್ರಜೆಗೆ ಸಂಬಂಧಪಡುವ ವಿಷಯಗಳನ್ನು ಜನರಿಗೆ ತಿಳಿಸಿ ಕಲಿಸಿಕೊಡಬೇಕಾಗಿದೆ. ಗವರ್ನಮೆಂಟು ಅಭಿವೃದ್ಧಿ ಹೊಂದುವುದಕ್ಕೂ ಪ್ರಜೆಗಳು ವಿದ್ಯಾವಿನಯ ಸಂಪನ್ನರಾಗುವುದಕ್ಕೂ ನಿರ್ಬಂಧವಿಲ್ಲದೆ ನುಡಿಯುವಂಥಾ ವರ್ತಮಾನ ಪತ್ರಿಕೆಗಳು ಅವಶ್ಯವಾಗಿರುತ್ತವೆ. ವಿಲಾಯತಿಯ ಪತ್ರಿಕೆಗಳಿಂದ ಅಲ್ಲಿನ ಜನರಿಗೆ ವಿಶೇಷ ಉಪಕಾರಗಳುಂಟಾಗಿರುವವು. ಮೈಸೂರು ಸಂಸ್ಥಾನಕ್ಕೆ ಅಂಥಾ ಉಪಕಾರಗಳೂ ಸಹಾಯವೂ ಅವಶ್ಯವಿಲ್ಲವೋ?

ಅದರೂ ಯೋಗ್ಯವಾದ ರೀತಿಯಲ್ಲಿ ನಡಿಸಲ್ಪಡುವ ಯಾವ ವರ್ತಮಾನ ಪತ್ರಿಕೆಯಾಗಲಿ ಈ ಕಾನೂನನ್ನು ನೋಡಿ ಭೀತಿಪಡಬೇಕಾದದ್ದಿಲ್ಲವೆಂದು ಹೇಳುವೆವು. ಪ್ರಜೆಗಳ ಹಿತವನ್ನು ಬಯಸಿ ಸತ್ಯವನ್ನೇ ಹಿಡಿದು ಹೋಗುವಂಥಾ ಎಡಿಟರು ಹೆದರಿಕೊಂಡು ತನ್ನ ಕಾರ್ಯವನ್ನು ಬಿಡಬೇಕಾದ ಅಗತ್ಯವಿಲ್ಲ. ಮೈಸೂರು ಗವರ್ನಮೆಂಟಿನವರು ಕಾರಣಸಹಿತವಾದ ಆಕ್ಷೇಪಣೆಗಳನ್ನು ಯಾರೂ ಮಾಡಕೂಡದೆಂದು ಹೇಳುವುದಿಲ್ಲ; ಅದರೆ ನಿಜವಲ್ಲದ ಸಂಗತಿಗಳನ್ನು ಕುರಿತು ಅಧಿಕಾರಿಗಳ ಅಥವಾ, ಗವರ್ನಮೆಂಟಿನ ಮೇಲೆ ಮೊಟ್ಟೆಕಟ್ಟು ಹರಟೆಗಳನ್ನು ಹೊರಪಡಿಸಿ ನಿಂದಿಸುವಂಥಾದ್ದನ್ನು ಮಾತ್ರ ಅವರು ನಿರ್ಬಂಧಪಡಿಸುತ್ತಾರೆ. ಈ ಕಾನೂನಿನ ಅಧಿಕಾರವನ್ನು ಶ್ರೀಮನ್ಮಹಾರಾಜಾ ಸರ್ಕಾರದವರು ದುರ್ವಿನಿಯೋಗ ಮಾಡಲಾರರೆಂತಲೂ ಧರ್ಮವಾಗಿ ಚಲಾಯಿಸುವರೆಂತಲೂ ನಮಗೆ ನಂಬಿಕೆಯುಂಟು.

ಈ ಕಾನೂನು ಜಾರಿಗೆ ಬಂತಲ್ಲಾ ಎಂದು ಹೆದರಿ ಸತ್ಯವಂತನೂ ನ್ಯಾಯಮಾರ್ಗದರ್ಶಕನೂ ಆದ ಯಾವ ಎಡಿಟರೂ ಈಗ ತಾನು ಮಾಡುತ್ತಿರುವ ಕಾರ್ಯವನ್ನು ಬಿಡದಿರಲಿ; ಇದುವರೆಗೆ ತಾನು ಬರೆಯುತ್ತಾ ಬಂದಿರುವ ರೀತಿಯನ್ನು ಸ್ವಲ್ಪ ಮಾತ್ರವೂ ಹೆಚ್ಚು ಕಡಮೆ ಮಾಡದಿರಲಿ. ಗವರ್ನಮೆಂಟಿಗೂ ಪ್ರಜೆಗಳಿಗೂ ಫಲಕಾರಿಯಾಗುವಂಥಾ ಸತ್ಯವಾದ ಆಕ್ಷೇಪಣೆಗಳನ್ನು ಈ ಕಾನೂನು ನಿರ್ಬಂಧಪಡಿಸುವುದಿಲ್ಲ. ಹೊಲದಲ್ಲಿ ಬೆಳೆದುಕೊಂಡಿರುವಂಥಾ ಕಳೆಯನ್ನು ಕಿತ್ತುಹಾಕುತ್ತಾ ಬಂದ ಹಾಗೆಲ್ಲಾ ಪ್ರಯೋಜನಕರವಾದ ಪೈರನ್ನು ಬೆಳೆಯಲು ಅವಕಾಶವುಂಟಾಗುತ್ತದೆ.

ಜ್ಞಾನಾಪೇಕ್ಷೆ.

ತಿನ್ನುವುದಕ್ಕೆ ಆಹಾರವಿಲ್ಲದಿದ್ದರೆ ಕ್ಷಾಮವು ಪ್ರಾಪ್ತವಾಗುತ್ತದೆಂದು ಎಲ್ಲರೂ ತಿಳಿದಿರುತ್ತಾರಷ್ಟೆ. ಅನಾವೃಷ್ಟಿಯ ಕಾಲದಲ್ಲಿ ಬೆಳೆಗಳೂ ಕೊಳೆಗಳೂ ಬತ್ತಿ ಹೋಗಿ ... ದನಗಳೂ ... ಯುವುದಕ್ಕೆ ... ವಿಲ್ಲದಂತಾಗುವುದು. ... [illegible] ... ಕಾಲದಲ್ಲಿ ಅನೇಕ ... ಕ್ರೈಸ್ತರಾಗುತ್ತಾರೆಂದು ಈ ದೇಶದಲ್ಲಿ ಕೆಲವರು ... ತಾರೆ. ಅದರ ಕಾರಣವೇ ... ಅಂಥಾ ಗತಿ ... ಕೇವಲ ಅನ್ನೋದಕಾದಿ ಕೆಲಸವೆಂದು ನಾವು ಇಲ್ಲಿ ತಿಳಿಸುವೆವು.

ಹಿಂದಿನ ಕಾಲದಲ್ಲಿ ಕ್ರೈಸ್ತಮತ ಪ್ರಚಾರಕರು ಕ್ಷಾಮ ಕಾಲಗಳಲ್ಲಿ ಜನರಿಗೆ ತಿನ್ನುವುದಕ್ಕೆ ಆಹಾರವನ್ನು ಒದಗಿಸಿಕೊಡುವರು. ಈ ರೀತಿಯಲ್ಲಿ ಅವರು ... ಅವರು ಏನು ... ವನ್ನು ... ಅನುಸರಿಸಿ ... ರುತ್ತಾರೆ ... ಗಳಲ್ಲಿರುವವರಿಗೆ ... ಸಹಾಯಮಾಡುವುದು, ಎರಡನೆಯದು ಕ್ಷಾಮದ ... ಕ್ರೈಸ್ತ ಮತಕ್ಕೆ ಸೇರಿಸಿಕೊಳ್ಳುವ ... ಕ್ಷಾಮಕಾಲಗಳಲ್ಲಿ ಕೆಲವರು ಕ್ರೈಸ್ತಮತೋಪದೇಶಕರ ಹತ್ತಿರಕ್ಕೆ ಬಂದು ಕ್ರೈಸ್ತರಾಗಬೇಕೆಂದು ತಿಳಿಸುವುದುಂಟು. ಅದರೆ ಅಂಥವರಿಗೆ ಪಾದ್ರಿಗಳು ಕ್ಷಾಮಕಾಲವು ತೀರುವತನಕ ದೀಕ್ಷೆಯನ್ನು ಕೊಡುವುದಿಲ್ಲ. ಅಂಥವರನ್ನು ಸೇರಿಸಿಕೊಳ್ಳುವುದಕ್ಕೆ ಮುಂಚೆ ಅವರ ಗುಣ ನಡತೆಗಳನ್ನು ಚನ್ನಾಗಿ ಪರೀಕ್ಷಿಸುವರು. ಅವರು ನಿಜವಾಗಿಯೂ ... ಕ್ರೈಸ್ತಮತಕ್ಕೆ ... ಬಂದಲ್ಲಿ ಅವರನ್ನು ತಕ್ಕ ಬಿಡಿ ವಾದಗಳಿಂದ ಕ್ರೈಸ್ತ ಮತಕ್ಕೆ ಸೇರಿಸಿಕೊಳ್ಳುವವೇ ವಿನಾ ಮತ್ತಾವ ರೀತಿಯಿಂದಲೂ ಸೇರಿಸಿಕೊಳ್ಳುವುದಿಲ್ಲ.

ಯಾರ್‍ಯಾರು ಯೇಸು ಕ್ರಿಸ್ತನ ಮೇಲೆ ನಿಜವಾದ ಭಕ್ತಿಯನ್ನಿಟ್ಟು ಆತನನ್ನು ನಂಬುವರೋ ಅಂಥವರೇ ಕ್ರೈಸ್ತ ಮತಕ್ಕೆ ಸೇರಲು ಯೋಗ್ಯರಾಗಿರುತ್ತಾರೆ. ಅನ್ನಕ್ಕೆ ಬಡಾಗ ... ಕ್ರೈಸ್ತರಾಗುವವರನ್ನು ನಿಜ ಕ್ರೈಸ್ತರೆಂದು ನಾವೆಂದಿಗೂ ಹೇಳಲಾರೆವು. ಒಂದಾನೊಂದು ಕಾಲದಲ್ಲಿ ಯೇಸುಕ್ರಿಸ್ತನನ್ನು ಅನೇಕ ಸಾವಿರ ಜನರು ಹಿಂಬಾಲಿಸಿ ಆತನ ಬೋಧನೆಯನ್ನು ಸೂರ್ಯಾಸ್ತಮಯದ ವರೆವಿಗೂ ಕೇಳಿದರು. ಅವರು ಊಟಕ್ಕಾದರೂ ತಮ್ಮ ಮನೆಗಳಿಗೆ ಹೋಗಲಿಲ್ಲ. ಆಗ್ಗೆ ಯೇಸುಕ್ರಿಸ್ತನು ಅಷ್ಟು ಮಂದಿಗೂ ಆಹಾರವನ್ನು ಕೊಟ್ಟನು. ಕೆಲವು ದಿವಸಗಳಾದ ಮೇಲೆ ಅದೇ ಜನರು ಊಟಕ್ಕೋಸ್ಕರ ಯೇಸುಕ್ರಿಸ್ತನ ಹಿಂದೆ ಹೋಗುತ್ತಿದ್ದರು. ಆದರೆ ಯೇಸುಕ್ರಿಸ್ತನು ಅವರನ್ನು ನೋಡಿ "ಆಹಾರವನ್ನು ತಿಂದದ್ದರಿಂದಲೇ ನೀವು ನನ್ನನ್ನು ಹುಡುಕುತ್ತೀರಿ. ಕೆಟ್ಟುಹೋಗುವ ಆಹಾರಕ್ಕಾಗಿ ದುಡಿಯಬೇಡಿರಿ. ನಿತ್ಯವಾದ ಜೀವಕ್ಕೆ ಬೇಕಾದಂಥ ಆಹಾರವನ್ನು ಸಂಪಾದಿಸಿಕೊಳ್ಳಿರಿ. ಆ ಜೀವ ಕೊಡುವ ಆಹಾರವು ನಾನೇ. ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವುದಿಲ್ಲ, ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ" ವೆಂಬದಾಗಿ ಬೋಧಿಸಿದನು.

ಯೇಸುಕ್ರಿಸ್ತನನ್ನು ಪ್ರೀತಿಸಿ ಆತನ ಕಟ್ಟಳೆಗಳನ್ನು ಕೈಕೊಳ್ಳುವವನೇ ಆತನ ನಿಜಶಿಷ್ಯನಾಗಿರುವನು. ಅಂಥವನಿಗೇನೇ ಸ್ಥಿರವಾದ ಆತ್ಮಸಂತೃಪ್ತಿ ಯುಂಟಾಗುವುದು.

ಈಗ್ಗೆ ಹಿಂದೂ ದೇಶದಲ್ಲಿ ಮತ್ತೊಂದು ವಿಧವಾದ ಕ್ಷಾಮವಿರುವುದು. ಅದು ಯಾವದೆಂದರೆ ಜ್ಞಾನಾಪೇಕ್ಷೆಯ ಕ್ಷಾಮ. ದೇಶದ ನಾನಾ ಬಗೆಯ ಜನರು ಎಚ್ಚತ್ತುಕೊಂಡು ಉತ್ತಮ ಸ್ಥಿತಿಗೆ ಬರಲು ಪ್ರಯತ್ನಿಸುತ್ತಿರುವರು. ಅವರು ಇದುವರೆವಿಗೂ ಮೌಢ್ಯದಲ್ಲಿದ್ದರು. ಇನ್ನು ಮೇಲೆ ಹಾಗಿರುವುದಕ್ಕೆ ಅವರು ಒಪ್ಪಂಬಡರು. ತಮ್ಮ ಮಕ್ಕಳಿಗೆ ವಿದ್ಯೆ ಕಲಿಸುವುದರಲ್ಲಿ ಅತ್ಯಾಸಕ್ತಿಯುಳ್ಳವರಾಗಿರುತ್ತಾರೆ. ಎಲ್ಲರಿಂದಲೂ ತಿರಸ್ಕರಿಸಲ್ಪಟ್ಟ ಹೊಲೆಯರೂ ಮಾದಿಗರೂ ಕೂಡ ಕ್ರೈಸ್ತ ಬೋಧಕರ ಹತ್ತಿರಕ್ಕೆ ಬಂದು—ನಾವು ವಿದ್ಯವಿಲ್ಲದೆ ಮೌಢ್ಯದಲ್ಲಿ ಮುಳುಗಿರುತ್ತೇವೆ. ನಮಗೆ ಜ್ಞಾನ ಸಂಪಾದಿಸಬೇಕೆಂಬ ಆಶೆಯು ಬಹಳವಾಗಿರುವುದು. ದಯಮಾಡಿ ನಮಗೆ ವಿದ್ಯೆಯನ್ನು ಕಲಿಸಿಕೊಡಿ ಎಂಬದಾಗಿ ನಾನಾ ಬಗೆಯಿಂದ ಬೇಡಿಕೊಳ್ಳುವರು.

ಅನೇಕ ಶತಮಾನಗಳಿಂದಲೂ ಇಂಡಿಯಾ ದೇಶದಲ್ಲಿ ಕೀಳು ಜಾತಿಯವರ ಸ್ಥಿತಿಯು ಬಹು ಶೋಚನೀಯವಾಗಿರುತ್ತದೆ. ಅವರು ವಿದ್ಯಾಭ್ಯಾಸ ಮಾಡತಕ್ಕ ಆವಶ್ಯಕತೆ ಇಲ್ಲವೆಂದು ಉತ್ತಮ ವರ್ಣದವರು ಅವರಿಗೆ ಪದೇ ಪದೇ ತಿಳಿಸುತ್ತಿದ್ದರು. ವೇದಗಳನ್ನಂತೂ ಓದಲೂ ಕೇಳಲೂ ಕೂಡದೆಂದು ಅವರಿಗೆ ವಿಧಿ ಇತ್ತು. ಬ್ರಾಹ್ಮಣರನ್ನು ಕಂಡರೆ ಅವರು ದಾರಿಯಾಗಿ ಹೋಗಬೇಕಾಗಿತ್ತು. ದೇವಸ್ಥಾನಗಳನ್ನು ಅವರು ಪ್ರವೇಶಿಸದಂತೆ ಉತ್ತಮ ಜಾತಿಯವರು ಅವರನ್ನು ಅಡ್ಡಿಮಾಡುತ್ತಿದ್ದರು. ಹೀಗಿದ್ದರೆ ಇಂಥವರ ಗತಿ ಏನಾಗಬೇಕು. ಅವರು ಈ ಜೀವಮಾನದಲ್ಲಿ ಸಭ್ಯರಾಗಿ ನಡೆದುಕೊಂಡರೆ ಒಂದು ವೇಳೆ ಮತ್ತೊಂದು ಜನ್ಮದಲ್ಲಿ ಉತ್ತಮ ಜಾತಿಯಲ್ಲಿ ಹುಟ್ಟಬಹುದೆಂದು ಬ್ರಾಹ್ಮಣರು ಅವರಿಗೆ ತಿಳಿಸುತ್ತಿದ್ದರು. ಆಗ್ಗೆ ಕಬೀರ್, ನಾನಕ ಮೊದಲಾದ ಮಹಾತ್ಮರು ದೇಶದಲ್ಲಿ ಹುಟ್ಟಿ ಈ ಕೀಳು ಜಾತಿಯವರನ್ನು ಕುರಿತು—ನೀವು ನಮ್ಮ ಸಹೋದರರಾಗಿದ್ದೀರಿ. ನೀವು ದೇವರನ್ನು ಪೂಜಿಸಿ ಮುಕ್ತಿಯನ್ನು ಪಡೆದುಕೊಳ್ಳಲು ಹಕ್ಕುಳ್ಳವರಾಗಿದ್ದೀರೆಂದು ಬೋಧಿಸುತ್ತಿದ್ದರು. ಆದರೆ ಮೇಲ್ಕಂಡ ಮಹಾತ್ಮರ ಬೋಧನೆಗಳು ದೇಶದಲ್ಲಿ ವಿಶೇಷವಾದ ಬದಲಾವಣೆಗಳನ್ನು ತರಲಿಲ್ಲ.

ಕ್ರೈಸ್ತ ಮತದ ವೇದಗ್ರಂಥವನ್ನು ನೋಡಿದರೆ ಅಲ್ಲಿ ನಾವು ಯೇಸುಕ್ರಿಸ್ತನು ತಿಳಿಸಿದ ಒಂದು ಸಂಗತಿಯನ್ನು ಓದಬಹುದು. ಅವನು ತನ್ನ ಕಣ್ಣುಗಳನ್ನೆತ್ತಿ ಅಷ್ಟ ಬರುತ್ತಿದ್ದ ಸಾಧಾರಣ ಜನಗಳನ್ನು ನೋಡಿ—ಇವರು ಕುರುಬನಿಲ್ಲದ ಕುರಿಗಳ ಹಾಗಿದ್ದಾರಲ್ಲಾ ಎಂದು ಕನಿಕರಪಟ್ಟು, ಅವರಿಗೆ ಬಹಳ ಉಪದೇಶ ಮಾಡುತ್ತಿದ್ದನು. ಆತನು ಆ ಜನರಿಗೆ ಗುರುಗಳೆನ್ನಿಸಿಕೊಂಡಿದ್ದ ಶಾಸ್ತ್ರಿಗಳನ್ನು ಗದರಿಸಿ ಅವರಿಗೆ—ಅಯ್ಯೋ ಧರ್ಮೋಪದೇಶಕರೇ ಜ್ಞಾನಕ್ಕೆ ಸಾಧನವಾದ ಬೀಗದ ಕೈಯನ್ನು ತೆಗೆದು ಬಿಟ್ಟಿರಿ. ನೀವೂ ಒಳಕ್ಕೆ ಹೋಗಲಿಲ್ಲ. ಒಳಕ್ಕೆ ಹೋಗುತ್ತಿರುವವರಿಗೂ ಅಡ್ಡಿ ಮಾಡಿದಿರಿ ಅಂದನು.

ಯೇಸು ಕ್ರಿಸ್ತನು ಎಲ್ಲರನ್ನೂ ವಿಶೇಷತಿಯಾಗಿ ಪ್ರೀತಿಸಿದನು. ಕನಿಷ್ಠನನ್ನು ಕೂಡ ಆತನು ಮರೆಯಲಿಲ್ಲ. ಆತನು ಪಾಪ ಮತ್ತು ಅಜ್ಞಾನ ಬಂಧನಾದಿಗಳಿಂದ ಜನರನ್ನು ಬಿಡಿಸಲು ಯಾವಾಗಲೂ ಸಿದ್ಧನಾಗಿರುತ್ತಾನೆ. ಈ ಕಾರಣದಿಂದಲೇ ಹಿಂದೂ ದೇಶದಲ್ಲಿ ಅನೇಕರು ಆತನ ಕಡೆಗೆ ತಮ್ಮ ದೃಷ್ಟಿಯನ್ನಿಟ್ಟಿರುತ್ತಾರೆ. ಅವರಿಗೆ ಜ್ಞಾನವು ಬೇಕಾಗಿರುತ್ತದೆ. ತೆಲುಗು ಭಾಷೆಯಲ್ಲಿ ಒಂದು ಗಾಥೆ ಇರುತ್ತದೆ. ಹೊಲೆಯನಿಗೆ ಭಕ್ತಿವಲ್ಲಿಯದು, ನಿಷ್ಠೆಯು ಯಾವ ರೀತಿಯಲ್ಲಿ ನೊಗಕ್ಕೆ ಕುತ್ತಿಗೆಯನ್ನು ಕೊಟ್ಟು ಕೋಣ ಹೊತ್ತಾದ ಮೇಲೆ ತನ್ನ ಕರ್ತವ್ಯವನ್ನು ಮರೆತು ಬಿಡುವುದೋ ಆ ರೀತಿಯಲ್ಲಿ ಹೊಲೆಯನ ಭಕ್ತಿಯು ಪದೇ ಪದೇ ಬದಲಾಗುತ್ತದೆ ಎಂಬುದೇ. ಕೆಲವು ದಿವಸಗಳ ಹಿಂದೆ ಒಬ್ಬ ಕ್ರೈಸ್ತೋಪದೇಶಕರಿಗೆ ಒಬ್ಬ ಹೊಲೆಯ ಪೂಜಾರಿಯು ಈ ರೀತಿಯಾಗಿ ತಿಳಿಸಿದನು—ಅಯ್ಯಾ ನನ್ನ ಜನಗಳಿಗೆ ನನ್ನ ಮತಾಚರಣೆಯು ಯಾವ ಪ್ರಯೋಜನಕ್ಕೂ ಬರುವದಿಲ್ಲ. ನಾನು ಕ್ರೈಸ್ತನಾಗಬೇಕು. ಕ್ರೈಸ್ತರಾದ ಆ ಹೊಲೆಯ ಪೂಜಾರಿಯೂ ಅವನ ಹೆಂಡತಿಯೂ ಈಗ ಎಷ್ಟೋ ಸಂತೋಷದಲ್ಲಿರುತ್ತಾರೆ. ಅವನು ಈಗ ಉಪಾಧ್ಯಾಯನಾಗಿದ್ದಾನೆ. ಆದರೆ ನಾನು ಕೇವಲ ಮೌಢ್ಯದಲ್ಲಿರುತ್ತೇನೆ. ಹೊಲದಲ್ಲಿ ಕೂಲಿ ಕೆಲಸ ಮಾಡುವುದಕ್ಕೆ ನನ್ನ ಕೈಲಾಗುವದಿಲ್ಲ. ಇಷ್ಟು ದಿವಸ ಪೂಜಾರಿ ಕೆಲಸ ಮಾಡಿದ ನನಗೆ ಕೂಲಿಯ ಕೆಲಸವು ನಾಚಿಕೆಯನ್ನುಂಟುಮಾಡುತ್ತದೆ. ಅವನಂತೆ ರಾತ್ರಿಯ ಪಾಠಶಾಲೆಯಲ್ಲಿ ಕಷ್ಟಪಟ್ಟು ವಿದ್ಯಾಭ್ಯಾಸಮಾಡಿ ಈಗ ಉಪಾಧ್ಯಾಯನಾಗಿದ್ದಾನೆ, ಎಂಬುವದೇ.

ಈಗಿನ ಕಾಲದಲ್ಲಿ ಪುರೋಹಿತರು ಮೊದಲ್ಗೊಂಡು ಸಾಧಾರಣ ಜನರ ವರೆವಿಗೆ ಜ್ಞಾನಸಂಪಾದನೆ ಮಾಡಬೇಕೆಂಬ ಕುತೂಹಲವಿರುವದು. ಯೇಸುಕ್ರಿಸ್ತನೇ ಆತನ ಸೇವಕರ ಮೂಲಕ ಇಂಥಾ ಜ್ಞಾನಗಳನ್ನು ಕೊಡಲು ಸಿದ್ಧನಾಗಿರುತ್ತಾನೆ.

ವಿದ್ಯಾಭ್ಯಾಸದ ಅವಶ್ಯಕತೆಯು.

ಮಕ್ಕಳ ಪೋಷಕರು ಗಮನಕೊಡಬೇಕಾದ ವಿಚಾರವು.

ಯಾವ ರಾಜ್ಯದಲ್ಲಿ ಜನರು ನಾಗರೀಕರಾಗಿ ಸುಖದುಃಖಗಳಲ್ಲಿ ಪರಸ್ಪರ ಸೇರುವರೋ ಆ ರಾಜ್ಯವೇ ಉತ್ತಮವೆನಿಸುವದು. ಈ ರೀತಿ ಯಾಗಲು ಅಲ್ಲಿನವರು ಚಿಕ್ಕವಯಸ್ಸಿನಲ್ಲಿಯೇ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಮಾಡಿಸಬೇಕು. ವಿದ್ಯಾಭ್ಯಾಸಕ್ಕೆ ಅನೇಕ ಅರ್ಥಗಳುಂಟು. ನಮ್ಮ ಜೀವಮಾನದಲ್ಲಿ ಕಲಿಯುತ್ತಿರುವದೆಲ್ಲಾ ವಿದ್ಯಾಭ್ಯಾಸವೇ. ನಾವು ಎಲ್ಲೆಲ್ಲಿಯೂ ಜ್ಞಾನವನ್ನು ಸಂಪಾದಿಸುತ್ತಲೇ ಇರುತ್ತೇವೆ. ಚಿಕ್ಕಂದಿನಿಂದ ಗೊತ್ತಾದ ಉದ್ದೇಶದಿಂದ ಸರಿಯಾದ ಮಾರ್ಗದಲ್ಲಿ ವಿದ್ಯವನ್ನು ಕಲಿಯಬೇಕು. ಬಾಲಕರಿಗೆ ಈ ತರಹದ ಶಿಕ್ಷಣವು ತಂದೆ ತಾಯಿ ಮತ್ತು ಉಪಾಧ್ಯಾಯರಿಂದ ಬರಬೇಕಾಗಿದೆ. ಪಾಠಶಾಲೆಯು ಬಾಲಕರ ಜ್ಞಾನಾಭಿವೃದ್ಧಿಗೆ ತಕ್ಕ ಸ್ಥಳವಾಗಿದೆ. ಇದಕ್ಕೆ ಮುಂಚೆ ಬಾಲಕರಿಗೆ ತಂದೆ ತಾಯಿಗಳು ಬೋಧಕರಾಗಿಯೂ ಶಿಕ್ಷಕರಾಗಿಯೂ ಇರಬೇಕಾಗಿದೆ. ನಮ್ಮ ದೇಶದಲ್ಲಾದರೋ ಮೇಲಿನ ವಿಚಾರಕ್ಕೆ ವಿರೋಧವಾಗಿ ಬಾಲಕನಿಗೆ ಪಾಠಶಾಲೆ ಹೊರತು ಜ್ಞಾನಸಂಪಾದಿಸಲು ಇತರ ಅವಕಾಶವೇ ಇಲ್ಲ. ಯಾಕೆಂದರೆ, ಮಾತಾಪಿತೃಗಳು ತಮ್ಮ ಬಾಲಕರಿಗೆ ತಕ್ಕ ಶಿಕ್ಷೆಯ ಮೂಲಕ ಬೋಧನೆಯನ್ನು ಮಾಡಬೇಕಾದರೆ ಮೊದಲು ಅವರು ವಿದ್ಯಾವಂತರಾಗಿಯೇ ಇರಬೇಕು. ಹಾಗಲ್ಲದೆ ನಮ್ಮ ದೇಶದ ಸ್ತ್ರೀಪುರುಷರ ವಿದ್ಯವನ್ನು ಹೇಳತೀರದು. ಅದರಲ್ಲಿ ಸ್ತ್ರೀ ವಿದ್ಯಾಭ್ಯಾಸವಂತೂ ಕೇವಲ ಶೋಚನೀಯವಾಗಿದೆ. ಕೆಲವು ಪ್ರೌಢರೂ ಕೂಡ ಸ್ತ್ರೀ ವಿದ್ಯಾಭ್ಯಾಸದಿಂದ ಹೆಂಗಸರ ನಡತೆಯು ಕೆಟ್ಟುಹೋಗುವದೆಂದು ಅಭಿಪ್ರಾಯಪಡುತ್ತಾ, ಅದನ್ನೇ ಇತರರಿಗೂ ಬೋಧಿಸುತ್ತಿರುವರು. ಅವರ ಅಭಿಪ್ರಾಯವೇ ನಿಶ್ಚಯವಾದರೆ ಮತ್ತೊಂದು ಪ್ರಶ್ನೆಯು ಅವರನ್ನು ಕೇಳಲ್ಪಡುವದು. ಏನಂದರೆ, ವಿದ್ಯಾಗಂಧವರಿಯದ ಯುವತಿಯರು ಅಂತರಂಗವಾಗಿ ಮಾಡುತ್ತಿರುವ ಹೇಯವಾದ ಕೃತ್ಯಗಳು ದಿನದಿನಕ್ಕೆ ಅಭಿವೃದ್ಧಿಯಾಗುತ್ತಿರಲು ಕಾರಣವೇನು? ಇದರಿಂದ ನಾವೇನು ತಿಳಿಯಬಹುದೆಂದರೆ, ಬೆಂಕಿಯು ಬಹಳ ಭಯಂಕರವಾದ ವಸ್ತುವಾದ್ದರಿಂದ ಅದರ ಹುಟ್ಟನ್ನೇ ಅಣಗಿಸುವದು ನ್ಯಾಯವಾಗಿದೆಯಲ್ಲವೇ? ಯಾಕೆ? ಅದನ್ನು ನಿಗ್ರಹಿಸುವ ಸಾಮರ್ಥ್ಯವಿಲ್ಲದಿರುವದರಿಂದ. ಅಂಥಾ ಬೆಂಕಿಯನ್ನೇ ಬುದ್ಧಿವಂತಿಕೆಯಿಂದ ಸರಿಯಾದ ಮಾರ್ಗದಲ್ಲಿ ಉಪಯೋಗಿಸಿದರೆ ಜನಾಂಗಕ್ಕೆಲ್ಲಾ ಅನೇಕ ಉಪಯೋಗಗಳು ಉಂಟಾಗುವದರಲ್ಲಿ ಸಂಶಯವೇನು? ಇದರಂತೆಯೇ ಸ್ತ್ರೀ ವಿದ್ಯಾಭ್ಯಾಸವೂ ಕೂಡಾ ಉಪಯೋಗ ಯಾವ ರೀತಿ ಇರುತ್ತೋ ಅದೇ ಫಲವು ಉಂಟಾಗುತ್ತೆ.

ಪುರುಷರ ವಿದ್ಯಾಭ್ಯಾಸದ ವಿಷಯದಲ್ಲಿ ಕೆಲವು ಜನರ ಅಭಿಮತವೇನಂದರೆ, ಈ ವಿದ್ಯಾಭ್ಯಾಸಕ್ಕಿಂತಲೂ ತಲೆತಲಾಂತರದಿಂದ ನಡೆದು ಬಂದಿರುವ ಆರಂಬದ ಕೆಲಸ ಒಂದನ್ನು ಮಾಡಿಕೊಂಡಿದ್ದರೆ ಸಾಕೆಂದೆಣಿಸುವರು. ಈ ವಿಚಾರವು ನಾವು ಅನುಮೋದಿಸುವೆವಾದರೂ ಅದಕ್ಕೂ ಮುಖ್ಯವಾಗಿ ವಿದ್ಯದ ಬಲವು ಅವಶ್ಯಕವೆಂದು ಹೇಳುತ್ತೇವೆ. ಹ್ಯಾಗಂದರೆ, ವಿದ್ಯಾವಂತರಾದ ವಿಲಾಯತಿ ಮುಂತಾದ ರಾಜ್ಯದ ವ್ಯವಸಾಯಗಾರರು ಮಾಡುವ ಬೇಸಾಯಕ್ಕೂ ನಮ್ಮ ಆರಂಬಗಾರರ ಬೇಸಾಯಕ್ಕೂ ಹೋಲಿಸಿ ನೋಡಿದರೆ ಅಜಗಜಾಂತರವಿರುವದು. ವಿದ್ಯಾವಂತನಾದ ರೈತನು ತನ್ನ ಆರಂಬವು ಒಂದಾವರ್ತಿ ಮಳೆಯಿಲ್ಲದೆ ಕೆಟ್ಟುಹೋದರೆ ತನ್ನ ವಿದ್ಯಾಕುಶಲತೆಯಿಂದ ಕಂಗೆಡದೆ ಉಪಾಯಾಂತರದಿಂದ ಬೇರೆ ತರದ ವ್ಯವಸಾಯವನ್ನು ಪ್ರಾರಂಭಿಸಿ, ಅದರಿಂದಲು ಜರೂ ಲಾಭಪಡೆದೇ ಪಡೆಯುವನು. ನಮ್ಮ ರೈತರಾದರೋ ಒಂದು ವರುಷ ಮಳೆ ಇಲ್ಲವಾದರೆ ಬೆಳೆಸನ್ನು ಹಾಳುಮಾಡಿಕೊಂಡೆವಲ್ಲಾ ಎಂಬ ಭೀತಿ ತಟ್ಟಿ ತಮ್ಮಲ್ಲಿರುವ ಅಲ್ಪಸ್ವಲ್ಪವನ್ನು ಮಾರಿಕೊಂಡು ನಿರ್ಗತಿಕರಾಗಿ ಎರಡು ಕೈಗಳನ್ನೂ ತಲೆಯ ಮೇಲೆ ಹೊತ್ತುಕೊಂಡು "... ದೇವರೇ ಗತಿ!" ಎಂದು ಕುಳಿತುಕೊಳ್ಳುತ್ತಾರೆ. ಇದೇ ವಿದ್ಯೆಯ ಗಂಧವಿಲ್ಲದವರು ಮಾಡುವ ಬೆಳಸಿನ ಫಲ. ಈ ರೀತಿಯಾದ ಭಿನ್ನಾಭಿಪ್ರಾಯಗಳಿಂದ ನಮ್ಮ ದೇಶದ ಜನರು ಅವಿದ್ಯಾವಂತರಾಗಿ, ಅದೇ ಮಾದರಿಯನ್ನು ಬಾಲಕ ಬಾಲಕಿಯರಿಗೆ ತೋರಿಸಿರುವರು. ಈಗಲಾದರೂ ಈ ಮೂಲಾಧಾರವನ್ನು ತಿಳಿದು ಸರಿಪಡಿಸಿಕೊಳ್ಳಲಾರದೆ, ರಾಜಕೀಯ ವಿಚಾರಗಳಿಗೆ ತಲೆಹಾಕುತ್ತಿದಾರೆ. ಇದೆಂಥಾ ಅಂಧಕಾರವೋ ನಾವರಿಯೆವು. ಮೇಲಿನ ಮೂಲಮಂತ್ರವನ್ನು ನಮ್ಮವರು ಸಾಧಿಸದಿದ್ದರೆ ಎಲ್ಲಾ ವಿಚಾರವೂ ಸ್ವಪ್ನಪ್ರಾಯವೇ ಸರಿ.

ಇದೂ ಅಲ್ಲದೆ ನಮ್ಮ ಶಾಸ್ತ್ರಗಳನ್ನೆಲ್ಲಾ ಇತರ ದೇಶದವರು ಪರಿಶೋಧಿಸಿ ನಮ್ಮಗಳನ್ನು ಪ್ರಶ್ನಿಸುತ್ತಿರುವಲ್ಲಿ ಅವರೊಡನೆ ನಾವು ತಕ್ಕ ಶಾಸ್ತ್ರರೀತಿಯಿಂದ ಹೋರಾಡುವದಕ್ಕೆ ಬದಲಾಗಿ ನಮ್ಮ ಶಾಸ್ತ್ರ ವಿಚಾರವನ್ನೇ ತಿಳಿಯಲಾರದವರಾದ್ದರಿಂದ ತಲೆಯನ್ನು ಬೊಗ್ಗಿಸಬೇಕಾಗಿ ಬಂದಿರುವದಕ್ಕೆ ಎಷ್ಟು ವಿಷಾದಪಟ್ಟರೂ ಸಾಲದ್ದಾಗಿದೆ. ಇನ್ನು ಅನೇಕರು ಈ ಅಮೂಲ್ಯ ರತ್ನಪ್ರಾಯವಾದ ವಿದ್ಯಾಭ್ಯಾಸವನ್ನು ತೃಣೀಕರಿಸಿ ಜ್ಞಾನಶೂನ್ಯರಾಗಿ ದ್ರವ್ಯಾರ್ಜನೆಮಾಡಿ ಸುಖಪಟ್ಟು ಯಶಸ್ಸು ಸಂಪಾದಿಸಬೇಕೆಂದು ಪ್ರಯತ್ನಿಸುವರು. ಈ ವಿಚಾರವು ಕೂಡ ಆಲೋಚಿಸತಕ್ಕದ್ದೇ ಸರಿ. ಹ್ಯಾಗಂದರೆ, ಸಂಪಾದಿಸುವಾತನು ವಿದ್ಯಾವಂತನಾದರೆ ದ್ರವ್ಯದ ಉಪಯೋಗವು ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡು ಯಶಸ್ವಿಯಾಗುವನು. ಹಾಗಲ್ಲದೆ ಪಾಮರನ ಬಳಿ ದ್ರವ್ಯವು ಇರುವದೇ ಅದರ ಚೋರರ, ಇಲ್ಲವೆ ಭೂಮಿಯ, ತಪ್ಪಿದರೆ ರಾಜರ ಪಾಲಾಗುವದರಿಂದ ಆತನು ಜೀವಮಾನಾಂತ್ಯದವರಿಗೂ ಆ ವ್ಯಸನದಲ್ಲೇ ನರಳಬೇಕಾಗುವದು. ಅದೂ ಇರಲಿ. ಹಣ ಒಂದನ್ನು ಸಂಪಾದಿಸಿಬಿಟ್ಟರೆ ಜನರಿಂದ ದೊಡ್ಡವನೆಂದೆನ್ನಿಸಿಕೊಳ್ಳಬಹುದೆಂಬ ಕೋರಿಕೆಯು ಅನೇಕರಲ್ಲಿದೆ. ಇದು ಶುದ್ಧ ಹುಚ್ಚು. ಹಿಂದೆ ನಮ್ಮ ಈ ಆರ್ಯಖಂಡದಲ್ಲಿ ಎಷ್ಟು ಮಂದಿ ಧನಿಕರು ಕೋಟ್ಯಾಧೀಶ್ವರರಾಗಿರಲಿಲ್ಲ! ಅವರ ಯಾತಕ್ಕೆ ಹೆಸರು ಪ್ರಸಿದ್ಧಿಯಾಗದೆ, ಪಂಡಿತಶ್ರೇಷ್ಠರಾದ ಶ್ರೀಹರ್ಷ, ಕೇಶಿರಾಜ, ಕಾಳಿದಾಸ, ಬಾಣ ಮುಂತಾದವರು ಪ್ರಸಿದ್ಧರಾಗಿರುವದಕ್ಕೆ ಕಾರಣವೇನು? ಅವರು ಗುಣವಂತರಾಗಿದ್ದದ್ದರಿಂದಲೋ, ಅಥವಾ ವಿದ್ವಾಂಸರಿಗೆ ಆದರ್ಶಸ್ಥಾನವಾಗಿದ್ದದ್ದರಿಂದಲೋ ವಾಚಕರೇ ಯೋಚಿಸಿರಿ. ಆದದರಿಂದ ಹಣಗಾರನನ್ನು ಅವನ ಆಶ್ರಿತನು ದೊಡ್ಡವನೆಂದೆನ್ನಬೇಕೇ ಹೊರತು ಇತರರು ಎಂದಿಗೂ ಅನ್ನಲಾರರು. ವಿದ್ಯವು ಲೋಕರಂಜಕವಾಗಿಯೂ, ಕಾಲಾಂತರದಲ್ಲಿ ಸಹಾಯ ಮಾಡುವದಾಗಿಯೂ, ಪರಮಾರ್ಥ ಬೋಧಕವಾಗಿಯೂ, ಇಹಪರಗಳಲ್ಲಿ ಫಲಪ್ರದವಾಗಿಯೂ, ಮೋಕ್ಷಸಾಧಕವಾಗಿಯೂ, ಮಾನ್ಯವಾಗಿಯೂ ಇರುವದರಿಂದ ಸೌಂದರ್ಯ, ಧನಾದಿ ಸಮಸ್ತ ಐಶ್ವರ್ಯವೂ ವಿದ್ಯವೇ ಆಗಿದೆ ಎಂದು ವ್ಯಕ್ತಪಡಿಸಬಹುದು. ಹೀಗಿರುವದರಿಂದ ಜ್ಞಾನಸಂಪನ್ನರಾಗಲು ವಿದ್ಯವು ಪ್ರಾಮುಖ್ಯವೆಂಬುವದನ್ನು ತಿಳಿದು ಈ ಭರತಖಂಡಕ್ಕೆ ಮುಖ್ಯವಾದ ಇದನ್ನು ಕಲಿಸಿ ಯೋಗ್ಯವಾದ ಕಾರ್ಯಗಳಲ್ಲಿ ಪ್ರವರ್ತಿಸುವದು ಅವಶ್ಯವಾಗಿದೆ.

ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ಪ್ರಜೆಗಳನ್ನು ಇತರ ನಾಗರೀಕ ದೇಶದವರಂತೆ ವಿದ್ಯಾವಂತರಾಗಿ ಮಾಡಲು ಲಕ್ಷಾಂತರ ದ್ರವ್ಯವನ್ನು ವ್ಯಯಮಾಡಿ, ಗ್ರಾಮಾಂತರಗಳಲ್ಲಿಯೂ ಪಾಠಶಾಲೆಗಳನ್ನೇರ್ಪಡಿಸಿ, ಅದರ ಮೇಲೆ ಕುಶಲವಿದ್ಯಗಳು ಪ್ರಬಲಿಸಲೆಂದು ಮುಖ್ಯ ಸ್ಥಳಗಳಲ್ಲಿ ಕೈಗಾರಿಕೆ ಪಾಠಶಾಲೆಗಳನ್ನು ಏರ್ಪಡಿಸಿ, ಬಹುಮಟ್ಟಿಗೆ ಸಹಾಯಮಾಡುತ್ತಿರುವರು. ಆದರೇನು! ನಮಗೆ ಲಭ್ಯವಿಲ್ಲದಂತಾಗಿದೆ. ಯಾಕೆಂದರೆ ವಿದ್ಯಾಭ್ಯಾಸಕ್ಕೆ ತಂದೆತಾಯಿಗಳು ತಮ್ಮ ಬಾಲಕರಿಗೆ ತಕ್ಕ ಪ್ರೋತ್ಸಾಹ ಕೊಡದಿರುವದರಿಂದಲೇ. ಇನ್ನು ಮೇಲಾದರೂ ನಮ್ಮ ಸಂಸ್ಥಾನದ ಪ್ರತಿಯೊಬ್ಬರೂ ಈ ವಿಚಾರವನ್ನು ಗಮನಿಸಿ ಮುಖ್ಯವಾಗಿ ಸರ್ಕಾರದವರು ಕೊಡುವ ಸಹಾಯವನ್ನು ಸಂಪೂರ್ಣವಾಗಿ ನಮ್ಮ ಬಾಲಕರಿಗೆ ಸಿಕ್ಕುವಂತೆ ಮಾಡಿ, ಆ ಮೂಲಕ ವಿದ್ಯೆ, ಕುಶಲತೆಗಳು ಅಭಿವೃದ್ಧಿಹೊಂದಿ, ಇತರ ನಾಗರೀಕ ದೇಶಗಳಲ್ಲಿ ಇದೊಂದೆಂಬಂತೆ ಗಣನೆಗೆ ಅರ್ಹವಾಗಿ ಮಾಡುವಂತೆ ಪ್ರಯತ್ನಿಸುವವರಾಗಲೆಂದು ಕೋರುತ್ತೇವೆ. ಅಲ್ಲದೆ ಅನೇಕ ಸಂದರ್ಭಗಳಲ್ಲಿ ನಮ್ಮಗಳಿಗೆ ಸಹಾಯಮಾಡಿ, ಪುತ್ರವಾತ್ಸಲ್ಯದಿಂದ ನಮ್ಮನ್ನು ಕಾಪಾಡಿಕೊಂಡು ಬರುತ್ತಿರುವ ಶ್ರೀಮನ್ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರಿಗೆ ಭಗವಂತನು ಚಿರಾಯುವನ್ನಿತ್ತು ಕಾಪಾಡುವಂತೆ ಪ್ರಾರ್ಥಿಸೋಣ.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ, ಬರತಕ್ಕ ಬಾತ್ಮೆಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಅಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್.

ವಿದ್ಯಾರ್ಥಿಗಳಿಗೆ ದ್ರವ್ಯಸಹಾಯ.

ಅಯ್ಯಾ,

ದಾವಣಗೆರೆ ಎ ವಿ ಸ್ಕೂಲಿನಿಂದ ೧೯೦೮ನೇ ನವಂಬರ್ ಮಾಹೆಯಲ್ಲಿ ನಡಿಯುವ ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿಗಳ ಪೈಕಿ ಇಬ್ಬರು ಬಡ ವಿದ್ಯಾರ್ಥಿಗಳು ಇದೇ ಮಾಹೆ ತಾ. ೧೭ ರಲ್ಲಿ ಅಪ್ಲಿಕೇಷನ್ ಕಳುಹಿಸುವದಕ್ಕೆ ಹಣವಿಲ್ಲದೆ ಮೋಚಾಡುತ್ತಿದ್ದದನ್ನು ನೋಡಿ, ಇಲ್ಲಿನ ವಿದ್ಯಾಭಿಮಾನಿಗಳೂ ದಯಾಪರರೂ ಆದ ಮೆ|| ಸಾಹುಕಾರ್ ಪಲ್ಲಾಗಟ್ಟೆ ಗುರುಸಿದ್ಧಪ್ಪನವರು ಕನಿಕರವಿಟ್ಟು ಆ ಅಪ್ಲಿಕೇಷನ್‌ಗೆ ತಗಲುವ ಹಣವನ್ನು ಅವರಿಗೆ ಕೊಟ್ಟು, ಪರೀಕ್ಷೆಗೆ ಹೋಗುವ ಹಾಗೆ ಪ್ರೋತ್ಸಾಹ ಮಾಡಿದ್ದು ತುಂಬಾ ಸ್ತೋತ್ರಾರ್ಹವಾಗಿದೆ. ಪುಣ್ಯವಂತರು ಹೀಗೆಯೇ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಾ ಬಂದರೆ ವಿದ್ಯಾಭಿವೃದ್ಧಿಗೆ ತುಂಬಾ ಅನುಕೂಲವಾಗುವುದು. ಮತ್ತು ಈ ಊರಿನ ವರ್ತಕ ಮಂಡಲಿಯವರು ವ್ಯಾಪಾರ ಮುಂತಾದದ್ದರಲ್ಲಿ ಧರ್ಮಕ್ಕಾಗಿ ಪ್ರತಿ ಜಿನಸಿನಲ್ಲಿಯೂ ತೆಗೆಯುವ ಭಾಗದ ಹಣವು ಅಭಿವೃದ್ಧಿಯಲ್ಲಿರುವದರಿಂದ ಈ ಹಣಕ್ಕೆ ಪ್ರಮುಖರಾದವರು ಮೇಲ್ಕಂಡ ವಿದ್ಯಾ ವಿಷಯಕ್ಕೆ ಗಮನಕೊಟ್ಟು, ಈಗಿನ ಕಾಲಾನುಗುಣವಾಗಿರುವ ರಾಜವಿದ್ಯವಾದ ಇಂಗ್ಲೀಷನ್ನು ಬಡ ವಿದ್ಯಾರ್ಥಿಗಳು ಕಲಿಯುವ ಹಾಗೆ ವಿದ್ಯಾರ್ಥಿ ವೇತನವನ್ನು ಕೊಟ್ಟು ಪುಣ್ಯಭಾಗಿಗಳೂ ಕೀರ್ತಿವಂತರೂ ಆಗುತ್ತಾರೆಂದು ನಂಬಿದ್ದೇನೆ.

ಎಚ್. ಎಂ ಮುರಿಗೈಯ.

ಹೊಳೆಹೊನ್ನೂರಿನ ದಾರಿಯ ಕಷ್ಟ.

ಅಯ್ಯಾ,

ಈ ಊರಿಗೆ ಮಳೆ ಹಿಡಿದಿರುವದು ೩೦ ದಿನದಿಂದ ಬಿಟ್ಟಿಲ್ಲ. ಈ ಊರಿಗೆ ಪಶ್ಚಿಮಕ್ಕೆ ಭದ್ರಾನದೀ ಪ್ರವಾಹ. ಇಲ್ಲಿಂದ ಹೋದರೆ ಶಿವಮೊಗ್ಗ ೮ ಮೈಲಿ ಇದೆ. ಪೂರ್ವಕ್ಕೆ ಜಂಗಲು ಹಳ್ಳಕೊಳ್ಳ ದಾಟಿ ಹೋದರೆ ಚನ್ನಗಿರಿ ೧೬ ಮೈಲಿ ಇದೆ. ಉತ್ತರಕ್ಕೆ ಮಹತ್ತಾದ ಕೆಸರು ಇಲ್ಲಿಗೆ ೭ ಮೈಲಿಯಲ್ಲಿ ಅನ್ವೇರಿ ಸಂತೆಯಾಗುತ್ತೆ. ದಕ್ಷಿಣಕ್ಕೆ ಕಾನೀಸರವೆಂಬ ಅಸಾಧ್ಯವಾದ ಕೆಸರಿನ ಹಳ್ಳ. ಇದನ್ನು ಪ್ರಾಣಮಾತ್ರ ಮನುಷ್ಯರು ದಾಟಿದರೆ ೧೧ ಮೈಲಿನಲ್ಲಿ ಬೆಂಕೀಪುರವಿದೆ. ಮಳೆಗಾಲದಲ್ಲಿ ೪ ಫರಲಂಗು ವರಿಗೆ ಮನುಷ್ಯರು ಬಂಡಿಗಳಾಗಲಿ, ಎತ್ತುಗಳಾಗಲಿ ಹೋಗುವಂತಿಲ್ಲ. ಈ ಚತುರ್ದಿಕ್ಕಿನ ಗ್ರಾಮಗಳಿಂದ ಜೀವಿಸಿ ಬಂದು ಈ ಊರಿನಲ್ಲಿ ವಾಸಮಾಡುವ ೨,೮೦೦ ಜನ ಪ್ರಜೆಗಳು ಜೀವನ ಮಾಡಬೇಕು. ಈ ಊರು ಮುನಿಸಿಪಾಲಿಟಿ ಟವರ್ ಆಗಿದ್ದು ೪ ವರುಷದಿಂದ ಮಾರ್ಗದ ದುರವಸ್ಥೆ ದೆಸೆಯಿಂದ ಪ್ರಜಾಸಂಖ್ಯೆ ಕಡಮೆಯಾಗಿ, ಯೂನಿಯನ್ ಎಂಬ ಹೆಸರು ಪಡಕೊಂಡಿರುತ್ತೆ. ಈ ಊರಿನಿಂದ ೮ ಮೈಲಿ ರಸ್ತೆ ಮಾಡಿಸಿ ಚನ್ನಗಿರಿ ಬೆಂಕೀಪುರಕ್ಕೆ ಇರುವ ರಸ್ತೆಗೆ ಕೂಡಿಸಿಕೊಟ್ಟು ನಮ್ಮ ಕಷ್ಟವನ್ನು ನಿವಾರಣೆ ಮಾಡಬೇಕೆಂದು ಎಷ್ಟು ಅರ್ಜಿಗಳು ಬರಕೊಂಡಾಗ್ಯೂ ಕೇಳಿದವರೇ ಇಲ್ಲ. ವಾರಕ್ಕೆ ಒಂದಾವರ್ತಿ ತರೀಕೆರೆಯಿಂದ ಬೆಂಕೀಪುರದ ಮೇಲೆ ಹಾದು ಜಿನಸಿ ಬರಬೇಕು. ಮೇಲ್ಕಂಡ ಕಾನೀಸರದಲ್ಲಿ ಬಿದ್ದರೆ ಹೊರಗೆ ಬರುವದಿಲ್ಲ. ಬಾಕಿ ಮೂರು ದಿಕ್ಕಿನ ಅವಸ್ಥೆ ಹೀಗಿದೆ. ಜೀವನಕ್ಕೆ ಹ್ಯಾಗೆ. ಇನ್ನಾದರೂ ಗವರ್ನಮೆಂಟಿನವರಿಗೆ ಈ ಊರಿನ ಪ್ರಜೆಗಳು ಇಲ್ಲೇ ಇದ್ದು ಬದುಕಲೆಂದು ಪ್ರೀತಿ ಹುಟ್ಟಿದರೆ ನಮ್ಮ ಈ ಕಷ್ಟಕ್ಕೆ ನಿಗಾ ಕೊಟ್ಟು ನಮ್ಮ ಕೋರಿಕೆಯಂತೆ ೮ ಮೈಲಿ ರಸ್ತೆ ತಕ್ಷಣ ಅಂದಾಜು ಮಾಡಿಸಿ ಕಾಮಗಾರಿಗೆ ಶುರುವು ಮಾಡಿಸಬಹುದೆಂದು ನಂಬುತ್ತೇವೆ. ವೃತ್ತಾಂತ ಪತ್ರಿಕೆ ಗವರ್ನಮೆಂಟಿಗೆ ತಲ್ಪಿ ನಮ್ಮ ದುಃಖ ನಿವಾರಣೆಯಾಗಬಹುದೆಂದು ಬರಕೊಂಡ

ಮೆಂಬರು ಪಿ ಎಂ ನಂಜುಂಡಪ್ಪಯ್ಯ

ಅರಸೀಕೆರೆಯ ವೈಶ್ಯ ಸಭೆಯು

ಅಯ್ಯಾ,

ಮೈಸೂರಲ್ಲಿ ನಡೆದ ಆರ್ಯ ವೈಶ್ಯ ಮಹಾ ಸಭೆಯ ತೀರ್ಮಾನವನ್ನು ತಮ್ಮ ಪೇಪರ ಮೂಲಕವೇ ತಿಳಿಸಲ್ಪಡೋಣವಾಗಿತ್ತಷ್ಟೆ. ಸದರಿ ಸಭೆಯಲ್ಲಿ ನಡೆದ ತೀರ್ಮಾನದಂತೆ ಮೈಸೂರು ದೇಶದಲ್ಲಿರತಕ್ಕ ವಿಶಿಷ್ಟ ದೊಡ್ಡ ಪಟ್ಟಣಗಳಲ್ಲೂ ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲೂ ಮೈಸೂರಲ್ಲಿರತಕ್ಕ ಆರ್ಯ ವೈಶ್ಯ ಮಹಾ ಸಭೆಗೆ ಅಂಗವಾಗಿ ಉಪಸಭೆಗಳನ್ನು ಸ್ಥಾಪಿಸಬೇಕೆಂದು ತೀರ್ಮಾನವಾದ ಪ್ರಕಾರ ಈ ಅರಸೀಕೆರೆ ಟವನಿನಲ್ಲಿ ಇದೇ ಕೀಲಕನಾಮ ಸಂ|| ಶ್ರಾವಣಶುದ್ಧ ೩ಯಲ್ಲು ಉಪಸಭೆಯನ್ನು ಸ್ಥಾಪಿಸಲಾಯಿತು. ಈ ಸಭೆಗೆ ಪ್ರೆಸಿಡೆಂಟರು ಯಜಮಾನ ಚಿಕ್ಕಯ್ಯಶೆಟ್ಟರು; ಮೆ|| ಕೆಂಚರಾಯಶೆಟ್ಟಿ ವಗೈರೆ ಒಂಭತ್ತು ಜನ ಮೆಂಬರುಗಳು. ಈ ಮೇರೆಗೆ ಏರ್ಪಾಟು ಮಾಡಲಾಯಿತು. ಮತ್ತು ಮೈಸೂರು ಸಭೆಯಲ್ಲಿ ತೀರ್ಮಾನವಾದ ಪ್ರಕಾರ ಈ ಗ್ರಾಮದಲ್ಲಿ ಸಭೆ ಸ್ಥಾಪಿತವಾದ ತಾರೀಖು ಲಾಗಾಯ್ತು ನಮ್ಮ ವೈಶ್ಯರ ಮನೆಗಳಲ್ಲಿ ನಡಿಯತಕ್ಕ ಶುಭಶೋಭನಾದಿಗಳಲ್ಲಿ ವರ್ತನೆ ವಸೂಲು ಮಾಡಲು ಪ್ರಾರಂಭವಾಗಿ ಒಂದು ನಾಮಕರಣದಲ್ಲಿ ನಾಲ್ಕಾಣೆಯೂ, ಒಂದು ನಿಶ್ಚಯಪ್ರಸ್ತದಲ್ಲಿ ಒಂದು ರೂಪಾಯಿಯೂ ವಸೂಲು ಮಾಡಿ ಫಂಡು ಬುಕ್ಕಿಗೆ ಜಮಾ ತರಲಾಯಿತು. ಈ ವಿಚಾರವನ್ನು ತಮ್ಮ ಪತ್ರಿಕೆಯ ಮೂಲಕ ಎಲ್ಲಾ ಗ್ರಾಮಗಳವರೂ ತಿಳಿದು ಜಾಗ್ರತೆಯಾಗಿ ತಮ್ಮತಮ್ಮ ಗ್ರಾಮಗಳಲ್ಲಿ ಸಭೆಗಳನ್ನು ಏರ್ಪಾಟು ಮಾಡಿ ತಮ್ಮ ಪೇಪರು ಮೂಲಕ ತಿಳಿಸುವರೆಂದು ನಂಬುತ್ತೇನೆ. ಮತ್ತು ನಮ್ಮ ವೈಶ್ಯರಲ್ಲಿ ಅನೇಕ ಜನಗಳಿಗೆ ತಮ್ಮ ಮತತತ್ವವೇ ತಿಳಿಯದು. ಅದನ್ನು ತಿಳಿಸಲೋಸುಗ ಮೆ|| ಬಿಡದಿಯಲ್ಲಿರುವ ಬಿ ಸಿ ಶ್ರೀನಿವಾಸಯ್ಯಂಗಾರರು ವೈಶ್ಯಕುಲವರ್ಧಿನಿ ಎಂಬ ಮಾಸಪತ್ರಿಕೆಯನ್ನು ಕೀಲಕನಾಮ ಸಂ|| ಚೈತ್ರದ ಲಾಗಾಯ್ತು ಪ್ರಕಟಿಸುತ್ತಾ ಇರುವದು ವೈಶ್ಯರಲ್ಲಿ ಕೆಲವು ಜನಗಳಿಗೆ ಮಾತ್ರ ತಿಳಿದಿರುತ್ತೆ. ಬಾಕಿಯವರಿಗೆ ಅದರ ವಿಚಾರ ತಿಳಿಯದು. ಅದರ ಚಂದಾ ವರುಷ ೧ಕ್ಕೆ ಹಾಸಲು ಸೇರಿ ೧|| ರೂ. ಈ ಪೇಪರು ನೋಡಿದ ವೈಶ್ಯರೆಲ್ಲರೂ ಆ ಪತ್ರಿಕೆಯನ್ನು ತರಿಸಿಕೊಂಡರೆ ಅದರಲ್ಲಿ ವೈಶ್ಯ ಮತ ತತ್ವಗಳೂ, ವೈಶ್ಯರಿಗೆ ಅನುಕೂಲವಾದ ಇನ್ನೂ ಅನೇಕ ವಿಷಯಗಳೂ ತಿಳಿಯುತ್ತೆ. ಅದು ಕನ್ನಡ ಪೇಪರಾದ್ದರಿಂದ ನಮ್ಮ ದೇಶದಲ್ಲಿನ ವೈಶ್ಯರೆಲ್ಲ ಸುಲಭವಾಗಿ ಓದಿ ತಿಳಿದುಕೊಳ್ಳಬಹುದು. ಆದ್ದರಿಂದ ನಮ್ಮ ವೈಶ್ಯರೆಲ್ಲಾ ದಯವಿಟ್ಟು ಮೇಲ್ಕಂಡ ಪತ್ರಿಕೆಯನ್ನು ನೋಡಿಕೊಳ್ಳುತ್ತಾರೆಂದು ನಂಬಿ ಬರೆದುಕೊಂಡಿರುತ್ತೇನೆ

ಅರಸೀಕೆರೆ ಪುರನಿವಾಸಿ

ಮೂಡಗೆರೆ ತಾ|| ಜಾವಳಿಯ ಹೊಸ ರೀಡಿಂಗ್ ರೂಂ

ಅಯ್ಯಾ.

ಈ ಗ್ರಾಮದಲ್ಲಿರುವ ಪ್ರಜಾ ಮಂಡಲಿಯವರ ಪೈಕಿ ಕೆಲವರು ಅಧಿಕಾರಸ್ಥರಾಗಿಯೂ, ಕೆಲವರು ಜಮೀನುದಾರರಾಗಿಯೂ ಇರುವದು ಸರಿಯಷ್ಟೆ. ಇವರುಗಳಲ್ಲೆಲ್ಲಾ ಮುಖ್ಯಸ್ಥರಾಗಿಯೂ, ಪ್ರಸಿದ್ಧಿ ಹೊಂದಿರುವವರಾಗಿಯೂ ಇರುವ ಮೆ|| ಗಣೇಶರಾಯರವರು ಈ ಗ್ರಾಮದಲ್ಲಿ ಒಂದು ರೀಡಿಂಗ್ ರೂಮನ್ನು ಸ್ಥಾಪನೆ ಮಾಡಿದರೆ ತುಂಬಾ ಉಪಯುಕ್ತವಾದೀತೆಂದು ಬಹು ದಿವಸಗಳಿಂದಲೂ ಎಲ್ಲರಿಗೂ ಪ್ರೋತ್ಸಾಹಿಸುತ್ತಾ ಇದ್ದದ್ದರ ಮೇಲೆ ತಾ. ೫ನೇ ಬುಧವಾರ ಮಧ್ಯಾಹ್ನ ಒಂದು ಸಭೆ ನಡಿಯಿತು. ಸದರಿ ರೀಡಿಂಗ್ ರೂಮನ್ನು ತಾ. ೧೧ನೇ ದಿವಸ ಪ್ರಾರಂಭವಾಗಬೇಕೆಂದು ತೀರ್ಮಾನಿಸಿದ್ದರ ಮೇಲೆ ಆ ದಿನ ಅನೇಕ ಜನಗಳು ಸಭೆಯನ್ನಲಂಕರಿಸಿದ್ದರು. ಸಭಿಕರೆಲ್ಲರೂ ೫ನೇ ತಾರೀಖಿನಲ್ಲಿ ನಿಶ್ಚಯಿಸಿದ್ದಂತೆ ಶ್ರೀ ಹೇಮಾವತಿ ಗಣೇಶ ರೀಡಿಂಗ್ ರೂಂ ಎಂಬ ಹೆಸರಿನಿಂದ ರೀಡಿಂಗ್ ರೂಂ ಏರ್ಪಡಿಸಿ ಪ್ರಕೃತದಲ್ಲಿ ಆಯಾಯ ಮೆಂಬರುಗಳಿಗೆ ಬರತಕ್ಕ ಕೆಲವು ಮಾಸಪತ್ರಿಕೆಗಳು, ವಾರಪತ್ರಿಕೆಗಳು, ದಿನಚರಿ ಪತ್ರಿಕೆಗಳು, ಇವುಗಳನ್ನೆಲ್ಲಾ ಸಂಗ್ರಹಿಸಿಕೊಂಡು ರೀಡಿಂಗ್ ರೂಂ ಸಭೆಯನ್ನು ನಡಿಸಿದರು. ಈ ಸಭೆಯಲ್ಲಿ ಮೆ|| ಸಾಹುಕಾರ್ ಗಣೇಶರಾಯರೂ, ಮೆ|| ಶೇಕದಾರ್ ವೈ. ಎಸ್. ಸುಬ್ರಾಯರೂ, ಮೆ|| ಪೋಸ್ಟ್ ಮಾಸ್ಟರ್ ಶ್ರೀನಿವಾಸರಾಯರೂ ಮೆ|| ಪಟೇಲ್ ದುಗ್ಗಪ್ಪಯ್ಯನವರೂ, ಮೆ|| ರಾಮದಾಸಭಟ್ಟರೇ ಮುಂತಾಗಿ ಸಭೆಯನ್ನು ಅಲಂಕರಿಸಿದರು. ಈ ಸಭೆಯ ಅಗ್ರಾಸನಾಧಿಪತ್ಯವನ್ನು ಸಭ್ಯದಲ್ಲಿ ಅನುಭವಶಾಲಿಗಳಾದ ಮೆ|| ಶೇಕದಾರ್ ವೈ ಎಸ್. ಸುಬ್ರಾಯರೇ ವಹಿಸಿಕೊಂಡರು. ರೀಡಿಂಗ್ ರೂಂ ಸಂಘದವರಿಂದ ರಿಪೋರ್ಟ ಓದಲಾಯಿತು. ಮೆ|| ದುಗ್ಗಪ್ಪಯ್ಯನವರು ಸಂಘದವರ ವಿಜ್ಞಾಪನೆಯಂತೆ ತಾತ್ಕಾಲಕ್ಕೆ ರೀಡಿಂಗ್ ರೂಂ ಪ್ರೆಸಿಡೆಂಟರಾಗಲೂ, ಮೆ|| ಎಚ್ ನಾರಣಪ್ಪನವರು ಸೆಕ್ರೆಟರಿಗಳಾಗಲೂ ಒಪ್ಪಿಕೊಂಡರು. ಅನಂತರ ಅಗ್ರಾಸನಾಧಿಪತಿಗಳು ಸೆಕ್ರೆಟರಿಗಳ ಹಸ್ತದಿಂದ ಪೇಪರುಗಳ ಕಟ್ಟನ್ನು ಬಿಚ್ಚಿಸಿ, ಎಲ್ಲರಿಗೂ ತೋರಿಸುವದರ ಮೂಲಕ ರೀಡಿಂಗ್ ರೂಂ ಪ್ರತಿಷ್ಠೆ ಮಾಡಿಸಿದರು. ಮ|| ಗಣೇಶರಾಯರೂ, ಮೆ|| ಸುಬ್ರಾಯರೂ, ಮೆ|| ಶ್ರೀನಿವಾಸರಾಯರೂ, ಮೆ|| ಶಾಸ್ತ್ರಿ ರಂಗಾಚಾರ್ಯ

ರ್ರು, ಮಾ|| ಕೃಷ್ಣಪ್ಪನವರೂ ರೀಡಿಂಗ್ ರೂಮಿನಿಂದುಂಟಾಗುವ ಪ್ರಯೋಜನದ ವಿಷಯವಾಗಿ ಉಪನ್ಯಾಸಮಾಡಿದ ತರುವಾಯ ಸಭಿಕರೆಲ್ಲರಿಗೂ ಆನಂದವುಂಟಾಯಿತು. ಅನಂತರ ಅಗ್ರಾಸನಾಧಿಪತಿಗಳ ಸಮಯೋಚಿತ ಉಪನ್ಯಾಸ ನಡೆದು ಸಭಾ ಬರಖಾಸ್ತಾಯಿತು. ಈ ರೀಡಿಂಗ್ ರೂಮು ಶಾಶ್ವತವಾಗಿ ನಡೆಯಲೆಂದು ಸಭಿಕರು ಪ್ರಾರ್ಥಿಸುವವರಾಗಿದಾರೆ.

ಪ್ರತ್ಯಕ್ಷದರ್ಶಿ

ಕಳವಿನ ಮಾಲು ಪತ್ತೆ ಆಗಲಿಲ್ಲ

ಅಯ್ಯಾ,

ಶಿವಮೊಗ್ಗಾ ತಾಲ್ಲೂಕು ಹೊಳೆಬೈರನಹಳ್ಳಿ ಗ್ರಾಮದ ವಾಸಸ್ಥ ಸವಾರ್ ಇಲಾಖಾದಲ್ಲಿದ್ದ ದೋಂಗ್ರೋಜಿ ಬೇಡುವ ವಿಜ್ಞಾಪನೆಗಳು:— ಈ ಕೆಳಗೆ ಬರೆದಿರುವ ನನ್ನ ಕಷ್ಟನಷ್ಟದ ಸಂಗತಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸೋಣವಾಗಿ ನನ್ನ ಮನಸ್ಸಂತೋಷಪಡಿಸಬೇಕು.

ಆಜ್ಞಾಧಾರಕನಾದ ಅತಿ ವೃದ್ಧನಾದ ನನ್ನ ಬಾಬತು, ನನ್ನ ಹತ್ತಿರವೇ ಸದಾ ಇರುತ್ತಿದ್ದ, ಹೊಳೆಹೊನ್ನೂರು ಸುತ್ತುಮುತ್ತಲಿನ ಗ್ರಾಮ ಪ್ರಮುಖರೇ ಆದಿಯಾಗಿ ಸರ್ವರಿಗೂ ಚನ್ನಾಗಿ ಗೊತ್ತಿದ್ದ ೬೦೦ ರೂ ಕಿಮ್ಮತ್ತು(?) ಕಡಮೆ ಬೆಲೆಬಾಳುವ ಹಿಂದಿನ ಕಾಲದ ಭಂಗಾರದ ವರಹಗಳು, ಚಂದ್ರನ ಆಕಾರದ ಕೊನ್ನಗಳು(?), ಇತರ ಬೆಳ್ಳಿ ಭಂಗಾರದ ಒಡವೆಗಳು ನಾಡು ೧೦೦ ರೂಪಾಯಿಗಳನ್ನು ಕೆಲಸದ ನಿಮಿತ್ತ ತರೀಕೆರೆಗೆ ಹೋಗುವದಕ್ಕಾಗಿ ಹೊರಟವನು ದಾರಿಯಲ್ಲಿದ್ದ ಬೇಲೂರಿನ(?) ಸಾಳು ಗ್ರಾಮದ ದೇವಸ್ಥಾನದಲ್ಲಿ ರಾತ್ರಿಯು ಸ್ವಲ್ಪ ಮಲಗಿರುವಾಗ್ಗೆ ತರೀಕೆರೆ ಪೇಟೆಯಿಂದ ಬಂದಿದ್ದ ನರಸೋಜಿ ವಗೈರೆ ಇಬ್ಬರು ನನ್ನನ್ನು ಹೊಡೆದು ಬಲೋತ್ಕಾರದಿಂದ ನನ್ನಲ್ಲಿದ್ದ ಮೇಲ್ಕಂಡ ಮಾಲುಗಳೆಲ್ಲವನ್ನು ತೆಗೆದುಕೊಂಡು ಓಡಿ ಹೋದರು. ಈ ಕಳವಾದ ಸಂಗತಿಯನ್ನು ಅಲ್ಲಿ ಪಟೇಲನಿಗೆ ತಿಳಿಸಿದೆನು. ನಾನೂ ತಲಾಷ್ ಮಾಡುತ್ತಿರುವಾಗ್ಗೆ ತರೀಕೆರೆಯಲ್ಲಿ ಅಗಸಾಲೆಯೊಬ್ಬನ ಮನೆಯಲ್ಲಿ ಮಾಲನ್ನು ಅಪಹರಿಸಿದ ಆಸಾಮಿಯನ್ನು ಮಾಲಿನೊಂದಿಗೆ ಪತ್ತೆಮಾಡಿ ಕೂಡಲೆ ತಾ ೨೯—೧೦—೧೯೦೬ರಲ್ಲಿ ತರೀಕೆರೆ ಪೋಲೀಸ್ ಜಮಾದಾರರಲ್ಲಿ ಫಿರ್ಯಾದು ಕೊಟ್ಟೆನು. ಅದರ ಮೇಲೆ ಅಪರಾಧಿಯನ್ನು ಲಾಕಪ್ಪಿನಲ್ಲಿಟ್ಟಿದ್ದರು. ಅನಂತರ ನಡೆಯಿಸಿದ ವಿಚಾರವು ನನಗೊಂದೂ ತಿಳಿಯದೆ, ಪೋಲೀಸ್ ಇ|| ಜನರಲ್ ರವರಿಗೂ, ಕಡೂರು ಡಿಸ್ಟ್ರಿಕ್ಟ್ ಡೆ|| ಕಮಿಷನರ್ ಸಾಹೇಬರವರಿಗೂ, ಪೋಲೀಸ್ ಸೂಪರಿಂಟೆಂಡೆಂಟರವರಿಗೂ ರಿಜಿಸ್ಟರ್ ಮೂಲಕ ೩—೪ ಅರ್ಜಿಗಳನ್ನು ಕಳುಹಿಸಿದನು. ಯಾವ ಜವಾಬೂ ದೊರೆಯಲಿಲ್ಲ. ತರೀಕೆರೆ ಪೋಲೀಸ್ ಇನ್ಸ್‌ಪೆಕ್ಟರಲ್ಲಿಗೆ ಹೋದರೆ,— ಈಗ ಸಿಕ್ಕಿರುವ ೭ ಬಂಗಾರದ ವರಹ, ಅಡ್ಡಿಕೆ, ಉಪ್ಪುಗಳನ್ನು(?) ಮಟ್ಟಿಗೆ ತೆಗೆದುಕೊಂಡು ಹೋಗು, ಇಲ್ಲವಾದರೆ ಇಲ್ಲಿಗೆ ಪದೇ ಪದೇ ಬರಬೇಡ ಹೋಗು ಎಂದು ಹೇಳುತ್ತಿದ್ದರು. ಹೀಗಾಗಿ ನಾನು ತಿರಿಗಿ ತಿರಿಗಿ ಬೇಸತ್ತು ಹೊಟ್ಟೆಗಿಲ್ಲದೆ ಉಪವಾಸ ಮತ್ತು ವನವಾಸ ಮಾಡಿಕೊಂಡು, ಗ್ರಾಮಾಂತರಗಳಲ್ಲಿ ಅಲೆಯುತ್ತಿದ್ದೇನೆ. ಸಿಕ್ಕಿರುವದನ್ನಾದರೂ ಕೊಡಿಸಿ ಎಂದು ಕೇಳಿದರೆ, ಅದನ್ನು ಕೊಡಿಸರಿಲ್ಲ. ಈ ಕಳವಿನ ರಿಕಾರ್ಡುಗಳೆಲ್ಲವೂ ತರೀಕೆರೆ ಪೋಲೀಸ್ ಆಫೀಸಿನಲ್ಲಿದೆ. ಸರ್ಕಾರದವರು ಸರಿಯಾದ ವಿಚಾರಣೆಯಿಂದ ನ್ಯಾಯವಾದ ಮಾರ್ಗಂ ಶೋಧಿಸೋಣವಾಗಿ ನನ್ನ ಮಾಲು ನನ್ನ ಸುಪರ್ದಿಗೆ ಕೊಡಿಸೋಣವಾಗಬೇಕಾಗಿ ಬೇಡುತ್ತೇನೆ. ನಾನು ಕೇವಲ ಮುದುಕನಾಗಿಯೂ, ಶಕ್ತಿಯಿಲ್ಲದವನಾಗಿಯೂ ಇರುವದರಿಂದ ನನ್ನ ಫಿರ್ಯಾದನ್ನು ಯಾರೂ ಲಕ್ಷ್ಯಕ್ಕೆ ತರಲಿಲ್ಲ. ತಮ್ಮ ಪತ್ರಿಕೆಯ ಮುಖಾಂತರ ಪ್ರಕಟಿಸಿ ಆ ಮೂಲಕ ಏನಾದರೂ ನ್ಯಾಯ ದೊರಿಯಬಹುದೆಂದು ನಿರೀಕ್ಷಣೆ ಇದೆ. ತಮ್ಮ ಸಹಾಯದಿಂದ ಈ ಮಾಲನ್ನು ಹೊಂದಿ ಜೀವಿಸ ಮಾಡಬೇಕಾಗಿದೆ.

ತೋಂಗ್ರೋಜಿ.

ಕ್ರಿಮಿನಲ್ ಕೃತ್ಯಕ್ಕೆ ಮನುಷ್ಯನ ಪ್ರಾಣತೆಗೆಯೋಣ

ಅಯ್ಯಾ

ಈಗ್ಗೆ ಕೆಲವು ದಿವಸದಿಂದ ಬಹಳ ನ್ಯೂಸ್ ಪೇಪರುಗಳಲ್ಲಿ ಎಂಥಾ ಕ್ರೂರಕೃತ್ಯ ಮಾಡಿದಾಗ್ಯೂ ಅದಕ್ಕೆ ಸಂಬಂಧಪಟ್ಟ ಮನುಷ್ಯನನ್ನು ಅದಕ್ಕಾಗಿ ಕೊಲ್ಲದೇ ಇರುವಂತೆ ಗೌವರ್ನಮೆಂಟಿನವರು ಲಾ ಮಾಡಬೇಕೆಂತ ಪ್ರಜೆಗಳು ಅಪೇಕ್ಷಿಸುತ್ತಿರುವದಾಗಿ ನಮೂದಿಸಿರತಕ್ಕದ್ದನ್ನು ಓದಿದೆ. ಆದರೆ ಈ ಕೋರಿಕೆ ಪ್ರಜೆಗಳಿಗೂ, ಗೌವರ್ನಮೆಂಟಿಗೂ ಕ್ಷೇಮಕರವಾದದ್ದಲ್ಲ. ಆ ವಿಧಿಯು ಪ್ರಜೆಗಳ ಸುಖಕ್ಕಾಗಿ ಇದ್ದೇ ತೀರಬೇಕಾಗಿದೆ.

ಹಿಂದಿನ ಕಾಲದ ಮೌಢ್ಯನಡವಳಿಕೆಯ ವಿವರವನ್ನು ಈಗ ತಿಳಿಸಿದರೆ ಆಗಿನ ಗೌವರ್ನಮೆಂಟಿನವರು ತಮ್ಮ ಪ್ರಜೆಗಳನ್ನು ಅಡವಿಯಲ್ಲಿ ಮೃಗಗಳನ್ನು ಬೇಟೆಯಾಡುವಂತೆ ಕೊಲ್ಲುತ್ತಿದ್ದರೆಂಬುವುದನ್ನೂ, ಪ್ರಯಾಣಸ್ಥರನ್ನು ಥಗ್ಸ್ ಎಂಬ ಕಳ್ಳರು ಕೊಲ್ಲುತ್ತಿದ್ದರೆಂಬುವದನ್ನು, ಗಂಗಾ ಸ್ನಾನಕ್ಕಾಗಿ ಹೋದ ವಿಶೇಷ ಐಶ್ವರ್ಯವಂತರಾದ ಹೆಂಗಸರನ್ನು ಗಂಗಾದೇವಿಯು ವಿಶ್ವಾಸದಿಂದ ತನ್ನಲ್ಲಿಗೆ ಕರೆದುಕೊಂಡಳೆಂಬ ರದಂತೀ ಹುಟ್ಟಿಸಿ, ಸಮುದ್ರಕಳ್ಳರು. ನಿರಪರಾಧಿಗಳಾದ ಹೆಂಗಸರನ್ನು ಕೊಲ್ಲುತ್ತಿದ್ದದ್ದನ್ನೂ, ಸಹಗಮನ ಇವೇ ಮೊದಲಾದ ಕ್ರೂರ ಕೃತ್ಯಗಳನ್ನೂ ಇಂಗ್ಲಿಷ್ ಗವರ್ನಮೆಂಟಿನವರು ನಮ್ಮ ಇಂಡಿಯಾಕ್ಕೆ ಬಂದನಂತರ ಬಹಳ ಕಷ್ಟದಿಂದ ನಿಲ್ಲಿಸಿಬಿಟ್ಟರು. ಅವರಿಂದೀಚೆಗೆ ನಮ್ಮ ಸೌಕರ್ಯಕ್ಕಾಗಿ ಇಂಗ್ಲೀಷು ಗೌವರ್ನಮೆಂಟಿನವರು ವಿಧಿಸಿರತಕ್ಕ ಲಾ ಗಳನ್ನು ವಿದ್ಯಾವಂತರಾದವರೆಲ್ಲಾ ಓದಿ ಅದರ ನಿಜವಾದ ಅರ್ಥವನ್ನು ಗ್ರಹಿಸಿದರೆ ಆ ಲಾ ಗಳು ನಮ್ಮನ್ನು ಸನ್ಮಾರ್ಗಕ್ಕೆ ತರತಕ್ಕ ವಿಧಿಗಳಾಗಿ ತೋರುತ್ತವೆಯೇ ಹೊರತು ನಮಗೆ ಬಾಧಕಪಡಿಸತಕ್ಕವುಗಳಾಗಿ ಇಲ್ಲ. ಅದರಲ್ಲೂ ಇಂಡಿಯನ್ ಪೆನಲ್ ಕೋಡಿನ ೬ನೇ(?) ಅಧ್ಯಾಯದ ಅರ್ಥ ಚನ್ನಾಗಿ ಯೋಚಿಸಿದರೆ ತಪ್ಪಿತಸ್ಥರಿಗೆ ವಿಧಿಸತಕ್ಕ ಶಿಕ್ಷೆ ಅವರ ಕೃತ್ಯ ತಪ್ಪಿತವಾದದ್ದೆಂತ ಅದನ್ನು ನಡಿಸಿದವರ ತಿಳುವಳಿಕೆಗೆ ಬಂದು ಮುಂದೆ ಅಂಥಾ ಕೃತ್ಯ ನಡಿಸಬಾರದೆಂಬ ತಿಳುವಳಿಕೆ ಕೊಡುವುದಕ್ಕೆ ಸಾಕಾದಷ್ಟು ನೇರವಾಗಿ ಕಾಣುತ್ತದೆಯೇ ಹೊರತು ಅಂಥವರನ್ನು ಕಠಿಣವಾಗಿ ಶಿಕ್ಷಿಸತಕ್ಕದ್ದಾಗಿಲ್ಲ. ಅದೇ ಕೋಡಿನ ೬ ಮತ್ತು ೧೭ ನೇ ಅಧ್ಯಾಯಗಳು ಅಂದರೆ ಸಂಸ್ಥಾನಕ್ಕೆ ವಿರೋಧವಾದ ಕೃತ್ಯ, ಮನುಷ್ಯಪ್ರಾಣ ತೆಗೆದ ಕೃತ್ಯ, ಅವುಗಳಲ್ಲಿ ಮಾತ್ರ ಮನುಷ್ಯನ ಪ್ರಾಣ ತೆಗೆಯಬಹುದೆಂತ ನಮೂದಿಸಿದ್ದಾಗ್ಯೂ ಖಂಡಿತವಾಗಿ ಮರಣದಂಡನೆ ಶಿಕ್ಷೆಯೇ ವಿಧಿಸಬೇಕೆಂಬ ವಿಧಿಯು ಅದರಲ್ಲೂ ಇಲ್ಲ. ಇದೇ ಕೋಡಿನ ೩೦೨, ೩೦೩ ನೇ ಸೆಕ್ಷನ್‌ಗಳನ್ನು ನೋಡಿ. ದೃಷ್ಟಾಂತಕ್ಕಾಗಿ ವೆ|| ಬಾಲಗಂಗಾಧರ ತಿಲಕರವರ ವಿಷಯದಲ್ಲಿ ಅವರಿಗೆ ಶಿಕ್ಷೆ ವಿಧಿಸಿದ ಜಸ್ಟಿಸ್ ದಾವರು ತೋರಿಸಿದ ದಯೆಯೇ ಎಲ್ಲರಿಗೂ ತಿಳುವಳಿಕೆ ಕೊಡುತ್ತದೆ.

ಹೀಗಿರತಕ್ಕದ್ದರಲ್ಲಿ ಲಾ ದಿಂದ ಬಂಧಿಸಲ್ಪಟ್ಟಿರತಕ್ಕ ಗೌವರ್ನಮೆಂಟು ಎಂದಿಗೂ ಅದರ ಮುಖ್ಯ ಆಸ್ತಿಯಾದ ಮನುಷ್ಯಪ್ರಾಣವನ್ನು ನಿಷ್ಕಾರಣವಾಗಿ ತೆಗೆಯುವದಿಲ್ಲ. ಅದಷ್ಟರಿಂದ ಫಾಸೀ ಸಜಾ ಕೊಡತಕ್ಕದ್ದನ್ನೇ ಮನ್ನಾ ಮಾಡಬೇಕೆಂದು ಕೇಳಿಕೊಳ್ಳತಕ್ಕವರು ಮೌಢ್ಯದಲ್ಲಿರತಕ್ಕ ಜನಗಳಿಗೆ ಸನ್ಮಾರ್ಗವನ್ನು ಚೆನ್ನಾಗಿ ಬೋಧಿಸಿ, ಈಗಿನ ಲಾ ಗಳ ಅರ್ಥವನ್ನು ಅವರಿಗೆ ತಿಳುವಳಿಕೆ ಕೊಟ್ಟು, ತಾವು ಲೋಕಕ್ಕೆ ಹಿತರಾಗಿಯೂ, ರಾಜಭಕ್ತಿ ಧುರೀಣರಾಗಿಯೂ, ತಮ್ಮ ಪದ್ಧತಿಯಲ್ಲಿ(?) ನಡೆಯುತ್ತೇ ಇದ್ದರೆ, ಮನುಷ್ಯಪ್ರಾಣ ತೆಗೆಯತಕ್ಕ ಸಂಭವವೇ ಗೌವರ್ನಮೆಂಟಿಗೆ ಉಂಟಾಗುವುದಿಲ್ಲ. ಪ್ರಜೆಗಳ ನಡವಳಿಕೆಯ ಮೇಲೆ ಲಾ ಗಳು ಹುಟ್ಟುತ್ತವೆ. ಮೇಲೆ ನಾನು ಹೇಳಿರುವಂತೆ ಸನ್ಮಾರ್ಗದಲ್ಲಿ ನಡೆಯತಕ್ಕ ಅಭ್ಯಾಸ ಕಲಿತರೇ ಸಾಕಾಗಿದೆ. ಫಾಸೀ ಸಜಾ ವಿಧಿಸುವುದನ್ನು ನಿಲ್ಲಿಸುವುದು ಸಧ್ಯಕ್ಕೆ ಯಾವ ಗೌವರ್ನಮೆಂಟಿಗೂ, ಪ್ರಜೆಗಳಿಗೂ ಕ್ಷೇಮಕರವಾದದ್ದಲ್ಲ.

ಒಬ್ಬ ಪೆನ್‌ಷನ್ ಆಫೀಸರ್.

ಹಳ್ಳಿಕೆರೆ ಸ್ಕೂಲಿನ ಬಹುಮಾನ ಸಭೆಯು

ಅಯ್ಯಾ,

ಇದೇ ಆಗಸ್ಟ್ ತಾ. ೧೦ನೇ ಸೋಮವಾರ ೧೨ ಘಂಟೆಗೆ ಅಮರಾಪುರದ(?) ಮಾರ್ಗೊ(?) ಡಾಕ್ಟರ್ ಬೌರ್ನ್, ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್, ಮದ್ರಾಸ್, ಇವರು ಪತ್ನೀ ಸಮೇತರಾಗಿ ಹಳ್ಳಿಕೆರೆಯನ್ನು ಸೇರುವವರಿದ್ದರು. ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮಿ|| ಡಿ. ರಾಮರಾಯರು ಸಾಹೇಬರವರನ್ನು ಕಂಡು, ಸ್ಕೂಲ್ ವಿದ್ಯಾರ್ಥಿಗಳಿಗೆ ಬಹುಮಾನ ಕೊಡಲು ದಯವಿಟ್ಟು ಸ್ಕೂಲಿಗೆ ದಯಮಾಡಿಸಬೇಕೆಂದು ಕೇಳಿಕೊಂಡಿದ್ದರ ಮೇಲೆ ಸಾಹೇಬರವರು ಒಪ್ಪಿ ಅಪ್ಪಣೆ ಕೊಡಿಸಿದರು. ಹೆಡ್ ಮಾಸ್ಟರು ಕಳೆದ ಮೂರ್ನಾಲ್ಕು ತಿಂಗಳಲ್ಲಿ ತಮ್ಮ ಸ್ವಾಧೀನಕ್ಕೆ ಬಂದಿದ್ದ ಹೊಸ ಕಟ್ಟಡವನ್ನು ತಳಿರುತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ, ಪತಾಕೆಗಳಿಂದಲೂ ಅಲಂಕರಿಸಿ ಊರಿನಲ್ಲಿರತಕ್ಕ ದೊಡ್ಡ ಮನುಷ್ಯರುಗಳಿಗೂ, ಸರ್ಕಾರಿ ನೌಕರರಿಗೂ ಸ್ಕೂಲಿಗೆ ದಯಮಾಡಿಸಬೇಕೆಂದು ಆಹ್ವಾನ ಪತ್ರಿಕೆಗಳನ್ನು ಕಳುಹಿಸಿ, ಬಾಲಿಕಾ ಪಾಠಶಾಲೆಯಲ್ಲಿ(?) ತಕ್ಕ ಬಾಲಿಕೆಯರನ್ನೂ ಅದೇ ಹೊಸ ಎ. ವಿ. ಸ್ಕೂಲ್ ಕಟ್ಟಡಕ್ಕೆ ಬರಮಾಡಿಕೊಂಡರು. ಡಾಕ್ಟರ್ ಬೌರ್ನ್ ಯವರು ಪತ್ನೀ ಸಮೇತರಾಗಿ ಮೋಟಾರ್ ಗಾಡಿಯಲ್ಲಿ ಕುಳಿತು ಸ್ಕೂಲ್ ಸಮೀಪಕ್ಕೆ ಬರುತ್ತಲೂ, ಮೊದಲೇ ಏರ್ಪಾಡಾಗಿದ್ದ ಮೇರೆಗೆ ಸ್ಕೂಲ್ ಮುಂಭಾಗದಲ್ಲಿ ಬಾಲಕರು ಡ್ರಿಲ್ ಮಾಡುವವರಿದ್ದರು. ಅನಂತರ ಸಾಹೇಬರವರು ತಮ್ಮನ್ನು ಎದುರುಗೊಂಡ ದೊಡ್ಡ ಮನುಷ್ಯರುಗಳನ್ನು ವಿಚಾರಿಸಿ ಆನಂದದಿಂದ ಸ್ಕೂಲ್ ಕಟ್ಟಡವನ್ನು ಪ್ರವೇಶಿಸಿ, ಅವರಿಗೋಸ್ಕರ ಏರ್ಪಡಿಸಿದ್ದ ಸ್ಥಳದಲ್ಲಿ ಕ್ರಮವಾಗಿ ಕುಳಿತುಕೊಳ್ಳುವವರಾದರು. ತರುವಾಯ ಮಿ|| ಗೋಪಾಲಕೃಷ್ಣರಾಯರು ಸುಸ್ವಾಗತವನ್ನು ಸೂಚಿಸಿದರು. ಸ್ಕೂಲ್ ರಿಪೋರ್ಟನ್ನು ಓದಿದರು. ಅದರಿಂದ ಮುಖ್ಯವಾಗಿ ಸ್ಕೂಲಿನಲ್ಲಿ ಹಾಲಿ ೧೨೯ ಬಾಲಕರಿರುವರೆಂತಲೂ, ಪ್ರತಿ ೩೧ ಬಾಲಕರು ಇಂಗ್ಲೀಷ್ ಓದುತ್ತಿರುವರೆಂತಲೂ, ಕಳೆದ ವರುಷ ಇಬ್ಬರು ಇಂಗ್ಲಿಷ್ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿ ಅವರಿಬ್ಬರೂ, ಕನ್ನಡದಲ್ಲಿ ೭ಕ್ಕೆ ೪ ಮಂದಿಯೂ ಪ್ಯಾಸಾಗಿರುವರೆಂತಲೂ, ಸರಾಸರಿ ತಿಂಗಳು ೧ಕ್ಕೆ ೪೦ ರೂ ಸ್ಕೂಲ್ ಫೀಜು ವಸೂಲಾಗುತ್ತಿದೆ ಎಂತಲೂ ಇವೇ ಮೊದಲಾದ ವಿಷಯಗಳು ತಿಳಿಸಲ್ಪಟ್ಟವು. ವಿದ್ಯಾರ್ಥಿಗಳು ಇಂಗ್ಲೀಷಿನಲ್ಲಿಯೂ, ಸಂಸ್ಕೃತದಲ್ಲಿಯೂ ಮನೋಹರವಾದ ಪದ್ಯಗಳನ್ನು ಹೇಳಿದರು. ಬಾಲಿಕೆಯರು ಸುಸ್ವರದಿಂದ ಇಂಪಾಗಿ ಗಾನವನ್ನು ಮಾಡಿದರು. ಅನಂತರ ಡಾ|| ಬೌರ್ನ್‌ಯವರು ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ಇನಾಂ ಪುಸ್ತಕಗಳನ್ನೂ, ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ಯಾಸಾದವರಿಗೆ ಸರ್ಟಿಫಿಕೇಟುಗಳನ್ನೂ ತಮ್ಮ ಕೈಯಿಂದಲೇ ಪರಮಾನಂದದಿಂದ ಕೊಡಿಸಿದರು. ಆ ವೇಳೆ ಡಾ|| ಬೌರ್ನ್ ಸಾಹೇಬರವರು ಎದ್ದು ನಿಂತು ತಮಗೆ ಇಂಥಾ ಸಂದರ್ಭವು ಒದಗಿದ್ದಕ್ಕಾಗಿ ತುಂಬಾ ಸಂತೋಷಪಡುತ್ತಾಗಿಯೂ, ಸ್ಕೂಲ್ ಕಟ್ಟಡವು ಬಹಳ ಚನ್ನಾಗಿರುವುದಾಗಿಯೂ, ಸ್ಕೂಲ್ ಕಟ್ಟಡವು ತಯಾರಾಗಿ ಬಹಳ ಸ್ವಲ್ಪ ಕಾಲವಾಗಿದ್ದರೂ, ಸದರೀ ಕಟ್ಟಡವು ನಡೆಯುತ್ತಲಿರುವ ಅಭಿವೃದ್ಧಿಯಿಂದ ಸಾಕಾಗದಂತೆ ಆಗುವುದಕ್ಕಾಗಿ ತಾವು ತುಂಬಾ ಸಂತೋಷಿಸುತ್ತಿರುವುದಾಗಿಯೂ, ಇವೇ ಮೊದಲಾದ ಅಭಿಪ್ರಾಯಗಳನ್ನೊಳಗೊಂಡ ಕೆಲವು ಮಾತುಗಳನ್ನು ಇಂಗ್ಲೀಷಿನಲ್ಲಿ ಹೇಳಿದರು. ಅನಂತರ ಆ ದಂಪತಿಗಳಿಗೆ ಗಂಧ, ಪುಷ್ಪ ಮಾಲಾ, ಫಲ, ತಾಂಬೂಲಾದಿಗಳು ಕೊಡಲ್ಪಟ್ಟು, ಹಾಗೆಯೇ ನೆರೆದಿದ್ದ ಸಭಿಕರಿಗೆಲ್ಲಾ ಗಂಧ, ತಾಂಬೂಲಗಳು ಕೊಡಲ್ಪಟ್ಟವು. ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ಸಿಹಿ ತಿಂಡಿ ಸಾಮಾನು ವಿನಿಯೋಗಿಸಲ್ಪಟ್ಟವು. ಅಂತ್ಯದಲ್ಲಿ ಶ್ರೀಮದಿಂಡಿಯಾ ಚಕ್ರವರ್ತಿಗಳಿಗೂ ಶ್ರೀಮನ್ಮಹಾರಾಜರವರಿಗೂ, ಪತ್ನೀಸಮೇತರಾದ ಡಾಕ್ಟರ್ ಬೌರ್ನ್ ಸಾಹೇಬರವರಿಗೂ ಶ್ರೇಯಸ್ಸೂಚಕವಾದ ಜಯಘೋಷವು ಮಾಡಲ್ಪಟ್ಟು, ಸಭೆಯು ಬರಖಾಸ್ತು ಮಾಡಲಾಯಿತು.

ವಿದ್ಯಾಭಿಮಾನಿ.

ಪ್ರಜಾಪ್ರತಿನಿಧಿಗಳಿಗೆ ವಿಜ್ಞಾಪನೆ.

ಅಯ್ಯಾ,

ದಸರಾ ಮೀಟಿಂಗಿನಲ್ಲಿ ಪ್ರಜಾ ಪ್ರತಿನಿಧಿಗಳಾದ ಮೆಂಬರುಗಳ ಚಿತ್ತಕ್ಕೆ ತರುವ ಕೆಲವು ವಿಷಯವನ್ನು ಈ ಕೆಳಗೆ ಕ್ರಮಪಡಿಸಿರುತ್ತೇನೆ. ದಯವಿಟ್ಟು ಪ್ರಕಟಿಸಿ, ಸರ್ವ ಮೆಂಬರುಗಳ ಚಿತ್ತಕ್ಕೂ ಬರುವಂತೆ ಮಾಡಬೇಕಾಗಿ ಬೇಡುತ್ತೇನೆ.

ತಾಲ್ಲೂಕುಗಳು ದೂರವಾಗಿ ಹಳ್ಳಿಗಳಲ್ಲಿರುವ ನಮ್ಮ ಮಲ್ನಾಡಿನ ಒಕ್ಕಲಿಗರಾದ ನಮ್ಮವರು ವಿದ್ಯವೆಂಬುದು ಗಂಧವೇ ಇಲ್ಲದೆ ತಾವು ಕಷ್ಟಪಡುವ ರೀತಿ, ಬೆಳೆದ ದವಸಗಳನ್ನು ವಿಕ್ರಯಿಸುವ ರೀತಿ, ದವಸಗಳನ್ನು ಇಡಬೇಕಾದ ಕಾಲ, ಮಾರಿಬಿಡುವ ಕಾಲ, ಇವುಗಳೇ ತಮಗೆ ಮುಖ್ಯವಾಗಿ ಗೊತ್ತಿಲ್ಲದಂತಾಗಿರುವದು ವಿದ್ಯಾಶಾಲಿಗಳಿಗೂ ಪಟ್ಟಣವಾಸಿಗಳಿಗೂ ಚನ್ನಾಗಿಯೇ ಗೊತ್ತು. ಇದಕ್ಕೆಲ್ಲ ಕಾರಣವಾಗಿರುವದು ಹಳೆಬರಾದ ನಮ್ಮವರಿಂದಲೇ. ಹ್ಯಾಗೆಂದರೆ, ತಮ್ಮಗಳ ಮನೆಯಲ್ಲಿ ಎಷ್ಟು ಗಂಡು, ಹೆಣ್ಣುಮಕ್ಕಳಿದ್ದರೂ ೧೦—೧೨ ವರ್ಷದವರಿಗೂ ಅವರನ್ನು ಯಾವ ಕೆಲಸಕ್ಕೂ ಪ್ರೇರೇಪಿಸದೆ ಸುಮ್ಮನೆ ಬಿಟ್ಟು, ಅನಂತರ ಸರದಿ ಮೇಲೆ ಕುರಿ ಮತ್ತು ದನಾ ಕಾಯುವುದಕ್ಕೆ ಬಿಡುವರು. ಆ ಲಾಗಾಯ್ತು ಶಕ್ತಿ ಇರುವವರೆಗೂ ಮೂಕಪಶುಗಳಾದ ಎತ್ತುಗಳಂತೆ ಕಷ್ಟಪಟ್ಟು, ೬೦ ವರ್ಷ ಪ್ರಾಪ್ತವಾಗುತ್ತಲೂ ಅಥವಾ ಆ ಮಧ್ಯೆ ಯಾವುದಾದರೂ ಕಾಯಿಲೆಯಿಂದ ಶರೀರವು ನಶಿಸಿಹೋದರೆಯೂ, ಮುದಿ ದನಗಳಿಗೆ ಮುಪ್ಪಿನಲ್ಲಿ ಹ್ಯಾಗೆ ಆಹಾರವನ್ನು ಕೊಟ್ಟು ಮನಸ್ಸಿಟ್ಟು ಕಾಪಾಡುವದೋ ಹಾಗೆಯೇ ಮಾಡುವರು. ಮೊದಲಲ್ಲಾ ೪೦—೫೦ ಜನ ಒಂದೇ ಕುಟುಂಬದಲ್ಲಿರೋಣವೆನ್ನುವರು. ಸಮಯೋಚಿತ ಬುದ್ಧಿ ಬಂದಂತೆ ಕಳಚಿ ಬಿಟ್ಟುಬಿಡುವರು. ಮೊದಲಿದ್ದಂತೆ ಏಕಮತ್ಯವಿದ್ದರೆ ಪ್ರಯೋಜನವೇನೆಂದೆನ್ನುವರು. ಈ ಮಧ್ಯೆ ತಾವು ಕಳಚಿಬಿಟ್ಟವರಾದ ಅವರು ಧೈರ್ಯಗುಂದಿ, ಮೂಢಪಶುಗಳಂತಾಗುವರು. ಆಹಾರ ವಿಹಾರ ಸರಿಯಿಲ್ಲದೆ, ಮನೆಯಲ್ಲಿ ಯಾರೇ ಆಗಲಿ ಕೊಂಚ ಕಾಯಿಲೆ ಬಿದ್ದು ಮಲಗಿದರೆ, ಜೋಯಿಸರುಗಳನ್ನೂ ಕವಡೇ ಇಡುವವರನ್ನೂ ಪಡೆ(?) ತಪ್ಪೋದೆ ಇಲ್ಲ. ಮನೆಯಾಗೆ ತಿಂಗಳು, ೨ ತಿಂಗಳಿಗೊಬ್ಬರು ಮಲಗಿರುವದು ತಪ್ಪಿ ಇಲ್ಲ. ಒಂದು ಮಾತು ನೋಡಿ ಕೊಡೀ ಅನ್ನುವದು, ಈ ರೀತಿ ಮಾಡಿ ಬೆಳ್ಳು(?) ಸನ್ಯಾಸ ತಕ್ಕಂತೆ(?) ಗಾದೆಯಂತಿರುವ ಅವರ ಮಾತಿನ ಮೇಲೆ ನೂರಾರು ರೂಪಾಯಿ ವ್ಯಥಾ ಖರ್ಚುಮಾಡುವದು. ಇಂಥಾ ವಿಷಯಗಳೆಲ್ಲವೂ ವಿದ್ಯಾವಿಹೀನರಾದ ಜನಗಳಲ್ಲಿ ನೆಲೆಗೊಂಡಿರುತ್ತೆ. ನಮ್ಮ ಜನರಲ್ಲಿ ಅನೇಕರು ಸರ್ಕಾರದ ಪಟೇಲಿ ಕೆಲಸವನ್ನು ನೋಡುತ್ತಿರುತ್ತಾರೆ. ಇವರುಗಳಿಗೆ ಸರ್ಕಾರದಿಂದ ಬರುವ ಪ್ರೋಟೆಗಳಲ್ಲಿ(?) ವಿದ್ಯವಿಲ್ಲದವರಿಗೆ ಒಂದು ರೂಪಾಯಿಯಾಗಲಿ ಸಿಕ್ಕಲಿಕ್ಕಿಲ್ಲ. ಅದೆಲ್ಲವೂ ವಿದ್ಯಾವಂತರ ಪಾಲಿಗೆ ಬೀಳುತ್ತಲಿದೆ.

ಸರ್ಕಾರದವರು ಜನಸಮೂಹವಿರುವ ಹಳ್ಳಿಗಳಲ್ಲಿ ಹೋಬಳಿ ಸ್ಕೂಲು ಏರ್ಪಡಿಸಿಕೊಟ್ಟಿರುತ್ತಾರೆ. ಪಟೇಲರುಗಳೇ ಮೊದಲಾದ ಯಜಮಾನರೂ ಒಬ್ಬೊಬ್ಬರು ತಮ್ಮ ಬಾಲಕರನ್ನು ೧—೨ ವರ್ಷ ೩ನೇ ಕ್ಲಾಸ್ ವರಿಗೂ ಓದಲಿಕ್ಕೆ ಕಳುಹಿಸುತ್ತಾರೆ. ಅನಂತರ ತಾಲ್ಲೂಕು ಸ್ಕೂಲುಗಳಿಗೆ ಕಳುಹಿಸಬೇಕಾದರೆ ದೂರವಾಗುತ್ತೆ. ಇವರು ಅಲ್ಲಿ ಹೋಗಿ ಕಲಿತು, ಉದ್ಧಾರವಾಗುತ್ತಾರೋ ಎಂದು ಬಿಟ್ಟುಬಿಟ್ಟು ಮುಟ್ಟುಕಸಬೇ ಸಾಕ್ಷಾಣಸ್ವಯ್ಯ(?) ಅನ್ನುವರು. ಏನು ಸ್ವಾಮಿ, ನಮ್ಮ ಹುಡುಗ ಅಲ್ಲಿಗೆ ಹೋಗಿ ಕಲಿಯೋದು ಬದ್ಧವೇ ಅನ್ನುವರು. ಆ ಮಹಾತ್ಮರು ವಿದ್ಯೆ ಕಲಿಸಿ ಗದ್ದೆ ಕೊಡಾ(?) ವಿಚಾರಮಾಡುತ್ತೀಯಾ ಅನ್ನುವರು. ಆ ಮಾತಿಗೆ ಅತಿ ಸಂತೋಷಪಟ್ಟು—ಇನ್ನೆರಡು ತಿಂಗಳ ಭೂಮಿ ಕೊಡಾರವಲ್ಪವಯ್ಯನೇ(?) ಎಂದು ಅಲ್ಲಿಗೆ ಸುಮ್ಮನಾಗಿಬಿಡುವರು. ಈ ರೀತಿ ಮೊದಲೇ ಬೇಕಾಗಿಲ್ಲದೆ ಇರುವ ಈ ನಮ್ಮ ಜನರಿಗೆ ಹೇಳುವವರೇ ಹೆಚ್ಚು ನಮಗೆ ಸಿಕ್ಕಿಲ್ಲದಂತಾಗಿರುತ್ತೆ. ನಮ್ಮ ಜನರಿಗೆ ಗುರುಶಿಕ್ಷೆ ಇಲ್ಲ. ರಾಜಶಿಕ್ಷೆ ಇಲ್ಲ. ಸ್ವಬುದ್ಧಿ ಮೊದಲೇ ಇಲ್ಲ. ಈ ರೀತಿ ಇರುವದರಿಂದ ಹಣವಂತರಂತೆ ಇವರೇ ಒಂದು ಸ್ವತಂತ್ರದವರೆಂದುಕೊಂಡಿರುತ್ತಾರೆ. ವಿದ್ಯವಿದ್ದರೆ ಇಂಥಾ ಅಭಿಪ್ರಾಯಗಳು ಮನಸ್ಸಿಗೆ ಎಂದಿಗೂ ಬರುತ್ತಾ ಇದ್ದಿಲ್ಲ.

ಕ್ಷಾಮಕಾಲ ಪ್ರಾಪ್ತವಾದರೆ ಬೇರೆ ಯಾತರಿಂದಲೂ ಜೀವನಾ ಮಾಡುವದಕ್ಕೆ ತಿಳಿಯದೆ ಅಶಕ್ತರಾಗಿರುವ ಈ ಬಡ ಒಕ್ಕಲಿಗರೇ ಮೊದಲಾದ ವಿದ್ಯಾವಿಹೀನರಾದ ಪ್ರಜೆಗಳನ್ನೆಲ್ಲಾ ಸರ್ವಶಕ್ತರಾಗುವಂತೆ ನಾಗರೀಕತೆಯುಳ್ಳವರಾಗಿಯೂ ಇರುವಂತೆ ಮಾಡಬೇಕೆಂದು ಕರುಣೆಯುಳ್ಳ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಘನ ಚಿತ್ತಕ್ಕೂ ಮೇಜರ್ ದಿವಾನ್ ಸಾಹೇಬರವರ ಚಿತ್ತಕ್ಕೂ ಬರುವಂತೆ ದಸರಾ ಮೀಟಿಂಗಿನಲ್ಲಿ ಚರ್ಚಿಸುವ ವಿಷಯದಲ್ಲಿ ಮೆಂಬರುಗಳು ಆಲೋಚಿಸಬೇಕೆಂದು ನನ್ನ ಬಿನ್ನಹಗಳನ್ನು ಈ ಕೆಳಗೆ ಕ್ರಮಪಡಿಸಿದೇನೆ —(೧) ಹೋಬಳಿ ಸ್ಕೂಲುಗಳಲ್ಲಿಯೂ ಹಳ್ಳಿಗಳ ಬಾಲಕರ ವಿದ್ಯಾಭಿವೃದ್ಧಿಗೋಸ್ಕರ ತಾಲ್ಲೂಕ್ ಸ್ಕೂಲುಗಳಂತೆ ಫೀ ವಗೈರೆ ಯಾವದಾದರೂ ಒಂದು ತೆರಿಗೆ ಮೂಲಕ ಇಂಗ್ಲೀಷಿನಲ್ಲಿ ೪ನೇ ತರಗತಿ ವರಿಗೂ ವಿದ್ಯೆ ಹೇಳಿಸುವ ಏರ್ಪಾಟು. (೨) ವಿದ್ಯೆ ಇಲ್ಲದೆ ಹಿಂದಾಳುಗಳಾಗಿರುವವರನ್ನೆಲ್ಲಾ ನಿರ್ಬಂಧದಿಂದ ವಿದ್ಯೆ ಕಲಿಸುವಂತೆ ಏರ್ಪಾಟು ಏರ್ಪಡಿಸಿಕೊಡಬೇಕೆಂದು ಇವೆರಡನ್ನೂ ಚರ್ಚಿಸಿ ಏರ್ಪಾಟು ಸಂಪಾದಿಸಿದ್ದಾದರೆ ದೇಶದಲ್ಲೆಲ್ಲಾ ದುಷ್ಟ ನಡತೆಗಳು ತಪ್ಪಿ, ಸಕಲರೂ ಒಗ್ಗಟ್ಟಾಗಿ ರಾಜಭಕ್ತಿ ವಿಶ್ವಾಸಗಳೊಡನೆ ನಾಗರೀಕತೆಯುಳ್ಳವರಾಗಿ, ಸ್ತ್ರೀಯರೂ ಕೂಡಾ ವಿದ್ಯಾಸಂಪಾದನೆ ಮೂಲಕ ರಾಮರಾಜ್ಯದಲ್ಲಿದ್ದಂತೆ ಸದಾ ಸುಭಿಕ್ಷಗೊಂಡುವವು(?)

ಹೆತ್ತೂರು ನಿರ್ವಾಣಗೌಡ.

ತಾಲ್ಲೂಕು ವರ್ತಮಾನಗಳು.

ಅರಸೀಕೆರೆ.—ಈ ತಿಂಗಳು ತಾ ೩ನೇ ಭಾನುವಾರ ರಾತ್ರಿ ಇಲ್ಲಿನ ವರ್ತಕ ಮಂಜಯ್ಯನವರ ಕರುವನ್ನು ತಿಂದುಹಾಕಿದ ಹುಲಿಯು ಸೋಮವಾರ ರಾತ್ರಿ ಎಕ್ಸೈಸ್ ಇನ್ಸ್‌ಪೆಕ್ಟರ ಬಳ್ಳೇ(?) ಗಬ್ಬದ ಹಸುವ

ನ್ನು ಕೊಂದು ರಕ್ತ ಕುಡಿದು ಹಿಂಭಾಗ ತಿಂದಿತು. ಈ ಹುಲಿಯು ಇಲ್ಲಿನ ತಿರುಪತಿ ಬೆಟ್ಟದಿಂದ ಪದೇ ಪದೇ ನಿರ್ಭಯವಾಗಿ ರಾತ್ರಿ ಆದ ಕೂಡಲೆ ಬಂದು ಬಹು ದನಕರು ಕುದುರೆ ಮೇಕೆಗಳನ್ನು ತಿನ್ನುತ್ತಿದೆ. ಇದರ ಅವಾಂತರಕ್ಕೆ ಜನರಿಗೆ ರಾತ್ರಿ ಹೊರಗೆ ಬರುವದಕ್ಕೆ ತುಂಬಾ ಅಂಜಿಕೆ ಆಗಿದೆ. ಸರ್ಕಾರದವರು ದಯವಿಟ್ಟು ಈ ಹುಲಿಗಳನ್ನು ಕೊಲ್ಲಿಸಲಿಕ್ಕೆ ತಕ್ಕ ಏರ್ಪಾಡು ಮಾಡಬೇಕಾಗಿದೆ. ಇಲ್ಲವೇ ಲೈಸೆನ್ಸ್‌ದಾರರಿಗೆ ಪ್ರೋತ್ಸಾಹಕೊಟ್ಟರೆ ಕೂಡಲೆ ಈ ಹುಲಿಗಳ ಭಯ ತಪ್ಪುವದು.—ಇಲ್ಲಿಗೆ ಸಬ್ ರೆಜಿಸ್ಟ್ರಾರಾಗಿ ೨|| ವರ್ಷಗಳ ಹಿಂದೆ ಬಂದು ಕೆಲಸಮಾಡುತ್ತಿರುವ ಮೆ|| ಬಿ. ಎಂ. ರಂಗಯ್ಯನಾಯಡುರವರಿಗೆ ವರ್ಗವಾಗುವ ವರ್ತಮಾನವಿದೆ. ಇವರು ಇಲ್ಲಿಗೆ ಬಂದ ಮೇಲೆ ಇಲ್ಲಿನ ರೀಡಿಂಗ್ ರೂಂ ಬಹು ಒಳ್ಳೇ ಅಭಿವೃದ್ಧಿಗೆ ಬಂದಂತೆ ತೋರುತ್ತೆ. ಇವರು ನಿಷ್ಪಕ್ಷಪಾತಿಗಳಾಗಿಯೂ ಖಂಡಿತವಾದಿಗಳಾಗಿಯೂ ದಯಾವಂತರಾಗಿಯೂ ಇರುವರೆಂದು ಕೇಳುತ್ತೇನೆ.

ಹೊಸಕೋಟೆ.—ಇಲ್ಲಿ ಈ ವರುಷ ಪ್ಲೇಗ್ ಗಲಾಟೆ ಇಲ್ಲದೆ ಇರುವದರಿಂದ ಜನಗಳೆಲ್ಲರೂ ಕ್ಷೇಮವಾಗಿರುತ್ತಾರೆ. ಈ ಗ್ರಾಮಕ್ಕೆ ಸಮೀಪದಲ್ಲಿರುವ ಬೇಗೂರಿನಲ್ಲಿ ಪ್ಲೇಗ್ ಗಲಾಟೆಯಿಂದ ೯ ಜನ ತೀರಿಹೋದರೆಂದು ವರ್ತಮಾನ ಕೇಳಿದೆವು.—ರಾಗಿ ಪೈರುಗಳು ಚನ್ನಾಗಿರುತ್ತವೆ. ಆದಾಗ್ಯೂ ಮಳೆ ಇಲ್ಲದ್ದರಿಂದ ಪೈರುಗಳು ಆಕಾಶವನ್ನೇ ಎದುರುನೋಡುತ್ತಲಿವೆ.—ಇದೇ ಊರಿನಲ್ಲಿ ತಯಾರಾಗಿರುವ ಶ್ರೀ ಕೃಷ್ಣರಾಜೇಂದ್ರ ಬಾಯಿಸ್ ಯೂನಿಯನ್ ನಾಟಕಸಂಘದವರು ಇದುವರಿಗೂ ಕೆಲವು ಕಡೆ ಸರ್ಕೀಟು ಮಾಡಿಕೊಂಡು ಬಂದು ಕಳೆದ ೧೩ನೇ ತಾ. ಗುರುವಾರ ದೊಡ್ಡಕೆರೆ ರಾಜಕಾಲುವೆಯ ಪಕ್ಕದಲ್ಲಿರುವ ಬೆಳಗಿರಯ್ಯಂಗಾರರ ಉದ್ಯಾನವನದಲ್ಲಿ ವನಭೋಜನಾರ್ಥವಾಗಿ ಸೇರಿದ್ದರು. ಅಲ್ಲಿ ಬಹುಜನ ದೊಡ್ಡಮನುಷ್ಯರು, ಸ್ನೇಹಿತರು, ಬಡವರಿಗೂ ಬಹಳ ವಿಶರಣೆಯಿಂದ ಭೋಜನಗಳೂ ಪುಷ್ಪ ತಾಂಬೂಲಗಳೂ ನಡಿಸಲ್ಪಟ್ಟವು. ಅನಂತರ ಸಂಗೀತವು ಹಾಡಲ್ಪಟ್ಟಿತು. ಮೇಲ್ಕಂಡ ಆಟಪಾಟಗಳ ಪೈಕಿ ದೊಡ್ಡ ದೊಡ್ಡ ಮರಗಳಿಗೆ ಉಯ್ಯಾಲೆಗಳು ಹಾಕಿದ್ದರು. ಅದರಲ್ಲಿ ಇಬ್ಬರು ಹುಡುಗರು ೫ ರ ೬ ಪರತು ಹಾಕಿಕೊಂಡು ೩|| ಗಂಟೆಯಿಂದ ೫ ಗಂಟೆ ವರಿಗೂ ಕಳೆಕ್ಕೆ ಆಡುವ ಹಾಗೆಯೂ, ಉಯ್ಯಾಲೆಯನ್ನು ನಿಲ್ಲಿಸದ ಹಾಗೆಯೂ ಆಡುತ್ತಿರುವಾಗ್ಗೆ ಅಕಸ್ಮಾತ್ ಉಯ್ಯಾಲೆಯು ಹಗ್ಗ ಕಿತ್ತು ಹೋಯಿತು. ದೈವಾಧೀನದಿಂದ ಏನೂ ಅಪಾಯವಾಗಲಿಲ್ಲ. ಅನಂತರ ಅಲ್ಲಿ ಸೇರಿದ್ದ ದೊಡ್ಡಮನುಷ್ಯರು ಉಭಯತ್ರರಿಗೂ ಸಮಾಧಾನಪಡಿಸಿ ಮೇಲ್ಕಂಡ ಪರತ್ತು ಸಮ ಭಾಗವಾಗಿ ಕಟ್ಟಿ ಕಳುಹಿಸಿದರು.

ಚಿತ್ರದುರ್ಗ.—ಕಳೆದ ೩ ನೇ ತಾ. ಇಲ್ಲಿ ಒಂದು ಆಶ್ಚರ್ಯಕರವಾದ ಕೆಲಸವು ನಡೆಯಿತು. ಅದೇನೆಂದರೆ, ಆ ತಾರೀಖಿನಲ್ಲಿ ಚಾಮರಾಜೇಂದ್ರ ಮೆಮೋರಿಯಲ್ ಹಾಲಿನಲ್ಲಿ ಒಂದು ಸರ್ಪವು ಸೇರಿಕೊಂಡಿತ್ತು. ಅಲ್ಲಿ ಸ್ಟೂಡೆಂಟ್ಸ್ ಹೋಮಿನ ಹುಡುಗರು ವಾಸಿಸುತ್ತಾರೆ. ಸದರೀ ಹುಡುಗರ ಬಟ್ಟೆಯನ್ನು ಒಬ್ಬ ಅಗಸರವನು ತಂದಿದ್ದನು. ಈ ಸರ್ಪವು ಅವನನ್ನು ಬೆನ್ನಟ್ಟಿ ಬಂತು. ಇದನ್ನು ನೋಡಿ ಅವನು ಗಾಬರಿಯಿಂದ ಕೂಗಿಕೊಂಡು ಓಡಿಹೋದನು. ಅನಂತರ ಅದು ಮೆಟ್ಟಲಿನ ಹತ್ತಿರ ಇದ್ದ ಒಂದು ಬಿಲವನ್ನು ಹೊಕ್ಕಿತು. ಆದರೆ ಅದು ಮುಂದಕ್ಕೆ ಹೋಗುವುದಕ್ಕೆ ಆಸ್ಪದವಿರಲಿಲ್ಲವಾದ್ದರಿಂದ ಅದು ಅಲ್ಲಿಯೇ ಇತ್ತು. ಹುಡುಗರೆಲ್ಲಾ ಗಾಬರಿಯಿಂದ ಅಲ್ಲಿಯೇ ಹೋಗುತ್ತಿದ್ದ ಒಬ್ಬ ಹುಡುಗನು ಹೋಗಿ ಅಲ್ಲಿಯೇ ಹೋಗುತ್ತಿದ್ದ ಬಾಪ್‌ಟಿಸ್ಟ್‌ಯಾದ ಮತ್ತು ನೇಟಿವ್ ತಾಳ್ಪರಾದ ಸೈಯದ್ ಸೈಪುಲ್ಲಾ ಉರುಫ್ ನಾಸಿದ್ ಪೀರಾ ಎಂಬುವರನ್ನು ಕರೆದುಕೊಂಡು ಬಂದನು. ಅವರು ಅಲ್ಲಿಗೆ ಬಂದು ಸ್ಟೂಡೆಂಟ್ಸ್ ಹೋಂ ಮ್ಯಾನೇಜರು ಕಳುಹಿಸಿಕೊಟ್ಟಿದ್ದ ಜವಾನನ ಸಹಾಯದಿಂದ ಆ ಮೆಟ್ಟಲನ್ನು ಕೀಳಿಸಲಾಗಿ ಒಳಗೆ ಇದ್ದ ಸರ್ಪವು ಹೊರಕ್ಕೆ ಬಂತು. ಒಡನೆಯೇ ಸದರಿ ಸಿಪಾಯಿಯು ಯಾವ ಸಾಧನವೂ ಇಲ್ಲದೆ ಸಹಾ ಪಕಿ ಆ ಹಾವನ್ನು ಹಿಡಿದುಕೊಂಡು ಹುಡುಗರೆಲ್ಲರಿಗೆ ಅದರ ಜೊತೆ ಆಟವಾಡಿ, ನಂತರ ಅದರೊಡನೆ ಮನೆಗೆ ಹೊರಟುಹೋದನು. ಇದು ಮಧ್ಯಾಹ್ನ ೧ ಘಂಟೆಯಿಂದ ೩ ಘಂಟೆಯವರಿಗೂ ನಡೆಯಿತು. ಅನಂತರ ಈ ವರ್ತಮಾನವು ಡೆಪ್ಯುಟಿ ಕಮೀಷನರ್ ಸಾಹೇಬರಿಗೆ ತಿಳಿಯಿತು. ಅವರು ಅದೇ ಸಾಯಂಕಾಲ ಸದರಿ ಹಾಲಿನ ಮುಂದೆ ಆ ಹಾವನ್ನು ತರುವಂತೆ ಅಪ್ಪಣೆ ಮಾಡಿದರು. ಸದರಿ ಮನುಷ್ಯನು ಆ ಹಾವನ್ನು ತಂದು ಅದರೊಡನೆ ಆಟವಾಡಲಾರಂಭಿಸಿದನು. ಆಗ್ಗೆ ಅಮಲ್ದಾರರೇ ಆದಿಯಾಗಿ ಸಕಲ ದೊಡ್ಡಮನುಷ್ಯರೂ ಬಂದಿದ್ದರು. ಅದರೊಡನೆ ಆಟವಾಡಿದನಂತರ ಒಂದು ಆಡು ಮರಿಯನ್ನು ತರಿಸಿ, ಆ ಹಾವಿನಿಂದ ಅದನ್ನು ಕಚ್ಚಿಸಿದನು. ಒಡನೇ ಅದಕ್ಕೆ ಸದರಿ ಸಿಪಾಯಿಯು ಕೆಲವು ಎಲೆಗಳನ್ನು ತಿನ್ನಿಸಿ ಬದುಕಿಸಿದನು. ಆಡು ಬದುಕಿದ್ದನ್ನು ನೋಡಿ ಸಕಲರೂ ಆಶ್ಚರ್ಯಪಟ್ಟರು. ಮಾರನೆ ದಿನ ಮೆ|| ಆರ್ಬತ್‌ನಾಟ್ ಸಾಹೇಬರೂ ಸದರೀ ಹಾವಿನಲ್ಲಿ ವಿಷವಿದೆಯೋ ಇಲ್ಲವೋ ಎಂದೂ ಪರೀಕ್ಷಿಸಿ ನೋಡಬೇಕೆಂದು ತಮ್ಮ ಸ್ವಂತ ಪಾರಿವಾಳವನ್ನು ಕಚ್ಚಿಸಿದರು. ಆದರೆ ಅದು ೧೦ ಘಳಿಗೆಯಲ್ಲಿಯೇ ಸತ್ತುಹೋಯಿತು.—ಈ ತಾಲ್ಲೋಕಿನಲ್ಲಿ ಕಳೆದ ೮—೧೦ ದಿವಸಗಳಿಂದಲೂ ತುಂತುರು ಮಳೆ ಹಿಡಿದು ಸೂರ್ಯರಶ್ಮಿಯೇ ಇಲ್ಲದೆ ಇದೆ. ಛಳಿ ಬಹಳವಾಗಿದೆ. ಧಾರಣೆವಾಸಿಗಳು ಇನ್ನೂ ಅಗ್ಗವಾಗಲಿಲ್ಲ.

ಚಿಕ್ಕಮಗಳೂರು.—ಈ ಪ್ರಾಂತ್ಯ ಒಂದು ತಿಂಗಳಿಂದಲೂ ಹಿಡಿದ ಮಳೆ ಬಿಡಲಿಲ್ಲ. ಈಗಷ್ಟೇ ಸ್ವಲ್ಪಮಟ್ಟಿಗೆ ಮಳೆ ಬಿಟ್ಟಿದೆ. ಗದ್ದೆ ರಾಗಿ ಪೈರು ಕೆಲವುಕಡೆ ಹೊಡೆಯಲಾಗಿದೆ. ಇನ್ನೂ ಕೆಲವು ಕಡೆ ೮—೧೦ ದಿನಗಳಲ್ಲಿ ಕೊಯ್ಲಿಗೆ ಬರುವದರಲ್ಲಿದೆ. ಎಲ್ಲಾ ಫಸಲೂ ಬಹಳ ಚನ್ನಾಗಿದೆ. ದಿನಸಿ ಧಾರಣೆ ಮಾತ್ರ ಇಳಿಯಲಿಲ್ಲ. ರಾಗಿ ರೂಪಾಯಿಗೆ ೧೬ ಸೇರು, ಅಕ್ಕಿ ೬—೬ ಸೇರು ಮಾರುತ್ತದೆ.—ಮಳೆ ಬಂದಾಗ ಕೆಲವು ರಸ್ತೆಗಳಲ್ಲಿ ಕೆಸರು ಜಾಸ್ತಿ. ಚರಂಡಿಗಳಲ್ಲಿ ಹುಲ್ಲು ಬೆಳೆದಿರುವದರಿಂದ ನೀರು ಹೋಗಲಿಕ್ಕೆ ಮಾರ್ಗವಿಲ್ಲದೆ ನಿಂತಿರುತ್ತದೆ. ಇದರಿಂದ ಜನರಿಗೆ ಬಹಳ ಬೇಸಿಗೆಯಾಗಿ ಕಾಣುತ್ತೆ. ಮ್ಯುನಿಸಿಪಾಲಿಟಿಯವರು ಗಮನಿಸಬೇಕಾಗಿದೆ.—ಈ ಊರಿನಲ್ಲಿ ಹಿಂದೂ ವೈದ್ಯಶಾಲೆ ಒಂದು ಉಂಟು. ಇದರಲ್ಲಿ ಸಹ ಅನೇಕ ಜನರು ತಕ್ಕ ಚಿಕಿತ್ಸೆಯನ್ನು ಹೊಂದುತ್ತಾ ಬರುತ್ತಾರೆ. ವೈದ್ಯರಾದ ಮೆ|| ರಾಮಸ್ವಾಮಿನವರು ಬಹಳ ಮುತುವರ್ಜಿಯನ್ನು ವಹಿಸುತ್ತಾರೆ.—ಕಡೂರು ಸ್ಟೇಷನಿನಿಂದ ಚಿಕ್ಕಮಗಳೂರಿಗೆ ಸಾಮಾನುಗಳನ್ನು ತರಿಸಿಕೊಡತಕ್ಕ ಸದರ್ನ ಮರಾಟಾ ರೈಲ್ವೆ ಕಂಪನಿಯ ಅಧಿಕಾರಿಗಳು ಕಾಲಕ್ಕೆ ಸರಿಯಾಗಿ ಸಾಮಾನುಗಳು ಅವರವರಿಗೆ ಮಾನತಿಯಾಗುವಂತೆ ಮಾಡಬೇಕಾಗಿದೆ. ಈ ವಿಷಯಕ್ಕೆ ಕಂಪನಿಯ ಅಧಿಕಾರಿಗಳು ಗಮನಕೊಡದಿದ್ದರೆ, ಜನರಿಗೆ ಸಂತೋಷವಿರಲಾರದು. ಬಹಳ ಅವಸರವಾಗಿ ಬಟವಾಡೆಯಾಗತಕ್ಕ ವೃತ್ತಾಂತ ಪತ್ರಿಕೆಗಳು ಸಹ ಬಹಳ ದೀರಿಯಾಗಿ ಬರುತ್ತವೆ. ಈ ಅನಾನುಕೂಲವನ್ನು ಕುರಿತು ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಇದನ್ನು ಇನ್ನೂ ಕ್ರಮಪಡಿಸದೆ ಇರುವದಕ್ಕೆ ಯಾವಕಾರಣವೋ ತಿಳಿಯದು.—ಈ ಚಿಕ್ಕಮಗಳೂರು ಟವುನ್ ಅಕ್ಟ್ರಾಯಿ ಕಟ್ಟೆಯಲ್ಲಿ ಹೆಡ್ ಮಾಸ್ಟೇ ಗುಮಾಸ್ತರು ಸುಂಕ ವಸೂಲ್‌ಮಾಡುವಾಗ ಸರಕಾರಕ್ಕೆ ದ್ರೋಹ ಮಾಡುತ್ತಾ ಬಂದರೆಂದು ಕೆಳಗಿನ ನೌಕರರಿಂದ ಮೇಲಿನವರಿಗೆ ತಿಳಿಸಲ್ಪಟ್ಟದ್ದರ ಮೇಲೆ ಸರಕಾರದವರು ತನಿಖೆಮಾಡಿ ಸದರಿ ರುದ್ರಗೌಡನಿಗೆ ಒಂದು ಸಾವಿರರೂಪಾಯಿ ಜುಲ್ಮಾನೆಯೂ, ಎರಡು ವರ್ಷ ಕಠಿಣ ಸಜವೂ ವಿಧಿಸಲ್ಪಟ್ಟಿತು ಎಂಬದಾಗಿ ತಿಳಿಯಲಾಗಿದೆ.—ಸುತ್ತುಮುತ್ತು ಕೆಲವು ಹಳ್ಳಿಗಳಲ್ಲಿ ದನಗಳಿಗೆ ರೋಗ ಉಂಟಾಗಿ ದನಗಳು ಸಾಯುತ್ತಾ ಇರುತ್ತವೆ. ಸರಕಾರದ ಆಸ್ಪತ್ರೆಗೆ ಬಂದು ಕ್ಷೇಮವನ್ನು ಹೊಂದಿಕೊಳ್ಳಬಹುದು.—ತಾ ೭ನೇ ಶುಕ್ರವಾರ ಹೊತ್ತಾರೆ ಸುಮಾರು ೯ ಘಂಟೆ ಸಮಯದಲ್ಲಿ ಬೇಲೂರು ಕೈಮಾರಿನಹತ್ತಿರ ಒಂದು ಮನೆಯ ಜಗಲಿಯ ಮೇಲೆ ಒಬ್ಬ ಮನುಷ್ಯನು ಸತ್ತು ಬಿದ್ದಿದ್ದನು. ಅವನ ಶರೀರವು ಜಗಲಿಯ ಮೇಲೆಯೂ, ತಲೆಯು ಜಗಲಿಯ ಕೆಳಗೂ ಬಿದ್ದು ಮೂಗಿನಿಂದ ಬೆಳ್ಳಗೆ ದ್ರವ್ಯ ಸೋರುತ್ತಾ ದಾರಿಯಲ್ಲಿ ಹೋಗುವವರಿಗೆ ಭಯಂಕರವಾಗಿಯೂ ಇತ್ತು. ಜನರನ್ನು ವಿಚಾರಿಸುವಾಗ ಇವನು ಒಬ್ಬ ಪ್ರಯಾಣಿಕನೆಂದೂ ಯಾವನೋ ಒಂದು ಕಾಯಿಲೆಯಿಂದ ಇವನನ್ನು ಉಪಚರಿಸುವವರಿಲ್ಲದೆ ನೆನ್ನೆ ಮಧ್ಯಾಹ್ನ ಸತ್ತುಹೋದನೆಂದು ತಿಳಿಯಲಾಯಿತು. ಇಂಥಾ ಪ್ರಯಾಣಿಕರ ವಿಷಯದಲ್ಲಿ ಮ್ಯುನಿಸಿಪಾಲಿಟಿಯವರು ಗಮನಿಸಬೇಕಾಗಿದೆ.

ಚನ್ನಪಟ್ಟಣ.—ಕಳೆದ ಶುಕ್ರವಾರ ೨—೩ ದಿವಸಗಳ ಮಟ್ಟಿಗೆ ಒಳ್ಳೆ ಮಳೆಯಾಯಿತು. ಪೈರುಗಳಿಗೆ ತಕ್ಕಮಟ್ಟಿಗೂ ತಂಪಾಯಿತು. ಧಾರಣೆವಾಸಿಗಳು ಮಾತ್ರ ಭಯಾವು ದರದಲ್ಲಿದೆಯೇ ಹೊರತು ಕಡಿಮೆಯಾಗಲಿಲ್ಲ. ರಾಗಿ ರೂಪಾಯಿಗೆ ೧೪ ಸೇರು, ಅಕ್ಕಿ ೬—೬|| ಸೇರು, ತೊಗರಿಬೇಳೆ ೫ ಸೇರು ಮಾರುತ್ತಾರೆ. ಗರೀಬರ ಜೀವನಕ್ಕೆ ತುಂಬಾ ಕಷ್ಟ.—ಬ್ರೊ|| ಇ|| ಮೆ|| ನಟರಾಜ ಐಯ್ಯರವರು ಇಲ್ಲಿನ ಕೆಲಸದ ಛಾರ್ಜ್ ತೆಗೆದುಕೊಂಡರು.—ಈಚೀಚಿಗೆ ಗ್ರಾಮಸ್ಥರ ಪ್ರಯೋಜನಕ್ಕಾಗಿ ಪ್ರತಿತಾಲ್ಲೋಕಿನಲ್ಲಿಯೂ ಸರ್ಕಾರಿ ಆಸ್ಪತ್ರೆ ಇಲ್ಲದಂಥಾ, ಇದ್ದರೂ ಹಳ್ಳಿ ಜನರಿಗೆ ದೂರವಾದಂಥಾ, ಅವಶ್ಯಕವೆಂದು ತೋರುವಕಡೆ ಕೆಲವು ವೈದ್ಯಾಲಯಗಳನ್ನು ಸ್ಥಾಪಿಸಬಹುದೆಂಬುದು ಸರ್ಕಾರದವರ ಅಭಿಪ್ರಾಯವಷ್ಟೆ. ಅದು ಬಹು ತುಂಬಾ ಅವಶ್ಯಕವಾದ ಏರ್ಪಾಡಾಗಿರುತ್ತೆ. ಈ ನಮ್ಮ ಚನ್ನಪಟ್ಟಣದಲ್ಲಿ ಸರ್ಕಾರಿ, ಮಿಷನ್ ತರಫ್ ಎರಡು ಆಸ್ಪತ್ರೆಗಳಿದ್ದರೂ, ದೂರವಾದ ಹಳ್ಳಿಯವರನೇಕರಿಗೆ ಈ ಆಸ್ಪತ್ರೆಗಳಿಂದ ಆಗುತ್ತಿರುವ ಪ್ರಯೋಜನವು ಕಡಮೆಯೇ. ಇಲ್ಲಿಗೆ ೮—೯ ಮೈಲುಗಳ ದೂರದಲ್ಲಿರುವ ಗ್ರಾಮಸ್ಥರು ರೋಗಪರಿಹಾರಕ್ಕಾಗಿ ಇಷ್ಟುದೂರ ಬರಲಾರದ ಅವಸ್ಥೆಯಲ್ಲಿರುವರು. ನಮ್ಮ ಅಮಲ್ದಾರರು ಈ ವಿಷಯವನ್ನು ಅನುಭವಕ್ಕೆ ತಂದುಕೊಂಡು, ಇಲ್ಲಿಗೆ ೩ ಮೈಲಿಯಲ್ಲಿರುವ ಹೊಂಗನೂರು ಗ್ರಾಮವು ವೈದ್ಯಾಲಯಸ್ಥಾಪನೆಗೆ ತಕ್ಕಸ್ಥಳವೆಂಬದಾಗಿ ಅಭಿಪ್ರಾಯಪಡುವರಾಗಿ ಕೇಳುತ್ತೇನೆ. ಹೊಂಗನೂರು ಇಲ್ಲಿಗೆ ಸಮೀಪವಾಗಿರುವದರಿಂದ ಹಿರಿಯ ವೈದ್ಯಶಾಲೆಯಿಂದ ಅಲಕ್ಷ ಹೊಂದಲು ಸಾಧ್ಯವೆ? ಆಗಿದ್ದರೂ ಇದಕ್ಕಿಂತಲೂ ೮—೧೦ ಮೈಲುಗಳ ದೂರವಾಗಿಯೂ, ಅನೇಕ ಪ್ರಜಾ ಸಮೂಹಕ್ಕೆ ಕೇಂದ್ರವಾಗಿಯೂ ಇರುವ ನಾಗವಾರ, ಅಬ್ಬೂರು, ಮೊದಲಾದ ಕಡೆ ಇಂಥಾ ವೈದ್ಯಶಾಲೆ ಸ್ಥಾಪಿಸೋಣವಾದರೆ ಬಹು ಜನರಿಗೆ ಪ್ರಯೋಜನವಾದೀತೆನ್ನುವದಕ್ಕೆ ಸಂದೇಹವಿರಲಾರದು. ಈ ಪ್ರಾಂತ್ಯದಲ್ಲೆಲ್ಲಾ ವೈದ್ಯದ ಕೆಲಸ ಮಾಡಿ ಬಹು ಜನರ ಪರಿಚಯವುಳ್ಳ ಮೆ|| ಪಂಡಿತ ಶ್ರೀನಿವಾಸೈಯ್ಯನವರು ಬುದ್ಧಿವಂತರೂ, ದೊಡ್ಡಮನುಷ್ಯರಿಂದ ತಕ್ಕ ಯೋಗ್ಯತಾಪತ್ರಗಳನ್ನು ಹೊಂದಿದವರೂ, ಗುಣವಂತರೂ, ಭೂತದಯೆಯುಳ್ಳವರೂ ಆಗಿರುವರೆ. ನಮ್ಮ ಅಮಲ್ದಾರರು ಇವರ ಯೋಗ್ಯತೆ ನೋಡಿ, ಇವರನ್ನು ಗ್ರಾಮವೈದ್ಯಶಾಲಾ ಪಂಡಿತರನ್ನಾಗಿ ಶಿಫಾರಸು ಮಾಡುವರೆಂದು ಕೇಳಬಹುದು.—ಕಳೆದ ಶನಿವಾರ ಸಾಯಂಕಾಲ ೫ ಘಂಟೆಯ ಸಮಯದಲ್ಲಿ ಇಲ್ಲಿನ ಸಾಹುಕಾರರೊಬ್ಬರ ೫ ೬ ವರುಷದ ಹುಡುಗನನ್ನು ಯಾರೋ ದುಷ್ಟರು ಎತ್ತಿಕೊಂಡುಹೋಗಿ, ಮೈ ಮೇಲೆ ಇದ್ದ ಸುಮಾರು ೧೦೦ ರೂಪಾಯಿ ನಗಗಳನ್ನು ಕಿತ್ತುಕೊಂಡು, ಕಾಲಿನಲ್ಲಿದ್ದ ಬೆಳ್ಳಿ ಬಳೆ ತೆಗೆಯಲು ಪ್ರಯತ್ನಿಸಿ, ಅದು ಸುಲಭವಾಗಿ ಬಾರದೆ ಹೋದದರಿಂದ ಬಿಟ್ಟುಬಿಟ್ಟರು. ಸದರಿ ಹುಡುಗನನ್ನು ರಾತ್ರಿ ೨ ಘಂಟೆ ವೇಳೆಯಲ್ಲಿ ಮಂಗಳವಾರಪೇಟೆ ಬಳಿಗಾರನೊಬ್ಬನು ವಾರಸುದಾರರಿಗೆ ತಂದುಕೊಟ್ಟನು. ಪೋಲೀಸಿನವರು ಪತ್ತೆ ತರಹೂದಿನಿಂದ ಗುಮಾನಿಯ ಮೇಲೆ ಒಬ್ಬ ಮುಸಲ್ಮಾನನನ್ನು ಹಿಡಿದು ಲಾಕಪ್ಪಿನಲ್ಲಿಟ್ಟುಕೊಂಡಿರುವದಾಗಿಯೂ, ಆ ಹುಡುಗನು ಇವನೇ ಕಿತ್ತುಕೊಂಡನೆಂದು ಹೇಳುವದಾಗಿಯೂ ಇದುವರಿಗೆ ತಿಳಿದು ಬಂದಿದೆ.

ಕುಣಿಗಲು.—ಈ ಊರಿನ ಎರಡು ಕೆರೆಗಳೂ ಒಣಗಿಹೋದವು. ಭಾವಿಗಳಲ್ಲಿ ಜಲವು ಬತ್ತಿಹೋಗಿ ಕುಡಿಯುವ ನೀರಿಗೆ ಕಂಗಾಲಾಯಿತು. ಮಳೆಯಿಲ್ಲದೆ ಕೆಲವು ಕಡೆ ಬಿತ್ತಿದ ಪೈರು ಒಣಗುತ್ತಿರುವದರಿಂದಲೂ, ಇನ್ನೂ ಕೆಲವು ಕಡೆ ಬೀಜ ಬಿತ್ತದೆ ಇರುವದರಿಂದಲೂ ರೈತರು ಮಾರಾಟಕ್ಕಾಗಿ ದವಸ ಧಾನ್ಯಗಳನ್ನು ಹೊರಗೆ ತೆಗೆಯದಿರಲಾಗಿ, ದಿನಸಿಗಳು ಕ್ಷಾಮದ ಧಾರಣೆಗೆ ಏರಿರುವವು. ರಾಗಿ ರೂಪಾಯಿಗೆ ೧೪ ಸೇರು, ಅಕ್ಕಿ ೫|| ಅಥವಾ ೬ ಸೇರು ಮಾರುತ್ತೆ. ಅನೇಕಾನೇಕ ಬಡ ಜನರು ಹೊಟ್ಟೆಗಿಲ್ಲದೆ ಸೊಪ್ಪುಸೊದೆಗಳನ್ನು ತಿಂದು ಕಾಲಕ್ಷೇಪ ಮಾಡುತ್ತಿರುವರು. ಇನ್ನೂ ಕೆಲವರು ಮಳೆ ಬಾರದೆಹೋದರೆ ಹೊಟ್ಟೆಗಿಲ್ಲದೆ ಸತ್ತುಹೋಗುತ್ತೇವೆಂದು ಹೇಳಿಕೊಂಡು ವ್ಯಸನಪಡುವರು. ಇದರ ಮೇಲೆ ಈ ಊರಿಗೆ ವಾಂತಿಭೇದಿ ಉಪದ್ರವು ಪ್ರವೇಶಮಾಡಿ ಸುಮಾರು ೧೦೦-೧೨೫ ಜನರ ವರಿಗೂ ಮೃತಪಟ್ಟರು. ಇದಕ್ಕೆ ನೀರಿನ ಕ್ಷೋಭೆ ಮತ್ತು ಪಟ್ಟಣದ ಗಲೀಜು ಕಾರಣವೆಂದು ಜನರು ಹೇಳಿಕೊಳ್ಳುವರು. ನಮ್ಮ ಅಮಲ್ದಾರರು ಊರಿನಲ್ಲಿ ದಿನಕ್ಕೆ ೫—೬ ಜನರು ಸಾಯುತ್ತಿರುವಾಗ ಟವುನ್ ಗಸ್ತುಮಾಡಿ ಪಾಕೀಜಾ ವಗ್ಗೆರೆ ತನಿಖೆ ಮಾಡುವರು. ಈ ಕಾರ್ಯವನ್ನು ಪ್ರಾರಂಭದಲ್ಲಿ ಮಾಡಿದ್ದರೆ ರೋಗವು ಇಷ್ಟು ಬಲವಾಗಿ ವ್ಯಾಪಿಸಲು ಆಸ್ಪದವಿಲ್ಲವಾಗುತ್ತಿತ್ತು. ಇದಲ್ಲದೆ ನೀರಿನ ಕ್ಷೋಭೆಯ ದೆಸೆಯಿಂದ ಜನರು ಬತ್ತಿದ ಕೆರೆಗಳ ಬೊಗ್ಗದ ನೀರನ್ನು ಕುಡಿದದ್ದರಿಂದ ಈ ರೀತಿ ಕುಡಿದ ಜನರಲ್ಲಿ ರೋಗ ವ್ಯಾಪಕವಾಯಿತು ಎನ್ನುವರು. ಇದಕ್ಕಾಗಿ ಪ್ರಾರಂಭದಲ್ಲಿಯೇ ಇಂಥಾ ಕಷ್ಟವಾದ ನೀರಿಗೆ ಅಡ್ಡಹಾಕಿ ಶುದ್ಧವಾದ ನೀರನ್ನು ಕುಡಿಯಲು ಅನುಕೂಲಮಾಡಿಸಿಕೊಟ್ಟಿದ್ದರೆ ಬಡಬಗ್ಗರಲ್ಲಿ ಇನ್ನೂ ಕೆಲವರು ಬದುಕಿಕೊಳ್ಳುತ್ತಿದ್ದರೇನೋ. ಅಂತು ಬಡವರು ಬಹು ಜನರು ಮೃತಪಟ್ಟರು. ಶುದ್ಧವಾದ ನೀರು ದೊರಕುವ ಪ್ರತಿ ಒಂದು ಭಾವಿಗೂ ನಾಲ್ಕು ದಿನಕ್ಕೊಮ್ಮೆ ಪರ್ಮಾಂಗನೇಟ್ ಹಾಕುತ್ತಾ ಬಂದದ್ದರಿಂದ ನೀರು ರಕ್ತ ವರ್ಣಕ್ಕೆ ತಿರುಗಿತು. ಅದರಲ್ಲಿದ್ದ ಮೀನು ಕಪ್ಪೆ ವಗ್ಗೆರೆ ಜಂತುಗಳು ಸತ್ತದ್ದರಿಂದ ನೀರು ದುರ್ವಾಸನೆಯಾಯಿತು. ಈ ನೀರನ್ನು ಜನರು ಕುಡಿಯದೆ ಕೆಟ್ಟ ನೀರನ್ನೇ ಕುಡಿಯಬೇಕಾದ್ದಾಗಿರಾದರು. ಹೀಗೆ ಒಂದು ಕಡೆ ನೀರಿನ ಕ್ಷೋಭೆ, ಒಂದು ಕಡೆ ಕ್ಷಾಮ, ಮತ್ತೊಂದು ಕಡೆ ಜಾಡ್ಯ, ಇವುಗಳಿಂದ ಈ ಊರಿನ ಜನರು ತುಂಬಾ ಕಷ್ಟನಷ್ಟಗಳಿಗೆ ಗುರಿಯಾದರು. ಸದ್ಯಕ್ಕೆ ರೋಗವು ನಿಂತಿರುವದು. ಈ ಕಾಲದಲ್ಲಿ ಡಾ|| ಮಿಸ್ ಡೇವಿಡ್‌ಸನ್‌ರವರ ಮತ್ತು ಇತರೇ ನೇಟಿವ್ ಪಂಡಿತರ ಇಲಾಜಿನಿಂದ ಅನೇಕರು ಬದುಕಿಕೊಂಡರು.—ಕಳೆದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಮುಸಾಫರ್‌ಖಾನೆಯ ವಿಷಯ ಅದರಲ್ಲಿ ಕೆಲವು ದಿನಗಳಿಂದಲೂ ಖಾಯಂ ವಾಸಮಾಡುತ್ತಿದ್ದ ಕೆಲವು ಜನಗಳ ವಿಷಯ ಚರ್ಚೆ ನಡೆಯಿತೆಂತಲೂ, ಆ ಕಡೆ ಒಂದೆರಡು ಕುಟುಂಬಗಳವರನ್ನು ಗದರಿಸಿ, ರೂಲಸಿಗೆ ವಿರುದ್ಧವಾಗಿ ಛತ್ರದಲ್ಲಿ ವಾಸಮಾಡುವದು ತಪ್ಪು ಎಂದು ಹೊರಡಿಸಿದರೆಂತಲೂ, ಆದರೆ ಸದರಿ ಕುಟುಂಬಗಳಿಗಿಂತಲೂ ಮುಂಚಿತವಾಗಿಯೇ ಛತ್ರದಲ್ಲಿ ಸೇರಿ ಈವರಿಗೂ ವಾಸಮಾಡಿಕೊಂಡಿರುವ, ರೂಲಸನ್ನು ಚನ್ನಾಗಿ ತಿಳಿದಿರುವ ಮಹನೀಯರನ್ನು ಇನ್ನೂ ಛತ್ರದಲ್ಲಿಟ್ಟಿರುವದು ರೂಲಸಿಗೆ ವಿರುದ್ಧವಲ್ಲವೇ ಎಂದು ಕೇಳುವ ಜನರಿಗೆ ಯಾವ ಉತ್ತರವಿದೆಯೋ ತಿಳಿಯಬೇಕಾಗಿದೆ.—ಈ ಗ್ರಾಮಸ್ಥರು ತಮ್ಮ ತಮ್ಮ ಮಹಾನುಭಾವರ ಚಂದಾ ಹಣವನ್ನು ಎತ್ತಿ ಬ್ರಾಹ್ಮಣರು, ವೈಶ್ಯರು, ಶೂದ್ರರು, ಮುಸಲ್ಮಾನರು, ವೀರಶೈವರು, ಬಡಬಗ್ಗರು ಮೊದಲಾದ ಎಲ್ಲಾ ಕೋಮಿನವರಿಗೂ ದೇವರ ಹೆಸರಿನಲ್ಲಿ ಅನ್ನದಾನ ಮಾಡಿ ಆತನ ಉಪಕಾರ ಸ್ಮರಣೆಮಾಡಿದರು.

ಮೈಸೂರು ಗೆಜೆಟ್ ಸಂಗ್ರಹ.

ಅ|| ಅ|| ಸರ್ಜನ್ ಮೆ|| ಡಿ. ಎಂ. ಜ್ಞಾನಪ್ರಕಾಶಂ ಪಿಳ್ಳೆಯವರು ರಜದಿಂದ ವಾಪಸು ಬಂದು ಜುಲೈ ತಾ ೧೩ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳುವ ರಜವನ್ನು ರದ್ದುಮಾಡಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ|| ಎಂ. ಚಂಗಯ್ಯಚೆಟ್ಟಿಯವರಿಗೆ ಕೊಟ್ಟಿದ್ದ ಇಪ್ಪತ್ತೆರಡು ದಿನಗಳ ಪ್ರಿವಿಲೆಜ್ ರಜವನ್ನು ಇನ್ನು ಒಂದು ದಿನ ಜಾಸ್ತಿ ಮಾಡಿದೆ.

ಕೋಲಾರ್ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಮೆ|| ಟಿ. ಬಿ. ಕೃಷ್ಣಸ್ವಾಮಿಯವರಿಗೆ ಒಂಬತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ|| ಕಮಿಷನರ್ ಮೆ|| ಟಿ. ತಿ. ಚೆಟ್ಟಿಯವರು ಕೋಲಾರ್ ಸಬ್ ಡಿವಿಜನ್ ಛಾರ್ಜನ್ನು ವಹಿಸಿದ್ದರು.

ಆಲೂರ್ ಸಬ್ ತಾಲೂಕಿನ ಅಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮಹಮದ್ ಷರೀಫ್ ಯವರು ರಜದಿಂದ ವಾಪಸು ಬರುವ ತನಕ ಹಾಸನ ಡೆಪ್ಯುಟಿ ಕಮಿಷನರ ಆಫೀಸ್ ಹೆಡ್ ಕ್ಲಾರ್ಕ್ ಜೆ. ಎಸ್. ರಾಮಸ್ವಾಮಿಯಂಗಾರು, ಆಲೂರ್ ಸಬ್ ತಾಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಬದಲಿ ಕೆಲಸ ನೋಡತಕ್ಕದ್ದು.

ಶಿವಮೊಗ್ಗ ಸಬ್ ಡಿವಿಜನ್ ಅ|| ಕಮಿಷನರ್ ಮೆ|| ಆರ್. ಟಿ. ಮುಕುಂದರಾಯರಿಗೆ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಲ್ಪಟ್ಟಿದೆ.

ಮೆ|| ಎಂ. ಚಂಗೈಯ ಚೆಟ್ಟಿಯವರು ಚಿತ್ರದುರ್ಗದ ಡಿಸ್ಟ್ರಿಕ್ಟ್‌ನ ಛಾರ್ಜನ್ನು ಅ|| ಕಮಿಷನರ್ ಮೆ|| ಎ. ವೆಂಕಟರಾಮಯ್ಯನವರಿಂದ ಜುಲೈ ೩ರಲ್ಲಿ ವಹಿಸಿಕೊಂಡರು.

ಬೆಂಗಳೂರು ಡಿವಿಜನ್ ಅ|| ಕಮಿಷನರ್ ಮೆ|| ಟಿ. ಜಿ. ಲಕ್ಷ್ಮಣರಾಯರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹಾಸನದ ತಾಲೂಕ್ ಅಮಲ್ದಾರ್ ಮೆ|| ಎಸ್. ಎನ್. ಅಪ್ಪಾಜಿಅಯ್ಯಂಗಾರ್ರಿಗೆ ಅವರ ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂವತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹಾಸನದ ಡೆಪ್ಯುಟಿ ಕಮಿಷನರ ಆಫೀಸ್ ಹೆಡ್ ಕ್ಲಾರ್ಕ್ ಜೆ. ಎಸ್. ರಾಮಸ್ವಾಮಿಯಂಗಾರು ಹಾಸನದ ತಾಲೂಕ್ ಛಾರ್ಜನ್ನು, ಆಲೂರ್ ಸಬ್ ತಾಲೂಕ್ ಛಾರ್ಜನ್ನು ವಹಿಸತಕ್ಕದ್ದು.

ಇಂಡಿಯಾ ದೇಶದ ವೃತ್ತಾಂತಗಳು.

ಸೋರಾ ಎಂಬ ಪಟ್ಟಣದಲ್ಲೇ ಅದರ ಸಮೀಪದಲ್ಲೋ ಗಂಗಾನದಿಗೆ ಒಂದು ಭಾರೀ ಸೇತುವೆಯನ್ನು ಕಟ್ಟಬೇಕೆಂದು ಕಳೆದ ವಾರ ಇಂಡಿಯಾ ಗವರ್ನಮೆಂಟಿನವರು ತೀರ್ಮಾನ ಮಾಡಿದರು.

ಪಂಜಾಬ್ ಅಧಿಪತ್ಯದಲ್ಲಿ ಗವರ್ನಮೆಂಟಿನವರು ನೀರಾವರಿ ಕಾಮಗಾರಿಗಳನ್ನು ಮಾಡಿಸುವುದಕ್ಕೆ ಇನ್ನು ಮುಂದೆ ಪ್ರತಿ ವರುಷವೂ ಒಂದೊಂದು ಕೋಟಿ ರೂಪಾಯಿನಂತೆ ಖರ್ಚುಮಾಡುತ್ತಾರೆಂದು ತಿಳಿಯುವುದು

❦❦❦

ಸಿಲೋನ್ ದ್ವೀಪದ ಒಬ್ಬ ಕಂಗಾಣಿಯೂ ಅವನ ಹೆಂಡತಿಯೂ ಕೈಸೇನು ಇಲ್ಲದೆ ಬಂಧೂಕನ್ನೂ ಮದ್ದುಗುಂಡನ್ನೂ ಇರಿಸಿಕೊಂಡ ದ್ದು ಪತ್ತೆ ಆಗಿ, ತಿನ್ನವೆಲ್ಲಿ ಸೆಷನ್ಸ್ ಜಡ್ಜಿಯವರು ಅವರಿಬ್ಬರನ್ನೂ ಭಯಾರ್ಗಳ್ತುಮಾಡಿ, ಗಂಡನಿಗೆ ಮೂರು ತಿಂಗಳ ಮತ್ತು ಹೆಂಡತಿಗೆ ಆರು ವಾರಗಳ ಕಠಿಣಸಜಾ ವಿಧಿಸಿದರು.

❦❦❦

ಕಳೆದ ವರುಷ ಹಿಂದುಸ್ಥಾನಕ್ಕೆ ಹೊರಗಿನಿಂದ ೨೦ ಲಕ್ಷ ಪೌಂಡು ಬೆಲೆಯಾಗುವಷ್ಟು ಬೆಳ್ಳಿಯೂ ೧೧೫ ಲಕ್ಷ ಪೌಂಡು ಬೆಲೆಬಾಳುವಷ್ಟು ಚಿನ್ನವೂ ಬಂದು ಕರಗಪಡಿ ಆಗಿರುತ್ತದೆ. ಬೆಳ್ಳಿಯ ಧಾರಣೆ ಕಡಮೆಯಾಗಿರುವ ತನಕ ಆ ಲೋಹವು ಹೆಚ್ಚು ಹೆಚ್ಚಾಗಿ ಈ ದೇಶಕ್ಕೆ ರಫ್ತಾಗಿ ಬರುತ್ತಿರುವುದು.

❦❦❦

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಬಸೇಹಾರ್ಕ್ ಪಟ್ಟಣದಲ್ಲಿ ಕಳ್ಳರು ಕಳೆದ ವಾರ ಒಂದು ಮನೆಗೆ ನುಗ್ಗಿ ಒಳಗಿದ್ದ ಮುದುಕರನ್ನು ಹಿಡಿದು ಏನೇನೋ ಹಿಂಸೆ ಮಾಡಿದರೂ ಅವನಿಂದ ಹೊಂದಿಗೆ ಇದ್ದ ಸ್ಥಳ ಹೇಳಿಸುವುದಕ್ಕಾಗದೆ ಹೋಯಿತು. ಆಗ ಕಳ್ಳರು ಬೆಂಕಿಹಾಕಿ ಆ ಮುದುಕನನ್ನು ಜೀವಸಹಿತ ಸುಟ್ಟು ಬಿಟ್ಟರು.

❦❦❦

ಪೂನಾ ಪಟ್ಟಣದ ಹತ್ತರ ಕಸೂರ್ಬಿ ಎಂಬ ಗ್ರಾಮದಲ್ಲಿ ೧೨ ಮ. ದಿ ಕಳ್ಳರು ಒಂದು ಮನೆಗೆ ನುಗ್ಗಿ ಹೆಂಗಸರನ್ನು ಬಹಳ ಕ್ರೂರತರವಾಗಿ ಹಿಂಸಿಸಿ ಸುಮಾರು ೨,೦೦೦ ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿದರು ಈಗ ಆ ಹನ್ನೆರಡು ಜನರಿಗೂ ಸೆಷನ್ಸ್ ಜಡ್ಜರು ೧ ವರುಷದ ಲಾಗಾಯಿತು ೭ ವರುಷದ ವರೆಗೆ ಕಠಿಣಸಜಾ ವಿಧಿಸಿರುತ್ತಾರೆ

❦❦❦

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ರತ್ನಪುರ ಡಿಸ್ಟ್ರಿಕ್ಟಿನಲ್ಲಿ ಒಂದು ಭಾರೀ ಗೋಮೇಧಿಕವು ದೊರಕಿತು. ಪ್ರಪಂಚದಲ್ಲೆಲ್ಲಾ ಇದೇ ಅತ್ಯಂತ ದೊಡ್ಡ ಗೋಮೇಧಿಕವೆಂದು ತಿಳಿಯಲ್ಪಟ್ಟಿದೆ. ಅದು ೨॥ ಅಂಗುಲ ಉದ್ದ, ೧॥ ಅಂಗುಲ ಅಗಲ, ಮುಕ್ಕಾಲು ಅಂಗುಲ ಮಂದವುಳ್ಳದ್ದಾಗಿರುವುದು. ಇದನ್ನು ಅಮೇರಿಕದ ಕೋಟ್ಯಾಧೀಶ್ವರನೊಬ್ಬನು ಕೊಂಡುಕೊಂಡನೆಂದು ಪ್ರಕಟವಾಗಿದೆ.

❦❦❦

ತಂಜಾವೂರು ಜಿಲ್ಲೆಗೆ ಸೇರಿದ ತಂಜಾವೂರು ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬಡವರಿಗೂ ಭಾಗ್ಯವಂತರಿಗೂ ಅವರ ಮನೆಗಳಿಗೆ ರಾತ್ರಿಹೊತ್ತು ನುಗ್ಗಿ ಕಳವು ಮಾಡುತ್ತೇವೆಂದು ದುಷ್ಟರು ಕೆಸರಿಲ್ಲದ ಕಾಗದಗಳನ್ನು ಅಂಚೆಯ ಮೇಲೆ ಹಾಕುತ್ತಿದ್ದಾರೆ. ಇದರಿಂದ ಆ ಪ್ರಾಂತ್ಯದ ಜನಗಳಿಗೆ ತುಂಬಾ ಗಾಬರಿಯುಂಟಾಗಿದೆ. ಆದರೆ ಇದುವರೆಗೆ ಆ ರೀತಿ ಒಂದು ಕಳವಾದರೂ ನಡೆದಿರುವುದಿಲ್ಲ.

❦❦❦

ಕಳೆದ ೧೯೦೬ನೇ ವರುಷದಲ್ಲಿ ಮದರಾಸ್ ಅಧಿಪತ್ಯದೊಳಗೆ ೧೨೩ ಕಾರ್ಖಾನೆಗಳಿದ್ದವು; ಅಂದರೆ ಹಿಂದಿನ ವರುಷಕ್ಕಿಂತ ೨೩ ಹೆಚ್ಚಿದವು. ಬೆಜ್ವಾಡದಲ್ಲಿ ೧೬ ಹೊಸ ಕಾರ್ಖಾನೆಗಳು ಪ್ರಾರಂಭವಾದವು ೧೯೦೫ನೇ ವರುಷದಲ್ಲಿದ್ದ ೧೦೦ ಕಾರ್ಖಾನೆಗಳೊಳಗೆ ೬೩,೦೦೮ ಜನರು ಕೆಲಸ ಮಾಡುತ್ತಿದ್ದರೆಂತಲೂ, ೧೯೦೬ನೇ ವರುಷದಲ್ಲಿ ೧೨೩ ಕಾರ್ಖಾನೆಗಳೊಳಗೆ ೬೫,೧೯೧ ಜನರು ಕೆಲಸ ಮಾಡುತ್ತಿದ್ದರೆಂತಲೂ ಪ್ರಕಟವಾಗಿದೆ

❦❦❦

ಕಲ್ಕತ್ತಾ ಪಟ್ಟಣದ ಅಂಬಿಗರು ಕಳೆದ ಶನಿವಾರ ಬಡ್ಜ್ ಬಡ್ಜಿನಿಂದ ವಿಮಾನುಗಳನ್ನು ಹಿಡಿದು ಗಾಡಿಗಳಲ್ಲಿ ಭರ್ತಿಮಾಡಿಕೊಂಡು, ಪಟ್ಟಣದಲ್ಲಿ ಬಿಕರಿಮಾಡುವುದಕ್ಕೋಸ್ಕರ ತರುತ್ತಿದ್ದರು. ಕಾರ್ಖಾನೆಗಳಲ್ಲಿ ಕೆಲಸಮಾಡತಕ್ಕ ಸುಮಾರು ೮—೯ ಸಾವಿರ ಜನರು ಮನೆಗೆ ಹೋಗುತ್ತಾ ಇರುವಲ್ಲಿ ಆ ವಿಮಾನುಗಳು ಭರ್ತಿಯಾಗಿದ್ದ ಗಾಡಿಗಳನ್ನು ಅಡೆದು ಲೂಟಿಮಾಡಿ, ಅಂಬಿಗರನ್ನು ಹೊಡೆದು ಕೆಡವಿದರು. ಪೋಲೀಸಿನವರು ೮—೧೦ ಜನರನ್ನು ದಸ್ತಗಿರಿಮಾಡಿದಾರೆ. ಇದು ಆಶ್ಚರ್ಯಯುಕ್ತವಾದ ಕಳ್ಳತನವಾಗಿರುತ್ತದೆ.

❦❦❦

ಮದರಾಸಿನಲ್ಲಿ ದಿವಾಳಿಯಾದ ಅರ್ಬತ್ನಾಟ್ ಕಂಪನಿಗೆ ಮಂಗಳೂರಿನಲ್ಲಿರುವ ಕಾಫಿ ಕಾರ್ಖಾನೆಯೂ, ತಲಚೇರಿಯಲ್ಲಿರುವ ಪುಲಿಕಾರ್ ಕಾಫಿ ಕಾರ್ಖಾನೆಯೂ ಸೇರಿದ್ದವು. ಕಳೆದ ೧೦ನೇ ತಾ. ಸೋಮವಾರ ಮಂಗಳೂರಿನಲ್ಲಿ ಆ ಎರಡು ಕಾಫಿ ಕಾರ್ಖಾನೆಗಳನ್ನೂ ಹರಾಜುಹಾಕಿದರು. ಮಂಗಳೂರು ಕಾರ್ಖಾನೆಯನ್ನು ಬೊಂಬಾಯಿನ ಮೆ॥ ಇರ್ವಿನ್ ಡರ್ಗಂಡಿಯವರು ೩೩,೦೦೦ ರೂಪಾಯಿಗೂ, ತಲಚೇರಿ ಕಾರ್ಖಾನೆಯನ್ನು ಮೆ॥ ಎಚ್. ಫಕೀರ್ ಮಹಮದ್ ಸೇಟರು ೬೨,೦೦೦ ರೂಪಾಯಿಗೂ ಬೀಟು ಮಾಡಿ ಪಡೆದುಕೊಂಡಿರುತ್ತಾರೆ

❦❦❦

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಕಾಮನಗರವೆಂಬ ಸ್ಟೇಷನ್ ಬಳಿ ರೈಲ್ ಗಾಡಿ ಹೋಗುತ್ತಿದ್ದಾಗ ಕಳೆದ ವಾರ ಎರಡನೇ ಕ್ಲಾಸ್ ಗಾಡಿಯಲ್ಲಿ ಕುಳಿತಿದ್ದ ಯೂರೋಪಿಯನ್ ಪ್ರಯಾಣಿಕರಿಗೆ ಗುರಿಕಟ್ಟಿ ರಾತ್ರಿ ಕತ್ತಲಲ್ಲಿ ಯಾರೋ ಸಿಡಿಮದ್ದಿನ ಗುಂಡನ್ನು ಎಸೆದರು. ಅಪರೆ ಆ ಗುಂಡು ನೆಲದ ಮೇಲೆ ಬಿದ್ದು ಒಡೆಯಿತು. ಯಾರಿಗೂ ಅಪಾಯವೇನೂ ಆಗಲಿಲ್ಲ. ಇದಲ್ಲದೆ ಚಂದ್ರನಗರದ ಬಳಿ ರೈಲ್ ರಸ್ತೆಯ ಹತ್ತರ ಎರಡು ಸಿಡಿಮದ್ದಿನ ಗುಂಡುಗಳು ಹಾರಿದವು. ಒಬ್ಬ ಕೂಲಿಯವನಿಗೆ ಗಾಯಗಳಾಗಿ ಆಸ್ಪತ್ರೆಗೆ ಒಯ್ಯಲ್ಪಟ್ಟನು; ಈ ಮೂರು ಸಂದರ್ಭಗಳಲ್ಲೂ ಗುಂಡು ಎಸೆದವರಾಗಲಿ, ರಸ್ತೆಯಲ್ಲಿಟ್ಟವರಾಗಲಿ ಪತ್ತೆ ಆಗಿಲ್ಲ.

❦❦❦

ಮೆ॥ ರಾಮನಾಥಶೆಟ್ಟಿ ಎಂಬೊಬ್ಬ ನಾಟಕಕೋಟಿಯು ವಿಲಾಯತಿಗೆ ಹೋಗಿ ಸುಮಾರು ೧೫ ತಿಂಗಳ ತನಕ ಇದ್ದು ಕಳೆದ ವಾರ ವಾಪಸು ಬಂದರು ಇವರು ವಿಲಾಯತಿಯಲ್ಲಿದ್ದಾಗ ಬಟ್ಟೆಗಳು ತಯಾರಾಗುವ ಮ್ಯಾಂಚೆಸ್ಟರ್ ಎಂಬ ಭಾರೀ ಪಟ್ಟಣದಲ್ಲಿ ಒಂದು ಚೀಟಿ ಬಟ್ಟೆಗಳ ಅಂಗಡಿಯನ್ನಿಟ್ಟು ನಡಿಸುವುದಕ್ಕೆ ಏರ್ಪಾಡು ಮಾಡಿ ಬಂದಿದಾರೆ. ಇನ್ನು ಮೇಲೆ ಅವರು ಅಲ್ಲಿಂದ ನೆಟ್ಟಗೆ ಬಟ್ಟೆಬರೆಗಳನ್ನು ಹಿಂದುಸ್ಥಾನಕ್ಕೆ ತರಿಸಿ ಬಿಕರಿಮಾಡುವರೆಂದು ತಿಳಿಯುವುದು. ಹಿಂದುಸ್ಥಾನದವರು ವಿಲಾಯತಿಯಲ್ಲಿ ಹೋಗಿ ಅಂಗಡಿ ಹಾಕಿ ವ್ಯಾಪಾರವನ್ನು ಪ್ರಾರಂಭಿಸುವುದರಲ್ಲಿ ಮೆ॥ ರಾಮನಾಥ ಶೆಟ್ಟರೇ ಮೊದಲನೆಯವರೆಂದು ಹೇಳಬಹುದು.

ಒಳದೇಶದ ವೃತ್ತಾಂತಗಳು.

ರಾಜಧಾನಿಯ ದೊಡ್ಡ ಪೇಟೆಯಲ್ಲಿ ಮೊನ್ನೆ ಸೋಮವಾರ ರಾತ್ರಿ ಕಳ್ಳರು ಒಂದು ಕಬ್ಬಿಣದ ಅಂಗಡಿಯನ್ನು ಮುರಿದು ಕಳವು ಮಾಡಿರುತ್ತಾರೆ.

❦❦❦

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಛಾಂಪಿಯನ್ ರೀಫ್ ಗಣಿಯಲ್ಲಿ ಅನಾಯತವಾಗಿ ಕಳೆದ ವಾರ ಇಬ್ಬರು ಕೂಲಿಯವರು ಮೃತಪಟ್ಟರು; ಹಲವರಿಗೆ ಗಾಯಗಳಾದವು.

❦❦❦

ಒಕ್ಕಲಿಗರ ಸಂಘದಿಂದ ಪ್ರಜಾಪ್ರತಿನಿಧಿಸಭೆಗೆ ಮೆಂಬರುಗಳನ್ನು ಕಳುಹಿಸುವುದಕ್ಕೆ ಅಪ್ಪಣೆಯಾಗಬೇಕೆಂದು ಆ ಸಂಘದವರು ಸರ್ಕಾರದವರನ್ನು ಕೇಳಿಕೊಳ್ಳುವವರಾಗಿದಾರೆ.

❦❦❦

ಇಲ್ಲಿನ ದೊಡ್ಡ ಪೇಟೆಯ ಒಬ್ಬ ವೈಶ್ಯ ವರ್ತಕನು ಮೊನ್ನೆ ಸಾಯಂಕಾಲ ಬೈಸಿಕಲ್ ಮೇಲೆ ಕುಳಿತು ರೈಲ್ವೆ ಸ್ಟೇಷನ್ ಬಳಿ ಬರುತ್ತಿದ್ದಾಗ ಬಿದ್ದು ಭಾರೀ ಗಾಯವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದಾನೆ.

❦❦❦

ಮೈನಿಂಗ್‌ಗಳಿಗೆ ಸೇರಿದ ಗ್ರಾಮಗಳಲ್ಲಿ ದೊರೆಯುವ ಹುಟ್ಟುವಳಿಯು ಚಾರಾ ಮುಂತಾದ ಖರ್ಚು ಕಳೆದು ಉಳಿದರೆ ಅದನ್ನು ಮೈನಿಂಗ್ ಗ್ರಾಮಗಳ ಉಪಯೋಗಕ್ಕೆ ವಿನಿಯೋಗಿಸಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದಾರೆ.

❦❦❦

ಕಳೆದ ಶನಿವಾರ ಮಧ್ಯಾಹ್ನ ಬೆಂಗಳೂರು ಆಗ್ರಾಮಿನಲ್ಲಿ ಕಲ್ಲುಗಳನ್ನು ಒಡೆಯುವುದಕ್ಕೆ ಮದ್ದುಹಾಕಿದ್ದದ್ದು ಅಕಸ್ಮಾತ್ತಾಗಿ ಹತ್ತಿಕೊಂಡು ಹಾರಿದ್ದರಿಂದ ಒಬ್ಬ ಇಂಜನಿಯರಿಗೂ ನಾಲ್ಕು ಜನ ಸಿಪಾಯಿಗಳಿಗೂ ತುಂಬಾ ಗಾಯಗಳಾಗಿವೆ

❦❦❦

ಅರಕಲಗೂಡು ತಾಲ್ಲೂಕು ಟ್ರಾಂಕ್ ಇನ್ಸ್‌ಪೆಕ್ಟರಾಗಿದ್ದು ಸಸ್ಪೆಂಡ್ ಆಗಿರುವ ಸಿ ಎಂ. ಸಾಂಟಸಿಸ ಮೊದಲಿಯಾರ್ ಎಂಬವನು ತಪ್ಪಿಸಿಕೊಂಡು ಹೋಗಿರುತ್ತಾನೆಂತಲೂ, ಅವನನ್ನು ಕಂಡವರು ಪೋಲೀಸಿಗೆ ತಿಳಿಸಬೇಕೆಂತಲೂ ಸರ್ಕಾರದವರು ಪ್ರಕಟಿಸಿದಾರೆ.

❦❦❦

ಕೋಲಾರ್ ಚಿನ್ನದ ಗಣಿಗಳಲ್ಲಿ ಅಲ್‌ಫ್ರೆಡ್ ಪೇರ್ ಎಂಬೊಬ್ಬ ಯೂರೋಪಿಯನ್ನನು ಗಣಿಯ ಚಿನ್ನವನ್ನು ತನ್ನ ಬಳಿ ಇಟ್ಟುಕೊಂಡಿದ್ದದ್ದರಿಂದ ಪೋಲೀಸಿನವರು ಅವನನ್ನು ಹಿಡಿದು ಮದರಾಸ್ ಪ್ರೆಸಿಡೆನ್ಸಿ ಸೆಷನ್ ವಿಚಾರಣೆಗೆ ಗುರಿಮಾಡಿಸಿದ್ದರಷ್ಟೆ ಅವನಿಗೆ ಕಳೆದ ವಾರ ಮೂರು ವರುಷಗಳ ಕಠಿಣ ಸಜಾ ವಿಧಿಸಲ್ಪಟ್ಟಿತು

❦❦❦

ಮೈಸೂರು ದಸರಾ ಪ್ರದರ್ಶನವಾಗುವಾಗ್ಗೆ ಅಂದರೆ ಸುಮಾರು ಅಕ್ಟೋಬರ್ ತಾ ೩ ರಿಂದ ತಾ ೧೭ರ ವರೆಗೆ ವಿದ್ಯಾಭ್ಯಾಸದ ಉಪಕರಣಗಳ ಪ್ರದರ್ಶನವು ರಾಜಧಾನಿಯಲ್ಲಿ ನಡಿಸಲ್ಪಡುವುದು. ವಿಲಾಯತಿಯಲ್ಲಿರುವ ವಿದ್ಯಾ ಇಲಾಖಾ ಬೋರ್ಡಿನವರೂ, ಮದರಾಸ್ ವಿದ್ಯಾ ಇಲಾಖೆಯ ಡೈರೆಕ್ಟರವರೂ ಪ್ರದರ್ಶನವಸ್ತುಗಳನ್ನು ಕಳುಹಿಸುವುದಾಗಿ ಒಪ್ಪಿಕೊಂಡಿದಾರೆ

❦❦❦

ಕಳೆದ ಶನಿವಾರ ಮಧ್ಯಾಹ್ನ ರಾಜಧಾನಿಯ ಮಿಡ್ಲ್ ಹೈ ಸ್ಕೂಲ್ ಮತ್ತು ಹಾರ್ಡ್ವಿಕ್ ಕಾಲೇಜಿನ ಹುಡುಗರಿಗೆ ಸ್ಕೂಲ್ ಅಧ್ಯಕ್ಷರು ನಾನಾ ಬಗೆಯ ಬಂಬೂನಾ ಆಟಗಳನ್ನು ಕಲ್ಪಿಸಿ ಆಡಿಸಿದರು. ನೂರಾರು ಮಂದಿ ಹುಡುಗರು ಅಲ್ಲಿ ಸೇರಿದ್ದು ಸಂಭ್ರಮಪಟ್ಟರು. ಸಾಹಸಯುಕ್ತವಾದ ಪಂದ್ಯಗಳಲ್ಲಿ ಹಿಂದೂ, ಮಹಮದೀಯ, ಕ್ರೈಸ್ತಬಾಲಕರು ಜಯಶೀಲರಾಗಿ ಬಹುಮಾನಗಳನ್ನು ಸಂಪಾದಿಸಿಕೊಂಡರು.

❦❦❦

ಮೈಸೂರು ವರ್ತಮಾನ ಪತ್ರಿಕೆಗಳ ಕಾನೂನು ಶ್ರೀಮನ್ಮಹಾರಾಜರವರ ಒಪ್ಪಿಗೆಯನ್ನು ತಾ ೮ನೇ ಶನಿವಾರ ಪಡೆದಿರುತ್ತದೆಂತಲೂ, ಅದು ಸೆಪ್ಟಂಬರ್ ತಾ ೧೦ ರಿಂದ ಈ ಸಂಸ್ಥಾನದಲ್ಲಿ ಜಾರಿಗೆ ಬರುವುದಾದ್ದರಿಂದ ಪತ್ರಿಕೆಗಳನ್ನು ನಡಿಸತಕ್ಕವರು ಸರ್ಕಾರದವರಿಂದ ಲೈಸೆನ್ಸ್ ಪಡೆದುಕೊಳ್ಳುವುದಕ್ಕೆ ಗವರ್ನಮೆಂಟ್ ಸೆಕ್ರೆಟರಿಯವರಿಗೆ ಅರ್ಜಿ ಬರೆದುಕೊಳ್ಳಬಹುದೆಂತಲೂ ಈ ವಾರದ ಗೆಜೆಟ್ಟಿನಲ್ಲಿ ಪ್ರಕಟಿಸಿದಾರೆ.

ವಿದೇಶ ವರ್ತಮಾನಗಳು.

ಚೀನಾ ಚಕ್ರವರ್ತಿಯವರು ಜಾವಾ ದ್ವೀಪದಲ್ಲಿರುವ ಒಂದು ಚೀನೆಯವರ ವಿದ್ಯಾಶಾಲೆಗೆ ಸುಮಾರು ೧೦ ಸಾವಿರ ರೂಪಾಯನ್ನೂ ಅನೇಕ ಪುಸ್ತಕಗಳನ್ನೂ ಕೆಲವು ಉಪಾಧ್ಯಾಯರನ್ನೂ ಹಡಗಿನಲ್ಲಿ ಕಳುಹಿಸಿಕೊಟ್ಟರು. ಜಾವಾ ಗವರ್ನಮೆಂಟಿನವರ ಅನುಮತಿ ಪಡೆಯದೆ ಇದನ್ನೆಲ್ಲಾ ಕಳುಹಿಸಿದ್ದರಿಂದ ಆ ಹಡಗು ಸಮುದ್ರತೀರದಲ್ಲೇ ಇರುವುದು. ಮತ್ತು ಚೀನೆಯವರ ವಿಷಯದಲ್ಲಿ ಜಾವಾ ದ್ವೀಪದವರಿಗೆ ಈ ವಿಚಾರವಾಗಿ ಸ್ವಲ್ಪ ಮನಸ್ತಾಪ ಉಂಟಾಗಿರುತ್ತದೆ.

❦❦❦

ಲಂಡನ್ ಪಟ್ಟಣದಲ್ಲಿ ನಡಿಯುತ್ತಿರುವ ಫ್ರಾಂಕೋ ಬ್ರಿಟಿಷ್ ಪ್ರದರ್ಶನಾಲಯದಲ್ಲಿ ಅಮೇರಿಕದ ಕ್ಯಾಪ್ಟನ್ ಲೌವ್‌ಲೇಸ್ ಎಂಬಾತನ ಆಕಾಶವಿಮಾನವು ಆಕಸ್ಮಿಕವಾಗಿ ಹತ್ತಿಕೊಂಡು, ಮಹಾ ಶಬ್ದದೊಡನೆ ಒಡೆದುಹೋಯಿತು. ಒಬ್ಬ ಸೆಕ್ರಟರಿಯು ಸುಟ್ಟುಹೋದಳು. ಆರು ಮಂದಿಗೆ ಗಾಯಗಳಾದವು ಕ್ಯಾಪ್ಟನ್ ಲೌವ್‌ಲೇಸ್ ಯವರಿಗೂ ಗಾಯವಾಗಿದೆ. ಆ ಶಬ್ದದ ದೆಸೆಯಿಂದ ಭೂಕಂಪವಾದಂತೆ ಪ್ರದರ್ಶನಶಾಲೆಯೆಲ್ಲಾ ಅಲ್ಲಾಡಿತು. ಅಲ್ಲಿದ್ದ ಜನರಿಗೆ ತುಂಬಾ ಗಾಬರಿಯಾಯಿತು

❦❦❦

ದಕ್ಷಿಣ ಅಫ್ರಿಕಕ್ಕೆ ಸೇರಿದ ಟ್ರಾನ್ಸ್‌ವಾಲ್ ದೇಶದಲ್ಲಿ ಏಷ್ಯಾಖಂಡದಿಂದ ಹೋಗಿರುವ ಜನರ ವಿಷಯದಲ್ಲಿ ಗವರ್ನಮೆಂಟಿನವರು ಒಂದು ಹೊಸ ಕಾನೂನ್ ಮಾಡಬೇಕೆಂದು ಯೋಚಿಸಿ, ಮುಸೂದೆಯನ್ನು ಪ್ರಕಟಿಸಿದಾರೆ ೧೯೦೮ನೇ ಇಸವಿ ಮೇ ತಿಂಗಳು ೨೦ನೇ ತಾರೀಖಿನೊಳಗೆ ತಾವಾಗಿಯೇ ಹೋಗಿ ಸರ್ಕಾರದಲ್ಲಿ ರಿಜಿಸ್ಟರ್ ಮಾಡಿಸಿಕೊಂಡಿರುವಂಥಾ ಏಷ್ಯಾದವರು ಅಲ್ಲಿ ವ್ಯಾಪಾರಾದಿ ಕಸಬುಗಳನ್ನು ನಡಿಸುವಂತೆ ಒಪ್ಪಿಕೊಳ್ಳುವುದಾಗಿಯೂ, ಅಂಥವರಿಗಲ್ಲದೆ ಇತರರಿಗೆ ಲೈಸೆನ್ಸ್ ಕೊಡುವುದಿಲ್ಲವೆಂತಲೂ, ಹಾಗೆ ಲೈಸೆನ್ಸ್ ಪಡಿಯದೆ ಇರುವವರನ್ನು ಸರ್ಕಾರದವರು ಎರಡು ವರುಷ ಸಜಾ ಮತ್ತು ೩,೫೦೦ ರೂಪಾಯಿ ಜುಲ್ಮಾನೆ ಎಂಬೀ ಶಿಕ್ಷೆಗಳಿಗೆ ಗುರಿಮಾಡುತ್ತೇವೆಂತಲೂ ಆ ಮುಸೂದೆಯು ತಿಳಿಸುವುದು.

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟರ್."

ವ್ಯವಹಾರನಿರ್ಣಯ—ಪುಟಗಳು ೫೬೫ ಹಿಂದೂ ಮಹಮದೀಯ ಲಾಗಳು, ೨೯ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತುವೇದು, ೬೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ ಪಿ. ಸೇರಿ ೧ ರೂ. ೧೨ ಆಣೆ. [40-J7]

ಕನ್ನಡ ಲಾ ರಿಪೋರ್ಟರ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ, ವರ್ಷದ ಚಂದಾ ೧—೨—೦ ಮುಂಗಡ, ಯಾ, ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೦—೨—೦

ಇವುಗಳನ್ನ ಪೇಕ್ಷಿಸುವವರು "ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯುವುದು

೧೯೦೮ ನೇ ಅಗಸ್ಟ್ ೨೬ರ ವರೆಗೆ ಮಾತ್ರ.

ಸತ್ಯವಾಗಿಯೂ ಅಗ್ಗದ ಅಂಗಡಿ.

59-4

ಆಶ್ಚರ್ಯ ಸಮಯ! ಆಶ್ಚರ್ಯ ಸಮಯ!!



ಅಗ್ಗದ ಬಿಕರಿ ಸಮಯ. ಕ್ರಯ ಮೂರರಲ್ಲಿ ಒಂದೇ ಪಾಲು. ಗಡಿಯಾರಗಳೆಲ್ಲಾ ಅಚ್ಚ ಹಸನಾದವು ಚಿನ್ನದಂಥಾ ಸಮಯ. ಇದಕ್ಕಿಂತ ಅಗ್ಗವಾಗಿ ಮತ್ತೆ ಸಿಕ್ಕಲಾರವು. ಸಾವಕಾಶಮಾಡಬೇಡಿ! ಕಾಲವಿಾರೀತು!!

ನಂ ೧೨೦—೧೮ ಓ. ಎಫ್. ಸುಂದರವಾದ ಲೋಹಗಡಿಯಾರ, ಸೆಕೆಂಡ್ ಹ್ಯಾಂಡ್ ಸಹಿತ, ಸಿಲಿಂಡರ್ ಚಲನೆ, ೩೬ ಗಂಟೆ ಹೊತ್ತು ನಡಿಯುವುದು. ಮೊದಲಿನ ಕ್ರಯ ರೂ. ೧೩—೮—೨; ಈಗಿನ ಕ್ರಯ ರೂ. ೩—೮—೦. ಐದು ವರ್ಷ ಜಾಮೀನ್

ನಂ. ೧೧೧ ಎ—ಕ್ರೊನೋಗ್ರಾಫ್ ವಾಚ್. ಸೆಕೆಂಡ್ ಹ್ಯಾಂಡ್ ಸಹಿತ. ಮೊದಲಿನ ಕ್ರಯ ರೂ. ೧೫; ಈಗ ರೂ ೫. ಐದು ವರ್ಷ ಜಾಮೀನ್.

ನಂ. ೧೦೭. ೦೮. ಓ. ಎಫ್. ಸಿಲಿಂಡರ್ ಚಲನೆ, ೩೬ ಗಂಟೆ ನಡಿಯುವುದು. ಮೊದಲಿನ ಕ್ರಯ ರೂ. ೧೧—೪—೦; ಈಗ ರೂ. ೩—೧೨—೦ ಐದು ವರ್ಷ ಜಾಮೀನ್. ನಂ. ೧೦೪—೦೮. ಓ. ಎಫ್. ರೈಲ್ವೆ ರೆಗ್ಯುಲೇಟರ್ ಲೀವರ್ ವಾಚ್. ೩೬ ಗಂಟೆ ನಡಿಯುವುದು. ಮೊದಲಿನ ಕ್ರಯ ರೂ. ೧೦—೧೪—೦; ಈಗ ರೂ. ೩—೭—೦ ಐದು ವರ್ಷ ಜಾಮೀನ್. ೧೦೯—ರಾಸ್ಕೋಪ್ ಲೀವರ್ ವಾಚ್. ಇದು ಬಹು ಶಾಶ್ವತವಾದದ್ದು. ಹತ್ತು ವರ್ಷ ಜಾಮೀನ್. ಮೊದಲು ರೂ. ೧೮; ಈಗ ರೂ. ೫—೮—೦. ೧೦೫—ಬೆಳ್ಳಿ ರಾಸ್ಕೋಪ್ ಲೀವರ್ ವಾಚ್. ರತ್ನಗಳುಳ್ಳದ್ದು. ೧೨ ವರ್ಷ ಜಾಮೀನ್. ಮೊದಲು ರೂ. ೩೦; ಈಗ ರೂ. ೧೦. ೧೦೬—ಬೆಳ್ಳಿ ಲೇಡಿ ಅಥವಾ ಕೈವಾಚ್. ಸಿಲಿಂಡರ್, ರತ್ನವುಳ್ಳದ್ದು. ಗಿಲ್ಟ್ ಚಲನೆ. ೬ ವರ್ಷ ಜಾಮೀನ್. ಕ್ರಯ ರೂ. ೨೨—೮; ಈಗ ರೂ. ೬—೮—೦. ೧೦೬—ಬೆಳ್ಳಿ ಓ. ಎಫ್. ಕೈ ಸಹಿತ, ಪಾಲಿಷ್ ಚಲನೆ. ರೂ. ೨೧; ಈಗ ರೂ. ೩. ಆರು ವರ್ಷ ಜಾಮೀನ್. ೧೦೮—ಬೆಳ್ಳಿ ಓ. ಎಫ್. ಗಂಡಸರ ಲೀವರ್ ರೂ. ೩೦ ಈಗ ರೂ. ೧೦ ಹತ್ತು ವರ್ಷ ಜಾಮೀನ್. ೧೦೮ ಎ—ಅದೇ ಹಂಟರ್, ರೂ. ೩೩, ಈಗ ರೂ. ೧೧. ೧೦೮ ಬಿ—ಅದೇ ಅರ್ಧ ಹಂಟರ್ ರೂ. ೩೬, ಈಗ ರೂ. ೧೨. ೧೦೯—ಬೆಳ್ಳಿ ೮ ದಿನ ನಡಿಯುವುದು. ರೂ. ೬೫; ಈಗ ರೂ. ೧೮. ವಾರಕ್ಕೊಮ್ಮೆ ಕೀಲಿ ಕೊಡುವುದು. ಲೀವರ್ ಚಲನೆ. ೧೦ ವರ್ಷ ಜಾಮೀನ್. ೧೦೯ ಎ.—೨೬ ದಿನ ನಡಿಯುವ ಚೊಕ್ಕಬೆಳ್ಳಿ ಗಡಿಯಾರ. ರತ್ನಗಳುಳ್ಳದ್ದು. ಸೆಕೆಂಡ್ ಹ್ಯಾಂಡ್. ೧೫ ವರ್ಷ ಜಾಮೀನ್ ರೂ. ೧೫೦. ಈಗ ರೂ. ೫೦. ೧೦೯ ಬಿ.—ಚೊಕ್ಕಬೆಳ್ಳಿ ಕ್ಯಾಲೆಂಡರ್ ಲೀವರ್ ವಾಚ್. ದಿನ, ತಾರೀಖು ತಿಂಗಳು, ಚಂದ್ರ ಇವನ್ನು ತೋರಿಸುತ್ತೆ. ೧೨ ವರ್ಷ ಜಾಮೀನ್. ಕ್ರಯ ರೂ. ೬೨—೮—೦; ಈಗ ರೂ ೧೩—೯—೦. ೧೧೦—ಚೊಕ್ಕ ಭಂಗಾರ. ರತ್ನಗಳುಳ್ಳದ್ದು. ಕ್ರಯ ರೂ. ೩೨. ಈಗ ರೂ. ೨೪. ಇಪ್ಪತ್ತೈದು ವರ್ಷ ಜಾಮೀನ್. ೧೧೧—ಎಂಟು ದಿನಗಳ ಚಿನ್ನದ ಗಡಿಯಾರ ತುಂಬಾ ರತ್ನಗಳು. ೧೨ ವರ್ಷ ಜಾಮೀನ್. ಕ್ರಯ ರೂ. ೧೫೯; ಈಗ ರೂ. ೫೩.

ಒಟ್ಟಿಗೆ ತರಿಸುವವರಿಗೆ ಸ್ಪೆಷಲ್ ದರಗಳು. ೩ ಗಡಿಯಾರ ಒಂದೇ ಸಲ ತರಿಸುವವರಿಗೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ

೬ ಗಡಿಯಾರ ಒಂದೇ ಸಲ ತರಿಸುವವರಿಗೆ ಒಂದು ಗಡಿಯಾರ ಇನಾಂ. ಕ್ರಯದಲ್ಲಿ ಕಾಲುಭಾಗ ಅಡ್ವಾನ್ಸು ಬರಬೇಕು; ಉಳಿದದ್ದಕ್ಕೆ ವಿ. ಪಿ. ಯಿಂದ ಕಳುಹಿಸುತ್ತೇವೆ. ಗಡಿಯಾರಗಳನ್ನು ಸುಂದರವಾದ ಮಕಮಲ್ ಪೆಟ್ಟಿಗೆಯಲ್ಲಿ ಸ್ಪ್ರಿಂಗ್, ಗ್ಲಾಸ್ ಸಹಿತ ಕಳುಹಿಸುವೆವು. ಇದಲ್ಲದೆ ಪ್ರತಿ ವಾಚಿಗೂ ನೋಗಸಾದ ಒಂದೊಂದು ಸರಪಣಿಯನ್ನು ಮಾಪು ಇನಾಮಾಗಿ ಕಳುಹಿಸುತ್ತೇವೆ ನಮ್ಮ ವಿಳಾಸ—

ಎಂ. ಎ. ಫಾಟೂಲಾ ಮತ್ತು ಕಂಪನಿ, ಜಿತ್ತೂರು.

ಎದೆಯಲ್ಲಿ ಹುಟ್ಟುವ ಕ್ಷಯರೋಗಗಳು.

[34-21]

ಅನೇಕ ವೇಳೆ ಶೀತವು ತಿಳಿಯದ ಹಾಗೆ ಕ್ರಮೇಣ ಪ್ರಬಲಿಸಿ ಕ್ಷಯರೋಗವಾಗುವುದು.

ಶೀತಗಾಳಿ ದೇಹಕ್ಕೆ ಬಡಿದು ನರಗಳನ್ನು ಅಂಟಿಕೊಳ್ಳೋಣದರಿಂದ ಕ್ಷಯರೋಗಗಳು ಹುಟ್ಟುತ್ತವೆ. ಶೀತವು ವಿಶೇಷವಾಗಿ ಮೂಗಿನಲ್ಲೂ ಗಂಟಲಿನಲ್ಲೂ ಕಾಣಿಸಿಕೊಳ್ಳುತ್ತದೆ. ಆದರೂ ಅನೇಕ ವೇಳೆ ಅದು ಶರೀರವನ್ನು ಹಿಡಿಯುವುದುಂಟು. ಗಂಟಲ ಶೀತವು ಶ್ವಾಸಕೋಶಗಳ ನಾಳಗಳ ಮೂಲಕ ಹಿಂದೆ ಮುಂದೆ ವ್ಯಾಪಿಸಿ, ಶ್ವಾಸಕೋಶಗಳನ್ನೇ ಹಿಡಿದು ಕ್ಷಯರೋಗ ಬಂದಂತೆ ಮಾಡುತ್ತದೆ. ಕೆಲವು ಬರವಣಿಗೆಗಾರರು ಅದನ್ನೇ ಕ್ಷಯರೋಗವೆಂದು ಎಣಿಸುತ್ತಾರೆ.

ಕ್ಷಯವು ಶ್ವಾಸಕೋಶವನ್ನು ಪ್ರವೇಶಿಸಿದ ಕೂಡಲೇ ಆಹಾರ ರುಚಿಸುವುದಿಲ್ಲ, ಶಕ್ತಿ ಕುಂದುವುದು, ದೇಹವು ಕೃಶಹೊಂದುವುದು ಅಂತು ಕ್ಷಯರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಆದರೆ ಅದು ಕ್ಷಯದಿಂದ ಪ್ರಾರಂಭವಾದದ್ದೆಂದು ತೋರುವುದಿಲ್ಲ. ಇಂಥಾ ಕಾಯಿಲೆಯನ್ನು ನಿವಾರಣೆಮಾಡುವುದಕ್ಕೆ ಒಂದೇ ಒಂದು ಮಾರ್ಗವುಂಟು, ಏನೆಂದರೆ ಅದಕ್ಕೆ ಕಾರಣವಾದ ಕ್ಷಯವನ್ನು ಹೊಡೆಯುವ ಪ್ರಯತ್ನವೇ.

ಕ್ಷಯರೋಗವನು ಹೊಡೆಯುವುದರಲ್ಲಿ ಪೆರೂನಾ ಚನ್ನಾಗಿ ಪರೀಕ್ಷೆ ಮಾಡಲ್ಪಟ್ಟ ಹಳೇ ಔಷಧ. ತಲೆ, ಗಂಟಲು, ಶ್ವಾಸಕೋಶ, ಜಠರ, ವಾ ದೇಹದ ಇತರ ಅಂಗಗಳಿಗೆ ಹಿಡಿಯುವ ಕ್ಷಯರೋಗಗಳೆಲ್ಲಾ ಈ ಔಷಧವನ್ನೇ ಉಪಯೋಗಿಸತಕ್ಕದ್ದಾಗಿದೆ. ದೇಹದ ಒಳಭಾಗದಲ್ಲಿ ಹುಟ್ಟುವ ರೋಗಗಳನ್ನು ನಿವಾರಣೆ ಮಾಡುವುದರಲ್ಲಿ ಪೆರೂನಾ ಬಹು ಪ್ರಸಿದ್ಧವಾದ ಔಷಧವಾಗಿದೆ. ಪೆರೂನಾ ಲಕ್ಷಾಂತರ ರೋಗಿಗಳಿಗೆ ಸೌಖ್ಯವನ್ನು ಕೊಟ್ಟಿರುವುದು. ಈ ಔಷಧದ ಸೇವನೆ ಪಥ್ಯ ಮುಂತಾದದ್ದನ್ನು ವಿವರವಾಗಿ ಬರೆದ ಕಾಗದವು ಆ ಶೀಸೆಯ ಜೊತೆಯಲ್ಲೇ ಇಟ್ಟಿದೆ. ಇದಲ್ಲದೆ ಪೆರೂನಾ ವಿಚಾರವನ್ನು ವಿವರಿಸಿರುವ ಸಣ್ಣ ಪುಸ್ತಕವನ್ನು ಔಷಧದ ಅಂಗಡಿಗಳಲ್ಲಿ ಕೇಳಿದರೆ ಸುಮ್ಮನೆ ಕೊಡುತ್ತಾರೆ.

ನೆತ್ತಿ, ಗಂಟಲು, ಶ್ವಾಸಕೋಶ, ಅನ್ನಕೋಶದಲ್ಲಿ ಕ್ಷಯವುಂಟಾಗಿರುವ ರೋಗಿಗಳು ಪೆರೂನಾವನ್ನು ಒಂದಾವರ್ತಿ ಪರೀಕ್ಷಿಸಿ ನೋಡಲಿ. ಒಂದು ಸಲ ಸೇವಿಸಿ ನೋಡಿದರೆ ಅದರ ಗುಣವು ಮುಂದಟ್ಟಾಗುವುದು. ಅದರ ಗುಣವು ಬೇಗ ಅನುಭವಕ್ಕೆ ಬಂದೀತೆನ್ನುವುದಕ್ಕೆ ಅನುಮಾನ ಕಾಣುವುದಿಲ್ಲ.

ಇತರ ಔಷಧಗಳಿಂದ ನನಗೆ ವಾಸಿಯಾಗಲಿಲ್ಲ. ಪೆರೂನಾ ವಾಸಿಮಾಡಿತು.

ಮಿಸೆಸ್ ಎಲಿಸಬೆತ್ ಹಂಟ್, ಮೆಲ್ಬೋರ್ನ್, ವಿಕ್ಟೋರಿಯಾ

ಮಿಸೆಸ್ ಎಲಿಸಬೆತ್ ಹಂಟ್, ೬೭ ಗ್ಲೆಸಿಂಗ್ಟನ್ ಬೀದಿ ನಾರ್ತ್ ಕೆಲ್ಲಿ, ಮೆಲ್ಬೋರ್ನ್, ವಿಕ್ಟೋರಿಯಾ, ಪ್ರಸ್ಬಿಟೇರಿಯನ್ ದೇವಾಲಯದ ಮೆಂಬರು, ಈಕೆ ಬರೆಯುವುದು —"ಶ್ವಾಸಕೋಶಗಳ ಕ್ಷಯಕ್ಕೆ ಪೆರೂನಾ ಸೇವಿಸುವುದೇ ಉತ್ತಮವೆಂದು ಸಂತೋಷದಿಂದ ಹೇಳುತ್ತೇನೆ. ನನಗೆ ಇತರ ಔಷಧಗಳಿಂದ ವಾಸಿಯಾಗಲಿಲ್ಲ. ಪೆರೂನಾ ವಾಸಿ ಮಾಡಿತು. ಹಲವು ವರುಷಗಳ ತನಕ ಈ ರೋಗವು ನನ್ನನ್ನು ಪೀಡಿಸಿತು. ನಾನು ತುಂಬಾ ಇಳಿದು ಹೋಗಿದ್ದೆನು. ನನಗೆ ಆಹಾರ ರುಚಿ ಸುತ್ತಿರಲಿಲ್ಲ. ರಾತ್ರಿ ಹೊತ್ತು ನಿದ್ರೆ ಬರುತ್ತಿರಲಿಲ್ಲ. ತುಂಬಾ ದುರ್ಬಲಳಾಗಿದ್ದೆನು. ನನ್ನ ಸ್ನೇಹಿತರು ನನಗಾಗಿ ತುಂಬಾ ಚಿಂತೆಪಟ್ಟರು. ಡಾಕ್ಟರುಗಳು ನನಗೆ ಗುಣಕೊಡಲಾರದೆ ಹೋದರು. ನನ್ನ ಶ್ವಾಸಕೋಶದಲ್ಲಿ ಹುಣ್ಣಾಗಿ ಯಾವಾಗಲೂ ಕೆಮ್ಮುತ್ತಿದ್ದೆನು. ಕಡೆಗೆ ನಿರಾಶೆಯಾಗಿ ಒಬ್ಬ ಸ್ನೇಹಿತನ ಮಾತು ಕೇಳಿ ಒಂದು ಬಾಟ್ಲಿ ಪೆರೂನಾ ಕೊಂಡುತಂದು, ಕೆಲವು ದಿನ ತೆಗೆದುಕೊಳ್ಳುವುದರೊಳಗಾಗಿ ನನಗೆ ಅದರ ಗುಣವು ಪರಮಾಶ್ಚರ್ಯವನ್ನುಂಟುಮಾಡಿತು. ನನಗೆ ನನ್ನ ಶ್ವಾಸಕೋಶಗಳು ಬಹಳ ಚನ್ನಾಗಿವೆ. ನಾನು ಪೆರೂನಾದಿನ ಉಪಕಾರವನ್ನು ಸರ್ವದಾ ಸ್ಮರಿಸುತ್ತೇನೆ."

ಬಹಳ ದುರ್ಬಲವುಂಟಾಗಿರುವುದು.

ಮಿಸೆಸ್ ಅಲಿಸ್ ಬ್ರಾಡ್ಲಿ, ಥಾರೋಲ್ಡ್, ಒಂಟೇರಿಯೊ, ಕೆನಡಾ, ಈಕೆ ಬರೆಯುವುದು.—"ಎರಡು ವರುಷಗಳ ಕೆಳಗೆ ನನ್ನ ಶಕ್ತಿ ಕುಂದಿ ಬಹಳ ಹೀನಸ್ಥಿತಿಯಲ್ಲಿದ್ದೆನು. ಆಗ ನನಗೆ ಪಾರ್ಶ್ವವಾಯು ಉಂಟಾಯಿತು. ಅದರಿಂದ ನನ್ನ ದೇಹದ ಒಂದು ಪಕ್ಕೆಯು ಬಿದ್ದುಹೋಗಿ, ಏಳಲಾರದೆ ಹೋದೆನು. ಡಾಕ್ಟರುಗಳನ್ನು ಕರೆಸಿ ಚಿಕಿತ್ಸೆ ಮಾಡಿಸಿಕೊಂಡರೂ ಕ್ರಮೇಣ ಹೀನಸ್ಥಿತಿಗೆ ಬರುವಂತಾಯಿತು. ನಾನು ಹಾಸಿಗೆಯಿಂದ ಏಳಲಾರೆನೆಂದು ನಿಶ್ಚಯಿಸಿಕೊಂಡೆನು. ಆದರೆ ಪೆರೂನಾವನ್ನು ನನಗೆ ಕೊಡುತ್ತಾ ಬಂದರು. ನಾಲ್ಕು ಬಾಟ್ಲಿಯ ಔಷಧ ಸೇವಿಸುವಷ್ಟರಲ್ಲೇ ನಾನು ಹಾಸಿಗೆಬಿಟ್ಟೇಳುವಂತೆಯೂ ಹೊರಗೆ ತಿರುಗಾಡುವಂತೆಯೂ ಆಯಿತು. ನನ್ನ ಸ್ಥಿತಿಯನ್ನು ನೋಡಿದ ನನಗೂ ನನ್ನ ಸ್ನೇಹಿತರಿಗೂ ಪರಮಾಶ್ಚರ್ಯವಾಯಿತು. ರೋಗಿಗಳಿಗೆ ಪೆರೂನಾ ಬಹು ಉಪಕಾರವುಳ್ಳ ಔಷಧವೆಂದು ನೆನಸುತ್ತೇನೆ. ಇದಲ್ಲದೆ ನನ್ನ ಮಗಳು ಕೂಡ ಪೆರೂನಾ ತೆಗೆದುಕೊಂಡು ಅಭ್ಯಾಸವಾಗಿದೆ. ಅವಳ ಶರೀರ ಸ್ಥಿತಿ ಬಹಳ ಪುಷ್ಟಿಯಾಗಿಯೂ ಆರೋಗ್ಯವಾಗಿಯೂ ಇದೆ. ನಮ್ಮ ಪ್ರಾಣಗಳನ್ನು ಪೆರೂನಾವು ಬದುಕಿಸಿತೆಂದು ನಂಬುತ್ತೇನೆ."

ಹೊಟ್ಟೆ ನೋವಿತ್ತು—ಈಗ ಹೋಯಿತು.

ಮಿಸೆಸ್ ಡಾನಿಯಲ್ ಹಾಸ್ಕ್ಯೆರ್, ವೆಲ್ಲಂಡ್, ಒಂಟೇರಿಯೊ, ಕೆನಡಾ, ಈಕೆ ಬರೆಯುವುದು —"ಮೂರು ವರುಷಗಳ ತನಕ ನನ್ನ ಹೊಟ್ಟೆಯಲ್ಲಿ ಅಕ್ರಮವುಂಟಾಗಿ ಅನುಭವಿಸಿದೆನು. ಒಂದೊಂದು ಸಲ ಕೆಲವು ದಿನಗಳ ವರೆಗೆ ನಾನು ಏನೂ ತಿನ್ನಲಾರದೆ ಇದ್ದೆನು. ನನ್ನ ಮಾಂಸಖಂಡಗಳು ಕೃಶವಾದವು, ತಲೆನೋವು ಹುಟ್ಟಿತು, ನಿರಾಶೆಯುಂಟಾಯಿತು. ಮೂವರು ಡಾಕ್ಟರುಗಳು ನನಗೆ ಚಿಕಿತ್ಸೆಮಾಡಿದರು. ಅದರಿಂದ ನನಗೆ ಸ್ವಲ್ಪವೂ ಅನುಕೂಲವಾಗಲಿಲ್ಲ. ಕಡೆಗೆ ಪೆರೂನಾ ಸೇವಿಸಲಿಕ್ಕಾರಂಭಿಸಿದೆನು. ಕೂಡಲೇ ಸ್ವಲ್ಪ ಸ್ವಲ್ಪವಾಗಿ ವಾಸಿಯಾಗುತ್ತಾ ಬಂತು. ಮೂರು ಬಾಟ್ಲಿ ಮುಗಿಸಿದ ಮೇಲೆ ಊಟ ರುಚಿಸುವಹಾಗಾಯಿತು. ಏನುಬೇಕಾದರೂ ಚನ್ನಾಗಿ ತಿನ್ನುವಂತಾಯಿತು. ಈಗ ನಾನು ಆರೋಗ್ಯವಾಗಿಯೂ ಶಕ್ತಿಹೊಂದಿಕೊಂಡವಳಾಗಿಯೂ ಆಗಿದೇನೆ. ಪೆರೂನಾ ನನ್ನ ಪ್ರಾಣವನ್ನು ಬದುಕಿಸಿತೆಂದು ನಂಬುತ್ತೇನೆ. ಯಾವಾಗಲೂ ಅದನ್ನು ಕೊಂಡಾಡುತ್ತೇನೆ."

ಕ್ಷಯ ಹಿಡಿಯುವ ಭೀತಿಯುಂಟಾಯಿತು.

ಮಿಸ್ ಆಲಿವಿ ಪೆರ್ರಾಲ್ಟ್, ೩೩೭ ಡೇವಿಡ್ಸನ್ ಬೀದಿ, ಬೋಲಿವಾರ್ಡ್ ಸೆಂಟ್ ಪಾಲ್, ಮಾಂಟ್ರಿಯಲ್, ಕೆನಡಾ, ಈಕೆ ಬರೆಯುವುದು —"ನಿಮ್ಮ ಪೆರೂನಾ ಎಂಬ ಪ್ರಖ್ಯಾತವಾದ ಔಷಧದ ವಿಷಯವಾಗಿ ಸಂತೋಷಪಾತ್ರಯೊದನ್ನು ಬರೆಯುತ್ತೇನೆ. ನಾನು ಇತರ ಔಷಧಗಳನ್ನು ಸೇವಿಸಿದೆನು. ನನ್ನ ಕ್ಷಯರೋಗವು ನಿವಾರಣೆಯಾಗಲಿಲ್ಲ. ನನಗೆ ಕ್ಷಯ ಹಿಡಿಯುತೆಂಬ ಭೀತಿಯುಂಟಾಯಿತು. ನನ್ನ ಆರೋಗ್ಯ ಕೆಟ್ಟು ಬಹಳ ಜುಗುಪ್ಸೆಯಾಗಿತ್ತು. ಹವಾ ಬದಲಾವಣೆಯಾದಾಗ ನನಗೆ ಶೀತ ಹಿಡಿದು, ಮೂರು ತಿಂಗಳ ತನಕ ಹಗಲೂ ರಾತ್ರಿ ಕೆಮ್ಮುತ್ತಿದ್ದೆನು. ನನ್ನ ಸಹೋದರನು ಪೆರೂನಾ ಸೇವಿಸೆಂದು ಹೇಳಿದಂತೆ ಪ್ರಾರಂಭಿಸಿದೆನು. ಅವನಿಗೆ ಅದು ರೋಗವನ್ನು ವಾಸಿ ಮಾಡಿತ್ತು. ಅದನ್ನು ನಾನು ಕ್ರಮವಾಗಿ ತೆಗೆದುಕೊಳ್ಳುತ್ತಾ ಬಂದದ್ದರಿಂದ ದಿನೇ ದಿನೇ ಆರೋಗ್ಯವಾಯಿತು. ಈಗ ನಾನು ಮೂರು ಬಾಟ್ಲಿ ಸೇವಿಸಿದೇನೆ. ನನ್ನ ರೋಗವು ಸಂಪೂರ್ಣವಾಗಿ ವಾಸಿಯಾಗಿರುತ್ತದೆ."

ಪೆರೂನಾದಿಂದ ಬೇಗ ಗುಣಕಂಡಿತು.

ಮಿಸ್ ಬೆಲ್ ಟಬ್ಸ್, ೩೦೧ ಫ್ರಾಂಕ್ಲಿನ್ ಬೀದಿ, ರಿಚ್ಮಂಡ್, ವರ್ಜಿನಿಯಾ, ಯು. ಎಸ್. ಎ., ಈಕೆ ಬರೆಯುವುದು.—"ನಾನು ಹುಡುಗಿಯಾಗಿದ್ದಾಗ ನನಗೆ ಕ್ಷಯ ಹಿಡಿಯಿತು. ಹಲವು ಒಳ್ಳೊಳ್ಳೇ ಡಾಕ್ಟರುಗಳು ನನಗೆ ಔಷಧ ಕೊಟ್ಟರು. ಆದರೆ ಯಾವುದರಿಂದಲೂ ನನಗೆ ಗುಣವಾಗಲಿಲ್ಲ. ಆಗ್ಗೆ ನನ್ನ ತಾಯಿ ಪೆರೂನಾ ಸೇವಿಸುತ್ತಿದ್ದಳು. ನನಗೂ ಅದನ್ನೇ ಕೆಲವು ಕಾಲ ಕೊಡುತ್ತಾ ಬಂದಳು. ನಾನು ದಿನೇ ದಿನೇ ಚನ್ನಾಗುತ್ತಾ ಬಂದು ಈಗ ಆರೋಗ್ಯವಾಗಿಯೂ ಪುಷ್ಟಿಯಾಗಿಯೂ ಬೆಳದಿರುವೆನು. ನನಗೆ ಈಗ ೧೬ ವರುಷ. ಡಾಕ್ಟರುಗಳು ನನಗೆ ಕ್ಷಯ ಹಿಡಿದಿದೆ ಎಂದು ಹೇಳಿದರು. ಆದರೆ ನನಗೆ ಸ್ವಲ್ಪ ಶೀತ ಹಿಡಿದಿತ್ತಲ್ಲದೆ ಬೇರೇನೂ ಇಲ್ಲ."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

31—7—1908 ರಿಂದ 7—8—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	*	*	0	0
ಮೈಸೂರು ,,	56	33	3	3
ಕೋಲಾರ್ ,,	28	14	3	3
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	9	2	21	21
ಹಾಸನ ,,	0	0	0	0
ಚಿತ್ರದುರ್ಗ ,,	0	0	1	1
ಕಡೂರ್ ,,	2	6	10	7
ಶಿವಮೊಗ್ಗ ,,	*	*	*	*
ಜುಮ್ಲಾ	95	55	38	35

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಶ್ರಾವಣ ಬಹುಳ ನವಮಿ ಗುರುವಾರದಿಂದ ಶ್ರಾವಣ ಬಹುಳ ಅಮಾವಾಸ್ಯೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಆಗಸ್ಟ್

ತಾ	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ	ತೇದಿ ಸಿಸ್ತ ಮಾಸ
20	ಗುರು ,,	ನವಮಿ	32-12	ರೋ	38 3	5
21	ಶುಕ್ರ	ದಶಮಿ	33 12	ಮೃ	40-6	6
22	ಶನಿ *	ಏಕಾದಶಿ	34 32	ಆ	43-52	7
23	ರವಿ †	ದ್ವಾದಶಿ	32 40	ಪು	48 18	8
24	ಚಂದ್ರ ‡	ತ್ರಯೋದಶಿ	41 38	ಪು	53 50	9
25	ಕುಜ ¶	ಚತುರ್ದಶಿ	46-20	ಆ	59 58	10
26	ಬುಧ ,,	ಅಮಾವಾಸ್ಯೆ	51 41	ಮ	60 0	11

,, ತೋಳಪ್ಪಸಂಪ್ರದಾಯಕ್ಕೆ ಶ್ರೀಜಯಂತಿ, ಉಪ್ಪಾಯೋಗ * ಸರ್ವತ್ರ ಏಕಾದಶಿ, ಶ್ರಾವಣಶನಿವಾರ † ದಗ್ಧಯೋಗ ‡ ಸೋಮಪ್ರದೋಷ ¶ ಮಾಸಶಿವರಾತ್ರಿ, ಕೃಷ್ಣಾಂಗಾರಕಚತುರ್ದಶಿ, ಮಂಗಳಗೌರೀವ್ರತ ,, ಸರ್ವತ್ರ ಅಮಾವಾಸ್ಯೆ, ಫಲಪ್ರದ ಗೌರೀವ್ರತ, ಸಿಂಹೆ ಪಂಚಗ್ರಹ ಯೋಗ-ರ, ಚಂ, ಕು, ಬು, ಗು

ಪೇಟೇ ಧಾರಣೆ.

ದಿನಸಿ	ಮೈಸೂರು.	ಬೆಂಗಳೂರು.
ಕಡ್ಡೀ ಅಕ್ಕಿ ಪಲ್ಲಕ್ಕೆ	ರೂ. ೧೫-೦-೦	೧೭-೦-೦
ಕಂಬಳಿತ ಅಕ್ಕಿ ಅವಲ್	೧೫-೮-೦	೧೩-೮-೦
,, ದಪ್ಪ	೧೨-೮-೦	೧೩-೦-೦
ಜಾಪಾನ್ ಅಕ್ಕಿ	೧೨-೮-೦	೧೫-೮-೦
ಸಣ್ಣಕ್ಕಿ ಅವಲ್	೧೩-೦-೦	೧೮-೦-೦
,, ದಪ್ಪ	೧೩-೮-೦	೧೨-೦-೦
ತೊಗರೀ ಬೇಳೆ ಪಲ್ಲಕ್ಕೆ	೧೩-೦-೦	೧೩-೦-೦
,, ದಪ್ಪ	೧೪-೮-೦	೧೫-೮-೦
[illegible] ರಾಗಿ ಪಲ್ಲಕ್ಕೆ	೩-೪-೦	೩-೮-೦
ಕಾರರಾಗಿ	೩-೪-೦	೩-೦-೦
ಜೋಳ	೩-೦-೦	೮-೮-೦
ಕಲಸಂದೆ ಪಲ್ಲಕ್ಕೆ	೧೧-೦-೦	೧೦-೦-೦
ಬಿಳೇ ಅವರೆ	೮-೮-೦	೯-೦-೦
ಹೆಸರು	೧೧-೮-೦	೧೨-೮-೦
ಉದ್ದು	೧೨-೮-೦	೧೨-೪-೦
ಕಡಲೆ	೧೩-೮-೦	೧೩-೮-೦
ಎಳ್ಳು ಸ ೧೨೩ ಕ್ಕೆ	೨೮-೮-೦	೨೨-೮-೦
ಹುರುಳಿ	೩-೮-೦	೩-೪-೦
ಹರಳು ೧೨೩ ಸೇರು	೧೧-೮-೦	೧೧-೦-೦
ಸೀಗೇಕಾ. ಪು. ಮಣ ೧ಕ್ಕೆ	೧-೮-೦	೧-೩-೦
ಮೆಣಸಿನಕಾಯಿ	೪-೪-೦	೪-೦-೦
,, ದಪ್ಪ	೩-೪-೦	೩-೮-೦
ಬೆಲ್ಲ ದೊಡ್ಡ ಅಚ್ಚು	೪-೦-೦	೫-೨-೪
ಒಳ್ಳೆಣ್ಣೆ ಮಣ ೧ಕ್ಕೆ	೫-೮-೦	೩-೦-೦
ಹರಳೆಣ್ಣೆ ,,	೬-೧೨-೦	೪-೦-೦
ಕೊತ್ತುಂಬರಿ ಪಲ್ಲಕ್ಕೆ	೩-೦-೦	೩-೮-೦
ಉಪ್ಪು ,,	೭-೮-೦	೫-೦-೦
ಹುಣಸೇ ಹಣ್ಣು	೧-೮-೦	೧-೩-೦
,, ಹಳೇದು	೧-೪-೦	೧-೫-೦
ತುಪ್ಪ ಮಣ ೧ಕ್ಕೆ	೧೩-೮-೦	೧೫-೮-೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ	೬-೧೫-೦	೪-೨-೦
ತೆಂಗಿನಕಾಯಿ ೧೦೦ ಕ್ಕೆ	೪-೦-೦	೩-೮-೦
ಅಡಿಕೇಕಾಯಿ ಮಣ ೧ಕ್ಕೆ	೧-೦-೦	೧-೧೨-೦
ಅಂಟ್ಯಾಳದ ಕಾಯಿ ಮಣ ೧ಕ್ಕೆ	೦-೧೨-೦	೧-೦-೦
ಚನ್ನ (ಪ) ಕೆಂಪು	೧೫-೩-೦	೧೫-೫-೦
,, ,, ಹಸಿರು	೧೫-೧೧-೦	೧೫-೧೨-೦
,, ,, ಗಟ್ಟಿ ಕೊಳೆ ೧ಕ್ಕೆ	೨೩-೧೨-೦	೨೯-೮-೦
ಬಿಳಿ ಗಟ್ಟಿ ಕೊಳ ೧೦೦ ಕ್ಕೆ	೩೫-೦-೦	೩೩-೪-೦

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore 20/8/1908.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೮ ನೇ ಇಸವಿ ಆಗಸ್ಟ್ ತಾರೀಖು ೨೭ ನೇ ಗುರುವಾರ. ಸಂಚಿಕೆ ೧೩

AMRUTANJAN DEPOT, 16 OAK-LANE, BOMBAY. [17-27]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ :—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಚಳಕವು ಮತ್ತು ಕ್ಷಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ ಕ್ಕೆ ಕಿಮ್ಮತು ೦-೮-೦. ಪೋಸ್ಟು ಖರ್ಚು ೦-೪-೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಕಜ್ಜಿ ವಗೈರೆ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦-೪-೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ—ಊಟಕ್ಕೆ ಡಬ್ಬಿ ೧ ಕ್ಕೆ.	೧-೪-೦	ಕಾಸಸಂಹಾರಿಗುಟಿಕೆ—ಕೆಂಗಸರ ಹೊಟ್ಟೆನೋವಿಗೆ	೧-೦-೦
ವಜ್ರಗುಟಿಕೆ—ಧಾತುಪುಷ್ಟಿ ರಕ್ತಶುದ್ಧಿ	೧-೦-೦	ಪ್ರಮೇಹದ ವಿಶ್ರಣ—ಪ್ರಮೇಹಕ್ಕೆ	೧-೦-೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ ಕ್ಕೆ	೨-೧೨-೦	ಕಫಹರಿ—ಕಫ, ಕೆಮ್ಮು, ಜ್ವರ ಇತ್ಯಾದಿ	೧-೪-೦
ಜೀರ್ಣಕಾರಕದ ಮದ್ದು	೦-೮-೦	ಸುಂದರೀ ತೈಲ—ಮೋರೆಗೆ	೦-೮-೦
ದಂತರೋಗಾಂತಕ—ಹಲ್ಲು ನೋವಿಗೆ	೦-೮-೦	ನೇತ್ರಾಂಜನ—ಮಂದದೃಷ್ಟಿಗೆ	೦-೪-೦
ಕರ್ಣರೋಗಾಂತಕ—ಕಿವಿನೋವಿಗೆ	೦-೬-೦	ಉರಿನಾಶಕ ಎಂಣೆ ಬಾಟ್ಲಿ ೧ ಕ್ಕೆ	೦-೮-೦
ಬಿಳ್ಪು ದುಃಖ ಎಣ್ಣೆ	೦-೩-೦	ವಾತದ ವಿಶ್ರಣ ,,	೧-೦-೦
ದಂತಮಂಜನ—ಹಲ್ಲುಗಳಿಗೆ	೦-೨-೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦-೧೦-೦
ಕೇಶವರ್ಧಿನೀ ತೈಲ—ಕೂದಲಿಗೆ	೧-೦-೦	ತಾಂಬೂಲ ಗುಟಿಕೆ ೫೦ ಗುಟಿಕೆ	೦-೮-೦
ಬಾಲಾಮೃತ—ಬಾಲರಿಗೆ	೨-೮-೦	ರೋಗಸಂಹಾರಿ	೦-೮-೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು ಫ್ರೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ.

ಮಹಾ ಬಾಧಾಪಹಾರಿಣಿಯು.

48-14

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

ಕ್ಲೆಮೆಂಟ್‌ಯವರ ಯಕ್ಷಿಣೀ ತೈಲವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ಪಾದ್ರಿಗಳು, ಕಾಂಟ್ರಾಕ್ಟರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಾರೆ, ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ಸಾಯುನೋವು, ಕಳಕ, ಗಂಟ್ಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಅಜೀರ್ಣದ ನೋವು, ಹಲ್ಲುನೋವು, ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಕ್ಲೆಮೆಂಟ್‌ಯವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮಾಂಸಖಂಡವನ್ನು ವ್ಯಾಪಿಸಿ, ಅದರ ಕಾಠಿನ್ಯವನ್ನು ಅಡಗಿಸಿಬಿಡುತ್ತದೆ. ಬಹಳ ಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ ಸೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಖರ್ಚು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕ್ರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ಪೊದಮುತ್ತಿಪಿಳ್ಳೆ ಬೀದಿ, ಪೇಟೆ, ಮದರಾಸ್.

ಜ್ವರಹರಿ. 64-4



ಇದು ಸಾಧಾರಣ ಜ್ವರ, ಚಳಿಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು. ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆ ತಾಲ್ಲೂಕಿನ ಮುನಿಸಿಪಾಲ್ ಇಲಾಖಾ ಸಬ್ ಓವರ್‌ಸಿಯರ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡ್ರಾಮಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾತರದಿಂದ ಕೇಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡ್ರಾಮಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ ೧ ರೂ ; ೧-೮ ರೂ , ೩ ರೂ. ೨—೧೨ ಆ.; ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ಪಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಪುಸ್ತಕ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆಪ್ಪಿಯವರ ಗ್ರೇಟ್ ಇಂಡಿಯಾ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ರೈನ್, ಮದರಾಸ್

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

53 9

ನಮ್ಮಲ್ಲಿ ಈಗ ದೊಡ್ಡಬಳ್ಳಾಪುರದಲ್ಲಿ ಸಿದ್ಧವಾಗಿರುವ ಚೆಕ್ಕು ಬಟ್ಟೆಗಳು ಸಾವಿರಕ್ಕಾಗಿ ಕಲ್ಲೂ ಹೆಲ್ಲಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಬೆಲೆ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುತ್ತದೆ. ಗಜ ಒಂದಕ್ಕೆ ಐದು ಆಣೆಯಿಂದ ಎಂಟು ಆಣೆ ವರಿವಿಗೂ ಬಳ್ಳದೆಯಾಗಿ ಯಾಗಲೀ ಒಟ್ಟಾಗಿ ಯಾಗಲೀ ಮಾರಲ್ಪಡುತ್ತವೆ. ಶಾಲುಗಳು, ಕಾಪಸನದ ಟೋಪಿಗಳು, ಮಖಮಲಿನ ಟೋಪಿಗಳು, ಹೊಸ ಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) . . . . ರೂ ೧—೨—೦

ಬಸಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ ರೂ. ೧—೧೪—೦

" " ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ಪತ್ರ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಶೌಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-29

೧. ಲೋಕಾನುಗ್ರಹದ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು. ಮೈ ಕೈಕಾಲು ಕೊರತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅಮೋಘಶ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಬೇಗೂ ದಾರಿಕೊಡದೆ, ನೀರು ಹವಾಗಳ ಒಗ್ಗದಿಕೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳೆವು, ಜ್ವರ, ಸಚ್ಚೂಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ :—ಶೌಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ತ್ವರೆಯಾಗಿ ಇಂಗ್ಲೀಷ್ ಕಲಿಯುವಿಕೆ.

61-3

ಇಂಗ್ಲೀಷ್ ಭಾಷೆಯನ್ನು ಬರೆಯುವುದಕ್ಕೂ, ಓದುವುದಕ್ಕೂ ಮಾತಾಡುವುದಕ್ಕೂ, ಬೋಧಕರ ಸಹಾಯ ಸ್ವಲ್ಪವೂ ಇಲ್ಲದೆ ಒಂದೆರಡು ತಿಂಗಳುಗಳಲ್ಲಿಯೇ ತಾನಾಗಿ ಕಲಿಸುವ ಅತ್ಯುತ್ತಮವಾದ ಪುಸ್ತಕ. ಕ್ರಯ ೧—೪—೦

ಪ್ರಶ್ನೋತ್ತರ ಲೇಖ್ಯಬೋಧಿನಿ.

ಸ್ವಲ್ಪ ಪ್ರತಿಗಳೇ ಉಳಿದಿವೆ. ೩೨೦ ಪುಟಗಳು ಆಯಾ ಪಂತ ಪದ್ಧತಿಯನ್ನು ನುಸರಿಸಿ ಬರೆಯುವ ಮರ್ಯಾದೆ, ಒಕ್ಕಣೆಗಳು, ಸಿವಿಲ್, ಮೇಜಿಸ್ಟ್ರೇಟ್, ರವಿನ್ಯೂ, ಪೊಲೀಸ್, ಇಂಜನಿಯರ್, ಫಾರೆಸ್ಟು, ಮುನ್ಸಿಪಾಲಿಟಿ, ವಿದ್ಯಾಭ್ಯಾಸ, ಮತ್ತು ಇನ್ನೂ ಇತರ ಇಲಾಖೆಗಳ ಬಗೆಬಗೆ ಸಂಗತಿಗಳೂ, ರೈತರಿಗೆ ರಿಯಾಯತಿ ದೊರೆಯುವ ಬಗೆಬಗೆ ಅರ್ಜಿಗಳೂ, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಹಿಂದೂ ಲಾ, ಮಹಮದೀಯ ಲಾ, ಕಂಪನೀಸ್ ಆಕ್ಟ್, ಲ್ಯಾಂಡ್ ಅಕ್ವಿಜಿಶನ್, ಡೊಡ್ಡಿ, ಆಗಂಸು ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳೂ, ಕೋರ್ಟುಗಳಿಗೂ ಪೋಲೀಸಿಗೂ ಇರುವ ಅಧಿಕಾರ, ವರ್ತಕರಿಗುಪಯೋಗವಾದ ಎಲ್ಲಾ ರೋಖು ನಗು ಲೆಕ್ಕಗಳು, ಶಾನುಭೋಗರಿಗೆ ಲೆಕ್ಕ ಬರೆಯುವ ರೀತಿ, ಇವುಗಳ ಸಾರಾಂಶವನ್ನೆಲ್ಲಾ ವಿವರಿಸಿದೆ ಪುಸ್ತಕದಲ್ಲಿರುವ ಸಂಗತಿಗಳನ್ನೆಲ್ಲಾ ವಿವರಿಸಲು ಸ್ಥಳಸಂಕೋಚದಿಂದ ಇಲ್ಲಿ ಸೂಕ್ಷ್ಮವಾಗಿ ತಿಳಿಸಲಾಗಿದೆ ಕ್ರಯ ೧—೮—೦. ವಿಳಾಸ —ಮ್ಯಾನೇಜರ್ ಕರ್ನಾಟಕ ಪುಸ್ತಕ ಶಾಲಾ, ಲಕ್ಕ್ಮೇಶ್ವರ್ ಪೋಸ್ಟ್, ಶಿರಹಟ್ಟಿ ತಾಲೂಕು, ಧಾರವಾಡ್ ಡಿಸ್ಟ್ರಿಕ್ಟ್

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—“ನನಗೆ ದಿನಕ್ಕೆ ಒಂದು ಸಲವಾದರೂ ಶೌಚಪ್ರವೃತ್ತಿಯಾಗುತ್ತಿದೆಯೇ ?” ಎಂದು ನಿನ್ನನ್ನು ನೀನೇ ಕೇಳಿಕೋ.

(೧೨ ಆಣೆ ಬುಡ್ಡಿ ಸಮಾಚಾ.)

ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಶಾಲ ಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು. ಮಲಬದ್ಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು, ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬದ್ಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ ; ಪಿತ್ತ ; ಪಿತ್ತಜ್ವರ ; ಅಜೀರ್ಣ ; ಅಗ್ನಿಮಾಂದ್ಯ ; ಗಾಬರಿ ; ಅಶಕ್ತಿ ; ಎದೆಯು ತಲ್ಲಣಿಸುವುದು ; ತಲೆತಿರುಗುವುದು ; ತಲೆನೋವು ; ಹೊಟ್ಟೆಯುಬ್ಬರ ; ಹುಳಿತೇಗಿನ ಹೊಟ್ಟೆನೋವು ; ಹೆಂಗಸರ ವ್ಯಾಧಿಗಳು ; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಸುಚಿಯಾಗಿಯೂ ಚಟಪಟಿಯಾಗಿಯೂ ಇಟ್ಟು, ಕೆಟ್ಟದ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [93-52]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ, ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಿಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ, ಡೋನ್ಸ್, ಪಿ. ಓ. ಬಾಕ್ಸ್ ೩೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಸೆ ೧೯೦೭ ರಿಂದ ೧೯೦೮ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೈದು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 33-22

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಸಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ.

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಕ್ಷಯರೋಗದ ಆಕ್ರಮಗಳು, ನಾನಾ ತರದ ಕೆಮ್ಮಲು,

ಸಕಲವಿಧ ಕೈಶ್ಯಗಳು ; ನಾಂಗಸುಂದಗಳ ಕ್ಷೀಣತೆ ;

ಆಹಾರದಲ್ಲಿ ಅರುಚಿ



ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ.

ಕೈಸೋಕಾದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ವಿಮಾನುಮುದ್ರೆ ಇರುವ ಔಷಧವನ್ನೇ ಕೊಂಡುಕೊಳ್ಳಿ.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

1-25



ಬೆನ್ನೆಲುಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಜಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಬಿಚ್ಚಾದ ಕಡೆಗಳ ನೋವು, ಸಂಧಿನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಾಣವಾಗಿ ಕಳೆಯುವ ಬಾಧೆ, ಜಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ರೆಬಾರದೆ ಇರುವುದು—ಇದೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿನ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

‘ಜ್ವರದ ಗುಳಿಗೆಗಳು.’

೧ ಬಾಟ್ಲಿಗೆ ೧ ರೂಪಾಯಿ, ೪ ಬಾಟ್ಲಿಗೆ ೩ ರೂಪಾಯಿ, ೧೨ ಬಾಟ್ಲಿಗೆ ೮ ರೂಪಾಯಿ.

ಡಾಕ್ಟರ ಬಿ ಇ ಘಾಸವಾಲಾ, ಎಲ್ ಎಮ್. ಎಸ್., ಮುಂಬಯಿ, ಎಫ್ ಸಿ ಎಸ್. ಲಂಡನ್, ಫೆಲೋ ಮುಂಬಯಿ ಯುನಿವರ್ಸಿಟಿ, ಫರ್ಸ್ಟ ಆಸಿಸ್ಟಂಟ ಕೆಮಿಕಲ್ ಎನಲಾಯಝರ, ಮುಂಬಯಿ ಗವರ್ನಮೆಂಟ, ಇವರ ಅಭಿಪ್ರಾಯ:—

ಗ ಚಾ ಕರ್ಕೆ ಮತ್ತು ಕಂಪನಿಯವರಿಂದ ತಯಾರಿಸಲ್ಪಟ್ಟ ಜ್ವರದ ಗುಳಿಗೆಗಳಲ್ಲಿ ಕೆಲವನ್ನು ನಾನು ಪೃಥಕ್ಕರಿಸಿ ಪರೀಕ್ಷಿಸಿರುತ್ತೇನೆ. ಜ್ವರಗಳ ಮೇಲೆ ಮುಖ್ಯವಾಗಿ ಬಿಟ್ಟು ಬಿಟ್ಟು ಬರುವ ಎಲ್ಲಾ ಪ್ರಕಾರದ ಜ್ವರಗಳ ಮೇಲೆ ವಿಶೇಷವಾಗಿಯೂ ಗುಣಕಾರಿಯಾಗಿಯೂ ಉಪಯೋಗಿಸಲ್ಪಡುವಂಥ ಔಷಧದ್ರವ್ಯಗಳಿಂದ ಈ ಗುಳಿಗೆಗಳು ತಯಾರಿಸಲ್ಪಟ್ಟಿರುತ ವೆಂದು ನನಗೆ ಕಂಡುಬಂತು. ಅವುಗಳಲ್ಲಿ ಅಪಾಯುಕರವಾದ ಔಷಧದ್ರವ್ಯಗಳು ಯಾವವೂ ಇಲ್ಲ. ಮುಂಬಯಿ ತಾ — ೨—೧೯೦೦.

ಡಾಕ್ಟರ ಎ ಟಿ. ಮುದಲ್ಯಾ, ಎಲ್. ಎಮ್. ಎಸ್., ಮುಂಬಯಿ, ಎಮ್. ಡಿ., ಎಲ್. ಆರ್. ಸಿ ಪಿ., ಎಲ್. ಆರ್. ಸಿ. ಎಸ್., ಇವರ ಅಭಿಪ್ರಾಯ:—

ಶ್ರೀಗ. ರಾ. ಕರ್ಕೆ ಮತ್ತು ಕಂಪನಿಯವರ ಜ್ವರದ ಗುಳಿಗೆಗಳು ನನ್ನ ಕಡೆಗೆ ಅಭಿಪ್ರಾಯಕ್ಕೋಸ್ಕರ ಬಂದಿದ್ದವು. ಇವುಗಳಲ್ಲಿ ಉಪಯೋಗಿಸುವ ಔಷಧಿಗಳ ಫಾರ್ಮುಲ ನಾನು ನೋಡಿದೆ, ಮತ್ತು ಇವುಗಳಲ್ಲಿ ಉಪಯೋಗಿಸಿದ ಔಷಧದ್ರವ್ಯಗಳ ಗುಣ ಮತ್ತು ಅವುಗಳ ಪ್ರಮಾಣ ಇವುಗಳ ಮೇಲಿಂದ ನಾನು ವ್ಯಾಪ್ತಿ ಪಟ್ಟಿರುವದೇನಂದರೆ:—ಅವು ಮಲೇರಿಯಾ ಜಾತಿಯ ಬಿಟ್ಟು ಬಿಟ್ಟು ಬರುವ, ಒಳಗ ಮಾಗಿ ಎಲ್ಲಾ ಪ್ರಕಾರದ ಜ್ವರಗಳ ಮೇಲೆ ಉಪಯುಕ್ತವಾಗಲಿಕ್ಕೇ ಬೇಕು. (ರಂಗೂನ).

ಡಾಕ್ಟರ ಸಾ. ಬ್ರಿಯಲ್ ಪಿಮೆಲ್ಲೋ, ಎಮ್. ಡಿ., ಎಲ್. ಆರ್. ಸಿ. ಪಿ., ಎಲ್. ಆರ್. ಸಿ. ಎಸ್ ಇ., ಎಲ್. ಎಫ್. ಪಿ. ಎಡ್. ಎಸ್. ಜಿ., ಎಲ್ ಎಮ್. ಇ., ಇವರ ಅಭಿಪ್ರಾಯ:—

ಹಿಂದುಸ್ಥಾನದಲ್ಲಿ ಜ್ವರವುಳ್ಳ ಪ್ರದೇಶಗಳು ಬಹಳವಾಗಿವೆ. ಅಲ್ಲಿ ಯಾವನಾದರೂ ಡಾಕ್ಟರನು ಇರಲಿಕ್ಕೆ ಒಪ್ಪಲಿಕ್ಕಿಲ್ಲ. ಮನಂತು ಅಂಥ ಪ್ರದೇಶಗಳಲ್ಲಿ ಕೂಲಿಕಾರರೂ ಮತ್ತು ಬೇರೆಯವರೂ ಮುಂತಾದ ಅನೇಕ ಜನರು ಇರಲೇ ಅಥವಾ ಕೆಲಸಮಾಡಲೇ ಬೇಕಾಗುತ್ತದೆ. ಅಂಥವರಿಗೆ ಯೋಗ್ಯ ಔಷಧಗಳ ಸಹಾಯ ಸಿಗೆಯುವದಿಲ್ಲವಾದ ಕಾರಣ ಅವರನ್ನು ಬಚಾವು ಮಾಡಲಿಕ್ಕೆ ಮೆಸರ್ಸ ಕರ್ಕೆ ಮತ್ತು ಕಂಪನಿಯವರು ಮುಂದೆ ಬಂದು ಜ್ವರದ ಗುಳಿಗೆಗಳೆಂಬ ಹೆಸರಿನ ಔಷಧಿಯನ್ನು ಕಳುಹಿಸುತ್ತಲಿದ್ದಾರೆ.

ಈ ಗುಳಿಗೆಗಳಲ್ಲಿ ಉಪಯೋಗಿಸಲ್ಪಡುವ ಔಷಧಿಗಳು ನನಗೆ ತಿಳಿದು ಬಂದವು. ಈ ಸಂದರ್ಭಗಳಲ್ಲಿ ಎಂಥ ಡಾಕ್ಟರರಾದರೂ ಉಪಯೋಗಿಸುವ ಔಷಧಿಗಳೇ ಇವು ಇರುತ್ತವೆ. ಆದ್ದರಿಂದ ಯೋಗ್ಯ ಡಾಕ್ಟರೀ ಔಷಧೋಪಚಾರವು ನಮ್ಮಲ್ಲಿ ದೊರೆಯುವವರೆಗೆ ಇವುಗಳನ್ನು ಕೊಡುವದು ಯೋಗ್ಯವಲ್ಲವೆಂದು ನನಗೆ ಸಂಶಯವಿಲ್ಲ. ಆದರೆ ಜ್ವರದ ಬಾಧೆಗಳ ಮಧ್ಯದಲ್ಲಿಯೂ ಮತ್ತು ಜ್ವರ ಪ್ರತಿಬಂಧ ಮಾಡುವಲ್ಲಿಯೂ ಇವು ಹೆಚ್ಚು ಉಪಯೋಗವಾಗುವವು. ತಾ ೨೫—೧೨—೧೯೦೦.

ಡಾಕ್ಟರ ಜೆ ಆರ್ ತಾಂಬೆ, ಎಮ್. ಎ. ಬಿ ಎಸ್ ಸಿ., ಎಲ್ ಎಮ್. ಎಸ್., ಮುಂಬಯಿ—

ಮೆಸರ್ಸ ಕರ್ಕೆ ಮತ್ತು ಕಂಪನಿಯವರ ಜ್ವರದ ಗುಳಿಗೆಗಳನ್ನು ಎಲ್ಲಾ ಜನರಿಗೂ ಶಿಫಾರಸು ಮಾಡಲಿಕ್ಕೆ ನನಗೆ ಬಹಳ ಆನಂದವಾಗುತ್ತದೆ. ಇವುಗಳೊಳಗಿನ ಔಷಧದ್ರವ್ಯಗಳ ಮೇಲಿನ ನಾನು ಪೂರ್ಣರೀತಿಯಿಂದ ಖಾತ್ರಿಯಾಗಿ ನಂಬುವ ದೇನಂದರೆ —ಬಿಟ್ಟು ಬಿಟ್ಟು ಬರುವ ಎಲ್ಲ ಪ್ರಕಾರದ ಜ್ವರಗಳಿಂದಲೂ, ಗೋಣಿ ಬೇನೆ ಕರದ ಸ್ಥಾನಿಕ ಜ್ವರಗಳಿಂದಲೂ, ಮಲೇರಿಯಾ ಎಂಬ ಕೆಟ್ಟ ಗಾಳಿಯಿಂದ ಉಂಟಾಗುವ ಅತಿಶಯ ರೋಗದಿಂದಲೂ, ಮನಸಿಕ್ಕೆ ಯಲ್ಲ ಉಂಟಾದ ಅವ್ಯವಸ್ಥೆಯಿಂದಲೂ ಪೀಡಿಸುತ್ತಿರುವ ರೋಗಿಗಳಿಗೆ ಈ ಗುಳಿಗೆಗಳು ಬಹಳವೇ ಉಪಯೋಗವುಳ್ಳವುಗಳಾಗಿವೆ. ಮನೆಯಲ್ಲಿ ಒಂದೇ ಕಡೆಗೆ ಕೂಡ್ರುವ ಅಭ್ಯಾಸದಿಂದ ಒಡಳ ಪಚನ ಶಕ್ತಿ ಕೆಟ್ಟುಹೋಗಿರುವ ಹಿಂದುಸ್ಥಾನದ ಹೆಂಗಸರಿಗೆ ವಿಶೇಷತಃ ಈ ಗುಳಿಗೆಗಳು ಉಪಯೋಗವಾಗುವ ಹಾಗೆ ಇರುತ್ತವೆ. ರಕ್ತಶುದ್ಧಿ ಮಾಡುವದರಲ್ಲಿಯೂ ಶರೀರದ ಎಲ್ಲಾ ಭಾಗಗಳಿಗೆ ಶಕ್ತಿ ಕೊಡುವದರಲ್ಲಿಯೂ ಈ ಗುಳಿಗೆಗಳು ಬೇರೆ ಕಡೆಯಲ್ಲಿ ಮಾರಲ್ಪಡುವ ಬೇರೆ ಎಲ್ಲ ಔಷಧಿಗಳಿಂದಲೂ ಹೆಚ್ಚು ಉತ್ತಮವಾಗಿವೆ. ತಾ ೧೩—೯—೧೯೦೦

ಡಾಕ್ಟರ ಕೆ. ಇ. ದಾದಾಭಾಂಜಿ, ಎಲ್ ಎಮ್ ಎಸ್., ಮುಂಬಯಿ, ಫೆಲೋ ಆಫ ದಿ ಮುಂಬಯಿ ಯುನಿವರ್ಸಿಟಿ, ಮೆಂಬರ ಮುಂಬಯಿ ಮುನ್ಸಿಪಾಲ ಕಾರ್ಪೋರೇಷನ್, ಇವರ ಅಭಿಪ್ರಾಯ:—

ಕರ್ಕೆ ಮತ್ತು ಕಂಪನಿಯವರ ಜ್ವರದ ಗುಳಿಗೆಗಳಲ್ಲಿ ಅಪಾಯುಕಾರವಾದ ಔಷಧಿ ದ್ರವ್ಯಗಳು ಇಲ್ಲವೆಂಬುವ ಬಗ್ಗೆ ನಾನು ಬಹಳ ಸಂತೋಷಪಡುತ್ತೇನೆ. ಅವು ಬಿಟ್ಟುಬಿಟ್ಟು ಬರುವ ಎಲ್ಲಾ ಪ್ರಕಾರದ ಜ್ವರಗಳ ಮೇಲೆ ಬಹಳೇ ಗುಣಕಾರಿಯಾಗಿದ್ದು ವಿಮುಖವಾಗಿ ಬರಬೇಕಾಗುತ್ತಲಿರುವ ಜ್ವರಗಳಿಂದ ಪೀಡಿತರಾದ ಜನರಿಗೆ ಈ ಗುಳಿಗೆಗಳಿಂದ ಒಂದು ಹೊತ್ತು ಅನುಸ್ರಾವೇ ಆಯಿತೆಂತ ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಅವುಗಳೊಳಗಿನ ಔಷಧಿ ದ್ರವ್ಯಗಳು ಒನ್ನಾಗಿ ಕೂಡಿಸಲ್ಪಟ್ಟಿದ್ದು ವಿದ್ಯಾಂಸರಾದ ಔಷಧಜ್ಞರಿಂದ ಬಹಳ ಪ್ರತಿಯೂ ಉಪಯೋಗಿಸಲ್ಪಡುವಂಥವೇ ಇವೆ. ತಾ ೦— ೧— ೧೯೦೦.

ಡಾಕ್ಟರ ಕಾವಸಜೀ ಮೋಟಾಭಾಯ್, ಎಲ್ ಎಮ್. ಎಸ್., ಮುಂಬಯಿ, ಇವರ ಅಭಿಪ್ರಾಯ:— [66-3]

ಮೆಸರ್ಸ ಕರ್ಕೆ ಮತ್ತು ಕಂಪನಿಯವರ ಜ್ವರದ ಗುಳಿಗೆಗಳನ್ನು ಶಿಫಾರಸು ಮಾಡಲಿಕ್ಕೆ ನನಗೆ ಅತ್ಯಾನಂದವಾಗುತ್ತದೆ. ಅವುಗಳಲ್ಲಿದ್ದ ಔಷಧಿ ದ್ರವ್ಯಗಳು ನನಗೆ ಸಂತೃಪ್ತಿ ಮತ್ತು ನನ್ನ ಸ್ವಂತ ಅನುಭವದ ಮೇಲಿಂದ ಅವು ಬಿಟ್ಟುಬಿಟ್ಟು ಬರುವ ಅನೇಕ ಪ್ರಕಾರದ ಜ್ವರಗಳ ಮೇಲೆ ಬಹಳ ಗುಣಕಾರಿಯಾಗಿರುತ್ತವೆಂತ ನಾನು ಅಭಿಪ್ರಾಯಪಡುತ್ತೇನೆ. ಕರ್ನಾಟಕ ದೇಶದಲ್ಲಿಯೂ, ಹಿಂದುಸ್ಥಾನ ದೇಶದಲ್ಲಿಯೂ ಅನೇಕ ಭಾಗಗಳಲ್ಲಿಯೂ ಅವು ಅತಿ ವಿಮುಖವಾಗಿ ಉಪಯೋಗಿಸಲ್ಪಡುತ್ತವೆ. ಇವುಗಳಿಂದ ಏನಾದರೂ ಅಪಾಯವಾಗಲಿಕ್ಕಿಲ್ಲ. ಇಂಥ ಜ್ವರದಿಂದ ಪೀಡಿತರಾದವರಿಗೆ ಇವುಗಳಿಂದ ಪೂರ್ಣ ಕಲ್ಯಾಣವಾದೀತು. ತಾ ೪- ೧೦ - ೧೯೦೦.

ವಿಳಾಸ:—ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪನಿ, ಠಾಕೂರದ್ವಾರ. ಮುಂಬೈ.

ನಿಮಗೆ ಸುಪೀರಿಯರ್ ಉಲ್ ಬೇಕೇ?

ನಿಮಗೆ ದಪ್ಪದ ಉಲ್ ಬೇಕೇ ?

117-45

೧೦ ಟೋಲ ಯಾಗುವ ಸುಪೀರಿಯರ್ ಉಲ್ ಬಂಡಲಿಗೆ	೩-೮-೦
ವಿಕ್ಟೋರಿಯಾ ಉಲ್ ಪೌಂಡು ಒಕ್ಕೆ	೨-೮-೦
೧೦ ಟೋಲವಾಗುವ ದಪ್ಪದ ಉಲ್ ಬಂಡಲಿಗೆ	೩-೩-೦
ಸತ್ಯವಿಜಯ ಹೇರ್ ಆಯಿಲ್ ಸೀಸೆಗೆ	೦-೧೦-೦

ಮೇಲ್ಕಂಡವುಗಳನ್ನು ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ-ಪ್ರೊಪ್ರೈಟರ್, ವಿಜಯ ಮಾರ್ಟ್, ಮಂಗಳೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-35

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಬಂದಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳು ಹಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಹಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಬುದ್ಧಿಗಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಸೇರಿದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಶೀಘ್ರ ಬರೆದು ತರಿಸಿಕೊಳ್ಳಿ. ಅಗ್ಗವಾಗಿ ಬೇಕಾದರೆ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವುದಿಲ್ಲ.

ಹಾರ, ಕೆಂಪು, ಅಚ್ಚ, ಬಿಳಿಕೆ, ಕಾಫಿ ಟೋಪಿಗಳು ೧ ರೂ ೮ ಆ ; ೧ ರೂ. ೬ ಆ.; ೧ ರೂ. ೪ ಆ.

ರೇಷ್ಮೆ ಹಾಕಿಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.

ಜಾರದ ಟೋಪಿಗಳು ೧ ರೂ. ೧೨ ಆ., ೧ ರೂ. ೮ ಆ.; ೧ ರೂ. ೬ ಆ.

ಜಿಗಿಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಹೊಸಗಾಗಳ ಟೋಪಿ, ಸೂಫಿ ಮಾರ್ಕೋಡು, ಆರ್ಡರ್ ಮೇಕೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ವೃತ್ತಾಂತ ಪತ್ರಿಕೆ.

ಸ್ ೧೯೦೮ ನೇ ಇಸವಿ ಆಗಸ್ಟ್ ತಾ|| ೨೭ ನೇ ಗುರುವಾರ

ತುರ್ಕಿ ಮತ್ತು ಪರ್ಷಿಯಾ ರಾಜ್ಯಗಳು.

ತುರ್ಕಿ ಮತ್ತು ಪರ್ಷಿಯಾ ರಾಜ್ಯಗಳು ಮುಸಲ್ಮಾನ್ ರಾಜ್ಯಗಳಾಗಿದ್ದು, ಈಚೆಗೆ ಆವೆರಡು ರಾಜ್ಯಗಳಲ್ಲೂ ರಾಜಪಕ್ಷವೆಂತಲೂ ಪ್ರಜಾ ಪಕ್ಷವೆಂತಲೂ ಎರಡೆರಡು ಸಂಗಡಗಳು ಹುಟ್ಟಿ ಪರಸ್ಪರ ವಾಗ್ವಾದ, ಹೋರಾಟ, ಕಲಹಗಳು ಉಂಟಾಗಿರುವುದೂ, ಸುಲ್ತಾನರುಗಳು ಪ್ರಜೆಗಳ ಕೋರಿಕೆಯಂತೆ ಪಾರ್ಲಿಮೆಂಟುಗಳನ್ನು ಸ್ಥಾಪನೆಮಾಡುವುದಾಗಿ ಅಪ್ಪಣೆ ಕೊಡಿಸಿರುವುದೂ ಹಿಂದೆಯೇ ವಾಚಕರಿಗೆ ತಿಳಿಸಲಾಗಿದೆ. ಈಗ ಇವೆರಡು ರಾಜ್ಯಗಳಿಗೂ ಎರಡು ವಿಷಯಗಳಲ್ಲಿ ಕಂಡುಬರುವ ವ್ಯತ್ಯಾಸಗಳನ್ನೂ ಅವುಗಳಿಂದ ಉಂಟಾಗಬಹುದಾದ ಫಲಪರಿಣಾಮಗಳನ್ನೂ ತಿಳಿಸಲಪೇಕ್ಷಿಸುವೆವು.

ಮೊದಲನೆಯದಾಗಿ, ತುರ್ಕಿ ಸುಲ್ತಾನರಿಗೆ ಯೂರೊಪ್ಪಿನಲ್ಲಿ ಕೆಲವು ಭಾಗವೂ ಏಷ್ಯಾ ಖಂಡದಲ್ಲಿ ಕೆಲವು ಭಾಗವೂ ಸೇರಿರುತ್ತವೆ. ಯೂರೊಪ್ಪಿಯನ್ ತುರ್ಕಿಯಲ್ಲಿರುವ ಪ್ರಜೆಗಳು ವಿಶೇಷ ವಿದ್ಯಾವಂತರಾಗಿಯೂ ಯೂರೊಪ್ಪಿಯನ್ ಭಾಷೆಗಳನ್ನೂ ಶಾಸ್ತ್ರವಿಚಾರಗಳನ್ನೂ ತಿಳಿದು ಬುದ್ಧಿಶಾಲಿಗಳಾಗಿಯೂ ಇರುತ್ತಾರೆ. ಸಂಪೂರ್ಣವಾಗಿ ಏಷ್ಯಾ ಖಂಡದಲ್ಲಿ ಇರುವಂಥಾ ಪರ್ಷಿಯಾ ರಾಜ್ಯದಲ್ಲಾದರೋ ಪ್ರಜೆಗಳು ಇನ್ನೂ ವಿದ್ಯಾವಿನಯ ಸಂಪನ್ನರಾಗದೆ ಅನಾಗರಿಕರಾಗಿಯೇ ಇರುತ್ತಾರೆ. ಪರ್ಷಿಯಾ ರಾಜ್ಯದಲ್ಲಿ ವಿಶೇಷವಾಗಿ ಮೌಲ್ವಿಗಳೆಂಬ ಸಂಗಡದವರೇ ಸ್ವಲ್ಪ ವಿದ್ಯಾವಂತರು. ಇವರು ಕೂಡ ತಮ್ಮ ನಡೆನುಡಿ ಆಚಾರ ಇಂಗಿತ ಅಭಿಪ್ರಾಯಾದಿಗಳಲ್ಲಿ ಪ್ರಾಚೀನ ಕಾಲದಿಂದ ಬಂದಿರುವ ಪದ್ಧತಿಗಳನ್ನೂ ಅಭಿಪ್ರಾಯಗಳನ್ನೂ ಇಟ್ಟುಕೊಂಡಿರುವರಲ್ಲದೆ ಈಗಿನ ಕಾಲಕ್ಕೆ ತಕ್ಕಂತೆ ವಿವೇಕಶಾಲಿಗಳಾಗಿರುವುದಿಲ್ಲ.

ಎರಡನೆಯದಾಗಿ ತುರ್ಕಿ ರಾಜ್ಯಕ್ಕೆ ಸೇರಿರುವ ಎರಡು ಕೋಟಿ ಪ್ರಜಾಸಂಖ್ಯೆಯಲ್ಲಿ ಸುಮಾರು ಐವತ್ತು ಲಕ್ಷ ಪ್ರಜೆಗಳು ಕ್ರೈಸ್ತ ವರ್ಣಾಶ್ರಮಕ್ಕೆ ಸೇರಿದವರು. ಯೂರೊಪ್ಪಿಯನ್ ತುರ್ಕಿಯಲ್ಲಿ ನೋಡಿದರೆ ಕ್ರೈಸ್ತರೂ ಮುಸಲ್ಮಾನರೂ ಸಮಾಸಮವಾಗುತ್ತಾರೆ. ಆದರೆ ಏಷ್ಯಾ ಖಂಡದಲ್ಲಿರುವ ತುರ್ಕಿ ಪ್ರಜೆಗಳಲ್ಲಿ ಮುಸಲ್ಮಾನ್ ಜನರೇ ಬಹಳ ಹೆಚ್ಚಾಗಿರುವರು. ಇತ್ತಲಾಗಿ, ಪರ್ಷಿಯಾ ರಾಜ್ಯದೊಳಗೆಲ್ಲಾ ಮುಸಲ್ಮಾನ್ ಪ್ರಜೆಗಳನ್ನು ಬಿಟ್ಟರೆ ಇತರ ವರ್ಣಾಶ್ರಮದವರು ಸಿಕ್ಕುವುದು ಅಪರೂಪ.

ಅವಕಾರಣ ತುರ್ಕಿ ಗವರ್ನಮೆಂಟಿನಲ್ಲಿ ವಿವೇಕಶಾಲಿಗಳಾದ ಪ್ರಜೆಗಳು ಹೇರಳವಾಗಿರೋಣದರಿಂದ ಪರ್ಷಿಯಾಕಿಂತಲೂ ತುರ್ಕಿ ರಾಜ್ಯದಲ್ಲಿ ಪಾರ್ಲಿಮೆಂಟನ್ನು ಸ್ಥಾಪಿಸುವುದಕ್ಕೂ ಅದು ತೃಪ್ತಿಕರವಾಗಿ ನಡೆಯಬಹುದೆಂದು ನಿರೀಕ್ಷಿಸುವುದಕ್ಕೂ ವಿಶೇಷ ಅವಕಾಶವುಂಟು. ಆದರೆ ತುರ್ಕಿ ರಾಜ್ಯದೊಳಗೂ ಜಾತಿ ಭೇದ ಸಂಗಡಗಳ ಪ್ರಜೆಗಳು ಸೇರಿಕೊಂಡಿರುವುದರಿಂದ ಅಲ್ಲೂ ಪಾರ್ಲಿಮೆಂಟನ್ನು ಸ್ಥಾಪಿಸುವುದಕ್ಕೆ ಒಂದು ಪ್ರತಿಬಂಧಕವು ಇರುವಂತೆ ಕಾಣುತ್ತದೆ. ಆ ಗವರ್ನಮೆಂಟಿನಲ್ಲಿ ಅಂಥಾ ಪ್ರತಿಬಂಧಕವನ್ನು ತಪ್ಪಿಸಬೇಕಾದರೆ ಸಕಲ ಪ್ರಜೆಗಳೂ ತಮ್ಮ ತಮ್ಮ ಇಷ್ಟಾನುಸಾರವಾದ ಮತಾಚಾರವನ್ನು ಅವಲಂಬಿಸಿಕೊಂಡಿರಬಹುದೆಂಬ ರಿಯಾಯತಿ ಇದ್ದೇ ತೀರಬೇಕು. ಈಗ ಆ ರಾಜ್ಯದಲ್ಲಿ ಕ್ರೈಸ್ತ ವರ್ಣಾಶ್ರಮದವರಿಗೆ ಸರ್ಕಾರದವರು ಮಾಡಿಟ್ಟಿರುವ ಕೆಲವು ಕೊರತೆಗಳನ್ನು ಮೊದಲು ನಿರ್ಮೂಲಮಾಡಬೇಕಾಗಿರುವುದು. ಗವರ್ನಮೆಂಟಿನವರು ಜಾತಿ ಮತಗಳ ತಾರತಮ್ಯವಿಡದೆ ಯೋಗ್ಯತಾಸಿದ್ಧಿಯನ್ನು ಪಡೆದಿರುವಂಥಾ ಪ್ರಜೆಗಳನ್ನು ಧಾರಾಳವಾಗಿ ಅಧಿಕಾರ ಸ್ಥಾನಗಳಿಗೂ ಸೈನ್ಯಕ್ಕೂ ನೇಮಿಸಿಕೊಳ್ಳುವಂತಾಗಬೇಕು. ಇಲ್ಲವಾದ ಪಕ್ಷದಲ್ಲಿ ರಾಜ್ಯದೊಳಗೆ ಪಕ್ಷ ಪರಪಕ್ಷಗಳೂ ಪರಸ್ಪರವಾದ ಮನೋವ್ಯಥೆಗಳೂ ಉಂಟಾಗುವವೆನ್ನುವುದಕ್ಕೆ ಸಂಶಯವಿಲ್ಲ. ಆದರೆ ತುರ್ಕಿ ರಾಜ್ಯದಲ್ಲಿ ರಾಜ್ಯಭಾರ ಕ್ರಮಗಳು ಬದಲಾವಣೆ ಹೊಂದಿ ಕ್ರಮಪಡಬೇಕೆಂದು ಹೋರಾಡುವಂಥಾ ಎಲ್ಲಾ ಸಂಗಡದವರೂ ಅಂಥಾ ಪ್ರತಿಬಂಧಕವೇನೂ ಇರಕೂಡದೆಂದು ಒಟ್ಟು ಕೂಡಿ ಹೇಳುತ್ತಿದಾರೆ. ಈ ವಿಧವಾದ ಐಕಮತ್ಯವಿರುವದನ್ನು ನೋಡಿ ನಾವು ಸಂತೋಷಪಡುವೆವು. ಇಷ್ಟೇ ಅಲ್ಲ. ತುರ್ಕಿ ಸುಲ್ತಾನರವರು ಒಂದು ಇಸ್ತಿಹಾರನ್ನು ಪ್ರಕಟಿಸಿ, ಇನ್ನುಮೇಲೆ ರಾಜ್ಯಭಾರವನ್ನು ಜಾತಿ ಮತಗಳ ತಾರತಮ್ಯವಿಡದೆ ಸಕಲ ಪ್ರಜೆಗಳನ್ನೂ ಏಕಪ್ರಕಾರವಾಗಿ ನಡಿಸಿ ಪರಿಪಾಲನೆಮಾಡುತ್ತಾ ಬರುವುದಾಗಿ ಅಪ್ಪಣೆ ಕೊಡಿಸಿದಾರೆ.

ಯಾವ ರಾಜ್ಯದಲ್ಲಾಗಲಿ ಪ್ರಜಾನೆಮ್ಮದಿಗೂ ದೇಶಾಭಿವೃದ್ಧಿಗೂ ಮೇಲ್ಕಂಡ ರೀತಿಯಾದ ನಡವಳಿಕೆಯೇ ಸಾಧುವಾದುದ್ದೆಂದು ನಾವು ಹೇಳಬೇಕಾಗಿಲ್ಲ. ಮುಸಲ್ಮಾನ್ ಸುಲ್ತಾನರವರು ಆಳುತ್ತಿರುವ ಈ ತುರ್ಕಿ ರಾಜ್ಯವು ಅದರ ಪ್ರಾಚೀನ ಕಾಲದ ಕೀರ್ತಿಯನ್ನೂ ಶ್ರೇಯೋಭಿವೃದ್ಧಿಯನ್ನೂ ಪಡೆಯುವುದಾದರೆ ನಮಗೆ ಪರಮಸಂತೋಷವಾಗುವುದು.

ರಾಜಧಾನಿಯ ಮಿಷನ್ ಆಸ್ಪತ್ರೆಯು.

ಎರಡನೇ ವಾರ್ಷಿಕೋತ್ಸವವು.

ರಾಜಧಾನಿಯ ಉತ್ತರ ಭಾಗದಲ್ಲಿರುವ ಪ್ರಜೆಗಳ ಪ್ರಯೋಜನವನ್ನು ಬಯಸಿ ಲೇಟ್ ಹೋಲ್ಡ್ಸ್‌ವರ್ತ್ ದೊರೆಸಾನಿಯವರ ಜ್ಞಾಪಕಾರ್ಥವಾಗಿ ಮಿಷನ್ ಇಲಾಖೆಯವರು ಸ್ಥಾಪಿಸಿದ ಧರ್ಮದ ಆಸ್ಪತ್ರೆಯನ್ನು ಶ್ರೀಮನ್ಮಹಾರಾಜರವರು ಪ್ರತಿಷ್ಠೆ ಮಾಡಿರುತ್ತಾರಷ್ಟೆ. ಈ ಆಸ್ಪತ್ರೆಯ ಎರಡನೇ ವಾರ್ಷಿಕೋತ್ಸವವನ್ನು ಕಳೆದ ಸೋಮವಾರ ಮಂಗಳವಾರಗಳಲ್ಲಿ ನಡಿಸಿದರು. ಸೋಮವಾರ ಸಾಯಂಕಾಲ ಆಸ್ಪತ್ರೆಯಲ್ಲಿ ಮಿಷನ್ ಇಲಾಖೆಯ ಪ್ರಮುಖರೂ ಆಸ್ಪತ್ರೆಯ ಡಾಕ್ಟರ್ ನೇ ಮೊದಲಾದವರೂ ಸೇರಿ ಕ್ರೈಸ್ತಮತಾನುಪೂರ್ವಕವಾದ ಭಗವತ್ಪ್ರಾರ್ಥನಾದಿಗಳನ್ನು ಜರುಗಿಸಿದರು. ಮಿಷನ್ ಇಲಾಖೆಯ ಅಧ್ಯಕ್ಷರಾದ ರೆವ್. ಸಾಕ್ಸ್ ಸಾಹೇಬರವರು ಆ ಆಸ್ಪತ್ರೆಯ ಶ್ರೇಯೋವೃದ್ಧಿಯನ್ನು ಕುರಿತು ಉಪನ್ಯಾಸ ಮಾಡಿದರು. ಅವರಿಂದ ತಿಳಿದು ಬಂದದ್ದೇನೆಂದರೆ, ಈ ಆಸ್ಪತ್ರೆಯಲ್ಲಿ ಇದುವರೆಗೆ ೩೦,೦೦೦ ಕ್ಕಿಂತಲೂ ಹೆಚ್ಚು ಜನರು ಬಂದು ಔಷಧಗಳನ್ನು ಪಡೆದಿರುತ್ತಾರೆ. ಇದಲ್ಲದೆ ೮೦೦ ಮಂದಿಗಿಂತಲೂ ಹೆಚ್ಚಾಗಿ ರೋಗಿಗಳು ಆ ಆಸ್ಪತ್ರೆಯೊಳಗೇ ಇದ್ದು ಚಿಕಿತ್ಸೆ ಮಾಡಿಸಿಕೊಂಡಿರುವರು. ಈ ಪೈಕಿ ೧೭೦ ಸ್ತ್ರೀಯರಿಗೆ ಹೆರಿಗೆ ಶೈತ್ಯೋಪಚಾರಗಳು ನಡೆದಿರುತ್ತವೆ. ರೋಗಿಗಳ ಪೈಕಿ ಕೆಲವರು ಹಾಸನ, ಶಿವಮೊಗ್ಗ ಮೊದಲಾದ ಬಹಳ ದೂರ ಪ್ರದೇಶಗಳಿಂದ ಬಂದು ಚಿಕಿತ್ಸೆ ಹೊಂದಿರುತ್ತಾರೆ.

ಮೈಸೂರು ಅಂಜುಮಾನಿ ಹಿಮಾಯತ್ ಇಸ್ಲಾಂ ಎಂಬ ಮಹಮ್ಮದೀಯರ ಸಭೆಯ ಸೆಕ್ರೆಟರಿಯವರು ಆ ಸಭೆಯಲ್ಲಿ ಈ ಆಸ್ಪತ್ರೆಯ ವಿಚಾರವಾಗಿ ತೀರ್ಮಾನಮಾಡಲ್ಪಟ್ಟ ಒಂದು ವಿಚಾರವನ್ನು ಹೇಳಿದರು. ಅದೇನೆಂದರೆ. ಮಿಷನ್ ಆಸ್ಪತ್ರೆಯಲ್ಲಿ ಡಾಕ್ಟರನ್ನೂ ನರ್ಸುಗಳೆಂಬ ಸೇವಕಿಯರೂ ಜಾತಿ, ಮತ, ಕುಲ, ಗೋತ್ರಗಳನ್ನು ಪರಿಗಣಿಸದೆ ಎಲ್ಲಾ ರೋಗಿಗಳ ವಿಷಯದಲ್ಲೂ ಪ್ರೀತಿ ವಿಶ್ವಾಸಗಳನ್ನಿಟ್ಟು ಬಹು ಆದರಣೆಯಿಂದ ಚಿಕಿತ್ಸೆ ಮಾಡುತ್ತಾ ಬಂದಿರುವುದಕ್ಕಾಗಿ ಮಹಮ್ಮದೀಯ ಸಂಘದವರು ಅವರನ್ನು ಮನಃಪೂರ್ವಕವಾಗಿ ವಂದಿಸುವರು ಎಂಬುದಾಗಿ.

ಕಳೆದ ಮಂಗಳವಾರ ಸಾಯಂಕಾಲ ರಾಜಧಾನಿಯಲ್ಲಿರುವ ಬಹುಮಂದಿ ಹಿಂದೂ ಮಹಮ್ಮದೀಯ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಸ್ತ್ರೀಯರೂ ಆಸ್ಪತ್ರೆಗೆ ಹೋಗಿ ಅಲ್ಲಿನ ಎಲ್ಲಾ ಭಾಗಗಳನ್ನೂ ನೋಡಿ ಸಂತೋಷಪಟ್ಟದ್ದಲ್ಲದೆ, ಅಲ್ಲಿ ನಡೆಸುತ್ತಿರುವ ಪರೋಪಕಾರ ಕಾರ್ಯಗಳನ್ನು ತಿಳಿದು ಡಾಕ್ಟರ್ ಮೊದಲಾದವರನ್ನು ವಿಶೇಷವಾಗಿ ವಂದಿಸಿದರು. ಆ ಆಸ್ಪತ್ರೆಯಲ್ಲಿ ಒಬ್ಬ ಹೆಂಗಸು ಮೂರು ಮಕ್ಕಳನ್ನು ಹೆತ್ತು ಕೆಲವಾರು ದಿನಗಳಾದವು. ತಾಯಿಯೂ ಮಕ್ಕಳೂ ಸುಖವಾಗಿರುತ್ತಾರೆ. ಆಸ್ಪತ್ರೆಗೆ ಹೋಗಿದ್ದ ಮೇಲ್ಕಂಡವರೆಲ್ಲಾ ಈ ಮಕ್ಕಳನ್ನು ನೋಡಿ ಬಹು ಸಂತೋಷ ಪಟ್ಟುಕೊಂಡರು.

ಒಳದೇಶದ ವೃತ್ತಾಂತಗಳು.

ಚನ್ನಗಿರಿ ತಾಲ್ಲೂಕಿಗೆ ಸೇರಿದ ಜೋಮಾರನಹಳ್ಳಿಯಲ್ಲಿ ಕಿರೋಸಿನ್ ಶೀಮೆಯೆಣ್ಣೆ ದೀಪದ ದುರುಪಯೋಗದಿಂದ ಒಂದು ಸಂಸಾರವೇ ಸುಟ್ಟುಹೋದ ದುಃಖಕರವಾದ ವೃತ್ತಾಂತವನ್ನು ಈ ಪತ್ರಿಕೆಯ ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ.

***

ತಾ. ೨೯ನೇ ಶನಿವಾರ ಸಾಯಂಕಾಲ ಬೆಂಗಳೂರು ಸಿಟಿ ದೊಡ್ಡಣ್ಣನವರ ಧರ್ಮದ ಸ್ಕೂಲ್ ಕಟ್ಟಡದಲ್ಲಿ ಸ್ತ್ರೀಜನ ಸಭೆಯೊಂದು ನಡೆಯುವುದು. ಬ್ರಿಟಿಷ್ ರೆಸಿಡೆಂಟರ ಪತ್ನೀರವರು ಸಭೆಯ ಅಗ್ರಾಸನವನ್ನು ವಹಿಸುವರು. ಆಗ್ನೆಸ್ ಸುಬ್ಬಮ್ಮನವರು ಸ್ತ್ರೀ ವಿದ್ಯಾಭಿವೃದ್ಧಿಯ ವಿಷಯದಲ್ಲಿ ಉಪನ್ಯಾಸ ಮಾಡುವರೆಂದು ಪ್ರಕಟವಾಗಿದೆ.

***

ರಾಜಧಾನಿಯ ಕೋಟೆ ಪಶ್ಚಿಮ ಭಾಗದಲ್ಲಿ ಪ್ರಜೆಗಳ ಸಂಚಾರಕ್ಕಾಗಿ ತೆರೆದಿರುವ ದಿಡ್ಡೀ ಬಾಗಿಲ ಬಳಿ ರಾತ್ರಿ ಹೊತ್ತು ನುಸುಳರೂ ಚೋರರೂ ಕಾದಿದ್ದು ಒಬ್ಬಂಟಿಗರಾಗಿ ತಿರುಗುವವರನ್ನು ತೊಂದರೆಪಡಿಸುತ್ತಾರೆಂದು ತಿಳಿಯುವುದು. ಪೋಲೀಸ್ ಸೂಪರಿಂಟೆಂಡರು ಅಲ್ಲಿ ಒಬ್ಬ ಕಾನ್ಸ್ಟೇಬಲನ್ನು ರಾತ್ರಿ ಹೊತ್ತು ಗಸ್ತು ವಾರಿ ನೋಡಿಕೊಳ್ಳುವಂತೆ ನೇಮಿಸುವುದು ಆವಶ್ಯವೆಂದು ಸೂಚಿಸುತ್ತೇವೆ.

***

ಮೈಸೂರು ಗವರ್ನಮೆಂಟಿನವರು ವರ್ತಮಾನಪತ್ರಿಕೆಗಳ ಕಾನೂನನ್ನು ಜಾರಿಗೆ ತಂದಿದ್ದರಿಂದ ರಾಜಧಾನಿಯಲ್ಲಿ ಕಳೆದ ೨೩ ವರುಷಗಳಿಂದ ಪ್ರಕಟವಾಗುತ್ತಿದ್ದ "ಮೈಸೂರು ಹೆರಲ್ಡ್" ಎಂಬ ಇಂಗ್ಲಿಷ್ ಪತ್ರಿಕೆಯನ್ನೂ, "ವೃತ್ತಾಂತ ಚಿಂತಾಮಣಿ" ಎಂಬ ಕನ್ನಡ ಪತ್ರಿಕೆಯನ್ನೂ ಅವುಗಳ ಮ್ಯಾನೇಜರವರು ಈ ವಾರದಿಂದ ನಿಲ್ಲಿಸಿಬಿಟ್ಟು, ಇನ್ನು ಮುಂದೆ ಪ್ರಕಟಿಸುವುದೇ ಇಲ್ಲವೆಂದು ನೋಟೀಸು ಪ್ರಕಟಿಸಿದಾರೆ.

***

ಶ್ರೀಮನ್ಮಹಾರಾಜರವರು ನಾಳೆ ಬೆಳಿಗ್ಗೆ ನೀಲಗಿರಿಯಿಂದ ಮೇಟುಪಾಳ್ಯ ಗಾಡಿಯಲ್ಲಿ ಪ್ರಯಾಣ ಬೆಳೆಸಿ ನಂಜನಗೂಡು ರೆಸಿಡೆನ್ಸಿ ಬಂಗಲೆಯಲ್ಲಿ ಆರೋಗಣೆ ಮುಂತಾದ್ದನ್ನು ತೀರಿಸಿಕೊಂಡು, ಸಾಯಂಕಾಲ ೫ ಗಂಟೆಗೆ ರಾಜಧಾನಿಗೆ ಚಿತ್ತೈಸುವವರಾಗಿದಾರೆ. ಅರಸುಗಳು, ಅಧಿಕಾರಿಗಳು, ಮ್ಯುನಿಸಿಪಲ್ ಕಮಿಷನರೇ ಮೊದಲಾದವರೆಲ್ಲಾ ಅರಮನೆ ಕರೀಕಲ್ಲು ತೊಟ್ಟಿಯಲ್ಲಿ ಕಾದಿದ್ದು, ಶ್ರೀಮನ್ಮಹಾರಾಜರವರಿಗೆ ಸುಸ್ವಾಗತವನ್ನು ಬಯಸುವರು.

***

ಇಲ್ಲಿನ ಪೋಸ್ಟ್ ಆಫೀಸಿನ ಮುಂಭಾಗದಲ್ಲಿ ಟ್ರಸ್ಟ್ ಬೋರ್ಡಿನವರು ದೊಡ್ಡ ಚರಂಡಿ ತೆಗೆಸಿ ಸರಿಯಾದ ಕಟಕಟೆ ಕಟ್ಟದೇನೂ ರಾತ್ರಿ ದೀಪ ಹಚ್ಚದೇನೂ ಇರೋಣದರಿಂದ ಜನರು ಬೀಳುವುದಕ್ಕೆ ಅವಕಾಶವಾಗಿದೆ. ಕಳೆದ ವಾರ ಪೋಸ್ಟ್ ಆಫೀಸಿನ ಒಬ್ಬ ನೌಕರನು ಆಕಸ್ಮಾತ್ತಾಗಿ ಆ ಚರಂಡಿಯಲ್ಲಿ ಬಿದ್ದು ಗಾಯಪಟ್ಟದ್ದರಿಂದ ಆಸ್ಪತ್ರೆಗೆ ಪೋಸ್ಟ್ ಮಾಸ್ತರು ಆತನನ್ನು ಗಾಡಿಯಲ್ಲಿ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸಬೇಕಾಯಿತೆಂದು ತಿಳಿದು ಬಂದಿದೆ.

***

ಮೈಸೂರು ಸಂಸ್ಥಾನದ ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಕಮಿಟಿ ಮೆಂಬರುಗಳು ಕಳೆದ ೧೯ನೇ ತಾ ಬುಧವಾರ ಮಧ್ಯಾಹ್ನ ಬೆಂಗಳೂರಿನಲ್ಲಿ ಸಭೆ ಸೇರಿದ್ದರು. ಆ ಸಭೆಯಲ್ಲಿ ತೀರ್ಮಾನವಾಗಿರುವ ಕೆಲವು ವಿಷಯಗಳ್ಯಾವವೆಂದರೆ, ಕೌನ್ಸಿಲರ್ ಮೆ|| ಕೆ ಪಿ ಪುಟ್ಟಣ್ಣ ಚೆಟ್ಟಿಯವರು ಸಂಘದ ಪ್ರೆಸಿಡೆಂಟರಾಗಿಯೂ, ಮೆ|| ಕೆ ಎಸ್. ನಂಜಪ್ಪನವರು ವೈಸ್ ಪ್ರೆಸಿಡೆಂಟರಾಗಿಯೂ ಮೆ|| ಬಿ ಬಸವಾರಾಧ್ಯರವರು ಸೆಕ್ರೆಟರಿಯಾಗಿಯೂ, ಧರ್ಮಪ್ರವರ್ತಕ ಮೆ|| ಗುಬ್ಬಿ ತೋಟದಪ್ಪನವರು ಟ್ರೆಜರರಾಗಿಯೂ ನೇಮಿಸಲ್ಪಟ್ಟಿರುತ್ತಾರೆ. ಆ ಫಂಡಿನಲ್ಲಿ ಈಗ ೧೫,೭೩೨ ಚಿಲ್ಲರೆ ರೂಪಾಯಿ ಶೇಖರವಾಗಿರುವುದೆಂದು ತಿಳಿದು ಬರುತ್ತದೆ.

***

ಕೋ ಆಪರೇಟಿವ್ ಸೊಸೈಟಿಗಳು ಅಭಿವೃದ್ಧಿಗೆ ಬರಬೇಕೆಂಬ ಉದ್ದೇಶದಿಂದ ಈ ಸೊಸೈಟಿಗಳಿಗೆ ೧೫,೦೦೦ ರೂಪಾಯಿಗಳನ್ನು ಸಾಲವಾಗಿ ಕೊಡಬಹುದೆಂದು ಗವರ್ನಮೆಂಟಿನವರು ಮಂಜೂರ್ ಮಾಡಿರುತ್ತಾರೆಂದು ಕಳೆದ ಜನವರಿಯಲ್ಲಿ ತಿಳಿಸಿರುತ್ತೇವಷ್ಟೆ. ಈ ಹಣದ ಪೈಕಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಮೊಳಕಾಲ್ಮೂರು ಕಸಬಾದಲ್ಲಿರುವ ಕೃಷಿಕರ ಸಹಾಯ ಸಂಘಕ್ಕೆ ಎರಡುನೂರು ರೂಪಾಯಿಗಳು ಸಾಲವಾಗಿ ಕೊಡಲ್ಪಟ್ಟಿದೆ. ಅದೇ ಊರಿನಲ್ಲಿ ೧೯೦೫ ಏಪ್ರಿಲ್ ಇಸ್ವಿಯಲ್ಲಿ ಎಂಬ ನೇಯಿಗೆ ಸಂಬಂಧವಾದ ಕೋ ಆಪರೇಟಿವ್ ಸೊಸೈಟಿಗೆ ಎರಡು ಸಾವಿರ ರೂಪಾಯಿಗಳನ್ನು ಸಾಲ ಕೊಡಬಹುದೆಂದು ಗವರ್ನಮೆಂಟಿನವರು ಈಚೆಗೆ ಅಪ್ಪಣೆ ಮಾಡಿರುತ್ತಾರೆ.

***

ಸೆಪ್ಟೆಂಬರ್ ತಾ ೧ನೇ ಮಂಗಳವಾರ ಸಾಯಂಕಾಲ ರಾಜಧಾನಿಯಲ್ಲಿ ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವಂತೆ ಆ ಇಲಾಖೆಯವರು ಬಹಳ ಆತುರಪಟ್ಟು ಕೆಲಸಗಳನ್ನು ಮುಗಿಸುತ್ತಿದಾರೆ. ಪಟ್ಟಣದಲ್ಲೆಲ್ಲಾ ಕಂಬಗಳನ್ನು ನೆಟ್ಟು, ತಂತಿಗಳನ್ನು ಬಿಗಿದು, ದೀಪದ ಬುಡ್ಡಿಗಳನ್ನು ತಗಲಿಸುತ್ತಿರುವರು. ಶಿವನಸಮುದ್ರದ ವಿದ್ಯುಚ್ಛಕ್ತಿ ಕಾರ್ಖಾನೆಯಿಂದ ರಾಜಧಾನಿಯ ಕರ್ನಲ್ ಗಾರ್ಡನೊಳಗೆ ಕಟ್ಟಿರುವ ವಿದ್ಯುಚ್ಛಕ್ತಿಯ ಉಗ್ರಾಣದ ಮನೆಗೆ (ಟ್ರಾನ್ಸ್‌ಫಾರ್ಮರ್ ಹೌಸ್) ವಿದ್ಯುಚ್ಛಕ್ತಿಯನ್ನು ಸಾಗಿಸಿಕೊಂಡು ಬರುವುದಕ್ಕೆ ಉದ್ದಕ್ಕೂ ಕಂಬಗಳನ್ನು ನೆಟ್ಟು ತಂತಿಗಳನ್ನು ಕಟ್ಟಿದ್ದಾರೆ. ಟ್ರಾನ್ಸ್‌ಫಾರ್ಮರ್ ಹೌಸಿನಲ್ಲಿ ವಿದ್ಯುಚ್ಛಕ್ತಿಯನ್ನು ಶೇಖರವಾಗಿಟ್ಟುಕೊಳ್ಳುವುದಕ್ಕೂ, ಅದನ್ನು ಪಟ್ಟಣದ ಎಲ್ಲಾ ಭಾಗಗಳಿಗೂ ಹಂಚುವುದಕ್ಕೂ ಅವಶ್ಯವಾದ ಯಂತ್ರಸಾಧನಗಳನ್ನು ತರಿಸಿ, ಕ್ರಮವಾಗಿ ಆ ಕಟ್ಟಡದಲ್ಲಿ ಇಟ್ಟುಕೊಂಡಿದ್ದಾಯಿತು. ಶ್ರೀಮನ್ಮಹಾರಾಜರವರು ಮುಂದಿನ ಮಂಗಳವಾರ ದಯಮಾಡಿ ತಾವೇ ಕೀಲನ್ನು ತಿರುಗಿಸಿ, ದೀಪಗಳ ಬೆಳಕನ್ನು ಪ್ರಾರಂಭಮಾಡುವರೆಂದು ಕೇಳುತ್ತೇವೆ.

***

ಮೈಸೂರು ಗವರ್ನಮೆಂಟಿನವರು ಈ ಸಂಸ್ಥಾನದ ಇಂಡಸ್ಟ್ರಿಯಲ್ ಮತ್ತು ಸ್ಪೆಷಲ್ ಸ್ಕೂಲುಗಳ ೧೯೦೭—೦೮ನೇ ಸಾಲಿನ ಜಮಾಖರ್ಚಿನ ಬಡ್ಜೆಟ್ಟನ್ನು ಸ್ಯಾಂಕ್ಷನ್ ಮಾಡಿರುತ್ತಾರೆ. ಹ್ಯಾಗೆಂದರೆ, ಮೈಸೂರು ಇಂಡಸ್ಟ್ರಿಯಲ್ ಸ್ಕೂಲು—ಉತ್ಪತ್ತಿ ೧೩ ಸಾವಿರ ರೂಪಾಯಿ, ಖರ್ಚು ರೂ. ೩೩,೬೫೮. ಸಂಸ್ಥಾನದ ಇತರ ಇಂಡಸ್ಟ್ರಿಯಲ್ ಸ್ಕೂಲುಗಳ ಒಟ್ಟು—ಉತ್ಪತ್ತಿ ರೂ. ೩,೯೦೦, ಖರ್ಚು ರೂ. ೧೯,೦೩೮; ಮೈಸೂರು ಇಂಜನಿಯರ್ ಸ್ಕೂಲು—ಉತ್ಪತ್ತಿ ೧,೫೭೦ ರೂಪಾಯಿ, ಖರ್ಚು ರೂ. ೮,೭೨೯; ವಿದ್ಯಾರ್ಥಿ ವೇತನಗಳು ೮,೧೮೦ ರೂ., ಗ್ರಾಂಟುಗಳು ೩,೮೪೮ ರೂ. ರೇಷ್ಮೆ ಕಸಬಿನ ಪ್ರೋತ್ಸಾಹಕ್ಕೆ ೧,೭೦೦ ರೂ., ಮೈಸೂರು ಇಂಡಸ್ಟ್ರಿಯಲ್ ಸ್ಕೂಲ್ ಸೂಪರಿಂಟೆಂಡೆಂಟರ ಸಕೀರ್ಟ್ ಅಲೋವೆನ್ಸು ೬೦೦ ರೂ., ಬೆಂಗಳೂರಿನಲ್ಲಿರುವ ತಾತಾರವರ ರೇಷ್ಮೆ ಕಾರ್ಖಾನೆಯ ಸೂಪರಿಂಟೆಂಡೆಂಟ್ ಮೆ|| ಒಡ್ನಿಯವರು ರೇಷ್ಮೆ ಕೆಲಸ ಮಾಡುವ ಸ್ಥಳಗಳಲ್ಲಿ ಸಂಚಾರಮಾಡಿಕೊಂಡು ಬರುವುದಕ್ಕೆ ಅಲೋವೆನ್ಸು ೬೦೦ ರೂ. ಈ ರೀತಿ ಈ ಸ್ಕೂಲುಗಳಲ್ಲಿ ಒಟ್ಟು ೨೨,೩೬೭ ರೂಪಾಯಿ ಉತ್ಪತ್ತಿಯಾಗುವುದೆಂದಲೂ, ಸರ್ಕಾರದಿಂದ ಒಟ್ಟು ಅವುಗಳಿಗಾಗಿ ೮೧,೩೮೦ ರೂಪಾಯಿ ಖರ್ಚಾಗುವುದೆಂತಲೂ ಗೊತ್ತು ಮಾಡಲ್ಪಟ್ಟಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಮಧ್ಯಪ್ರಾಂತ್ಯ ಮತ್ತು ಬೇರಾರ್ ಸೀಮೆಗಳ ಪ್ರದರ್ಶನವು ಮುಂದಿನ ನವೆಂಬರ್ ತಾ ೧೭ರಲ್ಲಿ ಪ್ರಾರಂಭವಾಗುವುದೆಂದು ಪ್ರಕಟವಾಗಿದೆ

❦❦❦

ಮಂಗಳೂರು ಟವುನಲ್ಲಿ ಆರೋಗ್ಯಕರವಾದ ಏರ್ಪಾಡುಗಳನ್ನು ಮಾಡುವುದಕ್ಕೆ ಗವರ್ನಮೆಂಟಿನವರು ೨೫,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ

❦❦❦

ಮದರಾಸ್ ಗವರ್ನಮೆಂಟಿನವರು ಟಿಕ್ಕೋಂಪುರದ ಪ್ರಜೆಗಳಿಗೆ ಆರೋಗ್ಯಕರವಾದ ನೀರನ್ನು ತಂದು ಸರಬರಾಜು ಮಾಡಿಸಬೇಕೆಂದು ಒಂದೂವರೆ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

❦❦❦

ಕಳೆದ ೨೦ನೇ ತಾ ಗುರುವಾರ ಮಧ್ಯಾಹ್ನ ೧೨ ಗಂಟೆ ಹೊತ್ತಿನಲ್ಲಿ ಸಿಂಲಾ ಪಟ್ಟಣದಲ್ಲಿ ಇಟ್ಟಿರುವ ಯಂತ್ರಗಳ ಸಹಾಯದಿಂದ ೫೦೦ ಮೈಲಿ ದೂರದಲ್ಲಿ ಎಲ್ಲಿಯೋ ಬಹು ಕಠಿಣವಾದ ಭೂಕಂಪವಾದಂತೆ ಗೊತ್ತಾಗುತ್ತದೆ.

❦❦❦

ವಾಯವ್ಯ ಪ್ರಾಂತ್ಯದಲ್ಲಿ ಚಿತ್ರಲ್ ಎಂಬ ಡಿಸ್ಟ್ರಿಕ್ಟಿನೊಳಗೆ ನದಿಗಳಲ್ಲಿ ಪ್ರವಾಹಗಳು ವಿಶೇಷವಾಗಿ ಬಂದದ್ದರಿಂದ ಹಲವು ರಸ್ತೆಗಳೂ ಸೇತುವೆಗಳೂ ಕೊಚ್ಚಿ ಹೋದವೆಂತಲೂ, ಬಹಳ ಪೈರು ಪಚ್ಚೆ ಮನೆ ಮಠಗಳು ನಷ್ಟವಾದವೆಂತಲೂ ತಿಳಿದು ಬಂದಿದೆ.

❦❦❦

ಡೆಹಲಿ ಪಟ್ಟಣದಲ್ಲಿ ಡೇವಿಸ್ ಎಂಬೊಬ್ಬ ರೈಲ್ವೆ ನೌಕರನು ಒಬ್ಬ ಕೂಲಿಕಾರನಿಗೆ ಮರಣವನ್ನುಂಟುಮಾಡಿದನೆಂದು ಮೊಕದ್ದಮೆ ಬಂದು, ದರ್ಯಾಫ್ತು ಆದದ್ದರಲ್ಲಿ ಅವನಿಗೆ ಒಂದು ತಿಂಗಳ ಕಠಿಣ ಸಜಾವೂ, ೧೦೦ ರೂಪಾಯಿ ದುಲ್ಮಾನೆಯೂ ವಿಧಿಸಲ್ಪಟ್ಟವು

❦❦❦

ಉತ್ತರ ದೇಶದಲ್ಲಿ ಕ್ಷಾಮ ಬಾಧೆಯು ವಾರ ವಾರಕ್ಕೆ ಕಡಮೆಯಾಗುತ್ತಿದೆ. ಕ್ಷಾಮ ಪೀಡಿತರ ಸಂಖ್ಯೆಯಲ್ಲಿ ಕಳೆದ ವಾರ ೬೦,೦೦೦ ಜನರು ರಿಲೀಫ್ ಕೆಲಸಗಳನ್ನು ತ್ಯಜಿಸಿ ತಮ್ಮ ಕಸಬನ್ನು ಕುರಿತು ಹೋದರು ಇನ್ನೂ ಐದು ಲಕ್ಷ ಪ್ರಜೆಗಳು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿರುತ್ತಾರೆ

❦❦❦

ಕಳೆದ ಗುರುವಾರ ಕಲ್ಕತ್ತಾ ಪಟ್ಟಣದಲ್ಲಿ ಒಂದು ಸ್ವದೇಶೀ ಮೀಟಿಂಗ್ ನಡೆಯಬೇಕಾಗಿತ್ತು. ಮ್ಯಾಜಿಸ್ಟ್ರೇಟರು ಆ ಮೀಟಿಂಗನ್ನು ೨೫ ನಿಮಿಷಗಳಲ್ಲಿ ಮುಗಿಸಬೇಕೆಂದು ಅಪ್ಪಣೆ ಕೊಟ್ಟರು ಅದರ ಮೇಲೆ ಜನರು ಆ ಮೀಟಿಂಗನ್ನು ತಮ್ಮ ತಮ್ಮ ಮನೆಗಳಲ್ಲೇ ಮಾಡಿಕೊಳ್ಳುವುದಾಗಿ ಚದರಿ ಹೋದರು

❦❦❦

ಕಲ್ಕತ್ತೆಯಲ್ಲಿ ಒಂದು ಸ್ವದೇಶೀ ಮೀಟಿಂಗ್ ನಡೆಯುವುದೆಂದು ಒಂದು ಅಚ್ಚಿನ ಆಫೀಸಿನವರು ನೋಟೀಸ್ ಪ್ರಿಂಟುಮಾಡಿಕೊಟ್ಟರು. ಅದರಲ್ಲಿ ಆ ಪ್ರಿಂಟಿಂಗ್ ಆಫೀಸಿನ ಹೆಸರು ನಮೂದು ಮಾಡಿರಲಿಲ್ಲ. ಅದಕ್ಕಾಗಿ ಆ ಆಫೀಸಿನ ಮುಖ್ಯಸ್ಥನನ್ನು ಸರ್ಕಾರದವರು ಹಿಡಿಸಿ, ಅವನಿಗೆ ೧೦೦ ರೂಪಾಯಿ ದುಲ್ಮಾನೆ ವಿಧಿಸಿದರು

❦❦❦

ನಾಗಪುರದಲ್ಲಿ ಕೊಲ್ಹಟ್ಕರ್ ಎಂಬಾತನು "ದೇಶ ಸೇವಕ" ಎಂಬ ಪತ್ರಿಕೆಯನ್ನೂ, ಸೂಫಿ ಎಂಬಾತನು "ಹಿಂದಿ ಕೇಸರಿ" ಎಂಬ ಪತ್ರಿಕೆಯನ್ನೂ, ನಡಿಸುತ್ತಾ ಇದ್ದು, ರಾಜದ್ರೋಹಕರವಾದ ಸಂಗತಿಗಳನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿದರೆಂದು ಮೊಕದ್ದಮೆ ಆಗಿ, ಗವರ್ನಮೆಂಟಿನವರು ಅವರಿಬ್ಬರನ್ನೂ ದಸ್ತಗಿರಿ ಮಾಡಿದಾರೆ.

❦❦❦

ವಾಯವ್ಯ ಪ್ರಾಂತ್ಯದಲ್ಲಿರುವ ಡಾರ್ಗಾಯಿ ಪಟ್ಟಣದಲ್ಲಿ ಖಾನ್ ರ್ಯಾನಿಜಾಯಿ ಜೇಗೂರ್ ಎಂಬ ಧರ್ಮಿಷ್ಠನು ಇಪ್ಪತ್ತೇಳು ಅಂಗಡಿಗಳುಳ್ಳ ಒಂದು ಬಜಾರನ್ನು ಕಟ್ಟಿಸಿ ಧರ್ಮಕ್ಕೆ ಬಿಟ್ಟಿರುತ್ತಾನೆ ಆ ಅಂಗಡಿಗಳಲ್ಲಿ ಉತ್ಪತ್ತಿಯಾಗುವ ಹಣವನ್ನು ವಿನಿಯೋಗಿಸಿ ಒಂದು ಧರ್ಮದ ಆಸ್ಪತ್ರೆಯನ್ನು ಇಡಿಸಬೇಕೆಂದು ಸರ್ಕಾರಕ್ಕೆ ತಿಳಿಸಿರುವನು

❦❦❦

ಈಗೀಗ ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರದ ಹಾವಳಿಯು ಸ್ವಲ್ಪ ಸ್ವಲ್ಪವಾಗಿ ಹೆಚ್ಚುತ್ತಿರುವಂತೆ ಕಾಣುವುದು. ಕಳೆದ ವಾರ ಈ ಉಪದ್ರದಿಂದ ಒಟ್ಟು ೯೨೫ ಮರಣಗಳಾಗಿರುತ್ತವೆ. ಅಂದರೆ, ಬೊಂಬಾಯಿ ಅಧಿಪತ್ಯ ೩೬೬, ಮೈಸೂರು ಸಂಸ್ಥಾನ ೧೬೨, ಮದರಾಸ್ ಅಧಿಪತ್ಯ ೧೦೨, ಬರ್ಮಾ ಅಧಿಪತ್ಯ ೯೧, ಮಧ್ಯಪ್ರಾಂತ್ಯಗಳು ೩೩, ಹೈದರಾಬಾದ್ ಸಂಸ್ಥಾನ ೫೧, ಬಂಗಾಳಾ ೧೪, ಈ ರೀತಿ ಮರಣಗಳಾಗಿವೆ.

❦❦❦

ಮದರಾಸ್ ಪಟ್ಟಣದಲ್ಲಿ ಯತಿರಾಜ ಸುರೇಂದ್ರನಾಥ ಆರ್ಯ ಎಂಬಾತನು ರಾಜದ್ರೋಹಕರವಾದ ಉಪನ್ಯಾಸಗಳನ್ನು ಮಾಡಿದನೆಂದು ಮೊಕದ್ದಮೆ ಆಗಿತ್ತಷ್ಟೆ ಮೊದಲನೇ ಅಪವಾದವು ದರ್ಯಾಫ್ತು ಆಗಿ, ಆತನಿಗೆ ಹೈ ಕೋರ್ಟ್ ಸೆಷನ್ಸ್ ಜಡ್ಜರು ಐದು ವರುಷಗಳ ಖಂಡಾಂತರ ಶಿಕ್ಷೆಯನ್ನು ವಿಧಿಸಿದರು. ಆತನ ಮೇಲೆ ಬಂದಿರುವ ಎರಡನೇ ಅಪವಾದದ ಮೊಕದ್ದಮೆಯನ್ನು ಈಗ ದರ್ಯಾಫ್ತು ಮಾಡಲಾರಂಭಿಸಿದಾರೆ

❦❦❦

ಕಲ್ಕತ್ತಾ ಪಟ್ಟಣದಿಂದ ಬಾಬು ಬಿಪಿನ ಚಂದ್ರ ಪಾಲ್‌ರವರು ಕಳೆದ ವಾರ ಗೋಲ್ಕೊಂಡಾ ಎಂಬ ಹಡಗು ಹತ್ತಿ ವಿಲಾಯಿತಿಗೆ ಪ್ರಯಾಣ ಮಾಡಿದರು. ಈಗಿನ ಹಿಂದುಸ್ಥಾನದ ಸ್ಥಿತಿಗತಿಯನ್ನು ಕುರಿತು ವಿಲಾಯಿತಿ ಮೊದಲಾದ ಕಡೆಗಳಲ್ಲಿ ಜನರಿಗೆ ತಿಳಿಸಬೇಕೆಂಬುವುದೇ ಅವರ ಉದ್ದೇಶವು ಲಾಲಾ ಲಾಜಪತ್ ರಾಯಿಯವರೂ ಇದಕ್ಕೋಸ್ಕರವೇ ಇನ್ನು ಕೆಲವು ದಿನಗಳಲ್ಲಿ ಪಂಜಾಬಿನಿಂದ ಸೀಮೆಗೆ ಪ್ರಯಾಣ ಮಾಡುವವರಾಗಿದಾರೆ

❦❦❦

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ರೆಸಿಡೆನ್ಸಿ ಬಜಾರ್ ಎಂಬ ಠಾಣ್ಯದಲ್ಲಿ ಧತ್ತೋಪಂತ್ ಎಂಬೊಬ್ಬ ಪ್ಲೀಡರು (ವಕೀಲನು) ವಾಸ ಮಾಡುವುದು ಪ್ರಜಾನೆಮ್ಮದಿಗೆ ಕುಂದಕವಾಗುತ್ತದೆಂದು ತಿಳಿದು ಬಂದದ್ದರಿಂದ ಬ್ರಿಟಿಷ್ ರೆಸಿಡೆಂಟರು ಆ ವಕೀಲನಿಗೆ ಇಪ್ಪತ್ತನಾಲ್ಕು ಗಂಟೆಗಳೊಳಗಾಗಿ ಊರು ಬಿಟ್ಟು ಹೊರಟು ಹೋಗಬೇಕೆಂದು ಹುಕುಂ ಕೊಟ್ಟು, ಗಡೀಪಾರು ಮಾಡಿರುತ್ತಾರೆ ಹೈದರಾಬಾದಿನ ಗವರ್ನಮೆಂಟಿನಿಂದಲೂ ಆ ಹುಕುಮು ಕೊಡಲಾಗಿದೆ

❦❦❦

ನೇಪಾಳ ಸಂಸ್ಥಾನದ ಮಂತ್ರಿಶ್ರೇಷ್ಠರು ಪರಿವಾರ ಸಹಿತ ಕಳೆದ ವಾರ ಸೀಮೆಯಿಂದ ಟುಟಿಕಾರಿನ್ (ತುಟ್ಟುಗುಡಿ) ಗೆ ಬಂದು ಅಲ್ಲಿ ಜಹಜು ಇಳಿದರು. ಅಧಿಕಾರಿಗಳೂ ಪ್ರಜೆಗಳೂ ಸಮುದ್ರ ತೀರದಲ್ಲಿ ಕಾದಿದ್ದು, ಮರ್ಯಾದೆಗಳೊಡನೆ ಅವರನ್ನು ಎದುರುಗೊಂಡು ಸತ್ಕರಿಸಿದರು ಮಂತ್ರಿಯವರು ಅಲ್ಲಿಂದ ಸ್ಪೆಷಲ್ ರೈಲು ಹತ್ತಿ ರಾಮೇಶ್ವರಕ್ಕೆ ಹೋಗಿ ದೇವರ ಸೇವೆ ಮಾಡಿಕೊಂಡು, ಜಹಜು ಹತ್ತಿ ನಾಗಪಟ್ಟಣದಿಂದ ಕಲ್ಕತ್ತೆಗೆ ಪ್ರಯಾಣ ಮಾಡುವವರಾಗಿದ್ದರು.

❦❦❦

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ರತ್ನಗಿರಿಯ ಜೈಲ್ ಖಾನೆಯಲ್ಲಿ ಕಳೆದ ವಾರ ಆರು ಜನ ಖೈದಿಗಳು ಮಧ್ಯಾಹ್ನ ೧ ಘಂಟೆ ಹೊತ್ತಿನಲ್ಲಿ ದೊಣ್ಣೆಗಳನ್ನು ಹಿಡಿದು ತಿರುಗಿಸಿ ಹೆದರಿಸುತ್ತಾ, ಬಂದೀಖಾನೆಯಿಂದ ಹೊರಕ್ಕೆ ಹೊರಟು, ಬೀದಿಯಲ್ಲಿ ಜನರು ಸಂಚಾರ ಮಾಡುತ್ತಿದ್ದರೂ ಅವರನ್ನೆಲ್ಲಾ ಘಾಬರಿ ಪಡಿಸಿ ಓಡಿಹೋದರು. ಸುಮಾರು ಅರ್ಧ ಘಂಟೆಯಾದ ಮೇಲೆ ಸುಮಾರು ೫೦ ಮಂದಿ ಪೋಲೀಸಿನವರು ಅವರ ಬೆನ್ನು ಹತ್ತಿ ಹೋದರು ಆದರೆ ಅವರು ಸಿಕ್ಕಲಿಲ್ಲ

❦❦❦

ಕೊಯಮುತ್ತೂರಿನಲ್ಲಿ ಒಬ್ಬ ಹಿಂದುವು ಮನೆಯಲ್ಲಿ ಏನೋ ಕಲಹವಾದಾಗ ತನ್ನ ಮಕ್ಕಳನ್ನೂ ಹೆಂಡತಿಯನ್ನೂ ಕರೆದು ತಾನು ಇನ್ನೊಂದು ಹೆಣ್ಣನ್ನು ಮದುವೆ ಮಾಡಿಕೊಳ್ಳುವುದಾಗಿ ಹೇಳಿದನು ಅವನ ಸಹೋದರನೂ ಆತನ ಹೆಂಡತಿ ಮಕ್ಕಳೂ ಮಸಲತ್ತು ಮಾಡಿ, ಅವನನ್ನು ಕೊಂದುಹಾಕಿದರು ಸೆಷನ್ಸ್ ಜಡ್ಜರು ಅವರನ್ನೆಲ್ಲಾ ದರ್ಯಾಫ್ತು ಮಾಡಿ, ಮೃತನ ಸಹೋದರನಿಗೂ ಹಿರಿಯ ಮಗನಿಗೂ ತಲಾ ಏಳು ವರುಷಗಳ ಖಂಡಾಂತರ ಸಜವನ್ನೂ, ೧೬ ವರುಷದ ಎರಡನೇ ಮಗನಿಗೆ ೬ ತಿಂಗಳ ಕಠಿಣ ಸಜವನ್ನೂ ವಿಧಿಸಿರುತ್ತಾರೆ

❦❦❦

ಅಮರಾವತಿ ಪಟ್ಟಣದಲ್ಲಿರುವ ಮಿ॥ ಖಪರ್ಡೆ ಎಂಬ ವಕೀಲರು ಮಿ॥ ತಿಲಕರಿಗಾದ ಶಿಕ್ಷೆಯ ಮೇಲೆ ವಿಲಾಯಿತಿಯ ಪ್ರಿವಿ ಕೌನ್ಸಿಲ್ ಎಂಬ ಕೋರ್ಟಿನಲ್ಲಿ ಅಪೀಲ್ ದಾಖಲ್ ಮಾಡುವುದಕ್ಕೋಸ್ಕರ ಕಳೆದ ವಾರ ಜಹಜು ಹತ್ತಿ ಸೀಮೆಗೆ ಪ್ರಯಾಣಮಾಡಿದರೆಂದು ಪ್ರಕಟವಾಗಿದೆ. ಹೀಗೆ ಅಪೀಲ್ ಮಾಡಲು ಅಪ್ಪಣೆಕೊಡಬೇಕೆಂದು ಮಿ॥ ತಿಲಕರ ಕಡೆಯ ವಕೀಲರು ಬೊಂಬಾಯಿ ಹೈ ಕೋರ್ಟಿನಲ್ಲಿ ಅರ್ಜಿ ಕೊಟ್ಟಿದ್ದರು ಈ ಅರ್ಜಿಯನ್ನು ಮೂರು ಮಂದಿ ಜಡ್ಜಿಗಳು ಸ್ವಲ್ಪ ಹೊತ್ತಿಗೆ ಕಳೆದ ವಾರ ತನಿಖೆಮಾಡಿ ಮೊನ್ನೆ ಸೋಮವಾರಕ್ಕೆ ಹೀರಿಂಗು ಇಟ್ಟಿದ್ದರು

❦❦❦

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಭಟ್ಟಪಾರಾ ಎಂಬ ಊರಿನಲ್ಲಿ ಕಾಂಕಿನಾರಾ ಸಿಡಿಮದ್ದಿನ ಗುಂಡಿನ ಅನಾಹುತಕ್ಕೆ ಸೇರಿದವರೆಂದು ಪೋಲೀಸಿನವರು ಬಹು ಪ್ರಸಿದ್ಧಿ ಹೊಂದಿದ ಒಬ್ಬ ಸಂಸ್ಕೃತ ವೈದೀಕ ಪಂಡಿತನನ್ನು ದಸ್ತಗಿರಿ ಮಾಡಿದಾರಷ್ಟೆ ಅಂಥವರನ್ನು ಹಿಡಿಯುವುದಕ್ಕೆ ಕಾರಣವೇನು ತಿಳಿಸಬೇಕೆಂದು ರಾಯ ಕಿಶೋರಿಲಾಲ ಗೋಸ್ವಾಮಿ ಬಹದ್ದೂರ್ ಎಂಬ ಮೆಂಬರು ಬಂಗಾಳಾ ಗವರ್ನಮೆಂಟಿನ ಮಂತ್ರಾಲೋಚನಾ ಸಭೆಯಲ್ಲಿ ಗವರ್ನರನ್ನು ಕೇಳಿದರು ಗವರ್ನಮೆಂಟ್ ತರಫಿನ ಮೆಂಬರು ಅಂಥಾ ಕಾರಣಗಳನ್ನು ತಿಳಿಸುವುದು ತರವಲ್ಲವೆಂದು ಜವಾಬುಕೊಟ್ಟರು

❦❦❦

ತಿನ್ನವೆಲ್ಲಿ ದಂಗೆ ಮೊಕದ್ದಮೆಯಲ್ಲಿ ಮೊದಲನೇ ಗುಂಪಿನ ಅಪರಾಧಿಗಳ ದರ್ಯಾಫ್ತಿಯು ಕಳೆದ ವಾರ ಪೂರೈಸಿತು. ಅಪರಾಧಿಗಳ ಪೈಕಿ ಗುರುನಾಥ ಐಯರು, ಲೋಕನಾಥ ಐಯರು, ಶಂಕರನಾರಾಯಣಪಿಳ್ಳೆ, ಅವಿನಾಶ ಕನಕಸಭಾಪತಿ ಪಿಳ್ಳೆ, ರಾಮಲಿಂಗಂಪಿಳ್ಳೆ, ಇಷ್ಟು ಜನರ ಮೇಲೂ ಅಪರಾಧ ರುಜುವಾತಾಗಲಿಲ್ಲವೆಂದು ಅಸೆಸರುಗಳು (ಪಂಚಾಯಿತರು) ತಮ್ಮ ಅಭಿಪ್ರಾಯವನ್ನು ಕೋರ್ಟಿನಲ್ಲಿ ಜಡ್ಜಿಯವರಿಗೆ ತಿಳಿಸಿದಾರೆ ಸೆಷನ್ಸ್ ಜಡ್ಜರು ಈ ದಿನ ಜಡ್ಜಮೆಂಟ್ ಹೇಳುವುದಾಗಿ ಮೊಕದ್ದಮೆಯನ್ನು ತೆಗೆದಿಟ್ಟರು ಎರಡನೇ ಗುಂಪಿನ ಅಪರಾಧಿಗಳನ್ನು ತನಿಖೆಮಾಡುತ್ತಿದಾರೆ

❦❦❦

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಹೋರಾರ್ ಎಂಬ ರೈಲ್ವೆ ಸ್ಟೇಷನ್ ಬಳಿ ಯಾರೋ ರೈಲ್ ಕಂಬಿಗಳಿಗೆ ಅಡ್ಡಲಾಗಿ ಎರಡು ಕಬ್ಬಿಣದ ಕಂಬಿಗಳನ್ನು ಇಟ್ಟಿದ್ದರು ಪ್ರಯಾಣಸ್ಥರು ಭರ್ತಿಯಾಗಿದ್ದ ರೈಲ್ ಗಾಡಿಯು ಅಲ್ಲಿಗೆ ಬಂದು ಆ ಕಂಬಿಗಳ ಮೇಲೆ ಜರಿದು ಅವನ್ನು ಮುರಿದುಕೊಂಡು ಮುಂದಕ್ಕೆ ಹೋಯಿತು. ರೈಲ್ ಗಾಡಿಯ ಒಂದು ಕಬ್ಬಿಣದ ಪಟ್ಟಿಯು ಮಾತ್ರ ಮುರಿದುಹೋಯಿತು. ಇನ್ನೇನೂ ಅನಾಹುತವಾಗಲಿಲ್ಲ. ಆದರೆ ಈ ಗಾಡಿಯನ್ನು ಕೆಡವಿ ಅನಾಹುತವನ್ನುಂಟುಮಾಡಬೇಕೆಂದು ಯಾರೋ ಆ ರೀತಿ ಮಾಡಿದ್ದಾರೆಂದು ಸರ್ಕಾರದವರು ಯೋಚಿಸಿ ಆಸಾಮಿಗಳನ್ನು ಪತ್ತೆ ಮಾಡುವುದರಲ್ಲಿದಾರೆ.

❦❦❦

"ಹಿಂದ್ ಸ್ವರಾಜ್ಯ" ಎಂಬ ಬೊಂಬಾಯಿ ಪಟ್ಟಣದ ಗುಜರಾತಿ ಪತ್ರಿಕೆಯ ಒಬ್ಬ ಎಡಿಟರಿಗೆ ಆತನು ರಾಜದ್ರೋಹಕರವಾದ ಸಂಗತಿಗಳನ್ನು ಪ್ರಕಟಿಸಿದನೆಂದು ದರ್ಯಾಫ್ತು ಮಾಡಿ, ಮೂರು ವರುಷ ಸಜಾ ವಿಧಿಸಿದರಷ್ಟೆ ಈಗ ಆ ಪತ್ರಿಕೆಯ ಇನ್ನೊಬ್ಬ ಎಡಿಟರಾದ ದಾಸ ಲಾಲ್ ಲಲ್ಲೂಬಾಯಿ ಥಾಕೂವಾಲಾ ಎಂಬಾತನನ್ನು ಸರ್ಕಾರದವರು ಅದೇ ಅಪರಾಧಕ್ಕಾಗಿ ಕಳೆದ ವಾರ ಮೌವಿ ಸಂಸ್ಥಾನದಲ್ಲಿ ಹಿಡಿದು, ಬೊಂಬಾಯಿಗೆ ಕರೆದು ತಂದು, ಆತನ ಮೇಲೆ ಮೊಕದ್ದಮೆ ಮಾಡಿರುತ್ತಾರೆ ಆತನು ತನ್ನ ಕಡೆ ವಕೀಲನನ್ನು ನೇಮಿಸಿಕೊಳ್ಳದೆ ತಾನೇ ತನ್ನ ಮೊಕದ್ದಮೆಯನ್ನು ನಡಿಸುತ್ತೇನೆಂದು ಹೇಳಿದನು

ಕಲ್ಕತ್ತಾ ಪಟ್ಟಣದ ಮಾಣಿಕ್ಯತೋಲಾ ಬೀದಿಯಲ್ಲಿ ಬಾಂಬ್ ಎಂಬ ಸಿಡಿಮದ್ದಿನ ಗುಂಡುಗಳನ್ನು ತಯಾರ್ಮಾಡಿ ಇಂಗ್ಲಿಷ್ ಗವರ್ನಮೆಂಟನ್ನು ತಲೆಕೆಳಗು ಮಾಡಬೇಕೆಂದು ಪಿತೂರಿಮಾಡಿದರೆಂದು ಗವರ್ನಮೆಂಟಿನವರು ಮೊದಲನೇ ಗುಂಪಿನಲ್ಲಿ ಮೂವತ್ತನಾಲ್ಕು ಮಂದಿ ಬಂಗಾಳಿಗಳನ್ನು ಹಿಡಿದು ಮೊಕದ್ದಮೆ ಮಾಡಿದರು ಅಲಿಪುರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅವರನ್ನೆಲ್ಲಾ ದರ್ಯಾಫ್ತು ಮಾಡಿ, ೩೦ ಜನರನ್ನು ಸೆಷನ್ ವಿಚಾರಣೆಗೆ ಗುರಿಮಾಡಿರುತ್ತಾರೆ ಈ ಅಪರಾಧಿಗಳಲ್ಲಿ ಬಾಬು ಅರವಿಂದ ಘೋಸ್ ಯವರು ಸೇರಿರುತ್ತಾರೆ ಇವರ ತಮ್ಮ ಬಾಬು ಬೈರೇಂದ್ರ ಕುಮಾರ ಘೋಸ್ ಎಂಬಾತನು ಆ ಕೃತ್ಯದಲ್ಲಿ ಸಹಾಯಕನಾಗಿದ್ದನೆಂದು ಕಂಡುಬಂದದ್ದರಿಂದ ಅವನನ್ನೇ ಪ್ರತ್ಯೇಕವಾಗಿ ದರ್ಯಾಫ್ತು ಮಾಡುವವರಾಗಿದಾರೆ.

❦❦❦

ಅಯೋಧ್ಯೆಯಲ್ಲಿ ಶಿವಪುದದ ರಾಜ ಎಂಬೊಬ್ಬ ಐಶ್ವರ್ಯವಂತರಾದ ತಾಲ್ಲೂಕ್ದಾರರು ಇರುತ್ತಾರೆ ಇವರಿಗೂ ಒಬ್ಬ ಬ್ರಾಹ್ಮಣನಿಗೂ ಮನಸ್ತಾಪಗಳುಂಟಾದವು ಆ ಬ್ರಾಹ್ಮಣನನ್ನು ಚನ್ನಾಗಿ ಹೊಡೆಯಬೇಕೆಂದು ತಾಲ್ಲೂಕ್ದಾರರು ತಮ್ಮ ಸೇವಕರಿಗೆ ಬುದ್ಧಿ ಬೋಧಿ ಕೊಟ್ಟು ಕಳುಹಿಸಿದರು ಆದರೆ ಆ ಸೇವಕರು ಅಷ್ಟಕ್ಕೇ ತೃಪ್ತರಾಗದೆ ಯಜಮಾನನ ಅಪ್ಪಣೆಯನ್ನು ಮೀರಿ ಆ ಬ್ರಾಹ್ಮಣನನ್ನು ಹೊಡೆದು ಕೊಂದೇ ಹಾಕಿದರು ಸರ್ಕಾರದವರು ಎಂಟು ಮಂದಿ ಸೇವಕರನ್ನು ಹಿಡಿದು ಮೊಕದ್ದಮೆ ಮಾಡಿದರು ಸೆಷನ್ಸ್ ಜಡ್ಜರು ದರ್ಯಾಫ್ತು ಮಾಡಿ, ಅಪರಾಧಿಗಳಲ್ಲಿ ಪ್ರತಿ ಒಬ್ಬನಿಗೂ ಐದು ವರುಷಗಳ ಕಠಿಣ ಸಜವನ್ನೂ ಅದರಲ್ಲಿ ಮೂರು ತಿಂಗಳ ಏಕಾಂತ ಸಜವನ್ನೂ ವಿಧಿಸಿರುತ್ತಾರೆ ತಾಲ್ಲೂಕ್ದಾರರು ತಮ್ಮ ಸೇವಕರನ್ನು ಕಾಪಾಡಬೇಕೆಂದು ಶವವನ್ನು ಅದಲುಬದಲು ಮಾಡಿದಂಥಾ ಸಿವಿಲ್ ಸರ್ಜನರಾದ ಕ್ಯಾಪ್ಟನ್ ಡೈಕ್ಸ್‌ಯವರಿಗೆ ಲಂಚಕೊಡಲು ಪ್ರಯತ್ನಪಟ್ಟರೆಂದೂ, ಈ ರಾಜರ ನಡತೆಯ ವಿಷಯದಲ್ಲಿ ಗವರ್ನಮೆಂಟಿನವರು ಸರಿಯಾದ ತನಿಖೆ ಮಾಡಬೇಕೆಂದೂ ಸೆಷನ್ಸ್ ಜಡ್ಜರು ಜಡ್ಜಮೆಂಟಿನಲ್ಲಿ ಬರೆದಿರುತ್ತಾರೆ.

❦❦❦

ಮದರಾಸ್ ಪಟ್ಟಣದಲ್ಲಿ "ಸ್ವದೇಶ ಮಿತ್ರನ್" ಎಂಬ ದಿನವಹಿ ಪ್ರಕಟವಾಗುವ ತಮಿಳು ಪತ್ರಿಕೆಯ ಎಡಿಟರಾದ ಮಿ॥ ಜಿ ಸುಬ್ರಹ್ಮಣ್ಯ ಐಯರವರನ್ನೂ, "ಇಂಡಿಯಾ" ಎಂಬ ತಮಿಳು ವಾರ ಪತ್ರಿಕೆಯ ಎಡಿಟರಾದ ಮಿ॥ ಎಂ. ಶ್ರೀನಿವಾಸೈಯಂಗಾರ್ ಯವರನ್ನೂ ಸರ್ಕಾರದವರು ರಾಜದ್ರೋಹದ ಬಾತ್ಮಿಗಳನ್ನು ಪ್ರಕಟಿಸಿದರೆಂದು ಹೇಳಿ ಕಳೆದ ವಾರ ದಸ್ತಗಿರಿ ಮಾಡಿದರು. ಮಿ॥ ಜಿ ಸುಬ್ರಹ್ಮಣ್ಯ ಐಯರವರು ತಿನ್ನವೆಲ್ಲಿ ಜಿಲ್ಲೆಗೆ ಸೇರಿದ ದಕ್ಷಿಣ ಕಾಶಿ (ತೆಂಕಾಶಿ) ಎಂಬ ಊರಿನಲ್ಲಿದ್ದರು ಅಲ್ಲಿಂದ ವಾರಂಟಿನಲ್ಲಿ ಹಿಡಿದು ಅವರನ್ನು ವಿಚಾರಣೆಯ ಬಗ್ಗೆ ಮದರಾಸಿಗೆ ಕರೆದು ತಂದಿರುತ್ತಾರೆ. ಇವರಿಗೆ ೫೩ ವರುಷ ವಯಸ್ಸಾಗಿ, ಕೆಟ್ಟ ರೋಗವನ್ನು ಅನುಭವಿಸುತ್ತಿರುವರು ಇವರು ಮೊದಲು "ಹಿಂದೂ" ಎಂಬ ಮದರಾಸಿನಲ್ಲಿ ದಿನವಹಿ ಪ್ರಕಟವಾಗುತ್ತಿರುವ ಇಂಗ್ಲಿಷ್ ಪತ್ರಿಕೆಯನ್ನು ಪ್ರಾರಂಭಿಸಿ ಅದನ್ನು ಅಭಿವೃದ್ಧಿಗೆ ತಂದರು ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಮಾಜವನ್ನು ಮೊದಲು ಬೊಂಬಾಯಿನಲ್ಲಿ ಪ್ರಾರಂಭ ಮಾಡಿದವರ ಪೈಕಿ ಇವರೂ ಒಬ್ಬರು. ಮತ್ತು ಮಿ॥ ಐಯರವರು ಮದರಾಸಿನಲ್ಲಿ ಮಹಾಜನ ಸಭೆ ಎಂಬುದನ್ನು ಸ್ಥಾಪಿಸುವುದರಲ್ಲಿ ಮುಂದಾಳಾಗಿದ್ದರು ಇವರು ಇಂಗ್ಲಿಷ್ ಗವರ್ನಮೆಂಟಿನವರ ಆಶ್ವಾಸೆಯಾದಂತೆ ಹಿಂದುಸ್ಥಾನದ ಜಮಾಖರ್ಚು ಮುಂತಾದ ವಿಚಾರಗಳನ್ನು ಕುರಿತು ತಮ್ಮ ಅಭಿಪ್ರಾಯವನ್ನು ವಿಲಾಯಿತಿಯಲ್ಲಿ ಬರೆಸಿ ಬಂದವರಾಗಿರುತ್ತಾರೆ. ಅಂತು ದಕ್ಷಿಣ ದೇಶದಲ್ಲಿ ಮಿ॥ ಸುಬ್ರಹ್ಮಣ್ಯ ಐಯರವರು ತುಂಬಾ ವಿದ್ಯಾವಂತರೂ, ರಾಜಕೀಯ ವಿಷಯಗಳನ್ನು ತಿಳಿದವರೂ, ಪ್ರಜೆಗಳ ಮುಖಂಡರೂ ಆಗಿರುತ್ತಾರೆಂದು ಹೆಸರು ಪಡೆದಿರುವರು. ಇವರನ್ನು ಈಗ ಸರ್ಕಾರದವರು ದಸ್ತಗಿರಿ ಮಾಡಿರುವುದು ಅನೇಕಾನೇಕರಲ್ಲಿ ಗಾಬರಿಯನ್ನುಂಟುಮಾಡಿದೆ. ಕಳೆದ ಫೆಬ್ರುವರಿ ೧೪ ಮತ್ತು ೨೭, ಏಪ್ರಿಲ್ ೪, ೯, ಮತ್ತು ೨೭, ಮೇ ೨೭, ಜೂನ್ ೩ ಮತ್ತು ೫ ಈ ತಾರೀಖುಗಳಲ್ಲಿ ಪ್ರಕಟವಾದ "ಸ್ವದೇಶ ಮಿತ್ರನ್" ಎಂಬ ಪತ್ರಿಕೆಯಲ್ಲಿ ಅವರು ರಾಜದ್ರೋಹಕರವಾದ ವಿಚಾರಗಳನ್ನು ಕುರಿತು ಬರೆದಿರುತ್ತಾರೆಂದು ಅಪವಾದ ಬಂದಿರುವುದು

ವಿದೇಶ ವರ್ತಮಾನಗಳು.

ಮಹಮ್ಮದೀಯರ ಯಾತ್ರಾಸ್ಥಾನಗಳಿಗೆ ಹಾಕುತ್ತಿರುವ ಹೆಡ್ಜಾಸ್ ರೈಲ್ ಮಾರ್ಗವು ಮೆದೀನಾ ಪಟ್ಟಣದ ತನಕ ಪೂರ್ತಿಯಾಗಿರುವುದು.

❦❦❦

ಫ್ರಾನ್ಸ್ ರಾಜ್ಯಕ್ಕೆ ಸೇರಿದ ಟೌಲಾನ್ ಪಟ್ಟಣದ ಸಮುದ್ರತೀರದಲ್ಲಿ ಕರೊನ್ನೆ ಎಂಬ ಜಹಜಿನೊಳಗೆ ಕಳೆದ ವಾರ ಒಂದು ಕೋವಿ ಫಿರಂಗಿಯು ಮಹಾ ಶಬ್ದದೊಡನೆ ಜಾರಿ ಒಡೆದುಹೋಯಿತು ಅದರಿಂದ ಆರು ಜನರು ಮೃತಪಟ್ಟರು, ಹದಿಮೂರು ಮಂದಿಗೆ ಗಾಯಗಳಾಗಿರುತ್ತವೆ.

ಪರ್ಷಿಯಾ ರಾಜ್ಯದಲ್ಲಿ ಷಿಯಾ ಪಂಗಡ ಮಹಮದೀಯ ಗುರುಗಳೆಲ್ಲಾ ಷಾ ಸುಲ್ತಾನರನ್ನು ಅಲ್ಲಗಳೆದು ದೂರುತ್ತಾ ಇದಾರೆಂದು ತಿಳಿಯುವುದು.

***

ಸಮೋವಾ ದ್ವೀಪದಲ್ಲಿ ಜರ್ಮನಿ ಜನರು ಕಳೆದ ಏಳು ವರುಷಗಳಿಂದ ಹತ್ತು ಲಕ್ಷ ತೆಂಗಿನ ಗಿಡಗಳನ್ನು ಹಾಕಿ ಬೆಳೆ ಮಾಡುತ್ತಿದಾರೆಂದು ತಿಳಿಯುವುದು.

***

ಕಳೆದ ಡಿಸೆಂಬರಿನಿಂದ ಏಪ್ರಿಲ್ ಆಖೈರು ವರೆಗೆ ಐದು ತಿಂಗಳಲ್ಲಿ ರಷ್ಯಾ ರಾಜ್ಯದೊಳಗೆ ಗವರ್ನಮೆಂಟಿನವರು ೫೫೦ ಕೊಟ್ಟು ೭೭ ವರ್ತಮಾನ ಪತ್ರಿಕೆಗಳನ್ನು ನಿಲ್ಲಿಸಿಬಿಟ್ಟರು.

***

ರಷ್ಯಾರಾಜ್ಯಕ್ಕೆ ಸೇರಿದ ಆಸ್ಟ್ರಖಾನ್, ಸರಟಾವ್, ಡಾನ್ ಎಂಬೀ ಪ್ರಾಂತ್ಯಗಳಲ್ಲಿ ವಾಂತಿಭೇದಿ ಉಪದ್ರವು ಪ್ರಾರಂಭವಾಗಿ, ಅನೇಕರು ಮೃತಪಡುತ್ತಿದಾರೆಂದು ತಂತೀವರ್ತಮಾನ ಬಂದಿದೆ.

***

ವಿಲಾಯತಿ ರಾಜ್ಯಕ್ಕೆ ಸೇರಿದ ಮಾಂಟಗೂ ಎಂಬ ಜಹಜು ಕೆಲವು ದಿನಗಳ ಹಿಂದೆ ನಾಶವಾಯಿತು. ಅದರ ದೆಸೆಯಿಂದ ಸರ್ಕಾರಕ್ಕೆ ಸುಮಾರು ಒಂದೂವರೆ ಕೋಟಿ ರೂಪಾಯಿ ನಷ್ಟವಾಗಿರುತ್ತದೆ.

***

ಚೀಣಾ ರಾಜ್ಯಕ್ಕೆ ಸೇರಿದ ಹಾಂಕಾಂಗ್ ಪಟ್ಟಣದಲ್ಲಿ ೧೯೧೯ನೇ ಇಸವಿ ಮಾರ್ಚಿ ಕಡೇ ತಾರೀಖಿನಲ್ಲಿ ಅಫೀಂ ಸೇದುವ ಮನೆಗಳನ್ನೂ ಬಿಕರಿ ಮಾಡುವ ಅಂಗಡಿಗಳನ್ನೂ ಸಂಪೂರ್ಣವಾಗಿ ಮುಚ್ಚಿಸಿಬಿಡಬೇಕೆಂದು ಯೋಚಿಸುತ್ತಿದಾರೆ

***

ಈಜಿಪ್ಟಿನ ಸ್ಥಿತಿಗತಿಗಳನ್ನು ವಿಲಾಯತಿಯ ಪ್ರಜೆಗಳಿಗೆ ತಿಳಿಸಿ, ಹೆಚ್ಚಾದ ಸೌಲಭ್ಯಗಳನ್ನೂ ರಿಯಾಯತಿಗಳನ್ನೂ ಸಂಪಾದಿಸಿಕೊಂಡು ಬರಬೇಕೆಂಬ ಉದ್ದೇಶದಿಂದ ಈಜಿಪ್ಟಿನ ಕೆಲವು ದೊಡ್ಡ ಮನುಷ್ಯರು ವಿಲಾಯತಿಗೆ ಪ್ರಯಾಣಮಾಡಿದರು.

ವಿಲಾಯತಿಗೆ ಸೇರಿದ ಮ್ಯಾಂಚೆಸ್ಟರ್ ಮತ್ತು ಲಿವರ್‌ಪೂಲ್ ಪಟ್ಟಣಗಳಲ್ಲಿ ಹತ್ತಿ ಬಟ್ಟೆಗಳ ವ್ಯಾಪಾರವು ಬಹಳ ಹೀನಸ್ಥಿತಿಯಲ್ಲಿರುವುದಾಗಿಯೂ, ಇಂಥಾ ಸ್ಥಿತಿಯು ಕಳೆದ ೨೫ ವರುಷಗಳಿಂದಲೂ ಪ್ರಾಪ್ತವಾಗಿರಲಿಲ್ಲವೆಂತಲೂ ತಂತೀವರ್ತಮಾನ ಬಂದಿದೆ.

***

ಏಷ್ಯಾಮೈನರಿಗೆ ಸೇರಿದ ಕೋಕಾಳ್ ವಿಲಾಯತಿನಲ್ಲಿ ಪ್ರವಾಹಗಳ ದೆಸೆಯಿಂದ ಎರಡು ಸಾವಿರ ಪ್ರಜೆಗಳು ಮೃತಪಟ್ಟರು. ಜೈಲ್‌ಖಾನೆಗಳೊಳಗಿದ್ದ ೩೦೦ ಜನ ಬಂದೀವಾನರು ಕೊಚ್ಚಿಹೋದರು. ಗವರ್ನಮೆಂಟ್ ಹೌಸ್ ಬಂಗಲೆಯ ಮೈದಾನಿನಲ್ಲಿ ಡ್ರಿಲ್ ಮಾಡುತ್ತಿದ್ದ ೬೦೦ ಜನ ಸಿಪಾಯಿಗಳಲ್ಲಿ ೧೨೦ ಮಂದಿ ಮಾತ್ರ ಬದುಕಿಕೊಂಡರು

***

ದಕ್ಷಿಣ ಆಫ್ರಿಕಾದಿಂದ ಪೋರ್ಚುಗಲ್, ಫ್ರಾನ್ಸ್, ಹಾಲೆಂಡ್ ರಾಜ್ಯಗಳಿಗೆ ಸುಮಾರು ೩೦೦ ಪ್ರಯಾಣಿಕರನ್ನು ಕೂರಿಸಿಕೊಂಡು ಹೋಗುತ್ತಿದ್ದ ಆಂಸ್ಟರ್‌ಲೇಡ್ ಎಂಬ ಡಚ್ಚರ ಜಹಜಿನಲ್ಲಿ ಕಳೆದ ವಾರ ಬೆಂಕಿ ಹುಟ್ಟಿತು ಪ್ರಯಾಣಿಕರಲ್ಲಿ ಗಲಿಬಿಲಿಯುಂಟಾಗಿ ಆರು ಮಂದಿ ಸಮುದ್ರದ ಪಾಲಾದರು. ಉಳಿದವರನ್ನು ದೋಣಿಗಳಲ್ಲಿ ಕೂಡಿಸಿ ಬದುಕಿಸಿದರು.

***

ಅಮೇರಿಕದಲ್ಲಿ ಕುದುರೆಯ ಜೂಜು ನಡಿಯುವ ಪ್ರದೇಶಗಳಲ್ಲಿ ಯಾರೂ ಜೂಜಾಡಕೂಡದೆಂದೂ, ಆಡಿದವರಿಗೆ ಶಿಕ್ಷೆಯಾಗುವುದೆಂದೂ ಗವರ್ನಮೆಂಟಿನವರು ಒಂದು ಕಾನೂನು ಮಾಡಿ ಜಾರಿಗೆ ತಂದಿದಾರೆ. ಅದರಿಂದ ಆ ಪ್ರಾಂತ್ಯದಲ್ಲಿ ಕುದುರೇ ಜೂಜುಗಳೇ ನಿಂತುಹೋದಂತಾಗಿವೆ ಎಂದು ತಿಳಿಯುವುದು. ಕೆಲವರು ತಮ್ಮ ಜೂಜಿನ ಕುದುರೆಗಳನ್ನು ಇತರ ದೇಶಗಳಿಗೆ ಸಾಗಿಸಿಕೊಂಡು ಹೋಗುತ್ತಿದಾರೆ.

***

ತುರ್ಕಿ ರಾಜ್ಯದಲ್ಲಿ ಇದುವರೆಗೆ ಯುದ್ಧದ ಇಲಾಖಾ ಮಂತ್ರಿಯಾಗಿದ್ದ ರಿಜಾ ಪಾಷಾಯವರು ತಮ್ಮ ಅಧಿಕಾರ ಕಾಲದಲ್ಲಿ ಸಂಪಾದನೆಮಾಡಿಟ್ಟುಕೊಂಡಿದ್ದ ಸುಮಾರು ಮೂವತ್ತು ಲಕ್ಷ ರೂಪಾಯನ್ನು ವಾಪಸು ಗವರ್ನಮೆಂಟಿಗೆ ಪಾವತಿಮಾಡಿದರು. ಹೀಗೆಯೇ ಇತರ ಅಧಿಕಾರಿಗಳೂ ತಮ್ಮ ಆಸ್ತಿಯನ್ನು ಕೊಡುತ್ತಾ ಬಂದಿರೋಣದರಿಂದ ಸುಲ್ತಾನರವರು ಅಂಥವರನ್ನೆಲ್ಲಾ ವಾಪಸು ಕರೆಸಿಕೊಳ್ಳುತ್ತಿದಾರೆ.

***

ದಕ್ಷಿಣ ಆಫ್ರಿಕಕ್ಕೆ ಸೇರಿದ ಜೋಹಾನಸ್ ಬರ್ಗಿನಲ್ಲಿ ಹಿಂದುಸ್ಥಾನದಿಂದ ಹೋಗಿರುವ ಪ್ರಜೆಗಳು ಒಂದು ಸಭೆಯನ್ನು ಮಾಡಿ ಆ ಸರ್ಕಾರದವರು ವಿಧಿಸಿರುವ ನಿರ್ಬಂಧವುಳ್ಳ ಕಾನೂನನ್ನು ಪ್ರತಿಭಟಿಸಿ ಉಪನ್ಯಾಸ ಮಾಡಬೇಕೆಂತಲೂ, ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ಅರಿಕೆಮಾಡಬೇಕೆಂತಲೂ, ತಾವಾಗಿ ಇದುವರೆಗೆ ಬರೆದುಕೊಟ್ಟಿರುವ ರೆಜಿಸ್ಟ್ರೇಷನ್ ಸರ್ಟಿಫಿಕೇಟುಗಳನ್ನು ಆ ಸಭೆಯಲ್ಲಿ ಸುಟ್ಟುಬಿಡಬೇಕೆಂತಲೂ ಗೊತ್ತುಮಾಡಿಕೊಂಡಿದಾರೆ.

***

ದೊರೆಗಳನ್ನೂ ಐಶ್ವರ್ಯವಂತರನ್ನೂ ಕೊಂದುಹಾಕಬೇಕೆಂದು ಉದ್ದೇಶ ಮಾಡಿಕೊಂಡಿರುವ "ನಿಹಿಲಿಸ್ಟ್" ಗುಂಪಿನ ಸುಮಾರು ೮೦ ಜನರು ರಷ್ಯಾ ರಾಜ್ಯದಿಂದ ವಿಲಾಯತಿಗೆ ಹೋಗಿ, ಲಂಡನ್ ಪಟ್ಟಣದ ನಾಟಿಂಗ್ ಹಾಲ್ ಎಂಬ ಬಂಗಲೆಯಲ್ಲಿ ಕಳೆದ ವಾರ ಸಭೆಯನ್ನು ನಡಿಸಿದರು. ಅವರಲ್ಲಿ ಹೆಂಗಸರೂ ಗಂಡಸರೂ ಸೇರಿದ್ದರು. ಸಭೆಯನ್ನು ಬಹಳ ಗೋಪ್ಯವಾಗಿ ನಡಿಸಿದರು. ಹೊರಗಿನವರ್‍ಯಾರೂ ಒಳಕ್ಕೆ ಪ್ರವೇಶ ಮಾಡದಂತೆ ಬಂಗಲೆಯ ಸುತ್ತಾ ಬಹಳ ಬಲವಾದ ಏರ್ಪಾಡನ್ನು ಮಾಡಿಕೊಂಡಿದ್ದರು.

ಅಮೇರಿಕಕ್ಕೆ ಸೇರಿದ ಪೆರೂ ಎಂಬ ಸ್ವತಂತ್ರರಾಜ್ಯದಲ್ಲಿ ಪ್ರಸಿಡೆಂಟರು ಕಳೆದ ವಾರ ಪಾರ್ಲಿಮೆಂಟ್ ಸಭೆ ಮನೆಯೊಳಗೆ ತಿರುಗಾಡುತ್ತಿದ್ದಾಗ ಯಾವನೋ ಒಬ್ಬ ದುಷ್ಟನು ಒಂದು ಚೂರಿಯನ್ನು ಹಿಡಿದು ಅವರ ಮೇಲೆ ಬಿದ್ದು ಅವರನ್ನು ಇರಿದು ಕೊಲ್ಲುವುದಕ್ಕೆ ಪ್ರಯತ್ನಪಟ್ಟನು ಪ್ರಸಿಡೆಂಟರು ಕೂಡಲೇ ಅವನನ್ನು ತಡೆದು ಹಿಡಿದುಕೊಂಡರು ಇತರರು ಅಷ್ಟರಲ್ಲೇ ಬಂದು ಸಹಾಯಕರಾಗಿ ನಿಂತರು. ಪ್ರಸಿಡೆಂಟರಿಗೆ ಗಾಯಗಳೇನೂ ಆಗಲಿಲ್ಲ. ಆ ಘಾತುಕನು ಗಲಾಟೆಯಲ್ಲಿ ಸಿಕ್ಕದೆ ತಪ್ಪಿಸಿಕೊಂಡುಬಿಟ್ಟನು.

***

ಚೀನಾ ಸರ್ಕಾರದವರು ಒಂದು ಜಹಜನ್ನು ಕಳೆದ ವಾರ ಟೇಕೊ ಎಂಬ ಸ್ಥಳದಲ್ಲಿ ತಡೆದು ಶೋಧನೆ ಮಾಡಿ, ಅದರಲ್ಲಿದ್ದ ೧೦ ಸಾವಿರ ಬಂದೂಕುಗಳನ್ನೂ ೨೦ ಲಕ್ಷ ತೋಟಾಗಳನ್ನೂ ಸ್ವಾಧೀನಪಡಿಸಿಕೊಂಡರು. ಈಗ ಈ ಮದ್ದುಗುಂಡುಗಳೆಲ್ಲಾ ಜಪಾನ ವರ್ತಕರಿಂದ ರವಾನೆ ಮಾಡಲ್ಪಟ್ಟಿದ್ದವೆಂದು ತಿಳಿದುಬಂದಿದೆ. ಆ ವರ್ತಕರು ಅದನ್ನು ತಮಗೆ ವಾಪಸು ಚೀನೀಯರಿಂದ ಕೊಡಿಸಿಕೊಡಬೇಕೆಂದು ಕೇಳಿರುತ್ತಾರೆ. ಈ ವಿಚಾರವು ಹ್ಯಾಗೆ ತೀರ್ಮಾನವಾಗುವುದೋ ಎಂದು ಅನೇಕರು ಎದುರುನೋಡುತ್ತಿರುವರು.

***

ಆಸ್ಟ್ರಿಯಾ ರಾಜ್ಯಾಂಗಗಳಾದ ಕ್ರೋಷಿಯಾ, ಬಾಸ್ನಿಯಾ ಎಂಬ ಅಧಿಪತ್ಯಗಳಲ್ಲಿ ಕೆಲವು ಮುಖಂಡರು ಪಿತೂರಿಯನ್ನು ಮಾಡಿ ಪ್ರಿನ್ಸ್ ನಿಕೊಲಸ್ ಯವರನ್ನು ಕೊಂದು, ದಂಗೆ ಎಬ್ಬಿಸಿ, ಮಾಂಟ ನೀಗ್ರೋ ಮತ್ತು ಸರ್ವಿಯಾಗಳ ಸಹಾಯದಿಂದ ಒಂದು ಪ್ರಜಾಪ್ರಭುತ್ವವನ್ನು ಸ್ಥಾಪಿಸಿಕೊಳ್ಳಬೇಕೆಂದು ಪ್ರಯತ್ನಪಟ್ಟರು. ಇದು ಪತ್ತೆಯಾದದ್ದರಿಂದ ಆ ಗುಂಪಿನವರಲ್ಲಿ ಮುಖಂಡರಾಗಿಯೂ ಪ್ರಜೆಗಳಲ್ಲಿ ಬಹಳ ಗಣ್ಯತೆಯನ್ನು ಪಡೆದವರಾಗಿಯೂ ಇದ್ದ ಹಲವರನ್ನು ಸರ್ಕಾರದವರು ದಸ್ತಗಿರಿ ಮಾಡಿರುತ್ತಾರೆಂದು ತಂತೀ ವರ್ತಮಾನ ಬಂದಿದೆ.

***

ಅಮೇರಿಕಕ್ಕೆ ಸೇರಿದ ಇಲಿನಾಯಿಸ್ ಎಂಬ ಡಿಸ್ಟ್ರಿಕ್ಟಿನೊಳಗೆ ಸ್ಪ್ರಿಂಗ್‌ಫೀಲ್ಡ್ ಎಂಬ ಪಟ್ಟಣದಲ್ಲಿ ನೀಗ್ರೋ ಎಂಬ ಕಪ್ಪು ಜನರು ಒಬ್ಬ ಬಿಳಿಯ ಸ್ತ್ರೀಯನ್ನು ಕೆಡಿಸಬೇಕೆಂದು ಪ್ರಯತ್ನಪಟ್ಟನು. ಇದಕ್ಕಾಗಿ ಅಲ್ಲಿ ಕಳೆದ ವಾರ ದೊಡ್ಡ ಗಲಭೆಯುಂಟಾಯಿತು. ಬಿಳಿಯ ಜನರು ಕಪ್ಪುಜನರಿದ್ದ ಭಾಗಕ್ಕೆ ನುಗ್ಗಿ ಅವರ ಮನೆ ಮಠಗಳನ್ನು ಸುಟ್ಟು, ಒಬ್ಬ ಮನುಷ್ಯನ ಚರ್ಮವನ್ನು ಸುಲಿದು ಕೊಂದರು. ಈ ದಂಗೆಯಲ್ಲಿ ಇಬ್ಬರು ಕೊಲ್ಲಲ್ಪಟ್ಟರು; ೭೫ ಮಂದಿಗೆ ಗಾಯಗಳಾಗಿವೆ. ಸರ್ಕಾರದವರು ೨,೫೦೦ ಸೈನ್ಯವನ್ನು ಕಳುಹಿಸಿ ಪ್ರಜಾ ನೆಮ್ಮದಿಯನ್ನು ಕಾಪಾಡುತ್ತಿದಾರೆ.

ಅಮೇರಿಕಕ್ಕೆ ಸೇರಿದ ವೆನಿಜುವೇಲಾ ಎಂಬ ಪ್ರಜಾಪ್ರಭುತ್ವದಲ್ಲಿ ಕಳೆದ ೧೮೯೮ನೇ ಇಸವಿಯಲ್ಲಿ ಗಲಿಬಿಲಿಯನ್ನೆಬ್ಬಿಸಿ, ರಾಜ್ಯಾಧಿಕಾರವನ್ನು ಪ್ರೆಸಿಡೆಂಟ್ ಕ್ಯಾಸ್ಟ್ರೋಯವರು ವಹಿಸಿಕೊಂಡಿದಾರೆ. ಇವರಿಗೂ ಹಾಲೆಂಡಿನವರಿಗೂ ಈಗ ಮನಸ್ತಾಪಗಳುಂಟಾಗಿರುವವು. ಪ್ರೆಸಿಡೆಂಟ್ ಕ್ಯಾಸ್ಟ್ರೋಯವರು ವೆನಿಜುವೇಲಾದಲ್ಲಿದ್ದ ಹಾಲೆಂಡ್ ರಾಯಭಾರಿಯನ್ನು ವಾಪಸು ಕಳುಹಿಸಿ, ಹಾಲೆಂಡ್ ಪ್ರಜೆಗಳಿಗೆ ನಾನಾ ವಿಧವಾದ ಕಿರುಕುಳವನ್ನುಂಟುಮಾಡಿರುತ್ತಾರೆಂದೂ, ಅದನ್ನು ಹಾಲೆಂಡಿನವರು ಸೈರಿಸಲಾರದೆ ಅಲ್ಲಿಗೆ ಮೂರು ಯುದ್ಧದ ಹಡಗುಗಳನ್ನು ಕಳುಹಿಸಿದಾರೆಂದೂ ತಂತೀವರ್ತಮಾನ ಬಂದಿದೆ.

***

ಟ್ರಾನ್ಸ್‌ವಾಲಿನಲ್ಲಿರುವ ಸುಮಾರು ೩,೦೦೦ ಏಷ್ಯಾ ಜನರು ಜೋಹಾನಸ್‌ಬರ್ಗಿನಲ್ಲಿ ಕಳೆದ ವಾರ ಒಂದು ದೊಡ್ಡ ಮೀಟಿಂಗಿನಲ್ಲಿ ಸಭೆಸೇರಿ, ೩೦೦—೪೦೦ ರಿಜಿಸ್ಟರ್ ಸರ್ಟಿಫಿಕೇಟುಗಳನ್ನು ಸುಟ್ಟುಹಾಕಿದರು. ಮಿ॥ ಗಂಧಿಯವರು ಸಭಿಕರನ್ನು ಕುರಿತು ಉಪನ್ಯಾಸ ಮಾಡುತ್ತಾ—"ಹಿಂದುಸ್ಥಾನದವರನ್ನು ಟ್ರಾನ್ಸ್‌ವಾಲ್ ಸರ್ಕಾರದವರು ಗುಲಾಮರಂತೆ ಎಣಿಸುವುದನ್ನು ನಾನು ನೋಡಿ ಸೈರಿಸಲಾರೆನು. ಅವರಿಗೆ ಸ್ವತಂತ್ರ ಬಂದು ಇತರ ಜನರಂತೆ ಆಗುವ ತನಕ, ಅವಶ್ಯಬಿದ್ದರೆ ನಾನು ಜೈಲಿನಲ್ಲಿರುವುದಕ್ಕೂ ಸಿದ್ಧನಾಗಿರುತ್ತೇನೆ. ಮಿ॥ ಸ್ಮಟ್ಸ್ ಎಂಬ ಅಧಿಕಾರಿಯು ಕಳೆದ ಜನವರಿ ಆಖೈರಿನಲ್ಲಿ ಒಪ್ಪಂದ ಮಾಡಿದಂತೆ ಅವರೇ ನಡಿಯದೆ ಇರುವುದು ಯೋಗ್ಯವಾಗಿಲ್ಲ" ಎಂಬೀ ರೀತಿಯಾಗಿ ಹೇಳಿದರು.

ವಿಲಾಯತಿಗೆ ಸೇರಿದ ಲ್ಯಾಂಕೆಷೈರ್ ಡಿಸ್ಟ್ರಿಕ್ಟಿನಲ್ಲಿ ಮೇಪೋಲ್ ಎಂಬ ಕಲ್ಲಿದ್ದಲ ಗಣಿಯೊಳಗೆ ಕಳೆದ ವಾರ ಬೆಂಕಿ ಹುಟ್ಟಿ ಬಹು ದುಃಖಕರವಾದ ಅನಾಹುತವಾಯಿತು. ಇದುವರೆಗೆ ೨೦ ಜನ ಕೂಲಿಗಳ ಶವಗಳು ಸಿಕ್ಕಿರುತ್ತವೆ. ಇನ್ನೂ ಆ ಗಣಿಯೊಳಗೆ ೮೦ ಜನಕ್ಕಿಂತ ಹೆಚ್ಚಾಗಿ ಸಿಕ್ಕಿಕೊಂಡಿದಾರೆಂದು ತಿಳಿಯುವುದು. ಉರಿಯು ಇನ್ನೂ ಶಮನವಾಗಲಿಲ್ಲ. ಕುಟುಂಬಗಳಿಗೆ ಸೇರಿದ ಜನರು ಬಹಳವಾಗಿ ಗೋಳಾಡುತ್ತಿದಾರೆ. ಬೆಂಕಿಯನ್ನು ಆರಿಸುವುದು ಅಸಾಧ್ಯವಾದದ್ದರಿಂದ ಗಣಿಗಳಿಗೆ ನೀರನ್ನು ಭರ್ತಿಮಾಡಬೇಕೆಂದು ತೀರ್ಮಾನಮಾಡಿದರು. ಈಚೆಗೆ ಗಣಿಯಿಂದ ೩೫ ಶವಗಳನ್ನು ಹೊರಕ್ಕೆ ತೆಗೆದದ್ದಾಯಿತೆಂತಲೂ, ಚಕ್ರವರ್ತಿಯವರು ಈ ವಾರ್ತೆಯನ್ನು ಕೇಳಿ ತುಂಬಾ ವ್ಯಸನಪಟ್ಟು ತಂತೀ ವರ್ತಮಾನ ಕಳುಹಿಸಿ ತಮ್ಮ ದುಃಖವನ್ನು ಮೃತಪಟ್ಟವರ ಸಂಬಂಧಿಗಳಿಗೆಲ್ಲಾ ತಿಳಿಸಿದರೆಂತಲೂ ತಂತೀ ವರ್ತಮಾನ ಬಂದಿದೆ.

ತಾಲ್ಲೋಕು ವರ್ತಮಾನಗಳು.

ಕೊಡಗು.—ಮಳೆಕಾಲ ಈ ವರುಷ ಸ್ವಲ್ಪ ಹಿಂದಾದರೂ ಆರಂಭ ಕೆಲಸಗಳಿಗೇನೂ ತೊಂದರೆ ಸಂಭವಿಸಿರುವದಿಲ್ಲ. ಒಂದು ವಾರದಿಂದೀಚೆಗೆ ಮಳೆ ಸ್ವಲ್ಪ ಬಿಟ್ಟಿದೆ. ಕ್ಷಾಮವು ಬಹಳ ಕಠಿಣವಾಗಿದೆ. ಒಂದು ರೂಪಾಯಿಗೆ ೬ ಸೇರು ಅಕ್ಕಿ, ೧೮ ಸೇರು ಬತ್ತ ದೊರೆಯುವದೇ ಕಷ್ಟ. ದಿನಸಿಗಳ ಧಾರಣೆ ಹೇಳಲಶಕ್ಯ. ಈ ಸಮಯದಲ್ಲಿ ಕೂಲಿಯವರ ಮತ್ತು ಚಿಕ್ಕ ಸಂಬಳದವರ ಕಷ್ಟಾನುಭವವು ನೋಡಿದರೆ ಬಹಳ ವ್ಯಸನವಾಗುತ್ತದೆ ಆದ್ದರಿಂದ ಇನ್ನಾದರೂ ಕ್ಷಾಮನಿವೃತ್ಯರ್ಥವಾದ ಫಂಡಿನಿಂದಲೂ, ಚಿಕ್ಕ ಸಂಬಳದವರ ಸಂಬಳ ಸ್ವಲ್ಪ ಹೆಚ್ಚಿಸುವದರಿಂದಲೂ ಉಚಿತವಾದ ಸಹಾಯ ಮಾಡುವ ವಿಷಯದಲ್ಲಿ ನಮ್ಮ ಸರ್ಕಾರದವರು ಪ್ರೀತಿಯಿಟ್ಟಾರೆಂದು ಸಂಪೂರ್ಣವಾಗಿ ನಂಬಿರುತ್ತೇನೆ.

ತಿಪಟೂರು.—ಇಲ್ಲಿ ಮಳೆಯಿಲ್ಲ ಕುಡಿಯುವ ನೀರಿಗೆ ತುಂಬಾ ಅಭಾವವಾಗಿದೆ. ಸಂತೆಯಲ್ಲಿ ರೂಪಾಯಿಗೆ ೧೩ ಸೇರು ರಾಗಿಯೂ, ೬ ಸೇರು ಅಕ್ಕಿಯೂ ಮಾರುತ್ತಾರೆ.—ಮುರುಘ ಸ್ವಾಮಿಗಳು ಈ ಊರಿಗೆ ಬರುತ್ತಾರೆಂಬ ವದಂತಿ ಇರುವದರಿಂದ ಈ ಊರಿನಲ್ಲಿರುವ ಸಾಹುಕಾರರು ತಮ್ಮ ತಮ್ಮ ಮನೆಗಳ ಮುಂದೆ ಚಪ್ಪರಗಳನ್ನು ಹಾಕಿಸುತ್ತಾರೆ. ಚೌಕದಲ್ಲಿರುವ ಚಪ್ಪರದ ಒಂದು ಪಾರ್ಶ್ವದಲ್ಲಿ ಮುರಿದುಹೋಯಿತು ಅಲ್ಲದೆ ಉರುಮಗೊಂಡೆ ಮಲ್ಲೇಶಪ್ಪನವರ ಮನೆ ಮುಂದಿನ ಚಪ್ಪರವು ದಕ್ಷಿಣಭಾಗದಲ್ಲಿ ಮುರಿದುಹೋಗಿತ್ತು.—ಕೊಟ್ಟೂರಯ್ಯನವರ ಮನೆ ಮುಂದಿರುವ ಹೆಲ್ಲಂಗೆರೆ ಗಂಗಮ್ಮನೆಂಬುವ ೪೦ ವರುಷದ ಮುದುಕಿಯನ್ನು ಯಾರೋ ಕಡಿದು, ಇದ್ದ ಒಡವೆಗಳನ್ನು ಕದ್ದುಕೊಂಡು ಹೋಗಿರುತ್ತಾರೆ.

ಹುಣಸೂರು.—ಟೌನ್ ಪಾಕೀಜಾ ವಿಷಯ ತೃಪ್ತಿಕರವಾಗಿಲ್ಲ. ಊರಿನ ಕೆಲವು ಭಾಗಗಳನ್ನು ನೋಡಿದರೆ ಗಲೀಜಾಗಿರುತ್ತವೆ. ಇದಕ್ಕೆ ನಮ್ಮ ಅಮಲ್ದಾರರು ಟೌನ್ ಗಸ್ತು ಮಾಡುವದು ಅಪರೂಪವಾಗಿರುವದೇ ಕಾರಣವೆಂದು ತೋರುತ್ತೆ. ಕಲ್ಕುಣಿಕೆ ಎಂಬ ಗ್ರಾಮವು ಮ್ಯುನಿಸಿಪಾಲಿಟಿಗೆ ಒಳಪಟ್ಟಿದ್ದಾಗ್ಯೂ ಆ ಗ್ರಾಮದ ಪಾಕೀಜಾ ವಿಷಯದಲ್ಲಿ ಯಾರೂ ನಿಗಾ ಕೊಡುವದಿಲ್ಲವೆಂದು ಕಾಣುವದು. ಆ ಗ್ರಾಮಕ್ಕೆ ಹೋಗುವಾಗ್ಗೆ ರಸ್ತೆಯ ಎರಡು ಪಾರ್ಶ್ವಗಳಲ್ಲಿಯೂ ಜನರು ಹೇಸಿಗೆ ಮಾಡಿ, ದುರ್ವಾಸನೆ ಬಡಿಯುತ್ತದೆ. ಮೇಲ್ಪಟ್ಟ ಅಧಿಕಾರಿಗಳು ತುಂಬಾ ನಿಗಾ ಕೊಡುವದು ಅವಶ್ಯಕ. ಮ್ಯುನಿಸಿಪಲ್ ಲಾಂದ್ರಗಳು ಸರಿಯಾದ ಸ್ಥಿತಿಯಲ್ಲಿಯೇ ಏನೋ ತಿಳಿಯದು ಯಾಕೆಂದರೆ ಇರುವ ೭೭—೭೫ ಲಾಂದ್ರಗಳಲ್ಲಿ ಕೆಲವು ಮಾತ್ರ ರಾತ್ರಿ ಬೆಳಕು ಕೊಡುವವು. ಇವು ಕೂಡ ತಮ್ಮ ಪ್ರಕಾಶವನ್ನು ಸರಿಯಾಗಿ ಕೊಡುವದಿಲ್ಲ ಈ ವಿಷಯದಲ್ಲಿಯೂ ಮೇಲ್ಪಟ್ಟ ಅಧಿಕಾರಿಗಳು ನಿಗಾ ಕೊಡತಕ್ಕದ್ದು ಅತ್ಯವಶ್ಯಕ.—ಈ ವರ್ಷ ಈ ಪ್ರಾಂತ್ಯ ಒಳ್ಳೇ ಮಳೆಯಾದ್ದರಿಂದ ರಾಗಿ ಫಸಲು ಚೆನ್ನಾಗಿರುತ್ತದೆ. ಇನ್ನು ಒಂದು ತಿಂಗಳೊಳಗಾಗಿ ಪೈರು ಕಟಾವಾಗುವದು. ಆದರೆ ದನಗಳ ರೋಗವು ಬಂದು, ಅನೇಕರನ್ನು ಬಹು ದುಃಖಕ್ಕೆ ಒಳಪಡಿಸುತ್ತಾ ಇದೆ.—ಟೌನಿನಲ್ಲಿ ವಾಸ ಮಾಡುತ್ತಾ ಇರುವ ವನ್ನಿಯಲ್ ಜಾತಿಗೆ ಸೇರಿದ ಅಣ್ಣಾಸ್ವಾಮಿ ಎಂಬುವರ ಮಗ ಸುಮಾರು ೧೮ ವರ್ಷದ ಯೌವನಸ್ಥನು ಕಳೆದ ವಾರ ಮುಸಲ್ಮಾನರ ಮತಕ್ಕೆ ಸೇರಿಕೊಂಡನು.

ಚನ್ನಗಿರಿ.—ಈ ತಾಲ್ಲೂಕಿಗೆ ಸೇರಿದ ಸಂತೆಬೆನ್ನೂರು ನಾಗತಿ ಕೋಮಾರನಹಳ್ಳಿಯಲ್ಲಿ ಅಂಕಾಪುರದ ಮಹದೇವಣ್ಣನೆಂಬ ಒಬ್ಬ ಗೌಡನ ಮನೆಯಲ್ಲಿ ಈಗ್ಗೆ ೧೦ ದಿವಸದ ಮುಂದೆ ಚಿಮಣಿ ಯಣ್ಣೆಯಿಂದ ಆದ ಅನಾಹುತವೇನೆಂದರೆ, ಸದರಿ ಗೌಡನ ಮನೆಯಲ್ಲಿ ಒಬ್ಬ ಮುದುಕಿ ಸತ್ತು, ಇಗೋ ರಾತ್ರಿ ಕತ್ತಲಾದ್ದರಿಂದ ಮುದುಕಿಯ ಹತ್ತರ ದೀಪ ಹಚ್ಚಬೇಕು. ಬುಡ್ಡಿ ತಕಾ ಎಂತ ಮನೇಲಿ ಇದ್ದ ಒಬ್ಬ ಹುಡುಗಿಗೆ ಹೇಳಿದ. ಸದರಿ ಹುಡುಗಿಯು ಕೈಯಲ್ಲಿ ಒಂದು ಬುಡ್ಡಿ ದೀಪ ಹಚ್ಚಿಕೊಂಡು ಚಿಮಣಿಯಣ್ಣೆ ಡಬ್ಬಾ ತಂದು ಕೊಟ್ಟಳು. ಮುದುಕಿ ಮಗನು ಬಾಗಿಲ ಹತ್ತರ ಡಬ್ಬಿಯಲ್ಲಿನ ಯಣ್ಣೆ ತೆಗೆಯುವದರಲ್ಲಿ ಇರುತ್ತಾ ಇದ್ದ. ಅಷ್ಟರಲ್ಲೇ ಹುಡುಗಿ ಕೈಯೊಳಗಿನ ದೀಪದ ಕಿಡಿಯು ಯಣ್ಣೆ ಡಬ್ಬದಲ್ಲಿ ಬಿದ್ದು ಡಬ್ಬಾ ಹತ್ತಿಕೊಂಡು ಉರಿ ಹೆಚ್ಚಾಯಿತು. ಗೌಡನು ಡಬ್ಬಾಕ್ಕೆ ನೀರು ಹಾಕಿದ ಉರಿ ಮತ್ತೂ ಹೆಚ್ಚಿತು. ಕೋಟೆ ಕಾಲಿನಲ್ಲಿ ಡಬ್ಬಾ ಒದ್ದನು. ಕೂಡ್ಲೆ ಡಬ್ಬದಲ್ಲಿ ಇದ್ದ ಯಣ್ಣೆ ಚಲ್ಲಿತು. ಮನೆಯಲ್ಲಿ ಉರಿ ಹತ್ತಿತು ಈ ಮನೆಯಲ್ಲಿ ಇದ್ದ ೬ ಜನ ಹೆಂಗಸರು ಬಾಗಿಲಲ್ಲಿ ಉರಿ ಜಾಸ್ತಿಯಾಗಿ ಹೋಗಿ ಹೆಚ್ಚಾದ್ದರಿಂದ ಅಡಿಗೆ ಮನೆಯಲ್ಲಿ ಹೋಗಿ ಸೇರಿದರು.—ಅಷ್ಟರಲ್ಲೇ ಗೌಡನ ಉಟ್ಟ ಪಂಚೆಗೆ ಬೆಂಕಿಬಿದ್ದು, ಗೌಡ ಕೂಗಾಡುವದಕ್ಕೆ ಪ್ರಾರಂಭಮಾಡಿದ. ಆಸುಪಾಸು ಮನೆಯವರು ಬಂದರು. ಮನೆ ಪೂರಾ ಸುಟ್ಟು, ಒಳಗೆ ಇದ್ದ ಆರು ಜನಗಳೂ, ಒಂಬತ್ತು ಜಾನುವಾರುಗಳೂ ಸುಟ್ಟುಹೋದವು. ವಿಚಾರಣೆ ಬಗ್ಗೆ ನಮ್ಮ ಅಮಲ್ದಾರರು ಅಲ್ಲಿಗೆ ದಯಮಾಡಿಸಿರುತ್ತಾರೆ.

ನೆಲಮಂಗಲ.—ಕಳೆದ ವಾರ ನೆಲಮಂಗಲದ ವೆಸ್ಲಿಯನ್ ಮಿಷನ್ ಗರ್ಲ್ ಸ್ಕೂಲ್ ಬಾಲಕಿಯರಿಗೆ ಬಹುಮಾನ ಕೊಡುವದಕ್ಕಾಗಿ ಬೆಂಗಳೂರಿಂದ, ರೆವ್. ಎ. ಬ್ರೋಕ್‌ಬ್ಯಾಂಕ್ ಬೋಧಕರವರೂ, ಅವರ ಪತ್ನಿಯವರೂ, ಘನ ವೈಟ್ ಮಿಸ್ಸಿಯವರೂ, ನೇಟಿವ್ ಮಿ॥ ಆಂಡ್ರೂ ಫಿಲಿಪ್ ಅಯ್ಯನವರೂ ದಯಮಾಡಿದ್ದರು ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಬಾಲಕಿಯರನ್ನೆಲ್ಲಾ ಸೇರಿಸಲ್ಪಟ್ಟಿತ್ತು. ಆ ಕಾಲದಲ್ಲಿ ಆಸ್ಪತ್ರೆ ಅಸಿಸ್ಟೆಂಟರೂ, ಸಬ್ ರೆಜಿಸ್ಟ್ರರೂ, ತಾಲ್ಲೂಕ್ ನೌಕರರೂ, ವರ್ತಕರೂ ಸೇರಿದ್ದರು. ಘನ ವೈಟ್ ಮಿಸ್ಸಿಯವರು ಅಗ್ರಾಸನವನ್ನು ವಹಿಸಿದರು ಮೊದಲು ಒಬ್ಬ ಬಾಲಕಿಯು ಇಂಗ್ಲೀಷ್ ಭಾಷೆಯಲ್ಲಿ ವೆಲ್‌ಕಂ ಹೇಳಿದಳು. ನಂತರ ಆಂಡ್ರೂ ಫಿಲಿಪ್ ಅಯ್ಯನವರು ಪ್ರಾರ್ಥನೆ ಮಾಡಿದ ಮೇಲೆ ಇಬ್ಬರು ಬಾಲಕಿಯರು ಶಾರದಾ ಸ್ತುತಿಯನ್ನು ಶ್ರೀರಾಗದಲ್ಲಿ ಹಾಡಿದರು. ಮತ್ತಿಬ್ಬರು ಬಾಲಕಿಯರು ಆರೋಗ್ಯ ವಿಷಯವನ್ನು ಕುರಿತು ಸಂಭಾಷಣೆ ಮಾಡಿದರು. ಆ ಮೇಲೆ ಇಬ್ಬರು ಬಾಲಕಿಯರು ಪತಿವ್ರತಾ ಧರ್ಮವನ್ನೂ, ಸ್ತ್ರೀ ವಿದ್ಯಾಭ್ಯಾಸವನ್ನೂ ಕುರಿತು ಓದಿದರು. ಅನಂತರ ಸ್ಕೂಲ್ ರಿಪೋರ್ಟು ಹೆ॥ ಮಾಸ್ಟರಿಂದ ಓದಲಾಯಿತು. ಆ ವೇಳೆ ರೆವರೆಂಡ್ ಎ. ಬ್ರೋಕ್‌ಬ್ಯಾಂಕ್ ಬೋಧಕರು ಮಕ್ಕಳಿಗೆ ಬುದ್ಧಿವಾದಗಳನ್ನೂ ಜನಗಳಿಗೆ ಸದುಪದೇಶವನ್ನೂ

ಹೇಳಿ ಮುಗಿಸಿದ ನಂತರ ಘನ ವೈಟ್ ಮಿಸ್ಸಿಯವರು ಬಾಲಿಕೆಯರಿಗೆ ಪೆಟ್ಟಿಗೆ, ಬೊಂಬೆ ಮೊದಲಾದ ಆಟದ ಸಾಮಾನುಗಳನ್ನು ಬಹುಮಾನವಾಗಿ ಕೊಟ್ಟರು ಆ ನಂತರ ಘನವುಳ್ಳ ಎಡ್ವರ್ಡ್ ಚಕ್ರವರ್ತಿಯವರ ಮೇಲೆ ಮಾಡಿರುವ ಇಂಗ್ಲೀಷ್ [illegible] ಮಹಾರಾಜರವರ ಮೇಲೆ ಮಾಡಿರುವ ಶ್ರೇಯಃಪ್ರಾರ್ಥನಾ ರೂಪವಾದ ಹಾಡನ್ನೂ ಬಾಲಿಕೆಯರು ದರ್ಬಾರ್ ರಾಗದಲ್ಲಿ ಹಾಡಿದರು, ತರುವಾಯ ಮಕ್ಕಳಿಗೆ ತಿಂಡಿ ಸಾಮಾನುಗಳನ್ನೂ, ಸಭೆಯವರಿಗೆ ಪುಷ್ಪ ತಾಂಬೂಲವನ್ನೂ ಕೊಟ್ಟು ಸಭೆಯನ್ನು ಮುಕ್ತಾಯಮಾಡಿದರು — ಈ ಊರಲ್ಲಿ ಕಳೆದ ವಾರ ಹೋಟಲ್ ಏಜಂಟು ಮನೆಯಲ್ಲಿರುವ ಲಕ್ಷ್ಮಕ್ಕನ ಮಗಳು ಒಂದು ಶಿಶುವನ್ನು ಹಡೆದಳು. ಅದಕ್ಕೆ ೨ ತಲೆ, ೪ ಕಣ್ಣುಗಳು, ೨ ಬಾಯಿ, ೨ ಮೂಗು, ೩ ಕಿವಿ, ಈ ಪ್ರಕಾರವಾಗಿ ಇನಿಸು ಕೆಲವು ಘಂಟೆ ಕಾಲ ಇದ್ದು, ಆ ಶಿಶುವು ಮೃತಪಟ್ಟಿತು ಶಿಶುವಿನ ತಾಯಿ ಸೌಖ್ಯವಾಗಿರುತ್ತಾಳೆ

ಕೊಪ್ಪ.—ಮಳೆಯು ಬಿಸಿಲು ಸಮವಾಗಿದೆ ರೈತರೆಲ್ಲರೂ ಬಿತ್ತನೆ ಕೆಲಸಗಳನ್ನು ಸಾಗುಮಾಡಿರುತ್ತಾರೆ ಜೀನಿಸಿನ ಧಾರಣೆಗಳು ಮಾತ್ರ ಏರುತ್ತಲೇ ಬರುತ್ತದೆ ರೂಪಾಯಿಗೆ ರಾಗಿ ೧೧ ಸೇರು, ಅಕ್ಕಿ ೫॥ ಸೇರು ಮಾರುವದು ಬಡವರು ಜೀವನ ಮಾಡುವದು ಬಹಳ ಕಷ್ಟವಾಗಿದೆ —ಇಲ್ಲಿ ಸಂತೆಯು ಬಹಳ ಚೆನ್ನಾಗಿ ನಡೆಯುತ್ತದೆ ಸೇರಿಗೆ ೨೦ ರೂಪಾಯಿ ಕೂಳ ಇದಕ್ಕೆ ಪೋಲೀಸಿನವರು ಸಗಾತ ಕೊಂಡರೆ ಸರಿಯಾಗುವದೆಂದು ಭಾವಿಸುತ್ತೇನೆ —ನಮ್ಮ ಗ್ರಾಮದ ರಾಸುಗಳಿಗೆ ದೊಡ್ಡ ರೋಗವು ಬರುವದು ನಿಲ್ಲಲೇ ಇಲ್ಲ ಜನರಿಗೆ ಆಗಿಂದಾಗ್ಗೆ ಮಲೆನಾಡು ಜ್ವರವು ಬರುವದು ಇನ್ನೂ ನಿಂತಿಲ್ಲ ನಮ್ಮ ಆಸ್ಪತ್ರೆಯ ಅಸಿಸ್ಟೆಂಟರು ರೋಗಗಳ ತಕ್ಕ ಔಷಧಿಯನ್ನು ಕೊಡುತ್ತಾರೆಂಬುದಕ್ಕೆ ಸಂದೇಹವಿಲ್ಲ —ಜನರ ಉಪಯೋಗಕ್ಕಾಗಿ ಮ್ಯುನಿಸಿಪಾಲಿಟಿಯವರು ದೀಪದ ಕಂಭಗಳನ್ನು ಇಟ್ಟಿರುತ್ತಾರೆ. ಇದಕ್ಕೆ ಕಡಮೆ ಕ್ರಯದ ಎಣ್ಣೆಯನ್ನು ಹಾಕಿ ಹಚ್ಚುವದರಿಂದ ಚೆನ್ನಾಗಿ ೩ ಗಂಟೆ ಉರಿಯುವದು ಕಷ್ಟವಾಗಿದೆ ಈ ಸಂಗತಿಯನ್ನು ನಮ್ಮ ಅಮಲ್ದಾರರು ನಿಗಾ ತಕ್ಕೊಂಡರೆ ಸರಿಯಾಗಬಹುದೆಂದು ನೆನಸುತ್ತೇನೆ

ಸೊರಬ.—ತಾರೀಕು ೨೦ನೇ ಗುರುವಾರ ರಾತ್ರಿ ೯ ಘಂಟೆ ಸಮಯದಲ್ಲಿ ಸ್ವಲ್ಪ ಭೂಮಿಯು ಗುಡುಗಿತು —ಈ ವರ್ಷ ಮಳೆಯು ಚೆನ್ನಾಗಿ ಸುರಿದಿದೆ. ಈಗ ನಾಲ್ಕಾರು ದಿನಸಗಳಿಂದ ಮಳೆಯು ಸಾಧಾರಣವಾಗಿ ಬರುತ್ತಾ ಇದೆ. ಭತ್ತದ ಪೈರು ಚೆನ್ನಾಗಿದೆ. ದವಸದ ಧಾರಣೆಯು ಇದುವರೆಗೂ ಕಮ್ಮಿ ಆಗಿಯೇ ಇಲ್ಲ ನದಿಯ ಪಕ್ಕಗಳಲ್ಲಿರುವ ತರೀ ಫಸಲು ಸಂಪೂರ್ಣ ನಾಶವಾಗಿದೆಯೆಂದು ಕೇಳುತ್ತೇನೆ. ಇದೂ ಅಲ್ಲದೆ ಸೊರಬ ತಾಲ್ಲೂಕು ಚಂದ್ರಗುತ್ತಿ ಹೋಬಳಿಯಲ್ಲಿ ಹರಿಯುವ ವರದಾ ನದಿಯ ಇಕ್ಕೆಲಗಳಲ್ಲಿರುವ ತರೀ ಫಸಲು ತುಂಬಾ ಹಾಳಾಗಿ ಹೋಗಿರುತ್ತದೆಂದೂ ವರ್ತಮಾನ ಕೇಳುತ್ತೇನೆ —ಈ ಕಾಲದಲ್ಲಿ ಚಂದ್ರಗುತ್ತಿ ಹೋಬಳಿ ನ್ಯಾರಸಿ ಗ್ರಾಮದ ಸಾಹುಕಾರ್ ಸಣ್ಣ ಶಿವಪ್ಪ ಗೌಡರೆಂಬುವರು ಈ ನಷ್ಟವಾದ ಜಮೀನಿನ ರೈತರಿಗೆ ಜೀವನಕ್ಕೋಸ್ಕರ ಪ್ರತಿ ವರ್ಷ ಇಲ್ಲಿಯ ದೊಡ್ಡ ಖಂಡುಗ ಅಂದರೆ ೧.೨೦೦ ಸೇರುಗಳುಳ್ಳಂಥಾ ನೂರು ಖಂಡುಗಗಳನ್ನು ಈಗ ೨ ವರ್ಷಗಳಿಂದ ಬಿತ್ತ ವಾಡದ ಬಗ್ಗೆ ಕೊಡುತ್ತಾ ಬಂದಿದ್ದಾರೆ ಇಂಥಾದ್ದರಲ್ಲಿ ಈ ವರ್ಷ ಸಹ ಬೆಳೆ ನಾಶವಾದ್ದರಿಂದ ನಷ್ಟಪಟ್ಟ ರೈತರು ಪುನಃ ಸದರಿ ಗೌಡರ ಬಳಿಗೆ ಪ್ರತಿ ದಿವಸ ೧೦—೨೦ ಜನರು ಹೋಗಿ ಪ್ರತಿಯೊಬ್ಬರೂ ೧೦—೧೫ ಕೊಳಗಗಳ ಮೇರೆ ತೆಗೆದುಕೊಂಡು ಬರುತ್ತಾ ಇದ್ದಾರೆ ಆದರೆ ಸದರಿ ಗೌಡರಿಗೆ ಕಳೆದ ೨—೩ ವರ್ಷಗಳ ಹಿಂದೆ ಕೊಟ್ಟ ಭತ್ತ ರೈತರಿಂದ ಸಲ್ಲದಿದ್ದರೂ ಈಗಲೂ ಧೈರ್ಯದಿಂದ ಬಡರೈತರುಗಳಿಗೆ ಸಹಾಯಮಾಡುತ್ತಾ ಇದ್ದಾರೆ ಈ ರೀತಿ ಧೈರ್ಯದಿಂದ ಹಿಂದಿನ ಬಾಕಿ ತಮಗೆ ಬಾರದಿದ್ದರೂ ರೈತರ ಕಷ್ಟವನ್ನು ನೋಡಲಾರದೆ ಈ ವಿಧವಾಗಿ ಸಾಲ ಕೊಟ್ಟು ಬಡವರನ್ನು ಕಾಪಾಡುತ್ತಾ ಇದ್ದಾರೆ ಇವರು ಕೊಟ್ಟಿರುವ ಸಾಲವು ವರ್ಷ ಒಂದಕ್ಕೆ ಸುಮಾರು ೬೦೦ ರೂ. ಆಗಬಹುದು ನಷ್ಟಹೊಂದಿದ ರೈತರು ಸದರಿ ಗೌಡರು ತಮಗೆ ಸಹಾಯಮಾಡದಿದ್ದರೆ ತಾವು ಹೊಟ್ಟೆಗೆ ಅನ್ನವಿಲ್ಲದೆ ಸತ್ತೇಹೋಗುತ್ತಿದ್ದೆವೆಂದು ಹೇಳಿಕೊಳ್ಳುತ್ತಿದ್ದಾರೆ ಈಗಲೂ ಜನರು ಪ್ರತಿದಿವಸ ಜೇನುಹುಳುಗಳಂತೆ ಗೌಡರನ್ನು ಮುತ್ತುತ್ತಿದ್ದಾರೆ ಬೇರೆಯವರು ಇಷ್ಟರಮಟ್ಟಿಗೆ ಕೊಟ್ಟು ಪುನಃಪುನಃ ಕೊಡಬೇಕೆಂದು ಬರುತ್ತಾ ಇದ್ದವರನ್ನು ತಮ್ಮ ಮನೆಯ ಸಮೀಪಕ್ಕೆ ಸಹಾ ಸೇರಿಸುತ್ತಾ ಇರಲಿಲ್ಲವೆಂದು ತೋರುತ್ತದೆ, ಏನೂ ನಿರೀಕ್ಷೆ ಇಲ್ಲದಿರುವ ಈ ಕಾಲದಲ್ಲಿ ಇವರು ಮಾಡಿರುವ ಧೈರ್ಯವೂ ಜನರು ಇವರನ್ನು ಮುತ್ತಿಕೊಂಡಿರುವ ರೀತಿಯೂ ಸ್ತೋತ್ರಾರ್ಹವಾಗಿದೆ ದಯಾಳುಗಳಾದ ಅನೇಕರು ಸದರಿ ಗೌಡರ ಮೇಲ್ಪಂಕ್ತಿಯನ್ನು ಅನುಸರಿಸಿ, ಬಡವರಿಗೆ ಸಕಾಲದಲ್ಲಿ ಸಹಾಯವನ್ನಿತ್ತು ನಮ್ಮ ದೇಶದ ಬಡತನವನ್ನು ಹೋಗಲಾಡಿಸಲು ಪ್ರಯತ್ನಿಸುವರೆಂದು ನಂಬಿದ್ದೇನೆ

ದೊಡ್ಡಬಳ್ಳಾಪುರ.—ನೆನ್ನೆ ೧೯ ನೇ ತಾ ಬುಧವಾರ ೧ ಜಡಮಟ್ಟಿಗೆ ಒಳ್ಳೇ ಮಳೆಯಾಗಿ ಪೈರುಗಳಿಗೆ ತುಂಬಾ ಅನುಕೂಲವಾಯಿತು. ಈ ಪ್ರಾಂತ್ಯವೆಲ್ಲಾ ರಾಗಿ, ಕಬ್ಬು, ವಗೈರೆ ಪೈರುಗಳು ಬಹು ಉಭಾಯಸ್ಥಿತಿಯಲ್ಲಿವೆ ೨—೩ ದಿನಗಳಿಂದಲೂ ನೋಡ ಕಟ್ಟಿ ಸುಮಾರಾಗಿ ಮಳೆ ಬೀಳುತ್ತಲೇ ಇದೆ ಕೆರೆಗಳಿಗೆ ಮಾತ್ರ ನೀರಿಲ್ಲ ದಿನಸಿಯ ಧಾರಣೆಗಳು ರೂಪಾಯಿಗೆ ರಾಗಿ ೧೩—೧೪ ಸೇರೂ, ಅಕ್ಕಿ ೬—೬॥ ಸೇರೂ ಮಾರುತ್ತೆ ಬಡವರು ಜೀವನ ಮಾಡುವದು ತುಂಬಾ ಕಷ್ಟವಾಗಿದೆ —ಇಲ್ಲಿಗೆ ೩—೪ ಮೈಲಿ ಫಾಸಲೆಯಲ್ಲಿರುವ ಕೆಸ್ತೂರು, ಒಡ್ಡರ ಪಾಳ್ಯ, ರಾಮಯ್ಯನ ಪಾಳ್ಯ, ಓಬದೇವನ ಹಳ್ಳಿ, ಈ ಗ್ರಾಮಗಳಲ್ಲಿ ಪ್ಲೇಗು ವ್ಯಾಪಿಸಿ ೪—೫ ದಿನಗಳಿಂದ ಹೋದದ್ದಕ್ಕೆ ಜನರು ಗ್ರಾಮಗಳನ್ನು ಬಿಟ್ಟು ಗುಡಿಸಲುಗಳಲ್ಲಿರುತ್ತಾರೆ. ಈ ಪೈಕಿ ಓಬದೇವನ ಹಳ್ಳಿಯಲ್ಲಿ ತುಂಬಾ ಗಲಭೆಯಾಗಿ ೧೦—೧೨ ಕೇಸುಗಳ ವರೆಗೆ ನಡೆದು ಭಯವನ್ನುಂಟುಮಾಡಿತು ಅಲ್ಲಿಗೆ ಸಮೀಪದಲ್ಲಿರುವ ನೇಗಿ ಪಂಡಿತ ರಮಾಬಾಯಮ್ಮನವರ ಮುಕ್ತಿ ಹೋಮಿನ ಮಿಸ್ಸನರಿಯವರಾದ ಮೇರಿಬಾಯಮ್ಮನವರು ಆ ಹಳ್ಳಿಯವರಿಗೆ ಧೈರ್ಯವನ್ನು ಹೇಳಿ, ಔಷಧಾದಿಗಳನ್ನು ಕೊಟ್ಟು ಸಹಾಯ ಮಾಡಿದ್ದನ್ನು ಕೇಳಿ ಎಲ್ಲರೂ ತುಂಬಾ ಸಂತೋಷಿಸಿದರು. ಸದರಿ ಸಮೀಪಗ್ರಾಮದಲ್ಲಿ ಈ ರೀತಿ ಯಾಗಿರುವದನ್ನು ನೋಡಿ ಪೇಟೆಯವರು ಭಯಪಟ್ಟಿರುತ್ತಾರೆ — ಇಲ್ಲಿನ ತಾಲೂಕ್ ಶಿರಸ್ತೇದಾರ್ ಮೇ॥ ನರಸಿಂಹಯ್ಯನವರಿಗೆ ಹೊಸ್ಕೋಟೆಗೆ ವರ್ಗವಾದದ್ದನ್ನು ಕೇಳಿ ಕಚೇರಿಯ ಗುಮಾಸ್ತರೂ ಊರಿನವರೂ ತುಂಬಾ ವ್ಯಸನಾಕ್ರಾಂತರಾದರು — ಈಗ ಆಕ್ಟಿಂಗ್ ಕೆಲಸದ ಮೇಲಿರುವ ಪೋಸ್ಟ್ ಮಾಸ್ತರರು. ಜನರ ವಿಶ್ವಾಸಕ್ಕೆ ಪಾತ್ರರಾಗಿ, ಮೊಹನತ್ತಿನಿಂದ ಕೆಲಸ ಮಾಡತಕ್ಕವರಾಗಿರುವದರಿಂದ ಇವರೇ ಇಲ್ಲಿ ಖಾಯಂ ಕೆಲಸಕ್ಕೆ ನಿಂತರೆ ಅನುಕೂಲವೆಂದು ಎಲ್ಲರೂ ಹಾರೈಸುತ್ತಾರೆ —ಇಲ್ಲಿನ ಮುನಿಸಿಪಾಲಿಟಿಯಲ್ಲಿ ಪರಸ್ಥಳದಿಂದ ಬರುವ ಜನಗಳಿಗೆ ಮಾತ್ರ ಸುಂಕ ಕೊಡುವ ಪದ್ಧತಿ ಇತ್ತು ಈಗ ಸ್ಥಳದ ಸಂತೇ ವರ್ತಕರು ಸಂತೇ ತೀರಿಸಿಕೊಂಡು ಬರುವಾಗ ಪರಸ್ಥಳದ ಜನಗಳ ತರುತ್ತಾರೆ ಆ ಜನಗಳಿಗೆ ಸುಂಕ ಕೊಡಬೇಕೆಂದು ತಗಾದೆ ಮಾಡುತ್ತಾರೆ. ಸ್ಥಳದ ಜನಗಳಿಗೆ ಮಾಫಿ ಮುದ್ರೆಯನ್ನು ಹಾಕಿಸಬೇಕೆಂದು ಟಾಂ ಟಾಂ ಮೂಲಕ ತಿಳಿಸಿರುತ್ತಾರೆ ಎಲ್ಲಿಯಾದರೂ ಒಂದು ಸ್ಥಳ ಗೊತ್ತುಮಾಡಿಸಿದರೆ ತುಂಬಾ ಅನುಕೂಲ ಈ ಸುಂಕದ ವಿಷಯವನ್ನು ಕುರಿತು ಡೆಪ್ಯುಟಿ ಕಮಿಷನರ್ ಸಾಹೇಬರಿಗೆ ಅನೇಕ ಅರ್ಜಿಗಳು ಬರುತ್ತಿವೆ —ಹಿಂದೆ ಕೋಟೆ ಅಂಜನೇಯ ದೇವಸ್ಥಾನದ ವಿಷಯವನ್ನು ಕುರಿತು, ಮುಜರಾಯಿ ಇಲಾಖೆಗೆ ಬರೆದಿದ್ದ ಅರ್ಜಿಗೆ ಇಂಡಾರ್ಸ್ ಅಪ್ಪಣೆಯಾದದ್ದನ್ನು ನೋಡಿ, ಎಲ್ಲರೂ ತುಂಬಾ ಸಂತೋಷಪಟ್ಟರು

ಬಾತ್ಮಿದಾರರಿಗೆ ನೋಟೀಸು.

ಹೆಸರು . ಊರುಗಳಲ್ಲಿ ಎಂತಹ ಬಾತ್ಮಿಗಳೇ ಇರಲಿ ಸಿಗಾಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂತವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್.

ಆರ್ಯ ಸ್ಟೂಡೆಂಟ್ಸ್ ಹೋಮ್, ಚಿತ್ರದುರ್ಗ

ಅಯ್ಯಾ,

ಚಿತ್ರದುರ್ಗ ಡಿಸ್ಟ್ರಿಕ್ಟ್ ಕೆಲವು ಗ್ರಾಮಾಂತರಗಳಲ್ಲಿ ವಾಸಮಾಡಿಕೊಂಡಿರುವ ಕಮ್ಮನಾಯನ, ವೆಲನಾಟವಡ್ಡಿ, ಬಟ್ಟರಾಜರೆಂಬ ಈ ಮೂರು ಪಂಗಡದವರು ಸುಮಾರು ೧೦,೦೦೦ ಪ್ರಜೆಗಳ ಮೇಲ್ಪಟ್ಟು ಇದ್ದಾರೆ. ಇವರೆಲ್ಲಾ ಮೂಡಲು ದೇಶದಲ್ಲಿ ವಾಸವಾಗಿದ್ದು ಕಾರಣಾಂತರಗಳಿಂದ ೧—೨ ಶತಮಾನಗಳ ಹಿಂದೆ ಈ ದೇಶಕ್ಕೆ ವಲಸೆಬಂದವರೆಂದು ಇವರ ನಡೆ ನುಡಿಗಳಿಂದಲೂ ಸ್ವಾನುಭವದಿಂದಲೂ ಗೊತ್ತಾಗುತ್ತೆ ಈ ಮೂರು ಪಂಗಡದವರು ಪರಸ್ಪರ ಸಹೋದರ ಪ್ರೀತಿವಾತ್ಸಲ್ಯವಂ ತೋರಿಸುತ್ತಾ ಸ್ವತಂತ್ರ ಜೀವಿಗಳಾಗಿಯೂ ಪರೋಪಕಾರಿಗಳಾಗಿಯೂ, ಆಂಧ್ರಭಾಷಾಪರಿಚಯಸ್ಥರಾಗಿಯೂ ಇದ್ದಾರೆ ಈ ದೇಶದ ಭಾಷೆಯಾದ ಕನ್ನಡದಲ್ಲಾಗಲೀ, ರಾಜಭಾಷೆಯಾದ ಇಂಗ್ಲೀಷಿನಲ್ಲಾಗಲೀ ತೇರ್ಗಡೆ ಹೊಂದಿದವರೊಬ್ಬರನ್ನಾದರೂ ನೋಡಬೇಕೆಂದರೆ ಇಲ್ಲವಲ್ಲಾ, ಅಂಧಕಾರವಿಲ್ಲದೆ ಸೂರ್ಯನ ಪ್ರಕಾಶವೇ ಕಾಣುವ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ವಾಸವಾಗಿಯೂ ಎಲ್ಲಾ ವಿಷಯದಲ್ಲಿ ಶಕ್ತಿವಂತರಾಗಿಯೂ ಇದ್ದು ವಿದ್ಯಾವಿಷಯದಲ್ಲಿ ಮಾತ್ರ ಹಿಂಡೆಬಿದ್ದು ಅಜ್ಞಾನವೆಂಬ ಕತ್ತಲೆಯಲ್ಲಿದ್ದುಕೊಂಡು ನ್ಯಾಯಬದ್ಧರಾಗಿರುವುದು ಸರ್ವವಿದಿತವಾಗಿದೆಯಷ್ಟೆ, ಹೀಗಾಗಲು ದೇಶಭಾಷೆ ಮತ್ತು ಇಂಗ್ಲೀಷ್ ಭಾಷೆಯ ದೊಡ್ಡ ಸ್ಕೂಲುಗಳಿರುವ ಚಿತ್ರದುರ್ಗದ ಟವನ್ನಿನಲ್ಲಿ ಈ ಪಂಗಡದ ವಿದ್ಯಾರ್ಥಿಗಳಿಗೆ ವಸತಿಗನುಕೂಲವಿಲ್ಲದಿರುವುದೇ ಮೂಲಕಾರಣವಾಗಿ ತೋರಿ ಕೆಲವು ಜನ ಆರ್ಯ ಮಹಾಶಯರು ಪ್ರೋತ್ಸಾಹ ಕೊಟ್ಟದ್ದರ ಮೇಲೆ ಚಿತ್ರದುರ್ಗದ ಟವನ್ನಲ್ಲಿ ಈ ಪಂಗಡದ ವಿದ್ಯಾರ್ಥಿಗಳಿಗೋಸ್ಕರ "ಆರ್ಯ ಸ್ಟೂಡೆಂಟ್ ಹೋಮ್" ಎಂಬ ಹೆಸರಿನಿಂದ ಭೋಜನಶಾಲೆಯೊಂದನ್ನು ಸ್ಥಾಪಿಸಲ್ಪಟ್ಟಿರುತ್ತೆ ಇದರಲ್ಲಿ ಸತ್ಯಶೌಚಾಚಾರ, ಸ್ಥೈರ್ಯ, ಧೈರ್ಯೋತ್ಸಾಹ, ಭೂತದಯಾದಿಗುಣಯುಕ್ತರಾಗಿ ಬ್ರಹ್ಮಚರ್ಯಾಶ್ರಮದಲ್ಲಿದ್ದುಕೊಂಡು ವಿದ್ಯಾರ್ಜನೆ ಮಾಡಲು ವಿದ್ಯಾರ್ಥಿಗಳಿಗೆ ಬಹಳ ಸೌಕರ್ಯವನ್ನುಂಟುಮಾಡಿರುವುದು ಇತರ ಭೋಜನ ಶಾಲೆಗಳಲ್ಲಿ ಮಾಡಿದರೆ ತಗಲುವ ಖರ್ಚಿಗಿಂತಲೂ ಇಲ್ಲಿ ಬಹಳ ಕಡಮೆ ದರ ಏರ್ಪಡಿಸಿದೆ. ವಿದ್ಯಾಭಿಮಾನಿಗಳಾದವರು ವಿದ್ಯಾರ್ಥಿಗಳನ್ನು ಈ ಸ್ಟೂಡೆಂಟ್ಸ್ ಹೋಮಿಗೆ ಕಳುಹಿಸಿ, ವಿದ್ಯಾರ್ಜನೆ ಮಾಡಿಸಿ, ಈ ಪಂಗಡದವರಿಗುಂಟಾಗಿರುವ ವಿದ್ಯಾಹೀನತೆಯನ್ನು ಹೋಗಲಾಡಿಸಿ, ದೇಶಬಾಂಧವರಂತೆ ಕೀರ್ತಿಯುತರಾಗಿ ಪ್ರಾರ್ಥಿಸುವ

ಎಚ್ ವಿ ಹನುಮಂತರಾಯ, ಮ್ಯಾನೇಜರ್

ಉಪಾಧ್ಯಾಯರುಗಳ ಪುರೋಭಿವೃದ್ಧಿಯು

ಅಯ್ಯಾ,

ದಯಾಳುಗಳಾದ ನಮ್ಮ ಮೈಸೂರ್ ಸರ್ಕಾರದವರು ಚಿಕ್ಕ ಮಕ್ಕಳಿಗೆಲ್ಲಾ ಸ್ಕೂಲ್ ಫೀಜನ್ನು ಮಾಫ್ ಮಾಡಿದ್ದಲ್ಲದೆ, ಬಡ ಮಾಸ್ತರುಗಳಿಗೆಲ್ಲಾ ಹತ್ತು ರೂಪಾಯಿ ಕಾಯಂ ಸಂಬಳವನ್ನು ಗೊತ್ತುಮಾಡಿ, ಲೋಕೋತ್ತರವಾದ ಕೀರ್ತಿಯನ್ನೂ ಧರ್ಮವನ್ನೂ ಸಂಪಾದಿಸಿದ್ದು ಅಪಾರವಾದ ಸಂತೋಷವನ್ನು ಉಂಟುಮಾಡಿರುವುದು ಇದರಿಂದ ಆ ಮಾಸ್ತರುಗಳಿಗೆ ಈ ಕ್ಷಾಮಕಾಲದಲ್ಲಿ ತಮ್ಮ ಸಂಸಾರವನ್ನು ಕಾಪಾಡಿಕೊಳ್ಳುವಷ್ಟು ದೃಢತ್ವ ಉಂಟಾಗಿ ಸಂಪೂರ್ಣವಾದ ಕೆಲಸದ ಮೇಲಿನ ಆಶೆಯಿಂದ ಒಳ್ಳೇ ಚಟುವಟಿಕೆಯಿಂದ ಕೆಲಸಮಾಡಲು ಅವಕಾಶವಾಗಿರುವುದು. ಮತ್ತು ಮಾಸ್ತರ ಕೆಲಸವು ಜನಗಳಲ್ಲಿ ಒಳ್ಳೇ ಯೋಗ್ಯತೆಯನ್ನು ಸಂಪಾದಿಸಿಕೊಳ್ಳ ತಕ್ಕದಾಗಿರುತ್ತದೆ ಆದರೆ ವಿದ್ಯೆ ಬುದ್ಧಿ ನಡತೆಗಳಲ್ಲಿ ಯೋಗ್ಯತೆಯನ್ನು ಹೊಂದಿದ್ದರೂ ಅದು ಬಲವಾದ ಐಶ್ವರ್ಯ ಸಾಧನವಾಗದಿದ್ದರೆ ಮಾತ್ರ ಅವರನ್ನು ಯಾರೂ ಪುರಸ್ಕರಿಸುವುದಿಲ್ಲವು. ಇದು ಅಲ್ಲದೆ ಇವರು ಅಷ್ಟಷ್ಟು ಜ್ಞಾನಾರ್ಜನೆಯನ್ನು ಮಾಡಿದಾಗ್ಯೂ ಸಹ ಸಂಬಳದಲ್ಲಿ ಒಬ್ಬ ಜವಾನನ ಯೋಗ್ಯತೆಗೆ ಸಮಾನವಾಗಿರಬೇಕಾಗಿತ್ತು ಇದುವರೆವಿಗೂ ಅನೇಕ ಸ್ಕೂಲ್ ಮಾಸ್ತರುಗಳು ಈ ಕೆಲಸದಿಂದ ತಮಗೆ ಸುಪೂರ್ಣವಾಗಿ ಜೀವನವಾಗದೇ ಇದ್ದುದರಿಂದ "ಈ ಕೆಲಸವಿದ್ದರೇನು? ಇಲ್ಲದಿದ್ದರೇನು?" ಎಂಬ ಖಾಲಿ ಮಾಡಿಕೆಯುಂಟಾಗಿ, ಮೇಲೆ ಬೇಕಾಗುವ ಹಣ ಸಂಪಾದನೆಗೋಸ್ಕರ ಬೇರೆ ಕೆಲಸಗಳನ್ನು ಮಾಡುತ್ತಾ, ಈ ಸ್ಕೂಲುಗಳ ಮೇಲೆ ಹಾಕತಕ್ಕ ಮನಸ್ಸನ್ನೂ ಕಾಲವನ್ನೂ ಸಂದರ್ಭಾನುಸಾರ ಇತರೇ ಕೆಲಸಗಳ ಮೇಲೆ ಉಪಯೋಗಿಸಬೇಕಾಗಿದ್ದಿತು. ವಿದ್ಯೆಯು ಮನಃಪೂರ್ವಕವಾಗಿ ಮಾಸ್ತರು ಅದರ ಗುಟ್ಟನ್ನು ಬಿಟ್ಟು ಹೇಳಿಕೊಟ್ಟರೆ ಬರುವುದಲ್ಲದೆ, ಮಾಸ್ತರಿಗೆ ಬಲಾತ್ಕರಿಸಿ ಹೇಳಿಸುತ್ತೇವೆ ಎಂದರೆ ಅಷ್ಟು ಸಾಧ್ಯವಾಗಲಾರದು ಮತ್ತು ಬಾಲ್ಯದಿಂದ ಪ್ರಾಪ್ತವಯಸ್ಕರಾಗುವ ವರಿವಿಗೂ ಓದಿ, ನಂತರ ಬೋಧನಾ ಕಾರ್ಯದಲ್ಲಿಯೇ ತೊಡಗಿದ ಮಾಸ್ತರು ಇದ್ದ ಕೆಲಸವನ್ನು ಬಿಡುವುದರಿಂದಲೇ ಆಗಲೀ, ಕೆಲಸವನ್ನು ತೆಗೆಯುವುದರಿಂದಲೇ ಆಗಲೀ, ತರುವಾಯ ಯಾವ ಕೆಲಸವನ್ನು ಮಾಡುವುದಕ್ಕೂ ಅನುಭವವಿಲ್ಲದೆ, ಜೀವಶವಗಳಾಗಬೇಕಾಗುತ್ತದೆ. ಆದುದರಿಂದ ಗವರ್ನಮೆಂಟಿನವರು ಬಡ ಮಾಸ್ತರುಗಳಿಗೆ ಜೀವದಾನವನ್ನೇ ಮಾಡಿದ ಹಾಗಾಯಿತು ಆದರೆ ಪ್ರತಿಯೊಂದು ಸತ್ಕಾರ್ಯಕ್ಕೂ ಮೇಲ್ಪಂಕ್ತಿಯನ್ನು ಹಾಕಿಕೊಡುವುದರಲ್ಲಿ ಮೈಸೂರ ಡಿಪಾರ್ಟ್‌ಮೆಂಟೇ ಮೊದಲನೆಯದಾಗಿರುತ್ತದೆ ಇದು ಕೇವಲ ಧರ್ಮಪದವಾದುದು. ಇದು ಪ್ರತಿಯೊಬ್ಬರ ಹಿತವನ್ನೂ ಕೋರತಕ್ಕದಾಗಿಯೂ ಉಂಟುಮಾಡತಕ್ಕದಾಗಿಯೂ ಇರುತ್ತದೆ ಇಹಪರಗಳೆರಡಕ್ಕೂ ಸಾಧನವಾಗಿರುವ ಈ ಡಿಪಾರ್ಟ್‌ಮೆಂಟಿನಲ್ಲಿ ಕೆಲಸಮಾಡತಕ್ಕ ಮಾಸ್ತರುಗಳಿಗೆ ಮಾತ್ರ ಒಂದೂ ನಿರ್ಧಾರವಿಲ್ಲದೆ ೩, ೬, ೪ ರೂಪಾಯಿ ಸಂಬಳವನ್ನು ಕೊಡುತ್ತಲಿರುವುದು ಬಹು ಕಷ್ಟಕರವಾಗಿದೆ ಈ ಮಾಸ್ತರುಗಳು ಸಹ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ, ಮಕ್ಕಳ ಬೋಧನಾಕಾರ್ಯದಲ್ಲಿಯೇ ತೊಡಗಿರುವವರಾಗಿರುತ್ತಾರೆ ಮತ್ತು ಈ ಅಲ್ಪ ಸಂಬಳದಿಂದ ಅವರು ಜೀವನಮಾಡುವುದು ಬಹು ಕಷ್ಟವಾಗಿದೆ ಆದುದರಿಂದ ದಯಾಳುಗಳಾದ ಮೈಸೂರ ಡಿಪಾರ್ಟ್‌ಮೆಂಟಿನವರೂ ಸಹ ಗವರ್ನಮೆಂಟಿನವರಂತೆ ಆ ಮಾಸ್ತರುಗಳ ಯೋಗ್ಯತೆಯನ್ನು ಪರಿಪಾಲಿಸಿ, ಸರೀಕರಿಗೆ ಸಮಾನರನ್ನಾಗಿ ಮಾಡಬೇಕಾಗಿ ಬೇಡುತ್ತೇನೆ

ಎಚ್ ನಂಜಪ್ಪ, ಶಿಕಾರಿಪುರ

ಮೂಢಭಕ್ತಿಯ ಕಾರ್ಯಗಳು.

ಅಯ್ಯಾ,

ಕೊಡಗು ನಂಜರಾಯಪಟ್ಟಣದ ತಾಲ್ಲೋಕು ಕಸ್ಬೆ ಹೋಬಳಿ ಹೆಬ್ಯಾಲೆ ಗ್ರಾಮದಲ್ಲಿ ಕಳೆದ ಮೇ ತಿಂಗಳಲ್ಲಿ ಪ್ರಾರಂಭವಾಗಿದ್ದ ಕಾಲರಾ ಉಪದ್ರದಲ್ಲಿ ಗ್ರಾಮವಾಸಿಗಳು ಮೇರೆ ಗ್ರಾಮದ ಪಟೇಲರು ಮುಖ್ಯಸ್ಥರೂ ಸೇರಿ ಕನ್ನಂಬಾಡಿ ಕಾಳಮ್ಮನವರ ಕಳಸ ತಂದು ಗ್ರಾಮದಲ್ಲಿ ಪದ್ಧತಿ ಮೇರೆ ಪೂಜಿಸುತ್ತಾ ಇದ್ದರು. ಇದರಂತೆಯೇ ಸದರಿ ಗ್ರಾಮದಲ್ಲಿ ಇರುವ ಆಚಾರಿಗಳೇ ಬೇರೆ ತಮ್ಮ ಕುಲದೇವತೆಯಾದ ಕಾಳಮ್ಮನ ಕಳಸವನ್ನು ತಮ್ಮಗಳ ಆಲಾಹಿದಾ ಮನೆಯಲ್ಲಿ ಇಟ್ಟು, ನಂಜಾಚಾರಿ ಯಾನೆ ಪುಟ್ಟಸ್ವಾಮಿ ಎಂಬುವನಿಂದ ಪೂಜಿಸುತ್ತಾ, ಭಕ್ತಿಯಿಂದ ಸರ್ವರೂ ಇರುವವರಂತೆ ಮನೆಮಠ, ಹಟ್ಟಿ, ಬಾಗಲು ಶುಚಿ ಮಾಡಿಕೊಂಡು ಇತ್ತಂಡದವರೂ ನಡೆಯುತ್ತಾ ಬರುತ್ತಿರುವಲ್ಲಿ ಆಚಾರಿಗಳು ಪೂಜಿಸುತ್ತಾ ಇದ್ದ ಕಾಳಮ್ಮ ದೇವರು ಪೂಜಾರಿ ಪುಟ್ಟಸ್ವಾಮಿಯು ಕಾಳಮ್ಮನವರ ಆವೇಶ ಬಂದು ಜನಸಮೂಹದೊಡನೆ [illegible]ಚತ್ರಿ, ಪ್ರಾಮರ, ತಾಳ, ನಗಾರಿ ಸಮೇತನಾಗಿಯೂ ಸ್ಮಶಾನಕ್ಕೆ ಹೋಗಿ ಸ್ನಾನ ಮಾಡುತ್ತಾ, ನೀರಿನಲ್ಲಿ ಮುಳುಗಿ ಎದ್ದು ಒಡನೆಯೇ ಕುಂಕುಮ ಅರಿಶಿನ ತೆಗೆದು ಸರ್ವರಿಗೂ ಕೊಟ್ಟು, ತಾನು ಸಹ ಮುಖಕ್ಕೆ ಅಲಂಕರಿಸಿಕೊಂಡು, ಸೀರೆಯನ್ನುಟ್ಟುಕೊಂಡು ಬೆಳ್ಳಿ ಬಂಗಾರದ ಒಡವೆಗಳನ್ನು ಅಲಂಕರಿಸಿಕೊಂಡು ನಾಟ್ಯವನ್ನು ಮಾಡುತ್ತಾ; ತಮ್ಮಗೆ ಸಹಾಯಕರಾದ ಹನುಮಂತರಾಯ, ವೀರಭದ್ರ ದೇವರು, ದಂಡಿನಮಾರಿ ಎಂಬ ದೇವತೆಗಳ ಆವೇಶದವರನ್ನು ಜೊತೆಯಲ್ಲಿ ಇಟ್ಟುಕೊಂಡು ಕೈಯಲ್ಲಿ ಕತ್ತಿಗಳನ್ನು ಹಿಡಿದುಕೊಂಡು, ಕತ್ತಿಗಳಿಂದ ಹೊಟ್ಟೆಗೆ ಹೊಡೆದುಕೊಳ್ಳುತ್ತಾ, ಗ್ರಾಮದ ಬೀದಿ ಬೀದಿಗಳಲ್ಲಿ ಸುತ್ತಿಸುತ್ತಾ, ಕಾಯಿಲೆಸ್ಥರ ಮನೆಗೆ ಹೋಗಿ ಅವರಿಗೆ ಧೈರ್ಯವನ್ನು ಹೇಳುತ್ತಾ, ಅವರು ಕೊಡುವ ಕಾಣಿಕೆಯನ್ನು ಪಟ್ಟಿಗೆ ಹಾಕಿಸಿಕೊಳ್ಳುತ್ತಾ, ಇದೇ ರೀತಿ ಪ್ರತಿ ಮಂಗಳವಾರ ಶುಕ್ರವಾರ ಬಿಡದೆ ನಡೆಸುತ್ತಾ, ಹೊಳೆಯಲ್ಲಿ ಕುಂಕುಮ ಅರಿಸಿನ ಮಾಡುವ ಮಹತ್ತಿನಿಂದ ಗ್ರಾಮದವರು ಇತರ ಗ್ರಾಮದವರು ಸಹ ಸಾಕ್ಷಾತ್ ಪಾರ್ವತಿಯೇ ಹೆಬ್ಯಾಲೆ ಗ್ರಾಮದಲ್ಲಿ ನೆಲಸಿರುತ್ತಾಳೆಂಬುದಾಗಿ ಹೇಳುವ ಆಶ್ಚರ್ಯಕರವಾದ ಮಾತು ಕೋರ್ಟು ಕಚೇರಿಗೂ ಮತ್ತು ಅನೇಕ ದೂರದ ಗ್ರಾಮಕ್ಕೂ ಸಹ ಪ್ರಕಾರ ಹುಟ್ಟಿ ೨—೩ ಹರದಾರಿ ದೂರದಿಂದಲೂ ಹೆಣ್ಣು ಗಂಡು ಅಧಿಕವಾಗಿ ಬಂದು ನೋಡಿಕೊಂಡು ಹೋಗುತ್ತಾ ಬರುತ್ತಿರುವರು ಮತ್ತು ಸದರಿ ಗ್ರಾಮದ ಮುಖ್ಯಸ್ಥರಾದ ಸಾನುಭಾರಿ ಗೌಡಗಳೂ ಇತರ ಸಾತನ್ನರೂ ಆದ ಕೆಲವು ಮುಖ್ಯಸ್ಥರು ಸಹ ತಮ್ಮ ತಮ್ಮ ಮನೆಗಳ ಮುಂದೆ ಮಂಟಪ ತೋರಣಗಳನ್ನು ಶೃಂಗರಿಸಿ, ಹಸಿದು ಸ್ನಾನಮಾಡಿ ಮಡಿಯಿಂದ ಆವೇಶ ಬರುವ ಆಚಾರಿಯನ್ನು ಮಂಟಪದಲ್ಲಿ ಕುರ್ಚಿ ಮೇಲೆ ಕೂರಿಸಿ, ಆಯಾ ಮನೆಯ ಗಂಡ ಹೆಂಡರು ಸುತರು ಸುತೆಯರು [illegible]ಯಾಗಿ ಪಾದಪೂಜೆಯನ್ನು

ನಾಡಿ ಪಾದತೀರ್ಥವನ್ನು ತಮ್ಮಗಳ ಶಿರಸ್ಸಿನ ಮೇಲೆ ಪ್ರೋಕ್ಷಿಸಿಕೊಂಡು, ಬಹಳ ಆನಂದದಿಂದ ಪಾದಪೂಜೆಯನ್ನು ನಡಿಸುತ್ತಾ ಬರುವದು ಸದರಿ ಹೋಬಳಿಗೆ ಸೇರಿದ ನಾಲೂರು ಗ್ರಾಮದಲ್ಲಿ ಇರುವ ನಾಮಧಾರಿ ಗೌಡಗಳಾದ ಪಟೇಲ್ ಮುಂತಾದ ಮುಖ್ಯಸ್ಥರು ನೋಡಿ, ಸದರಿ ಆವೇಶಧಾರಿಯಾದ ನಂಜಾಚಾರಿ ಯಾನೆ ಪುಟ್ಟಸ್ವಾಮಿಯನ್ನು ಪಲ್ಲಕ್ಕಿ ಮೇಲೆ ಕೂರಿಸಿಕೊಂಡು, ಬೋಯಿಗಳಿಂದ ಹೊರಿಸಿಕೊಂಡು, ಛತ್ರಿ, ಚಾಮರ, ಕಾಳೆ, ಮೇಳ ಸಮೇತವಾಗಿ ಹೆಬ್ಬೂರಿ ಗ್ರಾಮದ ಪಟೇಲರೂ ಮುಖ್ಯಸ್ಥರೂ ಆದಿಯಾಗಿ ನಾಲೂರು ಗ್ರಾಮಕ್ಕೆ ಬಂದು ಅಲ್ಲಿ ಪಟೇಲ್ ಮುಂತಾದ ಮುಖ್ಯಸ್ಥರ ಮನೆಯಲ್ಲಿ ಪಾದಪೂಜೆಯನ್ನು ಮಾಡಿಸಿಕೊಂಡು ಕಾಣಿಕೆಯನ್ನು ತೆಗೆದುಕೊಂಡು ಹೋದದ್ದು ಸಹ ನಾಡುಗ್ರಾಮ ಕಚೇರಿಗೆ ಸಹ ತಿಳಿದು, ಈ ಆಶ್ಚರ್ಯವನ್ನು ನೋಡಬೇಕಾಗಿ ಹೋಬಳಿ ಪಾರುಪತ್ತೇಗಾರರು, ಪೊಲೀಸು ಪಾರುಪತ್ತೇಗಾರರು, ಕಸ್ಬೆ ಸೇಟ್ ಶೆಟ್ಟರು, ಪುರೋಹಿತರು ಸಹ ಅನೇಕರು ಭಕ್ತಿಯಿಂದ ಹಣ್ಣು, ಕಾಯಿ, ಕರ್ಪೂರ, ಸಾಂಬ್ರಾಣಿ ಊದಕಡ್ಡಿ ಸಹ ತೆಗೆದುಕೊಂಡು ಹೊಳೆಗೆ ಬಂದು, ಆ ದೇವರ ವೇಷಧಾರಿಯು ಹೊರಡುವ ವರೆಗೆ ಕಾದು ಇದ್ದು, ಆ ವೇಷಧಾರಿಯೂ ಹೊಳೆಗೆ ಹೋಗಿ ಸ್ನಾನಕ್ಕೆ ನಿಂತ ಒಡನೆಯೇ ಪಾರುಪತ್ತೇಗಾರರು ಸೇಟ್ ಶೆಟ್ಟರು ಪುರೋಹಿತರು ಸಹ ಹೋಗಿ ಆ ವೇಷಧಾರಿಯು ಹತ್ತಿರ ನಿಂತುಕೊಂಡು—ತಮ್ಮ ಮಹತ್ವನ್ನು ನಮಗೂ ತೋರಿಸಬೇಕು, ನಾವು ನೋಡಲಿಲ್ಲ ನೋಡಿ ಮುಕ್ತರಾಗಬೇಕೆಂದು ಎಷ್ಟೋ ಕರುಣದಿಂದ ಬೇಡಿಕೊಂಡಾಗ್ಯೂ ಮುನ್ನಿನಂತೆ ಅರಿಸಿನ ಕುಂಕುಮ ಮಾಡುವ ಮಹತ್ವನ್ನು ತೋರಿಸದೇನೂ ಅವರು ಕೇಳುವ ಮಾತಿಗೆ ಉತ್ತರ ಕೊಡದೇನೂ ಮೌನವಾಗಿ ಇದ್ದದ್ದನ್ನು ಕಂಡು, ಎಲ್ಲರೂ ಹಾಸ್ಯ ಮಾಡಿಕೊಂಡು ಹೋದರು ಅವರು ಹೋದ ವೇಳೆ ಆ ವೇಷಧಾರಿಯು—ನನ್ನನ್ನು ಹಾಸ್ಯಮಾಡಿದವರನ್ನು ೩೦ ದಿವಸದಲ್ಲಿ ರಕ್ತಕಾರಿಸುತ್ತೇನೆ ಮತ್ತು ಇಂಥಾ ಜಾಗದಲ್ಲಿ ನಾನು ಒಡೆದು ಮೂಡುತ್ತೇನೆ ಎಂಬದಾಗಿ ಒಂದು ಜಾಗವನ್ನು ತೋರಿಸಿ,—ಈ ಕಂಗುಡು ಆಗುವ ವರಿವಿಗೂ ನಾನು ಆ ವೇಷದ ಮೇಲೆ ಬರುವದಿಲ್ಲವೆಂತ ಆ ದಿವಸವೇ ಆ ವೇಷ ನಿಂತುಹೋಗಿರುತ್ತೆ. ಹಾಸ್ಯಮಾಡಿದವರು ೨-೩ ತಿಂಗಳಾದಾಗ್ಯೂ ದೇವರ ದಯದಿಂದ ಕ್ಷೇಮದಲ್ಲಿ ಇರುತ್ತಾರೆ. ಪಾದಪೂಜೆ ಮಾಡಿದ ಗೌಡಗಳು ವ್ಯಸನದಲ್ಲಿ ಇರುತ್ತಾರೆ. ಈ ಗೌಡಗಳು ಸುಲಭದಲ್ಲಿ ಮುಕ್ತರಾಗಬೇಕೆಂಬದಾಗಿ ಆಚಾರಿಯ ಪಾದಪೂಜಾದಿಗಳನ್ನು ಮಾಡಿ ಇರುತ್ತಾರೆ ಇವರು ಇಂದು ನಾಳೆ ಮುಕ್ತರಾಗಬಹುದು ಇವರಂಥಾ ಆದಾರ ಬುದ್ಧಿಶಾಲಿಗಳನ್ನು ಕಾಣಲಿಲ್ಲ.

ಬಾತ್ಮಿದಾರ.

ಮುಖ್ಯವಾದ ವಿಷಯಗಳು.

ಬಂಗಾಳಾ ವ್ಯವಸಾಯದ ಇಲಾಖೆಯವರು ಅನೇಕ ವರ್ಷಗಳ ಕಾಲ ಅಜಮಾಯಿಷಿ ನಡಿಸಿ ಬಂಗಾಳಾದಲ್ಲಾಗುವ ಪೈರುಗಳ ಅನೇಕ ತಳಿಗಳು ಬಹಳ ಉತ್ತಮವಾಗಿರುತ್ತವೆಂದು ನಿರ್ಧರಿಸಿ, ಸದರಿ ತಳಿಗಳ ಬೀಜವನ್ನು ಸರಬರಾಜು ಮಾಡುವ ಉದ್ದೇಶ್ಯ ಒಂದು ಕೋಠಿ ಸ್ಥಾಪಿಸಿರುತ್ತಾರೆ ಬೀಜವನ್ನು ತರಿಸಿಕೊಳ್ಳಬಯಸುವವರು ಸದರಿ ಇಲಾಖೆಯವರಿಗೆ ಬರೆದುಕೊಳ್ಳಬಹುದು. ಬೀಜವನ್ನು ಅಸಲ್ ಖರೀದಿಗೇನೇ ಕೊಡುತ್ತಾರಂತೆ.

ಸ್ನಾಯುಗಳ ರಚನೆಗೆ ಆಧಾರಭೂತವಾದ ಪುಷ್ಟಿ ಪದಾರ್ಥಗಳು ಅಕ್ಕಿಯಲ್ಲಿರುವದಕ್ಕಿಂತಲೂ ಗೋಧಿಯಲ್ಲಿ ಸುಮಾರು ಎರಡರಷ್ಟು ಹೆಚ್ಚಾಗಿವೆ. ಧಾನ್ಯದ ಅಂಶವಾದ ಬೂದಿಯು ಧಾತುಪದಾರ್ಥವಾಗಿರುತ್ತದೆ. ಮತ್ತು ಈ ಬೂದಿಯಲ್ಲಿ ಸುಮಾರು ಅರ್ಧಭಾಗ ಎಲುಬುಗಳಾಗುವ ರಂಜಕದ್ರಾವಕವಾಗಿ ಇರುತ್ತದೆ. ಅಂದರೆ ಈ ಪದಾರ್ಥವು ಗೋಧಿಯಲ್ಲಿ ಅಕ್ಕಿಯಲ್ಲಿರುವದಕ್ಕಿಂತಲೂ ಮೂರರಷ್ಟು ಹೆಚ್ಚಾಗಿದೆ ಈ ಅಂಶಗಳು ಬಹಳ ಮುಖ್ಯವಾದವುಗಳು ಹೇಗೆಂದರೆ, ಈ ಪ್ರಾಂತ್ಯಗಳಲ್ಲಿ ಅಕ್ಕಿಯೇ ಮುಖ್ಯವಾದ ಆಹಾರ ಪದಾರ್ಥವಾಗಿರುತ್ತದೆ ಅಲ್ಲದೆ ಬಿಹಾರ್ ಪ್ರಾಂತ್ಯದಲ್ಲಿಯೂ ಕೂಡ ಜನಸ್ತೋಮಸ್ಥರೆಲ್ಲಾ ಗೋಧಿಯನ್ನು ಬಿಟ್ಟು ಅಕ್ಕಿಯನ್ನೇ ಆಹಾರ ಪದಾರ್ಥವಾಗಿ ಉಪಯೋಗಿಸು ತೊಡಗಿದಾರೆ.

ಈಚೆಗೆ ಬಂಗಾಳಾ ದೇಶದ ವ್ಯವಸಾಯ ಸ್ಥಿತಿಯಲ್ಲಿ ಅನೇಕ ವ್ಯತ್ಯಾಸಗಳು ಮತ್ತು ತಿದ್ದುಪಾಟುಗಳು ತೋರ್ಪಡುತ್ತಲಿವೆ. ಒಂದೇ ಜಮೀನಿನಲ್ಲಿ ಅನೇಕ ತರಹ ಬೆಳೆಗಳನ್ನಿಡುವದು ವಿಶೇಷ ರೂಢಿಯಲ್ಲಿ ಬರುತ್ತದೆ. ಮೊದಲು ನೀಲಿ ಬೆಳೆಯುತ್ತಿದ್ದ ಜಮೀನಿನಲ್ಲಿ ಕೇವಲ ನೀಲಿಯನ್ನು ಬೆಳೆಯುವದು ತಪ್ಪಿ ಕಬ್ಬು, ಮತ್ತು ವಿಧವಿಧವಾದ ಧಾನ್ಯಗಳನ್ನು ಬೆಳೆಯ ತೊಡಗಿದಾರೆ ನೀಲಿ ಜಮೀನುಗಳಲ್ಲಿ ವಿಶೇಷವಾಗಿ ಕಬ್ಬು ಬೆಳೆಯುವದು ಈಚೆಗೆ ಬಹಳ ಪ್ರಬಲವಾಗಿರುತ್ತೆ. ಇದಕ್ಕಾಗಿ ಅನೇಕ ಸ್ಥಳಗಳಲ್ಲಿ ಕಾರ್ಖಾನೆಗಳನ್ನು ಏರ್ಪಡಿಸಿ ಇಂಗ್ಲೆಂಡ್ ದೇಶದಿಂದ ನೂತನ ತರದ ಯಂತ್ರಗಳನ್ನು ತರಿಸಿ ಉಪಯೋಗಿಸುತ್ತಿದಾರೆ. ಇದಕ್ಕಾಗಿ ಎಷ್ಟೋ ಹಣ ಖರ್ಚು ಆಗಿರುತ್ತೆ. ಕಾರ್ಖಾನೆಗಳಿಗೆ ಅನೇಕ ದೂರ ಭೂಸಲುಗಳಿಂದ ಕಬ್ಬು ಬರುತ್ತದೆ. ಜಮೀನು ಹಿಡುವಳಿದಾರರು ಕೂಡ ಅಸಂಖ್ಯಾತವಾಗಿ ತಮ್ಮ ಬೆಳೆಗಳನ್ನು ಕಾರ್ಖಾನೆಗಳಿಗೆ ಕಳುಹಿಸುತ್ತಾರಂತೆ. ಇವರುಗಳಿಗೆಲ್ಲಾ ಪ್ರತ್ಯೇಕವಾಗಿ ಲೆಕ್ಕಗಳನ್ನು ಇಡಬೇಕಾಗಿರುತ್ತದೆ. ಒಂದು ಕಾರ್ಖಾನೆಯು ಒಂದು ಭಾಗದಲ್ಲಿಯೇ ಈ ಕಬ್ಬಿನ ವ್ಯಾಪಾರದಲ್ಲಿ ಈ ರೀತಿ ಸುಮಾರು ೪,೦೦೦ ಲೆಕ್ಕಗಳಿಟ್ಟಿರುತ್ತಾರಂತೆ.

ಹವಾ ಸ್ಥಿತಿಯನ್ನು ಸೂಚಿಸುವ ಗಿಡಗಳು ಇಂಡಿಯಾ, ಕ್ಯೂಬಾ, ಮರುಷಸ್ ಮುಂತಾದ ಉಷ್ಣನೆಲದ ಪ್ರದೇಶಗಳಲ್ಲಿ ಬೆಳೆಯುತ್ತವೆ. ನೋಟಕ್ಕೆ ಇತರ ಗಿಡಗಳಂತೆ ಕಾಣುತ್ತವೆಯೇ ವಿನಹಾ ಇವುಗಳಲ್ಲಿ ವಿಲಕ್ಷಣಗಳೇನೂ ತೋರುವದಿಲ್ಲ. ಇವು ಅತಿಸೂಕ್ಷ್ಮ ಸ್ವಭಾವವುಳ್ಳವುಗಳಾದ ಕಾರಣ ಇವುಗಳನ್ನು ಹವಾ ಗಿಡಗಳೆಂತ ಕರೆಯುತ್ತಾರೆ ಅನೇಕ ದಿವಸಗಳ ನಂತರ ಸಂಭವಿಸಬಹುದಾದ ಹವಾದಲ್ಲಿನ ವ್ಯತ್ಯಾಸಗಳನ್ನು ಈ ಗಿಡಗಳು ಮುಂದಾಗಿ ಸೂಚಿಸುತ್ತವಲ್ಲದೆ, ಮುಂದೆ ಬರಬಹುದಾದ ಬಿರುಗಾಳಿ, ಸುಂಟರಗಾಳಿ, ಭೂಕಂಪ, ಅಗ್ನಿಪರ್ವತಗಳ ಉದ್ರೇಕ, ಮುಂತಾದವುಗಳ ವಿಚಾರದಲ್ಲಿಯೂ ಸಹ ಎಚ್ಚರಿಸುತ್ತವೆ ಇವುಗಳ ಸಹಾಯದಿಂದ ಪ್ರೊಫೆಸರ್ ನೋವಾಕ್‌ಯವರು ಒಳ್ಳೆ ಹವಾ, ಕೆಟ್ಟ ಹವಾ, ಮಳೆ, ಬಿಸಲು ಬರತಕ್ಕ ಕಾಲಗಳನ್ನು ಬಹಳ ಖಚಿತವಾಗಿ ಹೇಳಬಲ್ಲರು. ಮುಖ್ಯವಾಗಿ ಹೀಗೆ ಭವಿಷ್ಯದ್ಸಂಭವಗಳನ್ನು ಹೇಳಬೇಕಾದರೆ ಈ ಗಿಡಗಳನ್ನು ರಾತ್ರಿ ಹಗಲು ಎಡೆಬಿಡದೆ ನೋಡಿಕೊಂಡು ಇರಬೇಕು. ಕಳೆದ ೨೦ ವರ್ಷಗಳಲ್ಲಿ ಉಂಟಾಗಿರತಕ್ಕ ಭೂಕಂಪಗಳನ್ನು ಪ್ರೊಫೆಸರ್ ನೋವಾಕ್‌ಯವರು ಮುಂದಾಗಿಯೇ ಸೂಚನೆ ಕೊಟ್ಟಿರುತ್ತಾರೆ. ಗಿಡದ ಚಲನೆಗಳನ್ನು ಹುಷಾರಾಗಿ ಮಂಡಟ್ಟು ಮಾಡಿಕೊಂಡರೆ ಈ ಅನಾಹುತಗಳು ಇಂಥಾ ದಿವಸ ಇಂಥಾ ಸ್ಥಳದಲ್ಲೇ ಸಂಭವಿಸುತ್ತವೆಂಬ ಅಂಶವನ್ನು ನಿರ್ಧರಿಸಬಹುದಲ್ಲದೆ ಅನಾಹುತಗಳ ಸ್ವಭಾವವನ್ನು ಸಹ ತಿಳಿದುಕೊಳ್ಳಬಹುದಂತೆ. ಈ ಗಿಡಗಳನ್ನು ಬೆಂಗಳೂರು ಲಾಲ್‌ಬಾಗಿನಲ್ಲಿ ಬೆಳೆಸಿರುತ್ತಾರೆ. ಮತ್ತು ಮೈಸೂರು ಪಟ್ಟಣದಲ್ಲಿ ಮುಂದಿನ ತಿಂಗಳಲ್ಲಿ ನಡೆಗುವ ದಸರಾ ಎಗ್ಜಿಭಿಷನ್ ಕಾಲದಲ್ಲಿ ಇವುಗಳನ್ನು ಪ್ರದರ್ಶಿಸುವವರಾಗಿದಾರೆ.

ಮೈಸೂರು ಗೆಜೆಟ್ ಸಂಗ್ರಹ.

ಕೋಲಾರ್ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಮೆ॥ ಸಿ. ಶ್ರೀಕಂಠೇಶ್ವರ ಐಯ್ಯರವರಿಗೆ ಅಗಸ್ಟ್ ೧೭ ರಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸಬ್ ಡಿವಿಜನ್ ಆಫೀಸರ್ ಮೆ॥ ಮಿರ್ ಹಂಜಾ ಹುಸ್ಸೇನ್‌ಯವರು ಕೋಲಾರ್ ಡಿಸ್ಟ್ರಿಕ್ಟಿನ ಛಾರ್ಜನ್ನು ವಹಿಸತಕ್ಕದ್ದು.

ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ಸಬ್ ಅ॥ ಸರ್ಜನ್ ಮೆ. ಸಿ ರಾಜಗೋಪಾಲ ಮೊದಲಿಯಾರ್‌ಗೆ ಅಗಸ್ಟ್ ೧೪ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುವ ಸಬ್ ಅ॥ ಸರ್ಜನ್ ಮೆ॥ ಟಿ. ಎಸ್. ಸಿದ್ಧಪ್ಪನವರನ್ನು ಚಿಕ್ಕಮಗಳೂರು ಜನರಲ್ ಆಸ್ಪತ್ರೆಗೆ ವರ್ಗ ಮಾಡಲ್ಪಟ್ಟಿದೆ.

ಅ॥ ಕಂಟ್ರೋಲರ್ ಮೆ॥ ಎಫ್. ಬಿಷ್ಟೋಪಂತ್ ಬಾದಾಮಿಯವರಿಗೆ ಜೂಲೈ ತಾ. ೨೯ ರಿಂದ ನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಆಕ್ಟಿಂಗ್ ಅಮಲ್ದಾರ್ ಮೆ॥ ಬಿ. ಕೃಷ್ಣರಾವ್‌ರವರು ರಜದಿಂದ ವಾಪಸು ಬರುವ ತನಕ ಶಿವಮೊಗ್ಗಾ ತಾಲ್ಲೂಕ್ ಶಿರಸ್ತೇದಾರ್ ಬಿ. ಗರುಡಾಚಾರ್ರು ಸಾಗರ ತಾಲ್ಲೂಕಿನ ಆಕ್ಟಿಂಗ್ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದಾರೆ.

ಮೆ॥ ಟಿ. ಎಸ್. ಅಚ್ಯುತರಾಯರನ್ನು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರಾಗಿ ಮೇ ತಾ. ೨ರಿಂದ ಖಾಯಂ ಮಾಡಿರೋದರಿಂದ ಮೆ॥ ಟಿ. ವಿ ಆರುಮುಗಂ ಮೊದಲಿಯಾರ್ರನ್ನೂ ಎಂ. ಆರ್. ಗೋವಿಂದರಾಜುಲು ಯವರನ್ನೂ ಸಿವಿಲ್ ಸರ್ಜನ್ ೧ನೇ ಮತ್ತು ೨ನೇ ಕ್ಲಾಸುಗಳಲ್ಲಿ ಅದೇ ತಾರೀಖಿನಿಂದ ಖಾಯಂ ಮಾಡಿದೆ.

ಅ॥ ಸರ್ಜನ್ ಮೆ॥ ಸಿ. ಜಿ. ಹನುಮಾನ್ ಸಿಂಗ್ ಯವರನ್ನು ಜೂಲೈ ೧೪ ರಿಂದ ೩ ನೇ ಕ್ಲಾಸ್ ಸಿವಿಲ್ ಸರ್ಜನ್‌ರಾಗಿ ಬಡ್ತಿ ಮಾಡಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಮೊಳಕಾಲ್ಮುರು ತಾಲ್ಲೂಕಿನ ಸರ್ವ ಮೊಕದ್ದಮೆಯನ್ನು ಅಂದರೆ, ಚಿಕ್ಕಾಲಭ ಹನುಮ ಮೊದಲಾದವರ ಮೇಲೆ ಆಪಾದನೆಯಾಗಿರುವ ಮೊಕದ್ದಮೆಯನ್ನು ವಯಾರ್ಟ್ಲ ಮಾಡುವುದಕ್ಕೋಸ್ಕರ ಶಿವಮೊಗ್ಗಾ ಸಬ್ ಜಡ್ಜ್ ಮೆ॥ ಡಿ. ಎಂ. ನರಸಿಂಗರಾಯರಿಗೆ ಅ॥ ಸೆಷನ್ಸ್ ಜಡ್ಜರ ಅಧಿಕಾರಗಳು ವಹಿಸಲ್ಪಟ್ಟಿವೆ.

ಕೋಲಾರ್ ಚಿನ್ನದ ಗಣಿಗಳ ಪ್ಲೇಗ್ ಆಸ್ಪತ್ರೆಯ ಛಾರ್ಜನ್ನು ವಹಿಸಿರುವ ಸಬ್ ಅ॥ ಸರ್ಜನ್ ಮೆ॥ ಟಿ. ಎಸ್. ಸಿದ್ಧಪ್ಪನವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗ ಮಾಡಿದೆ.

ಮೆ॥ ಮಹಮದ್ ಉಸ್ಮಾನ್ ಯವರನ್ನು ಅ॥ ಸರ್ಜನ್ ೨ ನೇ ಕ್ಲಾಸಿಗೆ ಜೂಲೈ ತಾ. ೪ ರಿಂದ ಬಡ್ತಿ ಮಾಡಿದೆ.

ಇಂಜನಿಯರ್ ಇಲಾಖೆ.

ಅ॥ ಇಂಜನಿಯರ್ ಮೆ॥ ಎನ್. ರಾಮರಾಯರಿಗೆ ಕಳೆದ ಮೇ ೩ ರಲ್ಲಿ ಕೊಟ್ಟಿರುವ ಐದು ತಿಂಗಳ ಕಾಯಿಲೆ ರಜವನ್ನು ಇನ್ನೂ ಮೂರು ತಿಂಗಳಿಗೆ ಜಾಸ್ತಿ ಮಾಡಿದೆ.

ರೆವಿನ್ಯೂ ಇ॥ ಖೆ.

ಜಗಲೂರ್ ತಾಲ್ಲೂಕ್ ಅಮಲ್ದಾರ್ ಮೆ॥ ಇ. ಸಿ. ಸದಾಶಿವಂ ಪಿಳ್ಳೆಯವರಿಗೆ ಅಗಸ್ಟ್ ತಾ. ೨೫ ರಿಂದ ಹದಿನೇಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಂಜರಾಬಾದಿನಿಂದ ಕೊಪ್ಪ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿರುವ ಅಮಲ್ದಾರ್ ಮೆ॥ ಎನ್. ರಾಮಸ್ವಾಮಿ ಐಯಂಗಾರ್ರಿಗೆ ಮಂಜರಾಬಾದ್ ತಾಲ್ಲೂಕಿನಿಂದ ಬಿಡುಗಡೆ ಹೊಂದಿದ ತಾರೀಖು ಲಾಗ್ಯಾಯತು ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಯಡೇಹಳ್ಳಿ ಸಬ್ ತಾಲ್ಲೂಕ್ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಎಸ್. ಸುಬ್ಬರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕೊಪ್ಪ ತಾಲ್ಲೂಕಿನ ಛಾರ್ಜನ್ನೂ ವಹಿಸತಕ್ಕದ್ದು.

ಗುಬ್ಬಿ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿರುವ ಅಮಲ್ದಾರ್ ಮೆ॥ ಎ. ಕೃಷ್ಣೇ ಅರಸಿನವರಿಗೆ ಗುಂಡ್ಲುಪೇಟೆ ತಾಲ್ಲೂಕಿನಿಂದ ಬಿಡುಗಡೆಯಾದ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪೊಲೀಸ್ ಇನ್ಸ್‌ಪೆಕ್ಟರ್ ಆರ್. ಸುಂದರರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಗುಬ್ಬಿ ತಾಲ್ಲೂಕ್ ಛಾರ್ಜನ್ನೂ ವಹಿಸತಕ್ಕದ್ದು.

ವಿದ್ಯಾಭ್ಯಾಸದ ಇಲಾಖೆ.

ತುಮಕೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಮೆ॥ ಸಿ. ಅಪ್ಪಾದೊರೆ ಮೊದಲಿಯಾರ್ರು ತುಮಕೂರು ಗವರ್ನಮೆಂಟ್ ಸ್ಟೂಡೆಂಟ್ಸ್ ಹೋಮಿನ ಮ್ಯಾನೇಜಿಂಗ್ ಕಮಿಟಿಯ ಮೆಂಬರಾಗಿ ನೇಮಿಸಲ್ಪಟ್ಟಿದಾರೆ.

“ವ್ಯವಹಾರ ನಿರ್ಣಯ,” “ಕನ್ನಡ ಲಾ ರಿಪೋರ್ಟರ್.”

ವ್ಯವಹಾರನಿರ್ಣಯ—ಪುಟಗಳು ೫೪೯, ಹಿಂದೂ ಮಹಮದೀಯ ಲಾಗಳು, ೨೯ ಶಾಸನಗಳು ಇವುಗಳ ಸಂಗ್ರಹವು, ೯೨ ದಸ್ತಾವೇಜು, ೬೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ. ಪಿ. ಸೇರಿ ೧ ರೂ. ೧೨ ಆಣೆ. [40-18]

ಕನ್ನಡ ಲಾ ರಿಪೋರ್ಟರ್—ಪ್ರಿವಿಕೌನ್ಸಿಲ್ ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ೧—೮—೦ ಮುಂಗಡ, ಯಾ, ವಿ ಪಿ ಬಿಡಿಪತ್ರಿಕೆ ೧ಕ್ಕೆ ೦—೨—೦

ಇವುಗಳನ್ನು ಅಪೇಕ್ಷಿಸುವವರು “ಎಂ ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು” ಈ ವಿಳಾಸಕ್ಕೆ ಬರೆಯುವುದು

ಖಂಡಿತವಾಗಿಯೂ ಮೋಸವಿಲ್ಲ! ಅಗ್ಗವಾಗಿ ದೊರೆಯತಕ್ಕ ಸ್ಥಳ!! ಚಿನ್ನದಂಥಾ ಸಮಯ!!!

ಈ ಸಮಯವನ್ನು ಬಿಡಬೇಡಿ.

69-5

ಮಹನೀಯರೇ,

ಈ ನವನಾಗರೀಕತೆಯ ಕಾಲದಲ್ಲಿ ಕೆಲವು ವ್ಯಾಪಾರಸ್ಥರು ತಮ್ಮ ಪದಾರ್ಥಗಳನ್ನು ವಿವಿಧವಾಗಿ ವಿವರಿಸಿ ಜನಗಳನ್ನು ಮೋಸಪಡಿಸುವುದುಂಟು. ಇಂಥಾ ಮೋಸಗಳಿಗೆ ಜನರು ಸದರಿ ವ್ಯಾಪಾರಸ್ಥರು ಕಳುಹಿಸುವ ವಿವರಣೆಯ ಪಟ್ಟಿಗಳನ್ನು ಮೂಲೆಗೆ ಬಿಸಾಡುವರು. ಇಲ್ಲವೆ ಒಲೆಗೆ ಹಾಕುವರು. ಆದರೆ ನಾವೆಂದಿಗೂ ಅಂಥಾ ಮೋಸಗಾರರ ಗುಂಪಿಗೆ ಸೇರಿದವರಲ್ಲ. ಒಂದಾವರ್ತಿ ನೀವು ನಮ್ಮಲ್ಲಿ ವ್ಯಾಪಾರ ಮಾಡಿದ ಕೂಡಲೇ ಇನ್ನೆಂದಿಗೂ ನಮ್ಮನ್ನು ಬಿಟ್ಟು ಬೇರೆ ಅಂಗಡಿಗೆ ಹೋಗಲಾರಿರಿ. ಇದು ಸತ್ಯವಾದ ಮಾತು. ನಮ್ಮ ವ್ಯಾಪಾರದ ಸತ್ಯತೆಯನ್ನು ವಾಚಕ ಮಹನೀಯರಿಗೆ ತಿಳಿಸುವುದಕ್ಕೋಸ್ಕರವೇ ನಾವು ಈ ನೋಟೀಸನ್ನು ಪ್ರಕಟಿಸಿರುತ್ತೇವೆ. ಮುಂದೆ ತಿಳಿಸುವ ಸಂಗತಿಯನ್ನು ಸ್ವಲ್ಪ ಸಾವಧಾನದಿಂದ ಓದಿರಿ :—

೧. ಒಂದಾವರ್ತಿ ಬೀಗದ ಕೈ ಕೊಟ್ಟರೆ ಮೂವತ್ತು ಗಂಟೆಗಳ ತನಕ ನಡಿಯುವ ಸೊಗಸಾದ ಮುಳ್ಳುಗಳುಳ್ಳ ಲೀವರ್ ಗಡಿಯಾರ. ಇದಕ್ಕೆ ಹತ್ತು ವರುಷಗಳು ಗಾರಂಟಿ. ಇದಕ್ಕೆ ಆಗತಕ್ಕ ಸರಪಣಿ ಮತ್ತು ಸೊಗಸಾದ ಪೆಟ್ಟಿಗೆ, ನೂರು ಪೋಸ್ಟ್ ಕಾರ್ಡುಗಳು, ಇಷ್ಟೆಲ್ಲಾ ಮನಿಯಾರ್ಡರ್ ಕಮಿಷನ್ ಮತ್ತು ಪೋಸ್ಟೇಜ್ ಸೇರಿ ಮೂರೇ ರೂಪಾಯಿ ಆಗುತ್ತದೆ.

೨. ಒಂದಾವರ್ತಿ ಬೀಗದ ಕೈ ಕೊಟ್ಟರೆ ಮೂವತ್ತು ಗಂಟೆಗಳ ತನಕ ನಡಿಯುವ ಎರಡು ಮುಚ್ಚಳಗಳುಳ್ಳ (ಹಿಂದೆ ಒಂದು ಮುಂದೆ ಒಂದು) ಸೊಗಸಾದ ಮುಳ್ಳುಗಳುಳ್ಳ ಚೆನ್ನಾಗಿ ಪರೀಕ್ಷಿಸಲ್ಪಟ್ಟ ಲೀವರ್ ಗಡಿಯಾರ. ಇದಕ್ಕೆ ಐದು ವರುಷಗಳು ಗಾರಂಟಿ. ಇದಕ್ಕೆ ಆಗತಕ್ಕ ಸರಪಣಿ, ಮತ್ತು ಮೇಜಿನ ಮೇಲೆ ಇಡುವುದಕ್ಕೆ ಒಂದು ಸೊಗಸಾದ ಟೈಂಪೀಸ್ ಗಡಿಯಾರ (ಇದು ಮೂವತ್ತು ಗಂಟೆಗಳು ನಡಿಯುವದು ಮತ್ತು ಮೂರು ವರುಷ ಗಾರಂಟಿ), ೧೦೦ ಸೊಗಸಾದ ಪೋಸ್ಟ್ ಕಾರ್ಡುಗಳು, ಇಷ್ಟೆಲ್ಲಾ ಮನಿಯಾರ್ಡರ್ ಕಮಿಷನ್ ಸೇರಿ ಐದೇ ರೂಪಾಯಿಗೆ ಸಿಕ್ಕುತ್ತದೆ.

೩. ಸೊಗಸಾದ ಬೆಳ್ಳಿಯಿಂದ ಮಾಡಲ್ಪಟ್ಟ ವಜ್ರದ ಕಲ್ಲುಗಳಿರುವ ದೊಡ್ಡ ಮನುಷ್ಯರು ಧರಿಸುವ ಎರಡು ಮುಚ್ಚಳಗಳುಳ್ಳ (ಒಂದು ಹಿಂದೆ, ಒಂದು ಮುಂದೆ) ಎಲ್ಲಾ ವಿಧವಾದ ಯಂತ್ರಸಹಾಯಗಳಿಂದ ಕೂಡಿದ, ಸರಿಯಾದ ಕಾಲ ತೋರಿಸುವ, ಬಹಳ ಕಾಲ ಬಾಳಿಕೆ ಬರುವ, ಚೆನ್ನಾಗಿ ಪಚ್ಚೇ ಹಾಕಿರುವ, ಪರಿಷ್ಕಾರವಾಗಿ ಪರೀಕ್ಷೆ ಮಾಡಲ್ಪಟ್ಟಿರುವ, ರೇಶಿಮೆ ಪೆಟ್ಟಿಗೆಯಲ್ಲಿ ಇಟ್ಟಿರುವ, ಅಲಾಯಿದ ಒಂದು ಗ್ಲಾಸ್ ಮುಚ್ಚಳ ಮತ್ತು ಸ್ಪ್ರಿಂಗ್ ಇರುವ, ಹತ್ತು ವರುಷಗಳು ಗಾರಂಟಿ ಇರುವ ಗಡಿಯಾರ. ಇದಕ್ಕೆ ಒಂದು ಸರಪಣಿಯೂ ಸಹಾ ಇರುವುದು. ಇದರ ಜೊತೆಗೆ ಮೂವತ್ತು ಗಂಟೆಗಳ ತನಕ ನಡಿಯುವ ಅಲಾರಂ ಎಂಬ ಶಬ್ದಮಾಡುವ ಗಡಿಯಾರ (ಇದಕ್ಕೆ ಐದು ವರುಷಗಳು ಗಾರಂಟಿ) ನೂರು ಸೊಗಸಾದ ಪೋಸ್ಟ್ ಕಾರ್ಡುಗಳು. ಇಷ್ಟೆಲ್ಲಾ ಮನಿಯಾರ್ಡರ್ ಕಮಿಷನ್ ಸೇರಿ ಏಳು ರೂಪಾಯಿ ಎಂಟು ಆಣೆಗಳಾಗುವವು. ಪದಾರ್ಥಗಳು ಬೇಕಾಗುವ ಪಕ್ಷದಲ್ಲಿ ಅರ್ಧ ನೊಬಲಗನ್ನು ಮುಂಗಡವಾಗಿಯೇ ಕಳುಹಿಸಬೇಕು. ಮಿಕ್ಕ ನೊಬಲಗನ್ನು ವಿ. ಪಿ. ಪಿ. ಮೂಲಕ ತೆಗೆದುಕೊಳ್ಳುತ್ತೇವೆ.

ಷರಾ. ನಿಮಗೆ ರಿಯಾಯತಿ ತೋರಿಸುವುದಕ್ಕೆ ನೀವು ಅರ್ಧ ನೊಬಲಗನ್ನು ಮನಿಯಾರ್ಡರ್ ಮಾಡಿದರೆ ನಾವೇ ಮನಿಯಾರ್ಡರ್ ಛಾರ್ಜ್ ವಹಿಸುತ್ತೇವೆ. ಇಲ್ಲವಾದರೆ ನೀವೇ ಎಂಟು ಆಣೆ ಛಾರ್ಜ್ ಹೆಚ್ಚಾಗಿ ಕೊಡಬೇಕು.

ನಮ್ಮ ವಿಳಾಸ :—ಎಂ. ಪಿ. ಗಟಾಲ ಮತ್ತು ಕಂಪನಿ,
(ಚಿತ್ತೂರು) Chittour, ನಾರ್ತ್ ಆರ್ಕಾಡು (North Arcot)

ಎದೆಯಲ್ಲಿ ಹುಟ್ಟುವ ಶೈತ್ಯರೋಗಗಳು.

[51 23]

ಅನೇಕ ವೇಳೆ ಶೀತವು ತಿಳಿಯದ ಹಾಗೆ ಕ್ರಮೇಣ ಪ್ರಬಲಿಸಿ ಕ್ಷಯರೋಗವಾಗುವುದು.

ಇತರ ಔಷಧಗಳಿಂದ ವಾಸಿಯಾಗಲಿಲ್ಲ. ಪೆರೂನಾ ವಾಸಿಮಾಡಿತು.

ಮಿಸೆಸ್ ಎಲಿಸಬೆತ್ ರೆಂಬ್ ಮಲ್ಬೊರ್ ವಿಕ್ಟೋರಿಯಾ

ಶೀತಗಾಳಿ ದೇಹಕ್ಕೆ ಬಡಿದು ನರಗಳನ್ನು ಅಂಟಿಕೊಳ್ಳೋಣದರಿಂದ ಶೈತ್ಯರೋಗಗಳು ಹುಟ್ಟುತ್ತವೆ. ಶೀತವು ವಿಶೇಷವಾಗಿ ಮೂಗಿನಲ್ಲೂ ಗಂಟಲಿನಲ್ಲೂ ಕಾಣಿಸಿಕೊಳ್ಳುತ್ತದೆ. ಆದರೂ ಅನೇಕ ವೇಳೆ ಅದು ಶರೀರವನ್ನು ಹಿಡಿಯುವುದುಂಟು. ಗಂಟು ಶೀತವು ಶ್ವಾಸಕೋಶಗಳ ನಾಳಗಳ ಮೂಲಕ ಹಿಂದೆ ಮುಂದೆ ವ್ಯಾಪಿಸಿ, ಶ್ವಾಸಕೋಶಗಳನ್ನೇ ಹಿಡಿದ ಕ್ಷಯರೋಗ ಬಂದಂತೆ ಮಾಡುತ್ತದೆ. ಕೆಲವು ಬರವಣಿಗನ್ನರು ಅದನ್ನೇ ಕ್ಷಯದ ಮೊದಲವೆಂದು ಎಣಿಸುತ್ತಾರೆ.

ಶೈತ್ಯವು ಶ್ವಾಸಕೋಶವನ್ನು ಪ್ರವೇಶಿಸಿದ ಕೂಡಲೇ ಆಹಾರ ರುಚಿಸುವುದಿಲ್ಲ. ಶಕ್ತಿ ಕುಂದುತ್ತದೆ, ದೇಹವು ಕೃಶವಾಗುವುದು. ಅಂತು ಕ್ಷಯರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಆದರೆ ಅದು ಶೈತ್ಯದಿಂದ ಪ್ರಾರಂಭವಾದದ್ದೆಂದು ತೋರುವುದಿಲ್ಲ. ಇಂಥಾ ಕಾಯಿಲೆಯನ್ನು ನಿವಾರಣೆಮಾಡುವುದಕ್ಕೆ ಒಂದೇ ಒಂದು ಮಾರ್ಗವುಂಟು, ಏನೆಂದರೆ, ಅದಕ್ಕೆ ಕಾರಣವಾದ ಶೈತ್ಯವನ್ನು ಹೋಗಲಾಡಿಸುವ ಪ್ರಯತ್ನವೇ.

ಶೈತ್ಯರೋಗವನ್ನು ಹೊಡೆಯುವುದಕ್ಕೆ ಪೆರೂನಾ ಚೆನ್ನಾಗಿ ಪರೀಕ್ಷೆ ಮಾಡಲ್ಪಟ್ಟ ಒಳ್ಳೇ ಔಷಧ. ತಲೆ ಗಂಟಲು, ಶ್ವಾಸಕೋಶ, ಅಥವಾ ದೇಹದ ಇತರ ಅಂಗಗಳಿಗೆ ಹಿಡಿಯುವ ಶೈತ್ಯರೋಗಗಳೆಲ್ಲಾ ಈ ಔಷಧವನ್ನೇ ಉಪಯೋಗಿಸತಕ್ಕದ್ದಾಗಿದೆ. ದೇಹದ ಒಳಭಾಗದಲ್ಲಿ ಹುಟ್ಟುವ ರೋಗಗಳನ್ನು ನಿವಾರಣೆ ಮಾಡುವುದರಲ್ಲಿ ಪೆರೂನಾ ಬಹು ಪ್ರಸಿದ್ಧವಾದ ಔಷಧವಾಗಿದೆ. ಪೆರೂನಾ ಲಕ್ಷಾಂತರ ರೋಗಿಗಳಿಗೆ ಸೌಖ್ಯವನ್ನು ಕೊಟ್ಟಿರುವುದು. ಈ ಔಷಧದ ಸೇವನೆ ಪಥ್ಯ ಮುಂತಾದದ್ದನ್ನು ವಿವರವಾಗಿ ಬರೆದ ಕಾಗದವು ಆ ಶೀಸೆಯ ಜೊತೆಯಲ್ಲೇ ಇಟ್ಟಿದೆ. ಇದಲ್ಲದೆ ಪೆರೂನಾ ವಿಚಾರವನ್ನು ವಿವರಿಸಿರುವ ಸಣ್ಣ ಪುಸ್ತಕವನ್ನು ಔಷಧದ ಅಂಗಡಿಗಳಲ್ಲಿ ಕೇಳಿದರೆ ಸುಮ್ಮನೆ ಕೊಡುತ್ತಾರೆ.

ನೆತ್ತಿ, ಗಂಟಲು, ಶ್ವಾಸಕೋಶ, ಅನ್ನಕೋಶದಲ್ಲಿ ಶೈತ್ಯವುಂಟಾಗಿರುವ ರೋಗಿಗಳು ಪೆರೂನಾವನ್ನು ಒಂದಾವರ್ತಿ ಪರೀಕ್ಷಿಸಿ ನೋಡಲಿ. ಒಂದು ಸಲ ಸೇವಿಸಿ ನೋಡಿದರೆ ಅದರ ಗುಣವು ಮುಂದಟ್ಟುಗುವುದು. ಅದರ ಗುಣವು ಬೇಗ ಅನುಭವಕ್ಕೆ ಬಂದೀತೆನ್ನುವದಕ್ಕೆ ಅನುಮಾನ ಕಾಣ ಪದಿಲ್ಲ.

ಬಹಳ ದುರ್ಬಲವುಂಟಾಗಿರುವುದು

ಮಿಸೆಸ್ ಆಲಿಸ್ ಬ್ರಾಡ್ಲಿ, ಫಾರೆಸ್ಟ್, ಒಂಟೇರಿಯೊ, ಕೆನಡಾ, ಈಕೆ ಬರೆಯುವುದು —"ಎರಡು ವರುಷಗಳ ಕೆಳಗೆ ನನ್ನ ಶಕ್ತಿ ಕುಂದಿ ಬಹಳ ಹೀನಸ್ಥಿತಿಯಲ್ಲಿದ್ದೆನು. ಆಗ ನನಗೆ ಪಾರ್ಶ್ವವಾಯು ಉಂಟಾಯಿತು. ಅದದರಿಂದ ನನ್ನ ದೇಹದ ಒಂದು ಪಕ್ಕ ಬಿದ್ದುಹೋಗಿ, ಏಳಲಾರದೆ ಹೋದೆನು. ಡಾಕ್ಟರುಗಳನ್ನು ಕರೆಸಿ ಚಿಕಿತ್ಸೆ ಮಾಡಿಸಿಕೊಂಡರೂ ಕ್ರಮೇಣ ಹೀನಸ್ಥಿತಿಗೆ ಬರುವಂತಾಯಿತು. ಮತ್ತೆ ನಾನು ಹಾಸಿಗೆಯಿಂದ ಏಳಲಾರೆನೆಂದು ನಿಶ್ಚಯಿಸಿಕೊಂಡೆನು. ಆದರೆ ಪೆರೂನಾವನ್ನು ನನಗೆ ಕೊಡುತ್ತಾ ಬಂದರು. ನಾಲ್ಕು ಬಾಟ್ಲಿಯು ಔಷಧ ಸೇವಿಸ ಮಧ್ಯದಲ್ಲೇ ನಾನು ಹಾಸಿಗೆಬಿಟ್ಟೇಳುವಂತೆಯೂ ಹೊರಗೆ ತಿರುಗಾಡುವಂತೆಯೂ ಆಯಿತು. ನನ್ನ ಸ್ಥಿತಿಯನ್ನು ನೋಡಿದ ನನಗೂ ನನ್ನ ಸ್ನೇಹಿತರಿಗೂ ಪರಮಾಶ್ಚರ್ಯವಾಯಿತು. ರೋಗಿಗಳಿಗೆ ಪೆರೂನಾ ಬಹು ಉಪಕಾರವುಳ್ಳ ಔಷಧವೆಂದು ನೆನಸುತ್ತೇನೆ. ಇದಲ್ಲದೆ ನನ್ನ ಮಗಳು ಕೂಡ ಪೆರೂನಾ ತೆಗೆದುಕೊಂಡು ಅಭ್ಯಾಸವಾಗಿದೆ. ಅವಳ ಶರೀರ ಸ್ಥಿತಿ ಬಹಳ ಪುಷ್ಟಿಯಾಗಿಯೂ ಆರೋಗ್ಯವಾಗಿಯೂ ಇದೆ. ನಮ್ಮ ಪ್ರಾಣಗಳನ್ನು ಪೆರೂನಾವೆ ಬದುಕಿಸಿತೆಂದು ನಂಬುತ್ತೇನೆ."

ಮಿಸೆಸ್ ಎಲಿಸಬೆತ್ ರೆಂಬ್, ೩೩ ಸ್ಟೇಶಿಂಗ್ ಬೀದಿ ಸೌತ್ ಕಿಲ್ಡ ಮೆಲ್ಬೊರ್ನ್, ವಿಕ್ಟೋರಿಯಾ, ಆಸ್ಟ್ರೇಲಿಯಾ ದೇಶದವಳೆಂಬುವಳು ಈಕೆ ಬರೆಯುವುದು —"ಶ್ವಾಸಕೋಶಗಳ ಶೈತ್ಯಕ್ಕೆ ಪೆರೂನಾ ಸೇವಿಸುವುದೇ ಉತ್ತಮವೆಂದು ಸಂತೋಷದಿಂದ ಹೇಳುತ್ತೇನೆ. ನನಗೆ ಇತರ ಔಷಧಗಳಿಂದ ವಾಸಿಯಾಗಲಿಲ್ಲ. ಪೆರೂನಾ ವಾಸಿ ಮಾಡಿತು. ಹಲವು ವರುಷಗಳ ತನಕ ಈ ರೋಗವು ನನ್ನನ್ನು ಪೀಡಿಸಿತು. ನಾನು ತುಂಬಾ ಇಳಿದು ಹೋಗಿದ್ದೆನು. ನನಗೆ ಆಹಾರ ರುಚಿಸುತ್ತಿರಲಿಲ್ಲ. ರಾತ್ರಿ ನಿದ್ದೆ ಬರುತ್ತಿರಲಿಲ್ಲ. ದಿನೇ ದಿನೇ ಬಡವಾಗಿದ್ದೆನು. ನನ್ನ ಸ್ನೇಹಿತರು ನನಗಾಗಿ ತುಂಬಾ ಚಿಂತೆಪಟ್ಟರು. ಡಾಕ್ಟರುಗಳು ನನಗೆ ಕ್ಷಯರೋಗ ಬಂದಿದೆ ಎಂದು ಹೇಳಿದರು. ನನ್ನ ಶ್ವಾಸಕೋಶದಲ್ಲಿ ಹುಣ್ಣಾಗಿ ಜ್ವರದಿಂದ ನರಳುತ್ತಿದ್ದೆನು. ಕಡೆಗೆ ನನ್ನ ಸ್ನೇಹಿತನ ಮಾತು ಕೇಳಿ ಒಂದು ಬಾಟ್ಲಿ ಪೆರೂನಾ ತಂದೆ. ಕೆಲವು ದಿವಸಗಳೊಳಗಾಗಿ ನನಗೆ ಆದ ಗುಣವು ಪರಮಾಶ್ಚರ್ಯವನ್ನುಂಟುಮಾಡಿತು. ಈಗ ನನ್ನ ಶ್ವಾಸಕೋಶಗಳು ಬಹಳ ಚೆನ್ನಾಗಿವೆ. ನಾನು ಪೆರೂನಾದ ಉಪಕಾರವನ್ನು ಸರ್ವದಾ ಸ್ಮರಿಸುತ್ತೇನೆ."

ಹೊಟ್ಟೆ ನೋವಿತ್ತು—ಈಗ ಹೋಯಿತು

ಮಿಸೆಸ್ ಡಾನಿಯಲ್ ಜಾನ್ಸ್ಟನ್, ವೆಲ್ಲಂಡ್, ಒಂಟೇರಿಯೊ, ಕೆನಡಾ ಈಕೆ ಬರೆಯುವುದು — ಮೂರು ವರುಷಗಳ ತನಕ ನನ್ನ ಹೊಟ್ಟೆಯಲ್ಲಿ ಅಜೀರ್ಣವುಂಟಾಗಿ ಅನುಭವಿಸಿದೆನು. ಒಂದೊಂದು ಸಲ ಕೆಲವು ದಿನಗಳವರೆಗೆ ನಾನು ಏನೂ ತಿನ್ನಲಾರದೆ ಇದ್ದೆನು. ನನ್ನ ಮಾಂಸಖಂಡಗಳು ಕೃಶವಾದವು, ತಲೆನೋವು ಹುಟ್ಟಿತು, ನಿಶಕ್ತಿಯುಂಟಾಯಿತು. ಮೂವರು ಡಾಕ್ಟರುಗಳು ನನಗೆ ಚಿಕಿತ್ಸೆ ಮಾಡಿದರು. ಆದರೆ ನನಗೆ ಸ್ವಲ್ಪವೂ ಅನುಕೂಲವಾಗಲಿಲ್ಲ. ಕಡೆಗೆ ಪೆರೂನಾ ಸೇವಿಸಲಿಕ್ಕಾರಂಭಿಸಿದೆನು. ಕೂಡಲೇ ಸ್ವಲ್ಪ ಸ್ವಲ್ಪವಾಗಿ ವಾಸಿಯಾಗುತ್ತಾ ಬಂತು. ಮೂರು ಬಾಟ್ಲಿ ಮುಗಿಸಿದ ಮೇಲೆ ಊಟ ರುಚಿಸುವಹಾಗಾಯಿತು. ಏನು ಬೇಕಾದರೂ ಚೆನ್ನಾಗಿ ತಿನ್ನುವಂತಾಯಿತು. ಈಗ ನಾನು ಆರೋಗ್ಯವಾಗಿಯೂ ಶಕ್ತಿಶಾಲಿಯಾಗಿಯೂ ಇದ್ದೇನೆ. ಪೆರೂನಾ ನನ್ನ ಪ್ರಾಣವನ್ನು ಬದುಕಿಸಿತೆಂದು ನಂಬುತ್ತೇನೆ. ಯಾವಾಗಲೂ ಅದನ್ನು ಕೊಂಡಾಡುತ್ತೇನೆ.

ಕ್ಷಯ ಹಿಡಿಯುವ ಭೀತಿಯುಂಟಾಯಿತು

ಮಿಸ್ ಆಲಿವಿನ್ ಪೆರ್ರಾಲ್ಟ್, ೩೩೫ ಸೇವಿಡ್ಸ್ ಬೀದಿ ಸೋಲಿನಾರ್ಡ್ ಸೆಂಟ್ ಪಾಲ್, ಮಾಂಟ್ರಿಯಲ್ ಕೆನಡಾ ಈಕೆ ಬರೆಯುವುದು — ನಿಮ್ಮ ಪೆರೂನಾ ಎಂಬ ಪ್ರಖ್ಯಾತವಾದ ಔಷಧದ ವಿಷಯವಾಗಿ ಸಂತೋಷವಾರ್ತೆಯೊಂದನ್ನು ಬರೆಯುತ್ತೇನೆ. ನಾನು ಇತರ ಔಷಧಗಳನ್ನು ಸೇವಿಸಿದೆನು. ನನ್ನ ಶೈತ್ಯರೋಗವು ನಿವಾರಣೆಯಾಗಲಿಲ್ಲ. ನನಗೆ ಕ್ಷಯ ಹಿಡಿಯುತ್ತೆಂಬ ಭೀತಿಯುಂಟಾಯಿತು. ನನ್ನ ತಲೆಯೆಲ್ಲಾ ಕೆಟ್ಟು ಹೋಯಿತು. ಆಕ್ರಮಿಸಲ್ಪಟ್ಟು ಬಹಳ ಜಾಗ್ರತೆಯಾಗಿತ್ತು. ಹವಾ ಬದಲಾವಣೆಯಾದಾಗ ನನಗೆ ಶೀತ ಹಿಡಿದು ಹಲವು ತಿಂಗಳ ತನಕ ಹಾಗೆಯೇ ಇರುತ್ತಿತ್ತು. ನನ್ನ ಸ್ನೇಹಿತರು ಪೆರೂನಾ ಸೇವಿಸೆಂದು ಹೇಳಿದಂತೆ ಪ್ರಾರಂಭಿಸಿದೆನು. ಅವನಿಗ ಅದು ರೋಗವನ್ನು ವಾಸಿ ಮಾಡಿತು. ಅದನ್ನು ನಾನು ಕ್ರಮವಾಗಿ ತೆಗೆದುಕೊಳ್ಳುತ್ತಾ ಬಂದದ್ದರಿಂದ ದಿನೇ ದಿನೇ ಆರೋಗ್ಯವಾಯಿತು. ಈಗ ನಾನು ಮೂರು ಬಾಟ್ಲಿ ಸೇವಿಸಿದ್ದೇನೆ. ನನ್ನ ರೋಗವು ಸಂಪೂರ್ಣವಾಗಿ ವಾಸಿಯಾಗಿರುತ್ತದೆ."

ಪೆರೂನಾದಿಂದ ಬೇಗ ಗುಣಕಂಡಿತು

ಮಿಸ್ ಸಲ್ಫ್ ಟೌನ್, ೩೦೯ ಫ್ರಾಂಕ್ಲಿನ್ ಬೀದಿ, ರಿಚ್ಮಂಡ್, ವರ್ಜೀನಿಯ ಯು. ಎಸ್. ಎ. ಈಕೆ ಬರೆಯುವುದು — ನಾನು ಹುಡುಗಿಯಾಗಿದ್ದಾಗ ನನಗೆ ಶೈತ್ಯ ಹಿಡಿಯಿತು. ಹಲವು ಒಳ್ಳೇ ಡಾಕ್ಟರುಗಳು ನನಗೆ ಔಷಧ ಕೊಟ್ಟರು. ಆದರೆ ಯಾವುದರಿಂದಲೂ ನನಗೆ ಗುಣವಾಗಲಿಲ್ಲ. ಆಗ್ಗೆ ನನ್ನ ತಾಯಿ ಪೆರೂನಾ ಸೇವಿಸುತ್ತಿದ್ದಳು. ನನಗೂ ಅದನ್ನೇ ಕೆಲವು ಕಾಲ ಕೊಡುತ್ತಾ ಬಂದಳು. ನಾನು ದಿನೇ ದಿನೇ ಚೆನ್ನಾಗುತ್ತಾ ಬಂದೆ. ಈಗ ಆರೋಗ್ಯವಾಗಿಯೂ ಪುಷ್ಟಿಯಾಗಿಯೂ ಬೆಳೆದಿರುವೆನು. ನನಗೆ ಈಗ ೧೫ ವರುಷ. ಡಾಕ್ಟರುಗಳು ನನಗೆ ಕ್ಷಯ ಹಿಡಿದಿದೆ ಎಂದು ಹೇಳಿದರು. ಆದರೆ ನನಗೆ ಸ್ವಲ್ಪ ಶೀತ ಹಿಡಿದಿತ್ತಲ್ಲದೆ ಬೇರೇನೂ ಅಲ್ಲ."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆಯಲ್ಲಿ ಕಳುಹಿಸುತ್ತೇವೆ.

ವಿಳಾಸ — ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOOK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೯—೮ ೧೯೦೮ರಿಂದ ೧೫—೮—೧೯೦೮ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	೨		೦	೦
ಮೈಸೂರು ,,	೨*	೧*	೧	೦
ಬೆಂಗಳೂರು ಡಿಸ್ಟ್ರಿಕ್ಟು	೪೮	೩೮	೧	೧
ಮೈಸೂರು ,,	೮೮	೭೮	೦	೦
ಕೋಲಾರ್ ,,	೩೫	೨೪	೧	೦
ಕೋಲಾರ್ ಚಿನ್ನದ ಗಣಿಗಳು	೦	೦	೧	೦
ತುಮಕೂರು ಡಿಸ್ಟ್ರಿಕ್ಟು	೦	೧	೭	೧
ಹಾಸನ ,,	೦	೦	*	*
ಚಿತ್ರದುರ್ಗ ,,	೨	೦	೪	೧
ಕಡೂರ್ ,,	೩೧	೧೨	೨೦	೧೦
ಶಿವಮೊಗ್ಗ ,,	೦	೦	*	*
* ಕೇವಲಗಳ ಪ್ರಮಾಣ	೨೦೩	೧೫೭	೩೨	೧೩

ಕಾಲಿರಾನ ಲೆಕ್ಕ ವರುಷಗಳು ೧೮೩೦ ನೇ ಶೇಲಶಾವ ಕೀಲಕ ನಾಮ ಸಂವತ್ಸರದ ಭಾದ್ರಪದಮಾಸ ಶುಕ್ಲಪಕ್ಷ ದಿಂದ ಭಾದ್ರಪದ ಶುದ್ಧ ... ವರೆಗಿನ ಏಳು ದಿನದ ಪಂಚಾಂಗ

೧೯೦೮ನೇ ಆಗಸ್ಟ್ ಮತ್ತು ಸೆಪ್ಟಂಬರ್

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರ ತೇದಿ ಸಿಂಹ ಮಾಸ
27	ಗುರು	ಪಾಡ್ಯ	16 6	ಪೂ	6 25	12
28	ಶುಕ್ರ	ಬಿದಿಗೆ	10 0	ಉ	13-10	13
29	ಶನಿ *	ತದಿಗೆ	1 5	ಹ	15 50	14
30	ರವಿ T	ತದಿಗೆ	1 50	ಚಿ	23 19	15
31	ಚಂದ್ರ ‡	ಚೌತಿ	7 30	ಚಿ	27 32	16
1	ಕುಜ	ಪಂಚಮಿ	5 08	ಸ್ವಾ	30 21	17
2	ಬುಧ	ಷಷ್ಟಿ	9 16	ವಿ	31 44	18

, ಚಂದ್ರೋದಯ, ಕಲ್ಕಿಜಯಂತಿ * ಬಲರಾಮ ಜಯಂತಿ, ವರಾಹ ಜಯಂತಿ T ಸ್ವರ್ಣಗೌರೀವ್ರತ, ಸಿದ್ಧಿವಿನಾಯಕ ವ್ರತ, ಗಣೇಶಚತುರ್ಥಿ ‡ ಋಷಿಪಂಚಮಿ, ಋಷಿಪಂಚಮಿವ್ರತ ಸೂರ್ಯಷಷ್ಠೀವ್ರತ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಗ್ಗ ಅಕ್ಕಿ ಪಲ್ಲ ಒಕ್ಕೆ	೮೪	೧೫ ೦ ೦	೧೩-೯ ೦
ಕಂಬಾತಿ ಅಕ್ಕಿ ಆಗಸ್		೧೫-೮ ೦	೧೪ ೮ ೦
,,		೨೩ ೯ ೦	೧೪ ೦ ೦
ಜೀರಾಸಾಲೆ ಅಕ್ಕಿ		೧೩ ೮ ೦	೧೫ ೮-೦
ಸಣ್ಣಕ್ಕಿ ಅವಲ್		೧೩-೦ ೦	೨೮ ೦-೦
,, ದುಂಡು		೧೪ ೮ ೦	೧೩ ೦ ೦
ತೊಗರಿ ಬೇಳೆ ಪಲ್ಲ ಒಕ್ಕೆ		೧೪ ೦-೦	೧೪ ೦ ೦
,, ದುಂಡು		೧೫ ೮-೦	೧೫ ೮-೦
ಗೋಧಿ ಪಲ್ಲ ಒಕ್ಕೆ		೩ ೪ ೦	೩ ೧೦ ೦
ರಾಗಿ		೪ ೪ ೦	೪ ೦
ಜೋಳ		೪ ೦-೦	೮-೮ ೦
ಕಡಲೆ ಪಲ್ಲ ಒಕ್ಕೆ		೧೧-೦ ೦	೧೦ ೧೨ ೦
ಬಿಳೇ ಅವರೆ		೮ ೮-೦	೯-೦ ೦
ಹೆಸರು		೧೧ ೮-೦	೧೨ ೮ ೦
ಉದ್ದು		೧೨-೮-೦	೧೨ ೪ ೦
ಹುರಳಿ		೧೩-೮ ೦	೧೩ ೮ ೦
ಎಳ್ಳು ೧೨ ಒಕ್ಕೆ		೨೮-೮-೦	೨೨-೦ ೦
ಹುರುಳಿ		೪ ೮-೦	೩-೪ ೦
ಹರಳು ೧೦ ಸೇರು		೧೧ ೮ ೦	೧೦ ೦ ೦
ಸೀಗೆಕಾಯಿ ಮಣ ಒಕ್ಕೆ		೧ ೮ ೦	೧ ೪ ೦
ಮೆಣಸಿನಕಾಯಿ		೪ ೪ ೦	೪ ೧ ೦
,, ದುಂಡು		೩-೪-೦	೩-೮-೦
ಬೆಲ್ಲ ದೊಡ್ಡ ಅಚ್ಚು		೪ ೧-೦	೫-೨-೪-೦
ಒಳ್ಳೆಣ್ಣೆ ಮಣ ಒಕ್ಕೆ		೫-೮-೦	೬-೦-೦
ಹರಳೆಣ್ಣೆ ,,		೪ ೧೨ ೦	೪ ೦ ೦
ಕೊಬ್ಬರಿ ಪಲ್ಲ ಒಕ್ಕೆ		೬-೦-೦	೬ ೮ ೦
ಉಪ್ಪು ,,		೪ ೯ ೦	೫ ೧ ೦
ಹುಣಸೇ ಹಣ್ಣು		೧ ೮ ೦	೧ ೪ ೦
,, ಅಳ್ಳೆದು		೧ ೪ ೦	೧ ೫ ೦
ತುಪ್ಪ ಮಣ ಒಕ್ಕೆ		೧೩ ೮ ೦	೧೫ ೮-೦
ಸೀಮೆಎಣ್ಣೆ ಪೆಟ್ಟಿ ಒಕ್ಕೆ		೪ ೧೫-೦	೪ ೦ ೦
ತೆಂಗಿನಕಾಯಿ ೧೦೦ ಕ್ಕೆ		೪-೦-೦	೬ ೦ ೦
ಆಲೇಕಾಯಿ ಮಣ ಒಕ್ಕೆ		೦ ೦ ೦	೦ ೧೦ ೦
ಅಂಟ್ವಾಳದ ಕಾಯಿ ಮಣ ಒಕ್ಕೆ		೦ ೧೨-೦	೦-೧೪-೦
ಚಿನ್ನ (ಪವನ್) ತೊಲ		೧೫ ೬-೦	೧೫-೩ ೬
,, ,, ಪವಿನು		೧೫-೧೦-೦	೨೫-೦-೦
,, ,, ಗಟ್ಟಿ ತೊಲ ಒಕ್ಕೆ		೨೩-೧ ೬-೦	೨೪ ೬ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೩೫-೦-೦	೩೫ ೦-೦

Printed and Published by the Rev E W THOMPSON, M A, Proprietor and Manager, Wesleyan Mission Press, Mysore. 27/8/1908

REGISTERED, M. 20[illegible]

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೨ | ಮೈಸೂರು—೧೯೦೮ ನೇ ಇಸವಿ ಸೆಪ್ಟಂಬರ್ ತಾರೀಖು ೩ ನೇ ಗುರುವಾರ. | ಸಂಚಿಕೆ ೧೪

BASEL MISSION WEAVING ESTABLISHMENT,

59-19

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಟ್ಟೆ) ನೇಯ್ಗೆಯ ಕಾರಖಾನೆಯಲ್ಲಿ

ನಾನಾ ವಿಧದ [illegible], ಟ್ವೀಡ್ ನಮೂನೆಯ ಕೋಟು [illegible] ಚಕ್ಕ ಬಟ್ಟೆಗಳೂ [illegible] ಶರ್ಟಿಂಗ್ ಎಂಬ ಕಮೀಜು [illegible] ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ, ಬೆಡ್ ಶೀಟ್ ಎಂಬ ಹೊದಿಕೆವಸ್ತ್ರಗಳೂ, ಟವಲು, ವಸ್ತ್ರಗಳೂ ಸಹ [illegible] ತಯಾರಿಸಲ್ಪಟ್ಟು ಯಾವಾಗಲೂ [illegible] ಬಿಲ್ಲೆ [illegible] ತಯಾರಿರುತ್ತವೆ.

ಒಳ್ಳೇ ಕಮಿಷ್ಯನ್ :—[illegible] ೧೦೦ ರ ಮೇಲೆ ವಸ್ತ್ರಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ [illegible] ಕೊಡಲಾಗುವದು. ಹೆಚ್ಚಿನ ವಿವರ [illegible] ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ನಮೂನೆ ಯಾ ಮಾದರಿಗಳು :—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಂಡಲ್ಲಿ ಕಳಿಸಲ್ಪಡುವವು.

ವಿಶೇಷ ಲಕ್ಷಿಸತಕ್ಕದ್ದು :—ಈ ನಮ್ಮ ವಸ್ತ್ರಗಳಿಗೆ ಇಲ್ಲಿ ಕಾಣಿಸಿರುವ "ಟ್ರೇಡ್ ಮಾರ್ಕ್" ಎಂಬ ವ್ಯಾಪಾರಗುರ್ತಿನ ಲೇಬಲ್ ಯಾನೆ ಚೀಟು ಹಚ್ಚಿರುತ್ತದೆ. ಈ ಗುರ್ತಿನ [illegible] ಇಲ್ಲದವುಗಳೆಲ್ಲಾ ನಮ್ಮ [illegible] ವಸ್ತ್ರಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತ :—[illegible] ವಸ್ತ್ರಗಳು [illegible] ಟಪ್ಪಾಲ ಮೂಲಕ ಕಳಿಸಲ್ಪಡಬೇಕಾಗಿದ್ದಲ್ಲಿ ಕಾಲುಭಾಗ [illegible] ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು.

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು "ಕೋಪಿರೈಟ್" ಪಡೆದಿರುವ ಲೇಬಲುಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾವಾದರೂ ಇತರ ವಸ್ತ್ರಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು.

ವಿಳಾಸ:—BASEL MISSION WEAVING ESTABLISHMENT,
MANGALORE S CANARA

AMRUTANJAN DEPOT, 16 OAK-LANE, BOMBAY.

[17-28,

ಗುಣ ಕಾಣದಿದ್ದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮು ಮತ್ತು [illegible], ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ಕ್ಕೆ ಕಿಮ್ಮತ್ತು ೦-[illegible]-೦ ಪೋಸ್ಟು ಖರ್ಚು ೦-೪-೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಇಸಬು ವಗೈರೆ ನಾಶವಾಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦-೪-೦.

ಈ ಕಂಪೆನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

[illegible]	೪—೦	[illegible]	೧—೦—೦
[illegible]	೧—೦—೦	[illegible]	೧—೦—೦
[illegible]	೦—[illegible]—೦	[illegible] ಇತ್ಯಾದಿ	೧—೪—೦
[illegible]	೦—[illegible]—೦	[illegible] ತೈಲ—[illegible]	೦—[illegible]—೦
[illegible] ನೋವಿಗೆ	೦—[illegible]—೦	[illegible]	೦—೩—೦
[illegible] ನೋವಿಗೆ	೦—[illegible]—೦	[illegible] ಬಾಟ್ಲಿ [illegible]	೦—[illegible]—೦
[illegible] ಮುಲಾಮು	೦—೩—೦	[illegible]	೧—೦—೦
[illegible]—[illegible]	೦—[illegible]—೦	[illegible]	೦—೧೦—೦
[illegible] ತೈಲ—ಕೂದಲಿಗೆ	೦—[illegible]—೦	[illegible]	೦—[illegible]—೦
[illegible] ಮಾತ್ರೆ—[illegible]	೦—[illegible]—೦	[illegible]	೦—[illegible]—೦

ವಿಳಾಸ:—ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನು ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ," ಮುಂಬಯಿ.

ಮಹಾ ಬಾಧಾಪಹಾರಿಣಿಯು.

48-15

ಇದನ್ನು ಹೋಲುವುದು ಪ್ರಪಂಚದಲ್ಲೇ ಇಲ್ಲವು.

[illegible] ರವರ [illegible] ಸಕಲ ವಿಧವಾದ ಬಾಧೆಗಳನ್ನು ಪರಿಹರಿಸತಕ್ಕದ್ದೆಂದು ಶಾಸ್ತ್ರಜ್ಞರು, [illegible], ಡಾಕ್ಟರುಗಳು ಈ ಮೊದಲಾದ [illegible] ಒಪ್ಪಿ [illegible]. ಈ ರಸಾಯನವನ್ನು [illegible] ಉಪಯೋಗಿಸಿದ ಮಾತ್ರಕ್ಕೇ ತಲೆನೋವು, ವಾಯುನೋವು, ಕಳತ, ಗಂಟ್ಲುನೋವು, [illegible], ನಾನಾವಿಧ ವಾಯುರೋಗಗಳು, ಶೀತರೋಗಗಳು, [illegible], ಕೈಕಾಲುಗಳ ಸಂದುಕಟ್ಟುಗಳ ನೋವು, [illegible], ಹಲ್ಲುನೋವು ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ [illegible] ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. [illegible] ಈ ಅನೋಘವಾದ ತೈಲವು [illegible] ಸ್ಥಳದ [illegible] ವ್ಯಾಪಿಸಿ, ಅದರ [illegible] ಇದರಿಂದ [illegible] ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ [illegible] ೧೦ ಆಣೆ ಪ್ಯಾಕಿಂಗ್ ೪ ಆಣೆ. ಆದರೆ [illegible] ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದು. ವ್ಯಾಪಾರಸ್ಥರಿಗೆ ಮತ್ತು [illegible] ೧೦ ಬಾಟ್ಲು ಒಂದೇಸಲ ತರಿಸಿಕೊಳ್ಳುವುದಾದರೆ ಪರ್ಸೆಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. [illegible],

೩೩, ವೇದಮುಲಪಿಳ್ಳೆ ಬೀದಿ, [illegible], ಮದರಾಸ್.

ಜ್ವರಹರಿ

64-5



ಇದು ಸಾಧಾರಣ ಜ್ವರ, [illegible], ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ [illegible], ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

[illegible] ಮುನಸಿಫ್ [illegible] ವೆಂಕಟಪತಿ [illegible] ರವರು—[illegible]

ಕ್ರಯ—[illegible]

[illegible]

ಓಮಂಕರ್ಪೂರ

ಈ ಔಷಧವು ಅಜೀರ್ಣ [illegible] ಯುವದು, ವಾಂತಿಭೇದಿ, ನಾನಾತರ [illegible] ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

[illegible] ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜ್ವರಹರಿ ಯು ಓಮಂಕರ್ಪೂರವನ್ನು ನಾನೂ ನನ್ನ [illegible] ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಪಾತ್ರಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ—

ಬೆನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ [illegible], ಮದರಾಸ್.

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟ್."

ವ್ಯವಹಾರನಿರ್ಣಯ—ಪುಟಗಳು ೫೬೬ ಹಿಂದೂ ಮಹಮ್ಮದೀಯ ಲಾಗಳು, ೬೯ ಶಾಸನಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೬೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ. ಪಿ. ಸೇರಿ ೧ ರೂ. ೧೨ ಆಣೆ. [40-19]

ಕನ್ನಡ ಲಾ ರಿಪೋರ್ಟ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ೧—೮—೦ ಮುಂಗಡ, ಯಾ, ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೦—೨—೦

ಇವುಗಳನ್ನಪೇಕ್ಷಿಸುವವರು "ಎಂ. ವೆಂಕಟಾಚಾರ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯುವುದು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

53-10

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ಐದು ಆಣೆಯಿಂದ ೬॥ ಆಣೆ ವರಿವಿಗೂ ಚಿಲ್ಲರೆಯಾಗಿ ಯಾಗಲೀ ಒಟ್ಟಾಗಿ ಯಾಗಲೀ ಮಾರಲ್ಪಡುತ್ತವೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕಾಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ತ್ವರವಾಗಿ ಇಂಗ್ಲಿಷ್ ಕಲಿಯುವಿಕೆ.

61-4

ಇಂಗ್ಲಿಷ್ ಭಾಷೆಯನ್ನು ಬರೆಯುವುದಕ್ಕೂ, ಓದುವುದಕ್ಕೂ, ಮಾತಾಡುವುದಕ್ಕೂ, ಬೋಧಕರ ಸಹಾಯ ಸ್ವಲ್ಪವೂ ಇಲ್ಲದೆ ಒಂದೆರಡು ತಿಂಗಳುಗಳಲ್ಲಿಯೇ ತಾನಾಗಿ ಕಲಿಸುವ ಅತ್ಯುತ್ತಮವಾದ ಪುಸ್ತಕ. ಕ್ರಯ ೧—೪—೦

ಪ್ರಶ್ನೋತ್ತರ ಲೇಖ್ಯಬೋಧಿನಿ.

ಸ್ವಲ್ಪ ಪ್ರತಿಗಳೇ ಉಳಿದಿವೆ. ೩೦೦ ಪುಟಗಳು. ಆಯಾ ಪಂತ ಪದ್ಧತಿಯನ್ನನುಸರಿಸಿ ಬರೆಯುವ ಮರ್ಯಾದೆ, ಒಕ್ಕಣೆಗಳು, ಸಿವಿಲ್, ರೆವಿನ್ಯೂ, ಪೊಲೀಸ್, ಇಂಜನಿಯರ್, ಫಾರೆಸ್ಟ್, ಮೆಡಿಕಲ್, ಎಜ್ಯುಕೇಷನ್, ಮುನಿಸಿಪಾಲಿಟಿ, ಯಳ್ಳೈಬು, ವಿದ್ಯಾಭ್ಯಾಸ, ಮತ್ತು ಇನ್ನೂ ಇತರ ಇಲಾಖೆಗಳ ಬಗೆಬಗೆ ಸಂಗತಿಗಳೂ, ರೈತರಿಗೆ ರಿಯಾಯತಿ ದೊರೆಯುವ ಬಗೆಬಗೆ ಅರ್ಜಿಗಳೂ, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಹಿಂದೂ ಲಾ, ಮಹಮ್ಮದೀಯ ಲಾ, ಕಂಪನೀಸ್ ಆಕ್ಟ್, ಬ್ಯಾಂಕ್ ಆಕ್ಟ್ವಿಜರ್ಸ, ದೊಡ್ಡಿ, ಅರಸು ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳೂ, ಕೋರ್ಟುಗಳಿಗೂ ಪೋಲೀಸಿಗೂ ಇರುವ ಅಧಿಕಾರ, ವರ್ತಕರಿಗುಪಯೋಗವಾದ ಎಲ್ಲಾ ರೋಜು ವರ್ಗ ಲೆಕ್ಕಗಳು, ಶಾನುಭಾವಿಗೆ ಲೆಕ್ಕ ಬರೆಯುವ ರೀತಿ, ಇವುಗಳ ಸಾರಾಂಶವನ್ನೆಲ್ಲಾ ವಿವರಿಸಿದೆ ಪುಸ್ತಕದಲ್ಲಿರುವ ಸಂಗತಿಗಳನ್ನೆಲ್ಲಾ ವಿವರಿಸಲು ಸ್ಥಳಸಂಕೋಚದಿಂದ ಇಲ್ಲಿ ಸೂಕ್ಷ್ಮವಾಗಿ ತಿಳಿಸಲಾಗಿದೆ. ಕ್ರಯ ೧—೪—೦. ವಿಳಾಸ—ಮ್ಯಾನೇಜರ್ ಕರ್ಣಾಟಕ ಪುಸ್ತಕ ಶಾಲಾ, ಬಳ್ಳಾಪುರ ಪೇಟೆ, ತಾ|| ಮಾಲೂರು, ಕೋಲಾರ್ ಡಿಸ್ಟ್ರಿಕ್ಟ್.

ವಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-29

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಗಳಲ್ಲಿ ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಜೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ಕಾಂಟೊಲೆಡೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂಥಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ಬಾರಿಕೊಡದೆ, ನೀರು ಪರ್ವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳೆವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಸ್ತ್ರೀಸಂಗ ಸೌಖ್ಯಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕಾಟ್ಲಿಗೆ ೬ ಆಣೆ; ೫ ಕಾಟ್ಲಿಗೆ ೧ ಕಾಟ್ಲಿ ಹೆಚ್ಚು. ೧ ರಿಂದ ೧೨ ಕಾಟ್ಲಿ ವರೆಗೆ ಪೋಸ್ಟೇಜು ೬ ಆಣೆ.

ವಿಳಾಸ:—ವಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೆನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

1-36



ಈ ಹೊಟ್ಟೆಯ ನೋವು, ಖರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕ್ರಯಿಂದ ಸ್ವಲ್ಪವೂ ಮುಟ್ಟದಿಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಮಕ್ಕಳ ಹಿತಕಾರಿ

ಎಂದು

SCOTT'S EMULSION

33-23

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳಸಿರುತ್ತದೆ

ಇದು ತಿಂಟಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು ; ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ವಿಶಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಒರೆದು ತರಿಸಿಕೊಳ್ಳಿ.

2-36

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಪಾರವೆಲ್ಲಾ ಟೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಪಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿಚೆ, ಕಾಫಿ ಟೋಪಿಗಳು ೧ ರೂ. ೪ ಆ ೧ ರೂ. ೬ ಆ.; ೧ ರೂ. ೯ ಆ.

ರೇಷ್ಮೆ ಜುಳ್ಳಿಯುಳ್ಳ ಟೋಪಿಗಳು ೧ ರೂ. ೪ ಆ.; ೨ ರೂ ಜರದ ಟೋಪಿಗಳು ೧ ರೂ. ೧೨ ಆ.; ೧ ರೂ. ೪ ಆ.; ೦ ರೂ. ೬ ಆ. ಉಸುಕಿನ ಟೋಪಿಗಳು ೧ ರೂ. ೪ ಆ.; ೧ ರೂ. ೬ ಆ.

ಹೊಸಗಳ ಟೋಪಿ, ಸೂಫಿ, ಮೇಜೋಡು, ಅರ್ಧ ಜೋಡು ಕೆತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿಕೊಂಡವರಿಗೆ ಕೊಟ್ಟು ಕಳುಹಿಸುತ್ತೇವೆ.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ, ಇತರ ಕಡೆಗಳಲ್ಲೂ ನಮ್ಮ ಏಜೆಂಟ್ರ ಮೂಲಕ ತೆಗೆದುಕೊಳ್ಳುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸ್) ರೂ. ೧—೦—೦

ಸರಸ್ವತೀವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ ರೂ. ೧—೬—೦

" " " " " ೦—೧೪—೦

ಚಂದಾದಾರರುಗಳಲ್ಲವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾಪತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸಬೇಕಾಗಿದ್ದ.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಏನೇನು ನೋವು ಆಗದೆ ಕೂದಲು ತೆಗೆಯುವ

ಬಾದಶಹಾ ಸಬಕಾರ.

70-1

ಬೇಕಾದ ಜಾಗದಲ್ಲಿ ಈ ಸಬಕಾರ ಹಚ್ಚಿದರೆ ಕೂದಲು ಬಹಳ ಸುಲಭವಾಗಿ ಹೋಗುತ್ತವೆ. ಮತ್ತು ತೊಗಲು ಮೆತ್ತಗೆ ಆಗುತ್ತದೆ. ಈ ಸಬಕಾರದಲ್ಲಿ ಸುಣ್ಣಾ ಮತ್ತು ಹರಿದಳ ಮುಂತಾದ ಕೆಟ್ಟ ಪದಾರ್ಥದ ಮಿಶ್ರಣವೇನೂ ಇಲ್ಲ.

ಕಿಮ್ಮತ್ತು ೩ ವಡೆ ಇರುವ ೧ ಪೆಟ್ಟಿಗೆಗೆ ರೂ. ೧, ಪೋಸ್ಟೇಜು ೬ ಆಣೆ.

ತಾ ಕ—ಪತ್ರವ್ಯವಹಾರ ಪೂರ್ಣವಿಳಾಸ ಕೊಟ್ಟು ಇಂಗ್ಲಿಷ್ ಭಾಷೆಯಲ್ಲಿ ಮಾಡಬೇಕು. ನಮ್ಮ ವಿಳಾಸ:—

ಪಿ. ಸಿ. ಮೆಹತಾ,

ಕಾಲಬಾದೇವಿ, ಮುಂಬಯಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ಕಳುಹಿಸುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೆಂದರೆ:—ಬೆನ್ನಿನಲ್ಲಿ ಛಳುಕು ; ನಿದ್ರೆಯಿಲ್ಲದೆ ಇರುವುದು ; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಸುಪಾಗಿಯೋ ಇಳಿಯುವುದು ; ಬಿಡದೆ ಬಾಯಾರಿಕೆ ; ಬಳಲಿಕೆ ; ಎದೆಕಲ್ಲಿಸಿಕೊಳ್ಳುವುದು ; ತಲೆನೋವು ; ಗಾಬರಿ ; ಕಣ್ಣುಮೊಬ್ಬು ; ತಲೆ ತಿರುಗುವಿಕೆ ; ಮೈನೋವು ಕೀಲುನೋವು , ಮರವು ; ನಿಶ್ಶಾಣ ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರಪಿಂಡವಸ್ತ್ರ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸರವ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನು ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ಕಳ್ಳುಹಿಸ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-1]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು, ಡೋನ್ಸರವ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವವು.



ರೂ. ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦, ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೫೦, ಬೊಂಬಾಯಿ.—ಇವರಲ್ಲಿ ದೊರೆಯುವುವು.

ವೃತ್ತಾಂತ ಪತ್ರಿಕೆ

ಸನ್ ೧೯೦೮ ನೇ ಇಸವಿ ಸೆಪ್ಟಂಬರ್ ತಾ|| ೩ ನೇ ಗುರುವಾರ.

ಸರ್ಕಾರಿ ಕಾರುಬಾರುಗಳ ಮೇಲೆ ಆಕ್ಷೇಪಣೆಮಾಡುವುದು

ಗವರ್ನಮೆಂಟಿನವರು ಹೊಸದಾಗಿ ವರ್ತಮಾನ ಪತ್ರಿಕೆಗಳ ಕಾನೂನನ್ನು ಮಾಡಿದ್ದರಿಂದ ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಪ್ರಕಟವಾಗುತ್ತಿದ್ದ ಕನ್ನಡ ಮತ್ತು ಇಂಗ್ಲೀಷಿನ ಐದು ಪತ್ರಿಕೆಗಳು ನಿಲ್ಲಿಸಲ್ಪಟ್ಟಿರುತ್ತವೆ. ಇದನ್ನು ನೋಡಿ ನಮ್ಮ ಕೆಲವು ವಾಚಕರು ವಿಷಾದಪಟ್ಟು, 'ಇನ್ನು ಮುಂದೆ ಗವರ್ನಮೆಂಟಿನವರ ಕಾರುಬಾರುಗಳನ್ನು ಕುರಿತು ಚರ್ಚಿಸಿ ಆಕ್ಷೇಪಣೆ ಮಾಡುವಂಥಾ ಪತ್ರಿಕೆಗಳು ಯಾವೂ ಇಲ್ಲದೆ ಹೋದವು. ಗವರ್ನಮೆಂಟಿಗೆ ಅಸಮಾಧಾನವನ್ನುಂಟುಮಾಡುವಂಥಾ ಯಾವ ಸಂಗತಿಯೂ ಪ್ರಕಟವಾಗುವ ಹಾಗಿಲ್ಲ. ಗವರ್ನಮೆಂಟ್ ಅಧಿಕಾರಿಗಳು ತಮ್ಮ ಕಾರುಕರ್ದಿಗಳ್ಯಾವವೂ ಬಯಲಿಗೆ ಬಾರದಂತೆ ಆಯಿತೆಂದು ತಿಳಿದು ನಿಶ್ಚಿಂತರಾಗಿ ಅನೇಕ ಅಕೃತ್ಯಗಳನ್ನೂ ಅನ್ಯಾಯಗಳನ್ನೂ ಮಾಡುವುದಕ್ಕೆ ಅವಕಾಶವೂ ಪ್ರೋತ್ಸಾಹವೂ ಆಗಿರುತ್ತದೆ. ಪ್ರಜೆಗಳಿಗೆ ಪತ್ರಿಕೆಗಳ ಮೂಲಕ ಉಂಟಾಗುತ್ತಿದ್ದ ಬೆಂಬಲವೂ ಸಹಾಯವೂ ತಪ್ಪಿಹೋಯಿತು" ಎಂಬೀ ರೀತಿ ಹೇಳಬಹುದು

ಇದಕ್ಕೆ ಪ್ರತಿಯಾಗಿ ನಾವು ಹೇಳುವುದೇನೆಂದರೆ, ಮೈಸೂರು ಸಂಸ್ಥಾನದ ಪ್ರಜೆಗಳಿಗೆ ವರ್ತಮಾನ ಪತ್ರಿಕೆಗಳ ಬೆಂಬಲವೂ ಪ್ರೋತ್ಸಾಹವೂ ಅವಶ್ಯವಾಗಿ ಬೇಕಾಗಿರುತ್ತವೆ ಎಂದು ಒಪ್ಪಿ ಧಾರಾಳವಾಗಿ ಹೇಳುತ್ತೇವೆ ಪಲವು ಅಧಿಕಾರಿಗಳೂ ನೌಕರರೂ ಕ್ರೂರಿಗಳಾಗಿಯೂ ಲಂಚಕೋರರಾಗಿಯೂ ಇರುವರು ಅಂಥವರ ದುಷ್ಕಾರ್ಯಗಳನ್ನು ಎತ್ತಿಹಾಕಿ ಬೈಲಿಗೆ ತರಬೇಕಾದದ್ದು ಬಹು ಅವಶ್ಯವಾಗಿರುತ್ತದೆ ಗವರ್ನಮೆಂಟಿನ ಕಾರುಬಾರುಗಳನ್ನು ಎತ್ತಿಹಾಕಿ ಎಷ್ಟು ಮಟ್ಟಿಗೆ ಆಕ್ಷೇಪಣೆಮಾಡಿದಾಗ್ಯೂ ಈ ಕಾನೂನು ಅಂಥವರನ್ನು ಅಡ್ಡಿಮಾಡುವುದಿಲ್ಲ ಈ ಭಾಗವನ್ನು ಸಕಲರೂ ಖಂಡಿತವಾಗಿಯೂ ಸ್ಪಷ್ಟವಾಗಿಯೂ ತಿಳಿಯಕೊಳ್ಳತಕ್ಕದ್ದು ಅಂಥಾ 'ಆಕ್ಷೇಪಣೆಗಳನ್ನು ಎಷ್ಟಾದರೂ ಮಾಡಲಿ" ಎಂತಲೂ 'ಆಕ್ಷೇಪಣೆಮಾಡುವುದನ್ನೇ ನಿರೀಕ್ಷಿಸುತ್ತೇವೆ' ಎಂತಲೂ ದಿವಾನರವರೂ ಕೌನ್ಸಲರುಗಳೂ ಬಹಿರಂಗವಾಗಿ ಹೇಳುತ್ತಾರೆ ಆದರೆ ಗವರ್ನಮೆಂಟಿನವರು ಸುಳ್ಳಾದ ವಿಷಯವನ್ನು ಬರೆಯತಕ್ಕ ಮನುಷ್ಯನನ್ನು ಕಠಿಣವಾಗಿ ಶಿಕ್ಷಿಸುತ್ತಾರಲ್ಲದೆ ಯಥಾರ್ಥವಾದ ಸಂಗತಿಗಳನ್ನು ನ್ಯಾಯವಾದ ರೀತಿಯಲ್ಲಿ ಪ್ರಕಟಿಸುವ ಯಾವ ಎಡಿಟರನ್ನೂ ಶಿಕ್ಷಿಸುವುದಿಲ್ಲ. ಸರ್ಕಾರಿ ಅಧಿಕಾರಿಗಳ ಮತ್ತು ನೌಕರರ ಮೇಲಿನ ಆಕ್ಷೇಪಣೆಗಳನ್ನು ಗವರ್ನಮೆಂಟಿನ ಕಾರುಬಾರುಗಳ ವಿಷಯದಲ್ಲಿ ಪ್ರಜೆಗಳಿಗೆ ತೋರುವ ಅಭಿಪ್ರಾಯಗಳನ್ನು ಪ್ರಜೆಗಳ ಕಷ್ಟನಷ್ಟಗಳನ್ನು ಇವೆಲ್ಲಾ ಎಷ್ಟೇ ನಿರ್ದಾಕ್ಷಿಣ್ಯವಾದವುಗಳಾಗಿದ್ದರೂ ಎಷ್ಟೇ ಕಠಿಣವಾದವುಗಳಾಗಿದ್ದರೂ—ಯಥಾರ್ಥವಾಗಿಯೂ ನ್ಯಾಯವಾಗಿಯೂ ಇರುವ ಪಕ್ಷದಲ್ಲಿ, ಅಂಥಾ ವಿಷಯಗಳನ್ನೆಲ್ಲಾ ನಾವು ಪ್ರಕಟಿಸಲು ಸಿದ್ಧರಾಗಿರುತ್ತೇವೆ ಮೈಸೂರು ಸಂಸ್ಥಾನದ ಪ್ರಜೆಗಳ ಬೆಂಬಲವಾಗಿ ನಿಂತು ಅವರಿಗೆ ಪ್ರಯೋಜನವನ್ನುಂಟುಮಾಡಬೇಕೆಂಬುದೇ ಈ ನಮ್ಮ ಪತ್ರಿಕೆಯ ಉದ್ದೇಶವಾಗಿರುವುದು ಅಕ್ರಮ ಅನ್ಯಾಯ ಮೋಸ ಲಂಚಕೋರತನ ಇವುಗಳನ್ನು ಎಲ್ಲಿ ಕಂಡರೂ ಎತ್ತಿಹಾಕಿ ನಮ್ಮ ಕೈಲಾಗುವ ಮಟ್ಟಿಗೂ ತೊಡೆದುಬಿಡುವುದೂ ಪ್ರಜೆಗಳ ನೆಮ್ಮದಿ ಸುಖಸಂತೋಷಾದಿಗಳನ್ನು ಅಭಿವೃದ್ಧಿಗೆ ತರುವ ಭಾಗದಲ್ಲಿ ಸಹಾಯಪಡುವುದೂ ನಮ್ಮ ಕರ್ತವ್ಯವಾಗಿದೆ ಪ್ರಜೆಗಳ ಕಷ್ಟನಿಷ್ಠುರಗಳನ್ನೂ ಅವರ ಇಂಗಿತ ಅಭಿಪ್ರಾಯಗಳನ್ನೂ ಪ್ರಕಟಿಸುವುದಕ್ಕೆ ನಮ್ಮ ಪತ್ರಿಕೆಯು ಧಾರಾಳವಾಗಿ ಸ್ಥಳಕೊಡುವುದು ಆದರೆ ಯಥಾರ್ಥವಾದ ಸಂಗತಿಗಳನ್ನು ನ್ಯಾಯವಾದ ರೀತಿಯಲ್ಲಿ ಬರೆಯುವವರಾಗಿ ನಿಜಾಂಶವನ್ನು ನ್ಯಾಯವಾಗಿ ತಿಳಿಯುವಂಥಾ ಗುಣವು ಪ್ರಜೆಗಳಲ್ಲಿ ಉಂಟಾಗುವ ತನಕ ಸರ್ಕಾರಿ ಅಧಿಕಾರಿಗಳ ಮತ್ತು ನೌಕರರ ದುರ್ಭಾಷಣೆಗಳೂ ಅನ್ಯಾಯಗಳೂ ಅಡಗಲಾರವು

ಕಳ್ಳನನ್ನು ಶಿಕ್ಷಿಸುವುದಕ್ಕೆ ಸರ್ಕಾರದವರು ಕಾನೂನು ಮಾಡಿದ್ದರೂ ಸತ್ಯವಂತನು ಅದನ್ನು ನೋಡಿ ಹಾಗೆ ಹೆದರಲಾರನೋ ಹಾಗೆಯೇ ಸತ್ಯವಾದಿಗಳಾದ ಎಡಿಟರು ಈ ಹೊಸ ಕಾನೂನಿಗಾಗಿ ಭಯಪಡಲಾರರು ಸತ್ಯತೆಯಿಂದಲೂ ನ್ಯಾಯವಾಗಿಯೂ ತನ್ನ ಕರ್ತವ್ಯವನ್ನು ನೆರವೇರಿಸುವಂಥಾ ಯಾವ ವರ್ತಮಾನ ಪತ್ರಿಕೆಯನ್ನೂ ಈ ಹೊಸ ಕಾನೂನು ನೋಯಿಸಲಾರದು

ವಿಗ್ರಹವು ನೀರಿನಲ್ಲಿ ಹುಟ್ಟಿದ್ದು

"ಬಾಗೇಪಲ್ಲಿ ಪರಗಣೆ ೧೦ ಮೈಲಿ ಫಾಸಲೆಯಲ್ಲಿ ಗಡದ ವೆಂಕಟರಮಣಸ್ವಾಮಿ ದೇವರ ಬೆಟ್ಟವಿದೆ ಆ ಬೆಟ್ಟದಲ್ಲಿ ಕೊಳೆ ಇದೆ ಆ ಕೊಣೇಲಿ ಬಹು ದಿವಸಗಳಿಂದ ಜಲಾಧಿವಾಸಿಗಳಾಗಿದ್ದ ಒಂದು ವಿಗ್ರಹ ಶಿರೋದಯವಾದಂತೆ ದಿನ ತೋರುವ ಹುಡುಗರಿಂದ ಆಗೀಷ್ಟು ತಾ ೧೮ನೇ ಮಂಗಳವಾರ ಜನ್ಮಾಷ್ಟಮಿ ದಿನ ಪ್ರಾತಃಕಾಲ ತಾಲ್ಲೂಕು ಅಮಲ್ದಾರರಾದ ಮೆ|| ಗೋಪಾಲರಾಯರಿಗೆ ಖಾತ್ರಿ ತಿಳಿದುಬಂದದ್ದರಿಂದ ಒಡನೆ ಅವರು ಬೆಟ್ಟಕ್ಕೆ ದಯಮಾಡಿಸಿದರು ಅವರ ಸಂಗಡ ಶಿರಸ್ತೆದಾರರು ಮತ್ತು ಕಚೇರಿ ನೌಕರರು, ಪ್ಲೀಡರು, ಗ್ರಾಮದ ಪಟೇಲರು, ಶೆಟ್ಟಿ ವರ್ತಕರು, ಮತಾಭಿಮಾನಿಗಳು ಮೊದಲಾದವರೆಲ್ಲಾ ಹೋಗಿ ಇದ್ದರು ಕೊಣೇಲಿ ೩—೩ ಅಡಿ ನೀರು ನಿಂತಿತ್ತು ಈ ನೀರಿನಲ್ಲಿ ತೇಲುತ್ತಿದ್ದ ವಿಗ್ರಹವನ್ನು ಈಚೆಗೆ ತೆಗಿಸಿ ಅಮಲ್ದಾರ್ ಮೆ|| ಗೋಪಾಲರಾಯರು ಅಂಗಾಂಗಗಳ್ಯಾವತ್ತೂ ಪರಿಶೋಧಿಸಿ ನೋಡಿದ್ದರಲ್ಲಿ ಯಾವ ವಿಧವಾದ ದೋಷಗಳೂ ಇರಲಿಲ್ಲ. ಪ್ರಜಾಪಾಲನೆಗೋಸ್ಕರ ಸ್ವಯಂ ಉದ್ಭವವಾಗಿರುವ ಮಹಾಸುಪ್ರಭಾವಶಾಲಿಯೆಂದು ತಿಳಿದು ಯೋಗವೆಂಕಟ್ರಮಣಸ್ವಾಮಿ ಎಂಬ ಹೆಸರಿನಿಂದ ವಂದನೆಯನ್ನು ಮಾಡಲಾರಂಭಿಸಿದರು ಪುರಾತನವಾದ ಸಾಲಿಗ್ರಾಮ ಶಿಲೆಯನ್ನು ಶಂಕರಾಚಾರಿಯಿಂದ ಕೆತ್ತಲ್ಪಟ್ಟಿರುವ ಅತಿ ಸುಂದರವಾದ ವಿಗ್ರಹ ಅದರ ಎತ್ತರ ೩ ಅಡಿ ಉಳ್ಳದ್ದಾಗಿದೆ. ಮೆ|| ಗೋಪಾಲರಾಯರು ಆ ವಿಗ್ರಹವನ್ನು ಕೊಳೆ ದಡದಲ್ಲಿ ಸ್ಥಾಪಿಸಿ ಮಾನಸಪೂಜೆಯನ್ನು ಮಾಡಿ, ಫಲಸಮರ್ಪಣೆ ಮಾಡಿದರು. ಶುಭಮುಹೂರ್ತದಲ್ಲಿ ಅಲ್ಲಿ ಜಮಾಯಿಸಿದ್ದ ಜನಗಳು ನೂರಾರು ತೆಂಗಿನಕಾಯಿಗಳನ್ನು ಅರ್ಪಿಸಿದರು ಆ ದಿನದಿಂದ ಒಂದು ನಿಮಿಷವೂ ಬಿಡುವಿಲ್ಲದಂತೆ ದೇವರ ದರ್ಶನಾರ್ಥವಾಗಿ ಗ್ರಾಮಾಂತರಗಳಿಂದ ಅನೇಕರು ಬರುತ್ತಲಿದ್ದಾರೆ ದಿನಕ್ಕೆ ಸಾವಿರಾರು ತೆಂಗಿನಕಾಯಿಗಳು ಫಲಸಮರ್ಪಣೆ ಮಾಡುತ್ತಲಿದ್ದಾರೆ. ಬೆಟ್ಟದ ಮೇಲೇನೇ ಒಂದು ಸ್ಥಳವನ್ನು ಆರಿಸಿ, ಭಕ್ತಾದಿಗಳಿಂದಲೂ ಸರ್ಕಾರದವರ ಸಹಾಯದಿಂದಲೂ ಒಂದು ಗರ್ಭಗುಡಿಯನ್ನು ಕಟ್ಟಿಸಿ, ಈ ದೇವರನ್ನು ಸ್ಥಾಪಿಸಿ, ಸಂಪ್ರೋಕ್ಷಣೆ ಮಾಡಿ ಜೀರ್ಣೋದ್ಧಾರವಾಗಬೇಕೆಂದು ಪ್ರಜೆಗಳೆಲ್ಲ ಸೇರಿ ಅಮಲ್ದಾರರನ್ನು ಕುರಿತು ಪ್ರಾರ್ಥಿಸಿಕೊಂಡಿರುವರು."

ನಮ್ಮ ಖಾತ್ರಿದಾರರಲ್ಲೊಬ್ಬರು ಮೇಲೆ ಕಾಣಿಸುವ ವಿಚಿತ್ರವಾದ ಖಾತ್ರಿಯನ್ನು ಬರೆದು ಕಳುಹಿಸಿರುತ್ತಾರೆ ಈ ಸಂಗತಿಯ ವಿಷಯ ನಮ್ಮಭಿಪ್ರಾಯವನ್ನು ತಿಳಿಸಬೇಕೆಂದಿರುತ್ತೇವೆ

(೧) ಪೂರ್ವಕಾಲದ ಪ್ರಸಿದ್ಧ ಶಿಲ್ಪಿಗಳಾದ ಜಂಕಣಾಚಾರ್ಯರೇ ಈ ವಿಗ್ರಹವನ್ನು ಕೆತ್ತಿದರೆಂದು ನಮ್ಮ ಖಾತ್ರಿದಾರರು ಅಭಿಪ್ರಾಯ ಪಡುವರು. ಇದರ ನಿಜತ್ವವನ್ನು ಅವರು ಚರಿತ್ರೆಗಳ ಮೂಲಕ ಸ್ಥಾಪಿಸುವರೇ? ಶಿಲ್ಪಕೆಲಸಗಳು ಯಾವಕಡೆಯಲ್ಲಿ ಕಂಡುಬಂದರೂ ಈ ದೇಶದ ಜನರು ಅವುಗಳನ್ನು ಜಂಕಣಾಚಾರ್ಯರೇ ಮಾಡಿದರೆಂದು ಸಾಧಾರಣವಾಗಿ ಮಾತನಾಡಿಕೊಳ್ಳುವರು. ಆದರೆ ವಿವೇಕಿಗಳಾದ ಜನರು ಇಂಥಾ ಸಂಗತಿಗಳನ್ನು ಸುಲಭವಾಗಿ ನಂಬುವವರಲ್ಲ ಅವರಿಗೆ ಬಲವಾದ ಸಾಕ್ಷಿಗಳು ಬೇಕಾಗಿರುತ್ತವೆ ಅಂಥಾ ಸಾಕ್ಷಿಗಳನ್ನೊದಗಿಸಿಕೊಡುವುದು ಸುಲಭವಲ್ಲ ಚರಿತ್ರೆಯಲ್ಲಿ ಪಾಂಡಿತ್ಯವನ್ನು ಪಡೆದಿರುವವರೂ ಪುರಾತನ ಕಟ್ಟಡಗಳನ್ನು ನೋಡಿ, ಅವುಗಳನ್ನು ಪರೀಕ್ಷಿಸಿ, ಅವುಗಳ ಚರಿತ್ರೆಯನ್ನೆಲ್ಲಾ ಆದ್ಯಂತವಾಗಿ ತಿಳಿದಿರುವವರೂ ಮಾತ್ರ ಮೇಲ್ಕಂಡ ಸಂಗತಿಯ ವಿಷಯದಲ್ಲಿ ಮಾತನಾಡಲು ಶಕ್ತರಾಗಿರುವರೇ ವಿನಾ ನಿಂಕ್ಯಾದವರು ಮಾತನಾಡಲು ಶಕ್ತರಲ್ಲವು ಅನೇಕ ಸಮಯಗಳಲ್ಲಿ ಚೆನ್ನಾಗಿ ತಿಳಿದಿರುವವರು ಕೂಡ ಯಾವನಾದರೊಂದು ಕೆತ್ತನೆಯ ಕೆಲಸವನ್ನು ನೋಡಿ ಸಂಶಯದಿಂದ ಕೂಡಿದವರಾಗಿ—ಇದನ್ನು ಒಂದುವೇಳೆ ಜಂಕಣಾಚಾರ್ಯರೇ ಮಾಡಿದ್ದರೂ ಮಾಡಿರಬಹುದು ಅಥವಾ ಇನ್ಯಾವ ಶಿಲ್ಪಿಯಾದರೂ ಮಾಡಿರಬಹುದೆಂದು ತಿಳಿಸುವುದು ಸಾಧಾರಣವಾಗಿರುತ್ತದೆ

(೨) ತಾಲ್ಲೂಕು ಅಮಲ್ದಾರರು ಆ ವಿಗ್ರಹವನ್ನು ಕಂಡು ಅದು ಪ್ರಜಾಪಾಲನೆಗೋಸ್ಕರ ಸ್ವಯಂ ಉದ್ಭವವಾಯಿತೆಂದು ಹೇಳಿದರೆಂಬದಾಗಿ ನಮ್ಮ ಖಾತ್ರಿದಾರರು ತಿಳಿಸುತ್ತಾರೆ ಇಂಥಾ ಅಭಿಪ್ರಾಯಕ್ಕೆ ಯಾವ ಸಾಕ್ಷಿಯಾದರೂ ಇರುವುದೇ? ಈ ವಿಗ್ರಹವನ್ನು ಜನರು ಪುರಾತನಕಾಲದಲ್ಲಿ ಅಲ್ಲಿ ಹಾಕಿದ್ದರೂ ಹಾಕಿರಬಹುದು ಅಥವಾ ಈಚೀಚೆಗೆ ಅದನ್ನು ಯಾರಾದರೂ ತಂದು ಅಲ್ಲಿಟ್ಟಿದ್ದರೂ ಇಟ್ಟಿರಬಹುದು ಯಾತಕ್ಕೆಂದರೆ ದೇವಸ್ಥಾನಗಳಿಗೆ ಸಂಬಂಧಪಟ್ಟ ಪೂಜಾರಿಗಳೂ ಇತರರೂ ಅನೇಕ ಸಮಯಗಳಲ್ಲಿ ಜನರನ್ನು ಮೋಸಪಡಿಸುವುದಕ್ಕೋಸ್ಕರ ನಾನಾತರವಾದ ಪಿತ್ತಲಾಟಗಳನ್ನು ಕಲ್ಪಿಸುವುದುಂಟು ಬುದ್ಧಿವಂತರಿಗೆ ಇಂಥಾ ಸಂಗತಿಗಳು ಸಂಶಯವನ್ನು ಹುಟ್ಟಿಸುವವು. ಯಾರಾದರೊಬ್ಬರು ಅಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿ ಪೂಜೆಪುನಸ್ಕಾರಗಳನ್ನು ಆರ್ಪಿಸುವುದಕ್ಕೋಸ್ಕರ ಇಂಥಾ ಸಂಗತಿಯನ್ನು ಹುಟ್ಟಿಸಿದರೆಂದು ನಂಬುವುದಕ್ಕೆ ಸ್ಪದವುಂಟು

(೩) ಇಂಥಾ ಸಂಗತಿಗಳನ್ನು ಕುರಿತು ಚರ್ಚಿಸುವಾಗ್ಗೆ ಎರಡು ವಿಶೇಷವಾದ ಅಂಶಗಳನ್ನು ಮನಸ್ಸಿನಲ್ಲಿಡುವುದು ವಾಚಕರ ಕರ್ತವ್ಯವಾಗಿರಬೇಕು ಮೊದಲನೇದು ದೇವರೆಂದಿಗೂ ಅದ್ಭುತವಾದ ರೀತಿಯಲ್ಲಿ ವಿಗ್ರಹಗಳನ್ನು ಸೃಷ್ಟಿಸುವವನೂ ಅಲ್ಲ. ಅಥವಾ ಅವುಗಳು ಆಶ್ಚರ್ಯವಾದ ರೀತಿಯಲ್ಲಿ ಜನರಿಗೆ ಕಾಣಬರುವಂತೆ ಮಾಡುವವನೂ ಅಲ್ಲ. ಎರಡನೇದಾಗಿ ದೇವರೆಂದಿಗೂ ತನ್ನ ಮಹಿಮಾಶಕ್ತಿಯನ್ನು ಮನುಷ್ಯನು ಮಾಡಿದ ವಿಗ್ರಹಗಳಲ್ಲಿ ಇರಿಸುವವನಲ್ಲ ವಿಗ್ರಹಗಳು ಜನರನ್ನೆಂದಿಗೂ ಕಾಪಾಡಲಾರವು ಅವು ತಮ್ಮನ್ನಾದರೂ ಕಾಪಾಡಿಕೊಳ್ಳುವುವೇ? ಎಂದಿಗೂ ಇಲ್ಲವಲ್ಲ'

(೪) ನಮ್ಮ ಖಾತ್ರಿದಾರರು ಕಳುಹಿಸಿರುವ ಈ ವಿಚಿತ್ರವಾದ ಕಥೆಯಂತೆಯೇ ಪೂರ್ವಕಾಲದಲ್ಲಿಯೂ ಕೂಡ ಅನೇಕ ಕಥೆಗಳು ಜನರೊಳಗೆ ಹರಡಿಕೊಂಡಿದ್ದವು ಆ ಕಾಲಗಳಲ್ಲಿ ಜನರು ವಿದ್ಯಾವಂತರಾಗಿಲ್ಲದೇ ಇದ್ದುದರಿಂದ ಅವರು ಮತವಿಷಯಗಳಲ್ಲಿ ಕೇವಲ ಮೂಢಾಭಿಪ್ರಾಯಗಳನ್ನಿಟ್ಟುಕೊಂಡಿದ್ದರು. ಪುರಾತನ ಕಾಲದಲ್ಲಿ (ಅಂದರೆ ಕ್ರಿ. ಪೂ ೧,೯೦೦ ರಲ್ಲಿ) ಟ್ರೋಯ್ ಎಂಬುದೊಂದು ಪ್ರಸಿದ್ಧವಾದ ಪಟ್ಟಣವಿತ್ತು ಆ ಪಟ್ಟಣದ ಜನರು ಅಲ್ಲಿ ಬಿದ್ದಿದ್ದ ಒಂದು ಮರದ ವಿಗ್ರಹವನ್ನು ನೋಡಿ ಅದು ಟ್ರೋಯ್ ಪಟ್ಟಣದ ಸಂರಕ್ಷಣೆಗೋಸ್ಕರ ಸ್ವರ್ಗದಿಂದ ಪ್ರಜಾಪತಿಯು ಕಳುಹಿಸಿದ ವಿಗ್ರಹವೆಂದು ತಿಳಿದಿದ್ದರು. ಆದರೆ ಟ್ರೋಯ್ ಪಟ್ಟಣವು ಶತ್ರುಗಳ ವಶವಾಗಿ ನಾಶವಾದುದನ್ನು ಪೂರ್ವದ ಚರಿತ್ರೆಯು ತಿಳಿಸುತ್ತದೆ ವಿದ್ಯಾವಂತರು ಇವುಗಳನ್ನೆಲ್ಲಾ ಬರೀ ಕಟ್ಟು ಕಥೆಗಳೆಂದೇ ಭಾವಿಸುವರು. ಈಗಿನ ಕಾಲದಲ್ಲಿ ಯೋಗ್ಯತೆಯನ್ನಿಸಿಕೊಳ್ಳುವವರು ಅಗೋಚರನೂ ಪವಿತ್ರನೂ ಆಗಿರುವ ದೇವರನ್ನು ಆತ್ಮದಿಂದ ಆರಾಧಿಸತಕ್ಕದ್ದಾಗಿರುತ್ತದೆ ನಮ್ಮ ಖಾತ್ರಿದಾರರು ತಿಳಿಸುವ ಪೂಜೆಯು ನಮ್ಮ ದೇಶೀಯರನ್ನೆಂದಿಗೂ ನೀತಿಮಾರ್ಗದಲ್ಲಿ ನಡಿಸುವುದಿಲ್ಲ

ಒಳದೇಶದ ವೃತ್ತಾಂತಗಳು.

ಬೆಂಗಳೂರು ದಂಡಿನಲ್ಲಿ ಒಬ್ಬ ಹಕೀಮನು ಒಬ್ಬ ರೋಗಿಗೆ ಹೆಚ್ಚಾಗಿ ಅಫೀಮನ್ನು ಕೊಟ್ಟದ್ದರಿಂದ ಅವನು ಸತ್ತುಹೋದನೆಂದು ತಿಳಿದು, ಪೋಲೀಸಿನವರು ಆ ಹಕೀಮನನ್ನು ಹಿಡಿದು ವಿಚಾರಣೆ ಮಾಡುತ್ತಿದ್ದಾರೆ.

***

ಶಿವಮೊಗ್ಗದ ಮೆ|| ವಿ. ಪಿ. ಮಾಧವರಾಯರೂ, ರೆವಿನ್ಯೂ ಕಮಿಷನರ್ ಮೆ|| ಎ. ರಂಗಸ್ವಾಮಿಅಯ್ಯಂಗಾರರೂ ಕಳೆದ ಸೋಮವಾರ ರಾಜಧಾನಿಗೆ ದಯಮಾಡಿದರು. ಇವರು ಇನ್ನೂ ೨—೩ ದಿನ ಇಲ್ಲೇ ಇರುತ್ತಾರೆಂದು ಕೇಳುತ್ತೇವೆ.

***

ಹೊಸ ಅರಮನೆಯಲ್ಲಿ ಅಲಂಕಾರಾದಿಗಳು ಇನ್ನೂ ಪೂರೈಸಿಲ್ಲವಾದ್ದರಿಂದ ಈ ವರುಷವೂ ಎಂದಿನಂತೆ ಜಗನ್ಮೋಹನ ಬಂಗಲೆಯಲ್ಲೇ ನವರಾತ್ರಿಯ ದರ್ಬಾರುಗಳೂ ಉತ್ಸವಾದಿಗಳೂ ನಡೆಯತಕ್ಕದ್ದೆಂದು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರುತ್ತಾರೆ

***

ಈ ಸಲ ನವರಾತ್ರಿ ಉತ್ಸವಗಳಿಗೂ ಪ್ರಜಾಪ್ರತಿನಿಧಿ ಸಭೆಗೂ ಬರುವಂಥಾ ದೇಶೀಯ ದೊಡ್ಡ ಮನುಷ್ಯರಿಗೂ, ಪ್ರತಿನಿಧಿಗಳಿಗೂ ಸ್ಥಳ ಮುಂತಾದ ವಿಷಯದಲ್ಲಿ ವಸತಿಯನ್ನು ಕಲ್ಪಿಸುವುದಕ್ಕೆ ಸರ್ಕಾರದವರು ಮೆ|| ಸಿ. ವೆಂಕಟರಾಯರನ್ನು ನೇಮಿಸಿ ರಾಜಧಾನಿಗೆ ಕಳುಹಿಸಿದಾರೆ

***

ಇಲ್ಲಿನ ದೊಡ್ಡ ಪೇಟೆಯಲ್ಲಿ ಚಿಲ್ಲರೆ ಅಂಗಡಿ ವರ್ತಕನಾಗಿದ್ದ ಒಬ್ಬ ಶೆಟ್ಟಿಯು ಬೈಸಿಕಲ್ ಸವಾರಿಯಲ್ಲಿ ರೈಲ್ ಸ್ಟೇಷನ್ ಬಳಿ ಬಿದ್ದು ಗಾಯಪಟ್ಟು ಕಳೆದ ವಾರ ಆಸ್ಪತ್ರೆಯಲ್ಲಿ ಕಾಲವಾದನು ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ಒಂದು ಯಂತ್ರಕ್ಕೆ ಸಿಕ್ಕಿ ಒಬ್ಬ ಪ್ರಾಯಸ್ಥನು ಕಳೆದ ವಾರ ತುಂಬಾ ಗಾಯಪಟ್ಟು, ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾನೆ.

***

ಬೆಂಗಳೂರು ಪಟ್ಟಣದಲ್ಲಿ ಪ್ರಕಟವಾಗುತ್ತಿದ್ದ "ನಡೆಗನ್ನಡಿ" ಎಂಬ ಕನ್ನಡ ವಾರಪತ್ರಿಕೆಯನ್ನೂ, "ಮೈಸೂರು ಸ್ಟ್ಯಾಂಡರ್ಡ್" ಎಂಬ ಇಂಗ್ಲಿಷ್ ಪತ್ರಿಕೆಯನ್ನೂ ಎಡಿಟರು ಇನ್ನು ಮುಂದೆ ಪ್ರಕಟಿಸುವುದಿಲ್ಲವೆಂದು ಹೇಳಿ ನಿಲ್ಲಿಸಿಬಿಟ್ಟರು ಮೈಸೂರು ಸರ್ಕಾರದವರು ಮಾಡಿರುವ ವರ್ತಮಾನಪತ್ರಿಕೆಗಳ ಹೊಸಕಾನೂನೇ ಅದಕ್ಕೆ ಕಾರಣವಾಗಿರುತ್ತದೆ

***

ಸಂಸ್ಥಾನದೊಳಗೆ ಸರ್ಕೀಟು ಮಾಡುವಂಥಾ ದೊಡ್ಡ ಅಧಿಕಾರಿಗಳು ಮೋಟಾರ್ ಗಾಡಿಗಳನ್ನು ಕೊಂಡು ಉಪಯೋಗಿಸಬಹುದೆಂತಲೂ, ಅವಶ್ಯ ಬಿದ್ದರೆ ಅಂಥವರು ಮೋಟಾರ್ ಗಾಡಿ ಕೊಂಡುಕೊಳ್ಳುವುದಕ್ಕೆ ೩,೫೦೦ ರೂಪಾಯಿ ತನಕ ಸರ್ಕಾರದಿಂದ ಸಾಲ ಪಡೆದುಕೊಂಡು, ಆ ಹಣವನ್ನು ಇನ್ನೂರು ತಿಂಗಳಲ್ಲಿ ಕಂತುಕೊಟ್ಟು ತೀರಿಸಬಹುದೆಂತಲೂ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿರುತ್ತಾರೆ

***

ಮೊದಲು ಕೋಲಾರದ ಡೆಪ್ಯುಟಿ ಕಮಿಷನರಾಗಿದ್ದು ಪೆನ್ಷನ್ ಪಡೆದು ರಾಜಧಾನಿಯ ಜನರಲ್ ಆಸ್ಪತ್ರೆ ಬಳಿ ವಾಸಮಾಡುತ್ತಿದ್ದ ಮೆ|| ಸಿ ಸುಬ್ಬರಾಯರು ಬೆಂಗಳೂರಿನಲ್ಲಿ ಕಾಲವಾದರೆಂದು ತಿಳಿದುಬಂದಿದೆ. ಇವರ ಕುಮಾರರಾದ ಮೆ|| ಸಿ ಶ್ರೀಕಂಠೇಶ್ವರ ಅಯ್ಯರವರು ಈಗ ಕೋಲಾರದ ಡೆಪ್ಯುಟಿ ಕಮಿಷನರಾಗಿರುವರು ಗತಿಸಿದ ಮೆ|| ಸುಬ್ಬರಾಯರು ಮದರಾಸ್ ಪಟ್ಟಣದಲ್ಲಿ ದಿವಾಳಿಯಾದ ಆರ್ಬತ್ನಾಟ್ ಕಂಪನಿಯಲ್ಲಿ ಬಹಳ ಹಣವನ್ನು ಕಳೆದುಕೊಂಡು, ತುಂಬಾ ವ್ಯಸನಾಕ್ರಾಂತರಾಗಿದ್ದರು

***

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಬಾಲಘಾಟಿನಲ್ಲಿ ಮೆ|| ರಿಷಲ್ ಎಂಬಾತನು ತನ್ನ ಬಂಗಲೆಯಲ್ಲಿ ಚಾಕರಿಮಾಡುತ್ತಿದ್ದ ಇಬ್ಬರು ಸಣ್ಣ ಹುಡುಗರೂ ಸೇರಿ, ತನ್ನ ಒಂದು ತಪ್ಪೇಲನ್ನು ಕದ್ದರೆಂದು ಊಹಿಸಿ, ಅವರನ್ನು ಕೊಠಡಿಯಲ್ಲಿ ಕೂಡಿ, ಅಕ್ರಮ ಬೈದು ಮಾಡಿದನೆಂದು ಮೊಕದ್ದಮೆ ಆಯಿತು. ವಿಚಾರಣೆಯಲ್ಲಿ ಅವನು ಆ ಹುಡುಗರನ್ನು ಬೈದು ಮಾಡಿದ್ದುಂಟೆಂದು ಒಪ್ಪಿಕೊಂಡನು. ಮ್ಯಾಜಿಸ್ಟ್ರೇಟರು ಅವನಿಗೆ ಕೋರ್ಟು ಬರಖಾಸ್ತಾಗುವ ತನಕ ಬೈದು ಸಜಿವನ್ನೂ ೩೫ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು

***

ಇಲ್ಲಿನ ಮರಿಮಲ್ಲಪ್ಪನವರ ಹೈಸ್ಕೂಲ್ ಬಳಿ ಒಂದು ಮನೆಯಲ್ಲಿ ಇದ್ದವರು ಹೆಂಗಸರೂ ಮಕ್ಕಳೂ ಮಲಗಿರುವಾಗ್ಗೆ ಕಳೆದ ಭಾನುವಾರ ರಾತ್ರಿ ಕಳ್ಳರು ರಸ್ತೆಯ ಕಡೆ ಗೋಡೆಗೆ ಕನ್ನಹಾಕಿ ನುಗ್ಗಿ ಸುಮಾರು ಎರಡು ಸಾವಿರ ರೂಪಾಯಿನ ಸಗನಾಭರಣಗಳನ್ನು ಅಪಹರಿಸಿಕೊಂಡು ಹೋದರು ಇದರಿಂದ ಆ ಮನೆಯವರು ದಿಗ್ಭ್ರಾಂತರಾದರು. ಸಮೀಪದಲ್ಲೇ ಪೋಲೀಸ್ ಇನ್ಸ್‌ಪೆಕ್ಟರ ಮನೆಯೂ, ಪೋಲೀಸ್ ಸ್ಟೇಷನ್ನೂ ಇರುತ್ತವೆ. ಆದರೂ ಈ ಕಳ್ಳತನ ನಡೆದದ್ದು ಪೋಲೀಸಿನವರು ಆ ರಾತ್ರಿ ಕಾಣದೆ ಹೋದದ್ದು ಆಶ್ಚರ್ಯವಾಗಿದೆ

***

ಒಬ್ಬ ಖಾತ್ರಿದಾರರು ಬರೆಯುವುದು —"ಕಾನಕಾನಹಳ್ಳಿ ತಾಲ್ಲೂಕು ಮರಳವಾಡಿ ಹೋಬಳಿ ಕನಕಪುರದಲ್ಲಿರುವ ಒಬ್ಬರ ವೆಂಕಟಾಚಲನೆಂಬುವನು ಕಳೆದ ಬುಧವಾರದ ರಾತ್ರಿ ತನ್ನ ಹೆಂಡತಿಯಾದ ಅಂದರೆ ಚಿಕ್ಕ ಮರಳವಾಡಿಯಲ್ಲಿರುವ ಹನುಮಂತಬೋವಿಯ ಮಗಳು ವೆಂಕಟಿ ಎಂಬುವಳನ್ನು ಏನೋ ನೆಪದಿಂದ ಉಪಾಯದಿಂದ ಊರ ಹೊರಗೆ ತೆಗೆದುಕೊಂಡು ಹೋಗಿ ವೆಂಪೆ ಕೆಳಗಿನ ಗಳಿಗಳು ಇಟ್ಟಿದ್ದ ಸ್ಥಳದಲ್ಲಿ ಹಾಗೆಯೇ ಕೆಡಗಿ ಕೊಡಲಿಯನ್ನು ತೂರಿಸಿ ಬೆಂಕಿಹಚ್ಚಿ ಮನೆಯಲ್ಲಿ ಬಂದು ಸೇರಿಕೊಂಡನು. ಆ ಹೆಣವು ಅರ್ಧ ಭಾಗ ಬೆಂದು ಒಂದು ಕಾಲು ಒಂದು ಕೈ ಮಾತ್ರ ಉಳಿದಿತ್ತು ಬೆಳಿಗ್ಗೆ ಗಲಾಟೆಯಾಯಿತು ಹೋಗಿ ನೋಡುವಲ್ಲಿ ಇದೆ ಸ್ಥಿತಿಯಲ್ಲಿ ಆಗಿತ್ತು ಈಗ ಅವನನ್ನು ಪೋಲೀಸ್ ವಿಚಾರಣೆಯಲ್ಲಿ ಇಟ್ಟಿದೆ"

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟರ್."

ವ್ಯವಹಾರನಿರ್ಣಯ- ಭಾಗಗಳು ೫೭೮ ಹಿಂದೂ ಮಹಮದೀಯ ಲಾಗಳು, ೨೯ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೭೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ, ಕ್ರಯ ವಿ. ಪಿ. ಸೇರಿ ೦ ರೂ. ೧೨ ಆಣೆ. [40-19]

ಕನ್ನಡ ಲಾ ರಿಪೋರ್ಟರ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ೧—೨—೦ ಮುಂಗಡ, ಯಾ, ವಿ. ಪಿ. ಬಿಡಿಪ್ರತಿಕೆ ೧ಕ್ಕೆ ೦—೨—೦

ಇವುಗಳನ್ನಪೇಕ್ಷಿಸುವವರು "ಎಂ ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯುವುದು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

59 10

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ಐದು ಆಣೆಯಿಂದ ೬॥ ಆಣೆ ವರಿವಿಗೂ ಚಿಲ್ಲರೆಯಾಗಿ ಯಾಗಲೀ ಒಟ್ಟಾಗಿ ಯಾಗಲೀ ಮಾರಲ್ಪಡುತ್ತವೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ತಾನಾಗಿ ಇಂಗ್ಲೀಷ್ ಕಲಿಯುವಿಕೆ.

61-4

ಇಂಗ್ಲೀಷ್ ಭಾಷೆಯನ್ನು ಬರೆಯುವುದಕ್ಕೂ, ಓದುವುದಕ್ಕೂ, ಮಾತಾಡುವುದಕ್ಕೂ, ಬೋಧಕರ ಸಹಾಯ ಸ್ವಲ್ಪವೂ ಇಲ್ಲದೆ ಒಂದೆರಡು ತಿಂಗಳುಗಳಲ್ಲಿಯೇ ತಾನಾಗಿ ಕಲಿಸುವ ಅತ್ಯುತ್ತಮವಾದ ಪುಸ್ತಕ ಕ್ರಯ ೧—೪—೦

ಪ್ರಶ್ನೋತ್ತರ ಲೇಖ್ಯಬೋಧಿನಿ.

ಸ್ವಲ್ಪ ಪ್ರತಿಗಳೇ ಉಳಿದಿವೆ. ೩೨೦ ಭಾಗಗಳು ಆಯಾ ಪದ್ಧತಿಯನ್ನನುಸರಿಸಿ ಬರೆಯುವ ಮರ್ಯಾದೆ, ಒಕ್ಕಣೆಗಳು, ಸಿವಿಲ್, ಮೇಜಿಸ್ಟ್ರೇಟ್, ರೆವಿನ್ಯೂ, ಪೋಲೀಸ್, ಇಂಜಿನಿಯರ್, ಫಾರೆಸ್ಟ್, ಮೆಡಿಕಲ್, ವಿದ್ಯಾಭ್ಯಾಸ, ಮತ್ತು ಇನ್ನೂ ಇತರ ಇಲಾಖೆಗಳ ಬಗೆಬಗೆ ಸಂಗತಿಗಳೂ, ರೈತರಿಗೆ ರಿಯಾಯತಿ ದೊರೆಯುವ ಬಗೆಬಗೆ ಅರ್ಜಿಗಳೂ, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಹಿಂದೂ ಲಾ, ಮಹಮದೀಯ ಲಾ, ಕಂಪನೀಸ್ ಆಕ್ಟು, ಲ್ಯಾಂಡ್ ಆಕ್ವಿಜಿಷನ್, ಪೊಷ್ಠಿ, ಆರಂಸು ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳೂ, ಕೋರ್ಟುಗಳಿಗೂ ಪೋಲೀಸಿಗೂ ಇರುವ ಅಧಿಕಾರ, ವರ್ತಕರಿಗುಪಯೋಗವಾದ ಎಲ್ಲಾ ರೋಜು ವಗೈರೆ ಲೆಕ್ಕಗಳು, ಬಾನುಭಾವಿಗೆ ಲೆಕ್ಕ ಬರೆಯುವ ರೀತಿ, ಇವುಗಳ ಸಾರಾಂಶವನ್ನೆಲ್ಲಾ ವಿವರಿಸಿದೆ ಪುಸ್ತಕದಲ್ಲಿರುವ ಸಂಗತಿಗಳನ್ನೆಲ್ಲಾ ವಿವರಿಸಲು ಸ್ಥಳಸಂಕೋಚದಿಂದ ಇಲ್ಲಿ ಸೂಕ್ಷ್ಮವಾಗಿ ತಿಳಿಸಲಾಗಿದೆ ಕ್ರಯ ೧—೪—೦. ವಿಳಾಸ —ಮ್ಯಾನೇಜರ್ ಕರ್ನಾಟಕ ಪುಸ್ತಕ ಶಾಲಾ, ಲಶ್ಕರ್ ಪೋಸ್ಟ್, ತಾ॥ ಮಾಲೂರು, ಕೋಲಾರ್ ಡಿಸ್ಟ್ರಿಕ್ಟ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-29

೧. ಲೋಕಾಮಯಹರ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚುಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು ಮೈ ಕೈಕಾಲು ಕೊಡತ (ಥಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ಊಟವಾದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಬೇಗೂ ದಾರಿಕೊಡದೆ, ನೀರು ಹನಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಷ್ಟಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿಪ್ರದ ಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

1-36



ಶೂಲೆ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರವ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯೂ ಕೂಡ ನೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲನಮಾಡಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ಮಕ್ಕಳ ಹಿತಕಾರಿ

ಎಂದು

SCOTT'S EMULSION 33-23

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದಾರೆ ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ವಿಶಾನುಮಾನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2 36

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದ ದಪ್ಪ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಕಪ್ಪು, ಕೆಂಪು, ಕಿತ್ತ, ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ ೧ ರೂ ೬ ಆ, ೧ ರೂ ೪ ಆ.

ರೇಶ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ, ೨ ರೂ

ದಾರದ ಟೋಪಿಗಳು ೧ ರೂ. ೧೨ ಆ, ೧ ರೂ ೮ ಆ., ೧ ರೂ. ೬ ಆ

ಮುಸುಕಿನ ಟೋಪಿಗಳು ೧ ರೂ. ೮ ಆ., ೧ ರೂ ೬ ಆ.

ಕೂಸುಗಳ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ. ಕಾರ್ಖಾನೆ. ಹಾಸನ

ವೃತ್ತಾಂತ ಪತ್ರಿಕೆ ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮುಖಾಂತರ ತೆಗೆದುಕೊಳ್ಳುವವರಿಗೆ - ಪ್ರತಿಗೆ ೧ ವರ ಷಕ್ಕೆ (ಅಡ್ವಾನ್ಸು) ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಅಂಚೆ ಸೇರಿ ರೂ ೧—೦೪—೦

" " " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ [illegible] ರಿಜಿಸ್ಟರ್ ನಂಬರನ್ನು [illegible]

ನನ್ನ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಏನೇನು ನೋವು ಆಗದೆ ಕೂದಲು ತೆಗೆಯುವ

ಪಾದಶಾಹೀ ಸಬಿಕಾರ.

70 1

ಬೇಕಾದ ಜಾಗದಲ್ಲಿ ಈ ಸಬುಕಾರ ಹಚ್ಚಿದರೆ ಕೂದಲು ಬಹಳ ಸುಲಭವಾಗಿ ಹೋಗುತ್ತದೆ ಮತ್ತು ಚರ್ಮವು ಮೆತ್ತಗೆ ಆಗುತ್ತದೆ ಈ ಸಬುಕಾರದಲ್ಲಿ ಸುಣ್ಣ ಮತ್ತು ಹರಿದಳ ಮುಂತಾದ ಕೆಟ್ಟ ಪದಾರ್ಥದ ಮಿಶ್ರಣವೇನೂ ಇಲ್ಲಾ

ಕಿಮ್ಮತು ೩ ವಡೆ ಇರುವ ೧ ಪೆಟ್ಟಿಗೆಗೆ ರೂ ೧, ಪೋಸ್ಟೇಜು ೪ ಆಣೆ

ತಾಕೀತು —ಪತ್ರವ್ಯವಹಾರ ಪೂರ್ಣವಿಳಾಸ ಕೊಟ್ಟು ಇಂಗ್ಲೀಷ್ ಭಾಷೆಯಲ್ಲಿ ಮಾಡಬೇಕು ನಮ್ಮ ವಿಳಾಸ —

ಶಿವ ಸಿ. ಮಹಾತ್ರಾ,

ಕಾಳಬಾದೇವಿ, ಮುಂಬಯಿ

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿಶೇಷವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು ಗಾಬರಿ ಕಣ್ಣು ಮೊಬ್ಬು ತಲೆ ತಿರುಗುವಿಕೆ; ಮೈನೋವು ಕೀಲುನೋವು, ಮರವು, ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ ವಾಯು ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-1]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಸುವುವು.



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦, ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಥವಾ ಡೋನ್ಸ್,

ವೃತ್ತಾಂತ ಪತ್ರಿಕೆ.

ಸನ್ ೧೯೦೮ ನೇ ಇಸವಿ ಸೆಪ್ಟಂಬರ್ ತಾ॥ ೩ ನೇ ಗುರುವಾರ.

ಸರ್ಕಾರಿ ಕಾರುಬಾರುಗಳ ಮೇಲೆ ಆಕ್ಷೇಪಣೆಮಾಡುವುದು

ಗವರ್ನಮೆಂಟಿನವರು ಹೊಸದಾಗಿ ವರ್ತಮಾನ ಪತ್ರಿಕೆಗಳ ಕಾನೂನನ್ನು ಮಾಡಿದ್ದರಿಂದ ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಪ್ರಕಟವಾಗುತ್ತಿದ್ದ ಕನ್ನಡ ಮತ್ತು ಇಂಗ್ಲಿಷಿನ ಐದು ಪತ್ರಿಕೆಗಳು ನಿಲ್ಲಿಸಲ್ಪಟ್ಟಿರುತ್ತವೆ. ಇದನ್ನು ನೆಗೆತಿ ನಮ್ಮ ಕೆಲವು ವಾಚಕರು ವಿಷಾದಪಟ್ಟು, "ಇನ್ನು ಮುಂದೆ ಗವರ್ನಮೆಂಟಿನವರ ಕಾರುಬಾರುಗಳನ್ನು ಕುರಿತು ಚರ್ಚಿಸಿ ಆಕ್ಷೇಪಣೆ ಮಾಡುವಂಥಾ ಪತ್ರಿಕೆಗಳು ಯಾವೂ ಇಲ್ಲದೆ ಹೋದವು. ಗವರ್ನಮೆಂಟಿಗೆ ಅಸಮಾಧಾನವನ್ನುಂಟುಮಾಡುವಂಥಾ ಯಾವ ಸಂಗತಿಯೂ ಪ್ರಕಟವಾಗುವ ಹಾಗಿಲ್ಲ. ಗವರ್ನಮೆಂಟ್ ಅಧಿಕಾರಿಗಳು ತಮ್ಮ ಕಾರುಕರ್ದಿಗಳ್ಯಾವವೂ ಹೊಯಲಿಗೆ ಬಾರವಂತೆ ಆಯಿತೆಂದು ತಿಳಿದು ನಿರ್ಭೀತರಾಗಿ ಅನೇಕ ಅಕೃತ್ಯಗಳನ್ನೂ ಅನ್ಯಾಯಗಳನ್ನೂ ಮಾಡುವುದಕ್ಕೆ ಅವಕಾಶವೂ ಪ್ರೋತ್ಸಾಹವೂ ಆಗಿರುತ್ತದೆ. ಪ್ರಜೆಗಳಿಗೆ ಪತ್ರಿಕೆಗಳ ಮೂಲಕ ಉಂಟಾಗುತ್ತಿದ್ದ ಬೆಂಬಲವೂ ಸಹಾಯವೂ ತಪ್ಪಿಹೋಯಿತು" ಎಂಬೀ ರೀತಿ ಹೇಳಬಹುದು

ಇದಕ್ಕೆ ಪ್ರತಿಯಾಗಿ ನಾವು ಹೇಳುವುದೇನೆಂದರೆ ಮೈಸೂರು ಸಂಸ್ಥಾನದ ಪ್ರಜೆಗಳಿಗೆ ವರ್ತಮಾನ ಪತ್ರಿಕೆಗಳ ಬೆಂಬಲವೂ ಪ್ರೋತ್ಸಾಹವೂ ಅವಶ್ಯವಾಗಿ ಬೇಕಾಗಿರುತ್ತವೆ ಎಂದು ಒಪ್ಪಿ ಧಾರಾಳವಾಗಿ ಹೇಳುತ್ತೇವೆ ಪಲವು ಅಧಿಕಾರಿಗಳೂ ನೌಕರರೂ ಕ್ರೂರಿಗಳಾಗಿಯೂ ಲಂಚಕೋರರಾಗಿಯೂ ಇರುವರು ಅಂಥವರ ದುಷ್ಕಾರ್ಯಗಳನ್ನು ಎತ್ತಿ ಹಾಕಿ ಬೈಲಿಗೆ ತರಬೇಕಾದದ್ದು ಬಹು ಅವಶ್ಯವಾಗಿರುತ್ತದೆ ಗವರ್ನಮೆಂಟಿನ ಕಾರುಬಾರುಗಳನ್ನು ಎತ್ತಿ ಹಾಕಿ ಎಷ್ಟು ಮಟ್ಟಿಗೆ ಆಕ್ಷೇಪಣೆಮಾಡಿದಾಗ್ಯೂ ಈ ಕಾನೂನು ಅಂಥವರನ್ನು ಅಡ್ಡಿಮಾಡುವುದಿಲ್ಲ ಈ ಭಾಗವನ್ನು ಸಕಲರೂ ಚೆಂದವಾಗಿಯೂ ಸ್ಪಷ್ಟವಾಗಿಯೂ ತಿಳಿದುಕೊಳ್ಳತಕ್ಕದ್ದು "ಅಂಥಾ ಆಕ್ಷೇಪಣೆಗಳನ್ನು ಎಷ್ಟಾದರೂ ಮಾಡಲಿ" ಎಂತಲೂ ಆಕ್ಷೇಪಣೆಮಾಡುವುದನ್ನು ಸಿಫಾರ್ಸು ಮಾಡುತ್ತೇವೆ ಎಂತಲೂ ದಿವಾನರವರೂ ಕೌನ್ಸೆಲರುಗಳೂ ಬಹಿರಂಗವಾಗಿ ಹೇಳಿರುತ್ತಾರೆ [illegible] ಗವರ್ನಮೆಂಟಿನವರು ನಿಜವಲ್ಲದ ವಿಷಯವನ್ನು ಬರೆಯತಕ್ಕ ಮನುಷ್ಯನನ್ನು ಕಠಿಣವಾಗಿ ಶಿಕ್ಷಿಸುತ್ತಾರಲ್ಲದೆ ಯಥಾರ್ಥವಾದ ಸಂಗತಿಗಳನ್ನು ನ್ಯಾಯವಾದ ರೀತಿಯಲ್ಲಿ ಪ್ರಕಟಿಸುವ ಯಾವ ಎಡಿಟರನ್ನೂ ಶಿಕ್ಷಿಸುವುದಿಲ್ಲ ಸರ್ಕಾರಿ ಅಧಿಕಾರಿಗಳ ಮತ್ತು ನೌಕರರ ಮೇಲಣ ಆಕ್ಷೇಪಣೆಗಳನ್ನು ಗವರ್ನಮೆಂಟಿನ ಕಾರುಬಾರುಗಳ ವಿಷಯದಲ್ಲಿ ಪ್ರಜೆಗಳಿಗೆ ತೋರುವ ಅಭಿಪ್ರಾಯಗಳನ್ನು ಪ್ರಜೆಗಳ ಕಷ್ಟನಷ್ಟಗಳನ್ನು [illegible] ಎಷ್ಟೇ [illegible]ವಾದವುಗಳಾಗಿದ್ದರೂ ಎಷ್ಟೇ ಕಠಿಣವಾದವುಗಳಾಗಿದ್ದರೂ—ಯಥಾರ್ಥವಾಗಿಯೂ ನ್ಯಾಯವಾಗಿಯೂ ಇರುವ ಪಕ್ಷದಲ್ಲಿ, ಅಂಥಾ ವಿಷಯಗಳನ್ನೆಲ್ಲಾ ನಾವು ಪ್ರಕಟಿಸಲು ಸಿದ್ಧವಾಗಿರುತ್ತೇವೆ ಮೈಸೂರು ಸಂಸ್ಥಾನದ ಪ್ರಜೆಗಳ ಬೆಂಬಲವಾಗಿ ನಿಂತು ಅವರಿಗೆ ಸ್ವಲ್ಪ ಪರಿಸ್ಥಿತಿಯುಂಟುಮಾಡಬೇಕೆಂಬುದೇ ಈ ನಮ್ಮ ಪತ್ರಿಕೆಯ [illegible]ವಾಗಿರುವುದು ಅಕೃತ ಅನ್ಯಾಯ ಮೋಸ ಲಂಚಕೋರತನ ಇವುಗಳನ್ನು ಎಲ್ಲಿ ಕಂಡರೂ ಎತ್ತಿಹಾಕಿ ನಮ್ಮ ಕೈಲಾಗುವ ಮಟ್ಟಿಗೂ ತೊಡೆದುಬಿಡುವುದೂ ಪ್ರಜೆಗಳ ನೆಮ್ಮದಿ ಸುಖಸಂತೋಷಾದಿಗಳನ್ನು ಅಭಿವೃದ್ಧಿಗೆ ತರುವ ಭಾಗದಲ್ಲಿ ಸಹಾಯಮಾಡುವುದೂ ನಮ್ಮ ಕರ್ತವ್ಯವಾಗಿದೆ ಪ್ರಜೆಗಳ ಕಷ್ಟನಿಷ್ಠುರಗಳನ್ನು ಅವರ ಇಂಗಿತ ಅಭಿಪ್ರಾಯಗಳನ್ನೂ ಪ್ರಕಟಿಸುವುದಕ್ಕೆ ನಮ್ಮ ಪತ್ರಿಕೆಯು ಧಾರಾಳವಾಗಿ ಅವಕಾಶಕೊಡುವುದು ಆದರೆ ಯಥಾರ್ಥವಾದ ಸಂಗತಿಗಳನ್ನು [illegible] ರೀತಿಯಲ್ಲಿ ಬರೆಯತಕ್ಕವರಾಗಿ [illegible] ಮಾಡಿಯುವಂಥಾ [illegible]ವು ಪ್ರಜೆಗಳಲ್ಲಿ [illegible] ತಕ್ಕ ಸರ್ಕಾರಿ ಅಧಿಕಾರಿಗಳ ಮತ್ತು ನೌಕರರ [illegible] ಅನ್ಯಾಯಗಳು ಆಗಲಾರವು

ಇವುಗಳನ್ನು ಶಿಕ್ಷಿಸುವುದಕ್ಕೆ ಸರ್ಕಾರದವರು ಕಾನೂನು ಮಾಡಿದ್ದರೂ ಸತ್ಯವಾದ ಅವನ್ನು [illegible] ದೇವರಾಣೆ ಸತ್ಯವಾದಿಗಳಾದ ಎಡಿಟರು ಈ ಹೊಸ ಕಾನೂನಿಗೆ ಭಯಪಡಬಾರದು. ಸತ್ಯಕ್ಕೆ ವಿರುದ್ಧವಾಗಿಯೂ ತನ್ನ ಕರ್ತವ್ಯವನ್ನು ನೆರವೇರಿಸುವಂಥಾ ಯಾವ ವರ್ತಮಾನ ಪತ್ರಿಕೆಯನ್ನೂ ಈ ಹೊಸ ಕಾನೂನು ನಿಲ್ಲಿಸಲಾರದು

ಪ್ರಸಿದ್ಧ ಶಿಲ್ಪಿಯ ಕೆಲಸ

"ಬಾಗೇಪಲ್ಲಿ ಟವುನ್ನಿಗೆ ೧॥ ಮೈಲಿ ಫಾಸಲೆಯಲ್ಲಿ ಗಡದ ವೆಂಕಟಸ್ವಾಮಿ ದೇವರ ಬೆಟ್ಟವಿದೆ ಆ ಬೆಟ್ಟದಲ್ಲಿ ಕೋಣೆ ಇದೆ ಆ ದೋಣೆಲಿ ಬಹು ದಿವಸಗಳಿಂದ ಜಲಾಧಿವಾಸಿಗಳಾಗಿದ್ದ ಒಂದು ವಿಗ್ರಹ ಶಿರೋದಯನಾಥದಂತೆ ದನ ಮೇಯಿಸುವ ಹುಡುಗರಿಂದ ಆಗೀಷ್ಟು ೩೧ನೇ ಮಂಗಳವಾರ ಜನ್ಮಾಷ್ಟಮಿ ದಿನ ಪ್ರಾತಃಕಾಲ ತಾಲ್ಲೂಕು ಅಮಲ್ದಾರರಾದ ಮೆ॥ ಗೋಪಾಲರಾಯರಿಗೆ ಖಾತ್ರಿ ತಿಳಿದುಬಂದದ್ದರಿಂದ ಒಡನೆ ಅವರು ಬೆಟ್ಟಕ್ಕೆ ದಯಮಾಡಿಸಿದರು ಅವರ ಸಂಗಡ ಶಿರಸ್ತೇದಾರರು ಮತ್ತು ಕಚೇರಿ ನೌಕರರು, ಪ್ಲೀಡರು, ಗ್ರಾಮದ ಪಟೇಲರು, ಶೆಟ್ಟಿ ವರ್ತಕರು, ಮಾತಾಬರವೃತ್ತರು ಮೊದಲಾದವರೆಲ್ಲಾ ಹೋಗಿದ್ದರು ದೋಣೆಲಿ ೩—೩॥ ಅಡಿ ನೀರು ನಿಂತಿತ್ತು ಈ ನೀರಿನಲ್ಲಿ ತೇಲುತ್ತಿದ್ದ ವಿಗ್ರಹವನ್ನು ಈಚೆಗೆ ತೆಗೆಸಿ ಅಮಲ್ದಾರ್ ಮೆ॥ ಗೋಪಾಲರಾಯರು ಅಂಗಾಂಗಗಳ್ಯಾವತ್ತೂ ಪರಿಶೋಧಿಸಿ ನೋಡಿದ್ದರಲ್ಲಿ ಯಾವ ವಿಧವಾದ ಲೋಪಗಳೂ ಇರಲಿಲ್ಲ ಪ್ರಜಾಪಾಲನೆಗೋಸ್ಕರ ಸ್ವಯಂ ಉದ್ಭವವಾಗಿರುವ ಮಹಾನುಭಾವರೆಂದು ತಿಳಿದು ಯೋಗಬೆಂಕಟರಮಣಸ್ವಾಮಿ ಎಂಬ ಹೆಸರಿನಿಂದ ವಂದನೆಯನ್ನು ಮಾಡಲಾರಂಭಿಸಿದರು ಪುರಾತನವಾದ ಸಾಲಿಗ್ರಾಮ ಶಿಲೆಯನ್ನು ಡಂಕಣಾಚಾರಿಯಿಂದ ಕೆತ್ತಲ್ಪಟ್ಟಿರುವ ಅತಿ ಸುಂದರವಾದ ವಿಗ್ರಹ ಅದರ ಎತ್ತರ ೩ ಅಡಿ ಉಳ್ಳದ್ದಾಗಿದೆ. ಮೆ॥ ಗೋಪಾಲರಾಯರು ಆ ವಿಗ್ರಹವನ್ನು ದೊಡ್ಡ ಥಡದಲ್ಲಿ ಸ್ಥಾಪಿಸಿ ಮಾನಸಪೂಜೆಯನ್ನು ಮಾಡಿ, ಫಲಸಮರ್ಪಣೆ ಮಾಡಿದರು. ಶುಭಮುಹೂರ್ತದಲ್ಲಿ ಅಲ್ಲಿ ಜಮಾಯಿಸಿದ್ದ ಜನಗಳು ನೂರಾರು ತೆಂಗಿನಕಾಯಿಗಳನ್ನು ಅರ್ಪಿಸಿದರು ಆ ರಾಗಾಯಿತು ಒಂದು ನಿಮಿಷವೂ ಬಿಡುವಿಲ್ಲದಂತೆ ದೇವರ ದರ್ಶನಾರ್ಥವಾಗಿ ಗ್ರಾಮಾಂತರಗಳಿಂದ ಅನೇಕರು ಬರುತ್ತಲಿದ್ದಾರೆ ದಿನಕ್ಕೆ ಸಾವಿರಾರು ತೆಂಗಿನಕಾಯಿಗಳು ಫಲಸಮರ್ಪಣೆ ಮಾಡುತ್ತಿದ್ದಾರೆ. ಬೆಟ್ಟದ ಮೇಲೇನೇ ಒಂದು ಸ್ಥಳವನ್ನು ಹಸನಾಯಿಸಿ, ಭಕ್ತಾದಿಗಳಿಂದಲೂ ಸರ್ಕಾರದವರ ಸಹಾಯದಿಂದಲೂ ಒಂದು ಗರ್ಭಗುಡಿಯನ್ನು ಕಟ್ಟಿಸಿ, ಈ ದೇವರನ್ನು ಸ್ಥಾಪಿಸಿ, ಸಂಪ್ರೋಕ್ಷಣೆ ಮಾಡಿ ಜೀರ್ಣೋದ್ಧಾರವಾಡಬೇಕೆಂದು ಪ್ರಜೆಗಳೆಲ್ಲ ಸೇರಿ ಅಮಲ್ದಾರರನ್ನು ಕುರಿತು ಪ್ರಾರ್ಥಿಸಿಕೊಂಡವರಾದರು"

ನಮ್ಮ ಖಾತ್ರಿದಾರರೊಬ್ಬರು ಮೇಲೆ ಕಾಣಿಸುವ ವಿಚಿತ್ರವಾದ ಖಾತ್ರಿಯನ್ನು ಬರೆದು ಕಳುಹಿಸಿರುತ್ತಾರೆ ಈ ಸಂಗತಿಯ ವಿಷಯ ನಮ್ಮಭಿಪ್ರಾಯವನ್ನು ತಿಳಿಸಬೇಕೆಂದಿರುತ್ತೇವೆ

(೧) ಪೂರ್ವಕಾಲದ ಪ್ರಸಿದ್ಧಶಿಲ್ಪಿಗಳಾದ ಡಂಕಣಾಚಾರ್ಯರೇ ಆ ವಿಗ್ರಹವನ್ನು ಕೆತ್ತಿದರೆಂದು ನಮ್ಮ ಖಾತ್ರಿದಾರರು ಅಭಿಪ್ರಾಯಪಡುವರು ಇದರ ನಿಜತ್ವವನ್ನು ಅವರು ಚರಿತ್ರೆಗಳ ಮೂಲಕ ಸ್ಥಾಪಿಸುವರೇ? ಶಿಲ್ಪಕೆಲಸಗಳು ಯಾವಕಡೆಯಲ್ಲಿ ಕಂಡುಬಂದರೂ ಈ ದೇಶದ ಜನರು ಅವುಗಳನ್ನು ಡಂಕಣಾಚಾರ್ಯರೇ ಮಾಡಿದರೆಂದು ಸಾಧಾರಣವಾಗಿ ಮಾತನಾಡಿಕೊಳ್ಳುವರು. ಆದರೆ ವಿವೇಕಿಗಳಾದ ಜನರು ಇಂಥಾ ಸಂಗತಿಗಳನ್ನು ಸುಲಭವಾಗಿ ನಂಬುವವರಲ್ಲ ಅವರಿಗೆ ಬಲವಾದ ಸಾಕ್ಷ್ಯಗಳು ಬೇಕಾಗಿರುತ್ತವೆ ಅಂಥಾ ಸಾಕ್ಷ್ಯಗಳನ್ನೊದಗಿಸಿಕೊಡುವುದು ಸುಲಭವಲ್ಲ ಚರಿತ್ರೆಯಲ್ಲಿ ಪಾಂಡಿತ್ಯವನ್ನು ಪಡೆದಿರುವವರೂ ಪುರಾತನ ಕಟ್ಟಡಗಳನ್ನು ನೋಡಿ, ಅವುಗಳನ್ನು ಪರೀಕ್ಷಿಸಿ, ಅವುಗಳ ಚರಿತ್ರೆಯನ್ನೆಲ್ಲಾ ಅತ್ಯಂತವಾಗಿ ತಿಳಿದಿರುವವರೂ ಮಾತ್ರ ಮೇಲ್ಕಂಡ ಸಂಗತಿಯ ವಿಷಯದಲ್ಲಿ ಮಾತನಾಡಲು ಕರ್ತರಾಗಿರುವರೇ ವಿನಾ ವಿಕ್ಷ್ಯಾದವರು ಮಾತನಾಡಲು ಕರ್ತರಲ್ಲವು ಅನೇಕ ಸ್ಥಳಗಳಲ್ಲಿ ಚೆನ್ನಾಗಿ ತಿಳಿದಿರುವವರು ಕೂಡ ಯಾವದಾದರೊಂದು ಕೆತ್ತನೆಯ ಕೆಲಸವನ್ನು ನೋಡಿ ಸಂಶಯದಿಂದ ಕೂಡಿದವರಾಗಿ ಇದನ್ನು ಒಂದುವೇಳೆ ಡಂಕಣಾಚಾರ್ಯರು ಮಾಡಿದ್ದರೂ ಮಾಡಿರಬಹುದು ಅಥವಾ ಇನ್ಯಾವ ಶಿಲ್ಪಿಯಾದರೂ ಮಾಡಿರಬಹುದೆಂದು ತಿಳಿಸುವುದು ಸಾಧಾರಣವಾಗಿರುತ್ತದೆ

(೨) ತಾಲ್ಲೂಕ್ ಅಮಲ್ದಾರರು ಆ ವಿಗ್ರಹವನ್ನು ಕಂಡು ಅದು ಪ್ರಜಾಪಾಲನೆಗೋಸ್ಕರ ಸ್ವಯಂ ಉದ್ಭವವಾಯಿತೆಂದು ಹೇಳಿದರೆಂಬುದಾಗಿ ನಮ್ಮ ಖಾತ್ರಿದಾರರು ತಿಳಿಸುತ್ತಾರೆ ಇಂಥಾ ಅಭಿಪ್ರಾಯಕ್ಕೆ ಯಾವ ಸಾಕ್ಷ್ಯಯಾದರೂ ಇರುವುದೇ? ಈ ವಿಗ್ರಹವನ್ನು ಜನರು ಪುರಾತನಕಾಲದಲ್ಲಿ ಅಲ್ಲಿ ಹಾಕಿದ್ದರೂ ಹಾಕಿರಬಹುದು ಅಥವಾ ಈಚೀಚೆಗೆ ಅದನ್ನು ಯಾರಾದರೂ ತಂದು ಅಲ್ಲಿ ಬಚ್ಚಿಟ್ಟರೂ ಇಟ್ಟಿರಬಹುದು ಯಾತಕ್ಕೆಂದರೆ ದೇವಸ್ಥಾನಗಳಿಗೆ ಸಂಬಂಧಪಟ್ಟ ಪೂಜಾರಿಗಳೂ ಇತರರೂ ಅನೇಕ ಸಮಯಗಳಲ್ಲಿ ಜನರನ್ನು ಮೋಸಪಡಿಸುವದಕ್ಕೋಸ್ಕರ ನಾನಾತರವಾದ ಹಿತ್ತಲಾಟಗಳನ್ನು ಕಲ್ಪಿಸುವುದುಂಟು ಬುದ್ಧಿವಂತರಿಗೆ ಇಂಥಾ ಸಂಗತಿಗಳು ಸಂಶಯವನ್ನು ಹುಟ್ಟಿಸುವವು. ಯಾರಾದರೊಬ್ಬರು ಅಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿ ಪೂಜೆಪುನಸ್ಕಾರಗಳನ್ನು ಆರ್ಜಿಸುವುದಕ್ಕೋಸ್ಕರ ಇಂಥಾ ಸಂಗತಿಯನ್ನು ಹುಟ್ಟಿಸಿದರೆಂದು ನಂಬುವುದಕ್ಕಾಸ್ಪದವುಂಟು

(೩) ಇಂಥಾ ಸಂಗತಿಗಳನ್ನು ಕುರಿತು ಚರ್ಚಿಸುವಾಗ್ಗೆ ಎರಡು ವಿಶೇಷವಾದ ಅಂಶಗಳನ್ನು ಮನಸ್ಸಿನಲ್ಲಿಡುವುದು ವಾಚಕರ ಕರ್ತವ್ಯವಾಗಿರಬೇಕು ಮೊದಲನೇದು ದೇವರೆಂದಿಗೂ ಅದ್ಭುತವಾದ ರೀತಿಯಲ್ಲಿ ವಿಗ್ರಹಗಳನ್ನು ಸೃಷ್ಟಿಸುವವನೂ ಅಲ್ಲ ಅಥವಾ ಅವುಗಳು ಆಶ್ಚರ್ಯವಾದ ರೀತಿಯಲ್ಲಿ ಜನರಿಗೆ ಕಾಣಬರುವಂತೆ ಮಾಡುವವನೂ ಅಲ್ಲ. ಎರಡನೇದಾಗಿ ದೇವರೆಂದಿಗೂ ತನ್ನ ಮಹಿಮಾಶಕ್ತಿಯನ್ನು ಮನುಷ್ಯನು ಮಾಡಿದ ವಿಗ್ರಹಗಳಲ್ಲಿ ಇರಿಸುವವನಲ್ಲ ವಿಗ್ರಹಗಳು ಜನರನ್ನೆಂದಿಗೂ ಕಾಪಾಡಲಾರವು ಅವು ತಮ್ಮನ್ನಾದರೂ ಕಾಪಾಡಿಕೊಳ್ಳುವುವೇ? ಎಂದಿಗೂ ಇಲ್ಲವಲ್ಲ.'

(೪) ನಮ್ಮ ಖಾತ್ರಿದಾರರು ಕಳುಹಿಸಿರುವ ಈ ವಿಚಿತ್ರವಾದ ಕಥೆಯಂತೆಯೇ ಪೂರ್ವಕಾಲದಲ್ಲಿಯೂ ಕೂಡ ಅನೇಕ ಕಥೆಗಳು ಜನರೊಳಗೆ ಸರ ಕೇಳಿಬಿದ್ದವು ಆ ಕಾಲಗಳಲ್ಲಿ ಜನರು ವಿದ್ಯಾವಂತರಾಗಿಲ್ಲದೇ ಇದ್ದುದರಿಂದ ಅವರು ಮತವಿಷಯಗಳಲ್ಲಿ ಕೇವಲ ಮೂಢಪ್ರಾಯರುಗಳಾಗಿದ್ದರು. ಪುರಾತನ ಕಾಲದಲ್ಲಿ (ಅಂದರೆ ಕ್ರಿ. ಪೂ. ೧೦೦೦ ರಲ್ಲಿ) [illegible] ಎಂಬುವ ಒಂದು ಪ್ರಸಿದ್ಧವಾದ ಪಟ್ಟಣವಿತ್ತು ಆ ಪಟ್ಟಣದ ಜನರ ಅಲ್ಲಿ ಬಿದ್ದಿದ್ದ ಒಂದು ಮರದ ವಿಗ್ರಹವನ್ನು ನೋಡಿ ಅದು [illegible] ಪಟ್ಟಣದ ಸಂರಕ್ಷಣೆಗೋಸ್ಕರ ಸ್ವರ್ಗದಿಂದ ಪ್ರಸಾದಿತವು. ಕಳುಹಿಸಿದ ವಿಗ್ರಹವೆಂದು ತಿಳಿದಿದ್ದರು ಆದರೆ [illegible] ಪಟ್ಟಣದ [illegible] ಸಾಧಾರಣ ವದನ್ನು ಪೂರ್ವದ ಚರಿತ್ರೆಯ ತಿಳಿಸುತ್ತದೆ ವಿದ್ಯಾವಂತರು ಇವುಗಳನ್ನೆಲ್ಲಾ ಬರೀ ಕಟ್ಟುಕಥೆಗಳೆಂದೇ ಎಣಿಸುವರು ಈಗಿನ ಕಾಲದಲ್ಲಿ ಯೋಗ್ಯರೆನ್ನಿಸಿಕೊಳ್ಳುವವರು ಅಗೋಚರವೂ ಪವಿತ್ರವೂ ಆಗಿರುವ ದೇವರನ್ನು ಆತ್ಮದಿಂದ ಆರಾಧಿಸತಕ್ಕವರಾಗಿರುತ್ತಾರೆ ನಮ್ಮ ಖಾತ್ರಿದಾರರು ತಿಳಿಸುವ ಪೂಜೆಯು ನಮ್ಮ ದೇಶೀಯರನ್ನೆಂದಿಗೂ ನೀತಿಮಾರ್ಗದಲ್ಲಿ ನಡಿಸುವುದಿಲ್ಲ

ಒಳದೇಶದ ವೃತ್ತಾಂತಗಳು.

ಬೆಂಗಳೂರು ದಂಡಿನಲ್ಲಿ ಒಬ್ಬ ಪಕೀರನು ಒಬ್ಬ ರೋಗಿಗೆ ಹೆಚ್ಚಾಗಿ ಅಫೀಮನ್ನು ಕೊಟ್ಟದ್ದರಿಂದ ಅವನು ಸತ್ತುಹೋದನೆಂದು ತಿಳಿದು, ಪೋಲೀಸಿನವರು ಆ ಪಕೀರನನ್ನು ಹಿಡಿದು ದರ್ಯಾಪ್ತು ಮಾಡುತ್ತಿದ್ದಾರೆ.

❀❀❀

ದಿವಾನರಾದ ಮೆ॥ ವಿ. ಪಿ. ಮಾಧವರಾಯರೂ, ರೆವಿನ್ಯೂ ಕಮಿಷನರ್ ಮೆ॥ ಎ. ರಂಗಸ್ವಾಮಯ್ಯಂಗಾರರೂ ಕಳೆದ ಸೋಮವಾರ ರಾಜಧಾನಿಗೆ ದಯಮಾಡಿದರು. ಇವರು ಇನ್ನೂ ೨—೩ ದಿನ ಇಲ್ಲೇ ಇರುತ್ತಾರೆಂದು ಕೇಳುತ್ತೇವೆ

❀❀❀

ಹೊಸ ಅರಮನೆಯಲ್ಲಿ ಅಲಂಕಾರಾದಿಗಳು ಇನ್ನೂ ಪೂರೈಸಿಲ್ಲವಾದ್ದರಿಂದ ಈ ವರುಷವೂ ಎಂದಿನಂತೆ ಜಗನ್ಮೋಹನ ಬಂಗಲೆಯಲ್ಲೇ ನವರಾತ್ರಿಯ ದರ್ಬಾರುಗಳೂ ಉತ್ಸವಾದಿಗಳೂ ನಡೆಯತಕ್ಕದ್ದೆಂದು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರುತ್ತಾರೆ

❀❀❀

ಈ ಸಲ ನವರಾತ್ರಿ ಉತ್ಸವಗಳಿಗೂ ಪ್ರಜಾಪ್ರತಿನಿಧಿ ಸಭೆಗೂ ಬರುವಂಥಾ ಕೇಶೀಯ ದೊಡ್ಡ ಮನುಷ್ಯರಿಗೂ, ಪ್ರತಿನಿಧಿಗಳಿಗೂ ಸ್ಥಳ ಮುಂತಾದ ವಿಷಯದಲ್ಲಿ ವಸತಿಯನ್ನು ಕಲ್ಪಿಸುವುದಕ್ಕೆ ಸರ್ಕಾರದವರು ಮೆ॥ ಸಿ. ವೆಂಕಟರಾಯರನ್ನು ನೇಮಿಸಿ, ರಾಜಧಾನಿಗೆ ಕಳುಹಿಸಿದಾರೆ

❀❀❀

ಇಲ್ಲಿನ ದೊಡ್ಡ ಪೇಟೆಯಲ್ಲಿ ಚಿಲ್ಲರೆ ಅಂಗಡಿ ವರ್ತಕನಾಗಿದ್ದ ಒಬ್ಬ ಶೆಟ್ಟಿಯು ಬೈಸಿಕಲ್ ಸವಾರಿಯಲ್ಲಿ ರೈಲ್ ಸ್ಟೇಷನ್ ಬಳಿ ಬಿದ್ದು ಗಾಯಪಟ್ಟು ಕಳೆದ ವಾರ ಆಸ್ಪತ್ರೆಯಲ್ಲಿ ಕಾಲವಾದನು ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ಒಂದು ಯಂತ್ರಕ್ಕೆ ಸಿಕ್ಕಿ ಒಬ್ಬ ಪ್ರಾಯಸ್ಥನು ಕಳೆದ ವಾರ ತುಂಬಾ ಗಾಯಪಟ್ಟು, ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಾನೆ

❀❀❀

ಬೆಂಗಳೂರು ಪಟ್ಟಣದಲ್ಲಿ ಪ್ರಕಟವಾಗುತ್ತಿದ್ದ "ನಡೆಗನ್ನಡಿ" ಎಂಬ ಕನ್ನಡ ವಾರಪತ್ರಿಕೆಯನ್ನೂ, "ಮೈಸೂರು ಸ್ಟ್ಯಾಂಡರ್ಡ್" ಎಂಬ ಇಂಗ್ಲಿಷ್ ಪತ್ರಿಕೆಯನ್ನೂ ಎಡಿಟರು ಇನ್ನು ಮುಂದೆ ಪ್ರಕಟಿಸುವುದಿಲ್ಲವೆಂದು ಹೇಳಿ ನಿಲ್ಲಿಸಿಬಿಟ್ಟರು ಮೈಸೂರು ಸರ್ಕಾರದವರು ಮಾಡಿರುವ ವರ್ತಮಾನಪತ್ರಿಕೆಗಳ ಹೊಸಕಾನೂನೇ ಅದಕ್ಕೆ ಕಾರಣವಾಗಿರುತ್ತದೆ

❀❀❀

ಸಂಸ್ಥಾನದಲ್ಲಿ ಸರ್ಕೀಟು ಮಾಡುವಂಥಾ ದೊಡ್ಡ ಅಧಿಕಾರಿಗಳು ಮೋಟಾರ್ ಗಾಡಿಗಳನ್ನು ಕೊಂಡು ಉಪಯೋಗಿಸಬಹುದೆಂತಲೂ, ಅವಶ್ಯ ಬಿದ್ದರೆ ಅಂಥವರು ಮೋಟಾರ್ ಗಾಡಿ ಕೊಂಡುಕೊಳ್ಳುವುದಕ್ಕೆ ೩,೫೦೦ ರೂಪಾಯಿ ತನಕ ಸರ್ಕಾರದಿಂದ ಸಾಲ ಪಡೆದುಕೊಂಡು, ಆ ಹಣವನ್ನು ಮನ್ನೆರಡು ತಿಂಗಳಲ್ಲಿ ಕಂತುಕೊಟ್ಟು ತೀರಿಸಬಹುದೆಂತಲೂ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿರುತ್ತಾರೆ

❀❀❀

ಮೊದಲು ಕೋಲಾರದ ಡೆಪ್ಟಿ ಕಮಿಷನರಾಗಿದ್ದು ಪೆನ್ಷನ್ ಪಡೆದು ರಾಜಧಾನಿಯ ಜನರಲ್ ಆಸ್ಪತ್ರೆ ಬಳಿ ವಾಸಮಾಡುತ್ತಿದ್ದ ಮೆ॥ ಸಿ ಸುಬ್ಬರಾಯರು ಬೆಂಗಳೂರಿನಲ್ಲಿ ಕಾಲವಾದರೆಂದು ತಿಳಿದುಬಂದಿದೆ. ಇವರ ಕುಮಾರರಾದ ಮೆ॥ ಸಿ ಶ್ರೀಕಂಠೇಶ್ವರ ಐಯ್ಯರವರು ಈಗ ಕೋಲಾರದ ಡೆಪ್ಟಿ ಕಮಿಷನರಾಗಿರುವರು. ಗತಿಸಿದ ಮೆ॥ ಸುಬ್ಬರಾಯರು ಮದರಾಸ್ ಪಟ್ಟಣದಲ್ಲಿ ದಿವಾಳಿಯಾದ ಆರ್ಬತ್ನಾಟ್ ಕಂಪನಿಯಲ್ಲಿ ಬಹಳ ಹಣವನ್ನು ಕಳೆದುಕೊಂಡು ತುಂಬಾ ವ್ಯಸನಾಕ್ರಾಂತರಾಗಿದ್ದರು

❀❀❀

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಬಾಲಘಾಟಿನಲ್ಲಿ ಮಿ॥ ರಿಡಲ್ ಎಂಬಾತನು ತನ್ನ ಬಂಗಲೆಯಲ್ಲಿ ಚಾಕರಿಮಾಡುತ್ತಿದ್ದ ಇಬ್ಬರು ಸಣ್ಣ ಹುಡುಗರೂ ಸೇರಿ, ತನ್ನ ಒಂದು ತಪ್ಪೇಲನ್ನು ಕದ್ದರೆಂದು ಊಹಿಸಿ, ಅವರನ್ನು ಕೋಣೆಯಲ್ಲಿ ಕೂಡಿ, ಅಕ್ರಮ ಪೈದು ಮಾಡಿದನೆಂದು ಮೊಕದ್ದಮೆ ಆಯಿತು ದರ್ಯಾಪ್ತಿನಲ್ಲಿ ಅವನು ಆ ಹುಡುಗರನ್ನು ಪೈದು ಮಾಡಿದ್ದುಂಟೆಂದು ಒಪ್ಪಿಕೊಂಡನು ಮ್ಯಾಜಿಸ್ಟ್ರೇಟರು ಅವನಿಗೆ ಕೋರ್ಟು ಬರಖಾಸ್ತಾಗುವ ತನಕ ಪೈದು ಸಜಾವನ್ನೂ ೩೫ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು

❀❀❀

ಇಲ್ಲಿನ ಮಹಿಮಲ್ಲಪ್ಪನವರ ಹೈಸ್ಕೂಲ್ ಬಳಿ ಒಂದು ಮನೆಯಲ್ಲಿ ಇಬ್ಬರು ಹೆಂಗಸರೂ ಮಕ್ಕಳೂ ಮಲಗಿರುವಾಗ್ಗೆ ಕಳೆದ ಭಾನುವಾರ ರಾತ್ರಿ ಕಳ್ಳರು ರಸ್ತೆಯ ಕಡೆ ಗೋಡೆಗೆ ಕನ್ನಹಾಕಿ ಸುಗ್ಗಿಸುಮಾರು ಎರಡು ಸಾವಿರ ರೂಪಾಯಿ ನ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋದರು ಇದರಿಂದ ಆ ಮನೆಯವರು ನಿರ್ಗತಿಕರಾದರು ಸಮೀಪದಲ್ಲೇ ಪೋಲೀಸ್ ಸೂಪರಿಂಟೆಂಡರ ಮನೆಯೂ, ಪೋಲೀಸ್ ಸ್ಟೇಷನ್ನೂ ಇರುತ್ತವೆ. ಆದರೂ ಈ ಕಳ್ಳತನ ನಡೆದದ್ದು ಪೋಲೀಸಿನವರು ಆ ರಾತ್ರಿ ಕಾಣದೆ ಹೋದದ್ದು ಆಶ್ಚರ್ಯವಾಗಿದೆ

❀❀❀

ಒಬ್ಬ ಖಾತ್ರಿದಾರರು ಬರೆಯುವುದು — 'ಕಾನಕಾನಹಳ್ಳಿ ತಾಲ್ಲೂಕು ಮರಳವಾಡಿ ಹೋಬಳಿ [illegible]ದಲ್ಲಿರುವ ಒಬ್ಬರ ವೆಂಕಟಾಚಲೋಜಿಯು ಕಳೆದ ಬುಧವಾರ ರಾತ್ರಿ ತನ್ನ ಹೆಂಡತಿಯಾದ ಅಂದರೆ ಚಿಕ್ಕ ಮರಳವಾಡಿಯಲ್ಲಿರುವ ಹನುಮಂತಚಾರಿಯ ಮಗಳು ವೆಂಕಟಿ ಎಂಬುವಳನ್ನು ಎದೆಯ ಮೇಲೆ ತುಳಿದು ಪ್ರಾಣತೆಗೆದು ಊರ ಹೊರಗೆ ತೆಗೆದುಕೊಂಡು ಹೋಗಿ ಮೇವೆ ಹೊಗೆದ ಗಳುಗಳು ಇಟ್ಟಿದ್ದ ಸ್ಥಳದಲ್ಲಿ ಕಾಗೆಯ [illegible] ತಲೆಯನ್ನು [illegible] ಮನೆಯಲ್ಲಿ ಬಂದು ಸೇರಿಕೊಂಡನು ಆ ಹೆಣದ ಅರ್ಧ ಭಾಗ ಬೆಂದು ಒಂದು ಕಾಲು ಒಂದು ಕೈ ಮಾತ್ರ ಉಳಿದಿತ್ತು [illegible] ಗಲಾಟೆಯಾಗಿ ಹೋಗಿ ನೋಡುವಲ್ಲಿ ಹಾಗೆ ಆಗಿತ್ತು ಈಗ ಅವನನ್ನು ಪೋಲೀಸ್ ವಿಚಾರಣೆಯಲ್ಲಿ ಇಟ್ಟಿದೆ"

ವೃತ್ತಾಂತ ಪತ್ರಿಕೆ

೧೯೦೮ ನೇ ಇಸವಿ ಸೆಪ್ಟೆಂಬರ್ ತಾ॥ ೩ ನೇ ಗುರುವಾರ

[illegible]ರಿ ಕಾರುಬಾರುಗಳ ಮೇಲೆ ಆಕ್ಷೇಪಣೆಮಾಡುವುದು

[illegible]ವರ್ನ್‌ಮೆಂಟಿನವರು ಹೊಸದಾಗಿ ವರ್ತಮಾನ ಪತ್ರಿ[illegible] ಕಾನೂನನ್ನು ಮಾಡಿದ್ದರಿಂದ ಮೈಸೂರಿನಲ್ಲೂ ಬೆಂಗ[illegible]ಲ್ಲೂ ಪ್ರಕಟವಾಗುತ್ತಿದ್ದ ಕನ್ನಡ ಮತ್ತು ಇಂಗ್ಲಿಷಿನ ಪತ್ರಿಕೆಗಳು ನಿಲ್ಲಿಸಲ್ಪಟ್ಟಿರುತ್ತವೆ. ಇದನ್ನು ನೋಡಿ ಕೆಲವು ವಾಚಕರು ವಿವಾದವೆಟ್ಟು, ಇನ್ನು ಮುಂದೆ [illegible]ಮೆಂಟಿನವರ ಕಾರುಬಾರುಗಳನ್ನು ಕುರಿತು ಚರ್ಚಿಸಿ [illegible] ಮಾಡುವಂಥಾ ಪತ್ರಿಕೆಗಳು ಯಾವೂ ಇಲ್ಲದೆ [illegible] ಗವರ್ನ್‌ಮೆಂಟಿಗೆ ಅಸಮಾಧಾನವನ್ನುಂಟುಮಾಡು[illegible] ಯಾವ ಸಂಗತಿಯೂ ಪ್ರಕಟವಾಗುವ ಹಾಗಿಲ್ಲ. ಗವ[illegible]ಟ್ ಅಧಿಕಾರಿಗಳು ತಮ್ಮ ಕಾರುಕರ್ದಿಗಳ[illegible] [illegible]ಗೆ ಬಾರದಂತೆ ಆಯಿತೆಂದು ತಿಳಿದು ನಿರ್ಭೀತರಾಗಿ [illegible] ಅಕೃತ್ಯಗಳನ್ನೂ ಅನ್ಯಾಯಗಳನ್ನೂ ಮಾಡುವುದಕ್ಕೆ [illegible]ಶವೂ ಪ್ರೋತ್ಸಾಹವೂ ಆಗಿರುತ್ತದೆ. ಪ್ರಜೆಗಳಿಗೆ [illegible]ಕೆಗಳ ಮೂಲಕ ಉಂಟಾಗುತ್ತಿದ್ದ ಬೆಂಬಲವೂ ಸಹಾ[illegible] [illegible] ತಪ್ಪಿಹೋಯಿತು ' ಎಂಬೀ ರೀತಿ ಹೇಳಬಹುದು.

ಇದಕ್ಕೆ ಪ್ರತಿಯಾಗಿ ನಾವು ಹೇಳುವುದೇನೆಂದರೆ, ಮೈ[illegible] ಸಂಸ್ಥಾನದ ಪ್ರಜೆಗಳಿಗೆ ವರ್ತಮಾನ ಪತ್ರಿಕೆಗಳ [illegible]ಲವೂ ಪ್ರೋತ್ಸಾಹವೂ ಅವಶ್ಯವಾಗಿ ಬೇಕಾಗಿರುತ್ತವೆ [illegible] ಒಪ್ಪಿ ಧಾರಾಳವಾಗಿ ಹೇಳುತ್ತೇವೆ. ಹಲವು ಅಧಿಕಾರಿ [illegible] ನೌಕರರೂ ಕ್ರೂರಿಗಳಾಗಿಯೂ [illegible]ಕೋರರಾ[illegible] ಇರುವರು. ಅಂಥವರ ದುಷ್ಕೃತ್ಯಗಳನ್ನು ಎತ್ತಿ [illegible] [illegible]ಬೈಲಿಗೆ ತರಬೇಕಾದದ್ದು ಬಹು ಅವಶ್ಯವಾಗಿರುತ್ತದೆ. [illegible]ಮೆಂಟಿನ ಕಾರುಬಾರುಗಳನ್ನು ಎತ್ತಿಹಾಕಿ ಎಷ್ಟು[illegible]ಗೆ ಆಕ್ಷೇಪಣೆಮಾಡಿದಾಗ್ಯೂ ಈ ಕಾನೂನು ಅಂಥವ[illegible] ಅಡ್ಡಿ ಮಾಡುವುದಿಲ್ಲ. ಈ ಭಾಗವನ್ನು ಸಕಲರೂ [illegible] [illegible]ಗಿಯೂ ಸ್ಪಷ್ಟವಾಗಿಯೂ ತಿಳಿದುಕೊಳ್ಳತಕ್ಕದ್ದು. [illegible] ಆಕ್ಷೇಪಣೆಗಳನ್ನು ಎಷ್ಟಾದರೂ ಮಾಡಲಿ ' ಎಂತ [illegible] ಆಕ್ಷೇಪಣೆಮಾಡುವುದನ್ನೇ ನಿರೀಕ್ಷಿಸುತ್ತೇವೆ. ಎಂತ [illegible]ವಿನಾ ರವರೂ ಕೌನ್ಸಿಲರುಗಳೂ ಬಹಿರಂಗವಾಗಿ ಹೇಳಿ[illegible] [illegible]ರ [illegible] ಗವರ್ನ್‌ಮೆಂಟಿನವರು ನಿಜವಲ್ಲದ ವಿಷಯ[illegible] ಬರೆಯತಕ್ಕ ಮನುಷ್ಯರನ್ನು ಕಠಿಣವಾಗಿ ಶಿಕ್ಷಿಸುತ್ತಾ[illegible] [illegible] ಯಥಾರ್ಥವಾದ ಸಂಗತಿಗಳನ್ನು ನ್ಯಾಯವಾದ ರೀತಿ[illegible] ಪ್ರಕಟಿಸುವ ಯಾವ ಎಡಿಟರನ್ನೂ ಶಿಕ್ಷಿಸುವುದಿಲ್ಲ. [illegible] [illegible] ನೌಕರರ [illegible] ಆಕ್ಷೇಪ[illegible]ನ್ನು [illegible] [illegible]ಮೆಂಟಿನ ಕಾರುಬಾರುಗಳ ವಿಷಯದಲ್ಲಿ [illegible] [illegible] ಅಭಿಪ್ರಾಯಗಳನ್ನು ಪ್ರಜೆಗಳ [illegible]ಗಳನ್ನು [illegible] [illegible] [illegible] [illegible] [illegible]—ಯಥಾರ್ಥವಾಗಿ [illegible] [illegible] ಇರುವ ಪಕ್ಷದಲ್ಲಿ ಅಂಥಾ ವಿಷ[illegible] [illegible] ನಾವು ಪ್ರಕಟಿಸಲು ಸಿದ್ಧರಾಗಿರುತ್ತೇವೆ. [illegible] [illegible] ಪ್ರಜೆಗಳ ಬೆಂಬಲವಾಗಿ ನಿಂತು ಅವ[illegible] [illegible] [illegible] [illegible] [illegible] [illegible] [illegible] [illegible] [illegible] ಇವುಗಳನ್ನು ಎಲ್ಲಿ [illegible] [illegible] ನಮ್ಮ ಕೈಲಾಗುವ ಮಟ್ಟಿಗೂ [illegible] [illegible] ಪ್ರಜೆಗಳ [illegible] [illegible] ಹಾದಿಗಳನ್ನು [illegible] ತರುವ [illegible] [illegible] ನಮ್ಮ [illegible] ಪ್ರಜೆಗಳ ಕಷ್ಟ [illegible]ಗಳನ್ನು [illegible] [illegible] ಅಭಿಪ್ರಾಯಗಳನ್ನು ಪ್ರಕಟಿಸುವುದಕ್ಕೆ ನಮ್ಮ [illegible] [illegible] [illegible] [illegible] ಯಥಾರ್ಥ [illegible] ಸಂಗತಿಗಳನ್ನು [illegible] ರೀತಿಯಲ್ಲಿ ಬರೆಯುವ[illegible] [illegible] [illegible] [illegible] [illegible] ಪ್ರಜೆಗಳಲ್ಲಿ [illegible] ತನಕ [illegible] ಅಧಿಕಾರಿಗಳ[illegible] [illegible] ನೌಕರರ [illegible] [illegible] [illegible] [illegible]ವು

[illegible] ಶಿಕ್ಷಿಸುವುದಕ್ಕೆ [illegible] [illegible] [illegible] ನೂತನ ಕಾನೂನು [illegible] ನೋಡಿ [illegible] [illegible] [illegible] ನವ [illegible] [illegible] [illegible] [illegible] [illegible] [illegible] [illegible] [illegible] ಕರ್ತವ್ಯವನ್ನು [illegible] [illegible] ವರ್ತಮಾನ ಪತ್ರಿಕೆಯನ್ನು ಈ ಹೊಸ ಕಾನೂನು [illegible] [illegible]ವದು

ವಿಗ್ರಹವು ನೀರಿನಲ್ಲಿ ಸಿಕ್ಕಿದ್ದು

" ಬಾಗಲ್ಲು ಟರ್ವ್ [illegible] ವೈಲಿ ದೂರದಲ್ಲಿ [illegible] [illegible] [illegible] ಸ್ವಾಮಿ ದೇವರ [illegible] ಆ ಬೆಟ್ಟದಲ್ಲಿ [illegible] [illegible] [illegible] ಎಷ್ಟು ದಿವಸಗಳಿಂದ ಜಲಾಧಿವಾಸಿಗಳಾಗಿದ್ದ ಒಂದು ವಿಗ[illegible] ಶಿರೋದಯವಾದಂತೆ ದನ ಮೇಯಿಸುವ ಹುಡುಗರಿಂದ ಆಗೀಷ್ಟು [illegible] ೧೮ನೇ ಮಂಗಳವಾರ ಜನ್ಮಾಷ್ಟಮಿ ದಿನ ಪ್ರಾತಃಕಾಲ ಕಾಲ್ಲೂರು ಅಮಲ್ದಾರರಾದ ಮ॥ ಗೋಪಾಲರಾಯರಿಗೆ ಬಾತ್ಮಿ ತಿಳಿದುಬಂದದ್ದರಿಂದ ಒಡನೆ ಅವರು ಬೆಟ್ಟಕ್ಕೆ ದಯಮಾಡಿಸಿದರು. ಅವರ ಜೊತೆ ಶಿರಸ್ತೇದಾರ್ರು ಮತ್ತು ಕಚೇರಿ ನೌಕರರು, ಪ್ಲೀಡರು, ಗ್ರಾಮದ ಪಟೇಲರು, ಶೆಟ್ಟಿ ವರ್ತಕರು, ಮಾತುಬರನ್ಯತರು ಮೊದಲಾದವರೆಲ್ಲಾ ಹೋಗಿ ಇದ್ದರು. ದೋಣೀಲಿ ೩—೩॥ ಅಡಿ ನೀರು ನಿಂತಿತ್ತು. ಈ ನೀರಿನಲ್ಲಿ ತೇಲುತ್ತಿದ್ದ ವಿಗ್ರಹವನ್ನು ಆಚೆಗೆ ತೆಗಿಸಿ ಅಮಲ್ದಾರ್ ಮ॥ ಗೋಪಾಲರಾಯರು ಅಂಗಾಂಗಗಳ್ಯಾವತ್ತೂ ಪರಿಶೋಧಿಸಿ ನೋಡಿದ್ದರಲ್ಲಿ ಯಾವ ವಿಧವಾದ ದೋಷಗಳೂ ಇರಲಿಲ್ಲ. ಪ್ರಜಾಪಾಲನೆಗೋಸ್ಕರ ಸ್ವಯಂ ಉದ್ಭವವಾಗಿರುವ ಮಹಾನುಭಾವರೆಂದು ತಿಳಿದು ಯೋಗವೆಂಕಟರಮಣಸ್ವಾಮಿ ಎಂಬ ಹೆಸರಿನಿಂದ ವಂದನೆಯನ್ನು ಮಾಡಲಾರಂಭಿಸಿದರು. ಪುರಾತನವಾದ ಸಾಲಿಗ್ರಾಮ ಶಿಲೆಯನ್ನು ಡಂಕಣಾಚಾರಿಯಿಂದ ಕೆತ್ತಲ್ಪಟ್ಟಿರುವ ಅತಿ ಸುಂದರವಾದ ವಿಗ್ರಹ. ಅದರ ಎತ್ತರ ೩ ಅಡಿ ಉಳ್ಳದ್ದಾಗಿದೆ. ಮ॥ ಗೋಪಾಲರಾಯರು ಆ ವಿಗ್ರಹವನ್ನು ದೊಡ್ಡ ಧಡದಲ್ಲಿ ಸ್ಥಾಪಿಸಿ ನಾನಸಪೂಜೆಯನ್ನು ಮಾಡಿ, ಫಲಸಮರ್ಪಣೆ ಮಾಡಿದರು. ಶುಭಮುಹೂರ್ತದಲ್ಲಿ ಅಲ್ಲಿ ಜಮಾಯಿಸಿದ್ದ ಜನಗಳು ಸೂರಾರು ತೆಂಗಿನಕಾಯಿಗಳನ್ನು ಅರ್ಪಿಸಿದರು. ಆ ದಿವಸವು ಒಂದು ನಿಮಿಷವೂ ಬಿಡುವಿಲ್ಲದಂತೆ ದೇವರ ದರ್ಶನಾರ್ಥವಾಗಿ ಗ್ರಾಮಾಂತರಗಳಿಂದ ಅನೇಕರು ಬರುತ್ತಲಿದ್ದಾರೆ. ದಿನಕ್ಕೆ ಸಾವಿರಾರು ತೆಂಗಿನಕಾಯಿಗಳು ಫಲಸಮರ್ಪಣೆ ಮಾಡುತ್ತಲಿದ್ದಾರೆ. ಬೆಟ್ಟದ ಮೇಲೇನೇ ಒಂದು ಸ್ಥಳವನ್ನು ಆರಿಸಿ, ಭಕ್ತಾದಿಗಳಿಂದಲೂ ಸರ್ಕಾರದವರ ಸಹಾಯದಿಂದಲೂ ಒಂದು ಗರ್ಭಗುಡಿಯನ್ನು ಕಟ್ಟಿಸಿ, ಈ ದೇವರನ್ನು ಸ್ಥಾಪಿಸಿ, ಸಂಪ್ರೋಕ್ಷಣೆ ಮಾಡಿ ಜೀರ್ಣೋದ್ಧಾರವಮಾಡಬೇಕೆಂದು ಪ್ರಜೆಗಳೆಲ್ಲ ಸೇರಿ ಅಮಲ್ದಾರರನ್ನು ಕುರಿತು ಪ್ರಾರ್ಥಿಸಿಕೊಂಡರು "

ನಮ್ಮ ಬಾತ್ಮಿದಾರರೊಬ್ಬರು ಮೇಲೆ ಕಾಣಿಸುವ ವಿಚಿತ್ರವಾದ ಬಾತ್ಮಿಯನ್ನು ಬರೆದು ಕಳುಹಿಸಿರುತ್ತಾರೆ. ಈ ಸಂಗತಿಯ ವಿಷಯ ನಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದಿರುತ್ತೇವೆ.

(೧) ಪೂರ್ವಕಾಲದ ಪ್ರಸಿದ್ಧ ಶಿಲ್ಪಿಗಳಾದ ಡಂಕಣಾಚಾರ್ಯರೇ ಆ ವಿಗ್ರಹವನ್ನು ಕೆತ್ತಿದರೆಂದು ನಮ್ಮ ಬಾತ್ಮಿದಾರರ ಅಭಿಪ್ರಾಯ ಪಡುವರು. ಇದರ ನಿಜತ್ವವನ್ನು ಅವರು ಚರಿತ್ರೆಗಳ ಮೂಲಕ ಸ್ಥಾಪಿಸುವರೇ? ಶಿಲ್ಪಿಕೆಲಸಗಳು ಯಾವಕಡೆಯಲ್ಲಿ ಕಂಡುಬಂದರೂ ಈ ದೇಶದ ಜನರು ಅವುಗಳನ್ನು ಡಂಕಣಾಚಾರ್ಯರೇ ಮಾಡಿದರೆಂದು ಸಾಧಾರಣವಾಗಿ ಮಾತನಾಡಿಕೊಳ್ಳುವರು. ಆದರೆ ವಿವೇಕಿಗಳಾದ ಜನರು ಇಂಥಾ ಸಂಗತಿಗಳನ್ನು ಸುಲಭವಾಗಿ ನಂಬುವವರಲ್ಲ. ಅವರಿಗೆ ಬಲವಾದ ಸಾಕ್ಷ್ಯಗಳು ಬೇಕಾಗಿರುತ್ತವೆ. ಅಂಥಾ ಸಾಕ್ಷ್ಯಗಳನ್ನೊದಗಿಸಿಕೊಡುವುದು ಸುಲಭವಲ್ಲ. ಚರಿತ್ರೆಯಲ್ಲಿ ಪಾಂಡಿತ್ಯವನ್ನು ಪಡೆದಿರುವವರೂ ಪುರಾತನ ಕಟ್ಟಡಗಳನ್ನು ನೋಡಿ, ಅವುಗಳನ್ನು ಪರೀಕ್ಷಿಸಿ, ಅವುಗಳ ಚರಿತ್ರೆಯನ್ನೆಲ್ಲಾ ಆದ್ಯಂತವಾಗಿ ತಿಳಿದಿರುವವರೂ ಮಾತ್ರ ಮೇಲ್ಕಂಡ ಸಂಗತಿಯ ವಿಷಯದಲ್ಲಿ ಮಾತನಾಡಲು ಶಕ್ತರಾಗಿರುವರೇ ವಿನಾ ವಿಕ್ಷಾದವರು ಮಾತನಾಡಲು ಶಕ್ತರಲ್ಲವು. ಅನೇಕ ಸಮಯಗಳಲ್ಲಿ ಚೆನ್ನಾಗಿ ತಿಳಿದಿರುವವರು ಕೂಡ ಯಾವದಾದರೊಂದು ಕೆತ್ತನೆಯ ಕೆಲಸವನ್ನು ನೋಡಿ ಸಂಶಯದಿಂದ ಕೂಡಿದವರಾಗಿ ಇದನ್ನು ಒಂದುವೇಳೆ ಡಂಕಣಾಚಾರ್ಯರು ಮಾಡಿದ್ದರೆ ಮಾಡಿರಬಹುದು ಅಥವಾ ಇನ್ಯಾವ ಶಿಲ್ಪಿಯಾದರೂ ಮಾಡಿರಬಹುದೆಂದು ತಿಳಿಸುವುದು ಸಾಧಾರಣವಾಗಿರುತ್ತದೆ.

(೨) ತಾಲ್ಲೋಕು ಅಮಲ್ದಾರರು ಆ ವಿಗ್ರಹವನ್ನು ಕಂಡು ಅದು ಪ್ರಜಾಪಾಲನೆಗೋಸ್ಕರ ಸ್ವಯಂ ಉದ್ಭವವಾಯಿತೆಂದು ಹೇಳಿದರೆಂಬುದಾಗಿ ನಮ್ಮ ಬಾತ್ಮಿದಾರರು ತಿಳಿಸುತ್ತಾರೆ. ಇಂಥಾ ಅಭಿಪ್ರಾಯ[illegible] ಯಾವ ಸಾಕ್ಷ್ಯವಾದರೂ ಇರುವುದೆ? ಈ ವಿಗ್ರಹವನ್ನು ಜನರು ಪುರಾತನಕಾಲದಲ್ಲಿ ಅಲ್ಲಿ ಹಾಕಿದ್ದರೂ ಹಾಕಿರಬಹುದು. ಅದು ಈಚೀಚೆಗೆ ಅದನ್ನು ಯಾರಾದರೂ ತಂದು ಅಲ್ಲಿಟ್ಟಿದ್ದರೂ ಇಟ್ಟಿರಬಹುದು. ಯಾತಕ್ಕೆಂದರೆ ದೇವಸ್ಥಾನಗಳಿಗೆ ಸಂಬಂಧಪಟ್ಟ ಪೂಜಾರಿಗಳೂ ಇತರರೂ ಅನೇಕ ಸಮಯಗಳಲ್ಲಿ ಜನರನ್ನು [illegible] [illegible] ನಾನಾತರವಾದ ಪಿತ್ತಲಾಟಗಳನ್ನು [illegible] [illegible] [illegible] ಇಂಥಾ ಸಂಗತಿಗಳು [illegible] [illegible] [illegible] [illegible] ಯಾರಾದರೊಬ್ಬರು ಅಲ್ಲಿ ಒಂದು ದೇವಸ್ಥಾನವನ್ನು [illegible] ಪೂಜೆಪುರಸ್ಕಾರಗಳನ್ನು ಆರ್ಪಿಸುವುದಕ್ಕೋಸ್ಕರ [illegible] [illegible] ಯನ್ನು ಹುಟ್ಟಿಸಿದರೆಂದು ನಂಬ ಬಹುದಾಗಿದೆ.

(೩) ಇಂಥಾ ಸಂಗತಿಗಳನ್ನು [illegible] [illegible] [illegible] ವಿಶೇಷವಾದ ಅಂಶಗಳನ್ನು [illegible] [illegible] [illegible] [illegible] [illegible] ವೇದಲನೇ [illegible] [illegible] [illegible] ಯಲ್ಲಿ ವಿಗ್ರಹಗಳನ್ನು [illegible] [illegible] [illegible] [illegible] ಆಶ್ಚರ್ಯವಾದ [illegible] [illegible] [illegible] ಅಲ್ಲ [illegible] [illegible] [illegible] [illegible] [illegible] [illegible] ಜನರನ್ನೆಂತಿ [illegible] [illegible] [illegible] [illegible] [illegible] [illegible]

[illegible]

ಒಳದೇಶದ ವೃತ್ತಾಂತಗಳು.

ಬೆಂಗಳೂರು ದಂಡಿನಲ್ಲಿ ಒಬ್ಬ ಹಕೀಮನು ಒಬ್ಬ ರೋಗಿಗೆ ಹೆಚ್ಚಾಗಿ ಅಫೀಮನ್ನು ಕೊಟ್ಟದ್ದರಿಂದ ಅವನು ಸತ್ತುಹೋದನೆಂದು ತಿಳಿದು, ಪೋಲೀಸಿನವರು ಆ ಹಕೀಮನನ್ನು ಹಿಡಿದು ದರ್ಯಾಫ್ತು ಮಾಡುತ್ತಿದಾರೆ.

***

ದಿವಾನರಾದ ಮ॥ ವಿ. ಪಿ. ಮಾಧವರಾಯರೂ ರೆವಿನ್ಯೂ ಕಮಿಷನರ್ ಮ॥ ಎ. ರಂಗಸ್ವಾಮ್ಯಯಂಗಾರರೂ ಕಳೆದ ಸೋಮವಾರ ರಾಜಧಾನಿಗೆ ದಯಮಾಡಿಸಿದರು. ಇವರು ಇನ್ನೂ ೨—೩ ದಿವ ಇಲ್ಲೇ ಇರುತ್ತಾರೆಂದು ಕೇಳುತ್ತೇವೆ.

***

ಹೊಸ ಅರಮನೆಯಲ್ಲಿ ಅಲಂಕಾರಾದಿಗಳು ಇನ್ನೂ ಪೂರೈಸಿಲ್ಲವಾದ್ದರಿಂದ ಈ ಸರ್ತಿಯೂ ಎಂದಿನಂತೆ ಜಗನ್ಮೋಹನ ಬಂಗಲೆಯಲ್ಲೇ ನವರಾತ್ರಿಯ ದರ್ಬಾರುಗಳೂ ಉತ್ಸವಾದಿಗಳೂ ನಡೆಯತಕ್ಕದ್ದೆಂದು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರುತ್ತಾರೆ.

***

ಈ ಸಲ ನವರಾತ್ರಿ ಉತ್ಸವಗಳಿಗೂ ಪ್ರಜಾಪ್ರತಿನಿಧಿ ಸಭೆಗೂ ಬರುವಂಥಾ ಹೇರಳ ದೊಡ್ಡ ಮನುಷ್ಯರಿಗೂ, ಪ್ರತಿನಿಧಿಗಳಿಗೂ ಸ್ಥಳ ಮುಂತಾದ ವಿಷಯದಲ್ಲಿ ವಸತಿಯನ್ನು ಕಲ್ಪಿಸುವುದಕ್ಕೆ ಸರ್ಕಾರದವರು ಮ॥ ಸಿ. ವೆಂಕಟರಾಯರನ್ನು ನೇಮಿಸಿ, ರಾಜಧಾನಿಗೆ ಕಳುಹಿಸಿದಾರೆ.

***

ಇಲ್ಲಿನ ದೊಡ್ಡ ಪೇಟೆಯಲ್ಲಿ ಬಳ್ಳೆರೆ ಅಂಗಡಿ ವರ್ತಕನಾಗಿದ್ದ ಒಬ್ಬ ಶೆಟ್ಟಿಯು ಬೈಸಿಕಲ್ ಸವಾರಿಯಲ್ಲಿ ರೈಲ್ ಸ್ಟೇಷನ್ ಬಳಿ ಬಿದ್ದು ಗಾಯಪಟ್ಟು ಕಳೆದ ವಾರ ಆಸ್ಪತ್ರೆಯಲ್ಲಿ ಕಾಲವಾದನು. ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ಒಂದು ಯಂತ್ರಕ್ಕೆ ಸಿಕ್ಕಿ ಒಬ್ಬ ವಿದ್ಯಾರ್ಥಿಯು ಕಳೆದ ವಾರ ತುಂಬಾ ಗಾಯಪಟ್ಟು, ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದಾನೆ.

***

ಬೆಂಗಳೂರು ಪಟ್ಟಣದಲ್ಲಿ ಪ್ರಕಟವಾಗುತ್ತಿದ್ದ " ಸದೆಗಳ್ಳದಿ " ಎಂಬ ಕನ್ನಡ ವಾರಪತ್ರಿಕೆಯನ್ನೂ, " ಮೈಸೂರ್ ಸ್ಟಾಂಡರ್ಡ್ " ಎಂಬ ಇಂಗ್ಲಿಷ್ ಪತ್ರಿಕೆಯನ್ನೂ ಎಡಿಟರು ಇನ್ನು ಮುಂದೆ ಪ್ರಕಟಿಸುವುದಿಲ್ಲವೆಂದು ಹೇಳಿ ನಿಲ್ಲಿಸಿಬಿಟ್ಟರು. ಮೈಸೂರು ಸರ್ಕಾರದವರು ಮಾಡಿರುವ ವರ್ತಮಾನಪತ್ರಿಕೆಗಳ [illegible] ಕಾನೂನೇ ಅದಕ್ಕೆ ಕಾರಣವಾಗಿರುತ್ತದೆ.

***

ಸಂಸ್ಥಾನದಲ್ಲಿ ಸರ್ವೇ [illegible] ಮಾಡುವಂಥಾ ದೊಡ್ಡ ಅಧಿಕಾರಿಗಳು ಮೋಟಾರ್ ಗಾಡಿಗಳನ್ನು [illegible] [illegible] [illegible] ತಲೂ, ಅವಶ್ಯ ಬಿದ್ದರೆ ಅಂಥವ [illegible] [illegible] [illegible] [illegible]ವುದಕ್ಕೆ [illegible] [illegible] ತನಕ [illegible] [illegible] ಕೊಂಡು, ಆ ಹಣವನ್ನು [illegible] [illegible] [illegible] [illegible] [illegible] ಬಹುದೆಂತಲೂ ಗವರ್ನ್‌ಮೆಂಟಿನವರು [illegible] [illegible] ತ್ತಾರೆ.

***

[illegible] [illegible] [illegible] [illegible] [illegible] ರಾಜಧಾನಿಯ ಜನರಲ್ [illegible] [illegible] [illegible] [illegible] ತಿದ್ದ ಮ॥ [illegible] [illegible] [illegible]

***

[illegible]

***

[illegible]

***

[illegible]

ಲೋಕಪರಿಚಯವು.

ಬೆಂಗಳೂರಿನಲ್ಲಿರುವ ಗವರ್ನಮೆಂಟ್ ಡೆಪ್ಟಿ ಸ್ಯಾನಿಟರಿ ಕಮಿಷನರಾದ ಡಾಕ್ಟರ್ ಪಲ್ಪುರವರ ಪತ್ನಿಯವರು ಅಲ್ಲಿನ ಸ್ತ್ರೀಯರ ಸಭೆಯಲ್ಲಿ ಮೇಲ್ಕಂಡ ವಿಷಯವನ್ನು ಕುರಿತು ಒಂದು ಉಪನ್ಯಾಸವನ್ನು ಮಾಡಿದರು. ಅವರ ಕೆಲವು ಭಾಗಗಳನ್ನು ತೆಗೆದು ಇಲ್ಲಿ ಪ್ರಕಟಿಸುತ್ತೇವೆ.

"ವಿರಾಮವಿರುವ ಕಾಲದಲ್ಲಿ ಸ್ತ್ರೀಯರಾದ ನಾವುಗಳು ಸೇರಿ ಸುಮ್ಮನೆ ಅನೇಕ ವಿಷಯಗಳನ್ನು ಮಾತನಾಡಿಕೊಳ್ಳುವದು ನಮ್ಮ ಸ್ವಭಾವವಾಗಿರುತ್ತೆ. ಈ ನಮ್ಮ ಮಾತುಗಳಲ್ಲಿ ಲೋಕ ಪರಿಚಯಕ್ಕೆ ಸಾಧಕವಾದ್ದೆಂದರೆ ಲೋಕಕ್ಕೆ ಬಂಧುಗಳು ನೆರೆಹೊರೆ ಎಂದರ್ಥ ಮಾಡಬೇಕಾಗಿದೆ. ಇಂಥ ಪ್ರಸಂಗಗಳಿಂದ ವಿಶೇಷ ಪ್ರಯೋಜನವೇನೂ ಇಲ್ಲ. ನಮ್ಮ ಮನೆಗಳಲ್ಲಿರುವ ಹಾಗೆಯೇ ಎಲ್ಲರ ಮನೆಗಳಲ್ಲಿಯೂ ಸಂಗತಿಗಳೆಲ್ಲಾ ಒಂದೇ ವಿಧವಾಗಿರುವವು. ದುಶ್ಶೀಲರಾದ ಪರಿಚಾರಕರು, ಮೂಢಮತಿಯುಳ್ಳ ಸ್ತ್ರೀಯರು, ಅಥವ ನೆರೆಹೊರೆಯವರ ಕಲಹಾದಿಗಳು, ಇಂಥವುಗಳ ವಿಚಾರವಾಗಿ ಇತರ ಜನರು ಬಂದು ತಮ್ಮ ಸ್ವಂತ ಅಭಿಪ್ರಾಯಗಳೊಂದಿಗೆ ಹೇಳುವ ನಿಸ್ಸಾರವಾದ ವರ್ತಮಾನಗಳನ್ನು ಕೇಳುವದೇ ನಮ್ಮ ಅಭ್ಯಾಸವಾಗಿರುವದರಿಂದ ಲೋಕವರ್ತಮಾನವೂ ಲೋಕಪರಿಚಯವೂ ಹ್ಯಾಗೆತಾನೇ ಲಭಿಸೀತು? ಇದರಿಂದ ಅನೇಕ ವೇಳೆ ಕಲಹಗಳು ಸಂಭವವಾಗುವದೂ ಉಂಟು. ಈ ತೊಂದರೆಗಳು ನಿಮಗೆಲ್ಲಾ ತಿಳಿದೇ ಇರಬಹುದು.

ಪತಿಹಿತಗಳನು ಅನುಸರಿಸುವದು, ತಮ್ಮ ಮಕ್ಕಳುಗಳಿಗೆ ಆಹಾರಾದಿಗಳನ್ನು ಕೊಟ್ಟು ಪೋಷಿಸುವದು, ಈ ಮೊದಲಾದ ಸ್ವಾರ್ಥಪರಗಳಾದ ಕೃತ್ಯಗಳನ್ನು ಪಕ್ಷಿ ಮೃಗಾದಿಗಳೂ ಸಹ ಸಾಮಾನ್ಯವಾಗಿ ಆಚರಿಸುತ್ತವೆ. ಇದು ಸೃಷ್ಟಿ ಸ್ವಭಾವವೇ ಸರಿ. ಮನುಷ್ಯರು ಮಾತ್ರ ಇಷ್ಟರಲ್ಲಿಯೇ ಎಂದಿಗೂ ತೃಪ್ತರಾಗಿರಬಾರದು. ಪರೋಪಕಾರ, ಪರಗುಣಕಾಂಕ್ಷೆ, ಇವನ್ನು ಅಭಿವೃದ್ಧಿಪಡಿಸಬೇಕೆನ್ನುವದು ಕಾಲಾಂತರದಿಂದಲೂ ಬಂದಿರುವಂತೆ ಈಗಲೂ ಪ್ರಚಾರದಲ್ಲಿ ತರಬೇಕು.

ಪತಿ ಸುತರು ಅನೇಕ ಅನ್ಯಾಧೀನಗಳಾದ ವಿದ್ಯೆಗಳನ್ನು ಕಲಿತು ಅಧಿಕಾರ ಮಾಡುತ್ತಿದ್ದು ಮನೆಗೆ ವಿಶ್ರಾಂತಿ ಸುಖಕ್ಕಾಗಿ ಬಂದಾಗ, ಅವರಿಗೆ ನೆರೆಹೊರೆಯವರ ವಿಚಾರವಾದ ಕ್ಷುದ್ರವಾರ್ತೆಗಳನ್ನು ಹೇಳಿದರೆ, ಲೌಕಿಕವಾಗಿಯೂ, ಗೌರವವಾಗಿಯೂ ಇರುವ ಅವರ ಅಭಿಪ್ರಾಯದಲ್ಲಿಯೇ ನಾವೂ ಸಹ ವಿಚಾರಮಾಡಲು ಶಕ್ತರಾಗಿದ್ದರೆ ಅವರಿಗೆ ಎಷ್ಟೋ ಹಿತವಾಗಿರುತ್ತೆ. ಅವರ ಪರಿಚಯವು, ಅವರ ಅಭಿಪ್ರಾಯಗಳು, ಇವುಗಳೂ, ಸಾಮಾನ್ಯವಾಗಿ ಈಗ ಸ್ತ್ರೀಯರಿಗಿರುವ ವಿಶಾಲವಲ್ಲದ ಅಭಿಪ್ರಾಯಗಳಿಗೂ ಬಹಳ ವ್ಯತ್ಯಾಸವಿರುವದು. ಅವರ ಅಭಿಪ್ರಾಯಗಳನ್ನು ಗ್ರಹಿಸುವದಕ್ಕೆ ನಮಗೆ ಸಾಮರ್ಥ್ಯ ಸಾಲದಾದರೆ ನಮ್ಮ ಅಜ್ಞಾನವು ಎಷ್ಟು ಹಾಸ್ಯಾಸ್ಪದವಾಗಿ ಅವರಿಗೆ ತೋರಬಹುದೋ ನೀವೇ ಯೋಚಿಸಿ. ಆದ್ದರಿಂದ ಲೋಕಪರಿಚಯವನ್ನು ಸಂಪಾದಿಸಿ ಸ್ವಲ್ಪ ಮಟ್ಟಿಗಾದರೂ ಅವರಿಗೆ ಹಿತಕರವಾಗುವದಕ್ಕೆ ನಾವೆಲ್ಲರೂ ಪ್ರಯತ್ನಿಸಬೇಕಾಗಿದೆ.

ಈಶ್ವರನ ವಿಷಯ ಪ್ರತಿಪಾದಿಸುವ ಗ್ರಂಥಗಳನ್ನು ಓದಿದರೆ ಈಶ್ವರನಲ್ಲಿ ಭಕ್ತಿ ಹುಟ್ಟುವಂತೆ ಲೌಕಿಕ ವಿಷಯಗಳನ್ನು ತಿಳಿಸುವ ಪುಸ್ತಕಗಳನ್ನೂ ಉತ್ತಮವಾದ ವರ್ತಮಾನ ಪತ್ರಿಕೆಗಳನ್ನೂ ಓದುತ್ತ ಬಂದರೆ ಲೋಕಜ್ಞಾನವು ಉಂಟಾಗುತ್ತೆಂಬುವದಕ್ಕೆ ಸಂಶಯವಿಲ್ಲ. ಆದರೆ ವರ್ತಮಾನ ಪತ್ರಿಕೆಗಳನ್ನು ಓದುವ ಸ್ತ್ರೀಯರನ್ನು ಕಂಡರೆ ಕೆಲವು ಸ್ತ್ರೀಯರು ಹಾಸ್ಯಮಾಡುವದನ್ನು ನಾನು ನೋಡಿದ್ದೇನೆ. ಅವರು ಬರಿ ಪ್ರಯೋಜನವಿಲ್ಲದ ಇಂಥ ಪದ್ಯಗಳನ್ನು ಕಲಿತು ಸಂತೋಷಪಡುವದರಲ್ಲಿ ಕಳೆಯುವ ಕಾಲವನ್ನು ಉತ್ತಮವಾಗಿಯೂ ಪ್ರಯೋಜನಕರವಾಗಿಯೂ ಉಪಯೋಗಿಸುವದಕ್ಕೆ ಅವರಿಗೆ ಇಷ್ಟವಿಲ್ಲವೇನು ತಿಳಿಯಬೇಕಾಗಿದೆ. ಲೋಕಶ್ರೇಷ್ಠರ ವಿಷಯದಲ್ಲಿ ತಿಳಿದುಕೊಳ್ಳಬೇಕಾದ ಸಂಗತಿಗಳೆಷ್ಟೋ ಇವೆ. ವಿಶಾಲವಾದ ಮನುಷ್ಯಬುದ್ಧಿಯು ಲೋಕದಲ್ಲಿನ ಗುಣಪ್ರದವಾದ ಒಂದೊಂದು ವಿಷಯವನ್ನು ಕಂಡುಹಿಡಿದರೂ, ಅದರಿಂದ ಸೌಖ್ಯವೂ, ಸೌಕರ್ಯವೂ ಉಂಟುಮಾಡಲ್ಪಡುತ್ತವೆ.

ಲೋಕದಲ್ಲಿನ ಈ ವಿಶ್ವ ಮಾರ್ಗಸ್ಥಿತಿಗಳು ಅದರ ವಿಷಯವಾಗಿ ಅವರವರು ಶ್ಲಾಘಿಸುವಷ್ಟು ಸಹಾಯಮಾಡುವದು. ನಾನಾ ದೇಶ ಜಾತಿ ಮತದವರ ಅನ್ಯೋನ್ಯ ವ್ಯತ್ಯಾಸವುಳ್ಳ ಸ್ಥಿತಿಭೇದಗಳು, ವಿಚಾರ ಭೇದಗಳು, ಅವರ ಮನೋದ್ದೇಶಗಳು, ಪರಿಷ್ಕಾರಗಳು, ನಮಗೂ ಅವರಿಗೂ ಇರುವ ತಾರತಮ್ಯಗಳು, ಇವೇ ಮೊದಲಾದ ಅನೇಕ ಶ್ರೇಷ್ಠಗುಣಗಳನ್ನು ಲೋಕದಲ್ಲಿ ನೋಡಿ, ಓದಿ, ತಿಳಿದು, ಪರಿಚಯಮಾಡಿಕೊಂಡರೆ ನಮ್ಮಗಳಿಗಿರುವ ಅಲ್ಪಗುಣ, ಅಲ್ಪವಿದ್ಯೆ ಅಲ್ಪಧನ, ಅಲ್ಪದಾಸ, ಇವುಗಳಲ್ಲಿರುವ ಗರ್ವವೂ, ದುರಭಿಮಾನವೂ, ತೃಪ್ತಿಯೂ ಎಷ್ಟೋ ಮಟ್ಟಿಗೆ ಕಡಿಮೆಯಾಗುವವು. ಶ್ರೇಷ್ಠಗುಣವುಳ್ಳವರ ಹಾಗೆ ಉತ್ತಮ ಕಾರ್ಯಗಳನ್ನು ಆಚರಿಸುವದಕ್ಕೆ ನಾವು ಪ್ರಯತ್ನಿಸಲು ಕಾತರಳಾಗಿ ಕಲಿಯುವದು. ಆಗ ನಮಗೂ ನಮ್ಮ ರಾಜ್ಯಕ್ಕೂ ಬೇಕಾದ ಸೌಖ್ಯ ಸ್ವಾತಂತ್ರ್ಯ ಪರಿಷ್ಕಾರಗಳು ಸಿದ್ಧಿಸುವದರಲ್ಲಿ ಸಂಶಯವಿಲ್ಲ.

ಹೀಗೆ ಲೋಕಪರಿಚಯವು ವೃದ್ಧಿಹೊಂದುತ್ತಾ ಬಂದು, ಪೂರ್ಣವಾಗಿ ಸಿದ್ಧಿಸುವಾಗ ಈ ಪ್ರಪಂಚವು ಈಶ್ವರನ ರಚನಾಕೌಶಲವು ಅದರಲ್ಲಿ ನಮ್ಮ ಕರ್ತವ್ಯವು ಇವೇ ಎಂಬುದಾಗಿ ನಮಗೆ ಕಂಡುಬರುವವು. ಇಂಥ ವಿಶೇಷ ಜ್ಞಾನದಿಂದ ನಮಗೆ ಭಕ್ತಿಯುಂಟಾಗಿ ನಿತ್ಯಾನಂದ ಸ್ವರೂಪನಾದ ಅತೀತ ವಸ್ತುವಿನಲ್ಲಿ ಆನಂದಕ್ಕೂ ಅದರ ದ್ವಾರ ಮೋಕ್ಷಸಾಧನೆಗೂ ಇದು ಸಹಕಾರಿಯಾಗುವದು. ಈ ವಿಧವಾದ ಲೋಕಪರಿಚಯವು ಸಿದ್ಧಿಸುವದಕ್ಕೆ ಈಗ ಇಲ್ಲಿ ಸೇರಿರುವಂಥ ಸಭೆಗಳೂ, ಶ್ರೀ|| ಸಿಂಗಮ್ಮನವರು ಪ್ರಯಾಸಪಟ್ಟು ಏರ್ಪಡಿಸಿರುವ ಸಂಘಗಳಂಥ ಸಂಘಗಳೂ ಮುಖ್ಯ ಉಪಕರಣಗಳಾಗಿವೆ. ಈ ಸ್ತ್ರೀಸಂಘಕ್ಕೆ ಈಗತಾನೇ ಮೊದಲನೇ ವರ್ಷವು ತುಂಬಿತು. ಇದುವರೆಗಿನಂತೆ ಇದನ್ನು ಇನ್ನು ಮುಂದೆಯೂ ಅಭಿವೃದ್ಧಿಗೆ ತರಲು ನೀವೆಲ್ಲರೂ ಬದ್ಧಕಂಕಣರಾಗಿರುತ್ತೀರೆಂದು ಪ್ರಾರ್ಥಿಸಿ ಉಪಸಂಹರಿಸುವೆನು."

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಲರುಗಳು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳುವಾರಿ ಮೀಟಿಂಗನ್ನು ನಡಸಿದರು. ಕಳೆದ ಜೂಲೈ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ. ೧೨,೪೮೦ ಆ. ೧೧—೭ ಪೈ ಉತ್ಪತ್ತಿಯೂ, ರೂ ೩,೯೦೦—೨—೩ ಪೈ ಖರ್ಚೂ ಆಗಿರುತ್ತದೆ. ಆ ತಿಂಗಳಲ್ಲಿ ಜನನ ೧೧೮, ಮರಣ— ಪ್ಲೇಗ್ ೩, ಜ್ವರ ೫, ಇತರ ಕಾರಣಗಳು ೧೨೦, ಅಂತು ೧೨೮. ಆಡಿಟರುಗಳು ಮ್ಯುನಿಸಿಪಲ್ ಲೆಕ್ಕಗಳನ್ನು ಅಜಮಾಯಿಷಿಮಾಡಿ, ಎಲ್ಲಾ ಸರಿಯಾಗಿದೆ ಎಂದು ತಿಳಿಸಿದ್ದಲ್ಲದೆ, ಕಂದಾಯದ ಬಾಕಿ ಬಹಳ ಉಳಿದಿದೆ ಎಂತಲೂ, ಮುತ್ಸದ್ದೀರು ತೃಪ್ತಿಕರವಾಗಿ ವಸೂಲಿ ಮಾಡಿಲ್ಲವೆಂತಲೂ, ಇಂಗಾಮಿ ಕೆಲಸಗಾರರನ್ನು ನೇಮಿಸಿದ್ದಾಗ್ಯೂ ವಸೂಲಾತಿಯು ಬಹಳ ಸುಸ್ತಿಯಾಗಿದೆ ಎಂತಲೂ, ೧ ನೇ, ೨ ನೇ ಡಿವಿಜನ್‌ಗಳ ಕಿರುವರ್ತಕ ಸ್ಟಾಕ್ ಗ್ಯಾರೀಲ ಆಗಿರುವುದನ್ನು ಇನ್ನೂ ಪತ್ತೆ ಮಾಡಿಲ್ಲವೆಂತಲೂ ರಿಪೋರ್ಟಿನಲ್ಲಿ ಕಾಣಿಸಿದ್ದರು. ವೈಸ್ ಪ್ರಸಿಡೆಂಟರು ಈ ವಿಚಾರಗಳಿಗೆಲ್ಲಾ ಗಮನಕೊಡುವುದಾಗಿ ಕೌನ್ಸಲರುಗಳಿಗೆ ತಿಳಿಸಿರುತ್ತಾರೆ.

ಮೆ|| ಸಿದ್ದಲಿಂಗಪ್ಪನವರಿಂದ ರಚಿಸಲ್ಪಟ್ಟಿರುವ ಸಚಿತ್ರ ಕನ್ನಡ ವರ್ಣಮಾಲೆಗಳ ೩೦೦ ಪ್ರತಿಗಳನ್ನು ಮ್ಯುನಿಸಿಪಾಲಿಟಿಯವರು ಕೊಂಡು, ಮ್ಯುನಿಸಿಪಲ್ ಬಾಲಬೋಧೆಯ ಸ್ಕೂಲುಗಳಿಗೆ ಹಂಚಿಕೊಡಬೇಕೆಂದು ಕೌನ್ಸಲರುಗಳು ಒಪ್ಪಿಕೊಂಡರು.

ದೊಡ್ಡ ಕೆರೆಯಲ್ಲಿ ಒಂದು ಪರಿಖಾನೆಯನ್ನು ಕಟ್ಟಿಸುವದಕ್ಕೆ ಅಂದಾಜು ಪಟ್ಟಿ ತಯಾರಾಗಿದ್ದಂತೆ ೧,೩೪೦ ರೂಪಾಯಿ ಸ್ಯಾಂಕ್ಷನ್ ಆಗಿರುತ್ತದೆ.

ಚಾಮುಂಡಿ ಬೆಟ್ಟದ ರಸ್ತೆಯನ್ನು ದುರಸ್ತು ಮಾಡಿಸುವುದಕ್ಕೆ ೩೫೦ ರೂಪಾಯಿ ಖರ್ಚುಮಾಡಬಹುದೆಂದು ಒಪ್ಪಲಾಯಿತು.

ಮ್ಯುನಿಸಿಪಲ್ ಕಂದಾಯಗಳನ್ನು ವಸೂಲ್ಮಾಡುವದಕ್ಕೆ ಮುತ್ಸದ್ದೀರುಗಳ ಮೇಲೆ ಇನ್ನೊಬ್ಬ ಮುಖ್ಯಸ್ಥನ ತನಿಖೆ ಕಲೆಕ್ಟರೆಂಬ ಅಧಿಕಾರಿಯನ್ನು ನೇಮಿಸಿಕೊಳ್ಳುವ ವಿಷಯದಲ್ಲಿ ಮ್ಯಾನೇಜಿಂಗ್ ಕಮಿಟಿಯವರ ಅಭಿಪ್ರಾಯವನ್ನು ಕೌನ್ಸಲರುಗಳು ಒಪ್ಪಿಕೊಂಡಿದ್ದಾರೆ.

ಲೋಕಲ್ ಫಂಡ್ ಮತ್ತು ಮ್ಯುನಿಸಿಪಲ್ ಆಸ್ಪತ್ರೆಗಳಲ್ಲಿ ನೀರನ್ನು ತಂದುಹಾಕುವ ಹೆಂಗಸಿನ ಸಂಬಳವನ್ನು ೭ ರೂಪಾಯಿ ಮಾಡಬೇಕೆಂದು ಸ್ಯಾಂಕ್ಷನ್ ಮಾಡಲಾಗಿದೆ.

ಮೆ|| ಶ್ರೀನಿವಾಸಾಚಾರ್ ಬಂಡೀಕೇರಿಯಲ್ಲಿ ಕೇದಾರದೇವಸ್ಥಾನವನ್ನು ಕಟ್ಟುವುದಕ್ಕೆ ನಿವೇಶನ ಕೊಡಿಸಿಕೊಡಬೇಕೆಂದು ಅರ್ಜಿ ಬರೆದುಕೊಂಡಿದ್ದರು. ಕೌನ್ಸಲರುಗಳು ಈ ವಿಚಾರವನ್ನು ಚರ್ಚೆಮಾಡಿ ಕಟ್ಟುವಕ್ಕೆ ತಕ್ಕಷ್ಟು ಹಣವನ್ನು ತೋರಿಸಿದ ಪಕ್ಷದಲ್ಲಿ ಸ್ಥಳವನ್ನು ಒದಗಿಸುವ ವಿಚಾರ ಗೊತ್ತುಮಾಡುವುದಾಗಿ ಅವರಿಗೆ ಉತ್ತರ ಕೊಡತಕ್ಕದ್ದೆಂದು ತೀರ್ಮಾನಮಾಡಿದರು.

ರಾಜಧಾನಿಯಲ್ಲಿ ಕಸಬುಗಳ ಮೇಲೆ ತೆರಿಗೆ ಹಾಕುವ ವಿಷಯವು ಹಿಂದೆಯೇ ಚರ್ಚೆಯಾಗಿ, ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ಯಾವರೀತಿ ಮಾಡುತ್ತಾರೋ ನೋಡಿಕೊಂಡು ತರುವಾಯ ಇಲ್ಲಿ ಇತ್ಯರ್ಥ ಮಾಡಬೇಕೆಂದು ಕೌನ್ಸಲರುಗಳು ಗೊತ್ತುಮಾಡಿದರಷ್ಟೆ. ಗವರ್ನಮೆಂಟಿನವರು ಬೆಂಗಳೂರಿಗೂ ಮೈಸೂರಿಗೂ ಸಂಬಂಧವೇನೂ ಇರುವುದಿಲ್ಲವೆಂತಲೂ, ಈ ತೆರಿಗೆ ಹಾಕುವ ವಿಚಾರದಲ್ಲಿ ಬೆಂಗಳೂರಿನ ಮುನಿಸಿಪಾಲಿಟಿಯವರನ್ನು ಕಾಯಬೇಕಾಗಿಲ್ಲವೆಂತಲೂ ಸೂಚಿಸಿಕೊಟ್ಟರು. ಕೌನ್ಸಲರುಗಳು ಒಂದು ಸಬ್ ಕಮಿಟಿಯನ್ನು ಮಾಡಿ ಅದಕ್ಕೆ ವೈಸ್ ಪ್ರಸಿಡೆಂಟರೂ, ಮೆ|| ಅನಂತರಾಮಯ್ಯನವರೂ, ಮೆ|| ನಾರಾಯಣಪ್ಪನವರೂ ಮೆಂಬರಾಗಿದ್ದುಕೊಂಡು, ಈ ಕಸಬಿನ ತೆರಿಗೆ ವಿಷಯದಲ್ಲಿ ಪೂರ್ತಿಯಾದ ರಿಪೋರ್ಟ್ ಕಳುಹಿಸತಕ್ಕದ್ದೆಂದು ಗೊತ್ತುಮಾಡಿದರು.

ಗವರ್ನಮೆಂಟಿನವರು ಪ್ಲೇಗ್ ಉಪದ್ರವನ್ನು ಅಡಗಿಸುವುದಕ್ಕೆ ಈ ವರುಷ ೨೦ ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿ, ಈ ಹಣವನ್ನು ಸಂಸ್ಥಾನದ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಫಂಡ್ ಬೋರ್ಡಿನವರೂ ಮ್ಯುನಿಸಿಪಲ್ ಬೋರ್ಡಿನವರೂ ಹಂಚಿಕೊಂಡು ಕೊಡಬೇಕೆಂದು ವಿಧಿಸಿದಾರೆ. ಮ್ಯುನಿಸಿಪಲ್ ಕೌನ್ಸಲರುಗಳು ಈ ಬಾಬಿನ ಖರ್ಚಿಗೆ ಮ್ಯುನಿಸಿಪಾಲಿಟಿಯಿಂದಲೂ ಕೆಲವು ಹಣವನ್ನು ಕೊಡಬಹುದೆಂದು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ.

ರಾಜಧಾನಿಯಲ್ಲಿ ಇಟ್ಟಿರುವ ದನಗಳ ರೋಗಚಿಕಿತ್ಸೆಯ ಆಸ್ಪತ್ರೆಯ ಖರ್ಚಿಗೆ ಮ್ಯುನಿಸಿಪಾಲಿಟಿಯವರು ೧೦೦ ರೂಪಾಯಿ ವರುಷಾಶನವನ್ನು ಕೊಡುವುದಾಗಿ ಕೌನ್ಸಲರುಗಳು ಒಪ್ಪಿಕೊಂಡಿರುತ್ತಾರೆ.

ಬೆಳಗೊಳದ ಬಳಿ ನಾಲೆಯಿಂದ ಯಂತ್ರಗಳ ಮೂಲಕ ನೀರು ಎತ್ತಿ ರಾಜಧಾನಿಗೆ ನಲ್ಲಿಗಳ ಮೂಲಕ ಕಳುಹಿಸಿ ಸರಬರಾಜು ಮಾಡುತ್ತಿದಾರಷ್ಟೆ. ಈ ಸ್ಥಳದಲ್ಲಿ ವಿದ್ಯುಚ್ಛಕ್ತಿಯ ಯಂತ್ರಗಳನ್ನಿಟ್ಟು ನೀರು ಎತ್ತುವ ಏರ್ಪಾಡುಮಾಡಿದಾಗ್ಯೂ ಆ ನಾಲೆಯಲ್ಲಿ ನೀರನ್ನು ಎತ್ತುವದರಿಂದ ಬೇಸಿಗೆಯಲ್ಲಿ ತಕ್ಕಷ್ಟು ನೀರು ರಾಜಧಾನಿಗೆ ಒದಗುವಹಿಲ್ಲವೆಂತಲೂ, ಪೈರಿಗೆ ಪಮಿರ್ ಹೋಗುವಾಗ ನೀರು ಸಾಲದೆ ಕಷ್ಟನಷ್ಟಗಳುಂಟಾಗುವವೆಂತಲೂ, ಅದಕ್ಕೆ ಪ್ರತಿಯಾಗಿ ಕಾವೇರೀ ನದಿ ಹುಂಡಲ್ ಯಂತ್ರಗಳನ್ನಿಟ್ಟು ವಿದ್ಯುಚ್ಛಕ್ತಿಯಿಂದ ನೀರು ಎತ್ತಿ ಪಟ್ಟಣಕ್ಕೆ ಸರಬರಾಜು ಮಾಡಿಸುವಂತೆ ಸರ್ಕಾರದವರಿಗೆ ಮೊದಲೇ ಅರಿಕೆಮಾಡಬೇಕೆಂದು ಮೆ|| ವೆಂಕಟಕೃಷ್ಣಯ್ಯನವರೂ ಮೆ|| ಎಂ. ಅಣ್ಣಯ್ಯಪಂಡಿತರೂ ಸೂಚಿಸಿದರು. ಈ ವಿಚಾರವನ್ನು ಸ್ಥಿತರ ಅಭಿಪ್ರಾಯವನ್ನು ಕುರಿತು ಕೂಡಲೇ ಗವರ್ನಮೆಂಟಿಗೆ ರಿಪೋರ್ಟ್ ಕಳುಹಿಸುತ್ತೇವೆಂದು ಪ್ರಸಿಡೆಂಟರು ಅಪ್ಪಣೆಕೊಡಿಸಿದರು.

ಗತಿಸಿದ ಮೆ|| ಸುಬ್ಬಕೃಷ್ಣರಾಯರ ಬಾಬಿತು ಕಾಲೇಜ್ ರಸ್ತೆಯಲ್ಲಿದ್ದ ಭೂಮಿಯನ್ನು ಮುಚ್ಚಿಸಿದ ವಿಚಾರದಲ್ಲಿ ಮ್ಯುನಿಸಿಪಾಲಿಟಿಯಿಂದ ಕಂಪೆನ್ಸೇಷನ್ ಹಣವನ್ನು ಕೊಡತಕ್ಕ ಭಾಗದಲ್ಲಿ ಚರ್ಚೆ ನಡಿಸಲು ಅವರ ವಾರಸುದಾರರ್ಯಾರೂ ಬಂದು ಕೇಳಲಿಲ್ಲವಾದ್ದರಿಂದ ಅದುವರೆಗೆ ಈ ವಿಷಯವನ್ನು ಪರ್ಯಾಲೋಚಿಸಬೇಕಾದದ್ದಿಲ್ಲವೆಂದು ಕೌನ್ಸಲರುಗಳು ತೀರ್ಮಾನಮಾಡಿದರು.

ಮ್ಯುನಿಸಿಪಲ್ ಇಲಾಖೆಯ ನೌಕರಿಯಲ್ಲಿ ಸೇರಿಕೊಂಡು ಆರು ರೂಪಾಯಿನೊಳಗೆ ಸಂಬಳ ಪಡೆಯುತ್ತಿರುವ ಜವಾನರೇ ಮೊದಲಾದವರಿಗೆಲ್ಲಾ ಈಗ ದಿನಸಿಗಳ ಧಾರಣೆ ಪ್ರಿಯವಾಗಿರೋಣದರಿಂದ ತಲಾ ೧ ರೂಪಾಯಿನಂತೆ ಆರು ತಿಂಗಳ ವರೆಗೆ ರಸುಂ ಜಾಸ್ತಿಯಾಗಿ ಕೊಡತಕ್ಕದೆಂದು ಮ್ಯುನಿಸಿಪಲ್ ಕೌನ್ಸಲರುಗಳು ಒಪ್ಪಿಸ್ಯಾಂಕ್ಷನ್ ಮಾಡಿದಾರೆ.

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ತಲೆಹಾಕಿದಂತೆ ಉಸ್ತುವಾರಿ ಮಾಡುವುದಕ್ಕೆ ಪ್ಲೇಗ್ ಇರತಕ್ಕ ಸುತ್ತುಮುತ್ತ ಗ್ರಾಮ ಊರುಗಳಿಂದ ಕಾಯಿಲೆಯವರನ್ನು ಹಿಡಿದು ಪ್ರತ್ಯೇಕವಾಗಿಡುವುದಕ್ಕೂ ತಮಗೆ ಅಧಿಕಾರಕೊಡಬೇಕೆಂದು ಹೆಲ್ತ್ ಆಫೀಸರವರು ಕೇಳಿದರು. ಕೌನ್ಸಲರುಗಳು ಸದ್ಯದಲ್ಲಿ ಅಂಥಾ ನಿರ್ಬಂಧವುಳ್ಳ ಅಧಿಕಾರಗಳನ್ನು ಕೊಡಲಾಗದೆಂದು ತೀರ್ಮಾನಮಾಡಿದರು.

ದಾಯಿಖಾನೆ ನಡಸುವುದಕ್ಕೆ ಸರ್ಕಾರದವರು ಚಾಮರಾಜ ಮೊಹಲ್ಲೆ ಮತ್ತು ನಜರಬಾದು ಮೊಹಲ್ಲೆಗಳಲ್ಲಿ ಪ್ರಜೆಗಳಿಂದ ತಿಂಗಳಿಗೆ ಇಷ್ಟೆಂದು ತೆರಿಗೆಯನ್ನು ವಸೂಲ್ಮಾಡಬೇಕೆಂದು ಹುಕುಂ ಮಾಡಿದ್ದರು. ಅದರಂತೆ ಹೆಲ್ತ್ ಆಫೀಸರು ಅದನ್ನು ಜಾರಿಗೆ ತಂದು ಕೆಲಸಮಾಡಿಸುತ್ತಾ ಇದ್ದಾರೆ. ಆದರೆ ಆ ತೆರಿಗೆಯ ವಸೂಲಾತಿಯನ್ನು ಮ್ಯುನಿಸಿಪಲ್ ಮುಖಾಂತರ ವಸೂಲಾತಿಯ ಮುತ್ಸದ್ದೀರ ಮೇಲೆ ಹಾಕಬೇಕೆಂತಲೂ, ತಮ್ಮ ಇಲಾಖೆಯ ಕಡೆಯಿಂದ ಆಗಲಾರದೆಂತಲೂ, ಒಂದು ವೇಳೆ ಆ ಮುತ್ಸದ್ದೀರುಗಳನ್ನು ಕೊಟ್ಟಂದಿಗೆ ಕಂದಾಯವನ್ನು ತಾವೇ ವಸೂಲ್ಮಾಡಿಸುತ್ತೇವೆಂತಲೂ ಹೆಲ್ತ್ ಆಫೀಸರು ಬರೆದುಕೊಂಡಿದ್ದರು. ಕೌನ್ಸಲರುಗಳು ಕಂದಾಯದ ವಸೂಲಾತಿಯನ್ನು ಹೆಲ್ತ್ ಆಫೀಸರಿಗೆ ವಹಿಸಬೇಕಾದ್ದಿಲ್ಲವೆಂತಲೂ, ದಾಯಿಖಾನೆ ತೆರಿಗೆಯನ್ನು ಮಾತ್ರ ಅವರು ತಮ್ಮ ಇಲಾಖೆಯ ಜವಾನರಿಂದಲೂ ಒಬ್ಬರಿಗಳಿಂದಲೂ ವಸೂಲ್ಮಾಡಿಸಬೇಕೆಂತಲೂ, ಅದಕ್ಕಾಗಿ ಪ್ರತ್ಯೇಕವಾದ ಶಿಬ್ಬಂದಿಯು ಅಗತ್ಯವಿಲ್ಲವೆಂತಲೂ ತೀರ್ಮಾನಮಾಡಿದರು.

ಕಡೆಯಲ್ಲಿ ಮೆ|| ಎಂ ಅಣ್ಣಯ್ಯ ಪಂಡಿತರು ಕೌನ್ಸಲರುಗಳ ಪರವಾಗಿ ಪ್ರಸಿಡೆಂಟರನ್ನು ಕುರಿತು ಹೊಸ ವೈಸ್‌ಪ್ರಸಿಡೆಂಟರ ವಿಚಾರವನ್ನು ಎತ್ತಿ—ಹಾಗೆ ಹೊಸ ವೈಸ್ ಪ್ರಸಿಡೆಂಟರನ್ನು ಕಳುಹಿಸಿಕೊಟ್ಟ ವಿಷಯದಲ್ಲಿ ನಾವೆಲ್ಲಾ ತುಂಬಾ ಸಂತೋಷಪಟ್ಟು ತಮ್ಮನ್ನು ವಂದಿಸುತ್ತೇವೆ. ಇವರು ಚಿಕ್ಕ ವಯಸ್ಸಿನವರಾದರೂ ಬಹಳ ಸಂಪನ್ನರು, ವಿದ್ಯಾವಂತರು. ಬೆಂಗಳೂರಿನಲ್ಲಿ ಎರಡು ವರುಷಕಾಲ ಮ್ಯುನಿಸಿಪಲ್ ವೈಸ್ ಪ್ರಸಿಡೆಂಟಾಗಿದ್ದು ಅಲ್ಲಿನ ಪ್ರಜೆಗಳ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡಿದಾರೆ. ಮ್ಯುನಿಸಿಪಲ್ ಕಾರ್ಯಗಳ ವಿಷಯದಲ್ಲಿ ಅವರಿಗೆ ವಿಶೇಷ ಅನುಭವವೂ ಉಂಟಾಗಿರುವುದು. ಇಂಥವರನ್ನು ರಾಜಧಾನಿಗೆ ಕಳುಹಿಸಿಕೊಟ್ಟ ವಿಷಯದಲ್ಲಿ ಪ್ರಜೆಗಳೆಲ್ಲಾ ತುಂಬಾ ಕೃತಜ್ಞರಾಗಿರುತ್ತಾರೆ ಎಂಬುದಾಗಿ ಹೇಳಿ, ಆ ದಿನ ಮೀಟಿಂಗನ್ನು ಮುಕ್ತಾಯ ಮಾಡಿದರು.

ವಿದೇಶ ವರ್ತಮಾನಗಳು.

ಮಿಸ್ ಲಿಲಿ ಸ್ಮಿತ್ ಎಂಬ ೧೯ ವರುಷದ ಇಂಗ್ಲಿಷ್ ಹುಡುಗಿಯು ಡೋವರ್ ಪಟ್ಟಣದಲ್ಲಿ ಈಜುಬಿದ್ದು ರಾಮ್ಸ್‌ಗೇಟ್ ವರೆಗೆ ಏಳು ಗಂಟೆ ಕಾಲತ್ತಿನಲ್ಲಿ ೨೦ ಮೈಲಿ ದೂರ ಈಜಿಕೊಂಡು ಹೋದಳು.

***

ಲಾಬ್ರಾಡರ್ ಸಮುದ್ರ ತೀರದಲ್ಲಿ ಕಳೆದ ವಾರ ಭಯಂಕರವಾದ ಸುಂಟರಗಾಳಿ ಎದ್ದು, ಓರ್ಕ್ ಎಂಬ ರೇವಿನಲ್ಲಿದ್ದ ೨೩ ಹಡಗುಗಳನ್ನೂ ಪಡವುಗಳನ್ನೂ ಹಾಳುಮಾಡಿತು. ಮೂವರು ಮಂದಿ ಪ್ರಾಣ ಕಳೆದುಕೊಂಡರು.

***

ಇಂಗ್ಲಿಷ್ ವರ್ತಕರಿಗೆ ಸೇರಿದ ತಸರ ಎಂಬ ಹಡಗು ಸಿಂಗಪೂರಕ್ಕೆ ಬರುತ್ತಿದ್ದಾಗ ಅಕಸ್ಮಾತ್ತಾಗಿ ಮುಳುಗಿಹೋಯಿತು. ಅದರಲ್ಲಿ ಪ್ರಯಾಣ ಮಾಡುತ್ತಿದ್ದವರ ಪೈಕಿ ೫೧ ಜನರು ಸಮುದ್ರದ ಪಾಲಾದರೆಂದು ತಂತೀ ವರ್ತಮಾನ ಬಂದಿದೆ.

***

ಹಾಂಕಾಂಗ್ ಪಟ್ಟಣದ ಸಮುದ್ರ ತೀರದಲ್ಲಿ ಸುಂಟರ ಗಾಳಿಯು ಹುಟ್ಟಿ, ಒಂದು ಬಾರಿ ಬಹಳ ನಾಶವಾಯಿತು. ಅದರಲ್ಲಿದ್ದ ೨೫೦ ಜನರು ನೀರಿನ ಪಾಲಾದರು. ಸರ್ಕಾರಿ ಕಟ್ಟಡಗಳು ಮುರಿದು ಬಿದ್ದು, ಒಂದೂವರೆ ಲಕ್ಷ ರೂಪಾಯಿ ನಷ್ಟವಾಯಿತು.

***

ಪೋರ್ಟ್ ಆಫ್ ಲಾ ಪ್ರೊಟೆಕ್ಟೊರೇಟ್ ಎಂಬ ಇಂಗ್ಲಿಷ್ ಸ್ವಸ್ಥಾನದಲ್ಲಿ ಅಲ್ಲಿನ ಸರ್ಕಾರ ಮಂತ್ರಾಲೋಚನಾ ಸಭೆಗೆ ಹಿಂದೂಸ್ಥಾನದ ಒಬ್ಬ ದೊಡ್ಡಮನುಷ್ಯನನ್ನು ಮೆಂಬರಾಗಿ ನೇಮಕಮಾಡಬೇಕೆಂದು ಚಕ್ರವರ್ತಿ ಸಾರ್ವಭೌಮರವರು ಆಜ್ಞೆ ದಯಪಾಲಿಸಿರುತ್ತಾರೆ.

***

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಜಾರ್ಜಿಯಾ ಮತ್ತು ಕೆರೋಲಿನಾ ಡಿಸ್ಟ್ರಿಕ್ಟುಗಳಲ್ಲಿ ಪ್ರವಾಹಗಳ ದೆಸೆಯಿಂದ ಇಪ್ಪತ್ತಾರು ಜನರು ಮೃತಪಟ್ಟರು, ೩೦ ಲಕ್ಷ ರೂಪಾಯಿನ ಆಸ್ತಿಪಾಸ್ತಿಗಳು ನಷ್ಟವಾದ

ಫ್. ನ್ಯೂವೆಸ್ಟಿ [illegible] ಪಟ್ಟಣದಲ್ಲಿ ಅಪಾರ ಮಳೆ ಸುರಿದು ಇದಿನೈದು ಜನರು ಸತ್ತುಹೋದದ್ದಲ್ಲದೆ ಅನೇಕ ಮನೆಮಾರುಗಳು ಹಾಳಾದವು

***

ಸಿಲಾಯುತಿಗೆ ಸೇರಿದ ಲಿನಾರ್ಥರ್ ಪಟ್ಟಣದಲ್ಲಿ ಮಿ॥ ಹೆರಿ ವೆಬ್ ಎಂಬಾತನು ೫೦ ಸಾವಿರ ರೂಪಾಯಿಗಳನ್ನು, ಮಿಸೆಸ್ ಜಾರ್ಜ್ ವಿಕ್ಸ್ ಎಂಬಾಕೆಯು ೧೫೪ ಸಾವಿರ ರೂಪಾಯಿಗಳನ್ನೂ ಕೊಟ್ಟು, ಅಲ್ಲಿನ ನೇತ್ರವೈದ್ಯದ ಆಸ್ಪತ್ರೆಯನ್ನು [illegible] ಮಾಡಬೇಕೆಂದೂ, ಕಣ್ಣುನೋಯಿಸುವವರಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದೂ ತಿಳಿಸಿದಾರೆ

***

ಜರ್ಮನಿ ರಾಜ್ಯದ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಫ್ರಾನ್ಸಿಸ್ ವಾರ್ಟನ್‌ಸ್ಲೀಬೆರ್ ಎಂಬ ಐಶ್ವರ್ಯವತಿಯು ಸುಮಾರು ಒಂದೂವರೆ ಲಕ್ಷ ರೂಪಾಯಿ ಬೆಲೆ ಬಾಳುವ ಒಂದು ಕಂಠೀ ಸರವು ಕಳುವಾಗಿ ಒಂದು ವರುಷದಿಂದ ಪತ್ತೆಯಿಲ್ಲದೆ ಇದ್ದುದು ಈಗ ಸಿಕ್ಕಿರುವುದಾಗಿಯೂ, ಆಕೆಯ [illegible] ಹಿಡಿದು ತನಿಖೆ ಮಾಡುತ್ತಿದಾರೆಂತಲೂ ತಿಳಿದು ಬಂದಿದೆ

***

ಇಟಲಿ ರಾಜ್ಯದ ಸೈನ್ಯದ ಇಲಾಖೆಯಲ್ಲಿ ಉದ್ಯೋಗದಾರನಾಗಿರುವ ಕ್ಯಾಪ್ಟನ್ [illegible] ಎಂಬಾತನು [illegible] ಬಡಿಯುವ ಅಲೆಗಳಿಗೆ ಒಂದು ವಿಧವಾದ ನವೀನ ಯಂತ್ರವನ್ನು ಇಟ್ಟು, ಆ ಅಲೆಗಳು ಬಡಿಯುವ ರಭಸದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಬಲ್ಲೆನೆಂತಲೂ, ಆ ವಿದ್ಯುಚ್ಛಕ್ತಿಯಿಂದ [illegible] ಎಂಬ ಪಟ್ಟಣಕ್ಕೆ ರಾತ್ರಿ ಕತ್ತಲೆ ದೀಪಗಳನ್ನು ಹಚ್ಚುತ್ತೇನೆಂತಲೂ ತಿಳಿಸಿರುತ್ತಾನೆ

***

ಕಳೆದ ಜುಲೈ ತಿಂಗಳಲ್ಲಿ ಟ್ರಾನ್ಸ್‌ವಾಲ್ ಚಿನ್ನದ ಗಣಿಗಳಲ್ಲಿ [illegible] ಸಾವಿರ [illegible] ತೂಕದಷ್ಟು ಚಿನ್ನವನ್ನು ಗಣಿಗಳಲ್ಲಿ ತೆಗೆದಿರುತ್ತಾರೆ. ಅದಕ್ಕೆ ಇಷ್ಟು ಹೆಚ್ಚು ಚಿನ್ನವನ್ನು ಇದುವರೆಗೆ ಯಾವ ತಿಂಗಳಲ್ಲೂ ಉತ್ಪತ್ತಿ ಮಾಡಿದ್ದಿಲ್ಲ. ಆ ಗಣಿಗಳಲ್ಲಿ ಕೆಲಸ ಮಾಡುವುದಕ್ಕೆ [illegible] ಸಾವಿರ ಜನ ಚೀನಾಯವರನ್ನು [illegible] ಸಾವಿರ ಮಂದಿ ಸ್ಥಳೀಕರನ್ನು ನೇಮಕ ಮಾಡಿಕೊಂಡಿದ್ದರು.

***

ಎಂಟು ಜನ ಜರ್ಮನ್ ಪ್ರಜೆಗಳನ್ನು ರಷ್ಯಾ ರಾಜ್ಯದವರು ದಸ್ತಗಿರಿ ಮಾಡಿ [illegible] ಕಟ್ಟಿ ಕರೆದುಕೊಂಡು ಹೋಗುತ್ತಿದ್ದಾಗ ಆ ಜರ್ಮನರು ಸೈನಿಕರ ಮೇಲೆ ಬಿದ್ದು ಕೊಂದು ತಪ್ಪಿಸಿಕೊಂಡು [illegible] ಪ್ರಯತ್ನಪಟ್ಟರು. ಅವರನ್ನು [illegible] ಕೋರ್ಟಿನಲ್ಲಿ ವಿಚಾರಣೆ ಮಾಡಿ, ಅವರಿಗೆಲ್ಲಾ ಮರಣ ದಂಡನೆಯನ್ನು ವಿಧಿಸಿರುವುದಾಗಿ ತೀರ್ಮಾನವಾಯಿತು. ಇದನ್ನು ರಷ್ಯಾ ದೇಶದ ಅಪೀಲ್ ಕೋರ್ಟಿನವರು ಖಾಯಂ ಮಾಡಿದಾರೆ

***

ಟರ್ಕಿ ರಾಜ್ಯದಲ್ಲಿ ಸುಲ್ತಾನರವರು ಅನೇಕ ವರುಷಗಳಿಂದ ತಮ್ಮ [illegible] ರಾಜನಗರದವರನ್ನು [illegible] ಈಗ ರಾಜ್ಯಭಾರದ [illegible] ಪ್ರಜೆಗಳ [illegible] ಬಿಡುಗಡೆ [illegible] ಆ [illegible] ಅವರ [illegible]

***

ಟರ್ಕಿ ರಾಜ್ಯಕ್ಕೆ ಸೇರಿದ ಸ್ಟಾಂಬೋಲ್ ಪಟ್ಟಣದಲ್ಲಿ ಕಳೆದ ವಾರ ಬೆಂಕಿಬಿದ್ದು ಎರಡು ಸಾವಿರ ಮನೆಗಳು ಸಂಪೂರ್ಣವಾಗಿ ಸುಟ್ಟುಹೋದವು ಆ ಮನೆಗಳೆಲ್ಲಾ ಮರದಲ್ಲಿ ಮಾಡಿದ್ದವುಗಳಾಗಿದ್ದ [illegible] ಬೆಂಕಿಯನ್ನಾರಿಸುವುದಕ್ಕೆ ಪ್ರಯತ್ನಪಡುತ್ತಿದ್ದವರು ಉರಿಯಲ್ಲಿ ಸಿಕ್ಕಿ ಸತ್ತರು. ಎಳು ಸಾವಿರ ಪ್ರಜೆಗಳಿಗಿಂತಲೂ ಹೆಚ್ಚಾಗಿ ನಿವೇಶನಗಳನ್ನು ಕಳೆದುಕೊಂಡು ಜೀವನವಿಲ್ಲದೆ ಅಲೆಯುತ್ತಿದ್ದಾರೆ ಟರ್ಕಿ ಸುಲ್ತಾನರವರು ಆ ಪ್ರಜೆಗಳ ಕಷ್ಟನಿವಾರಣೆಗೆ [illegible],೦೦೦ ರೂಪಾಯಿಗಳನ್ನು ಕಳುಹಿಸಿದರು.

***

ಈಜಿಪ್ಟ್ (ಮಿಸ್ರ) ರಾಜ್ಯದಲ್ಲಿರುವ ಪಿರಮಿಡ್ ಎಂಬ ಪುರಾತನ ಕಾಲದ ಅಗಾಧ ಕಟ್ಟಡಗಳನ್ನು ಕಟ್ಟಿ [illegible] ವರುಷಗಳಾದವೆಂದು ಇದುವರೆಗೆ ತಿಳಿದಿತ್ತು. ಫಾದರ್ [illegible] ಎಂಬೊಬ್ಬ ಪ್ರಾಚೀನ ವಿದ್ಯಾನ್ವೇಷಕನು ಈಚೆಗೆ ಅನೇಕ ಪರಿಶೋಧನೆಗಳನ್ನು ಮಾಡುತ್ತಾ ಬಂದದ್ದರಲ್ಲಿ ಒಂದು ಶಾಸನವು ಆತನಿಗೆ ದೊರಕಿರುತ್ತೆಂತಲೂ, ಅದರಲ್ಲಿ ಆ ಕಟ್ಟಡಗಳು ಸಿದ್ಧವಾದ ತಾರೀಖು ಮುಂತಾದ ವಿವರಗಳು ಪ್ರಕಟವಾಗುವವೆಂತಲೂ, ಇದರಿಂದ ಅವನ್ನು ಕಟ್ಟಿ ಇಲ್ಲಿಗೆ [illegible] ವರುಷಗಳಾಗಿರುವವೆಂದು ಗೊತ್ತಾಗುತ್ತದೆಂತಲೂ ತಿಳಿದುಬಂದಿದೆ

***

ಮಹಮದೀಯರ ಯಾತ್ರಾಸ್ಥಳವಾದ ಮೆಕ್ಕಾ, ಮೆದೀನಾ ಪಟ್ಟಣಗಳಿಗೆ ರೈಲ್ ರಸ್ತೆಯನ್ನು ಹಾಕುತ್ತಿದ್ದದ್ದು ಪೂರೈಸಿರುತ್ತದೆ ಟರ್ಕಿ ಸುಲ್ತಾನರವರು ಈ ರಸ್ತೆಯನ್ನು ಪ್ರತಿಷ್ಠೆ ಮಾಡಿ, ರೈಲ್ ಗಾಡಿಗಳನ್ನು ಓಡಿಸಲಾರಂಭಿಸುವುದಕ್ಕೆ ತಮ್ಮ ರಾಜ್ಯದ ಕೆಲವು ದೊಡ್ಡ ಮನುಷ್ಯರನ್ನು ತಮಗೆ ಪ್ರತಿನಿಧಿಗಳಾಗಿ ಮೆದಿನಾ ಪಟ್ಟಣಕ್ಕೆ ಕಳುಹಿಸಿದಾರೆ ಈ ತಿಂಗಳ ೧ ನೇ ತಾರೀಖು ಮಂಗಳವಾರ ಈ ರೈಲ್ ರಸ್ತೆಯು ಪ್ರಾರಂಭವಾಗಿರುತ್ತದೆ ಅದನ್ನು ನೋಡುವುದಕ್ಕೆ ಈಜಿಪ್ಟ್ ಮೊದಲಾದ ಅನೇಕ ದೇಶಗಳಿಂದ ಮುಸಲ್ಮಾನ್ ದೊಡ್ಡ ಮನುಷ್ಯರು ಅಲ್ಲಿಗೆ ಹೋಗಿದ್ದರೆಂದು ತಂತೀ ವರ್ತಮಾನ ಬಂದಿದೆ

ಈಜಿಪ್ಟ್ ರಾಜ್ಯದಲ್ಲಿ "ಲೀವಾ" ಎಂಬ ಪತ್ರಿಕೆಯ ಎಡಿಟರಾದ ಅಬ್ದುಲ್ ಅಜೀಜ್ ಷಾವಿಷ್ ಎಂಬಾತನು ಅಲ್ಲಿನ ಮಂತ್ರಿಗಳನ್ನು ದೂಷಣೆ ಮಾಡಿ ಅಪವಾದಗಳನ್ನು ಹೊರಿಸಿ, ಜಾತಿಜಾತಿಗಳ [illegible] ವೈಷಮ್ಯ ದ್ವೇಷಾಸೂಯೆಗಳನ್ನು ಉಂಟುಮಾಡುವಂಥಾ ಬರವಣಿಗೆಯನ್ನು ಆ ಪತ್ರಿಕೆಯಲ್ಲಿ ಬರೆದನೆಂತಲೂ, ಮಿ॥ [illegible] ಎಂಬ [illegible] ಇಂಗ್ಲೀಷನನ್ನು ಕೊಲೆ ಮಾಡಿದುದಕ್ಕಾಗಿ ಇಂಗ್ಲಿಷರು ಎಷ್ಟೋ ಮಂದಿ [illegible] ಜನರನ್ನು ಕೊಲ್ಲಿಸಿರುತ್ತಾರೆಂತಲೂ ಅಪವಾದಕರವಾದ ಬಾತ್ಮಿಯನ್ನು ಪ್ರಕಟಿಸಿದ್ದಕ್ಕಾಗಿಯೂ ಸರ್ಕಾರದವರು ಆತನನ್ನು ದಸ್ತಗಿರಿ ಮಾಡಿ, ವಿಚಾರಣೆಯಿಂದ ಆತನಿಗೆ ೩೦೦ ರೂಪಾಯಿ ಜುಲ್ಮಾನೆ ವಿಧಿಸಿದರು.

***

ಲಂಡನ್ ಪಟ್ಟಣದ ಫಿಲಿಮೋರ್ ಗಾರ್ಡನ್ ಎಂಬ ಸ್ಥಳದಲ್ಲಿದ್ದು ಕಾಲವಾದ ಮಿಸೆಸ್ ಎಲಿಜಾ [illegible] ಎಂಬಾಕೆಯು ತನ್ನ ಆಸ್ತಿಯಿಂದ ೩ ಲಕ್ಷದ [illegible] ಸಾವಿರ ರೂಪಾಯಿಗಳನ್ನು, [illegible] ಎಂಬ ಪಟ್ಟಣದ ಮಿಸೆಸ್ ಮೇರಿ ಅರಾಬೆಲಾ ಕಾರ್ ಎಂಬಾಕೆಯು ತನ್ನಾಸ್ತಿಯಲ್ಲಿ ಒಂದೂವರೆ ಲಕ್ಷ ರೂಪಾಯಿಯನ್ನು, [illegible] ಎಂಬ ಊರಿನ [illegible] ಬ್ಲಾಂಡ್ ಎಂಬಾಕೆಯು ಮೂರು ಲಕ್ಷ ರೂಪಾಯಿಗಳನ್ನು, ಕ್ಯಾಂಟರ್ಬರಿ ಪಟ್ಟಣದ ಮಿಸೆಸ್ ಕ್ಯಾಥರೀನ್ [illegible] ಎಂಬಾಕೆಯು [illegible] ಸಾವಿರ ರೂಪಾಯಿಗಳನ್ನು, [illegible] ನಗರದ ಮಿಸೆಸ್ ಜೋನ್ [illegible] ಎಂಬಾಕೆಯು [illegible] ಸಾವಿರ ರೂಪಾಯಿಗಳನ್ನು, ಮಿ॥ [illegible] ಎಂಬಾತನು [illegible] ಸಾವಿರ ರೂಪಾಯಿಗಳನ್ನು, ಡಾ॥ ಎಚ್ ಜೆ ಹಂಟರ್ ಎಂಬಾತನು ಸುಮಾರು [illegible] ಲಕ್ಷ ರೂಪಾಯಿಗಳನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣ ಶಾಸನಗಳನ್ನು ಬರೆದಿರುತ್ತಾರೆ

***

ಟರ್ಕಿ ಸುಲ್ತಾನರು ತಮ್ಮ ರಾಜ್ಯಭಾರದಲ್ಲಿ ಪ್ರಜಾಪ್ರತಿನಿಧಿಸಭೆಯನ್ನು ಸ್ಥಾಪನೆ ಮಾಡಿ ಆ ಸಭೆಯ [illegible] ರಾಜ್ಯಪಾಲನೆ ಮಾಡುವುದಾಗಿ ಅಪ್ಪಣೆ ಕೊಡಿಸಿದ್ದನ್ನು [illegible] ಪಟ್ಟಣದ ಪ್ರಜೆಗಳು [illegible] ಅನೇಕ ಸಂತೋಷೋತ್ಸವಗಳನ್ನು [illegible] ಬೀದಿಗಳನ್ನು, ಕಟ್ಟಡಗಳನ್ನು, ಗಾಡಿಗಳನ್ನು ನೇತ್ರಾನಂದಕರವಾಗಿ ಅಲಂಕಾರ ಮಾಡಿ [illegible] ಮೊದಲಾದವರೆಲ್ಲಾ [illegible] ಇದಲ್ಲದೆ [illegible] ಸಮಾಧಿ [illegible] ಪ್ರಜೆಗಳು ಒಂದಾಗಿ ಸೇರಿ, ತಮಗೆ ಸ್ವಾತಂತ್ರ್ಯ ದೊರಕಿದ್ದನ್ನು ಪ್ರಕಾಶಪಡಿಸುವಂಥಾ ಉಡುಪುಗಳನ್ನು ತೊಟ್ಟುಕೊಂಡು, [illegible] ಉತ್ಸವವನ್ನು ಮಾಡಿದರು. ರಾತ್ರಿ ದಿವ್ಯವಾದ ದೀಪೋತ್ಸವವನ್ನು ಮಾಡಿ ಸಂತೋಷಪಡುತ್ತಿದ್ದಾರೆ

***

ದಕ್ಷಿಣ ಆಫ್ರಿಕಕ್ಕೆ ಸೇರಿದ ನಟಾಲಿನಲ್ಲಿ [illegible] ಪ್ರಜೆಗಳಿಗೆ [illegible] ಹೋಗಬೇಕೆಂದು [illegible] ಆದರೆ ಆ ನಾಲ್ವರೂ [illegible] ಅವರನ್ನು [illegible] ಸರ್ಕಾರದವರು ಅವರನ್ನು [illegible] ಇಂಡಿಯನ್ [illegible] ಇಂಗ್ಲೆಂಡ್ [illegible] ಸಲಹೆ [illegible] ಜನರಲ್ [illegible]

ತಾಲ್ಲೂಕು ವರ್ತಮಾನಗಳು.

ಚಿತ್ರದುರ್ಗ — ಈ ತಾಲ್ಲೂಕಿನಲ್ಲಿ ಕಳೆದ ೩ನೇ ತಾ ಖಾನೆಸುಮಾರು ಒಂದು ದೊಡ್ಡ ಕುಸ್ತಿ ಆಯಿತು. ಇದು ಪೈಲ್ವಾನ್ [illegible] ಸಾಹೇಬರ [illegible] ಪೈಲ್ವಾನರಿಗೂ ಮತ್ತು [illegible] ಅದ್ದಗನಿಗೂ ನಡೆಯಿತು. ಆದರೆ ಈ ತಾಲ್ಲೂಕಿನಲ್ಲಿ ಪದೇಪದೇ ಕುಸ್ತಿಗಳು ಆಗುತ್ತಲೇ ಇವೆ ಮತ್ತು ಈ ಊರಿನಲ್ಲಿ [illegible] ಗರಡಿಗಳು ಇವೆ ಇಲ್ಲಿ ಅನೇಕರು ಸಾಧಕವನ್ನು ಮಾಡುತ್ತಲಿದ್ದಾರೆ ಆದರೆ ಈ ಗರಡಿಗಳ ಪೈಕಿ ದೊಡ್ಡ ಗರಡಿ ಮತ್ತು [illegible] ಗರಡಿ ಇವೆರಡೇ ಪ್ರಸಿದ್ಧವಾದವುಗಳು ಈ ಗರಡಿಗಳ ಹುಡುಗರಿಗೂ ಮತ್ತು ಇತರ ಗರಡಿಗಳ ಹುಡುಗರಿಗೂ ವರ್ಷ ವರ್ಷ ಕುಸ್ತಿಗಳಾಗುತ್ತಲೇ ಇವೆ ಮತ್ತು ಬಲಿಷ್ಠರಾದವರು ಇಲ್ಲಿ ಬಂದು ಕುಸ್ತಿ ಮಾಡುತ್ತಲೂ ಇದ್ದಾರೆ ಆದರೆ ಇದು [illegible] ಹೇಳಿದಂಥಾ ಕುಸ್ತಿಯಂತೆ [illegible] ಆಗಿಲ್ಲ ಈ ಕುಸ್ತಿಯು ಈ ಊರ ಕಿಲ್ಲೆಯ ಮೇಲೆ ನಡಿಯಿತು. ಇದನ್ನು ೫೦೦ ರೂಪಾಯಿಗೆ ಕಂಟ್ರಾಕ್ಟ್ ತೆಗೆದುಕೊಂಡಿದ್ದರು. ಇದು ಟಿಕೆಟ್ ಕುಸ್ತಿ ಇದನ್ನು ನೋಡುವುದಕ್ಕೆ ಅಮಲ್ದಾರರು, ಪೋಲೀಸ್ ಸೂಪರಿಂಟೆಂಡೆಂಟರವರು, ಇನ್ನೂ ಅನೇಕ ಸರ್ಕಾರದ ಉದ್ಯೋಗಸ್ಥರು ಬಂದಿದ್ದರು. ಈ ಕುಸ್ತಿಯಲ್ಲಿ ಕಡೆಗೆ [illegible] ಪೈಲ್ವಾನನೇ ಗೆದ್ದನು ಗೆದ್ದ ಪೈಲ್ವಾನನು ಇನ್ನೂ ದೊಡ್ಡ ಕುಸ್ತಿಗಳನ್ನು ಮಾಡಿ ಗೆದ್ದು ಹೆಸರುಗೊಂಡಿದಾನೆ ಇವರು ಒಳ್ಳೇ ಬುದ್ಧಿವಂತರು ಖುರಾನನ್ನೆಲ್ಲವನ್ನೂ ಅರ್ಥದೊಡನೆ ತಿಳಿದುಕೊಂಡಿದಾರೆ ಮತ್ತು ಸಾಧ್ಯವಾದ ಮಟ್ಟಿಗೂ ಅದಕ್ಕೆ ಅನುಸಾರವಾಗಿ ನಡೆಯುತ್ತಲಿದ್ದಾರೆ — ಈ ತಾಲ್ಲೂಕಿನಲ್ಲಿ ಸದರಿ ಖಾನೆಸುಮಾರಿಗೆ ಸ್ವಲ್ಪ [illegible] ಧಾರಣೆವಾಸಿಗಳು ಬಹಳ [illegible]ಯಾಗಿವೆ

ತಿಪಟೂರು.—ಇಲ್ಲಿ ಮಳೆ ಇಲ್ಲ ಜನರು ನೀರಿಗಾಗಿ ತುಂಬಾ ತೊಂದರೆಪಡುತ್ತಿದಾರೆ — ಕಳೆದ ತಾ ೩ನೇ ಖಾನೆಸುಮಾರ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಸ್ವಾಮಿಗಳ ಸವಾರಿಯು ಹೊನ್ನವಳ್ಳಿಗೆ ದಯಮಾಡಿಸುವದಕ್ಕೆ ಮುಂಚಿತವಾಗಿಯೇ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರವರೂ ಅಮಲ್ದಾರರವರೂ ಪೋ॥ ಇನ್ಸ್‌ಪೆಕ್ಟರವರೂ ರಿಜರ್ವ್ ಪೋಲೀಸ್ ಮತ್ತು ತಾ॥ ಪೋ॥ ಸಹ ಹಾಜರಾಗಿದ್ದರು ಉತ್ಸವವು ಊರಿನ ಎಲ್ಲಾ ಬೀದಿಗಳಲ್ಲಿಯೂ ಬಹಳ ವಿಜೃಂಭಣೆಯಿಂದ ನಡಿಯಿತು ಶಿಷ್ಯವರ್ಗದವರು ಸುಮಾರು ೪೦೦ ಸಾವಿರದ ವರೆಗೂ ಸೇರಿದ್ದರು ಈ ಗ್ರಾಮದಲ್ಲಿ ಇಷ್ಟು ಜನರು ಸೇರಿದ್ದು ಇದೇ ಮೊದಲನೆ ದಫೆ ಎಂದು ಹೇಳುತ್ತಾರೆ ಅಲ್ಲಿ ಸಾಹುಕಾರ್ ಮೇ॥ ಬೈರಪ್ಪನವರು ಜನಸಮೂಹಕ್ಕಾಗಿ ಏರ್ಪಡಿಸಿದ್ದ ಎಲ್ಲಾ ಕಾರ್ಯಗಳೂ ಬಹು ತೃಪ್ತಿಕರವಾಗಿದ್ದವು ಅವರ ಸ್ವಂತ ಹಣದಿಂದ ಸುಮಾರು ಒಂದು ಸಾವಿರ ರೂಪಾಯಿ ವರೆಗೆ ಖರ್ಚಾಗಿರಬಹುದು ಈ ಕ್ಷಾಮ ಕಾಲದಲ್ಲಿ ಇಂಥಾ ಔದಾರ್ಯವನ್ನು ತೋರಿಸಿದ ಮೇ॥ ಬೈರಪ್ಪನವರನ್ನು ಎಲ್ಲರೂ ಕೊಂಡಾಡುವರು ತಿಪಟೂರಿಗೆ ಸ್ವಾಮಿಗಳ ಸವಾರಿಯು ಸೆಪ್ಟಂಬರ್ ತಾ ೧ನೇ ಮಂಗಳವಾರ ದಯಮಾಡಿಸುತ್ತಾರೆ ಇವರನ್ನು ಮರ್ಯಾದೆಗಳಿಂದ ಎದುರುಗೊಳ್ಳುವದಕ್ಕೆ ಇಲ್ಲಿ ತಕ್ಕ ಏರ್ಪಾಡು ಮಾಡಿದಾರೆ — ಪೇಟೆಯ ಚಪ್ಪರ ಮತ್ತು ಸಾಹುಕಾರ್ ಮೇ॥ ಮಲ್ಲೇಶಪ್ಪನವರ ಅಂಗಡಿ ಮುಂದಿನ ಚಪ್ಪರ ಇವೆರಡೂ ಸುಂದರವೆಂದು ಹಿಂದೆ ಪ್ರಕಟವಾಗಿದ್ದದ್ದು ನಿಜವಲ್ಲ ೫೦ ವರುಷದ ಗಂಗಮ್ಮನು ಖೂನಿಮಾಡಲ್ಪಟ್ಟದ್ದು ನಿಜ ಆದರೆ ಆಕೆಯನ್ನು ಕತ್ತರಿಸಿದಾಕೆಲ್ಲ ಗಂಟಲಿಗೆ [illegible] ಕೊಂದಿದ್ದರು, ಆಕೆ ಒಡವೆ ವಸ್ತುಗಳನ್ನೆಲ್ಲಾ ಕಳ್ಳರು ತೆಗೆದುಕೊಂಡು ಹೋಗಿಲ್ಲವೆಂದು ಕಾಣುತ್ತದೆ ಸರ್ಕಾರದವರು ಮನೆಯ ಒಳಗಿರುವ ಸಾಮಾನುಗಳನ್ನು [illegible] ಪಂಚಾಯತರ ಎದುರಿನಲ್ಲಿ ಆಕೆಯ ಮನೆಗೆ ಬೀಗಹಾಕಿ ಮೊಹರು ಮಾಡಿ ಬೀಗದಕೈಯನ್ನು [illegible] ವಶಕ್ಕೆ ಕೊಟ್ಟಿದಾರೆ ಇದರಿಂದ ಸಾಮಾನು ಸರಂಜಾಮುಗಳನ್ನೆಲ್ಲಾ ಕಳ್ಳರು ತೆಗೆದುಕೊಂಡು ಹೋಗಿಲ್ಲವೆಂದು ಕಾಣುತ್ತದೆ — ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರ್ ಮೇ॥ ಅಬ್ದುಲ್ ರಜಾಕ್ ಸಾಹೇಬರಿಗೆ ಇಲ್ಲಿಂದ ಹೊಸಕೋಟೆಗೆ ವರ್ಗವಾಗಿರುವಂತೆ ಕೇಳುತ್ತೇನೆ ಇಲ್ಲಿನ ಎಲ್ಲಾ ಜನಗಳು ತುಂಬಾ ವ್ಯಸನಪಡುತ್ತಾರೆ ಇವರು ತಮಗೆ ವಹಿಸಲ್ಪಟ್ಟ ಕೆಲಸವನ್ನು ಕ್ರಮವಾಗಿಯೂ ತುಂಬಾ [illegible] ಮಾಡಿದಾರೆ ಇನ್ನೂ ಕೆಲವು ಕಾಲ ಇವರನ್ನು ಇಲ್ಲಿಯೇ ಇಟ್ಟಿದ್ದರೆ ಜನಕ್ಕೆಲ್ಲಾ ತುಂಬಾ ಸಂತೋಷವಿತ್ತು

ಅರಸೀಕೆರೆ —ಮಳೆ ಇಲ್ಲದೆ ಪೈರುಗಳೆಲ್ಲಾ ಒಣಗಿ ಹೋಗುತ್ತಿವೆ ಕಳೆದ ಒಂದು ತಿಂಗಳಿಂದಲೂ ಈ ಪ್ರಾಂತ್ಯ [illegible] ಮಳೆ ಕಡಿಮೆ ಆಗಿರುವದರಿಂದ ಈ ವರ್ಷದ ಪೈರುಗಳೆಲ್ಲಾ ಸಂಪೂರ್ಣವಾಗಿ ಕೆಟ್ಟುಹೋಗಿವೆ ಆದ್ದರಿಂದ ದಿನಸಿ ಧಾರಣೆಗಳು ಬಹು ದುಬಾರಿಯಾಗಿ ಏರುತ್ತಿವೆ ಅಕ್ಕಿ ರೂಪಾಯಿಗೆ ೩ ಸೇರು ಮಾತ್ರ, ರಾಗಿ ೧೯ ಸೇರು ಸಿಕ್ಕುವದೇ ದುಸ್ತರವಾಗಿದೆ ಇಂಥ ಕಷ್ಟಕಾಲದಲ್ಲಿ [illegible] ತುಂಬಾ ಕಷ್ಟವೇ ಸರಿ ಸಂತೆಯಲ್ಲಿ [illegible] ಹಿಟ್ಟಿನ ಸೇರುಗಳ ಗಲಾಟೆಯು [illegible] ಅವಾಂತರ [illegible] ಇಲ್ಲಿಗೆ ೧೧ ಮೈಲು ದೂರವಾಗಿರುವ ಗೊಲ್ಲರ ದೊಡ್ಡಿಯಲ್ಲಿ ಕಳೆದ ಒಂದು ವಾರದಿಂದಲೂ ಪ್ಲೇಗ್ ಪ್ರಾರಂಭವಾಗಿ ಈ ವರೆಗೆ ೭ ಜನರು ಮೃತಪಟ್ಟರೆಂತಲೂ ಒಬ್ಬಿಬ್ಬರು ಮರಣಾವಸ್ಥೆಯಲ್ಲಿರುವರೆಂತಲೂ ತಿಳಿಯ ಬಂದಿದೆ ಪ್ಲೇಗ್ ರೋಗ ಈ ದೇಶಕ್ಕೆ ಬಂದ ಲಾಗಾಯ್ತು [illegible] ಕಾಲಿಡಲಿಲ್ಲವಂತೆ ಅರಸೀಕೆರೆ [illegible] ಆದರೆ ಈ ಸಮೀಪದ ಅಂಟುರೋಗದ ವಿಷಯ [illegible] ವ್ಯಾಪಾರಕ್ಕೆ ತುಂಬಾ ತೊಂದರೆಯಾಗುವದೆಂದು ಭಯಪಡುತ್ತಿದಾರೆ — ಇಲ್ಲಿಗೆ ಮಂಡ್ಯದಿಂದ ವರ್ಗವಾಗಿ ಬಂದರು ಮೇ॥ [illegible] ಸಾಹೇಬರು [illegible] ಆಫೀಸರಾಗಿ ನೇಮಕ ಮಾಡಲ್ಪಟ್ಟಿದಾರೆ — ಇಲ್ಲಿನ ತಾಲ್ಲೂಕು ಕಚೇರಿಗೆ ಅತ್ಯಂತ ಸಮೀಪದಲ್ಲಿ [illegible] ಮೇ॥ ವೆಂಕಟಸುಬ್ರಹ್ಮಣ್ಯನವರ ಜವಳಿ ಅಂಗಡಿಗೆ ರಾತ್ರಿ ಕಾಲದಲ್ಲಿ ಯಾರೋ [illegible] ತೆಗೆದು ಒಳಗೆ ಬಿದ್ದು ಕಳ್ಳತನ ಮಾಡುತ್ತಿದ್ದವರು ಪಲಾಯನವಾದರು — ಇಲ್ಲಿಂದ ತೀರ್ಥಹಳ್ಳಿಗೆ ವರ್ಗವಾಗಿದ್ದ ಸಬ್ ರಿಜಿಸ್ಟ್ರಾರ್ ಮೇ॥ ರಂಗೈಯ್ಯನಾಯುಡು ಇವರಿಗೆ ಪುನಃ ಇಲ್ಲೇ ಖಾಯಂ ಆದಂತೆ ಹುಟ್ಟಿರುವ [illegible] ವರ್ತಮಾನ ನಿಜವಾಗಿರಬೇಕಾದರೆ ಅವರಿಗೂ ಅವರ ಮಿತ್ರಮಂಡಲಿಯವರಿಗೂ ತುಂಬಾ ಸಂತೋಷವೇ ಸರಿ — ಈ ಊರಲ್ಲಿರುವ ಅಗಸರು ಚೆನ್ನಾಗಿ ಮಡಿಮಾಡದೇಲೂ ಒಳ್ಳೇ ನೀರು ಸಿಕ್ಕುವ ಸ್ಥಳಕ್ಕೆ ಹೋಗಿ ಕಷ್ಟಪಟ್ಟು ಚೆನ್ನಾಗಿ ಕೆಲಸಮಾಡದೇಲೂ ಇರುವದಲ್ಲದೆ ಅನೇಕಾನೇಕರು ಬಟ್ಟೆಗಳನ್ನು ಹಾಳುಮಾಡುತ್ತಿದಾರೆ ಆದರೂ ಇಲ್ಲಿನ ಅಗಸರಿಗೆ ತುಂಬಾ ಕೆಲಸವೂ ಬಹಳ ಸಂಪಾದನೆಯೂ ಆಗುವದರಿಂದ ತುಮಕೂರಿನಿಂದ ಕೆಲವು ನಂಬಿಗಸ್ಥರಾದ ಒಳ್ಳೆ ಕೆಲಸ ಮಾಡುವ ಅಗಸರು ಬಂದರೆ ಅವರ ಮೇಲ್ಪಂಕ್ತಿಯನ್ನು ಇಲ್ಲಿನ ಅಗಸರೂ ಅನುಸರಿಸಬಹುದು — [illegible] ಭೂಮಿಗಳ [illegible] ಬರಬರ ಬತ್ತಿಹೋಗುತ್ತಿದೆ ಕುಡಿಯುವ ನೀರಿನ ಕಷ್ಟ [illegible] ಗ್ರಾಮದ [illegible] ಇಲ್ಲಿಗೆ ಒಬ್ಬ ಸ್ಯಾನಿಟರಿ ಇನ್ಸ್‌ಪೆಕ್ಟರು ನೇಮಿಸಲ್ಪಟ್ಟಿರುವದರಿಂದ ಅಲ್ಲಲ್ಲಿ ತುಂಬಾ ಕೊಳೆಯಾಗಿ [illegible] ತುಂಬಿರುವ ಪ್ರದೇಶಗಳನ್ನು ಇವರೂ ಇತರ ಅಧಿಕಾರಿಗಳೂ ಮುಖ್ಯವಾಗಿ [illegible] ಮಾಡಿಸಬೇಕಾದರೆ ಪ್ಲೇಗ್, ಕಾಲರಾ ರೋಗಗಳಿಗೆ ಅವಕಾಶ ಕಡಿಮೆಯಾಗಬಹುದು.

ಮಂಡ್ಯ.—ಈಚೆಗೆ ಇಲ್ಲಿ ಮಳೆ ಎನ್ನುವದೇ ನಿಂತು ಹೋಗಿರುತ್ತದೆ. ಯಾವಾಗಲೂ ಸೂರ್ಯ ರಶ್ಮಿಯು ಇದ್ದೇ ಇರುತ್ತದೆ. ಮೋಡ ವಾಡುವದೇ ಅಪರೂಪ. ರೈತಾದಿಗಳು ತಮ್ಮ ಹೊಲವನ್ನು ಹಸನು ಮಾಡಿಕೊಂಡು ರಾಗಿ ಬಿತ್ತನೆ ಯಾವಾಗ ಮಾಡೋಣವೆಂದು ಆಕಾಶವನ್ನೇ ನೋಡುತ್ತಾ ಇದ್ದಾರೆ. ಧಾರಣೆವಾಸಿಗಳು ದಿನೇ ದಿನೇ ಹೆಚ್ಚುತ್ತಲಿವೆ. ಅಕ್ಕಿ ರೂಪಾಯಿಗೆ ೯॥ ಸೇರು, ರಾಗಿ, ೧೩ ಅಥವಾ ೧೪ ಸೇರು ಮಾರುತ್ತದೆ. ಬಡವರು ಜೀವನ ಮಾಡುವದು ಕಷ್ಟವಾಗಿದೆ.—ಕಳೆದ ಸೋಮವಾರ ಸಾಯಂಕಾಲ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಸವಾರಿಯು ಬನ್ನೂರ ರಸ್ತೆಯ ಮಾರ್ಗವಾಗಿ ಇಲ್ಲಿಗೆ ದಯಮಾಡಿಸಿತು. ಅವರು ಮಂಗಳವಾರ ಬೆಳಿಗ್ಗೆ ಇಲ್ಲಿನ ಅಮಲ್ದಾರರೊಂದಿಗೆ ಟವುನ್ ಗಸ್ತು ಮಾಡಿ, ಯಾವಾಗಲೂ ಪ್ಲೇಗ್ ತಗಲುವ ಪ್ರದೇಶವನ್ನು ಪರೀಕ್ಷಿಸಿ, ಸ್ಕೂಲುಗಳನ್ನು ಸಂಧಿಸಿ ಮಕ್ಕಳಿಂದ ಸಂತೋಷಕರವಾದ ಗಾನವನ್ನು ಕೇಳಿದರು. ಟವುನ್ ಮತ್ತು ಮುನಸೀಫರ ಬಂಗಲೆಯು ಬಾವುಟ ತೋರಣಾದಿಗಳಿಂದ ಚೆನ್ನಾಗಿ ಅಲಂಕರಿಸಿತ್ತು. ಮಧ್ಯಾನ್ಹ ತಾಲ್ಲೂಕ್ ಬೋರ್ಡ್ ಮೀಟಿಂಗ್ ನಡೆಸಿದ್ದಲ್ಲದೆ ಹೊಳಲು ಎಂಬ ಗ್ರಾಮದ ಕಡೆ ಸಂಚಾರ ಮಾಡಿ, ಅಲ್ಲಿನ ಬೆಸ್ತರಿಗೂ ಗೌಡರಿಗೂ ಇರುವ ಗುಡಿಯ ವಿಷಯವಾದ ಮನಸ್ತಾಪವನ್ನು ವಿಚಾರಿಸಿ ವಾಪಸು ದಯಮಾಡಿದರು. ಬುಧವಾರ ಗುತ್ತಲು ಎಂಬ ಗ್ರಾಮಕ್ಕೆ ದಯಮಾಡಿಸಿ, ಅಲ್ಲಿ ಬಹಳ ಕಾಲದಿಂದ ಬ್ರಾಹ್ಮಣರಿಗೂ ಶಿವಾಚಾರದ ಮಾಹಸ್ಥರಿಗೂ ಆಕೇರ್ಶ್ವರಸ್ವಾಮಿ ಜಾತ್ರೆಯ ವಿಷಯವಾದ ಮನಸ್ತಾಪವನ್ನು ಸಾಂಗೋಪಾಂಗವಾಗಿ ಎರಡು ಪಂಗಡದವರನ್ನೂ ಬಹಳ ಹೊತ್ತಿನವರಿಗೂ ವಿಚಾರಿಸಿ, ಜಾತ್ರೆಯನ್ನು ನಡಿಸುವಂತೆ ಅಪ್ಪಣೆ ಕೊಡುತ್ತೇವೆಂದು ತಿಳಿಸಿದರು. ಮಾರನೆ ದಿನ ಸಾತನೂರು ಗ್ರಾಮಕ್ಕೆ ದಯಮಾಡಿಸಿ, ಅಲ್ಲಿ ಬಹಳ ಕಾಲದಿಂದ ನಿಂತು ಹೋಗಿದ್ದ ದೇವಾಲಯದ ಪೂಜೆಪುನಸ್ಕಾರಗಳ ವಿಷಯವನ್ನು ವಿಚಾರಿಸಿ, ವಾಪಸು ಬಂದು ಆ ದಿನದ ಮೆಯಿಲ್ ಗಾಡಿಯಲ್ಲಿ ಮೈಸೂರಿಗೆ ಪ್ರಯಾಣ ಬೆಳಸಿದರು.—ಕಳೆದ ಮೂರು ವರ್ಷಗಳಿಂದ ಇಲ್ಲಿನ ಇಂಜನಿಯರ್ ಇಲಾಖೆಯಲ್ಲಿ ಸಬ್ ಡಿವಿಜನ್ ಆಫೀಸರಾಗಿದ್ದ ಮೆ॥ ಎಲಿಸ್ ಸಾಹೇಬರನ್ನು ತಿಂಗಳು ಪ್ರಾರಂಭದಲ್ಲಿ ಅರಸೀಕೆರೆಗೆ ವರ್ಗ ಮಾಡಿದರು. ಇವರು ಈ ಸ್ಥಳದಲ್ಲಿ ನೀರಿನ ವಿಷಯದಲ್ಲಿ ಕಷ್ಟಕಾಲದಲ್ಲಿ ಬಡವರಿಗೆ ಸಹಾಯವಾಗುವ ಹಾಗೆ ಊರಿನಲ್ಲಿಯೂ ಗ್ರಾಮದಲ್ಲಿಯೂ ಅಬಿಸೀನಿಯನ್ ಟ್ಯೂಬ್‌ವೆಲ್ ಎಂಬ ಭಾವಿಯನ್ನು ಸರ್ಕಾರದಿಂದ ಇಡಿಸಿ ನೀರು ಸರಾಗವಾಗಿ ಎಲ್ಲರೂ ತೆಗೆದುಕೊಳ್ಳುವ ಹಾಗೆ ಮಾಡಿದರು. ರೀಡಿಂಗ್ ರೂಂ (ವಾಚನಶಾಲೆ) ವಿಷಯದಲ್ಲಿ ಬಹಳ ಪ್ರೋತ್ಸಾಹ ಕೊಡುತ್ತಾ ಅದಕ್ಕೆ ಒಬ್ಬ ಮೆಂಬರಾಗಿಯೂ ಇದ್ದರು. ಇವರಿಗೆ ಬದಲಾಗಿ ನಂಜನಗೂಡಿನಿಂದ ಮೆ॥ ಸೋಮನಾಥ ಅಯ್ಯರವರು ಬರುತ್ತಾರೆಂದು ತಿಳಿದು ಬಂದಿದೆ.—ಕಳೆದ ನಾಲ್ಕು ವರ್ಷಗಳಿಂದ ಇಲ್ಲಿ ಪೋಲೀಸ್ ಇನ್ಸ್‌ಪೆಕ್ಟರಾಗಿದ್ದ ಮೆ॥ ಫೈಜುಲ್ಲಾಖಾನ್ ಅವರನ್ನು ಸರ್ಕಾರದವರು ಮಳವಳ್ಳಿಗೆ ವರ್ಗ ಮಾಡಿರುತ್ತಾರೆ. ಇವರು ಎಲ್ಲಾ ಜನರಲ್ಲಿ ಪ್ರೀತಿಯುಳ್ಳವರಾಗಿಯೂ, ಸರಸಗುಣವುಳ್ಳವರಾಗಿಯೂ ಒಳ್ಳೇ ಉದ್ಯೋಗಸ್ಥರಾಗಿಯೂ, ಬಡವರಿಗೆ ಸಹಾಯಕರಾಗಿಯೂ ಇದ್ದರು. ಇವರು ಬಹಳವಾಗಿ ರೀಡಿಂಗ್ ರೂಮಿಗೆ ಸಹಾಯ ಮಾಡುತ್ತಾ ಇದ್ದರು. ಇವರಿಗೆ ಬದಲಾಗಿ ಹೊಸಕೋಟೆಯಿಂದ ಮೆ॥ ಚೆನ್ನಪ್ಪರಾಜ ಅರಸಿನವರು ಬರುತ್ತಾರೆಂಬ ವರ್ತಮಾನವಿದೆ.

ಚನ್ನಪಟ್ಟಣ.—ಈ ಪ್ರಾಂತ್ಯವೆಲ್ಲಾ ಮಳೆ ಇಲ್ಲದೆ ಪೈರು ಪಚ್ಚೆಗಳು ಬಾಡಲು ಪ್ರಾರಂಭವಾಗಿದೆ. ಮೋಡಗಳೇನೋ ಆಡುತ್ತಿವೆ. ದಿನಸಿ ಧಾರಣೆಗಳಂತು ದಿನೇ ದಿನೇ ಏರುತ್ತಲೇ ಇರುವವು. ಬಡವರ ಜೀವನವು ಕಳೆ ತೀರದು.—೧೫ ದಿನಗಳ ಹಿಂದೆ ಇಲ್ಲಿನ ಒಬ್ಬ ವೈಶ್ಯರ ಮನೆಯಲ್ಲಿ ಇಲಿಗಳು ಸತ್ತದ್ದರಿಂದ ಸದರಿ ಮನೆಯವರು ಪ್ರತ್ಯೇಕ ಮನೆಯಲ್ಲಿ ವಾಸಿಸುತ್ತಿರುವರು. ಕಳೆದ ವಾರ ಬೆಂಗಳೂರಿನಿಂದ ಬಂದ ಒಬ್ಬ ಮುಸಲ್ಮಾನರ ಹೆಣ್ಣು ಮಗಳು ಪ್ಲೇಗಿನಿಂದ ಮೃತಪಟ್ಟಂತೆಯೂ, ಈಚೆಗೆ ಒಂದೆರಡು ಪ್ಲೇಗ್ ರೋಗಿಗಳನ್ನು ಅಂತರಂಗದಲ್ಲೇ ಬೇರೆ ಗ್ರಾಮಗಳಿಗೆ ಸಾಗಿಸಿರುವಂತೆಯೂ, ಅನುಮಾನಾಸ್ಪದ ರೋಗಿಗಳಿದ್ದರೂ ಜನರು ಮನೆ ಬಿಡುವಂತೆ ಕಾಣುವದಿಲ್ಲವೆಂತಲೂ ಜನರು ಆಡಿಕೊಳ್ಳುತ್ತಿರುವರು. ಆಗಸ್ಟ್, ಸೆಪ್ಟೆಂಬರು ತಿಂಗಳುಗಳು ಪ್ಲೇಗ್ ಹುಟ್ಟುವ ವಾಡಿಕೆಯುಳ್ಳವುಗಳಾದುದರಿಂದ ಸೋಂಕಿನ ಪ್ರದೇಶಗಳಿಂದ ಬರುವ ನೆಂಟರಾದರೂ ವ್ಯಾಪಾರಿಗಳಾದರೂ ತಮ್ಮಗಳ ಹೆಸರು ಸ್ಥಳ ವಗೈರೆಗಳನ್ನು ಸರ್ಕಾರಕ್ಕೆ ತಿಳಿಸತಕ್ಕದೆಂತಲೂ, ಅಂಥವರನ್ನು ಸೇರಿಸಿಕೊಳ್ಳುವ ವಿಚಾರದಲ್ಲಿ ಪ್ರಜೆಗಳು ಜಾಗರೂಕರಾಗಿರಬೇಕೆಂತಲೂ ಡಂಗೂರ ನೋಟೀಸುಗಳಿಂದ ಪ್ರಕಟವಾಗಿದೆ.—ಕಳೆದ ತಾ. ೨೩ನೇ ರಾತ್ರಿ ಇಲ್ಲಿನ ಒಬ್ಬ ವೈಶ್ಯರ ಮನೆಗೆ ಕಳ್ಳರು ನುಗ್ಗಿ, ಎರಡು ಪೆಟ್ಟಿಗೆಗಳನ್ನು ಪ್ರಾಣಿವ್ಯಸನದ ಚತ್ರದ ಬಳಿ ಒಡೆದು ಬಿಸಾಟಿದ್ದರು. ನಮ್ಮ ಅಮಲ್ದಾರರೇ ಖುದ್ದು ಮಹಜರು ಮಾಡಿಕೊಂಡರು. ಬೇಗೂರು ಪಟೇಲ್ ನಾರಣಪ್ಪನವರು ತೆಂಗಿನಕಾಯಿ ಕಳುವಿನವರಿಂದ ರುಸುಂ ತೆಗೆದುಕೊಂಡದ್ದರ ಮೇಲೆ ಸಸ್ಪೆಂಡ್ ಹೊಂದಿರುವದಾಗಿಯೂ, ಅಪರಾಧಿಗಳಿಬ್ಬರಿಗೆ ೫೦, ೨೫ ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟದ್ದಾಗಿಯೂ ತಿಳಿದು ಬರುತ್ತೆ.—ತಾಲ್ಲೋಕ್ ಕಚೇರಿ ಮತ್ತು ಕೋರ್ಟು ವೈದಾನಗಳಲ್ಲಿ ಮುಲಮೂತ್ರಾದಿಗಳಿಂದ ಕೊಳಕೆ ಮಾಡುವವರನೇಕರು ದಿಟ್ಟವಾಗಿ ಶಿಕ್ಷೆಗಳಿಗೆ ಗುರಿಯಾಗುತ್ತಿರುವಂತೆ ತೋರುತ್ತಲಿದೆ. ನಮ್ಮ ಅಮಲ್ದಾರರು ಕೋರ್ಟಿನ ಕೆಲಸಕ್ಕಾಗಿ ಬರುವವರ ಮತ್ತು ಇತರರ ಉಪಯೋಗಕ್ಕಾಗಿ ಕೋರ್ಟಿಗೆ ಸ್ವಲ್ಪ ಸಮೀಪದಲ್ಲೇ ಒಂದು ಕಕ್ಕಸನ್ನು ಏರ್ಪಡಿಸಿಕೊಟ್ಟರೆ ತುಂಬಾ ಪ್ರಯೋಜನವಾಗುವದಲ್ಲದೆ ಸಾಕ್ಷಿದಾರರು ಕಾಲಗಳ ಕೆಲಸಕ್ಕೆ ಹೊರಡಬೇಕೆಂಬ ವಿಧಿಯಿಂದ ಮಲಮೂತ್ರಕ್ಕಾಗಿ ದೂರ ಹೋಗಬಾರದೆ ಈ ರೀತಿ ಶಿಕ್ಷೆಗೆ ಗುರಿಯಾಗತಕ್ಕವನ್ನು ತಪ್ಪಿಸಬಹುದು.—ಇಲ್ಲಿನ ಸರ್ಕಾರಿ ಕೈಗಾರಿಕೆಯ ಕಾರ್ಖಾನೆಯು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಾ, ಮೈಸೂರು ಶೀಮೆಗೇನೇ ಒಳ್ಳೇ ಹೆಸರು ತರುತ್ತಿರುವದನ್ನು ನೋಡಿ, ಸದರಿ ಕಾರ್ಖಾನೆಗೆ ಈಗಿನ ಬಾಡಿಗೆಯ ಸ್ಥಳವು ಸಾಲದ್ದರಿಂದ ಸರ್ಕಾರಿ ತರಫಿನಿಂದ ಬೇರೆ ಒಂದು ವಿಸ್ತಾರವಾದ ಕಟ್ಟಡವನ್ನೇರ್ಪಡಿಸಲು ಪ್ರಯತ್ನಿಸಿ, ಇಲ್ಲಿನ ಕೋಟೆ ಬೈಲಿನಲ್ಲಿರುವ ಹಳೇ ಛತ್ರವನ್ನು ಜೀರ್ಣೋದ್ಧಾರ ಮಾಡಿ ಕಟ್ಟಡದ ಖರ್ಚಿಗಾಗಿ ಮೂರು ಸಾವಿರ ರೂಪಾಯಿ ಸರ್ಕಾರದವರಿಂದ ಸ್ಯಾಂಕ್ಷನ್ ಮಾಡಲ್ಪಟ್ಟಿದೆ. ಅಲ್ಲದೆ ನಮ್ಮ ಟವುನ್ ಮುನಿಸಿಪಾಲಿಟಿಯವರು ಸದರಿ ಕಟ್ಟಡಕ್ಕೆ ಒಂದು ಸಾವಿರ ರೂಪಾಯಿ ಕೊಡುವದಾಗಿ ವಾಗ್ದಾನ ಮಾಡಿದ್ದಾರೆ. ಇದು ತುಂಬಾ ಸಂತೋಷಕರವಾದ ಸಂಗತಿಯೇ ಸರಿ. ಆದರೂ ನಮ್ಮ ಟವುನಿನ ವರ್ತಕಶಿಖಾಮಣಿಗಳೂ ಇತರ ಸ್ಥಳೀಕರೂ ಇಷ್ಟರಲ್ಲೇ ತೃಪ್ತರಾಗದೆ, ಸದರಿ ಕಟ್ಟಡದ ವಿಸ್ತಾರಕ್ಕೂ ಭದ್ರತೆಗೂ ಅಗಬೇಕಾದ ಮೂಲಧನಕ್ಕೆ ತಮ್ಮ ತಮ್ಮ ಯೋಗ್ಯತಾಸ್ಥಿತಿಗನುಸಾರವಾಗಿ ಧನಸಹಾಯ ಮಾಡಿ ಕೀರ್ತಿವಂತರಾಗಬಾರದೆಂಬುದಾಗಿ ನಂಬಿದ್ದೇನೆ.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್‌ಪಾಂಡೆನ್ಸ್.

ಗಾಡಿ ಬಿಟ್ಟು ಹಿಡಿದದ್ದು

ಅಯ್ಯಾ,

ಅಜ್ಜಂಪುರದ ಟಿ ಎಸ್ ಸಿದ್ದಾಮಪ್ಪ ಶೆಟ್ಟಿಯಾದ ನನ್ನ ಈ ಬಾತ್ಮಿಯನ್ನು ಪ್ರಕಟಿಸಬೇಕಾಗಿ ಕೋರುತ್ತೇನೆ. ತಾ ೭ ನೇ ಶುಕ್ರವಾರ ನನ್ನ ಬಂಡಿಯನ್ನು ಕ್ಯಾಂಟೀನ್ ಗಳುತರುವ ಉದಿಶ್ಯ ತರೀಕೆರೆ ಸಂತೆಗೆ ಕಳಿಸಿದ್ದೆ. ಅಲ್ಲಿ ನಾನು ಊಟಮಾಡುತ್ತಿದ್ದಾಗ ತರೀಕೆರೆ ಕೊತವಾಲರು ಮತ್ತು ದಂಡಿ, ಇವರ ಹೆಸರು ಗೊತ್ತಿಲ್ಲ, ಬಂದು ನನ್ನ ಆಳನ್ನು ಹೆದರಿಸಿ, ನನ್ನ ಗಾಡಿ ಎತ್ತುಗಳನ್ನು ಬಿಟ್ಟು ಎಂತ ಹಿಡಿದುಕೊಂಡು ಹೋಗಿ ಸಾಯಂಕಾಲ ೬ ಘಂಟೆವರಿಗೆ ಸತಾಯಿಸಿ, ೬॥ ಗಂಟೆ ಹೊತ್ತಿನಲ್ಲಿ ಬಿಟ್ಟರು. ಮತ್ತು ಸಂತೆಯಲ್ಲಿ ಇವರು ಹೀಗೇ ಗಾಡಿಗಳನ್ನು ಬಿಟ್ಟು ಎಂದು ಹಿಡಿದು ಸತಾಯಿಸಿ ಬಿಡುತ್ತಾರೆ.

೧೭-೮-೧೯೦೮ ಇಂತಿ ಬಿನ್ನಹ.

ಸ್ವಾಮಿಗಳ ಉತ್ಸವವು

ಅಯ್ಯಾ,

ಹೊಸದುರ್ಗದ ತಾಲ್ಲೂಕು ಶ್ರೀಮಠ ಸಾಣೆಹಳ್ಳಿ ಸಂಸ್ಥಾನದ ಪಟ್ಟಾಧ್ಯಕ್ಷ ಶ್ರೀಗುರುವಾದ ರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಉತ್ಸವವು ತರೀಕೆರೆ ತಾಲ್ಲೂಕು ಶಿವನೆ ಹರಳ ಶಿವನೆ, ಹನುಮಾನಹಳ್ಳಿ, ಹಲೇನಹಳ್ಳಿ, ಅಬ್ಬನೋಳಲು ಮೊದಲಾದ ಗ್ರಾಮಗಳಲ್ಲಿ ಪಲ್ಲಕ್ಕಿ ಮೊದಲಾದ ಬಿರುದಾವಳಿಗಳಿಂದ ಶಿವನೇ ಗ್ರಾಮದಲ್ಲಿ ಪೋಲೀಸ್ ಶಿಬ್ಬಂದಿಯೊಂದಿಗೆ ದೇಶಗಳ ಶಿಷ್ಯವರ್ಗಗಳೊಳಗೂಡಿ ೩—೫ ಸಾವಿರ ಪ್ರಜೆಗಳೊಂದಿಗೆ ವಿಜೃಂಭಣೆಯಿಂದ ಉತ್ಸವವು ನಡೆದು, ದೀಪಾರಾಧನೆ ಕಾಣಿಕೆ ವಸೂಲಿ ವಗೈರ ನೆರವೇರಿಸಿಕೊಂಡು, ಈ ತರಫ ಇರುವ ಗ್ರಾಮಾಂತರಗಳಲ್ಲಿ ಕಾಣಿಕೆ ವಸೂಲಿ ಬಗ್ಗೆ ಉತ್ಸಾಹ ಮೂಲಕ ಸಂಚರಿಸುತ್ತಿದ್ದಾರೆ. ಆದರೆ ತರೀಕೆರೆ ತಾಲ್ಲೂಕ್ ಸ್ಥಳ ಅಜ್ಜಂಪುರದ ತರಫ ಪ್ಲೇಗಿನ ಹಾವಳಿಯು ತಲೆದೋರಿರುವದರಿಂದ ಪ್ರಜೆಗಳು ಊರುಗಳನ್ನು ಬಿಟ್ಟು ಫಲಾಯನ ಸೂಳ್ಳಾಗುತ್ತಾರಾದ ಪ್ರಯುಕ್ತ ಕಡೂರು ತಾಲ್ಲೂಕು ಸ್ಥಳ ಹಿರಿನಲ್ಲೂರು ಹೋಬಳಿಗೆ ದಯಮಾಡಿಸಿ, ಉತ್ಸಾಹ ಮೂಲಕ ಸಂಚರಿಸುತ್ತಿದ್ದಾರೆ. ಮುಂದೆ ಬೀರೂರಿಗೆ ದಯಮಾಡಿಸಿ, ಉತ್ಸಾಹವು ನಡೆಯುತ್ತದೆಂಬುವ ವರ್ತಮಾನವಿದೆ. ಸಂಸ್ಥಾನದ ಕರಕಮಲಸಂಜಾತರಾದ ಚರಮೂರ್ತಿ ಚಂದ್ರಶೇಖರ ಮಹಾಸ್ವಾಮಿಗಳವರು ವಿದ್ಯಾಭ್ಯಾಸದಲ್ಲಿರುತ್ತಾರೆ. ಸಂಸ್ಥಾನದಲ್ಲಿ ಅಹೋರಾತ್ರಿ ವಿದ್ಯಾರ್ಥಿಗಳಿಗೆ ಅನ್ನದಾನ ವಿದ್ಯಾದಾನಗಳನ್ನು ಮಾಡುತ್ತಾ, ಅತಿಥಿ ಅಭ್ಯಾಗತರನ್ನು ಸತ್ಕರಿಸುತ್ತಾ, ಸಂಸ್ಥಾನದ ಯಶಸ್ಸು ಪ್ರಜ್ವಲಿಸುತ್ತಿರುವಂತಿದೆ. ಈ ಸಂಸ್ಥಾನಕ್ಕೆ ಸುಖಸಂತೋಷಾದಿಗಳು ಬೇಗನೆ ದೊರಕುವಂತಾಗಲೆಂದು ಹಾರೈಸುತ್ತೇನೆ.

ಎಂ ಡಿ ಬಸವಪ್ಪ

ಮೈಸೂರು ಗೆಜೆಟ್ ಸಂಗ್ರಹ

ಬೆಂಗಳೂರು ಸಬ್ ಜಡ್ಜ್ ಮೆ॥ ಜೆ ಎಚ್ ಭಾಭಾಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಇಪ್ಪತ್ತೊಂದು ದಿನಗಳ ಪ್ರಿವಿಲೆಜ್ ರಜವನ್ನೂ ಅದರ ಜೊತೆಗೆ ಎರಡು ವರುಷಗಳ ಸಂಬಳವಿಲ್ಲದ ರಜವನ್ನೂ ಕೊಟ್ಟಿದೆ.

ಪ್ರೊಬೇಷನರ್ ಡಿವಿಜನ್ ಆಕ್ಟಿಂಗ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ ಎ ಸಿ ಬನರ್ಜೀ ಅವರಿಗೆ ಆಗಸ್ಟ್ ತಾ ೨ ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಪ್ರಿನ್ಸಿಪಲ್ ಮುನ್ಸಿಫ್ ಮೆ॥ ಎಂ ಟಿ ನೋಬಲೈಯಂಗಾರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮೈಸೂರು ಸೆಷನ್ಸ್ ಕೋರ್ಟ್ ಹೆಡ್‌ಕ್ಲಾರ್ಕ್ ಎಂ ನಾರಾಯಣ ಐಯಂಗಾರ್ ಪ್ರಿನ್ಸಿಪಲ್ ಮುನ್ಸಿಫಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಚೀಫ್ ಕೋರ್ಟ್ ಡಿಪ್ಯುಟಿ ರೆಜಿಸ್ಟ್ರಾರ್ ಮೆ॥ ಬಿ ಎಸ್ ಕೃಷ್ಣರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಎಂಟು ದಿನಗಳಿಗೆ ಜಾಸ್ತಿ ಮಾಡಿದೆ.

ಹಾಸನದ ಅಮಲ್ದಾರ್ ಮೆ॥ ಎಸ್ ಎನ್ ಅಪ್ಪಣ್ಣ ಐಯಂಗಾರು ಬಡತಿ ಹೊಂದಿರುವಾಗ ಹಾಸನ ಡಿಸ್ಟ್ರಿಕ್ಟ್ ಆಫೀಸ್ ಹೆಡ್ ಕ್ಲಾರ್ಕ್ ಮತ್ತು ಆಲೂರ್ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಜೆ ಎಸ್ ರಾಮಸ್ವಾಮಿಯಂಗಾರರು ಹಾಸನದ ತಾಲ್ಲೂಕ್ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಅಸಿಸ್ಟೆಂಟ್ ಕಮಿಷನರ್ ಮೆ॥ ಎ ಮ್ಯಾತ್ಯೂಂಜಯ ಐಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿತ್ರದುರ್ಗದ ಡಿಸ್ಟ್ರಿಕ್ಟ್ ಎಕ್ಸೈಜ್ ಅಸಿಸ್ಟೆಂಟ್ ಕಮಿಷನರ್ ಮೆ॥ ಹಸನ್ ಅಲಿಯವರು ಖಜಾನೆಯ ಛಾರ್ಜನ್ನೂ ವಹಿಸಿರತಕ್ಕದ್ದು.

ಮೆ॥ ಟಿ. ಪರಮಶಿವ ಐಯರವರನ್ನೂ ಮೆ॥ ಆರ್ ಬಿ ಸ್ಟಮರ್ ಯವರನ್ನೂ ಜೂಲೈ ೧ನೇ ತಾರೀಖಿನಿಂದ ೨ನೇ ಕ್ಲಾಸ್ ಡಿಸ್ಟ್ರಿಕ್ಟ್ ಜಡ್ಜರನ್ನಾಗಿ ಖಾಯಂ ಮಾಡಿದೆ.

ಪ್ರೊಬೇಷನರ್ ಅಸಿಸ್ಟೆಂಟ್ ಕಮಿಷನರ್ ಮೆ॥ ಎಸ್. ವೆಂಕಟರಂಗಂ ಯವರನ್ನು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯೆಟ್ ಆಫೀಸಿನಿಂದ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಕೆಲಸ ಮಾಡುವಂತೆ ವರ್ಗಮಾಡಿದೆ.

ಮೈಸೂರು ಗವರ್ನಮೆಂಟ್ ಚೀಫ್ ಇಂಜನಿಯರ್ ಮತ್ತು ಸೆಕ್ರೆಟರಿಯವರಾದ ಮೆ॥ ದಳ್ಳಿಯ. ಮೊಕ್ಷಗುಂಡಮ್ ವಿಶ್ವೇಶ್ವರಯ್ಯನವರಿಗೆ ಆಗಸ್ಟ್ ತಾ. ೧೮ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಡಿಪ್ಯುಟಿ ಚೀಫ್ ಇಂಜನಿಯರ್ ಮತ್ತು ಗವರ್ನಮೆಂಟ್ ಅಂಡರ್ ಸೆಕ್ರೆಟರಿ ಕ್ಯಾಪ್ಟನ್ ಎ ಟಿ ಇ ಡಾಸ್ ಯವರು ಚೀಫ್ ಇಂಜನಿಯರವರ ಆಫೀಸ್ ಛಾರ್ಜನ್ನು ವಹಿಸಿರತಕ್ಕದ್ದು.

ಶ್ರೀಮನ್ಮಹಾರಾಜರವರು ಮೆ॥ ಬಿ ಪಿ ಕೃಷ್ಣೇ ಅರಸಿನವರನ್ನು ಮೈಸೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನಲ್ಲಿ ೪ ನೇ ಗ್ರೇಡ್ ಜಮೇದಾರ್ ಟ್ರೂಪ್ ಕಮ್ಯಾಂಡರಾಗಿ ನೇಮಕಮಾಡಿರುತ್ತಾರೆ.

ತರೀಕೆರೆಯಿಂದ ಸಾಗರಕ್ಕೆ ವರ್ಗ ಪಟ್ಟಿರುವ ಆಕ್ಟಿಂಗ್ ಅಮಲ್ದಾರ್ ಮೆ॥ ಬಿ. ಕೃಷ್ಣರಾಯರಿಗೆ ಜೂಲೈ ತಾ. ೩೦ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪಾವಗಡ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ॥ ಎಸ್. ರಾಘವೇಂದ್ರರಾಯರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶಿರಸ್ತೇದಾರರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಇಂಡಿಯಾ ದೇಶದ ವೃತ್ತಾಂತಗಳು

ಕಳೆದ ವಾರ ಹಿಂದೂಸ್ಥಾನದಲ್ಲೆಲ್ಲಾ ಒಟ್ಟು ೧,೦೧೫ ಜನರು ಪ್ಲೇಗ್ ಉಪದ್ರದಲ್ಲಿ ಕಾಲವಾದರು. ಆ ಪೈಕಿ ಬೊಂಬಾಯಿ ಅಧಿಪತ್ಯದಲ್ಲಿ ೩೩೯, ಮೈಸೂರು ಸಂಸ್ಥಾನದಲ್ಲಿ ೨೨೮ ಮರಣಗಳಾಗಿರುತ್ತವೆ.

* * *

ಕಲ್ಕತ್ತಾ ಪಟ್ಟಣದ ಪಬ್ಲಿಕ್ ಚೌಕ ಅಥವಾ ಮೈದಾನಗಳಲ್ಲಿ ಸೂರ್ಯಾಸ್ತಮಾನಕ್ಕೆ ಅರ್ಧಗಂಟೆ ಮುಂಚೆ ಯಾರೂ ಯಾವವಿಧವಾದ ಪಬ್ಲಿಕ್ ಮೀಟಿಂಗುಗಳನ್ನು ಇನ್ನೆರಡು ತಿಂಗಳ ತನಕ ನಡಿಸಕೂಡದೆಂದು ಪೋಲೀಸ್ ಮ್ಯಾಜಿಸ್ಟ್ರೇಟರು ಇಸ್ತಿಹಾರು ಹಾಕಿಸಿರುತ್ತಾರೆ.

* * *

ಅಫ್ಘಾನಿಸ್ಥಾನದಿಂದ ಅಲ್ಲಿನ ಅಮೀರರ ಸಹೋದರರು ಅಮೀರರ ಮೇಲೆ ತಿರುಗಿಬಿದ್ದು ದಂಗೆ ಎಬ್ಬಿಸಿದ್ದರಿಂದ ಗಲಭೆಯುಂಟಾಗಿದೆ ಎಂದು ಕಳೆದ ವಾರ ವರ್ತಮಾನಬಂದಿತ್ತು. ಈ ಸುದ್ದಿಯು ನಿರಾಧಾರವಾದದ್ದೆಂತಲೂ, ಅಲ್ಲಿ ಎಲ್ಲಾ ಸುರಕ್ಷಿತವಾಗಿದೆ ಎಂತಲೂ ಈಚೆಗೆ ತಿಳಿದು ಬಂದಿದೆ.

* * *

ಕೊಯಿಮತ್ತೂರು ಜಿಲ್ಲಾ ತಿರುಪತ್ತೂರಿನಿಂದ ಕೊಲ್ಲಂ ಎಂಬ ಊರಿಗೆ ಅಂಚೆ ಬಸ್ತಿಗಳನ್ನು ತೆಗೆದುಕೊಂಡು ಹೋಗುತ್ತಿದ್ದ ಅಂಚೆ ಜವಾನನನ್ನು ನಾಲ್ಕುಮಂದಿ ಹೊಡೆದು, ಆ ಬಸ್ತಿಗಳನ್ನು ಕಳುವುಮಾಡಿದ್ದರು. ಈ ನಾಲ್ವರಿಗೂ ಸೆಷನ್ಸ್ ಜಡ್ಜರು ತಲಾ ಮೂರು ವರ್ಷಗಳ ಕಠಿಣ ಸಜಾ ವಿಧಿಸಿರುತ್ತಾರೆ.

* * *

ಕೊಚ್ಚಿ ಸಂಸ್ಥಾನಕ್ಕೆ ಸೇರಿದ ಚಿತ್ತೂರಿನಲ್ಲಿ ಒಬ್ಬ ಜಮೀನ್ದಾರನು ಪೂರ್ವಕಾಲದಲ್ಲಿ ಅನೇಕಟ್ಟನ್ನು ಕಟ್ಟಿಸಿ, ಅದರಿಂದ ನೀರು ಹಾಯಿಸಿಕೊಂಡು ಬಹಳ ಜಮೀನನ್ನು ತರೀ ಸಾಗುವಳಿ ಮಾಡಿಕೊಳ್ಳುತ್ತಿದ್ದನು. ಈಗ ಆ ಜಮೀನ್ದಾರನು ಆ ಅನೇಕಟ್ಟನ್ನು ಸರ್ಕಾರಕ್ಕೆ ೯೫,೦೦೦ ರೂಪಾಯಿಗೆ ಬಿಕರಿಮಾಡುವುದಾಗಿ ಒಪ್ಪಂದ ಮಾಡಿಕೊಟ್ಟಿದ್ದಾನೆ.

* * *

ಕೊಯಿಮತ್ತೂರು ಸೆಂಟ್ರಲ್ ಜೈಲಿನಲ್ಲಿ ಬಂದೀವಾನರು ದಂಗೆಯೆದ್ದು ಜೈಲರನ್ನು ಬಹಳವಾಗಿ ಹೊಡೆದು ಗಾಯಪಡಿಸಿದರು. ಅಷ್ಟರಲ್ಲೇ ಪೋಲೀಸಿನವರೂ ಸೋಜರುಗಳೂ ಹೋಗಿ, ಆ ದೊಂಬಿಮಾಡಿದ ಖೈದಿಗಳ ಮೇಲೆ ಗುಂಡು ಹೊಡೆದು ಗಲಭೆಯನ್ನು ನಿಲ್ಲಿಸಿದರು. ಆರು ಜನ ಬಂದೀವಾನರಿಗೆ ಗಾಯಗಳಾಗಿ ಒಬ್ಬನು ಮೃತಪಟ್ಟನು. ಉಳಿದವರಿಗೆ ಇಲಾಜುಮಾಡುತ್ತಿದ್ದಾರೆ.

* * *

ಉತ್ತರ ದೇಶದಲ್ಲಿ ಕ್ಷಾಮಬಾಧೆಯು ಸ್ವಲ್ಪಸ್ವಲ್ಪವಾಗಿ ಕಡಮೆಯಾಗುತ್ತಾ ಬಂದಿದೆ. ಸರ್ಕಾರದವರ ರಿಲೀಫ್ ಕಾಮಗಾರಿಗಳಲ್ಲಿ ಸೇರಿಕೊಂಡು ಜೀವನ ಮಾಡುತ್ತಿದ್ದ ಕ್ಷಾಮಪೀಡಿತರ ಪೈಕಿ ಕಳೆದ ವಾರ ೮೦,೦೦೦ ಜನರು ಜಮೀನು ವ್ಯವಸಾಯ ಕಾರ್ಯಗಳಿಗಾಗಿ ತಮ್ಮ ತಮ್ಮ ಗ್ರಾಮಭೂಮಿಗಳಿಗೆ ಹೊರಟು ಹೋದರು. ಇನ್ನೂ ಐದು ಲಕ್ಷ ಪ್ರಜೆಗಳು ಸರ್ಕಾರದವರ ಪೋಷಣೆಯಲ್ಲಿರುತ್ತಾರೆ.

ಪೂನೆಯಿಂದ ೧೨ ಜನ ಛಾಟಿಯಾ ವರ್ತಕರು ಕಳೆದ ವಾರ ಬೊಂಬಾಯಿಗೆ ಹೋಗಿ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು, ಜೂಜಾಡುತ್ತಿದ್ದರು. ಪೋಲೀಸಿನವರು ಅವರನ್ನೆಲ್ಲಾ ಹಿಡಿದು ಅವರ ಮೇಲೆ ಮೊಕದ್ದಮೆ ಮಾಡಿದ್ದರಲ್ಲಿ ಮ್ಯಾಜಿಸ್ಟ್ರೇಟರು ತಲಾ ೫೦ ರೂಪಾಯಿ ಹಿಡಿದು ೧೦೦ ರೂಪಾಯಿ ವರೆಗೆ ಜುಲ್ಮಾನೆ ಹಾಕಿದ್ದಲ್ಲದೆ, ಮನೆಯನ್ನು ಬಾಡಿಗೆಗೆ ಕೊಟ್ಟವನಿಗೂ ೨೫ ರೂಪಾಯಿ ಜುಲ್ಮಾನೆ ವಿಧಿಸಿದರು. ಪೋಲೀಸಿನವರು ಮನೆನುಗ್ಗಿದಾಗ ಆಟದವರ ಬಳಿ ಸಿಕ್ಕಿದ ಜೂಜಿನ ಹಣ ೧,೭೫೦ ರೂಪಾಯನ್ನು ಸರ್ಕಾರಕ್ಕೆ ಸೇರಿಸಿಕೊಂಡರು.

***

ಮಾಲೇರ್ ಕೋಟ್ಲಾ ಸಂಸ್ಥಾನದ ನವಾಬರು ಹಿಂದಿನ ಶುಕ್ರವಾರ ವಾಂತಿಭೇದಿ ಉಪದ್ರ ದಿಂದ ಕಾಲವಾದರೆಂದು ತಿಳಿಯಬರುತ್ತದೆ. ಇವರು ಕಳೆದ ೧೮೭೧ ನೇ ಇಸವಿಯಲ್ಲಿ ಪಟ್ಟಕ್ಕೆ ಬಂದರು. ಆಗ್ಗೆ ಅವರಿಗೆ ೧೩ ವರುಷ ವಯಸ್ಸಾಗಿತ್ತು. ಪಂಜಾಬ್ ಆಧಿಪತ್ಯಕ್ಕೆ ಸೇರಿದ ಸಾಹರ್ಣಪ್ ಡಿಸ್ಟ್ರಿಕ್ಟಿನಲ್ಲಿ ಈ ಮಾಲೇರ್ ಕೋಟ್ಲಾ ಸಂಸ್ಥಾನವಿರುತ್ತದೆ. ಅದು ೧೬೭ ಚದರ ಮೈಲಿ ವಿಸ್ತಾರವಾಗಿಯೂ ೭೧,೦೦೦ ಪ್ರಜೆಯನ್ನುಳ್ಳದ್ದಾಗಿಯೂ ಇರುವುದು. ಅಲ್ಲಿ ಸಿಕ್ಕರೂ ಮಹಮದೀಯರೂ ಸಮಾಸಮವಾಗಿದ್ದಾರೆ.

***

ಸಂಯುಕ್ತ ಆಧಿಪತ್ಯಗಳಲ್ಲಿ ಬೆಟ್ವಾ ನದಿಯ ನೀರಿಗೆ ೫೦ ಅಡಿ ಪ್ರಮಾಣವುಳ್ಳ ಅಣೆಯನ್ನು ಕಟ್ಟಿ, ನಾಲೆಗಳ ಮೂಲಕ ಜಮೀನಿಗೆ ಹಾಯಿಸಿ ಭರೀ ಫಸಲನ್ನು ಹೆಚ್ಚಾಗಿ ಬೆಳೆಯುವಂತೆ ಮಾಡಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಅಂದಾಜು ಪಟ್ಟಿಯಂತೆ ೩೦ ಲಕ್ಷವೂ ೫೩ ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ. ಇದರಿಂದ ೭೫,೦೦೦ ಎಕರೆ ಜಮೀನು ಭರೀ ವ್ಯವಸಾಯಕ್ಕೆ ಬರುವುದೆಂದೂ, ಉತ್ಪತ್ತಿಯು ಈ ಮೂಲಧನಕ್ಕೆ ನೂರಕ್ಕೆ ವರುಷಕ್ಕೆ ೮ ರೂಪಾಯಿನಂತೆ ಬಡ್ಡಿ ಬೀಳುವುದೆಂದೂ ಅಧಿಕಾರಿಗಳು ತಿಳಿಯುವುದು

***

ಬಳ್ಳಾರಿಯಲ್ಲಿ ಮಳೆಗಳು ಹೋಗಿಲ್ಲದೆ ತುಂಬಾ ಕಷ್ಟಪಡುತ್ತಿರುವುದನ್ನು ನೋಡಿ ಅಲ್ಲಿನ ಮಿ|| ಗೋಲಿಕ್ಕಾಂಡೆ ಕೃಷ್ಣಸ್ವಾಮಿನವರೂ ಮಿ|| ಸೀತಾರಾಮಶೆಟ್ಟರೇ ಮೊದಲಾದ ೬೫ ಮಂದಿ ಶ್ರೀಮಂತರೂ ಸಭೆ ಸೇರಿ, ಒಂದು ಕ್ಷಾಮನಿವಾರಣೆಯ ಸಂಘವನ್ನು ಏರ್ಪಡಿಸಿ, ಚಂದಾ ಕೂಡಿಸಿ, ಕಳೆದ ೧೬ ನೇ ತಾರೀಖಿನಿಂದ ಪ್ರಜೆಗಳನ್ನು ಪೋಷಣೆ ಮಾಡುತ್ತಿದ್ದಾರೆ. ಪ್ರಾರಂಭದಲ್ಲಿ ದಿನವಹಿ ೮೦೦ ಜನರ ವರೆಗೆ ಅಲ್ಲಿ ಭೋಜನ ಮಾಡುತ್ತಿದ್ದರು. ಈಚೆಗೆ ೧,೦೦೦ ಮಂದಿ ಬಡಬಗ್ಗರು ಪೋಷಿಸಲ್ಪಡುತ್ತಿದ್ದಾರೆ. ಅಲ್ಲಿನ ಶೆಟ್ಟಿವರ್ತಕರ ಧರ್ಮಬುದ್ಧಿಯನ್ನು ಕೊಂಡಾಡುತ್ತಿರುವರು

***

ಕೇಶಿಲಾಲ್‌ವರ್ಮ ಎಂಬೊಬ್ಬ ಬಂಗಾಳಿಯು ಕೆಲವು ದಿನಗಳ ಹಿಂದೆ "ವಂದೇ ಮಾತರಂ" ಎಂಬ ಪತ್ರಿಕೆಗೆ ರಾಜದ್ರೋಹಕರವಾದ ಅಂತೀವರ್ತಮಾನವನ್ನು ಕಳುಹಿಸಿದನು. ಆ ಪತ್ರಿಕೆಯು ಅದನ್ನು ಪ್ರಕಟಿಸಿ, ಮರುದಿನವೇ ಅದು ನಿಜವಾದ ವರ್ತಮಾನವಲ್ಲವೆಂದು ತಿಳಿಸಿತು. ಆದರೆ ಸರ್ಕಾರದವರು ಆ ಕೇಶಿಲಾಲನನ್ನು ದಸ್ತಗಿರಿ ಮಾಡಿದರು. ಅವನ ಬಳಿಯಲ್ಲಿ ಸಿಡಿಮದ್ದಿನ ಗುಂಡುಗಳ ತಯಾರಿಯನ್ನು ಕಲಿಸುವ ಸಂಪೂರ್ಣವಾದ ವಿವರಣೆಯುಳ್ಳ ಕಾಗದಗಳು ಸಿಕ್ಕಿದವು. ಆಲಿಫರ್ ನೆರ್ಸ್ ದೊರೆಯು ಅವನನ್ನು ದರ್ಯಾಪ್ತು ಮಾಡಿ, ಅವನಿಗೆ ಏಳು ವರುಷಗಳ ಜೇಲ್ ಶಿಕ್ಷೆಯನ್ನು ವಿಧಿಸಿದ್ದಾರೆ

***

ತಿನ್ನವೆಲ್ಲಿ ಪಟ್ಟಣದ ದಂಗೆ ಮೊಕದ್ದಮೆಯಲ್ಲಿ ನೆರ್ಸ್ ದೊರೆಯು ಕಳೆದ ವಾರ ಮೊದಲನೇ ಗುಂಪಿನ ೨೨ ಮಂದಿ ಅಪರಾಧಿಗಳ ಪೈಕಿ ನಾಲ್ವರನ್ನು ಖುಲಾಸ್ ಮಾಡಿ, ಉಳಿದವರಿಗೆ ಮುಂದೆ ಹೇಳುವಂತೆ ಶಿಕ್ಷೆ ವಿಧಿಸಿರುತ್ತಾರೆ—ಗುರುನಾಥ ಅಯ್ಯರಿಗೆ ಏಳು ವರುಷದ ಜೇಲ್ ಶಿಕ್ಷೆ, ಲೋಕನಾಥ ಅಯ್ಯರಿಗೆ ಐದು ವರುಷ ಕಠಿಣ ಸಜಾ ಮತ್ತು ೨,೦೦೦ ರೂಪಾಯಿ ಜುಲ್ಮಾನೆ, ಶಂಕರನಾರಾಯಣ ಪಿಳ್ಳೆಗೂ ರಾಮಲಿಂಗ ಪಿಳ್ಳೆಗೂ ತಲಾ ಐದು ವರುಷಗಳ ಕಠಿಣ ಸಜಾ ಮತ್ತು ೫೦೦ ರೂಪಾಯಿ ಜುಲ್ಮಾನೆ, ಶಂಕರನಾರಾಯಣ ಅಯ್ಯರಿಗೆ ಐದು ವರುಷ ಕಠಿಣ ಸಜಾ, ಕನಕ ಸಭಾಪತಿ ಪಿಳ್ಳೆಗೆ ಐದು ವರುಷ ಕಠಿಣ ಸಜಾ, ಈ ರೀತಿ ಶಿಕ್ಷೆಯಾಗಿರುವುದು.

***

ಸಿಂಧು ದೇಶಕ್ಕೆ ಸೇರಿದ ಥಾರ್ ಪಾರ್ಕರ್ ಡಿಸ್ಟ್ರಿಕ್ಟಿನಲ್ಲಿ ಗುಲಾಂ ನಬಿಷಹಾ ಎಂಬ ಊರಿಗೆ ಮೂವತ್ತು ಮಂದಿ ಕಳ್ಳರು ಆಯುಧಪಾಣಿಗಳಾಗಿ ಹೋಗಿ, ಅಲ್ಲಿನ ಪೋಲೀಸ್ ಠಾಣಾಕ್ಕೆ ನುಗ್ಗಿ ಒಬ್ಬ ಜಮೇದಾರನನ್ನು ಕೊಂದು, ಒಬ್ಬ ಶಿಪಾಯಿಯನ್ನು ಗಾಯ ಮಾಡಿ ಕೆಡವಿ, ಅವನ ಬಳಿ ಇದ್ದ ಕತ್ತಿಯನ್ನೂ ಬಂದೂಕವನ್ನೂ ಕಿತ್ತುಕೊಂಡು, ಊರಿನೊಳಗೆ ಒಬ್ಬ ಹಿಂದೂ ಸಾಹುಕಾರನ ಮನೆಗೆ ಹೋಗಿ, ಅವನ ಸಹೋದರನನ್ನು ಕೊಂದು, ಮನೆಯವರಿಬ್ಬರನ್ನು ಗಾಯಮಾಡಿ ಕೆಡವಿ, ಸುಮಾರು ೫,೦೦೦ ರೂಪಾಯಿ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋದರು. ಪೋಲೀಸಿನವರು ಪತ್ತೇ ತರವನ್ನು ನಡಿಸುತ್ತಿದ್ದಾರೆ

***

ಹಿಂದುಸ್ಥಾನದ ವಾಯುವ್ಯ ಸರಹದ್ದಿನಲ್ಲಿ ಎಲ್ಲೆಕಟ್ಟಿನಿಂದ ಆಚೆ ಇರುವಂಥಾ ಜನರ ಹಾವಳಿಯನ್ನು ಇಂಡಿಯಾ ಗವರ್ನ್‌ಮೆಂಟಿನವರು ಯುದ್ಧಕಾರ್ಯಗಳನ್ನು ನಡಿಸಿ ಅಡಗಿಸಿರುತ್ತಾರಷ್ಟೆ. ಈಚೆಗೆ ಎರಡು ಮೂರು ವಾರಗಳಿಂದ ಆ ಪ್ರಾಂತ್ಯದಲ್ಲಿ ಕೆಲವು ಮುಸಲ್ಮಾನ ಸಂಕೀರರು ಎಲ್ಲೆಯನ್ನು ದಾಟಿ ಇಂಗ್ಲೀಷ್ ಸೀಮೆಯೊಳಕ್ಕೆ ನುಗ್ಗಿ ಬಂದು ಪ್ರಜೆಗಳ ಮನೆಮಠಗಳನ್ನು ಕೊಳ್ಳೆಹೊಡೆಯುತ್ತಲೂ, ಜನರನ್ನು ಜೀವಸಹಿತ ಸೆರೆಯಾಗಿ ಹಿಡಿದುಕೊಂಡು ಹೋಗುತ್ತಲೂ, ಪೋಲೀಸ್ ಠಾಣ್ಯಗಳಲ್ಲಿ ಸಿಕ್ಕುವ ಬಂದೂಕು ಮದ್ದುಗುಂಡನ್ನು ಎತ್ತಿಕೊಂಡು ಹೋಗುತ್ತಲೂ ಬಂದಿದ್ದಾರೆಂದು ತಿಳಿದುಬಂದಿದೆ. ಅಲ್ಲಿನ ಡೆಪ್ಯುಟಿ ಕಮಿಷನರವರು ಆ ಪಂಗಡಗಳ ಮುಖಂಡರಿಗೆ ಅವರನ್ನು ಶಾಸಿಸಿಕೊಳ್ಳಬೇಕೆಂದು ಹುಕುಂ ಕಳುಹಿಸಿದ್ದಾರೆ

ಮಿ|| ಬಿಪಿನಚಂದ್ರಪಾಲ್‌ರವರು ವಿಲಾಯತಿಗೆ ಹೋಗುವುದಕ್ಕೆ ಮೊದಲು ಕಳೆದ ವಾರ ಕಲ್ಕತ್ತೆಯಿಂದ ಮದರಾಸಿಗೆ ಹಡಗಿನಲ್ಲಿ ಬಂದಿದ್ದರು. ಅದರ ಹಿಂದಿನ ದಿನ ಸರ್ಕಾರದವರು ಆ ಹಡಗಿನ ಬಳಿಗೆ ಯಾರೂ ಹೋಗಕೂಡದೆಂತಲೂ, ಅದು ಪ್ಲೇಗ್ ಉಪದ್ರವಿರುವ ಸ್ಥಳದಿಂದ ಬಂದದ್ದೆಂತಲೂ ಡಂಗೂರ ಸಾರಿಸಿದ್ದರು. ಆದಾಗ್ಯೂ ಮದರಾಸ್ ವಿದ್ಯಾಶಾಲೆಗಳಲ್ಲಿ ಓದುತ್ತಿರುವ ಅನೇಕ ಮಂದಿ ವಿದ್ಯಾರ್ಥಿಗಳು ದೋಣಿಗಳಲ್ಲಿ ಕುಳಿತು, ಆ ಹಡಗಿಗೆ ಹತ್ತಿಹೋಗಿ ಮಿ|| ಪಾಲರನ್ನು ಕಂಡು ಬಂದರು. ಪೋಲೀಸಿನವರು ಆ ಹುಡುಗರ ಪೈಕಿ ಮೂವತ್ತಾರು ಮಂದಿಯನ್ನು ಹಿಡಿದು, ಚೀಫ್ ಪೋಲೀಸ್ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿ, ಅವರೆಲ್ಲಾ ಸರ್ಕಾರದ ಹುಕುಮನ್ನು ಉಲ್ಲಂಘಿಸಿ, ಮೇಲ್ಬಂದ ಹಡಗಿನೊಳಕ್ಕೆ ಹೋಗಿಬಂದಿರುತ್ತಾರೆಂದು ಅವರ ಮೇಲೆ ಮೊಕದ್ದಮೆ ಮಾಡಿದರು. ಸ್ವಲ್ಪಹೊತ್ತು ಚರ್ಚೆಯಾದ ಮೇಲೆ ಮ್ಯಾಜಿಸ್ಟ್ರೇಟ್ ಮಿ|| ರಾಜರತ್ನ ಮೊದಲಿಯಾರ್ರವರು ಆ ಹುಡುಗರಿಂದ ಪತ್ರಬರೆಸಿಕೊಂಡು ಜಾಮೀನಿನ ಮೇಲೆ ಬಿಡುಗಡೆಮಾಡಿದರು. ಈ ಮೊಕದ್ದಮೆಯು ನಾಳೆ ಶನಿವಾರ ಪರ್ಯಾಪ್ತಿಯಾಗುವುದಾಗಿದೆ.

***

ಬೊಂಬಾಯಿ ಪಟ್ಟಣದಲ್ಲಿ ಸುಮಾರು ೧೦೦ ಮಂದಿ ಹಿಂದೂ ಮಹಮದೀಯ ವಿದ್ಯಾವತಿಯರು ಸಭೆ ಸೇರಿ "ಸೇವಾಸದನ" ವೆಂಬ ಸಭೆಯನ್ನು ಸ್ಥಾಪನೆಮಾಡಿದರು. ಈ ಸಭೆಯ ಮಂದಿರದಲ್ಲಿ ಸ್ತ್ರೀಯರಿಗೆ ಅವರ ಧರ್ಮಕ್ಕೆ ಅನುಗುಣವಾದ, ಅಂದರೆ ವಿದ್ಯೆ ಕಲಿಯುವುದು, ರೋಗಿಗಳಿಗೆ ಶೈತ್ಯೋಪಚಾರಮಾಡುವುದು, ಹೊಲಿಗೆ ಮುಂತಾದ ಕೆಲಸಗಳನ್ನು ಮಾಡುವುದು, ವೈದ್ಯ ಕೆರಿಗೆ ಆರೋಗ್ಯ ಪೋಷಣೆ ಮೊದಲಾದವುಗಳನ್ನು ಕಲಿತುಕೊಳ್ಳುವುದು, ಬಡಬಗ್ಗರ ಮನೆಗಳಿಗೆ ಹೋಗಿ ಹೆಂಗಸರು ಮಕ್ಕಳಿಗೆ ವಿವೇಕ ಹೇಳಿಕೊಡುವುದು, ಈ ಮೊದಲಾದ ಕೆಲಸಗಳನ್ನು ಕಲಿಸುತ್ತಾರೆ. ಈ ಧರ್ಮಕಾರ್ಯಕ್ಕೆ ಇದುವರೆಗೆ ಸುಮಾರು ೩೦ ಸಾವಿರ ರೂಪಾಯಿ ಧನಕ ಫಂಡು ಕೂಡಿಸಲ್ಪಟ್ಟಿದೆ. ಈ ಸಭೆಯ ಶಾಖೆಗಳನ್ನು ಗ್ವಾಲಿಯರ್, ಬರೋಡಾ, ಅಹಮದಾಬಾದ್, ಹೈದರಾಬಾದ್, ಪೂನಾ, ಸೂರತ್, ಸಿಂಧು, ಈ ಮೊದಲಾದ ಪಟ್ಟಣಗಳಲ್ಲೂ ಸ್ಥಾಪಿಸಿ ನಡಿಸಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಈ ಸೇವಾಸದನದ ಮೂಲಧನಕ್ಕೆ ಗ್ವಾಲಿಯರ್ ಸಂಸ್ಥಾನದ ಮಹಾರಾಜರವರು ೫೦,೦೦೦ ರೂಪಾಯಿ ಕಳುಹಿಸಿದ್ದಾರೆಂತಲೂ, ಇನ್ನು ಮುಂದೆ ಅವಶ್ಯವಿದ್ದಾಗಲೆಲ್ಲಾ ದ್ರವ್ಯಸಹಾಯಮಾಡುತ್ತಾ ಬರುವಂತೆ ತಿಳಿಸಿದ್ದಾರೆಂತಲೂ ಪ್ರಕಟವಾಗಿದೆ.

***

ಕಲ್ಕತ್ತೆಯಲ್ಲಿ ಮಾಣಿಕ್ಯತೋಲಾ ಉದ್ಯಾನವನದೊಳಗೆ ಕೆಲವು ಬಂಗಾಳಿಗಳು ಫಿತೂರಿಮಾಡುತ್ತಾ, ಸಿಡಿಮದ್ದಿನ ಗುಂಡುಗಳನ್ನು ತಯಾರುಮಾಡುತ್ತಾ, ದುಷ್ಕೃತ್ಯಗಳನ್ನು ನಡಿಸಿ ಇಂಗ್ಲಿಷ್ ಗವರ್ನ್‌ಮೆಂಟನ್ನು ತಲೆಕೆಳಗು ಮಾಡಬೇಕೆಂದು ಪ್ರಯತ್ನಮಾಡುತ್ತಿದ್ದರೆಂದು ಸರ್ಕಾರದವರು ಕೆಲವರನ್ನು ದಸ್ತಗಿರಿಮಾಡಿ, ಮೊದಲನೇ ಗುಂಪಿನ ಅಪರಾಧಿಗಳನ್ನು ಸೆಷನ್ ವಿಚಾರಣೆಗೆ ಗುರಿಮಾಡಿರುತ್ತಾರಷ್ಟೆ. ಈ ಗುಂಪಿನವರ ಪೈಕಿ ನರೇಂದ್ರ ಗೋಸ್ವಾಮಿ ಎಂಬೊಬ್ಬ ಬಂಗಾಳಿಗೆ ಸರ್ಕಾರದವರು ಕ್ಷಮಾಪಣೆಯನ್ನು ಕೊಡುವುದಾಗಿ ಹೇಳಿದ್ದರಿಂದ ಅವನು ಆ ಫಿತೂರಿ ಗುಂಪಿನವರು ನಡಿಸುತ್ತಿದ್ದ ಕಾರ್ಯಗಳನ್ನೆಲ್ಲಾ ಕೋರ್ಟಿನಲ್ಲಿ ವಿಸ್ತಾರವಾಗಿ ವಿವರಿಸಿ ಹೇಳಿದನು. ಇವನನ್ನು ಇತರ ಅಪರಾಧಿಗಳ ಜೊತೆಯಲ್ಲಿ ಅಲಿಪುರದ ಜೈಲ್‌ಖಾನೆಯಲ್ಲಿ ಇಟ್ಟಿದ್ದರು. ಕಳೆದ ಸೋಮವಾರ ಬೆಳಿಗ್ಗೆ ೭ ಗಂಟೆ ಹೊತ್ತಿನಲ್ಲಿ ಆ ಫಿತೂರಿ ಗುಂಪಿನ ಅಪರಾಧಿಗಳ ಪೈಕಿ ಕನ್ಹಾಯಿಲಾಲದತ್ ಎಂಬುವನೂ ಸತ್ಯೇಂದ್ರನಾಥಬೋಸ್ ಎಂಬುವನೂ ಸೇರಿ, ಆ ಗೋಸ್ವಾಮಿ ಎಂಬ ಅಪ್ರೂವರನ್ನು ಗುಂಡಿನಿಂದ ಹೊಡೆದು ಕೊಂದುಹಾಕಿದರು. ಅವರ ಕೈಲಿದ್ದ ಬಂದೂಕನ್ನು ಕಿತ್ತುಕೊಳ್ಳಬೇಕೆಂದು ಹಿಗಿನ್ಸ್, ಲಿಂಟನ್ ಎಂಬಿಬ್ಬರು ಸೈದಿಗಳು ಪ್ರಯತ್ನಪಟ್ಟಾಗ ಇವರಿಗೂ ಗುಂಡನ್ನು ಬಾರುಮಾಡಿ ಹೊಡೆದರು. ಅಷ್ಟರಲ್ಲಿ ಇತರರು ಹೋಗಿ ಅವರಿಬ್ಬರು ಕೊಲೆಗಾರರನ್ನು ಹಿಡಿದುಕೊಂಡರು. ಹಿಗಿನ್ಸ್ ಎಂಬ ಸೈದಿಯು ಬದುಕುವುದು ಕಷ್ಟ. ಈಗ ಆ ಕೊಲೆಗಾರರಿಬ್ಬರ ಮೇಲೂ ಮೊಕದ್ದಮೆ ಮಾಡಿದ್ದಾರೆ. ಜೈಲಿನೊಳಕ್ಕೆ ಆ ಸೈದಿಗಳು ಮದ್ದುಗುಂಡನ್ನು ಹ್ಯಾಗೆ ತರಿಸಿಕೊಂಡರೋ ಗೊತ್ತಾಗಲಿಲ್ಲ. ಈ ವಿಷಯದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ತನಿಖೆಮಾಡುತ್ತಿದ್ದಾರೆ.

ಸ್ವದೇಶೀ ನೆಯ್ಗೆ ನೂಲು ಬೇಕೋ?

71 1

ಪ್ರಸಿದ್ಧವಾದ ಬೊಂಬಾಯಿ ಸ್ವದೇಶೀ ಮಿಲ್ಸ್ ಎಂಬ ಕಾರಖಾನೆಯಲ್ಲಿ ತಯಾರಾಗುವ ನಂಬರ್ ವಾರ್ ನೂಲುಗಳಿಗೆ ನಾವು ಆರ್ಡರ್ ತೆಗೆದುಕೊಂಡು ತರಿಸಿಕೊಡಲು ಅಧಿಕಾರ ಹೊಂದಿರುತ್ತೇವೆ. ನೂಲಿನ ನಮೂನೆ ದರ ಮುಂತಾದ ತಪಸೀಲನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಎಂ. ಸೂರ್ಯನಾರಾಯಣಪ್ಪ

ಕಮಿಷನ್ ಮತ್ತು ಜನರಲ್ ಏಜೆನ್ಸಿ, ಶಿವಮೊಗ್ಗಾ.

ನಿಮಗೆ ಸುಪೀರಿಯರ್ ಉಲ್ ಬೇಕೇ?

ನಿಮಗೆ ದಪ್ಪದ ಉಲ್ ಬೇಕೇ?

117 46

೧೦ ತೋಪಿ ಯಾಗುವ ಸುಪೀರಿಯರ್ ಉಲ್ ಒಂದಲಿಗೆ	೩-೮-೦
ವಿಲಾಯಿತಿ ಉಲ್ ಪೌಂಡು ಒಂದಕ್ಕೆ	೭-೮-೦
೧೦ ತೋಪಿಯಾಗುವ ದಪ್ಪದ ಉಲ್ ಬಂಡಲಿಗೆ	೩-೦-೦
ಸತ್ಯವಿಜಯ ಕೇರ್ ಆಯಿಲ್ ಸೀಸೆಗೆ	೧-೦-೦

ಮೇಲ್ಕಂಡವುಗಳನ್ನು ವಿ. ಪಿ. ಮೂಲಕವೂ ರವಾನಿಸುತ್ತೇವೆ

ವಿಳಾಸ-ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ಮಧುರೆ ಸೀರೆ 'ಗಟ್ಟಿ ಬಣ್ಣ' ೧೨|| ಮೊಳದುದ್ದ !!

57-5

ಬಿಳಿಯ ಚುಕ್ಕೆ ನಾನಾ ರೂಪ್ಯಗಳಿಂದ ಕೂಡಿದ ಕೆಂಪು ಅಥವಾ ಕಪ್ಪು ಬಣ್ಣದ್ದು ರೂ. ೩-೮ ಆ. ನಯವಾಗಿ ಅಂಚು ಸೆರಗಿನಲ್ಲಿ ಜರತಾರಿಯುಳ್ಳದು ರೂ ೫ ಬೆಳ್ಳಿಯ ಕಲಾಬತ್ತು ಸೀರೆ, ರೂ ೭, ರೂ. ೮, ರೂ. ೧೦ ಹೆಚ್ಚು ಖರೀದಿಗೆ ಉತ್ತಮ ಮಾಲು ದೊರೆಯುತ್ತೆ.

ಮದ್ರಾಸು ಬಿಳಿಯ ರೇಷ್ಮೆ ಅಂಚಿನ ಸೀರೆ ರೂ. ೬.

ಒಂದೇ ತರದ ೨ ರೇಷ್ಮೆ ಸೆರಗುಳ್ಳ ೨ ಅಂಗುಲ ಬಿಳಿರೇಷ್ಮೆ ದ್ರಾಕ್ಷಿ ಅಂಚುಳ್ಳ ಗಟ್ಟಿ ಕಪ್ಪು ಬಣ್ಣದ ೧೮ ಮೊಳದ ಸೀರೆಗೆ ರೂ. ೬. ೩ ಅಂಗುಲದಂಚಿನದಕ್ಕೆ ರೂ. ೭|| ಬಹು ನಯವಾದ ನೂಲು ಬಿಳಿ ಆಸ್ಸಾಂ ರೇಷ್ಮೆ ಅಂಚು, ೨ ಮೊಳದ ರೇಷ್ಮೆ ೨ ಸೆರಗು, ಬಹು ಸೊಗಸಾಗಿಯೂ ಎಂದಿಗೂ ಕೆಡದ ಖಾತರಿ ಬಣ್ಣದಲ್ಲಿ ತಯಾರಿಸಿದ ೨ ಅಂಗುಲದಂಚಿನದಕ್ಕೆ ರೂ. ೯|., ೩ ಅಂಗುಲದಂಚಿನದಕ್ಕೆ ರೂ. ೧೦|.

ಬುರ್ನೀಸ್! "ಬ್ಲಾಂಕೆಟ್" ಎಂಬ ಹೊಸ ಬನಾತು! ರೂ ೬.

ಶುದ್ಧ ಉಣ್ಣೆಯ ಹೊದಿಯಲು ಮಖಮಲಿನಂತೆ ಮೆತ್ತಗೂ ಭಾಳ ಬೆಚ್ಚಗೂ ಇದೆ, ಉದ್ದ ೮೦, ಅಗಲ ೪೮ ಅಂಗುಲ ಕ್ರಯ ರೂ. ೬.

ರೇಷ್ಮೆಯ (ಕೆಂಪು) ವಸ್ತ್ರಗಳು! ೨ ಮೊಳದಗಲ! ರೂ. ೫.

೩×೮ ಮೊಳದ ಮೇಲಂಕೋಟ ಅಂಚಿನ ಸಂಟಿಗಳು ಜೊತೆ ರೂ. ೩.

ವಿಳಾಸ.--ರಾವ್ ಎಂಪೋರಿಯಂ, ಸೈಡ್ ಫಾಂ ರೋಡ್,

ವೇಪೇರಿ, ಮದ್ರಾಸು.

ಸತ್ಯವಾಗಿಯೂ ಅಗ್ಗದ ಅಂಗಡಿ.

ಸ್ವದೇಶೀ ಟ್ರಂಕುಗಳು.

ಯಥಾರ್ಥವಾದ ಉಕ್ಕಿನ ಪೆಟ್ಟಿಗೆಗಳು.

ಅಗ್ಗವಾಗಿವೆ. ಬಾಳಿಕೆ ಬರುತ್ತವೆ

69-6

ಇಂಗ್ಲಿಷ್ ಮಾದ್ರಿಯ ಮತ್ತು ಸೊಗಸುಳ್ಳ ಉತ್ತಮೋತ್ತಮವಾದ ಉಕ್ಕಿನ ಟ್ರಂಕು (ಪೆಟ್ಟಿಗೆ) ಗಳು ನಮ್ಮಲ್ಲಿ ಮಾರಿಕೆಯಾಗುತ್ತವೆ. ಹಿಂದುಸ್ಥಾನದ ಎಲ್ಲಾ ಭಾಗಗಳ ಭಾರೀ ವರ್ತಕರೆಲ್ಲಾ ಇವನ್ನು ನಮ್ಮಿಂದಲೇ ಕೆಳಗೆ ಹೇಳುವ ಕ್ರಯಕ್ಕೆ ತರಿಸಿಕೊಳ್ಳುತ್ತಿದ್ದಾರೆ

ಒಂದರೊಳಗೊಂದರಂತೆ ೪ ಉಕ್ಕಿನ ಟ್ರಂಕುಗಳಿರುವ ಒಂದು ಸೆಟ್ಟಿರುವುದು. ಅವುಗಳ ಆಕಾರ —

೨೦ ಅಂ	ಉದ್ದ,	೧೧ ಅಂ	ಅಗಲ	ಮತ್ತು	೮ ಅಂ.	ಎತ್ತರ
೨೪	,,	,,	೧೩	,,	,,	೯	,,	,,
೨೬	,,	,,	೧೫	,,	,,	೧೦	,,	,,
೩೦	,,	,,	೧೬	,,	,,	೧೨	,,	,,

ಈ ನಾಲ್ಕರ ಒಟ್ಟು ಬೆಲೆ ರೂ. ೧೨. ಮರದ ಪೆಟ್ಟಿಗೆಯಿಂದ ಪ್ಯಾಕ್‌ಮಾಡುವ ಛಾರ್ಜ್ ಆ ೪

ಒಂದರೊಳಗೊಂದರಂತೆ ೩ ಉಕ್ಕಿನ ಟ್ರಂಕುಗಳಿರುವ ಒಂದು ಸೆಟ್ಟಿರುವುದು. ಉದ್ದ ೨೮, ೨೪, ೨೬ ಅಂಗುಲಗಳೂ ಅಗಲ ಮತ್ತು ಎತ್ತರ ಮೇಲಿನಂತೆಯೂ ಇರುತ್ತವೆ.

ಈ ಮೂರು ಪೆಟ್ಟಿಗೆಯುಳ್ಳ ಸೆಟ್ಟಿನ ಕ್ರಯ ರೂ ೮-೮. ಮರದ ಪೆಟ್ಟಿಗೆಯಿಂದ ಪ್ಯಾಕ್‌ಮಾಡುವ ಛಾರ್ಜ್ ಆ ೪. ರೈಲ್ ಛಕೀತಿಗೆ ಸುಮಾರು ಆ. ೨. ರೈಲ್ ಛಾರ್ಜನ್ನು ಅಲ್ಲೇ ಪಾವತಿಮಾಡತಕ್ಕದ್ದು.

ನಗದುಹಣ.—ಅಥವಾ, ಮನಿ ಆರ್ಡರ್ ಮೂಲಕ ಅರ್ಧ ಹಣ ಅಡ್ವಾನ್ಸು ಬಂದರೆ, ಅಪೇಕ್ಷಿಸಿದ ಪ್ರಕಾರ ೪ ಅಥವಾ ೩ ಟ್ರಂಕುಗಳುಳ್ಳ ಸೆಟ್ಟನ್ನು ಮಾದ್ರಿಗಾಗಿ ಕಳುಹಿಸುತ್ತೇವೆ, ರೈಲ್ ರಶೀತಿಯನ್ನು ಬಾಕಿ ಅರ್ಧ ಹಣಕ್ಕೆ ವಿ. ಪಿ. ಮೂಲಕ ಕಳುಹಿಸುವೆವು.

ನಮ್ಮಲ್ಲಿರುವ ಈ ಪ್ರಖ್ಯಾತವಾದ ಟ್ರಂಕು (ಪೆಟ್ಟಿಗೆ)ಗಳು ಬಹಳ ಅಂದವಾಗಿಯೂ ಗಟ್ಟಿ ತರವಾಗಿಯೂ ಮೋಹಿಸುವಂತೆಯೂ ಇರೋಣದರಿಂದ ವರ್ತಕರು ಬಹಳ ಲಾಭ ಪಡೆಯುತ್ತಿದ್ದಾರೆ. ಈ ಸಂಗತಿಯನ್ನು ವಾಚಕರೆಲ್ಲಾ ಚನ್ನಾಗಿ ತಿಳಿಯಬೇಕೆಂದು ಕೋರುತ್ತೇವೆ

ದಯವಿಟ್ಟು ನೋಡಿ.—೭೨ ರಿಂದ ೩೫ ಅಥವಾ ೨೩ ರಿಂದ ೨೫ ಸೇರುಗಳು ತೂಗುವ ೪ ಅಥವಾ ೩ ಪೆಟ್ಟಿಗೆಗಳುಳ್ಳ ಒಂದು ಸೆಟ್ಟನ್ನು ರೈಲ್ವೆ ಗೂಡ್ಸ್ ಗಾಡಿಯಲ್ಲಿ ತರಿಸಿಕೊಳ್ಳಬಹುದು.

ಎರಡು ಸೆಟ್ಟುಳ್ಳ ಪೆಟ್ಟಿಗೆಗಳ ರೈಲ್ ಛಾರ್ಜ್ ಬಹಳ ಕಡಮೆ. ನಿಮ್ಮ ಅಪ್ಪಣೆಯನ್ನು ನಿರೀಕ್ಷಿಸುತ್ತೇವೆ

ಒಂದೇ ಸಲ ೧೨ ಪೆಟ್ಟಿಗೆ ತರಿಸಿಕೊಂಡರೆ ಪೆಟ್ಟಿಗೆ ಒಂದಕ್ಕೆ ೨ ಆಣೆ ಡಿಸ್ಕೌಂಟು ಸಿಗುತ್ತೆ

ತಾ. ಕ.—ಈ ಪೆಟ್ಟಿಗೆಗಳನ್ನು ಯಥಾರ್ಥವಾದ ಉಕ್ಕಿನಿಂದ ಇಂಗ್ಲಿಷ್ ಮಾದ್ರಿಯ ಪ್ರಕಾರ ಮಾಡಿಲ್ಲದೆ ಹೋದರೆ ೧೦೦ ರೂಪಾಯಿ ಬಹುಮಾನ (ಪ್ರತಿಫಲ) ಕೊಡಲು ಸಿದ್ಧರಾಗಿದ್ದೇವೆ

ಮೊದಲು ಅರ್ಧ ಹಣ ಅಡ್ವಾನ್ಸ್ ಕಳುಹದಿದ್ದರೆ ನಾವು ಪೆಟ್ಟಿಗೆ ರವಾನೆ ಮಾಡಲಾರೆವು. ಉಳಿದ ಅರ್ಧ ಹಣವನ್ನು ವಿ. ಪಿ. ಮೂಲಕ ಕೊಡಬಹುದು. ಮನಿ ಆರ್ಡರ್ ಕೂಪನ್ನಿನಲ್ಲಿ ನಿಮ್ಮ ಊರಿಗೆ ಸಮೀಪವಾದ ರೈಲ್ ಸ್ಟೇಷನ್ ಹೆಸರನ್ನು ನಮೂದಿಸಬೇಕು

ನಮ್ಮ ವಿಳಾಸ —ಎಂ. ಎ. ಫಾರೂಖ್ ಖಾನ್ ಕಂಪನಿ

ಚಿತ್ತೂರು, ಉತ್ತರ ಆರ್ಕಾಟು.

ಪೆರೂನಾ ಎಲ್ಲಾ ಶೀತರೋಗಗಳನ್ನೂ ನಿವಾರಣೆ ಮಾಡುವುದರಲ್ಲಿ ಅಮೂಲ್ಯವಾಗಿದೆ ಎಂದು ಪ್ರಮುಖ ಆಸ್ಪತ್ರೆಗಳು ಹೇಳುತ್ತವೆ.



SISTERS OF THE GOOD SHEPHERD, MONTREAL.

ಸಿಸ್ಟರ್ಸ್ ಆಫ್ ದಿ ಗುಡ್ ಷೆಫರ್ಡ್, ಮಾಂಟ್ರೀಲ್ [34-23]

ಭೂಮಿಯ ಮೇಲಿರುವ ಆಸ್ಪತ್ರೆಗಳೆಲ್ಲಾ ಶೀತರೋಗಗಳನ್ನು ಚಿಕಿತ್ಸೆ ಮಾಡುವಲ್ಲಿ ಪೆರೂನಾ ಔಷಧವು ಬಹು ಬೆಲೆಯುಳ್ಳದ್ದೆಂದು ಕಂಡುಕೊಂಡಿವೆ.

ಶೀತ ನೆಗಡಿ ಮುಂತಾದ್ದು ಶ್ವಾಸಕೋಶಕ್ಕೆ ಬರುವ ರೋಗವೆಂತಲೂ ಅದು ಆರೇ ಪಕ್ಷ ಮಂ ಷಕ್ಕೆ ಎಂಟು ತಿಂಗಳ ಕಾಲ ಬರುವುದೆಂತಲೂ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ

ಈ ದೇಶದಲ್ಲಿ ಶೀತಕಾಲವು ದೀರ್ಘವಾದ ಮತ್ತು ಕಠಿಣವಾದ ಹವಾ ಉಳ್ಳದ್ದಾಗಿ ಬಹಳ ಕಾಲ ಇರುವುದರಿಂದ ಆಗಲೇ ಶೀತ ಜಾಡ್ಯಗಳು ಪ್ರಾಪ್ತವಾಗುವವೆಂದು ಖಂಡಿತವಾಗಿ ಹೇಳಬಹುದು.

ಆದಕಾರಣ ಕೆನಡಾ ಜನರು ಶೀತರೋಗಕ್ಕೆಲ್ಲಾ ಪೆರೂನಾ ನಂಬಿಕೆಯಾದ ಒಳ್ಳೇ ಔಷಧವೆಂದು ತಿಳಿದಕೂಡಲೇ ಅದನ್ನು ಎಲ್ಲಾ ಜನರು ಪ್ರೀತಿಮಾಡಿ ಉಪಯೋಗಿಸುತ್ತಾ ಬಂದರು; ಸಂಸಾರಗಳಲ್ಲಿ ಮಾತ್ರವೇ ಅಲ್ಲ; ದೊಡ್ಡ ಆಸ್ಪತ್ರೆಗಳಲ್ಲೂ ಕೂಡ ಆ ರೋಗಗಳನ್ನು ತಡೆಯುವುದಕ್ಕೂ ನೂರಾರು ರೋಗಿಗಳಿಗೆ ಸೌಖ್ಯವನ್ನುಂಟುಮಾಡುವುದಕ್ಕೂ ಪೆರೂನಾವನ್ನು ಉಪಯೋಗಿಸುತ್ತಾ ಬಂದರು

ಬಡಬಗ್ಗರಾಗಿಯೂ ರೋಗಿಗಳಾಗಿಯೂ ಇರುವಂಥವರಿಗೆ ಬಹು ತುಂಬಾ ಪ್ರಯೋಜನವನ್ನುಂಟುಮಾಡಿದ ವಿಷಯದಲ್ಲಿ ದೊಡ್ಡ ಆಸ್ಪತ್ರೆಯವರು ಒಪ್ಪಿ ಸಮ್ಮತಿಯನ್ನು ಕೊಡಲು ಹಿಂತೆಗೆದಿಲ್ಲವು

ಈ ದೊಡ್ಡ ಆಸ್ಪತ್ರೆಗಳ ಪೈಕಿ ಸಿಸ್ಟರ್ಸ್ ಆಫ್ ಗುಡ್ ಷೆಫರ್ಡ್ ಎಂಬುದು ಒಂದು ಅದರ ನೌಕರಮಾನೆಯವರು ಹೇಳುವುದನ್ನು ಕೇಳಿ:—

ಓಹಿಯೋ ಡಿಸ್ಟ್ರಿಕ್ಟ್ ಕೊಲಂಬಸ್ ಪಟ್ಟಣದಲ್ಲಿರುವ ಪೆರೂನಾ ಕಂಪನಿಗೆ—

ಕಳೆದ ಕೆಲವು ತಿಂಗಳಿಂದಲೂ ನಮ್ಮ ಕಾಯಿಲೆಯವರಿಗೂ ಬಡವರಿಗೂ ಪೆರೂನಾವನ್ನು ಪ್ರಯೋಗಮಾಡಿರುತ್ತೇವೆ, ಅದು ನಮಗೆ ತುಂಬಾ ತೃಪ್ತಿಯನ್ನುಂಟುಮಾಡಿರುತ್ತದೆಂದು ಸಂತೋಷವಾಗಿ ಹೇಳುವೆವು.

ಗುಡ್ ಷೆಫರ್ಡ್ ಸಹೋದರಿಯರು, ಆಗಸ್ಟ್ ೨೦, ೧೯೦೩.

ಮಾಂಟ್ರೀಲ್.

ಈ ಆಸ್ಪತ್ರೆಯು ಬಹು ದೀರ್ಘಕಾಲ ಈ ಔಷಧವನ್ನು ಉಪಯೋಗಿಸುತ್ತಾ ಬಂದು ಅದರ ಗುಣದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಬದಲಾಯಿಸುವುದಕ್ಕೆ ಕಾರಣವನ್ನು ಕಾಣದೆ, ತಮ್ಮ ಸಂತೋಷದ ತೃಪ್ತಿಯನ್ನು ಈ ರೀತಿ ಮುಂದೆ ಹೇಳುವ ಪ್ರಕಾರ ಬರೆದಿರುತ್ತಾರೆ —

ಮಾಂಟ್ರೀಲ್, ನೊವೆಂ. ೭, ೧೯೦೩.

ಪೆರೂನಾ ಅನೇಕ ರೋಗಿಗಳಿಗೆ ಸೌಖ್ಯಕೊಟ್ಟಿರುವುದನ್ನು ಕಂಡಿರುತ್ತೇವೆ. ಅದು ಒಳ್ಳೇ ಬಲಕಾರಿಯಾದ ಸೇವನೆಯ ಔಷಧವೆಂದು ಹೇಳಬಲ್ಲೆವು; ಮತ್ತು ಅದಕ್ಕಾಗಿ ನಾವು ನಿಮ್ಮನ್ನು ವಂದಿಸುತ್ತೇವೆ.

ಗುಡ್ ಷೆಫರ್ಡ್ ಆಸ್ಪತ್ರೆ ಸಹೋದರಿಯರು.

ಶೀತವು ಶರೀರದಲ್ಲಿ ಬೇರೂರಿತೆಂದರೆ ಅದನ್ನು ಹೋಗಲಾಡಿಸುವುದು ತುಂಬಾ ಕಷ್ಟವಾದೀತು

ಇದು ಶರೀರವನ್ನು ಹಿಡಿಯುವಂಥಾ, ದೇಹದ ಅಂಗಾಂಗಗಳಿಗೂ ವ್ಯಾಪನೆಯಾಗುವಂಥಾ ಔಷಧವಾದ್ದರಿಂದ ಅದನ್ನು ಬಹಳ ಅಗತ್ಯವಾಗಿ ಉಪಯೋಗ ಮಾಡಬೇಕಾಗಿರುತ್ತದೆ

ಪೆರೂನಾ ಅಂಥಾ ಒಳ್ಳೆಯ ಔಷಧವಾಗಿರುತ್ತದೆ ಅದು ದೇಹದೊಳಗಿರುವ ಕಾಯಿಲೆಯ ಪ್ರವೇಶವನ್ನು ತಡೆದು ಹಿಡಿಯುವುದು. ಬಳಿಕ ಮಾರ್ಗವನ್ನು ಗಟ್ಟಿಪಡಿಸಿ ಗಟ್ಟಿ ಮಾಡುವುದು. ಅದರ ಮೇಲೆ ಶರೀರಸೌಖ್ಯವು ತಾನಾಗಿ ಹಿಂತಿರುಗಿ ಬರುತ್ತದೆ

ಶೀತದಿಂದ ಬಹಳ ಕಠಿಣವಾದ ಕಾಯಿಲೆಗಳನ್ನು ಇಟ್ಟು ಕಾಲಾದು ಮಾಡಿ ವಾಸಿಮಾಡಿದ ಅನೇಕ ಆಸ್ಪತ್ರೆಗಳ ಪೈಕಿ ಸೇಂಟ್ ಜಾರ್ಜ ಎಂಬುದು ಒಂದಾಗಿರುತ್ತದೆ ಈ ಆಸ್ಪತ್ರೆಯವರು ಬರೆಯುವುದನ್ನು ನೋಡಿ —

“ನಿಮ್ಮ ಪೆರೂನಾವು ನಮಗೆ ತುಂಬಾ ತೃಪ್ತಿಕರವಾಗಿದೆ ಎಂದು ತಿಳಿಸಲು ಸಂತೋಷವುಳ್ಳವರಾಗಿದ್ದೇವೆ ಮೂವರು ರೋಗಿಗಳು ಈ ಔಷಧವನ್ನು ಉಪಯೋಗಿಸಿದರು ೬೯ ವರುಷ ವಯಸ್ಸಾದ ರನೋಯ ಡಾಕ್ಟ್ರಾಯಿಟ್ ಎಂಬುವನು ಶೀತದಿಂದ ಬಹಳ ಕಷ್ಟಪಡುತ್ತಿದ್ದನು ಈಗ ಅವನು ತುಂಬಾ ಸೌಖ್ಯವಾಗಿದ್ದಾನೆ ಇಷ್ಟು ವಯಸ್ಸಿಗೆ ಅವನು ಅನೇಕ ವರುಷಗಳಿಂದ ಆರೋಗ್ಯವಾಗಿಲ್ಲ

“ಹದಿನೈದು ವರುಷದ ಒಬ್ಬ ಹುಡುಗಿಗೆ ಬಹು ಕಠಿಣವಾದ ಕೆಮ್ಮಲು ಹಿಡಿದಿತ್ತು, ಅವಳಿಗೆ ಪೆರೂನಾವನ್ನು ಅರ್ಧ ಶೀಸೆ ಕೊಡುವುದರಲ್ಲೇ ಆ ಕೆಮ್ಮಲು ಅದೃಶ್ಯವಾಯಿತು.

“ನನ್ನ ವಿಷಯವನ್ನು ಹೇಳುತ್ತೇನೆ ಎರಡು ಬಾಟ್ಲು ಔಷಧವನ್ನು ತೆಗೆದುಕೊಳ್ಳುವಷ್ಟರಲ್ಲೇ ಪೆರೂನಾ ಬಹು ಉತ್ಕೃಷ್ಟವಾದ ಬಲವನ್ನು ಕೊಡುವ ಔಷಧವೆಂದು ನನಗೆ ಪರಿಷ್ಕಾರವಾಗಿ ತಿಳಿದು ಬಂದಿದೆ

“ಇದನ್ನು ಸೇವಿಸುವುದಕ್ಕೆ ಮುಂಚೆ ನಾನು ಕಾಲುಗಂಟೆ ಹೊತ್ತು ನಡೆಯುವುದಕ್ಕೂ ಆಗದೆ ಉಬ್ಬಸಪಡುತ್ತಿದ್ದೆ. ಈಗ ನಾನು ಒಂದು ಮೈಲಿ ದೂರವಾದರೂ ಸುಲಭವಾಗಿ ನಡೆಯಬಲ್ಲೆನು

“ಈ ಮೂರು ರೋಗಿಗಳ ಮೂಲಕ ನಿಮ್ಮ ಔಷಧವು ಬಹು ಫಲಕಾರಿಯಾದದ್ದೆಂದು ಸಕಲರಿಗೂ ತಿಳಿಯಪಡಿಸುತ್ತೇವೆ”

ಸೇಂಟ್ ಜಾರ್ಜ ಆಸ್ಪತ್ರೆ, ಕ್ವೀಬೆಕ್

ಬೋಲ್ಟನ್‌ದ ಆಸ್ಪತ್ರೆಯಿಂದ ಈಚೆಗೆ ಬಂದಿರುವ ಕಾಗದವು ಈ ರೀತಿಯಾಗಿ ಹೇಳುತ್ತದೆ.—

“ಪೆರೂನಾವು ನಮಗೆ ಎಷ್ಟು ತೃಪ್ತಿಯನ್ನು ಕೊಟ್ಟಿತೋ ಮೂರು ವಾರಗಳ ಕೆಳಗೆ ನಿಮಗೆ ಬರೆದು ತಿಳಿಸಿರುತ್ತೇವೆ. ಅದನ್ನು ಶೀತ, ವಾತ, ಕೆಮ್ಮು, ಅರತಲೆ ನೋವು ಈ ಮೊದಲಾದ ರೋಗಗಳಿಗೆ ಪ್ರಯೋಗಮಾಡಬಹುದೆಂದು ಶಿಫಾರಸು ಮಾಡುತ್ತೇವೆ.

“ನಾನು ಅದನ್ನು ಶಕ್ತಿ ಪುಷ್ಟಿಗಾಗಿ ಸೇವಿಸಿರುತ್ತೇನೆ ಅದರಲ್ಲಿ ಹೇಳಿರುವ ಪ್ರಕಾರ ಪ್ರತಿ ಅರ್ಧಗಂಟೆಗೂ ಅರ್ಧ ಟೀಚಮಚದಷ್ಟು ಸೇವಿಸುತ್ತೇನೆ.”

ಮಿಸೆಸ್ ಎಟ್ಟಾ ಬೂಕಾರ್ಡ್, ಡಿಂಸರ್, ಮಾಸ್ಸ್, ಎ ಡಬ್ಲಿಯು ಟಿ ಕಸರಾ ಕಾಶೆ ಬರೆಯುವುದೇನೆಂದರೆ.—

“ನಾನು ಶೀತಕ್ರಾಂತಿಯಲ್ಲಿ ಶೀತವಾಯುವಿನಿಂದ ಬಾಧೆಪಡುತ್ತಿದ್ದು, ಕಡೆಗೆ ಡಾಕ್ಟರ್ ಹಾರ್ಟ್‌ಮನ್‌ರವರಿಗೆ ಬರೆದು ಕೇಳಿದೆನು. ಅವರು ಹೇಳಿದ ಪ್ರಕಾರ ಔಷಧವನ್ನು ತೆಗೆದುಕೊಳ್ಳುತ್ತಾ ಬಂದೆನು ಈಗ ಆ ಕಷ್ಟಕರವಾಗಿದ್ದ ಬಾಧೆಯು ನನಗೆ ನಿವಾರಣೆಯಾಗಿ ಸೌಖ್ಯವಾಗಿದೇನೆ ಮತ್ತು ನಾನು ಅದಕ್ಕಾಗಿ ತುಂಬಾ ಕೃತಜ್ಞಳಾಗಿರುವೆನು ಪೆರೂನಾವು ಶೀತವಾಯುವಿಗೆ ಸರ್ವೋತ್ತಮವಾದ ಔಷಧವೆಂದು ನಾನು ತಿಳಿದಿದ್ದೇನೆ ಈಗ ನನಗಿರುವಷ್ಟು ದೇಹಸೌಖ್ಯವು ಹಿಂದೆ ಯಾವಾಗಲೂ ಇರಲಿಲ್ಲ”

ಪೆರೂನಾವು ಕೆಮ್ಮನ್ನು ಶೀತವಾತಗಳನ್ನೂ ಪ್ರಾರಂಭದಲ್ಲೇ ಬೇಗನೆ ಗುಣಮಾಡುವುದಲ್ಲದೆ ಬಹಳ ದೀರ್ಘಕಾಲದ ಶೀತವಾತ ರೋಗಗಳನ್ನೆಲ್ಲಾ ಚನ್ನಾಗಿ ವಾಸಿಮಾಡಬಲ್ಲದು.

ಆದರೂ ರೋಗ ಹುಟ್ಟಿದ ಪ್ರಾರಂಭದಲ್ಲಿ ಬಹಳ ಸ್ವಲ್ಪ ಔಷಧವನ್ನು ಸೇವಿಸಿದ ಮಾತ್ರಕ್ಕೇ ಅದು ನಿವಾರಣೆಯಾಗುತ್ತದೆಂತಲೂ ರೋಗವು ಹಳೆದಾದ ಮೇಲೆ ಬಹಳ ಔಷಧವನ್ನು ಸೇವಿಸಬೇಕಾಗುತ್ತದೆಂತಲೂ ನಾವು ಹೇಳಬೇಕಾದ ಅಗತ್ಯವಿಲ್ಲ

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

14—8—1908 ರಿಂದ 21—8—1908 ರ ವರೆಗೆ

ಸ್ಥಳ	ಪ್ಲೇಗ್ ಆಗಲಿ ವೃದ್ಧಿ.	ಪ್ಲೇಗ್ ಮೃತ ಸಂಖ್ಯೆ.	ಕಾಲರಾ ಆಗಲಿ ವೃದ್ಧಿ.	ಕಾಲರಾ ಮೃತ ಸಂಖ್ಯೆ
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	2*	2*	0	0
ಬೆಂಗಳೂರು ಡಿಸ್ಟ್ರಿಕ್ಟು	81	47	0	0
ಮೈಸೂರು ,,	61	80	0	0
ಕೋಲಾರ್ ,,	29	18	1	1
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	11	9	0	0
ಹಾಸನ ,,	5	4	[illegible]	[illegible]
ಚಿತ್ರದುರ್ಗ ,,	0	0	10	9
ಕಡೂರ್ ,,	84	53	8	[illegible]
ಶಿವಮೊಗ್ಗ ,,	23	17	*	[illegible]
* ಹೊರಗಿನದು ಒಟ್ಟು	335	208	21	11

ಶಾಲಿವಾಹನ ಶಕ ವರುಷಂಗಳ ೧೮೩೦ ನೇ ಕೀಲಕನಾಮ ಸಂವತ್ಸರದ ಭಾದ್ರಪದ ಶುದ್ಧ ಸಪ್ತಮಿ ಗುರುವಾರದಿಂದ ಭಾದ್ರಪದ ಶುದ್ಧ ಚತುರ್ದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಸೆಪ್ಟಂಬರ್.

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ತೇದಿ ಸಿಂಹ ಮಾಸ
3	ಗುರು	ಸಪ್ತಮಿ	5-8	ಜ್ಯೇ	31 58	19
4	ಶುಕ್ರ ,,	ಅಷ್ಟಮಿ	6 4	ಜ್ಯೇ	31-11	20
5	ಶನಿವಾ	ನವಮಿ	2-42	ಉಷಾ	55 46	21
6	ರವಿವಾ *	ಏಕಾದಶಿ	53-22	ಪೂರ್ವಾ	26-36	22
7	ಚಂದ್ರ †	ದ್ವಾದಶಿ	46-47	ಶ್ರವಣ	23-12	23
8	ಕುಜ ‡	ತ್ರಯೋದ	42-30	ಧ	19-20	24
9	ಬುಧ ,;	ಚತುರ್ದಶಿ	35 58	ಶ	15-20	25

,, ದಗ್ಧಯೋಗ * ಸ್ಮಾರ್ತರ ಏಕಾದಶಿ, ಪರಿವರ್ತನೈಕಾದಶಿ † ಹರಿವಾಸರ, ವೈಷ್ಣವ ಏಕಾದಶಿ, ಕಲ್ಕಿದ್ವಾದಶಿ, ವಾಮನಜಯಂತಿ ‡ ಪ್ರದೋಷ, ಅಶ್ವಲಾಯನ ಪ್ರಥಮೋಪಾಕರ್ಮ ;, ಶ್ರೀಮದನಂತ ಪದ್ಮನಾಭವ್ರತ

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು.
ಕಿತ್ತು ಅಕ್ಕಿ ಪಲ್ಲ ೧ಕ್ಕೆ	ರೂ.	[illegible]	[illegible]
[illegible] ಅಕ್ಕಿ [illegible]		[illegible]	[illegible]
[illegible]		[illegible]	[illegible]
[illegible] ಅಕ್ಕಿ		[illegible]	[illegible]
[illegible]		[illegible]	[illegible]
[illegible]		[illegible]	[illegible]
[illegible] ಪಲ್ಲ [illegible]		[illegible]	[illegible]
[illegible]		[illegible]	[illegible]
[illegible] ಪಲ್ಲ [illegible]		[illegible]	[illegible]
[illegible]		[illegible]	[illegible]
[illegible]		[illegible]	[illegible]
[illegible] ಪಲ್ಲ [illegible]		[illegible]	[illegible]
[illegible]		[illegible]	[illegible]
ಹೆಸರು		[illegible]	[illegible]
ಉದ್ದು		[illegible]	[illegible]
ಕಡಲೆ		[illegible]	[illegible]
[illegible]		[illegible]	[illegible]
[illegible]		[illegible]	[illegible]
[illegible]		[illegible]	[illegible]
[illegible] ಮಣ ೧ಕ್ಕೆ		[illegible]	[illegible]
[illegible]		[illegible]	[illegible]
[illegible]		[illegible]	[illegible]
[illegible]		[illegible]	[illegible]
[illegible] ಮಣ ೧ಕ್ಕೆ		[illegible]	[illegible]
[illegible]		[illegible]	[illegible]
[illegible] ಪಲ್ಲ ೧ಕ್ಕೆ		[illegible]	[illegible]
ಉಪ್ಪು		[illegible]	[illegible]
[illegible]		[illegible]	[illegible]
[illegible]		[illegible]	[illegible]
[illegible] ಮಣ ೧ಕ್ಕೆ		[illegible]	[illegible]
[illegible] ಪಟ್ಟು ೧ಕ್ಕೆ		[illegible]	[illegible]
[illegible] ೧೦೦ ಕ್ಕೆ		[illegible]	[illegible]
[illegible] ಮಣ ೧ಕ್ಕೆ		[illegible]	[illegible]
[illegible] ಮಣ ೧ಕ್ಕೆ		[illegible]	[illegible]
[illegible] ಕ್ಯಾಂಡಿ		[illegible]	[illegible]
,, ,, ಹಸಿದು		[illegible]	[illegible]
,, ,, ಗಟ್ಟಿ ತೊಲ [illegible]		[illegible]	[illegible]
[illegible] ಗಟ್ಟಿ ತೊಲ ೧೦೦ ಕ್ಕೆ		[illegible]	[illegible]

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore. 3/9/1908.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—೧೯೦೮ ನೇ ಇಸವಿ ಸೆಪ್ಟಂಬರ್ ತಾರೀಖು ೧೦ ನೇ ಗುರುವಾರ. ಸಂಚಿಕೆ ೧೫

ಮಹಾ ಬಾಧಾಪಹಾರಿಣಿಯು

48-16

ಇದನ್ನು ಕೇಳಲಿಕ್ಕೆ ಪ್ರಪಂಚದಲ್ಲಿ ಇಲವೆ

ಶ್ರೀ ನಾರಾಯಣರ ಯಕ್ಷ್ಮಾಣಿ ತೈಲವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಶಾಸ್ತ್ರೀಯರು ಮೊದಲಾದ ಅನೇಕರು ಒಪ್ಪಿ ಹೇಳಿರುವರು. ಈ ರಸಾಯನವನ್ನು ಲೇಪನ ಮಾಡಿದ ಮಾತ್ರಕ್ಕೇ ತಲೆನೋವು, ವಾಯು ನೋವು, ಕಳತ, ಗಂಟು ನೋವು, ಪಾರ್ಶ್ವ ವಾಯು ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನು ನೋವು, ಕಾಲುಗಳ ಸಂದುಕಟ್ಟುಗಳ ನೋವು, ಹೇಳ ಕರುಳ ನೋವು, ಹಲ್ಲು ನೋವು ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಬರುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. [illegible] ಈ ಅಪೂರ್ವವಾದ ತೈಲವು ಸೋಕಿದ ಕೂಡಲೆ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ ಅದರ ಶಕ್ತಿಯನ್ನೇ ಅಡಗಿಸಿಬಿಡುತ್ತದೆ. ಬಹುಮಂದಿ ಪತ್ರಿಕಾಕರ್ತರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುವಾರೆ.

ಕ್ರಯ ಸೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಅವರ ೩ ಅಥವಾ ಹೆಚ್ಚು ಬಾಟಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜ್ ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳ ಪ್ರಕಾರದ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಳಕೆ ಮಾಡ ಕ್ಕಾರ[illegible] ವಿಳಾಸ—

ಎಸ್. ಪೀಟರ್ಸ್,

೨೨ ಪೆರುಮಾಳ್‌ಪಿಳ್ಳೆ ಬೀದಿ, ಪೇಟೆ, ಮದರಾಸ್

ಜ್ವರಹರಿ 64 6

ಇದು ಸಾಧಾರಣ ಜ್ವರ, ಹಳೇಜ್ವರ ಚಳಿಜ್ವರ ಪಿತ್ತಜ್ವರ, ಶೀತಜ್ವರ ಸಂತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹಳ ಬೇಗನೆ ವಾಸಿಮಾಡುವದು.

ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರಿನಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ [illegible] ಬಾಗಿನ ಸೀಸೆಗಳು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ಹರಿಂದ ದಯವಿಟ್ಟು ಇನ್ನೊಂದು ೧೦ ಬಾಗಿನ ಸೀಸೆಗಳನ್ನು ವಿ. ಪಿ. ಪಾರ್ಸಲ್ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ. ೧—೮ ರೂ., ರೂ. ೨—೧೧ ೮, ೧೧ ರೂ., ಡಜನ್ ರೂ. ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಅಮೃತ ಕರ್ಪೂರ

Amrut Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಶೂಲೆ ಯವದು, ವಾಂತಿಭೇದಿ, ನಾನಾ ತರದ ಕೆಟ್ಟ ನೀರುಗಳು—ಮುಂತಾದ್ದಕ್ಕೆಲ್ಲಾ ಮಹೋಪಕಾರವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ತೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕಡಿದು ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕೋಲಾರದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜ್ವರಹರಿಯು ಅಮೃತ ಕರ್ಪೂರವನ್ನು ನಾನೂ ನನ್ನ ಹಾಸ್ಪಿಟಲ್ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪರೀಕ್ಷೆಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇನೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ —

ಚೆನ್ನಪಟ್ಟಣದ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

53 11

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಸ್ ಬಟ್ಟೆಗಳು ಸಾಹುಕಾರರಿಗಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತಹವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವದು. ಗಜ ಒಂದಕ್ಕೆ ಐದು ಆಣೆಯಿಂದ ೭ ಆಣೆ ವರಿವಿಗೂ ಚಿಲ್ಲರೆಯಾಗಿ ಯಾಗಲೀ ಒಟ್ಟಾಗಿ ಯಾಗಲೀ ಮಾರಲ್ಪಡುತ್ತವೆ. ಶಾಲುಗಳು, ಜಮಖಾನದ ಟೋಪಿಗಳು, ಮುಸುಕಿನ ಟೋಪಿಗಳು, ಹೆಂಗಸರ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ಸರ್ಕಾರ ಪೋಸ್ಟ್ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾರ್ಸಲ್ ಸೇರಿ ರೂ. ೧—೧೪—೦

" " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರ ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಳುಹುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರ ಸಂಖ್ಯಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

'ಜ್ವರದ ಗುಳಿಗೆಗಳು.'

೧ ಬಾಟ್ಲಿಗೆ ೧ ರೂಪಾಯಿ, ೪ ಬಾಟ್ಲಿಗೆ ೩ ರೂಪಾಯಿ, ೧೨ ಬಾಟ್ಲಿಗೆ ೮ ರೂಪಾಯಿ.

ಡಾಕ್ಟರ ಪಿ. ಆರ್. ಶ್ರೀನಿವಾಸರ ಎಂ. ಆರ್. ಸಿ. ಪಿ. ಎಂ. ಎಸ್., ಎಲ್. ಎಮ್. ಎಡಿಂಬರ್ಗ್, ಎಲ್. ಎಫ್. ಪಿ. ಎಂ. ಎಸ್., ಗ್ಲಾಸಗೊ, ಇವರ ಅಭಿಪ್ರಾಯ —

ಮೆಸರ್ಸ್ ಕರ್ಶ ಮತ್ತು ಕಂಪನಿಯವರು ನನಗೆ ಪರೀಕ್ಷೆಗೋಸ್ಕರ ಕೊಟ್ಟ ಗುಳಿಗೆಗಳಲ್ಲಿ ಮಲೇರಿಯಾದಂತ ಹಾಂಟಾದ ರೋಗಗಳನ್ನು ನಾಶ ಮಾಡುವ ಗುಣವಿರುತ್ತದೆಂತ ನಾನು ಶಿಫಾರಸು ಮಾಡುತ್ತೇನೆ. ಇವುಗಳಿಂದ ಬಿಟ್ಟುಬಿಟ್ಟು ಬರುವ ಎಲ್ಲಾ ಪ್ರಕಾರದ ಜ್ವರಗಳು ಗುಣವಾಗುತ್ತವೆನ್ನುವದು ನನಗೆ ಅನುಭವದಿಂದ ಕಂಡುಬಂದದೆ. ತಾ. ೨೮—೧೦—೧೯೦೦

ಡಾಕ್ಟರ ಫ್ರೆಂಚೋಲಿ, ಎ. ಫರಿಯಾ, ಎಲ್. ಆರ್. ಸಿ. ಪಿ. ಎಂ. ಎಸ್. ಎಡಿಂಬರ್ಗ್, ಎಲ್. ಎಫ್. ಪಿ. ಎಸ್. ಗ್ಲಾಸಗೋ, ಇವರ ಅಭಿಪ್ರಾಯ.—

ಮೆಸರ್ಸ್ ಗ. ರಾ. ಕರ್ಶ ಮತ್ತು ಕಂಪನಿಯವರಿಂದ ತಯಾರಿಸಲ್ಪಟ್ಟ ಜ್ವರದ ಗುಳಿಗೆಗಳನ್ನು ನಾನು ಮಿಸ್ತ್ರಾ ಲತಾ ಇಬ್ರಾಹಿಮ ಇವರ ಧರ್ಮದ ಆಸ್ಪತ್ರೆಯಲ್ಲಿ ಬಿಟ್ಟುಬಿಟ್ಟು ಬರುವ ಅನೇಕ ಪ್ರಕಾರದ ಜ್ವರಗಳ ಮೇಲೆ ಉಪಯೋಗಿಸುತ್ತೇನೆ ಮತ್ತು ಅವು ಬಹಳ ಗುಣಕಾರಿಯಂತ ಕಂಡು ಬಂದವು. ಈ ಗುಳಿಗೆಗಳಲ್ಲಿರುವ ಔಷಧಿ ದ್ರವ್ಯಗಳು ನನಗೆ ಗೊತ್ತಿವೆ ಮತ್ತು ಅವು ಶ್ರೇಷ್ಠ ಜಾತಿಯುಳ್ಳವುಗಳಾಗಿವೆ. ತಾ. ೧೪—೨—೧೯೦೧

ಡಾಕ್ಟರ ಎಫ್. ಎಸ್. ಪಟೇಲ, ಎಲ್. ಎಮ್. ಎಸ್. ಮುಂಬಯಿ, ಇವರ ಅಭಿಪ್ರಾಯ:—

ಕರ್ಶ ಮತ್ತು ಕಂಪನಿಯವರು ತಮ್ಮ ಜ್ವರದ ಗುಳಿಗೆಗಳ ಫಾರ್ಮುಲ ನನಗೆ ತೋರಿಸಿದರು. ಅವುಗಳ ಮಿಶ್ರಣವು ನಿಜವಾಗಿಯೂ ಅತ್ಯುತ್ತಮವಾಗಿದೆ. ಈ ಗುಳಿಗೆಗಳಲ್ಲಿದ್ದ ಔಷಧಿ ದ್ರವ್ಯಗಳು ಉತ್ತಮದಲ್ಲಿ ಉತ್ತಮವಾಗಿದ್ದು ಅತಿಯ ಗುಣಕಾರಿಯಾಗಿದ್ದು, ಕೆಟ್ಟ ಹವೆಯಿಂದ ಉಂಟಾಗುವ ಜ್ವರಗಳ ಮೇಲೂ, ಬಿಟ್ಟುಬಿಟ್ಟು ಬರುವ ಜ್ವರಗಳ ಮೇಲೂ ಅಥವಾ ಛಳಿ ಜ್ವರಗಳ ಮೇಲೂ ಬಹಳೇ ಗುಣಕಾರಿ ಎಂತ ಅನುಭವದಿಂದ ಸಿದ್ಧವಾದಂಥವುಗಳಾಗಿವೆ. ಖನಿಜದ ಕೆಟ್ಟ ಔಷಧಗಳಾಗಲೀ ಅಥವಾ ಅಪಾಯಕಾರಕ ಔಷಧಗಳಾಗಲೀ ಇವುಗಳಲ್ಲಿಲ್ಲ.

ಬಿಟ್ಟುಬಿಟ್ಟು ಬರುವ ಜ್ವರಗಳಿರುವ ಜಿಲ್ಲೆಗಳಲ್ಲಿ ಯೋಗ್ಯ ಡಾಕ್ಟರರ ಸಹಾಯವಿಲ್ಲದಿರುವವರಿಗೆ ಇದು ಸುರಕ್ಷಿತವಾದ ಮತ್ತು ಖಾತ್ರಿಯಾದ ಗುಣಕೊಡುವಂಥ ಔಷಧಿ ಎಂತ ನಾನು ಖಾತ್ರಿಯಾಗಿಯೂ ಹೇಳುವದು ಮಾಡುತ್ತೇನೆ. ಜ್ವರ ಉಂಟು ಮಾಡುವ ಮಲೇರಿಯಾ ಎನ್ನುವ ಕೆಟ್ಟ ಹವೆಯ ಪ್ರಾಂತಗಳಲ್ಲಿ ಜ್ವರದಿಂದ ಬಾಧೆಯುಳ್ಳ ಇರುವವರು ಪ್ರತಿ ಈ ಗುಳಿಗೆಗಳನ್ನು ನಡುವೆ ನಡುವೆ ತೆಗೆದುಕೊಳ್ಳಬೇಕೆಂತ ನಾನು ಖಾತ್ರಿಯಾಗಿಯೂ ಶಿಫಾರಸು ಮಾಡುತ್ತೇನೆ. ಇದರಿಂದ ಜ್ವರ ಪ್ರತಿಬಂಧವಾಗುವದು ಮತ್ತು ಆರೋಗ್ಯತೆಯು ಉಳಿಯುವದು. ತಾ. ೧೯—೧೦—೧೯೦೦

ಡಾಕ್ಟರ ಕೆ. ಎಸ್. ಗಾಬುಲೆ, ಎಲ್. ಎಮ್. ಎಸ್. ಮುಂಬಯಿ, ಕೋರ ಸಂಸ್ಥಾನದ ಮಾಜಿ ಚೀಫ್ ಮೆಡಿಕಲ ಆಫೀಸರ, ಇವರ ಅಭಿಪ್ರಾಯ —

ಕರ್ಶ ಮತ್ತು ಕಂಪನಿಯವರ ಜ್ವರದ ಗುಳಿಗೆಗಳನ್ನು ನಾನು ನೋಡಿರುತ್ತೇನೆ ಮತ್ತು ಉಪಯೋಗಿಸುತ್ತೇನೆ. ಈ ಗುಳಿಗೆಗಳು ಸಾಧಾರಣ ಜ್ವರಗಳ ಮೇಲೂ ಮಲೇರಿಯಾ ಎನ್ನುವ ಬಿಟ್ಟುಬಿಟ್ಟು ಬರುವ ಎಲ್ಲ ಪ್ರಕಾರದ ಜ್ವರಗಳ ಮೇಲೂ ಬಹಳೇ ಗುಣಕಾರಿ ಎಂತ ಕಂಡುಬಂದವು. ಈ ಔಷಧಗಳ ಫಾರ್ಮುಲ ನಾನು ನೋಡಿರುತ್ತೇನೆ ಮತ್ತು ಅದರಲ್ಲಿ ಅಪಾಯಕಾರಕವಾದ ಯಾವ ಔಷಧಿಯೂ ಕಂಡುಬರಲಿಲ್ಲ. ನಿಜವಾಗಿಯೂ ಈ ಗುಳಿಗೆಗಳಿಂದ ಜ್ವರದ ರೋಗಗಳಿಗೆ ತುಂಬಾ ಕೆಲಸವಾದೀತು. ತಾ. ೮—೧೦—೧೯೦೦

ಡಾಕ್ಟರ ಎಚ್. ಎಚ್. ಮಾಲವದೇಕರ, ಎಲ್. ಎಮ್. ಎಸ್., ಪಬ್ಲಿಕ್ ಹೆಲ್ತ ಆಫೀಸರ, ಮುಂಬಯಿ, ಇವರ ಅಭಿಪ್ರಾಯ —

ಬಿಟ್ಟುಬಿಟ್ಟು ಬರುವ ಎಲ್ಲ ಪ್ರಕಾರದ ಜ್ವರಗಳ ಮೇಲೆ ಬಹಳ ಗುಣಕಾರಿಯಾಗಿರುವ ಎಲ್ಲ ಔಷಧಿಗಳು ಇವರಲ್ಲಿ ಇರುತ್ತವೆ. ಈ ಗುಳಿಗೆಗಳನ್ನು ಜನರಲ್ಲಿ ಶಿಫಾರಸು ಮಾಡಲಿಕ್ಕೆ ನನಗೇನೂ ಅಡ್ಡಿ ಇಲ್ಲ.

ತಾ. ೧—೧೨—೧೯೦೦

ಮೆಸರ್ಸ್ ಕರ್ಶ ಮತ್ತು ಕಂಪನಿಯವರು ತಮ್ಮ ಜ್ವರದ ಗುಳಿಗೆಗಳ ಮತ್ತು ಶಕ್ತಿವರ್ಧಕ ಗುಳಿಗೆಗಳ ಔಷಧಿಗಳ ಫಾರ್ಮುಲ ನನಗೆ ತೋರಿಸಿದರು. ಈ ಗುಳಿಗೆಗಳ ಬಗ್ಗೆ ಅವರು ಆರಿಸಿ ತೆಗೆದ ಔಷಧಿಗಳು ಪ್ರಸಿದ್ಧ ಡಾಕ್ಟರುಗಳಿಂದ ಬಿಟ್ಟುಬಿಟ್ಟು ಬರುವ ಜ್ವರಗಳ ಮೇಲೂ ಮತ್ತು ಶಕ್ತಿವರ್ಧಕ ಗುಳಿಗೆಗಳು ಎಲ್ಲ ಪ್ರಕಾರದ ಅಶಕ್ತತೆಯ ಮೇಲೂ, ವಿಶೇಷವಾಗಿ ಉಪಯೋಗಿಸಲ್ಪಡುವಂತೆಯೇ ಇರುತ್ತವೆ. ಆದಕಾರಣ ಎಲ್ಲ ಜನರಿಗೂ ಇವುಗಳನ್ನು ಶಿಫಾರಸು ಮಾಡಲಿಕ್ಕೆ ನನಗೆ ಆನಂದವಾಗುತ್ತದೆ.

ತಾ. ೧—೧೧—೧೯೦೦

ಡಾಕ್ಟರ ಮಗನಲಾಲ ಯಜ್ಞಿಕ, ಎಲ್. ಎಮ್. ಎಸ್., ಇವರ ಅಭಿಪ್ರಾಯ — (66-41

ಇವುಗಳ ಮಿಶ್ರಣವು ಚೆನ್ನಾಗಿದ್ದು, ಬಿಟ್ಟುಬಿಟ್ಟು ಬರುವ ಜ್ವರಗಳ ಮೇಲೆ, ಯಾವಾಗಲೂ ಉಪಯೋಗಿಸುವ ಔಷಧಿಗಳು ಇವುಗಳಲ್ಲಿವೆ. ಈ ಗುಳಿಗೆಗಳು ಮಲೇರಿಯಾ ಎನ್ನುವ ಬಿಟ್ಟುಬಿಟ್ಟು ಬರುವ ಜ್ವರಗಳ ಮೇಲೆ ಗುಣಕಾರಿಯಾಗಲಿಕ್ಕೇ ಬೇಕು. ಜ್ವರದ ರಾಜ್ಯದಲ್ಲಿ ಇಂಥ ಔಷಧಿಯು ಅತ್ಯವಶ್ಯಕವಾದದ್ದು. ತಾ. ೧—೧೨—೧೯೦೦

ಇವುಗಳ ಮಿಶ್ರಣವು ಬಹಳ ಉಪಯೋಗವುಳ್ಳದ್ದಿದ್ದು ಇವುಗಳಿಂದ ಏನೂ ಅಪಾಯವಾಗಲಿಕ್ಕಿಲ್ಲ. ಛಳಿಜ್ವರ, ಬಿಟ್ಟುಬಿಟ್ಟು ಬರುವ ಜ್ವರ, ಮುಂತಾದವುಗಳ ಮೇಲೆ ಈ ಔಷಧಿಯು ಬಹಳ ಒಳ್ಳೇದೆ ಮತ್ತು ಇವುಗಳನ್ನು ಜನರಲ್ಲಿ ನಾನು ಸುರಕ್ಷಿತ ರೀತಿಯಿಂದ ಶಿಫಾರಸು ಮಾಡುತ್ತೇನೆ.

ತಾ. [illegible]—೧೯೦೦

ಡಾಕ್ಟರ ಎ. ಬ್ರಿಟೊ, ಎಲ್. ಎಮ್. ಎಸ್., ಡೆಪುಟಿ ಹೆಲ್ತ ಆಫೀಸರ, ಮುಂಬಯಿ, ಇವರ ಅಭಿಪ್ರಾಯ —

ಬಿಟ್ಟುಬಿಟ್ಟು ಬರುವ ಜ್ವರಗಳ ಮೇಲೆ ಉಪಯುಕ್ತವಾದ ಅವಶ್ಯವಿರುವ ಎಲ್ಲ ಔಷಧಿಗಳು ಇವುಗಳಲ್ಲಿವೆ. ಈ ಗುಳಿಗೆಗಳನ್ನು ಉಪಯೋಗಿಸುವ ಪ್ರಸಂಗ ನನಗೆ ಬಂದಿತ್ತು. ಅವು ಬಹಳೇ ಗುಣಕಾರಿ ಎಂತ ಕಂಡು ಬಂದವು. ಅವುಗಳಿಂದ ಯಾವ ರೀತಿಯಿಂದಲೂ ಅಪಾಯವಾಗಲಿಕ್ಕಿಲ್ಲ. ಮತ್ತು ಏನೂ ಅಂಜಿಕೆ ಇಲ್ಲದೆ ಅವುಗಳನ್ನು ತೆಗೆದುಕೊಳ್ಳಬಹುದು.

ತಾ. ೨೦—೧೦—೧೯೦೦

ಡಾಕ್ಟರ ಪಿ. ಜೆ. ಮುಂತ್ರಿ, ಎಲ್. ಆರ್. ಸಿ. ಪಿ. ಲಂಡನ್, ಇವರ ಅಭಿಪ್ರಾಯ.—

ಡಾಕ್ಟರ ಜೆ. ಬಿ. ಭೀರ, ಎಮ್. ಎಸ್. ಫಲೋ ಆಫ ದಿ ಮುಂಬಯಿ ಯುನಿವರ್ಸಿಟಿ, ಗ್ರಾಂಟ ಮೆಡಿಕಲ್ ಕಾಲೇಜದಲ್ಲಿ ಅಧ್ಯಾಪಕರು, ಇವರ ಅಭಿಪ್ರಾಯ.—

ಮೆಸರ್ಸ್ ಕರ್ಶ ಮತ್ತು ಕಂಪನಿಯವರು ತಮ್ಮ ಜ್ವರದ ಗುಳಿಗೆ ಮತ್ತು ಜ್ವರಕ್ಕೆ ಕುಡಿಯುವ ಔಷಧಿ ಇವುಗಳ ಫಾರ್ಮುಲ ನನಗೆ ತೋರಿಸಿದರು. ಈ ಔಷಧಗಳು ಕೆಲವು ವರುಷಗಳಿಂದ ಇಟಲೀ ಸರ್ಕಾರ ದೇಶದಲ್ಲಿ ಬಹಳವಾಗಿ ಖರ್ಚಾಗುತ್ತಲಿವೆ. ಬಿಟ್ಟುಬಿಟ್ಟು ಬರುವ ಜ್ವರಗಳ ಮೇಲೂ ಮಲೇರಿಯಾ ಎನ್ನುವ ಕೆಟ್ಟ ಹವೆಯಿಂದ ಉಂಟಾಗುವ ಬೇರೆ ರೋಗಗಳ ಮೇಲೂ ಪ್ರಸಿದ್ಧ ಡಾಕ್ಟರ ಇವರು ಅತ್ಯುತ್ತಮವೆಂತ ಅನುಭವದಿಂದ ನಿಶ್ಚಯಿಸಿದ ಔಷಧಗಳಿಂದ ಇವು ಮಾಡಲ್ಪಟ್ಟಿವೆ. ಇವುಗಳಲ್ಲಿ ಉಪಯೋಗಿಸಿರುವ ಔಷಧಿ ದ್ರವ್ಯಗಳು ಶುದ್ಧವಾಗಿದ್ದು ಶುದ್ಧವಿದ್ದು ಯೋಗ್ಯ ಪ್ರಮಾಣದಿಂದ ಕೂಡಿರುವದರಿಂದ ಏನೂ ಅಪಾಯವಾಗುವ ಸಂಭವವಿಲ್ಲ.

ತಾ. ೧—೧೦—೧೯೦೦

ಡಾಕ್ಟರ ಕೆ. ಆರ್. ಮುನಶಿ, ಎಲ್. ಆರ್. ಸಿ. ಪಿ., ಎಲ್. ಆರ್. ಸಿ. ಎಸ್. ಎಡಿಂಬರ್ಗ್, ಇವರ ಅಭಿಪ್ರಾಯ.—

ವಿಳಾಸ :—ಗಣೇಶ ರಾಮಚಂದ್ರ ಕರ್ಶ ಮತ್ತು ಕಂಪನಿ, ಠಾಕುರದ್ವಾರ, ಮುಂಬೈ

ಭಾರತಿ ಸಂಪಂಗಿ ರಾಮಯ್ಯನವರಿಂದ ರಚಿಸಿದ

ತಾನಾಗಿ ಇಂಗ್ಲಿಷ್ ಕಲಿಯುವಿಕೆ.

61-5

ಇಂಗ್ಲಿಷ್ ಭಾಷೆಯನ್ನು ಬರೆಯುವುದಕ್ಕೂ, ಓದುವುದಕ್ಕೂ, ಮಾತಾಡುವುದಕ್ಕೂ, ಬೋಧಕರ ಸಹಾಯ ಸ್ವಲ್ಪವೂ ಇಲ್ಲದೆ ಒಂದೆರಡು ತಿಂಗಳುಗಳಲ್ಲಿಯೇ ತಾನಾಗಿ ಕಲಿಸುವ ಅತ್ಯುತ್ತಮವಾದ ಪುಸ್ತಕ. ಕ್ರಯ ೧—೪—೦

ಪ್ರಶ್ನೋತ್ತರ ಲೇಖ್ಯಬೋಧಿನಿ.

ಸ್ವಲ್ಪ ಪ್ರತಿಗಳೇ ಉಳಿದಿವೆ. ೩೨೦ ಪುಟಗಳು ಆಯಾ ಮತಪದ್ಧತಿಯನ್ನನುಸರಿಸಿ ಬರೆಯುವ ಮರ್ಯಾದೆ, ಒಕ್ಕಣೆಗಳು, ಸಿವಿಲ್, ಮೇಜಿಸ್ಟ್ರೇಟ್, ರೆವಿನ್ಯೂ, ಪೋಲೀಸ್, ಇಂಜನಿಯರ್, ಫಾರೆಸ್ಟ್, ಯಶ್ಸೈಜು, ವಿದ್ಯಾಭ್ಯಾಸ, ಮತ್ತು ಇನ್ನೂ ಇತರ ಇಲಾಖೆಗಳ ಬಗೆಬಗೆ ಸಂಗತಿಗಳೂ, ರೈತರಿಗೆ ರಿಯಾಯತಿ ದೊರೆಯುವ ಬಗೆಬಗೆ ಅರ್ಜಿಗಳೂ, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಹಿಂದೂ ಲಾ, ಮಹಮದೀಯ ಲಾ, ಕಂಪನೀಸ್ ಆಕ್ಟ್, ಲ್ಯಾಂಡ್ ಅಕ್ವಿಜಿಷನ್, ಬೋರ್ಡ್, ಆರಂಸು ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳೂ, ಕೋರ್ಟುಗಳಿಗೂ ಪೋಲೀಸಿಗೂ ಇರುವ ಅಧಿಕಾರ, ವರ್ತಕರಿಗುಪಯೋಗವಾದ ಎಲ್ಲಾ ರೋಜು ವರ್ಗ ಲೆಕ್ಕಗಳು, ಅನುಭಾವಿಗೆ ಲೆಕ್ಕ ಬರೆಯುವ ರೀತಿ, ಇವುಗಳ ಸಾರಾಂಶವನ್ನೆಲ್ಲಾ ವಿವರಿಸಿದೆ. ಪುಸ್ತಕದಲ್ಲಿರುವ ಸಂಗತಿಗಳನ್ನೆಲ್ಲಾ ವಿವರಿಸಲು ಸ್ಥಳಸಂಕೋಚದಿಂದ ಇಲ್ಲಿ ಸೂಕ್ಷ್ಮವಾಗಿ ತಿಳಿಸಲಾಗಿದೆ ಕ್ರಯ ೧—೪—೦. ವಿಳಾಸ—ಮ್ಯಾನೇಜರ್ ಕರ್ನಾಟಕ ಪುಸ್ತಕ ಶಾಲೂ, ಲಕ್ಕೂರ್ ಪೋಸ್ಟ್, ತಾ॥ ಮಾಲೂರು, ಕೋಲಾರ್ ಡಿಸ್ಟ್ರಿಕ್ಟ್.

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡು ಹಿಡಿದ ಕೆಮ್ಮಿನ ಔಷಧವು



1-37

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಜುಬಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲನ್ನೂ ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಳ ಪ್ರಯೋಜನವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ವೇಳೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೋಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಕಟ್ಟುವನ್ನು ನಿಲ್ಲಿಸಿಬಿಡುತ್ತದೆ ಎದೆ ಬಿಗಿಯುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಸ್ನೋಯಂದಮಟ್ಟದೆ ತಯಾರಾಗಿದೆ.

ಎಲ್ಲಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

AMRUTANJAN DEPOT, 16 OAK-LANE, BOMBAY. [17-29]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ —ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮ್ ಮತ್ತು ಘಾಯ, ಗಂಟಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ ಬಾಟ್ಲಿ ೧ಕ್ಕೆ ಕಿಮ್ಮತು ೦ ೮-೦ ಪೋಸ್ಟು ಖರ್ಚು ೦ ೪ ೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ತಿಜ್ಜಿ ವಗೈರೆ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦ ೪ ೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ—ಜೀರ್ಣಕ್ಕೆ ಡಬ್ಬಿ ೧ಕ್ಕೆ.	೭—೪—೦	ಕುಸುಮಾರಿಗುಟಿಕ—ಚಿಂಗಸರ ಹೊಟ್ಟೆನೋವಿಗೆ	೦—೦—೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧—೦—೦	ಪ್ರಮೇಹದ ಮಿಶ್ರಣ—ಪ್ರಮೇಹಕ್ಕೆ	೧—೦—೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ಕ್ಕೆ	೦—೧೨—೦	ಕಫಹರ—ಕಫ, ಕೆಮ್ಮು ಕ್ಷಯ, ಇತ್ಯಾದಿ	೧—೪—೦
ಚೇಳುಕಡಿತದ ಮದ್ದು	೦—೮—೦	ಸುಂದರೀ ತೈಲ್ಯ—ಮೈಕೇರೆಗೆ	೦—೮—೦
ದಂತಶೂಲಹರಿ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಕರ್ಣಶೂಲಹಾರಿ—ಕಿವಿನೋವಿಗೆ	೦—೬—೦	ಉರಿನಾಳ ಎಂಸೆ ಬಾಟ್ಲಿ ೧ಕ್ಕೆ	೦—೮—೦
ಖಜ್ಜಿಯ ಮುಲಾಮು	೦—೩—೦	ವಾತದ ಮಿಶ್ರಣ ,,	೦—೦—೦
ದಂತಮಂಜನ—ಹಲ್ಲುಗಳಿಗೆ	೦—೨—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೮—೦
ಕೇಶವರ್ಧಿನೀ ತೈಲ್ಯ—ಕೂದಲಿಗೆ	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
ಬಾಲಾಮೃತ ಮಾತ್ರೆ—ಬಾಲಕರಿಗೆ	೨—೮—೦	ರೋಮಹಾರಿ	೦—೮—೦

ವಿಳಾಸ.—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ.

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ.

SCOTT'S EMULSION. 33-24

(ಸ್ಕಾಟ್ಸ್ ಇಮಲ್ಷನ್)

ಘಟ್ಟಿ ಶರೀರವುಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ.

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ.

ಅಸ್ವಸ್ಥವನ್ನು ದೂರ್ರಕ್ಕೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ನಿಶಾನಿಯನ್ನುಳ್ಳ ಇರುವ ಔಷಧವನ್ನೇ ಕೊಂಡುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2 37

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಎಲ್ಲಾ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬಣ್ಣದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚೆನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿಕೆ, ಕಾಫಿ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ

ಜಾರದ ಟೋಪಿಗಳು ೧ ರೂ. ೧೨ ಆ, ೧ ರೂ. ೮ ಆ.; ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ. ೮ ಆ., ೧ ರೂ. ೬ ಆ.

ಕೂಸುಗಳ ಟೋಪಿ, ಸೂರ್ಯ ಮೋಹರೆಯ, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುತ್ತೇವೆ.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ? ಎಂದು ನಿನ್ನನ್ನು ನೀನೇ ಕೇಳಿಕೋ ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳಿಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ. —ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯುಕಲ್ಲಣಿಸುವುದು, ತಲೆತಿರುಗುವುದು, ತಲೆನೋವು; ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [೧೯ ೨]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ಸ್ ಪಿ ಓ ಬಾಕ್ಸ್ ೨೦ ಬೊಂಬಾಯಿ — ಇವರಲ್ಲಿ ದೊರೆಯುವುದು.

'ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟರ್."

ವ್ಯವಹಾರನಿರ್ಣಯ—ಪುಟಗಳು ೫೪೪ ಹಿಂದೂ ಮಹಮದೀಯ ಲಾಗಳು, ೨೯ ಖಾನೂನುಗಳು ಇವುಗಳ ಸಂಗ್ರಹವೂ, ೯೦ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ ಪಿ ಸೇರಿ ೧ ರೂ. ೧೨ ಆಣೆ. [40-20]

ಕನ್ನಡ ಲಾ ರಿಪೋರ್ಟರ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ೧—೦—೦ ಮುಂಗಡ, ಯಾ ವಿ ಪಿ ಬಿಡಿಪತ್ರಿಕೆ ೧ಕ್ಕೆ ೦—೨—೦

ಇವುಗಳನ್ನು ಪ್ರಕಟಿಸುವವರು ಬಿ. ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್ ಮೈಸೂರು" ಈ ವಿಳಾಸಕ್ಕೆ ಬರೆಯುವುದು

ಚನ್ನಪಟ್ಟಣದ ನೋಟೀಸು.

72 1

ಇದೇ ಚನ್ನಪಟ್ಟಣದ ಕಸಬಾ ಗಂಡಮಡುವಿನ ನಿವಾಸಿ ಯಲೆ ಬಣಜಿಗರ ರಂಗೈಯನ ಹೆಂಡತಿ ಚನ್ನಮ್ಮನೆಂಬ ನನ್ನ ಸ್ವತ್ತಾದ ಮುನಿಸಿಪಲ್ ೧೨೯ನೇ ನಂ ಮನೆಯನ್ನು ನನ್ನ ಮೈದುನನಾದ ಗವಿ ಶೆಟ್ಟಿಯು ನನ್ನನ್ನು ಪುಸಲಾಯಿಸಿ, ನನಗೂ ಮಕ್ಕಳಿಗೂ ಜೀವನಾಂಶ ನಡಿಸುವದಾಗಿ ಭರವಸ ಕೊಟ್ಟು ಮನೆಯನ್ನು ತನ್ನ ಹೆಸರಿಗೆ ಬರೆಸಿಕೊಂಡು, ಈಗ ಮನೆಯನ್ನು ವಿಕ್ರಯಿಸಿ, ನನ್ನನ್ನೂ ಮಕ್ಕಳನ್ನು ಅನಾಥರನ್ನಾಗಿ ಮಾಡುವ ಪ್ರಯತ್ನದಲ್ಲಿರುವದಾಗಿ ತಿಳಿದುಬಂತು. ಮೇಲ್ಕಂಡ ಮನೆಯನ್ನು ಕ್ರಯ ಭೋಗ್ಯ ವಗೈರೆ ಮಾಡಲು ಗವಿ ಶೆಟ್ಟಿಗೆ ಹಕ್ಕಿರುವದಿಲ್ಲ. ಹಾಗ್ ಯಾರಾದರೂ ತೆಗೆದುಕೊಂಡರೆ ನಷ್ಟ ನಷ್ಟಕ್ಕೆ ಗುರಿಯಾಗಬೇಕೆಂಬುದನ್ನು ಈ ನೋಟೀಸ್ ಮೂಲಕ ತಿಳಿಯಪಡಿಸಿರುತ್ತೇನೆ

O ಈ ಬಳೆ ಗುರುತು ಚನ್ನಮ್ಮನು ಹಾಕಿದ್ದಕ್ಕೆ ಪುಟ್ಟಣ್ಣನ ಬರಹ.

ವೃತ್ತಾಂತ ಪತ್ರಿಕೆ.

೧೯೦೮ ನೇ ಇಸವಿ ಸೆಪ್ಟಂಬರ್ ತಾ|| ೧೦ನೇ ಗುರುವಾರ.

ಮದರಾಸ್ ಗವರ್ನರವರ ದಯಾರಸವು.

ಮದರಾಸ್ ಪಟ್ಟಣದಲ್ಲಿ ಮೆ|| ಜಿ. ಸುಬ್ರಹ್ಮಣ್ಯ ಐಯರವರು ತಮ್ಮ "ಸ್ವದೇಶ ಮಿತ್ರನ್" ಎಂಬ ತಮಿಳು ಪತ್ರಿಕೆಯಲ್ಲಿ ರಾಜದ್ರೋಹಕರವಾದ ವಿಚಾರಗಳನ್ನು ಪ್ರಕಟಿಸಿದರೆಂದು ಗವರ್ನಮೆಂಟಿನವರು ಅವರನ್ನು ಹಿಡಿಸಿ, ಮೊಕದ್ದಮೆ ತಂದಿದ್ದರಷ್ಟೆ. ಈ ವಿಚಾರವಾಗಿ ಮದರಾಸ್ ಪಟ್ಟಣದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಸರ್ಕಾರಿ ತರಫಿನ ವಕೀಲರು ತಿಳಿಸಿದ್ದನ್ನೂ ಮ್ಯಾಜಿಸ್ಟ್ರೇಟರು ತೀರ್ಮಾನ ಹೇಳಿದ್ದನ್ನೂ ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಮೆ|| ಸುಬ್ರಹ್ಮಣ್ಯ ಐಯರವರ ದೇಹಸ್ಥಿತಿಯನ್ನೂ, ಅವರ ಅವರವಯಸ್ಸನ್ನೂ, ಅವರು ಗವರ್ನರವರಿಗೆ ಕೊಟ್ಟಿರುವ ಅಭಯವನ್ನೂ ಪರಿಗಣಿಸಿ, ಗವರ್ನಮೆಂಟಿನವರು ಅವರಿಂದ ಜಾಮೀನ್ ತೆಗೆದುಕೊಂಡು, ಅವರ ಮೇಲೆ ತಂದಿದ್ದ ಮೊಕದ್ದಮೆಯನ್ನು ಮುಂದರಿಸದೆ ವಾಪಸು ತೆಗೆದುಕೊಂಡಿದಾರೆಂದು ತಿಳಿಸಲು ತುಂಬಾ ಸಂತೋಷಪಡುವೆವು. ಈ ಭಾಗವಲ್ಲಿ ದೇಶೀಯ ದೊಡ್ಡ ಮನುಷ್ಯರು ಮದರಾಸ್ ಗವರ್ನಮೆಂಟನ್ನು ಕೃತಜ್ಞತಾಪೂರ್ವಕವಾಗಿ ವಂದಿಸುತ್ತಿದಾರೆ.

ಹೈದರಲ್ಲಿಯ ಕಾಲದಲ್ಲಿ ಶ್ರೀರಂಗಪಟ್ಟಣಕ್ಕೆ ಒಬ್ಬ ಕ್ರೈಸ್ತಪಾದ್ರಿಯು ಬಂದದ್ದು.

ಈಗ್ಗೆ ಸುಮಾರು ನೂರಾಐವತ್ತು ವರುಷಗಳ ಕೆಳಗೆ ಮೈಸೂರು ದೇಶವನ್ನು ಪಾಲಿಸುತ್ತಿದ್ದ ಆಳ್ವಿಕೆಯಲ್ಲಿ ಹೈದರಲ್ಲಿಯ ಹೆಸರು ಆಗಿನ ಕಾಲದಲ್ಲಿ ಪ್ರಸಿದ್ಧಿಗೆ ಬಂದಿತ್ತು. ಆತನು ಯುದ್ಧದಲ್ಲಿ ಪರಾಕ್ರಮಿಯಾಗಿದ್ದುದಲ್ಲದೆ ರಾಜತಂತ್ರದಲ್ಲಿಯೂ ಅಗ್ರಗಣ್ಯನಾಗಿದ್ದನು. ಅನೇಕ ಸಮಯಗಳಲ್ಲಿ ಜನರು ಆತನನ್ನು ಕ್ರೂರಿಯೂ ನಿರ್ದಯನೂ ಆಗಿದ್ದನೆಂದು ಸೂಚನಾದಿಕೊಳ್ಳುವುದುಂಟು. ಆದರೆ ಈ ವಿಷಯ ನಾವು ಇಲ್ಲಿ ಪ್ರಸ್ತಾಪಿಸುವುದಿಲ್ಲ.

ಹೈದರಲ್ಲಿಯ ಕಾಲವಾಗುವುದಕ್ಕೆ ಮುಂಚೆ ಆತನಿಗೂ ಇಂಗ್ಲೀಷರಿಗೂ ರಾಜಕೀಯ ವಿಷಯಗಳಲ್ಲಿ ಮನಸ್ತಾಪವುಂಟಾಯಿತು. ಇಂಗ್ಲೀಷರಿಗಂತೂ ಹೈದರನ ಮೇಲೆ ಯುದ್ಧ ಮಾಡಲು ಮನಸ್ಸಿರಲಿಲ್ಲ. ಅವರ ಮನಸ್ಸು ಸಮಾಧಾನದ ಮೇಲೆ ನೆಲಸಿತ್ತು. ಆದರೆ ಹೈದರನ ಅಭಿಪ್ರಾಯವು ಬೇರೊಂದು ರೀತಿಯಲ್ಲಿತ್ತು. ಆವನು ಯುದ್ಧಾಪೇಕ್ಷೆಯುಳ್ಳವನಾಗಿದ್ದು ತನ್ನ ರಾಜ್ಯವನ್ನು ವಿಸ್ತರಿಸಬೇಕೆಂದಿದ್ದನು. ಇಂಗ್ಲೀಷರು ತಮ್ಮ ಅಭಿಪ್ರಾಯವನ್ನು ಹೈದರನಿಗೆ ತಿಳಿಸಲೋಸುಗ ದಕ್ಷಿಣ ದೇಶದಲ್ಲಿ ಪ್ರಸಿದ್ಧರಾಗಿದ್ದ ಸ್ವಾರ್ಟ್ಸ್ ಪಾದ್ರಿಗಳನ್ನು ಶ್ರೀರಂಗಪಟ್ಟಣಕ್ಕೆ ಕಳುಹಿಸಿದರು. ಸ್ವಾರ್ಟ್ಸ್ ಪಾದ್ರಿಗಳು ಬಹು ಗುಣಾಢ್ಯರು. ಅವರು ಈ ದೇಶದಲ್ಲಿ ಒಬ್ಬ ಸನ್ಯಾಸಿಯಂತೆಯೇ ಇದ್ದರು. ಅವರಿಗೆ ಹಿಂದೂಸ್ಥಾನಿ, ಪಾರಸಿ, ತಮಿಳು, ಪೋರ್ಚುಗೀಸ್ ಮೊದಲಾದ ಭಾಷೆಗಳಲ್ಲಿ ಅಸಾಧಾರಣವಾದ ಪಾಂಡಿತ್ಯವಿತ್ತು. ಸ್ವಾರ್ಟ್ಸ್ ರವರು ಇಂಗ್ಲೀಷರ ಪ್ರತಿನಿಧಿಯಾಗಿ ಹೈದರಲ್ಲಿಯ ಹತ್ತಿರಕ್ಕೆ ಬಂದಾಗ [illegible] ಉಭಯ [illegible] ಸಮಾಧಾನವನ್ನು [illegible] ಅವರು [illegible] ಪ್ರವಾಸ [illegible] ಗಳನ್ನು ನೋಡಿದ್ದರು [illegible] ಪ್ರತಿ [illegible] ಗರು [illegible] ಹೈದರಲ್ಲಿ [illegible] ಇಂಗ್ಲೀಷರು [illegible] ನನ್ನನ್ನು ಅವರ ಪ್ರತಿನಿಧಿಯನ್ನಾಗಿ [illegible]

[illegible]

ಹೀಗೆ ಸ್ವಾರ್ಟ್ಸ್ ರವರು ಉದ್ದೇಶಿಸಿ ಪ್ರಯಾಣ [illegible] ಅವರು ತಮ್ಮ ಪ್ರಯಾಣವನ್ನು ಕುರಿತು ಈ ರೀತಿಯಾಗಿ ಬರೆಯುತ್ತಾರೆ. "೧೭೭೯ ನೇ ವರುಷ ಜುಲೈ ೫ ನೇ ತಾರೀಖಿನಲ್ಲಿ ನಾನು ತಿರುಚಿನಾಪಳ್ಳಿಯನ್ನು ಬಿಟ್ಟು ೬ ನೇ ತಾರೀಖು ಸಾಯಂಕಾಲದ ಹೊತ್ತಿಗೆ ಕರೂರನ್ನು ತಲುಪಿದೆನು. ಕರೂರು ಹೈದರನ ಸೀಮೆಯ ಎಲ್ಲೆ. ಆತನು ತನ್ನ ಸೈನ್ಯದ ಒಂದು ತುಕ್ಕಡಿಯನ್ನು ಈ ಊರಿನಲ್ಲಿ ಇಟ್ಟಿರುತ್ತಾನೆ. ಈ ಊರಿನಲ್ಲಿ ನಾನು ಒಂದು ತಿಂಗಳು ನಿಲ್ಲಬೇಕಾಯಿತು. ಯಾತಕ್ಕೆಂದರೆ ಇಲ್ಲಿಂದ ಹೈದರನಿಗೆ ಒಂದು ಕಾಗದವನ್ನು ಕಳುಹಿಸಿದೆ. ಇದುವರಿವಿಗೂ ಜವಾಬು ಬಂದಿಲ್ಲ. ನಾನು ಇಲ್ಲಿ ಕ್ರೈಸ್ತ ಮತವನ್ನು ಹಿಂದೂ ಜನರಿಗೆ ಬೋಧಿಸುವುದರಲ್ಲಿ ನನ್ನ ಕಾಲವನ್ನು ಕಳೆಯುತ್ತಿರುವೆನು. ಆಗಲೇ ಹೈದರನ ಸೈನ್ಯದಲ್ಲಿ ಹುದ್ದೇದಾರನಾಗಿದ್ದ ಒಬ್ಬ ಜರ್ಮನ್ ಅಧಿಕಾರಿಯು ಆಗಾಗ್ಗೆ ಕ್ರೈಸ್ತ ಮತಾವಲಂಬಿಗಳಾದರು. ಆಗಸ್ಟ್ ತಿಂಗಳು ೬ನೇ ತಾರೀಖಿನಲ್ಲಿ ಕರೂರನ್ನು ಬಿಟ್ಟು ಪಾಂಡ್ಯಕ್ಕೆ ನನ್ನ ಪ್ರಯಾಣವನ್ನು ಬೆಳಸಿದೆನು. ೭ನೇ ತಾರೀಖು ಆದಿತ್ಯವಾರವಾಗಿ ಪರಿಣಮಿಸಿತು. ಆ ದಿನದಲ್ಲಿ ಪ್ರಯಾಣ ಮಾಡುವುದು ನನ್ನ ಇಷ್ಟಳೆಯಾಗಿಲ್ಲ. ಆ ದಿನ ನಾನು ಮಾಳಿಗೆ ಎಂಬ ಗ್ರಾಮದಲ್ಲಿ ತಂಗಿದೆನು. (ನಂಜನಗೂಡಿನ ಹತ್ತಿರವಿದ್ದ ಒಂದು ಗ್ರಾಮ) ಈ ಗ್ರಾಮವು ದೊಡ್ಡದಾಗಿದೆ ಮತ್ತು ಇದು ಕಾವೇರಿನದಿಯ ತೀರದಲ್ಲಿ ಕಟ್ಟಲ್ಪಟ್ಟಿರುವುದು. ಅಲ್ಲಿ ಕಾವೇರಿ ನದಿಗೆ ಇಪ್ಪತ್ತು ಮೂರು ಕಮಾನುಗಳುಳ್ಳ ಒಂದು ಸೇತುವೆ ಇರುವುದು. ಹೈದರನು ಈ ಸೇತುವೆಯನ್ನು ಬಹು ಬಂದೋಬಸ್ತಾಗಿ ಕಾಪಾಡುತ್ತಿರುತ್ತಾನೆ. ಮಳೆಯು ಬಂದು ಪಾಶ್ಚೋನಾದರೂ ಕೊಚ್ಚಿ ಹೋಗಿದ್ದಲ್ಲಿ ಗ್ರಾಮದಧಿಕಾರಿಗಳು ಕಾಲವಿಳಂಬ ಮಾಡದೆ ಕೊಚ್ಚಿ ಹೋದ ಭಾಗಗಳನ್ನು ತಕ್ಷಣವೇ ದುರಸ್ತು ಮಾಡಬೇಕಾಗುತ್ತಿತ್ತು. ಈ ವಿಷಯದಲ್ಲಿ ಹೈದರನು ಇಂಗ್ಲೀಷಿನವರಿಗಿಂತಲೂ ಬುದ್ಧಿವಂತನಾಗಿರುತ್ತಾನೆ. ೩೬ನೇ ತಾರೀಖಿನಲ್ಲಿ ನಾನು ಮೈಸೂರು ಪಟ್ಟಣಕ್ಕೆ ಬಂದೆನು. ಈ ಪಟ್ಟಣದ ಸುತ್ತಲೂ ಬುರಜುಗಳುಳ್ಳ ಒಂದು ಕೋಟೆಯು ಇರುತ್ತದೆ. ಕೋಟೆಯ ಮೇಲ್ಗಡೆಯಲ್ಲಿ ಬಾವುಟವು ದಟ್ಟವಾಗಿ ಬೆಳೆದುಕೊಂಡು ಪಸಿರು ಬಣ್ಣವನ್ನು ವಿಸ್ತಾರವಾಗಿ ಹೊದ್ದಿಸಿರುವರೋ ಎಂಬಂತೆ ಕಾಣುವುದು. ಮೈಸೂರು ಪಟ್ಟಣದ ಹತ್ತಿರ ಒಂದು ಎತ್ತರವಾದ ಬೆಟ್ಟವಿರುತ್ತದೆ. ಆ ಬೆಟ್ಟದ ತುದಿಯಲ್ಲಿ ಕಟ್ಟಲ್ಪಟ್ಟಿರುವ ಹಿಂದು ದೇವಾಲಯದ ಗೋಪುರವು ದೂರಕ್ಕೆ ಕಾಣಬರುತ್ತದೆ. ಈ ಬೆಟ್ಟದ ಮೇಲ್ಗಡೆಯಲ್ಲಿ ವಾಸವಾಡಿಕೊಂಡಿರುವ ಜನಗಳು ತಾವು ಪೂಜಿಸುವ ವಿಗ್ರಹಕ್ಕೆ ಮನುಷ್ಯರ ತಲೆಗಳನ್ನು ಕತ್ತರಿಸಿ ಕಾಣಿಕೆಯಾಗಿ ಅರ್ಪಿಸುತ್ತಿದ್ದರು. ಅವರು ದಾರಿಗಳಲ್ಲಿ ಕಾದಿದ್ದು ಪ್ರಯಾಣಿಕರ ಮೇಲೆ ಬಿದ್ದು ಅವರ ಮೂಗುಗಳನ್ನು ಕತ್ತರಿಸಿಕೊಂಡುಹೋಗಿ ತಾವು ಪೂಜಿಸುವ ವಿಗ್ರಹದ ಮುಂದಿಡುತ್ತಿದ್ದರು. ಆದರೆ ಹೈದರನು ಈ ದುಷ್ಟ ಪದ್ಧತಿಯನ್ನು ನಿಲ್ಲಿಸಿರುತ್ತಾನೆ. ಆಗಸ್ಟ್ ೨೫ ನೇ ತಾರೀಖು ನಾನು ಶ್ರೀರಂಗಪಟ್ಟಣವನ್ನು ತಲುಪಿದೆನು. ಶ್ರೀರಂಗಪಟ್ಟಣವು ನೋಡಲು ಮನೋಹರವಾದುದು. ಅದರೊಳಗಿರುವ ಹೈದರನ ಅರಮನೆಯು ಮುಸಲ್ಮಾನರ ಮಾದರಿಯಲ್ಲಿ ಕಟ್ಟಲ್ಪಟ್ಟಿರುತ್ತದೆ. ಅರಮನೆಯ ಎದುರಿನಲ್ಲಿ ಒಂದು ಮೈದಾನವಿರುತ್ತದೆ. ಅದರ ಎರಡು ಪಾರ್ಶ್ವಗಳಲ್ಲಿ ಸರಕಾರಿ ಆಫೀಸುಗಳಿರುತ್ತವೆ. ನನ್ನ ಬಿಡಾರವು ಕೋಟೆಯ ಹೊರಗಡೆಯಲ್ಲಿತ್ತು. ಶ್ರೀರಂಗಪಟ್ಟಣದಲ್ಲಿ ಆಗ್ಗೆ ಒಂದು ವಿಧವಾದ ವಿಷಜ್ವರವು ಹರಡಿಕೊಂಡಿದ್ದರಿಂದ ನಾನು ಹೊರಗಡೆಯಲ್ಲಿ ವಾಸಮಾಡಬೇಕಾಯಿತು. ಮನಸ್ಸು ಬಂದಾಗ್ಗೆ ಪಟ್ಟಣದೊಳಗೆ ಹೋಗಲೂ ಹೊರಕ್ಕೆ ಬರಲೂ ನನಗೆ ಹೈದರನು ಸಂಪೂರ್ಣವಾದ ಸ್ವಾತಂತ್ರ್ಯವನ್ನು ಕೊಟ್ಟಿದ್ದನು. ಹೈದರನಲ್ಲಿ ಆಡಂಬರವು ಕೊಂಚವೂ ಇಲ್ಲ. ಆತನು ಸಾಧಾರಣ ಮನುಷ್ಯರಂತೆಯೇ ಇದ್ದು ತನ್ನ ಕೆಲಸಗಳನ್ನು ಚಟುವಟಿಕೆಯಿಂದ ನಡಿಸುತ್ತಾನೆ.

ಇನ್ನೂ ಇದೆ

ಒಳದೇಶದ ವೃತ್ತಾಂತಗಳು.

ಕಳೆದ ಭಾನುವಾರ ಬೆಳಗಿನ ಮೆಯಿಲ್ ಗಾಡಿಯಲ್ಲಿ ದಿವಾನರವರು ಪರಿವಾರ ಸಹಿತ ಬೆಂಗಳೂರಿಗೆ ಪ್ರಯಾಣಮಾಡಿದರು.

❖❖❖

ಕಳೆದ ಭಾನುವಾರ ಬ್ರಿಟಿಷ್ ರೆಸಿಡೆಂಟರು ರಾಜಧಾನಿಗೆ ಬಂದು ನಾಲಕು ದಯಮಾಡಿದರು. ಎರಡು ವೇಳೆಯೂ ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು.

❖❖❖

ನೀಲಗಿರಿ ಜಿಲ್ಲೆಯ ಮೇಲೆ ಕೂನೂರಿನಿಂದ ಫೋರ್ಟಹಿಲ್ ಎಂಬ [illegible] ಮಹಾರಾಜರವರ ಅರಮನೆಯ ರಸ್ತೆ ರೈಲ್ ಕಾಲುವೆಯಿಂದ ಬಹಳ ಹಾನಿಯಾಗಿ ಗಾಡಿಗಳನ್ನು ಬಿಸಾಡಬೇಕು ತಿಳಿದು ಬಂದಿದೆ.

❖❖❖

ಮೈಸೂರು ಸಂಸ್ಥಾನದ ಮಿಲಿಟರಿ ಸೆಕ್ರೆಟರಿ ಮೇ|| ಆರ್ ಜಿ ಜೋನ್ಸ್ ರವರು ಈ ತಿಂಗಳ ೨೮ ನೇ ತಾ|| ಬೆಂಗಳೂರಿನಿಂದ ಬಿಟ್ಟು ನನ್ನ ಊಟಿಯ ಗಿರಿಕಂಡು ರೀವೆಗೆ ಪ್ರಯಾಣ ಮಾಡಿದರೆಂದು ಕೇಳುತ್ತೇವೆ.

❖❖❖

ಒಬ್ಬ ವಾರ್ತಾದಾರರು ಬರೆಯುತ್ತಾರೆ. — "ಈ ರಾಜನಗರದ ಕಡೆ ಕಳೆದ ೨-೩ ದಿನಗಳಿಂದಲೂ ತುಂಬಾ ಮಳೆಬೀಳುತ್ತದೆ. ಬೆಳೆಗಳು ಕೆಲಕಡೆ [illegible] ಈ ಕಾಲದಲ್ಲಿ ಕೆಲವು ಕಡೆ ಪ್ಲೇಗು ಜೋರಾಗಿದೆ."

❖❖❖

ಶ್ರೀಮನ್ಮಹಾರಾಜರವರೂ ಮಹಾಮಾತೃಶ್ರೀಯವರೂ ಪರಿವಾರ ಸಹಿತ ಈ ದಿನ ನಂಜನಗೂಡಿಗೆ ದಯಮಾಡಿ, ಹೋಮೋಪದಿ ಉತ್ಸವಾದಿಗಳನ್ನು ನಡೆಯಿಸಿ, ಸಾಯಂಕಾಲದ ವಾಪಸು ಬಿಜಯ ಮಾಡುವರು.

❖❖❖

ಮಂದರಾಸಿನ ಮನೋಹರ ಎಂಬ ನಾಟಕದವರು ಕಳೆದ ಶುಕ್ರವಾರ ರಾತ್ರಿ ಅರಮನೆಯಲ್ಲಿ ಲಂಕಾದಹನವೆಂಬ ನಾಟಕವನ್ನು ಆಡಿದರು. ಶ್ರೀಮನ್ಮಹಾರಾಜರವರೇ ಮುಂತಾದ ರಾಜಬಂಧುಗಳು ವರಾಂಬರಿಸಿ ಸಂತೋಷಪಟ್ಟರೆಂದು ಕೇಳುತ್ತೇವೆ.

❖❖❖

ಶ್ರೀಮಾನ್ ಯುವರಾಜರವರು ನೆನ್ನೆ ದಿನ ಪೂನಾ ಪಟ್ಟಣಕ್ಕೆ ದಯಮಾಡುವವರಾಗಿದ್ದರು. ಅಲ್ಲಿ ಅವರು ಒಂದು ವಾರದ ತನಕ ಇದ್ದು, ತರುವಾಯ ಬೆಂಗಳೂರಿನಲ್ಲಿ ೩-೪ ದಿವಸಗಳನ್ನು ಕಳೆದು, ಅನಂತರ ಪರಿವಾರ ಸಹಿತ ರಾಜಧಾನಿಗೆ ದಯಮಾಡುವವರಾಗಿದಾರೆ.

❖❖❖

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಸೂಪರಿಂಟೆಂಡೆಂಟ್ ಡಾಕ್ಟರ್ ಆರುಮುಗಂ ಮೊದಲಿಯಾರರ ಮನೆಯಲ್ಲಿ ಯಾರಿಗೆ ಸೇರಿಕೊಂಡಿದ್ದವನೊಬ್ಬನು ಅವರ ಬಾಬತು ಸುಮಾರು ೪೦೦ ರೂ ಬೆಲೆಯುಳ್ಳ ಚಿನ್ನಾಭರಣಗಳನ್ನು ಕಳವುಮಾಡಿಕೊಂಡು ಹೋದನೆಂದು ತಿಳಿಯುವುದು.

❖❖❖

ಗವರ್ನಮೆಂಟ್ ಆಂಗ್ಲೋವರ್ನಾಕ್ಯುಲರ್ ಸ್ಕೂಲುಗಳಲ್ಲೂ ವರ್ನಾಕ್ಯುಲರ್ ಸ್ಕೂಲುಗಳಲ್ಲೂ ೪ ರೂ., ೫ ರೂ. ಸಂಬಳವುಳ್ಳ ಉಪಾಧ್ಯಾಯರಿಗೆಲ್ಲಾ ಜುಲೈ ತಾ. ೧ ರಿಂದ ೧೦ ರೂಪಾಯಿಗಳ ಸಂಬಳವನ್ನು ಏರ್ಪಡಿಸಲಾಗಿದೆ ಎಂಬುದಾಗಿ ಸರ್ಕಾರದವರು ಹುಕುಂ ಕೊಟ್ಟಿರುತ್ತಾರೆ.

❖❖❖

ಬೆಂಗಳೂರು ಕೋಲೆಗಳ ಮೊಕದ್ದಮೆಗಳ ಸ್ಪೆಷಲ್ ಆಫೀಸರ್ [illegible] ಒಂದು ಮೊಕದ್ದಮೆಯಲ್ಲಿ ಶ್ರೀನಿವಾಸಲು ಎಂಬ ಅಪರಾಧಿಗೆ ಸೆಷನ್ಸ್ ಜಡ್ಜರು ಜೀವಾಂತ್ಯದವರೆಗಿನ ಸಜೆಯನ್ನು ವಿಧಿಸಿದ್ದರು. ಅವನು ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದನು. ಇಬ್ಬರು ಜಡ್ಜಿಗಳು ಈ ಮೊಕದ್ದಮೆಯನ್ನು ಪರಾಂಬರಿಸಿ, ಕೆಳಕೋರ್ಟಿನ ಶಿಕ್ಷೆಯನ್ನೇ ಖಾಯಂ ಮಾಡಿರುತ್ತಾರೆ.

❖❖❖

ಸುಮಾರು ೮—೧೦ ತಿಂಗಳಿಂದ ರಾಜಧಾನಿಯಲ್ಲಿ ಪ್ಲೇಗ್ ಅಂಕುರದ ಹೆಸರಿರಲಿಲ್ಲ. ಈಚೆಗೆ ಸುತ್ತಮುತ್ತಲೂ ಗ್ರಾಮಗಳಲ್ಲಿ ಪ್ಲೇಗ್ ಜೋರುವಾಗಿರೋಣದರಿಂದ ಅಲ್ಲಿನ ಜನರು ಇಲ್ಲಿಗೆ ಬಂದು ಕಾಯಿಲೆ ಬೀಳುತ್ತಿದ್ದರು. ಆದರೆ ಕಳೆದ ಶನಿವಾರ ರಾತ್ರಿ ಇಲ್ಲಿನ ಮಂಡಿ ಮೊಹಲ್ಲೆಯ ಒಂದೇ ಮನೆಯಲ್ಲಿ ನಾಲ್ವರು ಮುಸಲ್ಮಾನರಿಗೆ ಪ್ಲೇಗ್ ಆಗಿ, ಒಂದು ಮರಣವಾಯಿತು. ಈಚೆಗೆ ಹೊಸ ಕಾಯಿಲೆಗಳು ಆಗಿಲ್ಲ.

❖❖❖

ಈಚೆಗೆ ರಾಜಧಾನಿಯಲ್ಲಿ ಕಳವು, ಕನ್ನ ಚೋರಿಗಳು ಹೆಚ್ಚಾಗುತ್ತಿರುವುದನ್ನು ನೋಡಿ ಪೋಲೀಸ್ ಸೂಪರೇಂಟರು ರಾತ್ರಿಹೊತ್ತು ಗಸ್ತು ಮಾಡುವ ಪೋಲೀಸಿನವರ ಸಂಖ್ಯೆಯನ್ನು ಎರಡರಷ್ಟು ಹೆಚ್ಚಿಸಿರುತ್ತಾರೆ.—ಕಳೆದ ವಾರ ಒಂದೇ ದಿನ ನಂಜನಗೂಡಿನಲ್ಲಿ ನಾಲ್ಕಾರು ಕಡೆ ಕಳವಾದಂತೆ ತಿಳಿದುಬಂದದ್ದರಿಂದ ಪೋಲೀಸ್ ಸೂಪರೇಂಟರು ಅಲ್ಲಿಗೆ ಹೋಗಿದ್ದು ಬಂದೋಬಸ್ತುಮಾಡಿ ಬಂದರು.

❖❖❖

ರಾಜಧಾನಿಯಲ್ಲಿ ಬಿ ಸಿ ಶ್ರೀನಿವಾಸೈಯಂಗಾರ್ರು "ಜಗದ್ಗುರು" ಎಂಬ ಪಕ್ಷಪತ್ರಿಕೆಯನ್ನು ಮೊದಲು ಇಲ್ಲಿನ ಕ್ರೌನ್ ಪ್ರೆಸ್ಸಿನಲ್ಲಿ ಪ್ರಿಂಟು ಮಾಡುತ್ತಿದ್ದು, ಈಚೆಗೆ ಜನರಲ್ ಏಜನ್ಸಿ ಪ್ರೆಸ್ಸಿನಲ್ಲಿ ಪ್ರಿಂಟು ಮಾಡಿಸುತ್ತಾ ಬಂದರು. ಎರಡನೇ ಪ್ರೆಸ್ಸಿಗೆ ಅವರು ಬದಲಾಯಿಸಿದಾಗ ಅವರು ೧೮೯೬ನೇ ಇಸವಿಯ ಪ್ರೆಸ್ ಕಾನೂನ್ ಪ್ರಕಾರ ಮ್ಯಾಜಿಸ್ಟ್ರೇಟರ ಮುಂದೆ ಡಿಕ್ಲರೇಶನ್ ಮಾಡಲಿಲ್ಲ. ಸರ್ಕಾರದವರು ಈ ವಿಷಯವನ್ನು ಕುರಿತು ಅವರಿಗೆ ನೋಟೀಸ್ ಕೊಟ್ಟರೂ ಅವರು ಕಾನೂನಿನಂತೆ ಡಿಕ್ಲರೇಶನ್ ಮಾಡಲಿಲ್ಲ. ಇದಕ್ಕಾಗಿ ಬಿ ಸಿ ಶ್ರೀನಿವಾಸೈಯಂಗಾರ್ರನ್ನು ದಯಾರ್ಹತ್ತಿ ಪನಾದಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಕಳೆದ ಶನಿವಾರ ಅವರಿಗೆ ೧೫ ದಿನಗಳ ಸಾದಾ ಸಜಾ ವಿಧಿಸಿದರು. ಮತ್ತು ಜನರಲ್ ಏಜನ್ಸಿ ಪ್ರೆಸ್ಸಿನ ಮಾಲೀಕರಾದ ಎಲ್ ರಾಮಚಂದ್ರರಾಯರು "ಜಗದ್ಗುರು" ಪತ್ರಿಕೆಯನ್ನು ತಮ್ಮ ಪ್ರೆಸ್ಸಿನಲ್ಲಿ ಪ್ರಿಂಟು ಮಾಡುವುದಕ್ಕೆ ಮೊದಲ್ ಮ್ಯಾಜಿಸ್ಟ್ರೇಟರ ಮುಂದೆ ಮೇಲ್ಕಂಡ ಕಾನೂನ್ ಪ್ರಕಾರ ಡಿಕ್ಲರೇಶನ್ ಮಾಡಲಿಲ್ಲವೆಂತಲೂ, ಆ ಪತ್ರಿಕೆಯ ಮೇಲೆ ತಮ್ಮ ಹೆಸರನ್ನು ಪ್ರಕಟಿಸಲಿಲ್ಲವೆಂತಲೂ ಅವರ ಮೇಲೆ ಅಪರಾಧ ಹೊರಿಸಲ್ಪಟ್ಟು, ವಿಚಾರಣೆಯಿಂದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅದೇ ದಿನ ಅವರಿಗೆ ೧೦೦ ರೂಪಾಯಿ ಜುಲ್ಮಾನೆ ವಿಧಿಸಿದರು.

ಕರೆಸ್ಪಾಂಡೆನ್ಸ್.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.]

ವಿಗ್ರಹವು ಸಿಂದನಲ್ಲಿ ಹುಟ್ಟಿದ್ದು.

ಅಯ್ಯಾ,

ಬಾಗೇನ ಹಳ್ಳಿ ಹತ್ತಿರ ಹುಟ್ಟಿರುವ ಆ ವೆಂಕಟರಮಣನನ್ನು ಕುರಿತು ತಾವು ಮಾಡುವ ಆಕ್ಷೇಪಣೆಗಳಿಗೆ [illegible] ಅಸ್ಪದವಿರುತ್ತದೆ. ಆ ವಿಗ್ರಹವು ಹಾಳುಕೆರೆಯಲ್ಲಿದ್ದದ್ದೇ ಎಂದು ಬಾಗೇನ ಹಳ್ಳಿಯವರು ಎಲ್ಲರೂ [illegible] ಅದೆ [illegible] ಅದನ್ನು ಅಲ್ಲಿಂದ ತೆಗೆಸಿ, ಗಡದ ಮಾಹಾತ್ಮ್ಯವನ್ನು ಹೆಚ್ಚಿಸಬೇಕೆಂದು ಆ ದೇವಸ್ಥಾನದಲ್ಲಿ ಹುಟ್ಟಿಸಿದರೆಂದು ಕೇಳುತ್ತಾರೆ. ನಿಮ್ಮ ಬಾತ್ಮಿದಾರರು ಹೇಳಿದಂತೆ ಅನುಭವಸ್ಥರು ನಿಜವಾಗಿ ಹಾಗೆ ಮಾಡಿದ್ದರೆ ಆಶ್ಚರ್ಯವೇನಾದರೂ ಇಲ್ಲ. ಅದರೆ ಹಾಗೆ ಮಾಡಿದರೆಂದು ನಾನು ನಂಬಲಾರೆನು. ಆ ಪ್ರಕಾರವಾದ ಸಾಕ್ಷ್ಯದಿಂದ ತೃಪ್ತನಾಗಿ ನಾನು ಆ ವಿಗ್ರಹವನ್ನು ಪ್ರತಿಷ್ಠೆಮಾಡಿರುವರು. ಅಂಥ ವಿಷ್ಣುದಾರರಲ್ಲಿ ಅಸಾಧ್ಯವಾಗಿದೆ. ಈ ಅರಿದ ಮಾಹಾತ್ಮ್ಯವು ಸೋಜಿಗದ [illegible]

ನಮ್ಮೂರಿನ ಹತ್ತಿರ ಕೆಲವು ವರ್ಷಗಳ ಹಿಂದೆ ಒಂದು ಬಸವಣ್ಣನ ರೂಪಗಳು ಆಶ್ಚರ್ಯವಾಗಿ ಹುಟ್ಟಲಾರಂಭಿಸಿದವು. ಆ ಸಿದ್ಧ ಬಸು ದೇವದ ಮೇಲೆ ಇಟ್ಟು, ಜನರು ಗುಂಪು ಗುಂಪಾಗಿ ಬಂದು ಆ ಬಸವಣ್ಣನಿಗೆ ಪೂಜೆ ಮಾಡುವುದಕ್ಕೆ ಆರಂಭಿಸಿದರು. ಇದರಲ್ಲಿ ಇಟ್ಟಿರುವ ಮುಸಲ್ಮಾನರು ಈ ಅದ್ಭುತವೇನೆಂದು ತಿಳಿಯಬೇಕೆಂದು ರಾತ್ರಿಯೆಲ್ಲಾ ಆ ಸ್ಥಳದಲ್ಲಿ ಕಾದಿದ್ದರು. ಅರ್ಧ ರಾತ್ರಿಯಲ್ಲಿ ಕಳ್ಳಗಳು ಸಮೆಯಿಂದ ತೆಂಗಿನಕಾಯಿ ಬಂದು ಆ ವಿಗ್ರಹದ ಮೇಲೆ ಉಜ್ಜಿಕೊಳ್ಳುವರನ್ನು ಕಂಡರು. ಅದ್ಭುತವು ಅಷ್ಟೇ.

ಆ ಸೀಮಾ ವಿಗ್ರಹದ ವಿಷಯವಾಗಿ ಯಾರೇನು ಹೇಳಿದರೂ ಜನರು ಇವುಗಳನ್ನು ಗಾಢವಾಗಿ ವಿಚಾರಣೆ ಮಾಡಿದರೆ? ಇಲ್ಲ ಎಂದು ನಾವು ತ್ತೇನೆ. ಮೋಸ ಹೋಗುವುದು ಇಷ್ಟವೇ ಅಲ್ಲವೋ! ಈ ದೇಶದ ದೊಡ್ಡ ಬುದ್ಧಿಗೆ ವಿರೋಧವಾಗಿ ಇಂಥಾ ವ್ಯಸನಕರವಾದ ಆಕ್ಷೇಪಣೆಗಳು ಇನ್ನೆಷ್ಟು ದಿವಸವಿರಬಹುದೋ! ಪತ್ರಿಕಾ ವಾಚಕ

ಚಿತ್ರದುರ್ಗದ ಆರ್ಯನ್ ಸ್ಟೂಡೆಂಟ್ಸ್ ಹೋಮಿನ ವಾರ್ಷಿಕೋತ್ಸವವು.

ರೆಡ್ಡೀ ಜನರಿಂದ ಚಿತ್ರದುರ್ಗದಲ್ಲಿ ನೆಲೆಗೊಳಿಸಲ್ಪಟ್ಟಿರುವ ಈ ವಿದ್ಯಾರ್ಥಿ ನಿಲಯವು ಸ್ಥಾಪಿಸಿ ಒಂದು ವರುಷ ಪೂರೈಸಿತು. ಈ ಮೊದಲನೇ ವರುಷದಲ್ಲಿ ನಡೆದ ವಿದ್ಯಮಾನಗಳನ್ನು ಕುರಿತು ಯೋಚಿಸಲು ಮತ್ತು ಮುಂದಿನ ಪುರೋಭಿವೃದ್ಧಿಗನುಕೂಲತೆಗಳು ಕಲ್ಪಿಸಿಕೊಳ್ಳಲು ಚಿತ್ರದುರ್ಗದ ಡೆಪ್ಯುಟಿ ಕಮಿಷನರಾದ ಮೆ॥ ಎಂ. ಚಂಗಯ್ಯಶೆಟ್ಟರವರ ಅಧ್ಯಕ್ಷತೆಯಿಂದ ಸದರಿಯವರ ಬಂಗ್ಲೆಯಲ್ಲಿ ಕಳೆದ ತಾ. ೨೯ ರಲ್ಲಿ ರೆಡ್ಡೀ ಪ್ರಮುಖ ಜನರನ್ನೂ ಇತರೇ ದೊಡ್ಡ ಮನುಷ್ಯರನ್ನೂ ವಿದ್ಯಾರ್ಥಿಗಳನ್ನೂ ಸಭೆಸೇರಿಸಲ್ಪಟ್ಟಿತ್ತು.

ಮೆ॥ ಹನುಮಂತರಾಯರವರು ಸಭಿಕರನ್ನು ಕುರಿತು—ಈ ಸ್ಟೂಡೆಂಟ್ಸ್ ಹೋಮಿನ ಮೇಲೆ ತುಂಬಾ ಅಭಿಮಾನವಿಟ್ಟು ಇದರ ಪುರೋಭಿವೃದ್ಧಿಗಾಗಿ ರೆಡ್ಡೀ ಜನರನ್ನು ಸಭೆ ಸೇರಿಸಿ ತಾವೇ ಅಧ್ಯಕ್ಷರಾಗಿ ನಿಂತು ಪ್ರಜೆಗಳ ಶ್ರೇಯೋಭಿವೃದ್ಧಿಯನ್ನು ಹಾರೈಸತಕ್ಕ ದಯಾನಿಧಿಯಾದ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರ ಸುಗುಣಾತಿಶಯಗಳಿಗಾಗಿ ಕೃತಜ್ಞತೆಯನ್ನು ತೋರಿಸಿ, ಭಗವದಾರಾಧನೆ ಮಾಡಿ ಅಗ್ರಾಸನಾಧಿಪತಿಗಳಿಗೆ ಸ್ಟೂಡೆಂಟ್ಸ್ ಹೋಂ ಪ್ರೆಸಿಡೆಂಟರಿಂದ ಒಂದು ಹೂವಿನ ಹಾರವನ್ನು ಹಾಕಿಸಿ, ಈ ಹೋಮಿನ ಆಶ್ರಯದಾತರಾದ ರೆಡ್ಡೀ ಜನರ ಚರಿತ್ರೆಯನ್ನು ಸಂಕ್ಷೇಪವಾಗಿ ಸಭೆಯಲ್ಲಿ ಅರಿಕೆಮಾಡಿ, ಈ ಒಂದು ವರ್ಷದಲ್ಲಿ ಹೋಮಿನಲ್ಲಿ ನಡೆಸಿದ ವಿದ್ಯಮಾನಗಳನ್ನು ಕುರಿತು ಒಂದು ರಿಪೋರ್ಟನ್ನು ಓದಿದರು. ಅದರಲ್ಲಿ ಸ್ಟೂಡೆಂಟ್ಸ್ ಹೋಂ ಸ್ಥಾಪಿಸಿದ ಸದುದ್ದೇಶವೂ, ಭಗವದನುಗ್ರಹದಿಂದಲೂ, ಅಗ್ರಾಸನಾಧಿಪತಿಗಳ ಕೃಪೆಯಿಂದಲೂ ಈ ವಿದ್ಯಾರ್ಥಿನಿಲಯವು ದಿವಾನ್ ಸಾಹೇಬರ ಅನ್ವೇಷಣೆಗೆ ಗುರಿಯಾದದ್ದು, ಆಗ್ಗೆ ಆ ಮಹನೀಯರಿಗೆ ಭರಮಸಾಗರದ ಪಟೇಲ್ ತಿಮ್ಮಯ್ಯ, ನಾಡಿಗ ಬಯಣ್ಣ ವಗೈರೆ ರೆಡ್ಡೀ ಜನರು ಸೇರಿ ಕೊಟ್ಟ ಅಡ್ರೆಸ್, ಮತ್ತು ದಿವಾನ್ ಸಾಹೇಬರು ಅಪ್ಪಣೆ ಕೊಡಿಸಿದ ಉತ್ತರ, ಸ್ಟೂಡೆಂಟ್ಸ್ ಹೋಂ ಬಿಲ್ಡಿಂಗ್ ಕಟ್ಟಲು ಈ ಜನರಲ್ಲಿ ಕಾರ್ಯನಿರ್ವಾಹಕಸಭೆ ಸ್ಥಾಪಿಸಿದ್ದು, ಆ ಸಭೆಯವರು ಈ ಪಂಗಡಗಳ ಎಲ್ಲಾ ಜನರ ತಿಳುವಳಿಕೆಗೋಸ್ಕರ ಈ ಜನರ ಪೂರ್ವದ ಸ್ಥಿತಿ, ಈಗಿನ ಸ್ಥಿತಿ, ಮುಂದೆ ಮಾಡಬೇಕಾದ ಕರ್ತವ್ಯ, ವಿದ್ಯಾಭ್ಯಾಸ, ಪ್ರಾರ್ಥನೆ, ಈ ವಿಷಯಗಳನ್ನೊಳಗೊಂಡಿರುವ ಆರ್ಯನ್ ಸ್ಟೂಡೆಂಟ್ಸ್ ಹೋಂ ಸಮಾಸಕ್ತಿ ಎಂಬ ಪುಸ್ತಕವನ್ನು ಅಚ್ಚುಹಾಕಿಸಿ ಗ್ರಾಮಾಂತರಗಳಲ್ಲಿನ ಈ ಜನರಿಗೂ, ಇತರೇ ದೊಡ್ಡ ಮನುಷ್ಯರಿಗೂ, ಹಂಚಲ್ಪಟ್ಟದ್ದು, ಆ ಒಕ್ಕಲಿನಲ್ಲಿ ಪ್ರಚುರಪಡಿಸಿದ್ದ ಪ್ರಕಾರ ಮ್ಯಾನೇಜರ್ ಅದನಾಯಕನಿಗಾಗಿ ಕಳೆದ ಬೇಸಿಗೆ ರಜಾ ಕಾಲದಲ್ಲಿ ೩—೪ ಗ್ರಾಮಗಳು ಸಂಚಾರಮಾಡಿ ಚಂದಾಹಣ ಜಮಾಯಿಸಿರುವುದು, ಈಚೆಗೆ ಧರ್ಮೋಪದೇಶಕರು ಗ್ರಾಮಾಂತರಗಳೆಲ್ಲಾ ಸಂಚಾರಮಾಡಿ ಚಂದಾಹಣ ವಸೂಲ್ಮಾಡಿಕೊಂಡು ಬರಲು ಇರುವ ಅನಾನುಕೂಲಗಳು, ಈ ಲೋಪದಿಂದ ಈ ಆಗಸ್ಟ್ ತಾ. ೧೦, ೧೧, ೧೨ ರಲ್ಲಿ ಸೇರಬೇಕೆಂದಿದ್ದ ಮಹಾ ಸಭೆ ಸೇರಿಸಲು ಆಗಲಿಲ್ಲವೆಂಬ ವಿಷಯ, ಈ ವರ್ಷ ಈ ಸ್ಟೂಡೆಂಟ್ಸ್ ಹೋಮಿಗಾಗಿ ಎಲ್ಲಾ ಖರ್ಚು ಸೇರಿ ೯೪೪ ರೂಪಾಯಿ ಆಗಿರುವುದು, ಇದಕ್ಕಾಗಿ ವಿದ್ಯಾರ್ಥಿಗಳಿಂದ ೪೦೦ ರೂಪಾಯಿ ಮಾತ್ರ ಜಮಾ ಬಂದಿರುವುದು, ಬಾಕಿ ೫೪೪ ರೂಪಾಯಿ ಮ್ಯಾನೇಜರ ಕೈಯಿಂದ ಖರ್ಚಾಗಿರುವುದು, ತಮ್ಮ ಆಶ್ರಯದಾತರಾದ ರೆಡ್ಡೀ ಪಂಗಡಗಳ ಅಭಿವೃದ್ಧಿಯಾದ ಪರೋಪಕಾರವಾದ ಸತ್ಪಾತ್ರಕ್ಕಾಗಿ ಜಾಸ್ತಿ ಖರ್ಚಾದದ್ದು ಸಾರ್ಥಕವಾಗಿ ಪರಿಣಮಿಸಿದೆ ಎಂತಲೂ, ಜಾಗ್ರತೆ ಈ ಸ್ಟೂಡೆಂಟ್ಸ್ ಹೋಮಿಗಾಗಿ ಭಾರೀ ಕಟ್ಟಡ ತಯಾರ್ ಮಾಡಿ ಹೊಸದಾಗಿ ಬರತಕ್ಕ ವಿದ್ಯಾರ್ಥಿಗಳಿಗೆ ವಸತಿಮಾಡಬೇಕಾದ ಆವಶ್ಯಕತೆಯೂ ವಿಶದವಾಗಿ ಬರೆಯಲ್ಪಟ್ಟು ಓದಿದ್ದನ್ನು ಸಭಾಸದರು ಸಂತೋಷದಿಂದ ಕೇಳಿದರು.

ಅನಂತರ ೧೦-೧೨ ಜನ ವಿದ್ಯಾರ್ಥಿಗಳು ವಿದ್ಯಾ ವಿಷಯದಲ್ಲಿಯೂ, ವಿದ್ಯಾಭಿವೃದ್ಧಿಗೆ ಸ್ಟೂಡೆಂಟ್ಸ್ ಹೋಮಿನಿಂದ ಉಂಟಾಗುವ ಸೌಕರ್ಯವನ್ನೂ ಕುರಿತು ಇಂಗ್ಲೀಷ್ ಸಂಸ್ಕೃತ, ಆಂಧ್ರ, ಕನ್ನಡ, ಭಾಷೆಗಳಲ್ಲಿ ಲೇಖನಗಳು ಓದಿದರು. ತರುವಾಯ ಮೆ॥ ಸಿ. ಕೃಷ್ಣರಾಯರು ಪೂರ್ವದಲ್ಲಿ ಪ್ರಸಿದ್ಧವಂತರಾಗಿದ್ದ ಈ ರೆಡ್ಡೀ ಪಂಗಡದ ಜನರು ಈಗಲೂ ಸ್ವತಂತ್ರ ಜೀವಿಗಳಾಗಿ ಉದಾರಶಾಲಿಗಳಾಗಿದ್ದರೂ ವಿದ್ಯಾ ವಿಷಯದಲ್ಲಿ ಹಿಂದೆ ಬಿದ್ದಿರುವುದರಿಂದ ಇವರ ಮಕ್ಕಳನ್ನು ಸದ್ವಿದ್ಯಾವಂತರನ್ನಾಗಿ ಮಾಡುವುದು ತಂದೆತಾಯಿಗಳ ಕರ್ತವ್ಯವೂ ಗೌರ್ನಮೆಂಟ್ ಸಹಾಯವೂ ಅಗತ್ಯವಾಗಿದೆ ನಮ್ಮ ಡೆಪ್ಯುಟಿ ಕಮಿಷನರ್ ಮೆ॥ ಚಂಗಯ್ಯಶೆಟ್ಟಿಯವರ ಕಾಲದಲ್ಲಿ ಈ ಡಿಸ್ಟ್ರಿಕ್ಟಿನ ರೆಡ್ಡೀ ಪಂಗಡದ ಬಾಲಕರ ವಿದ್ಯಾಭಿವೃದ್ಧಿಗೋಸ್ಕರ ಈ ಸ್ಟೂಡೆಂಟ್ಸ್ ಹೋಂ ಸ್ಥಾಪಿತವಾಗಿದೆ. ಈಗ ಸ್ಥಾಪಿಸಲ್ಪಟ್ಟಿರುವ ಬಾಡಿಗೇ ಕಟ್ಟಡವಾದ ಚಿಕ್ಕ ಮನೆಯಲ್ಲಿ ೧೮-೨೦ ಜನ ವಾಸವಾಗಿರುವುದು ಆರೋಗ್ಯ ಶಾಸ್ತ್ರಕ್ಕೆ ವಿರೋಧವಾಗಿದೆ. ಪ್ರತ್ಯೇಕವಾಗಿ ಒಂದು ಚಿಕ್ಕ ಕಟ್ಟಡ ಜಾಗ್ರತೆ ತಯಾರ್ಮಾಡಬೇಕಾದ್ದು ಅವಶ್ಯಕವೆಂದು ಸೂಚಿಸಿದ್ದನ್ನು ರೆವ್. ಜೆ ವೆಸ್ಲಿಯವರು ಅನುಮೋದಿಸಿದರು ಮೆ॥ ಬಂಡ್ಲ ತಿಪ್ಪಯ್ಯನವರು, ನಾಡಿಗ ಬಯಣ್ಣನವರು, ಮುಲ್ಕ ಬುಡ್ಡಯ್ಯನವರು ಕಲಾ ೧೦೦-೨೦೦ ರೂಪಾಯಿ ಚಂದಾ ಕೊಡಲು ಒಪ್ಪಿದರು

ಅಗ್ರಾಸನಾಧಿಪತಿಗಳು ಸಭಿಕರನ್ನು ಕುರಿತು—ಈ ಸ್ಟೂಡೆಂಟ್ಸ್ ಹೋಮಿನ ಒಳ್ಳೇ ಫಲಿತಾಂಶವೂ, ನಿಮ್ಮಗಳ ಉತ್ಸಾಹವೂ, ಔದಾರ್ಯವೂ, ನೋಡಿ ಸಂತೋಷವಾಯಿತು ಈಗ ಇರತಕ್ಕ ೧೮—೨೦ ಜನರಿಗೋಸ್ಕರ ಒಂದು ಕಟ್ಟಡ ತಯಾರ್ಮಾಡುವುದಕ್ಕಾಗಿ ಸಣ್ಣ ಚಂದಾಪಟ್ಟಿ ಹಾಕುವುದಕ್ಕೆ ಬದಲು ಇನ್ನೂ ಗ್ರಾಮಾಂತರಗಳಿಂದ ಬರತಕ್ಕ ಅನೇಕ ಬಾಲಕರಿಗನುಕೂಲವಾಗಿ ದೊಡ್ಡದಾದ ಕಟ್ಟಡವನ್ನೇ ಕಟ್ಟಿ ಈ ಟವನಿನಲ್ಲಿ ಈ ಪಂಗಡದ ವಿದ್ಯಾರ್ಥಿಗಳಿಗೆ ಸ್ಥಳವಸತಿ ಮಾಡಬೇಕಾದದ್ದು ಅಗತ್ಯವಾಗಿದೆ ಇದಕ್ಕಾಗಿ ಹತ್ತು ಸಾವಿರ ರೂಪಾಯಿಗಳಾದರೂ ಜಮಾಯಿಸಬೇಕು. ಈ ಸಭೆಯಲ್ಲಿ ಹೆಚ್ಚಿಗೆ ಜನರು ಸೇರಿಲ್ಲವು. ಮತ್ತು ಈಗ ಕಾಲವಲ್ಲವು. ಈ ಪಂಗಡದ ಜನರು ಸುಮಾರು ಹತ್ತು ಸಾವಿರಕ್ಕೆ ಮೇಲ್ಪಟ್ಟು ಈ ಡಿಸ್ಟ್ರಿಕ್ಟಿನ ಆರು ತಾಲ್ಲೂಕು ಗ್ರಾಮಾಂತರಗಳಲ್ಲಿ ವಾಸಮಾಡುತ್ತಾ, ಎಲ್ಲರೂ ಜಮೀನ್ದಾರರಾಗಿಯೂ, ಭಾರೀ ಕಂದಾಯಕೊಡತಕ್ಕ ಸ್ಥಿತರಾಗಿಯೂ ಇದ್ದಾರೆ ಪ್ರಜೆಗಳ ಪುರೋಭಿವೃದ್ಧಿಯೇ ಗೌರ್ನಮೆಂಟಿನವರ ಮುಖ್ಯೋದ್ದೇಶವಾಗಿದೆ ಇದಕ್ಕಾಗಿ ಸರ್ಕಾರದಿಂದ ಆಗಬೇಕಾದ ಸಹಾಯಮಾಡಲು ಬದ್ಧರಾಗಿರುವರು ಮಳೆ ಬೆಳೆ ಸರಿಯಾಗಿ ನಡೆದು ಸುಭಿಕ್ಷವಾದ ಕೂಡಲೆ ಅಲ್ಲಲ್ಲಿ ಸಭೆ ಸೇರಿ ಚಂದಾ ಹಣ ವಸೂಲ್ಮಾಡಿ, ಹತ್ತು ಸಾವಿರ ರೂಪಾಯಿ ಜಮಾಯಿಸಿ ದೊಡ್ಡ ಕಟ್ಟಡ ತಯಾರ್ ಮಾಡಿಸಬೇಕು ಎಂಬೀ ರೀತಿ ಅಪ್ಪಣೆ ಕೊಡಿಸಿದ್ದನ್ನು ಎಲ್ಲರೂ ಒಪ್ಪಿ ಸಂತೋಷಪಟ್ಟರು.

ಬಿ. ಭೀಮರಾಯರವರು ಸಭಿಕರ ಮತ್ತು ಅಗ್ರಾಸನಾಧಿಪತಿಗಳ ಶ್ರೇಯಃಪ್ರಾರ್ಥನಾರೂಪವಾದ ಮಂಗಳವನ್ನು ಸಂಗೀತದಲ್ಲಿ ಹೇಳಿದರು ಹನುಮಂತರಾಯರವರು ಸಭಿಕರಿಗೂ, ಅಗ್ರಾಸನಾಧಿಪತಿಗಳಿಗೂ, ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೂ, ಇಂಡಿಯಾ ದೇಶದ ಚಕ್ರವರ್ತಿ ಸಾರ್ವಭೌಮರಿಗೂ ಆಯುರಾರೋಗ್ಯಾದಿಗಳನ್ನು ಬಯಸಿ, ಸಭಾಸದರೆಲ್ಲರಿಗೂ ಪುಷ್ಪವನ್ನು ಕೊಟ್ಟು, ಬೆಂಗಳೂರು ಒಕ್ಕಲಿಗರ ಸಂಘದವರೂ, ಆರ್ಯಸಮಾಜಿಕರೂ ಕಳುಹಿಸಿದ್ದ ಬುಕ್ಕುಗಳನ್ನು ಹಂಚಿ ಸಭೆಯನ್ನು ಮುಕ್ತಾಯಮಾಡಿದರು.

ಪ್ರತ್ಯಕ್ಷದರ್ಶಿ.

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಪಟ್ಟಣದಲ್ಲಿ ಬನ್ನಿಯಾ ವರ್ತಕ ಜನರ ಗುರುವಾದ ಮಹಾರಾಜ ಗೋಸ್ವಾಮಿ ಘನಶ್ಯಾಂ ಲಾಲ್ಜಿಯವರ ಅರಮನೆಗೆ ಕಳೆದ ವಾರ ಕಳ್ಳರು ಬಿದ್ದು, ಸುಮಾರು ೪೩,೦೦೦ ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿರುತ್ತಾರೆ.

***

ಕಳೆದ ವಾರ ಉತ್ತರದೇಶದಲ್ಲಿ ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದ್ದವರ ಪೈಕಿ ೫೦,೦೦೦ ಪ್ರಜೆಗಳು ರಿಲೀಫ್ ಕಾಮಗಾರಿಗಳನ್ನು ಬಿಟ್ಟು, ತಮ್ಮ ಜಮೀನ್ ವ್ಯವಸಾಯವೇ ಮೊದಲಾದ ಸ್ವಂತ ಕಸಬುಗಳನ್ನು ಕುರಿತು ಹೊರಟುಹೋದರು. ವಾರದ ಅಂತ್ಯದಲ್ಲಿ ಐದು ಲಕ್ಷ ಪ್ರಜೆಗಳು ಇನ್ನೂ ಸರ್ಕಾರದವರ ಪೋಷಣೆಯಲ್ಲಿದ್ದರು

***

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ೧,೨೩೯ ಜನರು ಪ್ಲೇಗ್ ಉಪದ್ರದಲ್ಲಿ ಕಾಲವಾದರು. ಇದರಿಂದ ಈಚೆಗೆ ಈ ಉಪದ್ರವು ಕ್ರಮವಾಗಿ ಹೆಚ್ಚುತ್ತಿದೆ ಎಂದು ಗೊತ್ತಾಗುತ್ತದೆ ಕಾಲವಾದವರ ಪೈಕಿ ಬೊಂಬಾಯಿ ಆಧಿಪತ್ಯಕ್ಕೆ ಸೇರಿದವರು ೬೧೭ ಜನರು, ಮೈಸೂರು ಸಂಸ್ಥಾನದವರು ೨೩೦ ಮಂದಿ, ಮದರಾಸ್ ಆಧಿಪತ್ಯ ೧೫೦, ಹೈದರಾಬಾದ್ ಸಂಸ್ಥಾನದಲ್ಲಿ ೯೪.

***

ಅನಂತಶಯನ (ತಿರುವಾಂಕೂರು) ಸಂಸ್ಥಾನದ ರಾಜಧಾನಿಯಲ್ಲಿ ಮಹಾರಾಜರವರ ಅರಮನೆ ಬಳಿ ಕಳೆದ ವಾರ ಬೆಂಕಿಬಿದ್ದಿತು. ಕೋಯಿಲ್ ತಂಪೂರಾನವರ ಟೌನ್ ಹೈಸ್ಕೂಲ್ ಕಟ್ಟಡವೂ, ಸರಸ್ವತಿ ಭಂಡಾರವೂ ಎಲ್ಲಾ ಉರಿದುಹೋಯಿತು ಸುಮಾರು ೧೦ ಸಾವಿರ ರೂಪಾಯಿನ ಮಾಲುಗಳೂ ಕಟ್ಟಡಗಳೂ ನಷ್ಟವಾದವು. ಯಾರೋ ಬೇಕೆಂದು ಬೆಂಕಿಹಾಕಿದಾರೆಂದು ಅನುಮಾನ ಉಂಟಾಗಿ ತನಿಖೆ ಮಾಡುತ್ತಿದಾರೆ

***

ವಾಯವ್ಯಪ್ರಾಂತ್ಯಕ್ಕೆ ಸೇರಿದ ಮಿರ್ಜಾಪುರದಲ್ಲಿ ಲಾಲಾ ಮಾಧವ ಪ್ರಸಾದ್ ಎಂಬೊಬ್ಬ ವರ್ತಮಾನಪತ್ರಿಕೆಯ ಎಡಿಟರನ್ನು ಮ್ಯಾಜಿಸ್ಟ್ರೇಟರೂ ಪೋಲೀಸಿನವರೂ ಅಕ್ರಮವಾಗಿ ದಸ್ತಗಿರಿಮಾಡಿ ಖೈದಿನಲ್ಲಿಟ್ಟಿದ್ದರೆಂದೂ, ಅದಕ್ಕಾಗಿ ಅವರಿಂದ ನಷ್ಟದ್ರವ್ಯವನ್ನು ಕೊಡಿಸಿಕೊಡಬೇಕೆಂದೂ ಆ ಎಡಿಟರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮೇಲೂ, ಪೋಲೀಸ್ ಅ॥ ಸೂಪರಿಂಟೆಂಡೆಂಟರೇ ಮೊದಲಾದವರ ಮೇಲೂ ದಾವಾ ತಂದಿರುತ್ತಾರೆ. ಈ ಮೊಕದ್ದಮೆಯನ್ನು ಅಲಹಾಬಾದ್ ಸಬ್ ಜಡ್ಜಿಯವರು ದರ್ಯಾಫ್ತು ಮಾಡುತ್ತಿದಾರೆ

***

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಔರಂಗಬಾದ್ ಡಿಸ್ಟ್ರಿಕ್ಟಿನಲ್ಲಿ ದೀಗೂರೆಂಬ ದೊಡ್ಡ ಊರಿನಲ್ಲಿ ಬಾಣಗಳನ್ನು ಮಾಡುವುದಕ್ಕೆ ಒಬ್ಬ ವರ್ತಕನು ಬಹಳ ಹೆಚ್ಚಾಗಿ ಮದ್ದನ್ನು ತಯಾರ್ಮಾಡುತ್ತಿದ್ದನು. ಅದು ಆಕಸ್ಮಾತ್ತಾಗಿ ಹತ್ತಿಕೊಂಡು ಮಹಾ ಶಬ್ದದೊಡನೆ ಆ ಮನೆಯನ್ನೇ ಹಾರಿಸಿಬಿಟ್ಟಿತು. ಅವನು ಚೂರುಚೂರಾದನು. ಮನೆಯಲ್ಲಿದ್ದ ನಾಲ್ವರು ಹೆಂಗಸರಿಗೆ ಘೋರ ಗಾಯಗಳಾದವು. ಇಬ್ಬರು ಆಸ್ಪತ್ರೆಯಲ್ಲಿ ಸತ್ತುಹೋದರು. ಇನ್ನಿಬ್ಬರು ಬದುಕುವುದು ಕಷ್ಟವಾಗಿದೆ. ಮದ್ದಿನಲ್ಲಿ ಸಾಹುಕಾರ ಮಾಡತಕ್ಕವರು ಎಷ್ಟು ಎಚ್ಚರಿಕೆಯಿಂದಿರಬೇಕೆಂಬುದು ಇವರಿಂದ ಗೊತ್ತಾಗುತ್ತದೆ

***

ತಿನ್ನವೆಲ್ಲಿ ಪಟ್ಟಣದಲ್ಲಿ ನಡೆದ ದಂಗೆ ಮೊಕದ್ದಮೆಯಲ್ಲಿ ಮೊದಲನೇ ಗುಂಪಿನ ಅಪರಾಧಿಗಳಿಗೆ ಶಿಕ್ಷೆಯಾದ ಸಂಗತಿಯನ್ನು ಕಳೆದ ವಾರ ತಿಳಿಸಿದೆವಷ್ಟೆ ಈಚೆಗೆ ಎರಡನೇ ಗುಂಪಿನ ಅಪರಾಧಿಗಳಾದ ಇಪ್ಪತ್ತೆರಡು ಮಂದಿಯನ್ನು ಮೆ॥ ಸ್ಪೆನ್ಸರ್ ಎಂಬ ಸೆಷನ್ಸ್ ಜಡ್ಜರು ದರ್ಯಾಫ್ತು ಮಾಡಿ, ಕಳೆದ ವಾರ ತೀರ್ಮಾನ ಹೇಳಿದರು. ಮೊದಲನೇ ಅಪರಾಧಿ ಸುಂದರಂ ಅಯ್ಯರೆಂಬ ಉಪನ್ಯಾಸಕನಿಗೆ ಐದು ವರುಷ ಕಠಿಣ ಸಜಾ, ೫೦೦ ರೂಪಾಯಿ ಜುಲ್ಮಾನೆಯನ್ನೂ; ಹನ್ನೆರಡು ಮಂದಿ ಅಪರಾಧಿಗಳಿಗೆ ತಲಾ ಐದು ವರುಷ ಕಠಿಣ ಸಜಾವನ್ನೂ; ಮೂರು ಮಂದಿ ಅಪರಾಧಿಗಳಿಗೆ ಕಡಮೆ ಸಜಾ ಶಿಕ್ಷೆಯನ್ನೂ ವಿಧಿಸಿದರು

***

ಆಲಿಘರದ ವೇದಿಕ್ ಆಶ್ರಮವೆಂಬ ವಿದ್ಯಾರ್ಥಿನಿಲಯದ ಸೂಪರಿಂಟೆಂಡೆಂಟ್ ರಾಮಸ್ವರೂಪನೂ, ಮೋತೀ ಲಾಲ್ ವರ್ಮ ಎಂಬವನೂ ಕಲ್ಕತ್ತೆಯಲ್ಲಿ ಪ್ರಕಟವಾಗುವ "ವಂದೇ ಮಾತರಂ" ಎಂಬ ವರ್ತಮಾನಪತ್ರಿಕೆಗೆ ರಾಜದ್ರೋಹಕರವಾದ ಒಂದು ತಂತೀವರ್ತಮಾನವನ್ನು ಕಳುಹಿಸಿದರೆಂದು ಮೊಕದ್ದಮೆ ಆಗಿ, ಅದರಲ್ಲಿ ಅವರಿಬ್ಬರಿಗೂ ಏಳೇಳು ವರುಷದ ಬಂಕೋಲ್ ಶಿಕ್ಷೆಯಾಯಿತಷ್ಟೆ. ಅವರು ರಾಜದ್ರೋಹಕರವಾದ ನೋಟೀಸುಗಳನ್ನು ವಿದ್ಯಾರ್ಥಿಗಳಿಗೂ ಸೈನಿಕರಿಗೂ ಹಂಚಿ ದಂಗೆ ಎಬ್ಬಿಸಬೇಕೆಂದು ಪ್ರಯತ್ನಪಟ್ಟರೆಂಬದಾಗಿ ಈಚೆಗೆ ಅವರ ಮೇಲೆ ಎರಡನೇ ಮೊಕದ್ದಮೆ ಹುಟ್ಟಿ, ಆಲಿಘರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅವರಿಬ್ಬರನ್ನೂ ದರ್ಯಾಫ್ತು ಮಾಡುತ್ತಿದಾರೆ.

***

ಮಧ್ಯ ಪ್ರಾಂತ್ಯಗಳ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾಗಿರುವುದೇನೆಂದರೆ—ಭಂಡಾರ ಡಿಸ್ಟ್ರಿಕ್ಟಿಗೆ ಸೇರಿದ ರಾಂಪಾಯಲಿ ಎಂಬ ಊರಿನಲ್ಲಿ ವಾಸಮಾಡುತ್ತಿರುವ ಸರ್ದಾರ್ ತಹಸೀಲ್ದಾರ್ (ಅವಾಲ್ದಾರ್) ಶಿವರಾಜಸಿಂಗ್ ಎಂಬಾತನು ಗವರ್ನಮೆಂಟಿಗೆ ರಾಜಕೀಯ ವಿಷಯದಲ್ಲಿ ಪ್ರತಿಕಕ್ಷಿಯಾಗಿ ನಿಂತು, ಪ್ರಜೆಗಳಲ್ಲಿ ದುರಭಿಪ್ರಾಯ ಅಪ್ರೀತಿಗಳನ್ನು ಹುಟ್ಟಿಸುವಂಥಾ ಕಾರ್ಯಗಳನ್ನು ನಡಿಸುತ್ತಾ ಬಂದಿರುತ್ತಾನೆ ಈ ವಿಧವಾದ ನಡತೆಯು ಸರಿಯಾದದ್ದಲ್ಲವೆಂದು ಗವರ್ನಮೆಂಟಿನವರು ಆತನಿಗೆ ಎಚ್ಚರಿಕೆ ಹೇಳಿದಾಗ್ಯೂ ಆತನು ಲಕ್ಷ್ಯಮಾಡಲಿಲ್ಲವಾದ್ದರಿಂದ ಗವರ್ನಮೆಂಟಿನಿಂದ ಆತನಿಗೆ ಸಲ್ಲುತ್ತಿರುವ ವರ್ಷಾಸನವನ್ನು ಕೊಡಕೂಡದೆಂದು ಈ ಮೂಲಕ ಹುಕುಂ ಕೊಡಲಾಗಿದೆ ಕಂಟ್ರೋಲರವರು ಇನ್ನು ಮುಂದೆ ಆತನ ವರ್ಷಾಸನ ಬಿಲ್ಲನ್ನು ಸ್ಯಾಂಕ್ಷನ್ ಮಾಡಕೂಡದು ಎಂಬುದೇ

***

ಹೈದರಾಬಾದ್ ಸಂಸ್ಥಾನದಲ್ಲಿ ಸರ್ಕಾರಿ ಯುನಾನಿ ವೈದ್ಯದ ಇಲಾಖೆಯನ್ನು ಇಟ್ಟಿದಾರೆ. ಈ ಇಲಾಖೆಯ ಪಂಡಿತರಾದ ಫೈಜುಲ್ ಜಂಗ್ ಯವರ ಬಳಿಯಲ್ಲಿ ಅನೇಕ ಅಪೂರ್ವವಾದ ಪ್ರಾಚೀನ ಯುನಾನಿ ವೈದ್ಯಗ್ರಂಥಗಳಿರುತ್ತವೆ ಆ ಪೈಕಿ ಕೈ ಬರಹದ ಒಂದು ಗ್ರಂಥವನ್ನು ರಾಯಲ್ ಏಷಿಯಾಟಿಕ್ ಸೊಸೈಟಿ ಎಂಬ ಸಂಘದವರು ಪರೀಕ್ಷೆಮಾಡಿ, ಮಹಾ ಶ್ರೇಷ್ಠವಾದದ್ದೆಂದು ಅಭಿಪ್ರಾಯಪಟ್ಟರು ಈ ಪುಸ್ತಕಗಳನ್ನೆಲ್ಲಾ—ಅವು ಎರಡು ಲಕ್ಷ ರೂಪಾಯಿ ಬೆಲೆ ಬಾಳುವವೆಂದು ಅಂದಾಜು ಕಟ್ಟಲ್ಪಟ್ಟಿದೆ—ಹೈದರಾಬಾದ್ ನೈಜಾಮರವರು ಆ ಡಾಕ್ಟರಿಂದ ಸರ್ಕಾರಕ್ಕೆ ತೆಗೆದುಕೊಂಡು, ಅದಕ್ಕೆ ಪ್ರತಿಫಲವಾಗಿ ಆ ಡಾಕ್ಟರಿಗೂ ಅವರ ವಂಶೀಕರಿಗೂ ಸರ್ಕಾರದಿಂದ ಮಾಸೇಯಾನಾ ೩೫೦ ರೂಪಾಯಿ ಸಂಬಳ ಕೊಡತಕ್ಕದ್ದೆಂದು ಹುಕುಂ ಕೊಟ್ಟಿರುತ್ತಾರೆ. ಇನ್ನು ಮುಂದೆ ಆ ಗ್ರಂಥಗಳನ್ನು ಗವರ್ನಮೆಂಟ್ ಸರಸ್ವತೀ ಭಂಡಾರದಲ್ಲಿ ಇಡಿಸುವರು,

***

ಪೂನಾ ಪಟ್ಟಣದ ಹಿಂದೂ ಗಾಯನ ಸಮಾಜದಲ್ಲಿ ಕಳೆದ ವಾರ ವಾರ್ಷಿಕೋತ್ಸವವಾಯಿತು. ಬೊಂಬಾಯಿ ಗವರ್ನರವರು ಸಭೆಯ ಅಗ್ರಾಸನವನ್ನು ಅಲಂಕರಿಸಿದ್ದರು. ವಿಲಾಯಿತಿಯ ರಾಜಕುಮಾರರಾದ ಡ್ಯೂಕ್ ಆಫ್ ಕನ್ನಾಟರವರೂ ಹಿಂದುಸ್ಥಾನದೊಳಗಿರುವ ಬಹುಮಂದಿ ದೇಶೀಯ ರಾಜರೂ ದೊಡ್ಡ ಮನುಷ್ಯರೂ ಈ ಸಮಾಜದ ಮೂಲಧನಕ್ಕೆ ಚಂದಾ ಕಳುಹಿಸಿರುತ್ತಾರೆ ಈ ಸಮಾಜದಲ್ಲಿ ೬೦೪ ಜನ ಬಾಲಕರು ದೇಶೀಯ ಸಂಗೀತವನ್ನು ಕ್ರಮವಾಗಿ ಕಲಿಯುತ್ತಿರುವರು. ಗವರ್ನರವರು ಸಮಾಜದ ಕಾರ್ಯಭಾರಗಳನ್ನೂ ವಿದ್ಯಾಭಿವೃದ್ಧಿಯನ್ನೂ ಕುರಿತು ಉಪನ್ಯಾಸಮಾಡಿ, ಉಪಾಧ್ಯಾಯರೇ ಮೊದಲಾದವರನ್ನು ಬಹಳವಾಗಿ ವಂದಿಸಿದ್ದಲ್ಲದೆ, ಸಂಗೀತಶಾಸ್ತ್ರವು ಮೊದಲು ಈ ದೇಶದಲ್ಲೇ ಪ್ರಾರಂಭವಾಗಿ ತುಂಬಾ ಉಚ್ಛ್ರಾಯಸ್ಥಿತಿಗೆ ಬಂದಿತೆಂತಲೂ, ದುರುಪಯೋಗದಿಂದ ಅದು ಕ್ಷೀಣಗತಿಗೆ ಬರುವಂತಾಗಿ ಈಚೆಗೆ ಪುನಹ ಒಳ್ಳೇ ಸ್ಥಿತಿಗೆ ಬರುತ್ತಿದೆ ಎಂತಲೂ, ಇಂಥಾ ಮನೋಹರವಾದ ವಿದ್ಯೆಯು ಎಂದಿಗೂ ಲಯವಾಗಲಾರದೆಂತಲೂ, ಸಂಗೀತವನ್ನು ಸಮಸ್ತ ಪಾಠಶಾಲೆಗಳಲ್ಲೂ ನೇಮಿಸಿ ಬಾಲಕರಿಗೆ ಕಲಿಸುವುದು ಹಿತಕರವಾದದ್ದೆಂತಲೂ ಉಪನ್ಯಾಸಮಾಡಿದರು

***

ದೆಹಲಿ ಪಟ್ಟಣದ ರಾಮನಾಟಕ ಮಂದಿರದಲ್ಲಿ ಹಿಂದಿನ ಶನಿವಾರ ಒಂದು ದೊಡ್ಡ ಸಭೆ ನಡೆದಾಗ ಪಂಡಿತಾ ಗಾಯತ್ರಿ ದೇವಿ ಎಂಬ ಹಿಂದೂ ಸ್ತ್ರೀಯು "ಸ್ತ್ರೀಯರ ವಿಷಯದಲ್ಲಿ ಪುರುಷರ ಧರ್ಮ" ಎಂಬ ವಿಚಾರವನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಈ ಕಾಲದಲ್ಲಿ ಹೆಂಗಸರನ್ನೂ ಹೆಣ್ಣು ಮಕ್ಕಳನ್ನೂ ಗಂಡಸರು ಬಹಳ ಅಲಕ್ಷ್ಯದಿಂದ ಕಾಣುತ್ತಾರೆ ಗಂಡಸರು ತಾವೇ ಬಿ. ಎ. ಮೊದಲಾದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಬೇಕೆಂದೂ, ಎಲ್ಲಾ ಶಾಸ್ತ್ರಗಳಲ್ಲೂ ತಾವೇ ಪಂಡಿತರೆನಿಸಿಕೊಳ್ಳಬೇಕೆಂದೂ, ಪುರುಷರಿಗೆ ಮಾತ್ರವೇ ಫಲಕಾರಿಗಳಾಗುವಂಥಾ ಬದಲಾವಣೆಗಳನ್ನು ಮಾಡಿಕೊಳ್ಳಬೇಕೆಂದೂ, ಸಂಘದಲ್ಲಿ ತಮಗೇ ಸಮಸ್ತ ಸನ್ಮಾನಗಳೂ ದೊರಕಬೇಕೆಂದೂ, ತಮಗೆ ಅಧಿಕಾರ ಹೆಚ್ಚಬೇಕೆಂದು ಗವರ್ನಮೆಂಟಿನವರ ಮೇಲೆ ರಾಜಕೀಯ ಹೋರಾಟಗಳನ್ನು ನಡಿಸುತ್ತಿದಾರೆಂದೂ, ಇದನ್ನೆಲ್ಲಾ ನೋಡಿದರೆ ಗಂಡಸರು ಸ್ವಾರ್ಥಪರಾಯಣರಾಗಿರುತ್ತಾರೆಂಬುದು ಸುಲಭವಾಗಿ ಗೊತ್ತಾಗುತ್ತದೆ ಎಂದೂ, ಆದರೆ ಅವರು ತಮ್ಮ "ಅರ್ಧಾಂಗಿ"ಗಳೆಂದು ಹೇಳುವ ಹೆಂಗಸರನ್ನು ಉತ್ತಮ ಸ್ಥಿತಿಗೆ ತರುವ ಭಾಗದಲ್ಲಿ ಅವರು ಸ್ವಲ್ಪವೂ ಮನಗೊಡುವುದಿಲ್ಲ ಎಂಬೀ ರೀತಿಯಾಗಿ ಉಪನ್ಯಾಸ ಮಾಡಿದರು.

***

ಹಿಂದುಸ್ಥಾನದಲ್ಲಿ ಸಂಸ್ಕೃತವನ್ನೂ ಅರಬ್ಬಿಯನ್ನೂ ಕಲಿತಿರುವ ದೇಶೀಯ ಪಂಡಿತರು ಅನೇಕಾನೇಕರು ಇರುತ್ತಾರಾದರೂ ಅವ

ರಲ್ಲಿ ಯಾರಿಗೂ ಆಯಾ ಭಾಷೆಯಲ್ಲಿ ಈಗಿನ ಕಾಲಕ್ಕೆ ತಕ್ಕಂಥಾ ಅಸ್ವತಂತ್ರವಾದ ವಿವೇಚನಾಶಕ್ತಿಯೂ ಕೌಶಲಬುದ್ಧಿಯೂ ಇಲ್ಲದಿರುವುದನ್ನು ನೋಡಿ, ಈ ಲೋಪವನ್ನು ಹೋಗಲಾಡಿಸಬೇಕೆಂತಲೂ, ದೇಶೀಯ ಪಂಡಿತರಿಗೆ ಪ್ರೋತ್ಸಾಹಗಳನ್ನು ಕಲ್ಪಿಸಿ ಅವರಲ್ಲಿ ಅಂಥಾ ಶಕ್ತಿಯನ್ನು ಉಂಟುಮಾಡಬೇಕೆಂತಲೂ ಇಂಡಿಯಾ ಗವರ್ನ್‌ಮೆಂಟಿನವರು ಪ್ರಯತ್ನಪಟ್ಟಿದ್ದಾರೆ. ಹಿಂದೂಸ್ಥಾನದಲ್ಲಿರುವಂಥಾ ಸಂಸ್ಕೃತ ಮತ್ತು ಅರಬ್ಬಿ ಭಾಷಾ ಪಂಡಿತರ ಪೈಕಿ ಒಬ್ಬೊಬ್ಬರನ್ನು ಪ್ರತಿ ವರುಷವೂ ತಲಾ ೨,೫೦೦ ರೂಪಾಯಿ ವೇತನವನ್ನು ಕೊಟ್ಟು, ಆ ತರದ ವಿದ್ಯೆಯನ್ನು ಕಲಿತು ಬರುವಂತೆ ವಿಲಾಯತಿ ಮೊದಲಾದ ಸ್ಥಳಗಳಿಗೆ ಕಳುಹಿಸಬೇಕೆಂದು ಹುಕುಂ ಕೊಟ್ಟಿರುವರು. ಈ ವರುಷ ಸಂಸ್ಕೃತಭಾಷಾ ಪಂಡಿತನಿಗೆ ಒಂದು ವೇತನವನ್ನೂ, ಅರಬ್ಬೀ ಪಂಡಿತನಿಗೆ ಒಂದನ್ನೂ ಕೊಟ್ಟು ಕಳುಹಿಸಿರುತ್ತಾರೆ. ಬರುವ ವರುಷ ಆ ಎರಡು ವೇತನಗಳನ್ನೂ ಸಂಸ್ಕೃತಪಂಡಿತರಿಗೇ ಕೊಡುವರು. ಹೀಗೆ ಅಂಥಾ ಶಕ್ತರಾದ ಪಂಡಿತರು ಹಿಂದೂಸ್ಥಾನದಲ್ಲಿ ಹೆಚ್ಚುವ ತನಕ ಗವರ್ನ್‌ಮೆಂಟಿನವರು ಈ ವೇತನಗಳನ್ನು ಕೊಡುತ್ತಾ ಬರುವರು.

* * *

ತುರ್ಕಿ ಸುಲ್ತಾನರವರಾದ ಅಬ್ದುಲ್ ಹಮೀದ್ ರವರು ಪಟ್ಟಕ್ಕೆ ಬಂದು ಈ ತಿಂಗಳ ಮೊದಲನೇ ತಾರೀಖಿಗೆ ೩೩ ಸಂವತ್ಸರಗಳಾದವು. ಇದಲ್ಲದೆ ಅವರು ಆ ದಿನ ಮಹಮದೀಯರ ಯಾತ್ರಾಸ್ಥಾನಗಳಿಗೆ ಹೋಗತಕ್ಕಂಥಾ ರೈಲ್ ರಸ್ತೆಯನ್ನು ಪ್ರತಿಷ್ಠೆಮಾಡಿ, ಗಾಡಿಗಳನ್ನು ಬಿಡಿಸಿದರು. ಇವೆರಡು ಸಂತೋಷ ಸಮಾಚಾರಗಳೂ ಹಿಂದೂಸ್ಥಾನದಲ್ಲಿ ತಿಳಿದು, ಅನೇಕಾನೇಕ ಮಹಮದೀಯ ಪ್ರಜೆಗಳು ನೂರಾರು ಪಟ್ಟಣಗಳಲ್ಲಿ ಬಹು ಸಂತೋಷಕರವಾದ ಉತ್ಸವಗಳನ್ನು ಮಾಡಿದರು. ಅನೇಕ ಕಡೆ ಬಡಬಗ್ಗರಿಗೆ ಆ ದಿನ ಮಹಮದೀಯರು ಅನ್ನವಸ್ತ್ರಗಳನ್ನು ಕೊಡಿಸಿ ಸಂತೋಷಪಡಿಸಿದ್ದಲ್ಲದೆ, ಸಾವಿರಾರು ಸಭೆಗಳನ್ನು ನಡಸಿ ಸುಲ್ತಾನರವರಿಗೆ ಆಯುರಾರೋಗ್ಯಾದಿಗಳನ್ನು ಬಯಸಿದರು. ಮಹಮದೀಯ ಪ್ರಜೆಗಳು ಹಿಂದೂಸ್ಥಾನದಲ್ಲಿ ಈ ರೀತಿಯಾದ ಸಂತೋಷ ಕಾರ್ಯಗಳನ್ನು ನಡಸಲು ಇನ್ನೊಂದು ದೊಡ್ಡ ಕಾರಣವೇನೆಂದರೆ—ಸುಲ್ತಾನರವರು ತಮ್ಮ ರಾಜ್ಯದಲ್ಲಿ ಕ್ರೂರಿಗಳೂ ಲಂಚಖೋರರೂ ಆಗಿದ್ದ ಅಧಿಕಾರಿಗಳನ್ನೆಲ್ಲಾ ಕೆಲಸದಿಂದ ವಜಾಮಾಡುತ್ತೇವೆಂತಲೂ, ಇನ್ನು ಮೇಲೆ ಪ್ರಜಾಪ್ರತಿನಿಧಿಗಳನ್ನು ಕರೆಸಿಕೊಂಡು (ಅಂದರೆ, ಪಾರ್ಲಿಮೆಂಟ್ ಸಭೆಗಳನ್ನು ಏರ್ಪಡಿಸಿ) ಪ್ರಜೆಗಳ ಅಭಿಪ್ರಾಯಾನುಸಾರವಾಗಿ ರಾಜ್ಯಭಾರವನ್ನು ನಡಸುತ್ತೇವೆಂತಲೂ ಅಪ್ಪಣೆ ಕೊಡಿಸಿರುವುದೇ ಮಹಮದೀಯ ಪ್ರಜೆಗಳ ಸಂತೋಷಕ್ಕೆ ದೊಡ್ಡ ಕಾರಣವಾಗಿರುವುದು.

* * *

ಈ ತಿಂಗಳ ಆಖೈರು ಭಾಗದಲ್ಲಿ ಮದರಾಸ್ ಪಟ್ಟಣದೊಳಗೆ ಬಹು ಅಪೂರ್ವವೂ ತುಂಬಾ ವಿಶೇಷವೂ ಆದ ಒಂದು ಭಾರೀ ಸಭೆ ನಡೆಯುವುದಾಗಿದೆ. ಹಿಂದೂಸ್ಥಾನದ ಅನೇಕ ಭಾಗಗಳಲ್ಲಿ ರಾಜದ್ರೋಹಕರವಾದ ಕೃತ್ಯಗಳೂ, ಬರವಣಿಗೆಗಳೂ, ಉಪನ್ಯಾಸಗಳೂ, ಅಭಿಪ್ರಾಯಗಳೂ ಹುಟ್ಟಿ ಪ್ರಜಾಪಾಲಕರಾದ ಬ್ರಿಟಿಷ್ ಗವರ್ನ್‌ಮೆಂಟಿನ ಅಧಿಕಾರಿಗಳಿಗೂ, ಕೋಟ್ಯನುಕೋಟಿ ಸಭ್ಯಪ್ರಜೆಗಳಿಗೂ ವಿವಾದವೂ ಚಿಂತೆಯೂ ಕಳವಳವೂ ಉಂಟಾಗಿರುವವಷ್ಟೆ. ನಮ್ಮೆಲ್ಲರಿಗೂ ಪ್ರಜೆಗಳ ಸುಖಸಂತೋಷಾದಿಗಳಿಗೂ ದೇಶಾಭ್ಯುದಯಕ್ಕೂ ಅವು ಬಹಳ ಪ್ರತಿಬಂಧಕಗಳಾಗಿರುವುದರಿಂದ ಅಂಥಾ ದುಷ್ಪ್ರವರ್ತನೆಗಳನ್ನು ಬುಡದಿಂದ ತೊಲಗಿಸುವುದೂ, ರಾಜಭಕ್ತಿಯನ್ನು ಸಕಲಪ್ರಜೆಗಳಲ್ಲೂ ಅಭಿವೃದ್ಧಿಹೊಂದುವಂತೆ ಮಾಡುವುದೂ ಈಗಿನ ಕಾಲದಲ್ಲಿ ಪರಮಾವಶ್ಯಕವಾಗಿದೆಯೆಂದು ಮದರಾಸ್ ಅಧಿಪತ್ಯದ ಕೆಲವು ಮಹನೀಯರು ಅಭಿಪ್ರಾಯಪಟ್ಟು, ಈ ತಮ್ಮ ಉದ್ದೇಶವನ್ನು ನೆರವೇರಿಸುವುದಕ್ಕೆ ಒಂದು ಮಹಾ ಸಭೆಯನ್ನು ನಡಸುವರು. ಈ ಸಭೆಯ ಕಾರ್ಯಗಳಲ್ಲಿ ದಕ್ಷಿಣ ದೇಶಕ್ಕೆ ಸೇರಿದ ದೇಶವತ್ಸಲರಾದ ಮಹಾರಾಜರು, ರಾಜರು, ಮಹಾರಾಣಿಯರು, ರಾಣಿಯರು, ನವಾಬರು, ಬೇಗಂಗಳು, ರಾಜಕುಮಾರರು, ರಾಜಕುಮಾರಿಯರು, ಅಧಿಪತಿಗಳು, ಜಮೀನ್ದಾರರು, ಜಹಗೀರ್ದಾರರು, ಅಧಿಕಾರಿಗಳು, ಉದ್ಯೋಗಸ್ಥರಾದ ದೊಡ್ಡಮನುಷ್ಯರು, ಮತ್ತು ಸ್ತ್ರೀಯರು ಮೊದಲಾದವರೂ, ಮೈಸೂರು, ಪುದುಕೋಟೆ, ತಿರುವಾಂಕೂರು, ಕೊಚ್ಚಿ ಮೊದಲಾದ ಸಂಸ್ಥಾನಗಳವರೂ ಪ್ರವೇಶಿಸಿ, ತಮ್ಮ ರಾಜಭಕ್ತಿ ವಿಶ್ವಾಸಾದಿಗಳನ್ನು ಮೇಲ್ಕಂಡ ಸಭೆಯಲ್ಲಿ ಪ್ರಕಾಶಪಡಿಸಿ, ನಮ್ಮನ್ನಾಳುವ ಬ್ರಿಟಿಷ್ ಸಾರ್ವಭೌಮ ಸರ್ಕಾರದವರಿಗೆ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಬೇಕೆಂದು ಪ್ರಯತ್ನಪಟ್ಟಿರುವರು. ಈ ಸಭೆಯು ಮುಗಿದ ತರುವಾಯ, ಅದೇ ಪಟ್ಟಣದಲ್ಲಿ ಜಾತಿಮತ ಭೇದವಿಲ್ಲದೆ ಆ ಸಭಿಕರಿಗೆಲ್ಲಾ ಭೋಜನಗಳು ನಡಸಲ್ಪಡುವವು. ಇದಕ್ಕೆ ರಾಜಭಕ್ತಿಯುತರ ಸಮಾರಾಧನೆ ಎಂದು ಹೆಸರು. ಇದರ ಖರ್ಚಿಗೆ ಬೇಕಾಗತಕ್ಕವು ೫ ರೂಪಾಯಿಗೆ ಕಡಮೆ ಇಲ್ಲದೆ ದ್ರವ್ಯಸಹಾಯ ಮಾಡಬೇಕು. ಈ ರೀತಿ ಕೂಡಿಸಲ್ಪಟ್ಟ ಹಣದಿಂದ ಪ್ರತಿ ವರುಷವೂ ಅಂಥಾ ಭೋಜನವನ್ನೂ ಮಹಾ ಸಭೆಯನ್ನೂ ನಡಸತಕ್ಕದ್ದೆಂದು ಏರ್ಪಾಡು ಮಾಡಿಕೊಂಡಿದಾರೆ. ಈ ನವೀನವಾದ ಏರ್ಪಾಡನ್ನು ಮಾಡಿದ ಮೂಲಪುರುಷರು ಇಂಥವರೆಂದು ಇನ್ನೂ ಪ್ರಕಟವಾಗಲಿಲ್ಲ. ಈ ತಿಂಗಳ ಆಖೈರ್ ಭಾಗದಲ್ಲಿ ನಡೆಯತಕ್ಕ ಸಭೆಯಲ್ಲಿ ಆ ದೊಡ್ಡ ಮನುಷ್ಯರುಗಳ ಹೆಸರು ಗೊತ್ತಾದೀತೆಂದು ತಿಳಿಸಲಾಗಿದೆ.

* * *

ಮದರಾಸ್ ಪಟ್ಟಣದಲ್ಲಿ ಮಿ॥ ಜಿ. ಸುಬ್ರಹ್ಮಣ್ಯ ಐಯರವರು "ಸ್ವದೇಶಮಿತ್ರನ್" ಎಂಬ ತಮಿಳು ವರ್ತಮಾನ ಪತ್ರಿಕೆಯನ್ನು ನಡಸುತ್ತಾ ಅದರಲ್ಲಿ ರಾಜದ್ರೋಹಕರವಾದ ಬಾತ್ಮಿಗಳನ್ನು ಬರೆದು, ಪ್ರಜೆಗಳಲ್ಲಿ ಸರ್ಕಾರದವರ ಮೇಲೆ ದ್ವೇಷಾಸೂಯೆಗಳನ್ನು ಉಂಟುಮಾಡಿದರೆಂದು ಅವರನ್ನು ದಸ್ತಗಿರಿ ಮಾಡಿ, ಅವರ ಮೇಲೆ ಮೊಕದ್ದಮೆ ಮಾಡಿದಾರೆಂದೂ, ಅವರನ್ನು ಜಾಮೀನ್ ಮೇಲೆ ಬಿಡದೆ ಜೈಲಿನಲ್ಲಿಟ್ಟಿದಾರೆಂದೂ ಕಳೆದ ವಾರ ತಿಳಿಸಿದ್ದೆವಷ್ಟೆ. ಈ ತಿಂಗಳ ೫ನೇ ತಾ. ದಿವಸ ಈ ಮೊಕದ್ದಮೆಯನ್ನು ಮದರಾಸ್ ಪಟ್ಟಣದ ಎಗ್ಮೋರ್ ಪೋಲೀಸ್ ಕೋರ್ಟ್ ಮ್ಯಾಜಿಸ್ಟ್ರೇಟರಾದ ಮಿ॥ ಎಫ್. ಡಿ. ಬರ್ಡ್ ರವರು ಪರ್ಯಾಪ್ತಿ ಮಾಡುವುದಕ್ಕಾಗಿ ಪ್ರಾರಂಭಿಸಿದರು. ಸರ್ಕಾರಿ ತರಫಿನ ಲಾಯರಾದ ಮಿ॥ ನ್ಯೂಗೆಂಟ್ ಗ್ರಾಂಟ್ ರವರು ಮ್ಯಾಜಿಸ್ಟ್ರೇಟರನ್ನು ಕುರಿತು ಹೇಳಿದ್ದೇನೆಂದರೆ—ಗವರ್ನ್‌ಮೆಂಟಿನವರು ಮಿ॥ ಜಿ. ಸುಬ್ರಹ್ಮಣ್ಯ ಐಯರವರ ಮೇಲೆ ಮಾಡಿರುವ ಈ ಫಿರ್ಯಾದನ್ನು ವಾಪಸು ತೆಗೆದುಕೊಂಡಿದಾರೆ. ಯಾಕೆಂದರೆ ಮಿ॥ ಸುಬ್ರಹ್ಮಣ್ಯ ಐಯರನ್ನು ಬಂಧನದಲ್ಲಿಟ್ಟರೆ ಅವರ ಶರೀರ ಸ್ಥಿತಿಯು ಕೆಟ್ಟು, ಪ್ರಾಣಕ್ಕೆ ಅಪಾಯವಾಗಬಹುದು ಎಂದು ಇಬ್ಬರು ಡಾಕ್ಟರುಗಳು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ. ಗವರ್ನ್‌ಮೆಂಟಿನವರು ಈ ಸರ್ಟಿಫಿಕೇಟನ್ನು ಒಪ್ಪಿಕೊಂಡಿದಾರೆ. ಗವರ್ನ್‌ಮೆಂಟಿನವರು ಮಿ॥ ಐಯರವರ ವಯಸ್ಸು ವಿಚಾರಿಸುವುದನ್ನು ಕುರಿತೂ ಯೋಚಿಸಿರುತ್ತಾರೆ. ಇದಲ್ಲದೆ ಮಿ॥ ಸುಬ್ರಹ್ಮಣ್ಯ ಐಯರವರು ಗವರ್ನ್‌ಮೆಂಟಿನವರನ್ನು ಅಂತರಂಗದಲ್ಲಿ ಕಂಡು, ಇನ್ನು ಮುಂದೆ ರಾಜದ್ರೋಹಕರವಾದ ಉಪನ್ಯಾಸಗಳನ್ನು ಮಾಡುವುದಿಲ್ಲವೆಂದೂ ಬರವಣಿಗೆಗಳನ್ನು ಬರೆಯುವುದಿಲ್ಲವೆಂದೂ ಅವರಿಗೆ ಮಾತುಕೊಟ್ಟಿರುತ್ತಾರೆ. ಈ ಕಾರಣಗಳಿಗೋಸ್ಕರ ಅವರಿಂದ ಒಂದು ವರುಷ ನೇಕಚಾಲಿಗೆ ಜಾಮೀನ್ ತೆಗೆದುಕೊಂಡು, ಅವರನ್ನು ಬಿಟ್ಟುಬಿಡಬಹುದಾಗಿದೆ ಎಂಬೀ ರೀತಿಯಾಗಿ ಹೇಳಿದರು. ಮಿ॥ ಸುಬ್ರಹ್ಮಣ್ಯ ಐಯರವರೂ ಅವರ ಕಡೆ ವಕೀಲರಾಗಿದ್ದ ಮಿ॥ ಟಿ. ರಂಗಾಚಾರ್ಯರೂ ಅದೇ ರೀತಿ ಮುಚ್ಚಳಿಕೆ ಕೊಟ್ಟು ವಾದಿಸಿದ್ದರಿಂದ ಮ್ಯಾಜಿಸ್ಟ್ರೇಟರು ಅದೇ ಅರ್ಥಕ್ಕೆ ಆ ಮೊಕದ್ದಮೆಯನ್ನು ವಜಾಮಾಡಿ, ಮಿ॥ ಐಯರನ್ನು ಖುಲಾಸ್ ಮಾಡಿದೆ ಎಂದು ಜಡ್ಜ್‌ಮೆಂಟು ಹೇಳಿದರು. ಮಿ॥ ಸುಬ್ರಹ್ಮಣ್ಯ ಐಯರು ಒಂದು ವರುಷ ನೇಕಚಾಲಿಗೆ ೫,೦೦೦ ರೂಪಾಯಿನ ಪತ್ರವನ್ನು ಬರೆದುಕೊಟ್ಟಿದಾರೆ. ಇದಲ್ಲದೆ ಮಿ॥ ತುಲ್ಜಾರಾಂ ಲಾಲಾ ಎಂಬ ಜಮೀನ್ದಾರರೂ, ಮಿ॥ ಟಿ. ಲಕ್ಷ್ಮೀನರಸು ನಾಯುಡು ಎಂಬ ಸ್ಕೂಲ್ ಉಪಾಧ್ಯಾಯರೂ ಮಿ॥ ಸುಬ್ರಹ್ಮಣ್ಯ ಐಯರವರ ಪಕ್ಷದಲ್ಲಿ ನಿಂತು ತಲಾ ೨,೫೦೦ ರೂಪಾಯಿನ ಜಾಮೀನು ಕೊಟ್ಟಿರುವರು. ಮಿ॥ ಸುಬ್ರಹ್ಮಣ್ಯ ಐಯರವರ ಮೇಲೆ ಬಂದ ರಾಜದ್ರೋಹದ ಮೊಕದ್ದಮೆಯು ಈ ಪ್ರಕಾರ ಇತ್ಯರ್ಥವಾಗಿ ಗವರ್ನ್‌ಮೆಂಟಿನವರು ಅವರ ವಿಷಯದಲ್ಲಿ ತೋರಿಸಿರುವ ದಯೆಯನ್ನು ನೋಡಿ ಸಕಲರೂ ಕೊಂಡಾಡುತ್ತಿದಾರೆ.

ತಾಲ್ಲೂಕು ವರ್ತಮಾನಗಳು.

ಹೊಳೆನರಸೀಪುರ.—ಈಗ್ಗೆ ಹದಿನೈದು ದಿನಗಳಿಂದ ಮಳೆಯಿಲ್ಲದೆ ರಾಗಿ, ಭತ್ತದ ಪೈರುಗಳೆಲ್ಲಾ ಒಣಗುವದಕ್ಕೆ ಬಂದವು. ಈ ಸಾರಿ ಗಿದ್ದರಾಗಿ ಫಸಲು ಮಳೆಯಿಲ್ಲದೆ ಅರ್ಧಫಸಲೂ ಕೈಸೇರುವ ಹಾಗಿಲ್ಲ. ಕಳೆದ ಮೂರು ವರ್ಷಗಳಿಗಿಂತಲೂ ಈ ಸಾರಿಯ ಬೆಳೆಯು ಕಡಮೆ.—ದನಗಳ ಆರೋಗ್ಯವು ದಿನೇ ದಿನೇ ಕೆಟ್ಟುತ್ತಿದೆ. ಯಾವ ಮಹನೀಯರ ಕಾಲದಲ್ಲಿ ಇವುಗಳ ಅವಾಂತರವು ನಿಲ್ಲುವದೋ ತಿಳಿಯದು. ಧಾನ್ಯ ಪದಾರ್ಥಗಳಂತೂ ದಿನೇ ದಿನೇ ತುಟ್ಟಿಯಾಗುತ್ತಿದೆ.—ಈ ಊರಿನಲ್ಲಿ ನಾಟಕದ ಮೇಲೆ ನಾಟಕಗಳು ತಯಾರಾಗುತ್ತಿವೆ. ಕಳೆದ ಬುಧವಾರ ಆರ್ಯ ಕರ್ನಾಟಕ ನಾಟಕ ಸಭಾದವರು ಒಂದು ಆಟವನ್ನು ಆಡಿದರು. ಈ ಊರಿಗೆ ಇದೇ ಪ್ರಥಮ ನಾಟಕವು.—ಈ ಸಾರಿ ಗೌರೀಹಬ್ಬವು ಬಹು ವಿಜೃಂಭಣೆಯಿಂದ ನಡೆಯಿತು. [illegible] ದಿನೇ ದಿನೇ ಹೆಚ್ಚುತ್ತಾ ಇದೆ. ಮ್ಯುನಿಸಿಪಾಲಿಟಿ ಕೆಲಸಗಳು ಬಹು ತೃಪ್ತಿಕರವಾಗಿವೆ.

ಮಂಡ್ಯ.—ಕಳೆದ ಮಂಗಳವಾರ ಬುಧವಾರ ಇಲ್ಲಿ ಸ್ವಲ್ಪ ಮಳೆ ಬಂದದ್ದರಿಂದ ಕೆಲವು ರೈತರು ತಮ್ಮ ಹೊಲದಲ್ಲಿ ರಾಗಿಯನ್ನು ಬಿತ್ತಿದ್ದಾರೆ. ಆದಾಗ್ಯೂ ಈ ಮಳೆಯಿಂದ ಭೂಮಿಯು ಅಷ್ಟಾಗಿ ಹದವಾಗಲಿಲ್ಲ. ಈಚೆಗೆ ಬಿಸಲು ಹೆಚ್ಚಾಗಿದೆ.—ಕಳೆದ ಬುಧವಾರ ಸಾಯಂಕಾಲ ಇಲ್ಲಿನ ವೆಸ್ಲಿಯನ್ ಮಿಷನ್ ಇಂಗ್ಲಿಷ್ ಸ್ಕೂಲಿನಲ್ಲಿ ಬಾಲಕಬಾಲಕಿಯರಿಗೂ ಜನ ಬೋಧಕರಾದ ಸಾರ್ವ ಸಾಹೇಬರವರ ಅಪ್ಪಣೆಯ ಪ್ರಕಾರ ಪ್ರೊಫೆಸರ್ ಮಿ॥ ಎಂ. ಪಿ. ಕೃಷ್ಣಸ್ವಾಮಯ್ಯಂಗಾರರು ಮ್ಯಾಜಿಕ್ ಲ್ಯಾಂಟರ್ನ್ ಮುಖಾಂತರ ಅನೇಕ ಚಿತ್ರಪಟಗಳನ್ನು ತೋರಿಸಿದರು. ಅವರು ತೋರಿಸಿದ ಪಟಗಳು ಯಾವವೆಂದರೆ—ಖಗೋಳಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ಲಂಡನ್ ಪಟ್ಟಣದ ಅನೇಕ ದೊಡ್ಡ ಸ್ಥಳಗಳು, ಉದ್ಯೋಗಸ್ಥರುಗಳು. ಆ ತೋರಿಸಿದ್ದನ್ನು ಸ್ಕೂಲ್ ಹೆಡ್ ಮಾಸ್ಟರ್ ಮಿ॥ ಎ. ಎಸ್. ಶ್ರೀಕಂಠಯ್ಯನವರು ಮಕ್ಕಳಿಗೆ ತಿಳಿಯುವಹಾಗೆ ಪರಿಷ್ಕಾರವಾಗಿ ವಿವರಿಸಿದ್ದರಿಂದ ಮಕ್ಕಳು ಸಂತೋಷಪಟ್ಟು ಅದರಿಂದ ಹೆಚ್ಚಾದ ಪ್ರಯೋಜನವನ್ನು ಹೊಂದಿದರು.

ದಾವಣಗೆರೆ.—ಈ ಊರಿಗೆ ಶ್ರೀಮನ್ ವಿರಂಬಿಸೆ ಜಗದ್ಗುರು ಮುರಿಗಾರಾಜೇಂದ್ರ ಮಹಾಸ್ವಾಮಿಗಳವರ ಶಾಖ ಶಿವಮೊಗ್ಗ ಬಿ. ಅನಂತಪುರದ ಶ್ರೀ ಲಿಂಗಸ್ವಾಮಿಗಳವರ ಸ್ವಾರಿಯು ದಯಮಾಡಿಸಿರುವದರಿಂದ ಇಲ್ಲಿನ ವೀರಶೈವಮಂಡಲಿಯವರು ತಮ್ಮ ತಮ್ಮ ಸ್ವಗೃಹಗಳಿಗೆ ಚಿತ್ತೈಸುವಂತೆ ಮಹಾಸ್ವಾಮಿಗಳಿಗೆ ಬಿನ್ನಹಮಾಡಿ ಕರೆತಂದು ಪಾದಪೂಜಾ ಮುಂತಾದ ಸತ್ಕಾರಗಳನ್ನು ಮಾಡಿಸಿ, ಕಾಣಿಕೆ ಮುಂತಾದ್ದನ್ನು ಒಪ್ಪಿಸಿ ನೂರಾರು ಜನಗಳಿಗೆ ಸುಖಭೋಜನವನ್ನು ಮಾಡಿಸುತ್ತಿರುವರು. ಈ ಪೈಕಿ ಪಂಚೆಗಿಮನೆ ಬ್ರಹ್ಮಲಿಂಗಪ್ಪನವರ ಗುರುಸೋಮಯ್ಯನವರು ಕಳೆದ ಶ್ರಾವಣಮಾಸದ ಆದಿಯಿಂದಲು ಶ್ರೀಮದ್ರಂಭಾಪುರೀ ಶಾಖೆ ಆವರಗೊಳ್ಳದ ಶ್ರೀಪಟ್ಟಸ್ವಾಮಿಗಳನ್ನು ಗುರುಪೀಠಸ್ಥರನ್ನಾಗಿ ಮಾಡಿಕೊಂಡು, ನಿತ್ಯವೂ ಪಾದಪೂಜಾ, ಪ್ರಸೋದ ಮುಂತಾದ್ದರಿಂದ ನೂರಾರು ಜಂಗಮರಿಗೂ ಬಡಜನಗಳಿಗೂ ಭೋಜನವನ್ನು ಮಾಡಿಸುತ್ತಾ ಇದ್ದು, ತಾ. ೨೭ ನೇ ಗುರುವಾರ ಕೊನೇದಿನದಲ್ಲಿ ಮೇಲ್ಕಂಡ ಮಹಾಸನ್ನಿಧಿಯು ತಮ್ಮ ಮಠಕ್ಕೆ ಚಿತ್ತೈಸುವ ಹಾಗೆ ಬಿನ್ನಹಮಾಡಿ, ಕರತಂದು ಆ ದಿನ ಪಾದಪೂಜಾ ಮುಂತಾದ ಮಹಾಗಣಾರಾಧನೆ ಮಾಡಿಸಿದ್ದರಲ್ಲಿ ಸುಮಾರು ಸಾವಿರಾರು ವೀರಶೈವ ಜನಗಳಿಗೂ ಬಡಜನಗಳಿಗೂ ಸುಖಭೋಜನವನ್ನು ಮಾಡಿಸಿದರು.—ತಾ. ೨೯ ರಲ್ಲಿ ಈ ಊರಿನ ವೆಸ್ಲಿಯನ್ ಮಿಷನ್ ಗರ್ಲ್ ಸ್ಕೂಲುಗಳಿಗೆ ಬೆಂಗಳೂರು ಗರ್ಲ್ ಸ್ಕೂಲುಗಳ ಸೂ॥ ಥೊರೆಸಾವಿಯವರು ದಯಮಾಡಿಸಿ, ಸ್ಕೂಲ್ ಇನ್ಸ್‌ಪೆಕ್ಷನ್ ಮಾಡಿ, ಸ್ಕೂಲುಗಳು ಪರೀಕ್ಷೆಯಲ್ಲಿ ಚೆನ್ನಾಗಿದೆಯೆಂದು ಅಪ್ಪಣೆಕೊಡಿಸಿ, ಸ್ಕೂಲು ಬಾಲಕಿಯರುಗಳಿಗೆ ತಿಂಡಿಗಾಗಿ ರೂಪಾಯಿಗಳನ್ನು ದಯಪಾಲಿಸಿ, ಆ ದಿನವೇ ರೈಲುಹತ್ತಿ ಶಿವಮೊಗ್ಗೆಗೆ ದಯಮಾಡಿಸಿದರು.—ಒಂದು ತಿಂಗಳಿಂದ ಮಳೆಯಿಲ್ಲದೆ ಜನಗಳು ಅಲೆಯುತ್ತಿದ್ದರು. ಈ ದಿನ ಸ್ವಲ್ಪ ಮಳೆ ಬಂದು ಸಂತೋಷವನ್ನುಂಟುಮಾಡಿತು.

ಚಿಕ್ಕಮಗಳೂರು.—ಈ ಕಡೆ ಮಳೆ ಬಂದು ೨೦ ದಿವಸಗಳಾಯಿತು. ಗಿದ್ದರಾಗಿ ಪೈರೆಲ್ಲಾ ಕಾಯಿಲಿಗೆ ಬಂದಿದೆ. ದೊಡ್ಡ ರಾಗಿ ಪೈರೆಲ್ಲಾ ಮಳೆ ಇಲ್ಲದ್ದರಿಂದ ಒಣಗುತ್ತಲಿದೆ. ರೈತರೆಲ್ಲಾ ಆಕಾಶವನ್ನೇ ದೃಷ್ಟಿಸುತ್ತಾರೆ. ಬಿಸಲು ಬೇಸಿಗೆ ಬಿಸಲಿಗೆ ಸಮವಾಗಿದೆ. ಈ ಸಂತೆಯಲ್ಲಿ ರಾಗಿ ೧ ರೂಪಾಯಿಗೆ ೧೨ ಸೇರು, ಅಕ್ಕಿ ೬॥ ಸೇರು ೭ ಸೇರು ಮಾರಿದರು. ಬಾಕಿ ದಿನಸಿಗಳು ಬಹಳ ಪ್ರಿಯವಾಯಿತು. ಬಡ ಜನರೆಲ್ಲಾ ಜೀವಿಸುವದು ಹ್ಯಾಗೆಂಬ ಚಿಂತೆಯಲ್ಲಿರುತ್ತಾರೆ.—ಕಳೆದ ೨೯ ನೇ ತಾ. ಇಲ್ಲಿನ ಸರಕಾರದ ಆಸ್ಪತ್ರೆಯಲ್ಲಿ ಸಬ್ ಅ॥ ಸರ್ಜನ್ ಮಿ॥ ರಂಗನಾಥ ಮೊದಲಿಯಾರು ಕಾರಣಾಂತರಗಳಿಂದ ಬೆಂಗಳೂರಿಗೆ ಹೋದರು. ಇವರು ಬಡ ಜನರಿಗೆ ಬಹಳ ಸಹಾಯಕರಾಗಿಯೂ ಎಲ್ಲಾ ಜನರ ಪ್ರೀತಿಗೌರವಗಳಿಗೆ ಪಾತ್ರರಾಗಿಯೂ ಇದ್ದರು. ಇವರು ತಿರಿಗಿ ಇಲ್ಲಿಗೆ ಬರುವದಿಲ್ಲವೆಂಬ ವರ್ತಮಾನವಿದೆ. ಇವರಿಗೆ ಬದಲಾಗಿ ಮಿ॥ ಸಿದ್ದಪ್ಪನವರು ಬಂದಿದ್ದಾರೆ. ಇವರು ಸಹ ಒಳ್ಳೆಯವರಾಗಿರುತ್ತಾರೆ.—ಅ॥ ಕಮಿಷನರ್ ಮಿ॥ ಕೃಷ್ಣಸ್ವಾಮಿ ಅಯ್ಯಂಗಾರ್ರು ಸಕಲೇಶಪುರಕ್ಕೆ ವರ್ಗವಾದರು. ಇವರು ತಮ್ಮ ಕೆಲಸ ಕಾರ್ಯಗಳಲ್ಲಿ ಬಹಳ ಚಟುವಟಿಕೆಯಾಗಿದ್ದು, ಪ್ರಜೆಗಳ ಉಪಕಾರಿಗಳಾಗಿದ್ದರು. ಇವರಿಗೆ ಬದಲಾಗಿ ಮಿ॥ ಹನುಮಂತರಾಯರು ಬಂದು ಚಾರ್ಜನ್ನು ವಹಿಸಿಕೊಂಡಿದಾರೆ. ಇವರು ಬಹಳ ಚಟುವಟಿಕೆಯಿಂದ ತಮ್ಮ ಕೆಲಸಗಳನ್ನು ನೋಡ ತೊಡಗಿರುತ್ತಾರೆ.—ಕಳೆದ ಮಂಗಳವಾರ ಈ ಊರು ಮಹಮ್ಮದೀಯರೆಲ್ಲಾ ಅಂಜುಮಾನ್ ಕಟ್ಟಡದಲ್ಲಿ ಸಭೆ ಸೇರಿ ತಮ್ಮ ಧರ್ಮಸ್ಥಳವಾದ ಮಕ್ಕಾ ಮದೀನಾ ಎಂಬ ಪಟ್ಟಣಗಳಿಗೆ ರೈಲ್ ರಸ್ತೆ ಆದ ಸಂತೋಷಸೂಚಕವಾದ ವರ್ತಮಾನವನ್ನು ಕೇಳಿ, ಆ ದಿನ ಸುಮಾರು ಸಾಯಂಕಾಲ ೬ ಘಂಟೆ ಲಾಗಾಯತು ರಾತ್ರಿ ೮ ಘಂಟೆ ವರಿವಿಗೆ ಈ ಊರಿನಲ್ಲಿರುವ ಇತರ ದೊಡ್ಡ ಮನುಷ್ಯರನ್ನೂ ಸೆಟ್ಟಿವರ್ತಕರನ್ನೂ ಇನ್ನೂ ಅನೇಕರನ್ನೂ ಬರಮಾಡಿಕೊಂಡು, ಬಂದ ಮಹನೀಯರನ್ನೆಲ್ಲಾ ಗಂಧ, ಪುಷ್ಪ, ತಾಂಬೂಲ, ಫಲಾಹಾರಗಳಿಂದ ತೃಪ್ತಿಗೊಳಿಸಿ ಸಂತೋಷಪಡಿಸಿದರು. ಅನಂತರ ಸಭೆಯು ಬರಖಾಸ್ತಾಯಿತು.—ಇದೇ ಚಿಕ್ಕಮಗಳೂರು ಕಸಬೆಗೆ ಸೇರಿದ ದಂಟರಮಕ್ಕಿ ಎಂಬ ಗ್ರಾಮದ ಕೆರೆಯು ದೊಡ್ಡದಾಗಿದೆ. ಇದರ ಕೆಳಗೆ ಜಮೀನುಗಳಿಂದ ೧೨ ಸಾವಿರ ರೂಪಾಯಿ ಕಂದಾಯ ಸರಕಾರಕ್ಕೆ ಪಾವತಿಯಾಗುತ್ತಿದೆ. ಇಂಥಾ ಕೆರೆಯನ್ನು ಸರಕಾರದವರು ಸರಿಯಾಗಿ ಭದ್ರಪಡಿಸತಕ್ಕದ್ದು ನ್ಯಾಯವಾಗಿದೆ. ಈ ಕೆರೆ ಇನ್ನೂ ತುಂಬಲಿಲ್ಲ. ಮೇಲೆ ಇದಕ್ಕೆ ಬರತಕ್ಕ ನೀರಿನ ದಾರಿ ಸರಿಯಾಗಿಲ್ಲದ್ದರಿಂದ ಸಲೀಸಾಗಿ ನೀರು ಬರಲು ಅವಕಾಶವಿಲ್ಲ. ಮತ್ತು ಕೆರೆಯ ಏರಿಗೆ ಕಟ್ಟಿದ್ದ ಕಲ್ಲುಗಳೆಲ್ಲಾ ಒಳಭಾಗ ಬಿದ್ದು ಹೋಗಿವೆ. ಈ ಭಾಗದಲ್ಲಿ ಮೇಲ್ಪಟ್ಟ ಅಧಿಕಾರಿಗಳು ಗಮನಕೊಟ್ಟರೆ ಇದರಿಂದ ಸರಕಾರಕ್ಕೂ ಪ್ರಜೆಗಳಿಗೂ ತುಂಬಾ ಪ್ರಯೋಜನ ಉಂಟಾಗುತ್ತದೆಂಬುವದಕ್ಕೆ ಸಂಶಯವೇನೂ ಇರುವದಿಲ್ಲ.

ಮಾಲೂರು.—ಇಲ್ಲಿ ಸುಮಾರು ೨೦ ದಿವಸದಿಂದಲೂ ಮಳೆ ಇಲ್ಲದೆ, ಹೊಲಗಳು ಒಣಗುತ್ತಿರುತ್ತವೆ. ಧವಸದ ಧಾರಣೆಗಳು ದಿನೇ ದಿನೇ ಏರುತ್ತಾ ಹೋಗುತ್ತವೆ. ರೂಪಾಯಿಗೆ ೬ ಸೇರು ಅಕ್ಕಿ, ೧೨ ಸೇರು ರಾಗಿ ಮಾರಾಟವಾಗಿದೆ. ಈ ಊರಿನ ಪ್ರಜೆಗಳ ನೀರಿಗಾಧಾರವಾಗಿರುವ ಗಜಾಗುಂಡಲುದಲ್ಲಿ ನೀರು ಕಡಮೆಯಾಗುತ್ತಾ ಬರುತ್ತದೆ. ಇನ್ನು ೮–೧೦ ದಿವಸದೊಳಗಾಗಿ ಮಳೆಬಾರದಿದ್ದರೆ, ಕುಡಿಯುವ ನೀರಿಗೆ ಅಭಾವವಾಗಿ ಪ್ರಜೆಗಳು ಕಷ್ಟಕ್ಕೆ ಗುರಿಯಾಗುವದರಲ್ಲಿ ಅನುಮಾನವಿಲ್ಲ. ಮನೆಗಳ ಭಾವಿಗಳಲ್ಲಿ ಉಪ್ಪು ನೀರಿದ್ದಾಗ್ಯೂ, ಅನ್ನಪಾನಗಳಿಗೆ ಯೋಗ್ಯವಾದ ನೀರು ಅಭಾವವಾಗುತ್ತಾ ಇರುತ್ತದೆ. ಕೆರೆ ಕುಂಟೆಗಳಲ್ಲಿ ನೀರಿನ ತೋರಿಕೆಯಾದರೂ ಇರುವದಿಲ್ಲ. ನೀರಿನ ಕ್ಷಾಮವೂ ಆಹಾರ ಪದಾರ್ಥಗಳ ಕ್ಷಾಮವೂ ಏಕೀಭವಿಸಿ, ಪ್ರಜೆಗಳಿಗೆ ಸಂಕಟವನ್ನುಂಟುಮಾಡುವಷ್ಟು ಪ್ರಬಲವಾಗಿದೆ. ಸಣ್ಣ ಸಂಬಳಗಾರರ ಪಾಡೂ, ಬಡವರ ಕಷ್ಟವೂ ಹೇಳತೀರದು.—ಇದಲ್ಲದೆ ಸಂತೆಗಳಲ್ಲಿ ದವಸಗಳನ್ನು ಮಾರುವದಕ್ಕೆ ಬರುವ ವರ್ತಕರು ಪಿಚ್ಚೋಸೇರು ತೂಕದ ಬಟ್ಟುಗಳನ್ನು ಇಟ್ಟುಕೊಂಡು, ಕೊಳ್ಳುವದಕ್ಕೆ ಬರುವ ಬಡಪಾಯಿಗಳಿಗೆ ಮೋಸಮಾಡುತ್ತಾರೆ. ಈ ವರ್ತಕರಿಗೆ ಯಾರೂ ಎದುರಿಲ್ಲ, ಬಡಪಾಯಿಗಳಿಗೆ ದಿಕ್ಕಿಲ್ಲ.—ಗೌರೀ ಗಣೇಶನ ಹಬ್ಬದಲ್ಲಿ ಸಾಲಿಗರೂ ಕೇಣಿಗರೂ ತಮ್ಮ ಉದ್ಯೋಗ ವ್ಯವಹಾರಗಳನ್ನು ಬಿಟ್ಟು, ತಮ್ಮ ಕಾಲವನ್ನು ವ್ಯರ್ಥವಾಗಿ ಕಳೆಯುತ್ತಾರೆ.—ಆಗಸ್ಟು ತಾ. ೩೦ನೇ ಸೋಮವಾರದ ತನಕ ಮಾಲೂರು ಕಸಬಾದಲ್ಲಿ ಆಂಗ್ಲೇಯ ಕರ್ನಾಟಕ ವಿದ್ಯಾಶಾಲೆಯು ಕಳೆದ ೧೨ ವರುಷಗಳಿಂದ ಮಾಳಿಗೆ ಮನೆಯಲ್ಲಿದ್ದು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಬರುಗುತ್ತಿತ್ತು. ಸರಕಾರದವರ ದಯಾಳುತ್ವದಿಂದಲೂ, ವಿದ್ಯಾಭ್ಯಾಸದ ಕಾರ್ಯದರ್ಶಿಗಳಾಗಿರುವ ಮಿ॥ ಭಾಭಾಸಾಹೇಬರ ಸಹಾಯದಿಂದಲೂ ನೂತನವಾಗಿ ರಚಿಸಲ್ಪಟ್ಟು, ವಿದ್ಯಾಭ್ಯಾಸಕ್ಕೆ ಯೋಗ್ಯವಾಗಿಯೂ, ಆರೋಗ್ಯಕರವಾಗಿಯೂ, ಕಚೇರಿಗೆ ಸಮೀಪಸ್ಥವಾಗಿಯೂ ಇರುವ ವಿಶಾಲಭವನದ ಪ್ರತಿಷ್ಠೆಯು ಆ ದಿನ ನೆರವೇರಿತು. ಈ ಕಾಲಕ್ಕೆ ಸರಿಯಾಗಿ ಮಾಲೂರಿಗೆ ಕಾರಣಾಂತರದಿಂದ ಬಂದಿದ್ದ, ಸಂಸ್ಥಾನದ ಮಂತ್ರಾಲೋಚಕ ಸಮಾಜದಿಂದ ಉದ್ಯೋಗ ನಿವೃತ್ತರಾಗಿರುವ ರಾಜಧರ್ಮ ಪ್ರವೀಣ ಮಿ॥ ಸಿ. ಶ್ರೀನಿವಾಸಯ್ಯಂಗಾರರು ದಯಮಾಡಿಸಿದ್ದರು. ಈ ಸಂದರ್ಭವನ್ನವಲಂಬಿಸಿ ಎ. ವಿ. ಸ್ಕೂಲು ಹೆಡ್ ಮಾಸ್ಟರು ವಿದ್ಯಾರ್ಥಿಗಳಿಗೆ ವಾರ್ಷಿಕ ಪಾರಿತೋಷಕಗಳ ವಿನಿಯೋಗವನ್ನು ಮಾಡಿಸಿದರು. ಈ ಸಂದರ್ಭದಲ್ಲಿ ಮಿ॥ ಸಿ. ಶ್ರೀನಿವಾಸಯ್ಯಂಗಾರರು ಅಗ್ರಾಸನಾಧಿಪತ್ಯವನ್ನು ವಹಿಸಿದ್ದ

ಟು ಇದಕ್ಕೆ ಪೂರ್ವಭಾವಿಯಾಗಿ ನೂತನ ಭವನವನ್ನಲಂಕರಿಸಿ, ಪುಷ್ಪ ತೋರಣ ಬಾಳೆ ಇವುಗಳಿಂದ ಶೋಭಾಯಮಾನವಾಗಿ ತೋಟಗಳ ಚಪ್ಪರಗಳಿಗೂ ಸುಂದರವಾಗಿ ತೋರುವಂತೆ ನಿರ್ಮಿಸಲ್ಪಟ್ಟಿತು. ಸಭಿಕರ ನೇತ್ರೋತ್ಸವಕ್ಕಾಗಿ ಕೆಲ ವಿನೋದಗಳಂ ಕಲ್ಪಿಸಿದ್ದರು. ಈ ನೂತನ ಭವನದಲ್ಲಿ ಊರಿನ ವರ್ತಕ ಶ್ರೀಮಂತರುಗಳೂ, ಶಾನುಭೋಗರೂ, ಸರಕಾರಿ ಉದ್ಯೋಗಸ್ಥರೂ, ಪಂಡಿತ ಪಾಮರ ಜನಸಮುದಾಯವೂ, ಪಟೇಲಗೌಡರೂ ಕಿಕ್ಕಿರಿದು ತುಂಬಿದ್ದರು. ಸ್ಥಳಸಂಕೋಚದಿಂದ ಅನೇಕರು ಹೊರಪ್ರದೇಶಗಳಲ್ಲಿ ನಿಂತಿದ್ದರು. ಸಾಯಂಕಾಲ ೫ ಘಂಟೆಯ ವೇಳೆ ಬಾಜಾ ಭಜಂತ್ರಿಗಳ ಘೋಷದೊಡನೆ ಮೆ॥ ಸಿ ಶ್ರೀನಿವಾಸಯ್ಯಂಗಾರ್ರು ಅಲಂಕೃತವಾದ ನೂತನ ಪಾಠಶಾಲೆಗೆ ಬಿಜಯಂಗೈದರು. ಅನಂತರ ಸಾರಂಗಪಾಣಿಯಾದ ಮೆ॥ ಕೇಶವದಾಸರು ಜರಗಬೇಕಾದ ಕಾರ್ಯೋದ್ಯೋಗವನ್ನು ದೇವತೋಪಾಸಕ ಮಂಗಳ ಗಾನದಿಂದ ಉಪಕ್ರಮಿಸಿದರು. ಹೆಡ್ ಮಾಸ್ಟರ ೯ ವರುಷದ ಬಾಲೆಯು ಆ ಮಂಗಳಗಾನಕ್ಕನುಸಾರವಾಗಿ ಇಂಪಾಗಿ ಹಾಡಿದಳು. ಅನಂತರ ಕೆಲವು ವಿದ್ಯಾರ್ಥಿಗಳು 'ಮರ್ಚಂಟ್ ಆಫ್ ವೆನಿಸ್' ಎಂಬ ಇಂಗ್ಲೀಷು ಮಹಾಕವಿ ಷೇಕ್ಸ್ಪಿಯರನಿಂದ ಪ್ರಣೀತವಾದ ನಾಟಕವನ್ನು ಅನುಕರಿಸಿದರು. ಬಳಿಕ ಮುಖ್ಯೋಪಾಧ್ಯಾಯರು ವಾರ್ಷಿಕ ರಿಪೋರ್ಟನ್ನು ಓದಿ, ವಿದ್ಯಾಭ್ಯಾಸವು ಅಭಿವೃದ್ಧಿಯಾಗುತ್ತಾ ಇರುತ್ತದೆಂದು ಹೇಳಿದರು. ವಿದ್ಯಾರ್ಥಿಗಳಿಗೆ ಪಾರಿತೋಷಕಂಗಳು ಹಂಚಲ್ಪಟ್ಟವು. ಇವುಗಳಾದನಂತರ ಗಂಧ ಪುಷ್ಪ ತಾಂಬೂಲಾದಿಗಳು ಸಭಿಕರಿಗೆ ಅರ್ಪಿಸಲ್ಪಟ್ಟವು. ಸಂತೆಹಳ್ಳಿ ಪಟೇಲ ರಾಮೇಗೌಡರು ಮೆ॥ ಸಿ ಶ್ರೀನಿವಾಸಯ್ಯಂಗಾರ್ರು ಅಗ್ರಾಸನಾಧಿಪತ್ಯವಂ ವಹಿಸಿದ್ದಕ್ಕಾಗಿ ಅಭಿವಂದಿಸಿದರು. ವಿದ್ಯಾರ್ಥಿಗಳ ಸತ್ಪ್ರವರ್ತನದ ನಿಮಿತ್ತ ಮೆ॥ ಶ್ರೀನಿವಾಸ ಅಯ್ಯಂಗಾರ್ರು ವಿಶೇಷ ಪಾರಿತೋಷಕ ಪುಸ್ತಕರೂಪವಾಗಿ ಸಚ್ಛೀಲವಿದ್ಯಾರ್ಥಿಗಳಿಗೆ ವಿನಿಯೋಗಿಸುವಂತೆ ೫ ರೂಪಾಯಿ ಬಹುಮಾನವನ್ನು ಕೊಡಿಸಿದರು. ಅನಂತರ ಚಕ್ರವರ್ತಿ ಸಾರ್ವಭೌಮರವರಿಗೂ, ಶ್ರೀಮನ್ಮಹಾರಾಜಾ ಶ್ರೀಕೃಷ್ಣರಾಜ ಒಡೆಯರವರಿಗೂ ಶ್ರೇಯೋಭ್ಯುದಯವುಂಟಾಗುವಂತೆ ಕರತಾಡನಪೂರ್ವಕ ಜಯಧ್ವನಿ ಮಾಡಲ್ಪಟ್ಟಿತು. ವಿದ್ಯಾರ್ಥಿಗಳಿಗೆ ಮಿಠಾಯಿ ವಿನಿಯೋಗದಿಂದ ಆ ದಿನದ ಕಾರ್ಯವು ಮುಕ್ತಾಯವಾಯಿತು.

ದೊಡ್ಡಬಳ್ಳಾಪುರ.—ತಾ ೧ರಲ್ಲಿ ಒಂದು ಜಡಮಳೆಯಾಯಿತು. ಗೌರಿಹಬ್ಬದಲ್ಲಿ ದೇವಾಂಗದವರು ೮—೯ ದಿನ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ ಈಗ ತಮಾಷೆಯಾದ ವೇಷಹಾಕಿಕೊಂಡು ಸಂತೋಷಪಡುತ್ತಾರೆ. ಹಾಡೆ ಗ್ರಾಮದಲ್ಲಿ ಬೇಗೂರು ತಿಮ್ಮರಾಯಪ್ಪ, ರಂಗಸ್ಥಳದ ಬಾಬುಸಾಹೇಬರು ಸೇರಿ ಜುಲೈ ತಾ ೨೮ ರಲ್ಲಿ ಲವಕುಶರ ಚರಿತ್ರೆಯನ್ನು ನಾಟಕರೂಪವಾಗಿ ಆಡಿ ಜನರನ್ನು ಸಂತೋಷಪಡಿಸಿದರು.—ಹೊನ್ನಾಗಟ್ಟದ ರುದ್ರಪ್ಪನ ಮನೆಯಲ್ಲಿ ಸುಮಾರು ೩ ಸಾವಿರ ರೂಪಾಯಿ ಕಳುವಾಗಿತ್ತಷ್ಟೆ. ಈ ಕಳುವನ್ನು ಜಮಾದಾರ್ ಮುನಿಶಾಮಪ್ಪನವರು ಬಹಳ ಮೆಹನತ್ತು ಮಾಡಿ, ಮಾಲುಗಳ ಸಹಿತ ೭ ಜನ ಕಳ್ಳರನ್ನು ಹಿಡಿದು ವಿಚಾರಣೆಗೆ ಗುರಿಮಾಡಿದಾರೆ ೭ ಜನರು ಬೇರೆ ಬೇರೆ ತಾಲ್ಲೋಕಿನ ೭ ಗ್ರಾಮಗಳವರು ಮೆ॥ ಮುನಿಶಾಮಪ್ಪನವರನ್ನು ಆಕ್ಟಿಂಗ್ ಇನ್ಸ್ಪೆಕ್ಟರಾಗಿ ಕಾರ್ಕಳಕ್ಕೆ ವರ್ಗಮಾಡಿದಾರೆ.—ಇಲ್ಲಿ ನಂಜುಂಡಪ್ಪನೆಂಬುವರು ೫—೬ ವರ್ಷದಿಂದ ಪ್ರೈವೇಟ್ ಸ್ಕೂಲ್ ಇಟ್ಟು ೫೦—೬೦ ಮಂದಿ ಹುಡುಗರನ್ನು ಜಮಾಯಿಸಿಕೊಂಡು ಚನ್ನಾಗಿ ಪಾಠಗಳನ್ನು ಹೇಳುತ್ತಿದ್ದರು ಈಗ ಗೌರ್ನಮೆಂಟಿನವರು ಕೆಲವು ಕ್ಲಾಸುಗಳಿಗೆ ಫೀಜನ್ನು ವಜಾಮಾಡಿದಾರೆ ಇಂಥ ಪ್ರೈವೇಟ್ ಸ್ಕೂಲ್ ಬಿಟ್ಟು ಈ ಸ್ಕೂಲುಗಳಿಗೆ ಬಾಲಕರು ಸೇರುತ್ತಾರೆ ಇದರಿಂದ ಇಂಥ ಉಪಾಧ್ಯಾಯರ ಜೀವನ ನಡೆಯುವದು ಕಷ್ಟ. ಆದ್ದರಿಂದ ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳು ಇಂಥ ಉಪಾಧ್ಯಾಯರಿಗೆ ಅದೇ ಸ್ಕೂಲುಗಳಲ್ಲಿ ಕೆಲಸ ಕೊಟ್ಟರೆ ಅನುಕೂಲ ಇದಕ್ಕಾಗಿ ನಂಜುಂಡಪ್ಪನವರು ಮೆ॥ ಬಾಬು ಸಾಹೇಬರಿಗೆ ಬರೆದುಕೊಂಡಿದಾರೆ ಇನ್ನೂ ಉತ್ತರ ಬರಲಿಲ್ಲವಂತೆ

ತುಂಕೂರು.—ಡಿಸ್ಟ್ರಿಕ್ಟ್ ಹೆಣ್ಣುಮಕ್ಕಳ ಸ್ಕೂಲುಗಳ ಅ॥ ಡೆಪ್ಟಿ ಇನ್ಸ್ಪೆಕ್ಟರ ಆಫೀಸ್ ಗುಮಾಸ್ತೆ ಮೆ॥ ಪಿ. ನರಸಿಂಹಯ್ಯನವರು, ಹಾಮುಂಚೂರು ಮಿಡ್ಲ್ ಸ್ಕೂಲುಗಳ ಬಾಲಕ ಬಾಲಕಿಯರಿಗೂ ಮಿಡ್ಲ್ ಬೆಂಗ್ಳೂರಲ್ಲಿರುವ ಇವರುಗಳಿಗೆ ಮನೋಹರವಾಗಿ ಕಾಣುವಂತೆ ಬಯಸ್ಕೋಪು ಪ್ರದರ್ಶನವನ್ನು ನಡೆಸಿದರು ಇದರ ಛಾಯಾಕಾರರ ಲಾಂಭಿ ಪೀಠಕ್ಕೆ ಎಣ್ಣೆ ಬದಲಾಗಿ ಗ್ಯಾಸ್ ಲೈಟ್ ಎಂಬ ಹೊಗೆಯ ದೀಪವನ್ನು ಉಪಯೋಗಿಸಿ ಚಿತ್ರಗಳನ್ನು ಬಹು ಪ್ರಕಾಶವಾಗಿರುವಂತೆ ಮಾಡಿದರು ಇವರು ತೋರಿಸಿದ ಚಿತ್ರಪಟಗಳು ಬಹು ಘನತರವಾದವುಗಳಾಗಿದ್ದು, ಬಾಲಕ ಬಾಲಕಿಯರಿಗೆ ಬಹು ಸಂತೋಷವನ್ನುಂಟುಮಾಡುವುದೇ ಅಲ್ಲದೆ ವಿದ್ಯಾಭಿವೃದ್ಧಿಗೂ ಇದ್ದವು ಪ್ರತಿಯೊಂದು ಪಟವನ್ನು ತೋರಿಸಿ ಅತಿ ಸ್ಪಷ್ಟವಾಗಿ ಸಣ್ಣ ಮಕ್ಕಳಿಗೂ ಸಹ ಮನಮುಟ್ಟುವಂತೆ ಸುಲಭ ಭಾಷೆಯಲ್ಲಿ ವಿವರಿಸಿದರು ಇವರ ವಿವರಣೆಯು ರೀತಿಯು ಎಲ್ಲರ ಮನಸ್ಸನ್ನೂ ಆಕರ್ಷಿಸುತ್ತದೋ ಎನ್ನುವಹಾಗಿತ್ತು ಈ ವಿಶೇಷತರವಾದ ಪಟಗಳನ್ನು ನೋಡಿದ್ದರಿಂದ ಹುಡುಗ ಹುಡುಗಿಯರಲ್ಲಿ ಉಂಟಾದ ಸಂತೋಷವು ಇಷ್ಟೆಂದು ಹೇಳುವುದಕ್ಕಾಗದು ನಮ್ಮ ಗೌರ್ನಮೆಂಟಿನವರು ಇವರನ್ನು ಈ ಡಿಸ್ಟ್ರಿಕ್ಟಿನ ಒಬ್ಬ ಪ್ರದರ್ಶಕರನ್ನಾಗಿ ಮಾಡಿದರೆ ಇವರಿಂದ ಎಲ್ಲಾ ವಿದ್ಯಾರ್ಥಿಗಳಿಗೆ ಜ್ಞಾನ ವೃದ್ಧಿಯಾಗಿ ಸದ್ವರ್ತನ ವಿಚಾರವು ಹುಟ್ಟಿ ಎಲ್ಲರಿಗೂ ತುಂಬ ಪ್ರಯೋಜನವಾಗುವುದರಲ್ಲಿ ಏನೂ ಸಂಶಯವಿರುವುದಿಲ [illegible] ಮೆ॥ ನರಸಿಂಹಯ್ಯನವರಿಗೆ ಇಲ್ಲಿನ ಮಿಡ್ಲ್ ಸ್ಕೂಲುಗಳ [illegible] ಹೆಡ್ ಮಾಸ್ಟರ್ [illegible] [illegible] [illegible]

ತಿಪ್ಟೂರು.—[illegible] ತಾ ೫ ನೇ [illegible] [illegible] [illegible] [illegible] [illegible] [illegible]

ದ ಇದೇ ಮಾಹೆ ೧ ನೇ ತಾ ಇಲ್ಲಿಗೆ ಬರುವದಾಗಿ ಇದ್ದದ್ದು ಬದಲಾಯಿಸಿ ೭ ನೇ ತಾ. ಸಾಯಂಕಾಲ ಬಂದರು ಇವರು ಊರೊಳಗೆ ಬರುವದಕ್ಕೆ ಮುಂಚೆ ಸಾಹುಕಾರ್ ಉರುಪ್ರಕಾಂಡೆ ಮಲ್ಲೇಶಪ್ಪನವರು ನೂತನವಾಗಿ ಕಟ್ಟಿರುವ ಬಂಗ್ಲೆಯಲ್ಲಿ ಆ ರಾತ್ರಿ ಅಹ್ನೀಕಗಳನ್ನು ತೀರಿಸಿಕೊಂಡು, ಪ್ರಾತಃಕಾಲ ೮ ಘಂಟೆಗೆ ಚತುರಂಗಬಲ ಸಮೇತ ಸಕಲ ಬಿರುದಾವಳಿಗಳೊಡನೆ ಪುರಪ್ರವೇಶಗೈಯುತ್ತಿರುವಾಗ ಶ್ರೀಗಳವರ ಪಲ್ಲಕ್ಕಿ ಮುಂಭಾಗದಲ್ಲಿ ವೇದಘೋಷಮಾಡುವ ವೈದೀಕ ಮಂಡಲಿಯವರೂ ಪುರನಿವಾಸಿಗಳಾದ ಭಕ್ತಾದಿಗಳೊಡನೆ ಬಿಜಯಂಗೈಯುತ್ತಿರುವಲ್ಲಿ, ಊರಿನಲ್ಲಿ ಹಾಕಿರತಕ್ಕ ಸುಮಾರು ೩೦ ಚಪ್ಪರಗಳ ಕೆಳಗೆ ಪಲ್ಲಕ್ಕಿಯನ್ನು ನಿಲ್ಲಿಸಿ ಶ್ರೀಗಳವರ ಮೇಲೆ ರಚಿಸಿದ್ದ ಮಂಗಳಪದ್ಯಗಳನ್ನು ಹೇಳುತ್ತಾ ಆರತಿ ಬೆಳಗಿದರು ಆರತಿಗಳನ್ನು ಬೆಳಗಿದ ಪ್ರತಿ ಬಾಲಕಿಯರಿಗೂ ೩ ರೂ ಬಹುಮಾನವನ್ನು ಶ್ರೀಗಳವರು ದಯಪಾಲಿಸಿದರು ಅನಂತರ ಮೆ॥ ಮಲ್ಲೇಶಪ್ಪನವರು ಹಾಕಿಸಿರುವ ಭಾರಿ ಚಪ್ಪರದಲ್ಲಿ ಇಲ್ಲಿನ ಮಹಮ್ಮದೀಯ ಮುಖಂಡರಾದ ಮೆ॥ ಬಿರಾಮ್ ಸಾಹೇಬರು, ಮೆ॥ ಮಾಕಾನ್ ಸಾಹೇಬರು, ಮೆ॥ ಯಾಕೂಬ್ ಸಾಹೇಬರು ಮೊದಲಾದವರು ಶ್ರೀಗಳವರಿಗೆ ವಂದನಾಪೂರ್ವಕವಾದ ಅಡ್ರೆಸ್ಸನ್ನು ಒಪ್ಪಿಸಿದರು ಅನಂತರ ವಿದ್ಯಾ ಬಾಲಿಕಾ ಪಾಠಶಾಲೆಯ ಬಾಲಿಕೆಯರು ಶ್ರೀಗಳವರ ಮೇಲೆ ರಚಿಸಿದ್ದ ಮಂಗಳಪದ್ಯವನ್ನು ಇಂಪಾಗಿ ಹಾಡಿದರು ಅದಕ್ಕೆ ಸ್ವಾಮಿಗಳವರು ೫ ರೂ ಬಹುಮಾನವನ್ನು ಕೊಟ್ಟದ್ದಲ್ಲದೆ ಇಲ್ಲಿನ ಆರ್ಯಬಾಲಿಕಾ ಪಾಠಶಾಲೆಯ ಬಾಲಿಕೆಯರು ಶ್ರೀಗಳವರ ಮೇಲೆ ರಚಿಸಿದ ಕೀರ್ತನೆಯನ್ನು ಮಂಗಳಕರವಾಗಿ ಹಾಡಿದರು ಅವರಿಗೂ ೫ ರೂ ಬಹುಮಾನ ದಯಪಾಲಿಸಿದರು ಅಲ್ಲಿಂದ ಈಶ್ವರದೇವಸ್ಥಾನದ ಮುಂದೆ ಹೋಗಿ ಕುರುಬರ ಕೇರಿಯಲ್ಲಿ ಹಾಕಿದ್ದ ಚಪ್ಪರದಲ್ಲಿ ಹಾಡು ಮೆ॥ ಮುನಿಸ್ವಾಮಿ ರಾಮಣ್ಣನವರ ಮನೆ ಮುಂಭಾಗದಲ್ಲಿ ಬೀದಿಗಳಲ್ಲಿ ಇಟ್ಟಿದ್ದ ಬೊಂಬೆಗಳನ್ನು ನೋಡಿ ಅವರ ಮಕ್ಕಳು ಮಂಗಳಹಾಡಿ ಆರತಿ ಎತ್ತಿದ್ದಕ್ಕೆ ಅವರಿಗೂ ೩ ರೂ ಬಹುಮಾನ ಕೊಟ್ಟರು ಅಲ್ಲಿಂದ ಮೆ॥ ದಸ್ತಗೀರ್ ಸಾಹೇಬರು ಹೊಸದಾಗಿ ಕಟ್ಟುತ್ತಿರುವ ಅಂಗಡಿ ಮುಂಭಾಗದಲ್ಲಿ ಹಾಕಿದ್ದ ಚಪ್ಪರದಲ್ಲಿ ನಿಂತು, ಅವರು ಸ್ವಾಮಿಗಳವರಿಗೆ ಹಿಂದುಸ್ಥಾನಿಯಲ್ಲಿ ತಮ್ಮ ಜೊತೆಯವರೊಂದಿಗೆ ಒಂದು ಅಡ್ರೆಸ್ಸನ್ನು ವಂದನಾಪೂರ್ವಕವಾಗಿ ಒಪ್ಪಿಸಿದರು ಇದಲ್ಲದೆ ಮೆ॥ ದಸ್ತಗೀರ್ ಸಾಹೇಬರು ಹೊಸದಾಗಿ ತೆಗಸಿರುವ ಭಾವಿಯಿಂದ ಒಂದು ಅರವಟ್ಟಿಗೆಯನ್ನು ಇಡಿಸಿ, ಬಂದ ಜನಗಳಿಗೆ ನೀರು ಕೊಡಿಸಿದರು. ಅಲ್ಲಿಂದ ದೊಡ್ಡ ಚೌಕದಲ್ಲಿ ಹೊರಟು ಮೆ॥ ಪುಟ್ಟಸಿದ್ದಯ್ಯನವರು ಹಾಕಿಸಿದ್ದ ಚಪ್ಪರದಲ್ಲಿ ಪ್ರವೇಶಿಸಿ ಸ್ವಾಮಿಗಳವರಿಗಾಗಿ ಏರ್ಪಡಿಸಿದ್ದ ಬಿಡಾರಕ್ಕೆ ಮಧ್ಯಾಹ್ನ ೧೨॥ ಘಂಟೆಗೆ ತೆರಳಿದರು ಅದೇ ದಿವಸ ಉತ್ಸವದ ಮುಂಭಾಗದಲ್ಲಿ ಅ॥ ಕಮಿಷನರವರೂ, ಪೊಲೀಸ್ ಸೂಪರಿಂಟೆಂಡೆಂಟರವರೂ, ತಾ॥ ಅಮಲ್ದಾರರೂ, ಡಿಸ್ಟ್ರಿಕ್ಟ್ ತಾ॥ ಪೊಲೀಸ್ ಇನ್ಸ್ಪೆಕ್ಟರವರೂ, ರಿಜರ್ವ್ ಮತ್ತು ಕಾನ್ಸ್ಟೇಬಲ್ ಪೊಲೀಸಿನವರೂ ಹಾಜರಾಗಿದ್ದು ಜನಸಮೂಹದಲ್ಲಿ ಯಾವ ಗಲಾಟೆಗೂ ಆಸ್ಪದಕೊಡದಂತೆ ಬಹಳ ಮೆಹನತ್ತಿನಿಂದ ನೋಡಿಕೊಂಡರು ಆ ದಿನ ಸುಮಾರು ೧೦—೧೫ ಸಾವಿರ ಜನಗಳು ಸೇರಿರಬಹುದು ಊರಿನ ಎಲ್ಲಾ ಬೀದಿಗಳೂ ಚಪ್ಪರ, ತೋರಣ, ರಂಗೋಲಿಗಳಿಂದ ಅಲಂಕರಿಸಲ್ಪಟ್ಟಿತ್ತು.—ಇಲ್ಲಿನ ಪೊಲೀಸ್ ಇನ್ಸ್ಪೆಕ್ಟರ್ ಮೆ॥ ಅಬ್ದುಲ್ ರಜಾಕ್ ಯವರಿಗೆ ವರ್ಗವಾದದ್ದನ್ನು ಕೇಳಿ ಜನಗಳು ವ್ಯಸನಪಡುತ್ತಿದ್ದರು ಆದರೆ ಅವರ ವರ್ಗವು ನಿಲ್ಲಿಸಲ್ಪಟ್ಟಿದೆ ಎಂದು ತಿಳಿದು ಎಲ್ಲರೂ ಸಂತೋಷಪಡುತ್ತಿದ್ದಾರೆ

ಮೈಸೂರು ಗೆಜೆಟ್ ಸಂಗ್ರಹ

ಸಬ್ ಅ॥ ಸರ್ಜನ್ ಮೆ॥ ಎಫ್ ನೊರೋನಾ ಯವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನು ಒಂದು ತಿಂಗಳಿಗೆ ಜಾಸ್ತಿ ಮಾಡಿದೆ

ಮತ್ತೊಂದು ಹುದ್ದೆಗೆ ಕೊಡಲ್ಪಡುವ ತನಕ ಅ॥ ಅ॥ ಸರ್ಜನ್ ಮೆ॥ ಡಿ ಎಂ ಪದ್ಮನಾಭಯ್ಯ ಪಿಳ್ಳೆಯವರು ದಾವಣಗೆರೆ ಆಸ್ಪತ್ರೆಯ ಛಾರ್ಜನ್ನು ವಹಿಸಿರತಕ್ಕದ್ದು

ಚಿಕ್ಕಬಳ್ಳಾಪುರದ ಮುನ್ಸಿಫ್ ಮೆ॥ ಟಿ ವೆಂಕೋಬರಾಯರಿಗೆ ಆಗಸ್ಟ್ ತಾ ೧೩ ರಿಂದ ಆರ್ಡರ್ ತಲಪಿದ ಮೇಲೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು ಛೀಫ್ ಕೋರ್ಟಿನ ಡೆಪ್ಯುಟಿ ರಿಜಿಸ್ಟ್ರಾರ್ ಟಿ ಅರಸಿಂಗರಾಮಯ್ಯ ಕಾರೀ ತರಗತಿಯ ಮುನ್ಸಿಫರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಮೈಸೂರು ವ್ಯವಸಾಯದ ಇಲಾಖಾ ಅಸಿಸ್ಟೆಂಟ್ ಡಾಕ್ಟರ್ ಎ. ಲೆಹ್ಮನ್ ಯವರಿಗೆ ಸೆಪ್ಟಂಬರ್ ತಾ ೨೦ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅ॥ ಕೆಮಿಸ್ಟ್ ಮೆ॥ ಬಿ ವೆಂಕಟರಾಯರಿಗೆ ಆಗಸ್ಟ್ ತಾ ೨೩ ರಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಗುಬ್ಬಿ ತಾಲ್ಲೂಕಿಗೆ ವರ್ಗವಾಗಿರುವ ಅಮಲ್ದಾರ್ ಮೆ॥ ಎ ಕೃಷ್ಣ ಅರಸಿನವರು ಬರುವ ವರೆಗೂ ಈಗ್ಗೆ ಪೊಲೀಸ್ ಇನ್ಸ್ಪೆಕ್ಟರ್ ಆರ್. ಸುಂದರರಾಯರು ಗುಬ್ಬಿ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ತರೀಕೆರೆ ತಾಲ್ಲೂಕ್ ಅಮಲ್ದಾರ್ ಮೆ॥ ಎಂ ಕೃಷ್ಣಸ್ವಾಮಿ ಐಯಂಗಾರ್ರಿಗೆ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿನ ಮೊಕದ್ದಮೆಗಳನ್ನು ವಿಚಾರಣೆ ಮಾಡುವ ಅಧಿಕಾರವನ್ನೂ, ಛಡಿ ಶಿಕ್ಷೆಯನ್ನು ವಿಧಿಸುವ ಅಧಿಕಾರವನ್ನೂ ವಹಿಸಲ್ಪಟ್ಟಿದೆ

ನೆಲಮಂಗಲ ಸಬ್ ಡಿವಿಜನ್ ಸ್ಪೆಷಲ್ ಅ॥ ಕಮಿಷನರ್ ಮೆ॥ ಎ ಸುಬ್ರಹ್ಮಣ್ಯ ಐಯರವರಿಗೆ ಅಪೀಲ್ ಮೊಕದ್ದಮೆಗಳನ್ನು ಇತ್ಯರ್ಥ ಮಾಡುವ ಅಧಿಕಾರವನ್ನು ವಹಿಸಲ್ಪಟ್ಟಿದೆ

ಮೈಸೂರು ಡಿಸ್ಟ್ರಿಕ್ಟ್ ಇನ್ಸ್ಪೆಕ್ಟರ್ ಮೆ॥ ಎಚ್ ರಾಜಗೋಪಾಲ್ [illegible] ರಿಗೆ ಕೊಟ್ಟಿರುವ ಪ್ರಿವಿಲೆಜ್ ರಜದ ಜೊತೆಗೆ [illegible] ಎಲ್ಲದ [illegible] ತಿಂಗಳ ಫರ್ಲೋ ರಜಾ ಕೊಡಲಾಗಿದೆ

ಇಂಜನಿಯರ್ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿ ಹುಕುಂ ಮಾಡಲ್ಪಟ್ಟಿದೆ.—(೧) ಅ॥ ಇಂಜನಿಯರ್ ಮೆ॥ ಟಿ ಎಸ್. ಕೇಶವಯ್ಯಂಗಾರರನ್ನು ಅರಮನೆ ಡಿವಿಜನಿಂದ ನಂಜನಗೂಡು ಸಬ್ ಡಿವಿಜಗೆ, (೨) ಅ॥ ಇಂಜನಿಯರ್ ಮೆ॥ ಬಿ. ಸಿ. ಶ್ರೀನಿವಾಸಯ್ಯಂಗಾರರನ್ನು ಮೈಸೂರು ಡಿವಿಜನಿಂದ ಹೊನ್ನಾಳಿ ಸಬ್ ಡಿವಿಜಗೆ.

(೧) ಎಗ್ಜಿಕ್ಯುಟಿವ್ ಇಂಜನಿಯರ್ ಮೆ॥ ಕೆ. ಕೃಷ್ಣ ಐಯಂಗಾರ್ರನ್ನು ಕೋಲಾರದಿಂದ ಬೆಂಗಳೂರು ಡಿವಿಜಗೆ (ಮೆ॥ ಟಿ ಎಸ್. ವೆಂಕಟಾಚಾರ್ರು ಸೆಪ್ಟಂಬರ್ ತಾ ೮ ರಿಂದ ಕೆಲಸದಿಂದ ನಿವೃತ್ತರಾಗುವರು); (೨) ಮೆ॥ ವಿ ಅಯ್ಯಾಸ್ವಾಮಿ ಐಯರವರು ಅ॥ ಎಗ್ಜಿಕ್ಯುಟಿವ್ ಇಂಜನಿಯರಾಗಿ ಕೋಲಾರ್ ಡಿವಿಜಗೆ ವರ್ಗಮಾಡಲ್ಪಟ್ಟಿದಾರೆ, (೩) ಇವರನ್ನು ಚಿಂತಾಮಣಿ ಸಬ್ ಡಿವಿಜಗೆ ವರ್ಗಮಾಡಿ ಎಂದು ಕೊಟ್ಟಿದ್ದ ಹುಕುಂ ರದ್ದುಮಾಡಲ್ಪಟ್ಟಿದೆ

ಕೋಲಾರ್ ಡಿವಿಜನ್ ಅ॥ ಇಂಜನಿಯರ್ ಮೆ॥ ಕೆ. ಪುಟ್ಟಸ್ವಾಮಿ ಐಯಂಗಾರರವರಿಗೆ ಸೆಪ್ಟಂಬರ್ ತಾ. ೧೫ ರಿಂದ ಒಂದು ತಿಂಗಳು ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಗುಬ್ಬಿ ತಾಲ್ಲೂಕ್ ಅಮಲ್ದಾರ್ ಮೆ॥ ಎ ಕೃಷ್ಣ ಅರಸಿನವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾಗಿ ರದ್ದುಮಾಡಲಾಗಿದೆ

ವಿದೇಶ ವರ್ತಮಾನಗಳು.

ಚೀಣಾ ಚಕ್ರಾಧಿಪತ್ಯದಲ್ಲಿ ಚಕ್ರವರ್ತಿಯವರು ಪ್ರಜಾಪ್ರತಿನಿಧಿಗಳ ಸಭೆಗಳನ್ನು ಕಲ್ಪಿಸಿ ಅವರ ಅಭಿಪ್ರಾಯಾನುಸಾರವಾಗಿ ಯೂರೋಪ್ಯರ ರಾಜ್ಯಗಳಲ್ಲಿ ನಡೆಯುವಂತೆ ರಾಜ್ಯಭಾರ ಕಾರ್ಯಗಳನ್ನು ನಡೆಸಬೇಕೆಂದು ಗೊತ್ತುಮಾಡಿ, ಅದಕ್ಕೆ ಸಹಕಾರಿಗಳಾದ ಏರ್ಪಾಡುಗಳನ್ನು ಮಾಡಲಾರಂಭಿಸಿದಾರೆ ಇನ್ನು ಕೆಲವು ಕಾಲದೊಳಗಾಗಿ ಚೀಣಾ ರಾಜ್ಯದಲ್ಲೂ ಪಾರ್ಲಿಮೆಂಟ್ ಸಭೆಗಳು ಪ್ರಾರಂಭವಾಗುವವೆಂದು ನಿರೀಕ್ಷಿಸಬಹುದಾಗಿದೆ

***

ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್ವಾಲ್ ಗವರ್ನಮೆಂಟಿನವರು ಅಲ್ಲಿರುವಂಥಾ ಹಿಂದುಸ್ಥಾನದ ಪ್ರಜೆಗಳ ವಿಷಯದಲ್ಲಿ ಕಠಿಣವಾದ ಕಾನೂನ್ ಮಾಡಿ, ಆ ಕಾನೂನನ್ನು ಉಲ್ಲಂಘಿಸಿದ ಜನರನ್ನು ಅಲ್ಲಿಂದ ಗಡೀಪಾರು ಮಾಡಿದ್ದರು ಹೀಗೆ ಗಡೀಪಾರು ಮಾಡಲ್ಪಟ್ಟ ಹಿಂದುಸ್ಥಾನದ ಜನರ ಪೈಕಿ ಹನ್ನೊಂದು ಮಂದಿ ಸರ್ಕಾರದವರ ಕಾನೂನನ್ನು ಲಕ್ಷ್ಯಮಾಡದೆ ಮತ್ತೆ ಟ್ರಾನ್ಸ್ವಾಲಿನೊಳಕ್ಕೆ ಹೋದರು. ಆದರೆ ಸರ್ಕಾರದವರು ಅವರನ್ನು ದಸ್ತಗಿರಿ ಮಾಡುತ್ತೇವೆಂದು ಹೇಳಿದಾಗ ಅವರಾಗಿಯೇ ಹೋಗಿ ಪೊಲೀಸಿನವರ ಸ್ವಾಧೀನವಾದರು

***

ಚೀಣಾ ರಾಜ್ಯಕ್ಕೆ ಸೇರಿದ ಕಾಂಗ್ [illegible] ಎಂಬ ಊರಿನಲ್ಲಿ ಒಬ್ಬ ಶಿಪಾಯಿ ದಂಗೆಮಾಡಿದ್ದಕ್ಕೆ ಸರ್ಕಾರದವರು ಅವನನ್ನು ದಸ್ತಗಿರಿ ಮಾಡಿದರು. ಇದಕ್ಕಾಗಿ ಆ ದಿವಿಜನಿನ ೧,೦೦೦ ಸೈನಿಕರು ದಂಗೆಯೆದ್ದು, ತಮ್ಮ ಅಧಿಪತಿಯನ್ನು ಅವನ ಸೆಕ್ರೆಟರಿ ಮತ್ತು ಗುಮಾಸ್ತೆಯನ್ನೂ ಕೊಂದುಹಾಕಿ, ದಾಂಧಳೆ ಮಾಡುತ್ತಾ ಓನಿಯಾಂಗ್ ಎಂಬ ಮಿಲ್ಟೆರಿ ರಾಜ್ಯವನ್ನು ಮುತ್ತಿಗೆ ಹಾಕಿದರು. ಅಲ್ಲಿಂದ ಸೈನಿಕರು ರಾಜ್ಯವನ್ನು ಬಿಟ್ಟು ಓಡಿಹೋದದ್ದು ಮಾತ್ರವಲ್ಲದೆ ಅವರ ಮೇಲ್ಗಡೆ ದಂಗೆ ಮಾಡಿದ ಸೈನಿಕರ ಕೂಡ ಸೇರಿಕೊಂಡರು ಚಕ್ರವರ್ತಿಯವರು ಈ ದಂಗೆಕೋರರನ್ನು ಹಿಡಿಯುವುದಕ್ಕೋಸ್ಕರ ಅಲ್ಲಿಗೆ ಹೊಸ ಸೈನ್ಯವನ್ನು ಕಳುಹಿಸಿಕೊಟ್ಟಿದಾರೆ

***

[illegible] ಸೇರಿದ [illegible] ಪಟ್ಟಣದ [illegible] ತನ್ನ ಆಸ್ತಿಯಲ್ಲಿ [illegible] ಲಕ್ಷ ರೂಪಾಯಿಯನ್ನು [illegible] ಮೆ॥ ಜೆ. ಜಿ [illegible] ಎಂಬಾತನು [illegible] ಸಾವಿರ [illegible] ಮೆ॥ ಜೆ ಸಿ [illegible] ಎಂಬಾತನು ೨೦ ಸಾವಿರ ರೂಪಾಯಿಯನ್ನೂ, [illegible] ಪಟ್ಟಣದ ಮೆ॥ ಟಿ ಎಂಬಾತನು ೧೦೫ ಸಾವಿರ ರೂಪಾಯಿಯನ್ನು, [illegible] ನಗರದ [illegible] ಎಂಬಾತನು ಒಂದೂವರೆ ಲಕ್ಷ ರೂಪಾಯಿಯನ್ನು, [illegible] ಪಟ್ಟಣದ ಮೆ॥ ಎ. ಜೆ [illegible] ಎಂಬಾತನು ೫೦ ಸಾವಿರ ರೂಪಾಯಿಯನ್ನು [illegible] ವಿನಿಯೋಗಿಸಬೇಕೆಂದು [illegible] ಬರೆದಿರುತ್ತಾರೆ

***

[illegible] ಎಂಬ ಇಂಗ್ಲಿಷ್ ಸ್ತ್ರೀಯು [illegible] [illegible] [illegible] [illegible] [illegible] [illegible] ಗಂಟೆ [illegible] [illegible] ೧೩ ಗಂಟೆ [illegible] [illegible] [illegible] ಆತನ ಸಾಮರ್ಥ್ಯವನ್ನು ಕೊಂಡಾಡಿದ್ದಾರೆ.

***

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮಂತ್ರಾಲೋಚನಾ ಸಭೆಗೆ [illegible] [illegible] [illegible] [illegible] [illegible] [illegible] [illegible] [illegible] [illegible] ಜಾತಿಯ

...ಯೋಜನೆಗಳನ್ನು ತ್ಯಜಿಸಿಬಿಟ್ಟರು. ಆರುವಾಯು ಆಕೆ ಸ್ತ್ರೀ ಸಾಮಾನ್ಯದಲ್ಲಿದ್ದ ಘೋಷಾ ಪದ್ಧತಿಯನ್ನು ನಿರ್ಮೂಲ ಮಾಡುವುದ ಕ್ಕೂ ಸ್ತ್ರೀ ವಿದ್ಯಾಭ್ಯಾಸವನ್ನು ಪ್ರೋತ್ಸಾಹಪಡಿಸುವುದಕ್ಕೂ ತುಂಬಾ ಶ್ರಮಪಟ್ಟು, ಕೆಲವು ಶ್ರೇಷ್ಠತರಗಳಾದ ಗ್ರಂಥಗಳನ್ನು ರಚಿಸಿರು ತ್ತಾರೆ. ಬಂಗಾಳಾ ಸ್ತ್ರೀಯರಲ್ಲಿ ಆಕೆ ಪೂರ್ಣ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿದ್ದರು. ಈಕೆಯ ಹೊಟ್ಟೆಯಲ್ಲಿ ಹುಟ್ಟಿದ ಎಂಟು ಮಂದಿ ಮಕ್ಕಳೂ ಸುಖವಾಗಿ ಬೆಳೆಯುತ್ತಿದ್ದಾರೆ. ಈಕೆಯ ಶವವನ್ನು ಗೋಲ್ಡಸ್‌ರ್ ಗ್ರೀನ್ ಎಂಬ ಸ್ಥಳದಲ್ಲಿ ದಹನಮಾಡಿದರು.

***

ಪೋರ್ಚುಗಲ್ ರಾಜ್ಯಕ್ಕೆ ಸೇರಿದ ಕೆಲವು ಮುಖ್ಯ ನಗರಗಳಲ್ಲಿ ಜೂಜಾಡುವವರು ಆಟದ ಸ್ಥಳ ಮುಂತಾದ ವಿಚಾರಗಳನ್ನು ಗವರ್ನ ಮೆಂಟಿಗೆ ತಿಳಿಸಿ, ಅವರಿಂದ ಲೈಸೆನ್ಸನ್ನು ಪಡೆದುಕೊಳ್ಳಬೇಕೆಂತಲೂ ಜೂಜಾಟ ನಡೆಯುವ ಪ್ರತಿ ಒಂದು ಮನೆಯ ಮೇಲೂ ಸರ್ಕಾರದವರು ವರುಷಕ್ಕೆ ಒಂಬತ್ತು ಸಾವಿರ ರೂಪಾಯಿ ತೆರಿಗೆ ಹಾಕಿಸಿ ವಸೂಲ್ಮಾಡುವರೆಂತಲೂ ಒಂದು ಕಾನೂನಾಗಿರುತ್ತದೆ. ಗವರ್ನಮೆಂಟಿನವರು ಈ ಜೂಜಿನ ಬಾಬಿನಲ್ಲಿ ತುಂಬಾ ಉತ್ಪತ್ತಿಯಾಗುವುದೆಂದು ಗೊತ್ತುಮಾಡಿದಾರೆ. ಜೂಜು ನಡೆಯುವ ಮನೆಗಳಲ್ಲಿ ಪ್ರಜಾ ಆರೋಗ್ಯಕ್ಕೆ ಅನುಕೂಲವಾದ ಏರ್ಪಾಡುಗಳನ್ನು ಸರ್ಕಾರದವರು ಮಾಡಿಕೊಟ್ಟು, ಅಲ್ಲಿ ಜೂಜುಗಾರರಿಗೆ ಬಗೆ ಬಗೆ ಕಾಡಿದಾಟಗಳು ನಡೆಯುವಂತೆ ಏರ್ಪಡಿಸುವವರನ್ನು ನೇಮಕಮಾಡಿ ಕೊಡುವುದುಂಟು. ಜೂಜಾಟದ ಮನೆಗಳನ್ನು ಮುಖ್ಯವಾದ ಸ್ಥಳಗಳಲ್ಲಿ ಪ್ರಾರಂಭಿಸಿ ನಡೆಸುವುದ ಕ್ಕೋಸ್ಕರ ಐವತ್ತು ಲಕ್ಷ ರೂಪಾಯಿ ಮೂಲಧನವುಳ್ಳ ಒಂದು ಕಂಪನಿ ಏರ್ಪಾಡಾಗುವುದರಲ್ಲಿದೆ. ಈ ಕಂಪನಿಯ ಷೇರುಗಳನ್ನು ಅನೇಕರು ಕೊಂಡುಕೊಳ್ಳುತ್ತಿರುವರು.

***

ಆಫ್ರಿಕದ ಉತ್ತರ ಭಾಗದಲ್ಲಿರುವ ಯುಗಾಂಡಾ ಸೀಮೆಯ ಗವರ್ನರಾದ ಸರ್ ಹೆನ್ರಿ ಹೆಸ್ಕೆಲ್ ಬೆಲ್ ಎಂಬುವರು ಆ ಸೀಮೆಯೊಳಗೆ ಪ್ರಬಲವಾಗಿರುವ ಭಯಂಕರವೂ ಮಾರಕವೂ ಆದ ನಿದ್ರಾರೋಗವನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನಪೂರ್ವಕವಾಗಿ ನಡೆಸುತ್ತಿರುವ ಕಾರ್ಯಗಳು ಇದುವರೆಗೆ ಫಲಕಾರಿಗಳಾಗಿರುತ್ತವೆ. ಕಳೆದ ೧೯೦೭ನೇ ಇಸವಿಯಲ್ಲಿ ಅಲ್ಲಿರುವ ಯೂರೋಪ್ಯರಿಗೆ ಯಾರಿಗೂ ಈ ರೋಗ ತಗಲಲಿಲ್ಲ. ಸ್ವದೇಶೀ ಜನಗಳ ಪೈಕಿ ಆ ವರ್ಷದ ಆರು ತಿಂಗಳಲ್ಲಿ ಆ ರೋಗದ ದೆಸೆಯಿಂದ ೬,೦೦೦ ಜನರು ಕಾಲವಾಗಿರುತ್ತಾರೆ. ಈಗ ಆ ರೋಗವಿರುವ ವಿಕ್ಟೋರಿಯಾ ನಿಯಾಂಜಾ ಎಂಬ ಕೆರೆಯ ಪ್ರಾಂತ್ಯದಲ್ಲಿ ಪ್ರಜೆಗಳ್ಯಾರೂ ವಾಸಮಾಡಕೂಡದೆಂದು ಹುಕುಂ ಕೊಟ್ಟು, ಅಲ್ಲಿದ್ದವರನ್ನೆಲ್ಲಾ ಬೇರೆ ಸ್ಥಳಗಳಿಗೆ ಕಳುಹಿಸಿದರು. ಈ ನಿದ್ರಾರೋಗವು ವಿಷಕರವಾದ ಒಂದು ಹುಳುವಿನ ಕಡಿತದಿಂದ ಹುಟ್ಟುವುದೆಂದು ತಿಳಿದು ಬಂದಿದೆ. ಆದಕಾರಣ ಆ ಹುಳುಗಳು ಕಡಿಯದಂತೆ ಅವುಗಳಿಗೆ ಜನರ್ಯಾರೂ ಸಿಕ್ಕದೆ ಹೋಗುವ ಪಕ್ಷದಲ್ಲಿ ಅವುಗಳಲ್ಲಿ ವಿಷಕರವಾದ ಭಾಗವು ಇಲ್ಲದೆ ಹೋಗುವುದೆಂದು ಎಣಿಸಲ್ಪಟ್ಟಿದೆ. ಈಗ ನಿದ್ರಾರೋಗ ತಗಲಿ ಅನುಭವಿಸುತ್ತಿರುವಂಥಾ ಕೆಲವು ಸಣ್ಣ ರೋಗಿಗಳನ್ನು ಸರ್ಕಾರದವರು ಪ್ರತ್ಯೇಕ ಪ್ರತ್ಯೇಕವಾದ ಸೆಗ್ರಿಗೇಷನ್ ಕ್ಯಾಂಪುಗಳಲ್ಲಿಟ್ಟು, ಅವರನ್ನೆಲ್ಲಾ ಅನೇಕ ನಾನಾ ತರಹ, ಪರಿಶೋಧನೆಗಳಿಂದ ಆಗಿಂದಾಗ್ಗೆ ಕಂಡುಬರುವಂಥಾ ಚಿಕಿತ್ಸೆಗಳನ್ನು ಮಾಡಿಸುತ್ತಲೂ ಬಂದಿದಾರೆ.

ಸ್ವದೇಶೀ ನೆಯ್ಗೆ ನೂಲು ಬೇಕೋ ?

71-2

ಪ್ರಸಿದ್ಧವಾದ ಬೊಂಬಾಯಿ ಸ್ವದೇಶೀ ಮಿಲ್ಸ್ ಎಂಬ ಕಾರಖಾನೆಯಲ್ಲಿ ತಯಾರಾಗುವ ನಂಬರ್ ವಾರ್ ನೂಲುಗಳಿಗೆ ನಾವು ಆರ್ಡರ್ ತೆಗೆದುಕೊಂಡು ತರಿಸಿಕೊಡಲು ಅಧಿಕಾರ ಹೊಂದಿರುತ್ತೇವೆ. ನೂಲಿನ ನಮೂನೆ ದರ ಮುಂತಾದ ತಪಸೀಲನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಎಂ. ಸೂರ್ಯನಾರಾಯಣಪ್ಪ,

ಕಮಿಷನ್ ಮತ್ತು ಜನರಲ್ ಏಜಂಸಿ, ಶಿವಮೊಗ್ಗ.

6 ರೂಪಾಯಿಗಳ ಗಡಿಯಾರಕ್ಕೆ 50 ಸಾಮಾನುಗಳು ಇನಾಮು ಕೊಡಲ್ಪಡುವವು.

53-1

ವಜ್ರಕಲ್ಲುಗಳನ್ನು ಹಾಕಿಸಲ್ಪಟ್ಟ ನಿಕ್ಕಲ್ ಬೆಳ್ಳಿ ಗಡಿಯಾರವು.

ಈ ಸ್ವಿಸ್ ಲೀವರ್ ಗಡಿಯಾರವು ಸಾಧಾರಣ ಸಿಲಿಂಡರ್ ಗಡಿಯಾರಕ್ಕಿಂತಲೂ ಕೆಂಪುಗಳು ಇರುವುದೂ ಅಲ್ಲದೆ ಲೀವರ್ ಗಡಿಯಾರವು ಬಹಳ ಶ್ರೇಷ್ಠವಾದದ್ದೆಂದು ಎಲ್ಲರೂ ತಿಳಿದಿರುತ್ತೇವೆ. ಇದು



ಬಹಳ ಘಟ್ಟಿಯಾಗಿಯೂ, ಕಾಂತಿಯಾಗಿಯೂ, ಶೃಂಗಾರವಾಗಿಯೂ ಆಫೀಸ್ ತಯಾಗೂ ಉಪಯೋಗಿಸಲಿಕ್ಕೆ ತಕ್ಕ ಗಡಿಯಾರವಾಗಿಯೂ ಇದೆ. ಬಹುಮಾನಗಳು:— ನಡುವಿನಲ್ಲಿ ಕಟ್ಟಿಕೊಳ್ಳುವ ವಿಲಾಯತಿ ಬೆಲ್ಟು, ಹವಳದ ಉಂಗುರ, ಜರ್ಮನ್‌ಸಿಲ್ವರ್ ಗಡಿಯಾರ ಸರಪಣಿ, ರಾಜಾರಾಣಿ ಕಂಪಸ್, ದುಡ್ಡುಕಾಸು ಹಾಕಿಕೊಳ್ಳುವ ಹಣದ ಚೀಲ, ಎರಡು ವರ್ಷಗಳ ಪಂಚಾಂಗವೂ ಕನ್ನಡಿಯೂ ಉಳ್ಳ ಪುಸ್ತಕ, ಹೆಂಗಸರು ತಲೆಯಲ್ಲಿಟ್ಟುಕೊಳ್ಳುವ ಸೂಜ್ಯ, ಮುಖ ನೋಡುವ ಚಿತ್ರಕೆಲಸದ ಕನ್ನಡಿ, ಗಡಿಯಾರ ಇಟ್ಟುಕೊಳ್ಳುವ ತೊಗಲಿನ ಸಂಚಿ, ಗಡಿಯಾರದ ರೇಷ್ಮೆದಾರ, 8 ಆಭರಣಗಳನ್ನಿಟ್ಟುಕೊಳ್ಳುವ ಚಕ್ರದ ಪೆಟ್ಟಿಗೆಗಳು, ಕತ್ತರಿಕೋಲು, ಪೆನ್‌ಕತ್ತಿ, ಸೀಮೆ ಪಾಟದಾರ್, ಕೈಗವುಸು, ಸುಕೋಶನ, ಲೇಡಿಪಟವು, ದಂತದ ಹಣಿಗೆ, ಸಿಯಜಸ್ತದ ದೀಪ, ವಾಸನೆ ದ್ರವ್ಯ ಬುರ್ಡಿ, ಬೀಗದ ಉಂಗುರ, ಸ್ಫಟಿಕದ ಕನ್ನಡಿ, ಹೇರ್ ಸ್ಪ್ರಿಂಗ್, ವೆಲ್‌ವೆಟ್ಟು ಪೆಟ್ಟಿಗೆ, ಮೇಲಾದ ಪೆನ್ಸಿಲ್, ಟೀ ಸ್ಪೂನ್, ಸೊಗಸಾದ ಷರ್ಟು ಬೊತ್ತಾಮುಗಳು, 20 ಅಂದವಾದ ಕಾರ್ಡುಗಳು, ಸ್ವದೇಶೀ ಪೆನ್ನು, ಸೋಪು ನಮ್ಮ ವಿಳಾಸ:—

ಮದರಾಸ್ ಸೊಸೈಟಿ ವಾಚ್ ಡಿಪೋ,

ಪಾರ್ಕ್ ಟೌನ್, ಮದ್ರಾಸ್.

ನಿಮಗೆ ಸುಪೀರಿಯರ್ ಉಲ್ ಬೇಕೇ ?

ನಿಮಗೆ ದಪ್ಪದ ಉಲ್ ಬೇಕೇ ?

117-47

೧೦ ತೋಲ ತೂಗುವ ಸುಪೀರಿಯರ್ ಉಲ್ ಬಂಡಲಿಗೆ ೩-೮-೦
ವಿಕ್ಟೋರಿಯಂ ಉಲ್ ಪೌಂಡು ೧ಕ್ಕೆ ೨-೮-೦
೧೦ ತೋಲಿಯಾಗುವ ದಪ್ಪದ ಉಲ್ ಬಂಡಲಿಗೆ ೩-೬-೦
ಸಪ್ಪವಿಜಯ ಹೇರ್ ಆಯಿಲ್ ಸೀಸೆಗೆ ೧-೦-೦

ಮೇಲ್ಕಂಡವುಗಳನ್ನು ವಿ. ಪಿ. ಯಿಂದಲೂ ರವಾನಿಸುತ್ತೇವೆ.

ವಿಳಾಸ-ಪ್ರೊಪ್ರೈಟರ್, ದಿ ಉಲ್ಲನ್ ಮಾರ್ಟ್, ಮಂಗಳೂರು.

ಏನೇನು ನೋವು ಆಗದೆ ಕೂದಲು ತೆಗೆಯುವ

ಬಾದಶಾಹೀ ಸಬಕಾರ.

70-2

ಬೇಕಾದ ಜಾಗದಲ್ಲಿ ಈ ಸಬಕಾರ ಹಚ್ಚಿದರೆ ಕೂದಲು ಬಹಳ ಸುಲಭವಾಗಿ ಹೋಗುತ್ತದೆ, ಮತ್ತು ತೊಗಲು ಮೆತ್ತಗೆ ಆಗುತ್ತದೆ. ಈ ಸಬಕಾರದಲ್ಲಿ ಸುಣ್ಣ ಮತ್ತು ಹರಿದಳ ಮುಂತಾದ ಕೆಟ್ಟ ಪದಾರ್ಥದ ಮಿಶ್ರಣವೇನೂ ಇಲ್ಲ.

ಕಿಮ್ಮತ್ತು ೩ ವಡೆ ಇರುವ ೧ ಪೆಟ್ಟಿಗೆಗೆ ರೂ. ೧, ಪೋಸ್ಟೇಜು ೪ ಆಣೆ.

ತಾ. ಕ.—ಪತ್ರವ್ಯವಹಾರ ಪೂರ್ಣವಿಳಾಸ ಕೊಟ್ಟು ಇಂಗ್ಲಿಷ್ ಭಾಷೆಯಲ್ಲಿ ಮಾಡಬೇಕು. ನಮ್ಮ ವಿಳಾಸ:—

ಟಿ. ಸಿ. ಮಹತ್ರಾ,

ಕಾಲಬಾದೇವಿ. ಮುಂಬಯಿ.

ಮಧುರೆ ಸೀರೆ ! ಗಟ್ಟಿ ಬಟ್ಟೆ ! ೧೭, ಮೊಳದುದ್ದ !!

57-6

ಬೆಳ್ಳಿಯ ಜರಿಕೆ ಯಾ ಹುವ್ವಗಳಿಂದ ಕೂಡಿದ ಕೆಂಪು ಅಥವಾ ಕಪ್ಪು ಬಣ್ಣದ್ದು ರೂ. ೩-೪ ಆ ನಯವಾಗಿ ಅಂಚು ಸೆರಗಿನಲ್ಲಿ ಜರತಾರಿಯುಳ್ಳದು ರೂ. ೫ ಬೆಳ್ಳಿಯ ಕಲಾಬತ್ತು ಸೀರೆ, ರೂ. ೭, ರೂ. ೮, ರೂ. ೧೦ ಕೆಟ್ಟ ಜರಿದಿನ್ ಉತ್ತಮ ಮಾಲು ದೊರೆಯುತ್ತೆ.

ಮದ್ರಾಸು ಬಿಳಿಯ ರೇಷ್ಮೆ ಅಂಚಿನ ಸೀರೆ ರೂ. ೭.

ಒಂದೇ ತರದ ೨ ರೇಷ್ಮೆ ಸೆರಗುಳ್ಳ ೨ ಅಂಗುಲ ಅಗಲ ರೇಷ್ಮೆ ರಾಷ್ಟ್ರ ಅಂಚುಳ್ಳ ಗಟ್ಟಿ ಕಪ್ಪು ಬಣ್ಣದ ೧೮ ಮೊಳದ ಸೀರೆಗೆ ರೂ. ೬. ೩ ಅಂಗುಲದಂಚಿನದಕ್ಕೆ ರೂ. ೭॥. ಬಹು ನಯದ ನೂಲು ಬಳಸಿ ೩ ರೇಷ್ಮೆ ಅಂಚು, ೨ ಮೊಳದ ರೇಷ್ಮೆ ೨ ಸೆರಗು, ಬಹು ಸೊಗಸಾಗಿಯೂ ಎಂದಿಗೂ ಕೆಡದ ಖಾತರಿ ಬಣ್ಣದಲ್ಲಿ ತಯಾರಿಸಿದ ೨ ಅಂಗುಲದಂಚಿನದಕ್ಕೆ ರೂ. ೯॥, ೩ ಅಂಗುಲದಂಚಿನದಕ್ಕೆ ರೂ. ೧೦॥.

ಬುರ್ನಿಸ್ ! "ಬ್ಲಾಂಕೆಟ್" ಎಂಬ ಹೊಸ ಬನಾತು ! ರೂ ೬.

ಶುದ್ಧ ಉಣ್ಣೆಯ ಕೋಡಿಯುಳ್ಳ ಮಖಮಲಿನಂತೆ ಮೆತ್ತಗೂ ಥಳಿಗೆ ಬೆಚ್ಚಗೂ ಇವೆ. ಉದ್ದ ೯೦, ಅಗಲ ೬೮ ಅಂಗುಲ. ಕ್ರಯ ರೂ. ೬.

ರೇಷ್ಮೆಯ (ಕೆಂಪು) ವಸ್ತ್ರಗಳು ! ೨ ಮೊಳದಗಲ ! ರೂ. ೫.

೬ ೮ ಮೊಳದ ಮೇಲಂಕೋಟೆ ಅಂಚಿನ ಪಂಚೆಗಳು ಜೊತೆ ರೂ. ೩.

ವಿಳಾಸ.—ರಾವ್ ಎಂಪೋರಿಯಂ, ಸ್ಟ್ರಿಂಗರ್ ಹಾಂ ರೋಡ್,

ಮೇಷೆರಿ, ಮದ್ರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-80

೧. ಶೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಬಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ನೆಗ್ಗಿ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಬೇಧಿ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ಊಟವಾದ ಕೂಡಲೇ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ಹಿಡಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಚ್ಛಿದ್ರಜ್ವರ, ಕ್ಷಯತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಡಬ್ಬಿಗೆ ೪ ಆಣೆ; ೫ ಡಬ್ಬಿಗೆ ೧ ಡಬ್ಬಿ ಹೆಚ್ಚು. ೧ ರಿಂದ ೧೨ ಡಬ್ಬಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ಸ್ಪೆಷಲ್ಲಾಗಿ ಕ್ರಯವನ್ನು ರೂ. ೭—೮—೦ ಇಂದ ೭ ರೂ. ಗೆ ಇಳಿಸಿದೆ.

ಯಾವ ತರವಾದ ಮೋಸವೂ ಇಲ್ಲ. ದರಗಳು ಬಹಳ ಸುಲಭ.
ವಿಪರೀತವಾಗಿ ಮಾರಾಟವಾಗುತ್ತಿವೆ. ಜಾಗ್ರತೆ ನೋಡಿ.

ಲೋಕದಲ್ಲೆಲ್ಲಾ ಅತ್ಯಂತ ಆಶ್ಚರ್ಯವಾದುದು.

69-7

ಬಹು ಸೊಗಸಾದ ಮತ್ತು ಮೇಜಿನ ಮೇಲಿಡುವುದಕ್ಕೆ ಉಪಯುಕ್ತವಾದ ದೊಡ್ಡ ಗಡಿಯಾರ ಮತ್ತು ಜೇಬಿನಲ್ಲಿಡುವುದಕ್ಕೆ ಯೋಗ್ಯವಾದ ವಾಚ್ ಗಡಿಯಾರ. ಎರಡು ಗಡಿಯಾರಗಳು ಸಿಕ್ಕುತ್ತವೆ.

ಮಾನನೀಯರುಗಳೇ,

ನಮ್ಮ ಹಿಂದೂ ದೇಶದ ವರ್ತಕರನೇಕರು ತಾವು ಮಾರುವ ಪದಾರ್ಥಗಳ ವಿಷಯ ವಿಪರೀತವಾಗಿ ಹೊಗಳಿ, ಸುಳ್ಳು ಸಂಗತಿಗಳನ್ನು ಪ್ರಕಟಿಸುವವರಾಗಿದ್ದಾರೆ. ಅಂಥಾ ವರ್ಣನೆಯನ್ನು ಓದುವವರು ಪದಾರ್ಥಗಳನ್ನು ಕೊಂಡಮೇಲೆ ಮೋಸಹೋಗುವರು. ಆದರಿಂದಲೇ ಜನರು ಕ್ರಯದ ಪಟ್ಟಿಗಳನ್ನು ಓದುವದಿಲ್ಲ. ಆದರೆ ನೀವೆಂದಿಗೂ ನಮ್ಮ ಅಂಗಡಿಯ ವಿಷಯ ಯಾವ ಸಂಶಯವನ್ನೂ ಇಡಬಾರದು. ನಮ್ಮ ಅಂಗಡಿಯಲ್ಲಿ ನೀವು ಒಂದಾವರ್ತಿ ವ್ಯಾಪಾರ ಮಾಡಿದರೆ ಇನ್ನೆಂದಿಗೂ ನಮ್ಮನ್ನು ಬಿಟ್ಟು ಬೇರೆ ಅಂಗಡಿಗಳಿಗೆ ಹೋಗಲಾರಿರಿ. ನೋಡಿರಿ, ಜೇಬಿನಲ್ಲಿ ಇಡುವ ಒಂದು ಸೊಗಸಾದ ಗಡಿಯಾರವನ್ನು ಕೊಂಡರೆ ಅದರ ಜೊತೆಯಲ್ಲಿ ೧೦೪ ಪದಾರ್ಥಗಳನ್ನು ಕಳುಹಿಸುತ್ತೇವೆ. ಗಡಿಯಾರಕ್ಕೆ ಒಂದಾವರ್ತಿ ಬೀಗ ಕೊಟ್ಟರೆ ೩೦ ಗಂಟೆಗಳ ಕಾಲ ನಡೆಯುವುದು. ಸೊಗಸಾದ ಮುಳ್ಳುಗಳು, ಬಿಳೀ ಗಾಜಿನ ಮೇಲೆ ಬರೆಯಲ್ಪಟ್ಟ ಗಂಟೆಗಳ ಅಂಕೆಗಳು ಇವುಗಳು ಅದರಲ್ಲಿರುತ್ತವೆ. ಇದಕ್ಕೆ ಐದು ವರ್ಷಗಳು ಗ್ಯಾರಂಟಿ ಕೊಡುತ್ತೇವೆ. ಈ ಗಡಿಯಾರವನ್ನು ಕಳುಹಿಸುವುದಕ್ಕೆ ಮೊದಲು ಅದನ್ನು ನಾವು ಚೆನ್ನಾಗಿ ಪರೀಕ್ಷೆಮಾಡಿಯೇ ಕಳುಹಿಸುವೆವು. ಅದರ ಜೊತೆಯಲ್ಲಿ ಕೆಳಗೆ ಕಂಡ ಪದಾರ್ಥಗಳನ್ನು ಕಳುಹಿಸುವೆವು.—ಒಂದು ಸೊಗಸಾದ ಗಡಿಯಾರದ ಸರಪಣಿ, ಮೇಜಿನ ಮೇಲೆ ಇಡುವ ದೊಡ್ಡ ಗಡಿಯಾರ ಒಂದು, ವಿಲಾಯತಿಯಲ್ಲಿ ಮಾಡಿದ ದುಡ್ಡಿನ ಪೆಟ್ಟಿಗೆಯೊಂದು, ಇದಕ್ಕೆ ಅರೆಗಳೂ ಬೀಗದ ಕೈಗಳೂ ಇರುವವು. ಒಂದು ಉತ್ಕೃಷ್ಟವಾದ ಡಬ್ಬಿ, ತಿಂಗಳಿಗೆಲ್ಲಾ ಒಂದೇ ಆಣೆಯ ಎಣ್ಣೆ ಕುಡಿಯುವ ಸೊಗಸಾದ ಲ್ಯಾಂಪ್ ದೀಪ, ಒಂದು ಸೊಗಸಾದ ಫೌಂಟನ್ ಪೆನ್ನು, ಒಂದು ಜೊತೆ ಬಾಳಕೆ ಬರುವ ಮೇಜೋಡುಗಳಂತಹ ಹಿಡಿಯುರುವ ಒಂದು ಚಾಕು, ಒಂದು ಬಲವಾದ ಚರ್ಮದಿಂದ ಮಾಡಿದ ದುಡ್ಡು ಹಾಕುವ ಚೀಲ, ಒಂದು ಸೊಗಸಾದ ಬಾಚಣಿಗೆ, ಒಂದು ದರ್ಪಣ (ಕನ್ನಡಿ), ಸೊಗಸಾದ ಕತ್ತರಿ, ರಾತ್ರಿಯಲ್ಲಿ ಹಾಕಿಕೊಳ್ಳುವ ಕಂಬಳಿ ಟೋಪಿ, ಷರ್ಟ ದಬ್ಬಳಕ್ಕೆ ಉಪಯೋಗವಾದ ಸೊಗಸಾದ ಗುಂಡಿಗಳು, ಒಂದು ಕನ್ನಡಕ, ಒಂದು ಸೊಗಸಾದ ಪೆಟ್ಟಿಗೆಯಲ್ಲಿ ಸೋಪು, ಒಂದು ಉತ್ಕೃಷ್ಟವಾದ ಕೈವಸ್ತ್ರ ಥಳಥಳಿಸುವ ಸೌಟು, ರಬ್ಬರು, ಸೊಗಸಾದ ಮಸೀ ಕುಪಿಕೆ, ಸೀಸದ ಕಡ್ಡಿ ಒಗೆಯುವ ಯಂತ್ರ. ಹನ್ನೆರಡು ಪೆನ್ನು ಕಡ್ಡಿಗಳು, ಆರು ಸೀಸದ ಕಡ್ಡಿಗಳು, ನೂರಐವತ್ತು ಸೊಗಸಾದ ಆವಿಲೋಪುಗಳು (ಲಕೋಟೆಗಳು) ನೂರೈವತ್ತು ಲೆಟರ್ ಕಾಗದಗಳು, ನೂರು ಪೋಸ್ಟ್ ಕಾರ್ಡುಗಳು, ಎಪ್ಪತ್ತುಮೂರು ಪೆನ್ನು ಮುಳ್ಳುಗಳು, ಇವೆಲ್ಲವುಗಳಿಗೆ ಏಳು ರೂಪಾಯಿ ಮಾತ್ರವೇ (Rs. 7—0—0). ಅಪೇಕ್ಷಿಸತಕ್ಕವರು ಅರ್ಧ ಮೊಬಲಗನ್ನು ಮುಂಗಡವಾಗಿ ಕೆಳಗೆ ಕಂಡ ಮನಿ ಯಾರ್ಡರ್ ಮೂಲಕ ರವಾನಿಸಬೇಕು.

ಎಂ. ಎ. ಗಟಾಲಾ ಅಂಡ್ ಕಂಪೆನಿ,

(ಉತ್ತರ ಆರ್ಕಾಡು) ಚಿತ್ತೂರು.

(ಪದಾರ್ಥಗಳನ್ನು ಕೊಂಡ ಮೇಲೆ ಅವು ನಿಮಗೆ ತೃಪ್ತಿಕರವಾಗಿಲ್ಲದಿದ್ದರೆ ನಿಮ್ಮ ದುಡ್ಡನ್ನು ವಾಪಸು ಕಳುಹಿಸುತ್ತೇವೆ.)

ಆರ್ಡರ್ ಫಾರಂ.

ಅಯ್ಯಾ,

ದಯಮಾಡಿ ಮಾರಾಟಮಾಲಿನಲ್ಲಿಯೇ ಜೇಬಿನಲ್ಲಿಡುವ ಒಂದು ಗಡಿಯಾರವನ್ನೂ ಮೇಜಿನ ಮೇಲಿಡುವದಕ್ಕೆ ಒಂದು ಸೊಗಸಾದ ದೊಡ್ಡ ಗಡಿಯಾರವನ್ನೂ ಇವುಗಳ ಸಂಗಡ 514 ಬಹುಮಾನಗಳನ್ನೂ ಕಳುಹಿಸಿಕೊಡಿರಿ. ಅವಕ್ಕಾಗುವ ಖರೀದಿ ೭—೦—೦ (Rs. 7-0-0) ಯಲ್ಲಿ ಅರ್ಧ ಮೊಬಲಗನ್ನು ಅಂದರೆ 3-8-0 ನ್ನು ಮನಿಯಾರ್ಡರ್ ಮೂಲಕ ರವಾನಿಸಿರುತ್ತೇನೆ. ಬಾಕಿ ಮೊಬಲಗನ್ನು ನೀವು ದಯವಿಟ್ಟು ವಿ ಪಿ ಪಿ ಮೂಲಕ ತೆಗೆದುಕೊಳ್ಳಿ.

ಹೆಸರು. . . . .
ವಿಳಾಸ. . . . .
ಪೋಸ್ಟ್ ಆಫೀಸ್. . . . .
ಹತ್ತಿರದಲ್ಲಿರುವ ರೈಲ್ವೆಸ್ಟೇಷನ್. . . . .

ಇಂತಿ.

. . . .

ಈ ಆರ್ಡರ್ ಫಾರಂನೊನ್ನು ಇದರ ಸಂಗಡ ಅರ್ಧ ಮೊಬಲಗಾದ 3—8—0 ನ್ನು ಕಳುಹಿಸುವಂಥವರಿಂದ ನಾವು 7—0—0 ಬಾಳುವ ಪದಾರ್ಥಗಳನ್ನು ಕಳುಹಿಸುವಲ್ಲಿ ಯಾವ ಪೋಸ್ಟೇಜ್ ಖರ್ಚನ್ನೂ ತೆಗೆದುಕೊಳ್ಳುವುದಿಲ್ಲ. ನಾವೇ ಪೋಸ್ಟ್ ಖರ್ಚನ್ನು ವಹಿಸುತ್ತೇವೆ.

ಸ್ಪೆಷಲ್ಲಾಗಿ ಕ್ರಯವನ್ನು ರೂ. ೭—೮—೦ ಇಂದ ರೂ. ೭ ಕ್ಕೆ ಇಳಿಸಿದೆ.

ಪೆರೂನಾ ಎಲ್ಲಾ ಶೀತರೋಗಗಳನ್ನೂ ನಿವಾರಣೆ ಮಾಡುವುದರಲ್ಲಿ ಅಮೂಲ್ಯವಾಗಿದೆ ಎಂದು ಪ್ರಮುಖ ಆಸ್ಪತ್ರೆಗಳು ಹೇಳುತ್ತವೆ.



ಸಿಸ್ಟರ್ಸ್ ಆಫ್ ದಿ ಗುಡ್ ಷೆಫರ್ಡ್, ಮಾಂಟ್ರೀಲ್ [34-24]

ಭೂಮಿಯ ಮೇಲಿರುವ ಆಸ್ಪತ್ರೆಗಳೆಲ್ಲಾ ಶೀತರೋಗಗಳನ್ನು ಚಿಕಿತ್ಸೆ ಮಾಡುವಲ್ಲಿ ಪೆರೂನಾ ಔಷಧವು ಬಹು ಬೆಲೆಯುಳ್ಳದ್ದೆಂದು ಕಂಡುಕೊಂಡಿವೆ.

ಶೀತ ನೆಗಡಿ ಮುಂತಾದ್ದು ಶ್ವಾಸಕೋಶಕ್ಕೆ ಬರುವ ರೋಗವೆಂತಲೂ ಅದು ಕರ್ಕಶವಾಗಿ ವರುಷಕ್ಕೆ ಎಂಟು ತಿಂಗಳ ಕಾಲ ಬರುವುದೆಂತಲೂ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ

ಈ ದೇಶದಲ್ಲಿ ಶೀತಕಾಲವು ದೀರ್ಘವಾದ, ಮತ್ತು ಕಠಿಣವಾದ ಹವಾ ಉಳ್ಳದ್ದಾಗಿ ಬಹಳ ಕಾಲ ಇರುವುದರಿಂದ ಆಗಲೇ ಶೀತ ಜಾಡ್ಯಗಳು ಜಾಸ್ತಿಯಾಗುವವೆಂದು ಖಂಡಿತವಾಗಿ ಹೇಳಬಹುದು.

ಆದಕಾರಣ ಕೆನಡಾ ಜನರು ಶೀತರೋಗಕ್ಕೆಲ್ಲಾ ಪೆರೂನಾ ನಂಬಿಕೆಯಾದ ಒಳ್ಳೇ ಔಷಧವೆಂದು ತಿಳಿದುಕೊಂಡರೇ ಅದನ್ನು ಎಲ್ಲಾ ಜನರು ಪ್ರೀತಿಮಾಡಿ ಉಪಯೋಗಿಸುತ್ತಾ ಬಂದರು. ಸಂಸಾರಗಳಲ್ಲಿ ಮಾತ್ರವೇ ಅಲ್ಲ; ದೊಡ್ಡ ಆಸ್ಪತ್ರೆಗಳಲ್ಲಿಯೂ ಕೂಡ ಆ ರೋಗಗಳನ್ನು ತಡೆಯುವುದಕ್ಕೂ ನೂರಾರು ರೋಗಿಗಳಿಗೆ ಸೌಖ್ಯವನ್ನುಂಟುಮಾಡುವುದಕ್ಕೂ ಪೆರೂನಾವನ್ನು ಉಪಯೋಗಿಸುತ್ತಾ ಬಂದರು.

ಬಡಬಗ್ಗರಾಗಿಯೂ ರೋಗಿಗಳಾಗಿಯೂ ಇರುವಂಥಾವರಿಗೆ ಅದು ತುಂಬಾ ಪ್ರಯೋಜನವನ್ನುಂಟುಮಾಡಿದ ವಿಷಯದಲ್ಲಿ ದೊಡ್ಡ ಆಸ್ಪತ್ರೆಯವರು ಒಪ್ಪಿ ಸಮ್ಮತಿಯನ್ನು ಕೊಡಲು ಹಿಂತೆಗೆದಿಲ್ಲವು

ಈ ದೊಡ್ಡ ಆಸ್ಪತ್ರೆಗಳ ಪೈಕಿ ಸಿಸ್ಟರ್ಸ್ ಆಫ್ ಗುಡ್ ಷೆಫರ್ಡ್ ಎಂಬುದು ಒಂದು. ಅದರ ನೌಕರಮಾನೆಯವರು ಹೇಳುವುದನ್ನು ಕೇಳಿ.—

ಓಹಿಯೋ ಡಿಸ್ಟ್ರಿಕ್ಟ್ ಕೊಲಂಬಸ್ ಪಟ್ಟಣದಲ್ಲಿರುವ ಪೆರೂನಾ ಕಂಪನಿಗೆ—

ಕಳೆದ ಕೆಲವು ತಿಂಗಳಿಂದಲೂ ನಮ್ಮ ಫಾಮಿಲಿಯವರಿಗೂ ಬಡವರಿಗೂ ಪೆರೂನಾವನ್ನು ಪ್ರಯೋಗಮಾಡಿರುತ್ತೇವೆ. ಅದು ನಮಗೆ ತುಂಬಾ ತೃಪ್ತಿಯನ್ನುಂಟುಮಾಡಿರುತ್ತದೆಂದು ಸಂತೋಷವಾಗಿ ಹೇಳುವೆವು.

ಗುಡ್ ಷೆಫರ್ಡ್ ಸಹೋದರಿಯರು, ಆಗೀಷ್ಟು ೨೦, ೧೯೦೩.

ಮಾಂಟ್ರೀಲ್.

ಈ ಆಸ್ಪತ್ರೆಯು ಬಹು ದೀರ್ಘಕಾಲ ಈ ಔಷಧವನ್ನು ಉಪಯೋಗಿಸುತ್ತಾ ಬಂದು ಅದರ ಗುಣದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಬದಲಾಯಿಸುವುದಕ್ಕೆ ಕಾರಣವನ್ನು ಕಾಣದೆ, ತಮ್ಮ ಸಂತೋಷದ ತೃಪ್ತಿಯನ್ನು ಕುರಿತು ಮುಂದೆ ಹೇಳುವ ಪ್ರಕಾರ ಬರೆದಿರುತ್ತಾರೆ.—

ಮಾಂಟ್ರೀಲ್, ನೊವೆಂ. ೭, ೧೯೦೩.

ಪೆರೂನಾ ಅನೇಕ ರೋಗಿಗಳಿಗೆ ಸೌಖ್ಯಕೊಟ್ಟಿರುವುದನ್ನು ಕಂಡಿರುತ್ತೇವೆ. ಅದು ಒಳ್ಳೇ ಬಲಕಾರಿಯಾದ ಸೇವನೆಯ ಔಷಧವೆಂದು ಹೇಳಬಲ್ಲೆವು; ಮತ್ತು ಅದಕ್ಕಾಗಿ ನಾವು ನಿಮ್ಮನ್ನು ವಂದಿಸುತ್ತೇವೆ.

ಗುಡ್ ಷೆಫರ್ಡ್ ಆಸ್ಪತ್ರೆ ಸಹೋದರಿಯರು.

ಶೀತವು ಶರೀರದಲ್ಲಿ ಬೇರೂರಿತೆಂದರೆ ಅದನ್ನು ಹೋಗಲಾಡಿಸುವುದು ತುಂಬಾ ಕಷ್ಟವಾದೀತು.

ಇದು ಶರೀರವನ್ನು ಹಿಡಿಯುವಂಥಾ, ದೇಹದ ಅಂಗಾಂಗಗಳಿಗೂ ವ್ಯಾಪನೆಯಾಗುವಂಥಾ ಔಷಧವಾದ್ದರಿಂದ ಅದನ್ನು ಬಹಳ ಆಗತ್ಯವಾಗಿ ಉಪಯೋಗ ಮಾಡಬೇಕಾಗಿರುತ್ತದೆ

ಪೆರೂನಾ ಅಂಥಾ ಒಳ್ಳೆಯ ಔಷಧವಾಗಿರುತ್ತದೆ ಅದು ದೇಹದೊಳಗಿರುವ ಕಾಯಿಲೆಯ ಪ್ರವೇಶವನ್ನು ಹುಡುಕಿ ಹಿಡಿಯುವುದು ಒಳಚರ್ಮವನ್ನು ಗುಣಪಡಿಸಿ ಗಟ್ಟಿಮಾಡುವುದು ಅದರ ಮೇಲೆ ಶರೀರಸೌಖ್ಯವು ತಾನಾಗಿ ಹಿಂತಿರುಗಿ ಬರುತ್ತದೆ

ಶೀತದಿಂದ ಬಹಳ ಕಠಿಣವಾದ ಹಳೇರೋಗಿಗಳನ್ನು ಇಟ್ಟು ಇಲಾಜು ಮಾಡಿ ವಾಸಿಮಾಡಿದ, ಅನೇಕ ಆಸ್ಪತ್ರೆಗಳ ಪೈಕಿ ಸೆಂಟ್ ಜಾನ್ ಎಂಬುವುದು ಒಂದಾಗಿರುತ್ತದೆ ಈ ಆಸ್ಪತ್ರೆಯವರು ಬರೆಯುವುದನ್ನು ನೋಡಿ.—

„ ನಿಮ್ಮ ಪೆರೂನಾವು ನಮಗೆ ತುಂಬಾ ತೃಪ್ತಿಕರವಾಗಿದೆ ಎಂದು ತಿಳಿಸಲು ಸಂತೋಷವುಳ್ಳವರಾಗಿದ್ದೇವೆ ಮೂವರು ರೋಗಿಗಳು ಈ ಔಷಧವನ್ನು ಉಪಯೋಗಿಸಿದರು. ೬೮ ವರುಷ ವಯಸ್ಸಾದ ರನೋಯ ಡ್ಯೂಪ್ರೇಯಸ್ ಎಂಬುವನು ಶೀತಹಿಡಿದು ಬಹಳ ಕಷ್ಟಪಡುತ್ತಿದ್ದನು ಈಗ ಅವನು ತುಂಬಾ ಸೌಖ್ಯವಾಗಿದ್ದಾನೆ ಇಷ್ಟು ಮಟ್ಟಿಗೆ ಅವನು ಅನೇಕ ವರುಷಗಳಿಂದ ಆರೋಗ್ಯವಾಗಿರಲಿಲ್ಲ

„ ಹದಿನೈದು ವರುಷದ ಒಬ್ಬ ಹುಡುಗಿಗೆ ಬಹು ಕಠಿಣವಾದ ಕೆಮ್ಮಲು ಹಿಡಿದಿತ್ತು. ಅವಳಿಗೆ ಪೆರೂನಾವನ್ನು ಅರ್ಧ ಶೀಸೆ ಕೊಡುವುದರಲ್ಲೇ ಆ ಕೆಮ್ಮಲು ಅದೃಶ್ಯವಾಯಿತು.

„ ನನ್ನ ವಿಷಯವನ್ನು ಹೇಳುತ್ತೇನೆ. ಎರಡು ಬಾಟ್ಲಿ ಔಷಧವನ್ನು ತೆಗೆದುಕೊಳ್ಳುವಷ್ಟರಲ್ಲೇ ಪೆರೂನಾ ಬಹು ಅದ್ಭುತವಾದ ಬಲವನ್ನು ಕೊಡುವ ಔಷಧವೆಂದು ನನಗೆ ಪರಿಷ್ಕಾರವಾಗಿ ತಿಳಿದು ಬಂದಿದೆ.

„ ಇದನ್ನು ಸೇವಿಸುವುದಕ್ಕೆ ಮುಂಚೆ ನಾನು ಕಾಲುನಂಬಿ ಹೊತ್ತು ನಡೆಯುವುದಕ್ಕೂ ಆಗದೆ ಉಬ್ಬಸಪಡುತ್ತಿದ್ದೆ. ಈಗ ನಾನು ಒಂದು ಮೈಲಿ ದೂರವಾದರೂ ಸುಲಭವಾಗಿ ನಡೆಯಬಲ್ಲೆನು

„ ಈ ಮೂರು ರೋಗಿಗಳ ಮೂಲಕ ನಿಮ್ಮ ಔಷಧವು ಬಹು ಫಲಕಾರಿಯಾದದ್ದೆಂದು ಸಕಲರಿಗೂ ತಿಳಿಯಪಡಿಸುತ್ತೇವೆ ”

ಸೆಂಟ್ ಜಾನ್ ಆಸ್ಪತ್ರೆ, ಕ್ವೀಬೆಕ್.

ಮೇಲ್ಕಂಡ ಆಸ್ಪತ್ರೆಯಿಂದ ಈಚೆಗೆ ಬಂದಿರುವ ಕಾಗದವು ಈ ರೀತಿಯಾಗಿ ಹೇಳುತ್ತದೆ:—

„ ಪೆರೂನಾವು ನಮಗೆ ಎಷ್ಟು ತೃಪ್ತಿಯನ್ನು ಕೊಟ್ಟಿತೋ ಮೂರು ವಾರಗಳ ಕೆಳಗೆ ನಿಮಗೆ ಬರೆದು ತಿಳಿಸಿರುತ್ತೇವೆ. ಅದನ್ನು ಶೀತ, ವಾತ, ಕೆಮ್ಮು, ಅರತಲೆ ನೋವು ಈ ಮೊದಲಾದ ರೋಗಗಳಿಗೆ ಪ್ರಯೋಗಮಾಡಬಹುದೆಂದು ಶಿಫಾರಸು ಮಾಡುತ್ತೇವೆ.

„ ನಾನು ಅದನ್ನು ಶಕ್ತಿಪುಷ್ಟಿಗಾಗಿ ಸೇವಿಸಿರುತ್ತೇನೆ ಅದರಲ್ಲಿ ಹೇಳಿರುವ ಪ್ರಕಾರ ಪ್ರತಿ ಅರ್ಧಗಂಟೆಗೂ ಅರ್ಧ ಚಮಚದಷ್ಟು ತಗೆದುಕೊಂಡೆನು ”

ಮಿಸೆಸ್ ಎಟ್ಟಾ ಬೂಕಾರ್, ಡಂಡರ್ಗ, ಸಾಸ್ಕ್, ಎನ್ ಡಬ್ಲ್ಯು ಟಿ ಕೆನಡಾ ಈಕೆ ಬರೆಯುವುದೇನೆಂದರೆ —

„ ನಾನು ಕಿಬ್ಬೊಟ್ಟೆಯಲ್ಲಿ ಶೀತವಾಯು ಹಿಡಿದು ಬಾಧೆಪಡುತ್ತಿದ್ದು, ಕಡೆಗೆ ಡಾಕ್ಟರ್ ಹಾರ್ಟ್‌ಮಾನರವರಿಗೆ ಬರೆದು ಕೇಳಿದೆನು. ಅವರು ಹೇಳಿದ ಪ್ರಕಾರ ಔಷಧವನ್ನು ತೆಗೆದುಕೊಳ್ಳುತ್ತಾ ಬಂದೆನು ಈಗ ಆ ಕಷ್ಟಕರವಾಗಿದ್ದ ಬಾಧೆಯು ನನಗೆ ನಿವಾರಣೆಯಾಗಿ ಸೌಖ್ಯವಾಗಿದೇನೆ ಮತ್ತು ನಾನು ಅದಕ್ಕಾಗಿ ತುಂಬಾ ಕೃತಜ್ಞಳಾಗಿರುವೆನು. ಪೆರೂನಾವು ಶೀತವಾಯುವಿಗೆ ಸರ್ವೋತ್ತಮವಾದ ಔಷಧವೆಂದು ನಾನು ತಿಳಿದಿದೇನೆ ಈಗ ನನಗಿರುವಷ್ಟು ದೇಹಸೌಖ್ಯವು ಹಿಂದೆ ಯಾವಾಗಲೂ ಇರಲಿಲ್ಲ ”

ಪೆರೂನಾವು ಕೆಮ್ಮನ್ನು ಶೀತವಾತಗಳನ್ನೂ ಪ್ರಾರಂಭದಲ್ಲೇ ಬೇಗನೆ ಗುಣಮಾಡುವುದಲ್ಲದೆ ಬಹಳ ದೀರ್ಘಕಾಲದ ಶೀತವಾತ ರೋಗಗಳನ್ನೆಲ್ಲಾ ಚನ್ನಾಗಿ ವಾಸಿಮಾಡಬಲ್ಲದು

ಆದರೂ ರೋಗ ಹುಟ್ಟಿದ ಪ್ರಾರಂಭದಲ್ಲಿ ಬಹಳ ಸ್ವಲ್ಪ ಔಷಧವನ್ನು ಸೇವಿಸಿದ ಮಾತ್ರಕ್ಕೇ ಅದು ನಿವಾರಣೆಯಾಗುತ್ತದೆಂತಲೂ ರೋಗವು ಹಳೆಯದಾದ ಮೇಲೆ ಬಹಳ ಔಷಧವನ್ನು ಸೇವನೆ ಮಾಡಬೇಕಾಗುತ್ತದೆಂತಲೂ ನಾವು ಹೇಳಬೇಕಾದ ಅಗತ್ಯವಿಲ್ಲ

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

21—8—1908 ರಿಂದ 28—8—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	58	45	0	0
ಮೈಸೂರು ,,	81	58	0	0
ಕೋಲಾರ್ ,,	30	17	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟ್	19	12	3	1
ಹಾಸನ ,,	41	34	0	0
ಚಿತ್ರದುರ್ಗ ,,	0	0	0	1
ಕಡೂರ್ ,,	85	56	5	1
ಶಿವಮೊಗ್ಗ ,,	8	7	0	0
ಜುಮ್ಲಾ.	322	228	8	[illegible]

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಭಾದ್ರಪದ ಶುದ್ಧ ಪೌರ್ಣಮಿ ಗುರುವಾರದಿಂದ ಭಾದ್ರಪದ ಬಹುಳ ಷಷ್ಟಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಸೆಪ್ಟಂಬರ್.

ತಾ.	ವಾರ	ತಿಥಿ.	ಘಳಿಗೆ.	ನಕ್ಷತ್ರ,	ಘಳಿಗೆ	ತೇದಿ ಸಿಂಹ ಶಕ
10	ಗುರು ¶	ಪೌರ್ಣಮಿ	29·48	ಶ	11 10	26
11	ಶುಕ್ರ ,,	ಪಾಡ್ಯ	24·2	ಪೂಭಾ	7 8	27
12	ಶನಿವಾ ;;	ಬಿದಿಗೆ	18·40	ಉತ್ತಭಾ	3·25	28
13	ರವಿವಾ	ತದಿಗೆ	13·42	ರೇ	0·12	29
14	ಚಂದ್ರ *	ಚೌತಿ	9·30	ಭ	56·26	30
15	ಕುಜ †	ಪಂಚಮಿ	6·22	ಕೃ	56·2	31
16	ಬುಧ ‡	ಷಷ್ಟಿ	4·30	ರೋ	56·50	1

¶ ಉಪಾಕರ್ಮೇಶ್ವರವ್ರತಂ, ಯಜುರ್ವೇದ ಪ್ರಥಮೋಪಾಕರ್ಮ. ,, ಅಪರಪಕ್ಷಾರಂಭ ;; ತಿಥಿದ್ವಯಂ, ಮಹಾಲಯ, ಪ್ರೇತದ್ವಿತೀಯಾ * ಮಹಾಭರಣಿ + ದಗ್ಧಯೋಗ ‡ ಷಡಶೀತಿಪುಣ್ಯಕಾಲ

ಪೇಟೇ ಧಾರಣೆ.

ದಿನಸು		ಮೈಸೂರು	ಬೆಂಗಳೂರು
ಕಪ್ಪೇ ಅಕ್ಕಿ ಪಲ್ಲ ೧ಕ್ಕೆ	ರೂ.	೧೫-೦-೦	೧೩-೦
ಕಂಬುಸಿತ ಅಕ್ಕಿ ಅವಲ್		೧೫-೮-೦	೧೩-೮
,, ೯ ನಂ		೧೪ ೪-೦	೧೩-೦
ಸಾಂಬ್ರಾಣಿ ಅಕ್ಕಿ		೧೫ ೦ ೦	೧೫-೮
ಸನ್ನಕ್ಕಿ ಅವಲ್		೧೩-೦-೦	೧೮-೦
,, ಮಧ್ಯಮ		೧೨-೮-೦	೧೨-೦
ತೊಗರಿ ಬೇಳೆ ಪಲ್ಲ ೧ಕ್ಕೆ		೧೩-೦-೦	೧೩-೦
,, ಮಧ್ಯಮ		೧೫-೮-೦	೧೫-೮
ಸ್ಸೆ ರಾಗಿ ಪಲ್ಲ ೧ಕ್ಕೆ		೩ ೪-೦	೩ ೧೦
ಕಾರಾಗಿ		೩-೪-೦	೩-೪
ಜೋಳ		೩-೦-೦	೮-೮
ಅಲಸಂದೆ ಪಲ್ಲ ೧ಕ್ಕೆ		೧೧ ೮ ೦	೧೦-೦
ಬಿಳೀ ಅವರೆ		೮-೮-೦	೯-೦
ಹೆಸರು		೧೧ ೮-೦	೧೨-೮
ಉದ್ದು		೧೪-೦-೦	೧೨-೪
ಕಡಲೆ		೧೪ ೮ ೦	೧೪ ೮
ಎಳ್ಳು ಪ ೧ಕ್ಕೆ		೧೯-೦-೦	೨೨-೦
ಹುರುಳಿ		೭-೦-೦	೭-೪
ಹರಳು ೧ ಪಲ್ಲ ಸೇರಿಗೆ		೧೧-೮-೦	೧೧-೦
ಸೀಗೇಕಾಯಿ ಮಣ ೧ಕ್ಕೆ		೧-೮-೦	೧-೩
ಮೆಣಸಿನಕಾಯಿ		೪-೪-೦	೪-೦
,, ಮಧ್ಯಮ		೩-೪-೦	೩-೮
ಬೆಲ್ಲ ದೊಡ್ಡ ಅಚ್ಚು		೪ ೦-೦	೫-೪
ಒಳ್ಳೆಣ್ಣೆ ಮಣ ೧ಕ್ಕೆ		೫-೮-೦	೩-೦
ಹರಳೆಣ್ಣೆ ,,		೪-೧೨-೦	೪-೦
ಕೊತ್ತುಂಬರಿ ಪಲ್ಲ ೧ಕ್ಕೆ		೩-೧-೦	೩ ೮
ಉಪ್ಪು ,,		೪-೮-೦	೫ ೬
ಹುಣಸೇ ಹಣ್ಣು		೧-೪-೦	೧ ೩
,, ಹಳೇದು		೧-೦ ೦	೧ ೫
ತುಪ್ಪ ಮಣ ೧ಕ್ಕೆ		೧-೪೮ ೦	೧೫ ೮
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೪-೧೨-೬	೪ ೦
ತೆಂಗಿನಕಾಯಿ ೧೦೦ಕ್ಕೆ		೪-೦-೦	೩ ೦
ಅಳಲೇಕಾಯಿ ಮಣ ೧ಕ್ಕೆ		೦-೮-೦	೦-೧೨
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨-೦	೦-೧೪
ಚಿನ್ನ (ಪೌನ್) ಕಂಠಿ		೧೫-೩-೦	೧೫-೩
,, ,, ಪಸಿಮೆ		೧೫-೧೧-೦	೧೫-೧೨
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೪ ೩
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೩೫-೦-೦	೩೫-೩

Printed and Published by the Rev. E. W. Thompson, M. A., Proprietor and Manager, Wesleyan Mission Press, Mysore. 10/9/1908.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೮ ನೇ ಇಸವಿ ಸೆಪ್ಟೆಂಬರ್ ತಾರೀಖು ೧೭ ನೇ ಗುರುವಾರ. ಸಂಚಿಕೆ ೧೬

ಮಹಾ ಬಾಧಾಪಹಾರಿಣಿಯು.

42-17

ಇದನ್ನು ಹೋಲುವಂಥದು ಪ್ರಪಂಚದಲ್ಲೇ ಇಲ್ಲವು.

ಶ್ರೀ ಪೆಂಟ್ಟ್ಯಾವರ ಪ್ರಸಿದ್ಧ ಲೇಪನವು ಸಕಲ ವಿಧವಾದ ಬಾಧೆಗಳನ್ನೂ ಪರಿಹರಿಸತಕ್ಕದ್ದೆಂದು ಡಾಕ್ಟರುಗಳು, ವರ್ತಕರು, ಶಾಸ್ತ್ರಜ್ಞರುಗಳು, ಈ ಮೊದಲಾದ ಅನೇಕರು ಒಪ್ಪಿ ಹೇಳುತ್ತಿದ್ದಾರೆ. ಈ ರಸಾಯನವನ್ನು ಲೇಪನಮಾಡಿದ ಮಾತ್ರಕ್ಕೇ ತಲೆನೋವು, ವಾಯುನೋವು, ಕಳಿತ, ಗಂಟ್ಲುನೋವು, ಪಾರ್ಶ್ವವಾಯು, ನಾನಾವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳುಕಡಿದ ನೋವು, ಹಲ್ಲುನೋವು ಮುಖ್ಯವಾಗಿ ಎಲ್ಲಾ ವಿಧವಾದ ದೇಹದ ಅಂಗಾಂಗಗಳಲ್ಲಿ ಹುಟ್ಟುವ ನೋವುಗಳೂ ಖಂಡಿತವಾಗಿ ನಿವಾರಣೆಯಾಗುತ್ತವೆ. ಶ್ರೀ ಪೆಂಟ್ಟ್ಯಾವರ ಈ ಅಮೋಘವಾದ ತೈಲವು ನೋವಿರುವ ಸ್ಥಳದ ಮೂಲಸ್ಥಾನವನ್ನು ವ್ಯಾಪಿಸಿ, ಅದರ ಹುಟ್ಟನ್ನೇ ಅಡಗಿಸಿಬಿಡುತ್ತದೆ. ಬಹುಮಂದಿ ಪ್ರಮಾಣಿಕರು ಇದಕ್ಕೆ ಹೋಲುವ ತೈಲವು ಬೇರೊಂದಿಲ್ಲವೆಂದು ಹೊಗಳಿರುತ್ತಾರೆ.

ಕ್ರಯ ಸೀಸೆ ೧ ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಅದರ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇಸಲ ತರಿಸಿಕೊಳ್ಳುವಹಾಗಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೭, ವೀರಮಲೆಪೆಳ್ಳೆ ಬೀದಿ, ಪೇಟೆ, ಮದರಾಸ್.

AMRUTANJAN DEPOT, 16 OAK-LANE, BOMBAY. [17-30]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ :—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮ್ ಮತ್ತು ಘಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ ಕ್ಕೆ ಕಿಮ್ಮತು ೦-೮-೦. ಪೋಸ್ಟು ಖರ್ಚು ೦-೪-೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಖಜ್ಜಿ ನಗ್ಯೆರೆ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦-೪-೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ—ಅಜೀರ್ಣಕ್ಕೆ ಡಬ್ಬಿ ೧ ಕ್ಕೆ	೧—೪—೦	ಕಾಮುದಪಾಚಿಗುಟಿಕ—ಹೆಂಗಸರ ಹೊಟ್ಟೆನೋವಿಗೆ	೧—೦—೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧—೦—೦	ಪ್ರಮೇಹದ ಮಿಶ್ರಣ—ಪ್ರಮೇಹಕ್ಕೆ	೧—೦—೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ ಕ್ಕೆ	೦—೧೨—೦	ಕಫಹರಿ—ಕಫ, ಕೆಮ್ಮು ಕ್ಷಯ, ಇತ್ಯಾದಿ	೧—೪—೦
ಚೇಳುಕಚ್ಚಿದ ಮದ್ದು	೦—೮—೦	ಸುಂದರೀ ತೈಲ್ಯ—ಮೋರೆಗೆ	೦—೮—೦
ದಂತಶೂಲಹರಿ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಕರ್ಣಶೂಲಹಾರಿ—ಕಿವಿನೋವಿಗೆ	೦—೬—೦	ಅರಿನಾಶಕ್ ಎಂಬ ಬಾಟ್ಲಿ ೧ ಕ್ಕೆ	೦—೮—೦
ಖಜ್ಜಿಯ ಮುಲಾಮು	೦—೩—೦	ಪಾಚಕ ಮಿಶ್ರಣ ,,	೧—೦—೦
ದಂತಮಂಜನ—ಹಲ್ಲುಗಳಿಗೆ	೦—೨—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
ಕೇಶವರ್ಧಿನೀ ತೈಲ್ಯ—ಕೂದಲಿಗೆ	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕ	೦—೮—೦
ಜುಲಾಬು ಮಾತ್ರೆ—ವಿರೇಚನಕ್ಕೆ	೦—೮—೦	ರೋಮಹಾರಿ	೦—೮—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ.

ಜ್ವರಹರಿ. 64-7

ಇದು ಸಾಧಾರಣ ಜ್ವರ, ಚಳೀಜ್ವರ, ಮೂರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖೆ ಸಬ್ ಡಿವಿಜನ್ ಆಫೀಸರು ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ ; ೧—೮ ರೂ., ರೂ. ೨—೧೨ ಆ. ; ೧೧ ರೂ. ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫ ಬಿಡಲಾಗುವದು.

* * * * * * * * *

ಅಮೃತ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯವು ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರೆಯುವದು.

ಕಡಪ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯಟ್ಟಾ ಕರ್ಪೂರವನ್ನು ನಾನೂ ನನ್ನ ಕಾಟೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಬೇಧಿ, ಅಜೀರ್ಣ ರೋಗಿಸ್ಥರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಆದ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವೆಂದು ಬರೆದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆನ್ರಿಯಟ್ಟಾ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-31

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚುಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸುಡಾಗಳ ನೋವು, ಮೈ ಕೈಕಾಲು ಕೊಡತ (ಘಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಸಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಬೆಗೂ ಪಾರಿಕೊಡದೆ, ನೀರು ನವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಚ್ಚುಜ್ವರ, ಕೃಕೃತ್ಯಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಕೊಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ :—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

53-12

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಡೂಳಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ಐದು ಆಣೆಯಿಂದ ೩೦ ಆಣೆ ವರಿವಿಗೂ ಚಿಲ್ಲರೆಯಾಗಿ ಯರ್ಬಳಿ ಟಕ್ಕಾಗಿ ಯಾಗಲೀ ಮಾರಲ್ಪಡುತ್ತವೆ. ಶಾಲುಗಳು, ಜಾಕಸದ ಟೋಪಿಗಳು, ಮಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ ರೂ ೧—೧೪—೦

,, .. ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪ್ರತಿ ಬರುವ ಪತ್ರಿಕೆಯ ವಿಳಾಸದಲ್ಲಿ ಎತ್ತಿಹಾಕಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

6 ರೂಪಾಯಿಗಳ ಗಡಿಯಾರಕ್ಕೆ 56 ಸಾಮಾನುಗಳು ಇನಾಮು ಕೊಡಲ್ಪಡುವದು.

73-2

ವಜ್ರಕಲ್ಲುಗಳನ್ನು ಕಾಟಿಸಲ್ಪಟ್ಟ ನಿಕ್ಕಲ್ ಬೆಳ್ಳಿ ಗಡಿಯಾರವು.

ಈ ಸ್ವಿಸ್ ಲೀವರ್ ಗಡಿಯಾರವು ಸಾಧಾರಣ ಸಿಲಿಂಡರ್ ಗಡಿಯಾರಕ್ಕಿಂತಲೂ ಕೆಂಪುಗಳು ಇರುವದೂ ಅಲ್ಲದೆ ಲೀವರ್ ಗಡಿಯಾರವು ಬಹಳ ಶ್ರೇಷ್ಠವಾದದ್ದೆಂದು ಎಲ್ಲರೂ ತಿಳಿದಿರುತ್ತೇವೆ. ಇದು

ಬಹಳ ಘಟ್ಟಿಯಾಗಿಯೂ, ಕಾಂತಿಯಾಗಿಯೂ, ಶೃಂಗಾರವಾಗಿಯೂ ಅಜಾಗ್ರತೆಯಾಗೂ ಉಪಯೋಗಿಸಲಿಕ್ಕೆ ತಕ್ಕ ಗಡಿಯಾರವಾಗಿಯೂ ಇದೆ. ಬಹುಮಾನಗಳು:— ನಡುವಿನಲ್ಲಿ ಕಟ್ಟಿಕೊಳ್ಳುವ ವಿಲಾಯತಿ ಬೆಲ್ಟು, ಸವಳದ ಉಂಗರ, ಜರ್ಮನಸಿಲ್ವರ್ ಗಡಿಯಾರ ಸರಪಣಿ, ರಾಜಾರಾಣಿ ಕೆಂಪಸ್, ದುಡ್ಡು ಕಾಸು ಹಾಕಿಕೊಳ್ಳುವ ಹಣದ ಚೀಲ, ಎರಡು ವರ್ಷಗಳ ಪಂಚಾಂಗವು ಕನ್ನಡಿಯೂ ಉಳ್ಳ ಪುಸ್ತಕ, ಹೆಂಗಸರು ತಲೆಯಲ್ಲಿಟ್ಟುಕೊಳ್ಳುವ ಬುಹ್ವೆ, ಮುಖ ನೋಡುವ ಚಿತ್ರಕೆಲಸದ ಕನ್ನಡಿ, ಗಡಿಯಾರ ಇಟ್ಟುಕೊಳ್ಳುವ ತೊಗಲಿನ ಸಂಚಿ, ಗಡಿಯಾರದ ರೇಷ್ಮೆ ದಾರ, 8 ಆಭರಣಗಳನ್ನಿಟ್ಟುಕೊಳ್ಳುವ ಚಿತ್ರದ ಪೆಟ್ಟಿಗೆಗಳು, ಕತ್ತರಿಕೋಲು, ಪೇನಾಕತ್ತಿ, ಸೀಮೆ ಬಾಟಲ್, ಕೈಗಟ್ಟಿ, ಸಂದೋಚನ, ಲೇಡಿಸಟವು, ದಂತದ ಹಣಿಗ, ಕಯು ನಕ್ಷ ಪೀಸ, ವಾಸನೆ ದ್ರವ್ಯ ಬುಡ್ಡಿ, ಬೀಗದ ಉಂಗುರ, ಸ್ಫಟಿಕದ ಕನ್ನಡಿ, ಹೇರ್ ಸ್ಪ್ರಿಂಗ್, ವೆಲ್ವೆಟ್ಟು ಪಟ್ಟಿಗೆ, ಮೇಲಾದ ಪೆನ್ಸಿಲ್, ಟೀ ಸ್ಪೂನ್, ಸೊಗಸಾದ ಷರ್ಟ ಬೊತ್ತಾಸುಗಳು, 20 ಅಂದವಾದ ಕಾರ್ಡುಗಳು, ಸ್ವದೇಶೀ ಪೇನಾ, ಸೋಪು. ನಮ್ಮ ವಿಳಾಸ—

ಮದರಾಸ್ ಸೊಸೈಟಿ ವಾಚ್ ಡಿಪ್ಪೋ,
ಪಾರ್ಕ್ ಟೌನ್, ಮದ್ರಾಸ್.

ನರಳುವ ನಮ್ಮ ಸಹೋದರರ ಮೇಲಣ ವಾತ್ಸಲ್ಯದಿಂದ ಕ್ರಯಗಳನ್ನು ಬಹುಮಟ್ಟಿಗೆ ಕಡಮೆ ಮಾಡಿದೆ.

69 8

ಅದ್ಭುತವಾದ ಔಷಧಗಳು: ನಮ್ಮ ಸತ್ಯತೆಯನ್ನು ಪರೀಕ್ಷಿಸಿ ನೋಡಿ. ದಿವ್ಯತರದ ಔಷಧಗಳು.

೧. ಘಟಾಲಾ ನೋವುಹರ—ಇದನ್ನು ಹಚ್ಚಿದ ಮಾತ್ರಕ್ಕೆ ಕೆಮ್ಮು, ತಲೆನೋವು, ನಾಯು ನೋವು, ಸಂಧಿ ನಡು ಎದೆ ಕಳತ, ಸರ್ವಾಂಗಗಳ ಬಾಧೆಗಳೂ ನಿವಾರಣೆಯಾಗುವವು ಕ್ರಯ ೮ ಆಣೆ.

೨ ಘಟಾಲಾ ಪ್ರಖ್ಯಾತವಾದ ಸುವಾಸನೆಯುಳ್ಳ ಕೇಶತೈಲ—ಬೋಳು ತಲೆ, ಸೊಗಡು, ಹೊಟ್ಟು, ತೀನಸು ಎಲ್ಲಾ ಹೋಗಿ, ತಲೆಯು ನೆಂದಳಿಸ ತಂಪಾಗಿ, ಕೋಮಲವಾದ ಕೂದಲು ಅಪಾರವಾಗಿ ಬೆಳೆಯುವುದು ಕ್ರಯ ೮ ಆಣೆ

೩. ಘಟಾಲಾ ಪಾಳಕಡ್ಡಿ ಹರ—ಇದನ್ನು ಮೇಲೆ ಹಚ್ಚುವುದರಿಂದ ಖಂಡಿತವಾಗಿ ಸಮೂಲವಾಗಿ ವಾಸಿಮಾಡುವುದು. ಕ್ರ. ೪ ಆ.

೪. ಘಟಾಲಾ ಚೇಳು ಕಡಿದ ವಿಷಹರ—ಕಡಿದ ಸ್ಥಳಕ್ಕೆ ಒಂದೆರಡು ಬೊಟ್ಟುಗಳನ್ನು ಹಾಕಿದ ಒಡನೆಯೇ ವಾಸಿಮಾಡುವುದು. ೪ ಆ.

೫. ಘಟಾಲಾ ಹಲ್ಲುಪುಡಿ—ಹಲ್ಲಿನ ನೋವು ವಾಸಿಮಾಡಿ ಕೊಳೆ ತೆಗೆದು ಗಟ್ಟಿಮಾಡುತ್ತದೆ. ಕ್ರಯ ೪ ಆಣೆ.

೬. ಘಟಾಲಾ ಉಬ್ಬಸಹರ—ಇದುವರೆಗೆ ವಾಸಿಯಾಗದೆ ಇರುವ ಉಬ್ಬಸದ ದಾಸ್ಯವನ್ನು ಇದು ವಾಸಿಮಾಡುವುದು. ಕ್ರಯ ೧೨ ಆಣೆ.

೭. ಘಟಾಲಾ ಕೂದಲ ಬಣ್ಣ—ಬಿಳೀ ಕೂದಲನ್ನು ಕಪ್ಪುಮಾಡುತ್ತದೆ. ಸಾವಿರಾರು ಜನರು ಇದರ ಗುಣವನ್ನು ಹೊಗಳಿದಾರೆ ೮ ಆ.

೮. ಘಟಾಲಾ ಮೂತ್ರರೋಗಹರ—ಕ್ರಯ ೮ ಆಣೆ

೯. ಘಟಾಲಾ ಮುಖಕಾಂತಿ ಪುಡಿ—ಮುಖದ ಮಚ್ಚೆ ಗುಳ್ಳೆ ಮೊದಲಾದ್ದನ್ನು ತೆಗೆದು ಚರ್ಮಕ್ಕೆ ಸೌಂದರ್ಯಕೊಡುತ್ತೆ ೬ ಆ.

೧೦. ಘಟಾಲಾ ಹುಚ್ಚುಹರ—ಇದು ಎಲ್ಲಾ ತರದ ಚಿತ್ತಭ್ರಮಣೆಯನ್ನೂ ವಾಸಿಮಾಡುವುದು ಕ್ರಯ ೮ ಆಣೆ.

೧೧. ಘಟಾಲಾ ಪಿತ್ತ ಕಫಹಾರಿ—ಬ್ಯವನ್ನು ವಾಸಿಮಾಡಿ, ಆಹಾರ ರುಚಿಸಿ ಪಚನವಾಗುವಂತೆ ಮಾಡುತ್ತೆ ಕ್ರಯ ೮ ಆಣೆ.

೧೨ ಘಟಾಲಾ ಜ್ವರನಾಶಿನಿ—ಎಲ್ಲಾ ತರದ ಜ್ವರಗಳನ್ನೂ ವಾಸಿಮಾಡುವುದು. ಕ್ರಯ ೮ ಆಣೆ

೧೩ ಘಟಾಲಾ ರಕ್ತಪರಿಹಾರಿಣಿ—ಎಲ್ಲಾ ಚರ್ಮ ರೋಗಗಳಿಗೂ ವಿಶೇಷವಾಗಿ ಕುಷ್ಠವೂ ಗುಣವಾಗುವುದು. ಕ್ರಯ ೧೨ ಆಣೆ.

೧೪ ಘಟಾಲಾ ಕಾಲರಾ ಹಾರಿಣಿ—ಕ್ರಯ ೮ ಆಣೆ.

೧೫. ಘಟಾಲಾ ಕಿವಿ ನೋವು ಹಾರಿ—ಕಿವುಡೂ ವಾಸಿಯಾಗುತ್ತೆ. ಕ್ರಯ ೮ ಆಣೆ.

೧೬. ಘಟಾಲಾ ಕೆಮ್ಮಿನ ಔಷಧ—ಕ್ರಯ ೮ ಆಣೆ.

೧೭. ಘಟಾಲಾ ಆಮಶಂಕೆ ಔಷಧ—ಕ್ರಯ ೮ ಆಣೆ.

೧೮. ಘಟಾಲಾ ಪಾರ್ಶ್ವವಾಯು ಹರ—ಕ್ರಯ ೧೨ ಆಣೆ.

೧೯. ಘಟಾಲಾ ವಾಯುಹಾರಿಣಿ—ಕ್ರಯ ೮ ಆಣೆ.

೨೦. ಅನೇಕಾಲು ರೋಗಕ್ಕೆ ಔಷಧ—ಕ್ರಯ ರೂ ೧.

ಐದು ರೂಪಾಯಿಗಿಂತ ಹೆಚ್ಚು ಔಷಧ ಕೊಂಡರೆ ರೂಪಾಯಿಗೆ ೧ ಆಣೆಯಂತೆ ಡಿಸ್ಕೌಂಟು. ಹತ್ತು ರೂಪಾಯಿಗಿಂತ ಹೆಚ್ಚಿನದಕ್ಕೆ ೧॥ ಆಣೆಯಂತೆ ಡಿಸ್ಕೌಂಟು. ಇಪ್ಪತ್ತು ರೂಪಾಯಿಗಿಂತ ಹೆಚ್ಚಿನದಕ್ಕೆ ಶೇಕಡಾ ೧೦ ರಂತೆ ಡಿಸ್ಕೌಂಟು. ಈ ರೀತಿ ನಾವು ಕೊಡುವೆವು.

ಇದಲ್ಲದೆ, ಎಲ್ಲಾ ವಿಧವಾದ ರೋಗಗಳಿಗೂ ನಮ್ಮಲ್ಲಿ ಖಾತರಿಯಾದ ಒಳ್ಳೇ ಔಷಧಗಳು ಅಪಾರವಾಗಿ ದೊರಕುವವು ಮೇಲ್ಕಂಡ ಔಷಧಗಳಿಂದ ಆಯಾ ರೋಗಗಳು ಖಂಡಿತವಾಗಿ ವಾಸಿಯಾಗುತ್ತವೆಂಬ ಭಾಗದಲ್ಲಿ ನಾವು ಜಾಮೀನುದಾರರಾಗಿದ್ದೇವೆ ವಾಸಿಯಾಗದೆ ಹೋದರೆ ಹಣವನ್ನು ಖಂಡಿತ ವಾಪಸು ಕೊಡುತ್ತೇವೆ. ನಮ್ಮ ವಿಳಾಸ:—

ಎಂ. ಎ. ಘಟಾಲಾ ಮತ್ತು ಕಂಪೆನಿ,
ಚಿತ್ತೂರು, ಉತ್ತರ ಆರ್ಕಾಟು.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



ಬೆನ್ನೆಲುಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಬಂತಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಎಳೆಯುವ ಜಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿಸ್ಸಹಾಯದೆ ಇರುವುದು.—ಇವೇ. ಇದೆಲ್ಲಾ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಯೊಳಗೆಲ್ಲಾ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಆದಷ್ಟೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಗುಟ್ಟನ್ನೇ ಕಿತ್ತು ಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ಸ್ವದೇಶೀ ನೆಯ್ಗೆ ನೂಲು ಬೇಕೋ?

71-3

ಪ್ರಸಿದ್ಧವಾದ ಬೊಂಬಾಯಿ ಸ್ವದೇಶೀ ಮಿಲ್ಸ್ ಎಂಬ ಕಾರಖಾನೆಯಲ್ಲಿ ತಯಾರಾಗುವ ನಂಬರ್ ವಾರ್ ನೂಲುಗಳಿಗೆ ನಾವು ಆರ್ಡರ್ ತೆಗೆದುಕೊಂಡು ತರಿಸಿಕೊಡಲು ಅಧಿಕಾರ ಹೊಂದಿರುತ್ತೇವೆ. ನೂಲಿನ ನಮೂನೆ ದರ ಮುಂತಾದ ತಪಸೀಲನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಎಂ. ಸೂರ್ಯನಾರಾಯಣಪ್ಪ,

ಕಮಿಷನ್ ಮತ್ತು ಜನರಲ್ ಏಜನ್ಸಿ, ಶಿವಮೊಗ್ಗ.

ನಿಮಗೆ ಸುಪೀರಿಯರ್ ಉಲ್ ಬೇಕೇ?

ನಿಮಗೆ ದಪ್ಪದ ಉಲ್ ಬೇಕೇ?

117 48

೧೦ ಟೋಪಿ ಯಾಗುವ ಸುಪೀರಿಯರ್ ಉಲ್ ಬಂಡಲಿಗೆ ೩-೮-೦

ವಿಡಿಯಂ ಉಲ್ ಔನ್ಸು ೧ಕ್ಕೆ ೨-೮-೦

೧೦ ಟೋಪಿಯಾಗುವ ದಪ್ಪದ ಉಲ್ ಬಂಡಲಿಗೆ . . . ೩-೬-೦

ಸತ್ಯವಿಜಯ ಹೇರ್ ಆಯಿಲ್ ಶೀಸೆಗೆ ೧-೦-೦

ಪೋಲ್ಕಂಡವುಗಳನ್ನು ವಿ. ಪಿ. ಯಿಂದಲೂ ರವಾನಿಸುತ್ತೇವೆ

ವಿಳಾಸ-ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ಏನೇನು ನೋವು ಆಗದೆ

ಕೂದಲು ತೆಗೆಯುವ

ಬಾದಶಾಹೀ ಸಬಕಾರ.

70 8

ಬೇಕಾದ ಜಾಗದಲ್ಲಿ ಈ ಸಬಕಾರ ಹಚ್ಚಿದರೆ ಕೂದಲು ಬಹಳ ಸುಲಭವಾಗಿ ಹೋಗುತ್ತದೆ, ಮತ್ತು ತೊಗಲು ಮೆತ್ತಗೆ ಆಗುತ್ತದೆ. ಈ ಸಬಕಾರದಲ್ಲಿ ಸುಣ್ಣ ಮತ್ತು ಹರಿದಳ ಮುಂತಾದ ಕೆಟ್ಟ ಪದಾರ್ಥಗಳ ಮಿಶ್ರಣವೇನೂ ಇಲ್ಲಾ.

ಕಿಮ್ಮತ್ತು ೩ ವಡೆ ಇರುವ ೧ ಪೆಟ್ಟಿಗೆಗೆ ರೂ. ೧, ಪೋಸ್ಟೇಜು ೪ ಆಣೆ

ತಾ. ಕ.—ಪತ್ರವ್ಯವಹಾರ ಪೂರ್ಣವಿಳಾಸ ಕೊಟ್ಟು ಇಂಗ್ಲಿಷ್ ಭಾಷೆಯಲ್ಲಿ ಮಾಡಬೇಕು. ನಮ್ಮ ವಿಳಾಸ:—

ಟಿ. ಸಿ. ಮಹತ್ರಾ,

ಕಾಲಬಾದೇವಿ, ಮುಂಬಯಿ.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ.

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದಾರೆಂದು ಕಂಡ ಕೂಡಲೇ

SCOTT'S EMULSION. 33-25

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು.

ಅದು ಸಂತೋಷವೂ ಆನಂದವೂ ಜಡುವದಾಗಿ ಆಹಾರದ ರುಚಿ ಹೊಂದಿ ಸುಖ ಚೆನ್ನೆ ತೋರಿಸುವದು

ಕೈಯಿಂದ ಮುಟ್ಟ ತಯಾರಿಸಿದ್ದಲ್ಲ.

ಎಲ್ಲಾ ಔಷಧವ್ಯಾಪಾರಿಗಾರರಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನು ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ಕಳುಹಿಸುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೆಂದರೆ:—ಬೆನ್ನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ಬಹಳವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ತಲ್ಲಣಿಸುವುದು; ತಲೆನೋವು; ಗಾಬರಿ; ಕೆನ್ನ ಮೊಬ್ಬು; ಶಲೆ ತಿರುಗುವಿಕೆ; ಮೈನೋವು ಕೀಲುನೋವು; ಮರವು; ನಿತ್ರಾಣ; ಇವೇ ಮೊದಲಾದುವು. ಉಪೇಕ್ಷೆ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ಕಳುಹಿಸುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೧೦, ಬೊಂಬಾಯಿ.—ಇವರಲ್ಲಿ ದೊರೆಯುವುದು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

3 33

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಷಾದ, ಕೆಂಪು, ಕಪ್ಪು, ಬಿಳಿಕೆ, ಕಾಫಿ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.; ೧ ರೂ. ೪ ಆ.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೨ ರೂ.

ಉಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂಥಿಂಗ್ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ವೃತ್ತಾಂತ ಪತ್ರಿಕೆ.

೧೯೦೮ ನೇ ಇಸವಿ ಸೆಪ್ಟಂಬರ್ ತಾ|| ೧೭ನೇ ಗುರುವಾರ

ಮೊರಾಕೊ ರಾಜ್ಯದ ಕಾರುಬಾರುಗಳು.

ಒಂದು ತಿಂಗಳ ಹಿಂದೆ ಮೊರಾಕೊ ದೇಶದ ಸುಲ್ತಾನರಾದ ಅಬ್ದುಲ್ ಅಸೀಸ್‌ಯವರನ್ನು ಅವರ ಅಣ್ಣಂದಿರಾದ ಮುಲ್ಲಾಯಿ ಹಾಫಿಡ್‌ಯವರು ಯುದ್ಧದಲ್ಲಿ ಸೋಲಿಸಿದರೆಂದೂ ಮಾಜಿ ಸುಲ್ತಾನರಾದ ಅಬ್ದುಲ್ ಅಸೀಸ್‌ಯವರು ಫ್ರೆಂಚರ ವಸತಿಯಲ್ಲಿ ಸೇರಿಕೊಂಡಿರುತ್ತಾರೆಂದೂ ಒಂದು ಸಮಾಚಾರ ಹುಟ್ಟಿತ್ತು. ಈ ಸಂಗತಿಯಿಂದ ಅಣ್ಣತಮ್ಮಂದಿರಾದ ಇವರಿಗೆ ಒಂದು ವರುಷದಿಂದಲೂ ನಡೆಯುತ್ತಿದ್ದ ಯುದ್ಧವು ಮುಕ್ತಾಯವಾಯಿತೆಂದು ಕಂಡುಬರುತ್ತದೆ. ಮುಲ್ಲಾಯಿ ಹಾಫಿಡ್‌ಯವರನ್ನು ಸುಲ್ತಾನರು ಕೆಲವು ವರುಷಗಳಿಂದಲೂ ಕಾರಾಗೃಹದಲ್ಲಿಟ್ಟಿದ್ದರು. ಸ್ವಲ್ಪಕಾಲವಾದ ಮೇಲೆ ಇವರಿಗೆ ಬಿಡುಗಡೆಯಾಗಲು ಇವರು ಮೊರಾಕೊ ರಾಜ್ಯದ ದಕ್ಷಿಣಪ್ರಾಂತ್ಯಗಳಿಗೆ ವೈಸ್‌ರಾಯರಾಗಿ ನಿಯಮಿಸಲ್ಪಟ್ಟರು. ಹೋದ ವರುಷ ಇವರು ಈ ಪದವಿಯಲ್ಲಿರುವಾಗ್ಗೆ ತಮ್ಮನ್ನು ಮೊರಾಕೊ ದೇಶದ ಸುಲ್ತಾನರೆಂದು ಹೇಳಿಕೊಂಡು ತಮ್ಮ ತಮ್ಮನ ಮೇಲೆ ದಂಗೆ ಎದ್ದರು. ಉಭಯಪಕ್ಷದವರಿಗೂ ಯುದ್ಧಮಾಡಲು ಅವಕಾಶದೊರೆಯಲಿಲ್ಲ. ಈಗ್ಗೆ ಬಂದಿರುವ ಸಮಾಚಾರದಿಂದ ಅಬ್ದುಲ್ ಅಸೀಸ್‌ಯವರ ಸೋಲಿಗೆ ಅವರ ಕಡೆಯ ಸೈನ್ಯದವರು ಅವರನ್ನು ಯುದ್ಧರಂಗದಲ್ಲಿ ಬಿಟ್ಟು ಓಡಿಹೋದದ್ದೇ ಕಾರಣವೆಂದು ಕಂಡುಬರುತ್ತದೆ. ಘೋರಯುದ್ಧವು ನಡೆದ ಸೂಚನೆಯೇನೂ ಇಲ್ಲ. ಹಿಂದೂದೇಶದಲ್ಲಿ ಪ್ರಕಟವಾಗುವ ವರ್ತಮಾನಪತ್ರಿಕೆಗಳನ್ನು ಓದಿದರೆ ಅಬ್ದುಲ್ ಅಸೀಸ್‌ಯವರ ಕುದುರೇಸೈನ್ಯದವರು ತಮ್ಮ ಶತ್ರುಗಳ ಮೇಲೆ ಯುದ್ಧಮಾಡುವುದಕ್ಕೆ ಕೊಂಚದೂರ ಹೋಗಿ ತಕ್ಷಣವೇ ಹಿಂತಿರುಗಿ ಬಂದು ತಮ್ಮ ಸ್ವಂತ ಪಾಳ್ಯಕ್ಕೇನೆ ನುಗ್ಗಿ ಅಲ್ಲಿದ್ದ ಸಾಮಗ್ರಿಯುಗಳನ್ನು ಕೊಳ್ಳೆಹೊಡೆದರೆಂತಲೂ ಕಂಡುಬರುತ್ತದೆ. ಆ ಸಮಯದಲ್ಲಿ ವಿಪರೀತವಾದ ದೊಂಬಿಯಾಯಿತೆಂತಲೂ ತಮ್ಮತಮ್ಮಲ್ಲಿ ಒಳಹೋರಾಟ ಕಾದಾಟವಾಯಿತೆಂತಲೂ ಸಮಾಚಾರವು ಬಂದಿರುವುದು. ಸ್ವಂತ ಸೈನ್ಯದವರು ಈ ರೀತಿಯಲ್ಲಿ ನಡೆದುಕೊಂಡದ್ದನ್ನು ಸುಲ್ತಾನರು ನೋಡಿ ಹೆದರಿಕೆಯಿಂದ ಕೂಡಿದವರಾಗಿ ಫ್ರೆಂಚರ ವಸತಿಗೆ ಓಡಿಹೋದರು.

ಈ ಹೊಡೆದಾಟದಲ್ಲಿ ಯೂರೋಪ್ಯರ ರಾಜ್ಯಗಳವರು ಕೈಹಾಕಿಲ್ಲ. ಅಬ್ದುಲ್ ಅಸೀಸ್‌ಯವರು ರಾಜ್ಯವನ್ನು ಪುನಃ ಸಂಪಾದಿಸಿಕೊಳ್ಳಬೇಕಾದರೆ ಬಹಳ ಪ್ರಯತ್ನಪಡಬೇಕಾಗಿದೆ, ಅವರಂತೂ ಖಜಾನೆಯನ್ನು ಬರಿದುಮಾಡಿರುವರು. ಮೊರಾಕೊ ದೇಶದ ಪ್ರಜೆಗಳನ್ನು ನೋಡಿದರೆ ಅವರು ಇನ್ನೂ ಕಾಡಾಡಿ ಸ್ಥಿತಿಯಲ್ಲೇ ಇರುತ್ತಾರೆ.

ತುರ್ಕಿರಾಜ್ಯದ ಅಭಿವೃದ್ಧಿ.

ಕೆಲವು ತಿಂಗಳಿಂದ ತುರ್ಕಿರಾಜ್ಯದ ಕಾರುಬಾರುಗಳು ಬದಲಾವಣೆಯ ಸ್ಥಿತಿಯಲ್ಲಿರುತ್ತವೆಂದು ನಾವು ಮೊದಲೇ ತಿಳಿಸಿದ್ದೆವಷ್ಟೆ. ಅಲ್ಲಿ ಏರ್ಪಾಡಾಗಿರುವ ಹೊಸ ಸರಕಾರದ ಉದ್ಯೋಗಸ್ಥರು ತಮ್ಮ ಕೆಲಸಗಳನ್ನು ಬಹು ಚಟುವಟಿಕೆಯಿಂದ ನಡಿಸುತ್ತಾ ಬರುವರು. ಉಪಯೋಗವಿಲ್ಲದ ಮತ್ತು ಹಣ ವ್ಯಯವಾಗುತ್ತಿದ್ದ ಕೆಲವು ಉದ್ಯೋಗಗಳು ವಜಾ ಮಾಡಲ್ಪಟ್ಟವು. ಅರಮನೆಯಲ್ಲಿ ಕೆಲಸಕ್ಕೆ ಬಾರದ ಕೆಲವು ಉದ್ಯೋಗಸ್ಥರಿದ್ದರು. ಅವರೆಲ್ಲರಿಗೂ ಕೆಲಸಹೋಯಿತು. ಸುಲ್ತಾನರ ಅಪ್ಪಣೆಯುವ ಖರ್ಚು ಕಡಿಮೆಮಾಡಲ್ಪಟ್ಟಿತು. ಕಳೆದ ವಿಪತ್ತಿನಲ್ಲಿ ಸುಲ್ತಾನರ ಮಂತ್ರಿಗಳು ಅನ್ಯಾಯವಾಗಿ ಸಂಪಾದಿಸಿದ್ದ ಹಣವನ್ನೆಲ್ಲಾ ಹೊಸ ಸರ್ಕಾರದವರು ಅವರಿಂದ ಕಿತ್ತುಕೊಂಡಿರುತ್ತಾರೆ. ತುರ್ಕ್ಕಿಯ ಪ್ರಯೋಜನಕ್ಕೆ ಬಾರದಿದ್ದ ಇಪ್ಪತ್ತೆರಡು ಯುದ್ಧದ ಹಡಗುಗಳನ್ನು ಮಾರಿಬಿಡಬೇಕೆಂತಲೂ ನೌಕಾಬಲವನ್ನು ಹೆಚ್ಚಿಸುವುದಕ್ಕೋಸ್ಕರ ಒಬ್ಬ ಇಂಗ್ಲಿಷ್ ಅಧಿಕಾರಿಯನ್ನು ನೇಮಮಾಡಿಕೊಳ್ಳಬೇಕೆಂತಲೂ ದೇಶದ ನಾಲ್ಕಾಕಡೆಗಳಲ್ಲಿಯೂ ಪ್ರೈಮರಿ ಮತ್ತು ಉತ್ತಮತರದ ಪಾಠಶಾಲೆಗಳನ್ನೇರ್ಪಡಿಸಬೇಕೆಂತಲೂ ಸಲಹೆಗಳು ಹುಟ್ಟಿರುವುವು. ಜರ್ಮನಿ ದೇಶದ ವಿದ್ಯಾಕ್ರಮವನ್ನೇ ತುರ್ಕಿಯಲ್ಲಿಯೂ ಜಾರಿಗೆ ತರಬೇಕೆಂದಿರುವರು. ಬರುವ ಅಕ್ಟೋಬರ್ ತಿಂಗಳಿಗೆ ಪಾರ್ಲಿಮೆಂಟ್ ಎಂಬ ಪ್ರಜಾಪ್ರತಿನಿಧಿ ಸಭೆಯು ಕೂಡುವುದು. ಮ್ಯಾಸಿಡೋನಿಯಾ ಪ್ರಾಂತ್ಯದಲ್ಲಿ ವಾಸಮಾಡಿಕೊಂಡಿರುವ ಬಲ್ಗೇರಿಯಾ ಕ್ರೈಸ್ತರು ತಮ್ಮ ಸ್ವಂತಕ್ಕೇನೆ ಒಂದು ಪಾರ್ಲಿಮೆಂಟ್ ಸಭೆಯನ್ನೇರ್ಪಡಿಸಿಕೊಡಬೇಕೆಂತಲೂ ಆ ಸಭೆಯು ಸುಲ್ತಾನರು ಏರ್ಪಡಿಸುವ ದೊಡ್ಡ ಸಭೆಗೆ ಅಧೀನವಾಗಿರುವುದೆಂತಲೂ ಸಲಹೆ ಕೊಟ್ಟರು. ಇದನ್ನು ನೂತನ ಸರ್ಕಾರದವರು ಅನುಮೋದಿಸುವರೆಂಬ ನಂಬಿಕೆಯು ಇಲ್ಲ. ತುರ್ಕಿ ಭಾಷೆಯೇ ಸರ್ಕಾರದ ಭಾಷೆಯಾಗಿರುವುದು. ಆ ಭಾಷೆಯನ್ನೇ ಎಲ್ಲಾ ಪಾಠಶಾಲೆಗಳಲ್ಲೂ ಕಲಿಸಿಕೊಡಬೇಕೆಂದು ತೀರ್ಮಾನವಾಗಿದೆ.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಕೆಲವು ವರುಷಗಳ ಕೆಳಗೆ ಮಹಾರಾಣಿ ಆಸ್ಪತ್ರೆಯ ಡಾಕ್ಟರಾಗಿದ್ದ ಮಿಸ್ ಗೋವಿಂದರಾಜುಲು ಅಮ್ಮನವರು ಹೋದ ವಾರ ತಮ್ಮ ಅಕ್ಕನವರ ಸಂಗಡ ಮೈಸೂರಿಗೆ ದಯಮಾಡಿಸಿ ತಮ್ಮ ತಂದೆ ತಾಯಿಗಳ ಗೋರಿಗಳನ್ನು ನೋಡಿಕೊಂಡು ಭಾನುವಾರ ರಾತ್ರಿ ಬೆಂಗಳೂರಿಗೆ ವಾಪಸ್ಸು ಹೋದರು.

***

ಕಳೆದ ಶನಿವಾರ ಇಲ್ಲಿನ ದಫರಿನ್ ಮಾರ್ಕೆಟ್ಟಿನ ಹತ್ತಿರ ನಿಂತಿದ್ದ ಒಬ್ಬ ಸಣ್ಣ ಹುಡುಗನ ಮೇಲೆ ಮರಳು ಭರ್ತಿಯಾಗಿದ್ದ ಒಂದು ಎತ್ತಿನ ಗಾಡಿಯು ಹರಿದು ಹೋಯಿತು. ಎತ್ತುಗಳು ಗಾಡಿಯವನ ಹತೋಟಿಯಲ್ಲಿರಲಿಲ್ಲವೆಂದು ಕಂಡುಬರುತ್ತದೆ. ಹುಡುಗನು ತಕ್ಷಣವೇ ಮೃತಪಟ್ಟನು. ತಂದೆತಾಯಿಗಳು ಮಕ್ಕಳನ್ನು ಒಂಟಿಯಾಗಿ ಬೀದಿಗಳಲ್ಲಿ ಬಿಟ್ಟಿರುವುದು ಅಪಾಯಕರವಾದದ್ದು.

***

ಮೈಸೂರು ಪಟ್ಟಣದ ಎಲ್ಲಾ ಕಡೆಗಳಲ್ಲೂ ಮಿಂಚಿನ ದೀಪಗಳನ್ನಿಟ್ಟಿದ್ದಾಯಿತು. ಆದರೆ ಅವುಗಳನ್ನು ಇದುವರೆವಿಗೂ ಹತ್ತಿಸಿಲ್ಲ. ಟ್ರಾನ್ಸ್‌ಫಾರ್ಮರ್ ಹೌಸ್ ಕಟ್ಟಡದಲ್ಲಿ ಇನ್ನೂ ಸಾಮಾನುಗಳನ್ನು ಪೂರ್ತಿಯಾಗಿ ಜೋಡಿಸಿಲ್ಲ. ಕೆಲಸಗಳಂತೂ ತರಾತುರಿಯಾಗಿ ನಡಿಯುತ್ತಲಿವೆ. ಅಂತೂ ನವರಾತ್ರಿ ಉತ್ಸವಗಳು ಪ್ರಾರಂಭವಾಗುವುದಕ್ಕೆ ಮೊದಲೇ ಈ ದೀಪಗಳನ್ನು ಹತ್ತಿಸುತ್ತಾರೆಂದು ಕೇಳುತ್ತೇವೆ.

***

ಬೆಂಗಳೂರು ಕೋಲಾರ್ ಪೋಲೀಸ್ ಕ್ರೆಡಿಟ್ ಸೊಸೈಟಿಯಲ್ಲಿ ತಮಗೆ ವಹಿಸಲ್ಪಟ್ಟ ಉದ್ಯೋಗಗಳನ್ನು ಸರಿಯಾಗಿ ನಡಿಸಲಿಲ್ಲವೆಂದು ಪೋಲೀಸ್ ಇನ್ಸ್‌ಪೆಕ್ಟರುಗಳಾದ ಕೇಶವಾಚಾರ್ ಮತ್ತು ವೆಂಕಟಸುಬ್ಬಯ್ಯ ಇವರುಗಳಿಗೆ ಕೆಲಸದಿಂದ ಡಿಸ್‌ಮಿಸ್ ಆಗಿತ್ತಷ್ಟೆ. ರೆಸಿಡೆಂಟರು ಈ ವಿಚಾರದ ಕಾಗದಗಳನ್ನೆಲ್ಲಾ ತರಿಸಿನೋಡಿ ಕೇಶವಾಚಾರ್ ರವರಿಗೆ ಕೊಟ್ಟಿದ್ದ ಶಿಕ್ಷೆಯನ್ನು ವಾಪಸುಮಾಡಿದರು. ವೆಂಕಟಸುಬ್ಬಯ್ಯನವರಿಗೆ ಪೆನ್ಷನ್ ಮೇಲೆ ನಿವೃತ್ತರಾಗುವಂತೆ ಅಪ್ಪಣೆ ಕೊಡಿಸಿದರು.

***

ಶಿವಮೊಗ್ಗ ತಾಲ್ಲೋಕು ಶಿಕಾರಿಪುರ ಕಸಬಾ ದೊಡ್ಡ ಕುರುಬರ ಕೇರಿಯ ೧೯ ವರ್ಷದ ಕುರುಬರ ಯೌವನಸ್ಥನು ಗದ್ದೆಗೆ ಹೋಗುವಾಗ್ಗೆ ಬದುವಿನ ಹುಲ್ಲಿನಲ್ಲಿದ್ದ ನಾಗರಹಾವು ಇವನ ಕಾಲನ್ನು ಕಚ್ಚಿತು. ಆ ಕೂಡಲೇ ಇವನು ಅದನ್ನು ಹೊಡೆದು ಕೊಂದು ಮನೆಗೆ ಬರುವಷ್ಟರಲ್ಲಿಯೇ ಇವನಿಗೂ ಬುದ್ಧಿ ತಪ್ಪಿ ಬವಳಿ ಬಂದು ನಾಲಿಗೆಯೇ ಬಿದ್ದು ಹೋಯಿತು. ಅನೇಕರು ಔಷಧ ಪ್ರಯೋಗ ಮಾಡಿದರೂ ಬದುಕದೆ ಮರಣವನ್ನೈದಿದನು. ಇವನಿಗೆ ವಿಧವೆಯಾದ ಒಬ್ಬ ತಾಯಿ ಇರುವಳು.

***

ಬೆಂಗಳೂರು ವ್ಯವಸಾಯ ಇಲಾಖೆಯ ಕೆಮಿಸ್ಟರಾಗಿದ್ದ ಡಾಕ್ಟರ್ ಲೀಮರ್‌ರವರು ಮೊನ್ನೆ ಶುಕ್ರವಾರ ರಾಜಧಾನಿಗೆ ದಯಮಾಡಿಸಿ ಶ್ರೀಮನ್ಮಹಾರಾಜರವರ ಭೇಟಿಯನ್ನು ತೆಗೆದುಕೊಂಡರು. ಇವರು ತಮ್ಮ ಕೆಲಸದಿಂದ ನಿವೃತ್ತರಾಗಿ ಪೆನ್ಷನ್ ಪಡೆದು ಶೀಘ್ರದಲ್ಲೇ ವಿಲಾಯಿತಿಗೆ ಹೋಗುವವರಾಗಿರುತ್ತಾರೆ. ಇವರು ಬೆಂಗಳೂರಲ್ಲಿ ಏರ್ಪಾಡಾಗಿರುವ ಕ್ರೈಸ್ತ ಯೌವನಸ್ಥ ಸಮಾಜದಲ್ಲಿ ಒಬ್ಬ ಆಫೀಸರಾಗಿದ್ದರು. ನೆನ್ನೆ ಸಾಯಂಕಾಲ ಐದು ಘಂಟೆಗೆ ಸದರಿ ಸಮಾಜದ ಮೆಂಬರುಗಳೆಲ್ಲಾ ಸೇರಿ ಡಾಕ್ಟರ್ ಲೀಮರ್‌ರವರಿಗೆ ಅಡ್ರಸ್ ಒಪ್ಪಿಸಿದರು. ಬ್ರಿಟಿಷ್ ರೆಸಿಡೆಂಟರಾದ ಮಿ|| ಫ್ರೇಜರವರೇ ಅಡ್ರಸನ್ನು ಓದಿದರು.

***

ಕಳೆದ ಗುರುವಾರ ಚಾತುರ್ಮಾಸ್ಯವು ಮುಕ್ತಾಯವಾದುದರಿಂದ ಜಗದ್ಗುರು ಶ್ರೀ ಶಂಕರಭಾರತಿ ಸ್ವಾಮಿಗಳವರು ಬೆಂಗಳೂರು ಪಟ್ಟಣದ ಪ್ರಜೆಗಳ ಆತಿಥ್ಯವನ್ನು ಸ್ವೀಕರಿಸಿ ಪಾಲಕಿಯಲ್ಲಿ ಕುಳಿತು ಮಲ್ಲೇಶ್ವರಕ್ಕೆ ದಯಮಾಡಿಸಿದರು. ಮೆರವಣಿಗೆಯ ಹಿಂದೆ ಪುರದ ಮಹಾಜನರೂ ವೈದಿಕ ಬ್ರಾಹ್ಮಣರೂ ಸರಕಾರಿ ಉದ್ಯೋಗಸ್ಥರೂ ದೇಶೀಯ ಸ್ತ್ರೀಯರೂ ಗುಂಪುಗುಂಪಾಗಿ ಹೋದರು. ರಸ್ತೆಯಲ್ಲಿ ಯಾವ ಗಲಾಟೆಯಾಗದಂತೆ ಪೋಲೀಸ್ ಬಂದೋಬಸ್ತು ಇತ್ತು. ಶ್ರೀ ಜಗದ್ಗುರುಗಳು ಮಲ್ಲೇಶ್ವರದ ಹತ್ತಿರಕ್ಕೆ ಹೋದಾಗ್ಗೆ ಅಲ್ಲಿನ ನಿವಾಸಿಗಳು ಕಾದಿದ್ದು ವಾದ್ಯಗಳೊಡನೆ ಅವರನ್ನು ಬರಮಾಡಿಕೊಂಡರು. ಕಾಡುಮಲ್ಲೇಶ್ವರಸ್ವಾಮಿ ದೇವಸ್ಥಾನದ ಹತ್ತಿರ ಮೆರವಣಿಗೆಯು ನಿಂತಿತು. ಸ್ವಾಮಿಗಳು ಅಲ್ಲಿ ಸ್ನಾನ ಜಪತಪಗಳನ್ನು ತೀರಿಸಿಕೊಂಡು ನೆರೆದು ಬಂದಿದ್ದವರಿಗೆ ಉಪನ್ಯಾಸವನ್ನು ಮಾಡಿದರು. ಅಲ್ಲಿ ಸಮಾರಾಧನೆಯೂ ಜರುಗಿತು. ಸಾಯಂಕಾಲದ ಪ್ರಾತಃನಮಸ್ಕಾರಗಳು ನಡೆದ ಮೇಲೆ ಜಗದ್ಗುರುಗಳು ರಾತ್ರಿ ಒಂಭತ್ತು ಗಂಟೆಗೆ ಮಲ್ಲೇಶ್ವರವನ್ನು ಬಿಟ್ಟು ಬೆಂಗಳೂರು ಪಟ್ಟಣಕ್ಕೆ ಹಿಂತಿರುಗಿದರು. ಆಗಲೂ ಅವರ ಹಿಂದೆ ಬಹು ಜನರು ಬಂದರು. ಮೆರವಣಿಗೆಯು ಬಳೇಪೇಟೆಗೆ ಬರುವಾಗ್ಗೆ ಹನ್ನೊಂದು ಗಂಟೆಯಾಗಿತ್ತು. ಇಲ್ಲಿ ಸ್ವಾಮಿಗಳು ನೆರದು ಬಂದಿದ್ದ ಜನಗಳನ್ನೆಲ್ಲಾ ಉಚಿತವಾಕ್ಯಗಳಿಂದ ವಂದಿಸಿ ಅವರು ತಮಗೆ ಈ ಚಾತುರ್ಮಾಸ್ಯದಲ್ಲಿ ತೋರಿಸಿದ ಆತಿಥ್ಯಕ್ಕೋಸ್ಕರ ಅವರು ಪೂಜಿಸುವ ಶ್ರೀ ಶಂಕರಾಚಾರ್ಯರು ಅವರನ್ನೆಲ್ಲಾ ಆಶೀರ್ವದಿಸುವರೆಂದು ತಿಳಿಸಿದರು. ಶೃಂಗಗಿರಿ ಮಠದ ಸರ್ವಾಧಿಕಾರಿಗಳಾಗಿರುವ ವೇದಮೂರ್ತಿ ವಿಶ್ವೇಶ್ವರ ಶಾಸ್ತ್ರಿಗಳು ಸ್ವಾಮಿಗಳು ಪುರಜನರ ಆತಿಥ್ಯವನ್ನು ಸ್ವೀಕರಿಸಿ ಅವರೆಲ್ಲರನ್ನು ಕೃತಾರ್ಥರನ್ನಾಗಿ ಮಾಡಿದ್ದಕ್ಕಾಗಿ ಅವರನ್ನು ವಂದಿಸಿದರು.

ಮೈಸೂರು ಗೆಜೆಟ್ ಸಂಗ್ರಹ.

ಸಾಗರದ ಮುನಸೀಫರಾದ ಮಿ|| ವೆಂಕಟಕೃಷ್ಣಯ್ಯನವರಿಗೆ ಜೂನ್ ಮೊದಲನೇ ತಾರೀಖಿನ ಬಾಗಾಯಿತು ೬ ದಿನಗಳ ಪ್ರಿವಿಲೆಜ್ ರಜವನ್ನು ಅರ್ಧ ಸಂಬಳದ ಮೇಲೆ ಕೊಟ್ಟಿರುತ್ತೆ.

ಬೆಂಗಳೂರು ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿದ್ದ ಮಿ|| ಸಿ ರಾಮರಾಯರು ತಮಗೆ ಕೊಟ್ಟಿದ್ದ ಒಂದು ತಿಂಗಳು ಇಪ್ಪತ್ತು ದಿವಸಗಳ ಪ್ರಿವಿಲೆಜ್ ರಜಾದಲ್ಲಿ ಒಂದು ತಿಂಗಳು ಹತ್ತೊಂಭತ್ತು ದಿನಗಳನ್ನು ಮಾತ್ರ ಉಪಯೋಗಿಸಿರುವುದರಿಂದ ಬಾಕಿ ಉಳಿದಿರುವ ಒಂದು ದಿನವನ್ನು ವಜಾ ಮಾಡಿರುತ್ತೆ.

ಕೋಲಾರ ಡೆಪ್ಯುಟಿ ಕಮಿಷನರಾದ ಮಿ|| ಶ್ರೀಕಂಠೇಶ್ವರಯ್ಯರಿಗೆ ಕೊಟ್ಟಿದ್ದ ಹದಿನಾಲ್ಕು ದಿವಸಗಳ ಪ್ರಿವಿಲೆಜ್ ರಜಾವನ್ನು ಅವರು ಪೂರ್ತಿಯಾಗಿ ಉಪಯೋಗಿಸಲಿಲ್ಲವಾದಕಾರಣ ಉಪಯೋಗಿಸದೆ ಉಳಿದಿರುವ ದಿವಸಗಳನ್ನು ವಜಾ ಮಾಡಿರುತ್ತೆ.

ಚೀಫ್ ಕೋರ್ಟ್ ಜಡ್ಜಿಗಳಾದ ಮಿ|| ಜಸ್ಟಿಸ್ ಕೃಷ್ಣರಾಯರಿಗೆ ಹಿಂದೆ ಪೂರಾ ಸಂಬಳದ ಮೇಲೆ ಕೊಟ್ಟಿದ್ದ ಒಂದು ತಿಂಗಳು ಎಂಟು ದಿವಸಗಳ ರಜಕ್ಕೆ ಇನ್ನೂ ಇಪ್ಪತ್ತು ದಿವಸಗಳ ಜಾಸ್ತಿ ರಜವನ್ನು ಅರ್ಧ ಸಂಬಳದ ಮೇಲೆ ಕೊಟ್ಟಿರುತ್ತೆ.

ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿರುವ ಮಿ|| ಸುಬ್ರಹ್ಮಣ್ಯ ಐಯ್ಯರವರು ಮುಜರಾಯಿ ಸೂಪರೆಂಟರಾಗಿಯೂ ಮುಜರಾಯಿ ಇಲಾಖೆಯ ಅಂಡರ್ ಸೆಕ್ರೆಟರಿಯವರಾಗಿರುವಂತೆಯೂ ಮೊಬದಲ್ ಮಾಡಲ್ಪಟ್ಟಿರುತ್ತಾರೆ.

ಮಿ|| ಎ. ಸುಬ್ರಹ್ಮಣ್ಯ ಅಯ್ಯರವರು ಮುಜರಾಯಿ ಇಲಾಖೆಗೆ ವರ್ಗವಾಗಿರುವುದರಿಂದ ಮೈಸೂರು ಡಿಸ್ಟ್ರಿಕ್ಟ್ ಟ್ರಷರಿ ಆಫೀಸರಾಗಿರುವ ಮಿ|| ಟಿ. ಕೆ. ಸುಂದರರಾಜೈಯ್ಯಂಗಾರರವರು ಮೈಸೂರು ಸಬ್‌ಡಿವಿಜನ್ ಆಫೀಸರಾಗಿ ನೇಮಿಸಲ್ಪಟ್ಟಿರುತ್ತಾರೆ. ಪ್ರೊಬೇಷನರಿ ಅಸಿಸ್ಟೆಂಟು ಕಮಿಷನರಾಗಿರುವ ಮಿ|| ಜೆ ಬಿ ಹಬ್ಲಿಕಾರರು ಮೈಸೂರು ಟ್ರಷರಿ ಚಾರ್ಜಿನಲ್ಲಿರತಕ್ಕದ್ದು.

ಅಸಿಸ್ಟೆಂಟ್ ಕಮಿಷನರಾಗಿದ್ದ ಮಿ|| ಬಾಡಾಮಿ ಕೃಷ್ಣರಾಯರು ರಿಟೈರಾದ್ದರಿಂದ ಕೆಳಗೆ ಕಂಡ ವರ್ಗಾವರ್ಗಗಳು ಆಗಿರುತ್ತವೆ.

ಗುಬ್ಬಿ ಸಬ್‌ಡಿವಿಜನ್ ಅಸಿಸ್ಟೆಂಟ್ ಕಮಿಷನರಾಗಿರುವ ಮಿ|| ಎಂ. ಸಿ ನಾರಾಯಣರಾಯರು ಫ್ರೆಂಚ್‌ರಾಕ್ಸ್ ಸಬ್‌ಡಿವಿಜನಿಗೆ

ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿರುವ ಮಿ|| ಎಂ ಎ. ನಾರಾಯಣ ಅಯ್ಯಂಗಾರರು ಮಿ|| ಚಾಂಡಿಯವರು ತಮ್ಮ ಚಾರ್ಜನ್ನು ವಹಿಸಿದ ಕೂಡಲೇ ಗುಬ್ಬಿ ಡಿವಿಜನ್ ಚಾರ್ಜು ವಹಿಸತಕ್ಕದ್ದು.

ಮಿ|| ಎಂ. ಎ. ನಾರಣೈಯಂಗಾರರು ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಹಂಗಾಮಿಯಾಗಿ ಕೆಲಸ ಮಾಡುವಾಗ್ಗೆ ಅಸಿಸ್ಟೆಂಟ್ ಕಮಿಷನರಾಗಿರುವ ಮಿ|| ಟಿ ತಂಬೂಚೆಟ್ಟಿರು, ಗುಬ್ಬಿ ಸಬ್‌ಡಿವಿಜನ್ ಚಾರ್ಜನ್ನು ವಹಿಸತಕ್ಕದ್ದು.

ಮಿ|| ಟಿ. ತಂಬೂಚೆಟ್ಟಿರು ತುಮಕೂರು ಡಿಸ್ಟ್ರಿಕ್ಟಿನಲ್ಲಿ ಕೆಲಸ ಮಾಡುತ್ತಿರುವಾಗ್ಗೆ ಮಿ|| ಟಿ ರಾಯಲು ಚೆಟ್ಟಿಯವರು ಬೆಂಗಳೂರು ಡಿಸ್ಟ್ರಿಕ್ಟ್ ಸಿವಿಲ್ ಆಫೀಸರಾಗಿರತಕ್ಕದ್ದು.

ಮತ್ತು ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾಗಿರುವ ಮಿ|| ಎನ್. ಮಾಧವರಾಯರು ಬೆಂಗಳೂರು ಡಿಸ್ಟ್ರಿಕ್ಟ್ ಟ್ರಷರಿ ಚಾರ್ಜಿನಲ್ಲಿರತಕ್ಕದ್ದು.

ಶಿವಮೊಗ್ಗ ಡಿವಿಜನಿಗೆ ಸೇರಿದ ಮಿ|| ಬಿ ನಂಜುಂಡಾರಾಧ್ಯರಿಗೆ ೩ನೇ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್‌ರಜಾ ಕೊಟ್ಟಿರುತ್ತೆ.

ಕರೆಸ್‌ಪಾಂಡೆನ್ಸ್.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.]

ಯಂಗ್‌ಮೆನ್ಸ್ ಮಹಮ್ಮಡನ್ ಅಸೋಸಿಯೇಷನ್.

ಮಹನೀಯರಿರಾ!

ಚಿತ್ರದುರ್ಗದ ಟವನ್ನಿನಲ್ಲಿರುವ ಮಹಮ್ಮದೀ ಬಾಲಕರಲ್ಲಿ ಅನೇಕರು ಬಹುಕಾಲದಿಂದಲೂ ವಿದ್ಯಾರಹಿತರಾಗಿ ತಿಳಿಗೇಡಿತನವೆಂಬ ಅಂಧಕಾರದ ಗುಹೆಯಲ್ಲಿ ಮಲಗಿ ನಿದ್ರೆಹೋಗುತ್ತಾ ಕಾಲವಿಳಂಬಮಾಡುವುದರಲ್ಲಿ ಉದ್ಯುಕ್ತರಾಗಿದ್ದರು.

ಇದೇ ಹೈಸ್ಕೂಲು ಮಹಮ್ಮದೀ ವಿದ್ಯಾರ್ಥಿಗಳಲ್ಲಿ ಕೆಲವರು ಇವರ ದುರ್ನಡತೆಗಳನ್ನು ನೋಡಿ ಇವರನ್ನು ನೀತಿವಾಕ್ಯಗಳಿಂದ ಒಳ್ಳೆ ಮಾರ್ಗವನ್ನು ಅನುಸರಿಸುವಂತೆ ಮಾಡಲಿಕ್ಕೆ "ಯಂಗ್‌ಮೆನ್ಸ್ ಮಹಮ್ಮಡನ್ ಅಸೋಸಿಯೇಷನ್" ಎಂಬ ಒಂದು ಸಂಘವನ್ನು ಏರ್ಪಡಿಸಿರುತ್ತಾರೆ.

ಈ ಸಂಘದಲ್ಲಿ ವಾರಕ್ಕೆ ಒಂದುಸಾರಿ ಮಹಮ್ಮದೀ ಬಾಲಕರನ್ನು ಕೂಡಿಸಿ ನೀತಿವಾಕ್ಯಗಳ ವಿಷಯವಾಗಿ ಉಪನ್ಯಾಸಮಾಡುವರು. ಇದರಿಂದ ಅನೇಕ ಬಾಲಕರು ತಮ್ಮಲ್ಲಿದ್ದ ದುರ್ನಡತೆಗಳನ್ನು ಈ ನೀತಿವಾಕ್ಯಗಳಿಂದ ಹೋಗಲಾಡಿಸಿಕೊಂಡು ಒಳ್ಳೆ ಮಾರ್ಗವನ್ನು ಅನುಸರಿಸುತ್ತಾ ವಿದ್ಯಾಸಂಪತ್ತನ್ನು ಹೊಂದಲಿಕ್ಕೆ ಉದ್ಯುಕ್ತರಾಗಿರುತ್ತಾರೆ. ಆದರೆ ಈ ಬಾಲಕರಲ್ಲಿ ಅನೇಕರು ಬಡವರಾದ್ದರಿಂದ ಅಮೂಲ್ಯವಾದ ವಿದ್ಯೆಯನ್ನು ಹೊಂದಲು ಅಸಾಧ್ಯವಾಗಿರುತ್ತೆ.

ಧರ್ಮಿಷ್ಠರಾದ ಮಹಮ್ಮದೀ ಬಾಲಕರಲ್ಲಿ ಅನೇಕರು, ಇತರೇ ಮತಸ್ಥರಲ್ಲಿ ಕೆಲವರು ಚಂದಾಹಾಕಿ ಈ ಹಣದಲ್ಲಿ ಬಡವರಾದ ಬಾಲಕರ ವಿದ್ಯಾಪೋಷಣೆಯ ವಿಷಯವಾಗಿ ಖರ್ಚುಮಾಡಬಹುದೆಂತಲೂ, ಮತ್ತು ಇವರಿಗೋಸ್ಕರ ರೀಡಿಂಗ್ ರೂಮ್ ಸ್ಥಾಪಿಸಬೇಕೆಂತಲೂ ಏರ್ಪಡಿಸಿರುತ್ತಾರೆ. ಈಗ ಚಂದಾವು ಸ್ವಲ್ಪಮಟ್ಟಿಗೆ ವಸೂಲ್ ಆಗಿದೆ.

ಅಯ್ಯಾ! ಯಾರುಬೇಕಾದರೂ ಈ ಬಾಲಕ ಸಂಘಕ್ಕೆ ಸೇರಿ ತಮ್ಮಿಂದಾಗುವ ಸಹಾಯವನ್ನು ತೋರ್ಪಡಿಸಿ ಇದನ್ನು ಉಚ್ಚತಸ್ಥಿತಿಗೆ ತಂದು ಬಡಬಾಲಕರಾದವರಿಗೆ ವಿದ್ಯಾದಾನಮಾಡಿಸಿ ಕೀರ್ತಿಯನ್ನು ಪಡೆಯಬೇಕೆಂತ ಅರಿಕೆಮಾಡಿಕೊಳ್ಳುತ್ತೇನೆ.

ಒಬ್ಬ ಮೆಂಬರು.

ಬ್ರಿಟಿಷ್ ರೆಸಿಡೆಂಟರ ಆತಿಥ್ಯ.

ಹೋದ ಗುರುವಾರ ಸಾಯಂಕಾಲ ಬ್ರಿಟಿಷ್ ರೆಸಿಡೆಂಟರಾದ ಮೇ॥ ಫ್ರೇಸರ್ ಸಿ. ಐ. ಇ. ರವರು ದಂಡಿನ ಇನಾಕ್ಯುಲೇಷನ್ ಹಾಕುವ ಪ್ರಯತ್ನದಲ್ಲಿ ಸರಕಾರಕ್ಕೆ ಸಹಾಯಮಾಡಿದ ಪ್ರಮುಖರಿಗೆ ಸರ್ಟಿಫಿಕೇಟುಗಳನ್ನು ಹಂಚಿದರು. ಆಗ್ಗೆ ರೆಸಿಡೆನ್ಸಿ ಬಂಗಲೆಯಲ್ಲಿ ದಂಡಿನ ಮಿಲಿಟರಿ ಉದ್ಯೋಗಸ್ಥರೂ ಡಾಕ್ಟರುಗಳೂ ಪತ್ನಿಗಳೂ ದೇಶೀಯ ದೊಡ್ಡ ಮನುಷ್ಯರೂ ಬೆಂಗಳೂರು ಸಿಟಿಯಿಂದ ದಿವಾನರಾದ ಮೇ॥ ಮಾಧವರಾಯರೂ ಕೆಲವುಮಂದಿ ಹಿಂದೂ ಸ್ತ್ರೀಯರೂ ಹಾಜರಾಗಿದ್ದರು. ನೆರದುಬಂದಿದ್ದ ಅತಿಥಿಗಳನ್ನೆಲ್ಲಾ ಮೇ॥ ಫ್ರೇಸರವರೂ ಅವರ ಪತ್ನಿಯವರೂ ಬಹು ಆದರಪೂರ್ವಕವಾಗಿ ಬರಮಾಡಿಕೊಂಡು ಅವರನ್ನು ಸತ್ಕರಿಸಿದರು. ಅತಿಥಿಗಳನ್ನು ಸಂತೋಷಪಡಿಸುವುದಕ್ಕೆ ಮಿಲಿಟರಿ ಬ್ಯಾಂಡಾಗುತ್ತಿತ್ತು. ಮೇ॥ ಫ್ರೇಸರವರು ಸಭಿಕರನ್ನೆಲ್ಲಾ ನೋಡಿ ಸಂತೋಷಪಟ್ಟವರಾಗಿ ಈ ರೀತಿಯಾಗಿ ಉಪನ್ಯಾಸ ಮಾಡಿದರು —'' ಸಭಿಕರೇ ಹೋದ ವರುಷದ ಅಂತ್ಯಭಾಗದಲ್ಲಿ ನಮ್ಮೂರಿನಲ್ಲಿ ಭಯಂಕರವಾದ ಪ್ಲೇಗ್ ವ್ಯಾಧಿಯು ಕಾಣಿಸಿಕೊಂಡದ್ದು ನಿಮಗೆ ಹೊಸ ಸಂಗತಿಯಲ್ಲ. ಆಗ್ಗೆ ರೆಸಿಡೆಂಟರಾಗಿದ್ದ ಮೇ॥ ವಿಲ್ಲಿಯಂಸ್‌ರವರು ಈ ಜಾಡ್ಯದ ಹಾವಳಿಯನ್ನು ತಪ್ಪಿಸುವ ಬಗ್ಗೆ ಇನಾಕ್ಯುಲೇಷನ್ ಹಾಕುವುದಕ್ಕೆ ಪ್ರಾರಂಭಮಾಡಿದರು. ಈಗ ಪ್ಲೇಗ್ ಜಾಡ್ಯವನ್ನು ತಡೆಯುವುದಕ್ಕೆ ಏರ್ಪಾಡಾಗಿರುವ ಉಪಾಯಗಳಲ್ಲಿ ಇನಾಕ್ಯುಲೇಷನೇ ಮುಖ್ಯವಾದದ್ದು. ಆದರೆ ಜನಗಳ ಸಹಾಯವಿಲ್ಲದೆ ಈ ಕಾರ್ಯವನ್ನು ನಡಿಸುವುದು ಕಷ್ಟ. ಹೋದ ವರುಷ ಡಿಸೆಂಬರ್ ೨೧ ರಲ್ಲಿ ದಂಡಿನ ಪ್ರಜೆಗಳನ್ನು ನಾನು ಈ ವಿಷಯದಲ್ಲಿ ಸಹಾಯಮಾಡುವಂತೆ ಕೇಳಿಕೊಳ್ಳಲು ಅವರು ಬಹು ಸಂತೋಷವಾಗಿ ಸಹಾಯಮಾಡುವುದಕ್ಕೆ ಒಪ್ಪಿದರು. ಇದೇ ವರುಷದ ಆಗಸ್ಟ್ ಆಖೈರೊಳಗಾಗಿ ಸುಮಾರು ಮೂವತ್ತೆರಡು ಸಾವಿರ ಜನರು ಇನಾಕ್ಯುಲೇಷನ್ ಹಾಕಿಸಿಕೊಂಡರು. ಇನಾಕ್ಯುಲೇಷನ್ ಹಾಕುವ ಸ್ಥಳಗಳಿಗೆ ಜನರು ಬರುವುದು ಅಸಾಧ್ಯವೆಂದು ಕಂಡುಬಂದಾಗಲೆಲ್ಲಾ ಅಂಥವರಿರುವ ಸ್ಥಳಗಳಿಗೆ ಆಫೀಸರುಗಳು ಹೋಗಿ ಇನಾಕ್ಯುಲೇಷನ್ ಹಾಕುತ್ತಿದ್ದರು. ನಮ್ಮ ಪ್ರಯತ್ನದ ಫಲಿತಾಂಶವು ಬಹಳಮಟ್ಟಿಗೆ ಫಲಕಾರಿಯಾಗಿದೆಯೆಂದು ನಾನು ಧೈರ್ಯವಾಗಿ ಹೇಳಬಲ್ಲೆನು. ಅನೇಕರ ಪ್ರಾಣಗಳು ರೋಗಕ್ಕೆ ಆಹುತಿಯಾಗದೆ ಉಳಿಕೊಂಡವು. ಯಾರ್ಯಾರು ಈ ನಮ್ಮ ಪ್ರಯತ್ನದಲ್ಲಿ ಸರಕಾರಕ್ಕೆ ಸಹಾಯ ಮಾಡಿರುತ್ತಾರೋ ಅಂಥವರನ್ನೆಲ್ಲಾ ನಾನು ಈಗ್ಗೆ ಹೃದಯಪೂರ್ವಕವಾಗಿ ವಂದಿಸುತ್ತೇನೆ.'' ಮೇ॥ ಫ್ರೇಸರವರು ಈ ರೀತಿಯಾಗಿ ಉಪನ್ಯಾಸಮಾಡಿ ಸರ್ಟಿಫಿಕೇಟುಗಳನ್ನು ಹಂಚಿದರು.

ಪ್ರಾತಃಕಾಲದ ಸ್ನಾನ.

ಸ್ನಾನದ ಆವಶ್ಯಕತೆಯನ್ನು ಎಲ್ಲರೂ ತಿಳಿದುಕೊಂಡಿರುವರು ಆದರೆ ಪ್ರತಿ ದಿನವೂ ಸ್ನಾನ ಮಾಡುವದು ಎಲ್ಲರ ಅಭ್ಯಾಸವಾಗಿಲ್ಲ ಸ್ನಾನ ಮಾಡುವುದರಿಂದ ಕೊಳೆಯು ಹೋಗುವುದು ಸಹಜವಾದ ಸಂಗತಿಯಾಗಿರುತ್ತದಷ್ಟೆ. ಆದರೆ ಸ್ನಾನದಿಂದ ಇದೊಂದೇ ಪ್ರಯೋಜನ ಉಂಟೆಂದು ಯಾರೂ ಭಾವಿಸಬಾರದು. ಸ್ನಾನವು ಮನುಷ್ಯನಿಗೆ ಬಲ ಕೊಡುವಂಥ ಒಂದು ಔಷಧದಂತಿರುತ್ತದೆ ಅದರ ಅಭ್ಯಾಸದಿಂದ ಆಯುಸ್ಸು ಹೆಚ್ಚುವದು ಬಲಿಷ್ಠರಾದವರಿಗೂ ಮಧ್ಯ ಪ್ರಾಯಸ್ಥರಿಗೂ ತಣ್ಣೀರಿನ ಸ್ನಾನವು ಉತ್ತಮ ಇದನ್ನು ಪ್ರತಿ ಪ್ರಾತಃಕಾಲದಲ್ಲಿ ಅಭ್ಯಾಸ ಮಾಡಬೇಕು ತಣ್ಣೀರಿನ ಸ್ನಾನದಿಂದ ದೇಹಕ್ಕೆ ಹಲವು ವಿಧವಾದ ಹಾನಿಯುಂಟೆಂದು ಜನರು ಮಾತನಾಡಿಕೊಳ್ಳುತ್ತಾರೆ ಆದರೆ ಇಂಥಾ ಭಾವನೆಯು ತಪ್ಪು ತಣ್ಣೀರಿನಲ್ಲಿ ಸ್ನಾನ ಮಾಡುವವರು ಗಾಳಿ ಇಲ್ಲದ ಕೊಠಡಿಯಲ್ಲಿ ಸ್ನಾನ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ ಈ ಕಟ್ಟಳೆಯನ್ನು ಮೀರಿದರೆ ಒಂದು ವೇಳೆ ವಿಷಜ್ವರವು ಬಂದರೂ ಬರಬಹುದು ಸ್ನಾನವು ಒಂದೆರಡು ನಿಮಿಷಗಳಲ್ಲಿಯೇ ಮುಗಿಯಬೇಕು. ಬಹಳಹೊತ್ತು ಮೈಯನ್ನು ಉಜ್ಜಿಕೊಳ್ಳುತ್ತಲೂ ನೀರಿನಲ್ಲಿ ಆಟವಾಡುತ್ತಲೂ ಇರಕೂಡದು. ಜ್ವರಬಂದು ಆಗ ತಾನೇ ವಾಸಿಯಾಗಿರುವವರಿಗೆ ತಣ್ಣೀರು ಸ್ನಾನವಾಗದು ಉಗುರು ಬೆಚ್ಚಗಿರುವ ನೀರಿನಲ್ಲಿ ಮೀಯುವುದು ಉತ್ತಮ. ತಣ್ಣೀರಿನಲ್ಲಿ ಸ್ನಾನ ಮಾಡಿದ ಕೂಡಲೇ ಒರಟಾದ ಬಟ್ಟೆಯಿಂದ ದೇಹವನ್ನೆಲ್ಲಾ ಚೆನ್ನಾಗಿ ಉಜ್ಜಿಕೊಳ್ಳಬೇಕು. ಚೆನ್ನಾಗಿ ಉಜ್ಜಿದ ಮೇಲೆ ಒಂದು ತರವಾದ ಕಾವು ಹುಟ್ಟಿ ಮನಸ್ಸಿಗೆ ಉತ್ಸಾಹ ಬರುವುದು. ಹೀಗೆ ಬಾರದಿದ್ದರೆ ದೇಹದಲ್ಲಿ ಸ್ವಲ್ಪ ಅಸೌಖ್ಯವಿದೆ ಎಂದು ತಿಳಿಯತಕ್ಕದು ಅಂಥವರು ಅರ್ಧ ಅಥವಾ ಒಂದು ನಿಮಿಷದೊಳಗಾಗಿಯೇ ನೀರಿನಿಂದ ಹೊರಕ್ಕೆ ಬಂದುಬಿಡಬೇಕು ಮತ್ತು ಮೈಯನ್ನು ಮತ್ತಷ್ಟು ಬಲವಾಗಿ ಬಟ್ಟೆಯಲ್ಲಿ ಉಜ್ಜಿಕೊಳ್ಳಬೇಕು ತಣ್ಣೀರಿನ ಸ್ನಾನವನ್ನು ಕ್ರಮೇಣವಾಗಿ ಅಭ್ಯಾಸಮಾಡಿಕೊಳ್ಳುವುದು ಉತ್ತಮ. ಈ ಸ್ನಾನದಿಂದ ನರಗಳು ಬಲಪಡುವವು. ಮಿದುಳು ಸೂಕ್ಷ್ಮದಲ್ಲಿರುವುದು. ಹಸಿವು ಚೆನ್ನಾಗಿ ಕಾಣಿಸುತ್ತದೆ. ಹೃದಯವು ನೂತನ ಶಕ್ತಿಯನ್ನು ಹೊಂದಿಕೊಳ್ಳುವುದು ನೆಗಡಿಯು ಇಲ್ಲದೆ ಹೋಗುವುದು ಮತ್ತು ದೇಹವು ರೋಗಾದಿಗಳಿಗೆ ಸುಲಭವಾಗಿ ಸಿಕ್ಕಿಕೊಳ್ಳುವುದಿಲ್ಲ. ನಾನಾ ತರವಾದ ಅಜೀರ್ಣ ರೋಗಗಳಿಂದ ನರಳುವವರು ಪ್ರಾತಃಕಾಲದ ತಣ್ಣೀರಿನ ಸ್ನಾನವನ್ನು ಅಭ್ಯಾಸ ಮಾಡುವುದು ತಮ್ಮ ಕರ್ತವ್ಯವೆಂದು ಭಾವಿಸಬೇಕು. ಆದರೆ ಅಂಥವರು ಮೇಲೆ ಸೂಚಿಸಿರುವ ಕಟ್ಟಳೆಗಳನ್ನು ಮಾತ್ರ ಮರೆಯದೆ ಅನುಸರಿಸತಕ್ಕದು.

ಪೈರುಗಳನ್ನು ನಾಶಮಾಡತಕ್ಕ ಹುಳಗಳು.

ಹುಳಗಳು ಬೀಳದಂತೆ ಉಪಾಯಗಳು —೧. ಭೂಮಿಯನ್ನು ಚೆನ್ನಾಗಿ ವ್ಯವಸಾಯ ಮಾಡಿ ಕಳೆಗಳಿಲ್ಲದಂತೆ ಪಾಕಾಗಿಡಬೇಕು. ಏಕೆಂದರೆ, ಹುಳಗಳು ಜಮೀನಿನಲ್ಲಿ ಕಳೆಗಳಲ್ಲಿಯೇ ಜೀವಿಸಿಕೊಂಡಿದ್ದು ಅನುಕೂಲವಾದ ಪೈರು ಬೆಳೆದ ನಂತರ ಹೆಚ್ಚು ಆಹಾರ ಒದಗುವದರಿಂದ ಅತಿ ಜಾಗ್ರತೆಯಾಗಿ ಹೊಲವನ್ನೆಲ್ಲಾ ಆವರಿಸಿಕೊಳ್ಳುತ್ತವೆ

೨. ಪೈರುಗಳಿಗೆ ಹುಳ ಬಿದ್ದಿದ್ದರೆ ಫಸಲನ್ನು ಕಟಾವು ಮಾಡಿದ ಕೂಡ್ಲೆ ಪೈರನ್ನೆಲ್ಲಾ ತಡಮಾಡದೆ ಹೊಲದಿಂದ ಸಾಗಿಸಬೇಕು. ಹೇಗೆಂದರೆ, ಜೋಳದ ತೆನೆಗಳನ್ನು ಮಾತ್ರ ಬಿಡಿಸಿಕೊಂಡು ದಂಟುಗಳನ್ನು ಹೊಲದಲ್ಲಿಯೇ ಬಿಟ್ಟಿದ್ದರೆ ದಂಟುಗಳಲ್ಲಿ ಹುಳುಗಳು ವೃದ್ಧಿಯಾಗಿ ಹೊಸದಾಗಿ ಹಾಕುವ ಪೈರಿಗೂ ಸಹ ಹತ್ತುತ್ತವೆ. ಹಾಗೆಯೇ ಹುಳು ಹತ್ತಿದ ಹತ್ತಿ ಬುಡ್ಡುಗಳನ್ನು ಆರಿಸದೆ ಹೊಲದಲ್ಲಿಯೇ ಬಿಟ್ಟಿದ್ದರೆ ಮುಂದಿನ ಸಾಲಿನಲ್ಲಿ ಆಸ್‌ಪಾಸ್ ಹತ್ತಿ ಹೊಲಗಳಿಗೆ ಹುಳುಗಳು ಹೆಚ್ಚಾಗಿ ಹತ್ತುತ್ತವೆ ಆದ್ದರಿಂದ ಪೂರಾ ಪೈರನ್ನು ಹೊಲದಿಂದ ಸಾಗಿಸಬೇಕಲ್ಲದೆ ನಿಂತದ್ದನ್ನು ಹೊಲದಲ್ಲಿಯೇ ಸುಟ್ಟುಬಿಡಬೇಕು

೩. ಹೊಲಗಳಲ್ಲಿ ಒಂದೇತರದ ಫಸಲನ್ನು ಇಡದೆ ಅನೇಕ ತರಹೆ ಪೈರುಗಳನ್ನಿಡುವದು ಒಳ್ಳೇದು ಇದರಿಂದ ಹುಳವು ತನಗೆ ಬೇಕಾದ ಪೈರನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆಯಾದ ಕಾರಣ ಇದರ ಹಾವಳಿಯು ಕಡಮೆಯಾಗುತ್ತದಲ್ಲದೆ ಬಹಳ ಗಿಡಗಳ ಮೇಲೆ ಮೊಟ್ಟೆಯಿಟ್ಟು ವೃದ್ಧಿಯಾಗುವದಕ್ಕೆ ಸಾಧ್ಯವಾಗುವದಿಲ್ಲ ನಾಗಪುರದ ಫಾರಂನಲ್ಲಿ ನಡೆದ ಅಜಮಾಯಿಷಿಯಲ್ಲಿ ಈ ಸಂಗತಿಯು ನಿರ್ಧರಪಟ್ಟಿತು ಹೇಗೆಂದರೆ, ಒಂದು ಹೊಲದಲ್ಲಿ ಬರೀ ತೊಗರಿ ಫಸಲನ್ನೆ ಮಾಡಿದ್ದರಲ್ಲಿ ಒಂದು ಜಾತಿ ಹುಳ ಹತ್ತಿ ಹೀಚುಗಳನ್ನೆಲ್ಲಾ ತಿಂದು ನಷ್ಟಪಡಿಸಿತು ಇದೇ ಬೆಳೆಯನ್ನು ಹತ್ತಿ ಮತ್ತು ಜೋಳದ ಪೈರುಗಳೊಂದಿಗೆ ಇಟ್ಟಿದ್ದರಲ್ಲಿ ಬೆಳೆಗೆ ಹುಳ ಹತ್ತಲಿಲ್ಲ.

೪. ಹುಳಗಳನ್ನು ಕೈಯಿಂದ ಕಿತ್ತುಹಾಕುವದು ಇದು ಕೆಲವು ಸಂದರ್ಭಗಳಲ್ಲಿ ಮಾತ್ರ ಸಾಧ್ಯವಾಗುತ್ತೆ. ಹುಳಗಳು ತಲೆದೋರಿದ ಕೂಡ್ಲೆ ಹೀಗೆ ಮಾಡಿದಲ್ಲಿ ಇವು ವೃದ್ಧಿಗೊಳ್ಳುವದನ್ನು ತಪ್ಪಿಸಬಹುದು. ಈ ಹುಳಗಳನ್ನು ಕಂಬಳಿ ಹುಳುವಿನ ಸ್ಥಿತಿಯಲ್ಲಿ ಅಲ್ಪಸ್ವಲ್ಪವಾಗಿದ್ದಾಗ ಕಿತ್ತುಹಾಕಿದರೇನೆ ಪೈರನ್ನು ಇವುಗಳ ಹಾವಳಿಯಿಂದ ಉಳಿಸಿಕೊಳ್ಳಬಹುದು ಇಲ್ಲವಾದರೆ ಅವು ಜಾಗ್ರತೆಯಲ್ಲಿ ಅಸಂಖ್ಯಾತವಾಗಿ ವೃದ್ಧಿಯಾಗುವವು ಆಗ್ಯೆ ಇವನ್ನು ನಾಶಪಡಿಸುವದು ಅಸಾಧ್ಯ

ಪರಿಹಾರ ಕ್ರಮಗಳು.—ಪೈರಿಗೆ ಹುಳುಬಿದ್ದರೆ ಅದನ್ನು ಪರಿಹರಿಸುವದು ಅನೇಕವೇಳೆ ಬಹಳ ಕಷ್ಟ. ಹೇಗೆಂದರೆ, ಅನೇಕವೇಳೆ ಹುಳುಗಳು ವೃದ್ಧಿಯಾಗಿ ಫಸಲನ್ನು ವಿಶೇಷವಾಗಿ ನಷ್ಟಪಡಿಸುವವರೆಗೂ ಇವುಗಳಿರುವ ಸಂಗತಿಯು ಗೋಚರಕ್ಕೆ ಬರುವದಿಲ್ಲ. ಕ್ರಿಮಿಕೀಟಗಳನ್ನು ತಿನ್ನುವ ಮೈನಾ ಮುಂತಾದ ಅನೇಕ ಪಕ್ಷಿಗಳು ಪೈರು ನಾಶಮಾಡುವ ಹುಳಗಳನ್ನು ತಿಂದು ಸಹಾಯಮಾಡುತ್ತವೆ. ಆದರೆ ಇವು ಹೊರಗೆ ಕಾಣುವ ಹುಳುಗಳನ್ನು ಮಾತ್ರ ತಿನ್ನುವದಾಗಿ ತಿಳಿದುಬರುತ್ತೆ. ಕೆಲವು ಸಂದರ್ಭಗಳಲ್ಲಿ ಚಿಕ್ಕ ಕೊಳವೆಗಳಿಂದ ದ್ರಾವಕಗಳನ್ನು ಪೈರುಗಳ ಮೇಲೆ ಚಿಮುಕಿಸುವದು ಒಂದು ಪರಿಹಾರ. ಆದರೆ ಈ ಕ್ರಮದಿಂದ ಗಿಡಗಳ ಮೇಲ್ಭಾಗದಲ್ಲಿ ಇದ್ದುಕೊಂಡು ನಾಶಪಡಿಸುವ ಹುಳಗಳನ್ನು ಮಾತ್ರ ಕೊಲ್ಲಬಹುದೆ ಶಿವಾಯಿ ಕಾಳುಗಳನ್ನು ಕೊರೆದು ಒಳಗೆ ಸೇರಿಕೊಳ್ಳುವ ಹುಳುಗಳನ್ನು ನಾಶಮಾಡುವದು ಸಾಧ್ಯವಲ್ಲ ಸಾಮಾನ್ಯವಾಗಿ ಒಂದು ಹೊಲಕ್ಕೆ ಹುಳ ಹತ್ತಿದರೆ ಈ ಪರಿಹಾರ ಕ್ರಮವು ಅಷ್ಟು ಉಪಯೋಗವಾಗುವದಿಲ್ಲ.

ರೆ. ಮತ್ತು ವ್ಯ. ಗೆ.

ವಿವಿಧ ಸಂಗತಿಗಳು.

ರೊಮೇನಿಯಾ ದೇಶದಲ್ಲಿ ಸ್ತ್ರೀಯರಿಗೋಸ್ಕರ ಒಂದು ಜೈಲ್ ಖಾನೆಯು ಇರುವುದು ಅಲ್ಲಿರುವ ಕೆಲಸದವರೆಲ್ಲರೂ ಹೆಂಗಸರಂತೆ

ಜೇನು ನೊಣಗಳಿಗೆ ಬಹಳ ಆಶ್ಚರ್ಯಕರವಾದ ದೂರದೃಷ್ಟಿಯು ಇರುವುದು. ಅವು ಅಂತರಿಕ್ಷದಲ್ಲಿರುವಾಗಲೇ ಬಹು ದೂರದಿಂದ ತಮ್ಮ ಗೂಡುಗಳನ್ನು ನೋಡುವುವು.

ಸರ್ ಟಾಮಸ್ ಲಿಪ್ಟನು ಎಂಬ ಇಂಗ್ಲೀಷ್ ಕೋಟ್ಯಾಧೀಶ್ವರನು ದೋಣಿಯ ಜೂಜಿನಲ್ಲಿ ಅಮೇರಿಕದವರನ್ನು ಸೋಲಿಸುವುದಕ್ಕೆ ಸುಮಾರು ಹದಿನೈದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿರುವನು.

ಪ್ಯಾರಿಸ್ ಪಟ್ಟಣದಲ್ಲಿ ಪಕ್ಷಿಗಳಿಗೋಸ್ಕರ ಒಂದು ಪಾಠಶಾಲೆಯನ್ನು ಏರ್ಪಡಿಸಿರುತ್ತಾರೆ. ಪಾಠಶಾಲೆಯಲ್ಲಿ ತರಪೇತಾದ ಗಿಣಿಗಳು ಅಂಗಡಿಯಲ್ಲಿರುವ ಪದಾರ್ಥಗಳ ಗುಣಕಥನವನ್ನು ಮಾಡುವುವಂತೆ

ಲೋಕಪ್ರಸಿದ್ಧವಾದ ಬ್ಯಾಂಕು ಲಂಡನ್‌ಪಟ್ಟಣದಲ್ಲಿರುತ್ತದೆ ಆ ಬ್ಯಾಂಕಿನಲ್ಲಿ ಪ್ರತಿ ವಾರವೂ ಮೂರು ಲಕ್ಷದ ಐವತ್ತು ಸಾವಿರ ಹಳೆಯದಾದ ಮತ್ತು ಹರಿದುಹೋದ ನೋಟುಗಳನ್ನು ಸುಟ್ಟುಹಾಕುವರು

ಆಸ್ಟ್ರೇಲಿಯಾ ದೇಶದಲ್ಲಿ ವಾಸಮಾಡುವ ಸಿಡ್ನಿ ಕಿಡ್ಮ್ಯಾನ್ ಎಂಬ ರೈತನು ತನ್ನ ಸ್ವಂತಕ್ಕೆ ಅರವತ್ತು ಸಾವಿರ ದನಗಳನ್ನು ಸಾಕುತ್ತಿರುವನು. ಇದೂ ಅಲ್ಲದೆ ಇವನಿಗೆ ಇನ್ನೂರೈವತ್ತು ಲಕ್ಷ ಎಕರೆಗಳ ಜಮೀನಿರುವದು

ಒಬ್ಬ ವಿದ್ಯಾವಂತರು ತಿಳಿಸುವ ಪ್ರಕಾರ ಭೂಲೋಕದಲ್ಲಿ ಪಕ್ಷಿಗಳಿಲ್ಲದಿದ್ದರೆ, ಈ ಭೂಮಿಯು ಹತ್ತು ವರುಷದೊಳಗಾಗಿ ನಾಶಹೊಂದುವುದಂತೆ ಭೂಲೋಕದಲ್ಲಿ ಉತ್ಪನ್ನವಾಗುವ ಲಕ್ಷೋಪಲಕ್ಷ ವಿಷಜಂತುಗಳನ್ನೂ ಹುಳುಹುಪ್ಪಟೆಗಳನ್ನೂ ಪಕ್ಷಿಗಳು ನಾಶಮಾಡುವುವು

ಜರ್ಮನಿ ದೇಶದ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿರುವ ಮುನ್ನೂರು ಬೀದಿಗಳಲ್ಲಿ ನಲವತ್ತು ನಾಲ್ಕು ಸಾವಿರ ಮರಗಳನ್ನು ನೆಟ್ಟಿರುವರು. ಈ ಮರಗಳ ಕರೀದಿಯು ಸುಮಾರು ಆರು ಲಕ್ಷ ರೂಪಾಯಿಗಳಾಗುವುವು ಇವುಗಳನ್ನು ನೋಡಿಕೊಳ್ಳುವುದಕ್ಕೆ ಒಂದು ಸಾವಿರ ತೋಟಗಾರರಿರುವರು.

ಜಪಾನ್ ದೇಶದಲ್ಲಿ ಸೋಜಾ ಎಂಬ ಒಂದು ವಿಧವಾದ ಗಿಡದಿಂದ ಕರೆಯುವ ಹಾಲನ್ನು ತಯಾರುಮಾಡುತ್ತಾರೆ. ಈ ಹಾಲಿಗೂ ಹಸುವಿನ ಹಾಲಿಗೂ ಬಣ್ಣದಲ್ಲಾದರೂ ರುಚಿಯಲ್ಲಾದರೂ ಯಾವ ವ್ಯತ್ಯಾಸವೂ ಕಂಡುಬರುವದಿಲ್ಲವಂತೆ. ಜನರು ಇದಕ್ಕೆ ಸ್ವಲ್ಪ ಸಕ್ಕರೆಯನ್ನು ಸೇರಿಸಿ ಕಾಫಿಯಂತೆ ಕುಡಿಯುವರು

ಇಟಲಿ ಸರಕಾರದವರು ಸರ್ಕಸ್ ಮತ್ತು ನಾಟಕ ವಿಷಯಗಳಲ್ಲಿ ಬಹು ಕಠಿಣವಾದ ಕಟ್ಟಳೆಗಳನ್ನು ಕೊಟ್ಟಿರುವರು ನಾಟಕದಲ್ಲಿ ಆಡಲ್ಪಡುವ ಪ್ರತಿಯೊಂದು ಅಂಕದ ವಿವರಣೆಯನ್ನೂ ಪೋಲೀಸಿನವರಿಗೆ ತಿಳಿಸಬೇಕಾಗಿದೆ ಜನರಿಗೆ ಯಾವ ವಿಧದಲ್ಲಾದರೂ ತಪ್ಪಾದ ಭಾವನೆಯನ್ನು ಹುಟ್ಟಿಸುವ ಆಟಗಳನ್ನಾಡಿದರೆ ಅಂಥವರನ್ನು ಸರ್ಕಾರದವರು ಶಿಕ್ಷಿಸುವರು.

ಅಮೇರಿಕಾ ದೇಶದ ರಾಜಧಾನಿಯಾದ ನ್ಯೂಯಾರ್ಕ್ ಪಟ್ಟಣದಲ್ಲಿ ನಲವತ್ತೇಳು ಅಂತಸ್ತುಗಳುಳ್ಳ ಒಂದು ಭಾರಿ ಮನೆಯನ್ನು ಕಟ್ಟುತ್ತಿರುವರು. ಕಟ್ಟಡಕ್ಕೆ ಒಂದು ಎತ್ತರವಾದ ಗೋಪುರವಿರುವುದು ಈ ಗೋಪುರಕ್ಕೆ ಮೂವತ್ತಾರು ಅಂತಸ್ತುಗಳಿರುವವು. ಕಟ್ಟಡವು ಭೂಮಿಯಿಂದ ಗೋಪುರದ ಕೊನೆಗೆ ೯೦೦ ಅಡಿ ಎತ್ತರವಿರುತ್ತದೆ

ಈಚೀಚೆಗೆ ಕಾಗದವನ್ನು ಹಲವು ಬಗೆಯಾಗಿ ಉಪಯೋಗಿಸುವರು. ಟೆಲಿಗ್ರಾಫ್ ಕಟ್ಟಣದ ಕಂಭಗಳಿಗೆ ಬದಲಾಗಿ ಕಾಗದದ ಕಂಭಗಳನ್ನೇ ಉಪಯೋಗಿಸುವರು. ರೈಲ್ ಚಕ್ರಗಳನ್ನು ಕಾಗದದಿಂದ ಮಾಡುವುದೂ ಉಂಟು. ಈಗ್ಗೆ ನೂತನವಾಗಿ ತುಪಾಕಿಯ ಗುಂಡುಗಳನ್ನು ಕಾಗದದಿಂದಲೇ ಮಾಡುತ್ತಿರುವರು ಸೀಸದ ಗುಂಡುಗಳಿಗಿಂತಲೂ ಕಾಗದದ ಗುಂಡುಗಳು ಚೆನ್ನಾಗಿ ತಗಲುವುವಂತೆ.

ರಷ್ಯಾ ದೇಶದ ಚಕ್ರವರ್ತಿಯವರು ಕ್ರುಪ್ ಎಂಬ ಜರ್ಮನ್ ಕಾರ್ಖಾನೆಯಲ್ಲಿ ಒಂದು ದೊಡ್ಡ ಫಿರಂಗಿಯನ್ನು ತಯಾರುಮಾಡಿಸಿರುತ್ತಾರೆ. ಅದಕ್ಕೆ ಹಾಕುವ ಗುಂಡಿನ ತೂಕವು ಎರಡು ಸಾವಿರದ ಆರುನೂರು ಪೌಂಡು ಭಾರವಾಗುವುದು ಈ ಫಿರಂಗಿಯನ್ನು ಕ್ರಾನ್‌ಸ್ಟಾಟ್ ಕೋಟೆಯ ಮೇಲಿಟ್ಟಿರುವರು. ಇದರ ಗುಂಡು ಹನ್ನೆರಡು ಮೈಲಿಗಳ ದೂರ ಹೋಗುವುದು. ಒಂದಾವರ್ತಿ ಇದನ್ನು ಬಾರ್‌ಮಾಡಿ ಗುಂಡು ಹಾರಿಸಿದರೆ ನಾಲ್ಕು ಸಾವಿರದ ಐನ್ನೂರು ರೂಪಾಯಿ ಖರ್ಚು ತಗಲುವುದು

ಅಮೇರಿಕಾ ದೇಶದ ನ್ಯೂಜರ್ಸಿ ಪಟ್ಟಣದಲ್ಲಿ ಲೋಕದಲ್ಲೆಲ್ಲಾ ದೊಡ್ಡದಾದ ಗಡಿಯಾರವನ್ನಿಡಬೇಕೆಂದು ಅಂದಾಜಾಗಿದೆ. ಈ ಗಡಿಯಾರದ ಮುಂದೆ ಇದುವರಿವಿಗೂ ಲೋಕದಲ್ಲೆಲ್ಲಾ ದೊಡ್ಡದೆಂದೆನ್ನಿಸಿಕೊಂಡಿದ್ದ ಲಂಡನ್ ಪಟ್ಟಣದ ಗಡಿಯಾರವು ಹೋಲಿಕೆ ಇಲ್ಲದಷ್ಟು ಸಣ್ಣದಾಗಿದೆ ಎಂದು ಹೇಳುವರು ಈ ಹೊಸ ಗಡಿಯಾರದ ಘಂಟೆ ತೋರಿಸುವ ಮುಳ್ಳುಗಳನ್ನು ಸಾಗಿಸುವುದಕ್ಕೆ ಒಂದು ದೊಡ್ಡ ಗಾಡಿಯನ್ನೇ ಉಪಯೋಗಿಸಬೇಕಾಯಿತು ಮುಳ್ಳಿನ ಉದ್ದ ಹದಿನೆಂಟು ಕಾಲು ಅಡಿಗಳಾಗುವುವು. ಅದರ ತೂಕ ಕಾಲುಟನ್. ಒಂದು ನಿಮಿಷಕ್ಕೆ ಈ ಮುಳ್ಳು ಇಪ್ಪತ್ತು ಮೂರು ಅಂಗುಲ ಜರುಗುವುದು. ಅಂದರೆ ದಿನ ಒಂದಕ್ಕೆ ಅರ್ಧ ಮೈಲು ಪ್ರಯಾಣ ಮಾಡಿದಂತಾಗುವುದು. ಗಂಟೆಗಳನ್ನು ಬರೆದಿರುವ ಗಾಜಿನ ಪಟ್ಟಿಯ ಅಗಲ ಇಪ್ಪತ್ತೆಂಟು ಅಡಿಗಳಾಗುತ್ತವೆ. ಇಂಥಾ ದೊಡ್ಡ ಗಡಿಯಾರದ ತೂಕವು ಆರು ಟನ್ನುಗಳಾಗುವುವು. ಇದು ಘಂಟೆ ಹೊಡೆದರೆ ಇನ್ನೆಷ್ಟು ದೂರ ಕೇಳಿಸುವುದೋ ಅದನ್ನು ವಾಚಕರೇ ಊಹಿಸಬೇಕು.

ಹೈದರಲ್ಲಿಯ ಕಾಲದಲ್ಲಿ ಶ್ರೀರಂಗಪಟ್ಟಣಕ್ಕೆ ಒಬ್ಬ ಕ್ರೈಸ್ತಪಾದ್ರಿಯು ಬಂದದ್ದು.

[ಕಳೆದ ವಾರದ ಶೇಷ]

ಆತನು ತನ್ನ ಸೇವಕರಿಗೆ ಇನಾಮುಗಳನ್ನು ಕೊಟ್ಟರೂ ಎಲ್ಲರನ್ನೂ ಭಯದಲ್ಲಿಟ್ಟಿರುತ್ತಾನೆ. ಪ್ರತಿ ದಿವಸದಲ್ಲಿಯೂ ಅನೇಕರಿಗೆ ಚಾವಟಿ ಏಟುಗಳು ಬಿದ್ದೇಬೀಳುತ್ತವೆ. ಈ ಕೆಲಸಕ್ಕೋಸ್ಕರ ಇನ್ನೂರು ಮಂದಿ ಆಳುಗಳು ಚಾವಟಿಗಳನ್ನು ಕೈಯಲ್ಲಿ ಹಿಡಿದು ಯಾವಾಗಲೂ ಸಿದ್ಧರಾಗಿರುವರು. ಆವನು ಶಿಕ್ಷಿಸುವುದರಲ್ಲಿ ಪಕ್ಷಪಾತಿಯಲ್ಲ. ಉನ್ನತಪದವಿಯಲ್ಲಿರುವವರನ್ನೂ ಕನಿಷ್ಠಪದವಿಯಲ್ಲಿರುವವರನ್ನೂ ಕಡೆಯಲ್ಲಿ ತನ್ನ ಮಕ್ಕಳನ್ನೂ ಸಹ ಏಕರೀತಿಯಿಂದ ಶಿಕ್ಷಿಸುವನು. ಒಂದಾನೊಂದು ಸಮಯದಲ್ಲಿ ನಾನು ಅರಮನೆಗೆ ಹೋಗಿದ್ದೆ. ಆಗ್ಗೆ ಅಲ್ಲಿ ಕೂತಿದ್ದವರೆಲ್ಲರೂ ಬಹು ಭಯದಿಂದ ನಡುಗುತ್ತಿದ್ದರು. ಅವರ ಭಯಕ್ಕೆ ಕಾರಣವೇನೆಂದು ವಿಚಾರಿಸುವಲ್ಲಿ ನನಗೆ ಯಾವ ಉತ್ತರವೂ ಸರಿಯಾಗಿ ಬರಲಿಲ್ಲ. ಸ್ವಲ್ಪಹೊತ್ತಾದ ಮೇಲೆ ಆಳುಗಳು ಒಬ್ಬ ದೊಡ್ಡ ಅಧಿಕಾರಿಯನ್ನು ಹಿಡಿದುಕೊಂಡು ಬಂದರು ಈತನು ಲಂಚಕೋರನಾಗಿದ್ದು ಪ್ರಜೆಗಳನ್ನು ಹಿಂಸಿಸುತ್ತಿದ್ದನು. ಹೈದರನು ಇವನನ್ನು ವಿಚಾರಣೆಮಾಡಿ ತಪ್ಪುಕಂಡುಬಂದದ್ದರಿಂದ ಇವನನ್ನು ಬಹು ಕ್ರೂರವಾಗಿ ದಂಡಿಸಿದನು. ಇವನ ಬೆನ್ನಿನಿಂದ ರಕ್ತಬರುವ ತನಕ ಆಳುಗಳು ಇವನನ್ನು ಚಾವಟಿಯಿಂದ ಹೊಡೆದರು ಇವನ ಕೂಗಾಟವು ಆಕಾಶವನ್ನೆ ತುಂಬಿಸುವಂತೆ ಇತ್ತು. ಈ ನನ್ನ ವಿವರಣೆಯನ್ನು ಉತ್ಪ್ರೇಕ್ಷೆಯೆಂದು ಕೆಲವರು ನಂಬಬಹುದು ಆದರೂ ಇದು ನಿಜವಾಗಿಯೂ ನಡೆದ ಸಂಗತಿಯಾಗಿದೆ ಹೈದರನು ಕೊಡುತ್ತಿದ್ದ ಶಿಕ್ಷೆಗಳು ಕಠಿಣವಾಗಿ ಕಂಡುಬಂದರೂ ಅಂಥಾ ಶಿಕ್ಷೆಗಳನ್ನು ಪಡೆಯುವುದಕ್ಕೆ ಅನೇಕರು ಅರ್ಹರಾಗಿದ್ದರು ಅಧಿಕಾರಿಗಳು ಜನಗಳನ್ನು ನ್ಯಾಯ

ವಾದ ರೀತಿಯಲ್ಲಿ ಆಳುವುದಕ್ಕೆ ಬದಲು ಅವರನ್ನು ಹಿಂಸಿಸುತ್ತಲೂ ಅವರಿಂದ ಲಂಚವನ್ನು ತೆಗೆದುಕೊಳ್ಳುತ್ತಲೂ ಬರುತ್ತಿದ್ದರು ಇಂಥವರನ್ನು ಚೆನ್ನಾಗಿ ಶಿಕ್ಷಿಸದೆ ಹೋದರೆ ರಾಜ್ಯಭಾರವು ಕೆಟ್ಟುಹೋಗುವುದೆಂದು ಹೈದರನು ನಂಬಿದ್ದನು. ನಾನು ಹೈದರನ ಹತ್ತಿರಕ್ಕೆ ಬಂದಾಗ್ಗೆ ಆತನು ತನ್ನ ಪಕ್ಕದಲ್ಲಿ ಕೂತುಕೊಳ್ಳುವಂತೆ ನನಗೆ ತಿಳಿಸಿದನು. ನೆಲದ ಮೇಲೆ ರತ್ನಜಮಖಾನೆಯನ್ನು ಹಾಸಿದ್ದರು. ಹೈದರನು ನನ್ನನ್ನು ಬಹು ಮರ್ಯಾದೆಯಿಂದ ಕಂಡು ನನ್ನನ್ನು ತನ್ನ ಹತ್ತಿರ ಕೂರಿಸಿಕೊಂಡನು. ನಾನು ಹೇಳತಕ್ಕ ಸಂಗತಿಗಳನ್ನೆಲ್ಲಾ ಆತನಿಗೆ ತಿಳಿಸಿದೆನು ಆತನು ಯಾವ ವಿಧವಾದ ಆಯಾಸವಿಲ್ಲದೆ ನಾನು ಹೇಳಿದುದನ್ನೆಲ್ಲಾ ಸಾವಧಾನದಿಂದ ಕೇಳಿ ನನಗೆ ತನ್ನಭಿಪ್ರಾಯವನ್ನು ಪರಿಷ್ಕಾರವಾಗಿ ತಿಳಿಸಿದನು ಇಂಗ್ಲೀಷರು ಅವು ಕೊಟ್ಟ ಭಾಷೆಯನ್ನು ವಿಚಾರಿ ನಡೆದಿದ್ದರೂ ನಾನಂತೂ ಅವರ ಸಂಗಡ ಸಮಾಧಾನದಿಂದಿರಬೇಕೆಂದುದ್ದೇಶಪಟ್ಟಿರುವೆನು ಎಂಬ ಅಭಯವನ್ನು ಆತನು ಕೊಟ್ಟನು. ಆವೇಳೆ ಆತನು ನಮ್ಮಿಬ್ಬರಿಗೂ ನಡೆದ ಸಂಭಾಷಣೆಯನ್ನು ಒಂದು ಕಾಗದದಲ್ಲಿ ಬರೆಸಿ ಅದನ್ನು ಓದಿಸಿದನು ಇದು ಅಲ್ಲದೆ ನಾನು ಸಹ ಇಂಗ್ಲಿಷ್ ಗವರ್ನರ ಸಂಗಡ ಸಾಕ್ಷಾತ್ ಮಾತನಾಡಬೇಕೆಂದು ಆತನು ಕೇಳಿಕೊಂಡನು ನಾನು ಹೈದರನ ಆಸ್ಥಾನದಲ್ಲಿರುವಾಗ್ಗೆ ಅವನು ರಾಜ್ಯಭಾರಕ್ಕೆ ಸಂಬಂಧಪಟ್ಟ ಕೆಲಸಗಳನ್ನು ಮಾಡುವ ವಿಧಾನವನ್ನು ನೋಡಿದೆನು. ಅವನು ಕೂತುಕೊಂಡಿರುವಾಗ್ಗೆ ವಕೀಲರು ಅವನಿಗೆ ತನ್ನ ರಾಜ್ಯದ ಕಾರುಬಾರುಗಳನ್ನು ಓದಿ ತಿಳಿಸುವರು. ಆತನು ಕಾಲವಿಳಂಬಮಾಡದೆ ಆಯಾ ಕೆಲಸಗಳನ್ನು ಜಾಗ್ರತೆಯಲ್ಲಿಯೇ ಪೂರೈಸುವನು. ಹೈದರನು ನಿರಕ್ಷರಕುಕ್ಷಿಯಾಗಿದ್ದನು ಅವನ ಸ್ವಂತ ಹೆಸರನ್ನು ಬರೆಯುವುದಕ್ಕೂ ಆತನಿಗೆ ಬರುತ್ತಿರಲಿಲ್ಲ. ಹೀಗಿದ್ದರೂ ಅವನಿಗೆ ವಿಶೇಷವಾದ ಜ್ಞಾಪಕಶಕ್ತಿ ಇತ್ತು. ಅವನು ಕೊಟ್ಟ ಸಲಹೆಗಳನ್ನು ವಕೀಲರು ಕಾಗದದ ಮೇಲೆ ಸರಿಯಾಗಿ ಬರೆದಿರುತ್ತಾರೋ ಇಲ್ಲವೋ ಎಂಬುದನ್ನು ನಿಶ್ಚಯಪಡಿಸಿಕೊಳ್ಳುವುದಕ್ಕೋಸ್ಕರ ಸದರಿ ಪತ್ರಗಳನ್ನು ಬೇರೆ ಜನಗಳ ಹತ್ತಿರ ಓದಿಸುತ್ತಿದ್ದನು. ಆತನು ತಿಳಿಸಿದ ಪ್ರಕಾರ ಬರೆಯದೆ ಇದ್ದವರ ಗತಿಯನ್ನೇನೆಂಬದಾಗಿ ಹೇಳಲಿ ಅವರ ಪ್ರಾಣವನ್ನೇ ತೆಗೆದುಬಿಡುತ್ತಿದ್ದನು ಹೈದರನು ಮತಾಸಕ್ತನಲ್ಲ ತನ್ನ ಪ್ರಜೆಗಳಲ್ಲಿ ಯಾರಾದರೂ ಯಾವ ಮತವನ್ನಾಗಲೀ ಅವಲಂಬಿಸಬಹುದು ಆತನ ಸೈನ್ಯವನ್ನು ನಾಲ್ಕು ಮಂದಿ ಉದ್ಯೋಗದವರು ನೋಡಿಕೊಳ್ಳುತ್ತಾರೆ ಈ ಉದ್ಯೋಗದವರಿಗೆ ಭಕ್ಷಿಗಳೆಂಬ ಬಿರುದಿರುವುದು ಅವರು ಸೈನ್ಯದವರಿಗೆ ಸಂಬಳ ಬಟವಾಡೆ ಮಾಡುವುದಲ್ಲದೆ ಸೈನ್ಯಕ್ಕೆ ಸೇರಲು ಹೊಸಬರನ್ನು ತಂದು ಸೇರಿಸುತ್ತಿದ್ದರು ಇವರು ಅನೇಕ ವೇಳೆಗಳಲ್ಲಿ ನ್ಯಾಯಾಧಿಪತಿಗಳಾಗಿದ್ದು ಜನರ ವ್ಯವಹಾರಗಳನ್ನು ಫೈಸಲ್ಮಾಡುತ್ತಿದ್ದರು ಈ ಬಕ್ಷಿಗಳು ಜಾತಿಯಲ್ಲಿ ಮುಸಲ್ಮಾನರಾಗಿದ್ದರು ಇವರು ನನ್ನನ್ನು ದೇವರಿಗೆ ಸಲ್ಲಿಸತಕ್ಕ ನಿಜವಾದ ಪ್ರಾರ್ಥನೆಯು ಯಾವುದೆಂಬುದಾಗಿ ಪ್ರಶ್ನೆ ಮಾಡಿದರು ಅದಕ್ಕೆ ನಾನು ಮನುಷ್ಯರೆಲ್ಲರೂ ಪಾಪಿಗಳಾಗಿರುತ್ತಾರೆಂತಲೂ ತಾವು ಮಾಡುತ್ತಿರುವ ಪಾಪಕೃತ್ಯಗಳಿಗೆ ದೇವರಿಂದ ಶಿಕ್ಷೆ ಹೊಂದುವುದಕ್ಕೆ ಅರ್ಹರಾಗಿರುತ್ತಾರೆಂತಲೂ ಪಾಪಿಗಳಾದ ಮನುಷ್ಯರನ್ನು ರಕ್ಷಿಸುವುದಕ್ಕೋಸ್ಕರ ಯೇಸು ಕ್ರಿಸ್ತನು ಭೂಲೋಕದಲ್ಲಿ ಅವತರಿಸಿದನೆಂತಲೂ ಪಾಪಿಗಳಾದ ಮನುಷ್ಯರಿಗೂ ಪರಮ ಶಾಂತಿಯಾದ ದೇವರಿಗೂ ಯೇಸು ಕ್ರಿಸ್ತನು ಮಧ್ಯಸ್ಥನಾಗಿರುತ್ತಾನೆಂಬದಾಗಿಯೂ ಪ್ರಸಂಗಿಸಿದೆನು ಇದಲ್ಲದೆ ಯೇಸು ಕ್ರಿಸ್ತನು ತನ್ನ ಮತದವರಿಗೆ ಕಲಿಸಿಕೊಟ್ಟಿರುವ ದಿವ್ಯವಾದ ಪ್ರಾರ್ಥನೆಯನ್ನು ಇವರಿಗೆ ವಿವರಿಸಿದೆನು ಪರ್ಷಿಯನ್ ಭಾಷೆಯು ಯಾರ್ಯಾರಿಗೆ ಚೆನ್ನಾಗಿ ಬರುತ್ತಿತ್ತೋ ಅವರಿಗೆ ಆ ಭಾಷೆಯಲ್ಲಿ ಪ್ರಸಂಗಿಸಿದೆನು ಹಿಂದೂಸ್ಥಾನಿ ಭಾಷೆಯ ಪರಿಚಯವಿದ್ದವರಿಗೆ ಹಿಂದೂಸ್ಥಾನಿ ಭಾಷೆಯಲ್ಲಿ ಪ್ರಸಂಗಿಸುತ್ತಿದ್ದೆನು. ಹೈದರನ ಹತ್ತಿರ ಕೆಲಸ ಮಾಡುವ ಮಂತ್ರಿಗಳಲ್ಲಿ ಮುಖ್ಯ ಮಂದಿ ಬ್ರಾಹ್ಮಣರೇ ಆಗಿರುತ್ತಾರೆ. ಅವರ ಸಂಗಡ ನಾನು ಪದೇ ಪದೇ ಕ್ರೈಸ್ತಮತ ತತ್ವಗಳನ್ನು ಕುರಿತು ಚರ್ಚಿಸುತ್ತಿದ್ದೆನು. ಅವರಲ್ಲಿ ಕೆಲವರು ನನ್ನ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದರು. ಮತ್ತೆ ಕೆಲವರು ಸುಮ್ಮನಿರುತ್ತಿದ್ದರು ಇನ್ನೂ ಕೆಲವರು ತಮ್ಮ ಗುಡಿಗೋಪುರಗಳನ್ನು ನನಗೆ ತೋರಿಸಿ ಅವುಗಳನ್ನು ತಮ್ಮ ಪೂರ್ವಿಕರು ವ್ಯರ್ಥವಾಗಿ ಕಟ್ಟಲಿಲ್ಲವೆಂದು ಹೇಳಿದರು ಅದಕ್ಕೆ ನಾನು—ಗುಡಿಗೋಪುರಗಳು ಮುಂದಕ್ಕೆ ಯಾವದಾದರೊಂದು ಉಪಯುಕ್ತವಾದ ಕೆಲಸಗಳಿಗೆ ಬರಬಹುದು. ಆದರೆ ಅವುಗಳಲ್ಲಿರುವ ವಿಗ್ರಹಗಳು ಮಾತ್ರ ಖಂಡಿತವಾಗಿಯೂ ಪೂಜಿಸಲ್ಪಡುವದಿಲ್ಲವೆಂದು ತಿಳಿಸಿದೆನು. ಕೋಟೆಯ ಹೊರಗಡೆಯಲ್ಲಿ ಸುಮಾರು ನೂರು ಮಂದಿ ಯುರೋಪಿಯನ್ನರು ವಾಸಮಾಡಿಕೊಂಡಿರುತ್ತಾರೆ ಇವರೆಲ್ಲರೂ ಕುದುರೇ ಸೈನ್ಯಕ್ಕೆ ಸೇರಿರುತ್ತಾರೆ. ಇವರೆಲ್ಲರಿಗೂ ಜರ್ಮನಿ ದೇಶದವನೊಬ್ಬನು ಮುಖ್ಯಾಧಿಕಾರಿಯಾಗಿರುತ್ತಾನೆ ಪ್ರತಿ ಆದಿತ್ಯವಾರವೂ ನಾನು ಈ ಸೈನ್ಯದವರನ್ನು ಕೂಡಿಸಿಕೊಂಡು ದೇವಾರಾಧನೆಯನ್ನು ನಡಿಸುತ್ತಿದ್ದೆನು. ನನ್ನನ್ನು ಯಾರೂ ಅಡ್ಡಿಮಾಡಲಿಲ್ಲ. ಮತ್ತು ನನ್ನ ಮನಸ್ಸಾಕ್ಷಿಯು ಯಾವ ರೀತಿಯಲ್ಲಿ ನನ್ನನ್ನು ನಡಿಸುತ್ತಿದೆಯೋ ಆ ರೀತಿಯಲ್ಲಿ ನಾನು ನಡೆಯುತ್ತಿರುವೆನು. ಹೈದರನ ಅರಮನೆಯಲ್ಲಿ ನಾನಿರುವಾಗ ಶ್ರೇಷ್ಠರಾದ ಅಧಿಕಾರಿಗಳೂ ಕನಿಷ್ಠರಾದ ಆಳುಗಳೂ ನನ್ನ ಹತ್ತಿರಕ್ಕೆ ಬಂದು ಕ್ರೈಸ್ತ ಮತವನ್ನು ಕುರಿತು ಚರ್ಚಿಸುತ್ತಿದ್ದರು. ಒಂದಾನೊಂದು ದಿನ ದರ್ಬಾರಿನಲ್ಲಿ ಹೈದರನ ಕಿರೀಮಗನು ನನಗೆ ನಮಸ್ಕಾರವನ್ನು ಮಾಡಿ ತಾನಿರುವ ಕೋಣೆಗೆ ನಾನು ಬರುವಂತೆ ಕೇಳಿಕೊಂಡನು ಅವನಿಗೆ ಹೈದರನ ಅಪ್ಪಣೆಯಾದರೆ ನಾನು ಖಂಡಿತವಾಗಿಯೂ ಬರುವೆನೆಂದು ತಿಳಿಸಿದೆನು ಹೈದರನ ಅಪ್ಪಣೆ ಇಲ್ಲದೆ ಯಾರಸಂಗಡಲಾದರೂ ಮಾತನಾಡುವುದು ಯುಕ್ತವಲ್ಲ. ಆತನು ಬೇಹುಗಾರರನ್ನು ಎಲ್ಲೆಲ್ಲಿಯೂ ನೇಮಿಸಿರುತ್ತಾನೆ ಹೀಗಿದ್ದರೂ ಮತಸಂಭಾಷಣೆ ನಡಿಸುವುದಕ್ಕೆ ಹೈದರನು ನನಗೆ ಸ್ವಾತಂತ್ರ್ಯವನ್ನು ಕೊಟ್ಟಿದ್ದನು. ಅನೇಕ ಸಮಯಗಳಲ್ಲಿ ನಾನು ಆತನ ಸಂಗಡ ಅರಮನೆಯ ಉದ್ಯಾನವನದಲ್ಲಿ ಕೂತುಕೊಂಡು ಸಂಭಾಷಿಸುತ್ತಿದ್ದೆನು ಆತನ ಉದ್ಯಾನವನವು ಬಹಳ ಸುಂದರವಾಗಿದೆ. ಅದರಲ್ಲಿರುವ ವೃಕ್ಷಗಳು ಎರಡು ತರವಾದ ಹಣ್ಣುಗಳನ್ನು ಬಿಡುವವು. ಹೈದರನಿಗೆ ಅನಾಥರಾದ ಮಕ್ಕಳ ಮೇಲೆ ಬಹಳ ಇಷ್ಟ ಆತನು ಶ್ರೀರಂಗಪಟ್ಟಣದಲ್ಲಿ ಒಂದು ಅನಾಥಾಲಯವನ್ನು ಏರ್ಪಡಿಸಿ ತನಗೆ ಸಿಕ್ಕತಕ್ಕ ಅನಾಥರನ್ನೆಲ್ಲಾ ಅಲ್ಲಿ ಸೇರಿಸಿ ಅವರಿಗೆ ವಿದ್ಯೆ ಕಲಿಸುವನು ಇದನ್ನು ನೋಡಿ ನನಗೆ ಬಹಳ ಸಂತೋಷವಾಯಿತು ಇಂಗ್ಲೀಷರು ಇವನ ಉದಾಹರಣೆಯನ್ನನುಸರಿಸಿ ತಮಗೆ ಸಿಕ್ಕತಕ್ಕ ಅನಾಥರನ್ನು ಸೇರಿಸಿ ಅವರಿಗೆ ಮತಬೋಧನೆಯನ್ನು ಕೊಟ್ಟರೆ ಇಂಗ್ಲೀಷರ ಹೆಸರು ಈ ದೇಶದಲ್ಲಿ ಚಿರಕಾಲವು ನಿಲ್ಲುವುದು. ನಾನು ಹೊರಟುಬರುವ ಕೊನೇ ದಿವಸದಲ್ಲಿ ಹೈದರನು ನಾನು ಫಾರಸಿ ಭಾಷೆಯನ್ನಾಡಬೇಕೆಂದು ಕೇಳಿಕೊಂಡನು. ಆತನನ್ನು ಸಂತೋಷಪಡಿಸುವುದಕ್ಕೆ ನಾನು ಆ ಭಾಷೆಯನ್ನಾಡಿದೆನು. ಆತನಿಗೆ ಫಾರಸಿ ಭಾಷೆಯನ್ನಾಡುವುದಕ್ಕೆ ಚೆನ್ನಾಗಿ ಬಾರದಿದ್ದರೂ ಅದನ್ನು ಕೇಳಿ ಗ್ರಹಿಸಿಕೊಳ್ಳುತ್ತಾನೆ. ನಾನು ಬಂದುದ್ದೇಶವನ್ನು ಅವನಿಗೆ ಪುನಃ ವಿವರಿಸಿದೆನು. ಯುದ್ಧವು ಘೋರವಾದುದೆಂತಲೂ ಅದು ದೇವರಿಗೆ ವಿರೋಧವಾದುದೆಂತಲೂ ದೇವರು ಸಮಾಧಾನವನ್ನೇ ಯಾವಾಗಲೂ ಅಪೇಕ್ಷಿಸುತ್ತಾನೆಂತಲೂ ತಿಳಿಸಿದೆನು ಈ ಘನವಾದ ಉದ್ದೇಶಗಳಿಂದಲೇ ದೇವರ ಸೇವಕನಾದ ನಾನು ಸಮಾಧಾನವನ್ನು ಬಯಸಿ ಇಲ್ಲಿಗೆ ಬಂದಿರುವೆನು. ಈ ನನ್ನ ಮನೋಗತವು ಕೈಗೂಡಿದರೆ ನನಗೆ ಹೇಳಕೂಡದಷ್ಟು ಆನಂದವಾಗುವುದು ಎಂಬುದಾಗಿ ಆತನಿಗೆ ತಿಳಿಸುವಲ್ಲಿ ಹೈದರನು ನಾನು ಹೇಳಿದುದನ್ನೆಲ್ಲಾ ಕೇಳಿ—ಆಗಲಿ ನಾನು ಸಹ ಇದೇ ಅಭಿಪ್ರಾಯವುಳ್ಳವನಾಗಿರುತ್ತೇನೆ ಇಂಗ್ಲೀಷರು ಸಮಾಧಾನದಿಂದಿರಬೇಕೆಂದಿದ್ದರೆ ನಾನು ಸಹ ಸಮಾಧಾನವನ್ನು ಬಯಸುವೆನು ಎಂಬದಾಗಿ ಮಾತುಕೊಟ್ಟನು." ಸ್ವಾರ್ಟ್ಸ್ ಪಾದ್ರಿಗಳು ಹೈದರನ ಸಂಗಡ ಸಂಭಾಷಿಸಿದ ಮೇಲೆ ಆತನ ಅಪ್ಪಣೆಯನ್ನು ಪಡೆದು ಇಂಗ್ಲೀಷರ ರಾಜ್ಯದ ಕಡೆಗೆ ಪ್ರಯಾಣ ಬೆಳಸಿದರು

ತಾಲ್ಲೋಕು ವರ್ತಮಾನಗಳು.

ಯಡೆಹಳ್ಳಿ.—ಈಗ ೭—೮ ದಿವಸಗಳಿಂದ ಮಳೆ ಕಮ್ಮಿಯಾಗಿದೆ. ಪೈರು ತಕ್ಕಮಟ್ಟಿಗೆ ಚೆನ್ನಾಗಿದೆ ಆದರೂ ಜಿನಸುಗಳ ಧಾರಣೆ ತುಟ್ಟಿಯಾಗಿರುವುದರಿಂದ ಬಡವರು ಜೀವನ ಮಾಡುವುದು ಕಷ್ಟವಾಗಿದೆ. ಇಲ್ಲಿಗೆ ಹೊಸದಾಗಿ ಬಂದಿರುವ ಅಮಲ್ದಾರ್ ಮ|| ಸುಬ್ರಾಯರು ಅನೇಕ ಬದಲಾವಣೆಗಳನ್ನು ಮಾಡಿ ಚಟಪಟಿಕೆಯಿಂದ ಕೆಲಸ ಮಾಡುತ್ತಾ ಇರುವುದರಿಂದ ಇವರೇ ಇಲ್ಲಿ ಇರಬೇಕೆಂತಲೂ ಬಹಳ ಜನಗಳ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆಂತಲೂ ಜನಗಳು ಮಾತನಾಡಿಕೊಳ್ಳುವುದೇನು ಆಶ್ಚರ್ಯವಲ್ಲ ಇವರು ಮಾಡಿದ ಕೆಲಸಗಳ ಪೈಕಿ ಮ್ಯುನಿಸಿಪಲ್ ರೋಡಿನಲ್ಲಿ ಬೆಳಕನ್ನು ಉಂಟುಮಾಡಿದ್ದರಿಂದ ರಸ್ತೆಯಲ್ಲಿ ಕತ್ತಲಿನಲ್ಲಿ ತಿರುಗಾಡುವ ಜನರಿಗೆ ಬಹಳ ಸೌಕರ್ಯವನ್ನು ಕಲ್ಪಿಸಿದ ಹಾಗಾಯಿತು ಇಲ್ಲಿ ಇದ್ದ ಜಮಾದಾರ್ ಮ|| ಅಯ್ಯರಾವ್, ಡಾಕ್ಟರ್ ಮ|| ಚಿನ್ನಯ್ಯ ಮತ್ತು ರೇಂಜರು ಮ|| ಕೃಷ್ಣಪ್ಪ ಇವರೆಲ್ಲರಿಗೂ ಏಕಕಾಲದಲ್ಲಿ ವರ್ಗವಾಯಿತು. ಇವರ ಜಾಗೆಗೆ ಬರುವವರು ಇವರಂತೆ ಕೆಲಸ ನಡಿಸುತ್ತಾರೆಂದು ನಂಬಿರುತ್ತೇನೆ. ಇದರಿಂದ ಅವರುಗಳು ಸರ್ಕಾರದ ಕೆಲಸದಲ್ಲಿ ಮತ್ತು ಜನಗಳ ಪ್ರೀತಿ ವಿಶ್ವಾಸಗಳಿಗೂ ಎಷ್ಟರಮಟ್ಟಿಗೆ ಪಾತ್ರರಾಗಿದ್ದರೆಂಬುದನ್ನು ಪುನಃ ಹೇಳಬೇಕಾಗಿಲ್ಲ.

ಮಾಲೂರು.—ಇಲ್ಲಿನ ಹವಾ ಬದಲಾಗಿರುತ್ತದೆ. ಮಳೆಯು ೬ ನೇ ವಾರದಲ್ಲಿ ವಿಶೇಷವಾಗಿ ಸುರಿಯದೆ, ಹೊಲಗಳಿಗೆ ತಂಪೇರಿ, ಕೆಂಪು ಮಾಡುವಷ್ಟು ಸುರಿದು, ಎಲ್ಲಿ ನೋಡಿದರೂ ಪಚ್ಚೆ ಪೈರು ಕಳಕಳಿಸಿ, ಸಂತೋಷಗೊಳಿಸಿರುತ್ತದೆ. ೩-೭-೮ ನೇ ತಾರೀಖುಗಳಲ್ಲಿ ಬಿದ್ದ ಮಳೆಯಿಂದ ಅಲ್ಪಸ್ವಲ್ಪ ನೀರು ಕೆರೆಕುಂಟೆಗಳಿಗೆ ಬಂದಿರುತ್ತದೆ ಗಜಾಗುಂಡಲಕ್ಕೆ ವಿಶೇಷ ನೀರು ಬಾರದಿದ್ದರೂ, ಜನಗಳ ಮುಖದಲ್ಲಿ ಗಲುಕ್ಕೆಂಟಾಗುವಷ್ಟು ನೀರು ಬಂದಿರುತ್ತದೆ ಗಣೇಶಗಳನ್ನು ಗಜಾಗುಂಡಲದಲ್ಲಿ ಬಿಡುವ ಪದ್ಧತಿ ಇತ್ತು. ನಮ್ಮೂರಿನ ಅಮಲ್ದಾರರು ಪ್ರಜೆಗಳ ಸೌಖ್ಯಾರೋಗ್ಯದಲ್ಲಿ ದೃಷ್ಟಿಯಿಟ್ಟು, ಕುಡಿಯುವ ನೀರಿನಲ್ಲಿ ಗಣೇಶನನ್ನು ಯಾರೂ ಗಜಾಗುಂಡಲದಲ್ಲಿ ಬಿಡದಂತೆ ನಿರ್ಬಂಧ ಪಡಿಸಿ, ಕಾವಲಿರಿಸಿದ್ದಾರೆ ಇದು ಮಹೋಪಕಾರವೇ — ಈ ಊರಿನಲ್ಲಿ ನಾಟಕಸಂಘಗಳುದ್ಭವಿಸಿ, ೬—೭ ವರುಷಗಳಾಗಿದ್ದು, ಗತಪ್ರಾಣಗಳಂತೆ ಪರಿಣಮಿಸಿದ್ದಾಗ್ಯೂ, ಈಚೀಚೆಗೆ ಚೇತನಗೊಂಡಂತೆ ತೋರುತ್ತವೆ. ಇದೇ ತಿಂಗಳು ೧೦ ನೇ ತಾರೀಖು ಗುರುವಾರ ರಾತ್ರಿ "ಪಾಂಡವವಿಜಯ" ಎಂಬ ನಾಟಕವು ಆಡಲ್ಪಟ್ಟಿತು ಲೈಸನ್ಸು ತೆಗೆದುಕೊಂಡಿದ್ದರಂತೆ. ಗುಬ್ಬಿ ನಾಟಕಸಂಘದ ಸದಸ್ಯರಲ್ಲೊಬ್ಬರು ಮಾಲೂರು ನಾಟಕದವರೊಡನೆ ಸೇರಿ, ಆಡಿ, ನೋಟಕರಿಗೆ ಹಾಸ್ಯಲಹರಿ ಮುಂತಾದ ವಿನೋದಗಳನ್ನು ಪ್ರದರ್ಶನಪಡಿಸಿದ್ದರಿಂದ ಉತ್ಸಾಹವುಂಟಾಯಿತೆಂದು ಹೇಳಿಕೊಳ್ಳುತ್ತಾರೆ. ಆದರೆ ನಾಟಕಗಳು ದೇವತಾಯೋಗ್ಯವಾದ ಭಕ್ತಿವೈರಾಗ್ಯರಸಗಳಿಗೆ ವಿರುದ್ಧ ಮನಾಚರಿಸಿ. ಮನುಷ್ಯನ ಜೀವಾತ್ಮನನ್ನು ನೀತಿಪದ್ಧತಿಗಳಿಗೆ ದೂರಸ್ಥನಾಗಮಾಡಿ, ಮನುಷ್ಯನನ್ನು ಪ್ರಾಪಂಚಿಕನಾಗ ಪರಿಣಮಿಸಲು ಹೇತುಗಳಾಗಿರುತ್ತವೆ. ಆದದರಿಂದ ನೀತಿ ಜ್ಞಾನ ಭಕ್ತಿಸಂಪನ್ನರಾಗುವದಕ್ಕಪೇಕ್ಷಿಸುವವರು, ಇಂತಹ ನಾಟಕಗಳಿಗೆ ವಿಮುಖರಾಗದೇ ಇರುವರೇ ?

ಸಿರ್ಯಾ.—ಈ ತಾಲ್ಲೋಕಿನಲ್ಲಿ ೩ ತಿಂಗಳಿಂದಲೂ ಸುತರಾಂ ಮಳೆ ಇಲ್ಲದ್ದರಿಂದ ಜಾನುವಾರುಗಳಿಗೆ ಕೆರೆ ಕಟ್ಟೆಗಳಲ್ಲಿ ನೀರಿಲ್ಲದೆ ಕಷ್ಟಪಡುತ್ತಿದ್ದವು. ಸೀರ್ಯದೊಳಗಿರುವ ಭಾವಿಗಳಲ್ಲಿ ಜಲಬತ್ತಿಹೋಗಿ, ಕಾಲಕ್ಕೆ ಮುಂಚೆ ಹೋದವರಿಗೆ ಮಾತ್ರ ಸ್ವಲ್ಪ ನೀರು ದೊರಕುತ್ತಾ, ಹಿಂದೆ ಹೋದವರಿಗೆ ದೊರಕದೆ, ಪೇಚಾಡುತ್ತಾ ಇದ್ದವು ಇದನ್ನು ಅಮಲ್ದಾರರು ತಿಳಿದು, ಖುದ್ದು ತಾವೇ ಭಾವಿಗಳ ಬಳಿಗೆ ಹೋಗಿ, ಪರೀಕ್ಷೆ ಮಾಡಿ, ಅವುಗಳೊಳಗಿರುವ ಬದಿಯನ್ನು ತೆಗಿಸಿ ಇನ್ನು ಸ್ವಲ್ಪ ಆಳವಾಗಿ ತೋಡುವಂತೆ ಅಪ್ಪಣೆ ಮಾಡಿದ್ದರಿಂದ, ೯ ಭಾವಿಗಳನ್ನು ತೋಡಿಸಿದ್ದಲ್ಲದೆ ಡೈನಾಮೆಂಟುಗಳನ್ನು ಹಾಕಿಸಿ, ಆಳವಾಗಿ ತೋಡಿಸಿರುತ್ತಾರೆ. ಈಗ ಜಲವು ಅಧಿಕವಾಗಿ ಬಂದು ಸಕಲರಿಗೂ ತಕ್ಕಷ್ಟು ನೀರು ಸಿಕ್ಕುತ್ತಾ ಇದೆ. ಈ ಉಪಕಾರಕ್ಕಾಗಿ ಪ್ರಜೆಗಳು ನಮ್ಮ ಅಮಲ್ದಾರರನ್ನು ಸ್ಮರಿಸುತ್ತಾರೆ.—ಸಂತೆಗೆ ಬರುವ ರಾಗಿಗೆ ಕೆಲವರು ನೀರು ಹಾಕಿ ಮೊತ್ತಗೆ ಮಾಡಿ, ತರುತ್ತಾರೆ ಕಳೆದ ಸಂತೆಯಲ್ಲಿ ಒಂದು ಗಾಡಿಯವನು ಈ ತಪ್ಪಿನಲ್ಲಿ ಸಿಕ್ಕಿದಾಗ ಅನೇಕ ನೆವಗಳನ್ನು ಹೇಳಿದನು. ದಾರಿಯಲ್ಲಿ ಬರುವಾಗ ಸ್ವಲ್ಪ ಮಳೆ ಬಂತೆಂದೂ, ನಾಟಿ ಮೇಲೆ ನೀರಿನ ಚಂಬು ಉರುಳಿತೆಂದೂ ಈ ರೀತಿ ಹೇಳುವರು ಇಂಥಾ ಪಾಪಿಗಳ ರಾಗಿಯನ್ನು ಒಣಗಿಸಿದರೆ ೧೩ ಸೇರಿಗೆ ೧೦ ಸೇರೇ ಆಗುವದು ಇದರ ವಿಷಯದಲ್ಲಿ ಸರ್ಕಾರದವರೂ, ದಳ್ಳಾಳಿಗಳೂ ಒಂದೆರಡು ಸಂತೆವರಿಗೂ ನಿಗಾ ಇಟ್ಟರೆ ಬಹಳ ಉಪಕಾರ ಮಾಡಿದಂತಾಗುವದು.—ಕಡವಗೆರೆ ಗ್ರಾಮದಲ್ಲಿ ೭ನೇ ತಾ|| ನಲ್ಲಿ ಒಂದು ಚಿಕ್ಕ ಜಾತ್ರೆ ನಡೆಯಿತು. ಆ ಗ್ರಾಮಸ್ಥರು ಸ್ವಲ್ಪ ಚಂದಾಹಾಕಿ, ತೇರಿನ ದಿವಸ ಬರುವ ಎಲ್ಲಾ ಜನರಿಗೆ ಸಮಾರಾಧನೆ ಮಾಡುವಂತೆ ಮೊದಲೇ ಏರ್ಪಡಿಸಿಕೊಂಡಿದ್ದರು ಈ ಅನ್ನದಾನದ ಕಾರ್ಯಕ್ಕೆ ನಾಲ್ವರು ಮುಂದಾಳುಗಳಾಗಿ ನಿಂತಿದ್ದರು. ಪ|| ಚಿಕ್ಕರಂಗೇಗೌಡರು, ಶಾ|| ನಾರಣಪ್ಪನವರು, ಅಜ್ಜೇಗೌಡರು, ಶಾಕಿ ನಿಂಗಪ್ಪನವರು ಇವರುಗಳ ಮೆಹನತ್ತಿನಿಂದ ಆ ದಿನ ಅನೇಕ ಬಡಬಗ್ಗರಿಗೂ ಗ್ರಾಮಸ್ಥರಿಗೂ ಬಂದಿದ್ದ ಪರಸ್ಥಳದವರಿಗೂ ಸುಭೋಜನವಾಯಿತು. ಆದರೆ ಈ ಗ್ರಾಮದಲ್ಲಿ ಜನರು ನೀರಿಲ್ಲದೆ ಕಷ್ಟಪಡುತ್ತಾರೆ ಪಟೇಲರ ಭಾವಿಯಲ್ಲಿ ಮಾತ್ರ ನೀರಿದೆ ಸರ್ಕಾರದವರು ಬೇರೆ ಏರ್ಪಾಟು ಮಾಡಿದರೆ ಜನರಿಗೂ ದನಗಳಿಗೂ ನೀರು ದೊರೆಯಬಹುದಾಗಿದೆ. ಜಾತ್ರೆ ಉಸ್ತುವಾರಿಗಾಗಿ ಜಮೇದಾರರೂ, ದಫೇದಾರರೂ, ಸ್ಯಾನಿಟೇರಿ ಇನಸ್ಪೆಕ್ಟರೂ ಬಂದಿದ್ದರು. ೮ ತಾ|| ರಾತ್ರಿ ದೇವರ ದಯದಿಂದ ಒಂದು ಹದ ಮಳೆ ಬಂತು ಕಟ್ಟೆಗಳಿಗೂ ಹಳ್ಳಕೊಳ್ಳಗಳಿಗೂ ಒಂದು ತಿಂಗಳ ನೀರು ಬಂದಿದೆ. ಇದರಿಂದ ಜನರಿಗೂ ದನಕರುಗಳಿಗೂ ಸದ್ಯಕ್ಕೆ ನೀರಿನ ಕಷ್ಟ ತಪ್ಪಿದ್ದರಿಂದ ಸಂತೋಷ ಉಂಟಾಗಿದೆ.

ಫ್ರೇಜರ್‌ಪೇಟ್.—ಮಳೆಇಲ್ಲ ಪೈರುಗಳೆಲ್ಲಾ ಬಾಡಿ ಒಣಗುತ್ತಾ ಬಂದವು ಕೆರೆನೀರು ಬಸಿದುಹೋಗಿ, ಗದ್ದೆ ಪೈರುಗಳಿಗೆ ಸುಮಾರು ಒಂದು ತಿಂಗಳು ನೀರುಮಾತ್ರ ಸಿಕ್ಕಬಹುದು. ಟವುನಿನಲ್ಲಿ ಕೆಲವು ಮನೆಗಳಲ್ಲಿ ಇಲಿ ಸತ್ತ ಸಮಾಚಾರವುಂಟು ಅದುಬಾದು ಗ್ರಾಮಗಳಲ್ಲಿ ಪ್ಲೇಗ್ ಹರಡುತ್ತಾ ಬರುತ್ತದೆ ಮೇದೆಧಾರಣೆಯಂತು ಹೇಳತೀರದು ಬಡಜನರ ಕಷ್ಟವು ಹೆಚ್ಚುತ್ತಾ ಬಂದಿದೆ. ಅಮಲ್ದಾರ್ ಮ|| ಲಿಂಗಯ್ಯನವರು ಇಲ್ಲಿಂದ ವರ್ಗವಾಗಿ ಹೋದದ್ದೇ ಸಾಕಾಯಿತೆಂದು ಹೇಳಿ ವರ್ತಕರು ಸಂತೆಯಲ್ಲೂ ಬಜಾರಿನಲ್ಲೂ ತಿರಿಗಿ ತಮ್ಮ ಕಳ್ಳಸೇರುಗಳನ್ನು ಉಪಯೋಗಿಸಲು ಅನುಕೂಲವಾಯಿತು. ಜಮೆದಾರರು ಒಂದಾವರ್ತಿ ಸಂತೆಯಲ್ಲಿ ಕಮ್ಮಿ ಸೇರುಗಳನ್ನು ಕಂಡುಹಿಡಿದು ಮಹಜರ್ ಮಾಡಿಸಿದ್ದನ್ನು ನೋಡಿದ್ದೇ ಹೊರತು ಅದರ ಫಲಿತಾಂಶವು ಏನಾಯಿತೆಂದು ಹೊರಪಟ್ಟ ಹಾಗೆ ಕಾಣಲಿಲ್ಲ. ಇಲ್ಲಿಗೆ ಇನ್ನು ನಾಯಬ್ ಅಮಲ್ದಾರರು ಬರಲಿಲ್ಲವಾದ್ದರಿಂದ ತಿಂಗಳಿಗೆ ಇಬ್ಬರು ಅಮಲ್ದಾರರು ಬದಲಾಯಿತು ಹೀಗಿರುವಾಗ್ಗೆ ಈ ಸಬ್ ತಾಲ್ಲೋಕಿನ ಸ್ಥಿತಿಯು ಕೂಡ ಕ್ರಮಪಡುವದು ಕಷ್ಟ. ಈ ಊರಿನಲ್ಲಿ ಮೂರು ನಾಲ್ಕು ಮನೆಗಳಲ್ಲಿ ಕಳವು ನಡೆದಿರುತ್ತದೆ. ಅದರ ಫಲಿತಾಂಶ ಗೊತ್ತಾಗಲಿಲ್ಲ. ನಮ್ಮ ಸೂಪರಿಂಟ್ ಸಾಹೇಬರು ತಕ್ಕ ಬಂದೋಬಸ್ತು ಮಾಡಿಸಿ ಮುಂದೆ ಕಳುವಿಗೆ ಮಾರ್ಗವಾಗದಂತೆ ಏರ್ಪಾಡು ಮಾಡುವರೆಂದು ನಿರೀಕ್ಷಿಸುತ್ತೇವೆ ನಮ್ಮ ಡೆಪ್ಟಿ ಕಮಿಷನರ್ ಸಾಹೇಬರ ಸವಾರಿಯು ಕಳೆದ ಮಂಗಳವಾರ ಈ ಮಾರ್ಗವಾಗಿ ನಾಗಮಂಗಲದ ಕಡೆ ಪ್ರಯಾಣ ಬೆಳಸಿತು. ಆಗ್ಗೆ ಸರ್ಕಾರಿ ನೌಕರರೂ, ಮ್ಯುನಿಸಿಪಲ್ ಮೆಂಬರುಗಳೂ ಶೆಟ್ಟಿ ವರ್ತಕರೂ, ಇತರ ಪ್ರಜೆಗಳೂ ಸೇರಿ ತಮ್ಮ ಮರ್ಯಾದೆಯನ್ನು ಸಲ್ಲಿಸಿದ್ದು ಮಾತ್ರವಲ್ಲದೆ, ಇಲ್ಲಿಗೆ ಮ್ಯುನಿಸಿಪಲ್ ಕೋರ್ಟನ್ನು ಬರಮಾಡಿ ಕೊಡಬೇಕೆಂತಲೂ ರೈಲು ಸ್ಟೇಷನ್ ಟವುನಿಗೆ ದೂರವಾಗಿರುವದರಿಂದ ಕೂಲಿ ಕಳುವಿಗೆ ಮಾರ್ಗವಾಗಿ ನಾನಾ ಅನಾನುಕೂಲಗಳು ನಡಿಯುತ್ತಿರುವದರಿಂದ ಸ್ಟೇಷನ್ ಊರಿನ ಸಮೀಪ ಮಾಡುವಂತೆಯೂ ರಿಪೋರ್ಟ್ ಮೂಲಕ ತಮ್ಮ ಅಹವಾಲನ್ನು ತಿಳಿಯಪಡಿಸಿದರು. ರೈಲ್ವೆ ಸ್ಟೇಷನ್ ಬಳಿ ಬಹಳ ಗಾಡಿಗಳೂ ಜನರೂ ರಾತ್ರಿ ಹೊತ್ತು ಕಾಲಕ್ಷೇಪ ಮಾಡಬೇಕಾಗಿರುವದರಿಂದ ಸರ್ಕಾರದವರು ಅಲ್ಲಿ ಒಂದು ಲ್ಯಾಂಟರ್ನ್ ಇಡುಗುವದು ತುಂಬಾ ಅವಶ್ಯಕವಾಗಿದೆ. ಇಲ್ಲಿ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರ್ ಆಗಿದ್ದ ಮ|| ವಾಸುದೇವ ರಾಯರನ್ನು ಪ್ರಾಸಿಕ್ಯೂಟಿವ್ ಇನ್ಸ್‌ಪೆಕ್ಟರಾಗಿ ಹಾಸನಕ್ಕೆ ವರ್ಗಮಾಡಿದ್ದಾರೆ. ಅವರು ಹೋಗುವುದರಿಂದ ಇಲ್ಲಿನ ಪ್ರಜೆಗಳೂ ಪೋಲೀಸ್ ನೌಕರರೂ ಬಹಳ ವ್ಯಸನಪಡುತ್ತಾರೆ. ಅವರು ತುಂಬಾ ಸಾಹಸಿಗಳೂ ನಿಸ್ಪೃಹರೂ ತಿಗಳೂ, ಲಂಚರುಸುಮತ್ತಿನ ವಾಸನೆಗೆ ಅಸಹ್ಯಪಡುವವರೂ, ಎಲ್ಲಾ ಜನರಲ್ಲಿಯೂ ತುಂಬಾ ಮರ್ಯಾದೆಯುಳ್ಳವರೂ ಆಗಿದ್ದರು. ಇಂಥವರನ್ನು ಬ್ರಾಹ್ಮಣರಲ್ಲಿ ಕಾಣುವುದು ತುಂಬಾ ದುಸ್ತರ.

ವೆಂಕಟೇಶಹಳ್ಳಿ.—ಇಲ್ಲಿ ಈ ವರ್ಷ ಮಳೆಗಾಲವು ಸರಿಯಾಗಿಲ್ಲ, ಕೆರೆಗೂ ನೀರು ಬರಲಿಲ್ಲ. ದವಸಧಾನ್ಯಾದಿಗಳು ಬಹಳ ಪ್ರಿಯವಾಗಿವೆ. ಬಡಬಗ್ಗರ ಕಷ್ಟವು ಹೇಳಲಸಾಧ್ಯವಾಗಿದೆ. ಇದರಿಂದ ಕಳ್ಳರ ಕಾಟವೂ ಜಾಸ್ತಿಯಾಗಿದೆ. ಕೆಲವು ದಿನಗಳ ಹಿಂದೆ ಒಂದೇ ರಾತ್ರಿಯಲ್ಲಿ ಏಳು ಮನೆಗಳಲ್ಲಿ ಕಳುವಾಯಿತು ಎಂದು ತಿಳಿಸಲು ಬಹಳ ವ್ಯಸನವಾಗಿದೆ. ೮ ನೇ ತಾರೀಖು ಮಂಗಳವಾರ ರಾತ್ರಿ ಮಾತ್ರ ಒಂದೆರಡು ಹದ ಮಳೆ ಬಿತ್ತು. ಇದರಿಂದ ಒಣಗಿದ್ದ ಪೈರುಗಳು ಪುನಃ ಹಸಿರುವರ್ಣಕ್ಕೆ ತಿರುಗುವಹಾಗಾಯಿತು. ಹೀಗೆಯೇ ಇನ್ನು ಮೇಲೆ ಮಳೆಹೊಯ್ದುವೆ ಬಿಡುತಿಕೊಂಡೇವು ಎಂದು ಎಲ್ಲರೂ ನಿರೀಕ್ಷಿಸುತ್ತಾರೆ. ಭಗವಂತನೇ ಕಟಾಕ್ಷಿಸಬೇಕು.—ಈ ಹೋಬಳಿಯಲ್ಲಿ ಗವರ್ನಮೆಂಟ್ ಕನ್ನಡಸ್ಕೂಲು ಒಂದು, ಗ್ರಾಮಸ್ಥರ ಗ್ರಾಂಟ್ ಇನ್ ಏಡ್ ಇಂಗ್ಲಿಷ್ ಸ್ಕೂಲು ಒಂದು, ಹಿಂದುಸ್ಥಾನಿ ಸ್ಕೂಲು ಒಂದು, ಲಂಡರ ವಿಮರ್ ಗ್ರಾಂಟ್ ಇನ್ ಎಯಿಡ್ ಗರ್ಲ್ಸ್ ಸ್ಕೂಲು ಒಂದು ಹೀಗೆ ನಾಲು ಸ್ಕೂಲುಗಳಿರುತ್ತವೆ ಈ ಕನ್ನಡಸ್ಕೂಲಿಗೆ ಸರ್ಕಾರದವರು ಊರಮುಂದೆ ಹೈರೋಡಿನ ಪಕ್ಕದಲ್ಲಿ ಒಂದು ಹೊಸ ಕಟ್ಟಡವನ್ನು ಕಟ್ಟಿಸಿಕೊಟ್ಟಿರುತ್ತಾರೆ ಆದರೆ ಈ ಕಟ್ಟಡವು ಚಿಕ್ಕದಾಗಿರುವದರಿಂದ ಅರ್ಧ ಸ್ಕೂಲು ಹಳೇ ಕಟ್ಟಡದಲ್ಲಿಯೇ ನಡಿಯುತ್ತದೆ.

ಸ್ಕೂಲನ್ನು ಹೊಸ ಕಟ್ಟಡಕ್ಕೆ ರವಾನಿಸಿದ ಕೂಡಲೆ ಮೊದಲಿದ್ದ ಹೆಡ್ ಮಾಸ್ತರು ಮೆ॥ ರಾಮಾಚಾರರು ಲಕ್ಕೂರಿಗೆ ವರ್ಗವಾಗಿ ಹೋದರು ಈಗ ಅವರ ಸ್ಥಾನಕ್ಕೆ ಮೆ॥ ಸುಬ್ಬರಾಯರು ಬಂದಿರುತ್ತಾರೆ ಇವರು ಹುಡುಗರನ್ನು ವಿದ್ಯಾಭಿವೃದ್ಧಿಗೆ ಪ್ರೋತ್ಸಾಹಗೊಳಿಸುವ ಬೇರೆ ಬೇರೆ ಕಾರ್ಯಗಳನ್ನು ಏರ್ಪಡಿಸಿ ಬಹು ಮುತುವರ್ಜಿಯಿಂದ ಕೆಲಸಮಾಡುತ್ತಾರೆ.—ಇಲ್ಲಿನ ಲಂಡರ್ ಮಿಡ್ಲ್ ಗರ್ಲ್ಸ್ ಸ್ಕೂಲಿಗೆ ಇನಾಂ ಕೊಡುವದಕ್ಕಾಗಿ ಚಿಕ್ಕಬಳ್ಳಾಪುರದಿಂದ ೨೭—೮—೦೮ ರಲ್ಲಿ ಘನವುಳ್ಳ ರೆ॥ ಆರ್ ಎ ಹಿಕ್ಲಿಂಗ್ ದೊರೆಗಳವರು ಘನವುಳ್ಳ ದೊರೆಸಾನಿಯವರ ಸಮೇತ ದಯಮಾಡಿಸಿದ್ದರು ಊರಿನ ಮಾನ್ಯಗೃಹಸ್ಥರಲ್ಲನೇಕರು ಆ ಕಾಲದಲ್ಲಿ ಸ್ಕೂಲಿಗೆ ದಯಮಾಡಿಸಿದ್ದರು ಬಾಲಕಿಯರು ಒಂದೆರಡು ಆಟಗಳನ್ನು ಆಡಿ ಅದರಲ್ಲಿ ಅಡಗಿರುವ ನೀತಿವಾಕ್ಯಗಳನ್ನು ಹಾಡಿನಿಂದ ತಿಳಿಸಿದನಂತರ ಬೋಧಕರು ಬಾಲಕಿಯರಿಗೆ ಚಿಕ್ಕ ಉಪನ್ಯಾಸವನ್ನು ಮಾಡಿ ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹಗೊಳಿಸಿದರು. ಕೂಡಲೆ ಬಾಲಕಿಯರೂ ನೆರೆದುಬಂದವರೂ ಸಂತೋಷದಿಂದ ಕೈಚಪ್ಪಾಳೆ ಹಾಕಿದರು ತರುವಾಯ ಮೆ॥ ಲಕ್ಷ್ಮಣಶೆಟ್ಟರು ಮಿಷನಿನವರ ಧರ್ಮಕಾರ್ಯಕ್ಕಾಗಿ ಕೃತಜ್ಞತಾಭಾವವನ್ನು ಸೂಚಿಸುವ ವಂದನೋಕ್ತಿಯನ್ನು ನುಡಿದ ಕೂಡಲೆ ಎಲ್ಲರೂ ಕೈಚಪ್ಪಾಳೆ ಹಾಕಿದರು ತರುವಾಯ ಆಯಾ ತರಗತಿಗಳ ಮೇರಿಗೆ ಸುಂದರವಾದ ಇಂಗ್ಲೀಷ್ ಗೊಂಬೆಗಳನ್ನೂ ಬಡಹುಡುಗಿಯರಿಗೆ ಬಟ್ಟೆಗಳನ್ನೂ ಘನವುಳ್ಳ ದೊರೆಸಾನಿಯವರು ಸ್ವಹಸ್ತದಿಂದಲೇ ಕೊಟ್ಟರು ಒಟ್ಟು ೬೫ ಬಾಲಕಿಯರಿಗೆ ಇನಾಂ ಕೊಡಲ್ಪಟ್ಟಿತು. ತರುವಾಯ ಬಾಲಕಿಯರಲ್ಲಿ ಮೊದಲನೇಯವಳು ಘನವುಳ್ಳ ದೊರೆ, ದೊರೆಸಾನಿಗಳಿಗೆ ಗಂಧ ಪುಷ್ಪ ಹಾರಗಳನ್ನು ಕೊಟ್ಟಳು ಮಧ್ಯಾಹ್ನದ ಮೇರೆ ಬಾಲಕಿಯರಿಗೆ ಮಿಠಾಯಿ ಬತ್ತಾಸು ಫಲಾಹಾರಗಳನ್ನು ಕೊಡುವ ಉತ್ಸವವಾಯಿತು ಆಗಲೂ ಅನೇಕ ಮಾನ್ಯಗೃಹಸ್ಥರೂ ಇತರ ಸ್ಕೂಲ್ ಮಾಸ್ತರುಗಳೂ ನೆರೆದುಬಂದರು ಸ್ಕೂಲ್ ಮಾಸ್ತರರು ಸ್ತ್ರೀ ವಿದ್ಯಾಭ್ಯಾಸವನ್ನು ಇದಕ್ಕಾಗಿ ಮಿಷನ್ ಇಲಾಖೆಯವರು ಮಾಡುವ ಪ್ರಯತ್ನವನ್ನು ಕುರಿತು ಚಿಕ್ಕ ಉಪನ್ಯಾಸವನ್ನು ಮಾಡಿ ಈ ಸ್ಕೂಲಿನ ಅಭಿವೃದ್ಧಿಗಾಗಿ ಸರ್ವರು ಸಹಾಯಮಾಡಬೇಕೆಂದು ಬಂದವರನ್ನೆಲ್ಲಾ ಪ್ರಾರ್ಥಿಸಿಕೊಂಡರು. ಕೂಡಲೆ ಎಲ್ಲರೂ ಕೈಚಪ್ಪಾಳೆಹಾಕಿದರು. ತರುವಾಯ ಬಾಲಕಿಯರು ಆಟವನ್ನು ಒಂದೆರಡು ಪದ್ಯಗಳನ್ನು ಹಾಡಿ ಬಂದವರನ್ನು ಸಂತೋಷಪಡಿಸಿದರು ತರುವಾಯ ಬಾಲಕರಿಗೆ ಮಿಠಾಯಿ ಮುಂತಾದವುಗಳನ್ನು ಸಭಿಕರಿಗೆ ಗಂಧ ಹೂವು ತಾಂಬೂಲಾದಿಗಳನ್ನು ಹಂಚೋಣವಾಯಿತು ಈ ಸ್ಕೂಲಿನ ಅಭಿವೃದ್ಧಿಯ ವಿಷಯವು ಈ ಸಂತೋಷದ ಕಾರ್ಯದ ನಿಮಿತ್ತವೂ ಸರ್ವರೂ ಹರ್ಷಿತರಾಗಿ ಸ್ವಗೃಹಗಳಿಗೆ ತೆರಳಿ ಹೋದರು.

ಚಿತ್ರದುರ್ಗ —ಈ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಾದ ಚಿತ್ರದುರ್ಗದ ಟವನ್ನಲ್ಲಿ ಈ ವರುಷದ ಜೂನ್ ಮಾಹೆ ೨೭ನೇ ತಾ॥ ನಲ್ಲಿ ಸರ್ಕಾರದವರು ಒಂದು ಪಶುವೈದ್ಯ ಶಾಲೆಯನ್ನು ಸ್ಥಾಪಿಸಿ ನಡಿಸುತ್ತಿದ್ದಾರೆ. ಇದು ಸರ್ಕಾರಿ ಇಂಡಸ್ಟ್ರಿಯಲ್ ಸ್ಕೂಲಿನ ಪಕ್ಕದ ಕಟ್ಟಡದಲ್ಲಿ ಹಾಲಿ ಇಡಲ್ಪಟ್ಟಿದೆ ಅಂದಿನಿಂದ ಈವರಿಗೆ ೪೫೦ ಅಥವಾ ೫೦೦ ರ ಮೇಲೆಯೇ ದನ ಕುರಿ ಕುದುರೆ ನಾಯಿ ಮೊದಲಾದ ಮೂಗ ಪ್ರಾಣಿಗಳಿಗೆ ಚಿಕಿತ್ಸೆ ಮಾಡಿದ್ದಾರೆ ಇದಲ್ಲದೆ ಈಗ ದನಕರುಗಳಲ್ಲಿ ಹಬ್ಬಿರುವ ದೊಡ್ಡ ರೋಗವನ್ನು ನಿಲ್ಲಿಸುವದಕ್ಕೆ ಸುಮಾರು ೭೦೦ ರಾಸುಗಳಿಗೆ ಸಿಡುಬು ಹಾಕಿದ್ದಾರೆ ಇವುಗಳ ಪೈಕಿ ರೋಗ ತಗಲಿದ್ದ ಸುಮಾರು ೨೦ಕ್ಕೆ ಮಾತ್ರ ಅದರಲ್ಲಿಯೂ ೮-೧೦ ಪ್ರಾಣಿಗಳು ಮಾತ್ರ ಸತ್ತು ಬಾಕಿ ಉಳಿಕೊಂಡಿವೆ ಸಿಡುಬು ಹಾಕದವುಗಳ ಪೈಕಿ ೧೦೦ ರಲ್ಲಿ ತೊಂಬತ್ತಕ್ಕೆ ರೋಗ ತಗಲಿದ್ದರಲ್ಲಿ ೬೦ರ ಮಟ್ಟಿಗೆ ಸತ್ತುಹೋಗಿವೆ ಮತ್ತು ಈ ವೈದ್ಯಶಾಲೆಯ ಚಾರ್ಜಿನಲ್ಲಿರುವ ಮೆ॥ ಶ್ರೀನಿವಾಸ ಯವರು ಯಾವ ಯಾವ ತಾಲ್ಲೋಕಿನಲ್ಲಿ ಅಂಟುರೋಗವಿದ್ದದ್ದು ತಿಳಿದರೂ ಅಲ್ಲಿಗೆ ಹೋಗಿ ತಕ್ಕ ಚಿಕಿತ್ಸೆಯಿಂದಲೂ ಸಿಡುಬು ಹಾಕುವದರಿಂದಲೂ ಈ ರೋಗವನ್ನು ತಡೆಯುತ್ತ ಬರುವದಲ್ಲದೆ ಕಾಯಿಲೆಯಾಗಿರುವ ರಾಸುಗಳನ್ನು ಪ್ರತ್ಯೇಕವಾಗಿಡುವದರಿಂದಲೂ ರೋಗ ತಗಲಿರುವ ಪಶುಗಳ ಮಲಮೂತ್ರಗಳನ್ನು ದೂರಕ್ಕೆ ಸಾಗಿಸಿ ಅವುಗಳನ್ನು ಗುಂಡಿ ತೆಗೆದು ಹೂಳುವದರಿಂದಲೂ ಪಶುಗಳನ್ನು ಕಟ್ಟುವ ಕೊಟ್ಟಿಗೆ ಜೋಪಡಿಗಳನ್ನು ಸುಣ್ಣ ಬಳಿದು ಶುಚಿಯಾಗಿಟ್ಟುಕೊಳ್ಳುವದರಿಂದಲೂ ರೋಗ ತಗಲಿದ ಒಡನೆ ವೈದ್ಯರಿಗೆ ತಿಳಿಸಿ ಚಿಕಿತ್ಸೆ ಮಾಡಿಸುವದರಿಂದಲೂ ಈ ರೋಗವು ಹರಡದಂತೆ ಮಾಡಬೇಕೆಂದು ಎಲ್ಲರಿಗೂ ತಿಳಿಸುವವರಾಗಿದ್ದಾರೆ ಇದರಂತೆ ಸರ್ವರೂ ನಡೆದು ಈ ರೋಗವನ್ನು ಅಣಗಿಸುವದಕ್ಕೆ ಸರ್ಕಾರದವರಿಗೆ ತಕ್ಕ ಸಹಾಯ ಕೊಡುವರೆಂದು ಹಾರೈಸುತ್ತೇವೆ —ಕಳೆದ ತಿಂಗಳು ೩ನೇ ತಾ॥ ನಲ್ಲಿ ಇಲ್ಲಿನ ಆರ್ಯನ್ ಸ್ಟೂಡೆಂಟ್ಸ್ ಹೋಮಿನ ಧರ್ಮದರ್ಶಿಗಳಾದ ಪರ್ಮನಾದರ್ ಮೆ॥ ಮಹಮದ್ ದಸ್ತಗಿರಿ ಸಾಹೇಬರು ಮೆ॥ ಪಂಡಿತ ವೆಂಕಟರಮಣಪ್ಪನವರೂ ವೈದ್ಯ ಮೆ॥ ಗುರುಶಾಂತಪ್ಪನವರೂ ರಿಟೈರ್ಡ್ ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರ್ ಮೆ॥ ಸಿ ಕೃಷ್ಣರಾಯರೂ ವೆಸ್ಲಿಯನ್ ಮಿಷನ್ ಪಾದ್ರಿಗಳಾದ ರೆವರೆಂಡ್ ಜೆ ವೆಸ್ಟ್ಲಿಯವರೂ ಹೋಮಿನ ಬಾಡಿಗೆ ಕಟ್ಟಡದಲ್ಲಿ ಮೀಟಿಂಗ್ ಮಾಡಿ ಇದಕ್ಕೆ ತಕ್ಕ ಕಟ್ಟಡ ಆಗುವವರಿಗೂ ತಕ್ಕ ಸ್ಥಳ ವಸತಿಗಾಗಿ ವಿಚಾರಿಸಬೇಕೆಂದು ಯೋಚಿಸಿ ಯಾವದೂ ಸರಿಹೋಗದೆ ಕಡೆಗೆ ಪೋಸ್ಟಾಫೀಸಿನ ಬಳಿ ಇರುವ ಸರ್ಕಾರಿ ಛತ್ರವನ್ನಾಗಲಿ ಚಾರ್ಚಿನಲ್ಲಿ ತಕ್ಕ ಸ್ಥಳವನ್ನಾಗಲಿ ಸದ್ಯ ಬಾಡಿಗೆಗಾದರೂ ದಯಮಾಡಿ ಮುಫತ್ತಾಗಿಯಾದರೂ ಸರ್ಕಾರದವರಿಂದ ಕೊಡಿಸಿಕೊಡಬೇಕೆಂದು ನಮ್ಮ ಡೆಪ್ಯುಟಿ ಕಮೀಷನರ್ ಮೆ॥ ಚಂಗಯ್ಯ ಶೆಟ್ಟಿಯವರಿಗೆ ಅರ್ಜಿ ಬರೆದುಕೊಂಡಿದ್ದಾರೆ ಮುಂದೆ ಇದರ ಇತ್ಯರ್ಥ ನಿರೀಕ್ಷಿಸುತ್ತಲಿದ್ದಾರೆ —ಈಚೆಗೆ ಇಲ್ಲಿ ಮಳೆ ಸುತರಾಂ ಇಲ್ಲದೆ ಎಳೆ ಪೈರುಗಳು ಒಣಗಿಹೋಗುತ್ತಿವೆ ದಿನಸಿ ಧಾರಣೆಗಳಂತೂ ಕ್ಷಾಮಸೂಚಕವಾಗಿವೆ ಟವನಿಗೆ ನೀರು ಸಪ್ಲೈ ಮಾಡುವ ಹೊಂಡದಲ್ಲಿ ನೀರು ಬತ್ತಿಹೋಗಿ ತಳದಲ್ಲಿರುವ ನೀರು ಒಡೆದಾಗಿಯೂ ಹಸಿರು ಹಳದೀ ಬಣ್ಣವಾಗಿಯೂ ಇವೆ ಆ ನೀರನ್ನೇ ಜನಗಳು ಕುಡಿಯಲಿಕ್ಕೂ ಅಡಿಗೆ ಮಾಡಲಿಕ್ಕೂ ಪ್ರಯೋಗಿಸುತ್ತಾರೆ. ನೀರನ್ನು ಫಿಲ್ಟರ್ ಮಾಡುವ ಏರ್ಪಾಡು ಮಾಡಿದರೆ ಈ ಜನಗಳಿಗೆ ಸರ್ಕಾರದವರು ಬಹಳ ಉಪಕಾರ ಮಾಡಿದಂತಾದೀತು

ಕಬ್ಬಿನ ಸಾಗುವಳಿ.

ಕಬ್ಬನ್ನು ಸಾಗುವಳಿ ಮಾಡಲು ಎಲ್ಲಾ ವಿಧವಾದ ಭೂಮಿಯನ್ನು ಉಪಯೋಗಿಸುವರು ಹೀಗೆ ಉಪಯೋಗಿಸತಕ್ಕ ಭೂಗುಣವು ನಾಲ್ಕು ವಿಧವಾಗಿದೆ ಒಂದನೇದು ಮರಳು ಮತ್ತು ಕೆಂಪು ಮಣ್ಣು ಸೇರಿರುವ ಕೆಂಪು ಭೂಮಿ, ಇದರಲ್ಲಿ ಕೆಂಪು ಮಣ್ಣೇ ಹೆಚ್ಚು ಎರಡನೇದು ಮರಳು ಮತ್ತು ಕಪ್ಪು ಮಣ್ಣು ಮಿಶ್ರವಾದ ಕಪ್ಪು ಭೂಮಿ, ಇದರಲ್ಲಿ ಕಪ್ಪು ಮಣ್ಣೇ ಹೆಚ್ಚು ಮೂರನೇದು ಇದರಲ್ಲಿ ಮರಳಿಲ್ಲದೆ ಬರೀ ಕಪ್ಪು ಮಣ್ಣೇ ಇರತಕ್ಕ ಕೃಷ್ಣಭೂಮಿ ನಾಲ್ಕನೇದ ಮರಳು ಮತ್ತು ಚೌಳು ಸಮವಾಗಿ ಸೇರಿಕೊಂಡಿರುವ ಚೌಳು ಭೂಮಿ ಕೆಂಪು ಭೂಮಿಯಲ್ಲಿ ಆಗುವ ಪೈರು ಉತ್ತಮವಾದದ್ದಾಗಿಯೂ ಇದರಲ್ಲಿ ಆಗತಕ್ಕ ಬೆಲ್ಲವು ಬಿಳುಪಾಗಿಯೂ, ಹೆಚ್ಚು ಸಿಹಿಯುಳ್ಳದ್ದಾಗಿ ಪುಡಿಮಾಡಿದಲ್ಲಿ ಸಣ್ಣ ಮರಳು ಅಥವಾ ರಾಯಪುಡಿ ಸಕ್ಕರೆಯಂತೆ ಮಿಂಚುತ್ತಾ ಇರುವದು ಎರಡು, ಮೂರನೇ ತರಗತಿಯಲ್ಲಿ ಆದ ಪೈರು ಮಧ್ಯಮವಾದುದಾಗಿ, ಇದರಿಂದ ಆಗುವ ಬೆಲ್ಲವು ಕೆಂಪು ಬಣ್ಣಗೂಡಿ ಕಮ್ಮಿ ಮಧುರಉಳ್ಳದ್ದಾಗಿದೆ ಚೌಳು ಭೂಮಿಯಲ್ಲಿ ಆಗುವ ಪೈರು ನಿಕೃಷ್ಟವಾದುದಾಗಿ, ಬೆಲ್ಲವು ಕಪ್ಪು ಬಣ್ಣದಿಂದ ಕೂಡಿ ಮಾಧುರ್ಯದಲ್ಲಿ ಹುಳ್ಳು ಮಿಶ್ರವಾಗಿರುವದು

ಕಬ್ಬಿನ ಪೈರನ್ನು ಎಬ್ಬಿಸುವದಕ್ಕೆ ಮೊದಲು ಕಡಲೆ, ಭತ್ತ, ರಾಗಿ ಅಥವಾ ನೆಲಗಡಲೆ ಬೆಳೆಗಳನ್ನು ಮಾಡಿ ಇವುಗಳ ಕೂಳೆಗೆ ಕಬ್ಬು ಹಾಕುತ್ತಾರೆ ನೆಲಗಡಲೆ ಸಾಗುವಳಿ ಆದ ಜಮೀನಿನಲ್ಲಿ ಕಬ್ಬಿನ ಬೆಳೆಯು ಒಂದನೆ ತರಗತಿಯಾಗಿಯೂ, ರಾಗಿ ಮತ್ತು ಕಡಲೆ ಸಾಗುವಳಿಯಾದ ಜಮೀನಿನಲ್ಲಿ ಮಧ್ಯಮತರಗತಿಯಾಗಿಯೂ, ಭತ್ತದ ಬೆಳೆಯಾದ ಜಮೀನಿನಲ್ಲಿ ಮೂರನೇ ತರಗತಿಯಾಗಿಯೂ ಆಗುವದು ರಾಗಿ, ಕಡಲೆ ಮುಂತಾದ ಫಸಲುಗಳು ಕಳವಾದ ಒಡನೆ ಮಾರ್ಗಶಿರ ಮತ್ತು ಪುಷ್ಯಮಾಸಗಳಲ್ಲಿ ಕೆಲವು ಸಾರಿ ಭೂಮಿಯನ್ನು ಉತ್ತು, ಹೆಂಟೆಗಳನ್ನು ಒಡೆದು, ಪುಡಿಪುಡಿ ಮಾಡಿ ಹಸನು ಮಾಡುವರು. ಹೀಗೆ ಹಸನು ಮಾಡಿದ ಭೂಮಿಯಲ್ಲಿ ದನ, ಕುರಿ, ಮೇಕೆಗಳ ಗೊಬ್ಬರಗಳನ್ನು ಪ್ರಯೋಗಿಸುವರು ಕೆಂಪು ಭೂಮಿಗೆ ಕರೀ ಮಣ್ಣನ್ನೂ ಕಪ್ಪು ಭೂಮಿಗೆ ಮರಳು ಹೆಚ್ಚಾಗಿರುವ ಕೆಂಪು ಮಣ್ಣನ್ನೂ, ಚೌಳು ಭೂಮಿಗೆ ಶುದ್ಧವಾದ ಕೆಂಪು ಮಣ್ಣನ್ನೂ ಗೊಬ್ಬರದ ಜೊತೆಯಲ್ಲಿ ಬೆರಸಿ ಭೂಮಿಯ ಮೇಲೆ ಎರಚಿ ಚನ್ನಾಗಿ ಸೇರುವಂತೆ ನೇಗಲಿನಿಂದ ಉತ್ತು, ಸಾಲು ಹೊಡೆಯುವರು

ಇದರಲ್ಲಿ ನೆಡುವ ಬೀಜವು ಎರಡು ವಿಧವುಂಟು ಕಬ್ಬಿನ ಸುಳಿಯಿಂದ ಕೆಳಕ್ಕೆ ಕತ್ತರಿಸಿ ತುಂಡುಮಾಡಿದ್ದೊಂದು ಸುಳಿಯಿಂದ ಮೇಲಕ್ಕೆ ಕತ್ತರಿಸಿದ ತುಂಡು, ಮತ್ತೊಂದು, ಹೀಗೆ ಸುಳಿಯಿಂದ ಕೆಳಕ್ಕೆ ಕತ್ತರಿಸಿದ ಬೀಜವು ಶ್ರೇಷ್ಠವಾದದ್ದಾಗಿ ಮೊಳಕೆಗಳು ಖಾಲಿ ಇಲ್ಲದೆ ಮೊಳೆತು ಕೋಮಲವಾದ ಪೈರಾಗುವದು

ಗಾಣಕ್ಕೆ ಕಬ್ಬು ಕತ್ತರಿಸುವ ಕಾಲದಲ್ಲಿ ಹೀಗೆ ತುಂಡುಮಾಡಿದ ಈ ಬೀಜವನ್ನು ಪ್ರತ್ಯೇಕವಾದ ಸ್ಥಳದಲ್ಲಿ ಗರಿಗಳ ಸಹಿತ ಜೋಡಿಸಿ ಇವರ ಮೇಲೆ ಒಣಗಿದ ಸೋಗೆಯನ್ನು ಮುಚ್ಚಿಟ್ಟು ಇಪ್ಪತ್ತು ದಿನಗಳ ವರಿವಿಗೂ ಬಾಡಿಸಿ ಅನಂತರ ಗರಿಗಳನ್ನು ಕತ್ತರಿಸಿ ತೊಂಡೆಯನ್ನು ನೆಡುವರು

ಜಮೀನಿನಲ್ಲಿ ಸಾಲು ಹೊಡಿದ ತರುವಾಯ ಮಾಘಮಾಸದ ಲಾಗಾಯಿತು ಚೈತ್ರಮಾಸದ ವರಿವಿಗೆ ಬೀಜಗಳನ್ನು ಹೂಳುತ್ತಾರೆ ಮಾಘ ಫಾಲ್ಗುಣಗಳಲ್ಲಿ ನೆಟ್ಟದ್ದು ಮುಂಬಿತ್ತನೆಂತಲೂ, ಚೈತ್ರದಲ್ಲಿ ಹೂಳಿದ್ದು ಹಿಂಬಿತ್ತನೆಯೆಂತಲೂ ಕರೆಯುವರು ಮುಂಬಿತ್ತನೆಯೇ ಹೆಚ್ಚು ಫಲಕಾರಿಯಾದದ್ದು

ಹೀಗೆ ಬಿತ್ತಿದ ಜಮೀನಿನಲ್ಲಿ ಸಾಲುಗಳ ಮಧ್ಯೆ ನೀರುಹಾಯಿಸಿ ಸಾಲುಗಳೆಲ್ಲವೂ ಹೀರಿ ಕೆಸರಾದನಂತರ ಗದ್ದೆಯ ಮೇಲಿರುವ ಬೀಜಗಳನ್ನು ತೆಗೆದು ನೀರು ಹರಿದ ಸಾಲುಗಳಲ್ಲಿಟ್ಟು ಕೆಸರುಮಣ್ಣನ್ನು ಮುಚ್ಚುವರು ಬೀಜಹಾಕಿದ ಜಮೀನಿನ ಸುತ್ತಲೂ ಬೇಲಿಹಾಕಿ ಇದರ ಮಗ್ಗುಲಿನಲ್ಲಿ ಹರಳು ಅಥವಾ ತೊಗರಿ ಗಿಡಗಳನ್ನು ಗಡಿಕೊಂಡರಂತೆ ಹೂಳುವರು ಇದರಿಂದ ಹರಳು ಮತ್ತು ತೊಗರಿ ಫಸಲುಗಳೂ ಆಗುವವು

ಬೀಜಹೂಳಿದ ಹನ್ನೊಂದನೆ ದಿನದ ಮೊದಲ್ಗೊಂಡು ಒಂದು ತಿಂಗಳ ಪರ್ಯಂತ ಹತ್ತುದಿನಗಳಿಗೊಂದುಸಲ ನೀರುಕಟ್ಟುವದರಿಂದ ಭೂಮಿಯು ನೆನೆದು ತಂಪಾಗುವುದು ಆದರೆ ಭತ್ತದ ಪೈರಿಗೆ ಕಟ್ಟಿದಂತೆ ಜಮೀನಿನಲ್ಲಿ ನೀರನ್ನು ನಿಲ್ಲಿಸಬಾರದು ಸೊಪ್ಪಿನ ಸಾಲು ತೆಗೆಯುವವರಿವಿಗೂ ಮೂರು ದಿನಗಳಿಗೊಂದುಸಲ ಗದ್ದೆಗಳು ಕರಗದಂತೆ ನೀರುಕಟ್ಟುವರು ಹೀಗೆ ಫಸಲು ಪೂರ್ತಿಯಾಗುವವರಿವಿಗೂ ಮಳೆಬಿದ್ದಕಾಲದಲ್ಲಿ ಹೊರ್ತು ಮೂರು ದಿನ ಅಥವಾ ನಾಲ್ಕು ದಿನಗಳಿಗೊಂದುಸಲ ನೀರುಕಟ್ಟುವರು

ಗಾಣಮಾಡಲು ಹಿಂದಿನ ದಿನ ನೀರು ಕಟ್ಟಿ ತಂಪು ಮಾಡಬೇಕು. ಇಲ್ಲದಿದ್ದರೆ ಕಬ್ಬಿನಲ್ಲಿ ರಸ ಕಮ್ಮಿಯಾಗಿ ಬೆಲ್ಲದ ವರ್ಣವೂ ಕಮ್ಮಿಯಾಗುವದು ಮೂರು ತಿಂಗಳು ಪೈರಾದ ನಂತರ ಪ್ರತಿ ಕಬ್ಬಿನಲ್ಲಿರತಕ್ಕ ಹಣ್ಣಾದ ಮತ್ತು ಒಣಗಿದ ಗರಿಗಳಿಂದ ಕಬ್ಬು ಕಾಣದಂತೆ ಸುತ್ತಿ ಇವುಗಳ ಬುಡದಲ್ಲಿರುವ ಹೊಸ ಮೊಳಕೆ ಮತ್ತು ಕಸರು ಗಿಡಗಳನ್ನು ಕಿತ್ತು ಚೊಕ್ಕಟ ಮಾಡುವರು ಇದಾದ ೬ ತಿಂಗಳಿಗೆ ೩—೪ ಕಬ್ಬುಗಳನ್ನು ಸೇರಿಸಿ ಸುತ್ತುಕಟ್ಟು ಹಾಕು ಮಾಡುವರು ಹೀಗೆ ಕಬ್ಬನ್ನು ಸುತ್ತುವದರಿಂದ ಗಾಳಿ ಮತ್ತು ಬಿಸಲಿನ ಝಳ ಸೋಕದೆ ರಸವತ್ತಾಗಿರುವದಲ್ಲದೆ ಕಚರಾವನ್ನು ತೆಗೆದುಹಾಕುವದರಿಂದ ನೀರು ಕಟ್ಟುವದಕ್ಕೂ ಅಲ್ಲಲ್ಲಿ ತಿರುಗಾಡುವದಕ್ಕೂ ಸಹಕಾರಿಯಾಗಿರುವದು

ಹೀಗೆ ಪೈರು ಹತ್ತು ಹನ್ನೆರಡು ತಿಂಗಳು ತನಕ ಬೆಳೆದನಂತರ ಶಿವರಾತ್ರಿ ಮೊದಲ್ಗೊಂಡು ಯುಗಾದಿವರೆಗೂ ಆಲೆ ಆಡಿಸುವರು ಆಲೆ ಮನೆಯನ್ನು ಹಂಗಾಮಿಯಾಗಿ ಚಪ್ಪರದಂತೆ ಕಟ್ಟಿ ಅದರಲ್ಲಿ ಒಂದು ಅಥವಾ ಎರಡು ಒಲೆಗಳನ್ನು ಮಾಡಿ ಇವುಗಳ ಮೇಲೆ ಕಬ್ಬಿಣದ ಕೊಪ್ಪರಿಗೆಯನ್ನಿಟ್ಟು ಆಲೆ ಆಡಿಬಂದ ರಸವನ್ನು ಮಕ್ಕರಿಗಳಲ್ಲಿ ಶೋಧಿಸಿ ಗಡಿಗೆಗಳಲ್ಲಿ ರಸವನ್ನು ತುಂಬಿಕೊಂಡು ಬಂದು ಮುಕ್ಕಾಲುಪಾಲು ತುಂಬುವವರಿವಿಗೂ ಗಡಿಗೆಗಳ ಲೆಕ್ಕದಿಂದ ಹಾಲನ್ನು ಕೊಪ್ಪರಿಗೆಗಳಲ್ಲಿ ತುಂಬಿ ಕಾಯಿಸುವರು ಹಾಲು ಸುರಿದ ಒಡನೆ ಸುಣ್ಣದ ಪುಡಿಯನ್ನು ಬೆರಸುವದರಿಂದ ಬೆಲ್ಲವು ಬಹಳ ಕಾಲದವರಿವಿಗಿಟ್ಟರೂ ಜೋನಿಯಾಗುವದಿಲ್ಲವು ಹಾಲು ಕಾಯುತ್ತಿರುವಾಗ ಇದರಲ್ಲಿರುವ ಕಲ್ಮಷಗಳು ನೊರೆಗಟ್ಟಿ ಮೇಲೆ ತೇಲುವುವು, ಇವುಗಳನ್ನು ತೆಗೆಯದಿದ್ದಲ್ಲಿ ಬೆಲ್ಲವು ಕಪ್ಪಾಗಿ ಹಸನಾಗಿರದು

ಪಾಕವು ಹೆಚ್ಚಾಗಿ ಕಾದರೆ ಸೀದುಹೋಗಿ ಬೆಲ್ಲವು ಕಹಿಯಾಗುವದು. ಕಮ್ಮಿ ಕಾದರೆ ಎಳಪಾಕವಾಗಿ ಬೆಲ್ಲವು ಜೋನಿಯಾಗುವದು. ಹದವಾಗಿ ಕಾದ ಕೊಪ್ಪರಿಗೆಯ ಪಾಕವನ್ನು ಕೆಳಕ್ಕೆ ಇಳಿಸಿಕೊಂಡು ಬೇರೆ ಒಂದು ಮಂದ ಪಾತ್ರೆಗೆ ಸುರಿದು ಕೊಂಚಹೊತ್ತು ಆರಿಸಿ ಅಚ್ಚಿನ ಮಣೆಯ ಮೇಲೆ ಒಂದೇ ಸಮನಾಗಿ ಬಿಡುವರು ಅಥವಾ ಕೈಗಳಿಗೆ ನೀರು ಸವರಿಕೊಂಡು ಉಂಡೆಗಟ್ಟುವರು.

ಹೊರವಾಗಿ ಬೆಳೆದ ಕಬ್ಬು ೧೫ ಅಡಿಯೂ, ಮಧ್ಯಮವಾಗಿ ಬೆಳೆದದ್ದು ೧೦ ಅಡಿಯೂ, ಕನಿಷ್ಠದ್ದು ೬ ಅಡಿ ಉದ್ದವೂ ಇರುವದು ಒಂದು ಎಕರೆ ಜಮೀನಿನಲ್ಲಿ ಬೀಜವನ್ನು ತೆಗೆಯದೆ ಆಲೆ ಆಡಿದರೆ ಅರವತ್ತೈದು ಅಡಿಗೆ ಬೆಲ್ಲವೂ ಬೀಜವನ್ನು ತೆಗೆದರೆ ಐವತ್ತೈದು ಅಡಿಗೆಯೂ ಬೀಳುವುದು ಒಂದು ಅಡಿಗೆ ಬೆಲ್ಲವು ಇಪ್ಪತ್ತು ನಾಲ್ಕು ರೂಪಾಯಿಗಳ ತೂಕವುಳ್ಳ ನಲವತ್ತು ಸೇರಿನ ಐದು ಮಣ ತೂಕವುಳ್ಳದ್ದಾಗಿದೆ ಬೆಲ್ಲವು ಮಣ ೧ ಕ್ಕೆ ಸರಾಸರಿ ಒಂದೂಕಾಲು ರೂಪಾಯಿಗೆ ಮಾರಾಟವಾಗುವದು

ಕಬ್ಬುಗಳಲ್ಲಿ ರಸದಾಳೆ, ಕೆಂಪುಪಟಾಪಟಿ, ಮರಕಬ್ಬೆಂದು ಮೂರು ತರಹವು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮರಕಬ್ಬನ್ನು ಅಷ್ಟು ವಿಶೇಷವಾಗಿ ಬೆಳಸುವದಿಲ್ಲವು ರಸದಾಳೆಕಬ್ಬು ಬಹಳ ಮಾಧುರ್ಯವಾಗಿಯೂ, ಇದರ ಬೆಲ್ಲವು ಉತ್ತಮವಾದುದಾಗಿಯೂ ಇರುವುದು

ಕಬ್ಬಿಗೆ ತಗಲತಕ್ಕ ಮುಖ್ಯವಾದ ರೋಗಗಳು ನೀರು ಹೆಚ್ಚಾಗಿ ಹಾಯಿಸುವದರಿಂದ ಉಂಟಾಗುವದೊಂದು ಕಮ್ಮಿಯಾಗಿ ಹಾಯಿಸಿ ಭೂಮಿಯಲ್ಲಿ ಕಾವು ಹೆಚ್ಚಾಗುವದೊಂದು, ಒಣಗಿಹೋಗುವುದು ಮತ್ತೊಂದು ನೀರು ಹೆಚ್ಚಾಗಿ ಉಂಟಾಗುವ ರೋಗವು ಗರಿಗಳ ಸುಳೀ ಸಮೀಪದ ೨—೩ ಗರಿಗಳ ವಿನಹಾ ಬಾಕಿ ಗರಿಗಳ ಮೇಲೆ ಮಚ್ಚೆ ಎದ್ದು, ಜೋತು, ಕಬ್ಬು ಹಸರು ಬಣ್ಣಕ್ಕೆ ತಿರುಗುವದು ಹೀಗೆ ಆದ ಒಡನೆಯೇ ನೀರು ಕಮ್ಮಿ ಮಾಡಿ ಮಚ್ಚೆ ಎದ್ದ ಗರಿಗಳನ್ನು ಸುತ್ತಿ ಕಚರಾ ಪಾಕುಮಾಡಿ ಭೂಮಿಯ ಮೇಲೆ ಹೆಚ್ಚಾಗಿ ಗಾಳಿ ಬೀಸುವಂತೆ ಮಾಡತಕ್ಕದ್ದು ಕಮ್ಮಿ ನೀರಿನಿಂದ ತಗಲುವ ರೋಗವು ಎರಡು ತಿಂಗಳ ಪೈರಿಗೇನೆ ತಗಲುವುದು ಇದಕ್ಕೆ ಹೆಚ್ಚಾಗಿ ನೀರನ್ನು ಹಾಯಿಸಿ ಭೂಮಿಯನ್ನು ತಂಪುಮಾಡತಕ್ಕದ್ದು ಪ್ರತಿಸಲವೂ ಕಬ್ಬನ್ನೇ ಸಾಗುವಳಿ ಮಾಡುವದರಿಂದಲೂ, ಕೋಂಗೆ ಹಿಂಡಿಯನ್ನು ಹಾಕುವದರಿಂದಲೂ ಫಸಲು ಕಟಾವು ಮಾಡುವದಕ್ಕೆ ೨—೩ ತಿಂಗಳು ಮುಂಚೆಯೇ ಒಣಗುವ ರೋಗವು ಕಾಣಿಸಿಕೊಳ್ಳುವದು ರೋಗ ಕಾಣಿಸಿಕೊಂಡ ಕೂಡಲೆ ಕತ್ತರಿಸಿ ಆಲೆಯಾಡಿಸಿಬಿಡಬೇಕು ಇಲ್ಲವಾದರೆ ಫಸಲು ಕೈಗೆ ಹತ್ತಲಾರದು.

ಇಂಡಿಯಾ ದೇಶದ ವೃತ್ತಾಂತಗಳು.

ಹೋಳ್ಕಾರ್ ಮಹಾರಾಜರಿಗೆ ಇದೇ ತಿಂಗಳು ೬ ನೇ ತಾರೀಖಿನಲ್ಲಿ ಪುತ್ರಜನನವಾಯಿತು ಈ ಪುತ್ರನೇ ಹೋಳ್ಕಾರ್ ಸಂಸ್ಥಾನಕ್ಕೆ ಮುಂದಿನ ಉತ್ತರಾಧಿಕಾರಿಗಳಾಗಿರುವರು

❖❖❖

ಕರೂರು ರಾಜದ್ರೋಹ ಮೊಕದ್ದಮೆಯಲ್ಲಿ ಸಿಕ್ಕಿಬಿದ್ದ ಕೃಷ್ಣಸ್ವಾಮಿ ಶರ್ಮ ಎಂಬವನಿಗೆ ಸೆಷನ್ಸ್ ಜಡ್ಜರು ಐದು ವರುಷಗಳ ದ್ವೀಪಾಂತರ ಟಾಪ್ ಸಜವನ್ನು ವಿಧಿಸಿರುತ್ತಾರೆ

❖❖❖

ಹೋದ ಸೋಮವಾರ ಬೊಂಬಾಯಿ ಪಟ್ಟಣದಲ್ಲಿ ಮೋಟಾರ್ ಗಾಡಿಗಳನ್ನಿಟ್ಟಿದ್ದ ಒಂದು ಅಂಗಡಿಗೆ ಬೆಂಕಿಬಿದ್ದು ಎರಡು ಗಾಡಿಗಳು ಸುಟ್ಟು ಬೂದಿಯಾದವು ಇನ್ನೂ ಅನೇಕ ಗಾಡಿಗಳಿಗೆ ನಷ್ಟವುಂಟಾಗಿರುವುದು

❖❖❖

ಹೋದ ವಾರ ಇಂಡಿಯಾದಲ್ಲೆಲ್ಲಾ ಕ್ಷಾಮಪೀಡಿತರಾದವರ ಸಂಖ್ಯೆಯು ಕಡಿಮೆಯಾಯಿತು ಆದರೆ ಇನ್ನೂ ನಾಲ್ಕು ಲಕ್ಷ ಜನರು ರಿಲೀಫ್ ಕಾಮಗಾರಿಗಳಲ್ಲಿರುತ್ತಾರೆ ಧಾರಣೆವಾಸಿಗಳು ಇದ್ದಸ್ಥಿತಿಯಲ್ಲೇ ಇರುತ್ತವೆ

❖❖❖

ಇದೇ ತಿಂಗಳು ೧ನೇ ತಾರೀಖಿನಲ್ಲಿ ಜೋಡ್‌ಪುರ ಸಂಸ್ಥಾನದ ಮೇಲೆಲ್ಲಾ ಸೈಕ್ಲೋನ್ ಎಂಬ ಬಿರುಗಾಳಿಯು ಹನ್ನೆರಡು ಘಂಟೆಗಳ ಕಾಲ ಬಹು ರಭಸದಿಂದ ಬೀಸಿ ಕೆರೆ ಕಟ್ಟೆಗಳನ್ನೂ ಅಲ್ಲಲ್ಲಿ ರೈಲ್ ಮಾರ್ಗಗಳನ್ನೂ ಸಹ ಒಡೆದುಬಿಟ್ಟಿರುತ್ತದೆ

❖❖❖

ಕಳೆದ ತಿಂಗಳು ಪೂನಾ ಪಟ್ಟಣದ ಜೈಲ್‌ಖಾನೆಯಲ್ಲಿ ಖೈದಿಯಾಗಿದ್ದ ಧೋಂಡಿ ಬಾಪು ಎಂಬವನು ಅಲ್ಲಿಯ ಸೂಪರಿಂಟೆಂಡರನ್ನು ದೊಣ್ಣೆಯಿಂದ ಹೊಡೆದು ಕೊಲ್ಲಲು ಪ್ರಯತ್ನಮಾಡಿದ್ದಕ್ಕಾಗಿ ಸೆಷನ್ ಜಡ್ಜರು ವಿಚಾರಣೆಮಾಡಿ ಅವನಿಗೆ ದ್ವೀಪಾಂತರ ಟಾಪ್ ಸಜವನ್ನು ವಿಧಿಸಿರುತ್ತಾರೆ

❖❖❖

ಲಾಹೋರಿನಿಂದ ಕರಾಚಿಗೆ ಹೋಗುತ್ತಿದ್ದ ಮೇಲ್‌ಗಾಡಿಯಲ್ಲಿ ಒಬ್ಬ ಯೂರೋಪಿಯನ್ ಹೆಂಗಸು ಪ್ರಯಾಣಮಾಡುತ್ತಿದ್ದಳು. ಗಾಡಿಯು ಮುಲ್ತಾನಿಗೆ ಬರುವಾಗ್ಗ ಈಕೆಯನ್ನು ಯಾರೋ ದುಷ್ಟರು

ಪರೋಪಕಾರವಾದ ಉದ್ದೇಶ ಕೊಂಡುಹಾಕಿದ್ದರೆಂದು ಗೊತ್ತಾಯಿತು. ಕೊಲೆಗಾರರು ಇನ್ನೂ ಪತ್ತೆಯಾಗಿಲ್ಲ.

***

ಕಳೆದ ವಾರ ಪಂಜಾಬ್ ದೇಶಕ್ಕೆ ಸೇರಿದ ರಾವಲ್‌ಪಿಂಡಿ ಮತ್ತು ಫಿರೋಜ್‌ಪೂರ್ ಪಟ್ಟಣಗಳಲ್ಲಿ ವಿಪರೀತವಾದ ಮಳೆಯು ಸುರಿದು ಅನೇಕ ಮನೆಗಳು ಬಿದ್ದುಹೋದವು. ಮನೆಮಾರುಗಳನ್ನು ಕಳೆದುಕೊಂಡ ರೈತರಿಗೆ ವಾಸಕ್ಕೋಸ್ಕರ ಸರ್ಕಾರದವರು ಅನೇಕ ಡೇರಾಗಳನ್ನು ಆಯಾ ಊರುಗಳಿಗೆ ಕಳುಹಿಸಿರುತ್ತಾರೆ.

***

ಮಿ॥ ಬಾಲಗಂಗಾಧರತಿಲಕರ ಮೊಕದ್ದಮೆಯನ್ನು ಪ್ರಿವಿಕೌನ್ಸಿಲ್‌ಗೆ ತೆಗೆದುಕೊಂಡು ಹೋಗುವುದಕ್ಕೆ ಅಪ್ಪಣೆಯಾಗಬೇಕೆಂದು ಅವರ ವಕೀಲರಾದ ಮಿ॥ ಬ್ಯಾಪಿಸ್ಟರವರು ಮೊಂಬಾಯಿ ಹೈಕೋರ್ಟು ಜಡ್ಜಿಗಳನ್ನು ಅಪ್ಪಣೆ ಕೇಳಿದ್ದರು. ಜಡ್ಜಿಗಳು ಈ ಕೇಸಿಗೆ ಸಂಬಂಧಪಟ್ಟ ಎಲ್ಲಾ ಸಂಗತಿಗಳನ್ನೂ ಚೆನ್ನಾಗಿ ಪರ್ಯಾಲೋಚಿಸಿ ಅಪೀಲಿಗೆ ಅಪ್ಪಣೆ ಕೊಡುವುದಕ್ಕಾಗುವದಿಲ್ಲವೆಂದು ಹೇಳಿದರು.

***

ಹೋದವಾರ ಪೂನಾ ಪಟ್ಟಣದಲ್ಲಿ ಸ್ಕೂಲ್ ಹುಡುಗರೆಲ್ಲರಿಗೆ ಪಂದ್ಯದ ಆಟಗಳಾದವು. ಅಗ್ಗೆ ಮೊಂಬಾಯಿ ಗವರ್ನರವರು ದಯಮಾಡಿಸಿ ಸ್ವಹಸ್ತದಿಂದಲೇ ಆಟದಲ್ಲಿ ಗೆದ್ದ ಹುಡುಗರಿಗೆ ಇನಾಮುಗಳನ್ನು ಹಂಚಿದರು. ಇನಾಮುಗಳನ್ನು ಕೊಟ್ಟಮೇಲೆ ಗವರ್ನರವರು ಒಂದು ಉಪನ್ಯಾಸವನ್ನು ಮಾಡಿ ಅಲ್ಲಿ ನೆರೆದಿದ್ದ ವಿದ್ಯಾರ್ಥಿಗಳನ್ನೆಲ್ಲಾ ಪ್ರೋತ್ಸಾಹಪಡಿಸಿದರು.

***

ಮದರಾಸ್ ಪಟ್ಟಣದ ತಿರುವೆಳಿಕ್ಕೇಣಿಯಲ್ಲಿರುವ ಮುಸಲ್ಮಾನರೆಲ್ಲರೂ ಸೇರಿ ಅಲ್ಲಿಯ ಆಸ್ಪತ್ರೆಯ ಡಾಕ್ಟರಾಗಿದ್ದ ಮೇಜರ್ ವೆಬ್ಸ್ಟರ ಗುಣಕಥನವನ್ನು ಮಾಡಿ ಅಲ್ಲಿ ಈಗ ಮುನಿಸಿಪಾಲಿಟಿಯವರು ಕಟ್ಟುತ್ತಿರುವ ಆಸ್ಪತ್ರೆಯನ್ನು ವೆಬ್ಸ್ಟರ್ ಆಸ್ಪತ್ರೆಯೆಂಬ ಹೆಸರಿನಿಂದ ಕರೆಯಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳಲು ಒಂದು ಮೀಟಿಂಗನ್ನು ನಡೆಸಿದರು.

***

ಅಲಿಪುರದ ಬಂದೀಖಾನೆಯಲ್ಲಿ ಗೋಸ್ವಾಮಿ ಎಂಬ ಅಪ್ರೂವರನ್ನು ಗುಂಡಿನಿಂದ ಹೊಡೆದು ಕೊಂದುಹಾಕಿದ ಕನ್ನಾಯಿಲಾಲದತ್ತನಿಗೆ ಸೆಷನ್ ಜಡ್ಜರು ಮರಣದಂಡನೆಯನ್ನು ವಿಧಿಸಿರುವರು. ಈ ಕೊಲೆಯಲ್ಲಿ ಇವನ ಸಹಾಯಕನಾದ ಸತ್ಯೇಂದ್ರ ಬೋಸನು ತಪ್ಪಿತಸ್ಥನಲ್ಲವೆಂದು ಜೂರಿ ಪಂಚಾಯಿತರು ಅಭಿಪ್ರಾಯಪಟ್ಟಿರುವ ಜಡ್ಜರು ಇವನ ಕೇಸನ್ನು ಹೈಕೋರ್ಟಿಗೆ ಹಾಕಿದಾರೆ.

***

ಹೋದ ಶುಕ್ರವಾರ ಕೊಯಂಬತೂರು ಪಟ್ಟಣದ ಬೀದಿಯಲ್ಲಿ ಒಂದು ಮನೆಗೆ ಬೆಂಕಿಬಿದ್ದು ಬಹಳ ಅನಾಹುತವನ್ನು ಮಾಡುತ್ತಿದ್ದಿತು. ಆದರೆ ಶೀಘ್ರದಲ್ಲಿಯೇ ಅಲ್ಲಿನ ಸ್ಕೂಲ್ ಹುಡುಗರೂ ಗುಮಾಸ್ತರೂ ಪೋಲೀಸಿನವರೂ ಸೇರಿ ಬಹಳ ಪ್ರಯಾಸದಿಂದ ಬೆಂಕಿಯನ್ನು ಆರಿಸಿಬಿಟ್ಟರು. ಮುನಿಸಿಪಾಲಿಟಿಯಲ್ಲಿದ್ದ ಬೆಂಕಿ ಆರಿಸುವ ಯಂತ್ರವು ಸಮಯಕ್ಕೆ ಪ್ರಯೋಜನವಿಲ್ಲದೆ ಕೆಟ್ಟುಹೋಗಿತ್ತಂತೆ.

***

ಮದರಾಸು ಪಟ್ಟಣದಲ್ಲಿ ಕಾಲರಾ ಉಪದ್ರವು ಉಲ್ಬಣ ಸ್ಥಿತಿಯಲ್ಲಿರುತ್ತದೆ. ದಿನ ಒಂದಕ್ಕೆ ೬೦ ರೋಗದಿಂದ ಸುಮಾರು ಇಪ್ಪತ್ತೈದು ಜನಗಳಂತೆ ಸಾಯುತ್ತಿರುವರು. ಮ್ಯುನಿಸಿಪಾಲಿಟಿಯವರು ರೋಗ ತಗಲಿದ ಮನೆಗಳನ್ನು ಪವಿತ್ರಗಳಿಂದ ಶುಚಿಮಾಡುತ್ತಲೂ ರೋಗಿಗಳನ್ನು ಕ್ಯಾಂಪುಗಳಿಗೆ ಸಾಗಿಸುತ್ತಲೂ ಬರುವರು. ಆಗಲೇ ಈ ಜಾಡ್ಯವು ಒಂದೆರಡು ಪೇಟೆಗಳಲ್ಲಿ ಸಂಪೂರ್ಣವಾಗಿ ನಿಂತುಹೋಗಿರುವುದು.

***

ಕಳೆದ ಶುಕ್ರವಾರ ಕಲ್ಕತ್ತಾ ಪಟ್ಟಣದಲ್ಲಿರುವ ಒಂದು ಸ್ಟೂಡೆಂಟ್ಸ್ ಹೋಮಿಗೆ ಪೋಲೀಸಿನವರು ಹೋಗಿ ಪತ್ತೆತರದೊದುಗಳನ್ನು ಮಾಡಿದರು. ಅಲ್ಲಿ ವಾಸ ಮಾಡಿಕೊಂಡಿದ್ದವರಲ್ಲಿ ಯಾರೇ ನಾಲ್ವರು ಪೋಲೀಸು ಆಫೀಸರುಗಳಂತೆ ವೇಷ ಹಾಕಿಕೊಂಡು ಒಬ್ಬ ಜಮೀನ್ದಾರನ ಮನೆಗೆ ನುಗ್ಗಿ ಕಳುವು ಮಾಡಿದರಂತೆ. ಪೋಲೀಸಿನವರು ಸದರಿ ಹೋಮಿನಲ್ಲಿರುವ ಯಾರನ್ನೂ ಸದ್ಯ ಅರೆಸ್ಟು ಮಾಡದಿದ್ದರೂ ಕೆಲವು ವಿಶೇಷವಾದ ಕಾಗದಗಳನ್ನು ತೆಗೆದುಕೊಂಡು ಹೋಗಿರುವರು.

***

ಅಲಹಾಬಾದಿನಲ್ಲಿ ಹಿಂದುಸಮಾಚಾರವೆಂಬ ಪತ್ರಿಕೆಯ ಸಂಪಾದಕರಾದ ಲಾಲಾ ಮಾಧವಪ್ರಸಾದ್ ಎಂಬುವರು ಒಂದು ವಿಚಿತ್ರವಾದ ಮೊಕದ್ದಮೆಯನ್ನು ಪೋಲೀಸಿನವರಮೇಲೆ ತಂದಿರುವರು. ಸದರಿ ಸಂಪಾದಕರು ಸರ್ಕಾರದ ಉದ್ಯೋಗಸ್ಥರ ತಪ್ಪುದೋಷಗಳನ್ನು ಹೊರಕ್ಕೆ ಹಾಕಿದ್ದರಿಂದ ಉದ್ಯೋಗಸ್ಥರು ದ್ವೇಷಾಸೂಯೆಯಿಂದ ಕೊಡಿದವರಾಗಿ ತನ್ನನ್ನು ಹಿಡಿದು ಲಾಕಪ್ಪಿನಲ್ಲಿ ಹಾಕಿದ್ದರೆಂತಲೂ, ಆದರಿಂದ ತನ್ನ ದೇಹಕ್ಕೆ ನಷ್ಟವಾದುದಲ್ಲದೆ ಹಣ ನಷ್ಟವಾಗಿದೆಯೆಂತಲೂ ಇದಕ್ಕೆಲ್ಲಾ ಸರ್ಕಾರದವರು ತನಗೆ ಮೂರು ಸಾವಿರ ರೂಪಾಯಿ ಪರಿಹಾರ ದ್ರವ್ಯವನ್ನು ಕೊಡಬೇಕೆಂತಲೂ ದಾವಾ ತಂದಿರುತ್ತಾರೆ.

***

ಕೈಕಾಲುಗಳೆಲ್ಲವೂ ತಣ್ಣಗಾಗಿ ನಾಡಿಯು ನಿಂತುಹೋದ ಮೇಲೆ ಮರಣವು ಪ್ರಾಪ್ತವಾಯಿತೆಂದು ಜನರು ಆಡಿಕೊಳ್ಳುವರು. ಆದರೆ ಕಳೆದ ವಾರ ಪೂನಾ ಪಟ್ಟಣದಲ್ಲಿ ಒಬ್ಬ ಯೂರೋಪಿಯನ್ ಹೆಂಗಸು ತೀರಿಹೋದಳೆಂದು ಮನೆಯಲ್ಲಿದ್ದವರು ನಂಬಿ ದಫನಮಾಡುವುದಕ್ಕೆ ಎಲ್ಲವನ್ನು ಸಿದ್ಧಪಡಿಸಿಕೊಂಡರು. ಹೆಣವನ್ನು ಪೆಟ್ಟಿಗೆಯಲ್ಲಿಟ್ಟದ್ದೂ ಆಯಿತು. ಸ್ವಲ್ಪ ಹೊತ್ತಾದಮೇಲೆ ದೇಹವು ಕೊಂಚ ಅಲ್ಲಾಡಿದ್ದನ್ನು ಅಲ್ಲಿದ್ದವರು ನೋಡಿ ಜಾಗ್ರತೆಯಲ್ಲಿ ಡಾಕ್ಟರನ್ನು ಕರೆದುಕೊಂಡು ಬಂದರು. ಡಾಕ್ಟರು ಬಂದು ... ಪ್ರಾಣವಿತ್ತು. ಆದರೂ ಸ್ವಲ್ಪ ಹೊತ್ತಾದ ಮೇಲೆ ಪ್ರಾಣವು ಸಂಪೂರ್ಣವಾಗಿ ಹೋಯಿತೆಂದು ಡಾಕ್ಟರವರು ಹೇಳಿದಮೇಲೆ ದಫನ ಕ್ರಿಯೆಗಳನ್ನು ನಡಿಸಿದರು.

***

ಹೋದ ವಾರ ರಂಗೂನ್ ಪಟ್ಟಣದ ಬೀದಿಯಲ್ಲಿ ಒಂದು ಭಯಂಕರವಾದ ಮರಣವು ಅಕಸ್ಮಾತ್ತಾಗಿ ಸಂಭವಿಸಿತು. ಒಬ್ಬ ಸೋಜರನು ಬೇಟೆಯಾಡಿಕೊಂಡು ಮನೆಗೆ ಬರುವಾಗ್ಗೆ ದಾಹವಾದ್ದರಿಂದ ಸೋಡಾ ಮಾರುವ ಅಂಗಡಿಗೆ ಹೋಗಿದ್ದನು. ಅಂಗಡಿಯಲ್ಲಿ ಒಬ್ಬ ಜಪಾನಿಯ ಹುಡುಗಿಯು ಕೂತು ವ್ಯಾಪಾರ ಮಾಡುತ್ತಿದ್ದಳು. ಆಕೆಯು ಬಂದೂಕನ್ನು ನೋಡಬೇಕೆಂದು ಸೋಜರನನ್ನು ಕೇಳಿದ್ದಕ್ಕೆ ಅವನು ಒಪ್ಪಿ ಅದರಲ್ಲಿರುವ ಸಾಮಾನುಗಳೆಲ್ಲವನ್ನು ಆಕೆಗೆ ವಿವರಿಸುತ್ತಿರುವಾಗ್ಗೆ ಬಂದೂಕವು ಅಕಸ್ಮಾತ್ತಾಗಿ ಹಾರಿ ಗುಂಡು ಆ ಹುಡುಗಿಯ ತಲೆಯಲ್ಲಿ ನುಗ್ಗಿಹೋಯಿತು. ಆಕೆಯು ತಕ್ಷಣವೇ ಮೃತಪಟ್ಟಳು. ಸೋಜರನು ಪೋಲೀಸಿನವರಿಗೆ ತನ್ನನ್ನು ಒಪ್ಪಿಸಿಕೊಟ್ಟನು. ಆದರೆ ಅದೇ ರಾತ್ರಿ ಅವನಿಗೆ ಬುದ್ಧಿ ವಿಕಲ್ಪವಾಗಿ ಬದುಕಲಾರದಷ್ಟು ಕಾಯಿಲೆಯಾಗಿರುತ್ತಾನೆ.

ವಿದೇಶ ವರ್ತಮಾನಗಳು.

ಮುಲಾಯಿ ಹಾಫಿಜ್ ಎಂಬುವನು ಮೊರಾಕೋ ರಾಜ್ಯಕ್ಕೆ ಸುಲ್ತಾನನಾಗಿ ನಿಯಮಿಸಲ್ಪಟ್ಟಿರುತ್ತಾನೆ.

***

ಈಗಿನ ಬ್ರಿಟಿಷ್ ಪ್ರಭುತ್ವದ ಮಂತ್ರಿಗಳಲ್ಲಿ ಒಬ್ಬರಾಗಿರುವ ಮಿ॥ ಚರ್ಚಿಲ್‌ರವರಿಗೆ ಮೊನ್ನೆ ಶನಿವಾರ ಲಂಡನ್ ಪಟ್ಟಣದಲ್ಲಿ ವಿವಾಹವಾಯಿತು. ವಧುವಿನ ಹೆಸರು ಕ್ಲೆಮೆಂಟಿನಾ. ವಿವಾಹಕ್ಕೆ ಕ್ಯಾಬಿನೆಟ್ ಮಂತ್ರಿಗಳೂ ಅಮೇರಿಕ ಮತ್ತು ಜರ್ಮನಿ ದೇಶದ ರಾಯಭಾರಿಗಳೂ ಬಂದಿದ್ದರು.

***

ರಷ್ಯಾ ರಾಜ್ಯದಲ್ಲಿ ಕಾಲರಾ ಉಪದ್ರವು ಬಲು ಭಯಂಕರವಾಗಿ ಹರಡಿಕೊಳ್ಳುತ್ತಲಿದೆ. ಇದುವರೆಗೂ ಸುಮಾರು ೩೫೦೦ ಜನರಿಗೆ ಆ ರೋಗವು ತಗಲಿತು. ಕಾಲರಾ ರೋಗಿಗಳು ಜರ್ಮನ್ ದೇಶಕ್ಕೆ ಪ್ರವೇಶಿಸದಂತೆ ಜರ್ಮನಿ ಸರ್ಕಾರದವರು ಆಯಾ ಎಲ್ಲೆಗಳಲ್ಲಿ ಉಸ್ತುವಾರಿ ಇಟ್ಟಿರುತ್ತಾರೆ.

***

ಇಂಡಿಯಾ ದೇಶದ ವೈಸರಾಯರಾಗಿದ್ದ ಲಾರ್ಡ್ ಕರ್ಜನ್‌ರವರು ಮೋಟರ್ ಗಾಡಿಯಲ್ಲಿ ಸಂಚರಿಸುತ್ತಿರುವಾಗ್ಗೆ ಸನ್ನಿಂಗ್‌ಡೇಲ್ ಎಂಬ ಸ್ಥಳದಲ್ಲಿ ಅವರ ಗಾಡಿಯು ಬೇರೊಂದು ಗಾಡಿಗೆ ಢಕ್ಕಾಮುಕ್ಕಿ ಬಿದ್ದಿತು. ಲಾರ್ಡ್ ಕರ್ಜನ್‌ರವರಿಗೆ ತಲೆಯಮೇಲೆ ಗಾಯವಾಗಿರುವುದಲ್ಲದೆ ಅವರ ದೇಹಕ್ಕೆಲ್ಲಾ ಬಾಧೆಯಾಗಿರುವುದು.

***

ಅಮೇರಿಕಾ ದೇಶದ ನ್ಯೂಯಾರ್ಕ್ ಗವರ್ನರಿಗೆ ಯಾರೋ ದುಷ್ಟರು ಪೋಸ್ಟು ಮೂಲಕ ಸಿಡಿಮದ್ದನ್ನು ಕಳುಹಿಸಿದ್ದರು. ಗವರ್ನರವರು ಆದಿತ್ಯವಾರಗಳಲ್ಲಿ ಯಾರೂ ಕಾರ್ಖಾನೆಗಳಲ್ಲಿ ಕೆಲಸ ಮಾಡಿಸಕೂಡದೆಂತಲೂ ಸಾರಾಯಿ ಅಂಗಡಿಗಳನ್ನು ಮುಚ್ಚಬೇಕೆಂತಲೂ ನಿರ್ಬಂಧಪಡಿಸಿದ್ದೇ ಇದಕ್ಕೆ ಕಾರಣವೆಂದು ತಿಳಿಯಬರುತ್ತೆ.

***

ಪರ್ಷಿಯಾ ದೇಶದ ಟೆಬ್ರಿಜ್ ಪಟ್ಟಣದಲ್ಲಿ ಪ್ರಜೆಗಳಿಗೂ ಸರಕಾರದವರಿಗೂ ಭಯಂಕರವಾದ ಹೊಡೆದಾಟವಾಗುತ್ತಿದೆ. ಬ್ರಿಟಿಷ್ ರಾಯಭಾರಿಯು ತನ್ನ ಕೈಲಾದ ಪ್ರಯತ್ನವನ್ನು ಮಾಡಿ ಉಭಯಪಕ್ಷದವರಿಗೂ ರಾಜಿಮಾಡಿಸಬೇಕೆಂದು ಪ್ರಯತ್ನಪಟ್ಟರು. ಆದರೆ ಇವರ ಸಹಾಯಕ್ಕೆ ರಷ್ಯಾರಾಯಭಾರಿಯು ಬರಲಿಲ್ಲ.

***

ಮೂರು ವರುಷಗಳ ಕೆಳಗೆ ತುರ್ಕಿ ಸುಲ್ತಾನರನ್ನು ಸಿಡಿಮದ್ದಿನಿಂದ ಕೊಲ್ಲುವುದಕ್ಕೆ ಪ್ರಯತ್ನಪಟ್ಟ ಸಿಲ್ವೆಸ್ಟರ್ ಎಂಬುವನು ತುರ್ಕಿ ರಾಜ್ಯಭಾರದ ನೂತನ ಏರ್ಪಾಡುಗಳನ್ನು ಕೇಳಿ ತನ್ನನ್ನು ಯಾರೂ ಏನೂ ಮಾಡಲಾರರೆಂದು ನಂಬಿ ಅಲ್ಲಿಗೆ ಪುನಃ ಹೋದನು. ಆದರೆ ಅವನನ್ನು ಪೋಲೀಸಿನವರು ಹಿಡಿದು ವಿಚಾರಣೆ ಮಾಡಿ ಪುನಃ ಬಿಟ್ಟುಬಿಟ್ಟರು.

***

ಅಮೇರಿಕಾ ದೇಶದ ಕೆನಡಾ ರಾಜ್ಯದಲ್ಲಿ ವಿಪರೀತವಾದ ಕಾಡ್ಗಿಚ್ಚು ಹರಡಿಕೊಳ್ಳುತ್ತಲಿದೆ. ಸೂಪೀರಿಯರ್ ಸರೋವರದ ತೀರದಲ್ಲಿ ನಿಂತು ನೋಡಿದರೆ ಅಲ್ಲಿನ ಪ್ರದೇಶವೆಲ್ಲಾ ಜ್ವಾಲಾಮಯವಾಗಿದೆಯೋ ಎನ್ನುವಂತಿರುವುದು. ಅಲ್ಲಲ್ಲಿರುವ ಅನೇಕ ಗ್ರಾಮಗಳು ಬೆಂಕಿಗೆ ಸಿಕ್ಕಬಹುದೆಂಬ ಭಯವು ಜನರ ಮನಸ್ಸುಗಳನ್ನು ಕಳವಳಗೊಳಿಸುತ್ತಿರುವದು.

***

ವಿಲಾಯಿತಿಯ ಗ್ಲಾಸ್ಗೋ ಪಟ್ಟಣದಲ್ಲಿ ಕೂಲಿ ಸಿಕ್ಕದೆ ಇದ್ದ ಸುಮಾರು ಮೂರು ಸಾವಿರ ಜನರು ಗುಂಪಾಗಿ ಸೇರಿ ಮಧ್ಯರಾತ್ರಿಯಲ್ಲಿ ಮೆರವಣಿಗೆ ಮಾಡುತ್ತಾ ದಾಂಧಲೆ ನಡಿಸಿದರು. ಇವರನ್ನು ಚದರಿಸುವುದಕ್ಕೆ ಅಲ್ಲಲ್ಲಿ ಪೋಲೀಸಿನವರು ಕಾದಿದ್ದರು. ಕೆಲವು ಸ್ಥಳಗಳಲ್ಲಿ ಪೋಲೀಸಿನವರಿಗೂ ಕೂಲೀ ಜನರಿಗೂ ಮಾರಾಮಾರಿ ಆಯಿತು. ಕೆಲವರಿಗೆ ಗಾಯಗಳಾಗಿ ಆಸ್ಪತ್ರೆಯಲ್ಲಿರುತ್ತಾರೆ.

***

ಲಾಹೋರಿನಲ್ಲಿರುವ ವಾಚ್ ಪತ್ರಿಕೆಯ ಸಂಪಾದಕರಾದ ಮೌಲ್ವಿ ಮಹಮದ್ ಇನಾಮ್ ಉಲ್ಲಾ ಎಂಬುವರು ತುರ್ಕಿ ಸುಲ್ತಾನರು ಹಾಕುತ್ತಿರುವ ಹೆಜ್ಜಾಜ್ ಪುಣ್ಯಕ್ಷೇತ್ರದ ರೈಲ್‌ರಸ್ತೆಗೆ ಹಿಂದೂ ದೇಶದಲ್ಲಿರುವ ಮುಸಲ್ಮಾನರಿಂದ ಚಂದಾ ಎತ್ತುತ್ತಿದ್ದರು. ಇದುವರೆಗೂ ಅವರು ವಸೂಲಾದ ಚಂದಾ ಹಣವನ್ನು ಸುಲ್ತಾನರಿಗೆ ಖಾವತಿಮಾಡಿರುತ್ತಾರೆ. ಅವರು ಈ ಕೆಲಸದಲ್ಲಿ ಸುಮಾರು ಎಪ್ಪತ್ತೈದು ಸಾವಿರ ರೂಪಾಯಿಗಳನ್ನು ವಸೂಲು ಮಾಡಿರುವರೆಂದು ಕಂಡುಬರುತ್ತದೆ.

ಜರ್ಮನಿ ರಾಜ್ಯಕ್ಕೆ ಸೇರಿದ ಡನೌಸಿಂಗೆನ್ ಪಟ್ಟಣದಲ್ಲಿ ಬೆಂಕಿ ಬಿದ್ದು ೩೦೦ ಭಾರೀ ಕಟ್ಟಡಗಳೂ, ಮೂರು ಮನೆಗಳೂ ಸುಟ್ಟುಹೋದವು. ಒಬ್ಬ ಹೆಂಗಸೂ ಇಬ್ಬರು ಮಕ್ಕಳೂ ಉರಿಯಲ್ಲಿ ಸಿಕ್ಕಿ ಸತ್ತರು. ೧೬ ಲಕ್ಷ ರೂಪಾಯಿನ ಕಟ್ಟಡಗಳೇ ನಾಶವಾದವು. ಚಕ್ರವರ್ತಿಯವರು ಈ ದುಃಖಕರವಾದ ಸಂಭವವನ್ನು ಕೇಳಿ ತುಂಬಾ ಮರುಗಿದರು. ಒಬ್ಬ ರಾಜಕುಮಾರನು ನಷ್ಟಪಟ್ಟ ಪ್ರಜೆಗಳಿಗೆ ಸಹಾಯ ಮಾಡುವುದಕ್ಕೋಸ್ಕರ ೩೦ ಸಾವಿರ ರೂಪಾಯಿ ಕಳುಹಿಸಿಕೊಟ್ಟಿದಾರೆ.

***

ತುರ್ಕಿರಾಜ್ಯಕ್ಕೆ ಸೇರಿದ ಡೆರ್‌ಸಿಂ ಪಟ್ಟಣದಲ್ಲಿ ಕುರ್ಡ್ಸ್ ಎಂಬ ಜನರು ಸರಕಾರದ ಮೇಲೆ ದಂಗೆ ಎದ್ದಿರುತ್ತಾರೆ. ಇವರನ್ನು ಅಡಗಿಸುವುದಕ್ಕೆ ತುರ್ಕಿ ಸುಲ್ತಾನರು ಇಬ್ರಾಹಿಂಪಾಷಾ ಎಂಬುವರ ಕೈಕೆಳಗೆ ಸೈನ್ಯವನ್ನು ಕಳುಹಿಸಿದರು. ತುರ್ಕಿ ಸೈನ್ಯಕ್ಕೂ ದಂಗೆಕೋರರಿಗೂ ಟಿಲಿಲಾಮ ಎಂಬ ಸ್ಥಳದಲ್ಲಿ ಯುದ್ಧವಾಯಿತು. ತುರ್ಕಿಯವರ ಕಡೆ ಇಬ್ರಾಹಿಂಪಾಷರ ಮಗನೂ ಇಪ್ಪತ್ತುಮಂದಿ ಸೈನಿಕರೂ ಮಡಿದುಹೋದರು. ಈಗ್ಗೆ ಸರಕಾರದವರು ಅಲ್ಲಿಗೆ ಹೆಚ್ಚಾದ ಸೈನ್ಯವನ್ನು ಕಳುಹಿಸಿರುತ್ತಾರೆ.

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟರ್."

ವ್ಯವಹಾರನಿರ್ಣಯ—ಪ್ರಕರಣಗಳು ೫೦೦ ಹಿಂದೂ ಮಹಮದೀಯ ಲಾಗಳು, ೬೯ ಕಾನೂನುಗಳು ಇವುಗಳ ಸಂಗ್ರಹವೂ, ೯೦ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ ಕ್ರಯ ವಿ. ಪಿ. ಸೇರಿ ೧ ರೂ. ೧೬ ಆಣೆ. [40-21]

ಕನ್ನಡ ಲಾ ರಿಪೋರ್ಟರ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ೧—೪—೦ ಮುಂಗಡ, ಯಾ, ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೦—೨—೦

ಇವುಗಳನ್ನು ಅಪೇಕ್ಷಿಸುವವರು "ಎಂ. ವೆಂಕಟ್ರಾಮಯ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯುವುದು.

ಸ್ವತ್ತು ಪರಾಧೀನ ತಡೆನೋಟೀಸ್.

74-1

ಮೈಸೂರು ಶ್ರೀರಾಂಪೇಟೆಯಲ್ಲಿರುವ ಗೊಲ್ಲರ ವೆಂಕಟಪ್ಪನ ಹೆಂಡತಿ ಚಿಕ್ಕಮ್ಮನೆಂಬ ನನ್ನ ದತ್ತು ತಾಯಿಗೆ ಬುದ್ಧಿ ಸ್ವಾಧೀನವಿಲ್ಲ. ನನಗೆ ಆಗದೆ ಇರತಕ್ಕ ಕೆಲವರು ದುಷ್ಟರು ಆಕೆಗೆ ದುರ್ಬೋಧನೆಮಾಡಿ ನನ್ನ ಪಕ್ಷಿಗೆ ಒಳಪಟ್ಟಿರುವ ಚರಸ್ಥಿರ ಆಸ್ತಿಗಳನ್ನು ಅವಳಿಂದ ಪರಾಧೀನಮಾಡಿಸುವುದಾಗಿಯೂ ಮತ್ತು ಅನ್ಯರೊಬ್ಬನನ್ನು ಪುನಃ ಆಕೆಗೆ ದತ್ತು ಮಾಡಿಸುವದಾಗಿಯೂ ವರ್ತಮಾನ ಕೇಳುತ್ತೇನೆ. ಹಾಗೆ ಏನಾದರೂ ಆಕೆ ದತ್ತು ಮಾಡಿಕೊಂಡರೆ ಆ ದತ್ತು ಊರ್ಜಿತವಾತಕ್ಕದ್ದಲ್ಲ. ಆಕೆ ಮಾಡುವ ಸ್ವತ್ತುಗಳ ಪರಾಧೀನವು ಊರ್ಜಿತವಾತಕ್ಕದಲ್ಲವೆಂದು ಈ ಮೂಲಕ ನಾನು ತಿಳಿಯಪಡಿಸಿದ್ದೇನೆ

ಚಿಕ್ಕಮ್ಮನ ದತ್ತುಮಗ ಕೆಂಪುಚನ್ನಯ್ಯ ಉರುಫ್ ಪಾಪಯ್ಯ,

ಮೈಸೂರು ಕೃಷ್ಣರಾಜಮೊಹಲ್ಲಾ ನಿವಾಸಿ.

ತಾ॥ ೩೦—೯—೧೯೦೮.

"ನೋಟೀಸ್ ಹರಾಜ್"

73-1

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :—

ಬಾಕಿ ಇರುವ ಅಕ್ಟೋಬರು ಮಾಹೆ ೭ನೇ ತಾರೀಖು ಬುಧವಾರದ ಬಾಗಾಯಿತು ಕೆಲವು ಪಳಕಾರ ಅಮೃತಮಹಲ್ ಇಬಾನಾ ಗಂಡು ರಾಸುಗಳನ್ನು ಪ್ರದರ್ಶನದ ಬಳಿ ಮೈಸೂರು ಮೊಕ್ಕಾಂನಲ್ಲಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಛಪ ಸವಾಲಿನಲ್ಲಿ ಪಡೆಯಬಹುದು.

ಮೊಕ್ಕಾಂ—ಘಿನ್ನೂರಹಳ್ಳಿ. ತಾ॥ ೧೫—೯—೧೯೦೮.	ಎಚ್. ನಂಜುಂಡರಾಜೇ ಅರಸ್, ಸೂಪರಿಂಟೆಂಡೆಂಟ್, ಅಮೃತಮಹಲ್ ಡಿಪಾರ್ಟುಮೆಂಟ್.

ಮಧುರೆ ಸೀರೆ! ಗಟ್ಟಿ ಬಣ್ಣ! ೧೬॥ ಮೊಳದುದ್ದ!!

57-7

ಬಿಳಿಯ ಚುಕ್ಕೆ ಯಾ ಹುವ್ವುಗಳಿಂದ ಕೂಡಿದ ಕೆಂಪು ಅಥವಾ ಕಪ್ಪು ಬಣ್ಣದ್ದು ರೂ. ೩-೪ ಆ. ಸಹಜವಾಗಿ ಅಂಚು ಸೆರಗಿನಲ್ಲಿ ಜರತಾರಿಯುಳ್ಳದು ರೂ. ೫. ಬೆಳ್ಳಿಯ ಕಲಾಬತ್ತು ಸೀರೆ, ರೂ. ೭, ರೂ. ೮, ರೂ. ೧೦. ಹೆಚ್ಚು ಖರೀದಿಗೆ ಉತ್ತಮ ಸಾಲು ದೊರೆಯುತ್ತೆ.

ಮದ್ರಾಸು ಬಿಳಿಯ ರೇಷ್ಮೆ ಅಂಚಿನ ಸೀರೆ ರೂ. ೬.

ಒಂದೇ ತರದ ೬ ರೇಷ್ಮೆ ಸೆರಗುಳ್ಳ ೬ ಅಂಗುಲ ಬಿಳಿರೇಷ್ಮೆ ದ್ರಾಕ್ಷಿ ಅಂಚುಳ್ಳ ಗಟ್ಟಿ ಕಪ್ಪು ಬಣ್ಣದ ೧೮ ಮೊಳದ ಸೀರೆಗೆ ರೂ. ೬. ೩ ಅಂಗುಲದಂಚಿನದಕ್ಕೆ ರೂ. ೭॥ ಬಹು ಸರಿಯಾದ ನೂಲು ಬಿಳಿ ಅಸ್ಸಾಂ ರೇಷ್ಮೆ ಅಂಚು, ೬ ಮೊಳದ ರೇಷ್ಮೆ ೬ ಸೆರಗು, ಬಹು ನೋಗಸಾಗಿಯೂ ಎಂದಿಗೂ ಕೆಡದ ಖಾದರಿ ಬಣ್ಣದಲ್ಲಿ ತಯಾರಿಸಿದ ೬ ಅಂಗುಲದಂಚಿನದಕ್ಕೆ ರೂ. ೯॥, ೩ ಅಂಗುಲದಂಚಿನದಕ್ಕೆ ರೂ. ೧೦॥.

ಬುದ್ಧೀಸ್! "ಬ್ಲಾಂಕೆಟ್" ಎಂಬ ಹೊಸ ಬನಾತು! ರೂ. ೬.

ಶುದ್ಧ ಉಣ್ಣೆಯ ಹೊದಿಕೆಯು ಮಖಮಲಿನಂತೆ ಮೆತ್ತಗೂ ಛಳಿಗೆ ಬೆಚ್ಚಗೂ ಇದೆ. ಉದ್ದ ೫೦, ಅಗಲ ೪೯ ಅಂಗುಲ. ಕ್ರಯ ರೂ. ೬. ರೇಷ್ಮೆಯ (ಕೆಂಪು) ವಸ್ತ್ರಗಳು ' ೬ ಮೊಳದಗಲ ' ರೂ. ೫.

೮ ಮೊಳದ ಮೇಲುಕೋಟೆ ಅಂಚಿನ ಪಂಚೆಗಳು ಜೊತೆ ರೂ. ೩.

ವಿಳಾಸ.—ದಾವ್ ಎಂಪೋರಿಯಂ, ಸೈಡರ್ ಹಾಂ ರೋಡ್,

ವೇಪೇರಿ. ಮದ್ರಾಸು.

ಪೆರೂನಾ ಎಲ್ಲಾ ಶೀತರೋಗಗಳನ್ನೂ ನಿವಾರಣೆ ಮಾಡುವುದರಲ್ಲಿ ಅಮೂಲ್ಯವಾಗಿದೆ ಎಂದು ಪ್ರಮುಖ ಆಸ್ಪತ್ರೆಗಳು ಹೇಳುತ್ತವೆ.



ಸಿಸ್ಟರ್ಸ್ ಆಫ್ ದಿ ಗುಡ್ ಷೆಫರ್ಡ್, ಮಾಂಟ್ರೀಲ್ [31-25]

ಭೂಮಿಯ ಮೇಲಿರುವ ಆಸ್ಪತ್ರೆಗಳೆಲ್ಲಾ ಶೀತರೋಗಿಗಳನ್ನು ಚಿಕಿತ್ಸೆ ಮಾಡುವಲ್ಲಿ ಪೆರೂನಾ ಔಷಧವು ಬಹು ಬೆಲೆಯುಳ್ಳದ್ದೆಂದು ಕಂಡುಕೊಂಡಿವೆ

ಶೀತ ನೆಗಡಿ ಮುಂತಾದದ್ದು ಶ್ವಾಸಕೋಶಕ್ಕೆ ಬರುವ ರೋಗವೆಂತಲೂ ಅದು ಆರೇ ಪಕ್ಷ ವರುಷಕ್ಕೆ ಎಂಟು ತಿಂಗಳ ಕಾಲ ಬರುವುದೆಂತಲೂ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ

ಈ ದೇಶದಲ್ಲಿ ಶೀತಕಾಲವು ದೀರ್ಘವಾದ ಮತ್ತು ಕಠಿಣವಾದ ಹವಾ ಉಳ್ಳದ್ದಾಗಿ ಬಹಳ ಕಾಲ ಇರುವುದರಿಂದ ಅಗಲೇ ಶೀತ ಜಾಡ್ಯಗಳು ಪ್ರಾಪ್ತವಾಗುವವೆಂದು ಖಂಡಿತವಾಗಿ ಹೇಳಬಹುದು.

ಆದಕಾರಣ ಕೆನಡಾ ಜನರು ಶೀತರೋಗಕ್ಕೆಲ್ಲಾ ಪೆರೂನಾ ಸಂಬಳಿಯುಟ ಒಳ್ಳೇ ಔಷಧವೆಂದು ತಿಳಿದಕೂಡಲೇ ಅದನ್ನು ಎಲ್ಲಾ ಜನರು ಪ್ರೀತಿಮಾಡಿ ಉಪಯೋಗಿಸುತ್ತಾ ಬಂದರು. ಸಂಸಾರಗಳಲ್ಲಿ ಮಾತ್ರವೇ ಅಲ್ಲ; ದೊಡ್ಡ ಆಸ್ಪತ್ರೆಗಳಲ್ಲೂ ಕೂಡ ಆ ರೋಗಗಳನ್ನು ತಡೆಯುವುದಕ್ಕೂ ನೂರಾರು ರೋಗಿಗಳಿಗೆ ಸೌಖ್ಯವನ್ನುಂಟುಮಾಡುವುದಕ್ಕೂ ಪೆರೂನಾವನ್ನು ಉಪಯೋಗಿಸುತ್ತಾ ಬಂದರು

ಬಡಬಗ್ಗರಾಗಿಯೂ ರೋಗಿಗಳಾಗಿಯೂ ಇರುವಂಥಾವರಿಗೆ ಅದು ತುಂಬಾ ಪ್ರಯೋಜನವನ್ನುಂಟುಮಾಡಿದ ವಿಷಯದಲ್ಲಿ ದೊಡ್ಡ ಆಸ್ಪತ್ರೆಯವರು ಒಪ್ಪಿ ಸಮ್ಮತಿಯನ್ನು ಕೊಡಲು ಹಿಂತೆಗೆದಿಲ್ಲವು

ಈ ದೊಡ್ಡ ಆಸ್ಪತ್ರೆಗಳ ಪೈಕಿ ಸಿಸ್ಟರ್ಸ್ ಆಫ್ ಗುಡ್ ಷೆಫರ್ಡ್ ಎಂಬುದು ಒಂದು ಅದರ ನೌಕರಮಾನೆಯವರು ಹೇಳುವುದನ್ನು ಕೇಳಿ.—

ಓಹಿಯೋ ಡಿಸ್ಟ್ರಿಕ್ಟ್ ಕೊಲಂಬಸ್ ಪಟ್ಟಣದಲ್ಲಿರುವ ಪೆರೂನಾ ಕಂಪನಿಗೆ—

ಕಳೆದ ಕೆಲವು ತಿಂಗಳಿಂದಲೂ ನಮ್ಮ ಕಾಯಿಲೆಯವರಿಗೂ ಬಡವರಿಗೂ ಪೆರೂನಾವನ್ನು ಪ್ರಯೋಗಮಾಡಿರುತ್ತೇವೆ. ಅದು ನಮಗೆ ತುಂಬಾ ತೃಪ್ತಿಯನ್ನುಂಟುಮಾಡಿರುತ್ತದೆಂದು ಸಂತೋಷವಾಗಿ ಹೇಳುವೆವು.

ಗುಡ್ ಷೆಫರ್ಡ್ ಸಹೋದರಿಯರು, ಆಗೀಷ್ಟು ೨೦, ೧೯೦೩.

ಮಾಂಟ್ರೀಲ್.

ಈ ಆಸ್ಪತ್ರೆಯು ಬಹು ದೀರ್ಘಕಾಲ ಈ ಔಷಧವನ್ನು ಉಪಯೋಗಿಸುತ್ತಾ ಬಂದು ಅದರ ಗುಣದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಬದಲಾಯಿಸುವುದಕ್ಕೆ ಕಾರಣವನ್ನು ಕಾಣಲಿಲ್ಲ, ತಮ್ಮ ಸಂಶೋಧನ ತೃಪ್ತಿಯನ್ನು ಕಾಣಿತು ಮುಂದೆ ಕೇಳುವ ಪ್ರಕಾರ ಬರೆದಿರುತ್ತಾರೆ —

ಮಾಂಟ್ರೀಲ್, ನೊವೆಂ. ೩, ೧೯೦೩.

ಪೆರೂನಾ ಅನೇಕ ರೋಗಿಗಳಿಗೆ ಸೌಖ್ಯಕೊಟ್ಟಿರುವುದನ್ನು ಕಂಡಿರುತ್ತೇವೆ.

ಅದು ಒಳ್ಳೇ ಬಲಕಾರಿಯಾದ ಸೇವನೆಯ ಔಷಧವೆಂದು ಹೇಳಬಲ್ಲೆವು; ಮತ್ತು ಅದಕ್ಕಾಗಿ ನಾವು ನಿಮ್ಮನ್ನು ವಂದಿಸುತ್ತೇವೆ.

ಗುಡ್ ಷೆಫರ್ಡ್ ಅಸ್ಪತ್ರೆ ಸಹೋದರಿಯರು.

ಶೀತವು ಶರೀರದಲ್ಲಿ ಬೇರೂರಿತೆಂದರೆ ಅದನ್ನು ಹೋಗಲಾಡಿಸುವುದು ತುಂಬಾ ಕಷ್ಟವಾದೀತು

ಇದು ಶರೀರವನ್ನು ಹಿಡಿಯುವಂಥಾ, ದೇಹದ ಅಂಗಾಂಗಳಿಗೂ ವ್ಯಾಪನೆಯಾಗುವಂಥಾ ಔಷಧವಾದ್ದರಿಂದ ಅದನ್ನು ಬಹಳ ಆಗತ್ಯವಾಗಿ ಉಪಯೋಗ ಮಾಡಬೇಕಾಗಿರುತ್ತದೆ

ಪೆರೂನಾ ಅಂಥಾ ಒಳ್ಳೆಯ ಔಷಧವಾಗಿರುತ್ತದೆ ಅದು ದೇಹದೊಳಗಿರುವ ಕಾಯಿಲೆಯ ಪ್ರದೇಶವನ್ನು ಹುಡುಕಿ ಹಿಡಿಯುವುದು ಒಳಚರ್ಮವನ್ನು ಗುಣಪಡಿಸಿ ಗಟ್ಟಿಮಾಡುವುದು ಅದರ ನೇರೆ ಶರೀರಸೌಖ್ಯವು ತಾನಾಗಿ ಹಿಂತಿರುಗಿ ಬರುತ್ತದೆ

ಶೀತದಿಂದ ಬಹಳ ಕಠಿಣವಾದ ಹಳೇರೋಗಿಗಳನ್ನು ಇಟ್ಟು ಇಲಾಜು ಮಾಡಿ ವಾಸಿಮಾಡಿದ ಅನೇಕ ಆಸ್ಪತ್ರೆಗಳ ಪೈಕಿ ಸೇಂಟ್ ಜಾರ್ಜ ಎಂಬುವುದು ಒಂದಾಗಿರುತ್ತದೆ ಈ ಆಸ್ಪತ್ರೆಯವರು ಬರೆಯುವುದನ್ನು ನೋಡಿ —

“ನಿಮ್ಮ ಪೆರೂನಾವು ನಮಗೆ ತುಂಬಾ ತೃಪ್ತಿಕರವಾಗಿದೆ ಎಂದು ತಿಳಿಸಲು ಸಂತೋಷವುಳ್ಳವರಾಗಿದೇವೆ ಮೂವರು ರೋಗಿಗಳು ಈ ಔಷಧವನ್ನು ಉಪಯೋಗಿಸಿದರು ೬೮ ವರುಷ ವಯಸ್ಸಾದ ರೆನೋಯ ದೂಪ್ರೊಯಿಸ್ ಎಂಬಾತನು ಶೀತಹಿಡಿದು ಬಹಳ ಕಷ್ಟಪಡುತ್ತಿದ್ದನು ಈಗ ಅವನು ತುಂಬಾ ಸೌಖ್ಯವಾಗಿದಾನೆ ಇಷ್ಟು ವಟ್ಟಿಗೆ ಅವನು ಅನೇಕ ವರುಷಗಳಿಂದ ಆರೋಗ್ಯವಾಗಿರಲಿಲ್ಲ

“ಹದಿನೈದು ವರುಷದ ಒಬ್ಬ ಹುಡುಗಿಗೆ ಬಹು ಕಠಿಣವಾದ ಕೆಮ್ಮಲು ಹಿಡಿದಿತ್ತು, ಅವಳಿಗೆ ಪೆರೂನಾವನ್ನು ಅರ್ಧ ಶೀಸೆ ಕೊಡುವುದರಲ್ಲೇ ಆ ಕೆಮ್ಮಲು ಅದೃಶ್ಯವಾಯಿತು.

“ನನ್ನ ವಿಷಯವನ್ನು ಹೇಳುತ್ತೇನೆ. ಎರಡು ಬಾಟ್ಲ ಔಷಧವನ್ನು ತೆಗೆದುಕೊಳ್ಳುವಷ್ಟರಲ್ಲೇ ಪೆರೂನಾ ಒಹು ಅದ್ಭುತವಾದ ಬಲವನ್ನು ಕೊಡುವ ಔಷಧವೆಂದು ನನಗೆ ಪರಿಷ್ಕಾರವಾಗಿ ತಿಳಿದು ಬಂದಿದೆ.

“ಇದನ್ನು ಸೇವಿಸುವುದಕ್ಕೆ ಮುಂಚೆ ನಾನು ಕಾಲುಗಂಟೆ ಹೊತ್ತು ನಡೆಯುವುದಕ್ಕೂ ಆಗದೆ ಉಬ್ಬಸಬರುತ್ತಿತ್ತು ಈಗ ನಾನು ಒಂದು ಮೈಲಿ ದೂರವಾದರೂ ಸುಲಭವಾಗಿ ನಡೆಯಬಲ್ಲೆನು

“ಈ ಮೂರು ರೋಗಿಗಳ ಮೂಲಕ ನಿಮ್ಮ ಔಷಧವು ಬಹು ಫಲಕಾರಿಯಾದದ್ದೆಂದು ಸಕಲರಿಗೂ ತಿಳಿಯಪಡಿಸುತ್ತೇವೆ”

ಸೇಂಟ್ ಜಾರ್ಜ ಆಸ್ಪತ್ರೆ, ಕ್ವೀಬೆಕ್.

ಮೇಲ್ಕಂಡ ಆಸ್ಪತ್ರೆಯಿಂದ ಈಚೆಗೆ ಬಂದಿರುವ ಕಾಗದವು ಈ ರೀತಿಯಾಗಿ ಹೇಳುತ್ತದೆ.—

“ಪೆರೂನಾವು ನಮಗೆ ಎಷ್ಟು ತೃಪ್ತಿಯನ್ನು ಕೊಟ್ಟಿತೋ ಮೂರು ವಾರಗಳ ಕೆಳಗೆ ನಿಮಗೆ ಬರೆದು ತಿಳಿಸಿರುತ್ತೇವೆ. ಅದನ್ನು ಶೀತ, ವಾತ, ಕೆಮ್ಮು, ಅರತಲೆ ನೋವು ಈ ಮೊದಲಾದ ರೋಗಗಳಿಗೆ ಪ್ರಯೋಗಮಾಡಬಹುದೆಂದು ಶಿಫಾರಸು ಮಾಡುತ್ತೇವೆ.

“ನಾನು ಅದನ್ನು ಶಕ್ತಿಪುಷ್ಟಿಗಾಗಿ ಸೇವಿಸಿರುತ್ತೇನೆ ಅದರಲ್ಲಿ ಹೇಳಿರುವ ಪ್ರಕಾರ ಪ್ರತಿ ಅರ್ಧಗಂಟೆಗೂ ಅರ್ಧ ಚಮಚದಷ್ಟು ತಗೆದುಕೊಂಡೆನು”

ಮಿಸೆಸ್ ಎಟ್ಟಾ ಬೂಶಾರ್, ಡಂಡಸ್, ಕೌನ್ಸ್, ಎಂ ದಕ್ಷಿಣಯ ಓ ಕೆನಡಾ ಈಕೆ ಬರೆಯುವುದೇನೆಂದರೆ —

“ನಾನು ಕಿಬ್ಬೊಟ್ಟೆಯಲ್ಲಿ ಶೀತವಾಯು ಹಿಡಿದು ಬಾಧೆಪಡುತ್ತಿದ್ದು, ಕಡೆಗೆ ಡಾಕ್ಟರ್ ಹಾರ್ಟ್‌ಮ್ಯಾನವರಿಗೆ ಬರೆದು ಕೇಳಿದೆನು ಅವರು ಹೇಳಿದ ಪ್ರಕಾರ ಔಷಧವನ್ನು ತೆಗೆದುಕೊಳ್ಳುತ್ತಾ ಬಂದೆನು ಈಗ ಆ ಅವ್ಯಕ್ತವಾಗಿದ್ದ ಬಾಧೆಯು ನನಗೆ ನಿವಾರಣೆಯಾಗಿ ಸೌಖ್ಯವಾಗಿದೇನೆ ಮತ್ತು ನಾನು ಅದಕ್ಕಾಗಿ ತುಂಬಾ ಕೃತಜ್ಞಳಾಗಿರುವೆನು ಪೆರೂನಾವು ಶೀತವಾಯುವಿಗೆ ಸರ್ವೋತ್ತಮವಾದ ಔಷಧವೆಂದು ನಾನು ತಿಳಿದಿದೇನೆ ಈಗ ನನಗಿರುವಷ್ಟು ದೇಹಸೌಖ್ಯವು ಹಿಂದೆ ಯಾವಾಗಲೂ ಇರಲಿಲ್ಲ”

ಪೆರೂನಾವು ಕೆಮ್ಮನ್ನು ಶೀತವಾತಗಳನ್ನೂ ಪ್ರಾರಂಭದಲ್ಲೇ ಬೇಗನೆ ಗುಣಮಾಡುವುದಲ್ಲದೆ ಬಹಳ ದೀರ್ಘಕಾಲದ ಶೀತವಾತ ರೋಗಗಳನ್ನೆಲ್ಲಾ ಚನ್ನಾಗಿ ವಾಸಿಮಾಡಬಲ್ಲದು

ಆದರೂ ರೋಗ ಹುಟ್ಟಿದ ಪ್ರಾರಂಭದಲ್ಲಿ ಬಹಳ ಸ್ವಲ್ಪ ಔಷಧವನ್ನು ಸೇವಿಸಿದ ಮಾತ್ರಕ್ಕೇ ಅದು ನಿವಾರಣೆಯಾಗುತ್ತದೆಂತಲೂ ರೋಗವು ಹಳದಾದ ಮೇಲೆ ಬಹಳ ಔಷಧವನ್ನು ಸೇವನೆ ಮಾಡಬೇಕಾಗುತ್ತದೆಂತಲೂ ನಾವು ಹೇಳಬೇಕಾದ ಅವಶ್ಯವಿಲ್ಲ

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

28—8—1908 ರಿಂದ 4—9—1908 ರ ವರೆಗೆ

ಸ್ಥಳ.	ಪ್ಲೇಗ್ ಆಗಲಿದ್ದು.	ಸತ್ತದ್ದು.	ಕಾಲರಾ ಆಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	*2	*1	0	0
ಮೈಸೂರು ,,	*1	0	0	0
ಬೆಂಗಳೂರು ಡಿಸ್ಟ್ರಿಕ್ಟು	78	59	0	0
ಮೈಸೂರು ,,	67	48	0	0
ಕೋಲಾರ್ ,,	26	25	2	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	9	4
ಹಾಸನ ,,	30	23	0	0
ಚಿತ್ರದುರ್ಗ ,,	0	0	0	0
ಕಾಡೂರ್ ,,	41	37	0	0
ಶಿವಮೊಗ್ಗ ,,	17	8	0	0
* ಹೊರಗಿನದು ಜುಮ್ಲಾ.	258	203	11	4

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಭಾದ್ರಪದ ಬಹುಳ ಸಪ್ತಮಿ ಗುರುವಾರದಿಂದ ಭಾದ್ರಪದ ಬಹುಳ ತ್ರಯೋದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೮ನೇ ಸೆಪ್ಟಂಬರ್.

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ	ಶೇದಿ ಕನ್ಯಾ ಮಾಸ
17	ಗುರು ¶	ಸಪ್ತಮಿ	3-28	ಮೃ	58 40	2
18	ಶುಕ್ರ ,,	ಅಷ್ಟಮಿ	3-58	ಆ	61 0	3
19	ಶನಿವಾ ;,	ನವಮಿ	5-48	ಆ	1-42	4
20	ರವಿವಾ	ದಶಮಿ	8-46	ಪು	6-5	5
21	ಚಂದ್ರ *	ಏಕಾದಶಿ	12-42	ಪು	11-30	6
22	ಕುಜ †	ದ್ವಾದಶಿ	17-27	ಶ್ಲೇ	17-36	7
23	ಬುಧ ‡	ತ್ರಯೋದಶಿ	22-48	ಮ	24-2	8

¶ ಮಾಧ್ಯಾಷ್ಟಮಿ, ವ್ಯತ್ಯಯೋಗ ,, ಮಹಾವ್ಯತೀಪಾತ, ಅವಿಧವಾನವಮಿ, ಪಗ್ಧಯೋಗ ,, ಹರಿಹರಪುತ್ರ * ದಗ್ಧಯೋಗ, ಸರ್ವತ್ರಏಕಾದಶಿ † ಪ್ರದೋಷ ‡ ಶೂನ್ಯತಿಥಿ.

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಡ್ಮೇ ಅಕ್ಕಿ ಪಲ್ಲಾ ೧ಕ್ಕೆ	ರೂ.	೧೫-೦-೦	೧೩-೦-೦
ಕಂಬೂತಿ ಅಕ್ಕಿ ಅವಲ್ ..	..	೧೫-೮-೦	೧೩-೦-೦
,, ದುಯ್ಯಂ	.	೧೪ ೪-೦	೧೩-೮-೦
ಜಾಪ್ರಾಣ ಅಕ್ಕಿ ..	..	೧೫-೦-೦	೧೩-೦-೦
ಸಣ್ಣಕ್ಕಿ ಅವಲ್ ..	.	೧೨-೦-೦	೨೦-೦-೦
,, ದುಯ್ಯಂ ..	.	೧೩ ೮-೦	೧೯-೦-೦
ಕೋಗರೀ ಬೆಳೆ ಪಲ್ಲಾ ೧ಕ್ಕೆ	.	೧೩-೦-೦	೧೮-೦-೦
,, ದುಯ್ಯಂ ..	.	೧೫-೮-೦	೧೨-೦-೦
ಹೈ ರಾಗಿ ಪಲ್ಲಾ ೧ಕ್ಕೆ ..	..	೩-೪-೦	೩-೧೨-೦
ಕಾರ್ರಾಗಿ ..	..	೬-೪-೦	೩-೪-೦
ಜೋಳ ..	.	೩-೦-೦	೯-೦ ೦
ಹಲಸಂದೆ ಪಲ್ಲಾ ೧ಕ್ಕೆ		೧೧-೮-೦	೧೧-೧೨ ೦
ಬಿಳೀ ಅವರೆ .	..	೮-೮-೦	೯-೦-೦
ಹೆಸರು ..	..	೧೧-೮-೦	೧೨-೮-೦
ಉದ್ದು .	..	೧೪-೦-೦	೧೨-೮ ೦
ಕಡಲೆ ..	.	೧೪-೮-೦	೧೪-೦-೦
ಎಳ್ಳು ಕೆ ೧೨ ಕ್ಕೆ .	.	೧೯-೦-೦	೧೮-೦ ೦
ಹುರುಳಿ ..	.	೩-೦ ೦	೮-೦ ೦
ಹರಳು ೧೨ ಸೇರಿಗೆ	.	೧೧-೮-೦	೧೧-೮ ೦
ಸೀಗೇಕಾಸು ಮಣ ೧ಕ್ಕೆ		೧-೮-೦	೧-೮-೦
ಮೆಣಸಿನಕಾಯಿ	.	೪-೪-೦	೪ ೦ ೦
,, ದುಯ್ಯಂ ..	.	೩-೪-೦	೩-೮-೦
ಬೆಲ್ಲ ದೊಡ್ಡ ಅಚ್ಚು ..	.	೪-೦-೦	ಮು ೨-೦-೦
ಒಳ್ಳೆಣ್ಣೆ ಮಣ ೧ಕ್ಕೆ ..	.	೫-೮-೦	೬-೪-೦
ಹರಳೆಣ್ಣೆ ,, ..	.	೪-೧೨-೦	೪-೦ ೦
ಕೊತ್ತುಂಬರಿ ಪಲ್ಲಾ ೧ಕ್ಕೆ ..	.	೬-೦-೦	೬ ೪ ೦
ಉಪ್ಪು ,, ..	.	೪-೮-೦	೫ ೬ ೦
ಹುಣಿಸೇ ಹಣ್ಣು ..	.	೧-೪-೦	೧ ೪ ೦
,, ಹಳೇದು ..	.	೧-೦ ೦	೧-೪ ೦
ತುಪ್ಪ ಮಣ ೧ಕ್ಕೆ ..	.	೧-೪೮ ೦	೧೫ ೮-೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ	.	೪-೧೨-೬	೪ ೦ ೦
ತೆಂಗಿನಕಾಯಿ ೧೦೦ಕ್ಕೆ	.	೪-೦-೦	೫ ೦.೦
ಆಳೆದೇ ಕಾಯಿ ಮಣ ೧ಕ್ಕೆ	..	೦-೮-೦	೦-೧೨-೦
ಜಂಬ್ಯಾಳದ ಕಾಯಿ ಮಣ ೧ಕ್ಕೆ	.	೦-೧೨-೦	೦-೧೪-೦
ಚಿನ್ನ (ಪ್ರ) ತೊಂಡು	..	೧೫-೬-೦	೧೫-೬-೦
,, ,, ಪಸಿಮೆ	..	೧೫-೧೧-೦	೧೬-೦-೬
,, ,, ಗಟ್ಟಿ ತೊಲ ೧ಕ್ಕೆ	.	೨೩-೧೨-೦	೨೪-೯-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	.	೭೫-೦-೦	೭೫-೮ ೦

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore. 17/9/1908.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೨ | ಮೈಸೂರು—೧೯೦೮ ನೇ ಇಸವಿ ಸೆಪ್ಟೆಂಬರ್ ತಾರೀಖು ೨೪ ನೇ ಗುರುವಾರ. | ಸಂಚಿಕೆ ೧೨

PLEASE HAVE A LOOK AT

The Wonderful Exhibits

OF

THE DIAMOND SOAP COMPANY,

[G]IRGAON, BOMBAY

Exhibits can be obtained

at the Stall

IN THE EXHIBITION,

from

MESSRS. RANADE COMPANY,

BANGALORE.

AMRUTANJAN DEPOT, 16 OAK-LANE, BOMBAY. [17-31]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ್. ಪ್ರಯತ್ನ ಮಾಡಿರಿ.

ಇದರಿಂದ —ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಜಕಮ್ ಮತ್ತು ಘಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ ಕ್ಕೆ ಕಿಮ್ಮತ್ತು ೦ ೮ ೦ ಪೋಸ್ಟು ಖರ್ಚು ೦-೪-೧.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಕಜ್ಜಿ ವಗೈರೆ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦-೪ ೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು

ಜೀರ್ಣರಸಾಯನ—ಅಜೀರ್ಣಕ್ಕೆ ಡಬ್ಬಿ ೧ ಕ್ಕೆ.	೧—೪—೦	ಕಾಮಸುವಾರಿಗುಟಿಕ—ಕೆಂಗಸರ ಹೊಟ್ಟೆನೋವಿನ	೧—೦—೦
ವಪ್ರುಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧—೦—೦	ಪ್ರಮೇಹದ ಮಿಶ್ರಣ—ಪ್ರಮೇಹಕ್ಕೆ	೧—೦—೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ ಕ್ಕೆ	೦—೧೨—೦	ಕಫಹರಿ—ಕಫ, ಕೆಮ್ಮು, ಕ್ಷಯ, ಇತ್ಯಾದಿ	೧—೪—೦
ಹೇಳಿಕೆಗಳ ಮದ್ದು	೦—೮—೦	ಸುಂದರೀ ತೈಲ್ಯ—ಮೊಡವೆಗೆ	೦—೮—೦
ದಂತಶೂಲಹರಿ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಕರ್ಣಶೂಲಹಾರಿ—ಕಿವಿನೋವಿಗೆ	೦—೬—೦	ಉರಿನಾಶಕ ಎಂಟೆ ಬಾಟ್ಲಿ ೧ ಕ್ಕೆ	೦—೮—೦
ಬಚ್ಚೆಯ ಮುಲಾಮು	೦—೩—೦	ವಾತದ ಮಿಶ್ರಣ ,,	೧—೦—೦
ದಂತಮಂಜನ—ಹಲ್ಲುಗಳಿಗೆ	೦—೨—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
ಕೇಶವರ್ಧಿನೀ ತೈಲ್ಯ—ಕೂದಲಿಗೆ	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
ಬಾಲಬುಃ ಮಾತೆ —ಬಾಲರಿಗೆ	೦—೮—೦	ರೋಮಹಾರಿ	೦—೮—೦

ವಿಳಾಸ—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ್," ಮುಂಬಯಿ.

ಜ್ವರಹರಿ 64 8



ಇದು ಸಾಧಾರಣ ಜ್ವರ, ಚಳಿಜ್ವರ, ಮರುಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ಕೀಲಿಗೆ ಇದ್ದಂತೆ ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

* * * * * * * * *

ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಬಂದುವತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಆಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಆ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಚೆನ್ನೈಯಿನ ಗ್ರೇಟ್ ಇಂಡಿಯಾ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-32

೧. ಲೋಕೋಪಯೋಗವರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ ಯಾವ ಬಾಯಿಬೇನೆ ಬಾರದಂತೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತಗಳಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕಾಡ್ಡಿಗೆ ೪ ಆಣೆ; ೫ ಕಾಪ್ಪಿಗೆ ೧ ಕಾಪ್ಪಿ ಹೆಚ್ಚು. ೧ ರಿಂದ ೧೨ ಕಾಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

58 13

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ಐದು ಆಣೆಯಿಂದ ೬ ಆಣೆ ವರಿವಿಗೂ ಬೆಲ್ಲವೆಯಾಗಿ ಯಾಗಲೀ ಒಟ್ಟಾಗಿ ಯಾಗಲೀ ಮಾರಲ್ಪಡುತ್ತವೆ. ಶಾಲುಗಳು, ಹಾಸನದ ಟೋಪಿಗಳು, ಮಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್ ಬುಕ್ ಡಿಪೋ, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) . . . . . ರೂ. ೧—೨—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಜ್ ಸೇರಿ ರೂ. ೧—೧೪—೦

,, , ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಈಗಲೇ ಬಂದಿದೆ.

117 49

೫,೦೦೦ ಹರ್ಸ ಟೋಪಿ ಕೊಲಿಯುವ ಸುಪೀರಿಯರ್ ಉಲ್.
೧೦ ಟೋಪಿಯಾಗುವ ಬಂಡಲ್ ೧ಕ್ಕೆ ೩—೮—೦
ಹರ್ಸ ಟೋಪಿ ಡಜನ್ ೧ಕ್ಕೆ ೭—೦—೦, ೯—೦—೦, ೧೨—೦—೦
ಜರ್ಮನ್ ಮೇಪ್ ಬನಿಯನ್ ಡಜನ್ ೧ಕ್ಕೆ ೪—೮—೦, ೫—೦—೦,
ಟಾವಲ್ ಗಳು ಡಜನಕ್ಕೆ ೦—೧೨—೦, ೧—೦—೦, ೧—೪—೦,
ವಿ. ಪಿ. ಯಿಂದಲೂ ರವಾನಿಸುತ್ತೇವೆ [೧—೮—೦
ವಿಳಾಸ—ಪ್ರೊಪ್ರೈಟರ್, ದಿ ಉಲ್ಲನ್ ಮಾರ್ಟ್, ಮಂಗಳೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

48-18

ತಲೆನೋವು, ವಾಯುನೋವು, ಸೆಳೆತ, ಗಂಟ್ಲುನೋವು, ಪಾರ್ಶ್ವ ವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂಧುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯಕ್ಷಿಣಿ ಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದು ಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನು ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಕೊಳ್ಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಬುಡವನ್ನೇ ಹಾಳುಮಾಡುತ್ತದೆ.

ಕ್ರಯ ಸೀಸೆ ೧ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕ್ರಿ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೭, ವೇದಮೂಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಇತ್ತಲಾಗಿ ಮುದ್ರಿಸಲ್ಪಟ್ಟಿರುವ ಬಾಸೆಲ್ ಮಿಶನ್ ಬುಕ್ ಎಂಡ್ ಟ್ರಾಕ್ಟ್ ಡಿಪ್ರೊಸಿಟರಿ ಮಂಗಳೂರು ಪುಸ್ತಕಗಳು.

78 1

ಪಾತ್ರದ್ ಹಾಸನ ಪ್ರವರ್ತನೆ	ಕ್ರಯ	೦—೦—೩
ಶಾವಂತಿ ಪುಷ್ಪ		೦—೦—೬
ಸುರಾರಿ ಕೀರ್ತನೆ		೦—೨—೦
ಮಹಮದ ಪೈಕ್ರಿಯ ಚರಿತ್ರೆ		೦—೩—೦
ಸ್ವದೇಶಾಭಿಮಾನ		೦—೩—೦
ಯೋಹಾನ್ ಬನ್ಯನ್ ಯಾತ್ರಿಕನ ಸಂಚಾರವು (ಮೊದಲನೆ ಭಾಗ)		೦—೪—೦
(ಎರಡನೆ ಭಾಗ ಮುದ್ರಣೆಯಲ್ಲಿದೆ)		
ಯೆಹೂದಿ ಪ್ರವಾದಿಗಳಲ್ಲಿ ಪ್ರಖ್ಯಾತನಾದ ಯೆರೆಮೀಯನು		೦—೪—೦
ಯೋಸೇಫನ ಚರಿತ್ರೆಯ ವಿಷಯವಾದ ಇಪ್ಪತ್ತು ಪ್ರಸಂಗಗಳು		೦—೫—೦
ವೇದಾಂತವಾದ ನಿರ್ಣಯ (ತತ್ವವಿವೇಕ)		೦—೫—೦
ಇಸೋಪನ ನೀತಿ ಕಥೆಗಳು (ಚಿತ್ರಸಹಿತ)		೦—೮—೦
ರಾಗಸಹಿತವಾದ ಅಭಿನಯ ಗೀತಗಳು		೦—೨—೬
ಬಾಲಕರ ಗೀತಗಳು		೦—೭—೦
ಮೂಲಶಾಲೆಗಳ ಶಿಕ್ಷಣಾ ಕ್ರಮಪದ್ಧತಿ		೦—೫—೦
ಕಿಂಡರ್ ಗಾರ್ಟನ್ ಕೈಪಿಡಿ, ಬಾಲಕ ಮತ್ತು ಮೊದಲನೆ ದರ್ಜೆಗಳಿಗೆ ಉಪಯುಕ್ತವಾದ ಕಥೆಗಳೂ ಹಾಡುಗಳೂ		೦—೨—೬
ಅದೇ ಎರಡನೆ ದರ್ಜೆಗೆ		೦—೨—೬
ಗೃಹೋಪಯೋಗದ ಹೋಮಿಯೋಪತಿ ಎಂಬ ಸಮಾನ ಪ್ರವೃತ್ತಿಕ ಚಿಕಿತ್ಸಾಕ್ರಮದ ಕೈಪಿಡಿ		೧—೪—೦

ಸತ್ಯದೀಪಿಕೆ.

ಪ್ರತಿ ವಾರಕ್ಕೊಂದು ಪ್ರಕಟವಾಗುವ ಪತ್ರವಿದು. ಪ್ರತಿ ಸಂಚಿಕೆಯು ಚತುಷ್ಪತ್ರಿ ಪರಿಮಾಣದ ಎಂಟೆಂಟು ಪುಟಗಳುಳ್ಳದ್ದಾಗಿದೆ. ಲೋಕ ವಿಷಯದ ಸಂಗತಿಗಳೂ, ಮತವಿಚಾರದ ಉಪನ್ಯಾಸಗಳೂ, ಮನೋರಂಜಕ ಕಥೆಗಳೂ, ವಿದ್ಯಾವಿಷಯಗಳೂ, ಲೋಕಸಮಾಚಾರ, ಸ್ವಪರದೇಶಗಳ ವರ್ತಮಾನ, ತಂತೀ ವರ್ತಮಾನ, ವ್ಯವಸಾಯ ಮತ್ತು ವೃಕ್ಷಾದಿಗಳ ವರ್ಣನೆ, ಸಾರ್ವೋಪಯೋಗದ ಪುಸ್ತಕಗಳ ಪ್ರಕಟಣೆ, ಪಂಚಾಂಗ ಮುಂತಾದ ವಿಶಿಷ್ಟ ವಿಷಯಗಳು ಇದರಲ್ಲಿ ಅಡಗಿರುವವು.

ಚಂದಾ ನಿರ್ಣಯ.

೧ ಪ್ರತಿಗೆ (ಸ್ಥಳಿಕರಿಗೆ) ವರ್ಷ ೧ಕ್ಕೆ		ರೂ	೧—೦—೦
೧ ,, ,,	ಅರ್ಧ ವರ್ಷಕ್ಕೆ		೦—೮—೦
೧ ,, (ಪರಸ್ಥಳಿಕರಿಗೆ) ವರ್ಷ ೧ಕ್ಕೆ ಹಾಸಲು ಕೂಡ			೧—೧೩—೦
೧ ,, ,,	ಅರ್ಧ ವರ್ಷಕ್ಕೆ		೦—೧೫—೦

ಚಂದಾ ಹಣ ಮುಂಗಡವೇ ರವಾನಿಸಬೇಕು ಮಾದರಿಗೆ ಪ್ರತಿ ಕಳುಹಿಸಲ್ಪಡುವದು

ಅಪೇಕ್ಷಕರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ:—

ಬಾಸೆಲ್ ಮಿಶನ್ ಬುಕ್ ಟ್ರಾಕ್ಟ್ ಡಿಪೊಸಿಟರಿ, ಮಂಗಳೂರು

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೆನ್ ಯವರು ಹೊಟ್ಟೆನೂಲಿ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

1-39



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ (ಕಾಲರಾ), ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಶ್ರೇಷ್ಠವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯು ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಲ್ಪಡಲಿಲ್ಲ

ಇದು ಎಲ್ಲೆಲ್ಲೂ ವಿಕ್ರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ಸ್ವದೇಶೀ ನೆಯ್ಗೆ ನೂಲು ಬೇಕೋ?

71 4

ಪ್ರಸಿದ್ಧವಾದ ಬೊಂಬಾಯಿ ಸ್ವದೇಶೀ ಮಿಲ್ಸ್ ಎಂಬ ಕಾರಖಾನೆಯಲ್ಲಿ ತಯಾರಾಗುವ ನಂಬರ್ ವಾರ್ ನೂಲುಗಳಿಗೆ ನಾವು ಆರ್ಡರ್ ತೆಗೆದುಕೊಂಡು ತರಿಸಿಕೊಡಲು ಅಧಿಕಾರ ಹೊಂದಿರುತ್ತೇವೆ. ನೂಲಿನ ನಮೂನೆ ದರ ಮುಂತಾದ ತಪಶೀಲನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಎಂ. ಸೂರ್ಯನಾರಾಯಣಪ್ಪ,

ಕಮಿಷನ್ ಮತ್ತು ಜನರಲ್ ಏಜನ್ಸಿ, ಶಿವಮೊಗ್ಗ.

ಇಲ್ಲಿ ನೋಡಿ.

77 1

ತುಮಕೂರು ಮಿಷನ್ ಇಲಾಖೆಯಲ್ಲಿ ಯೂರೋಪಿಯನರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ. ಕ್ರಯ.—೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯವರೆಗೆ. ೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು ಈಗ ತಾನೇ ಇಂಗ್ಲಿಷ್ ಉಲ್ ದಾರವು ಬಂದಿದೆ, ಬೇಕಾದ ತರದ ಟೋಪಿಗಳನ್ನು ತಯಾರಿಸಿ ಕಳುಹಿಸಬಲ್ಲೆವು

ನಮ್ಮ ವಿಳಾಸ:—ಮ್ಯಾನೇಜರ್,

ಹಾಸನದ ಟೋಪಿ ಕಾರಖಾನೆ, ಮಿಷನ್ ಇಲಾಖೆ, ತುಮಕೂರು

ಜ್ಯೋತಿಷ್ಯ ಗ್ರಂಥವು.

76 1

ಗೋಚಾರಫಲದರ್ಪಣವೆಂಬ ನೂತನ ಜ್ಯೋತಿಷ್ಯ ಗ್ರಂಥವು ತಜ್ಞಶಾಸ್ತ್ರದಲ್ಲಿ ಪ್ರಸಿದ್ಧ ಪಂಡಿತರಾದ ಆರ್ ಶಾಂತಪ್ಪನವರಿಂದ ವಿರಚಿಸಿ ಮಾರಾಟಕ್ಕೆ ಸಿದ್ಧವಾಗಿದೆ ಇದರಲ್ಲಿ ೧೦೨ ವಿಷಯಗಳಿದ್ದು ಸುಮಾರು ೨೫೦ ಪುಟಗಳಿರುತ್ತವೆ ಅತಿಶ್ರೇಷ್ಠವಾದ ಸಾಹಿತ್ಯದಿಂದ ತುಂಬಿರುತ್ತದೆ. ಇದೇ ಹೆಸರಿನ ಬೇರೆ ಜನರು ರಚಿಸಿದ ನಿರುಪಯೋಗವಾದ ಗ್ರಂಥಗಳನ್ನು ಕೊಳ್ಳುವದರಲ್ಲಿ ಸಾವಧರಾಗಿರಬೇಕು. ಮೊದಲಿನ ನೂರು ಗ್ರಾಹಕರಿಗೆ ಮಾತ್ರ ಕೀಲಕದ ಕನ್ನಡ ಅಗರ ಪುರಾಣ ಪಂಚಾಂಗ ಒಂದು ವಿಸ್ತಾರವುಳ್ಳದ್ದು ಬಹುಮತಿ ಕೊಡುವೆವು ಕಿಮ್ಮತು ವಿ. ಪಿ. ಪಿ. ಖರ್ಚು ಸಹ ಕನ್ನೆರಡಾಣೆ ವ್ಯಾಪಾರಿಗಳಿಗೆ ಬಹಳ ಸೋವಿಯಾಗಿ ಕೊಡುವೆವು ಪತ್ತೆ:—

Boandade Narasappa,
Post Chittwadgi, Bellary District.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION. 33-26

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಸಿಕ್ಕುತ್ತವೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷಧಗಳ ಕಾರಖಾನೆ,
ಲಂಡನ್, ಇಂಗ್ಲೆಂಡ್

ಈ ವಿಧಾನ ಮನುಷ್ಯ ಇರುವ ಔಷಧವನ್ನೇ ಕೇಳಿಕೊಳ್ಳಿ.

೮ ರೂಪಾಯಿಗಳ ಗಡಿಯಾರಕ್ಕೆ ೫೦ ಸಾಮಾನುಗಳು ಇನಾಮು ಕೊಡಲ್ಪಡುವವು.

72-3

ವಜ್ರಕಲ್ಲುಗಳನ್ನು ಕೂಡಿಸಲ್ಪಟ್ಟ ನಿಕ್ಕಲ್ ಬೆಳ್ಳಿ ಗಡಿಯಾರವು ಈ ಸ್ವಿಸ್ ಲೀವರ್ ಗಡಿಯಾರವು ಸಾಧಾರಣ ಸಿಲಿಂಡರ್ ಗಡಿಯಾರಕ್ಕಿಂತಲೂ ಕೆಂಪುಗಳು ಇರುವದೂ ಅಲ್ಲದೆ ಲೀವರ್ ಗಡಿಯಾರವು ಬಹಳ ಶ್ರೇಷ್ಠವಾದದ್ದೆಂದು ಎಲ್ಲರೂ ತಿಳಿದಿರುತ್ತೇವೆ ಇದು

ಬಹಳ ಘಟ್ಟಿಯಾಗಿಯೂ, ಕಾಂತಿಯಾಗಿಯೂ, ಶೃಂಗಾರವಾಗಿಯೂ ಅಜಾಗ ತೆಯಾಗ ಉಪಯೋಗಿಸಲಿಕ್ಕೆ ತಕ್ಕ ಗಡಿಯಾರವಾಗಿಯೂ ಇದೆ. ಬಹುಮಾನಗಳು.—ಸಮವಿನಲ್ಲಿ ಕಟ್ಟಿಕೊಳ್ಳುವ ವಿಲಾಯತಿ ಬೆಲ್ಟು, ಹವಳದ ಉಂಗುರ, ಜರ್ಮನ್ ಸಿಲ್ವರ್ ಗಡಿಯಾರ ಸರಪಣಿ, ರಜಾಯಿಗೆ ಕಂಪಸ್, ದುಡ್ಡಿಕಾಸು ಹಾಕಿಕೊಳ್ಳುವ ಚರ್ಮದ ಚೀಲ, ಎರಡು ವರ್ಷಗಳ ಪಂಚಾಂಗವೂ ಕನ್ನಡಿಯೂ ಉಳ್ಳ ಪುಸ್ತಕ, ಹೆಂಗಸರು ತಲೆಯಲ್ಲಿಟ್ಟುಕೊಳ್ಳುವ ಹುವ್ವು, ಮುಖ ನೋಡುವ ಚಿತ್ರ ಕೆಲಸದ ಕನ್ನಡಿ, ಗಡಿಯಾರ ಇಟ್ಟುಕೊಳ್ಳುವ ತೊಗಲಿನ ಸಂಚಿ, ಗಡಿಯಾರದ ರೇಷ್ಮೆ ದಾರ, ೫ ಆಭರಣಗಳನ್ನಿಟ್ಟುಕೊಳ್ಳುವ ಚಿತ್ರದ ಪೆಟ್ಟಿಗೆಗಳು, ಕತ್ತರಿಕೋಲು, ಪೇನಾಕತ್ತಿ, ಸೀಮೆ ಪಾಟಿ ಲಾಕ್, ಸ್ಟ್ರೆಗಟ್ಟಿ, ಸುರೋಕನ, ದೇವಿಪಟವು, ದಂತದ ಹಣಿಗೆ, ಕಯ ನಗ್ಗದ ದೀಪ, ಎಸನೆ ದ್ರವ್ಯ ಬುಡ್ಡಿ, ಬೀಗದ ಉಂಗುರ, ಸ್ಫಟಿಕದ ಕನ್ನಡಿ, ಹೇರ್ ಸ್ಪ್ರಿಂಗ್, ವೆಲ್ವೆಟ್ಟು ಪೆಟ್ಟಿಗೆ, ಮೇಲಾದ ಪೆನ್ಸಿಲ್, ಟೀ ಸ್ಪೂನ್, ಸೊಗಸಾದ ಷರ್ಟ್ ಬೆತ್ತಾಮುಗಳು, 20 ಅಂದವಾದ ಕಾರ್ಡುಗಳು, ಸ್ವದೇಶೀ ಪೇನಾ, ಸೋಪು ನಮ್ಮ ವಿಳಾಸ—

ಮದರಾಸ್ ಸೊಸೈಟಿ ವಾಚ್ ಡಿಪೋ,

ಪಾರ್ಕ್ ಟೌನ್, ಮದ್ರಾಸ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2 39

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು! ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದ ಮತ್ತು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.
ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ;
೧ ರೂ ೬ ಆ., ೧ ರೂ ೪ ಆ.
ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ ೮ ಆ., ೨ ರೂ
ದಾರದ ಟೋಪಿಗಳು ೧ ರೂ. ೧೨ ಆ; ೧ ರೂ. ೮ ಆ.; ೧ ರೂ ೬ ಆ.
ಉಸುಕಿನ ಟೋಪಿಗಳು ೧ ರೂ. ೮ ಆ., ೧ ರೂ. ೬ ಆ.

ಕೂಸುಗಳ ಟೋಪಿ. ಪೂರ್ತಿ ಮೋಜೋದು, ಅರ್ಧ ಮೋಜೋದು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರಖಾನೆ, ಹಾಸನ.

ವೃತ್ತಾಂತ ಪತ್ರಿಕೆ

ಸನ್ ೧೯೦೭ ನೇ ಇಸವಿ ಸೆಪ್ಟಂಬರ್ ತಾ ೨೮ ನೇ ಸೋಮವಾರ

ಗವರ್ನಮೆಂಟಿಗೆ ಸಾಲಕೊಡುವುದು

ಹಿಂದುಸ್ಥಾನದಲ್ಲಿ ಯಾವ ಕಡೆಗಳಲ್ಲಿ ಹೊಸದಾಗಿ ರೈಲ್ ರಸ್ತೆಗಳನ್ನು ಹಾಕಬಹುದೆಂದೂ, ಪ್ರತಿ ವರುಷವೂ ಎಷ್ಟು ಹಣವನ್ನು ಅದಕ್ಕಾಗಿ ವಿನಿಯೋಗಿಸತಕ್ಕದ್ದೆಂದೂ ಗೊತ್ತುಮಾಡುವುದಕ್ಕಾಗಿ ಒಂದು ಕಮಿಟಿಯು ಕೆಲವು ಕಾಲದಿಂದ ಯೋಚನೆಮಾಡುತ್ತಿದೆ. ಈ ರಾಷ್ಟ್ರದಲ್ಲಿ ಇನ್ನೂ ಹಲವು ರೈಲ್ ರಸ್ತೆಗಳನ್ನು ಹಾಕುವುದಾದರೆ ಬಹಳ ಪ್ರಯೋಜನವಾದೀತೆಂದು ಆ ಕಮಿಟಿಯವರು ಸೂಚಿಸುತ್ತಾರೆ. ಈಗ ಗವರ್ನ್‌ಮೆಂಟಿನವರು ರೈಲ್ವೆ ಏರ್ಪಾಡಿಗೆ ಪ್ರತಿ ವರುಷವೂ ೧೫ ಕೋಟಿ ರೂಪಾಯನ್ನು ವಿನಿಯೋಗಿಸುವುದು ಸಾಲದೆಂತಲೂ, ೧೮ ಕೋಟಿಯೂ ೭೫ ಲಕ್ಷ ರೂಪಾಯಿನಂತೆ ಖರ್ಚು ಮಾಡಬೇಕೆಂತಲೂ ಅವರು ಕೇಳುವರು. ಹಾಗಾದರೆ ಇಷ್ಟೊಂದು ಹಣವನ್ನು ಪ್ರತಿ ವರುಷವೂ ಹ್ಯಾಗೆ ಒದಗಿಸಬಹುದು? ಇಂಡಿಯಾ ಗವರ್ನ್‌ಮೆಂಟಿನವರು ಇಲ್ಲಿನ ರಾಜಾದಾಯದಿಂದ ಅಷ್ಟು ದ್ರವ್ಯವನ್ನು ಕೊಡುತ್ತಾ ಬರುವುದು ಸಾಧ್ಯವಿಲ್ಲ. ರಾಜಾದಾಯವನ್ನು ಸ್ವಲ್ಪಮಟ್ಟಿಗೆ ವಿನಿಯೋಗಿಸಬಹುದು. ಉಳಿದ ಹಣವನ್ನೆಲ್ಲಾ ಅವರು ಸಾಲಮಾಡಿಯೇ ತರಬೇಕಾಗಿದೆ. ಇದೇ ರೀತಿ ಇಂಡಿಯಾ ಗವರ್ನ್‌ಮೆಂಟಿನವರು ಸಾಲತಂದೇ ಈಗ ಹಿಂದುಸ್ಥಾನದಲ್ಲಿರುವ ರೈಲುಗಳನ್ನು ಹಾಕಿಸಿ, ಭಾರೀ ನೀರಾವರಿ ಕಾಮಗಾರಿಗಳನ್ನು ನಡಿಸುತ್ತಿದ್ದಾರೆ. ಹೀಗೆ ಸಾಲಮಾಡಿ ತರುವುದು ಹಿಂದುಸ್ಥಾನಕ್ಕೆ ನಷ್ಟಕರವಾದದ್ದಲ್ಲ. ಅಷ್ಟು ಹಣ ಖರ್ಚು ಮಾಡಿ ನಡಿಸಿದ ಆ ಕಾಮಗಾರಿಗಳು ಸಾಧಕವಾಗಿಯೂ, ಅವುಗಳಿಂದಾಗುವ ಉತ್ಪತ್ತಿಯು ಆ ಸಾಲದ ಮೇಲಣ ಬಡ್ಡಿಗಿಂತ ಬಹಳ ಹೆಚ್ಚು ಆದಾಯ ಕೊಡತಕ್ಕವುಗಳಾಗಿಯೂ ಇರುತ್ತವೆ. ಒಬ್ಬ ಮನುಷ್ಯನು ವರುಷಕ್ಕೆ ಶೇಕಡಾ ೪ ರೂಪಾಯಿ ಬಡ್ಡಿಗೆ ೧೦ ಸಾವಿರ ರೂಪಾಯಿ ಸಾಲ ತಂದು, ಲಾವ ಗಂಧಕಡ್ಡಿ ಬತ್ತಿಸ ಉಡುಗೆರೆಗಳೂ ಬಾಣಸಿಗಳಿಗೂ ಖರ್ಚು ಮಾಡಿ ಹಾಳುಮಾಡಿಕೊಳ್ಳುವುದಕ್ಕಿಂತ ಒಂದು ಮನೆಯನ್ನು ಕಟ್ಟಿಸಿದರೆ ಆ ಹಣವು ನಷ್ಟವಾಗಲಿಲ್ಲ. ಮನೆ ಉಳಿಯುವುದು. ಯಾವಾಗ ಬೇಕಾದರೂ ಅದನ್ನು ಮಾರಿ ಸಾಲವನ್ನು ತೀರಿಸಿಕೊಳ್ಳಬಹುದಾಗಿದೆ. ಇದಲ್ಲದೆ ಅದೇ ಮನೆಯನ್ನು ತಿಂಗಳಿಗೆ ೫೦ ರೂಪಾಯಿನಂತೆ ಬಾಡಿಗೆಗೆ ಕೊಟ್ಟಿದ್ದ ಪಕ್ಷದಲ್ಲಿ ವರುಷಕ್ಕೆ ಬಡ್ಡಿಗಾಗಿ ೪೦೦ ರೂಪಾಯಿ ಹೋದರೂ ೨೦೦ ರೂಪಾಯಿ ಲಾಭವನ್ನೂ ಹೊಂದಬಹುದಾಗಿದೆ. ಇಂಡಿಯಾ ಗವರ್ನ್‌ಮೆಂಟಿನವರು ಈ ರೀತಿಯಾಗಿಯೇ ಕಾರ್ಯಗಳನ್ನು ನಡಿಸುತ್ತಾರೆ. ಹಣವನ್ನು ಸಾಲಮಾಡಿ ಕೂಡ ಹೆಚ್ಚು ಪ್ರಯೋಜನವೂ ಉತ್ಪತ್ತಿಯೂ ಆಗುವಂಥಾ ರೈಲು ರಸ್ತೆ ನೀರಾವರಿ ಕಾಮಗಾರಿಗಳಿಗೆ ಹಾಕಿ ಮಾಡಿಸಿ, ಒಳ್ಳೇ ಜಾಸ್ತಿ ಲಾಭ ಸಂಪಾದಿಸಿಕೊಳ್ಳುತ್ತಿರುವರು.

ಗವರ್ನ್‌ಮೆಂಟಿಗೆ ಯಾರು ಅಷ್ಟು ಹಣವನ್ನು ಸಾಲಕೊಡುತ್ತಾರೆ ಎಂದು ಕೇಳಬಹುದು. ಕೆಲವು ಭಾಗದಷ್ಟು ಹಿಂದುಸ್ಥಾನದ ಪ್ರಜೆಗಳು ಕೊಡುತ್ತಾರೆ. ಗವರ್ನ್‌ಮೆಂಟಿನವರು ಮೊದಲಾ ಒಂದು ಕೋಟಿ ರೂಪಾಯಿ ಸಾಲಬೇಕೆಂದು ಇಸ್ತಿಹಾರು ಹಾಕುವರು. ಅದನ್ನು ತಿಳಿದು ಕಲ್ಕತ್ತೆ, ಬೊಂಬಾಯಿ, ಮದರಾಸ್, ಮೊದಲಾದ ಪಟ್ಟಣಗಳಲ್ಲಿರುವ ಹಣಗಾರರೂ ಇತರರೂ—"ಒಂದು ಲಕ್ಷ ಕೊಡುತ್ತೇನೆ," "೧೦ ಸಾವಿರ ಕೊಡುತ್ತೇನೆ" ಎಂದಾಗಿ ಗವರ್ನ್‌ಮೆಂಟಿಗೆ ಅರ್ಜಿ ಬರೆದುಕೊಳ್ಳುವರು. ಇದಲ್ಲದೆ ಇನ್ನೊಂದು ರೀತಿಯಲ್ಲೂ ಹಿಂದುಸ್ಥಾನದ ಪ್ರಜೆಗಳು ಸರ್ಕಾರಕ್ಕೆ ಸಾಲಕೊಡುವುದುಂಟು. ಇಂಡಿಯಾ ಗವರ್ನ್‌ಮೆಂಟಿನವರು ಎಲ್ಲಾ ಕಡೆಗಳಲ್ಲೂ ಸೇವಿಂಗ್ಸ್ ಬ್ಯಾಂಕುಗಳನ್ನು ಇಟ್ಟಿದ್ದಾರೆ. ಈ ಬ್ಯಾಂಕುಗಳಲ್ಲಿ ಎಷ್ಟಾದರೂ ಕೂಡ ಸ್ವಲ್ಪ ಸ್ವಲ್ಪವಾಗಿ ಹಣ ಹಾಕಬಹುದು. ಈ ಹಣಕ್ಕೆ ಸರ್ಕಾರದವರು ಶೇಕಡಾ ವರುಷಕ್ಕೆ ೩ ರೂಪಾಯಿನಂತೆ ಬಡ್ಡಿಕೊಡುವರು. ಈ ರೀತಿಯಾಗಿ ಪ್ರಜೆಗಳು ಹಾಕಿರತಕ್ಕ ಹಣವು ಸೇವಿಂಗ್ಸ್ ಬ್ಯಾಂಕುಗಳಲ್ಲಿ ಕೆಲವು ಕೋಟಿ ರೂಪಾಯಿಗಳಾಗುತ್ತದೆ. ಈ ಹಣಕ್ಕೆ ಸರ್ಕಾರದವರು ಬಡ್ಡಿಕೊಡಬೇಕಾಗಿರೋಣದರಿಂದ ಅವರು ಆ ಹಣವನ್ನು ಮುನಿಸಿಪಾಲಿಟಿ (ಪಬ್ಲಿಕ್ ವರ್ಕ್ಸ್) ಇಲಾಖೆಗೆ ಸಾಲಕೊಡುವರು. ಆ ಇಲಾಖೆಯವರು ನೀರಾವರಿ ಮೊದಲಾದ ಕಾಮಗಾರಿಗಳನ್ನು ಮಾಡಿ, ಹೆಚ್ಚು ಆದಾಯವನ್ನು ಉತ್ಪತ್ತಿ ಮಾಡುತ್ತಾರೆ.

ರೈಲ್ವೆ ಏರ್ಪಾಡಿಗೆ ಪ್ರತಿ ವರುಷವೂ ಬೇಕೆಂದು ಕೇಳುವ ೧೮ ಕೋಟಿಯೂ ೭೫ ಲಕ್ಷ ರೂಪಾಯಿನ ಪೈಕಿ ಸುಮಾರು ೩ ಕೋಟಿ ರೂಪಾಯಿ ಮಾತ್ರ ಹಿಂದುಸ್ಥಾನದಲ್ಲಿ ಸಾಲ ದೊರೆಯಬಹುದೆಂತಲೂ, ಉಳಿದ ಹಣವನ್ನೆಲ್ಲಾ ಲಂಡನ್ ಪಟ್ಟಣದಲ್ಲಿ ಸಾಲಮಾಡಿ ತರಬೇಕೆಂತಲೂ ಮೇಲ್ಕಂಡ ರೈಲ್ವೆ ಕಮಿಟಿಯವರು ಸೂಚಿಸುತ್ತಾರೆ. ಹಿಂದುಸ್ಥಾನವನ್ನು ಸಂಪದ್ಯುಕ್ತವಾದದ್ದನ್ನಾಗಿ ಮಾಡುವುದಕ್ಕೆ ಪರದೇಶದಿಂದ ಹಣವನ್ನು ಸಾಲಮಾಡಿ ತರುವುದರಿಂದ ಈ ದೇಶಕ್ಕೆ ಖಂಡಿತವಾಗಿ ನಷ್ಟವಾಗಲಾರದು. ಹಾಗಿದ್ದರೂ, ಈ ಸಂಗತಿಯನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾಗಿದೆ. ಹೇಗೆಂದರೆ ಪರದೇಶದಿಂದ ಸಾಲತಂದ ಪಕ್ಷದಲ್ಲಿ ಆ ಸಾಲವು ಇಲ್ಲಿನ ಗುಸ್ತಧನವನ್ನು ಹೊರಗೆ ತಂದು ವ್ಯಾಪಾರವನ್ನು ಅಭಿವೃದ್ಧಿ ಮಾಡುವುದು. ಇದಲ್ಲದೆ ಇಂಡಿಯಾ ಗವರ್ನ್‌ಮೆಂಟಿನವರು ಈ ರಾಷ್ಟ್ರವನ್ನು ಅಭಿವೃದ್ಧಿ ಮಾಡುವುದಕ್ಕೆ ಪರದೇಶದಿಂದ ಸಾಲ ತರಬೇಕಾಗಿದೆಯಲ್ಲಾ ಎಂದು ಚಿಂತೆಪಡಬೇಕಾಗಿದೆ. ಗವರ್ನ್‌ಮೆಂಟಿನವರಿಗೆ ಬೇಕಾಗುವಷ್ಟು ಸಾಲವನ್ನೂ ಇಲ್ಲಿನ ಪ್ರಜೆಗಳೇ ಒದಗಿಸಿಕೊಡುತ್ತಾ ಬಂದ ಪಕ್ಷದಲ್ಲಿ ಅವರು ಹಾಕಿದ ಅಸಲೂ ಅದರ ಬಡ್ಡಿಯೂ ಅವರ ಆಸ್ತಿಯಾಗಿಯೇ ಇರುತ್ತವೆ. ಹಿಂದುಸ್ಥಾನದಲ್ಲಿ ಅನೇಕ ಕೋಟಿ ರೂಪಾಯಿಗಳ ಚಿನ್ನ ಬೆಳ್ಳಿ ಒಡವೆ ವಸ್ತುಗಳು ನಿಷ್ಪ್ರಯೋಜನವಾಗಿ ಬಿದ್ದಿರುತ್ತವೆ ಎಂತಲೂ, ಇದರಿಂದ ಗವರನ್‌ಮೆಂಟಿಗೆ ಬೇಕಾಗುವಷ್ಟು ಹಣವನ್ನು ಸಾಲವಾಗಿ ಪಡೆದುಕೊಳ್ಳುವ ವಿಷಯದಲ್ಲಿ ಸರ್ಕಾರದವರು ಶ್ರಾಮಿಸಬೇಕೆಂತಲೂ ಲಂಡನ್ ಪಟ್ಟಣದ ಮುಖಂಡ ವರ್ತಕನೊಬ್ಬನು ಇಂಡಿಯಾ ಗವರ್ನ್‌ಮೆಂಟಿನವರಿಗೆ ಸೂಚಿಸಿ ಹೇಳುತ್ತಾನೆ. ಇಂಡಿಯಾ ಗವರ್ನ್‌ಮೆಂಟಿನವರಿಗೆ ಈ ರಾಷ್ಟ್ರದಲ್ಲಿ ಸಾಲ ಹುಟ್ಟದೆ ಇರುವುದಕ್ಕೆ ಕಾರಣಗಳೇನಾಗಿರಬಹುದೆಂದರೆ— (೧) ಯೂರೋಪಿನ ಹಣಗಾರರು ಅಪೇಕ್ಷಿಸುವುದಕ್ಕಿಂತ ಹಿಂದುಸ್ಥಾನದ ಹಣಗಾರರು ತಮ್ಮ ಹಣಕ್ಕೆ ಹೆಚ್ಚು ಬಡ್ಡಿ ಬರಬೇಕೆನ್ನುವರು. ಇಂಡಿಯಾ ಗವರ್ನ್‌ಮೆಂಟಿನವರು ಲಂಡನ್ ಪಟ್ಟಣದ ಸಾಹುಕಾರರಿಂದ ಶೇಕಡಾ ವರುಷಕ್ಕೆ ೩½, ೩¾, ೪ ಅಥವಾ ೪ ರೂಪಾಯಿನ ಬಡ್ಡಿಗೆ ಸಾಲ ತರಬಲ್ಲರು. ಹಿಂದುಸ್ಥಾನದ ಹಣಗಾರರು ತಮ್ಮ ಹಣಕ್ಕೆ ಶೇಕಡಾ ವರುಷಕ್ಕೆ ೧೨ ರೂಪಾಯಿ ಅಥವಾ ಅದಕ್ಕಿಂತಲೂ ಹೆಚ್ಚು ಬಡ್ಡಿ ಬರಬೇಕೆನ್ನುತ್ತಾರೆ. ಇಲ್ಲಿರುವ ಬ್ಯಾಂಕುಗಳಲ್ಲಿ ಹಣ ಹಾಕಿರತಕ್ಕವರು ಶೇಕಡಾ ೫ ರೂಪಾಯಿ ಬಡ್ಡಿಯನ್ನು ನಿರೀಕ್ಷಿಸುವರು. (೨) ಇಲ್ಲಿನ ಜನರಲ್ಲಿ ನಂಬಿಕೆಯೂ ಕಡಮೆಯಾಗಿದೆ. ಕೆಲವರು ಹಣವನ್ನು ಮನೆಯಲ್ಲಿ ಕೂಡಿಸಿಟ್ಟಿರುವುದೇ ಲೇಸೆಂದು ತಿಳಿದಿರುತ್ತಾರೆ. ಹೀಗೆ ಮಾಡುವುದು ಬುದ್ಧಿಹೀನರ ಕೆಲಸವೇ ಸರಿ. ಕೂಡಿಸಿಟ್ಟದ್ದು ಕಳ್ಳರ ಇಲ್ಲವೇ ಬೆಂಕಿಯ ಪಾಲಾಗುವುದು. ಗವರ್ನ್‌ಮೆಂಟಿಗೆ ಸಾಲಕೊಟ್ಟ ಹಣಕ್ಕೆ ಎಂದಿಗೂ ಚ್ಯುತಿಯುಂಟಾಗುವುದಿಲ್ಲ. (೩) ಹಿಂದುಸ್ಥಾನದಲ್ಲಿ ಜನರು ಬಹಳ ಹಣವನ್ನು ಚಿನ್ನ ಬೆಳ್ಳಿ ಒಡವೆಗಳಿಗೆ ಹಾಕುತ್ತಾರೆ. ಇದರಿಂದ ಒಂದು ಕಾಸೂ ಪ್ರಯೋಜನವಾಗುವುದಿಲ್ಲ. ಒಡವೆಯು ಬೆಳೆಯಲಾರದು, ಬಡ್ಡಿ ಕೊಡಲಾರದು. ಇಂಗ್ಲಿಷರಲ್ಲಿ "ಹಣವು ಹಣವನ್ನು ವೃದ್ಧಿ ಮಾಡುತ್ತದೆ" ಎಂಬ ಗಾದೆಯುಂಟು. ಹಾಗೆಂದರೆ, ಪ್ರತಿ ಒಬ್ಬನೂ ತನ್ನ ಹಣವನ್ನು ವೃದ್ಧಿಯಾಗುವಂತೆ ಉಪಯೋಗಿಸಲೆಂದು ಅಭಿಪ್ರಾಯ. ಇದರಂತೆಯೇ ಕಾಳನ್ನು ಭೂಮಿಗೆ ಹಾಕಿದರೆ ಹತ್ತರಷ್ಟು ಕಾಳು ಬೆಳೆಯುವುದು ಎಲ್ಲರಿಗೂ ತಿಳಿದೇ ಇದೆ.

ಈ ವಿಚಾರವನ್ನು ಕುರಿತು ಬರೆಯೋಣದರಲ್ಲಿ ನಮ್ಮ ಉದ್ದೇಶವೇನೆಂದರೆ, ಹಿಂದುಸ್ಥಾನದಲ್ಲಿ ಕಸಬುಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಇನ್ನೂ ಅಪಾರವಾದ ದ್ರವ್ಯ ಬೇಕಾಗಿರೋಣದರಿಂದ ಪ್ರಜೆಗಳು ತಮ್ಮ ಹಣವನ್ನು ಕೂಡಿಸಿಡದೆ, ದೇಶೋನ್ನತಿಗಾಗಿ ವಿನಿಯೋಗಿಸುತ್ತಿರಲಿ. ಸ್ವಲ್ಪ ಹಣವಿರತಕ್ಕವರು ಸೇವಿಂಗ್ಸ್ ಬ್ಯಾಂಕಿನಲ್ಲಿ ಇಡಲಿ. ಇದರಲ್ಲಿ ತಮಗೂ ತಮ್ಮ ದೇಶಕ್ಕೂ ಪ್ರಯೋಜನವಿದೆ. ಹಣಗಾರರು ತಮ್ಮ ಹಣವನ್ನು ಗವರನ್‌ಮೆಂಟಿಗೆ ಸಾಲಕೊಟ್ಟು, ಪತ್ರಗಳನ್ನು ಕೊಂಡುಕೊಳ್ಳಲಿ. ಹ್ಯಾಗೂ ಇಂಡಿಯಾ ಗವರ್ನ್‌ಮೆಂಟಿನವರು ಈ ದೇಶವನ್ನು ಅಭಿವೃದ್ಧಿಗೆ ತರುವುದಕ್ಕೆ ಅನ್ಯದೇಶದ ಹಣಗಾರರಿಂದ ಸಾಲತರದಂತಾದರೆ ಎಷ್ಟೋ ಶ್ರೇಯಸ್ಕರವಾದೀತು

ಬಂಗಳೂರಿನ ವೃತ್ತಾಂತಗಳು

ಮುಂದಿನ ವರುಷ ಜನವರಿ ತಿಂಗಳ ಮೊದಲನೇ ವಾರದಿಂದ ಬೆಂಗಳೂರಿನಲ್ಲಿ ಸರ್ಕಾರಿ ಪೋಲೀಸ್ ಸ್ಕೂಲು ಪ್ರಾರಂಭವಾಗುತ್ತದೆ.

ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮುಂದಿನ ಗುರುವಾರ ಮಧ್ಯಾಹ್ನ ೩ ಗಂಟೆಗೆ ಮೈಸೂರು ನ್ಯಾಯವಿಧಾಯಕ ಸಭೆಯು ನಡೆಯುವುದಾಗಿದೆ

ಶ್ರೀಮನ್ ಮಹಾರಾಜರವರು ನಾಳೆ ಹಸಿವಿನ ಸಾಯಂಕಾಲ ಸಿಂಹಾಸನವನ್ನು ಹತ್ತುವಾಗ್ಗೆ ಪಟ್ಟಣವೆಲ್ಲಾ ವಿದ್ಯುಚ್ಛಕ್ತಿಯ ದೀಪಗಳಿಂದ ಬೆಳಗುವಂತೆ ಪ್ರಾರಂಭಿಸುವರು

ಈ ಸಾಲ ಪ್ರಜಾಪ್ರತಿನಿಧಿ ಸಭೆಯು ಅಕ್ಟೋಬರ್ ತಾ. ೮ ನೇ ಗುರುವಾರ ಮಧ್ಯಾಹ್ನ ರಾಜಧಾನಿಯಲ್ಲಿ ಪ್ರಾರಂಭವಾಗುವುದು. ಆ ದಿನ ರಾತ್ರಿಯೇ ಯೂರೋಪಿಯನ್ ಸರದಾರರಿಗೆ ಔತಣ ಜರುಗುವುದಾಗಿದೆ.

ಹಿಂದುಸ್ಥಾನದ ಪರಸ್ಪರ ಸಹಾಯಕ ಸಂಘಗಳ ರೆಜಿಸ್ಟ್ರಾರುಗಳು ಸಿಮ್ಲಾ ಪಟ್ಟಣದಲ್ಲಿ ಸೇರಿ ನಡಿಸುವ ವಾರ್ಷಿಕ ಸಭೆಗೆ ಮೈಸೂರು ಸರ್ಕಾರದವರು ಮಿ|| ಎಂ. ರಾಮರಾಯರನ್ನು ನಿಯಮಿಸಿ ಕಳುಹಿಸಿರುತ್ತಾರೆ.

ಒಕ್ಕಲಿಗರ ಸಂಘದ ಮೂರನೇ ಸಮಾಜವನ್ನು ಹಾಸನದಲ್ಲಿ ಮುಂದಿನ ವರುಷದ ಏಪ್ರಿಲ್ ತಿಂಗಳಲ್ಲಿ ನಡಿಸಬೇಕೆಂತಲೂ, ಬೆಂಗಳೂರಿನಲ್ಲಿ ಆದಷ್ಟು ಬೇಗನೆ ಒಂದು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಬೇಕೆಂತಲೂ ತೀರ್ಮಾನವಾಗಿದೆ

ಮೈಸೂರು ಕಸಬುಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವು ತಾ ೩೦ ನೇ ಬುಧವಾರ ರಾಜಧಾನಿಯಲ್ಲಿ ಪ್ರಾರಂಭವಾಗುವುದು. ಅಕ್ಟೋಬರ್ ತಾ ೬ ನೇ ಮಂಗಳವಾರ ಬೆಳಿಗ್ಗೆ ಪ್ರದರ್ಶನ ಶಾಲೆಯ ಬಳಿ ಗೋಶಾಲೆಗಳ ಪ್ರದರ್ಶನ ನಡೆಯುತ್ತದೆ

ಒಳ್ಳೆ ಚಾತ್ರಿ ವಾರದ ಬರೆಯುವುದು:—ಈ ಬಂಗಾರಪೇಟೆ ತಾಲ್ಲೂಕು ರಾಮಸಮುದ್ರದಲ್ಲಿ ಈಗ ೧೫ ದಿನಗಳಿಗೆ ಮುಂಚೆ ಕ್ಷಾಮಸಮುದ್ರವಾಗಿ ಇತ್ತು. ಅಂದರೆ ಜನಗಳಿಗೆ ನೀರು, ಜನಗಳಿಗೆ ತಿಂಡಿ, ದನಗಳಿಗೆ ಹುಲ್ಲು ಇಲ್ಲ. ಈಗ ದೇವರ ದಯದಿಂದ ಸ್ವಲ್ಪ ಮಳೆ ಆಗಿ ಕೆರೆಗಳು ತುಂಬಿದವು

ಸಜಾ ಶಿಕ್ಷೆಯನ್ನು ಅನುಭವಿಸಬೇಕಾದ ಪ್ರತಿ ಒಬ್ಬ ಖೈದಿಗೂ ದೇಹಾರೋಗ್ಯವು ಚೆನ್ನಾಗಿರುವ ಪಕ್ಷಕ್ಕೆ ಜೈಲಿನಲ್ಲಿ ದಾಖಲು ಮಾಡಿಕೊಳ್ಳುವುದಕ್ಕಿಂತ ಮುಂಚೆ ಪ್ಲೇಗ್ ಶಿಡುಬನ್ನು ಹಾಕಿಸಬೇಕೆಂತಲೂ, ತರುವಾಯ ಪ್ರತಿ ವರುಷವೂ ಒಂದೊಂದು ಸಲ ಶಿಡುಬು ಹಾಕುತ್ತಾ ಬರಬೇಕೆಂತಲೂ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ.

ಈ ಸಲ ನವರಾತ್ರಿ ಉತ್ಸವಗಳಿಗಾಗಿ ಸುಮಾರು ೬೦ ಮಂದಿ ಯೂರೋಪಿಯನ್ ಸರದಾರರೂ ಮೇಮ್‌ಸಾಹೇಬರುಗಳೂ ಅಕ್ಟೋಬರ್ ತಾ ೫ ನೇ ಶನಿವಾರ ರಾಜಧಾನಿಗೆ ಬಂದು, ೮ ದಿವಸಗಳ ವರೆಗೆ ಶ್ರೀಮನ್ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ, ತಾ ೧೦ ನೇ ಶನಿವಾರ ವಾಪಸು ಪ್ರಯಾಣಮಾಡುವವರಾಗಿದಾರೆ

ತುಮಕೂರು ತಾಲ್ಲೂಕು ಹೆಬ್ಬೂರಿನಲ್ಲಿರುವ ಶ್ರೀಕೋದಂಡ ಆಶ್ರಮ ಮಠ (ಕೋದಂಡ ರಾಮಸ್ವಾಮಿ ಮಠ) ದ ಪೀಠಕ್ಕೆ ದೊಡ್ಡಬಳ್ಳಾಪುರದ ತಾಲ್ಲೂಕು ಅರುಡಿಯ ವೇ|| ನಾರಾಯಣ ಶಾಸ್ತ್ರಿಗಳನ್ನು ಸ್ವಾಮಿಗಳನ್ನಾಗಿ ಅಭಿಷೇಕ ಮಾಡಬಹುದೆಂದು ಸರ್ಕಾರದವರು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ.

ನಾಗಮಂಗಲದ ತಾಲ್ಲೂಕು ಬೆಳ್ಳೂರಿನಲ್ಲಿ ಜೈನರು ತಮ್ಮ ದೇವರನ್ನು ಹಬ್ಬ ಹರಿದಿನಗಳಲ್ಲಿ ಉತ್ಸವಮಾಡಿಕೊಂಡು ಹೋಗದಂತೆ ಅಡ್ಡಿಮಾಡಬೇಕೆಂದು ಅಲ್ಲಿನ ಬ್ರಾಹ್ಮಣ ಪ್ರಜೆಗಳು ಗವರ್ನ್‌ಮೆಂಟಿಗೆ ಅರ್ಜಿ ಬರೆದುಕೊಂಡದ್ದಕ್ಕೆ ಗವರ್ನ್‌ಮೆಂಟಿನವರು ಹಾಗೆ ಅಡ್ಡಿಮಾಡಲಾಗುವುದಿಲ್ಲವೆಂದು ಹುಕುಂ ಕೊಟ್ಟಿದಾರೆ.

ಜುಲ್ಮಾನೆಯ ಹಣವು ವಸೂಲಾಗುವುದಿಲ್ಲವೆಂದು ಗೊತ್ತಾದ ಪಕ್ಷದಲ್ಲಿ ಸೆಷನ್ಸ್ ಜಡ್ಜರಾಗಲಿ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಲಿ, ಇವರಿಂದ ಅಧಿಕಾರ ಹೊಂದಿದ ಇತರ ಮ್ಯಾಜಿಸ್ಟ್ರೇಟರಾಗಲಿ ಅಂಥಾ ಜುಲ್ಮಾನೆಯ ಹಣವನ್ನು ಸರ್ಕಾರಿ ಲೆಕ್ಕದಿಂದ ವಜಾಮಾಡಿ ಬಿಡಬಹುದೆಂದು ಚೀಫ್ ಕೋರ್ಟಿನವರು ಹುಕುಂ ಕೊಟ್ಟಿದಾರೆ.

ಮೈಸೂರು ಗೆಜೆಟ್ ಸಂಗ್ರಹ.

ನಗರದ ಆಕ್ಟಿಂಗ್ ಅಮಲ್ದಾರ್ ಮಿ|| ಎಂ. ರಾಮಚಂದ್ರರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತೊಂಬತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅವರ ಗೈರುಹಾಜರಿಯಲ್ಲಿ ಶಿರಸ್ತೇದಾರರು ತಾಲ್ಲೂಕ್ ಚಾರ್ಜು ಕೆಲಸಗಳ ಭಾರವನ್ನು ವಹಿಸಿರತಕ್ಕದ್ದು.

ಶ್ರೀರಂಗಪಟ್ಟಣದ ಅಮಲ್ದಾರ್ ವೆ|| ಶೇಕ್ ಅಬ್ದುಲ್ಲಾ ಯವರಿಗೆ ಸೆಪ್ಟಂಬರ್ ತಾ ೫ ರಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮತ್ತೊಂದು ಹುಕುಂ ಕೊಡಲ್ಪಡುವ ತನಕ ನಾಗಮಂಗಲದ ತಾಲ್ಲೂಕ್ ಶಿರಸ್ತೇದಾರ್ ಎಚ್. ಶ್ರೀನಿವಾಸೈಯಂಗಾರ್ರು ಶ್ರೀರಂಗಪಟ್ಟಣದ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಚಿತ್ರದುರ್ಗದ ಅಮಲ್ದಾರ್ ಸಿ. ಸುಬ್ಬೈಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿತ್ರದುರ್ಗದ ಡಿಸ್ಟ್ರಿಕ್ಟ್ ಆಫೀಸ್ ಶಿರಸ್ತೇದಾರ್ ಎನ್ ಶ್ರೀನಿವಾಸೈಯಂಗಾರ್ರು ಚಿತ್ರದುರ್ಗದ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಮೈಸೂರು ಮಹಾರಾಣಿ ಕಾಲೇಜ್ ಲೇಡಿ ಸೂಪರಿಂಟೆಂಡೆಂಟ್ ಮಿಸ್ ಜೆ. ಎಲ್. ಪಲಿತಾಪ್‌ ಯವರಿಗೆ ಕೊಟ್ಟಿರುವ ಪ್ರಿವಿಲೆಜ್ ಮತ್ತು ಕಾಯಿಲೆ ರಜಗಳನ್ನು ಡಿಸೆಂಬರ್ ತಾ. ೩೮ ವರೆಗೆ ಜಾಸ್ತಿ ಮಾಡಲಾಗಿದೆ.

ಅದುವರೆಗೆ ಸೌಭಾಗ್ಯವತಿ ಕೆ. ಡಿ ರುಕ್ಮಿಣಿಯಮ್ಮನವರೇ ಲೇಡಿ ಸೂಪರಿನ್‌ಟೆಂಡೆಂಟರಾಗಿ ಬದಲಿ ನೋಡತಕ್ಕದ್ದು.

ತುಮಕೂರು ಡಿಸ್ಟ್ರಿಕ್ಟ್ ಫೊ. ಅ|| ಕನ್ಸರ್ವೇಟರ್ ಮಿ|| ಡಿ. ಶ್ರೀನಿವಾಸೈಯಂಗಾರ್ರಿಗೆ ಆಗಸ್ಟ್ ತಾ. ೭ ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಮೈಸೂರು ಸರ್ಕಾರದವರು ಮೇಜರ್ ಎಚ್. ಇ. ಡ್ರೇಕ್ ಬ್ರಾಕ್‌ಮನ್ ಯವರನ್ನು ಜೂನ್ ತಾ ೨೮ ಲಾಗಾಯತು ಸ್ಪೆಷಲ್ ಡ್ಯೂಟಿ ಮೆಡಿಕಲ್ ಆಫೀಸರಾಗಿ ನೇಮಕಮಾಡಿರುತ್ತಾರೆ.

ಮುಂದೆ ಹೇಳುವ ಫಾರೆಸ್ಟ್ ಆಫೀಸರುಗಳ ಬಡ್ತಿಯನ್ನು ಜೂಲೈ ೧ ರಿಂದ ಸ್ಯಾಂಕ್ಷನ್ ಮಾಡಲಾಗಿದೆ:—

ಮೆ|| ಎಸ್. ಎ. ಬಾಪೂರಾಯರು ಪೆನ್ಷನ್ ಮೇಲೆ ಕೆಲಸ ಬಿಟ್ಟಿದ್ದರಿಂದ ಮೆ|| ಎಂ. ಜಿ ರಾಮರಾಯರು ಫಾರೆಸ್ಟ್ ಡಿಸ್ಟ್ರಿಕ್ಟ್ ಕನ್ಸರ್ವೇಟರಾಗಿಯೂ, ಮೆ|| ಎಚ್ ಶ್ರೀನಿವಾಸರಾಯರು ೧ ನೇ ಕ್ಲಾಸ್ ಅ|| ಕನ್ಸರ್ವೇಟರಾಗಿಯೂ, ಮೆ|| ಎಚ್ ರಾಮೈಯನವರು ೭ ನೇ ಕ್ಲಾಸ್ ಅ|| ಕನ್ಸರ್ವೇಟರಾಗಿಯೂ, ಮೆ|| ಎನ್. ರಾಮೈಯನವರು ೩ನೇ ಕ್ಲಾಸ್ ಅ|| ಕನ್ಸರ್ವೇಟರಾಗಿಯೂ ಮೆ|| ಕೆ. ಮುತ್ತೈಯನವರು ೪ನೇ ಕ್ಲಾಸ್ ಅ|| ಕನ್ಸರ್ವೇಟರಾಗಿಯೂ ಬಡ್ತಿಮಾಡಲ್ಪಟ್ಟಿದಾರೆ.

ಮೆ|| ಎ. ಸುಬ್ರಹ್ಮಣ್ಯ ಐಯರ್‌ರವರನ್ನು ಡೆಪ್ಯುಟಿ ಸೂಪರಿನ್‌ಟೆಂಡೆಂಟ್ ಮತ್ತು ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿಯಾಗಿ ನೇಮಿಸಲಾಯಿತು. ಇವರು ತಾ ೧೨ ರಲ್ಲಿ ೯ ಕೆಲಸದ ಭಾರವನ್ನು ವಹಿಸಿಕೊಂಡರು.

ಮೈಸೂರು ಡಿವಿಜನ್ ಅ|| ಇನ್‌ಸ್ಪೆಕ್ಟರ್ ಮಿ|| ಜಿ ಸಿ. ಶ್ರೀನಿವಾಸೈಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು ಇನ್‌ಫೆಂಟ್ರಿ ೩ ನೇ ರಿಸಾಲಾ ಕಮಾಂಡರ್ ರ್ಯಾಂಕಿಯಲ್ಲಿ ಸುಬೇದಾರ್ ಮೇಜರ್ ಬಸರಾಯರನ್ನು ಕಮ್ಯಾಂಡಿಂಗ್ ಅಧಿಕಾರಕ್ಕೆ ಸೆಪ್ಟಂಬರ್ ತಾ ೨೭ ಲಾಗಾಯತು ಬಡ್ತಿಮಾಡಲಾಗಿದೆ.

ಈಗಲೇ ಬಂದಿದೆ.

117-49

೫,೦೦೦ ಹರ್ಸ ಟೋಪಿ ಹೋಲಿಯುವ ಸುಪೀರಿಯರ್ ಉಲ್.

೧೦ ಟೋಪಿಯಾಗುವ ಬಂಡಲ್ ೧ ಕ್ಕೆ ೩—೮—೦

ಹರ್ಸ ಟೋಪಿ ಡಜ್ ೧ಕ್ಕೆ ೩—೦—೦, ೯—೦—೦, ೧೨—೦—೦

ಬಹಾಕ್ ಮೇಡ್ ಬನಿಯನ್ ಡಜ ೧ಕ್ಕೆ ೪—೮—೦, ೫—೦—೦,

ಬಾಚಣಿಗೆಗಳು ಡಜ ೧ಕ್ಕೆ ೦—೧೨—೦, ೧—೦—೦, ೧—೪—೦,

ವಿ. ಪಿ. ಯಿಂದಲೂ ರವಾನಿಸುತ್ತೇವೆ ೧—೮—೦

ವಿಳಾಸ-ಪ್ರೊಪ್ರೈಟರ್, ದಿ ಉಲನ್ ಮಾರ್ಟ, ಮಂಗಳೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

48-18

ತಲೆನೋವು, ವಾಯುನೋವು, ಸೆಳೆತ, ಗಂಟ್ಲುನೋವು, ಸೊಂಟನಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನು ನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಪಚ್ಚಿದರೆ ಯಕ್ಷಿಣೆ ಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದು ಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತರ ಇಟ್ಟಿರಬೇಕೆಂದು ಹೇಳುವರು. ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಸುಟ್ಟನ್ನೇ ಹಾಳುಮಾಡುತ್ತದೆ.

ಕ್ರಯ ಶೀಸೆ ೧ ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಓಟಿಸನ್,

೩೭, ವೇಪಮಲೆಪಳ್ಳ ಬೀದಿ, ವೇಪೇರಿ, ಮದರಾಸ್.

ಇತ್ತಲಾಗ ಮುದ್ರಿಸಲ್ಪಟ್ಟಿರುವ ಬಾಸೆಲ್ ಮಿಶನ ಬುಕ್ ಎಂಡ್ ಟ್ರಾಕ್ಟ್ ಡಿಪೊಸಿಟರಿ ಮಂಗಳೂರು ಪುಸ್ತಕಗಳು.

78 1

ಲೂತರ್ ಶಾಸನ ಪ್ರವರ್ತನೆ	ಕ್ರಯ	೦—೦—೩
ಶಾವಂತಿ ಪುಷ್ಪ		೦—೦—೬
ಸುರಾರಿ ಕೀರ್ತನೆ		೦—೦—೦
ವಾಜಪೂದ ಕೃಕ್ರಿಯ ಚರಿತ್ರೆ		೦—೩—೦
ಸ್ವದೇಶಾಭಿಮಾನ		೦—೩—೦
ಯೋಹಾನ ಬುನ್ಯನ ಯಾತ್ರಿಕನ ಸಂಚಾರವು (ಮೊದಲನೆ ಭಾಗ)		೦—೪—೦
(ಎರಡನೆ ಭಾಗ ಮುದ್ರಣೆಯಲ್ಲಿದೆ)		
ಯೆಹೂದಿ ಪ್ರವಾದಿಗಳಲ್ಲಿ ಪ್ರಖ್ಯಾತನಾದ ಯೆರೆಮೀಯನು		೦—೪—೬
ಯೋಸೇಫನ ಚರಿತ್ರೆಯ ವಿಷಯವಾದ ಇಪ್ಪತ್ತು ಪ್ರಸಂಗಗಳು		೦—೫—೦
ವೇದಾಂತನಾದ ನಿರ್ಣಯ (ತತ್ವವಿವೇಕ)		೦—೫—೦
ಇಸೋಪನ ನೀತಿ ಕಥೆಗಳು (ಚಿತ್ರಸಹಿತ)		೦—೮—೦
ರಾಗಸಹಿತವಾದ ಅಭಿನಯ ಗೀತಗಳು		೦—೨—೬
ಬಾಲಕರ ಗೀತಗಳು		೦—೩—೦
ಮೂಲಶಾಲೆಗಳ ಶಿಕ್ಷಣಾ ಕ್ರಮಪದ್ಧತಿ		೦—೫—೦
ಕಿಂಡರ್ ಗಾರ್ಟನ ಕೃಪಿರಿ, ಬಾಲಕ ಮತ್ತು ಮೊದಲನೆ ದರ್ಜೆಗಳಿಗೆ ಉಪಯುಕ್ತವಾದ ಕಥೆಗಳೂ ಹಾಡುಗಳೂ		೦—೨—೬
ಅದೇ ಎರಡನೆ ದರ್ಜೆಗೆ		೦—೨—೬
ಗೃಹೋಪಯೋಗದ ಹೋಮಿಯೊಪಥಿ ಎಂಬ ಸಮಾನ ಪ್ರವೃತ್ತಕ ಚಿಕಿತ್ಸಾಕ್ರಮದ ಕೃಪಿರಿ		೧—೪—೦

ಸತ್ಯದೀಪಿಕೆ.

ಪ್ರತಿ ಪಾಂಕ್ಷ್ಯಂಮ ಪ್ರಕಟವಾಗುವ ಪತ್ರವಿದು. ಪ್ರತಿ ಸಂಚಿಕೆಯು ಚತುಷ್ಪತ್ರಿ ಪರಿಮಾಣದ ಎಂಟೆಂಟು ಪುಟಗಳುಳ್ಳದ್ದಾಗಿದೆ. ಲೋಕ ವಿಷಯದ ಸಂಗತಿಗಳೂ, ಮತವಿಮರ್ಶೆಯ ಉಪನ್ಯಾಸಗಳೂ, ಮನೋರಂಜಕ ಕಥೆಗಳೂ, ವಿದ್ಯಾವಿಷಯಗಳೂ, ಲೋಕಸಮಾಚಾರ, ಸ್ವಪರದೇಶಗಳ ವರ್ತಮಾನ, ತಂತೀ ವರ್ತಮಾನ, ವ್ಯವಸಾಯ ಮತ್ತು ವೃಕ್ಷಾದಿಗಳ ವರ್ಣನೆ, ಕಾಲೋಪಯೋಗದ ಪುಸ್ತಕಗಳ ಪ್ರಕಟಣೆ, ಪಂಚಾಂಗ ಮುಂತಾದ ವಿಶಿಷ್ಟ ವಿಷಯಗಳು ಇದರಲ್ಲಿ ಅಡಗಿರುವವು.

ಚಂದಾ ನಿರ್ಣಯ

೧ ಪ್ರತಿಗೆ (ಸ್ಥಳಿಕರಿಗೆ) ವರ್ಷ ೧ ಕ್ಕೆ		ರೂ ೧—೦—೦
೧ ,, ,,	ಅರ್ಧ ವರ್ಷಕ್ಕೆ	೦—೮—೦
೧ ,, (ಪರಸ್ಥಳಿಕರಿಗೆ) ವರ್ಷ ೧ಕ್ಕೆ ಹಾಸಲು ಕೂಡ		೧—೧೩—೦
೧ ,, ,,	ಅರ್ಧ ವರ್ಷಕ್ಕೆ	೦—೧೫—೦

ಚಂದಾ ಹಣ ಮುಂಗಡವೇ ರವಾನಿಸಬೇಕು ಮಾದರಿ ಪ್ರತಿ ಕಳುಹಿಸಲ್ಪಡುವದು.

ಅಪೇಕ್ಷಕರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.—

ಬಾಸೆಲ್ ಮಿಶನ ಬುಕ್ ಟ್ರಾಕ್ಟ್ ಡಿಪೊಸಿಟರಿ, ಮಂಗಳೂರು

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೈನ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

1-39



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಅಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಶ್ರೇಷ್ಠ ಯೋಗ್ಯವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯು ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ.

ಸ್ವದೇಶೀ ನೆಯ್ಗೆ ನೂಲು ಬೇಕೋ?

71 4

ಪ್ರಸಿದ್ಧವಾದ ಕೋಯಮ್ಬತ್ತೂರು ಸ್ವದೇಶೀ ಮಿಲ್ಸ್ ಎಂಬ ಕಾರಖಾನೆಯಲ್ಲಿ ತಯಾರಾಗುವ ನಂಬರ್ ವಾರ್ ನೂಲುಗಳಿಗೆ ನಾವು ಆರ್ಡರ್ ತೆಗೆದುಕೊಂಡು ತರಿಸಿಕೊಡಲು ಅಧಿಕಾರ ಹೊಂದಿರುತ್ತೇವೆ. ನೂಲಿನ ನಮೂನೆ ದರ ಮುಂತಾದ ತಪಶೀಲನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಎಂ. ಸೂರ್ಯನಾರಾಯಣಪ್ಪ,

ಕಮಿಷನ ಮತ್ತು ಜನರಲ್ ಏಜನ್ಸಿ, ಶಿವಮೊಗ್ಗಾ.

ಇಲ್ಲಿ ನೋಡಿ.

77 1

ತುಮಕೂರು ಡಿಸ್ಟ್ರಿಕ್ಟ ಇಲಾಖೆಯಲ್ಲಿ ಯೂರೋಪಿಯನರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ. ಕ್ರಯ—೧೨ ಆಣೆ ಮೊದಲ್ಗೊಂಡು ೧ ರೂ ೧೦ ಆಣೆಯವರಿಗೆ. ೧ ಡಜನ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು. ಈಗ ಹಾನೇ ಇಂಗ್ಲಿಷ್ ಉಲ್ ದಾರವು ಬಂದಿದೆ. ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಬಲ್ಲೆವು ನಮ್ಮ ವಿಳಾಸ:—ಮ್ಯಾನೇಜರ್,

ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ ಇಲಾಖೆ, ತುಮಕೂರು

ಜ್ಯೋತಿಷ್ಯ ಗ್ರಂಥವು.

78 1

ಗೋಚಾರಫಲದರ್ಪಣವೆಂಬ ನೂತನ ಜ್ಯೋತಿಷ್ಯ ಗ್ರಂಥವು ತಜ್ಞಾಸ್ತ್ರದಲ್ಲಿ ಪ್ರಸಿದ್ಧ ಪಂಡಿತರಾದ ಆರ್. ಶಾಂತಪ್ಪಾಚಿಯವರಿಂದ ವಿರಚಿಸಿ ಮಾರಾಟಕ್ಕೆ ಸಿದ್ಧವಾಗಿದೆ ಇದರಲ್ಲಿ ೧೦೨ ವಿಷಯಗಳಿದ್ದು ಸುಮಾರು ೬೦೦ ಪಾನುಗಳಿರುತ್ತವೆ ಅತ್ಯುತ್ಕೃಷ್ಟವಾದ ಮಾಹಿತಿಯಿಂದ ಕೂಡಿರುತ್ತದೆ. ಇದೇ ಹೆಸರಿನ ಬೇರೆ ಜನರು ರಚಿಸಿದ ನಿರುಪಯೋಗವಾದ ಗ್ರಂಥಗಳನ್ನು ಕೊಳ್ಳುವದರಲ್ಲಿ ಸಾವಧಾನಾಗಿರಬೇಕು. ಮೊದಲಿನ ನೂರು ಗ್ರಾಹಕರಿಗೆ ಮಾತ್ರ ಕೀಲಕದ ಕನ್ನಡ ಅಗರ ಮರಾಠಿ ಪಂಚಾಂಗ ಒಂದು ವಿಸ್ತಾರವುಳ್ಳದ್ದು ಬಹುಮತಿ ಕೊಡುವೆವು ಕಿಮ್ಮತು ವಿ. ಪಿ. ಟಿ. ಖರ್ಚು ಸಹ ೫ನ್ನೆರಡಾಣೆ ವ್ಯಾಪಾರಿಕರಿಗೆ ಬಹಳ ಸೋವಿಯಾಗಿ ಕೊಡುವೆವು ಪತ್ತೆ:—

Boandade Narasappa,
Post Chittwadgi, Bellary District.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION. 33-26

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತವೆ.

ಸ್ಕಾಟ್ ಅಂಡ್ ಬೌನ, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ, ಇಂಗ್ಲೆಂಡ್

ಈ ವಿಸಾನ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

6 ರೂಪಾಯಿಗಳ ಗಡಿಯಾರಕ್ಕೆ 50 ಸಾಮಾನುಗಳು ಇನಾಮು ಕೊಡಲ್ಪಡುವವು.

78-3

ವಜ್ರಕಲ್ಲುಗಳಿನ್ನು ಕೂಡಿಸಲ್ಪಟ್ಟ ನಿಕ್ಕಲ್ ಬೆಳ್ಳಿ ಗಡಿಯಾರವು ಈ ಸ್ವಿಸ್ ಲೀವರ್ ಗಡಿಯಾರವು ಸಾಧಾರಣ ಸಿಲಿಂಡರ್ ಗಡಿಯಾರಕ್ಕಿಂತಲೂ ಕೆಂಪುಗಳು ಇರುವವೂ ಅಲ್ಲದೆ ಲೀವರ್ ಗಡಿಯಾರವು ಬಹಳ ಶ್ರೇಷ್ಠವಾದದ್ದೆಂದು ಎಲ್ಲರೂ ತಿಳಿದಿರುತ್ತೇವೆ ಇದು

ಬಹಳ ಘಟ್ಟಿಯಾಗಿಯೂ, ಕಾಂತಿಯಾಗಿಯೂ, ಶೃಂಗಾರವಾಗಿಯೂ ಅಜಾಗರತೆಯಾಗ ಉಪಯೋಗಿಸಲಿಕ್ಕೆ ತಕ್ಕ ಗಡಿಯಾರವಾಗಿಯೂ ಇದೆ. ಬಹುಮಾನಗಳು:—ನಡುವಿನಲ್ಲಿ ಕಟ್ಟಿಕೊಳ್ಳುವ ವಿಲಾಯತಿ ಬೆಲ್ಟು, ಸವಳದ ಉಂಗುರ, ಜರ್ಮನಸಿಲ್ವರ್ ಗಡಿಯಾರ ಸರಪಣಿ, ರಬ್ಬರಿನ ಕೆಂಪಸ್, ದುಡ್ಡುಕಾಸು ಹಾಕಿಕೊಳ್ಳುವ ಸಣ್ಣದ ಚೀಲ, ಎರಡು ವರ್ಷಗಳ ಪಂಚಾಂಗವೂ ಕನ್ನಡಿಯೂ ಉಳ್ಳ ಪುಸ್ತಕ, ಹೆಂಗಸರು ತಲೆಯಲ್ಲಿಟ್ಟುಕೊಳ್ಳುವ ಹೂವು, ಮುಖ ನೋಡುವ ಚಿತ್ರಕೆಲಸದ ಕನ್ನಡಿ, ಗಡಿಯಾರ ಇಟ್ಟುಕೊಳ್ಳುವ ತೊಗಲಿನ ಸಂಚಿ, ಗಡಿಯಾರದ ರೇಷ್ಮೆದಾರ, ೪ ಆಭರಣಗಳನ್ನಿಟ್ಟುಕೊಳ್ಳುವ ಚಿತ್ರದ ಪೆಟ್ಟಿಗೆಗಳು, ಕತ್ತರಿಕೋಲು, ಪೇನಾಕತ್ತಿ, ಸೀಮೆ ಪಾಟ ಲಾಕ್. ಶೈಗಟ್ಟಿ, ಸುಲೋಚನ, ಲೇಡಿಪಟವು, ದಂತದ ಹಣಿಗೆ, ಶಯನಗೃಹ ದೀಪ, ವಾಸನೆ ದ್ರವ್ಯ ಬುಡ್ಡಿ, ಬೇಗದ ಉಂಗುರ, ಸ್ಪಟಿಕದ ಕನ್ನಡಿ, ಹೇರ್ ಸ್ಪ್ರಿಂಗ್, ವೆಲ್‌ವೆಟ್ಟು ಪಟ್ಟಿಗೆ, ಸೀಸದ ಪೆನ್ಸಿಲ್, ಟೀ ಸ್ಪೂನ, ಸೊಗಸಾದ ಷರ್ಟ ಬೊತ್ತಾನುಗಳು, 20 ಅಂದವಾದ ಕಾಗದಗಳು, ಸ್ವದೇಶೀ ಪೇನಾ, ಸೋಪು ನಮ್ಮ ವಿಳಾಸ—

ಮದರಾಸ್ ಸೊಸೈಟಿ ವಾಚ್ ಡಿಪೋ,

ಪಾರ್ಕ ಟೌನ, ಮದ್ರಾಸ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳಿ.

2 39

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದ ದಪ್ಪ ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಟೋಪಿಗಳು ೧ ರೂ ೮ ಆ; ೧ ರೂ. ೬ ಆ., ೧ ರೂ. ೪ ಆ.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಸೂರ್ಥಿ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ವೃತ್ತಾಂತ ಪತ್ರಿಕೆ

[illegible]

ಗವರ್ನ್‌ಮೆಂಟಿಗೆ ಸಾಲಕೊಡುವುದು.

ಹಿಂದುಸ್ಥಾನದಲ್ಲಿ ಯಾವ ಕಡೆಗಳಲ್ಲಿ ಹೊಸದಾಗಿ ರೈಲ್ ರಸ್ತೆಗಳನ್ನು ಹಾಕಬಹುದೆಂದೂ, ಪ್ರತಿ ವರುಷವೂ ಎಷ್ಟು ಹಣವನ್ನು ಅದಕ್ಕಾಗಿ ವಿನಿಯೋಗಿಸತಕ್ಕದ್ದೆಂದೂ ಗೊತ್ತುಮಾಡುವುದಕ್ಕಾಗಿ ಒಂದು ಕಮಿಟಿಯು ಕೆಲವು ಕಾಲದಿಂದ ಯೋಚನೆಮಾಡುತ್ತಿದೆ ಈ ರಾಷ್ಟ್ರದಲ್ಲಿ ಇನ್ನೂ ಹಲವು ರೈಲ್ ರಸ್ತೆಗಳನ್ನು ಹಾಕುವುದಾದರೆ ತುಂಬಾ ಪ್ರಯೋಜನವಾದೀತೆಂದು ಆ ಕಮಿಟಿಯವರು ಸೂಚಿಸುತ್ತಾರೆ. ಈಗ ಗವರ್ನ್‌ಮೆಂಟಿನವರು ರೈಲ್ವೆ ಇಲಾಖೆಗೆ ಪ್ರತಿ ವರುಷವೂ ೧೫ ಕೋಟಿ ರೂಪಾಯನ್ನು ವಿನಿಯೋಗಿಸುವುದು ಸಾಲದೆಂತಲೂ, ೧೮ ಕೋಟಿಯ ೭೫|| ಲಕ್ಷ ರೂಪಾಯಿನಂತೆ ಖರ್ಚು ಮಾಡಬೇಕೆಂತಲೂ ಅವರು ಹೇಳುವರು. ಹಾಗಾದರೆ ಇಷ್ಟೊಂದು ಹಣವನ್ನು ಪ್ರತಿ ವರುಷವೂ ಹ್ಯಾಗೆ ಒದಗಿಸಬಹುದು? ಇಂಡಿಯಾ ಗವರ್ನ್‌ಮೆಂಟಿನವರು ಇಲ್ಲಿನ ರಾಜಾದಾಯದಿಂದ ಅಷ್ಟು ದ್ರವ್ಯವನ್ನು ಕೊಡುತ್ತಾ ಬರುವುದು ಸಾಧ್ಯವಿಲ್ಲ. ರಾಜಾದಾಯವನ್ನು ಸ್ವಲ್ಪ ಮಟ್ಟಿಗೆ ವಿನಿಯೋಗಿಸಬಹುದು. ಉಳಿದ ಹಣವನ್ನೆಲ್ಲಾ ಅವರು ಸಾಲಮಾಡಿಯೇ ತರಬೇಕಾಗಿದೆ. ಇದೇ ರೀತಿ ಇಂಡಿಯಾ ಗವರ್ನ್‌ಮೆಂಟಿನವರು ಸಾಲತಂದೇ ಈಗ ಹಿಂದುಸ್ಥಾನದಲ್ಲಿರುವ ರೈಲುಗಳನ್ನು ಹಾಕಿಸಿ, ಭಾರೀ ನೀರಾವರಿ ಕಾಮಗಾರಿಗಳನ್ನು ಮಾಡಿಸಿರುತ್ತಾರೆ. ಹೀಗೆ ಸಾಲಮಾಡಿ ತರುವುದು ಹಿಂದುಸ್ಥಾನಕ್ಕೆ ನಷ್ಟಕರವಾದದ್ದಲ್ಲ. ಅಷ್ಟು ಹಣ ಖರ್ಚು ಮಾಡಿ ನಡಸಿದ ಆ ಕಾಮಗಾರಿಗಳು ಸಾರ್ಥಕವಾಗಿಯೂ, ಅವುಗಳಿಂದಾಗುವ ಉತ್ಪತ್ತಿಯು ಆ ಸಾಲದ ಮೇಲಣ ಬಡ್ಡಿಗಿಂತ ಬಹಳ ಹೆಚ್ಚು ಆದಾಯ ಕೊಡತಕ್ಕವುಗಳಾಗಿಯೂ ಇರುತ್ತವೆ. ಒಬ್ಬ ಮನುಷ್ಯನು ವರುಷಕ್ಕೆ ಶೇಕಡಾ ೪ ರೂಪಾಯಿ ಬಡ್ಡಿಗೆ ೧೦ ಸಾವಿರ ರೂಪಾಯಿ ಸಾಲ ತಂದು, ಹೂವು ಗಂಧಕಸ್ತೂರಿ ಮುಂತಾದ ಉಡುಗೆತೊಡುಗೆ ಬಾಣಬಿರುಸುಗಳಿಗೂ ಖರ್ಚು ಮಾಡಿ ಹಾಳುಮಾಡಿಕೊಳ್ಳುವುದಕ್ಕಿಂತ ಒಂದು ಮನೆಯನ್ನು ಕಟ್ಟಿಸಿದರೆ ಆ ಹಣವು ನಷ್ಟವಾಗಲಿಲ್ಲ, ಮನೆ ಉಳಿಯುವುದು. ಯಾವಾಗ ಬೇಕಾದರೂ ಅದನ್ನು ಮಾರಿ ಸಾಲವನ್ನು ತೀರಿಸಿಕೊಳ್ಳಬಹುದಾಗಿದೆ ಇದಲ್ಲದೆ ಅದೇ ಮನೆಯನ್ನು ತಿಂಗಳಿಗೆ ೫೦ ರೂಪಾಯಿ ಬರುವಂತೆ ಬಾಡಿಗೆಗೆ ಕೊಟ್ಟ ಪಕ್ಷದಲ್ಲಿ ವರುಷಕ್ಕೆ ಬಡ್ಡಿಗಾಗಿ ೪೦೦ ರೂಪಾಯಿ ಹೋದರೂ ೨೦೦ ರೂಪಾಯಿ ಲಾಭವನ್ನೂ ಹೊಂದಬಹುದಾಗಿದೆ. ಇಂಡಿಯಾ ಗವರ್ನ್‌ಮೆಂಟಿನವರು ಈ ರೀತಿಯಾಗಿಯೇ ಕಾರ್ಯಗಳನ್ನು ನಡಸುತ್ತಾರೆ ಹಣವನ್ನು ಸಾಲಮಾಡಿ ತಂದು ಹೆಚ್ಚು ಪ್ರಯೋಜನವೂ ಉತ್ಪತ್ತಿಯೂ ಬರುವಂಥಾ ರೈಲು ರಸ್ತೆ ನೀರಾವರಿ ಕಾಮಗಾರಿಗಳಿಗೆ ಖರ್ಚು ಮಾಡಿ, ಬಡ್ಡಿ ಹೋಗಿ ಬಹಳ ಲಾಭ ಸಂಪಾದಿಸಿಕೊಳ್ಳುತ್ತಿರುವರು.

ಗವರ್ನ್‌ಮೆಂಟಿಗೆ ಯಾರು ಆಷ್ಟು ಹಣವನ್ನು ಸಾಲಕೊಡುತ್ತಿರುವರೆಂದು ಕೇಳಬಹುದು. ಕೆಲವು ಭಾಗದಷ್ಟು ಹಿಂದುಸ್ಥಾನದ ಪ್ರಜೆಗಳು ಕೊಡುತ್ತಾರೆ ಗವರ್ನ್‌ಮೆಂಟಿನವರು ಮೊದಲಾ ಒಂದು ಕೋಟಿ ರೂಪಾಯಿ ಸಾಲಬೇಕೆಂದು ಜಾಹೀರಾತು ಹಾಕುವರು ಅದನ್ನು ತಿಳಿದು ಕಲ್ಕತ್ತೆ, ಬೊಂಬಾಯಿ, ಮದರಾಸ್, ಮೊದಲಾದ ಪಟ್ಟಣಗಳಲ್ಲಿರುವ ಹಣಗಾರರೂ ವರ್ತಕರೂ—"ಒಂದು ಲಕ್ಷ ಕೊಡುತ್ತೇನೆ", "೧೦ ಲಕ್ಷ ಕೊಡುತ್ತೇನೆ" ಎಂಬದಾಗಿ ಗವರ್ನ್‌ಮೆಂಟಿಗೆ ಅರ್ಜಿ ಬರೆದುಕೊಳ್ಳುವರು. ಇದಲ್ಲದೆ ಇನ್ನೊಂದು ರೀತಿಯಲ್ಲಿ ಹಿಂದುಸ್ಥಾನದ ಪ್ರಜೆಗಳು ಸರ್ಕಾರಕ್ಕೆ ಸಾಲಕೊಡುವುದುಂಟು. ಇಂಡಿಯಾ ಗವರ್ನ್‌ಮೆಂಟಿನವರು ಎಲ್ಲಾ ಕಡೆಗಳಲ್ಲಿ ಸೇವಿಂಗ್ಸ್ ಬ್ಯಾಂಕುಗಳನ್ನು ಇಟ್ಟಿದ್ದಾರೆ ಈ ಬ್ಯಾಂಕುಗಳಲ್ಲಿ ಅತ್ಯಂತ ಬಡವರೂ ಕೂಡ ಸ್ವಲ್ಪ ಸ್ವಲ್ಪವಾಗಿ ಹಣಹಾಕಬಹುದು. ಈ ಹಣಕ್ಕೆ ಸರ್ಕಾರದವರು ಶೇಕಡಾ ವರುಷಕ್ಕೆ ೩—|| ರೂಪಾಯಿನಂತೆ ಬಡ್ಡಿ ಕೊಡುವರು. ಈ ರೀತಿಯಾಗಿ ಪ್ರಜೆಗಳು ಹಾಕಿರತಕ್ಕ ಹಣವು ಸೇವಿಂಗ್ಸ್ ಬ್ಯಾಂಕುಗಳಲ್ಲಿ ಕೆಲವು ಕೋಟಿ ರೂಪಾಯಿಗಳಾಗುತ್ತವೆ. ಈ ಹಣಕ್ಕೆ ಸರ್ಕಾರದವರು ಬಡ್ಡಿಕೊಡಬೇಕಾಗಿರೋಣವದರಿಂದ ಅವರು ಆ ಹಣವನ್ನು ಸರಕಾರದ ಪ್ರಾಮಿಸರಿ ನೋಟ್ (ಪ್ರಾಮಿಸರಿ ನೋಟು) ಇಲಾಖೆಗೆ ಸಾಲಕೊಡುವರು. ಆ ಇಲಾಖೆಯವರು ನೀರಾವರಿ ಮೊದಲಾದ ಕಾಮಗಾರಿಗಳನ್ನು ಮಾಡಿ, ಹೆಚ್ಚು ಲಾಭವನ್ನು ಉತ್ಪತ್ತಿ ಮಾಡುತ್ತಾರೆ

ರೈಲ್ವೆ ಇಲಾಖೆಗೆ ಪ್ರತಿ ವರುಷವೂ ಬೇಕಾಗುವ ೧೮ ಕೋಟಿಯ ೭೫|| ಲಕ್ಷ ರೂಪಾಯಿನ ಪೈಕಿ ಸುಮಾರು ೩|| ಕೋಟಿ ರೂಪಾಯಿ ಮಾತ್ರ ಹಿಂದುಸ್ಥಾನದಲ್ಲಿ ಸಾಲ ದೊರೆಯಬಹುದು, ಉಳಿದ ಹಣವನ್ನೆಲ್ಲಾ ಲಂಡನ್ ಪಟ್ಟಣದಲ್ಲಿ ಸಾಲಮಾಡಿ ತರಬೇಕೆಂತಲೂ ಮೇಲ್ಕಂಡ ರೈಲ್ವೆ ಕಮಿಟಿಯವರು ಸೂಚಿಸುತ್ತಾರೆ. ಹಿಂದುಸ್ಥಾನವನ್ನು ಸಂಪದ್ಯುಕ್ತವಾದದ್ದನ್ನಾಗಿ ಮಾಡುವುದಕ್ಕೆ ಪರದೇಶದಿಂದ ಹಣವನ್ನು ಸಾಲಮಾಡಿ ತರುವುದರಲ್ಲಿ ಈ ದೇಶಕ್ಕೆ ಹಿಡಿತವಾಗಿ ನಷ್ಟವಾಗಲಾರದು. ಹಾಗಿದ್ದರೂ, ಈ ಸಂಗತಿಯನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾಗಿದೆ. ಹಿಂದುಸ್ಥಾನದ ಪ್ರಜೆಗಳು ಮನಸ್ಸುಮಾಡುವ ಪಕ್ಷದಲ್ಲಿ ಆ ಸಾಲವು ಇಲ್ಲಿನ ಗುಪ್ತಧನವನ್ನು ಬಯಲಿಗೆ ತಂದು ದೇಶದ ಐಶ್ವರ್ಯವನ್ನು ಅಭಿವೃದ್ಧಿ ಮಾಡುವುದು. ಇದರೂ ಇಂಡಿಯಾ ಗವರ್ನ್‌ಮೆಂಟಿನವರು ಈ ರಾಷ್ಟ್ರವನ್ನು ಅಭಿವೃದ್ಧಿ ಮಾಡುವುದಕ್ಕೆ ಪರದೇಶದಿಂದ ಸಾಲ ತರಬೇಕಾಗಿದೆಯಲ್ಲಾ ಎಂದು ಚಿಂತಿಸಬೇಕಾಗಿದೆ. ಗವರ್ನ್‌ಮೆಂಟಿನವರಿಗೆ ಬೇಕಾಗುವಷ್ಟು ಸಾಲವನ್ನೂ ಇಲ್ಲಿನ ಪ್ರಜೆಗಳೇ ಒದಗಿಸಿಕೊಡುತ್ತಾ ಬಂದ ಪಕ್ಷದಲ್ಲಿ ಅವರು ಹಾಕಿದ ಅಸಲೂ ಅದರ ಬಡ್ಡಿಯೂ ಅವರ ಆಸ್ತಿಯಾಗಿಯೇ ಇರುತ್ತವೆ. ಹಿಂದುಸ್ಥಾನದಲ್ಲಿ ಅನೇಕ ಕೋಟಿ ರೂಪಾಯಿಗಳ ಚಿನ್ನ ಬೆಳ್ಳಿ ಒಡವೆ ವಸ್ತುಗಳು ನಿಷ್ಪ್ರಯೋಜನವಾಗಿ ಬಿದ್ದಿರುತ್ತವೆ ಎಂತಲೂ, ಇದರಿಂದ ಗವರ್ನ್‌ಮೆಂಟಿಗೆ ಬೇಕಾಗುವಷ್ಟು ಹಣವನ್ನು ಸಾಲವಾಗಿ ಪಡೆದುಕೊಳ್ಳುವ ವಿಷಯದಲ್ಲಿ ಸರ್ಕಾರದವರು ಪ್ರಾಯಸಪಡಬೇಕೆಂತಲೂ ಲಂಡನ್ ಪಟ್ಟಣದ ಮುಖ್ಯಂಡ ವರ್ತಕನೊಬ್ಬನು ಇಂಡಿಯಾ ಗವರ್ನ್‌ಮೆಂಟಿನವರಿಗೆ ಸೂಚಿಸಿ ಹೇಳುತ್ತಾನೆ ಇಂಡಿಯಾ ಗವರ್ನ್‌ಮೆಂಟಿನವರಿಗೆ ಈ ರಾಷ್ಟ್ರದಲ್ಲಿ ಸಾಲ ಹುಟ್ಟದೆ ಇರುವುದಕ್ಕೆ ಕಾರಣಗಳೇನಾಗಿರಬಹುದೆಂದರೆ— ೧) ಯೂರೋಪಿನ ಹಣಗಾರರು ಅಪೇಕ್ಷಿಸುವುದಕ್ಕಿಂತ ಹಿಂದುಸ್ಥಾನದ ಹಣಗಾರರು ತಮ್ಮ ಹಣಕ್ಕೆ ಹೆಚ್ಚು ಬಡ್ಡಿ ಬರಬೇಕೆನ್ನುವರು. ಇಂಡಿಯಾ ಗವರ್ನ್‌ಮೆಂಟಿನವರು ಲಂಡನ್ ಪಟ್ಟಣದ ಸಾಹುಕಾರರಿಂದ ಶೇಕಡಾ ವರುಷಕ್ಕೆ ೩|, ೩, ೩|| ಅಥವಾ ೪ ರೂಪಾಯಿನ ಬಡ್ಡಿಗೆ ಸಾಲ ತರಬಲ್ಲರು. ಹಿಂದುಸ್ಥಾನದ ಹಣಗಾರರು ತಮ್ಮ ಹಣಕ್ಕೆ ಶೇಕಡಾ ವರುಷಕ್ಕೆ ೧೨ ರೂಪಾಯಿ ಅಥವಾ ಅದಕ್ಕಿಂತಲೂ ಹೆಚ್ಚು ಬಡ್ಡಿ ಬರಬೇಕೆನ್ನುತ್ತಾರೆ. ಇಲ್ಲಿರುವ ಬ್ಯಾಂಕುಗಳಲ್ಲಿ ಹಣ ಹಾಕಿರತಕ್ಕವರು ಶೇಕಡಾ ೫ ರೂಪಾಯಿ ಬಡ್ಡಿಯನ್ನು ನಿರೀಕ್ಷಿಸುವರು. (೨) ಇಲ್ಲಿನ ಜನರಲ್ಲಿ ನಂಬಿಕೆಯೂ ಕಡಮೆಯಾಗಿದೆ. ಕೆಲವರು ಹಣವನ್ನು ಮನೆಯಲ್ಲಿ ಕೂಡಿಸಿಟ್ಟಿರುವುದೇ ಲೇಸೆಂದು ತಿಳಿದಿರುತ್ತಾರೆ. ಹೀಗೆ ಮಾಡುವುದು ಬುದ್ಧಿಹೀನರ ಕೆಲಸವೇ ಸರಿ. ಕೂಡಿಸಿಟ್ಟದ್ದು ಕಳ್ಳರ ಇಲ್ಲವೇ ಬೆಂಕಿಯ ಪಾಲಾಗುವುದು. ಗವರ್ನ್‌ಮೆಂಟಿಗೆ ಸಾಲಕೊಟ್ಟ ಹಣಕ್ಕೆ ಎಂದಿಗೂ ಚ್ಯುತಿಯುಂಟಾಗುವುದಿಲ್ಲ. (೩) ಹಿಂದುಸ್ಥಾನದಲ್ಲಿ ಜನರು ಬಹಳ ಹಣವನ್ನು ಚಿನ್ನ ಬೆಳ್ಳಿ ಒಡವೆಗಳಿಗೆ ಹಾಕುತ್ತಾರೆ. ಇದರಿಂದ ಒಂದು ಕಾಸೂ ಪ್ರಯೋಜನವಾಗುವುದಿಲ್ಲ. ಒಡವೆಯು ಬೆಳೆಯಬಾರದು, ಬಡ್ಡಿಕೊಡಬಾರದು. ಇಂಗ್ಲಿಷರಲ್ಲಿ "ಹಣವು ಹಣವನ್ನು ವೃದ್ಧಿಮಾಡುತ್ತದೆ" ಎಂಬ ಗಾದೆಯುಂಟು ಹಾಗೆಂದರೆ, ಪ್ರತಿ ಒಬ್ಬನೂ ತನ್ನ ಹಣವನ್ನು ವೃದ್ಧಿಯಾಗುವಂತೆ ಉಪಯೋಗಿಸಬೇಕೆಂದು ಅಭಿಪ್ರಾಯ ಇದರಂತೆಯೇ ಕಾಳನ್ನು ಭೂಮಿಗೆ ಹಾಕಿದರೆ ಹತ್ತರಷ್ಟು ಕಾಳು ಬೆಳೆಯುವುದು ಎಲ್ಲರಿಗೂ ತಿಳಿದೇ ಇದೆ.

ಈ ವಿಚಾರವನ್ನು ಕುರಿತು ಬರೆಯೋಣದರಲ್ಲಿ ನಮ್ಮ ಉದ್ದೇಶವೇನೆಂದರೆ, ಹಿಂದುಸ್ಥಾನದಲ್ಲಿ ಕಸಬುಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಇನ್ನೂ ಅಪಾರವಾದ ದ್ರವ್ಯ ಬೇಕಾಗಿರೋಣದರಿಂದ ಪ್ರಜೆಗಳು ತಮ್ಮ ಹಣವನ್ನು ಕೂಡಿಸಿಡದೆ, ದೇಶೋನ್ನತಿಗಾಗಿ ವಿನಿಯೋಗಿಸುತ್ತಾ ಬರಲಿ. ಸ್ವಲ್ಪ ಹಣವಿರತಕ್ಕವರು ಸೇವಿಂಗ್ಸ್ ಬ್ಯಾಂಕಿನಲ್ಲಿ ಇಡಲಿ ಇದರಲ್ಲಿ ತಮಗೂ ತಮ್ಮ ದೇಶಕ್ಕೂ ಪ್ರಯೋಜನವಿದೆ. ಹಣಗಾರರು ತಮ್ಮ ಹಣವನ್ನು ಗವರ್ನ್‌ಮೆಂಟಿಗೆ ಸಾಲಕೊಟ್ಟು ಪತ್ರಗಳನ್ನು ಕೊಂಡುಕೊಳ್ಳಲಿ. ಹ್ಯಾಗೂ ಇಂಡಿಯಾ ಗವರ್ನ್‌ಮೆಂಟಿನವರು ಈ ದೇಶವನ್ನು ಅಭಿವೃದ್ಧಿಗೆ ತರುವುದಕ್ಕೆ ಅನ್ಯದೇಶದ ಹಣಗಾರರಿಂದ ಸಾಲತರದಂತಾದರೆ ಎಷ್ಟೋ ಶ್ರೇಯಸ್ಕರವಾದೀತು.

ಒಳದೇಶದ ವೃತ್ತಾಂತಗಳು

ಮುಂದಿನ ವರುಷ ಜನವರಿ ತಿಂಗಳ ಮೊದಲನೇ ವಾರದಿಂದ ಬೆಂಗಳೂರಿನಲ್ಲಿ ಸರ್ಕಾರಿ ಪೋಲೀಸ್ ಸ್ಕೂಲು ಪ್ರಾರಂಭವಾಗುತ್ತದೆ.

ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮುಂದಿನ ಗುರುವಾರ ಮಧ್ಯಾಹ್ನ ೩ ಗಂಟೆಗೆ ಮೈಸೂರು ನ್ಯಾಯವಿಧಾಯಕ ಸಭೆಯು ನಡಿಯುವುದಾಗಿದೆ

ಶ್ರೀಮನ್ ಮಹಾರಾಜರವರು ನಾಳೆ ಶನಿವಾರ ಸಾಯಂಕಾಲ ಸಿಂಹಾಸನವನ್ನು ಹತ್ತುವಾಗ್ಗೆ ಪಟ್ಟಣವೆಲ್ಲಾ ವಿದ್ಯುಚ್ಛಕ್ತಿಯ ದೀಪಗಳಿಂದ ಬೆಳಗುವಂತೆ ಪ್ರಾರಂಭಿಸುವರು

ಈ ಸಲ ಪ್ರಜಾಪ್ರತಿನಿಧಿ ಸಭೆಯು ಅಕ್ಟೋಬರ್ ತಾ ೮ ನೇ ಗುರುವಾರ ಮಧ್ಯಾಹ್ನ ರಾಜಧಾನಿಯಲ್ಲಿ ಪ್ರಾರಂಭವಾಗುವುದು. ಆ ದಿನ ರಾತ್ರಿಯೇ ಯೂರೋಪಿಯನ್ ಸರದಾರರಿಗೆ ಔತಣ ಜರುಗುವುದಾಗಿದೆ.

ಹಿಂದುಸ್ಥಾನದ ಪರಸ್ಪರ ಸಹಾಯಕ ಸಂಘಗಳ ರಿಜಿಸ್ಟ್ರಾರುಗಳು ಸಿಮ್ಲಾ ಪಟ್ಟಣದಲ್ಲಿ ಸೇರಿ ನಡಿಸುವ ವಾರ್ಷಿಕ ಸಭೆಗೆ ಮೈಸೂರು ಸರ್ಕಾರದವರು ಮು|| ಎಂ. ರಾಮರಾಯರನ್ನು ಮೆಂಬರಾಗಿ ಕಳುಹಿಸಿರುತ್ತಾರೆ.

ಒಕ್ಕಲಿಗರ ಸಂಘದ ಮೂರನೇ ಸಮಾಜವನ್ನು ಮಾರ್ಚಿ ಏಪ್ರಿಲ್ ತಿಂಗಳಲ್ಲಿ ನಡಿಸಬೇಕೆಂತಲೂ, ಬೆಂಗಳೂರಿನಲ್ಲಿ ಆದಷ್ಟು ಬೇಗನೆ ಒಂದು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಬೇಕೆಂತಲೂ ತೀರ್ಮಾನವಾಗಿದೆ

ಮೈಸೂರು ಕಸಬುಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವು ತಾ ೩೦ ನೇ ಬುಧವಾರ ರಾಜಧಾನಿಯಲ್ಲಿ ಪ್ರಾರಂಭವಾಗುವುದು. ಅಕ್ಟೋಬರ್ ತಾ. ೬ ನೇ ಮಂಗಳವಾರ ಬೆಳಿಗ್ಗೆ ಪ್ರದರ್ಶನ ಶಾಲೆಯ ಬಳಿ ಗೋಶಾಲೆಗಳ ಪ್ರದರ್ಶನ ನಡಿಯುತ್ತದೆ.

ಒಳ್ಳೆ ಜಾತ್ರೆ ದಾರರು ಬೇಡುವುದು—ಈ ಬೌರಿಂಗಪೇಟೆ ತಾಲ್ಲೂಕು ರಾಮಸಮುದ್ರದಲ್ಲಿ ಈಗ ೧೫ ದಿನಗಳಿಗೆ ಮುಂಚೆ ಕ್ಷಾಮಸಮುದ್ರವಾಗಿ ಇತ್ತು ಅಂದರೆ ಮನುಷ್ಯರಿಗೆ, ದನಗಳಿಗೆ ತಿಂಡಿ ದನಗಳಿಗೆ ಹುಲ್ಲು ಇಲ್ಲ ಈಗ ದೇವರ ದಯೆಯಿಂದ ಸ್ವಲ್ಪ ಮಳೆಯಾಗಿ ಕೆರೆಗಳು ತುಂಬಿದವು.

ಸಜಾ ಶಿಕ್ಷೆಯನ್ನು ಅನುಭವಿಸಬೇಕಾದ ಪ್ರತಿ ಒಬ್ಬ ಖೈದಿಯೂ ದೇಹಾರೋಗ್ಯವು ಚೆನ್ನಾಗಿರುವ ಪಕ್ಷಕ್ಕೆ ಬಂದಿಖಾನೆಗೆ ದಾಖಲ್ ಮಾಡಿಕೊಳ್ಳುವುದಕ್ಕಿಂತ ಮುಂಚೆ ಪ್ಲೇಗ್ ಟೀಕೆಯನ್ನು ಹಾಕಿಸಬೇಕೆಂತಲೂ, ತರುವಾಯ ಪ್ರತಿ ವರುಷವೂ ಒಂದೊಂದು ಸಲ ಹಾಕಬೇಕೆಂತಲೂ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ.

ಈ ಸಲ ನವರಾತ್ರಿ ಉತ್ಸವಕ್ಕಾಗಿ ಸುಮಾರು ೭೦ ಮಂದಿ ಯೂರೋಪಿಯನ್ ಸರದಾರರೂ ದೊರೆಸಾನಿಗಳೂ ಅಕ್ಟೋಬರ್ ತಾ ೩ ನೇ ಶನಿವಾರ ರಾಜಧಾನಿಗೆ ಬಂದು, ೮ ದಿನಗಳ ವರೆಗೆ ಶ್ರೀಮನ್ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ, ತಾ. ೧೧ ನೇ ಶನಿವಾರ ವಾಪಸು ಪ್ರಯಾಣಮಾಡುವವರಾಗಿದ್ದಾರೆ.

ತುಮಕೂರು ತಾಲ್ಲೂಕು ಹೆಬ್ಬೂರಿನಲ್ಲಿರುವ ಶ್ರೀಕೋದಂಡ ಆಶ್ರಮ ಮಠ (ಕೋದಂಡ ರಾಮಸ್ವಾಮಿ ಮಠ) ದ ಪೀಠಕ್ಕೆ ದೊಡ್ಡಬಳ್ಳಾಪುರದ ತಾಲ್ಲೂಕು ಅರುಡಿಯ ವೇ|| ನಾರಾಯಣಶಾಸ್ತ್ರಿಗಳನ್ನು ಸ್ವಾಮಿಗಳನ್ನಾಗಿ ಅಭಿಷೇಕ ಮಾಡಬಹುದೆಂದು ಸರ್ಕಾರದವರು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ.

ನಾಗಮಂಗಲದ ತಾಲ್ಲೂಕು ಬೆಳ್ಳೂರಿನಲ್ಲಿ ಜೈನರು ತಮ್ಮ ದೇವರನ್ನು ಹಬ್ಬ ಹರಿದಿನಗಳಲ್ಲಿ ಉತ್ಸವಮಾಡಿಕೊಂಡು ಹೋಗದಂತೆ ಅಡ್ಡಿಮಾಡಬೇಕೆಂದು ಅಲ್ಲಿನ ಬ್ರಾಹ್ಮಣ ಪ್ರಜೆಗಳು ಗವರ್ನ್‌ಮೆಂಟಿಗೆ ಅರ್ಜಿ ಬರೆದುಕೊಂಡದ್ದಕ್ಕೆ ಗವರ್ನ್‌ಮೆಂಟಿನವರು ಹಾಗೆ ಅಡ್ಡಿಮಾಡಲಾಗುವುದಿಲ್ಲವೆಂದು ಹುಕುಂ ಕೊಟ್ಟಿದ್ದಾರೆ.

ಜುಲ್ಮಾನೆಯ ಹಣವು ವಸೂಲಾಗುವುದಿಲ್ಲವೆಂದು ಗೊತ್ತಾದ ಪಕ್ಷದಲ್ಲಿ ಸೆಷನ್ಸ್ ಜಡ್ಜರಾಗಲಿ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಲಿ, ಇವರಿಂದ ಅಧಿಕಾರ ಹೊಂದಿದ ಇತರ ಮ್ಯಾಜಿಸ್ಟ್ರೇಟರಾಗಲಿ ಅಂಥಾ ಜುಲ್ಮಾನೆಯ ಹಣವನ್ನು ಸರ್ಕಾರಿ ಲೆಕ್ಕದಿಂದ ವಜಾಮಾಡಿಬಿಡಬಹುದೆಂದು ಚೀಫ್ ಕೋರ್ಟಿನವರು ಹುಕುಂ ಕೊಟ್ಟಿದ್ದಾರೆ.

ಮೈಸೂರು ಗೆಜೆಟ್ ಸಂಗ್ರಹ.

ನಗರದ ಆಕ್ಟಿಂಗ್ ಅಮಲ್ದಾರ್ ಮೆ|| ಎಂ. ರಾಮಚಂದ್ರರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತೊಂಬತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅವರ ಗೈರುಹಾಜರಿಯಲ್ಲಿ ಶಿರಸ್ತೇದಾರರು ತಾಲ್ಲೂಕ್ ಜಾಸ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಶ್ರೀರಂಗಪಟ್ಟಣದ ಅಮಲ್ದಾರ್ ಮೆ|| ಷೇಕ್ ಅಬ್ದುಲ್ಲಾ ಯವರಿಗೆ ಸೆಪ್ಟಂಬರ್ ತಾ ೩ ರಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮತ್ತೊಂದು ಹುಕುಂ ಕೊಡಲ್ಪಡುವ ತನಕ ನಾಗಮಂಗಲದ ತಾಲ್ಲೂಕ್ ಶಿರಸ್ತೇದಾರ್ ಎಚ್. ಶ್ರೀನಿವಾಸೈಯಂಗಾರ್ರು ಶ್ರೀರಂಗಪಟ್ಟಣದ ಅಮಲ್ದಾರ್ ಮತ್ತು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಚಿತ್ರದುರ್ಗದ ಅಮಲ್ದಾರ್ ಸಿ. ಸುಬ್ಬೈಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿತ್ರದುರ್ಗದ ಡಿಸ್ಟ್ರಿಕ್ಟ್ ಆಫೀಸ್ ಶಿರಸ್ತೇದಾರ್ ಎಚ್. ಶ್ರೀನಿವಾಸೈಯಂಗಾರ್ರು ಚಿತ್ರದುರ್ಗದ ಅಮಲ್ದಾರ್ ಮತ್ತು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಮೈಸೂರು ಮಹಾರಾಣಿ ಕಾಲೇಜ್ ಲೇಡಿ ಸೂಪರಿನ್‌ಟೆಂಡೆಂಟ್ ಮಿಸ್ ಜೆ. ಎಲ್. ಪಲೆತಾರ್ಪ್ ಯವರಿಗೆ ಕೊಟ್ಟಿರುವ ಪ್ರಿವಿಲೆಜ್ ಮತ್ತು ಕಾಯಿಲೆ ರಜಗಳನ್ನು ಡಿಸೆಂಬರ್ ತಾ. ೩೧ ವರೆಗೆ ಜಾಸ್ತಿ ಮಾಡಲಾಗಿದೆ.

ಅದುವರೆಗೆ ಸೌಭಾಗ್ಯವತಿ ಕೆ. ಡಿ ರುಕ್ಮಿಣಿಯಮ್ಮನವರೇ ಲೇಡಿ ಸೂಪರಿನ್‌ಟೆಂಡೆಂಟರಾಗಿ ಬದಲಿ ನೋಡತಕ್ಕದ್ದು.

ತುಮಕೂರು ಡಿಸ್ಟ್ರಿಕ್ಟ್ ಪ್ರೈ. ಅ|| ಕಮಿಷನರ್ ಮೆ|| ವಿ. ಶ್ರೀನಿವಾಸೈಯಂಗಾರ್ರಿಗೆ ಆಗಸ್ಟ್ ತಾ ೨೮ ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಮೈಸೂರು ಸರ್ಕಾರದವರು ಮೇಜರ್ ಎಚ್. ಇ. ಡ್ರೇಕ್ ಬ್ರಾಕ್‌ಮನ್ ಯವರನ್ನು ಜೂನ್ ತಾ. ೧೮ ಲಾಗಾಯಿತು ಸ್ಪೆಷಲ್ ಡ್ಯೂಟಿ ಮೆಡಿಕಲ್ ಆಫೀಸರಾಗಿ ನೇಮಕಮಾಡಿರುತ್ತಾರೆ.

ಮುಂದೆ ಹೇಳುವ ಫಾರೆಸ್ಟ್ ಆಫೀಸರುಗಳ ಬಡ್ತಿಯನ್ನು ಜೂಲೈ ೧ ರಿಂದ ಸ್ಯಾಂಕ್ಷನ್ ಮಾಡಲಾಗಿದೆ:—

ಮೆ|| ಎಸ್. ಎ. ಬಾಪೂರಾಯರು ಪೆನ್ಷನ್ ಮೇಲೆ ಕೆಲಸ ಬಿಟ್ಟಿದ್ದರಿಂದ ಮೆ|| ಎಂ. ಬಿ ರಾಮರಾಯರು ನಾರ್ಥರ್ನ್ ಡಿಸ್ಟ್ರಿಕ್ಟ್ ಕನ್ಸರ್ವೇಟರಾಗಿಯೂ, ಮೆ|| ಎಚ್ ಶ್ರೀನಿವಾಸರಾಯರು ೧ ನೇ ಕ್ಲಾಸ್ ಅ|| ಕನ್ಸರ್ವೇಟರಾಗಿಯೂ ಮೆ|| ಎಚ್. ರಾಮೈಯನವರು ೩ ನೇ ಕ್ಲಾಸ್ ಅ|| ಕನ್ಸರ್ವೇಟರಾಗಿಯೂ ಮೆ|| ಎಚ್. ರಾಮೈಯನವರು ೩ನೇ ಕ್ಲಾಸ್ ಅ|| ಕನ್ಸರ್ವೇಟರಾಗಿಯೂ, ಮೆ|| ಕೆ. ಮುತ್ತೈಯನವರು ೩ನೇ ಕ್ಲಾಸ್ ಅ|| ಕನ್ಸರ್ವೇಟರಾಗಿಯೂ ಬಡ್ತಿ ಪಡೆಯಲ್ಪಟ್ಟಿದ್ದಾರೆ.

ಮೆ|| ವಿ. ಸುಬ್ರಹ್ಮಣ್ಯ ಅಯ್ಯರವರನ್ನು ಮೈಸೂರಿನ ಹೊಸ ರಿಕ್ರೂಟ್‌ಮೆಂಟ್ ಮತ್ತು ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿಯಾಗಿ ನೇಮಿಸಲಾಯಿತು. ಇವರು ತಾ ೧೭ ರಲ್ಲಿ ಆ ಕೆಲಸದ ಛಾರ್ಜನ್ನು ವಹಿಸಿಕೊಂಡರು.

ಮೈಸೂರು ಡಿಪುಟಿ ಅ|| ಇನ್ಸ್‌ಪೆಕ್ಟರ್ ಮೆ|| ಬಿ ಸಿ. ಶ್ರೀನಿವಾಸೈಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು ಇನ್‌ಫೆಂಟ್ರಿ ೩ ನೇ ರೆಜಿಮೆಂಟ್ ಕಮಾಂಡ್ ರ್ಯಾಂಕಿನಲ್ಲಿ ಸುಬೇದಾರ್ ಮೇಜರ್ [illegible]ರನ್ನು ಕಮ್ಯಾಂಡೆಂಟ್ ಅಧಿಕಾರಕ್ಕೆ ಸೆಪ್ಟಂಬರ್ ತಾ. ೩೧ ಲಾಗಾಯಿತು ಬಡ್ತಿಮಾಡಲಾಗಿದೆ.

ದಸರಾಮಹೋತ್ಸವ.

ಸನ್ ೧೯೦೮ನೇ ಸೆಪ್ಟಂಬರ್ (ಕೀಲಕನಾಮ ಸಂವತ್ಸರದ ಆಶ್ವಯುಜ ಶುದ್ಧ)

೨೬ ಶನಿವಾರ—ಪ್ರಾತಃಕಾಲ ೧೧||| ಗಂಟೆಗೆ ಧನುರ್ಲಗ್ನದಲ್ಲಿ ಸಿಂಹಾಸನಾರೋಹಣ, ನಜರ್; ಸಾಯಂಕಾಲ ೬ ಗಂಟೆಗೆ ದರ್ಬಾರ್, ನಜರ್.

೨೭ ಭಾನುವಾರ—ಪ್ರಾತಃಕಾಲ ೮ ಗಂಟೆಗೆ ಆನೆ ಕುದುರೆ ಕೆರೆ ಬಳಿಗೆ ಬಿಜಮಾಡುವುದು ಸಾಯಂಕಾಲ ೬ ಗಂಟೆಗೆ ದರ್ಬಾರ್.

ತಾ|| ೨೮, ೨೯, ೩೦, ಅಕ್ಟೋಬರ್ ೧, ೨ ರಲ್ಲಿ ತಾ|| ೨೭ನೆ ಭಾನುವಾರದಂತೆ ನಡೆಯುವುದು.

೩ ಶನಿವಾರ—ಪ್ರಾತಃಕಾಲ ೮ ಗಂಟೆಗೆ ಆನೆ ಕುದುರೆ ಕೆರೆ ಬಳಿಗೆ ಬಿಜಮಾಡುವುದು. ಸಾಯಂಕಾಲ ೫|| ಗಂಟೆಗೆ ಇಂಗ್ಲಿಷ್ ದರ್ಬಾರ್.

೪ ಭಾನುವಾರ—ಪ್ರಾತಃಕಾಲ ೬|| ಗಂಟೆಗೆ ಶುಕ್ರಕಾಲ ಹೋರೆಯಲ್ಲಿ ಆನೆ ಕುದುರೆ ಮತ್ತು ಆಯುಧ ಕೆರೆ ಬಳಿಗೆ ಬಿಜಮಾಡುವದು. ಅನಂತರ ಆಯುಧ ಗಜಾಶ್ವಾದಿಗಳ ಪೂಜೆ, ಸಾಯಂಕಾಲ ೬ ಗಂಟೆಗೆ ದರ್ಬಾರ್.

೫ ಸೋಮವಾರ—ಪ್ರಾತಃಕಾಲ ೮ ಗಂಟೆಗೆ ತುಲಾಲಗ್ನದಲ್ಲಿ ಆಯುಧಗಜಾಶ್ವ ಬನ್ನೀಮಂಟಪಕ್ಕೆ ಬಿಜಮಾಡುವುದು. ಅನಂತರ ಜಟ್ಟೀ ಕಾಳಗ; ಸಾಯಂಕಾಲ ೪ ಗಂಟೆಗೆ ಜಂಬೂಸವಾರೀ, ಅನಂತರ ದರ್ಬಾರ್.

೬ ಮಂಗಳವಾರ—ಸಾಯಂಕಾಲ ೬|| ಗಂಟೆಗೆ ಜಗನ್ಮೋಹನ ಮಹಲಿನಲ್ಲಿ ದರ್ಬಾರ್, ನಜರ್.

೭ ಬುಧವಾರ—ಸಾಯಂಕಾಲ ೬|| ಗಂಟೆಗೆ ಜಗನ್ಮೋಹನ ಮಹಲ್‌ನಲ್ಲಿ ದರ್ಬಾರ್, ಮಿಲಿಟರಿಯವರಿಗೂ ಪ್ರಜಾಪ್ರತಿನಿಧಿಗಳಿಗೂ ನಜರ್.

ಮೈಸೂರು ಸರ್ಕಾರಿ ಹುಕುಮುಗಳು.

ರೆವಿನ್ಯೂಕಮಿಷನರವರೂ ಮೊಹತರ್ಫಾ ಕಂದಾಯಗಳೂ.

ಅರಳೂರು ಒಸಪ್ಪನೆಂಬಾತನು ಅಪ್ಪಣೆಯಿಲ್ಲದೆ ಹದಿನೆಂಟು ಮೂಟೆಗಳ ಅಡಿಕೆಯನ್ನು ದೊಡ್ಡ ಬಳ್ಳಾಪುರಕ್ಕೆ ರಫ್ತು ಮಾಡಿದನೆಂದು ಆತನಿಂದ ೭೨ ಚಿಲ್ಲರೆ ರೂಪಾಯಿ ಜುಲ್ಮಾನೆ ತಹಶೀಲು ವಸೂಲ್ಮಾಡಿದರು. ರೆವಿನ್ಯೂ ಕಮಿಷನರವರು ಆ ಜುಲ್ಮಾನೆಯನ್ನು ವಜಾಮಾಡಿ, ವಾಪಸು ಕೊಡಿಸಬೇಕೆಂದು ಹುಕುಂ ಕೊಟ್ಟರು. ಆದರೆ ಕಂಟ್ರೋಲರವರು ರೆವಿನ್ಯೂ ಕಮಿಷನರವರಿಗೆ ಜನರಲ್ ಕಂದಾಯದ ಮೇಲೆ ಅಧಿಕಾರವಿರುವುದೇ ಶಿವಾಯಿ ಮೊಹತರ್ಫಾ ಕಂದಾಯಗಳನ್ನು ರಿಮಿಷನ್ ಮಾಡುವುದಕ್ಕಾಗಲಿ ವಾಪಸು ಕೊಡಿಸುವುದಕ್ಕಾಗಲಿ ಅಧಿಕಾರವಿಲ್ಲವೆಂದು ಗವರ್ನಮೆಂಟಿನವರಿಗೆ ತಿಳಿಸಿದರು. ಅದರ ಮೇಲೆ ಗವರ್ನಮೆಂಟಿನವರು ರೆವಿನ್ಯೂ ಕಮಿಷನರವರಿಗೆ ಮೊಹತರ್ಫಾ, ಸಾಯರು, ಉಪ್ಪಿನ ಮೋಳೆಗಳ ವಿಚಾರವಾದ ರೂಲನ್ನು ಚಲಾಯಿಸುವಂತೆ ೧೯೦೩ನೇ ಮಾರ್ಚ್ ತಾ. ೨೭ ರಲ್ಲಿ ಅಧಿಕಾರ ವಹಿಸಿರುತ್ತಾರೆಂತಲೂ, ಅವರು ಆ ರೀತಿ ಈ ಬಾಬುಗಳ ಕಂದಾಯವನ್ನು ವಾಪಸು ಮಾಡಿಸುವುದಕ್ಕೂ ರಿಮಿಷನ್ ಮಾಡುವುದಕ್ಕೂ ಹುಕುಂ ಕೊಡತಕ್ಕದ್ದಾಗಿದೆ ಎಂತಲೂ ತೀರ್ಮಾನ ಮಾಡಿರುತ್ತಾರೆ

ಶೇಂದಿ ಸರಾಬುಗಳ ಇಜಾರೆ.

ಕೆಲವು ಕಡೆಗಳಲ್ಲಿ ಶೇಂದಿ ಸರಾಬು ದುಕಾನುಗಳನ್ನು ಪ್ರತಿ ವರುಷವೂ ಒಂದೊಂದು ಸಾಲಿಗೆ ಸರ್ಕಾರದವರು ಹರಾಜು ಹಾಕುವುದು ಗವರ್ನಮೆಂಟಿಗೂ ಕಂಟ್ರಾಕ್ಟುದಾರರಿಗೂ ತುಂಬಾ ನಷ್ಟಕ್ಕೆ ಕಾರಣವಾಗುವುದೆಂತಲೂ, ಅದನ್ನು ತಪ್ಪಿಸಿ ಮೂರು ಅಥವಾ ಐದು ವರುಷಗಳಿಗೆ ಒಂದಾವರ್ತಿ ಹರಾಜು ಮಾಡಿಸಬೇಕೆಂತಲೂ ೧೯೦೭ನೇ ಇಸವಿಯ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಗವರ್ನಮೆಂಟಿನವರನ್ನು ಕೇಳಿಕೊಂಡರು. ಈ ವಿಷಯವನ್ನು ಸರ್ಕಾರದವರು ಎಕ್ಸೈಸ್ ಕಮಿಷನರವರಿಗೆ ತಿಳಿಯಪಡಿಸಿದರು ಅವರು ಸಹ ಅದೇ ಅಭಿಪ್ರಾಯವನ್ನು ಅನುಮೋದಿಸಿ, ಅದರಂತೆ ಬದಲಾವಣೆಮಾಡೋಣದರಲ್ಲಿ ಉಭಯತಾ ಅನುಕೂಲವುಂಟೆಂದು ಗವರ್ನಮೆಂಟಿಗೆ ರಿಪೋರ್ಟು ಮಾಡಿದರು. ಗವರ್ನಮೆಂಟಿನವರು ತೀರ್ಮಾನ ಮಾಡಿರುವುದೇನೆಂದರೆ.—

ಕೆಲವು ಸಂದರ್ಭಗಳಲ್ಲಿ ಮೂರು ವರುಷಗಳಿಗೊಂದಾವರ್ತಿ ಶೇಂದಿ ದುಕಾನುಗಳನ್ನು ಹರಾಜುಮಾಡುವಂತೆ ಎಕ್ಸೈಸ್ ಕಮಿಷನರವರಿಗೆ ಅವಕಾಶ ಕೊಡುವುದು ಉಚಿತವೆಂದು ಕಾಣುತ್ತದೆ. ಕೆಲವು ಕಡೆಗಳಲ್ಲಿ ಮರಗಳು ಇಲ್ಲದೆ ಕಂಟ್ರಾಕ್ಟುದಾರನು ದೂರ ಫಾಸಲೆಯಿಂದ ಶೇಂದಿಯನ್ನು ಸಾಗಿಸಿಕೊಂಡು ಒಂದು ವಿಕರಿ ಮಾಡಬೇಕಾಗಿ ಬರುವುದು; ಕೆಲವು ಕಡೆಗಳಲ್ಲಿ ಸೇಂದಿ ಇಳಿಸತಕ್ಕ ಈಡಿಗರು ಇಲ್ಲದೆ ಅದಕ್ಕಾಗಿ ಹೆಚ್ಚು ಖರ್ಚಿಟ್ಟು ದೂರ ಫಾಸಲೆಯಿಂದ ಅವರನ್ನು ಕರಸಿಕೊಳ್ಳಬೇಕಾಗುವುದು, ಇನ್ನು ಕೆಲವು ಕಡೆಗಳಲ್ಲಿ ಶೇಂದಿಯು ಆಗಾಗ್ಗೆ ಉತ್ಪತ್ತಿಯಾಗೋಣದರಿಂದ ಕಂಟ್ರಾಕ್ಟುದಾರನು ಕಮ್ಮಿಕ್ರಯಕ್ಕೆ ವಿಕರಮಾಡಿ ನಷ್ಟ ಹೊಂದಬೇಕಾಗುವುದು. ಇಂಥಾ ವಿಶೇಷ ಸಂದರ್ಭಗಳಿರುವಂಥಾ ಕಡೆಗಳಲ್ಲಿ ಎಕ್ಸೈಸ್ ಕಮಿಷನರವರು ಕಂಟ್ರಾಕ್ಟಿನ ಅವಧಿಯನ್ನು ಹೆಚ್ಚಿಸಬಹುದಾಗಿರುತ್ತದೆ. ಮತ್ತು ಕೆಲವು ಕಾಲವಾದನಂತರ ಈ ಹೊಸ ಏರ್ಪಾಡಿನ ವಿಷಯದಲ್ಲಿ ಅವರು ಒಂದು ರಿಪೋರ್ಟನ್ನು ಗವರ್ನಮೆಂಟಿಗೆ ಕಳುಹಿಸತಕ್ಕದ್ದಾಗಿದೆ.

ಸನ್ ೧೯೦೭ನೇ ಇಸವಿಯಲ್ಲಿ ನಡೆದ ಮೈಸೂರು ದಸರಾ ಕೈಗಾರಿಕೆ ಮತ್ತು ವ್ಯವಸಾಯದ ಪ್ರದರ್ಶನವು.

ಕಳೆದ ವರುಷ ರಾಜಧಾನಿಯಲ್ಲಿ ನವರಾತ್ರಿ ಉತ್ಸವಗಳ ಕಾಲದಲ್ಲಿ ನಡೆದ ಪ್ರದರ್ಶನದ ರಿಪೋರ್ಟನ್ನು ಪ್ರೆಸಿಡೆಂಟರು ಜುಲೈ ತಾ. ೨೩ ರಲ್ಲಿ ಗವರ್ನಮೆಂಟಿಗೆ ಕಳುಹಿಸಿ ಕೊಟ್ಟರು. ಅದನ್ನು ಪರಾಂಬರಿಸಿ ಗವರ್ನಮೆಂಟಿನವರು ಅಪ್ಪಣೆ ಕೊಡಿಸಿರುವುದೇನೆಂದರೆ—ಮೊದಲು ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವನ್ನು ಮಾತ್ರ ನಡಿಸಬೇಕೆಂದು ಏರ್ಪಾಡಾಗಿತ್ತು. ಆದರೆ ಆರೋಗ್ಯ ವಿಚಾರವನ್ನು ಪ್ರಜೆಗಳಿಗೆ ದೃಷ್ಟಾಂತಪೂರ್ವಕವಾಗಿ ತಿಳಿಯಪಡಿಸುವುದಕ್ಕೋಸ್ಕರ ಹೆಲ್ತ್ ಸೆಕ್ಷನ್ ಎಂಬ ಭಾಗವನ್ನು ಏರ್ಪಾಡುಮಾಡಲಾಯಿತು. ಇದಲ್ಲದೆ ಪ್ರತ್ಯೇಕವಾದ ಅಂದರೆ ಜೂಬಿಲಿ ಇನ್‌ಸ್ಟಿಟ್ಯೂಟ್ ಎಂಬ ಕಟ್ಟಡದಲ್ಲಿ ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಪ್ರದರ್ಶನವೂ ನಡಿಸಲ್ಪಟ್ಟಿತು. ಸಂಸ್ಥಾನದ ಕಸಬುಗಳ ವಿಚಾರವಾದ ಎಲ್ಲಾ ಇಲಾಖೆಗಳಿಂದಲೂ ವಸ್ತುಗಳು ಪ್ರದರ್ಶನಕ್ಕೆ ಕಳುಹಲ್ಪಟ್ಟಿದ್ದವು. ಗೋಕಾಯಿಗಳ ಪ್ರದರ್ಶನವೂ ನಡಿಸಲ್ಪಟ್ಟಿತು. ಒಂದು ಸಾವಿರ ರಾಸುಗಳ ವರೆಗೆ ಕಳುಹಲ್ಪಟ್ಟಿದ್ದವು. ವಿಶೇಷವಾಗಿ ಮೈಸೂರು ಡಿಸ್ಟ್ರಿಕ್ಟಿನ ರಾಸುಗಳೇ ಬಂದಿದ್ದರೂ ಬಹು ಉತ್ಕೃಷ್ಟಜಾತಿಯ ಗೋಕಾಯಿಗಳು ಪ್ರದರ್ಶನಮಾಡಲ್ಪಟ್ಟವು. ಪ್ರದರ್ಶನವನ್ನು ರಿಜರ್ವ್ ಪೋಲೀಸ್ ಲೈನ್ಸ್ ಎಂಬ ಕಟ್ಟಡದಲ್ಲಿ ನಡಿಸಲಾಯಿತು. ಶ್ರೀಮನ್ ಮಹಾರಾಜರವರೇ ಖುದ್ದಾಗಿ ದಯಮಾಡಿ ೧೯೦೭ನೇ ಇಸವಿ ಅಕ್ಟೋಬರ್ ತಾ. ೧೫ ರಲ್ಲಿ ಪ್ರದರ್ಶನವನ್ನು ಪ್ರಾರಂಭಮಾಡಿದರು. ಅದೇ ಅಕ್ಟೋಬರ್ ಆಖೈರ ವರೆಗೆ ಪ್ರದರ್ಶನಶಾಲೆಯನ್ನು ತೆರೆದಿಡಲ್ಪಟ್ಟಿತ್ತು. ಮೇಲ್ವಿಚಾರಣಾ ಕಮಿಟಿಯವರು ಎಲ್ಲಾ ಏರ್ಪಾಡುಗಳನ್ನೂ ನಡಿಸಲು ಸಾಕಾದಷ್ಟು ಅವಕಾಶವಿರಲಿಲ್ಲ. ಎರಡು ತಿಂಗಳೊಳಗಾಗಿ ಎಲ್ಲಾ ಕಾರ್ಯಗಳನ್ನೂ ಸಮಗ್ರವಾಗಿಯೂ ತೃಪ್ತಿಕರವಾಗಿಯೂ ಸ್ತುತ್ಯರ್ಹವಾಗಿಯೂ ಮಾಡಿ ಮುಗಿಸಿದರು. ಆಗ ಅವರಿಗೆ ಉಂಟಾದ ಅನುಭವದಿಂದ ಮುಂದೆ ಜರುಗುವ ಪ್ರದರ್ಶನಗಳು ಇನ್ನೂ ಚನ್ನಾಗಿ ನಡಿಯುವುದಕ್ಕೆ ಸರಾಗವಾಯಿತು. ಸರ್ಕಾರಿ ನೌಕರರಲ್ಲದವರನ್ನೂ ಈ ಪ್ರದರ್ಶನ ಕಾರ್ಯದಲ್ಲಿ ಸೇರಿಸಿಕೊಂಡು, ಅವರಲ್ಲಿ ಕುತೂಹಲವನ್ನುಂಟುಮಾಡಬೇಕೆಂಬ ಉದ್ದೇಶದಿಂದ ಮುಂದಿನ ವರುಷದ ಕಮಿಟಿಗೆ ಐದು ಮಂದಿಯನ್ನು ನೇಮಕಮಾಡಲಾಗಿದೆ. ಹೋದವರುಷ ೭,೧೭೧ ಜನರು ೧೨,೧೬೯ ಪ್ರದರ್ಶನವಸ್ತುಗಳನ್ನು ತಂದಿಟ್ಟರು ಅವುಗಳ ಒಟ್ಟು ಕ್ರಯ ೧ ಲಕ್ಷದ ೯೩ ಸಾವಿರ ರೂಪಾಯಿಗಳು. ಪ್ರದರ್ಶನಕಾಲದಲ್ಲಿ ಆ ಪೈಕಿ ೫,೦೮೯ ಚಿಲ್ಲರೆ ರೂಪಾಯಿನ ಮಾಲುಗಳು ವಿಕರಿ ಆದವು. ಈ ಪೈಕಿ ದೇಶೀಯ ವರ್ತಕರ ಪದಾರ್ಥಗಳೇ ೩,೮೪೩ ಚಿಲ್ಲರೆ ರೂಪಾಯಿನಷ್ಟು ವಿಕರಿ ಆಗಿರುತ್ತವೆ.

ಪ್ರದರ್ಶನ ವಸ್ತುಗಳನ್ನು ಬಂದು ನೋಡಿದ ಸುಮಾರು ೩೦,೦೦೦ ಜನರಲ್ಲಿ ಅರೆವಾಸಿ ಜನರು ಛಾರ್ಜು ಕೊಟ್ಟರು. ಛಾರ್ಜು ಕೊಡಲು ಚೈತನ್ಯವಿಲ್ಲದ ಪ್ರದರ್ಶಕರನ್ನೂ, ಕಸಬುದಾರರನ್ನೂ, ರೈತರನ್ನೂ ಮಾಫಿಯಾಗಿ ಬಿಡಲಾಯಿತು. ಪ್ರದರ್ಶನ ಶಾಲೆಯಲ್ಲಿ ದೇಶೀಯ ಕಸಬುಗಳ ವಿಚಾರವಾಗಿ ಹದಿನೇಳು ಉಪನ್ಯಾಸಗಳು ನಡಿಸಲ್ಪಟ್ಟವು. ನಾನಾತರದ ಯಂತ್ರಸಾಧನಗಳನ್ನು ಇಟ್ಟು, ಅವುಗಳ ಕೆಲಸವನ್ನು ದೃಷ್ಟಾಂತಮಾಡಲ್ಪಟ್ಟವು. ಈ ಪ್ರದರ್ಶನೋತ್ಸವವನ್ನು ನಡಿಸುವುದಕ್ಕೆ ಸರ್ಕಾರದಿಂದ ೨೫ ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಲಾಯಿತು. ಟಿಕಿಟ್ಟುಗಳಿಂದಲೂ ಅನುಪಯೋಗವಾದ ಪದಾರ್ಥಗಳ ವಿಕರಿಯಿಂದಲೂ ೨,೬೭೦ ಚಿಲ್ಲರೆ ರೂಪಾಯಿ ಉತ್ಪತ್ತಿಯಾಯಿತು. ಪ್ರದರ್ಶನಕ್ಕಾಗಿ ಖಾಸು ೨೬,೩೭೬ ಚಿಲ್ಲರೆ ರೂಪಾಯಿ ಖರ್ಚಾಗಿರುತ್ತದೆ. ಇದಲ್ಲದೆ ಬೇರೆಬೇರೆ ಇಲಾಖೆಗಳವರು ೪,೯೦೦ ಚಿಲ್ಲರೆ ರೂಪಾಯಿ ಖರ್ಚುಮಾಡಿದಾರೆ. ಈ ಜಮಾಖರ್ಚನ್ನೆಲ್ಲಾ ನೋಡಲಾಗಿ ಈ ಪ್ರದರ್ಶನಕ್ಕೆ ಒಟ್ಟು ೧೯,೫೬೭ ಚಿಲ್ಲರೆ ರೂಪಾಯಿ ಖರ್ಚಾಯಿತೆಂದು ಗೊತ್ತಾಗುವುದು.

ಪ್ರದರ್ಶನ ಮಾಡಲ್ಪಟ್ಟ ಪದಾರ್ಥಗಳ ಪೈಕಿ ಉತ್ಕೃಷ್ಟವಾಗಿ ಕಂಡುಬಂದವುಗಳಿಗೆ ಪರೀಕ್ಷಕರ ತೀರ್ಮಾನವಾದಂತೆ ಎಳು ಚಿನ್ನದ ಮೆಡಲುಗಳನ್ನೂ, ೨೫ ಬೆಳ್ಳಿಯ ಮೆಡಲುಗಳನ್ನೂ, ಐದು ಕಂಚಿನ ಮೆಡಲುಗಳನ್ನೂ, ೧,೫೬೭ ರೂಪಾಯಿನ ೩೫೭ ಬಹುಮಾನಗಳನ್ನೂ ಕೊಡಲಾದವು. ಈ ಪೈಕಿ ಮೈಸೂರು ಸಂಸ್ಥಾನದ ಪದಾರ್ಥಗಳಿಗೆ ೩ ಚಿನ್ನದ, ೧೫ ಬೆಳ್ಳಿಯ, ೭ ಕಂಚಿನ, ೩೦೩ ಹಣದ ಬಹುಮಾನಗಳು ಕೊಡಲ್ಪಟ್ಟಿವೆ.

ಸಾಮಾನುಗಳನ್ನು ಕೆಲವು ರೈಲ್ ಕಂಪನಿಗಳು ಪ್ರದರ್ಶನಕ್ಕೆ ಸುಲಭವಾದ ಚಾರ್ಜಿನಿಂದ ಸಾಗಿಸಿಕೊಟ್ಟು ಸಹಾಯಮಾಡಿರುತ್ತವೆ. ಮದರಾಸ್ ಸರ್ಕಾರದವರೂ ಇತರ ಗವರ್ನಮೆಂಟಿನವರೂ ವಸ್ತುಗಳನ್ನು ಕಳುಹಿಸಿಕೊಟ್ಟು ಪ್ರೋತ್ಸಾಹ ಪಡಿಸಿರುತ್ತಾರೆ ಇದಕ್ಕಾಗಿ ಅವರುಗಳನ್ನೆಲ್ಲಾ ಸರ್ಕಾರದವರು ವಂದಿಸುವರು. ಈ ಪ್ರದರ್ಶನವನ್ನು ನಡಿಸುವುದರಲ್ಲಿ ಪ್ರೆಸಿಡೆಂಟರೂ, ಮೆ|| ಪಲ್ಲೂಯವರೂ, ಮೆ|| ಭಾಭಾಯವರೂ, ಉಳಿದ ಮೆಂಬರುಗಳೂ ಎಲ್ಲಾ ತುಂಬಾ ಸಾಹಸಪಟ್ಟಿರುತ್ತಾರೆಂದು ಗವರ್ನಮೆಂಟಿನವರು ಕೃತಜ್ಞತಾಪೂರ್ವಕವಾಗಿ ವಂದಿಸುತ್ತಾರೆ. ಈ ಪ್ರದರ್ಶನದ ಕಮಿಟಿ ಸೆಕ್ರೆಟರಿ ಮೆ|| ಕೆ. ಸುಬ್ಬರಾಯರು ಬಹಳ ಕಷ್ಟಪಟ್ಟಿರೋಣದರಿಂದ ಅವರಿಗೆ ಸರ್ಕಾರದವರು ೫೦೦ ರೂಪಾಯಿ ಬಹುಮಾನ ಕೊಟ್ಟಿರುವರು ಬೇರೋಜುಗಾರರಾದ ಕಮಿಟಿ ಮೆಂಬರುಗಳು ತುಂಬಾ ಮುತುವರ್ಜಿಯಿಂದ ಪ್ರದರ್ಶನಕ್ಕೆ ಸಹಾಯಕರಾಗಿದ್ದದರಿಂದ ಗವರ್ನಮೆಂಟಿನವರು ಅವರನ್ನು ವಂದಿಸುತ್ತಾರೆ

ಬೆಂಗಳೂರು ಕೊಲೆಗಳು.

ಬೆಂಗಳೂರು ಸಿಟಿಯಲ್ಲೂ ದಂಡಿನಲ್ಲೂ ಭಯಂಕರವಾದ ಕೆಲವು ಕೊಲೆಗಳು ನಡೆದದ್ದು ಈ ವರುಷದ ಪ್ರಾರಂಭದಲ್ಲಿ ಪ್ರಕಟವಾದವು. ಅವುಗಳನ್ನು ಪತ್ತೆಮಾಡಿ ಅಪರಾಧಿಗಳನ್ನು ಹಿಡಿಯುವುದರಲ್ಲಿ ಬೆಂಗಳೂರು ಸಿಟಿ ಪೋಲೀಸಿನವರು ಎಷ್ಟು ಮಟ್ಟಿಗೆ ಸಾಹಸಪಟ್ಟರೆಂಬ ವಿಚಾರವನ್ನು ಮೈಸೂರು ಸರ್ಕಾರದವರು ತನಿಖೆ ಮಾಡಿಸಿದರು. ಬೆಂಗಳೂರು ಡೆಪ್ಯುಟಿ ಕಮೀಷನರ್ ಮೆ|| ಬಿ. ಜಿ. ಕುಮಾರಸ್ವಾಮಿ ನಾಯಕರವರು ಅಲ್ಲಿನ ಪೋಲೀಸ್ ಅಧಿಕಾರಿಗಳನ್ನು ಕರೆಸಿಕೊಂಡು ಅವರು ನಡಿಸಿದ ಕಾರುಬಾರುಗಳನ್ನೆಲ್ಲಾ ಅಂತರಂಗದಲ್ಲೇ ವಿಚಾರಣೆ ಮಾಡಿ, ರಿಪೋರ್ಟು ಬರೆದು ಅವರ ನಡತೆಯ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಕಾಣಿಸಿ, ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ಜೂಲೈ ತಾ. ೧೪ ರಲ್ಲಿ ಕಳುಹಿಸಿದರು. ಅದನ್ನೆಲ್ಲಾ ಇನ್‌ಸ್ಪೆಕ್ಟರ್ ಜನರಲ್‌ರವರು ನೋಡಿ, ಅದರ ಮೇಲೆ ತಮ್ಮ ಅಭಿಪ್ರಾಯವನ್ನು ಕಾಣಿಸಿ, ಜೂಲೈ ೨೫ ರಲ್ಲಿ ಗವರ್ನಮೆಂಟಿಗೆ ಕಳುಹಿಸಿಕೊಟ್ಟರು. ಗವರ್ನಮೆಂಟಿನವರು ಅದನ್ನೆಲ್ಲಾ ಪರಾಂಬರಿಸಿ ಹುಕುಂ ಕೊಟ್ಟಿರುವುದೇನೆಂದರೆ—ಇಂಥಾ ಘೋರತರವಾದ ಕೊಲೆಗಳು ಇದುವರೆಗೆ ಈ ಸಂಸ್ಥಾನದಲ್ಲಿ ನಡೆದಿರುವುದಿಲ್ಲ. ಈ ಕೊಲೆಗಾರರ ಗುಂಪಿಗೆ ಸೇರಿದ ಜಾಬು, ಸುಂದರರಾಜು, ಚಲ್ಲತಂಪಿ ಶ್ರೀನಿವಾಸಲು ಎಂಬೀ ನಾಲ್ವರು ಪತ್ತೆ ಆಗಿ, ಮೊದಲನೇ ಮೂರು ಮಂದಿಗೂ ಮರಣದಂಡನೆಯೂ. ಕಡೆಯವನಿಗೆ ಯಾವಜ್ಜೀವವೂ ಕಠಿಣ ಸಜಾ ಶಿಕ್ಷೆಯೂ ವಿಧಿಸಲ್ಪಟ್ಟಿರುತ್ತವೆ. ಬೆಂಗಳೂರು ಡೆಪ್ಯುಟಿ ಕಮಿಷನರವರು—ಸಿಟಿ ಪೋಲೀಸಿನವರು ತಮ್ಮ ಬುದ್ಧಿ ಶಕ್ತಿ ಸಾಮರ್ಥ್ಯ ಚಮತ್ಕಾರಾದಿಗಳನ್ನೆಲ್ಲಾ ಸಂಪೂರ್ಣವಾಗಿ ವಿನಿಯೋಗಿಸಿ ಮನಸ್ಸಾರ ಕಾರ್ಯಗಳನ್ನು ನಡಿಸಿ ಪತ್ತೆತರದೂದು ಮುಂತಾದದ್ದನ್ನು ಮಾಡಿರುತ್ತಾರೆಂದೂ, ಅವರ ಮೇಲೆ ಅಯೋಗ್ಯರೆಂಬ ಅಪವಾದವಾಗಲಿ ಅಜಾಗರೂಕತೆಯ ಅಪವಾದವಾಗಲಿ ಹೊರಿಸಲು ಸ್ವಲ್ಪವೂ ಅವಕಾಶ ಕಾಣುವುದಿಲ್ಲವೆಂತಲೂ ಅಭಿಪ್ರಾಯಪಡುತ್ತಾರೆ. ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರು ಅದರಂತೆಯೇ ಅಭಿಪ್ರಾಯಪಟ್ಟು, ಕೊಲೆಗಳು ನಡೆದ ಪ್ರಾರಂಭದಲ್ಲಿ ಸಿಟಿ ಪೋಲೀಸಿನವರು ತಮ್ಮ ಕೈಲಾದ ಮಟ್ಟಿಗೂ ಪತ್ತೆತರದೂದು ನಡಿಸಿದರೆಂತಲೂ, ಕಡೇ ಭಾಗದಲ್ಲಿ ಆ ಮೊಕದ್ದಮೆಗಳು ತೃಪ್ತಿಕರವಾಗಿ ತೀರ್ಮಾನ ಹೊಂದುವಂತೆ ಸಾಹಸ ಮಾಡಿದರೆಂತಲೂ ತಿಳಿಸುತ್ತಾರೆ. ಈ ರೆಕಾರ್ಡುಗಳನ್ನೆಲ್ಲಾ ಪರಾಂಬರಿಸಿ ಗವರ್ನಮೆಂಟಿನವರು—ಬೆಂಗಳೂರು ಸಿಟಿ ಪೋಲೀಸಿನವರು ತಮಗೆ ರಿಪೋರ್ಟಾದ ಈ ಅಪರಾಧಗಳನ್ನು ಪತ್ತೆ ಮಾಡುವುದರಲ್ಲಿ ಸಹಜವಾದ ತರದೂದುಗಳನ್ನೆಲ್ಲಾ ನಡಿಸಿರುತ್ತಾರೆಂದು ಒಪ್ಪಿಕೊಳ್ಳುತ್ತಾರೆ. ಈಗ ಶಿಕ್ಷೆಯಾಗಿರುವಂಥಾ ೪ ಕೊಲೆಗಾರರ ಗುಂಪಿನವರು ಸಿಟಿ ಅವರಣದೊಳಗೆ ಎರಡು ಕೊಲೆಗಳನ್ನು ನಡಿಸಿದ್ದರು. ಇವೆರಡು ಮೊಕದ್ದಮೆಗಳನ್ನು ಪತ್ತೇ ಮಾಡುವುದಕ್ಕೆ ಪೋಲೀಸ್ ಇಲಾಖೆಯವರು ಅಪರಾಧಿಗಳನ್ನು ದಸ್ತಗಿರಿ ಮಾಡಲಾರದೆ ಹೋದರೂ ಅವರು ತುಂಬಾ ಸಾಹಸಪಟ್ಟಿರುತ್ತಾರೆನ್ನುವುದಕ್ಕೆ ಅನುಮಾನವಿಲ್ಲ. ಮೊದಲನೆಯದಾದ ಲಕ್ಷ್ಮಿಯನ್ನು ಕೊಂದ ಮೊಕದ್ದಮೆಯಲ್ಲಿ ಶವವು ಇಂಥವಳದೇ ಎಂದು ಪತ್ತೆ ಮಾಡುವುದಕ್ಕೆ ಸಿಟಿ ಪೋಲೀಸಿನವರು ಸಾಧ್ಯವಾದಷ್ಟು ತರದೂದು ನಡಿಸಿದರು. ಶವದ ಫೋಟೋ (ನಕ್ಷೆ) ತೆಗೆದು ಎಲ್ಲಾ ಕಡೆಗಳಿಗೂ ಕಳುಹಿಸಿದಾಗ್ಯೂ ಕೊಲ್ಲಲ್ಪಟ್ಟವಳು ಇಂಥವಳೆಂದು ಗೊತ್ತಾಗದೆಹೋದದ್ದರಿಂದ ಮುಂದರಿಸಲು ಅಡಚಣೆಯುಂಟಾಯಿತು. ಎರಡನೇ ಮೊಕದ್ದಮೆಯಲ್ಲಿ ಅಂದರೆ ಅಪ್ಪಯ್ಯನ ಕೊಲೆಯಲ್ಲಿ ಸಿಟಿ ಪೋಲೀಸಿನವರು ನಿಜವಾದ ಅಪರಾಧಿಗಳನ್ನು ಮೊದಲೇ ದಸ್ತಗಿರಿ ಮಾಡಿದರು. ಆದರೆ ಆ ಕೊಲೆಯಾದ ಅಪ್ಪಯ್ಯನಿಂದಲೇ ಕಳುಹಲ್ಪಟ್ಟಂತೆ ಒಂದು ತಂತೀ ವರ್ತಮಾನ ಬಂದದ್ದರಿಂದ ಅವನು ಬದುಕಿದಾನೆಂದು ನೆನಸಿ, ಪೋಲೀಸಿನವರು ಅಪರಾಧಿಗಳನ್ನು ಬಿಟ್ಟುಬಿಟ್ಟರು. ಆಗಲೂ ಪೋಲೀಸಿನವರು ಆ ತಂತೀ ವರ್ತಮಾನ ಕೊಟ್ಟದ್ದು ನಿಜವೆಂಬುವುದನ್ನು ಮುಂದಷ್ಟು ಮಾಡಿಕೊಳ್ಳುವುದಕ್ಕೋಸ್ಕರ ಅದರ ಕೈಬರಹವನ್ನು ತರಿಸಿಕೊಂಡು, ಅವನು ಕೊಲ್ಲಲ್ಪಟ್ಟಿಲ್ಲವೆಂದು ನಿಶ್ಚಯಿಸಿಕೊಂಡು ಅವರನ್ನು ಬಿಡುಗಡೆ ಮಾಡಿರುತ್ತಾರೆ. ಇದನ್ನೆಲ್ಲಾ ನೋಡಿದರೆ ಪೋಲೀಸಿನವರು ಪತ್ತೆ ತರದೂದನ್ನು ಸಾಹಸ ಚಮತ್ಕಾರಪೂರ್ವಕವಾಗಿ ನಡಿಸಿರುತ್ತಾರೆಂಬುವುದೂ, ಆದರೆ ಮೋಸ್ತಂಡ ಅಡಚಣೆಗಳು ಒದಗಿದ್ದರಿಂದ ಅವರು ಸೋತುಹೋದರೆಂಬುವುದೂ ವ್ಯಕ್ತಪಡುತ್ತದೆ ದಂಡಿನಲ್ಲಿ ಒಂದು ಕೊಲೆಯ ಪ್ರಯತ್ನ ನಡೆದು, ಆ ಗುಂಪಿನವರ ಮೇಲೆ ಸಂಶಯ ಉಂಟಾದಾಗ ಸಿಟಿ ಪೋಲೀಸಿನವರು ತಕ್ಷಣವೇ ಮೋಸ್ತಂಡ ಎರಡು ಕೊಲೆಗಳನ್ನೂ ಅವರೇ ನಡಿಸಿರಬೇಕೆಂದು ನಿಶ್ಚಯಿಸಿಕೊಂಡು, ಅಲ್ಲಿಂದೀಚೆಗೆ ಪತ್ತೆ ತರದೂದು ನಡಿಸುತ್ತಾ ಒಂದು ಕಡೆಗೆ ಅವರಿಗೆ ಶಿಕ್ಷೆಯಾಗುವಂತೆ ಮಾಡಿದರು ಈ ಸಂದರ್ಭದಲ್ಲಿ ಇನ್ನೊಂದು ಸಂಗತಿಯನ್ನೂ ಹೇಳಬಹುದಾಗಿದೆ. ಆ ಅಪರಾಧಿಗಳು ಸಿಟಿ ಪೋಲೀಸಿನವರಿಗೆ ತಾವು ಅಂಜಿರುವುವತ್ತು ಕೊಟ್ಟು ಒಳಹಾಕಿಕೊಂಡಿದ್ದರೆಂಬುದಾಗಿ ಹೇಳಿರುವದಿಲ್ಲ. ಆ ಗುಂಪಿನವರ ಪೈಕಿ ಜಾಬ್ ಎಂಬುವನು ಕಳವುಮಾಡಿದನೆಂದು ಸಿಟಿ ಪೋಲೀಸಿನವರು ಮೊದಲೇ ಅವನ ಮೇಲೆ ಮೊಕದ್ದಮೆ ತಂದು ಅವನಿಗೆ ಮೂರುತಿಂಗಳ ಸಜಾ ಹಾಕಿಸಿದ್ದರು. ಹೀಗಿರುವಲ್ಲಿ ಸಿಟಿ ಪೋಲೀಸಿನವರು ಅವರಿಗೆ ಸಹಾಯಕರಾಗಿದ್ದದ್ದರೂ ಅವರಿಂದ ಲಂಚ ಮುಂತಾದದ್ದನ್ನು ತೆಗೆದುಕೊಂಡಿದ್ದರೂ ಅವರು ತಮ್ಮ ವಾಜ್ಮೂಲಗಳಲ್ಲಿ ಹೇಳಿ ಬಿಡುತ್ತಿದ್ದರೆನ್ನುವುದಕ್ಕೆ ಸಂಶಯವಿಲ್ಲ ಆದಕಾರಣ ಇನ್‌ಸ್ಪೆಕ್ಟರ್ ಜನರಲ್‌ರವರು ಹೇಳಿರುವಂತೆ ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮೆ|| ಎಲ್. ಕೃಷ್ಣರಾಯರು ಬಹಳ ವಿವೇಕದಿಂದ ಪೋಲೀಸ್ ಇಲಾಖೆಯನ್ನು ನಡಿಸುತ್ತಾ ಬಂದಿದಾರೆಂತಲೂ, ಬೆಂಗಳೂರು ಸೆಂಟ್ರಲ್ ಜೈಲ್ ಚೀಫ್ ಜೈಲರಾದ ಮೆ|| ನಾಗಪ್ಪಕಾರ್‌ರವರು ಚಟುವಟಿಕೆಯವರಾಗಿಯೂ ಸಾಹಸವುಳ್ಳ ಪತ್ತೇತರದೂದು ನಡಿಸಿರುತ್ತಾರೆಂತಲೂ, ಅದರಂತೆಯೇ ಇನ್‌ಸ್ಪೆಕ್ಟರ್ ಸಿದ್ದರಾಮಪ್ಪನವರೂ ಸಾಹಸ ಪಟ್ಟಿರುತ್ತಾರೆಂತಲೂ ಗವರ್ನಮೆಂಟಿನವರು ಸಂತೋಷವುಳ್ಳವರಾಗಿದಾರೆ. ಇನ್‌ಸ್ಪೆಕ್ಟರ್ ಸಿದ್ದರಾಮಪ್ಪನವರಿಗೆ ಇನ್‌ಸ್ಪೆಕ್ಟರ್ ಜನರಲ್ ರವರು ಸೂಕ್ತ ತೋರುವಂತೆ ಬಹುಮಾನ ಕೊಡಬಹುದು. ಮೆ|| ನಾಗಪ್ಪಕಾರ್ ರವರ ವಿಚಾರದಲ್ಲಿ ಗವರ್ನಮೆಂಟಿನವರು ಪ್ರತ್ಯೇಕವಾದ ಹುಕುಂ ಕೊಡುವವರಾಗಿದಾರೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ವೆಂಬುದನ್ನು ಸಕಲರೂ ತಿಳಿಯತಕ್ಕದ್ದು. ಎಡಿಟರ್.

ರಿಟೈರ್ಡ್ ಆಫೀಸರ್, ಕುಂಕೂರು.—ನಿಮ್ಮ ಬಾತ್ಮಿಯಲ್ಲಿ ಬರೆದಿರುವ ಅಭಿಪ್ರಾಯಕ್ಕಾಗಿ ನಿಮ್ಮನ್ನು ವಂದಿಸುತ್ತೇವೆ. ಆದರೆ ಅದನ್ನು ಪ್ರಕಟಿಸೋಣದರಿಂದ ಫಲವೇನೂ ಕಾಣುವುದಿಲ್ಲ. ನಿಮ್ಮ ಕೋರಿಕೆಯಂತೆ ಬದಲಾವಣೆ ಮಾಡಲಾಗದು.

ಸಾ॥ ಜಿ. ಮುನಿಯಪ್ಪಶೆಟ್ಟರು, ತಿಪ್ಟೂರು. - ನೀವು ನಿಜವಲ್ಲವೆಂದು ಹೇಳಿ ಬರೆದಿರುವ ವಿಚಾರಗಳು ಯಾವ ಪತ್ರಿಕೆಯಲ್ಲಿ ಪ್ರಕಟವಾದವೋ ಅದೇ ಪತ್ರಿಕೆಗೆ ಬರೆದು ತಿಳಿಸುವುದು ಒಳ್ಳೆಯದು

ಸಿ. ವಿ. ಆರ್., ಚಾಮರಾಜನಗರ—ನೀವು ವಿವರಿಸಿರುವಷ್ಟು ಘೋರವಾದ ಗಲಿಬಿಲಿಯು ನಡೆಯಲಿಲ್ಲವೆಂದೂ, ಸಂಗತಿಯನ್ನು ನೀವು ಬಹಳವಾಗಿ ಉತ್ಪ್ರೇಕ್ಷೆಮಾಡಿ ಬರೆದಿರುತ್ತೀರೆಂದೂ ನಮಗೆ ತೋರುತ್ತಿದೆ. ಇಂಥಿಂಥಾ ಮನುಷ್ಯರನ್ನು ಇಂಥಿಂಥವರು ಇಷ್ಟಿಷ್ಟು ಮಟ್ಟಿಗೆ ಕಷ್ಟನಷ್ಟಗಳಿಗೆ ಗುರಿ ಮಾಡಿರುತ್ತಾರೆಂಬುದನ್ನು ನೀವು ಚನ್ನಾಗಿ ವಿಚಾರಿಸಿ, ವೃಥಾ ಆರೋಪಣೆಗಳನ್ನು ಮಾಡದೆ ಸಹನೆಯೂ ಸೌಜನ್ಯವೂ ಆದ ರೀತಿಯಲ್ಲಿ ಬಾತ್ಮಿಯನ್ನು ಬರೆದರೆ ಪ್ರಕಟಿಸಬಹುದಾಗಿದೆ.

ವೆಂಕಟಪುರದು, ಶಿವಮೊಗ್ಗೆ; ಕೆ. ಟಿ. ದೇ, ನಾಲೂರು.—ಇವರಿಂದ ಬರೆದು ಬಂದಿರುವ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ಎಡಿಟರ್.]

ಕರೆಸ್ಪಾಂಡೆನ್ಸ್.

ಸೂರ್ಯನ ಬಳಿ ಗುರುತುಗಳು.

ಅಯ್ಯಾ,

ಇದೊಂದು ಅಗಾಧ ಆಶ್ಚರ್ಯವು ಆಕಾಶದಲ್ಲಿ ತಾ ೧೭ನೇ ಗುರುವಾರ ದಿವಸ ಸುಮಾರು ೪ ಘಂಟೆಯಲ್ಲಿ ಕಾಣಿಸಿಕೊಂಡಿತು ಏನೆಂದರೆ, ಸೂರ್ಯನ ಎರಡು ಪಕ್ಕದಲ್ಲೂ ಅಂಕಗಣಿತದ ಕೂಡುವ ಗುರುತಿನ ಇರತಕ್ಕ ಚಿಹ್ನೆಯೂ ಅದರ ಮುಂಭಾಗಕ್ಕೆ ಅರ್ಧ ಚಂದ್ರಾಕೃತಿಯ ಗುರುತಿನ ಇರತಕ್ಕ ಚಿಹ್ನೆಯೂ ಹಸುರು ಬಣ್ಣವಾಗಿ ಕಾಣಿಸಿಕೊಂಡಿತು ನೋಡುವುದಕ್ಕೆ ಅದರ ಕಾಂತಿಯು ಬಹಳ ವಕ್ರವಾಗಿತ್ತು.

ತಿಪಟೂರು ತಾ ವಾಸುದೇವನಹಳ್ಳಿ. ವಾಚಕ.

ತಗಡೂರು ಗ್ರಾಮದ ಕೊರತೆಗಳು.

ಅಯ್ಯಾ,

ನಂಜನಗೂಡು ತಾಲ್ಲೂಕು ತಗಡೂರು ಗ್ರಾಮವು ಒಂದುಸಾವಿರ ಮನೆಗಳುಳ್ಳದ್ದಾಗಿ, ಇದಕ್ಕೆ ತಕ್ಕ ಪ್ರಜಾಭಿವೃದ್ಧಿಯುಳ್ಳ ಗ್ರಾಮವು. ಈ ಗ್ರಾಮಕ್ಕೆ ಗೌರ್ನಮೆಂಟಿನಿಂದ ಪ್ರಜಾಭಿವೃದ್ಧಿ ವಿಷಯದಲ್ಲಿ ಮುನಿಸಿಪಾಲಿಟಿಯು ಏರ್ಪಾಡು ಮಾಡಿರುತ್ತಾರಾದ್ದರಿಂದ ಪ್ರಯಾಣಿಕರಿಗೂ ವ್ಯಾಪಾರಿಗಳಿಗೂ ಅನುಕೂಲವಾಗಿ ಈ ಗ್ರಾಮದಿಂದ ಯಾವ ಕಡೆ ಪ್ರಯಾಣಮಾಡುವುದಕ್ಕೂ ಸರಿಯಾದ ರಸ್ತೆಗಳಿಲ್ಲದೆ ತೊಂದರೆ ಪಡುತ್ತಿರುವುದರಿಂದಲೂ ಮತ್ತು ಪ್ರಯಾಣಿಕರಿಗೂ, ವ್ಯಾಪಾರಸ್ಥರಿಗೂ ಅನುಕೂಲವಾಗಿ ಸಕಾಲಕ್ಕೆ ಸರಿಯಾಗಿ ಲೆಟರುಗಳು ಬಂದೊದಗದೆ ನಷ್ಟಕ್ಕೂ, ಕಷ್ಟಕ್ಕೂ ಒಳಪಟ್ಟು ಇರುವುದರಿಂದಲೂ ನಮ್ಮ ಗವರ್ನ್‌ಮೆಂಟಿನವರು ಬಡರೈತರುಗಳಾದ ನಮ್ಮ ವಿಷಯದಲ್ಲಿ ತುಂಬಾ ದಯವಿಟ್ಟು ಸದ್ಯಕ್ಕೆ ಈ ಗ್ರಾಮದಿಂದ ನಂಜನಗೂಡಿಗೆ ಹೋಗತಕ್ಕ ರಸ್ತೆಯನ್ನೂ, ಒಂದು ಬ್ರಾಂಚು ಪೋಸ್ಟಾಫೀಸನ್ನೂ ಜಾಗ್ರತೆಯಾಗಿ ಕೊಡಿಸಿಕೊಟ್ಟು ಈ ಬಡರೈತರುಗಳು ಪಡುವ ಕಷ್ಟವನ್ನು ತಪ್ಪಿಸಿ ಕೊಟ್ಟು ಕಾಪಾಡುತ್ತಾರೆಂದು ನಂಬಿರುತ್ತೇವೆ.

ಬಾತ್ಮಿದಾರ

ಮಸೀತಿ ಕಟ್ಟಡದ ಮುಕ್ತಾಯಕ್ಕೆ ದ್ರವ್ಯ ಸಹಾಯ ಬೇಕು.

ಅಯ್ಯಾ,

ಜಗಲೂರು ತಾಲ್ಲೂಕು ಬಿಳಿಚೋಡು ಗ್ರಾಮದ ವಾಸಿಗಳಾದ ವ ಮಮ್ಮದಿಯರು ವಿದ್ಯಾವಿಹೀನರಾದ್ದರಿಂದ ಇವರ ಮರ್ಯಾದೆಗೂ ಜೀವನಕ್ಕೂ ಕ್ಷಾಮ ಪ್ರಾಪ್ತವಾದದ್ದನ್ನು ನೋಡಿ, ಚಿತ್ರದುರ್ಗದ ಬಂಜಾರಪೇಟೆ ಅಬ್ದುಲ್ ಕರೀಂ ಸಾಹೇಬರು ಈ ಗ್ರಾಮಕ್ಕೆ ಪೋಲೀಸ್ ದಫೇದಾರರಾಗಿ ಬಂದು, ಇಲ್ಲಿ ಹಲವು ಉಪಕಾರ ಕಾರ್ಯಗಳನ್ನು ನಡಿಸಿರುತ್ತಾರೆ. ಸದ್ಯ ಇವರು ಇಲ್ಲಿನ ಮಹಮ್ಮದಿಯರ ಮೌಢ್ಯವನ್ನು ಹೋಗಲಾಡಿಸುವುದಕ್ಕೋಸ್ಕರ ಹಿಂದೂ ಜನಗಳ ಮೆರವಣಿಗೆ ಮೊಹರಮ್ಮು ಬಾವದಿರುವ ಸ್ಥಳವನ್ನು ನಿರ್ದೇಶಿಸಿ, ದಯಾಪರರಾದ ನಮ್ಮ ಮೈಸೂರು ಸರ್ಕಾರದವರಿಂದ ಉಚಿತವಾಗಿ ಜಾಗವನ್ನು ಪಡೆದು ಮಣ್ಣು ಮುಂತಾದ್ದನ್ನು ಪಡೆದು, ಜುಮ್ಮಾ ಮಸೀದಿಯನ್ನು ಕಟ್ಟಿಸುತ್ತಲಿರುವರು ಆಗಲೇ ಮುಕ್ಕಾಲು ಭಾಗ ಕೆಲಸ ಪೂರೈಸುವುದು ಸದರಿ ಅಬ್ದುಲ್ ಕರೀಂ ಸಾಹೇಬರು ಈ ಕಟ್ಟಡವನ್ನು ಪೂರೈಸಿ, ಅದರಲ್ಲಿ ಆಚರಣೆಯಲ್ಲಿ ನಿರತರಾಗಿಯೂ ವಿದ್ಯಾವಂತರಾಗಿಯೂ ಇರುವ ಒಬ್ಬ ಖಾಜೀ ಸಾಹೇಬರನ್ನು ನೇಮಿಸಬೇಕೆಂತಲೂ, ಆತನು ಮಹಮ್ಮದೀಯ ಹುಡುಗರಿಗೆ ಸ್ವಕುಲ ಶಾಸ್ತ್ರವನ್ನು ಬೋಧಿಸುತ್ತಲೂ, ಪದ್ಧತಿಯ ಪ್ರಕಾರ ಕಾಲಕ್ಕೆ ಸರಿಯಾಗಿ ನಮಾಜು ವಗೈರೆ ಮಾಡುತ್ತಲೂ, ಮುಸಾಫರಾಗಿ ನಮಾಜು ಮಾಡಲು ಬಂದವರಿಗೆ ಒಂದು ಹೊತ್ತು ಅನ್ನಾ ಕೊಡಬೇಕೆಂತಲೂ, ಇದಕ್ಕಾಗಿ ಸದರಿ ಖಾಜಿ ಸಾಹೇಬರಿಗೆ ಒಂದು ಜಮೀನನ್ನು ಆಧಾರಮಾಡಿ ಕೊಡಬೇಕೆಂತಲೂ ಯೋಚಿಸಿರುವರು. ಆದರೆ ಇಷ್ಟೆಲ್ಲಾ ಪೂರೈಸುವದಕ್ಕೆ ಧನಸಹಾಯವು ಸಾಲದ್ದರಿಂದಲೂ, ಇಲ್ಲಿನವರು ರಿಕ್ತರಾದ್ದರಿಂದಲೂ ಸ್ವಕುಲ ವಾತ್ಸಲ್ಯತೆಯುಳ್ಳ ದೇಶ ಮಧ್ಯದ ಎಲ್ಲಾ ಭಾಗದ ಮಹಮ್ಮದೀಯರೂ ಫಂಡನ್ನು ಅಂದರೆ ಒಂದು ರೂಪಾಯಿಗೆ ಕಡಮೆ ಇಲ್ಲದಂತೆ ಈ ಕೆಳಗೆ ನಮೂದಾಗಿರುವವರ ಹೆಸರಿಗೆ ಮನಿಯಾರ್ಡರ್ ಮೂಲಕ ಕಳುಹಿಸಿಕೊಟ್ಟು ಕೀರ್ತಿ ಹೊಂದುವರೆಂದು ನಂಬಿದ್ದೇನೆ. [ಇದುವರೆಗೆ ಈ ಕೆಲಸಕ್ಕೆ ಚಂದಾ ಮೂಲಕ ೨೦೬ ರೂಪಾಯಿ ವಸೂಲಾಗಿರುತ್ತದೆ. ಚಂದಾ ಕೊಟ್ಟವರ ಹೆಸರುಗಳನ್ನೂ ಹಣವನ್ನೂ ಪ್ರಕಟಿಸಲು ಸ್ಥಳ ಸಾಲದಿಲ್ಲವೆಂದು ವಿಷಾದಿಸುತ್ತೇವೆ.—ಎಡಿ] ಈ ಧರ್ಮಕಾರ್ಯಕ್ಕೆ ಫಂಡನ್ನು ಕಳುಹಿಸತಕ್ಕವರು ಜಗಲೂರು ತಾಲ್ಲೂಕು ಬಿಳಿಚೋಡು ವಾಸಸ್ಥರಾದ ಖಾಜಿ ಖಾಸಿಂ ಸಾಹೇಬ್ ರಜಬಲಿ ಸಾಹೇಬ್ ಖಾನ್ ಸಾಹೇಬ್ ರಸೂಲ್ ಸಾಹೇಬ್ ಇವರ ವಿಳಾಸಕ್ಕೆ ಮನಿಯಾರ್ಡರ್ ಮೂಲಕ ಕಳುಹಿಸಿ, ರಸೀದಿ ಪಡೆಯುವರೆಂದು ನಂಬಿರುವ ತಮ್ಮ ವಿಧೇಯ

ಪ್ರಜಾ ಹಿತಚಿಂತಕ.

ಇನ್ನೂ ವ್ಯವಸ್ಥೆಯಾಗಲಿಲ್ಲ.

ಅಯ್ಯಾ,

ಬೆಂಗಳೂರು ಬಸವಾಪುರದಲ್ಲಿರುವ ಚಿಂತಾಮಣಿ ತಾಲ್ಲೂಕು ಲೇಟ್ ನಗದಿ ಗುಮಾಸ್ತೆ ಬಿ. ಎಂ. ನಂಜುಂಡಯ್ಯನಾದ ನಾನು ಷುರುವಾಗಾಯ್ತು ಕೋಲಾರ, ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ಶೇಕದಾರಿ, ರೆವಿನ್ಯೂ ಗುಮಾಸ್ತೆ, ಹೆಡ್ ಗುಮಾಸ್ತೆ, ನಗದಿ ಗುಮಾಸ್ತೆ ಮೊದಲಾದ ಕೆಲಸಗಳಲ್ಲಿ ಸೇರಿ ೨೫ ವರುಷ ಸರ್ಕಾರಿ ಸರ್ವೀಸ್ ಮಾಡಿದೆನು. ೩೦ ವರುಷ ಸರ್ವೀಸ್ ಮಾಡಬೇಕೆಂಬ ಕುತೂಹಲವಿತ್ತು.

ಈಚೆಗೆ ನನ್ನ ಕಾಯಿಲೆ ಜೋರಾದದ್ದರಿಂದ ಸರ್ಕಾರದವರ ಹುಕುಮಿನಂತೆ ೧೯೦೫ನೇ ನವಂಬರ್ ೩೦ ಒರಲ್ಲಿ ಕೆಲಸಕ್ಕೆ ಲಾಯಖಿಲ್ಲವೆಂದು ಸರ್ಟಿಫಿಕೇಟಾಗಿ ರಿಟೈರಾಯ್ತು. ೩ ವರುಷದಿಂದ ನಮ್ಮ ಡಿಸ್ಟ್ರಿಕ್ಟ್ ಅಧಿಕಾರಿಗಳಿಗೆ ಪೆನ್ಷನ್ ವಿಷಯವಾಗಿ ಅನೇಕ ಅರ್ಜಿಗಳ ಮೂಲಕ ಬೇಡಿಕೊಂಡೆ, ಒಂದು ವಾರದ ಒಳಗಾಗಿ ಪೆನ್ಷನ್ ಸ್ಯಾಂಕ್ಷನ್ ಆಗಿ ಬಾರದೆ ಹೋದರೆ ಅಡ್ವಾನ್ಸು ತರೀಖು ಪೆನ್ಷನ್‌ಗೆ ಶಿಫಾರಸು ಮಾಡುವದಾಗಿ ಹುಕುಂ ಕೊಟ್ಟರು ಆ ಹುಕುಂ ನನಗೆ ತಲಪಿ ೧ ವರ್ಷವಾಯ್ತು. ಇತ್ಯರ್ಥವೇ ಇಲ್ಲ. ರೆವಿನ್ಯೂ ಕಮಿಷನರವರಿಗೂ, ಡಿಸ್ಟ್ರಿಕ್ಟ್ ಹುಜೂರಿಗೂ ಅರ್ಜಿಗಳು ಕೊಟ್ಟು ಸಾಕಾಗಿದೆ. ಜವಾಬೇ ಇಲ್ಲ.

ನನಗೆ ಈ ಮಧ್ಯೆ ಜೀವನ ಜರುಗದೇ ಹೋದದ್ದರಿಂದ ಎಲ್ಲಾದರೂ ಕೆಲ ಜಮೀನು ಕೊಡಿಸಬೇಕೆಂದು ಗವರ್ನ್‌ಮೆಂಟು ಜನಾಬಿನಲ್ಲಿ ಕೇಳಿಕೊಳ್ಳಲಾಗಿ, ಡೆಪ್ಟಿ ಕಮಿಷನರವರಲ್ಲಿ ಕೇಳಿಕೊಂಡರೆ ಕೊಡುತ್ತಾರೆಂದು ಇಂಡಾರಸು ಹುಕುಂ ಕೊಡಿಸಿದರು. ಅದರ ಮೇರೆ ಒಂದು ನಂಬರು ೭ ಎಕರೆ ಜಮೀನ್ ಕೊಡಿಸಬೇಕೆಂದು ತಾಲ್ಲೂಕಿನಲ್ಲಿಯೂ, ಸಬ್ ಡಿವಿಜನ್‌ನಲ್ಲಿಯೂ, ಡಿಸ್ಟ್ರಿಕ್ಟಿನಲ್ಲಿಯೂ ೩ ವರುಷದ ಆದಿಯಾಯ್ತು ಕೇಳಿಕೊಳ್ಳುತ್ತಾ ಇದೇನೆ. ಹುಕುಂ ಕೊಡಲಿಲ್ಲ. ಪೆನ್ಷನ್ ಬಾರದೆ ಹೋಗಿದ್ದರೂ ಜಮೀನ್ ಮೂಲಕ ಜೀವಿಸೋಣವೆಂದು ಕೇಳಿಕೊಂಡಾಗ್ಯೂ ಯಾವ ಅಧೀಸರರಿಗೂ ನನ್ನ ವಿಷಯದಲ್ಲಿ ದಯೆ ಹುಟ್ಟಲಿಲ್ಲ. ನಾನು ಏನು ಮಾಡಲಿ! ಜೀವನಕ್ಕೆ ಕಷ್ಟವಾಗಿದೆ!

ಮತ್ತು ೧೮೯೬ನೇ ಇಸವಿಯಲ್ಲಿ ನಾನು ಪಡೆದಿದ್ದ ೬ ಆಳದ ರಿವಾಲ್ವರ್ ಲೈಸನ್ಸ್ ೧೯೦೭ನೇ ಫೆಬ್ರವರಿ ಮಾಹೆಯಲ್ಲಿ ಮಾಮೂಲ್ ಪ್ರಕಾರ ರಿನ್ಯೂ ಮಾಡಿ ವಾಪಸು ಕೊಡಲು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರಲ್ಲಿ ಹಾಜರಾಗಿದೆ. ಅದು ಹೋದ ದಾರಿಯೇ ತಿಳಿಯಲಿಲ್ಲ. ಈ ವಿಚಾರದಲ್ಲಿ ಅನೇಕ ಕಾಗದ ಪತ್ರ ನಡೆದು ಇದೆ ೭ ವರುಷವಾಯ್ತು. ಇತ್ಯರ್ಥವೇ ಆಗಲಿಲ್ಲ. ಅದು ಹಾಗಿರಲಿ.

೬ ತಿಂಗಳ ಸಿನೋ ತಲಬು ವಿಚಾರದಲ್ಲಿ ೧೯೦೧ನೇ ಇಸವಿಯಲ್ಲಿ ರೆವಿನ್ಯೂ ಕಮಿಷನರವರಲ್ಲಿ ಅಪೀಲ್ ಮಾಡಿ, ಆ ಲಾಗಾಯ್ತು ಪ್ರತಿವರ್ಷ ಒಂದೆರಡು ಅರ್ಜಿ ಹಾಕುತ್ತಾ ಇದೇನೆ. ೮ ವರುಷದ ಲಾಗಾಯಿತು ಅಪೀಲು ಇತ್ಯರ್ಥವಾಗಲಿಲ್ಲ

ಬಿ. ಎಂ. ನಂಜುಂಡಯ್ಯ.

ಗ್ರಾಮಾಂತರ ಸ್ಕೂಲ್ ಮತ್ತು ಮಾಸ್ತರುಗಳ ಕೊರತೆಗಳು.

ಅಯ್ಯಾ,

ಹೋಬಳಿ ಸ್ಕೂಲುಗಳಲ್ಲಿ ಓದುವುದಕ್ಕೆ ಬಾರದೆ ನಿಲ್ಲತಕ್ಕ ಬಾಲಕರನ್ನು ಪ್ರತಿ ದಿನ ಎರಡು ವೇಳೆಯಲ್ಲೂ ಕರೆಸಲು ಗ್ರಾಮದ ಸೇರಿಂಗಟೆ ಮತ್ತು ತಳವಾರ ಇವರಿಂದ ಈ ಕೆಲಸ ಮಾಡಿಸುವದಾದರೆ ಉತ್ತಮ. ಬೇಕಾದ ವೇಳೆ ಬ್ರಾಂಚ್ ಆಫೀಸಿನಿಂದ ಪುಸ್ತಕ ತರಿಸುವುದಕ್ಕೂ ಪರೋಪಕಾರಿ ಟಪಾಲ್ ರವಾನಿಸುವುದಕ್ಕೂ, ಮಾಸ್ತರನಿಗೆ ತಲಬು ಕೊಡದೆ ನಿಲ್ಲಿಸಿದಾಗ್ಯೆ ತಲಬು ತರಿಸಿಕೊಳ್ಳುವುದಕ್ಕೂ ಅನುಕೂಲವಾಗಿ ಸರ್ಕಾರದ ಕೆಲಸವು ಚನ್ನಾಗಿ ನಡಿಯುತ್ತೆ. ಶಾಲೆ ಸೇರಿಗಟ್ಟಿ, ತಳವಾರ, ಈ ನೌಕರರು ವೃಥಾ ಸರ್ಕಾರಿ ಇನಾಮತಿ ಅನುಭವಿಸುತ್ತಾ, ಯಾವ ಕೆಲಸವೂ ಮಾಡದೆ ಇದ್ದಾರೆ ರೈತರಿಗೂ ಬಹಳ ಉಪಕಾರವಾಗುತ್ತೆ.

ಬೆಂಗಳೂರು ಸೆಂಟ್ರಲ್ ಬುಕ್ ಡಿಪೋ ಅಧೀಸರವರಿಂದಲೂ ಕೇಳಿದ ವೇಳೆ ಪುಸ್ತಕ ಸಲುವಾಗಿ ಸರಬರಾಜು ಮಾಡುವದಿಲ್ಲ. ಈಗ ಅಪೇಕ್ಷಿಸಿದರೆ ಒಂದು ವರ್ಷಕ್ಕೆ ಸಿಕ್ಕುವುದೇ ದುಸ್ತರ ಕೆಲವು ಪ್ರತಿ ಇದ್ದಾಗ್ಗೆ ಪ್ರಿಂಟು ಮಾಡಿಸುವ ಯೋಚನೆ ಮಾಡಬೇಕು. ಅಥವಾ ಅಚ್ಚಾಗಿ ಬರುವ ವರಿಗೆ ಮುಕ್ತಾವ ಇಲಾಖೆಯ ಪುಸ್ತಕವಾದರೂ ಕೊಂಡು ಓದಿಸುತ್ತಿರಿ ಎಂತಲೂ ಅಪ್ಪಣೆ ಮಾಡುವದಿಲ್ಲ. ಖಂಡಿತವಾಗಿ ಅವರಿಗೆ ಬರೆದರೆ ಕೋಪ ಬರುತ್ತೆ. ಈಗ ೩ ವರುಷದಿಂದಲೂ ಪುಸ್ತಕಗಳು ಮಂಗಳೂರಿನಿಂದ ಸಣ್ಣಕ್ಷರದಲ್ಲಿ ಪ್ರಿಂಟುಮಾಡಿ ಕಳುಹಿಸುತ್ತಿದಾರೆ, ಬಿ ತರದ ಬಾಲಬೋಧೆಯು ಅಕ್ಷರ ಸಣ್ಣದಾಗಿ ಹಾಕಿ. ಮಕ್ಕಳಿಗೆ ತಿಳಿಯದಂತೆ ಮಾಡಿದಾರೆ. ಮೈಸೂರಿನಲ್ಲಿ ಅಚ್ಚಿನ ಕಾರ್ಖಾನೆ ಇಲ್ಲವೇ! ಬೆಂಗಳೂರಿನಲ್ಲಿಲ್ಲವೇ? ಇಲ್ಲಿನ ಅಕ್ಷರಕ್ಕೂ ಮಂಗಳೂರು ಅಕ್ಷರಕ್ಕೂ ಬಹಳ ವ್ಯತ್ಯಾಸ. ಕೇಳಿದ ಪುಸ್ತಕ ಸರಬರಾಜು ಮಾಡದಿದ್ದರೆ ವಿದ್ಯಾಭಿವೃದ್ಧಿ ಹ್ಯಾಗೆ ನಡೆಯಬೇಕು?

ಹೋಬಳಿ ಸ್ಕೂಲಿನ ಮಾಸ್ತರ ತಲಬು ಖಾವತಿ ವಿಷಯ ಕೇಳತಕ್ಕವರೇ ಇಲ್ಲ. ಎರಡು ತಿಂಗಳಿಗೊಂದಾವರ್ತಿ ಬಟವಾಡೆ ಮಾಡಿಸುತ್ತಾರೆ ತಾಲ್ಲೋಕಿಗೆ ಹೋದ್ರಾ ಹೋದರೂ ತಲಬು ಕೊಡುವದಿಲ್ಲ. ಈಗ ತಾಳು, ಆಗ ತಾಳು ಎಂದು ಸಬೂಬು ಹೇಳುತ್ತಾ ಕೂರಿಸುತ್ತಾರೆ ಇಲ್ಲಿಂದ ನಡೆದು ಹೋಗುವುದು, ಅಲ್ಲಿ ಅನ್ನವಿಲ್ಲದೆ ಸಾಯುವುದು, ಇಲ್ಲಿ ಮಾಡುವ ಕೆಲಸವು ಕೆಡು, ಅಲ್ಲಿಂದ ನಡೆದು ಬರುವುದು, ಇದೇ ಅದೇಶವಾಗಿದೆ. ೧೯೦೮ನೇ ಜನವರಿ ೪ ರಲ್ಲಿ ನನ್ನ ಮೊಬ್ರಾ ಬರಬೇಕೆಂತ ಹುಕುಂ ಕೊಟ್ಟು ಕರೆಸಿಕೊಂಡು, ತಲಬು ಕೊಡದೆ ಸುತ್ತಾಡಿಸಿದರು. ಮೇ ಮಾಹೆ ತಲಬು ಜೂನ್ ೨೯ ರಲ್ಲೂ, ಜೂನ್ ಮಾಹೆ ತಲಬು ಜೂಲೈ ೨೭ ರಲ್ಲೂ, ಜೂಲೈ ಮಾಹೆ ತಲಬು ಆಗಸ್ಟ್ ೨೨ ರಲ್ಲೂ ಕೊಡಿಸಿದರು ಗರೀಬರ ಸಂಸಾರದ ಗತಿ ಏನಾಗಬೇಕು? ಇದಲ್ಲದೆ ೮ ರೂ. ೯ ರೂ., ಇದ್ದ ಮಾಸ್ತರಿಗೆ ಜೂಲೈ ಲಾಗಾಯ್ತು ೧೦ ರೂಪಾಯಿ ತಲಬು ಮಂಜೂರಾಗಿದ್ದರೂ ಇನ್ನೂ ೬ ರೂಪಾಯಿ ಕೊಡುತ್ತಲೇ ಇದಾರೆ

ಪ್ರೇಕ್ಷಕ

ಮೈ। ಗುಂಜಾ ನರಸಿಂಹಯ್ಯನವರೂ, ಒಕ್ಕಲಿಗರ ಸಂಘವೂ

ಅಯ್ಯಾ,

ದೊಡ್ಡ ಮನುಷ್ಯರಾದ ಮೈ। ನರಸಿಂಹಯ್ಯನವರು ಮೈಸೂರು ನಿವಾಸಿಗಳೆಂತಲೂ, ಕುಂಚಿಟ ಒಕ್ಕಲಿಗರೆಂತಲೂ ತಿಳಿಯಬರುತ್ತದೆ ಈ ಕಾಲದ ಅನೇಕ ಮತ, ಜಾತಿ, ಪಂಗಡಗಳಲ್ಲಿ ಒಕ್ಕಲಿಗರು ಎಂಬುದೇ ಒಂದು ಪಂಗಡ ಅದರಲ್ಲಿ ಕುಂಚಿಟವೆಂಬ ಹೆಸರುಳ್ಳದ್ದು ಒಂದು ಉಪಪಂಗಡವಾಗಿರುವುದು ಬೆಂಗಳೂರಲ್ಲಿರುವ ಒಕ್ಕಲಿಗರ ಸಂಘದವರು ತಮ್ಮ ಮೊದಲನೆಯ ಸಭೆಯಲ್ಲಿ ತಮ್ಮ ಸಂಘಕ್ಕೆ ಸಮಸ್ತ ಉಪಪಂಗಡಗಳೂ ಸೇರಿರುವವೆಂದು ತಿಳಿಸಿರುವರು ಇಂತಹ ವಿವೇಕವಾದ ಏರ್ಪಾಡಿಗೆ ಕುಂಚಿಟ ಒಕ್ಕಲಿಗರೂ ಸಹ ಬಹಳ ಉಲ್ಲಾಸವುಳ್ಳವರಾಗಿರುತ್ತಾರೆಂದು ತಿಳಿದಿತ್ತು. ಆದರೆ ಈಗಿನ ಸಂದರ್ಭದಲ್ಲಿ ಮೈ। ನರಸಿಂಹಯ್ಯನವರು ತಮ್ಮ ಪಂಗಡದ ವಿದ್ಯಾರ್ಥಿಗಳಿಗೇನೇ ಒಂದು ಪ್ರತ್ಯೇಕವಾದ ಸ್ಕೂಲನ್ನು ರಾಜಧಾನಿಯಲ್ಲಿ ಏರ್ಪಡಿಸುವರೆಂದು ತಿಳಿದುದರ ಮೇಲೆ ಒಂದು ವಿಧವಾದ ಸಂಶಯವು ತೋರುವುದು.

ನಮ್ಮ ಪೂರ್ವಿಕರು ನ್ಯಾಯವಾಗಿರುವಂತಹ ಒಂದು ಜಾತಿಯೆಂಬ ಪಂಗಡದಲ್ಲಿ ಭೇದಗಳನ್ನೂ ಒಳಭೇದಗಳನ್ನೂ ಲೆಕ್ಕವಿಲ್ಲದಷ್ಟು ಉಂಟುಮಾಡಿದ್ದರಿಂದ ನಮ್ಮ ನಮ್ಮಗಳಿಗೆ ಪರಸ್ಪರವಾಗಿ ಸಹಬೇಳುವರಿ ಐಕಮತ್ಯವಿಲ್ಲದವರಾಗಿ ಬಹಳ ಕಷ್ಟನಷ್ಟಗಳನ್ನು ಅನುಭವಿಸುತ್ತಿರುವೆವು. ಇಂತಹ ವಿಷಯಗಳನ್ನೆಲ್ಲಾ ನಿರ್ಮೂಲಮಾಡಿ, ಒಂದು ಜಾತಿ ಅಥವಾ ಪಂಗಡದಲ್ಲಿರುವ ಸಮಸ್ತ ಉಪಪಂಗಡದವರೂ ಅನ್ಯೋನ್ಯ ಪ್ರೀತಿಯುಳ್ಳವರಾಗಿ ಸಹಜ ಭ್ರಾತೃಗಳಂತೆ ಈ ನಾಗರೀಕತೆಯ ಕಾಲಕ್ಕೆ ತಕ್ಕಂತೆ ಇತರ ಜನಾಂಗದವರೂ ಅಭಿವೃದ್ಧಿಗೆ ಬರುವಂತೆ ತಾವೂ ಬರಬೇಕೆಂದು ಬೋಧಿಸುವುದು ಶ್ರೀಮಂತರಾಗಿಯೂ, ವಿದ್ಯಾವಂತರಾಗಿಯೂ, ವಿವೇಕವಂತರಾಗಿಯೂ ಇರತಕ್ಕವರ ಕೆಲಸವಾಗಿರುವುದು. ಮತ್ತು ಒಕ್ಕಲಿಗರ ಸಂಘಕ್ಕೆ ಸೇರಿರುವ ಎಲ್ಲಾ ಪಂಗಡದವರಿಗೂ, ಈ ಕುಂಚಿಟ ಪಂಗಡದವರಿಗೂ ಎಲ್ಲಾ ಗ್ರಾಮಗಳಲ್ಲಿಯೂ ಆಪೇಕ್ಷೆಯಿಂದಲೂ ಭೋಜನ ಪ್ರತಿಭೋಜನಗಳು ನಡೆಯುತ್ತಿರುವವು. ಈಗ ನೂತನವಾಗಿ ಮಾಡಿಕೊಳ್ಳುವ ಏರ್ಪಾಡುಗಳಿಂದ ಇತರ ಒಕ್ಕಲಿಗರಿಗೂ ಈ ಕುಂಚಿಟ ಒಕ್ಕಲಿಗರಿಗೂ ಉತ್ತರೋತ್ತರ ಸಂಬಂಧವೇ ಇಲ್ಲದಂತೆ ಆಗುತ್ತದೆ. ಇಂತಹ ಅಸಂಬದ್ಧಗಳಿಗೆ ಅವಕಾಶ ಕೊಡದೆ, ಈಗಿನ ಕಾಲಕ್ಕೆ ಘನವಾದ ಐಕಮತ್ಯವನ್ನು ವೃದ್ಧಿಪಡಿಸುವುದರಲ್ಲಿ ಬುದ್ಧಿಶಾಲಿಗಳಾದ ಮೈ॥ ನರಸಿಂಹಯ್ಯನವರು ಎಂದಿಗೂ ಹಿಂತೆಗೆಯಲಾರರೆಂದು ನಂಬುತ್ತೇನೆ. ಒಂದು ಪಕ್ಷ ಜಾತಿಯ ಅಂತರಂಗ ವಿಷಯಗಳೇನಿದ್ದರೂ ಅದಕ್ಕೂ ಈ ವಿದ್ಯಾಭಿವೃದ್ಧಿಗೂ ಏನೇನೂ ಸಂಬಂಧವಿರುವುದಿಲ್ಲ.

ಹಾಲಿ ಇರುವ ಒಕ್ಕಲಿಗರ ಸಂಘಕ್ಕೆ ನಮ್ಮನ್ನಾಳುವ ಮಹಾಸ್ವಾಮಿಯವರೇ ಪೋಷಕರಾಗಿರುವುದರಿಂದ ಬಹಳ ಗೌರವ ಸ್ಥಿತಿಯಲ್ಲಿರುತ್ತದೆ. ಇಂತಹ ಘನತರವಾದ ಸಂಘಕ್ಕೆ ತಾವೂ ಸೇರಿ, ಇದರ ಮುಖಂಡರು ವಹಿಸಿರುವ ಜವಾಬ್ದಾರಿಯ ಕೆಲಸ ಕಾರ್ಯಗಳಲ್ಲಿ ತಾವೂ ಭಾಗಿಗಳಾಗಿ, ಎಲ್ಲಾ ಪಂಗಡದ ಒಕ್ಕಲಿಗರೂ ಒಟ್ಟಾಗಿಯೂ, ಬಹಳ ಮೈತ್ರಿಯುಳ್ಳವರಾಗಿಯೂ ಪರಸ್ಪರವಾದ ಭೇದಭಾವಗಳನ್ನೆಣಿಸದೆ, ಎಲ್ಲರೂ ಸಹೋದರರಂತೆ ಸಂಘದ ಕಾರ್ಯಗಳನ್ನು ಮಾಡುತ್ತಿರುವರೆಂಬ ಅತಿಶಯವಾದ ಹೆಸರುವಾಸಿಯನ್ನು ಪಡೆಯುವುದು ಸಭ್ಯದಲ್ಲಿ ಮೈ॥ ನರಸಿಂಹಯ್ಯನವರ ಅಧೀನವಾಗಿರುತ್ತದೆ, ಇದನ್ನು ಬಿಟ್ಟು ತಮ್ಮ ಉಪಪಂಗಡಕ್ಕೇ ಒಂದು ಸ್ಕೂಲನ್ನು ತಯಾರುಮಾಡಿಕೊಳ್ಳುತ್ತೇವೆಂತಲೂ, ಒಕ್ಕಲಿಗರ ಸಂಘವೇ ಬೇರೆ, ಆ ಸಂಘವೇ ಬೇರೆ ಎಂತಲೂ ಕಾರ್ಯಕರು ನಡೆಯಿಸುತ್ತಿದ್ದರೆ ಕೇಳತಕ್ಕವರಿಗೂ ನೋಡತಕ್ಕವರಿಗೂ ವ್ಯಸನಕರವಾಗಿಯೂ, ಆಭಾಸಕರವಾಗಿಯೂ ಇರುವುವು. ಆದರೆ ಮೈ। ನರಸಿಂಹಯ್ಯನವರು ತಿಳುವಳಿಕೆಯುಳ್ಳವರು. ಸ್ವಭಾವಿಕವಾಗಿಯೂ ಇಂತಹ ವಿವೇಚನೆಗಳಿಗೆಲ್ಲಕ್ಕೂ ಇವರ ಹೃದಯವು ತೌರುಮನೆಯಾಗಿರುವುದರಿಂದ ಹೆಚ್ಚಾಗಿ ಹೇಳಬೇಕಾದುದೇ ಇಲ್ಲ. ಈಗಲಾದರೂ ಒಕ್ಕಲಿಗರ ಸಂಘದವರೂ, ಮೈ। ಗುಂಜಾ ನರಸಿಂಹಯ್ಯನವರೂ ಚನ್ನಾಗಿ ಪರ್ಯಾಲೋಚಿಸಿ, ಉಭಯತ್ರರೂ ಸಮಾಗಮವಾಗಿ ಸೇರಿಕೊಂಡು, ಕೆಲ ಭಾಗದ ಯಜಮಾನಿಕೆಯನ್ನು ಮೈ। ನರಸಿಂಹಯ್ಯನವರೂ ವಹಿಸಿ, ತಮ್ಮ ಕುಂಚಿಟ ಒಕ್ಕಲಿಗ ಮಹಾ ಜನರೆಲ್ಲರನ್ನೂ ತಮ್ಮ ಮಾರ್ಗಕ್ಕೆ ತಂದು, ಹಾಲಿ ಮೈಸೂರಲ್ಲಿ ಕಟ್ಟಿಸುತ್ತಿರುವ ಸ್ಕೂಲಿನ ಕಟ್ಟಡವನ್ನು ತಮ್ಮ ಎಲ್ಲಾ ಪಂಗಡದ ಒಕ್ಕಲಿಗ ಬಾಲಕರೂ ಓದುವುದಕ್ಕೆ ಸಂಘದವರು ಕಟ್ಟಿಸಬೇಕೆಂದಿರುವ ಸ್ಕೂಲಿಗೆ ಬಿಟ್ಟುಕೊಟ್ಟು, ನಮ್ಮನ್ನಾಳುವ ಮಹಾಸ್ವಾಮಿಯವರು ಎಲ್ಲಾ ಉಪಪಂಗಡಗಳನ್ನೂ ಹೊಂದಿರುವ ಒಕ್ಕಲಿಗರ ಸಂಘಕ್ಕೆ ಅಭಿವೃದ್ಧಿಯಾಗಲೆಂದು ಮಾಡುತ್ತಿರುವ ಆಶೀರ್ವಾದಗಳನ್ನು ಸಫಲಗೊಳಿಸಬೇಕೆಂದು ಮೈ। ಗುಂಜಾ ನರಸಿಂಹಯ್ಯನವರಲ್ಲಿಯೂ, ಒಕ್ಕಲಿಗರ ಸಂಘದವರಲ್ಲಿಯೂ ಕೃತಜ್ಞತೆಯಿಂದ ವಿಜ್ಞಾಪಿಸಿಕೊಂಡಿರುತ್ತೇವೆ

ಒಬ್ಬ ಗೌಡ.

ತಾಲ್ಲೂಕು ವರ್ತಮಾನಗಳು.

ಕೊಪ್ಪ.—ಇಲ್ಲಿ ಮಳೆಯು ಇಲ್ಲ. ರೈತರ ಪೈರುಗಳೆಲ್ಲಾ ಒಣಗುವದಕ್ಕೆ ಆರಂಭವಾಗಿದೆ. ಜಿನಸಿನ ಧಾರಣೆಯು ಇನ್ನೂ ಇಳಿಯಲಿಲ್ಲ. ರೂಪಾಯಿಗೆ ಅಕ್ಕಿ ೬ ಸೇರು, ರಾಗಿ ೧೨ ಸೇರು, ಗೋಧಿ ೫ ಸೇರಿನಂತೆ ವಿಕ್ರಯಿಸುತ್ತಾರೆ. ಬಡವರು ಜೀವನ ಮಾಡುವದು ಅತೀ ಕಷ್ಟ. ಇಲ್ಲಿ ಸಂತೆ ನಡಿಯುತ್ತದೆ. ಆದರೆ ಚಿಲ್ಲರೆ ವ್ಯಾಪಾರಸ್ಥರು ೨ ತರದ ಅಳತೆ, ತೂಕ ಸೇರುಗಳನ್ನು ಇಟ್ಟುಕೊಂಡಿರುವದರಿಂದ ಇವರು ಮಾಡತಕ್ಕ ಮೋಸವನ್ನು ಕಂಡುಹಿಡಿಯುವದಕ್ಕೆ ಆಗಲಾರದು. ಈ ಸಂಗತಿಯಲ್ಲಿ ಪೋಲೀಸಿನವರು ಬಹು ಜಾಗ್ರತೆಯಿಂದ ಸಿಗಾ ತಕ್ಕೊಂಡರೆ ಸರಿಯಾಗುವುದೆಂದು ನೆನಸುತ್ತೇನೆ.—ನಮ್ಮ ಗ್ರಾಮಕ್ಕೆ ಬಂದಿರುವ ದನಗಳ ದೊಡ್ಡರೋಗವು ದೇವರ ದಯದಿಂದ ಕಡಮೆ ಆಗಿದೆ. ಜನಗಳಿಗೆ ಬರತಕ್ಕ ಮಲೆನಾಡು ಜ್ವರವು ಇನ್ನೂ ಬರುತ್ತಲೇ ಇದೆ ಕೆಲವು ಸಂದರ್ಭದಲ್ಲಿ ಈ ಕಾಯಿಲೆಯಿಂದ ನಷ್ಟ ಜಾಡ್ಯ ಉಂಟಾಗಿ ಕೆಲವು ಮರಣಗಳಾದವು. ಈ ರೋಗಕ್ಕೆ ನಮ್ಮ ಆಸ್ಪತ್ರೆಯ ಅಸಿಸ್ಟೆಂಟರು ಬಹಳ ಮುತುವರ್ಜಿಯಿಂದ ಔಷಧಿಯನ್ನು ಕೊಟ್ಟು, ರೋಗಿಗಳನ್ನು ವಾಸಿಮಾಡುವರು ಎಂಬದಕ್ಕೆ ಸಂಶಯವಿಲ್ಲ.—ನಮ್ಮ ಈಗಿನ ಪೋಸ್ಟುಮಾಸ್ಟರು ಬಹಳ ಜಾಗ್ರತೆಯಿಂದಲೂ ಮುತುವರ್ಜಿಯಿಂದಲೂ ಕೆಲಸ ಮಾಡುತ್ತಾರೆ. ಇಲ್ಲಿಯ ಒಬ್ಬ ಪೋಸ್ಟುಮ್ಯಾನನು ಕೆಲವು ರೂಪಾಯಿಗಳ ನೋಟು (ನಂಬರು ಗೊತ್ತಿಲ್ಲ) ತಾಲ್ಲೋಕು ಖಜಾನೆಗೆ ಪಾಕಾರಣೆ ಬಗ್ಗೆ ಪೋಸ್ಟು ರಿಜಿಸ್ಟ್ರಿಗೆ ರುಜುಮಾಡಿ ತಗೆದುಕೊಂಡು ಹೋದವನು ಅಜಾಗ್ರತೆಯಿಂದ ಎಲ್ಲಿಯೋ ಬಿಸಾಕಿದನೆಂತಲೂ, ಪುನಃ ಅದೇ ನೋಟು ಯಾವದೋ ಒಂದು ಲೆಟರ್ ಬಾಕ್ಸಿನಲ್ಲಿ ಸಿಕ್ಕಿತೆಂತಲೂ, ಸದರಿ ನೋಟು ವಾಪಸು ತಂದು ಕೊಟ್ಟನೆಂತಲೂ, ವರ್ಗವಾಗಿ ಹೋದ ಪೋಸ್ಟುಮಾಸ್ಟರು ಕ್ರಮದಂತೆ ಮೇಲ್ಪಟ್ಟ ಆಫೀಸರಿಗೆ ಬರೆಕೊಂಡಲ್ಲಿ ಪೋಸ್ಟುಮ್ಯಾನ್ ಮಾಡಿದ ಸರ್ಕಾರಿ ಅಜಾಗ್ರತೆ ಕೆಲಸಕ್ಕಾಗಿ ಈತನನ್ನು ಕೆಲಸದಿಂದ ವಜಾ ಮಾಡಿರುವುದಾಗಿಯೂ ಪೋಸ್ಟ್ ಮಾಸ್ಟರಿಗೆ ಯಾವ ಕಾರಣದಿಂದಲೋ ವರ್ಗ ಮಾಡಿದರೆಂತಲೂ ವರ್ತಮಾನ ಕೇಳುತ್ತೇನೆ.

ಚಿಕ್ಕಬಳ್ಳಾಪುರ.—ಇಲ್ಲಿ ಪ್ರಾಯಶಃ ಒಂದು ತಿಂಗಳಿಂದಲೂ ಮಳೆಯಿಲ್ಲದೆ, ಹೊಲಗಳು ಒಣಗುತ್ತಿರುತ್ತವೆ. ದವಸ ಧಾನ್ಯಗಳು ದಿನೇದಿನೇ ಏರುತ್ತಾ ಹೋಗುತ್ತವೆ. ರೂಪಾಯಿಗೆ ೬ ಸೇರು ಅಕ್ಕಿ, ೧೨ ಸೇರು ರಾಗಿ ಮಾರಾಟವಾಗಿದೆ. ಈ ಊರಿನ ಸಾಧುಭಾವಿ ಒಂದು ವಿನಹ ಮಿಕ್ಕ ಭಾವಿಗಳಲ್ಲಿ ಸುತರಾಂ ನೀರಿಲ್ಲದೆ, ಜನರು ಬಹಳ ಕಷ್ಟಪಡುತ್ತಾರೆ ಮನೆಗಳ ಭಾವಿಗಳಲ್ಲಿ ಉಪ್ಪು ನೀರು ಸುದಾ ಇಲ್ಲದೆ, ಅನ್ನಪಾನಗಳಿಗೆ ಯೋಗ್ಯವಾದ ನೀರು ಸಿಕ್ಕದೆ, ಒಂದು ಬೀದಿಯವರು ಮತ್ತೊಂದು ಬೀದಿಗೆ ಹೋಗಿ, ಸಿಕ್ಕಿದ ನೀರನ್ನು ಹೊತ್ತುಕೊಂಡು ಬರುವ ಹೆಂಗಸರ ಕಷ್ಟವು ಎಷ್ಟು ವರ್ಣಿಸಿದರೂ ಸಾಲದು ನೀರಿನ ಕ್ಷಾಮವೂ, ಆಹಾರ ಪದಾರ್ಥಗಳ ಕ್ಷಾಮವೂ ಏಕೀಭವಿಸಿ ಪ್ರಜೆಗಳಿಗೆ ಸಂಕಟವನ್ನುಂಟುಮಾಡುವಷ್ಟು ಪ್ರಬ

ಲವಾಗಿದೆ. ಸಣ್ಣ ಸಂಬಳಗಾರರ ಮತ್ತು ಬಡವರ ಕಷ್ಟವಂತೂ ಹೇಳತೀರದು. ಈಗ್ಗೆ ೪ ದಿವಸದ ಕೆಳಗೆ ಯಾರೋ ಒಬ್ಬ ಮುಸಲ್ಮಾನ್ ನವನೂ, ಹಿಂದುವೂ ಸಹ ಸತ್ತುಹೋಗಲು ಅವರು ಪ್ಲೇಗ್‌ನಿಂದ ಮೃತಪಟ್ಟರು ಇದ್ದಾರೆಂದು ಜನರು ಭಯಪಟ್ಟು ಪುನಃ ತಮಗೆ ತೊಂದರೆಯುಂಟಾಯಿತಲ್ಲಾ ಎಂದು ಭಯಪಟ್ಟು ಇದ್ದರು. ಆದರೆ ಇದುವರಿವಿಗೆ ಯಾವ ಗಲಾಟೆಯೂ ಇಲ್ಲ. ಇಲ್ಲಿ ಉದರಗಿನ್ನೆ ವ್ಯಾಪಾರ ಮಾಡುವವರ ಪೈಕಿ ಪೋಲಿಶೆಟ್ಟಿ ದೊಡ್ಡ ನಾಗಪ್ಪ, ಶೆಟ್ಟಪ್ಪ ಇವರುಗಳು ಈ ಊರು ಕಂದವರದ ಪೇಟೆಯ ಕೆಲವರ ಹತ್ತಿರ ೩,೦೦೦ ರೂಪಾಯಿನ ಉದರಗಿನ್ನೆ ತೆಗೆದುಕೊಂಡು, ಸುಮಾರು ೯ ತಿಂಗಳಾಗುತ್ತಾ ಬಂತು. ಇವರು ಯಾವಾಗಲೂ ಮದರಾಸ್, ಬೆಂಗಳೂರು ವ್ಯಾಪಾರ ಮಾಡುವರು. ಇವರಿಗೆ ಸುಮಾರು ೧೫,೦೦೦ ರೂಪಾಯಿ ವರಿವಿಗೂ ಸಾಲವಾಗಿ, ತಮ್ಮ ಆಸ್ತಿಪಾಸ್ತಿಗಳನ್ನು ಬೆಂಗಳೂರು ಬಳೆ ರಾಜಪೇಟೆ ಮಂಡಿವಾರ್ ಗೊಲ್ಲಹಳ್ಳಿ ರಾಮಯ್ಯನವರಿಗೆ ೫,೦೦೦ ರೂಪಾಯಿಗೆ ಬರೆದುಕೊಟ್ಟು ರಿಜಿಸ್ಟರು ಸಹ ಮಾಡಿಸಿದರು. ಈ ವರ್ತಮಾನವು ಇಲ್ಲಿನ ಕೋಲಶೆಟ್ಟಿ ಮಲ್ಲಯ್ಯನವರಿಗೆ ತಿಳಿದು, ತನಗೆ ಕೊಡಬೇಕಾಗಿರುವ ಹಣಕ್ಕೆ ಕೋರ್ಟಿನಲ್ಲಿ ದಾವಾಮಾಡಿ ಇನ್‌ಜಕ್ಷನ್ ಸಹ ಮಾಡಿಸಿದರು. ಇವರ ಮೇಲ್ಪಂಕ್ತಿಯನ್ನು ಅನುಸರಿಸಿ ಅಪ್ಪಣ್ಣನವರ ವೆಂಕಟಪ್ಪ ಸಹ ದಾವಾಮಾಡಿದಾರೆ. ಮಿಕ್ಕ ಸಾಲಗಾರರು ಎಂತೂ ಬರುವದಿಲ್ಲವೆಂದು ವ್ಯಥೆಪಡುತ್ತಾರೆ. ತೋಟಗಾರರು ರಾತ್ರಿ ಹಗಲೂ ಕಷ್ಟಪಟ್ಟು ಬೆಳೆದ ಫಸಲನ್ನು ಈ ರೀತಿ ಕೊಟ್ಟು ಇರುತ್ತಾರೆ. ಇನ್ನು ಮೇಲಾದರೂ ಬುದ್ಧಿವಂತರಾಗಿ ಸರಕುಗಳನ್ನು ನಗದಾಗಿ ತೆಗೆದುಕೊಳ್ಳುವವರಿಗೆ ಕೊಟ್ಟು ಹಣ ಪಡೆದುಕೊಂಡಾರೆಂದು ನಂಬುತ್ತೇವೆ.

ಹೊಳೆಹೊನ್ನೂರು.—ಸುತ್ತಮುತ್ತಲಿನ ಗ್ರಾಮಗಳಲ್ಲಿ ಪ್ಲೇಗ್ ವ್ಯಾಪಿಸಿದೆ. ಈ ಊರು ಉಪ್ಪಾರ ಬೀದಿಯಲ್ಲಿ ಇಲಿಗಳು ಬಿದ್ದುದರಿಂದ ಆ ಶ್ರೇಣಿಯವರು ತಮ್ಮ ತಮ್ಮ ತೋಟಗಳಲ್ಲಿ ಜೋಪಡಿಗಳನ್ನು ಹಾಕಿಕೊಳ್ಳುವದರಲ್ಲಿ ತೊಡಗಿದ್ದಾರೆ. ಊರು ಬಹಳ ಗಲೀಜು. ಪಾಳು ನಿವೇಶನಗಳಲ್ಲಿ ಲಾಂಟಾನಾ ಮುಳ್ಳುಹರಿವೆ ಗಿಡಗಳು ಬೆಳೆದು, ಆನೆ ತೊಕ್ಕನೂ ಕಾಣದಂತೆ ಬೆಳೆಸುವ ಭದ್ರಾ ನದಿಯ ಪಕ್ಕದ ದಂಡೆಯ ಮೇಲೆ ನೀರಿಗೆ ಸಮೀಪವಾಗಿ ಜನಗಳು ಮಲಮೂತ್ರ ವಿಸರ್ಜನೆ ಮಾಡಿ, ನೀರು ಕೆಡಿಸುತ್ತಾರೆ. ಸರ್ಕಾರದವರ ದೃಷ್ಟಿಯು ಇದರ ಮೇಲೆ ಬಿದ್ದರೂ, ದುರಾಚಾರವನ್ನು ತಪ್ಪಿಸದಿರುವುದರ ಕಾರಣವೇನೋ. ಇವು ಅಂಟು ಜಾಡ್ಯಕ್ಕೆ ಬಹಳ ಸಹಾಯಕಾರಿಗಳಾಗಿವೆ. ಮನೆಗಳಿಗೆ ಸಮೀಪವಾಗಿ ಪಾಳು ನಿವೇಶನಗಳನ್ನಾವರಿಸಿರುವ ಹಾಳು ಗಿಡಗಳಿಂದ ಅಕ್ಕಪಕ್ಕದ ಮನೆಗಳಿಗೆ ಬೆಂಕಿಯ ಭಯಕ್ಕೆ ಅನುಮಾನವೇ ಇಲ್ಲ. ಊರಿನಲ್ಲಿರತಕ್ಕ ಈ ಲಾಂಟಾನಾ ಗಿಡಗಳಿಂದ ಈಗ ೩ ೪ ವರುಷದ ಹಿಂದೆ, ಅಗ್ರಹಾರದ ಬೀದಿಯಲ್ಲಿ ೪ ೫ ಮನೆಗಳು ಸುಟ್ಟು ಬೂದಿಯಾದುವೆಂದು ಹೇಳುತ್ತಾರೆ. ಇದು ಸರ್ಕಾರದ ದೃಷ್ಟಿಗೋಚರವಾಗುವುದು. ಹಾಳು ಗಿಡಗಳನ್ನು ತೆಗೆಯಿಸುವುದೂ, ನದಿಯ ಪಕ್ಕದಲ್ಲಿ ಮಲಮೂತ್ರ ವಿಸರ್ಜಿಸುವದಕ್ಕೆ ಆತಂಕಪಡಿಸುವದೂ ಸಹ ಸರ್ಕಾರದವರು ನಡೆಯಿಸುವಲ್ಲಿ ಎಷ್ಟೋ ಅನುಕೂಲವೂ ಪ್ಲೇಗ್ ನಿರೋಧವೂ ಆಗಿದೆ. ಇಲ್ಲಿನ ಯೂನಿಯನ್ ಮೆಂಬರ್ ಮೆ|| ಪಿ. ಎಂ. ನಂಜುಂಡಪ್ಪಯ್ಯನವರು ತಾ ೨೦ನೇ ಆಗಸ್ಟು ಪತ್ರಿಕೆಯಲ್ಲಿ ಬರೆದುಕೊಂಡಂತೆ, ಈ ಊರಿನ ಚತುರ್ದಿಕ್ಕಿಗೆ ಇರುವ ದಾರಿ ಕಷ್ಟವು ಕೇಳುವವರೇ ಇಲ್ಲ. ಇಲ್ಲಿ ಸರಾಸರಿ ೨,೮೦೦ ಪ್ರಜಾ ಸಂಖ್ಯೆ ಇದ್ದುದರಿಂದ ಮೊದಲು ಮುನಿಸಿಪಾಲಿಟಿ ಇದ್ದಾಗ್ಗೆ ಅಬ್ಕಾರಿಯು ಮತ್ತು ವ್ಯಾಪಾರ ತೆರಿಗೆಗಳಿಂದ ಹೆಚ್ಚು ಉತ್ಪತ್ತಿ ಇತ್ತು. ಈಗ ಯೂನಿಯನ್ ಬಂದಿದ್ದರಿಂದ ಬಡಬಗ್ಗರ ಮನೆ ತೆರಿಗೆ ಜಾಸ್ತಿ, ಆದಾಗ್ಯೂ ಮೊದಲಿನ ಉತ್ಪತ್ತಿ ಇಲ್ಲ. ಮುಂಚಿನಂತೆ ಮುನಿಸಿಪಾಲಿಟಿ ಆದರೆ ಉತ್ತಮ.—ಈ ಸ್ಥಳದಲ್ಲಿ ಸಾಲೀಯಾನ ಜಕಾತಿಗೆ ೧,೦೦೦ ರೂಪಾಯಿಗಳು ಕಂದಾಯ ಕೊಡುವ ನಾಡಿಗರು ಮೆ|| ಧರ್ಮರಾಯನಾಚಾರ್ಯರು ಇನಾಂದಾರರೂ, ಪೆನ್‌ಷನ್‌ದಾರರೂ ಇರುತ್ತಾರೆ. ಪಟೇಲರೊಬ್ಬರು ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಎರಡಕ್ಕೂ ಒಬ್ಬರೇ ಸಭಾಸದರಾಗಿ ನಿಯಮಿಸಲ್ಪಟ್ಟಿರೋಣವು ಗೌವರ್ನಮೆಂಟಿನವರ ಉದ್ದೇಶದ ಫಲಿತಾರ್ಥವನ್ನು ಪ್ರಜೆಗಳು ಎಷ್ಟರಮಟ್ಟಿಗೆ ಧಾರಾಳವಾಗಿ ಪಡೆಯುವರೆಂಬುವದನ್ನು ವಾಚಕರ ಅವಗಾಹನೆಗೆ ಬಿಡಲ್ಪಟ್ಟಿರುವುದು.—ಮಳೆ ಇಲ್ಲ. ಸುವರಾ ಇಲ್ಲ. ಜಿನಸಿ ಧಾರಣೆ ದಿನೇ ದಿನೇ ಏರುತ್ತ, ರೈತರೂ ಬಡ ಪ್ರಜೆಗಳೂ ಗಾಬರಿಯಾಗಿದ್ದಾರೆ. ಈ ತಾಲ್ಲೂಕು ಅಮಲ್ದಾರರು ಚಟುವಟಿಕೆಯವರಾಗಿಯೂ ನಿಷ್ಪಕ್ಷಪಾತಿಗಳಾಗಿಯೂ, ದಯಾಳುಗಳಾಗಿಯೂ ಕೆಲಸವನ್ನು ನಡೆಯಿಸುತ್ತಿರುವುದು ಪ್ರಜೆಗಳಿಗೆ ಸಂತೋಷ.—ಕಳೆದ ತಿಂಗಳು ತಾ ೨೩, ೨೪, ೨೫, ಈ ಮೂರು ದಿವಸಗಳಲ್ಲಿ ಶ್ರೀ ಸತ್ಯಧರ್ಮ ಸ್ವಾಮಿಗಳವರ ಆರಾಧನೆಯು ಬಹು ವಿಜೃಂಭಣೆಯಿಂದ ನಡೆಯಿತು. ಬಹು ಜನ ಯಾತ್ರಾರ್ಥಿಗಳು ಸೇರಿದ್ದರು. ಅಲಂಕಾರಗಳಿಗೆ ಸುಮಾರು ೩ ರೂಪಾಯಿ ತೂಕವುಳ್ಳ ಬೆಳ್ಳಿ ಥಾಲಿಗಳು ಕೊಡಲ್ಪಟ್ಟವು.

ಇಂಡಿಯಾ ದೇಶದ ವೃತ್ತಾಂತಗಳು.

ಕರ್ನೂಲಿನಲ್ಲಿ ನಡೆದ ರಾಜದ್ರೋಹದ ಮೊಕದ್ದಮೆಯಲ್ಲಿ ಕೃಷ್ಣಸ್ವಾಮಿ ಶರ್ಮ ಎಂಬ ಆಸಾಮಿಗೆ ಸೆಷನ್ಸ್ ಜಡ್ಜರವರು ಐದು ವರುಷದ ಒಂಕೋಲಿ ಶಿಕ್ಷೆಯನ್ನು ವಿಧಿಸಿದರು.

ಅಸ್ಸಾಂ ಪ್ರಾಂತದಲ್ಲಿ ಮೆ|| ಗ್ಲಾಸ್ ಎಂಬೊಬ್ಬ ಯೂರೋಪಿಯನ್ ಪ್ಲಾಂಟರನ್ನು ಅವನ ಕೈ ಕೆಳಗೆ ತೋಟದಲ್ಲಿ ಕೆಲಸಮಾಡುತ್ತಿದ್ದವನೊಬ್ಬನು ಗುಂಡಿನಿಂದ ಹೊಡೆದು ಕೊಂದುಹಾಕಿರುತ್ತಾನೆ.

ಈ ವರುಷ ಕಳೆದ ಮಾರ್ಚ ಅಖೈರಿನಲ್ಲಿ ಹಿಂದುಸ್ಥಾನದ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಒಟ್ಟು ೧೨,೮೪,೪೧೧ ಜನರು ೧೪ ಕೋಟಿ ರೂಪಾಯಿಯನ್ನು ಠೇವಣಿ ಇಟ್ಟಿರುತ್ತಾರೆಂದು ಗೊತ್ತಾಯಿತು.

ಈ ಸಲ ಡಿಸೆಂಬರ್ ಕಡೆ ವಾರದಲ್ಲಿ ಮದರಾಸ್ ಪಟ್ಟಣದಲ್ಲಿ ನಡೆಯುವ ನ್ಯಾಷನಲ್ ಕಾಂಗ್ರೆಸ್ ಎಂಬ ಹಿಂದುಸ್ಥಾನದ ರಾಷ್ಟ್ರಸಭೆಗೆ ಡಾಕ್ಟರ್ ರಾಸ್ ಬಿಹಾರಿ ಘೋಷರವರು ಪ್ರೆಸಿಡೆಂಟರಾಗಿ ನಿಲ್ಲುವರೆಂದು ಪ್ರಕಟವಾಗಿದೆ.

ಬೆಳ್ಗಾಂವದಲ್ಲಿ ಗಣಪತಿಯನ್ನು ಬಿಡುವುದಕ್ಕಾಗಿ ಹಿಂದೂಗಳು ಮೆರವಣಿಗೆ ಮಾಡಿಕೊಂಡು ಹೋದಾಗ ಅವರಿಗೂ ಪೋಲೀಸಿನವರಿಗೂ ಜಗಳಗಳಾದವೆಂತಲೂ, ಪೋಲೀಸಿನವರು ಕೆಲವು ಸಂಸಾರಿಕರನ್ನೂ ಕೆಲವು ಹುಡುಗರನ್ನೂ ದಸ್ತಗಿರಿ ಮಾಡಿರುತ್ತಾರೆಂತಲೂ ಪ್ರಕಟವಾಗಿದೆ.

ಸಂಯುಕ್ತ ಆಧಿಪತ್ಯಗಳಲ್ಲಿ ಇನ್ನೂ ೨,೫೦,೦೦೦ ಪ್ರಜೆಗಳು ಕ್ಷಾಮ ಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿರುತ್ತಾರೆ. ಮಧ್ಯ ಹಿಂದುಸ್ಥಾನದಲ್ಲಿ ದಿನಸಿಗಳ ಧಾರಣೆ ಸ್ವಲ್ಪ ಇಳಿದಿದೆ. ಇತರ ಕಡೆಗಳಲ್ಲಿ ಇನ್ನೂ ಧಾರಣೆ ಕಡಮೆಯಾಗಿಲ್ಲ.

ಮೆ|| ತಿಲಕರಿಗೆ ಶಿಕ್ಷೆಯಾದದ್ದನ್ನು ಕೇಳಿ ಬೊಂಬಾಯಿಯ ಹಿಂದೂ, ಮಹಮ್ಮದೀಯ ಮತ್ತು ಪಾರ್ಸಿ ಸ್ತ್ರೀಯರು ಸಭೆಯನ್ನು ನಡಿಸಿ ಉಪನ್ಯಾಸಗಳನ್ನು ಮಾಡಿ, ಮೆ|| ತಿಲಕರವರ ಪತ್ನಿ ಪುತ್ರಾದಿಗಳಿಗೆ ತಮ್ಮ ವ್ಯಸನವನ್ನು ತಿಳಿಸಬೇಕೆಂದು ತೀರ್ಮಾನ ಮಾಡಿದರು.

ಬರೋಡಾ ಸಂಸ್ಥಾನದ ಮಹಾರಾಜರವರ ಜ್ಯೇಷ್ಠ ಪುತ್ರರೂ ಯುವರಾಜರೂ ಆದ ಸುಮಾರು ೨೫ ವರುಷ ವಯಸ್ಸಿನ ಫತ್ತೆಸಿಂಗರವರು ಕಳೆದ ವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಚಿಕ್ಕವಯಸ್ಸಿನ ಪತ್ನಿಯವರೂ ಒಂದು ಸಣ್ಣ ಮಗುವೂ ಇರುತ್ತಾರೆ.

ಕಳೆದ ತಾ ೨೫ನೇ ಮಂಗಳವಾರ ಕಾಶ್ಮೀರ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯ ಕಾರ್ಖಾನೆಯಲ್ಲಿ ಶಕ್ತಿಯನ್ನು ಉತ್ಪತ್ತಿ ಮಾಡುವುದು ಪ್ರಾರಂಭವಾಯಿತು. ಆ ಸಂತೋಷಕ್ಕಾಗಿ ಮಹಾರಾಜರವರು ನೂರಾರುಮಂದಿ ಸರದಾರರನ್ನೂ ದೊಡ್ಡ ಮನುಷ್ಯರನ್ನೂ ಕರೆಸಿಕೊಂಡಿದ್ದರು.

ಹೈದರಾಬಾದು ಸಂಸ್ಥಾನದ ನೈಜಾಮರವರು ಪ್ರಯಾಣ ಮಾಡಿ ಮೂರು ತಿಂಗಳ ತನಕ ಬೊಂಬಾಯಿ ಪಟ್ಟಣದಲ್ಲಿರುತ್ತಾರೆಂತಲೂ, ತರುವಾಯ ಅಜ್ಮೀರ, ದೆಹಲಿ, ಆಗ್ರಾ, ಲಕ್ನೋ ಮೊದಲಾದ ನಗರುಗಳಿಗೆ ಹೋಗಿ ಸಂಚಾರಮಾಡಿಕೊಂಡು ಬರುತ್ತಾರೆಂದು ವರ್ತಮಾನವಿದೆ.

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ಒಟ್ಟು [illegible] ಜನರು ಪ್ಲೇಗು ಉಪದ್ರವದಲ್ಲಿ ಕಾಲವಾದರು. ಬೊಂಬಾಯಿ ಆಧಿಪತ್ಯ [illegible], ಮಧ್ಯಪ್ರಾಂತ್ಯಗಳು ಮತ್ತು ಬೀರಾರ [illegible], ಮೈಸೂರು ಸಂಸ್ಥಾನ ೧೪೮, ಮದರಾಸಾಧಿಪತ್ಯ ೯೦, ಹೈದರಾಬಾದು ಸಂಸ್ಥಾನ ೬೦, ಈ ರೀತಿ ಮರಣಗಳಾಗಿರುತ್ತವೆ.

ಕಲ್ಕತ್ತೆಯ ಪೋಲೀಸಿನವರು ಕಳೆದ ವಾರ ಅಲ್ಲಿನ ಇಬ್ಬರು ಬ್ಯಾರಿಸ್ಟರುಗಳ ಮನೆಗಳನ್ನೂ ಇತರ ದೊಡ್ಡ ಮನುಷ್ಯರ ಹನ್ನೊಂದು ಮನೆಗಳನ್ನೂ ಪ್ರವೇಶಿಸಿ ಶೋಧನೆಮಾಡಿದರು. ಆ ಮನೆಗಳಲ್ಲಿ ಅನುಮಾನಾಸ್ಪದವಾದ ಪದಾರ್ಥಗಳೇನೂ ಸಿಕ್ಕಲಿಲ್ಲ. ಕೆಲವು ಕಾಗದ ಪತ್ರಗಳನ್ನು ತೆಗೆದುಕೊಂಡು ಹೋದರು.

ಮರ್ಗೋಲೆಯಲ್ಲಿ ಕೆಲವು ದಿನಗಳ ಕೆಳಗೆ ಕಾರ್ಖಾನೆಯನ್ನು ಇಟ್ಟಿದ್ದ ಆಬ್ಬಾ ಸಾಹೇಬ ರಾಮಚಂದ್ರ ಎಂಬಾತನ ಮೇಲೆ ಮೊಕದ್ದಮೆ ಮಾಡಿದ್ದರು. ಈ ಮೊಕದ್ದಮೆಯಲ್ಲಿ ಮ್ಯಾಜಿಸ್ಟ್ರೇಟರು ೧,೫೦೦ ರೂಪಾಯಿನ ಎರಡು ಜಾಮೀನ್ ಕೊಡಬೇಕೆಂದು ತೀರ್ಮಾನ ಮಾಡಿದರು. ಆದರೆ ಅಪರಾಧಿಯು ಜಾಮೀನ್ ಒದಗಿಸಲಿಲ್ಲವಾದ್ದರಿಂದ ಒಂದು ವರುಷ ಕಠಿಣ ಸಜಾ ಶಿಕ್ಷೆಯನ್ನು ಅನುಭವಿಸಬೇಕಾಯಿತು.

ಕೆಲವು ದಿನಗಳ ಕೆಳಗೆ ಕೊಯಮುತ್ತೂರು ಜೈಲ್‌ಖಾನೆಯಲ್ಲಿ ಅನೇಕ ಖೈದಿವಾಸರು ದಂಗೆ ಎದ್ದು ಜೈಲ್ ಅಧಿಕಾರಿಗಳನ್ನು ಹೊಡೆದು ಗಲಭೆ ಮಾಡಿದ್ದರಷ್ಟೆ. ಸರ್ಕಾರದವರು ದಂಗೆ ಮಾಡಿದ ೩೪ ಮಂದಿ ಖೈದಿಗಳನ್ನು ಹಿಡಿದು ದರ್ಯಾಫ್ತುಮಾಡಿದರು. ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ದರ್ಯಾಫ್ತುಮಾಡಿ, ಕಳೆದ ವಾರ ಇಬ್ಬರನ್ನು ಖುಲಾಸ್ ಮಾಡಿ, ಉಳಿದ ೩೨ ಮಂದಿ ಅಪರಾಧಿಗಳಿಗೆ ತಲಾ ೩ ೪ ವರುಷಗಳ ಕಠಿಣ ಸಜಾ ವಿಧಿಸಿರುತ್ತಾರೆ.

ಕಳೆದ ವಾರ ಬಂಗಾಳ ಆಧಿಪತ್ಯಕ್ಕೆ ಸೇರಿದ ಕಂಚ್ರಪಾರಾ ಎಂಬ ಸ್ಟೇಷನ್ ಸಮೀಪದಲ್ಲಿ ಜನರು ಕುಳಿತು ಪ್ರಯಾಣಮಾಡುತ್ತಿದ್ದ ಒಂದು ರೈಲ್ ಗಾಡಿಯ ಕೆಳಗೆ ಒಂದು ಸಿಡಿಮದ್ದಿನ ಗುಂಡು ಮಹಾ ಸ್ಫೋಟನೆ ಹೊಂದಿತು. ಕೂಡಲೇ ರೈಲ್ವೆ ಅಧಿಕಾರಿಗಳು ಅಲ್ಲಿಗೆ ಹೋಗಿ ಪರಿಶೀಲನೆ ಮಾಡಿದರು. ದೇವರ ದಯದಿಂದ ಗಾಡಿಯೊಳಗಿದ್ದವರ ಪೈಕಿ ಯಾರಿಗೂ ಅಪಾಯವೇನೂ ಆಗಿರಲಿಲ್ಲ. ಆ ಗುಂಡು ಅಲ್ಲಿ ಹಾರುವದಕ್ಕೆ ಕಾರಣವೇನೆಂದು ಪೋಲೀಸಿನವರು ಪತ್ತೆಕರದೂಡು ನಡಿಸುತ್ತಿದಾರೆ.

ಹಿಂದುಸ್ಥಾನದ ಮಹಮ್ಮದೀಯರು ಬೊಂಬಾಯಿಪಟ್ಟಣದ ಮೂಲಕ ತಮ್ಮ ಪವಿತ್ರ ಸ್ಥಾನಗಳಾದ ಮೆಕ್ಕಾ, ಮದೀನಾಗಳಿಗೆ ಹೋಗಬೇಕಾಗಿರುವುದರಿಂದ ಅವರಿಗೆ ಬೊಂಬಾಯಿ ಪಟ್ಟಣದಲ್ಲಿ ತಂಗುವುದಕ್ಕೆ ಸರಿಯಾದ ಸ್ಥಳವಸತಿ ಇರಲಿಲ್ಲ. ಈ ಲೋಪವನ್ನು ಹೋಗಲಾಡಿಸಲು ಬೊಂಬಾಯಿ ಗವರ್ನಮೆಂಟಿನವರು ೩,೪೦೦ ಚದರಗಜದಷ್ಟು ವಿಸ್ತಾರವಾದ ಜಾಗದ ಕ್ಷೇತ್ರವನ್ನು ಒಂದು ಮುಸಾಫರಖಾನೆ ಕಟ್ಟುವಂತೆ ಕೊಡಿಸಿರುತ್ತಾರೆ. ಆ ಸ್ಥಳದಲ್ಲಿ ಅಲ್ಲಿನ ಮುಸಲ್ಮಾನ ದೊಡ್ಡ ಮನುಷ್ಯರು ತಮ್ಮ ಸಂಗಡದ ಯಾತ್ರಿಕರಿಗಾಗಿ ಕಟ್ಟಡಗಳನ್ನು ಕಟ್ಟಿಸಬೇಕೆಂದು ಹಣವನ್ನು ಕೂಡಿಸಲಾರಂಭಿಸಿರುವರು.

ಪಂಜಾಬ್ ಗವರ್ನಮೆಂಟಿನವರು ಲೂಧಿಯಾನಾ, ಅಮೃತಸಾರ, ಸಿಯಾಲ್ಕೋಟ ಈ ಮೊದಲಾದ ಕಡೆಗಳಲ್ಲಿ ಸಣ್ಣ ಸಣ್ಣ ಪ್ರದರ್ಶನ ಶಾಲೆಗಳನ್ನು ಏರ್ಪಡಿಸಿ, ಗ್ರಾಮಾಂತರಗಳಲ್ಲಿ ನೇಯ್ಗೆಯವರು ಸುಲಭವಾಗಿ ಉಪಯೋಗಿಸ ಬಹುದಾದಂಥಾ ಮಗ್ಗಗಳನ್ನು ಇಡಿಸುತ್ತಾರೆ. ಇದಲ್ಲದೆ ಅಪೇಕ್ಷಿಸಿ ಅಲ್ಲಿಗೆ ಹೋಗತಕ್ಕ ನೇಯ್ಗೆಯವರಿಗೆ ಆ ಮಗ್ಗಗಳ ರಚನೆಯನ್ನೂ ಅವುಗಳಲ್ಲಿ ಕೆಲಸ ಮಾಡುವ ವಿಧಾನವನ್ನೂ ಕಲಿಸಿ ಕೊಡುವರು. ಮತ್ತು ನೇಯ್ಗೆಯವರು ಪರಸ್ಪರ ಸಹಾಯದ ಕಂಪನಿಗಳನ್ನು ಮಾಡಿಕೊಳ್ಳುವಂತೆ ಸರ್ಕಾರದವರು ಅವರಿಗೆ ಪ್ರೋತ್ಸಾಹಕೊಟ್ಟು, ಆ ಮಗ್ಗಗಳನ್ನು ಸುಂಥ ಕ್ರಯಕ್ಕೆ ವಿಕ್ರಯಮಾಡುವುದಾಗಿ ಒಪ್ಪಿಗೆ ಕೊಡಿಸಿರುತ್ತಾರೆ.

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಸಿರಾಂಪುರದಲ್ಲಿ ಮೂರು ಮಂದಿ ಪೋಲೀಸಿನವರಂತೆ ದಿರಸು ಹಾಕಿಕೊಂಡು, ಒಬ್ಬ ಜಮೀನ್‌ದಾರನ ಮನೆಯೊಳಕ್ಕೆ ನುಗ್ಗಿ, ಸಿಡಿಮದ್ದಿನ ಗುಂಡುಗಳು ಇವೆ ಎಂದು ಮನೆಯನ್ನೆಲ್ಲಾ ಶೋಧನೆ ಮಾಡುತ್ತಿದ್ದರು. ಕೆಲವು ಪೋಲೀಸಿನವರು ಬೇರೆ ದಿರಸಿನಲ್ಲಿ ಆ ಮನೆಗೆ ಬಂದಾಗ ಆ ಮೋಸಗಾರರು ಅವರನ್ನು ಕುರಿತು—ನೀವು ಬೇರೆ ದಿರಸಿನಲ್ಲಿ ಯಾಕೆ ಬಂದಿರಿ, ನೀವು ಠಾಣಾಕ್ಕೆ ಹೋಗಿ ಎಂದು ಹೆದರಿಸಿ ಕಳುಹಿಸಿಬಿಟ್ಟು, ಸ್ವಲ್ಪ ಹೊತ್ತಾದ ಮೇಲೆ ಅದೇ ಪೋಲೀಸಿನವರನ್ನು ಠಾಣಾದಿಂದ ಬರಮಾಡಿಕೊಂಡು, ಬೆಳಗಿನ ತನಕ ಆ ಮನೆಯನ್ನು ಉಸ್ತುವಾರಿ ಮಾಡುತ್ತಿರಬೇಕೆಂದು ಪಹರೆ ನೇಮಿಸಿ, ತಾವು ಕಳವು ಮಾಡಿದ್ದ ೬,೦೦೦ ರೂಪಾಯಿನ ನಗನಾಣ್ಯಗಳನ್ನು ಸಾಗಿಸಿಕೊಂಡು ಹೋದರು. ಈಚೆಗೆ ಈ ಮೂರು ಮಂದಿಯೂ ಸಿಕ್ಕಿಬಿದ್ದಿದಾರೆ.

ಸಾಧುಬಂಡು ಗೋಪಾಳೆ ಎಂಬೊಬ್ಬ ದಕಾಯಿತಿ ಕೋರನು ದಕಾಯಿತಿ ನಡಿಸಿದ್ದಕ್ಕಾಗಿ ೨೫ ವರುಷಗಳ ಹಿಂದೆ ಹಿಡಿಯಲ್ಪಟ್ಟನು. ಆಗ ಸೆಷನ್ಸ್ ಜಡ್ಜರು ಅವನಿಗೆ ಯಾವಜ್ಜೀವವೂ ಒಂಕೋಲಾ ಶಿಕ್ಷೆಯನ್ನು ಅನುಭವಿಸಬೇಕೆಂಬ ಶಿಕ್ಷೆಯನ್ನು ವಿಧಿಸಿದರು. ಆದರೆ ಪೋಲೀಸಿನವರು ಅವನನ್ನು ಜೈಲಿಗೆ ಸಾಗಿಸಿಕೊಂಡು ಹೋಗುತ್ತಿದ್ದ ವೇಳೆಯಲ್ಲಿ ಹ್ಯಾಗೋ ಅವನು ತಪ್ಪಿಸಿಕೊಂಡು ಹೋದನು. ಅವನು ಇದುವರೆಗೂ ನೈಜಾಮರವರ ಸಂಸ್ಥಾನದೊಳಗೆ ಸೇರಿಕೊಂಡಿದ್ದನೆಂದು ಕಾಣುತ್ತದೆ. ಹೈದರಾಬಾದ್ ಸರ್ಕಾರದವರು ಅವನನ್ನು ಕಳೆದ ವಾರ ಹಿಡಿದು, ಇಂಗ್ಲಿಷ್ ಅಧಿಕಾರಿಗಳ ವಶಕ್ಕೆ ಒಪ್ಪಿಸಿದರು. ಹೀಗೆ ತಪ್ಪಿಸಿಕೊಂಡು ಹೋದದ್ದಕ್ಕೆ ಮ್ಯಾಜಿಸ್ಟ್ರೇಟರು ಅವನಿಗೆ ನಾಲ್ಕು ತಿಂಗಳ ಕಠಿಣ ಸಜಾ ವಿಧಿಸಿದಾರೆ. ಅವನು ಈ ಸಜಾ ಅನುಭವಿಸಿದ ಮೇಲೆ ಒಂಕೋಲಿ ಶಿಕ್ಷೆಗೆ ಗುರಿಮಾಡುವರು.

ಮೆ|| ತಿಲಕರಿಗೆ ಬೊಂಬಾಯಿ ಹೈ ಕೋರ್ಟಿನವರು ಶಿಕ್ಷೆ ವಿಧಿಸಿದಾಗ್ಗೆ ಆ ಪಟ್ಟಣದ ಕೆಲವು ಕಡೆಗಳಲ್ಲಿ ಜನರು ದೊಂಬಿ ಮಾಡಿ ಗಲಭೆಯೆಬ್ಬಿಸಿದ್ದನ್ನೂ, ಈ ಗಲಭೆಯನ್ನು ಅಡಗಿಸುವುದಕ್ಕೆ ಸರ್ಕಾರಿ ಸೈನಿಕರು ಅವರ ಮೇಲೆ ಗುಂಡು ಹೊಡೆಯಬೇಕಾಗಿ ಬಂದದ್ದೂ, ಆ ದೊಂಬಿಯಲ್ಲಿ ಹದಿಮೂರು ಜನರು ಸತ್ತು ಹೋದದ್ದೂ, ಈಚೆಗೆ ಸರ್ಕಾರದವರು ದೊಂಬಿಗಾರರನ್ನು ಹಿಡಿದು ಅವರಿಗೆಲ್ಲಾ ಸಜಾ ಜುಲ್ಮಾನೆ ಶಿಕ್ಷೆಗಳನ್ನು ವಿಧಿಸಿದ್ದೂ ವಾಚಕರಿಗೆ ತಿಳಿದಿರುವುದಷ್ಟೆ. ಗವರ್ನಮೆಂಟಿನವರು ಕರುಣವಿಟ್ಟು ಆ ಪೈಕಿ ಕೆಲವು ಜನರ ಅಪರಾಧಗಳನ್ನು ಕ್ಷಮಿಸಿ ಜೈಲಿನಿಂದ ಬಿಡುಗಡೆಮಾಡಿದರು. ಉಳಿದವರು ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದರು. ಹೈ ಕೋರ್ಟ್ ಜಡ್ಜಿಗಳು ಅವರ ಮೊಕದ್ದಮೆಗಳನ್ನೆಲ್ಲಾ ಪರಾಂಬರಿಸಿ, ಕೆಳಕೋರ್ಟಿನ ಶಿಕ್ಷೆಯನ್ನು ಬಹಳ ಸ್ವಲ್ಪಕ್ಕೆ ಇಳಿಸಿ, ಅವರನ್ನೆಲ್ಲಾ ಖುಲಾಸ್ ಮಾಡಿಸಿರುತ್ತಾರೆ.

ರಾಜದ್ರೋಹದ ಅಪರಾಧಕ್ಕಾಗಿ ಮೆ|| ಬಾಲಗಂಗಾಧರ ತಿಲಕರವರಿಗೆ ಬೊಂಬಾಯಿ ಹೈಕೋರ್ಟಿನವರು ಆರು ವರುಷಗಳ ದ್ವೀಪಾಂತರ ಶಿಕ್ಷೆಯನ್ನೂ ೧,೦೦೦ ರೂಪಾಯಿ ಜುಲ್ಮಾನೆಯನ್ನು ವಿಧಿಸಿದರಷ್ಟೆ. ಬೊಂಬಾಯಿ ಗವರ್ನಮೆಂಟಿನವರು ಈಗ ಆ ಜುಲ್ಮಾನೆಯನ್ನು ಮಾಫಾಮಾಡಿ ಅವರಿಗೆ ವಾಪಸಾ ಕೊಡಬೇಕೆಂದು ಹುಕುಂ ಕೊಟ್ಟಿದಾರೆ. ಆದರೆ ಮೊಕದ್ದಮೆಯನ್ನು ವಿಲಾಯಿತಿಯಲ್ಲಿರುವ ಪ್ರಿವಿ ಕೌನ್ಸಿಲ್ ಎಂಬ ಕೋರ್ಟಿನಲ್ಲಿ ಅಪೀಲ್ ಮಾಡುವುದಕ್ಕೆ ಅಪ್ಪಣೆಕೊಡಬಾರದೆಂದು ಹೈಕೋರ್ಟ್ ಜಡ್ಜರು ತೀರ್ಮಾನಮಾಡಿದರು. ಆದರೆ ಆ ಮೊಕದ್ದಮೆಯನ್ನು ಪ್ರಿವಿ ಕೌನ್ಸಿಲ್ ಕೋರ್ಟಿನಲ್ಲಿ ಅಪೀಲ್ ಮಾಡುವುದಕ್ಕಾಗಿ ಮೆ|| ತಿಲಕರ ಹಿತಚಿಂತಕರು ವಿಲಾಯಿತಿಗೆ ಹೋಗಿರುವರು. ಇತ್ತಲಾಗಿ ಮೆ|| ತಿಲಕರನ್ನು ಸಜಾ ಅನುಭವಿಸುವುದಕ್ಕೋಸ್ಕರ ಜಹಜಿನ ಮೇಲೆ ಬರ್ಮಾಗೆ ಸಾಗಿಸಿಕೊಂಡು ಹೋದರೆಂದು ಪ್ರಕಟವಾಗಿದೆ. ಬೊಂಬಾಯಿ ಗವರ್ನಮೆಂಟಿನವರು ಮೆ|| ತಿಲಕರ ವಯಸ್ಸನ್ನೂ ಅವರ ಶರೀರ ಸ್ಥಿತಿಯನ್ನೂ ಪರಿಗಣಿಸಿ, ಅವರಿಗೆ ವಿಧಿಸಲ್ಪಟ್ಟಿರುವ ೬ ವರುಷಗಳ ಕಠಿಣ ಸಜೆಯನ್ನು ಸಾಧಾರಣ ಸಜೆಯಾಗಿ ಬದಲಾಯಿಸಿ ಹುಕುಂ ಕೊಟ್ಟಿರುತ್ತಾರೆಂದು ತಂತಿ ವರ್ತಮಾನ ಬಂದಿದೆ.

ವಿದೇಶ ವರ್ತಮಾನಗಳು.

ರಷ್ಯಾ ಚಕ್ರಾಧಿಪತ್ಯಕ್ಕೆ ಸೇರಿದ ಎಂಟು ಪ್ರಾಂತ್ಯಗಳಲ್ಲಿ ವಾಂತಿಭೇದಿ ಉಪದ್ರವು ಪ್ರಾಪ್ತವಾಗಿದೆ ಎಂತಲೂ, ಇದುವರೆಗೆ ೫,೧೬೦ ಜನರು ಆ ರೋಗದಲ್ಲಿ ತೀರಿಹೋದರೆಂತಲೂ ತಂತಿ ವರ್ತಮಾನ ಬಂದಿದೆ.

ವಿಲಾಯಿತಿಗೆ ಸೇರಿದ ನಾಟಿಂಗ್ಹಾಂ ಪಟ್ಟಣದಲ್ಲಿ ಕ್ಲೇ ಎಂಬುವನಿಗೆ ಸಣ್ಣ ಮಗುವಾಗಿದ್ದಾಗ ಸಿಡುಬಿನ ಉಪದ್ರ ಬಂದು, ಕಣ್ಣು ಹೋಗಿ ಕಳೆದ ೩೬ ವರುಷಗಳಿಂದಲೂ ಕುರುಡನಾಗಿದ್ದನು. ಕೆಲವು ಕಾಲದಿಂದ ಮ್ಯಾಂಚೆಸ್ಟರ್ ಪಟ್ಟಣದ ಒಬ್ಬ ವೈದ್ಯನು ಅವನ ಕಣ್ಣಿಗೆ ಔಷಧ ಹಾಕಿ ಚಿಕಿತ್ಸೆ ಮಾಡುತ್ತಾ ಬಂದದ್ದರಿಂದ ಆ ಕುರುಡನಿಗೆ ಈಗ ಕಣ್ಣು ಕಾಣುವಂತಾಯಿತು.

ಕಪೂರ್ಥಲಾ ಸಂಸ್ಥಾನದ ಮಹಾರಾಜರವರೂ, ಮಹಾರಾಣಿಯವರೂ, ರಾಜಕುಮಾರರುಗಳೂ ಪರಿವಾರ ಸಹಿತ ವಿಲಾಯತಿಯಿಂದ ಪ್ರಯಾಣ ಬೆಳಸಿ ಪ್ಯಾರಿಸ್ ಪಟ್ಟಣಕ್ಕೆ ಬಂದರು. ಇವರು ಕೆಲವು ವಾರಗಳ ತರುವಾಯ ಹಿಂದುಸ್ಥಾನವನ್ನು ಕುರಿತು ತೆರಳುವವರಾಗಿದ್ದಾರೆ.

ಯುಗಾಂಡಾ ಪ್ರಾಂತ್ಯದಲ್ಲಿ ಹಬ್ಬಿರುವ ನಿದ್ರಾರೋಗವನ್ನು ಪರಿಶೋಧನೆ ಮಾಡಿ, ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ಕೆಲವು ಪ್ರಸಿದ್ಧ ವೈದ್ಯರು ಕಳೆದ ವಾರ ಆಫ್ರಿಕಕ್ಕೆ ಪ್ರಯಾಣ ಮಾಡಿದರು. ಸರ್ ಡೇವಿಡ್ ಬ್ರೂಸ್ ಎಂಬವರೇ ಆ ವೈದ್ಯರ ಮುಖಂಡರಾಗಿ ಹೋಗಿರುತ್ತಾರೆ.

ವಿಲಾಯತಿಯಲ್ಲಿ ಮೋಟಾರ್ ಗಾಡಿಯೊಳಗೆ ಕುಳಿತು ಹೋಗುತ್ತಿದ್ದಾಗ ಲಾರ್ಡ್ ಕರ್ಜನ್ ಯವರಿಗೆ ಅಪಾಯ ಸಂಭವಿಸಿ ಗಾಯವಾಯಿತೆಂದು ಕಳೆದ ವಾರ ತಿಳಿಸಿದ್ದೆವಷ್ಟೆ. ಅವರ ಗಾಯಗಳು ವಾಸಿಯಾಗಿ ಅವರಿಗೆ ಆರೋಗ್ಯವಾಗುತ್ತಿದೆ ಎಂದು ಈಚೆಗೆ ಕಡೇ ವರ್ತಮಾನ ಬಂದಿರುವುದು.

ವಿಲಾಯತಿಗೆ ಸೇರಿದ ಲ್ಯಾಂಕೆಷೈರ್ ಡಿಸ್ಟ್ರಿಕ್ಟಿನ ಹತ್ತಿ ಬಟ್ಟೆಗಳ ಕಾರ್ಖಾನೆಗಳಲ್ಲಿ ಕೂಲಿಮಾಡುವ ಸುಮಾರು ಒಂದೂವರೆ ಲಕ್ಷ ಜನರು ತಮಗೆ ಕೂಲಿಯನ್ನು ಜಾಸ್ತಿಯಾಗಿ ಕೊಡದಿದ್ದ ಪಕ್ಷದಲ್ಲಿ ಕೆಲಸಕ್ಕೆ ಬರುವುದಿಲ್ಲವೆಂದು ಹಟಹಿಡಿದಿರುತ್ತಾರೆ. ಸರ್ಕಾರದ ಅಧಿಕಾರಿಗಳು ಈ ವಿಷಯದಲ್ಲಿ ಕಾರ್ಖಾನೆಗಳ ಮಾಲೀಕರಿಗೆ ಸಮಾಧಾನ ಹೇಳಿ, ಕೂಲಿ ಹೆಚ್ಚಿಸುವಂತೆ ಸಾಹಸಪಡುತ್ತಿದ್ದಾರೆ.

ವಿಲಾಯತಿಯಲ್ಲಿ ಕಾಲವಾದ ಮಿ|| ವಿಲ್ಕಿನ್‌ಸನ್ ಸ್ಮಿತ್ ಎಂಬಾತನು ನಾಟಿಂಗ್ಹಂ ಪಟ್ಟಣದಲ್ಲಿ ಸಿಕ್ಕಿಲ್ಲದ ವಿಧವೆಯರಿಗೆ ಪೆನ್ಷನ್ ಕೊಡಬೇಕೆಂದು ತನ್ನ ಆಸ್ತಿಯನ್ನು ಕೊಟ್ಟಿರುತ್ತಾನೆ. ಈಗ ಈ ಆಸ್ತಿಯ ಉತ್ಪತ್ತಿಯಿಂದ ೭೦ ಮಂದಿ ವಿಧವೆಯರಿಗೆ ಜೀವನ ನಡೆಯುತ್ತಿದೆ. ಇನ್ನು ೭೦ ಮಂದಿಗೆ ಜೀವನಾಂಶ ಕೊಡಬೇಕೆಂದು ಗೊತ್ತುಮಾಡುವುದರಲ್ಲಿದ್ದಾರೆ. ಈ ಜೀವನಾಂಶಕ್ಕೆ ೧,೬೦೦ ಜನರಿಗಿಂತಲೂ ಹೆಚ್ಚು ವಿಧವೆಯರು ಅರ್ಜಿ ಬರೆದುಕೊಂಡಿರುವರು.

ಸ್ಕಾಟ್ಲೆಂಡಿನ ಒಬ್ಬ ಸಂಗೀತಗಾರನು ಅಮೇರಿಕದಲ್ಲಿ ಸಂಚಾರ ಮಾಡುತ್ತಿದ್ದಾನೆ. ನ್ಯೂಯಾರ್ಕ್ ಪಟ್ಟಣದ ಎರಡು ನಾಟಕಶಾಲೆಗಳಲ್ಲಿ ಈತನಿಗೆ ವಾರಕ್ಕೆ ೧೫,೦೦೦ ರೂಪಾಯಿ (ತಿಂಗಳಿಗೆ ೬೦ ಸಾವಿರ) ಸಂಬಳ ಕೊಟ್ಟು, ನಾಟಕಗಳಲ್ಲಿ ಸಂಗೀತ ಹಾಡುವ ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ. ಮೂವತ್ತು ಕೋಟಿ ಪ್ರಜೆಗಳನ್ನು ಪರಿಪಾಲಿಸುತ್ತಲಿರುವ ಹಿಂದುಸ್ಥಾನದ ವೈಸ್‌ರಾಯಿಯವರ ಸಂಬಳಕ್ಕಿಂತಲೂ ಆ ಸಂಗೀತಗಾರನ ಸಂಬಳವು ಮೂರರಷ್ಟು ಹೆಚ್ಚಾಗಿಯೂ, ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಸಲ್ಲುವ ವರುಷಾಸನಕ್ಕಿಂತ ಎರಡರಷ್ಟಾಗಿಯೂ, ವಿಲಾಯತಿ ರಾಜ್ಯದ ಚೀಫ್ ಜಡ್ಜ್‌ರವರ ಸಂಬಳಕ್ಕಿಂತ ಆರರಷ್ಟು ಹೆಚ್ಚಾಗಿಯೂ ಇರುತ್ತದೆ.

ಸ್ಪೈನ್ ರಾಜ್ಯದಲ್ಲಿ ಸಾಮಾನ್ಯವಾಗಿ ಸಂತೋಷ ಸಂಭ್ರಮ ಕಾಲಗಳಲ್ಲಿ ಜನರು ಗೂಳೀ ಕಾಳಗಗಳನ್ನು ನಡಿಸಿ ನೋಡುವುದು ಒಂದು ವಿಶೇಷವಾಗಿದೆ. ಆ ನೋಟವನ್ನು ನೋಡುವುದಕ್ಕೆ ಸಾವಿರಾರು ಜನರೂ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಸಾಮಾನ್ಯವಾಗಿ ಸೇರುವರು. ಕಾಳಗ ನಡಿಯುವಾಗ್ಗೆ ಬಹು ಘೋರವಾದ ರಕ್ತಪ್ರವಾಹ ಹರಿಯುವುದು ಅಪರೂಪವಲ್ಲ. ಇಂಥಾ ಕ್ರೂರತರವಾದ ವಿನೋದವನ್ನು ಈ ನವನಾಗರಿಕ ಕಾಲದಲ್ಲೂ ನಡಿಸುವುದು ನಾಗರಿಕರಾದ ಯಾವ ಜನರಿಗೂ ಯೋಗ್ಯವಾಗಿರಲಾರದೆಂದೂ, ಇದನ್ನು ಖಂಡಿತವಾಗಿ ನಿಲ್ಲಿಸುವುದೇ ಕ್ಷೇಮಕರವೆಂದೂ ಸ್ಪೈನ್ ರಾಜ್ಯದ ಒಂದು ಸಮಾಜದವರು ದೊರೆಯವರಿಗೆ ಅರ್ಜಿ ಬರೆದುಕೊಂಡಿದ್ದಾರೆ.

ಪರ್ಷಿಯಾ ರಾಜ್ಯದಲ್ಲಿ ಪ್ರಜಾ ಪಕ್ಷದವರಿಗೂ ರಾಜ ಪಕ್ಷದವರಿಗೂ ಕೆಲವು ಕಾಲದಿಂದ ಕಲಹ ಕದಿವಾಟಗಳು ನಡೆಯುತ್ತಾ, ಅನೇಕ ಪ್ರಜೆಗಳು ಪ್ರಾಣ ಕೊಟ್ಟರೆಂತಲೂ, ತಮ್ಮ ಆಸ್ತಿ ಪಾಸ್ತಿಗಳನ್ನೆಲ್ಲಾ ಕಳೆದುಕೊಂಡರೆಂತಲೂ, ಇಂಥಾ ಕ್ರೂರತರವಾದ ಕೊಲೆಗಳನ್ನು ನಿಲ್ಲಿಸಿ ಪ್ರಜಾ ಸಮ್ಮದಿಯನ್ನು ಕಾಪಾಡಬೇಕೆಂತಲೂ ಪರ್ಷಿಯಾ ರಾಜ್ಯದ ಸ್ತ್ರೀಯರು ವಿಲಾಯತಿ ರಾಜ್ಯದ ಮಹಾರಾಜ್ಞೀ ರವರಿಗೆ ವಿಜ್ಞಾಪನಾ ಪತ್ರಿಕೆಯನ್ನು ಬರೆದು ಕೊಂಡರು. ಚಕ್ರವರ್ತಿನಿಯವರ ಪರವಾಗಿ ಸರ್ ಎಡ್ವರ್ಡ್ ಗ್ರೇ ಯವರು ಆ ವಿಜ್ಞಾಪನೆಗೆ ಜವಾಬಾಗಿ—ವಿಲಾಯತಿ ರಾಜ್ಯದವರೂ ರಷ್ಯಾ ರಾಜ್ಯದವರೂ ಪರ್ಷಿಯಾದಲ್ಲಿ ಪ್ರಜಾ ಸಮ್ಮದಿಗೆ ಕುಂದಕ ಬಾರದಂತೆ ಸಲಹೆಗಳನ್ನು ಕೊಟ್ಟು ಪ್ರಯತ್ನ ಮಾಡುತ್ತಿದ್ದಾರೆ ಎಂದು ತಂತೀ ವರ್ತಮಾನ ಕಳುಹಿಸಿದ್ದಾರೆ.

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟರ್."

ವ್ಯವಹಾರನಿರ್ಣಯ—ಪುಟಗಳು ೩೮೪ ಹಿಂದೂ ಮಹಮ್ಮದೀಯ ಲಾಗಳು, ೬೯ ಶಾಸನಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ. ಪಿ. ಸಹಿತ ರೂ. ೧-೨ ಆಣೆ. [40-22]

ಕನ್ನಡ ಲಾ ರಿಪೋರ್ಟರ್—ಪ್ರಿವಿಕೌನ್ಸಿಲ್, ಹೈಕೋರ್ಟ್, ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಂದಾವರ್ತಿ ಹೊರಡುತ್ತದೆ. ವರ್ಷದ ಚಂದಾ ೧-೮-೦ ಮುಂಗಡ, ಯಾ, ವಿ. ಪಿ. ಬಿಡಿಪ್ರತಿಗೆ ೦-೩-೦

ಇವುಗಳನ್ನು ಪ್ರಕಟಿಸುವವರು "ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯುವುದು

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ.)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ ; ಪಿತ್ತ ; ಪಿತ್ತಜ್ವರ ; ಅಜೀರ್ಣ, ಅಗ್ನಿಮಾಂದ್ಯ ; ಗಾಟರಿ ; ಅಶಕ್ತಿ ; ಎದೆಯು ಕಲ್ಲಣಿಸುವುದು ; ತಲೆತಿರುಗುವುದು ; ತಲೆನೋವು ; ಹೊಟ್ಟೆಯುಬ್ಬರ ; ಹುಳಿತೇಗಿನ ಹೊಟ್ಟೆನೋವು ; ಹೆಂಗಸರ ವ್ಯಾಧಿಗಳು ; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [69-4]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಿಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ, ಡೋನ್ಸ್ ಪಿ. ಒ. ಬಾಕ್ಸ್ ೨೦, ಬೊಂಬಾಯಿ — ಇವರಲ್ಲಿ ದೊರೆಯುವುದು

ಸ್ವಲ್ಪಕಾಲಕ್ಕೆ ಕ್ರಯವನ್ನು ೩-೯-೦ ಇಂದ ೭ ರೂ. ಗೆ ಇಳಿಸಿದೆ. ಕೆಲವು ಕಾಲ ಮಾತ್ರ

ಯಾವ ತರಹದ ಮೋಸವೂ ಇಲ್ಲ	ಪದಗಳು ಬಹಳ ಸುಲಭ.
ವಿಪರೀತವಾಗಿ ಮಾರಾಟವಾಗುತ್ತಿದೆ	ಜಾಗ್ರತೆ ನೋಡಿ

ಲೋಕದಲ್ಲೆಲ್ಲಾ ಅತ್ಯಂತ ಆಶ್ಚರ್ಯವಾದುದು.

69 9

ಬಹು ಸೊಗಸಾದ ಮತ್ತು ಮೇಜಿನ ಮೇಲಿಡುವುದಕ್ಕೆ ಉಪಯುಕ್ತವಾದ ದೊಡ್ಡ ಗಡಿಯಾರ ಮತ್ತು ಜೇಬಿನಲ್ಲಿಡುವುದಕ್ಕೆ ಯೋಗ್ಯವಾದ ವಾಚ್ ಗಡಿಯಾರ, ಎರಡು ಗಡಿಯಾರಗಳು ಸಿಕ್ಕುತ್ತವೆ.

ಮಹನೀಯರುಗಳೇ,

ನಮ್ಮ ಹಿಂದೂ ದೇಶದ ವರ್ತಕರನೇಕರು ತಾವು ಮಾರುವ ಪದಾರ್ಥಗಳ ವಿಷಯ ವಿಪರೀತವಾಗಿ ಹೊಗಳಿ, ಸುಳ್ಳು ಸಂಗತಿಗಳನ್ನು ಪ್ರಕಟಿಸುವವರಾಗಿದ್ದಾರೆ. ಅಂಥಾ ವರ್ಣನೆಯನ್ನು ಓದುವವರು ಪದಾರ್ಥಗಳನ್ನು ಕೊಂಡ ಮೇಲೆ ಮೋಸಹೋಗುವರು. ಆದರಿಂದಲೇ ಜನರು ಕ್ರಯದ ಪಟ್ಟಿಗಳನ್ನು ಓದುವುದಿಲ್ಲ. ಆದರೆ ನೀವೆಂದಿಗೂ ನಮ್ಮ ಅಂಗಡಿಯ ವಿಷಯ ಯಾವ ಸಂಶಯವನ್ನೂ ಇಡಬಾರದು. ನಮ್ಮ ಅಂಗಡಿಯಲ್ಲಿ ನೀವು ಒಂದಾವರ್ತಿ ವ್ಯಾಪಾರ ಮಾಡಿದರೆ ಇನ್ನೆಂದಿಗೂ ನಮ್ಮನ್ನು ಬಿಟ್ಟು ಬೇರೆ ಅಂಗಡಿಗಳಿಗೆ ಹೋಗಲಾರಿರಿ ನೋಡಿರಿ, ಜೇಬಿನಲ್ಲಿ ಇಡುವ ಒಂದು ಸೊಗಸಾದ ಗಡಿಯಾರವನ್ನು ಕೇಳಿದರೆ ಅದರ ಜೊತೆಯಲ್ಲಿ ೩೧ ಪದಾರ್ಥಗಳನ್ನು ಕಳುಹಿಸುತ್ತೇವೆ. ಗಡಿಯಾರಕ್ಕೆ ಒಂದಾವರ್ತಿ ಕೀ ಕೊಟ್ಟರೆ ೩೦ ಗಂಟೆಗಳ ಕಾಲ ನಡೆಯುವುದು. ಸೊಗಸಾದ ಮುಳ್ಳುಗಳು, ಬಿಳೀ ಗಾಜಿನ ಮೇಲೆ ಬರೆಯಲ್ಪಟ್ಟ ಗಂಟೆಗಳ ಅಂಕೆಗಳು, ಇವುಗಳು ಅದರಲ್ಲಿರುತ್ತವೆ. ಇದಕ್ಕೆ ಐದು ವರ್ಷಗಳು ಗ್ಯಾರಂಟಿ ಕೊಡುತ್ತೇವೆ. ಈ ಗಡಿಯಾರವನ್ನು ಕಳುಹಿಸುವುದಕ್ಕೆ ಮೊದಲು ಅದನ್ನು ನಾವು ಚನ್ನಾಗಿ ಪರೀಕ್ಷೆಮಾಡಿಯೇ ಕಳುಹಿಸುವೆವು. ಅದರ ಜೊತೆಯಲ್ಲಿ ಕೆಳಗೆ ಕಂಡ ಪದಾರ್ಥಗಳನ್ನು ಕಳುಹಿಸುವೆವು.—ಒಂದು ಸೊಗಸಾದ ಗಡಿಯಾರದ ಸರಪಣಿ, ಮೇಜಿನ ಮೇಲೆ ಇಡುವ ದೊಡ್ಡ ಗಡಿಯಾರ ಒಂದು, ವಿಲಾಯತಿಯಲ್ಲಿ ಮಾಡಿದ ದುಡ್ಡಿನ ಪೆಟ್ಟಿಗೆಯೊಂದು, ಇದಕ್ಕೆ ಆರೆಗಳೂ ಬೀಗದ ಕೈಗಳೂ ಇರುವವು. ಒಂದು ಉತ್ಕೃಷ್ಟವಾದ ಡಬ್ಬಿ, ತಿಂಗಳುಗಟ್ಟಲೆ ಒಂದೇ ಸಮನೆ ಎಣ್ಣೆ ಕಾಯಿಯುವ ಸೊಗಸಾದ ಲ್ಯಾಂಪ್ ದೀಪ, ಒಂದು ಸೊಗಸಾದ ಫೌಂಟನ್ ಪೆನ್, ಒಂದು ಜೊತೆ ಬಾಳಿಕೆ ಬರುವ ಮೇಜೋಡು, ಸಂತದ ಹಿಡಿಯುಳ್ಳ ಒಂದು ಚಾಕು, ಒಂದು ಬಲವಾದ ಚರ್ಮದಿಂದ ಮಾಡಿದ ದುಡ್ಡು ಹಾಕುವ ಚೀಲ, ಒಂದು ಸೊಗಸಾದ ಬಾಚಣಿಗೆ, ಒಂದು ದರ್ಪಣ (ಕನ್ನಡಿ), ಸೊಗಸಾದ ಕತ್ತರಿ, ರಾತ್ರಿಯಲ್ಲಿ ಹಾಕಿಕೊಳ್ಳುವ ಕಂಬಳಿ ಟೋಪಿ, ಷರ್ಟ್ ಜಾಕೆಟ್ಟಿಗೆ ಉಪಯೋಗವಾದ ಸೊಗಸಾದ ಗುಂಡಿಗಳು, ಒಂದು ಕನ್ನಡಕ, ಒಂದು ಸೊಗಸಾದ ಪೆಟ್ಟಿಗೆಯಲ್ಲಿ ಸೋಪು, ಒಂದು ಉತ್ಕೃಷ್ಟವಾದ ಕೈವಸ್ತ್ರ, ಥಳಥಳಿಸುವ ಪಿನ್ನು, ರಬ್ಬರು, ಸೊಗಸಾದ ಮಸೀಕುಡಿಕೆ, ಸೀಸದ ಕಡ್ಡಿ ಬರೆಯುವ ಯಂತ್ರ), ಇನ್ನೆರಡು ಪೆನ್ನಾ ಕಡ್ಡಿಗಳು ಆರು ಸೀಸದ ಕಡ್ಡಿಗಳು, ನೂರೈವತ್ತು ಸೊಗಸಾದ ಆಲ್‌ಪಿನ್ನುಗಳು (ಲಕೋಟೆಗಳು), ನೂರೈವತ್ತು ಲೆಟರ್ ಕಾಗದಗಳು ನೂರು ಪೋಸ್ಟ್ ಕಾರ್ಡುಗಳು, ಎಪ್ಪತ್ತೈದು ಪೆನ್ನಾ ಮುಳ್ಳುಗಳು, ಇವೆಲ್ಲವುಗಳಿಗೆ ಏಳು ರೂಪಾಯಿ ಮಾತ್ರವೇ (Rs 7—0—0) ಅಪೇಕ್ಷಿಸುತ್ತೇವೆ. ಅರ್ಧ ಬೆಲೆಗಳನ್ನು ಮುಂಗಡವಾಗಿ ಕೆಳಗೆ ಕಂಡ ವಿಳಾಸಕ್ಕೆ ಮನಿಯಾರ್ಡರ್ ಮೂಲಕ ರವಾನಿಸಬೇಕು

ಎಂ. ಎ. ಘಟಾಲಾ ಮತ್ತು ಕಂಪನಿ,
ಚಿತ್ತೂರು, ಉತ್ತರ ಅರ್ಕಾಟು.

"ಇಸ್ತಿಹಾರ್"

73-2

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :—

ಬರುವ ಅಕ್ಟೋಬರು ಮಾಹೆ ೭ನೇ ತಾರೀಖು ಬುಧವಾರದ ಬಾಗಾಯಿತು ಕೆಲವು ಎಳೆಕಾರ ಅಮೃತಮಹಲ್ ಇಲಾಖಾ ಗಂಡು ರಾಸುಗಳನ್ನು ಪ್ರದರ್ಶನದ ಬಳಿ ಮೈಸೂರು ಮೊಕ್ಕಾಂನಲ್ಲಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಆ ಸಮಯದಲ್ಲಿ ಹಾಜರಾಗಬಹುದು.

ಮೊಕ್ಕಾಂ—ಹುಣಸೂರು ತಾ|| ೧೫—೯—೧೯೦೮.	ಎಚ್. ನಂಜುಂಡರಾಜೇ ಅರಸ್, ಸೂಪರಿಂಟೆಂಡೆಂಟ್,

ಅಮೃತಮಹಲ್ ಡಿಪಾರ್ಟ್‌ಮೆಂಟ್.

ಏನೇನು ನೋವು ಆಗದೆ ಕೂದಲು ತೆಗೆಯುವ

ಬಾದಶಾಹೀ ಸಬಕಾರ.

70-4

ಬೇಕಾದ ಜಾಗದಲ್ಲಿ ಈ ಸಬಕಾರ ಹಚ್ಚಿದರೆ ಕೂದಲು ಬಹಳ ನುಣುಪಾಗಿ ಹೋಗುತ್ತದೆ, ಮತ್ತು ತೊಗಲು ಮೆತ್ತಗೆ ಆಗುತ್ತದೆ. ಈ ಸಬಕಾರದಲ್ಲಿ ಸುಣ್ಣ ಮತ್ತು ಹರಿದಳ ಮುಂತಾದ ಕೆಟ್ಟ ಪದಾರ್ಥದ ಮಿಶ್ರಣವೇನೂ ಇಲ್ಲ.

ಕಿಮ್ಮತ್ತು ೩ ವಡೆ ಇರುವ ೧ ಪೆಟ್ಟಿಗೆಗೆ ರೂ. ೧, ಪೋಸ್ಟೇಜು ೮ ಆಣೆ.

ತಾ. ಕ.—ಪತ್ರವ್ಯವಹಾರ ಪೂರ್ಣವಿಳಾಸ ಕೊಟ್ಟು ಇಂಗ್ಲಿಷ್ ಭಾಷೆಯಲ್ಲಿ ಮಾಡಬೇಕು. ನಮ್ಮ ವಿಳಾಸ :—

ಪಿ. ಸಿ. ಮೆಹತ್ರಾ,
ಕಾಲಬಾದೇವಿ, ಮುಂಬಯಿ.

ಮಧುರೆ ಸೀರೆ ! ಗಟ್ಟಿ ಬಣ್ಣ ! ೧೬|| ಮೊಳದುದ್ದ !!

57-8

ಬಿಳಿಯ ಚೆಕ್ಕೆ ಜರಿ ಜವ್ವಿಗೆಯಿಂದ ಕೂಡಿದ ಕೆಂಪು ಅಥವಾ ಕಪ್ಪು ಬಣ್ಣದ್ದು ರೂ. ೩-೮ ಅ ನಯವಾಗಿ ಅಂಚು ಸೆರಗಿನಲ್ಲಿ ಜರತಾರಿಯುಳ್ಳದ್ದು ರೂ ೫ ಬೆಳ್ಳಿಯ ಕಲಾಬತ್ತು ಸೀರೆ, ರೂ. ೭, ರೂ. ೯, ರೂ. ೧೦ ಹೆಚ್ಚು ಖರೀದಿಗೆ ಉತ್ತಮ ಮಾಲು ದೊರೆಯುತ್ತೆ.

ಮದ್ರಾಸು ಬಿಳಿಯ ರೇಷ್ಮೆ ಅಂಚಿನ ಸೀರೆ ರೂ. ೬.

ಒಂದೇ ತರದ ೨ ರೇಷ್ಮೆ ಸೆರಗುಳ್ಳ ೨ ಅಂಗುಲ ಬಿಳಿರೇಷ್ಮೆ ರುದ್ರಾಕ್ಷಿ ಅಂಚುಳ್ಳ ಗಟ್ಟಿ ಕಪ್ಪು ಬಣ್ಣದ ೧೯ ಮೊಳದ ಸೀರೆಗೆ ರೂ. ೬. ೩ ಅಂಗುಲದಂಚಿನದಕ್ಕೆ ರೂ. ೭! ಬಹು ನಯವಾದ ನೂಲು ಬಿಳಿ ಆಸ್ಮಾನಿ ರೇಷ್ಮೆ ಅಂಚು, ೨ ಮೊಳದ ರೇಷ್ಮೆ ೨ ಸೆರಗು, ಬಹು ಸೊಗಸಾಗಿಯೂ ಎಂದಿಗೂ ಕೆಡದ ಖಾತರಿ ಬಣ್ಣದಲ್ಲಿ ತಯಾರಿಸಿದ ೨ ಅಂಗುಲದಂಚಿನದಕ್ಕೆ ರೂ ೯!., ೩ ಅಂಗುಲದಂಚಿನದಕ್ಕೆ ರೂ. ೧೧!.

ಬುರ್ನೀಸ್ ! "ಬ್ಲಾಂಕೆಟ್" ಎಂಬ ಹೊಸ ಬನಾತು ! ರೂ ೬.

ಶುದ್ಧ ಉಣ್ಣೆಯ ಹೊದಿಕೆಯು ಮಖಮಲಿನಂತೆ ಮೆತ್ತಗೂ ಛಳಿಗೆ ಬೆಚ್ಚಗೂ ಇದೆ. ಉದ್ದ ೯೦, ಅಗಲ ೭೯ ಅಂಗುಲ. ಕ್ರಯ ರೂ. ೬. ರೇಷ್ಮೆಯ (ಕೆಂಪು) ವಸ್ತ್ರಗಳು ! ೨ ಮೊಳದಗಲ ! ರೂ. ೫.

೯ ಮೊಳದ ಮೇಲಾಕೋಟೆ ಅಂಚಿನ ಪಂಚೆಗಳು ಜೊತೆ ರೂ. ೩.

ವಿಳಾಸ.—ರಾವ್ ಎಂಪೋರಿಯಂ, ಸ್ಪರ್ಡ್ ಟ್ಯಾಂ ರೋಡ್,
ವೇಪೇರಿ, ಮದ್ರಾಸು.

ಭಾರತಿ ಸಂಪಂಗಿ ರಾಮಯ್ಯನವರಿಂದ ರಚಿಸಿದ ತಾನಾಗಿ ಇಂಗ್ಲಿಷ್ ಕಲಿಯುವಿಕೆ.

61-6

ಇಂಗ್ಲಿಷ್ ಭಾಷೆಯನ್ನು ಬರೆಯುವುದಕ್ಕೂ, ಓದುವುದಕ್ಕೂ, ಮಾತಾಡುವುದಕ್ಕೂ, ಬೋಧಕರ ಸಹಾಯ ಸ್ವಲ್ಪವೂ ಇಲ್ಲದೆ ಒಂದೆರಡು ತಿಂಗಳುಗಳಲ್ಲಿಯೇ ತಾನಾಗಿ ಕಲಿಸುವ ಅತ್ಯುತ್ತಮವಾದ ಪುಸ್ತಕ. ಕ್ರಯ ೧—೮—೦

ಪ್ರಶ್ನೋತ್ತರ ಲೇಖ್ಯಬೋಧಿನಿ.

ಸ್ವಲ್ಪ ಪ್ರತಿಗಳೇ ಉಳಿದಿವೆ. ೩೬೦ ಪುಟಗಳು. ಆಯಾ ಮತ ಪದ್ಧತಿಯನ್ನನುಸರಿಸಿ ಬರೆಯುವ ಮಯಾರ್ದೆ, ಒಕ್ಕಣೆಗಳು, ಸಿವಿಲ್, ಮೇಜಿಸ್ಟ್ರೇಟ್, ರೆವಿನ್ಯೂ, ಪೋಲೀಸ್, ಇಂಜನಿಯರ್, ಫಾರೆಸ್ಟು, ಯಜ್ಕೇಷನ್, ವಿದ್ಯಾಭ್ಯಾಸ, ಮತ್ತು ಅನ್ಯ ಇತರ ಇಲಾಖೆಗಳ ಬಗೆಬಗೆ ಸಂಗತಿಗಳೂ, ರೈತರಿಗೆ ರಿಯಾಯಿತಿ ದೊರೆಯುವ ಬಗೆಬಗೆ ಅರ್ಜಿಗಳೂ, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಹಿಂದೂ ಲಾ, ಮಹಮ್ಮದೀಯ ಲಾ, ಕಂಪನೀಸ್ ಆಕ್ಟ್, ಲ್ಯಾಂಡ್ ಅಕ್ವಿಜಿಷನ್, ಸೊಡ್ಡು, ಆರಂಭ ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳೂ, ಕೋರ್ಟುಗಳಿಗೂ ಪೋಲೀಸಿಗೂ ಇರುವ ಅಧಿಕಾರ, ವರ್ತಕರಿಗುಪಯೋಗವಾದ ಎಲ್ಲಾ ರೋಜು ವಗೈರೆ ಲೆಕ್ಕಗಳು, ಶಾನುಭೋಗರಿಗೆ ಲೆಕ್ಕ ಬರೆಯುವ ರೀತಿ, ಇವುಗಳ ಸಾರಾಂಶವನ್ನೆಲ್ಲಾ ವಿವರಿಸಿದೆ ಪುಸ್ತಕದಲ್ಲಿರುವ ಸಂಗತಿಗಳನ್ನೆಲ್ಲಾ ವಿವರಿಸಲು ಸ್ಥಳಸಂಕೋಚದಿಂದ ಇಲ್ಲಿ ಸೂಕ್ಷ್ಮವಾಗಿ ತಿಳಿಸಲಾಗಿದೆ. ಕ್ರಯ ೧—೮—೦. ವಿಳಾಸ —ವ್ಯಾನೇಜರ್ ಕರ್ಣಾಟಕ ಪುಸ್ತಕ ಶಾಲಾ, ಬಳ್ಳಾರಿ ಪೋಸ್ಟ್, ತಾ|| ಮಾಲೂರು, ಕೋಲಾರ್ ಡಿಸ್ಟ್ರಿಕ್ಟ್.

ಪೆರೂನಾ ಎಲ್ಲಾ ಶೀತರೋಗಗಳನ್ನೂ ನಿವಾರಣೆ ಮಾಡುವುದರಲ್ಲಿ ಅಮೂಲ್ಯವಾಗಿದೆ ಎಂದು ಪ್ರಮುಖ ಆಸ್ಪತ್ರೆಗಳು ಹೇಳುತ್ತವೆ.



SISTERS OF THE GOOD SHEPHERD, MONTREAL.

ಸಿಸ್ಟರ್ಸ್ ಆಫ್ ದಿ ಗುಡ್ ಷೆಪರ್ಡ್, ಮಾಂಟ್ರೀಲ್. [34-26]

ಭೂಮಿಯ ಮೇಲಿರುವ ಆಸ್ಪತ್ರೆಗಳೆಲ್ಲಾ ಶೀತರೋಗಿಗಳನ್ನ ಚಿಕಿತ್ಸೆ ಮಾಡುವಲ್ಲಿ ಪೆರೂನಾ ಔಷಧವು ಬಹು ಬೆಲೆಯುಳ್ಳದ್ದೆಂದು ಕಂಡುಕೊಂಡಿವೆ.

ಶೀತ ನೆಗಡಿ ಮುಂತಾದ್ದು ಶ್ವಾಸಕೋಶಕ್ಕೆ ಬರುವ ರೋಗವೆಂತಲೂ ಅದು ಕಡೇ ಪಕ್ಷ ವರುಷಕ್ಕೆ ಎಂಟು ತಿಂಗಳ ಕಾಲ ಬರುವುದೆಂತಲೂ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ.

ಈ ದೇಶದಲ್ಲಿ ಶೀತಕಾಲವು ದೀರ್ಘವಾದ ಮತ್ತು ಕಠಿಣವಾದ ಹವಾ ಉಳ್ಳದ್ದಾಗಿ ಬಹಳ ಕಾಲ ಇರುವುದರಿಂದ ಆಗಲೇ ಶೀತ ಜಾಡ್ಯಗಳು ಜಾಸ್ತಿಯಾಗುವವೆಂದು ಖಂಡಿತವಾಗಿ ಹೇಳಬಹುದು.

ಆದಕಾರಣ ಕೆನಡಾ ಜನರು ಶೀತರೋಗಕ್ಕೆಲ್ಲಾ ಪೆರೂನಾ ನಂಬಿಕೆಯಾದ ಒಳ್ಳೇ ಔಷಧವೆಂದು ತಿಳಿದುಕೊಂಡಲೇ ಅದನ್ನು ಎಲ್ಲಾ ಜನರು ಪ್ರೀತಿಪೂರ್ವಕ ಉಪಯೋಗಿಸುತ್ತಾ ಬಂದರು. ಸಂಸಾರಗಳಲ್ಲಿ ಮಾತ್ರವೇ ಅಲ್ಲ; ದೊಡ್ಡ ಆಸ್ಪತ್ರೆಗಳಲ್ಲಿ ಕೂಡ ಆ ರೋಗಗಳನ್ನು ತಡೆಯುವುದಕ್ಕೂ ನೂರಾರು ರೋಗಿಗಳಿಗೆ ಸೌಖ್ಯವನ್ನುಂಟುಮಾಡುವುದಕ್ಕೂ ಪೆರೂನಾವನ್ನು ಉಪಯೋಗಿಸುತ್ತಾ ಬಂದರು.

ಬಡಬಗ್ಗರಾಗಿಯೂ ರೋಗಿಗಳಾಗಿಯೂ ಇರುವಂಥವರಿಗೆ ಅದು ತುಂಬಾ ಪ್ರಯೋಜನವನ್ನುಂಟುಮಾಡಿದ ವಿಷಯದಲ್ಲಿ ದೊಡ್ಡ ಆಸ್ಪತ್ರೆಯವರು ಒಪ್ಪಿ ಸಮ್ಮತಿಯನ್ನು ಕೊಡಲು ಹಿಂತೆಗೆದಿಲ್ಲವು.

ಈ ದೊಡ್ಡ ಆಸ್ಪತ್ರೆಗಳ ಪೈಕಿ ಸಿಸ್ಟರ್ಸ್ ಆಫ್ ಗುಡ್ ಷೆಫರ್ಡ್ ಎಂಬುದು ಒಂದು. ಅದರ ನೌಕರಮಾನೆಯವರು ಹೇಳುವುದನ್ನು ಕೇಳಿ :—

ಓಹಿಯೋ ಡಿಸ್ಟ್ರಿಕ್ಟ್ ಕೊಲಂಬಸ್ ಪಟ್ಟಣದಲ್ಲಿರುವ ಪೆರೂನಾ ಕಂಪನಿಗೆ—

ಕಳೆದ ಕೆಲವು ತಿಂಗಳಿಂದಲೂ ನಮ್ಮ ಕಾಯಿಲೆಯವರಿಗೂ ಬಡವರಿಗೂ ಪೆರೂನಾವನ್ನು ಪ್ರಯೋಗಮಾಡಿರುತ್ತೇವೆ. ಅದು ನಮಗೆ ತುಂಬಾ ತೃಪ್ತಿಯನ್ನುಂಟುಮಾಡಿರುತ್ತದೆಂದು ಸಂತೋಷವಾಗಿ ಹೇಳುವೆವು.

ಗುಡ್ ಷೆಫರ್ಡ್ ಸಹೋದರಿಯರು, ಆಗೀಷ್ಟು ೨೦, ೧೯೦೩.

ಮಾಂಟ್ರೀಲ್.

ಈ ಆಸ್ಪತ್ರೆಯು ಬಹು ದೀರ್ಘಕಾಲ ಈ ಔಷಧವನ್ನು ಉಪಯೋಗಿಸುತ್ತಾ ಬಂದು ಅದರ ಗುಣದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಬದಲಾಯಿಸುವುದಕ್ಕೆ ಕಾರಣವನ್ನು ಕಾಣದೆ, ತಮ್ಮ ಸಂತೋಷದ ತೃಪ್ತಿಯನ್ನು ಕುರಿತು ಮುಂದೆ ಹೇಳುವ ಪ್ರಕಾರ ಬರೆದಿರುತ್ತಾರೆ.—

ಮಾಂಟ್ರೀಲ್, ನೊವೆಂ. ೭, ೧೯೦೩.

ಪೆರೂನಾ ಅನೇಕ ರೋಗಿಗಳಿಗೆ ಸೌಖ್ಯಕೊಟ್ಟಿರುವುದನ್ನು ಕಂಡಿರುತ್ತೇವೆ. ಅದು ಒಳ್ಳೇ ಬಲಕಾರಿಯಾದ ಸೇವನೆಯ ಔಷಧವೆಂದು ಹೇಳಬಲ್ಲೆವು; ಮತ್ತು ಅದಕ್ಕಾಗಿ ನಾವು ನಿಮ್ಮನ್ನು ವಂದಿಸುತ್ತೇವೆ.

ಗುಡ್ ಷೆಫರ್ಡ್ ಆಸ್ಪತ್ರೆ ಸಹೋದರಿಯರು.

ಶೀತವು ಶರೀರದಲ್ಲಿ ಸೇರೂರಿತೆಂದರೆ ಅದನ್ನು ಹೋಗಲಾಡಿಸುವುದು ತುಂಬಾ ಕಷ್ಟವಾದೀತು.

ಇದು ಶರೀರವನ್ನು ಹಿಡಿಯುವಂಥಾ, ದೇಹದ ಅಂಗಾಂಗಗಳಿಗೂ ವ್ಯಾಪನೆಯಾಗುವಂಥಾ ರೋಗವಾದ್ದರಿಂದ ಅದನ್ನು ಬಹಳ ಅಗತ್ಯವಾಗಿ ಉಪಯೋಗ ಮಾಡಬೇಕಾಗಿರುತ್ತದೆ.

ಪೆರೂನಾ ಅಂಥಾ ಒಳ್ಳೆಯ ಔಷಧವಾಗಿರುತ್ತದೆ. ಅದು ದೇಹದೊಳಗಿರುವ ಕಾಯಿಲೆಯ ಪ್ರದೇಶವನ್ನು ಹುಡುಕಿ ಹಿಡಿಯುವುದು. ಒಳಚರ್ಮವನ್ನು ಗುಣಪಡಿಸಿ ಗಟ್ಟಿಮಾಡುವುದು. ಅದರ ಮೇಲೆ ಶರೀರಸೌಖ್ಯವು ತಾನಾಗಿ ಹಿಂತಿರುಗಿ ಬರುತ್ತದೆ.

ಶೀತದಿಂದ ಬಹಳ ಕಠಿಣವಾದ ಹಳೇರೋಗಿಗಳನ್ನು ಇಟ್ಟು ಇಲಾಜು ಮಾಡಿ ವಾಸಿಮಾಡಿದ ಅನೇಕ ಆಸ್ಪತ್ರೆಗಳ ಪೈಕಿ ಸೆಂಟ್ ಜಾರ್ಜ್ ಎಂಬುವುದು ಒಂದಾಗಿರುತ್ತದೆ ಈ ಆಸ್ಪತ್ರೆಯವರು ಬರೆಯುವುದನ್ನು ನೋಡಿ.—

"ನಿಮ್ಮ ಪೆರೂನಾವು ನಮಗೆ ತುಂಬಾ ತೃಪ್ತಿಕರವಾಗಿದೆ ಎಂದು ತಿಳಿಸಲು ಸಂತೋಷವುಳ್ಳವರಾಗಿದ್ದೇವೆ. ಮೂವರು ರೋಗಿಗಳು ಈ ಔಷಧವನ್ನು ಉಪಯೋಗಿಸಿದರು. ೩೮ ವರುಷ ವಯಸ್ಸಾದ ರೆನೋಯ ಡೂಬ್ರೋಯಿಸ್ ಎಂಬಾತನು ಶೀತಹಿಡಿದು ಬಹಳ ಕಷ್ಟಪಡುತ್ತಿದ್ದನು. ಈಗ ಅವನು ತುಂಬಾ ಸೌಖ್ಯವಾಗಿದ್ದಾನೆ. ಇಷ್ಟು ಮಟ್ಟಿಗೆ ಅವನು ಅನೇಕ ವರುಷಗಳಿಂದ ಆರೋಗ್ಯವಾಗಿರಲಿಲ್ಲ.

"ಹದಿನೈದು ವರುಷದ ಒಬ್ಬ ಹುಡುಗಿಗೆ ಬಹು ಕಠಿಣವಾದ ಕೆಮ್ಮಲು ಹಿಡಿದಿತ್ತು. ಅವಳಿಗೆ ಪೆರೂನಾವನ್ನು ಅರ್ಧ ಶೀಸೆ ಕೊಡುವುದರಲ್ಲೇ ಆ ಕೆಮ್ಮಲು ಅದೃಶ್ಯವಾಯಿತು.

"ನನ್ನ ವಿಷಯವನ್ನು ಹೇಳುತ್ತೇನೆ ಎರಡು ಬಾಟ್ಲಿ ಔಷಧವನು ತೆಗೆದುಕೊಳ್ಳುವಷ್ಟರಲ್ಲೇ ಪೆರೂನಾ ಬಹು ಶ್ರೇಷ್ಠವಾದ ಬಲವನ್ನು ಕೊಡುವ ಔಷಧವೆಂದು ನನಗೆ ಪರಿಷ್ಕಾರವಾಗಿ ತಿಳಿದು ಬಂದಿದೆ.

"ಇದನ್ನು ಸೇವಿಸುವುದಕ್ಕೆ ಮುಂಚೆ ನಾನು ಕಾಲುಗಂಟೆ ಹೊತ್ತು ನಡೆಯುವುದಕ್ಕೂ ಆಗದೆ ಉಬ್ಬಸಬರುತ್ತಿತ್ತು. ಈಗ ನಾನು ಒಂದು ಮೈಲಿ ದೂರವಾದರೂ ಸುಲಭವಾಗಿ ನಡೆಯಬಲ್ಲೆನು.

"ಈ ಮೂರು ರೋಗಿಗಳ ಮೂಲಕ ನಿಮ್ಮ ಔಷಧವು ಬಹು ಫಲಕಾರಿಯಾದದ್ದೆಂದು ಸಕಲರಿಗೂ ತಿಳಿಯಪಡಿಸುತ್ತೇವೆ."

ಸೆಂಟ್ ಜಾರ್ಜ್ ಆಸ್ಪತ್ರೆ, ಕ್ವೆಬೆಕ್.

ಮೇಲ್ಕಂಡ ಆಸ್ಪತ್ರೆಯಿಂದ ಈಚೆಗೆ ಬಂದಿರುವ ಕಾಗದವು ಈ ರೀತಿಯಾಗಿ ಹೇಳುತ್ತದೆ.—

"ಪೆರೂನಾವು ನಮಗೆ ಎಷ್ಟು ತೃಪ್ತಿಯನ್ನು ಕೊಟ್ಟಿತೋ ಮೂರು ವಾರಗಳ ಕೆಳಗೆ ನಿಮಗೆ ಬರೆದು ತಿಳಿಸಿರುತ್ತೇವೆ. ಅದನ್ನು ಶೀತ, ವಾತ, ಕೆಮ್ಮು, ಆರತಲೆ ನೋವು ಈ ಮೊದಲಾದ ರೋಗಗಳಿಗೆ ಪ್ರಯೋಗಮಾಡಬಹುದೆಂದು ಶಿಫಾರಸು ಮಾಡುತ್ತೇವೆ.

"ನಾನು ಅದನ್ನು ಶಕ್ತಿಪುಷ್ಟಿಗಾಗಿ ಸೇವಿಸಿರುತ್ತೇನೆ. ಅದರಲ್ಲಿ ಹೇಳಿರುವ ಪ್ರಕಾರ ಪ್ರತಿ ಅರ್ಧಗಂಟೆಗೂ ಅರ್ಧ ಟೀಚಮಚದಷ್ಟು ತಗೆದುಕೊಂಡೆನು."

ಮಿಸೆಸ್ ಎಟ್ಟ್ವ ಬೂಕಾರ್, ಡಂಡಗ್, ಹುಷ್ಯ, ಎಂ. ಡಬ್ಲಿಯು ಟಿ ಕೆನಡಾ ಈಕೆ ಬರೆಯುವುದೇನೆಂದರೆ .—

"ನಾನು ಕಿಬ್ಬೊಟ್ಟೆಯಲ್ಲಿ ಶೀತವಾಯು ಹಿಡಿದು ಬಾಧೆಪಡುತ್ತಿದ್ದು, ಕಡೆಗೆ ಡಾಕ್ಟರ್ ಹಾರ್ಟ್‌ಮ್ಯಾನರವರಿಗೆ ಬರೆದು ಕೇಳಿದೆನು. ಅವರು ಹೇಳಿದ ಪ್ರಕಾರ ಔಷಧವನ್ನು ತೆಗೆದುಕೊಳ್ಳುತ್ತಾ ಬಂದೆನು. ಈಗ ಆ ಕಷ್ಟಕರವಾಗಿದ್ದ ಬಾಧೆಯು ನನಗೆ ನಿವಾರಣೆಯಾಗಿ ಸೌಖ್ಯವಾಗಿದೇನೆ. ಮತ್ತು ನಾನು ಅದಕ್ಕಾಗಿ ತುಂಬಾ ಕೃತಜ್ಞಳಾಗಿರುವೆನು. ಪೆರೂನಾವು ಶೀತವಾಯುವಿಗೆ ಸರ್ವೋತ್ತಮವಾದ ಔಷಧವೆಂದು ನಾನು ತಿಳಿದಿದ್ದೇನೆ. ಈಗ ನನಗಿರುವಷ್ಟು ದೇಹಸೌಖ್ಯವು ಹಿಂದೆ ಯಾವಾಗಲೂ ಇರಲಿಲ್ಲ."

ಪೆರೂನಾವು ಕೆಮ್ಮನ್ನು ಶೀತವಾತಗಳನ್ನೂ ಪ್ರಾರಂಭದಲ್ಲೇ ಬೇಗನೆ ಗುಣಮಾಡುವುದಲ್ಲದೆ ಬಹಳ ದೀರ್ಘಕಾಲದ ಶೀತವಾತ ರೋಗಗಳನ್ನೆಲ್ಲಾ ಚನ್ನಾಗಿ ವಾಸಿಮಾಡಬಲ್ಲದು.

ಅದರೂ ರೋಗ ಹುಟ್ಟಿದ ಪ್ರಾರಂಭದಲ್ಲಿ ಬಹಳ ಸ್ವಲ್ಪ ಔಷಧವನ್ನು ಸೇವಿಸಿದ ಮಾತ್ರಕ್ಕೇ ಅದು ನಿವಾರಣೆಯಾಗುತ್ತದೆಂತಲೂ ರೋಗವು ಹಳೆದಾದ ಮೇಲೆ ಬಹಳ ಔಷಧವನ್ನು ಸೇವನೆ ಮಾಡಬೇಕಾಗುತ್ತದೆಂತಲೂ ನಾವು ಹೇಳಬೇಕಾದ ಅಗತ್ಯವಿಲ್ಲ.

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ :—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

28—8—1908 ರಿಂದ 4—9—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	*2	*1	0	0
ಮೈಸೂರು "	*1	0	0	0
ಬೆಂಗಳೂರು ಡಿಸ್ಟ್ರಿಕ್ಟು	72	59	0	0
ಮೈಸೂರು "	67	48	0	0
ಕೋಲಾರ್ "	28	21	2	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	9	1
ಹಾಸನ "	30	23	0	0
ಚಿತ್ರದುರ್ಗ "	0	0	0	0
ಕಡೂರ್ "	41	37	0	0
ಶಿವಮೊಗ್ಗ "	17	8	0	0
* ಹೊರಗಿನದು ಜುಮಲ್ಲು.	258	213	11	1

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಭಾದ್ರಪದ ಬಹುಳ ಚತುರ್ದಶಿ ಗುರುವಾರದಿಂದ ಆಶ್ವೀಜ ಶುದ್ಧ ಪಂಚಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೮ನೇ ಸೆಪ್ಟಂಬರ್.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ಕನ್ಯಾ ಮಾಸ
24	ಗುರು ¶	ಚತುರ್ದಶಿ	26 45	ಪೂ	30 32	9
25	ಶುಕ್ರ ,,	ಅಮಾವಾಸ್ಯೆ	32-12	ಉತ್ತ	35 50	10
26	ಶನಿವಾ ;,	ಪಾಡ್ಯ	36 12	ಹ	11 40	11
27	ರವಿವಾ †	ಬಿದಿಗೆ	38 56	ಚಿ	45-46	12
28	ಚಂದ್ರ *	ತದಿಗೆ	40-14	ಸ್ವಾ	48-41	13
29	ಕುಜ	ಚೌತಿ	40-51	ವಿ	50-26	14
30	ಬುಧ ‡	ಪಂಚಮಿ	39-58	ಅ	51-3	15

¶ ಮಾಸಶಿವರಾತ್ರಿ, ಘಾತಚತುರ್ದಶಿ ,, ಮಹಾಲಯಾಮಾವಾಸ್ಯಾ(ರವಿ, ಸರ್ವತ್ರ, ಮಹಾಲಯ ,, ಶರನ್ನವರಾತ್ರ್ಯಾರಂಭ, ಗಜಗೌರೀವ್ರತ, ಬಾಲಲಕ್ಷ್ಮೀ ಕಲಶಸ್ಥಾಪನ † ಚಂದ್ರೋದಯ. * ಉಪಾಂಗ ಚಂದ್ರ ೧ ‡ ಉಪಾಂಗಲಲಿತಾವ್ರತ

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕಪ್ಪೇ ಅಕ್ಕಿ ಪಲ್ಲಾ ೧ಕ್ಕೆ	ರೂ. ೧೩-೦-೦	೧೩-೦-೦
ಕಂಬೂತಿ ಅಕ್ಕಿ ಅವಲ್	೧೩-೧೨-೦	೧೩-೦-೦
" ನುಚ್ಚು	೧೭-೪-೦	೧೩-೮-೦
ಜಾಪಾನ್ ಅಕ್ಕಿ	೧೩-೦-೦	೧೩-೦-೦
ಸಣ್ಣಕ್ಕಿ ಅವಲ್	೧೯-೦-೦	೨೦-೦-೦
" ದುಂಡು	೧೮-೮-೦	೧೯-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೩-೧೨-೦	೧೮-೦-೦
" ದುಂಡು	೧೩-೦-೦	೧೩-೦-೦
ಕೈಗ ರಾಗಿ ಪಲ್ಲಾ ೧ಕ್ಕೆ	೩-೮-೦	೩-೧೨-೦
ಕಾರ್ರಾಗಿ	೩-೪-೦	೩-೪-೦
ಜೋಳ	೬-೮-೦	೯-೦-೦
ಹಲಸಂದೆ ಪಲ್ಲಾ ೧ಕ್ಕೆ	೧೧-೮-೦	೧೧-೧೨-೦
ಬಿಳೀ ಅವರೆ	೯-೮-೦	೯-೦-೦
ಹೆಸರು	೧೨-೦-೦	೧೨-೮-೦
ಉದ್ದು	೧೩-೦-೦	೧೨-೮-೦
ಕಡಲೆ	೧೫-೪-೦	೧೪-೦-೦
ಎಳ್ಳು ಸೆ. ೧೨೩ ಕ್ಕೆ	೨೧-೦-೦	೧೮-೦-೦
ಹುರುಳಿ	೩-೩-೦	೮-೦-೦
ಹರಳು ೧೨೩ ಸೇರಿಗೆ	೧೨-೦-೦	೧೧-೮-೦
ಸೀಗೇಕಾಯಿ ಮಣ ೧ಕ್ಕೆ	೧-೧೧-೦	೧-೮-೦
ಮೆಣಸಿನಕಾಯಿ	೪-೧೨-೦	೪-೦-೦
" ದುಂಡು	೪-೮-೦	೩-೮-೦
ಬೆಲ್ಲ ದೊಡ್ಡ ಅಚ್ಚು	೫-೪-೦	ವ ೨-೦-೦
ಒಳ್ಳೆಣ್ಣೆ ಮಣ ೧ಕ್ಕೆ	೫-೧೨-೦	೩-೪-೦
ಹರಳೆಣ್ಣೆ "	೫-೦-೦	೪-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೩-೪-೦	೩-೪-೦
ಉಪ್ಪು "	೪-೧೨-೦	೫-೪-೦
ಹುಣಸೇ ಹಣ್ಣು	೧-೮-೦	೧-೪-೦
" ಹಳೇದು	೧-೪-೦	೧-೪-೦
ತುಪ್ಪ ಮಣ ೧ಕ್ಕೆ	೧೪-೧೨-೦	೧೫-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೪-೧೪-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	೪-೪-೦	೫-೦-೦
ಅಳಲೇಕಾಯಿ ಮಣ ೧ಕ್ಕೆ	೦-೧೧-೦	೦-೧೨-೦
ಅಂಟುವಾಳದ ಕಾಯಿ ಮಣ ೧ಕ್ಕೆ	೦-೧೪-೦	೦-೧೪-೦
ಚಿನ್ನ (ಪವನ್) ಕೆಂಪು	೧೫-೩-೦	೧೫-೩-೦
" " ಪಸಿಮೆ	೧೫-೧೪-೦	೧೫-೧೨-೦
" " ಗಟ್ಟಿ ತೊಲ ೧ಕ್ಕೆ	೨೪-೧೧-೦	೨೪-೮-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೬೩-೦-೦	೬. ೮-೦

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore. 24/9/1908.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸರ್ ೧೯೦೮ ನೇ ಇಸವಿ ಅಕ್ಟೋಬರ್ ತಾರೀಖು ೧ ನೇ ಗುರುವಾರ. ಸಂಚಿಕೆ ೧೮

PLEASE HAVE A LOOK AT

The Wonderful Exhibits

OF

THE DIAMOND SOAP COMPANY,

GIRGAON, BOMBAY.

7-2

Exhibits can be obtained

at the Stall

IN THE EXHIBITION,

from

MESSRS. RANADE COMPANY,

BANGALORE.

ಜ್ವರಹರಿ 64-9

ಇದು ಸಾಧಾರಣ ಜ್ವರ, ಹಳೇಜ್ವರ, ಮೊರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ನಾಶಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯ ನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಇದನ್ನೇ ಕೇಳುತ್ತಿರುವ ಕಾರಣದಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆ ದಿದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ೩—೧.೦ ಆ ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂಕರ್ಪೂರ

Omum-Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಶೂಲೆ ಮುಂತಾದ ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾ ದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡು ವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದಂವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಕಾಸೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇನೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧ ವೆಂದು ಬರೆದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗ ಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

BASEL MISSION WEAVING ESTABLISHMENT, 59-20

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಟ್ಟೆಯ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ಖಿಸ್ಕರ್) ಟ್ವೀಡ್ ನಮೂನೆಯ ಕೋಟು ಇಜಾರುಗಳ ಚೆಕ್ಕ ಬಟ್ಟೆಗಳೂ, ಹಂಟಿಂಗ್ ಯಾನೆ ಶಿಕಾರಿ ಬಟ್ಟೆಗಳೂ, ಶರ್ಟಿಂಗ್ ಯಾನೆ ಕಮೀಸಿನ ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ, ಟೇಬಲ್ ಕ್ಲೋಥ್ ಯಾನೆ ಮೇಜುವಸ್ತ್ರಗಳೂ, ಟುವಾಲು ವಗೈರೆಗಳೂ ನಾಜೂಕಾಗಿ ತಯಾರಿಸಲ್ಪಟ್ಟು ಯಾವಾಗಲೂ ಬಿಲ್ಲರೆಯಾಗಿಯಾಗಲೀ ರಖಂ ಆಗಿಯಾಗಲೀ ಮಾರಾಟಕ್ಕೆ ತಯಾರಿರುತ್ತವೆ.

TRADE MARK

ಒಳ್ಳೇ ಕಮಿಶ್ಶನ್:—ರೂಪಾಯಿ ೧೦೦ ರ ಮೇಲೆ ಮಾಲುಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾದೀತು ಹೆಚ್ಚಿನ ವಿವರ ಬರೆದ್ದಾಗಿ ಯಾ ಕಾಗದ ಮೂಲಕ ತಿಳಕೊಳ್ಳಬಹುದು

ನಮೂನೆ ಯಾ ಮಾದರಿಗಳು:—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರೆ ಕೊಂಡಲ್ಲಿ ಕಳುಹಿಸಲ್ಪಡುವವು

ವಿಶೇಷ ಲಕ್ಷ್ಯಸತಕ್ಕದ್ದು:—ಈ ನಮ್ಮ ಮಾಲುಗಳಿಗೆ ಇಲ್ಲಿ ಕಾಣಿಸಿರುವ "ಟ್ರೇಡ್ ಮಾರ್ಕ್" ಎಂಬ ವ್ಯಾಪಾರಗುರ್ತು ಇರುವ ಲೇಬಲ್ ಯಾನೆ ಚೀಟು ಹಚ್ಚಿರುತ್ತದೆ ಈ ಗುರ್ತಿನ ಚೀಟುಗಳು ಇಲ್ಲದವುಗಳೆಲ್ಲಾ ಖಾಸಾ ಖಿಸ್ಕರ್ ಮಾಲುಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತ:—ನಗದಾಗಿ ಇಲ್ಲವೆ ಮಾಲುಗಳು ವಿ. ಪಿ. ಟಪ್ಪಾಲ ಮೂಲಕ ಕಳುಹಿಸಲ್ಪಡಬೇಕಾಗಿದ್ದಲ್ಲಿ ಕಾಬೂದಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರಿಯ ತಕ್ಕದ್ದು

☞ ಈ "ಟ್ರೇಡ್ ಮಾರ್ಕ"ನ್ನಾಗಲೀ ನಾವು "ಕೋಪಿರೈಟ್" ಪಡೆದಿರುವ ಲೇಬಿಲುಗಳನ್ನಾಗಲೀ ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ಮಾಲುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು.

ವಿಳಾಸ:—BASEL MISSION WEAVING ESTABLISHMENT,
MANGALORE, S CANARA

AMRUTANJAN DEPOT, 16 OAK-LANE BOMBAY. [17-32]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ:—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಖಮ್ ಮತ್ತು ಘಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ ಕ್ಕೆ ಕಿಮ್ಮತು ೦-೮-೦. ಪೋಸ್ಟು ಖರ್ಚು ೦-೪-೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಖಜ್ಜಿ ವಗೈರೆ ನಾಶವಾಗುವವು, ಇದ ರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ ಡಬ್ಬಿ ೧ಕ್ಕೆ ೦-೩-೦ ಪೋಸ್ಟು ಖರ್ಚು ೦-೪-೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವವು

ಜೀರ್ಣರಸಾಯನ—ಅಜೀರ್ಣಕ್ಕೆ ಡಬ್ಬಿ ೧ ಕ್ಕೆ	೧—೪—೦	ಕಾಮಸಂಜೀವಿನೀ ಗುಟಿಕ—ಹೆಂಗಸರ ಹೊಟ್ಟೆನೋವಿಗೆ	೧—೦—೦
ವಜ್ರಗುಟಿಕ—ಧಾತುಪುಷ್ಟಿ ರಕ್ತವೃದ್ಧಿ	೧—೦—೦	ಪ್ರಮೇಹದ ಮಿಶ್ರಣ—ಪ್ರಮೇಹಕ್ಕೆ	೧—೦—೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ ಕ್ಕೆ	೦—೧೨—೦	ಕಫಹರಿ—ಕಫ, ಕೆಮ್ಮು ಕ್ಷಯ, ಇತ್ಯಾದಿ	೧—೪—೦
ಹೊಳೆಕಸಿತದ ಮದ್ದು	೦—೮—೦	ಸಂಜೀವನೀ ತೈಲ—ಮೋರೆಗೆ	೦—೮—೦
ದಂತಶೂಲಹಾರಿ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಕರ್ಣಶೂಲಹಾರಿ—ಕಿವಿನೋವಿಗೆ	೦—೩—೦	ಉರಿನಾಶಕ ಎಂಣೆ ಬಾಟ್ಲಿ ೧ ಕ್ಕೆ	೦—೮—೦
ಖಜ್ಜಿಯ ಮುಲಾಮು	೦—೩—೦	ಪಾಕದ ಮಿಶ್ರಣ ,,	೧—೦—೦
ದಂತಮಂಜನ—ಹಲ್ಲುಗಳಿಗೆ	೦—೨—೦	ಕಸ್ತೂರಿ ಮಾತ್ರ ೫೦ ಗುಟಿಕೆ	೦—೧೨—೦
ಕೇಶವರ್ಧಿನೀ ತೈಲ—ಕೂದಲಿಗೆ	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
ಮುಲಾಮು ಮಾತ್ರ—ಜಾಲಾರಿಗೆ	೦—೮—೦	ರೋಗಹಾರಿ	೦—೮—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ.

"ಇಸ್ತಿಹಾರ್"

73-3

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಬಾಕ್ಸ್ ಇಸವಿ ಅಕ್ಟೋಬರು ಮಾಹೆ ೩ನೇ ತಾರೀಖು ಬುಧವಾರದ ಬಾಗಾಯಿತು ಕೆಲವು ಎಳಕಾರ ಅಮೃತಮಹಲ್ ಇಲಾಖಾ ಗಂಡು ರಾಸುಗಳನ್ನ ಪ್ರದರ್ಶನದ ಬಳಿ ಮೈಸೂರು ಮೊಕ್ಕಾಂನಲ್ಲಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಥರ ಸವಾಲಿನಲ್ಲಿ ಪಡಿಯಬಹುದು.

ಮೊಕ್ಕಾಂ—ಭೀಮ್ನಹಳ್ಳಿ. | ಎಚ್. ನಂಜುಂಡರಾಜೇ ಅರಸ್,
ತಾ|| ೧೯—೯—೧೯೦೪. | ಸೂಪರಿಂಟೆಂಡೆಂಟ್,
ಅಮೃತಮಹಲ್ ಡಿಪಾರ್ಟಮೆಂಟ್.

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟ್."

ವ್ಯವಹಾರನಿರ್ಣಯ—ಘಟಗಳು ೫೪೪ ಹಿಂದೂ ಮನಸಾದೀಯ ಬಾಗಳು, ೨೯ ಐನಾಂಶಗಳು ಇವುಗಳ ಸಂಗ್ರಹವು, ೯—೨ ದಸ್ತಾವೇಜು, ೬೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ. ಪಿ. ಸೇರಿ ೦ ರೂ. ೦-೨ ಆಣೆ. [40-23]

ಕನ್ನಡ ಲಾ ರಿಪೋರ್ಟ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ೦—೦—೦ ಮುಂಗಡ, ಯಾ, ವಿ ಪಿ. ಯಿಂದ ಪತ್ರಿಕೆ ಒಳ್ಳೆ ೦— ೬—೬

ಇವುಗಳನ್ನ ಸೇಕ್ಷಿಸುವವರು "ಎಂ ವಾಲ್ಲಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯಬಹುದು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

48-19

ತಲೆನೋವು, ವಾಯುನೋವು, ಸಳಿತ, ಗಂಟ್ಲುನೋವು, ಏರ್ಪಿವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂಧುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯಕ್ಷಣೆ ಮಾಡದಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸುವಿದಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು. ಆದ್ದರಿಂದಲೇ ಅದನ್ನು ಇಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅನರ್ಘ್ಯವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಸುಟ್ಟನ್ನೇ ಹಾಳುಮಾಡುತ್ತದೆ.

ಕ್ರಯ ಶೀಸೆ ೧ಕ್ಕೆ ೦—೨ ಆಣೆ. ಪ್ಯಾಕಿಂಗ್ ೮ ಆಣೆ ಅದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧—೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಳಕೆ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,
೩೩, ವೇದಮಲ್ಲಿಪ್ಪ ಬೀದಿ, ವೇಪೇರಿ, ಮದರಾಸ್.

ಬಹುಮಾನ! 160 ರೂಪಾಯಿ ಬಹುಮಾನ!!

ಸುಲಭ ಕಿಮ್ಮತು.		ಸುಲಭ ಕಿಮ್ಮತು.

ಇಮಿಟೇಷನ್ ಸ್ವೀಡಿಕಮಲದ ಓಲೆ.

ಈ ಇಮಿಟೇಷನ್ ಸ್ವೀಡಿಕಮಲದ ಓಲೆ, ಅತ್ಯುತ್ತಮ ಮತ್ತು ಬೂಗು ಚೊಟ್ಟುಗಳು ಹೊಸದಾಗಿ ವಿಲಾಯಿತಿಯಿಂದ ಈಗ ತಾನೆ ಬಂದಿವೆ. ... ಇವನ್ನು ...

ಇದರ ಬೆಲೆ ಬಹಳ ಕಡಿಮೆ ... ಅಡ್ರಸ್ಸ್ ...

ಓಲೆ ಜತೆ ಒಳ್ಳೆ 5—0—0
ಅತ್ಯುತ್ತಮ ಜತೆ ಒಳ್ಳೆ 2—0—0
ಮೂಗುಬಟ್ಟು ಒಳ್ಳೆ 1—0—0
ವಿ. ಪಿ. ಖರ್ಚು ಬೇರೆ ...

... 100 ...

ವಿಳಾಸ:—ಗುರು ಬಸವ ಅಂಡ್ ಕಂಪೆನಿ, ಮದರಾಸು

CHAMBERLAIN'S COUGH REMEDY.

ಚೇಂಬರ್ಲೈನರವರು ಕಂಡು ಹಿಡಿದ ಕೆಮ್ಮಿನ ಔಷಧವು.

1-40

ಶೀತದ ಕೆಮ್ಮು, ಗಂಟ್ಲು ಗಾರೆನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ೧ಂಟ್ಲ ನೋವು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಳ ಉಪಯೋಗವಾಗಿದೆ

ಈ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೈನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಚೆನ್ನಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗಿದಂಥ ಕಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೈನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ
ಕೈಯಿಂದಮುಟ್ಟದೆ ತಯಾರಾಗಿದೆ.

ಎಲ್ಲಾ ಕಡೆ ಬಿಕರಿಯಾಗುವುದು. ಸಣ್ಣಶೀಸೆಗೆ ೧ ರೂಪಾಯಿ ದೊಡ್ಡಶೀಸೆಗೆ ೨ ರೂಪಾಯಿ.

6 ರೂಪಾಯಿಗಳ ಗಡಿಯಾರಕ್ಕೆ 56 ಸಾಮಾನುಗಳು ಇನಾಮು ಕೊಡಲ್ಪಡುವುದು.

73-4

ವಜ್ರಕಲ್ಲುಗಳನ್ನು ಕಾಪಿಸಲ್ಪಟ್ಟ ನಿಕ್ಕಲ್ ಬೆಳ್ಳಿ ಗಡಿಯಾರವು.

ಈ ಸ್ವಿಸ್ ಲೀವರ್ ಗಡಿಯಾರವು ಸಾಧಾರಣ ಸಿಲಿಂಡರ್ ಗಡಿಯಾರಕ್ಕಿಂತಲೂ ಕೆಂಪುಗಳು ಇರುವದೂ ಅಲ್ಲದೆ ಲೀವರ್ ಗಡಿಯಾರವು ಬಹಳ ಶ್ರೇಷ್ಠವಾದದ್ದೆಂದು ಎಲ್ಲರೂ ತಿಳಿದಿರುತ್ತೀವೆ ಇದು

ಬಹಳ ಘಟ್ಟಿಯಾಗಿಯೂ, ಕಾಂತಿಯಾಗಿಯೂ, ಶೃಂಗಾರವಾಗಿಯೂ ಅಜಾಗ್ರತೆಯಾಗೂ ಉಪಯೋಗಿಸಲಿಕ್ಕೆ ತಕ್ಕ ಗಡಿಯಾರವಾಗಿಯೂ ಇದೆ. ಬಹುಮಾನಗಳು:—ಸಮುಖದಲ್ಲಿ ಕಟ್ಟಿಕೊಳ್ಳುವ ವಿಲಾಯಿತಿ ಬೆಲ್ಟು, ಹವಳದ ಉಂಗುರ, ಜರ್ಮನ್‌ಸಿಲ್ವರ್ ಗಡಿಯಾರ ಸರಪಣಿ, ರಾಜಾರಾಣಿ ಕಂಪಸ್, ದುಡ್ಡು ಹಾಕುವ ಚೀಲ, ಎರಡು ವರ್ಷಗಳ ಪಂಚಾಂಗವು ಕನ್ನಡಿಯೂ ಉಳ್ಳ ಪುಸ್ತಕ, ಹೆಂಗಸರು ತಲೆಯಲ್ಲಿಟ್ಟುಕೊಳ್ಳುವ ಹುಪ್ಪು, ಮುಖ ನೋಡುವ ಚಿತ್ರಕಲಸದ ಕನ್ನಡಿ, ಗಡಿಯಾರ ಇಟ್ಟುಕೊಳ್ಳುವ ತೊಗಲಿನ ಸಂಚಿ, ಗಡಿಯಾರದ ರೇಷ್ಮೆದಾರ, 8 ಆಭರಣಗಳನ್ನಿಟ್ಟುಕೊಳ್ಳುವ ಚಿತ್ರದ ಪೆಟ್ಟಿಗೆಗಳು, ಕತ್ತರಿಕೋಲು, ಪೇನಾಕತ್ತಿ, ಸಿನೆ ಪಟಲಾಕ್, ಕೈಗುಚ್ಚಿ, ಸುಲೋಚನ, ರಿಬ್ಬನವು, ದಂತದ ಹಣಿಗೆ, ಕಯ್ಯಗಳ ದೀಪ, ವಾಸನೆ ದ್ರವ್ಯ ಬುಡ್ಡಿ, ಬೇಗದ ಉಂಗುರ, ಸ್ಪಟಿಕದ ಕನ್ನಡಿ, ಹೇರ್ ಸ್ಪ್ರಿಂಗ್, ವೆಲ್ವೆಟ್ಟು ಪೆಟ್ಟಿಗೆ, ಬೇಕಾದ ಪೆನ್ಸಿಲ್, ಟೈ ಸ್ಪಿನ್, ಸೊಗಸಾದ ಷರ್ಟು ಬೊತ್ತಾಸುಗಳು, 20 ಅಂದವಾದ ಕಾರ್ಡುಗಳು, ಸ್ವದೇಶೀ ಪೇನಾ, ಸೋಪು. ನಮ್ಮ ವಿಳಾಸ—

ಮದರಾಸ್ ಸೊಸೈಟಿ ವಾಚ್ ಡಿಪೋ,
ಪಾರ್ಕ್ ಟೌನ್, ಮದ್ರಾಸ್.

THE PLACE FOR HASSAN CAPS IS
HASSAN.

ನಿಮ್ಮ ತಲೆಯ ಮೇಲಿರುವದೇನು?
ಹಾಸನದ ಟೋಪಿ ಅಲ್ಲವೋ?
ಆಗಾದರೆ ಬೇಗ ಒರೆದು ತರಿಸಿಕೊಳ್ಳಿ.

2-40

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?
ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅನೇಕ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾನೇ ನಿಂತು ಚನ್ನಾಗಿ ಹಾಕಿಸುತ್ತೇನೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ. ಬಿಳಿ, ಕೆಂಪು, ಕಪ್ಪು, ಬೆರಕೆ, ಕಾಫಿ ಟೋಪಿಗಳು ೧ ರೂ ೮ ಆ ೦ ರೂ ೩ ಆ.; ೧ ರೂ. ೬ ಆ.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ.; ೨ ರೂ ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೦ ರೂ ೩ ಆ ಉಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೩ ಆ.

ಕೂಸುಗಳ ಟೋಪಿ, ಸೂಥಿಗೆ ಮೇಜೋಡು, ಅರ್ಧ ಮೇಜೋಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿದಂಥವರಿಗೆ ಕೊಟ್ಟು ಕಳುಹಿಸುತ್ತೇವೆ.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಈಗಲೇ ಬಂದಿದೆ.

117-50

೫,೦೦೦ ಜರ್ಸ ಟೋಪಿ ಹೊಲಿಯುವ ಸುಚೀರಿಯರ್ ಉಲ್.
೧೦ ಟೋಪಿಯಾಗುವ ಬಂಡಲ್ ಒಳ್ಳೆ ೩—೮—೦
ಜರ್ಸ ಟೋಪಿ ಡಜ಼ನ್ ಒಳ್ಳೆ ೩—೦—೦, ೯—೦—೦, ೦—೨—೦
ಜರ್ಮ ವೇಷ್ ಬನಿಯನ್ ಡಜ಼ನ್ ಒಳ್ಳೆ ೬—೮—೦, ೫—೦—೦,
ಬಾಚಣಿಗೆಗಳು ಡಜ಼ನ್‌ಕ್ಕೆ ೦—೧—೦, ೦—೦—೦, ೦—೬—,
ವಿ. ಪಿ. ಯಿಂದಲೂ ರವಾನಿಸುತ್ತೇವೆ [೦—೮—೦

ವಿಳಾಸ-ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ಇಲ್ಲಿ ನೋಡಿ.

77-2

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ ಯೂರೋಪಿಯನ್ನರ ಮೇಲ್ವಿಚಾರಣೆಯಿಂದ ಉತ್ತಮ ತರದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ ಕ್ರಯ:—೧೨ ಆಣೆ ಮೊದಲ್ಗೊಂಡು ೧ ರೂ ೨ ಆಣೆಯವರಿಗೆ ೧ ಡಜ಼ನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವುದು. ಈಗ ತಾನೇ ಇಂಗ್ಲಿಷ್ ಉಲ್ ದಾರವು ಬಂದಿದೆ. ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಬಲ್ಲೆವು ನಮ್ಮ ವಿಳಾಸ—ಮ್ಯಾನೇಜರ್,

ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ್ ಇಲಾಖೆ, ತುಮಕೂರು.

ಜ್ಯೋತಿಷ್ಯ ಗ್ರಂಥವು.

76-2

ಗೋಚಾರಫಲದರ್ಪಣವೆಂಬ ನೂತನ ಜ್ಯೋತಿಷ್ಯ ಗ್ರಂಥವು ಆಚ್ಚಾಗುತ್ತಿದ್ದೆ. ಪ್ರಸಿದ್ಧ ಪಂಡಿತರಾದ ಆರ್ ಕಾಂತಪ್ಪಜೋಯಿಸರಿಂದ ವಿರಚಿಸಿ ಮಾಡಲ್ಪಟ್ಟು ಸಿದ್ಧವಾಗಿದೆ ಇದರಲ್ಲಿ ೧೦೨ ವಿಷಯಗಳಿದ್ದು ಸುಮಾರು ೩೫೦ ಪುಟಗಳಿರುತ್ತವೆ ಅತ್ಯುತ್ಕೃಷ್ಟವಾದ ನಾಹಿತಿಯಿಂದ ತುಂಬಿರುತ್ತದೆ. ಇದೇ ಹೆಸರಿನ ಬೇರೆ ಜನರು ರಚಿಸಿದ ನಿರುಪಯೋಗವಾದ ಗ್ರಂಥಗಳನ್ನು ಕೊಳ್ಳುವದರಲ್ಲಿ ಸಾವಧಾನಿಗಳಾಗಿರಬೇಕು. ಮೊದಲಿನ ನೂರು ಗ್ರಾಹಕರಿಗೆ ನೂತ್ನ ಶೀಲಕದ ಕನ್ನಡ ಅಗರ ಮುದ್ರಿತ ಪಂಚಾಂಗ ಬಹು ವಿಸ್ತಾರವುಳ್ಳದ್ದು ಬಹುಮತಿ ಕೊಡುವೆವು ಕ್ರಮ ೩ ವಿ ಪಿ. ಟ. ಖರ್ಚು ಸಹ ಚನ್ನರಡಾಣೆ ವ್ಯಾಪಾರಿಕರಿಗೆ ಬಹಳ ಸೋವಿಯಾಗಿ ಕೊಡುವೆವು ಪತ್ರ:—

Boandade Narasappa,
Post Chittwadgi, Bellary District.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ರೋಗಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಆವಶ್ಯಕ.

SCOTT'S EMULSION 33-27
(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.



ಮೀನುಹಿಡಿಯುವ ಮನುಷ್ಯ ಇರುವ ಈ ಔಷಧದ ಗುರುತು

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು.

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ವೃತ್ತಾಂತ ಪತ್ರಿಕೆ.

ಸನ್ ೧೯೦೮ ನೇ ಇಸವಿ ಅಕ್ಟೋಬರ್ ತಾ ೧ ನೇ ಗುರುವಾರ

ವಿದ್ಯುಚ್ಛಕ್ತಿಯ ದೀಪಗಳು.

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯಲ್ಲಿ ಶ್ರೀಮನ್ ಮಹಾರಾಜರವರು ಜಗನ್ಮೋಹನ ಬಂಗಲೆಯ ದರ್ಬಾರ್ ಮಂದಿರಕ್ಕೆ ದಯಮಾಡಿ, ಸಿಂಹಾಸನವನ್ನು ಹತ್ತಿದ ಒಡನೆಯೇ ಒಂದು ಗುಂಡನ್ನು ಅಮಿಕಿ ಸೂಚನೆಕೊಟ್ಟು, ಪಟ್ಟಣದಲ್ಲೆಲ್ಲಾ ಏಕಕಾಲದಲ್ಲಿ ದೀಪಗಳು ಪ್ರಕಾಶಿಸುವಂತೆ ಮಾಡಿದರು. ಆ ದಿನ ಸಾಯಂಕಾಲ ಮೋಡ ಕವಿದು ಮಳೆ ಸುರಿಯುತ್ತಿದ್ದದ್ದರಿಂದ ಅಂಧಕಾರವು ಬಹಳ ಹೆಚ್ಚಾಗಿದ್ದಿತು. ಅಂಥಾದ್ದರಲ್ಲಿ ಸುಮಾರು ೭॥ ಗಂಟೆ ಹೊತ್ತಿಗೆ ಎಲ್ಲೆಲ್ಲೂ ಪ್ರಕಾಶಮಾನವಾದ ಬೆಳಕು ಉಂಟಾದದ್ದು ಎಲ್ಲರಲ್ಲೂ ಪರಮಾಶ್ಚರ್ಯವನ್ನುಂಟುಮಾಡಿತು. ಹಾಗಾದರೆ ಈ ವಿದ್ಯುಚ್ಛಕ್ತಿಯ ದೀಪವೆನ್ನುವುದೇನು? ಅದರಿಂದ ಬೆಳಕು ಉಂಟಾಗುವ ಬಗೆ ಹೇಗೆ? ಎಂದು ಕೇಳುವುದು ಬಹು ಸುಲಭವಾದ ಪ್ರಶ್ನೆಗಳೇ ಸರಿ. ಆದರೆ ಅವುಗಳಿಗೆ ಸಮಾಧಾನ ಹೇಳುವುದು ಅಷ್ಟು ಸುಲಭವಲ್ಲ. ವಿದ್ಯುತ್ ಎಂಬ ಶಕ್ತಿಯು ಎಂಥಾದ್ದು? ಆ ಶಕ್ತಿಯನ್ನು ಹೇಗೆ ಹುಟ್ಟಿಸುವುದು? ಎಂಬೀ ವಿಷಯಗಳನ್ನು ಮಹಾ ಬುದ್ಧಿಶಾಲಿಗಳಾದ ಶಾಸ್ತ್ರಜ್ಞರೂ ಬಹು ಕುಶಲಮತಿಗಳೆನಿಸಿಕೊಂಡ ಇಂಜನಿಯರುಗಳೂ ಸ್ಪಷ್ಟವಾಗಿ ವಿವರಿಸಿ ತಿಳಿಸಲಾರರು. ಆದರೂ ಮೈಸೂರು ಪಟ್ಟಣಕ್ಕೆ ಈ ವಿದ್ಯುಚ್ಛಕ್ತಿಯ ಬೆಳಕು ಹೇಗೆ ತರಲ್ಪಟ್ಟಿತೆಂಬ ವಿಷಯವನ್ನು ನಾವು ಕೂಡಿದ ಮಟ್ಟಿಗೂ ಸುಲಭವಾದ ರೀತಿಯಲ್ಲಿ ವಿವರಿಸಲು ಪ್ರಯತ್ನಪಡುವೆವು.

ಕುದುರೆ ಲಾಳದಂತಿರುವ ಸೂಜಿಗಲ್ಲನ್ನೂ, ಅದರ ಒಳಗೆ ಉಕ್ಕಿನಲ್ಲಿ ಮಾಡಿದ ಸೂಜಿ ದಬ್ಬಳಗಳನ್ನು ತಂದು ಹಿಡಿದರೆ ತನ್ನ ಕಡೆಗೆ ಸೆಳೆದು ಗಟ್ಟಿಯಾಗಿ ಹಿಡಿಯುವುದನ್ನೂ ವಾಚಕರು ನೋಡಿರಬಹುದು. ಸುಮಾರು ಎಂಬತ್ತು ವರುಷಗಳ ಹಿಂದೆ ಫಾರಡೇ ಎಂಬೊಬ್ಬ ಇಂಗ್ಲಿಷ್ ಶಾಸ್ತ್ರಜ್ಞನು ಪರಿಶೋಧನೆಮಾಡುತ್ತಿರುವಾಗ್ಗೆ, ಸೂಜಿಗಲ್ಲಿನ ಎರಡು ಕೊನೆಗಳ ಮಧ್ಯೆ ಒಂದು ಸಣ್ಣ ತಾಂಬ್ರದ ಕಡ್ಡಿಯ ಚಕ್ರವನ್ನು ವೇಗವಾಗಿ ತನ್ನಷ್ಟಕ್ಕೆ ತಾನೇ ತಿರುಗುವಂತೆ ಮಾಡಿ, ಬೇರೆ ತಾಂಬ್ರದ ತಂತಿಯ ಒಂದು ಕೊನೆಯನ್ನು ಆ ಚಕ್ರದ ಸುತ್ತಿಗೂ ಇನ್ನೊಂದು ಕೊನೆಯನ್ನು ಮಧ್ಯಕ್ಕೂ ತಗಲುವಂತೆ ಮಾಡಿದಲ್ಲಿ, ಈ ತಂತಿಯ ಮೂಲಕ ವಿದ್ಯುಚ್ಛಕ್ತಿಯು ಕಾಣಿಸಿಕೊಂಡು ಹರಿಯುತ್ತದೆ ಎಂಬದನ್ನು ಕಂಡುಹಿಡಿದನು. ಫಾರಡೇ ಎಂಬಾತನು ಈ ರೀತಿಯಾಗಿ ಕಂಡು ಹಿಡಿದದ್ದೇ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವಂಥಾ ಡೈನಮೋ ಎಂಬ ಯಂತ್ರಗಳ ನಿರ್ಮಾಣಕ್ಕೆ ಮಾರ್ಗವಾಯಿತು.

ವಾಚಕರು ಶಿವನಸಮುದ್ರಕ್ಕೆ ಹೋಗಿ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನು ಅಜಮಾಯಿಷಿಮಾಡಿದಲ್ಲಿ ಅವರಿಗೆ ತಿಳಿಯುವುದೇನೆಂದರೆ, ಕಾವೇರೀ ನೀರನ್ನು ನಾಲೆಯಲ್ಲಿ ತೆಗೆದುಕೊಂಡು ಹೋಗಿ ಕಬ್ಬಿಣಗಳಿಂದಿರುವ ಕೊಳವೆಗಳ ಮೂಲಕ ಬಹಳ ಎತ್ತರದಿಂದ ಕೆಳಕ್ಕೆ ರಭಸವಾಗಿ ಬೀಳುವಂತೆ ಮಾಡಿದಾರೆ. ಈ ಕೊಳವೆಗಳ ತಳದಲ್ಲಿ ಚಕ್ರಗಳನ್ನು ತಗಲಿಸಿರುತ್ತಾರೆ. ಈ ಚಕ್ರಗಳಿಗೆ ಟರ್ಬೈನ್‌ಗಳೆಂದು ಹೆಸರು. ಕೊಳವೆಗಳ ಮೂಲಕ ಬಹಳ ಎತ್ತರದಿಂದ ಮಹಾ ರಭಸವಾಗಿ ಬೀಳುವ ನೀರು ಅಡಿಯಲ್ಲಿರುವ ಚಕ್ರಗಳನ್ನು ಬಹು ವೇಗವಾಗಿ ಸುತ್ತುವಂತೆ ಮಾಡುವುದು. ಈ ಚಕ್ರಗಳು ಸುತ್ತೋಣದರಿಂದ ಇನ್ನೊಂದು ಕಡೆ ದೊಡ್ಡ ದೊಡ್ಡ ಸೂಜಿಗಲ್ಲುಗಳ ಮಧ್ಯೆ ಇಟ್ಟಿರುವ ಚಕ್ರಗಳು ಸುತ್ತುವವು. ತಾಂಬ್ರದ ತಂತಿಯ ಒಂದು ಕೊನೆಯನ್ನು ಈ ಚಕ್ರದ ಅಂಚಿಗೆ ಜಂಟಿಸಿ, ತಂತಿಯನ್ನು ಶಿವಸಮುದ್ರದಿಂದ ಮೈಸೂರು ಪಟ್ಟಣದ ತನಕ ಉದ್ದಕ್ಕೂ ಕಂಬಗಳ ಮೇಲೆ ಸುತ್ತಿ ತಂದು, ಇಲ್ಲಿಂದ ಮತ್ತೆ ಅದೇ ತಂತಿಯನ್ನು ಶಿವಸಮುದ್ರಕ್ಕೆ ನಾಗಿಸಿಕೊಂಡು ಹೋಗಿ, ಇನ್ನೊಂದು ಕೊನೆಯನ್ನು ಮೇಲ್ಕಂಡ ಚಕ್ರದ ಮಧ್ಯ ಸ್ಥಳಕ್ಕೆ ಜಂಟಿಸಿದಾರೆ. ಈ ರೀತಿ ತಂತಿಯನ್ನು ಶಿವಸಮುದ್ರದಿಂದ ಮೈಸೂರಿಗೆ ತಂದು ಇಲ್ಲಿಂದ ಶಿವಸಮುದ್ರದ ತನಕ ಸುತ್ತಿಕಟ್ಟಿದ ಹೊಂದಿಕೆಯಲ್ಲಿ ವಿದ್ಯುಚ್ಛಕ್ತಿಯು ಆ ತಂತಿಯ ಮೂಲಕ ಉದ್ದಕ್ಕೂ ಹರಿಯುವುದಲ್ಲದೆ ಈ ಶಕ್ತಿಯು ತಾಂಬ್ರದ ಕಡ್ಡಿಗಳ ಮೂಲಕ ಬಹಳ ಸುಲಭವಾಗಿ ಹರಿದು ಹೋಗತಕ್ಕದ್ದಾಗಿರುತ್ತದೆ. ಹೊರತು, ಇತರ ವಸ್ತುಗಳ ಮೂಲಕ ಅಷ್ಟು ಬೇಗನೆ ಸಾಗಿ ಹೋಗುವುದಿಲ್ಲ.

ವಿದ್ಯುಚ್ಛಕ್ತಿಯು ಹರಿಯುತ್ತಿರುವಂಥಾ ತಾಂಬ್ರದ ತಂತಿಯನ್ನು ಕತ್ತರಿಸಿ ಎರಡು ಕೊನೆಗಳಿಗೂ ಮಧ್ಯೆ ಒಂದು ತುಂಡು ಇಜ್ಜಲನ್ನು ಸಿಕ್ಕಿಸಿ, ತಂತಿಯ ಕೊನೆಗಳನ್ನು ಇಜ್ಜಲಿನ ಆಚೆ ಈಚೆ ಇರುವಂತೆ ತಗಲಿಸಿದ ಪಕ್ಷದಲ್ಲಿ ವಿದ್ಯುಚ್ಛಕ್ತಿಯು ಆ ಇಜ್ಜಲಿನ ಮೂಲಕ ಸಾಗಿ ಒಳಗೆ ಹೋಗುವುದು ಸ್ವಲ್ಪ ಕಷ್ಟ. ಹೀಗೆ ಶಕ್ತಿಯು ಸಾಗಿ ಹೋಗುವಾಗ್ಗೆ ಆ ಇಜ್ಜಲು ಬೆಳ್ಳಗೆ ಕಾದು ಪ್ರಕಾಶಿಸುವುದು. ಇದೇ ವಿದ್ಯುಚ್ಛಕ್ತಿಯಿಂದುಂಟಾಗುವ ದೀಪವೆಂದು ತಿಳಿಯಬೇಕು. ಆದರೆ ವಾಚಕರು ಈ ದೀಪದ ಕಂಬದ ಬಳಿ ನಿಂತು ದೀಪವನ್ನು ನೋಡಿದಲ್ಲಿ, ಗಾಜಿನ ಬುಡ್ಡಿಯೊಳಗೆ ಸಣ್ಣ ಸಣ್ಣ ೨—೩ ಎಳೆ ದಾರಗಳು ಸುತ್ತಿರುವಂತೆಯೂ, ಅವು ಪ್ರಕಾಶಮಾನವಾಗಿ ಹತ್ತಿಕೊಂಡು ಉರಿಯುತ್ತಿರುವಂತೆಯೂ ಕಾಣುವುದು. ಈ ಸಣ್ಣ ದಾರಗಳನ್ನು ಇಜ್ಜಲಿನಿಂದಲೇ ಮಾಡಿರುತ್ತಾರೆ. ಈ ದಾರದ ಎರಡು ಕೊನೆಗಳೂ ವಿದ್ಯುಚ್ಛಕ್ತಿ ಹರಿಯುವಂಥಾ ತಂತಿಯ ಎರಡು ಕೊನೆಗಳಿಗೆ ಜಂಟಿಸಲ್ಪಟ್ಟಿರುತ್ತವೆ. ಹ್ಯಾಗೆಂದರೆ, ಕಂಭಗಳ ಮೇಲೆ ಹೋಗಿರುವ ತಾಂಬ್ರದ ತಂತಿಯಿಂದ ಕಂಭದ ಎರಡು ಕಡೆಗಳಿಂದಲೂ ಎರಡು ತಂತಿಗಳನ್ನು ಇಳಿಸಿ, ದೀಪ ಉರಿಯುವ ಗಾಜಿನ ಬುರುಡೆಯೊಳಕ್ಕೆ ತಂದು ಬಿಟ್ಟಿದಾರೆ. ಇವೆರಡು ತಂತಿಗಳ ಎರಡು ಕೊನೆಗಳಿಗೂ ಬುರುಡೆಯೊಳಗಿರುವ ಸಣ್ಣ ದಾರದ ಕೊನೆಗಳನ್ನು ತಗಲಿಸಿರುವರು. ವಿದ್ಯುಚ್ಛಕ್ತಿಯು ಆ ಇಜ್ಜಲಿನ ದಾರದ ಮೂಲಕ ಹರಿದುಹೋಗುವಾಗ್ಗೆ ದಾರವನ್ನು ಪ್ರಕಾಶವಾಗಿ ಹೊಳೆಯುವಂತೆ ಮಾಡುತ್ತದೆ. ಇದೇ ವಿದ್ಯುಚ್ಛಕ್ತಿಯ ಬೆಳಕು. ಗಾಜಿನ ಬುರುಡೆಯು ಈ ಬೆಳಕಿಗೆ ಅವಶ್ಯ. ಅದಿಲ್ಲದಿದ್ದರೆ ಅದರೊಳಗಿರುವ ದಾರಕ್ಕೆ ಮಳೆಗಾಳಿಗಳು ಬಡಿಯುವವು. ಮತ್ತು ಅದು ಹೊಳಪಾಗಿ ಪ್ರಕಾಶಿಸುವಾಗ್ಗೆ ವಾಯುವು ಗಾಜಿನ ಬುರುಡೆಯೊಳಗೆ ಸ್ವಲ್ಪವೂ ಇರಕೂಡದು. ಆದಕಾರಣ ಆ ಬುರುಡೆಯನ್ನು ತಗಲಿಸುವುದಕ್ಕೆ ಮೊದಲು ಅದರಲ್ಲಿ ಲೇಶಮಾತ್ರವೂ ಗಾಳಿಯಿಲ್ಲದಂತೆ ಶೋಧಿಸುತ್ತಾರೆ. ಬುರುಡೆಯೊಳಗೆ ಗಾಳಿ ಇದ್ದರೆ ಇಜ್ಜಲಿನ ದಾರವು ಆ ಗಾಳಿಯ ಸಹಾಯದಿಂದ ಸಂಪೂರ್ಣವಾಗಿ ಉರಿದು ಹೋಗಿ ಬೂದಿಯಾಗುವದು. ವಿದ್ಯುಚ್ಛಕ್ತಿಯ ಬೆಳಕಿಗೂ ಸಾಮಾನ್ಯವಾದ ಎಣ್ಣೆಯದೀಪಕ್ಕೂ ಇರುವ ದೊಡ್ಡ ತಾರತಮ್ಯವೇನೆಂದರೆ—ಎಣ್ಣೆಯ ದೀಪಉರಿಯುವುದಕ್ಕೆ ವಾಯುವು ಇದ್ದೇ ಇರಬೇಕು; ಎಣ್ಣೆಯ ದೀಪದ ಮೇಲೆ ಒಂದು ಗಾಜಿನ ಬಟ್ಲನ್ನು ಬೋರ್ಲುಹಾಕಿ, ಒಳಗಿರುವ ಗಾಳಿಯನ್ನೆಲ್ಲಾ ಹೊರಡಿಸಿಬಿಟ್ಟರೆ ದೀಪವು ಉರಿಯಲಾರದೆ ಆರಿಹೋಗುತ್ತದೆ. ವಿದ್ಯುಚ್ಛಕ್ತಿಯ ಬೆಳಕಿಗಾದರೋ ಗಾಳಿಯುಇರಲೇ ಕೂಡದು. ವಾಯುವಿದ್ದರೆ ವಿದ್ಯುತ್ತಿನ ಬೆಳಕಿರುವುದಿಲ್ಲ.

ಇದೇ ವಿದ್ಯುಚ್ಛಕ್ತಿಯ ಬೆಳಕಿನ ಪೂರ್ವೋತ್ತರವು. ವಾಚಕರು ಇದನ್ನು ಸಾವಧಾನದಿಂದ ಓದಿ ಅರ್ಥಮಾಡಿಕೊಂಡಾರೆಂಬ ಕುತೂಹಲದಿಂದ ಇಷ್ಟು ದೂರ ವಿವರಿಸಿರುತ್ತೇವೆ. ಮೇಲ್ಕಂಡ ವಿವರಣೆಗಳನ್ನೆಲ್ಲಾ ಸಂಕ್ಷೇಪವಾಗಿ ಇಲ್ಲಿ ಸೂಚಿಸಿ ಮುಗಿಸುವೆವು. ಕಾವೇರಿಯ ನೀರು ಕೊಳವೆಗಳ ಮೂಲಕ ಧುಮುಕಿ, ಕೆಳಗಿರುವ ಟರ್ಬೈನ್ ಎಂಬ ಚಕ್ರಗಳನ್ನು ಸುತ್ತಿಸುತ್ತವೆ. ಇದರಿಂದ ಭಾರೀ ಸೂಜಿಗಲ್ಲುಗಳ ನಡುವೆ ಇರಿಸಲ್ಪಟ್ಟಿರುವ ದೊಡ್ಡ ದೊಡ್ಡ ಚಕ್ರಗಳು ತಿರುಗುವವು. ಈ ಚಕ್ರಗಳಿಗೆ ತಗಲಿಕೊಂಡಿರುವಂಥಾ ತಾಂಬ್ರದ ತಂತಿಗಳ ಮೂಲಕ ವಿದ್ಯುತ್ ಎಂಬ ಶಕ್ತಿಯು ತಡೆಯಿಲ್ಲದೆ ಹರಿಯುತ್ತಾ ಬರುತ್ತದೆ. ಗಾಜಿನಬುರುಡೆಗಳೊಳಗಿರುವ ಇಜ್ಜಲಿನ ದಾರವು (ಇದಕ್ಕೆ ಕಾರ್ಬನ್ ಎಂದು ಹೆಸರು) ಆ ಶಕ್ತಿಯನ್ನು ತಡೆದು ಪ್ರಕಾಶಮಾನವಾದ ಬಿಳಿಯ ಬೆಳಕನ್ನು ಕೊಡುವುದು.

ಒಳದೇಶದ ವೃತ್ತಾಂತಗಳು.

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯಲ್ಲಿ ಒಂದು ಹದ ಒಳ್ಳೇ ಮಳೆ ಆಯಿತು. ಹವಾ ಬಹಳ ಆರೋಗ್ಯಕರವಾಗಿದೆ.

ಆವನಿ ಮಠದಲ್ಲಿ ಹಿಂದಿನ ಕಾಲದ ಜವಾಹಿರಿ ನಗಗಳಿಟ್ಟಿದ್ದ ಪೆಟ್ಟಿಗೆಯು ಅನಾಮತ್ತಾಗಿ ಕಳುವಾಯಿತೆಂದು ತಿಳಿಯುವುದು.

ಕಳೆದ ಶನಿವಾರ ರಾತ್ರಿ ಛಕ್ಕೆ ನರಸಪ್ಪನವರ ದೇವಸ್ಥಾನದ ಬಳಿ ನಡುಬೀದಿಯಲ್ಲಿ ಮೆ|| ಶಿವಾಜಿರಾಯರ ಜೀನಾ ಜವಳಿ ಅಂಗಡಿಗೆ ಕಳ್ಳರು ಬಿದ್ದು ಸಾಮಾನುಗಳನ್ನು ಅಪಹರಿಸಿದರೆಂದು ಕೇಳುತ್ತೇವೆ.

ಮುಳಬಾಗಲಿನಲ್ಲಿ ಒಬ್ಬ ಮಹಮದೀಯ ಪೋಲೀಸ್ ಇನ್‌ಸ್ಪೆಕ್ಟರ್ ಆಫೀಸರು ತನ್ನ ಹೆಂಡತಿಯನ್ನು ಕೊಂದುಹಾಕಿರುತ್ತಾನೆಂದೂ, ಈ ಮೊಕದ್ದಮೆಯನ್ನು ಸೆಷನ್ಸ್ ಕೋರ್ಟಿಗೆ ಕಳುಹಿಸಿದಾರೆಂದೂ ಪ್ರಕಟವಾಗಿದೆ.

ರಾಜಧಾನಿಯ ಅರಮನೆ ಖಜಾನೆಯಲ್ಲಿ ನೌಕರಮಾಡಿರಾಗಿರುವ ಅಲ್ಪ ಸಂಬಳಗಾರರಿಗೆ ದಿನಸಿ ಧಾರಣೆ ಅಗ್ಗವಾಗುವ ತನಕ ಅಲೋಯನ್ಸುಗಳನ್ನು ಕೊಡತಕ್ಕದ್ದೆಂದು ಶ್ರೀಮನ್ ಮಹಾರಾಜರವರು ಅಪ್ಪಣೆಕೊಡಿಸಿರುತ್ತಾರೆ.

ಬೆಂಗಳೂರು ಪಟ್ಟಣದಲ್ಲಿ ನೀರಿನ ಇಲಾಖೆಯವರು ಮನೆಗಳಲ್ಲಿ ಜನರು ಉಪಯೋಗಿಸಿಕೊಂಡ ಹೆಚ್ಚು ನೀರಿಗೆ ಬಿಲ್ಲುಕೊಟ್ಟು ಹದಿನೈದು ದಿನಗಳೊಳಗಾಗಿ ಹಣ ಪಾವತಿ ಮಾಡದೆ ತಪ್ಪಿದರೆ ಅಂಥಾ ಮನೆಗಳಿಗೆ ನೀರು ಕೊಡುವುದನ್ನು ನಿಲ್ಲಿಸಿ ಬಿಡುವುದಾಗಿ ತಿಳಿಸಿದಾರೆ.

ಅರಮನೆ ಆಫೀಸಿನ ಮ್ಯಾನೇಜರ್ ಮೆ|| ಸಿ. ರಾಮಚಂದ್ರರಾಯರೂ, ನೋಟೀಸಿನ ಮೊತ್ತೇಸರ್ ಮೆ|| ಹಿಂದೂಪುರದ ರಾಮರಾಯರೂ ಸರ್ವೀಸ್‌ದಾರರಾಗಿ ಬಹಳ ಮನಸ್ಸಿಟ್ಟು ಕೆಲಸ ಮಾಡುತ್ತಿರುವುದನ್ನು ಶ್ರೀಮನ್ ಮಹಾರಾಜರವರು ಪರಾಂಬರಿಸಿ, ಅವರಿಬ್ಬರಿಗೂ ಅರಮನೆ ದರ್ಬಾರಿನಲ್ಲಿ ಖಾಸಾ ಹಾರಗಳನ್ನು ಹಾಕುವಂತೆ ಅಪ್ಪಣೆಕೊಡಿಸಿದಾರೆ.

ರಾಜಧಾನಿಯಲ್ಲಿ ಸ್ಲಾಯಿಡ್ ಎಂಬ ಕೈಚಳಕವನ್ನು ಕಲಿಸಿಕೊಡುವ ಪಾಠಶಾಲೆಯನ್ನು ಸರ್ಕಾರದವರು ಪ್ರಾರಂಭಿಸಿ ೮-೧೦ ದಿನಗಳಾದವು. ಇಲ್ಲಿರುವ ಕಾಲೇಜು, ಮರಿಮಲ್ಲಪ್ಪನವರ ಹೈಸ್ಕೂಲ್, ಮಿಷನ್ ಹೈಸ್ಕೂಲ್, ನಾರ್ಮಲ್ ಸ್ಕೂಲುಗಳ ಕೆಲವು ತರಗತಿಗಳ ವಿದ್ಯಾರ್ಥಿಗಳನ್ನು ಈ ಹೊಸ ಪಾಠಶಾಲೆಗೆ ಸರದಿಯ ಮೇರೆ ಕರೆಸಿಕೊಂಡು, ಹಸ್ತಕೌಶಲವನ್ನು ಕಲಿಸಿಕೊಡುತ್ತಿರುವರು.

ಮುಂದಿನ ಗುರುವಾರ ರಾಜಧಾನಿಯಲ್ಲಿ ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಗುವುದು. ಆ ದಿನ ದಿವಾನರವರು ಮೈಸೂರು ಸಂಸ್ಥಾನದ ಜಮಾ ಖರ್ಚು ಮೊದಲಾದ ವಿಚಾರಗಳನ್ನು ಪ್ರಜಾಪ್ರತಿನಿಧಿ ಸಭಿಕರಿಗೆ ತಿಳಿಯಪಡಿಸುವರು. ಅದೇ ದಿನ ಪ್ರತಿನಿಧಿಗಳು ತಮ್ಮಲ್ಲಿ ಇಬ್ಬರನ್ನು ನ್ಯಾಯ ವಿಧಾಯಕ ಸಭೆಗೆ ಮೆಂಬರಾಗಿ ಚುನಾವಣೆ ಮಾಡುತ್ತಾರೆ. ಮೈಸೂರು ಡೆಪ್ಟಿ ಕಮೀಷನರ್ ಮೆ|| ಕಾಂತರಾಜೇ ಅರಸಿನವರು ಆ ಚುನಾವಣೆಯ ಕಾಲದಲ್ಲಿ ಹಾಜರಿದ್ದು ಮೇಲ್ವಿಚಾರಣೆ ನೋಡಿಕೊಳ್ಳುವರು.

ಶ್ರೀರಂಗಪಟ್ಟಣದಲ್ಲಿ ಮುನ್ಸಿಫರಾಗಿದ್ದ ಮೆ|| ಜಿ. ಸತ್ಯಾಚಾರಾಯರಿಗೆ ಅಲ್ಲಿಂದ ವರ್ಗವಾದದ್ದರಿಂದ ಅಲ್ಲಿನ ಪ್ರಜೆಗಳು ಕಳೆದ ಭಾನುವಾರ ದರಿಯಾ ದೌಲತ್ ಬಂಗಲೆಯಲ್ಲಿ ಅವರಿಗೆ ಬಹು ವಿಶೇಷವಾದ ಔತಣವನ್ನು ಮಾಡಿ, ತಮ್ಮ ಕೃತಜ್ಞತೆ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು. ಅದೇ ಸಂದರ್ಭದಲ್ಲಿ ರಾಜಧಾನಿಯ ಸಂಗೀತ ವಿದ್ವಾನ್ ವಾಸುದೇವಾಚಾರ್‍ರಿಗೆ ಶ್ರೀರಂಗಪಟ್ಟಣದ ಪ್ರಜೆಗಳು ಅವರ ಪಾಂಡಿತ್ಯಕ್ಕೆ ಮೆಚ್ಚಿ ಆಸ್ಥಾನದ ವೈಣಿಕ ಶಿಖಾಮಣಿ ಶೇಷಣ್ಣನವರ ಹಸ್ತದಿಂದ ಸುಮಾರು ೩೦೦ ರೂಪಾಯಿನ ತೋಡಾ ಮತ್ತು ಗಂಟೆಯನ್ನು ತೊಡಿಸಿದರು.

ಇಲ್ಲಿನ ಜನರಲ್ ಏಜನ್ಸಿ ಪ್ರೆಸ್ಸಿನ ಮೆ|| ಎಲ್. ರಾಮಚಂದ್ರರಾಯರು "ಜಗದ್ಗುರು" ಎಂಬ ಪತ್ರಿಕೆಯನ್ನು ತಮ್ಮ ಪ್ರೆಸ್ಸಿನಲ್ಲಿ ಅಚ್ಚು ಹಾಕುತ್ತೇವೆಂದು ತಿಳಿಸಲಿಲ್ಲವೆಂತಲೂ, ಆ ಪತ್ರಿಕೆಯ ಮೇಲೆ ತಮ್ಮ ಹೆಸರನ್ನು ಹಾಕದೆ ಹೋದರೆಂತಲೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಎರಡು ತಕ್ಸೀರು ಹೊರಿಸಿ ಒಂದೊಂದಕ್ಕೆ ೫೦ ರೂಪಾಯಿನಂತೆ ಜುಲ್ಮಾನೆ ವಿಧಿಸಿದ್ದರಷ್ಟೆ. ಅದರ ಮೇಲೆ ಅವರು ಸೆಷನ್ಸ್ ಕೋರ್ಟಿನಲ್ಲಿ ಅಪೀಲ್ ಮಾಡಿದ್ದರು. ಸೆಷನ್ಸ್ ಜಡ್ಜರು ಮೊದಲನೇ ಅಪರಾಧಕ್ಕೆ ೫ ರೂಪಾಯಿ ಮಾತ್ರ ಜುಲ್ಮಾನೆಯನ್ನು ವಿಧಿಸಿ, ಇನ್ನೊಂದು ತಕ್ಸೀರನ್ನು ವಜಾ ಮಾಡಿರುತ್ತಾರೆ.

೧೯೦೮ನೇ ಇಸವಿ ಮೈಸೂರು ದಸರಾ ಕೈಗಾರಿಕೆ ಮತ್ತು ವ್ಯವಸಾಯದ ಪ್ರದರ್ಶನವು.

ಮೈಸೂರು ಪಟ್ಟಣದ ಪಶ್ಚಿಮಾಭಿವೃದ್ಧಿಯಲ್ಲಿರುವ ಪೊಲೀಸ್ ಲೈನ್ಸ್ ಎಂಬ ಕಟ್ಟಡದಲ್ಲಿ ನೆನ್ನೆ ಮಧ್ಯಾಹ್ನ ೪ ಗಂಟೆಗೆ ಈ ವರುಷದ ಪ್ರದರ್ಶನವು ಪ್ರಾರಂಭವಾಯಿತು. ಈ ತಿಂಗಳ ತಾ. ೧೪ನೇ ಬುಧವಾರದ ತನಕ ಪ್ರದರ್ಶನಶಾಲೆಯು ಮುಂದೆ ಹೇಳಿರುವ ಕಾಲಗಳಲ್ಲಿ ತೆರೆಯಲ್ಪಡುವುದು:—ಸೆಪ್ಟಂಬರ್ ತಾ. ೩೦ನೇ ಬುಧವಾರ ಸಾಯಂಕಾಲ ೪ ರಿಂದ ೮ ಗಂಟೆ ವರೆಗೆ, ಅಕ್ಟೋಬರ್ ತಾ. ೧ ರಿಂದ ೪ ರ ವರೆಗೆ ದಿನವಹಿ ಮಧ್ಯಾಹ್ನ ೨ ರಿಂದ ರಾತ್ರಿ ೮ ಗಂಟೆ ವರೆಗೆ, ತಾ. ೫ನೇ ಸೋಮವಾರ ಬೆಳಗ್ಗೆ ೭ ರಿಂದ ೧೧ ಗಂಟೆ ವರೆಗೆ, ತಾ. ೬ನೇ, ೭ನೇ ಮಂಗಳವಾರ ಬುಧವಾರ ಮಧ್ಯಾಹ್ನ ೨ ರಿಂದ ರಾತ್ರಿ ೮ ಗಂಟೆ ವರೆಗೆ, ತಾ. ೮ನೇ ಗುರುವಾರ ಬೆಳಗ್ಗೆ ೭ ರಿಂದ ೧೧ ಗಂಟೆ ವರೆಗೆ, ತಾ. ೯ ರಿಂದ ೧೪ ರ ವರೆಗೆ (ಉಭಯ ದಿನಗಳೂ ಸೇರಿ) ದಿನಾ ಮಧ್ಯಾಹ್ನ ೨ ರಿಂದ ರಾತ್ರಿ ೮ ರ ವರೆಗೆ. ಫಲ ಪುಷ್ಪ ಕಾಯಿಪಲ್ಯಾದಿಗಳ ಪ್ರದರ್ಶನವು ಮೊದಲನೆಯ ದಿನ ಸಾಯಂಕಾಲ ೪ ಗಂಟೆಗೆ ಪ್ರಾರಂಭವಾಗಿ ರಾತ್ರಿ ೮ ಗಂಟೆಗೆ ಮುಕ್ತಾಯವಾಗುವುದು.

ಪ್ರತಿ ಸಲಕ್ಕೂ ಪ್ರದರ್ಶನಶಾಲೆಯೊಳಕ್ಕೆ ಹೋಗಲು ತಲೆಗೆ ೨ ಆಣೆಯಂತೆ ರುಸುಂ ಕೊಡಬೇಕು. ಟಿಕೀಟು ಅಥವಾ ಪ್ಯಾಸು ಇಲ್ಲದೆ ಇದ್ದವರನ್ನು ಪ್ರದರ್ಶನದೊಳಕ್ಕೆ ಬಿಡುವುದಿಲ್ಲ. ಪ್ರವೇಶದ ರುಸುಂ ಕೊಡಲು ಶಕ್ತಿಯಿಲ್ಲದಂಥಾ ರೈತರೂ ಕಸಬುದಾರರೂ ಡೆಪ್ಟಿ ಕಮಿಷನರ್‌ರಿಂದಲೂ, ಅಸಿಸ್ಟೆಂಟ್ ಕಮಿಷನರ್‌ರಿಂದಲೂ, ಅಮಲ್ದಾರರಿಂದಲೂ ಸರ್ಟಿಫಿಕೇಟುಗಳನ್ನು ತಂದು ತೋರಿಸಬೇಕಾಗಿದೆ. ಅತಿಥಿಗಳಾದ ದೊಡ್ಡ ಮನುಷ್ಯರೂ, ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳೂ, ಹೆಂಗಸರೂ ಪ್ರತ್ಯೇಕವಾಗಿ ಪ್ರದರ್ಶನವನ್ನು ನೋಡಬೇಕೆಂದಪೇಕ್ಷಿಸಿ, ಸೆಕ್ರೆಟರಿಯವರಿಗೆ ತಿಳಿಸಿದಲ್ಲಿ ಅವರು ಅದಕ್ಕಾಗಿ ಪ್ರತ್ಯೇಕವಾದ ಏರ್ಪಾಡುಗಳನ್ನು ಮಾಡುವರು.

ಅಕ್ಟೋಬರ್ ೪, ೬, ೯, ೧೦, ೧೧ ನೇ ತಾರೀಖುಗಳಲ್ಲಿ ಬೆಳಗ್ಗೆ ೮ ರಿಂದ ೧೦ ಗಂಟೆ ತನಕ ಉಪನ್ಯಾಸಗಳನ್ನು ನಡಿಸಲು ಏರ್ಪಾಡು ಮಾಡಲಾಗುವುದು.

ಅಕ್ಟೋಬರ್ ತಾ ೯, ೧೦, ೧೧, ೧೨ ರಲ್ಲಿ ಬೆಳಗ್ಗೆ ೭ ರಿಂದ ೧೧ ಗಂಟೆಯ ತನಕ ಪ್ರದರ್ಶನಶಾಲೆಯ ಆವರಣದಲ್ಲಿ ಉಳುವುದರಲ್ಲಿ ಮೇಲಾಟ ನಡಿಯುತ್ತದೆ. ಯಾರು ಬೇಕಾದರೂ ಒಂದು ನೋಡಬಹುದು. ರುಸುಂ ಏನೂ ಕೊಡತಕ್ಕದ್ದಿಲ್ಲ.

ಅಕ್ಟೋಬರ್ ತಾ. ೬, ೭, ೮ ರಲ್ಲಿ ಪ್ರದರ್ಶನಶಾಲೆಯ ಆವರಣದೊಳಗೆ ಮಗ್ಗಗಳಲ್ಲಿ ನೇಯ್ಗೆಯ ಮೇಲಾಟ ನಡಿಯುತ್ತದೆ. ಪ್ರದರ್ಶನಶಾಲೆಯು ಮುಚ್ಚಿರುವಲ್ಲಿ ಈ ಮೇಲಾಟವನ್ನು ಹೊರಗಿನವರು ನೋಡಲು ಅವಕಾಶವಿಲ್ಲ.

ಅಕ್ಟೋಬರ್ ತಾ. ೮ ನೇ ಗುರುವಾರ ಮಧ್ಯಾಹ್ನ ಕಸರತ್ತು ಮೊದಲಾದ ಆಟಗಳು (ಸ್ಪೋರ್ಟ್ಸ್) ನಡೆಯುವವು. ರುಸುಂ ಕೊಟ್ಟು ಹೋಗಿ ನೋಡತಕ್ಕದ್ದು.

ನವರಾತ್ರಿ ಉತ್ಸವಗಳು

ಕಳೆದ ತಾ. ೨೬ ನೇ ಶನಿವಾರ ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ನವರಾತ್ರಿ ಕಟ್ಟಳೆಯ ಉತ್ಸವಗಳು ಪ್ರಾರಂಭವಾದವು. ಆ ದಿನ ಪ್ರಾತಃಕಾಲ ಶ್ರೀಮನ್ಮಹಾರಾಜರವರು ಅರಮನೆಯಲ್ಲಿ ಮಂಗಳಸ್ನಾನ ಆಹ್ನಿಕಗಳನ್ನೂ ಪೂಜಾದಿಗಳನ್ನೂ ನೆರವೇರಿಸಿ, ಮಹಾ ಮಾತೃಶ್ರೀಯವರ ಮತ್ತು ಅರಮನೆ ಗುರುಗಳ ಆಶೀರ್ವಾದಗಳನ್ನು ಸ್ವೀಕರಿಸಿ, ದರ್ಬಾರ್ ಪೋಷಾಕನ್ನು ಧರಿಸಿಕೊಂಡು, ಪಾಲಖಿಯಲ್ಲಿ ಕುಳಿತು ಸಮಸ್ತ ಬಿರುದುಗಳ ಮತ್ತು ವಾದ್ಯ ಓಲಗ ತಾಳ ಮೇಳಗಳ ಸಮೇತ ಮೆರವಣಿಗೆಯಲ್ಲಿ ಕರೀಕಲ್ಲು ತೊಟ್ಟಿಯಿಂದ ಜಗನ್ಮೋಹನ ಬಂಗಲೆಗೆ ಚಿತ್ತೈಸಿದರು. ದರ್ಬಾರ್ ಮಂದಿರದಲ್ಲಿ ಋತ್ವಿಕ್ಕರು, ಶಾಸ್ತ್ರಿಗಳು, ಜೋಯಿಸರು, ಪಂಡಿತರು, ಪುರೋಹಿತರೇ ಮೊದಲಾದ ವೈದಿಕ ಮಂಡಲಿಯವರೂ; ರಾಜಬಂಧುಗಳು, ದಿವಾನರು, ಕೌನ್ಸಿಲ್ ಮೆಂಬರುಗಳು, ಸೆಕ್ರೆಟರಿಗಳು, ಬಕ್ಷಿಗಳು, ಲಾಯರುಗಳೂ, ಮ್ಯುನಿಸಿಪಲ್ ಕೌನ್ಸಿಲರುಗಳು, ಎಲ್ಲಾ ಕೋಮುಗಳ ಮತ್ತು ಕಸುಬುಗಳ ಪ್ರತಿನಿಧಿಗಳು ಮೊದಲಾದ ಲೌಕಿಕ ಮಂಡಲಿಯವರೂ ಹಾಜರಾಗಿದ್ದರು ಶ್ರೀಮನ್ಮಹಾರಾಜರವರು ಶ್ರೀಮದ್ ಯುವರಾಜರವರ ಸಮೇತ ೧೧||| ಘಂಟೆಯ ಹೊತ್ತಿಗೆ ದರ್ಬಾರ್ ಮಂದಿರಕ್ಕೆ ದಯಮಾಡಿ, ವೈದಿಕರ ಮುಖೇನ ಶಾಸ್ತ್ರೋಕ್ತವಾದ ಪೂಜೆ ಮುಂತಾದದ್ದನ್ನೂ ದಾನಾದಿಗಳನ್ನೂ ಮಾಡಿ, ಸಿಂಹಾಸನದ ಬಳಿಯಲ್ಲೂ ಅರ್ಚನೆ ನೈವೇದ್ಯ ದಾನಾದಿಗಳನ್ನು ನೆರವೇರಿಸಿ, ಮೂರಾವರ್ತಿ ಪ್ರದಕ್ಷಿಣೆಮಾಡಿ, ಸಿಂಹಾಸನವನ್ನು ಹತ್ತಿ ನಿಂತು ಸಮಸ್ತ ದರ್ಬಾರಿಗಳೂ ನೈನಿಕರೂ ಮಾಡಿದ ಮುಜರೆಗೆ ಪ್ರತಿಯನ್ನಿತ್ತು ಕುಳಿತುಕೊಂಡರು. ಕೂಡಲೇ ಕಹಳೆಗಳೂ ವಾದ್ಯಗಳೂ ಓಲಗ ತಾಳ ಮೇಳಗಳೂ ಘೋರ್ಗರೆದವು ಗೌರವಾರ್ಥವಾದ ೨೧ ತೋಫುಗಳು ಹಾರಿಸಲ್ಪಟ್ಟವು. ತರುವಾಯ ಪಟ್ಟದಾನೆ ಕುದುರೆಗಳು ಮೆರವಣಿಗೆ ಹೊರಟವು. ಗುರುಪೀಠಗಳಿಂದ ಕಳುಹಲ್ಪಟ್ಟ ಆಶೀರ್ವಾದಪೂರ್ವಕವಾದ ಮಿಲ್ಲತ್ತುಗಳೂ ಫಲಮಂತ್ರಾಕ್ಷತೆಗಳೂ ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟ ತರುವಾಯ ವೈದಿಕ ಮಂಡಲಿಯವರು ಫಲವನ್ನೊಪ್ಪಿಸಿ ಮಂತ್ರಾಕ್ಷತೆಯನ್ನು ಅವರ ಶಿರಸ್ಸಿನ ಮೇಲೆ ಹಾಕಿದರು ಅರಸುಗಳೂ ಲೌಕಿಕ ಮಂಡಲಿಯವರೂ ಸಾಲುಸಾಲಾಗಿ ನಿಂತು ಮುಜರೆ ಮಾಡಿ ಸಿಂಹಾಸನದ ಬಳಿಗೆ ಹೋಗಿ ಶ್ರೀಮನ್ಮಹಾರಾಜರವರಿಗೆ ನಜರುಗಳನ್ನೊಪ್ಪಿಸಿದರು ಮಹಾರಾಜರವರು ನಜರುಗಳನ್ನು ಮುಟ್ಟಿ ವಾಪಸು ದಯಪಾಲಿಸಿದರು ತರುವಾಯ ಸಂತೋಷ ಸೂಚಕವಾದ ಸರಟುಗಳು ಮೈದಾನಿನಲ್ಲಿ ಸಿಪಾಯಿಗಳಿಂದ ಮೂರಾವರ್ತಿ ಹಾರಿಸಲ್ಪಟ್ಟವು. ಆನೆಗಳು, ಸವಾರರು, ಸಿಪಾಯಿಗಳೇ ಮೊದಲಾದ ಸೈನಿಕರು ಮೈದಾನಿನಲ್ಲಿ ಶ್ರೀಮನ್ಮಹಾರಾಜರವರ ಎದುರುಪಾರ್ಶ್ವಕ್ಕೆ ಬಂದು ಮುಜರೆ ಮಾಡಿ ತೆರಳಿದರು. ಕಡೆಯಲ್ಲಿ ಸೈನಿಕರೆಲ್ಲಾ "ಶ್ರೀಮನ್ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್‌ಕೀ ಜೈ" ಎಂಬ ಧ್ವನಿಯೆತ್ತಿ ಜಯಘೋಷ ಮಾಡಿದರು. ಪಟ್ಟದಾನೆ ಕುದುರೆಗಳು ಮೆರವಣಿಗೆಯಲ್ಲಿ ಕೆರೆ ಕಡೆಯಿಂದ ಬಂದು ಶ್ರೀಮನ್ಮಹಾರಾಜರವರಿಗೆ ಮುಜರೆ ಮಾಡಿದ ಮೇಲೆ ದರ್ಬಾರ್ ಮಂದಿರದಲ್ಲಿ ವೈದಿಕ ಲೌಕಿಕರುಗಳಿಗೆ ಹೂವಿನ ಹಾರ ಹಾಕಿ ಅಡಿಕೆಲೆಯನ್ನು ವಿನಿಯೋಗ ಮಾಡಿದರು. ದರ್ಬಾರಿಗಳೆಲ್ಲಾ ಎದ್ದು ಮುಜರೆ ಮಾಡಿ, ತೆರಳಿದರು. ಶ್ರೀಮನ್ಮಹಾರಾಜರವರು ಮುಖ್ಯ ಮುಖ್ಯರಾದ ಅರಸುಮಕ್ಕಳಿಗೂ ದಿವಾನರೇ ಮುಂತಾದ ಹುದ್ದೇದಾರರಿಗೂ ಪ್ರಸಾದವನ್ನು ಕೊಟ್ಟರು ಇಲ್ಲಿಗೆ ನವರಾತ್ರಿಯ ಪ್ರಾರಂಭದ ದರ್ಬಾರು ಮುಕ್ತಾಯವಾಯಿತು

ಸಾಯಂಕಾಲದ ದರ್ಬಾರು.

ವಿದ್ಯುಚ್ಛಕ್ತಿಯ ದೀಪಗಳನ್ನು ಪ್ರಾರಂಭಮಾಡಿದ್ದು.

ಶನಿವಾರ ಸಾಯಂಕಾಲ ೭ ಗಂಟೆ ೩೦ ನಿಮಿಷಕ್ಕೆ ಶ್ರೀಮನ್ಮಹಾರಾಜರವರು ದರ್ಬಾರ್ ಮಂದಿರಕ್ಕೆ ಚಿತ್ತೈಸಿ, ಸಿಂಹಾಸನವನ್ನು ಅರ್ಚನೆ ಮಾಡಿ, ವಾದ್ಯಗಳು ಮೊಳಗುತ್ತಿರುವಲ್ಲಿ ಮೆಟ್ಟಲು ಹತ್ತಿ ಸಿಂಹಾಸನದ ಮೇಲೆ ಕುಳಿತುಕೊಂಡರು ಕೂಡಲೇ ದಿವಾನ್ ಮೆ|| ವಿ. ಪಿ. ಮಾಧವರಾಯರು ಪುಷ್ಪಗಳ ಮಧ್ಯೆ ಒಂದು ಚಂಡನ್ನಿಟ್ಟಿದ್ದ ಒಂದು ಚಿನ್ನದ ತಟ್ಟೆಯನ್ನು ಹಿಡಿದು ತಂದು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಿದರು ಮಹಾರಾಜರವರು ಆ ಚಂಡನ್ನು ಹಿಡಿದು ಅದರಲ್ಲಿಟ್ಟಿದ್ದ ಒಂದು ಬಿರಡೆಯನ್ನು ೩-೪ ಸಲ ಅಮುಕಿ ತಟ್ಟೆಯಲ್ಲಿಟ್ಟು ವಾಪಸ್ ಮಾಡಿದರು, ಅಂದರೆ, ರಾಜಧಾನಿಯ ಎಲ್ಲಾ ಭಾಗಗಳಿಗೂ ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವುದಕ್ಕೆ ಅದೇ ಸೂಚನೆಯಾಯಿತು ಹ್ಯಾಗೆಂದರೆ, ಕರ್ಜನ್ ಪಾರ್ಕಿನ ಪೂರ್ವದಿಗ್ಭಾಗದಲ್ಲಿ ಕಟ್ಟಿರುವ ಟ್ರಾನ್ಸ್‌ಫಾರ್ಮರ್ ಹೌಸ್ ಎಂಬ ವಿದ್ಯುಚ್ಛಕ್ತಿಯ ಉಗ್ರಾಣದ ಮನೆಯಿಂದ ಜಗನ್ಮೋಹನ ಬಂಗಲೆಯ ದರ್ಬಾರ್ ಮಂದಿರಕ್ಕೆ ತಂತಿಯನ್ನು ತಂದು ಆರಾರು ದೀಪಗಳುಳ್ಳ ಎರಡು ಗುಳೋಪುಗಳಿಗೆ ತಗಲಿಸಿದ್ದರು ಈ ತಂತಿಯ ಮೂಲಕ ವಿದ್ಯುಚ್ಛಕ್ತಿಯು ಸಂಚಾರ ಮಾಡುವುದು; ಶ್ರೀಮನ್ಮಹಾರಾಜರವರು ಮೇಲ್ಕಂಡ ಚಂಡಿನಲ್ಲಿದ್ದ ಬಿರಡೆಯನ್ನು ಒತ್ತಿದ ಕೂಡಲೇ ಅದರ ಅಡಿಯಿಂದ ಹೊರಟ ತಂತಿಯ ಮೂಲಕ ವಿದ್ಯುಚ್ಛಕ್ತಿಯು ಉಗ್ರಾಣದ ಮನೆಗೆ ವರ್ತಮಾನ ತಲಪಿ, ಅಲ್ಲಿಂದ ವಿದ್ಯುಚ್ಛಕ್ತಿಯು ದರ್ಬಾರ್ ಮಂದಿರದ ಗುಳೋಪುಗಳಿಗೆ ಬಂದು, ದಿವ್ಯವಾದ ಹನ್ನೆರಡು ದೀಪಗಳಾಗಿ ಉರಿಯಲಾರಂಭವಾಯಿತು. ಮತ್ತು ಅದೇ ಕ್ಷಣದಲ್ಲಿ ಉಗ್ರಾಣದ ಮನೆಯಲ್ಲಿ ಯಂತ್ರಗಳನ್ನು ಒತ್ತಿ, ಪಟ್ಟಣಕ್ಕೆಲ್ಲಾ ವಿದ್ಯುಚ್ಛಕ್ತಿಯ ದೀಪಗಳು ಏಕಕಾಲದಲ್ಲಿ ಹತ್ತಿಕೊಳ್ಳುವಂತೆ ಮಾಡಿದರು. ಈ ರೀತಿ ನವರಾತ್ರಿಯ ಮೊದಲನೇ ದಿವಸ ಸಾಯಂಕಾಲದಿಂದ ಶ್ರೀಮನ್ಮಹಾರಾಜರವರು ರಾಜಧಾನಿಗೆ ಈ ನವೀನವಾದ ದೀಪಗಳನ್ನು ತರಿಸಿರುತ್ತಾರೆ. ಇಂಥಾ ವಿಚಿತ್ರವಾದ ದೀಪಗಳನ್ನು ಇಲ್ಲಿನ ಪ್ರಜೆಗಳು ಸಾಮಾನ್ಯವಾಗಿ ನೋಡಿರಲಿಲ್ಲವಾದ್ದರಿಂದ ಎಲ್ಲರೂ ಅವನ್ನು ನೋಡಿ ಆಶ್ಚರ್ಯಪಟ್ಟು, ಆ ಶಕ್ತಿಯ ಮಹತ್ವವನ್ನು ಕುರಿತು ಅಲ್ಲಲ್ಲಿ ನಾನಾ ಪ್ರಕಾರವಾಗಿ ಸಂತೋಷದಿಂದ ಮಾತನಾಡಿಕೊಳ್ಳುತ್ತಿದ್ದಾರೆ

ಆ ದಿನ ಸಾಯಂಕಾಲವೂ ಈವರೆಗೂ ಪ್ರತಿದಿನವೂ ಸಾಯಂಕಾಲಗಳಲ್ಲಿ ಪದ್ಧತಿಯ ಪ್ರಕಾರ ಶ್ರೀಮನ್ಮಹಾರಾಜರವರು ದರ್ಬಾರ್ ನಡಿಸಿದರು ಜಟ್ಟಿ ಕಾಳಗ, ಸೈನಿಕರ ಕವಾತು, ಬಾಣಬಿರಸು, ಆನೆ ಕುದುರೆಗಳ ಮೆರವಣಿಗೆ ಮೊದಲಾದವು ನಡೆಯುತ್ತಲಿವೆ

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಸೋಮವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮೀಟಿಂಗನ್ನು ನಡಿಸಿದರು. ಕಳೆದ ಆಗಸ್ಟ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ೧೪,೯೧೫ ಚಿಲ್ಲರೆ ರೂಪಾಯಿ ಜಮಾ ಆಯಿತೆಂತಲೂ, ೯,೭೮೪ ಚಿಲ್ಲರೆ ರೂಪಾಯಿ ಖರ್ಚಾಯಿತೆಂತಲೂ ತಿಳಿಯಿತು. ಆ ತಿಂಗಳಲ್ಲಿ ಜನನ ೧೦೯, ಮರಣ—ಪ್ಲೇಗು ೩, ಜ್ವರ ೧೩, ಇತರ ಕಾರಣಗಳು ೧೩೭, ಒಟ್ಟು ೧೫೩. ಮೊದಲು ಆಡಿಟರುಗಳ ರಿಪೋರ್ಟು ಓದಲಾಯಿತು ಅದರಲ್ಲಿ ಆಗಸ್ಟ ತಿಂಗಳ ಜಮಾಖರ್ಚು ವೌಚರ್‌ಗಳೂ ಸರಿಯಾಗಿವೆ ಎಂತಲೂ, ಮೊಹತರ್ಫಾ ಕಂದಾಯಗಳಲ್ಲಿ ೩,೨೦೦ ಚಿಲ್ಲರೆ ಮಾತ್ರ ವಸೂಲಾಯಿತೆಂತಲೂ, ವಸೂಲಿ ವಿಚಾರವು ಇನ್ನೂ ತೃಪ್ತಿಕರವಾಗುವಂತೆ ಮುತುವರ್ಜಿ ಮಾಡಬೇಕಾಗಿದೆ ಎಂತಲೂ ಆಡಿಟರುಗಳು ಸೂಚಿಸಿದ್ದರು ಮ್ಯುನಿಸಿಪಾಲಿಟಿಯಲ್ಲಿ ಇನ್ನೂ ೪೦,೦೦೦ ರೂಪಾಯಿವರೆಗೆ ವಸೂಲಾಗದ ಕಂದಾಯವು ಬಾಕಿಯಲ್ಲಿರುತ್ತದೆಂದು ತಿಳಿಯಿತು

ಪ್ಲೇಗು, ವಾಂತಿಭೇದಿ, ದೊಡ್ಡ ಸಿಡುಬು, ಈ ಮೊದಲಾದ ಅಂಟು ಜಾಡ್ಯಗಳು ಯಾರ ಮನೆಯಲ್ಲಿ ಕಾಣಿಸಿಕೊಂಡರೂ ಮನೆಯ ಯಜಮಾನನು ಮ್ಯುನಿಸಿಪಾಲಿಟಿಗೆ ಕೂಡಲೇ ತಿಳಿಸಬೇಕು, ಹೆಲ್ತ್ ಆಫೀಸರು ಹೋಗಿ ಕಾಯಿಲೆಯವನನ್ನು ಬಲಾತ್ಕಾರವಾಗಿ ಆಸ್ಪತ್ರೆಗೆ ಸಾಗಿಸಬೇಕು, ಮನೆಯಲ್ಲೇ ಸ್ಥಳವು ಅನುಕೂಲವಾಗಿದ್ದರೆ ರೋಗಿಯನ್ನು ಅಲ್ಲೇ ಇಟ್ಟುಕೊಂಡು, ಶುದ್ಧಿ ಕಾರ್ಯಗಳನ್ನು ನಡೆಸುವ ಏರ್ಪಾಡು ಮಾಡಬೇಕು ಎಂಬೀ ಈ ಮೊದಲಾದ ಅಧಿಕಾರಗಳನ್ನು ಮ್ಯುನಿಸಿಪಾಲಿಟಿಯವರು ವಹಿಸಿಕೊಂಡು, ಚಲಾಯಿಸಬೇಕಾಗಿದೆ ಎಂತಲೂ, ಇಲ್ಲವಾದರೆ ಅಂಟು ಜಾಡ್ಯಗಳನ್ನು ತಡೆಯುವುದು ಸಾಧ್ಯವಾಗುವುದಿಲ್ಲವೆಂತಲೂ ಸ್ಯಾನಿಟರಿ ಕಮಿಷನರವರು ಬರೆದು ತಿಳಿಸಿದ್ದರು. ಈ ವಿಚಾರವನ್ನು ಕೌನ್ಸಿಲರುಗಳು ದೀರ್ಘವಾಗಿ ಚರ್ಚೆ ಮಾಡಿದರು ಅಂಟು ಜಾಡ್ಯವನ್ನು ಹಬ್ಬದಂತೆ ತಡೆಯುವುದಕ್ಕೆ ಪ್ರಾರಂಭದಲ್ಲಿ ಅಂಥಾ ನಿರ್ಬಂಧಗಳನ್ನು ಕಲ್ಪಿಸಿ ಜಾರಿಯಲ್ಲಿ ತರಬೇಕಾದದ್ದು ಅವಶ್ಯವೆಂದು ಪ್ರೆಸಿಡೆಂಟರೂ ಮೆ|| ಪಂಡಿತರೂ ಸೂಚಿಸಿದರು ಮೆ|| ರಂಗಯ್ಯಂಗಾರ್ರೇ ಮೊದಲಾದವರು—ಕಾಯಿಲೆ ಪ್ರಾಪ್ತವಾದ ವಿಚಾರವನ್ನು ಮನೆಯವನು ಸರ್ಕಾರಕ್ಕೆ ಕೂಡಲೇ ತಿಳಿಸಬೇಕೆಂದು ವಿಧಿಸುವುದು ಅವಶ್ಯವೆಂತಲೂ, ಆದರೆ ಕಾಯಿಲೆಯವನನ್ನು ಬಲಾತ್ಕಾರದಿಂದ ಕ್ಯಾಂಪು ಅಥವಾ ಆಸ್ಪತ್ರೆಗಳಿಗೆ ಸಾಗಿಸುವ ಅಧಿಕಾರವನ್ನು ಚಲಾಯಿಸಿದರೆ ಹಿಂದೆ ಪ್ಲೇಗ್ ಕಾಲದಲ್ಲಿ ಬಡಬಗ್ಗರು ಪಟ್ಟಂಥಾ ಕಷ್ಟ ನಷ್ಟ ಸಂಕಟಗಳನ್ನು ಮತ್ತೆ ಅನುಭವಿಸಬೇಕಾಗುವುದೆಂತಲೂ, ಅಂಥಾ ಬಲಾತ್ಕಾರದ ಕಾನೂನುಗಳು ಬೊಂಬಾಯಿ ಆದಿಸ್ಥಳದಲ್ಲಿ ಸರ್ಕಾರದವರು ಜಾರಿಯಲ್ಲಿ ತಂದು ಈಚೆಗೆ ವಜಾ ಮಾಡಿರುತ್ತಾರೆಂತಲೂ, ಈ ಅಧಿಕಾರಗಳು ಮ್ಯುನಿಸಿಪಾಲಿಟಿಯವರ ಜವಾಬ್ದಾರಿಯನ್ನು ಹೆಚ್ಚು ಮಾಡುವುದೆಂತಲೂ ಅಭಿಪ್ರಾಯ ಪಟ್ಟರು ಮೆ|| ವೆಂಕಟಕೃಷ್ಣಯ್ಯನವರು—ಈ ಅಧಿಕಾರಗಳನ್ನು ಪ್ರೆಸಿಡೆಂಟರಿಗೆ ವಹಿಸೋಣ, ಅವರು ಪ್ರಜಾ ಹಿತಕ್ಕಾಗಿ ಯಾವ ರೀತಿ ಚಲಾವಣೆ ಮಾಡುವರೋ ಮಾಡಲಿ, ಕಠಿಣತರವಾದ ಯಾವ ಕಾನೂನನ್ನೂ ಮಾಡಕೂಡದೆಂದು ಹೇಳುವಾಗ್ಗೆ ನಾವು ಬರಿಯ ಪ್ರಜಾಪ್ರೀತಿಯನ್ನು ತೋರಿಸುವವರಾಗುತ್ತೇವಲ್ಲದೆ, ನಮ್ಮ ಕರ್ತವ್ಯವನ್ನು ಸಂದರ್ಭಾನುಸಾರ ಅವಶ್ಯವಾದದನ್ನೂ ಮಾಡಿದಂತಾಗುವುದಿಲ್ಲ ಎಂಬೀ ರೀತಿ ಅಭಿಪ್ರಾಯ ಪಟ್ಟರು. ಇನ್ನು ಕೆಲವು ಕೌನ್ಸಿಲರುಗಳು—ಕಾಯಿಲೆಯವರನ್ನು ಅವರ ಮನೆಯನ್ನು ಬಿಟ್ಟು ಕ್ಯಾಂಪು ಅಥವಾ ಆಸ್ಪತ್ರೆಗಳಿಗೆ ಸರ್ಕಾರದವರು ಸಾಗಿಸುತ್ತಾರೆಂಬ ಭೀತಿಯಿಂದಲೇ ಅನೇಕ ಅನರ್ಥಗಳಾಗಿರುತ್ತವೆ; ಮುಂದೂ ಹಾಗೆ ಆಗಬಹುದಾದ್ದರಿಂದ ಈ ಬಲಾತ್ಕಾರದ ಅಧಿಕಾರಗಳು ಮ್ಯುನಿಸಿಪಾಲಿಟಿಗೆ ಅವಶ್ಯವೆಂದು ಕಾಣುವುದಿಲ್ಲವೆಂಬದಾಗಿ ಅಭಿಪ್ರಾಯ ಪಟ್ಟರು. ಮೆ|| ಅನಂತರಾಜ್ಯೈಯನವರೇ ಮುಂತಾದವರು—ಪಟ್ಟಣದ ಪ್ರಜೆಗಳಿಗೆ ಅಂಥಾ ನಿರ್ಬಂಧವನ್ನು ವಿಧಿಸಲಾಗದೆಂತಲೂ, ಹೊರಗಿನಿಂದ ಬಂದು ಕಾಯಿಲೆ ಬೀಳತಕ್ಕವರ ವಿಷಯದಲ್ಲೂ ಅಂಟು ಜಾಡ್ಯಗಳಿರುವ ಕಡೆಗಳಿಂದ ಪಟ್ಟಣಕ್ಕೆ ಬರತಕ್ಕವರ ವಿಷಯದಲ್ಲೂ ಈ ಅಧಿಕಾರಗಳನ್ನು ಬೇಕಾದರೆ ಚಲಾಯಿಸುವಂತೆ ಮಾಡಬಹುದು ಎಂತಲೂ ಸೂಚಿಸಿದರು. ಕಡೆಗೆ ಈ ವಿಚಾರವನ್ನು ಮ್ಯುನಿಸಿಪಲ್ ಮ್ಯಾನೇಜಿಂಗ್ ಕಮಿಟಿಯಲ್ಲಿ ಚೆನ್ನಾಗಿ ಚರ್ಚೆಮಾಡಿ, ಅವರ ಅಭಿಪ್ರಾಯವನ್ನು ತಿಳಿಸಬೇಕೆಂದು ಗೊತ್ತು ಮಾಡಿರುತ್ತಾರೆ.

ತಂಬಾಕು (ಹೊಗೆಸೊಪ್ಪಿನ) ಮೇಲೆ ಮ್ಯುನಿಸಿಪಾಲಿಟಿಯವರು ಮಣ ೧ಕ್ಕೆ ಒಳದೇಶದ ಸರಕಿಗೆ ೩ ರೂಪಾಯಿನಂತೆಯೂ, ರಫ್ತಾಗಿ ಬರತಕ್ಕ ಸರಕಿಗೆ ೩|| ರೂಪಾಯಿನಂತೆಯೂ ಆಕ್ಟ್ರಾಯಿ ಸುಂಕವನ್ನು ಹಾಕಿ ವಸೂಲ್ಮಾಡುತ್ತಿದ್ದಾರೆ ಈ ದರಗಳು ತುಂಬಾ ಹೆಚ್ಚಾಗಿರೋಣದರಿಂದ ಈ ಬಾಬಿನ ಉತ್ಪತ್ತಿಯು ಬಹಳ ಕಡಿಮೆಯಾಗಿದೆ ಎಂತಲೂ, ಅನೇಕರು ಕಳ್ಳತನದಿಂದ ಸರಕನ್ನು ಊರಿನೊಳಕ್ಕೆ ಸಾಗಿಸಿಕೊಂಡು ಬರುವುದಕ್ಕೆ ಅವಕಾಶವಾಗಿದೆ ಎಂತಲೂ, ದರಗಳನ್ನು ೨ ರೂಪಾಯಿಗೂ, ೨|| ರೂಪಾಯಿಗೂ ಇಳಿಸಿದರೆ ಉತ್ತಮವೆಂತಲೂ ಮ್ಯುನಿಸಿಪಲ್ ಮ್ಯಾನೇಜಿಂಗ್ ಕಮಿಟಿಯವರು ಅಭಿಪ್ರಾಯಪಟ್ಟರು ಈ ಹೊಸ ದರಗಳನ್ನು ಒಂದು ವರುಷದ ವರೆಗೆ ಆಜಮಾಯಿಷಿಗಾಗಿ ಜಾರಿಯಲ್ಲಿ ತರಬೇಕೆಂದು ತೀರ್ಮಾನವಾಗಿದೆ.

ಆಕ್ಟ್ರಾಯಿ ಆಫೀಸ್ ಉಗ್ರಾಣದಲ್ಲಿ ವರ್ತಕರು ದಾಸ್ತಾನ್ ಇಟ್ಟಿರುವಂಥಾ ಸರಕುಗಳ ಸ್ಥಳ ಬಾಡಿಗೆ ದರಗಳನ್ನು ಮ್ಯುನಿಸಿಪಲ್ ಮ್ಯಾನೇಜಿಂಗ್ ಕಮಿಟಿಯವರು ಪರ್ಯಾಲೋಚನೆ ಮಾಡಿ, ಕ್ರಮಪಡಿಸಬೇಕೆಂದು ಕೌನ್ಸಿಲ್ ಮೆಂಬರುಗಳು ತೀರ್ಮಾನ ಮಾಡಿದರು

ವೀವರ್ಸ್ ಲೈನ್ ಮೊಹಲ್ಲೆಯಲ್ಲಿ ಸರ್ಕಾರಿ ಆಸ್ಪತ್ರೆಯನ್ನು ಇಟ್ಟಿರುವ ಕಟ್ಟಡದಲ್ಲಿ ಗೆದ್ದಲು ಹುಳುಗಳ ಕಾಟ ಹೆಚ್ಚಾಗಿರೋಣದರಿಂದ ಅಲ್ಲಿ ಆಸ್ಪತ್ರೆಯನ್ನು ಮನ್ನಾ ಮಾಡಿ, ರಾಮಸೂಕರಾಯವರ ಮನೆಗೆ ೧೦ ರೂಪಾಯಿ ಬಾಡಿಗೆ ಕೊಟ್ಟು, ಅದರಲ್ಲಿ ಆಸ್ಪತ್ರೆ ಇಡಿಸಬಹುದೆಂದೂ, ಈಗ ಆಸ್ಪತ್ರೆ ಇರುವ ಕಟ್ಟಡವನ್ನು ಪಳ್ಳಿಮಠಕ್ಕೆ ವಿನಿಯೋಗಿಸಿಕೊಳ್ಳಬಹುದೆಂದೂ ಕೌನ್ಸಿಲರುಗಳು ತೀರ್ಮಾನ ಮಾಡಿದರು.

ಗ್ರಾಮ ಕೆರೆ ಪಂಚಾಯಿತಿ ಬಿಲ್ಲು

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

ಮೈಸೂರು ಸಂಸ್ಥಾನದಲ್ಲಿ ಅನೇಕ ದೊಡ್ಡ ದೊಡ್ಡ ಕೆರೆಗಳೂ ಚಿಕ್ಕ ಚಿಕ್ಕ ಕೆರೆಗಳೂ ಇವೆಯಷ್ಟೆ. ಈ ಕೆರೆಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಂಡಿರುವುದರಿಂದಲೇ ಈ ಸಂಸ್ಥಾನದ ಅಭಿವೃದ್ಧಿಯಾಗುವುದಲ್ಲದೆ ಅನ್ಯಥಾ ಇಲ್ಲವು. ಇವುಗಳಿಂದ ಉಪಯೋಗಪಡೆಯುವವರು ರೈತರೇ ಆದುದರಿಂದ ಅವರೇ ಅವುಗಳನ್ನು ಒಳ್ಳೇ ದುರಸ್ತಿನಲ್ಲಿ ಇಡಬೇಕಾದದ್ದೆಂಬ ಅಂಶವನ್ನು ಲಾಗಾಯಿತಿನಿಂದಲೂ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಒಡೆದುಹೋದ ಕೆರೆಗಳನ್ನು ಪುನಃ ಕಟ್ಟಿಕೊಳ್ಳುವುದು, ಅವುಗಳನ್ನು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಂಡಿರುವುದು ಮುಂತಾದ ವಿಷಯಗಳಲ್ಲಿ ರೈತರು ತಮ್ಮ ಕೆಲಸಗಳನ್ನು ತಿಳಿದುಕೊಂಡು, ಅದರಂತೆ ನಡೆಕೊಳ್ಳತಕ್ಕ ಬಗ್ಗೆ ೧೮೭೩ನೇ ಇಸವಿಯಲ್ಲಿ ಚೀಫ್ ಕಮಿಷನರವರು ನಿಬಂಧನೆಗಳನ್ನು ಏರ್ಪಡಿಸಿದ್ದರು. ಈ ನಿಬಂಧನೆಗಳನ್ನೇ ೧೮೯೦ನೇ ಇಸವಿ ಡಿಸೆಂಬರ್ ೧೫ನೇ ತಾರೀಖು ಇಸ್ತಿಹಾರ್ನಾಮೆಯಲ್ಲಿ ಸ್ವಲ್ಪ ಮಟ್ಟಿಗೆ ಬದಲಾಯಿಸಿ ಈಗಲೂ ಜಾರಿಯಲ್ಲಿ ಇಟ್ಟಿರುತ್ತದೆ

ಈ ನಿಬಂಧನೆಗಳನ್ನು ಚಲಾಯಿಸುವುದಕ್ಕೆ ಎರಡು ತರಹ ವಿಘ್ನವುಂಟಾಗಿರುವುದಾಗಿ ಈಗಿನ ಅನುಭವದಿಂದ ತಿಳಿಯಬಂದಿರುತ್ತದೆ. ಅವು ಯಾವುವೆಂದರೆ -- ಜನಸಾಮಾನ್ಯಕ್ಕೆ ಉಪಯೋಗಕರವಾದ ಕೆಲಸಗಳಲ್ಲಿ ಗ್ರಾಮಸ್ಥರು ಐಕಮತ್ಯದಿಂದ ಪರಸ್ಪರ ಸಹಾಯಮಾಡುವ ಪದ್ಧತಿಯು ನಿಂತುಹೋಗಿ ಇರುತ್ತದೆ ಇದೂ ಅಲ್ಲದೆ ಈ ನಿಬಂಧನೆಗಳನ್ನು ಜಾರಿಯಲ್ಲಿ ತಂದು ಕೆರೆಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟಿರುವ ಕೆಲಸವನ್ನು ಯಾವ ಸರ್ಕಾರಿ ಅಧಿಕಾರಿಗಳಿಗೆ ವಹಿಸಿರುತ್ತದೆಯೋ ಅಂಥಾ ಅಧಿಕಾರಿಗಳು ತಮ್ಮ ಕೆಲಸದ ವಿಷಯದಲ್ಲಿ ಉದಾಸೀನರಾಗಿರುತ್ತಾರೆ. ಈ ಎರಡು ಕಾರಣಗಳಿಂದ ಅನೇಕ ಕೆರೆಗಳು ಹೀನಸ್ಥಿತಿಗೆ ಬಂದು ಕೆಟ್ಟುಹೋಗಿರುತ್ತವೆ

ಕೆರೆ ಕೆಳಗಣ ಜಮೀನುಗಳ ಹಿಡುವಳಿದಾರರಾದ ರೈತರು ಅವುಗಳಿಂದ ಪ್ರಯೋಜನ ಅಥವಾ ನಷ್ಟವನ್ನು ಹೊಂದುವುದರಿಂದ ಅವರಿಗೆ ಆ ಕೆರೆಗಳಲ್ಲಿ ವಿಶೇಷ ಆಸಕ್ತಿ ಇರಬೇಕಾದಾಗ್ಯೂ ಅವುಗಳನ್ನು ದುರಸ್ತಿನಲ್ಲಿಟ್ಟಿರುವ ಕೆಲವು ಸರ್ಕಾರದವರೊಬ್ಬರಿಗೆ ಮಾತ್ರ ಸಂಬಂಧಪಟ್ಟಿರುತ್ತದೆಯೇ ಹೊರತು ರೈತರಿಗೆ ಎಷ್ಟು ಮಾತ್ರಕ್ಕೂ ಸಂಬಂಧಪಟ್ಟದ್ದಲ್ಲವೆಂದು ತಿಳಿದುಕೊಂಡಿರುವುದೇ ಅವು ಹೀಗೆ ಬೇದುರಸ್ತಿಗೆ ಬಂದಿರುವುದಕ್ಕೆ ಕಾರಣವಾಯಿತೆಂದು ಹೇಳಬಹುದು. ಕೆರೆಗಳ ದುರಸ್ತಿನ ವಿಷಯದಲ್ಲಿ ರೈತರಿಗೆ ಮಮತೆಯುಂಟಾಗುವಂತೆ ಮಾಡಿ ಅವರು ಈ ಕೆಲಸದಲ್ಲಿ ಮನಃಪೂರ್ವಕವಾಗಿ ಸಹಾಯಮಾಡುವಂತೆ ಪ್ರೋತ್ಸಾಹಪಡಿಸಲು ಸರ್ಕಾರದ ಅಧಿಕಾರಿಗಳು ಯಾವ ಪ್ರಯತ್ನವನ್ನೂ ಮಾಡಿಲ್ಲ ಹೀಗೆ ಕೆರೆಗಳನ್ನು ಒಳ್ಳೇ ಸ್ಥಿತಿಗೆ ತರುವ ಬಗ್ಗೆ ಮಾಡಬೇಕಾದ ಏರ್ಪಾಟುಗಳ ವಿಚಾರವಾಗಿ ರೈತರ ಯೋಚನೆಯೂ ಕೇಳಿ ಅವರ ಸಲಹೆಗಳನ್ನೂ ಅಂಗೀಕರಿಸಿ ಈ ಬಗ್ಗೆ ಸರ್ಕಾರದವರು ವಿನಿಯೋಗಿಸಬೇಕೆಂದಿರುವ ಹಣವನ್ನು ಅವರ ಮುಕ್ತ್ಯಾರಿಯಲ್ಲಿಟ್ಟು ಈ ಕೆಲಸಗಳನ್ನು ಮಾಡಿಸುವ ಅಧಿಕಾರವನ್ನು ಅವರಿಗೇನೇ ಕೊಟ್ಟದ್ದೇ ಆದರೆ, ಕೆರೆಗಳು ಪುನಃ ದುರಸ್ತಿನ ಸ್ಥಿತಿಗೆ ಬರಬಹುದೆಂದು ತೋರುತ್ತದೆ. ಈ ಅಭಿಪ್ರಾಯದಿಂದ ಆಯಾ ಗ್ರಾಮದಲ್ಲಿ ಪಟೇಲ, ಶಾನುಭೋಗರೂ, ರೈತರೇ ತಮ್ಮೊಳಗೆ ಚುನಾಯಿಸುವ ೩ ಅಥವಾ ಹೆಚ್ಚು ಮಂದಿ ಜನಗಳೂ ಇವರುಗಳನ್ನು ಸೇರಿಸಿ ಪಂಚಾಯತರನ್ನಾಗಿ ನಿಯಮಿಸುವದು ಸೂಕ್ತವೆಂದು ತೋರುತ್ತದೆ. ಇಂಥಾ ಪಂಚಾಯಿತಿಯನ್ನು ಏರ್ಪಡಿಸುವದೂ, ಈ ಪಂಚಾಯಿತಿಯವರು ಯಾವ ಯಾವ ಕೆಲಸವನ್ನು ಮಾಡಬೇಕು ಯಾವ ಯಾವ ಅಧಿಕಾರಗಳನ್ನು ಚಲಾಯಿಸಬೇಕು ಎಂಬುವದನ್ನು ಗೊತ್ತುಮಾಡುವದೂ ಈ ಬಿಲ್ಲಿನ ಉದ್ದೇಶವಾಗಿದೆ.

ಆದರೆ ಯಾವ ಯಾವ ಗ್ರಾಮಗಳಲ್ಲಿ ಪಂಚಾಯಿತರನ್ನು ನಿಯಮಿಸುವದು ರೈತರಿಗೆ ಇಷ್ಟವಿಲ್ಲವೋ ಅಲ್ಲಿ ಬಲಾತ್ಕಾರದಿಂದ ಅಂಥಾ ಪಂಚಾಯಿತರನ್ನು ಏರ್ಪಡಿಸಬೇಕೆಂಬುವದು ಈ ಕಾನೂನಿನ ಉದ್ದೇಶವಲ್ಲ ಯಾವ ಗ್ರಾಮದಲ್ಲಿ ಗ್ರಾಮಸ್ಥರ ಪೈಕಿ ಬಹುಭಾಗದವರು ಅಂದರೆ ೩ರಲ್ಲಿ ೨ ಭಾಗದವರಿಗಿಂತ ಕಮ್ಮಿ ಇಲ್ಲದಷ್ಟು ಜನರು ಇಷ್ಟಪಡುತ್ತಾರೆಯೋ ಅಂಥಾ ಗ್ರಾಮದಲ್ಲಿ ಮಟ್ಟಿಗೆ ಪಂಚಾಯಿತರನ್ನು ಏರ್ಪಡಿಸುವುದಾಗುತ್ತೆ. ಕೆರೆ ದುರಸ್ತಿನ ವಿಚಾರದಲ್ಲಿ ಇದುವರೆವಿಗೂ ರೈತರು ಮಾಡಬೇಕಾದ ಕೆಲಸವನ್ನು ಈ ಬಿಲ್ಲಿನಲ್ಲಿ ವಿವರಿಸಿದೆಯೇ ಹೊರತು ಇದರಿಂದ ಅವರ ಮೇಲೆ ಹೊಸ ಜವಾಬ್ದಾರಿ ಯಾವದನ್ನೂ ಹೊರಿಸುವುದಿಲ್ಲ. ಯಾವ ಯಾವ ಕೆರೆಗಳನ್ನು ದುರಸ್ತಿನ ಸ್ಥಿತಿಗೆ ತಂದಿರುತ್ತದೆಯೋ ಅಂಥವುಗಳ ಸರಿಯಾಗಿಟ್ಟುಕೊಂಡಿರುವುದೂ ಒಡೆದುಹೋದ ಚಿಕ್ಕ ಕೆರೆಗಳನ್ನು ತಿರಿಗಿ ಕಟ್ಟಿಸುವುದೂ ರೈತರ ಕೆಲಸವೆಂದು ವಿಧಿಸಿರುವ ಹಾಲೀ ಜಾರಿಯಲ್ಲಿರುವ ನಿಬಂಧನೆಗಳನ್ನು ಬದಲಾಯಿಸಿರುವದಿಲ್ಲ. ಆದರೆ ಇದುವ

ಬಿಗೂ ಈ ವಿಧವಾದ ಕೆಲಸಗಳನ್ನೂ ಅಧಿಕಾರಗಳನ್ನೂ ಸರ್ಕಾರಿ ಅಧಿಕಾರಿಗಳು ನಡಿಸುತ್ತಿದ್ದುದಕ್ಕೆ ಬದಲಾಗಿ ಇತಃಪರ ರೈತರೇ ತಮ್ಮೊಳಗೆ ಚುನಾಯಿಸಿದ ಕೆಲವು ಪಂಚಾಯಿತರು ಈ ಅಧಿಕಾರಗಳನ್ನು ಚಲಾಯಿಸಬೇಕೆಂದು ಏರ್ಪಡಿಸಲಾಗಿದೆ. ಈ ಕೆರೆಗಳ ದುರಸ್ತಿನ ಕೆಲಸವು ಸರ್ಕಾರಕ್ಕೆ ಮಟ್ಟಿಗೆ ಸಂಬಂಧಪಟ್ಟದ್ದಲ್ಲ. ಅದಕ್ಕೆ ರೈತರೂ ಭಾಗಿಗಳಾಗಿರಬೇಕೆಂಬ ವಿಷಯವನ್ನು ಅವರ ನಿದರ್ಶನಕ್ಕೆ ತರುವ ಉದ್ದೇಶದಿಂದಲೂ ಮತ್ತು ಅವರ ಜವಾಬ್ದಾರಿಯನ್ನು ಅವರು ಸರಿಯಾಗಿ ಚಲಾಯಿಸುವ ಬಗ್ಗೆ ಇದಕ್ಕಾಗಿ ವಿನಿಯೋಗಿಸಬೇಕೆಂದಿರುವ ಹಣವನ್ನು ಸದರಿ ಪಂಚಾಯಿತರ ವಶದಲ್ಲಿಡಬೇಕೆಂದು ಉದ್ದೇಶಿಸಿದೆ. ಹೀಗೆ ಮಾಡುವುದರಿಂದ ರೈತರು ತಮಗೆ ಬಹು ಮುಖ್ಯವಾದ ಈ ವಿಚಾರದಲ್ಲಿಯೂ ಜನ ಸಾಮಾನ್ಯಕ್ಕೆ ಉಪಯುಕ್ತವಾಗಿರುವ ಇನ್ನೂ ಇತರ ಕೆಲಸಗಳಲ್ಲಿಯೂ ಮುತುವರ್ಜಿಯನ್ನು ವಹಿಸಿ ಐಕಮತ್ಯದಿಂದ ತಮ್ಮಲ್ಲಿ ಪರಸ್ಪರ ಸಹಾಯ ಮಾಡತಕ್ಕ ಬುದ್ಧಿಯು ಅವರಲ್ಲಿ ಅಭಿವೃದ್ಧಿಯಾದೀತೆಂದು ನಿರೀಕ್ಷಿಸಬಹುದಾಗಿದೆ. ಯಾವ ಯಾವ ಸ್ಥಳಗಳಲ್ಲಿ ಕೆರೆಗಳ ಮೇಲ್ವಿಚಾರಣೆಗೆ ಪಂಚಾಯಿತರು ಇರಬೇಕೆಂದು ರೈತರು ಅಪೇಕ್ಷಿಸುತ್ತಾರೆಯೋ ಆಯಾ ಸ್ಥಳಗಳಲ್ಲಿ ಮಾತ್ರ ಅಂಥಾ ಪಂಚಾಯಿತರನ್ನು ಏರ್ಪಡಿಸುವುದು ಮಟ್ಟಿಗೆ ಈ ಬಿಲ್ಲಿನ ಉದ್ದೇಶವಾದುದರಿಂದ ಕೆರೆಗಳ ವಿಚಾರದಲ್ಲಿ ರೈತರು ಮಾಡಬೇಕಾದ ಕೆಲಸಗಳನ್ನು ಈ ಬಿಲ್ಲಿನಲ್ಲಿ ವಿಧಿಸಿರುವುದೂ ಇಲ್ಲ. ಇದೇ ವಿಷಯವಾಗಿ ಜಾರಿಯಲ್ಲಿರುವ ಸರ್ಕಾರಿ ಹುಕುಂಗಳನ್ನೂ ಕಾನೂನುಗಳನ್ನೂ ಸಂಗ್ರಹಿಸಿ ಬರೆದೂ ಇಲ್ಲ. ಈ ಸಂಸ್ಥಾನಾವಳಿ ಕೆರೆಗಳ ವಿಷಯವಾಗಿ ಜಾರಿಯಲ್ಲಿರುವ ಸರ್ಕಾರಿ ನಿಬಂಧನೆಗಳನ್ನೆಲ್ಲಾ ಒಟ್ಟುಗೂಡಿಸಿ ಕಾನೂನನ್ನು ಏರ್ಪಡಿಸುವದೇನೋ ಬಹಳ ಅಪೇಕ್ಷಣೀಯವಾದದ್ದೇ ಸರಿ. ಆದರೆ ಇದರಲ್ಲಿ ಅನೇಕ ತೊಂದರೆಗಳಿರುವದಲ್ಲದೆ ಈಗ ತುರ್ತು ಅವಶ್ಯಕವಾದದ್ದಲ್ಲ.

ಪಂಚಾಯಿತರ ಅಧಿಕಾರಗಳನ್ನೂ ಕರ್ತವ್ಯಗಳನ್ನೂ ಈ ಬಿಲ್ಲಿನ ಆಯಾ ಕಲಮುಗಳಲ್ಲಿ ಸ್ಪಷ್ಟವಾಗಿ ವಿವರಿಸಿದೆ. ಮತ್ತು ಇದರ ನಿಯಮಗಳಿಗೆ ಎಷ್ಟು ಮಟ್ಟಿನ ವ್ಯಾಪನೆಯುಂಟು, ಅವುಗಳನ್ನು ಏರ್ಪಡಿಸುವುದಕ್ಕೆ ಕಾರಣವೇನು ಎಂಬುದನ್ನು ಅದರ ಮೊಕ್ಕೆಯಲ್ಲಿರುವ ಟಿಪ್ಪಣಿಗಳಲ್ಲಿ ತಿಳಿಸಿದೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದ್ದರಿಂದ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ನಿಜವಾದ ಹೆಸರು ವಿಳಾಸಗಳನ್ನು ಬರೆಯತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಅಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು ಎಡಿಟರ್

'ವಿದ್ಯಾಭಿಲಾಷಿ' 'ಸೊರಬದ ಹಿತಚಿಂತಕ' 'ಸುಜನಮಿತ್ರ' ವರ್ಗೀಕೃ, 'ನಾಗವಳ್ಳಿಯಿಂದ ಒಂದು ಬಾತ್ಮಿ', ಪಾಲೂರು ಬಾತ್ಮಿ ಇವುಗಳಿಗೆ ಈ ಪತ್ರಿಕೆಯಲ್ಲಿ ಅವಕಾಶ ದೊರಕಲಾರದೆಂದು ವಿಷಾದಿಸುತ್ತೇವೆ ಎಡಿಟರ್]

ಕರೆಸ್ಪಾಂಡೆನ್ಸ್

ಕಸಿ ಮಾವಿನ ವ್ಯವಸಾಯವು.

ಅಯ್ಯಾ,

ಈ ವರ್ಷ ಕೆಲವು ಕಾಲದ ಹಿಂದೆ ಬೆಂಗಳೂರಿಂದ ಕಸಿ ಮಾಡಿದ ಮಾವಿನ ಗಿಡಗಳನ್ನು ಅನೇಕ ತರಿಸಿದೆನು ಸದರಿ ಗಿಡ ರವಾನಿಸಿದ ಕಂಪನಿಯು ಗಿಡಗಳನ್ನು ರೈಲ್ ಮೇಲೆ ರವಾನಿಸಿದ್ದಲ್ಲದೆ, ಇವುಗಳು ಹ್ಯಾಗೆ ನಡಿಯುವವೆಂಬದು ತಿಳಿಸೋಣವಾಗಲಿಲ್ಲ. ನಾನು ನನ್ನ ಅಭಿಪ್ರಾಯದ ಪ್ರಕಾರ ನೆಡಿಸಿದ್ದಲ್ಲಿ ಕೆಲವು ಗಿಡಗಳು ಸತ್ತು ಹೋದವು ಆದ್ದರಿಂದ ಇವುಗಳ ಕಸಿ ಮಾಡಿದ ಭಾಗ ವ ಗಂಟು ಮಣ್ಣಿನ ಒಳಗೆ ಹಾಕಬೇಕೋ ಯಾ ನಡುವಾಗ ಮೇಲೆ ಇಡಬೇಕೋ - ಇದಕ್ಕೆ ಬೇಕಾದ ಗೊಬ್ಬರವು, ಎಷ್ಟು ವರ್ಷದಲ್ಲಿ ಫಲ ಕೊಡುತ್ತೆಂಬುದೂ, ಹ್ಯಾಗೆ ನಡಿಯಬೇಕೆಂಬದೂ, ಯಾವ ಮಣ್ಣು ಬಲೋದೆಂಬದೂ ತಮ್ಮ ಪತ್ರಿಕೆಯಲ್ಲಿ ತಿಳಿಸೋಣವಾದ ಸರ್ವರೂ ಕಸಿ ಮಾಡಿದ ಮಾವಿನ ಗಿಡಗಳ ಉಪಯೋಗವನ್ನು ತಿಳಿಯುವ ರೀತಿ ತಮಗೆ ಅರಿಕೆ ಮಾಡಿಕೊಂಡಿದ್ದೇನೆ.

ನಿಮ್ಮ ೨೩೮೫ನೇ ಚಂದಾದಾರ

ಜಪತಪಗಳೂ ಮಳೆಯೂ

ಅಯ್ಯಾ,

ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆ ಸಮ್ಮತು ಬಂದ್ರೇಹಳ್ಳಿಯಲ್ಲಿ ಕಳೆದ ತಾ. ೧೬ ನೇ ಬುಧವಾರ ಮಳೆ ಬರುವದಕ್ಕಾಗಿ ಉಡುಪಿಯಿಂದ ಒಬ್ಬ ಮಹನೀಯರು ಬಂದು ೪ ಹಸು, ೪ ಮೇಕೆ, ೧ ಕೋಣ, ಇಷ್ಟು ದಾನಗಳನ್ನು ಅವರಿಗೆ ಕಟ್ಟಿಸಿಕೊಂಡು, ಒಂದು ಗಂಟೆಯವರಿಗೂ ಜಪವನ್ನು ಮಾಡಿ ಅನಂತರ ಸಮಾಜಿಯನ್ನು ಮಾಡುವದರ ಒಳಗಾಗಿ ಆ ಗ್ರಾಮಕ್ಕೆ ಸ್ವಲ್ಪ ಮಳೆಯಾಯಿತು, ಇನ್ನು ಎಂಟು ದಿನಗಳೊಳಗಾಗಿ ಬೋರೆಂದಾಕಿ ಮಳೆಯಾಗುತ್ತೆಂದು ಹೇಳುತ್ತಾರೆ. ಮತ್ತು ಹೊಸದುರ್ಗದ ತಾಲ್ಲೂಕು ಬುಡಿಹಾಳು ಗ್ರಾಮದಲ್ಲಿ ಮಳೆ ಬರುವದಕ್ಕಾಗಿ ಒಬ್ಬರು ತಪಸ್ಸಿಗೆ ಕುಳಿತಿರುತ್ತಾರೆ ಇವರು ಐದು ದಿನಗಳೊಳಗಾಗಿ ಕೋಲಮಳೆಯಾಗಿ ಕೆರೆಗಳು ತುಂಬುತ್ತವೆಂದು ಹೇಳುತ್ತಾರೆ. ಇದನ್ನು ಕೇಳಿ ಜನರೆಲ್ಲಾ ಸಂತೋಷಪಡುತ್ತಿದ್ದಾರೆ. ಈಗಲಾದರೋ ಒಂದು ತಿಂಗಳಿಂದ ಮಳೆ ಇಲ್ಲದೆ ಪೈರುಗಳು ಒಣಗುತ್ತಲಿವೆ.

ರಾಮನಾಯಕ.

ಪುನರ್ವಿವಾಹದ ಪ್ರೋತ್ಸಾಹವು.

ಅಯ್ಯಾ,

ಈಗ ಸ್ವಲ್ಪ ದಿವಸದ ಹಿಂದೆ ತೀರ್ಥಹಳ್ಳಿ ತಾಲ್ಲೂಕು ಮಾಳೂರು ಕಸಬಾ ಪಟೇಲ್ ಪುಟ್ಟಣ್ಣಗೌಡರೆಂಬುವ ೨೮ ವರ್ಷ ಪ್ರಾಯದ ವರ ಹಾಸಗೆ ಹಣಗೇರಿ ಮಹಿಸಾಲೆ ಕೊಪ್ಪದ ಪಟೇಲ್ ವೆಂಕಟ್ಟಗೌಡರ ತಮ್ಮ ಪುಟ್ಟೇಗೌಡರೆಂಬುವರ ಪುತ್ರಿ ಲೋಕಮ್ಮನೆಂಬ ೨೦ ವರ್ಷ ಪ್ರಾಯದ ಕನ್ನಿಕೆಯನ್ನು ತಂದು ಒಡನೇ ವಿವಾಹವಂತ ಚಪ್ಪರವಗ್ಗೆರೆ ಶೃಂಗಾರಗಳಿಂದಲೂ, ಬೋಯಿಸರಿಂದ ಕ್ರಮವಾದ ಶಾಸ್ತ್ರೋಕ್ತ ಪ್ರಕಾರ ಮಂತ್ರಗಳಿಂದಲೂ, ವಾದ್ಯ ಮುಂತಾದ ಸಕಲ ವೈಭವಗಳಿಂದಲೂ, ಒಂದನೇ ವಿವಾಹಕ್ಕಿಂತ ಹೆಚ್ಚಾದ ಸೋಪಸ್ಕರಗಳಿಂದಲೂ ಅಲಂಕರಿಸಿ, ನಮ್ಮ ಮತದ ಅನೇಕ ಜನ ಮಹನೀಯರು ಸೇರಿರುವದಲ್ಲದೆ, ಮಾ|| ಲೇಟ್ ಮಣೇಗಾರ್ ಕೊಪ್ಪಗೆ ತಿಮ್ಮೇಗೌಡರ ಮನೆಯ ಯಜಮಾನರೇ ಮುಂದಾಳಾಗಿ ನಿಂತು, ಈ ಕೆಲಸವನ್ನು ಮುತುವರ್ಜಿಯಿಂದ ಸಾಂಗವಾಗಿ ನೆರವೇರಿಸಿದ್ದಕ್ಕಾಗಿ ತುಂಬಾ ಸಂತೋಷಪಡುವೆನಲ್ಲದೆ, ಮುಂದಾಳಾಗಿ ನಿಂತು ಮುತುವರ್ಜಿಯಿಂದ ಕೆಲಸ ಮಾಡಿಸಿದ ಮಹನೀಯರೆಲ್ಲರಿಗೂ ನಾನು ಕೃತಜ್ಞತಾಪೂರ್ವಕವಾಗಿ ವಂದಿಸುತ್ತೇನೆ. ಅಲ್ಲದೆ ನಮ್ಮ ಈ ನಾಮಧಾರಿ ಮತದಲ್ಲಿ ಪುನರ್ವಿವಾಹವೆಂಬುದನ್ನು ಹೀನಸ್ಥಿತಿಯಿಂದ ನಡೆಸುತ್ತಿದ್ದುದಲ್ಲದೆ ಒಂದಾವರ್ತಿ ಗಂಡನಿಗೆ ಲಗ್ನವಾಗಿ ಹೆಂಡತಿಯು ವಿಯೋಗ ಹೊಂದಿದ ಹೊರ್ತು ಪುನರ್ವಿವಾಹದ ಕನ್ಯೆಯನ್ನು ಲಗ್ನವಾಗುತ್ತಿರಲಿಲ್ಲ. ಈಗಲಾದರೋ ಮೇಲ್ಕಂಡ ಮಹನೀಯರು ಹಿಂದಿನ ತಪ್ಪು ತಿಳುವಳಿಕೆಯನ್ನು ವಜಾಮಾಡಿ, ಈಗಿರುವ ಹಿತಕಾರಿಯಾದ ನಾಗರೀಕತೆಯನ್ನು ಅನುಸರಿಸಿ, ಮೇಲುಪಙ್ಕ್ತಿಯನ್ನು ಹಾಕಿ ನಮ್ಮಗಳಿಗೆ ತಿಳುವಳಿಕೆಗೆ ಬರುವಂತೆ ಮಾಡಿರುತ್ತಾರೆ ಈಗಲಾದರೂ ನಮ್ಮ ಮತದ ಸರ್ವ ಮಹನೀಯರೂ ಗಮನಿಕೆಗೆ ತೆಗೆದುಕೊಂಡು, ಇದಕ್ಕಿಂತಲೂ ಹೆಚ್ಚಾದ ವಿಜೃಂಭಣೆಯಿಂದ ಈ ಕಾರ್ಯವನ್ನು ನೆರವೇರಿಸಲು ಆಸಕ್ತಿಯುಳ್ಳವರಾಗಿರಬೇಕೆಂದು ನಿರೀಕ್ಷಿಸುತ್ತಿರುವ ಮತಾಭಿಮಾನಿಯಾದ ತಮ್ಮ

ದೇವಂಗಿ ದೇ ರಾಮಣ್ಣಗೌಡ.

ತಾಲ್ಲೋಕು ವರ್ತಮಾನಗಳು.

ಕೃಷ್ಣರಾಜನಗರ — ಮಳೆ ಸುತರಾಂ ಇಲ್ಲ. ಪೈರುಗಳೆಲ್ಲಾ ಒಣಗಿ ಹೋಗುತ್ತಿವೆ ಕುಡಿಯುವುದಕ್ಕೆ ನೀರಿಗೆ ತುಂಬಾ ಅಭಾವವಾಗಿದೆ. ನೀರಿಗಾಗಿ ಜನರು ಪಡುವ ಕಷ್ಟವನ್ನು ವರ್ಣಿಸುವುದು ಅಸಾಧ್ಯ. ಪ್ಲೇಗಿನ ಹಾವಳಿಯು ತಾಲ್ಲೂಕಿನ ಕೆಲವು ಕಡೆ ಬಹಳವಾಗಿದೆ ಹಲವು ಗ್ರಾಮಗಳು ಖಾಲಿ ಮಾಡಲ್ಪಟ್ಟಿದೆ ಪ್ಲೇಗು ಇರುವ ಸ್ಥಳಗಳಿಂದ ಯಾರೂ ಊರಿನೊಳಕ್ಕೆ ಬಾರದಿರುವಂತೆ ಸ್ಥಳಿಕರು ಏರ್ಪಾಡು ಮಾಡಿಕೊಂಡಿರುತ್ತಾರೆ. ಮದಹಳ್ಳಿ ಸಂತೆಯಲ್ಲಿ ಕಳ್ಳ ಸೇರುಗಳು ಬಹಳವಾಗಿವೆ. ಈ ವಾರ ಬಂದು ಕಳ್ಳ ಸೇರಿನ ಮೊಕದ್ದಮೆ ನಡಿಯುವುದಾಗಿದೆ. ಕೋ ಆಪರೇಟಿವ್ ಸಂಘವು ಅಭಿವೃದ್ಧಿಗೆ ಬರುತ್ತಿರುವುದು ಅತಿ ಸಂತೋಷವಾಗಿದೆ. ವರ್ತಕರು ಮುಖ್ಯವಾಗಿ ಮ|| ವೆಂಕಟರಾಮ ಶೆಟ್ಟರು ಮುತುವರ್ಜಿ ವಹಿಸಿ ನಡೆಸುತ್ತಿರುವುದರಿಂದ ಯೋಚನೆ ಇಲ್ಲವೆನ್ನಬೇಕಾಗಿದೆ — ನಮ್ಮ ಅಮಲ್ದಾರ್ರು ಸರ್ಕೀಟಿನಲ್ಲಿರುತ್ತಾರೆ ಹೊಸದಾಗಿ ಬಂದಿರುವ ಪೋಲೀಸ್ ಇನ್‌ಸ್ಪೆಕ್ಟರು ತುಂಬ ಸಂಸಾರಿಗಳಾಗಿಯೂ, ಜನರಲ್ಲಿ ಸ್ನೇಹಪರರಾಗಿಯೂ ಇದ್ದಾರೆ.

ಸಿರಾ. — ಈ ತಾಲ್ಲೂಕಿನಲ್ಲಿ ಹಲವು ವರುಷಗಳಿಂದಲೂ ಪೋಲೀಸ್ ಇನ್‌ಸ್ಪೆಕ್ಟರಾಗಿದ್ದ ಮ|| ಹೈದರ್ ಹುಸೇನ್ ಸಾಹೇಬರು ಪ್ರಜೆಗಳ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಆಗಸ್ಟ್ ತಾ ೨೩ ರಲ್ಲಿ ಅವರಿಗೆ ವರ್ಗವಾದ ವಿಷಯವನ್ನು ಪುರ ಜನರು ಕೇಳಿ ಅವರನ್ನು ಸಂತೋಷಗೊಳಿಸಿ ಕಳುಹಿಸಿ ಕೊಡುವದಕ್ಕಾಗಿ ಒಂದು ಭೋಜನದ ಕೂಟವನ್ನು ಏರ್ಪಡಿಸಿದ್ದರು. ಇವಕ್ಕೆ ಮುಸಲ್ಮಾನರಲ್ಲಿ ಮಹಮದ್ ಯೂಸುಫ್‌ಖಾನ್ ಸಾಹೇಬರು ಇಬ್ರಾಹಿಂಖಾನ್ ಸಾಹೇಬರು, ಹಿಂದುಗಳಲ್ಲಿ ಸಿದ್ದಪ್ಪನವರು, ವೆಂಕಣ್ಣನವರು ಮುಂದಾಳುಗಳಾಗಿ ನಿಂತು ಸದರಿ ಕೂಟವನ್ನು ನಡೆಸಿದರು. ಈ ಕೂಟಕ್ಕೆ ಅನೇಕ ಹಿಂದು ಮಹಮ್ಮದೀಯ ದೊಡ್ಡ ಮನುಷ್ಯರು, ಪೋಲೀಸ್ ಮತ್ತು ರೆವಿನ್ಯೂ ಇಲಾಖೆ ನೌಕರರು ಸಹಾ ಬಂದಿದ್ದು ಸಂತೋಷಪಟ್ಟರು. ಆದರೆ ಇನ್‌ಸ್ಪೆಕ್ಟರಿಗೆ ವರ್ಗವಾದ ಕೂಡಲೇ ತೆರಳದೆ ಮತ್ತೊಂದು ಹುಕುಂ ಪ್ರಕಾರ ಒಂದು ತಿಂಗಳು ಇಲ್ಲಿಯೇ ಇದ್ದು ಎರಡನೇ ಹುಕುಂ ಪ್ರಕಾರ ಗುಬ್ಬಿಗೆ ೧೪ ನೇ ತಾ. ಪ್ರಯಾಣ ಬೆಳಸಿದರು ಇವರಿಗೆ ಬದಲಾಗಿ ಬರತಕ್ಕವರು ಸಹಾ ಜನರ ಪ್ರೀತಿ ಗೌರವಗಳಿಗೆ ಅಧಿಕ ಪಾತ್ರರಾಗಿರುವರೆಂದು ನಿರೀಕ್ಷಿಸಲ್ಪಟ್ಟಿದೆ. ಹಿಂದೂಸ್ತಾನಿ ಸ್ಕೂಲು ಬಾಲಕ ಬಾಲಕಿಯರನ್ನು ಪರೀಕ್ಷೆ ಮಾಡುವ ಬಗ್ಗೆ, ಡೆಪ್ಯುಟಿ ಇನ್‌ಸ್ಪೆಕ್ಟರು ಮತ್ತು ಅ|| ಡೆಪ್ಯುಟಿ ಇನ್‌ಸ್ಪೆಕ್ಟರು ಒಂದು ತಾ ೧೯ ರಲ್ಲಿ ಪರೀಕ್ಷೆ ಮಾಡಿದರು. ಅನೇಕ ಬಾಲಕ ಬಾಲಕಿಯರು ಪ್ಯಾಸಾದರು ಇವರನ್ನು ಬಡ್ತಿ ಕ್ಲಾಸುಗಳಿಗೆ ಪ್ರಮೋಷನ್ ಮಾಡಿಸಿ ಸ್ಕೂಲುಗಳ ಕ್ರಮಗಳನ್ನು ಕ್ರಮಪಡಿಸಿ ಮಧುಗಿರಿ ಮಾರ್ಗವಾಗಿ ತೆರಳಿದರು. — ಈ ತಿಂಗಳು ತಾ ೨೨, ೨೩ ನೇ ರಾತ್ರಿ ೨ ಹದ ಒಳ್ಳೇ ಮಳೆ ಒಂದಷ್ಟರಿಂದ ರೈತರ ಪೈರು ಪಚ್ಚೆಗಳಿಗೂ ಜೀವರಾಸಿಗಳಿಗೂ ತುಂಬಾ ಅನುಕೂಲವಾಯಿತು. ಅಬ್ದುಲ್‌ನಬಿ ಸಾಹೇಬರ ಮಗ ಮಹಮ್ಮದ್ ಸಾಬಿಗೆ ಚೇಳು ಕಡಿದು, ವಿಷವೇರಿ ನಾನಾ ಇಲಾಜು ಮಾಡಿದಾಗ್ಯೂ ಪ್ರಯೋಜನವಾಗದೆ ೨೪ ನೇ ತಾ ರಾತ್ರಿ ತೀರಿಹೋದನು ಈತನಿಗೆ ೫-೬ ಮಕ್ಕಳು ಇರುತ್ತಾರೆ

ಚಿತ್ರದುರ್ಗ. — ಇಲ್ಲಿ ಬಹಳ ದಿನಗಳಿಂದ ಸುತರಾಂ ಮಳೆ ಇಲ್ಲದೆ ಇದ್ದು, ಕಳೆದ ರವಿವಾರ ೨೦ನೇ ಸಪ್ಟೆಂಬರಿನ ಸಾಯಂಕಾಲದಲ್ಲಿ ಒಳ್ಳೆ ಹದ ಮಳೆಯಾಗಿ ಒಣಗಿಹೋಗಿದ್ದ ಪೈರು ಪಚ್ಚೆಗಳು ಚೇತರಿಸಿಕೊಳ್ಳಲಿಕ್ಕೂ ದನಕರುಗಳಿಗೆ ಹುಲ್ಲು, ನೀರು ಆಗಲಿಕ್ಕೂ ಅನುಕೂಲವಾಯಿತು ಆದರೆ ಈ ವರಿಗಾದದ್ದು ಸೋನೆಮಳೆಯೇ ಹೊರತು ಕೆರೆ ಕುಂಟೆಗಳಿಗೆ ನೀರೇನೂ ವಿಶೇಷವಾಗಿ ಬಂದಿಲ್ಲ. ಬಹಳ ಕಾಲದ ವರಿವಿಗೂ ಮಳೆ ಇಲ್ಲದಿದ್ದ ನಾಯಕನ ಹಟ್ಟಿ, ಚಳ್ಳಕೆರೆ, ಈ ಪ್ರಾಂತ್ಯಗಳಲ್ಲಿಯೂ ಈಗಲೇ ತಕ್ಕ ಮಟ್ಟಿಗೆ ಮಳೆಯಾಗಿದೆ. — ಸಮೀಪದ ಗುಡ್ಡಗಳಲ್ಲಿ ಚಿರತೆ ಕಿರುಬಗಳು ಸೇರಿಕೊಂಡು ದನಕರುಗಳನ್ನು ಈಚೀಚೆಗೆ ತೊಂದರೆ ಪಡಿಸುವವು, ಇವೆ ಕಳೆದ ರವಿವಾರ ಸಾಯಂಕಾಲದಲ್ಲಿ ಕೆರೆಯ ಅಂಗಳದಲ್ಲಿ ಮೇಯುತ್ತಿದ್ದ ಒಂದು ಕರುವನ್ನೂ ಮತ್ತು ಒಂದು ಮೇಕೆಮರಿಯನ್ನೂ ಮೃಗವು ಹಿಡಿದು ಹೊತ್ತುಕೊಂಡು ಹೋಗುತ್ತಿರುವಾಗ ಅಲ್ಲಿದ್ದ ಹುಡುಗರು ಕೂಗಿಕೊಂಡಿದ್ದರಿಂದ ಹಾಗೆಯೇ ಬಿಟ್ಟು ಹೋಯಿತು, ಆದರೂ ಆ ಪ್ರಾಣಿಗಳು ಸತ್ತೇ ಹೋದವು. ಇಲ್ಲಿನ ಸ್ಕೂಲ್ ವಿದ್ಯಾರ್ಥಿಗಳಿಗೆ ಸರ್ಕಾರದವರು "ಸ್ಪೆಷಿಯಲ್ ಕ್ಲಾಸ್" ಗಳನ್ನು ಏರ್ಪಡಿಸಿ, ಕಲಿಸಲಿಕ್ಕೆ ತಜವೀಜು ಮಾಡುತ್ತಿದ್ದಾರೆ. — ಕಳೆದ ತಿಂಗಳ ಮಧ್ಯಭಾಗದಲ್ಲಿ ವೆಸ್ಲಿಯನ್ ಮಿಷನ್ ಘನ ಪಾದ್ರಿಗಳಾದ ವ್ ಬ್ರೋಕ್ ಬ್ಯಾಂಕ್ ದೊರೆಯವರೂ, ರೆವ್ ಸ್ಲೇಟರ್ ದೊರೆಯವರೂ ಬಂದಿದ್ದು, ಇಲ್ಲಿನ ಪ್ರಸಿದ್ಧವಾದ ಮುರುಗಿ ಮಠವನ್ನು ನೋಡಿಕೊಂಡು, ತದನಂತರ ಆರ್ಯನ್ ಸ್ಟುಡೆಂಟ್ಸ್ ಹೋಮಿನ ವಿದ್ಯಾರ್ಥಿಗಳಿಗೂ ಪೋಷಕರಿಗೂ ಭೇಟಿಯನ್ನು ಕೊಟ್ಟು, ವಿದ್ಯಾರ್ಥಿಗಳಿಗೆ ಸದುಪದೇಶವನ್ನು ಮಾಡಿ, ತಮ್ಮ ಸಭೆಯವರಿಗೆ ತಕ್ಕ ಆರಾಧನಾ ಕ್ರಮಗಳನ್ನು ಜರುಗಿಸಿ, ದಾವಣಗೆರೆ ಪ್ರಾಂತ್ಯಕ್ಕಾಗಿ ತೆರಳಿದರು. ಈ ಡಿಸ್ಟ್ರಿಕ್ಟಿನ ತಾಲ್ಲೂಕು ಮೊಳಕಾಲ್ಮುರುವಿನಲ್ಲಿಯೂ, ಇನ್ನು ಕೆಲವು ಗ್ರಾಮಗಳಲ್ಲಿಯೂ ವಾಂತಿಭೇದಿ ಉಪದ್ರ ಕಾಣಿಸಿಕೊಂಡು, ಅನೇಕರ ಪ್ರಾಣಗಳಿಗೆ ಮುಳುವಾಗಿದೆ ಎಂದು ವರ್ತಮಾನ ಬಂದಿದೆ.

ಹೆಗ್ಗಡದೇವನಕೋಟೆ ತಾ|| ಸರಗೂರು. — ಇಲ್ಲಿ ಮಳೆ ಸುತರಾಂ ಇಲ್ಲ. ರಾಗಿ ಕಟಾವೆಲ್ಲಾ ಪೂರೈಸುವಷ್ಟು ಬಂತು ಅಕ್ಕಿ ರೂಪಾಯಿಗೆ ೫ ಸೀ|| ಸೇರು ಮಾರುತ್ತೆ ರಾಗಿ ರೂಪಾಯಿಗೆ ೨೦ ಸೇರು. — ಇಂಥಾ ಕಾಲದಲ್ಲಿ ಇಲ್ಲಿನ ಸುತ್ತುಮುತ್ತು ಅನೇಕ ಗ್ರಾಮಗಳಲ್ಲೂ ಇಲ್ಲಿಯೂ ಪ್ಲೇಗು ಶುರುವಾಗಿ ೨—೩ ತಿಂಗಳಾಗುತ್ತಾ ಬಂತು. ಇದುವರೆಗೆ ಈ ರೋಗದಲ್ಲಿ ಸುಮಾರು ಈ ಊರಿನಲ್ಲಿ ೩೦—೪೦ ಜನಗಳ ವರೆಗೂ ಕಾಲವಾದರು. ಇಲ್ಲಿ ಎಲ್ಲರೂ ಷೆಡ್ಡುಗಳಲ್ಲಿ ವಾಸಮಾಡುತ್ತಿದ್ದಾರೆ. ಷೆಡ್ಡುಗಳಲ್ಲಿಯೂ ಸಹಾ ಈ ಹಾವಳಿ ತಪ್ಪಲಿಲ್ಲ. ಇದಕ್ಕೆ ಈ ಊರಿನ ಗೊಬ್ಬರದ ವಿಷಯವಾಗಿ ಎಚ್ಚರಿಸಿದ್ದಾಯಿತು. ಇದು ವರಿಗೂ ಒಬ್ಬರಾದರೂ ಅದರ ವಿಷಯದಲ್ಲಿ ಗಮನ ಕೊಡಲಿಲ್ಲ. ಈಗಲೂ ಪ್ರತಿ ಒಬ್ಬರೂ ತಮ್ಮ ತಮ್ಮ ಮನೆಯ ಹಿತ್ತಲಿನ ಗೊಬ್ಬರವನ್ನು ತೆಗೆಯಿಸದಿದ್ದರೆ ಇನ್ನು ಮುಂದೆ ಇನ್ನೂ ಭಯಂಕರವಾದ ಅಂಟುಜಾಡ್ಯಗಳಿಗೆ ಗುರಿಯಾಗಲು ಯಾವ ಅಭ್ಯಂತರವೂ ಇಲ್ಲ. ಈ ಊರಿನ ಪಾಕೀಜಾ ಸ್ವಲ್ಪ ಮಟ್ಟಿಗೆ ಮಾತ್ರ ಕಣ್ಣಿನಿಂದ ನೋಡುವ ಹಾಗಿದೆ. ಆದರೆ ಮ್ಯುನಿಸಿಪಾಲಿಟಿಯವರು ಇನ್ನೂ ಹೆಚ್ಚು ಗಮನ ಕೊಡಬೇಕು. — ಈ ಊರಿನಲ್ಲಿ ಪರೇಲಾ ಎಂಬ ಆಟವು ಬಹು ಕಾಲದಿಂದಲೂ ನಡಿಯುತ್ತಲೇ ಇದೆ. ಇದು ಇಲ್ಲಿಗೆ ಬಂದ ಯಾವ ಪೋಲೀಸ್ ಆಫೀಸರಿಗೂ ತಿಳಿದಂತಿಲ್ಲ. ಈಗ ಹೊಸದಾಗಿ ಬಂದಿರುವ ದಫೇದಾರ್ರು ನೋಟೀಸಿಗೆ ಬೀಳದಿರುವುದು ತುಂಬಾ ಶೋಚನೀಯವಾಗಿದೆ. ಈಗಲೂ ಅದನ್ನು ಪರೀಕ್ಷಿಸಿ ನಿಲ್ಲಿಸಿಕೊಟ್ಟಲ್ಲಿ ಬಹು ಜನರ ಮನೆ ಉದ್ಧಾರವಾಗುತ್ತೆ. — ಈ ಊರು ಸಂತೆಯಲ್ಲಿ ಬಹು ಕಾಲದಿಂದಲೂ ಪಿಚ್ಚೆಸೇರು, ಪಿಚ್ಚೆಪಾವು, ಇವುಗಳನ್ನು ಇಟ್ಟುಕೊಂಡು ವ್ಯಾಪಾರಮಾಡುವುದು ರೂಢಿಯಾಗಿ ಹೋಗಿದೆ. ಇಂಥಾ ಗ್ರಾಮದಲ್ಲಿಯೂ ಕೂಡ ವ್ಯಾಪಾರಸ್ಥರು ಈ ರೀತಿ ಬಡಬಗ್ಗರಿಗೆ ತಪ್ಪು ಸೇರಿನಿಂದ ಮಾರುತ್ತಾರೆ. ಅವರು ಬಹು ವ್ಯಥೆಯಿಂದ ತೆಗೆದುಕೊಂಡು ಹೋಗುತ್ತಾರೆ. ನಮ್ಮ ಘನ ಹೊಂದಿದ ಸರ್ಕಾರಕ್ಕೆ ಯಾವಾಗಲೂ ಪ್ರಜೆಗಳ ಹಿತವನ್ನು ಬಯಸುವುದೇ ಆಗಿರೋದರಿಂದ, ನಮ್ಮ ತಾಲ್ಲೋಕು ಅಮಲ್ದಾರ್ರವರು ಮತ್ತು ಈ ಊರಿನ ದಫೇದಾರ್ ಈ ವಿಷಯವನ್ನು ಜಾಗ್ರತೆಯಿಂದ ಸರಿಪಡಿಸಬೇಕಾಗಿ ಕೋರುತ್ತೇನೆ. — ಈ ಊರು ಆಸ್ಪತ್ರೆ ಅಸಿಸ್ಟೆಂಟರಾದ ಮ|| ಸುಬ್ಬರಾಯರಿಗೆ ಬಡ್ತಿ ಮೇಲೆ ತಿರುಮಕೂಡ್ಲು ನರಸೀಪುರಕ್ಕೆ ವರ್ಗವಾಯಿತೆಂದು ವರ್ತಮಾನ ಕೇಳುತ್ತೇನೆ. ಹಾಗೆ ಅದು ನಿಜವಾಗಿದ್ದ ಪಕ್ಷದಲ್ಲಿ ಇನ್ನೂ ಕೆಲವು ಕಾಲ ಅಂಥಾ ಮಹನೀಯರನ್ನು ಇಲ್ಲೇ ಇಟ್ಟಲ್ಲಿ ಉತ್ತಮ. ಇವರು ಒಳ್ಳೇ ಸ್ವಭಾವ ಉಳ್ಳವರಾಗಿಯೂ, ಪ್ರಜಾರಂಜಕರಾಗಿಯೂ, ಶೀಘ್ರವಾಗಿ ಪ್ರಜೆಗಳ ಕಾಯಿಲೆಗಳನ್ನು ಗುಣಪಡಿಸುವವರಾಗಿಯೂ ಇರುವರು. — ಈ ಊರಿನಲ್ಲಿ ಮ್ಯುನಿಸಿಪಾಲಿಟಿ ಇರುವುದೊಂದೇ ವಿನಹಾ ಕ್ರಮವಾಗಿ ಮಿಟಿಂಗು ನಡಿಯುವುದಿಲ್ಲ. ಈಗ ಸುಮಾರು ೩—೪ ತಿಂಗಳಿಂದಲೂ ಮಿಟಿಂಗು ನಡೆದಂತೆ ಕಾಣುವುದಿಲ್ಲ.

ಸಂತೆಬೆನ್ನೂರು — ಇಲ್ಲಿ ಹವಾ ಚೆನ್ನಾಗಿದೆ. ಮಳೆ ಇಲ್ಲದೆ ಪೈರುಗಳೆಲ್ಲಾ ಒಣಗುತ್ತಲಿವೆ. ಜನಗಳು ಮೇಘವನ್ನೇ ನೋಡುತ್ತಾರೆ ಇನ್ನುಮೇಲಾದರೂ ಮಳೆ ಬಂದರೆ ಎಂಟಾಣೆ ಅಥವಾ ಹತ್ತಾಣೆ ಫಸಲು ಆಗಬಹುದು. ಆದರೆ ಈ ಊರು ಮತ್ತು ಆಸುಪಾಸು ಎಲ್ಲಾ ಗ್ರಾಮಗಳಲ್ಲಿ ಜಾನುವಾರುಗಳಿಗೆ ದೊಡ್ಡ ಬಾಧ್ಯವಾಗಿ, ಬಡವರ ಮನೆಗಳನ್ನು ಹಾಳು ಮಾಡುತ್ತಲಿದೆ. ಹಿಂದಕ್ಕೆ ಜನಗಳಿಗೆ ಪ್ಲೇಗು ತಗಲಿ ಕೆಲವರ ಮನೆಗಳನ್ನು ಹಾಳು ಮಾಡಿತು. ಈಗ ಸದ್ಯಕ್ಕೆ ಆ ರೋಗವೇನೂ ಇರುವದಿಲ್ಲ. ದನಗಳಿಗೆ ಮಾತ್ರ ಬಂದಿರುತ್ತೆ. ಸರ್ಕಾರದವರು ಇದನ್ನು ಘನವಾದ ಚಿತ್ತಕ್ಕೆ ತಂದು, ಈ ರೋಗ ಪ್ರಬಲವಾಗದಂತೆ ಮಾಡಿದರೆ ಬಹಳ ಉಪಕಾರ ಮಾಡಿದಂತೆ ಆಗುತ್ತದೆ. — ಈ ಮುನಿಸಿಪಾಲಿಟಿಯು ೫೫೦ ಮನೆಯೂ ಮತ್ತು ೩,೫೦೦ ಪ್ರಜಾ ಉಳ್ಳ ದೊಡ್ಡ ಗ್ರಾಮವಾಗಿರುತ್ತೆ. ಮತ್ತು ಒಳ್ಳೆ ವ್ಯಾಪಾರಸ್ಥಳವಾಗಿರುತ್ತೆ. ಇದು ಮುನಿಸಿಪಾಲಿಟಿ ಆಗಿ ೨.೪ ವರುಷವಾಗಿರುತ್ತೆ. ಇದರಿಂದ ಬಡವರಿಗೆ ತೊಂದರೆ ಬಂತು. ಇದೂ ಹಾಗಿರಲಿ ವ್ಯಾಪಾರಸ್ಥರಿಗೆ ಮಾತ್ರ ಬಹಳ ಲಾಭವನ್ನುಂಟುಮಾಡಿತು. ಅದು ಹ್ಯಾಗಂದರೆ, ಅವರಿಗೆ ವ್ಯಾಪಾರ ಕಂದಾಯ, ಚಿಲ್ಲರೆ ಕಂದಾಯ, ಗಾಡಿ ಕಂದಾಯ, ಇವುಗಳೆಲ್ಲಾ ಮಾಫ್ ಆಗಿರುತ್ತೆ. ಮನೆ ಕಂದಾಯ ಮಾತ್ರವೇ ಸೇರಿರುತ್ತೆ. ಇಲ್ಲಿ ಜವಳಿ ವ್ಯಾಪಾರವು ಲಕ್ಷಾಂತರ ರೂಪಾಯಿಗಳವರಿಗೂ ನಡಿಯುತ್ತದೆ. ಆದ್ದರಿಂದ ಸರ್ಕಾರದವರು ಘನವಾದ ಚಿತ್ತಕ್ಕೆ ತಂದು ಆ ವ್ಯಾಪಾರಸ್ಥರಿಗೆ ಅವರು ಮಾಡುವ ಕಸುಬಿನ ಕಂದಾಯ ಸೇರಿಸಿ, ಆ ಗ್ರಾಮಕ್ಕೆ ಅನುಕೂಲವಾಗುವ ಹಾಗೆ ಮಾಡಬೇಕು. ಮುನಿಸಿಪಲ್ ಲಾಂದ್ರಗಳು ನಕ್ಷತ್ರಗಳಂತೆ ಮಿಣುಕುತ್ತವೆ ಇದು ನಮ್ಮ ವೈಸ್ ಪ್ರೆಸಿಡೆಂಟರವರ ಕಣ್ಣಿಗೆ ಬಿದ್ದರೆ ಇನ್ನುಮೇಲೆ ಹಾಗೆ ಆಗಲಾರದೆಂದು ನಂಬಿರುತ್ತೇವೆ. ಇಲ್ಲಿ ಒಂದು ಆಸ್ಪತ್ರೆ ಇಡಬೇಕೆಂದು ಬಹು ದಿವಸದಿಂದ ನಡೆದದ್ದಕ್ಕೆ ಮುನಿಸಿಪಲ್ ಆದನಂತರ ಆಸ್ಪತ್ರೆ ಇಟ್ಟು ಕೊಡುತ್ತೇವೆ ಎಂತ ಹೇಳಿದ್ದರು. ಅದುವರಿಗೆ ಚನ್ನಗಿರಿ ಆಸ್ಪತ್ರೆ ಡಾಕ್ಟರವರು ವಾರಕ್ಕೊಂದಾವೃತ್ತಿ ಹೋಗಿ ಬರಬೇಕಾಗಿ ಅಪ್ಪಣೆ ಆಗಿತ್ತು. ಅವರಂತೆ ಕೆಲವು ದಿನಗಳು ಜರುಗಿತು ಮುನಿಸಿಪಲ್ ಆದ ನಂತರ ಅದೂ ನಿಂತುಹೋಯಿತು. ಸರ್ಕಾರದವರು ಇದನ್ನು ಚೆನ್ನಾಗಿ ಪರ್ಯಾಲೋಚಿಸಿ, ಜಾಗ್ರತೆಯಾಗಿ ಆಸ್ಪತ್ರೆಯನ್ನು ಇಡಿಸಿಕೊಟ್ಟರೆ ಪ್ರಜೆಗಳಿಗೆ ತುಂಬಾ ಉಪಕಾರ ಮಾಡಿದಂತೆ ಆಗುತ್ತದೆ. ಗವರ್ನಮೆಂಟು ಕನ್ನಡ ಸ್ಕೂಲು ಹಿಂದಕ್ಕೆ ನಮ್ಮ ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಒಂದನೇದು ಆಗಿ, ಶುಕ್ಲಪಕ್ಷದ ಚಂದ್ರನಂತೆ ದಿನ ದಿನಕ್ಕೆ ಅಭಿವೃದ್ಧಿ ಸ್ಥಿತಿಯಲ್ಲಿತ್ತು. ಈಗ ಕೃಷ್ಣಪಕ್ಷದ ಚಂದ್ರನ ಸ್ಥಿತಿಯಲ್ಲಿರುತ್ತದೆ ಇದು ಏನು ಕಾರಣವೋ ಗೊತ್ತಿಲ್ಲ. ಇದನ್ನು ಈಗ ನೋಡಲಾಗಿ ಬಹಳ ವ್ಯಸನವಾಗುತ್ತದೆ, ಆದರೆ ಇನ್ನು ಮೇಲೆ ಹೀಗೆ ಆಗುವದಿಲ್ಲವಾಗಿ ನಂಬಿರುತ್ತೇನೆ. ನಮ್ಮ ಗರಲ್ ಸ್ಕೂಲು ಯಥಾ ಪ್ರಕಾರ ಆ ಸ್ಕೂಲಿನಂತೆಯೇ ಇತ್ತು. ಈಗ ಯಥಾ ಪ್ರಕಾರವೇ ಇರುತ್ತೆ. ಈ ಸ್ಕೂಲು ಬಾಲಕಿಯರಿಂದ ತುಂಬಿ ಬಹಳ ಆನಂದವಾಗಿರುತ್ತೆ. ಹೆಣ್ಣು ಮಕ್ಕಳಿಗೆ ಮುಖ್ಯವಾಗಿ ಸಂಗೀತವೇ ಕಾರಣವಾಗಿರುವದರಿಂದ ಸರ್ಕಾರದವರು ಸಂಗೀತದ ಮಾಸ್ತರನ್ನು ಕೊಟ್ಟರೆ ಇನ್ನೂ ಅಭಿವೃದ್ಧಿ ಸ್ಥಿತಿಗೆ ಬರುವದರಲ್ಲಿ ಏನೂ ಸಂಶಯವಿರುವದಿಲ್ಲ.

ದಾವಣಗೆರೆ. — ಈ ಊರಿಗೆ ಬೆಂಗಳೂರು ವೆಸ್ಲಿಯನ್ ಮಿಷನ್ ಘನ ಹೊಂದಿದ ಬ್ರೋಕ್ ಬ್ಯಾಂಕ್ ದೊರೆಯವರು ಕಳೆದ ತಾ. ೧೯ ರಲ್ಲಿ ದಯಮಾಡಿಸಿ, ಇಲ್ಲಿನ ವೆಸ್ಲಿಯನ್ ಮಿಷನ್ ಗರಲ್ ಸ್ಕೂಲುಗಳನ್ನು ನೋಡಿಕೊಂಡು ಟ್ರಾವಲರ್ಸ್ ಬಂಗಲೆಗೆ ದಯಮಾಡಿದರು, ತಾ. ೨೦ನೇ ಬಾನುವಾರ ಭಗವದಾರಾಧನೆ ತೀರಿಸಿಕೊಂಡು, ತಾ ೨೧ರಲ್ಲಿ ಪುನಹ ಸದರಿ ಸ್ಕೂಲುಗಳನ್ನು ಇನ್‌ಸ್ಪೆಕ್ಷನ್ ಮಾಡಿ, ಸ್ಕೂಲುಗಳ ವಿದ್ಯಾಭಿವೃದ್ಧಿಯು ಚೆನ್ನಾಗಿದೆ ಎಂದು ಅಪ್ಪಣೆಕೊಡಿಸಿದರು. ತಾ ೨೨ರಲ್ಲಿ ಘನ ಬ್ರೋಕ್ ಬ್ಯಾಂಕ್ ದೊರೆಸಾನಿಯವರು ಸಹ ಬೆಂಗಳೂರಿಂದ ದಯಮಾಡಿದರು. ದೊರೆಯವರು ಪತ್ನಿಸಹಿತ ಆ ದಿನ ೧೦ ಘಂಟೆಗೆ ಇಲ್ಲಿನ ಮಿಷನ್ ಮೇನ್ ಗರಲ್ಸ್ಕೂಲಿಗೆ ದಯಮಾಡಿ ಮೇನ್ ಮತ್ತು ಬ್ರ್ಯಾಂಚ್ ಗರಲ್ಸ್ ಸ್ಕೂಲುಗಳನ್ನು ಒಂದಾಗಿ ಸೇರಿಸಿ, ಬಾಲಕಿಯರುಗಳಿಗೆ ಆಯಾಯ ತರಗತಿಗಳ ಪ್ರಕಾರ ಬೊಂಬೆ ಮೊದಲಾದ ಬಹುಮಾನಗಳನ್ನು ದಯಪಾಲಿಸಿದರು. ಆಗ್ಗೆ ಇಲ್ಲಿನ ಸರ್ಕಾರಿ ಉದ್ಯೋಗಸ್ಥರೂ ಮತ್ತು ಮ್ಯುನಿಸಿಪಲ್ ಮೆಂಬರುಗಳೂ ಸಾಹುಕಾರರೂ ಬಾಲಕಿಯರುಗಳ ತಂದೆಗಳೂ ಸಹ ದಯಮಾಡಿದ್ದರು. ಬಹುಮಾನ ಕೊಟ್ಟ ಸ್ಥಳವಾದ ಮೇನ್ ಗರಲ್ಸ್ ಸ್ಕೂಲನ್ನು ನಾಟಕದ ಸೀನರಿಗಳಿಂದಲೂ, ಕದಳೀ ಸ್ತಂಭಗಳಿಂದಲೂ, ತೋರಣಗಳಿಂದಲೂ, ಹೂವುಗಳಿಂದಲೂ, ಚಕ್ರವರ್ತಿಗಳ ಮತ್ತು ಮಹಾರಾಜರವರ ಫೋಟೋಗಳಿಂದಲೂ ಅಲಂಕರಿಸಿದ್ದರು. ಈ ಅಲಂಕಾರವು ಸಭಿಕರ ಮನಸ್ಸಿಗೆ ಆನಂದವನ್ನುಂಟುಮಾಡುತ್ತಿತ್ತು. ಬಾಲಕಿಯರು ಮೊದಲು ಸಭೆಯನ್ನು ಕುರಿತು ಪ್ರಾರ್ಥನೆ ಮಾಡಿದ ನಂತರ ತಂಬೂರಿ, ಪಿಟೀಲು,

ಇವುಗಳೊಂದಿಗೆ ಭಗವಂತನ ಮೇಲೆ ಸಂಗೀತವನ್ನು ಹೇಳಿದರು. ಅನಂತರ ವಿದ್ಯಾ ವಿಷಯವನ್ನು ಕುರಿತು ಮಾತನಾಡಿ, ಸರಸ್ವತಿಯ ಮೇಲಿನ ಗೀತವನ್ನು ಹಾಡಿದರು. ತದನಂತರ ಮಿಷನ್ನಿನವರ ಸದ್ಗುಣಗಳನ್ನು ಶ್ಲಾಘನೆಮಾಡಿ, ಚಕ್ರವರ್ತಿಗಳ ಮೇಲೂ ಮತ್ತು ಮಹಾರಾಜರವರ ಮೇಲೂ ಗೀತಗಳನ್ನು ಹಾಡಿದರು. ಈ ಬಾಲಕಿಯರುಗಳು ವಾಕ್ಚಾತುರ್ಯವಾದ ಸಂಭಾಷಣೆಗಳನ್ನು ಮಾಡಿ, ಇಂಪಾದ ಗಾನಗಳನ್ನು ಹಾಡಿದ್ದಕ್ಕಾಗಿ ಅಲ್ಲಿ ಸೇರಿದ್ದ ಸಭಿಕರೆಲ್ಲರೂ ಸಂತೋಷಪಟ್ಟು ಕರತಾಡನ ಮಾಡಿದರು. ಅನಂತರ ಸ್ಕೂಲುಗಳ ವಿದ್ಯಾಭಿವೃದ್ಧಿಯ ರಿಪೋರ್ಟನ್ನು ಸ್ಕೂಲಿನ ಹೆಡ್ ಮಾಸ್ಟರು ಹೇಳಿದರು. ತದನಂತರ ಅಗ್ರಾಸನಾಧಿಪತಿಗಳಾದ ಘನ ಟಿ. ಬ್ಲ್ಯಾಂಕ್ ದೊರೆಯವರು ಸ್ತ್ರೀ ವಿದ್ಯಾಭ್ಯಾಸವನ್ನು ಕುರಿತು ಉಪನ್ಯಾಸದ ಮೂಲಕ ಪಾರಮಾರ್ಥಿಕ ಜ್ಞಾನಕ್ಕೆ ಮುಖ್ಯ ಕರ್ತವ್ಯವಾಗಿರುತ್ತೆಂಬದಾಗಿ ಅಪ್ಪಣೆಕೊಡಿಸಿದರು. ಅನಂತರ ಸಭಿಕರೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು. ಸಭೆಯಲ್ಲಿ ಸೇರಿದ್ದ ಮಹನೀಯರುಗಳು ತಮ್ಮ ತಮ್ಮ ಗೃಹಗಳಿಗೆ ತೆರಳಿದರು. ಮಧ್ಯಾಹ್ನ ೪ ಘಂಟೆಯಿಂದ ೫ ಘಂಟೆಯ ವರೆಗೆ ಸ್ಕೂಲುಗಳ ಬಾಲಕಿಯರುಗಳಿಗೆ ಮಿಠಾಯಿ ವಗೈರೆ ಯಥೇಷ್ಟವಾಗಿ ಕೊಡಿಸಿದರು. ೬ ಘಂಟೆ ರೈಲಿಗೆ ದೊರೆ ದೊರೆಸಾನಿಯವರು ಹಂಪಿಹರದ ಮಿಷನ್ ಗರಲ್ಸ್ ಸ್ಕೂಲಿಗೆ ಬಹುಮಾನಗಳನ್ನು ದಯಪಾಲಿಸುವುದಕ್ಕಾಗಿ ಪ್ರಯಾಣ ಮಾಡಿದರು. ಇಲ್ಲಿನ ವೆಸ್ಲಿಯನ್ ಮಿಷನ್ ಗರಲ್ಸ್ ಸ್ಕೂಲನ್ನು ೧೮೮೮ನೇ ಇಸವಿಯಲ್ಲಿ ಈಗ ರಿಟೈರಾಗಿರುವ ಡಿಸ್ಟ್ರಿಕ್ಟ್ ಸೂಪರಿನ್‌ಟೆಂಡೆಂಟ್ ಮೆ|| ರಾಮಯ್ಯಂಗಾರ್ರವರ ಮಾಮಲೇ ಕಾಲದಲ್ಲಿ ಈ ಊರಿನ ದೊಡ್ಡ ಮನೆತನದವರಲ್ಲಿ ಮೆಂಬರುಗಳಾಗಿದ್ದ ಹೊಳೆಯಪ್ಪನವರ ಚನ್ನಪ್ಪನವರು, ಉತ್ತರೆಕೊಂಡಿ ಬಸಪ್ಪನವರು ಮಾಗಾನಹಳ್ಳಿ ದೊಡ್ಡ ಬಸಪ್ಪನವರು, ಪಲ್ಲಾಗಟ್ಟಿ ಧರಮಪ್ಪನವರು, ಬೆಳಗಾವಿ ಚನ್ನಪ್ಪನವರು, ಚನ್ನಗಿರಿ ತಿಮ್ಮಪ್ಪನವರು, ಮೈಲಾರದ ಮುರಿಗೆಪ್ಪನವರು, ಹೊಸೂರು ನಂಜುಂಡರಾಯರು, ಇವರುಗಳ ಸಮ್ಮತಿಯಿಂದ ಸದರಿ ಮಾಮಲೇದಾರರು — ಮಿಷನ್ ಗರಲ್ಸ್ ಸ್ಕೂಲು ಮಾಡಿದರೆ ಒಳ್ಳೇದು, ಮಿಷನ್ನಿನವರು ಇಂಡಿಯಾ ದೇಶಕ್ಕೆಲ್ಲಾ ಮೊದಲು ಸ್ತ್ರೀ ವಿದ್ಯಾಭ್ಯಾಸಕ್ಕೆ ಅಸ್ತಿಭಾರ ಹಾಕಿರುತ್ತಾರೆ ಮತ್ತು ಮಕ್ಕಳಲ್ಲಿ ಅತ್ಯಂತ ಕರುಣವನ್ನು ತೋರಿಸುವವರು, ಸ್ಕೂಲನ್ನು ಬಹಳ ಆದರಣೆಯಿಂದ ಕಾಪಾಡಿಕೊಂಡು ಬರುತ್ತಾರೆಂದು ದೃಢ ಮನಸ್ಸಿನಿಂದ ಸ್ಕೂಲನ್ನು ಸ್ಥಾಪನೆಮಾಡಿಸಿರುತ್ತಾರೆ. ಇಂಥಾ ಸ್ಕೂಲಿನಲ್ಲಿ ಈಗ ವಿದ್ಯಾಭಿವೃದ್ಧಿಯಾಗುತ್ತಿರುವುದು, ಪ್ರಾಕ್ತನಕಾಲಿಗಳೂ ಪುಣ್ಯವಂತರೂ ಇದನ್ನು ಕಾಪಾಡಿಕೊಂಡು ಬಂದಾರೆಂದು ನಂಬಿದೇನೆ, — ಈಗ ಸುಮಾರು ೧ — ೨ ತಿಂಗಳಿಂದ ಮಳೆ ಇಲ್ಲದೆ ಹೋದದ್ದರಿಂದ ತಾ ೩ನೇ ಇಲ್ಲಿನ ಕಾಯಿಪೇಟೆ ದೇವಸ್ಥಾನದಲ್ಲಿ ವೀರಶೈವರು ಮಳೆಗಾಗಿ ಆ ದಿವಸವೆಲ್ಲಾ ಭಗವದಾರಾಧನೆ ಮಾಡಿ ಸಾಯಂಕಾಲಕ್ಕೆ ಸುಮಾರು ೧೫೦ — ೨೦೦ ಜನಗಳ ವರಿಗೂ ಊಟಕ್ಕೆ ಕೊಟ್ಟು ತೃಪ್ತಿಪಡಿಸಿದರು. ತಾ. ೨೪ರಲ್ಲಿ ಮಳೆಯ ಚಿಹ್ನೆ ತೋರಿ, ತಾ ೨೫, ೨೬ರಲ್ಲಿ ಭಗವದನುಗ್ರಹದಿಂದ ಸಂಪೂರ್ಣವಾಗಿ ಹದ ಮಳೆಯಾಯಿತು. ಇದು ಈ ತಾಲ್ಲೂಕಿನ ಪ್ರಜೆಗಳಿಗೆ ತುಂಬಾ ಆನಂದವನ್ನುಂಟುಮಾಡಿರುತ್ತದೆ.

ಮೈಸೂರು ಗೆಜೆಟ್ ಸಂಗ್ರಹ

ಸಬ್ ಅ|| ಸರ್ಜನ್ ಮೆ|| ಸಿ. ರಾಜಗೋಪಾಲ ಮೊದಲಿಯಾರ್ರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ. ಮ|| ಟಿ. ಎಸ್. ಸಿದ್ದಪ್ಪನವರೇ ಚಿಕ್ಕಮಗಳೂರು ಆಸ್ಪತ್ರೆಯಲ್ಲಿ ಕೆಲಸ ನೋಡತಕ್ಕದ್ದು.

ಆಲೂರ್ ಅಕ್ಟಿಂಗ್ ಡೆಪ್ಟಿ ಅಮಲ್ದಾರ್ ಮಹಮದ್ ಸೈಯಿದ್ ಷರೀಫ್ ಯವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿಮಾಡಿದೆ.

ಶಿಕಾರಿಪುರದ ಅಮಲ್ದಾರ್ ಮೆ|| ಗುಲಾಂ ಮಹಮದ್ ಮೆಕ್ಕೆಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿವಮೊಗ್ಗೆಯ ತಾಲ್ಲೂಕ್ ಸಿರಸ್ತೆದಾರ್ ಬಿ. ಗರುಡಾಚಾರ್ರು ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲೀ ನೇಮಿಸಲ್ಪಟ್ಟಿದ್ದಾರೆ.

ಕೊಪ್ಪದ ಅಮಲ್ದಾರ್ ಮೆ|| ಎಸ್. ರಾಮಸ್ವಾಮಿಯ್ಯಂಗಾರ್ರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿಮಾಡಿದೆ. ಯಡೆಹಳ್ಳಿಯ ಡಿಪ್ಟಿ ಅಮಲ್ದಾರ್ ಎಸ್. ಸುಬ್ಬರಾಯರು ಕೊಪ್ಪದ ಅಮಲ್ದಾರರಾಗಿಯೂ ಬದಲಿ ನೋಡತಕ್ಕದ್ದು.

ಡಾಕ್ಟರ್ ಶ್ರೀನಿವಾಸರಾಯರು ಸೀಮೆಗೆ ಪ್ರಯಾಣ ಮಾಡೋಣದರಿಂದ ಮೆ|| ಎ. ಕೆ. ವಾಣಿಯವರು ಕೆಮಿಕಲ್ ಎಗ್ಜಾಮಿನರ್ ಮತ್ತು ಬ್ಯಾಕ್ಟೀರಿಯಾಲಜಿಸ್ಟಾಗಿಯೂ ಪಶ್ಚಿಮ ಸರ್ಕಲ್ ಡಿ|| ಸ್ಯಾನಿಟರಿ ಆಫೀಸರ್ ಮೆ|| ಬಿ. ಕೃಷ್ಣರಾಯರು ಬೆಂಗಳೂರು ಸಿಟಿ ಹೆಲ್ತ್ ಆಫೀಸರಾಗಿಯೂ ಬದಲಿ ನೇಮಿಸಲ್ಪಟ್ಟಿದ್ದಾರೆ.

ಶ್ರೀಮನ್ ಮಹಾರಾಜರವರು ಮೆ|| ಎಸ್. ಸೇಟ್ಲೂರ್ ಯವರನ್ನು ಮೈಸೂರ್ ಚೀಫ್ ಕೋರ್ಟಿನಲ್ಲಿ ಸಾಕ್ಷಿಯ ಭಾಷಾಂತರಕಾರನಾಗಿ ನೇಮಕ ಮಾಡಿರುತ್ತಾರೆ.

ಶ್ರೀಮನ್ ಮಹಾರಾಜರವರು ಮೆ|| ಎಚ್. ಗೋಪಾಲರಾಜೇ ಅರಸಿನವರನ್ನು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ ಜಮಾದಾರರನ್ನಾಗಿ ನೇಮಕ ಮಾಡಿರುತ್ತಾರೆ.

ಮುಂದೆ ಹೇಳುವ ಮುನ್ಸಿಫರುಗಳ ವರ್ಗಾವರ್ಗಿಯು ಅಕ್ಟೋಬರ ತಾ ೧೫ ರಿಂದ ಜಾರಿಯಲ್ಲಿ ಬರತಕ್ಕದ್ದು — ಮೆ|| ಟಿ. ಎಸ್. ವೆಂಕಟ್ರಾವ್ — ಮೈಸೂರಿಗೆ, ಮೆ|| ಎಸ್. ಟಿ. ಗೋಪಾಲೈಯಂಗಾರ್ — ಕೋಲಾರ್ ಜಿಲ್ಲೆಯ ಗಣಿಗಳಿಗೆ, ಮ|| ಎಂ. ಎಸ್. ಶ್ರೀಕಂಠೇಶಗೌಡ — ಬೆಂಗಳೂರಿಗೆ, ಮೆ|| ಡಿ. ಕೆ. ರಾಮರಾವ್ — ನಂಜನಗೂಡಿಗೆ, ಪಿ. ಎಸ್. ಕೃಷ್ಣರಾವ್ — ಶ್ರೀರಂಗಪಟ್ಟಣಕ್ಕೆ, ಮೆ|| ಬಿ. ಸತ್ಯಾಚಾರ್ — ತುಂಕೂರಿಗೆ, ಮ|| ಟಿ. ಕೃಷ್ಣಯ್ಯಂಗಾರ್ — ಚಿಕ್ಕಮಗಳೂರಿಗೆ, ಮ|| ಸಿ. ಮಹದೇವಯ್ಯ — ಚಿತ್ರದುರ್ಗಕ್ಕೆ.

ಮ|| ಸಿ. ರಾಜಗೋಪಾಲ ಮೊದಲಿಯಾರ್ರನ್ನು ಸಬ್ ಅ|| ಸರ್ಜನ್ ೩ನೇ ಕ್ಲಾಸಿಗೆ ಬಡ್ತಿಮಾಡಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಢಕ್ಕಾ ಪಟ್ಟಣದಲ್ಲಿ ಒಬ್ಬ ಬಂಗಾಳಿ ವಿದ್ಯಾರ್ಥಿಯು ಪೇದಿರಸ್ತಿನಲ್ಲಿದ್ದ ಒಬ್ಬ ಪೋಲೀಸಿನವನಿಗೆ ಬಂದೂಕವನ್ನು ಬಿಚರಿಮಾಡಿ ಸಿಕ್ಕಿಬಿದ್ದನು.

ಡೆಹಲಿ ಪಟ್ಟಣದಲ್ಲಿರುವ ಪ್ರಸಿದ್ಧವಾದ ಜುಮ್ಮಾ ಮಶೀತಿಯೊಳಕ್ಕೆಲ್ಲಾ ಅಧಿಕಾರಿಗಳು ವಿದ್ಯುಚ್ಛಕ್ತಿಯ ದೀಪಗಳನ್ನು ಈಗ ಇಡಿಸ ಲಾರಂಭಿಸಿದಾರೆ.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಪಾಕೋರ್ ಎಂಬ ರೈಲ್ ಸ್ಟೇಷನ್ ಬಳಿ ಒಂದು ರೈಲುಗಾಡಿಯ ಕೆಳಗೆ ಸಿಡಿಮದ್ದಿನ ಗುಂಡು ಒಡೆದು ಅನಾಹುತವಾಯಿತು.

ಬೀಹಾರ್ ಪ್ರಾಂತ್ಯದ ರೈತ ಪ್ರಜೆಗಳಿಗೆ ವ್ಯವಸಾಯ ಕಾರ್ಯಗಳಿಗಾಗಿ ತಕಾವಿ ಅಡ್ವಾನ್ಸು ಕೊಡಬೇಕೆಂದು ಇಂಡಿಯಾ ಗವರ್ನಮೆಂಟಿನವರು ೧೨ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ಕಲ್ಕತ್ತೆಯ ಪೋಲೀಸಿನವರು ಬ್ಯಾರಿಸ್ಟರ್ ಮ|| ಪಿ. ಮಿತ್ರ ಯವರ ಮನೆಯನ್ನು ಕಳೆದ ವಾರ ಶೋಧನೆ ಮಾಡಿದರು. ಅನುಮಾನಾಸ್ಪದವಾದದ್ದು ಏನೂ ಸಿಕ್ಕಲಿಲ್ಲ.

ಢಕ್ಕಾ ಪಟ್ಟಣದ ಕೋರ್ಟಿನ ಬಳಿ ಒಂದು ಕೊಳದಲ್ಲಿ ಮದ್ದುಗುಂಡು ತೋಟಾಗಳು ಭರ್ತಿಯಾಗಿದ್ದ ಕೆಲವು ಚೀಲಗಳು ಸಿಕ್ಕಿದವು. ಪೋಲೀಸಿನವರು ಅದರ ಪೂರ್ವೋತ್ತರವನ್ನು ತನಿಖೆ ಮಾಡುತ್ತಿದಾರೆ.

ಪಿಶಾವರ್ ಮತ್ತು ಡಾರ್ಜಿಲಿಂಗ್ ಪಟ್ಟಣಗಳಲ್ಲಿ ಕಳೆದ ಭಾನುವಾರವೂ ಗುರುವಾರವೂ ಬೆಳಿಗ್ಗೆ ೧೧ ಗಂಟೆ ಹೊತ್ತಿನಲ್ಲಿ ಸಣ್ಣದಾಗಿ ಭೂಮಿ ಗುಡುಗಿತು. ಆದರೆ ಯಾವ ವಿಧವಾದ ನಷ್ಟವೂ ಆಗಲಿಲ್ಲ.

ಪೂರ್ವ ಬಂಗಾಳಾ ಸ್ಟೇಟ್ ರೈಲ್ ಗಾಡಿಯು ವೇಗವಾಗಿ ಹೋಗುತ್ತಿದ್ದಾಗ ಇಬ್ಬರು ಬಂಗಾಳಿ ಹುಡುಗರು ಕಲ್ಲುಗಳನ್ನು ಬೀರಿದರು. ೧ ನೇ ಕ್ಲಾಸ್ ಗಾಡಿಯ ಕಿಟಕಿ ಕನ್ನಡಿಯು ಒಡೆದು ಹೋಯಿತು.

ಪೂನಾ ಪಟ್ಟಣದ ಮೆ|| ಬಿ. ಗಂಗಾಧರ ತಿಲಕರನ್ನು ಸರ್ಕಾರದವರು ಬೊಂಬಾಯಿನಿಂದ ಜಹಜಿನಲ್ಲಿ ಬರ್ಮಾಕ್ಕೆ ಕರೆದುಕೊಂಡು ಹೋಗಿ, ಮಾಂಡಲೇ ಪಟ್ಟಣದ ಸೆಂಟ್ರಲ್ ಜೈಲಿಗೆ ಕಳೆದ ವಾರ ಕಳುಹಿಸಿರುತ್ತಾರೆ.

ಕೊಚ್ಚಿಯಲ್ಲಿ ಕಳೆದ ವಾರ ರೋಮಾಯ ಕ್ರೈಸ್ತರ ಮೆರವಣಿಗೆಯಾಗುತ್ತಿದ್ದಾಗ ಒಂದು ಆನೆಯು ಬೆದರಿ ತುಂಬಾ ಗಲಭೆ ಮಾಡಿತು. ಒಂದು ಹೆಣ್ಣು ಮಗು ಸತ್ತು ಹೋಯಿತು, ನಾಲ್ವರಿಗೆ ಗಾಯಗಳಾದವು.

ಉತ್ತರ ದೇಶದಲ್ಲಿ ಕ್ಷಾಮ ಬಾಧೆಯು ವಾರ ವಾರಕ್ಕೆ ಕಡಮೆಯಾಗುತ್ತಿದೆ. ಕ್ಷಾಮ ಪೀಡಿತರ ಸಂಖ್ಯೆಯಲ್ಲಿ ೧,೩೭,೦೦೦ ಜನರು ಕಡಮೆಯಾದರು. ಇನ್ನೂ ೧,೨೫,೦೦೦ ಪ್ರಜೆಗಳು ಸರ್ಕಾರದವರ ಪೋಷಣೆಯಲ್ಲಿರುತ್ತಾರೆ.

ಕರ್ನಾಲ್ ಮತ್ತು ಮುಜಫರ್‌ನಗರದ ನವಾಬ್ ಅಜ್ಮತ್ ಅಲ್ಲಿ ಖಾನ್ ಯವರು ತಮ್ಮ ಆಸ್ತಿಯನ್ನೆಲ್ಲಾ ಅಂದರೆ ಮೂರು ಲಕ್ಷ ರೂಪಾಯಿಗಳನ್ನು ಅಲಿಘಡದ ಮುಸಲ್ಮಾನರ ವಿದ್ಯಾಭ್ಯಾಸದ ಫಂಡಿಗೆ ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ.

ತಿನ್ನವೆಲ್ಲಿ ಮತ್ತು ಟುಟಿಕೊರಿನ್ (ತಟ್ಟುಕುಡಿ) ಪಟ್ಟಣಗಳಲ್ಲಿ ಸರ್ಕಾರದವರು ಶಿಕ್ಷಾರ್ಥವಾಗಿ ನೇಮಿಸಿದ್ದ ಪೋಲೀಸ್ ಶಿಬ್ಬಂದಿಯನ್ನು ಈ ದಿನದಿಂದ ವಜಾಮಾಡಿ ಕ್ರಮಪೋಲೀಸ್ ಶಿಬ್ಬಂದಿಯನ್ನು ಇನ್ನು ಮೇಲೆ ಜಾಸ್ತಿ ಮಾಡುವವರಾಗಿದಾರೆ.

ಮದರಾಸ್ ಗವರ್ನರವರೂ, ಹಿಂದುಸ್ಥಾನದ ಸರ್ವಸೇನಾಪತಿಯವರೂ ಈ ತಿಂಗಳಲ್ಲಿ ಕೊಚ್ಚಿ ಸಂಸ್ಥಾನಕ್ಕೆ ದಯಮಾಡಿ, ಅಲ್ಲಿನ ರಾಜರ ಆತಿಥ್ಯವನ್ನು ಸ್ವೀಕರಿಸುವವರಾಗಿದಾರೆ. ಇದಕ್ಕಾಗಿ ರಾಜರು ಸುಮಾರು ೧೨ ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ಕಳೆದ ವಾರ ಹಿಂದುಸ್ಥಾನದಲ್ಲಿ ಒಟ್ಟು ೧,೯೭೭ ಜನರು ಪ್ಲೇಗ್ ಉಪದ್ರದಿಂದ ಕಾಲವಾದರು. ಈ ಪೈಕಿ ಬೊಂಬಾಯಿ ಅಧಿಪತ್ಯ ೧,೯೦೦ ಮಧ್ಯ ಪ್ರಾಂತ್ಯಗಳು ಮತ್ತು ಬೀರಾರ ೪೪೭ ಮೈಸೂರು ಸಂಸ್ಥಾನ ೧೮೫, ಮದರಾಸ್ ಅಧಿಪತ್ಯ ೭೦ ಹೈದರಾಬಾದ್ ಸಂಸ್ಥಾನ ೬೧

ನಟ್ಟಿಯಾ ಪಟ್ಟಣದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಮರಣಕರವಾದ ಸಿಡಿಮದ್ದಿನ ಗುಂಡನ್ನು ಕಳುಹಿಸಿಕೊಟ್ಟಿದ್ದ ಆಶುತೋಷಚಂದ್ರ ಪಾಲ್ ಎಂಬೊಬ್ಬ ಬಂಗಾಳಿ ಹುಡುಗನನ್ನು ಸರ್ಕಾರದವರು ಹಿಡಿದು ದಯಾರ್ಪ್ಪುಮಾಡಿದರು. ಡಿಸ್ಟ್ರಿಕ್ಟ್ ಜಡ್ಜರು ಈ ಅಪರಾಧಿಗೆ ಐದು ವರುಷಗಳ ಕಠಿಣ ಶಿಕ್ಷೆ ವಿಧಿಸಿರುತ್ತಾರೆ.

ಕೊಚ್ಚಿ ಸಂಸ್ಥಾನದಲ್ಲಿ ಪ್ರಕಟವಾಗುವ « ಮನೋರಮಾ '' ಎಂಬ ಮಲೆಯಾಳಿ ಪತ್ರಿಕೆಯಲ್ಲಿ ಸರ್ಕಾರಿ ಅಧಿಕಾರಿಗಳ ಮೇಲೆ ಇಲ್ಲದ ಆರೋಪಣೆಗಳನ್ನು ಮಾಡಿದರೆಂದು ಹೇಳಿ, ಆ ಪತ್ರಿಕೆಯ ಎಡಿಟರಿಗೆ ಸರ್ಕಾರ ಪುಸ್ತಕಂಗಳನ್ನು ಕಳುಹಿಸ ಕೂಡದೆಂತಲೂ, ಎಡಿಟರನ್ನು ಸರ್ಕಾರಿ ಸಭೆಗಳಿಗೆ ಸೇರಿಸ ಕೂಡದೆಂತಲೂ ದಿವಾನರವರು ಹುಕುಂ ಕೊಟ್ಟಿದಾರೆ.

ರಾಣಿಗಂಜ್ ಸ್ಟೇಷನ್‌ಗೂ ಮೋಹಾಮಿ ಸ್ಟೇಷನ್‌ಗೂ ನಡುವೆ ಎರಡು ರೈಲ್ ಗಾಡಿಗಳು ಎದುರುಬದುರಾಗಿ ಹೋಗುತ್ತಿರುವಲ್ಲಿ ಒಂದು ರೈಲ್ ಗಾಡಿಯೊಳಗಿಂದ ಇನ್ನೊಂದು ರೈಲ್ ಗಾಡಿಗೆ ಒಂದು ಸಿಡಿಮದ್ದಿನ ಗುಂಡನ್ನು ಎಸೆದರೆಂತಲೂ, ಆದರೆ ಯಾರಿಗೂ ಅದರಿಂದ ಅಪಾಯವಾಗಲಿಲ್ಲವೆಂತಲೂ ಒಬ್ಬ ಮಿಲ್ಟೇರಿ ಪೋಲೀಸಿನವನು ಹೌರಾ ಪಟ್ಟಣಕ್ಕೆ ಬಂದು ತಿಳಿಸಿದನು.

ತಿರುಪತಿಯ ತಿರುಮಲೆ ಬೆಟ್ಟದ ಮೇಲಿರುವ ಪ್ರಸಿದ್ಧ ಶ್ರೀ ವೇಂಕಟೇಶ್ವರ ಸ್ವಾಮಿ ದೇವಸ್ಥಾನದ ಗೋಪುರದ ಮೇಲೆ ಚಿನ್ನದ ಕಲಶಗಳನ್ನು ಹಾಕಿಸಬೇಕೆಂದು ಏರ್ಪಾಡಾಗಿ ಎಲ್ಲಾ ಸಿದ್ಧವಾಗಿದೆ, ಇದಕ್ಕೆ ೫೦ ಸಾವಿರ ರೂಪಾಯಿ ಖರ್ಚಾಗಿದೆ ಎಂತಲೂ, ಕಲಶವನ್ನು ಈ ತಿಂಗಳ ೧೪ನೇ ತಾ. ಬುಧವಾರ ಪ್ರತಿಷ್ಠೆ ಮಾಡುವವರಾಗಿದಾರೆಂತಲೂ ತಿಳಿಯುವುದು.

ಬಂಗಾಳಾ ಅಧಿಪತ್ಯದಲ್ಲಿರುವ ಕತ್ರಾಸ್-ಜೆರೈಯಾ ಎಂಬ ಕಲ್ಲಿದ್ದಲ ಗಣಿಗಳ ಕಂಪನಿಯವರು ಆ ಕಂಪನಿಯಲ್ಲಿ ಷೇರುಗಳನ್ನು ಪಡೆದುಕೊಂಡಿರತಕ್ಕವರಿಗೆ ಕಳೆದ ವರುಷ ಶೇಕಡಾ ವರುಷಕ್ಕೆ ೧೧೦ ರೂಪಾಯಿನಂತೆ ಬಡ್ಡಿ ಬಟವಾಡೆ ಮಾಡಿದರು. ಚಿನ್ನ ಬೆಳ್ಳಿ ವಜ್ರವೈಢೂರ್ಯಗಳನ್ನು ಗಣಿಗಳಿಂದ ತೆಗೆಯುತ್ತಿರುವ ಯಾವ ಕಂಪನಿಯವರೂ ಇದು ವರೆಗೆ ಇಷ್ಟು ಹೆಚ್ಚು ಬಡ್ಡಿಯನ್ನು ತಮ್ಮ ಷೇರುದಾರರಿಗೆ ಪಾವತಿ ಮಾಡಿರುವುದಿಲ್ಲ.

ಇಂದೋರ್ ಪಟ್ಟಣದ ಡಾಲಿ ಕಾಲೇಜ್ ಎಂಬ ವಿದ್ಯಾಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಖಾಟ್ಕರಿ ಸಂಸ್ಥಾನದ ಒಬ್ಬ ರಾಜಕುಮಾರನು ಕಳೆದ ವಾರ ಒಂದು ದಿನ ರಾತ್ರಿ, ಭೋಜನಮಾಡಿ ತನ್ನ ಹಾಸಿಗೆಯ ಮೇಲೆ ಮಲಗಿ ನಿದ್ರೆಮಾಡುತ್ತಿರುವ ವೇಳೆಯಲ್ಲಿ ತಲೆಯ ಕಡೆಯಿಂದ ಒಂದು ನಾಗರ ಹಾವು ಹತ್ತಿ ಹೋಗಿ ರಾಜಕುಮಾರನನ್ನು ಕಡಿಯಿತು. ತರುವಾಯ ಐದು ಗಂಟೆಗಳ ಹೊತ್ತಿನಲ್ಲಿ ವಿಷವೇರಿ ರಾಜಕುಮಾರನು ಕಾಲವಾದನು.

ಕಳೆದ ವಾರ ಅಫಘಾನಿಸ್ಥಾನದ ಅಮೀರರ ಕಡೆಯಿಂದ ಬಂದಿದ್ದ ರಾಯಭಾರಿಗೆ ವೈಸ್‌ರಾಯಿ ಪ್ರಭುಗಳು ಸಿಮ್ಲಾ ಪಟ್ಟಣದಲ್ಲಿ ಭೇಟಿ ಕೊಟ್ಟು, ಅಮೀರರು ಬರೆದು ಕಳಿಸಿದ್ದ ಸ್ನೇಹಪರವಾದ ಕಾಗದವನ್ನು ಬಹುಮಾನ ವಸ್ತುಗಳ ಸಮೇತ ಸ್ವೀಕರಿಸಿದರು. ಅಮೀರರು ಎರಡು ಕುದರೆಗಳನ್ನೂ ಬಹುಮಾನವಾಗಿ ಕಳುಹಿಸಿದ್ದರು. ಅಮೀರರು ಸೌಖ್ಯವಾಗಿದಾರೆಂತಲೂ, ಮಳೆ ಬೆಳೆಗಳು ಅಫಘಾನಿಸ್ಥಾನದಲ್ಲಿ ಬಹಳ ಚನ್ನಾಗಿವೆ ಎಂತಲೂ ಆ ರಾಯಭಾರಿಯ ಮೂಲಕ ತಿಳಿದು ಬಂದಿದೆ.

ಬೊಂಬಾಯಿ ಬರ್ನ್ ಬ್ರಿಡ್ಜ್ ಪೇಟೆಯಲ್ಲಿ ವರ್ತಕರು ತಮ್ಮ ಅಂಗಡಿ ಮುಂದೆ ತಡಿಕೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮ್ಯುನಿಸಿಪಾಲಿಟಿಯಿಂದ ಲೈಸೆನ್ಸ್ ಪಡೆದುಕೊಳ್ಳಬೇಕೆಂದು ವಿಧಿಸಿದರು. ೧೫೦ ಮಂದಿ ವರ್ತಕರು ಅದನ್ನು ಪ್ರತಿಭಟಿಸಿ, ಕಲೆಕ್ಟರಿಗೆ ಅರ್ಜಿ ಬರೆದುಕೊಂಡು, ಜವಾಬು ಬರುವುದನ್ನು ನಿರೀಕ್ಷಿಸದೇನೇ ಕಳೆದ ವಾರ ಅಂಗಡಿಗಳನ್ನು ಮುಚ್ಚಿಬಿಟ್ಟರು. ತರುವಾಯ ಕಲೆಕ್ಟರು ಮ್ಯುನಿಸಿಪಲ್ ಆಫೀಸಿನಲ್ಲಿ ಧಾನ್ಯಗಳನ್ನು ತರಿಸಿ ವಿಕರಿಮಾಡುವುದಕ್ಕೆ ಏರ್ಪಾಡು ಮಾಡಿದಾಗ ವರ್ತಕರು ತಮ್ಮ ಅಂಗಡಿಗಳನ್ನು ತೆರೆದರು. ಹೀಗೆ ಮಾಡಿದ್ದರಿಂದ ವರ್ತಕರಿಗೆ ವ್ಯಾಪಾರ ತಪ್ಪಿದ್ದೊಂದೇ ಹೊರತಾಯಿತು ಹೊರತು ಬೇರೇನೂ ಪ್ರಯೋಜನವಾಗಲಿಲ್ಲ.

ಕಳೆದ ೨೧ ನೇ ತಾ ಸೋಮವಾರ ಕಾಶ್ಮೀರ ಸಂಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟರಾದ ಸರ್ ಫ್ರಾನ್ಸಿಸ್ ಯಂಗ್‌ಹಸ್ಬೆಂಡ್ ಯವರು ಶ್ರೀಮನ್ ಮಹಾರಾಜರವರ ಪ್ರಾರ್ಥನೆಯಂತೆ ಜೇಲಂ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನು ಪ್ರಾರಂಭ ಮಾಡಿದರು. ಕಾರ್ಖಾನೆಯಿಂದ ವಿದ್ಯುಚ್ಛಕ್ತಿಯು ಬಾರಾಮುಲಾ ಸ್ಟೇಷನ್‌ಗೆ ಹೋಗಿ ಅಲ್ಲಿನ ಯಂತ್ರಗಳನ್ನು ನಡಿಸುವುದಕ್ಕಾರಂಭವಾಯಿತು. ಮತ್ತು ೫೦ ಮೈಲಿ ದೂರದಲ್ಲಿರುವ ರಾಜಧಾನಿಯಾದ ಶ್ರೀನಗರಕ್ಕೆ ವಿದ್ಯುಚ್ಛಕ್ತಿಯನ್ನು ಸಾಗಿಸಿಕೊಂಡು ಹೋಗಿ ಅಲ್ಲಿ ರೇಷ್ಮೆ ತಯಾರಾಗತಕ್ಕ ಕಾರ್ಖಾನೆಯ ಯಂತ್ರಗಳನ್ನು ನಡಿಸುವುದಕ್ಕೆ ಉಪಯೋಗಿಸಿಕೊಂಡರು. ಮೈಸೂರು ಸಂಸ್ಥಾನದಲ್ಲಿ ಶಿವಸಮುದ್ರ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನು ಏರ್ಪಾಡು ಮಾಡಿದ ಮೇಜರ್ ಎ. ಜೆ. ಡಿ ಲಾಟಿನಿಯರ್ ಎಂಬ ಇಂಜನಿಯರವರೇ ಕಾಶ್ಮೀರಕ್ಕೆ ಹೋಗಿ ಅಲ್ಲಿ ಮೂರು ವರುಷಗಳಿಂದ ಶ್ರಮಪಟ್ಟು, ಅಲ್ಲಿನ ಈ ಜಲದ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನು ಏರ್ಪಾಡು ಮಾಡಿರುತ್ತಾರೆ.

ಮೆ|| ಬಾಲಗಂಗಾಧರ ತಿಲಕರ ಮೇಲೆ ರಾಜದ್ರೋಹದ ಮೊಕದ್ದಮೆ ಬಂದು, ಬೊಂಬಾಯಿ ಹೈ ಕೋರ್ಟಿನ ಜಡ್ಜಿಯವರು ಅವರಿಗೆ ಶಿಕ್ಷೆ ವಿಧಿಸಿದ ವಿಚಾರವನ್ನು ಕುರಿತು « ಜ್ಞಾನಪ್ರಕಾಶ '' ಎಂಬ ಪತ್ರಿಕೆಯಲ್ಲಿ ಮ|| ಎಚ್. ಎನ್. ಗೋಖಲೆ ಮತ್ತು ಮೆ|| ಎನ್. ಎ. ದ್ರಾವಿಡ್ ಎಂಬುವವರು ಕೋರ್ಟಿಗೆ ಅವಮಾನಕರವಾದ ರೀತಿಯಲ್ಲಿ ವಾಕ್ಯಗಳನ್ನು ಬರೆದರೆಂದು ಆರೋಪಿಸಿ ಮೇಲೂ, « ಸುಧಾರಕ '' ಎಂಬ ಪತ್ರಿಕೆಯಲ್ಲಿ ಅದರ ಎಡಿಟರ್ ಮೆ|| ಪಿ. ಸಿ. ಕಲ್ಕರ್ಣಿ ಯವರು ಅದೇ ಅಪರಾಧ ಮಾಡಿದಾರೆಂದು ಅವರ ಮೇಲೂ ಬೊಂಬಾಯಿ ಹೈ ಕೋರ್ಟಿನಲ್ಲಿ ಕ್ರಿಮಿನಲ್ ಮೊಕದ್ದಮೆ ತರಲಾಯಿತು. ಮೆ|| ಗೋಖಲೆ ಮತ್ತು ಮೆ|| ದ್ರಾವಿಡ ಎಂಬುವರನ್ನು ಮೊದಲು ವಿಚಾರಣೆ ಮಾಡಿದಾಗ ಅವರು ತಾವು ಆ ರೀತಿ ಬರೆದದ್ದು ತಪ್ಪೆಂತಲೂ, ಹಾಗೆ ಬರೆಯಬಾರದಾಗಿತ್ತಾದ್ದರಿಂದ ಕೋರ್ಟಿ

ನವರ ಕ್ಷಮಾಪಣೆಯನ್ನು ಬೇಡುತ್ತೇವೆಂತಲೂ ಅರಿಕೆಮಾಡಿಕೊಂಡರು. ಜಡ್ಜಿಗಳು ಅವರ ಕ್ಷಮಾಪತ್ರವನ್ನು ಅಂಗೀಕರಿಸಿ, ಅವರ ಮೇಲಿನ ಮೊಕದ್ದಮೆಯನ್ನು ವಜಾಮಾಡಿದರು. "ಮರಾಟಾ" ಪತ್ರಿಕೆಯ ಎಡಿಟರ್ ಮೆ|| ಕೆಲ್ಕಾರ್ ಯವರಾದರೋ ತಮ್ಮ ಮೇಲೆ ಬಂದಿರುವ ಅಪವಾದವು ರುಜುವಾತಾಗಿ ತಾವು ಅಪರಾಧಿಗಳೆಂದು ನಿರ್ಧರಿಸಲ್ಪಟ್ಟ ಪಕ್ಷದಲ್ಲಿ ಆಗ್ಗೆ ತಾವು ಕೋರ್ಟಿನವರನ್ನು ಕ್ಷಮಾಪಣೆಯನ್ನು ಬೇಡುವವೆಂಬುದಾಗಿ ತಿಳಿಸುತ್ತಾರೆ. ಜಡ್ಜಿಯವರ ತೀರ್ಮಾನವನ್ನು ಎದುರುನೋಡಬೇಕಾಗಿದೆ.

ವಿದೇಶ ವರ್ತಮಾನಗಳು.

ಫ್ರಾನ್ಸಿಗೆ ಸೇರಿದ ಟೌಲಾನ್ ಪಟ್ಟಣದ ಬಳಿ ಕಳೆದ ವಾರ ಒಂದು ಜಹಜಿನಲ್ಲಿದ್ದ ಪಿರಂಗಿಯು ಅಕಸ್ಮಾತ್ ಒಡೆದು ಅನಾಹುತವಾಯಿತು. ಪದಿನೈದು ಮಂದಿ ಮೃತಪಟ್ಟರು.

ಹಿಂದುಸ್ಥಾನದ ಒಂದು ಹಡಗು ಅಲಾಸ್ಕಾ ತೀರದ ಬಳಿ ಕಳೆದ ವಾರ ಬಂಡೆಗೆ ಬಡಿದು ಅನಾಹುತವಾಗಿ, ೯ ಮಂದಿ ಬಿಳಿಯ ಜನರೂ, ೧೧೧ ಜನ ಚೀಣೆಯವರೂ ಜಪಾನಿನವರೂ ಸಮುದ್ರದಲ್ಲಿ ಮುಳುಗಿ ಸತ್ತರು.

ದಕ್ಷಿಣ ಆಫ್ರಿಕಕ್ಕೆ ಸೇರಿದ ನೆಟಾಲಿನಲ್ಲಿ ಹಿಂದುಸ್ಥಾನದ ಜನರಿಗೂ ಸ್ವದೇಶೀಯರಿಗೂ ಜಮೀನನ್ನು ಕೊಟ್ಟ ಪಕ್ಷದಲ್ಲಿ ಅಂಥಾ ಜಮೀನಿನ ಕಂದಾಯವನ್ನು ಇತರ ಜಮೀನುಗಳಿಗಿಂತ ನಾಲ್ಕರಷ್ಟು ಹೆಚ್ಚು ಪಾವತಿ ಮಾಡಬೇಕೆಂದು ಸರ್ಕಾರದವರು ಕಾನೂನ್ ಮಾಡಿರುತ್ತಾರೆ.

ಸರ್ ಸಯ್ಯದ್ ಅಹಮದ್ ಖಾನ್ ಎಂಬ ಹಿಂದುಸ್ಥಾನದ ಮಹಮದೀಯ ದೊಡ್ಡ ಮನುಷ್ಯರು ಕೆಲವು ದಿನಗಳ ಕೆಳಗೆ ತುರ್ಕಿ ರಾಜಧಾನಿಗೆ ಹೋಗಿದ್ದರು. ಸುಲ್ತಾನರವರು ಅವರನ್ನು ಬಹಳ ಪ್ರೀತಿಯಾಗಿ ಕಂಡರೆಂತಲೂ, ರಾಮಜಾನ್ ಮಸೀದಿಯಲ್ಲಿ ಅವರು ದೇವರ ಆರಾಧನೆಯನ್ನು ನಡಿಸಿದರೆಂತಲೂ ತಿಳಿದು ಬಂದಿದೆ.

ವಿಲಾಯಿತಿಗೆ ಸೇರಿದ ಲಾಂಕೆಷೀರಾ ಡಿಸ್ಟ್ರಿಕ್ಟಿನಲ್ಲಿ ಹತ್ತಿ ಬಟ್ಟೆ ತಯಾರಾಗುವ ೫೦೦ ಕಾರ್ಖಾನೆಗಳಲ್ಲಿ ಕೆಲಸವನ್ನು ನಿಲ್ಲಿಸಬೇಕಾಯಿತು. ೧೦೦ ಕಾರ್ಖಾನೆಗಳಲ್ಲಿ ಮಾತ್ರ ಕೆಲಸ ನಡಿಯುತ್ತಿರುವುದು. ಕಾರ್ಖಾನೆಗಳ ಯಜಮಾನರು ಕೂಲಿಕಾರರಿಗೆ ಕೊಡುತ್ತಿದ್ದ ದರಗಳನ್ನು ಕಡಮೆ ಮಾಡಿದ್ದರಿಂದ ಕೂಲಿಯವರು ಕೆಲಸಕ್ಕೆ ಹೋಗದೆ ಹಟ ಹಿಡಿದು ನಿಂತು ಇರುತ್ತಾರೆ.

ಪ್ರಾಣವನ್ನು ಒದುಕಿಸುವುದರಲ್ಲಿ ವಿಶೇಷ ಪರಾಕ್ರಮವನ್ನು ತೋರಿಸುವಂಥಾ ಇಂಗ್ಲಿಷ್ ಜನರನ್ನೂ ಅವರ ಹೆಂಡರು ಮಕ್ಕಳನ್ನೂ ಸಾಕುವುದಕ್ಕೋಸ್ಕರ ಪ್ರಸಿದ್ಧ ಕೋಟ್ಯಾಧೀಶ್ವರನಾದ ಮೆ|| ಅಂಡ್ರು ಕಾರ್ನೆಗಿಯು ತನ್ನ ಆಸ್ತಿಯಿಂದ ೧೨|| ಲಕ್ಷ ರೂಪಾಯಿಗಳನ್ನು ಕೊಟ್ಟು ಫಂಡು ಮಾಡಿದನು. ವಿಲಾಯಿತಿಯ ದೊರೆಯವರು ಅವನ ಔದಾರ್ಯವನ್ನು ಮೆಚ್ಚಿ ಒಪ್ಪಿಕೊಂಡಿರುತ್ತಾರೆ.

ಪರ್ಷಿಯಾ ರಾಜ್ಯದಲ್ಲಿ ಟೆಬ್ರಿಜ್ ಪಟ್ಟಣದೊಳಗೆ ಪ್ರಜೆಗಳಿಗೂ ಸರ್ಕಾರದವರಿಗೂ ಕಲಹ ಕದನಗಳು ಇನ್ನೂ ಶಮನವಾಗಲಿಲ್ಲ. ಆ ಪಟ್ಟಣಕ್ಕೆ ಸೈನಿಕರು ಮುತ್ತಿಗೆ ಹಾಕಿಕೊಂಡು, ೪೮ ಗಂಟೆಗಳೊಳಗಾಗಿ ಪುರ ಜನರು ತಮ್ಮ ಆಯುಧಗಳನ್ನೂ, ಮದ್ದುಗುಂಡನ್ನೂ ಒಪ್ಪಿಸದೆ ತಪ್ಪಿದಲ್ಲಿ ಪಟ್ಟಣವನ್ನು ಕೊಳ್ಳೆ ಹೊಡಿಯಬೇಕೆಂದು ಷಾ ಸುಲ್ತಾನರವರು ಹುಕುಂ ಕೊಟ್ಟಿದ್ದಾರೆ.

ದಕ್ಷಿಣ ಆಫ್ರಿಕಕ್ಕೂ ಆಸ್ಟ್ರೇಲಿಯಾಕ್ಕೂ ನಡುವೆ ಹಿಂದೂ ಸಾಗರದಲ್ಲಿ ಕರ್ಗೂಲೆನ್ಸ್ ಲ್ಯಾಂಡ್ ಎಂಬ ನಿರ್ಜನ ಪ್ರದೇಶವಾದ ಹೊಸ ದ್ವೀಪವನ್ನು ನಾರ್ವೆ ವರ್ತಕರು ಕಂಡುಹಿಡಿದು, ಅಲ್ಲಿ ಹೋಗಿ ವಾಸಮಾಡಿಕೊಂಡು ಮೀನು ಮುಂತಾದದ್ದನ್ನು ಹಿಡಿದು ಅದರಲ್ಲಿ ವ್ಯಾಪಾರ ಮಾಡುವವರಾಗಿದ್ದಾರೆ. ಇದಕ್ಕಾಗಿ ಎಪ್ಪತ್ತು ಸಂಸಾರಗಳು ಆ ದ್ವೀಪಕ್ಕೆ ಜಹಜುಗಳಲ್ಲಿ ಪ್ರಯಾಣ ಮಾಡಿದವು.

ಜರ್ಮನಿ ರಾಜ್ಯಕ್ಕೆ ಸೇರಿದ ಎಸ್ಸೆನ್ ಎಂಬ ಪಟ್ಟಣದಲ್ಲಿ ಪ್ರಖ್ಯಾತವಾದ ಬಂದೂಕು, ಗುಂಡು, ಪಿರಂಗಿ ಮುಂತಾದ್ದನ್ನು ತಯಾರು ಮಾಡುವ ಕ್ರುಪ್ ಎಂಬ ಭಾರೀ ಕಾರ್ಖಾನೆ ಇರುತ್ತದೆ. ಇದರಲ್ಲಿ ೬,೦೦೦ ಮಂದಿ ಇಂಜನಿಯರುಗಳೇ ಸೇರಿರುವರು, ಮತ್ತು ೬೦,೦೦೦ ಜನರು ಕೆಲಸಗಳನ್ನು ಮಾಡುತ್ತಾರೆ. ಈ ಕಂಪನಿಯಲ್ಲಿ ಕೆಲಸ ಮಾಡುವಷ್ಟು ಜನರು ಪ್ರಪಂಚದ ಇನ್ಯಾವ ಕಾರ್ಖಾನೆಯಲ್ಲೂ ಇರುವುದಿಲ್ಲ.

ಹಿಂದುಸ್ಥಾನದ ಸೈನ್ಯದ ಸ್ಥಿತಿಗತಿಯ ವಿಚಾರವಾಗಿ ಇಂಗ್ಲಿಷ್ ಗವರ್ನಮೆಂಟಿನವರು ಪ್ರಕಟಿಸಿರುವ ರಿಪೋರ್ಟಿನಿಂದ ಈ ರಾಷ್ಟ್ರದಲ್ಲಿ ಕಳೆದ ೧೮೮೬ನೇ ಇಸವಿಯಲ್ಲಿ ೭೩,೫೮೩ ಮಂದಿ ಇಂಗ್ಲಿಷ್ ಸೈನಿಕರೂ, ೧,೩೪,೪೯೩ ಮಂದಿ ದೇಶೀಯ ಸೈನಿಕರೂ ಇದ್ದರೆಂತಲೂ, ಈಗ ೭೫,೭೦೨ ಮಂದಿ ಇಂಗ್ಲಿಷ್ ಸೈನಿಕರೂ, ೧,೪೮,೯೯೬ ಮಂದಿ ದೇಶೀಯ ಸೈನಿಕರೂ ಇರುತ್ತಾರೆಂತಲೂ, ಕಳೆದ ೧೮೮೧ನೇ ಇಸವಿಯಲ್ಲಿ ಹಿಂದುಸ್ಥಾನದ ಪ್ರಜಾ ಸಂಖ್ಯೆಯು ೨೫ ಕೋಟಿಯೂ ೪೦ ಲಕ್ಷ ಇದ್ದದ್ದು ಈ ವರುಷ ೨೯ ಕೋಟಿಯೂ ೪೦ ಲಕ್ಷಕ್ಕೆ ಹೆಚ್ಚಿರುತ್ತದೆಂತಲೂ ಗೊತ್ತಾಗುತ್ತದೆ.

ವಿಲಾಯಿತಿಯಲ್ಲಿ ಸರ್ಕಾರದವರು ಪ್ರಜೆಗಳ ಮತ್ತು ವರ್ತಕರ ಆದಾಯದ ಮೇಲೆ ತೆರಿಗೆಯನ್ನು ಹಾಕಿ ವಸೂಲ್ಮಾಡುತ್ತಾರಷ್ಟೆ. ಈ ಬಾಬಿನ ಉತ್ಪತ್ತಿಯು ೧೯೦೬-೦೭ ನೇ ಸಾಲಿನಲ್ಲಿ ೧,೪೧೪|| ಕೋಟಿ ರೂಪಾಯಿ ಆಯಿತೆಂದೂ, ಈ ಕಂದಾಯ ಕೊಟ್ಟವರ ಪೈಕಿ ಇಪ್ಪತ್ತು ಮಂದಿಯ ವರ್ಷದ ಆದಾಯವು ತಲಾ ೭೫ ಕೋಟಿ ರೂಪಾಯಿಗಿಂತ ಹೆಚ್ಚೆಂತಲೂ, ೧|| ಲಕ್ಷ ರೂಪಾಯಿಗೆ ಮೀರಿ ೭|| ಲಕ್ಷ ರೂಪಾಯಿನೊಳಗೆ ಆದಾಯವಿದ್ದವರು ೨೪೧ ಮಂದಿ ಎಂತಲೂ ತಿಳಿದು ಬಂದಿದೆ.

ಯೂರೋಪ್ ಖಂಡಕ್ಕೆ ಸೇರಿದ ಸರ್ವಿಯಾ ರಾಜ್ಯದಲ್ಲಿ ಪೀಟರ್ ಯವರು ದೊರೆಯವರಾಗಿರುತ್ತಾರಷ್ಟೆ. ಈಗ ಆ ರಾಜ್ಯದಲ್ಲಿ ಕೆಲವು ಜನ ಮುಖಂಡರು ಆ ದೊರೆಯನ್ನು ಸಿಂಹಾಸನದಿಂದ ದೊಬ್ಬಿಬಿಟ್ಟು, ಪ್ರಜಾಪ್ರಭುತ್ವವನ್ನು ಸ್ಥಾಪಿಸಿಕೊಳ್ಳಬೇಕೆಂದು ಫಿತೂರಿ ಮಾಡುತ್ತಿದ್ದರು. ಕೆಲವು ಕಾಲಕ್ಕೆ ಮುಂಚೆ ಮಂತ್ರಿಯಾಗಿದ್ದ ಲ್ಯೂಬೋಮಿರ್ ಯವರೂ, ಪ್ರೋಟಾ ಯವರೂ ಈ ಫಿತೂರಿಗಾರರಲ್ಲಿ ಮುಖಂಡರಾಗಿರುತ್ತಾರೆ. ಈ ಎರಡನೇ ದೊಡ್ಡ ಮನುಷ್ಯರಿಗೆ ಪ್ರಜಾಪ್ರಭುತ್ವದ ಅಧಿಕಾರ ವಹಿಸಬೇಕೆಂದು ಏರ್ಪಾಡಾಗಿತ್ತು. ಆದರೆ ಅವರ ಉದ್ದೇಶವು ಸಾರ್ಥಕವಾಗುವುದಕ್ಕಿಂತ ಮೊದಲೇ ಈ ಫಿತೂರಿಕೋರರ ಕಾರ್ಯಗಳು ಬಯಲಿಗೆ ಬಿದ್ದವು. ಈಗಿರುವ ದೊರೆಯ ವಿಷಯದಲ್ಲಿ ಅನೇಕನೇಕ ಪ್ರಜೆಗಳಿಗೆ ಪ್ರೀತಿ ವಿಶ್ವಾಸಗಳಿಲ್ಲ. ಆದ್ದರಿಂದ ದೊರೆಯವರು ತಮ್ಮ ದೇಶವನ್ನು ಬಿಟ್ಟು ಎಲ್ಲೂ ಹೊರಗೆ ಹೋಗದೆ ಇರುತ್ತಾರೆ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಥಳುಕು ; ನಿದ್ದೆಯಿಲ್ಲದೆ ಇರುವುದು ; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು ; ಬಡಬಡಿಕೆ ; ಬಳಲಿಕೆ ; ಎದೆ ತಲ್ಲಣಿಸುವುದು ; ತಲೆನೋವು ; ಗಾಬರಿ ; ಕಣ್ಣು ಮೊಬ್ಬು ; ತಲೆ ತಿರುಗುವಿಕೆ ; ಮೈನೋವು ಕೀಲುನೋವು ; ನರವು ; ನಿತ್ರಾಣ ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನು ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-5]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು, ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨–೦–೦, ಅಥವಾ ೬ ಬುಡ್ಡಿಗಳಿಗೆ ರೂ. ೧೦–೮–೦, ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ.—ಇವರಲ್ಲಿ ದೊರೆಯುವುದು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-33

೧. ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ನವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಶ್ರೇಷ್ಠವಾದ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈ ಕಾಲು ಸೆಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ಸನ್ನಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಋತುವಿಗೂ ಸಾರಿಕೊಡದ್ದು, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಿತ್ಯಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಕೊಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ರೂಪಾಯಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ :—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

58 14

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ಹದಿ ಆಣೆಯಿಂದ ೩ ಆಣೆ ವರಿವಿಗೂ ಬೆಲ್ಲರೆಯಾಗಿ ಯಾಗಲೀ ಒಟ್ಟಾಗಿ ಯಾಗಲೀ ಮಾರಲ್ಪಡುತ್ತವೆ. ಶಾಲುಗಳು, ಹಾಸಿಗೆ ದುಪ್ಪಟಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ನೋಟಿಸ್.

80-1

ಶ್ರೀರಂಗ ಪಟ್ಟಣದ ತಾಲ್ಲೂಕು. ಕ್ಯಾತನಹಳ್ಳಿ ಹೋಬಳಿಗೆ ಸೇರಿದ ಮುತ್ತಲಮ್ಮನ ಕೊಪ್ಪಲು ವಾಸಿ ದಳ್ಳಾಳಿ ನಂಜುಂಡೈಯ್ಯನೆಂಬವನಾಗಿ ತಿಳಿಯ ಪಡಿಸುವ ನೋಟಿಸು.

ಇದೇ ಸೆಪ್ಟಂಬರು ೨೪ ಲಲ್ಲಿ ಮಂಡ್ಯದಲ್ಲಿರುವ ದಿನಸೀ ಅಂಗಡಿ ಎಮ್. ಎಸ್ ಅಬ್ದುಲ್ ಖರೀಮ್ ಸಾಹೇಬರವರಲ್ಲಿ ಟಿ ಬಿ ೭೦೬-೨೬ ನೇ ನಂಬರುಳ್ಳ ಮದರಾಸು ಒಂದು ನೂರು ರೂಪಾಯಿನ ಬಾಬತು ಅರ್ಧ ನೋಟು ತೆಗೆದುಕೊಂಡು ಆ ದಿನ ರಾತ್ರಿಯೇ ಮಂಡ್ಯದಿಂದ ಇರೋಡ್ ಸ್ಟೇಷನ್ನಿಗೆ ಹೋಗಿ ಇಳಿದು ಮೇಲ್ಕಂಡ ನನ್ನ ಊರಿಗೆ ಸೇರಿ ನಂತರ ಅರ್ಧ ನೋಟನ್ನು ನೋಡಿಕೊಳ್ಳಲು ಜೇಬಿನಲ್ಲಿರಲಿಲ್ಲ. ಇದನ್ನು ಯಾರಾದರೂ ತಂದು ಕೊಡುವದಾದರೆ ಅವರಿಗೆ ತುಂಬಾ ಕೃತಜ್ಞತೆಯಿಂದ ಹತ್ತು ರೂಪಾಯಿಗಳನ್ನು ಇನಾಂ ಕೊಡುತ್ತೇನೆ.

ದಳ್ಳಾಳಿ ನಂಜುಂಡೈಯ್ಯ, ಮುತ್ತಲಮ್ಮನ ಕೊಪ್ಪಲು.

ಮಧುರೆ ಶೀರೆ ! ಗಟ್ಟಿ ಬಣ್ಣ ! ೧೬|| ಮೊಳದುದ್ದ !!

57-9

ಬಿಳಿಯ ಚುಕ್ಕೆ ಯಾ ಹುವ್ವುಗಳಿಂದ ಕೂಡಿದ ಕೆಂಪು ಅಥವಾ ಕಪ್ಪು ಬಣ್ಣದ್ದು ರೂ. ೩-೪ ಆ. ನಡುವಾಗಿ ಅಂಚು ಸೆರಗಿನಲ್ಲಿ ಜರತಾರಿಯುದು ರೂ. ೫. ಬೆಳ್ಳಿಯ ಕಲಾಬತ್ತು ಸೀರೆ, ರೂ. ೬, ರೂ. ೮, ರೂ. ೧೦. ಹೆಚ್ಚು ಖರೀದಿಗೆ ಉತ್ತಮ ನಾಲು ದೊರೆಯುತ್ತೆ.

ಮದ್ರಾಸು ಬಿಳಿಯ ರೇಷ್ಮೆ ಅಂಚಿನ ಶೀರೆ ರೂ. ೬.

ಒಂದೇ ತರದ ೨ ರೇಷ್ಮೆ ಸೆರಗುಳ್ಳ ೨ ಅಂಗುಲ ಬಿಳಿರೇಷ್ಮೆ ರುದ್ರಾಕ್ಷ ಅಂಚುಳ್ಳ ಗಟ್ಟಿ ಕಪ್ಪು ಬಣ್ಣದ ೧೮ ಮೊಳದ ಶೀರೆಗೆ ರೂ. ೬. ೩ ಅಂಗುಲದಂಚಿನದಕ್ಕೆ ರೂ. ೭|| ಬಹು ನಯವಾದ ನೂಲು ಬಿಳಿ ಆಸ್ಟಂ ರೇಷ್ಮೆ ಅಂಚು, ೨ ಮೊಳದ ರೇಷ್ಮೆ ೨ ಸೆರಗು, ಬಹು ನೋಗಸಾಗಿಯೂ ಎಂದಿಗೂ ಕೆಡದ ಖಾಕಿ ಬಣ್ಣದಲ್ಲಿ ತಯಾರಿಸಿದ ೨ ಅಂಗುಲದಂಚಿನದಕ್ಕೆ ರೂ. ೯||, ೩ ಅಂಗುಲದಂಚಿನದಕ್ಕೆ ರೂ. ೧೧||.

ಬುರ್ನ್ನೀಸ್ ! "ಬ್ಲಾಂಕೆಟ್" ಎಂಬ ಹೊಸ ಬನಾತು ! ರೂ ೬.

ಶುದ್ಧ ಉಣ್ಣೆಯ ಹೊದಿಯಲು ಮಖಮಲಿನಂತೆ ಮೆತ್ತಗೂ ಛಳಿಗೆ ಬೆಚ್ಚಗೂ ಇದೆ. ಉದ್ದ ೮೦, ಅಗಲ ೬೮ ಅಂಗುಲ. ಕ್ರಯ ರೂ. ೬.

ರೇಷ್ಮೆಯ (ಕೆಂಪು) ವಸ್ತ್ರಗಳು ! ೨ ಮೊಳದಗಲ ! ರೂ. ೫.

೮ ಮೊಳದ ಮೋಲುಕೋಟೆ ಅಂಚಿನ ಪಂಚೆಗಳು ಜೊತೆ ರೂ. ೩.

ವಿಳಾಸ.—ರಾವ್ ಎಂಪೋರಿಯಂ, ಸ್ಟೇಟ್ ಹಾಂ ರೋಡ್,

ವೇಪೇರಿ, ಮದ್ರಾಸು.

ಶಿವಪಂಚಸ್ತವವು.

79-1

(ಪುಟಗಳು ೩೦೨)

ಶಿವಭಕ್ತಿ ಸಂಪನ್ನರಿಗೆಲ್ಲರಿಗೂ ಬೇಕಾದುದು.

ಶ್ರೀ ಮಾದರಸ ವಂಶೋದ್ಭವರಾದ ವಿಶ್ವಾರಾಧ್ಯರಿಂದ ರಚಿತವಾದ ಸಂಸ್ಕೃತದ ವ್ಯಾಖ್ಯಾನದೊಡನೆ ಕೂಡಿದ ಮಲ್ಹಣ, ಮಹಿಮ್ನ, ಮಲಯರಾಜ, ಆನಾಮಯ, ಹಲಾಯುಧವೆಂಬ ಪ್ರಖ್ಯಾತನಾದವರ ಪಂಚ ಸ್ತೋತ್ರಗಳು ಹೊಸದಾಗಿ ಬರೆದ ಕನ್ನಡ ಟಿಪ್ಪಣಿಯಿಂದ ಕೂಡಿ. ಸುಂದರವಾದ ಕನ್ನಡದ ಅಕ್ಷರಗಳಿಂದ ಉತ್ತಮವಾದ ಕಾಗದದಲ್ಲಿ ಅಚ್ಚು ಮಾಡಿಸಲ್ಪಟ್ಟದೆ.

ಕ್ರಯ ಪುಸ್ತಕ ೧ ಕ್ಕೆ ವಿ. ಪಿ. ಮೂಲಕ ರೂ. ೧–೪–೦.

೧೨ ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಪ್ರತಿಯು ಉಚಿತವಾಗಿ ಕೊಡಲ್ಪಡುವುದು.

ವಿಳಾಸ:—ಬಸವಲಿಂಗಸ್ವಾಮಿಗಳು, ಹೊಸಮಠ, ಮೈಸೂರು.

ಪ್ರತಿಯೊಬ್ಬ ವೀರಶೈವ ಮಹಸ್ತರಿಗೆ ಅವಶ್ಯಕವಾದದ್ದು.

ಚೆನ್ನಬಸವೇಶ ವಿಜಯ, ಕನ್ನಡ ವಚನ ರೂಪವಾದದ್ದು, ಅನೇಕ ಶರಣರ ಕಥೆಗಳು ಇರುತ್ತೆ ಕ್ರಯ ೧–೪–೦. ಈ ಪುಸ್ತಕವನ್ನು ತರಿಸಿಕೊಳ್ಳುವವರಿಗೆ ಕೆಳಗಿನ ಫೋಟೋಗಳನ್ನು ಬಹುಮಾನವಾಗಿ ಕಳುಹಿಸುತ್ತೇವೆ

ಶ್ರೀಅಲ್ಲಮ್ ಪ್ರಭುದೇವರು ಬಸವಾದಿ ಪ್ರಮಥರುಗಳೊಡನೆ ಇರತಕ್ಕ ಫೋಟೋ ೧ ಕ್ಕೆ ೦–೨–೦

ಶ್ರೀ ಚಿತ್ರದುರ್ಗ ಸಂಸ್ಥಾನದ ಈಗಿನ ಶ್ರೀಮರ್ಣಿ ರಂಜನ ಜಗದ್ಗುರುಗಳ ಫೋಟೋ ೧ ಕ್ಕೆ ೦–೨–೦

ಡಿಟೋ ಸ್ವಾಮಿಗಳ ಫೋಟೋ ನಂ ೨ ಸೈಜ್ ೦–೧–೦

ಒಟ್ಟಾಗಿ ತರಿಸಿಕೊಂಡರೆ ೮ ಕ್ಕೆ ೧, ೨೦ ಕ್ಕೆ ೨, ೫೦ ಕ್ಕೆ ೩, ೧೦೦ ಕ್ಕೆ ೨೦ ರಂತೆ ಕಮಿಷನ್ ದೊರೆಯುತ್ತೆ. ೧೮ × ೧೨ ರ ಸೈಜಿನ ಅಸಲ್ ಫೋಟೋ ೧ ಕ್ಕೆ ೦–೮–೦

ವಿಳಾಸ:—ಡಿ. ಪಿ. ಪುಟ್ಟಣ್ಣ, ಫ್ಯಾನ್ಸಿ ಬಜಾರ್, ಕೋಟೆ, ಮೈಸೂರು.

ನೆತ್ತಿಹತ್ತಿದ ಶೀತದಿಂದ ಮೂಗಿನಲ್ಲಿ ಹರಿಯುವದು. ಇದೇ ಪ್ರಪಂಚದಲ್ಲೆಲ್ಲಾ ರೋಗಕ್ಕೆ ಮೂಲಕಾರಣವು. ಇದಕ್ಕೆ ಪೆ-ರೂ-ನಾ ಸರ್ವಶ್ರೇಷ್ಠವಾದ ಪರಿಹಾರ.

[31-27]

ಉಷ್ಣದ ನೀರು ಹರಿಯುವ
ನೆತ್ತಿ ಹತ್ತಿದ ಶೀತ
ನೆಗಡಿ.

ಇದು ಅನ್ನಕೋಶ, ಮಲಕೋಶ, ದೊಡ್ಡ ಸಣ್ಣ ಕರುಳುಗಳು, ಕುಂದಿಯ ಕೋಶಗಳು, ಇವೆಲ್ಲಾ ವ್ಯಾಪನೆಯಾಗುತ್ತದೆ.

ಶೀತದ ನೀರು ಹರಿಯುವ
ನೆತ್ತಿ ಹತ್ತಿದ ಶೀತ
ನೆಗಡಿ.

ಇದು ನೆತ್ತಿ, ಗಂಟಲು, ಶ್ವಾಸಕೋಶ, ಶ್ವಾಸನಾಳಗಳು, ಇವಕ್ಕೆಲ್ಲಾ ವ್ಯಾಪಿಸಿಕೊಳ್ಳುತ್ತದೆ.

ನೆತ್ತಿಹತ್ತಿದ ಶೀತ ಅಥವಾ ಉಷ್ಣದ ನೆಗಡಿಯಿಂದ ಮೂಗಿನಲ್ಲಿ ನೀರು ಹರಿಯುವುದು ಮಹಾ ಕಠಿಣತರವಾದ ಜಾಡ್ಯವೆಂದು ಪ್ರಪಂಚದಲ್ಲಿ ಸಮಸ್ತ ಜನರಿಗೂ ತಿಳಿದೇ ಇರುತ್ತದೆ. ಅಮೇರಿಕ ಖಂಡಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳೆಂಬ ಒಂದು ರಾಜ್ಯದೊಳಗೇನೇ ಪ್ರತಿ ವರುಷವೂ ಎರಡು ಲಕ್ಷ ಪ್ರಜೆಗಳು ಈ ರೋಗಕ್ಕೆ ಸಿಕ್ಕಿ ಸರಳುತ್ತಾ ಇದಾರೆ ಹೀಗಿರುವಲ್ಲಿ ಇತರ ದೇಶಗಳೊಳಗೆ ಈ ರೋಗದಲ್ಲಿ ಬಿದ್ದು ಕಷ್ಟಪಡುವಂಥಾವರ ಸಂಖ್ಯೆಯು ಸರಾಸರಿ ನೋಡಿದರೆ ಅಷ್ಟು ಹೆಚ್ಚಾಗಿಯೇ ಇರಬೇಕೆಂದು ಹೇಳಲು ಸಂದೇಹವಿಲ್ಲ

ಈ ನೆತ್ತಿಹಿಡಿದ ಶೀತ ಅಥವಾ ಉಷ್ಣದ ನೀರು ಸುರಿಯುವಂಥಾ ರೋಗಕ್ಕೆ ಪೆ ರೂ ನಾ ಎಂಬೀ ಔಷಧವೇ ಸರ್ವಶ್ರೇಷ್ಠವಾದದ್ದೆಂದೂ, ಇದು ಇತರ ಔಷಧಗಳಿಗಿಂತ ಮೊದಲನೆಯ ಸ್ಥಾನವನ್ನು ಪಡೆದಿರುವಂಥಾದ್ದೆಂದೂ ಅನೇಕ ವರುಷಗಳಿಂದಲೂ ಅನುಭವಕ್ಕೆ ಬಂದಿರುತ್ತದೆ

ಪೆ ರೂ ನಾ ಎಂಬೀ ಔಷಧವು ಪ್ರಪಂಚದ ಪಶ್ಚಿಮ ಪೂರ್ವ ಮತ್ತು ಪೂರ್ವಾರ್ಧಗೋಳಗಳಲ್ಲೆಲ್ಲಾ ಇದು ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಪಡೆದಿರುತ್ತದೆ

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದ್ದೂ ಇವರಿಂದಲೇ ತಿಳಿಯಬಹುದು.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೧೧—೯—1908 ರಿಂದ 18—9—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	2	3	0	0
ಬೆಂಗಳೂರು ಡಿಸ್ಟ್ರಿಕ್ಟ್	*	*	0	0
ಮೈಸೂರು ,,	37	29	0	0
ಕೋಲಾರ್ ,,	11	15	6	6
ಕೋಲಾರ್ ಚಿನ್ನದ ಗಣಿಗಳು	16	15	0	0
ತುಂಕೂರು ಡಿಸ್ಟ್ರಿಕ್ಟ್	35	24	34	21
ಹಾಸನ ,,	0	0	0	0
ಚಿತ್ರದುರ್ಗ ,,	0	0	25	6
ಕಡೂರ್ ,,	42	30	0	0
ಶಿವಮೊಗ್ಗ ,,	43	26	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ.	188	142	65	33

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಆಶ್ವೀಜ ಶುದ್ಧ ಷಷ್ಠಿ ಗುರುವಾರದಿಂದ ಆಶ್ವೀಜ ಶುದ್ಧ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಅಕ್ಟೋಬರ್.

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ಕನ್ಯಾ ಮಾಸ
1	ಗುರು	ಷಷ್ಠಿ	37-48	ಜ್ಯೇ	50 24	16
2	ಶುಕ್ರ ,,	ಸ ಮಿ	34-38	ಮೂಲ	19-38	17
3	ಶನಿವಾ ,,	ಅಷ್ಟಮಿ	30-20	ಪೂಷಾ	46 2	18
4	ರವಿವಾ †	ನವಮಿ	25-38	ಉತ್ತರಾಷಾ	42 44	19
5	ಚಂದ್ರ *	ದಶಮಿ	20-15	ಶ್ರ	39 2	20
6	ಕುಜ ¶	ಏಕಾದಶಿ	14-22	ಧ	35-4	21
7	ಬುಧ ‡	ದ್ವಾದಶಿ	8-8	ಶ	31-40	22

,, ಶಾರದಾಪಸ್ಥಾಪನಂ, ಕಾಳರಾತ್ರಿ, ಮಹಿಷಾಸುರಸಂಹಾರ. , ಕಾಳಿಕಾಷ್ಟಮಿ, ದುರ್ಗಾಷ್ಟಮಿ † ಮಹಾನವಮಿ, ಆಯುಧಗಳಿಗೆ ಸರಸ್ವತೀಪೂಜಾ, ಅಮಲದೇವತಾ ಪೂಜಾ * ವಿಜಯದಶಮಿ, ಶಮೀಪೂಜಾ, ರಾಜಶ್ರಾಂಸೀಮೋಲ್ಲಂಘನಂ ¶ ಸರ್ವತ್ರಏಕಾದಶಿ, ತುಲಸೀವ್ರತಂ ‡ ಪ್ರದೋಷ, ಪದ್ಮನಾಭಗೋದ್ವಾದಶಿ.

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	ರೂ.	೧೬-೪-೦	೧೭-೩-೦
ಕಂಬುತಿ ಅಕ್ಕಿ ಅವಲ್	.	೧೩-೦-೦	೧೩-೦-೦
,, ದುಯಂ	.	೧೬ ೮-೦	೧೬-೮-೦
ಜಾದ್ರಾಷ ಅಕ್ಕಿ	.	೧೬-೮-೦	೧೬-೦-೦
ಸಣ್ಣಕ್ಕಿ ಅವಲ್	. .	೧೯-೦-೦	೨೦-೦-೦
,, ದುಯಂ	.	೧೮-೮-೦	೧೯-೦-೦
ಕೈಗರೀ ಬೇಳೆ ಪಲ್ಲ ೧ಕ್ಕೆ	.	೧೬-೧೨-೦	೧೮-೦-೦
,, ದುಯಂ	. .	೧೬-೪-೦	೧೬-೦-೦
ಸ್ಯ ರಾಗಿ ಪಲ್ಲ ೧ಕ್ಕೆ	. .	೭-೮-೦	೭-೧೨-೦
ಕಾರ್ರಾಗಿ	.	೭-೪-೦	೭-೪-೦
ಜೋಳ	.	೭-೮-೦	೯-೦-೦
ಹುಲಸಂದೆ ಪಲ್ಲ ೧ಕ್ಕೆ	.	೧೧-೮-೦	೧೧-೧೨-೦
ಬಿಳೀ ಅವರೆ	. .	೧೧ ೮-೦	೯-೦-೦
ಹೆಸರು		೧೨ ೦-೦	೧೨-೮-೦
ಉದ್ದು	. .	೧೬-೦-೦	೧೨-೮-೦
ಕಡಲೆ	.	೧೫-೪-೦	೧೫-೦-೦
ಎಳ್ಳು ಸೆ ೧೨೬ ಕ್ಕೆ	.	೨೧-೦-೦	೨೮-೦-೦
ಹುರುಳಿ		೭ ೬-೦	೮ ೦ ೦
ಹರಳು ೧೨೬ ಸೇರಿಗೆ	.	೧೨-೦-೦	೧೦-೮-೦
ಸೀಗೇಕಾಯಿ ಮಣ ೧ಕ್ಕೆ		೦-೧೧-೦	೧ ೮-೦
ಮೆಣಸಿನಕಾಯಿ	.	೪-೧೨-೦	೪-೦-೦
ದುಯಂ	.	೪-೮-೦	೩-೮-೦
ಬೆಲ್ಲ ಜೊಡ್ಡ ಅಚ್ಚು	. .	೫-೮-೦	೫ ೨-೦
ಒಳ್ಳೆಣ್ಣೆ ಮಣ ೧ಕ್ಕೆ	. .	೫-೧೨-೦	೬-೪-೦
ಹರಳೆಣ್ಣೆ ,,	.	೫-೦-೦	೪ ೦ ೦
ಕೊತ್ತುಂಬರಿ ಪಲ್ಲ ೧ಕ್ಕೆ	.	೬-೪-೦	೬ ೪ ೦
ಉಪ್ಪು ,,	. .	೪-೧೨-೦	೫ ೬ ೦
ಹುಣಸೇ ಹಣ್ಣು	. .	೦-೮-೦	೧ ೪ ೦
,, ಹಳೇದು	.	೧-೪ ೦	೨-೪ ೦
ತುಪ್ಪ ಮಣ ೧ಕ್ಕೆ	. .	೧೪-೧೨ ೦	೧೫ ೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	.	೪-೧೪-೦	೪ ೦ ೦
ತೆಂಗಿನಕಾಯಿ ೧೦೦ ಕ್ಕೆ	. .	೪-೪-೦	೫ ೦ ೦
ಅಳಲೇಕಾಯಿ ಮಣ ೧ಕ್ಕೆ	. .	೦-೧೧-೦	೦ ೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	. .	೦-೧೪-೦	೦-೧೪ ೦
ಚಿನ್ನ (ಪವ್) ಕೆಂಪು	. .	೧೫ ೭-೦	೧೫-೬-೦
,, ,, ಪಸಿಮೆ	. .	೧೫-೧೪-೦	೧೫-೧೨-೦
,, ,, ಗಟ್ಟಿ ತೊಲ ೧ಕ್ಕೆ	. .	೨೪-೧೧-೦	೨೪-೮-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	. .	೬೭-೦-೦	೬೫-೮ ೦

Printed and Published by the Rev E. W. Thompson, M. A., Proprietor and Manager, Wesleyan Mission Press, Mysore. 1/10/1908.

ವೃತ್ತಾಂತ ಪತ್ರಿಕೆ.

ವಿಶೇಷ ಪತ್ರಿಕೆ.

ಕ್ರಯ ೩ ಕಾಸು. ಕ್ರಯ ೩ ಕಾಸು.

ಮೈಸೂರು—ಸನ್ ೧೯೦೮ ನೇ ಇಸವಿ ಅಕ್ಟೋಬರ್ ತಾರೀಖು ೫ ನೇ ಸೋಮವಾರ.

ವಿಜಯ ದಶಮೀ ಉತ್ಸವವು.

ಈ ದಿನ ವಿಜಯ ದಶಮಿಯು. ಈ ಹಬ್ಬವನ್ನು ಪೂರ್ವಕಾಲದಲ್ಲಿ ಹಿಂದೂಸ್ಥಾನದ ರಾಜರುಗಳು ಪರಸ್ಪರ ಯುದ್ಧಮಾಡುತ್ತಿದ್ದಾಗ್ಗೆ ರೂಢಿಯಲ್ಲಿತ್ತೆಂದು ಕೆಲವು ಚರಿತ್ರಕಾರರು ತಿಳಿಸುತ್ತಾರೆ. ಆ ಕಾಲದಲ್ಲಿ ನದಿಗಳಿಗೆ ಸೇತುವೆಗಳನ್ನು ಕಟ್ಟಿರಲಿಲ್ಲ; ಕ್ರಮವಾದ ರಸ್ತೆಗಳಿರಲಿಲ್ಲ. ರೈಲ್ ಗಾಡಿಗಳೇನೋ ಆಗಿನ ಕಾಲದವರು ಕಂಡದ್ದೇ ಇಲ್ಲ. ಮಳೆಗಾಲಗಳಲ್ಲಿ ಸೈನ್ಯಗಳು ಊರಿಂದೂರಿಗೆ ಹೋಗುವುದು ಅಸಾಧ್ಯವಾಗಿದ್ದಿತು. ಧಾರೋದ್ಧಾರವಾಗಿ ಸುರಿಯುವ ಮಳೆಗಳಲ್ಲಿ ಸೈನಿಕರು ದಂಡಯಾತ್ರೆಯನ್ನು ಮಾಡಿದ ಪಕ್ಷದಲ್ಲಿ ನಾನಾ ಸಂಕಟಗಳಿಗೆ ಗುರಿಯಾಗುತ್ತಿದ್ದರು. ಆನೆ ಕುದುರೆಗಳು ಕೆಸರಿನಲ್ಲಿ ಸಿಕ್ಕಿಕೊಂಡು ನರಳಬೇಕಾಗಿತ್ತು. ಇದನ್ನೆಲ್ಲಾ ನೋಡಿ ಆಗಿನ ಕಾಲದ ರಾಜರುಗಳು ವರ್ಷಾಕಾಲ ಕಳೆಯುವ ತನಕ ಯುದ್ಧ ಕಾರ್ಯಗಳನ್ನು ಪ್ರಾರಂಭಿಸುತ್ತಿರಲಿಲ್ಲ. ಆ ತರುವಾಯ ಅವರು ಶತ್ರುಗಳ ಮೇಲೆ ದಂಡಯಾತ್ರೆ ಹೊರಡುತಲಿದ್ದರು. ಈ ವಿಜಯದಶಮೀ ಹಬ್ಬವು ವರ್ಷಾಕಾಲ ಮುಕ್ತಾಯವಾಗಿ, ಯುದ್ಧಕಾರ್ಯ ಪ್ರಾರಂಭ ಸಮಯವನ್ನು ಸೂಚಿಸುವ ಉತ್ಸವವಾಗಿರುತ್ತದೆ.

ನಮ್ಮ ಕಾಲವಾದರೋ ಹಿಂದಿನ ಈ ಸಂಕೋಚಗಳನ್ನು ಕಾಣದಾಗಿದೆ. ಬ್ರಿಟಿಷ್ ಗವರ್ನ್‌ಮೆಂಟಿನವರ ರಕ್ಷಣೆಯಲ್ಲಿ ಈ ದೇಶದ ಸಮಸ್ತ ಭಾಗಗಳಲ್ಲೂ ಸಾರ್ವತ್ರಿಕವಾದ ನೆಮ್ಮದಿಯು ನೆಲೆಗೊಂಡಿರುವುದು. ಐವತ್ತು ವರುಷಗಳಿಂದಲೂ ಈ ರಾಷ್ಟ್ರದ ಯಾವ ಭಾಗದಲ್ಲಾಗಲಿ ಯುದ್ಧದ ಹೆಸರೇ ಅಡಗಿ ಹೋಗಿರುತ್ತದೆ. ಹಾಗಾದರೆ ನಾವೇನು ಮಾಡೋಣ? ಘೋರ ಯುದ್ಧಗಳೂ ಕೊಲೆಗಳೂ ರಕ್ತಪ್ರವಾಹಗಳೂ ಇಲ್ಲವೇ ಇಲ್ಲವಲ್ಲ? ನಾವು ಪರಾಕ್ರಮಶಾಲಿಗಳಾಗಬೇಕಾದದ್ದಿಲ್ಲವೋ? ಎಂದು ಅನೇಕರು ಕೇಳಬಹುದು. ನಾವು ಹೋರಾಡಬೇಕಾದದ್ದು ಬಹಳ ಉಂಟು. ಆ ಘೋರವಾದ ಯುದ್ಧವನ್ನು ಮಾಡಬೇಕಾಗಿದೆ. ಅದಕ್ಕಾಗಿ ಧೈರ್ಯ ಸ್ಥೈರ್ಯಾದಿಗಳನ್ನು ನಾವು ಸಂಪಾದಿಸಿಕೊಂಡು, ಬಹಳ ಪರಾಕ್ರಮಶಾಲಿಗಳಾಗಬೇಕಾಗಿದೆ.

ಪ್ರಾಚೀನಕಾಲದಲ್ಲಿ ಒಬ್ಬ ಮಹಾತ್ಮನು ಒಬ್ಬ ಸ್ವಾರ್ಥಯುಕ್ತನಿಗೆ ಶ್ರೇಷ್ಠವಾದ ವಿಷಯವನ್ನು ಹಿಡಿದು ಪರಾಕ್ರಮವಂದ [illegible] ಎಂಬುದಾಗಿ ಬರೆಯುತ್ತಾನೆ. ಅಂಥಾ ಮಹತ್ತಾದ ವಿಷಯವಾವುದು? ನಮ್ಮ ಭ್ರಾತೃವರ್ಗಕ್ಕೆ ಸೇರಿದಂಥಾ ಜನರನ್ನು ಗುಂಡಿನಿಂದ ಕೊಂದುಹಾಕುವುದಲ್ಲ. ಪರರನ್ನು ಹಿಂಸೆ ಕಷ್ಟ ನಷ್ಟಗಳಿಗೂ ಸಂಕಟಗಳಿಗೂ ಗುರಿಮಾಡುವುದಲ್ಲ. ಪ್ರಜೆಗಳನ್ನು ಕಡಿದು ರಕ್ತಪ್ರವಾಹ ಹರಿಸುವುದೂ ಅಲ್ಲ. ಮನುಷ್ಯನಲ್ಲಿ ಹುಟ್ಟುವಂಥಾ ಶತ್ರುಗಳನ್ನು ಅಡಗಿಸಿ, ಕಾಮಕ್ರೋಧಾದಿ ಅರಿಷಡ್ವರ್ಗಗಳನ್ನು ಜಯಿಸುವುದೇ ಆ ಮಹಾ ವಿಷಯವಾಗಿರುತ್ತದೆ. ಸಕಲರೂ ಈ ಯುದ್ಧದಲ್ಲಿ ಗೆಲ್ಲುವಷ್ಟು ಪರಾಕ್ರಮಿಗಳಾಗಬೇಕು.

ಇದಕ್ಕೆ ಪ್ರತಿಯಾಗಿ ನೀವು ಹೀಗೆ ಹೇಳಬಹುದು.—“ಅದು ಬಹಳ ಕಷ್ಟವಾದ ಯುದ್ಧ. ಆ ಶತ್ರುಗಳನ್ನು ಕೊಂದು ಜಯಶೀಲರಾಗುವುದು ಕಷ್ಟಸಾಧ್ಯವಾಗಿರುತ್ತದೆ. ಅವರು ಎದುರಿಗೆ ನಿಂತು ಹೋರಾಡತಕ್ಕವರಲ್ಲ, ಯುಕ್ತಿ ಮತ್ತು ಮೋಸಕೃತ್ಯಗಳಲ್ಲಿ ಅವರು ನಿಪುಣರಾಗಿರುತ್ತಾರೆ. ನೂರು ಪ್ರಾಣಗಳವರೋ ಎನ್ನುವಂತೆ ಕಾಣಿಸಿಕೊಳ್ಳುತ್ತಾರಲ್ಲ! ಇನ್ನೇನು ಕೊಂದುಬಿಟ್ಟೆವು ಎಂದು ನಾವು ಜಯ ಭೇರಿಯನ್ನು ಹೊಡೆಯಲಾರಂಭಿಸುವಷ್ಟರೊಳಗಾಗಿ ಆ ಶತ್ರುಗಳು ಯಥಾಪ್ರಕಾರ ಪರಾಕ್ರಮಶಾಲಿಗಳಾಗಿ ಎದ್ದು ನಿಲ್ಲುವರು. ಒಂದು ತಲೆಯನ್ನು ಕಡಿದು ಹಾಕಿದರೆ ಬದಲಿಗೆ ಹತ್ತು ತಲೆಗಳು ಹುಟ್ಟಿ ಬರುತ್ತವೆ. ಇಂಥಾ ಮೋಸಗಾರರ ಕೂಡ ಹೋರಾಡಿ ಜಯಪ್ರದ ಹೊಂದುವುದು ಹೇಗೆ?”

ಇದೆಲ್ಲಾ ನಿಜವಾಗಿಯೇ ಇರುವುದು. ರಣರಂಗದಲ್ಲಿ ಶತ್ರುವನ್ನು ಗುಂಡಿನಿಂದ ಹೊಡೆದಾಗಲಿ ಇಲ್ಲವೇ ಕತ್ತಿಯಿಂದ ಕಡಿದಾಗಲಿ ಕೊಲ್ಲಬಹುದು. ಆದರೆ ಮನಸ್ಸಿನೊಳಗೆ ಹುಟ್ಟತಕ್ಕ ದುರಾಶೆ ಪಾಪಾದಿಗಳನ್ನು ಜೈಸುವುದು ಸುಲಭವಲ್ಲ. “ಶತ್ರುವಿನ ಕೋಟೆಯನ್ನು ಮುತ್ತಿ ಹಿಡಿದುಕೊಳ್ಳುವುದಕ್ಕಿಂತ ತನ್ನ ಸ್ವಂತ ಮನಸ್ಸಾಕ್ಷಿಗಳನ್ನು ಹತೋಟಿಯಲ್ಲಿಡುವವನೇ ಧೀರನೆಂಬುದಾಗಿ” ಒಂದು ಗಾದೆಯು ಇರುವುದು. ಭಗವಂತನು ಯಾವಾಗಲೂ ನಮ್ಮ ಸಹಾಯಕನಾಗಿದ್ದಾನೆ. ದೇವರು ಆದಿಯಲ್ಲಿ ಮನುಷ್ಯರನ್ನು ಸೃಷ್ಟಿಸಿದಾಗ್ಗೆ ಮನುಷ್ಯರೆಲ್ಲರೂ ಪವಿತ್ರರೂ ಒಳ್ಳೆಯವರೂ ಆಗಿರಬೇಕೆಂದು ಆತನು ಉದ್ದೇಶಿಸಿದನು. ಜಗದಾದಿಯಿಂದ ಇದುವರೆವಿಗೂ ಆತನು ತನ್ನ ಮಕ್ಕಳಾದ ಮನುಷ್ಯರೆಲ್ಲರನ್ನು ಉತ್ತಮಸ್ಥಿತಿಗೆ ತರುವ ಪ್ರಯತ್ನದಲ್ಲಿಯೇ ನಿರತನಾಗಿದ್ದಾನೆ. ಆತನ ಅತಿಶಯವಾದ ಕೃಪೆಯಿಂದ ಮನುಷ್ಯನು ದಿನೇ ದಿನೇ ಅಭಿವೃದ್ಧಿಹೊಂದುತ್ತಿರುವದರಿಂದ ಪಾಪವು ಕಡಮೆಯಾಗಿ ನೀತಿಯು ಹೆಚ್ಚುತ್ತಿರುವದು. ಪಾಪಬಂಧನದಿಂದ ನರಕುಲವನ್ನು ಬಿಡಿಸಬೇಕೆಂಬುದೇ ಆತನ ಇಷ್ಟವಾಗಿರುತ್ತದೆ. ದೇವರ ಉದ್ದೇಶವು ಹೀಗಿರುವುದರಿಂದ ನೀವು ಪಾಪದ ಕೇಡುಗಳಿಂದ ತಪ್ಪಿಸಿಕೊಳ್ಳುವುದಕ್ಕೆ ನಿಮ್ಮ ಕೈಲಾದ ಪ್ರಯತ್ನಗಳನ್ನು ಮಾಡಿರಿ. ಪೂರ್ವಕಾಲದಲ್ಲಿ ಬದುಕಿದ್ದ ಒಬ್ಬ ಭಕ್ತನು ಈ ರೀತಿಯಾಗಿ ಬರೆಯುತ್ತಾನೆ. “ದೇವರು ನನಗೆ ಬೆಳಕೂ ರಕ್ಷಣೆಯೂ ಆಗಿದ್ದಾನೆ ಯಾರಿಗೆ ಹೆದರುವೆನು? ದೇವರು ನನ್ನ ಜೀವದ ಬಲಸ್ಥಾನವು. ಯಾರಿಗೆ ಅಂಜುವೆನು? ನನ್ನ ವೈರಿಗಳು ನನಗೆ ವಿರೋಧವಾಗಿ ಎದ್ದುನಿಂತರೂ ನನ್ನ ಹೃದಯವು ಭಯಪಡದು.”

ಆದ್ದರಿಂದ ಈ ವಿಜಯದ ದಶಮೀ ದಿವಸ ನೀವು ಪಾಪವನ್ನು ತ್ಯಜಿಸಿ ಸತ್ಕರ್ಮೋತ್ಕರ್ಷಕ್ಕಾಗಿ ಹೋರಾಡುವ ಪ್ರಯತ್ನವನ್ನು ಪ್ರಾರಂಭಿಸಿ. ಎಲ್ಲಾ ಬಗೆಯಾದ ದುಷ್ಕೃತ್ಯಗಳನ್ನು ಹೋಗಲಾಡಿಸಿ ಸತ್ಯವನ್ನು ಸ್ಥಾಪಿಸುವದಕ್ಕೆ ಪ್ರಯತ್ನಪಡುತ್ತಿರುವ ಭಕ್ತರ ಗುಂಪಿಗೆ ಸೇರಿರಿ. ಸತ್ಯವಂತನಾದ ಏಕೋ ಭಗವಂತನಿಗೆ ಹಗಲಿರಾತ್ರಿ ಪೂರ್ಣ ಮನಸ್ಸಿನಿಂದ ಪ್ರಾರ್ಥಿಸಿರಿ.

“ನೀವು ಭಗವಂತನನ್ನೂ ಆತನ ಅತ್ಯಧಿಕವಾದ ಶಕ್ತಿಯನ್ನೂ ಆಶ್ರಯಿಸಿಕೊಂಡವರಾಗಿ ಬಲಗೊಳ್ಳಿರಿ; ಪಾಪದ ತಂತ್ರೋಪಾಯಗಳನ್ನು ನೀವು ಎದುರಿಸಿ ನಿಲ್ಲುವದಕ್ಕೆ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ. ಸತ್ಯವೆಂಬ ನಡುಕಟ್ಟನ್ನು ಕಟ್ಟಿಕೊಂಡು, ನೀತಿಯೆಂಬ ಉಕ್ಕಿನ ಕವಚವನ್ನು ಧರಿಸಿಕೊಂಡು, ಸಮಾಧಾನದ ವಿಷಯವಾದ ಸಂಗತಿಗಳನ್ನು ತಿಳಿಸುವುದರಲ್ಲಿ ದೃಢವಾದ ಮನಸ್ಸನ್ನು ಪಡೆದುಕೊಳ್ಳಿರಿ. ನೀವು ದೇವರ ಆತ್ಮನಿಂದ ಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲ ವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ಆತನನ್ನು ಭಜಿಸಿರಿ.”

ಅಪಾರವಾದ ಮಳೆಗಳು.

ಹೈದರಾಬಾದಿನಲ್ಲಿ ನಡೆದ ಅನಾಹುತಗಳು.

ಕಳೆದ ತಿಂಗಳ ೨೫ ನೇ ತಾ. ಶುಕ್ರವಾರ ಅಪೂರ್ವವಾದ ಮಳೆ ಸುರಿದು ರಾಜಮಂಡ್ರಿಯ ಉತ್ತರ ಭಾಗದಲ್ಲಿ ಧಾರಾಪುರಿಗೂ ಕಡಿಯಾಮಿಗೂ ನಡುವೆ ರೈಲ್ ರಸ್ತೆಯು ಕಿತ್ತುಹೋಯಿತು. ಕಲ್ಕತ್ತೆಯಿಂದ ಮದರಾಸಿಗೆ ಆ ಶುಕ್ರವಾರದ ಲಾಗಾಯಿತು ತಾ ೨೯ ನೇ ಮಂಗಳವಾರದ ತನಕ ರೈಲ್ ಗಾಡಿಗಳೇ ಬಾರದೆಹೋದವು. ಕಾಗದಗಳು ನಾಲ್ಕು ದಿನಗಳ ವರೆಗೆ ತಲಪಲಿಲ್ಲ. ತರುವಾಯ ಭೀಮಡೋಲಿಗೂ ಎಲ್ಲೋರಿಗೂ ನಡುವೆ ರೈಲ್ ರಸ್ತೆ ಕಿತ್ತುಹೋಯಿತು. ಅಂತು ಬೆಜವಾಡದಿಂದ ಧಾರಾಪುರಿಯ ತನಕ ರೈಲ್ ಗಾಡಿ ಹೋಗಿ ಬರುವಂತೆ ಅಡಚಣೆಯುಂಟಾಯಿತು. ಸೆಪ್ಟಂಬರ್ ತಾ. ೨೭ ರಲ್ಲಿ ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಸಿಕಂದ್ರಾಬಾದಿನಿಂದ ವರ್ತಮಾನ ಬಂದದ್ದೇನೆಂದರೆ —ಈಗ ಹೈದರಾಬಾದಿನಲ್ಲಿ ಮಳೆ ಸುರಿಯುತ್ತಿರುವಷ್ಟು ಹದಿಮೂರು ವರುಷಗಳಿಂದ ಸುರಿಯಲಿಲ್ಲ. ಹತ್ತು ದಿನಗಳಿಂದಲೂ ಏಕ ಪ್ರಕಾರವಾಗಿ ಮಳೆ ಸುರಿಯುತ್ತಿದೆ. ರೈಲ್ ರಸ್ತೆಗಳು ಹನ್ನೆರಡು ಕಡೆಗಳಲ್ಲಿ ಕಿತ್ತುಹೋಗಿವೆ. ಸೇತುವೆಗಳು ಕಳಚಿ ಬೀಳುತ್ತಿರುವವು. ವಾಡಿಯಿಂದ ಬೇಗಂಪೇಟೆಯ ತನಕ ಉದ್ದಕ್ಕೂ ಪ್ರವಾಹವು ಸಮುದ್ರದಂತೆ ನುಗ್ಗಿ ಹರಿಯುತ್ತಿದೆ. ಹುಸೇನ್ ಸಾಗರವೆಂಬ ಕೆರೆಯ ಆ ಪಕ್ಕದಲ್ಲಿ ಕಡೆಯ ರೈಲ್ ಗಾಡಿಯು ಅರೆವಾಸಿ ಪ್ರವಾಹದಲ್ಲಿ ಮುಳುಗಿ ಬಹು ನಿಧಾನವಾಗಿಯೂ, ತುಂಬಾ ಜಾಗರೂಕತೆಯಿಂದಲೂ ಬಂದಿತು. ಆ ಪ್ರಾಂತ್ಯದಲ್ಲಿರುವ ಸಣ್ಣ ಸಣ್ಣ ಕೆರೆಗಳು ತುಂಬಿ, ಒಡೆದು ಕಿತ್ತುಹೋಗಿ ಮನೆಗಳು ಕಳಚಿ ಬೀಳುತ್ತಿವೆ. ನೆನ್ನೆ ಬೆಳಗ್ಗೆ ೮ ಘಂಟೆಯಿಂದ ಈ ದಿನ ಸಾಯಂಕಾಲದ ವರೆಗೆ ೧೦ ಅಂಗುಲ ಪ್ರಮಾಣ ಮಳೆ ಸುರಿದಿದೆ.

ಸೆಪ್ಟಂಬರ್ ತಾ. ೨೮ರಲ್ಲಿ ವರ್ತಮಾನ ಬಂದಿರುವುದೇನೆಂದರೆ:—ರಾತ್ರಿಯೆಲ್ಲಾ ಮಳೆ ಸುರಿಯಿತು. ಈಗ ಇನ್ನೂ ಜೋರಾಗಿ ಬರುತ್ತಿದೆ. ಹೈದರಾಬಾದ್ ಟವರ್‌ನಲ್ಲಿ ಸುತ್ತಲೂ ಇರುವ ಮೂಸಿ ಎಂಬ ನದಿಯಲ್ಲಿ ಇದ್ದಕ್ಕಿದ್ದಹಾಗೆ ಪ್ರವಾಹ ಬಂದು ಜನರನ್ನು ಗಾಬರಿಪಡಿಸಿತು. ಪ್ರಜೆಗಳು ಮನೆ ಮಠಗಳನ್ನು ಬಿಟ್ಟು ತಂಡ ತಂಡವಾಗಿ ದೂರಕ್ಕೆ ಹೋಗುತ್ತಿದ್ದಾರೆ. ನದಿಯ ದಡದ ಉದ್ದಕ್ಕೂ ಇಟ್ಟಿದ್ದ ತೊಲೆಗಳ ರಾಶಿಯು ಕೊಚ್ಚಿ ಹೋಯಿತು. ಅವು ನದಿಯಲ್ಲಿ ತೇಲಿಕೊಂಡು ಹೋಗುತ್ತಿವೆ. ಅದೇ ದಿನ ಸ್ವಲ್ಪ ಹೊತ್ತಾದ ಮೇಲೆ ಬಂದ ಸುದ್ದಿ.—ಹೈದರಾಬಾದ್ ಪಟ್ಟಣದಲ್ಲಿ ಜನರ ಕಳವಳವು ಹೆಚ್ಚಿತು. ಮಳೆ ನಿಲ್ಲದೆ ಬರುತ್ತಲೇ ಇದೆ. ಮೂರು ಕಡೆಗಳಿಂದ ಹೈದರಾಬಾದ್ ಪಟ್ಟಣಕ್ಕೆ ಹೋಗುವ ರಸ್ತೆಗಳು ಪ್ರವಾಹಗಳಿಂದ ಕಟ್ಟಿಹೋದವು. ಪ್ರವಾಹವು ನದಿಯ ದಡದಿಂದ ಹೊರಗೆ ಬಹು ರಭಸವಾಗಿ ನುಗ್ಗಿ ಬರುತ್ತಲಿದೆ. ಬ್ರಿಟಿಷ್ ರೆಸಿಡೆಂಟರು ಮೋಟಾರ್ ಗಾಡಿಯಲ್ಲಿ ಬೋಲಾರಂನಿಂದ ಹೈದರಾಬಾದ್ ರೆಸಿಡೆನ್ಸಿ ಬಂಗಲೆಗೆ ಹೋಗಬೇಕೆಂದು ಬಂದರು. ಆ ಬಂಗಲೆಗೂ ಅ|| ರೆಸಿಡೆಂಟರ ಬಂಗಲೆಗೂ ನೀರು ನುಗ್ಗಿ ತುಂಬಾ ಹಲಾಕು ಮಾಡುತ್ತಿದೆ. ಸ್ವರಾತ್ ಬಾಗಿನಲ್ಲಿರುವ ಜನಾನಾ ಬೋರ್ಡಿಂಗ್ ಕಟ್ಟಡದ ಸುತ್ತಲೂ ನೀರು ನಿಂತು ಕ್ರಮೇಣ ಹೆಚ್ಚುತ್ತಿದೆ. ಇಂಜನಿಯರೇ ಮೊದಲಾದ ಸರ್ಕಾರಿ ನೌಕರರು ಹುಸೇನ್ ಸಾಗರ ತಲಾವಿನ ಕೆಳಗಡೆ ಇರುವಂಥಾ ಗ್ರಾಮಸ್ಥರಿಗೆಲ್ಲಾ ಎಚ್ಚರಿಕೆ ಹೇಳಿ, ಅವರನ್ನು ಬೇರೆ ಕಡೆಗಳಿಗೆ ಕಳುಹಿಸಿ, ಅಲ್ಲಿದ್ದ ಕಾಲುವೆಯನ್ನು ಮುಚ್ಚಿಸಿ, ಏರಿಯು ಒಡೆದು ಹೋಗದಂತೆ ಕೆರೆಯ ನೀರನ್ನು ಇನ್ನೊಂದು ಭಾಗದಲ್ಲಿ ತಿರುಗಿಸಿರುತ್ತಾರೆ. ಟೆಲಿಗ್ರಾಫ್ ಆಫೀಸಿನೊಳಕ್ಕೆ ನೀರು ನುಗ್ಗಿದ್ದರಿಂದ ನೌಕರರು ತಮ್ಮ ಪದಾರ್ಥಗಳನ್ನು ಬೇಗ ಬೇಗನೆ ಸಾಗಿಸಿ ಬಿಟ್ಟರು. ತಂತೀ ವರ್ತಮಾನ ಹೋಗಿ ಬರುವುದು ತಪ್ಪಿತು. ರಾಜಧಾನಿಯಿಂದ ಯಾವ ಸುದ್ದಿ ಬರುವುದಕ್ಕೂ ಮಾರ್ಗವಿಲ್ಲ. ಈ ದಿನ ಮಧ್ಯಾಹ್ನ ಒಬ್ಬ ಚಾರನು ಅಲ್ಲಿಂದ ಸಿಕಂದ್ರಾಬಾದಿಗೆ ಬಂದು, ಮೂಸಿ ನದಿಯಲ್ಲಿ ಪ್ರವಾಹ ಅಪಾರವಾಗಿ ಬಂದು, ದಡದ ಮೇಲೆ ಹರಿದು ಬಹು ನಷ್ಟ ಕಷ್ಟಗಳನ್ನುಂಟುಮಾಡುತ್ತಿದೆ ಎಂದು ಹೇಳಿದನು. ರೆಸಿಡೆನ್ಸಿ ಬಂಗಲೆಯ ಸುತ್ತಾ ನೀರು ಜಮಾಯಿಸಿತ್ತು. ಒಳಗಿದ್ದ ಸಾಮಾನುಗಳೆಲ್ಲಾ ಸಂಪೂರ್ಣವಾಗಿ ಕೆಟ್ಟುಹೋದವು. ಕೆಲವು ಯೂರೋಪ್ಯಿಯನ್ ಸವಾರರೇ ಮುಂತಾದವರು ಸಿಕಂದ್ರಾಬಾದಿನಿಂದ ದೋಣಿಗಳಲ್ಲಿ ಹೈದರಾಬಾದಿಗೆ ಹೋಗಿ ಬಹು ಸಾಹಸಪಟ್ಟು ಅನೇಕರನ್ನು ಬದುಕಿಸಿದರು.

ಹೈದರಾಬಾದ್ ಪಟ್ಟಣದಲ್ಲಿ ಎರಡು ತಲೆಗಳಿಂದ ಇಷ್ಟು ಭಯಂಕರವಾದ ಅನಾಹುತಗಳು ನಡೆಯಲಿಲ್ಲ. ಅಫ್ಜಲ್‌ಗಂಜ್ ಮತ್ತು ಚಾದರ ಘಾಟಿನ ಸೇತುವೆಗಳು ಒಡೆಯುವಂತೆ ಕಂಡದ್ದರಿಂದ ಪೊಲೀಸಿನವರೂ ಅಧಿಕಾರಿಗಳೂ ತುಂಬಾ ಮೆಹನತ್ತುಮಾಡಿ, ಅನೇಕ ಗ್ರಾಮಗಳಿಗೆ ಹೋಗಿ ಜನರನ್ನು ಎಚ್ಚರಿಸಿ ಮನೆಗಳನ್ನು ಬಿಡಿಸಿದರು. ಕೆಲವು ಸಹಸ್ರ ಜನರು ಈ ರೀತಿ ಬೇರೆಕಡೆ ಹೋಗಿ ಬದುಕಿಕೊಂಡರು. ಈ ದಿನ ಮಧ್ಯಾಹ್ನ ಆ ಎರಡು ಸೇತುವೆಗಳ ಮೇಲೂ ಅಪಾರವಾದ ನೀರು ಹರಿದು, ಸೇತುವೆಗಳನ್ನು ಸಂಪೂರ್ಣವಾಗಿ ಕಡಿದು ಕೊಚ್ಚಿಬಿಟ್ಟಿತು. ತರುವಾಯ ನೀರು ನುಗ್ಗಿ ಅಫ್ಜಲ್‌ಗಂಜಿನೊಳಕ್ಕೆ ಹೊ

ರಳಿ ಬಂದು ಬಹು ದುಃಖಕರವಾದ ಅನಾಹುತವನ್ನುಂಟು ಮಾಡಿತು. ಗಲ್ಲಿ, ಬೀದಿ, ರಸ್ತೆ ಮೊದಲಾದ ಕಡೆಗಳಲ್ಲಿ ಪ್ರವಾಹವು ತಡೆಬಡೆ ಇಲ್ಲದೆ ಮಹಾ ರಭಸವಾಗಿ ಹೊರಳಿ ಹೋಗುತ್ತಾ, ತನ್ನೆದುರಿಗೆ ಸಿಕ್ಕಿದ ಮನೆ ಮಠಗಳನ್ನೂ ಗಿಡ ಮರಗಳನ್ನೂ ಸಮೂಲವಾಗಿ ನಾಶನ ಮಾಡಿಬಿಟ್ಟಿತು. ಸಾವಿರಾರು ಪ್ರಜೆಗಳು ಬೆಟ್ಟದೋಪಾದಿಯಲ್ಲಿ ನುಗ್ಗಿ ಬರುತ್ತಿದ್ದ ಪ್ರವಾಹವನ್ನು ನೋಡಿ ತಮ್ಮ ಸರ್ವಸ್ವವನ್ನೂ ಹಾಗೆ ಹಾಗೇ ಬಿಟ್ಟು ಗೋಳಾಡುತ್ತಾ ಹುಂಗಾಳಿಗಳಂತೆ ದಿಕ್ಕಾಪಾಲಾಗಿ ಚದರಿಹೋದರು. ಆ ಸಮಯದಲ್ಲಿ ಅವರ ಸ್ಥಿತಿ ಗತಿಯು ಹ್ಯಾಗಿತ್ತೆಂದು ವಿವರಿಸುವುದು ಯಾರಿಂದಲೂ ಸಾಧ್ಯವಲ್ಲ. ಎಲ್ಲಾ ಪ್ರದೇಶಗಳಲ್ಲೂ ಏಕ ಪ್ರಕಾರವಾಗಿ ಎಂಟು ಅಡಿ ಪ್ರಮಾಣದ ನೀರು ನಿಂತು ಹರಿಯುತ್ತಿತ್ತು. ನೂರಾರು ಪ್ರಜೆಗಳು ನೀರಿನಲ್ಲಿ ಮುಳುಗಿ ಸತ್ತರು, ಅನೇಕರು ಮನೆಗಳೊಳಗೇ ಗೋಡೆಗಳ ಕೆಳಗೆ ಸಿಕ್ಕಿ ಹತರಾದರು. ಈ ಸುದ್ದಿಯು ತಿಳಿದ ಕೂಡಲೇ ಚದರಘಾಟ್ ಮತ್ತು ಸೈಫಾಬಾದ್ ಎಂಬ ಸ್ಥಳಗಳಿಂದ ಸರ್ಕಾರ ಅಧಿಕಾರಿಗಳೂ ಸೋಜರುಗಳೂ ದೋಣಿಗಳಲ್ಲಿ ಕುಳಿತು ಅಲ್ಲಿಗೆ ಹೋಗಿ ಪ್ರಾಣ ಬದುಕಿಸುವುದಕ್ಕೆ ಶ್ರಮದಿಂದಾದಷ್ಟೂ ಸಾಹಸ ಪಡುತ್ತಿದಾರೆ. ಅನೇಕರನ್ನು ಆನೆಗಳ ಮೇಲೆ ತೊಟ್ಟಿಲುಗಳಲ್ಲಿ ಕೂಡಿಸಿಕೊಂಡು ಬಂದರು.

ಆಸ್ತಿಪಾಸ್ತಿಗಳು ಈ ಅನಾಹುತದಿಂದ ಎಷ್ಟು ಹಾಳಾದವೋ ಊಹಿಸುವುದೂ ಕಷ್ಟವಾಗಿದೆ. ಅನೇಕ ಸಹಸ್ರ ಮನೆಗಳು ಏಕಕಾಲದಲ್ಲಿ ಭೂಕಂಪಕ್ಕೆ ಸಿಕ್ಕಿದಂತೆ ನಾಶಹೊಂದಿ ನೆಲಸಮನಾಗಿರುವುದನ್ನು ನೋಡಿದಾಗ ಸುಮಾರು ಎರಡು ಕೋಟಿ ರೂಪಾಯಿಗಳ ಆಸ್ತಿಪಾಸ್ತಿಗಳಿಗೇನೂ ಕಡಮೆಯಿಲ್ಲದೆ ಹಾಳಾಗಿರುತ್ತವೆಂದು ಧಾರಾಳವಾಗಿ ಹೇಳಬಹುದು. ಒಂದು ಸ್ಥಳದಲ್ಲಿ ಶೇಖರಮಾಡಿಡಲ್ಪಟ್ಟಿದ್ದ ಸುಮಾರು ಎರಡು ಲಕ್ಷ ರೂಪಾಯಿನ ಆಹಾರ ಧಾನ್ಯಗಳೆಲ್ಲಾ ನಾಶವಾದವು. ಕೆಲವು ಮೈಲಿಗಳ ತನಕ ಪಟ್ಟಣವೆಲ್ಲಾ ಪಾಳುಬೀಳುತ್ತಲಿದೆ. ಮನೇ ಮಠಾದಿಗಳನ್ನು ಕಳೆದುಕೊಂಡವರೂ ರಕ್ತಸಂಬಂಧಿಗಳನ್ನು ಕಳೆದುಕೊಂಡವರೂ ಗೋಳಾಡುತ್ತಾ ದಿಕ್ಕಿಲ್ಲದೆ ಅಲೆಯುತ್ತಿರುವುದನ್ನು ನೋಡಿ ಸೈರಿಸುವುದು ಕಷ್ಟವಾಗಿದೆ. ಎಲ್ಲಿ ನೋಡಿದರೂ ಹೆಣಗಳ ಮಯವಾಗಿದೆ. ಪೋಲೀಸಿನವರೂ ಸೈನಿಕರೂ ಕಷ್ಟನಿವಾರಣೆಗಾಗಿ ಬಹು ಸಾಹಸಪಡುತ್ತಿದಾರೆ.

ಅನೇಕ ಯೂರೋಪಿಯನ್ ಸರದಾರರು ತಮ್ಮ ಪ್ರಾಣದ ಮೇಲೆ ಅಂಗೀಕರಿಸದೆ ಪಟ್ಟಣದ ಎಲ್ಲಾ ಕಡೆಗಳಲ್ಲೂ ಸಂಚಾರ ಮಾಡುತ್ತಾ, ಅಲ್ಲಲ್ಲಿ ಜೀವದೊರಸೆ ಸಿಕ್ಕಿಕೊಂಡು ನರಳುತ್ತಿರುವ ಜನರನ್ನು ಬಿಡಿಸಿ ಸಾಗಿಸಿಕೊಂಡು ಬರುತ್ತಿದಾರೆ. ಈ ರೀತಿ ಇವರು ನೂರಾರು ಪ್ರಜೆಗಳನ್ನು ಬದುಕಿಸಿದರು. ಇನ್ನೂ ಮೋಡಗಳು ಬಹಳ ಗಟ್ಟಿಯಾಗಿ ಸೇರಿಕೊಂಡಿವೆ. ಇದನ್ನು ನೋಡಿದರೆ ಮತ್ತೆ ಮಳೆ ಸುರಿಯುವ ಪಕ್ಷಕ್ಕೆ ಅನಾಹುತವು ಇನ್ನೂ ಅಪಾರವಾಗುವುದಲ್ಲಾ ಎಂದು ಅನೇಕರು ಪರಿತಾಪ ಪಡುತ್ತಿದಾರೆ. ಹೈದರಾಬಾದ್ ಪಟ್ಟಣಕ್ಕೆ ಹೋಗಿ ಬರುವ ಮಾರ್ಗಗಳೆಲ್ಲಾ ಮುಚ್ಚಿಹೋದವು. ಅಲ್ಲಿಂದ ಯಾವ ವರ್ತಮಾನವೂ ಹೊರಕ್ಕೆ ತಿಳಿಯುವಹಾಗಿಲ್ಲ. ನೈಜಾಮರವರೂ, ಮಂತ್ರಿಶ್ರೇಷ್ಠರೂ, ಅನೇಕ ಭಾರೀ ಉದ್ಯೋಗಸ್ಥರೂ ಆ ಪಟ್ಟಣದೊಳಗೇ ಇರತಕ್ಕದ್ದರಿಂದ ಅವರ ಯೋಗಕ್ಷೇಮವೇನೆಂಬುದು ತಿಳಿಯದ ವ್ಯಸನವಾಗುವುದು. ಇದರ ಮಧ್ಯಸ್ಥದ [illegible] ಟಾಗಳ ಸಂಸ್ಥೆಗಳ ಮೂಲಕ [illegible] ವರ್ತಮಾನ [illegible] ತಾಗಿದೆ. ಅನೇಕ ಸರ್ಕಾರಿ ಆಫೀಸುಗಳು ಸಮಸ್ತ ರಿಕಾರ್ಡುಗಳ ಸಹಿತ ಹಾಳಾದವು. ಅಫ್ಜಲ್‌ಗಂಜ್ ಆಸ್ಪತ್ರೆಯು ಮೊದಲೇ ಈ ಪ್ರವಾಹಕ್ಕೆ ಸಿಕ್ಕಿಬಿದ್ದದ್ದರಿಂದ ಅದು ಸಂಪೂರ್ಣವಾಗಿ ನೆಲಸಮವಾಯಿತು. ಒಳಗಿದ್ದ ಅನೇಕ ರೋಗಿಗಳೂ ಸೇವಕಾಳಿಗಳೂ ಮೃತಪಟ್ಟರು. ಚದರಘಾಟ್ ಸೇತುವೆಯ ಮೇಲೆ ಹನ್ನೆರಡು ಅಡಿಗಳ ಎತ್ತರಕ್ಕೆ ಪ್ರವಾಹಗಳು ಹರಿದು, ಕಣ್ಣುಮುಟ್ಟಕ್ಕೆ ಸುತ್ತಲೂ ಕಾಣುವ ಪ್ರದೇಶವೆಲ್ಲಾ ನೀರಿನ ಮಯವಾಯಿತು. ೩೬ ಗಂಟೆ ಹೊತ್ತಿನಲ್ಲಿ ೧೫ ಅಂಗುಲ ಪ್ರಮಾಣದಷ್ಟು ಮಳೆ ಸುರಿದಿರುತ್ತದೆ.

ಸೆಪ್ಟೆಂಬರ್ ತಾ. ೨೯ ನೇ ಮಂಗಳವಾರ ಬಂದ ವರ್ತಮಾನವೇನೆಂದರೆ.—ಮುಸೀಸಾಗರವೆಂಬ ಕೆರೆಯಿಂದ ೫೦ ಗಜಗಳ ದೂರದಲ್ಲಿ ಉದ್ದಕ್ಕೂ ಇದ್ದ ಮನೋಹರವಾದ ಭಾರಿಭಾರಿ ಕಟ್ಟಡಗಳೆಲ್ಲಾ ಹಾಳಾದವು. ಶವಗಳು ನಾನಾ ಸ್ಥಿತಿಯಲ್ಲಿ ಬಿದ್ದು ಇರುತ್ತವೆ. ಹೆಣಗಳ ಮೇಲೆ ಆಭರಣಾದಿಗಳು ಹಾಗೆ ಹಾಗೇ ಇರುತ್ತವೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿದ್ದ ರೋಗಿಗಳನ್ನು ಮಾತ್ರ ಬಹು ಸಾಹಸಪಟ್ಟು ಪ್ರಾಣದೊರಸೆ ಕಾಪಾಡಿದರು. ವಿಶೇಷವಾಗಿ ಸಣ್ಣ ಸಣ್ಣ ಮಕ್ಕಳೂ ಮುದುಕಿಯರೂ ನೂರಾರು ಮಂದಿ ಪ್ರವಾಹಕ್ಕೆ ಸಿಕ್ಕಿಯೋ, ಮನೆ ಗೋಡೆಗಳ ಕೆಳಗೆ ಬಿದ್ದೋ ಸತ್ತುಹೋಗಿರುತ್ತಾರೆ. ಮನೆಯಲ್ಲಿ ಮಗುವನ್ನು ಅಪ್ಪಿಕೊಂಡಿರುವ ತಾಯಂದಿರು, ಮಕ್ಕಳನ್ನು ಎತ್ತಿಕೊಂಡಿರುವ ಗಂಡಸರು, ಹಾಗೆ ಹಾಗೇ ಸತ್ತುಹೋಗಿದಾರೆ. ಅನೇಕ ಸಂದರ್ಭಗಳಲ್ಲಿ ಹೆಣಗಳು ಗುರುತು ಸಿಕ್ಕದಂತೆ ಕಿತ್ತು ಕಿತ್ತುಹೋಗಿರುವವು. ಗೋಳಾಯಿಗಳು, ಕುದುರೆಗಳು, ನಾಯಿಗಳು, ಬೆಕ್ಕುಗಳು, ಕತ್ತೆಗಳು, ಈ ಮೊದಲಾದ ಮೂಗು ಪ್ರಾಣಿಗಳು ಲೆಕ್ಕವಿಲ್ಲದಷ್ಟು ಪ್ರವಾಹದಲ್ಲಿ ಸಿಕ್ಕಿ ಮುಳುಗಿ ಸತ್ತುಬಿದ್ದಿರುತ್ತವೆ. ಅಂತು ನೆನ್ನೆ ಮೊನ್ನೆ ಕೂಡಾ ಬಹಳ ಜನಭರಿತವಾಗಿ ತುಂಬಾ ಕಳಕಳಿಸುತ್ತಿದ್ದ ಭಾಗವೆಲ್ಲಾ ಸಂಪೂರ್ಣವಾಗಿ ನಾಶಹೊಂದಿರುವುದು. ನಷ್ಟವೂ ಕಷ್ಟವೂ ಪ್ರಾಣಹಾನಿಯೂ ಎಷ್ಟು ಘೋರವಾದದ್ದೋ ಇದರಿಂದ ಊಹಿಸಿಕೊಳ್ಳಬಹುದಾಗಿದೆಯಲ್ಲದೆ ವಿವರಿಸುವುದು ಸಾಧ್ಯವಲ್ಲ. ಮುಲ್ಲಾ ಪೇಟೆಯ ಕಡೆ ಪೂರ್ವಭಾಗದ ಪಟ್ಟಣವು ನಿರ್ನಾಮವಾಯಿತು. ಮೇಲೆ ಮೇಲೆ ಕಾಣುವ ಹೆಣಗಳನ್ನು ತೆಗೆದು ಸಾಗಿಸುತ್ತಿದಾರೆ. ಬಿದ್ದಿರುವ ಮನೆಗಳ ಅಡಿಯಲ್ಲಿ ಇನ್ನೂ ನೂರಾರು ಶವಗಳು ಅಡಗಿದೆ ಎನ್ನುವುದಕ್ಕೆ ಸಂಶಯವಿಲ್ಲ. ಪ್ರವಾಹವು ಉತ್ತರದಿಂದ ದಕ್ಷಿಣ ಕಡೆಗೆ ಬಂತೆಂಬೂ, ಒಂದು ಮೈಲಿ ದೂರ ಅರ್ಧ ಮೈಲಿ ಅಗಲಕ್ಕೆ ಉದ್ದಕ್ಕೂ ಪ್ರವಾಹವು ಎಲ್ಲವನ್ನೂ ಕೊಚ್ಚಿದುಬಿಟ್ಟಿತು ಮುಖ್ಯವಾಗಿ ಬಹಳ ಜನಭರಿತವಾಗಿದ್ದ ಪರನಪುಲ್ ಮೊಹಲ್ಲಾದಲ್ಲಿ ಕೆಲವು ಸಾವಿರ ಮನೆಗಳು ಕೆಲವು ನಿಮಿಷಗಳೊಳಗಾಗಿ ನೆಲಸಮನಾದವು. ಶವಗಳನ್ನು ಮಣ್ಣಿನ ಕೆಳಗಿಂದ ಬಿಡಿಸಿ ತೆಗೆಯುವುದು ಬಹಳ ಕಷ್ಟವೇ ಸರಿ. ಆದರೆ ಬಿದ್ದ ಮನೆಗಳನ್ನು ಶೋಧಿಸಿ ಸಾಮಗ್ರಿಗಳನ್ನು ಪ್ರತ್ಯೇಕ ಮಾಡುವುದಕ್ಕೆ ಹತ್ತಾರು ವರುಷಗಳೇ ಬೇಕಾಗಿದೆ. ಇಷ್ಟಲ್ಲಾ ಮುಸೀನದಿ ಜಲದಿಂದ ಹಿಡಿದು ಕೋಟೆಯ ಪತ್ತಿಮಗೋಡೆಗಳ ವರೆಗೆ ಇರುವಂಥಾ ಪ್ರದೇಶದಲ್ಲಿ ಸಂಭವಿಸಿರುತ್ತದೆ. ಈಗಲಾದರೋ ಆ ಪ್ರಾಂತ್ಯದಲ್ಲೆಲ್ಲಾ ಹೆಣಗಳು ಕೊಳೆತು ದುರ್ಗಂಧ ಬಡಿಯುತ್ತಿರುವುದು. ಆ ಹೆಣಗಳನ್ನು ಬೇಗ ಬೇಗನೆ ಸಾಗಿಸದೆ ಹೋದಲ್ಲಿ ವಾಂತಿಭೇದಿ ಮೊದಲಾದ ಬಾಧ್ಯಗಳು ಹುಟ್ಟುವುದಕ್ಕೂ, ಈಗ ಉಳಿದುಕೊಂಡಿರುವವರಲ್ಲಿ ಅನೇಕಾನೇಕರು ಮೃತಪಡುವುದಕ್ಕೂ, ರೋಗಾದಿಗಳು ಇತರ ಕಡೆಗಳಿಗೂ ಹರಡಿಕೊಳ್ಳುವುದಕ್ಕೂ ಅವಕಾಶವಾಗುತ್ತೆನ್ನುವುದರಲ್ಲಿ ಏನೇನೂ ಸಂಶಯವಿಲ್ಲ. ಸರ್ಕಾರದ ಅಧಿಕಾರಿಗಳು ಹೆಣಗಳನ್ನು ಕೀಳಿಸಿ ಗಾಡಿಗಳಲ್ಲಿ ದೂರ ಪ್ರದೇಶಕ್ಕೆ ಸಾಗಿಸಿ ರಾಶಿಹಾಕಿ ಸುಡಿಸಲಾರಂಭಿಸಿರುತ್ತಾರೆ. ಶವಗಳು ಇಂಥವರೆಂದು ಗುರುತುಹಿಡಿಯುವುದು ಸಾಧ್ಯವಲ್ಲ. ಒಂದು ಮನೆಯಲ್ಲಿ ಬಹು ದುಃಖಕರವಾದ ಸಂಗತಿ ನಡೆಯಿತು. ಒಬ್ಬ ಬ್ರಾಹ್ಮಣ ವಕೀಲನು ತನ್ನ ತಂದೆಯೂ ಇನ್ನು ನಾಲ್ವರೂ ಮನೆ ಬಿದ್ದು ಸತ್ತುಹೋದದ್ದನ್ನು ನೋಡಿ, ತನ್ನ ಮನೆ ಮುಂದಿದ್ದ ಮರದ ಮೇಲಕ್ಕೆ ಹತ್ತಿ ತಾನಾದರೂ ಬದುಕಿಕೊಳ್ಳಬೇಕೆಂದು ತನ್ನ ರುಮಾಲನ್ನು ಮೈಗೂ ಒಂದು ಕೊಂಬೆಗೂ ಬಲವಾಗಿ ಕಟ್ಟಿಕೊಂಡನು. ಆದರೆ ಪ್ರವಾಹವು ಅಷ್ಟು ಮೇಲಕ್ಕೂ ಹತ್ತಿ ಅವನನ್ನು ಒಡಿದುಕೊಂಡು ಹೋಗುವಂತೆ ಆದಾಗ ಅವನು ತನ್ನ ರುಮಾಲಿನ ಕಟ್ಟನ್ನು ಬಿಚ್ಚಿ ಇನ್ನೂ ಮೇಲಕ್ಕೆ ಹತ್ತಿಹೋಗಬೇಕೆಂದು ಪ್ರಯತ್ನಪಟ್ಟನು. ಆದರೆ ಗಂಟುಬಿಚ್ಚುವಷ್ಟರಲ್ಲೇ ಪ್ರವಾಹವು ಅವನನ್ನು ಮುಳುಗಿಸಿ, ಮರದ ಕೊಂಬೆಯಲ್ಲಿ ತಗಲಿಕೊಂಡಿದ್ದಂತೆಯೇ ಸತ್ತುಹೋದನು. ಮರುದಿನ ಬೆಳಿಗ್ಗೆ ಅವನ ಶವವು ಗಿಡದ ಮೇಲೆ ನೇತಾಡುತ್ತಿತ್ತು. ಈ ಸಂಗತಿಯನ್ನು ಆ ವಕೀಲನ ಸಹೋದರನೇ ಹೇಳಿಕೊಂಡು ಗೋಳಾಡುತ್ತಿದಾನೆ.

ಅರೆವಾಸಿ ಬಿದ್ದು ಪ್ರಾಣಾಪಾಯವನ್ನುಂಟುಮಾಡುವ ಸ್ಥಿತಿಯಲ್ಲಿರುವಂಥಾ ಮನೆಗಳ ಮತ್ತು ಬಂಗಲೆ ಮೊದಲಾದ ದೊಡ್ಡ ಕಟ್ಟಡಗಳನ್ನೆಲ್ಲಾ ಆನೆಗಳಿಂದ ದೊಬ್ಬಿಸಿ ಕೆಡವುತ್ತಿದಾರೆ. ರೆಸಿಡೆನ್ಸಿ ಬಂಗಲೆಯ ಬಳಿ ಒಂದು ಹಳ್ಳದ ಕೊಟ್ಟೆಯಲ್ಲಿ ಹನ್ನೊಂದು ಶವಗಳು ಸಿಕ್ಕಿದವು. ನಾಗಪಲ್ಲಿಗೂ ಲಿಂಗಂಪಲ್ಲಿಗೂ ನಡುವೆ ರೈಲ್ ರಸ್ತೆಯು ಕಿತ್ತು ಕೊಚ್ಚಿ ಹೋಯಿತು. ಪ್ರವಾಹ ಬಂದಾಗ ಅನೇಕಾನೇಕ ಜನರೂ ಸ್ತ್ರೀಯರು ಓಡಿ ಹೋಗಿ ರೈಲ್ ಸ್ಟೇಷನ್ ಕಟ್ಟಡದಲ್ಲಿ ಆಶ್ರಯವನ್ನು ಹೊಂದಿದರು. ಅಫ್ಜಲ್‌ಗಂಜಿನ ಕಡೆ ಮನೆಗಳನ್ನು ಶೋಧಿಸುತ್ತಿದ್ದಾಗ ಒಂದು ಮನೆಯಲ್ಲಿ [illegible] ಜನರೂ ೧ ಮಗುವೂ ಸಂಕಟ ಪಡುತ್ತಿದ್ದರು. ಅವರನ್ನೆಲ್ಲಾ ಬಹು ಸಾಹಸಪಟ್ಟು ಹೊರಕ್ಕೆ ಕರೆದು ತಂದ ಒಡನೆಯೇ ಆ ಮನೆಯು ಅನಾಮತ್ತು ಬಿದ್ದು ನೆಲಸಮನಾಯಿತು. ಅವರನ್ನು ಹೊರಕ್ಕೆ ಸಾಗಿಸುವುದು ಸ್ವಲ್ಪ [illegible] ಕಾಲವಾಗಿದ್ದಲ್ಲಿ ಅಷ್ಟು ಜನರೂ ಅನ್ಯಾಯವಾಗಿ ಮೃತಪಡುತ್ತಿದ್ದರು. ಅಫ್ಜಲ್‌ಗಂಜಿನ ಆಸ್ಪತ್ರೆಯ ಗೋಡೆಗಳು ಮಾತ್ರ ನಿಂತಿವೆ; ಒಳಗಿದ್ದ ಸಮಸ್ತ ಸಾಮಾನುಗಳೂ [illegible] ಔಷಧಗಳೂ ಹಾಳಾದವು.

ವೈಸ್‌ರಾಯ್ ಲಾರ್ಡ್ ಮಿಂಟೋರವರು ಈ ಸುದ್ದಿಯನ್ನು ಕೇಳಿ ತುಂಬಾ ಪರಿತಾಪ ಪಟ್ಟು ನೈಜಾಮರವರಿಗೆ ತಮ್ಮ ವ್ಯಸನವನ್ನು ಸಿಂಲಾ ಪಟ್ಟಣದಿಂದ ತಂತೀವರ್ತಮಾನಕೊಟ್ಟು ತಿಳಿಸಿರುತ್ತಾರೆ. ಏನೆಂದರೆ—"ಹೈದರಾಬಾದ್ ಟೌನ್‌ಗೆ ಸಂಭವಿಸಿದಂಥಾ ದುರ್ದಶೆಯನ್ನು ಪ್ರಾಣ ನಷ್ಟವಾದುದನ್ನೂ ಕೇಳಿ ನಾನು ತುಂಬಾ ವ್ಯಸನಾಕ್ರಾಂತನಾಗಿರುತ್ತೇನೆ. ನಿಮ್ಮ ವಿಷಯದಲ್ಲಿ ನಾನು ಹೃದಯಪೂರ್ವಕವಾಗಿ ಸಂತಾಪಪಡುತ್ತೇನೆಂದು ತಿಳಿಯಿರಿ." ಈಚೆಗೆ ಹೈದರಾಬಾದಿನ ಕೆಲವು ಅಧಿಕಾರಿಗಳೇ ಸೇರಿ, ಕಷ್ಟಪರಿಹಾರಾರ್ಥವಾದ ಧರ್ಮದ ಫಂಡನ್ನು ಕೂಡಿಸಿ, ಕಷ್ಟಪಡುತ್ತಿರುವ ಪ್ರಜೆಗಳಿಗೆ ಸಹಾಯ ಮಾಡಲಾರಂಭಿಸಿದಾರೆ.

ಸೆಪ್ಟೆಂಬರ್ ತಾ. ೩೦ ನೇ ಬುಧವಾರ ಬಂದ ವರ್ತಮಾನವೇನೆಂದರೆ.—ಸರ್ಕಾರದ ಅಧಿಕಾರಿಗಳೂ ಪೋಲೀಸಿನವರೂ ಸೈನಿಕರೂ ಗುಂಪು ಗುಂಪಾಗಿ ಪಟ್ಟಣದ ಅನೇಕ ಕಡೆಗಳಲ್ಲಿ ಭೂಮಿಯನ್ನು ಶೋಧಿಸುವ ಕೆಲಸದಲ್ಲಿದಾರೆ. ಪ್ರಾಣ ಉಳಿಸಿಕೊಳ್ಳುವುದಕ್ಕೋಸ್ಕರ ಮರಗಳ ಮೇಲೂ, ಮಸೀತಿ ದೇವಸ್ಥಾನಗಳ ಮೇಲೂ, ದೊಡ್ಡ ಮತ್ತು ಎತ್ತರವಾದ ಕಟ್ಟಡಗಳ ಮೇಲೂ, ಗುಡ್ಡಗಳಂತಿರುವ ಎತ್ತರವಾದ ಪ್ರದೇಶಗಳಲ್ಲೂ ಹೋಗಿ ಸೇರಿಕೊಂಡಿದ್ದಂಥಾ ನೂರಾರು ಪ್ರಜೆಗಳನ್ನು ಅಲ್ಲಿಂದ ಕರೆತಂದು ಅನ್ನಪಾನಗಳನ್ನು ನಡಿಸುತ್ತಿದಾರೆ. ಘೌಸಿಗೂಡಾ ಎಂಬ ಗ್ರಾಮಕ್ಕೆ ಗ್ರಾಮವೇ ಹಾಳಾಯಿತು. ಅದರಲ್ಲಿದ್ದ ೧,೦೦೦ ಮನೆಗಳೂ ಜೋಪಡಿಗಳೂ ಸಂಪೂರ್ಣವಾಗಿ ಕಳ್ಳು ಬಿದ್ದುಕೊಂಡವು. ಅಲ್ಲಿ ಹೊರಡುತ್ತಿರುವ ದುರ್ಗಂಧವು ಸಹಿಸಲಶಕ್ಯವಾಗಿರುತ್ತದೆ. ಒಂದು ಕಡೆ ಅಗೆದು ತೆಗೆಯುತ್ತಿರುವಲ್ಲಿ ಹನ್ನೆರಡು ಶವಗಳು ರಾಶಿಯಾಗಿ ಬಿದ್ದಿದ್ದವು. ಅವರ ರಕ್ತಸಂಬಂಧಿಗಳು ಎದುರಿಗೆ ಕುಳಿತು ರೋದನ ಮಾಡುತ್ತಿದಾರೆ. ಇನ್ನೊಂದು ಕಡೆ ಹಳ್ಳದಲ್ಲಿ ಮೂರು ಹೆಣಗಳು ಸಿಕ್ಕಿದವು. ಮತ್ತೊಂದು ಸ್ಥಳದಲ್ಲಿ ಬಹಳ ಸಾಹಸಪಟ್ಟು ಮಣ್ಣು ಬಿಡಿಸಿ, ಕುಟುಕು ಪ್ರಾಣವಿದ್ದ ಏಳು ಜನ ಹೆಂಗಸರನ್ನು ಬದುಕಿಸಿದರು. ಹೆಣಗಳನ್ನು ಗಾಡಿಗಳಲ್ಲಿ ಭರ್ತಿ ಮಾಡಿ ಸಾಗಿಸುತ್ತಿದಾರೆ.

ಇತ್ತಲಾಗಿ ಮನೆಮಠಗಳನ್ನೂ ಸರ್ವಸ್ವವನ್ನೂ ಕಳೆದುಕೊಂಡು, ಹೊಟ್ಟೆಗಿಲ್ಲದೆ ಅಲೆಯುತ್ತಿರುವವರು ಅಂಗಡಿ ಮುಂಗಟ್ಟುಗಳನ್ನು ನುಗ್ಗಿ ಲೂಟಿ ಮಾಡಲಾರಂಭಿಸಿದಾರೆ. ಅನೇಕ ಸರ್ಕಾರಿ ಅಧಿಕಾರಿಗಳು ಈ ಅನಾಹುತದಿಂದ ೧೦,೦೦೦ ಕ್ಕಿಂತಲೂ ಹೆಚ್ಚು ಪ್ರಜೆಗಳು ಮೃತಪಟ್ಟಿದಾರೆಂದು ಹೇಳುತ್ತಾರೆ. ಅಂತು ಹತ್ತು ಚದರ ಮೈಲಿ ವಿಸ್ತೀರ್ಣವುಳ್ಳ ಈ ಪ್ರದೇಶದಿಂದ ಬೇಗನೆ ಹೆಣಗಳನ್ನು ಸಾಗಿಸದೆ ಹೋದರೆ ಬಾಧ್ಯಗಳು ಬೇರೆ ಹುಟ್ಟಿ ಪ್ರಜೆಗಳು ಇನ್ನೂ ಲಯವಾದಾರೆನ್ನುವುದಕ್ಕೆ ಸಂಶಯವಿಲ್ಲ.

ಹೈದರಾಬಾದಿನಲ್ಲಿ ಟೆಲಿಗ್ರಾಫ್ ಆಫೀಸು ಮತ್ತೆ ಪ್ರಾರಂಭವಾಯಿತು. ಹಿಂದು ಸ್ಥಾನದ ಇತರ ಕಡೆಗಳಿಂದ ಅನೇಕಾನೇಕರು ತಮ್ಮ ನೆಂಟರಿಷ್ಟರು ಕ್ಷೇಮವಾಗಿದಾರೆಯೇ ಎಂದು ಗಾಬರಿಪಟ್ಟು ನೂರಾರು ತಂತೀ ವರ್ತಮಾನಗಳನ್ನು ಕೊಟ್ಟು ಕೇಳುತ್ತಿರುವರು. ನೂರಾರು ಕಾಗದಗಳು ಬಾವತಿ ಆಗದೆ ಬಿದ್ದುಕೊಂಡಿವೆ. ತಂತೀ ವರ್ತಮಾನಗಳನ್ನು ತಲಪಿಸುವ ಸ್ಥಾನದಲ್ಲಿ ಅರೆವಾಸಿ ಜನರು ಎಲ್ಲಿದಾರೋ ತಿಳಿಯದು. ಉಳಿದಿರುವವರನ್ನು ಕೇಳಿದರೆ ಅವರು— "ಸ್ವಾಮಿ, ನಾವು ಯಾರಿಗೆ ಬಾವತಿ ಮಾಡೋಣ? ಯಾವ ಬೀದಿಯೂ ಯಾವ ಮನೆಯೂ ಯಾವ ಮನುಷ್ಯನೂ ಕಾಣುವದಿಲ್ಲವಲ್ಲಾ! ಎಲ್ಲಾ ಹಾಳು ಬಿದ್ದಿರುತ್ತಿದೆ" ಎಂದು ಹೇಳುತ್ತಾರೆ. ನವಾಬ್ ಸಾಲಾರ್ ಜಂಗರ ಅರಮನೆಯನ್ನು ಹೋಗಿ ನೋಡಿದರೆ ಅದರಲ್ಲಿ ಅರ್ಧಪಾಲು ನಾಶವಾಗಿದೆ. ಆ ದೊಡ್ಡ ಮನುಷ್ಯರೊಬ್ಬರಿಗೇ ಮೂರು ಲಕ್ಷ ರೂಪಾಯಿನ ಮಾಲುಗಳು ನಷ್ಟವಾಗಿರುತ್ತವೆ.

ಕಲ್ಕತ್ತಾಪಟ್ಟಣದ ಪುರಾಧ್ಯಕ್ಷರು ಹೈದರಾಬಾದಿನ ಪ್ರಜೆಗಳ ಕಷ್ಟನಿವಾರಣೆಗಾಗಿ ಧರ್ಮದ ಫಂಡನ್ನು ಕೂಡಿಸುತ್ತೇವೆಂದು ತಿಳಿಸಿದಾರೆ. ಹೈದರಾಬಾದಿನ ನೈಜಾಮರವರು ಅಧಿಕಾರಿಗಳಿಗೆ ಅಪ್ಪಣೆಯನ್ನು ಕೊಟ್ಟು ಒಂದು ಧರ್ಮದ ಫಂಡನ್ನು ಪ್ರಾರಂಭಿಸುವಂತೆ ಮಾಡಿದರು. ಆಗಲೇ ಕೆಲವು ಕಡೆಗಳಲ್ಲಿ ಧರ್ಮದ ಅನ್ನಸತ್ರಗಳನ್ನು ಹಾಕಿಸಿ ನಡಿಸುತ್ತಿದಾರೆ. ಚದರಘಾಟ್ ಪಬ್ಲಿಕ್ ಉದ್ಯಾನದಲ್ಲಿ ಜನರು ವಾಸಮಾಡುವುದಕ್ಕೋಸ್ಕರ ದೊಡ್ಡ ಚಪ್ಪರವನ್ನು ಕಟ್ಟಿಸಿದ್ದಾರೆ. ಸುತ್ತುಮುತ್ತಲೂ ಇರುವ ಗ್ರಾಮಾಂತರಗಳಲ್ಲಿ ಎಷ್ಟು ಪ್ರಜೆಗಳು ನಷ್ಟವಾದರೋ ಇನ್ನೂ ತಿಳಿದು ಬಂದಿಲ್ಲ.

ಅಕ್ಟೋಬರ್ ತಾ. ೧ ರಲ್ಲಿ ಬಂದ ವರ್ತಮಾನ.—ಹೈದರಾಬಾದಿನಿಂದ ಸಿಕಂದ್ರಾಬಾದಿಗೆ ಹೋಗುವ ರಸ್ತೆಯಲ್ಲಿ ಸಿಕ್ಕುವ ಬೇಗಂಪೇಟೆ ಕಬ್ಬಿಣ ಸೇತುವೆಯು ಮುರಿದು ಬಿದ್ದು ಕೊಚ್ಚಿ ಹೋಯಿತು. ಜಗ್ಗಿ ಆ ಸೇತುವೆಯ ಮೇಲೆ ಹೋಗುತ್ತಿದ್ದ [illegible] ಕುದುರೆ ಗಾಡಿಯು ಪ್ರವಾಹದ ಪಾಲಾಯಿತು. ಕುದುರೆಗಳೂ ಗಾಡಿಯವನೂ, ಕುದುರೆಯವನೂ ಮೃತಪಟ್ಟರು. ಆ ಮೇಲೆ ೧ ಮೈಲಿ ದೂರದಲ್ಲಿ ಮುರಿದು ಬಿದ್ದಿದ್ದ ಗಾಡಿ ಮಾತ್ರ ಸಿಕ್ಕಿತು. ವರ್ತಕರು ಇದೇ ಸಮಯವೆಂದು ಬಹಳ ಧಾರಣೆಯನ್ನು ಹೆಚ್ಚಿಸಿ ರೂಪಾಯಿಗೆ ೪ ಸೇರು ಬಿಕರಿಮಾಡುತ್ತಿದಾರೆ. ಜೋಪಡಿಗಳಿಗೂ ಬಾಡಿಗೆ ದರಗಳು ಬಹಳವಾಗಿ ಹೆಚ್ಚಿರುತ್ತವೆ. ಬಡಬಗ್ಗರ ಕಷ್ಟವೂ ಸಂಕಟವೂ ಅಪಾರವಾಯಿತು. ನೀರಿನಲ್ಲಿ ಸಿಕ್ಕಿ ಮುಗ್ಗಲಾದಂಥಾ ಧಾನ್ಯವನ್ನು ರೂಪಾಯಿಗೆ ೬೦ ಸೇರಿನಂತೆ ಬಿಕರಿಮಾಡಿ ಹಣ ಕೂಡಿಸುತ್ತಿದ್ದದ್ದನ್ನು ನೋಡಿ ಪೋಲೀಸ್ ಆಫೀಸರವರು ನಿಲ್ಲಿಸಿದರು. ಬಹಳ ಬೆಲೆಯುಳ್ಳ ವಸ್ತುಗಳಿಂದ ಕೂಡಿದ ನವಾಬ್ ಫೈಯಜ್ ಅಲ್ಲಿ ಖಾನ್ [illegible] ಬಂಗಲೆಯು ಸಂಪೂರ್ಣವಾಗಿ ನಾಶಹೊಂದಿ ಲಕ್ಷಾಂತರ ರೂಪಾಯಿ ನಷ್ಟವಾಯಿತು. ಸರ್ಕಾರದವರು ಎಷ್ಟು [illegible] ತಮ್ಮ [illegible] ಹೋಗಲಾರದ ಮನೆಗಳ [illegible] ನಗನಾಣ್ಯಗಳೆಲ್ಲಾ ಕೊಚ್ಚಿಹೋದವು. ಕೂಲಿಕಾರರು [illegible] ಕಷ್ಟ ಸಿಕ್ಕಿದರೂ ಎಸಕ್ಕೆ ಒಂದು ರೂಪಾಯಿ ಕೇಳುವರು. [illegible] ಸಂಬಳವನ್ನು ಕೊಡುವರು [illegible]

ನೈಜಾಮರವರು ಬಹಳ ಕರುಣೆಯಿಂದ ತಮ್ಮ [illegible] ಅರಮನೆಗಳನ್ನು ಬಡಬಗ್ಗರ ವಾಸಕ್ಕೆ ಬಿಟ್ಟುಕೊಟ್ಟಿದಾರೆ. [illegible] ತುಂಬಾ ಜನರು ಭರ್ತಿಯಾಗಿ ಸೇರಿಕೊಂಡಿರುವರು. [illegible] ಒರೆ ಕೂಟದ ಅನ್ನ ಹಾಕಿಸುತ್ತಿದಾರೆ. ಹಿಂದುಗಳಿಗೂ ಮುಸಲ್ಮಾನರಿಗೂ ಪ್ರತ್ಯೇಕವಾದ ಏರ್ಪಾಡಾಗಿದೆ.

ಚಕ್ರವರ್ತಿ ಸಾರ್ವಭೌಮರವರಿಗೆ ಈ ಸುದ್ದಿ [illegible] ಅವರಿಗೆ ತುಂಬಾ ವ್ಯಸನವನ್ನುಂಟುಮಾಡಿತು. ಅವರು ನೈಜಾಮರವರಿಗೆ ತಂತೀ ವರ್ತಮಾನಕೊಟ್ಟು ತಮ್ಮ ಮನೋವ್ಯಥೆಯನ್ನು ತಿಳಿಸಿದ್ದಾರೆ.

ಅಕ್ಟೋಬರ್ ತಾ. ೨ ರಲ್ಲಿ ಬಂದ ವರ್ತಮಾನ.—ಬೇಗ ಬೇಗನೆ ಹೆಣಗಳನ್ನು ಗಾಡಿಗಳ ಮೇಲೆ ಹೊರಿಸಿ ದೂರ ಪ್ರದೇಶಗಳಿಗೆ ಸಾಗಿಸಿ ಒಟ್ಟೊಟ್ಟಾಗಿ ಸುರಿಸಿ ಸುಡಿಸುತ್ತಿದಾರೆ. ಅದರ ಉರಿಯು ರಾತ್ರಿಹೊತ್ತು ಅಂತರಿಕ್ಷದಲ್ಲಿ ಪ್ರಕಾಶಮಾನವಾಗಿ ಕಾಣಿಸುವುದು. ಹೊಗೆಯೂ ದುರ್ಗಂಧವೂ ಅಪಾರವಾಗಿದೆ. ನೈಜಾಮರವರು ಸರ್ಕಾರಿ ಜಾಹೀರಾತನ್ನು ಪ್ರಕಟಿಸಿ, ಹೈದರಾಬಾದ್ ಪಟ್ಟಣಕ್ಕೆ ಸಂಭವಿಸಿದ ಮಹಾ ದುಃಖಕರವಾದ ವಿಪತ್ತನ್ನು ವಿವರಿಸಿ ಕಷ್ಟಕ್ಕೆ ಸಿಕ್ಕಿದಂಥಾ ಸರ್ಕಾರಿ ನೌಕರರಿಗೆಲ್ಲಾ ಒಂದು ತಿಂಗಳ ಸಂಬಳವನ್ನು ಅಡ್ವಾನ್ಸು ಕೊಡತಕ್ಕದ್ದೆಂತಲೂ, ಹತ್ತು ದಿನಗಳ ತನಕ ಎಲ್ಲಾ ಕೋರ್ಟು ಕಚೇರಿಗಳನ್ನೂ ಮುಚ್ಚಿಬಿಡಬೇಕೆಂತಲೂ ಅಪ್ಪಣೆ ಕೊಡಿಸಿದಾರೆ. ಈ ಸಂಸ್ಥಾನದಲ್ಲಿ ಯಾವ ವರ್ತಮಾನ ಪತ್ರಿಕೆಯೂ ಪ್ರಕಟಿಸಲಾಗದು ಎಂಬ ವಿಧಿ ಇರೋಣದರಿಂದ, ಈ ಸಂದರ್ಭದಲ್ಲಿ ಕಷ್ಟನಷ್ಟಗಳು ಎಲ್ಲೆಲ್ಲಿ ಎಷ್ಟೆಷ್ಟು ಹುಟ್ಟಿಗೆ ಪ್ರಾಪ್ತವಾಗಿರುವುವೋ ಯಾರಿಗೂ ತಿಳಿಯುವುದು ಅಸಾಧ್ಯವಾಗಿದೆ. ಹತ್ತು ಸಾವಿರ ಪ್ರಜೆಗಳು ಅಕಾಲಮರಣವನ್ನು ಹೊಂದಿದರೆಂದು ಮೊದಲು [illegible]. ಈಗ ವಿಚಾರಿಸುವಲ್ಲಿ ಮೃತಪಟ್ಟವರ ಸಂಖ್ಯೆಯು ೫೦,೦೦೦ ಕ್ಕೆ ಏನೇನೂ ಕಡಮೆಯಿಲ್ಲವೆಂದು ಗೊತ್ತಾಗುವುದು. [illegible] ಧಾನ್ಯಗಳನ್ನು ರಾಶಿರಾಶಿಯಾಗಿ ಸುರಿಸಿ ಸುಡಿಸುತ್ತಿದಾರೆ. ಒಂದು ಕಡೆ ಶೋಧನೆಮಾಡುತ್ತಿರುವಲ್ಲಿ ೯೦ ಗಂಟೆ ಹೊತ್ತಿನ ಮನೆ ಕೆಳಗೆ ಸಿಕ್ಕಿ ನರಳುತ್ತಿದ್ದ ಒಬ್ಬ ಮನುಷ್ಯನು ಸಿಕ್ಕಿದನು. ಅವನನ್ನು ಉಪಚರಿಸುತ್ತಿದಾರೆ. ಬದುಕಬಹುದಾಗಿ ಕಾಣುವುದು.

ಸೇತುವೆ ರಸ್ತೆ ಮೊದಲಾದವುಗಳನ್ನು ಬೇಗ ಬೇಗನೆ ದುರಸ್ತು ಮಾಡಿಸುತ್ತಿದಾರೆ. ಆಹಾರ ಧಾನ್ಯಗಳು ಎಲ್ಲಾ ಕಡೆಗಳಲ್ಲೂ ಮುಗಿದುಹೋದವು. ಜಿವ್ ಮುತ್ತಾ ಕೆರೆಯ ಬಳಿ ದೊಡ್ಡ ಕೊಳಾಯಿಗಳು ಒಡೆದು ಹೋದದರಿಂದ ಸಿಕಂದ್ರಾಬಾದ್ ಪಟ್ಟಣ

ಕ್ಕೆ ಕುಡಿಯುವ ನೀರಿಲ್ಲದೆ ಕಷ್ಟಪಡುತ್ತಿದಾರೆ. ವೈರುಪಕ್ಷಿಗಳು ಗುಂಪಾಗಿ ಕೊಚ್ಚಿ ಹೋದವು. ಹೈದರಾಬಾದಿನಲ್ಲಿ ಬ್ರಿಟಿಷ್ ರೆಸಿಡೆಂಟರು ಮುಂದಾಳಾಗಿ ನಿಂತು ಸಭೆ ನಡಿಸಿ ಕಷ್ಟಪರಿಹಾರದ ಫಂಡನ್ನು ಕೂಡಿ ಸುವುದಕ್ಕೆ ಪ್ರಾರಂಭಮಾಡುವರು. ಮದರಾಸ್ ಪಟ್ಟಣದ ಪ್ರಜೆಗಳೂ ಚಂದಾ ಎತ್ತಿ ಕಳುಹಿಸಲಾರಂಭಿಸಿದಾರೆ. ಸಿಂಲಾ ಪಟ್ಟಣದಲ್ಲಿ ಧರ್ಮ ಚಂದಾ ಎತ್ತಿ ಪ್ರತಿ ದಿನವೂ ಸೇರಿದಷ್ಟು ಹಣವನ್ನು ಥಾರ್ಜಿಲ್ಲದೆ ಟೆಲಿಗ್ರಾಫ್ ಮೂಲಕ ಹೈದರಾಬಾದಿಗೆ ರವಾನೆಮಾಡುತ್ತಾ ಬರುವರು.

ಅಕ್ಟೋಬರ್ ತಾ. ೩ ರಲ್ಲಿ ಬಂದ ವರ್ತಮಾನ:—ಹೈದರಾಬಾದ್ ಸಂಸ್ಥಾನದ ನೈಜಾಂ ದೊರೆಯವರು ಥಾಲಕ್ನಾಮಾ ಅರಮನೆಯಿಂದ ಮೋಟಾರ್ ಗಾಡಿಯಲ್ಲಿ 'ಅಪ್ಜಲ್‌ಗಂಜ್' ಸೇತುವೆಯ ಬಳಿಗೆ ದಯಮಾಡಿ, ತಮ್ಮ ಕಣ್ಣುಮುಟ್ಟ ಕೂಡಿ ಕಂಡುಬಂದ ಹಾನಿ ನಷ್ಟಗಳನ್ನೂ ಅನಾಹುತಗಳನ್ನೂ ಪರಾಂಬರಿಸಿ ಕಣ್ಣೀರಿಟ್ಟು ಗೋಳಾಡಿದರು. ಹೈದರಾಬಾದಿನಲ್ಲಿ ಆಹಾರಧಾನ್ಯಗಳು ಮುಗಿದುಹೋದ ವು. ಸಿಕಂದ್ರಾಬಾದಿನಿಂದ ಅಲ್ಲಿಗೆ ಬರಬೇಕು. ಅಲ್ಲಿನ ವರ್ತಕರು ಅಕ್ಕಿಯನ್ನು ಪಲ್ಲಾಕ್ಕೆ ೩೦ ರೂಪಾಯಿ ಮಾಡಿರುತ್ತಾರೆ. ಮಹಮದೀಯರಿಗೆ ಐದು ಕಡೆಗಳಲ್ಲೂ ಇತರ ಪಂಗಡದವರಿಗೆ ಐದು ಕಡೆಗಳಲ್ಲೂ ಧರ್ಮದ ಅನ್ನಸತ್ರಗಳನ್ನು ಹಾಕಿಸಿದಾರೆ. ಜನಾನಾ ಸ್ತ್ರೀಯರಿಗೂ ಜೀವನಕ್ಕೆ ಅನುಕೂಲಮಾಡಿಕೊಡಲಾಗಿದೆ.

ಮೈಸೂರು ದಸರಾ ವ್ಯವಸಾಯದ ಮತ್ತು ಕೈಗಾರಿಕೆಯ ಪ್ರದರ್ಶನವು.

ಮೈಸೂರು ದಸರಾ ವ್ಯವಸಾಯದ ಮತ್ತು ಕೈಗಾರಿಕೆಯ ವಸ್ತುಪ್ರದರ್ಶನವು ಕಳೆದ ಬುಧವಾರ ಸಾಯಂಕಾಲ ೪ ಗಂಟೆಗೆ ತೆರೆಯಲ್ಪಟ್ಟಿತು. ಕಳೆದ ವರುಷದಂತೆಯೇ ಪ್ರದರ್ಶನವು ರಿಜರ್ವ್ ಪೊಲೀಸ್ ಲೈನ್ಸಿನಲ್ಲಿ ನಡಿಸಿದ್ದರಿಂದ ಪ್ರದರ್ಶನಶಾಲೆಯು ನಾನಾ ಬಣ್ಣದ ಬಾವುಟಗಳಿಂದಲೂ ತೋರಣ ಮೊದಲಾದ್ದುಗಳಿಂದಲೂ ಅಲಂಕರಿಸಲ್ಪಟ್ಟು ನೋಡುವವರಿಗೆ ನೇತ್ರಾನಂದವನ್ನುಂಟುಮಾಡುತ್ತಿದೆ. ನಡುವೆ ಇರುವ ಅಂಗಳದಲ್ಲಿ ಒಂದು ದೊಡ್ಡ ಚಪ್ಪರವನ್ನು ಹಾಕಿ, ಅದರಲ್ಲಿ ಅಂತಸ್ತುಗಳ ಮೇಲೆ ಪುಷ್ಪಗಳನ್ನು ನಾನಾವಿಧ ಬಣ್ಣ ದೇಶದ ಮತ್ತು ಇಂಗ್ಲಿಷ್ ತರಕಾರಿಗಳನ್ನೂ ಇಟ್ಟಿದ್ದರು. ಅನೇಕ ವಿಧ ಸುಂದರವಾದ ಹೂವುಗಳಿಂದ ಕಟ್ಟಿದ ತುರಾಯಿಗಳೂ, ಹಾರಗಳೂ, ಕತ್ತರಿಸಿ [illegible] ಕುಂಡಗಳಲ್ಲಿ ನೆಟ್ಟಿದ್ದ ನಾನಾ ಬಣ್ಣದ ಹೂವುಗಳೂ, ಮೈಸೂರು ಗವರ್ನ್‌ಮೆಂಟು [illegible] ಸಕ್ಕರೆ [illegible] ಬಹು ಸುಂದರವಾಗಿ [illegible] ಕಳುಹಿಸಿದ್ದ [illegible] ಮತ್ತು ಹುಣ್ಣು ಕಾಯಿಗಳನ್ನು [illegible] ಸಕ್ಕರೆಯಲ್ಲಿ [illegible] ಬಹಳ ಚನ್ನಾಗಿದ್ದವು. [illegible] ಮತ್ತು [illegible] ಮಹಾರಾಜರ [illegible] ತೋಟ [illegible] ಗಾರ್ಡನ್ [illegible] ಗಿಡಗಳನ್ನು [illegible] ನೋಡುವುದಕ್ಕೆ [illegible] ಉಂಟುಮಾಡುತ್ತಿದ್ದವು [illegible] ಗೂ ಗೂ [illegible] ಬೆಳೆದಿದ್ದ [illegible] ಕತ್ತರಿ [illegible] ಇನಾಮು ಮಾಡಿದರು. [illegible] ಮ|| [illegible] ರಾಮರಾಯರು ಕಳುಹಿಸಿದ್ದ [illegible] ಕಮಲ [illegible] ಕಳುಹಿಸಿದ್ದ [illegible] ಶ್ಲಾಘನೀಯವಾಗಿದ್ದವು. [illegible] ನೋಡದ ಇದ್ದ ಬಂಗಾರದ [illegible] ಒಂದು [illegible] ಬಹಳ ಗಾತ್ರವಾದ ಕುಂಬಳಕಾಯಿಗಳೂ ನೋಟಕರ ದೃಷ್ಟಿಯನ್ನು ಆಕರ್ಷಿಸಿದವು. ಭತ್ತದ ಮರವೋ ಎನ್ನುವಷ್ಟು ಎತ್ತರವಾಗಿ ಬೆಳೆದಿದ್ದ ಭತ್ತದ ಪೈರು ಬಹು ಆಶ್ಚರ್ಯಕರವಾದ ಪ್ರದರ್ಶನವಸ್ತುವಾಗಿತ್ತು. ಕೋಸು ಗಡ್ಡೆ, ಪಡವಲಕಾಯಿ, ಹಾಗಲಕಾಯಿ ಮತ್ತು ಇತರ ದೇಶೀಯ ಮತ್ತು ಇಂಗ್ಲಿಷ್ ಕಾಯಿಪಲ್ಯಗಳೂ ಬಹಳ ರಮ್ಯವಾಗಿದ್ದವು. ಮೊದಲನೇ ಮಹಾರಾಜಕುಮಾರಿಯವರ ಮ್ಯಾರ್ಷಲ್ ತೋಟದಿಂದ ಕಳುಹಿಸಿದ ಸುಮಾರು ಮರಸೇಬು ತರಹ ಹಣ್ಣುಗಳಿಸಿದ ಕಾಯಿಗಳು ನೋಟಕರಲ್ಲಿ ಆಶ್ಚರ್ಯವನ್ನುಂಟುಮಾಡುತ್ತಿದ್ದವು. ಮಹಾರಾಜಾ ಕಾಲೇಜ್ ಪ್ರಿನ್ಸಿಪಾಲರಾದ ಮ|| ಜೆ. ವೈಯರ್ ಸಾಹೇಬರ ಪತ್ನಿಯು ಕಳುಹಿಸಿಕೊಟ್ಟಿದ್ದ ಗಾಜಿನ ಕುಂಡದಲ್ಲಿ ಕತ್ತರಿಸಿದ ಹೂವುಗಳಿಗೂ, ಮಣ್ಣಿನ ದೊಡ್ಡ ಕುಂಡಗಳಲ್ಲಿ ಬೆಳೆಸಿದ್ದ ಕ್ರೋಟನ್ ಗಿಡಗಳಿಗೂ ಬಹುಮಾನ ಕೊಡಲಾಯಿತು. ಆ ದಿನ ಬೆಳಿಗ್ಗೆ ಸುಮಾರು ಎಂಟುಗಂಟೆಯ ಸಮಯದಲ್ಲಿ ಮಹಾರಾಣಿಯವರೂ ಯುವರಾಜರೂ ಇತರ ರಾಜವರ್ಗದವರೂ ಪ್ರದರ್ಶನಶಾಲೆಗೆ ದಯಮಾಡಿಸಿದ್ದರು. ಪ್ರದರ್ಶನಶಾಲೆಯ ಬಾಗಿಲಲ್ಲಿ ರೆವಿನ್ಯೂ ಕಮಿಷನರ್ ಮ|| ಟಿ. ರಂಗಸ್ವಾಮಿ ಐಯಂಗಾರರೂ ಡೆಪ್ಯುಟಿ ಕಮಿಷನರ್ ಮ|| ಎಂ. ಕಾಂತರಾಜೇ ಅರಸಿನವರೂ ಅವರನ್ನು ಎದುರ್ಗೊಂಡು ಒಳಕ್ಕೆ ಬಿಜಮಾಡಿಸಿದರು. ಅವರು ಪ್ರದರ್ಶನವನ್ನೆಲ್ಲಾ ಪರಾಂಬರಿಸಿ ಬಹಳ ಸಂತೋಷಪಟ್ಟು, ಹಣ್ಣು ಹಂಪಲುಗಳಲ್ಲೂ ತರಕಾರಿಗಳಲ್ಲೂ ಬಹಳ ಭಾಗವನ್ನು ಕೊಂಡುಕೊಂಡರು. ಈ ಫಲಪುಷ್ಪಗಳ ಮತ್ತು ತರಕಾರಿಯ ಪ್ರದರ್ಶನವು ಅಂದಿನ ಸಾಯಂಕಾಲಕ್ಕೇ ಮುಕ್ತಾಯವಾಯಿತು.

ಒಂದು ಕೊಠಡಿಯಲ್ಲಿ ಕಂಚಿನಿಂದ ತಯಾರಿಸಿ ಚಿನ್ನ ಮತ್ತು ಬೆಳ್ಳಿ ಮುಲಾಮು ಮಾಡಿ ರಾವಣನು ಹತ್ತು ತಲೆಗಳಿಂದಲೂ ಎತ್ತುತ್ತಿರುವನೋ ಎನ್ನುವ ಹಾಗಿರುವ ಕೈಲಾಸ ಮಂಟಪವೂ, ಶ್ರೀಮನ್ ಮಹಾರಾಜರವರೂ ಯುವರಾಜರವರೂ ಸರ್ಕೀಟು ಹೋಗಿದ್ದಾಗ ಆಯಾ ಪ್ರಾಂತ್ಯದ ಪ್ರಜೆಗಳು ಒಪ್ಪಿಸಿದ ಬಹಳ ಸುಂದರವಾದ ಚಿನ್ನ ಬೆಳ್ಳಿಯ ಕೈಪೆಟ್ಟಿಗೆಗಳೂ ನವರತ್ನ ಕೆತ್ತನೆಯಾದ ತಟ್ಟೆಗಳೂ ನೋಟಕರ ಕಣ್ಮನಗಳನ್ನು ಸೆಳೆಯದೆ ಇರವು. ಮತ್ತೊಂದು ಕೊಠಡಿಯಲ್ಲಿ ಬೆಂಗಳೂರು ಸೆಂಟ್ರಲ್ ಜೈಲಿನ ಉತ್ತಮವಾದ ಕಂಬಳಿಗಳೂ, ಕಾಶಿಯ ಪುರುಷೋತ್ತಮಾನಂದಗಿರಿಯವರ ರೇಷ್ಮೆಯ ಮತ್ತು ಕಲಾಪತ್ತಿನ ಪೇಟಾಗಳೂ, ತರಹೇವಾರಿ ಶಾಲುಗಳೂ, ಬೆಲೆಯುಳ್ಳ ಸೀರೆಗಳೂ ಇವೆ. ಬೆಂಗಳೂರು ಮತ್ತು ಪುದುಕೋಟೆಯಿಂದ ಅಂಗೀ ಬಟ್ಟೆಗಳೂ, ಅಮೃತಸರದಿಂದ ಟೋಪಿಗಳೂ, ತಿರುವನಂತಪುರದ ಕಲಾಶಾಲೆಯಿಂದ ಕೊಂಬಿನ ಮತ್ತು ದಂತದ ವಿಗ್ರಹಗಳೂ, ಚಾಕು ಹಿಡಿಗಳೂ, ಮದರಾಸಿನಿಂದ ಬೆಳ್ಳಿಯ ತಟ್ಟೆ ಒಡವೆ ಮತ್ತು ಪ್ರತಿಮೆಗಳೂ, ಕಲ್ಕತ್ತಾ ಮತ್ತು ಸಿಯಾಲ್ಕೋಟ್ ನಗರಗಳಿಂದ ಚಿತ್ರಕೆಲಸ ಮಾಡಿರುವ ಚೌಕಟ್ಟುಗಳೂ, ಜಡುರಂಗದ ಕಾಯಿಗಳೂ ಬಂದಿರುತ್ತವೆ. ಮೈಸೂರು ಗವರ್ನ್‌ಮೆಂಟು ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ತಯಾರಿಸಿದ ಬೆತ್ತದ ತಟ್ಟೆಗಳೂ, ಕುರ್ಚಿಗಳೂ, ಪೆಟ್ಟಿಗೆಗಳೂ, ಮಣ್ಣಿನ ಕುಂಡಾಗಳೂ, ಕಾಯಿಕುಡಿಕೆಗಳೂ, ನೆಲಕ್ಕೆ ಮತ್ತು ಹಂಜರಕ್ಕೆ ಉಪಯೋಗಿಸುವ ಹೆಂಚುಗಳೂ, ಕಬ್ಬಿಣದ ಪೆಟ್ಟಿಗೆಗಳೂ, ಕಾರ್ಪುರದ ಸಾಬೂನುಗಳೂ, ಅತ್ತರುಗಳೂ, ಬೊಂಬಾಯಿ ಮತ್ತು ಬರೋಡಾದ ಮಲ್ಲಿಗೆ ಮತ್ತು ಸಂಪಿಗೆ ಎಣ್ಣೆಗಳೂ, ಗೀರ್ಗಾವದ ಕೇಶವರ್ಧಿನೀ ತೈಲಗಳೂ ಒಂದು ಕೊಠಡಿಯಲ್ಲಿ ಕಣ್ಣು ಕೋರೈಸುವಂತೆ ಅಣಿ ಮಾಡಲ್ಪಟ್ಟಿವೆ. ಇನ್ನೊಂದು ಕೊಠಡಿಯಲ್ಲಿ ಛತ್ರದಿಂದ ಕಟ್ಟಿದ ಮಂಟಪವೂ, ಇನ್ನೂರು ರೂಪಾಯಿ ಬೆಲೆಯುಳ್ಳ ಯಮುನಾ ಕಲ್ಲಿನ ಪಗಡೇ ಕಾಯಿಗಳೂ, ಮಂಗಳೂರಿನ ಮೇಣದ ಬತ್ತಿಗಳೂ, ಬೊಂಬಾಯಿನ ಕಾಗೇ ಬಂಗಾರದ ಚಿಮಣಿಗಳೂ, ಚನ್ನಪಟ್ಟಣದ ಆಟದ ಒಣ್ಣ ಸಾಮಾನೂ ಬಹಳ ಚನ್ನಾಗಿ ಶೇಖರಿಸಲಾಗಿದೆ. ಮುಸಲ್ಮಾನರ ಬಡ ವಿಧವೆಯರ ಅನಾಥ ಶಾಲೆಯಲ್ಲಿ ತಯಾರಿಸಿದ ಕಾಗೇ ಬಂಗಾರದ ಕೆಲಸ ಮಾಡಿರುವ ಸುಂದರವಾದ ಬಾಗಿಲ ಪರದೆಯನ್ನೂ, ಬಹಳ ನಾಜೂಕಾಗಿ ಮಾಡಿರುವ ಹ್ಯಾಂಗಿಯನ್ನೂ, ನಾಲ್ಕೈದು ತರಹಾ ರವೆಗಳನ್ನೂ, ರಾಗಿ ಆರಾರೂಟ್ ಹಿಟ್ಟುಗಳನ್ನೂ ಪ್ರದರ್ಶನ ಮಾಡಿರುತ್ತಾರೆ. ಮುಸಲ್ಮಾನರ ವಿಧವೆಯರಿಗೆ ಈ ರೀತಿ ಸ್ವತಂತ್ರ ಜೀವನೋಪಾಯವನ್ನು ಕಲ್ಪಿಸಿರುವುದು ಬಹಳ ಶ್ಲಾಘನೀಯವಾದದ್ದು. ಎರಡು ಕೊಠಡಿಗಳಲ್ಲಿ ನಾನಾ ತರಹಾ ಭತ್ತ ಮತ್ತು ಅಕ್ಕಿಗಳನ್ನೂ, ಮತ್ತೊಂದರಲ್ಲಿ ಅನೇಕ ವಿಧ ಜೋಳ, ರಾಗಿ, ಬರಗು ಕಡಲೆ ಮುಂತಾದ ಧಾನ್ಯಗಳನ್ನೂ, ಹರಳು, ಕುಸುಂಬೆ, ಹೊಂಗೆ ಇವೇ ಮೊದಲಾದ ಎಣ್ಣೇ ಬೀಜಗಳನ್ನೂ ಅಂತಸ್ತುಗಳ ಮೇಲೆ ಕ್ರಮವಾಗಿ ಇರಿಸಿರುತ್ತಾರೆ. ಮಲ್ನಾಡಿನಲ್ಲಿ ಅಂಗಾಗ್ಗೆ ಪ್ರಾಪ್ತವಾಗಿ ಅಡಿಕೆಯ ಫಸಲನ್ನು ನಾಶಪಡಿಸುವ "ಕೊಳೇ" ರೋಗ ತಗುಲಿ ಕೃಶವಾಗಿ ಹೋಗಿರುವ ಅಡಿಕೆಯನ್ನೂ, ಅದರ ಮಗ್ಗುಲಲ್ಲಿ ಔಷಧಿಯಿಂದ ರೋಗಪರಿಹಾರವಾಗಿ ಬೆಳೆದಿರುವ ಅಡಿಕೆಯನ್ನೂ ಜನರ ತಿಳುವಳಿಕೆಗಾಗಿ ಪ್ರದರ್ಶನ ಮಾಡಿದಾರೆ. ತೊಂಬತ್ತು [illegible] ಚೌಕಟ್ಟಿನಲ್ಲಿ ಒಂದು ಕಡೆ ಇರಿಸಿದಾರೆ. [illegible] ಪ್ರದರ್ಶನ ಶಾಲೆಯಲ್ಲಿ ಮೈಸೂರು [illegible] ಕಾಡುಗಳಲ್ಲಿ [illegible] ಸ್ವಾಭಾವಿಕ [illegible] ಔಷಧಕ್ಕೆ ಮತ್ತು [illegible] ಹಾಕುವುದಕ್ಕೆ ಉಪಯೋಗಿಸುವ ತೊಗಟೆಗಳನ್ನೂ, ಗುಗ್ಗುಳ ಗೋಂದು ಮೊದಲಾದವನ್ನೂ, [illegible] ಅಂದವಾಗಿ [illegible] ಆದರೆ ಅಲ್ಲಿ [illegible] ತರಹಾ ಸೌದೆಗಳನ್ನು [illegible] ತಗೆದಿಹಾಕಿ, ಅವುಗಳ ಕೊನೆಯಲ್ಲಿ [illegible] ಹೊಸೆದ ಹಗ್ಗವನ್ನೂ, ಅವುಗಳ [illegible] ತಿಳಿಯುವಂತೆ [illegible] ಸತ್ತುಹೋದ [illegible] ಅನೇಕ ಕಾಲುಗಳನ್ನೂ, ತಲೆ [illegible] ಇರುವ [illegible] ಗಳನ್ನೂ [illegible] ಇರಿಸಿದಾರೆ. ಭೂಗರ್ಭದಲ್ಲಿ ದೊರಕುವ ವಸ್ತುಗಳ ಪ್ರದರ್ಶನ ಶಾಲೆಯಲ್ಲಿ ಮೈಸೂರು ಸೀಮೆಯ [illegible] ಬೇರೆ ಕಡೆಗಳಲ್ಲಿ ಸಿಕ್ಕುವ ಬಂಗಾರ ಮಿಶ್ರವಾದ ಕಲ್ಲುಗಳನ್ನೂ, ಮ್ಯಾಂಗನೀಸ್ ಕೋರು ಮೊದಲಾದುವನ್ನೂ ತೋರಿಸಿರುವರು.

ಹೊರಗಡೆಯ ಆವರಣದಲ್ಲಿ ಒಂದು ಚಪ್ಪರವನ್ನು ಹಾಕಿಸಿ ಬೆಂಗಳೂರು ತಾತಾಯವರ ರೇಷ್ಮೆ ಕಾರ್ಖಾನೆಯಲ್ಲಿ ರೇಷ್ಮೆ ಹುಳಗಳನ್ನು ಸಾಕುವ ಮತ್ತು ಅದರಿಂದ ರೇಷ್ಮೆ ತೆಗೆಯುವ ವಿಧಾನಗಳನ್ನು ತೋರಿಸಿರುವದಲ್ಲದೆ ಜಪಾನ್ ಮತ್ತು ಬಂಗಾಳಾ ದೇಶಗಳ ರೇಷ್ಮೆ ಹುಳುವಿನ ಗೂಡುಗಳನ್ನು ಮಾದರಿಗಾಗಿ ಇಟ್ಟಿದಾರೆ. ಬೊಂಬಾಯಿ ಪಟ್ಟಣದ ರಕ್ಷಣಾ ಸೇನೆ (ಸ್ಯಾಲ್ವೇಷನ್ ಆರ್ಮಿ) ಯವರಿಂದ ಕಂಡು ಹಿಡಿಯಲ್ಪಟ್ಟ ಸುಲಭವಾಗಿಯೂ, ಜಾಗ್ರತೆಯಾಗಿಯೂ ಮತ್ತು ಒಪ್ಪನಿಂದ [illegible] ಕೆಲಸ ಮಾಡಬಹುದಾದ ಕೈಮಗ್ಗವು ನೋಡುವುದಕ್ಕೆ ಅರ್ಹವಾದದ್ದು. ನಮ್ಮ ಸೀಮೆಯ ಮತ್ತು ಪರದೇಶದ ನೇಗಿಲುಗಳೂ, ಜಾಳೀನಾರು ತೆಗೆಯುವ, ಹರತೆ ಹೊಡಿಯುವ, ಹುಲ್ಲು ಕತ್ತರಿಸುವ ಯಂತ್ರಗಳೂ, ತೃಪ್ತಿಕರವಾಗಿ ಕೆಲಸ ಮಾಡತಕ್ಕವುಗಳಾಗಿರೋಣದರಿಂದ ವ್ಯವಸಾಯದಿಂದ ಜೀವಿಸುವವರಿಗೂ ಇತರರಿಗೂ ಅವು ಬಹಳ ಸಹಾಯಕಾರಿಗಳೆನ್ನುವದಕ್ಕೆ ಅಡ್ಡಿಯಿಲ್ಲ. ದೇವತ್ರಿಮೂರ್ತಿಗಳದ್ದೇನೂ, ಜಾಗ್ರತೆಯಾಗಿಯೂ ಕಪಲೇಕಾಯಿನ ಹೊಟ್ಟನ್ನು ಪ್ರತಿನಾ [illegible] ಬಿತ್ತವನ್ನು ಬೇರೆಬೇರೆ ಒಡಿಸಿ ವಿಂಗಡಿಸುವ ಯಂತ್ರವು ಆಶ್ಚರ್ಯವಾದದ್ದೇ ಸರಿ. ಯಣ್ಣೆಯನ್ನು ತೆಗೆಯುವ ಯಂತ್ರವೂ, ನೀರನ್ನು ನಲ್ಲಿಗಳ ಮೂಲಕ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವ ಯಂತ್ರಗಳೂ ಬಹಳ ಶ್ಲಾಘನೀಯವಾದವು.

ದೇಹಾರೋಗ್ಯಕ್ಕೆ ಸಹಕಾರಿಯಾದ ಮತ್ತು ಕುಂದಕವನ್ನುಂಟುಮಾಡುವ ಪದಾರ್ಥಗಳನ್ನು ಎರಡು ಭಾಗವಾಗಿ ವಿಂಗಡಿಸಿ ಒಂದು ಕಡೆ ಕೆಟ್ಟ ನೀರುಗಳನ್ನೂ, ಅವುಗಳನ್ನು ಕುಡಿಯುವದರಿಂದುಂಟಾಗುವ ನಾನಾ ತರಹಾ ರೋಗಗಳನ್ನೂ ವಿವರಿಸಿರುವದಲ್ಲದೆ, ಅಂಥಾ ಕಲ್ಮಷ ಯುಕ್ತವಾದ ನೀರನ್ನು ಶುದ್ಧ ಮಾಡುವ ಉಪಾಯಗಳನ್ನು ತಿಳಿಸಿರುತ್ತಾರೆ. ಈ ಪ್ರದರ್ಶನ ಶಾಲೆಯನ್ನು ಪ್ರತ್ಯೇಕವಾಗಿ ಕಟ್ಟಿರುವದರಿಂದಲೂ ಮತ್ತು ಜನರು ತಮ್ಮ ಆರೋಗ್ಯಕ್ಕೆ ಹೆಚ್ಚು ಗಮನ ಕೊಡಬೇಕೆಂಬ ಉದ್ದೇಶದಿಂದಲೂ ಸರ್ಕಾರದವರು ಈ ಪ್ರದರ್ಶನ ಶಾಲೆಗೆ ನೋಟಕರನ್ನು ಮುಫತ್ತಾಗಿ ಬಿಡುವಂತೆ ಏರ್ಪಡಿಸಿದಾರೆ. ಒಂದು ಸಲ ಹೋಗಿ ನೋಡಿಕೊಂಡು ಬಂದರೆ ತುಂಗಳು ಹಾಲನ್ನೂ, ಕೊಳೆತು ಬಹಳ ದಿನವಾದ ಕಾಯಿಪಲ್ಯಗಳನ್ನೂ, ಹುಳುಕ ಧಾನ್ಯಗಳನ್ನು ಖಂಡಿತವಾಗಿಯೂ ಉಪಯೋಗಿಸ ಬಾರದೆನ್ನುವದು ಎಲ್ಲರಿಗೂ ಸ್ಪಷ್ಟವಾದೀತು. ಆರೋಗ್ಯ ಸ್ಥಿತಿಯಲ್ಲಿರತಕ್ಕ ಮನುಷ್ಯನ ರಕ್ತ ಕಣಗಳನ್ನೂ, ಪ್ಲೇಗ್ ಕ್ರಿಮಿಗಳು ಸೇರಿರತಕ್ಕ ರಕ್ತ ಕಣಗಳನ್ನೂ ವ್ಯತ್ಯಾಸ ತಿಳಿಯುವಂತೆ ಚಿತ್ರ ರೂಪವಾಗಿ ತೋರಿಸಿರುವರು. ಮಲ್ನಾಡಿನ ಜೌಗು ನೀರು ಕುಡಿಯುವುದರಿಂದ ಗಾತ್ರವಾಗಿ ಮಲೇರಿಯಾ ಜ್ವರವನ್ನುಂಟುಮಾಡುವ ಗುಲ್ಮ (ಲಿವರ್) ವನ್ನು ತೆಗೆದು ಗಾಜಿನ ಸೀಸೆಯಲ್ಲಿ ಇಟ್ಟು ತೋರಿಸಿದಾರೆ. ಬೆಳಕೂ ಗಾಳಿಯೂ ಧಾರಾಳವಾಗಿ ಸಂಚಾರ ಮಾಡುವಂತೆ ನಾಲ್ಕೈದು ತರಹಾ ಹೆಂಚಿನ ಮತ್ತು ತಾರಸಿಯ ಮನೆಗಳನ್ನೂ, ಹುತ್ತಲು ಮನೆಗಳನ್ನೂ ಮಾದರಿಗಾಗಿ ಕಟ್ಟಿ ತೋರಿಸಿದಾರೆ.

ಕೆಲವು ದಿನ ಬೆಳಿಗ್ಗೆ ಪ್ರದರ್ಶನ ಶಾಲೆಯಲ್ಲಿ ವ್ಯವಸಾಯದ ಮತ್ತು ದೇಹಾರೋಗ್ಯದ ವಿಷಯವಾಗಿ ಉಪನ್ಯಾಸಗಳು ನಡೆಯಲು ಏರ್ಪಾಡು ಮಾಡಿದೆ. ಉಳುಮೆಯ ಮತ್ತು ನೆಯಿಗೆಯ ಪೋಟೋ ಪೋಟಿಯು ಪ್ರದರ್ಶನ ಶಾಲೆಯ ದಕ್ಷಿಣ ಪಾರ್ಶ್ವದ ಮೈದಾನದಲ್ಲಿ ನಡೆಯುವದರಿಂದ ಇಷ್ಟವುಳ್ಳವರು ಮುಫತ್ತಾಗಿ ಹೋಗಿ ನೋಡಬಹುದು. ಈ ಪ್ರದರ್ಶನವು ಕಳೆದ ಬುಧವಾರದ ಲಾಗಾಯಿತು ಅಕ್ಟೋಬರ್ ತಾ. ೧೪ ನೇ ಬುಧವಾರದ ವರೆಗೆ ತೆರೆದಿರುತ್ತೆ.

ಮೈಸೂರು ನ್ಯಾಯವಿಧಾಯಕ ಸಭೆಯು.

ಕಳೆದ ಗುರುವಾರ ಮಧ್ಯಾಹ್ನ ೩ ಗಂಟೆಗೆ ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರುಗಳು ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ಉಪ್ಪರಿಗೆಯಲ್ಲಿ ಸಭೆ ಸೇರಿ ಕೆಳಗೆ ವಿವರಿಸಿರುವ ವಿಚಾರಗಳನ್ನು ಕುರಿತು ಚರ್ಚೆ ಮಾಡಿದರು. ಸಭೆಯಲ್ಲಿ ದಿವಾನ್‌ರವರು ಅಗ್ರಾಸನವನ್ನು ವಹಿಸಿದ್ದರು.

ಸೆಕ್ರೆಟರಿಯವರು ವರ್ತಮಾನ ಪತ್ರಿಕೆಗಳ ರೆಗ್ಯುಲೇಷನನ್ನು ಶ್ರೀಮನ್ ಮಹಾರಾಜರವರು ೧೯೦೮ನೇ ಇಸವಿ ಆಗಸ್ಟ್ ತಾ. ೨೮ರಲ್ಲಿ ಒಪ್ಪಿ ಸಮ್ಮತಿ ಹಾಕಿರುತ್ತಾರೆಂದು ಕೌನ್ಸಿಲ್ ಮೆಂಬರುಗಳಿಗೆ ಅರಿಕೆ ಮಾಡಿದರು.

ಮೈಸೂರು ಪಟ್ಟಣವನ್ನು ಅಭಿವೃದ್ಧಿಪಡಿಸುವ ವಿಚಾರದಲ್ಲಿ ಮಾಡಲ್ಪಟ್ಟಿರುವ ಕಾನೂನ್ ಸ್ವಲ್ಪ ಬದಲಾಯಿಸಿ, ಹೆಲ್ತ್ ಆಫೀಸರನ್ನು ಟ್ರಸ್ಟ್ ಬೋರ್ಡಿನ ಮೆಂಬರಾಗಿ ಮಾಡಬೇಕೆಂಬದಾಗಿ ಮ|| ಟಿ ಆನಂದರಾಯರು ಸೂಚಿಸಿದ್ದನ್ನು ಮ|| ಕೆ. ಪಿ. ಪುಟ್ಟಣ್ಣ ಚೆಟ್ಟಿಯವರು ಸೆಕೆಂಡ್ ಮಾಡಿದರು. ಮೆಂಬರುಗಳೆಲ್ಲಾ ಅಗ ಬಹುಮಂದು ಒಪ್ಪಿಕೊಂಡರು.

ಮೈಸೂರು ಸಂಸ್ಥಾನದಲ್ಲಿ ಭೂಮಿಯೊಳಗೆ [illegible] ಬೆಲೆ ನಗ ನಾಣ್ಯಗಳು ದೊರಕಿದರೆ ಅದನ್ನು ಕಂಡವರು [illegible] ಸರಿಗೆ [illegible] ಒಂದು ಕಾನೂನಿನ ಮಸೂದೆ [illegible] ಕಳೆದ ವರುಷದ ಮಾರ್ಚ್ ತಿಂಗಳಲ್ಲಿ ಸರ್ಕಾರಿ ಗೆಜೆಟ್ಟಿನ ಮೂಲಕ ಪ್ರಕಟ ಮಾಡಿದೆ ಎಂತಲೂ, ಈ ಮಸೂದೆಯನ್ನು ಈ ಸಭೆಯಲ್ಲಿ ಮೆಂಬರುಗಳು ಚರ್ಚೆ ಮಾಡಬೇಕಾಗಿದೆ ಎಂತಲೂ ರಾಜಕಾರ್ಯಪ್ರವೀಣ ಮ|| ಟಿ. ರಂಗಸ್ವಾಮಿ ಐಯಂಗಾರರು ಸೂಚಿಸಿದರು. ಮ|| ಕೆ. ಎಸ್ ಚಂದ್ರಶೇಖರ ಐಯರವರು ಸೆಕೆಂಡ್ ಮಾಡಿದರು. ಮೆಂಬರುಗಳೆಲ್ಲಾ ಅದರಂತೆ ಒಪ್ಪಿಕೊಂಡರು.

ಮೈಸೂರು ಸಂಸ್ಥಾನದಲ್ಲಿ ವಿಷಪದಾರ್ಥಗಳನ್ನು ಇಂಗ್ಲಿಷ್ ಔಷಧ ಮಾರುವವರು ವರ್ತಕರೂ ತರಿಸುವಾಗಲೂ, ಪ್ರಜೆಗಳಿಗೆ ವಿಕರಿ ಮಾಡುವಾಗಲೂ ಅವರು ಕೆಲವು ಕ್ರಮಗಳನ್ನು ಅನುಸರಿಸಬೇಕಾದದ್ದು ಆವಶ್ಯಕವೆಂತಲೂ, ಇಂಥಾ ಕಾನೂನು ಈ ಸಂಸ್ಥಾನದಲ್ಲಿ ಇಲ್ಲದಿರೋಣದರಿಂದ ಅನೇಕ ಅಚಾತುರ್ಯವಾದ ಮತ್ತು ಘೋರವಾದ ಕೃತ್ಯಗಳು ನಡಿಯುವದಕ್ಕೆ ಅವಕಾಶ ಇಲ್ಲವೆಂತಲೂ, ದೃಷ್ಟಾಂತವಾಗಿ ಬೆಂಗಳೂರು ಪಟ್ಟಣದಲ್ಲಿ ನಡೆದ ಪರಿತಾಪಕರವಾದ ಕೊಲೆಗಳನ್ನು ಎಲ್ಲರೂ ಕೇಳಿರುತ್ತಾರೆಂತಲೂ ಮ|| ಕೆ. ಪಿ. ಪುಟ್ಟಣ್ಣಚೆಟ್ಟಿಯವರು ಸೂಚಿಸಿದರು. ಇದನ್ನು ಮ|| ಎಂ. ಕಾಂತರಾಜೇ ಅರಸಿನವರು ಸೆಕೆಂಡ್ ಮಾಡಿದರು. ಉಳಿದ ಮೆಂಬರುಗಳು ಇಂಥಾ ಕಾನೂನ್ ಆಗಬೇಕೆಂದು ಒಪ್ಪಿಕೊಂಡಿರುತ್ತಾರೆ

ಮೈಸೂರು ರೆಜಿಸ್ಟ್ರೇಷನ್ ಕಾನೂನಿನಲ್ಲಿ ಸ್ವಲ್ಪ ಬದಲಾವಣೆ ಮಾಡಿ, ಡಿಸ್ಟ್ರಿಕ್ಟ್ ಪೋಸ್ಟ್ ಮಾಸ್ಟರ್ ಜನರಲರವರು ರೆಜಿಸ್ಟ್ರೇಷನ್ ಆಫೀಸುಗಳಿಗೆ ಖುದ್ದಾಗಿ ಹಾಜರಾಗಬೇಕಾದದ್ದಿಲ್ಲವೆಂದು ವಿನಾಯಿತಿ ಮಾಡಬೇಕಾಗಿದೆ ಎಂಬದಾಗಿ ಮ|| ಟಿ. ಆನಂದರಾಯರು ತಿಳಿಸಿದ್ದನ್ನು ಮ|| ಎಸ್. ನಾರಾಯಣರಾಯರು ಸೆಕೆಂಡ್ ಮಾಡಿದರು. ಮೆಂಬರುಗಳೆಲ್ಲಾ ಒಪ್ಪಿಕೊಂಡರು.

ಗ್ರಾಮಾಂತರ ಕೆರೆಗಳನ್ನು ಸಂರಕ್ಷಣೆಮಾಡುವುದಕ್ಕೋಸ್ಕರ ಪಟೇಲ್ ಶ್ಯಾನುಭೋಗರೇ ಮುಂತಾದವನ್ನು ಕೂಡಿಸಿ ಒಂದು ಪಂಚಾಯತಿಯನ್ನು ಏರ್ಪಡಿಸುವುದು ಆವಶ್ಯವೆಂತಲೂ, ಈ ಬಾಬ್ತಲ್ಲಿ ಮಸೂದೆ ಕಾನೂನು ತಯಾರಾಗಿ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಾಯಿಷ್ ಮಾಡಿದೆ ಎಂತಲೂ, ಆ ಮಸೂದೆಯನ್ನು ಕೌನ್ಸಿಲ್ ಸಭೆಯಲ್ಲಿ ಓದಿ ಚರ್ಚಿಸಬೇಕೆಂತಲೂ ಮ|| ಕೆ. ಪಿ. ಪುಟ್ಟಣ್ಣ ಚೆಟ್ಟಿಯವರು ಸೂಚಿಸಿದರು. ಅದನ್ನು ಮ|| ಕೆ. ಎಸ್. ಚಂದ್ರಶೇಖರ ಐಯರವರು ಸೆಕೆಂಡ್ ಮಾಡಿದರು. ಮೆಂಬರುಗಳ ಸಮ್ಮತಿಯನ್ನು ಪಡೆದು ಪ್ರೆಸಿಡೆಂಟರು ಈ ಬಿಲ್ಲನ್ನು (ಮಸೂದೆಯನ್ನು) ಒಂದು ಸಬ್ ಕಮಿಟಿಯವರಿಗೆ ಒಪ್ಪಿಸಿದಾರೆ.

ಕಡೆಯಲ್ಲಿ ಗ್ರಾಮಾಧಿಕಾರಿಗಳ ಮಸೂದೇ ಕಾನೂನು ಚರ್ಚೆಯಾಗಿ ಸಿದ್ಧವಾಗಿದೆ ಎಂದು ಮ|| ಟಿ. ಆನಂದರಾಯರು ಸೂಚಿಸಿ

ದರು. ಇದನ್ನು ಪ್ಯಾಸ್ ಮಾಡುವುದು ಒಳ್ಳೇದೆಂಬ ಅರ್ಥಕ್ಕೆ ಮೆ॥ ಸಿ. ಶ್ರೀನಿವಾಸೈಯಂಗಾರರೂ, ಮೆ॥ ಬಿ. ನಾಗಪ್ಪನವರೂ ಸಣ್ಣ ಭಾಷಣಗಳನ್ನು ಮಾಡಿದರು. ದಿವಾನರವರು ಮೆಂಬರುಗಳ ಅಭಿಪ್ರಾಯಾನುಸಾರವಾಗಿ ಈ ಬಿಲ್ಲನ್ನು ಪ್ಯಾಸ್ ಮಾಡಿದೆ ಎಂದು ಅಪ್ಪಣೆ ಕೊಡಿಸಿದರು. ಈ ಬಿಲ್ಲನ್ನು ಓದಿ ತಿದ್ದಿ ಕ್ರಮಕ್ಕೆ ತಂದಿಟ್ಟ ವಿಷಯದಲ್ಲಿ ಬೇರೋಜುಗಾರರಾದ ಮೆಂಬರುಗಳು ಬಹಳ ಸಾಹಸಪಟ್ಟು ತಮ್ಮ ಸಮಯವನ್ನೂ ಬುದ್ಧಿಕುಶಲತೆಯನ್ನೂ ಪ್ರಜೆಗಳ ಪರವಾಗಿ ವಿನಿಯೋಗಿಸಿರುತ್ತಾರೆಂಬುದನ್ನು ಶ್ರೀಮನ್ಮಹಾರಾಜರವರ ತಿಳಿದು ಅವರನ್ನು ವಂದಿಸಿರುತ್ತಾರೆ ಎಂದು ದಿವಾನರವರು ಹೇಳಿದರು. ಅಲ್ಲಿಗೆ ಆ ದಿನದ ಸಭೆಯು ಬರಖಾಸ್ತು ಮಾಡಲ್ಪಟ್ಟಿತು.

ಒಳದೇಶದ ವೃತ್ತಾಂತಗಳು.

ಕೋಲಾರ್ ಚಿನ್ನದ ಗಣಿಗಳಲ್ಲಿ ಬೀದಿಗಳಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸಬೇಕೆಂದು ಪ್ರಯತ್ನಪಡುತ್ತಿದಾರೆಂದು ತಿಳಿಯುವುದು.

ಮುಂದಿನ ತಿಂಗಳ ಪ್ರಾರಂಭದಿಂದ ಮೈಸೂರು ಸಂಸ್ಥಾನದ ಎಲ್ಲಾ ಸರ್ಕಾರೀ ಪಾಠಶಾಲೆಗಳಲ್ಲೂ ವಿದ್ಯಾರ್ಥಿಗಳಿಗೆ ಸದ್ಗುಣ, ಸದ್ಭಕ್ತಿ, ಸದಾಚಾರಗಳನ್ನು ಪ್ರತಿದಿನವೂ ಅರ್ಧ ಗಂಟೆಯ ಹೊತ್ತು ಕಲಿಸಿಕೊಡಬೇಕೆಂದು ಗವರ್ನಮೆಂಟಿನವರು ವಿಧಾಯಕಮಾಡಿರುತ್ತಾರೆ.

ರಾಜಧಾನಿಯ ಕರುಣಾಪುರದಲ್ಲೂ ಅದರ ಸಮೀಪದಲ್ಲೂ ಕಳೆದ ಗುರುವಾರ ನಾಲ್ಕು ಕಡೆ ಕಳ್ಳರು ಬಿದ್ದರೆಂದು ಕೇಳಿದೆವು. ಪೋಲೀಸ್ ಇಲಾಖೆಯವರು ತುಂಬಾ ಎಚ್ಚರಿಕೆಯಿಂದ ಉಸ್ತುವಾರಿ ಮಾಡಿ, ದುಷ್ಟರನ್ನು ಹಿಡಿಯದೆಹೋದರೆ ಅಪಯಶಸ್ಸಿಗೆ ಗುರಿಯಾದಾರು.

ತಾ. ೮ ನೇ ಗುರುವಾರ ಮಧ್ಯಾಹ್ನ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಗುತ್ತದೆ. ಆ ದಿನ ರಾತ್ರಿಯೇ ಶ್ರೀಮನ್ಮಹಾರಾಜರವರು ಗವರ್ನಮೆಂಟ್ ಹೌಸ್ ಬಂಗಲೆಯಲ್ಲಿ ರೆಸಿಡೆಂಟರೇ ಮೊದಲಾದ ಸರ್ದಾರರಿಗೆಲ್ಲಾ ಔತಣವನ್ನು ಮಾಡಿಸುವರು.

ನಾಳೆ ಗುರುವಾರ ಮಧ್ಯಾಹ್ನ ಇಲ್ಲಿನ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಪ್ರಜಾಪ್ರತಿಸಭೆಯ ಮೆಂಬರುಗಳು ತಮ್ಮಲ್ಲಿ ಇಬ್ಬರನ್ನು ನ್ಯಾಯ ವಿಧಾಯಕ ಸಭೆಗೆ ಮೆಂಬರಾಗಿ ಚುನಾಯಿಸುವವರಾಗಿದ್ದರಷ್ಟೆ. ಸರ್ಕಾರದವರು ಇದನ್ನು ಬದಲಾಯಿಸಿ, ಮುಂದಿನ ತಾ. ೧೦ ನೇ ಶನಿವಾರ ಮಧ್ಯಾಹ್ನ ಚುನಾವಣೆ ನಡೆಯಲೆಂದು ಅಪ್ಪಣೆಕೊಟ್ಟಿದಾರೆ.

ರಾಜಧಾನಿಯಲ್ಲಿ ಈಗ ಪ್ಲೇಗ್ ಮೊದಲಾದ ಯಾವದೊಂದು ಕಾಯಿಲೆಯೂ ಇಲ್ಲದಿರೋಣದರಿಂದ ನವರಾತ್ರಿ ಉತ್ಸವಗಳನ್ನು ನೋಡುವುದಕ್ಕೆ ಅನೇಕ ಸಹಸ್ರ ಜನರು ಇತರ ಕಡೆಗಳಿಂದ ಬಂದಿರುತ್ತಾರೆ. ಇಷ್ಟು ಜನರು ರಾಜಧಾನಿಯಲ್ಲಿ ಸೇರಿದ್ದದ್ದನ್ನು ನೋಡಿ ಬಹಳ ವರುಷಗಳಾದವು. ಜನರ ನೋಟಕ್ಕೂ ವಿನೋದಕ್ಕೂ ನಾನಾ ವಿಧವಾದ ಸಾಮಾನುಗಳು ಉಂಟು.

ಕಳೆದ ಶುಕ್ರವಾರ ಸಾಯಂಕಾಲ ಇಲ್ಲಿನ ಹೆಡ್ ಪೋಸ್ಟ್ ಆಫೀಸಿನ ಬಳಿ ಒಂದು ತುಂಟುಕುದುರೆಯು ಒಬ್ಬ ಮುದುಕಿಯನ್ನು ಒದ್ದು ಕೆಡವಿತು. ಮುದುಕಿಗೆ ಗಾಯವಾಗಿ ರಕ್ತಹರಿಯುತ್ತಿದ್ದದ್ದನ್ನು ಪೋಸ್ಟ್ ಮಾಸ್ಟರವರು ತಿಳಿದು ಒಡನೆಯೇ ಆಕೆಯನ್ನು ಗಾಡಿಯಲ್ಲಿ ಮಲಗಿಸಿ ಆಸ್ಪತ್ರೆಗೆ ಕಳುಹಿಸಿ ಉಪಚಾರ ನಡೆಯುವಂತೆ ಮಾಡಿದರು. ಅವರ ಕರುಣೆಯನ್ನು ನೋಡಿ ಬಹುಜನರು ಸಂತೋಷಪಟ್ಟರು.

ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪ್ಯಿಯನ್ ಸರ್ದಾರರು ಕಳೆದ ಶನಿವಾರ ರಾಜಧಾನಿಗೆ ಬಂದು ಶ್ರೀಮನ್ ಮಹಾರಾಜರವರ ನವರಾತ್ರಿ ಕಚ್ಚೇರಿಯ ಔತಣವನ್ನು ಸ್ವೀಕರಿಸುತ್ತಿದಾರೆ. ಕಳೆದ ಶನಿವಾರ ಜಗನ್ಮೋಹನ ಬಂಗಲೆಯಲ್ಲಿ ಶ್ರೀಮನ್ ಮಹಾರಾಜರವರು ಯೂರೋಪ್ಯಿಯನ್ ಸರ್ದಾರರನ್ನು ಕರೆಸಿಕೊಂಡು, ದಿವ್ಯವಾದ ದರ್ಬಾರ್ ನಡೆಸಿದರು. ಆ ದಿನ ಹಾರಿಸಿದ ಬಾಣಬಿರುಸುಗಳು ನೇತ್ರಾನಂದಕರಗಳಾಗಿದ್ದವು.

ಸುಟ್ಟುಹೋದ ಅರಮನೆಯ ಆನೇಬಾಗಿಲನ್ನು ಶ್ರೀಮನ್ಮಹಾರಾಜರವರು ಪುನಹಾ ಚಿನ್ನದ ಮುಲಾಮುಮಾಡಿಸಿ, ಚಾಮುಂಡೀ ಬೆಟ್ಟದ ಮೇಲಣ ದೇವಸ್ಥಾನದ ಮಹಾದ್ವಾರಕ್ಕೆ ಬಾಗಿಲಾಗಿ ಮಾಡಿಸಿದರು. ಮತ್ತು ಆ ದೇವಸ್ಥಾನದ ಗರುಡಗಂಬಕ್ಕೆ ವಿಗ್ರಹಗಳನ್ನು ಬಿಡಿಸಿದ ಬೆಳ್ಳಿ ತಗಡುಗಳನ್ನು ಮಾಡಿಸಿಕೊಟ್ಟರು. ಇವೆರಡೂ ಕಳೆದ ವಾರ ಪ್ರತಿಷ್ಠೆಮಾಡಲ್ಪಟ್ಟವು. ಇದಕ್ಕೆಲ್ಲಾ ಸುಮಾರು ಆರು ಸಾವಿರ ರೂಪಾಯಿ ಖರ್ಚಾಗಿರಬಹುದೆಂದು ಕೇಳುತ್ತೇವೆ.

ಪ್ರತಿ ಗುರುವಾರವೂ ಪ್ರಕಟವಾಗುವ

ವೃತ್ತಾಂತ ಪತ್ರಿಕೆ

ಈ ವರ್ತಮಾನ ಪತ್ರಿಕೆಯನ್ನು ಅನೇಕಾನೇಕರು ತರಿಸಿ ಓದುತ್ತಿದಾರೆ. ಇದರ ಚಂದಾ ವರುಷಕ್ಕೆ ರೂ. ೧—೧೪—೦ ಮಾತ್ರವೇ. ಚಂದಾ ಕಟ್ಟಿ ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆದು ತಿಳಿಸಿ. ಒಂದು ವರುಷದ ತನಕ ವಾರಕ್ಕೊಂದರಂತೆ ನಿಮಗೆ ಪತ್ರಿಕೆಯನ್ನು ರವಾನೆ ಮಾಡುವೆವು.

ಈ ಪತ್ರಿಕೆಯು ನಿಮಗೆ ಪ್ರಪಂಚದಲ್ಲಿ ನಡೆಯುವ ವರ್ತಮಾನಗಳನ್ನು ತಿಳಿಸುತ್ತದಲ್ಲಾ ! ಇದನ್ನು ತರಿಸಿ ಓದಿ ಪ್ರಪಂಚದ ಜ್ಞಾನವನ್ನೂ ವಿವೇಕಾದಿಗಳನ್ನೂ ಸಂಪಾದಿಸಿಕೊಳ್ಳಬಾರದೇ ? ಭಾವಿಯಲ್ಲಿರುವ ಕಪ್ಪೆಯಂತೆ ತೃಪ್ತಿಪಟ್ಟುಕೊಂಡಿರುವುದು ಸಹಜವಲ್ಲ. ಈ ದಿನವೇ ಚಂದಾ ಕಟ್ಟಿ, ಪತ್ರಿಕೆಯನ್ನು ತರಿಸುವುದಕ್ಕಾರಂಭಿಸುತ್ತೀರೆಂದು ನಂಬಿದೇವೆ.

ಮ್ಯಾನೇಜರ್,
"ವೃತ್ತಾಂತ ಪತ್ರಿಕೆ," ಮೈಸೂರು.

ENCOURAGE LOCAL INDUSTRIES.

Mysore Exercise Books! Mysore Exercise Books!!

AN EXCELLENT MEDALLION PORTRAIT
OF
H. H. THE MAHARAJAH OF MYSORE
IS PRINTED ON THE COVER. GOOD PAPER. GOOD RULING.
MARVELLOUSLY CHEAP, EXCELLING ANY IMPORTED BOOKS.

PRICES:

40	Pages	6 pies
80	„	1 anna
160	„	2 annas

MANAGER, C. L. S. BOOK DEPOT, MYSORE CITY.

ಸ್ವದೇಶೀ ಕೈಗಾರಿಕೆಗಳನ್ನು ಪ್ರೋತ್ಸಾಹಪಡಿಸಿರಿ.

ಮೈಸೂರು ಎಕ್ಸರ್‌ಸೈಜ್ ಪುಸ್ತಕಗಳು ! ಮೈಸೂರು ಎಕ್ಸರ್‌ಸೈಜ್ ಪುಸ್ತಕಗಳು !!

ಸದರಿ ಪುಸ್ತಕಗಳ ರಟ್ಟಿನ ಮೇಲೆ ಮಹಾರಾಜರ ಛಾಯಾಚಿತ್ರವು ಬಹು ಸುಂದರವಾಗಿ ಅಚ್ಚುಹಾಕಲ್ಪಟ್ಟಿದೆ. ಈ ಮೇಲ್ಕಂಡ ಪುಸ್ತಕಗಳನ್ನು ಉಪಾಧ್ಯಾಯರು ಸಾವಿರಗಟ್ಟಲೆಯಾಗಿ ಕೊಂಡುಕೊಂಡು ನಮ್ಮನ್ನು ಪ್ರೋತ್ಸಾಹಪಡಿಸುವಂತೆ ಪ್ರಾರ್ಥನೆ. ಕಾಗದ ಮತ್ತು ರೈಂಡ್ ಉತ್ಕೃಷ್ಟವಾಗಿವೆ.

ಕ್ರಯ:

೪೦ ಪೇಜಿನದಕ್ಕೆ	... ...	ರೂ. ೦—೦—೬.
೮೦ „	... ...	೦—೧—೦.
೧೬೦ „	... ...	೦—೨—೦.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

Printed and Published by the Rev. E. W. THOMPSON, M. A., Proprietor and Manager, W. M. P., Mysore.

REGISTERED
M 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೮ ನೇ ಇಸವಿ ಅಕ್ಟೋಬರ್ ತಾರೀಖು ೮ ನೇ ಗುರುವಾರ. ಸಂಚಿಕೆ ೧೯

MYSORE DASARA EXHIBITION, 1908.

PLEASE HAVE A LOOK AT

The Wonderful Exhibits

OF

THE DIAMOND SOAP COMPANY,

GIRGAON, BOMBAY.

Exhibits can be obtained

at the Stall

IN THE EXHIBITION,

from

MESSRS. RANADE COMPANY,

BANGALORE

ಜ್ವರಹರಿ [illegible]

ಇದು ಸರ್ವೋತ್ತಮ [illegible] ಜ್ವರ, [illegible] ಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ [illegible] ಎಂಬ [illegible] ವಿಧವಾದ ಜ್ವರಗಳನ್ನು [illegible]

[illegible] ಎಸ್. ಕೆ. ವೆಂಕಟಪತಿ ಅಯ್ಯಂ [illegible] ಕೊಂದಿರುವವರು [illegible] ದಿನಗಳು [illegible] ಇನ್ನೊಂದು [illegible] ಎಂದು [illegible]

ಕ್ರಯ — [illegible] ೧ [illegible], ೧—೮ [illegible] [illegible] ಕರಿಸಿಕೊಂಡವರ [illegible]

****

ಬಿ ಮು ೦ ಕ ಪ್ರೂ ೯ ರ.

Queen Carpoor

ಈ ಔಷಧವು ಅಜೀರ್ಣ, [illegible] ಭೇದಿ, [illegible] ಹೊಟ್ಟೆ [illegible] ವಾಂತಿಭೇದಿ, [illegible] ಮೊದಲಾದ [illegible] ಇದು [illegible] ಗುಣ [illegible]

[illegible] ಅಸಿಸ್ಟೆಂಟ್ [illegible] ಗೆಜೆಟೆಡ್ [illegible] ಕರ್ಪೂರವನ್ನು [illegible] ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ [illegible] ಒಳ್ಳೇ ಔಷಧ [illegible]

ಈ ಎರಡು ಔಷಧಗಳೂ [illegible] ವೈದ್ಯಶಾಲೆಗ [illegible] ದೊಡ್ಡ ಪಟ್ಟಣಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ [illegible] ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಮದ್ರಾಸಿನ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೌಕಾರ್ ಪೇಟ್ [illegible], ಮದರಾಸ್.

AMRUTANJAN DEPOT, 16 OAK-LANE BOMBAY. [17-33]

ಗುಣ ಕಂಡುಬರುವದಿಲ್ಲವಾದರೆ ಹಣ ವಾಪಸು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ:—ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಚಳಕು ಮತ್ತು ಗಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ಕ್ಕೆ ಕಿಮ್ಮತ್ತು ೦ ೮—೦ ಪೋಸ್ಟು ಖರ್ಚು ೦—೪—೦

ಗಜಕರ್ಣದ ಮುಲಾಮು.

ನೂರು ಸಾರಿ ಹಾಗಿಸುವದರಿಂದ ಗಜಕರ್ಣ ಬಹಳ ಸ್ವಲ್ಪ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦—೩—೦ ಪೋಸ್ಟು ಖರ್ಚು ೦ ೪ ೦

ಈ ಕಂಪನಿಯವರು ಮತ್ತು ಸಮುದಾಯ ಔಷಧಗಳನ್ನು ತಯಾರಿಸುವದರಿಂದ [illegible] ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು

[illegible]	[illegible]—೪—೦	[illegible]	[illegible]—೨—೦
[illegible]	೧—೨—೦	[illegible]	[illegible]—೨—೦
ಜ್ವರಹಾರಿ—[illegible]	[illegible]—೦—೦	[illegible]	[illegible]—೬—೦
[illegible]	೦—೮—೦	ಸುಂದರೀ ತೈಲ್ಯ—[illegible]	೦—೮—೦
[illegible]—[illegible]	೦—೮—೦	ನೇತ್ರಾಂಜನ—[illegible]	೦—೬—೦
[illegible]	೦—೩—೦	ಉರಿನಾಶಕ ಎಂಟೆ [illegible]	೦—೮—೦
[illegible]	೦—೩—೦	[illegible]	೧—೦—೦
ದಂತದಾಂಜನ—[illegible]	೦—೨—೦	ಕಸ್ತೂರಿ ಮಾತ್ರೆ ೫೦ ಗುಳಿಗೆ	೦—೧೦—೦
[illegible] ತೈಲ್ಯ—[illegible]	೧—೦—೦	[illegible] ೫೦ ಗುಳಿಗೆ	೦—೮—೦
[illegible]	೧—೮—೦	[illegible]	೦—೮—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು ಫ್ರೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-34

೧. ಶೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆ ಕಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾಯುಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, [illegible] ನೋವು, ಕೆಮ್ಮು, ನೆಗಡಿ, ಸನ್ನಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

[illegible] ಅಥವಾ [illegible] ಉಪಯೋಗಿಸುತ್ತಿದ್ದರೆ ಎಷ್ಟೆ [illegible] ಎಂಥ ಆಹಾರವನ್ನು ತಿಂದು ಜೀರ್ಣಗೊಳಿಸಿ, [illegible] ದಾರಿಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ [illegible] ದೋಷವನ್ನು ತೆಗೆದು [illegible] ಸ್ತ್ರೀಯರ ಋತುಶೂಲೆ, ಮಕ್ಕಳ [illegible], ಜ್ವರ, ಸನ್ನಿಜ್ವರ ಕೃತ್ಯಗಳನ್ನು ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ [illegible] ಕೊಂಡಿಗೆ [illegible] ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನವತ್ತು ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ ರೂಪಾಯಿ ಜೆಹ್ಹ ೧ ರಿಂದ ೧೨ ಡಬ್ಬಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್. ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟರ್."

ವ್ಯವಹಾರನಿರ್ಣಯ—ಶ್ರುಟಿಗಳು [illegible] ಹಿಂದೂ [illegible] ಲಾಗಳು, [illegible] ಶಾಸನಗಳು ಇವುಗಳ ಸಂಗ್ರಹವು, [illegible] ದಸ್ತಾವೇಜು, [illegible] ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ. ಪಿ. ಸೇರಿ ೧ ರೂ. ೧೨ ಆಣೆ. [40-24]

ಕನ್ನಡ ಲಾ ರಿಪೋರ್ಟರ್—ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಂದು ಸಾರಿ ಹೊರಡುತ್ತದೆ. ವರ್ಷದ ಚಂದಾ ೧—೦—೦ ಮುಂಗಡ, ಯಾ. ವಿ ಪಿ. ಬಿಡಿಪತ್ರಿಕೆ ೧ಕ್ಕೆ ೦—೨—೦

ಇವುಗಳನ್ನು ಅಪೇಕ್ಷಿಸುವವರು "ಎಂ [illegible] ವಕೀಲ್, [illegible] ಮೈಸೂರು" ಈ ವಿಳಾಸಕ್ಕೆ ಬರೆಯುವುದು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

53 15

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕಾ ಬಟ್ಟೆಗಳು ನಾಲಕ್ಕಾಗಿ ತಯಾರಿಸಲ್ಪಟ್ಟ ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ಐದು ಆಣೆಯಿಂದ ೬ ಆಣೆ ವರೆವಿಗೂ ಚಿಲ್ಲರೆಯಾಗಿ ಯಾವಾಗಲೀ ಒಟ್ಟಾಗಿ ಯಾಗಲೀ ಮಾರಲ್ಪಡುತ್ತವೆ. ಶಾಲುಗಳು, ಹಾಸಿಗೆ ಜಮಖಾನಗಳು, ಮುಸುಕಿನ ಬಟ್ಟೆಗಳು ಕೋಟುಗಳ ಚೀಟಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಶಿವಪಂಚಸ್ತವವು.

79-2

(ಪುಟಗಳು ೩೦೨)

ಶಿವಭಕ್ತಿ ಸಂಪನ್ನರಿಗೆಲ್ಲರಿಗೂ ಬೇಕಾದುದು.

ಶ್ರೀ ಮೂದರಸ ಪಂಡಿತಾರಾಧ್ಯರಾದ ವಿಶ್ವಾರಾಧ್ಯರಿಂದ ರಚಿತವಾದ ಸಂಸ್ಕೃತದ ವ್ಯಾಖ್ಯಾನದೊಡನೆ ಕೂಡಿದ ಪಲ್ಲವ, ನಾಗಿಸ್ತ್ರ, ಮಾಲಯಾರಾಜ, ಅನುಭವ, ಕಾಲಾಯುಧವೆಂದು ಪ್ರಖ್ಯಾತವಾದ ಪಂಚ ಸ್ತೋತ್ರಗಳು ಹೊಸದಾಗಿ ಬರೆದ ಕನ್ನಡ ಟಿಪ್ಪಣಿಯಿಂದ ಕೂಡಿ, ಸುಂದರವಾದ ಕನ್ನಡದ ಅಕ್ಷರಗಳಿಂದ ಉತ್ತಮವಾದ ಕಾಗದದಲ್ಲಿ ಅಚ್ಚು ಮಾಡಿಸಲ್ಪಟ್ಟಿದೆ.

ಕ್ರಯ: ಪುಸ್ತಕ ೧ಕ್ಕೆ ವಿ. ಪಿ. ಮೂಲಕ ರೂ. ೧—೮—೦. ೧೦ ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಪ್ರತಿಯು ಉಚಿತವಾಗಿ ಕೊಡಲ್ಪಡುವುದು.

ವಿಳಾಸ—ಬಸವಲಿಂಗಸ್ವಾಮಿಗಳು, ಹೊಸಮಠ, ಮೈಸೂರು.

ಪ್ರತಿಯೊಬ್ಬ ವೀರಶೈವ ಮತಸ್ಥರಿಗೆ ಅವಶ್ಯಕವಾದದ್ದು.

ಚನ್ನಬಸವೇಶ ವಿಜಯವು, ಕನ್ನಡ ವಚನ ರೂಪವಾದದ್ದು, ಅನೇಕ ಶರಣರ ಕಥೆಗಳು ಇರುತ್ತೆ. ಕ್ರಯ ೧—೮—೦. ಈ ಪುಸ್ತಕವನ್ನು ತರಿಸಿಕೊಳ್ಳುವವರಿಗೆ ಕೆಳಗಿನ ಫೋಟೋಗಳನ್ನು ಬಹುಮಾನವಾಗಿ ಕಳುಹಿಸುತ್ತೇವೆ

ಶ್ರೀಅಲ್ಲಮ ಪ್ರಭುದೇವರು ಬಸವಾದಿ ಪ್ರಮಥರುಗಳೊಡನೆ ಇರತಕ್ಕ ಫೋಟೋ ೧ಕ್ಕೆ .. .. .. ೦—೨—೦

ಶ್ರೀ ಚಿತ್ರದುರ್ಗ ಸಂಸ್ಥಾನದ ಈಗಿನ ಶ್ರೀ ಮುರುಘರಾಜೇಂದ್ರ ಜಗದ್ಗುರುಗಳ ಫೋಟೋ ೧ಕ್ಕೆ .. .. ೦—೨—೦

ಇವರ ಸ್ವಾಮಿಗಳ ಫೋಟೋ ನಂ ೨ ಸೈಜ್ ೦—೯—೦

ಒಟ್ಟಿಗೆ ತರಿಸಿಕೊಂಡರೆ ೮ಕ್ಕೆ ೧, ೨೦ಕ್ಕೆ ೨, ೫೦ಕ್ಕೆ ೩, ೧೦೦ಕ್ಕೆ ೨೦ ರಂತೆ ಕಮಿಷನ್ ದೊರೆಯುತ್ತೆ. ೧೦×೧೨ ಸೈಜಿನ ಅಸಲ್ ಫೋಟೋ ೧ಕ್ಕೆ .. ೦—೮—೦

ವಿಳಾಸ:—ವಿ ಪಿ ಪುಟ್ಟಣ್ಣ, ಫ್ಯಾನ್ಸಿ ಬಜಾರ್, ಕೋಟೆ, ಮೈಸೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

46-20

ತಲೆನೋವು, ಮಾರುನೋವು, ಸೆಳೆತ, ಗಂಟುನೋವು, [illegible] ವಾಯು, ನಾನಾ ವಿಧ ವಾಯುರೋಗಗಳು, [illegible] ನೋವು [illegible] ಹಲ್ಲುನೋವು,—ಇವುಗಳಲ್ಲಿ ಈ ತೈಲವನ್ನು [illegible] ಮಾಡಿದಂತೆ [illegible] ಈ ಔಷಧವನ್ನು [illegible] ಎಲ್ಲಾ ಭಾಗಗಳ [illegible] ಬಾಧೆಗಳನ್ನು ನಿವಾರಣೆ ಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು. ಆದದ್ದರಿಂದಲೇ ಅದನ್ನು ಅಷ್ಟು [illegible] ವಿಶೇಷ ಪ್ರೀತಿಯಿಂದಲೂ ಎಲ್ಲರೂ [illegible] ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅನೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ [illegible] ಮಾಡುತ್ತದೆ

ಕ್ರಯ: [illegible] ೨ ಆಣೆ, ಪ್ಯಾಕಿಂಗ್ ೮ ಆಣೆ [illegible] ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು [illegible] ವ್ಯಾಪಾರಸ್ಥರಿಗೆ [illegible] ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ [illegible] ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಳಕೆ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ವೇದವಲ್ಲಿಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಒಳ್ಳೆ ಸಮಾನ! 100 ರೂಪಾಯಿ ಬಹುಮಾನ!!

ಸುಲಭ ಕಿಮ್ಮತ್ತು.		ಸುಲಭ ಕಿಮ್ಮತ್ತು.

ಇಮಿಟೇಷನ್ ಸೀಮೆಕಲ್ಲಿನ ಒಲೆ.

ಈ ಇಮಿಟೇಷನ್ ಸೀಮೆಕಲ್ಲಿನ ಒಲೆ, ಅತ್ತರಗಳು ಮತ್ತು ದೂಪದ ಬಟ್ಟಲುಗಳು ಹೊಸದಾಗಿ ವಿಲಾಯಿತಿಯಿಂದ ಈಗ ತಾನೇ ನಾವು ತರಿಸಿ ಇರುತ್ತೇವೆ. ಈ ನಗಗಳು ನಿಜವಾದ ಸೀಮೆಕಲ್ಲಿನಂತೆ ಹೊಳೆಯುತ್ತವೆ. ಇದನ್ನು ನೋಡುವವರು ಸೀಮೆಕಲ್ಲಿನ ಒಲೆಯೆಂತ ಹೇಳುವರೆ ಹೊರತು ಬೇರಿಲ್ಲವು. ಇದನ್ನು ಅನೇಕ ವೈಭವಗಳು ಉಪಯೋಗಿಸಿ ಬರುವರು. ಈ ಕಲ್ಲುಗಳು ಕೋಟಿ ಸೂರ್ಯ ಪ್ರಕಾಶಕ್ಕೆ ಒಪ್ಪಾದ ಕಾಂತಿಯು ಮತ್ತು ನೋಡುವದಕ್ಕೆ ಅತಿ ಬೆಳಕಾಗಿ ಹೊಳೆಸುವದು. ಇದನ್ನು [illegible] ಸರಿಯಾಗಿಯೂ ಎಂದಿಗೂ ಕಪ್ಪಾಗದಂತೆ [illegible] ಅತಿ ಸುಂದರವಾದ ಕಟ್ಟಡವು ಕಟ್ಟಿರುತ್ತದೆ. ಇದು ಯಾವಾಗಲೂ ಕಪ್ಪಾಗದೆಂದು ಹೇಳುವದಲ್ಲದೆ ಅಪ್ಪಟ ಬಂಗಾರದಂತೆ ತಳತಳಿಸುವದೆಂದು ನಾವು ಖಂಡಿತ ಹೇಳುತ್ತೇವೆ. ಈ ನಗಗಳನ್ನು ಒಬ್ಬರು ತೆಗದುಕೊಂಡಲ್ಲಿ ನೋಡುವವರು ತೆಗಯದೆ ಇಂಥಾದರು, ಬಹಳ ಆಶ್ಚರ್ಯವಾದದ್ದು. ಈ ಸಮಾನು [illegible] ಬೇರೆ ಸಮಯ ಎಂದಿಗೂ ಸಿಗಲಾರದು. ಇದನ್ನು ತೆಗದುಕೊಂಡವರು ಇಷ್ಟವಿಲ್ಲದವರಿಗೆ ಅವರ ಹಣವು [illegible]

ಇದರ ಬೆಲೆ ಬಹಳ ಕಡಿಮೆ ಆದುದರಿಂದ ತ್ವರಿತ ಆರ್ಡರ್ ಕೊಡುವವರಿಗೆ ಸಿಗುವದೆ ಹೊರತು ಅನ್ಯರಿಗೆ ಸಿಗಲಾರದು

ಒಲೆ ಜತೆ ೧ಕ್ಕೆ ೨—೧—0

ಅತ್ತರದಾನಿ ಜತೆ ೧ಕ್ಕೆ —೧—0

ದೂಪದಾನಿಯ ೧ಕ್ಕೆ 1—0—0

ವಿ. ಪಿ. [illegible]

[illegible]

ವಿಳಾಸ:—ಗ. ಬಸವ ಅಂಡ್ ಕಂಪೆನಿ, ಮದರಾಸು

CHAMBERLAIN'S PAIN BALM

ಛೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



1-41

ಬೆನ್ನುಲುಬಿನಲ್ಲಿನ ನೋವು, ಕೀಲುಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಬಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡತಕ್ಕ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕ್ಷೀಣವಾಗಿ ಕಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇದೇ. ಇದೆಲ್ಲಾ ನಿನಗೆ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಕಾವು ಮೈಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು   ಸಣ್ಣ ಸೀಸೆಗೆ ೧ ರೂಪಾಯಿ.   ದೊಡ್ಡ ಸೀಸೆಗೆ ೨ ರೂಪಾಯಿ

ಮನೆ ಬಿಕರಿಗೆ ಸಿದ್ಧವಾಗಿದೆ.

82-1

ಮೈಸೂರು [illegible] ರಸ್ತೆಯಲ್ಲಿ [illegible] ಅಂಕಣದ [illegible] ಕೃಷ್ಣಸ್ವಾಮಿಯವರದ್ದು [illegible] ಬೇಕಾದವರು—[illegible] ಶ್ರೀಕಂಠಯ್ಯನವರಿಗೆ ಬರೆದು [illegible] ತಿಳಿದುಕೊಳ್ಳಬಹುದು

ವಾತಹರಿ.

51-1

ಒಂದು [illegible] ಆಣೆ [illegible]

ಈ ತೈಲವು [illegible], ಅರ್ಧತಲೆನೋವು, ವಾಯುವಿನಿಂದ [illegible] ಸೊಂಟನೋವು, [illegible], ಪಾರ್ಶ್ವವಾಯು, ಎದೆನೋವು, ಪೆಟ್ಟುಗಳಿಂದ ಉಂಟಾದ ಗಾಯ, ಬಜ್ಜು, [illegible] ವಾತ, ಮೇಹವಾತ, ನರ [illegible], ಕೀಲುವಾಯು, ಹಲ್ಲುನೋವು, ಬುಡ [illegible] ಸಂಬಂಧಪಟ್ಟ ದರ್ದು, ಚಳಿ [illegible], ಇತ್ಯಾದಿ ಅನೇಕ ವ್ಯಾಧಿಗಳಿಗೆ "ವಾತಹರಿ" ಅಂದರೆ

[illegible]

ಸಿಂಹದೋಪಾದಿ ಪ್ರಖ್ಯಾತಿಯಲ್ಲಿ ನಾಶಮಾಡುವುದು [illegible] ಈ ರೋಗಗಳೆಲ್ಲಾ ಈ ಔಷಧಿಯು [illegible] ಅನ್ಯ ಔಷಧಗಳಿಂದ [illegible] ಅನುಭವಿಸುವವರು ಕೂಡಲೇ ಬರೆದು [illegible] ಎಂದು ಎಂದಿಗೂ ವ್ಯಸನಪಡುವುದಿಲ್ಲ. [illegible] ಒಟ್ಟಿಗೆ ತರಿಸಿಕೊಳ್ಳುವರಿಗೆ [illegible] ಕ್ಯಾಟಲಾಗನ್ನು [illegible]

ವಿಳಾಸ—ಎಂ. ಗೋವಿಂದಶೆಟ್ಟಿ ಮೆಡಿಕಲ್

ಪ್ರಾಕ್ಟೀಷನರ್, ದೇವನಹಳ್ಳಿ.

ಸನ್ ೧೮೭೬ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 33-28

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ, ಸರ್ವೋತ್ಕೃಷ್ಟವಾದದ್ದೆಂದು ಹೇಳಿರುತ್ತಾರೆ.

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ.—

ಶ್ವಾಸಕೋಶದ ಆಕ್ರಮಗಳು; ನಾನಾ ತರದ ಕೆಮ್ಮುಗಳು;

ಸಕಲವಿಧ ಕ್ಷಯಗಳು; ಮಾಂಸಖಂಡಗಳ ಕ್ಷೀಣತೆ;

ಆಹಾರದಲ್ಲಿ ಅರುಚಿ.

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷದವೂ ಇದೇ.

ಕೈಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು.

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ವಿಮಾನವಿರುವ ಇರುವ ಔಷಧವನ್ನೇ ಕೊಂಡುಕೊಳ್ಳಿ.

6 ರೂಪಾಯಿಗಳ ಗಡಿಯಾರಕ್ಕೆ 56 ಸಾಮಾನುಗಳು ಇನಾಮು ಕೊಡಲ್ಪಡುವದು.

73 5

ಪಟ್ರಕಲುಗಳನ್ನು ಹಾಕಿಸಲ್ಪಟ್ಟ ನಿಕ್ಕಲ್ ಬೆಳ್ಳಿ ಗಡಿಯಾರವು.

ಈ ಸ್ವಿಸ್ ಲೀವರ್ ಗಡಿಯಾರವು ಸಾಧಾರಣ ಸಿಲಿಂಡರ್ ಗಡಿಯಾರಕ್ಕಿಂತಲೂ ಹೆಚ್ಚುಗಳು ಇರುವದೂ ಅಲ್ಲದೆ ಲೀವರ್ ಗಡಿಯಾರವು ಬಹಳ ಶ್ರೇಷ್ಠವಾದದ್ದೆಂದು ಎಲ್ಲರೂ ತಿಳಿದಿರುತ್ತೀರಿ. ಇದು

ಬಹಳ ಘಟ್ಟಿಯಾಗಿಯೂ, ಕಾಂತಿಯಾಗಿಯೂ, ಶೃಂಗಾರವಾಗಿಯೂ ಅಜಾಗ್ರತೆಯಾಗಿ ಉಪಯೋಗಿಸಲಿಕ್ಕೆ ತಕ್ಕ ಗಡಿಯಾರವಾಗಿಯೂ ಇದೆ. ಬಹುಮಾನಗಳು:— [illegible] ಕಟ್ಟಿಕೊಳ್ಳುವ [illegible] ಬೆಲ್ಟು, ಹವಳದ ಉಂಗುರ, ಜರ್ಮನ್ ಸಿಲ್ವರ್ ಗಡಿಯಾರ ಸರಪಣಿ, [illegible] ಕೇಸ್, [illegible] ಹಾಕಿಕೊಳ್ಳ [illegible], ಎರಡು [illegible] ಉಪ್ಪು ಪುಸ್ತಕ, ಕೆಂಗಸರು ತಲೆಯಲ್ಲಿಟ್ಟುಕೊಳ್ಳುವ [illegible] ನೋಡುವ ಚಿತ್ರ [illegible] ಗಡಿಯಾರ ಇಟ್ಟುಕೊಳ್ಳುವ [illegible] ಸಂಚಿ, ಗಡಿಯಾರದ [illegible], 8 ಆಭರಣಗಳನ್ನು ಇಟ್ಟುಕೊಳ್ಳುವ ಚಿತ್ರದ ಪೆಟ್ಟಿಗೆಗಳು, ಕತ್ತರಿಕೋಲು, ಪೆನ್ನಾಕತ್ತಿ, ಸೀನು ಪಾಟಲಾಕ್, ಸಿಗರೆಟ್ಟು, [illegible], ಬೇರಿಪಟವು, ದಂತದ ಹಣಿಗೆ [illegible] ನಸ್ಯದ ಡಬ್ಬಿ, ವಾಸನೆ ಪುಷ್ಪ ಬುರುಡೆ, ಬೀಗದ ಉಂಗುರ, ಸ್ಫಟಿಕದ ಕನ್ನಡಿ, ಹೇರ್ ಸ್ಪ್ರಿಂಗ್, ನೆಲ್ವೆಟ್ಟು ಪೆಟ್ಟಿಗೆ, ಮೇಣದ ಪೆನ್ಸಿಲ್, [illegible], ಸೊಗಸಾದ ಪಟ್ಟರ್ ಗುಂಡಿಗಳು, 20 ಅಂದವಾದ ಕಾಗದಗಳು, ಸ್ವದೇಶೀ ಪೇನಾ, ಸೋಪು ನಮ್ಮ ವಿಳಾಸ—

ಮದರಾಸ್ ಸೊಸೈಟಿ ವಾಚ್ ಡಿಪೋ,

ಪಾರ್ಕ್ ಟೌನ್, ಮದ್ರಾಸ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ [illegible] ತರಿಸಿಕೊಳ್ಳಿ.

2-41

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಬುದ್ಧಿಯಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದ ಮತ್ತು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಕಾಡು, ಕೆಂಪು, ಕಪ್ಪು, ಬೆರಕೆ, ಕಾಫಿ ಟೋಪಿಗಳು ೧ ರೂ ೮ ಆ. ೨ ರೂ ೩ ಆ.; ೧ ರೂ. ೪ ಆ.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ; ೨ ರೂ. [illegible] ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೩ ಆ. [illegible] ಟೋಪಿಗಳು ೧ ರೂ. ೮ ಆ., ೧ ರೂ. ೩ ಆ.

ಕೂಸುಗಳ ಟೋಪಿ, ಸೂಫಿ ಮೇಜೋಡು, ಅರ್ಧ ಪೇಟ [illegible] ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ೧ ಸ್ಟಾಂಪು ಕಳುಹಿಸುವವರಿಗೆ ಕೊಟ್ಟು ಕಳುಹಿಸುತ್ತೇವೆ.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ವೃತ್ತಾಂತ ಪತ್ರಿಕೆ.

೧೯೦೮ ನೇ ಇಸವಿ ಅಕ್ಟೋಬರ್ ತಾ. ೮ ನೇ ಗುರುವಾರ.

ಸರ್ಕಾರಿ ಪಾಠಶಾಲೆಗಳಲ್ಲಿ ಭಕ್ತಿ ನೀತಿಗಳನ್ನು ಕಲಿಸಿಕೊಡುವ್ರದು.

ಮೈಸೂರು ಗವರ್ನ್‌ಮೆಂಟಿನವರು ಮುಂದಿನ ತಿಂಗಳ ಪ್ರಾರಂಭದಿಂದ ಈ ಸಂಸ್ಥಾನದ ಸರ್ಕಾರಿ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸದ್ಭಕ್ತಿ, ಸದ್ಗುಣ, ಸಚ್ಚರಿತೆಗಳನ್ನು ಉಪಾಧ್ಯಾಯರು ಕಲಿಸುತ್ತಾ ಬರಬೇಕು ಎಂಬದಾಗಿ ಕಳೆದ ವಾರದ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಿದಾರೆ. ಈ ಹುಕುಮು ಬಹು ವಿಶೇಷವಾದದ್ದೇ ಸರಿ. ಆದರೆ ಅದನ್ನು ನಿರ್ಧರಿಸುವುದೂ ರೂಢಿಗೆ ತರುವುದೂ ಕಷ್ಟಕರವಾದದ್ದೆಂದು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಯಾಕೆಂದರೆ ಹಿಂದೂ, ಮಹಮ್ಮದೀಯ, ಕ್ರೈಸ್ತ ಮತತತ್ವಗಳು ಒಂದಕ್ಕೊಂದು ಸರಿಹೋಗತಕ್ಕವುಗಳಾಗಿಲ್ಲ. ಇದಲ್ಲದೆ ಹಿಂದುಗಳಲ್ಲೇ ಅನೇಕ ಪ್ರತ್ಯೇಕ ಪಂಗಡಗಳೂ ಇರುತ್ತವೆ. ಭಕ್ತಿವಿಚಾರಗಳೂ ಆಚಾರವ್ಯವಹಾರಗಳೂ ಬೇರೆ ಬೇರಾಗಿರುವವು. ಆದರೂ ನೀತಿಮಾರ್ಗಗಳನ್ನು ತೋರಿಸಿ ಕಲಿಸುವ ಭಾಗದಲ್ಲಿ ಅಂಥಾ ಕಷ್ಟವೇನೂ ಇರಲಾರದು. ನಿಜವನ್ನು ಹೇಳುವುದು, ಸತ್ಯವಂತರಾಗುವುದು, ಗುರುಹಿರಿಯರನ್ನು ಭಯಭಕ್ತಿಯಿಂದ ಕಾಣುವುದು, ಪ್ರೀತಿಪಾತ್ರಳ್ಳವರಾಗುವುದು, ಸ್ವಾರ್ಥವನ್ನು ಬಿಟ್ಟು ಪರಾರ್ಥವನ್ನು ಬಯಸುವುದು, ಈ ಮೊದಲಾದ ಶ್ರೇಷ್ಠ ಗುಣಗಳನ್ನು ಗಂಡು ಹೆಣ್ಣು ಮಕ್ಕಳಿಗೆ ಕಲಿಸಬೇಕೆಂಬ ವಿಷಯದಲ್ಲಿ ಲೋಕದಲ್ಲಿರತಕ್ಕ ಸಮಸ್ತ ಮತಗಳೂ ಒಂದಾಗಿರುತ್ತವೆ. ಈ ಭಾಗದಲ್ಲಿ ಯಾವ ಮತವೂ ಭಿನ್ನಾಭಿಪ್ರಾಯ ಪಡಲಾರದು. ಯಾವ ಮತದ ಪತಿಗಳ ಭಕ್ತಿಮಾರ್ಗಕ್ಕೂ ವಿರೋಧವಾಗದಂಥಾ ಮತ್ತು ಸಕಲರೂ ಒಪ್ಪಿ ಅನುಸರಿಸುವಂಥಾ ನೀತಿಗಳನ್ನೂ ಕರ್ತವ್ಯಾಂಶಗಳನ್ನೂ ವಿವರವಾಗಿ ಬರೆದು ತಿಳಿಸುವುದರಲ್ಲಿ ಗವರ್ನ್‌ಮೆಂಟಿನವರಿಗೆ ಕಷ್ಟವಿಲ್ಲ. ಮಕ್ಕಳಿಗೆ ಇಂಥಾ ವಿಷಯಗಳನ್ನು ಕಲಿಸತಕ್ಕದ್ದೆಂದು ಸರ್ಕಾರದವರು ನಿರ್ದೇಶಿಸುವುದು ಸಾಧ್ಯವಾಗಿರುತ್ತದೆ.

ಪಾಠಶಾಲೆಗಳಲ್ಲಿ ಮಕ್ಕಳಿಗೆ ವಾರಕ್ಕೆ ಮೂರು ದಿನ ನೀತಿಮಾರ್ಗ ವಿಚಾರವನ್ನೂ, ಎರಡು ದಿನ ಮತಭಕ್ತಿ ವಿಚಾರವನ್ನೂ ಕುರಿತು ವ್ಯಾಸಂಗಮಾಡಿಸಬೇಕೆಂಬದಾಗಿ ವಿದ್ಯಾಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರಾದ ಮಿ. ಎಚ್. ಜೆ. ಭಾಭಾ ಯವರು ಸೂಚಿಸಿದಂತೆ ಗವರ್ನ್‌ಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ. ಈ ಉದ್ದೇಶವು ಸಾರ್ಥಕವಾಗುವುದಕ್ಕೆ ಒಂದು ದೊಡ್ಡ ಕೊರತೆಯುಂಟೆಂದು ನಮಗೆ ತೋರುವುದು. ಈ ವಿಷಯಗಳನ್ನು ಕುರಿತು ಹಿಂದುಸ್ಥಾನದ ಜನರಿಗೆ ಉಪಯುಕ್ತವಾದಂಥಾ ರೀತಿಯಲ್ಲಿ ಬರೆದಿರುವ ಪುಸ್ತಕಗಳು ಇನ್ನೂ ದೊರಕುವಹಾಗಿಲ್ಲ. ಯೂರೋಪು ಮತ್ತು ಅಮೇರಿಕ ಖಂಡಗಳ ಪ್ರಜೆಗಳಿಗೆ ಅನುಕೂಲವಾಗಿರತಕ್ಕ ಪುಸ್ತಕಗಳು ದೊರಕುವಹಾಗಿದ್ದರೂ, ಅವುಗಳನ್ನು ಈ ದೇಶಕ್ಕೆ ತಕ್ಕಂತೆ ತಿದ್ದಿ ಕ್ರಮಪಡಿಸಿ ಪ್ರಕಟಿಸಬೇಕಾಗಿರುವುದು. ವಿದ್ಯಾರ್ಥಿಗಳಿಗೆ ಯಾವ ಯಾವ ವಿಷಯಗಳನ್ನು ಕಲಿಸಬೇಕಾಗಿರುವುದೋ ಅದನ್ನು ಉಪಾಧ್ಯಾಯರೇ ಯೋಚಿಸಿ ಹೇಳಿಕೊಡಲಿ ಎಂದು ಅವರ ವಿವೇಚನೆಗೆ ಬಿಡುವುದು ಸಹಜವಾಗಿ ಕಾಣಲಾರದು. ವಾರಕ್ಕೆ ಮೂರು ದಿನ ನೀತಿಮಾರ್ಗವನ್ನು ಕುರಿತು ಪ್ರಸ್ತಾಪಮಾಡಿ ಕಲಿಸುವುದು ಬಹಳ ಅನುಭವಶಾಲಿಗಳಾದ ಉಪಾಧ್ಯಾಯರಿಗೂ ಕೂಡ ಕಷ್ಟವಾಗಿರುತ್ತದೆ. ಈ ಭಾಗದಲ್ಲಿ ಕ್ರಮವಾದ ಪುಸ್ತಕಗಳಿಲ್ಲದೆ ಹೋದರೆ ಬೋಧಕರಿಗೆ ಬಹಳ ಆಲಸ್ಯಗಳೂ, ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಪ್ರಯೋಜನಗಳೂ ಉಂಟಾಗುವವೆಂದು ನಾವು ಹೇಳಬೇಕಾದದ್ದಿಲ್ಲ.

ಇನ್ನೊಂದು ವಿಷಯವೇನೆಂದರೆ, ನೀತಿ ಮಾರ್ಗಗಳನ್ನು ಕುರಿತು ನಿಯಮಿತ ರೀತಿಯಲ್ಲಿ ಚಿಕ್ಕ ಮಕ್ಕಳಿಗೆ ಸಮ್ಯಗ್ಬೋಧೆ ಮಾಡುವುದಕ್ಕೆ ಕೆಲವು ಉಪಾಧ್ಯಾಯರಿಗೆ ಬುದ್ಧಿ ಕುಶಲತೆಯಾಗಲಿ, ತಾರತಮ್ಯಜ್ಞಾನವಾಗಲಿ, ತಕ್ಕ ಶೀಲ ಸ್ವಭಾವವಾಗಲಿ ಇರುವುದಿಲ್ಲವೆಂದು ದಾರಾಳವಾಗಿ ಹೇಳುತ್ತೇವೆ. ಆದಕಾರಣ ಮಕ್ಕಳಿಗೆ ಕಲಿಸಿಕೊಡತಕ್ಕಂಥಾ ಧರ್ಮನೀತಿಗಳನ್ನು ಉದಹರಿಸಿ, ಅವು ಚಿಕ್ಕ ವಯಸ್ಸಿನವರ ಮನಸ್ಸಿಗೆ ಹಿಡಿಯುವಂತೆ ಸಣ್ಣ ದೊಡ್ಡ ಕಥೆಗಳ ರೂಪದಲ್ಲಿ ಬರೆದು ಪುಸ್ತಕಗಳಾಗಿ ಪ್ರಕಟಿಸುವುದಕ್ಕೆ ಮೈಸೂರು ಗವರ್ನ್‌ಮೆಂಟಿನವರು ಮೊದಲು ಪ್ರಯತ್ನಪಡತಕ್ಕದ್ದಾಗಿದೆ. ಇಂಥಾ ಪುಸ್ತಕಗಳನ್ನು ಹಿಡಿದು ಉಪಾಧ್ಯಾಯರು ಮಕ್ಕಳಿಗೆ ವ್ಯಾಸಂಗ ಮಾಡಿಸುವುದು ಸುಲಭವಾದೀತು. ಬೋಧಿಸಲ್ಪಡುವ ವಿಷಯಗಳು ಸರ್ವಮತ ಸಮ್ಮತಗಳಾಗಿಯೇ ಇರಬೇಕು. ತಂದೆತಾಯಿಗಳ ವಿಷಯದಲ್ಲಿ, ಪ್ರಜಾಪಾಲಕರ ವಿಷಯದಲ್ಲೂ, ಜನ ಸಾಮಾನ್ಯದ ವಿಷಯದಲ್ಲೂ ಯಾವ ಯಾವ ತರದ ಧರ್ಮಗಳನ್ನು ಮಕ್ಕಳು ಕಲಿತು ಅಭ್ಯಾಸಕ್ಕೆ ತರಬೇಕೋ ಅವರಿಗೆ ಸವಿಸ್ತಾರವಾಗಿ ತಿಳಿಸುವಂಥಾ ಪುಸ್ತಕಗಳಿರಬೇಕು. ಮತ್ತು ಸಾಮಾನ್ಯವಾದ ಸಮಸ್ತ ನೀತಿಮಾರ್ಗಗಳನ್ನೂ ಕಲಿಸಿಕೊಡುವಂತಾಗಬೇಕು.

ಇತ್ಯರ್ಥವಾಗಿ ಮಕ್ಕಳಿಗೆ ಭಕ್ತಿಮಾರ್ಗವನ್ನು ಎಂದರೆ ದೇವರ ಆರಾಧನೆಯನ್ನೂ ಅದರ ವಿಧಾನಗಳನ್ನೂ ಕಲಿಸಿಕೊಡಬೇಕೆಂಬ ವಿಷಯದಲ್ಲಿ ಗವರ್ನ್‌ಮೆಂಟಿನವರು ಮಾಡಿರುವ ಏರ್ಪಾಡು ನ್ಯಾಯವಾಗಿರುತ್ತದೆ. ಈ ಸಂಸ್ಥಾನದ ಸಮಸ್ತ ಪಾಠಶಾಲೆಗಳಲ್ಲಿಯೂ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಬಹು ಭಾಗವೆಲ್ಲಾ ಹಿಂದುಗಳೇ ಆಗಿರುವರು. ಇತರ ವರ್ಣಾಶ್ರಮದವರು ಕೆಲವು ಕೆಲವರಾಗಿರುತ್ತಾರೆ. ಆದಕಾರಣ ಮತಭಕ್ತಿಯನ್ನು ಕುರಿತು ಬೋಧಿಸುವುದಕ್ಕೆ ತಕ್ಕ ಏರ್ಪಾಡುಮಾಡುವುದು ಸುಲಭ. ವಿದ್ಯಾರ್ಥಿಗಳಲ್ಲಿ ಮಹಮ್ಮದೀಯರೂ ಕ್ರೈಸ್ತರೂ ತಕ್ಕಮಟ್ಟಿಗೆ ಇದ್ದು, ಅವರಿಗೆ ಅವರ ಮತತತ್ವಗಳನ್ನು ಕಲಿಸಿಕೊಡಬೇಕೆಂಬ ಆವಶ್ಯಕತೆಯು ಕಂಡುಬಂದಲ್ಲಿ ಗವರ್ನ್‌ಮೆಂಟಿನವರು ಆ ರೀತಿ ಅನುಕೂಲಮಾಡಿಕೊಡುವರು.

ಗವರ್ನ್‌ಮೆಂಟಿನವರು ಈ ಹುಕುಮನ್ನು ಮುಂದಿನ ನವೆಂಬರ್ ತಿಂಗಳಿಂದ ಜಾರಿಗೆ ತರಬೇಕೆಂದು ಅಪ್ಪಣೆ ಕೊಡಿಸಿರುವುದು ಅಷ್ಟು ಅನುಕೂಲವಾಗಿರುವಂತೆ ಕಾಣುವುದಿಲ್ಲ. ಅದಕ್ಕೆ ಬದಲಾಗಿ ಮುಂದಿನ ವರುಷದ ಪ್ರಾರಂಭದಿಂದ ಈ ಹುಕುಮನ್ನು ಜಾರಿಗೆ ತರುವಂತೆ ಮಾಡಿದ್ದರೆ ಚೆನ್ನಾಗಿತ್ತು. ಯಾಕೆಂದರೆ ಲೋವರ್ ಸೆಕೆಂಡ್ರಿ ಮತ್ತು ಹೈ ಸ್ಕೂಲ್ ತರಗತಿಗಳಲ್ಲಿ ಪರೀಕ್ಷೆಗೆ ಪಣಕಟ್ಟಿ ವ್ಯಾಸಂಗ ಮಾಡುತ್ತಿರುವಂಥಾ ವಿದ್ಯಾರ್ಥಿಗಳಿಗೆ ಆ ಪರೀಕ್ಷೆಗಳ ನಿಮಿತ್ತ ಮನಸ್ಸು ಚಂಚಲಪಟ್ಟಿರುತ್ತದೆ. ಪರೀಕ್ಷೆಗಳು ಸಮೀಪವಾದವು. ಸದ್ಯದಲ್ಲಿ ಉಪಾಧ್ಯಾಯರು ಅವರನ್ನು ತರಪೇತು ಮಾಡುವುದರಲ್ಲೂ, ವಿದ್ಯಾರ್ಥಿಗಳು ವ್ಯಾಸಂಗ ಮಾಡುವುದರಲ್ಲೂ ಮಗ್ನರಾಗಿರುತ್ತಾರೆ. ಆದರೂ ಈ ನಮ್ಮ ಆಕ್ಷೇಪಣೆಯು ಅಷ್ಟೇನೂ ದೊಡ್ಡದೆಂದು ಭಾವಿಸಬೇಕಾದದ್ದಿಲ್ಲ. ಗವರ್ನ್‌ಮೆಂಟಿನವರು ಈಗ ಪ್ರಾರಂಭಿಸಿರುವ ಕಾರ್ಯವು ಫಲಕಾರಿಯಾಗಿ, ಪ್ರಜೆಗಳ ಮತ ಭಕ್ತಿ ಆಚಾರಗಳೂ ನೀತಿ ಗುಣ ನಡತೆಗಳೂ ಈ ಸಂಸ್ಥಾನದಲ್ಲೆಲ್ಲಾ ಒದಬಾಹಣೆಯಾಗಿ ವಿದ್ಯಾರ್ಥಿಷ್ಠವಾಗುವುದಕ್ಕೆ ಸಹಕಾರಿಯಾದೀತೆಂದು ನಾವು ನಿರೀಕ್ಷಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಕೋಲಾರ ಚಿನ್ನದ ಗಣಿಗಳಲ್ಲಿ ಬೀದಿಗಳಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸಬೇಕೆಂದು ಪ್ರಯತ್ನಪಡುತ್ತಿದ್ದಾರೆಂದು ತಿಳಿಯುವುದು.

* * *

ಬೆಂಗಳೂರು ಡೇಲಿ ಪೋಸ್ಟ್ ಪ್ರೆಸ್ಸಿನ ಆಫೀಸಿನ ಕಾರ್ಯನಿರ್ವಹಣೆಯನ್ನು ಅಲ್ಲಿನ ಅಡ್ವೋಕೇಟು ಮಿ|| ಎ. ಧೀನುದಾಸರು ಮಿಸ್ಟರ್ ಎ. ಇ. ಡಾಸನ್ ಎಂಬಾತನಿಂದ ಕ್ರಯಕ್ಕೆ ಪಡೆದುಕೊಂಡರೆಂದು ತಿಳಿಯುವುದು.

* * *

ಮುಂದಿನ ತಿಂಗಳ ಪ್ರಾರಂಭದಿಂದ ಮೈಸೂರು ಸಂಸ್ಥಾನದ ಎಲ್ಲಾ ಸರ್ಕಾರೀ ಪಾಠಶಾಲೆಗಳಲ್ಲೂ ವಿದ್ಯಾರ್ಥಿಗಳಿಗೆ ಸದ್ಗುಣ, ಸದ್ಭಕ್ತಿ, ಸದಾಚಾರಗಳನ್ನು ಪ್ರತಿದಿನವೂ ಅರ್ಧ ಗಂಟೆಯ ಹೊತ್ತು ಕಲಿಸಿಕೊಡಬೇಕೆಂದು ಗವರ್ನ್‌ಮೆಂಟಿನವರು ವಿಧಾಯಕಮಾಡಿದ್ದಾರೆ.

* * *

ರಾಜಧಾನಿಯ ಕರುಣಾಪುರದಲ್ಲೂ ಅದರ ಸಮೀಪದಲ್ಲೂ ಕಳೆದ ಗುರುವಾರ ನಾಲ್ಕು ಕಡೆ ಕಳ್ಳರು ಬಿದ್ದರೆಂದು ಕೇಳಿದೆವು. ಪೋಲೀಸ್ ಇಲಾಖೆಯವರು ಬಹಳ ಎಚ್ಚರಿಕೆಯಿಂದ ಉಸ್ತುವಾರಿ ಮಾಡಿ, ದುಷ್ಟರನ್ನು ಹಿಡಿಯದೆಹೋದರೆ ಅಪಾಯಕ್ಕೆ ಗುರಿಯಾದಾರು.

* * *

ರಾಜಧಾನಿಯಲ್ಲಿ ಮಹಮ್ಮದೀಯ ವಿದ್ಯಾಪ್ರೋತ್ಸಾಹಕ ಸಂಘದವರು ಈ ತಿಂಗಳ ೩೧ ನೇ ತಾ. ಶನಿವಾರ ೬ ನೆಯ ವಾರ್ಷಿಕೋತ್ಸವವನ್ನು ನಡೆಸುವರೆಂತಲೂ, ಆಗ ನವಾಬ್ ಎಂ. ರಾಜತರಾಜೀ ಅರಸಿನವರು ಸಭೆಯ ಅಗ್ರಾಸನವನ್ನು ವಹಿಸುವರೆಂತಲೂ ತಿಳಿಯುವುದು.

* * *

ಈ ದಿನ ಮಧ್ಯಾಹ್ನ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಗುತ್ತದೆ. ರಾತ್ರಿ ಶ್ರೀಮನ್ ಮಹಾರಾಜರವರು ಗವರ್ನ್‌ಮೆಂಟ್ ಹೌಸ್ ಬಂಗಲೆಯಲ್ಲಿ ರೆಸಿಡೆಂಟರೇ ಮೊದಲಾದ ಸರ್ದಾರರಿಗೆಲ್ಲಾ ಔತಣವನ್ನು ಮಾಡಿಸುವರು.

* * *

ಮೊದಲು ಈ ಸಂಸ್ಥಾನದಲ್ಲೂ ಈಗ ಕಾಶ್ಮೀರ ಸಂಸ್ಥಾನದಲ್ಲೂ ವಿದ್ಯುಚ್ಛಕ್ತಿಯ ಕಾರ್ಖಾನೆಗಳನ್ನು ಸ್ಥಾಪನೆಮಾಡಿದ ಮೇಜರ್ ಜಾಲಿ ಡಿ ಲಾಟಬಿನಿಯರ್ ಯವರನ್ನು ಮೈಸೂರು ಗವರ್ನ್‌ಮೆಂಟಿನವರು ಇಲ್ಲಿನ ಚೀಫ್ ಇಂಜನಿಯರಾಗಿ ನೇಮಿಸಿಕೊಳ್ಳಬೇಕೆಂದು ಯೋಚಿಸುತ್ತಿರುವುದಾಗಿ ವರ್ತಮಾನವಿದೆ.

* * *

ಈ ದಿನ ಮಧ್ಯಾಹ್ನ ಇಲ್ಲಿನ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳು ತಮ್ಮಲ್ಲಿ ಇಬ್ಬರನ್ನು ನ್ಯಾಯ ವಿಧಾಯಕ ಸಭೆಗೆ ಮೆಂಬರಾಗಿ ಚುನಾಯಿಸುವವರಾಗಿದ್ದರಷ್ಟೆ. ಸರ್ಕಾರದವರು ಇದನ್ನು ಬದಲಾಯಿಸಿ, ಮುಂದಿನ ತಾ. ೧೦ ನೇ ಶನಿವಾರ ಮಧ್ಯಾಹ್ನ ೪ ಗಂಟೆಯ ಮೇಲೆ ಚುನಾವಣೆ ನಡೆಯಲೆಂದು ಅಪ್ಪಣೆಕೊಟ್ಟಿದಾರೆ.

ಕಳೆದ ಶುಕ್ರವಾರ ಸಾಯಂಕಾಲ ಇಲ್ಲಿನ ಹೆಡ್ ಪೋಸ್ಟ್ ಆಫೀಸಿನ ಬಳಿ ಒಂದು ಕುಂಟುಕುದುರೆಯು ಒಬ್ಬ ಮುದುಕಿಯನ್ನು ಒದ್ದು ಕೆಡಹಿತು. ಮುದುಕಿಗೆ ಗಾಯವಾಗಿ ರಕ್ತಹರಿಯುತ್ತಿದ್ದದ್ದನ್ನು ಪೋಸ್ಟ್ ಮಾಸ್ಟರವರು ತಿಳಿದು ಒಡನೆಯೇ ಆಕೆಯನ್ನು ಗಾಡಿಯಲ್ಲಿ ಕುಳ್ಳಿರಿಸಿ ಆಸ್ಪತ್ರೆಗೆ ಕಳುಹಿಸಿ ಉಪಚಾರ ನಡೆಯುವಂತೆ ಮಾಡಿದರು. ಅವರ ಕರುಣೆಯನ್ನು ನೋಡಿ ಬಹುಜನರು ಸಂತೋಷಪಟ್ಟರು.

* * *

"ಜಗದ್ಗುರು" ಎಂಬ ಪಕ್ಷ ಪತ್ರಿಕೆಯನ್ನು ನಡಿಸುತ್ತಿದ್ದ ಮೆ|| ಬಿ. ಸಿ. ಶ್ರೀನಿವಾಸೈಯಂಗಾರ್ರು ಇನ್ನು ಮುಂದೂ ಇದನ್ನು ನಡಿಸುವ ಭಾಗದಲ್ಲಿ ಮೈಸೂರು ವರ್ತಮಾನ ಪತ್ರಿಕೆಗಳ ಕಾನೂನ್ ಪ್ರಕಾರ ತಮಗೆ ಅಪ್ಪಣೆಕೊಡಬೇಕೆಂದು ಅರ್ಜಿ ಬರೆದುಕೊಂಡಿದ್ದದ್ದಕ್ಕೆ ಗವರ್ನ್‌ಮೆಂಟಿನವರು ಅವರಿಗೆ ಆ ಪತ್ರಿಕೆಯನ್ನು ನಡಿಸಲು ಅಪ್ಪಣೆಕೊಡಲಾಗುವುದಿಲ್ಲವೆಂದು ಹುಕುಂ ಕೊಟ್ಟಿರುವುದಾಗಿ ಕೇಳುತ್ತೇವೆ.

* * *

ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪಿಯನ್ ಸರ್ದಾರರು ಕಳೆದ ಶನಿವಾರ ರಾಜಧಾನಿಗೆ ಬಂದು ಶ್ರೀಮನ್ ಮಹಾರಾಜರವರ ನವರಾತ್ರಿ ಕಟ್ಲೆಯ ಔತಣವನ್ನು ಸ್ವೀಕರಿಸುತ್ತಿದಾರೆ. ಕಳೆದ ಶನಿವಾರ ಜಗನ್ಮೋಹನ ಬಂಗಲೆಯಲ್ಲಿ ಶ್ರೀಮನ್ ಮಹಾರಾಜರವರು ಯೂರೋಪಿಯನ್ ಸರ್ದಾರರನ್ನು ಕರೆಸಿಕೊಂಡು, ದಿವ್ಯವಾದ ದರ್ಬಾರ್ ನಡಿಸಿದರು. ಆ ದಿನ ಹಾರಿಸಿದ ಬಾಣಬಿರುಸುಗಳು ನೇತ್ರಾನಂದಕರಗಳಾಗಿದ್ದವು.

* * *

ಸುಟ್ಟುಹೋದ ಅರಮನೆಯ ಆನೆಬಾಗಿಲನ್ನು ಶ್ರೀಮನ್ ಮಹಾರಾಜರವರು ಪುನಹಾ ಚಿನ್ನದ ಮುಲಾಮುಮಾಡಿಸಿ, ಚಾಮುಂಡೀ ಬೆಟ್ಟದ ಮೇಲಣ ದೇವಸ್ಥಾನದ ಮಹಾದ್ವಾರಕ್ಕೆ ಬಾಗಿಲಾಗಿ ಮಾಡಿಸಿದರು. ಮತ್ತು ಆ ದೇವಸ್ಥಾನದ ಗರುಡಗಂಬಕ್ಕೆ ವಿಗ್ರಹಗಳನ್ನು ಬಿಡಿಸಿದ ಬೆಳ್ಳಿ ತಗಡುಗಳನ್ನು ಮಾಡಿಸಿಕೊಟ್ಟರು. ಇವೆರಡೂ ಕಳೆದ ವಾರ ಪ್ರತಿಷ್ಠೆಮಾಡಲ್ಪಟ್ಟವು. ಇದಕ್ಕೆಲ್ಲಾ ಸುಮಾರು ಆರು ಸಾವಿರ ರೂಪಾಯಿ ಖರ್ಚಾಗಿರಬಹುದೆಂದು ಕೇಳುತ್ತೇವೆ.

* * *

ಮೊನ್ನೆ ಮಂಗಳವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಆರ್ಯಸಮೋಜ್ಜೀವಿನಿ ಸಮಾಜದ ವಾರ್ಷಿಕೋತ್ಸವವು ನಡಿಸಲಾಯಿತು. ಮೆ|| ಜಸ್ಟಿಸ್ ಎಚ್. ವಿ. ನಂಜುಂಡೈಯನವರು ಸಭೆಯ ಅಗ್ರಾಸನವನ್ನು ವಹಿಸಿ ಉಪನ್ಯಾಸಮಾಡಿದರು. ಸೆಕ್ರೆಟರಿ ಮೆ|| ಎ. ಸುಬ್ರದೇವಶಾಸ್ತ್ರಿಯವರು ಸಭೆಯ ವಾರ್ಷಿಕ ರಿಪೋರ್ಟನ್ನು ಇಂಗ್ಲೀಷಿನಲ್ಲಿ ಓದಿದರು. ಮೆ|| ಎಂ. ವೆಂಕಟಕೃಷ್ಣಯ್ಯನವರು ಆ ರಿಪೋರ್ಟಿನ ಕೆಲಂಶ ಭಾಗವನ್ನು ಕನ್ನಡದಲ್ಲಿ ಸಭಿಕರಿಗೆ ತಿಳಿಸಿದರು.

* * *

ಮೊನ್ನೆ ಸೋಮವಾರ ರಾಜಧಾನಿಯಲ್ಲಿ ಪದ್ಧತಿಯ ಪ್ರಕಾರ ವಿಜಯದಶಮಿ ಉತ್ಸವವು ಮೆರವಣಿಗೆಯೂ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ರಾಜಧಾನಿಯಲ್ಲಿ ಈಗ ಪ್ಲೇಗ್ ಮೊದಲಾದ ಯಾವದೊಂದು ಈತಿ ಬಾಧೆಯೂ ಇಲ್ಲದಿರೋಣದರಿಂದ ನವರಾತ್ರಿ ಉತ್ಸವಗಳನ್ನು ನೋಡುವುದಕ್ಕೆ ಅನೇಕ ಸಾವಿರ ಜನರು ಇತರ ಕಡೆಗಳಿಂದ ಬಂದಿರುತ್ತಾರೆ. ಇಷ್ಟು ಜನರು ರಾಜಧಾನಿಯಲ್ಲಿ ನೆರೆದಿದ್ದದ್ದನ್ನು ನೋಡಿ ಹತ್ತು ವರುಷಗಳಾದವು. ಜನರ ನೋಟಕ್ಕೂ ವಿನೋದಕ್ಕೂ ನಾನಾ ಏರ್ಪಾಡುಗಳು ಉಂಟು.

* * *

ತುಂಕೂರು ಡಿಸ್ಟ್ರಿಕ್ಟ್ ದೇವರಾಯದುರ್ಗದ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಕಳೆದ ವರುಷ ಡಕಾಯಿತರು ಸುಮಾರು ೮–೯ ಸಾವಿರ ರೂಪಾಯಿ ಬಾಳುವ ನಗನಾಣ್ಯಗಳನ್ನು ಹೊತ್ತುಕೊಂಡುಹೋಗಿದ್ದರು. ಈಚೆಗೆ ಹಾಫೀಜಾಬೆ ಉರುಫ್ ಮಹಮದ್‌ಖಾನ್ ಎಂಬವನ ವಶದಲ್ಲಿ ಕೆಲವು ನಗಗಳು ಸಿಕ್ಕಿ ನೆಸರ್ಕಾರ್ ಜಡ್ಜರು ಅವನನ್ನು ವಿಚಾರಣೆಮಾಡಿದ್ದರಲ್ಲಿ ತಪ್ಪಿತಸ್ಥನೆಂದು ತೀರ್ಮಾನವಾಯಿತು. ಈಗ ಅಪರಾಧಿಗೆ ಚೀಫ್ ಕೋರ್ಟಿನಲ್ಲಿ ೫ ವರುಷಗಳ ಕಠಿಣ ಸಜಾ ಶಿಕ್ಷೆಯು ವಿಧಿಸಲ್ಪಟ್ಟಿದೆ. ಮತ್ತು ಸಿಕ್ಕಿರುವ ನಗಗಳು ಸದರೀ ದೇವಸ್ಥಾನದ ಧರ್ಮಕರ್ತರಾದ ಮೆ|| ನಲ್ಲಪ್ಪನವರ ವಶಕ್ಕೆ ಕೊಡತಕ್ಕದ್ದೆಂದು ತೀರ್ಮಾನವಾಯಿತು.

* * *

ನೆನ್ನೆ ಬೆಳಿಗ್ಗೆ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಒಹು ಮಂದಿ ಪ್ರಜಾಪ್ರತಿನಿಧಿಗಳು ತಾವ್ತಾವೇ ಸೇರಿ ಒಂದು ಸಭೆ ನಡಿಸಿ ತೀರ್ಮಾನವಾಡಿಕೊಂಡಿರುವುದೇನೆಂದರೆ:—(೧) ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಒಂದು ಡಿವಿಜನ್ನಿಂದ ಲಾಯರಾಗಿರುವಂಥಾ ಮೆಂಬರನ್ನೂ, ಎರಡನೇ ಡಿವಿಜನ್ನಿಂದ ಪ್ರಜಾ ಸಾಮಾನ್ಯದ ಕುಂದುಕೊರತೆಗಳನ್ನು ತಿಳಿದಿರುವಂಥಾ ಮೆಂಬರನ್ನೂ ಚುನಾಯಿಸಬೇಕು. (೨) ದಿವಾನ್‌ರವರು ಸಭೆಯಲ್ಲಿ ಓದಿ ಹೇಳುವ ಅಡ್ರೆಸ್ಸನ್ನು ನೋಡಿಕೊಂಡು, ಅವಶ್ಯವಿದ್ದರೆ ಅವರು ಸೂಚಿಸುವಂಥಾ ವಿಷಯಗಳನ್ನು ಚರ್ಚಿಸಿ, ಅದಕ್ಕೆ ತಕ್ಕ ಪ್ರತ್ಯುತ್ತರವನ್ನು ಬರೆದು ಒಪ್ಪಿಸಬೇಕು. (೩) ಮೈಸೂರು ಪ್ರೆಸ್ ರೆಗ್ಯುಲೇಷನ್ ವಿಷಯದಲ್ಲಿ ಅದರ ಕಾಠಿಣ್ಯ ಭಾಗವನ್ನು ಕೂಡಿದಮಟ್ಟಿಗೂ ಕಡಮೆಮಾಡಿಕೊಡಬೇಕೆಂದು ಶ್ರೀಮನ್ ಮಹಾರಾಜರವರಿಗೆ ವಿಜ್ಞಾಪನೆ ಮಾಡಿಕೊಳ್ಳಬೇಕು.

ಮೈಸೂರು ಅನಾಥ ಬಾಲಿಕಾಶ್ರಮ.

ರಾಯಬಹದ್ದೂರ್ ರಾಜಕಾರ್ಯ ಪ್ರಸಕ್ತ ಲೇಟ್ ದರ್ಬಾರ್ ಬಕ್ಷಿ ಎ. ನರಸಿಂಹ ಅಯ್ಯಂಗಾರ್ಯರ ವಿಜ್ಞಪ್ತಿ:- ಪ್ಲೇಗಿನ ಹಾವಳಿಯಿಂದಲೂ ಇತರ ಕಾರಣಗಳಿಂದಲೂ ಮೈಸೂರು ಸೀಮೆಯಲ್ಲಿ ಅನೇಕ ಬಾಲವಿತಂತುಗಳಿಗೆ ಸಂಕಟವು ಪ್ರಾಪ್ತವಾಗಿರುವುದು ಸರಿಯಷ್ಟೆ. ಅನೇಕವೆಂದರೆ, ಹದಿನೈದು ವಯಸ್ಸು ಮತ್ತು ಅದಕ್ಕೆ ಕಡಮೆಯಾದ ವಯಸ್ಸಿನ ಬಾಲವಿತಂತುಗಳು ಹದಿಮೂರು ಸಹಸ್ರವಿರುವರು. ಇವರಲ್ಲಿ ರಕ್ಷಕರೂ ಪೋಷಕರೂ ಉಳ್ಳಂಥವರ ಸಂಖ್ಯೆಯು ಅರ್ಧಕ್ಕಿಂತ ಹೆಚ್ಚಾಗಿದೆ ಎಂದು ಭಾವಿಸಿದರೂ ಅನಾಥರಾಗಿ ಜೀವಿಸುವದೇ ಕಷ್ಟವಾಗಿ ಬಹು ಶ್ರಮದಶೆಯಲ್ಲಿ ನರಳುತ್ತ ನಶಿಸುತ್ತಿರುವವರು ಸುಮಾರು ನಾಲ್ಕೈದು ಸಹಸ್ರಕ್ಕೆ ಕಡಮೆ ಬೇರೆ ಇಲ್ಲ. ಈ ಸ್ಥಿತಿಯನ್ನು ಯೋಚಿಸಿದರೆ ದೇಶೋನ್ನತಿಯಲ್ಲಿ ಅಭಿಮಾನವುಳ್ಳ ಯಾವನ ಹೃದಯ ತಾನೇ ಕರಗದು! ಹೀಗಿರಲು ಈ ನಿರ್ಗತಿಕರ ಉಜ್ಜೀವನವು ದೇಶೀಯರ ಕರ್ತವ್ಯವಲ್ಲವೇ? ಇವರಿಗೆ ವಿದ್ಯಾಭ್ಯಾಸವನ್ನು ಮಾಡಿಸಿದಲ್ಲಿ ಇವರು ಲೋಕೋಪಕಾರಿಣಿಯರಾಗಿ ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಳ್ಳಲಾರರೇ?

ಇವರಿಗೆ ವಿದ್ಯಾಭ್ಯಾಸವು ವೈದಿಕವೆಂದೂ ಲೌಕಿಕವೆಂದೂ ಎರಡು ವಿಧವಾಗಿರುವುದು. ವೈದಿಕವೆಂದರೆ, ಭಗವಂತನಲ್ಲಿ ಭಕ್ತಿ ಹುಟ್ಟಿ, ಆತ್ಮಾನಂದ ಉಂಟಾಗುವಂತೆ ಪುರಾಣ ಪುಣ್ಯಕಥೆಗಳನ್ನು ಓದುತ್ತ ಕಾಲಕ್ಷೇಪ ಮಾಡುವುದು. ಲೌಕಿಕವೆಂದರೆ, ತಮ್ಮ ಜೀವಿತಕ್ಕೆ ಅನುಕೂಲವಾಗುವಂತೆಯೂ ತನ್ಮೂಲಕ ಲೋಕೋಪಕಾರವಾಗುವಂತೆಯೂ ಹೆಣ್ಣುಮಕ್ಕಳ ಪಾಠಶಾಲೆಗಳಲ್ಲಿ ಉಪಾಧ್ಯಾಯಿನಿಯರಾಗುವುದು, ವೈದ್ಯರೂ ಸೂಲಗಿತ್ತಿಯರೂ ಆಗುವುದು, ಇಲ್ಲವೆ ಕಲ್ಕತ್ತಾದಲ್ಲಿ ತಪಸ್ವಿನಿಯಾಗಿ "ಮಾತಾಜಿ ತಪಸ್ವಿನಿ" ಎಂಬ ಹೆಸರಿನಿಂದ ಅಲ್ಲಿ ಎಲ್ಲರ ಗೌರವಕ್ಕೆ ಪಾತ್ರಳಾಗಿದ್ದ ಮೈಸೂರು ಅರಮನೆ ಆಸ್ಥಾನ ವಿದ್ವಾಂಸರಾದ ಆಲಿಪಟ್ಟಂ ಶ್ರೀನಿವಾಸಾಚಾರ್ಯರ ಪುತ್ರಿಯಂತೆ ಆಗುವುದು, ಇವೇ ಮೊದಲಾದ ವೃತ್ತಿಗಳು.

ಈ ವೈದಿಕ ಲೌಕಿಕವಾದ ಎರಡು ಮಾರ್ಗಗಳನ್ನು ಪ್ರತಿ ಒಬ್ಬರೂ ಕೂಡಿದ ಮಟ್ಟಿಗೂ ಆಚರಿಸುವಂತೆ ಮಾಡಿದರೆ ಆಗ ವಿದ್ಯಾಭ್ಯಾಸದ ಉದ್ದೇಶವು ಸಂಪೂರ್ಣವಾದಂತಾಗುವುದು. ಈ ವಿಧವಾಗಿ ವಿದ್ಯಾಭ್ಯಾಸವನ್ನು ಸಡೆದಪಕ್ಷದಲ್ಲಿ ಇವರೆಲ್ಲರೂ ನಿಜವಾದ ಸನ್ಯಾಸಿನಿಗಳಾಗಿ ಯೂರೋಪ್ ಖಂಡದ ಕನ್ಯಾಸ್ತ್ರೀಯರಂತೆ ಇತರ ಸಂದರ್ಭದಲ್ಲಿ ತರಾಗಿ ನಿಜವಾಗಿ ಲೋಕೋಪಕಾರಿಣಿಗಳಾಗಿ ಆಗುವರು. ಹೀಗಿರಲು ಇವರ ವಿದ್ಯಾಭ್ಯಾಸದಲ್ಲಿ ಯತ್ನಿಸುವುದು ನಮ್ಮ ಅವಶ್ಯಕವಾದ ಕರ್ತವ್ಯವಲ್ಲವೇ? ಈ ಉದ್ದೇಶವನ್ನು ನೆರವೇರಿಸಿದಾಗಲ್ಲವೇ ಅನಾಥ ಬಾಲವಿತಂತುಗಳ ಸಂಕಟವನ್ನು ಪರಿಹಾರ ಮಾಡಿದಂತೆಯೂ ಇವರನ್ನು ಮೇಲೆ ಹೇಳಿದಂತೆ ಲೋಕೋಪಕಾರಿಣಿಗಳನ್ನಾಗಿ ಮಾಡಿದಂತೆಯೂ ಆಗುವುದು.

ಇದಕ್ಕೆ ನಮ್ಮ ಪೂರ್ವಚರಿತ್ರೆಗಳಲ್ಲಿ ಅನೇಕ ದೃಷ್ಟಾಂತಗಳಿರುವವು. ಮತ್ತು ಈಗ ನಾಗರಿಕತೆಯ ಉತ್ತಮ ಅಂತಸ್ತಿನಲ್ಲಿರುವ ಯೂರೋಪ್ ಖಂಡ, ಅಮೇರಿಕಾ ಖಂಡ, ಜಪಾನ್ ದೇಶಗಳಲ್ಲಿಯೂ ಈಗ ನಡವಳಿಕೆಯಲ್ಲಿ ಇರುವವು. ಪರಂತು ನಮ್ಮ ದೇಶದಲ್ಲಿರುವ ಹಾಗೆ ಕಷ್ಟವನ್ನು ಅನುಭವಿಸುವ ಬಾಲವಿತಂತುಗಳು ಆ ದೇಶಗಳಲ್ಲಿ ಇಲ್ಲವೇ ಇಲ್ಲ. ಆದರೂ ಆ ದೇಶಗಳಲ್ಲಿ ಪ್ರಸಂಚಿಕವಾದ ಸಾಂಸಾರಿಕ ಸುಖದುಃಖಗಳ ತೃಪ್ತರಿಗೂ, ಅವುಗಳಲ್ಲಿ ಜುಗುಪ್ಸೆಯಿಂದ ವಿರಕ್ತರಾದವರಿಗೂ ಕ್ರಿಸ್ತಧರ್ಮದಲ್ಲಿದ್ದುಕೊಂಡು ಲೋಕೋಪಕಾರವಾದ ಮಾರ್ಗಗಳಲ್ಲಿ ಪ್ರವರ್ತಿಸುವುದಕ್ಕೆ ಅನೇಕ ಏರ್ಪಾಡುಗಳಾಗಿ ಬಳಕೆಯಲ್ಲಿ ಬಂದಿರುವವು. ಆದರೆ ನಮ್ಮ ದೇಶದಲ್ಲಿ ಹಾಗಿನ ಏರ್ಪಾಡೂ ಇಲ್ಲದಿರುವುದರಿಂದ ಅನೇಕ ಸಹಸ್ರ ಬಾಲವಿತಂತುಗಳು ಸಂಕಟಪಟ್ಟು ಸಾಯುತ್ತಿರುವರು. ಇದನ್ನು ಉಪೇಕ್ಷೆಯಿಂದ ನೋಡುತ್ತಿರುವುದು ನಮಗೆ ಧರ್ಮವೇ?

ಈ ವಿಧವಾದ ಧರ್ಮಸಂಕಟದ ಪರ್ಯಾಲೋಚನೆಯಿಂದ ಪುನಹೆಯಲ್ಲಿಯೂ, ಕಲ್ಕತ್ತಾದಲ್ಲಿಯೂ, ಸೂರತ್ತಿನಲ್ಲಿಯೂ ಅನಾಥ ಬಾಲಿಕಾಶ್ರಮಗಳು ಸ್ಥಾಪಿತವಾಗಿರುವವು. ಅದರಂತೆಯೇ ಮೈಸೂರು ರಾಜಧಾನಿಯಲ್ಲಿಯೂ ಒಂದು ಅನಾಥಬಾಲಿಕಾಶ್ರಮವು ಈಗೆ ಒಂದೂವರೆ ವರ್ಷಕ್ಕೆ ಹಿಂದೆ ಸ್ಥಾಪಿತವಾಗಿ ಅಭಿವೃದ್ಧಿಯಾಗುತ್ತಾ ಬರುತ್ತಿದೆಯಷ್ಟೆ. ಈ ಅನಾಥಬಾಲಿಕಾಶ್ರಮಕ್ಕೆ ಪರಮ ದಯಾಳುಗಳಾದ ನಮ್ಮ ಶ್ರೀಮನ್ ಮಹಾರಾಜರವರು ಬಹು ಕನಿಕರದಿಂದ ಸಹಾಯವನ್ನು ದಯಪಾಲಿಸುತ್ತಿರುವರು.

ಮೈಸೂರು ಸಂಸ್ಥಾನದ ಎಲ್ಲಾ ಪ್ರಾಂತ್ಯಗಳಿಂದಲೂ ಬಂದ ಪ್ರಜಾಪ್ರತಿನಿಧಿಗಳು ಅನಾಥರಾದ ಬಾಲವಿತಂತುಗಳ ಉದ್ಧಾರಕ್ಕಾಗಿ ರಾಜಧಾನಿಯಲ್ಲಿ ಮಾಡಿರುವ ಈ ಏರ್ಪಾಡನ್ನು ತಿಳಿದುಕೊಂಡು, ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ಪ್ರಚಾರಪಡಿಸಿ, ಅಲ್ಲಲ್ಲಿರುವ ಅನಾಥ ಬಾಲಿಕೆಯರು ಇದರ ಪ್ರಯೋಜನವನ್ನು ಪಡೆಯುವಂತೆ ಮಾಡುವರಲ್ಲದೆ, ತಮ್ಮ ಕೈಯಿಂದಾಗುವ ಸಹಾಯಗಳನ್ನೂ ಮಾಡುವರೆಂದು ತಿಳಿಸುವ ಪ್ರಾರ್ಥನೆ.

ಮೈಸೂರು ನ್ಯಾಯವಿಧಾಯಕ ಸಭೆಯು.

ಕಳೆದ ಗುರುವಾರ ಮಧ್ಯಾಹ್ನ [illegible] ಗಂಟೆಗೆ ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರುಗಳು ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ಉಪ್ಪರಿಗೆಯಲ್ಲಿ ಸಭೆ ಸೇರಿ ಕೆಳಗೆ ವಿವರಿಸಿರುವ ವಿಚಾರಗಳನ್ನು ಕುರಿತು ಚರ್ಚೆ ಮಾಡಿದರು. ಸಭೆಯಲ್ಲಿ ದಿವಾನರವರು ಅಗ್ರಾಸನವನ್ನು ವಹಿಸಿದ್ದರು.

ಸೆಕ್ರೆಟರಿಯವರು, ವರ್ತಮಾನ ಪತ್ರಿಕೆಗಳ ರೆಗ್ಯುಲೇಷನನ್ನು ಶ್ರೀಮನ್ ಮಹಾರಾಜರವರು [illegible]ನೇ ಇಸವಿ ಆಗಸ್ಟು ತಾ. ದಲ್ಲಿ ಒಪ್ಪಿ ಸಮ್ಮತಿ ಹಾಕಿರುತ್ತಾರೆಂದು ಕೌನ್ಸಿಲ್ ಮೆಂಬರುಗಳಿಗೆ ಅರಿಕೆ ಮಾಡಿದರು.

ಮೈಸೂರು ಪಟ್ಟಣವನ್ನು ಅಭಿವೃದ್ಧಿಪಡಿಸುವ ವಿಚಾರದಲ್ಲಿ ಮಾಡಲ್ಪಟ್ಟಿರುವ ಕಾನೂನ್ ಸ್ವಲ್ಪ ಬದಲಾಯಿಸಿ, ಹೆಲ್ತ್ ಆಫೀಸರನ್ನು ಟ್ರಸ್ಟ್ ಬೋರ್ಡಿನ ಮೆಂಬರಾಗಿ ಮಾಡಬೇಕೆಂಬದಾಗಿ ಮೆ|| ಟಿ. ಆನಂದರಾಯರು ಸೂಚಿಸಿದ್ದನ್ನು ಮೆ|| ಕೆ. ಪಿ. ಪುಟ್ಟಣ್ಣ ಚೆಟ್ಟಿಯವರು ಸೆಕೆಂಡ್ ಮಾಡಿದರು. ಮೆಂಬರುಗಳೆಲ್ಲಾ ಆಗ ಒಮ್ಮತದಿಂದು ಒಪ್ಪಿಕೊಂಡರು.

ಮೈಸೂರು ಸಂಸ್ಥಾನದಲ್ಲಿ ಭೂಮಿಯೊಳಗೆ ಹೂಣಿಡಲ್ಪಟ್ಟ ಹಳೆ ನಗ ನಾಣ್ಯಗಳು ದೊರಕಿದರೆ ಅದನ್ನು ಕಂಡವರು ಸರ್ಕಾರದವರಿಗೆ ತಿಳಿಸತಕ್ಕ ವಿಚಾರವಾಗಿ ಒಂದು ಕಾನೂನಿನ ಮಸೂದೆಯನ್ನು ಮಾಡಿ, ಕಳೆದ ವರುಷದ ಮಾರ್ಚಿ ತಿಂಗಳಲ್ಲಿ ಸರ್ಕಾರಿ ಗೆಜೆಟ್ಟಿನ ಮೂಲಕ ಪ್ರಕಟ ಮಾಡಿದೆ ಎಂತಲೂ, ಈ ಮಸೂದೆಯನ್ನು ಆ ಸಭೆಯಲ್ಲಿ ಮೆಂಬರುಗಳು ಚರ್ಚೆ ಮಾಡಬೇಕಾಗಿದೆ ಎಂತಲೂ ರಾಜಕಾರ್ಯಪ್ರವೀಣ ಮೆ|| ಎ. ರಂಗಸ್ವಾಮಿ ಐಯಂಗಾರ್ರು ಸೂಚಿಸಿದರು. ಮೆ|| ಕೆ. ಎಸ್. ಚಂದ್ರಶೇಖರ ಐಯರವರು ಸೆಕೆಂಡ್ ಮಾಡಿದರು. ಮೆಂಬರುಗಳೆಲ್ಲಾ ಅದರಂತೆ ಒಪ್ಪಿಕೊಂಡರು.

ಮೈಸೂರು ಸಂಸ್ಥಾನದಲ್ಲಿ ವಿಷಪದಾರ್ಥಗಳನ್ನು ಇಂಗ್ಲಿಷ್ ಔಷಧ ಮಾರುವವರೂ ವರ್ತಕರೂ ವಿಕ್ರಯಿಸುವಾಗಲೂ, ಪ್ರಜೆಗಳಿಗೆ ವಿಕರ ಮಾಡುವಾಗಲೂ ಅವರು ಕೆಲವು ಕ್ರಮಗಳನ್ನು ಅನುಸರಿಸಬೇಕಾದದ್ದು ಆವಶ್ಯವೆಂತಲೂ, ಇಂಥಾ ಕಾನೂನು ಈ ಸಂಸ್ಥಾನದಲ್ಲಿ ಇಲ್ಲದಿರೋಣದರಿಂದ ಅನೇಕ ಅಚಾತುರ್ಯವಾದ ಮತ್ತು ಘೋರವಾದ ಕೃತ್ಯಗಳು ನಡೆಯುವುದಕ್ಕೆ ಅಡ್ಡಿ ಇಲ್ಲವೆಂತಲೂ, ದೃಷ್ಟಾಂತವಾಗಿ ಬೆಂಗಳೂರು ಪಟ್ಟಣದಲ್ಲಿ ನಡೆದ ಪರಿತಾಪಕರವಾದ ಕೊಲೆಗಳನ್ನು ಎಲ್ಲರೂ ಕೇಳಿರುತ್ತಾರೆಂತಲೂ ಮೆ|| ಕೆ. ಪಿ. ಪುಟ್ಟಣ್ಣಚೆಟ್ಟಿಯವರು ಸೂಚಿಸಿದರು. ಇದನ್ನು ಮೆ|| ಎಂ. ಕಾಂತರಾಜೇ ಅರಸಿನವರು ಸೆಕೆಂಡ್ ಮಾಡಿದರು. ಉಳಿದ ಮೆಂಬರುಗಳು ಇಂಥಾ ಕಾನೂನ್ ಆಗಬೇಕೆಂದು ಒಪ್ಪಿಕೊಂಡಿರುತ್ತಾರೆ.

ಮೈಸೂರು ರೆಜಿಸ್ಟ್ರೇಷನ್ ಕಾನೂನ್‌ನಲ್ಲಿ ಸ್ವಲ್ಪ ಬದಲಾವಣೆ ಮಾಡಿ, ಡಿಸ್ಟ್ರಿಕ್ಟ್ ಪೋಸ್ಟ್ ಮಾಸ್ಟರ್ ಜನರಲ್‌ರವರು ರೆಜಿಸ್ಟ್ರೇಷನ್ ಆಫೀಸುಗಳಿಗೆ ಖುದ್ದಾಗಿ ಹಾಜರಾಗಬೇಕಾದದ್ದಿಲ್ಲವೆಂದು ಏರ್ಪಾಟು ಮಾಡಬೇಕಾಗಿದೆ ಎಂಬದಾಗಿ ಮೆ|| ಟಿ ಆನಂದರಾಯರು ತಿಳಿಸಿದ್ದನ್ನು ಮೆ|| ಎಸ್. ನಾರಾಯಣರಾಯರು ಸೆಕೆಂಡ್ ಮಾಡಿದರು. ಮೆಂಬರುಗಳೆಲ್ಲಾ ಒಪ್ಪಿಕೊಂಡರು.

ಗ್ರಾಮಾಂತರ ಕೆರೆಗಳನ್ನು ಸಂರಕ್ಷಣೆಮಾಡುವುದಕ್ಕೋಸ್ಕರ ಪಟೇಲ್ ಶ್ಯಾನುಭೋಗರೇ ಮುಂತಾದವರನ್ನು ಕೂಡಿಸಿ ಒಂದು ಪಂಚಾಯತಿಯನ್ನು ನಿರ್ಮಿಸುವುದು ಆವಶ್ಯವೆಂತಲೂ, ಈ ವಿಚಾರದಲ್ಲಿ ಮಸೂದೆ ಕಾನೂನು ತಯಾರಾಗಿ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟನೆ ಮಾಡಿದೆ ಎಂತಲೂ, ಆ ಮಸೂದೆಯನ್ನು ಕೌನ್ಸಿಲ್ ಸಭೆಯಲ್ಲಿ ಓದಿ ಚರ್ಚಿಸಬೇಕೆಂತಲೂ ಮೆ|| ಕೆ. ಪಿ. ಪುಟ್ಟಣ್ಣ ಚೆಟ್ಟಿಯವರು ಸೂಚಿಸಿದರು. ಅದನ್ನು ಮೆ|| ಕೆ. ಎಸ್ ಚಂದ್ರಶೇಖರ ಐಯರವರು ಸೆಕೆಂಡ್ ಮಾಡಿದರು. ಮೆಂಬರುಗಳ ಸಮ್ಮತಿಯನ್ನು ಪಡೆದು ಪ್ರೆಸಿಡೆಂಟರು ಈ ಬಿಲ್ಲನ್ನು (ಮಸೂದೆಯನ್ನು) ಒಂದು ಸಬ್ ಕಮಿಟಿಯವರಿಗೆ ಒಪ್ಪಿಸಿದಾರೆ.

ಕಡೆಯಲ್ಲಿ ಗ್ರಾಮಾಧಿಕಾರಿಗಳ ಮಸೂದೇ ಕಾನೂನು ಚರ್ಚೆಯಾಗಿ ಸಿದ್ಧವಾಗಿದೆ ಎಂದು ಮೆ|| ಟಿ. ಆನಂದರಾಯರು ಸೂಚಿಸಿದರು. ಇದನ್ನು ಪ್ಯಾಸ್ ಮಾಡುವುದು ಒಳ್ಳೆದೆಂಬ ಅರ್ಥಕ್ಕೆ ಮೆ|| ಟಿ. ಶ್ರೀನಿವಾಸೈಯಂಗಾರ್ರು ಮೆ|| ಪಿ ನಾಗಪ್ಪನವರೂ ಸಣ್ಣ ಭಾಷಣಗಳನ್ನು ಮಾಡಿದರು. ದಿವಾನರವರು ಮೆಂಬರುಗಳ ಅಭಿಪ್ರಾಯಾನುಸಾರವಾಗಿ ಈ ಬಿಲ್ಲನ್ನು ಪ್ಯಾಸ್ ಮಾಡಿದೆ ಎಂದು ಅಪ್ಪಣೆ ಕೊಡಿಸಿದರು. ಈ ಬಿಲ್ಲನ್ನು ಒಂದು ತಿದ್ದಿ ಕ್ರಮಕ್ಕೆ ತಂದಿಟ್ಟ ವಿಷಯದಲ್ಲಿ ಬೇರೆ ಬೇರೆ ಜುಗಾರರಾದ ಮೆಂಬರುಗಳು ಬಹಳ ಶ್ರಾಸಪಟ್ಟು ತಮ್ಮ ಸಮಯವನ್ನೂ ಬುದ್ಧಿಕುಶಲತೆಯನ್ನೂ ಪ್ರಜೆಗಳ ಪರವಾಗಿ ವಿನಿಯೋಗಿಸಿರುತ್ತಾರೆಂಬುದನ್ನು ಶ್ರೀಮನ್ ಮಹಾರಾಜರವರು ತಿಳಿದು ಆನಂದವನ್ನು ಪಡಿಸಿರುತ್ತಾರೆ ಎಂದು ದಿವಾನರವರು ಹೇಳಿದರು.

ಅಲ್ಲಿಗೆ ಆ ದಿನದ ಸಭೆಯು ಬರಖಾಸ್ತು ಮಾಡಲ್ಪಟ್ಟಿತು.

ಮೈಸೂರು ದಸರಾ ವ್ಯವಸಾಯದ ಮತ್ತು ಕೈಗಾರಿಕೆಯ ಪ್ರದರ್ಶನವು.

ಮೈಸೂರು ದಸರಾ ವ್ಯವಸಾಯದ ಮತ್ತು ಕೈಗಾರಿಕೆಯ ವಸ್ತುಪ್ರದರ್ಶನವು ಕಳೆದ ಬುಧವಾರ ಸಾಯಂಕಾಲ ೪½ ಗಂಟೆಗೆ ತೆರೆಯಲ್ಪಟ್ಟಿತು. ಕಳೆದ ವರುಷದಂತೆಯೇ ಪ್ರದರ್ಶನವು ರಿಜರ್ವ್ ಪೋಲೀಸ್ ಲೈನಿನಲ್ಲಿ ನಡೆಸಿದ್ದರಿಂದ ಪ್ರದರ್ಶನಶಾಲೆಯು ನಾನಾ ಬಣ್ಣದ ಬಾವುಟಗಳಿಂದಲೂ ತೋರಣ ಮೇಲ್ಕಟ್ಟುಗಳಿಂದಲೂ ಅಲಂಕರಿಸಲ್ಪಟ್ಟು, ನೋಟಕರಿಗೆ ನೇತ್ರಾನಂದವನ್ನುಂಟುಮಾಡುತ್ತಿದ್ದ. ನಡುವೆ ಇರುವ ಅಂಗಳದಲ್ಲಿ ಒಂದು ದೊಡ್ಡ ಚಪ್ಪರವನ್ನು ಹಾಕಿ, ಅದರಲ್ಲಿ ಅಂತಸ್ತುಗಳ ಮೇಲೆ ಫಲಪುಷ್ಪಗಳನ್ನೂ ನಾನಾವಿಧ ಬಳದೇಶದ ಮತ್ತು ಇಂಗ್ಲಿಷ್ ತರಕಾರಿಗಳನ್ನೂ ಇಟ್ಟಿದ್ದರು. ಅನೇಕ ವಿಧ ಸುಂದರವಾದ ಹೂವುಗಳಿಂದ ಕಟ್ಟಿದ ತುರಾಯಿಗಳೂ, ಹಾರಗಳೂ, ಕತ್ತರಿಸಿ ಸಣ್ಣ ಕುಂಡಾಗಳಲ್ಲಿ ನೆಟ್ಟಿದ್ದ ನಾನಾ ಬಣ್ಣದ ಹೂವುಗಳೂ, ಮೈಸೂರು ಗವರ್ನ್‌ಮೆಂಟು ಹೌಸಿನಿಂದ ಸಕ್ಕರೆಯಲ್ಲೇ ಬಹು ಸುಂದರವಾಗಿ ಮಾಡಿ ಕಳುಹಿಸಿದ್ದ ಕುಂಡಾ ಮತ್ತು ಹುವ್ವು ಕಾಯಿಗಳನ್ನು ಇಟ್ಟಿದ್ದ ಸಕ್ಕರೆಯಲ್ಲೇ ಮಾಡಿದ್ದ ಗಿಡವೂ ಬಹಳ ಚನ್ನಾಗಿದ್ದವು. ಮೊದಲನೆ ಮತ್ತು ಮೂರನೇ ಮಹಾರಾಜಕುಮಾರಿಯರ ತೋಟಗಳಿಂದಲೂ ಗಾರ್ಡನ್ ಪಾರ್ಕಿನಲ್ಲೂ ಬೆಳೆದ ಕ್ರೋಟನ್ ಗಿಡಗಳನ್ನು ಸುತ್ತಲೂ ಅಂತಸ್ತುಗಳ ಮೇಲೆ ಇರಿಸಿದ್ದರಿಂದ ನೋಡುವುದಕ್ಕೆ ತೋರಿದವರ ದಟ್ಟವನ್ನಾ ಬಿಸಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತಿದ್ದವು. ದಿವಾನ್ ಸಾಹೇಬರ ತೋಟಗಳಿಂದ ಹಣ್ಣಿನ ಗೊನೆಗೂ ಜೋರುವಾಗಿ ಬೆಳೆದಿದ್ದ ಮರಶೇಬು, ಚಕೋತ್ರ, ಅಂಜೂರ, ಕಿತ್ತಳೆ ಹಣ್ಣುಗಳಿಗೂ ಇನಾಮು ದೊರೆಯಿತು. ಫಾರೆಸ್ಟ್ ಆಫೀಸರ್ ಮೆ|| ಎಂ. ಜಿ. ರಾಮರಾಯರು ಕಳುಹಿಸಿದ್ದ ಮಾದಳದ ಹಣ್ಣೂ, ಕಪನೀಪಕ್ಷಿಯನು ಕಳುಹಿಸಿದ್ದ ನಿಂಬೇಹಣ್ಣೂ, ಬಹಳ ಶ್ಲಾಘನೀಯವಾಗಿದ್ದವು. ಇದುವರೆಗೂ ನೋಡದೆ ಇದ್ದ ಬಂಗಾರದ ಬಣ್ಣವನ್ನುಳ್ಳ ಎರಡು ಗೊಂಚಲು ಯಳನೀರುಗಳೂ, ಬಹಳ ಗಾತ್ರವಾದ ಕುಂಬಳಕಾಯಿಗಳೂ ನೋಟಕರ ದೃಷ್ಟಿಯನ್ನು ಆಕರ್ಷಿಸಿದವು. ಛತ್ರದ ಮರವೋ ಎನ್ನುವಷ್ಟು ಎತ್ತರವಾಗಿ ಬೆಳೆದಿದ್ದ ಛತ್ರದ ಪೈರು ಒಂದು ಆಶ್ಚರ್ಯಕರವಾದ ಪ್ರದರ್ಶನವಸ್ತುವಾಗಿತ್ತು. ಕೋಸುಗಡ್ಡೆ, ಪಡವಲಕಾಯಿ, ಹಾಗಲಕಾಯಿ ಮತ್ತು ಇತರ ದೇಶೀಯ ಮತ್ತು ಇಂಗ್ಲಿಷ್ ಕಾಯಿಪಲ್ಯಗಳೂ ಬಹಳ ರಮ್ಯವಾಗಿದ್ದವು. ಮೊದಲನೇ ಮಹಾ ರಾಜಕುಮಾರಿಯರ ವ್ಯಾಗನರ್ ತೋಟದಿಂದ ಕಳುಹಿಸಿದ್ದ ಸುಮಾರು ಹದಿನೇಳು ತರಹಾ ಹಸೀಮೆಣಸಿನ ಕಾಯಿಗಳು ನೋಟಕರಲ್ಲಿ ಆಶ್ಚರ್ಯವನ್ನುಂಟುಮಾಡುತ್ತಿದ್ದವು. ಮಹಾರಾಜಾ ಕಾಲೇಜು ಪ್ರಿನ್ಸಿಪಾಲ್‌ರಾದ ಮೆ|| ಜೆ. ವೀಯರ್ ಸಾಹೇಬರ ಪತ್ನಿಯು ಕಳುಹಿಸಿಕೊಟ್ಟಿದ್ದ ಸಣ್ಣ ಗಾಜಿನ ಕುಂಡಾದಲ್ಲಿ ಕತ್ತರಿಸಿದ ಹೂವುಗಳಿಗೂ, ಮಣ್ಣಿನ ದೊಡ್ಡ ಕುಂಡಾಗಳಲ್ಲಿ ಬೆಳೆಸಿದ್ದ ಕ್ರೋಟನ್ ಗಿಡಗಳಿಗೂ ಇನಾಮು ಕೊಡಲಾಯಿತು. ಆ ದಿನ ಹೊತ್ತು ಸುಮಾರು ೫ ಗಂಟೆಯ ಸಮಯದಲ್ಲಿ ಮಹಾರಾಣಿಯವರೂ ಯುವರಾಜರೂ ಇತರ ರಾಜವರ್ಗದವರೂ ಪ್ರದರ್ಶನಶಾಲೆಗೆ ದಯಮಾಡಿಸಿದ್ದರು. ಪ್ರದರ್ಶನಶಾಲೆಯ ಬಾಗಿಲಲ್ಲಿ ರೆವಿನ್ಯೂ ಕಮಿಷನರ್ ಮೆ|| ಎ. ರಂಗಸ್ವಾಮಿ ಐಯಂಗಾರ್ರು ಡೆಪ್ಯುಟಿ ಕಮಿಷನರ್ ಮೆ|| ಎಂ. ಕಾಂತರಾಜೇ ಅರಸಿನವರೂ ಅವರನ್ನು ಎದುರ್ಗೊಂಡು ಒಳಕ್ಕೆ ಬಿಜಮಾಡಿಸಿದರು. ಅವರು ಪ್ರದರ್ಶನವನ್ನೆಲ್ಲಾ ಪರಾಂಬರಿಸಿ ತುಂಬಾ ಸಂತೋಷಪಟ್ಟು, ಹಣ್ಣು ಹಂಪಲುಗಳಲ್ಲೂ ತರಕಾರಿಯಲ್ಲೂ ಬಹಳ ಭಾಗವನ್ನು ಕೊಂಡುಕೊಂಡರು. ಈ ಫಲಪುಷ್ಪಗಳ ಮತ್ತು ತರಕಾರಿಯ ಪ್ರದರ್ಶನವು ಅಂದಿನ ಸಾಯಂಕಾಲಕ್ಕೇ ಮುಕ್ತಾಯವಾಯಿತು.

ಒಂದು ಕೊಠಡಿಯಲ್ಲಿ ಕಂಚಿನಿಂದ ತಯಾರಿಸಿ ಚಿನ್ನ ಮತ್ತು ಬೆಳ್ಳಿ ಮುಲಾಮು ಮಾಡಿ ರಾವಣನು ಹತ್ತು ತಲೆಗಳಿಂದಲೂ ಎತ್ತುತ್ತಿರುವಹಾಗೆ ಎಸ್ಕ ಮಾಡಿರುವ ಕೈಲಾಸ ಮಂಟಪವೂ, ಶ್ರೀಮನ್ ಮಹಾರಾಜರವರೂ ಯುವರಾಜರವರೂ ಸರ್ಕೀಟು ಹೋಗಿದ್ದಾಗ ಆಯಾ ಪ್ರಾಂತ್ಯದ ಪ್ರಜೆಗಳು ಒಪ್ಪಿಸಿದ ಬಹು ಸುಂದರವಾದ ಚಿನ್ನ ಬೆಳ್ಳಿಯ ಕೈಪೆಟ್ಟಿಗೆಗಳೂ ಸಾರತ್ನ ಕಾಚೀನಾದ ಪೆಟ್ಟಿಗೆಗಳೂ ನೋಟಕರ ಕಣ್ಮನಗಳನ್ನು ಸೆಳೆಯುತ್ತ ಇದ್ದವು. ಮತ್ತೊಂದು ಕೊಠಡಿಯಲ್ಲಿ ಬೆಂಗಳೂರು ಸೆಂಟ್ರಲ್ ಜೈಲಿನ ಉತ್ತಮವಾದ ಕಂಬಳಿಗಳೂ, ಕಾಶಿಯ ಪುರುಷೋತ್ತಮದಾಸಂದಗಿರಿಯವರ ರೇಷ್ಮೆಯ ಮತ್ತು ಕಲಾವತ್ತಿನ ಸೀರೆಗಳೂ, ತರಹೇವಾರಿ ಶಾಲುಗಳೂ, ಬೆಲೆಯುಳ್ಳ ಸೀರೆಗಳೂ ಇವೆ. ಬೆಂಗಳೂರು ಮತ್ತು ಪುದುಕೋಟೆಯಿಂದ ಅಂಗೀ ಬಟ್ಟೆಗಳೂ, ಅಮೃತಸರದಿಂದ ಟೋಪಿಗಳೂ, ತಿರುವನಂತಪುರದ ಕಲಾಶಾಲೆಯಿಂದ ಕೊಂಬಿನ ಮತ್ತು ದಂತದ ವಿಗ್ರಹಗಳೂ, ಚಾಕು ಪಿಡಿಗಳೂ, ಮದರಾಸಿನಿಂದ ಬೆಳ್ಳಿಯ ಕಟ್ಟ ಒಡವೆ ಮತ್ತು ಪ್ರತಿಮೆಗಳೂ, ಕಲ್ಕತ್ತಾ ಮತ್ತು ಸಿಯಾಲ್ಕೋಟೆ ನಗರಗಳಿಂದ ಚಿತ್ರಕೆಲಸ ಮಾಡಿರುವ ಚೌಕಟ್ಟುಗಳೂ, ಆಟದ ಸಾಮಾನುಗಳೂ ಬಂದಿರುತ್ತವೆ. ಮೈಸೂರು ಗವರ್ನ್‌ಮೆಂಟು ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ತಯಾರಿಸಿದ ಚಿತ್ರದ ತಟ್ಟೆಗಳೂ, ಕುರ್ಚಿಗಳೂ, ಪೆಟ್ಟಿಗೆಗಳೂ, ಮಣ್ಣಿನ ಕುಂಡಾಗಳೂ, ಬಿದಿರು ಕುಡಿಕೆಗಳೂ, ನಾಲ್ಕೈದು ಮತ್ತು ತಂಬಾಕಿಗೆ ಉಪಯೋಗಿಸುವ ಡಬ್ಬಿಗಳೂ, ಕಪ್ಪಣದ ಪೆಟ್ಟಿಗೆಗಳೂ, ಕಾರ್ಖಾನೆಯ ಸಾಮಾನುಗಳೂ, ಅಸ್ತ್ರಗಳೂ, ಮೊಂಬಾಳೆ ಮತ್ತು ಬಸೋದಾದ ಮಲ್ಲಿಗೆ ಮತ್ತು ಸಂಪಿಗೆ ಎಣ್ಣೆಗಳೂ, ಗೀಗಾರದ ಕೇವಲ ಥಿನೀ ತೈಲಗಳೂ ಒಂದು ಕೊಠಡಿಯಲ್ಲಿ ಕಣ್ಣು ಕೋರೈಸುವಂತೆ ಅಣಿ ಮಾಡಲ್ಪಟ್ಟಿವೆ. ಇನ್ನೊಂದು ಕೊಠಡಿಯಲ್ಲಿ ಛತ್ರದಿಂದ ಕಟ್ಟಿದ ಮಂಟಪವೂ, ಶಿವಸ್ವಾಮಿ ಬಾವಾಜಿ ಬಳೆಯವರ ಯಮುನಾ ಕಲ್ಲಿನ ಹರಳಿ ಕಾಯಿಗಳೂ ಬೆಂಗಳೂರಿನ ಮೇಣದ ಚಿತ್ರಗಳೂ, ಜೊಂಬಾಯಿನ ಕಾರ್ಪೆಂಟರದ ಚಮಚಗಳೂ, ವಸ್ತ್ರಪಟ್ಟಣದ ಆಟದ ಬಣ್ಣ ಸಾಮಾನೂ ಬಹಳ ಚನ್ನಾಗಿ ಶೇಖರಿಸಲಾಗಿದೆ. ಮುಸಲ್ಮಾನರ ಬಡ ವಿಧವೆಯರ ಅನಾಥ ಶಾಲೆಯಲ್ಲಿ ತಯಾರಿಸಿದ ಕಾಗೆ ಬಂಗಾರದ ಕೆಲಸ ಮಾಡಿರುವ ಸುಂದರವಾದ ಬಾಗಿಲ ಪರದೆಯನ್ನು, ಬಹಳ ನಾಜೂಕಾಗಿ ಮಾಡಿರುವ ತ್ಯಾಪಿಗೆಯನ್ನೂ, ನಾಲ್ಕೈದು ತರಹಾ ದಬೆಗಳನ್ನೂ, ಹಾಗೆ ಅರಾರೂಟ್ ಹಿಟ್ಟುಗಳನ್ನೂ ಪ್ರದರ್ಶನ ಮಾಡಿರುತ್ತಾರೆ. ಮುಸಲ್ಮಾನರ ವಿಧವೆಯರಿಗೆ ಈ ರೀತಿ ಸ್ವತಂತ್ರ ಜೀವನೋಪಾಯವನ್ನು ಕಲ್ಪಿಸಿರುವುದು ಬಹಳ ಶ್ಲಾಘನೀಯವಾದದ್ದು. ಎರಡು ಕೊಠಡಿಗಳಲ್ಲಿ ನಾನಾ ತರಹಾ ಭತ್ತ ಮತ್ತು ಅಕ್ಕಿಗಳನ್ನೂ, ಮತ್ತೊಂದರಲ್ಲಿ ಅನೇಕ ವಿಧ ಜೋಳ, ರಾಗಿ, ಒರಗು ಕಡಲೆ ಮುಂತಾದ ಧಾನ್ಯಗಳನ್ನೂ, ಹರಳು, ಕುಸುಂಬೆ, ಹೊಂಗೆ ಇವೇ ಮೊದಲಾದ ಎಣ್ಣೇ ಬೀಜಗಳನ್ನೂ ಅಂತಸ್ತುಗಳ ಮೇಲೆ ಕ್ರಮವಾಗಿ ಇರಿಸಿರುತ್ತಾರೆ. ಮಲ್ನಾಡಿನಲ್ಲಿ ಈಗಿಂದಾಗ್ಗೆ ಪ್ರಾಪ್ತವಾಗಿ ಅಡಿಕೆಯ ಫಸಲನ್ನು ನಾಶಪಡಿಸುವ "ಕೊಳೆರೋಗ ತಗುಲಿ ಕೃಶವಾಗಿ ಹೋಗಿರುವ ಅಡಿಕೆಯನ್ನೂ, ಅದರ ಮಗ್ಗುಲಲ್ಲಿ ಔಷಧಿಯಿಂದ ರೋಗಪರಿಹಾರವಾಗಿ ಬೆಳೆದಿರುವ ಅಡಿಕೆಯನ್ನೂ ಜನರ ತಿಳುವಳಿಕೆಗಾಗಿ ಪ್ರದರ್ಶನ ಮಾಡಿದ್ದಾರೆ. ಕೊಂಚತ್ತು ವರುಷದ ಹಿಂದಣ ಇಸ್ಪೀಟುಗಳನ್ನು ಚೌಕಟ್ಟಿನಲ್ಲಿ ಒಂದು ಕಡೆ ಇರಿಸಿದಾರೆ. ಫಾರೆಸ್ಟ್ ಇಲಾಖೆಯ ಪ್ರದರ್ಶನ ಶಾಲೆಯಲ್ಲಿ ಮೈಸೂರು ಸೀಮೆಯ ಕಾಡುಗಳಲ್ಲಿ ಸಿಕ್ಕಬಹುದಾದ ನಾಗುವಾನಿ ಮರಗಳ ನಮೂನೆಗಳನ್ನೂ, ಔಷಧಕ್ಕೆ ಮತ್ತು ಬಣ್ಣ ಹಾಕುವುದಕ್ಕೆ ಉಪಯೋಗಿಸುವ ಚಕ್ಕೆಗಳನ್ನೂ, ಗುಗ್ಗುಳ ಗೋಂದು ಮೊದಲಾದವನ್ನೂ, ನೋಡುವುದಕ್ಕೆ ಅಂದವಾಗಿ ಅಣಿಮಾಡಿಟ್ಟಿದಾರೆ. ಅದೂ ಅಲ್ಲದೆ ೩೨ ತರಹಾ ನಾರುಗಳನ್ನು ಗೋಡೆಗೆ ತಗಲಿಹಾಕಿ, ಅವುಗಳ

ಕೊನೆಯಲ್ಲಿ ಆಯಾ ನಾರಿನಿಂದ ಹೊಸೆದ ಹಗ್ಗವನ್ನೂ, ಅವುಗಳ ತಾರತಮ್ಯಗಳನ್ನೂ ತಿಳಿಯುವಂತೆ ಇರಿಸಿರುತ್ತಾರೆ. ಸತ್ತುಹೋದ ಭಾರೀ ಆನೆಯ ಕಾಲುಗಳನ್ನೂ, ತಲೆ ಸಹಿತ ಇರುವ ಹುಲಿಯ ಚರ್ಮಗಳನ್ನೂ ಹದಮಾಡಿ ಇರಿಸಿದಾರೆ. ಭೂಗರ್ಭದಲ್ಲಿ ದೊರಕುವ ವಸ್ತುಗಳ ಪ್ರದರ್ಶನ ಶಾಲೆಯಲ್ಲಿ ಮೈಸೂರು ಸೀಮೆಯ ಬೇರೆ ಬೇರೆ ಕಣಿಗಳಲ್ಲಿ ಸಿಕ್ಕುವ ಭಂಗಾರ ಮಿಶ್ರವಾದ ಕಲ್ಲುಗಳನ್ನೂ, ಮ್ಯಾಂಗನೀಸ್ ಲೋಹ ಮೊದಲಾದವನ್ನೂ ತೋರಿಸಿರುವರು.

ಹೊರಗಡೆಯ ಆವರಣದಲ್ಲಿ ಒಂದು ಚಪ್ಪರವನ್ನು ಹಾಕಿಸಿ ಬೆಂಗಳೂರು ತಾತಾಯವರ ರೇಷ್ಮೆ ಕಾರ್ಖಾನೆಯಲ್ಲಿ ರೇಷ್ಮೆ ಹುಳಗಳನ್ನು ಸಾಕುವ ಮತ್ತು ಅದರಿಂದ ರೇಷ್ಮೆ ತೆಗೆಯುವ ವಿಧಾನಗಳನ್ನು ತೋರಿಸಿರುವದಲ್ಲದೆ ಜಪಾನ್ ಮತ್ತು ಬಂಗಾಳಾ ದೇಶಗಳ ರೇಷ್ಮೆ ಹುಳುವಿನ ಮೊಟ್ಟೆಗಳನ್ನು ಮಾರಲಿಕ್ಕಾಗಿ ಇಟ್ಟಿದಾರೆ. ಬೊಂಬಾಯಿ ಪಟ್ಟಣದ ರಕ್ಷಣಾ ಸೇನೆ (ಸಾಲ್ವೇಷನ್ ಆರ್ಮಿ) ಯವರಿಂದ ಕಂಡು ಹಿಡಿಯಲ್ಪಟ್ಟ ಸುಲಭವಾಗಿಯೂ, ಜಾಗ್ರತೆಯಾಗಿಯೂ ಮತ್ತು ಒಬ್ಬನಿಂದಲೇ ಕೆಲಸ ಮಾಡಬಹುದಾದ ಕೈಮಗ್ಗವು ನೋಡುವದಕ್ಕೆ ಅರ್ಹವಾದದ್ದು. ನಮ್ಮ ಸೀಮೆಯ ಮತ್ತು ಪರದೇಶದ ನೇಗಿಲುಗಳೂ, ಬಾಳೇನಾರು ತೆಗೆಯುವ, ಹರಳೆ ಹೊಡಿಯುವ, ಹುಲ್ಲು ಕತ್ತರಿಸುವ ಯಂತ್ರಗಳೂ, ತೃಪ್ತಿಕರವಾಗಿ ಕೆಲಸ ಮಾಡಶಕ್ಯವಾಗಿರೋಣದರಿಂದ ವ್ಯವಸಾಯದಿಂದ ಜೀವಿಸುವವರಿಗೂ ಇತರರಿಗೂ ಅವು ಬಹಳ ಸಹಾಯಕಾರಿಗಳೆನ್ನುವದಕ್ಕೆ ಅಡ್ಡಿಯಿಲ್ಲ. ದೇಹಶ್ರಮವಿಲ್ಲದೇನೂ, ಜಾಗ್ರತೆಯಾಗಿಯೂ ಕಸವೇಳಾಯಿನ ಹೊಟ್ಟನ್ನು ಪೃಥಿಮಾಡದೆ ಬಿತ್ತವನ್ನು ಬೇರೆಬೇರೆ ಬಿಡಿಸಿ ಸಂಗಡಿಸುವ ಯಂತ್ರವು ಆಶ್ಚರ್ಯವಾದದ್ದೇ ಸರಿ. ಮಗ್ಗೆ ಜೂಸ್ಸು ತೆಗೆಯುವ ಯಂತ್ರವೂ, ನೀರನ್ನು ನಲ್ಲಿಗಳ ಮೂಲಕ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವ ಯಂತ್ರಗಳೂ ಬಹಳ ಶ್ಲಾಘನೀಯವಾದವು.

ದೇಹಾರೋಗ್ಯಕ್ಕೆ ಸಹಕಾರಿಯಾದ ಮತ್ತು ಕುಂದಕವನ್ನುಂಟುಮಾಡುವ ಪದಾರ್ಥಗಳನ್ನು ಎರಡು ಭಾಗವಾಗಿ ವಿಂಗಡಿಸಿ ಒಂದು ಕಡೆ ಕೆಟ್ಟ ನೀರುಗಳನ್ನೂ, ಅವುಗಳನ್ನು ಕುಡಿಯುವದರಿಂದುಂಟಾಗುವ ನಾನಾ ತರಹಾ ರೋಗಗಳನ್ನೂ ತೋರಿಸುವದಲ್ಲದೆ, ಅಂಥಾ ಕಲ್ಮಷ ಯುಕ್ತವಾದ ನೀರನ್ನು ಶುದ್ಧಿ ಮಾಡುವ ಉಪಾಯಗಳನ್ನು ತೋರಿಸಿರುತ್ತಾರೆ. ಈ ಪ್ರದರ್ಶನ ಶಾಲೆಯನ್ನು ಪ್ರತ್ಯೇಕವಾಗಿ ಕಟ್ಟಿರುವದರಿಂದಲೂ ಮತ್ತು ಜನರು ತಮ್ಮ ಆರೋಗ್ಯಕ್ಕೆ ಹೆಚ್ಚು ಗಮನ ಕೊಡಬೇಕೆಂಬ ಉದ್ದೇಶದಿಂದಲೂ ಸರಕಾರದವರು ಈ ಪ್ರದರ್ಶನ ಶಾಲೆಗೆ ನೋಟಕರನ್ನು ಮುಫತ್ತಾಗಿ ಬಿಡುವಂತೆ ಏರ್ಪಡಿಸಿದಾರೆ. ಒಂದು ಸಲ ಹೋಗಿ ನೋಡಿಕೊಂಡು ಬಂದರೆ ತಂಗಳು ಹಾಲನ್ನೂ, ಕೊಳೆತು ಬಹಳ ಹಳಸಾದ ಕಾಯಿಪಲ್ಯಗಳನ್ನೂ, ಹುಳಿತ ಧಾನ್ಯಗಳನ್ನೂ ಖಂಡಿತವಾಗಿಯೂ ಉಪಯೋಗಿಸ ಬಾರದೆನ್ನುವದು ಎಲ್ಲರಿಗೂ ಸ್ಪಷ್ಟವಾದೀತು. ಆರೋಗ್ಯ ಸ್ಥಿತಿಯಲ್ಲಿರತಕ್ಕ ಮನುಷ್ಯನ ರಕ್ತ ಕಣಗಳನ್ನೂ, ಪ್ಲೇಗ್ ಕ್ರಿಮಿಗಳು ಸೇರಿರತಕ್ಕ ರಕ್ತ ಕಣಗಳನ್ನೂ ವ್ಯತ್ಯಾಸ ತಿಳಿಯುವಂತೆ ಚಿತ್ರ ರೂಪವಾಗಿ ತೋರಿಸಿರುವರು. ಮಲ್ನಾಡಿನ ಜೌಗು ನೀರು ಕುಡಿಯುವದರಿಂದ ಗಾತ್ರವಾಗಿ ಮಲೇರಿಯಾ ಜ್ವರವನ್ನುಂಟುಮಾಡುವ ಗುಂಗು (ಕೀಟ) ವನ್ನು ತೆಗೆದು ಗಾಜಿನ ಸೀಸೆಯಲ್ಲಿ ಇಟ್ಟು ತೋರಿಸಿದಾರೆ. ಬೆಳಕೂ ಗಾಳಿಯೂ ಧಾರಾಳವಾಗಿ ಸಂಚಾರ ಮಾಡುವಂತೆ ಸಾತ್ಮ್ಯದ ತರಹಾ ಹೆಂಚಿನ ಮತ್ತು ತಾರಸಿಯ ಮನೆಗಳನ್ನೂ, ಹಿತ್ತಲು ಮನೆಗಳನ್ನೂ ಮಾದರಿಗಾಗಿ ಕಟ್ಟಿ ತೋರಿಸಿದಾರೆ.

ಕೆಲವು ದಿನ ಬೆಳಿಗ್ಗೆ ಪ್ರದರ್ಶನ ಶಾಲೆಯಲ್ಲಿ ವ್ಯವಸಾಯದ ಮತ್ತು ದೇಹಾರೋಗ್ಯದ ವಿಷಯವಾಗಿ ಉಪನ್ಯಾಸಗಳು ನಡೆಯುವ ಏರ್ಪಾಡು ಮಾಡಿದೆ. ಉದ್ಯಾನವು ಮತ್ತು ಸೇನೆಯ ಫೋಟೋಗಳು ಪ್ರದರ್ಶನ ಶಾಲೆಯ ಪಕ್ಕದ ಪಾರ್ಶ್ವದ ಮೈದಾನದಲ್ಲಿ ನಡೆಯುವದರಿಂದ ಇಷ್ಟವುಳ್ಳವರು ಮುಫತ್ತಾಗಿ ಹೋಗಿ ನೋಡಬಹುದು. ಈ ಪ್ರದರ್ಶನವು ಕಳೆದ ಬುಧವಾರದ ಆರಭ್ಯ ಅಕ್ಟೋಬರ ತಾ. ೧೪ ನೇ ಬುಧವಾರದ ವರೆಗೆ ತೆರೆದಿರುತ್ತೆ.

ಅಪಾರವಾದ ಮಳೆಗಳು.

ಹೈದರಾಬಾದಿನಲ್ಲಿ ನಡೆದ ಅನಾಹುತಗಳು.

ಕಳೆದ ತಿಂಗಳು ೨೧ನೇ ತಾ ಶುಕ್ರವಾರ ಅಪೂರ್ವವಾದ ಮಳೆ ಸುರಿದು ರಾಜಮಂಧ್ರಿಯ ಉತ್ತರ ಭಾಗದಲ್ಲಿ ಧಾರಾಪ್ರಾಗೂ ಕಡಿಯಾಮಿಗೂ ನಡುವೆ ರೈಲ್ ರಸ್ತೆಯು ಕಿತ್ತುಹೋಯಿತು. ಕಲ್ಕತ್ತೆಯಿಂದ ಮದರಾಸಿಗೆ ಆ ಶುಕ್ರವಾರದ ಆಗಾಗಾಯಿತು ತಾ. ೨೫ನೇ ಮಂಗಳವಾರದ ತನಕ ರೈಲ್ ಗಾಡಿಗಳೇ ಬಾರದೆಹೋದವು. ಕಾಗದಗಳು ನಾಲ್ಕು ದಿನಗಳ ವರೆಗೆ ತಲಪಲಿಲ್ಲ. ಕದುವಾಯಿ ಹೇಮದೊಳೆಗೂ ಎಲ್ಲೋರಿಗೂ ನಡುವೆ ರೈಲ್ ರಸ್ತೆ ಕಿತ್ತುಹೋಯಿತು. ಅಂತು ಬೆಜ್ವಾಡದಿಂದ ಧಾರಾಪ್ರಾಯ ತನಕ ರೈಲ್ ಗಾಡಿ ಹೋಗಿ ಬರದಂತೆ ಅಡಚಣೆಯುಂಟಾಯಿತು. ಸೆಪ್ಟಂಬರ್ ತಾ. ೨೭ರಲ್ಲಿ ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಸಿಕಂದ್ರಾಬಾದಿನ ವರ್ತಮಾನ ಬಂದದ್ದೇನೆಂದರೆ —ಈಗ ಹೈದರಾಬಾದಿನಲ್ಲಿ ಮಳೆ ಸುರಿಯುತ್ತಿರುವಷ್ಟು ಹದಿಮೂರು ವರುಷಗಳಿಂದ ಸುರಿಯಲಿಲ್ಲ. ಹತ್ತು ದಿನಗಳಿಂದಲೂ ಏಕ ಪ್ರಕಾರವಾಗಿ ಮಳೆ ಸುರಿಯುತ್ತಿದೆ. ರೈಲ್ ರಸ್ತೆಗಳು ಹನ್ನೆರಡು ಕಡೆಗಳಲ್ಲಿ ಕಿತ್ತುಹೋಗಿವೆ. ಸೇತುವೆಗಳು ಕಳಚಿ ಬೀಳುತ್ತಿರುವವು. ಪಾಡಿಯಿಂದ ಬೇಗಂಪೇಟೆಯ ತನಕ ಉದ್ದಕ್ಕೂ ಪ್ರವಾಹವು ಸಮುದ್ರದಂತೆ ನುಗ್ಗಿ ಹರಿಯುತ್ತಿದೆ. ಹುಸೇನ್‌ಸಾಗರವೆಂಬ ಕೆರೆಯ ಬಲ ಪಕ್ಕದಲ್ಲಿ ಕಡೆಯ ರೈಲ್ ಗಾಡಿಯು ತೆರೆವಾಸಿ ಪ್ರವಾಹದಲ್ಲಿ ಮುಳುಗಿ ಬಹು ನಿದಾನವಾಗಿಯೂ, ಬಹಳ ಜಾಗರೂಕತೆಯಿಂದಲೂ ಬಂದಿತು. ಈ ಪ್ರಾಂತ್ಯದಲ್ಲಿರುವ ಸಣ್ಣ ಸಣ್ಣ ಕೆರೆಗಳು ತುಂಬಿ, ಒಡೆದು ಕಿತ್ತುಹೋಗಿ ಮನೆಗಳು ಕಳಚಿ ಬೀಳುತ್ತಿವೆ. ನೆನ್ನೆ ಬೆಳಿಗ್ಗೆ ೮ ಘಂಟೆಯಿಂದ ಈ ದಿನ ಸಾಯಂಕಾಲದ ವರೆಗೆ ೧೦ ಅಂಗುಲ ಪ್ರಮಾಣ ಮಳೆ ಸುರಿದಿದೆ.

ಸೆಪ್ಟಂಬರ್ ತಾ. ೨೮ರಲ್ಲಿ ವರ್ತಮಾನ ಬಂದಿರುವುದೇನೆಂದರೆ:—ರಾತ್ರಿಯೆಲ್ಲಾ ಮಳೆ ಸುರಿಯಿತು. ಈಗ ಇನ್ನೂ ಜೋರಾಗಿ ಬರುತ್ತಿದೆ. ಹೈದರಾಬಾದ್ ಟವುನಿನಲ್ಲಿ ಸುತ್ತಲೂ ಇರುವ ಮೂಸಿ ಎಂಬ ನದಿಯಲ್ಲಿ ಇದ್ದಕ್ಕಿದ್ದಹಾಗೆ ಪ್ರವಾಹ ಬಂದು ಜನರನ್ನು ಗಾಬರಿ ಪಡಿಸಿತು. ಪ್ರಜೆಗಳು ಮನೆ ಮಠಗಳನ್ನು ಬಿಟ್ಟು ತಂಡ ತಂಡವಾಗಿ ದೂರಕ್ಕೆ ಹೋಗುತ್ತಿದಾರೆ. ನದಿಯ ದಡದ ಉದ್ದಕ್ಕೂ ಇಟ್ಟಿದ್ದ ತೊಲೆಗಳ ರಾಸಿಯು ಕೊಚ್ಚಿ ಹೋಯಿತು ಅವು ನದಿಯಲ್ಲಿ ತೇಲಿಕೊಂಡು ಹೋಗುತ್ತಿವೆ. ಅದೇ ದಿನ ಸ್ವಲ್ಪ ಹೊತ್ತಾದ ಮೇಲೆ ಬಂದ ಸುದ್ದಿ:—ಹೈದರಾಬಾದ್ ಪಟ್ಟಣದಲ್ಲಿ ಜನರ ಕಳವಳವು ಹೆಚ್ಚಿತು. ಮಳೆ ನಿಲ್ಲದೆ ಬರುತ್ತಲೇ ಇದೆ ಮೂರು ಕಡೆಗಳಿಂದ ಹೈದರಾಬಾದ್ ಪಟ್ಟಣಕ್ಕೆ ಹೋಗುವ ರಸ್ತೆಗಳು ಪ್ರವಾಹಗಳಿಂದ ಕಟ್ಟಿಹೋದವು. ಪ್ರವಾಹವು ನದಿಯ ದಡದಿಂದ ಹೊರಗೆ ಬಹು ರಭಸವಾಗಿ ನುಗ್ಗಿ ಬರುತ್ತಲಿದೆ. ಬ್ರಿಟಿಷ ರೆಸಿಡೆಂಟರು ಮೋಟಾರ್ ಗಾಡಿಯಲ್ಲಿ ಬೋಲಾರಮ್‌ದಿಂದ ಹೈದರಾಬಾದ್ ರೆಸಿಡೆನ್ಸಿ ಬಂಗಲೆಗೆ ಹೋಗಬೇಕೆಂದು ಬಂದರು. ಆ ಬಂಗಲೆಗೂ ರೆಸಿಡೆನ್ಸಿ ಬಂಗಲೆಗೂ ನೀರು ನುಗ್ಗಿ ತುಂಬಾ ಹಾನಿ ಮಾಡುತ್ತಿದೆ. ಖೈರತಾಬಾದಿನಲ್ಲಿರುವ ಜನಾನಾ ಬೋರ್ಡಿಂಗ್ ಕಟ್ಟಡದ ಸುತ್ತಲೂ ನೀರು ನಿಂತು ಕ್ರಮೇಣ ಹೆಚ್ಚುತ್ತಿದೆ. ಇಂಜನಿಯರ್ ಮೊದಲಾದ ಸರಕಾರಿ ನೌಕರರು ಹುಸೇನ್ ಸಾಗರ ತಟಾಕದ ಕೆಳಗಡೆ ಇರುವಂಥಾ ಗ್ರಾಮಸ್ಥರಿಗೆಲ್ಲಾ ಎಚ್ಚರಿಕೆ ಹೇಳಿ, ಅವರನ್ನು ಬೇರೆ ಕಡೆಗಳಿಗೆ ಕಳುಹಿಸಿ, ಅಲ್ಲಿದ್ದ ಕಾರ್ಖಾನೆಯನ್ನು ಮುಚ್ಚಿಸಿ, ಕೆರೆಯು ಒಡೆದು ಹೋಗದಂತೆ ಕೆರೆಯ ನೀರನ್ನು ಇನ್ನೊಂದು ಭಾಗದಲ್ಲಿ ತಿರುಗಿಸುತ್ತಾರೆ. ಟೆಲಿಗ್ರಾಫ್ ಆಫೀಸಿನೊಳಕ್ಕೆ ನೀರು ನುಗ್ಗಿದ್ದರಿಂದ ನೌಕರರು ತಮ್ಮ ಪದಾರ್ಥಗಳನ್ನು ಬೇಗ ಬೇಗನೆ ಸಾಗಿಸಿ ಬಿಟ್ಟರು. ಇಂಥಾ ವರ್ತಮಾನ ಹೋಗಿ ಬರುವುದು ತಪ್ಪಿತು. ರಾಜಧಾನಿಯಿಂದ ಯಾವ ಸುದ್ದಿ ಬರುವುದಕ್ಕೂ ಮಾರ್ಗವಿಲ್ಲ. ಈ ದಿನ ಮಧ್ಯಾಹ್ನ ಒಬ್ಬ ಚಾರನು ಅಲ್ಲಿಂದ ಸಿಕಂದ್ರಾಬಾದಿಗೆ ಬಂದು, ಮೂಸಿ ನದಿಯಲ್ಲಿ ಪ್ರವಾಹ ಅಪಾರವಾಗಿ ಬಂದು, ದಡದ ಮೇಲೆ ಇರುವ ಬಹು ನಷ್ಟ ಕಷ್ಟಗಳನ್ನುಂಟುಮಾಡುತ್ತಿದೆ ಎಂದು ಹೇಳಿದನು. ರೆಸಿಡೆನ್ಸಿ ಬಂಗಲೆಯ ಸುತ್ತಾ ನೀರು ಬಳಸಿಕೊಂಡಿತ್ತು. ಒಳಗಿದ್ದ ಸಾಮಾನುಗಳೆಲ್ಲಾ ಸಂಪೂರ್ಣವಾಗಿ ಕೆಟ್ಟುಹೋದವು. ಕೆಲವು ಯೂರೋಪಿಯನ್ ಸರದಾರರೇ ಮೊದಲಾದವರು ಸಿಕಂದ್ರಾಬಾದಿನಿಂದ ದೋಣಿಗಳಲ್ಲಿ ಹೈದರಾಬಾದಿಗೆ ಹೋಗಿ ಬಹು ಸಾಹಸಪಟ್ಟು ಅನೇಕರನ್ನು ಬದುಕಿಸಿದರು.

ಹೈದರಾಬಾದ್ ಪಟ್ಟಣದಲ್ಲಿ ಎರಡು ಶತಗಳಿಂದ ಇಷ್ಟು ಭಯಂಕರವಾದ ಅನಾಹುತಗಳು ನಡೆಯಲಿಲ್ಲ. ಅಫ್ಜಲ್‌ಗಂಜ್ ಮತ್ತು ಚಾದರ್‌ಘಾಟ್ ಸೇತುವೆಗಳು ಒಡೆಯುವಂತೆ ಕಂಡದ್ದರಿಂದ ಪೋಲೀಸಿನವರೂ ಅಧಿಕಾರಿಗಳೂ ತುಂಬಾ ಮುಹನತ್ತುಮಾಡಿ, ಅನೇಕ ಗ್ರಾಮಗಳಿಗೆ ಹೋಗಿ ಜನರನ್ನು ಎಚ್ಚರಿಸಿ ಮನೆಗಳನ್ನು ಬಿಡಿಸಿದರು. ಕೆಲವು ಸಾವಿರ ಜನರು ಈ ರೀತಿ ಬೇರೆಕಡೆ ಹೋಗಿ ಬದುಕಿಕೊಂಡರು. ಈ ದಿನ ಮಧ್ಯಾಹ್ನ ಆ ಎರಡು ಸೇತುವೆಗಳ ಮೇಲೂ ಅಪಾರವಾದ ನೀರು ಹರಿದು, ಸೇತುವೆಗಳನ್ನು ಸಂಪೂರ್ಣವಾಗಿ ಕೆಡಿಸಿ ಕೊಚ್ಚಿಬಿಟ್ಟಿತು. ತರುವಾಯ ನೀರು ನುಗ್ಗಿ ಅಫ್ಜಲ್‌ಗಂಜಿನೊಳಕ್ಕೆ ಹೊರಳಿ ಬಂದು, ಬಹು ದುಃಖಕರವಾದ ಅನಾಹುತವನ್ನುಂಟು ಮಾಡಿತು. ಗಲ್ಲಿ, ಬೀದಿ, ರಸ್ತೆ ಮೊದಲಾದ ಕಡೆಗಳಲ್ಲಿ ಪ್ರವಾಹವು ತಡೆಯಿಲ್ಲದೆ ಮಹಾ ರಭಸವಾಗಿ ಹರಿದು ಹೋಗುತ್ತಾ, ಸಿಕ್ಕಿದ್ದ ಮನೆ ಮಠಗಳನ್ನೂ ಗಿಡ ಮರಗಳನ್ನೂ ಸಮೂಲವಾಗಿ ನಾಶನ ಮಾಡಿಬಿಟ್ಟಿತು. ಸಾವಿರಾರು ಪ್ರಜೆಗಳು ಬೆಟ್ಟದಮೇಲಿನಿಂದ ನುಗ್ಗಿ ಬರುತ್ತಿದ್ದ ಪ್ರವಾಹವನ್ನು ನೋಡಿ ತಮ್ಮ ಸರ್ವಸ್ವವನ್ನೂ ಹಾಗೆ ಹಾಗೇ ಬಿಟ್ಟು ಗಾಬರಿಯಾಗುತ್ತಾ ಕಂಗಾಲಿಗಳಂತೆ ದಿಕ್ಕುಪಾಲಾಗಿ ಚದರಿಹೋದರು. ಆ ಸಮಯದಲ್ಲಿ ಜನರ ಸ್ಥಿತಿ ಗತಿಯು ಹ್ಯಾಗಿತ್ತೆಂದು ವಿವರಿಸುವದು ಯಾರಿಂದಲೂ ಸಾಧ್ಯವಿಲ್ಲ. ಎಲ್ಲಾ ಪ್ರದೇಶಗಳಲ್ಲೂ ಏಕ ಪ್ರಕಾರವಾಗಿ ಒಂದು ಅಡಿ ಪ್ರಮಾಣದ ನೀರು ನಿಂತು ಹರಿಯುತ್ತಿತ್ತು. ನೂರಾರು ಪ್ರಜೆಗಳು ನೀರಿನಲ್ಲಿ ಮುಳುಗಿ ಸತ್ತರು, ಅನೇಕರು ಮನೆಗಳೊಳಗೇ ಗೋಡೆಗಳ ಕೆಳಗೆ ಸಿಕ್ಕಿ ಸತ್ತರು. ಈ ಸುದ್ದಿಯು ತಿಳಿದ ಕೂಡಲೇ ಚಾದರ್‌ಘಾಟ್ ಮತ್ತು ಸೈಫಾಬಾದ್ ಎಂಬ ಸ್ಥಳಗಳಿಂದ ಸರಕಾರಿ ಅಧಿಕಾರಿಗಳೂ ಸೋಲಜರುಗಳೂ ದೋಣಿಗಳಲ್ಲಿ ಕುಳಿತು ಅಲ್ಲಿಗೆ ಹೋಗಿ ಪ್ರಾಣ ಉಳಿಸುವುದಕ್ಕೆ ತಮ್ಮಿಂದಾದಷ್ಟು ಸಹಾಯ ಮಾಡುತ್ತಿದಾರೆ. ಅನೇಕರನ್ನು ಮನೆಗಳ ಮೇಲೆ ತೊಟ್ಟಿಗಳಲ್ಲಿ ಕೂಡಿಸಿಕೊಂಡು ಬಂದರು.

ಆಸ್ತಿಪಾಸ್ತಿಗಳು ಈ ಅನಾಹುತದಿಂದ ಎಷ್ಟು ಹಾಳಾದವೋ ಊಹಿಸುವದೂ ಕಷ್ಟವಾಗಿದೆ. ಅನೇಕ ಸಹಸ್ರ ಮನೆಗಳು ಏಕಕಾಲದಲ್ಲಿ ಭೂಕಂಪಕ್ಕೆ ಸಿಕ್ಕಿದಂತೆ ನಾಶಹೊಂದಿ ನೆಲಸಮನಾಗಿರುವುದನ್ನು ನೋಡಿದರೆ ಸುಮಾರು ಎರಡು ಕೋಟಿ ರೂಪಾಯಿಗಳ ಆಸ್ತಿಪಾಸ್ತಿಗಳಿಗೇನೂ ಕಡಮೆಯಿಲ್ಲದೆ ಹಾಳಾಗಿರುತ್ತವೆಂದು ಧಾರಾಳವಾಗಿ ಹೇಳಬಹುದು. ಒಂದು ಸ್ಥಳದಲ್ಲಿ ಶೇಖರಮಾಡಿಡಲ್ಪಟ್ಟಿದ್ದ ಸುಮಾರು ಎರಡು ಲಕ್ಷ ರೂಪಾಯಿನ ಆಹಾರ ಧಾನ್ಯಗಳೆಲ್ಲಾ ನಾಶವಾದವು. ಕೆಲವು ವ್ಯಕ್ತಿಗಳ ತನಕ ಪಟ್ಟಣವೆಲ್ಲಾ ಹಾಳುಬಿದ್ದಿರುತ್ತದೆ. ಮನೆ ಮಠಾದಿಗಳನ್ನು ಕಳೆದುಕೊಂಡವರೂ ರಕ್ತಸಂಬಂಧಿಗಳನ್ನು ಕಳೆದುಕೊಂಡವರೂ ಗೋಳಾಡುತ್ತಾ ದಿಕ್ಕಿಲ್ಲದೆ ಅಲೆಯುತ್ತಿರುವದನ್ನು ನೋಡಿ ಸೈರಿಸುವದು ಕಷ್ಟವಾಗಿದೆ. ಎಲ್ಲಿ ನೋಡಿದರೂ ಹೆಣಗಳ ಮಯವಾಗಿದೆ. ಪೋಲೀಸಿನವರೂ ಸೈನಿಕರೂ ಕಷ್ಟನಿವಾರಣೆಗಾಗಿ ಬಹು ಸಾಹಸಪಡುತ್ತಿದಾರೆ.

ಅನೇಕ ಯೂರೋಪಿಯನ್ ಸರದಾರರು ತಮ್ಮ ಪ್ರಾಣದ ಮೇಲೆ ಆಸೆಯಿಡದೆ ಪಟ್ಟಣದ ಎಲ್ಲಾ ಕಡೆಗಳಲ್ಲೂ ಸಂಚಾರ ಮಾಡುತ್ತಾ, ಅಲ್ಲಲ್ಲಿ ಜೀವದೊಡನೆ ಸಿಕ್ಕಿಕೊಂಡು ನರಳುತ್ತಿರುವ ಜನರನ್ನು ಬಿಡಿಸಿ ಸಾಗಿಸಿಕೊಂಡು ಬರುತ್ತಿದಾರೆ. ಈ ರೀತಿ ಇವರು ನೂರಾರು ಪ್ರಜೆಗಳನ್ನು ಬದುಕಿಸಿದರು. ಇನ್ನೂ ಮೋಡಗಳು ಬಹಳ ಗಟ್ಟಿಯಾಗಿ ಸೇರಿಕೊಂಡಿವೆ. ಇದನ್ನು ನೋಡಿದರೆ ಮತ್ತೆ ಮಳೆ ಸುರಿಯುವ ಪಕ್ಷಕ್ಕೆ ಅನಾಹುತವು ಇನ್ನೂ ಅಪಾರವಾಗುವುದಲ್ಲಾ ಎಂದು ಅನೇಕರು ಪರಿತಾಪ ಪಡುತ್ತಿದಾರೆ. ಹೈದರಾಬಾದ್ ಪಟ್ಟಣಕ್ಕೆ ಹೋಗಿ ಬರುವ ಮಾರ್ಗಗಳೆಲ್ಲಾ ಮುಚ್ಚಿಹೋದವು. ಅಲ್ಲಿಂದ ಯಾವ ವರ್ತಮಾನವೂ ಹೊರಕ್ಕೆ ತಿಳಿಯುವಹಾಗಿಲ್ಲ. ನೈಜಾಮರವರೂ, ಮಂತ್ರಿಶ್ರೇಷ್ಠರೂ, ಅನೇಕ ಭಾರೀ ಉದ್ಯೋಗಸ್ಥರೂ ಆ ಪಟ್ಟಣದೊಳಗೇ ಇರೋಣದರಿಂದ ಅವರ ಯೋಗಕ್ಷೇಮವೇನೆಂಬುವುದು ತಿಳಿಯದೆ ವ್ಯಸನವಾಗುವುದು. ಆದರೆ ಮಧ್ಯಾಹ್ನದ ಮೇಲೆ ಬಾವುಟಾಗಳ ಸಂಜ್ಞೆಗಳ ಮೂಲಕ ಸ್ವಲ್ಪ ವರ್ತಮಾನ ತರಿಸಿಕೊಳ್ಳುವಂತಾಗಿದೆ. ಅನೇಕ ಸರ್ಕಾರಿ ಆಫೀಸುಗಳು ಸಮಸ್ತ ರಿಕಾರ್ಡುಗಳ ಸಹಿತ ಹಾಳಾದವು. ಅಫ್ಜಲ್‌ಗಂಜ್ ಆಸ್ಪತ್ರೆಯು ಮೊದಲೇ ಈ ಪ್ರವಾಹಕ್ಕೆ ಸಿಕ್ಕಿಬಿದ್ದದ್ದರಿಂದ ಅದು ಸಂಪೂರ್ಣವಾಗಿ ನೆಲಸಮವಾಯಿತು. ಒಳಗಿದ್ದ ಅನೇಕ ರೋಗಿಗಳೂ ಸೇವಕರುಗಳೂ ಮೃತಪಟ್ಟರು. ಚಾದರಘಾಟ್ ಸೇತುವೆಯ ಮೇಲೆ ಹನ್ನೆರಡು ಅಡಿಗಳ ಎತ್ತರಕ್ಕೆ ಪ್ರವಾಹಗಳು ಹರಿದು, ಕಣ್ಣುಮುಟ್ಟುವಕ್ಕೆ ಸುತ್ತಲೂ ಕಾಣುವ ಪ್ರದೇಶವೆಲ್ಲಾ ನೀರಿನ ಮಯವಾಯಿತು. ೩೬ ಗಂಟೆ ಹೊತ್ತಿನಲ್ಲಿ ೧೫ ಅಂಗುಲ ಪ್ರಮಾಣದಷ್ಟು ಮಳೆ ಸುರಿದಿರುತ್ತದೆ.

ಸೆಪ್ಟಂಬರ್ ತಾ. ೨೯ನೇ ಮಂಗಳವಾರ ಬಂದ ವರ್ತಮಾನವೇನೆಂದರೆ —ಹುಸೇನ್‌ಸಾಗರವೆಂಬ ಕೆರೆಯಿಂದ ೫೦ ಗಜಗಳ ದೂರದಲ್ಲಿ ಉದ್ದಕ್ಕೂ ಇದ್ದ ಮನೋಹರವಾದ ಭಾರಿಭಾರಿ ಕಟ್ಟಡಗಳೆಲ್ಲಾ ಹಾಳಾದವು. ಶವಗಳು ನಾನಾ ಸ್ಥಿತಿಯಲ್ಲಿ ಬಿದ್ದು ಇರುತ್ತವೆ. ಕೆಲವು ಮೇಲೆ ಆಭರಣಾದಿಗಳು ಹಾಗೆ ಹಾಗೇ ಇರುತ್ತವೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿದ್ದ ರೋಗಿಗಳನ್ನು ಮಾತ್ರ ಬಹು ಸಾಹಸಪಟ್ಟು ಪ್ರಾಣದೊಡನೆ ಕಾಪಾಡಿದರು. ವಿಶೇಷವಾಗಿ ಸಣ್ಣ ಸಣ್ಣ ಮಕ್ಕಳೂ ಮುದುಕಿಯರೂ ನೂರಾರು ಮಂದಿ ಪ್ರವಾಹಕ್ಕೆ ಸಿಕ್ಕಿಯೋ, ಮನೆ ಗೋಡೆಗಳ ಕೆಳಗೆ ಬಿದ್ದೋ ಸತ್ತುಹೋಗಿರುತ್ತಾರೆ. ಮನೆಯಲ್ಲಿ ಮಗುವನ್ನು ಅಪ್ಪಿಕೊಂಡಿರುವ ತಾಯಂದಿರು, ಮಕ್ಕಳನ್ನು ಎತ್ತಿಕೊಂಡಿರುವ ಗಂಡಸರು, ಹಾಗೆ ಹಾಗೇ ಸತ್ತುಹೋಗಿದಾರೆ. ಅನೇಕ ಸಂದರ್ಭಗಳಲ್ಲಿ ಹೆಣಗಳು ಗುರುತು ಸಿಕ್ಕದಂತೆ ಕಿತ್ತು ಕಿತ್ತುಹೋಗಿರುವವು. ಗೋವುಗಳು, ಕುದುರೆಗಳು, ನಾಯಿಗಳು, ಬೆಕ್ಕುಗಳು, ಕತ್ತೆಗಳು, ಈ ಮೊದಲಾದ ಮೂಗ ಪ್ರಾಣಿಗಳು ಲೆಕ್ಕವಿಲ್ಲದಷ್ಟು ಪ್ರವಾಹದಲ್ಲಿ ಸಿಕ್ಕಿ ಮುಳುಗಿ ಸತ್ತುಬಿದ್ದಿರುತ್ತವೆ. ಅಂತು ನಿನ್ನೆ ಮೊನ್ನೆ ಕೂಡಾ ಬಹಳ ಜನಭರಿತವಾಗಿ ತುಂಬಾ ಕಳಕಳಿಸುತ್ತಿದ್ದ ಭಾಗವೆಲ್ಲಾ ಸಂಪೂರ್ಣವಾಗಿ ನಾಶಹೊಂದಿರುವುದು. ನಷ್ಟವೂ ಕಷ್ಟವೂ ಪ್ರಾಣಹಾನಿಯೂ ಎಷ್ಟು ಘೋರವಾದದ್ದೋ ಇದರಿಂದ ಊಹಿಸಿಕೊಳ್ಳಬಹುದಾಗಿದೆಯಲ್ಲದೆ ವಿವರಿಸುವುದು ಸಾಧ್ಯವಲ್ಲ. ಮುಲ್ಲಾ ಪೇಟೆಯ ಕಡೆ ಪೂರ್ವಭಾಗದ ಪಟ್ಟಣವು ನಿರ್ನಾಮವಾಯಿತು. ಮೇಲೆ ಮೇಲೆ ಕಾಣುವ ಹೆಣಗಳನ್ನು ತೆಗೆದು ಸಾಗಿಸುತ್ತಿದಾರೆ. ಬಿದ್ದಿರುವ ಮನೆಗಳ ಅಡಿಯಲ್ಲಿ ಇನ್ನೂ ನೂರಾರು ಶವಗಳು ಅಡಗಿದೆ ಎನ್ನುವುದಕ್ಕೆ ಸಂಶಯವಿಲ್ಲ. ಪ್ರವಾಹವು ಉತ್ತರದಿಂದ ದಕ್ಷಿಣ ಕಡೆಗೆ ಬಂತೆಂದೂ, ಒಂದು ಮೈಲಿ ದೂರ ಅರ್ಧ ಮೈಲಿ ಅಗಲಕ್ಕೆ ಉದ್ದಕ್ಕೂ ಪ್ರವಾಹವು ಎಲ್ಲವನ್ನೂ ಕೊಚ್ಚಿಕೊಂಡುಬಿಟ್ಟಿತು. ಮುಖ್ಯವಾಗಿ ಬಹಳ ಜನಭರಿತವಾಗಿದ್ದ ಪರನವುಲಾ ಮೊಹಲ್ಲಾದಲ್ಲಿ ಕೆಲವು ಸಾವಿರ ಮನೆಗಳು ಕೆಲವು ನಿಮಿಷಗಳೊಳಗಾಗಿ ನೆಲಸಮವಾದವು. ಶವಗಳನ್ನು ಮಣ್ಣಿನ ಕೆಳಗಿಂದ ಬಿಡಿಸಿ ತೆಗೆಯುವುದು ಬಹಳ ಕಷ್ಟವೇ ಸರಿ. ಆದರೆ ಬಿದ್ದ ಮನೆಗಳನ್ನು ಶೋಧಿಸಿ ಸಾಮಾನುಗಳನ್ನು ಪ್ರತ್ಯೇಕ ಮಾಡುವುದಕ್ಕೆ ಹತ್ತಾರು ವರುಷಗಳೇ ಬೇಕಾಗಿದೆ. ಇಷ್ಟೆಲ್ಲಾ ಮುಸೇನಿ ಆಲಂನಿಂದ ಹಿಡಿದು ಕೋಟೆಯ ಪಶ್ಚಿಮ ಗೋಡೆಗಳ ವರೆಗೆ ಇರುವಂಥಾ ಪ್ರದೇಶದಲ್ಲಿ ಸಂಭವಿಸಿರುತ್ತದೆ. ಈಗಲಾದರೋ ಆ ಪ್ರಾಂತ್ಯದಲ್ಲೆಲ್ಲಾ ಹೆಣಗಳು ಕೊಳೆತು ದುರ್ಗಂಧ ಬೀಸುತ್ತಿರುವುದು. ಆ ಹೆಣಗಳನ್ನು ಬೇಗ ಬೇಗನೆ ಸಾಗಿಸದೆ ಹೋದಲ್ಲಿ ವಾಂತಿಭೇದಿ ಮೊದಲಾದ ವ್ಯಾಧಿಗಳು ಹುಟ್ಟುವುದಕ್ಕೂ, ಈಗ ಉಳಿದುಕೊಂಡಿರುವವರಲ್ಲಿ ಅನೇಕಾನೇಕರು ಮೃತಪಡುವುದಕ್ಕೂ, ರೋಗಾದಿಗಳು ಇತರ ಕಡೆಗಳಿಗೂ ಹರಡಿಕೊಳ್ಳುವುದಕ್ಕೂ ಅವಕಾಶವಾಗುತ್ತೆನ್ನುವುದರಲ್ಲಿ ಏನೂ ಸಂಶಯವಿಲ್ಲ. ಸರಕಾರದ ಅಧಿಕಾರಿಗಳು ಹೆಣಗಳನ್ನು ಕೀಳಿಸಿ ಗಾಡಿಗಳಲ್ಲಿ ದೂರ ಪ್ರದೇಶಕ್ಕೆ ಸಾಗಿಸಿ ರಾಶಿರಾಶಿ ಸುಡಿಸಲಾರಂಭಿಸಿರುತ್ತಾರೆ. ಶವಗಳು ಇಂಥವರದೆಂದು ಗುರುತುಹಿಡಿಯುವುದು ಸಾಧ್ಯವಿಲ್ಲ. ಒಂದು ಮನೆಯಲ್ಲಿ ಬಹು ದುಃಖಕರವಾದ ಸಂಗತಿ ನಡೆಯಿತು ಒಬ್ಬ ಬ್ರಾಹ್ಮಣ ವಕೀಲನು ತನ್ನ ತಂದೆಯೂ ಇನ್ನು ನಾಲ್ವರೂ ಮನೆ ಬಿದ್ದು ಸತ್ತುಹೋದದ್ದನ್ನು ನೋಡಿ, ತನ್ನ ಮನೆ ಮುಂದಿದ್ದ ಮರದ ಮೇಲಕ್ಕೆ ಹತ್ತಿ ಪ್ರಾಣವನ್ನಾದರೂ ಉಳಿಸಿಕೊಳ್ಳಬೇಕೆಂದು ತನ್ನ ರುಮಾಲನ್ನು ಮೈಗೂ ಒಂದು ಕೊಂಬೆಗೂ ಬಲವಾಗಿ ಕಟ್ಟಿಕೊಂಡನು. ಆದರೆ ಪ್ರವಾಹವು ಅಷ್ಟು ಮೇಲಕ್ಕೂ ಹತ್ತಿ ಅವನನ್ನು ಬಡಿದುಕೊಂಡು ಹೋಗುವಂತೆ ಆದಾಗ ಅವನು ತನ್ನ ರುಮಾಲಿನ ಕಟ್ಟನ್ನು ಬಿಚ್ಚಿ ಇನ್ನೂ ಮೇಲಕ್ಕೆ ಹತ್ತಿಹೋಗಬೇಕೆಂದು ಪ್ರಯತ್ನಪಟ್ಟನು. ಆದರೆ ಗಂಟುಬಿಚ್ಚುವಷ್ಟರಲ್ಲೇ ಪ್ರವಾಹವು ಅವನನ್ನು ಮುಳುಗಿಸಿ, ಮರದ ಕೊಂಬೆಯಲ್ಲಿ ತಗಲಿಕೊಂಡಿದ್ದಂತೆಯೇ ಸತ್ತುಹೋದನು. ಮರುದಿನ ಬೆಳಿಗ್ಗೆ ಅವನ ಶವವು ಗಿಡದ ಮೇಲೆ ನೇತಾಡುತ್ತಿತ್ತು. ಈ ಸಂಗತಿಯನ್ನು ಆ ವಕೀಲನ ಸಹೋದರನೇ ಹೇಳಿಕೊಂಡು ಗೋಳಾಡುತ್ತಿದಾನೆ.

ಅದೇವಾರ ಬಿದ್ದು ಪ್ರಾಣಾಪಾಯವನ್ನುಂಟುಮಾಡುವ ಸ್ಥಿತಿಯಲ್ಲಿರುವಂಥಾ ಮನೆಗಳ ಮತ್ತು ಬಂಗಲೆ ಮೊದಲಾದ ದೊಡ್ಡ ಕಟ್ಟಡಗಳನ್ನೆಲ್ಲಾ ಜನಗಳಿಂದ ಬಿಡಿಸಿ ಕೆಡವುತ್ತಿದಾರೆ. ರೆಸಿಡೆನ್ಸಿ ಬಂಗಲೆಯ ಬಳಿ ಒಂದು ಹಳ್ಳದ ಕೊಟ್ಟೆಯಲ್ಲಿ ಹನ್ನೊಂದು ಶವಗಳು ಸಿಕ್ಕಿದವು. ನಾಗಪಲ್ಲಿಗೂ ಲಿಂಗಂಪಲ್ಲಿಗೂ ನಡುವೆ ರೈಲ್ ರಸ್ತೆಯು ಕಿತ್ತು ಕೊಚ್ಚಿ ಹೋಯಿತು. ಪ್ರವಾಹ ಬಂದಾಗ ಅನೇಕಾನೇಕ

ಜನಗಳು ಸ್ತ್ರೀಯರು ಓಡಿ ಹೋಗಿ ರೈಲ್ವೆ ಸ್ಟೇಷನ್ ಕಟ್ಟಡದಲ್ಲಿ ಆಶ್ರಯವನ್ನು ಹೊಂದಿದರು. ಅಫ್ಜಲ್‌ಗಂಜಿನ ಕಡೆ ಮನೆಗಳನ್ನು ಶೋಧಿಸುತ್ತಿದ್ದಾಗ ಒಂದು ಮನೆಯಲ್ಲಿ ೨೧ ಜನರೂ ೧ ಮಗುವೂ ಸಂಕಟ ಪಡುತ್ತಿದ್ದರು. ಅವರನ್ನೆಲ್ಲಾ ಬಹು ಶ್ರಾಸಪಟ್ಟು ಹೊರಕ್ಕೆ ಕರೆದು ತಂದ ಒಡನೆಯೇ ಆ ಮನೆಯು ಅನಾಮತ್ತು ಬಿದ್ದು ನೆಲ ಸಮನಾಯಿತು. ಅವರನ್ನು ಹೊರಕ್ಕೆ ಸಾಗಿಸುವುದು ಸ್ವಲ್ಪ ತಡ ಕಾಲವಾಗಿದ್ದಲ್ಲಿ ಅಷ್ಟು ಜನರೂ ಅನ್ಯಾಯವಾಗಿ ಮೃತ ಪಡುತ್ತಿದ್ದರು. ಅಫ್ಜಲ್‌ಗಂಜಿನ ಆಸ್ಪತ್ರೆಯ ಗೋಡೆಗಳು ಮಾತ್ರ ನಿಂತಿರುತ್ತವೆ. ಒಳಗಿದ್ದ ಸಮಸ್ತ ಸಾಮಾನುಗಳೂ ಔಷಧಗಳೂ ಬಹು ಬೆಲೆಯುಳ್ಳ ಶಸ್ತ್ರಾದಿ ಆಯುಧಗಳೂ ಹಾಳಾದವು.

ವೈಸರಾಯಿ ಲಾರ್ಡ್ ಮಿಂಟೋರವರು ಈ ಸುದ್ದಿಯನ್ನು ಕೇಳಿ ತುಂಬಾ ಪರಿತಾಪ ಪಟ್ಟು ನೈಜಾಮರವರಿಗೆ ತಮ್ಮ ವ್ಯಸನವನ್ನು ಸಿಂಲಾ ಪಟ್ಟಣದಿಂದ ತಂತೀವರ್ತಮಾನಕೊಟ್ಟು ತಿಳಿಸಿರುತ್ತಾರೆ. ಏನೆಂದರೆ—"ಹೈದರಾಬಾದು ಟವರ್‌ಗೆ ಸಂಭವಿಸಿದಂಥಾ ದುರ್ದೆಸೆಯನ್ನೂ ಪ್ರಾಣ ನಷ್ಟವಾದುದನ್ನೂ ಕೇಳಿ ನಾನು ತುಂಬಾ ವ್ಯಸನಾಕ್ರಾಂತನಾಗಿರುತ್ತೇನೆ. ನಿಮ್ಮ ವಿಷಯದಲ್ಲಿ ನಾನು ಮನಃಪೂರ್ವಕವಾಗಿ ಸಂತಾಪಪಡುವೆನೆಂದು ತಿಳಿಯಿರಿ." ಈಚೆಗೆ ಹೈದರಾಬಾದಿನ ಕೆಲವು ಅಧಿಕಾರಿಗಳೇ ಸೇರಿ, ಕಷ್ಟ ಪರಿಹಾರಾರ್ಥವಾದ ಧರ್ಮದ ಫಂಡನ್ನು ಕೂಡಿಸಿ, ಕಷ್ಟಪಡುತ್ತಿರುವ ಪ್ರಜೆಗಳಿಗೆ ಸಹಾಯ ಮಾಡಲಾರಂಭಿಸಿದಾರೆ.

ಸೆಪ್ಟಂಬರು ತಾ. ೩೦ ನೇ ಬುಧವಾರ ಬಂದ ವರ್ತಮಾನವೇನೆಂದರೆ:—ಸರ್ಕಾರದ ಅಧಿಕಾರಿಗಳೂ ಪೊಲೀಸಿನವರೂ ಸಿಪಾಯಿಗಳೂ ಗುಂಪು ಗುಂಪಾಗಿ ಪಟ್ಟಣದ ಅನೇಕ ಕಡೆಗಳಲ್ಲಿ ಭೂಮಿಯನ್ನು ಶೋಧಿಸುವ ಕೆಲಸದಲ್ಲಿದಾರೆ. ಪ್ರಾಣ ಉಳಿಸಿಕೊಳ್ಳುವುದಕ್ಕೋಸ್ಕರ ಮರಗಳ ಮೇಲೂ, ಮಸೀತಿ ದೇವಸ್ಥಾನಗಳ ಮೇಲೂ, ದೊಡ್ಡ ಮತ್ತು ಎತ್ತರವಾದ ಕಟ್ಟಡಗಳ ಮೇಲೂ, ಗುಡ್ಡ ಗಲಂತಿರುವ ಎತ್ತರವಾದ ಪ್ರದೇಶಗಳಲ್ಲೂ ಹೋಗಿ ಸೇರಿಕೊಂಡಿದ್ದಂಥಾ ನೂರಾರು ಪ್ರಜೆಗಳನ್ನು ಅಲ್ಲಿಂದ ಕರೆತಂದು ಅನ್ನಪಾನಗಳನ್ನು ನಡಿಸುತ್ತಿದಾರೆ. ಫೌಲ್‌ಗೂಡಾ ಎಂಬ ಗ್ರಾಮಕ್ಕೆ ಗ್ರಾಮವೇ ಹಾಳಾಯಿತು. ಅದರಲ್ಲಿದ್ದ ೧,೦೦೦ ಮನೆಗಳೂ ಜೋಪಡಿಗಳೂ ಸಂಪೂರ್ಣವಾಗಿ ಕಳ್ಳು ಬಿದ್ದುಕೊಂಡವು. ಅಲ್ಲಿ ಹೊರಡುತ್ತಿರುವ ದುರ್ಗಂಧವು ಸಹಿಸಲಸಾಧ್ಯವಾಗಿರುತ್ತದೆ. ಒಂದು ಕಡೆ ಅಗೆದು ತೆಗೆಯುತ್ತಿರುವಲ್ಲಿ ಹನ್ನೆರಡು ಶವಗಳು ರಾಶಿಯಾಗಿ ಬಿದ್ದಿದ್ದವು. ಅವರ ರಕ್ತಸಂಬಂಧಿಗಳು ಎದುರಿಗೆ ಕುಳಿತು ರೋದನ ಮಾಡುತ್ತಿದಾರೆ. ಇನ್ನೊಂದು ಕಡೆ ಹಳ್ಳದಲ್ಲಿ ಮೂರು ಹೆಣಗಳು ಸಿಕ್ಕಿದವು. ಮತ್ತೊಂದು ಸ್ಥಳದಲ್ಲಿ ಬಹಳ ಸಾಹಸಪಟ್ಟು ಮಣ್ಣು ಅಗೆದು, ಕುಟುಕು ಪ್ರಾಣವಿದ್ದ ಏಳು ಜನ ಹೆಂಗಸರನ್ನು ಬದುಕಿಸಿದರು. ಹೆಣಗಳನ್ನು ಗಾಡಿಗಳಲ್ಲಿ ಭರ್ತಿ ಮಾಡಿ ಸಾಗಿಸುತ್ತಿದಾರೆ.

ಇತ್ತಲಾಗಿ ಮನೆಮಠಗಳನ್ನೂ ಸರ್ವಸ್ವವನ್ನೂ ಕಳೆದುಕೊಂಡು, ಹೊಟ್ಟೆಗಿಲ್ಲದೆ ಅಲೆಯುತ್ತಿರುವವರು ಅಂಗಡಿ ಮುಂಗಟ್ಟುಗಳನ್ನು ನುಗ್ಗಿ ಲೂಟಿ ಮಾಡಲಾರಂಭಿಸಿದಾರೆ. ಅನೇಕ ಸರ್ಕಾರಿ ಅಧಿಕಾರಿಗಳು ಈ ಅನಾಹುತದಿಂದ ೨,೦೦೦ ಕ್ಕಿಂತಲೂ ಹೆಚ್ಚು ಪ್ರಜೆಗಳು ಮೃತಪಟ್ಟಿರಬಹುದೆಂದು ಹೇಳುತ್ತಾರೆ. ಇಂಥ ಪತ್ತು ಇದರ ಮೈಲಿ ವಿಸ್ತೀರ್ಣವುಳ್ಳ ಈ ಪ್ರದೇಶದಿಂದ ಬೇಗನೆ ಹೆಣಗಳನ್ನು ಸಾಗಿಸದೆ ಹೋದರೆ ಖಾಯಿಲೆಗಳು ಬೇರೆ ಹುಟ್ಟಿ ಪ್ರಜೆಗಳು, ಇನ್ನೂ ಬಹು ಹಾನಿಪಡುವುದಕ್ಕೆ ಸಂಶಯವಿಲ್ಲ.

ಹೈದರಾಬಾದಿನಲ್ಲಿ ಟೆಲಿಗ್ರಾಫು ಆಫೀಸು ಮತ್ತೆ ಆರಂಭವಾಯಿತು. ಹಿಂದೂಸ್ಥಾನದ ಇತರ ಕಡೆಗಳಿಂದ ಅನೇಕಾನೇಕರು ತಮ್ಮ ನೆಂಟರಿಷ್ಟರು ಕ್ಷೇಮವಾಗಿದಾರೆಯೋ ಎಂದು ಗಾಬರಿಪಟ್ಟು ನೂರಾರು ತಂತೀ ವರ್ತಮಾನಗಳನ್ನು ಕೊಟ್ಟು ಕೇಳುತ್ತಿರುವರು. ನೂರಾರು ಕಾಗದಗಳು ಸಾವಕಾಶ ಅಂಚೆಗೆ ಬಿದ್ದುಕೊಂಡಿವೆ. ತಂತಿ ವರ್ತಮಾನಗಳನ್ನು ತಲುಪಿಸುವ ವಿಚಾರದಲ್ಲಿ ಅವರವರ ಜನರು ಬದುಕಿದಾರೋ ತಿಳಿಯದು. ಉಳಿದಿರುವವರನ್ನು ಕೇಳಿದರೆ ಅವರು— ಸ್ವಾಮಿ, ನಾವಿನ್ನು ಯಾರಿಗೆ ಸಾವಕಾಶ ಸಾರೋಣ? ಯಾವ ಬೀದಿಯೂ ಯಾವ ಮನೆಯೂ ಯಾವ ಮನುಷ್ಯನೂ ಕಾಣಸಿಗುವುದಿಲ್ಲ ' ಎನ್ನುತ್ತಾರೆ. ' ಓಡಿ ಹೋಗುತ್ತಿದೇವೆ " ಎಂದು ಹೇಳುತ್ತಾರೆ. ನವಾಬ್ ಸಾಲಾರ್ ಜಂಗರ ಅರಮನೆಯನ್ನು ಹೋಗಿ ನೋಡಿದರೆ ಅವರಲ್ಲಿ ಅರ್ಧಪಾಲು ನಾಶವಾಗಿದೆ. ಆ ದೊಡ್ಡ ನಗರದ ಬಹು ರೀತಿ ಸುಂದರ ಆಸ್ಥಾನ ಹಾಗೂ ನಾನಾ ಮಹಲುಗಳು ನಷ್ಟವಾಗಿರುತ್ತವೆ.

ಕಲ್ಕತ್ತಾ ನಗರದ ವರ್ತಕರು ಹೈದರಾಬಾದಿನ ಪ್ರಜೆಗಳ ಕಷ್ಟನಿವಾರಣೆಗಾಗಿ ಧರ್ಮದ ಫಂಡನ್ನು ಕೂಡಿಸುತ್ತಿದೇವೆಂದು ತಿಳಿಸಿದಾರೆ. ಹೈದರಾಬಾದಿನ ನೈಜಾಮರವರು ಅಧಿಕಾರಿಗಳಿಗೆ ಅಪ್ಪಣೆಯನ್ನು ಕೊಟ್ಟು ಒಂದು ಧರ್ಮದ ಫಂಡನ್ನು ಪ್ರಾರಂಭಿಸುವಂತೆ ಮಾಡಿದರು. ಜಗಲೀ ಕೆಲವು ಕಡೆಗಳಲ್ಲಿ ಧರ್ಮದ ಅನ್ನಛತ್ರಗಳನ್ನು ಹಾಕಿಸಿ ನಡಿಸುತ್ತಿದಾರೆ. ಬೆದರಿಹೋಗಿ ನಗರದ ಹೊರಭಾಗದಲ್ಲಿ ಬಿಡಾರು ವಾಸಮಾಡುವುದಕ್ಕೋಸ್ಕರ ಗುಡ್ಡ ಜನರು ಕಟ್ಟಿಕೊಂಡರು, ಸುತ್ತಮುತ್ತಲೂ ಇರುವ ಗ್ರಾಮಾಂತರಗಳಲ್ಲೂ ಪ್ರಜೆಗಳು ನಷ್ಟವಾದರೋ ಇನ್ನೂ ತಿಳಿದು ಬಂದಿಲ್ಲ.

ಅಕ್ಟೋಬರ್ ತಾ. ೧ ರಲ್ಲಿ ಬಂದ ವರ್ತಮಾನ:—ಹೈದರಾಬಾದಿನಿಂದ ಸಿಕಂದ್ರಾಬಾದಿಗೆ ಹೋಗುವ ರಸ್ತೆಯಲ್ಲಿ ಸಿಕ್ಕುವ ಬೇಗಂಪೇಟೆ ಕಟ್ಟೆಯ ಸೇತುವೆಯು ಮುರಿದು ಬಿದ್ದು ಕೊಚ್ಚಿ ಹೋಯಿತು. ಆಗ್ಗೆ ಆ ಸೇತುವೆಯ ಮೇಲೆ ಹೋಗುತ್ತಿದ್ದ ಮೇಲ್ ಕುದುರೆ ಗಾಡಿಯು ಪ್ರವಾಹದ ಪಾಲಾಯಿತು. ಕುದುರೆಗಳೂ ಗಾಡಿಯವನೂ, ಕುದುರೆಯವನೂ ಮೃತಪಟ್ಟರು. ಆ ಸ್ಥಳಕ್ಕೆ ೧ ಮೈಲಿ ದೂರದಲ್ಲಿ ಮುರಿದು ಬಿದ್ದಿದ್ದ ಗಾಡಿ ಮಾತ್ರ ಸಿಕ್ಕಿತು. ವರ್ತಕರು ಇದೇ ಸಮಯವೆಂದು ದಿನಸಿ ಧಾರಣೆಯನ್ನು ಹೆಚ್ಚಿಸಿ, ರೂಪಾಯಿಗೆ ೪ ಸೇರು ಬಿಕರಿಮಾಡುತ್ತಿದಾರೆ. ಜೋಪಡಿಗಳಿಗೂ ಬಾಡಿಗೆ ದರಗಳು ಬಹಳವಾಗಿ ಹೆಚ್ಚಿರುತ್ತವೆ. ಜನರುಗ್ಗರ ಕಷ್ಟವೂ ಸಂಕಟವೂ ಅಪಾರವಾಯಿತು. ಸೀರಿನಲ್ಲಿ ಸಿಕ್ಕಿ ಮುಗ್ಗಲಾದಂಥಾ ಪ್ರಾಣಿಗಳನ್ನು ರೂಪಾಯಿಗೆ ೭೦ ಸೇರಿನಂತೆ ಬಿಕರಿಮಾಡಿ ಹಣ ಕೂಡಿಸುತ್ತಿದ್ದನ್ನು ನೋಡಿ ಪೊಲೀಸ್ ಆಫೀಸರರು ಹಿಡಿದರು. ಬಹಳ ಬೆಲೆಯುಳ್ಳ ವಸ್ತುಗಳಿಂದ ತುಂಬಿದ ನವಾಬ್ ಫೈಜ್ ಅಲ್ಲಿ ಖಾನ್ ರವರ ಬಂಗಲೆಯು ಸಂಪೂರ್ಣವಾಗಿ ನಾಶವಾಯಿತು. ಐತ್ವಾರದರ ರೂಪಾಯಿ ನಷ್ಟವಾಯಿತು. ಸರ್ಕಾರದವರು ಎತ್ತಿನಗಾಡಿಗಳೂ ಹೆಣಗಳನ್ನೆಲ್ಲಾ ತಮ್ಮ ಜನರನ್ನು ಬಿಟ್ಟು ಸಾಗಿಸುವರು. ಮನೆಗಳಲ್ಲೇ ಇದ್ದು ಬಿಟ್ಟಿರಾದ್ದರಿಂದ ಅವರೇ ಬಹು ಮಂದಿ ಮೃತಪಟ್ಟರು. ಆದರ ಚೆನ್ನಾಗಿ ನಗರವಾಸ್ತವ್ಯಗಳೆಲ್ಲಾ ಕೊಚ್ಚಿಹೋದವು. ಕೂಲಿಕಾರರು ಸಿಕ್ಕುವುದೇ ಕಷ್ಟ. ಸಿಕ್ಕಿದರೂ ದಿನಕ್ಕೆ ಒಂದು ರೂಪಾಯಿ ಕೇಳುವರು. ಟಂಕಸಾಲೆಯನ್ನು ಕಾಯುವವರು ಸಿಕ್ಕದೆ ಮುಚ್ಚಿಬಿಟ್ಟಿದಾರೆ.

ನೈಜಾಮರವರು ಬಹಳ ಕರುಣೆಯಿಂದ ತಮ್ಮ ಎರಡು ಅರಮನೆಗಳನ್ನು ಜನಗಳ ವಾಸಕ್ಕೆ ಬಿಟ್ಟುಕೊಟ್ಟಿದಾರೆ. ಅವೆರಡೂ ತುಂಬಾ ಜನರು ಭರ್ತಿಯಾಗಿ ಸೇರಿಕೊಂಡಿರುವರು. ಅವರಿಗೆ ಬಟ್ಟೆ ಬರೆ ಕೂಡಿಸಿ ಅನ್ನಹಾಕಿಸುತ್ತಿದಾರೆ. ಹಿಂದುಗಳಿಗೂ ಮುಸಲ್ಮಾನರಿಗೂ ಪ್ರತ್ಯೇಕವಾದ ಏರ್ಪಾಡಾಗಿದೆ.

ಚಕ್ರವರ್ತಿ ಸಾರ್ವಭೌಮರವರಿಗೆ ಈ ಸುದ್ದಿ ತಿಳಿಸಿ, ಅವರಿಗೆ ತುಂಬಾ ವ್ಯಸನವನ್ನುಂಟುಮಾಡಿತು. ಅವರು ನೈಜಾಮರವರಿಗೆ ತಂತೀ ವರ್ತಮಾನಕೊಟ್ಟು ತಮ್ಮ ಮನೋವ್ಯಥೆಯನ್ನು ತಿಳಿಸಿರುತ್ತಾರೆ.

ಅಕ್ಟೋಬರ್ ತಾ. ೨ ರಲ್ಲಿ ಬಂದ ವರ್ತಮಾನ—ಬೇಗ ಬೇಗನೆ ಹೆಣಗಳನ್ನು ಗಾಡಿಗಳ ಮೇಲೆ ಹೇರಿಸಿ ದೂರ ಪ್ರದೇಶಗಳಿಗೆ ಸಾಗಿಸಿ ಒಟ್ಟೊಟ್ಟಾಗಿ ಸುರಿಸಿ ಸುಡಿಸುತ್ತಿದಾರೆ. ಅವರ ಉರಿಯು ರಾತ್ರಿ ಹೊತ್ತು ಅಂತರಿಕ್ಷದಲ್ಲಿ ಪ್ರಕಾಶಮಾನವಾಗಿ ಕಾಣುವುದು. ಹೋಗಿಯೂ ದುರ್ಗಂಧವು ಅಸಾಧ್ಯವಾಗಿದೆ. ನೈಜಾಮರವರು ಸರ್ಕಾರಿ ಜಾಹೀರಾತನ್ನು ಪ್ರಕಟಿಸಿ, ಹೈದರಾಬಾದ್ ಪಟ್ಟಣಕ್ಕೆ ಸಂಭವಿಸಿದ ಮಹಾ ದುಃಖಕರವಾದ ವಿಪತ್ತನ್ನು ವಿವರಿಸಿ, ಕಷ್ಟಕ್ಕೆ ಸಿಕ್ಕಿದಂಥಾ ಸರ್ಕಾರಿ ನೌಕರರೆಲ್ಲಾ ಒಂದು ತಿಂಗಳ ಸಂಬಳವನ್ನು ಅಡ್ವಾನ್ಸು ಕೊಡತಕ್ಕದ್ದೆಂತಲೂ, ಪತ್ತು ನಗರ ತನಿಖೆ ಒದ್ದು ಕೊಟ್ಟು ಕರೆಗಳನ್ನೂ ಮುಚ್ಚಿಬಿಡಬೇಕೆಂತಲೂ ಅಪ್ಪಣೆ ಕೊಡಿಸಿದಾರೆ. ಈ ಸಂಸ್ಥಾನದಲ್ಲಿ ಬಹು ಸನ್ಮಾನ ಪತ್ರಿಕೆಯೂ ಪ್ರಕಟಿಸಲಾಗದು ಎಂಬ ನಿಬಂಧನೆಯಿರುವುದರಿಂದ, ಈ ಸಂದರ್ಭದಲ್ಲಿ ಅನ್ನ ನಷ್ಟಗಳು ಎಲ್ಲೆಲ್ಲಿ ಎಷ್ಟೆಷ್ಟು ಹುಟ್ಟಿಗೆ ಪ್ರಾಪ್ತವಾಗಿರುವವೋ ಯಾರಿಗೂ ತಿಳಿಯುವುದು ಅಸಾಧ್ಯವಾಗಿದೆ. ಹತ್ತು ಸಾವಿರ ಪ್ರಜೆಗಳು ಅಕಾಲಮರಣವನ್ನು ಹೊಂದಿದವೆಂದು ಮೊದಲು ತಿಳಿದಿಯಷ್ಟೆ. ಈಗ ವಿಚಾರಿಸುವಲ್ಲಿ ಮೃತಪಟ್ಟವರ ಸಂಖ್ಯೆಯು ೫೦,೦೦೦ ಕ್ಕೆ ಏನೇನೂ ಕಡಮೆಯಿಲ್ಲವೆಂದು ಗೊತ್ತಾಗುವುದು. ಕೆಟ್ಟು ಹೋದ ಧಾನ್ಯಗಳನ್ನು ರಾಶಿರಾಶಿಯಾಗಿ ಸುರಿಸಿ ಸುಡಿಸುತ್ತಿರುವರು. ಒಂದು ಕಡೆ ಶೋಧನೆಮಾಡುತ್ತಿರುವಾಗ್ಗೆ ೭೦ ಗಂಟೆ ಹೊತ್ತಿನಿಂದ ಮನೆ ಕಳಗೆ ಸಿಕ್ಕಿ ನರಳುತ್ತಿದ್ದ ಒಬ್ಬ ಮನುಷ್ಯನು ಸಿಕ್ಕಿದನು. ಅವನನ್ನು ಉಪಚರಿಸುತ್ತಿದಾರೆ. ಬದುಕಬಹುದೆಂದು ಕಾಣುವುದು.

ಕೇತುವೆ ವಸ್ತು ಮೊದಲಾದವುಗಳನ್ನು ಬೇಗ ಬೇಗನೆ ದುರಸ್ತು ಮಾಡಿಸುತ್ತಿದಾರೆ. ಅಪಾರ ಧಾನ್ಯಗಳು, ಎಲ್ಲಾ ಕಡೆಗಳಲ್ಲೂ ನಾಗಿದುಹೋದವು. ಬೆಲೆ ಮುತ್ತಾ ಕೆಲವು ದಿನ ಹೊತ್ತು ಕೊಳ್ಳುವುಗಳು ಬಿಡವು. ಹೋದದಿಂದ ಸಿಕಂದ್ರಾಬಾದು ಮುಂತಾದ ಕಡೆಯಿಂದ ಕಿರುಗಿ ಕಸ್ತಪಡುತ್ತಿದಾರೆ. ಸ್ವದೇಶ ಪ್ರಜೆಗಳು ತುಂಬಾ ಕೊಚ್ಚಿಹೋದವು. ಸಿಕಂದರಾಬಾದಿನಲ್ಲಿ ಬ್ರಿಟಿಷ್ ರೆಸಿಡೆಂಟರು ಮುಂತಾದವರಾಗಿ ಸೇರಿ, ನಗರ ಕಷ್ಟ ಪರಿಹಾರದ ಫಂಡನ್ನು ಕೂಡಿಸುವುದಕ್ಕೆ ಪ್ರಾರಂಭಿಸಿದಾರೆ. ಬಿದ್ದುಹೋದ ಮನೆಗಳ ಪ್ರಜೆಗಳಿಗೆ ಅಂದಾಜು ಮತ್ತು ಕೆಲಸಗಳನ್ನು ಕೊಡುವರು. ಹಿಂದಿನ ಧರ್ಮದ ಫಂಡಿನ ಮತ್ತು ಸಭೆ ಗಳಲ್ಲಿ ಕರ್ನಲ್ ಅವರು ಹಣ ಕೊಡುವರು. ತಂತೀ ಚಂದಾ ಮಾಡಿ ಹೈದರಾಬಾದಿಗೆ ರವಾನೆಮಾಡಿದರು. ಬಂದಿರುವರು.

ಅಕ್ಟೋಬರ್ ತಾ. ೩ ರಲ್ಲಿ ಬಂದ ವರ್ತಮಾನ—ಹೈದರಾಬಾದು ಸಂಸ್ಥಾನದ ನೈಜಾಮ ದೊರೆಯವರು ಸಾಲಾರ್ ಜಂಗ್ ಅವರು ನೆಂಟರ ಸಾಲಾರ್ ಜಂಗ್ ಸಾಹೇಬರ ಅಪ್ಪ ಭಾಗದ ಸೇತುವೆಯ ಒಳಗೆ ದಯಮಾಡಿ, ತಮ್ಮ ಕಣ್ಣುಗಳಿಂದ ನೋಡಿದ ಕಾರಣದಿಂದ ಹಾನಿ ನಷ್ಟಗಳನ್ನೂ ಅನಾಹುತಗಳನ್ನೂ ಪರಾಂಬರಿಸಿ ಕಣ್ಣೀರಿಟ್ಟು ಗೋಳಾಡಿದರು. ಸ್ವದೇಶದವರೆಲ್ಲ ಅಪಾರ ಧಾನ್ಯಗಳನ್ನು ಮುಗಿಸಿಹೋದವು. ಸಿಕಂದ್ರಾಬಾದಿನಿಂದ ಅಲ್ಲಿನ ಜನರಿಗೂ ಅನ್ನ ವರ್ತಕರು ಅಕ್ಕಿ ಮುಸುರಿ ಸಹಾಯಕ್ಕೆ ೨೦ ರೂಪಾಯಿ ಹಾಕುತ್ತಿದಾರೆ. ಸುಮಾರು ದಿನಗಳ ಮಾತ್ರ ದಿನಗಳಲ್ಲೂ ಇತರ ಹೆಂಗಸರಿಗೆ ಸಹ ಕಳಗ ಉಳ್ಳ ಧರ್ಮದ ಅನ್ನಛತ್ರಗಳನ್ನು ಹಾಕಿಸಿದೆ. ಬಡವರ ಯಾರಿಗೂ ಜೀವನಕ್ಕೆ ತೊಂದರೆ ಬಾರದಂತೆ ಮಾಡಿರುವರು.

ಈಗಿನ ಬಂದಿರುವ ಸುದ್ದಿ

ಹೈದರಾಬಾದು ಬಂಗಾಲ ಬ್ಯಾಂಕಿನ ಏಜೆಂಟ್ ಬಂದಿದ್ದರು ಹೆಚ್ಚಿನ ಸಹಾಯ ಒಂದು ಬಹಳ ಸಭೆ ನಡೆಯಿತು. ಸುಮಾರು ೫೦,೦೦೦ ಪ್ರಜೆಗಳು ನೀರಿನಿಂದ ಬಿಡಿಸಿ ರೆಸಿಡೆಂಟರು ಸಭೆ ಏರ್ಪಡಿಸಿ ಅವರ ಅಧ್ಯಕ್ಷರಾದರು. ಹೈದರಾಬಾದಿಗೆ ಪ್ರಾಪ್ತವಾದ ಅನಾಹುತದ ಕಷ್ಟವನ್ನು ಕೇಳಿ ಹಲವು ದೂರದ ನಗರಗಳು, ಕೊಡುಗೆಗಳಾಗಿ, ಕಷ್ಟ ಪರಿಹಾರಕ್ಕಾಗಿ ಧರ್ಮದ ಫಂಡು ಕೂಡಿಸಬೇಕೆಂದು ಸೂಚಿಸಿದರು. ಹೈದರಾಬಾದು ನೈಜಾಮರವರು ೪ ಲಕ್ಷ ರೂಪಾಯಿ ದಯಪಾಲಿಸಿದರು. ಇನ್ನೂ ಅನೇಕರು ಕೆಲವು ಸಾವಿರ ರೂಪಾಯಿಗಳನ್ನು ಕೊಟ್ಟರು. ಮತ್ತೆ ಕೆಲವರು ಸೇರಿ ೫೦,೦೦೦ ರೂಪಾಯಿ ಧರ್ಮಮಾಡಿದರು. ಗವರ್ನರ್‌ಮೆಂಟಿನವರು ೨ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ.

ಬೆಂಗಳೂರಿನ ಪ್ರಜೆಗಳೂ ಇಷ್ಟರಲ್ಲೇ ಒಂದು ಸಭೆಯನ್ನು ನಡಿಸಿ, ಧರ್ಮದ ಫಂಡನ್ನು ಕೂಡಿಸಿ ಹೈದರಾಬಾದಿಗೆ ಕಳುಹಿಸುವವರಾಗಿದಾರೆಂದು ತಿಳಿದು ಬಂದಿದೆ.

ಹಿಂದೆ ನಡೆದ ಅನಾಹುತಗಳು.

ಮೂಸಿ ಹೊಳೆಯು ಹೈದರಾಬಾದಿನಿಂದ ಸುಮಾರು ೫೦ ಮೈಲಿ ದೂರದಲ್ಲಿರುವ ಬೆಟ್ಟಗಳಲ್ಲಿ ಹುಟ್ಟಿ ಹರಿದು ಬರುತ್ತದೆ. ಬೇಸಿಗೆಯಲ್ಲಿ ಕೆಲಕಾಲದಲ್ಲೂ ಅದರಲ್ಲಿ ನೀರು ಇರುವುದು ಅಪರೂಪ. ಮಳೆಗಾಲದಲ್ಲೂ ಕೂಡ ಸಾಮಾನ್ಯವಾಗಿ ಹಾದುಹೋಗ ಬಹುದು. ಆದರೆ ಹಿಂದೆ ಕೆಲವು ಸಲ ಈ ಹೊಳೆಯಲ್ಲಿ ಪ್ರವಾಹಗಳು ಬಂದು ಅನಾಹುತಗಳನ್ನುಂಟುಮಾಡಿರುವವು. ೧೫೦೦ ನೇ ಇಸವಿಯಲ್ಲಿ ಪ್ರವಾಹ ಬಂದು ಅನೇಕರನ್ನು ಕೊಂದು ತುಂಬಾ ನಷ್ಟಕಷ್ಟಗಳನ್ನುಂಟುಮಾಡಿತು. ೧೬೮೧ ನೇ ಇಸವಿಯಲ್ಲಿ ಬಹಳ ಬೇಗ ಅದರಲ್ಲಿ ಪ್ರವಾಹ ಹುಟ್ಟಿ ೨,೦೦೦ ಪ್ರಜೆಗಳನ್ನು ಕೊಂದುಹಾಕಿದ್ದಲ್ಲದೆ ತುಂಬಾ ನಷ್ಟ ಮಾಡಿತು. ಈಚೆಗೆ ೧೯೦೩ ನೇ ಇಸವಿ ಅಕ್ಟೋಬರು ತಿಂಗಳಲ್ಲಿ ಈ ನದಿಯ ನೆರೆಯಿಂದ ಅನೇಕಾನೇಕರ ಮನೆಮಠಗಳು ಕೊಚ್ಚಿ ಹೋದವು. ನೂರಾರು ಪ್ರಜೆಗಳು ಲಯವಾದರು.

ಈ ದುಃಖವಾರ್ತೆಯನ್ನು ಕೇಳಿ ತುಂಬಾ ಮರುಗಿ ಬೊಂಬಾಯಿ ಗವರ್ನರವರು ಹೈದರಾಬಾದು ನೈಜಾಮರವರಿಗೆ ತಂತೀ ವರ್ತಮಾನ ಕೊಟ್ಟು ತಮ್ಮ ವ್ಯಸನವನ್ನು ತಿಳಿಸಿ ಸಂತಾಪಪಟ್ಟರು.

ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್ ರವರೂ ಅವರ ಪತ್ನಿಯವರೂ ತುಂಬಾ ವ್ಯಸನಪಟ್ಟು, ನೈಜಾಮರವರಿಗೆ ಸಂತಾಪಸೂಚಕವಾದ ತಂತೀ ವರ್ತಮಾನವನ್ನು ಕಳುಹಿಸಿದಾರೆ.

ಮೈಸೂರು ಗೆಜೆಟು ಸಂಗ್ರಹ

ಮೈಸೂರು ಮಹಾರಾಣಿಯವರ ಆಸ್ಪತ್ರೆಯ ಛಾರ್ಜನ್ನು ವಹಿಸಿರುವ ಅಸಿಸ್ಟೆಂಟ್ ಸರ್ಜನ್ ಮಿಸ್ ಎಂ. ಜಿ. ಡಿವಾಲ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ಕಾಲದಿಂದ ಮೂವತ್ತು ದಿವಸ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ರವರ್ಕ್ಸ್ ಜವಾನ್ ರಂಗಪ್ಪನವರು ಸ್ಯಾನಿಟೇಷನ್ ವಿಚಾರದಲ್ಲಿ ವಿಚಾರವನ್ನು ಕಲಿತು ಬರ ಸದರಕ್ಕಾಗಿ ಕಳೆದ ಮಾರ್ಚಿ ತಾ ೧೨ ರ ಲಾಗಾಯಿತು ಗವರನ್‌ಮೆಂಟಿನವರು ಕಳುಹಿಸಿಕೊಟ್ಟಿದ್ದರು.

ನಾಗಮಂಗಲದ ತಾಲ್ಲೂಕ್ ಅಮಲ್ದಾರ್ ಮೆ. ಎಚ್. ವಿ. ವೆಂಕಟಾಚಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ಕಾಲದಿಂದ ಎರಡೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿರಸ್ತೇದಾರ್ ಎಚ್. ಶ್ರೀನಿವಾಸಯ್ಯಂಗಾರ್ಯರನ್ನು ನಾಗಮಂಗಲದ ಅಮಲ್ದಾರ್ ಮತ್ತು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡುವಂತೆ ನೇಮಕವಾಗಿದೆ.

ಪ್ರೊಬೇಷನರ್ ಡೆಪ್ಯುಟಿ ಅಮಲ್ದಾರ್ ಎ. ಕಾಶೀನಾಥರಾಯರು ಶ್ರೀರಂಗಪಟ್ಟಣದ ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಮೈಸೂರು ಸಬ್ ಡಿವಿಷನ್ ಛಾರ್ಜನ್ನು ವಹಿಸುವ ಅ. ಕಮಿಷನರ್ ಮಿ. ಆರ್. ಟಿ. ನುರಸಿಂಹಯ್ಯರವರಿಗೆ ಸರ್ವಿಸ್ಸು ಹಬ್ಬದ ರಜಾದೊಂದಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹುಂಸೂರು ಡಿಸ್ಟ್ರಿಕ್ಟ್ ವಿಚಾರಾಯ ಛಾರ್ಜನ್ನು ವಹಿಸಿರುವ ಅ. ಕಮಿಷನರ್ ಮಿ. ಎಂ. ಶ್ರೀನಿವಾಸ ಮೂರ್ತಿಯವರನ್ನು ಮೈಸೂರು ಸಬ್ ಡಿವಿಷನ್ ಛಾರ್ಜಿಗೆ ನೇಮಕವಾಗಿದೆ.

ರಜಾ ದಿವಸದ ಇನ್ನು ಮೇಲೆ ಮಿ. ಆರ್. ಕೆ. ನ ಹರಿಹರದ ರಾಯರು ಹುಂಸೂರು ಡಿಸ್ಟ್ರಿಕ್ಟ್ ವಿಚಾರಣೆ ಛಾರ್ಜನ್ನು ವಹಿಸತಕ್ಕದ್ದು.

ಅವರು ರಜಾ ದಿವಸ ಬರುವ ತನಕ ಮೈ. ಆ. ಕಮಿಷನರ್ ಮೈ. ಡಿ. ಶಿವಶಂಕರಯ್ಯ ರವರು ಡಿಸ್ಟ್ರಿಕ್ಟ್ ವಿಚಾರಣೆ ಛಾರ್ಜನ್ನು ವಹಿಸತಕ್ಕದ್ದು.

ಆ. ಕಮಿಷನರ್ ಮೆ. ಎ. ನ್ಯೂ ಕೃಷ್ಣರಾವು ಯವರಿಗೆ ಕೊಟ್ಟಿರುವ ಪದಿನೈದು ದಿವಸ ಪ್ರಿವಿಲೆಜ್ ರಜಾವನ್ನು ಇನ್ನು ದು ವಾ ರ ಬಿಟ್ಟು ನಾಡಿದೆ. ಎಕ್ಸ್‌ಟ್ರಾ ಅ. ಕಮಿಷನರ್ ಮೆ. ಮನ್ಸೂರ್ ಅಲೀಯವರು ಚಿತ್ರದುರ್ಗದ ವಿಚಾರ ಸೇವಾ ವಿಚಾರವನ್ನು ವಹಿಸಿರತಕ್ಕದ್ದು.

ಮುಜರೆ ಡಿಪಾರ್ಟ್ಮೆಂಟ್ ಪ್ರತಿಯೊ ಸಬ್ ರಿಜಿಸ್ಟ್ರಾರುಗಳನ್ನು ವರ್ಗಾಯಿಸಿ ನಾಡಿದೆ. ಮಿ. ಟಿ. ಟಿ. ಕೃಷ್ಣಸ್ವಾಮಿ, ಎಸ್. ರಾಮಸ್ವಾಮಿ ಅಯ್ಯಂಗಾರು.

ಶ್ರೀರಂಗಪಟ್ಟಣದವರು ಸಬ್ ಜಡ್ಜ್ ನಾಜರ್ ಶೆಟ್ಟಿಯವರು ಆರಸೀಕೆರೆ ನ್ಯಾಯಾಲಯದ ಛಾರ್ಜನ್ನು ವಹಿಸಿಕೊಂಡು ಕಾರ್ಯಭಾರ ನಿರ್ವಹಿಸತಕ್ಕದ್ದು ಎಂದು ಈ ದಿನ ಮಾಡಿದ್ದಾರೆ.

ಮುಜರೆ ಕೆಳಗಿನ ಮುಜರಾಯಿ ಅಧ್ಯಕ್ಷರು, ವಾದಿದೆ. ಮೆ. ಬಿ. ಕೃಷ್ಣಯ್ಯಂಗಾರ್ಯರನ್ನು ೧೯೦೭ ನೇ ಇಸವಿ ಡಿಸೆಂಬರ್ ತಿಂಗಳ ನೇಮಕವಾಗಿ ಇರುವರು.

ಹಿಂದಿರುಗಿಬಂದ ಕೆಲವರ್ಷಗಳಲ್ಲಿ ಸುಮಾರು ಎಂ. ಲಿಂಗಣ್ಣನವರು ತಮ್ಮ ಆಫೀಸಿನ ಛಾರ್ಜನ್ನು ೧೯೦೮ ರ ಆಗಸ್ಟ್ ತಾ. ೨೯ ರಲ್ಲಿ ಕೊಟ್ಟು ರಜಾದಲ್ಲಿ ಬಿಟ್ಟಿದ್ದಾರೆ.

ಎಗ್ಜಿಕ್ಯುಟಿವ್ ಇಂಜಿನಿಯರ್ ಮೆ. ಸಿ. ರಂಗನಾಥ ಅಯ್ಯಂಗಾರ್ಯರಿಗೆ ಅಕ್ಟೋಬರ್ ತಾ ೧೪ ರಿಂದ ಮೂವತ್ತು ದಿವಸ ಪ್ರಿವಿಲೆಜ್ ರಜಾ ಕೊಟ್ಟಿದೆ.

ಆ ಇಂಜಿನಿಯರ್ ಮೆ. ಕೆ. ಶ್ರೀನಿವಾಸ ಅಯ್ಯಂಗಾರ್ಯರು ಅವರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಮೈಸೂರು ಡಿವಿಷನ್ ಸಬ್ ಆಸಿಸ್ಟೆಂಟ್ ಸರ್ಜನ್ ಮೆ. ಬಿ. ಪಿ. ಕರಿಗಿರಿಯವರನ್ನು ಅರಸೀಕೆರೆ ಆಸ್ಪತ್ರೆಗೆ ವರ್ಗಮಾಡಿದೆ. ಅವರು ಸಂಗಿಗೆ ಜಿಲ್ಲೆಯ ಮೆಡಿಕಲ್ ವರ್ಕ್ ಷಾಪ್ ಆಫೀಸಿನ ಛಾರ್ಜನ್ನು ವಹಿಸತಕ್ಕದ್ದು.

ತಾಲ್ಲೋಕು ವರ್ತಮಾನಗಳು.

ನಂಜನಗೂಡು ತಾಲ್ಲೂಕು ಹೊಸ್ಕೊಪ್ಪಲು.—ಇಲ್ಲಿ ಮಳೆ ಹೋಯಿದು ಒಂದೇ ವರು ತಿಂಗಳಾಯಿತು. ಬೈರುಗಳೆಲ್ಲ ಒಣಗಿರುವವು. ಈ ಗ್ರಾಮವು ಈ ಸಿಸ್ತಿಗೆ ಗ ಕಡೆಯ ಸಮೀಪದಲ್ಲಿರುವುದರಿಂದ ಇಲ್ಲಿ ರಕ್ಷಣಾ ವರ್ತಮಾನಿಗಳವರು ಅಷ್ಟು ವ್ಯಕಲರುವುದು ಸರ್ಕಾರದವರಿಗೆ ತಿಳಿದಿರುವ ಆ ಭಯ ವರ್ತಮಾನದ ಕೆಲವು ೨—೩ ಜನ ಕಾನ್ಸ್ಟೇಬಲರನ್ನು ಮಾತ್ರ ನಿಯಮಿಸುವರೆಂದು ವರದಿ. ಈ ಸರ್ಕಾರದವರು ಸದ್ಯಕ್ಕೆ ಇರುವರೋ ಏರ್ಪಾಡಿಟ್ಟು ಪ್ರಜೆಗಳ ತನು ಧನ ಪ್ರಾಣಗಳನ್ನು ಕಾಪಾಡುವರೆಂದು ನಂಬಿರುತ್ತೇವೆ.—ಇಲ್ಲಿ ಸ್ಕೂಲಿಗೆ ಸೇರಿಯೂ

ಮನೆ ಇಲ್ಲದೆ ಜನಗಳು ತೊಂದರೆಪಡುತ್ತಿದ್ದುದನ್ನು ನೋಡಿ ಗ್ರಾಮಸ್ಥರು ಸರ್ಕಾರದವರ ಅಪ್ಪಣೆಯಂತೆ ೩೦೦೦ ರೂಪಾಯನ್ನು ಸರ್ಕಾರದ ಖಜಾನೆಯಲ್ಲಿ ನೀಡಿದರೆ ಈ ಧನ ಸರ್ಕಾರದ ಚಿತ್ತಕ್ಕೆ ಇನ್ನೂ ಬರಲಿಲ್ಲ. ಈಗಲಾದರೂ ದಯೆಯಿಟ್ಟು ಪ್ರಜೆಗಳ ಪ್ರಾರ್ಥನೆಯನ್ನು ನೆರವೇರಿಸಬೇಕೆಂದು ಕೋರುತ್ತೇವೆ.

ಚಾಮರಾಜನಗರ.—ಈ ಪ್ರಾಂತ್ಯದಲ್ಲಿ ಮಳೆ ಇಲ್ಲದೆ ಪೈರುಗಳು ಒಣಗುತ್ತಿವೆ. ಕುಡಿಯುವ ನೀರಿಗೆ ತುಂಬಾ ಅಭಾವವಾಗಿರುವುದರಿಂದ ಜನಗಳಿಗೂ ದನಕರುಗಳಿಗೂ ಉಂಟಾಗಿರುವ ತೊಂದರೆಯನ್ನು ಹೇಳತೀರದು. ಧಾರಣೆಯಾದರೆ ದಿನೇ ದಿನೇ ಏರುತ್ತಾ ಇದೆ. ಅಕ್ಕಿ ರೂಪಾಯಿಗೆ ೫ ಸೇರು, ರಾಗಿ ೧೪ ಸೇರು ಮಾರುತ್ತದೆ. ಈ ಊರು ತಾಲ್ಲೂಕು ಹೆಡ್ ಕ್ವಾರ್ಟರ್ ಆಗಿದ್ದರೂ ಇಲ್ಲಿ ಒಂದು ಸಂತೆ ಆಗದಿರುವುದು ತುಂಬಾ ಆಶ್ಚರ್ಯವಾಗಿದೆ. ಇಲ್ಲಿನವರು ದಿನಸಿ ತರಲು ೨—೩ ಮೈಲಿ ದೂರ ಹಳ್ಳಿ ಸಂತೆಗಳಿಗೆ ಹೋಗಬೇಕಾಗಿದೆ. ಪ್ರಜಾ ಹಿತಚಿಂತಕರಾದ ಸರ್ಕಾರದವರು ಈ ಊರಿನಲ್ಲಿ ಪ್ರತಿ ವಾರವೂ ಸಂತೆ ಕಟ್ಟುವಂತೆ ಮಾಡುವುದು ಬಹಳ ಪ್ರಯೋಜನ. ಈ ಕಾಲದಲ್ಲಿ ಅಂತೆ ಸೇರುಗಳ ವಿಷಯ ಕಂಪ್ಲೇಂಟುಗಳಾಗಿ ಪೋಲೀಸಿನವರು ಪಕ್ಕ ಬಿಗಿ ಕೊಡುತ್ತಾ ಬರುವುದು ಒಳ್ಳೇದು.—ಇಲ್ಲಿನ ಎಕ್ಸೈಜ್ ಸ್ವೆಕ್ಟರು ಗುಟ್ಟಾಗಿ ಗಾಂಜಾವನ್ನು ಸಾಗಿಸಿ ತರುತ್ತಿದ್ದವನ್ನು ಹಿಡಿದು ಎರಡು ಮೊಕದ್ದಮೆ ಮಾಡಿದರು. ಅಪರಾಧಿಗಳಿಗೆ ಸಜಾ ಮತ್ತು ಜುಲ್ಮಾನೆಗಳು ವಿಧಿಸಲ್ಪಟ್ಟವು.

ಚಿಂತಾಮಣಿ. ಈ ಪ್ರಾಂತ್ಯದಲ್ಲಿ ಮಳೆ ಇಲ್ಲ. ಅಲ್ಪಸ್ವಲ್ಪ ಬೆಳೆದಿದ್ದ ಪೈರುಗಳು ಒಣಗುತ್ತಿವೆ. ಕೆರೆಗಳಲ್ಲಿ ಪತ್ತಾರಿ ನಿಜಗಳು ಬೆಳೆದಿವೆ. ದಾಸನಗಳಿಗೆ ನೀರಿಗೆ ಅಭಾವವಾಗಿದೆ. ಆಹಾರ ದಿನಸಿಗಳು ವ ಎರಡು ರವಗಳಿಂದಲೂ ಏರಿಕೆಯಲ್ಲಿದೆ. ರೂಪಾಯಿಗೆ ೫ ಸೇರು ಅಕ್ಕಿ, ... ಸೇರು ರಾಗಿ ... ಬಡವರ ಪಾಡು ಹೇಳತೀರದು.—ಈ ಊರಿನ ಸಂತೆಯು ಕೂಡಾ ದೊಡ್ಡದು. ಈ ಸಂತೆಯಲ್ಲಿ ಮಳೆ ಎತ್ತಿನ ಪಾಪದ ಜೀವಿತಗಳು ಬಿನ ವಿಶಕ್ಕೆ ಹೆಚ್ಚುತ್ತಿವೆ. ಈ ಬೈಪಾಸಿನಲ್ಲಿ ಬಡತ್ತೈಸರು ಅಲ್ಪಸ್ವಲ್ಪ ತರಕಾರಿ ಮುಂತಾದ್ದು ಏನ ಬಿಟ್ಟರೆ ಹುರ ದಾಗಿಲ್ಲಿ ಸುಂಕಕೊಡಬೇಕು, ಮೊಂಡಿಗೆ ಆಸಕೊಡಬೇಕು, ಟೋಲು ಸು ದೇವರಿಗೆ ಮಾರದ ದೇವತೆಗಳು. [illegible] ... ಈ ಶ್ರಮ ಕ್ಕೆ ತ್ರೆಯ್ಯ ಚಿಕ್ಕನಾಯಕನಹಳ್ಳಿ ಚನ್ನೆ ಉಳಿಯುವದು. ಈ ಬಗ್ಗೆ ನಮ್ಮ ಅಮಲ್ದಾರರು ತಕ್ಕ ನಿಗಾ ಕೊಟ್ಟರೆ ಬಡವರು ಬದುಕಿಕೊಂಡಾರು.—ಪೋಲೀಸ್ ಇಲಾಖೆಯ ವಿಷಯದಲ್ಲಿ ನಮ್ಮ ಇನ್ಸ್ಪೆಕ್ಟರು ಪಕ್ಕ ... [illegible] ... ಇದಕ್ಕಾಗಿ ದೂರು ಹೇಳಿಕೊಂಡಿದ್ದೇವೆ ... ಈ ಊರಿನಲ್ಲಿ ... ನಾರಾಯಣಸ್ವಾಮಿ ... [illegible] ... ವೈದ್ಯರು ... ಬಹಳ ... ದೇವರು ... ಅವರ ಅಮಲ್ದಾರರನ್ನು ... ಈ ಊರಿನಲ್ಲಿ ಅಧಿಕಾರಿಗಳನ್ನು ... [illegible] ... ವಾದ್ಯಗಳು ... ವೈದಿಕರು ... ನಾರಾಯಣಸ್ವಾಮಿ ... ಅವರ ಸಹ ... [illegible] ... ಕೆಲಸಕ್ಕೆ ... ಎಲ್ಲರಿಗೂ ... ಸಕ್ಕರೆ ಪೊಟ್ಟಣ ... ಈ ಕ್ರಮ ಕಾಲದಲ್ಲಿ ... ಜನರಿಗೆ ... ವಿನಾಗವಾಯಿತು.

ಸೊರಬ.—ಈ ಊರಲ್ಲಿ ಒಂದು ತಿಂಗಳಿಂದ ಬಹಳ ಗಲಾಟೆ ನಡೆಯುತ್ತಿದೆ. ಕೆಲವು ... ರಾತ್ರಿ ಕಳ್ಳರು ಮನೆಗೆ ಕನ್ನ ಹಾಕುವುದು, ... ಮನೆಯ ಮೇಲೆ ಅನೇಕವಾಗಿ ಕಲ್ಲುಗಳನ್ನು ಎಸೆಯುವುದು ಮುಂತಾದ ಕೃತ್ಯಗಳನ್ನು ಮಾಡುತ್ತಾರೆ. ಇದರಿಂದ ಜನರು ನೆಮ್ಮದಿಯಿಲ್ಲದೆ ... ಭೀತಿಯಿಂದ ... ಬೀದಿಗಳಲ್ಲಿ ... ಪೋಲೀಸಿನವರು ... [illegible] ... ಕಲ್ಲು ... ಪೋಲೀಸ್ ... ಮನೆಗೆ ... ಕಲ್ಲುಗಳನ್ನು ಎಸೆದರು. ಒಂದೇ ರಾತ್ರಿಯಲ್ಲಿ ... ರಾತ್ರಿ ಕಲ್ಲು ಬಿದ್ದವು. ಪೋಲೀಸಿನವರೂ ಆ ... ಜನರೂ ಇವನ್ನು ಪತ್ತೆಮಾಡಲು ... ಅನೇಕ ರೀತಿಯಿಂದ ... ಒಂದು ಗರಡಿಯೊಳಗೆ ನೋಡಲು ಇಬ್ಬರು ಮೂವರು ... ಕಲ್ಲು ಎಸೆಯುವುದಕ್ಕೆ ಪ್ರಯತ್ನಿಸುತ್ತಿದ್ದರಂತೆ. ಒಳಗೆ ಕಲ್ಲುಗಳ ... ಪೋಲೀಸಿನವರು ಅವರನ್ನು ... ಹಿಡಿದುಕೊಂಡು ... ಅವರಲ್ಲಿ ಆ ಗರಡಿಯ ಮುಖಂಡರು ... ಹೋಗಿ ಅಪರಾಧಿಗಳನ್ನು ... ಪ್ರಯತ್ನ ಮಾಡಿದಾಗ ಪೋಲೀಸಿನವರಿಗೂ ಗರಡಿಯವರಿಗೂ ... ಆಯಿತು. ಬಳಿಕ ಈ ಸಂಗತಿಗಳೆಲ್ಲಾ ಅಮಲ್ದಾರರಿಗೆ ವರದಿಯಾಗಿ ... ಪೋಲೀಸಿನವರನ್ನು ... ಇದ್ದರೆ ಸಾಹುಕಾರರನ್ನು ... ಸಾಹುಕಾರರು ಆರಾಮಗಳನ್ನು ಬಿಟ್ಟುಕೊಂಡು ... ಮನೆಯನ್ನು ... ಬಡವರ ಮನೆಗಳಿಗೆ ಕಲ್ಲು ಬೀಳು ... ಅವರು ಕಲ್ಲು ಹಾಕತಕ್ಕವರನ್ನು ... ಗ್ರಾಮಸ್ಥರು ಸರಕಾರಕ್ಕೆ ಸಹಾಯವನ್ನು ... ಇಂಥಾ ... ಆಗ ತಕ್ಕ ಬಂದೋಬಸ್ತಾಗಿ, ಜನಗಳು ನೆಮ್ಮದಿಯಿಂದ ... ಅನೇಕ ಜನರು ... ಕಲ್ಲು ಎಸೆಯುತ್ತಿದ್ದಾರೆ. ... ನಿವರಣೆಯನ್ನು ಕೋರಿದರು. ಒಂದು ದೊಡ್ಡ ಹಾಳುಮನೆಯಲ್ಲಿ ... ಈ ಸಂಗತಿಯನ್ನು ಕೂಡ ಯಾರೂ ಈ ವರೆಗೂ ಪತ್ತೆಮಾಡಲಿಲ್ಲ. ... ತುಂಬಾ ವ್ಯಸನಕರವಾಗಿದೆ. ಜೀವನ್ಮಾತ್ರ ಆಗಬೇಕಾದ ... ಕೆಲವರ ಮನೆಗಳಿಗೂ ಕನ್ನಹಾಕಿದ್ದು ಇನ್ನೂ ಪತ್ತೆ ಆಗಲಿಲ್ಲ. ... ಮುಸಾಫರಿಂದ ಮುನ್ಸಿಫರಾದ ನಂ॥ ಶ್ರೀಕಂಠಸ್ವಾಮಿಯವರು ಬೆಂಗಳೂರಿಗೆ ... ಅವರು ಸರಕಾರದ ಕೆಲಸವನ್ನು ತುಂಬಾ ಮುತುವರ್ಜಿಯಿಂದ ... ಪಕ್ಷಪಾತವಿಲ್ಲದೆ ಎಲ್ಲರಲ್ಲಿಯೂ ಪ್ರೀತಿ ವಿಶ್ವಾಸವಿಟ್ಟುಕೊಂಡು ... ಇವರಿಗೆ ಈ ಸ್ಥಳದಲ್ಲಿ ಕೆಲವು ದಿವಸ ... ಇವರು ವರ್ಗವಾದದ್ದು ಅನೇಕರಿಗೆ ತುಂಬಾ ವ್ಯಸನ

ಉಂಟಾಗಿದೆ. ಅರಸನಕೆರೆಯು ಈಗ ಒಡೆದಿದೆ. ಇದರ ಅಧಾರದಿಂದ ಬಹಳ ಜಮೀನು ಸಾಗುವಳಿಯಾಗುತ್ತಿದ್ದೆ. ಗದ್ದೆಗಳು ವ ತ್ರವಲ್ಲ, ಅನೇಕ ಬಾಳೇ ತೋಟಗಳೂ ತೆಂಗಿನ ತೋಟಗಳೂ ಸಹ ಸಾಗುವಳಿಯಾಗುತ್ತವೆ. ಈಗ ನೀರಿಲ್ಲದೆ ಇವುಗಳೆಲ್ಲಾ ಒಣಗಿ ಹೋಗುತ್ತಿವೆ. ರೈತರ ಭಯವು ಹಾಳಾಯಿತು. ಬಡಜನರ ಸಂಕಟ ಹೇಳತೀರದು. ಈ ಕೆರೆ ದೊಡ್ಡದಾದರೂ ಆಳವಿಲ್ಲದ್ದು ವರ್ಷ ವರ್ಷ ಮಣ್ಣು ಬಿದ್ದು ಮುಚ್ಚಿಹೋಗುತ್ತಾ ಇದೆ. ಇಂಥಾ ಪ್ರಯೋಜನಕರವಾದ ಕೆರೆಯು ರಿಪೇರಿ ಆಗಬೇಕಾಗಿದೆ. ಸರಕಾರದವರು ಪ್ರಯತ್ನಪಟ್ಟು ಈ ಕೆರೆಗೆ ಮೇಲಿನಿಂದ ಕಾಲುವೆ ತಿರುಗಿಸಿದರೆ ಆಗ ನೀರು ಯಾವಾಗಲೂ ಇರಬಹುದು. ಮತ್ತು ರೈತರು ಹೆಚ್ಚು ಕಂದಾಯಕೊಡಲು ಸಿದ್ಧರಾಗಿದ್ದಾರೆ. ಈ ಕೆರೆಯ ಮೇಲೆ ದೊಡ್ಡ ಉದ್ಯೋಗಸ್ಥರ ದೃಷ್ಟಿ ಬಿದ್ದರೆ ಬಡ ರೈತರು ಸುಖವಾಗಿ ಜೀವನಮಾಡಲು ಅವಕಾಶವಾಗುತ್ತೆ. ಇಲ್ಲದಿದ್ದರೆ ವರ್ಷ ವರ್ಷವೂ ದಂಡದ ಕಂದಾಯ ತೆತ್ತು ನಿರ್ಭಾಗ್ಯರಾಗುತ್ತಾರೆ.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲ

(೨ ಅಥವಾ ೩ ಗುಳಿಗೆಗಳು ಬುದ್ಧಿ ಪರಿಮಾಣ.) ಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು. ಮಲಬದ್ಧತೆಯುಂಟಾದರೆ ಅರ್ಧವೇನೆಂದರೆ ಮಲಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟ ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಸಂಚದ ರೋಗಗಳೆಲ್ಲಕ್ಕೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು. ಮಲಬಂಧದಿಂದ ರೋಗಗಳೇ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ, ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅರುಚಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗು; ಹೊಟ್ಟೆ ಉರಿ; ಹೆಂಗಸರ ವ್ಯಾಧಿಗಳು; ಮೇಹ ನೋವುಗಳು; ಚರ್ಮದ ಬಿಟ್ಟಿಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಬಳಸಬಹುದು. ... ಮಲವನ್ನು ಕಕ್ಕಿಸದೆ ... ಮಲಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಶಕ್ತಿಯಾಗಿಯೂ ಇಟ್ಟು, ಕಪ್ಪದ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [69-6]

೮೦ ಆಣೆ, ೫ ಆಣೆ ಮತ್ತು ೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ನಿಜವಾದವುಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ, ಡೋನ್ಸ್ ಪಿ. ಓ. ಬಾಕ್ಸ್ ೨೦, ಬೊಂಬಾಯಿ —ಇವರಲ್ಲಿ ದೊರೆಯುವುದು.

ಈಗಲೇ ಬಂದಿದೆ.

17 51

[illegible] ಟೈಪ್ ರೈಟರ್ ... ಗುಲ್ ... ೩—೮—೦

... ಟೈಪ್ ... ಬಂಡಲ್ ... ೩—೮—೦

... ೧—೦—೦ ... ೦—೩

ಜರ್ಮನ್ ಬ್ರೆಡ್ ಬಿಸ್ಕಟ್ ... ೧—೮—೦, ೪—೦—೦,

ಬಾಚಣಿಗೆಗಳು. ... ೦—೨—೦, ೦—೩—೦, ೦—೬—೦

ಪಿ. ಟಿ. ಬಂಡಲ್ ... [೦—೪—೦

ವಿಳಾಸ-ಪ್ರೊಪ್ರೈಟರ್, ದಿ ಊರ್ಲಿ ಮಾರ್ಟ್ ಮಂಗಳೂರು.

ಇಲ್ಲಿ ನೋಡಿ.

77 8

ತುಮಕೂರು ಜಿಲ್ಲಾ ಇಲಾಖೆಯಲ್ಲಿ ... ಟೋಪಿ ... ಬಟ್ಟೆ ... ಹಾಕುವ ... ಆಣೆ ಮೊದಲ್ಗೊಂಡು ೧ ರೂ. ೮ ಆಣೆಯವರೆಗೆ ೧ ಡಜ಼ನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಕಿಕ್ಕರ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವುದು. ಈಗ ತಾನೇ ಇಂಗ್ಲಿಷ್ ಉಲ್ ದಾರವು ಬಂದಿದೆ ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಲ್ಪಡುವುದು ನಮ್ಮ ವಿಳಾಸ:—ಮ್ಯಾನೇಜರು,

ನಾಗಸಂದ ಟೋಪಿ ಕಾರ್ಖಾನೆ, ವಿ. ಜಿ. ಇಲಾಖೆ, ತುಮಕೂರು.

ಮಧುರ ಹೀರೆ! ಗಟ್ಟಿ ಚಿನ್ನ! ೧೭ ಮೊಳದುದ್ದ!!

57-10

ಬೆಳಿಯ ... ರಾ ... ಲೇಸು ಅಥವಾ ಕಪ್ಪು ಚಿನ್ನದ್ದು ರೂ. ೩-೭-೫ ನಯವಾಗಿ ... ತಿಳಿಸುವವರಿಗೆ ... ರೂ. ೬ ... ರೂ. ೧೧. ಹೆಚ್ಚು ಬೆಲೆಗೆ ಉತ್ತಮ ಮಾಲು ದೊರೆಯುತ್ತೆ.

ಮದ್ರಾಸು ಬಿಳಿಯ ರೇಷ್ಮೆ ಅಂಚಿನ ಸೀರೆ ರೂ. ೬.

ಒಂದೇ ತರಹ ... ರೇಷ್ಮೆ ಸೆರಗುಳ್ಳ ... ಅಂಗುಲ ಬಿಳಿರೇಷ್ಮೆ ರು ... ಅಂಚುಳ್ಳ ಗಟ್ಟಿ ಕಪ್ಪು ಚಿನ್ನದ ೧೪ ಮೊಳದ ಸೀರೆಗೆ ರೂ. ೩ ... ಅಂಗುಲ ... ರೂ ... ಬಳು ... ರೇಷ್ಮೆ ಅಂಚು ... ರೇಷ್ಮೆ ... ಸೆರಗು ... ಗೆ ... ಖಾತರಿ ಚಿನ್ನದಲ್ಲಿ ತಯಾರಾಗಿದೆ ... ಅಂಗುಲ ಅಂಚಿನವಕ್ಕೆ ರೂ. ೧೧., ೩ ಅಂಗುಲ ಅಂಚಿನವಕ್ಕೆ ರೂ. ೧೧.

ಚಿಟ್ಟಿನಿಸ್! "ಬ್ಲಾಂಕೆಟು" ಎಂಬ ಹೊಸ ಬಿನಾತು! ರೂ ೬.

... ಭಿಗೆ ... ಇದೆ ... ಅಂಗುಲ ... ರೇಷ್ಮೆಯ (ಕೆಂಪು) ವಸ್ತ್ರಗಳು! ೨ ಮೊಳದಗಲ! ರೂ. ೫.

೪ ಮೊಳದ ... ಅಂಚಿನ ಪಂಚೆಗಳು ಜೊತೆ ರೂ. ೩.

ವಿಳಾಸ.—ರಾವ್ ಎಂಪೋರಿಯಂ, ಸ್ಪೆನ್ಸರ್ ಹಾಂ ರೋಡ್,

ವೇಪೇರಿ, ಮದ್ರಾಸು.

ಎಲ್ಲರಿಗೂ ಅವಶ್ಯವಾದ ಎರಡು ಪುಸ್ತಕಗಳು.

83-1

ಭಾರತಿ ಸಂಸಂಗಿದಾಸಯ್ಯನವರ "ತಾವಾಗಿ ಇಂಗ್ಲೀಷು ಕಲಿಯುವಿಕೆ". ಕ್ರಯ ೧-೮-೦ ಇಂಗ್ಲೀಷ್ ಓದಲು ಬರೆಯಲು ಸಹಾಯವಿಲ್ಲದೇನೆ ... ತಿಂಗಳಲ್ಲಿ ಕಲಿಸುವ ಉತ್ತಮ ಪುಸ್ತಕ "... ಲೆಟರ್ ರೈಟರ್" ; ಕ್ರಯ ೧-೮-೦, ಲೋಕಕ್ಕವಶ್ಯವಾದ ... ಆ ವಿಷಯಗಳು, ... ಪತ್ರಗಳು ಬರೆಯುವ ರೀತಿ, ಇನ್ನೂ ಅನೇಕ ಸಂಗತಿಗಳು ಅಡಗಿವೆ. ವಿಳಾಸ:— ಮ್ಯಾನೇಜರ್, ಕರ್ನಾಟಕ ಬುಕ್ ಡಿಪೋ, ಬಳ್ಳಾರಿ ಪೋಸ್ಟ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ
ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) .. .. . ರೂ. ೧—೦—

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ
ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ. ೧—೦೪—೦
. ೬ ,, ,, ೦—೧೪—೦

ಚಂದಾದಾರರುಗಳಾದವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಪ್ರಾಕೆಟಿನಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ಸಮಾಧಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಸತ್ಯವಾಗಿಯೂ ಅಗ್ಗದ ಅಂಗಡಿ.

69-10

ಆಶ್ಚರ್ಯ ಸಮಾಚಾರ! ಆಶ್ಚರ್ಯ ಸಮಾಚಾರ!!

ಅಗ್ಗದ ಬೆಲೆಗೆ ಸಮಾನ. ಕ್ರಯ ಮಾರಿರಲ್ಲಿ ಒಂದೇ ಬೆಲೆ ಗಡಿಯಾರಗಳೆಲ್ಲಾ ಅಚ್ಚ ಹಸನಾದವು ಚಿನ್ನದಂಥಾ ಸಮಾಯ ಇದಕ್ಕಿಂತ ಅಗ್ಗವಾಗಿ ಪತ್ತೆ ಸಿಕ್ಕಲಾರವು ಸಾವಕಾಶವಾಗಬೇಡಿ! ಕಾಲ ಮೀರೀತು!!



ನಂ ೧೦೦—೦೪ ಓ ಎಫ್ ಸುಂದರವಾದ ಲೋಹಗಡಿಯಾರ, ಸೆಕೆಂಡ್ ಹ್ಯಾಂಡ್ ಸಹಿತ, ಸಿಲಿಂಡರ್ ಚಲನೆ, ೩೬ ಗಂಟೆ ಹೊತ್ತು ನಡೆಯುವುದು. ಮೊದಲಿನ ಕ್ರಯ ರೂ. ೩—೮—೦; ಈಗಿನ ಕ್ರಯ ರೂ. ೩—೮—೦. ಐದು ವರ್ಷ ಜಾಮೀನು.

ನಂ. ೧೦೧ ಎ—ಫೋಟೋಗ್ರಾಫ್ ವಾಚ್ ಸೆಕೆಂಡ್ ಹ್ಯಾಂಡ್ ಸಹಿತ ಮೊದಲಿನ ಕ್ರಯ ರೂ. ೧೫; ಈಗ ರೂ. ೫ ಐದು ವರ್ಷ ಜಾಮೀನು.

ನಂ ೧೦೨—೦೪ ಓ. ಎಫ್ ಸಿಲಿಂಡರ್ ಚಲನೆ, ೩೬ ಗಂಟೆ ನಡೆಯುವುದು. ಮೊದಲಿನ ಕ್ರಯ ರೂ. ೧೦—೮—೦; ಈಗ ರೂ. ೩—೦—೦ ಐದು ವರ್ಷ ಜಾಮೀನು. ನಂ ೧೦೩—೦೪ ಓ ಎಫ್. ರೈಲ್ವೆ ರೆಗ್ಯುಲೇಟರ್ ಲೀವರ್ ವಾಚ್ ೩೬ ಗಂಟೆ ನಡೆಯುವುದು. ಮೊದಲಿನ ಕ್ರಯ ರೂ. ೧೦—೦೮—೦; ಈಗ ರೂ. ೩—೦—೦. ಐದು ವರ್ಷ ಜಾಮೀನು. ೧೦೪—ರಾಸ್ಕೋಪ್ ಲೀವರ್ ವಾಚ್. ಇದು ಬಹು ಗಟ್ಟಿಯಾದದ್ದು ಹತ್ತು ವರ್ಷ ಜಾಮೀನು ಮೊದಲು ರೂ. ೧೪, ಈಗ ರೂ. ೫—೪—೦. ೧೦೫—ಬೆಳ್ಳಿ ರಾಸ್ಕೋಪ್ ಲೀವರ್ ವಾಚ್. ರತ್ನಗಳುಳ್ಳದ್ದು. ೧೨ ವರ್ಷ ಜಾಮೀನು. ಮೊದಲು ರೂ. ೩೦; ಈಗ ರೂ. ೧೧ ೧೦೬—ಬೆಳ್ಳಿ ಲೇಡಿ ಅಥವಾ ಜೆಂಟ್ಸ್ ವಾಚ್. ಸಿಲಿಂಡರ್, ರತ್ನಖಚಿತದ್ದು ಗಿಲ್ಟ್ ಚಲನೆ ೬ ವರ್ಷ ಜಾಮೀನು. ಕ್ರಯ ರೂ. ೨೫—೪; ಈಗ ರೂ. ೭—೪—೦. ೧೦೭—ಬೆಳ್ಳಿ ಓ. ಎಫ್. ಕೀ ಸಹಿತ. ಪಾಲಿಷ್ ಚಲನೆ. ರೂ. ೨೦, ಈಗ ರೂ. ೩. ಆರು ವರ್ಷ ಜಾಮೀನು. ೧೦೮—ಬೆಳ್ಳಿ ಓ. ಎಫ್ ಗಂಡಸರ ಲೀವರ್. ರೂ. ೩೦; ಈಗ ರೂ. ೧೦ ಹತ್ತು ವರ್ಷ ಜಾಮೀನು. ೧೦೯ ಎ.—ಆರ್ಧ ಹಂಟರ್. ರೂ. ೩೩, ಈಗ ರೂ. ೧೧. ೧೦೯ ಬಿ.—ಆರ್ಧ ಹಂಟರ್ ರೂ. ೩೬: ಈಗ ರೂ. ೧೨ ೧೧೦—ಬೆಳ್ಳಿ ೪ ದಿನ ನಡೆಯುವುದು ರೂ. ೬೫, ಈಗ ರೂ. ೧೫. ವಾರಕ್ಕೊಮ್ಮೆ ಕೀಲಿ ಕೊಡುವುದು ಲೀವರ್ ಚಲನೆ ೧೦ ವರ್ಷ ಜಾಮೀನು.—೧೧೧—೮ ದಿನ ನಡೆಯುವ ಚೊಕ್ಕಬೆಳ್ಳಿ ಗಡಿಯಾರ. ರತ್ನಗಳುಳ್ಳದ್ದು. ಸೆಕೆಂಡ್ ಹ್ಯಾಂಡ್. ೧೫ ವರ್ಷ ಜಾಮೀನು. ರೂ ೧೫೦ ಈಗ ರೂ. ೫೦. ೧೧೨—ಬಿ ಚೊಕ್ಕಬೆಳ್ಳಿ ಕ್ಯಾಲೆಂಡರ್ ಲೀವರ್ ವಾಚ್. ದಿನ, ತಾರೀಖು, ತಿಂಗಳು, ಚಂದ್ರ, ಇವನ್ನು ತೋರಿಸುತ್ತೆ. ೧೫ ವರ್ಷ ಜಾಮೀನು ಕ್ರಯ ರೂ ೬೦—೪—೦, ಈಗ ರೂ ೧೮—೪—೦. ೧೧೩—ಚೊಕ್ಕ ಬಂಗಾರ. ರತ್ನಗಳುಳ್ಳದ್ದು. ಕ್ರಯ ರೂ. ೩೦. ಈಗ ರೂ. ೫೦ ಹದಿನೈದು ವರ್ಷ ಜಾಮೀನು. ೧೧೪—ಎಂಟು ದಿನಗಳ ಚಿನ್ನದ ಗಡಿಯಾರ ತಬಲು ರತ್ನಗಳು. ೨೦ ವರ್ಷ ಜಾಮೀನು. ಕ್ರಯ ರೂ ೧೫೦, ಈಗ ರೂ ೫೫.

ಒಟ್ಟಿಗೆ ತರಿಸುವವರಿಗೆ ಸ್ಪೆಷಲ್ ದರಗಳು.

೩ ಗಡಿಯಾರ ಒಂದೇ ಸಲ ತರಿಸುವವರಿಗೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ.

೬ ,, ,, ,, ,, ಒಂದು ಗಡಿಯಾರ ಇನಾಂ.

ಕ್ರಯದಲ್ಲಿ ಕಾಲುಭಾಗ ಅಡ್ವಾನ್ಸು ಬರಬೇಕು, ಉಳಿದದ್ದಕ್ಕೆ ವಿ ಪಿ ಪಿ ಯಿಂದ ಕಳಿಸುತ್ತೇವೆ. ಗಡಿಯಾರಗಳನ್ನು ಸುಂದರವಾದ ಪಾಕೀಸುಲ್ ಪೆಟ್ಟಿಗೆಯಲ್ಲಿ ಸ್ಪ್ರಿಂಗ್, ಗ್ಲಾಸ್ ಸಹಿತ ಕಳಿಸುವೆವು. ಇದಲ್ಲದೆ ಪ್ರತಿ ವಾಚಿಗೂ ಸೊಗಸಾದ ಒಂದೊಂದು ಸರಪಣಿಯನ್ನು ನಾವು ಇನಾಮಾಗಿ ಕಳಿಸುತ್ತೇವೆ.

ಎಂ. ಎ. ಘಟಿಯಾಲಾ ಮತ್ತು ಕಂಪನಿ, ಚಿತ್ತೂರು.

ಜನಾನಾ ಸ್ತ್ರೀಯರು ಓಡಿ ಹೋಗಿ ರೈಲ್ವೇ ಸ್ಟೇಷನ್ ಕಟ್ಟಡದಲ್ಲಿ ಆಶ್ರಯವನ್ನು ಹೊಂದಿದರು. ಅಪ್ಸಲ್‌ಗಂಜಿನ ಕಡೆ ಮನೆಗಳನ್ನು ಶೋಧಿಸುತ್ತಿದ್ದಾಗ ಒಂದು ಮನೆಯಲ್ಲಿ ೨೧ ಜನರೂ ೧ ಮಗುವೂ ಸಂಕಟ ಪಡುತ್ತಿದ್ದರು. ಅವರನ್ನೆಲ್ಲಾ ಬಹು ಸಾಹಸಪಟ್ಟು ಹೊರಕ್ಕೆ ಕರೆದು ತಂದ ಬಳಿಕ ಆ ಮನೆಯು ಅನಾಮತ್ತು ಬಿದ್ದು ನೆಲಸಮನಾಯಿತು. ಅವರನ್ನು ಹೊರಕ್ಕೆ ಸಾಗಿಸುವುದು ಸ್ವಲ್ಪ ತಡವಾಗಿದ್ದಲ್ಲಿ ಅಷ್ಟು ಜನರೂ ಅನ್ಯಾಯವಾಗಿ ಮೃತಪಡುತ್ತಿದ್ದರು. ಅಪ್ಸಲ್‌ಗಂಜಿನ ಆಸ್ಪತ್ರೆಯ ಗೋಡೆಗಳು ಮಾತ್ರ ನಿಂತಿರುತ್ತವೆ. ಒಳಗಿದ್ದ ಸಮಸ್ತ ಸಾಮಾನುಗಳೂ ಔಷಧಗಳೂ ಬಹು ಬೆಲೆಯುಳ್ಳ ಶಸ್ತ್ರಾದಿ ಆಯುಧಗಳೂ ಹಾಳಾದವು.

ವೈಸ್‌ರಾಯಿ ಲಾರ್ಡ್ ಮಿಂಟೋರವರು ಈ ಸುದ್ದಿಯನ್ನು ಕೇಳಿ ತುಂಬಾ ಪರಿತಾಪ ಪಟ್ಟು ನೈಜಾಮರವರಿಗೆ ತಮ್ಮ ವ್ಯಸನವನ್ನು ಸಿಂಲಾ ಪಟ್ಟಣದಿಂದ ತಂತಿವರ್ತಮಾನಕೊಟ್ಟು ತಿಳಿಸಿರುತ್ತಾರೆ. ಏನೆಂದರೆ—"ಹೈದರಾಬಾದ್ ಟವರ್‌ಗೆ ಸಂಭವಿಸಿದಂಥಾ ದುರ್ದೆಸೆಯನ್ನೂ ಪ್ರಾಣ ನಷ್ಟವಾದುದನ್ನೂ ಕೇಳಿ ನಾನು ತುಂಬಾ ವ್ಯಸನಾಕ್ರಾಂತನಾಗಿರುತ್ತೇನೆ. ನಿಮ್ಮ ವಿಷಯದಲ್ಲಿ ನಾನು ಮನಃಪೂರ್ವಕವಾಗಿ ಸಂತಾಪಪಡುತ್ತೇನೆಂದು ತಿಳಿಯಿರಿ." ಈಚೆಗೆ ಹೈದರಾಬಾದಿನ ಕೆಲವು ಅಧಿಕಾರಿಗಳೇ ಸೇರಿ, ಕಷ್ಟ ಪರಿಹಾರಾರ್ಥವಾದ ಧರ್ಮದ ಫಂಡನ್ನು ಕೂಡಿಸಿ, ಕಷ್ಟಪಡುತ್ತಿರುವ ಪ್ರಜೆಗಳಿಗೆ ಸಹಾಯ ಮಾಡಲಾರಂಭಿಸಿದಾರೆ.

ಸೆಪ್ಟಂಬರ್ ತಾ. ೩೦ ನೇ ಬುಧವಾರ ಬಂದ ವರ್ತಮಾನವೇನೆಂದರೆ—ಸರ್ಕಾರದ ಅಧಿಕಾರಿಗಳೂ ಪೋಲೀಸಿನವರೂ ಸೈನಿಕರೂ ಗುಂಪು ಗುಂಪಾಗಿ ಪಟ್ಟಣದ ಅನೇಕ ಕಡೆಗಳಲ್ಲಿ ಭೂಮಿಯನ್ನು ಶೋಧಿಸುವ ಕೆಲಸದಲ್ಲಿದಾರೆ. ಪ್ರಾಣ ಉಳಿಸಿಕೊಳ್ಳುವುದಕ್ಕೋಸ್ಕರ ಮರಗಳ ಮೇಲೂ, ಮಸೀತಿ ದೇವಸ್ಥಾನಗಳ ಮೇಲೂ, ದೊಡ್ಡ ಮತ್ತು ಎತ್ತರವಾದ ಕಟ್ಟಡಗಳ ಮೇಲೂ, ಗುಡ್ಡಗಳಂತಿರುವ ಎತ್ತರವಾದ ಪ್ರದೇಶಗಳಲ್ಲೂ ಹೋಗಿ ಸೇರಿಕೊಂಡಿದ್ದಂಥಾ ನೂರಾರು ಪ್ರಜೆಗಳನ್ನು ಅಲ್ಲಿಂದ ಕರೆತಂದು ಅನ್ನಪಾನಗಳನ್ನು ನಡೆಸುತ್ತಿದಾರೆ. ಘೋಳಿಗೂಡಾ ಎಂಬ ಗ್ರಾಮಕ್ಕೆ ಗ್ರಾಮವೇ ಹಾಳಾಯಿತು. ಅದರಲ್ಲಿದ್ದ ೧,೦೦೦ ಮನೆಗಳೂ ಜೋಪಡಿಗಳೂ ಸಂಪೂರ್ಣವಾಗಿ ಕಳ್ಳು ಬಿದ್ದುಕೊಂಡವು. ಅಲ್ಲಿ ಹೊರಡುತ್ತಿರುವ ದುರ್ಗಂಧವು ಸಹಿಸಲಶಕ್ಯವಾಗಿರುತ್ತದೆ. ಒಂದು ಕಡೆ ಅಗೆದು ತೆಗೆಯುತ್ತಿರುವಲ್ಲಿ ಹನ್ನೆರಡು ಶವಗಳು ರಾಶಿಯಾಗಿ ಬಿದ್ದಿದ್ದವು. ಅವರ ರಕ್ತಸಂಬಂಧಿಗಳು ಎದುರಿಗೆ ಕುಳಿತು ರೋದನ ಮಾಡುತ್ತಿದಾರೆ. ಇನ್ನೊಂದು ಕಡೆ ಹಳ್ಳದಲ್ಲಿ ಮೂರು ಹೆಣಗಳು ಸಿಕ್ಕಿದವು. ಮತ್ತೊಂದು ಸ್ಥಳದಲ್ಲಿ ಬಹಳ ಸಾಹಸಪಟ್ಟು ಮಣ್ಣು ಅಗೆದು, ಕುಟುಕು ಪ್ರಾಣವಿದ್ದ ಏಳು ಜನ ಹೆಂಗಸರನ್ನು ಬದುಕಿಸಿದರು. ಹೆಣಗಳನ್ನು ಗಾಡಿಗಳಲ್ಲಿ ಭರ್ತಿ ಮಾಡಿ ಸಾಗಿಸುತ್ತಿದಾರೆ.

ಇತ್ತಲಾಗಿ ಮನೆಮಠಗಳನ್ನೂ ಸರ್ವಸ್ವವನ್ನೂ ಕಳೆದುಕೊಂಡು, ಹೊಟ್ಟೆಗಿಲ್ಲದೆ ಅಲೆಯುತ್ತಿರುವವರು ಅಂಗಡಿ ಮುಂಗಟ್ಟುಗಳನ್ನು ನುಗ್ಗಿ ಲೂಟಿ ಮಾಡಲಾರಂಭಿಸಿದಾರೆ. ಅನೇಕ ಸರ್ಕಾರಿ ಅಧಿಕಾರಿಗಳು ಈ ಅನಾಹುತದಿಂದ ೨,೦೦೦ ಕ್ಕಿಂತಲೂ ಹೆಚ್ಚು ಪ್ರಜೆಗಳು ಮೃತಪಟ್ಟಿರಾರೆಂದು ಹೇಳುತ್ತಾರೆ. ಅರ್ಧ ಮತ್ತು [illegible] ಮೈಲಿ ವಿಸ್ತೀರ್ಣವುಳ್ಳ ಈ ಪ್ರದೇಶದಿಂದ ಬೇಗನೆ ಹೆಣಗಳನ್ನು ಸಾಗಿಸದೆ ಹೋದರೆ ಜಾಡ್ಯಗಳು ಹೇರಿ ಹುಟ್ಟಿ ಪ್ರಜೆಗಳು ಇನ್ನೂ ಬಹು ಹಾಳಾದಾರೆಂಬುದಕ್ಕೆ ಸಂಶಯವಿಲ್ಲ.

ಹೈದರಾಬಾದಿನಲ್ಲಿ [illegible] ಇನ್ನೂ ಮತ್ತೆ [illegible]ಯಿತು. ಹಿಂದು ಸ್ಥಾನದ ಇತರ ಕಡೆಗಳಿಂದ ಅನೇಕಾನೇಕರು ತಮ್ಮ ನೆಂಟರಿಷ್ಟರು ಕ್ಷೇಮವಾಗಿದಾರೆಯೋ ಎಂದು ಗಾಬರಿಪಟ್ಟು ನೂರಾರು ತಂತೀ ವರ್ತಮಾನಗಳನ್ನು ಕೊಟ್ಟು ಕಳುಹುತ್ತಿರುವರು. ನೂರಾರು ಕಾಗದಗಳು ಸಾವತಿ (?) ಬಗೆದು ಬಿದ್ದುಕೊಂಡಿವೆ. ತಂತೀ ವರ್ತಮಾನಗಳನ್ನು ತಲುಪಿಸುವ ಜವಾನರಲ್ಲಿ ಆರ್ಭಟಿಸಿ (?) ಜನರು ಏನಾದರೋ ತಿಳಿಯದು ಉಳಿದಿರುವವರನ್ನು ಕೇಳಿದರೆ ಅವರು—"ಸ್ವಾಮಿ, ನಾವು ಯಾರಿಗೆ ಸಾವತಿ ಮಾಡೋಣ? ಯಾವ ಬೀದಿಯೂ ಯಾವ ಮನೆಯೂ ಯಾವ ಮನುಷ್ಯನೂ ಕಾಣುವದಿಲ್ಲವಲ್ಲಾ? ಎಲ್ಲಾ ಹಾಳು ಬಿದ್ದಿರುತ್ತಿದೆ" ಎಂದು ಹೇಳುತ್ತಾರೆ. ನವಾಬ್ ಸಾಲಾರ್ ಜಂಗರ ಅರಮನೆಯನ್ನು ಹೋಗಿ ನೋಡಿದರೆ ಅದರಲ್ಲಿ ಅರ್ಧ ಹಾಳು ನಾಶವಾಗಿದೆ. ಆ ದೊಡ್ಡ [illegible] ಲಕ್ಷ ರೂಪಾಯಿನ ಸಾಮಾನುಗಳು ನಷ್ಟವಾಗಿರುತ್ತವೆ.

ಕಲ್ಕತ್ತಾ ಪಟ್ಟಣದ ಮುಸಲ್ಮಾನರು ಹೈದರಾಬಾದಿನ ಪ್ರಜೆಗಳ ಕಷ್ಟನಿವಾರಣೆಗಾಗಿ ಧರ್ಮದ ಫಂಡನ್ನು ಕೂಡಿಸುತ್ತಿದೇನೆಂದು ತಿಳಿದಾರೆ. ಹೈದರಾಬಾದಿನ ನೈಜಾಮರವರು ಅಧಿಕಾರಿಗಳಿಗೆ ಅಪ್ಪಣೆಯನ್ನು ಕೊಟ್ಟು ಒಂದು ಧರ್ಮದ ಫಂಡನ್ನು ಪ್ರಾರಂಭಿಸುವಂತೆ ಮಾಡಿದರು. ಆಗಲೇ ಕೆಲವು ಕಡೆಗಳಲ್ಲಿ ಧರ್ಮದ ಅನ್ನಸತ್ರಗಳನ್ನು ಸ್ಥಾಪಿಸಿ ನಡಸುತ್ತಿದಾರೆ. ಚದರಘಾಟ್ ಪಬ್ಲಿಕ್ ಉದ್ಯಾನದಲ್ಲಿ ಜನರು ವಾಸಮಾಡುವುದಕ್ಕೋಸ್ಕರ ದೊಡ್ಡ ಚಪ್ಪರವನ್ನು ಕಟ್ಟಿಸಿದ್ದಾರೆ. ಸುತ್ತುಮುತ್ತಲೂ ಇರುವ ಗ್ರಾಮಾಂತರಗಳಲ್ಲಿ ಎಷ್ಟು ಪ್ರಜೆಗಳು ನಷ್ಟವಾದರೆಂದು ಇನ್ನೂ ತಿಳಿದು ಬಂದಿಲ್ಲ.

ಅಕ್ಟೋಬರ್ ತಾ. ೧ ರಲ್ಲಿ ಬಂದ ವರ್ತಮಾನ—ಹೈದರಾಬಾದಿನಿಂದ ಸಿಕಂದರಾಬಾದಿಗೆ ಹೋಗುವ ರಸ್ತೆಯಲ್ಲಿ ನಿಜಾಮನ ಬೇಗಂ ಪೇಟೆ ಕಬ್ಬಿಣ ಸೇತುವೆಯು ಮುರಿದು ಬಿದ್ದು ಕೊಚ್ಚಿ ಹೋಯಿತು. ಆಗ್ಗೆ ಆ ಸೇತುವೆಯ ಮೇಲೆ ಹೋಗುತ್ತಿದ್ದ ಒಂದು ಕುದುರೆ ಗಾಡಿಯು ಪ್ರವಾಹದ ಪಾಲಾಯಿತು. ಕುದುರೆಗಳೂ ಗಾಡಿಯವನೂ, ಕುದುರೆಯವನೂ ಮೃತಪಟ್ಟರು. ಆ ಸೇತುವೆ ೧ ಮೈಲಿ ದೂರದಲ್ಲಿ ಮುರಿದು ಬಿದ್ದಿದ್ದ ಗಾಡಿ ಮಾತ್ರ ಸಿಕ್ಕಿತು. ವರ್ತಕರು ಇದೇ ಸಮಯವೆಂದು ದಿನಸಿ ಧಾರಣೆಯನ್ನು ಹೆಚ್ಚಿಸಿ, ರೂಪಾಯಿಗೆ ೪ ಸೇರು ವಿಕರಿಮಾಡುತ್ತಿದಾರೆ. ಜೋಪಡಿಗಳಿಗೂ ಬಾಡಿಗೆ ದರಗಳು ಬಹಳವಾಗಿ ಹೆಚ್ಚಿರುತ್ತವೆ. ಬಡಬಗ್ಗರ ಕಷ್ಟ ಸಂಕಟವು ಅಪಾರವಾಯಿತು. ಸೀರಿನಲ್ಲಿ ಸಿಕ್ಕಿ ಮುಗ್ಗಲಾದಂಥಾ ಧಾನ್ಯವನ್ನು ರೂಪಾಯಿಗೆ ೨೦ ಸೇರಿನಂತೆ ವಿಕರಿಮಾಡಿ ಹಣ ಕೂಡಿಸುತ್ತಿದ್ದವನನ್ನು ನೋಡಿ ಪೊಲೀಸ್ ಆಫೀಸರರವರು ಹಿಡಿದರು. ಬಹಳ ಬೆಲೆಯುಳ್ಳ ವಸ್ತುಗಳಿಂದ ಕೂಡಿದ ನವಾಬ್ [illegible] ಅಲ್ಲಿ [illegible] ಬಂಗಲೆಯು ಸಂಪೂರ್ಣವಾಗಿ ನಾಶಹೊಂದಿ ಲಕ್ಷಾಂತರ ರೂಪಾಯಿ ನಷ್ಟವಾಯಿತು. ಸರ್ಕಾರದವರು ಎಚ್ಚರಿಸಿದಾಗ್ಯೂ ಹಣಗಾರರೆಲ್ಲಾ ತಮ್ಮ ಆಸ್ತಿಯನ್ನು ಬಿಟ್ಟು ಹೋಗಲಾರದೆ ಮನೆಗಳಲ್ಲೇ ಇದ್ದುಬಿಟ್ಟರಾದ್ದರಿಂದ ಅವರೇ ಬಹಳ ಮಂದಿ ಮೃತಪಟ್ಟರು. ಅವರ ಆಸ್ತಿ ನಗನಾಣ್ಯಗಳೆಲ್ಲಾ ಕೊಚ್ಚಿ ಹೋದವು. ಕೂಲಿಕಾರರು ಸಿಕ್ಕುವುದೇ ಕಷ್ಟ. ಸಿಕ್ಕಿದರೂ ದಿನಕ್ಕೆ ಒಂದು ರೂಪಾಯಿ ಕೇಳುವರು. ಟಂಕಸಾಲೆಯನ್ನು ಕೂಲಿಯವರು ಸಿಕ್ಕದೆ ಮುಚ್ಚಿಬಿಟ್ಟಿದಾರೆ.

ನೈಜಾಮರವರು ಬಹಳ ಕರುಣೆಯಿಂದ ತಮ್ಮ ಎರಡು ಅರಮನೆಗಳನ್ನು ಬಡಬಗ್ಗರ ವಾಸಕ್ಕೆ ಬಿಟ್ಟುಕೊಟ್ಟಿದಾರೆ. ಅವೆರಡರ ತುಂಬಾ ಜನರು ಭರ್ತಿಯಾಗಿ ಸೇರಿಕೊಂಡಿರುವರು. ಅವರಿಗೆ ಬಟ್ಟೆ ಬರೆ ಕೊಡಿಸಿ ಅನ್ನ ಹಾಕಿಸುತ್ತಿದಾರೆ. ಹಿಂದುಗಳಿಗೂ ಮುಸಲ್ಮಾನರಿಗೂ ಪ್ರತ್ಯೇಕವಾದ ಏರ್ಪಾಡಾಗಿದೆ.

ಚಕ್ರವರ್ತಿ ಸಾರ್ವಭೌಮರವರಿಗೆ ಈ ಸುದ್ದಿ ತಲುಪಿ, ಅವರಿಗೆ ತುಂಬಾ ವ್ಯಸನವನ್ನುಂಟುಮಾಡಿತು. ಅವರು ನೈಜಾಮರವರಿಗೆ ತಂತೀ ವರ್ತಮಾನಕೊಟ್ಟು ತಮ್ಮ ಮನೋವ್ಯಥೆಯನ್ನು ತಿಳಿಸಿರುತ್ತಾರೆ.

ಅಕ್ಟೋಬರ್ ತಾ. ೩ ರಲ್ಲಿ ಬಂದ ವರ್ತಮಾನ—ಬೇಗಬೇಗನೆ ಹೆಣಗಳನ್ನು ಗಾಡಿಗಳ ಮೇಲೆ ಹೇರಿ ದೂರ ಪ್ರದೇಶಗಳಿಗೆ ಸಾಗಿಸಿ, ಒಟ್ಟೊಟ್ಟಾಗಿ ಸುರಿಸಿ ಸುಡಿಸುತ್ತಿದಾರೆ. ಅದರ ಜ್ವಾಲೆಯು ರಾತ್ರಿ ಹೊತ್ತು ಅಂತರಿಕ್ಷದಲ್ಲಿ ಪ್ರಕಾಶಮಾನವಾಗಿ ಕಾಣುವುದು. ಹೊಗೆಯೂ ದುರ್ಗಂಧವೂ ಆ [illegible]. ನೈಜಾಮರವರು ಸರ್ಕಾರಿ ಜಾಹೀರಾತನ್ನು ಪ್ರಕಟಿಸಿ, ಹೈದರಾಬಾದ್ ಪಟ್ಟಣಕ್ಕೆ ಸಂಭವಿಸಿದ ಮಹಾ ದುಃಖಕರವಾದ ವಿಪತ್ತನ್ನು ವಿವರಿಸಿ, ಕಷ್ಟಕ್ಕೆ ಸಿಕ್ಕಿದಂಥಾ ಸರ್ಕಾರಿ ನೌಕರರೆಲ್ಲಾ ಒಂದು ತಿಂಗಳ ಸಂಬಳವನ್ನು ಅಡ್ವಾನ್ಸು ಕೊಡತಕ್ಕದ್ದೆಂತಲೂ ಮತ್ತು ಬಂಗಲೆ ಕಸಕ ಎಲ್ಲಾ [illegible] ಕಚೇರಿಗಳನ್ನೂ ಮುಚ್ಚಿಬಿಡಬೇಕೆಂತಲೂ ಅಪ್ಪಣೆ ಕೊಡಿಸಿದಾರೆ. ಈ ಸಂಸ್ಥಾನದಲ್ಲಿ ಯಾವ ವರ್ತಮಾನ ಪತ್ರಿಕೆಯೂ ಪ್ರಕಟಿಸಲಾಗದು ಎಂಬ ನಿಬಂಧನೆಯಿಂದ, ಈ ಸಂದರ್ಭದಲ್ಲಿ [illegible] ನಷ್ಟಗಳು ಎಲ್ಲೆಲ್ಲಿ ಎಷ್ಟೆಷ್ಟು ಮಟ್ಟಿಗೆ ಪ್ರಾಪ್ತವಾಗಿರುವವೋ ಯಾರಿಗೂ ತಿಳಿಯುವುದು ಅಸಾಧ್ಯವಾಗಿದೆ. ಹತ್ತು ಸಾವಿರ ಪ್ರಜೆಗಳು ಅಕಾಲಮರಣವನ್ನು ಹೊಂದಿದರೆಂದು ಮೊದಲು ತಿಳಿದಿದ್ದಿತು. ಈಗ ವಿಚಾರಿಸುವಲ್ಲಿ ಮೃತಪಟ್ಟವರ ಸಂಖ್ಯೆಯು ೫೦,೦೦೦ ಕ್ಕೆ ಏನೇನೂ ಕಡಮೆಯಿಲ್ಲವೆಂದು ಗೊತ್ತಾಗುವುದು. ಕೊಚ್ಚಿ ಹೋದ ಧಾನ್ಯಗಳನ್ನು ರಾಶಿರಾಶಿಯಾಗಿ ಸುರಿಸಿ ಸುಡಿಸುತ್ತಿರುವರು. ಒಂದು ಕಡೆ ಶೋಧನೆಮಾಡುತ್ತಿರುವಲ್ಲಿ ೯೦ ಗಂಟೆ ಹೊತ್ತಿನಿಂದ ಮನೆ ಕೆಳಗೆ ಸಿಕ್ಕಿ ನರಳುತ್ತಿದ್ದ ಒಬ್ಬ ಮನುಷ್ಯನು ಸಿಕ್ಕಿದನು. ಅವನನ್ನು ಉಪಚರಿಸುತ್ತಿದಾರೆ. ಬದುಕಬಹುದಾಗಿ ಕಾಣುವುದು.

[illegible] ರಸ್ತೆ ಮೊದಲಾದವುಗಳನ್ನು ಬೇಗ ಬೇಗನೆ ದುರಸ್ತು ಮಾಡಿಸುತ್ತಿದಾರೆ. ಆಹಾರ ಧಾನ್ಯಗಳು ಎಲ್ಲಾ ಕಡೆಗಳಲ್ಲೂ ಮುಗಿದುಹೋದವು. ಬೇಗ ಮುತ್ತು [illegible] ದೊಡ್ಡ [illegible]ಗಳು ಬಿದ್ದು ಹೋದದ್ದರಿಂದ ಸಿಕಂದರಾಬಾದ್ [illegible]ಕ್ಕೆ [illegible] ಕಷ್ಟ ಪಡುತ್ತಿದಾರೆ. ಹೈದರಾಬಾದ್ [illegible] ತುಂಬಾ ಕೊಚ್ಚಿ ಹೋದವು. ಹೈದರಾಬಾದಿನಲ್ಲಿ ಬ್ರಿಟಿಷ್ ರೆಸಿಡೆಂಟರು ಮುಖ್ಯವಾಗಿ ನಿಂತು [illegible] ಪರಿಹಾರದ ಫಂಡನ್ನು ಕೂಡಿಸುವುದಕ್ಕೆ ಪ್ರಾರಂಭಿಸಿದರು. [illegible] ಪ್ರಜೆಗಳು ಚಂದಾ ಎತ್ತಿ ಕಳುಹಿಸಲಾರಂಭಿಸಿದಾರೆ. [illegible] ಧರ್ಮವನ್ನು ಎತ್ತಿ [illegible] ಹಣವನ್ನು [illegible] ತಂತೀ ಟಪ್ಪಾಲು ಮೂಲಕ ಹೈದರಾಬಾದಿಗೆ ರವಾನೆ ಮಾಡುತ್ತಾ ಬಂದಿರುವರು.

ಅಕ್ಟೋಬರ್ ತಾ. ೪ ರಲ್ಲಿ ಬಂದ ವರ್ತಮಾನ—ಹೈದರಾಬಾದ್ ಸಂಸ್ಥಾನದ ನೈಜಾಂ ದೊರೆಯವರು [illegible] ಅರಮನೆಯಿಂದ [illegible] ಅಫ್ಸಲ್‌ಗಂಜ್ [illegible] ಒಳಗೆ ದಯಮಾಡಿ, ತಮ್ಮ ಕಣ್ಣಿನಿಂದಲೇ ಕಂಡು [illegible] ಅನಾಹುತಗಳನ್ನೂ [illegible] ನೋಡಿದರು. ಹೈದರಾಬಾದಿನಲ್ಲಿ ಆಹಾರಧಾನ್ಯಗಳು ಮುಗಿದುಹೋದವು. ಸಿಕಂದರಾಬಾದಿನಿಂದ ಅಲ್ಲಿಗೆ [illegible] ವರ್ತಕರು ಅಕ್ಕಿಯನ್ನು ಖಂಡುಗಕ್ಕೆ ೬೦ ರೂಪಾಯಿ ಮಾರುತ್ತಾರೆ. [illegible] ಬೀದಿಗಳಲ್ಲೂ ಇತರ ಸ್ಥಳಗಳಲ್ಲೂ [illegible] ಧರ್ಮದ ಅನ್ನಸತ್ರಗಳನ್ನು ಹಾಕಿದಾರೆ. ಜನಾನಾ ಸ್ತ್ರೀಯರಿಗೂ ಪ್ರತ್ಯೇಕ ಏರ್ಪಾಡು ಮಾಡಿಕೊಡಲಾಗಿದೆ.

ಕಡೆಗೆ ಬಂದಿರುವ ಸುದ್ದಿ

ಹೈದರಾಬಾದ್ ಜನಾನಾ ಸ್ಕೂಲಿನ [illegible] ಕಟ್ಟಡದಲ್ಲಿ ಭಾನುವಾರ ಸಾಯಂಕಾಲ ಒಂದು ಬಹಿರಂಗ ಸಭೆ ನಡೆಯಿತು. ಸುಮಾರು ೫,೦೦೦ ಪ್ರಜೆಗಳು ಸೇರಿದ್ದರು. ಬ್ರಿಟಿಷ್ ರೆಸಿಡೆಂಟರಾದ [illegible] ಮಿ. ಬೆಯ್ಲಿರವರು ಅಗ್ರಾಸನವನ್ನು ವಹಿಸಿದ್ದರು. ಹೈದರಾಬಾದಿಗೆ ಪ್ರಾಪ್ತವಾದ ಅನಾಹುತದ ಕಷ್ಟವನ್ನು ಕುರಿತು ಹಲವು ದೊಡ್ಡಮನುಷ್ಯರು ಉಪನ್ಯಾಸಮಾಡಿ, ಕಷ್ಟಪರಿಹಾರಕ್ಕಾಗಿ ಧರ್ಮದ ಫಂಡು ಕೂಡಿಸಬೇಕೆಂದು ಸೂಚಿಸಿದರು. ಹೈದರಾಬಾದ್ ನೈಜಾಮರವರು ೧ ಲಕ್ಷ ರೂಪಾಯಿ ದಯಪಾಲಿಸಿದರು. ಇನ್ನೂ ಅನೇಕರು ಕೆಲವು ಸಾವಿರ ರೂಪಾಯಿಗಳನ್ನು ಕೊಟ್ಟರು. ಮತ್ತೆ ಕೆಲವರು ಸೇರಿ ೩೩,೦೦೦ ರೂಪಾಯಿ ಧರ್ಮಮಾಡಿದರು. ಗವರ್ನಮೆಂಟಿನವರು ೨ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ.

ಬೆಂಗಳೂರಿನ ಪ್ರಜೆಗಳೂ ಇಷ್ಟರಲ್ಲೇ ಒಂದು ಸಭೆಯನ್ನು ನಡಿಸಿ, ಧರ್ಮದ ಫಂಡನ್ನು ಕೂಡಿಸಿ ಹೈದರಾಬಾದಿಗೆ ಕಳುಹಿಸುವವರಾಗಿದಾರೆಂದು ತಿಳಿದು ಬಂದಿದೆ.

ಹಿಂದೆ ನಡೆದ ಅನಾಹುತಗಳು.

ಮೂಸಿ ಹೊಳೆಯು ಹೈದರಾಬಾದಿನಿಂದ ಸುಮಾರು ೬೦ ಮೈಲಿ ದೂರದಲ್ಲಿರುವ ಬೆಟ್ಟಗಳಲ್ಲಿ ಹುಟ್ಟಿ ಹರಿದು ಬರುತ್ತದೆ. ಬೇಸಿಗೆಯಲ್ಲೂ ಶೀತಕಾಲದಲ್ಲೂ ಅದರಲ್ಲಿ ನೀರು ಇರುವುದು ಅಪರೂಪ. ಮಳೆಗಾಲದಲ್ಲೂ ಇದರ ಸಾಮಾನ್ಯವಾಗಿ [illegible] ಬಹುದು. ಇದು ಬಂದ ಕೆಲವು ಸಲ ಈ ಹೊಳೆಯಲ್ಲಿ ಪ್ರವಾಹಗಳು ಬಂದು ಅನಾಹುತಗಳನ್ನುಂಟುಮಾಡಿರುವವು. ೧೮೩೧ ನೇ ಇಸವಿಯಲ್ಲಿ ಪ್ರವಾಹ ಬಂದು ಅನೇಕರನ್ನು ಕೊಂದು ತುಂಬಾ ನಷ್ಟಕಷ್ಟಗಳನ್ನುಂಟುಮಾಡಿತು. ೧೯೦೩ ನೇ ಇಸವಿಯಲ್ಲಿ ಬಹಳ ಬೇಗ ಅದರಲ್ಲಿ ಪ್ರವಾಹ ಹುಟ್ಟಿ ೩,೦೦೦ ಪ್ರಜೆಗಳನ್ನು ಕೊಂದುಹಾಕಿದ್ದಲ್ಲದೆ ತುಂಬಾ ನಷ್ಟವನ್ನುಂಟುಮಾಡಿತು. ಈಚೆಗೆ ೧೯೦೮ ನೇ ಇಸವಿ ಅಕ್ಟೋಬರು ತಿಂಗಳಲ್ಲಿ ಈ ನದಿಯ ದೆಸೆಯಿಂದ ಅನೇಕಾನೇಕರ ಮನೆಮಠಗಳು ಕೊಚ್ಚಿ ಹೋದವು. ನೂರಾರು ಪ್ರಜೆಗಳು ಲಯವಾದರು.

ಈ ದುಃಖವಾರ್ತೆಯನ್ನು ಕೇಳಿ ತುಂಬಾ ಮರುಗಿ ಬೊಂಬಾಯಿ ಗವರ್ನರವರು ಹೈದರಾಬಾದ್ ನೈಜಾಮರವರಿಗೆ ತಂತೀ ವರ್ತಮಾನ ಕೊಟ್ಟು ತಮ್ಮ ವ್ಯಸನವನ್ನು ತಿಳಿಸಿ ಸಂತಾಪಪಟ್ಟರು.

ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸರವರೂ ಅವರ ಪತ್ನೀರವರೂ ತುಂಬಾ ವ್ಯಸನಪಟ್ಟು, ನೈಜಾಮರವರಿಗೆ ಸಂತಾಪಸೂಚಕವಾದ ತಂತೀ ವರ್ತಮಾನವನ್ನು ಕಳುಹಿಸಿದಾರೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಮಹಾರಾಜರವರ ಆಸ್ಪತ್ರೆಯ ಚಾರ್ಜನ್ನು ವಹಿಸಿರುವ ಅ. ಸರ್ಜನ್ ಮಿಸ್ ಎ. ಜೆ. ಡಿಸಾಸ್ ಮವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂವತ್ತು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್‌ರವರನ್ನು ಜವಾನ್ ರಾಜ್ಯದಲ್ಲಿ ಸ್ಯಾನಿಟೇಷನ್ ಏರ್ಪಾಡಿನ ವಿಚಾರವನ್ನು ಕಲಿತು ಬರುವುದಕ್ಕಾಗಿ ಕಳೆದ ಮಾರ್ಚಿ ತಾ. ೧೪ ರ ಆರ್ಡರಾಯಿತು ಗವರ್ನ್‌ಮೆಂಟಿನವರು ಕಳುಹಿಸಿಕೊಟ್ಟಿದ್ದರು.

ನಾಗಮಂಗಲದ ತಾಲ್ಲೂಕ್ ಅಮಲ್ದಾರ್ ಮಿ. ಎಚ್. ವಿ. ವೆಂಕಟಾಚಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿರಸ್ತೇದಾರ್ ಎಚ್. ಶ್ರೀನಿವಾಸಯ್ಯಂಗಾರ್ರನ್ನು ನಾಗಮಂಗಲದ ಅಮಲ್ದಾರ್ ಮತ್ತು ೪ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡುವಂತೆ ನೇಮಕವಾಗಿದೆ.

ಫ್ರೊಬೇಷನರ್ ಡೆಪ್ಯುಟಿ ಅಮಲ್ದಾರ್ [illegible] ರವರು ಶ್ರೀರಂಗಪಟ್ಟಣದ ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು.

ಶಿವಮೊಗ್ಗ ಸಬ್ ಡಿವಿಜನ್ ಛಾರ್ಜನ್ನು ವಹಿಸುವ ಅ. ಕಮಿಷನರ್ ಮಿ. ಆರ್. ಟಿ. ಮಹದೇವರಾಯರಿಗೆ ನವರಾತ್ರಿ ಹಬ್ಬದ ರಜಾದೊಂದಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತುಮಕೂರು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ ಛಾರ್ಜನ್ನು ವಹಿಸಿರುವ ಅ. ಕಮಿಷನರ್ ಮಿ. ಎ. ಶ್ರೀನಿವಾಸ ಮೂರ್ತಿರಾಯರವರನ್ನು ಶಿವಮೊಗ್ಗ ಸಬ್ ಡಿವಿಜನ್ ಛಾರ್ಜಿಗೆ ವರ್ಗಮಾಡಿದೆ.

[illegible] ಮಿ. ಆರ್. ಟಿ. ಮಹದೇವರಾಯರು ತುಮಕೂರು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ ಛಾರ್ಜನ್ನು ವಹಿಸತಕ್ಕದ್ದು.

ಅವರು [illegible] ಬರುವ ತನಕ ಪ್ರೊ. ಅ. ಕಮಿಷನರ್ ಮಿ. ಡಿ. ಶ್ರೀನಿವಾಸಯ್ಯಂಗಾರ್ರವರು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ ಛಾರ್ಜನ್ನು ವಹಿಸತಕ್ಕದ್ದು.

ಅ. ಕಮಿಷನರ್ ಮಿ. ಎ. ಮೃತ್ಯುಂಜಯ ಐಯರವರಿಗೆ ಕೊಟ್ಟಿರುವ ಹದಿನೈದು ದಿವಸಗಳ ಪ್ರಿವಿಲೆಜ್ ರಜವನ್ನು [illegible] ಮಾಡಿದೆ. ಎಕ್ಸ್‌ಟ್ರಾ ಅ. ಕಮಿಷನರ್ ಮಿ. [illegible] ಚಿತ್ರದುರ್ಗದ [illegible] ಛಾರ್ಜನ್ನು ವಹಿಸತಕ್ಕದ್ದು.

ಮುಂದೆ ಹೇಳುವ ಸ್ಪೆಷಲ್ ಸಬ್ ರಿಜಿಸ್ಟ್ರಾರುಗಳನ್ನು ಖಾಯಂ ಮಾಡಿದೆ: ಕೆ. ಟಿ. ಪುಟ್ಟಣ್ಣನವರು, ಎಸ್. ರಾಮಸ್ವಾಮಿ ಐಯಂಗಾರ್ರು.

ಶ್ರೀನಿವಾಸಾಚಾರ್ಯರನ್ನು ಸುಬೇದಾರ್ [illegible] [illegible] ತಾ. ೧೮ ರ [illegible] ಮಾಡಿರುತ್ತಾರೆ.

ಮುಂದೆ ಹೇಳುವ ಮುನ್ಸಿಫರ ಬದಲಿ ಮಾಡಿದೆ: ಮಿ. ಬಿ. ಕೃಷ್ಣಮೂರ್ತಿರವರನ್ನು [illegible] ನೇ ಕ್ಲಾಸಿಗೆ, ಮಿ. ಡಿ. ಕೆ. ರಾಮರಾಯರನ್ನು ೪ ರಿಂದ ೩ ನೇ ಕ್ಲಾಸಿಗೆ.

[illegible] ಜೆಯಿಲ್ ಮಿ. [illegible] ರವರು ತಮ್ಮ ಆಫೀಸ್ ಛಾರ್ಜನ್ನು [illegible] ತಾ. ೧೯ ರಲ್ಲಿ ತಾ. [illegible] ಕೊಟ್ಟು ರವರಿಗೆ ವಹಿಸಿರುತ್ತಾರೆ.

[illegible] ಇನ್ಸ್‌ಜಿನಿಯರ್ ಮಿ. [illegible] ಐಯಂಗಾರ್ರಿಗೆ ಅಕ್ಟೋಬರ್ ತಾ. ೧೫ ರಿಂದ ಹದಿನೈದು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ. ಇನ್ಸ್‌ಜಿನಿಯರ್ ಮಿ. ಕೆ. ಶ್ರೀನಿವಾಸ ಐಯಂಗಾರ್ರು ಅವರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಮೈಸೂರು ಡಿವಿಜನ್ ಸಬ್ ಅ. ಇನ್ಸ್‌ಪೆಕ್ಟರ್ ಮಿ. ವಿ. ವಿ. [illegible]ರವರನ್ನು ಅರಮನೆ ಇಲಾಖೆಗೆ ವರ್ಗಮಾಡಿದೆ. ಅವರು ನೀಲಗಿರಿ ಬೆಟ್ಟದ ಮೇಲಿರುವ ಫರ್ನ್‌ಹಿಲ್ ಅರಮನೆಯ ಛಾರ್ಜನ್ನು ವಹಿಸತಕ್ಕದ್ದು.

ತಾಲ್ಲೋಕು ವರ್ತಮಾನಗಳು.

ತುಂಕೂರು ದ್ಯಾ|| ಹೊನ್ನುದಿಕೆ.—ಇಲ್ಲಿ ಮಳೆ ಹೋಯಿದು ಒಂದೆರಡು ತಿಂಗಳಾಯಿತು, ಪೈರುಗಳೆಲ್ಲ ಒಣಗಿರುವವು. ಈ ಗ್ರಾಮವು ಈ ಡಿಸ್ಟ್ರಿಕ್ಟಿಗೆ ಕಡೆಯ ಸರಹದ್ದಿನಲ್ಲಿರುವುದರಿಂದ ಇಲ್ಲಿ ಶಕ್ತರಾದ ದಫೇದಾರರಿರುವುದು ಅತ್ಯವಶ್ಯಕವೆಂಬುದು ಸರ್ಕಾರದವರಿಗೆ ವೇದ್ಯವಿದ್ದರೂ ಇಲ್ಲಿಯ ದಫೇದಾರರನ್ನು ತೆಗೆದು ೩—೪ ಜನ ಕಾನ್‌ಸ್ಟೇಬಲರನ್ನು ಮಾತ್ರ ನಿಯಮಿಸುವರೆಂದು ವದಂತಿ ಇದೆ. ಸರ್ಕಾರದವರು ಸದ್ಯಕ್ಕೆ ಇರುವಂತೆಯೇ ಏರ್ಪಾಡಿಟ್ಟು ಪ್ರಜೆಗಳ ತನು ಧನ [illegible]

ಮನೆ ಇಲ್ಲದೆ ಬಾಲಕರು ತೊಂದರೆಪಡುತ್ತಿದ್ದುದನ್ನು ನೋಡಿ ಗ್ರಾಮಸ್ಥರು ಸರ್ಕಾರದವರ ಅಪ್ಪಣೆಯಂತೆ ೫೦೦ ರೂಪಾಯನ್ನು ಸರ್ಕಾರದ ಖಜಾನೆಯಲ್ಲಿ ಠೇವಣಿ ಇಟ್ಟರೂ ಘನ ಸರ್ಕಾರದ ಚಿತ್ತಕ್ಕೆ ಇನ್ನೂ ಬರಲಿಲ್ಲ. ಈಗಲಾದರೂ ದಯೆಯಿಟ್ಟು ಕ್ರಮ್ಯಸಹಾಯ ಮಾಡಿ ಗ್ರಾಮಸ್ಥರ ಇಷ್ಟಾರ್ಥವನ್ನು ನೆರವೇರಿಸಿಕೊಡಬೇಕಾಗಿದೆ.

ಚಾಮರಾಜನಗರ.—ಈ ಪ್ರಾಂತ್ಯ ಮಳೆ ಇಲ್ಲದೆ ಪೈರುಗಳು ಒಣಗುತ್ತಿವೆ ಕುಡಿಯುವ ನೀರಿಗೆ ತುಂಬಾ ಅಭಾವವಾಗಿರುವದರಿಂದ ಜನಗಳಿಗೂ ದನಕರುಗಳಿಗೂ ಉಂಟಾಗಿರುವ ತೊಂದರೆಯನ್ನು ಹೇಳತೀರದು. ಧಾರಣೆಯಾಗಿ ದಿನ ದಿನೇ ಏರುತ್ತಾ ಇದೆ. ಅಕ್ಕಿ ರೂಪಾಯಿಗೆ ೫ ಸೇರು, ರಾಗಿ ೧೧ ಸೇರು ಮಾರುವದು. ಈ ಊರು ತಾಲ್ಲೂಕು ಹೆಡ್ ಕ್ವಾರ್ಟರ್ ಆಗಿದ್ದರೂ ಇಲ್ಲಿ ಒಂದು ಸಂತೆ ಆಗದಿರುವದು ತುಂಬಾ ಆಶ್ಚರ್ಯವಾಗಿದೆ. ಇಲ್ಲಿನವರು ದಿನಸಿ ತರಲು ೮-೧೦ ಮೈಲಿ ದೂರ ಹಳ್ಳಿ ಸಂತೆಗಳಿಗೆ ಹೋಗಬೇಕಾಗಿದೆ. ಪ್ರಜಾ ಹಿತಚಿಂತಕರಾದ ಸರ್ಕಾರದವರು ಈ ಊರಿನಲ್ಲಿ ಪ್ರತಿ ವಾರವೂ ಸಂತೆ ಕಟ್ಟುವಂತೆ ಮಾಡುವುದು ಬಹುಜನರಿಗೆ ಪ್ರಯೋಜನ. ಈ ಕಾಲದಲ್ಲಿ ಅಳತೆ ಸೇರುಗಳ ವಿಷಯ ಸಂಶಯವುಂಟಾಗಿದೆ. ಪೋಲೀಸಿನವರು ತಕ್ಕ ಸಿಗಾ ಕೊಡುತ್ತಾ ಬರುವದು ಒಳ್ಳೇದು.—ಇಲ್ಲಿನ ಎಕ್ಸೈಸ್ ಇನ್ಸ್ಪೆಕ್ಟರು ಗುಟ್ಟಾಗಿ ಗಾಂಜಾವನ್ನು ಸಾಗಿಸಿ ತರುತ್ತಿದ್ದವರನ್ನು ಹಿಡಿದು ಎರಡು ಮೊಕದ್ದಮೆ ಮಾಡಿದರು. ಅಪರಾಧಿಗಳಿಗೆ ಸಜಾ ಮತ್ತು ಜುಲ್ಮಾನೆಗಳು ವಿಧಿಸಲ್ಪಟ್ಟವು.

ಚಿಂತಾಮಣಿ. ಈ ಪ್ರಾಂತ್ಯ ಮಳೆ ಇಲ್ಲ. ಅಲ್ಪಸ್ವಲ್ಪ ಬೆಳೆದಿದ್ದ ಪೈರುಗಳು ಒಣಗುತ್ತಿವೆ. ಕೆರೆಗಳಲ್ಲಿ ದಟ್ಟವಾಗಿ ಗಿಡಗಳು ಬೆಳೆದಿವೆ. ದನಗಳಿಗೆ ನೀರಿಗೆ ಅಭಾವವಾಗಿದೆ. ಆಹಾರ ದಿನಸಿಗಳು ಮೂರು ವರ್ಷಗಳಿಂದಲೂ ಏರಿಳಿತವಿಲ್ಲದೆ. ರೂಪಾಯಿಗೆ ೫ ಸೇರು ಅಕ್ಕಿ, [illegible] ಸೇರು ರಾಗಿ [illegible]. ಬಡವರ ಜೀವನ ಹೇಳತೀರದು.— ಈ ಊರಿನ ಸಂತೆಯು ತುಂಬಾ ದೊಡ್ಡದು. ಈ ಸಂತೆಯಲ್ಲಿ ಪಿಕ್ ಪಾಕೆಟ್ ಪಾಪದ ದೇವತೆಗಳು ದಿನ ದಿನಕ್ಕೆ ಹೆಚ್ಚುತ್ತಿವೆ. ಈ ಕ್ಷಾಮಕಾಲದಲ್ಲಿ ಒಪ್ಪೊತ್ತು ಅಲ್ಪಸ್ವಲ್ಪ ತಂದಿಟ್ಟ ಮೂಟೆಯನ್ನು ಮಾರಿ ಹೊಟ್ಟೆಗೆ [illegible] ಬಾಗಿಲಲ್ಲಿ ಸುಂಕ ಕೊಡಬೇಕು, ಮೊಂಡರಿಗೆ ಕಾಸು ಕೊಡಬೇಕು. ಮೋಜಗಳು ಬೇರೆ, ಪವಿತ್ರ ದೇವತೆಗಳು ಬೇರೆ ಇವರೆಲ್ಲರಿಗೂ ಹಂಚಿಕೆಯಾದ ಮೇಲೆ ಆ ರೈತರ ಕೈಯಲ್ಲಿ [illegible] ಉಳಿಯುವದು. ಈ ವಿಚಾರವಾಗಿ ನಮ್ಮ ಅಮಲ್ದಾರರು ತಕ್ಕ ಸಿಗಾ ಕೊಟ್ಟರೆ ಬಡರೈತರು ಬದುಕಿಕೊಂಡಾರು.—ಪೋಲೀಸ್ ಇಲಾಖೆಯ ವಿಷಯದಲ್ಲಿ ನಮ್ಮ ಇನ್ಸ್ಪೆಕ್ಟರು ತಕ್ಕ [illegible] ಅಪ್ಪಣೆಯಿಲ್ಲದಂತೆ ನೋಡಿಕೊಂಡಾರೆಂದು ನಂಬಿಕೆ ಇದೆ.—ಈ ಊರಿನಲ್ಲಿ ಕಳೆದ ೬ ತಿಂಗಳಿಂದ ಮೆ॥ ನಾರಾಯಣಪ್ಪನವರು ಚೆಟ್ಟಿಯರು [illegible] ಬಿಡಾರದಲ್ಲಿ [illegible] ಇದ್ದುದರಿಂದ [illegible] ದೊಡ್ಡ [illegible] ಮಹಾ ಛತ್ರ ಕಟ್ಟಿ ಅಕ್ಕಿ [illegible] ಅವರು ಅಮಲ್ದಾರರನ್ನೂ [illegible] ಇತರ ಸರ್ಕಾರಿ ಅಧಿಕಾರಿಗಳನ್ನೂ [illegible] ಕಾರ್ಯಕ್ಕೆ ಆಹ್ವಾನಿಸಿದರು. [illegible] ಅಲಂಕರಿಸಲ್ಪಟ್ಟಿತ್ತು. ವಾದ್ಯಗಳು ಭೋರ್ಗರೆಯುತ್ತಿದ್ದವು. [illegible] ಬಂದಿದ್ದರು. ಮೆ॥ ನಾರಾಯಣಪ್ಪನವರು ಚೆಟ್ಟಿ ಕೋರಿಕೆಯಂತೆ ಅಮಲ್ದಾರರು ಲಕ್ಷ್ಮೀನರಸಿಂಹರವರ ಪೂಜೆಮಾಡಿ, ಬೆಳ್ಳಿ ತಟ್ಟೆಯಲ್ಲಿ ಛತ್ರ ತುಂಬಿ ಗನ್‌ಪನ್‌ನಲ್ಲಿ ಹಾಕಲಾಗಿ ಮಹಾ ಶಬ್ದದೊಡನೆ ಕೆಲಸಕ್ಕೆ ಸುಲಭವಾಗಿ ಕ್ಷಣಮಾತ್ರದಲ್ಲಿ ಬಹು ಬೆಳ್ಳಗಾದ ಅಕ್ಕಿಯು ನೋಟಕರಿಗೆಲ್ಲಾ ತೋರಿಸಲಾಯಿತು. ಎಲ್ಲರಿಗೂ ಹೂವಿನ ಹಾರಗಳೂ, ಗಂಧ ತಾಂಬೂಲಗಳೂ, ಫಲ ಪನ್ನೀರುಗಳೂ, ಸಕ್ಕರೆ ಪೊಟ್ಟಣಗಳೂ ಹಂಚಲಾಯಿತು. ಮೆ॥ ಚೆಟ್ಟರ ಪ್ರಯತ್ನದಿಂದ ಈ ಕ್ಷಾಮ ಕಾಲದಲ್ಲಿ [illegible] ಮಂದಿ ಹೆಂಗಸು ಗಂಡಸರಿಗೆ ಜೀವನಕ್ಕೆ ಮಾರ್ಗವಾಯಿತು.

ನಂಜನಗೂಡು.—ಈ ಊರಲ್ಲಿ ಒಂದು ತಿಂಗಳಿಂದ ಬಹಳ ಗಲಾಟೆ ನಡೆಯುತ್ತಾ ಇದೆ. ಕೆಲವು ಜನರು ಒಂದಾಗಿ ಸೇರಿಕೊಂಡು ಮನೆಗೆ ಕನ್ನಹಾಕುವದು, ಚೀಟಿ ಅಂಟಿಸುವದು ಮನೆಗಳ ಮೇಲೆ ಅನೇಕವಾಗಿ ಕಲ್ಲುಗಳನ್ನು ಎಸೆಯುವದು ಮುಂತಾದ ಕೃತ್ಯಗಳನ್ನು ಮಾಡುತ್ತಾರೆ. ಇದರಿಂದ ಜನರು ನೆಮ್ಮದಿಯಾಗಿರುವದು ತಪ್ಪಿ ಭೀತಿ ಅಸಮಾಧಾನಗಳಿಂದ ತುಂಬಿದ್ದಾರೆ. ಮುಖ್ಯ ಬೀದಿಗಳಲ್ಲಿ ಈ ಊರಿನ ಕೆಲವು ಜನರು ಪೋಲೀಸಿನವರು ಗಸ್ತುಮಾಡುತ್ತಾರೆ, ಆದರೂ ಕಲ್ಲುಗಳ ಏಟು ತಪ್ಪಲಿಲ್ಲವೆಂತಲೂ, ಇಲ್ಲಿನ ಪೋಲೀಸ್ ನವರನ್ನೂ ಇನ್ಸ್ಪೆಕ್ಟರನ್ನೂ ಬೇರೆ ಸ್ಥಳಗಳಿಗೆ ವರ್ಗಮಾಡಿದರೆ ವಾಸಿ, ಡೆಪ್ಯುಟಿ ಕಮಿಷನರ್‌ರೂ ಸೂಪರಿಂಟೆಂಡೂ ಖುದ್ದಾಗಿ ಬಂದು ಅಪವಾದ ಹೊರಿಸಿಕೊಂಡು ಹೋದರೆಂತಲೂ, ಹೊಸ ಪೋಲೀಸ್ ಸಿಬ್ಬಂದಿ ಬಂದಿದ್ದರೂ ಕಲ್ಲು ಎಸೆಯುವದು ತಪ್ಪಲಿಲ್ಲವೆಂತಲೂ ಹೇಳುತ್ತಾರೆ. ಮೊನ್ನೆ ಮಂಗಳವಾರ ಇಲ್ಲಿನ ಮಳಿಗೆ ಸಾಹುಕಾರ್ ನಾಗಪ್ಪನವರ ಮನೆಯ ಮೇಲೆ ಲೆಕ್ಕವಿಲ್ಲದಷ್ಟು ಕಲ್ಲುಗಳನ್ನು ಎಸೆದರು. ಒಂದೇ ರಾತ್ರಿಯಲ್ಲ. ಅದಕ್ಕೆ ಮುಂಚೆಯೂ ೨-೩ ರಾತ್ರಿ ಕಲ್ಲು ಬಿದ್ದವು. ಪೋಲೀಸಿನವರೂ ಆ ಮನೆಯ ಕೆಲವು ಜನರೂ ಇದನ್ನು ಪತ್ತೆಮಾಡಲು ಯತ್ನಿಸಿ ಅನೇಕ ರೀತಿಯಿಂದ ಹುಡುಕಿದರು ಆದರೆ ಒಂದು ಗರಡಿಯೊಳಗೆ ನೋಡಲು ಇಬ್ಬರು ಮೂವರು ಕಲ್ಲುಗಳನ್ನು ಆಗಲೇ ಎಸೆಯುವದಕ್ಕೆ ಪ್ರಯತ್ನಿಸುತ್ತಿದ್ದರಂತೆ. ಒಳಗೆ ಕಲ್ಲುಗಳ ರಾಶಿಯು ಸಿಕ್ಕಿದವಂತೆ ಪೋಲೀಸಿನವರು ಅವರನ್ನು ಸ್ಟೇಷನ್ನಿಗೆ ಹಿಡಿದುಕೊಂಡು ಹೋದರು. ಅಷ್ಟರಲ್ಲಿ ಆ ಗರಡಿಯ ಮುಖಂಡರು ಗುಂಪಾಗಿ ಹೋಗಿ ಅಪರಾಧಿಗಳನ್ನು ಬಿಡಿಸಿಕೊಳ್ಳುವ ಪ್ರಯತ್ನಮಾಡಿದಾಗ ಪೋಲೀಸಿನವರಿಗೂ ಗರಡಿಯವರಿಗೂ ಮಾರಾಮಾರಿ ಆಯಿತು. ಬೇಗ್ಗ ಈ ಸಂಗತಿಗಳೆಲ್ಲಾ ಅಮಲ್ದಾರರಿಗೆ ವರದಿಯಾಗಿದೆ. ಪೋಲೀಸಿನವರನ್ನು ಲಕ್ಷ್ಯಮಾಡದೆ ಇದ್ದರೆ ಸಾಹುಕಾರರನ್ನು ಯಾರು ಲಕ್ಷ್ಯಮಾಡುತ್ತಾರೆ? ಸಾಹುಕಾರರು ಆಳುಕಾಳುಗಳನ್ನು ಇಟ್ಟುಕೊಂಡು ತಮ್ಮ ಮನೆಯನ್ನು ಕಾಪಾಡಿಕೊಳ್ಳುತ್ತಿದ್ದಾರೆ ಬಡವರ ಮನೆಗಳಿಗೆ ಕಲ್ಲು ಬೀಳುವದನ್ನು ತಪ್ಪಿಸುವವರು ಯಾರು? ಅವರು ಕಲ್ಲು ಹಾಕತಕ್ಕವರನ್ನು ಹ್ಯಾಗೆ ಹಿಡುಕೊಟ್ಟಾರು? ಗ್ರಾಮಸ್ಥರು ಸರಕಾರಕ್ಕೆ ಸಹಾಯವಾಗಿ, ಇಂಥಾ ಕೃತ್ಯ ನಡೆಸುವವರನ್ನು ತೋರಿಸಿದರೆ, ಆಗ ತಕ್ಕ ಬಂದೋಬಸ್ತಾಗಿ, ಜನಗಳು ನೆಮ್ಮದಿಯಿಂದ ಊರಲ್ಲಿ ಜೀವಿಸಬಹುದು. ಅನೇಕ ಜನರು ಸೇರಿ ಕಲ್ಲು ಎಸೆಯುತ್ತಾರೆ. ಮತ್ತು ಒಬ್ಬ ನಿರಪರಾಧಿಯನ್ನು ಕೊಂದು ಒಂದು ದೊಡ್ಡ ಹಾಳುಮನೆಯಲ್ಲಿ ಹಾಕಿದ್ದರು ಈ ಸಂಗತಿಯನ್ನು ಕೂಡ ಯಾರೂ ಈ ವರೆಗೂ ಪತ್ತೆಮಾಡಲಿಲ್ಲ. ಈ ಊರಿನ ಸ್ಥಿತಿಯು ತುಂಬಾ ವ್ಯಸನಕರವಾಗಿದೆ. ದೇವಸ್ಥಾನದ ಆಗಮಿಕರ ಮನೆಗೂ ಇನ್ನು ಕೆಲವರ ಮನೆಗಳಿಗೂ ಕನ್ನಹಾಕಿದ್ದು ಇನ್ನೂ ಪತ್ತೆ ಆಗಲಿಲ್ಲ.—ಇಲ್ಲಿ ಎರಡು ವರುಷಗಳಿಂದ ಮುನ್ಸಿಫರಾಗಿದ್ದ ಮೆ॥ ಶ್ರೀಕಂಠೇಗೌಡರು ಬೆಂಗಳೂರಿಗೆ ವರ್ಗವಾದರು ಅವರು ಸರಕಾರದ ಕೆಲಸವನ್ನು ತುಂಬಾ ಮುತುವರ್ಜಿಯಿಂದ ನೋಡುತ್ತಾ ಪಕ್ಷಪಾತವಿಲ್ಲದೆ ಎಲ್ಲರಲ್ಲೂ ಪ್ರೀತಿ ವಿಶ್ವಾಸವಿಟ್ಟುಕೊಂಡು ಸರ್ವಜನಪ್ರಿಯರಾಗಿದ್ದರು. ಇವರಿಗೆ ಈ ಸ್ಥಳದಲ್ಲಿ ಕೆಲವು ಮನೆಗಳೂ ಜಮೀನುಗಳೂ ಇರುತ್ತವೆ. ಇವರು ವರ್ಗವಾದದ್ದು ಅನೇಕರಿಗೆ ತುಂಬಾ ವ್ಯಸನ ಉಂಟಾಗಿದೆ. ಅರಸನಕೆರೆಯು ಈಗ ಒಡೆಗಿದೆ. ಇದರ ಆಧಾರದಿಂದ ಬಹಳ ಜಮೀನು ಸಾಗುವಳಿಯಾಗುತ್ತದೆ. ಗದ್ದೆಗಳು ಮಾತ್ರವಲ್ಲ, ಅನೇಕ ಬಾಳೇ ತೋಟಗಳೂ ತೆಂಗಿನ ತೋಟಗಳೂ ಸಹ ಸಾಗುವಳಿಯಾಗುತ್ತವೆ, ಈಗ ನೀರಿಲ್ಲದೆ ಇವುಗಳೆಲ್ಲ ಒಣಗಿ ಹೋಗುತ್ತಿವೆ, ರೈತರ ಫಸಲು ಹಾಳಾಯಿತು. ಬಡಜನರ ಸಂಕಟ ಹೇಳತೀರದು. ಈ ಕೆರೆ ದೊಡ್ಡದಾದರೂ ಆಳವಿಲ್ಲದ್ದು, ವರ್ಷ ವರ್ಷ ಮಣ್ಣು ಬಿದ್ದು ಮುಚ್ಚಿಹೋಗುತ್ತಾ ಇದೆ. ಇಂಥಾ ಪ್ರಯೋಜನಕರವಾದ ಕೆರೆಯು ರಿಪೇರಿ ಆಗಬೇಕಾಗಿದೆ. ಸರಕಾರದವರು ಪ್ರಯತ್ನಪಟ್ಟು ಈ ಕೆರೆಗೆ ಮೇಲಿನಿಂದ ಕಾಲುವೆ ತಿರುಗಿಸಿದರೆ ಆಗ ನೀರು ಯಥಾವಾಗಲೂ ಇರಬಹುದು ಮತ್ತು ರೈತರು ಹೆಚ್ಚು ಕಂದಾಯಕೊಡಲು ಸಿದ್ಧರಾಗಿದಾರೆ. ಈ ಕೆರೆಯ ಮೇಲೆ ದೊಡ್ಡ ಉದ್ಯೋಗಸ್ಥರ ದೃಷ್ಟಿಬಿದ್ದರೆ ಬಡರೈತರು ಸುಖವಾಗಿ ಜೀವನಮಾಡಲು ಅವಕಾಶವಾಗುತ್ತೆ. ಇಲ್ಲದಿದ್ದರೆ ವರ್ಷ ವರ್ಷವೂ ದಂಡದ ಕಂದಾಯ ತೆತ್ತು ನಿರ್ಭಾಗ್ಯರಾಗುತ್ತಾರೆ.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿಲ್ಲ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ.)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ; ಅಗ್ನಿಮಾಂದ್ಯ, ಗಾಬರಿ; ಅಶಕ್ತಿ, ಎದೆಯು ಕಲ್ಲಾಗುವುದು, ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ಜೀಗೆಂಬೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು, ಕಷ್ಟದ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [69-6]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು. ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು. ಔಷಧಿಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ.—ಇವರಲ್ಲಿ ದೊರೆಯುವುದು

ಈಗಲೇ ಬಂದಿದೆ.

117 5

[illegible]

[illegible] ಬಂಡಲ್ ಒಂದಕ್ಕೆ	೩—೮—೦
[illegible] ಒಂದಕ್ಕೆ	೩—೦—೦, ೯—೬—೦, ೧—[illegible]—೦
[illegible] ಒಂದಕ್ಕೆ	೬—೮—೦, ೪—೦—೦,
[illegible] ಒಂದಕ್ಕೆ	೦—[illegible]—೦, ೧—೦—೦, ೧—೮—೦,
ವಿ. ಪಿ. ಯಿಂದಲೂ ರವಾನಿಸುತ್ತೇವೆ	೧೦—೮—೦

ವಿಳಾಸ-ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ಇಲ್ಲಿ ನೋಡಿ.

77-3

[illegible] ಇಲಾಖೆಯಲ್ಲಿ [illegible] ಕೈವಾಡದಿಂದ [illegible] ಟೋಪಿಗಳು ಅತಿ [illegible] ಉಲ್ ದಾರದಿಂದ ತಯಾರಾಗುತ್ತವೆ ಕ್ರಯ:—೧೨ ಆಣೆ ಮೊದಲ್ಗೊಂಡು ೧ ರೂ. ೧೨ ಆಣೆಯವರೆಗೆ. ೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಸೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವದು. ಈಗ ತಾನೇ ಇಂಗ್ಲಿಷ್ ಉಲ್ ದಾರವು ಬಂದಿದೆ. ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಬಲ್ಲೆವು

ನಮ್ಮ ವಿಳಾಸ:—ಮ್ಯಾನೇಜರ್,

[illegible] ಕಾರ್ಖಾನೆ, ಜಿಲ್ಲಾ ಇಲಾಖೆ, ತುಮಕೂರು.

ಮಧುರೆ ಸೀರೆ 'ಗಟ್ಟಿ ಬಣ್ಣ' ೧೭ ಮೊಳದುದ್ದ!!

57-10

[illegible] ರೂ. ೩-೭ ಆ [illegible] ಚೆಲ್ಲಿಯ [illegible] ರೂ. ೭, ರೂ. ೯, ರೂ. ೧೦ [illegible] ಉತ್ತಮ [illegible] ದೊರೆಯುತ್ತೆ

ಮದ್ರಾಸು ಜೋಡಿ ರೇಷ್ಮೆ ಅಂಚಿನ ಸೀರೆ ರೂ. ೬.

ಒಂದೇ ತರದ [illegible] ರೇಷ್ಮೆ [illegible] ಅಂಗುಲ ಬಿಳಿರೇಷ್ಮೆ [illegible] ಅಂಚುಳ್ಳ ಗಟ್ಟಿ ಕಪ್ಪು ಬಣ್ಣದ ೧೮ ಮೊಳದ [illegible] ರೂ. ೩ [illegible] ಅಂಗುಲದಂಚಿನದಕ್ಕೆ ರೂ. ೨॥ [illegible] ರೇಷ್ಮೆ ಅಂಚು [illegible] ರೇಷ್ಮೆ [illegible] ಎಂದಿಗೂ ಕೆಡದ ಖಾತ್ರಿ ಬಣ್ಣದಲ್ಲಿ ತಯಾರಿಸಿದ [illegible] ಅಂಗುಲದಂಚಿನದಕ್ಕೆ ರೂ. [illegible], ೩ ಅಂಗುಲದಂಚಿನದಕ್ಕೆ ರೂ. ೧೧॥.

ಬುರ್ಲಿಂಗ್‌ಸ್ "ಬ್ಲಾಂಕೆಟ್" ಎಂಬ ಹೊಸ ಬನಾತು ರೂ ೬.

[illegible] ರೂ. ೩.

ರೇಷ್ಮೆಯ (ಕೆಂಪು) ವಸ್ತ್ರಗಳು! ೧೭ ಮೊಳದಗಲ ರೂ. ೫.

[illegible] ಅಂಚಿನ ಪಂಚೆಗಳು ಜೊತೆ ರೂ. ೩.

ವಿಳಾಸ.—ರಾವ್ ಎಂಪೋರಿಯಂ, ಸ್ಪೈಡರ್ ಹಾಂ ರೋಡ್,

ವೇಪೇರಿ, ಮದ್ರಾಸು.

ಎಲ್ಲರಿಗೂ ಆವಶ್ಯವಾದ ಎರಡು ಪುಸ್ತಕಗಳು.

83-1

ಭಾರತಿ ಸಂಘಗಿರಿಯಪ್ಪನವರ [illegible] ಇಂಗ್ಲೀಷು ಕಲಿಯುವಿಕೆ" ಕ್ರಯ ೦-೭-೦ ಇಂಗ್ಲೀಷ್ ಓದಲೂ ಬರೆಯಲೂ ಮಾತಾಡಲೂ ಯಾರ ಸಹಾಯವಿಲ್ಲದೇನೆ ೧-೨ ತಿಂಗಳಲ್ಲಿ ಕಲಿಸುವ ಉತ್ತಮ ಪುಸ್ತಕ. "ಪ್ರಶ್ನೋತ್ತರ ಲೆಖ್ಖಬೋಧಿನಿ": ಕ್ರಯ ೦-೬-೦. ಲೋಕಜ್ಞಾನ ಹಾರ ಮತ್ತು ಆ ವಿಷಯಗಳು, ಸಾನುಭೂತಿ ಮತ್ತು ವರ್ತಕರ ಲೆಕ್ಕ ಬರೆಯುವ ರೀತಿ, ಇನ್ನೂ ಅನೇಕ ಸಂಗತಿಗಳು ಅಡಗಿವೆ. ವಿಳಾಸ:—ಮ್ಯಾನೇಜರ್, ಕರ್ನಾಟಕ ಬುಕ್ ಡಿಪೋ, ಲಕ್ಷ್ಮೀ ಪೋಸ್ಟ್.

ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜೆಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . . . . . . ರೂ. ೧-೨-

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ. ೧—೧೪—೦

. . . ,, ,, ೬—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸಿದಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಸತ್ಯವಾಗಿಯೂ ಅಗ್ಗದ ಅಂಗಡಿ.

59-10

ಅದ್ಭುತ ಸಮಯ! ಅದ್ಭುತ ಸಮಯ!!

ಅಗ್ಗದ ಬೆಲೆಯ ಸಮಯ ಕ್ರಯ ಮೂರರಲ್ಲಿ ಒಂದೇ ಪಾಲು



ಗಡಿಯಾರಗಳೆಲ್ಲಾ ಅಚ್ಚ ಹೊಸದಾದವು ಚೆನ್ನ ದಂಥಾ ಸಮಯ ಇದಕ್ಕಿಂತ ಅಗ್ಗವಾಗಿ ಮತ್ತೆ ಸಿಕ್ಕಲಾರವು ಜಾಗ್ರತೆಯಾಗಬೇಕು! ಕಾಲ ಮೀರೀತು!!

ನಂ ೧೦೦—೧೮ ಓ ಎಫ್ ಸುಂದರವಾದ ಕೊರೆದಗಡಿಯಾರ, ಸೆಕೆಂಡ್ ಹ್ಯಾಂಡ್ ಸಹಿತ, ಸಿಲಿಂಡರ್ ಚಲನೆ, ೩೦ ಗಂಟೆ ಹೊತ್ತು ನಡಿಯುತ್ತದೆ ಮೊದಲಿನ ಕ್ರಯ ರೂ. ೧೩—೮—೦; ಈಗಿನ ಕ್ರಯ ರೂ. ೩—೮—೦. ಐದು ವರ್ಷ ಜಾಮೀನು

ನಂ. ೧೦೯ ಎ—ಕ್ರೊನೊಗ್ರಾಫ್ ವಾಚ್ ಸೆಕೆಂಡ್ ಹ್ಯಾಂಡ್ ಸಹಿತ. ಮೊದಲಿನ ಕ್ರಯ ರೂ. ೧೫; ಈಗ ರೂ. ೫ ಐದು ವರ್ಷ ಜಾಮೀನು

ನಂ ೧೦೭—೧೮ ಓ. ಎಫ್ ಸಿಲಿಂಡರ್ ಚಲನೆ, ೩೦ ಗಂಟೆ ನಡೆಯುವುದು. ಮೊದಲಿನ ಕ್ರಯ ರೂ. ೧೧—೮—೦: ಈಗ ರೂ. ೩—೭—೦ ಐದು ವರ್ಷ ಜಾಮೀನು. ನಂ ೧೦೮—೧೮ ಓ ಎಫ್. ರೈಲ್ವೆ ರೆಗ್ಯುಲೇಟರ್ ಲೀವರ್ ವಾಚ್ ೩೦ ಗಂಟೆ ನಡಿಯುತ್ತದೆ. ಮೊದಲಿನ ಕ್ರಯ ರೂ ೧೦—೧೪—೦; ಈಗ ರೂ. ೩—೦—೦. ಐದು ವರ್ಷ ಜಾಮೀನು. ೧೦೫—ರಾಸ್ಕೋಫ್ ಲೀವರ್ ವಾಚ್. ಇದು ಬಹು ಶಾಶ್ವತವಾದದ್ದು ಹತ್ತು ವರ್ಷ ಜಾಮೀನು ಮೊದಲು ರೂ. ೧೮ ಈಗ ರೂ ೫—೮—೦. ೧೦೫—ಬೆಳ್ಳಿ ರಾಸ್ಕೋಫ್ ಲೀವರ್ ವಾಚ್, ರತ್ನಗಳುಳ್ಳದ್ದು ೧೭ ವರ್ಷ ಜಾಮೀನು. ಮೊದಲು ರೂ ೩೦; ಈಗ ರೂ. ೧೦ ೧೦೬—ಬೆಳ್ಳಿ ಲೇಡಿ ಅಥವಾ ಕೈವಾಚ್. ಸಿಲಿಂಡರ್, ರತ್ನವುಳ್ಳದ್ದು ಗಿಲ್ಟ್ ಚಲನೆ ೬ ವರ್ಷ ಜಾಮೀನು. ಕ್ರಯ ರೂ. ೨೭—೮, ಈಗ ರೂ. ೭—೮—೦. ೧೦೭—ಬೆಳ್ಳಿ ಓ. ಎಫ್. ಕೈ ಸಹಿತ. ಪಾಲಿಷ್ ಚಲನೆ ರೂ ೨೦; ಈಗ ರೂ. ೭. ಆರು ವರ್ಷ ಜಾಮೀನು, ೧೦೮—ಬೆಳ್ಳಿ ಓ. ಎಫ್ ಗಂಡಸರ ಲೀವರ್. ರೂ. ೩೦, ಈಗ ರೂ. ೧೦ ಹತ್ತು ವರ್ಷ ಜಾಮೀನು ೧೦೮ ಎ.—ಅರ್ಧ ಹಂಟರ್. ರೂ ೩೩, ಈಗ ರೂ. ೧೧. ೧೦೮ ಬಿ.—ಅರ್ಧ ಅರ್ಧ ಹಂಟರ್ ರೂ ೩೬, ಈಗ ರೂ ೧೨. ೧೦೯—ಬೆಳ್ಳಿ ೮ ದಿನ ನಡಿಯುವುದು ರೂ. ೬೫, ಈಗ ರೂ ೧೫ ಮಾರಕ್ಕೊಮ್ಮೆ ಕೀಲಿ ಕೊಡುವುದು ಲೀವರ್ ಚಲನೆ ೧೦ ವರ್ಷ ಜಾಮೀನು — ಎ ೧೦೯ ೩೦ ದಿನ ನಡಿಯುವ ಚೊಕ್ಕಬೆಳ್ಳಿ ಗಡಿಯಾರ ರತ್ನಗಳುಳ್ಳದ್ದು. ಸೆಕೆಂಡ್ ಹ್ಯಾಂಡ್. ೧೫ ವರ್ಷ ಜಾಮೀನು. ರೂ ೧೫೦ ಈಗ ರೂ. ೫೦. ೧೦೯—ಬಿ ಚೊಕ್ಕಬೆಳ್ಳಿ ಕ್ಯಾಲೆಂಡರ್ ಲೀವರ್ ವಾಚ್. ದಿನ, ತಾರೀಖು, ತಿಂಗಳು, ಚಂದ್ರ, ಇವನ್ನು ತೋರಿಸುತ್ತೆ. ೧೨ ವರ್ಷ ಜಾಮೀನು ಕ್ರಯ ರೂ ೬೭—೮—೦, ಈಗ ರೂ ೧೭—೮—೦. ೧೧೦—ಚೊಕ್ಕ ಬಂಗಾರ. ರತ್ನಗಳುಳ್ಳದ್ದು. ಕ್ರಯ ರೂ ೩೭. ಈಗ ರೂ. ೨೬ ಇಪ್ಪತ್ತು ವರ್ಷ ಜಾಮೀನು. ೧೧೧—ಎಂಟು ದಿನಗಳ ಚಿನ್ನದ ಗಡಿಯಾರ ತುಂಬಾ ರತ್ನಗಳು. ೧೭ ವರ್ಷ ಜಾಮೀನು. ಕ್ರಯ ರೂ ೧೫೯, ಈಗ ರೂ ೫೩.

ಒಟ್ಟಿಗೆ ತರಿಸುವವರಿಗೆ ಸ್ಪೆಷಲ್ ದರಗಳು.

೩ ಗಡಿಯಾರ ಒಂದೇ ಸಲ ತರಿಸುವವರಿಗೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ.

೬ " " " " ಒಂದು ಗಡಿಯಾರ ಇನಾಂ.

ಕ್ರಯದಲ್ಲಿ ಕಾಲುಭಾಗ ಅಡ್ವಾನ್ಸು ಬರಬೇಕು, ಉಳಿದದ್ದಕ್ಕೆ ವಿ ಪಿ ಪಿ ಯಿಂದ ಕಳಿಸುತ್ತೇವೆ. ಗಡಿಯಾರಗಳನ್ನು ಸುಂದರವಾದ ವೆಲ್ವೆಟ್ ಪೆಟ್ಟಿಗೆಯಲ್ಲಿ ಸ್ಪ್ರಿಂಗ್, ಗ್ಲಾಸ್ ಸಹಿತ ಕಳಿಸುವೆವು. ಇದಲ್ಲದೆ ಪ್ರತಿ ವಾಚಿಗೂ ಸೊಗಸಾದ ಒಂದೊಂದು ಸರಪಣಿಯನ್ನು ನಾವು ಇನಾಮಾಗಿ ಕಳಿಸುತ್ತೇವೆ.

ಎಂ. ಎ. ಘಟಿಕಾಲಾ ಮತ್ತು ಕಂಪೆನಿ, ಚಿತ್ತೂರು.

ನೆತ್ತಿಹತ್ತಿದ ಶೀತದಿಂದ ಮೂಗಿನಲ್ಲಿ ಹರಿಯುವದು. ಇದೇ ಪ್ರಪಂಚದಲ್ಲೆಲ್ಲಾ ರೋಗಕ್ಕೆ ಮೂಲಕಾರಣವು. ಇದಕ್ಕೆ ಪೆ-ರೂ-ನಾ ಸರ್ವಶ್ರೇಷ್ಠವಾದ ಪರಿಹಾರ.

[34-28]

ಉಷ್ಣದ ನೀರು ಹರಿಯುವ
ನೆತ್ತಿ ಹತ್ತಿದ ಶೀತ
ನೆಗಡಿ.

ಇದು ಅನ್ನಕೋಶ, ಮಲಕೋಶ, ದೊಡ್ಡ ಸಣ್ಣ ಕರುಳುಗಳು, ಕುಂಡಿಯ ಕೋಶಗಳು, ಇವೆಲ್ಲಾ ವ್ಯಾಪನೆಯಾಗುತ್ತದೆ.

ಶೀತದ ನೀರು ಹರಿಯುವ
ನೆತ್ತಿ ಹತ್ತಿದ ಶೀತ
ನೆಗಡಿ.

ಇದು ನೆತ್ತಿ, ಗಂಟಲು, ಶ್ವಾಸಕೋಶ, ಶ್ವಾಸನಾಳಗಳು, ಇವಕ್ಕೆಲ್ಲಾ ವ್ಯಾಪಿಸಿಕೊಳ್ಳುತ್ತದೆ.

ನೆತ್ತಿ ಹತ್ತಿದ ಶೀತ ಅಥವಾ ಉಷ್ಣದ ನೆಗಡಿಯಿಂದ ಮೂಗಿನಲ್ಲಿ ನೀರು ಹರಿಯುವುದು ಮಹಾ ಕಠಿಣತರವಾದ ಜಾಡ್ಯವೆಂದು ಪ್ರಪಂಚದಲ್ಲಿ ಸಮಸ್ತ ಜನರಿಗೂ ತಿಳಿದೇ ಇರುತ್ತದೆ. ಅಮೇರಿಕ ಖಂಡಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳೆಂಬ ಒಂದು ರಾಜ್ಯದೊಳಗೇನೇ ಪ್ರತಿ ವರುಷವೂ ಎರಡು ಲಕ್ಷ ಪ್ರಜೆಗಳು ಈ ರೋಗಕ್ಕೆ ಸಿಕ್ಕಿ ಸಾಯುತ್ತಾ ಇದ್ದಾರೆ. ಹೀಗಿರುವಲ್ಲಿ ಇತರ ದೇಶಗಳೊಳಗೆ ಈ ರೋಗದಲ್ಲಿ ಬಿದ್ದು ಕಷ್ಟಪಡುವಂಥವರ ಸಂಖ್ಯೆಯು ಸರಾಸರಿ ನೋಡಿದರೆ ಅಷ್ಟು ಹೆಚ್ಚಾಗಿಯೇ ಇರಬೇಕೆಂದು ಹೇಳಲು ಸಂದೇಹವಿಲ್ಲ.

ಈ ನೆತ್ತಿ ಹಿಡಿದ ಶೀತ ಅಥವಾ ಉಷ್ಣದ ನೀರು ಸುರಿಯುವಂಥಾ ರೋಗಕ್ಕೆ ಪೆ-ರೂ-ನಾ ಎಂಬೀ ಔಷಧವೇ ಸರ್ವಶ್ರೇಷ್ಠವಾದದ್ದೆಂದೂ, ಇದು ಇತರ ಔಷಧಗಳಿಗಿಂತ ಮೊದಲನೆಯ ಸ್ಥಾನವನ್ನು ಹಡೆದಿರುವಂಥಾದ್ದೆಂದೂ ಅನೇಕ ವರುಷಗಳಿಂದಲೂ ಅನುಭವಕ್ಕೆ ಬಂದಿರುತ್ತದೆ.

ಪೆ-ರೂ-ನಾ ಎಂಬೀ ಔಷಧವು ಪ್ರಪಂಚದ ಪಶ್ಚಿಮಾರ್ಧ ಮತ್ತು ಪೂರ್ವಾರ್ಧಗೋಳಗಳಲ್ಲೆಲ್ಲಾ ಬಹು ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಪಡೆದಿರುತ್ತದೆ.

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದ್ದೂ ಇವರಿಂದಲೇ ತಿಳಿಯಬಹುದು.

ವಿಳಾಸ:—ಹಿಂದೂಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

18-9-1908 ರಿಂದ 25-9-1908 ರ ವರೆಗೆ

ಸ್ಥಳ	ಪ್ಲೇಗ್ ಹತ್ತಿದ್ದು	ಪ್ಲೇಗ್ ಸತ್ತದ್ದು	ಕಾಲರಾ ಹತ್ತಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	3	3	0	0
ಮೈಸೂರು ,,	2	1	0	0
ಬೆಂಗಳೂರು ಡಿಸ್ಟ್ರಿಕ್ಟು	29	25	[illegible]	0
ಮೈಸೂರು ,,	*	*	0	0
ಕೋಲಾರ್ ,,	17	10	3	2
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	*	*	0	0
ಹಾಸನ ,,	25	15	*	*
ಚಿತ್ರದುರ್ಗ ,,	0	0	20	6
ಕಡೂರ್ ,,	42	3	[illegible]	0
ಶಿವಮೊಗ್ಗ ,,	*	*	0	0
* ಸಂಖ್ಯೆ ಕಾಣಿಸಿಲ್ಲ ಜಮಾ	118	83	23	6

[illegible] ಶಾಲಿವಾಹನ ಶಕ [illegible] ಕೀಲಕನಾಮ ಸಂವತ್ಸರದ [illegible] ಗುರುವಾರದಿಂದ [illegible] ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಅಕ್ಟೋಬರ್.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ಕನ್ಯಾ ಮಾಸ
8	ಗುರು	[illegible]	2-16	[illegible]	54-20	23
9	ಶುಕ್ರ	[illegible]	51-10	[illegible]	23-2	24
10	ಶನಿ	[illegible]	46-30	ಮ	19-56	25
11	ಭಾನು	[illegible]	42-28	ಪೂ	17-16	26
12	[illegible] ‡	[illegible]	39-28	ಉ	15-25	27
13	ಕುಜ	[illegible]	37-32	ಹ	14-48	28
14	ಬುಧ	[illegible]	36-52	ಚಿ	14-12	29

[illegible]

‡ [illegible]

ಪೇಟೇ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು.
[illegible] ಅಕ್ಕಿ ಪಲ್ಲ ೧ಕ್ಕೆ	[illegible]	[illegible]
[illegible] ಅಕ್ಕಿ ಅವಲ್	[illegible]	[illegible]
,, [illegible]	[illegible]	[illegible]
[illegible] ಅಕ್ಕಿ	[illegible]	[illegible]
ಸಣ್ಣಕ್ಕಿ ಅವಲ್	೧೯-೦-೦	[illegible]
,, ಗುಂಡು	೧೮-೮-೦	೧೯-೦-೦
ತೊಗರೀ ಬೇಳೆ ಪಲ್ಲ ೧ಕ್ಕೆ	[illegible]	[illegible]
,, ದುಂಡು	[illegible]	[illegible]
[illegible] ರಾಗಿ ಪಲ್ಲ ೧ಕ್ಕೆ	[illegible]	[illegible]
ಕಾರಾಗಿ	[illegible]	೯-೦-೦
ಜೋಳ	[illegible]	[illegible]
ಹಲಸಂದೆ ಪಲ್ಲ ೧ಕ್ಕೆ	[illegible]	೯-೦-೦
ಬಿಳೀ ಅವರೆ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಕಡಲೆ	[illegible]	[illegible]
ಎಳ್ಳು ಸ. [illegible]ಕ್ಕೆ	[illegible]	೮-೦-೦
ಹುರುಳಿ	[illegible]	[illegible]
ಸಕ್ಕರೆ [illegible] ಸೇರಿಗೆ	[illegible]	[illegible]
ಸೀಗೇಕಾಯಿ ಮಣ ೧ಕ್ಕೆ	[illegible]	[illegible]
ಮೆಣಸಿನಕಾಯಿ	[illegible]	[illegible]
,, ದುಂಡು	[illegible]	[illegible]
ಬೆಲ್ಲ ದೊಡ್ಡ ಅಚ್ಚು	[illegible]	[illegible]
ಒಳ್ಳೆಣ್ಣೆ ಮಣ ೧ಕ್ಕೆ	[illegible]	[illegible]
ಹರಳೆಣ್ಣೆ ,,	[illegible]	[illegible]
ಕೊತ್ತುಂಬರಿ ಪಲ್ಲ ೧ಕ್ಕೆ	[illegible]	[illegible]
ಉಪ್ಪು ,,	[illegible]	[illegible]
ಹುಣಿಸೇ ಹಣ್ಣು	[illegible]	[illegible]
,, ಹಳೇದು	[illegible]	[illegible]
ತುಪ್ಪ ಮಣ ೧ಕ್ಕೆ	[illegible]	[illegible]
ಸೀಮೆಯೆಣ್ಣೆ ಬಟ್ಟು ೧ಕ್ಕೆ	[illegible]	[illegible]
ತೆಂಗಿನಕಾಯಿ ೧೦೦ಕ್ಕೆ	[illegible]	[illegible]
ಅಳಲೇಕಾಯಿ ಮಣ ೧ಕ್ಕೆ	[illegible]	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ	[illegible]	[illegible]
ಚಿನ್ನ ([illegible]) ಕೆಂಪು	[illegible]	[illegible]
,, ,, ಹಸಿರು	[illegible]	[illegible]
,, ,, ಗಟ್ಟಿ ತೊಲ ೧ಕ್ಕೆ	[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	[illegible]	[illegible]

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore. 8/10/1908.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು

ಸಂಪುಟ ೨೨ | ಮೈಸೂರು—೧೯೦೮ ನೇ ಇಸವಿ ಅಕ್ಟೋಬರ್ ತಾರೀಖು ೧೫ ನೇ ಗುರುವಾರ. | ಸಂಚಿಕೆ ೨೦

MYSORE DASARA EXHIBITION 1908.

PLEASE HAVE A LOOK AT

The Wonderful Exhibits

OF

THE DIAMOND SOAP COMPANY,

GIRGAON, BOMBAY.

73-4

Exhibits can be obtained

at the Stall

IN THE EXHIBITION,

from

MESSRS. PANADE COMPANY,

BANGALORE

ಜ್ವರಹರಿ. 64-11



ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ ಚಳಿ ಹಿಡಿಯುವದು, ಎಂಬ [illegible] ಜ್ವರಗಳನ್ನು [illegible] ಬೇಗನೆ ವಾಸಿಮಾಡುವದು.

ಚಿತ್ರದುರ್ಗದ [illegible] ಯಲ್ಲಿರುವ [illegible] ಸಬ್ ಡಿವಿಜನ್ ಆಫೀಸರ್ [illegible] ವೆಂಕಟಪತಿ [illegible] [illegible] ಸೀಸೆಯನ್ನು [illegible] ಉಪಕಾರವಾಗಿದೆ—ಎಂದು ಬರೆ[illegible]

ಕ್ರಯ —ಸೀಸೆ ೧ಕ್ಕೆ ೮ ಆಣೆ ೧ ಡಜ, ೧—೮ ರೂ, [illegible] ಕನ್ನಡದ ಸೀಸೆ [illegible] ಮಾಡಿ ಬಿಡಲಾಗುವದು

****

ಓಮಂ ಕರ್ಪೂರ

Omum Carpoor

ಈ ಔಷಧವು ಅಜೀರ್ಣ, [illegible], [illegible] ಶಾಂತಿಭೇದಿ, ನಾನಾತರದ [illegible]—ಮುಂತಾದ [illegible] ಮಹೌಷಧವಾಗಿ ಪರಿಣಮಿಸಿ, [illegible] ಗುಣಕೊಡುವ [illegible] ಇದು ಕೆಂಗರವು ತಿಂಗಳಿಗೆ [illegible] ಮುಂತಾದ ವ್ಯಾಧಿಗಳನ್ನು [illegible] ಗುಣಪಡಿಸುತ್ತದೆ [illegible] ಎಂಬ [illegible] ಸೀಸೆಗಳಲ್ಲಿ [illegible]

[illegible] ಅಸಿಸ್ಟೆಂಟ್ [illegible] ಗಣಪತಿರಾಯರು—[illegible] ನನ್ನ [illegible] ಮ್ಯುನಿಸಿಪಲ್ [illegible] ಅನೇಕ [illegible] ಕಾಲರಾ, ಅಜೀರ್ಣ [illegible] ರೋಗಿಗಳಿಗೆ ಕೊಡುತ್ತೇವೆ [illegible] ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧ [illegible] ಬರೆದಾರೆ

ಈ ಎರಡು ಔಷಧಗಳೂ [illegible] ರಾಜ ವೈದ್ಯಶಾಲೆಗ [illegible] ಔಷಧ ವ್ಯಾಪಾರಿಗಳಲ್ಲೂ [illegible] ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

[illegible] ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ [illegible] ರೋ, ಮದರಾಸ್.

AMRUTANJAN DEPOT, 16 OAK-LANE BOMBAY. [17-34]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ —ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕಮ್ ಮತ್ತು ಘಾಯ, ಗಂಟ್ಲುನೋವು, ಎದೆನೋವು, ಶೀತ ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ ಬಾಟ್ಲಿ ೧ಕ್ಕೆ ಕಿಮ್ಮತು ೦-೮-೦ ಪೋಸ್ಟು ಖರ್ಚು ೦-೪-೦.

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ತುರಿಕೆ ವಗೈರೆ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦-೪-೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು.

[illegible]—ಜೀರ್ಣಕ್ಕೆ ಡಬ್ಬಿ ೧ಕ್ಕೆ	೧—೪—೦	[illegible]	೧—೦—೦
ಸಪ್ತಗುಟಿಕ—ದಾತುಪುಷ್ಟಿ ರಕ್ತಶುದ್ಧಿ	೧—೦—೦	ಪ್ರಮೇಹದ ವಿಶ್ರಾಣಿ—ಪ್ರಮೇಹಕ್ಕೆ	೧—೦—೦
ಜ್ವರಹರಿ—ಜ್ವರಕ್ಕೆ ಬಾಟ್ಲಿ ೧ಕ್ಕೆ	೦—೧೨—೦	[illegible]	೧—೪—೦
[illegible]	೦—೮—೦	ಸುಂದರೀ ತೈಲ್ಯ—[illegible]	೦—೮—೦
ದಂತಶೂಲಹರಿ—[illegible]	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
[illegible]	೦—೬—೦	ಉದರಿನಾಶಕ ಎಣ್ಣೆ ಬಾಟ್ಲಿ ೧ಕ್ಕೆ	೦—೮—೦
[illegible]	೦—೪—೦	ಪಾಕದ ವಿಶ್ರಾಣಿ "	೧—೦—೦
[illegible]	೦—೨—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
ಕೇಶವರ್ಧಿನೀ ತೈಲ್ಯ—[illegible]	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
[illegible]	೦—೮—೦	ರೇಚನಕಾರಿ	೦—೩—೦

ವಿಳಾಸ —ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು ಫ್ರೋರ್ಟು, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ್," ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-35

೧. ಲೋಕಾಮಯಹರ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, [illegible], ಸಂದುಗಳ ನೋವು [illegible] ಕೈಕಾಲು ಸೆಳೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, [illegible] ನೋವು, [illegible], ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

[illegible] ಅಥವಾ [illegible] ಗಿಸುತ್ತಿದ್ದರೆ ಬಹಳ [illegible] ಅಜೀರ್ಣ [illegible] ನೀರು [illegible] ಬಹಳವಾಗಿ [illegible] ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ [illegible], [illegible] ಎಳೆವು, ಜ್ವರ, ನಚ್ಚುಜ್ವರ, [illegible]ಗಳನ್ನು ಗುಣಪಡಿಸುತ್ತದೆ

ಇದನ್ನು [illegible] ಖಂಡಿತವಾಗಿಯೂ [illegible] ಗುರಿಯಾಗ [illegible] ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೩೦ ಮಾತ್ರೆಯುಳ್ಳ ಕಾಪ್ಪಿಗೆ ೪ ಆಣೆ, ೫ ಕಾಪ್ಪಿಗೆ ೧ ಕಾಪ್ಪು ಕೆಚ್ಚು. ೧ ರಿಂದ ೧೨ ಕಾಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ,

ಎಸ್. ಎಸ್. ಆರ್ ವೈದ್ಯಶಾಲಾ,

ಲಕ್ಷ್ಮೀವಿಲಾಸ ರೋಡ್, ಮೈಸೂರು.

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟ್."

ವ್ಯವಹಾರನಿರ್ಣಯ—[illegible] ಹಿಂದೂ [illegible] ಲಾಗಳು, [illegible] ಇವುಗಳ ಸಂಗ್ರಹವು, [illegible] ಅರ್ಜಿ [illegible] ಕ್ರಯ [illegible] ಆಣೆ [40-25]

ಕನ್ನಡ ಲಾ ರಿಪೋರ್ಟ್—ಪ್ರಿವಿಕೌನ್ಸಿಲ್, [illegible] ಚೀಫ್‌ಕೋರ್ಟ್ ತೀರ್ಪುಗಳು ಕನ್ನಡದಲ್ಲಿ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಂದು [illegible] ವರ್ಷದ ಚಂದಾ ೧—೦—೦ ಮುಂಗಡ, [illegible] ೦—೨—೦

ಇವುಗಳನ್ನು [illegible] ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು" ಈ ವಿಳಾಸಕ್ಕೆ ಬರೆಯುವುದು

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

63-16

ನಮ್ಮಲ್ಲಿ ಈಗ [illegible] ಸಿದ್ಧವಾಗಿರುವ ಚಕ್ಕೆ ಬಟ್ಟೆಗಳು [illegible] ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು [illegible] ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. [illegible] ಇದು ಆಣೆಯಿಂದ [illegible] ಆಣೆ ವರಿವಿಗೂ ಚಿಲ್ಲರೆಯಾಗಿ ಯಾಗಲೀ [illegible] ಯಾಗಲೀ ಮಾರಲ್ಪಡುತ್ತವೆ. ಶಾಲುಗಳು, [illegible] ಟೋಪಿಗಳು, ಮುಸುಕಿನ ಟೋಪಿಗಳು, [illegible] ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್. ಬುಕ್ ಡಿಪೋ, ಮೈಸೂರು.

ಶಿವಪಂಚಸ್ತವವು.

79-3

(ಪುಟಗಳು ೩೦೨)

ಶಿವಭಕ್ತ ಸಂಪನ್ನರಿಗೆಲ್ಲರಿಗೂ ಬೇಕಾದುದು.

ಶ್ರೀ ಮಾಧರಸ ವಂಶೋದ್ಭೂತರಾದ ವಿದ್ವಾಂಸರಿಂದ ರಚಿತವಾದ ಸಂಸ್ಕೃತದ ವ್ಯಾಖ್ಯಾನದೊಡನೆ ಕೂಡಿದ ಮಲ್ಲಣ, ಮಹಿಮ್ನ, ಮಾಲಯರಾಜ, ಅನಾಮಯ, ಶೂಲಾಯುಧವೆಂಬ ಪ್ರಖ್ಯಾತವಾದ ಪಂಚ ಸ್ತೋತ್ರಗಳು ಹೊಸದಾಗಿ ಬರೆದ ಕನ್ನಡ ಟಿಪ್ಪಣಿಯಿಂದ ಕೂಡಿ, ಸುಂದರವಾದ ಕನ್ನಡದ ಅಕ್ಷರಗಳಿಂದ ಉತ್ತಮವಾದ ಕಾಗದದಲ್ಲಿ ಅಚ್ಚು ಮಾಡಿಸಲ್ಪಟ್ಟಿದೆ.

ಕ್ರಯ: ಪುಸ್ತಕ ೧ಕ್ಕೆ ವಿ. ಪಿ. ಮೂಲಕ ರೂ. ೧—೪—೦

೧೨ ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಪ್ರತಿಯು ಉಚಿತವಾಗಿ ಕೊಡಲ್ಪಡುವುದು.

ವಿಳಾಸ:—ಬಸವಲಿಂಗಸ್ವಾಮಿಗಳು, ಹೊಸಮಠ, ಮೈಸೂರು.

ಪ್ರತಿಯೊಬ್ಬ ವೀರಶೈವ ಮತಸ್ಥರಿಗೆ ಅವಶ್ಯಕವಾದದ್ದು.

ಚೆನ್ನಬಸವೇಶ ವಿಜಯ, ಕನ್ನಡ ವಚನ ರೂಪವಾದದ್ದು, ಅನೇಕ ತರಹರ ಕಥೆಗಳು ಇರುತ್ತೆ. ಕ್ರಯ: ೧—೪—೦. ಈ ಪುಸ್ತಕವನ್ನು ತರಿಸಿಕೊಳ್ಳುವವರಿಗೆ ಕೆಳಗಿನ ಫೋಟೋಗಳನ್ನು ಬಹುಮಾನವಾಗಿ ಕಳುಹಿಸುತ್ತೇವೆ

ಶ್ರೀ ಅಲ್ಲಮ ಪ್ರಭುದೇವರು ಬಸವಾದಿ ಪ್ರಮಥರುಗಳೊಡನೆ ಇರತಕ್ಕ ಫೋಟೋ ೧ಕ್ಕೆ .. .. .. ೦—೨—೦

ಶ್ರೀ ಚಿತ್ರದುರ್ಗ ಸಂಸ್ಥಾನದ ಈಗಿನ ಶ್ರೀಮನ್ಮಹಾರಾಜರ ಜಗದ್ಗುರುಗಳ ಫೋಟೋ ೧ಕ್ಕೆ . . ೦—೨—೦

ಡಿಟೋ ಸ್ವಾಮಿಗಳ ಫೋಟೋ ನಂ ೨ ಸೈಜ್ ೦—೯—೦

ಒಟ್ಟಾಗಿ ತರಿಸಿಕೊಂಡರೆ ೪ಕ್ಕೆ ೧, ೭ಂಕ್ಕೆ ೨, ೫ಂಕ್ಕೆ ೭ ೧೦೦ಕ್ಕೆ ೨೦ ರಂತೆ ಕಮಿಷನ್ ದೊರೆಯುತ್ತೆ. ೧೦×೧೨ರ ಸೈಜಿನ ಅಸಲ್ ಫೋಟೋ ೧ಕ್ಕೆ .. .. ೦—೮—೦

ವಿಳಾಸ.—ಡಿ. ಬಿ ಪುಟ್ಟಣ್ಣ, ಫ್ಯಾನ್ಸಿ ಬಜಾರ್, ಕೋಟೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

48-21

ತಲೆನೋವು, ಸಾಯಾನೋವು, ಸೆಳತ, ಗಂಟುನೋವು, ಮಾರ್ಗ ವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನು ನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯಕ್ಷಿಣಿ ಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಮೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಕೊಳ್ಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಬುಡವನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೦೨ ಆಣೆ. ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜ್ ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್ ಕ್ಲೆಮೆಂಟ್ಸ್,

೩೩, ವೇದಮಲಿಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಬಹುಮಾನ! 100 ರೂಪಾಯಿ ಬಹುಮಾನ!!

ಸುಲಭ ಕಿಮ್ಮತ್ತು.



ಸುಲಭ ಕಿಮ್ಮತ್ತು.

ಇಮಿಟೇಷನ್ ಸ್ಟೋನುಕರಮಲದ ಓಲೆ.

ಈ ಇಮಿಟೇಷನ್ ಸ್ಟೋನುಕರಮಲದ ಓಲೆ ಅತ್ಯುತ್ತಮವು ಮತ್ತು ಯಾವ ಬೊಟ್ಟುಗಳು ಹೊಸದಾಗಿ ವಿಲಾಯತಿಯಿಂದ ಈಗ ತಾನೆ ಸಾಕಷ್ಟು ತರಿಸಿ ಇರುತ್ತೇವೆ. ಈ ನಗಗಳು ನಿಜವಾದ ಸ್ಟೋನುಕರಮಲಕ್ಕೆ ಹೋಲುವವು. ಇವನ್ನು ನೋಡುವವರು ಸ್ಟೋನುಕರಮಲದ ಓಲೆಯೆಂತ ಹೇಳುವರೆ ಹೊರತು ಬೇರಿಲ್ಲವು. ಇವನ್ನು ಅನೇಕ ಪ್ರಭುಗಳು ಉಪಯೋಗಿಸಿ ಒಪ್ಪಿರುವರು. ಈ ಓಲೆಗಳು ಕೋಟ್ಟಿ ಸೂರ್ಯ ಪ್ರಕಾಶಕ್ಕೆ ಒಪ್ಪುವ ಕಾಂತಿಯು ಮತ್ತು ನೀರುಮಯಕ್ಕೆ ಅತಿ ಬಿಳುಪಾಗಿ ಹೊಳೆಯುವವು. ಇವನ್ನು ಸ್ಟೋನಿನ ಒಂಗಾರಕ್ಕೆ ಸರಿಯಾಗಿಯೂ ಎಂದಿಗೂ ಕಪ್ಪಾಗದಂತೆ ಕನ್ನಡಿಯ ಗೋಲ್ಡಿನ ಅತಿ ಸುಂದರವಾದ ಅಚ್ಚಿನ ಕಟ್ಟಿರುತ್ತದೆ ಇದು ಯಾವಾಗಲೂ ಕಪ್ಪಾಗದೆಯು ಹೊಳೆಯುವಂಥ ಅಚ್ಚ ಬಂಗಾರದಂತೆ ತೋರುವುದರಿಂದ, ನಾವು ಖಂಡಿತ ಹೇಳುತ್ತೇವೆ. ಈ ನಗಗಳನ್ನು ಒಬ್ಬರು ತಗಲುಕೊಂಡಲ್ಲಿ ನೋಡುವವರು ತಿಳಿಯದೆ ಇರಲಾರರು, ಒಳಗೆ ಅಪುರೂಪವಾದವು. ಈ ಸಮಯ ಬಿಟ್ಟಲ್ಲಿ ಬೇರೆ ಸಮಯ ಎಂದಿಗೂ ಸಿಗಲಾರದು ಇವನ್ನು ತಿಗಟುಕೊಂಡವರು ಇಷ್ಟಪಿಲ್ಲದಿದ್ದಕ್ಕೆ ಅವರ ಹಣವು ವಾಪಸ ಖಂಡಿತವಾಗಿಕೊಡುವೆವು.

ಇವರ ಬೆಲೆ ಬಹಳ ಕಡಿಮೆ ಇರುವುದರಿಂದ ತ್ವರಿತ ಆರ್ಡರ್ ಕೊಡುವವರಿಗೆ ಸಿಗುವದ ಹೊರತು ಅನ್ಯರಿಗೆ ಸಿಗಲಾರದು

ಓಲೆ ಜತೆ ೧ಕ್ಕೆ 3—0—0

ಅತ್ಯುತ್ತಮವು ಜತೆ ೧ಕ್ಕೆ .—0—0

ಮೂಗುಬೊಟ್ಟು ೧ಕ್ಕೆ 1—0—0

ವಿ. ಪಿ. ಖರ್ಚು ಬೇರೆ ಬೀಳುವದು.

ಸೂಚನೆ:—ನಮ್ಮಲ್ಲಿ ಈ ಇಮಿಟೇಷನ್ ಟಿಕೀಲ ಬದ ನಗಗಳು ಪ್ರಕಟಿಸಿ ಹೋಲಿಕೆ ಇಲ್ಲವೆಂದು ತಿಳಿದವರಿಗೆ ಮೇಲ್ಕಂಡಂತೆ ರೂ 100 ಬಹುಮಾನ ಕೊಡಲಾಗುವುದು.

ವಿಳಾಸ:—ಗುರು ಬಸವ ಅಂಡ್ ಕಂಪನಿ, ಮದರಾಸು

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಕಲಿ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



1-42

ಕಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ರಾಂತಿಭೇದಿ ಇವುಗಳಿಗೂ ಮತ್ತು ಸಣ್ಣ ಮಕ್ಕಳ ಹೊಟ್ಟೆಯ ನಾನಾ ತರದ ರೋಗಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಸಮಯಕ್ಕೆ ಉಪಯುಕ್ತವಾದ ಔಷಧವು ಜನರನ್ನು ಬದುಕಿಸಿರುವವಲ್ಲದೆ ಮತ್ತು ನೋವನ್ನು ಬಾಧೆಯನ್ನೂ ನಿವಾರಿಸುವಷ್ಟು ರಮಣೀಯ ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ

ಪ್ರಾಣಕಾಲದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿನ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಾಲದಿಂದ ಭೇದಿಯೂ ಕೂಡ ಮೂರೇ ಹೊತ್ತಿಗೆ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಿಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುತ್ತದೆ ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ಮನೆ ಬಿಕರಿಗೆ ಸಿದ್ಧವಾಗಿದೆ.

82-2

ಮೈಸೂರು ಶಿವರಾಂಪೇಟೆ ಇಲ್ವಾಲ್ ರಸ್ತೆಯಲ್ಲಿ ೨೩×೩ ಅಂಕಣಗಳ ಅಂಚೆ ಗಾರೆಕಾರೆ ಕೃಷ್ಣಪ್ಪನವರಿದ್ದ ದೊಡ್ಡ ಮನೆ ಬೇಕಾದವರು—ಮೇಲ್ಕಂಡ ರೇಂಜರ್ ಬಿ ಶ್ರೀಕಂಠಯ್ಯನವರಿಗೆ ಬರೆದು ಕ್ರಯ ಮುಂತಾದ್ದನ್ನು ತಿಳಿಯಬಹುದು

ಮಾತಪರಿ.

81-2

ಒಂದು ಡಬ್ಬಿ ಕಿಮ್ಮತ್ತು ೨ ಆಣೆ —ವಿ ಪಿ ಛಾರ್ಜು ಬೇರೆ

ಈ ಸ್ಪಲವು ತಲೆಸುಳಿ, ಅರತಲೆ ನೋವು, ವಾಯುವಿನಿಂದ ಕೈ ಕಾಲು ನೋವು, ಚಳಿ ಶಕ್ತಿಜ್ವರ, ಮೂಳೆ ಸವಾಯು ಎದೆನೋವು, ಕಸ್ತ್ರ ಗಳಿಂದ ಉಂಟಾದ ಘಾಯ, ಬಚ್ಚೆ, ತುರಿ, ಕರಪಾಣ, ಮೇಹಪುಣ್ಣೆ, ನರಗಳ ಬಳಲಿಕೆ, ಕೀಲುವಾಯು, ಹಲ್ಲುನೋವು, ಮುಡಮೆ, ಉಷ್ಣಕಲೆ ಬೆಂಕಿಯಿಂದ ಸುಟ್ಟಗಾಯ ದ್ದರೂ, ಛಳಿಕು, ಇತ್ಯಾದಿ ಅನೇಕ ವ್ಯಾಧಿಗಳಿಗೆ "ವರ" ಅಂದರೆ

ಅಕ್ಷರ ಪರಿಕಾರ

ಸಿಂಹದೋಷವಿರಿ ಪ್ರತಿಮಾತ್ರ ದಲ್ಲಿ ನಾಶಮಾಡುವದು. ಮೂಲವ್ಯಾಧಿಗೂ ಕೃತವಾಗಿದೆ ಈ ರೋಗಗಳಿಗೆಲ್ಲಾ ಈ ಔಷಧಿಯು ಎಷ್ಟರ ಮಟ್ಟಿಗೆ ಕೃತವೋ ಅಷ್ಟು ಇನ್ಯಾವ ಔಷಧವಾದರೂ ಇಲ್ಲ. ಇದನ್ನು ನೋವಿರುವ ಸ್ಥಳಕ್ಕೆ ಹಚ್ಚಿದ ಮಾತ್ರಕ್ಕೆ ದಃಖಕರವಾದ ರೋಗ ಮಾಯವಾಗಿ ತೋಲಗಿ ಸುಖ ಸಂತೋಷಗಳುಂಟಾಗುತ್ತೆ ಬಾಧೆಯನ್ನು ಅನುಭವಿಸುವವರು ಕೂಡಲೆ ಬರೆದು ತರಿಸಿಕೊಳ್ಳಿ ತರಿಸದವರಲ್ಲಾ ಎಂದು ಎಂದಿಗೂ ವ್ಯಸನಪಡುವುದಿಲ್ಲ. ೬ ಡಬ್ಬಿಗಳನ್ನು ಒಟ್ಟಿಗೆ ತರಿಸಿಕೊಳ್ಳುವರಿಗೆ ಪೋಸ್ಟೇಜು ಮಾಫಿ ಬಿಡುತ್ತೇವೆ ಔಷಧಗಳ ಕ್ಯಾಟಲಾಗನ್ನ ನೋಡ್ಬೇಕೆನ್ನುವವರು ೬ ಪ್ಲ. ಸ್ಟಾಂಪಿನ್ನಿಟ್ಟು ಬರೆದುಕೊಳ್ಳತಕ್ಕದ್ದು

ವಿಳಾಸ—ಎಂ. ಗೋವಿಂದಸೆಟ್ಟಿ ಮೆಡಿಕಲ್ ಪ್ರ್ಯಾಕ್ಟೀಷನರ್, ದೇವನಹಳ್ಳಿ.

ಮಕ್ಕಳ ಹಿತಕಾರಿ

ಎಂದು

SCOTT'S EMULSION

33-29

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಕೆಸರಿಟ್ಟಿದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ

ಇದು ತಿಂದು ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು; ಬಲಹೀನರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಈ ವಿಶಾಲಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಕ್ವೆಸ್ಟೋಕಡ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

"ಮುಷ್ಟಿ"

84-1

ನಮ್ಮ ಹುವ್ವಿನ ಸಾರಗಳ ಮುಂದೆ ಮತ್ಯಾವ ವಿಧವಾದ ಪರಿಮಳವೂ ಪ್ರಯೋಜನವಿಲ್ಲವೆ ಬಂಬವನ್ನು ಸರ್ವರಿಗೂ ತಿಳಿಯಬೇಕು ನಮ್ಮ ಒಂದು ಸೀಸೆ ಹುವ್ವಿನ ಸಾರಕ್ಕೆ ಆರ್ಡರು ಕೊಡುವವರಿಗೆ

ಬಹಳ ಅಂದವಾದ ಮತ್ತು ಬೆಲೆಯುಳ್ಳ ೧೯೦೯ ನೇ ಇಸವಿ ಕ್ಯಾಲೆಂಡರನ್ನು ಮುಫತ್ತಾಗಿ ಕೊಡುತ್ತೇವೆ —ಸೀಸೆ ೧ಕ್ಕೆ ರೂ ೧—೮—೦ ಟಪಾಲ್ ಹಾಸಲ್ ಬೇರೆ ಅಲ್ಲದೆ ನಮ್ಮ ಹುವ್ವಿನ ಸಾರವನ್ನು ಉಪಯೋಗಿಸಿ ಅದರ ಗುಣಾತಿಶಯವನ್ನು ಬರೆಯುವವರ ಲೇಖನಗಳ ಪೈಕಿ ನಮ್ಮ ಮನಸ್ಸಿಗೆ ತೃಪ್ತಿಕರವಾದ್ದಕ್ಕೆ ೫ ರೂ. ಬಾಳತಕ್ಕ ಪದಾರ್ಥವನ್ನು ಇನಾಮಾಗಿ ಕೊಡುವೆವು. ಆಗಿಂದಾಗ್ಯೆ ನಮ್ಮಲ್ಲಿ ಆಗುವ ಪ್ರಕಟನೆಗಳನ್ನು ಅಪೇಕ್ಷಿಸುವವರು ಈ ನಮ್ಮ ಪ್ರಕಟನೆಯನ್ನು ಕತ್ತರಿಸಿ, ಅರ್ಧ ಆಣೆ ಲೇಬಲ್ ಸಮೇತ ನಿಮ್ಮ ಹೆಸರು ವಿಳಾಸದೊಡನೆ ಕೆಳಗಿನ ಅಡ್ರೆಸ್ಸಿಗೆ ರವಾನಿಸಿರಿ —ದಿ ಸ್ಟಾರ್ ಟ್ರೇಡಿಂಗ್ ಅಸೋ. ಸಿಯೇಷನ್ ಶ್ರೀಮನ್ಮಹಾರಾಜರವರಿಗೆ ಅಪ್ಯಾಯಮಾನವಾದ ಹುವ್ವಿನ ಸಾರಗಳನ್ನು ಸರಬರಾಯಿ ಮಾಡತಕ್ಕವರು, ಬೆಂಗಳೂರು ಸಿಟಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಒಂದು ತರಿಸಿಕೊಳ್ಳಿ.

242

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಬಾಬತೆಲ್ಲಾ ಬೇಳಾದದ್ದು, ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ಕೇವಲ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಬಾಬತೆಲ್ಲಾ ನಟ್ಟಿನ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಒಡ್ಡಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕ ಪ್ಯಾಟರ್ನುಗಳನ್ನೇ ಆರಿಸಿ ಕಳಿಸುತ್ತೇವೆ.

ಒಳ್ಳೇದಾದ, ಚೆನ್ನಾಗಿ ಕಸೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದವರು, ನಮಗೆ ನೇರ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಇನ್ನಾಗಿಲ್ಲದಿದ್ದ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ. ಕಡು, ಕೆಂಪು ಕಪ್ಪು, ಬಿಳಿ ಕಾಪ್ ಟೋಪಿಗಳು ೧ ರೂ ೮ ಆ; ೧ ರೂ. ೩ ಆ , ೧ ರೂ ೪ ಆ.

ರೇಷ್ಮೆ ಪಾಕ್ಕೆಟ್ ಒಳ್ಳ ಟೋಪಿಗಳು ೧ ರೂ. ೮ ಆ ; ೨ ರೂ ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ ; ೧ ರೂ ೫ ಉಸುಕಿನ ಟೋಪಿಗಳು ೧ ರೂ ೮ ಆ.; ೧ ರೂ ೩ ಆ

ಕೂಸುಗಳ ಟೋಪಿ, ಸೂಥಿನ ಮೇಜೋಡು, ಉಗಿ ವಗೈರೆ ಡು ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮಿಂದ ಕೇಳುವಂಥವರಿಗೆ ಕೊಟ್ಟು ಕಳಿಸುತ್ತೇವೆ.

ಮ್ಯಾನೇಜರ್,

ವೃತ್ತಾಂತ ಪತ್ರಿಕೆ.

ಸನ್ ೧೯೦೮ ನೇ ಇಸವಿ ಅಕ್ಟೋಬರ್ ತಾ ೧೫ ನೇ ಗುರುವಾರ

ದಿವಾನರವರ ಉಪನ್ಯಾಸವು.

ಕಳೆದ ಗುರುವಾರ ಮಧ್ಯಾಹ್ನ ದಿವಾನರವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಓದಿ ತಿಳಿಸಿದ ವಾರ್ಷಿಕ ರಿಪೋರ್ಟಿನ ಕೆಲವು ಭಾಗಗಳನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಗತವರುಷದಲ್ಲಿ ಎಲ್ಲಾ ಭಾಗಗಳೂ ತುಂಬಾ ತೃಪ್ತಿಕರವಾಗಿ ಅಭಿವೃದ್ಧಿಗೆ ಬಂದಿರುತ್ತವೆಂದು ಈ ರಿಪೋರ್ಟನ್ನು ಓದಿದವರಿಗೆ ಪರಿಸ್ಕಾರವಾಗಿ ತಿಳಿಯುವುದು. ಹಿಂದಿನ ವರುಷಗಳ ರಿಪೋರ್ಟಿಗಿಂತಲೂ ಇದು ತುಂಬಾ ಸಂತೋಷವನ್ನುಂಟುಮಾಡತಕ್ಕದಾಗಿದೆ ಎನ್ನುವುದಕ್ಕೆ ಸಂಶಯವಿಲ್ಲ. ಕಳೆದ ವರುಷ ನಡಿಸಲ್ಪಟ್ಟ ಕಾರುಕರ್ದಿಗಳನ್ನು ನೋಡಿ ದಿವಾನರವರ ವಿಷಯದಲ್ಲೂ ಗವರ್ನ್‌ಮೆಂಟ್ ಅಧಿಕಾರಿಗಳ ವಿಷಯದಲ್ಲೂ ನಾವು ಸಂತೋಷವುಳ್ಳವರಾಗಿದ್ದೇವೆ. ವಾಚಕರು ಆ ರಿಪೋರ್ಟನ್ನು ಸಾವಧಾನದಿಂದ ಓದಿನೋಡಿದಲ್ಲಿ ಈ ಸಂಸ್ಥಾನದ ಶ್ರೇಯಸ್ಸಿಗೂ ಪ್ರಜೆಗಳ ಕ್ಷೇಮಾಭ್ಯುದಯಗಳಿಗೂ ಸಂಬಂಧಪಡುವಂಥಾ ಅನೇಕ ವಿಷಯಗಳು ಗೋಚರಕ್ಕೆ ಬರುತ್ತವೆ.

ಸದ್ಯ ನಾವು ಒಂದೆರಡು ವಿಷಯಗಳನ್ನು ಮಾತ್ರ ಕುರಿತು ಪ್ರಸ್ತಾಪಮಾಡುವೆವು. ಸ್ವಾಭಾವಿಕವಾಗಿ ದಿವಾನರವರ ರಿಪೋರ್ಟಿನಲ್ಲಿ ವಿಶೇಷಭಾಗವು ಇತರ ವಿಚಾರಗಳಿಗಿಂತಲೂ ಸಂಸ್ಥಾನದ ಹಣಕಾಸಿನ ಲೆಕ್ಕಾಚಾರಕ್ಕೆ ವಿನಿಯೋಗಿಸಲಾಗಿದೆ. ಆದಾಯವು ಹೆಚ್ಚಾಯಿತೆಂತಲೂ, ಖರ್ಚು ಕಡಮೆಯಾಯಿತೆಂತಲೂ, ಖರ್ಚು ಕಳೆದು ಹದಿನಾರು ಲಕ್ಷ ರೂಪಾಯಿ ಆದಾಯವಾಗಿದೆಯೆಂತಲೂ, ಈ ಸಂಸ್ಥಾನದ ಶೇಖರಣೆ ಹಣವು ೭೪ ಲಕ್ಷದಿಂದ ೯೧ ಲಕ್ಷಕ್ಕೆ ಹೆಚ್ಚಿರುವುದೆಂತಲೂ ತಿಳಿಯಲಾಗುವುದು. ಹಣದ ಶೇಖರಣೆ ವಿಚಾರದಲ್ಲಿ ಪ್ರಪಂಚದ ಇನ್ಯಾವ ಗವರ್ನ್‌ಮೆಂಟೂ ಮೈಸೂರಿಗಿಂತ ತೃಪ್ತಿಕರವಾದ ಸ್ಥಿತಿಯಲ್ಲಿರುವುದಿಲ್ಲವೆಂದು ಹೇಳಬಹುದಾಗಿದೆ. ಮೈಸೂರು ಗವರ್ನ್‌ಮೆಂಟು ಮಾಡಿರುವ ಸಾಲವು ಸ್ವಲ್ಪವಾಗಿದೆ. ವಿಶೇಷ ವರಮಾನಗಳನ್ನು ಕೊಡುವಂಥಾ ಶಿವಸಮುದ್ರದ ಕಾರ್ಖಾನೆ, ರೈಲ್ವೆ, ಕೆರೆ ನಾಲೆಗಳು, ಇವುಗಳೆಲ್ಲಾ ಗವರ್ನ್‌ಮೆಂಟಿನ ಭಾರಿ ಆಸ್ತಿಗಳಾಗಿರುತ್ತವೆ. ಇಂಥಾ ಸ್ಥಿತಿಗೆ ಸೈನ್ಯದ ಬಾಬಿನ ಭಾರೀ ಖರ್ಚು ಮೈಸೂರು ಗವರ್ನ್‌ಮೆಂಟಿನವರಿಗೆ ಇಲ್ಲದಿರುವುದೇ ಒಂದು ಕಾರಣವೆಂದು ಹೇಳಬಹುದು. ಇಂಡಿಯಾ ಗವರ್ನ್‌ಮೆಂಟಿಗೂ ಯೂರೋಪಿನ ರಾಜ್ಯಗಳಿಗೂ ಸೈನ್ಯದ ಖರ್ಚೇ ಆಧಾರವಾಗುತ್ತಿದೆ.

ಮೈಸೂರು ಗವರ್ನ್‌ಮೆಂಟಿನವರು ಪ್ರಜೋಪಕಾರಕಗಳಾದ ಭಾರೀ ಕಾಮಗಾರಿಗಳಿಗೆ ಹಣ ಖರ್ಚುಮಾಡುವ ವಿಷಯದಲ್ಲಿ ಸದ್ಯ ತುಂಬಾ ಜಾಗರೂಕರಾಗಿರುವಂತೆ ಕಾಣುವುದು. ಈಗಿನ ಕಾಲದಲ್ಲಿ ಯಾವ ಗವರ್ನ್‌ಮೆಂಟಿನವರಾಗಲಿ ಹಣವನ್ನು ಖಜಾನೆಗಳಲ್ಲಿ ತುಂಬಿಟ್ಟುಕೊಳ್ಳುವುದು ತರವಲ್ಲ. ಅಂಥಾ ಹಣವನ್ನು ಪ್ರಜೆಗಳ ಕ್ಷೇಮಚಿಂತನೆಗೂ ದೇಶಾಭ್ಯುದಯಕ್ಕೂ ವಿನಿಯೋಗಪಡಿಸಲು ಹೊಸ ಮಾರ್ಗಗಳನ್ನು ಹುಡುಕಬೇಕಾದದ್ದೇ ಧರ್ಮವು. ಸರ್ಕಾರಕ್ಕೂ ಪ್ರಜೆಗಳಿಗೂ ಪ್ರಯೋಜನಕರವಾದಂಥಾ ಭಾರೀ ನೀರಾವರಿ ಕಾಮಗಾರಿ, ರೈಲು ರಸ್ತೆಯ ಬಡಾವಣೆ, ಕೈಗಾರಿಕೆ ಮೊದಲಾದವುಗಳನ್ನು ಏರ್ಪಾಡು ಮಾಡುವುದಕ್ಕೆ ಗವರ್ನ್‌ಮೆಂಟಿನವರು ಪ್ರಯತ್ನಪಡಬೇಕು. ಇಂಡಿಯಾ ಗವರ್ನ್‌ಮೆಂಟಿಗೂ ಮೈಸೂರು ಸಂಸ್ಥಾನಕ್ಕೂ ಬಹಳ ವ್ಯತ್ಯಾಸವುಂಟು. ಹ್ಯಾಗೆಂದರೆ, ಇಂಡಿಯಾ ಗವರ್ನ್‌ಮೆಂಟಿನವರು ಅನೇಕ ಹೊಸ ಕೆಲಸಗಳನ್ನು ಪ್ರಾರಂಭಿಸಿರುವರು ; ಅದಕ್ಕೆಲ್ಲಾ ಅವರಿಗೆ ಹಿಂದುಸ್ಥಾನದಲ್ಲಿ ಮೂಲಧನ ಸಿಕ್ಕುವುದಿಲ್ಲ. ಆದ್ದರಿಂದ ಅವರು ವಿಲಾಯಿತಿಯಿಂದ ಸಾಲಮಾಡಿ ತರಬೇಕಾಗಿದೆ. ಮೈಸೂರು ಗವರ್ನ್‌ಮೆಂಟಿನವರಾದರೋ ತಮ್ಮ ಪ್ರಜೆಗಳು ಕೂಡಿಸಿಕೊಡತಕ್ಕಂಥಾ ಹಣವನ್ನು ಪ್ರಯೋಜನಕರವಾದ ರೀತಿಯಲ್ಲಿ ವಿನಿಯೋಗಿಸಬಹುದು. ಇದಾಗಿ ಸೇವಿಂಗ್ಸ್ ಬ್ಯಾಂಕಿನ ಡಿಪಾಜಿಟ್ ಹಣವು ಬಹಳವಾಗಿ ನಿಂತಿದ್ದು, ಅದನ್ನು ಕಡಮೆಮಾಡುವುದಕ್ಕೆ ಸರ್ಕಾರದವರು ಯೋಚಿಸುವುದು ವಾಚಕರಿಗೆ ತಿಳಿದೇ ಇದೆ. ಈ ಮಾತು ಹೇಳಿದ್ದರಿಂದ ನಾವು ಈ ವಿಷಯದಲ್ಲಿ ಗವರ್ನ್‌ಮೆಂಟಿನವರ ಕಾರ್ಯವನ್ನು ಆಕ್ಷೇಪಣೆಮಾಡುತ್ತೇವೆಂದು ಯಾರೂ ಊಹಿಸಬಾರದು. ಹಾಗೆ ಕಡಮೆಮಾಡುವುದಕ್ಕೆ ಅವರಿಗೆ ಅನೇಕ ಕಾರಣಗಳು ಇದ್ದವು. ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣವನ್ನು ಹೆಚ್ಚಾಗಿ ಇಟ್ಟುಕೊಳ್ಳುವುದೂ, ಸ್ವಲ್ಪಕಾಲದಲ್ಲೇ ಅನೇಕರು ಹಣ ಕೇಳಿದರೆ [illegible] ಸಾಗುವುದೂ [illegible] ಈ [illegible] ಸರ್ಕಾರದವರು ಕಡಿಮೆಮಾಡಬೇಕಾಯಿತೆಂಬುವುದನ್ನು [illegible] ಇಲ್ಲಿನ ಪ್ರಜೆಗಳ [illegible] ಗವರ್ನ್‌ಮೆಂಟಿನವರು ಆ ಹಣವನ್ನು [illegible] ವಿನಿಯೋಗಿಸಲು ಇನ್ನು ಮಾರ್ಗಗಳು [illegible] ಇಲ್ಲವೆಂದೂ ಗೊತ್ತಾಗುತ್ತದೆ.

ರೈಲ್ವೆ ಕಾಮಗಾರಿಯನ್ನು ಈ ಸಂಸ್ಥಾನದಲ್ಲಿ ನಿಲ್ಲಿಸಿಬಿಟ್ಟು ಬಹಳ ಕಾಲವಾಯಿತು. ರೈಲ್ವೆ [illegible] ಬರುವುದಿಲ್ಲ. [illegible]ದಲ್ಲಿ ಭಾರೀ ತಲಾವನ್ನು ನಿರ್ಮಾಣಮಾಡಬೇಕೆಂಬುವುದೊಂದೇ ದೊಡ್ಡ ನೀರಾವರಿ ಕಾಮಗಾರಿಯು. ಇದನ್ನು ಪರ್ಯಾಲೋಚಿಸಬೇಕೆಂದು ಹೇಳಿ ಮನಸ್ಸುಮಾಡಿದ್ದಾರೆ. ಗವರ್ನ್‌ಮೆಂಟಿನವರು ಸುಮ್ಮನಿರುವುದು ತಪ್ಪೆಂದು ನಾವು ಅಭಿಪ್ರಾಯಪಡುವುದಿಲ್ಲ. ಕಾವೇರೀ ನದಿಗೆ ಅಡ್ಡಕಟ್ಟೆ ಹಾಕಿ ಈ ಭಾರೀ ತಲಾವನ್ನು ಕಟ್ಟಿಸುವುದು ಫಲಕಾರಿಯಾದದ್ದೋ ಇಲ್ಲವೋ ಗಟ್ಟಿಗರಾದ ಇಂಜನಿಯರುಗಳಿಗೂ ನಿಪುಣರಾದ ರೆವಿನ್ಯೂ ಅಧಿಕಾರಿಗಳಿಗೂ ಗೊತ್ತಾಗಬೇಕೇ [illegible] ಅನ್ಯಥಾ ತಿಳಿಯಲಾಗದು.

[illegible]ದರೆ ನಾವು ಹೇಳುವುದು ಇಷ್ಟೇ. ಮೈಸೂರು ಗವರ್ನ್‌ಮೆಂಟಿನವರು ಬಹಳ ಹಣವನ್ನು ಒದಗಿಸಲು ಸಮರ್ಥರಾಗಿದ್ದರೂ, ಫಲಕಾರಿಗಳಾದ ಮಾರ್ಗಗಳಲ್ಲಿ ಅದನ್ನು ವಿನಿಯೋಗಿಸಲು ಹೆಚ್ಚಿನ ಪ್ರಯತ್ನ ಮಾಡುವುದು ಅವಶ್ಯ. ರಾಜನ ಖಜಾನೆಯು ತುಂಬಿಕೊಳ್ಳುತ್ತಿರುವಂತೆ ದ್ರವ್ಯವನ್ನು ಕೂಡಿಸಿಡುವುದು ಪೂರ್ವಕಾಲದ ಮಂತ್ರಿಗಳ ಮುಖ್ಯ ಆಶಯವಾಗಿತ್ತು. ಕೋಟಕೊತ್ತಲಗಳಲ್ಲಿ ಅಪಾರವಾದ ದ್ರವ್ಯವನ್ನೂ ಚಿನ್ನಬೆಳ್ಳಿ, ನಗಗಳನ್ನೂ ಶೇಖರಮಾಡಿಡುತ್ತಿದ್ದರು. ಈಗಿನ ಕಾಲದ ಗವರ್ನ್‌ಮೆಂಟು ಅಂಥಾ ಉದ್ದೇಶವನ್ನು ಪಡೆದಿರುವುದಿಲ್ಲ. ಕೂಡಿಸಿಟ್ಟ ಸಕಲ ವಿಧವಾದ ಧನಗಳನ್ನೂ ಹೊರಕ್ಕೆ ತಂದು, ಯಾವ ಭಾಗವೂ ನಿರುಪಯೋಗವಾಗಿ ಹಾಳಾದಂತೆ ವಿನಿಯೋಗಪಡಿಸುವುದೇ ಪರಮಾವಶ್ಯವಾಗಿರುತ್ತದೆ.

ದಿವಾನರವರ ಅಡ್ರೆಸ್ಸಿನಲ್ಲಿ ಇನ್ನೆರಡು ವಿಷಯಗಳನ್ನು ಕುರಿತು ಪ್ರಸ್ತಾಪಮಾಡಿದ್ದರೆ ಪ್ರಜೆಗಳು ಇನ್ನೂ ವಿಶೇಷ ಸಂತೋಷಪಡುತ್ತಿದ್ದರೆಂದು ನಮಗೆ ತೋರುತ್ತದೆ. ಅವು ಯಾವವೆಂದರೆ—ಮೊದಲನೆಯದಾಗಿ ಮಾರೀಕಣಿವೆ ಏರ್ಪಾಡಿನ ಈಗಿನ ಸ್ಥಿತಿ, ಮುಂದೆ ಅದರ ಪ್ರಯೋಜನಾಂಶಗಳು ; ಎರಡನೆಯದಾಗಿ, ಆಹಾರ ದಿನಸಿಗಳ ಧಾರಣೆಗಳು ಇಳಿಯದೆ ಹೆಚ್ಚಾಗಿಯೇ ಇರುವುದಕ್ಕೆ ಕಾರಣಾಂತರಗಳು. ಗವರ್ನ್‌ಮೆಂಟಿನವರು ಈ ಭಾಗದಲ್ಲಿ ಪಡುವ ಅಭಿಪ್ರಾಯವನ್ನೂ ಇದರ ಪರಿಹಾರಕ್ಕಾಗಿ ಮಾಡಬೇಕೆಂದಿರುವ ಏರ್ಪಾಡುಗಳನ್ನೂ ತಿಳಿಯಲಪೇಕ್ಷಿಸುತ್ತೇವೆ. ಯಾಕಂದರೆ ಸದ್ಯದಲ್ಲಿ ಈ ವಿಚಾರವು ಸಂಸ್ಥಾನದಲ್ಲಿ ವಿಶೇಷವಾದ ಚಿಂತೆಯನ್ನುಂಟುಮಾಡಿರುವುದು.

ಬಳದೇಶದ ವೃತ್ತಾಂತಗಳು.

ನವರಾತ್ರಿ ಉತ್ಸವಗಳಿಗಾಗಿ ರಾಜಧಾನಿಗೆ ದಯಮಾಡಿದ್ದ ಯೂರೋಪ್ಯಿಯನ್ ಅತಿಥಿಗಳೆಲ್ಲಾ ಕಳೆದ ಶನಿವಾರ ವಾಪಸು ತಮ್ಮ ತಮ್ಮ ಸ್ಥಳಗಳಿಗೆ ಪ್ರಯಾಣ ಮಾಡಿದರು.

ಫುಟ್‌ಬಾಲ್ ಟ್ರೋಫಿ ಪಂದ್ಯವು ಕಳೆದ ಶನಿವಾರ ಸಾಯಂಕಾಲ ಮುಕ್ತಾಯವಾಗಿ ಪಂದ್ಯದಲ್ಲಿ ಗೆದ್ದ ಮೈಸೂರು ಛಾಂಪಿಯನ್ಸ್ ಎಂಬ ಸಂಘದವರಿಗೆ ಬಹುಮಾನದ ಬಟ್ಟಲು ದೊರಕಿತು.

ಮೈಸೂರು ಸಂಸ್ಥಾನದ ಅಸಿಸ್ಟೆಂಟ್ ರೆಸಿಡೆಂಟರ ಕೆಲಸದ ಛಾರ್ಜನ್ನು ಕಳೆದ ವಾರ ಮೆ|| ಎಸ್. ಬಿ. ಕೋಪ್ಲೆಂಡ್, ಐ. ಸಿ. ಎಸ್. ಯವರು ಮೆ|| ಮೂರ್ ಯವರಿಂದ ವಹಿಸಿಕೊಂಡಿರುತ್ತಾರೆ.

ಆಹಾರ ದಿನಸುಗಳ ಧಾರಣೆ ಜಾಸ್ತಿಯಾಗಿರುವುದನ್ನು ನೋಡಿ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯು ಅಲ್ಪ ಸಂಬಳಗಾರರಿಗೆ ಒಂದು ರೂಪಾಯಿನಂತೆ ಬರವ ಭತ್ಯವನ್ನು ಕೊಡಬೇಕೆಂದು ಸರ್ಕಾರಕ್ಕೆ ಬರೆದಿದಾರೆ.

ಈ ನವರಾತ್ರಿ ಉತ್ಸವಗಳಾದ ತರುವಾಯ ಎರಡನೇ ದಿನದ ದರ್ಬಾರಿನಲ್ಲಿ ಶ್ರೀಮನ್ ಮಹಾರಾಜರವರ ಆಜ್ಞಾನುಸಾರ ಸರ್ದಾರ್ ಗೋಪಾಲರಾಜೆ ಅರಸಿನವರಿಗೂ, ಸರ್ದಾರ್ ಗೋಪಾಲಕೃಷ್ಣೇ ಅರಸಿನವರಿಗೂ ಸರ್ದಾರ್ ಬಸಪ್ಪಾಜಿ ಅರಸಿನವರಿಗೂ ಐವೆಳೆಯ ದಿಂಡಿನ ಹಾರಗಳನ್ನು ಹಾಕಿಸಿದರೆಂದು ಕೇಳುತ್ತೇವೆ.

ಕಳೆದ ಬಾನುವಾರ ಮಧ್ಯಾಹ್ನ ರಾಜಧಾನಿಯ ಸಂಸ್ಕೃತ ಕಾಲೇಜಿನಲ್ಲಿ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಿಗೆ ಸರ್ಕಾರದ ಔತಣ ನಡೆಯಿತು. ದಿವಾನರೇ ಮೊದಲಾದ ಅಧಿಕಾರಿಗಳೂ, ಪ್ರತಿನಿಧಿಗಳೂ, ರಾಜಧಾನಿಯ ಮುಖ್ಯ ದೊಡ್ಡ ಮನುಷ್ಯರೂ ಉದ್ಯೋಗಸ್ಥರೂ ಸೇರಿ ಸುಭೋಜನಮಾಡಿ, ಮನೋಹರವಾದ ಸಂಗೀತವನ್ನು ಕೇಳಿ ಆನಂದಪಟ್ಟರು.

ಕಳೆದ ಗುರುವಾರ ಸಾಯಂಕಾಲ ಇಲ್ಲಿನ [illegible]ನವರ ಹೈಸ್ಕೂಲಿನಲ್ಲಿ ನವರಾತ್ರಿ ಉತ್ಸವಗಳಿಗಾಗಿ ಬಂದಿದ್ದ ರೆಸಿಡೆಂಟರವರ ಪತ್ನಿಯವರೂ ಬೊಂಬಾಯಿ ಗವರ್ನರವರ ಪುತ್ರಿಯವರಾದ ಮಿಸ್ ಕ್ಲಾರ್ಕ್ ರವರೂ ಇತರ ಯೂರೋಪ್ಯಿಯನ್ ಮತ್ತು ದೇಶೀಯ ಸ್ತ್ರೀಯರನ್ನೂ ಒಡಗೂಡಿಕೊಂಡು, ಮಹಾರಾಣೀ ಕಾಲೇಜಿನ ಲೇಡಿ ಸೂಪರಿಂಟೆಂಡೆಂಟ್ ಶ್ರೀ ರುಕ್ಮಿಣಮ್ಮನವರು ಅವರಿಗೆಲ್ಲಾ ಕೆಲವು ವಿನೋದಗಳನ್ನು ಕಲ್ಪಿಸಿ ಸಂತೋಷಪಡಿಸಿದರು.

[illegible] ಗ್ರಾಮದ [illegible] ಹರಪನಹಳ್ಳಿ ಮಂಡಲ ಬ್ರಹ್ಮಶ್ರೀ ಸಿದ್ಧಾಂತಿ ಹೊಳಲು ಶಾಸ್ತ್ರಿಗಳು ಮಾಡಿದ ನೂತನವಾದ ಸೌಮ್ಯ ಸಂವತ್ಸರದ ಪಂಚಾಂಗದ ನೋಟೀಸನ್ನು ನಮ್ಮ ಚಂದಾದಾರರಿಗೆ ಈ ವಾರದ ಪತ್ರಿಕೆಯ ಕೂಡ ಹಂಚಿರುತ್ತೇವೆ. ಈ ಪಂಚಾಂಗದಲ್ಲಿ ಅತಿನೂತನವಾದ ವಿಷಯಗಳನ್ನು ಹಾಕಿರುವುದಲ್ಲದೆ, ಎಲ್ಲರಿಗೂ ಉಪಯೋಗವಾಗಿರುವ ಕಾರಣ ಈ ಪಂಚಾಂಗಗಳನ್ನು ತರಿಸಿಕೊಳ್ಳುವುದರ ಮೂಲಕ ಇವರು ನಡೆಸಿರುವ ಅನಾಥಾಲಯಕ್ಕೆ ಸಹಾಯಮಾಡಿಯಾರೆಂದು ನಿರೀಕ್ಷಿಸುತ್ತೇವೆ.

ಕಳೆದ ಸೋಮವಾರ ರಾಜಧಾನಿಯ ಚಾಮುಂಡಿ ಬೆಟ್ಟದ ಮೇಲೆ ವರ್ಷಗಟ್ಟಳೆಯ ರಥೋತ್ಸವವಾಯಿತು. ಶ್ರೀಮನ್ ಮಹಾರಾಜರವರೇ ಮೊದಲಾದ ರಾಜವರ್ಗದವರೆಲ್ಲಾ ದಯಮಾಡಿದ್ದರು. ಸಾವಿರಾರು ಪ್ರಜೆಗಳು ಜಾತ್ರೆಗೆ ಹೋಗಿದ್ದರು. ಹೊಸದಾಗಿ ಮುನಿಸಿಪಲ್ ಸೂಪರಿಂಟೆಂಡರಾಗಿ ನೇಮಕವಾಗಿರುವ ಮೆ|| ಸುಬ್ರಹ್ಮಣ್ಯ ಅಯ್ಯನವರು ತುಂಬಾ ಸಾಹಸಪಟ್ಟು, ರಥವನ್ನು ಸುಮಾರು ೧೧|| ಗಂಟೆಗೆ ನೆಲೆಗೆ ನಿಲ್ಲುವಂತೆ ಏರ್ಪಾಡು ಮಾಡಿದರು. ಮಳೆ ಮೊದಲಾದ ತೊಂದರೆಯೇನೂ ಇಲ್ಲದೆ ಜನರ ಸಂತೋಷಕ್ಕೆ ತುಂಬಾ ಅನುಕೂಲವಾಗಿತ್ತು.

ಕಳೆದ ಗುರುವಾರ ಇಲ್ಲಿನ ಗವರನ್‌ಮೆಂಟ್ ಬಂಗಲಿಯಲ್ಲಿ ಯೂರೋಪ್ಯಿಯನ್ ಸರ್ದಾರರಿಗೆ ನವರಾತ್ರಿ ಆಟ್ಲೆಯ ಔತಣವು ಜರುಗಿತು. ಸುಮಾರು ೬೦ ಮಂದಿ ಸರ್ದಾರರೂ, ದೊರೆಸಾನಿಗಳೂ ಭೋಜನಕ್ಕೆ ಸೇರಿದ್ದರು. ಭೋಜನಾನಂತರ ಪದ್ಧತಿಯ ಪ್ರಕಾರ ಶ್ರೀಮನ್‌ಮಹಾರಾಜರವರೂ, ಶ್ರೀಮಾನ್ ಯುವರಾಜರವರೂ, ಸರ್ದಾರ್ ಲಕ್ಷ್ಮೀಕಾಂತರಾಜೇ ಅರಸಿನವರೂ, ಸರ್ದಾರ್ ಗೋಪಾಲರಾಜೇ ಅರಸಿನವರೂ, ದಿವಾನ್‌ರವರೂ ಕೌನ್ಸಿಲ್ ಮೆಂಬರುಗಳೂ ಅಲ್ಲಿಗೆ ದಯಮಾಡಿ, ಯೂರೋಪ್ಯಿಯನ್ ಅತಿಥಿಗಳನ್ನು ಸತ್ಕರಿಸಿ ಬಂದರು. ರೆಸಿಡೆಂಟರವರು ಶ್ರೀಮನ್‌ಮಹಾರಾಜರವರ ಕ್ಷೇಮಾಭ್ಯುದಯಗಳನ್ನು ಬಯಸಿ ಕೆಲವು ಸೂಕ್ತಿಗಳನ್ನು ಹೇಳಿದರು.

ಕಳೆದ ಭಾನುವಾರ ಸಾಯಂಕಾಲ ಇಲ್ಲಿನ ಪ್ರದರ್ಶನ ಶಾಲೆಯ ಆವರಣದಲ್ಲಿ ಆಟಪಾಟ ವಿನೋದಗಳನ್ನು ನಡಿಸಿದರು. ಶ್ರೀಮನ್ ಮಹಾರಾಜರವರೂ ದಿವಾನರೇ ಮೊದಲಾದ ಹುದ್ದೇದಾರರೂ ದಯಮಾಡಿದ್ದರು. ಪ್ರದರ್ಶನಶಾಲೆಯ ಕಮಿಟಿಯವರ ರಿಪೋರ್ಟನ್ನು ಮೆ|| ಎ. ರಂಗಸ್ವಾಮ್ಯೆಯಂಗಾರ್‍ರು ಓದಿ, ಶ್ರೀಮನ್ ಮಹಾರಾಜರವರಿಗೆ ಅರಿಕೆ ಮಾಡಿದರು. ಪ್ರದರ್ಶನವು ಈ ವರುಷ ತುಂಬಾ ತೃಪ್ತಿಕರವಾಗಿ ನಡಿಯಿತೆನ್ನುವುದಕ್ಕೆ ಸಂಶಯವಿಲ್ಲ. ಸುಮಾರು ೨೨,೦೦೦ ಜನರ ವರಿಗೂ ಹೋಗಿ ಪ್ರದರ್ಶನವನ್ನು ನೋಡಿರುತ್ತಾರೆಂತಲೂ, ೧೩,೯೧೧ ಪ್ರದರ್ಶನ ವಸ್ತುಗಳು ಕಳುಹಲ್ಪಟ್ಟಿದ್ದವೆಂತಲೂ ಗೊತ್ತಾಗುವುದು. ಶ್ರೀಮನ್ ಮಹಾರಾಜರವರು ಬಹುಮಾನಗಳನ್ನು ಹಂಚಿಕೊಟ್ಟು, ಪ್ರದರ್ಶನದ ಕಮಿಟಿಯವರ ಸಾಹಸವನ್ನು ತುಂಬಾ ಸಂತೋಷದಿಂದ ಮೆಚ್ಚಿಕೊಂಡರು. ಈ ವರುಷದ ಪ್ರದರ್ಶನವು ನೆನ್ನೆಗೆ ಅಖೈರಾಯಿತು.

ಕಳೆದ ವಾರ ಕಡೂರು, ಶಿವಮೊಗ್ಗೆ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಪೋಲೀಸ್ ಸೂಪರೆಂಟರೂ ಸುಮಾರು ೧೫೦ ಮಂದಿ ಪೋಲೀಸಿನವರೂ ಬೇದಿರಸಿನಲ್ಲಿ ತರೀಕೆರೆ ತಾಲ್ಲೂಕು ಶಿವಪುರಕ್ಕೂ ಜೋಡಿಕಟ್ಟೆಗೂ ಒಂದೂವರೆ ಮೈಲಿ ದೂರದಲ್ಲಿರುವ ಕಲ್ಲುದುರ್ಗವೆಂಬ ಸ್ಥಳಕ್ಕೆ ರಾತ್ರಿ ಹೊತ್ತು ಬೆಳದಿಂಗಳಲ್ಲಿ ನುಗ್ಗಿ ೨೮ ಮಂದಿ ಡಕಾಯಿತಿಕೋರರನ್ನು ದಸ್ತಗಿರಿ ಮಾಡಿದರು. ಈಚೆಗೆ ಇನ್ನು ೩ ಜನರು ಸಿಕ್ಕಿ ಬಿದ್ದರು. ಶಿವಮೊಗ್ಗಾ ಡಿಸ್ಟ್ರಿಕ್ಟಿನ ಮಾವಿನಕೆರೆಯಲ್ಲಿ ಪೋಲೀಸಿನವರು ಕೆಲವರನ್ನು ದಸ್ತಗಿರಿ ಮಾಡಿರುತ್ತಾರೆ. ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರೂ ಹಾಜರಾಗಿದ್ದರು. ಆ ಪ್ರಾಂತ್ಯಗಳಲ್ಲಿ ಬಹು ಕಾಲದಿಂದ ನಡಿಯುತ್ತಾ ಬಂದಿರುವ ಕಳ್ಳತನಗಳ ಪೈಕಿ ಬಹು ಭಾಗ ಈ ಕಳ್ಳರಿಂದ ಗೊತ್ತಾದೀತೆಂದು ನಿರೀಕ್ಷಿಸಲ್ಪಟ್ಟಿದೆ. ಆ ರಾತ್ರಿ ಬೆಳದಿಂಗಳಲ್ಲಿ ಕಳ್ಳರನ್ನು ಹಿಡಿಯುವುದಕ್ಕೆ ಹೋಗುತ್ತಿದ್ದ ಪೋಲೀಸಿನವರ ಪೈಕಿ ಶಿವಮೊಗ್ಗಾ ಪೋಲೀಸಿನ ಧಪೇದಾರ ಚಾರಿ ಎಂಬವನು ಹಾವು ಕಡಿದು ಮೃತಪಟ್ಟನೆಂದು ತಿಳಿಯುವುದು.

ನ್ಯಾಯವಿಧಾಯಕ ಸಭೆಗೆ ಮೆಂಬರುಗಳನ್ನು ಚುನಾಯಿಸುವುದು.

ಗವರ್ನ್‌ಮೆಂಟಿನ ಎರಡನೇ ಹುಕುಮು.

ಕಳೆದ ತಾ. ೧೦ನೇ ಶನಿವಾರ ನಾಲ್ಕು ಗಂಟೆಯ ಮೇಲೆ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಗವರನ್‌ಮೆಂಟಿನವರ ಅಪ್ಪಣೆಗನುಸಾರವಾಗಿ ನ್ಯಾಯವಿಧಾಯಕ ಸಭೆಗೆ ಮೆಂಬರುಗಳ ಪೈಕಿ ಇಬ್ಬರನ್ನು ಚುನಾಯಿಸುವ ವಿಷಯದಲ್ಲಿ ಡೆಪ್ಟಿ ಕಮಿಷನರ್ ಮೆ|| ಕಾಂತರಾಜೆ ಅರಸಿನವರು ಕುಳಿತಿದ್ದ ಬಳಿಗೆ ಹೋಗಿ ಚೀಟಿಗಳಲ್ಲಿ ಹೆಸರುಗಳನ್ನು ಬರೆದು ಅವರ ಮುಂದಿದ್ದ ಪೆಟ್ಟಿಗೆಯೊಳಗೆ ಹಾಕಿಬಂದರು. ತರುವಾಯ ಮೆ|| ಕಾಂತರಾಜೆ ಅರಸಿನವರು ಆ ಪೆಟ್ಟಿಗೆಯನ್ನು ದಿವಾನ್‌ರವರ ಬಂಗಲೆಗೆ ತಲುಪಿಸಿದರು. ಪ್ರತಿನಿಧಿಗಳೆಲ್ಲಾ ಯಾರಿಗೆ ಮೆಂಬರ ಕೆಲಸವಾಯಿತೋ ಎಂದು ತಿಳಿಯದೆ ಮೂರು ದಿನಗಳಿಂದ ಕಳವಳಪಡುತ್ತಿದ್ದರು. ನೆನ್ನೆ ಮಂಗಳವಾರ ಸಾಯಂಕಾಲ ಪ್ರತಿನಿಧಿ ಸಭೆಯಲ್ಲಿ ಗವರ್ನಮೆಂಟ್ ಸೆಕ್ರೇಟರಿಯವರು ಕೆಳಗೆ ನಮೂದಾಗುವ ಅಭಿಪ್ರಾಯವುಳ್ಳ ಹುಕುಮನ್ನು ಸಭೆಯಲ್ಲಿ ಮೆಂಬರುಗಳಿಗೆ ಓದಿ ಹೇಳಿದರು. ಏನೆಂದರೆ—

ನ್ಯಾಯವಿಧಾಯಕ ಸಭೆಗೆ ಇಬ್ಬರು ಮೆಂಬರುಗಳನ್ನು ತಾ ೧೦ ರಲ್ಲಿ ಪ್ರತಿನಿಧಿಗಳು ಚುನಾವಣೆ ಮಾಡಿದರು. ಅವರು ಓಟುಗಳನ್ನು ಕೊಟ್ಟಿರುವ ಪ್ರಕಾರ ಪೂರ್ವ ಡಿವಿಜನಿಗೆ ಮೆ|| ಡಿ. ವೆಂಕಟರಾಮಯ್ಯನವರೂ, ಪಶ್ಚಿಮ ಡಿವಿಜನಿಗೆ ಮೆ|| ಎಂ. ವೆಂಕಟಕೃಷ್ಣಯ್ಯನವರೂ ಹೆಚ್ಚು ಸಮ್ಮತಿಗಳನ್ನು ಪಡೆದಿರುತ್ತಾರೆಂದು ಗೊತ್ತಾಯಿತು. ಆದರೆ ಈ ಪ್ರಕಾರ ಚುನಾಯಿಸಲ್ಪಟ್ಟಿರುವ ಈ ಇಬ್ಬರು ಮೆಂಬರುಗಳನ್ನು ಗವರನ್‌ಮೆಂಟಿನವರು ಒಪ್ಪಿಕೊಳ್ಳಲಾರರೆಂದು ತಿಳಿಸಲು ವಿಷಾದಪಡುತ್ತಾರೆ. ಚುನಾವಣೆಯ ರೂಲ್ಸು ಪ್ರಕಾರ ಪ್ರತಿನಿಧಿಗಳು ಬೇರೇ ಇಬ್ಬರು ಮೆಂಬರುಗಳನ್ನು ಚುನಾಯಿಸಿ ಗವರನ್‌ಮೆಂಟಿಗೆ ತಿಳಿಸಬೇಕಾಗಿದೆ. ಇದಕ್ಕಾಗಿ ತಾ. ೧೬ನೇ ಶುಕ್ರವಾರ ಸಾಯಂಕಾಲ ೪ ಗಂಟೆಗೆ ಮೈಸೂರು ಪಬ್ಲಿಕ್ ಆಫೀಸ್ ಕಟ್ಟಡದ ದರ್ಬಾರ್ ಹಾಲ್‌ನಲ್ಲಿ ಪ್ರತಿನಿಧಿಗಳ ಸಭೆ ಕೂಡಿಸಲ್ಪಡುವುದು. ಆಗ್ಗೆ ಮೈಸೂರು ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರವರು ಆ ಸಭೆಯಲ್ಲಿ ಹಾಜರಾಗಿದ್ದು, ಪ್ರತಿನಿಧಿಗಳ ಓಟುಗಳನ್ನು ರಿಕಾರ್ಡುಮಾಡಿ, ಚುನಾಯಿಸಲ್ಪಟ್ಟ ಮೆಂಬರುಗಳ ಹೆಸರನ್ನು ಗವರನ್‌ಮೆಂಟಿಗೆ ರಿಪೋರ್ಟು ಮಾಡಬೇಕಾಗಿ ಕೋರಲ್ಪಟ್ಟಿದೆ.

ಲೆಜಿಸ್ಲೆಟಿವ್ ಕೌನ್ಸಿಲ್‌ಗೆ ಮೆಂಬರಾಗಿ ಚುನಾಯಿಸಲ್ಪಡಬೇಕೆಂದು ಅಪೇಕ್ಷಿಸತಕ್ಕ ಪ್ರತಿನಿಧಿಗಳು ತಾ. ೧೫ನೇ ಸೋಮವಾರ ಸಾಯಂಕಾಲದೊಳಗೆ ತಮ್ಮ ಹೆಸರನ್ನು ಗವರನ್‌ಮೆಂಟ್ ಸೆಕ್ರೆಟರಿಯವರಿಗೆ ತಿಳಿಯಪಡಿಸಬೇಕೆಂದು ಅಪ್ಪಣೆ ಕೊಡಿಸಿರುತ್ತಾರೆ.

ಶಿವಪಂಚಸ್ತವವು.

79-3

(ಪ್ರತಿಗಳು ೩೦೦)

ಶಿವಭಕ್ತ ಸಂಪನ್ನರಿಗೆಲ್ಲರಿಗೂ ಬೇಕಾದುದು.

ಶ್ರೀ ಮಾಧರಸ ವಂಶೋದ್ಭವರಾದ ವಿದ್ವಾರಾಧ್ಯರಿಂದ ರಚಿತವಾದ ಸಂಸ್ಕೃತದ ವ್ಯಾಖ್ಯಾನದೊಡನೆ ಕೂಡಿದ ವಲ್ಲಭ, ಮಹಿಮ್ನ, ಮಾಲಯರಾಜ, ಅನಾಮಯ, ಶೂಲಾಯುಧವೆಂದು ಪ್ರಖ್ಯಾತವಾದ ಪಂಚ ಸ್ತೋತ್ರಗಳು ಹೊಸದಾಗಿ ಬರೆದ ಕನ್ನಡ ಟಿಪ್ಪಣಿಯಿಂದ ಕೂಡಿ, ಸುಂದರವಾದ ಕನ್ನಡದ ಅಕ್ಷರಗಳಿಂದ ಉತ್ತಮವಾದ ಕಾಗದದಲ್ಲಿ ಅಚ್ಚು ಮಾಡಿಸಲ್ಪಟ್ಟಿದೆ.

ಕ್ರಯ. ಪುಸ್ತಕ ೧ಕ್ಕೆ ವಿ. ಪಿ. ಮೂಲಕ ರೂ. ೧—೪—೦

೧೨ ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಪ್ರತಿಯು ಉಚಿತವಾಗಿ ಕೊಡಲ್ಪಡುವುದು.

ವಿಳಾಸ:—ಬಸವಲಿಂಗಸ್ವಾಮಿಗಳು, ಹೊಸಮಠ, ಮೈಸೂರು.

ಪ್ರತಿಯೊಬ್ಬ ವೀರಶೈವ ಮತಸ್ಥರಿಗೆ ಅವಶ್ಯಕವಾದದ್ದು.

ಚೆನ್ನಬಸವೇಶ ವಿಜಯ, ಕನ್ನಡ ವಚನ ರೂಪವಾದದ್ದು, ಅನೇಕ ಶರಣರ ಕಥೆಗಳು ಇರುತ್ತವೆ ಕ್ರಯ ೧—೪—೦. ಈ ಪುಸ್ತಕವನ್ನು ತರಿಸಿಕೊಳ್ಳುವವರಿಗೆ ಕೆಳಗಿನ ಫೋಟೋಗಳನ್ನು ಬಹುಮಾನವಾಗಿ ಕಳುಹಿಸುತ್ತೇವೆ

ಶ್ರೀಅಲ್ಲಮ ಪ್ರಭುದೇವರು ಬಸವಾದಿ ಪ್ರಮಥರುಗಳೊಡನೆ ಇರತಕ್ಕ ಫೋಟೋ ೧ಕ್ಕೆ . . . . . ೦—೨—೦

ಶ್ರೀ ಚಿತ್ರದುರ್ಗ ಸಂಸ್ಥಾನದ ಈಗಿನ ಶ್ರೀಮಜ್ಜಗದ್ಗುರುಗಳ ಫೋಟೋ ೧ಕ್ಕೆ . . . ೦—೨—೦

ಡಿಟ್ಟೋ ಸ್ವಾಮಿಗಳ ಫೋಟೋ ನಂ ೨ ಸೈಜ್ ೦—೧—೦

ಒಟ್ಟಾಗಿ ತರಿಸಿಕೊಂಡರೆ ೪ಕ್ಕೆ ೧, ೨೦ಕ್ಕೆ ೨, ೫೦ಕ್ಕೆ ೩, ೧೦೦ಕ್ಕೆ ೨೦ ರಂತೆ ಕಮೀಷನ್ ದೊರೆಯುತ್ತೆ. ೧೦ × ೧೨ರ ಸೈಜಿನ ಅಸಲ್ ಫೋಟೋ ೧ಕ್ಕೆ . . . ೦—೮—೦

ವಿಳಾಸ.—ಡಿ. ಪಿ ಪುಟ್ಟಣ್ಣ, ಫ್ಯಾನ್ಸಿ ಬಜಾರ್, ಕೋಟೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

18-21

ತಲೆನೋವು, ವಾಯುನೋವು, ಸೆಳತ, ಗಂಟು ನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನು ನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದ ಕೂಡಲೆ ಮಂತ್ರಿಸಿದಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದು ಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು. ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಮಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜ್ ಮಾಫಿಯಾಗುತ್ತದೆ. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೪೩, ವೇದಮಲಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಬಹುಮಾನ! 100 ರೂಪಾಯಿ ಬಹುಮಾನ!!

ಸುಲಭ ಕಿಮ್ಮತು.  ಸುಲಭ ಕಿಮ್ಮತು.

ಇಮಿಟೇಷನ್ ಸೀಮೆಕಮಲದ ಓಲೆ.

ಈ ಇಮಿಟೇಷನ್ ಸೀಮೆಕಮಲದ ಓಲೆ ಅತ್ತಿಗಳು ಮತ್ತು ಮೂಗುಬಟ್ಟುಗಳು ಹೊಸದಾಗಿ ವಿಲಾಯಿತಿಯಿಂದ ಈಗ ತಾನೆ ನಾವು ತರಿಸಿರುತ್ತೇವೆ. ಈ ನಗಗಳು ನಿಜವಾದ ಸೀಮೆಕಮಲಕ್ಕೆ ಹೋಲುತ್ತವೆ. ಇವನ್ನು ನೋಡುವವರು ಸೀಮೆಕಮಲದ ಓಲೆಯೆಂತ ಹೇಳುವರೆ ಹೊರತು ಬೇರಲ್ಲವು. ಇದನ್ನು ಅನೇಕ ಪ್ರಭುಗಳು ಉಪಯೋಗಿಸುತ್ತಿರುವರು. ಈ ಕಲ್ಲುಗಳು ಸೂರ್ಯ ಪ್ರಕಾಶಕ್ಕೆ ಒಳ್ಳೆ ಕಾಂತಿಯು ಮತ್ತು ನೀರಿನಲ್ಲಿ ಅತಿ ಜಲುವಾಗಿ ಹೊಳೆಯುವುದು. ಇದನ್ನು ಸೋಲ್ಡರಿನ್ ಬಂಗಾರಕ್ಕೆ ಸರಿಯಾಗಿಯೂ ಎಂದಿಗೂ ಕಪ್ಪಾಗದಂತೆ ಕನ್ನಡಿಯನ್ ಗೋಲ್ಡಿನಿಂದ ಅತಿ ಸುಂದರವಾದ ಕಟ್ಟುಗಳು ಕಟ್ಟಿರುತ್ತದೆ. ಇದು ಯಾವಾಗಲೂ ಕಪ್ಪಾಗದೆಂದು ಹೇಳುವದಲ್ಲದೆ ಅಚ್ಚ ಬಂಗಾರದಂತೆ ತಳತಳಿಸುವದೆಂದು ನಾವು ಖಂಡಿತ ಹೇಳುತ್ತೇವೆ. ಈ ನಗಗಳನ್ನು ಒಪ್ಪದು ತೆಗದುಕೊಂಡಲ್ಲಿ ನೋಡುವವರು ತೆಗೆಯದೆ ಇರಲಾರರು. ಒಳ್ಳೆ ಅಪುರೂಪವಾದದ್ದು. ಈ ಸಮಯ ಬಿಟ್ಟಲ್ಲಿ ಬೇರೆ ಸಮಯ ಎಂದಿಗೂ ಸಿಗಲಾರದು. ಇದನ್ನು ತೆಗದುಕೊಂಡವರು ಇಷ್ಟವಿಲ್ಲದಪಕ್ಷಕ್ಕೆ ಅವರ ಹಣವು ವಾಪಸು ಕಳುಹಿಸಿಕೊಡಲಾಗುವುದು.

ಇವರ ಬೆಲೆ ಬಹಳ ಕಡಿಮೆ ಆದುದರಿಂದ ತ್ವರಿತ ಆರ್ಡರ್ ಕೊಡುವವರಿಗೆ ಸಿಗುವದೆ ಹೊರತು ಅನ್ಯರಿಗೆ ಸಿಗಲಾರದು

ಓಲೆ ಜತೆ ೧ಕ್ಕೆ 5—0—0

ಅತ್ತಿಕಡುಕು ಜತೆ ೧ಕ್ಕೆ —0—0

ಮೂಗುಬಟ್ಟು ೧ಕ್ಕೆ 1—0—0

ವಿ. ಪಿ. ಖರ್ಚು ಬೇರೆ ಕೊಡಬೇಕು

ನಮ್ಮಲ್ಲಿ ಇಮಿಟೇಷನ್ ಸೀಮೆಕಮಲದ ನಗಗಳು ಪ್ರಕಟಿಸಿ ಮೇರೆಗೆ ಇಲ್ಲವೆಂದು ಹೇಳುವವರಿಗೆ ಮೇಲೆ ಹೇಳಿದಂತೆ ರೂ 100 ಬಹುಮಾನ ಕೊಡಲಾಗುವುದು

ವಿಳಾಸ:—ಗುರು ಬಸವ ಅಂಡ್ ಕಂಪೆನಿ, ಮದರಾಸು

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

1-42



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಅಮಶಂಕೆ, ವಾಂತಿಭೇದಿ ಉಬ್ಬರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಸಂಪೂರ್ಣಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿನ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯನ್ನೂ ಕೂಡ ಮೂರೇ ಹೊತ್ತಿಗೆ ಈ ಔಷಧದಿಂದ ನಿರ್ಮೂಲವಮಾಡಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಮನೆ ಬಿಕರಿಗೆ ಸಿದ್ಧವಾಗಿದೆ.

32-2

ಮೈಸೂರು ಶಿವರಾಂಪೇಟೆ ಇರ್ವಿನ್ ರಸ್ತೆಯಲ್ಲಿ ೨೫೩ ಅಂಕಣಗಳ ಅಂಚೆ ಗುಮಾಸ್ತೆ ಕೃಷ್ಣಪ್ಪನವರಿದ್ದ ದೊಡ್ಡ ಮನೆ ಬೇಕಾದವರು—ಪೋಲೀಸ್ ಟೆಂಪಲ್ ಬಿ ಶ್ರೀಕಂಠಯ್ಯನವರಿಗೆ ಬರೆದು ಕ್ರಯ ಮುಂತಾದ್ದನ್ನು ತಿಳಿಯಬಹುದು

ವಾತಹರಿ.

61-2

ಒಂದು ಡಬ್ಬಿ ಕಿಮ್ಮತ್ತು ೧೨ ಆಣೆ—ವಿ ಪಿ ಛಾರ್ಜ್ ಬೇರೆ

ಈ ತೈಲವು ತಲೆಶೂಲೆ, ಅಂತರಿ ನೋವು, ವಾಯುವಿನಿಂದ ಕೈಕಾಲು ನೋವು, ಚಳಿ, ಶೀತ, ಜ್ವರ, ಪಾಶ್ವವಾಯು ಎದೆನೋವು, ಗಸ್ತ್ರಗಳಿಂದ ಉಂಟಾದ ಘಾಯ, ಮಿಡ್ಜೆ, ತುರಿ, ಕಾರ ಪಾಣ, ಮೇಹಫಟೆ, ನರ ನೋವುಗಳ ದರ್ದು, ಕೀಲುವಾಯು, ಕಲ್ಲುನೋವು, ಮಡವೆ, ಉಷ್ಣಕಾಲ ಬೆಂಕಿಯಿಂದ ಸುಡಲ್ಪಟ್ಟದ್ದರೂ, ಭಗಂದರ, ಇತ್ಯಾದಿ ಅನೇಕ ವ್ಯಾಧಿಗಳಿಗೆ "ವಾತಹರಿ" ಅಂದರೆ



ತಕ್ಷಣ ಪರಿಹಾರ

ಸಂಪೂರ್ಣವಾಗಿ ಕ್ಷಣಮಾತ್ರದಲ್ಲಿ ನಾಶಮಾಡುವದು. ಮೂಲವ್ಯಾಧಿಗೂ ಸತ್ಯವಾಗಿದೆ. ಈ ರೋಗಗಳಿಗೆಲ್ಲಾ ಈ ಔಷಧಿಯು ಎಷ್ಟರಮಟ್ಟಿಗೆ ಸತ್ಯವೋ ಅಷ್ಟು ಇನ್ಯಾವ ಔಷಧವಾದರೂ ಇಲ್ಲ. ಇದನ್ನು ನೋವಿರುವ ಸ್ಥಳಕ್ಕೆ ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗ ಮುಖವು ತೊಲಗಿ ಸುಖ ಸಂತೋಷಗಳುಂಟಾಗುತ್ತೆ. ಬಾಧೆಯನ್ನು ಅನುಭವಿಸುವವರು ಕೂಡಲೇ ಬರೆದು ತರಿಸಿಕೊಳ್ಳಿ. ತರಿಸಿದವರೆಲ್ಲಾ ಎಂದು ಎಂದಿಗೂ ವ್ಯಸನಪಡುವುದಿಲ್ಲ. ೬ ಡಬ್ಬಿಗಳನ್ನು ಒಟ್ಟಿಗೆ ತರಿಸಿಕೊಳ್ಳುವರಿಗೆ ಪೋಸ್ಟೇಜು ಮಾಫಿ ಕಳುಹಿಸುತ್ತೇವೆ. ಔಷಧಗಳ ಕ್ಯಾಟಲಾಗನ್ನು ಅಪೇಕ್ಷಿಸುವವರು ೩ ಸ್ಟಾಂಪಿನ ಟಿಕೇಟು ಇಟ್ಟು ಬರೆದುಕೊಳ್ಳತಕ್ಕದ್ದು

ವಿಳಾಸ—ಎಂ ಗೋವಿಂದಶೆಟ್ಟಿ ಮೆಡಿಕಲ್ ಪ್ರಾಕ್ಟೀಷನರ್, ದೇವನಹಳ್ಳಿ.

ಮಕ್ಕಳ ಹಿತಕಾರಿ

ಎಂದು

SCOTT'S EMULSION

33-29

(ಸ್ಕಾಟ್ಸ್ ಇಮಲ್ಷನ್)

ಎಂಟೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ. ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳಸಿರುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು; ಆರೋಗ್ಯವಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುತ್ತದೆ

ಈ ವಿಶಾಸಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

"ಮುಫತ್ತು."

84-1

ನಮ್ಮ ಅಂಗಡಿಯ ಸಾಮಗ್ರಿಗಳ ಮುಂದೆ ಮತ್ಯಾವ ವಿಧವಾದ ಜಲವಾಳಿಸು ಪ್ರಯೋಜನವಿಲ್ಲವೆಂಬುದನ್ನು ಸರ್ವರಿಗೂ ತಿಳಿಯಲೆಂದು ನಮ್ಮ ಒಂದು ಸೀಸೆ ಎಣ್ಣೆಯ ಸಾರಕ್ಕೆ ಆರ್ಡರು ಕೊಡುವವರಿಗೆ

ಬಹಳ ಅಂದವಾದ ಮತ್ತು ಬೆಲೆಯುಳ್ಳ ೧೯೦೯ ನೇ ಇಸವಿ ಕ್ಯಾಲೆಂಡರನ್ನು ಮುಫತ್ತಾಗಿ ಕೊಡುತ್ತೇವೆ—ಸೀಸೆ ೧ಕ್ಕೆ ರೂ ೧—೮—೦ ಟಪಾಲ್ ಹಾಸಲ್ ಬೇರೆ ಅಲ್ಲದೆ ನಮ್ಮ ಎಣ್ಣೆಯ ಸಾರವನ್ನು ಉಪಯೋಗಿಸಿ ಅದರ ಗುಣಾತಿಶಯವನ್ನು ಬರೆಯುವವರ ಲೇಖನಗಳ ಪೈಕಿ ನಮ್ಮ ಮನಸ್ಸಿಗೆ ತೃಪ್ತಿಕರವಾದ್ದಕ್ಕೆ ೫ ರೂ ಬೆಳೆತಕ್ಕ ಪದಾರ್ಥವನ್ನು ಇನಾಮಾಗಿ ಕೊಡುವೆವು. ಆಗಿಂದಾಗ್ಯೆ ನಮ್ಮಲ್ಲಿ ಆಗುವ ಪ್ರಕಟನೆಗಳನ್ನು ಅಪೇಕ್ಷಿಸುವವರು ಈ ನಮ್ಮ ಪ್ರಕಟನೆಯನ್ನು ಕತ್ತರಿಸಿ, ಅರ್ಧ ಆಣೆ ಲೇಬಿಲ್ ಸಮೇತ ನಿಮ್ಮ ಹೆಸರು ವಿಳಾಸದೊಡನೆ ಕೆಳಗಿನ ಅಡ್ರೆಸ್ಸಿಗೆ ರವಾನಿಸಿರಿ —ದಿ ಸ್ಟಾರ್ ಟ್ರೇಡಿಂಗ್ ಅಸೋಸಿಯೇಷನ್ ಶ್ರೀಮನ್ಮಹಾರಾಜರವರಿಗೆ ಅಪರೂಪವಾದ ಎಣ್ಣೆಯ ಸಾರಗಳನ್ನು ಸರಬರಾಯಿ ಮಾಡತಕ್ಕವರು, ಬೆಂಗಳೂರು ಸಿಟಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-42

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಒಡ್ಡಾಗಿ ನಾವೇ ಎಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ನಮೂನೆಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಕಸೂತಿ ಬೀಳುವ ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಕಾವಿ, ಕೆಂಪು, ಕಪ್ಪು, ಬಿಳಿ ಕಾಫಿ ಟೋಪಿಗಳು ೧ ರೂ ೮ ಆ; ೨ ರೂ. ೬ ಆ, ೧ ರೂ ೪ ಆ.

ರೇಶ್ಮೆ ಜರತಾರಿ ಟೋಪಿಗಳು ೧ ರೂ. ೮ ಆ, ೨ ರೂ. ದಾರದ ಟೋಪಿಗಳು ೧ ರೂ ೧೨ ಆ, ೧ ರೂ. ೮ ಆ.; ೧ ರೂ ೬ ಆ ಉಣ್ಣೆಯ ಟೋಪಿಗಳು ೧ ರೂ ೮ ಆ., ೧ ರೂ ೬ ಆ

ಕೂಸುಗಳ ಟೋಪಿ, ಸೂಟ್ ಕೋಟು, ಅರ್ಧ ಕೋಟು ಕತ್ತಿನ ಪಟ್ಟಿ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು.

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ವೃತ್ತಾಂತ ಪತ್ರಿಕೆ.

— o —

೧೯೦೮ ನೇ ಇಸವಿ ಅಕ್ಟೋಬರ್ ತಾ ೧೫ ನೇ ಗುರುವಾರ

ದಿವಾನ್‌ರವರ ಉಪನ್ಯಾಸವು.

ಕಳೆದ ಗುರುವಾರ ಮಧ್ಯಾಹ್ನ ದಿವಾನ್‌ರವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಓದಿ ತಿಳಿಸಿದ ವಾರ್ಷಿಕ ರಿಪೋರ್ಟಿನ ಕೆಲವು ಭಾಗಗಳನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಗತವರುಷದಲ್ಲಿ ಎಲ್ಲಾ ಭಾಗಗಳೂ ತುಂಬಾ ತೃಪ್ತಿಕರವಾಗಿ ಅಭಿವೃದ್ಧಿಗೆ ಬಂದಿರುತ್ತವೆಂದು ಈ ರಿಪೋರ್ಟನ್ನು ಓದಿದವರಿಗೆ ಪರಿಷ್ಕಾರವಾಗಿ ತಿಳಿಯುವುದು. ಹಿಂದಿನ ಕೆಲವು ವರುಷಗಳ ರಿಪೋರ್ಟಿಗಿಂತಲೂ ಇದು ತುಂಬಾ ಸಂತೋಷವನ್ನುಂಟುಮಾಡತಕ್ಕದಾಗಿದೆ ಎನ್ನುವುದಕ್ಕೆ ಸಂಶಯವಿಲ್ಲ. ಕಳೆದ ವರುಷ ನಡಿಸಲ್ಪಟ್ಟ ಕಾರುಕರ್ದಿಗಳನ್ನು ನೋಡಿ ದಿವಾನ್‌ರವರ ವಿಷಯದಲ್ಲೂ, ಗವರ್ನ್‌ಮೆಂಟ್ ಅಧಿಕಾರಿಗಳ ವಿಷಯದಲ್ಲೂ ನಾವು ಸಂತೋಷವುಳ್ಳವರಾಗಿದ್ದೇವೆ. ವಾಚಕರು ಆ ರಿಪೋರ್ಟನ್ನು ಸಾವಧಾನದಿಂದ ಓದಿನೋಡಿದಲ್ಲಿ ಈ ಸಂಸ್ಥಾನದ ಶ್ರೇಯಸ್ಸಿಗೂ ಪ್ರಜೆಗಳ ಕ್ಷೇಮಾಭ್ಯುದಯಗಳಿಗೂ ಸಂಬಂಧಪಡುವಂಥಾ ಅನೇಕ ವಿಷಯಗಳು ಗೋಚರಕ್ಕೆ ಬರುತ್ತವೆ.

ಸದ್ಯ ನಾವು ಒಂದೆರಡು ವಿಷಯಗಳನ್ನು ಮಾತ್ರ ಕುರಿತು ಪ್ರಸ್ತಾಪಮಾಡುವೆವು. ಸ್ವಾಭಾವಿಕವಾಗಿ ದಿವಾನ್‌ರವರ ರಿಪೋರ್ಟಿನಲ್ಲಿ ವಿಶೇಷಭಾಗವು, ಇತರ ವಿಚಾರಗಳಿಗಿಂತಲೂ ಸಂಸ್ಥಾನದ ಹಣಕಾಸಿನ ಲೆಕ್ಕಾಚಾರಕ್ಕೆ ವಿನಿಯೋಗಿಸಲಾಗಿದೆ. ಆದಾಯವು ಹೆಚ್ಚಾಯಿತೆಂತಲೂ, ಖರ್ಚು ಕಡಮೆಯಾಯಿತೆಂತಲೂ, ಖರ್ಚು ಕಳೆದು ಹದಿನಾರು ಲಕ್ಷ ರೂಪಾಯಿ ಆದಾಯವಾಗಿದೆಯೆಂತಲೂ, ಈ ಸಂಸ್ಥಾನದ ಠೇವಣಿ ಹಣವು ೭೪ ಲಕ್ಷದಿಂದ ೯೧ ಲಕ್ಷಕ್ಕೆ ಹೆಚ್ಚಿರುವುದೆಂತಲೂ ತಿಳಿಯಬಹುದಾಗುವುದು. ಹಣದ ಠೇವಣಿ ವಿಚಾರದಲ್ಲಿ ಪ್ರಪಂಚದ ಇನ್ಯಾವ ಗವರ್ನ್‌ಮೆಂಟೂ ಮೈಸೂರಿಗಿಂತ ತೃಪ್ತಿಕರವಾದ ಸ್ಥಿತಿಯಲ್ಲಿರುವುದಿಲ್ಲವೆಂದು ಹೇಳಬಹುದಾಗಿದೆ. ಮೈಸೂರು ಗವರ್ನ್‌ಮೆಂಟು ಮಾಡಿರುವ ಸಾಲವು ಸ್ವಲ್ಪವಾಗಿದೆ. ವಿಶೇಷ ವರಮಾನಗಳನ್ನು ಕೊಡುವಂಥಾ ಶಿವಸಮುದ್ರದ ಕಾರ್ಖಾನೆ, ರೈಲ್ವೆ, ಕೆರೆ ಕಾಲುವೆಗಳು, ಇವುಗಳೆಲ್ಲಾ ಗವರ್ನ್‌ಮೆಂಟಿನ ಭಾರಿ ಆಸ್ತಿಗಳಾಗಿರುತ್ತವೆ. ಇಂಥಾ ಸ್ಥಿತಿಗೆ ಸೈನ್ಯದ ಬಾಬಿನ ಭಾರೀ ಖರ್ಚು ಮೈಸೂರು ಗವರ್ನ್‌ಮೆಂಟಿನವರಿಗೆ ಇಲ್ಲದಿರುವುದೇ ಒಂದು ಕಾರಣವೆಂದು ಹೇಳಬಹುದು. ಇಂಡಿಯಾ ಗವರ್ನ್‌ಮೆಂಟಿಗೂ ಯೂರೋಪಿನ ರಾಜ್ಯಗಳಿಗೂ ಸೈನ್ಯದ ಖರ್ಚೇ ಭಾರವಾಗುತ್ತಿದೆ.

ಮೈಸೂರು ಗವರ್ನ್‌ಮೆಂಟಿನವರು ಪ್ರಜೋಪಕಾರಕಗಳಾದ ಭಾರೀ ಕಾಮಗಾರಿಗಳಿಗೆ ಹಣ ಖರ್ಚುಮಾಡುವ ವಿಷಯದಲ್ಲಿ ಸದ್ಯ ತುಂಬಾ ಜಾಗರೂಕರಾಗಿರುವಂತೆ ಕಾಣುವುದು. ಈಗಿನ ಕಾಲದಲ್ಲಿ ಯಾವ ಗವರ್ನ್‌ಮೆಂಟಿನವರಾಗಲಿ ಹಣವನ್ನು ಖಜಾನೆಗಳಲ್ಲಿ ತುಂಬಿಸಿಟ್ಟುಕೊಳ್ಳುವುದು ಸರಿಯಲ್ಲ. ಅಂಥಾ ಹಣವನ್ನು ಪ್ರಜೆಗಳ ಕ್ಷೇಮಚಿಂತನೆಗೂ ದೇಶಾಭ್ಯುದಯಕ್ಕೂ ವಿನಿಯೋಗಪಡಿಸಲು ಹೊಸ ಮಾರ್ಗಗಳನ್ನು ಹುಡುಕಬೇಕಾದದ್ದೇ ಧರ್ಮವು. ಸರ್ಕಾರಕ್ಕೂ ಪ್ರಜೆಗಳಿಗೂ ಪ್ರಯೋಜನಕರವಾದಂಥಾ ಭಾರೀ ನೀರಾವರಿ ಕಾಮಗಾರಿ, ರೈಲು ರಸ್ತೆಯ ಬಡಾವಣೆ, ಕೈಗಾರಿಕೆ ಮೊದಲಾದವುಗಳನ್ನು ಏರ್ಪಾಡು ಮಾಡುವುದಕ್ಕೆ ಗವರ್ನ್‌ಮೆಂಟಿನವರು ಪ್ರಯತ್ನಪಡಬೇಕು. ಇಂಡಿಯಾ ಗವರ್ನ್‌ಮೆಂಟಿಗೂ ಮೈಸೂರು ಸಂಸ್ಥಾನಕ್ಕೂ ಬಹಳ ವ್ಯತ್ಯಾಸವುಂಟು ಹ್ಯಾಗೆಂದರೆ, ಇಂಡಿಯಾ ಗವರ್ನ್‌ಮೆಂಟಿನವರು ಅನೇಕ ಹೊಸ ಕೆಲಸಗಳನ್ನು ಪ್ರಾರಂಭಿಸಿರುವರು. ಅದಕ್ಕೆಲ್ಲಾ ಅವರಿಗೆ ಹಿಂದುಸ್ಥಾನದಲ್ಲಿ ಮೂಲಧನ ಸಿಕ್ಕುವುದಿಲ್ಲ. ಆದ್ದರಿಂದ ಅವರು ವಿಲಾಯತಿಯಿಂದ ಸಾಲಮಾಡಿ ತರಬೇಕಾಗಿದೆ. ಮೈಸೂರು ಗವರ್ನ್‌ಮೆಂಟಿನವರಾದರೋ ತಮ್ಮ ಪ್ರಜೆಗಳು ಕೂಡಿಸಿಕೊಡತಕ್ಕಂಥಾ ಹಣವನ್ನು ಪ್ರಯೋಜನಕರವಾದ ರೀತಿಯಲ್ಲಿ ವಿನಿಯೋಗಿಸಬಾರದು ಕದಾವೆ. ಇಂಗ್ಲೀಷ್ ಬ್ಯಾಂಕಿನ ಡಿಪಾಜಿಟ್ ಹಣವು ಬಹಳವಾಗಿ ಹೆಚ್ಚಿದ್ದು ಅದನ್ನು ಕಡಮೆಮಾಡುವುದಕ್ಕೆ ಸರ್ಕಾರದವರು ಯೋಚಿಸುವಾಗಿ ಬಾಳಿಗ ತಿಳಿದಿರುವುದು ವಾಚಕರಿಗೆ ತಿಳಿದೇ ಇದೆ. ಈ ಮಾತು ಹೇಳಿದ್ದರಿಂದ ನಾವು ಈ ವಿಷಯದಲ್ಲಿ ಗವರ್ನ್‌ಮೆಂಟಿನವರ ಕಾರ್ಯವನ್ನು ಆಕ್ಷೇಪಣೆಮಾಡುತ್ತೇವೆಂದು ಯಾರೂ ಭಾವಿಸಬಾರದು. ಹಾಗೆ ಕಡಮೆಮಾಡುವುದಕ್ಕೆ ಅವರಿಗೆ ಅನೇಕ ನ್ಯಾಯವಾದ ಕಾರಣಗಳೂ ಇದ್ದಾವು. ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣವನ್ನು ಹೆಚ್ಚಾಗಿ ಇಟ್ಟುಕೊಳ್ಳುವುದೂ, ಸ್ವಲ್ಪಕಾಲದಲ್ಲೇ ಅನೇಕರು ಹಣ ಬೇಕೆಂದು ಕೇಳುವಾಗ್ಗೆ ಕೊಡುವುದು ತೊಂದರೆಯಾಗುವುದೂ ಉಚಿತವಲ್ಲ. ಆದರೆ ಈ ಬಾಬಿನ ಹಣವನ್ನು ಕಡಮೆಮಾಡಲು ಸರ್ಕಾರದವರು ಕೇವಲ ರೂಪಾಯಿಮಾಡಬೇಕಾಯಿತೆಂಬುವುದನ್ನು ನೋಡಿದರೆ ಇಲ್ಲಿನ ಪ್ರಜೆಗಳ ಹತ್ತಿರ ಹಣವಿದೆಯೆಂದೂ ಗವರ್ನ್‌ಮೆಂಟಿನವರು ಆ ಹಣವನ್ನು ಉಪಕಾರಿಗಳಾದ ರೀತಿಗಳಲ್ಲಿ ವಿನಿಯೋಗಿಸಲು ಇನ್ನು ಮಾರ್ಗ ಕಂಡುಹಿಡಿಯಲಿಲ್ಲವೆಂದೂ ಗೊತ್ತಾಗುತ್ತದೆ.

ರೈಲ್ವೆ ಕಾಮಗಾರಿಗಳನ್ನು ಈ ಸಂಸ್ಥಾನದಲ್ಲಿ ನಿಲ್ಲಿಸಿಬಿಟ್ಟು ಬಹಳ ಕಾಲವಾಯಿತು. ರೈಲ್ವೆ ಬಡಾವಣೆಯು ಆಗುವುದಿಲ್ಲ. ಬೀಗೊಳದಲ್ಲಿ ಭಾರೀ ತಲಾವನ್ನು ನಿರ್ಮಾಣಮಾಡಬೇಕೆಂಬುವುದೊಂದೇ ದೊಡ್ಡ ನೀರಾವರಿ ಕಾಮಗಾರಿಯು. ಇದನ್ನು ಪರ್ಯಾಲೋಚಿಸಬೇಕೆಂದು ಹೇಳಿ ಮುಸ್ತಾಮಾಡಿದ್ದಾರೆ. ಗವರ್ನ್‌ಮೆಂಟಿನವರು ಸುಮ್ಮನಾದದ್ದು ತಪ್ಪೆಂದು ನಾವು ಅಭಿಪ್ರಾಯಪಡುವುದಿಲ್ಲ. ಕಾವೇರೀ ನದಿಗೆ ಅಡ್ಡಕಟ್ಟೆ ಹಾಕಿ ಈ ಭಾರೀ ತಲಾವನ್ನು ಕಟ್ಟಿಸುವುದು ಫಲಕಾರಿಯಾದದ್ದೋ ಅಲ್ಲವೋ ಗಟ್ಟಿಗರಾದ ಇಂಜನಿಯರುಗಳಿಗೂ ನಿಪುಣರಾದ ರೆವಿನ್ಯೂ ಅಧಿಕಾರಿಗಳಿಗೂ ಗೊತ್ತಾಗಬೇಕಲ್ಲದೆ ಅನ್ಯಥಾ ತಿಳಿಯಲಾಗದು.

ಆದರೆ ನಾವು ಹೇಳುವುದು ಇಷ್ಟೇ. ಮೈಸೂರು ಗವರ್ನ್‌ಮೆಂಟಿನವರು ಬಹಳ ಹಣವನ್ನು ಒದಗಿಸಲು ಸಮರ್ಥರಾಗಿದ್ದರೂ, ಫಲಕಾರಿಗಳಾದ ಮಾರ್ಗಗಳಲ್ಲಿ ಅದನ್ನು ವಿನಿಯೋಗಿಸಲು ಹೆಚ್ಚಿನ ಪ್ರಯತ್ನ ಮಾಡುವುದು ಅವಶ್ಯ. ರಾಜನ ಖಜಾನೆಯು ತುಂಬಿಕೊಳ್ಳುತ್ತಿರುವಂತೆ ದ್ರವ್ಯವನ್ನು ಕೂಡಿಸಿಡುವುದು ಪೂರ್ವಕಾಲದ ಮಂತ್ರಿಗಳ ಮುಖ್ಯ ಆಶಯವಾಗಿತ್ತು. ಕೋಟೆಕೊತ್ತಲಗಳಲ್ಲಿ ಅಪಾರವಾದ ದ್ರವ್ಯವನ್ನೂ ಚಿನ್ನಬೆಳ್ಳಿ ನಗಗಳನ್ನೂ ಶೇಖರಮಾಡಿಡುತ್ತಿದ್ದರು. ಈಗಿನ ಕಾಲದ ಗವರ್ನ್‌ಮೆಂಟು ಅಂಥಾ ಉದ್ದೇಶವನ್ನು ಹಿಡಿದಿರುವುದಿಲ್ಲ. ಕೂಡಿಸಿಟ್ಟ ಸಕಲ ವಿಧವಾದ ಧನಗಳನ್ನೂ ಹೊರಕ್ಕೆ ತಂದು, ಯಾವ ಭಾಗವೂ ನಿರುಪಯೋಗವಾಗಿ ಹಾಳಾದಂತೆ ವಿನಿಯೋಗಪಡಿಸುವುದೇ ಪರಮಾವಶ್ಯವಾಗಿರುತ್ತದೆ.

ದಿವಾನ್ ರವರ ಅಡ್ರೆಸ್ಸಿನಲ್ಲಿ ಇನ್ನೆರಡು ವಿಷಯಗಳನ್ನು ಕುರಿತು ಪ್ರಸ್ತಾಪಮಾಡಿದ್ದರೆ ಪ್ರಜೆಗಳು ಇನ್ನೂ ವಿಶೇಷ ಸಂತೋಷಪಡುತ್ತಿದ್ದರೆಂದು ನಮಗೆ ತೋರುತ್ತದೆ. ಅವು ಯಾವವೆಂದರೆ—ಮೊದಲನೆಯದಾಗಿ ಮಾರೀಕಣಿವೆ ಏರ್ಪಾಡಿನ ಈಗಿನ ಸ್ಥಿತಿ, ಮುಂದೆ ಅದರ ಪ್ರಯೋಜನಾಂಶಗಳು; ಎರಡನೆಯದಾಗಿ, ಆಹಾರ ದಿನಸಿಗಳ ಧಾರಣೆಗಳು ಇಳಿಯದೆ ಹೆಚ್ಚಾಗಿಯೇ ಇರುವುದಕ್ಕೆ ಕಾರಣಾಂತರಗಳು. ಗವರ್ನ್‌ಮೆಂಟಿನವರು ಈ ಭಾಗದಲ್ಲಿ ಪಡುವ ಅಭಿಪ್ರಾಯವನ್ನೂ ಇದರ ಪರಿಹಾರಕ್ಕಾಗಿ ಮಾಡಬೇಕೆಂದಿರುವ ಏರ್ಪಾಡುಗಳನ್ನೂ ತಿಳಿಯಲಪೇಕ್ಷಿಸುತ್ತೇವೆ. ಯಾಕಂದರೆ ಸದ್ಯದಲ್ಲಿ ಈ ವಿಚಾರವು ಸಂಸ್ಥಾನದಲ್ಲಿ ವಿಶೇಷವಾದ ಚಿಂತೆಯನ್ನುಂಟು ಮಾಡಿರುವುದು.

ಒಳದೇಶದ ವೃತ್ತಾಂತಗಳು.

ನವರಾತ್ರಿ ಉತ್ಸವಗಳಿಗಾಗಿ ರಾಜಧಾನಿಗೆ ದಯಮಾಡಿದ್ದ ಯೂರೋಪಿಯನ್ ಅತಿಥಿಗಳೆಲ್ಲಾ ಕಳೆದ ಶನಿವಾರ ವಾಪಸು ತಮ್ಮ ತಮ್ಮ ಸ್ಥಳಗಳಿಗೆ ಪ್ರಯಾಣ ಮಾಡಿದರು.

ಫುಟ್‌ಬಾಲ್ ಟ್ರೋಫಿ ಪಂದ್ಯವು ಕಳೆದ ಶನಿವಾರ ಸಾಯಂಕಾಲ ಮುಕ್ತಾಯವಾಗಿ ಪಂದ್ಯದಲ್ಲಿ ಗೆದ್ದ ಮೈಸೂರು ಛಾಂಪಿಯನ್ಸ್ ಎಂಬ ಸಂಘದವರಿಗೆ ಬಹುಮಾನದ ಬಟ್ಟಲು ದೊರಕಿತು.

ಮೈಸೂರು ಸಂಸ್ಥಾನದ ಅಸಿಸ್ಟೆಂಟ್ ರೆಸಿಡೆಂಟರ ಕೆಲಸದ ಛಾರ್ಜನ್ನು ಕಳೆದ ವಾರ ಮೆ|| ಎಸ್. ಬಿ. ಕೋಪ್ಲೆಂಡ್, ಐ. ಸಿ. ಎಸ್. ಯವರು ಮೆ|| ಮೂರ್ ಯವರಿಂದ ವಹಿಸಿಕೊಂಡಿರುತ್ತಾರೆ.

ಆಹಾರ ದಿನಸುಗಳ ಧಾರಣೆ ಜಾಸ್ತಿಯಾಗಿರುವುದನ್ನು ನೋಡಿ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಅಲ್ಪ ಸಂಬಳಗಾರರಿಗೆ ಒಂದು ರೂಪಾಯಿಸಂತೆ ಬರವ ಭತ್ಯವನ್ನು ಕೊಡಬೇಕೆಂದು ಸರ್ಕಾರಕ್ಕೆ ಬರೆದಿದಾರೆ.

ಈ ನವರಾತ್ರಿ ಉತ್ಸವಗಳಾದ ತರುವಾಯ ಎರಡನೇ ದಿನದ ದರ್ಬಾರಿನಲ್ಲಿ ಶ್ರೀಮನ್ ಮಹಾರಾಜರವರ ಆಜ್ಞಾನುಸಾರ ಸರ್ದಾರ್ ಗೋಪಾಲರಾಜೇ ಅರಸಿನವರಿಗೂ, ಸರ್ದಾರ್ ಗೋಪಾಲಕೃಷ್ಣೇ ಅರಸಿನವರಿಗೂ ಸರ್ದಾರ್ ಬಸಪ್ಪಾಜಿ ಅರಸಿನವರಿಗೂ ಬಿಳಿಯ ದಿಂಡಿನ ಹಾರಗಳನ್ನು ಹಾಕಿಸಿದರೆಂದು ಕೇಳುತ್ತೇವೆ.

ಕಳೆದ ಭಾನುವಾರ ಮಧ್ಯಾಹ್ನ ರಾಜಧಾನಿಯ ಸಂಸ್ಕೃತ ಕಾಲೇಜಿನಲ್ಲಿ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳಿಗೆ ಸರ್ಕಾರದ ಔತಣ ನಡೆಯಿತು. ದಿವಾನ್‌ರೇ ಮೊದಲಾದ ಅಧಿಕಾರಿಗಳೂ, ಪ್ರತಿನಿಧಿಗಳೂ, ರಾಜಧಾನಿಯ ಮುಖ್ಯ ದೊಡ್ಡ ಮನುಷ್ಯರೂ ಉದ್ಯೋಗಸ್ಥರೂ ಸೇರಿ ಸುಭೋಜನಮಾಡಿ, ಮನೋಹರವಾದ ಸಂಗೀತವನ್ನು ಕೇಳಿ ಆನಂದಪಟ್ಟರು.

ಕಳೆದ ಗುರುವಾರ ಸಾಯಂಕಾಲ ಇಲ್ಲಿನ ಮಹಮ್ಮದೀಯರವರ ಹೈಸ್ಕೂಲಿನಲ್ಲಿ ನವರಾತ್ರಿ ಉತ್ಸವಗಳಿಗಾಗಿ ಬಂದಿದ್ದ ರೆಸಿಡೆಂಟರವರ ಪತ್ನಿಯವರನ್ನೂ ಬೊಂಬಾಯಿ ಗವರ್ನರವರ ಪುತ್ರಿಯಾದ ಮಿಸ್ ಕ್ಲಾರ್ಕ್ ರವರನ್ನೂ ಇತರ ಯೂರೋಪಿಯನ್ ಮತ್ತು ದೇಶೀಯ ಸ್ತ್ರೀಯರನ್ನೂ ಬರಮಾಡಿಕೊಂಡು, ಮಹಾರಾಣಿ ಕಾಲೇಜಿನ ಆಕ್ಟಿಂಗ್ ಲೇಡಿ ಸೂಪರಿಂಟೆಂಡೆಂಟ್ ಶ್ರೀ ರುಕ್ಮಿಣಮ್ಮನವರು ಅವರಿಗೆಲ್ಲಾ ಕೆಲವು ವಿನೋದಗಳನ್ನು ಕಲ್ಪಿಸಿ ಸಂತೋಷಪಡಿಸಿದರು.

ಪರಪನಹಳ್ಳಿ ಗ್ರಾಮದ ತೆಲಗಿ ಹಂಪನಹಳ್ಳಿ ಮಂಡಲ ಬ್ರಹ್ಮಶ್ರೀ ಸಿದ್ಧಾಂತಿ ಕೋಟೆಬಸಪ್ಪ ಶಾಸ್ತ್ರಿಗಳು ಮಾಡಿದ ಹೊಸದಾದ ಸೌಮ್ಯ ಸಂವತ್ಸರದ ಪಂಚಾಂಗದ ನೋಟೀಸನ್ನು ನಮ್ಮ ಚಂದಾದಾರರಿಗೆ ಈ ವಾರದ ಪತ್ರಿಕೆಯ ಕೂಡ ಹಂಚಿರುತ್ತೇವೆ. ಈ ಪಂಚಾಂಗದಲ್ಲಿ ಅತಿನೂತನವಾದ ವಿಷಯಗಳನ್ನು ಹಾಕಿರುವುದಲ್ಲದೆ, ಸರ್ವರಿಗೂ ಉಪಯೋಗವಾಗಿರುವ ಕಾರಣ ಈ ಪಂಚಾಂಗಗಳನ್ನು ತರಿಸಿಕೊಳ್ಳುವರ ಮೂಲಕ ಇವರು ಪಡುತ್ತಿರುವ ಪ್ರಯಾಸಕ್ಕೆ ಸಹಾಯಮಾಡಿಯಾರೆಂದು ನಿರೀಕ್ಷಿಸುತ್ತೇವೆ.

ಕಳೆದ ಸೋಮವಾರ ರಾಜಧಾನಿಯ ಚಾಮುಂಡಿ ಬೆಟ್ಟದ ಮೇಲೆ ವರ್ಷಗಟ್ಟಲೆಯ ರಥೋತ್ಸವವಾಯಿತು. ಶ್ರೀಮನ್ ಮಹಾರಾಜರವರೇ ಮೊದಲಾದ ರಾಜವರ್ಗದವರೆಲ್ಲಾ ದಯಮಾಡಿದ್ದರು. ಸಾವಿರಾರು ಪ್ರಜೆಗಳು ಜಾತ್ರೆಗೆ ಹೋಗಿದ್ದರು. ಹೊಸದಾಗಿ ಮುಜರಾಯಿ ಸೂಪರಿಂಟೆಂಡರಾಗಿ ನೇಮಕವಾಗಿರುವ ಮೆ|| ಸುಬ್ರಹ್ಮಣ್ಯ ಐಯರವರು ತುಂಬಾ ಸಾಹಸಪಟ್ಟು, ರಥವನ್ನು ಸುಮಾರು ೧೧|| ಗಂಟೆಗೆ ನೆಲೆಗೆ ನಿಲ್ಲುವಂತೆ ಏರ್ಪಾಡು ಮಾಡಿದರು. ಮಳೆ ಮೊದಲಾದ ತೊಂದರೆಯೇನೂ ಇಲ್ಲದೆ ಜನರ ಸಂತೋಷಕ್ಕೆ ತುಂಬಾ ಅನುಕೂಲವಾಗಿತ್ತು.

ಕಳೆದ ಗುರುವಾರ ಇಲ್ಲಿನ ಗವರನ್‌ಮೆಂಟ್ ಬಂಗಲೆಯಲ್ಲಿ ಯೂರೋಪಿಯನ್ ಸರ್ದಾರರಿಗೆ ನವರಾತ್ರಿ ಕಟ್ಲೆಯ ಔತಣವು ಜರುಗಿತು. ಸುಮಾರು ೬೦ ಮಂದಿ ಸರ್ದಾರರೂ, ದೊರೆಸಾನಿಗಳೂ ಭೋಜನಕ್ಕೆ ಸೇರಿದ್ದರು. ಭೋಜನಾನಂತರ ಪದ್ಧತಿಯ ಪ್ರಕಾರ ಶ್ರೀಮನ್‌ಮಹಾರಾಜರವರೂ, ಶ್ರೀಮಾನ್ ಯುವರಾಜರವರೂ, ಸರ್ದಾರ್ ಲಕ್ಷ್ಮೀಕಾಂತರಾಜೇ ಅರಸಿನವರೂ, ಸರ್ದಾರ್ ಗೋಪಾಲರಾಜೇ ಅರಸಿನವರೂ, ದಿವಾನ್‌ರವರೂ ಕೌನ್ಸಿಲ್ ಮೆಂಬರುಗಳೂ ಅಲ್ಲಿಗೆ ದಯಮಾಡಿ, ಯೂರೋಪಿಯನ್ ಅತಿಥಿಗಳನ್ನು ಸತ್ಕರಿಸಿ ಬಂದರು. ರೆಸಿಡೆಂಟರವರು ಶ್ರೀಮನ್‌ಮಹಾರಾಜರವರ ಕ್ಷೇಮಾಭ್ಯುದಯಗಳನ್ನು ಬಯಸಿ ಕೆಲವು ಸೂಕ್ತಿಗಳನ್ನು ಹೇಳಿದರು.

ಕಳೆದ ಭಾನುವಾರ ಸಾಯಂಕಾಲ ಇಲ್ಲಿನ ಪ್ರದರ್ಶನ ಶಾಲೆಯ ಆವರಣದಲ್ಲಿ ಆಟಪಾಟ ವಿನೋದಗಳನ್ನು ನಡಿಸಿದರು. ಶ್ರೀಮನ್ ಮಹಾರಾಜರವರೂ ದಿವಾನ್‌ರೇ ಮೊದಲಾದ ಹುದ್ದೇದಾರರೂ ದಯಮಾಡಿದ್ದರು. ಪ್ರದರ್ಶನಶಾಲೆಯ ಕಮಿಟಿಯವರ ರಿಪೋರ್ಟನ್ನು ಮೆ|| ಎ. ರಂಗಸ್ವಾಮಿ ಅಯ್ಯಂಗಾರ್ಯರು ಓದಿ, ಶ್ರೀಮನ್ ಮಹಾರಾಜರವರಿಗೆ ಅರಿಕೆ ಮಾಡಿದರು. ಪ್ರದರ್ಶನವು ಈ ವರುಷ ತುಂಬಾ ತೃಪ್ತಿಕರವಾಗಿ ನಡೆಯಿತೆನ್ನುವುದಕ್ಕೆ ಸಂಶಯವಿಲ್ಲ. ಸುಮಾರು ೨೨,೦೦೦ ಜನರ ವರಿಗೂ ಹೋಗಿ ಪ್ರದರ್ಶನವನ್ನು ನೋಡಿರುತ್ತಾರೆಂತಲೂ, ೧೨,೯೧೧ ಪ್ರದರ್ಶನ ವಸ್ತುಗಳು ಕಳುಹಲ್ಪಟ್ಟಿದ್ದವೆಂತಲೂ ಗೊತ್ತಾಗುವುದು. ಶ್ರೀಮನ್ ಮಹಾರಾಜರವರು ಬಹುಮಾನಗಳನ್ನು ಹಂಚಿಕೊಟ್ಟು, ಪ್ರದರ್ಶನದ ಕಮಿಟಿಯವರ ಸಾಹಸವನ್ನು ತುಂಬಾ ಸಂತೋಷದಿಂದ ಮೆಚ್ಚಿಕೊಂಡರು. ಈ ವರುಷದ ಪ್ರದರ್ಶನವು ನೆನ್ನೆಗೆ ಮುಕ್ತಾಯವಾಯಿತು.

ಕಳೆದ ವಾರ ಕಡೂರು, ಶಿವಮೊಗ್ಗ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಪೋಲೀಸ್ ಸೂಪರಿಂಟೆಂಡರೂ ಸುಮಾರು ೧೫೦ ಮಂದಿ ಪೋಲೀಸಿನವರೂ ಬೇದಿಸಿನಲ್ಲಿ ತರೀಕೆರೆ ತಾಲ್ಲೂಕು ಶಿವಪುರಕ್ಕೂ ಜೋಡಿಕಟ್ಟೆಗೂ ಒಂದೂವರೆ ಮೈಲಿ ದೂರದಲ್ಲಿರುವ ಕಲ್ಲುದುರ್ಗವೆಂಬ ಸ್ಥಳಕ್ಕೆ ರಾತ್ರಿ ಹೊತ್ತು ಬೆಳದಿಂಗಳಲ್ಲಿ ನುಗ್ಗಿ ೨೮ ಮಂದಿ ಡಕಾಯಿತಿಕೋರರನ್ನು ದಸ್ತಗಿರಿ ಮಾಡಿದರು. ಈಚೆಗೆ ಇನ್ನು ೩ ಜನರು ಸಿಕ್ಕಿ ಬಿದ್ದರು. ಶಿವಮೊಗ್ಗಾ ಡಿಸ್ಟ್ರಿಕ್ಟಿನ ಮಾಯಕೆರೆಯಲ್ಲಿ ಪೋಲೀಸಿನವರು ಕೆಲವರನ್ನು ದಸ್ತಗಿರಿ ಮಾಡಿರುತ್ತಾರೆ. ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರೂ ಹಾಜರಾಗಿದ್ದರು. ಆ ಪ್ರಾಂತ್ಯಗಳಲ್ಲಿ ಬಹು ಕಾಲದಿಂದ ನಡೆಯುತ್ತಾ ಬಂದಿರುವ ಕಳ್ಳತನಗಳ ಪೈಕಿ ಬಹು ಭಾಗ ಈ ಕಳ್ಳರಿಂದ ಗೊತ್ತಾದೀತೆಂದು ನಿರೀಕ್ಷಿಸಲ್ಪಟ್ಟಿದೆ. ಆ ರಾತ್ರಿ ಬೆಳದಿಂಗಳಲ್ಲಿ ಕಳ್ಳರನ್ನು ಹಿಡಿಯುವುದಕ್ಕೆ ಹೋಗುತ್ತಿದ್ದ ಪೋಲೀಸಿನವರ ಪೈಕಿ ಶಿವಮೊಗ್ಗ ಪೋಲೀಸಿನ ಧರ್ಮಾಚಾರಿ ಎಂಬವನು ಹಾವು ಕಡಿದು ಮೃತಪಟ್ಟನೆಂದು ತಿಳಿಯುವುದು.

ನ್ಯಾಯವಿಧಾಯಕ ಸಭೆಗೆ ಮೆಂಬರುಗಳನ್ನು ಚುನಾಯಿಸುವುದು.

ಗವರ್ನ್‌ಮೆಂಟಿನ ಎರಡನೇ ಹುಕುಮು.

ಕಳೆದ ತಾ. ೧೦ನೇ ಶನಿವಾರ ನಾಲ್ಕು ಗಂಟೆಯ ಮೇಲೆ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಗವರ್ನ್‌ಮೆಂಟಿನವರ ಅಪ್ಪಣೆಗನುಸಾರವಾಗಿ ನ್ಯಾಯವಿಧಾಯಕ ಸಭೆಗೆ ಮೆಂಬರುಗಳ ಪೈಕಿ ಇಬ್ಬರನ್ನು ಚುನಾಯಿಸುವ ವಿಷಯದಲ್ಲಿ ಡೆಪ್ಟಿ ಕಮಿಷನರ್ ಮೆ|| ಕಾಂತರಾಜೇ ಅರಸಿನವರು ಕುಳಿತಿದ್ದ ಬಳಿಗೆ ಹೋಗಿ ಚೀಟಿಗಳಲ್ಲಿ ಹೆಸರುಗಳನ್ನು ಬರೆದು ಅವರ ಮುಂದಿದ್ದ ಪೆಟ್ಟಿಗೆಯೊಳಗೆ ಹಾಕಿಬಂದರು. ತರುವಾಯ ಮೆ|| ಕಾಂತರಾಜೇ ಅರಸಿನವರು ಆ ಪೆಟ್ಟಿಗೆಯನ್ನು ದಿವಾನ್‌ರವರ ಬಂಗಲೆಗೆ ಕಳುಹಿಸಿದರು. ಪ್ರತಿನಿಧಿಗಳೆಲ್ಲಾ ಯಾರಿಗೆ ಮೆಂಬರ ಕೆಲಸವಾಯಿತೋ ಎಂದು ತಿಳಿಯದೆ ಮೂರು ದಿನಗಳಿಂದ ಕಳವಳಪಡುತ್ತಿದ್ದರು. ನೆನ್ನೆ ಮಂಗಳವಾರ ಸಾಯಂಕಾಲ ಪ್ರತಿನಿಧಿ ಸಭೆಯಲ್ಲಿ ಗವರ್ನ್‌ಮೆಂಟ್ ಸೆಕ್ರೆಟರಿಯವರು ಕೆಳಗೆ ನಮೂದಾಗುವ ಅಭಿಪ್ರಾಯವುಳ್ಳ ಹುಕುಮನ್ನು ಸಭೆಯಲ್ಲಿ ಮೆಂಬರುಗಳಿಗೆ ಓದಿ ಹೇಳಿದರು. ಏನೆಂದರೆ—

ನ್ಯಾಯವಿಧಾಯಕ ಸಭೆಗೆ ಇಬ್ಬರು ಮೆಂಬರುಗಳನ್ನು ತಾ. ೧೦ ರಲ್ಲಿ ಪ್ರತಿನಿಧಿಗಳು ಚುನಾವಣೆ ಮಾಡಿದರು. ಅವರು ಓಟುಗಳನ್ನು ಕೊಟ್ಟಿರುವ ಪ್ರಕಾರ ಪೂರ್ವ ಡಿವಿಜನಿಗೆ ಮೆ|| ಬಿ. ವೆಂಕಟರಾಮಯ್ಯನವರೂ, ಪಶ್ಚಿಮ ಡಿವಿಜನಿಗೆ ಮೆ|| ಎಂ. ವೆಂಕಟಕೃಷ್ಣಯ್ಯನವರೂ ಹೆಚ್ಚು ಸಮ್ಮತಿಗಳನ್ನು ಪಡೆದಿರುತ್ತಾರೆಂದು ಗೊತ್ತಾಯಿತು. ಆದರೆ ಈ ಪ್ರಕಾರ ಚುನಾಯಿಸಲ್ಪಟ್ಟಿರುವ ಈ ಇಬ್ಬರು ಮೆಂಬರುಗಳನ್ನು ಗವರ್ನ್‌ಮೆಂಟಿನವರು ಒಪ್ಪಿಕೊಳ್ಳಲಾರರೆಂದು ತಿಳಿಸಲು ವಿಷಾದಪಡುತ್ತಾರೆ. ಚುನಾವಣೆಯ ರೂಲುಸು ಪ್ರಕಾರ ಪ್ರತಿನಿಧಿಗಳು ಬೇರೆ ಇಬ್ಬರು ಮೆಂಬರುಗಳನ್ನು ಚುನಾಯಿಸಿ ಗವರ್ನ್‌ಮೆಂಟಿಗೆ ತಿಳಿಸಬೇಕಾಗಿದೆ. ಇದಕ್ಕಾಗಿ ತಾ. ೧೬ನೇ ಶುಕ್ರವಾರ ಸಾಯಂಕಾಲ ೪ ಗಂಟೆಗೆ ಮೈಸೂರು ಪಬ್ಲಿಕ್ ಆಫೀಸ್ ಕಟ್ಟಡದ ದರ್ಬಾರ್ ಹಾಲ್‌ನಲ್ಲಿ ಪ್ರತಿನಿಧಿಗಳ ಸಭೆ ಕೂಡಿಸಲ್ಪಡುವುದು. ಅಗ್ಗೆ ಮೈಸೂರು ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರವರು ಆ ಸಭೆಯಲ್ಲಿ ಹಾಜರಾಗಿದ್ದು, ಪ್ರತಿನಿಧಿಗಳ ಓಟುಗಳನ್ನು ರಿಕಾರ್ಡುಮಾಡಿ, ಚುನಾಯಿಸಲ್ಪಟ್ಟ ಮೆಂಬರುಗಳ ಹೆಸರನ್ನು ಗವರ್ನ್‌ಮೆಂಟಿಗೆ ರಿಪೋರ್ಟು ಮಾಡಬೇಕಾಗಿ ಕೋರಲ್ಪಟ್ಟಿದೆ.

ಲೆಜಿಸ್ಲೆಟಿವ್ ಕೌನ್ಸಿಲಿಗೆ ಮೆಂಬರಾಗಿ ಚುನಾಯಿಸಲ್ಪಡಬೇಕೆಂದು ಅಪೇಕ್ಷಿಸತಕ್ಕ ಪ್ರತಿನಿಧಿಗಳು ತಾ. ೧೯ನೇ ಸೋಮವಾರ ಸಾಯಂಕಾಲದೊಳಗೆ ತಮ್ಮ ಹೆಸರನ್ನು ಗವರನ್‌ಮೆಂಟ್ ಸೆಕ್ರೆಟರಿಯವರಿಗೆ ತಿಳಿಯಪಡಿಸಬೇಕೆಂದು ಅಪ್ಪಣೆ ಕೊಡಿಸಿರುತ್ತಾರೆ.

ಅರಮನೆಯಲ್ಲಿ ನಡೆದ ದರ್ಬಾರು.

ವಿದ್ವತ್ತಾ ಪರೀಕ್ಷೆಯ ರಿಪೋರ್ಟು.

ಕಳೆದ ತಾ. ೭ ನೇ ಬುಧವಾರ ರಾತ್ರಿ ಜಗನ್ಮೋಹನ ಬಂಗಲೆಯಲ್ಲಿ ನಡಿಸಿಸಲ್ಪಟ್ಟ ಎರಡನೇ ದಿನದ ಪ್ರೈವೆಟ್ ದರ್ಬಾರಿನಲ್ಲಿ ಮುಜರಾಯಿ ಇಲಾಖೆಯ ಸೂಪರಿಂಟೆಂಡೆಂಟ್ ಮೆ|| ಎ. ಸುಬ್ರಹ್ಮಣ್ಯಯ್ಯರವರು ಕೆಳಗೆ ಕಂಡ ರಿಪೋರ್ಟನ್ನು ಶ್ರೀಮನ್ಮಹಾರಾಜರವರ ಸನ್ನಿಧಾನದಲ್ಲಿ ಓದಿ ಅರಿಕೆಮಾಡಿದರು.

ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಕೀಲಕನಾಮ ಸಂವತ್ಸರದಲ್ಲಿ ನಡೆದ ವಿದ್ವತ್ ಪರೀಕ್ಷಾ ವಿಷಯವನ್ನು ಮಹಾ ಸನ್ನಿಧಾನದಲ್ಲಿ, ವಿಜ್ಞಾಪಿಸಿಕೊಳ್ಳುತ್ತೇನೆ, ಮಹಾಸ್ವಾಮಿ.

ಈ ಸಂವತ್ಸರದಲ್ಲಿ ವಿದ್ವತ್ ಪರೀಕ್ಷೆಗೆ ಸೇರಲು ಅಪೇಕ್ಷಿಸಿದ ೨೩ ಜನರಲ್ಲಿ ಪರೀಕ್ಷೆಗೆ ಬಂದವರು ೧೫ ಜನರು. ಅವರಲ್ಲಿ ತೇರ್ಗಡೆಯಾದವರು ೧೨ ಜನರು. ಇವರಲ್ಲದೆ ಉತ್ತರ ದೇಶದಿಂದ ಬಂದ ಒಬ್ಬರು ವ್ಯಾಕರಣ ಶಾಸ್ತ್ರದಲ್ಲಿಯೂ, ಮತ್ತೊಬ್ಬರು ಜ್ಯೋತಿಷ ಶಾಸ್ತ್ರದಲ್ಲಿಯೂ ಪರೀಕ್ಷಿಸಲ್ಪಟ್ಟರು. ಸೇಲಂ ಡಿಸ್ಟ್ರಿಕ್ಟ್ ಕಾಮಲಾಪುರದಿಂದ ಬಂದ ಒಬ್ಬರು ಶುಕ್ಲಯಜುರ್ವೇದ ಸ್ಮಾರ್ತ ಪ್ರಯೋಗದಲ್ಲಿ ಪರೀಕ್ಷಿಸಲ್ಪಟ್ಟರು.

ಪರೀಕ್ಷೆಯಲ್ಲಿ ತೇರ್ಗಡೆಯಾದವರ ಹೆಸರು ಅವರುಗಳಿಗೆ ಕೊಡಲ್ಪಡುವ ಬಹುಮಾನ ಮತ್ತು ಪರೀಕ್ಷಿಸಲ್ಪಟ್ಟ ವಿಷಯ ಸಹ ಇದರ ಕೆಳಗೆ ವಿವರಿಸಿದೆ, ಮಹಾಸ್ವಾಮಿ.—

ಗಣೇಶಘನಪಾಠಿ—ಯಜುರ್ವೇದ, ರೂ. ೩೦ ಮತ್ತು ಶಾಲು ಜೋಡಿ ಸಹ; ಶ್ರೀನಿವಾಸರಂಗಾಚಾರ್ಯ—ಜ್ಯೋತಿಷ ಪ್ರಥಮಭಾಗ, ರೂ. ೪೦; ನೇರೂರುಕೃಷ್ಣಾಚಾರ್ಯ—ವ್ಯಾಕರಣ ದ್ವಿತೀಯಭಾಗ, ರೂ. ೬೫, ಇವರು ಪ್ರಥಮಭಾಗದಲ್ಲಿ ೧೯೦೫ ರಲ್ಲಿ ತೇರ್ಗಡೆಯಾದರು; ಯೋಗಾನರಸಿಂಹಾಚಾರ್ಯ—ವ್ಯಾಕರಣ ದ್ವಿತೀಯಭಾಗ, ರೂ. ೬೫, ಇವರು ಪ್ರಥಮಭಾಗದಲ್ಲಿ ೧೯೦೭ ರಲ್ಲಿ ತೇರ್ಗಡೆಯಾದರು; ಮನ್ನಾರಗುಡಿ ಮಾಧವಾಚಾರ್ಯ—ವೇದಾಂತ ಪ್ರಥಮದ್ವಿತೀಯಭಾಗಗಳು, ರೂ. ೧೨೫, ಉಡುಪಿ ಮುಖ್ಯಪ್ರಾಣಾಚಾರ್ಯ—ಡಿಟ್ಟೋ, ರೂ. ೧೨೫; ಹೊಳವನಹಳ್ಳಿ ಕಟ್ಟೆಕೃಷ್ಣಾಚಾರ್ಯ—ವೇದಾಂತ ದ್ವಿತೀಯಭಾಗ, ರೂ. ೬೫, ಇವರು ಪ್ರಥಮಭಾಗದಲ್ಲಿ ೧೯೦೬ ರಲ್ಲಿ ತೇರ್ಗಡೆಯಾದರು; ಮಧುರೆ ಶ್ರೀನಿವಾಸಾಚಾರ್ಯ—ಡಿಟ್ಟೋ, ರೂ. ೬೫; ಪ್ರಥಮಭಾಗದಲ್ಲಿ ೧೯೦೭ ರಲ್ಲಿ ತೇರ್ಗಡೆಯಾದರು; ಪುರೋಹಿತ ವಾಸುದೇವಾಚಾರ್ಯ—ಡಿಟ್ಟೋ, ರೂ. ೪೦, ಮುಳಬಾಗಲು ಆನಂದತೀರ್ಥಾಚಾರ್ಯ—ವೇದಾಂತ ಪ್ರಥಮಭಾಗ, ರೂ. ೪೦; ಸಾಲಿಗ್ರಾಮದ ನಾರಾಯಣಶಾಸ್ತ್ರಿ—ಡಿಟ್ಟೋ, ರೂ. ೪೦; ರಾಮನಾಥಪುರ ನರಸಿಂಹಾಚಾರ್ಯ—ಸಾಹಿತ್ಯ ಪ್ರಥಮಭಾಗ, ರೂ. ೪೦, ಕಾಮಲಾಪುರಂ ಸುಬ್ರಹ್ಮಣ್ಯಶಾಸ್ತ್ರಿ—ಶುಕ್ಲ ಯಜುರ್ವೇದ ಸ್ಮಾರ್ತಪ್ರಯೋಗ, ರೂ. ೩೫, ತುರಂತಲಾಲಶರ್ಮ—ಜ್ಯೋತಿಷ, ರೂ. ೧೨೫; ರತಿಕಾಂತಶರ್ಮ—ವ್ಯಾಕರಣ, ರೂ. ೧೦೦.

ಈ ಪ್ರಕಾರ ತೇರ್ಗಡೆಯಾದವರಲ್ಲಿ ಈ ಮಹಾ ಪಾಠಶಾಲೆಯಲ್ಲಿ ವ್ಯಾಸಂಗ ಮಾಡಿದವರು ೬ ಜನರು. ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಿಂದ ಬಂದವರು ಇಬ್ಬರು. ಸ್ವಂತ ವ್ಯಾಸಂಗ ಮಾಡಿಕೊಂಡು ಬಂದವರು ೮ ಜನರು.

ಮೇಲ್ಕಂಡ ೧೫ ಜನರಲ್ಲಿ ಸಾಲಿಗ್ರಾಮದ ನಾರಾಯಣಶಾಸ್ತ್ರಿಗಳು ಸಾಹಿತ್ಯ ವಿದ್ವತ್ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಸನ್ಮಾನಿತರಾಗಿರುತ್ತಾರೆ. ಇವರು ಇಂಗ್ಲೀಷಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿಯೂ ತೇರ್ಗಡೆಯಾಗಿರುತ್ತಾರೆ. ಕಾಮಲಾಪುರಂ ಸುಬ್ರಹ್ಮಣ್ಯ ಶಾಸ್ತ್ರಿಗಳು ಶುಕ್ಲಯಜುರ್ವೇದ ಸಲಕ್ಷಣ ಘನಾಂತ ವಿದ್ವತ್ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಸನ್ಮಾನಿತರಾಗಿರುತ್ತಾರೆ, ಮಹಾಸ್ವಾಮಿ.

ಕರಾಚಿಯಲ್ಲಿರುವ ಎಗ್ಸಿಕ್ಯೂಟಿವ್ ಇಂಜನಿಯರಾದ ಮಹಾರಾಜಶ್ರೀ ಕರ್ಪೂರ ಶ್ರೀನಿವಾಸರಾಯರಿಂದ ಬಂದ ಒಂದುನೂರು ರೂಪಾಯಿಗಳನ್ನು ಈ ವರುಷ ವ್ಯಾಕರಣವಿದ್ವತ್ಪರೀಕ್ಷೆಯಲ್ಲಿ ಮೊದಲನೆಯವರಾಗಿರುವ ನೇರೂರು ಕೃಷ್ಣಾಚಾರ್ಯರಿಗೆ ಬಹುಮಾನವಾಗಿ ಕೊಟ್ಟಿರುತ್ತೆ.

ಈ ಸಂಗತಿಗಳನ್ನು ಮಹಾ ಸನ್ನಿಧಾನದಲ್ಲಿ ವಿಜ್ಞಾಪಿಸಿಕೊಂಡಿದ್ದೇನೆ, ಮಹಾಸ್ವಾಮಿ.

ಈಗ ಅರಮನೆ ಧರ್ಮಾಧಿಕಾರಿಗಳಲ್ಲಿ ಖಾಲಿ ಇರುವ ಎರಡು ಕೆಲಸಗಳಲ್ಲಿ ಒಂದಕ್ಕೆ ಪಂಡಿತರು ನವೀನಂ ರಾಮಾನುಜಾಚಾರ್ಯರನ್ನು, ಮತ್ತೊಂದಕ್ಕೆ ಪಂಡಿತರು ಶ್ರೀ ಮುಷ್ಣಂ ಗೋಪಾಲಕೃಷ್ಣಾಚಾರ್ಯರನ್ನೂ ಸಹ ನೇಮಿಸುವಂತೆ ಹುಜೂರು ಮಹಾ ಸನ್ನಿಧಾನದಲ್ಲಿ ಅಜ್ಞೆಯಾಗಿರುತ್ತೆ.

ಮೇಲ್ಕಂಡ ರಿಪೋರ್ಟನ್ನು ಓದಿದ ತರುವಾಯ ಅದರಲ್ಲಿ ವಿವರಿಸಿದ ಆಯಾ ಪಂಡಿತರಿಗೆ ಆಯಾ ಬಹುಮಾನಗಳನ್ನು ಶ್ರೀಮನ್ಮಹಾರಾಜರವರು ದಯಪಾಲಿಸಿದರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯು.

ಪ್ರಾರಂಭವಾದದ್ದು.

ಕಳೆದ ತಾ. ೮ನೇ ಗುರುವಾರ ಮಧ್ಯಾಹ್ನ ೧೨ ಗಂಟೆಗೆ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ದರ್ಬಾರ್ ಹಾಲ್‌ನಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಯಿತು. ಅದಕ್ಕಾಗಿ ಸಭಾಮಂದಿರವನ್ನು ನೇತ್ರಾನಂದಕರವಾಗಿ ಅಲಂಕಾರ ಮಾಡಿದ್ದರು. ಮುಂದಿರದ ಪ್ಲಾಟ್‌ಫಾರಂ ಎಂಬ ಎತ್ತರವಾದ ಸ್ಥಳದಲ್ಲಿ ದಿವಾನ್‌ರವರು, ಕೌನ್ಸಿಲ್ ಮೆಂಬರುಗಳು, ಚೀಫ್ ಕೋರ್ಟ್ ಜಡ್ಜಿಗಳು, ಬೇರೆ ಬೇರೆ ಇಲಾಖೆಗಳ ಸೆಕ್ರೆಟರಿಗಳು, ರೆವಿನ್ಯೂ ಮತ್ತು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರುಗಳು ಹಾಜರಾಗಿದ್ದರು. ಬ್ರಿಟಿಷ್ ರೆಸಿಡೆಂಟರವರೂ, ಅವರ ಅಸಿಸ್ಟೆಂಟರೇ ಮೊದಲಾದ ಶ್ರೀಮನ್ಮಹಾರಾಜರವರ ಯೂರೋಪಿಯನ್ ಅತಿಥಿಗಳೂ ದಯಮಾಡಿದ್ದರು. ಪ್ಲಾಟ್‌ಫಾರಮಿನ ಎದುರು ಪಾರ್ಶ್ವದಲ್ಲಿ ಸಂಸ್ಥಾನಾದ್ಯಂತದಿಂದ ಬಂದಿರುವ ಸುಮಾರು ೨೫೦ ಮಂದಿ ಪ್ರಜಾಪ್ರತಿನಿಧಿಗಳೂ, ಮುಂದುಗಡೆ ಬಲಭಾಗದಲ್ಲಿ ಸರ್ಕಾರದ ಸೆಕ್ರೆಟರಿಗಳೂ, ಎಡಭಾಗದಲ್ಲಿ ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳೂ ಕುಳಿತಿದ್ದರು. ೧೨ ಗಂಟೆ ಹೊಡಿಯುತ್ತಲೇ ದಿವಾನ್ ಮೆ|| ವಿ. ಪಿ. ಮಾಧವರಾವ್, ಸಿ. ಐ. ಇ. ಯವರು ಎದ್ದು ನಿಂತು, ಸಭಿಕರಿಗೆ ಮೈಸೂರು ಸಂಸ್ಥಾನದ ಗತಸಾಲಿನ ಆದಾಯ ವ್ಯಯಗಳನ್ನೂ ಇಲಾಖೆಗಳ ಕಾರುಬಾರುಗಳನ್ನೂ ಪ್ರಜೆಗಳ ಸ್ಥಿತಿಗತಿ, ಏರ್ಪಾಡುಗಳೇ ಮೊದಲಾದ ವಿಷಯಗಳನ್ನೂ ಕುರಿತ ವಾರ್ಷಿಕ ಅಡ್ರೆಸ್ಸನ್ನು ಇಂಗ್ಲೀಷಿನಲ್ಲಿ ಓದಿ ಹೇಳಿದರು.

ಅಡ್ರೆಸ್ಸುಗಳು.

ತರುವಾಯ ಮೆ|| ಆರ್ಥರ್ ಗಿಫರ್ಡ್ ಎಂಬ ಪ್ರತಿನಿಧಿಯು ಕೋಲಾರ ಚಿನ್ನದ ಗಣಿಗಳ ಸ್ಥಿತಿಗತಿಯ ವಿಚಾರವಾದ ಅಡ್ರೆಸ್ಸನ್ನೂ, ಮೆ|| ಡಬ್ಲಿಯು ಎಲ್. ಕ್ರಾಫರ್ಡ್ ರವರು ಈ ಸಂಸ್ಥಾನದ ಕಾಫಿ ಪ್ಲಾಂಟರುಗಳ ಪರವಾದ ಅಡ್ರೆಸ್ಸನ್ನೂ, ಚಿಕ್ಕಮಗಳೂರು ಮುಸಲ್ಮಾನ್ ಸಭೆಯ ಪ್ರತಿನಿಧಿಯಾದ ಮೆ|| ರಸೂಲ್ ಖಾನ್ ಸಾಹೇಬರು ಮಹಮದೀಯರ ಕುಂದುಕೊರತೆಗಳ ವಿಚಾರವಾದ ಅಡ್ರೆಸ್ಸನ್ನೂ, ಮೈಸೂರು ಮೆ|| ಅಂಬಳೆ ಅಣ್ಣಯ್ಯ ಪಂಡಿತರೂ ಮೆ|| ಮಸ್ತ್ ಅಲ್ಲಿ ಬೇಗ್‌ರವರೂ ಎರಡು ಅಡ್ರೆಸ್ಸುಗಳನ್ನೂ, ಬೆಂಗಳೂರು ಮೆ|| ಸಿ. ಎಚ್. ಯಾರ್ಡಿನ್‌ರವರು ಈಸ್ಟ್ ಇಂಡಿಯನ್ ಮತ್ತು ಆಂಗ್ಲೋ ಇಂಡಿಯನ್ ಸಂಘದ ಪರವಾದ ಅಡ್ರೆಸ್ಸನ್ನೂ, ಹರಿಹರದ ಮೆ|| ಶ್ರೀನಿವಾಸ ಸೀತಾರಾಮ ಕುಲಕರ್ಣಿಯವರು ಒಂದು ಅಡ್ರೆಸ್ಸನ್ನೂ ಓದಿ ದಿವಾನ್‌ರವರಿಗೆ ಒಪ್ಪಿಸಿದರು. ದಿವಾನ್‌ರವರು ಅವುಗಳನ್ನೆಲ್ಲಾ ಸ್ವೀಕರಿಸಿ, ಅವುಗಳಲ್ಲಿ ಕಂಡ ವಿಚಾರಗಳನ್ನು ಗವರ್ನ್‌ಮೆಂಟಿನವರು ಪರ್ಯಾಲೋಚನೆಮಾಡಿ ಕಾಲಕ್ರಮದಲ್ಲಿ ಹುಕುಂ ಕೊಡಲಾಗುವುದೆಂದು ಅಪ್ಪಣೆಕೊಡಿಸಿದರು.

ಅನಂತರ ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪಿಯನ್ ಸರದಾರರು ದಿವಾನ್‌ರವರಿಂದ ಹೇಳಿಕೊಂಡು ಸಭೆಯಿಂದ ದಯಮಾಡಿದರು. ಸಭಿಕರೆಲ್ಲಾ ಅವರನ್ನು ನಮಸ್ಕರಿಸಿ ಕಳುಹಿಸಿಕೊಟ್ಟರು. ತರುವಾಯ ಸೆಕ್ರೆಟರಿ ಮೆ|| ಕೆ. ಎಸ್. ಚಂದ್ರಶೇಖರಯ್ಯರವರು ದಿವಾನ್‌ರವರ ಅಡ್ರೆಸ್ಸಿನ ಕೆಲವು ಭಾಗವನ್ನೂ, ಮೆ|| ಸಿ. ಎಸ್. ಬಾಲಸುಂದರಂ ಐಯರವರು ಇನ್ನು ಕೆಲವು ಭಾಗವನ್ನೂ ಕನ್ನಡದಲ್ಲಿ ಸಭಿಕರಿಗೆ ಓದಿ ತಿಳಿಸಿದರು.

ಇದಾದ ತರುವಾಯ ಮೊದಲನೇ ದಿನದ ಸಭಾಕಾರ್ಯಗಳು ಮುಕ್ತಾಯವಾದಹಾಗಾಯಿತು. ಮಾರನೆದಿನ ಅಂದರೆ ಶುಕ್ರವಾರದ ಬೆಳಗಾಯಿತು ಸಂಸ್ಥಾನದವರಿಗೆ ಸಂಬಂಧಪಟ್ಟ ವಿಚಾರಗಳನ್ನು ಕುರಿತು ವಿನಂತಿ ಸಭೆನೇರಿ ಚರ್ಚೆಗಳೂ ದಿವಾನ್‌ರವರ ಉತ್ತರಗಳೂ ನಡೆಯುತ್ತಾ ಇವೆ.

ದಿವಾನ್‌ರವರ ಉಪನ್ಯಾಸದ ಕೆಲವು ಭಾಗಗಳನ್ನು ತೆಗೆದು ವಾಚಕರ ತಿಳುವಳಿಕೆಗೋಸ್ಕರ ಕೆಳಗೆ ಪ್ರಕಟಿಸಿರುವೆವು.

ಹರಿಹರದ ಮೆ|| ಶ್ರೀನಿವಾಸ ಸೀತಾರಾಮ ಕುಲಕರ್ಣಿಯವರು ಓದಿ ಒಪ್ಪಿಸಿದ ಅಡ್ರೆಸ್ ಏನೆಂದರೆ—ಸ್ವಾಮಿಯವರು ಈ ಉನ್ನತ ಪದವಿಗೆ ದಯಮಾಡಿಸಿದ ಈಚೆಗೆ ಅಂದರೆ ಅತ್ಯಲ್ಪ ಕಾಲದೊಳಗಾಗಿ ಅನೇಕ ಸದುಪಾಯ ರಾಜಕೀಯ ಭಾಗಗಳು ಮತ್ತು ಶ್ರೀಮನ್ಮಹಾರಾಜರವರ ಇಷ್ಟಾನುಸಾರ ಚಾತುರ್ಯದಿಂದ ನಿರ್ವಹಿಸಿರುವ ಅನೇಕ ರಾಜಕಾರ್ಯಗಳು ಸದ್ಬುದ್ಧಿಯ ಸ್ಥಾನವೆಂಬುದನ್ನು ಅತ್ಯಂತ ಉತ್ಸಾಹದೊಡನೆ ವಿಜ್ಞಾಪಿಸುವಂತೆ ಉತ್ತೇಜನವನ್ನುಂಟುಮಾಡುತ್ತವೆ.

ವಿದ್ಯಾಭ್ಯಾಸದ ಇಲಾಖೆಯಲ್ಲಿ ಸ್ಕೂಲುಮಾಸ್ಟರುಗಳಿಗೆ ಬಡ್ತಿ ಮಾಡಿಸಿದ್ದುದಕ್ಕೂ, ಪ್ರೈಮರಿ ಸ್ಕೂಲುಗಳಿಗೆ ಫೀಜು ವಜಾಮಾಡಿರುವುದಕ್ಕೂ, ಪ್ರಜಾಪ್ರತಿನಿಧಿ ಸಭೆಯಿಂದ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಇಬ್ಬರು ಮೆಂಬರುಗಳನ್ನು ಚುನಾವಣೆ ಮೂಲಕ ಆರಿಸಿಕೊಂಡಿರುವುದಕ್ಕೂ, ಒಂದೂ ವೈದ್ಯ ಕಾಲೇಜನ್ನು ಮೈಸೂರಲ್ಲಿ ಸ್ಥಾಪಿಸಿ ದೇಶೀಯ ವೈದ್ಯಕ್ಕೂ, ಮತಸಂಬಂಧ ನೀತಿ ಭಕ್ತಿ ಮಾರ್ಗಕ್ಕೂ ಪ್ರೋತ್ಸಾಹ ಕಲ್ಪಿಸಿರುವುದಲ್ಲದೆ, ಹೆಣ್ಣು ಮಕ್ಕಳಿಗೆ ಕಿಂಡರ್ ಗಾರ್ಟನ್ ಸಂಬಂಧ ಸ್ಕೂಲ್ ಇನ್‌ಸ್ಟ್ರಕ್ಷನ್ ಮುಂತಾದ ಅನೇಕ ವಿಧವಾದ ಪ್ರಜೋಪಕಾರಗಳನ್ನು ಕಲ್ಪಿಸಿರುವುದು, ಈ ಮುಂತಾದ ಪರಮ ಸಹಾಯಕ್ಕೂ ಮತ್ತು ಈ ದಿವಸದ ಮಹಾಸ್ವಾಮಿಯವರ ಘನವಾದ ಉಪನ್ಯಾಸದಿಂದ ಪ್ರಕಾಶಪಡಿಸಿರುವ ವಿಷಯಗಳಿಗೂ ತುಂಬ ಕೃತಜ್ಞತೆಯುಳ್ಳವನಾಗಿದ್ದೇನೆ.

ನದಿಯಿಂದ ನಲ್ಲಿ ಮೂಲಕ ನೀರಿನ ಸರಬರಾಯಿಗೋಸ್ಕರ ಗೌರ್ನಮೆಂಟಿನವರು ಸ್ಯಾಂಕ್ಷನ್ ಮಾಡಿಸಿದ ಕೆಲಸವು ಕಾರ್ಯತಃ ಪೂರೈಸುವುದರಿಂದ ಒಪನಿಂಗ್ ಸರ್ಮನಿಗೆ ಮಹಾಸ್ವಾಮಿಯವರ ಸವಾರಿಯು ದಯಮಾಡಿಸಿ, ಶಾಶ್ವತಗೊಳಿಸಬೇಕೆಂದು ಓಟ್ ಮೆಂಬರುಗಳು ಮತ್ತು ಇತರ ಪ್ರಜೆಗಳು ವಿಶ್ವಾಸದೊಡನೆ ಬಿನ್ನೈಸಿಕೊಂಡಿರುವ ಅಂಶವನ್ನು ದಿವ್ಯಸನ್ನಿಧಿಯಲ್ಲಿ ನಿವೇದಿಸಿಕೊಂಡಿದ್ದೇನೆ.

ದೇವರ ಬೆಳಕೆರೆ ಬಳಿ ಶಾಂತಿ ಹಳ್ಳಕ್ಕೆ ಅಡ್ಡವಾಗಿ ಒಂದು ಕೆರೆಯನ್ನು ಕಟ್ಟುವ ಕಾಮಗಾರಿಯನ್ನು ಪ್ರಾರಂಭಿಸುವುದಕ್ಕೆ ೩ ಲಕ್ಷ ರೂಪಾಯಿ ಅಂದಾಜಾಗಿ, ಫ್ಯಾಮಿನ್ ಪ್ರೊಟೆಕ್ಟಿವ್ ಆರ್ಡರು ಪ್ರಕಾರವಾಗಿ ಬದಲಾಯಿಸಿರುವ ವಿಷಯದಲ್ಲಿ ಗೌರ್ನಮೆಂಟಿನವರಿಗೆ ವಂದನೆಗಳನ್ನು ಸಮರ್ಪಿಸುತ್ತೇನೆ. ಆದರೆ ಇದನ್ನು ಅರ್ಜೆಂಟ್ ಪ್ರಕಾರವಾಗಿ ಬದಲಾಯಿಸಿ, ನಾಲ್ಕು ಐದು ಸಂವತ್ಸರಗಳಲ್ಲಿ ಮುಗಿಸುವ ಕೆ ಈ ಸಾಲಿನಲ್ಲಿ ಕೆಲವು ಮೊಬಲಗನ್ನು ಸ್ಯಾಂಕ್ಷನ್ ಮಾಡಿಸಿ, ಅದ ರಿಯಿಂದ ಕಾಮಗಾರಿ ಪ್ರಾರಂಭಿಸಿ, ಬಡಜನಗಳ ಜೀವನವನ್ನು ಕಲ್ಪಿಸುವುದು ಸರ್ಕಾರಕ್ಕೆ ಮೂರು ಸಾವಿರ ಎಕರೆ ತರಿ ಆಗುವುದರಿಂದ ಆದಾಯಕರವಾಗಿಯೂ ಇದೆ.

ನಲ್ಲಿಗೋಸ್ಕರ ಹಾಲಿ ಸ್ಯಾಂಕ್ಷನ್ ಆಗಿರುವ ಮೊಬಲಗು ವಿನಿಯೋಗವಾಗಿ ಉಳಿದುದರಲ್ಲಿ ಹೊಸಪೇಟೆ, ಕುರುಬಗೇರಿ, ನಡುವಿನ ಪೇಟೆ ಮುಂತಾದ ಅಧಿಕವರ್ಗದ ಜನಬಾಹುಳ್ಯವಿರುವ ಪ್ರದೇಶಗಳಿಗೆ ನಲ್ಲಿಗಳು ಇಲ್ಲದೆ ಇರುವುದರಿಂದ ಇದಕ್ಕಾಗಿ ಇನ್ನೆರಡುಮೂರು ಸಾವಿರ ರೂಪಾಯಿ ರಿವೈಜ್ ಮಾಡಿಸಿ, ಎಲ್ಲಾ ಪ್ರಜೆಗಳಿಗೂ ನೀರಿನ ಸೌಲಭ್ಯವನ್ನು ಕಲ್ಪಿಸಿಕೊಡೋಣಾಗಬೇಕು.

ಹರಿಹರದಲ್ಲಿ ಈ ವರ್ಷ ಡೆಪ್ಯುಟಿ ಕಮೀಷನರ್ ಸಾಹೇಬರವರ ಪ್ರೋತ್ಸಾಹದಿಂದ ಸೇಯಿಗೆ ಮುಂತಾದ ಕೈಕಸುಬಿನವರಿಗೋಸ್ಕರ ಸ್ಥಾಪಿಸಲ್ಪಟ್ಟಿರುವ (ಶ್ರೀ ಹರಿಹರೇಶ್ವರ ಸ್ವಾಮಿ) ಅನ್ಯೋನ್ಯ ಸಹಾಯಕ ಸಂಘಕ್ಕೆ ಗೌರ್ನಮೆಂಟಿನಿಂದ ಸಹಾಯದ್ರವ್ಯವನ್ನು ಕೊಡಿಸಿಕೊಡಬೇಕು. ಈ ವಿಷಯಗಳನ್ನು ಮಹಾ ಸನ್ನಿಧಾನಕ್ಕೆ ನಿವೇದಿಸಿ, ಫಲಿತಾಂಶವನ್ನು ತಿಳಿಯಲು ನನ್ನನ್ನು ಚುನಾಯಿಸಿರುವ ಮೆಂಬರುಗಳು ಕುತೂಹಲಪಟ್ಟಿರುವುದನ್ನು ಬಿನ್ನೈಸಿಕೊಂಡಿರುತ್ತೇನೆ.

ಸ್ಥಳಮಾಹಾತ್ಮ್ಯದಿಂದಲೂ ಈ ಚಿತ್ರದುರ್ಗ ಡಿಸ್ಟ್ರಿಕ್ಟಿನ ಕೆಲವು ತಾಲ್ಲೂಕುಗಳಿಗಿಂತ ಹೆಚ್ಚಾದ ಸುವರ್ಣಾದಾಯವು ಇರುವುದರಿಂದಲೂ ಸಬ್ ಟ್ರೆಜರಿಯನ್ನು ದಯಪಾಲಿಸಬೇಕೆಂದು ಗತ ವರ್ಷದಲ್ಲಿ ಪ್ರಾರ್ಥನೆಮಾಡಿಕೊಂಡ ಅಂಶವನ್ನು ಸೂಚನಾ ಅರಿಕೆ ಮಾಡಿಕೊಂಡಿದ್ದೇನೆ.

ಮಹಾಸ್ವಾಮಿಯವರ ಆಳ್ವಿಕೆಯಲ್ಲಿ ಜನಗಳು ಆನಂದತುಂದಿಲಹೃದಯರಾಗಿರುತ್ತಾ, ಇದನ್ನು ಸ್ಥಿರವಾಗಿ ದೀರ್ಘಕಾಲ ನಮಗೆ ಶಾಶ್ವತವಾಗಿ ನಡಿಸಲಿ ಕಷ್ಟ ಶ್ರೀಹರಿಹರೇಶ್ವರನು ಸ್ವಾಮಿಯವರಿಗೆ ದೀರ್ಘಾಯುಷ್ಯವನ್ನೂ ಆರೋಗ್ಯಭಾಗ್ಯವನ್ನೂ ಉನ್ನತ ಶಕ್ತಿಯನ್ನೂ ಕೊಟ್ಟು ಅನವರತ ಸಂರಕ್ಷಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನ್‌ರವರು ಮಾಡಿದ ಉಪನ್ಯಾಸ.

ತಾರೀಖು ೮ನೇ ಅಕ್ಟೋಬರ್ ೧೯೦೮ ನೇ ಇಸವಿ.

ಸಭಿಕರಿರಾ

ಈ ಸಲದ ಪ್ರತಿನಿಧಿಸಭೆಗೆ ಈ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿಗಳಾದ ತಾವುಗಳು ದಯಮಾಡಿರುವುದನ್ನು ನೋಡಿ ನಮಗೆ ತುಂಬಾ ಸಂತೋಷವಾಗಿದೆ. ಅಲ್ಲದೆ ತಮ್ಮಗಳ ಸುಖಾಗಮನವು ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರಿಗೂ ಅವರ ಸರ್ಕಾರದವರಿಗೂ ಬಹಳ ಸಂತೋಷವನ್ನುಂಟುಮಾಡುವ ಸಂಗತಿಯನ್ನು ಅವರ ಪರವಾಗಿ ತಮ್ಮಗಳಿಗೆ ತಿಳಿಸುತ್ತೇನೆ.

೧೯೦೬ ಮತ್ತು ೧೯೦೭ ಸಾಲುಗಳಲ್ಲಿ ನಾನು ತಮಗೆ ಓದಿದ ಉಪನ್ಯಾಸಗಳಲ್ಲಿ ರಾಜ್ಯಾಡಳಿತದ ವಿಚಕ್ಷಣೆಯನ್ನು ವೃದ್ಧಿಪಡಿಸುವುದಕ್ಕಾಗಿಯೂ, ಕೆಲವು ಬಾಬುಗಳಲ್ಲಿ ವಿಚಾರಗಳನ್ನು ಕಡಮೆ ಮಾಡುವುದಕ್ಕಾಗಿಯೂ, ಈ ಸಂಸ್ಥಾನದ ಧನಸಂಪತ್ತಿಯನ್ನು ವೃದ್ಧಿಪಡಿಸುವದಕ್ಕಾಗಿಯೂ ತೆರಿಗೆಯನ್ನು ಕಮ್ಮಿಮಾಡಿ, ವಿದ್ಯೆಯನ್ನು ಅಭಿವೃದ್ಧಿಪಡಿಸಿ, ಜನಸಾಮಾನ್ಯದ ಆರೋಗ್ಯವನ್ನು ಕಾಪಾಡಲು ಒಂದು ಕ್ರಮವನ್ನು ಏರ್ಪಡಿಸಿ, ತನ್ಮೂಲಕ ಜನಗಳ ಹೊಸಸ್ಥಿತಿಯನ್ನು ಯೋಗ್ಯಪಡಿಸಿ ಅವರನ್ನು ಉತ್ತಮಸ್ಥಿತಿಗೆ ತರುವುದಕ್ಕಾಗಿಯೂ, ಸರ್ಕಾರದವರು ಮಾಡಿದ ಅನೇಕ ಏರ್ಪಾಡುಗಳನ್ನು ತಮ್ಮಗಳಿಗೆ ವಿವರಿಸಿ ಹೇಳಿದೆನಷ್ಟೆ. ಕಳೆದ ಸಾಲಿನಲ್ಲಿಯೂ ಇದೇ ಕ್ರಮವನ್ನೇ ಅನುಸರಿಸಲಾಯಿತು. ಆಗ ಮಾಡಿದ ಮುಖ್ಯವಾದ ಏರ್ಪಾಟುಗಳನ್ನು ಈ ಉಪನ್ಯಾಸದಲ್ಲಿ ಆಯಾ ಕಡೆ ತಮ್ಮಗಳಿಗೆ ತಿಳಿಸುತ್ತೇವೆ.

ವಿಚಾರ ಕಡಮೆ ಮಾಡುವ ಬಗ್ಗೆ ನಿಯಮಿತವಾದ ಕಮಿಟಿ.

ಸರ್ಕಾರದ ವಿಚಾರಗಳನ್ನು ಕಡಮೆ ಮಾಡುವಬಗ್ಗೆ ನಿಯಮಿತವಾದ ಕಮಿಟಿಯವರು ಈ ವರುಷದಲ್ಲಿಯೂ ತುಂಬಾ ಶ್ರಮಪಟ್ಟು ಬಂದೋಬಸ್ತು, ಅಬ್ಕಾರಿ, ಮರಾಮತ್ ಈ ಇಲಾಖೆಗಳಲ್ಲಿಯೂ ಮತ್ತು ಕೆಲವು ಕಛೇರಿಗಳ ಕೆಳಗಿನ ಸಿಬ್ಬಂದಿಗಳಲ್ಲಿಯೂ ಸಾಧ್ಯವಾದಷ್ಟು ಆಗುತ್ತಿದ್ದ ವಿಚಾರಗಳನ್ನು ಕಡಮೆ ಮಾಡಿದರು. ಕಳೆದ ಎರಡು ವರುಷ ವಿಚಾರ ಕಡಮೆ ಮಾಡಿದ್ದರಲ್ಲಿ ವರುಷ ಒಂದಕ್ಕೆ ಸರ್ಕಾರಕ್ಕೆ ೩,೫೮,೦೦೦ ರೂಪಾಯಿ ಮಿಗುತ್ತದಾಗಿ ತೋರುತ್ತದೆ. ಇದಲ್ಲದೆ ಈ ಸಂಸ್ಥಾನದ ಇಲಾಖೆಗಳಲ್ಲೆಲ್ಲಾ ತುಂಬಾ ಹಣ ವಿಚಾರಗುತ್ತಿರುವ ಮರಾಮತ್ ಇಲಾಖೆಯಲ್ಲಿ ವಿಚಾರವನ್ನು ಇನ್ನೂ ಬಹಳ ಮಟ್ಟಿಗೆ ಕಡಮೆ ಮಾಡುವ ಏರ್ಪಾಟುಗಳು ನಡೆಯುತ್ತಲಿವೆ.

ಧರ್ಮಕಾರ್ಯಗಳಿಗಾಗಿ ಸರ್ಕಾರದಲ್ಲಿ ಇಟ್ಟ ಹಣದ ಮೇಲಿನ ಬಡ್ಡಿ.

ಸಂಸ್ಥಾನದ ಆದಾಯವ್ಯಯಕ್ಕೆ ಸಂಬಂಧಪಟ್ಟ ವಿಷಯವನ್ನು ಕುರಿತು ಪ್ರಸ್ತಾಪಿಸುವುದಕ್ಕೆ ಮೊದಲು ತಮಗೆಲ್ಲರಿಗೂ ವಿಶೇಷ ಸಂತೋಷಕರವಾದ ಮತ್ತೊಂದು ವಿಷಯವನ್ನು ಸೂಚಿಸುತ್ತೇವೆ. ಅದೇನೆಂದರೆ—ಜನಗಳು ಧರ್ಮಕಾರ್ಯಗಳಿಗಾಗಿ ಹಣ ವಿನಿಯೋಗಿಸುವಂತೆ ಪ್ರೋತ್ಸಾಹಪಡಿಸುವ ಉದ್ದೇಶದಿಂದ ಅಂಥಾ ಹಣವನ್ನು ಸರ್ಕಾರದವರು ತಮ್ಮ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಡಿಪಾಜಿಟ್ ಇಟ್ಟುಕೊಂಡು ಅದರ ಮೇಲೆ ಸ್ವಲ್ಪ ಹೆಚ್ಚಾದ ದರದಲ್ಲಿ ಬಡ್ಡಿಯನ್ನು ಕೊಡಬೇಕೆಂದು ಹಿಂದೆ ೧೮೯೬ನೇ ಇಸವಿಯಲ್ಲಿಯೇ ಹುಕುಂ ಮಾಡಿದ ಸಂಗತಿಯು ತಮಗೆಲ್ಲರಿಗೂ ತಿಳಿದಿದೆಯಷ್ಟೆ. ಹೀಗೆ ಸರ್ಕಾರದವರು ರಿಯಾಯಿತಿಯನ್ನು ತೋರಿಸಿದುದರಿಂದ ಧರ್ಮಕೆಲಸದಲ್ಲಿ ಆಸಕ್ತಿಯುಳ್ಳ ಅನೇಕ ಮಂದಿ ದೊಡ್ಡ ಮನುಷ್ಯರು ಹಣವನ್ನು ಡಿಪಾಜಿಟ್ಟು ಮಾಡಿದರು; ತನ್ಮೂಲಕ ಜನೋಪಯುಕ್ತವಾದ ಅನೇಕ ಧರ್ಮಕಾರ್ಯಗಳು ಸ್ಥಾಪಿತವಾದುವು. ಆದರೆ ಕಾರಣಾಂತರದಿಂದ, ಸರ್ಕಾರದವರು ಸದರಿ ರಿಯಾಯಿತಿಯನ್ನು ೧೮೯೯ನೇ ಇಸವಿಯಲ್ಲಿ ವಜಾ ಮಾಡಿದುದರ ಮೇಲೆ, ಅದೇ ರಿಯಾಯಿತಿಯನ್ನು ಪುನಃ ಜಾರಿಗೆ ತರಬೇಕೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿಯೂ ಇತರ ಕಡೆಗಳಲ್ಲಿಯೂ ಜನಗಳು ಆಗಿಂದಾಗ್ಗೆ ಅಹವಾಲುಗಳನ್ನು ಹೇಳಿಕೊಳ್ಳುತ್ತಾ ಬಂದರು. ಆದಕಾರಣ ಸರ್ಕಾರದವರು ಸಂಸ್ಥಾನದ ಆದಾಯವ್ಯಯದ ಸ್ಥಿತಿಯನ್ನು ಕುರಿತು ಆಲೋಚನೆ ಮಾಡುವ ಕಾಲದಲ್ಲಿ ಈ ವಿಷಯವನ್ನೂ ತಮ್ಮ ಅವಗಾಹನೆಗೆ ತೆಗೆದುಕೊಂಡು ಚೆನ್ನಾಗಿ ಪರಿಶೀಲನೆ ಮಾಡಿದುದರ ಮೇಲೆ ೧೯೦೮ನೇ ಇಸವಿಯ ಫೆಬ್ರವರಿ ತಿಂಗಳಲ್ಲಿ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರು ೧೮೯೬ನೇ ಇಸವಿಯ ನಿಬಂಧನೆಗಳನ್ನೇ ಸ್ವಲ್ಪಮಟ್ಟಿಗೆ ಬದಲಾಯಿಸಿ ಪುನಃ ಜಾರಿಗೆ ತರಬೇಕೆಂತ ಹುಕುಂ ದಯಪಾಲಿಸಿದರು. ಈ ಪ್ರಕಾರವಾಗಿ ತಿರುಗಿ ಜಾರಿಗೆ ತಂದ ನಿಬಂಧನೆಗಳ ಮೇರೆಗೆ, ಯಾವ ಕೆಲಸಕ್ಕೆ ಸರ್ಕಾರದ ಹಣವನ್ನು ನ್ಯಾಯವಾಗಿ ಖರ್ಚು ಮಾಡಬಹುದೋ ಅಂಥಾ ಪರೋಪಕಾರಾರ್ಥವಾದ ಧರ್ಮಕಾರ್ಯಗಳಿಗಾಗಿ ೩,೦೦೦ ರೂಪಾಯಿಗೆ ಕಮ್ಮಿ ಇಲ್ಲದೆ ೧,೦೦,೦೦೦ ರೂಪಾಯಿಯೊಳಗಾಗಿ ಎಷ್ಟು ಮೊಬಲಗನ್ನಾದರೂ ಖಾಯಂ ಆಗಿ ಡಿಪಾಜಿಟ್ಟು ತೆಗೆದುಕೊಂಡು, ಅಂಥಾ

ಧರ್ಮಕಾರ್ಯಗಳ ಉದ್ದೇಶವನ್ನು ನೆರವೇರಿಸುವ ಬಗ್ಗೆ ಉಪಯೋಗಿಸುವುದ ಕ್ಕೋಸ್ಕರ ಸದರಿ ಮೊಬಲಗಿನ ಮೇಲೆ ಶೇಕಡ ೪ ರೂಪಾಯಿನಂತೆ ಬಡ್ಡಿಯನ್ನು ಕೊಡಲಾಗುತ್ತದೆ. ಈ ನಿಬಂಧನೆಗಳನ್ನನುಸರಿಸಿ ಕೆಲವು ದೊಡ್ಡ ಮನುಷ್ಯರು ಡಿಪಾಸಿಟ್ ಇಟ್ಟಿರುವ ಹಣದ ವಿವರ ಹ್ಯಾಗೆಂದರೆ.—(೧) ಪ್ರಯಾಣಿಕರ ಉಪಯೋಗಾರ್ಥವಾದ ಸತ್ರದ ಖರ್ಚಿಗಾಗಿಯೂ ಇತರ ಧರ್ಮಕೆಲಸಗಳಿಗಾ ಗಿಯೂ ಧರ್ಮಪ್ರವರ್ತಕ ಸಾಹುಕಾರ್ ಮಿ॥ ಗುಬ್ಬಿ ತೋಟದಪ್ಪನವರಿಂದ ರೂ. ೭೦,೧೦೦, (೨) ಒಂದು ಧರ್ಮಪಾಠಶಾಲೆಯನ್ನು ನಡೆಸುವುದಕ್ಕಾಗಿ ಮೋಟಕಾರಿ ಸಾಹುಕಾರ್ ಮಿ॥ ದೊಡ್ಡಣ್ಣಶೆಟ್ಟರವರಿಂದ ರೂ ೪೦,೦೦೦ (೩) ವಿದ್ಯಾಭ್ಯಾಸ ಕಾರ್ಯಗಳಿಗೋಸ್ಕರ ಲಿಂಗಾಯಿತರ ಫಂಡಿನ ಪ್ರೆಸಿಡೆಂಟರವ ರಿಂದ ರೂ. ೧೩,೦೦೦.

ಆದಾಯ ವ್ಯಯ.

೧೯೦೭—೦೮ನೇ ಸಾಲಿನ ಜಮಾಖರ್ಚು.

೧೯೦೭—೦೮ನೆಯ ವರ್ಷದ ಆದಾಯವ್ಯಯಗಳನ್ನು ಪರೀಕ್ಷಿಸಿದಲ್ಲಿ ಆದಾಯವೇ ಹೆಚ್ಚಾಗಿರುವಂತೆ ತೋರಬಹುದು. ಈ ವರ್ಷದ ಆದಾಯವ್ಯಯ ಗಳನ್ನು ಸೂಚಿಸುವುದಕ್ಕೆ ಮುಂಚೆ ರೈಲ್ವೇ ಹುಟ್ಟುವಳಿ ಬಾಬನ್ನು ಲೆಕ್ಕದಲ್ಲಿ ಕಾಣಿಸುವುದರಲ್ಲಿ ಹಿಂದಿನ ವರ್ಷಗಳ ಪದ್ಧತಿಯಲ್ಲಿ ಸ್ವಲ್ಪ ವ್ಯತ್ಯಾಸವನ್ನು ಮಾಡಿದ್ದನ್ನು ತಿಳಿಸಬೇಕಾಗಿದೆ. ತವಾಂ ಜಮಾಖರ್ಚುಗಳನ್ನು ತಿಳಿಸುವ ಪಟ್ಟಿಯಿಂದ ಕಳೆದ ಎರಡು ವರ್ಷಗಳಲ್ಲಿ ರೈಲ್ವೆಯ ಒಟ್ಟು ಆದಾಯವನ್ನೂ, ಬಡ್ಡಿ ವಗೈರೆ ಖರ್ಚು ಸೇರಿ ಒಟ್ಟು ಖರ್ಚನ್ನೂ ಲೆಕ್ಕದ ಪಟ್ಟಿಯಲ್ಲಿಯೂ ಕಂಡಾಣಗಳಲ್ಲಿಯೂ ಬೇರೆಯಾಗಿ ತೋರಿಸಲಾಯಿತು. ಹೀಗೆ ಮಾಡಬೇಕಾದರೆ ಸಂಸ್ಥಾನದ ಒಟ್ಟು ಆದಾಯವ್ಯಯಗಳು ಅನವಶ್ಯಕವಾಗಿ ಜಾಸ್ತಿಯಾಗಿ ತೋರು ತ್ತವೆಯಾದಕಾರಣ ಈ ವಿಚಾರದಲ್ಲಿ ಜನಗಳಿಗೆ ತಪ್ಪು ತಿಳುವಳಿಕೆಯುಂಟಾಗುವು ದಕ್ಕೆ ಆಸ್ಪದವಾಗುತ್ತದೆ. ಆದುದರಿಂದ ಈ ಪದ್ಧತಿಯು ತೃಪ್ತಿಕರವಾದುದಲ್ಲ ವೆಂದು ಕಂಡು ಬಂತು. ಈ ಕಾರಣದಿಂದ ರೈಲ್ವೇ ಬಾಬಿನಲ್ಲಿ ಪ್ರಯಾಣಿಕ ರಿಂದಲೂ ಆಮದು ರಫ್ತುಗಳಿಂದಲೂ ವಾಸ್ತವವಾಗಿ ಬಂದ ನಿವ್ವಳ ಹುಟ್ಟುವಳಿ ಯನ್ನು ಮಾತ್ರ ತೋರಿಸುವ ಪೂರ್ವದ ಪದ್ಧತಿಯನ್ನೇ ಪುನಃ ಅನುಸರಿಸುವುದು ಒಳ್ಳೆಯದೆಂದು ನಿರ್ಣಯಿಸಲಾಯಿತು.

೧೯೦೭—೦೮ನೇ ಸಾಲಿನ ಶಿಲ್ಕು

ನಾವು ಕಳೆದ ವರ್ಷ ತಮ್ಮಗಳಿಗೆ ಸೂಚಿಸಿದ ಬಜೆಟ್ ಯಾ ಆದಾಯವ್ಯ ಯದ ಅಂದಾಜು ಪಟ್ಟಿಯಲ್ಲಿ ನಮೂದಿಸಿರುವ ಜಮಾ ಮತ್ತು ಖರ್ಚು ಎರಡು ಬಾಬುಗಳಿಂದಲೂ ರೈಲ್ವೆಗಳ ಬಡ್ಡಿ ವಗೈರೆ ಖರ್ಚು ಎಂದರೆ ೧೮,೯೩,೦೦೦ ರೂಪಾಯಿಗಳು ಬಿಟ್ಟು ಬಿಟ್ಟಲ್ಲಿ ೨,೭೬,೮೮,೦೦೦ ರೂಪಾಯಿ ಒಟ್ಟು ಆದಾಯವೂ, ೨,೧೩,೯೪,೦೦೦ ರೂಪಾಯಿ ಒಟ್ಟು ಖರ್ಚೂ ಆಗಿ, ೧೩,೭೪,೦೦೦ ರೂಪಾಯಿ ಶಿಲ್ಕು ಉಳಿಯುವುದೆಂಬ ನಿರೀಕ್ಷಣೆ ಇತ್ತು. ಈ ಉಳಿಕೆಯ ಪೈಕಿ ೧೦,೩೪,೦೦೦ ರೂಪಾಯಿಗಳು ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಡಿನಿಂದ ಉಂಟಾದ ನಿವ್ವಳ ಹುಟ್ಟುವಳಿ ೨,೮೮,೦೦೦ ರೂಪಾಯಿಗಳು ಕ್ಷಾಮ ನಿವಾರಣಾರ್ಥವಾಗಿ ವರ್ಷೇ ವರ್ಷೇ ಉಳಿಸುತ್ತಿರುವ ಮೊಬಲಗು, ಉಳಿದ ೪೮,೦೦೦ ರೂಪಾಯಿಗಳು ಸಾಧಾರಣ ಲೆಕ್ಕಚೇತದಲ್ಲಿ ಕಂಡುಬಂದ ಶಿಲ್ಕು; ಈ ರೀತಿ ಮಿಗುತ್ತದೆಂದು ನಿರೀಕ್ಷಿಸಿಕೊಂಡಿದ್ದೆವು. ಈಗ ನಾವು ನಿರೀ ಕ್ಷಿಸಿದ್ದಕ್ಕಿಂತ ಹೆಚ್ಚಾಗಿಯೇ ಶಿಲ್ಕು ಉಳಿಯಿತೆಂಬ ವಿಷಯದಲ್ಲಿ ಸಂತೋಷ ಪಡಬೇಕಾಗಿದೆ. ಹಾಲಿ ತಯಾರಾಗಿರುವ ಪೂರಾ ಲೆಕ್ಕಾ ಲೆಕ್ಕಗಳ ನೋಡಿ ಗೆ ಈ ಅಂದಾಜು ಶಿಲ್ಕಿಗಿಂತಲೂ ಹೆಚ್ಚಾಗಿಯೇ ಉಳಿದಿದೆ. ಹ್ಯಾಗ ಎಂದರೆ, ಸದರಿ ಲೆಕ್ಕಾ ಲೆಕ್ಕದಿಂದ ಒಟ್ಟು ... ರೂಪಾಯಿಗಳ ಹುಟ್ಟುವಳಿಯು ಆದುದೆಂದು ತಿಳಿಯಬರುತ್ತದೆ. ಇದರ ಪೈಕಿ ಈ ವರ್ಷದ ಖರ್ಚುಗಳನ್ನೆಲ್ಲಾ ಪೂರೈಸಿದ್ದಲ್ಲದೆ ನಗದು ಶಿಲ್ಕನ್ನು ಭರ್ತಿ ಮಾಡುವುದಕ್ಕೋಸ್ಕರ ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಡಿನಿಂದ ಬಂದ ೧೨,೯೧,೦೦೦ ರೂಪಾಯಿಯನ್ನೂ, ವರ್ಷ ವರ್ಷಕ್ಕೆ ಕ್ಷಾಮಕ್ಕಾಗಿ ತೆಗೆದಿರಿಸುತ್ತಿದ್ದ ತೆಗೆದಿರಿಸುತ್ತಿದ್ದ ೩ ಲಕ್ಷ ರೂಪಾಯಿಯನ್ನೂ ೧೯೦೭—೦೮ ರಲ್ಲಿ ತೆಗೆದ ... ರೂಪಾಯಿಯ ಸಾಲವನ್ನು ತೀರಿಸುವ ಬಗ್ಗೆ ೧,೫೩ ... ರೂಪಾಯಿ ಫಂಡನ್ನೂ ಉಳಿಸಲು ಸಾಧ್ಯವಾಯಿತು. ಈ ಮೊಬಲಗುಗಳನ್ನು ಉಳಿಸಿಟ್ಟ ನಂತರವೂ ಕೂಡ ೧೪,೮೩,೦೦೦ ರೂಪಾಯಿನಷ್ಟು ಭಾರಿ ಮೊಬಲಗು ಮಿಕ್ಕಿತು. ಅಂದಾಜು ಮಾಡಿದ್ದಕ್ಕಿಂತ ಹೆಚ್ಚಾಗಿರುವ ... ಲಕ್ಷ ರೂಪಾಯಿ ಜಾಸ್ತಿಯೂ, ಖರ್ಚಿನಲ್ಲಿ ೮೩,೦೦೦ ರೂಪಾಯಿ ಕಡಮೆಯೂ ಆದ ಪ್ರಯುಕ್ತವೇ ಇಷ್ಟು ನಿಲ್ಲು ಶಿಲ್ಕು ಉಳಿಯು ವುದಕ್ಕೆ ಕಾರಣವಾಯಿತು. ಮುಖ್ಯವಾದ ಪ್ರತಿಬಾಬಿನಲ್ಲಿಯೂ ಆದಾಯವು ಹೆಚ್ಚಿತು. ಈ ಪೈಕಿ ಜಮೀನ್ ಕಂದಾಯದ ಬಾಬಿನಲ್ಲಿ ೪.೬೫ ಲಕ್ಷವೂ, ಚಿನ್ನದ ಬಾಬಿನಲ್ಲಿ ೨.೨೫ ಲಕ್ಷವೂ, ಅಬ್ಕಾರಿ ಬಾಬಿನಲ್ಲಿ ೨.೫೦ ಲಕ್ಷವೂ, ಸರ್ಕಾರದವರು ಬ್ಯಾಂಕು ವಗೈರೆಗಳಲ್ಲಿ ಇಟ್ಟಿರುವ ಮೊಬಲಗಿನ ಮೇಲಣ ಬಡ್ಡಿಯ ಬಾಬಿನಲ್ಲಿ ೧ ಲಕ್ಷವೂ, ರೈಲ್ವೇ ಬಾಬಿನಲ್ಲಿ ೨ ಲಕ್ಷವೂ ಹೆಚ್ಚು ಆದಾಯ ಉಂಟಾಯಿತು.

ಈ ಸಾಲಿಗೂ ೧೯೦೬—೦೭ನೇ ಸಾಲಿಗೂ

ಇರುವ ತಾರತಮ್ಯ.

ಈ ವರ್ಷಕ್ಕೂ ೧೯೦೬-೦೭ನೆಯ ವರ್ಷಕ್ಕೂ ಹೋಲಿಸಿದಲ್ಲಿ ಉಭಯ ವರ್ಷಗಳಲ್ಲಿಯೂ ಒಟ್ಟು ಖರ್ಚು ಸ್ವಲ್ಪ ಹೆಚ್ಚು ಕಡಮೆ ಒಂದೇ ಸಮನಾಗಿ ದ್ದರೂ, ಒಟ್ಟು ಆದಾಯವು ಮಾತ್ರ ೧೯೦೭-೦೮ನೆ ವರ್ಷದಲ್ಲಿ ಹಿಂದಣ ವರ್ಷಕ್ಕಿಂತ ೬ ಲಕ್ಷ ರೂಪಾಯಿ ಹೆಚ್ಚಾಯಿತೆಂದು ವಿಶದವಾಗುವುದು. ಮಳೆಯ ಮೇಲಣ ಹಾಲತ್ತಿನಿಂದ ೩ ಲಕ್ಷ ರೂಪಾಯಿ ನಷ್ಟವೂ, ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಡಿನ ಮತ್ತು ಗಣಿಗ ವರಮಾನದಲ್ಲಿ ೩ ಲಕ್ಷ ರೂಪಾ ಯಿ ಕಮ್ಮಿಯೂ ಆಗಿದ್ದರೂ ಕೂಡ ಒಟ್ಟು ಆದಾಯವೇನೋ ಹೆಚ್ಚಾಯಿತೆಂ ದು ತಿಳಿಯುತ್ತದೆ. ಈಗ ಹುಟ್ಟುವಳಿ ಕಮ್ಮಿಬಿದ್ದ ಬಾಬುಗಳ ವಿಚಾರವನ್ನು ಪರಿಶೀಲಿಸುವೆವು. ಸುಪಾರಿಯ ಮೇಲಣ ಹಾಲತ್ತನ್ನು ವಜಾ ಮಾಡಿದುದರಿಂದ ಅದರ ಉತ್ಪತ್ತಿಯು ಸಂಪೂರ್ಣವಾಗಿ ನಿಂತುಹೋಯಿತು. ಇದರಿಂದ ೩ ಲಕ್ಷ ರೂಪಾಯಿಯ ವರಮಾನವು ಕಡಮೆಯಾಯಿತು. ಕೋಲಾರದ ಚಿನ್ನದ ಗಣಿಗಳ ಪೈಕಿ ಕೆಲವು ಗಣಿಗಳಲ್ಲಿ ಚಿನ್ನವು ದೊರೆಯುವುದು ಕಮ್ಮಿ ಬಿದ್ದ ದ್ದರಿಂದ ಈ ಬಾಬಿನಲ್ಲಿ ೬೪ ಸಾವಿರ ರೂಪಾಯಿ ಕಡಮೆಯಾಯಿತು. ಕಾ ವೇರೀ ವಿದ್ಯುಚ್ಛಕ್ತಿಗಾಗಿ ಜಾಸ್ತಿ ದರದಲ್ಲಿ ಹಣ ಕೊಡುವಂತೆ ಏಜೆಂಟರಿಗೆ ಹೇಳಿ ಆಗಿದ್ದ ... ಗತಿಸಿಹೋದ ಪ್ರಯುಕ್ತ ಈ ಬಾಬಿನಲ್ಲಿ ೩ ಲಕ್ಷ ರೂಪಾಯಿ ಕಡಮೆಯಾಯಿತು.

ಸರ್ಕಾರಿ ಶಿಲ್ಕು.

ಈ ವರ್ಷದ ಪ್ರಾರಂಭದಲ್ಲಿ ೭೪,೫೦,೦೦೦ ರೂಪಾಯಿ ಶಿಲ್ಕು ಇದ್ದುದು ಸಾಲ್ ಆಖೈರಿನಲ್ಲಿ ೩೯,೪೬,೦೦೦ ರೂಪಾಯಿನ ಉಳಿಕೆ ಸಹಿತ (ಇದರಲ್ಲಿ ಕ್ಷಾಮನಿವಾರಣೆಯ ೨,೦೦,೦೦೦ ರೂಪಾಯಿಯೂ, ಸಾಲದ ಫಂಡಿನ ೧,೩೩,೦೦೦ ರೂಪಾಯಿಯೂ ಸೇರಿವೆ.) ೧,೦೩,೯೮,೦೦೦ ರೂಪಾಯಿ ಆಯಿತು. ಆದರೆ ಈ ಆದಾಯವ್ಯಯದ ವಿಷಯದಲ್ಲಿ ಸರಿಯಾದ ಸ್ಥಿತಿಯನ್ನು ನಿರ್ಧರಿಸಬೇಕಾದರೆ ಈ ವರುಷ ಕಾವೇರೀ ವಿದ್ಯುಚ್ಛಕ್ತಿಯ ೩ ನೇ ಸ್ಥಾಪನೆಗೆ ತಗಲಿದ ೧೨,೮೧,೦೦೦ ರೂಪಾಯಿ ಮೊಬಲಗನ್ನು ಸರ್ಕಾರಿ ಖರ್ಚಾಗಿ ಭಾವಿಸಬೇಕಾಗಿರುವುದರಿಂದ ಸದರಿ ಸಾಲಿನ ವಾಸ್ತವವಾದ ಉಳಿತವು ೧೬,೬೫,೦೦೦ ರೂಪಾಯಿಯೂ, ೧೯೦೮ನೆ ಇಸವಿ ಜೂನ್ ೩೦ನೆ ತಾರೀಖಿನ ದಿವಸ ಖರ್ ಸರ್ಕಾರಿ ಉಳಿತವು ೯೧,೧೫,೦೦೦ ರೂಪಾಯಿಯೂ ಆಗುತ್ತವೆ.

೧೯೦೮—೦೯ ನೆ ಸಾಲಿನ ಜಮಾ ಖರ್ಚು ಅಂದಾಜು.

೧೯೦೮—೦೯ ನೆ ಸಾಲಿನ ಬಜೆಟ್ಟು ಎಂದರೆ ಅಂದಾಜು ಪಟ್ಟಿಗಳಲ್ಲಿ ಒಟ್ಟು ೨,೨೮,೧೫,೦೦೦ ರೂಪಾಯಿ ಹುಟ್ಟುವಳಿ ಆಗುವಂತೆಯೂ, ೨,೨೭,೯೯,೦೦೦ ರೂ ಖರ್ಚು ಆಗುವಂತೆಯೂ ಅಂದಾಜು ಕಾಣಿಸಿರುತ್ತದೆ. ಇದರಿಂದ ಸಾಧಾರಣ ಲೆಕ್ಕಾಚಾರ ಪ್ರಕಾರ ೧೬,೦೦೦ ರೂಪಾಯಿನಷ್ಟು ಮಾತ್ರ ಉಳಿಕೆಯಾದಂತಾಯಿತು. ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಡಿನಿಂದ ಬರಬಹು ದೆಂದು ಅಂದಾಜು ಮಾಡಿರುವ ೧೦,೩೧,೦೦೦ ರೂಪಾಯಿನ ತವಾಂ ನಿವ್ವಳ ವರಮಾನವನ್ನು ಈ ಸಲವೂ ಕೂಡ ಅಂದಾಜು ಪಟ್ಟಿಯಲ್ಲಿ ಜಮೆ ತೋರಿಸದೆ ಬಿಟ್ಟಿದೆ. ಇದಲ್ಲದೆ ಕ್ಷಾಮನಿವಾರಣೆಗಾಗಿ ೨ ಲಕ್ಷ ರೂಪಾಯಿನ ಮೊಬಲಗನ್ನು ಉಳಿಸಿದೆ. ಆದುದರಿಂದ ಅಂದಾಜು ಪಟ್ಟಿಗಳಂತೆ ಒಟ್ಟು ಉಳಿಕೆ ೧೨,೪೭,೦೦೦ ರೂಪಾಯಿ ಆದಂತಾಯಿತು.

ಹುಟ್ಟುವಳಿ ಬಾಬಿನ ಅಂದಾಜುಗಳೆಲ್ಲಾ ಸಾಧಾರಣವಾಗಿ ಹಿಂದಿನ ಸಾಲು ಗಳ ಅಂದಾಜುಗಳಷ್ಟೇ ಆಗಿರುತ್ತವೆ. ಆದರೆ ಗಣಿಗಳ ರಾಜಾದಾಯ ಮತ್ತು ಗುತ್ತಿಗೆಯಿಂದ ಬರತಕ್ಕ ವರಮಾನ ಮಾತ್ರ, ಕಳೆದ ವರುಷದ ವರಮಾನಕ್ಕಿಂತ ಸುಮಾರು ೧ ಲಕ್ಷ ರೂಪಾಯಿ ಕಡಿಮೆಯಾಗಬಹುದೆಂದು ಅಂದಾಜು ಹಾಕ ಬೇಕಾಗಿದೆ. ಖರ್ಚಿನ ಬಾಬಿನಲ್ಲಿ ಎಲ್ಲಾ ಇಲಾಖೆಗಳ ಸಾಧಾರಣ ಖರ್ಚಿಗಾಗಿ ಬೇಕಾದ ಹಣವನ್ನೂ ಅಂದಾಜು ಪಟ್ಟಿಗಳಲ್ಲಿ ಸೇರಿಸಿರುವುದಲ್ಲದೆ, ಪ್ರಯೋಜನ ಕರವಾದ ಮತ್ತು ಅಭಿವೃದ್ಧಿಗಾಳಕರವಾದ ಅನೇಕ ಏರ್ಪಾಟುಗಳಿಗೆ ಬೇಕಾಗುವ ಮೊಬಲಗುಗಳನ್ನು ಸಹ ನಮೂದಿಸಿರುತ್ತದೆ. ಇವುಗಳಲ್ಲಿ ಮುಖ್ಯವಾದುವುಗ ಳ್ಯಾವುವೆಂದರೆ — ಹೋಬಳಿ ಸ್ಕೂಲ್ ಮಾಸ್ಟರುಗಳಿಗೆ ಸಂಬಳಗಳ ಏರಿ ಮತ್ತು ಪ್ರಾಥಮಿಕ ವಿದ್ಯಾಭ್ಯಾಸದ ಫೀಜುಗಳನ್ನು ವಜಾ ಮಾಡುವುದು. ಸ್ಯಾನಿಟರಿ ಯಾ ಆರೋಗ್ಯ ಇಲಾಖೆಯನ್ನು ಅಭಿವೃದ್ಧಿಪಡಿಸಿ ಅದಕ್ಕೆ ಬೇಕಾದ ಸಿಬ್ಬಂದಿ ಗಳನ್ನು ನೇಮಕಮಾಡುವುದು. ಚೆಲ್ಲರೆ ಶಿಸ್ತಿನ ಇಲಾಖೆಗಳನ್ನು ವೃದ್ಧಿಪಡಿಸಿ ಅವುಗಳಿಗೆ ಬೇಕಾದ ಸಿಬ್ಬಂದಿಗಳನ್ನು ನೇಮಿಸುವುದು. ಮತ್ತು ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಯಾ ಕೈಗಾರಿಕೆ ಮುಂತಾದ ಕಸುಬುದಾರಿ ಪಾಠ ಶಾಲೆಯನ್ನು ಕಟ್ಟುವುದು.

ಹಿಂದೂಸ್ಥಾನದಲ್ಲಿನ ಅಸಮಾಧಾನ ಸ್ಥಿತಿ.

ಹಿಂದೂಸ್ಥಾನದಲ್ಲಿ ಈಗ ರಾಜಕೀಯ ವಿಷಯಗಳಲ್ಲಿ ಅಸಮಾಧಾನವಿರುವ ವಿಚಾರವು ತಮ್ಮಗಳಿಗೆ ತಿಳಿದಿರಬಹುದು. ಈ ಉಪನ್ಯಾಸವನ್ನು ಪೂರೈಸುವುದಕ್ಕೆ ಮುಂಚೆ ಈ ವಿಚಾರವಾಗಿ ಸ್ವಲ್ಪ ಮಟ್ಟಿಗೆ ಪ್ರಸ್ತಾಪಿಸಬೇಕಾಗಿದೆ. ಈ ಅಸಮಾ ಧಾನ ಸ್ಥಿತಿಗೆ ಕಾರಣಗಳು ಯಾವುವೆಂಬುವನ್ನು ಈಗ ವಿಚಾರಿಸ ಬೇಕು ಅವಶ್ಯಕ ವಿಲ್ಲ. ಕಾರಣಗಳು ಯಾವುದಾದರೂ ಆಗಲಿ ಅಸಮಾಧಾನ ಸ್ಥಿತಿಯೇನೋ ಇರು ತ್ತದೆಂದು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಹಿಂದೂಸ್ಥಾನದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಉಪಕ್ರಮ ಮಾಡಿದಾಗಲೇ ಈ ಅಸಮಾಧಾನವೂ ಹುಟ್ಟಿ ತೆಂದು ಹೇಳಬಹುದು. ಹಿಂದೂಸ್ಥಾನದಲ್ಲಿ ಇಂಗ್ಲಿಷ್ ಭಾಷೆಯನ್ನು ಕಲಿತಿರುವ ನಮ್ಮ ದೇಶೀಯರು ಇಂಗ್ಲೆಂಡು ದೇಶದ ಚರಿತ್ರೆಯನ್ನೂ ಇಂಗ್ಲಿಷ್ ಭಾಷೆಯ ಲ್ಲಿ ಬರೆದಿರತಕ್ಕ ಪುಸ್ತಕಗಳನ್ನೂ ಓದಿ ವಿಷಯಗಳನ್ನು ಕುರಿತು ಆಲೋಚಿಸುವುದ ರಿಂದ ರಾಜಕೀಯ ಅಧಿಕಾರಗಳಲ್ಲಿ ತಮಗೂ ಇನ್ನೂ ಹೆಚ್ಚು ಅಧಿಕಾರ ಸ್ವಾತಂ ತ್ರ್ಯಗಳನ್ನು ಪಡೆಯಬೇಕೆಂಬ ಆಸೆಯು ಅವರಲ್ಲಿ ಹುಟ್ಟಿದೆ. ಈ ಆಸೆಯು ಪ್ರಾರಂಭದಲ್ಲಿ ಸ್ಪಷ್ಟವಾಗಿ ಕಾಣದೇ ಇದ್ದಾಗ್ಯೂ, ಈಚೀಚೆಗೆ ಅವರಲ್ಲಿ ಬೇರೂರಿ ನೆಲೆಗೊಂಡಿರುವುದಲ್ಲದೆ ಇಂಗ್ಲಿಷ್ ತಿಳಿಯದ ಜನಗಳಲ್ಲಿಯೂ ಕೂಡ ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ನಿಧಾನವಾಗಿ ಹರಡುತ್ತಿದೆ ಎಂಬು ವುದರಲ್ಲಿ ಸಂದೇಹವಿಲ್ಲ.

ರಾಜ್ಯಾಡಳಿತ ವಿಷಯದಲ್ಲಿ ಪ್ರಜೆಗಳಿಗೂ ಸ್ವಾತಂತ್ರ್ಯವೂ ಅಧಿಕಾರವೂ ಇರಬೇಕೆಂಬ ಆಶೆಗಳು ನಮ್ಮ ದೇಶದಲ್ಲಿ ಅನಾದಿಯಿಂದ ಅನುಭವದಲ್ಲಿ ಬಂದುದಲ್ಲವೆಂತಲೂ, ಇಂಗ್ಲೆಂಡು ದೇಶೀಯರಿಂದ ಈಚೆಗೆ ಕಲಿತುಕೊಂಡು ದೆಂತಲೂ ನಮ್ಮ ದೇಶೀಯರ ಸ್ಥಿತಿಗತಿಗಳಿಗನುಸಾರವಾಗಿ ಅನುಭವದಲ್ಲಿ ಬರ ಬೇಕಾದರೆ ಬಹುಕಾಲ ಬೇಕಾಗುತ್ತದೆಂತಲೂ ಒಂದುಪಕ್ಷ ಹೇಳಬಹುದು. ಆದರೂ ಈ ಆಶಯಗಳು ಈಗ ಈ ದೇಶೀಯರಲ್ಲಿ ಶಾಶ್ವತವಾಗಿ ನಾಟು ಹರಡಿ ಕೊಳ್ಳುತ್ತವೆಯೇ ಹೊರತು ಅನ್ಯಥಾ ಅಲ್ಲವೆಂದು ಸರ್ವರೂ ಒಪ್ಪಿಕೊಳ್ಳಲೇ ಬೇಕು. ಪ್ರಜೆಗಳಲ್ಲಿ ಮುಖಂಡರೂ ಸರ್ಕಾರದವರೂ ಸಹ ಈ ನೂತನ ಮನೋ ಭಾವಾತರಂಗವನ್ನು ಸರಿಯಾಗಿ ತಿಳಿದುಕೊಂಡು ಪ್ರಜೆಗಳ ಈ ಆಶೆಯು ನ್ಯಾಯ ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಬೇಕಾದುದು ಅವರ ಮುಖ್ಯವಾದ ಕರ್ತವ್ಯ.

ಈಗಿನ ಗಲಭೆಯ ಸ್ಥಿತಿಯನ್ನು ಹೋಗಲಾಡಿಸುವುದು ಕಷ್ಟಸಾಧ್ಯವಾ ದಾಗ್ಯೂ ಪ್ರಜೆಗಳಿಗೂ ಸರ್ಕಾರದವರಿಗೂ ಪರಸ್ಪರ ಅನುರಾಗವು ಇರತಕ್ಕುದೇ ಇದಕ್ಕೆ ಪರಿಹಾರವೆಂದು ಅನೇಕರು ಅನೇಕ ಸಂದರ್ಭಗಳಲ್ಲಿ ಹೇಳಿರುವುದನ್ನು ಪುನಃ ಇಲ್ಲಿ ಹೇಳಬೇಕಾಗಿದೆ. ರಾಜ್ಯಭಾರಮಾಡತಕ್ಕವರು ತಮ್ಮ ಪ್ರಜೆಗಳಲ್ಲಿ ಅನುರಾಗವಿಲ್ಲದವರೆಂದು ವಿವೇಚನೆ ಇಲ್ಲದೆ ಕೆಲವು ಜನರು ಪದೇ ಪದೇ ಹೇಳು ವುದನ್ನು ಒಪ್ಪತಕ್ಕದ್ದಲ್ಲ. ಪ್ರಜೆಗಳಲ್ಲಿ ಇರತಕ್ಕ ನ್ಯೂನತೆಗಳನ್ನು ಅಭಿಮಾನ ವಿಟ್ಟು ನಿವಾರಿಸಿ ಅವರ ಕೋರಿಕೆಗಳನ್ನು ಸಾಧ್ಯವಾದ ಮಟ್ಟಿಗೆ ಪ್ರೋತ್ಸಾಹ ದಿಂದ ನಡೆಯಿಸಿಕೊಡಬೇಕೆಂಬ ಅಭಿಮಾನವು ಸರ್ಕಾರಕ್ಕೆ ಇರಬೇಕು. ಸರ್ಕಾರ ದವರಿಗೆ ಇಂಡಿಯಾ ದೇಶದ ಜನಗಳ ಸ್ವಭಾವವು ಚೆನ್ನಾಗಿ ತಿಳಿಯದೆ ಇರುವುದು ಸಹಜವೇ ಎಂಬ ಸಂಗತಿಯನ್ನೂ, ಹೊಸ ಏರ್ಪಾಡುಗಳನ್ನು ಜಾರಿಗೆ ತರುವುದ ರಲ್ಲಿ ಅವರಿಗೆ ತುಂಬಾ ಕಷ್ಟಗಳುಂಟು ಎಂಬ ಸಂಗತಿಯನ್ನೂ, ಈ ದೇಶಕ್ಕೆ ಹೊರಗಿನಿಂದ ಉಪಾಧಿ ಉಂಟಾಗದಂತೆ ಕಾಪಾಡುವುದೂ, ದೇಶದೊಳಗೆ ಪ್ರಜಾ ಕ್ಷೇಮವನ್ನು ನೋಡಿಕೊಳ್ಳುವುದೂ, ನಾನಾ ಜಾತಿಯ ಜನಗಳಿರುವ ಈ ದೇಶ ದಲ್ಲಿ ಅಭಿವೃದ್ಧಿಯುಂಟಾಗುವಂತೆ ನಿರ್ವಹಿಸುವುದೂ, ಈ ರೀತಿಯಾದ ಬಹು ಕಷ್ಟ ಕೆಲಸಗಳನ್ನು ಅವರು ವಹಿಸಿರುತ್ತಾರೆಂಬ ಸಂಗತಿಯನ್ನೂ ತಿಳಿದುಕೊಂಡು ಅವರಲ್ಲಿ ಪ್ರಜೆಗಳು ಭಕ್ತಿ ವಿಶ್ವಾಸಗಳನ್ನು ಇಟ್ಟಿರಬೇಕು. ಇದನ್ನೆಲ್ಲಾ ಪರ್ಯಾ ಲೋಚಿಸಿ ನೋಡಿದರೆ ದುಷ್ಟರಾದ ಕೆಲವು ಜನರು ಸ್ವಾಯತ್ತೆಗಳನ್ನು ಬಿಡಿ ದರಾಶೋನ್ಮಾರಾಗಿ ಸರ್ಕಾರವನ್ನು ಭಯಪಡಿಸುವ ಕೇವಲ ನಿಷ್ಪ್ರಯೋಜನವಾದ ಉದ್ದೇಶದಿಂದ ರಾಜದ್ರೋಹಕರವಾದ ಘೋರಕೃತ್ಯಗಳನ್ನು ನಡೆಯಿಸಬಿಟ್ಟಿರು ವುದು ತುಂಬಾ ವಿಷಾದಕರವಾದುದೇ ಸರಿ.

ಬ್ರಿಟಿಷ್ ಸರ್ಕಾರದವರು ಈ ದೇಶದೊಳಗೆ ಸಮಾಧಾನವನ್ನು ಏರ್ಪಡಿಸಿ, ಪ್ರಜೆಗಳನ್ನು ನ್ಯಾಯದಿಂದ ಕಾಪಾಡುತ್ತಾ ಇದ್ದಾರೆ. ಈ ಕಾರಣದಿಂದ ಇಂಡಿಯಾ ದೇಶದ ಬಹುಪಾಲು ಜನರು ಶ್ರೀಮದಿಂಡ್ಯಾ ಚಕ್ರವರ್ತಿಯವರಲ್ಲಿ ಸಂಪೂರ್ಣ ರಾಜಭಕ್ತಿ ವಿಶ್ವಾಸವುಳ್ಳವರಾಗಿದ್ದಾರೆ. ಆದುದರಿಂದ ಈ ಜನಗಳೂ ಮತ್ತು ಸರಿಯಾದ ತಿಳುವಳಿಕೆಯುಳ್ಳ ಜನರೆಲ್ಲರೂ ಈ ರೀತಿ ರಾಜದ್ರೋಹಕರವಾದ ಕೆಲಸಗಳಿಗೂ ಇಂಡಿಯಾ ದೇಶವು ಬ್ರಿಟಿಷ್ ಸರ್ಕಾರದವರ ಕೈತಪ್ಪಬೇಕೆಂಬ ಯೋಚನೆಗೂ ಸ್ವಲ್ಪವೂ ಸಮ್ಮತಿಸಲಾರರು.

ನಮ್ಮ ಮೈಸೂರು ಸಂಸ್ಥಾನದ ವಿಷಯವನ್ನು ಆಲೋಚಿಸೋಣ. ಇದರ ಸುತ್ತಲೂ ಬ್ರಿಟಿಷ್ ರಾಜ್ಯವಿದೆ. ಬ್ರಿಟಿಷ್ ಇಂಡಿಯಾದಲ್ಲಿ ಸ್ವಾತಂತ್ರ್ಯ, ದೇಶಾಭಿಮಾನ ವಗೈರೆ ಅಭಿಪ್ರಾಯಗಳು ಹುಟ್ಟುವುದಕ್ಕೆ ಸಹಕಾರಿಯಾದ ಇಂಗ್ಲೀಷ್ ವಿದ್ಯಾಭ್ಯಾಸ ಮುಂತಾದ ಕಾರಣಗಳು ಅಲ್ಲಿ ಎಷ್ಟು ಕಾಲದಿಂದ ಇವೆಯೋ ಇಲ್ಲಿಯೂ ಅಷ್ಟೇ ಕಾಲದಿಂದ ಇವೆ. ಆದುದರಿಂದ ಇಂಡಿಯಾ ದೇಶ ದಲ್ಲೆಲ್ಲಾ ಈಗ ಹರಡಿಕೊಂಡಿರುವ ಅಸಮಾಧಾನವು ಇಲ್ಲಿಯೂ ಸ್ವಲ್ಪ ಮಟ್ಟಿಗೆ ವ್ಯಾಪಿಸಿರುವುದು ಸಹಜವಾದುದೇ ಸರಿ. ಆದರೆ ಈ ಸ್ಥಿತಿಯಿಂದ ಇಂಡಿಯಾ ದೇಶದ ಇತರ ಕೆಲವು ಕಡೆಗಳಲ್ಲಿ ಉಂಟಾಗಿರುವ ಅನರ್ಥಗಳು ಇಲ್ಲಿ ಸಂಭವಿ ಸಿಲ್ಲವೆಂಬ ಅಂಶವನ್ನು ಕುರಿತು ಸಂತೋಷಪಡಬೇಕಾಗಿದೆ.

ನಮ್ಮ ಸಂಸ್ಥಾನದಲ್ಲಿಯೂ ಕೂಡ ಸ್ವಲ್ಪ ಮಟ್ಟಿಗೆ ಗಲಾಟೆಯೋರರು ದುರ್ಬೋಧನೆಗಳನ್ನು ಮಾಡುವುದಕ್ಕೆ ಶುರುಮಾಡಿದರು. ಆದರೆ ಈ ಗಲಾಟೆ ಯೋರರು ಅಷ್ಟು ಅಪಾಯಕರವಾದಾಗ್ಯೂ ಅವರ ವಿಷಯದಲ್ಲಿ ಅವಶ್ಯಕ ವಾದ ಬಂದೋಬಸ್ತು ಮಾಡಬೇಕಾಯಿತು. ಮತ್ತು ವಿತಿಮೀರಿ ಗಲಭೆ ಎಬ್ಬಿ ಸುವವರ ದುರ್ಬೋಧನೆಗಳನ್ನು ಸ್ಕೂಲು ಹುಡುಗರೂ ಜನಸಾಮಾನ್ಯವೂ ಕೇಳಿ ಅದರಂತೆ ನಡೆದರೆ ಮುಂದಕ್ಕೆ ತುಂಬಾ ಅನರ್ಥಗಳಿಗೆ ಗುರಿಯಾಗಬೇಕಾದೀ ತೆಂದು ಅವರಿಗೆ ಎಚ್ಚರಿಕೆಯನ್ನೂ ಕೂಡ ಕೊಡಲಾಯಿತು. ಇದಲ್ಲದೆ ಮೈಸೂ ರಿನ ವಿಷಯದಲ್ಲಾದರೋ, ವಿಶೇಷವಾಗಿ ದೇಶಾಭಿಮಾನಿಗಳಾದವರಿಗೆ ಯಾವ ಯಾವ ಕೋರಿಕೆಗಳಿರಬಹುದೋ ಅಂಥಾ ಕೋರಿಕೆಗಳೆಲ್ಲಾ ಈ ಸಂಸ್ಥಾನದ ಜನರಿಗೆ ನೆರವೇರಿಯೇ ಇವೆ ಎಂಬುವುದನ್ನು ಎಲ್ಲರಿಗೂ ತಿಳಿಸಲಾಯಿತು. ಪ್ರಥ ಮತಃ ಸಂಸ್ಥಾನದ ಜನಗಳಿಗೆಲ್ಲಾ ಪ್ರತಿನಿಧಿಸ್ಥಾನವಾಗಿ ಈ ಮಹಾ ಸಭೆಯು ಸ್ಥಾಪಿತವಾಗಿದೆ. ಪ್ರತಿಯೊಂದು ಸರ್ಕಾರಿ ಆದೇಶವನ್ನೂ ಏರ್ಪಾಡನ್ನೂ ಮೆಂಬ ರುಗಳು ಈ ಸಭೆಯಲ್ಲದೆ ನ್ಯಾಯವಿಧಾಯಕ ಸಭೆಯೊಂದನ್ನೂ ಕೂಡ ಏರ್ಪಡಿ ಸಿರಾರೆ. ಈಚೆಗೆ ಈ ನ್ಯಾಯವಿಧಾಯಕ ಸಭೆಗೆ ಪ್ರಜಾಪ್ರತಿನಿಧಿ ಸಭೆಯಿಂದ ಇಬ್ಬ ರು ಮೆಂಬರುಗಳನ್ನು ಚುನಾಯಿಸಲು ಶ್ರೀಮನ್ಮಹಾರಾಜಾಸಾಹೇಬ್ ಬಹದ್ದೂರ ವರು ಅಪ್ಪಣೆ ದಯಪಾಲಿಸಿರುತ್ತಾರೆ.

ಇವುಗಳಲ್ಲದೆ ಶ್ರೀಮನ್ಮಹಾರಾಜರವರ ಮಂತ್ರಾಲೋಚನಾಸಭೆಯೂ ಏರ್ಪಟ್ಟಿದೆ. ಇವುಗಳೆಲ್ಲಕ್ಕೂ ಮೇಲೆ ಶ್ರೀಮನ್ಮಹಾರಾಜರವರೇ ಹಿಬರ ಪ್ರಾಯದವರಾಗಿದ್ದು ಖುದ್ದು ರಾಜ್ಯಭಾರ ನಡೆಸುತ್ತಿರುವರು. ನಮ್ಮ ಸಂಸ್ಥಾನದ ರಾಜ್ಯಭಾರಕ್ರಮವನ್ನು ಬ್ರಿಟಿಷ್ ಸರ್ಕಾರದ ಕ್ರಮದಂತೆ ಏರ್ಪಡಿಸಿ ಪ್ರಜೆಗಳ ಪ್ರಯೋಜನವನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ವಿಚಕ್ಷಣೆಯಿಂದ ನಡೆ ಸುತ್ತಿದೆ. ಮತ್ತು ಸರ್ಕಾರದ ಅಧಿಕಾರಿಗಳೆಲ್ಲರೂ ಸಾಮಾನ್ಯವಾಗಿ ಹಿಂದೂ ದೇಶೀಯರೇ ಆಗಿರುತ್ತಾರೆ. ಈ ಸಂಸ್ಥಾನದಲ್ಲಿ ಪ್ರಜೆಗಳಿಗೆ ಎಲ್ಲಾ ಭಾಗದ ಲ್ಲಿಯೂ ಕ್ಷೇಮವುಂಟಾಗುವ ಕೆಲಸಗಳನ್ನು ಸರ್ಕಾರದವರು ಬಹಳ ಶ್ರದ್ಧೆಯಿಂ ದಲೂ ಮಾಡುತ್ತಲಿದ್ದಾರೆ. ಗ್ರಾಮಕೆರೆ ಪಂಚಾಯಿತಿಗಳೆಂಬ ಮತ್ತೊಂದು ಏರ್ಪಾಡನ್ನು ಮಾಡಬೇಕೆಂದು ಸರ್ಕಾರದವರು ಯೋಚಿಸಿರುತ್ತಾರೆ. ಇದರಿಂದ ಜನಗಳಿಗೆ ಅನೇಕ ಪ್ರಯೋಜನಗಳುಂಟಾಗುವುದರಲ್ಲಿ ಸಂದೇಹವಿಲ್ಲ. ಈ ಪ್ರಯೋ ಜಗಳ ಪೈಕಿ ಕೆಲವಾದರೂ ದೊರೆತರೆ ಆಯಾ ಸ್ಥಳಗಳ ಆಡಳಿತಗಳನ್ನು ಆಯಾ ಜನರೇ ನಡೆಸಿಕೊಳ್ಳುವ ಸ್ವಾತಂತ್ರ್ಯವನ್ನು ಯಾವರೀತಿ ಅವರಿಗೆ ಕೊಡಬಹುದು ಎಂಬ ದೊಡ್ಡ ವಿಷಯವನ್ನು ಬಹಳ ಮಟ್ಟಿಗೆ ತೀರ್ಮಾನಮಾಡಿದಂತಾಗುತ್ತದೆ. ಇಂಡಿಯಾ ದೇಶದ ಇತರ ಕಡೆಗಳಲ್ಲಿರುವ ನಮ್ಮ ದೇಶೀಯರು ಇಂಥಾ ಸ್ವಾತಂ ತ್ರ್ಯಕ್ಕಾಗಿಯೇ ಇನ್ನೂ ಬಹಳ ಸಾಹಸಪಡುತ್ತಾ ಇದ್ದಾರೆ. ಇಂಥಾ ಸ್ವಾತಂ ತ್ರ್ಯವನ್ನು ಈಗಲೇ ಈ ಸಂಸ್ಥಾನದ ಪ್ರಜೆಗಳು ಪಡೆದಂತೆ ಆಗುತ್ತದೆ.

ಈ ಸಂಸ್ಥಾನದ ಜನರು ಈ ಪ್ರಯೋಜನಗಳನ್ನೆಲ್ಲಾ ಹೊಂದಿದ್ದರೂ ಕೂಡ ವೃಥಾ ಗಲಭೆ ಎಬ್ಬಿಸುವವರ ದುರ್ಬೋಧನೆಗೆ ಕಿವಿಗೊಟ್ಟು ನಮ್ಮಗಳ ಕ್ಷೇಮ ಕ್ಕಾಗಿಯೂ ಸಂಸ್ಥಾನದ ಏಳಿಗೆಗಾಗಿಯೂ ನಾವು ಮಾಡಬೇಕಾದ ಕಾರ್ಯಗ ಳನ್ನು ಬಿಟ್ಟುಬಿಡತಕ್ಕದ್ದು ಶುದ್ಧ ಅವಿವೇಕವಲ್ಲವೇ? ಈಗ ನಡೆಯುತ್ತಿರುವ ಸ್ವಾತಂತ್ರ್ಯಾಭಿಲಾಷೆಯಲ್ಲಿ ಕೆಡಕೇನೂ ಇಲ್ಲ. ಆದರೆ ಇದರಿಂದ ಅಧಿಕಾರ ಗೌರವವನ್ನು ತಿರಸ್ಕರಿಸುವುದೂ, ವಿವೇಚನಾಶಕ್ತಿ ಇಲ್ಲದ ಜನರನ್ನು ಕಾನೂನಿಗೆ ವಿರೋಧವಾದ ದುರ್ನಡತೆಯಲ್ಲಿ ಪ್ರವರ್ತಿಸುವಂತೆ ಮಾಡುವುದೂ, ಈ ಫಲಗಳು ಉಂಟಾದರೆ, ಜನಸಾಮಾನ್ಯದ ಕ್ಷೇಮಲಾಭಗಳಿಗೂ ದೇಶಾಭಿವೃದ್ಧಿಗೂ ಕುಂ ದಕ ಉಂಟಾಗುತ್ತದೆ. ಇಂಡಿಯಾ ದೇಶದ ಇತರ ಭಾಗಗಳಲ್ಲಿ ದುರ್ಮಾರ್ಗಿ ಗಳೂ ಉನ್ಮತ್ತರೂ ಆದ ಕೆಲವು ಗಲಭೆಯೋರರು ಈಚೆಗೆ ನಡೆಸಿರುವ ಘೋರ ವಾದ ಅನರ್ಥಗಳನ್ನು ಈ ಸಂಸ್ಥಾನದ ಪ್ರಜಾಪ್ರತಿನಿಧಿಗಳಾದ ತಾವುಗಳೆಲ್ಲರೂ ಖಂಡಿಸುತ್ತೀರೆಂತಲೂ ಈ ಕೃತ್ಯಗಳನ್ನು ಯಾವ ಅಭಿಪ್ರಾಯದಿಂದಲೂ ರೀತಿ ಯಿಂದಲೂ ನಡೆಸಿದುದಾಗಿರಲಿ ಅಂಥಾ ಅಭಿಪ್ರಾಯಗಳನ್ನೂ ಕ್ರಮಗಳನ್ನೂ ಅನುಮೋದಿಸುವುದು ಎಂದಿಗೂ ನಮ್ಮಗಳ ಸ್ವಭಾವವಲ್ಲವೆಂತಲೂ ನಾವು ದೃಢ ವಾಗಿ ಹೇಳುತ್ತೇವೆ.

ಸಂಸ್ಥಾನದ ವಿಷಯದಲ್ಲಿಯೂ ಶ್ರೀಮನ್ಮಹಾರಾಜರವರಲ್ಲಿಯೂ ತಾವುಗಳು ಪ್ರೀತಿಗೌರವಾದಿಗಳನ್ನು ಇಟ್ಟಿರಬೇಕಲ್ಲದೆ, ನಮ್ಮಗಳಿಗೂ ನಮ್ಮ ಸಂಸ್ಥಾನಕ್ಕೂ ಎಷ್ಟೋ ಉಪಕಾರವನ್ನು ಮಾಡಿರುವ ಶ್ರೀಮದಿಂಡಿಯಾ ಚಕ್ರ ವರ್ತಿಯವರಲ್ಲಿ ರಾಜಭಕ್ತಿ ಗೌರವಗಳನ್ನು ಇಟ್ಟುಕೊಂಡಿರಬೇಕಾದುದು ನಮ್ಮ ಕರ್ತವ್ಯ. ಈ ರಾಜಭಕ್ತಿ ವಿಶ್ವಾಸಾದಿಗಳಿಗೆ ಎಷ್ಟು ಮಾತ್ರವಾಗಲಿ ಕುಂದಕ ವುಂಟುಮಾಡುವ ಪ್ರಯತ್ನಗಳನ್ನು ತಿರಸ್ಕರಿಸಬೇಕಲ್ಲದೆ ಅವುಗಳಿಗೆ ಸ್ವಲ್ಪ

ಮಾತ್ರವೂ ಅವಕಾಶಕೊಡಕೊಡದು ನಮ್ಮ ಸಂಸ್ಥಾನಕ್ಕೆ ಹೊರಗಿನಿಂದ ಬಾಧೆಯುಂಟಾಗದೆ ಇರುವುದಕ್ಕೂ ರಾಜ್ಯಭಾರ ಕ್ರಮವು ಬಹು ವಿಚಕ್ಷಣೆಯಿಂದ ನಡೆಯುತ್ತಿರುವುದಕ್ಕೂ ಮುಖ್ಯವಾಗಿ ಸಾರ್ವಭೌಮ ಸರ್ಕಾರದವರು ಪ್ರೀತಿ ಸಹಾಯಗಳೇ ಕಾರಣವಾಗಿವೆ. ನಮ್ಮ ಶ್ರೀಮನ್ಮಹಾರಾಜರವರು ಕೆಲವುಕಾಲದ ಹಿಂದೆ ಶ್ರೀಮದಿಂಡಿಯಾ ಸಾರ್ವಭೌಮರ ಪ್ರತಿನಿಧಿಯವರ ಸಮಕ್ಷಮ ಈ ಸಂಸ್ಥಾನದ ಪ್ರಜೆಗಳಿಗಿರುವ ರಾಜಭಕ್ತಿಯ ವಿಷಯವಾಗಿ ಎಲ್ಲರಿಗೂ ತಿಳಿಯುವಂತೆ ಸ್ಪಷ್ಟವಾದ ರೀತಿಯಲ್ಲಿ ಅಪ್ಪಣೆ ಕೊಡಿಸಿದ ಮಾತುಗಳನ್ನು ಇಲ್ಲಿ ನಮ್ಮವರಿಗೆಲ್ಲಾ ತಿಳಿಸಿ ಈ ಉಪನ್ಯಾಸವನ್ನು ಪೂರೈಸುವೆವು.

"ನಮ್ಮ ಮೈಸೂರು ಸಂಸ್ಥಾನಕ್ಕೂ ಸಾರ್ವಭೌಮ ಸರ್ಕಾರ ಮತ್ತು ಅವರ ಅಧಿಕಾರಿಗಳಿಗೂ ಒಂದು ತರಹ ವಿಶೇಷವಾದ ಸಂಬಂಧವಿರುವುದೆಂದು ತಾವು ಸೂಚಿಸೋಣವಾಯಿತು. ಸಾರ್ವಭೌಮರ ಸರ್ಕಾರದವರು ಈ ಸಂಸ್ಥಾನಕ್ಕೆ ಮಹಾ ಉಪಕಾರವನ್ನು ಮಾಡಿದ್ದಾರೆ. ಈ ಉಪಕಾರವನ್ನು ಹೊಂದುವುದಕ್ಕೆ ನಮ್ಮ ಸಂಸ್ಥಾನವು ಸಕಲ ವಿಧದಲ್ಲಿಯೂ ಅರ್ಹವಾಗಿರುತ್ತೆಂದು ನಾವು ದೃಢವಾಗಿ ನಂಬಿರುತ್ತೇವೆ. ಇವುಗಳೇ ಈ ವಿಶೇಷ ಸಂಬಂಧಕ್ಕೆ ಆಧಾರವಾಗಿರುತ್ತವೆ. ಈಗ್ಗೆ ೧೦೦ ವರುಷಗಳಿಗಿಂತ ಜಾಸ್ತಿಯಾಗಿಯೇ ಕಷ್ಟಕಾಲಗಳಲ್ಲಿಯೂ ಸುಖಕಾಲಗಳಲ್ಲಿಯೂ ನಾವು ಉಭಯತ್ರರೂ ವಿಶ್ವಸಿಸಿ ಪರಸ್ಪರ ಸಹಾಯ ಮಾಡುತ್ತಾ ಬಂದಿರುವುದರಿಂದ ಈ ಸೌಹಾರ್ದವು ಇನ್ನೂ ದೃಢಪಟ್ಟಿದೆ. ಇದೇ ಸೌಹಾರ್ದವು ಮುಂದೆಯೂ ಶಾಶ್ವತವಾಗಿ ನಡೆದುಬರಬೇಕೆಂಬುವುದೇ ನಮ್ಮ ಮೈಸೂರು ಸಂಸ್ಥಾನದ ಪ್ರಜೆಗಳಿಗೂ ಈ ಸಂಸ್ಥಾನದ ಪ್ರಭುತ್ವವನ್ನು ವಹಿಸಿರುವ ನಮಗೂ ಇರತಕ್ಕ ಮುಖ್ಯ ಕೋರಿಕೆಯಾಗಿದೆ."

ಮೈಸೂರು ಸಂಸ್ಥಾನದ ಜಮಾ ಖರ್ಚು.

೧೯೦೭-೦೮ ನೇ ಸಾಲಿನ ಜಮಾ ಬಾಬುಗಳು

	1906-07. ನಿಶ್ಚಿತ ರೂ.	1907-08. ಪ್ರಾಥಮಿಕ. ರೂ.
ಜಮೀನು ಕಂದಾಯ	1,00,31,178	1,03,78,856
ಉಪ್ಪು	18,638	10,182
ಸ್ಟಾಂಪುಗಳು	7,58283	7,98,314
ಅಬ್ಕಾರಿ—(ಎ) ಸಾರಾಯಿ	20,01,438	21,70,393
(ಬಿ) ಶೇಂದಿ	18,56,485	18,85,292
(ಸಿ) ಚಿಲ್ಲರೆ ಬಾಬುಗಳು	1,09,058	92,227
ಸಾಯರು	3,07,677	2,451
ಮೊಹತರ್ಫ	3,29,650	3,16,693
ಜಂಗಲು—(ಎ) ಗಂಧದ ಮರ	12,56,680	14,17,702
(ಬಿ) ಚೌಬೀನೆ	3,57,891	4,26,491
(ಸಿ) ಇತರ ಜಂಗಲ ಬಾಬುಗಳು	3,01,748	4,28,739
ಚಿನ್ನದ ಗಣಿ—(ಎ) ಶೇಕಡಾ ೫ ರಂತೆ ರಾಜಾದಾಯ	18,01,492	15,13,083
(ಬಿ) ಖನಿಜಾನ್ವೇಷಣದ ಲೈಸೆನ್ಸುಗಳ ರುಸುಂ ಹೊಸದಾಗಿ ಕೊಟ್ಟ ಗುತ್ತಿಗೆಗಳಿಗೆ ಪ್ರೀಮಿಯಂ ಯಾ ಮುಂಗಡ	45,422	69,892
ರಿಜಿಸ್ಟ್ರೇಷನ್	1,43,640	1,49,445
ಅಮೃತಮಹಲ್	54,454	49,606
ಸರ್ಕಾರೀ ಮತ್ತು ಬ್ಯಾಂಕಿನ ಠೇವಣಾತಿಗಳು—		
(ಎ) ಇಂಡಿಯಾ ಸರ್ಕಾರಿ ಪತ್ರಗಳ ಮೇಲಿನ ಬಡ್ಡಿ	2,24,559	4,50,567
(ಬಿ) ಮದರಾಸ್ ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಹಣದ ಮೇಲಿನ ಬಡ್ಡಿ	37,455	79,068
ಸಾಲಗಳ ಮತ್ತು ಕಂಬಾಯದ ಬಾಕಿಗಳ ಮೇಲಿನ ಬಡ್ಡಿ	99,927	1,34,621
ನ್ಯಾಯವಿಮರ್ಶೆ— ಎ, ಕೋರ್ಟುಗಳು	52,850	41,389
ಬಿ ಬಂದೀಖಾನೆಗಳು	24 062	23,706
ಪೋಲೀಸ್	36,133	21,547
ವಿದ್ಯಾಭ್ಯಾಸ	1,20,841	1,24,592
ವೈದ್ಯ	81,183	99,543
ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	20,730	25,274
ಸಾದಿಲ್ವಾರ್ ಮತ್ತು ಛಾಪಖಾನೆ	8,694	8,318
ಮರಮತ್ತು ಇಲಾಖಾ	3,29,966	3,70,019
ಇತರ ಬಾಬುಗಳು	1,70 910	1,81,890
ಸರ್ಕಾರಿ ರೈಲ್ವೆಗಳು -ರೆವಿನ್ಯು ಬಾಬು	9,05 894	9,87,311
ಕಾವೇರಿ ವೈದ್ಯುತ ಶಕ್ತಿಯ ಪ್ರವಾಹದ	20,11,551	17,58,316
ಒಟ್ಟು ಜಮಾ ರೂ.	2,33,86,711	2,40,36,517

ಖರ್ಚುಬಾಬುಗಳು.

	1906-07 ನಿಶ್ಚಿತ ರೂ.	1907-08. ಪ್ರಾಥಮಿಕ. ರೂ.
ಪೊಗದಿ	35,00,000	35,00,000
ಅರಮನೆಯ ಖರ್ಚು	16,00,000	16,00,000
ರಾಜವಂಶೀಯರ ಪೆನ್‌ಷನ್‌ಗಳು	3,40,000	3,40,000
ರಾಜಕೀಯ ಪೆನ್‌ಷನ್ ವೇತನಗಳು—		
ಜಹಗೀರುಗಳಿಗೆ ಬದಲಾಗಿ ಕೊಟ್ಟವುಗಳು ಸಹ	84,361	84,824
ವಾಪಸ್ ಜಮೆ ವಗೈರೆ ಜಮೀನ್ ಕಂದಾಯ ವಲ್ಲಿ ಸೇರಿಹೋದ ಇರ್ರಿಗೇಷನ್ ಸೆಸ್	1 56,414	1,56,414
ಇತರ ಬಾಬುಗಳು	57,987	51,975
ಜಮೀನ್ ಕಂದಾಯದ ಖರ್ಚುಗಳು—		
ರೆವಿನ್ಯೂ ಕಮಿಷನರ್	54 320	57,695
ಡೆಪ್ಯುಟಿ ಕಮಿಷನರುಗಳೂ, ಅವರ ಸಿಬ್ಬಂದಿಗಳೂ	1,87,693	1,86,173
ಅಸಿಸ್ಟೆಂಟ್ ಕಮಿಷನರುಗಳೂ, ಅವರ ಸಿಬ್ಬಂದಿಗಳೂ	1,13,211	1,08,967
ತಾಲ್ಲೂಕು ಸಿಬ್ಬಂದಿಗಳು	4,24,071	4,34,209
ಸಾದಿಲ್‌ವಾರ್ ವಗೈರೆ	20,307	18,163
[illegible]	31 841	30 490
ಶೇಕದಾರರುಗಳಿಗೆ ಇಂಜನಿಯರಿಂಗ್ ತರಗತಿ	1,503	2,099
ಪಟೇಲ ಶಾನಭೋಗರಿಗೆ ಪೋಟಿಗೆ	8,11,679	8,12,703
ಸರ್ವೆ ಮತ್ತು ಸೆಟ್ಲ್‌ಮೆಂಟ್	1,30,686	1,58,273
ಇನಾಂ	8,193	4,900
ಸ್ಟಾಂಪುಗಳು	25,701	26,672
ಅಬ್ಕಾರಿ	3,17,664	3,29,297
ಸಾಯರು	14,058	1,940
ಜಂಗಲು (ಅನೇಬಂಗಡಿಯೂ ಸಹ)	6,58,341	6,64,212
ಚಿನ್ನದಗಣಿ	14,935	1,09,608
ರಿಜಿಸ್ಟ್ರೇಷನ್	86,502	81,705
ಅಮೃತಮಹಲ್	29,828	30,393
ಬಡ್ಡಿ—1882 ನೆಯ ಮೈಸೂರು ಡಿಬೆಂಚರ್ ಸಾಲದ ಬಡ್ಡಿ	675	200
ಮೈಸೂರು ಸಂಸ್ಥಾನದ 1906-07 ರ ಶೇಕಡಾ 4 ರ-ಸಾಲದ ಬಡ್ಡಿ	8,693	2,361
ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟಿರುವ ಡಿಪಾಜಿಟ್ಟಿನ ಬಡ್ಡಿ	2,33,402	2,30,012
ಧರ್ಮದ ಫಂಡಿನ ಬಡ್ಡಿ	16,242	15,932
ಇನ್‌ಷೂರೆನ್ಸು ಫಂಡಿನ ಬಡ್ಡಿ	42,094	47,432
ವಾಪಸ್ ಜಮೆ	400	216
ಮೇಲ್‌ವಿಚಾರಣೆಯ ಸಿಬ್ಬಂದಿ	6,43,789	5,46,127
ನ್ಯಾಯವಿಮರ್ಶೆ — ಕೋರ್ಟುಗಳು	9,26,642	8,56,618
ನ್ಯಾಯವಿಮರ್ಶೆ — ಬಂದೀಖಾನೆಗಳು	1,27,960	1,22,666
ಪೋಲೀಸು	9,89,384	9,14,034
ವಿದ್ಯಾಭ್ಯಾಸ	8,03,105	13,50,989
ಮುಜರಾಯಿ	3,41,132	3,34,920
ವೈದ್ಯ	6,57,997	5,81,438
ಗವರನ್‌ಮೆಂಟ್ ಹೌಸ್ ಯಾ ಸರ್ಕಾರಿ ಕಟ್ಟಡಗಳು	1,93,140	1,12,160
ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	2,60,333	2,10,626
ನಾನಾವಿಧವಾದ ಚಿಲ್ಲರೆ ಖರ್ಚುಗಳು—		
ವಯೋಧಿಕತ್ವಾಗಿ ಕೊಟ್ಟ ಪೆನ್‌ಷನ್‌ಗಳೂ ಗ್ರಾಟ್ಯುಟಿಗಳೂ	5,39,976	6,27,904
ಬೇಖಿನ ಸಾಮಗ್ರಿಗಳು ಮತ್ತು ಛಾಪ	1,93,839	2,26,302
ಕೊಂಡುಕೊಂಡ ಇಂಡಿಯಾ ಸರ್ಕಾರಿ ಪ್ರೊನೋಟುಗಳಿಗೆ ಕೊಟ್ಟ ಪ್ರೀಮಿಯಂ ವಗೈರೆ	6,216	12,054
ಇತರ ಬಾಬುಗಳು	5,52,186	3,75,354
ಪ್ಲೇಗು	81,366	68,913
ಕ್ಷಾಮಪರಿಹಾರ ಮತ್ತು ಇನ್‌ಷ್ಯೂರೆನ್ಸ್	2,00,000	2,00,000
ಮರಮತ್ತು ಕೆಲಸಗಳು	31,61,036	27,91,546
ಸೈನ್ಯ	13,63,777	12,73,822
ಸರ್ಕಾರಿ ರೈಲ್ವೆಗಳು—ಮೈಸೂರು-ಹರಿಹರ ಮಾರ್ಗದ ಬಂಡವಾಳದಲ್ಲಿ ಖರಾರ್ದ ಭಾಗದ ಮೇಲಿನ ಬಡ್ಡಿ	7,11,235	7,20,000
ಬಂಡವಾಳದ ಲೆಕ್ಕ	2,60,004	3,84,163
ಕಾವೇರಿ ವೈದ್ಯುತ ಶಕ್ತಿಯ ಪ್ರವಾಹ—		
ಆದಾಯದ ಲೆಕ್ಕ	4,04,347	4,51,706
ಬಂಡವಾಳದ ಖರ್ಚು	52,687	75,523
ಒಟ್ಟು ಖರ್ಚಿನ ಜುಮ್ಲಾ ರೂ	2,13,31,662	2,14,13,256

ತಾಲ್ಲೂಕು ವರ್ತಮಾನಗಳು.

ಸಿದ್ಲಘಟ್ಟ.—ಇಲ್ಲಿ ಮಳೆ ಇಲ್ಲದೆ ಬೆಳೆಗಳಿಗೆ ಬಹಳ ತೊಂದರೆಯಾಗಿತ್ತು. ಈಗ, ಸುಮಾರು ೭—೮ ದಿವಸಗಳ ಕೆಳಗೆ ... ಮಳೆ ಪೂರ್ತಿಯಾಗಿ ಆಯಿತು. ಕೆರೆಗಳಿಗೂ ಕುಂಟೆಗಳಿಗೂ ಅಲ್ಪ ಸ್ವಲ್ಪ ನೀರು ಬಂದು ಬೆಳೆಗಳಿಗೆ ಬಹಳ ಅನುಕೂಲವಾಗಿದೆ. [illegible] ಧಾರಣೆ [illegible] ... ೧೨ ಸೇರಿಗಿಂತಲೂ ಹೆಚ್ಚಿಲ್ಲ. ಆದರೆ ಬೆಳೆಗಳು ಬಹಳ ಹುಲುಸಾಗಿವೆ.—[illegible] ನೇ ಸೋಮವಾರ [illegible] ಫುಟ್‌ಬಾಲ್ ಕ್ಲಬ್ಬಿಗೂ [illegible] ಸ್ಕೂಲ್ ಫುಟ್‌ಬಾಲ್ ಕ್ಲಬ್ಬಿಗೂ ಮ್ಯಾಚ್ ನಡೆಯಿತು. ಆದರೆ [illegible] ಹಾಗೆ [illegible] ಜಿ ವಾಲ್ಲರಾಯರು [illegible] ಆಗಲಿಲ್ಲ.—ಈ ಊರಲ್ಲಿ [illegible] ಗರಡಿ [illegible] ಈ ಕಡೆ [illegible] ಬಹಳ [illegible] ಕಾಲ [illegible] ಸರ್ಕಾರ [illegible] ದಾನ [illegible] ಮಾಡಿ, ಅಲ್ಲಿ ಎಲ್ಲಾ ಕಾರ್ಯಗಳನ್ನೂ ನಡೆಸಿದರು.

ಚಿತ್ರದುರ್ಗ.—ಈ [illegible] ಚಳ್ಳಕೆರೆ ಕಸಬಾದಲ್ಲಿ ಈಗ್ಗೆ ೧೦-೧೨ ದಿವಸಗಳ ಕೆಳಗೆ ಒಂದು ದಿನ [illegible] ಮುತ್ತಪ್ಪ [illegible] ೨೦ ವರುಷದವನು [illegible] ದಲ್ಲಿ ಆತನಿಗೆ [illegible] ಮೊಕದ್ದಮೆ [illegible] ಯ ಮೇಲಿನವನು ಪ್ರಥಮ ಸಿಬಾರಿಯಲ್ಲಿ [illegible] ಸಿಂತ [illegible] ಪೋಲೀಸ್ ಕಾನ್ಸ್‌ಟೇಬಲನ್ನು [illegible] ಈ ಕೇಸು [illegible] ಯಲ್ಲಿ ಇರುತ್ತಾರೆಂದು ತಿಳಿಯಬರುತ್ತೆ.—ಕಾಲ್ಲಕೆರೆ [illegible] ಜನಗಳು ತಕ್ಕಷ್ಟು [illegible] ಕುಡಿಯುವ ನೀರಿಗೆ ಅಭಾವವಾಗುವ ಸಂಗತಿಯಾಗಿದೆ. ಈ ವರಿಗೂ ಆಗಿರುವ ಮಳೆಯಿಂದ ಕೆರೆಕುಂಟೆಗಳಿಗೆ ಸರಿಯಾಗಿ ನೀರು ಬಂದಿಲ್ಲ. [illegible] ನೀರನ್ನು ಸರದಿ ಮೇಲೆ ಒಂದು [illegible] ಒಂದು ಗಂಟೆ ಹೊತ್ತು ಮಾತ್ರ ಬಿಡುತ್ತಾರೆ. ೬ ಕೊಡ [illegible] ಎಲ್ಲರೂ ಪುನಃ ಮಾರನೆ ದಿವಸ ವರಿಗೂ ಬಳಕೆಗೆ ಬೇಕಾದಷ್ಟು ನೀರನ್ನು ಶೇಖರಿಸಿಕೊಳ್ಳಬೇಕಾದ ಪ್ರಯುಕ್ತ, [illegible] ಜನಗಳು [illegible] ಯಾಗಿ [illegible] ತ್ತಾರೆ.—ಮಳೆಯಂತೂ ಇನ್ನೂ ಬರಲಿಲ್ಲ. ಬಿಸಿಲಿನ ಝಳ ಸಹಿಸಲಿಕ್ಕಾಗದು. ಮೋಡಗಳು ಹಗಲೆಲ್ಲಾ ನಿರೀಕ್ಷೆಯನ್ನು ಹೆಚ್ಚಿಸುವ ಹಾಗೆ ಆಡುತ್ತಿದ್ದು, ಸಾಯಂಕಾಲದಲ್ಲಿ ಆಕಾಶವು ನಿತ್ಯವೂ ನಿರ್ಮಲವಾಗಿ ಚಂದ್ರ ನಕ್ಷತ್ರಗಳು ಸ್ವಚ್ಛವಾಗಿ ಪ್ರಕಾಶಿಸುತ್ತವೆ. ಹೀಗೆ ನಿತ್ಯವೂ ಮುಗಿಲನ್ನು ನೋಡುತ್ತಿರುವದೇ ಆಗಿದೆ. ಇನ್ನೊಂದು ಒಳ್ಳೇ ಹದಕ್ಕಾಗಿ ಎಲ್ಲಾ ಪೈರುಗಳೂ ಹೊರಟುಬಿಟ್ಟು ಕಾದಿರುತ್ತವೆ. ಮಳೆ ಸುತರಾಂ ಬಾರದೇಹೋದರೆ ಬಹಳ ಕಷ್ಟ. ಧಾರಣೆವಾಸಿಗಳಂತೂ ಆಖಾಶದಲ್ಲಿರುತ್ತಲಿವೆ.

ಮಳವಳ್ಳಿ, ತಾ. ಚೆನ್ನಪಟ್ಟಣ.—ಇಲ್ಲಿ ಈ ವರುಷ ರಾಗಿ ಬಿತ್ತನೆ ಲಾಗಾಯಿತು ಮಳೆಗಾಲವು ಸರಿಯಾಗಿ ನಡೆಯಲೇ ಇಲ್ಲ. ಕೆರೆಗೂ ನೀರು ಬರಲಿಲ್ಲ. ದವಸಧಾನ್ಯಾದಿಗಳು ಬಹಳ ಪ್ರಿಯವಾಗಿವೆ. ಬಡಬಗ್ಗರ ಕಷ್ಟ ಹೇಳಲಸಾಧ್ಯವಾಗಿದೆ. ನೆನ್ನೆ ೨೭ ನೇ ತಾ ಭಾನುವಾರ ರಾತ್ರಿ ಒಂದು ಮಳೆಯಾಯಿತು. ಇದರಿಂದ ಆಕಾಶವನ್ನೇ ಎದುರುನೋಡುತ್ತಿದ್ದ ಒಣಗಿದ್ದ ಪೈರುಗಳು ಪುನಃ ಹಸಿರು ವರ್ಣಕ್ಕೆ ತಿರುಗುತ್ತಾ ಇವೆ. ಇನ್ನು ಮುಂದಾದರೂ ಸಕಾಲಕ್ಕೆ ಸರಿಯಾಗಿ ಮಳೆಯಾದರೆ ಅರ್ಧಬೆಳೆಯಾದರೂ ಆಗಬಹುದೆಂದು ನಿರೀಕ್ಷಿಸುತ್ತಿದ್ದಾರೆ.—ಈಗೆ ಸುಮಾರು ಒಂದು ತಿಂಗಳಿನಲ್ಲಿ ಇದಕ್ಕೆ ಪಾರ್ಶ್ವಗ್ರಾಮವಾದ ಕೊನ್ನಾಪುರದಲ್ಲಿ ಹೆಂಡತಿಯ ತಲೆ ಕುಯಿದುಹಾಕಿ ಓಡಿಹೋದ ಕೊಂಡನೆಂಬುವನು ಇನ್ನೂ ಸಿಕ್ಕಲಿಲ್ಲ. ಪೋಲೀಸ್ ದಫೇದಾರ್ ನರಸಪ್ಪನವರು ೫—೬ ದಿವಸದಲ್ಲಿ ಛಾರ್ಜು ವಹಿಸಿಕೊಂಡರು. ಇವರು ಆ ಕ್ರೂರಾತ್ಮನನ್ನು ಹಿಡಿದಾರೆಂದು ನಂಬಿದೇವೆ.—ಮಳವಳ್ಳಿ ಮೊದಲಾದ ಪ್ಲೇಗ್ ಸೋಂಕಿನ ಸ್ಥಳಗಳಿಂದ ಅನೇಕರು ಹಲಗೂರಿಗೆ ಬಂದು ಸೇರಿರುವುದಾಗಿ ವರ್ತಮಾನವು. ಆದುದರಿಂದ ಇಲ್ಲಿಗೂ ಯಾವಾಗ ಪ್ಲೇಗ್ ತಲೆದೋರುವುದೋ ಎಂದು ಜನರು ಬಹಳ ಗಾಬರಿಬೀಳುತ್ತಿದಾರೆ. ಅಂಥವರನ್ನು ಬರಗೊಡಿಸದೆ ಅಡ್ಡಿಮಾಡುವುದು ಬಹಳ ಕ್ಷೇಮಕರ.—ಇದೇ ತಿಂಗಳು ೨೮ ನೇ ತಾ. ಸೋಮವಾರದ ದಿನ ಹಲಗೂರಿನ ಒಬ್ಬ ವರ್ತಕನ ೧೨ ವರುಷದ ಹುಡುಗನು ಒಂದು ಬಂದೂಕು ತೋಟಾವನ್ನು ಎಡದ ಕೈಯಲ್ಲಿ ಹಿಡಿದುಕೊಂಡಿದ್ದನು. ಅದು ಅಕಸ್ಮಾತ್ತಾಗಿ ಹತ್ತಿಕೊಂಡು ಭಯಂಕರವಾದ ಶಬ್ದದೊಡನೆ ಹಾರಿದಾಗ ಹುಡುಗನ ಎಡಕೈ ಮಧ್ಯದ ಬೆರಳನ್ನು ಕಿತ್ತುಕೊಂಡು ಹೋಗಿದೆ. ಕಿತ್ತುಹೋದ ಬೆರಳು ಪತ್ತೆಯೇ ಇಲ್ಲ. ಬಾಕೀ ಬೆರಳುಗಳೂ ಉಳಿಯುವಂತಿಲ್ಲ. ಹುಡುಗನು ತುಂಬಾ ಜಖಂ ಆಗಿ ಅದೇ ದಿವಸ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಒಯ್ಯಲ್ಪಟ್ಟನು. ಅಂಗಡಿಯಲ್ಲಿ ವ್ಯಾಪಾರ ತೆಗೆದುಕೊಳ್ಳುತ್ತಿದ್ದವರು ಅನೇಕರಿದ್ದರೂ, ಅವರ್ಯಾರಿಗೂ ಅಪಾಯವಾಗಲಿಲ್ಲ.—ಇದೇ ದಿವಸ ಮಧ್ಯಾಹ್ನ ೧೨ ಗಂಟೆಯಲ್ಲಿ ಇಲ್ಲಿಗೆ ೩ ಫರ್ಲಾಂಗ್ ದೂರದಲ್ಲಿರುವ ಲಿಂಗಪಟ್ಟಣದಲ್ಲಿ ೩ ವರುಷದ ಒಂದು ಗಂಡುಮಗುವು ಅಕಸ್ಮಾತ್ತಾಗಿ ನೀರು ಸೇದುವ ಭಾವಿಗೆ ಬಿದ್ದು ಮೃತಪಟ್ಟಿತು. ಮಗುವಿನ ತಾಯಿತಂದೆಗಳ ಗೋಳನ್ನು ಎಷ್ಟು ಹೇಳಿದರೂ ತೀರದು.

ಚಾಮರಾಜನಗರ.—ಈಗ ಸುಮಾರು ೪-೫ ದಿನಗಳಿಂದ ತಕ್ಕಷ್ಟು ಗೂ ಮಳೆ [illegible] ಪೈರುಗಳಿಗೂ ಕುಡಿಯುವ ನೀರಿಗೂ ಅನುಕೂಲವಾಯಿತು. ಈ ಊರಿನಲ್ಲಿ ಈಚೀಚೆಗೆ ಕಳ್ಳತನವು ಜಾಸ್ತಿಯಾಗುತ್ತಾ ಬಂದಿದೆ. ಕಳೆದ ೪ ನೇ ತಾ ಭಾನುವಾರ ರಾತ್ರಿ ಸಮಯದಲ್ಲಿ ಮಿಠಾಯಿ ಅಂಗಡಿಗೆ ನುಗ್ಗಿ, ಅಲ್ಲಿ ಮಲಗಿದ್ದ ಅಂಗಡಿಯವನ ಬಾಯಿಗೆ ಬಟ್ಟೆ ತುರುಕಿ, ಕೈಯಲ್ಲಿದ್ದ [illegible] ನಗದು ರೂಪಾಯಿಗಳನ್ನೂ, ಮಿಠಾಯಿಯನ್ನೂ ತೆಗೆದುಕೊಂಡು ಹೋದಂತೆ [illegible] ಒಬ್ಬ [illegible] ವರೆಗೆ ಪತ್ತೆಯಿಲ್ಲ. [illegible] ಈಶ್ವರರಾವ್ ಜವಳಿ ಅಂಗಡಿಗೆ [illegible] ಕೆಲವರು ಮಾತಾಡುತ್ತಿದ್ದದ್ದನ್ನು [illegible] ಕೆಲವರು [illegible] ಕಳ್ಳರು [illegible] ಕೆಲವನ್ನು [illegible] ಈ ವಿಷಯವನ್ನು ನಮ್ಮ ಜನುಲ್ಲಾ [illegible] ಪೋಲೀಸಿನವರು [illegible] ಪೋಲೀಸಿನವರು [illegible] ಮತ್ತು [illegible] ಈ ವಿಷಯದಲ್ಲಿ [illegible] ಈ ಊರಿನಲ್ಲಿರುವ [illegible] ಟ್ರಾವೆಲರ್ಸ್ [illegible] ಜನರು [illegible] ಮಾಡಿದರು [illegible] ಕಟ್ಟೆ [illegible] ಉಪಕಾರವನ್ನು [illegible] ಮಾಡಿದ್ದರಿಂದ [illegible] ಈ ಊರಿಗೆ ಉಪಕಾರವಾಗುವುದು.

ಬಲ್ಗೇರಿಯಾ ಆಸ್ಟ್ರಿಯಾ ಮತ್ತು ತುರ್ಕಿ ರಾಜ್ಯಗಳು.

ಈಚೆಗೆ ಬಲ್ಗೇರಿಯಾ ಮತ್ತು ಆಸ್ಟ್ರಿಯಾ ಗವರ್ನ್‌ಮೆಂಟುಗಳು ನಡೆಸುತ್ತಿರುವ ಕಾರುಬಾರುಗಳನ್ನು ನೋಡಿ ಯೂರೋಪಿನ ಇತರ ನಾನಾ ಗವರ್ನ್‌ಮೆಂಟಿನವರಿಗೆ ಬಹಳ ಚಿಂತೆಯುಂಟಾಗಿರುವುದು. ಈಗ ನಡೆದಿರುವ ವಿಪ್ಲವಗಳನ್ನೆಂದು ತಿಳಿಯಬೇಕಾದರೆ ಸುಮಾರು ಮೂವತ್ತು ವರುಷಗಳ ಹಿಂದೆ ನಡೆದ ಸಂಗತಿಗಳನ್ನು ಚೆನ್ನಾಗಿ ಗೊತ್ತುಮಾಡಿಕೊಳ್ಳುವುದು ಅವಶ್ಯ. ಅವನ್ನು ಈ ವಕ್ಕಣೆಯಲ್ಲಿ ಸಂಕ್ಷೇಪವಾಗಿ ವಿವರಿಸುತ್ತೇವೆ. ಆಗ ರಷ್ಯಾದವರಿಗೂ ತುರ್ಕಿಯವರಿಗೂ ಯುದ್ಧ ಪ್ರಾಪ್ತವಾಗಿ, ರಷ್ಯಾ ಸೈನಿಕರು ತುರ್ಕಿಯವರನ್ನು ಸೋಲಿಸಿ ತುರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣವನ್ನು ಮುಟ್ಟುತ್ತಿದ್ದರು. ತುರ್ಕಿ ಸುಲ್ತಾನರು ಅವರನ್ನು ತಡೆದು ಹಿಮ್ಮೆಟ್ಟಿಸುವುದು ಸಾಧ್ಯವಲ್ಲವೆಂದು ಕಂಡು, ರಷ್ಯಾ ಚಕ್ರವರ್ತಿಗಳ ಕೂಡ ೧೮೭೮ ನೇ ಇಸವಿಯಲ್ಲಿ ಸ್ಯಾನ್ ಸ್ಟಿಫೆನೋ ಎಂಬ ಸ್ಥಳದಲ್ಲಿ ಒಂದು ಕರಾರನ್ನು ಮಾಡಿಕೊಂಡು ಅದರಂತೆ ಯೂರೋಪಿನಲ್ಲಿ ತುರ್ಕಿ ರಾಜ್ಯಕ್ಕೆ ಸೇರಿದ್ದ ಕೆಲವು ಅಧಿಪತ್ಯಗಳ

ದವರಿಗೆ ಒಪ್ಪಿಸಿ ಬಿಟ್ಟರು. ಈ ಏರ್ಪಾಟಿನಿಂದ ಯೂರೋಪಿನ ದಕ್ಷಿಣ ದಲ್ಲಿ ತುರ್ಕಿಯು ಬಲವು ಕಡಮೆಯಾಗಿ, ರಷ್ಯಾದವರು ಪ್ರಬಲರಾಗುತ್ತಾ ಇ, ರಷ್ಯಾದವರ ಯುದ್ಧದ ನಾವೆಗಳಿಗೆ ಮೆಡಿಟರೇನಿಯನ್ ಕಡಲಿನೊಳಕ್ಕೆ ಪ್ರವೇಶಿಸುವಂತೆ ಅವಕಾಶಕೊಡುವುದು ಸಹಜವಲ್ಲವೆಂತಲೂ ಇಂಗ್ಲಿಷರು ನೆನಸಿ ತುರ್ಕಿಯವರ ಪಕ್ಷದಲ್ಲಿ ನಿಂತು ಸ್ಯಾನ್ ಸ್ಟೆಫನೋದಲ್ಲಿ ನಡೆದಿದ್ದ ಕರಾರನ್ನು ರದ್ದುಪಡಿಸುವಂತೆ ಮಾಡಿದರು. ಆಗ ಇಂಗ್ಲಿಷರಿಗೂ ರಷ್ಯಾದವರಿಗೂ ಈ ವಿಷಯ ಯುದ್ಧವಾಗುವಂತಿತ್ತು. ಆದರೆ ಯೂರೋಪಿನ ಸಮಸ್ತ ರಾಜ್ಯಗಳ ರಾಯಭಾರಿಗಳೂ ೧೮೭೮ರಲ್ಲಿ ಬರ್ಲಿನ್ ಪಟ್ಟಣದಲ್ಲಿ ಸಭೆ ಸೇರಿ ಒಂದು ಹೊಸ ಕರಾರನ್ನು ರಚಿಸಿ ಮಾಡಿದರು. ಈ ಹೊಸ ಒಪ್ಪಂದವೇ ಈಗಲೂ ಆಚರಣೆಯಲ್ಲಿರುತ್ತದೆ. ಅದರ ಕೌಲುನಾಮೆಯ ಪ್ರಕಾರ ಬಲ್ಗೇರಿಯಾ ಅಧಿಪತ್ಯಕ್ಕೆ ಸ್ವಾತಂತ್ರ್ಯಾಧಿಕಾರಗಳು ವಹಿಸಲ್ಪಟ್ಟಾಗ್ಯೂ, ಅದು ಹೆಸರಿಗೆ ತುರ್ಕಿ ಸುಲ್ತಾನರ ಸಾಮಂತ್ಯಾಂಗವೆಂದೇ ಎಣಿಸಲ್ಪಡತಕ್ಕದ್ದೆಂದು ನಿರ್ಣಯವಾಗಿರುವುದು. ಅದರ ದಕ್ಷಿಣದಲ್ಲಿರುವ ಪೂರ್ವ ರೂಮೇಲಿಯಾ ಎಂಬ ಆಧಿಪತ್ಯವನ್ನು ಒಬ್ಬ ಕ್ರೈಸ್ತ ಮತದ ಗವರ್ನರ್ ಜನರಲ್ ಆಳಬೇಕೆಂತಲೂ, ಆತನು ಸುಲ್ತಾನರಿಗೆ ಪೊಗದಿಯನ್ನು ಕೊಡಬೇಕೆಂತಲೂ ವಿಧಾಯಕವಾಯಿತು. ಮತ್ತು ಬಾಸ್ನಿಯಾ, ಹರಿಜೆವಿನಾ ಎಂಬ ಎರಡು ಆಧಿಪತ್ಯಗಳನ್ನೂ ಆಸ್ಟ್ರಿಯಾ ರಾಜ್ಯಾಂಗಗಳಾಗಿ ಸೇರಿಸಿಕೊಟ್ಟರು. ಮೇಲ್ಕಂಡ ಪೂರ್ವ ರೂಮೇಲಿಯಾ ಆಧಿಪತ್ಯದಲ್ಲಿ ಬಲ್ಗೇರಿಯ ಪ್ರಜೆಗಳಿರುತ್ತಾರೆ. ಆದ್ದರಿಂದ ಬಲ್ಗೇರಿಯಾ ಪ್ರಜೆಗಳೂ ಈ ಪೂರ್ವ ರೂಮೇಲಿಯಾ ಪ್ರಜೆಗಳೂ ಏಕವಾಗಿ, ಒಂದೇ ಗವರ್ನ್‌ಮೆಂಟಿಗೆ ಸೇರಬೇಕೆಂಬ ಕುತೂಹಲವು ವಿಶೇಷವಾಗಿತ್ತು. ಕಳೆದ ೧೮೮೫ನೇ ಇಸವಿಯಲ್ಲಿ ಪ್ರಜೆಗಳು ಗಲಭೆ ಎಬ್ಬಿಸಿ ಬಲ್ಗೇರಿಯಾ ದೊರೆಯನ್ನೇ ಪೂರ್ವದ ರೂಮೇಲಿಯಾಕ್ಕೂ ದೊರೆಯನ್ನಾಗಿ ಮಾಡಿಕೊಂಡರು. ಅಗ್ಗ ಅದನ್ನು ಪ್ರತಿಭಟಿಸುವುದಕ್ಕೆ ತುರ್ಕಿ ಸುಲ್ತಾನರಿಗೆ ಸಾಮರ್ಥ್ಯವಿಲ್ಲದೆ ಹೋದದ್ದರಿಂದ ಇದುವರೆಗೂ ಅವೆರಡು ಆಧಿಪತ್ಯಗಳೂ ಒಂದಾಗಿಯೇ ಇದ್ದುಕೊಂಡು ಬಂದಿರುತ್ತವೆ.

ತುರ್ಕಿ ರಾಜ್ಯದಲ್ಲಿ ಕೆಲವು ವಾರಗಳ ಹಿಂದೆ ಕೆಲವು ನವೀನ ಸಂಘದವರು ತಮ್ಮ ರಾಜ್ಯಭಾರದ ಕಾರುಬಾರುಗಳನ್ನು ಬದಲಾವಣೆ ಮಾಡಬೇಕೆಂದು ಸಾಹಸಪಟ್ಟರೆಂಬೂ, ಸುಲ್ತಾನನ ಬಳಿ ಇದ್ದ ದುಷ್ಟಮಂತ್ರಿಗಳನ್ನು ಓಡಿಸಿಬಿಟ್ಟರೆಂಬೂ, ಸುಲ್ತಾನನು ಪ್ರಜೆಗಳ ಕುತೂಹಲದಂತೆ ಒಪ್ಪಿ, ಪಾರ್ಲಿಮೆಂಟ್ ಸಭೆಗಳನ್ನು ಏರ್ಪಡಿಸಿ, ಪ್ರಜಾಸಮ್ಮತದಿಂದ ಜಾತಿ ಮತಗಳ ತಾರತಮ್ಯ ನೋಡದೆ ಸರ್ವರನ್ನೂ ಸಮಪ್ರಕಾರವಾಗಿ ಪರಿಪಾಲಿಸುತ್ತಾ ರಾಜ್ಯಭಾರ ನಡಿಸುವುದಾಗಿ ವಾಗ್ದಾನ ಮಾಡಿರುವನೆಂಬೂ ವಾಚಕರಿಗೆ ತಿಳಿಸಿರುತ್ತೇವಷ್ಟೆ. ಇಂಥಾ ಬದಲಾವಣೆಗಳುಂಟಾಗುವ ಸಂದರ್ಭಗಳಲ್ಲಿ ಗಲಭೆ ಹುಟ್ಟುವುದು ಸ್ವತಸ್ಸಿದ್ಧವೆಂದು ಭಾವಿಸಬೇಕು. ಬಲ್ಗೇರಿಯಾದವರು ತಾವು ಸುಲ್ತಾನರ ಚಕ್ರಾಧಿಪತ್ಯಕ್ಕೆ ಸೇರಿದವರಲ್ಲವೆಂತಲೂ, ಇನ್ನು ಮುಂದೆ ತಾವು ಸ್ವತಂತ್ರರಾಗಿರುತ್ತೇವೆಂತಲೂ ಹೇಳಿಬಿಟ್ಟರು. ಇದರಲ್ಲಿ ಪೂರ್ವ ರೂಮೇಲಿಯಾದಿಂದ ತುರ್ಕಿಗೆ ಬಾಬತ್ತಾಗುತ್ತಿರುವ ಪೊಗದಿಯು ತಪ್ಪಿಹೋಗುವುದೇ ಮುಖ್ಯವಿಚಾರವು. ಏಕೆಂದರೆ ಕಳೆದ ೧೮೮೫ನೇ ಇಸವಿಯು ಲಾಗಾಯಿತು ಬಲ್ಗೇರಿಯಾ ದೊರೆಯೇ ಆ ಆಧಿಪತ್ಯವನ್ನೂ ಕಾರ್ಯತಃ ಆಳುತ್ತಾ ಬಂದಿರುತ್ತಾನೆ. ಅತ್ತಲಾಗಿ ಆಸ್ಟ್ರಿಯಾದವರು ಕೂಡ ಬಾಸ್ನಿಯಾ ಮತ್ತು ಹರಿಜೆವಿನಾ ಡಿಸ್ಟ್ರಿಕ್ಟುಗಳು ತಮ್ಮ ಅಧಿಕಾರಕ್ಕೆ ಒಳಪಟ್ಟಿರುತ್ತವೆಂತಲೂ, ತುರ್ಕಿ ಸುಲ್ತಾನರಿಗೆ ಅವುಗಳ ವಿಷಯದಲ್ಲಿ ಯಾವ ಸಂಬಂಧವೂ ಇರುವುದಿಲ್ಲವೆಂತಲೂ ಪ್ರತಿಭಟಿಸಿರುತ್ತಾರೆ. ಇದರಲ್ಲಿ ತುರ್ಕಿಯವರಿಗೆ ಅಧಿಕಾರವಿದೆ ಎಂಬ ಹೆಸರುಮಾತ್ರ ತಪ್ಪಿಹೋಗುವುದಲ್ಲದೆ, ಅದರಿಂದ ಸುಲ್ತಾನರಿಗೆ ನಷ್ಟವೇನೂ ಆಗುವುದಿಲ್ಲ. ಮೇಲ್ಕಂಡ ಬರ್ಲಿನ್ ಕರಾರಿನ ಪ್ರಕಾರ ಅವೆರಡು ಡಿಸ್ಟ್ರಿಕ್ಟುಗಳೂ ಹೆಸರಿಗೆ ಮಾತ್ರ ತುರ್ಕಿಯವರಿಗೆ ಸೇರಿದ್ದವಲ್ಲದೆ ಅವುಗಳಿಂದ ಯಾವ ವಿಶೇಷವಾದ ಪ್ರಯೋಜನವೂ ಸುಲ್ತಾನರಿಗೆ ದೊರಕುತ್ತಿರಲಿಲ್ಲ. ಇದುವರೆಗೆ ನಡೆದಿರುವ ವಿದ್ಯಮಾನಗಳು ಇಷ್ಟೇ. ಈ ವಿಚಾರಗಳನ್ನೆಲ್ಲಾ ಯೂರೋಪಿನ ಸಮಸ್ತ ರಾಜ್ಯಗಳ ರಾಯಭಾರಿಗಳೂ ರಷ್ಯಾ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ ಬಂದು ಸೇರಿ ಚರ್ಚೆಮಾಡಿ ತೀರ್ಮಾನಮಾಡಬೇಕು ಎಂಬದಾಗಿ ರಷ್ಯಾ ಚಕ್ರವರ್ತಿಯವರು ಹೇಳಕಳುಹಿಸಿದಾರೆ. ತುರ್ಕಿ ರಾಜ್ಯದಲ್ಲಿ ರಾಜ್ಯಭಾರಕ್ರಮಗಳು ಬದಲಾವಣೆಯಾಗಬೇಕೆಂಬದಾಗಿ ಇಂಗ್ಲಿಷ್ ಗವರ್ನ್‌ಮೆಂಟಿನವರು ಕುತೂಹಲಪಡುತ್ತಾರಾದಕಾರಣ ಅವರು ತುರ್ಕಿಯವರ ಪಕ್ಷದಲ್ಲಿ ನಿಂತು ಮೇಲ್ಕಂಡ ಬರ್ಲಿನ್ ಪಟ್ಟಣದಲ್ಲಿ ನಡೆದಿರುವಂಥಾ ಕೌಲುನಾಮೆಯೇ ಆಚರಣೆಯಲ್ಲಿರಬೇಕೆಂದು ಹೇಳಿರುತ್ತಾರೆ. ಆದರೆ ಬಲ್ಗೇರಿಯಾದವರೂ ಆಸ್ಟ್ರಿಯಾದವರೂ ಮೇಲ್ಕಂಡ ರೀತಿ ಸ್ವತಂತ್ರ್ಯಾಧಿಕಾರಗಳನ್ನು ವಹಿಸಬೇಕೆಂದು ಪ್ರತಿಭಟಿಸಿರುವುದು ನೆನೆಸದ ಕಾರಣವೆಂದು ಕಾಣುತ್ತದೆ. ಕೆಲವು ತಿಂಗಳ ಹಿಂದೆ ತುರ್ಕಿ ಸೈನಿಕರು ಮ್ಯಾಸಿಡೋನಿಯಾ ಮತ್ತು ಅರ್ಮೇನಿಯಾ ಸೀಮೆಗಳಲ್ಲಿ ನಡಿಸಿದ ಕ್ರೂರಕೃತ್ಯಗಳನ್ನೂ, ಸುಲ್ತಾನರ ಕೈಕೆಳಗಿನ ಮಂತ್ರಿಗಳ ದುಷ್ಟ ಪ್ರವರ್ತನೆಗಳನ್ನೂ ನೋಡಿ, ಇಂಗ್ಲಿಷ್ ಪ್ರಜೆಗಳು ತುಂಬಾ ಆಗ್ರಹಯುಕ್ತರಾಗಿದ್ದರು. ಆಗ್ಗೆ ಮೇಲ್ಕಂಡ ಸಂಗತಿಗಳು ನಡೆದಿದ್ದರೆ ಇಂಗ್ಲಿಷರು ಎಷ್ಟುಮಾತ್ರಕ್ಕೂ ತುರ್ಕಿಯವರ ಪಕ್ಷವನ್ನು ವಹಿಸುತ್ತಿರುವದಿಲ್ಲ. ಆದರೆ ಈಚೆಗೆ ತುರ್ಕಿ ರಾಜ್ಯದಲ್ಲಿ ಪ್ರಜಾಸಮ್ಮತವಾದ ಮತ್ತು ನಿಷ್ಪಕ್ಷಪಾತತೆಯುಳ್ಳ ಪರಿಪಾಲನಾ ಕ್ರಮಗಳು ಆಗ ತೃಪ್ತಿಕರವಾಗಿ ರೂಢಿಸಲ್ಪಡುತ್ತಿರುವುದನ್ನು ನೋಡಿ ಸಂತೋಷಪಟ್ಟು, ಅವರಿಗೆ ಬೆಂಬಲವನ್ನು ಕೊಡುತ್ತಿದಾರೆ. ತುರ್ಕಿ ಸುಲ್ತಾನರ ಗವರ್ನ್‌ಮೆಂಟನ್ನು ತೊಡೆದುಬಿಡಬೇಕೆಂಬುವುದು ಇಂಗ್ಲಿಷ್ ಗವರ್ನ್‌ಮೆಂಟಿನವರ ಅಭಿಮತವಲ್ಲ. ಅದನ್ನು ಅಭಿವೃದ್ಧಿಗೆ ತರಬೇಕೆಂಬುವುದೇ ಅವರ ಕುತೂಹಲವಾಗಿರುತ್ತದೆ. ಇದಕ್ಕಾಗಿಯೇ ಇಂಗ್ಲಿಷ್ ಪ್ರಜೆಗಳು ತುರ್ಕಿಯ ಹೊಸ ಗವರ್ನ್‌ಮೆಂಟಿನ ಪಕ್ಷವನ್ನು ವಹಿಸಿ, ಅದಕ್ಕೆ ಯಾವ ಕುಂದುಕೊರತೆಗಳೂ ಕಷ್ಟನಷ್ಟಗಳೂ ಪ್ರಾಪ್ತವಾಗದಂತೆ ನೋಡಿಕೊಳ್ಳಬೇಕೆಂದು ಅಪೇಕ್ಷಿಸುತ್ತಿದಾರೆ.

ಅಂತರಿಕ್ಷದಲ್ಲಿ ಸಂಚರಿಸುವುದು.

ಕಳೆದ ತಿಂಗಳ ೧೭ನೇ ತಾರೀಖಿನ ದಿವಸ ಅಮೇರಿಕಾ ಸಂಯುಕ್ತ ರಾಜ್ಯಗಳ ಭಾರೀ ಪಟ್ಟಣವಾದ ವಾಷಿಂಗ್‌ಟನ್ ನಗರದಲ್ಲಿ ಅಂತರಿಕ್ಷದಲ್ಲಿ ಸಂಚಾರಮಾಡುತ್ತಿದ್ದ ವಿಮಾನಕ್ಕೆ ಅಪಾಯವು ಸಂಭವಿಸಿತು. ಆ ವಿಮಾನವನ್ನು ಪ್ರಸಿದ್ಧರಾದ ಆರ್ವಿಲ್ ರೈಟ್‌ರವರೇ ತಯಾರುಮಾಡಿದ್ದರಾದಕಾರಣ ಅವರೂ ಅಮೇರಿಕಾ ಸಂಯುಕ್ತ ರಾಜ್ಯಗಳ ಸೈನ್ಯಾಧಿಕಾರಿಗಳಾದ ಸೆಲ್‌ಫ್ರಿಡ್ಜ್‌ರವರೂ ಅದರಲ್ಲಿ ಕುಳಿತು ಪ್ರಯಾಣಕ್ಕಾಗಿ ಹೊರಟರು. ಸುಮಾರು ಎಪ್ಪತ್ತೈದು ಅಡಿಗಳಿಗಿಂತಲೂ ಹೆಚ್ಚಾಗಿ ಮೇಲಕ್ಕೆ ಹತ್ತಿದಾಗ ಆ ಯಂತ್ರದ ಯಾವ ಭಾಗವು ವ್ಯತ್ಯಸ್ತವಾದ್ದರಿಂದಲೋ ಮತ್ಯಾವ ಕಾರಣದಿಂದಲೋ ಆ ವಿಮಾನವು ಮೇಲಕ್ಕೆ ಹತ್ತುವುದಕ್ಕೆ ಬದಲಾಗಿ ಒಂದು ಕಡೆಗೆ ಓರೆಯಾಗಿ ಕೆಳಕ್ಕೆ ಇಳಿಯುವದಕ್ಕೆ ಪ್ರಾರಂಭಿಸಿತು. ಆರ್ವಿಲ್ ರೈಟ್‌ರವರು ಯಂತ್ರವನ್ನು ಸರಿಪಡಿಸುವುದರ ಒಳಗಾಗಿ ಆ ವಿಮಾನವೇ ಭೂಮಿಗೆ ಬಿದ್ದು ಅವರನ್ನೂ ಅವರ ಜೊತೆಯಲ್ಲಿದ್ದ ಸೆಲ್‌ಫ್ರಿಡ್ಜ್‌ರವರನ್ನೂ ಬಹಳ ಅಪಾಯಕ್ಕೆ ಗುರಿಮಾಡಿತು. ಯಂತ್ರವೆಲ್ಲಾ ಮುರಿದುಹೋಗಿ ಇಬ್ಬರೂ ಜ್ಞಾನ ತಪ್ಪಿ ಬಿದ್ದರು. ರೈಟ್‌ರವರ ತೊಡೆಗೂ ಸೆಲ್‌ಫ್ರಿಡ್ಜ್‌ರವರ ತಲೆಗೂ ಪೂರಾ ಪೆಟ್ಟು ಬಿದ್ದು ರಕ್ತ ಸುರಿಯಲಾರಂಭಿಸಿತು. ಅನಂತರ ಅವರನ್ನು ಆಸ್ಪತ್ರೆಗೆ ಸಾಗಿಸಿದರು. ಆದರೂ ಅವರಿಗೆ ಜ್ಞಾನವೇ ಬರದೆ ಸುಮಾರು ಮೂರು ಗಂಟೆಗಳ ಒಳಗಾಗಿ ಸೆಲ್‌ಫ್ರಿಡ್ಜ್‌ರವರು ಕಾಲವಾದರು. ಇವರು ವಿಮಾನದ ನಿರ್ಮಾಣದಲ್ಲೂ ಮತ್ತು ನಡಿಸುವದರಲ್ಲೂ ಬಹಳ ಮೆಹನತ್ತು ಮಾಡಿದ್ದರಾದಕಾರಣ ಮುಂದೆ ಅತ್ಯಂತ ಖ್ಯಾತಿಯನ್ನು ಪಡೆಯುತ್ತಿದ್ದರೆನ್ನುವದಕ್ಕೆ ಸಂದೇಹವಿಲ್ಲ. ಇಂಥಾ ಲೋಕೋಪಕಾರಿಗಳಾದ ಇವರು ಪೂರ್ವ ವಯಸ್ಸಿನಲ್ಲೇ ಕಾಲವಾದ್ದಕ್ಕಾಗಿ ಆ ದೇಶದ ಸೇನೆಯವರು ತುಂಬಾ ವಿಷಾದಿಸುತ್ತಾರೆ. ಮರುದಿವಸ ಬಂದ ತಂತೀ ವರ್ತಮಾನದಿಂದ ರೈಟ್‌ರವರು ತೃಪ್ತಿಕರವಾಗಿ ಗುಣಹೊಂದುತ್ತಿದಾರೆಂತಲೂ ಅವರನ್ನು ನೋಡುವದಕ್ಕೆ ಅವರ ಸಹೋದರಿಯನ್ನೂ ಮತ್ತು ಅವರ ಕೈಕೆಳಗೆ ಕೆಲಸಮಾಡುತ್ತಿದ್ದ ಕೆಲವು ಜನರನ್ನೂ ಮಾತ್ರ ಬಿಡುತ್ತಾರೆಂತಲೂ ತಿಳಿಯಬಂತು. ಮುರಿದುಹೋದ ವಿಮಾನವನ್ನೂ ಅದರ ಸಾಮಾನುಗಳನ್ನೂ ಪುನಃ ಅದನ್ನು ಸರಿಪಡಿಸಬಹುದೆಂಬ ಊಹೆಯಿಂದ ಜೋಪಾನವಾಗಿ ಇರಿಸಿರುತ್ತಾರೆ. ಇವರು ಗುಣ ಹೊಂದಿದ ನಂತರದಲ್ಲೂ ವಿಮಾನ ವಿಷಯದಲ್ಲೇ ಪರಿಶೋಧನೆ ಮಾಡಲು ಅಭಿಲಾಷೆಯುಳ್ಳವರಾಗಿವಾರೆಂದು ವರ್ತಮಾನವಿದೆ. ಆರ್ವಿಲ್ ರೈಟ್‌ರವರಿಗೆ ತೊಡೆಯು ಮುರಿದುಹೋಗಿರುವದಲ್ಲದೆ ಎಡೆಯಲ್ಲಿ ಎರಡು ಮೂಳೆಗಳು ಮುರಿದುಹೋಗಿದ್ದುವೆಂತಲೂ ಸ್ವಾಭಾವಿಕವಾಗಿ ಅವರು ಆಶಕ್ತರಾದಕಾರಣ ಕಾಲಕ್ರಮೇಣ ಗುಣಹೊಂದುವರೆನ್ನುವದಕ್ಕೆ ಸಂಶಯವಿಲ್ಲವೆಂತಲೂ ಈಚೆಗೆ ಬಂದಿರುವ ವರ್ತಮಾನವನ್ನು ತಿಳಿಸಲು ಸಂತೋಷಿಸುತ್ತೇವೆ.

ಆರ್ವಿಲ್ ರೈಟ್‌ರವರ ಸಹೋದರರಾದ ವಿಲ್ಬರ್ ರೈಟ್‌ರವರು ಕಳೆದ ತಿಂಗಳು ೨೧ನೇ ತಾರೀಖಿನ ದಿನ ಫ್ರಾನ್ಸಿನಲ್ಲಿರುವ ಲೀಮ್ಯಾನ್ಸ್ ಪಟ್ಟಣದಲ್ಲಿ ವಿಮಾನದಲ್ಲಿ ಕುಳಿತು ಹಿಂದೆ ಯಾರೂ ಹತ್ತದಿದ್ದಷ್ಟು ದೂರ ಅಂತರಿಕ್ಷದಲ್ಲೇ ಪ್ರಯಾಣ ಮಾಡಿದರು. ಈ ಅದ್ಭುತವನ್ನು ನೋಡುವದಕ್ಕೆ ಅಮೇರಿಕಾ ರಾಜ್ಯಗಳ ರಾಯಭಾರಿಗಳಾದ ಹೆನ್ರಿ ವೈಟ್‌ರವರೂ ಮತ್ತು ಸುಮಾರು ೬,೧೦೦ ನೋಟಕರೂ ಸೇರಿದ್ದರು. ನಾಲ್ಕೈದು ಸಲ ತಪ್ಪಿಹೋಗಿ ಸಾಯಂಕಾಲ ಸುಮಾರು ಐದೂಕಾಲು ಗಂಟೆಗೆ ವಿಮಾನವು ಮೇಲಕ್ಕೆ ಹತ್ತುವದಕ್ಕೆ ಪ್ರಾರಂಭಿಸಿತು. ಕತ್ತಲೆಯಾಗುವವರೆಗೂ (ಸುಮಾರು ಒಂದೂವರೆ ಗಂಟೆಯವರೆಗೂ) ಅಂತರಿಕ್ಷದಲ್ಲೇ ಸಂಚರಿಸುತ್ತಿದ್ದ ನಂತರ ಭೂಮಿಗೆ ಇಳಿಯಿತು. ಅಮೇರಿಕದಲ್ಲಿ ತಮ್ಮ ಸಹೋದರರಿಗೆ ಸಂಭವಿಸಿದ ಅಪಾಯವನ್ನು ಕೇಳಿ ವಿಲ್ಬರ್ ರೈಟ್‌ರವರು ತುಂಬಾ ದುಃಖಪಟ್ಟರು.

ತಾ. ೧೭ ರಲ್ಲಿ ಅಂಗರ್ಸ್ ಎಂಬ ಸ್ಥಳದಲ್ಲಿ ಆ ಕಾಲದಲ್ಲಿ ಸಂಚರಿಸುವ ವಿಮಾನಗಳನ್ನು ಮಾಡುವುದರಲ್ಲಿ ಹೆಸರುವಾಸಿಗೆ ಬಂದಿರುವ ಎಂ. ರಿನೇ ಗ್ಯಾಸ್ನೀರ್ ಎಂಬಾತನು ಪಕ್ಷಿಯ ಆಕಾರವುಳ್ಳ ಒಂದು ವಿಮಾನವನ್ನು ತಯಾರುಮಾಡಿ ಸ್ವಲ್ಪಸ್ವಲ್ಪ ದೂರ ಅದರಲ್ಲಿ ಸಂಚಾರ ಮಾಡುವುದನ್ನು ಸಾಧ್ಯಮಾಡಿರುವನು. ಈ ವಿಮಾನವು ಭೂಮಿಯಿಂದ ೩೦ ಅಡಿ ಮೇಲೆ ಏರಿ ಸ್ವಲ್ಪ ದೂರ ಚೆನ್ನಾಗಿ ಹೋಯಿತು. ಆದರೆ ಅದರಲ್ಲಿ ಒಂದು ತಂತಿಯೋ ಏನೋ ಕಿತ್ತು ನೆಲಕ್ಕೆ ಬಿದ್ದು ಅಪ್ಪಚ್ಚಿಯಾಗಿದೆ. ಒಳಗಿದ್ದ ಎಂ. ಗ್ಯಾಸ್ನೀರ್ ಎಂಬಾತನ ತಲೆಗೆ ಸ್ವಲ್ಪ ಪೆಟ್ಟು ತಗಲಿತಾದರೂ, ಅಪಾಯವೇನೂ ಆಗದಂತೆ ತಪ್ಪಿಸಿಕೊಂಡಿರುತ್ತಾನೆ.

ಇನ್ನೊಂದು ಸ್ಥಳದಲ್ಲಿ ಎಂ. ಡಿಲಾಗ್ರಾಂಜೆ ಎಂಬ ಇನ್ನೊಬ್ಬ ಕಾರೇಗಾರನು ವಿಮಾನವನ್ನು ಮಾಡಿ ಹಿಂದೆ ತಾನು ತನ್ನ ವಿಮಾನದಲ್ಲಿ ಸಂಚಾರ ಮಾಡಿದ್ದದ್ದಕ್ಕಿಂತಲೂ ಹೆಚ್ಚು ಹೊತ್ತು ಬಹಳ ದೂರವೂ ಹೋಗಿ ಬಂದಿರುತ್ತಾನೆ. ಆದರೂ ಈ ವಿಮಾನವೂ ಸಂಚರಿಸುತ್ತಿರುವಲ್ಲೇ ಆಕಸ್ಮಾತ್ತಾಗಿ ನೆಲದ ಮೇಲೆ ಬಿದ್ದು ನಿರುಪಯೋಗವಾಯಿತು.

ಜರ್ಮನಿ ರಾಜ್ಯದವರಾದರೋ ಕೌಂಟ್ ಜೆಪ್ಪೆಲಿನ್ ಎಂಬ ಪ್ರಸಿದ್ಧ ಕಾರೇಗಾರನು ಇದುವರೆಗೆ ತನ್ನ ಕೈಯಿಂದ ಹಣ ಹಾಕಿ ವಿಮಾನಗಳನ್ನು ಮಾಡುತ್ತಾ ಬಂದಿದ್ದನು. ಈಗ ಜೆಪ್ಪೆಲಿನ್ ವಿಮಾನಗಳ ತಯಾರಿ ಕಂಪನಿ ಎಂಬ ಸಂಘವನ್ನು ಕಲ್ಪಿಸಿಬಿಟ್ಟನು. ಆ ಕಂಪನಿಯ ಷೇರುಗಳನ್ನು ಅನೇಕರು ಪಡೆದು ಇರುತ್ತಾರೆ. ಈತನು ಎರಡು ಮನೆಗಳಲ್ಲಿ ತನ್ನ ಕೈಯಿಂದ ಮಾಡಲ್ಪಟ್ಟ ವಿಮಾನಗಳನ್ನು ಇಟ್ಟು ಇರುತ್ತಾನೆ.

ಅತ್ತಲಾಗಿ ಫೋನೋಗ್ರಾಫ್, ಗ್ರಾಮೊಫೋನ್ ಮೊದಲಾದ ವಿಚಿತ್ರತರದ ಯಂತ್ರಗಳನ್ನು ಕಂಡು ಹಿಡಿದಿರುವ ಮೆ|| ಎಡಿಸನ್ ಎಂಬಾತನು ಮನುಷ್ಯನ ಬುದ್ಧಿ ಕುಶಲತೆಯಿಂದ ಈ ವಿಮಾನಗಳು ಪರಿಪೂರ್ಣವಾಗಬೇಕಾಗಿದೆ ಎಂತಲೂ, ಇನ್ನು ಐದು ವರುಷಗಳೊಳಗಾಗಿ ಆಕಾಶದಲ್ಲಿ ಸಂಚರಿಸುವುದು ವ್ಯಾಪಾರ ಸಿದ್ಧವಾಗುವುದೆಂತಲೂ, ಪ್ರಯಾಣಿಕರು ವಿಮಾನಗಳಲ್ಲಿ ಕುಳಿತು ೧೮ ಗಂಟೆ ಹೊತ್ತಿನಲ್ಲಿ ಮಹಾಸಾಗರವನ್ನು ದಾಟಿ ಹೋಗುವಂತೆ ಆಗುವುದರಲ್ಲಿ ಅಡ್ಡಿಯಿಲ್ಲವೆಂತಲೂ ಧರವಸದಿಂದ ಹೇಳಿರುತ್ತಾನೆ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೆನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಾಲು ಮೆಟ್ಟು; ತಲೆ ತಿರುಗುವಿಕೆ; ಮೈನೋವು ಕೀಲುನೋವು; ಮರವು; ನಿತ್ರಾಣ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-7]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦ ; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ.—ಇವರಲ್ಲಿ ದೊರೆಯುವುವು.

ಮೆಡಲಿಸ್ಟ್ ಶಾರದಾ ಸೋಪ್ ಸ್ವದೇಶಿ.

85-1

ಆರೇಂಜ್, ಗುಲಾಬ್, ಕ್ಯಾಂಫರ್ ಮೊದಲಾದ ಸೋಪುಗಳು ಬಿಕರಿಗೆ ಸಿದ್ಧವಾಗಿವೆ. ಇವುಗಳಲ್ಲಿ ಚರಬಿಯು ಶುದ್ಧಾಂಗವಾಗಿ ಸೇರಿಲ್ಲ. ಉತ್ತಮವಾದ್ದೆಂಬುವುದಕ್ಕೆ ಸರಟಿಫೀಕೇಟುಗಳಿವೆ. ವ್ಯಾಪಾರಿಗಳಿಗೆ ಹೆಚ್ಚಾದ ಕಮಿಷನ್. ಸ್ವದೇಶೋದ್ಯೋಗಕ್ಕೆ ಪ್ರೋತ್ಸಾಹ ಕೊಳಿಸಿ. ವಿಳಾಸ:—ಶಾರದಾಸೋಪ್ ಫ್ಯಾಕ್ಟರಿ, ಶೃಂಗೇರಿ.

ಎಲ್ಲರಿಗೂ ಅವಶ್ಯವಾದ ಎರಡು ಪುಸ್ತಕಗಳು.

63-2

ಭಾರತಿ ಸಂಬಂಗಿರಾಮಯ್ಯನವರ "ಕನ್ನಡದಲ್ಲಿ ಇಂಗ್ಲೀಷು ಕಲಿಯುವಿಕೆ": ಕ್ರಯ ೧-೪-೦. ಇಂಗ್ಲೀಷ್ ಓದಲೂ ಬರಿಯಲೂ ಮಾತಾಡಲೂ ಯಾರ ಸಹಾಯವಿಲ್ಲದೇನೆ ೧-೩ ತಿಂಗಳಲ್ಲಿ ಕಲಿಸುವ ಉತ್ತಮ ಪುಸ್ತಕ. "ಪ್ರಶ್ನೋತ್ತರ ಲೇಖ್ಯಬೋಧಿನಿ": ಕ್ರಯ ೧-೪-೦. ಲೋಕವ್ಯವಹಾರ ಮತ್ತು ಲಾ ವಿಷಯಗಳು, ಅನುಭಾವಿಕ ಮತ್ತು ವರ್ತಕರ ಲೆಕ್ಕ ಬರೆಯುವ ರೀತಿ, ಇನ್ನೂ ಅನೇಕ ಸಂಗತಿಗಳು ಅಡಗಿವೆ. ವಿಳಾಸ:—ಮ್ಯಾನೇಜರ್, ಕರ್ನಾಟಕ ಬುಕ್ ಡಿಪೋ, ಲಕ್ಕರ್ ಪೋಸ್ಟು.

ಈಗಲೇ ಬಂದಿದೆ.

117-52

೫,೦೦೦ ಜರ್ಗ ಟೋಪಿ ಹೋಲಿಯಾಲ ಸುಪೀರಿಯರ್ ಉಲ್.

೧೨ ಟೋಪಿಯಾಗುವ ಬಂಡಲ್ ೧ಕ್ಕೆ ೭—೮—೦

ಜರ್ಗ ಟೋಪಿ ಡಜನ್ ೧ಕ್ಕೆ ೭—೦—೦, ೯—೦—೦, ೧೨—೦—೦

ಜಪಾನ್ ಮೇಡ್ ಬನಿಯನ್ ಡಜನ್ ೧ಕ್ಕೆ ೪—೮—೦, ೫—೦—೦,

ಬೂಟುಗಳ ಗಗಳು ಡಜನ್ ೧ಕ್ಕೆ ೦—೧೨—೦, ೧—೨—೦, ೧—೪—೦,

ವಿ. ಪಿ. ಯಿಂದಲೂ ರವಾನಿಸುತ್ತೇವೆ [೧—೮—೦

ವಿಳಾಸ-ಪ್ರೊಪ್ರೈಟರ್, ದಿ ಉಲನ್ ಮಾರ್ಟ್, ಮಂಗಳೂರು.

ಇಲ್ಲಿ ನೋಡಿ.

77-4

ತುಮಕೂರು ವಿಜನ್ ಇಲಾಖೆಯಲ್ಲಿ ಯೂರೋಪಿಯನ್ನರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ. ಕ್ರಯ:—೧೩ ಆಣೆ ಮೊದಲ್ಗೊಂಡು ೧ ರೂ. ೧೩ ಆಣೆಯವರಿಗೆ. ೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಸೇಕಡ ೫ ರಂತೆ ಡಿಸ್‌ಕೌಂಟ್ ಕೊಡಲ್ಪಡುವುದು. ಈಗ ತಾನೇ ಇಂಗ್ಲಿಷ್ ಉಲ್ ದಾರವು ಬಂದಿದೆ. ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಲ್ಪಡುವು.

ನಮ್ಮ ವಿಳಾಸ:—ಮ್ಯಾನೇಜರ್,

ಹಾಸನದ ಟೋಪಿ ಕಾರ್ಖಾನೆ, ವಿಜನ್ ಇಲಾಖೆ, ತುಮಕೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ

ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) .. .. .. ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ

ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ. ೧—೧೪—೦

" " " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ನಮಗೆ ಬಾಬತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ಸೂಚಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ನೆತ್ತಿಹತ್ತಿದ ಶೀತದಿಂದ ಮೂಗಿನಲ್ಲಿ ಹರಿಯುವದು. ಇದೇ ಪ್ರಪಂಚದಲ್ಲೆಲ್ಲಾ ರೋಗಕ್ಕೆ ಮೂಲಕಾರಣವು. ಇದಕ್ಕೆ ಪೆ-ರೂ-ನಾ ಸರ್ವಶ್ರೇಷ್ಠವಾದ ಪರಿಹಾರ.

[34-29]

ಉಷ್ಣದ ನೀರು ಹರಿಯುವ
ನೆತ್ತಿ ಹತ್ತಿದ ಶೀತ
ನೆಗಡಿ.

ಇದು ಅನ್ನಕೋಶ, ಮಲಕೋಶ, ದೊಡ್ಡ ಸಣ್ಣ ಕರುಳುಗಳು, ಕುಂಡಿಯ ಕೋಶಗಳು, ಇವೆಲ್ಲಾ ವ್ಯಾಪನೆಯಾಗುತ್ತದೆ

ಶೀತದ ನೀರು ಹರಿಯುವ
ನೆತ್ತಿ ಹತ್ತಿದ ಶೀತ
ನೆಗಡಿ

ಇದು ನೆತ್ತಿ, ಗಂಟಲು, ಶ್ವಾಸಕೋಶ, ಶ್ವಾಸನಾಳಗಳು, ಇವಕ್ಕೆಲ್ಲಾ ವ್ಯಾಪಿಸಿಕೊಳ್ಳುತ್ತದೆ.

ನೆತ್ತಿ ಹತ್ತಿದ ಶೀತ ಅಥವಾ ಉಷ್ಣದ ನೆಗಡಿಯಿಂದ ಮೂಗಿನಲ್ಲಿ ನೀರು ಹರಿಯುವುದು ಬಹಳ ಕಠಿಣತರವಾದ ಜಾಡ್ಯವೆಂದು ಪ್ರಪಂಚದಲ್ಲಿ ಸಮಸ್ತ ಜನರಿಗೂ ತಿಳಿದೇ ಇರುತ್ತದೆ ಅಮೇರಿಕ ದೇಶಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳೆಂಬ ಒಂದು ರಾಜ್ಯದೊಳಗೇನೇ ಪ್ರತಿ ವರುಷವೂ ಎರಡು ಲಕ್ಷ ಪ್ರಜೆಗಳು ಈ ರೋಗಕ್ಕೆ ಸಿಕ್ಕಿ ಸಾಯುತ್ತಾ ಇದ್ದರೆ ಹೀಗಿರುವಲ್ಲಿ ಇತರ ದೇಶಗಳೊಳಗೆ ಈ ರೋಗದಲ್ಲಿ ಬಿದ್ದು ಕಷ್ಟಪಡುವಂಥಾವರ ಸಂಖ್ಯೆಯು ಸರಾಸರಿ ನೋಡಿದರೆ ಎಷ್ಟು ಹೆಚ್ಚಾಗಿಯೇ ಇರಬೇಕೆಂದು ಹೇಳಲು ಸಾಧ್ಯವಿಲ್ಲ

ಈ ನೆತ್ತಿ ಹಿಡಿದ ಶೀತ ಅಥವಾ ಉಷ್ಣದ ನೀರು ಸುರಿಯುವುದಾ ರೋಗಕ್ಕೆ ಪೆ ರೂ ನಾ ಎಂಬೀ ಔಷಧವು ಸರ್ವಶ್ರೇಷ್ಠವಾದದ್ದೆಂದೂ, ಇದು ಇತರ ಔಷಧಗಳಿಗಿಂತ ಮೇಲೆನಿಯ ಸ್ಥಾನವನ್ನು ಪಡೆದಿರುವಂಥಾದ್ದೆಂದೂ ಅನೇಕ ವರುಷಗಳಿಂದಲೂ ಅನುಭವಕ್ಕೆ ಬಂದಿರುತ್ತದೆ

ಪೆ-ರೂ ನಾ ಎಂಬೀ ಔಷಧವು ಪ್ರಪಂಚದ ಪಶ್ಚಿಮಾರ್ಧ ಮತ್ತು ಪೂರ್ವಾರ್ಧಗಳೆರಡರಲ್ಲಿಯೂ ಬಹು ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಪಡೆದಿರುತ್ತದೆ

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯುತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು ಅಥವಾ ತಮಿಳು ಬಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದ್ದೂ ಇವರಿಂದಲೇ ತಿಳಿಯಬಹುದು

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

18-9—1908 ರಿಂದ 25-9—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದವು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದವು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	1	0	0
ಮೈಸೂರು ,,	2	1	0	0
ಬೆಂಗಳೂರು ಡಿಸ್ಟ್ರಿಕ್ಟು	28	23	0	0
ಮೈಸೂರು ,,	*	*	0	0
ಕೋಲಾರ್ ,,	17	10	3	2
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	*	*	0	0
ಹಾಸನ ,,	25	15	*	*
ಚಿತ್ರದುರ್ಗ ,,	0	0	20	6
ಕಡೂರ್ ,,	42	31	0	0
ಶಿವಮೊಗ್ಗ ,,	*	*	0	0
* ಸಂಖ್ಯೆ ಕಾಣಿಸಿಲ್ಲ ಒಟ್ಟು	118	88	23	8

ಶಾಲಿವಾಹನ ಶಕ ವರುಷಂಗಳು ೧೮೩೦ನೇ ಕೀಲಕನಾಮ ಸಂವತ್ಸರದ ಆಶ್ವೀಜ ಬಹುಳ ಷಷ್ಠಿ ಗುರುವಾರದಿಂದ ಆಶ್ವೀಜ ಬಹುಳ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಅಕ್ಟೋಬರ್.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇದಿ ತಾರೀಖು ಮಾಸ
15	ಗುರು *	ಷಷ್ಠಿ	36 54	ಮೃ	16 58	30
16	ಶುಕ್ರ	ಸಪ್ತಮಿ	39 20	ಆರ್ದ್ರ	19 52	1
17	ಶನಿವಾ	ಅಷ್ಟಮಿ	41 58	ಪುನ	24 2	2
18	ರವಿವಾ	ನವಮಿ	46 26	ಪುಷ್ಯ	29 12	3
19	ಚಂದ್ರ ‡	ದಶಮಿ	51 10	ಆಶ್ಲೇ	35-14	4
20	ಕುಜ †	ಏಕಾದಶಿ	55 58	ಮಘ	41 32	5
21	ಬುಧ ,,	ದ್ವಾದಶಿ	60 0	ಪುಬ್ಬ	48 2	6

* ವ್ಯತೀಪಾತಯೋಗ, ದಗ್ಧಯೋಗ ‡ ಶ್ರೀರಂಗಪಟ್ಟಣದಲ್ಲಿ ಅಷ್ಟತೀರ್ಥೋತ್ಸವ † ಸ್ಮಾರ್ತರ ಏಕಾದಶಿ, ಹರಿದಾಸರ ಭಾಗವತವೈಷ್ಣವ ಏಕಾದಶಿ

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಸಣ್ಣ ಅಕ್ಕಿ ಪಲ್ಲ ೧ಕ್ಕೆ	೧೩ ೮ ೦	೧೩-೦ ೦
ಕಂಬಳಿ ಅಕ್ಕಿ	೧೩ ೮-೦	೧೨ ೦ ೦
,, ದುಯಂ	೧೨ ೦-೦	೧೩ ೮ ೦
ಜೀರಾಸ ಅಕ್ಕಿ	೩ ೧೨-೦	೧೩-೦-೦
ಸಣ್ಣಕ್ಕಿ ಬಸಲ್	೨೦ ೦-೦	೨೦ ೦ ೦
,, ದುಯಂ	೧೯-೦-೦	೧೯-೦ ೦
ತೊಗರಿ ಬೇಳೆ ಪಲ್ಲ ೧ಕ್ಕೆ	೧೭ ೦-೦	೧೮ ೦ ೦
,, ದುಯಂ	೧೩-೮ ೦	೧೩-೦ ೦
ಕಡ್ಲೆ ಬಾಗಿ ಪಲ್ಲ ೧ಕ್ಕೆ	೮ ೮ ೦	೩ ೦-೦ ೦
ಕಾರಾಗಿ	೮ ೦-೦	೨-೪ ೦
ಜೋಳ	೨-೧೦-೦	೯-೦ ೦
ಅಲಸಂದೆ ಪಲ್ಲ ೧ಕ್ಕೆ	೧೧-೮-೦	೧೧ ೦-೦ ೦
ಬಿಳೀ ಅವರೆ	೧೧-೮-೦	೯-೦-೦
ಹೆಸರು	೧-೦ ೦-೦	೧-೦-೮-೦
ಉದ್ದು	೧೩-೦ ೦	೧-೦ ೮ ೦
ಆವಲೆ	೧೫-೪ ೦	೧೪ ೦ ೦
ಎಳ್ಳು ಸೆ ೧ಖಂಡಿಕ್ಕೆ	೨೧-೦-೦	೧೩-೮ ೦
ಹುರುಳಿ	೩ ೮-೦	೮ ೦ ೦
ಹರಳು ೧ ಸೇರಿಗೆ	೧-೦ ೪-೦	೧೧ ೦ ೦
ಸೀಗೆಕಾಯಿ ಮಣ ೧ಕ್ಕೆ	೧-೧-೦ ೦	೧ ೩ ೦
ಮೆಣಸಿನಕಾಯಿ	೬-೦-೦	೪ ೪ ೦
ದುಯಂ	೫ ೮-೦	೪-೦ ೦
ಬೆಲ್ಲ ದೊಡ್ಡ ಅಚ್ಚು	೫ ೮ ೦	೨೦-೦-೦ ೦
ಬೆಳ್ಳುಳ್ಳಿ ಮಣ ೧ಕ್ಕೆ	೫-೧-೦-೦	೬-೪-೦
ಹರಳೆಣ್ಣೆ ,,	೫-೦-೦	೪ ೦ ೦
ಕೊತ್ತುಂಬರಿ ಪಲ್ಲ ೧ಕ್ಕೆ	೬ ೪-೦	೬ ೪ ೦
ಉಪ್ಪು ,,	೪-೧-೦-೦	೫ ೮ ೦
ಹುಣಸೇ ಹಣ್ಣು	೧-೮-೦	೧ ೪ ೦
,, ಹಳೇದು	೧-೬ ೦	೧ ೪ ೦
ತುಪ್ಪ ಮಣ ೧ಕ್ಕೆ	೧೪ ೧-೦	೧೫ ೮-೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ	೯-೦-೦	೪ ೦ ೦
ತೆಂಗಿನಕಾಯಿ ೧೦೦ಕ್ಕೆ	೪-೮-೦	೫ ೦ ೦
ಅಳಲೇಕಾಯಿ ಮಣ ೧ಕ್ಕೆ	೦-೧೦-೦	೦ ೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೪-೦	೦-೧೩ ೦
ಚಿನ್ನ (ಪೌನ್) ಕೆಂಪು	೧೫ ೩-೦	೧೫ -೦ ೦
,, ,, ಪಸಿಮೆ	೧೫-೧೪-೦	೧೫-೮ ೦
,, ,, ಗಟ್ಟಿ ತೊಲ ೧ಕ್ಕೆ	೨೪-೧೧-೦	೨೪ ೮ ೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೩೩-೦-೦	೩೪ ೮ ೦

Printed and Published by the Rev. E W. THOMPSON, M A, Proprietor and Manager, Wesleyan Mission Press, Mysore 15/10/1908.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೮ ನೇ ಇಸವಿ ಅಕ್ಟೋಬರ್ ತಾರೀಖು ೨೨ ನೇ ಗುರುವಾರ. ಸಂಚಿಕೆ ೨೧

AMRUTANJAN DEPOT, 16 OAK-LANE BOMBAY. [17-35]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ —ವಾತ ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಜಕವು ಮತ್ತು ಘಾಯ, ಗಂಟ್ಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ ಬಾಟ್ಲಿ ೧ಕ್ಕೆ ಕಿಮ್ಮತು ೦ ೮-೦ ಪೋಸ್ಟು ಖರ್ಚು ೦-೩-೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಹುಜ್ಜಿ ವಗೈರ ನಾಶವಾಗುವದು, ಇದರಿಂದ ಚನೋವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦-೩-೦

ಈ ಕಂಪನಿಯವರು ಹೆಚ್ಚು ನಮೂನೆಯು ಔಷಧಗಳನ್ನು ತಯಾರಿಸುವದರಿಂದ [illegible] ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ರವಾನಿಸಲ್ಪಡುವದು

ಜೀರ್ಣಾಮೃತ—[illegible] ೧ಕ್ಕೆ	೧—[illegible]	ಕುಮುದ [illegible]—[illegible]	೧—[illegible]
[illegible] ರಕ್ತಶುದ್ಧಿ	[illegible]	ಪ್ರಮೇಹದ [illegible]	೧—[illegible]
[illegible]	—೨—	[illegible]	೧—೪—೦
[illegible]	—[illegible]—	[illegible]	೦—೬—
[illegible]	—[illegible]—	[illegible]	೦—೪—
[illegible]	—[illegible]—	[illegible] ೧ಕ್ಕೆ	೦—[illegible]—
[illegible]	—[illegible]—	[illegible]	೧—೦—೦
[illegible]	—[illegible]—	[illegible]	[illegible]
[illegible]	—[illegible]—	[illegible]	—೬—
[illegible]	—[illegible]—	ರೇಚಕ [illegible]	೦—[illegible]—

ವಿಳಾಸ —ವಿಲಿಯಂ ಮತ್ತು ಕಂಪೆನಿ ೧೬ ಓಕ್‌ಲೇನ್ ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಎಡ್ರೆಸ್ಸು — "ಅಮೃತಾಂಜನ." ಮುಂಬಯಿ

ವಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

16 46



೧ ಲೋಕಾಮೃಯದ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಚಳಿಜ್ವರ, ಹೊಟ್ಟೆಶೂಲೆ, ಸಂಧುಗಳ ನೋವು, ಮೈ ಕೈ ಕಾಲು ಸೆಳೆತ (ವಾತ) ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಸನ್ನಿ [illegible] ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

[illegible] ಅಥವಾ [illegible] ಉಪಯೋಗಿಸುತ್ತಿದ್ದರೆ ಬಹಳ ಹೊತ್ತು [illegible], ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, [illegible] ದಾರಿ ಕೊಡದ, [illegible] ನರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿ ಪಡಿಸುತ್ತದೆ [illegible] ಜ್ವರ ಪಚ್ಚಜ್ವರ, ಕ್ಷಯ [illegible] ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ [illegible] ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷದದ ಸಂಗಡ [illegible]

[illegible] ವರ್ಷದೊಳಗಿನ [illegible] ೧ ಕುಪ್ಪಿ ಪಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು [illegible]

ವಿಳಾಸ —ವಾಳ್ಯದ ವೆಂಕಟಾಚಲ ಪಂಡಿತ [illegible]

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಜ್ವರಹರಿ 64 12



ಇದು ಸಾಧಾರಣ ಜ್ವರ [illegible] ಶೀತಜ್ವರ, ವಾತಜ್ವರ, [illegible] ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

[illegible] ವೆಂಕಟರು [illegible] ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ [illegible] ಯಿತು ಇಷ್ಟು ಸ್ವಲ್ಪ ಕಾಲದಲ್ಲಿ [illegible] ಔಷದದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು [illegible] ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ [illegible]—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ [illegible] ರೂ , ೧—೮ ರೂ [illegible] ರೂ ೭—೧೨ ಆ , ೧೧ ರೂ , ಹನ್ನೆರಡು [illegible] ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಓಮಂ ಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದೆಸವು ,, ಜ್ವರಹರಿ ' ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಹಾಜೀದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಿಂದ್ರಲ್ಲಿ ವಿಕ್ರಯ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

ಶಿವಸಂಚಿಸ್ತವ [illegible].

79 4

(ಪುಟಗಳು [illegible])

ಶಿವಭಕ್ತಿ ಸಂಪನ್ನರಿಗೆಲ್ಲರಿಗೂ ಬೇಕಾದುದು

ಶ್ರೀ ಮಾದರಸ ನಂದೀಂದ್ರ [illegible] ರಚಿತವಾದ ಸಂಸ್ಕೃತದ ವ್ಯಾಖ್ಯಾನದೊಡನೆ ಕೂಡಿದ ಮೂಲ [illegible] ಮಹಿಮ್ನ [illegible], ಹಾಲ [illegible] ಪ್ರಖ್ಯಾತವಾದ ಪಂಚ ಸ್ತೋತ್ರಗಳು ಹೊಸದಾಗಿ ಬರೆದ ಕನ್ನಡ ಟಿಪ್ಪಣದಿಂದ ಕೂಡಿ ಸುಂದರವಾದ ಕನ್ನಡದ ಅಕ್ಷರಗಳಿಂದ ಉತ್ತಮವಾದ ಕಾಗದದಲ್ಲಿ ಅಚ್ಚು ಮಾಡಿಸಲ್ಪಟ್ಟಿದೆ

ಕ್ರಯ ಪುಸ್ತಕ ೧ಕ್ಕೆ ವಿ ಪಿ ಮೂಲಕ ರೂ ೧—೪—೦

೧೨ ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಪ್ರತಿಯು ಉಚಿತವಾಗಿ ಕಳುಹಲ್ಪಡುವುದು

ವಿಳಾಸ —ಬಸವಲಿಂಗಸ್ವಾಮಿಗಳು, ಹೊಸಮಠ, ಮೈಸೂರು

ಪ್ರತಿಯೊಬ್ಬ ವೀರಶೈವ ಮತಸ್ಥರಿಗೆ ಅವಶ್ಯಕವಾದದ್ದು

ಚೆನ್ನಬಸವೇಶ ವಿಜಯ, ಕನ್ನಡ ವಚನ ರೂಪವಾದದ್ದು, ಅನೇಕ ಚರಿತ್ರೆಗಳು ಇರುತ್ತೆ ಕ್ರಯ ರೂ ೧—೪—೦ ಈ ಪುಸ್ತಕವನ್ನು ತರಿಸಿಕೊಳ್ಳುವವರಿಗೆ ಕೆಳಗಿನ ಫೋಟೋಗಳನ್ನು ಬಹುಮಾನವಾಗಿ ಕಳುಹಿಸುತ್ತೇವೆ

ಶ್ರೀ ಅಲ್ಲಮ ಪ್ರಭುದೇವರು ಬಸವಾದಿ ಪ್ರಮಥರುಗಳೊಡನೆ ಇರತಕ್ಕ ಫೋಟೋ ೧ಕ್ಕೆ ೦—೨—೦

ಶ್ರೀ ಚಿತ್ರದುರ್ಗ ಸಂಸ್ಥಾನದ ಈಗಿನ ಶ್ರೀಮಜ್ಜಯದೇವ [illegible] ಜಗದ್ಗುರುಗಳ ಫೋಟೋ ೧ಕ್ಕೆ ೦—೨—೦

ಆಡೀ ಸ್ವಾಮಿಗಳ ಫೋಟೋ ನಂ ೨ ಸೈಜ್ ೦—೧—೦

ಒಟ್ಟಾಗಿ ತರಿಸಿಕೊಂಡರೆ ೮ಕ್ಕೆ ೧, ೨೦ಕ್ಕೆ ೩, ೫೦ಕ್ಕೆ ೭, ೧೦೦ಕ್ಕೆ ೨೦ ರಂತೆ ಕಮೀಷನ್ ದೊರೆಯುತ್ತೆ ೧೦×೧೨ ರ ಸೈಜಿನ ಅಸಲ್ ಫೋಟೋ ೧ಕ್ಕೆ ೦—೮—೧

ವಿಳಾಸ —[illegible] ಪುಟ್ಟಣ್ಣ, [illegible] ಬಜಾರ್, ಕೋಟೆ, ಮೈಸೂರು

ಮಾರಾಟಕ್ಕೆ ಸಿದ್ಧವಾಗಿದೆ

89 3

ಮೈಸೂರು ಶಿವರಾಂಪೇಟೆ ಇಬ್ರಾಹಿಂ ರಸ್ತೆಯಲ್ಲಿ ೨೭×೭ ಅಂಕಣಗಳ ಅಂಚೆ ಗುರಿಕಾರ್ ಕೃಷ್ಣಪ್ಪನವರಿದ್ದ ದೊಡ್ಡ ಮನೆ [illegible] ಬೇಕಾದವರು—ಮೋಕ್ಷೋಟಿಮ ಫಾರೆಸ್ಟ್ ರೇಂಜರಾದ [illegible] ಶ್ರೀಕಂಠಯ್ಯನವರಿಗೆ ಬರೆದು ಕ್ರಯ ಮುಂತಾದದ್ದನ್ನು ತಿಳಿಯಬಹುದು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

48 22

ತಲೆನೋವು, ವಾಯುನೋವು, ನೆಳತ ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, [illegible] ಲುಗಳ ಸಂಧುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆ ಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಹಿಂದಾವರ್ತಿ ತರಿಸಿ ಪರೀಕ್ಷಿಸಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕ್ರಯಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಕ್ಲೆಮೆಂಟ್,

೩೩, ಪೋದಮುಲೆಟ್ಟಿ ಬೀದಿ, ವೇಪೇರಿ, ಮದರಾಸ್.

ಇಲ್ಲಿ ನೋಡಿ.

77 ।

ತುಮಕೂರು ಮಿರ್ಜ ಇಲಾಹಿಯವರ ಯೂರೋಪಿಯನ್ನರ ಮೇಲ್ಬಾವಿ ರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ದಾರದಿಂದ ತಯಾರಾಗುತ್ತವೆ ಕ್ರಯ —೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯ ವರೆಗೆ ೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು ಈಗತಾನೇ ಇಂಗ್ಲಿಷ್ ಉಲ್ದಾರವು ಬಂದಿದೆ ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಲ್ಪಡುವು ವಿಳಾಸ — ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿರ್ಜ ಇಲಾಹಿ, ತುಮಕೂರು

"ವ್ಯವಹಾರ ನಿರ್ಣಯ," "ಕನ್ನಡ ಲಾ ರಿಪೋರ್ಟರ್."

ವ್ಯವಹಾರನಿರ್ಣಯ—ಪುಟಗಳು ೫೪೫ ಹಿಂದೂ ಮಹಮದೀಯ ಶಾಸ್ತ್ರಗಳು, ೨೯ ಖಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂ ೧೨ ಆಣೆ [10 26]

ಕನ್ನಡ ಲಾ ರಿಪೋರ್ಟರ್—ಪ್ರಿವಿ ಕೌನ್ಸಿಲ್, ಹೈ ಕೋರ್ಟ್, ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ ವರ್ಷದ ಚಂದಾ ರೂ ೧—೦—೦ ಮುಂಗಡ, ಯಾ, ವಿ ಪಿ ಬಿಡಿಪತ್ರಿಕೆ ೧ ಕ್ಕೆ ೦—೨—೦

ಇವುಗಳನ್ನಪೇಕ್ಷಿಸುವವರು—ಬಿ ಎಂ ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು—ಈ ವಿಳಾಸಕ್ಕೆ ಬರೆಯುವುದು

ವಾತಹರಿ

81 3

ಒಂದು ಡಬ್ಬಿ ಕಿಮ್ಮತ್ತು ೧೨ ಆಣೆ—ವಿ ಪಿ ಖರ್ಚು ಬೇರೆ

ಈ ತೈಲವು ತಲೆಶೂಲೆ, ಅರತಲೆ ನೋವು, ವಾಯುವಿನಿಂದ ಕೈಕಾಲು ನೋವು, ಚೇಳು ಕಚ್ಚಿದ್ದರೂ, ಪಾರ್ಶ್ವವಾಯು ಎದೆನೋವು, ಶಸ್ತ್ರಗಳಿಂದ



ತಕ್ಷಣ ಪರಿಹಾರ

ಉಂಟಾದ ಗಾಯ, ಜ್ವರ, ತುರಿ, ಕರವಾಣ, ಮೇಹಪಡೆ, ನರ ಹೊರಳಿದ್ದರೂ ಕೀಲುವಾಯು, ಹಲ್ಲುನೋವು ಮಡಮೆ, ಉಷ್ಣ ಕಳೆ ಬೆಂಕಿಯಿಂದ ಸುಡಲ್ಪಟ್ಟಿದ್ದರೂ, ಥಳಕು, ಇತ್ಯಾದಿ ಅನೇಕ ವ್ಯಾಧಿಗಳಿಗೆ ಚರಿ, ಅಂದರೆ ಎಂಥದೋ ಹಾದಿ ಕ್ಷಣ ಮಾತ್ರದಲ್ಲಿ ನಾಶವಾಗುವದು ಮೂಲವ್ಯಾಧಿಗೂ ಶತ್ಯವಾಗಿದೆ

ಈ ರೋಗಗಳಿಗೆಲ್ಲಾ ಈ ಔಷಧಿಯು ಎಷ್ಟರಮಟ್ಟಿಗೆ ಶತ್ರುವೋ ಅಷ್ಟು ಇನ್ನಾವ ಔಷಧವಾದರೂ ಇಲ್ಲ ಇದನ್ನು ನೋವಿರುವ ಸ್ಥಳಕ್ಕೆ ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗ ಮಾಯವು ತೊಲಗಿ ಸುಖಸಂತೋಷಗಳುಂಟಾಗುತ್ತ ಬಾಧೆಯನ್ನು ಅನುಭವಿಸುವವರು ಕೂಡಲೇ ಬರೆದು ತರಿಸಿಕೊಳ್ಳಿ ತರಿಸದೆವಲ್ಲಾ ಎಂದು ಎಂದಿಗೂ ವ್ಯಸನಪಡುವಿದಿಲ್ಲ ೨ ಡಬ್ಬಿಗಳನ್ನು ಒಟ್ಟಿಗೆ ತರಿಸಿಕೊಳ್ಳುವವರಿಗೆ ಪೋಸ್ಟೇಜು ಮಾಫಿ ಬಿಡುತ್ತೇವೆ ಔಷಧಗಳ ಕ್ಯಾಟಲಾಗನ್ನಪೇಕ್ಷಿಸುವವರು ೬ ಪೈ ಲೇಬಿಲ್ಲಿಟ್ಟು ಬರೆದುಕೊಳ್ಳತಕ್ಕದ್ದು

ವಿಳಾಸ—ಎಂ ಗೋವಿಂದಶೆಟ್ಟಿ
ಮೆಡಿಕಲ್ ಪ್ರಾಕ್ಟೀಷನರ್, ದೇವನಹಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2 43

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ನಿಂದಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರು ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ

ಧಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಕೂಸುಗಳ ಟೋಪಿ, ಸೊಕ್ಸ್ ಮೇಜೋಡು, ಅರ್ಧ ಮೇಜೋಡು, ಕತ್ತಿನಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು



143

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು ನಾಯಿಗೆಮ್ಮು, ಎಲ್ಲಾ ತರದ ಶೀತ ಗಂಟಲಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧ ಬಾಣವಾಯುವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ಶ್ವಾಸಕೋಶ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಹಿಂದಿ ತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತವೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕ್ರಯದಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

53 17

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬| ಆಣೆ ವರೆವಿಗೂ ಚಿಲ್ಲರೆಯಾಗಿ ಆಗಲೀ ಜೋಡಿಯಾಗಿ ಆಗಲೀ ಮಾರಲ್ಪಡುತ್ತವೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ರಾಸುಗಳ ಹರಾಜು.

87 1

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ —ಸನ್ ೧೯೦೮ ನೇ ಇಸವಿ ಅಕ್ಟೋಬರು ತಾರೀಖು ೨೯ನೇ ಗುರುವಾರ ಬೆಳಗ್ಗೆ ೮ ಘಂಟೆಗೆ ಸರಿಯಾಗಿ ಬೆಂಗಳೂರು ಸಿಟಿ ಹಳೇ ಸವಾರ್ ಲೈನ್ ಮುಂಭಾಗದಲ್ಲಿ ಕೆಳಗೆ ನಮೂದಿಸಿರುವ ೩೧ ರಾಸುಗಳು ಬಹಿರಂಗವಾದ ಹರಾಜು ಮೂಲಕ ಮುಂಜೂರಾತಿಗೆ ಒಳಪಟ್ಟು ವಿಕ್ರಯಿಸಲ್ಪಡುತ್ತವೆ ಇಷ್ಟವಿದ್ದವರು ಛಡಸವಾಲ್ ಮೂಲಕ ಪಡೆದುಕೊಳ್ಳಬಹುದು ಹರಾಜು ಆದ ಕೂಡಲೇ ಪೂರಾ ಹಣವನ್ನು ಒಂದೇ ಗಂಟಿನಲ್ಲಿ ಪಾವತಿ ಮಾಡಬೇಕಾಗಿರುತ್ತದೆ

ಹಸುಗಳು	೫	ಎಮ್ಮೆ ಕರುಗಳು	೯
ಹೆಣ್ಣು ಕರುಗಳು	೬	ಕೋಣಗಳು	೩
ಗಂಡುಕರುಗಳು	೧೦	ಪರದೇಶದ ಹೋರಿ	೧

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 33 30

(ಸ್ಕಾಟ್ಸ್ ಇಮಲ್ಷನ್)

ಪುಷ್ಟಿ ಶರೀರವುಳ್ಳವರ್‍ಯಾರೂ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಈ ಮೀನುಮನುಷ್ಯ ಇರುವ ಔಷಧ ವನ್ನೇ ಕೊಂಡುಕೊಳ್ಳಿ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಶಾಲಿಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕ್ರಿಸೋಕದೆ ತಯಾರಾದದ್ದು.

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ— ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ— 'ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ?' ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು ಈ ಜಗತ್ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ ಪಿತ್ತ ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ ಗಾಬರಿ ಅಶಕ್ತಿ, ಎದೆಯು ತಲ್ಲಣಿಸುವುದು, ತಲೆತಿರುಗುವುದು ತಲೆನೋವು, ಹೊಟ್ಟೆಯುಬ್ಬರ ಹುಳಿತೇಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು ಇವೇ ಮೊದಲಾದವು ಹಾಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಷವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [69 8]

ಚೆಕ ೮ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೮ ಆಣೆ ಬುಡ್ಡಿಗಳಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ಸ್ ಪಿ ಒ ಬಾಕ್ಸ್ ೨೦, ಬೊಂಬಾಯಿ — ಇವರಲ್ಲಿ ದೊರೆಯುವುದು

ವೃತ್ತಾಂತ ಪತ್ರಿಕೆ

ಸನ್ ೧೯೦೮ ನೇ ಇಸವಿ ಅಕ್ಟೋಬರ್ ತಾ|| ೨೨ನೇ ಗುರುವಾರ

ಆರೋಗ್ಯ ವಿಚಾರವಾದ ಪ್ರದರ್ಶನವು

ಡಾಕ್ಟರ್ ಪಲ್ಪುಯವರ ಕೂಡ ನಡಿಸಿದ ಸಂಭಾಷಣೆಯು

ರಾಜಧಾನಿಯಲ್ಲಿ ಆರೋಗ್ಯ ವಿಚಾರವಾದ ಪ್ರದರ್ಶನವನ್ನು ಕಳೆದ ಭಾನುವಾರಕ್ಕೆ ಮುಕ್ತಾಯಮಾಡಿದರು ಮರು ದಿನ ಅಂದರೆ ಸೋಮವಾರ ಬೆಳಗ್ಗೆ ಪ್ರದರ್ಶನಶಾಲೆಗೆ ಹೋಗಿ, ಕಟ್ಟಡ ಮುಂತಾದ್ದನ್ನು ಬಿಚ್ಚಿಸಿ ಸಾಮಾನುಗಳನ್ನು ಕೂಡಿಸುತ್ತಿದ್ದ ಡಾಕ್ಟರ್ ಪಲ್ಪುಯವರನ್ನು ಕಂಡೆವು. ಅವರೇ ಈ ಪ್ರದರ್ಶನವನ್ನು ಏರ್ಪಾಡು ಮಾಡಿದವರು ಅವರ ಕೂಡ ಮಾತನಾಡುತ್ತಿರುವಲ್ಲಿ ಅವರು ನಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಟ್ಟರು ಆ ನಮ್ಮ ಪ್ರಶ್ನೋತ್ತರಗಳು ಸಾಮಾನ್ಯವಾಗಿ ಸಕಲ ಪ್ರಜೆಗಳಿಗೂ, ವಿಶೇಷವಾಗಿ ಬಹು ದೂರ ವಾಸಿಸುವ ಹಳ್ಳಿಗಾಡುಗಳಲ್ಲಿದ್ದುಕೊಂಡು ಈ ಸಲದ ಪ್ರದರ್ಶನಶಾಲೆಯನ್ನು ನೋಡಲಾರದೆಹೋದ ವಾಚಕರಿಗೂ ಓದಲು ಕುತೂಹಲ ಉಂಟಾದೀತೆಂದು ನಿರೀಕ್ಷಿಸುತ್ತೇವೆ

ಪ್ರಶ್ನೆ ಡಾಕ್ಟರ್ ಪಲ್ಪುಗಳೇ, ಈ ಪ್ರದರ್ಶನಶಾಲೆಯನ್ನು ಏರ್ಪಡಿಸಿದ್ದರಲ್ಲಿ ನಿಮ್ಮ ಉದ್ದೇಶವೇನು ?

ಉತ್ತರ —ಸಾಮಾನ್ಯವಾದ ಪ್ರಜೆಗಳಿಗೆ ಅವರ ದೇಹಾರೋಗ್ಯವನು ಕಾಪಾಡಿಕೊಳ್ಳುವುದಕ್ಕೆ ಸಹಾಯವಾಗುವಂಥಾ ವಿಷಯಗಳನ್ನು ತಿಳಿಸಬೇಕೆಂಬುವುದೇ ನಮ್ಮ ಉದ್ದೇಶವು

ಪ್ರಶ್ನೆ —ಅಂಥಾ ವಿಷಯಗಳನ್ನು ಅವರಿಗೆ ತಿಳಿಸುವುದಕ್ಕೆ ನೀವು ಏನು ಮಾಡಿದಿರಿ ?

ಉತ್ತರ —ದೃಷ್ಟಾಂತವಾಗಿ ಒಂದೆರಡು ಸಂಗತಿಗಳನ್ನು ಹೇಳುತ್ತೇನೆ, ಕೇಳಿ ಮೈಸೂರು ಸಂಸ್ಥಾನದಲ್ಲಿ ಮಲೇರಿಯಾ ಎಂಬ ಕಾಡುಜ್ವರವು ಬಹು ಪ್ರಬಲವಾಗಿದೆ ಅನೇಕರು ಈ ಜ್ವರದಲ್ಲಿ ಸಾಯುತ್ತಾರೆ ದಿನ ಒಂದಕ್ಕೆ ೧೩೮ ಜನರು ಮೃತಪಡುವರು ಆ ಜ್ವರದ ಉತ್ಪತ್ತಿಯನ್ನು ನಾವು ಅಲ್ಲಿ ವಿವರವಾಗಿ ತೋರಿಸಿದೇವೆ ಒಂದು ತರಹ ಸೊಳ್ಳೆಯು ಮನುಷ್ಯನನ್ನು ಕಚ್ಚಿದಲ್ಲಿ ಅವನ ರಕ್ತಕ್ಕೆ ಆ ಜ್ವರದ ಕ್ರಿಮಿಗಳು ಸೇರಿ, ರೋಗವನ್ನು ಹುಟ್ಟಿಸು

ಸ್ವವೆ. ಅಂಥಾ ಸೊಳ್ಳೆಗಳನ್ನು ಹಿಡಿದು ಶೀಸೆಗಳಲ್ಲಿ ಸೇರಿ ಹಾಕಿ ಬಿಟ್ಟು, ತೋರಿಸುತ್ತೇವೆ. ಆ ಸೊಳ್ಳೆಗಳ ಆಕೃತಿ ಲಕ್ಷಣಾದಿಗಳನ್ನೂ, ಒಂದು ತೊಟ್ಟು ರಕ್ತದಲ್ಲಿ ಆ ಜ್ವರದ ಕ್ರಿಮಿಗಳಿರುವುದನ್ನೂ ಎರಡು ಸರಿಗನು ನಾವು ಇಲ್ಲಿ ಗೋಡೆಗೆ ಸೇರುವಂತೆ ತೋರಿಸುತ್ತೇವೆ. ಇವುಗಳನ್ನು ಇಲ್ಲಿಗೆ ಬಂದ ನೋಟ ಕರಿಗೆ ತೋರಿಸಿ, ಈ ರೋಗ ಪ್ರಾಪ್ತವಾಗುವ ರೀತಿಯನ್ನೂ, ದುಷ್ಟ ಸೊಳ್ಳೆ ಯಾವುವೆಂಬುದನ್ನೂ ಅವರೇ ನೋಡಿ ಗೊತ್ತುಮಾಡಿಕೊಳ್ಳುವಂತೆ ಸಕ್ರಿಗಳನ್ನು ಬಳ್ಳುತ್ತೇವೆ.

ಪ್ರಶ್ನೆ.—ಈ ಕಾಯಿಲೆಯನ್ನು ಕಡಮೆ ಮಾಡುವುದಕ್ಕೆ ನೀವೇನಾದರೂ ಮಾಡಿರುವಿರಾ?

ಉತ್ತರ.—ವಾಡಿಕೆಯ ಒಂದು ಯೂರೋಪ್ಯ ಅಂಗಡಿಯವರು ನನಗೆ ಒಂದು ತರಹಾ ಕ್ವಿನೈನ್ (ಜ್ವರದ ಪುಡಿಯನ್ನು) ಕಳುಹಿಸಿದಾರೆ. ಅದರ ಹೆಸರು ಯುಕ್ವಿನೈನ್ ಎಂಬುವುದು. ಅದು ಕಹಿಯಾಗಿಲ್ಲ. ಅದನ್ನು ಸೇವಿಸಿದರೆ ಕಿವಿಯು ಕೇಳಿಸದುದಾಗಲಿ ತಲೆ ನೋವಾಗಲಿ ಉಂಟಾಗದು. ಇತರ ತರಹಾ ಕ್ವಿನೈನ್‌ನಲ್ಲಿ ಈ ದುರ್ಗುಣಗಳುಂಟು. ಗುಡಿಗಳಲ್ಲಿ ಪೂಜಾರಿಯು ಭಕ್ತಾದಿಗಳಿಗೆ ಯಾವ ರೀತಿಯಲ್ಲಿ ಪ್ರಸಾದವನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕೊಡುವನೋ, ಅ ನಮ್ಮ ಆರೋಗ್ಯಭಾಗ್ಯವೆಂಬ ಗುಡಿಯಲ್ಲಿ ಬಂದವರಿಗೆ ಈ ಯುಕ್ವಿನೈನ್ ಎಂಬದರ ಗುಳಿಗೆಗಳನ್ನು ಹಂಚಿಕೊಟ್ಟಿದೇವೆ. ರೋಗಿಗೆ ಜ್ವರವಿಲ್ಲದಿದ್ದಾಗಲೂ ಕಡ ಪೂರ್ಣಪ್ರಮಾಣದ ಕ್ವಿನೈನನ್ನು ಕೊಡತಕ್ಕದ್ದೆಂದೂ ಬಂದವರಿಗೆ ತಿಳಿಸಿದ್ದೇವೆ.

ಪ್ರಶ್ನೆ.—ಗ್ರಾಮಾಂತರದ ಪ್ರಜೆಗಳು ಈ ನಿಮ್ಮ ಪ್ರದರ್ಶನ ಶಾಲೆಗೆ ಬಂದು ನೋಡಿ ಹೋಗಿದಾರಷ್ಟೆ. ಅವರು ಇಲ್ಲಿ ನೋಡಿದ್ದರಿಂದ ತಮ್ಮ ಗ್ರಾಮಗಳನ್ನು ಆರೋಗ್ಯಕರವಾದ ಸ್ಥಿತಿಯಲ್ಲಿಟ್ಟುಕೊಂಡಾರೆಂಬ ಊಹೆ ನಿಮಗುಂಟೇ?

ಉತ್ತರ.—ಚೆನ್ನಾಗಿ ಕೇಳಿದಿರಿ. ಈ ಪ್ರದರ್ಶನವನ್ನು ನೋಡುವುದಕ್ಕೆ ಬಂದಿದ್ದ ಜನರಿಗೆಲ್ಲಾ ಇಲ್ಲಿನ ವಿಷಯಗಳನ್ನು ತೋರಿಸಿ ವಿವರಿಸುತ್ತೇವೆ; ಅಂದರೆ, ಅವರು ತಮ್ಮ ಮನೆಮಠಗಳ ಸುತ್ತುಮುತ್ತಿನಲ್ಲಿರುವ ಹಳ್ಳಕೊಳ್ಳಗಳನ್ನೂ ಗುಂಡಿಗಳನ್ನೂ ಮುಚ್ಚಿಬಿಟ್ಟು, ಬಕ್ಕರೆ ಬೋರುಗಳಲ್ಲಿ ಕೂಡ ಎಲ್ಲೂ ನೀರು ನಿಲ್ಲದಂತೆ ನೋಡಿಕೊಳ್ಳಬೇಕೆಂದೂ, ಅಂಥಾ ನೀರುಗಳಲ್ಲೇ ಈ ದುಷ್ಟ ಜ್ವರವನ್ನು ಹುಟ್ಟಿಸುವಂಥಾ ಸೊಳ್ಳೆಗಳು ಹುಟ್ಟಿ ಹಬ್ಬುವವೆಂದೂ ಹೇಳುತ್ತೇವೆ.

ಪ್ರಶ್ನೆ.—ಇದಲ್ಲದೆ ಇನ್ಯಾವ ರೋಗಗಳ ವಿಷಯವಲ್ಲಾದರೂ ಅವರಿಗೆ ನೀವು ಏನಾದರೂ ತಿಳಿಸಬಲ್ಲಿರಾ?

ಉತ್ತರ.—ಅನೇಕ ಇತರ ವಿಚಾರಗಳನ್ನು ಕುರಿತೂ ಅವರಿಗೆ ತಿಳಿಸಿದೇವೆ. ಮಲಿನ, ಕೆಟ್ಟ ನೀರನ್ನು ಉಪಯೋಗಿಸಿದ್ದರಿಂದ ಉಂಟಾಗುವ ರೋಗಗಳ ವಿಷಯವನ್ನು ತೋರಿಸಿ ವಿವರಿಸಿದೇವೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ನಾರುಹುಣ್ಣು ಬಹಳ ಹೆಚ್ಚಾಗಿ ಜನರನ್ನು ಪೀಡಿಸುತ್ತದೆ. ಇದು ಬಹು ಅಸಹ್ಯವಾದ ಮತ್ತು ಬಾಧೆಯನ್ನು ಕೊಡುವ ಹುಣ್ಣು. ಇದಕ್ಕೆ ಕಾರಣವಾದ ಒಂದು ಜಾತಿಯ ಕ್ರಿಮಿಯು ನೀರಿನಲ್ಲಿ ಸೇರಿಕೊಂಡಿರುತ್ತದೆ. ಒಂದು ಗ್ರಾಮದಲ್ಲಿ ಒಂದೇ ಒಂದು ಭಾವಿಯುಂಟು. ಆ ನೀರಿನಲ್ಲಿ ಅಂಥಾ ಕ್ರಿಮಿಗಳಿರುತ್ತವೆ. ಆ ನೀರನು ಶೀಸೆಯಲ್ಲಿ ತುಂಬಿ ಕ್ರಿಮಿಗಳನ್ನು ನೋಟಕರಿಗೆ ತೋರಿಸಿರುವೆವು. ಇದಲ್ಲದೆ ನೀರಿನಲ್ಲಿರತಕ್ಕ ಇತರ ಜಾತಿಯ ಕ್ರಿಮಿಗಳ ಮೊಟ್ಟೆಗಳು ಮನುಷ್ಯನ ಕರುಳಿನೊಳಕ್ಕೆ ಹೋಗಿ ಸೇರುವವು. ಅಂಥಾ ಕ್ರಿಮಿಗಳನ್ನು ಕರುಳಿನಲ್ಲಿ ಪಡೆದಿರುವ ಜನರು, ಬಳಸುವಂಥಾ ನೀರಿನ ಬಳಿ ಕೆರೆ ಜಲಮಲಾದಿಗಳನ್ನು ವಿಸರ್ಜನೆ ಮಾಡುತ್ತಾರೆ. ಈ ಮೂಲಕ ಆ ಕ್ರಿಮಿಗಳ ಮೊಟ್ಟೆಗಳು ನೀರಿಗೆ ಬಂದು ಬಿದ್ದು ಅದನ್ನು ಕೆಡಿಸುತ್ತವೆ.

ಪ್ರಶ್ನೆ.—ನಾಂತಿಭೇದಿ ಉಪದ್ರವು ನೀರಿನಲ್ಲಿರುವಂಥಾ ಕ್ರಿಮಿಯಿಂದಲೇ ಉತ್ಪತ್ತಿಯಾಗುವುದೆಂಬ ಅಂಶವನ್ನು ಈಗ ಜನರೆಲ್ಲಾ ಸುಸ್ಪಷ್ಟವಾಗಿ ತಿಳಿದುಕೊಂಡಿರುವರಲ್ಲವೋ?

ಉತ್ತರ.—ಈ ಪ್ರದರ್ಶನವನ್ನು ನೋಡುವುದಕ್ಕೆ ಬಂದವರಲ್ಲಿ ಕೆಲವರಿಗೆ ತಮ್ಮ ಕುಡಿಯುವ ನೀರಿನಲ್ಲಿ ನಾರುಹುಣ್ಣು ಹುಟ್ಟಿಸುವ ಮತ್ತು ಇತರ ಕಾಯಿಲೆಗಳನ್ನುಂಟುಮಾಡುವ ಕ್ರಿಮಿಗಳಿರುವುದನ್ನು ತೋರಿಸಿದಾಗ ಅವರು ಪರಮಾಶ್ಚರ್ಯಪಟ್ಟರು. ವಾಂತಿಭೇದಿ ಉಪದ್ರವು ನೀರಿನಲ್ಲಿರುವಂಥಾ ಕ್ರಿಮಿಯಿಂದ ಹುಟ್ಟುತ್ತದೆಂದು ಅನೇಕರು ತಿಳಿಯಬಹುದು. ಆದರೆ ಶುದ್ಧವಾದ ನೀರನ್ನು ಸಂಪಾದಿಸಿಕೊಳ್ಳುವುದಕ್ಕೆ ಏನುಮಾಡಬೇಕೋ ಅವರಿಗೆ ತಿಳಿಯದು.

ಪ್ರಶ್ನೆ.—ಯಾಗಾದರೆ ನೀರನ್ನು ನಿರ್ಮಲವಾಗಿ ಮಾಡುವುದಕ್ಕೆ ಏನುಮಾಡಬೇಕೆಂದು ಹೇಳುತ್ತೀರಿ? ಅದಕ್ಕೆ ಪರದೇಶಗಳಿಂದ ಬರತಕ್ಕ ನೀರುಶೋಧಿಸುವ ಯಂತ್ರಗಳು (ಫಿಲ್ಟರುಗಳು) ಬಹಳ ಪ್ರಿಯ. ಅವು ತುಂಬಾ ನಾಜೂಕಾಗಿ ರಚಿಸಿದಂತ ಸಾಧಾರಣ ಜನರು ಅವುಗಳನ್ನು ಕೊಂಡು ಉಪಯೋಗಿಸುವುದು ಸಾಧ್ಯವಲ್ಲ.

ಉತ್ತರ.—ಹೌದು. ನೀವು ಹೇಳುವ ಮಾತು ನಿಜ. ಕೆಲವು ಸಂದರ್ಭಗಳಲ್ಲಿ ಜನರು ಶುದ್ಧವಾದ ನೀರಿಗೋಸ್ಕರ ಬಹಳ ಶ್ರಮಪಡಬೇಕಾಗಿರುವುದಿಲ್ಲ. ಮೊದಲು, ಒಂದು ಕೆರೆಯ ನೀರು ಕೆಟ್ಟುಹೋಗಿದ್ದರೆ ಅದರ ಪಕ್ಕದಲ್ಲಿ ಒಂದು ಭಾವಿಯನ್ನು ತೋಡಿ. ಆ ಭಾವಿಯ ನೀರನ್ನು ಉಪಯೋಗಿಸಿದಲ್ಲಿ ಅನೇಕ ವೇಳೆ ಆ ನೀರು ನಿರ್ಮಲವಾಗಿದ್ದೀತು. ಆದರೆ ಹೇಗಾದರೂ ನೀರನ್ನು ಕುದಿಸಿಬಿಟ್ಟರೆ ಸರ್ವೋತ್ತಮ. ಕುದಿಸಿದ ನೀರು ನಿರ್ದೋಷವಾದದ್ದು. ಅದರಿಂದ ಅನೇಕ ಜಾತಿಯ ರೋಗಕ್ರಿಮಿಗಳು ನಾಶವಾಗುವವು.

ಪ್ರಶ್ನೆ.—ಈ ಸಲ ಪ್ರದರ್ಶನವನ್ನು ನೋಡುವುದಕ್ಕೆ ಬಹಳ ಜನರು ಬಂದಿದ್ದರೋ?

ಉತ್ತರ.—ಅನೇಕ ಜನರು ಗುಂಪು ಗುಂಪಾಗಿ ಬಂದಿದ್ದರು. ಈ ಪ್ರದರ್ಶನಶಾಲೆಯೊಳಗೆ ಎಳ್ಳಷ್ಟೂ ಸ್ಥಳವಿಲ್ಲದಂತೆ ತುಂಬಿಕೊಂಡಿದ್ದರು. ದಿನ ಒಂದಕ್ಕೆ ಸರಾಸರಿ ೪ ಅಥವಾ ೫ ಸಾವಿರ ಜನರಂತೆ ಬಂದು ನೋಡಿದರು.

ಪ್ರಶ್ನೆ.—ಉಪನ್ಯಾಸಗಳೇನಾದರೂ ನಡೆದವೋ?

ಉತ್ತರ.—ದೇವಿಯೊಳಗೆ ಒಂದೆರಡು ಉಪನ್ಯಾಸಗಳು ನಡೆಸಲ್ಪಟ್ಟವು. ಆದರೆ ನೈರ್ಮಲ್ಯವೇ ಮೊದಲಾದ ವಿಷಯಗಳನ್ನು ಕುರಿತು ಹೇಳಲ್ಪಟ್ಟ ಉಪನ್ಯಾಸಗಳನ್ನು ಕೇಳುವುದಕ್ಕೆ ಬಹು ಜನರು ಸೇರಲಿಲ್ಲ. ಕೆಲಕೆಲವರು ಮಾತ್ರ ಹಾಜರಿದ್ದರು. ನಮ್ಮ ಪ್ರದರ್ಶನದಲ್ಲಿ ಜನರಿಗೆ ವಿಷಯಗಳನ್ನು ಸರಿಯಾಗಿ ವಿವರಿಸಿ ತಿಳಿಸುವುದಕ್ಕೋಸ್ಕರ ನಾವು ನಮ್ಮ ಕಛೇರಿಯವರನ್ನು ನೇಮಕ ಮಾಡಿದ್ದು ತುಂಬಾ ಪ್ರಯೋಜನವಾಯಿತು.

ಪ್ರಶ್ನೆ.—ಬಂದಿದ್ದ ಜನರಿಗೆ ನೀವು ಬಹಳ ಸಂಗತಿಗಳನ್ನು ತಿಳಿಸಿದಿರೋ? ಇಲ್ಲಿ ನೀವು ತೋರಿಸಿದ್ದನ್ನೆಲ್ಲಾ ಅವರು ಸರಿಯಾಗಿ ತಿಳಿದುಕೊಂಡರೋ?

ಉತ್ತರ.—ಇಲ್ಲಿಗೆ ಬಂದು ನೋಡಿದವರ ಪೈಕಿ ಅನೇಕ ಮಂದಿ ಅಕ್ಷರಜ್ಞರಾದ ಟೆಕರು, ಸ್ಯಾನಿಟರಿ ಇನ್‌ಸ್ಪೆಕ್ಟರುಗಳು, ಶೇಖ್ದಾರರು ಮತ್ತು ಪಟೇಲರು. ಅವರಲ್ಲಿ ಕೆಲವರು ನಾವು ತೋರಿಸಿ ವಿವರಿಸಿದ್ದನ್ನು ನೋಡಿ ತಿಳಿದುಕೊಂಡಿದಾರೆ. ಆದರೆ ಅನೇಕ ಗ್ರಾಮಸ್ಥರು ಸಾಮರ್ಥ್ಯಸಾಲದವರಾದ್ದರಿಂದ ಅವರಿಗೆ ನಾವು ಹೇಳಿದ್ದೆಲ್ಲಾ ಮನದಟ್ಟಾಗಲಿಲ್ಲ. ಹ್ಯಾಗೂ ಅವರಿಗೂ ಅಲ್ಪಸ್ವಲ್ಪ ತಿಳುವಳಿಕೆಯನ್ನು ಮಾಡಿಕೊಟ್ಟೆವು. ಭೂಪಟನ್ನೂ ಈ ಪ್ರದರ್ಶನಗಳನ್ನಿಟ್ಟುಕೊಂಡು ನಾವು ಗ್ರಾಮಾಂತರಗಳ ಮೇಲೆ ಸಂಚರಿಸುತ್ತಾ, ಜನರಿಗೆ ಅಲ್ಲಲ್ಲಿ ನೋಟವನ್ನು ತೋರಿಸಿ ವಿವರಿಸುತ್ತಾ ಬಂದರೆ ತುಂಬಾ ಪ್ರಯೋಜನವಾಗುವುದು.

ಪ್ರಶ್ನೆ.—ತಿಳುವಳಿಕೆ ಸಾಲದೆ ಇರೋಣದರಿಂದ ಅನೇಕ ಜನರು ರೋಗಗಳಲ್ಲಿ ಬಿದ್ದು ನರಳುತ್ತಾರೆಂತಲೂ, ತಿಳುವಳಿಕೆಯುಂಟಾದರೆ ಅವೆಲ್ಲಾ ನಿವಾರಣೆಯಾಗುತ್ತದೆಂತಲೂ ಹೇಳುತ್ತೀರೋ?

ಉತ್ತರ.—ನಿಜ, ಖಂಡಿತವಾಗಿಯೂ ಹಾಗೇ ಸರಿ. ಗ್ರಾಮಸ್ಥರು ಬಹಳ ಸ್ವಲ್ಪ ಶ್ರಮಪಟ್ಟಲ್ಲಿ ತಮ್ಮ ಮನೆಗಳನ್ನು ಆರೋಗ್ಯಕರವಾಗಿ ಮಾಡಿಕೊಳ್ಳಬಹುದು, ಶರೀರದ ಸೌಖ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು, ಈಗ್ಗಿಂತಲೂ ಹೆಚ್ಚು ದಿವಸ ಬದುಕಬಹುದು. ಆದರೆ ಏನು ಮಾಡಬೇಕೆಂಬುವುದು ಅವರಿಗೆ ತಿಳಿಯದೆ ಇವೆ. ಅವರಿಗೆ ತಿಳುವಳಿಕೆ ಕೊಡಬೇಕಾದದ್ದು ಅವಶ್ಯ. ಈಗ ಗವರ್ನ್‌ಮೆಂಟಿನವರು ಹೊಸದಾಗಿ ಏರ್ಪಾಡು ಮಾಡಿರುವ ಸ್ಯಾನಿಟರಿ ಇಲಾಖೆಯು ಜನರಿಗೆ ಈ ವಿಚಾರದಲ್ಲಿ ಕ್ರಮೇಣ ಅಂಥಾ ತಿಳುವಳಿಕೆಯನ್ನು ಉಂಟುಮಾಡುತ್ತಾ ಬರುವದು.

ಪ್ರಶ್ನೆ.—ಮುಂದಿನ ವರುಷವೂ ಈ ಪ್ರದರ್ಶನವನ್ನು ನಡೆಸುತ್ತೀರೋ?

ಉತ್ತರ.—ಹೌದು. ಬರುವ ವರುಷ ಪ್ರದರ್ಶನವನ್ನು ದೊಡ್ಡದಾಗಿ ನಡೆಸಿ, ಇನ್ನೂ ಹೆಚ್ಚು ವಿಷಯಗಳನ್ನು ಪ್ರದರ್ಶನ ಮಾಡಬೇಕೆಂದಿದೇವೆ. ಈ ಪ್ರದರ್ಶನವನ್ನು ಬಹು ಆತುರದಿಂದ ಏರ್ಪಾಡು ಮಾಡಿದೆವು. ಕೆಲವು ಪ್ರದರ್ಶನ ವಸ್ತುಗಳು ಇನ್ನೂ ಈಗೀಗ ಬರುತ್ತವೆ. ಕೆಲವು ಯೂರೋಪಿಯನ್ ಷಾಪುಗಳಿಂದ ಸಾಮಾನುಗಳನ್ನು ತರಿಸುವುದಕ್ಕೆ ಈ ವರುಷ ಸಮಯವಿರಲಿಲ್ಲ. ಮುಂದಿನ ವರುಷ ತರಿಸುವೆವು.

ಇಷ್ಟೆಲ್ಲಾ ಮಾತನಾಡಿಕೊಂಡು ನಾವು ವಾಪಸು ಬರುತ್ತಿರುವಲ್ಲಿ ಡಾಕ್ಟರ್ ಪಲ್ಪುಯವರು ನಮ್ಮನ್ನು ಕರೆದು ಆರೋಗ್ಯ ವಿಚಾರವಾದ ಕೆಲವು ಕಾಗದಗಳನ್ನೂ ಪುಸ್ತಕಗಳನ್ನೂ ಕೊಟ್ಟರು. ಅವುಗಳಲ್ಲಿ ಕೆಲವು ಇಂಗ್ಲಿಷಿನಲ್ಲೂ ಕೆಲವು ಕನ್ನಡದಲ್ಲೂ ಬರೆದು ಅಚ್ಚು ಹಾಕಲ್ಪಟ್ಟಿವೆ. ಅವು ಆರೋಗ್ಯಭಾಗ್ಯ ವಿಚಾರವಾದ ಅನೇಕ ಸಂಗತಿಗಳನ್ನು ವಿವರಿಸತಕ್ಕವುಗಳಾಗಿವೆ. ಕೇಳಿದವರಿಗೆಲ್ಲಾ ಕೆಲವನ್ನು ಪುಕ್ಕಟೆಯಾಗಿ ಹಂಚಿಕೊಡುವರು. ಕೆಲವನ್ನು ತಲಾ ೩ ಕಾಸಿಗೆ ಒಂದರಂತೆ ವಿಕ್ರಯಮಾಡುತ್ತಾರೆ. ವಾಚಕರು ಈ ಕಾಗದಗಳನ್ನೂ ಪುಸ್ತಕಗಳನ್ನೂ ಡಾಕ್ಟರ್ ಪಲ್ಪುಯವರಿಗೆ ಬೆಂಗಳೂರಿಗೆ ಬರೆದು ತರಿಸಿಕೊಂಡು ಓದಿ, ಆರೋಗ್ಯಕ್ರಮಗಳನ್ನು ತಿಳಿದು ಆಚರಣೆಯಲ್ಲಿ ತಂದು ಸುಖಜೀವಿಗಳಾದಾರೆಂದು ಹಾರೈಸುತ್ತೇವೆ. ಮತ್ತು ಪ್ರದರ್ಶನವನ್ನು ಬಹು ತೃಪ್ತಿಕರವಾಗಿ ನಡೆಸಿದ ವಿಷಯದಲ್ಲಿ ಡಾಕ್ಟರ್ ಪಲ್ಪುಯವರನ್ನೂ ಅವರ ಸಹಾಯಕರನ್ನೂ ಅವರು ಪಟ್ಟಶ್ರಮಕ್ಕಾಗಿ ಸಂತೋಷದಿಂದ ವಂದಿಸಿ, ಬರುವ ವರುಷದ ಪ್ರದರ್ಶನದಿಂದ ಇನ್ನೂ ಹೆಚ್ಚಾದ ಪ್ರಯೋಜನವಾದೀತೆಂದು ನಂಬಿ ನಿರೀಕ್ಷಿಸುತ್ತೇವೆ.

ದೇವರ ಪ್ರತಿರೂಪವು.

ಜೀವವುಳ್ಳ ಮನುಷ್ಯನ ಗುಣಸ್ವಭಾವಗಳನ್ನು ತೋರಿಸುವುದಕ್ಕೆ ಯಾವ ವಿಧವಾದ ಜಡವಸ್ತುವಾದರೂ ಸರಿಯಾಗ ಬಹುದೇ? ತಾಯಿಯ ಅತಿಶಯವಾದ ಪ್ರೀತಿಯನ್ನು ಮಗನಿಗೆ ಯಾವ ರೂಪವಲ್ಲಾದರೂ ತಿಳಿಸುವುದಕ್ಕಾದೀತೆ? ಗುರುವಿನ ಜ್ಞಾನವನ್ನೂ ಪವಿತ್ರತ್ವವನ್ನೂ ಶಿಷ್ಯನಿಗೆ ಒಂದು ಗೊಂಬೆಯ ಮೂಲಕ ತಿಳಿಸಬಹುದೇ? ಪ್ರೀತಿಗೂ ಜ್ಞಾನಕ್ಕೂ ಪವಿತ್ರತ್ವಕ್ಕೂ ಪದಾರ್ಥಗಳಿಗಿರುವಂತೆ ಆಳತವಾದರೂ ಆಕಾರವಾದರೂ ಇರುವದಿಲ್ಲ. ಅವುಗಳನ್ನು ಅಂತರ್ಯದ ಮನಸ್ಸಿನಿಂದಲೇ ತಿಳಿದು ಗ್ರಹಿಸಿಕೊಳ್ಳಬೇಕಾಗುತ್ತದೆ. ಹೀಗಿರುವಲ್ಲಿ ದೇವರ ಅತಿಶಯವಾದ ಸಂಪೂರ್ಣತೆಯನ್ನು ರತ್ನಖಚಿತವಾದ ಯಾವ ರನ್ನಗೊಂಬೆಯಾದರೂ ತೋರಿಸಬಲ್ಲುದೇ? ಆತನ ಅಪಾರವಾದ ಪ್ರೀತಿಯು ಮನುಷ್ಯನಿಗೆ ಪ್ರಕಟವಾಗಬೇಕಾದರೆ ಅದು ಜೀವವುಳ್ಳ ಒಬ್ಬ ಪವಿತ್ರಪುರುಷನ ಮೂಲಕ ಆಗಬೇಕೇ ಹೊರತು ನಿರ್ಜೀವವಸ್ತುಗಳಿಂದ ಆಗತಕ್ಕದ್ದಲ್ಲ. ಪೌಲನೆಂಬ ಒಬ್ಬ ಮಹಾತ್ಮನು ಯೇಸುಕ್ರಿಸ್ತನನ್ನು ದೇವರ ಪ್ರತಿರೂಪವೆಂದು ಕರೆಯುತ್ತಾನೆ. ಹೀಗೆ ಹೇಳುವುದರಲ್ಲಿ ಆತನ ಅರ್ಥವೇನು? ಯೇಸುಕ್ರಿಸ್ತನು ಭೂಲೋಕದಲ್ಲಿ ನರಾವತಾರವನ್ನೆತ್ತಿ ದೇವರು ಎಂಥವನೆಂಬುದನ್ನು ಪ್ರಕಟಪಡಿಸಿದನೆಂಬರ್ಥ. ಯೇಸುಕ್ರಿಸ್ತನಲ್ಲಿದ್ದ ಧೈರ್ಯ, ಪವಿತ್ರತೆ, ನೀತಿ, ಸತ್ಯತೆ, ಶಾಂತತ್ವ, ಅನ್ವಾಘಾತತೆ, ದಯೆ ಮೊದಲಾದ ಸುಲಕ್ಷಣಗಳು ದೇವರ ಸ್ವಭಾವವನ್ನು ಮನುಷ್ಯರಿಗೆ ಪ್ರಕಟಿಸುತ್ತವೆ. ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ಒಂದಾನೊಂದು ಸಮಯದಲ್ಲಿ "ನನ್ನನ್ನು ನೋಡಿದವನು ನನ್ನ ತಂದೆಯಾದ ದೇವರನ್ನು ನೋಡಿದ್ದಾನೆ" ಎಂಬುದಾಗಿ ಹೇಳಿದ. ಕ್ರೈಸ್ತ ವೇದಗ್ರಂಥದ ಮೊದಲನೇ ಕಾಂಡದಲ್ಲಿ "ದೇವರು ಮನುಷ್ಯನನ್ನು ತನ್ನ ರೂಪವಾಗಿ ಸೃಷ್ಟಿಸಿದನು" ಎಂಬುದಾಗಿ ಬರೆದಿರುತ್ತದೆ. ಇದರಿಂದ—ಮನುಷ್ಯನ ದೇಹವು ದೇವರ ಪ್ರತಿರೂಪವಾಗಿದೆ ಎಂದೂ, ದೇವರಿಗೆ ಮನುಷ್ಯನ ಹಾಗೆ ಅಂಗಗಳಿವೆಯೆಂದೂ ಯಾರೂ ಭಾವಿಸಕೂಡದು. ಆತನು ತನ್ನ ಸಾರೂಪ್ಯದಲ್ಲಿಯೇ ನಮ್ಮನ್ನು ಸೃಷ್ಟಿಸಿ, ಸತ್ಯತೆ, ಪವಿತ್ರತೆ, ಪ್ರೀತಿ ಇವುಗಳನ್ನು ಗ್ರಹಿಸಿ ಅನುಸರಿಸತಕ್ಕ ಸಾಮರ್ಥ್ಯವನ್ನು ಮನುಷ್ಯರಾದ ನಮಗೆ ಕೊಟ್ಟಿರುತ್ತಾನೆ. ನಾವು ಈ ಗುಣಗಳನ್ನು ಧರಿಸಿ ಆತನಂತೆಯೇ ಆಗಬಹುದು. ನಮ್ಮ ಹೃದಯವು ದರ್ಪಣದಂತಿದ್ದು ದೇವರ ಪ್ರಭಾವವನ್ನು ನಮ್ಮೊಳಗೆ ಪ್ರತಿಬಿಂಬಿಸಬೇಕಾಗಿರುತ್ತದೆ. ನಿರ್ಮಲವಾದ ಸರೋವರವು ಚಂದ್ರನ ಪ್ರತಿಮೆಯನ್ನು ಪ್ರತಿಬಿಂಬಿಸುವ ಪ್ರಕಾರ ದೇವರ ಪ್ರಭಾವವು ನಮ್ಮಲ್ಲಿ ಕಾಣಬೇಕು. ಕೆಸರಿನಿಂದ ಕಲಕಿಹೋಗಿರುವ ಕೆರೆಯಲ್ಲಿ ಚಂದ್ರನ ಬಿಂಬವು ಮನೋಹರವಾಗಿರುವುದೇ? ಎಂದಿಗೂ ಇಲ್ಲವಲ್ಲಾ. ನಮ್ಮ ಹೃದಯಗಳು ಪಾಪಕಲ್ಮಷದಿಂದ ಕಲಕಿಹೋಗಿದ್ದರೆ ದೇವರು ಹ್ಯಾಗೆ ತಾನೇ ನಮ್ಮ ಹೃದಯಗಳಲ್ಲಿ ಕಾಣಿಸಿಕೊಂಡಾನು? ಆತನ ಪ್ರಭಾವವು ನಮ್ಮ ಹೃದಯಗಳಲ್ಲಿ ಕಾಣಿಸಿಕೊಳ್ಳಬೇಕಾದರೆ ಮೊದಲು ನಮ್ಮಲ್ಲಿ ಚಿತ್ತಶುದ್ಧಿ ಇರಬೇಕು. ಯೇಸುಕ್ರಿಸ್ತನು ನಮ್ಮನ್ನು ದೇವರಂತೆ ಪವಿತ್ರರನ್ನಾಗಿ ಮಾಡುವುದಕ್ಕೆ ಪ್ರಯತ್ನಿಸುತ್ತಾನೆ. "ಪರಲೋಕದಲ್ಲಿರುವ ನಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ" ಎಂಬುದಾಗಿ ಆತನು ತನ್ನ ಶಿಷ್ಯರಿಗೆ ಆಜ್ಞಾಪಿಸಿದನು. ನಾವು ಆತನ ಸ್ಮರಣೆಯಲ್ಲಿ ನಿರತರಾಗಿದ್ದುಕೊಂಡು ಆತನನ್ನು ಪ್ರಾರ್ಥಿಸಿದರೆ ಆತನು ನಮ್ಮನ್ನು ಪವಿತ್ರರನ್ನಾಗಿ ಮಾಡಿ ದೇವರ ಸ್ವಭಾವವನ್ನು ನಮ್ಮೊಳಗೆ ಪ್ರತಿಬಿಂಬಿಸುವನು. ನಾವು ಆತನಂತೆಯೇ ಆಗುವೆವು. ನಾವೆಲ್ಲರೂ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ ಎಂದು ಶ್ರೀಪೌಲನು ಭಕ್ತರಿಗೆ ಅಭಯವನ್ನಿತ್ತಿಯವನು.

ಇಂಡಿಯಾ ದೇಶದ ವೃತ್ತಾಂತಗಳು.

ಮುಂದಿನ ಡಿಸೆಂಬರ್ ತಿಂಗಳಲ್ಲಿ ಮದರಾಸ್ ಗವರ್ನರವರು ಕಲ್ಕತ್ತೆಗೆ ಹೋಗಿ ವೈಸ್‌ರಾಯಿಯವರನ್ನು ಭೇಟಿಮಾಡಿಕೊಂಡು ಬರುವವರಾಗಿದಾರೆ.

ಬರ್ಮಾ ಆಧಿಪತ್ಯದ ಬಂದೀಖಾನೆಯಲ್ಲಿ ಸಿವಿಲ್ ಸಜಾ ಅನುಭವಿಸುವಂತೆ ಕಳುಹಿಸಲ್ಪಟ್ಟಿರುವ ಮ್ಮ॥ ಬಾಲಗಂಗಾಧರ ತಿಲಕರವರ ಪರಿಚಾರಿಕೆಗೋಸ್ಕರ ಬೊಂಬಾಯಿ ಗವರ್ನರವರು ಪೂನಾ ಜೈಲಿನಿಂದ ಒಬ್ಬ ಬ್ರಾಹ್ಮಣ ಖೈದಿಯನ್ನು ಕಳುಹಿಸಿದ್ದಾರೆ.

ಕಲ್ಕತ್ತೆಯ ಆಲಿಪುರದ "ಜೈಲ್‌ಖಾನೆಯಲ್ಲಿ ಅಪ್ರೂವರ್ ಗೋಸ್ವಾಮಿಯನ್ನು ಕೊಂದುಹಾಕಿದರಷ್ಟೆ. ಈ ಕೃತ್ಯದಲ್ಲಿ ಸತ್ಯೇಂದ್ರನಾಥ ಬೋಸನು ನಿರಪರಾಧಿಯಾಗಿದ್ದಾನೆಂದು ಜೂರಿ ಪಂಚಾಯಿತರು ಅಭಿಪ್ರಾಯಪಟ್ಟರು. ಜಡ್ಜಿಯವರು ಇನ್ನೂ ತೀರ್ಮಾನ ಹೇಳಿಲ್ಲ.

ದಕ್ಷಿಣ ದೇಶದಲ್ಲಿ ತಿರುಚನಾಪಲ್ಲಿಯಿಂದ ರಾಮನಾಡಿಗೂ, ದೇವಿಕೋಟೆಯಿಂದ ಅರಂತಂಗಿಗೂ, ಕಾಮರ್‌ಕುಡಿಯಿಂದ ಪರುದುಪಟ್ಟಿಗೂ ರೈಲ್ ರಸ್ತೆಗಳನ್ನು ಹಾಕುವುದಕ್ಕೆ ದಕ್ಷಿಣ ಇಂಡಿಯಾ ರೈಲ್ವೇ ಕಂಪನಿಯವರಿಂದ ಸರ್ವೇ ಮಾಡಿಸಬೇಕೆಂದು ಸ್ಯಾಂಕ್ಷನ್ ಆಗಿದೆ.

೧೯೦೭ನೇ ಮಾರ್ಚಿ ಅಖೈರಿಗೆ ಅಂತ್ಯವಾದ ೧೨ ತಿಂಗಳಲ್ಲಿ ಹಿಂದುಸ್ಥಾನದ ಪೋಸ್ಟ್ (ಅಂಚೆ) ಇಲಾಖೆಯಲ್ಲಿ ಖರ್ಚು ಜಾತಾ ಸರ್ಕಾರಕ್ಕೆ ೧೦ ಲಕ್ಷ ರೂಪಾಯಿ ಆದಾಯವಾಯಿತು. ಆದರೆ ೧೯೦೮ನೇ ಮಾರ್ಚಿ ಅಖೈರಿಗೆ ಮುಕ್ತಾಯವಾದ ವರುಷದಲ್ಲಿ ಗವರ್ನ್‌ಮೆಂಟಿಗೆ ೨ ಲಕ್ಷ ರೂಪಾಯಿ ಮಾತ್ರ ಆದಾಯವಾಗಿರುವುದು.

ಉತ್ತರ ದೇಶದಲ್ಲಿ ಕ್ಷಾಮ ಬಾಧೆಯು ಈಚೆಗೆ ತುಂಬಾ ಕಡಮೆಯಾಗಿರುತ್ತದೆ. ಒಟ್ಟು ೪೦,೦೦೦ ಪ್ರಜೆಗಳು ಮಾತ್ರ ಸರ್ಕಾರದವರ ಪೋಷಣೆಯಲ್ಲಿರುತ್ತಾರೆ. ಈ ಪೈಕಿ ಅರೆವಾಸಿ ಜನರು ಬಂಗಾಳಾ ಆಧಿಪತ್ಯದಲ್ಲಿ, ಉಳಿದವರು ಮಧ್ಯಪ್ರಾಂತ್ಯಗಳಲ್ಲೂ ಇರುವರು. ಆಹಾರ ಧಾನ್ಯಗಳ ಧಾರಣೆಯು ನಿಧಾನವಾಗಿ ಇಳಿಯುತ್ತಿದೆ.

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಪೂರ್ವಬಂಗಾಳಾ ಸ್ಟೇಟ್ ರೈಲ್ವೆಯಲ್ಲಿ ನಾಯಿಹಟ್ಟಿ ಎಂಬ ಸ್ಟೇಷನ್ ಬಳಿ ಒಂದು ಸಿಡಿಮದ್ದಿನ ಗುಂಡು ಕಳೆದ ತಾ. ೧೪ರಲ್ಲಿ ಸಿಕ್ಕಿತು. ಅದನ್ನು ಎತ್ತಿಕೊಂಡ ರೈಲ್ವೆ ನೌಕರನಿಗೆ ಸ್ವಲ್ಪ ಗಾಯವಾಯಿತು. ರೈಲ್‌ಗಾಡಿಗಳಿಗೆ ಅಪಾಯವನ್ನುಂಟುಮಾಡಬೇಕೆಂಬ ಉದ್ದೇಶದಿಂದ ಅದನ್ನು ಅಲ್ಲಿಟ್ಟಿದ್ದರೆಂದು ತಿಳಿಯುವುದು. ಅಸಾಮಿಗಳನ್ನು ಪತ್ತೆ ಮಾಡುತ್ತಿದಾರೆ.

ಕಳೆದ ವಾರ ಹಿಂದುಸ್ಥಾನದಲ್ಲಿ ಒಟ್ಟು ೧,೬೩೪ ಜನರು ಪ್ಲೇಗ್ ಉಪದ್ರದಲ್ಲಿ ಕಾಲವಾದರು. ಬೇರೆ ಬೇರೆ ಕಡೆಗಳ ಸಂಖ್ಯೆ ಎಷ್ಟೆಂದರೆ—ಬೊಂಬಾಯಿ ಆಧಿಪತ್ಯ ೯೪೨, ಮದರಾಸ್ ಆಧಿಪತ್ಯ ೧೧೬, ಪಂಜಾಬ್ ಸೀಮೆ ೬೨, ಮಧ್ಯಪ್ರಾಂತ್ಯಗಳು ಮತ್ತು ಬೇರಾರ ೨೩೮, ಮೈಸೂರು ಸಂಸ್ಥಾನ ೧೮೪, ಮಧ್ಯ ಇಂಡಿಯಾ ೪೭, ರಾಜಪುಟಾನಾ ३೭, ಬಂಗಾಳಾ ೧೧, ಸಂಯುಕ್ತ ಆಧಿಪತ್ಯಗಳು ೧೪, ಬರ್ಮಾ ೨೨.

ದಕ್ಷಿಣ ದೇಶದಲ್ಲೆಲ್ಲಾ ಪ್ರಖ್ಯಾತಿಗೊಂಡಿರುವ ಕ್ರಿಶ್ಚಿಯನ್ ಕಾಲೇಜ್ ಎಂಬ ವಿದ್ಯಾಶಾಲೆಯು ಮದರಾಸ್ ಪಟ್ಟಣದಲ್ಲಿ ಇರುತ್ತದೆ. ಅದನ್ನು ಬದಲಾವಣೆ ಮಾಡಿ ಕಟ್ಟುವುದಕ್ಕೆ ಪ್ರಯತ್ನಪಟ್ಟು ಚಂದಾ ಕೂಡಿಸಿದ್ದರಲ್ಲಿ ಒಟ್ಟು ೧ ಲಕ್ಷದ ೮೨ ಸಾವಿರ ರೂಪಾಯಿ ಹುಟ್ಟಿದವು. ಆಯಿತು. ಬದಲಾವಣೆ ಕಾಮಗಾರಿಯನ್ನು ಪ್ರಾರಂಭಿಸಿ ಮಾಡಿಸುತ್ತಿದಾರೆ. ಕಟ್ಟಡವನ್ನು ಉದ್ದೇಶಪಟ್ಟ ರೀತಿಯಲ್ಲಿ ಕಟ್ಟಿಸಿ ಪೂರೈಸುವುದಕ್ಕೆ ಇನ್ನೂ ೭೫ ಸಾವಿರ ರೂಪಾಯಿ ಬೇಕಾಗಿದೆ ಎಂದು ಸ್ಕೂಲ್ ಅಧಿಕಾರಿಗಳು ತಿಳಿಸಿರುವರು.

ಹಿಂದುಸ್ಥಾನದ ವೈಸ್‌ರಾಯಿ ಮತ್ತು ಗವರ್ನರ್ ಜನರಲ್‌ರವರಾದ ಘನವನ್ನೈದಿದ ಲಾರ್ಡ್ ಮಿಂಟೋ ಪ್ರಭುಗಳು ಈ ತಿಂಗಳ ಅಖೈರಿಗೆ ಸಿಮ್ಲಾದಿಂದ ಹೊರಟು, ನವಂಬರ್ ತಾ. ೨ ರ ವರೆಗೆ ಜೋಧಪುರದಲ್ಲಿದ್ದು, ಒಂದು ದರ್ಬಾರ್ ನಡಿಸಿ ಮಹಾರಾಜರವರಿಗೆ ಕೆ. ಸಿ. ಎಸ್. ಐ. ಎಂಬ ಬಿರುದನ್ನು ದಯಪಾಲಿಸುವರು. ಮರುದಿನ ಅವರು ಬಿಕಾನೀರ್ ಸಂಸ್ಥಾನಕ್ಕೆ ಹೋಗಿ ತಾ. ೧೬ ರ ವರೆಗೆ ಇದ್ದು ಶಿಕಾರಿ ಮುಂತಾದದ್ದನ್ನು ಮಾಡಿ, ಲಕ್ನೋ ಪಟ್ಟಣವನ್ನು ತಲುಪಿ, ರೈಲ್ ಸ್ಟೇಷನ್‌ನಲ್ಲಿ ಒಂದು ಅಡ್ರೆಸ್ಸನ್ನು ಸ್ವೀಕರಿಸಿ, ಆ ಊರಿನಲ್ಲಿ ತಾ. ೨೪ ರ ತನಕ ಇದ್ದು, ಅಲ್ಲಿಂದ ಆಗ್ರಾ ಪಟ್ಟಣಕ್ಕೆ ಹೋಗಿ ನವಂಬರ್ ಅಖೈರ್ ವರೆಗೆ ಅಲ್ಲೇ ಇರುತ್ತಾರೆ. ಡಿಸೆಂಬರ್ ತಾ. ೨—೩ ರಲ್ಲಿ ಕಾಶೀ ಪಟ್ಟಣದಲ್ಲಿದ್ದು, ತಾ. ೪ ರಲ್ಲಿ ಪೂಸಾ ಎಂಬ ಪಟ್ಟಣಕ್ಕೆ ದಯಮಾಡಿ, ಅಲ್ಲಿ ಹಿಂದೂಸ್ಥಾನದ ಸರ್ವವ್ಯವಸಾಯ ಪರಿಶೋಧನಾ ವಿದ್ಯಾಲಯವನ್ನು ಪ್ರತಿಷ್ಠೆ ಮಾಡಿ, ತಾ. ೫ ರಲ್ಲಿ ಕಲ್ಕತ್ತೆಯನ್ನು ತಲುಪುವವರಾಗಿದಾರೆ.

ಮೈಸೂರು ಸರ್ಕಾರಿ ಹುಕ್ಕುಂ.

ಮೈಸೂರು ವರ್ತಮಾನ ಪತ್ರಿಕೆಗಳ ರೆಗ್ಯುಲೇಷನ್ಸಿನ ೩ನೇ ಪ್ರಕರಣದ ಮೇರೆ "ಜಗದ್ಗುರು" ಎಂಬ ಪತ್ರಿಕೆಯನ್ನು ಅಚ್ಚಿಗೆ ತಯಾರುಮಾಡುವುದಕ್ಕೂ, ಛಾಪಿಸುವುದಕ್ಕೂ ಮತ್ತು ಪ್ರಸಿದ್ಧಪಡಿಸುವುದಕ್ಕೂ ಸಹ ಅಪ್ಪಣೆಕೊಡಬೇಕೆಂದು ಸದರಿ "ಜಗದ್ಗುರು" ಪತ್ರಿಕಾಕರ್ತರಾದ ಮೆ|| ಬಿ. ಸಿ. ಶ್ರೀನಿವಾಸಯ್ಯಂಗಾರ್ರವರು ಬರೆದುಕೊಂಡ ೧೯೦೮ನೇ ಇಸವಿ ಸೆಪ್ಟೆಂಬರ್ ೧೭ನೇ ತಾರೀಖಿನ ಅರ್ಜಿಯನ್ನು ಪರಿಶೀಲಿಸಲಾಯಿತು.

"ಜಗದ್ಗುರು" ಎಂಬ ಪತ್ರಿಕೆಯು ಮೈಸೂರು ಪಟ್ಟಣದಲ್ಲಿ ೧೫ ದಿವಸಗಳಿಗೊಂದಾವರ್ತಿ ಛಾಪಿಸಿ ಪ್ರಸಿದ್ಧಪಡಿಸತಕ್ಕ ಕನ್ನಡ ಪತ್ರಿಕೆಯಾಗಿ ಇರುತ್ತದೆ. ಈ ಪತ್ರಿಕಾಕರ್ತರು ಮೆ|| ಬಿ. ಸಿ. ಶ್ರೀನಿವಾಸಯ್ಯಂಗಾರೆಂಬುವರು, ಹಿಂದೆಯೆ "ದೇಶಾಭಿಮಾನಿ" ಎಂಬ ಪತ್ರಿಕಾಕರ್ತರಾಗಿ ಇದ್ದು ಸದರಿ ಪತ್ರಿಕೆಯಲ್ಲಿ ಶ್ರೀಮನ್ಮಹಾರಾಜರವರಿಗೆ ಅವಮಾನಕರವಾದ, ರಾಜದ್ರೋಹಕರವಾದ ಮತ್ತು ಇತರ ವಿಧವಾದ ಆಕ್ಷೇಪಣೆಗೆ ಅರ್ಹವಾದ ಮಾತುಗಳನ್ನು ಪ್ರಯೋಗಿಸಿ ಇದ್ದುದರಿಂದಲೂ, ಜನಗಳಿಗೆ ದುರ್ನೀತಿಯನ್ನು ಬೋಧಿಸತಕ್ಕ ಮಾರ್ಗವನ್ನು ಅವಲಂಭಿಸಿ ಇದ್ದುದರಿಂದಲೂ ಸಹ ಘನವನ್ನು ಹೊಂದಿದ ಗತಿಸಿದ ಶ್ರೀಮನ್ಮಹಾರಾಜರವರ ಆಜ್ಞಾನುಸಾರ, ೧೮೯೫ನೇ ಇಸವಿಯಲ್ಲಿ ಸದರಿ ಪತ್ರಿಕೆಯನು ಪ್ರಸಿದ್ಧಪಡಿಸಕೂಡದೆಂದು ಹುಕುಂ ಮಾಡಿ ಅದನ್ನು ನಿಲ್ಲಿಸೋಣವಾಯಿತು. ಈಗ ಶ್ರೀಮನ್ಮಹಾರಾಜರವರ ಸರ್ಕಾರದವರು ಮೆ|| ಬಿ. ಸಿ. ಶ್ರೀನಿವಾಸಯ್ಯಂಗಾರ್ರ ಹಿಂದಿನ ನಡತೆಯನ್ನು ಗಣನೆಗೆ ತಾರದೆ ಉಪೇಕ್ಷಿಸುವುದಕ್ಕೆ ಸಿದ್ಧರಾಗಿದ್ದುದಲ್ಲದೆ, ಈ ಎರಡನೇ ಪತ್ರಿಕೆಯಲ್ಲಿಯಾದರೂ ತಕರಾರುಕರವಾದ ಬರವಣಿಗೆಯನ್ನು ಪ್ರಚುರಪಡಿಸದೆ ಇದ್ದ ಪಕ್ಷದಲ್ಲಿ, ಸದರಿ ಪತ್ರಿಕೆಯನ್ನು ಪ್ರಸಿದ್ಧಪಡಿಸುವುದಕ್ಕೆ ಅಪ್ಪಣೆಯನ್ನೂ ಕೊಡುತ್ತಿದ್ದರು. ಆದರೆ ಕಳೆದ ೧೧ ತಿಂಗಳುಗಳಿಂದ ಛಾಪಿಸಲ್ಪಡುತ್ತಿರುವ "ಜಗದ್ಗುರು" ಪತ್ರಿಕಾ ಸಂಚಿಕೆಗಳನ್ನು ಓದಲು, ಈ ಪತ್ರಿಕೆಯಲ್ಲಿ ಅನೇಕ ವೇಳೆ ತುಂಬಾ ಅವಮಾನಕರವಾದ ಛಂದ ಮಾತುಗಳನ್ನೂ ಮತ್ತು ೧೮೯೫ನೇ ಇಸವಿಯಲ್ಲಿ ನಿಲ್ಲಿಸಲ್ಪಟ್ಟ "ದೇಶಾಭಿಮಾನಿ"ಯಲ್ಲಿ ಪ್ರಚುರಪಡಿಸಲ್ಪಟ್ಟ ವಿಷಯಗಳಂತೆಯೇ ಬಹಳ ಆಕ್ಷೇಪಣೀಯವಾದ ವಿಷಯಗಳನ್ನೂ ಪ್ರಚುರಪಡಿಸುತ್ತಾ ಇದೆ ಎಂದು ನಿಸ್ಸಂದೇಹವಾಗಿ ಕಂಡು ಬಂತು.

ಈ ಕಾರಣಗಳಿಂದ "ಜಗದ್ಗುರು" ಎಂಬ ಪತ್ರಿಕೆಯನ್ನು ಇನ್ನು ಮುಂದೆ ಪ್ರಸಿದ್ಧಪಡಿಸುವುದರಿಂದ ಜನಗಳ ಪ್ರಯೋಜನಕ್ಕೆ ಕುಂದಕವುಂಟಾಗುವುದೆಂದು ತಿಳಿಯಬರುತ್ತದೆಯಾಗಿ ಈಗ ಮೆ|| ಶ್ರೀನಿವಾಸಯ್ಯಂಗಾರ್ರು ಕೋರುವಂತೆ ಅಪ್ಪಣೆಕೊಡಲು ಆಗಲಾರದು.

ಮೈಸೂರು ಸಂಸ್ಥಾನವು.

1908-09 ನೆಯ ಸಾಲಿನ ಜಮಾಖರ್ಚು ಅಂದಾಜುಪಟ್ಟಿ (ಬಡ್ಜೆಟ್)

ಜಮಾ ಬಾಬುಗಳು.

ಜಮೀನ್ ಕಂದಾಯ	ರೂಪಾಯಿ 1,00,00,000
ಫಾರೆಸ್ಟು	20,17,000
ಅಬ್ಕಾರಿ	10,86,000
ತೆರಿಗೆಗಳು	4,18,000
ಉಪ್ಪು	10,000
ಸ್ಟಾಂಪುಗಳು	7,70,000
ರಿಜಿಸ್ಟ್ರೇಷನ್	1,38,000
ಗಣಿಗಳ ರಾಜಧಾಯ ಮತ್ತು ಗುತ್ತಿಗೆಗಳು	11,56,000
ಬಡ್ಡಿ	1,13,000
ಲಾಭ ಅಥವಾ ನಷ್ಟ	4,31,000
ನ್ಯಾಯವಿಮರ್ಶೆ—ಕೋರ್ಟುಗಳು	52,000
ನ್ಯಾಯವಿಮರ್ಶೆ—ಬಂದೀಖಾನೆಗಳು	30,000
ಪೋಲೀಸು	25,000
ವಿದ್ಯಾಭ್ಯಾಸ	1,27,000
ವೈದ್ಯ	97,000
ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	61,000
ವಯೋಧಿಕಸ್ಥರಿಗಾಗಿ ಕೊಡುವ ಪೆನ್ಷನಿಗಾಗಿ ಜಮೆ	2,000
ಸಾದಿಲ್ವಾರ್ ಮತ್ತು ಛಾಪಾಖಾನೆ	6,000
ನಾನಾ ಚಿಲ್ಲರೆ ಬಾಬುಗಳು	1,29,000
ಸೈನ್ಯ	73,000
ಸಂಸ್ಥಾನದ ರೈಲ್ವೆಗಳು—ಹುಟ್ಟುವಳಿಯ ಲೆಕ್ಕ	8,87,000
ಮರಾಮತ್ತು ಕಾಮಗಾರಿಗಳು	3,79,000
ಕಾವೇರೀ ವೈದ್ಯುತ ಶಕ್ತಿಯ ಏರ್ಪಾಡು	16,50,000
ಜುಮ್ಲಾ ಹುಟ್ಟುವಳಿ ಮತ್ತು ಜಮೆಗಳು	2,28,15,000
ಕಾವೇರೀ ವೈದ್ಯುತ ಶಕ್ತಿಯ ಪೂರಣೆ ಸ್ಥಾಪನೆಗಾಗಿ ತೆಗೆದುಕೊಂಡ ಸಾಲದಲ್ಲಿ ಉಳಿದಿರುವ ಶಿಲ್ಕು	5,76,000

ಖರ್ಚು ಬಾಬುಗಳು.

ವಾಪಸ್ ಜಮಾ	ರೂಪಾಯಿ 2,22,000
ಜಮೀನ್ ಕಂದಾಯ	19,28,000
ಫಾರೆಸ್ಟು	7,61,000
ಅಬ್ಕಾರಿ	3,42,000
ಸ್ಟಾಂಪು	34,000
ರಿಜಿಸ್ಟ್ರೇಷನ್	85,000
ಗಣಿಯ ಹುಟ್ಟುವಳಿಗೆ ಆದ ಖರ್ಚು	2,51,000
ಸಾಧಾರಣ ಸಾಲದ ಬಡ್ಡಿ	15,000
ಇತರ ಸಾಲದ ಬಡ್ಡಿ	3,02,000
ಲಾಭ ಅಥವಾ ನಷ್ಟ	10,000
ಅರಮನೆ	19,10,000
ಮೇಲ್ವಿಚಾರಣೆಯ ಸಿಬ್ಬಂದಿ	6,70,000
ನ್ಯಾಯವಿಮರ್ಶೆ—ಲಾ ಕೋರ್ಟುಗಳು	7,65,000
ನ್ಯಾಯವಿಮರ್ಶೆ—ಬಂದೀಖಾನೆಗಳು	1,30,000
ಪೋಲೀಸು	9,18,000
ವಿದ್ಯಾಭ್ಯಾಸ	10,21,000
ಮುಜರಾಯಿ ಸತ್ರ ದೇವಾಲಯಗಳು	3,58,000
ವೈದ್ಯ	7,16,000
ಶಾಸ್ತ್ರೀಯವಾದ ಮತ್ತು ಇತರ ಚಿಲ್ಲರೆ ಇಲಾಖೆಗಳು	3,02,000
ಕರಾರುಗಳ ಮೇಲೆ ಕೊಡುವ ವೇತನಗಳು	35,87,000
ವಯೋಧಿಕಸ್ಥರಿಗಾಗಿ ಕೊಡುವ ಪೆನ್ಷನ್ ಮತ್ತು ವೇತನಗಳು	6,50,000
ಸಾದಿಲ್ವಾರ್ ಮತ್ತು ಛಾಪಾಖಾನೆ	1,88,000
ಚಿಲ್ಲರೆ	4,38,000
ಸೈನ್ಯ	14,62,000
ಸಾಲವನ್ನು ಕಡಮೆ ಮಾಡಿದ್ದು ಅಥವಾ ಸಾಲವಾಗದ ಹಾಗೆ ಮಾಡಿದ್ದು.	2,00,000
ಸಂಸ್ಥಾನದ ರೈಲ್ವೆಗಳು—ಹುಟ್ಟುವಳಿ ಲೆಕ್ಕ	7,20,000
ಭಾರೀ ನೀರಾವರಿ ಕಾಮಗಾರಿಗಳು	4,12,000
ಸಣ್ಣ ನೀರಾವರಿ ಕಾಮಗಾರಿಗಳು	2,12,000
ಸಿವಿಲ್ ಕಾಮಗಾರಿಗಳು	21,16,000
ಸೈನ್ಯಕ್ಕೆ ಸಂಬಂಧಪಟ್ಟ ಕಾಮಗಾರಿಗಳು	10,000
ರೈಲ್ವೆಯ ಕಟ್ಟಡ	3,00,000
ಕಾವೇರಿ ವೈದ್ಯುತ ಶಕ್ತಿಯ ಹುಟ್ಟುವಳಿ ಲೆಕ್ಕ—	
,, ಕೆಲಸ ನಡೆಸುವ ಖರ್ಚು	3,70,000
,, ಸಾಲದ ಮೇಲಿನ ಬಡ್ಡಿ	70,000
,, ಸಾಲಾ ತೀರಿಸಿದ್ದು	1,33,000
,, ಅಸಲು ಮಾಪತಿಬಗ್ಗೆ ಉಪಯೋಗಿಸಿದ ಮೊಬಲಗು	10,31,000
ಬಂಡವಾಳದ ಖರ್ಚು—ಮೊದಲನೆಯ ಸ್ಥಾಪನೆ	26,000
,, ಬೆಂಗಳೂರಿನಲ್ಲಿ ದೀಪ ಮತ್ತು ಶಕ್ತಿಯ ಸರಬರಾಯಿ	20,000
ಒಟ್ಟು ಖರ್ಚು	2,27,99,000
ಶಿಲ್ಕು	16,000
ಒಟ್ಟು ಜಮಾ	2,28,15,000
ಕಾವೇರೀ ವೈದ್ಯುತ ಶಕ್ತಿಯ ಪೂರಣೆಯ ಸ್ಥಾಪನೆ	1,26,000

ಮೈಸೂರು ಪ್ರಜಾಪ್ರತಿನಿಧಿ ಸಭೆಯು.

ಕಡೇ ದಿನ ನಡೆದ ವಿಷಯಗಳು.

ಈ ವರುಷ ಮೈಸೂರು ಪ್ರಜಾಪ್ರತಿನಿಧಿ ಸಭೆಯು ಎಂಟು ದಿನಗಳ ವರೆಗೆ ನಡೆಯಿತು. ಪ್ರತಿನಿಧಿಗಳು ಸೂಚಿಸಿದ ವಿಷಯಗಳನ್ನು ದಿವಾನ್‌ರವರು ಚರ್ಚೆ ಮಾಡಿ ಪ್ರತಿ ವಿಷಯದಲ್ಲೂ ಗವರ್ನ್‌ಮೆಂಟಿನವರ ತೀರ್ಮಾನವನ್ನು ತಿಳಿಯಪಡಿಸಿದರು. ಚರ್ಚೆಗಳೆಲ್ಲಾ ಕಳೆದ ಗುರುವಾರ ಸಾಯಂಕಾಲಕ್ಕೆ ಪೂರೈಸಿದವು. ಆಗ ಕೃಷ್ಣರಾಜಪೇಟೆ ಮೆಂಬರು ಮೆ|| ಕೃಷ್ಣಶಾಸ್ತ್ರಿಗಳೂ, ದೇವನಹಳ್ಳಿ ಮೆಂಬರು ಮೆ|| ಹನುಮಂತರಾಯರೂ, ಮೈಸೂರು ಮುಸಲ್ಮಾನರ ಸಂಘದ ಮೆಂಬರು ಮೌಲ್ವಿ ದರ್ವೇಷ್ ಪೀರ್‌ಎಂಬುವರೂ ದಿವಾನ್‌ರವರಿಗೆ ಸಭಿಕರ ಪರವಾಗಿ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಿದರು. ಇವರು ಆಗ ಅಂಕೆ ಮಾಡಿದ ಮುಖ್ಯಾಭಿಪ್ರಾಯಗಳೇನೆಂದರೆ —

ಪ್ರಜೆಗಳ ಪ್ರಾರ್ಥನೆ

ಪ್ರಜಾಪ್ರತಿನಿಧಿಗಳು ಎಂಟು ದಿನಗಳಿಂದಲೂ ತಮಗೆ ಅರಿಕೆ ಮಾಡಿ ಚರ್ಚಿಸಿದ ಸಕಲ ವಿಚಾರಗಳನ್ನೂ ಅಹವಾಲುಗಳನ್ನೂ ತಾವು ಜುಗುಪ್ಸೆಪಟ್ಟುಕೊಳ್ಳದೆ ಬಹಳ ಶಾಂತಚಿತ್ತದಿಂದ ಲಾಲಿಸಿ, ಸೂಕ್ತ ತೋರಿದಂತೆ ಉತ್ತರಗಳನ್ನು ದಯಪಾಲಿಸಿದಿರಿ. — ವರ್ತಮಾನ ಪತ್ರಿಕೆಗಳ ಕಾನೂನ್ ವಿಷಯದಲ್ಲಿ ಪ್ರಜೆಗಳಿಗೆ ತುಂಬಾ ಗಾಬರಿಯುಂಟಾಗಿತ್ತು. ತಾವು ಎರಡು ದಿನ ಸಭೆಯಲ್ಲಿ ಬಹಳ ಶ್ರಮಪಟ್ಟು ಅದರ ಉದ್ದೇಶವನ್ನೂ ಅದರಿಂದುಂಟಾಗುವ ಸೌಕರ್ಯವನ್ನೂ ಬಹಳ ಚೆನ್ನಾಗಿ ವಿವರಿಸಿ ನಮ್ಮ ಭೀತಿಯನ್ನು ನಿವಾರಣೆ ಮಾಡುತ್ತೀರಿ. ಈಗ ಈ ಕಾನೂನು ಸ್ವದೇಶದ ಭಾಗ್ಯೋದಯಕ್ಕಾಗಿಯೇ ಜಾರಿಗೆ ತರಲ್ಪಟ್ಟಿದೆ ಎಂದು ನಮಗೆ ಪರಿಷ್ಕಾರವಾಗಿ ಗೊತ್ತಾಯಿತು — ಈ ಸಂಸ್ಥಾನದ ತರೀಸಾಗುವಳಿಯನ್ನು ಅಭಿವೃದ್ಧಿಪಡಿಸುವುದಕ್ಕೂ ಕೆರೆಗಳನ್ನು ಕಾಪಾಡುವುದಕ್ಕೂ ನೀರಿನ ವಿಲೇವಾರಿಯನ್ನು ಕ್ರಮಪಡಿಸುವುದಕ್ಕೂ ಹಿತಕಾರಿಯಾದಂಥಾ ಗ್ರಾಮಕೆರೆಗಳ ಪಂಚಾಯಿತಿ ಕಾನೂನ್ ಮಾಡಬೇಕೆಂದು ಸರ್ಕಾರದವರು ಪ್ರಯತ್ನಪಟ್ಟಿರುವುದು ಪರಮ ಸಂತೋಷಕರವಾಗಿದೆ — ದೊಡ್ಡ ಮನೆತನಸ್ಥರ ಮಕ್ಕಳೂ ಕೂಡ ದುಷ್ಟರ ಸಹವಾಸದಲ್ಲಿ ಬಿದ್ದು ಅನೇಕಾನೇಕ ಪಾಪಕೃತ್ಯಗಳನ್ನು ಮಾಡಿ ಕೆಟ್ಟುಹೋಗುತ್ತಿರುವುದನ್ನು ನೋಡಿ ಗವರ್ನ್‌ಮೆಂಟಿನವರು ತುಂಬಾ ಕನಿಕರಪಟ್ಟು ಸಮಸ್ತ ಪಾಠಶಾಲೆಗಳಲ್ಲೂ ಮಕ್ಕಳಿಗೆ ಸನಾತನ ಧರ್ಮಗಳನ್ನು ಕಲಿಸಿ ಸತ್ಪ್ರಜೆಗಳಾಗಿ ಬೆಳೆಯುವಂತೆ ಏರ್ಪಾಡುಮಾಡಿರುವುದು ಸಕಲ ಪ್ರಜೆಗಳಿಗೂ ಪರಮಾನಂದವುಂಟಾಗಿದೆ — ರಾಜಧಾನಿಯಲ್ಲಿ ನವರಾತ್ರಿ ಉತ್ಸವಗಳು ನಡೆಯುವಾಗ್ಗೆ ಸಾವಿರಾರು ಪ್ರಜೆಗಳು ಸಂಸ್ಥಾನದ ಎಲ್ಲಾ ಭಾಗಗಳಿಂದಲೂ ಬರುತ್ತಿರುವುದನ್ನು ನೋಡಿ, ಗವರ್ನ್‌ಮೆಂಟಿನವರು ಈ ಸೀಮೆಯ ಕಸಬುಗಳನ್ನೂ ಕುಶಲವಿದ್ಯೆಗಳನ್ನೂ ವ್ಯವಸಾಯವನ್ನೂ ಗೋಶಾಲೆಗಳನ್ನೂ ಅಭಿವೃದ್ಧಿಗೆ ತರುವುದರ ಉದ್ದೇಶವಿಟ್ಟುಕೊಂಡು, ಪ್ರದರ್ಶನವನ್ನು ವರುಷೇ ವರುಷ ನಡಿಸುತ್ತಿರುವುದು ಈ ಸೀಮೆಯ ಭಾಗ್ಯೋದಯಕ್ಕೆ ಕಾರಣವಾಗಿರುತ್ತದೆ. ಪ್ರದರ್ಶನಶಾಲೆಗೆ ಬಡಬಗ್ಗರಾದ ರೈತರನ್ನೂ ಕಸಬುದಾರರಾದ ಕಾರೀಗಾರರನ್ನೂ ಮುಫತ್ತಾಗಿ ಬಿಟ್ಟು, ಅವರು ಸಾಮಾನುಗಳನ್ನು ಪರೀಕ್ಷೆಮಾಡಿ ಹೊಸ ಸಂಗತಿಗಳನ್ನು ತಿಳಿದುಕೊಳ್ಳುವುದಕ್ಕೆ ಅನುಕೂಲಮಾಡಿಕೊಟ್ಟದ್ದು ಮಹೋಪಕಾರವಾಗಿದೆ. ಹೊಸ ಮುಟ್ಟುಗಳಿಂದ ಉಳುಮೆಯ ಮಾಡುವುದನ್ನೂ ನೂತನ ಯಂತ್ರಸಾಧನ ಮಗ್ಗಗಳಿಂದ ಸ್ವಲ್ಪ ಕಾಲದಲ್ಲೇ ನೆಟ್ಟು ಬಟ್ಟೆಗಳನ್ನು ನೇಯುವುದನ್ನೂ ಪ್ರದರ್ಶನಶಾಲೆಯಲ್ಲಿ ಪ್ರತ್ಯಕ್ಷವಾಗಿ ತೋರಿಸಿದ್ದೂ, ನಾನಾ ಪ್ರಯೋಜನಕರಗಳಾದ ವಿಷಯಗಳನ್ನು ಕುರಿತ ಉಪನ್ಯಾಸಗಳನ್ನು ಆ ಭಾಗಗಳಲ್ಲಿ ಪ್ರವೀಣತೆ ಹೊಂದಿರುವ ದೊಡ್ಡ ಮನುಷ್ಯರಿಂದ ಉಪನ್ಯಾಸಮಾಡಿಸಿದ್ದೂ, ಆರೋಗ್ಯನಿಯಮಗಳನ್ನು ಪ್ರಜೆಗಳು ತಿಳಿದು ಆಚರಣೆಗೆ ತರುವುದರ ಮೂಲಕ ಸಂಸಾರ ಸುಖಸಂತೋಷಗಳನ್ನು ರೋಗಾದಿಗಳ ಭಯವಿಲ್ಲದೆ ಸರಾಗದಿಂದ ಅನುಭವಿಸುವ ಹಾಗೆ ಮಾಡಬೇಕೆಂದು ಹೆಲ್ತ್ (ಆರೋಗ್ಯ) ಪ್ರದರ್ಶನವನ್ನು ಏರ್ಪಡಿಸಿ, ಎಲ್ಲರನ್ನೂ ಛಾರ್ಜಿಲ್ಲದೆ ನೋಡುವುದಕ್ಕೆ ಬಿಡುವಂತೆ ಮಾಡಿದ್ದೂ ಶ್ರೇಯಸ್ಕರವಾಗಿದೆ. ಇದಕ್ಕಾಗಿ ಸಕಲರೂ ಸರ್ಕಾರದವರನ್ನು ಮನಃಪೂರ್ವಕವಾಗಿಯೂ ಕೃತಜ್ಞತೆಯಿಂದಲೂ ವಂದಿಸುತ್ತೇವೆ. ಪ್ರಜಾಪ್ರತಿನಿಧಿ ಸಭೆಗೋಸ್ಕರ ಸಂಸ್ಥಾನದ ಎಲ್ಲಾ ಭಾಗಗಳಿಂದಲೂ ರಾಜಧಾನಿಗೆ ಬಂದಂಥಾ ಮೆಂಬರುಗಳ ವಿಷಯದಲ್ಲಿ ಸರ್ಕಾರದವರು ತುಂಬಾ ಕನಿಕರ ಪ್ರೀತಿ ವಿಶ್ವಾಸಗಳನ್ನು ತೋರಿಸಿ, ಅವರ ವಾಸಕ್ಕೂ ಭೋಜನಾದಿಗಳಿಗೂ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವುದಕ್ಕಾಗಿ ಮೆಂಬರುಗಳೆಲ್ಲಾ ಏಕವಾಕ್ಯತೆಯಿಂದಲೂ ಸಂತೋಷವಾಗಿಯೂ ವಂದಿಸುತ್ತೇವೆ — ಈ ವಿಚಾರಗಳನ್ನೆಲ್ಲಾ ತಾವು ನಮ್ಮನ್ನು ತಂದೆಯೋಪಾದಿಯಲ್ಲಿ ಪರಿಪಾಲಿಸುತ್ತಿರುವಂಥಾ ಶ್ರೀಮನ್ಮಹಾರಾಜರವರಿಗೆ ಅರಿಕೆಮಾಡಬೇಕೆಂದು ತಮ್ಮನ್ನು ವಿನಯವಿನಯ ಭಯಭಕ್ತಿಪೂರ್ವಕವಾಗಿ ಬೇಡಿಕೊಳ್ಳುವೆವು ಎಂಬುವರೇ.

ದಿವಾನ್‌ರವರ ಅಂತ್ಯೋಕ್ತಿಗಳು.

ತರುವಾಯ ದಿವಾನ್‌ರವರು ಪ್ರಜಾಪ್ರತಿನಿಧಿಗಳನ್ನು ಅವರು ತಿಳಿಸಿದ ಅಭಿಪ್ರಾಯಗಳಿಗಾಗಿ ತುಂಬಾಸಂತೋಷಪಟ್ಟು ಅವರನ್ನು ವಂದಿಸಿ ಅವರ ಪ್ರಾರ್ಥನೆಗಳನ್ನೆಲ್ಲಾ ಅವರ ಕುತೂಹಲದಂತೆ ಶ್ರೀಮನ್ಮಹಾರಾಜರವರಲ್ಲಿ ವಿಜ್ಞಾಪನೆ ಮಾಡುವುದಾಗಿ ಮಾತುಕೊಟ್ಟು, ಕಡೆಯಲ್ಲಿ ಅವರನ್ನು ಕುರಿತು ಹೇಳಿದ್ದೇನೆಂದರೆ —

ಸಭಿಕರಿರಾ,

ಈ ವರುಷದ ಪ್ರಜಾಪ್ರತಿನಿಧಿ ಸಭೆಯ ಮೀಟಿಂಗ್ ಪೂರೈಸುತ್ತಾ ಬಂದಿರುವದರಿಂದ ಮೆಂಬರುಗಳು ಹೊರಟು ಹೋಗುವದಕ್ಕೆ ಮುಂಚಿತವಾಗಿ ಕಳೆದ ಶನಿವಾರ ನ್ಯಾಯವಿಧಾಯಕ ಸಭೆಗೆ ಮೆಂಬರುಗಳನ್ನು ಚುನಾಯಿಸಿದ ವಿಷಯವಾಗಿಯೂ ಮತ್ತು ಆ ಚುನಾವಣೆಯನ್ನು ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರ್‌ರವರ ಸರ್ಕಾರದವರು ರದ್ದುಮಾಡಿದ ವಿಷಯವಾಗಿಯೂ ನಿಮಗೆ ಕೆಲವು ಮಾತುಗಳನ್ನು ಹೇಳಲು ಅಪೇಕ್ಷಿಸುತ್ತೇವೆ. ಪ್ರಕೃತದಲ್ಲಿ ನಡೆದ ಚುನಾವಣೆಯಲ್ಲಿ ನಮಗೆ ಕೆಲವು ಅನಾನುಕೂಲಗಳು ಇದ್ದಂತೆ ಸರ್ಕಾರಕ್ಕೆ ತಿಳಿಯಬಂದಿದೆ. ಕಳೆದ ಗುರುವಾರ ನಾವು ಈ ವಿಷಯವಾಗಿ ತಮ್ಮಗಳಿಗೆ ತಿಳಿಯಪಡಿಸಿದಾಗ, ನಾವು ಸಂದೇಹಪಟ್ಟಂತೆಯೇ ಚುನಾವಣೆಗೆ ವಾಯಿಸ್ ಮಾಡಿದವರು ವೋಟ್ ಮಾಡುವ ಸ್ವತಂತ್ರ ಬುದ್ಧಿಯನ್ನು ಉಪಯೋಗಿಸತಕ್ಕ ಸ್ಥಿತಿಯಲ್ಲಿ ಇರಲಿಲ್ಲವೆಂತಲೂ ತಿಳಿಯಬಂದಿದೆ. ಪ್ರಜಾಪ್ರತಿನಿಧಿಗಳು ತಮ್ಮ ವೋಟುಗಳಿಂದ ನ್ಯಾಯವಿಧಾಯಕ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟವರಿಗೆ ಎಷ್ಟು ಭಾರೀ ಗೌರವವು ಉಂಟಾಗಬೇಕೆಂದು ಉದ್ದೇಶಿಸಿರುತ್ತದೋ ಅದನ್ನು ಚೆನ್ನಾಗಿ ಆಲೋಚನೆಗೆ ತರಲಿಲ್ಲವೆಂತಲೂ ಸಹ ನಾವು ಊಹಿಸುತ್ತೇವೆ. ಮೆಂಬರುಗಳು ತಮ್ಮ ಸಮ್ಮತಿಗಳನ್ನು ಕೊಡುವಲ್ಲಿ ತಾವುಗಳು ಬೇರೆಯ ಸಂಸ್ಥಾನದಲ್ಲಿ ಇದ್ದೇವೆಂಬ ಅಂಶವನ್ನೂ, ನ್ಯಾಯವಿಧಾಯಕ ಸಭೆಗೆ ಮೆಂಬರುಗಳನ್ನು ಚುನಾವಣೆಯ ಮೂಲಕ ನೇಮಿಸುವ ಕ್ರಮವನ್ನೂ ನಾವು ಅಜಮಾಯಿಸಿ ತರೀಪ್ ಅನುಸರಿಸುತ್ತಾ ಇದ್ದೇವೆಂಬ ಅಂಶವನ್ನೂ, ಮತ್ತು ಪ್ರಜಾಪ್ರತಿನಿಧಿ ಸಭೆಯವರಾದ ತಮ್ಮಗಳಿಂದ ಚುನಾಯಿಸಲ್ಪಡತಕ್ಕವರು ಒಳ್ಳೇ ನಡತೆಯುಳ್ಳವರಾಗಿಯೂ ರಾಜಭಕ್ತಿವಿಶ್ವಾಸಯುಕ್ತರಾಗಿಯೂ, ಮತ್ತು ದೇಶೋನ್ನತಿಗೆ ಕಾರಣವಾಗಿರುವ ಅಂಶಗಳನ್ನು ತಿಳಿಯಪಡಿಸಲು ಸಮರ್ಥರಾಗಿಯೂ ಇರಬೇಕೆಂಬ ಅಂಶವನ್ನೂ ಮತ್ತು ಶ್ರೀಮನ್ಮಹಾರಾಜರವರು ಸರ್ಕಾರೀ ಉದ್ಯೋಗಸ್ಥರಲ್ಲದ ನ್ಯಾಯವಿಧಾಯಕ ಸಭೆಯ ಮೆಂಬರುಗಳಿಗೆ ದಯಪಾಲಿಸಿರತಕ್ಕ ಗೌರವವನ್ನೂ, ಅಧಿಕಾರವನ್ನೂ ಪಡೆಯಲು ಅರ್ಹರಾಗಿರಬೇಕೆಂಬ ಅಂಶವನ್ನೂ ಜ್ಞಾಪಕದಲ್ಲಿಟ್ಟುಕೊಂಡಿರಬೇಕು.

ನ್ಯಾಯವಿಧಾಯಕ ಸಭೆಗೆ ಪುನಃ ಮೆಂಬರುಗಳನ್ನು ಚುನಾಯಿಸಬೇಕೆಂದು ಸರ್ಕಾರದವರು ಕೊಟ್ಟಿರುವ ಅಪ್ಪಣೆಯನ್ನು ಬರುವ ವರ್ಷ ಉಪಯೋಗಿಸಿಕೊಳ್ಳುವದಾಗಿ ತಾವುಗಳು ಕೇಳಿಕೊಂಡಿರುವದು ಯುಕ್ತವಾದುದೇ ಸರಿ. ಅನೇಕ ಮೆಂಬರುಗಳು ಈಗಾಗಲೇ ಈ ಸ್ಥಳವನ್ನು ಬಿಟ್ಟು ಪ್ರಯಾಣಮಾಡಿಬಿಟ್ಟಿದ್ದಾರೆ. ನಾಲ್ಕರಲ್ಲಿ ಒಂದು ಭಾಗಕ್ಕಿಂತಲೂ ಕಮ್ಮಿಯಾಗಿ ಮೆಂಬರುಗಳು ಹಾಲೀ ಹಾಜರಿರುತ್ತಾರೆ. ಈ ವರ್ಷದ ಸಭೆಯು ಪೂರೈಸಿದ ನಂತರ ಈಗಿನ ಮೆಂಬರುಗಳ ಕೆಲಸದ ಮುದ್ದತ್ತು ಮುಗಿಯುವದರಿಂದ ಬರುವ ವರ್ಷ ಎಲ್ಲಾ ಮೆಂಬರುಗಳನ್ನೂ ಹೊಸದಾಗಿ ಚುನಾಯಿಸಿ ಈ ಸಭೆಯನ್ನೇ ಪುನಃ ಏರ್ಪಡಿಸಬೇಕಾಗುತ್ತದೆ. ಹೀಗೆ ಹೊಸದಾಗಿ ಚುನಾಯಿಸಲ್ಪಟ್ಟ ಸಭಿಕರು ನ್ಯಾಯವಿಧಾಯಕ ಸಭೆಗೆ ಮೆಂಬರುಗಳನ್ನು ಚುನಾಯಿಸುವದು ಬಹಳ ಉತ್ತಮವಾಗಿರುತ್ತದೆ. ಏಕೆಂದರೆ ಈ ಉಭಯ ಸಭೆಯವರೂ ಪ್ರಾಯಶಃ ಒಂದೇ ಕಾಲದ ಪರ್ಯಂತ ಮೆಂಬರುಗಳಾಗಿರುವರು. ಹೊಸದಾಗಿ ಏರ್ಪಾಟಾಗುವ ಪ್ರತಿನಿಧಿಗಳು ನ್ಯಾಯವಿಧಾಯಕ ಸಭೆಗೆ ಮೆಂಬರುಗಳನ್ನು ಇನ್ನೂ ಉತ್ತಮ ರೀತಿಯಲ್ಲಿ ಚುನಾಯಿಸುವರೆಂತಲೂ, ಹೀಗೆ ತಮ್ಮ ಅಧಿಕಾರವನ್ನು ಸರಿಯಾಗಿ ಉಪಯೋಗಿಸುವದರ ಮೂಲಕ ಶ್ರೀಮನ್ಮಹಾರಾಜರವರು ಈ ಸಭಿಕರಲ್ಲಿ ಇಟ್ಟಿರತಕ್ಕ ನಂಬಿಕೆಗೆ ತಾವುಗಳು ಅರ್ಹರಾಗಿರುವರೆಂದು ತೋರ್ಪಡಿಸಿ ತನ್ಮೂಲಕ ಈ ಸಭೆಯವರು ಇನ್ನೂ ಹೆಚ್ಚಾದ ಅಧಿಕಾರಗಳನ್ನು ಪಡೆಯಲು ಅವಕಾಶ ಕಲ್ಪಿಸುವರೆಂತಲೂ ನಾವು ನಂಬುತ್ತೇವೆ.

ಪ್ರಜಾಪ್ರತಿನಿಧಿಗಳು ದಿವಾನ್‌ರವರಿಗೆ ಓದಿ ಒಪ್ಪಿಸಿದ ಎರಡು ಅಡ್ರೆಸ್ಸುಗಳು.

ನ್ಯಾಯವಿಧಾಯಕ ಸಭೆಗೆ ಪ್ರತಿನಿಧಿ ಸಭೆಯವರಿಂದ ಚುನಾಯಿಸಲ್ಪಡುವ ಇಬ್ಬರು ಮೆಂಬರುಗಳನ್ನು ನೇಮಿಸಿಕೊಳ್ಳುವಂತೆ ನಮ್ಮ ಮಹಾಸ್ವಾಮಿಯವರ ವರ್ಧಂತಿ ಮಹೋತ್ಸವದ ದಿವಸ ಎಕ್‌ಸ್ಟ್ರಾರ್ಡಿನರಿ ಗೆಜೆಟ್ ಮೂಲಕ ಅಪ್ಪಣೆ ಕೊಡಿಸಿದ್ದಕ್ಕಾಗಿ ನಮ್ಮ ಶ್ರೀಮನ್ಮಹಾರಾಜರವರಿಗೂ ಮಹಾರಾಜಾ ಸರ್ಕಾರಕ್ಕೂ ವಂದನೆಯನ್ನು ಒಪ್ಪಿಸುತ್ತೇವೆ. ಮೊದಲು ಆಳಿದ ಮಹಾಸ್ವಾಮಿಯವರು ಕಾಲಂಭೀನವಾದ ೧೮೯೪ನೇ ಇಸವಿ ಡಿಸೆಂಬರ್ ೨೮ನೇ ತಾರೀಖಿನಿಂದ ಬಂದು ನಾವ ವಿಶೇಷವಾಗಿರುವ ಆಯುರ್ವೇದ ವೈದ್ಯ ವಿದ್ಯೆಯ ಪುನರುದ್ಧಾರಕ್ಕಾಗಿ ಈಗ ಮಹಾಸ್ವಾಮಿಯವರ ರಾಜ್ಯಭಾರ ಕಾಲದಲ್ಲಿ ಆಯುರ್ವೇದ ಪಾಠಶಾಲೆಯನ್ನು ಸ್ಥಾಪಿಸುವಂತೆ ಅಪ್ಪಣೆ ದಯಪಾಲಿಸಿದ್ದಕ್ಕಾಗಿ ಮಹಾಸ್ವಾಮಿಯವರಿಗೂ ಮಹಾರಾಜಾ ಸರ್ಕಾರದವರಿಗೂ ಭಕ್ತಿಪೂರ್ವಕವಾದ ವಂದನೆಗಳನ್ನು ಒಪ್ಪಿಸುತ್ತೇವೆ. ಸ್ಕೂಲುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಆಯಾಯವರ ಮತಸಂ

ಂಥವಾದ ವಿದ್ಯೋಪದೇಶ ಮತ್ತು ನೀತಿಬೋಧನೆ ಈ ಪಾಠಗಳನ್ನು ಇಡುವಂತೆ ಮಹಾಸ್ವಾಮಿಯವರು ಅಪ್ಪಣೆ ದಯಪಾಲಿಸಿ, ಈ ಅನ್ಯಾದೃಶವಾದ ಉಪಕಾರಕ್ಕೆ ಮಹಾಸ್ವಾಮಿಯವರಿಗೂ ಮಹಾರಾಜಾ ಸರ್ಕಾರಕ್ಕೂ ಭಕ್ತಿ ಪೂರ್ವಕವಾದ ವಂದನೆಗಳನ್ನು ಒಪ್ಪಿಸುತ್ತೇನೆ. ನಮ್ಮ ಮಹಾಸ್ವಾಮಿಯವರು ಪ್ರಜೆಗಳೆಲ್ಲಾ ವಿದ್ಯಾವಂತರಾಗಬೇಕೆಂಬ ಅಭಿಲಾಷೆಯಿಂದ ಈ ಸಂಸ್ಥಾನದ ಹೋಬಳಿ ಸ್ಕೂಲುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆಲ್ಲಾ ಸ್ಕೂಲು ಫೀ ಮಾಫ್ ಮಾಡಿ ಪಾಠಶಾಲೆಗಳ ಉಪಾಧ್ಯಾಯರುಗಳಿಗೆಲ್ಲಾ ಹತ್ತು ರೂಪಾಯಿಗೆ ಕಡಿಮೆ ಇಲ್ಲದ ಸಂಬಳವನ್ನು ಗೊತ್ತುಮಾಡಿದ್ದರಿಂದ ಪ್ರಜಾ ಸಾಮಾನ್ಯದ ವಿದ್ಯಾಭಿವೃದ್ಧಿಗೆ ಅನುಕೂಲ ಮಾಡಿದ್ದಕ್ಕಾಗಿ ಮಹಾಸ್ವಾಮಿಯವರಿಗೂ ಮಹಾರಾಜಾ ಸರ್ಕಾರಕ್ಕೂ ಭಕ್ತಿಪೂರ್ವಕವಾದ ಅನೇಕ ವಂದನೆಗಳನ್ನು ಒಪ್ಪಿಸುತ್ತೇನೆ. ಈ ವಿಧವಾದ ವಾತ್ಸಲ್ಯದಿಂದ ಈ ಸಂಸ್ಥಾನದ ಪ್ರಜೆಗಳನ್ನ ಕಾಪಾಡುವ ನಮ್ಮ ಮಹಾಸ್ವಾಮಿಯವರಿಗೆ ಪರಮೇಶ್ವರನು ದೀರ್ಘಾಯುರಾರೋಗ್ಯವನ್ನು ಕೊಟ್ಟು ಕಾಪಾಡಲೆಂದು ಇಲ್ಲಿ ಸೇರಿರುವ ಸಭಿಕರೆಲ್ಲರೂ ಪ್ರಾರ್ಥಿಸುತ್ತೇವೆ.

ಅಂಬಳೆ ಅಣ್ಣಯ್ಯ ಪಂಡಿತರು.

ಈ ಕೆಳಗೆ ರುಜು ಮಾಡುವ ರೆಪ್ರಜಂಟೇಟಿವ್ ಮೆಂಬರುಗಳಾದ ನಾವುಗಳು ವಿನಯಪೂರ್ವಕವಾಗಿ ವಿಜ್ಞಾಪನೆ ಮಾಡಿಕೊಳ್ಳುವದೇನಂದರೆ— ತಾವು ನಮ್ಮ ಮೈಸೂರು ಸಂಸ್ಥಾನಕ್ಕೆ ದಿವಾನರವರಾಗಿ ದಯಮಾಡಿಸಿದ ಲಾಗಾಯತು ಪ್ರಜೆಗಳಿಗೆ ಅನೇಕವಾದ ಸೌಲಭ್ಯಗಳು ಉಂಟಾಗಿರುತ್ತವೆ. ಬಹುಕಾಲದಿಂದಲೂ, ನಮ್ಮ ಒಳಗೆ ಮುಖ್ಯವಾದ ವಿದ್ಯಾಭ್ಯಾಸದ ಸ್ಕೂಲುಗಳಲ್ಲಿ ಮತಸಂಬಂಧವಾದ ಶಾಸ್ತ್ರಗಳನ್ನು ಹೇಳದೆ ಇದ್ದದ್ದರಿಂದ ಮಕ್ಕಳು ತಮ್ಮ ತಮ್ಮ ಮತಾಚಾರವನ್ನು ಮರೆತು ದೇವ, ಗುರು, ರಾಜ್ಯ, ಮಾತಾ, ಪಿತೃಗಳ ಭಕ್ತಿಯನ್ನು ಅವಲಂಭಿಸದೆ ಇರುವದಕ್ಕೆ ಕಾರಣವಾಗಿತ್ತು. ಇನ್ನು ಮೇಲೆ ತಮ್ಮ ಏರ್ಪಾಡಿನಿಂದ ಮತಶಾಸ್ತ್ರಗಳ ಬೋಧನೆ ಮೂಲಕ ಪೂರ್ವಾಚಾರಗಳನ್ನು ಅವಲಂಬಿಸುವದಕ್ಕೆ ಅವಕಾಶವುಂಟಾದ ಭಾಗದಲ್ಲಿ ನಮ್ಮ ಶ್ರೀಮನ್ ಮಹಾರಾಜರವರಿಗೂ ಗವರ್ನಮೆಂಟಿಗೂ ನಮ್ಮ ವಂದನೆಯನ್ನು ಮಾಡತಕ್ಕವರಾಗಿದ್ದೇವೆ. ಇದಲ್ಲದೆ ಪ್ರೈಮರಿ ಎಜುಕೇಷನ್ನಿಗೆ ಸಂಪೂರ್ಣವಾಗಿ ನಮ್ಮ ಸಂಸ್ಥಾನದಲ್ಲೆಲ್ಲಾ ಫ್ರೀ ಮಾಡಿದ ಭಾಗದಲ್ಲಿ ತುಂಬಾ ಕೃತಜ್ಞರಾಗಿರುತ್ತೇವೆ. ಇದರಂತೆ ಇಂಗ್ಲೀಷ್ ಪ್ರೈಮರಿ ವಿದ್ಯಾಭ್ಯಾಸಕ್ಕೂ ಸೌಲಭ್ಯವನ್ನು ಉಂಟುಮಾಡಿಕೊಡಬೇಕಲ್ಲದೆ ಬಾಲ ವಿದ್ಯಾಭ್ಯಾಸವನ್ನೂ ಆರಂಭದಿಂದ ಅಂದರೆ ಕೆಂಪಲ್ಸರಿಯಾಗಿ ಮಾಡಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ. ನಮ್ಮ ಇಂಡಿಯಾ ದೇಶದಲ್ಲಿ ಕೆಲವು ದಿವಸಗಳಿಂದ ಉಂಟಾಗಿರುವ ಸ್ವಾರಾಜ್ಯದ ಗಲಭೆಯಲ್ಲಿ ಮುಖ್ಯಮುಖ್ಯವಾದ ಮುಂದಾಳುಗಳು ಅನೇಕವಾದ ಪ್ರಜೆಗಳೂ ಕಷ್ಟಕ್ಕೆ ಗುರಿಯಾಗಿರುವದು ಸರ್ವತ್ರ ಪ್ರಸಿದ್ಧಿಯಾಗಿರುವದನ್ನು ಕುರಿತು ತಾವು ತಮ್ಮ ಕಾರಕರ್ದಿಯಿಂದ ನಮ್ಮ ಸಂಸ್ಥಾನದಲ್ಲಿ ಅಂಥಾ ಅಪವಾದಗಳು ಮತ್ತು ಕಷ್ಟನಷ್ಟಗಳು ಸಹಾ ನಮ್ಮ ಪ್ರಜೆಗಳ ಗೋಚರಕ್ಕೂ ಬಾರದಂತೆ ತಾವು ವಹಿಸಿದ ಪ್ರೆಸ್ ಆಕ್ಟ್ ಸಾಕ್ಷ್ಯಭೂತವಾಗಿರುತ್ತೆ. ಆದರೆ ಕೆಲವು ಕೆಲವರು ಈ ಆಕ್ಟಿನ ವಿಚಾರದಲ್ಲಿ ನಾನಾ ತಾತ್ಪರ್ಯಗಳನ್ನು ಮನಸ್ಸಿಗೆ ಭೇದಗಳನ್ನುಂಟುಮಾಡಿಕೊಂಡಿರುತ್ತಾರೆ. ಮೇಲ್ಕಂಡ ಕಾನೂನಿನಿಂದ ರಾಜಭಕ್ತಿ ಪ್ರಜೆಗಳಲ್ಲಿ ಉಂಟಾಗುವದೇ ಹೊರತು ಅನ್ಯಥಾ ಅಲ್ಲ. ಈ ಹೊಸ ಕಾನೂನಿನಿಂದ ಪ್ರಜೆಗಳ ಹಕ್ಕುಗಳನ್ನು ಅಧಿಕಾರಿಗಳ ಜುಲುಂ ಜಬರ್‍ದಸ್ತುಗಳು ಗವರ್ನಮೆಂಟಿಗೆ ಜಾಹೀರಾಗುವದಕ್ಕೆ ಯಾವ ಅಭ್ಯಂತರವೂ ಉಂಟುಮಾಡಿದಂತೆ ಇಲ್ಲ. ಈ ವಿಚಾರ ಕ್ರಮೇಣ ಜನಗಳ ಮನಸ್ಸಿಗೆ ಸಮಾಧಾನವನ್ನು ಉಂಟುಮಾಡೀತೆಂದು ನಂಬುತ್ತೇವೆ. ಮೈಸೂರಿನ ಸಿಟಿ ಇಂಪ್ರೂವ್‍ಮೆಂಟ್ ಡಿಪಾರ್ಟ್‍ಮೆಂಟು ಈಗಿನ ವರ್ಷದಿಂದ ಖರ್ಚು ಕಡಿಮೆಯಾಗಿ ಕೆಲಸ ಕಾರ್ಯಗಳು ಕ್ರಮವಾಗಿ ನಡೆಯುತ್ತಾ ಇದ್ದಾವೆ. ಈ ಡಿಪಾರ್ಟ್‍ಮೆಂಟನ್ನು ಮ್ಯುನಿಸಿಪಲ್ ಬೋರ್ಡಿಗೆ ಸೇರಿಸಿಬಿಟ್ಟರೆ ಅವರೆ ಇನ್ನೂ ಚೆನ್ನಾಗಿಯೂ, ಮಿತವ್ಯಯವಾಗಿಯೂ, ಜನಗಳ ಹಕ್ಕು ಬಾಧ್ಯತೆಗೆ ಕುಂದಿಲ್ಲದಂತೆಯೂ, ಸಾವಕಾಶವಿಲ್ಲದಂತೆಯೂ, ಜರಗಬಹುದಾದ ಕಾರ್ಯ ಅದರಂತೆ ಮಾಡಿಕೊಡಲು ಬೇಡುತ್ತೇವೆ. ಮೈಸೂರು ಪಟ್ಟಣ ಅಬಾದಿಗೋಸ್ಕರ ನಮ್ಮ ಶ್ರೀಮನ್ ಮಹಾರಾಜರವರು ವಿದ್ಯುಚ್ಛಕ್ತಿ ದೀಪಗಳನ್ನು ಇಡಿಸಿದ್ದಲ್ಲದೆ ಸನ್ನಿಹಿತ ಪಟ್ಟಣಿಗೆ ಅವಿಚ್ಛಿನ್ನವಾಗಿ ನೀರಿನ ಸಂಬರಾಯಿ ನಡೆಯುವಂತೆ ಮಾಡಿರುವ ಏರ್ಪಾಡಿನ ಉಪಕಾರವನ್ನು ಪ್ರಜೆಗಳು ಯಾವಾಗ್ಲೂ ಮರೆಯತಕ್ಕದ್ದಾಗಿಲ್ಲ. ಮತ್ತು ಈ ಭಾಗದಲ್ಲಿ ಸಿಟಿಜನ್‍ರವರ ಪರವಾಗಿ ವಂದನೆಯನ್ನು ಸಮರ್ಪಿಸುತ್ತೇವೆ. ನಮ್ಮ ದೇಶದಲ್ಲಿ ನೇಟಿವ್ ವೈದ್ಯಶಾಸ್ತ್ರ ಶಿಥಿಲವಾಗುತ್ತಿರುವ ಭಾಗವನ್ನು ಯೋಚಿಸಿ ಆಯುರ್ವೇದಿಕ್ ಕಾಲೇಜನ್ನು ಏರ್ಪಾಡು ಮಾಡಿಕೊಟ್ಟರೋ ಭಾಗದಲ್ಲಿ ಸಂಪೂರ್ಣವಾದ ವಂದನೆಗಳನ್ನು ಅರ್ಪಿಸುತ್ತೇವೆ. ಈ ಸಭೆ ಸೇರಿದ ಫಲವನ್ನು ಎಲ್ಲಾ ಸಂಗಡದವರೂ ಅನುಭವಿಸುವಂತೆ ಮಾಡಿಕೊಡಬೇಕೆಂದು ಕೋರುತ್ತೇವೆ. ನಮ್ಮ ಶ್ರೀಮನ್ ಮಹಾರಾಜರವರಿಗೂ, ರಾಜಕುಟುಂಬದವರಿಗೂ, ತಮಗೂ ದೇವರು ಆಯುರಾರೋಗ್ಯವನ್ನು ದಯಪಾಲಿಸಬೇಕೆಂದು ಭಗವತ್ಸನ್ನಿಧಿಯಲ್ಲಿ ಬೇಡತಕ್ಕವರಾಗಿದ್ದೇವೆ, ಸ್ವಾಮಿ.

ದರವೇಷ್ ಪೀರ್ ಮತ್ತು ೭೨ ಜನ ಇತರರು.

ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸ.

ಸಾಮಾನ್ಯ ಆದಾಯವ್ಯಯಸ್ಥಿತಿ.

೧೯೦೫—೦೬ನೇ ಇಸವಿಯ ಪ್ರಾರಂಭದಲ್ಲಿ ೪೩,೪೯,೦೦೦ ರೂಪಾಯಿ ಇದ್ದದ್ದು ೧೯೦೭—೦೮ನೇ ಸಾಲಿನ ಆಖೈರಿನಲ್ಲಿ ೯೧,೧೫,೦೦೦ ರೂಪಾಯಿಗೆ ಏರಿತು. ಆದುದರಿಂದ ಈ ೩ ವರುಷಗಳಲ್ಲಿ ಸುಮಾರು ೪೮ ಲಕ್ಷ ರೂಪಾಯಿ ಉಳಿಸಿದಂತಾಯಿತು. ಈ ಸಾಲಿನ ಅಂದಾಜುಪಟ್ಟಿಗಳಲ್ಲಿ ಉಳಿತಾಯವಾಗಬಹುದೆಂದು ಕಾಣಿಸುವ ೧೨,೬೭,೦೦೦ ರೂಪಾಯಿಯನ್ನೂ ಸೇರಿ ಒಟ್ಟು ಸುಮಾರು ೧,೦೪,೦೦,೦೦೦ ರೂಪಾಯಿ ಸರ್ಕಾರಕ್ಕೆ ಉಳಿಯುತ್ತದೆ. ಇದು ೧೮೯೮—೯೯ನೇ ಸಾಲಿನ ಪ್ರಾರಂಭದಲ್ಲಿದ್ದ ಉಳಿಕೆಗಿಂತ ೩೫ ಲಕ್ಷ ರೂಪಾಯಿ ಮಾತ್ರ ಕಡಿಮೆಯಾಗಿದೆ. ಇದೆಲ್ಲವನ್ನೂ ೧೮೯೮—೯೯, ೧೯೦೫—೦೬, ೧೯೦೮—೦೯ ಈ ಮೂರು ಸಾಲುಗಳ ಪ್ರಾರಂಭದಲ್ಲಿ ಸರ್ಕಾರಕ್ಕೆ ಬರಬೇಕಾದ ಮೊಬಲಗುಗಳನ್ನೂ ಸರ್ಕಾರದವರು ಕೊಡಬೇಕಾದ ಮೊಬಲಗುಗಳನ್ನೂ ನಮೂದಿಸಿ ಇದಕ್ಕೆ ಲಗತ್ತಿಸಿರುವ ತಖ್ತೆಯಲ್ಲಿ ಸ್ಪಷ್ಟವಾಗಿ ಕಾಣಿಸಿರುತ್ತದೆ.

ತಖ್ತೆಯಲ್ಲಿ ಕಾಣಿಸುವ ಮೊಬಲಗುಗಳಲ್ಲಿ ಸರ್ಕಾರಕ್ಕೆ ಬರಬೇಕಾದ ಮತ್ತು ಸರ್ಕಾರದವರು ಕೊಡಬೇಕಾದ ನಗದು ಮೊಬಲಗುಗಳನ್ನೇ ಸೇರಿಸಿದೆಯಲ್ಲದೆ ಹಿಂದಿನ ವರುಷಗಳಲ್ಲಿ ಮರಹಮ್ಮತ್ತು, ರೈಲ್ವೆ, ನೀರಾವರಿ ಕಾಮಗಾರಿಗಳು, ಕಾವೇರಿ ವಿದ್ಯುಚ್ಛಕ್ತಿಯ ಏರ್ಪಾಟು ಇವುಗಳ ಮೇಲೆ ಖರ್ಚಾದ ಭಾರಿ ಬಂಡವಾಳವನ್ನು ಇದರಲ್ಲಿ ಸೇರಿಸಿರುವುದಿಲ್ಲ.

ಈ ವಿಚಾರವಾಗಿ ಈಗ್ಗೆ ೨ ವರುಷಗಳ ಹಿಂದೆ ನಮ್ಮ ಉಪನ್ಯಾಸದಲ್ಲಿ ನಾವು ಹೇಳಿದ್ದುದು ತಮ್ಮಗಳಿಗೆ ಜ್ಞಾಪಕವಿರಬಹುದು. ಆಗ ನಾವು ಹೇಳಿದ್ದು ಏನೆಂದರೆ, ೧೮೯೮-೯೯ರ ಲಾಗಾಯತು ೧೯೦೪-೦೫ನೇ ಸಾಲಿಗೆ ಆಖೈರಾಗುವ ೭ ವರುಷಗಳಲ್ಲಿ "ಸೇವಿಂಗ್ಸ್ ಬ್ಯಾಂಕು" ಮತ್ತು "ಇನ್ಷ್ಯೂರೆನ್ಸ್" ಯಾ ಭೀಮಾ ಫಂಡು ಎಂಬ ಬಾಬುಗಳಲ್ಲಿ ಸಂಸ್ಥಾನದಿಂದ ಕೊಡಬೇಕಾದ ಮೊಬಲಗು ತುಂಬಾ ಜಾಸ್ತಿಯಾಯಿತು. ಆದರೆ ಇದೇ ಕಾಲದಲ್ಲಿ ಉಳಿಸಿಟ್ಟಿದ್ದ ನಗದು ಹಣವೂ ಬ್ಯಾಂಕು ವಗೈರೆಗಳಲ್ಲಿಟ್ಟಿದ್ದ ಹಣವೂ ಬಹಳವಾಗಿ ಕಡಿಮೆ ಬಿದ್ದು ೧೮೯೮-೯೯ನೇ ವರುಷದ ಆದಿಯಲ್ಲಿ ೧,೩೯,೫೩,೦೦೦ ರೂಪಾಯಿ ಸರ್ಕಾರಕ್ಕೆ ಉಳಿಕೆಯಾಗಿದ್ದುದು ೧೯೦೫ನೇ ಜುಲೈ ೧ನೇ ತಾರೀಖಿನ ದಿವಸ ೪೩,೪೯,೦೦೦ ರೂಪಾಯಿಗೆ ಇಳಿದುಹೋಗಿತ್ತು. ಇದರಿಂದ ಈ ಸಂಸ್ಥಾನದ ಧನಸಂಪತ್ತಿಯು ಸ್ವಲ್ಪಮಟ್ಟಿಗೆ ತಗ್ಗಿತು. ಆದುದರಿಂದ ಸಂಸ್ಥಾನದ ಆದಾಯ ವ್ಯಯವನ್ನು ಸರಿಯಾದ ಸ್ಥಿತಿಗೆ ತರಬೇಕಾದರೆ ಸರ್ಕಾರದವರು ಕೊಡಬೇಕಾದ ಮೊಬಲಗುಗಳು ಕಡಿಮೆ ಬೀಳುವಂತೆಯೂ, ರಿಜರ್ವ್ ಫಂಡು ಯಾ ಉಳಿಸಿಟ್ಟುಕೊಂಡಿರುವ ಹಣವು ವೃದ್ಧಿಯಾಗುವಂತೆಯೂ ಮಾಡುವುದು ಅತ್ಯವಶ್ಯಕವಾಗಿಯೂ ತುರ್ತಾಗಿಯೂ ನೆರವೇರಿಸತಕ್ಕ ಕೆಲಸವಾಯಿತು. ಸರ್ಕಾರಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಯಾರೂ ವರ್ಷಂಪ್ರತಿ ಆಗಲಿ ಒಟ್ಟಿನಲ್ಲಿ ಆಗಲಿ ಫಲಾನಾ ಮೊಬಲಗಿಗಿಂತ ಹೆಚ್ಚಾಗಿ ಹಣ ಇಡಕೂಡದು ಎಂಬ ಅಂಶದಲ್ಲಿ ಮಾಡಿದ ಏರ್ಪಾಡಿನಿಂದ ಸರ್ಕಾರದ ಸಾಲವು ಬಹಳಮಟ್ಟಿಗೆ ಕಡಿಮೆ ಬಿತ್ತು. ಇದಲ್ಲದೆ ಸಂಸ್ಥಾನದ ರಿಜರ್ವ್ ಫಂಡಿಗೆ ೪೦ ಲಕ್ಷ ರೂಪಾಯಿನಷ್ಟು ಭಾರೀ ಜಮೆಯನ್ನೂ ಕೂಡ ಮಾಡಲಾಯಿತು. ೧೯೦೬-೦೭ನೇ ಇಸವಿಯ ಲಾಗಾಯತು ಬಹಳ ಮುಖ್ಯವಾದ ಮತ್ತೊಂದು ಏರ್ಪಾಟನ್ನು ನಿರ್ಧರಿಸಿ ನಡೆಸಲಾಯಿತು. ಅದು ಯಾವುದೆಂದರೆ, ಸಂಸ್ಥಾನದಲ್ಲಿ ದುರದೃಷ್ಟವಶಾತ್ ಕ್ಷಾಮವೇನಾದರೂ ತಲೆದೋರಿ ಅದರ ನಿವಾರಣಾರ್ಥವಾಗಿ ಏರ್ಪಾಡು ಮಾಡಬೇಕಾಗಿ ಬಂದಲ್ಲಿ ಸಂಸ್ಥಾನದ ಸಾಲೀಯಾನಾ ಆದಾಯವ್ಯಯದ ಬಾಬುಗಳ ತಂಟೆಗೆ ಹೋಗದೇನೇ ಕೆಲಸವನ್ನು ನಡೆಸುವದಕ್ಕೆ ಅವಶ್ಯಕವಾದ ಮೊಬಲಗನ್ನು ಪ್ರತ್ಯೇಕವಾಗಿಟ್ಟುಕೊಂಡಿರುವುದೇ. ಕ್ಷಾಮವು ಪ್ರಾಪ್ತವಾದ ವರುಷಗಳಲ್ಲಿ ಅದರ ನಿವಾರಣಾರ್ಥವಾಗಿ ವಿಶೇಷ ಖರ್ಚು ಮಾಡಬೇಕಾಗುತ್ತದೆಯಲ್ಲದೆ ಸರ್ಕಾರಿ ಉತ್ಪತ್ತಿಯೂ ಕೂಡ ಕಡಿಮೆ ಬಿದ್ದುಹೋಗುತ್ತದೆ. ಇದಕ್ಕಾಗಿ ಹಣವನ್ನು ಪ್ರತ್ಯೇಕಿಸಿ ಇಡದಿದ್ದರೆ ಸರ್ಕಾರದವರು ಸಾಲಗಳನ್ನು ಮಾಡಬೇಕಾಗುವುದಲ್ಲದೆ ಆಯಾ ಇಲಾಖೆಗಳಲ್ಲಿ ಅವಶ್ಯಕವಾಗಿ ನಡೆಯತಕ್ಕ ಕೆಲಸಗಳಿಗೆ ಹಣವಿಲ್ಲದೆ ಹೋಗುತ್ತದೆ. ಆದುದರಿಂದ ಕ್ಷಾಮವು ಪ್ರಾಪ್ತವಾಗುವ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳಲು ಅನುಕೂಲವಾಗುವಂತೆ ಪ್ರತ್ಯೇಕವಾಗಿ ರಿಜರ್ವ್ ಫಂಡನ್ನು ಏರ್ಪಡಿಸುವುದು ತುಂಬಾ ಆಗತ್ಯವಾದ ಕಾರಣ ೧೯೦೬-೦೭ನೇ ಸಾಲಿನಿಂದ ವರುಷ ಒಂದಕ್ಕೆ ಎರಡುಲಕ್ಷ ರೂಪಾಯಿ ಪ್ರಕಾರ ಉಳಿಸಿ ಒಂದು ಫಂಡನ್ನು ಏರ್ಪಡಿಸಬೇಕೆಂದು ನಿರ್ಧರಿಸಿದೆ. ಈ ಏರ್ಪಾಡಿನ ಮೇರೆಗೆ ಇದುವರೆಗೆ ೪ ಲಕ್ಷ ರೂಪಾಯಿಯನ್ನು ಉಳಿಸಿರುವುದಲ್ಲದೆ ಹಾಲೀ ವರ್ಷದ ಬಜೆಟ್‍ನಲ್ಲಿ ಎರಡು ಲಕ್ಷ ರೂಪಾಯಿಗಳ ಉಳಿಕೆಗೂ ಏರ್ಪಾಟು ಮಾಡಿದೆ. ಸಂಸ್ಥಾನದ ಅನೇಕ ಇಲಾಖೆಗಳಲ್ಲಿ ವಿಶೇಷ ಖರ್ಚು ಮುಟ್ಟುವ ಬದಲಾವಣೆಗಳನ್ನು ನಡೆಸಿದ್ದರೂ ಕೂಡ ಸಂಸ್ಥಾನದ ಆದಾಯವ್ಯಯದ ವಿಷಯದಲ್ಲಿ ಚಿಂತೆಗೆ ಅವಕಾಶವಿಲ್ಲದಿರುವಂತೆ ಧನ ಸಂಪತ್ತಿಯನ್ನುಂಟುಮಾಡಲು ಮೇಲ್ಕಂಡಂತೆ ಮಾಡಿರುವ ಏರ್ಪಾಟುಗಳೆಲ್ಲವನ್ನೂ ಜಾರಿಗೆ ತಂದಿರುವುದು ತುಂಬಾ ತೃಪ್ತಿಕರವಾಗಿದೆ. ಜಮೀನ ಕಂದಾಯ, ಜಂಗಲಾತ್, ಆಬ್ಕಾರಿ, ಸ್ಟಾಂಪು ವಗೈರೆ ಮುಖ್ಯವಾದ ಹುಟ್ಟುವಳಿ ಬಾಬುಗಳಲ್ಲಿ ಅವಶ್ಯಕ ಬಿದ್ದಲ್ಲಿ ಆದಾಯವು ಜಾಸ್ತಿಯಾಗುವುದಕ್ಕೆ ಅವಕಾಶವಿರುವ ಪ್ರಯುಕ್ತವೂ, ಕಾವೇರಿ ವಿದ್ಯುಚ್ಛಕ್ತಿಯ ಏರ್ಪಾಡಿನಿಂದಲೂ, ಗಣಿಗಳ ರಾಜಾದಾಯದಿಂದಲೂ ಅಧಿಕವಾದ ವರಮಾನವು ಬಂದ ಪ್ರಯುಕ್ತವೂ ಮೇಲೆ ಹೇಳಿದಂತೆ ಮಾಡಲು ಅವಕಾಶವಾಯಿತು. ಕಳೆದ ಮೂರು ವರ್ಷಗಳಲ್ಲಿ ಮಂಜೂರಾದ ಬದಲಾವಣೆಗಳು ಯಾವುವೆಂದರೆ —(೧) ಸುಪಾರಿಯ ಹಾಲತ್ತನ್ನು ವಜಾಮಾಡಿದುದು—ಇದರಿಂದ ಸಾಲೀಯಾನಾ ೨ ಲಕ್ಷ ರೂ ವರಮಾನವು ಬರುವುದು ತಪ್ಪಿಹೋಯಿತು. (೨) ಆರೋಗ್ಯ ಇಲಾಖೆಯ ಮತ್ತು ಪಶುವೈದ್ಯದ ಇಲಾಖೆಯ ಏರ್ಪಾಡು—ಇದಕ್ಕೆ ೧½ ಲಕ್ಷ ರೂಪಾಯಿ ಖರ್ಚಾಯಿತು. (೩) ಕಿಂಡರ್‍ಗಾರ್ಟನ್ ಮತ್ತು ಮಾನ್ಯುಯಲ್ ಟ್ರೈನಿಂಗ್ ಈ ಪದ್ಧತಿಗಳನ್ನು ಏರ್ಪಡಿಸುವುದರ ಮೂಲಕ ಬೋಧನಾಕ್ರಮವನ್ನು ಉತ್ತಮಸ್ಥಿತಿಗೆ ತಂದುದು—ಇದಕ್ಕೆ ಅರ್ಧ ಲಕ್ಷ ರೂಪಾಯಿ ಖರ್ಚು ಹಿಡಿಯಿತು. (೪) ಸ್ಕೂಲ್ ಮಾಸ್ಟರುಗಳ ಕನಿಷ್ಠ ಸಂಬಳವನ್ನು ೧೦ ರೂಪಾಯಿಗಳಿಗೆ ಹೆಚ್ಚಿಸಿದುದು—ಇದರಿಂದ ಸಾಲೀಯಾನಾ ೭೩,೦೦೦ ರೂಪಾಯಿ ಖರ್ಚಾಗುತ್ತದೆ. (೫) ಪ್ರಾರಂಭಿಕ ವಿದ್ಯಾಭ್ಯಾಸಕ್ಕೆ ಫೀಜನ್ನು ತೆಗೆದುಹಾಕಿದುದು, ಮದರಾಸ್ ಯೂನಿವರ್ಸಿಟಿಯ ಹೊಸ ರೆಗ್ಯುಲೇಷನ್ನಿಗನುಸಾರವಾಗಿ ಇಲ್ಲಿಯ ಕಾಲೇಜುಗಳ ಪಾಠಕ್ರಮವನ್ನು ಬದಲಾಯಿಸುವುದು ಮತ್ತು ಬಿ ಎ ಪರೀಕ್ಷೆಗೆ ಇದುವರೆಗೆ ಇಲ್ಲಿ ಬೋಧಿಸದೆ ಇದ್ದ ಹೊಸ ಪಾಠಗಳನ್ನು ಬೋಧಿಸುವಂತೆ ಏರ್ಪಡಿಸುವುದು—ಇದಕ್ಕಾಗಿ ಸುಮಾರು ೩ ಲಕ್ಷ ರೂಪಾಯಿ ಖರ್ಚು ತಗಲುವುದು. ಈ ಪೈಕಿ ೧ ಲಕ್ಷ ರೂಪಾಯಿ ವರ್ಷಂವರ್ಷ ಆಗಬೇಕಾದ ಖರ್ಚು. ಕೊನೆಯಲ್ಲಿ ನಮೂದಿಸಿರುವುದೊಂದು ಹೊರತು ಉಳಿದ ಏರ್ಪಾಡುಗಳೆಲ್ಲಾ ಜಾರಿಗೆ ತಂದಿರುತ್ತದೆ. ಈ ವರ್ಷ ಕಾವೇರಿ ವಿದ್ಯುಚ್ಛಕ್ತಿಯ ಮೂರನೇ ಸ್ಥಾಪನೆಗಾಗಿ ೧೨,೮೧,೦೦೦ ರೂಪಾಯಿ ಮೊಬಲಗನ್ನು ವಿನಿಯೋಗಿಸಲಾಯಿತು. ಈ ಕಾರ್ಯವು ಪೂರೈಸುತ್ತಾ ಬಂದಿದೆ.

ನಗದು ಶಿಲ್ಕು.

೧೯೦೮ನೇ ಜೂನ್ ೩೦ರಲ್ಲಿ ಖಜಾನೆಗಳಲ್ಲಿಯೂ ಬ್ಯಾಂಕುಗಳಲ್ಲಿಯೂ ೧,೦೮,೭೪,೦೦೦ ರೂಪಾಯಿ ನಗದು ಶಿಲ್ಕು ಇತ್ತು. ಈ ಪೈಕಿ ೩೩ ಲಕ್ಷ ರೂಪಾಯಿಯನ್ನು ಕಳೆದ ಆಗಸ್ಟ್ ತಿಂಗಳಲ್ಲಿ ಇಂಡಿಯಾ ಸರ್ಕಾರದ ಮತ್ತು ಇತರ ಆಧಾರಪತ್ರಗಳನ್ನು ಕೊಂಡುಕೊಳ್ಳುವುದರಲ್ಲಿ ವಿನಿಯೋಗಿಸಲಾಯಿತು. ಸದರಿ ತಾರೀಖಿನಲ್ಲಿ ಬ್ಯಾಂಕುವಗೈರೆ ಲೆಕ್ಕಗಳಲ್ಲಿ ಒಟ್ಟು ೧೩೭ ಲಕ್ಷ ರೂಪಾಯಿ ಶಿಲ್ಕು ಮೊಬಲಗು ಸರ್ಕಾರದ ಜಮೆಯಲ್ಲಿ ನಿಂತಿರುತ್ತದೆ.

ನ್ಯಾಯವಿಧಾಯಕ ಸಭೆ.

ನ್ಯಾಯವಿಧಾಯಕ ಸಭೆಯು ಸ್ಥಾಪಿತವಾಗಿ ಒಂದು ವರುಷದ ಮೇಲಾಯಿತು. ಈ ಕಾಲದಲ್ಲಿ ಏಳಾವರ್ತಿ ಸಭೆ ಕೂಡಿತ್ತು. ಕೆಲವು ಮುಖ್ಯವಾದ ಕಾನೂನುಗಳು ಎಂದರೆ, ಗ್ರಾಮ ನೌಕರಿ ಬಿಲ್ಲು, ಪೊಲೀಸ್ ಬಿಲ್ಲು, ವರ್ತಮಾನ ಪತ್ರಿಕೆಗಳ ಬಿಲ್ಲು, ಮತ್ತು ಕೋರ್ಟುಫೀ ರೆಗ್ಯುಲೇಷನ್, ಸ್ಟಾಂಪು ರೆಗ್ಯುಲೇಷನ್, ಸಿವಿಲ್ ಪ್ರೊಸೀಜರ್ ಕೋಡು—ಇವುಗಳನ್ನು ತಿದ್ದುಪಾಟು ಮಾಡುವ ಬಿಲ್ಲುಗಳು ಸಭೆಯಲ್ಲಿ ಚರ್ಚೆಗೆ ಬಂದು ಮೈಸೂರು ವರ್ತಮಾನ ಪತ್ರಿಕಾ ರೆಗ್ಯುಲೇಷನ್ನು, ಕೋರ್ಟುಫೀ ಮತ್ತು ಸ್ಟಾಂಪುಗಳ ರೆಗ್ಯುಲೇಷನ್ನುಗಳೂ ಮಂಜೂರ್ ಆದುವು, ಗ್ರಾಮನೌಕರೀ ಬಿಲ್ಲು ಸಹ ಸಭೆಯು ಕಳೆದ ಸಾರಿ ಕೂಡಿದ್ದಾಗ ಮಂಜೂರಾಯಿತು; ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರ್ ರವರು ಅನುಮತಿಯನ್ನು ದಯಪಾಲಿಸಿದ ನಂತರ ಅದು ಜಾರಿಗೆ ಬರುವುದು. ಇವುಗಳಲ್ಲದೆ ಮೈಸೂರು ವರ್ತಮಾನ ಪತ್ರಿಕೆಗಳ ರೆಗ್ಯುಲೇಷನ್ ಎಂಬ ಮತ್ತೊಂದು ಕಾನೂನನ್ನೂ ಮಂಜೂರ್ ಮಾಡಲಾಯಿತು. ಇದನ್ನು ಹಿಂದೂಸ್ಥಾನದ ಅನೇಕ ವರ್ತಮಾನ ಪತ್ರಿಕೆಗಳವರು ಅನುಮೋದಿಸಲಿಲ್ಲ. ಇದೇನೂ ಆಶ್ಚರ್ಯವಲ್ಲ. ಯಾಕೆಂದರೆ, ಮೈಸೂರು ಸಂಸ್ಥಾನವನ್ನು ಬಿಟ್ಟು ಇತರ ಕಡೆಗಳಲ್ಲಿ ಪ್ರಕಟವಾಗುವ ವರ್ತಮಾನ ಪತ್ರಿಕೆಗಳವರು ಈ ಸಂಸ್ಥಾನದ ವಾಸ್ತವವಾದ ಸ್ಥಿತಿಗತಿಗಳನ್ನು ಕಣ್ಣಾರ ನೋಡಿ ತಿಳಿಯುವುದು ಸುಲಭಸಾಧ್ಯವಲ್ಲ. ಆದುದರಿಂದ ಅವರುಗಳು ಈ ವಿಷಯವನ್ನು ಕುರಿತು ಸಾಮಾನ್ಯ ನ್ಯಾಯಕ್ಕೆ ಅನುಸಾರವಾಗಿ ಚರ್ಚಿಸುವರೇ ಹೊರತು ಸ್ಥಳ ವಿದ್ಯಮಾನಗಳ ತಿಳುವಳಿಕೆಯಿಂದ *ಚರ್ಚಿಸುವುದಿಲ್ಲ. ಆದರೆ ಈ ಸಂಸ್ಥಾನದಲ್ಲಿ ತಾವಾಗಿಯೇ ಪ್ರಕಟನೆಯನ್ನು* ನಿಲ್ಲಿಸಿಬಿಟ್ಟ ಮೂರು ಪತ್ರಿಕೆಗಳವರು ಹೊರತು ಉಳಿದ ಪತ್ರಿಕಾಕರ್ತರು ಸಾಮಾನ್ಯವಾಗಿ ಈ ವಿಧವಾದ ಒಂದು ಕಾನೂನು ಇರಬೇಕಾದುದು ಅಗತ್ಯವೆಂದು ಒಪ್ಪಿಕೊಳ್ಳುತ್ತಾರೆಯಲ್ಲದೆ, ಈಗ ಮಂಜೂರ್ ಆಗಿರುವ ರೆಗ್ಯುಲೇಷನಿನಲ್ಲಿ ಆಶಂಕೆಗೆ ಕಾರಣವಿಲ್ಲವೆಂದು ಅಭಿಪ್ರಾಯಪಡುತ್ತಾರೆ. ಈ ವಿಷಯದಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರ್ ರವರಿಗೆ ಮೊದಲಿಂದಲೂ ಇದ್ದ ಅಧಿಕಾರಗಳನ್ನೇ ಈ ಕಾನೂನಿನಲ್ಲಿ ವ್ಯಕ್ತಪಡಿಸಿದೆಯೇ ಹೊರತು ಇನ್ನೇನೂ ಜಾಸ್ತಿಯಾಗಿ ಸೇರಿಸಿರುವುದಿಲ್ಲವೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ಪತ್ರಿಕಾ ಪ್ರಕಟನೆಗೆ ಅಪ್ಪಣೆ ಕೊಡದೆ ತಿರಸ್ಕರಿಸುವುದೂ ಮತ್ತು ಒಂದು ಸಾರಿ ಅಪ್ಪಣೆಯನ್ನು ಕೊಟ್ಟು ಅದನ್ನು ರದ್ದು ಮಾಡುವುದೂ ಈ ಅಧಿಕಾರಗಳನ್ನು ಸರ್ಕಾರದವರು ಚಲಾಯಿಸುವ ವಿಷಯದಲ್ಲಿ ಆಕ್ಷೇಪಣೆ ಮಾಡುವವರಾಗಿದ್ದಾರೆ. ಈ ಆಕ್ಷೇಪಣೆಯನ್ನು ಒಂದು ಊಹೆಯ ಆಧಾರದ ಮೇಲೆ ಮಾಡುತ್ತಾರೆ. ಅದು ಯಾವುದೆಂದರೆ, ಪತ್ರಿಕೆಗಳಲ್ಲಿ ಪ್ರಕಟವಾಗುವ ಅಂಶಗಳಲ್ಲಿ ಸ್ವಲ್ಪ ಅಸಮಾಧಾನಕರವಾದ ಅಂಶವು ಇದ್ದ ಮಾತ್ರಕ್ಕೇನೇ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರ್ ರವರ ಸರ್ಕಾರದವರು ಸ್ವೇಚ್ಛೆಯಾಗಿ ತಮ್ಮ ಅಧಿಕಾರವನ್ನು ಚಲಾಯಿಸುವರು, ಮತ್ತು ಸ್ವಲ್ಪ ಕಾಲದಮಟ್ಟಿಗೆ ಅಧಿಕಾರವುಳ್ಳ ಸರ್ಕಾರೀ ಅಧಿಕಾರಿಗಳು ಪತ್ರಿಕಾ ಕರ್ತರಿಗೆ ಪದೇಪದೇ ಹಿಂಸೆ ಕೊಡುವುದಕ್ಕೆ ಆಸ್ಪದವಾಗುತ್ತದೆ ಎಂಬ ಊಹೆಯ ಮೇಲೆ ಹಾಗೆ ಆಕ್ಷೇಪಿಸುತ್ತಾರೆ. ಆದರೆ ನ್ಯಾಯವಿಧಾಯಕ ಸಭೆಯಲ್ಲಿ ಸರ್ಕಾರದವರ ಅಭಿಪ್ರಾಯವನ್ನು ನಾವು ತಿಳಿಸುವುದರಲ್ಲಿ ಸರ್ಕಾರದವರ ಆಡಳಿತಗಳಲ್ಲಿ ಕಂಡ ದೋಷಗಳನ್ನು ಪತ್ರಿಕಾಕರ್ತರು ತಮ್ಮ ಇಷ್ಟಾನುಸಾರ ಧಾರಾಳವಾಗಿ ತೋರ್ಪಡಿಸಿ ಬರೆಯಬಹುದೆಂದು ಭರವಸೆ ಕೊಟ್ಟಿರುತ್ತೇವೆ. ಪರಂತು ಸುಳ್ಳು ವರ್ತಮಾನಗಳನ್ನು ಹರಡಿ ನಿಜಸ್ಥಿತಿಯನ್ನು ಕುರಿತು ಜನಗಳಿಗೆ ಕೆಟ್ಟ ಅಭಿಪ್ರಾಯ ಹುಟ್ಟುವಂತೆ ಮನಃಪೂರ್ವಕವಾಗಿ ಅಪಾರ್ಥಮಾಡಿ ತನ್ಮೂಲಕ ಸಂಸ್ಥಾನದ ಕ್ಷೇಮಕ್ಕೆ ಕುಂದಕವನ್ನುಂಟುಮಾಡತಕ್ಕ ಬರವಣಿಗೆಗಳನ್ನು ಮಾತ್ರ ಪ್ರಚುರಪಡಿಸಕೂಡದೆಂತ ಹೇಳಿದೆವು. ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್ ರವರ ಸರ್ಕಾರದವರು ತಮ್ಮ ಕಾರ್ಯಗಳನ್ನು ಸಮಸ್ತರಿಗೂ ಪ್ರಚುರಪಡಿಸುವುದರಲ್ಲಿ ಎಂದಿಗೂ ಹಿಂತೆಗೆದಿಲ್ಲ. ಪ್ರಜೆಗಳ ಅಹವಾಲುಗಳನ್ನು ಚೆನ್ನಾಗಿ ತಿಳಿಯಪಡಿಸುವುದಕ್ಕೆ ಈ ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿರುವಷ್ಟು ಸೌಕರ್ಯಗಳು ಇಂಡಿಯಾ ದೇಶದಲ್ಲಿ ಮತ್ತೆಲ್ಲಿಯೂ ಇರುವುದಿಲ್ಲ; ಇಂಥಾ ಸಭೆಯಲ್ಲಿ ರಾಜ್ಯಾಡಳಿತದ ಅಂಶಗಳನ್ನು ಬಹಿರಂಗವಾಗಿ ಚರ್ಚಿಸುತ್ತಿರುವುದನ್ನೂ, ಸರ್ಕಾರದವರ ಆದೇಶಗಳನ್ನು ಪತ್ರಿಕಾಕರ್ತರಿಗೆ ತಿಳಿಯಪಡಿಸುವುದಕ್ಕಾಗಿ ಬೆಂಗಳೂರಿನಲ್ಲಿ ಪ್ರೆಸ್ ರೂಂ ಏರ್ಪಡಿಸಿರುವುದನ್ನೂ ನೋಡಿದರೆ ಸರ್ಕಾರದವರ ಕಾರ್ಯಗಳನ್ನೆಲ್ಲಾ ಸಮಸ್ತರಿಗೂ ತಿಳಿಯಪಡಿಸುವುದೇ ಅವರ ಉದ್ದೇಶವೆಂಬುವುದು ಸ್ಪಷ್ಟಪಡುತ್ತದೆ. ಸಾಮಾನ್ಯವಾಗಿ ಒಳ್ಳೇ ತಿಳುವಳಿಕೆಯುಳ್ಳಂಥಾವರೂ ಕೂಡ ಈ ರೆಗ್ಯುಲೇಷನ್ನಿನ ಪ್ರಕಾರ ಪತ್ರಿಕಾಪ್ರಕಟನೆಗೆ ಅಪ್ಪಣೆ ಕೊಡೋಣವೂ ಬಿಡೋಣವೂ ಆಯಾ ಅಧಿಕಾರಿಗೆ ಮನಸ್ಸು ಬಂದಂತೆ ಮಾಡತಕ್ಕ ಕೆಲಸವೇ ಹೊರತು ಅನ್ಯಥಾ ಅಲ್ಲವೆಂದು ತಿಳಿದುಕೊಂಡಿರುತ್ತಾರೆ. ಇದು ತಪ್ಪು ಅಭಿಪ್ರಾಯ, ಮತ್ತು ಹೀಗೆ ಅಭಿಪ್ರಾಯ ಪಡುವುದಕ್ಕೆ ಸ್ವಲ್ಪವೂ ಆಧಾರವಿಲ್ಲವೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಅಂಥಾ ವಿಷಯಗಳನ್ನೆಲ್ಲಾ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್ ರವರ ಮಂತ್ರಾಲೋಚನಾ ಸಭೆಯಲ್ಲಿ ಚರ್ಚೆಗೆ ತಂದು ಚೆನ್ನಾಗಿ ಪರಿಶೀಲನೆಮಾಡಿ ಅನಂತರ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್ ರವರಿಗೆ ಹುಕುಂಬಗ್ಗೆ ಒಪ್ಪಿಸಲಾಗುತ್ತದೆ. ಹಿಂದೆಯೂ ಹೀಗೆಯೇ ನಡೆಸುತ್ತಿತ್ತು. ಇನ್ನು ಮುಂದೆಯೂ ಇದೇ ಕ್ರಮವನ್ನೇ ತಪ್ಪದೆ ಅನುಸರಿಸುವುದಾಗುತ್ತದೆ. ಮೇಲ್ಕಂಡ ರೆಗ್ಯುಲೇಷನ್ನನ್ನು ಜಾರಿಯಲ್ಲಿ ತಂದುದರಿಂದ ಉಂಟಾದ ಅನುಕೂಲಪ್ರತಿಕೂಲಗಳನ್ನು ಈಗ ವಿಚಾರ ಮಾಡೋಣ. ಈ ರೆಗ್ಯುಲೇಷನ್ ಮಂಜೂರಾದರೆ ಯಾವಯಾವ ಅನರ್ಥಗಳು ಸಂಭವಿಸುತ್ತವೆಂದು ಹೇಳುತ್ತಿದ್ದರೋ ಅವು ಯಾವುವೂ ಈ ವರೆಗೂ ಉಂಟಾಗಿರುವುದಿಲ್ಲ. ವಾರಕ್ಕೆ ಎರಡಾವರ್ತಿ ಪ್ರಕಟವಾಗುತ್ತಿದ್ದ ಎರಡು ಇಂಗ್ಲೀಷ್ ಪತ್ರಿಕೆಗಳೂ, ಅವುಗಳ ಜತೆಯಲ್ಲಿಯೇ ಪ್ರಕಟವಾಗುತ್ತಿದ್ದ ಎರಡು ಕನ್ನಡ ಪತ್ರಿಕೆಗಳೂ ಸಹ ಒಂದೊಂದು ಪತ್ರಿಕೆಯೆಂದೇ ಭಾವಿಸಿ ಈ ಎರಡು ಪತ್ರಿಕೆಗಳೂ, ಮತ್ತೊಂದು ಪತ್ರಿಕೆಯೂ ಸೇರಿ ಅಂತೂ ೩ ಪತ್ರಿಕೆಗಳು ಈಗ ಪ್ರಕಟನಾಗದೆ ತಾವಾಗಿಯೇ ನಿಂತುಹೋಗಿವೆ. ಇವು ಹೋಗಲಾಗಿ, ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಕಟವಾಗುತ್ತಿದ್ದ ಮಿಕ್ಕ ಹನ್ನೆರಡು ಪತ್ರಿಕೆಗಳ ಸಂಪಾದಕರಿಂದಲೂ ಆಯಾ ಪತ್ರಿಕೆಗಳನ್ನು ಪ್ರಕಟಿಸುವುದಕ್ಕೆ ಈ ರೆಗ್ಯುಲೇಷನ್ ಮೇಲೆ ಅಪ್ಪಣೆಬಗ್ಗೆ ಅರ್ಜಿ ಬಂದು ಅವರಿಗೆ ಅವಶ್ಯಕವಾದ ಅಪ್ಪಣೆ ಕೊಟ್ಟಿರುತ್ತದೆ. ಈ ಪೈಕಿ ಕೆಲವಕ್ಕೆ ಈಗ ನಿಂತುಹೋದ ಪತ್ರಿಕೆಗಳಿಗೆ ಇದ್ದುದಕ್ಕಿಂತ ಜಾಸ್ತಿ ಚಂದಾದಾರರಾಗಿರುತ್ತಾರೆ. ಹದಿನೈದು ದಿವಸಗಳಿಗೆ ಒಂದಾವರ್ತಿ ಪ್ರಕಟವಾಗುತ್ತಿದ್ದ ಒಂದು ಕನ್ನಡ ಪತ್ರಿಕೆಗೆ ಮಾತ್ರ ಅರ್ಜಿ ಬಂದಾಗ್ಯೂ ಅಪ್ಪಣೆ ಕೊಡಲಿಲ್ಲ. ಹಾಗೆ ಅಪ್ಪಣೆ ಕೊಡದೆ ಹೋದುದಕ್ಕೆ ಕಾರಣವನ್ನು ಈಗಾಗಲೇ ಪ್ರಕಟವಾಗಿರುವ ಸರ್ಕಾರಿ ಹುಕುಮಿನಲ್ಲಿಯೇ ವಿವರಿಸಿದೆ. ಈ ರೆಗ್ಯುಲೇಷನ್ ಪ್ರಕಾರ ಸರ್ಕಾರದವರು "ಇಂಥಿಂಥಾ ಸಂದರ್ಭದಲ್ಲಿ ಇಂಥಿಂಥಾ ಕ್ರಮ ಜರುಗಿಸಬೇಕೆಂಬ ಬಗ್ಗೆ ನಿಬಂಧನೆಗಳನ್ನು ಏರ್ಪಡಿಸುವುದು ಸಾಧ್ಯವಾಗಿದ್ದ ಪಕ್ಷದಲ್ಲಿ ಅವರು

ಬಹಳ ಸಂತೋಷದಿಂದ ಅಂಥಾ ನಿಬಂಧನೆಗಳನ್ನು ವಿಸ್ತರಿಸುತ್ತಲೇ ಇದ್ದರು. ಆದರೆ ಈ ರೆಗ್ಯುಲೇಷನ್ ಮೇರೆ ಸರ್ಕಾರದವರು ನ್ಯಾಯವಾಗಿ ಕ್ರಮ ಜರುಗಿಸಬಹುದಾದ ಎಲ್ಲಾ ಸಂದರ್ಭಗಳನ್ನೂ ನಿಬಂಧನೆಗಳಲ್ಲಿ ಸೇರಿಸುವುದು ಬಹಳ ಕಷ್ಟವೆಂದು ತಮ್ಮಗಳಿಗೆಲ್ಲಾ ತಿಳಿದೇ ಇರಬಹುದು. ಪ್ರಕೃತದಲ್ಲಿ ಇಷ್ಟುಮಾತ್ರ ಹೇಳಬಹುದು; ಯಾವುದಾದರೂ ಒಂದು ಪತ್ರಿಕೆಯ ಬರವಣಿಗೆಗಳು ಸಂಸ್ಥಾನದ ಕ್ಷೇಮಕ್ಕೂ ಪ್ರಜೆಗಳ ಶೀಲಸ್ವಭಾವಾದಿಗಳಿಗೂ ಹಾನಿಕರವಾಗಿರುವುದಾಗಿ ತಿಳಿದುಬಂದ ಹೊರತು ಈ ರೆಗ್ಯುಲೇಷನ್ನಿನ ನಿಬಂಧನೆಗಳನ್ನು ಜಾರಿ ಮಾಡುವುದಿಲ್ಲ.

ಸಾಗುವಳಿ ಜಮೀನಿನ ವಿಸ್ತೀರ್ಣ.

ಸಾಗುವಳಿ ಜಮೀನಿನ ವಿಸ್ತೀರ್ಣವು ೬೭,೭೪,೭೬೪ ಎಕರೆಗಳಿದ್ದುದು ೬೮,೪೧,೯೩೪ ಎಕರೆಗಳಾಯಿತು; ಎಂದರೆ, ೬೭,೧೯೭ ಎಕರೆ ಜಾಸ್ತಿಯಾದಂತೆ ಆಯಿತು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಸೂಚಿಸಿದ ವಿಷಯಗಳೂ ದಿವಾನರವರ ಪ್ರತ್ಯುತ್ತರಗಳೂ.

ಸಂಕ್ಷೇಪ ವಿವರಣೆ.

ಮೆಂಬರುಗಳ ಅರಿಕೆ.—ನ್ಯಾಯವಿಧಾಯಕ ಸಭೆಗೆ ಪ್ರತಿನಿಧಿ ಸಭೆಯವರು ಇಬ್ಬರು ಮೆಂಬರುಗಳನ್ನು ಚುನಾಯಿಸಿ ಕಳುಹಿಸಬಹುದೆಂದು ಶ್ರೀಮನ್ಮಹಾರಾಜರವರು ಅಪ್ಪಣೆ ದಯಪಾಲಿಸಿರುತ್ತಾರೆ. ಈ ಸಂಸ್ಥಾನದಲ್ಲಿರುವ ಪ್ರತಿ ಒಂದು ಡಿಸ್ಟ್ರಿಕ್ಟಿನಿಂದಲೂ ಒಬ್ಬ ಮೆಂಬರನ್ನು ಚುನಾಯಿಸಿ ಕಳುಹಿಸುವಂತೆ ಆಗಬೇಕು, ಇದು ಸಾಧ್ಯವಿಲ್ಲದಿದ್ದರೆ ಪೂರ್ವದಲ್ಲಿದ್ದ ನಂದದುರ್ಗ, ಅಷ್ಟಗ್ರಾಮ, ನಗರ, ಈ ಮೂರು ಡಿವಿಜನ್‌ಗಳಿಂದ ಮೂವರು ಪ್ರತಿನಿಧಿಗಳನ್ನು ನ್ಯಾಯವಿಧಾಯಕ ಸಭೆಗೆ ತೆಗೆದುಕೊಳ್ಳುವಂತಾಗಬೇಕು.

ದಿವಾನರವರ ಉತ್ತರ.—ಈಗ ಕೊಟ್ಟಿರುವ ರಿಯಾಯಿತಿಯು ಹೊಸದು. ಇದರ ವಿಷಯದಲ್ಲಿ ನೀವು ಲಾಯಖ್ ತೋರಿಸಿಕೊಂಡುಬಂದರೆ ಕ್ರಮೇಣ ನಿಮ್ಮ ಕೋರಿಕೆಯನ್ನು ಶ್ರೀಮನ್ಮಹಾರಾಜರವರು ನೆರವೇರಿಸಿಕೊಟ್ಟಾರು. ಸದ್ಯದಲ್ಲಿ ಆಗಲಾರದು.

ಅರಿಕೆ.—ತ್ಯಾಗಭೋಗಿಕೆಯಲ್ಲಿ ೧೦ ರೂಪಾಯಿ ವರಮಾನವಿದ್ದರೂ ಅದು ಅನುಭಾವನಾಗಿ ಬಂದ ಪಕ್ಷಾಂತರಲೂ, ಅದನ್ನು ಕಳೆಕೊಳ್ಳಬಾರದೆಂತಲೂ, ಅದರಿಂದ ವಿಧವೆಯರಿಗೂ ತಬ್ಬಲಿಮಕ್ಕಳಿಗೂ ಜೀವನವಾಗುವದೆಂತಲೂ ಸಾವಿರಾರು ರೂಪಾಯಿ ತನಕಲಾದರೂ ಖರ್ಚುಮಾಡಿ ಸಾಧಿಸಿಕೊಳ್ಳುತ್ತಾರೆ. ಗುಮಾಸ್ತರನ್ನು ಇಟ್ಟಲ್ಲಿ ಡೆಪ್ಯುಟಿ ಕಮಿಷನರು ಒಪ್ಪಿಕೊಳ್ಳುತ್ತಾರೆ ರೆವಿನ್ಯೂ ಕಮಿಷನ್ನರವರೇ ಅಖೈರಿಂದಲೇ ವಿಧಾಯಕನಾಗಿರುವವನನ್ನು ತಪ್ಪಿಸಿ, ಕೌನ್ಸಿಲ್ಲಿಗೂ ತರುವಾಯ ಶ್ರೀಮನ್ಮಹಾರಾಜರವರಿಗೂ ಈ ನೌಕರಿಗೆ ಸಂಬಂಧಪಟ್ಟ ಮೊಕದ್ದಮೆಯನ್ನು ಅಪೀಲ್ ಮಾಡಿಕೊಳ್ಳುವಂತೆ ಅವಕಾಶ ಮಾಡಿಕೊಡಬೇಕು.

ಉತ್ತರ.—ಈ ವಿಷಯವನ್ನು ಗುರುತು ಮಾಡಿಕೊಂಡು, ಆಲೋಚನೆ ಮಾಡುತ್ತೇನೆ.

ಅರಿಕೆ.—ಗವರ್ನ್‌ಮೆಂಟಿನವರು ನಿಕಾಯೇಕಿ ಅತ್ಯಂತ ಕಠಿಣತರವಾದ ಕಾನೂನನ್ನು ಮಾಡಿ, ವರ್ತಮಾನ ಪತ್ರಿಕೆಗಳ ವಾಗ್ಬಂಧನವನ್ನು ಮಾಡಿದ್ದು ಸರಿಯಲ್ಲ. ಎಡಿಟರು ಪತ್ರಿಕೆ ನಡಿಸುವುದಕ್ಕೆ ಮೊದಲು ಸರ್ಕಾರದವರಿಗೆ ತಿಳಿಸಿ ಅವರಿಂದ ಅಪ್ಪಣೆ ಪಡೆದುಕೊಳ್ಳಬೇಕೆಂದು ವಿಧಿಸೋಣಾಗಿದೆ ಇದರಿಂದ ಪ್ರಜೆಗೆ ಅರ್ಹತಕ್ಕ ಸ್ವತಸ್ಸಿದ್ಧವಾದ ಬರವಣಿಗೆಯ ಸ್ವಾತಂತ್ರ್ಯಕ್ಕೆ ನಿರ್ಬಂಧವುಂಟಾಯಿತು ರಾಜದ್ರೋಹವುಳ್ಳ ಬರವಣಿಗೆಯನ್ನಾಗಲಿ, ಒಂದು ಪಂಗಡದವರನ್ನು ಇನ್ನೊಂದು ಪಂಗಡದವರ ಮೇಲೆ ಎತ್ತಿಕಟ್ಟುವಂಥಾ ಬರವಣಿಗೆಯನ್ನಾಗಲಿ, ಸಂಸ್ಥಾನ ನೀತಿಗೆ ಕುಂದಕಬರುವ ಬರವಣಿಗೆಯನ್ನಾಗಲಿ, ನೀತಿಗೆ ವಿರೋಧವಾದ ಮತ್ತು ದುರ್ಭಾವನೆಗಳನ್ನುಳ್ಳ ಲಜ್ಜಾಸ್ಪದವಾದ ಬರವಣಿಗೆಯನ್ನಾಗಲಿ ಬರೆದು ಪ್ರಕಟಿಸುವಂಥಾ ಎಡಿಟರನ್ನು ಈಗ ಜಾರಿಯಲ್ಲಿರುವಂಥಾ ಕಾನೂನಿನ ಪ್ರಕಾರ ಶಿಕ್ಷಿಸಿ, ಇತರರಿಗೆ ಬುದ್ಧಿಹೇಳುವ ಸಾಕಾದ ಅವಕಾಶವಿರುವಲ್ಲಿ ಸರ್ಕಾರದವರು ಆ ಮಾರ್ಗವನ್ನು ಬಿಟ್ಟು, ಅಕಸ್ಮಾತ್ತಾಗಿ ಅಂಥಾ ಎಡಿಟರನ್ನು ಸೀಮೆಯಿಂದಲೇ ಹೊರಡಿಸಿ ಬಿಡಬೇಕೆಂದು ಮಾಡಿರುವ ಈ ಕಾನೂನು ಬಹು ಭಯಂಕರವಾದದ್ದಾಗಿದೆ; ಹೇಯವಾದ ಕೃತ್ಯಗಳನ್ನು ಮಾಡಿದಂಥಾ ಅಪರಾಧಿಗೂ ಕೋರ್ಟುವಿಚಾರಣೆ, ತೀರ್ಪು, ಅಪೀಲು, ಇವೆಲ್ಲಾ ಉಂಟು ಪತ್ರಿಕೆಯನು ನಡಿಸುವವನಿಗೆ ಈ ರಿಯಾಯಿತಿ ಯಾವದೂ ಇಲ್ಲ. ಇಂಥಾ ಅಪರಾಧವೇ ಈ ಕಾನೂನಿಗೆ ಸಂಬಂಧಪಡುತ್ತೆಂದೂ ವಿಧಿಸಿಲ್ಲ. ಆದ್ದರಿಂದ ಎಡಿಟರನ್ನು ಸೀಮೆಯಿಂದ ಹೊರಡಿಸುವಂಥಾ ಶಿಕ್ಷೆಯನ್ನು ತಪ್ಪಿಸಿ, ಜುಲ್ಮಾನೆಯೋ ಸಜೆಯೋ ವಿಧಿಸುವಂತೆ ಆಗಬೇಕು

ಉತ್ತರ.—ಈ ಕಾನೂನು ನಿರೋಧಕವಾದ ಕಾನೂನಲ್ಲದೆ ಶಿಕ್ಷಾರ್ಥವಾದ ಕಾನೂನಲ್ಲ. ಜುಲ್ಮಾನೆ ಅಥವಾ ಸಜಾ ವಿಧಿಸಿದರೆ ಎಡಿಟರ ಕೆಲಸಕ್ಕೇನೆ ಕುಂದಕವಾಗುವದು. ಅಂಥಾ ಬರವಣಿಗೆಗಳನ್ನು ಬರೆದು ಪ್ರಕಟಿಸುವವನನ್ನು ಸರ್ಕಾರದವರು ಮೊದಲು ಎಚ್ಚರಿಸುವರು, ಹಾಗೂ ಅವನು ಆ ರೀತಿ ಬರೆಯುವುದನ್ನು ಬಿಡದಿದ್ದರೆ ಅವನನ್ನು ಈ ಸೀಮೆಯಿಂದ ಹೊರಗೆ ಹೋಗಬೇಕೆಂದು ಹೇಳುವರು. ಅಂಥವನನ್ನು ಬನ್ನೂರಿಗಾಗಲಿ, ಅಂಡಮಾನ್ ದ್ವೀಪಕ್ಕಾಗಲಿ ಕಳುಹಿಸುವುದು ಸಾಧ್ಯವಲ್ಲ. ಬೆಂಗಳೂರು ದಂಡಿನಲ್ಲಿ ಅವರು ಹೋಗಿರಬಹುದು. ಕೆಲವು ಕಾಲದಲ್ಲೇ ಅವನಿಗೆ ವಿವೇಕವುಂಟಾಗಿ ಕ್ಷಮಾಪಣೆಯನ್ನು ಬೇಡಿಕೊಂಡಲ್ಲಿ ವಾಪಸು ಬರುವಂತೆ ಅಪ್ಪಣೆ ದೊರೆಯಬಹುದು. ಪತ್ರಿಕೆ ನಡಿಸತಕ್ಕವನ ಹೆಸರು, ಬುದ್ಧಿ, ಸಾಮರ್ಥ್ಯಾದಿಗಳನ್ನು ತಿಳಿದುಕೊಳ್ಳಬೇಕಾದದ್ದು ಅವಶ್ಯ. ಆದ್ದರಿಂದಲೇ ಅವನು ಮೊದಲು ಸರ್ಕಾರದಿಂದ ಅನುಜ್ಞೆಯನ್ನು ಪಡೆಯಬೇಕಾಗಿದೆ. ಈ ಕಾನೂನ್ ಇಲ್ಲದಿದ್ದರೂ ಶ್ರೀಮನ್ಮಹಾರಾಜರವರಿಗೆ ಯಾವನನ್ನಾದರೂ ಈ ಸೀಮೆಯಿಂದ ಹೊರಗೆ ಹೋಗಬೇಕೆಂದು ಹೇಳುವ ಸ್ವತಂತ್ರಾಧಿಕಾರವು ಇದ್ದೇ ಇದೆ. ಈ ಕಾನೂನು ಇಲ್ಲದಿದ್ದರೂ ಅಂಥಾ ಅಧಿಕಾರವನ್ನು ಅವರು ಹಿಂದೆ ಚಲಾಯಿಸಿರುತ್ತಾರೆ ಈಗ ಈ ಅಧಿಕಾರವನ್ನು ಕಾನೂನ್ ಮೂಲಕ ಪ್ರಕಾಶಪಡಿಸಿ, ವಿಧಿಯನುಸಾರವಾಗಿ ಗವರ್ನ್‌ಮೆಂಟಿನವರು ನಡಿಸಲಿ ಎಂದು ಮಾಡಿದಾರೆ. ಕೋರ್ಟು ವಿಚಾರಣೆ, ಜಡ್ಜ್‌ಮೆಂಟು ಮುಂತಾದದ್ದು ಎಡಿಟರಿಗೆ ಇರಬಾರದು, ಕೌನ್ಸಿಲರುಗಳೂ, ದಿವಾನರೂ ಏಕೀಭವಿಸಿ ಪರ್ಯಾಲೋಚನೆ ಮಾಡಿ, ತಮ್ಮ ಅಭಿಪ್ರಾಯವನ್ನು ಶ್ರೀಮನ್ಮಹಾರಾಜರವರಿಗೆ ಅರಿಕೆ ಮಾಡಿದರೆ ಅವರು ಸಂದರ್ಭಾನುಸಾರ ಹುಕುಂ ದಯಪಾಲಿಸುವುದು ಎಡಿಟರಿಗೆ ಕ್ಷೇಮಕರವಾಗಿರುತ್ತದೆ.

ಅರಿಕೆ.—ಸಂಸ್ಥಾನದಲ್ಲಿ ವರ್ತಕರು ಕೊಂಡುಮಾರುವ ಅಳತೆ ಮತ್ತು ತೂಕಗಳನ್ನು ಏಕಪ್ರಕಾರವಾಗಿರುವಂತೆ ಕ್ರಮಪಡಿಸಿ ಕೊಡಬೇಕೆಂದು ಅನೇಕ ವರುಷಗಳಿಂದ ಪ್ರಾರ್ಥಿಸಿಕೊಳ್ಳುತ್ತಾ ಬಂದಿದೇವೆ. ವರ್ತಕರು ಬಡಬಗ್ಗರನ್ನು ಬಹುತರವಾಗಿ ಮೋಸಪಡಿಸುತ್ತಾರೆ. ಈಗಿನಂಥಾ ದುರ್ಭಿಕ್ಷಕಾಲದಲ್ಲಿ ಇದರ ಕಷ್ಟ ಅನಿಷ್ಟವೆಂದು ವಿವರಿಸಲಾಗದು.

ಉತ್ತರ.—ಇದು ಬಹು ಆವಶ್ಯಕವೆಂದು ಗವರ್ನ್‌ಮೆಂಟಿಗೆ ತಿಳಿದಿದೆ. ಬೊಂಬಾಯಿ ಮತ್ತು ಮದರಾಸ್ ಗವರ್ನ್‌ಮೆಂಟುಗಳ ಕಾನೂನನ್ನು ತರಿಸಿ ನೋಡುತ್ತಿದಾರೆ. ಸಂಸ್ಥಾನದಲ್ಲಿ ಒಂದೇ ತರದ ಅಳತೆ ತೂಕಗಳನ್ನು ಗೊತ್ತುಮಾಡಿ ಜಾಗ್ರತೆಯಲ್ಲೇ ಜಾರಿಗೆ ತರುವರು.

ಅರಿಕೆ.—ವರ್ತಕರು ಆಹಾರ ಪದಾರ್ಥಗಳನ್ನು ಶುದ್ಧವಾಗಿಟ್ಟು ಬಿಕರಿ ಮಾಡದೆ ನಾನಾ ಪ್ರಕಾರವಾಗಿ ಬೆರಕೆಮಾಡಿ ಮಾರುವರು. ಇದರಿಂದ ಪ್ರಜೆಗಳ ಆರೋಗ್ಯ ಕೆಡುವುದಕ್ಕೂ ಸಾಂಕ್ರಾಮಿಕ ರೋಗಾದಿಗಳು ಹುಟ್ಟುವುದಕ್ಕೂ ಅವಕಾಶವಾಗಿದೆ. ಹಾಗೆ ಬೆರಕೆ ಮಾಡಿದವರನ್ನು ಶಿಕ್ಷಿಸುವಂತೆ ಕಾನೂನ್ ಮಾಡಿ ಕೊಡಬೇಕು.

ಉತ್ತರ.—ಈ ವಿಷಯದಲ್ಲಿ ಸಂಸ್ಥಾನದಲ್ಲಿ ಅನ್ವಯಿಸುವಂಥಾ ಕಾನೂನ್ ಆಗಬೇಕೆಂದು ಸ್ಯಾನಿಟರಿ ಕಮಿಷನರವರು ಗವರ್ನ್‌ಮೆಂಟಿಗೆ ಸೂಚನೆ ಕೊಟ್ಟು ಕೇಳಿದಾರಾದ್ದರಿಂದ ಇಷ್ಟರಲ್ಲೇ ಒಂದು ಮಸೂದೆಯನ್ನು ತಯಾರುಮಾಡಿ ಚರ್ಚೆಗೆ ತರಲಾಗುವುದು.

ಅರಿಕೆ.—ಮೋಟಾರ್ ಗಾಡಿಗಳು ಸ್ಟೀಮಿಯಿಂದಲೂ ಅತಿ ವೇಗವಾಗಿಯೂ ಸಂಚಾರ ಮಾಡೋಣದರಿಂದ ಅನಾಹುತಗಳು ನಡಿಯಲು ಕಾರಣವಾಗಿದೆ. ಅದನ್ನು ತಡೆಯುವುದಕ್ಕೆ ಒಂದು ಕಾನೂನು ಆಗಬೇಕು.

ಉತ್ತರ.—ಆಗಲಿ. ಮಸೂದೆ ಕಾನೂನ್ ತಯಾರಾಗಿ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಇಟ್ಟಿದೆ.

ಅರಿಕೆ.—ಕಂದಾಯದ ಬಾಕಿಗೆ ಆಗುವ ರೆವಿನ್ಯೂ ಹರಾಜಿನ ಸಂಗತಿ ಅನೇಕ ವೇಳೆ ಜಮೀನ್ ಮಾಲೀಕರಿಗೆ ತಿಳಿಯುವುದಿಲ್ಲ ಪಟ್ಟೇದಾರರಿಗೆನೋಟೀಸಾಗಿ ಹರಾಜು ನಡಿಸುವರು. ಇದರಲ್ಲಿ ಮೋಸವೂ ಆಗುವುದುಂಟು ಖರೀದಿಲ್ಲ ಕೊಟ್ಟರೆ ಜಮೀನ್ ವಾಪಸು ಕೊಡಿಸುವಂತೆ ಆಗಬೇಕು.

ಉತ್ತರ.—ಆಗಲಿ. ಗುರುತು ಹಾಕಿಕೊಂಡು ಆಲೋಚನೆ ಮಾಡುತ್ತೇವೆ.

ಅರಿಕೆ.—ಸಂಸ್ಥಾನದಲ್ಲಿ ಅನೇಕ ಧರ್ಮಗಳೂ ಅನ್ನಸತ್ರಗಳೂ ವಿಚಾರಣೆ ಇಲ್ಲದೆ, ಅವುಗಳಿಗೆ ಬಿಟ್ಟಿರುವ ಸ್ವತ್ತುಗಳು ಅನ್ಯಾಕ್ರಾಂತವಾಗಿವೆ ಇದ್ದರೂ ಸರಿಯಾಗಿ ಆಯಾ ಧರ್ಮಕಾರ್ಯಗಳು ನಡಿಯುವುದಿಲ್ಲ ಇವನ್ನು ಸರ್ಕಾರದವರು ಕ್ರಮಪಡಿಸಬೇಕು.

ಉತ್ತರ.—ಒಳ್ಳೇದು. ಧರ್ಮಕಾರ್ಯಗಳು ತೃಪ್ತಿಕರವಾಗಿ ನಡಿಯುವ ವಿಷಯದಲ್ಲಿ ಗವರ್ನ್‌ಮೆಂಟಿನವರು ಪರ್ಯಾಲೋಚನೆ ಮಾಡಿ ಕಾನೂನ್ ಮಾಡುವರು

ಅರಿಕೆ.—(ಕೆಲವು ಮೆಂಬರುಗಳು) ಕೆಲವು ಕಡೆ ಅಮಲ್ದಾರ್ರಿಗೆ ಇದ್ದ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಕಿತ್ತುಹಾಕಿ ಮುನ್ಸಿಫರಿಗೆ ಕೊಟ್ಟರೋ ಇದರಿಂದ ಅಮಲ್ದಾರ್ರ ಕೆಲಸ ತೃಪ್ತಿಕರವಾಗಿ ನಡಿಯದೆ ಇರುವುದಕ್ಕೂ, ಮುನ್ಸಿಫ್ ಕೋರ್ಟುಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳು ಜಾಗ್ರತೆ ಫೈಸಲಾಗದೆ ಎರಡೂ ನಾವಕಾಶಕ್ಕೆ ಬೀಳುವುದಕ್ಕೂ ಆಕರವಾಗಿದೆ. (ಇನ್ನು ಕೆಲವರು) ಹೆಚ್ಚು ಕೆಲಸವಿರುವಂಥಾ ಮುನ್ಸಿಫರಿಗೆ ಅಧಿಕಾರದ ಸರಹದ್ದನ್ನು ಕಡಮೆ ಮಾಡಬಹುದಲ್ಲದೆ, ಅಮಲ್ದಾರ್ರಿಗೆ ಮತ್ತೆ ಕ್ರಿಮಿನಲ್ ಅಧಿಕಾರ ಕೊಡಕೂಡದು. ಸಭೆಯಲ್ಲಿ ಬಹು ಕಾಲದಿಂದ ನಾವು ಪ್ರಾರ್ಥಿಸಿಕೊಂಡದ್ದನ್ನು ನೋಡಿ ಸರ್ಕಾರದವರು ಪರೀಕ್ಷಾರ್ಥವಾಗಿ ಕೆಲವು ಕಡೆ ಇದನ್ನು ರೂಢಿಸಿದಾರೆ.

ಉತ್ತರ.—ಮೊಕದ್ದಮೆಗಳು ಇತ್ಯರ್ಥವಾಗುವುದಕ್ಕೆ ನಾವಕಾಶವಾಗುವ ವಿಚಾರವನ್ನು ಸರಿಪಡಿಸುವಂತೆ ಚೀಫ್ ಕೋರ್ಟಿಗೆ ತಿಳಿಸುವೆವು.

ಅರಿಕೆ.—ಸಿವಿಲ್ ಕೋರ್ಟುಗಳಲ್ಲಿ ಕೈಫಿಯತ್ತು ಅಥವಾ ಜಡ್ಜ್‌ಮೆಂಟುಗಳ ಕಾಪಿ (ನಕಲು) ಬೇಕಾದರೆ ಹಣ ಕಟ್ಟಬೇಕು ಮದರಾಸ್ ಆಫೀಸುಗಳಲ್ಲಿ ಕಾಪಿ ಫೀಜಿಗೆ ತಕ್ಕ ಬೆಲೆಯ ಛಾಪಾ ಕಾಗದವನ್ನೇ ಉಪಯೋಗಿಸಿ, ಅದರಲ್ಲಿ ಬರೆದುಕೊಡುತ್ತಾರೆ ಇದರಿಂದ ಕಕ್ಷಿಗಾರರಿಗೆ ನಷ್ಟವಿಲ್ಲ. ಈ ಪದ್ಧತಿಯನ್ನು ಈ ಸಂಸ್ಥಾನದಲ್ಲೂ ರೂಢಿಸಬೇಕು

ಉತ್ತರ.—ಈ ಸಂಗತಿಯನ್ನು ಚೀಫ್ ಜಡ್ಜಿಯವರಿಗೆ ತಿಳಿಸುತ್ತೇನೆ. ಅವರು ಪರ್ಯಾಲೋಚನೆಯಿಂದ ಸೂಕ್ತವಾದದ್ದನ್ನು ಮಾಡಿಯಾರು.

ಅರಿಕೆ.—ಕೋರ್ಟುಗಳಿಗೆ ಸಾಕ್ಷಿ ಭತ್ಯವನ್ನು ಕಕ್ಷಿಗಾರರು ಕಟ್ಟಿದ್ದರ ಪೈಕಿ ಎಷ್ಟು ಹಣ ಬಾಕಿ ಉಳಿಯುತ್ತದೋ ಅವರಿಗೆ ತಿಳಿಯದೆ ನಷ್ಟಪಡುವರು.

ಉತ್ತರ.—ಚೀಫ್ ಜಡ್ಜಿಯವರು ಶಿವಮೊಗ್ಗೆ ಕಡೆ ಸರ್ಕೀಟು ಹೋಗಿದ್ದ ವೇಳೆ ಈ ವಿಚಾರ ಅವರಿಗೆ ತಿಳಿದುಬಂದಿದೆ. ಅವರು ಜಾಗ್ರತೆಯಲ್ಲಿ ಕ್ರಮಪಡಿಸುವರೆಂದು ನಿರೀಕ್ಷಿಸುತ್ತೇನೆ.

ಅರಿಕೆ.—ವಾರಸ್ ಸರ್ಟಿಫಿಕೇಟುಗಳನ್ನು ಪಡೆಯುವುದಕ್ಕೆ ಮೊದಲು ಆಂವತೆ ೧೯೦೦ನೇ ಇಸವಿಯ ವರೆಗೆ ೧,೦೦೦ ರೂಪಾಯಿಯೊಳಗಿರುವ ಸಾಲಗಳನ್ನು ವಸೂಲ್ಮಾಡಿಕೊಳ್ಳುವುದಕ್ಕೆ ಸರ್ಕಾರದವರು ಫೀಜನ್ನು ಮಾಫ್‌ಮಾಡಿದ್ದರು ಈಗ ಕೆಲವು ನೂರು ರೂಪಾಯಿ ಸಾಲ ವಸೂಲ್ಮಾಡುವುದಕ್ಕೂ ವಾರಸ್ ಸರ್ಟಿಫಿಕೇಟು ಪಡೆಯಬೇಕೆಂತಲೂ ಶೇಕಡಾ ೩ ರೂಪಾಯಿನಂತೆ ಕೋರ್ಟಿಗೆ ಫೀಜು ಕೊಡಬೇಕೆಂತಲೂ ನಿಧಾಯಕವಾಗಿ ವಸೂಲಾಗುತ್ತದೆ ಇದರಿಂದ ಬಡಬಗ್ಗರಿಗೆ ತುಂಬಾ ನಷ್ಟವಾಗುವುದು ಮೊದಲಿದ್ದಂತೆ ೧,೦೦೦ ರೂಪಾಯಿ ವರೆಗೆ, ಇಲ್ಲವಾದರೆ ೫೦೦ ರೂಪಾಯಿ ವರೆಗೆ ವಿನಾಯಿತಿ ಮಾಡಿಕೊಡಬೇಕು

ಉತ್ತರ.—ಆಗಲಿ. ಈ ವಿಚಾರದಲ್ಲಿ ಗವರ್ನ್‌ಮೆಂಟಿನವರು ಪರ್ಯಾಲೋಚನೆಯಿಂದ ಏನಾದರೂ ರಿಯಾಯಿತಿ ತೋರಿಸಬಹುದು.

ಅರಿಕೆ.—ಸೆಂಟ್ರಲ್ ನಾಜರ್ ವಿಭಾಗದಿಂದ ಕಕ್ಷಿಗಾರರಿಗೆ ಹಣ ನಷ್ಟ; ತೃಪ್ತಿಕರವಾಗಿ ಜಾರಿ ಕೆಲಸ ನಡಿಯುವುದಿಲ್ಲ ಅದನ್ನು ತನಿಖೆಯಿಂದ ಕ್ರಮಪಡಿಸುವುದಕ್ಕೆ ಆಯಾ ಕೋರ್ಟಿನವರಿಗೆ ಅವಕಾಶವೂ ಕಡಮೆ. ಇದನ್ನು ವಜಾ ಮಾಡಿ, ಪೂರ್ವದಲ್ಲಿದ್ದಂತೆ ಆಯಾ ಕೋರ್ಟುಗಳಿಗೇ ಬೇರೆಬೇರೆ ಏರ್ಪಾಡು ಮಾಡಿ ಕೊಡಬೇಕು

ಉತ್ತರ.—ಈಗಿನ ಏರ್ಪಾಡು ೧೯೦೯ನೇ ಫೆಬ್ರವರಿ ತನಕ ನಡಿಯುವಂತೆ ಮೊದಲೇ ಸರ್ಕಾರದಿಂದ ಸ್ಯಾಂಕ್ಷನ್ ಮಾಡಲಾಗಿದೆ. ಅದರ ವಿಷಯದಲ್ಲಿ ಚೀಫ್ ಜಡ್ಜಿಯವರು ತನಿಖೆಮಾಡುತ್ತಿದಾರೆ. ಆ ವಾಯಿದೆ ಕಳೆದ ನಂತರ ಅವರು ಇತ್ಯರ್ಥಮಾಡುವರು.

ಅರಿಕೆ.—ಸಿವಿಲ್ ಕೋರ್ಟುಗಳಲ್ಲಿ ಆರ್ಗ್ಯುಮೆಂಟ್ ಆಗಿ ತಿಂಗಳು ಕಳೆದುಹೋದರೂ ಜಡ್ಜ್‌ಮೆಂಟು ಹೇಳುವುದಿಲ್ಲ. ಇದರಿಂದ ಆರ್ಗ್ಯುಮೆಂಟಿನ ಪ್ರಯೋಜನವೇನೂ ಕಕ್ಷಿಗಾರರಿಗೆ ದೊರಕದು. ಕಷ್ಟನಷ್ಟಗಳಿಗೆ ಆಕರವಾಗಿದೆ ಜಡ್ಜ್‌ಮೆಂಟನ್ನು ಜಾಗ್ರತೆಯಿಂದ ಹೇಳುವಂತೆ ಏರ್ಪಾಡು ಮಾಡಿಕೊಡಬೇಕು.

ಉತ್ತರ.—ಈ ವಿಷಯವು ಚೀಫ್ ಜಡ್ಜಿಯವರ ಸಮಾಲೋಚನೆಗೆ ಬಂದು, ಆರ್ಗ್ಯುಮೆಂಟಾದ್ಯಹತ್ತು ದಿನಗಳೊಳಗಾಗಿ ಜಡ್ಜ್‌ಮೆಂಟು ಹೇಳಬೇಕೆಂತಲೂ, ಸಾವಕಾಶವಾದರೆ ಅದಕ್ಕೆ ತಕ್ಕ ಕಾರಣಗಳನ್ನು ತೋರಿಸಿ ರಿಪೋರ್ಟು ಮಾಡಬೇಕೆಂತಲೂ ಎಲ್ಲಾ ಜಡ್ಜಿಗಳಿಗೂ ಸರ್ಕ್ಯುಲರ್ ಕೊಟ್ಟಿರುತ್ತಾರೆಂದು ತಿಳಿಸಿರುವರು.

ಅರಿಕೆ.—ಡಿಕ್ರಿದಾರರಿಗೆ ಸಿವಿಲ್ ಕೋರ್ಟಿನವರು ಸ್ವತ್ತು ಸ್ವಾಧೀನ ಮಾಡಿದರೂ ಅನೇಕವೇಳೆ ಅದು ಸಿದ್ಧವಾಗುವದಿಲ್ಲವಾದ್ದರಿಂದ ರೆವಿನ್ಯೂ ಇಲಾಖೆಯ ಮೂಲಕ ಸ್ವತ್ತು ಸ್ವಾಧೀನ ಮಾಡಿಸಿಕೊಡುವಂತೆ ಅಪ್ಪಣೆ ಆಗಬೇಕು.

ಉತ್ತರ.—ಇದರಿಂದ ಸಹಾಯವಾಗುವುದಕ್ಕೆ ಪ್ರತಿಯಾಗಿ ಇನ್ನೂ ಕೆಡುಕು ಹೆಚ್ಚುವುದೆಂದು ತಿಳಿದು ಬರುತ್ತದೆ. ಆದ್ದರಿಂದ ಇದು ಸಾಧ್ಯವಿಲ್ಲ.

ಅರಿಕೆ.—ಪೋಲೀಸ್ ಸ್ಟೇಷನ್ನಲ್ಲೇ ಅಂದರೆ ಪತ್ತೆತರಮೂದು ನಡಿಸುವ ಪೋಲೀಸಿನವರ ವಶದಲ್ಲೇ ಖೈದಿಗಳನ್ನು ಇರುವ ಏರ್ಪಾಡು ತಪ್ಪಿಸಿ ಕೊಡಬೇಕು. ಇದರಿಂದ ನಾನಾ ಅಕೃತ್ಯಗಳು ನಡಿಯಲು ಅವಕಾಶವಾಗಿದೆ. ಆ ಖೈದಿಗಳಿಗೆ ನ್ಯಾಯ ದೊರಕುವದೂ ಕಷ್ಟ ಅಂಥಾ ಖೈದಿಗಳಿಗೆ ಪ್ರತ್ಯೇಕವಾದ ಸ್ಥಳದಲ್ಲಿ ಲಾಕಪ್ ಕಟ್ಟಿಸಿಕೊಟ್ಟು, ಖೈದಿಗಳ ಮೇಲೆ ಪಹರೆ ಇರುವುದಕ್ಕೆ ಬೇರೆ ಜನರನ್ನು ನೇಮಿಸುವಂತೆ ಮಾಡಿಕೊಡಬೇಕು.—ಖೈದಿಗಳಾದ ಹೆಂಗಸರನ್ನು ರಾತ್ರಿ ಹೊತ್ತು ಒಬ್ಬ ಪೋಲೀಸಿನವನ ಪಹರೆಯಲ್ಲಿ ಇರುವುದಾಗಲಿ, ಅವರನ್ನು ರಾತ್ರಿಯಲ್ಲಿ ಮನೆಯಿಂದ ಮನೆಗೆ ಕರೆದುಕೊಂಡು ಹೋಗುವುದಾಗಲಿ ತರವಲ್ಲ. ರಾತ್ರಿ ಹೊತ್ತು ಲಾಕಪ್ಪುಗಳಿಗೆ ಬೀಗಹಾಕುವ ತನಕ ಬೀಗ ಮೊಹರು ಹಾಕಿ, ಬೀಗದ ಕೈಯನ್ನು ಶಿರಸ್ತೇದಾರರ ಅಥವ ಸಬ್ ರಿಜಿಸ್ಟ್ರಾರ್ರ ವಶದಲ್ಲಿ ಇಟ್ಟರೆ ಕ್ಷೇಮ.

ಉತ್ತರ.—ಇವೆರಡು ವಿಷಯಗಳಿಗೂ ಸರಿಯಾದ ಏರ್ಪಾಡು ಮಾಡಬೇಕಾದರೆ ಪ್ರತ್ಯೇಕ ಪ್ರತ್ಯೇಕವಾದ ಲಾಕಪ್ಪುಗಳನ್ನೇ ಕಟ್ಟಿಸಬೇಕು. ಇದಕ್ಕೆ ಹಣ ಒದಗಬೇಕು. ಅದು ಒದಗಿದ ಹಾಗೆ ಮಾಡುತ್ತೇವೆ.

ಅರಿಕೆ.—ಪತ್ರಗಳ ನಕಲುಗಳನ್ನು ಸ್ವಂತ ಉಪಯೋಗಕ್ಕೋಸ್ಕರ ಖಾಲಿ ಕಾಗದದಲ್ಲಿ ಸ್ಟಾಂಪ್ ಮೊಹರಿಲ್ಲದೆ ಕೊಡಬೇಕೆಂದು ಅಪೇಕ್ಷಿಸಿದರೆ, ಸಬ್ ರಿಜಿಸ್ಟ್ರಾರ್ರು ಕೊಡುವುದಿಲ್ಲ. ಅದನ್ನು ಕೊಡಿಸುವಂತೆ ಏರ್ಪಾಡಾಗಬೇಕು.—ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಿಂದಿನ ದಾಖಲೆ ನೋಡುವುದಕ್ಕೆ ಕಕ್ಷಿಗಾರರು ಕೊಡಬೇಕಾಗಿರುವ ಫೀಜು ಬಹಳ ದುಬಾರಿಯಾಗಿದೆ. ಪೂರ್ವದಲ್ಲಿದ್ದಂತೆಯೇ ಚಾಲ್ತಿಯಲ್ಲಿ ಇಡಬೇಕು.

ಉತ್ತರ.—ಈ ಎರಡು ವಿಷಯಗಳನ್ನೂ ಗವರ್ನ್‌ಮೆಂಟಿನವರು ಪರ್ಯಾಲೋಚಿಸಿ, ಬೇಗನೆ ಹುಕುಂ ಕೊಡುವರು

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಪ್ರಿನ್ಸಿಪಲ್ ಮುನ್ಸಿಫ್ ಮ॥ ಎಚ್. ಟಿ. ಗೋಪಾಲೈಯಂಗಾರ್ರಿಗೆ ಆರ್ಡರ್ ತಲುಪಿದ ಮೇಲೆ ಕೊಟ್ಟಿರುವ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಎಂಟು ದಿನಗಳಿಗೆ ಜಾಸ್ತಿ ಮಾಡಿದೆ.

ಚೀಫ್ ಕೋರ್ಟ್ ರೆಜಿಸ್ಟ್ರಾರ್ ಮ॥ ವಿ. ಎ. ರಾಜರತ್ನಮೊದಲಿಯಾರ್ರಿಗೆ ಅಕ್ಟೋಬರ್ ತಾ ೧೨ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚೀಫ್ ಕೋರ್ಟ್ ಡಿಪ್ಯುಟಿ ರೆಜಿಸ್ಟ್ರಾರ್ ಮ॥ ಬಿ. ಬಸವಾರಾಧ್ಯರವರು ತಮ್ಮ ಕೆಲಸಗಳೊಂದಿಗೆ ರೆಜಿಸ್ಟ್ರಾರ್ ಆಫೀಸಿನ ಚಾಲ್ತಿ ಕೆಲಸಗಳ ಭಾರವನ್ನೂ ವಹಿಸತಕ್ಕದ್ದು.

ಕೋಲಾರ್ ಡಿಸ್ಟ್ರಿಕ್ಟ್ ಪೋಲೀಸ್ ಅ॥ ಸೂಪರಿಂಟೆಂಡೆಂಟ್ ಮ॥ ಎಂ. ಪಿ. ವಿಶ್ವನಾಥರಾಯರಿಗೆ ದಸರಾ ರಜಾದೊಂದಿಗೆ ಐದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕೋಲಾರ್ ಡಿಸ್ಟ್ರಿಕ್ಟ್ ಅ. ಕಮಿಷನರ್ ಮ. ಎ. ವೇದಾಂತದೇಶಿಗಾಯ್ಯಂಗಾರ್ರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಆ ಡಿಸ್ಟ್ರಿಕ್ಟಿನ ಪೋಲೀಸ್ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರಾಗಿ ಕೆಲಸ ನೋಡತಕ್ಕದ್ದು.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಪ್ರೊಬೇಷನರಿ ಅ. ಕಮಿಷನರ್ ಮ. ಎಸ್. ರಾಮಯ್ಯನವರು ಕೋಲಾರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸತಕ್ಕದ್ದು.

ಚೀಫ್ ಕೋರ್ಟ್ ಜಡ್ಜ್ ಮ॥ ಜಸ್ಟಿಸ್ ಎಚ್. ವಿ. ನಂಜುಂಡಯ್ಯನವರಿಗೆ ಅಕ್ಟೋಬರ್ ತಾ ೧೨ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶ್ರೀಮನ್ಮಹಾರಾಜರವರು ಮ. ಎಸ್. ಸೇಟ್ಲೂರ್ ಯವರನ್ನು ಚೀಫ್ ಕೋರ್ಟ್ ಜಡ್ಜರನ್ನಾಗಿ ನೇಮಕ ಮಾಡಿರುತ್ತಾರೆ.

ಮ. ಜಸ್ಟಿಸ್ ನಂಜುಂಡಯ್ಯನವರು ರಜಾ ಉಪಯೋಗಿಸಿಕೊಳ್ಳುವ ತಾರೀಖಿನಿಂದ ಚೀಫ್ ಕೋರ್ಟಿನ ನಾಲ್ಕನೇ ಜಡ್ಜಿಯ ಕೆಲಸವನ್ನು ವಜಾ ಮಾಡಿರುತ್ತೆ

ಎಕ್ಸೈಸ್ ಕಮಿಷನರಾಗಿ ಕೆಲಸ ನೋಡುತ್ತಿರುವ ಶಿವಮೊಗ್ಗಾ ಡೆಪ್ಯುಟಿ ಕಮಿಷನರ್ ಮ. ಎಂ. ನಾರಾಯಣರಾಯರಿಗೆ, ಎಕ್ಸೈಸ್ ಕಮಿಷನರ್ ಮ. ಎಚ್. ಎಚ್. ಸ್ಟ್ರೋಕ್ಸ್ ಯವರಿಗೆ ಛಾರ್ಜು ವಹಿಸಿದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಆನೇಕಲ್ ತಾಲ್ಲೂಕು ಅಮಲ್ದಾರ್ ಮ. ಸಿ. ಎಸ್. ಕುಪ್ಪುಸ್ವಾಮಿ ಅಯ್ಯಂಗಾರ್ರಿಗೆ ದಸರಾ ರಜಾದ ಜೊತೆಗೆ ಒಂದೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ ಅ॥ ಸೂಪರಿಂಟೆಂಡೆಂಟ್ ಮ. ಎಚ್. ವೆಂಕಟನರಸೈಯ್ಯನವರು ಆನೇಕಲ್ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಹೊಳೆನರಸೀಪುರಕ್ಕೆ ವರ್ಗವಾಗಿರುವ ಆಕ್ಟಿಂಗ್ ಅಮಲ್ದಾರ್ ಮ॥ ಸಿ. ನಾರಾಯಣರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳಿಗೆ ಜಾಸ್ತಿ ಮಾಡಿದೆ.

ಮೈಸೂರ್ ರೆವಿನ್ಯೂ ಸರ್ವೆ ಸಬ್ ಅ॥ ಸೂಪರಿಂಟೆಂಡೆಂಟ್ ಮ॥ ಡಿ. ಶ್ರೀನಿವಾಸರಾಯರಿಗೆ ದಸರಾ ರಜಾದ ಜೊತೆಗೆ ಒಂದೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ವರೆಗೂ ಅ. ಕಮೀಷನರ್ ಮ ಡಿ. ಶ. ರಾಮಸ್ವಾಮಿಯವರು ತಮ್ಮ ಕೆಲಸದೊಡನೆ ಅವರ ಕೆಲಸದ ಛಾರ್ಜನ್ನೂ ವಹಿಸತಕ್ಕದ್ದು.

ಫಾರೆಸ್ಟ್ ಸರ್ವೆ ಸೂಪರಿಂಟೆಂಡೆಂಟ್ ಮ ಟಿ. ಶಿ ಎಂ. ಕ್ಲಾಡಿಯಸ್ ರವರಿಗೆ ಅಕ್ಟೋಬರ್ ತಾ ೪ ರಿಂದ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತುಂಕೂರು ಡಿಸ್ಟ್ರಿಕ್ಟ್ ಮಿಜಿಂಸರು ಛಾರ್ಜನ್ನು ವಹಿಸಿರುವ ಅ| ಕಮೀಷನರ್ ಮೆ|| ಎಂ. ಶ್ರೀನಿವಾಸ ಮೂರ್ತಿಯವರಿಗೆ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿದೆ.

ಸೀನಿಯರ್ ಆಸ್ಪತ್ರೆ ಅಸಿಸ್ಟೆಂಟರಾದ ಧರ್ಮರಥಿ ಬಸಪ್ಪನವರನ್ನೂ, ವಿ. ಎಸ್. ರಾಜಗೋಪಾಲ ಮೊದಲಿಯಾರ್ರನ್ನೂ ೧೯೦೭ನೇ ಡಿಸೆಂಬರ್ ತಾ. ೧೮ ರಿಂದ ಆಯಾಯಿತು ಆಸರಿ ಸಬ್ ಅ, ಸರ್ಜನ್ ೨ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮುಂದೆ ಹೇಳುವ ಪುರ್ಜಿ ನಿಶ್ಚಿತ ವರ್ಗಾವರ್ಗಿ ಹುಕುಂ ಮಾಡಿದೆ :—ಮೆ|| ಎ. ಎಲ್. ಶ್ರೀಕಂಠೇಶ ಗೌಡರು—ಬೆಂಗಳೂರಿಗೆ, ಮೆ| ಡಿ. ಕೆ. ರಾಮರಾಯರು—ನಂಜನಗೂಡಿಗೆ, ಮೆ| ಎಸ್. ಕೃಷ್ಣರಾಯರು—ಶ್ರೀರಂಗಪಟ್ಟಣಕ್ಕೆ, ಮೆ| ಜಿ. ಸತ್ಯಾಜಿರಾಯರು—ತುಂಕೂರಿಗೆ, ಮೆ| ಟಿ. ಕೃಷ್ಣ ಐಯಂಗಾರ್ರು—ಚಿಕ್ಕಮಗಳೂರಿಗೆ, ಮೆ|| ಪಿ. ಮಹದೇವಪ್ಪನವರು—ಸಾಗರಕ್ಕೆ, ಮೆ| ಎಸ್. ವೆಂಕಟಕೃಷ್ಣಯ್ಯನವರು—ಚಿತ್ರದುರ್ಗಕ್ಕೆ.

ಮುಂದೆ ಹೇಳುವ ಸಬ್ ರೆಜಿಸ್ಟ್ರಾರುಗಳ ವರ್ಗಾವರ್ಗಿಯನ್ನು ರದ್ದು ಮಾಡಿದೆ.—ಎಸ್. ಎ. ಸುಬ್ರಹ್ಮಣ್ಯ ಐಯರವರು. ಎ. ಶ್ರೀನಿವಾಸರಾಯರು. ಪಿ. ಎ. ರಂಗೈಯನಾಯ್ಡು ಅವರು, ಎಂ. ಶ್ರೀನಿವಾಸಮೂರ್ತಿಯವರು.

ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಮ ಪಿ ಶ್ರೀನಿವಾಸರಾಯರಿಗೆ ಅಪೀಲ್ ಮೊಕದ್ದಮೆಗಳನ್ನು ನಡಿಸಲು ಅಧಿಕಾರ ಕೊಡಲ್ಪಟ್ಟಿದೆ.

ಶ್ರೀಮನ್ಮಹಾರಾಜರವರು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನ ಕಮಾಂಡ್ ರ್‍ಯಾಂಕಿನಲ್ಲಿ ಮುಂದೆ ಹೇಳುವ ಬಡ್ತಿಯನ್ನು ಸಪ್ಟಂಬರ್ ತಾ. ೨೧ರ ಲಾಗಾಯಿತು ಸ್ಯಾಂಕ್ಷನ್ ಮಾಡಿರುತ್ತಾರೆ.—ವೆಂಕಟರಾಯರು, ಜೆಮೆದಾರ್ ಯವರಿಗೂ (ಮಾಜಿ) ಜಮಾದಾರಿ ದರ್ಜೆಗೆ

ಮೆ| ಆರ್ ತಿರುಮಲರಾಯರನ್ನೂ. ಷೇಕ್ ಅಬ್ದುಲಾ ಯವರನ್ನೂ ಸಪ್ಟಂಬರ್ ತಾ. ೧೫ ರಿಂದ ೧ನೇ ಗ್ರೇಡ್ ಆಸ್ಪತ್ರೆ ಅಸಿಸ್ಟೆಂಟರ ದರ್ಜೆಗೆ ಬಡ್ತಿ ಮಾಡಿದೆ.

ತಾಲ್ಲೋಕು ವರ್ತಮಾನಗಳು.

ತಿಪ್ಟೂರು.—ಇಲ್ಲಿ ಮಳೆ ಇಲ್ಲದೆ ಪಶುಗಳಿಗೂ ಮನುಷ್ಯರಿಗೂ ನೀರಿನ ತೊಂದರೆಯು ಇಷ್ಟೆಂದು ಹೇಳಲು ಅಸಾಧ್ಯವಾಗಿದೆ. ಕೆರೆಯಲ್ಲೆಲ್ಲಾ ಗಿಡಗಳು, ಹೂಳು ಇವುಗಳಿಂದ ತುಂಬಿರುತ್ತದೆ. ಸಂತೆಯಲ್ಲಿ ರಾಗಿಯ ಗಲಭೆ ವಿಶೇಷವಾಗಿದೆ. ಖಾಥಾ ಕ್ಷಾಮಗಾಲದಲ್ಲಿ ಸಾಹುಕಾರರುಗಳು ಪಲ್ಲಾ ೧ಕ್ಕೆ ೧ ರೂ. ನಂತೆ ನಫೆ ತೆಗೆದುಕೊಂಡು ಬಿಕರಿ ಮಾಡುತ್ತಾರೆ. ಸಾಹುಕಾರ್ ಮೆ|| ಮುಷ್ಟೂರು ದಾಮ್ಯೆಯಶೆಟ್ಟರು ಸಾಹುಕಾರ್ ಮ ನಂಜಪ್ಪನವರ ಹೇಳಿಕೆ ಪ್ರಕಾರ ಈಗಿನ ಧಾರಣೆಗೆ ನೂರು ಮೂಟೆ ರಾಗಿಯನ್ನು ಮಿದು ನಿಂತು ರೂ ೧ ಕ್ಕೆ ೨೨ ಸೇರಿನಂತೆ ಬಡಬಗ್ಗರಿಗೆ ಅಳೆದರು. ಇದೇ ರೀತಿಯಾಗಿ ಸಾಹುಕಾರ್ ಮೆ| ಛಟ್ಟರಾಮಶೆಟ್ಟರು ಕನಿಕರಪಟ್ಟು ವಿಯಾಯಿತಿ ದರದಿಂದ ಮಾರಿಸುವ ರೆಂದು ನಂಬಿರುತ್ತೇನೆ.

ದೊಡ್ಡಬಳ್ಳಾಪುರ.—ಇಲ್ಲಿ ಮಳೆ ಬಂದು ೧೦—೧೨ ದಿನಗಳಾದವು. ಈಗ ಮಳೆ ಬಾರದೆ ಬಿಸಲು ಮಾತ್ರ ಬಹು ಜೋರಾಗಿದೆ. ಹೊಲಗಳು ಒಣಗುತ್ತಾ ಇವೆ. ಒಳ್ಳೇ ಸಮಯದಲ್ಲಿ ಮಳೆ ನಿಂತು ಇದೆ. ಕೆರೆಗಳಲ್ಲಿ ನೀರು ಇಲ್ಲ. ಮತ್ತು ಅನೇಕ ಭಾವಿಗಳಲ್ಲಿ ನೀರು ಇಲ್ಲ. ಅರಳಿಮಲ್ಲಿಗೆ ಬಾಗಲಲ್ಲಿರುವ ಶೀನೀರು ಭಾವಿಗಳಲ್ಲಿ ನೀರು ಇಲ್ಲದೆ ಜನರು ಬಹಳವಾಗಿ ಕಷ್ಟಪಡುತ್ತಾರೆ. ಈ ಭಾವಿಗಳನ್ನು ಇನ್ನೂ ಸ್ವಲ್ಪ ತೋಡಿಸಿದರೆ ಜಲವು ಬರಬಹುದು.—ಈ ಬಳ್ಳಾಪುರಕ್ಕೆ ನೀರಿನ ನಲ್ಲಿ ಇಡಿಸುವ ವಿಚಾರವನ್ನು ಸರ್ಕಾರದವರು ಶೀಘ್ರದಲ್ಲಿ ಗಮನಕ್ಕೆ ತೆಗೆದುಕೊಂಡರೆ ಜನರಿಗೆ ತುಂಬಾ ಸಹಾಯವಾದೀತು. ಈ ಸಹಾಯವನ್ನು ಇಲ್ಲಿನ ಜನರು ಎಂದಿಗೂ ಮರೆಯಲಾರರು.—ಇಲ್ಲಿನ ಚಿಕ್ಕಪೇಟೆಯಲ್ಲಿ ೧೦—೧೨ ದಿನಗಳಿಂದಲೂ ಇಲಿಗಳು ಸಾಯುತ್ತಾ ಇದ್ದು, ೯—೧೦ನೇ ತಾ. ಗಳಲ್ಲಿ ಎರಡು ಕೇಸುಗಳಾದವು. ಇನ್ನೂ ಒಬ್ಬಿಬ್ಬರು ಕಾಯಿಲೆ ಬಿದ್ದಿದಾರೆಂದು ಹೇಳುತ್ತಾರೆ. ಈ ಕಷ್ಟಕಾಲದಲ್ಲಿ ಈ ವಿಷಯವು ಜನರಿಗೆ ತುಂಬಾ ಗಾಬರಿಯನ್ನುಂಟುಮಾಡಿದೆ.

ಚನ್ನಪಟ್ಟಣ.—ಈ ಪ್ರಾಂತ್ಯ ಎರಡು ತಿಂಗಳಿಂದ ಮಳೆಯಿಲ್ಲ. ಒಂದೆರಡಾವರಿ ಉದುರಿದ ತುಂತುರಿನಂಥ ಮಳೆಯಿಂದ ಕೆಲವು ಪೈರುಗಳು ಈಗಿನ ವರೆಗೂ ಬದುಕಿಕೊಂಡವು. ಅನೇಕ ಕಡೆಯ ಪೈರುಗಳು ಒಣಗಿಹೋದುವು. ಅನೇಕ ಕಡೆ ಪೈರುಗಳು ಸೊಕ್ಕಿ ಸೊರಗುತ್ತಿರುವವು. ಮಳೆಯ ನಿರೀಕ್ಷೆಯೇ ಇಲ್ಲ. ಬಿಸಲೂ ಶಖೆಯೂ ಜಾಸ್ತಿಯಾಗಿದೆ.—ಎರಡೂವರೆ ವರುಷಗಳಿಂದಲೂ ಇಲ್ಲಿ ಆಸ್ಪತ್ರೆ ಅಸಿಸ್ಟೆಂಟರಾಗಿದ್ದು ಅನೇಕ ರೋಗಗಳನ್ನು ಪರಾಂಬರಿಸಿ ಜನರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದ ಮೆ| ಮುತ್ತುಸಾಮಿ ಪಿಳ್ಳೆಯವರಿಗೆ ಮೈಸೂರು ಜನರಲ್ ಆಸ್ಪತ್ರೆಗೆ ವರ್ಗವಾಗಿದೆ. ಮುಂದೆ ಶಿವಮೊಗ್ಗ ಡಿಸ್ಟ್ರಿಕ್ಟು ಶಿಕಾರಿಪುರದಿಂದ ಮೆ|| ಅರಿವಾನಂದ ಪಿಳ್ಳೆಯವರು ಈ ಸ್ಥಳದ ವೈದ್ಯಶಾಲಾಧಿಕಾರಿಗಳಾಗಿ ಬರುವರೆಂದು ತಿಳಿದುಬರುತ್ತೆ. ಇವರು ಕೇವಲ ಸಾಧುಗಳೂ ಸಂತೋಷಿಗಳೂ ಆಗಿರೋಣದರಿಂದ ಈ ಸ್ಥಳದ ಬಹು ಜನರಿಗೆ ಪ್ರಯೋಜಕರಾಗುವರೆಂದ್ರು ನಂಬುತ್ತೇನೆ.—ದಿನಸಿ ಧಾರಣೆಗಳ ವಿಷಯ ಕೇಳತೀರದು. ರಾಗಿ ರೂಪಾಯಿಗೆ ೧೦ ಸೇರೂ, ಅಕ್ಕಿ ೪||-೫ ಸೇರೂ ಮಾರಾಟವಾಗುತ್ತದೆ. ಬಡವರ ಮತ್ತು ಅಲ್ಪ ಸಂಬಳದವರ ಪಾಡೇನಾಗಿರುವದೋ ವಿವರಿಸಲಾಗದು.

ಹೊಳೆನರಸೀಪುರ.—ಇಲ್ಲಿ ಹವ ಚನ್ನಾಗಿದೆ. ಶುಕ್ರವಾರ, ಶನಿವಾರ ಸಮೃದ್ಧಿಯಾಗಿ ಮಳೆ ಬಂದು, ಕೆರೆಕಟ್ಟೆಗಳಿಗೆ ಮುಕ್ಕಾಲುವಾಲು ನೀರು ಬಂದಿರುತ್ತೆ. ಇದರಿಂದ ಕೃಷೀಕರಿಗೂ ಪೈರುಪಚ್ಚೆಗಳಿಗೂ ಬಹಳ ಸಂತೋಷವನ್ನುಂಟುಮಾಡಿತು. ಆದರೆ ದಿನಸಿ ಧಾರಣೆಗಳು ಇಳಿದಿರುವದಿಲ್ಲ. ಅಕ್ಕಿ ರೂಪಾಯಿಗೆ ೬-೭ ಸೇರೂ, ಜೋಳ ೧೧ ಸೇರೂ, ರಾಗಿ ೧೬ ಸೇರೂ ಇರುತ್ತೆ. ಬಡವರು ಜೀವನ ಮಾಡುವದು ಬಹಳ ಕಷ್ಟ. ಸಂತೆಯಲ್ಲಿ ವರ್ತಕರು ಕಮ್ಮಿ ಸೇರು ಪಾವುಗಳನ್ನು ಇಟ್ಟು ಮಾರುತ್ತಾರೆ. ಆದರೆ ಪೋಲೀಸಿನವರ ಭಯ ಈಗ ಕಡಿಮೆ ಆಗಿರುತ್ತೆ.—ಮೊನ್ನೆ ನವರಾತ್ರಿಯಲ್ಲಿ ನಾಯಕೊಂಡದ ವೆಂಕಟರಮಣಾಚಾರ್ರ ಮನೆಯಲ್ಲಿ ಒಂದು ಪೀತಾಂಬರವೂ, ಒಂದು ರೇಷ್ಮೆಮಡಿಯೂ ಕಳುವಾಗಿರುತ್ತೆ.—ಗವರ್ನಮೆಂಟು ಕನ್ನಡಸ್ಕೂಲಿಗೆ ಮೊದಲು ಮ|| ರಾಘವೇಂದ್ರರಾಯರು ಹೆಡ್ ಮಾಸ್ಟರಾಗಿ ೨೫ ವರುಷ ಕೆಲಸಮಾಡಿ ಇಲ್ಲಿನ ಪ್ರಜೆಗಳಲ್ಲಿ ತುಂಬಾ ಅನುರಾಗದಿಂದ ಇದ್ದರು. ಪ್ರತಿವರ್ಷವೂ ೫-೬ ಜನ ವಿದ್ಯಾರ್ಥಿಗಳನ್ನು ಪ್ಯಾಸು ಮಾಡಿಸಿರುತ್ತಾರೆ. ಅವರ ಕಾಲದಲ್ಲಿ ಸ್ಕೂಲ್ ಅಭಿವೃದ್ಧಿ ಸ್ಥಿತಿಯಲ್ಲಿದ್ದು ಕಟ್ಟಡ ಬಹಳ ಚಿಕ್ಕದಾದ್ದರಿಂದ ಸರ್ಕಾರದವರು ೪ ಸಾವಿರ ರೂಪಾಯಿ ಮುಟ್ಟಿಸಿ ಊರಹೊರಗೆ ಸೂಳೆಕೆರೆ ರೋಡಿನಲ್ಲಿ ಭಾರಿ ಕಟ್ಟಡವನ್ನೂ ಕಟ್ಟಿಸಿಕೊಟ್ಟರು. ಪುನಹ ಅವರ ಸ್ಥಾನಕ್ಕೆ ಮ|| ಶ್ರೀನಿವಾಸರಾಯರು ಬಂದಿರುತ್ತಾರೆ. ಇವರು ಒಳ್ಳೇ ವಿದ್ಯಾವಂತರು, ನಮ್ಮ ಕನ್ನಡ ಸಾಹಿಗಳು, ಸ್ವಲ್ಪವೂ ಹಿಂಜರಿಯದೆ ಬಹಳ ಮೆಹನತ್ತಿನಿಂದ ಕೆಲಸಮಾಡುತ್ತಾ ಎಲ್ಲರಲ್ಲೂ ಪ್ರೀತಿಯಿಂದ ಇರುತ್ತಾರೆ. ಮೊನ್ನೆದಿನ ಇನ್ಸ್ಪೆಕ್ಟರು ಬಂದು ಎಂಟು ಮೊಕ್ಕಾಂಮಾಡಿ ಸ್ಕೂಲ್ ಇನ್ಸ್ಪೆಕ್ಷನ್ ಮಾಡಿ, ಮೊದಲಿನಂತೆ ಅದು ಅಭಿವೃದ್ಧಿ ಸ್ಥಿತಿಯಲ್ಲಿರುವದನ್ನೂ, ಬಾಲಕರ ಸಂಖ್ಯೆ ಹೆಚ್ಚಾಗಿರುವದನ್ನೂ ನೋಡಿ ಬಹಳ ಸಂತೋಷಪಟ್ಟು, ಇನ್ನೊಬ್ಬ ಮಾಸ್ಟರನ್ನು ಜಾಸ್ತಿಯಾಗಿ ಕೊಡುತ್ತೇವೆಂತ ಹೇಳಿದಾರೆ. ಮತ್ತು ಸ್ಕೂಲ್ ಕಟ್ಟಡ ಹೀನಸ್ಥಿತಿಯಾದ್ದರಿಂದ ಅದನ್ನು ಕಾಮಗಾರಿ ಮಾಡಿಸುವದಕ್ಕೆ ಅಂದಾಜು ಮಾಡಿಕೊಂಡು, ಕಾಮಗಾರಿಯಾಗುವ ವರಿಗೂ ಸ್ಕೂಲ್ ಬೇರೆಕಡೆ ಮಾಡಬೇಕೆಂದು ಇನ್ಸ್ಪೆಕ್ಟರಿಂದ ಆರ್ಡರು ಬಂದದ್ದರಿಂದ ಈಗ ಬಾಡಿಗೆ ಮನೆಯಲ್ಲಿ ಸ್ಕೂಲ್ ಮಾಡುತ್ತಾರೆ.—ಮೊದಲು ಮ|| ಗೋಪಾಲಾಚಾರ್ಯರು ಮಾಸ್ಟರಾಗಿದ್ದಾಗ ಇಲ್ಲಿನ ಬಾಲಿಕಾ ಪಾಠಶಾಲೆಯು ತುಂಬಾ ಅಭಿವೃದ್ಧಿ ಸ್ಥಿತಿಯಲ್ಲಿತ್ತು. ಈಗೀಗ ಅದು ಅಷ್ಟು ತೃಪ್ತಿಕರವಾದ ರೀತಿಯಲ್ಲಿರುವಂತೆ ಕಾಣುವದಿಲ್ಲ. ಮಾಸ್ಟರು ಮುಂತು ವರ್ಜವಹಿಸಿಯಾರೆಂದು ಕೋರಿಕೆ.

ಚಿಕ್ಕಮಗಳೂರು.—ಈ ಡಿಸ್ಟ್ರಿಕ್ಟಿನಲ್ಲಿ ಕಾಲಕ್ಕೆ ಸರಿಯಾಗಿ ಮಳೆ ಬಾರದೆ ಹೋದ್ದರಿಂದ ಇಟ್ಟ ಬೆಳೆಗಳೆಲ್ಲಾ ಅಲ್ಲಲ್ಲೇ ನಾಶಹೊಂದಿದವು. ರೈತನ ಕಷ್ಟವು ಹೆ ಅಲಕ್ಷ್ಯವಾಗಿದೆ. ಸರ್ಕಾರಕ್ಕೆ ಕಂದಾಯ ಕೊಡಬೇಕಾಗಿದೆ. ನಾವು ಹ್ಯಾಗೆ ಕೊಡಬೇಕೋ ಎಂದು ಅಂಗಲಾಚುತ್ತಾರೆ. ಸರ್ಕಾರದವರು ಬಡ ರೈತರ ಕಷ್ಟಗಳನ್ನು ನೋಡಿ ಕಂದಾಯವನ್ನು ಕಮ್ಮಿ ಮಾಡುವದಾದರೆ ಇದರಿಂದ ಎಷ್ಟೋ ಸಹಾಯವು ಉಂಟಾದೀತು. ಈ ಭಾಗದಲ್ಲಿ ನಮ್ಮ ಡೆಪ್ಟಿ ಕಮಿಷನರ್ ಸಾಹೇಬರು ಗಮನಕ್ಕೆ ತಂದಾರೆಂದು ನಿರೀಕ್ಷೆ ಉಂಟಾಗಿದೆ. ಈ ಕಾಲವು ಕ್ಷಾಮಕಾಲವಾಗಿದೆ ಎನ್ನುವದಕ್ಕೆ ಸಂಶಯವೇನೂ ಕಾಣುವುದಿಲ್ಲ. ಅಕ್ಕಿ ರೂಪಾಯಿಗೆ ೫-೬ ಸೇರೂ, ರಾಗಿ ೧೧ ಸೇರೂ, ಬೇಳೆ ೫ ಸೇರೂ ಮಾರಾಟವಾಗುತ್ತಿದೆ. ಸ್ವಲ್ಪ ಹೆಚ್ಚು ಕಡಮೆಯಾಗಿ ಧಾತು ಈಶ್ವರ ಸಂವತ್ಸರಗಳಲ್ಲಿ ಉಂಟಾದ ಪ್ರಕಾರ ಇದೆ.—ಈ ಕಾಲದಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳೂ ತಮ್ಮ ಕೈಕೆಳಗಿನ ಕಮ್ಮಿ ಸಂಬಳದ ನೌಕರರ ವಿಷಯದಲ್ಲಿ ಯೋಚಿಸಿ, ಅವರವರಿಗೆ ಅವರ ಸಂಬಳದ ಮೇಲೆ ಅಲೋವೆನ್ಸ್ ಕೊಟ್ಟು ಕಾಪಾಡ್ಯಾರೆಂದೂ, ಹೀಗೆ ಮಾಡಿದರೆ ಬಡ ನೌಕರರ ಕಷ್ಟವು ನೀಗುವದೆಂದೂ ನಂಬಬಹುದು.—ಈಗ ಮಾಗಿಕಾಲವಾಗಿದೆ ಹವಾ ಸ್ವಲ್ಪಮಟ್ಟಿಗೆ ಬದಲಾವಣೆಯಾಗಿದೆ. ಆದಕಾರಣ ಯಾವ ಮನೆಯಲ್ಲಿ ನೋಡಿದರೂ ಚಳಿ ಜ್ವರದಿಂದ ಒಬ್ಬಿಬ್ಬರು ಕಾಯಿಲೆಯಾಗಿದಾರೆ. ಈ ಕಾರಣದಿಂದ ಆಸ್ಪತ್ರೆಯು ಹೊತ್ತಾರೆ ೭-೧೧ ಘಂಟೆವರಿಗೂ ಕಾಯಿಲೆಯವರಿಂದ ತುಂಬಲ್ಪಡುತ್ತೆ. ಡಾಕ್ಟರುಗಳಿಗೆ ಪುರಸತ್ತೇ ಇರುವದಿಲ್ಲ. ಅವರು ಬಹಳ ಮುತುವರ್ಜಿಯಾಗಿ ಔಷಧಗಳನ್ನು ಕೊಡುವದರಿಂದ ಬೇಗ ಬೇಗನೆ ಅನೇಕರು ಗುಣಹೊಂದುತ್ತಿದಾರೆ.—ಈ ಟವುನಿನಲ್ಲಿ ಪ್ಲೇಗ್ ಸಂಬಂಧವಾದ ಯಾವ ಸೂಚನೆಗಳೂ ಇರುವದಿಲ್ಲ. ಆದರೆ ಸುತ್ತು ಮುತ್ತು ಕೆಲವು ಹಳ್ಳಿಗಳಲ್ಲಿ ಉಂಟು. ಅಲ್ಲಿ ಕಾಯಿಲೆಯಾದವರನ್ನು ಸಿವಿಲ್ ಸರ್ಜನ್ರಾದ ಮೆ| ಮುತ್ತುಸ್ವಾಮಿ ದಾಸ್ ಯವರು ಪರಾಂಬರಿಸುವದಕ್ಕೆ ಹೋಗುವದಲ್ಲದೆ, ಕಷ್ಟವಾಗಿರುವವರನ್ನೂ ಹೊರಗಿನಿಂದ ಬರತಕ್ಕ ಪ್ಲೇಗ್ ರೋಗಿಗಳನ್ನೂ ನೋಡ್ಡನಲ್ಲಿಟ್ಟುಕೊಂಡು, ಕಾಲಕ್ಕೆ ಸರಿಯಾದ ಔಷಧಿ ಆಹಾರ ಮುಂತಾದದ್ದನ್ನು ಕೊಡುವದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿದಾರೆ.—ಈ ಕಾಲದಲ್ಲಿ ಜನರು ಕುಡಿಯತಕ್ಕ ನೀರು ಶುಚಿಯಾಗಿರಬೇಕು. ನಲ್ಲಿಗಳಲ್ಲಿ ಬರತಕ್ಕ ನೀರು ಕೆಂಪಗೆ ಇರುತ್ತದೆ. ಮುನಿಸಿಪಾಲಿಟಿ ಅಧಿಕಾರಿಗಳು ಗಮನಕ್ಕೆ ತಂದುಕೊಂಡು, ಆಗಾಗ್ಗೆ ಕಾರಂಜಿಗಳನ್ನು ಶುಚಿಮಾಡಿಸುವದಾದರೆ ಜನರಿಗೆ ಕ್ಷೇಮ ಉಂಟಾದೀತು.—ಎಲ್ಲಾ ಸ್ಥಳಗಳಲ್ಲಿಯೂ ಪೋಲೀ ದನಗಳಿಗೆ ದೊಡ್ಡಿಯುಂಟು. ಅದರಂತೆ ಇಲ್ಲಿಯೂ ಒಂದು ದೊಡ್ಡಿ ಇರುತ್ತದೆ. ಮಳೆಗಾಲದಲ್ಲಿ ಅದರಲ್ಲಿ ಕೂಡತಕ್ಕ ಜಾನುವಾರುಗಳಿಗೆ ಬಹಳ ಕಷ್ಟ ಉಂಟಾಗುತ್ತೆ. ಯಾಕೆಂದರೆ ಮಳೇ ನೀರು ಹೊರಗೆ ಹೋಗದೆ ಅಲ್ಲಿಯೇ ನಿಲ್ಲುವದರಿಂದಲೂ, ಆ ಜಾನುವಾರುಗಳು ತುಳಿಯುವದರಿಂದಲೂ ಕೆಸರು ಬಹಳವಾಗಿರುತ್ತದೆ. ಇದರ ದೆಸೆಯಿಂದ ಸೊಳ್ಳೆಗಳ ಕಾಟವು ಹೆಚ್ಚುತ್ತದೆ. ಕೆಲವು ದನಗಳು ಸಾಯುವದೂ ಉಂಟು. ಆದಕಾರಣ ಇವುಗಳಿಗೆ ಹೆಚ್ಚು ತೊಂದರೆ ಆಗದಹಾಗೆ ಕೆಳಭಾಗಕ್ಕೆಲ್ಲಾ ಚಪ್ಪಡಿ ಕಲ್ಲುಗಳನ್ನು ಹಾಸಿಸಿದರೆ ಬಹಳ ಸಹಾಯವಾಗುವದು. ಮತ್ತು ಅವುಗಳಿಗೆ ಕಾಲಕ್ಕೆ ಸರಿಯಾಗಿ ನೀರು ಸರಬರಾಗಿ ಆಗುವದಿಲ್ಲ. ದೊಡ್ಡಿಯ ಒಳಭಾಗದಲ್ಲಿ ನಲ್ಲಿಯನ್ನು ಇಟ್ಟು ತೊಟ್ಟಿಯನ್ನು ಕಟ್ಟಿಸಿದರೆ ಬಡ ಗೋಕಾಯಿಗಳ ಕಷ್ಟವು ತಪ್ಪುತ್ತೆ. ಈ ವಿಷಯಕ್ಕೆ ಮೇಲಿನ ಅಧಿಕಾರಿಗಳು ಗಮನಿಸಿದರೆ ಬಹಳ ಪ್ರಯೋಜನ ಉಂಟಾಗುತ್ತದೆ.

ಬೀದೇಶದ ವೃತ್ತಾಂತಗಳು.

ದಿವಾನ್‌ರೇ ಮೊದಲಾದ ಅಧಿಕಾರಿಗಳು ಪರಿವಾರಸಹಿತ ಕಳೆದ ಭಾನುವಾರ ಮಧ್ಯಾಹ್ನ ಬೆಂಗಳೂರಿಗೆ ಪ್ರಯಾಣಮಾಡಿದರು.

∴

ಮೊನ್ನೆ ಸೋಮವಾರ ರಾತ್ರಿ ನಂಜನಗೂಡಿನಿಂದ ರಾಜಧಾನಿಗೆ ಬಂದ ರೈಲ್ ಗಾಡಿಯು ಸ್ಟೇಷನ್ನಲ್ಲಿ ೮-೯ ವರುಷದ ಒಬ್ಬ ಹುಡುಗನ ಮೇಲೆ ಹರಿದು ಕೊಂದುಬಿಟ್ಟಿತು.

∴

ಒಬ್ಬ ಬಾತ್ಮೀದಾರರು ಬರೆಯುವುದು :—ಬೆಂಗಳೂರು ದೇಶಾಭ್ಯುದಯ ಸಂಘದವರು ಮಾಮೂಲಿನಂತೆ ಈ ವರ್ಷವೂ ಕಳೆದ ವಿಜಯದಶಮಿಯ ದಿವಸ ಮಾಗಡಿ ರೋಡ್ ಆಸ್ಪತ್ರೆಯಲ್ಲಿರುವ ಬಡರೋಗಿಗಳಿಗೆ ಮಿಠಾಯಿ, ಹಣ್ಣು, ಕಾಫಿ, ಬಿಸ್ಕತ್ತು ಮೊದಲಾದುದನ್ನು ಕೊಟ್ಟು ದೊಡ್ಡ ಹಬ್ಬವನ್ನು ಮಾಡಿಸಿದರು ಗಂಡಸರು ಹೆಂಗಸರು ಮಕ್ಕಳು ಸಹಿತ ಒಟ್ಟು ೫೦ ಜನರು ಆ ದಿವಸ ಸಂಘದವರ ಅತಿಥಿಗಳಾಗಿದ್ದರು. ಪ್ರತಿ ಸಂವತ್ಸರವೂ ವಿಜಯದಶಮಿಯು ಸಮೀಪಿಸಿದ ಕೂಡಲೆ ಆಸ್ಪತ್ರೆಯೊಳಗಿನ ಈ ಬಡ ಜನರಿಗೆ ಈ ಹಬ್ಬದ ಆಗಮನವನ್ನುಂಟು ಮಾಡುತ್ತದೆಂದು ಕಂಡು ಬರುತ್ತದೆ ಎಂಬುವುದೇ.

∴

ನಾಲ್ಕನೆಯ ಸೀರಕ್ಷಿನ ಸಮಾಜವು ಈ ಸಲ ಮುಂದಿನ ಡಿಸೆಂಬರ್ ತಿಂಗಳಲ್ಲಿ ಬಿಜಾಪುರ ಜಿಲ್ಲೆಗೆ ಸೇರಿದ ಬಾಗಲಕೋಟೆಯಲ್ಲಿ ಜರುಗಬೇಕೆಂದು ಆ ಮಂಗಡದ ಮುಖಂಡರು ತೀರ್ಮಾನಮಾಡಿರುತ್ತಾರೆ.

∴

ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಮೆ|| ಡಿ ದೇವರಾಜೇ ಅರಸಿನವರು ಕಳೆದ ಭಾನುವಾರ ರಾಜಧಾನಿಗೆ ಬಂದು ಮೂರು ದಿನ ಇಲ್ಲಿದ್ದು, ನೆನ್ನೆ ವಾಪಸು ಬೆಂಗಳೂರಿಗೆ ಪ್ರಯಾಣಮಾಡುವವರಾಗಿದ್ದರು.

∴

ಮದರಾಸ್ ಅಧಿಪತ್ಯದ ಭೂಪ್ಪರವರು ಕಳೆದ ವಾರ ರಾಜಧಾನಿಗೆ ಬಂದು ಗವರ್ನ್‌ಮೆಂಟ್ ಹೌಸ್ ಬಂಗಲೆಯಲ್ಲಿ ಇಳುಕೊಂಡಿದಾರೆ. ಇವರು ಈ ದಿನ ಮಡಕೇರಿ, ಕೊಡಗು ಮುಂತಾದ ಕಡೆಗಳಿಗೆ ಪ್ರಯಾಣ ಮಾಡುವರು.

∴

ಮೆ|| ಜಂಗಮಕೋಟೆ ಶ್ರೀನಿವಾಸರಾಯರು ರಾಜಧಾನಿಗೆ ಬಂದು ೩—೪ ದಿನಗಳಿಂದ ಟೌನ್ ಹಾಲ್ ಬಂಗಲೆಯಲ್ಲಿ ಸಾಯಂಕಾಲದ ವೇಳೆ ದೇಶೀಯ ವಿದ್ಯಾಭ್ಯಾಸ, ಕರ್ಮಮಾರ್ಗ, ಈ ಮೊದಲಾದ ವಿಷಯಗಳನ್ನು ಕುರಿತು ಕನ್ನಡದಲ್ಲಿ ಉಪನ್ಯಾಸ ಮಾಡುತ್ತಿದಾರೆ.

∴

ಇಲ್ಲಿ ಕಳೆದ ಭಾನುವಾರದಿಂದ ಪ್ರತಿದಿನವೂ ರಾತ್ರಿ ಹೊತ್ತು ಬಲವಾದ ಮೋಡ ಕವಿದು, ಕೆಲವು ಹನಿಯಷ್ಟು ಮಾತ್ರ ಮಳೆ ಸುರಿದು ನಿಲ್ಲುತ್ತಿದೆ. ಇದರಿಂದ ಸುತ್ತುಮುತ್ತಿನಲ್ಲಿ ಮಳೆ ಆಗಿರಬೇಕೆಂದು ನಿರೀಕ್ಷಿಸುತ್ತೇವೆ. ಧಾರಣೆವಾಸಿಗಳು ಸ್ವಲ್ಪವೂ ಇಳಿಯಲಿಲ್ಲ.

∴

ಇಲ್ಲಿನ ಹಳೇ ಅಗ್ರಹಾರದಲ್ಲಿ ಬಚ್ಚೇರಾಯರ ಮನೆಯೊಳಕ್ಕೆ ಕಳೆದ ವಾರ ಒಬ್ಬ ಕಳ್ಳನು ನುಗ್ಗಿ, ಆಭರಣಗಳನ್ನೆಲ್ಲಾ ಅಪಹರಿಸಿಕೊಂಡು ಹೋಗುತ್ತಿದ್ದಾಗ ಪೋಲೀಸಿನವರೇ ಮೊದಲಾದವರು ಹಿಂದಟ್ಟಿಕೊಂಡು ಹೋಗಿ ಅವನನ್ನು ದಸ್ತಗಿರಿ ಮಾಡಿರುತ್ತಾರೆ. ನಗಗಳೆಲ್ಲಾ ಸಿಕ್ಕಿದವು.

∴

ರಾಜಧಾನಿಯಲ್ಲಿರುವ ಮಜಲಿಸೆ—ರಿಫಾಹುಲ್—ಮುಸ್ಲಮಿನ್ ಎಂಬ ಮಹಮದೀಯ ಸಂಘದ ಮೊದಲನೇ ವಾರ್ಷಿಕ ಸಭೆಯು ನಾಳೆ ಶನಿವಾರ ಸಾಯಂಕಾಲ ಆ ಸಂಘದ ಕಟ್ಟಡದಲ್ಲಿ ಜರುಗುವುದಾಗಿದೆ. ಸರ್ದಾರ್ ಎಂ. ಕಾಂತರಾಜೇ ಅರಸಿನವರು ಸಭೆಯ ಅಗ್ರಾಸನವನ್ನು ವಹಿಸುವರು.

∴

ರಾಯಬಹದೂರ್ ಮೆ| ಅಂಬಿಲ್ ನರಸಿಂಹಯ್ಯಂಗಾರ್ರು ರಾಜಧಾನಿಯಲ್ಲಿ ಸ್ಥಾಪಿಸಿ ನಡಿಸುತ್ತಿರುವಂಥಾ ಅನಾಥ ಬಾಲಿಕಾಶ್ರಮವನ್ನು ಅವರು ಮೇಲ್ಕೋಟೆಯಲ್ಲೂ ಸ್ಥಾಪಿಸಬೇಕೆಂದಿದಾರೆಂತಲೂ, ಅಲ್ಲಿ ಆಗಲೇ ಸುಮಾರು ೧೨ ಮಂದಿ ಸ್ತ್ರೀಯರು ಆ ಮಂದಿರದಲ್ಲಿ ಸೇರಲು ಇಷ್ಟಪಟ್ಟಿದಾರೆಂತಲೂ ಕೇಳುತ್ತೇವೆ. ಈ ಪುಣ್ಯ ಕೆಲಸವು ಸಾರ್ಥಕಹೊಂದಿ, ಅಭಿವೃದ್ಧಿಗೆ ಬಂದೀತೆಂದು ಹಾರೈಸುತ್ತೇವೆ.

∴

ರಾಜಧಾನಿಯಲ್ಲಿರುವ ಮ್ಯುನಿಸಿಪಲ್ ಕೌನ್ಸಿಲರ್ ಮೆ| ಅಂಬಳೆ ಅಣ್ಣಯ್ಯ ಪಂಡಿತರರು ಮದರಾಸ್ ಪಟ್ಟಣದ ಸಂಸ್ಕೃತ ಪಾಠಶಾಲೆಗೆ ೨೦೦ ರೂಪಾಯಿ ಕಳುಹಿಸಿಕೊಟ್ಟು, ಸಂಸ್ಕೃತ ಓದುವ ವಿದ್ಯಾರ್ಥಿಗಳಿಗೆ ಸಹಾಯಮಾಡಬೇಕೆಂತಲೂ, ಪ್ರತಿ ವರುಷವೂ ಇದೇ ರೀತಿ ಹಣ ಕಳುಹುತ್ತಾ ಬರುತ್ತೇವೆಂತಲೂ ಬರೆದು ತಿಳಿಸಿದರು. ಆ ಪಾಠಶಾಲೆಯಲ್ಲಿ ಈ ಹಣದಿಂದ ಇಬ್ಬರಿಗೆ ಮೆ|| ಪಂಡಿತರ ಹೆಸರಿನ ಮೇಲೆ ವೇತನಗಳನ್ನು ಕೊಡುತ್ತಿದಾರೆ.

∴

ಕಳೆದ ಶನಿವಾರ ಸಾಯಂಕಾಲ ಇಲ್ಲಿನ ಎಗ್ಜಿಭಿಷನ್ ಮೈದಾನದಲ್ಲಿ ಮಿಷನ್ ಹೈಸ್ಕೂಲಿನ ಬಾಲಕರಿಂದ ಕಸರತ್ತುಗಳನ್ನು ಮಾಡಿಸಿದರು. ಅದನ್ನು ನೋಡುವುದಕ್ಕೆ ಬಹಳ ಜನರು ಸೇರಿದ್ದರು. ದೊಡ್ಡ ಹುಡುಗರ ಪೈಕಿ ವಾಸುದೇವರಾವ್‌ಗೆ ಮೊದಲನೆಯ ಬಹುಮಾನದ ಮೆಡಲ್ ದೊರಕಿತು, ಇನ್ನೊಬ್ಬರಿಗೆ ಎರಡನೇ ಬಹುಮಾನ ಸಿಕ್ಕಿತು. ಸಣ್ಣ ಹುಡುಗರಲ್ಲಿ ಪಿ. ರಾಮಸ್ವಾಮಿ ಐಯಂಗಾರ್‌ಗೆ ಒಂದನೇ ಬಹುಮಾನವೂ ಇನ್ನೊಬ್ಬರಿಗೆ ಬೇರೆ ಬಹುಮಾನಗಳೂ ದೊರಕಿದವು. ಆಕ್ತಲಾಗಿ ಜೂನಿಯರ್ ಫುಟ್‌ಬಾಲ್ ಪಂದ್ಯವನ್ನು ಅರಸುಗಳ ಬೋರ್ಡಿಂಗ್ ಸ್ಕೂಲ್ ಹುಡುಗರು ಹಾರ್ಡ್ವಿಕ್ ಕಾಲೇಜ್ ಹುಡುಗರ ಕೂಡ ಪಂದ್ಯವಾಡಿ ಗೆದ್ದರು. ಕಡೆಯಲ್ಲಿ ಮಿಸೆಸ್ ಥಾಮ್ಸನವರು ಕಾರ್ಯವನ್ನಲಂಕರಿಸಿ, ಫುಟ್‌ಬಾಲ್ ಬಹುಮಾನದ ಬಟ್ಟಲನ್ನೂ ಮೆಡಲನ್ನೂ ಗೆದ್ದವರಿಗೆಲ್ಲಾ ಹಂಚಿ ಕೊಟ್ಟರು.

ಸ್ವತ್ತು ಪರಾಧೀನದ ತಡೆ ನೋಟೀಸ್.

96-1

ಮೈಸೂರು ಶಿವರಾಂಪೇಟೆಯಲ್ಲಿ ರೊಟ್ಟಿ ಗಡಂಗ್ ಎಂದು ತಿಳಿಯಲ್ಪಟ್ಟಿರುವ ಮಹಡಿ ಮನೆಯನ್ನು ಹಾಲಿ ಅದರಲ್ಲಿ ವಾಸವಾಗಿರುವ ಲೇಟ್ ನಂಜುಂಡಶೆಟ್ಟಿಯ ಮಕ್ಕಳು ೧ನೇ ಕೇಶವಲುಶೆಟ್ಟಿ ಮತ್ತು ೨ನೇ ರಾಜಗೋಪಾಲಶೆಟ್ಟಿ ಸಹಾ ಸದರಿ ಮನೆಯನ್ನು ತಮ್ಮ ಸ್ವತ್ತೆಂದು ಹೇಳುತ್ತಾ, ನಮಗೆ ಮೋಸವಾಗುವ ಪರಾಧೀನ ಮಾಡಬೇಕೆಂದಿರುವಂತೆ ಕೇಳುತ್ತೇವೆ. ಈ ಮನೆಯು ನಮ್ಮ ಮತ್ತು ಮೇಲ್ಕಂಡ ಇಬ್ಬರ ಪಿತಾಮಹರಾದ ಚಲುವರಾಯ ಶೆಟ್ಟಿಯವರು ಸಂಪಾದಿಸಿದ ಪಿತ್ರಾರ್ಜಿತ ಸ್ವತ್ತಾದ್ದರಿಂದ ನಮ್ಮ ಹಕ್ಕು ಬಾಧ್ಯತೆಗೆ ಒಳಪಟ್ಟ ಈ ಮನೆಯನ್ನು ನಮ್ಮ ಅನುಮತಿ ಶಿವಾಯ ಯಾರೂ ಅಧಿಕ್ರಯಾದಿಗಳನ್ನು ಮಾಡಿಕೊಳ್ಳಕೂಡದೆಂದು ಎಚ್ಚರಿಸಿದೆ. ಚಲುವರಾಯಶೆಟ್ರ ಮಕ್ಕಳು ಆಸ್ಪತ್ರೆ ಅಸಿಸ್ಟೆಂಟ್ ನರಸಿಂಹಶೆಟ್ಟರ ಮಕ್ಕಳು—೧ನೇ ಎನ್. ವೆಂಕಟಾಚಲಂ ಶೆಟ್ಟಿ, ೨ನೇ ಎಂ. ಎನ್. ಶ್ರೀನಿವಾಸ ಶೆಟ್ಟಿ.

ನೆತ್ತಿಹತ್ತಿದ ಶೀತದಿಂದ ಮೂಗಿನಲ್ಲಿ ಹರಿಯುವದು. ಇದೇ ಪ್ರಪಂಚದಲ್ಲೆಲ್ಲಾ ರೋಗಕ್ಕೆ ಮೂಲಕಾರಣವು. ಇದಕ್ಕೆ ಪೆ-ರೂ-ನಾ ಸರ್ವಶ್ರೇಷ್ಠವಾದ ಪರಿಹಾರ.

[34-30]

ಉಷ್ಣದ ನೀರು ಹರಿಯುವ
ನೆತ್ತಿ ಹತ್ತಿದ ಶೀತ
ನೆಗಡಿ.

ಇದು ಅನ್ನಕೋಶ, ಮಲಕೋಶ, ದೊಡ್ಡ ಸಣ್ಣ ಕರುಳುಗಳು, ಕುಂಡಿಯ ಕೋಶಗಳು, ಇವೆಲ್ಲಾ ವ್ಯಾಪಿಸಿಯಾಗುತ್ತದೆ.

ಶೀತದ ನೀರು ಹರಿಯುವ
ನೆತ್ತಿ ಹತ್ತಿದ ಶೀತ
ನೆಗಡಿ.

ಇದು ನೆತ್ತಿ, ಗಂಟಲು, ಶ್ವಾಸಕೋಶ, ಶ್ವಾಸನಾಳಗಳು, ಇವಕ್ಕೆಲ್ಲಾ ವ್ಯಾಪಿಸಿಕೊಳ್ಳುತ್ತದೆ.

ನೆತ್ತಿಹತ್ತಿದ ಶೀತ ಅಥವಾ ಉಷ್ಣದ ನೆಗಡಿಯಿಂದ ಮೂಗಿನಲ್ಲಿ ನೀರು ಹರಿಯುವುದು ಮಹಾ ಕಠಿಣತರವಾದ ಜಾಢ್ಯವೆಂದು ಪ್ರಪಂಚದಲ್ಲಿ ಸಮಸ್ತ ಜನರಿಗೂ ತಿಳಿದೇ ಇರುತ್ತದೆ. ಅಮೇರಿಕ ಖಂಡಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳೆಂಬ ಒಂದು ರಾಜ್ಯದೊಳಗೇನೇ ಪ್ರತಿ ವರುಷವೂ ಎರಡು ಲಕ್ಷ ಪ್ರಜೆಗಳು ಈ ರೋಗಕ್ಕೆ ಸಿಕ್ಕಿ ಸಾಯುತ್ತಾ ಇದ್ದಾರೆ. ಹೀಗಿರುವಲ್ಲಿ ಇತರ ದೇಶಗಳೊಳಗೆ ಈ ರೋಗದಲ್ಲಿ ಬಿದ್ದು ಕಷ್ಟಪಡುವಂಥಾವರ ಸಂಖ್ಯೆಯು ಸರಾಸರಿ ನೋಡಿದರೆ ಅಷ್ಟು ಹೆಚ್ಚಾಗಿಯೇ ಇರಬೇಕೆಂದು ಹೇಳಲು ಸಂದೇಹವಿಲ್ಲ.

ಈ ನೆತ್ತಿ ಹಿಡಿದ ಶೀತ ಅಥವಾ ಉಷ್ಣದ ನೀರು ಸುರಿಯುವಂಥಾ ರೋಗಕ್ಕೆ ಪೆ-ರೂ-ನಾ ಎಂಬೀ ಔಷಧವೇ ಸರ್ವಶ್ರೇಷ್ಠವಾದದ್ದೆಂದೂ, ಇದು ಇತರ ಔಷಧಗಳಿಗಿಂತ ಮೊದಲನೆಯ ಸ್ಥಾನವನ್ನು ಪಡೆದಿರುವಂಥಾದ್ದೆಂದೂ ಅನೇಕ ವರುಷಗಳಿಂದಲೂ ಅನುಭವಕ್ಕೆ ಬಂದಿರುತ್ತದೆ.

ಪೆ-ರೂ-ನಾ ಎಂಬೀ ಔಷಧವು ಪ್ರಪಂಚದ ಪಶ್ಚಿಮಾರ್ಧ ಮತ್ತು ಪೂರ್ವಾರ್ಧಗೋಳಗಳಲ್ಲೆಲ್ಲಾ ಬಹು ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಪಡೆದಿರುತ್ತದೆ.

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದ್ದು ಇದರಿಂದಲೇ ತಿಳಿಯಬಹುದು.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವು ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

19—9—1908 ರಿಂದ 25—9—1908 ರ ವರೆಗೆ

ಸ್ಥಳ.	ಪ್ಲೇಗ್ ಸಗಲಿ ಮೃ.	ಪ್ಲೇಗ್ ಸತ್ತ ವೃ	ಕಾಲರಾ ಸಗಲಿ ಮೃ.	ಕಾಲರಾ ಸತ್ತ ಮೃ.
ಬೆಂಗಳೂರು ಪಟ್ಟಣ	3	3	0	0
ಮೈಸೂರು ,,	2	1	0	0
ಬೆಂಗಳೂರು ಡಿಸ್ಟ್ರಿಕ್ಟು	29	23	0	0
ಮೈಸೂರು ,,	*	*	0	0
ಕೋಲಾರ್ ,,	17	10	3	2
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	*	*	0	0
ಹಾಸನ ,,	25	15	*	*
ಚಿತ್ರದುರ್ಗ ,,	0	0	20	6
ಕಡೂರ್ ,,	12	31	0	0
ಶಿವಮೊಗ್ಗಾ ,,	*	*	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	118	83	23	8

ಶಾಲಿವಾಹನ ಶಕ ವರುಷಂಗಳು ೧೮೩೦ನೇ ಕೀಲಕನಾಮ ಸಂವತ್ಸರದ ಆಶ್ವೀಜ ಬಹುಳ ದ್ವಾದಶಿ ಗುರುವಾರದಿಂದ ಆಶ್ವೀಜ ಬಹುಳ ೩ವರೆಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೮ನೇ ಅಕ್ಟೋಬರ್

ತಾ.	ವಾರ	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ತೇದಿ ತುಲಾ ಮಾಸ
22	ಗುರು *	ದ್ವಾದಶಿ	1-16	ಉತ್ತ	51-2	7
23	ಶುಕ್ರ ,,	ತ್ರಯೋ	6-28	ಹ	59-30	8
24	ಶನಿ	ಚತುರ್ದಶಿ	10-26	ಚಿ	60-0	9
25	ರವಿ ‡	ಅಮಾವಾಸ್ಯೆ	13-12	ಚಿ	1-56	10
26	ಚಂದ್ರ †	ಪಾಡ್ಯಮಿ	14-50	ಸ್ವಾ	27-19	11
27	ಕುಜ †	ಬಿದಿಗೆ	15-15	ವಿ	9-11	12
28	ಬುಧ	ತದಿಗೆ	14-18	ಅನೂ	10-6	13

* ಪ್ರದೋಷ ... [illegible] ... ಬಲೀಂದ್ರಪೂಜಾ, ಕಾರ್ತೀಕಸ್ನಾನಾರಂಭ † ... [illegible] ... ಯಮದ್ವಿತೀಯಾ [illegible]

ಪೇಟೆ ಧಾರಣೆ.

ವಿವರ	ಮೈಸೂರು	ಬೆಂಗಳೂರು
ಸಣ್ಣ ಅಕ್ಕಿ ಪಲ್ಲಕ್ಕೆ ರೂ	[illegible]	[illegible]
ಕೆಂಪು ಅಕ್ಕಿ ಅವಲು	[illegible]	೧೮-೦-೦
,, ಮುರಿ	[illegible]	೧೭-೮-೦
ಜಾಲ್ಯಾ ಅಕ್ಕಿ	[illegible]	೧೭-೦-೦
ಸಣ್ಣಕ್ಕಿ ಅವಲು	[illegible]	೨೩-೦-೦
,, ಮುರಿ	೧೯-೦-೦	[illegible]
ಗೋಧಿ ಪಲ್ಲಕ್ಕೆ	[illegible]	೧೮-೮-೦
,, ಮುರಿ	[illegible]	೧೦-೦-೦
ಹುರುಳಿ ರಾಗಿ ಪಲ್ಲಕ್ಕೆ	೮-೦-೦	೧೦-೦-೦
ಕಾಡ್ರಾಗಿ	೮-೦-೦	೯-೦-೦
ಜೋಳ	೭-೧೨-೦	೯-೦-೦
ಹುಲುಸಂದೆ ಪಲ್ಲಕ್ಕೆ	೧೧-೮-೦	೧೧-೧೨-೦
ಬಿಳೀ ಅವರೆ	೧೧-೮-೦	೧೦-೮-೦
ಹೆಸರು	೧೨-೦-೦	೧೩-೦-೦
ಉದ್ದು	೧೬-೦-೦	೧೪-೦-೦
ಕಡಲೆ	೧೫-೪-೦	೧೪-೦-೦
ಎಳ್ಳು ೫೦ ೧೭೭ ಕ್ಕೆ	[illegible]	೧೮-೮-೦
ಹುರುಳಿ	೭-೮-೦	೮-೦-೦
ಹರಳು ೧೭೭ ಸೇರಿಗೆ	೧೩-೪-೦	೧೦-೦-೦
ಸೀಗೇಕಾಯಿ ಮಣ ೧ಕ್ಕೆ	೧-೧೨-೦	೧-೭-೦
ಮೆಣಸಿನಕಾಯಿ	೬-೦-೦	೪-೮-೦
,, ಮೆಣಸು	೫-೮-೦	೪-೪-೦
ಬೆಲ್ಲ ಮೊದ್ದ ಅಚ್ಚು	೫-೮-೦	ಮು ೭-೪-೦
ಒಳ್ಳೆಣ್ಣೆ ಮಣ ೧ಕ್ಕೆ	೫-೧೨-೦	೬-೪-೦
ಹರಳೆಣ್ಣೆ ,,	೫-೦-೦	೪-೦-೦
ಕೊತ್ತುಂಬರಿ ಪಲ್ಲ ೧ಕ್ಕೆ	೬-೪-೦	೬-೮-೦
ಉಪ್ಪು ,,	೪-೧೨-೦	೫-೪-೦
ಹುಣಿಸೇ ಹಣ್ಣು	೧-೮-೦	೧-೪-೦
,, ಹಳೇದು	೧-೬-೦	೧-೪-೦
ತುಪ್ಪ ಮಣ ೧ಕ್ಕೆ	೧೪-೮-೦	೧೫-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೦-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	೪-೮-೦	೫-೦-೦
ಅಡಿಕೆಕಾಯಿ ಮಣ ೧ಕ್ಕೆ	೦-೧೦-೦	೦-೧೪-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೪-೦	೦-೧೩-೦
ಚಿನ್ನ (ಪೌನ್) ಕೆಂಪು	೧೫-೭-೦	೧೫-೬-೦
,, ,, ಹಸುರು	೧೫-೧೪-೦	೧೬-೧-೦
,, ,, ಗಟ್ಟಿ ತೊಲ ೧ಕ್ಕೆ	೨೪-೧೦-೧	೨೪-೮-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೬೭-೦-೦	೬೫-೧-೦

Printed and Published by the Rev. E. W. Thompson, M. A., Proprietor and Manager, Wesleyan Mission Press, Mysore. 22/10/1908

REGISTERED
M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೨ | ಮೈಸೂರು—೧೯೦೮ ನೇ ಇಸವಿ ಅಕ್ಟೋಬರ್ ತಾರೀಖು ೨೯ ನೇ ಗುರುವಾರ. | ಸಂಚಿಕೆ ೨೨

AMRUTANJAN DEPOT, 16 OAK-LANE BOMBAY. [17-36]

ಗುಣ ಕಂಡುಬರುವದಿಲ್ಲವಾದರ ಹಣ ಬರತು ಮಾಡಲ್ಪಡುವದು.

ಅಮೃತಾಂಜನ. ಪ್ರಯತ್ನ ಮಾಡಿರಿ.

ಇದರಿಂದ —ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಚಳುಕು ಮತ್ತು ಉಳುಕು, ಗಂಟಲನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ ಬಾಟ್ಲಿ ೧ಕ್ಕೆ ಕಿಮ್ಮತ್ತು ೦-೮-೦ ಪೋಸ್ಟು ಖರ್ಚು ೦-೪-೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಹುಳುಕಡ್ಡಿ ವಗೈರೆ ನಾಶವಾಗುವದು, ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦-೪-೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು

[illegible]	೧-[illegible]	ಕುಸುಮಾವತಿಗುಟಿಕೆ—ಹೆಂಗಸರ ಹೊಟ್ಟೆನೋವಿಗೆ	೧—೦—೦
[illegible]	[illegible]	ಪ್ರಮೇಹದ ಮಿಶ್ರಣ—ಪ್ರತಿ ಪಕ್ಕೆ	೧—೦—೦
[illegible]	[illegible]	ಕಫಹರಿ—ಕೆಮ್ಮು, ಕಫ, ಕ್ಷಯ [illegible]	೧—[illegible]—೦
[illegible]	[illegible]	ಸುಂದರಿ ತೈಲ—ತಲೆಗೆ	೦—[illegible]—೦
[illegible]	[illegible]	ನೇತ್ರಾಂಜನ—ಮಂದದೃಷ್ಟಿಗೆ	೦—[illegible]—೦
[illegible]	[illegible]	[illegible] ಬಾಟ್ಲಿ ೧ಕ್ಕೆ	೦—[illegible]—೦
[illegible]	[illegible]	ವಾತದ ಮಿಶ್ರಣ ,,	೧—೦—೦
ದಂತಮಂಜನ—ಹಲ್ಲುಗಳಿಗೆ	೦—[illegible]—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
[illegible]	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—[illegible]—೦
[illegible]	೦—[illegible]—೦	[illegible]	೦—[illegible]—೦

ವಿಳಾಸ —ವಿಲಿಯಂ ಮತ್ತು ಕಂಪೆನಿ, ೧೬ ಓಕ್ ಲೇನು ಫೋರ್ಟು, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —'ಅಮೃತಾಂಜನ," ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-27

೧ ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ [illegible], ಉತ್ತಮವಾದ ಕಸ್ತೂರಿ ಮೊದಲಾದ ಕೆಟ್ಟು ಹೋಗದಂಥ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ.



[illegible], ಜ್ವರ, ಹೊಟ್ಟೆನೋವು, ಸಂದುಗಳ ನೋವು, ಮೈ ಕೈಕಾಲು [illegible], ಮೈ [illegible], ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, [illegible], [illegible] ಅರೋಚಕ ಇವೇ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣವಾಗುತ್ತದೆ

ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸುತ್ತಿದ್ದರೆ ಬಹಳ [illegible], ಎಂಥಾ ಆಹಾರವನ್ನಾದರೂ [illegible], [illegible] ಕೊಡದೆ, [illegible] ಬಲಹೀನತೆಯನ್ನು [illegible], ರಕ್ತದಲ್ಲಿ [illegible] ವೃದ್ಧಿಪಡಿಸುತ್ತದೆ [illegible], [illegible], ಜ್ವರ, ಸನ್ನಿಜ್ವರ, ಕ್ಷಯರೋಗಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ [illegible] ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೨೦ ಮಾತ್ರೆಯುಳ್ಳ ಕುಪ್ಪಿಗೆ ೧ ರೂ ೮ ಆಣೆ [illegible] ಕುಪ್ಪಿಗೆ ೧ ಕುಪ್ಪಿ ಬಟ್ಟು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು [illegible]

ವಿಳಾಸ—ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್. ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ

64-13

ಇದು ಸಾಧಾರಣ ಜ್ವರ [illegible], [illegible], [illegible], ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ [illegible] ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ [illegible] ಸಬ್ ಡಿವಿಜನ್ ಆಫೀಸರ್ ಎಸ್ [illegible] ವೆಂಕಟಪತಿ ಅಯ್ಯರವರು—[illegible] ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ [illegible] ಸೀಸೆಯು [illegible] ಇಷ್ಟು ಸ್ವಲ್ಪ ಕಾಲದಲ್ಲಿ [illegible] ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು [illegible] ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ಕ್ಕೆ [illegible] ೧ ರೂ [illegible]; ರೂ [illegible], ೧೧ ರೂ [illegible] ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಹಿಮಂಕಪ್ರಹಾರ

ಈ ಔಷಧವು ಅಜೀರ್ಣ, ಶೀತಭೇದಿ, [illegible] ಹೊಟ್ಟೆ [illegible] ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹತ್ತರವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು [illegible] ಒಂದಾವರ್ತಿ ಹೊರಗೆ ಆಗುವಾಗ್ಗೆ [illegible] ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ಪಟ್ಟಿಯು [illegible] ಎಂಬ [illegible] ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿ [illegible]—[illegible] ಕರ್ಪೂರವನ್ನು ನಾನೂ ನನ್ನ [illegible] ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ [illegible], ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಿಂದ್ರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

3-44

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಸಲಾಗುತ್ತಿರುವ ಟೋಪಿಗಳ [illegible] ಬೆಲೆಯವು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ [illegible] ಬೆಲ್ಲಾ ನಿಟ್ಟಿಗೆ ವಿಲಾಯಿತಿಯಿಂದಲೇ ಬರುವವು (೨) ಟೋಪಿಗಳನ್ನು ಮುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ನಮೂನೆಗಳನ್ನೇ ಅರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೊಸೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ ಅಗ್ಗವಾದವೂ ಚನ್ನಾಗಿಲ್ಲದವೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ನಾದ, ಕೆಂಪು, ಕಪ್ಪು, ಬಿಳಿ ಕಾಫಿ ಬಣ್ಣಗಳ ಟೋಪಿಗಳು ೧ ರೂ [illegible] ಆ, ೧ ರೂ ೬ ಆ , ೧ ರೂ [illegible] ಆ

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ [illegible] ಆ , ೨ ರೂ

ದಾಸದ ಟೋಪಿಗಳು ೧ ರೂ ೧೨ ಆ , ೧ ರೂ. [illegible] ಆ , ೧ ರೂ. ೬ ಆ

ಕಾಪಿಕಿನ ಟೋಪಿಗಳು ೧ ರೂ [illegible] ಆ. , ೧ ರೂ ೬ ಆ ,

ಕೊಕ್ಕುಗಳ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು, ಕಟ್ಟಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಮನೆ ವಿಕರಿಗೆ ಸಿದ್ಧವಾಗಿದೆ

82-4

ಮೈಸೂರು ಶಿವರಾಂಪೇಟೆ ಇಲ್ವಾಲ್ ರಸ್ತೆಯಲ್ಲಿ ೨೬×೭ ಅಂಕಣಗಳ ಅಂಚೆ ಗುಂಡಾಲ್ ಕೃಷ್ಣಪ್ಪನವರಿದ್ದ ದೊಡ್ಡ ಮನೆ ಬೇಕಾದವರು—ಮೇ ಟ್ರೋಟಿಮು ಫಾರೆಸ್ಟು ರೇಂಜರ್ ಮೆ ಬಿ ಶ್ರೀಕಂಠಯ್ಯನವರಿಗೆ ಬರೆದು ಕ್ರಯ ಮುಂತಾದದ್ದನ್ನು ತಿಳಿಯಬಹುದು

ಕ್ಲೆಮೆಂಟರ ವಸ್ಸಾಜಿಕಾ ಬಾಂ ತೈಲವು

48-23

ತಲೆನೋವು, ವಾಯುನೋವು, ಸೆಳತ, ಗಂಟಲನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸೆಳತ [illegible] ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಮಂತ್ರ ಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅಮೃತವಾದದ್ದು ಆದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಕುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿಸುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಕ್ಲೆಮೆಂಟ್ಸ್,

೩೨, ವೀರಮಲೆಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಇಲ್ಲಿ ನೋಡಿ.

77-6

ತುಮಕೂರು ಮಿಷನ್ ಇಲಾಖೆಯಲ್ಲಿ ಯೂರೋಪಿಯನ್ನರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ದಾರದಿಂದ ತಯಾರಾಗುತ್ತವೆ. ಕ್ರಯ:—೧೨ ಆಣೆ ಮೊದಲ್ಗೊಂಡು ೧ ರೂ. ೧೨ ಆಣೆಯ ವರೆಗೆ. ೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು. ಈಗತಾನೇ ಇಂಗ್ಲಿಷ್ ಉಲ್ದಾರವು ಬಂದಿವೆ. ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಲಾಗುವುದು. ವಿಳಾಸ:—ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

ವಾ ತ ಹ ರಿ.

81-4

ಒಂದು ಡಬ್ಬಿ ಕಿಮ್ಮತ್ತು ೧೨ ಆಣೆ—ವಿ. ಪಿ. ಛಾರ್ಜು ಬೇರೆ.

ಈ ತೈಲವು ತಲೆಶೂಲೆ, ಅರತಲೆ ನೋವು, ವಾಯುವಿನಿಂದ ಕೈಕಾಲು ನೋವು, ಬೇಳು ಕಟ್ಟಿದ್ದರೂ, ಪಾರ್ಶ್ವವಾಯು ಎದೆನೋವು, ಶಸ್ತ್ರಗಳಿಂದ ಉಂಟಾದ ಘಾಯ, ಬಿಜ್ಜ, ತುರಿ, ಕಜ್ಜಿತುರಿ, ಮೇಹಘಡೆ, ನರ ಹೊರಳಿದ್ದರೂ, ಕೀಲುವಾಯು, ಹಲ್ಲುನೋವು, ಮಡಮೆ, ಉಷ್ಣಕಲ ಬೆಂಕಿಯಿಂದ ಸುಡಲ್ಪಟ್ಟಿದ್ದರೂ, ಛಳಕು, ಇತ್ಯಾದಿ ಅನೇಕ ವ್ಯಾಧಿಗಳಿಗೆ ಪರಿಹರ, ಅಂದರೆ ಹಚ್ಚಿ ನೋವಾದಿ ಕ್ಷಣ ಮಾತ್ರದಲ್ಲಿ ನಾಶವಾಗುವದು. ಮೂಲವ್ಯಾಧಿಗೂ ರಾಮಬಾಣವಾಗಿದೆ.



ತಕ್ಷಣ ಪರಿಹಾರ

ಈ ರೋಗಗಳೆಲ್ಲಾ ಈ ಔಷಧಿಯು ಎಷ್ಟರಮಟ್ಟಿಗೆ ಶತ್ರುವೋ ಅಷ್ಟು ಇನ್ನಾವ ಔಷಧವಾದರೂ ಇಲ್ಲ. ಇದನ್ನು ನೋವಿರುವ ಸ್ಥಳಕ್ಕೆ ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗ ಮುಖವು ತೊಲಗಿ ಸುಖಸಂತೋಷಗಳುಂಟಾಗುತ್ತೆ. ಬಾಧೆಯನ್ನು ಅನುಭವಿಸುವವರು ಕೂಡಲೇ ಬರೆದು ತರಿಸಿಕೊಳ್ಳಿ. ತರಿಸಿದವರೆಲ್ಲಾ ಎಂದು ಎಂದಿಗೂ ವ್ಯಸನಪಡುವುದಿಲ್ಲ. ೬ ಡಬ್ಬಿಗಳನ್ನು ಒಟ್ಟಿಗೆ ತರಿಸಿಕೊಳ್ಳುವವರಿಗೆ ಪೋಸ್ಟೇಜು ಮಾಫಿ ಬಿಡುತ್ತೇವೆ. ಔಷಧಗಳ ಕ್ಯಾಟಲಾಗನ್ನಪೇಕ್ಷಿಸುವವರು ೬ ಪೈ ಸ್ಟಾಂಪುಗಳನ್ನು ಬರೆದುಕೊಳ್ಳತಕ್ಕದ್ದು.

ವಿಳಾಸ—ಎಂ. ಗೋವಿಂದಶೆಟ್ಟಿ.
ಮೆಡಿಕಲ್ ಪ್ರಾಕ್ಟೀಷನರ್, ದೇವನಹಳ್ಳಿ.

ಇತ್ತಲಾಗಿ ಮುದ್ರಿಸಲ್ಪಟ್ಟಿರುವ ಬಾಸೆಲ್ ಮಿಷನ್ ಬುಕ್ ಎಂಡ್ ಟ್ರಾಕ್ಟ್ ಡಿಪೋಸಿಟರಿ ಮಂಗಳೂರು ಪುಸ್ತಕಗಳು.

78-2

ದಾಕ್ತರ್ ಪಾಸನ ಪ್ರವರ್ತನೆ	ಕ್ರಯ	೦—೨—೩
ಶಾವಂತಿ ಪುಷ್ಪ		೦—೨—೬
ಸುರಾರಿ ಕೀರ್ತನೆ		೦—೭—೦
ಮಹಮದ ಪ್ರವಕ್ತೃಯ ಚರಿತ್ರೆ		೦—೩—೧
ಸ್ವದೇಶಾಭಿಮಾನ		೦—೩—೦
ಯೋಹಾನ್ ಬುನ್ಯನ್ ಯಾತ್ರಿಕನ ಸಂಚಾರವು (ಮೊದಲನೆ ಭಾಗ)		೦—೪—೦
(ಎರಡನೆ ಭಾಗ ಮುದ್ರಿಸಲ್ಪಡುತ್ತಿದೆ.		
ಯೆಹೂದಿ ಪ್ರವಾದಿಗಳಲ್ಲಿ ಪ್ರಖ್ಯಾತನಾದ ಯೆರೆಮಿಯನು		೦—೪—೦
ಯೋಸೇಫನ ಚರಿತ್ರೆಯ ವಿಷಯವಾದ ಇಪ್ಪತ್ತು ಪ್ರಸಂಗಗಳು		೦—೫—೦
ವೇದಾಂತವಾದ ನಿರ್ಣಯ (ತತ್ವವಿವೇಕ) ...		೦—೫—೦
ಇಸೋಪನ ನೀತಿ ಕಥೆಗಳು (ಚಿತ್ರಸಹಿತ) ...		೦—೮—೦
ರಾಗಸಹಿತವಾದ ಅಭಿನಯ ಗೀತಗಳು		೦—೨—೬
ಬಾಲಕರ ಗೀತಗಳು		೦—೭—೦
ಮೂಲಶಾಲೆಗಳ ಶಿಕ್ಷಣಾ ಕ್ರಮಪದ್ಧತಿ		೦—೫—೦
ಕಿಂಡರ್ ಗಾರ್ಟನ್ ಕ್ರಮಪಡಿ, ಬಾಲಕ ಮತ್ತು ಮೊದಲನೆ ದರ್ಜೆಗಳಿಗೆ ಉಪಯುಕ್ತವಾದ ಕಥೆಗಳೂ ಹಾಡುಗಳೂ ...		೦—೨—೬
ಅದೇ ಎರಡನೆ ದರ್ಜೆಗೆ		೦—೨—೬
ಗೃಹೋಪಯೋಗದ ಹೋಮಿಯೋಪತಿ ಎಂಬ ನವಾನ ಪ್ರವರ್ತಕ ಚಿಕಿತ್ಸಾಕ್ರಮದ ಕೈಪಿಡಿ ...		೧—೪—೦

ಸತ್ಯದೀಪಿಕೆ.

ಪ್ರತಿ ವಾರಕ್ಕೊಂದು ಪ್ರಕಟವಾಗುವ ಪತ್ರವಿದು. ಪ್ರತಿ ಸಂಚಿಕೆಯು ಚತುಷ್ಪತ್ರ ಪರಿಮಾಣದ ಎಂಟೆಂಟು ಪುಟಗಳುಳ್ಳದ್ದಾಗಿದೆ. ಲೋಕ ವಿಷಯದ ಸಂಗತಿಗಳೂ, ಮತವಿಚಾರದ ಉಪನ್ಯಾಸಗಳೂ, ಮನೋರಂಜಕ ಕಥೆಗಳೂ, ವಿದ್ಯಾವಿಷಯಗಳೂ, ಲೋಕಸಮಾಚಾರ, ಸ್ವಪರದೇಶಗಳ ವರ್ತಮಾನ, ತಂತಿ ವರ್ತಮಾನ, ವ್ಯವಸಾಯ ಮತ್ತು ವ್ಯಾಪಾರಗಳ ವರ್ಣನೆ, ಶಾಲೋಪಯೋಗದ ಪುಸ್ತಕಗಳ ಪ್ರಕಟನೆ, ಪಂಚಾಂಗ ಮುಂತಾದ ವಿಶಿಷ್ಟ ವಿಷಯಗಳು ಇದರಲ್ಲಿ ಅಡಗಿರುವವು.

ಚಂದಾ ನಿರ್ಣಯ.

೧ ಪ್ರತಿಗೆ (ಸ್ಥಳಿಕರಿಗೆ) ವರ್ಷ ೧ ಕ್ಕೆ ..	ರೂ.	೧—೨—೦
೧ ,, ,, ಅರ್ಧ ವರ್ಷಕ್ಕೆ ...		೦—೮—೦
೧ ,, (ಪರಸ್ಥಳಿಕರಿಗೆ) ವರ್ಷ ೧ಕ್ಕೆ ಹಾಸಲು ಕೂಡ		೧—೧೩—೦
೧ ,, ,, ಅರ್ಧ ವರ್ಷಕ್ಕೆ ...		೦—೧೫—೦

ಚಂದಾ ಹಣ ಮುಂಗಡವೇ ರವಾನಿಸಬೇಕು. ನಮೂನೆ ಪ್ರತಿ ಕಳುಹಿಸಲ್ಪಡುವದು.

ಅಪೇಕ್ಷಕರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ:—

ಬಾಸೆಲ್ ಮಿಷನ್ ಬುಕ್ ಟ್ರಾಕ್ಟ್ ಡಿಪೋಸಿಟರಿ, ಮಂಗಳೂರು.

CHAMBERLAIN'S PAIN BALM.

ಚೇಂಬರ್ಲೀನ್ ಯವರು ಮಾಡಿದ ನೋವುಹರ ಔಷಧವು.

1-44



ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಬಜಾದ ಕಡಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡುವಂಥಾ ಔಷಧ.

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸಿಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು—ಇದೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೀನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಇದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದರೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುತ್ತದೆ. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ಮುದಲಿಸ್ಟ್ ಶಾರದಾ ಸೋಪ್ ಸ್ವದೇಶಿ.

65-3

ಆರೆಂಜ್, ಗುಲಾಬ್, ಕ್ಯಾಂಫರ್ ಮೊದಲಾದ ಸೋಪುಗಳು ಬಿಕರಿಗೆ ಸಿದ್ಧವಾಗಿವೆ. ಇವುಗಳಲ್ಲಿ ಚರಬಿಯು ಸುದ್ದಾಂಗವಾಗಿ ಸೇರಿಲ್ಲ. ಉತ್ತಮವಾದವೆಂಬುವುದಕ್ಕೆ ಸರ್ಟಿಫಿಕೇಟುಗಳಿವೆ. ವ್ಯಾಪಾರಿಗಳಿಗೆ ಹೆಚ್ಚಾದ ಕಮಿಷನ್. ವಾಚಕರೇ, ಸ್ವದೇಶೋದ್ಯೋಗಕ್ಕೆ ಪ್ರೋತ್ಸಾಹಗೊಳಿಸಿ.

ವಿಳಾಸ :—ಶಾರದಾಸೋಪ್ ಫ್ಯಾಕ್ಟರಿ, ಶೃಂಗೇರಿ

ಸೊತ್ತು ಪರಾಧೀನದ ತಡೆ ನೋಟೀಸಿಗೆ ಜವಾಬು.

58-1

ರೊಟ್ಟಿ ಗದಂಗ್ ಚೇಟ್ ನಂಜುಂಡಶೆಟ್ಟರ ಬಾಬತು ಹಾಲೀ ನಾವು ವಾಸವಾಗಿರುವ ಮನೆಯಲ್ಲಿ ಅಸ್ಸಿಸ್ಟೆಂಟ್ ಅಸಿಸ್ಟೆಂಟ್ ನರಸಿಂಹಶೆಟ್ಟರ ಮಕ್ಕಳಾದ ೧ನೇ ವೆಂಕಟಾಚಲಶೆಟ್ಟರಿಗೂ ೨ನೇ ಶ್ರೀನಿವಾಸಶೆಟ್ಟರಿಗೂ ಸಹಾ ಹಕ್ಕಿದೆ ಎಂತಲೂ ಇದು ಇವರ ಪಿತ್ರಾರ್ಜಿತವಾದುದೆಂತಲೂ ಹೇಳುವುದು ಶುದ್ಧ ಸುಳ್ಳು. ಈ ಸೊತ್ತಿನ ಮೇಲೆ ಚೇಟ್ ನಂಜುಂಡಶೆಟ್ಟರ ಮಕ್ಕಳಾದ ನಮ್ಮ ವಿನಹಾ ಮತ್ತಾರಿಗೂ ಯಾವ ವಿಧವಾದ ಹಕ್ಕು ಬಾಧ್ಯತೆಯೂ ಇರುವುದಿಲ್ಲ. ರೊಟ್ಟಿ ಗದಂಗ್

೧ನೇ ಎನ್. ಕೇಶವಶೆಟ್ಟಿ, ೨ನೇ ಎನ್. ರಾಜಗೋಪಾಲಶೆಟ್ಟಿ.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

58-18

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತಹವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಕಿರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರಿವಿಗೂ ಚಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತವೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ.

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION. 33-31

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.



ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ, ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸತೋರುವದು.

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖಚಿಹ್ನೆ ತೋರಿಸುವದು.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್,

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಅಪೂರ್ವದ ಕುಸ್ತಿಯ ನೋಟೀಸ್

59-1

ಸನ್ ೧೯೦೮ ನೇ ಇಸವಿ ನವಂಬರ್ ತಾ ೧ ನೇ ಭಾನುವಾರ ಮಧ್ಯಾಹ್ನ ಮೈಸೂರು ಹಳೇ ಅಗ್ರಹಾರದ ಉತ್ತರ ಕರೋಟಿಯಲ್ಲಿ ಹೈದರಾಬಾದಿನಿಂದ ಬಂದಿರುವ ಪೈಲವಾನ್ ಅಲಿ ಬಕ್ಸ್ ಯವರಿಗೂ ಕಾನ್ಪೂರದಿಂದ ಬಂದಿರುವ ಪೈಲವಾನ್ ಕಂಟಕರಿಗೂ ಬಹಳ ವಿನೋದವಾಗಿ ಕುಸ್ತಿ ನಡೆಯುತ್ತೆ. ಅಲಿ ಬಕ್ಸ್ ಯವರು ಎಂಬುವರು ಅನೇಕ ರಾಜರ ಎದುರಿಗೆ ಕುಸ್ತಿಗಳನ್ನು ಮಾಡಿ, ಮೆಡಲುಗಳನ್ನು ಪಡೆದಿರುವವರಲ್ಲದೆ, ಮೈಸೂರು ಶ್ರೀಮನ್ಮಹಾರಾಜಾಬಹದ್ದೂರವರು ಕೊಡ ರೇಸ್ ಕೋರ್ಸಿನಲ್ಲಿ ಪ್ರಖ್ಯಾತಿಯೊಂದಿದ ತೋಟಾ ಪೈಲವಾನ್‌ನನ್ನು ಗೆದ್ದದ್ದಕ್ಕೆ ೧೫೦ ರೂಪಾಯಿನ ಕಪ್ಪು, ೨೦೦ ರೂಪಾಯಿ ಇನಾಮೂ ಕೊಟ್ಟಿರುತ್ತಾರೆ. ಕುಸ್ತಿ ನೋಡಲು ಅನೇಕರು ಅಭಿಪ್ರಾಯಪಟ್ಟದ್ದರಿಂದ ದೇಶಾಭಿಮಾನಿಗಳು ಬಂದು ನೋಡಿ ನೇತ್ರಾನಂದ ಹೊಂದುವರೆಂದು ನಂಬುತ್ತೇನೆ.

ಕಂಟ್ರಾಕ್ಟರ್ ಬಾಜಾ ಮೊಹಿದೀನ್.

ವೃತ್ತಾಂತ ಪತ್ರಿಕೆ.

ಸನ್ ೧೯೦೮ ನೇ ಇಸವಿ ಅಕ್ಟೋಬರ್ ತಾ ೨೯ ನೇ ಗುರುವಾರ.

ಜ್ಯೋತಿಶ್ಶಾಸ್ತ್ರವೂ ಪಂಚಾಂಗಗಳೂ.

ಕಳೆದ ೧೫ನೇ ತಾ. ಗುರುವಾರದ “ವೃತ್ತಾಂತ ಪತ್ರಿಕೆ” ಯ ಕೂಡ ಒಂದು ಪಂಚಾಂಗದ ವಿಷಯವಾದ ನೋಟೀಸನ್ನು ಹಂಚಿದ್ದಕ್ಕಾಗಿಯೂ, ಅದೇ ಸಂಚಿಕೆಯಲ್ಲಿ ಆ ಪಂಚಾಂಗವನ್ನು ಕುರಿತು ಕೆಲವು ಸಂಗತಿಗಳನ್ನು ಬರೆದಿರುವದಕ್ಕಾಗಿಯೂ ವಿಷಾದಿಸುತ್ತೇವೆ. ಇದಲ್ಲದೆ ಆ ಪಂಚಾಂಗವನ್ನು ಮೈಸೂರು ಮಿಷನ್ ಪ್ರೆಸ್ಸಿನಲ್ಲಿ ಅಚ್ಚು ಹಾಕಿಕೊಟ್ಟ ಭಾಗದಲ್ಲೂ ವ್ಯಸನಪಡುವೆವು. ಅದರಲ್ಲಿ ರತಕ್ಕ ವಿಷಯಗಳನ್ನು ಪ್ರೆಸ್ಸಿನ ಮ್ಯಾನೇಜರವರು ಭಾಷೆಯ ಅಜ್ಞತೆಯಿಂದ ತಿಳಿಯಲಾರದೆ ಪ್ರಿಂಟು ಮಾಡುವುದಕ್ಕೆ ಅಂಗೀಕರಿಸಿದರು. ಮತ್ತು ಆ ಪ್ರಕಟನೆಯ ನೋಟೀಸು ಎಡಿಟರವರ ಅನುಮತಿಯನ್ನು ಪಡೆಯದೇನೇ ಪತ್ರಿಕೆಯ ಕೂಡ ಹಂಚಿದ್ದಾಗಿರುತ್ತದೆ.

ಆ ಪಂಚಾಂಗವನ್ನು ನೋಡಿದ್ದರಲ್ಲಿ ಅದರೊಳಗೆ ಉಪಯುಕ್ತವೂ ಅವಶ್ಯವೂ ಆದ ಅನೇಕ ವಿಷಯಗಳುಂಟೆಂದು ಕಾಣುತ್ತದೆ. ಇದಲ್ಲದೆ ಅದರಲ್ಲಿರುವ ಕೆಲವು ಸಂಗತಿಗಳು ಯಥಾರ್ಥವಾದವುಗಳೆಂದು ನಾವು ನಂಬಲಾರೆವು. ಇನ್ನು ಕೆಲವು ವಿಷಯಗಳಾದರೋ ಪ್ರಜೆಗಳಿಗೆ ಯಾವ ಪ್ರಯೋಜನವನ್ನೂ ತರಲಾರವೆಂದು ನೆನಸುತ್ತೇವೆ. ಆದಕಾರಣ ಆ ಪಂಚಾಂಗದ ನೋಟೀಸನ್ನು ಹಂಚಿದ್ದಕ್ಕೆ ಛಾರ್ಜನ್ನು ತೆಗೆದುಕೊಳ್ಳದೆ ನಿರಾಕರಿಸಿರುತ್ತೇವೆಂದು ಸಂಪಾದಕರಿಗೆ ತಿಳಿಸಿಬಿಟ್ಟೆವು.

ಜ್ಯೋತಿಷ್ಯವು ಅಯೋಗ್ಯವಾದ ಶಾಸ್ತ್ರವೆಂಬುವುದು ನಮ್ಮ ಅಭಿಮತವಾಗಿರುತ್ತದೆ. ಯೂರೋಪಾ ಖಂಡದಲ್ಲಿ ವಿದ್ಯೆಯ ಪ್ರಚಾರಕ್ಕೆ ಬಂದ ಮೇಲೆ ಜ್ಯೋತಿಷ ಶಾಸ್ತ್ರವು ಯಾವ ರೀತಿ ನಿರ್ನಾಮವಾಗಿ ಹೋಯಿತೋ ಅದೇ ರೀತಿ ಈ ರಾಷ್ಟ್ರದಲ್ಲೂ ವಿದ್ಯಾಭಿವೃದ್ಧಿಯಾದ ಹಾಗೆಲ್ಲಾ ಆ ಶಾಸ್ತ್ರವು ಕ್ಷಯಿಸಿಹೋಗುವುದು. ಜೋಯಿಸರು ಮುಂದಾಗುವುದನ್ನು ಕುರಿತು ಹೇಳುವುದನ್ನು ನಂಬುವುದು ಸಂಪೂರ್ಣವಾಗಿಯೂ ಅಯೋಗ್ಯವಾಗಿರುತ್ತದೆ. ಜ್ಯೋತಿಷವು ಪ್ರಜೆಗಳಿಗೆ ಕೇಡನ್ನುಂಟುಮಾಡುವ ಶಾಸ್ತ್ರವೆಂದೇ ನಮಗೆ ತೋರುವುದು. ಅದರಿಂದ ಶುಭಾಶುಭಗಳಿಗೆ ನ್ಯಾಯವಾದ ಕಾರಣಗಳನ್ನು ಸರಿಯಾದ ರೀತಿಯಲ್ಲಿ ಜನರಿಗೆ ತಿಳಿಸದೆ, ಅವರಿಗೆ ಅಬದ್ಧ ಕಾರಣಗಳನ್ನು ತೋರಿಸಿಕೊಡುವುದಕ್ಕೆ ಅನುಕೂಲವಾಗಿದೆ. ಹಲ್ಲೀ ಶಕುನವೇ ಮೊದಲಾದ ಅಲ್ಪವೂ ಅಪಹಾಸ್ಯಕರವೂ ಆದ ಹಲವು ವಿಚಾರಗಳನ್ನು ಕುರಿತು ಹೇಳುವುದೂ, ಅವುಗಳನ್ನೆಲ್ಲಾ ನಂಬುವುದೂ ಸಹಜವಲ್ಲ.

ವಾಚಕರಿಗೆ ನಾವು ತಿಳಿಸುವುದೇನೆಂದರೆ—“ನೀವು ನಕ್ಷತ್ರಗಳ ಮೇಲಲ್ಲ, ದೇವರ ಮೇಲೆ ಭಾರಹಾಕಿ ನಡೆಯಬೇಕು. ದೇವರು ನಿಮಗೆ ಬುದ್ಧಿ ವಿವೇಕಗಳನ್ನು ಕೊಟ್ಟಿರುವನು. ಅವುಗಳನ್ನು ನೀವು ಉಪಯೋಗಿಸಿ, ನಿಮ್ಮ ಕಾರ್ಯಗಳನ್ನು ನೀವೇ ಚನ್ನಾಗಿ ಮಾಡಿಕೊಂಡು ಅಭಿವೃದ್ಧಿಹೊಂದುತ್ತಾ ಬನ್ನಿ” ಎಂಬುವುದೇ.

ಭಾರತ ಪುತ್ರರ ಸಂಘವು

ಕಾಶೀಪಟ್ಟಣದಲ್ಲಿರುವ ಹಿಂದೂ ಕಾಲೇಜ್ ಎಂಬ ವಿದ್ಯಾಶಾಲೆಯ ಅಧ್ಯಕ್ಷರಾದ ಮಿಸೆಸ್ ಬೆಸೆಂಟ್ ಎಂಬಾಕೆಯು "ಭಾರತ ಪುತ್ರರ ಸಂಘ" ಎಂಬ ಒಂದು ಕೂಟವನ್ನು ಪ್ರಾರಂಭಿಸಬೇಕೆಂದು ಪ್ರಯತ್ನಪಟ್ಟಿರುತ್ತಾರೆ. ಆ ಸಂಘಕ್ಕೆ ಮೆಂಬರಾಗಿ ಸೇರಿಕೊಳ್ಳಬೇಕೆಂದು ಕುತೂಹಲಪಡುವಂಥಾ ಬಾಲಕರು ಮೊದಲು ಭಾಷೆಕೊಟ್ಟುಕೊಳ್ಳಬೇಕಾಗಿರುವುದೇನೆಂದರೆ —

"ನಾನು ಈ ರಾಷ್ಟ್ರದ ಸಮಸ್ತ ಭಾಗಗಳಲ್ಲಿ ಇರುವಂಥಾ ಸಮಸ್ತ ಜಾತಿಯ ಮತ್ತು ಸಕಲ ಮತಗಳ ಜನರನ್ನೂ ನನ್ನ ಸಹೋದರರಂತೆ ಎಣಿಸಿ ನಡೆದುಕೊಳ್ಳುವೆನೆಂದೂ,

"ಜೀವಿಸುತ್ತಿರುವುದೇ ನನ್ನ ಜೀವಮಾನದ ಮುಖ್ಯ ಉದ್ದೇಶವಾಗಿ ಇಟ್ಟುಕೊಳ್ಳುವೆನೆಂದೂ ಒಪ್ಪಿ ಭಾಷೆಕೊಟ್ಟುಕೊಳ್ಳುತ್ತೇನೆ.

"ಈ ನನ್ನ ಉದ್ದೇಶವು ಸಾರ್ಥಕವಾಗಿ ನೆರವೇರುವುದಕ್ಕೋಸ್ಕರ

"ನಾನು ನನ್ನ ಸ್ವಾರ್ಥತೆಯನ್ನು ತ್ಯಾಗವಮಾಡಿ ಪರಹಿತವನ್ನು ಹುಡುಕಿ ಮಾಡುತ್ತಾ ಬರುವೆನು,

"ಅಸಹಾಯರಾದವರನ್ನು ಸಂರಕ್ಷಣೆಮಾಡುವುದಕ್ಕೂ, ಕಷ್ಟನಷ್ಟಗಳಿಗೆ ಗುರಿಯಾದವರಿಗೆ ಬೆಂಬಲವಾಗಿ ನಿಂತು ಕಾಪಾಡುವುದಕ್ಕೂ, ಮೂಢರಿಗೆ ವಿದ್ಯೆ ಬುದ್ಧಿ ವಿವೇಕಗಳನ್ನು ಕಲಿಸಿಕೊಳ್ಳುವುದಕ್ಕೂ, ಹೀನರೆಂದು ತುಳಿಯಲ್ಪಟ್ಟವರನ್ನು ಮೇಲಕ್ಕೆ ಎತ್ತುವುದಕ್ಕೂ,

"ಎಲ್ಲಾ ಜನರಿಗೆ ಹಿತಕಾರಿಯಾಗುವಂಥಾ ಮಾರ್ಗಗಳನ್ನು ಹುಡುಕಿ, ಅವುಗಳನ್ನು ನೆರವೇರಿಸುವುದಕ್ಕೂ ಸಾಹಸಪಡುವೆನೆಂತಲೂ,

"ಪ್ರತಿದಿನವೂ ಕಡೆಯ ಪಕ್ಷ ಒಂದಾದರೂ ಪರೋಪಕಾರ ಕಾರ್ಯವನ್ನು ಮಾಡುವೆನೆಂತಲೂ ವಾಗ್ದಾನಮಾಡುತ್ತೇನೆ.

"ನಮ್ಮ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ನಾವು ಧರ್ಮವಾದ ನ್ಯಾಯಮಾರ್ಗಗಳನ್ನೇ ಹಿಡಿದು ಕಾರ್ಯಮಾಡುತ್ತಾ ಬರುವೆವು.

"ನಾನು ವಾಸಮಾಡುವ ಮ್ಯುನಿಸಿಪಾಲಿಟಿಯಲ್ಲಿ, ಡಿಸ್ಟ್ರಿಕ್ಟಿನಲ್ಲಿ, ಸಂಸ್ಥಾನದಲ್ಲೂ ಜನಭೂಮಿಯಲ್ಲಿ, ಚಕ್ರಾಧಿಪತ್ಯದಲ್ಲಿ ಸತ್ಪ್ರಜೆಯಾಗಿ ಬಾಳುವೆನು.

"ನಾನು ಹಿಂದೂಸ್ಥಾನದ ಸುಪುತ್ರನಾಗಿ ಇರುತ್ತೇನೆಂದು ಸರ್ವಚಿತ್ತನಾದ ಪರಮಾತ್ಮನ ಸನ್ನಿಧಾನದಲ್ಲಿ ನನ್ನ ದೊರೆಗೂ ಅಧಿಪತಿಗೂ, ಸಹೋದರವರ್ಗಕ್ಕೂ, ದೇಶಕ್ಕೂ ವಾಗ್ದಾನವನ್ನು ಕೊಡುತ್ತೇನೆ."

ಆಶ್ಚರ್ಯಕರವಾದ ಗಾಡಿಯು

ಒಂದೇ ಕಂಬಿಯಮೇಲಿನ ಬಂಡಿ ಸಂಚಲತೆಯು.

ಈಚೆಗೆ ಒಬ್ಬ ಇಂಜಿನಿಯರು ತನ್ನ ಬುದ್ಧಿ ಕುಶಲತೆಯನ್ನು ಉಪಯೋಗಿಸಿ ಒಂದು ನೂತನವಾದ ಗಾಡಿಯನ್ನು ತಯಾರುಮಾಡಿರುತ್ತಾನೆ. ಸಾಮಾನ್ಯವಾಗಿ ಗಾಡಿಗಳಿಗೆ ನಾಲ್ಕು ಅಥವಾ ಮೂರು ಚಕ್ರಗಳಾದರೂ ಇರಬೇಕೆಂಬುವುದು ಎಲ್ಲರಿಗೂ ತಿಳಿದಿದೆ. ಬೈಸಿಕಲ್ ಬಂಡಿಗಳಂತೆ ಎರಡು ಚಕ್ರಗಳು ಮಾತ್ರ ಇರುವ ವಾಹನ ಮೂಲಕವೂ ಎತ್ತು ಕುದುರೆಗಳ ಮೂಲಕ ಎಳೆಯಬಹುದು. ಅಂಥಾ ಗಾಡಿಗಳು ನೆಟ್ಟಗೆ ನಿಲ್ಲಲಾರವು. ಆದ್ದರಿಂದ ಗಾಡಿ ಸರಿಯಾಗಿ ನಿಂತುಕೊಳ್ಳುವುದಕ್ಕೆ ಅದರ ಕೆಳಭಾಗದಲ್ಲಿ ನಾಲ್ಕು ಕಡೆಗಳಲ್ಲೂ ಕಾಲುಗಳಂತೆ ನಾಲ್ಕು ಚಕ್ರಗಳಾಗಲಿ, ಇಲ್ಲವಾದರೆ ಮೂರು ಚಕ್ರದ ಗಾಡಿಗಳಿರುವಂತೆ ಮಧ್ಯದಲ್ಲಿ ಎರಡು, ಮುಂಭಾಗದಲ್ಲಿ ಒಂದು ಈ ರೀತಿ ಮೂರು ಚಕ್ರಗಳಾಗಲಿ ಇರಬೇಕಾಗಿರುತ್ತದೆ. ಈಗ ಹೊಸವಾಗಿ ತಯಾರುಮಾಡಿರುವ ಗಾಡಿಗಾದರೋ ಕೆಳಗಡೆ ಒಂದೇ ಚಕ್ರವಿರುತ್ತದೆ, ಇಲ್ಲವೆ ನೆಟ್ಟಗೆ ಒಂದರ ಹಿಂದೊಂದರಂತೆ ಎರಡು ಚಕ್ರಗಳಿರುತ್ತವೆ. ಬೈಸಿಕಲ್ಲಿನಲ್ಲಿ ಒಂದರಹಿಂದೆ ಒಂದರಂತೆ ಎರಡು ಚಕ್ರಗಳಿದ್ದಾಗ್ಯೂ ಬೈಸಿಕಲ್ಲು ನಿಲ್ಲಿಸಿದ ಕೂಡಲೆ ನೆಟ್ಟಗೆ ನಿಲ್ಲಲಾರದೆ, ಎಡಕ್ಕಾಗಲಿ ಬಲಕ್ಕಾಗಲಿ ವಾಲಿಬಿಡುತ್ತದೆ. ಇಂಥಾ ಬೈಸಿಕಲ್ ಮೇಲೆ ಸವಾರಿ ಮಾಡುವವನು ಸರಿಯಾಗಿ ಕುಳಿತು ವೇಗವಾಗಿ ಪೆಡಲ್‌ಗಳನ್ನು ತುಳಿಯುತ್ತಾ ಸಮಾನವಾಗಿ ಬಿಟ್ಟುಕೊಂಡು ಹೋಗುವ ಪಕ್ಷದಲ್ಲಿ ಅದು ಎಂದು ಬೀಳದೆ ಹೋಗುವ ಕೂಡಲೆ ಬೀಳುವುದಿಲ್ಲ. ಅದು ನೆಟ್ಟಗೆ ನಿಲ್ಲದೆ ಅದು ಬೀಳುವುದನ್ನು ನೋಡಿರತಕ್ಕವರಿಗೆಲ್ಲಾ ತಿಳಿದಿದೆ. ಈ ಹೊಸ ಗಾಡಿಯು ಹಾಗಲ್ಲ. ನಿಲ್ಲಿಸಿದ ಕಡೆಯಲ್ಲಿ ಒಂದೇ ಚಕ್ರದ ಮೇಲೆ ನಿಂತುಕೊಳ್ಳುವುದು. ಅದು ವಾಲುವುದೂ ಇಲ್ಲ, ಬೀಳುವುದೂ ಇಲ್ಲ. ಅದನ್ನು ಬೇಕಾದ ಕಡೆಗೆ ತಿರುಗಿಸಬಹುದು, ಮಕ್ಕಳು ಹತ್ತಿ ಕುಳಿತುಕೊಳ್ಳಬಹುದು. ಅದರ ಮೇಲೆ ಕುಳಿತು ಪಕ್ಕಕ್ಕೆ ತಿರುಗಿದರೂ ಏರಿಳಿತವಾಗಿದ್ದರೂ ಸರಾಗವಾಗಿ ಸಂಚರಿಸುವುದು.

ಹಾಗಾದರೆ ಈ ಗಾಡಿಯು ಬೀಳದಿರುವ ಆಶ್ಚರ್ಯಕರವಾದ ಗುಟ್ಟೇನು? ಅದು ಒಂದೇ ಒಂದು ಚಕ್ರದ ಮೇಲೆ ನೆಟ್ಟಗೆ ನಿಲ್ಲುವ ಉಪಾಯವೇನು? ಎಂದು ಆಶ್ಚರ್ಯ ಹುಟ್ಟುವಂತಾಗುತ್ತದೆ. ಆ ಗಾಡಿಯ ಹತ್ತಿರ ನಿಂತು ಕೇಳಿದಲ್ಲಿ ಗುಂಯ್ ಎಂಬ ಶಬ್ದವು ಕೇಳಿಬರುತ್ತದೆ. ಅದರ ಒಳಭಾಗದಲ್ಲಿ ಎರಡು ಚಕ್ರಗಳು ಅತಿ ವೇಗವಾಗಿ ಸುತ್ತುತ್ತಿರುತ್ತವೆ. ಆ ಶಬ್ದಕ್ಕೆ ಕಾರಣ ಅದೇ. ಚನ್ನಾಗಿ ನೋಡಿದರೆ ಬುಗುರಿಯಂಥಾ ಎರಡು ಯಂತ್ರಗಳು ವೇಗವಾಗಿಯೂ ವಿರುದ್ಧವಾಗಿಯೂ ಸುತ್ತುತ್ತಿರುವುದನ್ನು ನೋಡಬಹುದು. ಒಂದು ಬಲಗಡೆಗೂ, ಮತ್ತೊಂದು ಎಡಗಡೆಗೂ ಸುತ್ತುತ್ತಿರುವವು. ಇದೇ ಆ ಗಾಡಿ ಎಲ್ಲಿರುವ ಗುಟ್ಟು. ಬಾಲಕರು ಬುಗುರಿಯನ್ನು ತಿರುಗಿಸಿ ಬಿಟ್ಟ ಕೂಡಲೇ ಅದು ಗಿರ್ರೆಂದು ಸುತ್ತುತ್ತಾ ಇರುವುದೂ, ಆಗ ಅದನ್ನು ನೂಕಿದರೂ ಅದು ಬೀಳದೆ ಮೊನೆಯಮೇಲೆ ನೆಟ್ಟಗೆ ನಿಂತು ಸುತ್ತುತ್ತಿರುವುದೂ, ಜೋರು ಕಡಿಮೆಯಾದಾಗ ಅದು ಉರುಳಿಕೊಳ್ಳುವುದೂ ಎಲ್ಲರಿಗೂ ತಿಳಿದ ವಿಷಯವು. ಹೀಗೆ ಮೊನೆಯ ಸಣ್ಣದಾದ ಕೊನೆಯ ಮೇಲೆ ಸುತ್ತುತ್ತಿರುವ ತನಕ ಬುಗುರಿಯು ಹಾಗೆ ನೆಟ್ಟಗೆ ನಿಂತಿರುವುದೋ ಹಾಗೆಯೇ ಈ ಗಾಡಿಯ ಒಳಗೆ ಇಟ್ಟಿರುವಂಥಾ ಸುತ್ತುವ ಯಂತ್ರಗಳ ವೇಗದಿಂದ ಗಾಡಿಯು ಓಡುವಾಗಲೂ ನಿಲ್ಲಿಸಿದಾಗಲೂ ಆಚೀಚೆಗೆ ವಾಲದೆ ನೆಟ್ಟಗೆ ಒಂದೇ ಚಕ್ರದ ಮೇಲೆ ನಿಂತುಕೊಳ್ಳಬಲ್ಲದು. ಈ ಚಕ್ರಗಳನ್ನು ತಿರುಗಿಸುವುದಕ್ಕಾಗಿಯೇ ಅದರಲ್ಲಿ ಒಂದು ಯಂತ್ರವನ್ನು ಜೋಡಿಸಿದ್ದಾರೆ. ಇದಲ್ಲದೆ ನೆಲದ ಮೇಲೆ ನಿಲ್ಲುವ ಚಕ್ರವನ್ನು ಮುಂದಕ್ಕೆ ತಳ್ಳಿ ಓಡಿಸುವುದಕ್ಕೋಸ್ಕರ ಇನ್ನೊಂದು ಯಂತ್ರವನ್ನು ಇಟ್ಟಿರುವರು.

ಕಾಲಕ್ರಮೇಣ ಈ ಪ್ರಕಾರವಾಗಿ ನೆಟ್ಟಗೆ ನಿಲ್ಲುವಂಥಾ ಗಾಡಿಗಳೇ ಎಲ್ಲಾ ಕಡೆಗೆ ಬರುವವೆನ್ನುವುದಕ್ಕೆ ಸಂದೇಹವಿಲ್ಲ. ಇಂಥಾ ಯಂತ್ರಗಳು ಹಡಗುಗಳಲ್ಲಿ ಬಹಳ ಪ್ರಯೋಜನಕಾರಿಗಳಾಗಿರುತ್ತವೆ. ಸಮುದ್ರದ ಮೇಲೆ ಹೋಗುವಾಗ್ಗೆ ಹಡಗು ಅಲೆಗಳ ಹೊಡೆಯಿಂದ ಎಡಕ್ಕೂ ಬಲಕ್ಕೂ ತೂಗಾಡುವುದರಿಂದ ಅದರಲ್ಲಿ ಕುಳಿತುಕೊಳ್ಳುವವರಿಗೆ ಪಿತ್ತತೆರಳಿ ವಾಂತಿಯಾಗುತ್ತಾ, ಪ್ರಯಾಣವನ್ನು ಅಸಹ್ಯವಾಗಿ ಮಾಡುವುವು. ಆದ್ದರಿಂದ ಈಗೀಗ ಈ ತರದ ಭಾರೀ ಯಂತ್ರಗಳನ್ನು ಹಡಗುಗಳಲ್ಲಿ ಜೋಡಿಸಿ, ಅವು ಎಡಬಲಕ್ಕೆ ಓಲಾಡದಂತೆ ಮಾಡುತ್ತಿದ್ದಾರೆ. ಅಲೆಗಳು ಎಷ್ಟು ಜೋರಾಗಿ ಬಡಿದರೂ ಹಡಗಿನೊಳಗೆ ಒಂದು ಬಲಕ್ಕೂ ಒಂದು ಎಡಕ್ಕೂ ಬಲವಾಗಿ ಸುತ್ತುತ್ತಿರುವಂಥಾ ಯಂತ್ರಗಳಿರೋದರಿಂದ ಹಡಗು ಸ್ವಲ್ಪವೂ ಕದಲದೆ ನೆಟ್ಟಗೆ ನೀರಿನ ಮೇಲೆ ನಿಲ್ಲುವುದಕ್ಕೆ ಸಹಾಯವಾಗಿದೆ. ಇಂಥಾ ಹೊಸ ಯಂತ್ರಕ್ಕೆ ಗೈರೋಸ್ಕೋಪ್ ಎಂದು ಹೆಸರು.

ಒಳದೇಶದ ವೃತ್ತಾಂತಗಳು.

ಬ್ರಿಟಿಷ್ ರೆಸಿಡೆಂಟರವರ ಪತ್ನಿಯರಾದ ಲೇಡಿ ಫ್ರೇಸರ್ ಯವರು ಶರೀರ ಸೌಖ್ಯಕ್ಕಾಗಿ ೩-೪ ತಿಂಗಳ ತನಕ ಶೀಮೆಯಲ್ಲಿದ್ದು ಬರಬೇಕೆಂಬ ಉದ್ದೇಶದಿಂದ ಕಳೆದ ವಾರ ಬೆಂಗಳೂರಿನಿಂದ ಪ್ರಯಾಣ ಮಾಡಿದರು.

ಹೈದರಾಬಾದಿನಲ್ಲಿ ಜಲಪ್ರವಾಹಕ್ಕೆ ಸಿಕ್ಕಿ ನಷ್ಟ ಕಷ್ಟಗಳಿಗೆ ಗುರಿಯಾಗಿರುವವರಿಗೆ ಸಹಾಯಮಾಡುವುದಕ್ಕೋಸ್ಕರ ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀ ಸಂಘದವರು ಕನಿಕರಪಟ್ಟು, ಚಂದಾ ಕೂಡಿಸಲಾರಂಭಿಸಿದಾರೆ.

ಬೆಂಗಳೂರು ಪಟ್ಟಣದ ಲಾಲ್ ಬಾಗ್ ಎಂಬ ಉದ್ಯಾನವನದಲ್ಲಿ ಇಡಿಸಿರುವ ಮೃಗಾಲಯದೊಳಗೆ ಯಾರೋ ಕೆಲವು ಜಿಂಕೆ ಮೊದಲಾದ ಪ್ರಾಣಿಗಳನ್ನು ಕಳುವುಮಾಡಿದರೆಂದೂ, ಪೋಲೀಸಿನವರು ಪತ್ತೆ ಮಾಡುತ್ತಿದ್ದಾರೆಂದೂ ತಿಳಿದು ಬಂದಿದೆ.

ಮುಂದಿನ ತಿಂಗಳಲ್ಲಿ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಬೇರೆ ಬೇರೆ ಮೊಹಲ್ಲೆಗಳ ಪ್ರಜೆಗಳು ಹೊಸ ಪ್ರತಿನಿಧಿಗಳನ್ನು ಚುನಾಯಿಸಬೇಕಾಗಿರುವುದು. ಈ ಚುನಾವಣೆಯು ಬರುವ ವಾರದ ಕಡೇ ಭಾಗದಿಂದ ಪ್ರಾರಂಭವಾಗುವಂತೆ ಕೇಳುತ್ತೇವೆ.

ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್‌ರಾದ ಮಿ ಎಚ್ ಜೆ ಭಾಬಾರವರು ಬೆಂಗಳೂರಿನಲ್ಲಿ ಕಳೆದ ವಾರ ಕುದುರೆ ಸವಾರಿ ಮಾಡುತ್ತಿದ್ದಾಗ ಕೆಳಕ್ಕೆ ಬಿದ್ದು ಸ್ವಲ್ಪ ಪೆಟ್ಟಾಗಿದೆ ಎಂದಲೂ, ಇಷ್ಟರಲ್ಲೇ ಆರೋಗ್ಯವಾಗುವರೆಂತಲೂ ಕೇಳುತ್ತೇವೆ.

ಇಲ್ಲಿನ ದೇವರಾಜ ಮಾರ್ಕೆಟ್ಟಿನ ಬಳಿ ಸಂತೇಪೇಟೆಯಲ್ಲಿರುವ ಸಾಹುಕಾರ್ ಸೀಲಗಿರಿ ಪುಟ್ಟಣ್ಣನವರ ಮಗ ಸಾ, ಕರಿಯಪ್ಪನವರ ಅಂಗಡಿಗೆ ಮೊನ್ನೆ ಸೋಮವಾರ ರಾತ್ರಿ ಯಾರೋ ಕನ್ನಹಾಕಿ ಸರಕನ್ನು ಕಳುವುಮಾಡಿಕೊಂಡು ಹೋದರು. ಪೋಲೀಸಿನವರು ಪತ್ತೆ ತರಮೊದಲು ನಡಿಸುತ್ತಿದ್ದಾರೆ.

ಚನ್ನಪಟ್ಟಣದ ತಾಲ್ಲೂಕಿಗೆ ಸೇರಿದ ರಾಮಗೊಂಡನಹಳ್ಳಿಯಲ್ಲಿ ಒಂದು ಹೆಣ್ಣು ಹುಲಿಯು ಒಂದು ಭಾರೀ ಎತ್ತನ್ನು ಕೊಲ್ಲುತ್ತಿದ್ದದ್ದನ್ನು ನೋಡಿ, ಅದರ ಮಾಲೀಕನಾದ ಚಿಕ್ಕಣ್ಣನೆಂಬಾತನು ಆ ಹುಲಿಯನ್ನು ಕೊಂದುಹಾಕಿದನೆಂತಲೂ ಅದು ಐದು ಅಡಿ ಉದ್ದದ ಮೃಗವೆಂತಲೂ ಪ್ರಕಟವಾಗಿದೆ.

ಕಳೆದ ಸೋಮವಾರ ಬೆಳಗ್ಗೆ ೧೦ ೧೧ ಘಂಟೆ ಹೊತ್ತಿನಲ್ಲಿ ರಾಜಧಾನಿಯ ಅಗ್ರಹಾರದ ದೊಡ್ಡಬೀದಿಯಲ್ಲಿ ರಸ್ತೆಯ ಮೇಲೆ ಉರುಳಿಸುವ ರೋಲರ್ ಕಲ್ಲನ್ನು ಎಳೆಯುತ್ತಿದ್ದಾಗ ಸುಮಾರು ೬ ವರುಷದ ಒಬ್ಬ ಶಿವಾಚಾರದ ಬಾಲಕನು ಹಿಂದಿನಿಂದ ಹೋಗಿ ಆ ಕಲ್ಲಿನ ಕೆಳಗೆ ಸಿಕ್ಕಿ ಸ್ವಲ್ಪ ಹೊತ್ತಿನೊಳಗಾಗಿ ಕಾಲವಾದನು.

ಕಳೆದ ಸೋಮವಾರ ಸಾಯಂಕಾಲ ದಿವಾನ್ ಮಿ ಮಾಧವರಾಯರು ಬೆಂಗಳೂರಿನಲ್ಲಿ ತಮ್ಮ ಪಟೇಲ್ ಭವನ್ ಎಂಬ ಬಂಗಲೆಯೊಳಗೆ ಒಂದು ಸಂತೋಷಕೂಟವನ್ನು ನಡಿಸಿದರು. ಯೂರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರನ್ನು ಕರೆಸಿಕೊಂಡು, ಅವರಿಗೆ ಫಲಾಹಾರಗಳನ್ನು ಒದಗಿಸಿ ಸಂತೋಷಪಡಿಸಿದರು.

ದೊಡ್ಡಬಳ್ಳಾಪುರದ ವ್ಯವಸಾಯದ ಬ್ಯಾಂಕಿನ ಏಜಂಟಾಗಿದ್ದ ವೆಂಕಟರಂಗಪ್ಪ ಎಂಬಾತನು ಆ ಬ್ಯಾಂಕಿನ ಬಾಬತ್ತು ೩೦೦ ಚಿಲ್ಲರೆ ರೂಪಾಯಿ ದುರ್ವಿನಿಯೋಗ ಮಾಡಿದ್ದಕ್ಕಾಗಿ ಮೊಕದ್ದಮೆ ಆಗಿ, ಮ್ಯಾಜಿಸ್ಟ್ರೇಟ್ ಮೈ॥ ನಾರಣ್ಣಯ್ಯಂಗಾರ್ಯ ಕೋರ್ಟಿನಲ್ಲಿ ದಂಡಾಸ್ತಿ ಆಗಿ, ಆತನಿಗೆ ಮೂರು ತಿಂಗಳ ಕಠಿಣ ಸಜಾವೂ ೪೦೦ ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿತು.

ಧಾರಣೆ ಬೆಲೆಗಳು ಬಹಳ ಹೆಚ್ಚಿರುವುದನ್ನೂ, ಬಡವರು ಜೀವನಕ್ಕೆ ಕಷ್ಟಪಡುತ್ತಿರುವುದನ್ನೂ ನೋಡಿ, ಬೆಂಗಳೂರು ಡೆಪ್ಯುಟಿ ಕಮಿಷನರ್ ಮಿ ಬಿ ಜೆ ಕುಮಾರಸ್ವಾಮಿ ಶಾಸ್ತ್ರಿ ಎಂಬವರು ಅಲ್ಲಿನ ಪೇಟೆ ವರ್ತಕರ ಕೂಡ ಈ ವಿಷಯವನ್ನು ಕುರಿತು ಮಾತನಾಡಿದ ಹಾಗೂ, ವರ್ತಕರು ಧಾರಣೆಯನ್ನು ಇಳಿಸುವ ಭಾಗದಲ್ಲಿ ಆಲೋಚನೆ ಮಾಡುತ್ತಿರುವುದಾಗಿಯೂ ಕೇಳುತ್ತೇವೆ.

ಮೈಸೂರು ರಾಜಗುರುಗಳಾದ ಶ್ರೀ ಪರಕಾಲ ಮಠದ ಸ್ವಾಮಿಗಳಿಗೆ ಕೆಲವು ವರುಷಗಳಿಂದ ಒಂದು ಕಣ್ಣು ಊನವಾಗಿತ್ತು. ಕಳೆದ ಶುಕ್ರವಾರ ಆವಾಮಿಯು ಸಿವಿಲ್ ಸರ್ಜನ್‌ರಾದ ಮಿ ಟಿ ಎಸ್ ನಂಜಪ್ಪನವರು ಮಠಕ್ಕೆ ಹೋಗಿ ಸ್ವಾಮಿಗಳ ಕಣ್ಣಿಗೆ ಶಸ್ತ್ರಚಿಕಿತ್ಸೆ ಮಾಡಿಬಂದು ದಿನದ ನೋಡುತ್ತಿದ್ದಾರೆ. ಆ ಕಣ್ಣಿನ ಬಾಧೆಯು ಒಂದೆರಡು ವಾರಗಳೊಳಗಾಗಿ ನಿವಾರಣೆಯಾಗುವುದೆಂದು ಕೇಳುತ್ತೇವೆ.

ಮುಂದಿನ ತಿಂಗಳು ೩ನೇ ತಾ ಭಾನುವಾರ ಶ್ರೀಮನ್ಮಹಾರಾಜರವರೂ ಮಹಾರಾಣಿ ಶ್ರೀಯವರೂ ಕೆಲವು ರಾಜಬಂಧುಗಳವರೂ ರಾಜಧಾನಿಯಿಂದ ನಂಜನಗೂಡು ಮಾರ್ಗವಾಗಿ ನರಸೀಪುರಕ್ಕೆ ದಯಮಾಡಿ, ಅಲ್ಲಿಂದ ತಲಕಾಡು ಮುಡುಕತೊರೆಗಳಲ್ಲಿ ಪಂಚಲಿಂಗದರ್ಶನಮಾಡಿಕೊಂಡು ಹರಕೆ ಮುಂತಾದದ್ದನ್ನು ಸಲ್ಲಿಸಿ, ಬನ್ನೂರು ಮಾರ್ಗವಾಗಿ ಶ್ರೀರಂಗಪಟ್ಟಣದ ಮೇಲೆ ತಾ ೧೫ಕ್ಕೆ ವಾಪಸು ರಾಜಧಾನಿಗೆ ದಯಮಾಡುವವರಾಗಿದ್ದಾರೆಂದು ಕೇಳುತ್ತೇವೆ.

ಶ್ರೀಮನ್ ಯುವರಾಜರವರು ನೆನ್ನೆ ಮೋಟಾರ್ ಗಾಡಿಯಲ್ಲಿ ಕುಳಿತು ರಾಜಧಾನಿಯಿಂದ ಹೊರಟು ನಂಜನಗೂಡು, ಗುಂಡ್ಲುಪೇಟೆ, ಬೇಗೂರು ಮಾರ್ಗವಾಗಿ ಗೋಪಾಲಸ್ವಾಮಿಬೆಟ್ಟಕ್ಕೆ ಚಿತ್ತೈಸಿದರು. ಅವರ ಕೂಡ ಡಾಕ್ಟರ್ ಬ್ರೀಕ್ ಬ್ಯಾಕ್‌ವೆಲ್‌ರವರೂ, ಡಾಕ್ಟರ್ ರಂಗಣ್ಣನವರೂ, ಕೆ ವೆಂಗಳಾಚಾರ್ಯರೂ ಪ್ರಯಾಣ ಮಾಡಿದರು. ಅವರು ಅಲ್ಲಿ ಸುಮಾರು ನಾಲ್ಕು ವಾರಗಳ ತನಕ ಇದ್ದು ವಾಪಸು ದಯಮಾಡುವವರಾಗಿದ್ದಾರೆಂದು ಕೇಳುತ್ತೇವೆ.

ಮದರಾಸ್ ಪಟ್ಟಣದಲ್ಲಿ ಕಳೆದ ವಾರ ಹವಾ ಬದಲಾವಣೆ ಹೊಂದಿ ೩-೪ ದಿನಗಳಲ್ಲಿ ಸುಮಾರು ೧೬ ಅಂಗುಲ ಪ್ರಮಾಣದಷ್ಟು ಮಳೆ ಸುರಿಯಿತು. ಆ ಪ್ರಾಂತ್ಯದಲ್ಲಿ ಕಪ್ಪಿದ ಮೋಡಗಳ ದೆಸೆಯಿಂದಲೇ ನಮ್ಮ ಸಂಸ್ಥಾನಕ್ಕೂ ಕೆಲವು ಕಡೆಗಳಲ್ಲಿ ಸ್ವಲ್ಪ ಮಳೆ ಸುರಿದಿದೆ. ಜನರು ಮದರಾಸಿನಲ್ಲಿ, ಸಮುದ್ರದ ಅಲೆಗಳೆಲ್ಲಾ ನಿಂತುಹೋಯಿತೆಂತಲೂ, ಏನೋ ಅನಾಹುತವಾಗುವುದೆಂತಲೂ ವರ್ತಮಾನ ಹುಟ್ಟಿಸಿದ್ದರು. ಇದಕ್ಕೆ ಸ್ವಲ್ಪವೂ ಆಧಾರವಿಲ್ಲವೆಂದು ತಿಳಿಯುತ್ತದೆ.

ಕಳೆದ ಸೋಮವಾರ ರಾತ್ರಿ ರಾಜಧಾನಿಯ ಚಾಮುಂಡೀ ಬೆಟ್ಟದ ತಪ್ಪಲಲ್ಲಿರುವ ಕುದುರೇ ಜೂಜಿನ ಮೈದಾನದಲ್ಲಿ ಶ್ರೀಮನ್ಮಹಾರಾಜರವರು ಬಹು ಅಪೂರ್ವವೂ ನವೀನವೂ ಆದ ಒಂದು ಸಂತೋಷಕೂಟವನ್ನು ಆಗಮಾಡಿಸಿದರು. ರಾಜಧಾನಿಯಲ್ಲಿರುವ ಯೂರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಕರೆಸಲ್ಪಟ್ಟಿದ್ದರು. ನವರಾತ್ರಿ ಉತ್ಸವಗಳ ದಸ್ಕತ್ತಿಗಾಗಿ ರಾಜಧಾನಿಗೆ ಕರೆಸಲ್ಪಟ್ಟಿದ್ದ ಕಮಾಂಡ್ ಬಾರ್ ಎಂಬ ಕಾಲ್ಬಲದ ಸೈನಿಕರಿಂದ ಪಂಜುಗಳ ಡ್ರಿಲ್ ಎಂಬ ಕವಾಯತನ್ನು ನೇತ್ರಾನಂದಕರವಾಗಿಯೂ ವಿಚಿತ್ರವಾಗಿಯೂ ಮಾಡಿಸಿದರು. ಸೈನಿಕರು ಬಿಳಿಯ ಬಟ್ಟೆಗಳನ್ನು ಹಿಡಿದು, ಬ್ಯಾಂಡಿನವರ ಮನೋಹರವಾದ ವಾದ್ಯಲಯಕ್ಕೆ ಸರಿಯಾಗಿ ಆ ಬೆಳಕಿನ ದೊಣ್ಣೆಗಳನ್ನು ಕ್ರಮವಾಗಿಯೂ ನಾಲ್ಕುನಾಲ್ಕಾಗಿಯೂ ತಿರುಗಿಸುತ್ತಾ ಕವಾತು ಮಾಡಿದರು. ಅನಂತರ ನಾಲ್ಕು ಕಂಪನಿಗಳ ಶಿಪಾಯಿಗಳು ಅಂದರೆ ೩೬೦ ಮಂದಿ ಪಂಜು ಕಟ್ಟಿದ ದೊಣ್ಣೆಗಳನ್ನು ಹಿಡಿದು ನಾನಾಪ್ರಕಾರವಾದ ಮತ್ತು ಬ್ಯಾಂಡ್ ವಾದ್ಯದ ಲಯಕ್ಕನುಸಾರವಾದ ಕವಾತನ್ನು ಮಾಡಿದರು. ಸುಮಾರು ೧,೫೦೦ ಮತ್ತು ಪಟಾಕಿಗಳನ್ನು ಅವರು ಸಾಲುಕಟ್ಟಿ ನಿಂತು ನೂರುಬಾರದಂತೆ ಹಚ್ಚಿ ಸುಟ್ಟರು. ಇದಾದ ಮೇಲೆ ಶ್ರೀಮನ್ಮಹಾರಾಜರವರ ಆಜ್ಞಾನುಸಾರವಾಗಿ ಪ್ರತಿ ಒಬ್ಬ ಸಿಪಾಯಿಗೂ ಐದು ರೂಪಾಯಿನಂತೆ ಬಹುಮಾನ ಕೊಡಲಾಯಿತು. ಇಂಗ್ಲಿಷ್ ಬ್ಯಾಂಡಿನವರು ಬಹು ಮನೋಹರವಾದ ರಾಗಗಳನ್ನು ನುಡಿಸಿ ಸಕಲರನ್ನೂ ಸಂತೋಷಪಡಿಸಿ, ಕಡೆಯಲ್ಲಿ ಎಲ್ಲರೂ ಎದ್ದುನಿಂತಿರುವಾಗ್ಗೆ ಸಲಾಂ ಬಾಜಾ ನುಡಿಸಿದರು. ಅಲ್ಲಿಗೆ ಅಂದರೆ ಬೆಳಗಿನ ಝಾವದ ೧ ಗಂಟೆಯ ಹೊತ್ತಿಗೆ ಆ ದಿನದ ಸಂತೋಷಕಾರ್ಯಗಳು ಮುಕ್ತಾಯವಾದವು. ಯೂರೋಪಿಯನ್ನರಿಗೂ, ಅರಸುಗಳಿಗೂ, ಬ್ರಾಹ್ಮಣರೇ ಮೊದಲಾದ ಅಧಿಕಾರಿಗಳಿಗೂ ದೊಡ್ಡ ಮನುಷ್ಯರಿಗೂ, ಅಂದರೆ ಬಹುಮಂದಿಯ ಸೈನಿಕರಿಗೂ, ಶಿಪಾಯಿಗಳಿಗೂ ಪ್ರತ್ಯೇಕಪ್ರತ್ಯೇಕವಾದ ಡೇರಾಗಳನ್ನು ಹಾಕಿಸಿ, ಅವರುಗಳಿಗೆ ಅನುಗುಣವಾದ ಫಲಹಾರಾದಿಗಳನ್ನು ಕೊಡಿಸಿದರು. ಇಂಥಾ ಸಂತೋಷಕೂಟವು ಇದುವರೆಗೆ ರಾಜಧಾನಿಯಲ್ಲಿ ನಡೆದಿರಲಿಲ್ಲ. ಅದು ಮೊದಲಿನಿಂದ ಕಡೆಯ ವರೆಗೂ ಬಹಳ ಅಚ್ಚುಕಟ್ಟಾಗಿಯೂ, ತುಂಬಾ ಶ್ಲಾಘನೀಯವಾಗಿಯೂ ನಡೆಯಿತೆಂದು ತಿಳಿಸಲು ಸಂತೋಷಪಡುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಪೋಲೀಸ್ ಆ ಸೂಪರಿಂಟೆಂಡೆಂಟ್ ಮಿ ಬಿ ರಾಮಸ್ವಾಮಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಆಗಾಯಿತು ಒಂದು ತಿಂಗಳು ಹತ್ತೊಂಬತ್ತು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ಸೆಂಟ್ರಲ್ ಜೈಲಿನ ಚೀಫ್ ಜೈಲರಾದ ಮೈ॥ ಆರ್ ಎಸ್ ನಾಗಪ್ಪಾಜಿರಾಯರನ್ನು ೫ ನೇ ಕ್ಲಾಸ್ ಅ ಕಮಿಷನರಾಗಿ ನೇಮಕ ಮಾಡಿದೆ. ಇವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿತ್ರದುರ್ಗದ ಡಿಸ್ಟ್ರಿಕ್ಟ್ ಪೋಲೀಸ್ ಅ॥ ಸೂಪರಿಂಟೆಂಡೆಂಟರಾಗಿ ಕೆಲಸ ನಡೆಸತಕ್ಕದ್ದು.

ಶಿಕಾರೀಪುರದ ಸಬ್ ಡಿವಿಜನ್ ಆಫೀಸರ್ ಆ ಕಮಿಷನರ್ ಮೈ॥ ಎಂ ಕೃಷ್ಣಸ್ವಾಮಿ ಐಯಂಗಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹಾಸನದ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮಿ ಎಂ ರಂಗರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶಿಕಾರೀಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು. ಇವರಿಗೆ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಕೊಟ್ಟಿದೆ.

ಅಸಿಸ್ಟೆಂಟ್ ಕಮಿಷನರ್ ಮಿ ಬಿ ವೆಂಕಟರಾಯರಿಗೆ ಕೊಟ್ಟಿರುವ ಹದಿಮೂರು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಅವರತ್ತೆರಡು ದಿನಗಳಿಗೆ ಜಾಸ್ತಿ ಮಾಡಿದೆ.

ವೈದ್ಯ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿ ಹುಕುಂ ಮಾಡಲಾಗಿದೆ — ಮಿ ಕೆ ಕೃಷ್ಣಯ್ಯರವರನ್ನು ಶಿಕಾರಿಪುರದ ಆಸ್ಪತ್ರೆಯಿಂದ ನಂಜನಗೂಡು ಆಸ್ಪತ್ರೆಗೆ, ಮಿ ಕೆ ಅನಂತರಾಮಯ್ಯಂಗಾರ್ಯರನ್ನು ನಂಜನಗೂಡು ಆಸ್ಪತ್ರೆಯಿಂದ ಪ್ಲೇಗ್ ಶಿಬಿರಕ್ಕೆ ಹಾಕುವ ಇನಾಕ್ಯುಲೇಷನ್ ಸ್ಟಾಫಿಗೆ.

ಮುಂದೆ ಹೇಳುವ ಅಮಲ್ದಾರ್ ವರ್ಗಾವರ್ಗಿ ಹುಕುಂ ಮಾಡಲಾಗಿದೆ — ಮೈ॥ ಎ ಆರ್ ನಾರಾಯಣಸ್ವಾಮಿ ನಾಯಡುರವರನ್ನು ಮಂಜರಾಬಾದಿನಿಂದ ಅರಸೀಕೆರೆ ತಾಲ್ಲೂಕಿಗೆ, ಮಿ ಸಿ ವಿ ನಾರಾಯಣರಾಯರನ್ನು ಅರಸೀಕೆರೆಯಿಂದ ಹೊಳೆನರಸೀಪುರದ ತಾಲ್ಲೂಕಿಗೆ, ಹೊಳೆನರಸೀಪುರದ ತಾಲ್ಲೂಕಿಗೆ ವರ್ಗಪಟ್ಟು ರಜದ ಮೇಲಿರುವ ಮಿ ಸಿ ನಾರಾಯಣರಾಯರನ್ನು ಮಂಜರಾಬಾದ್ ತಾಲ್ಲೂಕಿಗೆ.

ಅ ಸರ್ಜನ್ ಮೈ॥ ಎಸ್ ರಂಗಣ್ಣನವರನ್ನು ಜೂನ್ ತಾ. ೧೫ ರಿಂದ ೧ನೆ ಕ್ಲಾಸಿಗೆ ಬಡ್ತಿ ಮಾಡಿದೆ.

ಎರಡು ತಿಂಗಳು ಇಪ್ಪತ್ತೆಂಟು ದಿನಗಳ ಪ್ರಿವಿಲೆಜ್ ರಜಾ ಪಡೆದಿದ್ದ ಮೈ॥ ಎಚ್ ಎಚ್ ಸ್ಪಾರ್ಕ್ಸ್‌ಯವರು ವಾಪಸು ಬಂದು ಅಕ್ಟೋಬರ್ ತಾ ೧೩ ರಲ್ಲಿ ಮೈ॥ ಎಂ ನಾರಾಯಣರಾಯರಿಂದ ಎಕ್ಸೈಸ್ ಕಮಿಷನರ ಕೆಲಸದ ಛಾರ್ಜನ್ನು ವಹಿಸಿಕೊಂಡರು.

ಕಡೂರ್ ಡಿವಿಜನ್ ಸಬ್ ಅ ಇಂಜನಿಯರ್ ಮೈ॥ ಕೆ ಎನ್. ವಾಸುದೇವರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅಮೆರಿಕಾ ದೇಶದಲ್ಲಿ ಕಿತ್ತಲೇ ಹಣ್ಣು ಬೆಳೆಯುವುದು.

ಮೈಸೂರು ದೇಶದಲ್ಲಿ ವಾಸಮಾಡುವವರನ್ನು ಕಿತ್ತಲೆಹಣ್ಣು ಎಲ್ಲಿಂದ ಬರುವುದೆಂದು ಪ್ರಶ್ನೆ ಮಾಡಿದರೆ ಅವರು ಕೊಡಗು ಸೀಮೆಯಿಂದ ಬರುತ್ತದೆಂದು ಉತ್ತರ ಕೊಡುವರು ಕೊಡಗು ಸೀಮೆಯ ಕಾಡುಗಳಲ್ಲಿ ಕಿತ್ತಲೆ ಮರಗಳು ವಿಶೇಷವಾಗಿ ಬೆಳೆಯುವಷ್ಟು ಬೇರೆ ಯಾವ ಕಡೆಯಲ್ಲಿಯಾದರೂ ಬೆಳೆಯುವುದಿಲ್ಲ. ಆ ಪ್ರಾಂತ್ಯದ ಭೂಗುಣವೇ ಇದಕ್ಕೆ ಕಾರಣವಾಗಿರುತ್ತದೆ.

ಕಿತ್ತಲೆ ಹಣ್ಣಿನ ಫಸಲನ್ನು ಅಭಿವೃದ್ಧಿ ಮಾಡುವುದಕ್ಕೆ ನಮ್ಮ ದೇಶದ ಜಮೀನುದಾರರು ಯಾವ ಪ್ರಯತ್ನವನ್ನೂ ಮಾಡುತ್ತಲಿಲ್ಲವೆಂದು ಕಂಡು ಬರುತ್ತದೆ. ಈಚೀಚೆಗೆ ಅಮೆರಿಕಾ ದೇಶದವರು ಕಿತ್ತಲೆ ಗಿಡಗಳನ್ನು ಕ್ಯಾಲಿಫೋರ್ನಿಯಾ ಪ್ರಾಂತ್ಯದಲ್ಲಿ ನೆಡುತ್ತಲೂ, ಕಿತ್ತಲೆ ಫಸಲನ್ನು ಅಭಿವೃದ್ಧಿ ಮಾಡುತ್ತಲೂ ಬಂದಿರುವರು. ಈ ವರುಷ ಫೆಬ್ರವರಿ ತಿಂಗಳಿನ ಮೊದಲಿನಿಂದ ಮೇ ತಿಂಗಳು ಆಖೈರು ವರಿವಿಗೆ ಇಪ್ಪತ್ತೆರಡು ಸಾವಿರ ಬಂಡಿಗಳ ತುಂಬಾ ಅಂದರೆ ಸುಮಾರು ಅರವತ್ತೈದು ಲಕ್ಷ ಬುಟ್ಟಿಗಳ ತುಂಬಾ ಕಿತ್ತಲೆ ಹಣ್ಣುಗಳನ್ನು ಬೇರೆ ರಫ್ತು ಮಾಡಿದರು ಇವುಗಳ ಬೆಲೆಯು ಒಂದು ಸಾವಿರದ ಎಂಟುನೂರು ಲಕ್ಷ ರೂಪಾಯಿಗಳಾಗುತ್ತವೆ (ರೂ ೧,೮೦೦,೦೦,೦೦೦). ವಾಚಕರೇ, ಇದನ್ನು ನೋಡಿದರೆ ಬಹಳ ಆಶ್ಚರ್ಯಕರವಾಗುವುದಿಲ್ಲವೇ ?

ಹದಿನೆಂಟು ವರುಷಗಳ ಹಿಂದೆ ಕ್ಯಾಲಿಫೋರ್ನಿಯಾ ಪ್ರಾಂತ್ಯದಲ್ಲಿ ಕಿತ್ತಲೆ ಗಿಡಗಳೇ ಇರಲಿಲ್ಲ. ಆದರೂ ಅಮೆರಿಕಾ ದೇಶದವರ ಬುದ್ಧಿಕುಶಲತೆಯಿಂದ ಇಷ್ಟು ಆಶ್ಚರ್ಯಕರವಾದ ಬದಲಾವಣೆಯಾದದ್ದು ನಮ್ಮೆಲ್ಲರಿಗೂ ಒಳ್ಳೇ ಪಾಠವನ್ನು ಕಲಿಸುತ್ತದಲ್ಲವೇ ? ಕಿತ್ತಲೆ ಹಣ್ಣನ್ನು ಬೆಳೆಸುವುದಕ್ಕೆ ಅಮೆರಿಕಾ ದೇಶದ ರೈತರು ಬಹಳ ಬುದ್ಧಿಯನ್ನು ವಿನಿಯೋಗಿಸುತ್ತಾರೆ. ಮರಗಳಿಗೆ ಗೊಬ್ಬರವನ್ನು ಹಾಕುವಾಗಲೂ ಹಣ್ಣುಗಳನ್ನು ಕೀಳುವಾಗಲೂ ಅವರು ಬಹು ಎಚ್ಚರಿಕೆಯುಳ್ಳವರಾಗಿರುತ್ತಾರೆ. ಹಣ್ಣು ಕೀಳುವುದಕ್ಕೆ ಅನೇಕ ಚಮತ್ಕಾರವಾದ ಯಂತ್ರಗಳನ್ನು ನಿರ್ಮಿಸಿರುತ್ತಾರೆ ಈ ಕೆಲಸದಲ್ಲಿ ಹಣ್ಣುಗಳು ಕೆಳಗೆ ಬಿದ್ದು ಪೆಟ್ಟು ತಿಂದು ಕೊಳೆತು ಹೋಗುವುದು ಅಪರೂಪ. ಹಣ್ಣುಗಳನ್ನು ಕಿತ್ತ ಮೇಲೆ ಅವುಗಳನ್ನು ಚೆನ್ನಾಗಿ ತೊಳೆದು ಮೂರುದಿನಗಳ ತನಕ ಅವುಗಳಲ್ಲಿ ನಾನಾತರವಾದ ಬದಲಾವಣೆಗಳನ್ನು ತರುವರು. ಆ ಮೇಲೆ ಅವುಗಳನ್ನು ಪೆಟ್ಟಿಗೆಗಳಲ್ಲಿ ತುಂಬಿ ನಾನಾ ಕಡೆಗಳಿಗೆ ರಫ್ತು ಮಾಡುವರು. ಕ್ಯಾಲಿಫೋರ್ನಿಯಾದಲ್ಲಿ ನಾನಾ ತರದ ಕಿತ್ತಲೆ ಹಣ್ಣುಗಳನ್ನು ಬೆಳೆಯುತ್ತಾರೆ. ಕೆಲವು ಜಾತಿಯ ಕಿತ್ತಲೆ ಹಣ್ಣುಗಳನ್ನು ಸಿಪ್ಪೆಯ ಸಹಿತವಾಗಿಯೇ ತಿನ್ನಬಹುದಂತೆ ಕ್ಯಾಲಿಫೋರ್ನಿಯಾ ದೇಶದಲ್ಲಿ ಸದ್ಯ ಇನ್ನೂರೈವತ್ತು ಲಕ್ಷ ಕಿತ್ತಲೆ ಗಿಡಗಳಿವೆಯೆಂದು ಕಂಡುಬರುತ್ತದೆ. ನಾಲ್ಕು ವರುಷಗಳ ತನಕ ಅವು ಹಣ್ಣು ಬಿಡುವುದಿಲ್ಲ ನಾಲ್ಕನೇ ವರುಷ ಒಂದೊಂದು ಗಿಡವು ಹತ್ತಿಪ್ಪತ್ತು ಹಣ್ಣುಗಳನ್ನು ಬಿಟ್ಟರೆ ಹೆಚ್ಚು. ಆದರೆ ಗಿಡಕ್ಕೆ ಇಪ್ಪತ್ತು ವರುಷಗಳು ತುಂಬಿದರೆ ಅದು ಫಸಲೊಂದಕ್ಕೆ ಎರಡು ಸಾವಿರದಿಂದ ಎರಡು ಸಾವಿರದ ಐನೂರು ಹಣ್ಣುಗಳ ತನಕ ಬಿಡುವುದು ವರುಷ ವರುಷವೂ ಕಿತ್ತಲೆ ಗಿಡವು ಫಲವನ್ನು ಹೆಚ್ಚಾಗಿ ಬಿಡುವುದೇ ಹೊರತು ಕಡಮೆ ಬಿಡುವುದಿಲ್ಲ ಕೆಲವು ಗಿಡಗಳು ಇಪ್ಪತ್ತು ಅಡಿಗಳ ಉದ್ದ ಬೆಳೆದು ಹನ್ನೆರಡು ಅಡಿಗಳ ಅಗಲ ತನ್ನ ರೆಂಬೆಗಳನ್ನು ಹರಡುವುದು ಅಂಥಾ ಗಿಡಗಳು ಫಸಲೊಂದಕ್ಕೆ ಮೂರು ಸಾವಿರದಿಂದ ನಾಲ್ಕು ಸಾವಿರದ ವರಿವಿಗೂ ಹಣ್ಣುಗಳನ್ನು ಬಿಡುವವು. ಕಿತ್ತಲೆ ಗಿಡಗಳು ಜಾಗ್ರತೆಯಲ್ಲಿ ಬಂಜೆಯಾಗುವುದಿಲ್ಲ ಅವು ನೂರು ಅಥವಾ ನೂರೈವತ್ತು ವರುಷಗಳ ವರಿವಿಗೆ ಪುಷ್ಕಳವಾದ ಫಸಲನ್ನು ಕೊಡುವವು ವ್ಯವಸಾಯ ಕ್ರಮದಲ್ಲಿ ಬುದ್ಧಿವಂತಿಕೆ ಇದ್ದರೆ ಇಂಥಿವಾ ದೇಶವು ಅಭಿವೃದ್ಧಿಯಾಗಬಹುದಲ್ಲವೆ ?

ಅಮೆರಿಕಾ ದೇಶದವರು ಕಿತ್ತಲೆ ಹಣ್ಣುಗಳನ್ನು ಮಾರುವುದಕ್ಕೆ ದೊಡ್ಡ ದೊಡ್ಡ ಪ್ರದರ್ಶನಗಳನ್ನು ನಡಿಸುವುದುಂಟು. ಇಂಥಾ ಪ್ರದರ್ಶನಗಳಿಗೆ ಕಿತ್ತಲೆ ಹಣ್ಣುಗಳು ಹೊರತು ಮತ್ತಾವ ಪದಾರ್ಥವು ಬರಕೂಡದೆಂದು ವಿಧಿ ಇರುತ್ತದೆ. ಕಿತ್ತಲೆಹಣ್ಣು ಬೆಳೆಯುವ ರೈತರು ಒಳ್ಳೊಳ್ಳೇ ಬಹುಮಾನಗಳನ್ನು ಪಡೆಯುವುದಕ್ಕೆ ತಮ್ಮ ಬುದ್ಧಿ ಚಮತ್ಕಾರದಿಂದ ವಿಚಿತ್ರವಾದ ಕಿತ್ತಲೆ ಹಣ್ಣುಗಳನ್ನು ಬೆಳೆದು ತರುವರು. ಸೂರ್ಯೋದಯವಾದ ಸಮಯದಲ್ಲಿ ಅಮೆರಿಕಾ ದೇಶದ ಕಿತ್ತಲೆ ತೋಟಗಳನ್ನು ನೋಡುವುದು ಮನಸ್ಸಿಗೆ ಹರ್ಷವನ್ನುಂಟುಮಾಡತಕ್ಕದ್ದಾಗಿರುತ್ತದೆ ಕಣ್ಣುಸುಟ್ಟಕಡ್ಡಿ ಮರಗಳ ಮೇಲೆ ಹೊಂಬಣ್ಣದ ಕಿತ್ತಲೆ ಹಣ್ಣುಗಳು ಸಾವಿರ ಗಟ್ಟಲೆಯಾಗಿ ಕಂಡುಬರುವವು. ಸಮರ್ಥರಾದ ರೈತರನ್ನು ಪಡೆದಿರುವ ಅಮೆರಿಕಾದೇಶವು ಐಶ್ವರ್ಯದಿಂದ ತುಂಬಿ ತುಳುಕುತ್ತಿರುವುದು ಆಶ್ಚರ್ಯವೇ !

ಮೈಸೂರು ಮುಸಲ್ಮಾನರ ಸಂಘವು.

ಮೊದಲನೇ ವಾರ್ಷಿಕೋತ್ಸವವು.

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯ ಲಷ್ಕರ್ ಮೊಹಲ್ಲೆಯಲ್ಲಿರುವ ಮಜಲಿಸ್-ರಿಫಾಹುಲ್-ಮುಸ್ಲಮೀನ್ ಎಂಬ ಮಹಮ್ಮದೀಯ ಸಂಘದ ಮೊದಲನೇ ವಾರ್ಷಿಕೋತ್ಸವವು ಆ ಸಂಘದ ಸ್ವಂತ ಕಟ್ಟಡದಲ್ಲಿ ಜರುಗಿತು ಆ ಕಟ್ಟಡವನ್ನೂ ಅದರ ಮುಂಭಾಗದಲ್ಲಿ ಹಾಕಿದ್ದ ಡೇರಾ ಮತ್ತು ಚಪ್ಪರಗಳನ್ನೂ ಅಲಂಕಾರ ಮಾಡಿದ್ದರು. ನೂರಾರು ಮಂದಿ ಮಹಮ್ಮದೀಯ ದೊಡ್ಡ ಮನುಷ್ಯರೂ, ಹಿಂದೂ ವರ್ತಕರೂ ಅಧಿಕಾರಿಗಳೂ ದೊಡ್ಡಮನುಷ್ಯರೂ ಯೂರೋಪಿಯನ್ನರೂ ಸಭೆಯಲ್ಲಿ ಹಾಜರಾಗಿದ್ದರು. ಡಿಪ್ಟಿ ಕಮಿಷನರ್ ಮೆ|| ಎಂ. ಕಾಂತರಾಜೇ ಅರಸಿನವರು ದಯಮಾಡಿ ಸಭಾನಾಯಕರಾಗಿ ಮೈಸೂರು ಬಡಾಮಕಾನ್ ಸಜ್ಜಾದಿಯಾ ಪೀರ್ ಸೈಯದ್ ವಲಿ ಮೊಹಿದ್ದೀನ್ ಬಾದ್‌ಷಾ ಸಾಹೇಬ್ ಖಾದ್ರಿ ಯವರ ಬಲಭಾಗದಲ್ಲಿ ಪ್ಲಾಟ್ ಫಾರಮಿನ ಮೇಲೆ ಕುಳಿತುಕೊಂಡರು. ಆಗ ಮಹಮ್ಮದೀಯ ದೊಡ್ಡ ಮನುಷ್ಯರೂ ಬಾಲಕರೂ ಇಂಗ್ಲಿಷ್ ಮತ್ತು ಉರ್ದು ಭಾಷೆಯಲ್ಲಿ ಭಾಷಣಗಳನ್ನು ಮಾಡಿದ್ದು, ಹಾಡು ಮುಂತಾದ್ದನ್ನು ಹೇಳಿದ್ದೂ ಮನೋಹರವಾಗಿತ್ತು.

ಆ ಸಂಘದ ಪ್ರೆಸಿಡೆಂಟರಾದ ಮೆ| ಮಹಮದ್ ಜಾಫರ್ ಯವರು ಇಂಗ್ಲಿಷಿನಲ್ಲೂ, ಸೆಕ್ರೆಟರಿ ಮೆ| ರಹಮತುಲ್ಲಾ ಅಹಮದ್ ಸೇಟ್ ಯವರು ಉರ್ದು ಭಾಷೆಯಲ್ಲೂ ಸಂಘದ ವಾರ್ಷಿಕ ರಿಪೋರ್ಟನ್ನು ಓದಿ ತಿಳಿಸಿದರು. ಈ ರಿಪೋರ್ಟಿನ ಮುಖ್ಯ ಭಾಗಗಳನ್ನು ಇಲ್ಲಿ ಸೂಚಿಸುವೆವು.—ಬಡವರಾಗಿ ತೊಂದರೆ ಪಡುತ್ತಿರುವ ವಿಧವೆಯರ, ಘೋಷಾ ಹೆಂಗಸರ, ಅನಾಥ ಬಾಲಕ ಮತ್ತು ಬಾಲಕಿಯರ ತೊಂದರೆಯನ್ನು ತಪ್ಪಿಸಿ ಸಹಾಯ ಮಾಡುವ ಮುಖ್ಯ ಉದ್ದೇಶದಿಂದಲೂ ಮತ್ತು ಸ್ತ್ರೀ ವಿದ್ಯಾಭ್ಯಾಸವನ್ನು ಅಭಿವೃದ್ಧಿಪಡಿಸಲೂ ಈ ಸಂಘವು ಸ್ಥಾಪಿಸಲ್ಪಟ್ಟಿರುತ್ತದೆ. ಇದಕ್ಕೋಸ್ಕರ ಕಾರ್ಯತಃ ಒಂದು ವಿಧವಾಲಯವೂ, ಒಂದು ಅನಾಥಾಲಯವೂ, ಒಂದು ಗರಲ್ಸ್ ಸ್ಕೂಲೂ ಸ್ಥಾಪಿಸಿ, ೧೯೦೭ನೇ ಜೂಲೈ ಲಾಗಾಯಿತು ನಡಿಸಲ್ಪಡುತ್ತಿರುವವು. ಸಂಘದಲ್ಲಿ ೨೩೧ ಮೆಂಬರುಗಳಿದ್ದಾರೆ. ಈ ಪೈಕಿ ಅನೇಕರು ಮುಂದಾಳಾದ ಮಹಮ್ಮದೀಯರು. ಇದು ಕೆಲವು ಹಿಂದೂ ದೊಡ್ಡಮನುಷ್ಯರ ಕರುಣೆಗೂ ಒಳಪಟ್ಟು, ಇದರ ಫಂಡಿಗೆ ಅವರು ಸಹ ಉದಾರವಾಗಿ ಸಹಾಯಮಾಡಿರುವರು. ಈ ಸಂಘದ ಫಂಡಿಗೆ ಪೋಷಕದ್ರವ್ಯದಿಂದಲೂ ಚಂದಾಗಳಿಂದಲೂ ೩,೮೮೫ ಚಿಲ್ಲರೆ ರೂಪಾಯಿ ವಸೂಲಾಗಿ, ಗರ್ಲ್ಸ್ ಸ್ಕೂಲು, ಅನಾಥಾಲಯ, ಮಿಶ್ರ ಬಾಬುಗಳಿಗೆ ೧,೧೧೦ ಚಿಲ್ಲರೆ ರೂಪಾಯಿ ಖರ್ಚಾಗಿ, ಫಂಡಿನಲ್ಲಿ ಇನ್ನೂ ೨,೭೭೫ ಚಿಲ್ಲರೆ ರೂಪಾಯಿ ಉಳಿದಿದೆ.

ವಿಧವಾಲಯ.—ಈ ಪಟ್ಟಣದಲ್ಲಿ ಈ ಆಲಯವನ್ನು ಸಂಘದ ಮೆಂಬರುಗಳು ಸ್ಥಾಪಿಸಿದರು. ಹಿಟ್ಟು ತಯಾರ್ಮಾಡುವುದನ್ನು ಪ್ರಾರಂಭಿಸಿದರು ಇದಕ್ಕೆ ಬಂಡವಾಳ ಹೆಚ್ಚು ಬೇಕಾಗಿಲ್ಲ. ತರಪೇತಾದ ಮತ್ತು ಏನೂ ತಿಳಿಯದ ಸ್ತ್ರೀಯರಿಗೆ ಈ ಉದ್ಯೋಗದಲ್ಲಿ ಕೆಲಸ ಕೊಡುವುದು ಸುಲಭವಾಯಿತು ಕೂಲಿಯನ್ನು ಹೆಚ್ಚಾಗಿ ಕೊಟ್ಟು, ಅವರ ಜೀವನ ನಡಿಯುವಂತೆ ಮಾಡಿದರು. ಇದನ್ನು ನೋಡಿ ಅನೇಕ ಹೆಂಗಸರು ಇಲ್ಲಿ ಕೆಲಸಕ್ಕೆ ಬಂದು ಸೇರಿದರು. ಇಲ್ಲಿ ತಯಾರಾದ ಹಿಟ್ಟನ್ನು ಶಿವರಾಂಪೇಟೆಯ ಒಂದು ಅಂಗಡಿಯಲ್ಲಿಟ್ಟು ಬಿಕರಿಮಾಡುವ ಏರ್ಪಾಡಾಗಿದೆ. ಇದಲ್ಲದೆ ಈ ಆಲಯದಲ್ಲಿ ರವಿಕೆ ಹೊಲಿಯುವ, ಬ್ರಮಾ ಎಂಬ ಬಟ್ಟೆಗಳ ಮೇಲೆ ಬಣ್ಣ ಹಾಕುವ, ಕಲಾಬತ್ತಿನ ಕೆಲಸ ಮಾಡುವ, ಚಟ್ನಿ ಉಪ್ಪಿನಕಾಯಿಗಳನ್ನು ತಯಾರ್ಮಾಡುವ ಕಸಬುಗಳನ್ನೂ ಪ್ರಾರಂಭಿಸಿದರು. ಈ ಆಲಯದ ಜಮಾಖರ್ಚು ನೋಡುವಲ್ಲಿ ಅದರಿಂದ ೯೫ ರೂಪಾಯಿ ಆದಾಯವಾಗಿರುತ್ತದೆ. ಹಾಗೆ ಇದದೆ, ಅರಮನೆ ಮೋತೀಖಾನೆಗೆ ಒಪ್ಪಿಕೊಂಡಿರುವ ಹಿಟ್ಟಿನ ಕಂಟ್ರಾಕ್ಟನ್ನು ಕಂಟ್ರಾಕ್ಟುದಾರರಾದ ಮೆ ಬಸ್ವಣ್ಣನವರೂ ಮೆ| ತಿಮ್ಮಯ್ಯನವರೂ ಈ ಆಲಯಕ್ಕೆ ವಹಿಸಿರುವುದಕ್ಕಾಗಿ ಸಂಘದವರು ಅವರನ್ನು ವಂದಿಸುತ್ತಾರೆ.

ಗರಲ್ಸ್ ಸ್ಕೂಲು —ಈ ಸಂಘದವರು ಸ್ಥಾಪಿಸಿ ನಡಿಸುತ್ತಿರುವ ಬಾಲಿಕಾ ಪಾಠಶಾಲೆಯಲ್ಲಿ ಈಗ ೧೨೦ ಮಂದಿಯ ವರೆಗೆ ವಿದ್ಯೆ ಕಲಿಯುತ್ತಿರುವರು ಅಲ್ಲಿ ಹುಡುಗಿಯರಿಗೆ ಸಾಮಾನ್ಯ ವಿದ್ಯೆಯನ್ನು ಕಲಿಸುವುದಲ್ಲದೆ, ಮತಭಕ್ತಿಯನ್ನೂ, ಅಡಿಗೆ, ಕಸೂತಿ, ಬಣ್ಣಹಾಕುವುದು, ಕಲಾಪತ್ತು, ಈ ಮೊದಲಾದ ಕಸಬುಗಳನ್ನೂ ಕಲಿಸುತ್ತಿದ್ದಾರೆ ಬಾಲಕಿಯರು ಇಲ್ಲಿ ಫೀಜು ಕೊಡಬೇಕಾಗಿಲ್ಲ ಬಡವರಿಗೆ ಸಂಘದವರು ಪುಸ್ತಕಗಳನ್ನು ಮುಫತ್ತಾಗಿ ಕೊಡಿಸುತ್ತಾರೆ. ಈ ಪಾಠಶಾಲೆಯು ದಿನೇ ದಿನೇ ತುಂಬಾ ಅಭಿವೃದ್ಧಿಯಾಗುತ್ತಿರುವುದು

ಅನಾಥಾಲಯ.—ಈ ಸಂಘದವರು ಅನಾಥ ಮಕ್ಕಳನ್ನು ಅವರ ಸ್ನೇಹಿತರ ಇಲ್ಲವೇ ನೆಂಟರ ಅಥವಾ ದೊಡ್ಡಮನುಷ್ಯರ ಪೋಷಣೆಯಲ್ಲಿಟ್ಟು, ಅವರ ಅನ್ನ ಬಟ್ಟೆ ವಿದ್ಯಾಭಿವೃದ್ಧಿಯ ವೆಚ್ಚವನ್ನು ಸಂಘದವರೇ ವಹಿಸುತ್ತಿದ್ದಾರೆ ಅನಾಥಾಲಯವನ್ನು ಬೇರೆ ಏರ್ಪಡಿಸಿ ನಡಿಸುವುದಕ್ಕಿಂತಲೂ ಈ ಏರ್ಪಾಡು ವಿಶೇಷ ತೃಪ್ತಿಕರವಾದದ್ದೆಂದು ಸಂಘದವರಿಗೆ ಅನುಭವಕ್ಕೆ ಬಂದಿದೆ. ಅವರ ಪೋಷಣೆ ಮುಂತಾದ್ದಕ್ಕೆ ದೊಡ್ಡಮನುಷ್ಯರ ಮನೆಗಳಲ್ಲಿ ಚೀಲಗಳನ್ನಿಟ್ಟು ದಿನವಹಿ ಅವರು ಅದಕ್ಕೆ ಒಂದು ಹಿಡಿ ಅಕ್ಕಿಯನ್ನು ಹಾಕುವಂತೆ ಮಾಡಿ, ಅದನ್ನು ವಾರಕ್ಕೊಂದಾವರ್ತಿ ಕೂಡಿಸಿ, ಅನಾಥಾಲಯದ ಖರ್ಚಿಗೆ ಕೊಡುತ್ತಾ ಬಂದಿದ್ದಾರೆ

ಇತರ ವಿಷಯಗಳು —ಈ ಸಂಘವು ದಿನಕ್ರಮೇಣ ಪ್ರಸಿದ್ಧಿಗೆ ಬರುತ್ತಿರುವುದರಿಂದ (೧) ಈಗ ಬಾಡಿಗೆಯನ್ನು ಕೊಡತಕ್ಕ ಕಟ್ಟಡವು ಸಾಲದೆ ಇದೆ ಮತ್ತು (೨) ಅದರ ಕೆಲಸವು ಸಾರ್ಥಕವಾಗಿ ನಡಿಸಲು ಇನ್ನೂ ಹೆಚ್ಚು ದ್ರವ್ಯ ಬೇಕಾಗಿದೆ. ಉರ್ದು ಪತ್ರಿಕೆಗಳನ್ನು ತರಿಸಿ ಬಂದು ವಾಚಕ ಶಾಲೆಯನ್ನು ಏರ್ಪಡಿಸಿದೆ. ಈ ಸಂಘದ ಕಾರ್ಯಗಳಿಗೆ ದ್ರವ್ಯ ಸಹಾಯ ಮಾಡುವುದರಲ್ಲೂ ಮುತುವರ್ಜಿಯಾಗಿ ಮನಸ್ಸು ಕೊಡುತ್ತಿರುವುದರಲ್ಲೂ ಇಲ್ಲಿನ ಬಹು ಜನ ಸ್ತ್ರೀಯರು ಮುಂದಾಳುಗಳಾಗಿ ನಿಂತಿರುವುದು ತುಂಬಾ ವಿಶೇಷವಾಗಿದೆ. ಇವರ ಮೇಲ್ಪಂಕ್ತಿಯನ್ನು ಇತರ ಐಶ್ವರ್ಯವತಿಯರೂ ಅನುಸರಿಸುವರೆಂದು ಕೋರಲ್ಪಟ್ಟಿದೆ.

ಈ ಪ್ರಕಾರ ರಿಪೋರ್ಟನ್ನು ಓದಿದ ತರುವಾಯ ಈ ಸಂಘಕ್ಕೆ ಮಹನೀಯರಾದ ಪ್ರಜೆಗಳು ದ್ರವ್ಯ ಸಹಾಯ ಮಾಡಿ, ಅದರ ಕಾರ್ಯಗಳನ್ನು ಅಭಿವೃದ್ಧಿಗೆ ತರಬೇಕಾದದ್ದು ಅವಶ್ಯವೆಂಬದಾಗಿ ಕೆಲವು ಮಹಮ್ಮದೀಯ ದೊಡ್ಡಮನುಷ್ಯರು ಉಪನ್ಯಾಸ ಮಾಡಿದರು ಕೋಲಾರ್ ಚಿನ್ನದಗಣಿಗಳಲ್ಲಿ ಭಾರೀ ವರ್ತಕರೂ ದೊಡ್ಡ ಮನೆತನಕ್ಕೆ ಸೇರಿದವರೂ ಆಗಿರುವ ಒಬ್ಬ ನವಾಬರು ಸಂಘದಲ್ಲಿ ಹಾಜರಾಗಿದ್ದು ಇಂಗ್ಲಿಷಿನಲ್ಲೂ ಉರ್ದುಭಾಷೆಯಲ್ಲೂ ಬಹು ಸ್ವಾರಸ್ಯವಾದ ಭಾಷಣವನ್ನು ಮಾಡಿ, ಫಂಡಿಗೆ ೧೦೦ ರೂಪಾಯಿ ಕೊಟ್ಟದ್ದಲ್ಲದೆ ತಿಂಗಳಿಗೆ ೨ ರೂಪಾಯಿನಂತೆ ಚಂದಾ ಕೊಡುವುದಾಗಿ ಮಾತುಕೊಟ್ಟು, ಒಟ್ಟು ಹಣವನ್ನು ಅಲ್ಲೇ ಪಾವತಿ ಮಾಡಿದರು.

ಸಭಾನಾಯಕರಾದ ಮೆ| ಎಂ. ಕಾಂತರಾಜೇ ಅರಸಿನವರು ಸಂಘದ ಪ್ರೆಸಿಡೆಂಟರನ್ನೂ ಸಭೆಯಲ್ಲಿ ಕೂಡಿದ್ದ ದೊಡ್ಡಮನುಷ್ಯರನ್ನೂ ಕುರಿತು ತಿಳಿಸಿದ ಮುಖ್ಯಾಭಿಪ್ರಾಯಗಳೇನೆಂದರೆ —ಈ ಸಂಘದ ಕಾರ್ಯಗಳು ಇಷ್ಟು ಸಂತೋಷಕರವಾಗಿಯೂ ಹಿತಕರವಾಗಿಯೂ ಅಭಿವೃದ್ಧಿ ಹೊಂದುತ್ತಾ ಬರುತ್ತಿರುವುದನ್ನು ನೋಡಿ, ಅದರ ಕೆಲಸಗಳನ್ನು ನಡಿಸುವ ಮೆಂಬರುಗಳನ್ನು ಮನಃಪೂರ್ವಕವಾಗಿ ವಂದಿಸುತ್ತೇನೆ. ವಿಧವಾ ನಿಲಯದಲ್ಲಿ ಸೂಲಗಿತ್ತಿಯರಾಗುವುದನ್ನೂ ನರ್ಸುಗಳಾಗುವುದನ್ನೂ ಸ್ತ್ರೀಯರಿಗೆ ಕಲಿಸಿ ತರಪೇತು ಮಾಡಿದರೆ ಮಹಮ್ಮದೀಯರ ಸಮುದಾಯಕ್ಕೂ ಇತರರಿಗೂ ಅವರಿಂದ ತುಂಬಾ ಪ್ರಯೋಜನವಾದೀತು. ಮೆಂಬರುಗಳು ಈ ವಿಷಯವನ್ನು ತಮ್ಮ ಗಮನಕ್ಕೆ ತಂದುಕೊಂಡಾರೆಂದು ನಿರೀಕ್ಷಿಸುತ್ತೇನೆ. ಬಾಲಕಿಯರಿಗೆ ಭಕ್ತಿ ನೀತಿಮಾರ್ಗಗಳನ್ನೂ ಕಲಿಸಿಕೊಡಬೇಕಾದದ್ದು ಪರಮಾವಶ್ಯ. ಇದನ್ನು ನಿಮ್ಮ ಪಾಠಶಾಲೆಯಲ್ಲಿ ಕಲಿಸುವಂತೆ ಏರ್ಪಾಡು ಮಾಡಿದ್ದು ತುಂಬಾ ಸಂತೋಷ. ಅವರಿಗೆ ಕನ್ನಡವನ್ನು ಕಲಿಸಬೇಕೆಂದು ಸೂಚಿಸಲಪೇಕ್ಷಿಸುತ್ತೇನೆ ಯಾಕೆಂದರೆ ಇದು ಕನ್ನಡದೇಶ. ಈ ಭಾಷೆಯನ್ನು ಸ್ತ್ರೀಯರೂ ಕಲಿಯೋಣದರಿಂದ ಹಿಂದೂ ಮಹಮ್ಮದೀಯರು ಒಂದಾಗಿ ಸೇರಿ ಆಲೋಚನೆ ವಾರ್ತಾ ಕಥೆಗಳನ್ನು ನಡಿಸುವುದಕ್ಕೂ, ಎರಡು ಪಂಗಡಗಳಿಗೂ ಪರಸ್ಪರವಾದ ಪ್ರೀತಿ ವಿಶ್ವಾಸಗಳು ಹುಟ್ಟಿ ಅಭಿವೃದ್ಧಿಯಾಗುವುದಕ್ಕೂ ತುಂಬಾ ಸಹಾಯವಾಗುತ್ತದೆ. ಈ ಸಂಘದವರು ಪ್ರಾರಂಭಿಸಿರುವ ಕಾರ್ಯವು ಪರಾರ್ಥವೂ ಪುಣ್ಯಕರವೂ ಆಗಿರೋಣದರಿಂದ ಅದರ ಪ್ರಯೋಜನವು ಪ್ರಜೆಗಳಿಗೆ ಹೆಚ್ಚು ಹೆಚ್ಚಾಗಿ ಗೊತ್ತಾದ ಹಾಗೆಲ್ಲಾ ಅದನ್ನು ಪ್ರೋತ್ಸಾಹಪಡಿಸುವುದಕ್ಕೋಸ್ಕರ ಹೆಚ್ಚು ಹೆಚ್ಚಾಗಿ ದ್ರವ್ಯವೇ ಮೊದಲಾದ ಸಹಾಯಗಳನ್ನು ಮಾಡಿಯಾರೆನ್ನುವುದಕ್ಕೆ ಸಂದೇಹವಿಲ್ಲ. ಈ ಸಂಘದ ಕಾರ್ಯಗಳು ಇಷ್ಟು ಸ್ವಲ್ಪಕಾಲದಲ್ಲೇ ತುಂಬಾ ಅಭಿವೃದ್ಧಿಗೆ ಬಂದಿರುವ ವಿಚಾರವನ್ನು ಶ್ರೀಮನ್ಮಹಾರಾಜರವರಿಗೆ ಅರಿಕೆ ಮಾಡುತ್ತೇನೆ ಎಂಬುದೇ.

ಅನಂತರ ಅ|| ಕಮಿಷನರ್ ಮೆ| ಮಿರ್ ಹಂಜಾ ಹುಸೇನ್ ಯವರು ಕೆಲವು ಸಂತೋಷಕರವಾದ ಮಾತುಗಳನ್ನು ಹೇಳಿ, ಸಭಿಕರ ಪರವಾಗಿಯೂ ಸಂಘದ ಪರವಾಗಿಯೂ ಸಭಾಧ್ಯಕ್ಷರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಒಪ್ಪಿಸಿದರು ಎಲ್ಲರಿಗೂ ಹೂವಿನ ಹಾರಾ ಹಾಕಿದ ಮೇಲೆ ಶ್ರೀಮನ್ಮಹಾರಾಜರವರ ಶ್ರೇಯಸ್ಸನ್ನು ಬಯಸಿ, ಆ ದಿನದ ಸಭೆಯನ್ನು ಮುಕ್ತಾಯ ಮಾಡಿದರು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಸೂಚಿಸಿದ ವಿಷಯಗಳೂ, ದಿವಾನರವರ ಪ್ರತ್ಯುತ್ತರಗಳೂ.

ಸಂಕ್ಷೇಪ ವಿವರಣೆ.

ಅರಿಕೆ.—ಗ್ರಾಮಾಂತರಗಳಲ್ಲಿ ಕಳವು ಮುಂತಾದ ಅಪರಾಧಗಳು ನಡದರೆ ಪಟೇಲರು ಪೋಲೀಸ್ ಸ್ಟೇಷನ್‌ಗೆ ತಿಳಿಸಬೇಕು ಕೆಲವು ಮೊಕದ್ದಮೆಗಳು ತಾಲ್ಲೂಕು ಪೋಲೀಸಿಗಾಗಲಿ ಮ್ಯಾಜಿಸ್ಟ್ರೇಟರಿಗಾಗಲಿ ತಿಳಿಯದೇ ಅಲ್ಲಲ್ಲೇ ಇತ್ಯರ್ಥ ಹೊಂದುತ್ತವೆ. ಆದ್ದರಿಂದ ಕೃತ್ಯನಡೆದ ಕೂಡಲೆ ಪಟೇಲರು ರಿಪೋರ್ಟು ಬರೆದು ಅದರ ಒಂದು ನಕಲನ್ನು ಸ್ಟೇಷನ್ ಹೌಸ್ ಆಫೀಸರಿಗೂ, ಒಂದನ್ನು ತಾಲ್ಲೂಕ್ ಮ್ಯಾಜಿಸ್ಟ್ರೇಟರಿಗೂ ಕಳುಹಿಸಿ, ಇನ್ನೊಂದು ನಕಲನ್ನು ತಮ್ಮ ಬಳಿಯಲ್ಲೇ ಇಟ್ಟುಕೊಂಡಿರುವಂತೆ ಏರ್ಪಾಡಾಗಬೇಕು.

ಉತ್ತರ.—ಈ ವಿಷಯವು ಗವರ್ನಮೆಂಟಿನಲ್ಲಿ ಚರ್ಚೆಗೆ ಬಂದಿದೆ. ಹೊಸ ಪೋಲೀಸ್ ಕಾನೂನಿನಲ್ಲಿ ಇದನ್ನು ಈ ಭಾಗವನ್ನು ಸೇರಿಸಲಾಗುವುದೆಂದು ಕಾಣುವುದು

ಅರಿಕೆ.—ವ್ಯವಸಾಯವನ್ನು ಅಭಿವೃದ್ಧಿಪಡಿಸುವುದಕ್ಕೆ ಬೆಂಗಳೂರಿನಲ್ಲೋ ಮೈಸೂರಿನಲ್ಲೋ ಪರೀಕ್ಷಾರ್ಥವಾದ ಒಂದು ಫಾರಮನ್ನೂ, ಪ್ರತಿ ಒಂದು ಡಿಸ್ಟ್ರಿಕ್ಟಿನಲ್ಲೂ ಒಂದೊಂದು ಮಾದರೀ ಫಾರಮನ್ನೂ ಏರ್ಪಡಿಸಿ, ಉತ್ತಮ ತರಹಾ ವ್ಯವಸಾಯದ ಮುಟ್ಟುಗಳನ್ನಿಟ್ಟು ಪ್ರಜೆಗಳಿಗೆ ಪ್ರದರ್ಶನಪಡಿಸುವುದಾಗಿ ಕಳೆದ ವರುಷ ಗವರ್ನಮೆಂಟಿನಿಂದ ಅಪ್ಪಣೆಯಾಗಿತ್ತು ಇಂಗ್ಲಿಷ್ ನೇಗಿಲು ಮೊದಲಾದ ಹತಾಯಿತು ಸಾಮಾನುಗಳನ್ನು ಪ್ರತಿ ತಾಲ್ಲೂಕಿನಲ್ಲೂ ತರಿಸಿಟ್ಟು, ರೈತರಿಗೆ ಅಸಲ್ ಕ್ರಯಕ್ಕೆ ಬಿಕರಿಮಾಡಿಸಬೇಕು ವ್ಯವಸಾಯದಲ್ಲಿ ನಿಪುಣರಾದವರನ್ನು ತಾಲ್ಲೂಕುಗಳಿಗೆ ಕಳುಹಿ, ಅವರ ಮೂಲಕ ರೈತರಿಗೆ ಹೊಸ ಸಂಗತಿಗಳನ್ನು ಕಲಿಸಿಕೊಡುವಂತೆ ಮಾಡಬೇಕು.

ಉತ್ತರ.—ಬೆಂಗಳೂರು ಹೆಬ್ಬಾಳದಲ್ಲೂ ಮೈಸೂರು ನಾರ್ಮಲ್ ಸ್ಕೂಲಿಗೆ ಸಂಬಂಧಪಟ್ಟ ಹಾಗೂ ವ್ಯವಸಾಯದ ಫಾರಂಗಳು ಇರುತ್ತವೆ. ರೈತರು ಅಲ್ಲಿಗೆ ಹೋಗಿ ಕೆಲವು ಕಾಲ ಇದ್ದು ಹತಾಯತನ್ನು ತಿಳಿದುಕೊಳ್ಳಬಹುದು ಇಂಥ ಕರವಾಗಿ ಕಬ್ಬಿನ ಬೆಳೆ ಮಾಡುವುದನ್ನು ಕಲಿಯಬೇಕೆನ್ನುವವರು ಬಿದದಿಯ ಬಳಿ ಇರುವ ಉರಗಳ್ಳಿಯ ಫಾರಮಿಗೆ ಹೋಗಿ, ಅಲ್ಲಿ ಜಮೀನ್ದಾರರು ಕಬ್ಬು ವ್ಯವಸಾಯ ಮಾಡಿರುವುದನ್ನು ನೋಡಿ ಕಲಿತುಕೊಳ್ಳಬಹುದು ಜಮೀನ್ದಾರರು ತಮ್ಮ ರೈತರನ್ನು ಸ್ವಲ್ಪ ದ್ರವ್ಯಸಹಾಯಮಾಡಿ ದೇಶಾಂತರ ಸ್ಥಳಗಳಲ್ಲಿ ಇದ್ದು ಹೊಸ ಕ್ರಮಗಳನ್ನು ಕಲಿತು ಬರುವಂತೆ ಕಳುಹಿಸುವುದಾದರೆ ಗವರ್ನಮೆಂಟಿನವರು ಕೂಡ ಅಂಥವರ ಜೀವನಕ್ಕೆ ಸ್ವಲ್ಪ ಹಣ ವೇತನರೂಪವಾಗಿ ಕೊಡಿಸಲು ಸ್ಯಾಂಕ್ಷನ್ ಮಾಡಬಹುದೆಂದು ಕಾಣುತ್ತದೆ ಕುತೂಹಲವುಳ್ಳ ಜಮೀನ್ದಾರರೂ ರೈತರೂ ಈ ಭಾಗವನ್ನು ಯೋಚಿಸಿ ಪ್ರಯೋಜನ ಹೊಂದಬಹುದಾಗಿದೆ. ಸೀಮೆಯ ನೇಗಿಲುಗಳನ್ನು ಇಷ್ಟರಲ್ಲೇ ಗವರ್ನಮೆಂಟಿನವರು ಎಲ್ಲಾ ಡಿಸ್ಟ್ರಿಕ್ಟುಗಳಿಗೂ ಕಳುಹಿಸಿಕೊಡಲು ಏರ್ಪಾಡು ಮಾಡುವರು

ಅರಿಕೆ —ಕೆರೆ ನಾಲೆಗಳಿಲ್ಲದ ತಾಲ್ಲೂಕುಗಳಲ್ಲಿ ಸರ್ಕಾರದವರು ದೊಡ್ಡ ದೊಡ್ಡ ಹವೆಯ ಯಂತ್ರಗಳನ್ನಿಟ್ಟು ನೀರು ಎತ್ತಿ ನಲ್ಲಿಗಳ ಮೂಲಕ ಸಾಗಿಸಿ ತಂದು ರೈತರ ಜಮೀನುಗಳಿಗೆ ಹಾಯಿಸಿದರೆ ಸಾಗುವಳಿ ಅಭಿವೃದ್ಧಿಯಾಗುವುದಕ್ಕೂ ತರೀ ಕಂದಾಯ ಹೆಚ್ಚುವುದಕ್ಕೂ ಅನುಕೂಲವಾದೀತು —ಕೋಲಾರ್ ತಾಲ್ಲೂಕಿನ ಅನೇಕ ಕಡೆಗಳಲ್ಲಿ ನೀರು ಎಲ್ಲಿ ದೊರಕುತ್ತೋ ತಿಳಿಯದೆ ರೈತರೂ ಜಮೀನ್ದಾರರೂ ಬಹಳ ಹಣ ಮುಟ್ಟಿ ಬಾವಿಗಳನ್ನು ತೋಡಿ ಕಡೆಗೂ ನೀರು ಬೀಳದೆ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿರುತ್ತಾರೆ ಗವರ್ನಮೆಂಟಿನವರು ಭೂಗರ್ಭಶಾಸ್ತ್ರಜ್ಞರ ಮೂಲಕ ಭೂಮಿಯನ್ನು ಪರಿಶೋಧಿಸಿಮಾಡಿ, ಎಲ್ಲಿ ನೀರು ಬೀಳುವುದೆಂದು ಗೊತ್ತುಮಾಡಿದರೆ. ಜನರು ಅಂಥಾ ಸ್ಥಳಗಳಲ್ಲಿ ಬಾವಿ ತೋಡಿಕೊಳ್ಳಲು ಅನುಕೂಲವಾದೀತು

ಉತ್ತರ.—ಇವೆರಡು ವಿಷಯಗಳನ್ನೂ ಚೀಫ್ ಇಂಜಿನಿಯರ್ ರವರಿಗೆ ತಿಳಿಸಿ ಅವರ ಅಭಿಪ್ರಾಯವನ್ನು ಕೇಳುವೆವು. ಕೊಳವೆಗಳನ್ನಿಟ್ಟು ಭೂಮಿಯಿಂದ ನೀರನ್ನು ಎತ್ತುವಂಥಾ ಯಂತ್ರಗಳನ್ನು ಮದರಾಸಿನಿಂದ ತರಿಸಿ, ಅವುಗಳಿಂದ ಪ್ರಯೋಜನವಾದೀತೇ ಎಂದು ಸರ್ಕಾರದವರು ಪರೀಕ್ಷೆಮಾಡುತ್ತಿದ್ದಾರೆ

ಅರಿಕೆ.—ಅನೇಕ ಕಡೆಗಳಲ್ಲಿ ರೋಗಪೀಡಿತ ದನಗಳು ಲಯವಾಗುತ್ತಿವೆ. ಅದನ್ನು ತಪ್ಪಿಸಿಕೊಡುವುದಕ್ಕಾಗಿ ದೇಶೀಯ ಪಶುವೈದ್ಯ ಶಾಸ್ತ್ರ ಕಲಿತ ಸರ್ಕಾರಿ ನೌಕರರನ್ನು ಗ್ರಾಮಾಂತರಗಳ ಮೇಲೆ ಕಳುಹಿಸಿಕೊಟ್ಟು ದನಗಳಿಗೆ ರೋಗ ತಗಲದಂತೆ ಅವರಿಂದ ಸಿಡುಬು ಹಾಕಿಸಬೇಕು

ಉತ್ತರ —ಪಶುವೈದ್ಯದ ಇಲಾಖೆಯು ಈಗತಾನೇ ಏರ್ಪಾಡಾಗಿದೆ. ಸಿಡುಬು ಹಾಕತಕ್ಕ ವಿಧಾನವನ್ನು ದೇಶೀಯ ಪಶುವೈದ್ಯರಿಗೆ ಮೊದಲು ಕಲಿಸಿ ಕೊಟ್ಟು, ಕ್ರಮೇಣ ಅವರನ್ನು ಗ್ರಾಮಾಂತರಗಳ ಮೇಲೆ ಕಳುಹಿಸುವ ಏರ್ಪಾಡು ಮಾಡಲಾಗುವುದು.

ಅರಿಕೆ.—ಪ್ರತಿ ವರುಷವೂ ರಾಜಧಾನಿಯಲ್ಲೇ ಪ್ರದರ್ಶನವನ್ನು ನಡಿಸುವುದಕ್ಕಿಂತಲೂ, ಈ ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ಒಂದೊಂದು ವರುಷ ನಡಿಸಿದರೆ ಹೆಚ್ಚು ಪ್ರಯೋಜನವಾಗುತ್ತದೆ ಇದು ಕೂಡದಿದ್ದರೆ ೩ ಅಥವಾ ೪ ವರುಷಕ್ಕೊಂದಾವರ್ತಿ ನಡಿಸಿದಲ್ಲಿ ದೇಶಾಭ್ಯುದಯಕ್ಕೆ ಸಹಾಯವಾದೀತು.

ಉತ್ತರ—ಈ ಪ್ರದರ್ಶನವನ್ನು ಈಗತಾನೆ ಪ್ರಾರಂಭಿಸಿ, ಎರಡು ಸಲ ನಡಿಸಿದ್ದಾಗಿದೆ. ಇದರ ಫಲಾಫಲಗಳನ್ನು ಮುಂದೆ ನೋಡಿ ಇದು, ಪ್ರಯೋಜನವಿಲ್ಲವೆಂದು ಕಂಡುಬಂದಲ್ಲಿ ಬೇರೆ ಯೋಚನೆ ಮಾಡೋಣ.

ಅರಿಕೆ —ಸುಪಾರಿ ಹಾಲತ್ತನ್ನು ವಜಾಮಾಡಿ, ಗಿಡಕ್ಕೆ ಒಂದಾಣೆಯಂತೆ ಸೆಸ್ಸು (ವರಿ) ವಸೂಲ್ಮಾಡುತ್ತಿದ್ದಾರೆ ಈ ಹಣವನ್ನು ಯಾವ ರೀತಿ ಉಪಯೋಗ ಮಾಡೋದವಾಗಿದೆಯೋ ತಿಳಿಯಲಿಲ್ಲ.

ಉತ್ತರ.—ಈ ವಿಚಾರದಲ್ಲಿ ಡಾಕ್ಟರ್ ಕೋಲ್ಮನ್‌ರವರನ್ನು ಕೇಳಿದಾಗ ಅವರು ಆ ತನಾವು ಸಹಜವಾದ ರೀತಿಯಲ್ಲಿ ಏನುಪಯೋಗವಾಗುತ್ತದೆ ಎಂದು ಹಾಟು ಕೊಟ್ಟಿದಾರೆ.

ಅರಿಕೆ.—ಶಾನುಭೋಗರಿಗೆ ಅವರ ಕೆಲಸಕ್ಕೆ ತಕ್ಕಷ್ಟು ಅಥವಾ ಅವರ ಜೀವನಕ್ಕೆ ಸಾಕಾಗುವಷ್ಟು ಫೋಟಿಗಿ ದೊರಕದೆ ಈಗಿನಂಥಾ ದುಷ್ಕಾಲಗಳಲ್ಲಿ ಬಹಳ ವ್ಯಥೆಪಡುತ್ತಾರೆ. ಸರ್ಕಲ್ ಮೇಲೆ ಫೋಟಿಗಿಯನ್ನು ರದ್ದಾಯಿಸಿ, ಫೋಟಿಗಿ ದರವನ್ನು ಜಾಸ್ತಿಮಾಡಿಕೊಡಬೇಕು. ಇತರ ಇಲಾಖೆಗಳ ನೌಕರರ ಸಂಬಳಗಳನ್ನು ಗವರ್ನ್‌ಮೆಂಟಿನವರು ಕಾಲಾನುಗುಣ್ಯವಾಗಿ ಬಡ್ತಿಮಾಡಿರೋಣವಾಗಿದೆ. ಬಹು ಕಾಲದಿಂದಲೂ ಶಾನುಭೋಗರು ಫೋಟಿಗಿ ಸಾಲದೆಂದು ಅರಿಕೆ ಮಾಡಿಕೊಳ್ಳುತ್ತಲೇ ಬಂದಿರುವರು. ಅದು ಬಿಟ್ಟರೆ ಅವರಿಗೆ ಜೀವನಕ್ಕೆ ಬೇರೆ ಮಾರ್ಗವಿಲ್ಲ.

ಉತ್ತರ.—ಅದೇ ಅವರಿಗೆ ಜೀವನವೆಂದೂ ಅನ್ಯಥಾ ಇಲ್ಲವೆಂದೂ ಗವರ್ನ್‌ಮೆಂಟಿಗೆ ತಿಳಿದಿದೆ. ರೆವಿನ್ಯೂ ಕಮಿಷನರ್‌ರೂ ಸರ್ವೆ ಸೂಪರಿಂಟೆಂಡೆಂಟರೂ ಸೇರಿ, ಅವರ ವರಮಾನವನ್ನು ಪರಿಗಣಿಸಿ, ಆಲೋಚನೆಮಾಡಬೇಕೆಂತಲೂ, ಸ್ಕೇಲ್ ಬದಲಾಯಿಸುವ ವಿಷಯದಲ್ಲಿ ಅವರ ಅಭಿಪ್ರಾಯವನ್ನು ತಿಳಿಸಬೇಕೆಂತಲೂ ಗವರ್ನ್‌ಮೆಂಟಿನವರು ಕೇಳಿ, ಅವರ ಶಿಫಾರಸನ್ನು ತರಿಸಿಕೊಂಡು ಇತ್ಯರ್ಥ ಮಾಡುತ್ತಾರೆ.

ಅರಿಕೆ.—ಪಟೇಲ್ ಶಾನುಭೋಗರ ಹಕ್ಕುದಾರರು ಒಬ್ಬರಿಗಿಂತಲೂ ಹೆಚ್ಚು ಮಂದಿ ಇದ್ದರೆ ಅಂಥಾ ಸಂದರ್ಭಗಳಲ್ಲಿ ಪ್ರತಿ ಒಬ್ಬ ಹಕ್ಕುದಾರನಿಂದಲೂ ಸರದಿಯ ಮೇರೆ ಕೆಲಸ ತೆಗೆದುಕೊಳ್ಳುವಂತೆ ಅಪ್ಪಣೆ ಆಗಬೇಕು.

ಉತ್ತರ.—ಈಗತಾನೇ ಪಾಸಾಗಿರುವ ಗ್ರಾಮ ನೌಕರರ ಹಕ್ಕುದಾರಿ ಬಾಬಿನ ಕಾನೂನಿನಲ್ಲಿ ಈ ರೀತಿ ಏರ್ಪಾಡು ಮಾಡತಕ್ಕದ್ದೆಂದು ವಿಧಿಸಲಾಗಿದೆ. ಈಗ ವಿಚಾರವನ್ನು ಚರ್ಚಿಸಿ ಪ್ರಯೋಜನವಿಲ್ಲ.

ಅರಿಕೆ.—ಕಂದಾಯದ ಬಾಕಿಗಾಗಿ ಕೊಡುವ ನೋಟೀಸ್ ಫೀಯನ್ನು ಕಡಮೆಮಾಡಿಕೊಡಬೇಕು.

ಉತ್ತರ.—ಈಗಿರುವ ದರವನ್ನು ಕಡಮೆ ಮಾಡಲಾಗುವುದಿಲ್ಲ. ಆದರೆ ಕಷ್ಟವೆಂದು ಕಂಡುಬರುವ ಸಂದರ್ಭಗಳಲ್ಲಿ ನೋಟಿಸ್ ಫೀ ವಜಾ ಮಾಡಲು ಅಮಲ್ದಾರರಿಗೆ ಅಧಿಕಾರ ಕೊಡುವ ವಿಷಯದಲ್ಲಿ ಗವರ್ನ್‌ಮೆಂಟಿನವರು ಆಲೋಚನೆ ಮಾಡುವರು.

ಅರಿಕೆ.—ಕಂದಾಯವನ್ನು ಮನಿಆರ್ಡರ್ ಮೂಲಕ ಕಳುಹಿಸಿದರೆ ಶಾನುಭೋಗರು, ಶೇಕ್‌ದಾರರು, ಅಮಲ್ದಾರರು ತೆಗೆದುಕೊಳ್ಳದೆ ವಾಪಸ್ ಮಾಡುತ್ತಾರೆ. ಮದರಾಸ್ ಆಧಿಪತ್ಯದಲ್ಲಿ ಸರ್ಕಾರದವರು ರಾಜ್ಯಕ್ಕೆ ಸಂದಾಯಿಸುವ ರೆವಿನ್ಯೂ ಮನಿ ಆರ್ಡರ್ ಫಾರಮನ್ನು ಈ ಸಂಸ್ಥಾನದಲ್ಲಿ ಜಾರಿಗೆ ತಂದರೆ ಬಹಳ ಉಪಕಾರವಾಗುವುದು. (ಮೊಬಲು ಸುಪರ್ದಿನ ರೆವಿನ್ಯೂ ಮನಿಆರ್ಡರ್ ಫಾರಮಿನ ಸಲುವು ಬಿರಾದರವನಿಗೆ ಒಪ್ಪಿಸುವರು.)

ಉತ್ತರ.—ಇದನ್ನು ರೆವಿನ್ಯೂ ಕಮಿಷನರ್‌ರವರಿಗೆ ಕಳುಹಿಸಿ, ಅವರ ಅಭಿಪ್ರಾಯವನ್ನು ತರಿಸಿಕೊಂಡು, ಇತ್ಯರ್ಥಮಾಡುವೆವು.

ಅರಿಕೆ.—ಜಮೀನ್ ಖರೀದಿ ಮಾಡುವುದಕ್ಕೆ ರೈತರು ಸರ್ಕಾರದಿಂದ ಸಾಲ ಪಡೆಯಬೇಕೆಂದು ಕೇಳಿದರೆ ಅಂಥಾ ಸಾಲವನ್ನು ಅಮಲ್ದಾರರೇ ಸ್ಯಾಂಕ್ಷನ್ ಮಾಡುವುದಕ್ಕೆ ಅವರಿಗೆ ಅಧಿಕಾರ ಕೊಡಬೇಕು.

ಉತ್ತರ.—ಅಮಲ್ದಾರರಿಗೆ ಆ ಅಧಿಕಾರ ಕೊಡಬೇಕೆಂದು ಗವರ್ನ್‌ಮೆಂಟಿನವರು ಆಲೋಚನೆ ಮಾಡುತ್ತಿದ್ದಾರೆ. ಈ ವಿಷಯದಲ್ಲಿ ಜಾಗ್ರತೆ ಕೆಲವು ರೂಲುಗಳು ಪ್ರಕಟಿಸಲಾಗುವುವು.

ಅರಿಕೆ.—ರೈತರು ಮನೆಯನ್ನು, ಮಗ್ಗ ರಾಟಿಣ ಮೊದಲಾದ್ದನ್ನು ಕಟ್ಟಲು ತಾಲ್ಲೂಕಿಗೆ ಅರ್ಜಿ ಕೊಟ್ಟರೆ ಅದಕ್ಕೆ ಜವಾಬು ಬಾಯಿಯನ್ನೂ ಚೀಟಿಯನ್ನೂ ಕೊಡುವುದಿಲ್ಲ. ಕೊಡಿಸುವಂತೆ ಮಾಡಬೇಕು.

ಉತ್ತರ.—ಅರ್ಜಿ ಕೊಡುವವರು ಅವರ ಜೊತೆಯಲ್ಲೇ ಒಂದಾಣೆ ಸ್ಟಾಂಪು ಹಚ್ಚಿದ ರಶೀತಿಯನ್ನು ಬರೆದು ಹಾಜರು ಮಾಡಿದರೆ ಅದಕ್ಕೆ ರುಜುಮಾಡಿ ಕೊಡಬೇಕೆಂದು ರೂಲಸು ಮಾಡುತ್ತೇವೆ.

ಅರಿಕೆ.—ಗ್ರಾಮಾಂತರಗಳ ಜಾರಾಬಂದಿ ರಿಜಿಸ್ಟರುಗಳು ಕ್ರಮವಾಗಿ ಇಲ್ಲ. ಅದರಲ್ಲಿ ಬದಲಾವಣೆ ಮಾಡುವುದಕ್ಕೂ ಅವಕಾಶವಿಲ್ಲ. ಹೊಸ ರಿಜಿಸ್ಟರುಗಳನ್ನು ತಯಾರುಮಾಡಿ-ಕೊಡಬೇಕಾದದ್ದು ಅವಶ್ಯ.

ಉತ್ತರ.—ಈ ವಿಷಯವನ್ನು ರೆವಿನ್ಯೂ ಕಮಿಷನರಿಗೆ ತಿಳಿಸಿ, ಅವರ ಅಭಿಪ್ರಾಯ ತಿಳಿದು, ಹುಕುಂ ಕೊಡಲಾಗುವುದು.

ಅರಿಕೆ.—ಜನರ ಮನೆ ರಿಜಿಸ್ಟರುಗಳನ್ನು ಹದಿನಾರು ವರುಷಗಳ ತನಕ ಮಾತ್ರ ಇಟ್ಟಿದ್ದು ಆ ತರುವಾಯ ನಾಶಮಾಡುವ ಪದ್ಧತಿ ಇದೆ. ಅನೇಕ ಸಂದರ್ಭಗಳಲ್ಲಿ ಇದರಿಂದ ವಾದಿಗಳು ಪಕ್ಷದವರಿಗೆ ಬಹಳ ಕಷ್ಟವಾಗುತ್ತದೆ. ಆ ರೆಕಾರ್ಡುಗಳನ್ನು ಎಂದೆಂದಿಗೂ ನಾಶಮಾಡದೆ ರಿಕಾರ್ಡು ಇಟ್ಟಿರಬೇಕೆಂದು ಪ್ರಾರ್ಥಿಸುತ್ತೇವೆ.

ಉತ್ತರ.—ಈ ವಿಷಯದಲ್ಲಿ ಸೂಕ್ತವಾದ ಅಪ್ಪಣೆ ಕೊಡುವಂತೆ ರೆವಿನ್ಯೂ ಕಮಿಷನರಿಗೆ ತಿಳಿಸುತ್ತೇವೆ.

ಅರಿಕೆ.—ಸರ್ವೆ ಇಲಾಖೆಯನ್ನು ವಜಾಮಾಡಬೇಕು. ಈಗ ಸಂಸ್ಥಾನದ ಮೇಲಿರಾಗಿ ವಸೂಲಾಗುತ್ತಿರುವ ಸರ್ವೆ ಕಂದಾಯದ ದರಗಳನ್ನೇ ಶಾಶ್ವತವಾಗಿ ಇಟ್ಟಿರಬೇಕು. ಮತ್ತೆ ಮತ್ತೆ ಸರ್ವೆ ಸೆಟಲ್ಮೆಂಟು ಮಾಡಕೂಡದು. ಈಗ ಸರ್ವೆ ಆಫೀಸಿನಲ್ಲಿರುವ ಲೆಕ್ಕಪತ್ರಗಳನ್ನೆಲ್ಲಾ ಆಯಾ ಡೆಪ್ಯುಟಿ ಕಮಿಷನರುಗಳಿಗೆ ಹಂಚಿ ಕೊಡಬಹುದು. ಹೀಗೆ ಸರ್ವೆ ಇಲಾಖೆಯನ್ನು ವಜಾಮಾಡೋಣದರಿಂದ ಸರ್ಕಾರಕ್ಕೆ ವಾರ್ಷಿಕವಾಗಿ ಸುಮಾರು ಎರಡು ಲಕ್ಷ ರೂಪಾಯಿ ಉಳಿಯುವುದು. ಈ ಹಣವನ್ನು ರೈತರ ಶ್ರೇಯೋಭಿವೃದ್ಧಿಗೆ ವಿನಿಯೋಗಿಸಬಹುದಾಗಿದೆ.

ಉತ್ತರ.—ಈ ವಿಷಯವನ್ನು ಗುರುತು ಹಾಕಿಕೊಂಡು, ಆಲೋಚನೆ ಮಾಡುತ್ತೇವೆ.

ಅರಿಕೆ.—ಹಿಡುವಳಿ ಜಮೀನುಗಳಲ್ಲಿರುವ ಗಂಧದ ಮರಗಳ ಉತ್ಪತ್ತಿಯಲ್ಲಿ ಒಂದು ಭಾಗವನ್ನಾದರೂ ಜಮೀನುದಾರರಿಗೆ ಕೊಡಿಸಬೇಕೆಂದೂ, ಇದರಿಂದ ಆ ಮರಗಳನ್ನು ಅವರು ಚೆನ್ನಾಗಿ ಕಾಪಾಡಿ ಬೆಳೆಸುವುದಕ್ಕೂ ಸರ್ಕಾರದ ಉತ್ಪತ್ತಿ ಹೆಚ್ಚುವುದಕ್ಕೂ ಅವಕಾಶವಾಗುವುದೆಂದೂ ಅನೇಕ ವರುಷಗಳಿಂದ ಗವರ್ನ್‌ಮೆಂಟನ್ನು ಈ ಸಭೆಯಲ್ಲಿ ಪ್ರಾರ್ಥನೆಮಾಡಿ ಕೇಳಿಕೊಳ್ಳುತ್ತಾ ಬಂದಿದೇವೆ.

ಉತ್ತರ.—ಗವರ್ನ್‌ಮೆಂಟಿನವರು ಈ ವಿಚಾರವನ್ನು ಚರ್ಚೆಮಾಡುತ್ತಾ ಇದ್ದಾರೆ. ಜಾಗ್ರತೆಯಲ್ಲೇ ಹುಕುಂ ಕೊಡುವರು.

ಅರಿಕೆ.—ಮಲನಾಡು ಪ್ರಾಂತ್ಯದಲ್ಲಿ ಸೌದೆಯ ಸುಂಕವನ್ನು ವಜಾಮಾಡಿ ಕೊಡಬೇಕು. ಇಲ್ಲವೇ, ಆ ದರವನ್ನು ಕಡಮೆಮಾಡಿಕೊಡಬೇಕು.

ಉತ್ತರ.—ಫಾರೆಸ್ಟ್ ಕನ್ಸರ್ವೇಟರವರು ದರವನ್ನು ಕಡಮೆಮಾಡುವ ವಿಷಯದಲ್ಲಿ ಆಲೋಚನೆ ಮಾಡಿ ಹುಕುಂ ಕೊಡುತ್ತಾರೆ.

ಅರಿಕೆ.—ಮಲನಾಡಿನಲ್ಲಿ ವ್ಯವಸಾಯದ ಮುಟ್ಟುಗಳನ್ನು ಮಾಡಿಕೊಳ್ಳುವುದಕ್ಕೆ ರೈತರಿಗೆ ಮುಫತ್ತಾಗಿ ಹೊನ್ನೇ ಮರವನ್ನು ಕೊಡಿಸಬೇಕು. ಬೇರೆ ಜಾತಿಯ ಮರಗಳಲ್ಲಿ ಮುಟ್ಟುಗಳನ್ನು ಮಾಡುವುದಕ್ಕಾಗದಾದಕಾರಣ ಅದನ್ನು ಕೊಡಿಸಬೇಕು.

ಉತ್ತರ.—ಫಾರೆಸ್ಟ್ ಇಲಾಖೆಯವರು ಕಡಿದುಹಾಕಿರುವ ಹೊನ್ನೆಮರದ ರೆಂಬೆಗಳನ್ನು ಶಿಕಾರಿಪುರ, ಸೊರಬ, ಸಾಗರ, ಈ ಪ್ರಾಂತ್ಯಗಳಲ್ಲಿ ರೈತರಿಗೆ ಮುಫತ್ತಾಗಿ ಕೊಡುವಂತೆ ಹುಕುಂ ಮಾಡಲಾಗುತ್ತದೆ.

ಅರಿಕೆ.—ಮೈಸೂರು ಸೀಮೆಯ ಕಾಡು ಮರಗಳನ್ನು ಈಜಿಪ್ಟಿಗೆ ಸಾಗಿಸಿ, ಅಲ್ಲಿ ಬಿಕರಿ ಮಾಡುವುದಕ್ಕೆ ಸರ್ಕಾರದವರು ಒಬ್ಬ ಏಜಂಟರನ್ನು ನೇಮಕ ಮಾಡಿದ್ದಾರೆ. ಈ ಏಜಂಟರಿಗೆ ಎಷ್ಟು ಕಮಿಷನ್ ಕೊಡುವರು? ಮತ್ತು ಆ ಸೀಮೆಯಲ್ಲಿ ಸರ್ಕಾರದವರೇ ಒಂದು ಡಿಪೋ ಇಟ್ಟು, ಮೈಸೂರಿನ ಫಾರೆಸ್ಟ್ ನೌಕರರನ್ನು ಅಲ್ಲಿ ಬಿಕರಿ ಮಾಡುವುದಕ್ಕೆ ನೇಮಿಸಿದರೆ ಉತ್ತಮ.

ಉತ್ತರ.—ಸರ್ಕಾರದವರು ಒಬ್ಬ ಏಜಂಟರನ್ನು ನೇಮಿಸಿ ಅವರ ಮೂಲಕ ಮರಗಳನ್ನು ಈಜಿಪ್ಟಿನಲ್ಲಿ ಬಿಕರಿಮಾಡಿಸುವ ಏರ್ಪಾಡು ಮಾಡಿದ್ದಾರೆ. ಆ ಏಜಂಟರಿಗೆ ರೂಪಾಯಿಗೆ ಎರಡಾಣೆ ಕಮಿಷನ್ ಕೊಡುವರು. ಈ ವಿಷಯವು ಹೊಸದು; ಗವರ್ನ್‌ಮೆಂಟಿಗೆ ಇನ್ನೂ ಅನುಭವಕ್ಕೆ ಬಂದಿಲ್ಲ. ಅನುಭವಕ್ಕೆ ಬಂದು ಲಾಭಕರವೆಂದು ಸ್ಪಷ್ಟಪಟ್ಟರೆ ಬೇರೆ ಏರ್ಪಾಡು ಮಾಡಲು ಆಲೋಚಿಸುವರು.

ಅರಿಕೆ.—ಈಗ ದವಸಗಳ ಧಾರಣೆ ಬಹಳ ಹೆಚ್ಚಿದೆ. ಸರ್ಕಾರದ ಸಣ್ಣ ನೌಕರರಿಗೆ ಕ್ಷಾಮದ ಭತ್ಯವನ್ನು ಕೊಡಿಸುವಂತೆ ಅಪ್ಪಣೆ ಆಗಬೇಕು.

ಉತ್ತರ.—ಆಲೋಚನೆ ಮಾಡುತ್ತೇವೆ.

ಅರಿಕೆ.—ಸರ್ಕಾರದ ಗ್ರಾಂಟು ಪಡೆಯುವಂಥಾ ಸ್ಕೂಲುಗಳ ಉಪಾಧ್ಯಾಯರನ್ನು ಗವರ್ನ್‌ಮೆಂಟ್ ಇನ್‌ಷೂರೆನ್ಸ್ (ಭೀಮಾ) ಕಂಪನಿಗೆ ಸೇರಿಸಿಕೊಳ್ಳುವಂತೆ ಏರ್ಪಾಡಾಗಬೇಕು.

ಉತ್ತರ.—ಸದ್ಯದಲ್ಲಿ ಇದು ಸಾಧ್ಯವಲ್ಲವೆಂದು ಕಾಣುತ್ತದೆ.

ಅರಿಕೆ.—ಜಾತ್ರೆ ಮೊದಲಾದ ಜನಗಳ ಕೂಟ ಸೇರುವ ಕಡೆಗಳಲ್ಲಿ ಎಕ್ಸೈಸ್ ಇಲಾಖೆಯವರು ಹೆಂಡ ಶರಾಬ್ ಅಂಗಡಿಗಳನ್ನು ಇಡಿಸುತ್ತಾರೆ. ಅಂಥಾ ಅಂಗಡಿಗಳಿಗೆ ಲೈಸೆನ್ಸ್ ಕೊಡಕೂಡದು. ಯಾಕೆಂದರೆ ಜನರು ಆ ಸ್ಥಳಗಳಲ್ಲಿ ದಾನ ಧರ್ಮಗಳಿಗೆ ವಿನಿಯೋಗಮಾಡುವ ಹಣವನ್ನು ಕುಡಿಯುವುದಕ್ಕೆ ಹಾಕಿ ಕೆಡುವುದಕ್ಕೆ ಪ್ರೋತ್ಸಾಹವಾಗಿದೆ.

ಉತ್ತರ.—ಜಾತ್ರೆಗೆ ಹೋಗುವವರಿಗೂ ಅಲ್ಲಿ ಕುಡಿಯುವುದಕ್ಕೆ ಬೇಕಾಗುತ್ತಾದ್ದರಿಂದ ಲೈಸೆನ್ಸ್ ಕೊಡುವ ಪದ್ಧತಿ ಉಂಟು. ಸಣ್ಣ ಜಾತ್ರೆ ನಡೆಯುವ ಕಡೆ ಅಂಥಾ ಅಂಗಡಿಗಳನ್ನು ಹೊಸದಾಗಿ ಇಡುವುದಿಲ್ಲ. ಆದರೂ ಈ ವಿಷಯದಲ್ಲಿ ಗವರ್ನ್‌ಮೆಂಟಿನವರು ಯೋಚನೆ ಮಾಡಿ ಹುಕುಂ ಕೊಡುವರು.

ಅರಿಕೆ.—ಈಚಲು ಮರದಲ್ಲಿ ಹೆಂಡ ಇಳಿಸುವಂತೆ ಬಗನೀ ಮರದಲ್ಲಿ ಯಾವಾಗಲೂ ಇಳಿಸಿಕೊಳ್ಳುವುದಕ್ಕಾಗುವುದಿಲ್ಲ. ವರುಷದಲ್ಲಿ ಕೆಲವು ಕಾಲ ಮಾತ್ರ ಅದರಲ್ಲಿ ಹೆಂಡ ಇಳಿಸಬಹುದು. ಆದಕಾರಣ ಬಗನೀ ಮರಕ್ಕೆ ಗೊತ್ತುಮಾಡಿರುವ ತೆರಿಗೆಯನ್ನು ವಜಾಮಾಡಿ, ಮರದಾರರಿಂದ ವಸೂಲ್ಮಾಡುವಂತೆ ಅಪ್ಪಣೆ ಆಗಬೇಕು.

ಉತ್ತರ.—ಈ ವಿಷಯವನ್ನು ಯೋಚಿಸಿ, ಹಾಸನದ ಡಿಸ್ಟ್ರಿಕ್ಟಿನಲ್ಲಿ ಅಜಮಾಯಿಸಿ ತರೀಖು ಪರೀಕ್ಷಿಸುತ್ತೇವೆ.

ಅರಿಕೆ.—ಹುಕ್ಕನ್ನು ಕರಗಿಸಿ ಕಬ್ಬಿಣ ತಯಾರುಮಾಡುವುದು ಪೂರ್ವದಲ್ಲಿ ಬಹಳ ವಿಶೇಷವಾಗಿತ್ತು. ಈಗ ಹೊಂಬಳದವರೂ ಕುಲುಮೆಯವರೂ ತಮ್ಮ ಕಸುಬು ತಪ್ಪಿ ಬಹಳ ಕೆಟ್ಟುಹೋಗಿದಾರೆ. ಈ ಕಸುಬೇ ಕ್ಷೀಣವಾಗಿರುವುದು. ಸರ್ಕಾರದವರು ಪೂರ್ವದಿಂದ ಮುಫತ್ತಾಗಿ ಜಂಗಲಿನ ಇದ್ದಿಲನ್ನು ಆ ಕಸಬಿನವರು ತಂದುಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದು, ಈಚೆಗೆ ಅಂದರೆ ಕಳೆದ ೧೮೯೨ನೇ ಇಸವಿಯಿಂದ ೧-೮ ರೂಪಾಯಿನಂತೆ ತೆರಿಗೆ ಹಾಕಿ ವಸೂಲ್ಮಾಡುತ್ತಾರೆ. ಇದನ್ನು ವಜಾಮಾಡಿ ಕೊಟ್ಟರೆ ಆ ಕಸಬು ನಡೆಯಲು ಪ್ರೋತ್ಸಾಹವಾಗುವುದು.

ಉತ್ತರ.—ಈ ವಿಚಾರದಲ್ಲಿ ನಡೆದಿರುವ ಹಿಂದಿನ ಪ್ರೊಸೀಡಿಂಗ್ಸನ್ನು ನೋಡಿ, ಹುಕುಂ ಕೊಡಲ್ಪಡುವುದು.

ಅರಿಕೆ.—ಸಬ್ ರಿಜಿಸ್ಟ್ರಾರುಗಳು ಪ್ರತ್ಯೇಕವಾಗಿ ಇರುವ ಸ್ಥಳಗಳಲ್ಲಿ ಮ್ಯುನಿಸಿಪಾಲಿಟಿಗೆ ಅವರನ್ನು ವೈಸ್ ಪ್ರೆಸಿಡೆಂಟರನ್ನಾಗಿ ನೇಮಕಮಾಡಿದರೆ ಮ್ಯುನಿಸಿಪಾಲಿಟಿ ಕೆಲಸಗಳು ಇನ್ನೂ ಪ್ರಜೆಗಳಿಗೆ ಅನುಕೂಲವಾಗಿ ನಡೆಯಲು ಅನುಕೂಲವಾಗುವುದು.

ಉತ್ತರ.—ಈ ವಿಷಯವನ್ನು ಗವರ್ನ್‌ಮೆಂಟಿನವರು ಚರ್ಚೆಮಾಡಿದ್ದರಲ್ಲಿ ಅವರಿಗೆ ಆ ಅಧಿಕಾರ ಕೊಡುವುದು ಉಚಿತವಲ್ಲವೆಂದು ಕಂಡುಬಂದು ಆ ರೀತಿ ತೀರ್ಮಾನವಾಗಿದೆ. ಮತ್ತೆ ಇದರ ಪ್ರಸ್ತಾಪ ಅವಶ್ಯವಿಲ್ಲ.

ಅರಿಕೆ.—ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗುವುದಕ್ಕೆ ಪಟೇಲರಿಗೆ ಯೋಗ್ಯತೆಯುಂಟೆಂದು ವಿಧಾಯಕವಾಗಿದೆ. ಅವರು ಸರ್ಕಾರಿ ನೌಕರರಾದ್ದರಿಂದ ಅವರಿಗೂ ಇತರರಂತೆ ಆಸ್ತಿಗಳಿದ್ದ ಹೊರತು ಓಟು ಮಾಡುವ ಅಥವಾ ಮೆಂಬರಾಗುವ ಯೋಗ್ಯತೆ ಇರಕೂಡದು.

ಉತ್ತರ.—ಗ್ರಾಮದಲ್ಲಿ ಪಟೇಲನೇ ಮುಖಂಡನಾಗಿರುತ್ತಾನೆ. ಆ ಅಧಿಕಾರವೇ ದೊಡ್ಡ ಆಸ್ತಿಯು. ಅದು ಹಕ್ಕುದಾರಿಯಾದ ನೌಕರಿ. ಆಸ್ತಿ ಇಲ್ಲದಿದ್ದರೂ ಅವನು ಓಟುಮಾಡಲು ಯೋಗ್ಯತೆಯನ್ನು ಪಡೆದಿರುವನು. ಅವನ ಅಧಿಕಾರವನ್ನು ತಪ್ಪಿಸಲಿಕ್ಕಾಗದು. ಅದ್ದರಿಂದ ಗವರ್ನ್‌ಮೆಂಟಿನವರು ಪಟೇಲನಿಗಿರುವ ಗೌರವವನ್ನೂ ಅಧಿಕಾರವನ್ನೂ ತಪ್ಪಿಸಲು ಇಷ್ಟಪಡುವವರಾಗಿಲ್ಲ.

ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸ.

ವ್ಯವಸಾಯ ಬ್ಯಾಂಕುಗಳು.

ಈ ಸಾಲಿನಲ್ಲಿ ೧೧ ಬ್ಯಾಂಕುಗಳನ್ನು ಮುಚ್ಚುವಂತೆ ಹುಕುಂ ಮಾಡಿದ್ದರಿಂದ ಮುಂಚೆ ೩೬ ಬ್ಯಾಂಕುಗಳಿದ್ದುದು ೨೫ಕ್ಕೆ ಇಳಿಯಿತು. ಹಾಲಿ ಇರುವ ಈ ೨೫ ಬ್ಯಾಂಕುಗಳ ಪೈಕಿ ೪ ಬ್ಯಾಂಕುಗಳಲ್ಲಿ ಮಾತ್ರ ಸ್ವಲ್ಪ ಮಟ್ಟಿಗೆ ಕೆಲಸ ನಡೆದಿದೆ. ಬಾಕಿ ಬ್ಯಾಂಕುಗಳು ಹಿಂದಿನಂತೆಯೇ ಇವೆ. ಆದರೆ ಈ ಬ್ಯಾಂಕುಗಳ ವಿಷಯದಲ್ಲಿ ಒಂದು ಅಂಶವು ತೃಪ್ತಿಕರವಾಗಿದೆ. ಅದೇನೆಂದರೆ—ಡೆಪ್ಯುಟಿ ಕಮಿಷನರುಗಳೂ, ವ್ಯವಸಾಯ ಬ್ಯಾಂಕುಗಳ ಇನ್ಸ್‌ಪೆಕ್ಟರೂ ಮತ್ತು ರೆವಿನ್ಯೂ ಕಮಿಷನರರೂ ಸಹ ಬಹಳ ಮುತುವರ್ಜಿ ವಹಿಸಿದುದರಿಂದ ಸರ್ಕಾರಕ್ಕೆ ಬರತಕ್ಕ ಸಾಲಗಳ ಪೈಕಿ ಈ ಸಾಲಿನಲ್ಲಿ ೧-೩೩,೦೦೦ ರೂಪಾಯಿ ವಸೂಲಾಗಿದೆ. ಈ ಮೊಬಲಗು ಹಿಂದಿನ ಸಾಲಿನಲ್ಲಿ ವಸೂಲಾದುದಕ್ಕೆ ಎರಡರಷ್ಟು ಜಾಸ್ತಿ. ಹೀಗೆ ವಸೂಲಿ ನಡೆಸಿದುದರಲ್ಲಿಯೂ ಸಾಮಾನ್ಯವಾಗಿ ಮೆಂಬರುಗಳ ಆಸ್ತಿಯನ್ನು ಹರಾಜು ಮಾಡಿಸದೇನೇ ಇಷ್ಟು ಭಾರೀ ಮೊಬಲಗು ವಸೂಲಾಗಿರುವುದು ಇನ್ನೂ ತೃಪ್ತಿಕರವಾಗಿದೆ. ಹಿಂದೆ ಸಕಲೇಶಪುರದಲ್ಲಿಯೂ, ಚಿಕ್ಕಮಗಳೂರಲ್ಲಿಯೂ ಇದ್ದ ಕಾಫೀ ಬ್ಯಾಂಕುಗಳಿಂದ ಸರ್ಕಾರಕ್ಕೆ ಭಾರೀ ಸಾಲ ಬರಬೇಕಾಗಿತ್ತಷ್ಟೆ. ಈ ಬ್ಯಾಂಕುಗಳಿಗೆ ಚಾಲ್ತಿ ಬಡ್ಡಿಗೆ ಬೇಕಾದಷ್ಟು ಹಣ ಮುಂಗಡವಾಗಿ ಕೊಡುತ್ತಾ ಬಂದು ಈ ಪದ್ಧತಿಯಿಂದ ಪ್ರಯೋಜನವೇನೂ ಕಂಡುಬರಲಿಲ್ಲ. ಹೀಗೆ ಅಡ್ವಾನ್ಸ್ ಕೊಟ್ಟಾಗ್ಯೂ ಅನೇಕ ಕಾಫಿತೋಟಗಳು ಕ್ರಮೇಣ ಹೀನಸ್ಥಿತಿಗೆ ಬರುತ್ತಾ ಇವೆ. ಆದಕಾರಣ ಅಡ್ವಾನ್ಸ್ ಕೊಡುವ ಪದ್ಧತಿಯನ್ನು ಮನ್ನಾ ಮಾಡಬೇಕೆಂತಲೂ ಸರ್ಕಾರದವರಿಗೂ, ಕಾಫಿತೋಟಗಳ ಮಾಲೀಕರಿಗೂ ಕೂಡಿ ಯಾವ ಮಟ್ಟಿಗೂ ನಷ್ಟವಾಗದಂತೆ ಸದರಿ ಸಾಲದ ಹಣವನ್ನು ಸಾಧ್ಯವಾದಷ್ಟು ಜಾಗ್ರತೆಯಾಗಿ ವಸೂಲ್ಮಾಡಬೇಕೆಂತಲೂ ನಿಶ್ಚಯಮಾಡಿ, ಸರ್ಕಾರದವರು ಕಳೆದ ಜನವರಿ ತಿಂಗಳಲ್ಲಿ ಹುಕುಂ ಮಾಡಿದರು.

ಅನ್ಯೋನ್ಯ ಸಹಾಯಕ ಸಂಘಗಳು.

ಈ ಸಾಲಿನಲ್ಲಿ ಅನ್ಯೋನ್ಯ ಸಹಾಯಕ ಸಂಘಗಳು ಸುಮಾರಾಗಿ ಅಭಿವೃದ್ಧಿಯಾಗಿವೆ. ಈ ಸಂಘಗಳ ಸಂಖ್ಯೆಯು ೧೫ ರಿಂದ ೨೭ಕ್ಕೆ ಹೆಚ್ಚಿದೆ. ಈ ಪೈಕಿ ೮ ಸಂಘಗಳು ವ್ಯವಸಾಯಕ್ಕೆ ಸಂಬಂಧಪಟ್ಟವುಗಳು. ಈ ಸಂಘಗಳ ಆಡಳಿತಕ್ಕೆ ಅವಶ್ಯಕವಾದ ಯೋಗ್ಯತೆಯುಳ್ಳ ಲಾಯಖ್ ಜನಗಳು ಕೆಲಸ ನಡೆಸುವುದಕ್ಕೆ ಸಿಕ್ಕುವುದೇ ಕಷ್ಟವೆಂತ ತಿಳಿಯಬರುತ್ತದೆ. ಆದುದರಿಂದ ಈ ಸಂಸ್ಥಾನದಲ್ಲಿ ಬುದ್ಧಿವಂತರಾಗಿಯೂ ಫಲಾಪೇಕ್ಷಾರಹಿತರಾಗಿಯೂ ಇರತಕ್ಕ ತಾವುಗಳು ಸಾಧ್ಯವಾದಮಟ್ಟಿಗೆ ಈ ಕೊರತೆಯನ್ನು ಹೋಗಲಾಡಿಸುವಿರೆಂದು ನಂಬಿದ್ದೇವೆ. ಯಾಕೆಂದರೆ ನಿಸ್ಸ್ವಾರ್ಥರಾದ ಸಾಧುಜನಗಳು ಜನಗಳಿಗೆ ಉಪಕಾರವನ್ನು ದೇಶಕ್ಕೆ ವಾಸ್ತವವಾದ ಪ್ರಯೋಜನಗಳನ್ನುಂಟುಮಾಡುವುದಕ್ಕೆ ಈ ವಿಧವಾದ ಸಂಘಗಳಲ್ಲಿ ಬಹಳ ಅವಕಾಶವಿರುತ್ತದೆ.

ಪಶುವೈದ್ಯ ಇಲಾಖೆ.

ಪಶುವೈದ್ಯ ಇಲಾಖೆಯನ್ನು ಏರ್ಪಡಿಸತಕ್ಕ ಸಂಗತಿಯನ್ನು ಕುರಿತು ಹೋದವರ್ಷದ ನಮ್ಮ ಉಪನ್ಯಾಸದಲ್ಲಿ ತಮಗೆ ತಿಳಿಸಿದ್ದೇವಷ್ಟೆ. ಈ ವರ್ಷದ ಆದಿಯಲ್ಲಿಯೇ ಈ ಬಗ್ಗೆ ಹುಕುಂ ಕೊಟ್ಟಿದ್ದಾಗ್ಯೂ, ಈ ಇಲಾಖೆಗೆ ತಕ್ಕಷ್ಟು ಮಂದಿ ಲಾಯಖ್ ಜನಗಳು ಸಿಕ್ಕುವುದಕ್ಕೆ ಸ್ವಲ್ಪಕಾಲ ಹಿಡಿಯಿತು. ಹೀಗೆ ಸಾವಕಾಶವಾದುದರಿಂದ, ೧೯೦೪ನೇ ಇಸವಿಯ ಜನವರಿ ತಿಂಗಳಲ್ಲಿ ಬೆಂಗಳೂರಿನಲ್ಲಿ ಒಂದು ಪಶು ಚಿಕಿತ್ಸೆಯ ಆಸ್ಪತ್ರೆಯನ್ನು ಏರ್ಪಡಿಸಲಾಯಿತು. ಮೈಸೂರು, ಚಿಕ್ಕಮಗಳೂರು, ಹಾಸನ, ಈ ಸ್ಥಳಗಳಲ್ಲಿ ಇಂಥಾ ಆಸ್ಪತ್ರೆಗಳನ್ನೂ, ಡಿಸ್ಪೆನ್ಸರಿಗಳನ್ನೂ ಸ್ಥಾಪಿಸುವುದಕ್ಕೆ ೧೯೦೪ನೇ ಮೇ ತಿಂಗಳ ವರೆಗೂ ಸಾವಕಾಶವಾಗಬೇಕಾಯಿತು. ಈ ವೈದ್ಯಶಾಲೆಗಳನ್ನು ಸ್ಥಾಪಿಸುವುದಕ್ಕೆ ಇಷ್ಟು ಕಾಲವಿಳಂಬವಾದಾಗ್ಯೂ, ಇದುವರೆಗೆ ಇವುಗಳಲ್ಲಿ ಎಲ್ಲಾ ಜಾತಿಯ ಪ್ರಾಣಿಗಳೂ ಸೇರಿ ೧,೭೦೩ ಪ್ರಾಣಿಗಳಿಗೆ ಚಿಕಿತ್ಸೆ ನಡೆದಿದೆ. ನೆರಡಿ, ಚಪ್ಪೆರೋಗ, ಮೆಟ್ರಿಗಟ್ಟು, ಕಾಲು ಬಾಯಿ ಜ್ವರ, ಕುರಿಯ ಸಿಡುಬು ಮೊದಲಾದ ನಾನಾ ಪ್ರಕಾರವಾದ ಸಾಂಕ್ರಾಮಿಕ ಜಾಡ್ಯಗಳು ಈ ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಅಲ್ಲಲ್ಲಿ ಉಂಟಾಗಿದ್ದುವು. ಅಗ್ರಿ ವೆಟರಿನರಿ ಇನ್ಸ್‌ಪೆಕ್ಟರೂ ಇವರ ಅಸಿಸ್ಟೆಂಟರುಗಳೂ ದನಗಳಿಗೆ ಕೆಲವು ಮಟ್ಟಿಗೆ ಸಹಾಯವಮಾಡಿದರು. ಈ ಸಂಸ್ಥಾನದಲ್ಲಿ ಬಹಳ ಕಾಲದಿಂದ ಈಚೆಗೆ ಇಲ್ಲದೇ ಇದ್ದ ದನಗಳ ದೊಡ್ಡರೋಗವು ಶಿವಮೊಗ್ಗಾ ಮತ್ತು ಕೋಲಾರ ಡಿಸ್ಟ್ರಿಕ್ಟುಗಳಲ್ಲಿಯೂ, ಕಡೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳ ಕೆಲವು ಭಾಗಗಳಲ್ಲಿಯೂ ಸಾಂಕ್ರಾಮಿಕ ರೂಪವಾಗಿ ಕಾಣಿಸಿಕೊಂಡಿತು. ಈ ರೋಗವು ಬಾಧಕ ಅಧಿಕವಾಗದುದಕ್ಕಾಗಿ ದನಗಳಿಗೆ ಸಿಡುಬು ಹಾಕುವ ಪದ್ಧತಿಯನ್ನು ಅನೇಕ ಸ್ಥಳಗಳಲ್ಲಿ ಅನುಸರಿಸಲಾಯಿತು. ಹೀಗೆ ಸಿಡುಬು ಹಾಕುವುದರಿಂದ ಬಹಳ ಪ್ರಯೋಜನವುಂಟೆಂದು ರೈತರಿಗೆ ನಂಬಿಕೆ ಹುಟ್ಟಿದುದರಿಂದ ಸಿಡುಬು ಹಾಕುವವರನ್ನು ಕಳುಹಿಸಬೇಕೆಂದು ಈ ಸಂಸ್ಥಾನದ ಅನೇಕ ಸ್ಥಳಗಳಲ್ಲಿ ಎಲ್ಲರೂ ಕೇಳುತ್ತಾರೆ. ಇದುವರೆಗೆ ಒಟ್ಟು ೪,೭೫೫ ದನಗಳಿಗೆ ಈ ರೀತಿ ಸಿಡುಬು ಹಾಕಿರುತ್ತದೆ. ಇತರ ಸಾಂಕ್ರಾಮಿಕ ಜಾಡ್ಯಗಳಿಗೂ ಸಿಡುಬು ಹಾಕುವ ಹಾಲುಗಳನ್ನು ತರಿಸಿ ಅವಶ್ಯಕಬಿದ್ದಾಗ್ಗೆ ಉಪಯೋಗಿಸುವುದಕ್ಕೋಸ್ಕರ ಸಿದ್ಧವಾಗಿ ಇಟ್ಟಿದೆ.

ಜಂಗಲಿಗಳು.

ಒಟ್ಟು ೧೦೫ ಚದರ ಮೈಲಿಗಳ ವಿಸ್ತೀರ್ಣವುಳ್ಳ ಇನ್ನೆರಡು ತಾಲೂಕುಗಳನ್ನು ಮನ್ನಾ ಜಂಗಲಿಗಳನ್ನಾಗಿ ಏರ್ಪಡಿಸಿದುದಲ್ಲದೆ, ೧೬೭ ಚದರ ಮೈಲಿಗಳ ವಿಸ್ತೀರ್ಣವುಳ್ಳ ಜಮೀನುಗಳನ್ನೂ ಸರ್ಕಾರಕ್ಕೆ ಉಳಿಸಿಕೊಂಡಿದೆಯೆಂದು ಪ್ರಕಟಪಡಿಸಲಾಯಿತು. ಗಂಧದ ಮರಗಳ ಪೈಕಿ ಫೆಲ್ಡ್ ಒಣಗಿದ ಮರಗಳನ್ನು ಮಾತ್ರವೇ ಜಮಾಯಿಸಿ ೨,೫೧೮ ಟನ್ನುಗಳನ್ನು ಮಾರಿದುದರಿಂದ ಈ ವರ್ಷ ೧೪,೧೮,೦೦೦ ರೂಪಾಯಿ ಉತ್ಪತ್ತಿಯಾಯಿತು. ಈ ಇಲಾಖೆಯಿಂದ ೧೨,೩೫,೦೦೦ ರೂಪಾಯಿ ನಿವ್ವಳ ಹುಟ್ಟುವಳಿ ಬಂತು. ಹಿಂದಿನ ಸಾಲಿನಲ್ಲಿ ೧೩,೭೪,೦೦೦ ರೂಪಾಯಿ ಮಾತ್ರ ನಿವ್ವಳ ಹುಟ್ಟುವಳಿಯಾಗಿತ್ತು. ಈಗಿನ ಹುಟ್ಟುವಳಿಯು ಈಗ್ಗೆ ೮ ವರುಷಗಳ ಕೆಳಗೆ ಬಂದ ಹುಟ್ಟುವಳಿಯ ಎರಡರಷ್ಟು ಆಗುತ್ತದೆ. ಈ ಸಂದರ್ಭದಲ್ಲಿ ನಾವು ತಮಗೆ ತಿಳಿಯಪಡಿಸತಕ್ಕ ಅಂಶವೇನೆಂದರೆ.—ಸರ್ಕಾರದವರು ಈಗಿನ ಹುಟ್ಟುವಳಿಯನ್ನು ಹೆಚ್ಚಿಸುವುದಕ್ಕೋಸ್ಕರ ಸಂಸ್ಥಾನದ ಜಂಗಲಿಗಳಲ್ಲಿರುವ ಮರಗಳನ್ನೆಲ್ಲಾ ಮನಸ್ಸಿನಂತೆ ಕಡಿದು ಬಯಲು ಮಾಡುತ್ತಾ ಇದ್ದಾರೆಂದು ಪತ್ರಿಕೆಗಳಲ್ಲಿ ಆಗಿಂದಾಗ್ಗೆ ಪ್ರಚಾರವಾಗುತ್ತಿದೆ. ಅಂಥಾ ವರ್ತಮಾನಗಳಿಗೆ ಸ್ವಲ್ಪವೂ ಆಧಾರವೇ ಇರುವುದಿಲ್ಲವೆಂದು ದೃಢವಾಗಿ ನಂಬಬಹುದು. ಸಂಸ್ಥಾನಕ್ಕೆ ಶಾಶ್ವತವಾದ ಪ್ರಯೋಜನ ಉಂಟಾಗುವಂತೆಯೂ, ಮುಂದಕ್ಕೆ ಬೇಕಾದ ಜಂಗಲಿ ದಾಸ್ತಾನಿಗೆ ಲೋಪವಿಲ್ಲದಂತೆಯೂ ಈ ಬಾಬನ್ನು ರೂಢಿಸುತ್ತಿವೆ ಎಂಬುದರಲ್ಲಿ ಸಂಶಯಪಡುವ ಕೆಲಸವಿಲ್ಲ. ಗಂಧದ ಮರಗಳನ್ನು ಕಾಪಾಡಿ ಬೆಳೆಸುವುದರಲ್ಲಿ ರೈತರ ಸಹಾಯವನ್ನೂ ಹೊಂದುವ ಉದ್ದೇಶದಿಂದ ಯಾವ ರೈತರ ಜಮೀನುಗಳಲ್ಲಿ ಗಂಧದ ಮರಗಳು ಇವೆಯೋ ಅವರಿಗೆ ಅಂಥಾ ಮರಗಳನ್ನು ಕೀಳುವ ಕಾಲದಲ್ಲಿ ಬಹುಮಾನಕೊಡುವುದಾಗಿಯೂ, ಸಾಗುವಳಿಗೆ ಅಡಚಣೆ ಉಂಟುಮಾಡುವ ಗಂಧದ ಮರಗಳನ್ನು ತೆಗೆದು ಹಾಕುವುದಕ್ಕೆ ಹೆಚ್ಚಾದ

ಅನಕಾಶಕೊಡುವುದಾಗಿಯೂ ಉದ್ದೇಶಿಸಿದೆ ಎಂದು ಕಳೆದ ವರುಷದ ಉಪನ್ಯಾಸದಲ್ಲಿ ತಿಳಿಸಿದ್ದೆವಷ್ಟೆ. ಈ ವರ್ಷ ಇದನ್ನು ಇನ್ನೂ ಪರ್ಯಾಲೋಚಿಸಲಾಯಿತು. ಶೀಘ್ರದಲ್ಲಿಯೇ ಹುಕುಂ ಕೊಡಲಾಗುತ್ತದೆ.

ಪೋಲೀಸು.

ಈ ವರ್ಷ ರಿಪೋರ್ಟಾದ ತಕ್ಸೀರುಗಳ ಸಂಖ್ಯೆಯು ೧೯೦೬—೦೭ನೇ ಸಾಲಿನ ಸಂಖ್ಯೆಗಿಂತ ಕಮ್ಮಿಯಾಗಿರುತ್ತದೆ. ಮತ್ತು ಫೈಸಲಾಗಿರುವ ಮೊಕದ್ದಮೆಗಳ ಪೈಕಿ ಅನೇಕ ಮೊಕದ್ದಮೆಗಳಲ್ಲಿ ತಕ್ಸೀರು ಸಾಬೀತಾಗಿರುತ್ತದೆ. ಈ ಎರಡು ಸಂಗತಿಗಳೂ ತೃಪ್ತಿಕರವಾಗಿವೆ. ಈ ಸಂವತ್ಸರದಲ್ಲಿ ನಡೆದ ಎರಡು ಸಂಗತಿಗಳು ಕುಂಬಾ ಆಶ್ಚರ್ಯಕರವಾಗಿಯೂ ವಿಷಾದಕರವಾಗಿಯೂ ಇದ್ದುವು. ಅವುಗಳನ್ನು ಸಂಕ್ಷೇಪವಾಗಿ ತಿಳಿಸುತ್ತೇವೆ. ಮೊದಲನೇದು—ಕೋಲಾರದ ಛಿನ್ನದ ಗಣಿಗಳಲ್ಲಿ ಕೂಲಿಯವರಿಗೂ ಪಂಜಾಬಿ ಪಹರೆಯವರಿಗೂ ಜಗಳಗಳು ನಡೆದುದರ ಮೇಲೆ ೧೯೦೭ನೇ ಇಸವಿಯ ಡಿಸೆಂಬರು ೨೫ ರಿಂದ ೩೧ರ ವರೆಗೆ ಸ್ವಲ್ಪವಾದ ದೊಂಬಿ ನಡೆಯಿತು. ಈ ದೊಂಬಿಯು ಕೆಲವು ಕಾಲದ ವರೆಗೆ ಬಹಳ ಜೋರಾಗಿದ್ದುದರಿಂದ ಆಯುಧಸಾಧನಗಳಾದ ಸಿಪಾಯಿಗಳನ್ನು ಬಿಟ್ಟು ದೊಂಬಿಯವರನ್ನು ಚದರಿಸಬೇಕಾಯಿತು. ಆದರೆ ಆ ಸ್ಥಳದ ದೊಡ್ಡ ದೊಡ್ಡ ಅಧಿಕಾರಿಗಳು ಗಾಬರಿಪಡದೆ ವಿಶೇಷ ಧೈರ್ಯದಿಂದಲೂ ಸಮಯೋಚಿತವಾಗಿಯೂ ನಡೆದುಕೊಂಡುದರಿಂದ ಪ್ರಾಣನಷ್ಟವಾಗಲೀ ಸ್ವತ್ತಿಗೆ ಹಾನಿಯಾಗಲೀ ಸ್ವಲ್ಪವೂ ಇಲ್ಲದಹಾಗೆ ದೊಂಬಿಯನ್ನು ಅಡಗಿಸಲಾಯಿತು. ಈ ದೊಂಬಿಗೆ ಸೇರಿದ್ದ ಎರಡು ಪಕ್ಷಗಳಲ್ಲಿಯೂ ಮುಖಂಡರಾದವರನ್ನು ಕಾನೂನಿಗನುಸಾರವಾಗಿ ವಿಚಾರಣೆಮಾಡಿ ಶಿಕ್ಷೆಗೆ ಗುರಿಮಾಡಲಾಯಿತು. ಎರಡನೇದು—ಬೆಂಗಳೂರಿನಲ್ಲಿ ಕೆಲವು ಪ್ರಾಯಪ್ರಬುದ್ಧರಾದ ಚಿಕ್ಕವಯಸ್ಸಿನವರು ವಿಷಪ್ರಯೋಗ ಮಾಡುವುದು, ಕತ್ತಿಗೆ ಕೊಯ್ಯುವುದು, ಈ ರೀತಿಯಲ್ಲಿ ಬೆಂಗಳೂರು ಪಟ್ಟಣದಲ್ಲಿಯೂ ಅಷ್ಟರಿನಲ್ಲಿಯೂ ಕಳೆದ ಎರಡು ವರ್ಷಗಳ ಲಾಗಾಯಿತು ಅನೇಕ ಘೋರವಾದ ಖೂನಿಗಳನ್ನು ನಡೆಸಿದರು. ಇವರು ಸ್ವಲ್ಪಮಟ್ಟಿಗೆ ಇಂಗ್ಲೀಷ್ ವಿದ್ಯಾಭ್ಯಾಸ ಮಾಡಿದ್ದರಲ್ಲದೆ ಮರ್ಯಾದಸ್ಥರ ಕುಟುಂಬಕ್ಕೆ ಸೇರಿದ್ದರು. ಇವರು ಈ ಖೂನಿಗಳನ್ನು ನಡೆಸುವುದಕ್ಕೆ ಬಹಳ ಚಮತ್ಕಾರವಾಗಿ ಏರ್ಪಾಡು ಮಾಡಿದ್ದರು. ಹೀಗೆ ಖೂನಿ ನಡೆಸುವುದಕ್ಕೆ ಭಂಗಾರದ ಒಡವೆಗಳನ್ನು ಕಸುಕೊಳ್ಳುವುದೇ ಮುಖ್ಯ ಉದ್ದೇಶವಾಗಿತ್ತು. ಖೂನಿ ಆದವರ ದೇಹಗಳನ್ನು ಇವರು ವರ್ಜನ ಮಾಡುತ್ತಿದ್ದ ರೀತಿಯನ್ನೂ, ಸದರಿ ಒಡವೆಗಳನ್ನು ಇವರು ಬಿಕರಿ ಮಾಡುತ್ತಿದ್ದ ರೀತಿಯನ್ನೂ ನೋಡಿದರೆ ಇವರು ವಿಶೇಷ ಬುದ್ಧಿವಂತಿಕೆಯನ್ನು ದುರ್ಮಾರ್ಗದಲ್ಲಿ ಉಪಯೋಗಿಸುತ್ತಿದ್ದರೆಂಬ ಸಂಗತಿಯು ವ್ಯಕ್ತಪಡುತ್ತದೆ. ಈ ತಕ್ಸೀರುಗಳು ಅಕಸ್ಮಾತ್ತಾಗಿ ಹೊರಬಿದ್ದ ಸಂಗತಿಯೂ ಈ ತಪ್ಪಿತಸ್ಥರು ತಮ್ಮ ದುಷ್ಕೃತಿಗೆ ತಕ್ಕಹಾಗೆ ಶಿಕ್ಷೆ ಅನುಭವಿಸಿದುದೂ ಗತಿಯೂ ತಮಗೆಲ್ಲಾ ವೇದ್ಯವಾಗಿಯೇ ಇದೆ. ಈ ಮೊಕದ್ದಮೆಯ ವೃತ್ತಾಂತಗಳನ್ನು ನೋಡಿದರೆ ಮರ್ಯಾದಸ್ಥರೆಂದು ತೋರುವವರ ಮನೆಗಳಲ್ಲಿಯೂ ಕೂಡ ಮಕ್ಕಳು ದುರ್ಮಾರ್ಗಕ್ಕೆ ಬೀಳದೆ ಒಳ್ಳೇ ಬುದ್ಧಿಯನ್ನೇ ಕಲಿಯುವುದಕ್ಕೆ ತಕ್ಕ ಅವಕಾಶವಿಲ್ಲವೆಂದು ಕಂಡುಬರುತ್ತದೆಯಲ್ಲದೆ, ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ನೀತಿ ಸಂಬಂಧವಾಗಿಯೂ, ಮತಸಂಬಂಧವಾಗಿಯೂ ಶಿಕ್ಷಣ ಕೊಡದೆ ಇರುವ ಕೊರತೆಯಿಂದ ಎಷ್ಟು ಮಟ್ಟಿನ ಹಾನಿ ಉಂಟಾಗುತ್ತದೆಂಬುವದು ವ್ಯಕ್ತಪಡುತ್ತದೆ. ಬೆಂಗಳೂರು ಪಟ್ಟಣದಲ್ಲಿ ನಡೆದ ಮೊಕದ್ದಮೆಗಳ ತನಿಖೆಗೆ ಸಂಬಂಧಪಟ್ಟ ಪೋಲೀಸು ಆಫೀಸರುಗಳ ನಡತೆಯ ವಿಷಯದಲ್ಲಿ ಇಲಾಖಾ ತರೀಖ್ ವಿಚಾರಣೆ ನಡೆಸಲಾಯಿತು. ಇದರಿಂದ ಈ ಆಫೀಸರುಗಳು ಏಕಪ್ರಕಾರವಾಗಿ ಪ್ರಾಮಾಣಿಕತೆಯಿಂದಲೂ ನಿಷ್ಠೋತ್ಸಾಹವಾದ ರೀತಿಯಲ್ಲೂ ನಡೆದಿರುವುದಾಗಿ ಕಂಡು ಬಂದಿರುವುದು ಸಂತೋಷಕರವಾದುದೇ ಸರಿ.

ಮರಾಮತ್ತ್ ಕಾಮಗಾರಿಗಳು.

೧೯೦೭—೦೮ ನೇ ಸಾಲಿನಲ್ಲಿ ಮರಾಮತ್ತ್ ಕಾಮಗಾರಿಗಾಗಿ ಒಟ್ಟು ೫೩,೫೮,೦೦೦ ರೂಪಾಯಿ ಖರ್ಚಾಯಿತು. ಈ ಪೈಕಿ ... ರೀತಿ ಕಾಮಗಾರಿಗಳ ಬಾಬಿನಲ್ಲಿ ೧೦,೫೫,೦೦೦ ರೂಪಾಯಿಯೂ, ... ಸಿವಿಲ್ ಕಾಮಗಾರಿಗಳ ಬಾಬಿನಲ್ಲಿ ೩೬,೬೫,೦೦೦ ರೂಪಾಯಿಯೂ, ... ಮಿಲಿಟರಿ ಯಾಸ್ಪತ್ರೆ ಕಾಮಗಾರಿಗಳ ಬಾಬಿನಲ್ಲಿ ೩೬,೦೦೦ ರೂಪಾಯಿಯೂ, ಕಾವೇರಿ ವಿದ್ಯುಚ್ಛಕ್ತಿಯ ಕಾಮಗಾರಿಗಳ ಬಾಬಿನಲ್ಲಿ ೧೬,೧೩,೦೦೦ ರೂಪಾಯಿಯೂ ಖರ್ಚಾದುವು.

ನೀರಾವರಿ ಕಾಮಗಾರಿಗಳು

ಕಳೆದ ವರುಷದಲ್ಲಿ ಮಾರಿಕಣಿವೆ ಕೆರೆಯ ಕಾಮಗಾರಿಯು ತೃಪ್ತಿಕರವಾಗಿ ನಡೆಯಿತು. ಈ ಕಾಮಗಾರಿಗೆ ೧,೪೩,೩೫೭ ರೂಪಾಯಿ ಖರ್ಚಾಯಿತು. ಈ ಕೆರೆಯ ದೊಡ್ಡ ಅಣೆಕಟ್ಟು ಪೂರೈಸಿತು. ಕಲ್ಲು ಚಪ್ಪಡಿ ಕಾಮಗಾರಿ ಮಟ್ಟಕ್ಕೆ ಬಾಕಿ ನಿಂತಿದೆ. ಬಲ ದಡದ ನಾಲೆಯು ೧೮ ನೇ ಮೈಲಿಯ ವರೆಗೆ ಪೂರ್ತಿಯಾದಂತೆಯೇ ಹೇಳಬಹುದು. ಈ ನಾಲೆಯು ೩೦ ನೇ ಮೈಲಿಯಿಂದ ೨೫ ನೇ ಮೈಲಿಯ ವರೆಗೂ ಮಣ್ಣು ಕಾಮಗಾರಿಯೂ ಮುಗಿಯುತ್ತಾ ಬಂದಿದೆ; ೧೬ ನೇ ಮೈಲಿಯ ತನಕ ನೀರನ್ನು ಬಿಡಲಾಯಿತು. ಎಡ ದಡದ ನಾಲೆಯಲ್ಲಿ ಇಟ್ಟಿಗೆ ಗಾರೆ ಕೆಲಸವೂ ಸಹ ೨೨ ನೇ ಮೈಲಿಯ ತನಕ ಪೂರೈಸಿ ಇದೆ. ೨೧ ನೇ ಮೈಲಿಯ ವರೆಗೆ ನೀರನ್ನು ಬಿಡಲಾಯಿತು. ಕಳೆದ ಸರ್ಕಾರಿ ಸಾಲ ... ವರೆಗೆ ಈ ಕಾಮಗಾರಿಗೆ ಒಟ್ಟು ೩೩,೪೫,೬೫೩ ರೂಪಾಯಿ ಖರ್ಚಾಯಿತು.

ಸಣ್ಣ ಕೆರೆಗಳು.

ಸಣ್ಣ ಕೆರೆಗಳಿಗಾಗಿ ರೆವಿನ್ಯೂ ಇಲಾಖೆಯಿಂದ ೭೭,೦೦೦ ರೂಪಾಯಿ ಖರ್ಚಾಯಿತಲ್ಲದೆ ರೈತರಿಗೆ ಅವರ ಪಾಲಿನ ಮಣ್ಣು ಕಾಮಗಾರಿಯನ್ನು ಮಾಡುವುದಕ್ಕಾಗಿ ೧೩,೦೦೦ ರೂಪಾಯಿಯನ್ನು ಮುಂಗಡ ಕೊಡಲಾಯಿತು. ಈ ವರುಷದಲ್ಲಿ ೩೭೫ ಕೆರೆಗಳ ಕಾಮಗಾರಿಯು ಆರಂಭವಾಗಿ ೧೭೫ ಕೆರೆಗಳ ಕಾಮಗಾರಿಯು ಪೂರೈಸಿತು. ಈ ಬಾಬಿನಲ್ಲಿ ನಡೆದ ಕೆಲಸದ ಒಟ್ಟಿನಲ್ಲಿ ತೃಪ್ತಿಕರವಾಗಿತ್ತು. ತಕ್ಷಾಪಿ ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ೧೬೪ ಕೆರೆಗಳನ್ನು ದುರಸ್ತು ಮಾಡಲು ಆರಂಭಿಸಿದುದಕ್ಕೆ ಕಳೆದ ವರುಷದಲ್ಲಿ ಆ ಪೈಕಿ ೫೬ ಕೆರೆಗಳು ಪೂರಾ ದುರಸ್ತಾದುದು ಬಹಳ ಸಮರ್ಪಕವಾಗಿದೆ.

ಕಾವೇರೀ ನದಿಗೆ ಅಡ್ಡಲಾಗಿ ಕೆರೆ.

ಬಳನೋಲದ ಬಳಿ ಕಾವೇರೀ ನದಿಗೆ ಅಡ್ಡವಾಗಿ ಅಣೆ ಹಾಕಿ ಒಂದು ದೊಡ್ಡ ಕೆರೆಯನ್ನು ಕಟ್ಟುವುದಕ್ಕೋಸ್ಕರ ಷುರು ಅಜಮಾಯಿಷಿ ಕೆಲಸವು ಪೂರೈಸಿ, ಆ ಬಗ್ಗೆ ಒಂದು ಅಂದಾಜು ತಯಾರಾಯಿತಲ್ಲದೆ ಸರ್ಕಾರದವರು ಅದನ್ನು ಪರ್ಯಾಲೋಚನೆ ಮಾಡುತ್ತಾ ಇದ್ದಾರೆ. ಈ ಕೆರೆಯನ್ನು ಕಟ್ಟುವುದು ಸಾಧ್ಯವಾಗಿರುವುದಾಗಿ ಕಂಡುಬರುವುದಲ್ಲದೆ ಉತ್ತರೋತ್ತರ ಅದರಿಂದ ತಕ್ಕಮಟ್ಟಿಗೆ ವರಮಾನವು ಬರಬಹುದಾಗಿಯೂ ತೋರುತ್ತದೆ. ಆದರೆ ಇದಕ್ಕೆ ಬಹಳ ಖರ್ಚಾಗಬೇಕಾಗಿರುವದರಿಂದ ಹಣವನ್ನು ಒದಗಿಸುವ ವಿಚಾರದಲ್ಲಿ ಸ್ವಲ್ಪ ಅನಾನುಕೂಲವಾಗಿದೆ. ಸರ್ಕಾರದವರು ಈ ವಿಷಯವನ್ನು ಎಲ್ಲಾ ಭಾಗದಲ್ಲಿಯೂ ಪರ್ಯಾಲೋಚಿಸಿ, ಮುಂದೆ ಇನ್ನೂ ಅನುಕೂಲವಾದ ಕಾಲ ಬಂದಾಗ ಇದನ್ನು ಪುನಃ ಯೋಚಿಸಬಹುದು.

ಕಾವೇರೀ ವಿದ್ಯುಚ್ಛಕ್ತಿಸ್ಥಾಪನೆಯ ಕಾಮಗಾರಿಗಳು.

ಕಾವೇರೀ ವಿದ್ಯುಚ್ಛಕ್ತಿಸ್ಥಾಪನೆಯ ಏರ್ಪಾಡಿಗೆ ಒಟ್ಟು ೧೬,೧೩,೧೪೫ ರೂಪಾಯಿ ಖರ್ಚಾಯಿತು; ಈ ಪೈಕಿ ೧೩,೮೦,೮೩೧ ರೂಪಾಯಿಯು ಮೂರನೇ ಸ್ಥಾಪನೆಗೆ ಖರ್ಚಾಯಿತು. ೭೫,೫೩೮ ರೂಪಾಯಿ ಬೆಂಗಳೂರಿನಲ್ಲಿ ಬೆಳಕನ್ನಿಡುವ ಮತ್ತು ಕಾರ್ಖಾನೆಗಳಿಗೆ ಶಕ್ತಿಯನ್ನು ಸರಬರಾಯಿ ಮಾಡುವ ಏರ್ಪಾಡಿಗೆ ಖರ್ಚಾಯಿತು. ೩,೫೫,೭೮೬ ರೂಪಾಯಿಯು ಸಿಬ್ಬಂದಿ ಖರ್ಚುಗೂ, ಮೊದಲನೇ ಎರಡನೇ ಸ್ಥಾಪನೆಗಳನ್ನು ದುರಸ್ತಿನ ಸ್ಥಿತಿಯಲ್ಲಿಡುವುದಕ್ಕೂ ತಗಲಿತು. ಕಳೆದ ವರ್ಷದಲ್ಲಿ ಒಟ್ಟು ೧೬,೫೮,೩೪೬ ರೂಪಾಯಿ ಉತ್ಪತ್ತಿಯಾಯಿತು. ಈ ಪೈಕಿ ಸಿಬ್ಬಂದಿ ಖರ್ಚು ಜಾತಾ ೧೫,೦೩,೫೬೦ ರೂಪಾಯಿ ನಿವ್ವಳ ಹುಟ್ಟುವಳಿಯಾಯಿತು; ಎಂದರೆ, ಬಜೆಟ್ ಯಾನೆ ಜಮಾಖರ್ಚಿನ ಅಂದಾಜುಪಟ್ಟಿಯಲ್ಲಿ ನಿರೀಕ್ಷಿಸಿದ್ದಕ್ಕಿಂತ ೩,೩೫,೦೦೦ ರೂಪಾಯಿ ಜಾಸ್ತಿ ಬಂದ ಹಾಗಾಯಿತು. ಶಿವಸಮುದ್ರದ ಬ್ಲಫ್ ಎಂಬ ಒಂದು ಊರಿನ ಪಾಠಶಾಲೆ ಬಗ್ಗೆ ೩೪,೫೧೯ ರೂಪಾಯಿಯ ಖರ್ಚಿನಿಂದ ಕಾಮಗಾರಿಯನ್ನು ಪೂರೈಸಲಾಯಿತು. ೧೯೦೮ ನೇ ಇಸವಿಯ ಜನವರಿ ಗುರುವಾರದಿನ ಬೆಂಗಳೂರಿನ ದಂಡಿನಲ್ಲಿ ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವುದಕ್ಕೆ ಉಪಕ್ರಮವಾಯಿತು. ೧೯೦೮ ನೇ ಇಸವಿಯ ಸೆಪ್ಟೆಂಬರು ೩೬ ರ ಲಾಗಾಯಿತು ಮೈಸೂರಿನಲ್ಲಿ ಇದೇ ದೀಪಗಳನ್ನು ಹಚ್ಚುತ್ತಾ ಇದೆ.

ರೈಲ್ ರಸ್ತೆಗಳು

ಈಗಿರುವ ರೈಲ್ ಮಾರ್ಗಗಳಲ್ಲಿ ನಿವ್ವಳ ಹುಟ್ಟುವಳಿಯು ೧೯೦೬-೦೭ರಲ್ಲಿ ೧೦,೭೩,೮೭೩ ರೂಪಾಯಿ ಇದ್ದುದು ಈ ಸಾರಿ ೧೧,೩೭,೦೦೦ ರೂಪಾಯಿ ಆಯಿತು; ಎಂದರೆ, ಬಂಡವಾಳದ ಮೇಲಣ ಹುಟ್ಟುವಳಿಯು ೧೯೦೬-೦೭ರಲ್ಲಿ ೪.೫೩ ಆಗಿದ್ದುದು ಈ ಸಾರಿ ೪.೭೧ ಆಯಿತು. ಒಟ್ಟು ಹುಟ್ಟುವಳಿಯ ಪೈಕಿ ಸಿಬ್ಬಂದಿ ಖರ್ಚು ೧೯೦೬—೦೭ರಲ್ಲಿ ೬೦.೬೧ ಆಗಿದ್ದುದು ಈ ಸಾರಿ ೬೨.೯೩ ಆಯಿತು. ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ಲಘುರೈಲ್ವೆಯನ್ನು ಹಾಕುವುದಕ್ಕೆ ಮೊದಲು ಅಂದಾಜು ಹಾಕಿದ್ದು ಮೊಬಲಗಿಗಿಂತ ಖರ್ಚು ಬಹಳ ಹೆಚ್ಚಾಗುವುದಾಗಿ ತೋರಬಂದುದರಿಂದ ಸದರಿ ಏರ್ಪಾಡನ್ನು ಬಿಟ್ಟು ಬಿಟ್ಟು ಅದರ ಬದಲಾಗಿ ಏರ್ಪಟ್ಟಿದ್ದ ಕಂಪನಿಯವರು ಅದಕ್ಕೆ ಬದಲಾಗಿ ಒಂದು ಸ್ಟೀಂ ಟ್ರಾಂವೇಯನ್ನು ಹಾಕುವುದಕ್ಕಾಗಿ ಸರ್ಕಾರದವರ ಅಪ್ಪಣೆಯನ್ನು ಕೇಳಿದ್ದಾರೆ. ಈ ವಿಚಾರವಾಗಿ ನಕಾಷೆಗಳೂ, ಅಂದಾಜುಗಳೂ ತಯಾರಾಗುತ್ತವೆ ಎಂದು ತಿಳಿದುಬಂದಿದೆ. ಮದರಾಸ್ ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪನಿಯವರು ಮೈಸೂರಿಂದ ಹಾಸನದ ವರೆಗಿನ ರಸ್ತೆಯನ್ನು ಸರ್ವೇ ಮಾಡುವುದಾಗಿ ಒಪ್ಪಿಕೊಂಡಿದ್ದಾರೆ.

ಛಿನ್ನಾರ.

೧೯೦೫—೦೬ನೇ ಸಾಲಿನಲ್ಲಿ ಗಣಿಗಳಿಂದ ತೆಗೆದ ಚಿನ್ನಕ್ಕಿಂತಲೂ ೧೯೦೬-೦೭ನೇ ಸಾಲಿನಲ್ಲಿ ತೆಗೆದುದು ಬಹಳ ಕಡಮೆಯಾಗಿತ್ತು ಎಂಬ ಅಂಶವನ್ನು ಹೋದ ವರ್ಷದ ಉಪನ್ಯಾಸದಲ್ಲಿ ಸೂಚಿಸಿದ್ದೆವು. ಆದರೆ ೧೯೦೭—೦೮ನೇ ಸಾಲಿನಲ್ಲಿಯೂ ಇದೇ ರೀತಿಯಾಗಿ ಕಮ್ಮಿಯಾಗಿರುವುದನ್ನು ನೋಡಿ ವಿಷಾದಿಸಬೇಕಾಗಿದೆ. ೧೯೦೫—೦೬ನೇ ಸಾಲಿನಲ್ಲಿ ೬೨,೪೫,೧೦೭ ಪೌಂಡ್ ಕಿಮ್ಮತ್ತು ಚಿನ್ನವನ್ನೂ, ೧೯೦೬-೦೭ನೇ ಸಾಲಿನಲ್ಲಿ ೫೯,೬೬,೧೯೭೦ ಪೌಂಡುಗಳ ಚಿನ್ನವನ್ನೂ, ೧೯೦೭-೦೮ನೇ ಸಾಲಿನಲ್ಲಿ ೫೭,೭೯,೭೨೬ ಪೌಂಡುಗಳ ಚಿನ್ನವನ್ನೂ ಗಣಿಗಳಿಂದ ತೆಗೆಯಲಾಯಿತು.

ಪ್ಲೇಗಿನ ಹಾವಳಿ

೧೯೦೬—೦೭ ರಲ್ಲಿ ಜನಸಂಖ್ಯೆಯು ೧,೦೦೦ಕ್ಕೆ ೧೬.೩೨ ರಂತೆ ಇದ್ದುದು ಈ ವರ್ಷ ೧೪ ೯೮ಕ್ಕೆ ಇಳಿಯಿತು. ಮರಣಸಂಖ್ಯೆಯು ೩೦ ರಂತೆ ಇದ್ದುದು ೧೮ ೬೩ಕ್ಕೆ ಇಳಿಯಿತು. ಜ್ವರಗಳಿಂದಲೂ, ವಾಂತಿಭೇದಿಯಿಂದಲೂ, ಸಿಡುಬಿನಿಂದಲೂ ಹಿಂದಣ ವರ್ಷಕ್ಕಿಂತ ಈ ವರ್ಷದಲ್ಲಿ ಆದ ಮರಣಗಳು ಕಡಮೆ. ಆದರೆ ಪ್ಲೇಗು ಹಿಂದಣ ವರ್ಷಕ್ಕಿಂತ ಜೋರಾಗಿತ್ತು. ೧೯೦೬—೦೭ರಲ್ಲಿ ಈ ರೋಗವು ೫,೯೮೩ ಜನರಿಗೆ ತಗಲಿ ೪,೨೦೭ ಜನರು ಮೃತಪಟ್ಟರು. ಈ ವರ್ಷದಲ್ಲಿಯಾದರೋ ೩೦,೩೦೬ ಜನರಿಗೆ ತಗಲಿ ೧೪,೭೫೦ ಜನರು ಮೃತಪಟ್ಟರು. ಎಲ್ಲಾ ಡಿಸ್ಟ್ರಿಕ್ಟುಗಳ ಪೈಕಿ ಬೆಂಗಳೂರಲ್ಲಿ ವಿಶೇಷ ಮರಣವೂ, ಚಿತ್ರದುರ್ಗದಲ್ಲಿ ಅತ್ಯಂತ ಕಡಮೆ ಮರಣವೂ ಆಯಿತು; ಎಂದರೆ, ಬೆಂಗಳೂರ್ ಡಿಸ್ಟ್ರಿಕ್ಟಿನಲ್ಲಿ ೫,೪೭೯ ಜನರಿಗೆ ಈ ವ್ಯಾಧಿಯು ತಗಲಿ ೪,೦೮೦ ಜನರು ಸತ್ತುಹೋದರು; ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ೩೦೩ ಜನರಿಗೆ ತಗಲಿ ೧೬೮ ಜನರು ಸತ್ತುಹೋದರು

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರುತ್ತಿದ್ದ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಅಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್.

ಹೊಸಕೋಟೆಯ ವಿಷಯಗಳು.

ಅಯ್ಯಾ,

ಈ ತಿಂಗಳು ೧೭ನೇ ತಾರೀಖು ಶನಿವಾರದಿವಸ್ಯ ತಿಗಳರಜಾತಿ ಮುತ್ತಪ್ಪನ ಹೆಂಡತಿ ಕಣ್ಣಮ್ಮ ಒಂದು ಗಂಡುಮಗುವನ್ನು ಹೆತ್ತಳು. ಆ ಮಗು ಹುಟ್ಟಿದ ಕೂಡಲೇ ತಂದೆತಾಯಿಗಳಿಗೆ ಬಹಳ ಸಂತೋಷವಾಯಿತು. ಅದನ್ನು ಪರೀಕ್ಷೆಮಾಡಿ ನೋಡಿದಾಗ ಅದಕ್ಕೆ ಮಲಮೂತ್ರ ದ್ವಾರಗಳು ಇರಲಿಲ್ಲ. ಇದನ್ನು ತಂದೆತಾಯಿಗಳು ನೋಡಿ ಬಹಳ ವ್ಯಸನಪಟ್ಟರು. ಆ ಮಗು ಹೀಗೆ ಹುಟ್ಟುವದಕ್ಕೆ ಕಾರಣವೇನು ಎಂದು ಜ್ಯೋತಿಶ್ಶಾಸ್ತ್ರವನ್ನು ಕೇಳಿದರು. ಸಮ್ಮ ಮನೆದೇವರೋ, ಮತ್ತು ಯಾವ ಪಿಶಾಚಿಯೋ ಹೀಗೆ ಮಾಡಿತು ಎಂದು ಕೇಳಿದರು. ಜ್ಯೋತಿಷ್ಯನು ಯಾವ ಪಿಶಾಚವೂ ಇಲ್ಲ, ದೇವರು ಹಾಗೆ ಉಂಟುಮಾಡಿದಾನೆ ಎಂದು ಹೇಳಿದನು. ಆಗ ಆ ಮಗು ಬದುಕುವದೋ ಎಂದು ತಿರುಗಿ ಕೇಳಿದರು. ಆ ಮಗು ಬದುಕುವದಿಲ್ಲವೆಂದು ಹೇಳಿದರು. ಕೂಡಲೇ ಹೆಂಗಸು ಎಷ್ಟು ಘೋರಿಟುಹೋದಳು. ಆ ಮಗುವಿಗೆ ಹೊಟ್ಟೆ ಊದಿಕೊಂಡು ಇದೆ. ಬದುಕುವದು ಕಷ್ಟ. (ತಂದೆ ತಾಯಿಗಳು ಜೋಯಿಸರನ್ನು ಕೇಳುವದಕ್ಕೆ ಬದಲಾಗಿ ಶಸ್ತ್ರವೈದ್ಯದಲ್ಲಿ ನಿಪುಣರಾದ ಡಾಕ್ಟರಿಗೆ ಮಗುವನ್ನು ತೋರಿಸಿದಲ್ಲಿ ಅನುಕೂಲವಾದೀತು.—ಎಡಿ.)

ಹೊಸಕೋಟೆಯಲ್ಲಿ ಮಳೆ ಇಲ್ಲದೆ ಪೈರುಗಳೆಲ್ಲಾ ಒಣಗಿ ಹೋಗುತ್ತಿವೆ. ಅಕ್ಕಿ ರೂಪಾಯಿಗೆ ೫; ಸೇರು, ರಾಗಿ ೧೦ ಸೇರು ಮಾರುತ್ತಾರೆ. ಕೂಲಿಮಾಡುವ ಬಡವರು ಅನ್ನವಿಲ್ಲದೆ ಬಹಳ ಕಷ್ಟಪಡುತ್ತಾರೆ. ಬಡವರ ಕಷ್ಟವನ್ನು ಹೇಳಲಸಾಧ್ಯವಾಗಿರುತ್ತದೆ. ಈ ಊರಿನಲ್ಲಿ ಬ್ರಾಹ್ಮಣರು ಮಳೆ ತರಿಸುತ್ತೇವೆಂದು ಹೇಳಿ ಸ್ವಲ್ಪ ಹೆಚ್ಚು ಕಡಿಮೆ ೧೫೦ ರೂಪಾಯಿಗಳನ್ನು ಪ್ರಜೆಗಳಿಂದ ವಸೂಲ್ಮಾಡಿಕೊಂಡಿದ್ದಾರೆಂದೂ, ಅವರು ಈ ಚಿಕ್ಕ ಕೆರೆ ದೇವಸ್ಥಾನದಲ್ಲಿ ಜಪವನ್ನು ಮಾಡುತ್ತಿದ್ದಾರೆಂದೂ ಕೇಳುತ್ತೇನೆ. ಅನೇಕ ಬಡಜನರು—ಬ್ರಾಹ್ಮಣರು ಮಳೆಗೋಸ್ಕರ ಜಪವನ್ನು ಮಾಡುತ್ತಾರೆ, ಮಳೆ ಬರುತ್ತದೆಂದು ಬಹಳ ಆಶೆಯಾಗಿದ್ದರು. ಆದರೂ ಇನ್ನೂ ಮಳೆ ಬರಲಿಲ್ಲ. ಪೈರುಗಳೆಲ್ಲಾ ಒಣಗಿಹೋಯಿತು. ಆದರಿಂದ ಅವರು ಆಸೆಬಿಟ್ಟುಬಿಟ್ಟರು.

ಬಾತ್ಮಿದಾರ್.

ಕಸಬುಗಳಿಗೆ ಪ್ರೋತ್ಸಾಹ.

ಅಯ್ಯಾ,

ಯಾವ ದೇಶವು ಅಭಿವೃದ್ಧಿಸ್ಥಿತಿಗೆ ಬರಬೇಕಾದರೂ ಅದರ ಕೈಗಾರಿಕೆಯ ಪ್ರಾಬಲ್ಯದಿಂದಲೇ ಅಲ್ಲವೇ? ನಮ್ಮ ಮೈಸೂರು ಸಂಸ್ಥಾನವೂ ಕೂಡ ಈಚೀಚೆಗೆ ಕೈಗಾರಿಕೆಯ ಪ್ರಾಬಲ್ಯವನ್ನು ಹೊಂದುವ ಸ್ಥಿತಿಗೆ ಬಂದಿದೆ. ಸರ್ಕಾರದ ಪ್ರೋತ್ಸಾಹವಲ್ಲದೆ ಸರ್ಕಾರದ ಭಾರಿ ಭಾರಿ ಹುದ್ದೆದಾರರಲ್ಲಿಯೂ ಕೂಡ ಕೆಲವರು ತಮ್ಮ ಸ್ವಂತ ಹಣದಿಂದ ಕೈಗಾರಿಕೆಗಳ ಕಂಪನಿಗಳನ್ನೇರ್ಪಡಿಸಿ, ದೇಶೋನ್ನತಿಗೆ ಬದ್ಧಕಂಕಣರಾಗಿ ಕೀರ್ತಿಯನ್ನು ಪಡೆಯಬೇಕೆಂದು ಪ್ರಯತ್ನಪಡುತ್ತಿರುವರೆಂದು ತಿಳಿಸಲು ತುಂಬಾ ಸಂತೋಷಪಡುತ್ತೇನೆ.

ಇದಕ್ಕೆ ಉದಾಹರಣೆಯಾಗಿ ಚಿತ್ರದುರ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಸಾಹೇಬರಾದ ಮಿ. ಚಂಗ್ಯಬಸಪ್ಪನವರು ಹಿರಿಯೂರು ತಾಲ್ಲೂಕಿನಲ್ಲಿ ಛಾವಿ ರೇಷ್ಮೆ ಕಂಪೆನಿಯೊಂದನ್ನು ಸ್ಥಾಪಿಸಿ, ರೇಷ್ಮೆ ಕೆಲಸವನ್ನು ಸರಿಯಾಗಿ ಕಲಿತುಕೊಂಡು ಬರುವಂತೆ ಸಿ. ಅಬ್ದುಲ್ ಖಾದರ್ ಎಂಬ ಒಬ್ಬ ಮಹಮ್ಮದೀಯ ಯುವಕನಿಗೆ ಸ್ಕಾಲರ್‌ಷಿಪ್ ಕೊಟ್ಟು ಬೆಂಗಳೂರಲ್ಲಿರುವ ತಾತಾರವರ ಎಕ್ಸ್‌ಪೆರಿಮೆಂಟಲ್ ಸಿಲ್ಕ್ ಫಾರಮಿಗೆ ಕಳುಹಿಸಿಕೊಟ್ಟಿದ್ದರು. ಈಗ ಆ ವಿದ್ಯಾರ್ಥಿಯು ಬಹಳ ಮುತುವರ್ಜಿಯಿಂದ ರೇಷ್ಮೆಯ ಕೆಲಸಗಳನ್ನೆಲ್ಲಾ ಕಲಿತುಕೊಂಡು, ಇಷ್ಟು ಕಾಲದ ದಿವಸದಲ್ಲಿಯೇ ವಾಪಸು ಹಿರಿಯೂರಿಗೆ ಹೋಗಿ, ಸದರೀ ಕಂಪೆನಿಯ ಕೆಲಸವನ್ನು ಪ್ರಾರಂಭ ಮಾಡುವವರಾಗಿರುವರೆಂದು ಕೇಳಿ ತುಂಬಾ ಸಂತೋಷಪಡುತ್ತೇನೆ. ಈ ಕಂಪೆನಿಯು ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಹೊಸದುರ್ಗ ಮೊಳಕಾಲ್ಮೂರು ಮುಂತಾದ ರೇಷ್ಮೆ ಕೈಗಾರಿಕೆ ನಡೆಯುವ ಸ್ಥಳಗಳಿಗೆಲ್ಲಾ ರೇಷ್ಮೆಯನ್ನು ಸರಬರಾಯಿ ಮಾಡುವುದಾಗಿರುವದರಿಂದ ಅಲ್ಲಿನ ರೇಷ್ಮೆ ವ್ಯಾಪಾರಗಾರರೆಲ್ಲಾ ಇದನ್ನು ಮುಂದೆ ಈ ಕಂಪೆನಿಗೆ ಪ್ರೋತ್ಸಾಹ ಕೊಡುತ್ತಾರೆಂದು ದೃಢವಾಗಿ ನಾನು ನಂಬಿದ್ದೇನೆ. ಮಿ. ಚಂಗ್ಯಬಸಪ್ಪನವರ ಮೇಲ್ಪಂಕ್ತಿಯನ್ನೇ ಅನುಸರಿಸಿ, ಇತರ ದೊಡ್ಡ ಅಧಿಕಾರಿಗಳೂ ಕೂಡ ಬೇರೆ ಬೇರೆ ಕೈಗಾರಿಕೆ ಕಂಪನಿಗಳನ್ನೇರ್ಪಡಿಸಿ, ದೇಶೋನ್ನತಿಗೆ ಕಾರಣರಾಗಿ ... ತಮ್ಮ ಯಶಸ್ಸನ್ನು ಸ್ಥಾಪಿಸಬೇಕೆಂದು ಹಾರೈಸುವ

ಕೆ. ಎಚ್.

ಕೋಲಾರ—ತಿರುಮಣಿ ಸರ್ಕಾರಿ ರಸ್ತೆಗಳೂ

ಅಯ್ಯಾ,

ಕೋಲಾರ ಡಿಸ್ಟ್ರಿಕ್ಟಿನಲ್ಲಿ ಮಳೆ ಇಲ್ಲದೆ ಬೆಳೆಗಳೆಲ್ಲಾ ಒಣಗಿ ಹೋದವು. ಸಿಸ್ಟಮಿನಿಂದ ನೋಡ ಮುಸುಕಿ ಹಸಿಗರು ಉದುರುತ್ತಿವೆ. ಕುಡಿಯುವ ನೀರು ಪಾಪಕರವಾಗಿದೆ. ತಿನ್ನುವ ಬಿಟ್ಟು ಚಲ್ಲಾಯಿತು. ಗೊತ್ತಾದ ವಿಷಯವನ್ನು ಹೇಳುತ್ತೇವೆ. ಬಡ ರೈತರು ಕಷ್ಟಗಳಿಲ್ಲದೆ ಗಾಡಿಗಳು ಕಟ್ಟಿಕೊಂಡು ರಾತ್ರಿಯೆಲ್ಲಾ ಪ್ರಯಾಣ ಎಲ್ಲಿಗೋ ಹೋಗಿ, ಮಾರನೇ ಸಾಯಂಕಾಲ ೬—೭ ಘಂಟೆಗೆ ದೊಡ್ಡ ಘೋಷಂತೆ ಬರುತ್ತಾರೆ. ಅವರ ಮುಖಲಕ್ಷಣವನ್ನೂ ಕಷ್ಟವನ್ನೂ ಹೇಳತೀರದು—ಈ ಕಡೆ ಪ್ರಯಾಣಗಳು ನೋಡಿ ಪರಿ ಹೊಟ್ಟೆಗಿಲ್ಲದೆ ಕರುಳು ಕಚ್ಚೆ ತಿನ್ನುತ್ತಿದ್ದಾರೆ. ಕುಡಿಯುವ ನೀರಿಗಂತೂ ಒಂದೂರಿನ ಜನಗಳು ಮತ್ತೊಂದೂರಿಗೆ ಅಲೆದುಹೋಗುತ್ತಾರೆ. ದಯಾಳುಗಳಾದ ತಾಲ್ಲೂಕ್ ಅಮಲ್ದಾರರು ಗ್ರಾಮಸ್ಥ ಬಾರವಾಯಿತು. ಕರುಳು ತಿನ್ನುವವರನ್ನು ನೋಡಿ ಮರುಗುತ್ತಾ, ಕೆಲವರೆಗಳಲ್ಲಿ ಸ್ವಂತ ಹಣದಿಂದ ಸಹಾಯವಾಗಿ ಪರಿಹಾರವಾಗಿ ಜನರು ಹೇಳುತ್ತಾರೆ. ಕರುಣಾಳು ಪ್ರಭುಗಳು ನಮ್ಮ ಅಮಲ್ದಾರರಲ್ಲಿ ಅಂಥಾ ಕರುಣೆ ಇಟ್ಟಿದ್ದಾನೆ ಬಡ ಮುಖಸ್ತುತಿ ನಾನಲ್ಲ. ಈ ಕೆರೆಗೆ ಕಾಣುವ ಅವರ ಕಾರ್ಯದಿಂದಲೇ ವಾಚಕರಿಗೆ ವ್ಯಕ್ತವಾದೀತು.

ಈ ಊರಿನ ಸಂತೆಯೋ ತುಂಬಾ ಹೆಸರುವಾಸಿಯಾದದ್ದರಿಂದ ಹೇಳುವುದು, ಚಿತ್ತೂರು, ಕೃಷ್ಣಗಿರಿ, ಕಡಪ, ಕರ್ನೂಲು, ಕಡಿರಿ, ಪುಂಗನೂರು, ಮದನಪಲ್ಲಿ, ಕೋಲಾರು, ಬೆಂಗಳೂರು, ಚಿಕ್ಕಬಳ್ಳಾಪುರವೆ ಮುಂತಾದ ಕಡೆಗಳಿಂದ ನೂರಾರು ಗಾಡಿಗಳು ಸೇರಿ ಇಲ್ಲಿಯ ಧಾನ್ಯದ ಗಿರಾಕಿಯನ್ನು ಪಡಿಸುತ್ತಾರೆ. ಅಲ್ಲದೆ ಚಿಲ್ಲರೆಯಾಗಿ ಕೊಳ್ಳುವವರಿಗೆ ಧಾನ್ಯ ದೊರೆಯುವುದೇ ಇಲ್ಲ. ಬಿಟ್ಟೂಟ್ಟಾಗಿಯೇ ವಿಳು ಛಂದಿಯೊಳಗಾಗಿ ಒಪ್ಪಂದವಾಗಿರುತ್ತದೆ. ಮುಫಾಸ್ಸಿನ ಮೇರೆ ಬಡಬಗ್ಗರು ಹಳ್ಳಿಹಳ್ಳಿಗಳಿಂದ ಬಂದು ನೋಡಿದರೆ ಧಾನ್ಯವೇ ದೊರೆಯುವದಿಲ್ಲ. ಈ ದುರ್ಭಿಕ್ಷಕಾಲದಲ್ಲಿ ವರ್ತಕರು ಅಧಿಕ ಪ್ರಯೋಜನಕ್ಕಾಗಬೇಕೆಂದು ರಾಗಿ ನೀರು ಬೆರಸಿ ಗಾತ್ರವಾಗಿ ಊದುವಂತೆಮಾಡಿ ಮಾರುತ್ತಾರೆ. ಅಂತೆ ಬೇಟ್ಟಿ ಸೇರುಗಳು ಬಹು ಕಡಮೆಯಾಗಿಟ್ಟು ಮಾರುತ್ತಾರೆ. ಕಳೆದ ಸಂತೆಯಲ್ಲಿ ಒಬ್ಬ ವರ್ತಕ ಕೆಲವು ಮೂಟೆಗಳ ರಾಗಿಯನ್ನು ನೀರು ಬೆರಸಿ ಮಾರಾಟಕ್ಕೆ ಇಟ್ಟಿರಲು ತಾಲ್ಲೂಕು ಅಮಲ್ದಾರರು ಅಜಮಾಯಿಷಿಯಿಂದ ತಿಳಿದು ವಾಕ್ಯದವರ ಅಪ್ಪಣೆಯಿಂದ ಮುಟ್ಟುಗೋಲು ರಾಗಿಯನ್ನು ಮಾರಕೂಡದೆಂದು ಅಪ್ಪಣೆಕೊಟ್ಟರು. ಈ ಶಿಕ್ಷೆ ಸಾಲದು. ಇಂಥಾ ಅನ್ಯಾಯಗಾರರಲ್ಲಿ ಒಬ್ಬಿಬ್ಬರಿಗೆ ಪೂರಾ ಶಿಕ್ಷೆ ಕೊಟ್ಟಲ್ಲಿ ಈ ದುಷ್ಕರ ದುರಾಲೋಚನೆಯು ಕಡಮೆಯಾಗುವದರಲ್ಲಿ ಸಂದೇಹವಿಲ್ಲ. ಧಾರಣೆಗಳಂತೂ ವಿಪರೀತವಾಗಿರುವುದು. ರಾಗಿ ರೂಪಾಯಿಗೆ ೯—೯½ ಸೇರು

...೪॥ ಸೇರೂ ಮಾರಾಟವಾಗುತ್ತಿದೆ. ಅದರೂ ಮೊಲ್ಯಂದಂತೆ ರೂಪಾಯಿ, ...ರೂಪಾಯಿಗೆ ದೊರೆಯುವದಿಲ್ಲ. ಬಡವರು ಗೋಳಾಡಲಿಕ್ಕೆ ಪುರುವಾ ...ಯಿತು. ಅಷ್ಟರಲ್ಲಿ ಬಡವರ ತಂದೆಯೋ ಎಂಬಂತೆ ತೋರುತ್ತಾ ಅಮಲ್ದಾ ...ರು ಮುಂದಿನ ದಿನ ಮೀಟಿಂಗ್ ನಡಿಸ ಏರ್ಪಾಟುಮಾಡಿದ್ದ ಮೇರೆಗೆ ಮೆ॥ ...ನ ಟಿ. ಸುಬ್ಬಯ್ಯ, ಶ್ರೀ ರಾಮಚಂದ್ರಯ್ಯ, ಸಾಳ್ಕದ ನಾರಣಪ್ಪ, ಅಕಲ ...ವಪ್ಪ, ಕಂಚಿ ಆದಪ್ಪ ಮುಂತಾದ ಸಾಹುಕಾರರಿಂದ ಸುಮಾರು ೪೦ ...ಯ ರಾಗಿ ತೆಗೆದು, ತಾವೇ ಖುದ್ದು ಕೊತುಕೊಂಡು ಬಡವರನ್ನೇ ವಿಚಾರಿ ...ತ್ತಾ ಅವರವರ ಯೋಗ್ಯತೆ ಅಂದರೆ ಜನಸ್ತೋಮಕ್ಕೆ ಬೇಕಾದಷ್ಟು ಕೊಡಿಸ ...ರು ತೆಗೆದು ೯। ಸೇರು, ಮಾರಾಟ ೧೦॥ ಸೇರಾದ್ದರಿಂದ ಮೊಲ್ಯಂದ ...ಕ್ಕೆ ಸಾಹುಕಾರರು ಸ್ವಲ್ಪ ನಷ್ಟಪಟ್ಟರೂ ತಾವೂ ಸಂತೋಷಚಿತ್ತರಾಗಿ ...ಯುತ್ತಿದ್ದರು. ಹೀಗೆಯೇ ೬೦ ಮೂಟೆ ಧಾನ್ಯ ಬಡವರಿಗೆ ಅಳೆದರು. ಅಷ್ಟು ...ತ್ತು ಅಮಲ್ದಾರರು ಕೂತಲ್ಲಿಯೇ ಅನ್ನನೀರು ಮರೆತು ಕೂತಿದ್ದರೆಂತಲೂ, ...ಮುಸಲ್ಮಾನನು ಎರಡಾಣೆ ತಂದು ರಾಗಿ ಕೇಳಲಾಗಿ ಯಥಾಪ್ರಕಾರ ಅವ ...ರು ಅವನ ಮನೆವಾರ್ತೆ ವಿಚಾರಿಸಲು,—ಸ್ವಾಮಿ, ನಮ್ಮ ಮನೆಯಲ್ಲಿ ...ತ್ತು ಜನರಿದ್ದೇವೆಂದು ಹೇಳಲಾಗಿ, ಇವರಲ್ಲಿ ಬಡವರಂತೆ ವಿಚಾರಪರರಾದ ...ಸುವ ಕಂಬನಿಗಳ ತಂದುಕೊಂಡು,—ಅಯ್ಯೋ, ಈ ಎರಡಾಣೆಯು ...ಗೆ ಸಾಕಾಗುತ್ತದ್ಯೋ ಅನ್ನಲು— ಸ್ವಾಮಿ, ಮತ್ತಿಲ್ಲ ಎಂತ ಆ ಬಡ ...ರು ಅನ್ನುತ್ತಿರಲು, ಈ ಸಂಭಾಷಣೆಯನ್ನು ಕೇಳುತ್ತಿದ್ದ ಇತರರು ೬ ಬಡವ ...ಗೆ ಎಣಿಕೆ ಇಲ್ಲದ ದಾನ್ಯಕೊಟ್ಟು ಕಳುಹಿದರಂತೆ.

ಹೀಗೆ ಅಮಲ್ದಾರರು ಬಡವರಿಗೆ ತಂದೆಯಂತೆ ಕಾಣಿಸಿಕೊಂಡು ಅವರ ಕಷ್ಟಕಾರ್ಪಣ್ಯಗಳಲ್ಲಿಯೂ ಸುಖಗಳಲ್ಲಿಯೂ ಸಂತಾಪಪಡುತ್ತಾ ಬಹಿರ್ಬ್ಯಾರ ...ವಿಚಾರಿಸಿ. ಅವರ ... ಅಂತರಂಗಗಳನ್ನು ಖುದ್ದು ತಿಳಿದವರಾದ್ದರಿಂದ ಮಾರನೆ ...ದಿನ ಮುನಿಸಿಪಲ್ ಮೀಟಿಂಗ್ ಮಾಡಿ, ಜನರ ಕಷ್ಟಗಳನ್ನು ಮುಂಬರುಗಳಿಗೆ ...—ಸ್ಥಳಗಳ ಈ ಕಾಲದಲ್ಲಿ ಸ್ವಲ್ಪ ನಷ್ಟಪಟ್ಟರೂ ಚಿಂತೆಪಡದೆ, ಭಗ ...ವಂತನ ಮೇಲೆ ಭಾರಹಾಕಿ, ತಮ್ಮ ಸಂಪತ್ತುಗಳಿಂದ, ನಮ್ಮ ಜೊತೆ ಪ್ರಜೆಗಳಾದ ಬಡವರಿಗೆ ಸಹಾಯಮಾಡಿದರೆ ಈ ಕಾರ್ಯವು ಸಫಲವಾಗುವದು ಎಂದು ...ವಿವರಿಸುತ್ತಾ ... ಪಡದೆ ನಮ್ಮ ಮನೆಯ ವಿನಿಮಯ ಕಣ್ಣಿನಲ್ಲಿ ...ಪು ತಂದುಕೊಂಡರೆಂತಲೂ, ಆ ... ತುಂಬಿದ ಮುಖಭಾವವನ್ನು ನೋಡಿ ...ಪುಣ್ಯವಂತರಾದ ಮು... ಗಂಗೆ ನಾರಾಯಣ ಲಿಂಗಪ್ಪನವರೂ, ಕಂಚಿ ...ವಪ್ಪನವರೂ, ಆ ನಂಜುಂಡಪ್ಪನವರೂ, ಕ. ರಾಮಣ್ಣನವರೂ, ಬುರ್ಹಾನ್ ಸಾಹೇಬರು ಮುಂತಾದ ಸಾಹುಕಾರರು ೧೦ ಸೇರು ರಾಗಿ ನಾಪುಗಳು ಅಳೆಯು ...ದೆಂದು ಒಪ್ಪಿಕೊಂಡರು ... ತಾಲೂಕಿನಲ್ಲಿ ನಡೆಯುವ ನಾಲ್ಕಾರು ಸಂತೆ ...ಗಳಲ್ಲಿಯೂ, ಅದರಂತೆ ಜಾಗದ ಪದ್ಧತಿಯಂತೆ ತಾವೂ ೧೦ ಸೇರು ಅಳೆಯುತ್ತೇ ...ವೆಂದು ಹೇಳಿದ ... ಅಮಲ್ದಾರರು ಸಂತೋಷಚಿತ್ತರಾಗಿ ಮನೆಗೆ ತೆರಳಿದ ...ರೆಂದು ಕೇಳಿದ ... ಸಂತೋಷವಾಗದಿರದು. ಇದರಂತೆ ಪ್ರಜಾಪರಿ ...ಪಾಲಕರಾದ ... ಅವರ ಕಷ್ಟಸ್ಥಿತಿಗಳನ್ನು ತಿಳಿಯುವದು ...ಅಧಿಕಾರಿಗಳಿಗೆ ಸರ್ವಥಾ ಅಸಾಧ್ಯವಾದ ಕಾರ್ಯ ... ಮನಸ್ಸು ಇದ್ದರೆ ಎಲ್ಲಾ ಸಾಧ್ಯ.

ದುಸ್ಥಿತಿ ...ಗಿರಲಾಗಿ ತಾಲೂಕಿನ ಅಧಿಕಾರಿಗಳು ಸ್ವತಃ ... ...ಸ್ಥಿತಿ ತಿಳಿದು, ಸಂದರ್ಭಾನುಸಾರ ಅವರ ಕಷ್ಟಗಳಲ್ಲಿ ಸಂತಾಪ ...ತ್ತಾ, ತಮ್ಮಿಂದಾದಷ್ಟೂ ಸಹಾಯಮಾಡುತ್ತಾ, ಏನಾದ್ದಕ್ಕೆ ದೊರೆಯುವಾದ ಗೌರ್ನಮೆಂಟಿಗೆ ಅರಿಕೆಮಾಡಿ, ಆ ಪರಿಯಲ್ಲಿಯಾದರೂ ಸರ್ಕಾರದಿಂದ ಸಹಾಯ ...ಏರ್ಪಾಡು ಮಾಡಿ, ಬಡಪ್ರಜೆಗಳನ್ನು ಪಾಲಿಸುವದು ಅವರ ಕರ್ತವ್ಯವಾ ...ಯಿತು. ಇದಕ್ಕಾಗಿಯೇ ಶ್ರೀಮನ್ಮಹಾರಾಜಾಬಹದ್ದೂರರವರು ತಮ್ಮ ಬಡ ...ಗೆ ಚಿಕ್ಕ ಚಿಕ್ಕ ಆಫೀಸರುಗಳನ್ನು ನೇಮಕಮಾಡಿ ಪ್ರಜೆಗಳ ಕುಂದುಕೊರತೆಗಳನ್ನು ...ತಿಳಿಸಬೇಕೆಂದು ಕೋರಿಕೆಯುಳ್ಳವರಾಗಿರಲು, ಕೆಲ ಅಧಿಕಾರಿಗಳು ಇಲ್ಲ ...ಸ್ಥಿತಿಯ ರಿಪೋರ್ಟುಗಳ ಪ್ರಕಟಿಸಿ, ಪ್ರಜೆಗಳ ಕಷ್ಟವನ್ನೂ ದೇಶದ ...ಸ್ಥಿತಿಯನ್ನೂ ಮರೆಮಾಚುತ್ತಿದ್ದಾರೆ ... ಉದಾಹರಣೆಗಾಗಿ ಅಕ್ಟೋಬರ್ ೧ ನೇ ...ಗೆಜೆಟ್ ಕಾಲಸ್ಥಿತಿ ರಿಪೋರ್ಟ್ —ಬೌರಿಂಗ್ ಪೇಟೆ ತಾಲೂಕಿನಲ್ಲಿ ...ರಾಗಿ ಬೆಳೆ ೧೨ ಆಣೆಯಷ್ಟು ಆಗಿರುತ್ತದೆ. ಪೈರುಗಳು ಚನ್ನಾಗಿವೆ. ಗುಡಿ ...ಬಂಡೆಯಲ್ಲಿ ಗಿಡ್ಡರಾಗಿ ಜಾಸ್ತಿ ೧೬ ಆಣೆಯಷ್ಟಾಗಿದೆ. ಶಿಡ್ಲಘಟ್ಟದಲ್ಲಿ ...ದ ಉತ್ಪತ್ತಿ ೮ ಆಣೆಯಷ್ಟಾಗಿದೆ. ಹಾಸನ ಡಿ ಚನ್ನರಾಯಪಟ್ಟಣ ...ತಾಲೂಕಿನಲ್ಲಿ ಸರಸ್ವರಿಯು ಚನ್ನಾಗಿದೆ. ರೈತರು ದನಗಳಿಗೆ ಕಬ್ಬಿನ ತೋಟದ ಹುಲ್ಲನ್ನು ಮುಗಿಸಿದ... ... ಕಡ್ಡಿಯನ್ನೂ ಹಾಕಿ ಸಾಕುತ್ತ ...—ಇತ್ಯಾದಿ ಬರೆಯಲ್ಪಟ್ಟಿದೆ.

ಅಯ್ಯಾ ಎಡಿಟರವರೆ, ಇದೇನಾಶ್ಚರ್ಯ! ಕಬ್ಬಿನ ತೋಟದ ಮಧ್ಯ ...ದಲ್ಲಿ ಹುಲ್ಲು ಬೆಳೆಯುವದುಂಟೇ? ಹುಲ್ಲಿನ ಹುಟ್ಟಿದಗಿಡ ಬೇಕೆಂದು ...ರೈತರು ಬೆಳೆಸುವಲ್ಲಿ ಮೂರು ತಿಂಗಳು ಉತ್ತು, ಹುಲ್ಲು ಇಲ್ಲವೇ ಇಲ್ಲ ...ದು ಕಬ್ಬಿನ ಮೇಲೆ ಕಬ್ಬು ನಾಟುತ್ತಾನೆ. ಹಾಗಾದರೆ ಹುಲ್ಲು ಬೆಳೆದದ್ದೆಲ್ಲಿ? ...ವನಗಳ ಬಯಲಿನಲ್ಲಿ ... ಅದು ೧೦ ದನಗಳಿಗೆ ಎಷ್ಟು ದಿನಗಳ ...ಸಾಗುವದು? ಒಂದು ವಿಚಾರ್ಯದರೆ ಹಟ್ಟಿಲ್ಲವೇ? ಒಳ್ಳೇದು, ತಾಲೂ ...ಕಿನ ಕಬ್ಬಿನ ಬೆಳೆ ವಾಸಿಯಿಂಟೆಯೋ? ಗ್ರಾಮದ ರೈತರೆಲ್ಲರೂ ಕಬ್ಬು ಬೇ ...ಸಾಯಿಸ್ತಾರೆಯೋ? ಎಲ್ಲರಿಗೂ ಹುಲ್ಲು ದೊರೆಯುತ್ತಿದೆಯೋ? ಮತ್ತು ...೧೬ ಆಣೆಯಷ್ಟು ಗಿಡ್ಡರಾಗಿ ಬೌರಿಂಗಪೇಟೆ, ಗುಡಿಬಂಡೆ ತಾಲೂಕಿನ ...ಒಂದು ಗ್ರಾಮದಲ್ಲಿಯೂ ಆಗಿದೆಯೋ? ಅಲ್ಲಿಯ ... ...ವರ್ತಕರು ಪತ್ರಿಕೆಯಲ್ಲಿ ಬರೆದು ತಿಳಿಸಿದರೆ ತುಂಬಾ ಉಪಕಾರ.

ರೈತರಿಲ್ಲದೆ ಗಿಡ್ಡರಾಗಿ ಬೆಳೆಯುತ್ತಾರೆಯೋ? ಹೀಗಿದ್ದರೆ ೯ ಸೇರು ರಾಗಿ ...ಮಾರಲಿಕ್ಕೆ ಕೊಳ್ಳುವದಕ್ಕೂ ಕಾರಣವೇನು? ಅಯ್ಯೋ, ಇಂಥಾ ರಿಪೋ ...ರ್ಟುಗಳಿಂದ ಪ್ರಜೆಗಳಿಗಿರುವ ಕಷ್ಟದ ನಿಜಸ್ಥಿತಿಯನ್ನು ನಮ್ಮ ಮಹಾರಾಜರವ ...ರಿಗೆ ಮರೆಮಾಚಿದಂತಾಗಲಿಲ್ಲವೇ? ಕಬ್ಬಿನ ತೋಟದ ಹುಲ್ಲು ಮೇಯು ...ತ್ತಿವೆಯೆಂದು ರಿಪೋರ್ಟು ಕೊಟ್ಟಿರುವದನ್ನು ನೋಡಿದರೆ, ಎಂದೂ ಹಿಂದೊಮ್ಮೆ ...ದೊರೆಯುವ ರಾಗಿ, ಭತ್ತದ ಹುಲ್ಲಿನ ವಿಷಯ ತಿಳಿಯದ ಇಂಗ್ಲಾಂಡಿನಲ್ಲಿರುವ ...ಮುಕಿ ದೊರೆಸಾನಿಯವರಿಗೆ ಇಂಡಿಯಾ ದೇಶದಲ್ಲಿ (ಮೈಸೂರು) ರಾಗಿ ...ಗಳನ್ನೂ ಭತ್ತದ ಮರಗಳನ್ನೂ ಕೊಡ್ಲಿಯಿಂದ ಕಡಿದು ಭತ್ತ ರಾಗಿ ...ಉಣ್ಣುವರುತ್ತಾರೆಂದು ಬರೆದು ತಿಳಿಸಿದಂತಿರುವದಿಲ್ಲವೇ?

...ಲ್ಲಿ ಎರಡು ವರುಷಗಳಿಂದಲೂ ಕೆರೆಗಳಲ್ಲಿ ನೀರಿಲ್ಲ. ಕೆರೆಗಳ ...ರಿ ವನಗಳು ಬೆಳೆದಿವೆ. ತರಿ ಸಾಗುವಳಿ ಇಲ್ಲವೇ ಇಲ್ಲ. ಗೋಮಾಳ ...ಹೋಗಿವೆ. ಪ್ರಜೆಗಳು ಆಹಾರಕ್ಕೆ ಶ್ರಮಪಡುತ್ತಾರೆ. ರಿಲೀಫ್ ...ಸಹಾಯವನ್ನು ಮಾಡುವದು ಯುಕ್ತವಾಗಿ ತೋರುತ್ತೆ ಎಂದು ತಾಲ್ಲೂಕ್ ಅಧಿಕಾರಿಗಳು ಪ್ರಜೆಗಳ ಪರವಾಗಿ ನಿಂತು ನಿಷ್ಪಕ್ಷಪಾತವಾದ ಕಾಲಸ್ಥಿತಿಯ ರಿಪೋರ್ಟು ಮಾಡುವದು ಯುಕ್ತವಾಗಿರುವಲ್ಲಿ, ಇಂಥಾ ರಿಪೋರ್ಟುಗಳಿಂ ಪ್ರಜೆಗಳಿಗಾಗುವ ಪ್ರಯೋಜನವೇನು? ಮತ್ತು ಪ್ರಜೆಗಳ ಕಷ್ಟಸ್ಥಿತಿ ಗೌರ್ನಮೆಂಟಿಗೆ ಸರಿಯಾಗಿ ತಿಳಿಯದಂತಾಗುವದೇ? ದಯಾಳು ಗೌರ್ನಮೆಂಟಿನವರು ಬಹುಶಃ ವಿಶಿಷ್ಟ ಕರ ಕಂದಾಯ ರಿಮಿಷನ್ ಮಾಡಬೇಕಾಗಿರುವಲ್ಲಿ, ಈ ಸ್ಥಿತಿಯನ್ನು ಕಾಲಸ್ಥಿತಿಯ ರಿಪೋರ್ಟಿನಲ್ಲಿ ಕಾಣಿಸಲಿಲ್ಲವಲ್ಲಾ? ಕಾರಣವೇನು? ಬಡರೈತರನ್ನು ಉದಾಸೀನ ಮಾಡುವದು ಯಾವ ಧರ್ಮ? ರೈತನ ಕ್ಷೇಮಕ್ಕೆ ದೇಶಕ್ಕೆ ದೇಶವೇ ಕಾದಿರುವದಿಲ್ಲವೇ? ಅವನ ಗದ್ದೆ ಹೊಲ ಕೆಟ್ಟರೆ ರಾಜ್ಯಕ್ಕೆ ರಾಜ್ಯವೇ ದಿವಾಳಿಯಾಗುವದಲ್ಲ? ಇರುವೆ ಎಂಬತ್ತು ಕೋಟಿ ಜೀವರಾಶಿಗಳೂ ರೈತನಿಂದ ಜೀವಿಸುವದೆಂದು ಒರಟು ಗಾದೆ ಇದ್ದಾಗ್ಯೂ ಬಹು ಮಟ್ಟಿಗೆ ಇದು ಸತ್ಯವಾಗಿದೆ. ನಮ್ಮ ಘನವನ್ನೈದ ಶ್ರೀಮನ್ಮಹಾರಾಜರವರ ಪ್ರೀತಿಯನ್ನು ಹೆಚ್ಚಿ ಬರುವಹಾಗೂ, ದೇಶೋನ್ನತಿಗೆ ಆತಂಕವಾಗುವಂತೆಯೂ ಬಡ ಪ್ರಜೆಗಳ ಕಷ್ಟನಿಷ್ಠೂರಗಳಲ್ಲಿ ಸೇರಿ ಸಮಸ್ತರೂ ಭಾಗಿಗಳಾಗಿ ನಿಜಸ್ಥಿತಿಯಲ್ಲಿ ರೈತರನ್ನು ಕಾಯುತ್ತಾ ಚಿಂತಾಮಣಿಯ ಕಾಲಸ್ಥಿತಿಯ ವಿರ್ಪಾಟನ್ನನುಸರಿಸುವವರಾದರೆ, ನಮ್ಮ ಘನವನ್ನೈದ ಶ್ರೀಮನ್ಮಹಾರಾಜರವರ ಕೀರ್ತಿಯು ಸಮಸ್ತ ಲೋಕದಲ್ಲಿ ಮತ್ತಷ್ಟು ವಿಸ್ತರಿಸುವಂತೆ ಆಗುವದು.

ಚಿಂತಾಮಣಿ. ಪ್ರಜಾ ಹಿತಚಿಂತಕ.

ತಾಲ್ಲೂಕು ವರ್ತಮಾನಗಳು.

ದೇವನಹಳ್ಳಿ.—ಇಲ್ಲಿ ಸುಮಾರು ಒಂದು ತಿಂಗಳ ಅಂತರವಾಯಿತು ಮಳೆ ಇಲ್ಲದ್ದರಿಂದ ಪೈರುಗಳೆಲ್ಲಾ ಒಣಗಿ ಸೊರಗಿ ಹೋಗಿದ್ದವು. ಇಂಥಾ ಕಷ್ಟಕಾಲದಲ್ಲಿ ಪೇಟೆ ಧಾರಣೆಗಳು. ರಾಗಿ ರೂಪಾಯಿಗೆ ೯ ಸೇರು, ಅಕ್ಕಿ ೫ ಸೇರು ಮಾರಲಿಕ್ಕೆ ಶುರು ಆಗಿ, ಅದು ಕೂಡ ಸರಿಯಾಗಿ ಸಿಕ್ಕದೆ ಬಡ ಪ್ರಜೆಗಳು ತುಂಬಾ ಪ್ರಯಾಸ ಪಡುತ್ತಿದ್ದರು. ಇದರಲ್ಲಿಯೂ ಸಂತೆಗಳಲ್ಲಿ ವರ್ತಕರು ಕಮ್ಮಿ ಸೇರು, ಸಾವುಗಳನ್ನು ಇಟ್ಟು ಮಾರುವುದು ನೋಡಿದರೆ ಸ್ಥಳಾಧಿಕಾರಿಗಳ ಗಮನವು ಈ ಕಡೆ ಬೀಳುವುದಿಲ್ಲವೆಂಬುದು ವ್ಯಕ್ತವಾಗುತ್ತೆ. ಇಂಥಾ ಕಾಲದಲ್ಲಿ ಐಶ್ವರ್ಯವಂತರು ಬಡಬಗ್ಗರಿಗೆ ಸಹಾಯವಾಗಿ ಧರ್ಮಸಂಪಾದನೆ ಮಾಡುವುದರಲ್ಲಿ ತುಂಬಾ ಗುಣ ಉಂಟು ಹಾಗೆ ಮಾಡಿ ಘನತೆ ಪಡೆದವರಲ್ಲಿ ಈ ಊರಿನ ಮೆ॥ ಎಚ್. ಗೋಪಾಲಪ್ಪನವರ ಮಕ್ಕಳು ಕೃಷ್ಣಪ್ಪನವರು ಬೇಕಾದಷ್ಟು ರಾಗಿಯನ್ನು ತರಿಸಿ ರೂಪಾಯಿಗೆ ೧೨ ಸೇರಿನಂತೆ ಮಾರಿಸುತ್ತಾ, ಬಡವರ ಕಷ್ಟವನ್ನು ಸ್ವಲ್ಪ ಮಟ್ಟಿಗೆ ತಪ್ಪಿಸಿ, ತುಂಬಾ ಸಹಾಯ ಮಾಡಿರುತ್ತಾರೆ. ಇವರ ದಯಾಗುಣವನ್ನು ನೋಡಿ ಇಲ್ಲಿನ ಅಮಲ್ದಾರ್ರು ವಗೈರೆಯೂ ಪ್ರಜೆಗಳೂ ತುಂಬಾ ಸಂತೋಷ ಪಟ್ಟಿರುತ್ತಾರೆ.—ಈಚೆಗೆ ಸ್ವಲ್ಪ ಮಟ್ಟಿಗೆ ಜಡಿಮಳೆ ೨—೩ ದಿನದಿಂದ ಸುರಿದಾಗಿ ಉಳಿದುಳಿದ ರಾಗಿ ಪೈರು ಸ್ವಲ್ಪ ಬಚಾವಿಗೆ ಬಂದಿರುತ್ತೆ. ಕೆರೆಗಳಿಗೆ ನೀರು ಬಾರದ್ದರಿಂದ ತರಿ ಫಸಲು ಶುದ್ಧಾಂಗವಾಗಿ ಹೋಯಿತು.

ದೊಡ್ಡಬಳ್ಳಾಪುರ.—ಇಲ್ಲಿ ಪ್ಲೇಗಿನ ಗಲಾಟೆಯಿಂದ ಸುಮಾರು ಅರ್ಧ ಜನರು ಊರು ಬಿಟ್ಟರು. ಇದುವರೆಗೆ ಸುಮಾರು ೧೦-೧೧ ಜನರು ಸತ್ತರು. ಇನ್ನೂ ಇಬ್ಬರು ಕಾಯಿಲೆಯಾಗಿದ್ದಾರೆ. ಉಪಾಧ್ಯಾಯರು ಸ್ಕೂಲ್ ಬಾಗಿಲುಗಳನ್ನು ಸುಮ್ಮನೆ ತೆರೆದುಕೊಂಡಿದ್ದಾರೆ. ಜೋಪಡಿಗಳಲ್ಲಿರುವ ಜನರಿಗೆ ನೀರಿಗೆ ಕಷ್ಟವಾಗಿದೆ. ಇದ್ದ ನೀರೆಲ್ಲಾ ಮುಗಿದು ಚೆಂಬುಗಳಲ್ಲಿ ತಂದುಕೊಳ್ಳಬೇಕು. ೫-೬ ದಿವಸದಿಂದ ತುಂತುರು ಮಳೆ ಹಿಡಿದು ಇದೆ. ಇಷ್ಟುಮಾತ್ರ ಬಂದದ್ದು. ದಿನಸಿಗಳ ಕ್ರಯವು ತುಂಬಾ ಪ್ರಿಯವಾಗಿದೆ. ಬಡ ಜನರೂ ಅಲ್ಪ ಸಂಬಳದ ನೌಕರರೂ ಜೀವಿಸುವದು ತುಂಬಾ ಕಷ್ಟ. ಅಕ್ಕಿ ರೂಪಾಯಿಗೆ ೫-೫॥ ಸೇರೂ, ರಾಗಿ ೧೧ ಸೇರೂ ಮಾರುತ್ತಾರೆ. ಜಲ್ಲರೆಯಾಗಿ ಜನರಿಗೆ ರಾಗಿ ಸಿಕ್ಕುವದೇ ಕಷ್ಟ. ಇಂಥಾ ಕಾಲದಲ್ಲಿ ಮೆ॥ ರುದ್ರಪ್ಪನವರು ೨೨ನೇ ತಾ॥ ಬಡ ಜನರಿಗೆ ರಾಗಿಯನ್ನು ಧರ್ಮವಾಗಿ ಕೊಟ್ಟರು. ಆ ದಿನ ಈ ಜನರ ಗುಂಪು ಸಂತೆಯ ಹಾಗೆ ಸೇರಿತ್ತು. ಇವರ ಧರ್ಮಗುಣವನ್ನು ಅನೇಕರು ಕೊಂಡಾಡಿದರು. ಇನ್ನು ಕೆಲವು ಸಾಹುಕಾರರು ಇದೇ ರೀತಿ ಮಾಡುತ್ತಾರೆಂದು ಕೇಳುತ್ತೇನೆ. ಇಂಥಾ ಕಷ್ಟಕಾಲದಲ್ಲಿ ನಮ್ಮ ಅಮಲ್ದಾರ್ರು, ಡಾಕ್ಟರು, ಪೋಲೀಸ್ ಆಫೀಸರು ಜನರನ್ನು ಧೈರ್ಯಪಡಿಸುತ್ತಾ ಇದ್ದಾರೆ. ಬಡವರಾದವರಿಗೆ ಸ್ವಲ್ಪ ಹಿಡಿಗೆ ಬೊಂಬು, ಗಳಗಳನ್ನು ಅಮಲ್ದಾರರು ಕೊಡಿಸುತ್ತಾರೆ. ಪ್ಲೇಗಮ್ಮನನ್ನು ಸಾಗಹಾಕಬೇಕೆಂದು ಒಂದು ಮೇಕೆಯನ್ನು ಹಿಡಿದು ಊರಲ್ಲಿ ಮೆರವಣಿಗೆ ಮಾಡಿಸಿ ಸ್ವಲ್ಪ ದುಡ್ಡನ್ನು ಅದರ ಕತ್ತಿನಲ್ಲಿ ಕಟ್ಟಿ ಕಾಡಿಗೆ ಸಾಗಿಸಿದರು. ಅದರ ದುಡ್ಡನ್ನು ಯಾರೋ ತೆಗೆದುಕೊಂಡು, ಮೇಕೆಯನ್ನು ಊರಿನ ಹತ್ತರ ಕಟ್ಟಿದ್ದರು. ಅದು ಊರಿಗೆ ಬಂದದ್ದು ಒಳ್ಳೇದಲ್ಲವೆಂದು ಜನರು ಗಾಬರಿಪಟ್ಟರು. ೧೦-೧೧ ದಿನಗಳ ವರೆಗೆ ಕ್ಯಾಂಪುಗಳು ಬಂದಿವೆ.

ಚಿತ್ರದುರ್ಗ.—ತಾ॥ ೨೪ ರಿಂದ ೨೬ ತಾರೀಖುಗಳಲ್ಲಿ ಇಲ್ಲಿ ಬಹಳ ಮೋಡ ಕವಿದು ನೋಡಿ, ತುಂತುರು ತಂಗಾಳಿ ಸುರುವಾಗಿ ಹವ ಬಹಳ ಥಂಡಿಯಾಗಿದೆ. ಮಳೆ ಮಾತ್ರ ಇನ್ನು ಬಂದಿಲ್ಲ. ಕಳೆದ ೧೯ನೇ ತಾರೀಖಿನ ಸಂತೆಯಲ್ಲಿ ಬಿಕರಿಗಾಗಿ ರಾಗಿ ತಂದಿದ್ದವರು ೧೦—೧೧ ಸೇರು ರೂಪಾಯಿ ಒಂದಕ್ಕೆ ಕೊಡುತ್ತೇವೆಯೇ ಹೊರತು ಜಾಸ್ತಿ ಮಾರಲಿಕ್ಕಾಗುವದಿಲ್ಲವೆಂದು ಮುಷ್ಕರ ಹಿಡಿದಿದ್ದ ಮೇಲೆ ಇಲ್ಲಿನ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರ್ ಮೆ॥ ರಾಂಸ್ವಾಮಯ್ಯರ್ ಯವರು ಬಂದು ವರ್ತಕರಿಗೆ ತಕ್ಕ ಬುದ್ಧಿ ಹೇಳಿ ಒಡಂಬಡಿಸಿ ರೂಪಾಯಿಗೆ ೧೩-೧೪ ಸೇರು ಮಾರುವ ಹಾಗೆ ಗೊತ್ತುಮಾಡಿದರು. ಅಧಿಕಾರಿಗಳ ಸಂಚಾರವು ಹೀಗೆ ಆಗಾಗ್ಯೆ ಸಂತೆಯಲ್ಲಿ ಸುಳಿದಾಡುತ್ತಾ ಇದ್ದರೆ ದುಷ್ಟರಿಗೆ ಭೀತಿಯೂ ಪ್ರಜಾಕ್ಷೇಮವೂ ಉಂಟು.—ಇಲ್ಲಿನ ಆರ್ಯನ್ ಸ್ಟೂಡೆಂಟ್ಸ್ ಹೋಮಿನ ಮ್ಯಾನೇಜರ್ ಹನುಮಂತರಾಜು ಯವರಿಗೆ ಪುತ್ರಜನನವಾದ ನಾಮಕರಣಕ್ಕೆ ಮೊನ್ನೆ ೨೨ನೇ ತಾ॥ ಸಾಯಂಕಾಲ ೭ ಘಂಟೆಗೆ ಸದರಿ ಸ್ಟೂಡೆಂಟ್ಸ್ ಹೋಮಿನಲ್ಲಿ ಒಂದು ಸಭೆಯು ಜರುಗಿತು. ಈ ಉತ್ಸವಕ್ಕೆ ಎಲ್ಲಾ ಮುಖಸ್ಥರೂ ಬಂದಿದ್ದರು. ಹೈಸ್ಕೂಲು ಸಂಸ್ಕೃತ ಪಂಡಿತರಾದ ಮೆ॥ ಅನಂತಕೃಷ್ಣಮಾಚಾರ್‍ರು ಅಧ್ಯಕ್ಷರಾದ ನಂತರ ಮೆ॥ ಹನುಮಂತರಾಜು ಯವರು ಎದ್ದು ನಿಂತು—ನಾನು ಒಬ್ಬ ಬಡ ಸ್ಕೂಲ್ ಮಾಸ್ಟರಾಗಿ ರೆಡ್ಡಿ ಜನರ ಮಕ್ಕಳ ವಿದ್ಯಾವರ್ಧನೆಗೋಸ್ಕರವಾಗಿ ಈ ಹೋಮನ್ನು ಸ್ಥಾಪಿಸಿ ನಡೆಸುತ್ತಾ ಇರುವದು ತಮ್ಮಗಳಿಗೆ ಗೊತ್ತೇ ಇದೆ. ದೇವರು ನನ್ನ ಪ್ರಯತ್ನವನ್ನು ಬಹಳ ಕೃಪೆಯಿಂದ ನಡಿಸುತ್ತಾ ಇರುವದಲ್ಲದೆ ತಮ್ಮಗಳ ಮಧ್ಯೆ ಈ ಸಣ್ಣ ಶಿಶುವನ್ನು ನನಗೆ ಅನುಗ್ರಹಿಸಿರುವನು. ಇದಕ್ಕೆ ತಕ್ಕ ಹೆಸರಿನಿಂದ ನಾಮಕರಣ ಮಾಡಬೇಕಾಗಿ ತಮ್ಮಗಳ ಆಗಮನವನ್ನು ನಾನು ಕೋರಿದೆನು ಎಂದು ಮುಂತಾಗಿ ಉಪನ್ಯಾಸ ಮಾಡಿದರು. ಅನಂತರ ಮೆ॥ ಸಿ. ಕೃಷ್ಣರಾಯರು—ಸದ್ಯದಲ್ಲಿ ಹಿಂದೆ ಬಿದ್ದಿರತಕ್ಕ ಜನಗಳಿಗೆ ಜಾತಿಭೇದನೆಣಿಸದೆ ಸಹಾಯಮಾಡತಕ್ಕವರೇ ಸತ್ಪುರುಷರು. ಅಂಥಾ ಕಾರ್ಯವನ್ನು ಮೆ॥ ಹನುಮಂತರಾಜು ಯವರು ಪ್ರಾರಂಭಮಾಡಿದಲ್ಲಿ ದೇವರ ಪ್ರೀತಿಯುಂಟಾಗಿ ಈ ಕೂಸು ಜನ್ಮಿಸಿರುವದರಿಂದ ಅದಕ್ಕೆ ದೇವಮೂರ್ತಿ ಎಂತ ಹೆಸರು ಇಡುವದು ಸರಿಯಾಗಿದೆ ಎಂತ ಹೇಳಿದರು. ಕಡೆಗೆ ಅದನ್ನೇ ಸಭಿಕರೂ ಅಗ್ರಾಸನಾಧಿಪತಿಗಳೂ ಒಪ್ಪಿ, ಆ ಶಿಶುವನ್ನು ಆದರ ಮಾತಾಪಿತೃಗಳನ್ನು ಆಯುರಾರೋಗ್ಯ ಸಂಪತ್ತುಗಳನ್ನು ಕೊಟ್ಟು ಆಶೀರ್ವದಿಸಲಿ ಎಂದು ಪ್ರಾರ್ಥಿಸಿ, ಸಭೆಯನ್ನು ಮುಕ್ತಾಯಮಾಡಿದರು.

ಹುಣಸೂರು.—ಮಳೆ ಇಲ್ಲದೆ ಇಲ್ಲಿನ ಪ್ರಜೆಗಳು ತುಂಬಾ ಚಿಂತೆಯಲ್ಲಿ ಮುಳುಗಿಹೋಗಿದ್ದರು. ಧಾರಣೆವಾಸಿಗಳೆಲ್ಲಾ ಬಹು ಏರಿಹೋಗಿ ಅಕ್ಕಿ ರೂಪಾಯಿಗೆ ೫—೫॥ ಸೇರು, ರಾಗಿ ೧೪—೧೬ ಸೇರು, ಹೊಗರಿಬೇಳೆ ೫—೫॥ ಸೇರು ಆಗಿರುತ್ತದೆ. ಆದರೆ ಈ ತಿಂಗಳ ಪ್ರಾರಂಭದಲ್ಲಿ ಒಳ್ಳೇ ಮಳೆಯಾದದ್ದಲ್ಲದೆ, ಈಗ ಒಂದು ವಾರದಿಂದಲೂ ಬಿಡದೆ ಪ್ರತಿದಿನವೂ ಮಳೆ ಸುರಿಯುತ್ತಾ ಇದ್ದಾಗ್ಯೂ ಧಾರಣೆವಾಸಿ ಇನ್ನೂ ಇಳಿತರವಾಗಲಿಲ್ಲ. ಗರೀಬರು ಜೀವಿಸುವದು ತುಂಬಾ ಕಷ್ಟವಾಗಿದೆ. ಹಣ ಸಂಪಾದಿಸುವುದಕ್ಕೆ ಇದೇ ಸಮಯವೆಂದು ವರ್ತಕರು ದಿನಸಿಯನ್ನು ಹೊರ ಕಡೆಗೆ ಭರ್ತಿಮಾಡುತ್ತಾ ಇರುತ್ತಾರೆ.—ಈ ಊರಿಗೆ ಸುಮಾರು ಎರಡು ಮೈಲಿ ದೂರದಲ್ಲಿರುವ ...ಲವಾಗಲುವೆಂಬ ಗ್ರಾಮದಲ್ಲಿ ...ಗಳು ಸಾಯುತ್ತಾ ಇವೆಯೆಂತಲೂ, ಎರಡು ಮೂರು ಮರಿಗಳು ಸಹ ಆದವೆಂತಲೂ ವರ್ತಮಾನ, ಆದ್ದರಿಂದ ನಮ್ಮ ಅಮಲ್ದಾರರು ವಿಶೇಷವಾಗಿ ಈ ಕಾಲದಲ್ಲಿ ಟೌನ್ ಪಾಕೀಜಾ ವಿಷಯದಲ್ಲಿ ನಿಗಾ ಕೊಡುವರೆಂದು ನಂಬುತ್ತೇನೆ. ಈಗ್ಗೆ ಒಂದು ತಿಂಗಳ ಕೆಳಗೆ ನಮ್ಮ ಅಮಲ್ದಾರರ ಮತ್ತು ಅನೇಕ ದೊಡ್ಡ ಮನುಷ್ಯರ ಕೋರಿಕೆಯಂತೆ ಮೈಸೂರಿಂದ ಡಾಕ್ಟರು ಇಲ್ಲಿಗೆ ಬಂದು ಅನೇಕರಿಗೆ ಇನಾಕ್ಯುಲೇಷನ್ ಮಾಡಿದರು. ಇನ್ನೂ ಅನೇಕರು ಪ್ಲೇಗ್ ಔಷಧಿ ಹಾಕಿಸಿಕೊಳ್ಳದೆ ಇರುತ್ತಾರೆ. ಅಂಥವರು ಸಹ ಇನಾಕ್ಯುಲೇಷನ್ ಮಾಡಿಸಿಕೊಂಡರೆ ಉತ್ತಮವಾಗಿರುವದು.—ಇಲ್ಲಿರುವ ಮುನಿಸಿಪಲ್ ಲಾಂದ್ರಗಳಲ್ಲಿ ಕೆಲವು ಮಾತ್ರ ಬೆಳಕು ಕೊಡುತ್ತವೆ. ಬಾಕಿ ಲಾಂದ್ರಗಳು ಏನಾದವೋ ತಿಳಿಯದು. ಈ ವಿಷಯದಲ್ಲಿ ಮೇಲ್ಪಟ್ಟ ಅಧಿಕಾರಿಗಳು ನಿಗಾ ಕೊಡುವರೆಂದು ನಂಬುತ್ತೇನೆ. ಟೌನಿನಲ್ಲಿ ಅಲ್ಲಲ್ಲೇ ಕಳ್ಳತನ ಶುರುವಾಗಿರುವ ಹಾಗೆ ಭಾಸವಾಗಿದೆ. ಮುನಿಸಿಪಲ್ ಲಾಂದ್ರಗಳು ಕೆಲವು ಸ್ಥಳಗಳಲ್ಲಿ ಪ್ರಕಾಶಿಸದೆ ಇರುವದರಿಂದಲೂ ಕೆಲವು ಸ್ಥಳಗಳಲ್ಲಿ ಲಾಂದ್ರಗಳು ಇಲ್ಲದಿರುವದರಿಂದಲೂ ಕಳ್ಳರಿಗೆ ಅನುಕೂಲವಾಗಿರಬಹುದು.—ಇದೇ ತಿಂಗಳು ೨೦ನೇ ತಾ॥ ಗುರುವಾರ ಬೆಳಗ್ಗೆ ಮದ್ರಾಸ್ ಭೂಪರ್‌ರವರು ಮೋಟಾರ್ ಗಾಡಿಯಲ್ಲಿ ಇಲ್ಲಿಗೆ ಬಂದು ಮೆ॥ ಡೇವಿಸ್ ಸಾಹೇಬರ ಬಂಗ್ಲೆಯಲ್ಲಿ ಇಳಿದು, ಭೋಜನ ತೀರಿಸಿಕೊಂಡು, ೧೧ ಘಂಟೆಗೆ ಮಡಕೇರಿ ಕಡೆ ಪ್ರಯಾಣ ಬೆಳಸಿದರು.—ಹುಣಸೂರು ಟೌನಿನಲ್ಲಿ ಮೆ॥ ಅರುಣಾಚಲಂ ಪಿಳ್ಳೆಯವರು ಒಂದು ನಾಟಕದ ಕಂಪನಿಯನ್ನೂ, ಮೆ॥ ದಾದಾಪೀರ್ ಸಾಹೇಬರು ಒಂದು ನಾಟಕದ ಕಂಪನಿಯನ್ನೂ ಹೊಸದಾಗಿ ಏರ್ಪಡಿಸಿ ಟಿಕೆಟ್ ಇಲ್ಲದೆ ಆಟವಾಡುತ್ತಾ ಜನರನ್ನು ಸಂತೋಷಪಡಿಸುತ್ತಿದ್ದಾರೆ. ಮುಂದೆ ಇವು ತುಂಬಾ ಅಭಿವೃದ್ಧಿ ಸ್ಥಿತಿಗೆ ಬರುವವೆಂದು ನಂಬುತ್ತೇನೆ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು ; ನಿದ್ರೆಯಿಲ್ಲದೆ ಇರುವುದು ; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು , ಬಿಡದೆ ಬಾಯಾರಿಕೆ ; ಬಳಲಿಕೆ ; ಎದೆ ತಲ್ಲಣಿಸುವುದು ; ತಲೆನೋವು ; ಗಾಬರಿ ; ಕೀಲು ನೋವು ; ತಲೆ ತಿರುಗುವಿಕೆ ; ಮೈನೋವು ಕೀಲುನೋವು ; ಮಲವು , ನಿಶ್ರಾಣ ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ನೈಟಾವು, ಉದುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-9]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦ ; ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ತೋಕ್ಸ್, ಪಿ. ೬ ಬಾಕ್ಸ್ ೨೦, ಬೊಂಬಾಯಿ.—ಇವರಲ್ಲಿ ದೊರೆಯುವುದು.

ಲಾ ಪ್ರಕಟನೆಗಳು.

ವ್ಯವಹಾರನಿರ್ಣಯ—ಪುಟಗಳು ೫೪೫. ಹಿಂದೂ ಮಹಮದೀಯ ಲಾಗಳು, ೨೯ ಶಾಸನಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ. ಪಿ. ಸೇರಿ ೧ ರೂ. ೧೨ ಆಣೆ. [40-27]

ಕನ್ನಡ ಲಾ ರಿಪೋರ್ಟ್—ಪ್ರಿವಿ ಕೌನ್ಸಿಲ್, ಹೈ ಕೋರ್ಟ್, ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ರೂ. ೧—೦—೦ ಮುಂಗಡ, ಯಾ, ವಿ. ಪಿ. ಬದಿಪತ್ರಿಕೆ ೧ ಕ್ಕೆ ೦—೨—೦

ಇವುಗಳನ್ನಪೇಕ್ಷಿಸುವವರು—... ಎಂ. ಪಿ... ರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, (೯೦) ೨ ನೇ ರೋಡ್, ಚಾಮರಾಜಪೇಟೆ, ಬೆಂಗಳೂರು ಸಿಟಿ.—ಈ ವಿಳಾಸಕ್ಕೆ ಬರೆಯುವುದು.

ಅವಕಾಶಕೊಡುವುದಾಗಿಯೂ ಉದ್ದೇಶಿಸಿದೆ ಎಂದು ಕಳೆದ ವರುಷದ ಉಪನ್ಯಾಸದಲ್ಲಿ ತಿಳಿಸಿದ್ದೆವಷ್ಟೆ. ಈ ವರ್ಷ ಇದನ್ನು ಇನ್ನೂ ಪರ್ಯಾಲೋಚಿಸಲಾಯಿತು. ಕ್ಷಿಪ್ರದಲ್ಲಿಯೇ ಹುಕುಂ ಕೊಡಲಾಗುತ್ತದೆ.

ಪೋಲೀಸು.

ಈ ವರ್ಷ ರಿಪೋರ್ಟಾದ ತಕ್ಸೀರುಗಳ ಸಂಖ್ಯೆಯು ೧೯೦೬—೦೭ನೇ ಸಾಲಿನ ಸಂಖ್ಯೆಗಿಂತ ಕಮ್ಮಿಯಾಗಿರುತ್ತದೆ. ಮತ್ತು ಫೈಸಲಾಗಿರುವ ಮೊಕದ್ದಮೆಗಳ ಪೈಕಿ ಅನೇಕ ಮೊಕದ್ದಮೆಗಳಲ್ಲಿ ತಕ್ಸೀರು ಸಾಬೀತಾಗಿರುತ್ತದೆ. ಈ ಎರಡು ಸಂಗತಿಗಳೂ ತೃಪ್ತಿಕರವಾಗಿವೆ. ಈ ಸಂವತ್ಸರದಲ್ಲಿ ನಡೆದ ಎರಡು ಸಂಗತಿಗಳು ತುಂಬಾ ಆಶ್ಚರ್ಯಕರವಾಗಿಯೂ ವಿಷಾದಕರವಾಗಿಯೂ ಇದ್ದುವು. ಅವುಗಳನ್ನು ಸಂಕ್ಷೇಪವಾಗಿ ತಿಳಿಸುತ್ತೇವೆ. ಮೊದಲನೇದು—ಕೋಲಾರದ ಭಂಗಾರದ ಗಣಿಗಳಲ್ಲಿ ಕೂಲಿಯವರಿಗೂ ಪಂಜಾಬಿ ಪಹರೆಯವರಿಗೂ ಜಗಳಗಳು ನಡೆದುದರ ಮೇಲೆ ೧೯೦೭ನೇ ಇಸವಿಯ ಡಿಸೆಂಬರು ೨೫ ರಿಂದ ೩೦ರ ವರೆಗೆ ಪ್ರಬಲವಾದ ದೊಂಬಿ ನಡೆಯಿತು. ಈ ದೊಂಬಿಯು ಕೆಲವು ಕಾಲದ ವರೆಗೆ ಬಹಳ ಜೋರಾಗಿದ್ದುದರಿಂದ ಆಯುಧಪಾಣಿಗಳಾದ ಶಿಪಾಯಿಗಳನ್ನು ಬಿಟ್ಟು ದೊಂಬಿಯನ್ನು ಚದರಿಸಬೇಕಾಯಿತು. ಆದರೆ ಆ ಸ್ಥಳದ ದೊಡ್ಡ ದೊಡ್ಡ ಅಧಿಕಾರಿಗಳು ಗಾಬರಿಪಡದೆ ವಿಶೇಷ ಸ್ಮರಣೆಯಿಂದಲೂ ಸಮಯೋಚಿತವಾಗಿಯೂ ನಡೆದುಕೊಂಡುದರಿಂದ ಪ್ರಾಣನಷ್ಟವಾಗಲೀ ಸ್ವತ್ತಿಗೆ ಹಾನಿಯಾಗಲೀ ಸ್ವಲ್ಪವೂ ಇಲ್ಲದಹಾಗೆ ದೊಂಬಿಯನ್ನು ಅಡಗಿಸಲಾಯಿತು. ಈ ದೊಂಬಿಗೆ ಸೇರಿದ್ದ ಎರಡು ಪಕ್ಷಗಳಲ್ಲಿಯೂ ಮುಖಂಡರಾದವರನ್ನು ಕಾನೂನಿಗನುಸಾರವಾಗಿ ವಿಚಾರಣೆಮಾಡಿ ಶಿಕ್ಷೆಗೆ ಗುರಿಮಾಡಲಾಯಿತು. ಎರಡನೇದು—ಬೆಂಗಳೂರಿನಲ್ಲಿ ಕೆಲವು ಪ್ರಾಯಪ್ರಬುದ್ಧರಾದ ಚಿಕ್ಕವಯಸ್ಸಿನವರು ವಿಷಪ್ರಯೋಗ ಮಾಡುವುದು, ಕತ್ತಿಗೆ ಕೊಯ್ಯುವುದು, ಈ ರೀತಿಯಲ್ಲಿ ಬೆಂಗಳೂರು ಪಟ್ಟಣದಲ್ಲಿಯೂ ಲಷ್ಕರಿನಲ್ಲಿಯೂ ಕಳೆದ ಎರಡು ವರ್ಷಗಳ ಲಾಗಾಯಿತು ಅನೇಕ ಘೋರವಾದ ಖೂನಿಗಳನ್ನು ನಡೆಸಿದರು. ಇವರು ಸ್ವಲ್ಪಮಟ್ಟಿಗೆ ಇಂಗ್ಲೀಷ್ ವಿದ್ಯಾಭ್ಯಾಸ ಮಾಡಿದ್ದರಲ್ಲದೆ ಮರ್ಯಾದಸ್ಥರ ಕುಟುಂಬಕ್ಕೆ ಸೇರಿದ್ದರು. ಇವರು ಈ ಖೂನಿಗಳನ್ನು ನಡೆಸುವುದಕ್ಕೆ ಬಹಳ ಚಮತ್ಕಾರವಾಗಿ ಏರ್ಪಾಡು ಮಾಡಿದ್ದರು. ಹೀಗೆ ಖೂನಿ ನಡೆಸುವುದಕ್ಕೆ ಭಂಗಾರದ ಒಡವೆಗಳನ್ನು ಕಸುಕೊಳ್ಳುವುದೇ ಮುಖ್ಯ ಉದ್ದೇಶವಾಗಿತ್ತು. ಖೂನಿ ಆದವರ ದೇಹಗಳನ್ನು ಇವರು ದಫನ್ ಮಾಡುತ್ತಿದ್ದ ರೀತಿಯನ್ನೂ, ಸದರಿ ಒಡವೆಗಳನ್ನು ಇವರು ಬಿಕರಿ ಮಾಡುತ್ತಿದ್ದ ರೀತಿಯನ್ನೂ ನೋಡಿದರೆ ಇವರು ವಿಶೇಷ ಬುದ್ಧಿವಂತಿಕೆಯನ್ನು ದುರ್ಮಾರ್ಗದಲ್ಲಿ ಉಪಯೋಗಿಸುತ್ತಿದ್ದರೆಂಬ ಸಂಗತಿಯು ವ್ಯಕ್ತಪಡುತ್ತದೆ. ಈ ತಕ್ಸೀರುಗಳು ಆಕಸ್ಮಾತ್ತಾಗಿ ಹೊರಬಿದ್ದ ಸಂಗತಿಯೂ ಈ ತಪ್ಪಿತಸ್ಥರು ತಮ್ಮ ದುರ್ಬುದ್ಧಿಗೆ ತಕ್ಕಹಾಗೆ ಶಿಕ್ಷೆ ಅನುಭವಿಸಿದುದೂ ಗತಿಯೂ ತಮಗೆಲ್ಲಾ ವೇದ್ಯವಾಗಿಯೇ ಇದೆ. ಈ ಮೊಕದ್ದಮೆಯ ವಿದ್ಯಮಾನಗಳನ್ನು ನೋಡಿದರೆ ಮರ್ಯಾದಸ್ಥರಂತೆ ತೋರುವವರ ಮನೆಗಳಲ್ಲಿಯೂ ಕೂಡ ಮಕ್ಕಳು ದುರ್ಮಾರ್ಗಕ್ಕೆ ಬೀಳದೆ ಒಳ್ಳೇ ಬುದ್ಧಿಯನ್ನೇ ಕಲಿಯುವುದಕ್ಕೆ ತಕ್ಕ ಅವಕಾಶವಿಲ್ಲವೆಂದು ಕಂಡುಬರುತ್ತದೆಯಲ್ಲದೆ, ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ನೀತಿಸಂಬಂಧವಾಗಿಯೂ, ಮತಸಂಬಂಧವಾಗಿಯೂ ಶಿಕ್ಷಣ ಕೊಡದೆ ಇರುವ ಕೊರತೆಯಿಂದ ಎಷ್ಟು ಮಟ್ಟಿನ ಹಾನಿ ಉಂಟಾಗುತ್ತದೆಂಬುವದು ವ್ಯಕ್ತಪಡುತ್ತದೆ. ಬೆಂಗಳೂರು ಪಟ್ಟಣದಲ್ಲಿ ನಡೆದ ಮೊಕದ್ದಮೆಗಳ ತನಿಖೆಗೆ ಸಂಬಂಧಪಟ್ಟ ಪೋಲೀಸು ಆಫೀಸರುಗಳ ನಡತೆಯ ವಿಷಯದಲ್ಲಿ ಇಲಾಖಾ ತರ್ಫಿ ವಿಚಾರಣೆ ನಡೆಸಲಾಯಿತು. ಇದರಿಂದ ಈ ಆಫೀಸರುಗಳು ಏಕಪ್ರಕಾರವಾಗಿ ಪ್ರಾಮಾಣಿಕತೆಯಿಂದಲೂ ಸಂತೋಷಕರವಾದ ರೀತಿಯಲ್ಲೂ ನಡೆದಿರುವುದಾಗಿ ಕಂಡುಬಂದಿರುವುದು ಸಂತೋಷಕರವಾದುದೇ ಸರಿ.

ಮರಾಮತ್ ಕಾಮಗಾರಿಗಳು.

೧೯೦೭—೦೮ನೇ ಸಾಲಿನಲ್ಲಿ ಮರಾಮತ್ ಕಾಮಗಾರಿಗಾಗಿ ಒಟ್ಟು ೫೩,೫೮,೦೦೦ ರೂಪಾಯಿ ಖರ್ಚಾಯಿತು. ಈ ಪೈಕಿ "ಸಿವಿಲ್ ಕಾಮಗಾರಿ"ಗಳ ಬಾಬಿನಲ್ಲಿ ೧೮,೫೫,೦೦೦ ರೂಪಾಯಿಯೂ, "ರೈಲ್ ಕಾಮಗಾರಿ"ಗಳ ಬಾಬಿನಲ್ಲಿ ೨೬,೬೫,೦೦೦ ರೂಪಾಯಿಯೂ, "ಮಿಲಿಟರಿ ಯಾಸ್ವನ್ಸ ಕಾಮಗಾರಿ"ಗಳ ಬಾಬಿನಲ್ಲಿ ೨೬,೦೦೦ ರೂಪಾಯಿಯೂ, "ಕಾವೇರಿ ವಿದ್ಯುಚ್ಛಕ್ತಿಯ ಕಾಮಗಾರಿ"ಗಳ ಬಾಬಿನಲ್ಲಿ ೮೬,೧೩,೦೦೦ ರೂಪಾಯಿಯೂ ಖರ್ಚಾದುವು.

ನೀರಾವರಿ ಕಾಮಗಾರಿಗಳು

ಕಳೆದ ವರುಷದಲ್ಲಿ ಮಾರಿಕಣಿವೆ ಕೆರೆಯ ಕಾಮಗಾರಿಯು ತೃಪ್ತಿಕರವಾಗಿ ನಡೆಯಿತು. ಈ ಕಾಮಗಾರಿಗೆ ೧,೪೩,೫೫೭ ರೂಪಾಯಿ ಖರ್ಚಾಯಿತು. ಈ ಕೆರೆಯಲ್ಲಿ ದೊಡ್ಡ ಆಣೆಕಟ್ಟು ಪೂರೈಸಿತು. ಕೆಲವು ಚಿಲ್ಲರೆ ಕಾಮಗಾರಿ ಮಾತ್ರ ಬಾಕಿ ನಿಂತಿದೆ. ಬಲ ದಡದ ನಾಲೆಯು ೧೮ನೇ ಮೈಲಿಯ ವರೆಗೆ ಪೂರ್ಣವಾದಂತೆ ಹೇಳಬಹುದು. ಈ ನಾಲೆಯು ೨೦ನೇ ಮೈಲಿಯಿಂದ ೨೫ನೇ ಮೈಲಿಯ ವರೆಗೂ ಮಟ್ಟಿಕಾಮಗಾರಿಯೂ ಮುಗಿಯುತ್ತಾ ಬಂದಿದೆ; ೧೮ನೇ ಮೈಲಿಯ ತನಕ ನೀರನ್ನು ಬಿಡಲಾಯಿತು. ಎಡ ದಡದ ನಾಲೆಯಲ್ಲಿ ಇಟ್ಟಿಗೆ ಗಾರೆ ಕೆಲಸವೂ ಸಹ ೨೫ನೇ ಮೈಲಿಯ ತನಕ ಪೂರೈಸಿ ಇದೆ. ೨೧ನೇ ಮೈಲಿಯ ವರೆಗೆ ನೀರನ್ನು ಬಿಡಲಾಯಿತು. ಕಳೆದ ಸರಕಾರಿ ಸಾಲಿನ ಆಖೈರ್‌ವರೆಗೆ ಈ ಕಾಮಗಾರಿಗೆ ಒಟ್ಟು ೩೩,೪೨,೭೩೩ ರೂಪಾಯಿ ಖರ್ಚಾಯಿತು.

ಸಣ್ಣ ಕೆರೆಗಳು.

ಸಣ್ಣ ಕೆರೆಗಳಿಗಾಗಿ ರೆವಿನ್ಯೂ ಇಲಾಖೆಯಿಂದ ೭೭,೦೦೦ ರೂಪಾಯಿ ಖರ್ಚಾಯಿತಲ್ಲದೆ ರೈತರಿಗೆ ಅವರ ಪಾಲಿನ ಮಟ್ಟಿ ಕಾಮಗಾರಿಯನ್ನು ಮಾಡುವುದಕ್ಕಾಗಿ ೧೩,೦೦೦ ರೂಪಾಯಿಯನ್ನು ಮುಂಗಡ ಕೊಡಲಾಯಿತು. ಈ ವರುಷದಲ್ಲಿ ೩೭೫ ಕೆರೆಗಳ ಕಾಮಗಾರಿಯು ಆರಂಭವಾಗಿ ೧೭೫ ಕೆರೆಗಳ ಕಾಮಗಾರಿಯು ಪೂರೈಸಿತು. ಈ ಬಾಬಿನಲ್ಲಿ ನಡೆದ ಕೆಲಸವು ಒಟ್ಟಿನಲ್ಲಿ ತೃಪ್ತಿಕರವಾಗಿತ್ತು. ತಥಾಪಿ ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ೧೪೪ ಕೆರೆಗಳನ್ನು ದುರಸ್ತು ಮಾಡಲು ಆರಂಭಿಸಿದುದಕ್ಕೆ ಕಳೆದ ವರುಷದಲ್ಲಿ ಆ ಪೈಕಿ ೫೬ ಕೆರೆಗಳು ಪೂರಾ ದುರಸ್ತಾದುದು ಬಹಳ ಸಮಾಧಾನಕರವಾಗಿದೆ.

ಕಾವೇರೀ ನದಿಗೆ ಅಡ್ಡಲಾಗಿ ಕೆರೆ.

ಬನ್ನೂರಿನ ಬಳಿ ಕಾವೇರೀ ನದಿಗೆ ಅಡ್ಡವಾಗಿ ಅಣೆ ಹಾಕಿ ಒಂದು ದೊಡ್ಡ ಕೆರೆಯನ್ನು ಕಟ್ಟುವುದಕ್ಕೋಸ್ಕರ ಸುರು ಅಜಮಾಯಿಷಿ ಕೆಲಸವು ಪೂರೈಸಿ, ಆ ಬಗ್ಗೆ ಒಂದು ಅಂದಾಜು ತಯಾರಾಯಿತಲ್ಲದೆ ಸರ್ಕಾರದವರು ಅದನ್ನು ಪರ್ಯಾಲೋಚನೆ ಮಾಡುತ್ತಾ ಇದ್ದಾರೆ. ಈ ಕೆರೆಯನ್ನು ಕಟ್ಟುವುದು ಸಾಧ್ಯವಾಗಿರುವುದಾಗಿ ಕಂಡುಬರುವುದಲ್ಲದೆ ಉತ್ತರೋತ್ತರ ಅದರಿಂದ ತಕ್ಕಮಟ್ಟಿಗೆ ವರಮಾನವು ಬರಬಹುದಾಗಿಯೂ ತೋರುತ್ತದೆ. ಆದರೆ ಇದಕ್ಕೆ ಬಹಳ ಖರ್ಚು ಮಾಡಬೇಕಾಗಿರುವದರಿಂದ ಹಣವನ್ನು ಒದಗಿಸುವ ವಿಚಾರದಲ್ಲಿ ಸ್ವಲ್ಪ ಅನಾನುಕೂಲವಾಗಿದೆ. ಸರ್ಕಾರದವರು ಈ ವಿಷಯವನ್ನು ಎಲ್ಲಾ ಭಾಗದಲ್ಲಿಯೂ ಪರ್ಯಾಲೋಚಿಸಿ, ಮುಂದೆ ಇನ್ನೂ ಅನುಕೂಲವಾದ ಕಾಲ ಬಂದಾಗ ಇದನ್ನು ಪುನಃ ಯೋಚಿಸಬಹುದು.

ಕಾವೇರೀ ವಿದ್ಯುಚ್ಛಕ್ತಿಸ್ಥಾಪನೆಯ ಕಾಮಗಾರಿಗಳು

ಕಾವೇರೀ ವಿದ್ಯುಚ್ಛಕ್ತಿಸ್ಥಾಪನೆಯ ಏರ್ಪಾಡಿಗೆ ಒಟ್ಟು ೧೬,೧೩,೧೪೮ ರೂಪಾಯಿ ಖರ್ಚಾಯಿತು; ಈ ಪೈಕಿ ೧೨,೮೦,೬೩೧ ರೂಪಾಯಿಯು ಮೂರನೇ ಸ್ಥಾಪನೆಗೆ ಖರ್ಚಾಯಿತು. ೭೫,೫೭೮ ರೂಪಾಯಿ ಬೆಂಗಳೂರಿನಲ್ಲಿ ಬೆಳಕನ್ನು ಕೊಡುವ ಮತ್ತು ಕಾರ್ಖಾನೆಗಳಿಗೆ ಶಕ್ತಿಯನ್ನು ಸರಬರಾಯಿ ಮಾಡುವ ಏರ್ಪಾಡಿಗೆ ಖರ್ಚಾಯಿತು. ೩,೫೫,೭೮೬ ರೂಪಾಯಿಯು ಶಿಲ್ಬಂದಿ ಖರ್ಚೂ, ಮೊದಲನೇ ಎರಡನೇ ಸ್ಥಾಪನೆಗಳನ್ನು ದುರಸ್ತಿನ ಸ್ಥಿತಿಯಲ್ಲಿಡುವುದಕ್ಕೂ ತಗಲಿತು. ಕಳೆದ ವರ್ಷದಲ್ಲಿ ಒಟ್ಟು ೧೭,೫೮,೩೪೬ ರೂಪಾಯಿ ಉತ್ಪತ್ತಿಯಾಯಿತು. ಈ ಪೈಕಿ ಶಿಲ್ಬಂದಿ ಖರ್ಚು ಕಳೆದು ೧೫,೦೨,೫೬೦ ರೂಪಾಯಿ ನಿವ್ವಳ ಹುಟ್ಟುವಳಿಯಾಯಿತು; ಎಂದರೆ, ಬಡ್ಜೆಟ್ ಯಾನೆ ಜಮಾಖರ್ಚಿನ ಅಂದಾಜುಪಟ್ಟಿಯಲ್ಲಿ ನಿರೀಕ್ಷಿಸಿದ್ದದಕ್ಕಿಂತ ೨,೩೨,೦೦೦ ರೂಪಾಯಿ ಜಾಸ್ತಿ ಬಂದ ಹಾಗಾಯಿತು. ಶಿವಸಮುದ್ರದ ಬ್ಲಫ್ ಎಂಬ ಒಂದು ಊರಿನ ಸಾಕೀಜಾ ಬಗ್ಗೆ ೨೪,೮೧೯ ರೂಪಾಯಿಯ ಖರ್ಚಿನಿಂದ ಕಾಮಗಾರಿಯನ್ನು ಪೂರೈಸಲಾಯಿತು. ೧೯೦೮ನೇ ಇಸವಿಯ ಜನವರಿ ಸುರುವಿನ ಬೆಂಗಳೂರಿನ ದಂಡಿನಲ್ಲಿ ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವುದಕ್ಕೆ ಉಪಕ್ರಮವಾಯಿತು. ೧೯೦೮ನೇ ಇಸವಿಯ ಸೆಪ್ಟೆಂಬರು ೩೦ರ ಲಾಗಾಯಿತು ಮೈಸೂರಿನಲ್ಲಿ ಇದೇ ದೀಪಗಳನ್ನು ಹಚ್ಚುತ್ತಾ ಇದೆ.

ರೈಲ್ ರಸ್ತೆಗಳು.

ಈಗಿರುವ ರೈಲ್ ಮಾರ್ಗಗಳಲ್ಲಿ ನಿವ್ವಳ ಹುಟ್ಟುವಳಿಯು ೧೯೦೬-೦೭ರಲ್ಲಿ ೧೦,೭೩,೮೭೩ ರೂಪಾಯಿ ಇದ್ದುದು ಈ ಸಾರಿ ೧೧,೩೭,೦೦೦ ರೂಪಾಯಿ ಆಯಿತು; ಎಂದರೆ, ಬಂಡವಾಳದ ಮೇಲಣ ಹುಟ್ಟುವಳಿಯು ೧೯೦೬-೦೭ರಲ್ಲಿ ೪.೫೩ ಆಗಿದ್ದುದು ಈ ಸಾರಿ ೪.೭೧ ಆಯಿತು. ಒಟ್ಟು ಹುಟ್ಟುವಳಿಯ ಪೈಕಿ ನಿಬ್ಬಂದಿ ಖರ್ಚು ೧೯೦೬—೦೭ರಲ್ಲಿ ೬೦.೬೧ ಆಗಿದ್ದುದು ಈ ಸಾರಿ ೬೨.೯೨ ಆಯಿತು. ಬೆಂಗಳೂರಿಂದ ಚಿಕ್ಕಬಳ್ಳಾಪುರಕ್ಕೆ ಲಘುರೈಲ್ವೆಯನ್ನು ಹಾಕುವುದಕ್ಕೆ ಮೊದಲು ಅಂದಾಜು ಹಾಕಿದ್ದ ಮೊಬಲಗಿಗಿಂತ ಖರ್ಚು ಬಹಳ ಹೆಚ್ಚಾಗುವುದಾಗಿ ತೋರಬಂದುದರಿಂದ ಸದರೀ ಏರ್ಪಾಡನ್ನು ಬಿಟ್ಟುಬಿಟ್ಟು ಅದರ ವಿಚಾರವಾಗಿ ಏರ್ಪಟ್ಟಿದ್ದ ಕಂಪನಿಯವರು ಅದಕ್ಕೆ ಬದಲಾಗಿ ಒಂದು ಸ್ಟೀಂ ಟ್ರಾಂವೇಯನ್ನು ಹಾಕುವುದಕ್ಕಾಗಿ ಸರ್ಕಾರದವರ ಅಪ್ಪಣೆಯನ್ನು ಕೇಳಿದ್ದಾರೆ. ಈ ವಿಚಾರವಾಗಿ ನಕಾಷೆಗಳೂ, ಅಂದಾಜುಗಳೂ ತಯಾರಾಗುತ್ತಿವೆ ಎಂದು ತಿಳಿಯಬಂದಿದೆ. ಮದರಾಸ್ ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪನಿಯವರು ಮೈಸೂರಿಂದ ಹಾಸನದ ವರೆಗಿನ ರಸ್ತೆಯನ್ನು ಸರ್ವೇ ಮಾಡುವುದಾಗಿ ಒಪ್ಪಿಕೊಂಡಿದ್ದಾರೆ.

ಭಂಗಾರ.

೧೯೦೫—೦೬ನೇ ಸಾಲಿನಲ್ಲಿ ಗಣಿಗಳಿಂದ ತೆಗೆದ ಚಿನ್ನಕ್ಕಿಂತಲೂ ೧೯೦೬-೦೭ನೇ ಸಾಲಿನಲ್ಲಿ ತೆಗೆದುದು ಬಹಳ ಕಡಮೆಯದಾಗಿತ್ತು ಎಂಬ ಅಂಶವನ್ನು ಹೋದ ವರ್ಷದ ಉಪನ್ಯಾಸದಲ್ಲಿ ಸೂಚಿಸಿದ್ದೆವು. ಆದರೆ ೧೯೦೭—೦೮ನೇ ಸಾಲಿನಲ್ಲಿಯೂ ಇದೇ ರೀತಿಯಾಗಿ ಕಮ್ಮಿಯಾಗಿರುವುದನ್ನು ನೋಡಿ ವಿಷಾದಿಸಬೇಕಾಗಿದೆ. ೧೯೦೫—೦೬ನೇ ಸಾಲಿನಲ್ಲಿ ೬೦,೪೫,೧೦೮ ಪೌಂಡ್ ಕಿಮ್ಮತ್ತು ಚಿನ್ನವನ್ನೂ, ೧೯೦೬-೦೭ನೇ ಸಾಲಿನಲ್ಲಿ ೨೦,೬೮,೯೭೦ ಪೌಂಡುಗಳ ಚಿನ್ನವನ್ನೂ, ೧೯೦೭-೦೮ನೇ ಸಾಲಿನಲ್ಲಿ ೨೦,೩೪,೭೮೬ ಪೌಂಡುಗಳ ಚಿನ್ನವನ್ನೂ ಗಣಿಗಳಿಂದ ತೆಗೆಯಲಾಯಿತು

ಜನಾರೋಗ್ಯ.

೧೯೦೬—೦೭ರಲ್ಲಿ ಜನನಸಂಖ್ಯೆಯು ೧,೦೦೦ಕ್ಕೆ ೧೬.೩೨ರಂತೆ ಇದ್ದುದು ಈ ವರ್ಷ ೧೪.೯೮ಕ್ಕೆ ಇಳಿಯಿತು, ಮರಣಸಂಖ್ಯೆಯು ೨೬.೮೮ರಂತೆ ಇದ್ದುದು ೧೮.೮೩ಕ್ಕೆ ಇಳಿಯಿತು. ಜ್ವರಗಳಿಂದಲೂ, ವಾಂತಿಭೇದಿಯಿಂದಲೂ, ಸಿಡುಬಿನಿಂದಲೂ ಹಿಂದಿನ ವರ್ಷಕ್ಕಿಂತ ಈ ವರ್ಷದಲ್ಲಿ ಆದ ಮರಣಗಳು ಕಡಮೆ. ಆದರೆ ಪ್ಲೇಗು ಹಿಂದಣ ವರ್ಷಕ್ಕಿಂತ ಜೋರಾಗಿತ್ತು. ೧೯೦೬—೦೭ರಲ್ಲಿ ಈ ರೋಗವು ೫,೯೪೩ ಜನರಿಗೆ ತಗಲಿ ೪,೨೯೭ ಜನರು ಮೃತಪಟ್ಟರು, ಈ ವರ್ಷದಲ್ಲಿ ಯಾದರೋ ೬೦,೩೧೬ ಜನರಿಗೆ ತಗಲಿ ೧೪,೭೫೦ ಜನರು ಮೃತಪಟ್ಟರು. ಎಲ್ಲಾ ಡಿಸ್ಟ್ರಿಕ್ಟುಗಳ ಪೈಕಿ ಬೆಂಗಳೂರಲ್ಲಿ ವಿಶೇಷ ಮರಣನಷ್ಟ, ಚಿತ್ರದುರ್ಗದಲ್ಲಿ ಅತ್ಯಂತ ಕಡಮೆ ಮರಣನಷ್ಟ ಆಯಿತು; ಎಂದರೆ, ಬೆಂಗಳೂರ್ ಡಿಸ್ಟ್ರಿಕ್ಟಿನಲ್ಲಿ ೫,೪೭೯ ಜನರಿಗೆ ಈ ವ್ಯಾಧಿಯು ತಗಲಿ ೪,೦೮೦ ಜನರು ಸತ್ತುಹೋದರು; ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ೩೦೩ ಜನರಿಗೆ ತಗಲಿ ೧೬೮ ಜನರು ಸತ್ತುಹೋದರು

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್.

ಹೊಸಕೋಟೆಯ ವಿಷಯಗಳು.

ಅಯ್ಯಾ,

ಈ ತಿಂಗಳು ೧೭ನೇ ತಾರೀಖು ಶಾನುಭೋಗ ತಿಗಳರಜಾತಿ ಮುತ್ತಪ್ಪನ ಹೆಂಡತಿ ಕಣ್ಣಮ್ಮ ಒಂದು ಗಂಡುಮಗುವನ್ನು ಹೆತ್ತಳು. ಆ ಮಗು ಹುಟ್ಟಿದ ಕೂಡಲೇ ತಂದೆತಾಯಿಗಳಿಗೆ ಬಹಳ ಸಂತೋಷವಾಯಿತು. ಅದನ್ನು ಪರೀಕ್ಷೆ ಮಾಡಿ ನೋಡಿದಾಗ ಅದಕ್ಕೆ ಮಲಮೂತ್ರ ದ್ವಾರಗಳು ಇರಲಿಲ್ಲ. ಇದನ್ನು ತಂದೆತಾಯಿಗಳು ನೋಡಿ ಬಹಳ ವ್ಯಸನಪಟ್ಟರು. ಆ ಮಗು ಹೀಗೆ ಹುಟ್ಟುವದಕ್ಕೆ ಕಾರಣವೇನು ಎಂದು ಜ್ಯೋತಿಶ್ಶಾಸ್ತ್ರವನ್ನು ಕೇಳಿದರು. ನಮ್ಮ ಮನೆದೇವರೋ, ಮತ್ತು ಯಾವ ಪೀಡೆಪಿಶಾಚನು ಹೀಗೆ ಮಾಡಿತು ಎಂದು ಕೇಳಿದರು. ಜ್ಯೋತಿಷ್ಯನು ಯಾವ ಪೀಡೆಪಿಶಾಚವೂ ಇಲ್ಲ. ದೇವರು ಹಾಗೆ ಉಂಟುಮಾಡಿದಾನೆ ಎಂದು ಹೇಳಿದರು. ಆ ಮಗು ಬದುಕುವದೋ ಎಂದು ತಿರಿಗಿ ಕೇಳಿದರು. ಆ ಮಗು ಬದುಕುವದಿಲ್ಲವೆಂದು ಹೇಳಿದರು. ಕೂಡಲೇ ಹೆಂಗಸು ಎದ್ದು ಹೊರಟುಹೋದಳು. ಆ ಮಗುವಿಗೆ ಹೊಟ್ಟೆ ಊದಿಕೊಂಡು ಇದೆ. ಬದುಕುವದು ಕಷ್ಟ. [ತಂದೆ ತಾಯಿಗಳು ಜೋಯಿಸರನ್ನು ಕೇಳುವದಕ್ಕೆ ಬದಲಾಗಿ ಶಸ್ತ್ರವೈದ್ಯದಲ್ಲಿ ನಿಪುಣರಾದ ಡಾಕ್ಟರಿಗೆ ಮಗುವನ್ನು ತೋರಿಸಿದಲ್ಲಿ ಅನುಕೂಲವಾದೀತು.—ಎಡಿ.]

ಹೊಸಕೋಟೆಯಲ್ಲಿ ಮಳೆ ಇಲ್ಲದೆ ಪೈರುಗಳೆಲ್ಲಾ ಒಣಗಿ ಹೋಗುತ್ತಿವೆ. ಅಕ್ಕಿ ರೂಪಾಯಿಗೆ ೫|| ಸೇರು, ರಾಗಿ ೧೦|| ಸೇರು ಮಾರುತ್ತಾರೆ. ಕೂಲಿಮಾಡುವ ಬಡವರು ಅನ್ನವಿಲ್ಲದೆ ಬಹಳ ಕಷ್ಟಪಡುತ್ತಾರೆ. ಬಡವರ ಕಷ್ಟವನ್ನು ಹೇಳಲಸಾಧ್ಯವಾಗಿರುತ್ತದೆ. ಈ ಊರಿನಲ್ಲಿ ಬ್ರಾಹ್ಮಣರು ಮಳೆ ತರಿಸುತ್ತೇವೆಂದು ಹೇಳಿ ಸ್ವಲ್ಪ ಹೆಚ್ಚು ಕಡಿಮೆ ೧೫೦ ರೂಪಾಯಿಗಳನ್ನು ಪ್ರಜೆಗಳಿಂದ ವಸೂಲ್ಮಾಡಿಕೊಂಡಿದ್ದಾರೆಂದೂ, ಅವರು ಈ ಚಿಕ್ಕ ಕೆರೆ ದೇವಸ್ಥಾನದಲ್ಲಿ ಜಪಸ್ನಾನಮಾಡುತ್ತಿದ್ದಾರೆಂದೂ ಕೇಳುತ್ತೇನೆ. ಅನೇಕ ಬಡವರು—ಬ್ರಾಹ್ಮಣರು ಮಳೆಗೋಸ್ಕರ ಜಪವನ್ನು ಮಾಡುತ್ತಾರೆ. ಮಳೆ ಬರುತ್ತದೆಂದು ಬಹಳ ಆಸೆಯಾಗಿದ್ದರು. ಆದರೂ ಇನ್ನೂ ಮಳೆ ಬರಲಿಲ್ಲ. ಪೈರುಗಳೆಲ್ಲಾ ಒಣಗಿಹೋಯಿತು. ಅದರಿಂದ ಅವರು ಆಸೆಬಿಟ್ಟುಬಿಟ್ಟರು.

ಬಾತ್ಮೀದಾರ್.

ಕಸಬುಗಳಿಗೆ ಪ್ರೋತ್ಸಾಹ.

ಅಯ್ಯಾ,

ಯಾವ ದೇಶವು ಅಭಿವೃದ್ಧಿಸ್ಥಿತಿಗೆ ಬರಬೇಕಾದರೂ ಅದರ ಕೈಗಾರಿಕೆಯು ಪ್ರಾಬಲ್ಯಪಡೆಯಬೇಕಲ್ಲವೇ? ನಮ್ಮ ಮೈಸೂರು ಸಂಸ್ಥಾನವೂ ಕೂಡ ಈಚೀಚೆಗೆ ಕೈಗಾರಿಕೆಯ ಪ್ರಾಬಲ್ಯವನ್ನು ಹೊಂದುವ ಸ್ಥಿತಿಗೆ ಬಂದಿದೆ. ಸರ್ಕಾರದ ಪ್ರೋತ್ಸಾಹವಲ್ಲದೆ ಸರ್ಕಾರದ ಭಾರಿ ಭಾರಿ ಉದ್ಯೋಗದಲ್ಲಿಯೂ ಕೂಡ ಕೆಲವರು ತಮ್ಮ ಸ್ವಂತ ಹಣದಿಂದ ಕೈಗಾರಿಕೆಗಳ ಕಂಪನಿಗಳನ್ನೇರ್ಪಡಿಸಿ, ದೇಶೋನ್ನತಿಗೆ ಬದ್ಧಕಂಕಣರಾಗಿ ಕೀರ್ತಿಯನ್ನು ಪಡೆಯಬೇಕೆಂದು ಪ್ರಯತ್ನಪಡುತ್ತಿರುವರೆಂದು ತಿಳಿಸಲು ತುಂಬಾ ಸಂತೋಷಪಡುತ್ತೇನೆ.

ಇದಕ್ಕೆ ಉದಾಹರಣೆಯಾಗಿ ಚಿತ್ರದುರ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಸಾಹೇಬರಾದ ಮೆ|| ಚೆಂಗ್ಲೆಯಶೆಟ್ಟರವರು ಹಿರಿಯೂರು ತಾಲ್ಲೂಕಿನಲ್ಲಿ ಭಾರಿ ರೇಷ್ಮೆ ಕಂಪನಿಯೊಂದನ್ನು ಸ್ಥಾಪಿಸಿ, ರೇಷ್ಮೆ ಕೆಲಸವನ್ನು ಸರಿಯಾಗಿ ಕಲಿತುಕೊಂಡು ಬರುವಂತೆ ಸಿ. ಅಬ್ದುಲ್ ಖಾದರ್ ಎಂಬ ಒಬ್ಬ ಮಹಮ್ಮದೀಯ ಯುವಕನಿಗೆ ಸ್ಕಾಲರ್‌ಶಿಪ್ ಕೊಟ್ಟು ಬೆಂಗಳೂರಲ್ಲಿರುವ ತಾತಾರವರ ಎಕ್ಸ್‌ಪೆರಿಮೆಂಟಲ್ ಸಿಲ್ಕ್ ಫಾರಮಿಗೆ ಕಳುಹಿಸಿಕೊಟ್ಟಿದ್ದರು. ಈಗ ಆ ವಿದ್ಯಾರ್ಥಿಯು ಬಹಳ ಮುತುವರ್ಜಿಯಿಂದ ರೇಷ್ಮೆಯ ಕೆಲಸಗಳನ್ನೆಲ್ಲಾ ಕಲಿತುಕೊಂಡು, ಇನ್ನು ಕೆಲವು ದಿವಸದಲ್ಲಿಯೇ ವಾಪಸು ಹಿರಿಯೂರಿಗೆ ಹೋಗಿ, ಸದರೀ ಕಂಪೆನಿಯ ಕೆಲಸವನ್ನು ಪ್ರಾರಂಭ ಮಾಡುವವರಾಗಿದ್ದಾರೆಂದು ಕೇಳಿ ತುಂಬಾ ಸಂತೋಷಪಡುತ್ತೇನೆ. ಈ ಕಂಪನಿಯು ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಹೊಸದುರ್ಗ, ಮೊಳಕಾಲ್ಮೂರು ಮುಂತಾದ ರೇಷ್ಮೆ ಕೈಗಾರಿಕೆ ನಡೆಯುವ ಸ್ಥಳಗಳಿಗೆಲ್ಲಾ ರೇಷ್ಮೆಯನ್ನು ಸರಬರಾಯಿ ಮಾಡಬಹುದಾಗಿರುವದರಿಂದ ಅಲ್ಲಿನ ರೇಷ್ಮೆ ವ್ಯಾಪಾರಗಾರರೆಲ್ಲಾ ಇನ್ನು ಮುಂದೆ ಈ ಕಂಪನಿಗೆ ಪ್ರೋತ್ಸಾಹ ಕೊಡುತ್ತಾರೆಂದು ಧೈರ್ಯವಾಗಿ ನಾನು ನಂಬಿದ್ದೇನೆ. ಮೆ|| ಚೆಂಗ್ಲೆಯಶೆಟ್ಟರವರ ಮೇಲ್ಪಂಕ್ತಿಯನ್ನನುಸರಿಸಿ, ಇತರ ದೊಡ್ಡ ಅಧಿಕಾರಿಗಳೂ ಕೂಡ ಬೇರೆ ಬೇರೆ ಕೈಗಾರಿಕೆ ಕಂಪನಿಗಳನ್ನೇರ್ಪಡಿಸಿ, ದೇಶೋನ್ನತಿಗೆ ಪಾತ್ರರಾಗಿ ವಿಶೇಷ ಕೀರ್ತಿಯನ್ನೂ ಯಶಸ್ಸನ್ನೂ ಸಂಪಾದಿಸಬೇಕೆಂದು ಹಾರೈಸುವ

ಕೆಳಸ್ಥಿತಿಯೂ ಸರ್ಕಾರ ರಿಪೋರ್ಟುಗಳೂ.

ಅಯ್ಯಾ,

ಕೋಲಾರದ ಡಿಸ್ಟ್ರಿಕ್ಟಿನಲ್ಲಿ ಮಳೆ ಇಲ್ಲದೆ ಪೈರೆಲ್ಲಾ ಒಣಗಿ ಹೋದವು. ನೆನ್ನೆಯಿಂದ ಮೋಡ ಮುಸುಕಿ ಹನಿಗಳು ಉದುರುತ್ತವೆ. ಕುಡಿಯುವ ನೀರು ಹಾನಿಕರವಾಗಿದೆ. ತಿನ್ನುವ ಹಿಟ್ಟು ಇಲ್ಲವಾಯಿತು. ಗೋಗ್ರಾಸದ ವಿಷಯವಂತು ಹೇಳತೀರದು. ಬಡ ರೈತರು ಕಣ್ಣಿಗೆ ನಿದ್ದೆ ಇಲ್ಲದೆ ಗಾಡಿಗಳು ಕಟ್ಟಿಕೊಂಡು ರಾತ್ರಿಯೆಲ್ಲಾ ಪ್ರಯಾಣಮಾಡಿ ಎಲ್ಲಿಗೋ ಹೋಗಿ, ಮಾರನೇ ಸಾಯಂಕಾಲ ೬—೭ ಘಂಟೆಗೆ ಹೊಟ್ಟೆ ಭಜನೆಯಂತೆ ಬರುತ್ತಾರೆ. ಅವರ ಮುಖಲಕ್ಷಣವನ್ನೂ ಕಷ್ಟವನ್ನೂ ಹೇಳತೀರದು.—ಈ ಕಡೆ ಪ್ರಜೆಗಳ ಗೋಳು ನೋಡಿದರೆ ಹೊಟ್ಟೆಗಿಲ್ಲದೆ ಕತ್ತಾಳೆ ಕಡ್ಡಿ ತಿನ್ನುತ್ತಿದ್ದಾರೆ. ಕುಡಿಯುವ ನೀರಿಗಂತೂ ಒಂದೂರಿನ ಜನಗಳು ಮತ್ತೊಂದೂರಿಗೆ ಅಲೆದುಹೋಗುತ್ತಾರೆ. ದಯಾಳುಗಳಾದ ತಾಲ್ಲೂಕ್ ಅಮಲ್ದಾರರು ಗ್ರಾಮಸಂಚಾರಮಾಡುತ್ತಾ, ಕತ್ತಾಳೆ ತಿನ್ನುವವರನ್ನು ನೋಡಿ ಮರುಗುತ್ತಾ, ಕೆಲವೆಡೆಗಳಲ್ಲಿ ಸ್ವಂತ ಹಣದಿಂದ ಸಹಾಯಮಾಡಿದರೆಂಬುದಾಗಿ ಜನರು ಹೇಳುತ್ತಾರೆ. ಕರುಣಾಳು ದೊರೆಯ ನಮ್ಮ ಅಮಲ್ದಾರರಲ್ಲಿ ಅಂಥಾ ಕರುಣೆ ಇಟ್ಟಿದ್ದಾರೆಂಬುದು ಮುಖಸ್ತುತಿಯ ಮಾತಲ್ಲ. ಈ ಕಳೆ ಕಾಣುವ ಅವರ ಕಾರ್ಯದಿಂದಲೇ ವಾಚಕರಿಗೆ ವೇದ್ಯವಾದೀತು.

ಈ ಊರಿನ ಸಂತೆಯೋ ತುಂಬಾ ಹೆಸರುವಾಸಿಯಾದದ್ದು. ಇಂಥ ವೇಲೂರು, ಚಿತ್ತೂರು, ಕೃಷ್ಣಗಿರಿ, ಕಡಪ, ಕರ್ನೂಲು, ಕೆಂಪರಿ, ಪುಂಗನೂರು, ಮದನಪಲ್ಲಿ, ಕೋಲಾರು, ಬೆಂಗಳೂರು, ಚಿಕ್ಕಬಳ್ಳಾಪುರವೇ ಮುಂತಾದ ಕಡೆಗಳಿಂದ ನೂರಾರು ಗಾಡಿಗಳು ಸೇರಿ ಇಲ್ಲಿಯ ಧಾನ್ಯದ ಗಿರಾಕಿಯನ್ನು ಏರಿಸುತ್ತಾರೆ. ಅಲ್ಲದೆ ಚಿಲ್ಲರೆಯಾಗಿ ಕೊಳ್ಳುವವರಿಗೆ ಧಾನ್ಯ ದೊರೆಯುವುದೇ ಇಲ್ಲ. ಒಟ್ಟೊಟ್ಟಾಗಿಯೇ ಎಳು ಘಂಟೆಯೊಳಗಾಗಿ ಒಪ್ಪಂದವಾಗಿರುತ್ತದೆ. ಮಧ್ಯಾಹ್ನದ ಮೇಲೆ ಬಡಬಗ್ಗರು ಹಳ್ಳಿಹಳ್ಳಿಗಳಿಂದ ಬಂದು ನೋಡಿದರೆ ಧಾನ್ಯವೇ ದೊರೆಯುವದಿಲ್ಲ. ಈ ದುರ್ಭಿಕ್ಷಕಾಲದಲ್ಲಿ ವರ್ತಕರು ಅಧಿಕ ಧನವಂತರಾಗಬೇಕೆಂದು ರಾಗಿ ನೀರು ಬೆರಸಿ ಗಾತ್ರವಾಗಿ ಊದುವಂತೆಮಾಡಿ ಮಾರುತ್ತಾರೆ. ಅಳತೆ ಬಳ್ಳ ಸೇರುಗಳು ಬಹು ಕಡಮೆಯದಾಗಿಟ್ಟು ಮಾರುತ್ತಾರೆ. ಕಳೆದ ಸಂತೆಯಲ್ಲಿ ಒಬ್ಬ ವರ್ತಕ ಕೆಲವು ಮೂಟೆಗಳ ರಾಗಿಯನ್ನು ನೀರು ಬೆರಸಿ ಮಾರಾಟಕ್ಕೆ ಇಟ್ಟಿರಲು ತಾಲ್ಲೂಕು ಅಮಲ್ದಾರರು ಅಜಮಾಯಿಷಿಯಿಂದ ತಿಳಿದು ದಾಕ್ಷ್ಯರವರ ಆಜ್ಞೆಯಿಂದ ಮೇಲ್ಕಂಡ ರಾಗಿಯನ್ನು ಮಾರಕೂಡದೆಂದು ಅಪ್ಪಣೆಕೊಟ್ಟರು. ಈ ಶಿಕ್ಷೆ ಸಾಲದು. ಇಂಥಾ ಅನ್ಯಾಯಗಾರರಲ್ಲಿ ಒಬ್ಬಿಬ್ಬರಿಗೆ ಪೂರಾ ಶಿಕ್ಷೆ ಕೊಟ್ಟಲ್ಲಿ ಈ ದುಷ್ಕೃತ ಮರಾಪೋಚನೆಯು ಕಡಮೆಯಾಗುವದರಲ್ಲಿ ಸಂದೇಹವಿಲ್ಲ. ಧಾರಣೆಗಳಂತೂ ವಿಷಮವಾಗಿರುವುದು. ರಾಗಿ ರೂಪಾಯಿಗೆ ೯—೯|| ಸೇರು

ಅಕ್ಕಿ ೪—೪॥ ಸೇರು ವ್ಯಾಪಾರವಾಗುತ್ತಿದೆ. ಅದೂ ಮೇಲ್ಕಂಡಂತೆ ರೂಪಾಯಿ, ಗೆ ರೂಪಾಯಿಗೆ ದೊರೆಯುವದಿಲ್ಲ. ಬಡವರು ಗೋಳಾಡಲಿಕ್ಕೆ ಶುರುವಾಯಿತು. ಅಷ್ಟರಲ್ಲಿ ಬಡವರ ತಂದೆಯೋ ಎಂಬಂತೆ ತೋರುತ್ತಾ ಅಮಲ್ದಾರರು ಮುಂಚಿನ ದಿನ ಮೀಟಿಂಗ್ ನಡಿಸಿ ಏರ್ಪಾಟುಮಾಡಿದ್ದ ಮೇರೆಗೆ ಮೆ॥ ಪುರದ ಪೂ. ಸುಬ್ಬಯ್ಯ, ಪೂ. ರಾಮಚಂದ್ರಯ್ಯ, ಶಾಖದ ನಾರಣಪ್ಪ, ಆಕಲಗೂಡು ದಾಸಪ್ಪ, ಕೆಂಚಿ ಆಪಪ್ಪ ಮುಂತಾದ ಸಾಹುಕಾರರಿಂದ ಸುಮಾರು ೪೦ ಖಂಡಿಯ ರಾಗಿ ತೆಗಿಸಿ, ತಾವೇ ಖುದ್ದು ಕೂತುಕೊಂಡು ಬಡವರನ್ನೇ ವಿಚಾರಿಸುತ್ತಾ ಅವರವರ ಯೋಗ್ಯತೆ ಅಂದರೆ ಜನಸ್ತೋಮಕ್ಕೆ ಬೇಕಾದಷ್ಟು ಕೊಡಿಸಿದರು. ಕೆಗಿವದು ೯। ಸೇರು, ವ್ಯಾಪಾರ ೧೦॥ ಸೇರಾದ್ದರಿಂದ ಮೇಲ್ಕಂಡ ರಾಗಿ ಸಾಹುಕಾರರು ಸ್ವಲ್ಪ ನಷ್ಟಪಟ್ಟರೂ ತಾವೂ ಸಂತೋಷಚಿತ್ತರಾಗಿ ಕೊಡುತ್ತಿದ್ದರು. ಹೀಗೆಯೇ ೬೦ ಮೂಟೆ ಧಾನ್ಯ ಬಡವರಿಗೆ ಅಳೆದರು. ಅಷ್ಟು ಹೊತ್ತು ಅಮಲ್ದಾರರು ಕೂತಲ್ಲಿಯೇ ಅನ್ನಾಹಾರ ಮರೆತು ಕೂತಿದ್ದರೆಂತಲೂ, ಒಬ್ಬ ಮುದುಕನು ಎರಡಾಣೆ ತಂದು ರಾಗಿ ಕೇಳಲಾಗಿ ಯಥಾಪ್ರಕಾರ ಅವನು ಜೀವನ ಮನೆವಾರ್ತೆ ವಿಚಾರಿಸಲು,—ಸ್ವಾಮಿ, ನಮ್ಮ ಮನೆಯಲ್ಲಿ ಇಬ್ಬರು ಜನರಿದ್ದೇವೆ ಎನ್ನಲಾಗಿ, ಬಡವರಲ್ಲಿ ಬಡವನಂತೆ ವಿಚಾರಪರರಾದ ಮಹನೀಯರು ಕಾಸುಗಳ ತಂದುಕೊಂಡು,—ಅಯ್ಯೋ, ಈ ಎರಡಾಣೆಯ ರಾಗಿ ಮುಗಿದೊಡನೆ ಏನು ಮಾಡುತ್ತಯ್ಯ ಅನ್ನಲು—ಸ್ವಾಮಿ, ಯತ್ನವಿಲ್ಲ ಎಂತ ಆ ಬಡವನು ಅನ್ನುತ್ತಿರಲು, ಈ ಸಂಭಾಷಣೆಯನ್ನು ಕೇಳುತ್ತಿದ್ದ ಇತರರು ಆ ಬಡವನಿಗೆ ಎರಡಾಣೆ ಇಲ್ಲದ ದಾನ್ಯಕೊಟ್ಟು ಕಳುಹಿಸಿದರಂತೆ.

ಹೀಗೆ ಅಮಲ್ದಾರರು ಬಡವರಿಗೆ ತಂದೆಯಂತೆ ಕಾಣಿಸಿಕೊಂಡು ಅವರ ಕಷ್ಟನಿಷ್ಠುರಗಳಲ್ಲಿಯೂ ದಿನಗಳಲ್ಲಿಯೂ ಸಂತಾಪಪಡುತ್ತಾ ಒಮ್ಮೆ ಬೃಹತ್ತಾಗಿ ವಿಚಾರಿಸಿ, ಅವರ ಸಂಗತಿಗಳನ್ನು ಖುದ್ದು ತಿಳಿದವರಾದ್ದರಿಂದ ಮಾರನೆ ದಿವಸ ಮುನಿಸಿಪಲ್ ಮೀಟಿಂಗ್ ಮಾಡಿ, ಜನರ ಕಷ್ಟಗಳನ್ನು ಮೆಂಬರುಗಳಿಗೆ ತಿಳಿಸಿ,—ನೀವುಗಳು ಈ ಕಾಲದಲ್ಲಿ ಸ್ವಲ್ಪ ನಷ್ಟಪಟ್ಟರೂ ಚಿಂತೆಯಿಲ್ಲ, ಭಗವಂತನ ಕೃಪೆ ಹುಟ್ಟಿದರೆ ಶ್ರೀಮಂತರ ಕೃಪೆಗಳೂ, ನಮ್ಮ ಜೊತೆ ಪ್ರಜೆಗಳೂ ಈ ಬಡವರಿಗೆ ಸಹಾಯಮಾಡಿದರೆ ಈ ಕಾರ್ಯವು ನಷ್ಟವಾಗದು ಎಂದು ಹೃದಯಮಾಡಿ ವಿವರಿಸುತ್ತಾ, ಹಿಂದಿನ ದಿನದಲ್ಲಿ ನಡೆದ ವಿಷಯವೂ ವಿವರಿಸಿ ಕಣ್ಣಿನಲ್ಲಿ ನೀರು ತುಂಬಿಕೊಂಡಿರಲಾಗಿ, ಆ ದಯೆ ತುಂಬಿದ ಮುಖಭಾವವನ್ನು ನೋಡಿ ಧನ್ಯವಂತರಾದ ಮ॥ ಗಂಗೆ ಸಾಹುಕಾರ ರಂಗಯ್ಯನವರೂ, ಕೆಂಚಿ ಅಪ್ಪನವರೂ, ಆ. ನಂಜುಂಡಪ್ಪನವರೂ, ಕ. ಚಿಕ್ಕಣ್ಣನವರೂ, ಬುಡನ್ ಸಾಹೇಬರವರೂ ಮುಂತಾದ ಸಾಹುಕಾರರು ೧೦ ಸೇರು ರಾಗಿ ಸಾವ್ವಗಳು ಅಳೆಯುತ್ತೇವೆಂದು ಒಪ್ಪಿಕೊಂಡರು. ಹಾಲೂರು ತಾಲ್ಲೂಕಿನಲ್ಲಿ ನಡೆಯುವ ಶಾಲ್ಯಾರು ಸಂತೆಯಲ್ಲಿಯೂ, ಅದರಾಯ ಭಾಗದ ಪಟ್ಟಿಗಳು ತಾವೂ ೧೦। ಸೇರು ಅಳೆಯುತ್ತೇವೆಂದು ಹೇಳಿದರು. ಅಮಲ್ದಾರರು ಸಂತೋಷಚಿತ್ತರಾಗಿ ಮನೆಗೆ ತೆರಳಿದರಂತೆ. ಕೇಳುವ ಬಡವರಿಗೆ ಎಷ್ಟು ಸಂತೋಷವಾಗಿದ್ದಿರಬಹುದು? ಇದೀಗ ಪ್ರಜಾಪರನಾದವರಲ್ಲವೇ? ಬಡವರಲ್ಲಿ ಸೇರಿ ಅವರ ಕಷ್ಟಸ್ಥಿತಿಗಳನ್ನು ತಿಳಿಯುವದು ಅಧಿಕಾರಿಗಳಿಗೆ ಸರ್ವಥಾ ಅನುಸರಿಸಬೇಕಾದ ಕಾರ್ಯ. ಮನಸ್ಸಿದ್ದರೆ ಎಲ್ಲಾ ಸಾಧ್ಯ.

ಕಾಲಸ್ಥಿತಿ ಹೀಗಿರುವಾಗ ತಾಲ್ಲೂಕಿನ ಅಧಿಕಾರಿಗಳು ಪ್ರಜೆಗಳ ಸ್ಥಿತಿ, ಬೆಳೆ ಪರಿಸ್ಥಿತಿ ತಿಳಿದು, ಸಂದರ್ಭಾನುಸಾರ ಅವರ ಕಷ್ಟಗಳಲ್ಲಿ ಸಂತಾಪಪಡುತ್ತಾ, ತಮ್ಮಿಂದಾದಷ್ಟೂ ಸಹಾಯಮಾಡುತ್ತಾ, ತಮ್ಮಿಂದಾಗದ್ದಕ್ಕೆ ದಯಾಳುವಾದ ಗೌರ್ನಮೆಂಟಿಗೆ ಅರಿಕೆಮಾಡಿ, ಆ ಪರಿಯಲ್ಲಿಯಾದರೂ ಸರಕಾರದಿಂದ ಸಹಾಯಕ್ಕೆ ಏರ್ಪಾಡು ಮಾಡಿ, ಬಡಪ್ರಜೆಗಳನ್ನು ಪಾಲಿಸುವದು ಅವರ ಕರ್ತವ್ಯವಾಗಿರುತ್ತೆ. ಇದಕ್ಕಾಗಿಯೇ ಶ್ರೀಮನ್ಮಹಾರಾಜಾಬಹದ್ದೂರರವರು ತಮ್ಮ ಬದಲಿಗೆ ಚಿಕ್ಕ ಚಿಕ್ಕ ಅಧಿಕಾರಿಗಳನ್ನು ನೇಮಕಮಾಡಿ ಪ್ರಜೆಗಳ ಕುಂದುಕೊರತೆಗಳನ್ನು ತಮಗೆ ತಿಳಿಸಬೇಕೆಂದು ಕೋರುತ್ತಿರುವವರಾಗಿರಲು, ಕೆಲ ಅಧಿಕಾರಿಗಳು ಇಲ್ಲದ್ದನ್ನು ಕಾಲಸ್ಥಿತಿಯ ರಿಪೋರ್ಟುಗಳಲ್ಲಿ ಪ್ರಕಟಿಸಿ, ಪ್ರಜೆಗಳ ಕಷ್ಟವನ್ನು ದೊರೆಯ ದೃಷ್ಟಿಯಿಂದ ಮರೆಮಾಡುತ್ತಾರೆ. ಉದಾಹರಣೆಗಾಗಿ ಅಕ್ಟೋಬರ್ ೧ ನೇ ತಾ. ಗೆಜೆಟ್ ಕಾಲಸ್ಥಿತಿ ರಿಪೋರ್ಟು.—ಬೌರಿಂಗ್ ಪೇಟೆ ತಾಲ್ಲೂಕಿನಲ್ಲಿ ಸರಾಸರಿ ೧೬ ಅಂಗುಲ ಮಳೆ ಆಗಿರುತ್ತದೆ. ಪೈರುಗಳು ಚನ್ನಾಗಿವೆ. ಗುಡಿಬಂಡೆಯಲ್ಲಿ ಗಿಡ್ಡರಾಗಿ ಉತ್ಪತ್ತಿ ೧೭ ಆಣೆಯಷ್ಟಾಗಿದೆ. ನಿಡ್ಲಘಟ್ಟದಲ್ಲಿ ಹೊಸ ಉತ್ಪತ್ತಿ ೮ ಆಣೆಯಷ್ಟಾಗಿದೆ. ಹಾಸನ ಡಿ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಸಸಹರಾಯ ಚನ್ನಾಗಿದೆ. ರೈತರು ದನಗಳಿಗೆ ಕಬ್ಬಿನ ತೋಟದ ಹುಲ್ಲನ್ನು ಮುಂಗಾರಿನಲ್ಲಿ ಬೆಳೆದ ಜೋಳದ ಕಡ್ಡಿಯನ್ನೂ ಹಾಕಿ ಸಾಕುತ್ತಿದ್ದಾರೆ—ಇತ್ಯಾದಿ ಬರೆಯಲ್ಪಟ್ಟಿದೆ.

ಅಯ್ಯಾ ಎಡಿಟರವರೆ, ಇದೇನಾಶ್ಚರ್ಯ! ಕಬ್ಬಿನ ತೋಟದ ಮಧ್ಯ ಭಾಗದಲ್ಲಿ ಹುಲ್ಲು ಬೆಳೆಯುವದುಂಟೋ? ಹುಲ್ಲಿನ ಹುಟ್ಟಿದಗಿಡ ಬೇಕೆಂದು ರೈತನು ಬೆಳೆಗಿಯುತ್ತಿ ಮೂರು ತಿಂಗಳು ಉತ್ತು, ಹುಲ್ಲು ಇಲ್ಲವೇ ಇಲ್ಲದಂತೆ ನೀರು ತೀಟಿ ಕಬ್ಬು ನಾಟುತ್ತಾನೆ. ಹಾಗಾದರೆ ಹುಲ್ಲು ಬೆಳೆದದ್ದೆಲ್ಲಿ? ಒಂದು ವೇಳೆ ಬರುವದನ್ನು ಹೇಳಿದ್ದರೂ ಅದು ೧೦ ದನಗಳಿಗೆ ಎಷ್ಟು ದಿನಗಳ ತನಕ ಸಾಲುವದು? ಒಂದು ವಿಸಕ್ಕಾದರೆ ಹೆಚ್ಚಲ್ಲವೇ? ಒಳ್ಳೇದು, ತಾಲ್ಲೂಕಿನಲ್ಲಿ ಕಬ್ಬಿನ ಬೆಳೆ ಮಾಡಿದವರೆಷ್ಟು? ಗ್ರಾಮದ ರೈತರೆಲ್ಲರೂ ಕಬ್ಬು ಬೆಳೆ ಮಾಡಿದ್ದಾರೆಯೋ? ಎಲ್ಲರಿಗೂ ಹುಲ್ಲು ದೊರೆಯುತ್ತಿದೆಯೋ? ಮತ್ತು ೧೬—೧೬ ಆಣೆಯಷ್ಟು ಗಿಡ್ಡರಾಗಿ ಬೌರಿಂಗಪೇಟೆ, ಗುಡಿಬಂಡೆ ತಾಲ್ಲೂಕು ಗಳ ಒಂದೊಂದು ಗ್ರಾಮದಲ್ಲಿಯೂ ಆಗಿದೆಯೋ? ಅಲ್ಲಿಯ ಚಂದಾದಾರರು ವಾಚಕರು ಪತ್ರಿಕೆಯಲ್ಲಿ ಬರೆದು ತಿಳಿಸಿದರೆ ತುಂಬಾ ಉಪಕಾರ.

ರೈತರಿಲ್ಲರು ಗಿಡ್ಡರಾಗಿ ಬೆಳೆದಿರುತ್ತಾರೆಯೋ? ಹೀಗಿದ್ದರೆ ೯ ಸೇರು ರಾಗಿ ಮಾರುವದಕ್ಕೂ ಕೊಳ್ಳುವದಕ್ಕೂ ಕಾರಣವೇನು? ಅಯ್ಯೋ, ಇಂಥಾ ರಿಪೋರ್ಟುಗಳಿಂದ ಪ್ರಜೆಗಳಿಗಿರುವ ಕಷ್ಟದ ನಿಜಸ್ಥಿತಿಯನ್ನು ನಮ್ಮ ಮಹಾರಾಜರವರ ಗಮನಕ್ಕೆ ಮರೆಮಾಚಿದಂತಾಗಲಿಲ್ಲವೇ? ಕಬ್ಬಿನ ತೋಟದ ಹುಲ್ಲು ಮೇಯುತ್ತಿರುವುದು ರಿಪೋರ್ಟು ಕೊಟ್ಟಿರುವದನ್ನು ನೋಡಿದರೆ, ಎಂದೂ ಹಿಂದೂದೇಶದಲ್ಲಿ ಬೆಳೆಯುವ ರಾಗಿ, ಭತ್ತದ ಪೈರಿನ ವಿಷಯ ತಿಳಿಯದ ಇಂಗ್ಲಾಂಡಿನಲ್ಲಿರುವ ಒಬ್ಬ ಮುದುಕಿ ದೊರೆಸಾನಿಯು ನಿಗ ಇಂಡಿಯಾ ದೇಶದಲ್ಲಿ (ಮೈಸೂರು) ರಾಗಿ ಮರಗಳನ್ನೂ ಭತ್ತದ ಮರಗಳನ್ನೂ ಕೊಡಲಿಯಿಂದ ಕಡಿದು ಭತ್ತ ರಾಗಿ ಯನ್ನು ಉಪಯೋಗಿಸುತ್ತಾರೆಂದು ಬರೆದು ತಿಳಿಸಿದಂತಿರುವದಿಲ್ಲವೇ?

ಅದಕ್ಕೆಂತಲೂ ಎರಡು ವರುಷಗಳಿಂದಲೂ ಕೆರೆಗಳಲ್ಲಿ ನೀರಿಲ್ಲ. ಕೆರೆಗಳ ಪೈರು ಒಣಗಿ ದನಗಳು ಬೆಳೆದಿವೆ. ತರಿ ಸಾಗುವಳಿ ಇಲ್ಲವೇ ಇಲ್ಲ. ಗೋಮಾಳ ಒಣಗಿಹೋಗಿವೆ. ಪ್ರಜೆಗಳು ಆಹಾರಕ್ಕೆ ಶ್ರಮಪಡುತ್ತಾರೆ. ರಿಲೀಫ್ ಕೆಲಸಗಳ ಸಹಾಯವನ್ನು ಮಾಡುವದು ಯುಕ್ತವಾಗಿ ತೋರುತ್ತೆ ಎಂದು ತಾಲ್ಲೂಕ್ ಅಧಿಕಾರಿಗಳು ಪ್ರಜೆಗಳ ಪರವಾಗಿ ನಿಂತು ನಿಷ್ಪಕ್ಷಪಾತವಾದ ಕಾಲಸ್ಥಿತಿಯ ರಿಪೋರ್ಟು ಮಾಡುವದು ಯುಕ್ತವಾಗಿರುವಲ್ಲಿ, ಇಂಥಾ ರಿಪೋರ್ಟುಗಳಿಂದ ಪ್ರಜೆಗಳಿಗಾಗುವ ಪ್ರಯೋಜನವೇನು? ಮತ್ತು ಪ್ರಜೆಗಳ ಕಷ್ಟಸ್ಥಿತಿ ಗೌರ್ನಮೆಂಟಿಗೆ ಸರಿಯಾಗಿ ತಿಳಿಯದಂತಾಗುವದೇ? ದಯಾಳು ಗೌರ್ನಮೆಂಟಿನವರು ಬಹಳ ವಿಶಿಷ್ಟ ತರಿ ಕಂದಾಯ ರಿಮಾರ್ಕ್ ಮಾಡಬೇಕಾಗಿರುವಲ್ಲಿ, ಈ ಸ್ಥಿತಿಯನ್ನು ಕಾಲಸ್ಥಿತಿಯ ರಿಪೋರ್ಟಿನಲ್ಲಿ ಕಾಣಿಸಲಿಲ್ಲವಲ್ಲಾ? ಕಾರಣವೇನು? ಬಡರೈತರನ್ನು ಉದಾಸೀನ ಮಾಡುವದು ಯಾವ ಧರ್ಮ? ರೈತನ ಕೈಕಷ್ಟಕ್ಕೆ ದೊರಕ್ಕೆ ದೇಶವೇ ಕಾದಿರುವದಿಲ್ಲವೇ? ಅವನ ಗದ್ದೆ ಹೊಲ ಕೆಟ್ಟರೆ ರಾಜ್ಯಕ್ಕೆ ರಾಜ್ಯವೇ ದಿವಾಳಿಯಾಗುವದಲ್ಲ? ಇರುವ ಎಂಬತ್ತು ಕೋಟಿ ಜೀವರಾಸಿಗಳೂ ರೈತನಿಂದ ಜೀವಿಸುವದೆಂದು ಒರಟು ಗಾದೆ ಇದ್ದಾಗ್ಯೂ ಬಹು ಮಟ್ಟಿಗೆ ಇದು ಸತ್ಯವಾಗಿದೆ. ನಮ್ಮ ಘನವನ್ನೈದ ಶ್ರೀಮನ್ಮಹಾರಾಜರವರ ಶ್ರೇಯಸ್ಸು ಹೆಚ್ಚಿ ಬರುವದಾಗೂ, ದೇಶೋನ್ನತಿಗೆ ಆಕರವಾಗುವಂತೆಯೂ ಬಡ ಪ್ರಜೆಗಳ ಕಷ್ಟನಿಷ್ಠುರಗಳಲ್ಲಿ ಸೇರಿ ಸಮಸ್ತರೂ ಭಾಗಿಗಳಾಗಿ ನಿಜಸ್ಥಿತಿಯಲ್ಲಿ ರೈತರನ್ನು ಕಾಯುತ್ತಾ ಚಿಂತಾಮಣಿಯ ಕಾಲಸ್ಥಿತಿಯ ನಿರ್ಣಯವನ್ನನುಸರಿಸುವವರಾದರೆ, ನಮ್ಮ ಘನವನ್ನೈದ ಶ್ರೀಮನ್ಮಹಾರಾಜರವರ ಕೀರ್ತಿಯು ಸಮಸ್ತ ಲೋಕದಲ್ಲಿ ಮತ್ತಷ್ಟು ವಿಸ್ತರಿಸುವಂತೆ ಆಗುವದು.

ಚಿಂತಾಮಣಿ. ಪ್ರಜಾ ಹಿತಚಿಂತಕ.

ತಾಲ್ಲೂಕು ವರ್ತಮಾನಗಳು.

ದೇವನಹಳ್ಳಿ.—ಇಲ್ಲಿ ಸುಮಾರು ಒಂದು ತಿಂಗಳ ಲಾಗಾಯಿತು ಮಳೆ ಇಲ್ಲವದ್ದರಿಂದ ಪೈರುಗಳೆಲ್ಲಾ ಒಣಗಿ ಸೊರಗಿ ಹೋಗಿದ್ದವು. ಇಂಥಾ ಕಷ್ಟಕಾಲದಲ್ಲಿ ಪೇಟೆ ಧಾರಣೆಗಳು. ರಾಗಿ ರೂಪಾಯಿಗೆ ೯ ಸೇರು, ಅಕ್ಕಿ ೫ ಸೇರು ಮಾರಲಿಕ್ಕೆ ಶುರು ಆಗಿ, ಅದು ಕೂಡ ಸರಿಯಾಗಿ ಸಿಕ್ಕದೆ ಬಡ ಪ್ರಜೆಗಳು ತುಂಬಾ ಪ್ರಯಾಸ ಪಡುತ್ತಿದ್ದರು. ಇದರಲ್ಲಿಯೂ ಸಂತೆಗಳಲ್ಲಿ ವರ್ತಕರು ಕಮ್ಮಿ ಸೇರು, ನಾಣ್ಯಗಳನ್ನು ಇಟ್ಟು ಮಾರುವುದು ನೋಡಿದರೆ ಸ್ಥಳಾಧಿಕಾರಿಗಳ ಗಮನವು ಈ ಕಡೆ ಬೀಳುವುದಿಲ್ಲವೆಂಬುದು ವ್ಯಕ್ತವಾಗುತ್ತೆ. ಇಂಥಾ ಕಾಲದಲ್ಲಿ ಐಶ್ವರ್ಯವಂತರು ಬಡಬಗ್ಗರಿಗೆ ಸಹಾಯಮಾಡಿ ಧರ್ಮಸಂಪಾದನೆ ಮಾಡುವುದರಲ್ಲಿ ತುಂಬಾ ಗುಣ ಉಂಟು. ಹಾಗೆ ಮಾಡಿ ಘನತೆ ಪಡೆದವರಲ್ಲಿ ಈ ಊರಿನ ಮೆ। ಎಲ್. ಗೋಪಾಲಪ್ಪನವರ ಮಕ್ಕಳು ಕೃಷ್ಣಪ್ಪನವರು ಬೇಕಾದಷ್ಟು ರಾಗಿಯನ್ನು ತರಿಸಿ ರೂಪಾಯಿಗೆ ೧೨ ಸೇರಿನಂತೆ ಮಾರಿಸುತ್ತಾ, ಬಡವರ ಕಷ್ಟವನ್ನು ಸ್ವಲ್ಪ ಮಟ್ಟಿಗೆ ತಪ್ಪಿಸಿ, ತುಂಬಾ ಸಹಾಯ ಮಾಡಿರುತ್ತಾರೆ. ಇವರ ದಯಾಗುಣವನ್ನು ನೋಡಿ ಇಲ್ಲಿನ ಅಮಲ್ದಾರ್ರು ವಗೈರೆಯೂ ಪ್ರಜೆಗಳೂ ತುಂಬಾ ಸಂತೋಷ ಪಟ್ಟಿರುತ್ತಾರೆ.—ಈಚೆಗೆ ಸ್ವಲ್ಪ ಮಟ್ಟಿಗೆ ಜಡಿಮಳೆ ೩—೪ ದಿನದಿಂದ ಶುರುವಾಗಿ ಕಳೆದುಳಿದ ರಾಗಿ ಪೈರು ಸ್ವಲ್ಪ ಬಣ್ಣಕ್ಕೆ ಬಂದಿರುತ್ತೆ. ಕೆರೆಗಳಿಗೆ ನೀರು ಬಾರದ್ದರಿಂದ ತರಿ ಫಸಲು ದುರ್ಭಿಕ್ಷವಾಗಿ ತೋರುತ್ತದೆ.

ದೊಡ್ಡಬಳ್ಳಾಪುರ.—ಇಲ್ಲಿ ಪ್ಲೇಗಿನ ಗಲಾಟೆಯಿಂದ ಸುಮಾರು ಅರ್ಧ ಜನರು ಊರು ಬಿಟ್ಟಿರು. ಇದುವರಿಗೆ ಸುಮಾರು ೧೦-೧೧ ಜನರು ಸತ್ತರು. ಇನ್ನೂ ಇಬ್ಬರು ಕಾಯಿಲೆಯಾಗಿದಾರೆ. ಉಪಾಧ್ಯಾಯರು ಸ್ಕೂಲ್ ಬಾಗಲುಗಳನ್ನು ಸುಮ್ಮನೆ ತೆರೆದುಕೊಂಡಿದ್ದಾರೆ. ಜೋಪಡಿಗಳಲ್ಲಿರುವ ಜನರಿಗೆ ನೀರಿಗೆ ಕಷ್ಟವಾಗಿದೆ. ಇದ್ದ ಜಲವೆಲ್ಲಾ ಮುಗಿದು ಚಂಬುಗಳಲ್ಲಿ ಸೇದಬೇಕು. ೫-೬ ದಿವಸದಿಂದ ತುಂತುರು ಮಳೆ ಬಿಡದು ಇದೆ. ಇಷ್ಟು ಮಾತ್ರ ಬಂದಷ್ಟು. ದಿನಸಿಗಳ ಕ್ರಯವು ತುಂಬಾ ಪ್ರಿಯವಾಗಿದೆ. ಬಡ ಜನರೂ ಅಲ್ಪ ಸಂಬಳದ ನೌಕರರೂ ಜೀವಿಸುವದು ತುಂಬಾ ಕಷ್ಟ. ಅಕ್ಕಿ ರೂಪಾಯಿಗೆ ೫-೫॥ ಸೇರೂ, ರಾಗಿ ೧೧ ಸೇರೂ ಮಾರುತ್ತಾರೆ. ಚಿಲ್ಲರೆಯಾಗಿ ಜನರಿಗೆ ರಾಗಿ ಸಿಕ್ಕುವದೇ ಕಷ್ಟ. ಇಂಥಾ ಕಾಲದಲ್ಲಿ ಮೆ। ರುದ್ರಪ್ಪನವರು ೨೨ನೇ ತಾ. ಬಡ ಜನರಿಗೆ ರಾಗಿಯನ್ನು ಧರ್ಮವಾಗಿ ಕೊಟ್ಟರು. ಆ ದಿನ ಈ ಜನರ ಗುಂಪು ಸಂತೆಯ ಹಾಗೆ ಸೇರಿತ್ತು. ಇವರ ಧರ್ಮಗುಣವನ್ನು ಅನೇಕರು ಕೊಂಡಾಡಿದರು. ಇನ್ನು ಕೆಲವು ಸಾಹುಕಾರರು ಇದೇ ರೀತಿ ಮಾಡುತ್ತಾರೆಂದು ಕೇಳುತ್ತೇವೆ. ಇಂಥಾ ಕಷ್ಟಕಾಲದಲ್ಲಿ ನಮ್ಮ ಅಮಲ್ದಾರ್ರು, ಡಾಕ್ಟರು, ಪೋಲೀಸ್ ಆಫೀಸರು ಜನರನ್ನು ಧೈರ್ಯಪಡಿಸುತ್ತಾ ಇದ್ದಾರೆ. ಬಡವರಾದವರಿಗೆ ಸ್ವಲ್ಪ ಸಿರೀಧಿಗೆ ಚೂರು, ಗಳಗಳನ್ನು ಅಮಲ್ದಾರರು ಕೊಡಿಸುತ್ತಾರೆ. ಪ್ಲೇಗನ್ನು ನನ್ನು ಸಾಗಹಾಕಬೇಕೆಂದು ಒಂದು ಮೇಕೆಯನ್ನು ಹಿಡಿದು ಊರಲ್ಲಿ ಮೆರವಣಿಗೆ ಮಾಡಿಸಿ ಸ್ವಲ್ಪ ದುಡ್ಡನ್ನು ಅದರ ಕತ್ತಿನಲ್ಲಿ ಕಟ್ಟಿ ಕಾಡಿಗೆ ಸಾಗಿಸಿದರು. ಅದರ ದುಡ್ಡನ್ನು ಯಾರೋ ತೆಗೆದುಕೊಂಡು, ಮೇಕೆಯನ್ನು ಊರಿನ ಹತ್ತಿರ ಕಟ್ಟಿದ್ದರು. ಅದು ಊರಿಗೆ ಬಂದದ್ದು ಒಳ್ಳೇದಲ್ಲವೆಂದು ಜನರು ಗಾಬರಿಪಟ್ಟರು. ೧೦-೧೧ ದಿನಗಳ ವರಿಗೆ ಕ್ಷಾಂಪುಕಹ ಬಂದಿದೆ.

ಚಿತ್ರದುರ್ಗ.—ತಾ. ೨೮ ರಿಂದ ೨೬ ತಾರೀಖುಗಳಲ್ಲಿ ಇಲ್ಲಿ ಬಹಳ ಮೋಡ ಕವಿದು ಸೋನೆ, ತುಂತುರು ತಂಗಾಳಿ ಶುರುವಾಗಿ ಹವ ಬಹಳ ಥಂಡಿಯಾಗಿದೆ. ಮಳೆ ಮಾತ್ರ ಇನ್ನು ಬಂದಿಲ್ಲ. ಕಳೆದ ೧೯ನೇ ತಾರೀಖಿನ ಸಂತೆಯಲ್ಲಿ ಬಳರಿಗಾಗಿ ರಾಗಿ ತಂದಿದ್ದವರು ೧೦—೧೧ ಸೇರು ರೂಪಾಯಿ ಒಂದಕ್ಕೆ ಕೊಡುತ್ತೇವೆಯೇ ಹೊರತು ಜಾಸ್ತಿ ಮಾರಲಿಕ್ಕಾಗುವದಿಲ್ಲವೆಂದು ಮುಷ್ಕರ ಹಿಡಿದಿದ್ದ ಮೇಲೆ ಇಲ್ಲಿನ ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರ್ ಮೆ। ನಾರಣ್ಯಯ್ಯರ್ ಯವರು ಬಂದು ವರ್ತಕರಿಗೆ ತಕ್ಕ ಬುದ್ಧಿ ಹೇಳಿ ಒಡಂಬಡಿಸಿ ರೂಪಾಯಿಗೆ ೧೩-೧೪ ಸೇರು ಮಾರುವ ಹಾಗೆ ಗೊತ್ತುಮಾಡಿದರು. ಅಧಿಕಾರಿಗಳ ಸಂಚಾರವು ಹೀಗೆ ಆಗಾಗ್ಯೆ ಸಂತೆಯಲ್ಲಿ ಸುಳಿದಾಡುತ್ತಾ ಇದ್ದರೆ ದುಷ್ಟರಿಗೆ ಭೀತಿಯೂ ಪ್ರಜಾಕ್ಷೇಮವೂ ಉಂಟು.—ಇಲ್ಲಿನ ಆರ್ಯ ಸ್ಟುಡೆಂಟ್ಸ್ ಹೋಮಿನ ಮ್ಯಾನೇಜರ್ ಹನುಮಂತರಾಜು ಯವರಿಗೆ ಪುತ್ರಜನನವಾದ ನಾಮಕರಣಕ್ಕೆ ಮೊನ್ನೆ ೨೩ನೇ ತಾ. ಸಾಯಂಕಾಲ ೭ ಘಂಟೆಗೆ ಸದರಿ ಸ್ಟೂಡೆಂಟ್ಸ್ ಹೋಮಿನಲ್ಲಿ ಒಂದು ಸಭೆಯು ಜರುಗಿತು. ಈ ಉತ್ಸವಕ್ಕೆ ಎಲ್ಲಾ ಮತಸ್ಥರೂ ಬಂದಿದ್ದರು. ಹೈಸ್ಕೂಲು ಸಂಸ್ಕೃತ ಪಂಡಿತರಾದ ಮೆ॥ ಅನಂತಕೃಷ್ಣಮಾಚಾರ್ರು ಅಧ್ಯಕ್ಷರಾದ ನಂತರ ಮೆ। ಹನುಮಂತರಾಜು ಯವರು ಎದ್ದು ನಿಂತು—ನಾನು ಒಬ್ಬ ಬಡ ಸ್ಕೂಲ್ ಮಾಸ್ಟರಾಗಿ ರೆಡ್ಡಿ ಜನರ ಮಕ್ಕಳ ವಿದ್ಯಾವರ್ಧನೆಗೋಸ್ಕರವಾಗಿ ಈ ಹೋಮನ್ನು ಸ್ಥಾಪಿಸಿ ನಡಸುತ್ತಾ ಇರುವದು ತಮ್ಮಗಳಿಗೆ ಗೊತ್ತೇ ಇದೆ. ದೇವರು ನನ್ನ ಪ್ರಯತ್ನವನ್ನು ಬಹಳ ಕೃಪೆಯಿಂದ ನಡಿಸುತ್ತಾ ಇರುವ ಹಲ್ಲದೆ ತಮ್ಮಗಳ ಮಧ್ಯೆ ಈ ಸಣ್ಣ ಶಿಶುವನ್ನು ನನಗೆ ಅನುಗ್ರಹಿಸಿರುವನು. ಇದಕ್ಕೆ ತಕ್ಕ ಹೆಸರಿನಿಂದ ನಾಮಕರಣ ಮಾಡಬೇಕಾಗಿ ತಮ್ಮಗಳ ಆಗಮನವನ್ನು ನಾನು ಕೋರಿದೆನು ಎಂದು ಮುಂತಾಗಿ ಉಪನ್ಯಾಸ ಮಾಡಿದರು. ಅನಂತರ ಮೆ॥ ಸಿ. ಕೃಷ್ಣರಾಯರು—ವಿದ್ಯೆಯಲ್ಲಿ ಹಿಂದೆ ಬಿದ್ದಿರತಕ್ಕ ಜನಗಳಿಗೆ ಜಾತಿಭೇದವೆಣಿಸದೆ ಸಹಾಯಮಾಡತಕ್ಕವರೇ ಸತ್ಪುರುಷರು. ಅಂಥಾ ಕಾರ್ಯವನ್ನು ಮೆ॥ ಹನುಮಂತರಾಜು ಯವರು ಪ್ರಾರಂಭಮಾಡಿದಲ್ಲಿ ದೇವರ ಪ್ರೀತಿಯುಂಟಾಗಿ ಈ ಕೂಸು ಜನ್ಮಿಸಿರುವದರಿಂದ ಅದಕ್ಕೆ ವೇದಮೂರ್ತಿ ಎಂತ ಹೆಸರು ಇಡುವದು ಸರಿಯಾಗಿದೆ ಎಂತ ಹೇಳಿದರು. ಕಡೆಗೆ ಅದನ್ನೇ ಸಭಿಕರೂ ಅಧ್ಯಾಸನಾಧಿಪತಿಗಳೂ ಒಪ್ಪಿ, ಆ ಶಿಶುವನ್ನು ಅದರ ಮಾತಾಪಿತೃಗಳನ್ನು ಆಯುರಾರೋಗ್ಯ ಸಂಪತ್ತುಗಳನ್ನು ಕೊಟ್ಟು ಆಶೀರ್ವದಿಸಲಿ ಎಂದು ಪ್ರಾರ್ಥಿಸಿ, ಸಭೆಯನ್ನು ಮುಕ್ತಾಯಮಾಡಿದರು.

ಹುಣಸೂರು.—ಮಳೆ ಇಲ್ಲದೆ ಇಲ್ಲಿನ ಪ್ರಜೆಗಳು ತುಂಬಾ ಚಿಂತೆಯಲ್ಲಿ ಮುಳುಗಿಹೋಗಿದ್ದರು. ಧಾರಣೆಗಳೆಲ್ಲಾ ಬಹು ಏರಿಹೋಗಿ ಅಕ್ಕಿ ರೂಪಾಯಿಗೆ ೫—೫॥। ಸೇರು, ರಾಗಿ ೧೪—೧೬ ಸೇರು, ತೊಗರಿಬೇಳೆ ೫—೫॥ ಸೇರು ಆಗಿರುತ್ತದೆ. ಆದರೆ ಈ ತಿಂಗಳ ಪ್ರಾರಂಭದಲ್ಲಿ ಒಳ್ಳೇ ಮಳೆಯಾದದ್ದಲ್ಲದೆ, ಈಗ ಒಂದು ವಾರದಿಂದಲೂ ಬಿಡದೆ ಪ್ರತಿದಿನವೂ ಮಳೆ ಸುರಿಯುತ್ತಾ ಇದ್ದಾಗ್ಯೂ ಧಾರಣೆ ಮಾತ್ರ ಇನ್ನೂ ಇಳಿತರವಾಗಲಿಲ್ಲ. ಗರೀಬರು ಜೀವಿಸುವದು ತುಂಬಾ ಕಷ್ಟವಾಗಿದೆ. ಹಣ ಸಂಪಾದಿಸುವದಕ್ಕೆ ಇದೇ ಸಮಯವೆಂದು ವರ್ತಕರು ದಿನಸಿಯನ್ನು ಜಾಸ್ತಿ ಕಡಗೆ ಭರ್ತಿಮಾಡುತ್ತಾ ಇದ್ದಾರೆ.—ಈ ಊರಿಗೆ ಸುಮಾರು ಎರಡು ಮೈಲಿ ದೂರದಲ್ಲಿರುವ ಬಿಳಿಕೆರೆ ಗ್ರಾಮದಲ್ಲಿ ಇಲಿಗಳು ಸಾಯುತ್ತಾ ಇದೆಯಂತಲೂ, ಎರಡು ಮೂರು ಮರಣಗಳು ಸಹ ಆದವೆಂತಲೂ ವರ್ತಮಾನ, ಆದ್ದರಿಂದ ನಮ್ಮ ಅಮಲ್ದಾರರು ವಿಶೇಷವಾಗಿ ೯ ಕಾಲದಲ್ಲಿ ಟೌನ್ ಶಾಸಕ ವಿಷಯದಲ್ಲಿ ನಿಗಾ ಕೊಡುವರೆಂದು ನಂಬುತ್ತೇನೆ. ಈಗ್ಗೆ ಒಂದು ತಿಂಗಳ ಕೆಳಗೆ ನಮ್ಮ ಅಮಲ್ದಾರರ ಮತ್ತು ಅನೇಕ ದೊಡ್ಡ ಮನುಷ್ಯರ ಕೋರಿಕೆಯಂತೆ ಮೈಸೂರಿಂದ ಡಾಕ್ಟರು ಇಲ್ಲಿಗೆ ಬಂದು ಅನೇಕರಿಗೆ ಇನಾಕ್ಯುಲೇಷನ್ ಮಾಡಿದರು. ಇನ್ನೂ ಅನೇಕರು ಪ್ಲೇಗ್ ಶಿಬಿರ ಹಾಕಿಸಿಕೊಳ್ಳದೆ ಇರುತ್ತಾರೆ. ಅಂಥವರು ಸಹ ಇನಾಕ್ಯುಲೇಷನ್ ಮಾಡಿಸಿಕೊಂಡರೆ ಉತ್ತಮವಾಗಿರುವದು.—ಇಲ್ಲಿರುವ ಮ್ಯುನಿಸಿಪಲ್ ಲಾಂದ್ರಗಳಲ್ಲಿ ಕೆಲವು ಮಾತ್ರ ಬೆಳಕು ಕೊಡುತ್ತವೆ. ಬಾಕಿ ಲಾಂದ್ರಗಳು ಏನಾದವೋ ತಿಳಿಯದು. ಈ ವಿಷಯದಲ್ಲಿ ಮೇಲ್ಪಟ್ಟ ಅಧಿಕಾರಿಗಳು ನಿಗಾ ಕೊಡುವರೆಂದು ನಂಬುತ್ತೇನೆ. ಟೌನಿನಲ್ಲಿ ಅಲ್ಲಲ್ಲಿ ಕಳ್ಳತನ ಶುರುವಾಗಿರುವ ಹಾಗೆ ಪ್ರಚಾರವಾಗಿದೆ. ಮ್ಯುನಿಸಿಪಲ್ ಲಾಂದ್ರಗಳು ಕೆಲವು ಸ್ಥಳಗಳಲ್ಲಿ ಪ್ರಕಾಶಿಸದೆ ಇರುವದರಿಂದಲೂ ಕೆಲವು ಸ್ಥಳಗಳಲ್ಲಿ ಲಾಂದ್ರಗಳು ಇಲ್ಲದಿರುವದರಿಂದಲೂ ಕಳ್ಳರಿಗೆ ಅನುಕೂಲವಾಗಿರಬಹುದು.—ಇದೇ ತಿಂಗಳು ೨೨ನೇ ತಾ. ಗುರುವಾರ ಬೆಳಗ್ಗೆ ಮದ್ರಾಸ್ ಭೂಪನ್‌ರವರು ಮೋಟಾರ್ ಗಾಡಿಯಲ್ಲಿ ಇಲ್ಲಿಗೆ ಬಂದು ಮೆ॥ ಹನುಮಯ್ಯರ ಬಂಗ್ಲೆಯಲ್ಲಿ ಇಳಿದು, ಭೋಜನ ತೀರಿಸಿಕೊಂಡು, ೧೧ ಘಂಟೆಗೆ ಮಡಕೇರಿ ಕಡೆ ಪ್ರಯಾಣ ಬೆಳಸಿದರು.—ಹುಣಸೂರು ಟೌನಿನಲ್ಲಿ ಮೆ। ಅರುಣಾಚಲಂ ಪಿಳ್ಳೆಯವರು ಒಂದು ನಾಟಕದ ಕಂಪನಿಯನ್ನೂ, ಮೆ॥ ದಾದಾಪೀರ್ ಸಾಹೇಬರು ಒಂದು ನಾಟಕದ ಕಂಪನಿಯನ್ನೂ ಹೊಸದಾಗಿ ಏರ್ಪಡಿಸಿ ಟಿಕೆಟ್ ಇಲ್ಲದೆ ಆಟವಾಡುತ್ತಾ ಜನರನ್ನು ಸಂತೋಷಪಡಿಸುತ್ತಿದಾರೆ. ಮುಂದೆ ಇವು ತುಂಬಾ ಅಭಿವೃದ್ಧಿ ಸ್ಥಿತಿಗೆ ಬಂದೀತೆಂದು ನಂಬುತ್ತೇನೆ.

ಸ್ವಸ್ಥವಾಗುವ್ರದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರವ್ನುವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬೆಳುಪಾಗಿಯೋ ಆಯುವುದು; ಬಿಡದ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣು ಮೊಬ್ಬು; ತಲೆ ತಿರುಗುವಿಕೆ; ಮೈನೋವು ಕೀಲುನೋವು; ನವೆವು; ನಿತ್ರಾಣ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋದ್ರವ, ವಾಯು, ಮೈಬಾವು, ಉದುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ತಪ್ಪಾಗಿ ಎಣಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-9]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಹೋಲ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ.—ಇವರಲ್ಲಿ ದೊರೆಯುವುದು.

ಲಾ ಪ್ರಕಟನೆಗಳು.

ವ್ಯವಹಾರಸಿದ್ಧಾಂತಯ—ಘಟಗಳು ೫೪೫. ಹಿಂದೂ ಮಹಮದೀಯರ ಲಾಗಳು, ೨೯ ಬಾಷಾಸುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ. ಪಿ. ಸೇರಿ ೧ ರೂ. ೧೨ ಆಣೆ. [40-27]

ಕನ್ನಡ ಲಾ ರಿಪೋರ್ಟ್—ಪ್ರಿವಿ ಕೌನ್ಸಿಲ್, ಹೈ ಕೋರ್ಟ್, ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ರೂ. ೧—೦—೦ ಮುಂಗಡ, ಯಾ, ವಿ. ಪಿ. ಬಿಡಿಪತ್ರಿಕೆ ೧ ಕ್ಕೆ ೦—೩—೦

ಇವುಗಳನ್ನಪೇಕ್ಷಿಸುವವರು—ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, (೯೦) ೨ ನೇ ರೋಡ್, ಚಾಮರಾಜ ಪೇಟೆ, ಬೆಂಗಳೂರು ಸಿಟಿ.—ಈ ವಿಳಾಸಕ್ಕೆ ಬರೆಯುವುದು.

ನೆತ್ತಿಹತ್ತಿದ ಶೀತದಿಂದ ಮೂಗಿನಲ್ಲಿ ಹರಿಯುವದು. ಇದೇ ಪ್ರಪಂಚದಲ್ಲೆಲ್ಲಾ ರೋಗಕ್ಕೆ ಮೂಲಕಾರಣವು. ಇದಕ್ಕೆ ಪೆ-ರೂ-ನಾ ಸರ್ವಶ್ರೇಷ್ಠವಾದ ಪರಿಹಾರ.

[34-31]

ಉಷ್ಣದ ನೀರು ಹರಿಯುವ ನೆತ್ತಿ ಹತ್ತಿದ ಶೀತ ನೆಗಡಿ.	ಶೀತದ ನೀರು ಹರಿಯುವ ನೆತ್ತಿ ಹತ್ತಿದ ಶೀತ ನೆಗಡಿ
ಇದು ಅನ್ನಕೋಶ, ಮಲಕೋಶ, ದೊಡ್ಡ ಸಣ್ಣ ಕರುಳುಗಳು, ಕುಂಡಿಯ ಕೋಶಗಳು, ಇವೆಲ್ಲಾ ವ್ಯಾಪನೆಯಾಗುತ್ತದೆ	ಇದು ನೆತ್ತಿ, ಗಂಟಲು, ಶ್ವಾಸಕೋಶ, ಶ್ವಾಸನಾಳಗಳು ಇವಕ್ಕೆಲ್ಲಾ ವ್ಯಾಪಿಸಿಕೊಳ್ಳುತ್ತದೆ.

ನೆತ್ತಿಹತ್ತಿದ ಶೀತ ಅಥವಾ ಉಷ್ಣದ ನೆಗಡಿಯಿಂದ ಮೂಗಿನಲ್ಲಿ ನೀರು ಹರಿಯುವದು ಮಹಾ ಕಠಿಣತರವಾದ ವ್ಯಾಧಿಯೆಂದು ಪ್ರಪಂಚದಲ್ಲಿ ಸಮಸ್ತ ಜನರಿಗೂ ತಿಳಿದೇ ಇರುತ್ತದೆ ಅಮೇರಿಕ ಖಂಡಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳೆಂಬ ಒಂದು ರಾಜ್ಯದೊಳಗೇನೇ ಪ್ರತಿ ವರುಷವೂ ಎರಡು ಲಕ್ಷ ಪ್ರಜೆಗಳು ಈ ರೋಗಕ್ಕೆ ಸಿಕ್ಕಿ ನರಳುತ್ತಾ ಇದ್ದಾರೆ ಹೀಗಿರುವಲ್ಲಿ ಇತರ ದೇಶಗಳೊಳಗೆ ಈ ರೋಗದಲ್ಲಿ ಬಿದ್ದು ಕಷ್ಟಪಡುವಂಥಾವರ ಸಂಖ್ಯೆಯು ಸರಾಸರಿ ನೋಡಿದರೆ ಅಷ್ಟು ಹೆಚ್ಚಾಗಿಯೇ ಇರಬೇಕೆಂದು ಹೇಳಲು ಸಂದೇಹವಿಲ್ಲ

ಈ ನೆತ್ತಿಹಿಡಿದ ಶೀತ ಅಥವಾ ಉಷ್ಣದ ನೀರು ಸುರಿಯುವಂಥಾ ರೋಗಕ್ಕೆ ಪೆ-ರೂ-ನಾ ಎಂಬೀ ಔಷಧವೇ ಸರ್ವಶ್ರೇಷ್ಠವಾದದ್ದೆಂದೂ, ಇದು ಇತರ ಔಷಧಗಳಿಗಿಂತ ಮೊದಲನೆಯ ಸ್ಥಾನವನ್ನು ಪಡೆದಿರುವಂಥದ್ದೆಂದೂ ಅನೇಕ ವರುಷಗಳಿಂದಲೂ ಅನುಭವಕ್ಕೆ ಬಂದಿರುತ್ತದೆ

ಪೆ-ರೂ-ನಾ ಎಂಬೀ ಔಷಧವು ಪ್ರಪಂಚದ ಪಶ್ಚಿಮಾರ್ಧ ಮತ್ತು ಪೂರ್ವಾರ್ಧಗೋಳಗಳಲ್ಲೆಲ್ಲಾ ಬಹು ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಪಡೆದಿರುತ್ತದೆ

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದ್ದು ಇವರಿಂದಲೇ ತಿಳಿಯಬಹುದು

ವಿಳಾಸ.—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ :—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

2—10—1908 ರಿಂದ 9—10—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	7	7	0	0
ಮೈಸೂರು ,,	1	1	0	0
ಬೆಂಗಳೂರು ಡಿಸ್ಟ್ರಿಕ್ಟು	8	7	0	0
ಮೈಸೂರು ,		4	0	0
ಕೋಲಾರ್ ,,	1	10	10	9
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	23	21	20	7
ಹಾಸನ ,	4	3	14	11
ಚಿತ್ರದುರ್ಗ ,,	0	0	7	6
ಕಡೂರ್ ,	14	25	*	*
ಶಿವಮೊಗ್ಗ	*	*	*	*
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	10[illegible]	80	51	33

ಶಾಲಿವಾಹನ ಶಕ ವರುಷಗಳು ೧೮೩೦ನೇ ಕೀಲಕನಾಮ ಸಂವತ್ಸರದ ಕಾರ್ತಿಕ ಶುದ್ಧ ಚೌತಿ ಗುರುವಾರದಿಂದ ಕಾರ್ತಿಕ ಶುದ್ಧ ಏಕಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಅಕ್ಟೋಬರ್ ಮತ್ತು ನವೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರ ತುಲಾ ಮಾಸ
29	ಗುರು *	ಚೌತಿ	1. 1-	ಜ್ಯೇ	[illegible] 30	14
30	ಶುಕ್ರ	ಪಂಚಮಿ	[illegible]	ಮೂಲ	8 14	15
31	ಶನಿ	ಷಷ್ಠಿ	[illegible]	ಪೂಷಾ	10 4	16
1	ರವಿ	ಸಪ್ತಮಿ	0 1[illegible]	ಉಷಾ	[illegible] 30	17
2	ಚಂದ್ರ	ನವಮಿ	[illegible]	ಧ	[illegible]	18
3	ಕುಜ †	ದಶಮಿ	[illegible]	ಶ	[illegible]	19
4	ಬುಧ	ಏಕಾದಶಿ	1[illegible]	ಪೂಭಾ	16 0	20

* ಯುಗಚತುರ್ಥಿ

† ಮಹಾವ್ಯತೀಪಾತ, ಆರೋಗ್ಯ[illegible] ವ್ರತ [illegible]

, ಸರ್ವತ್ರಪ್ರಬೋಧಿನ್ಯೇಕಾದಶಿ

ಪೇಟೆ ಧಾರಣೆ

ವಿವರ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೭ ೬-೦	೧೮ ೦
ಕೋಟೆ ಅಕ್ಕಿ ಅವಲ್		೧೬ ೬ ೦	೧೮
,, ಮಧ್ಯ		೧೭ ೨ ೦	೧೭ ೮
ಜಾಪಾನಿ ಅಕ್ಕಿ		೧೬ ೧೩ ೦	೧೭
ಸಣ್ಣಕ್ಕಿ ಅವಲ್		೨೦ ೦ ೦	೨೨-೦
,, ಮಧ್ಯ		೧೯ ೦ ೦	೨೦ ೦
ಕೊಳಗ ಪೈರು ಪಲ್ಲಕ್ಕೆ		೧೭ ೦ ೦	೧೪ ೮
ಮಧ್ಯ		೧೬ ೮ ೦	೧೪ ೦
ಹೈಕ ರಾಗಿ ಪಲ್ಲಾ ೧ಕ್ಕೆ		೮ ೪ ೦	೧೦ ೦
ಕಾರ್ಬ್ರಿ		೮ ೦-೦	೯
ಜೋಳ		೮ ೦ ೦	೯ ೦
ತೊಗರಿಬೇಳೆ ಪಲ್ಲಾ ೧ಕ್ಕೆ		೧೧ ೮ ೦	೧೧ ೧೨
ಬೇಳೆ ಅವರೆ		೧೧ ೮ ೦	೧೦ ೮
ಹೆಸರು		೧೨ ೦ ೦	೧೨ ೦
ಉದ್ದು		೧೬ ೦ ೦	೧೪--
ಕಡಲೆ		೧೫ ೪-೦	೧೪--
ಎಳ್ಳು ಸೇರು ೧೨೭ ಕ್ಕೆ		೨೯-೯ ೦	೧೫-೮
ಹುರುಳಿ		೮ ೪ ೦	೮ ೦
ಹರಳು ೧೨೭ ಸೇರಿಗೆ		[illegible] ೦	೧೦ ೦
ನೆಲಗಡಲೆ ಮೂಟೆ ೧ಕ್ಕೆ		೧ ೫ ೦	೧ ೬
ಮೆಣಸಿನಕಾಯಿ		೫ ೬ ೦	೪-೪
,, ಮಧ್ಯ		೫-- ೦	೪ ೪
ಬೆಲ್ಲ ದೊಡ್ಡ ಅಚ್ಚು		೫ ೨ ೦	ಮ ೨ ೪
ಒಳ್ಳೆ ಮೂಟೆ ೧ಕ್ಕೆ		೫ ೮ ೦	೬-೪
ಹರಳೆಣ್ಣೆ ,,		೫ ೦ ೦	೪ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೬ ೪ ೦	೬-೪
ಉಪ್ಪು ,,		೫ ೮ ೦	೫-೪
ಹುಣಸೇ ಹಣ್ಣು		೧ ೮ ೦	೧-೪
, ಹಳೇದು		೧-೬-೦	೧-೪
ತುಪ್ಪ ಮಣ ೧ಕ್ಕೆ		೧೪-೦ ೦	೧೫-೪
ಸೀಮೆಯೆಣ್ಣೆ ಪೆಟ್ಟಿಗೆಗೆ		೫ ೦ ೦	೪-೦
ತೆಂಗಿನಕಾಯಿ ೧೦೦ ಕ್ಕೆ		೪-೮-೦	೪-೦
ಅಡಿಕೆ ಕಾಯಿ ಮಣ ೧ಕ್ಕೆ		೦ ೧೦ ೦	೦-೧೧
ಇಂಡ್ಯಾಳದ ಕಾಯಿ ಮಣ ೧ಕ್ಕೆ		೦ ೧೪ ೦	೦-೧೧
ಚಿನ್ನ (ತೋ) ತೊಲ		೧೫-೭ ೦	೧೫-೪
,, ,, ಕಮ್ಮಿ		೧೫ ೧೪-೦	೧೫-೪
,, ,, ಗಟ್ಟಿ ತೊಲ ೧ಕ್ಕೆ		೨೪ ೧೦ ೦	೨೪-೪
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೧ ೦	೬೭-೪

Printed and Published by the Rev E. Thompson, M A Proprietor and Manager, Wesley Mission Press, Mysore. 29/10/1908

REGISTERED
M. 30

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸಿ ೧೯೦೮ ನೇ ಇಸವಿ ನವೆಂಬರ್ ತಾರೀಖು ೫ ನೇ ಗುರುವಾರ. ಸಂಚಿಕೆ ೨೩

BASEL MISSION WEAVING ESTABLISHMENT,

59-21

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಟ್ಟೆ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ಮಿರ್ಸ್ಸ್) ಟ್ವೀಡ್ ಸಮೂನೆಯ ಕೋಟು ಅಂಗಿಗಳ ಚೆಕ್ ಬಟ್ಟೆಗಳೂ, ಹಂಟಿಂಗ್ ಯೆಂಬ ಶಿಕಾರಿ ಬಟ್ಟೆಗಳೂ, ಶರ್ಟಿಂಗ್ ಎಂಬ ಕಮೀಜಿನ ಬಟ್ಟೆಗಳೂ, ಬೇರೆ ತರದ ಬಟ್ಟೆಗಳೂ ಟೇಬಲ್ ಕ್ಲೋತ್ ಎಂಬ ಮೇಜುವಸ್ತ್ರಗಳೂ ಟುವಾಲು ವಗೈರೆಗಳೂ ನಾಜೂಕಾಗಿ ತಯಾರಿಸಲ್ಪಟ್ಟು ಯಾವಾಗಲೂ ಬಲ್ಲಿ ಸಿದ್ಧವಾಗಿರುವವಲ್ಲದೆ ರಖಂ ಆಗಿಯಾಗಲೀ ಪರಚೂರಾಗಿ ಕ್ರಯಕ್ಕೆ ತಯಾರಿರುತ್ತವೆ

ಒಳ್ಳೇ ಕಮಿಶ್ಯನ್ :—ರೂಪಾಯಿ ೧೦೦ ರ ಮೇಲೆ ಮಾಲುಗಳನ್ನು ತೆಗದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾಗುವದು. ಹೆಚ್ಚಿನ ವಿವರ ಮುದ್ದಾಗಿ ಯಾ ಕಾಗದ ಮೂಲಕ ತಿಳುಕೊಳ್ಳಬಹುದು

ನಮೂನೆ ಯಾ ಮಾದರಿಗಳು :—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಕಳುಹಿಸಲ್ಪಡುವವು.

ವಿಶೇಷ ಲಕ್ಷ್ಯಸತಕ್ಕದ್ದು :—ಈ ನಮ್ಮ ಮಾಲುಗಳಿಗೆ ಇಲ್ಲಿ ಕಾಣಿಸುವ ಟ್ರೇಡ್ ಮಾರ್ಕ್ ಎಂಬ ವ್ಯಾಪಾರಗುರುತು ಇರುವ ಲೇಬಲ್ ಯೆಂಬ ಚೀಟು ಹಚ್ಚಿರುತ್ತದೆ. ಈ ಗುರುತಿನ ಚೀಟುಗಳು ಇಲ್ಲದವುಗಳೆಲ್ಲಾ ಬಾಜಾ ಮಿರ್ಸ್ಸ್ ಮಾಲುಗಳಲ್ಲವೆಂದು ತಿಳಿಯತಕ್ಕದ್ದು

ಶರ್ತ :—ನಗದಾಗಿ ಇಲ್ಲವೆ ಮಾಲುಗಳು ವಿ. ಪಿ. ಟಪ್ಪಾಲ ಮೂಲಕ ಕಳುಹಿಸಲ್ಪಡಬೇಕಾಗಿದ್ದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು.

☞ ಈ ರಿಜಿಸ್ಟರ್ಡ ಮಾರ್ಕನ್ನಾಗಲೀ, ನಾವು "ಕೋಪಿರೈಟ್" ಪಡದಿರುವ ಲೇಬಿಲುಗಳನ್ನಾಗಲೀ, ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ಮಾಲುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು

ವಿಳಾಸ—BASEL MISSION WEAVING ESTABLISHMENT,
MANGALORE, S CANARA

ವೈದ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-38

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳು ಹವಳದ ಭಸ್ಮ, ಚಿನ್ನದ ಕ್ಷೀರೀಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಬೂಬೆ, ಸಂದುಗಳ ನೋವು, ಮೈ ಕೈಕಾಲು ಸೆಳೆತ (ಫಾಸೆ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನರಗಳ ಬಲಹೀನತೆಯನ್ನು ಪರಿಹರಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲ, ಮಕ್ಕಳ ಎಳವು, ಜ್ವರ, ನಿಲ್ಲು ಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಅಕಾಲಮರಣಕ್ಕೀಡಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನವೂ ಔಷಧ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ರೂಪಾಯಿ, ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ:—ವೈದ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಅರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವ ರ ಹ ರಿ.

64-14



ಇದು ಸಾಧಾರಣ ಜ್ವರ, ಚಳಿಜ್ವರ, ವಿಷಮಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್, ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಪಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ಜ್ವರಹರಿ ಸೀಸೆಯು ತಲಪಿತು. ಇಷ್ಟು ಸ್ವಲ್ಪ ಕಾಲದಲ್ಲಿ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಜಾಹೀರು ಬೇಳುತ್ತಿರುವದರಿಂದ ದಯಮಾಡಿ ಇನ್ನೊಂದು ೨೦ ಡಿಗ್ರಿಯ ಸೀಸೆಯನ್ನು ವಿ. ಪಿ. ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುವರು.

ಕ್ರಯ.—ಸೀಸೆ ೧ ಕ್ಕೆ ೨ ಆಣೆ. ೧ ಡ, ೧—೨ ರೂ; ದೂ ೨—೧೨ ಆ., ೧೧ ರೂ. ಪನ್ನೆರಡು ೬೪ ತೆಗೆದುಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಓ ಮು ಂ ಕ ಪ್ರೂ ಫ ರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ ಕೈಲಾ ಮಹತ್ವವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮುಂಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರಭೇದಿ, ಅಜೀರ್ಣ ರೋಗಸ್ಥರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿರುವರು.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ವಾಣಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ —

ಹಮ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೋರ್ಡ್ ಬೀಚ್ ಲೈನ್, ಮದರಾಸ್.

AMRUTANJAN DEPOT, 16 OAK-LANE BOMBAY. [17-37]

ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಮಾಡಲ್ಪಡುವದು.

ಅ ಮೃ ತಾಂ ಜ ನ. ಪ್ರ ಯ ತ್ನ ಮಾ ಡಿ ರಿ.

ಇದರಿಂದ :—ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಚಿಕಮ್ ಮತ್ತು ಘಾಯ, ಗಂಟಲುನೋವು, ಎದೆನೋವು, ಶೀತ, ಜ್ವರ, ಕೈಕಾಲುಗಳಿಗೆ ಆಗುವ ಎಲ್ಲಾ ತರದ ನೋವಿಗೆ ಇದು ಉತ್ತಮವಾಗಿರುತ್ತದೆ. ಬಾಟ್ಲಿ ೧ ಕ್ಕೆ ಕಿಮ್ಮತ್ತು ೦-೮-೦. ಪೋಸ್ಟು ಖರ್ಚು ೦-೪-೦.

ಗ ಜ ಕ ರ್ಣ ದ ಮು ಲಾ ಮು.

ಮೂರು ಸಾರಿ ಹಾಗಿಸುವದರಿಂದ ಗಜಕರ್ಣ ಬಾಷ್ಪೆ ವಗೈರೆ ನಾಶವಾಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦-೬-೦ ಪೋಸ್ಟು ಖರ್ಚು ೦-೪-೦.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ರವಾನಿಸಲ್ಪಡುವದು.

ಜೀರ್ಣರಸಾಯನ—೨ ಔನ್ಸ್ ಡಬ್ಬಿ ೧ ಕ್ಕೆ.	೧—೪—೦	ಕುಸುಮಾರಿಗುಟಿಕೆ—ಹೆಂಗಸರ ಹೊಟ್ಟೆನೋವಿಗೆ	೧—೦—೦
ನೇತ್ರಗುಟಿಕೆ—ಧಾತುಪುಷ್ಟಿ, ರಕ್ತಶುದ್ಧಿ	೧—೦—೦	ಪ್ರಮೇಹದ ಮಿಶ್ರಣ—ಪ್ರಮೇಹಕ್ಕೆ	೧—೦—೦
ಜ್ವರಹಾರಿ—ಜ್ವರಕ್ಕೆ ಬಾಟ್ಲಿ ೧ ಕ್ಕೆ	೦—೧೨—೦	ಕಫಹರಿ—ಕಫ, ಕೆಮ್ಮು, ಕ್ಷಯ, ಇತ್ಯಾದಿ	೧—೪—೦
ಶೇಸುಕಡಿತದ ಮದ್ದು	೦—೬—೦	ಸುಂದರೀ ತೈಲ—ಮೋರೆಗೆ	೦—೮—೦
ದಂತಶೂಲಹರಿ—ಹಲ್ಲುನೋವಿಗೆ	೦—೮—೦	ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಕರ್ಣಶೂಲಹಾರಿ—ಕಿವಿನೋವಿಗೆ	೦—೬—೦	ಉರಿನಾಶಕ ಎಣ್ಣೆ ಬಾಟ್ಲಿ ೧ ಕ್ಕೆ	೦—೮—೦
ತಿಜ್ಜಿಯ ಮುಲಾಮು	೦—೩—೦	ವಾತದ ಮಿಶ್ರಣ ,,	೧—೦—೦
ದಂತಮಂಜನ—ಹಲ್ಲುಗಳಿಗೆ	೦—೨—೦	ಕಸ್ತೂರಿ ಮಾತ್ರೆ ೫೦ ಗುಟಿಕೆ	೦—೧೦—೦
ಕೇಶವರ್ಧಿನೀ ತೈಲ—ಕೂದಲಿಗೆ	೧—೦—೦	ತಾಂಬೂಲ ಗುಟಿಕೆ ೫೦ ಗುಟಿಕೆ	೦—೮—೦
ಜುಲಾಬು ಮಾತ್ರೆ—ಜುಲಾಬಿಗೆ	೦—೮—೦	ರೋಮಹಾರಿ	೦—೮—೦

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

48 21

ತಲೆನೋವು, ವಾಯುನೋವು, ಸೆಳತ, ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಜೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆ ನಿಲುಕದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಇದರ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಟೀಟಸ್,

೩೭, ಮೇದಮಾಲೆಟುಳ್ಳ ಬೀದಿ, ವೇಪೇರಿ, ಮದರಾಸ್.

ವಾತಹರಿ.

81 5

ಒಂದು ಹಸ್ತಿ ಅವುನ್ಸಿನ ೧೨ ಆಣೆ— ವಿ ಪಿ ಛಾರ್ಜು ಬೇರೆ

ಈ ತೈಲವು ತಲೆನೋವು, ಅಂಗತಿ ನೋವು, ವಾಯುವಿನಿಂದ ಕೈಕಾಲು ನೋವು ಕೀಲು ಕಟ್ಟಿದ್ದರೂ, ಪಾರ್ಶ್ವವಾಯು ಎದೆನೋವು, ಶಸ್ತ್ರಗಳಿಂದ ಉಂಟಾದ ಗಾಯ, ಹುಣ್ಣು, ಕುರಿ, ಕರಪಾಣೆ, ಮೋಹಪಡೆ, ನರ ಹೊರಳಿದ್ದರೂ, ಕೀಲುವಾಯು, ಹಲ್ಲುನೋವು, ಮಡಮು ಉಷ್ಣಕಲೆ ಬೆಂಕಿಯಿಂದ ಸುಟ್ಟ ಗಾಯ ಬಿದ್ದರೂ, ಛಳಕು, ಇತ್ಯಾದಿ ಅನೇಕ ವ್ಯಾಧಿಗಳಿಗೆ - ಹರಿ

ತಕ್ಷಣ ಪರಿಹಾರ

ಅಂದರೆ ಸಂಪೂರ್ಣವಾದ ಕ್ಷಣ ಮಾತ್ರದಲ್ಲಿ ನಿವಾರಣೆಮಾಡುವದು ಮೂಲವ್ಯಾಧಿಗೂ ಪಕ್ವವಾಗಿದೆ ಈ ರೋಗಗಳಿಗೆಲ್ಲಾ ಈ ಔಷಧಿಯು ಎಷ್ಟರಮಟ್ಟಿಗೆ ಶತ್ರುವೋ ಅಷ್ಟು ಇನ್ನಾವ ಔಷಧವಾದರೂ ಇಲ್ಲ ಇದನ್ನು ನೋವಿರುವ ಸ್ಥಳಕ್ಕೆ ಹಚ್ಚಿದ ಮಾತ್ರಕ್ಕೇ, ದುರ್ಧಿಕರವಾದ ರೋಗ ಮುಂತಾದವು ತೊಲಗಿ ಸುಖಸಂತೋಷಗಳು ಉಂಟಾಗುವವು ಬಾಧೆಯನ್ನು ಅನುಭವಿಸುವವರು ತಕ್ಷಣ ಒಂದು ತರಿಸಿಕೊಳ್ಳಿ ತರಿಸದವರಲ್ಲಾ ಎಂದು ಎಂದಿಗೂ ಪಶ್ಚಾತ್ತಾಪಪಡುವುದಿಲ್ಲ ೬ ಡಬ್ಬಿಗಳನ್ನು ಒಟ್ಟಿಗೆ ತರಿಸಿಕೊಳ್ಳುವವರಿಗೆ ಪೋಸ್ಟೇಜು ಮಾಫಿ ಎಡುತ್ತೇವೆ ಔಷಧಗಳ ಕ್ಯಾಟಲಾಗನ್ನ ಪೇಕ್ಷಿಸುವವರು ೭ ಸ್ಟಾಂಪಿನಲ್ಲಿಟ್ಟು ಬರೆದುಕೊಳ್ಳತಕ್ಕದ್ದು

ವಿಳಾಸ—ಎಂ ಗೋವಿಂದಶೆಟ್ಟಿ

ಮೆಡಿಕಲ್ ಪ್ರಾಕ್ಟೀಷನರ್, ದೇವನಹಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2 45

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಮಾಡಿಸುತ್ತಿರುವ ಟೋಪಿಗಳ ಪಾರವೆಲ್ಲಾ ನೀಳವಾದದ್ದು ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಅದರ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಮಿಷಿನಿ ಹಾಕಿ ಸಂಕು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೀವು ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ೪ , ೧ ರೂ ೬ ೪ ೧ ರೂ ೬ ೪

ಕೇಶ್ಮಿ ಚುಕ್ಕಿಯುಳ್ಳ ಟೋಪಿಗಳು ೧ ರೂ ೮ ೪ , ೨ ರೂ

ದಾರದ ಟೋಪಿಗಳು ೧ ರೂ ೧೨ ೪ ೧ ರೂ ೮ ೪ , ೧ ರೂ ೬ ೪

ಜರಿಕಸಿನ ಟೋಪಿಗಳು ೧ ರೂ ೮ ೪ , ೧ ರೂ ೬ ೪ ;

ಕೊಳುಗಳ ಟೋಪಿ, ಸುಕ್ಕಿನ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವ-ಇವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

CHAMBERLAIN'S COLIC CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆನೋವು ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

1 45



ಕೆಳ ಹೊಟ್ಟೆಯ ನೋವು, ಬಲ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರವ ಕೀಲುಗಳ ನೋವು, ಹೃದಯದ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ

ಜ್ವಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೭ ರೂಪಾಯಿ

ಇಲ್ಲಿ ನೋಡಿ.

77

ತುಮಕೂರು ಮಿಷನ್ ಇಲಾಖೆಯಲ್ಲಿ ಮ್ಯಾನೇಜರ್ ರವರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ ಕ್ರಯ —೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯ ವರೆಗೆ ೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು ಈಗತಾನೇ ಇಂಗ್ಲಿಷ್ ಉಲ್ ದಾರವು ಬಂದಿದೆ ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಬಲ್ಲೆವು ವಿಳಾಸ — ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

53 10

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಲ್ಲಾ ಬಟ್ಟೆಗಳು ಸಾವಿರಾರಿಗೆ ತಯಾರಿಸಿಲ್ಲಲ್ಲಿಟ್ಟು ಬಹಳ ಬಾಳಿಕೆ ಬರುವಂತಹವುಗಳಾಗಿರುತ್ತವೆ ಒಳ್ಳೆಯ ಹತ್ತಿ ಗುರಿದಲ್ಲಿ ಖರೀದಿ ಬಹಳ ಕಡಮೆ ಈ ಎಲ್ಲಾ ಗಾರು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆ ಗಳನ್ನು ತರಿಸಿ ನೋಡಿ ಅಗ್ಗ ಈ ಬಟ್ಟೆ ಗಳ ಪ್ರಯೋಜನವು ನಿಮಗೆ ಗೋಚರವಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೭½ ಆಣೆ ವರೆಗೂ ಬೆಲೆ ಬೇರಾಗಿ ಅಗಲಿ ಬಟ್ಟೆ ಅಗಲೀ ದಾರಲ್ಲದುತ್ತದೆ ಶಾಲುಗಳು, ಹಾಸನದ ಟೋಪಿಗಳು, ಜುಬ್ಬಿನ ಟೋಪಿಗಳು, ಕಾಶ್ಮೀರ ಟೋಪಿ, ಇನ್ನೂ ಕೆಲವು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪ್ಪೋ, ಮೈಸೂರು

ಲಾ ಪ್ರಕಟನೆಗಳು

ವ್ಯವಹಾರನಿರ್ಣಯ—ಪುಟಗಳು ೫೧೫ ಒಂದೂ ಮುಕ್ಕಾಲುಕಾಲು ಆಣೆಗಳು, ೬೯ ಮಾನ್ಯುಮಗಳು ಇವುಗಳ ಸಂಗ್ರಹವು, ೯೩ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂ ೧೨ ಆಣೆ [10-28]

ಕನ್ನಡ ಲಾ ರಿಪೋರ್ಟರ್—ಪ್ರಿವಿ ಕೌನ್ಸಿಲ್, ಹೈ ಕೋರ್ಟು, ಚೀಫ್ ಕೋರ್ಟ್ ತೀರ್ಪುಗಳು ಕನ್ನಡದಲ್ಲಿ ಸಂಗ್ರಹಿಸಲ್ಪಟ್ಟಿರುವ ಈ ಮಾಸ ಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ ವರ್ಷದ ಚಂದಾ ರೂ ೧—೮—೦ ಮುಂಗಡ, ಡಾ, ವಿ ಪಿ ಜಿಡಿಸ್ಟ್ರೀ ೧ ಕ್ಕೆ ೦—೨—೦

ಇವುಗಳನ್ನಪೇಕ್ಷಿಸುವವರು—ಎಂ ಮಲ್ಲಾರಾಯರು, ಪಸ್ಟ್ ಗ್ರೇಡ್ ಪ್ಲೀಡರ್, (೯೦) ೭ ನೇ ರೋಡ್, ಚಾಮರಾಜಪೇಟೆ, ಬೆಂಗಳೂರು ಸಿಟಿ — ಈ ವಿಳಾಸಕ್ಕೆ ಬರೆಯುವುದು

ಭೂಸ್ಥಿತಿಯ ಹರಾಜು ಇಸ್ತಿಹಾರ್

90 1

ಬೆಂಗಳೂರು ಸಿಟಿ ಬಸವನಗುಡಿ ಯುಕ್ತಿ ಬ್ಯೂಲ್ ಟೆಂಪಲ್ ರೋಡ್ ನಲ್ಲಿರುವ ಮ್ಯುನಿಸಿಪಲ್ ೧೮೯ನೇ ನಂಬರ್ ನಿವೇಶನವನ್ನು ಮುಖ್ಯಕಾರನಾದ ಮೆ ಕೆ ಪಿ ನಾರಣಪ್ಪಯ್ಯಂಗಾರ್ಯವರ ಇರಾದೆಯಂತೆ ಬೆಂಗಳೂರು ಸಿಟಿ ಜನರಲ್ ಆಕ್ಷನೀಯರ್ಸ್ ಮೆಸರ್ಸ್ ಎಂ ಕಾರ್ನಿಕ್ ಅಂಡ್ ಕೋ ಯವರು ಈ ನವಂಬರ್ ತಾ ೫ ನೇ ತಾರೀಖು ಭಾನುವಾರ ಬೆಳಿಗ್ಗೆ ೮ ಘಂಟೆಗೆ ಸರಿಯಾಗಿ ಸ್ಥಳದಲ್ಲಿ ಹರಾಜು ಹಾಕುತ್ತಾರೆ ಬೇಕಾದವರು ಭಾವಸಾಗಿ ಮಾಡಿಕೊಳ್ಳಬಹುದು ಹರಾಜು ಆ ದಿನ ಮಧ್ಯಾಹ್ನದ ಒಳಗಾಗಿಯೇ ಪೂರೈಸಲ್ಪಡುತ್ತದೆ

ತಾ ೩—೧೧—೦೮ ಎಂ ಕಾರ್ನಿಕ್ ಅಂಡ್ ಕೋ, ಬೆಂಗಳೂರು ಆಕ್ಷನೀಯರ್ಸ್

ಎಚ್ಚರಿಕೆ ನೋಟೀಸು

91 1

ಮಧುಗಿರಿ ತಾಲ್ಲೂಕು ಪುರವರ ಸಮೀಪ ಹಳ್ಳಿ ಮಜರೆ ಬಿಡುಪದನ ಹಳ್ಳಿಯಲ್ಲಿ ಇರುವ ನರಸಪ್ಪನ ತಮ್ಮ ಪುಟಪ್ಪನ ಹೆಂಡತಿ ನಾಗಮ್ಮನು ಇದೇ ದಿ ನಮ್ಮನ್ನು ಜನರಿಗೂ ತಿಳಿಸುವದೇನೆಂದರೆ ೨೬—೧೦—೧೯೦೮ನೇ ತಾರೀಖಿನಲ್ಲಿ ಬೀಯ್ಯಲ್ಲದಲ್ಲಿ ೩೪೫ನೇ ನಂಬರಿನ ೫ ರೂಪಾಯಿ ಛಾಪಾಕಾಗದ ಒಂದನ್ನೂ, ೩೪೬ನೇ ನಂಬರಿನ ೧ ರೂಪಾಯಿ ಛಾಪಾ ಕಾಗದ ಒಂದನ್ನೂ ನನ್ನ ಹಸರಿಗೆ ಕೊಂಡುಕೊಂಡೆನು ಅವು ನನ್ನ ಕೆಲಸಕ್ಕೆ ಅನುಕೂಲಿಸದ್ದರಿಂದ ೧೬—೩—೧೯೦೭ ನೇ ತಾರೀಖಿನಲ್ಲಿ ೧೦೦೫ನೇ ನಂಬರಿನ ೧೦ ರೂಪಾಯಿ ಛಾಪಾ ಕಾಗದವನ್ನು ತೆಗೆದುಕೊಂಡು, ನನ್ನ ಮಗಳ ಹಸರಿಗೆ ನನ್ನ ಆಸ್ತಿಯನ್ನೆಲ್ಲಾ ಬರೆದು ಮೇಲ್ಕಂಡ ಆ ಎರಡು ಪತ್ರಗಳು ನನ್ನ ಪಕ್ಷ ಪತ್ರಗಳನ್ನು ನೋಡುತ್ತಿದ್ದವರಿಂದ ಲೋ ಹ್ಯಾಗೋ ಕೈತಪ್ಪಿಹೋಗಿವೆ ಆದ್ದರಿಂದ ಆ ಎರಡು ಪತ್ರಗಳಲ್ಲಿ ಯಾರು ಯಾವ ವಿಧವಾದ ಬರವಣಿಗೆಯನ್ನು ಬರೆದುಕೊಂಡಿದ್ದರೂ ಅದೆಲ್ಲಾ ಸಾಗತಕ್ಕದ್ದಲ್ಲವೆಂದು ಪತ್ರಿಕಾಮೂಲಕ ಪ್ರಕಟಿಸಿದೆ

೩೦—೧೦—೧೯೦೮ ಈ ಒಬ್ಬ ಗುರುತು ನಾಗಮ್ಮನ ರುಜು

ಆಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರುವುದಕ್ಕೆ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು.

ಶ್ವಾಸಕೋಶಗಳು ಬಲಹೀನವಾಗುವುದರಿಂದ ಇದರಿಂದ ತೋರಿಬರುತ್ತದೆ ಅದನ್ನು ಬೇಗನೇ ನಿಲ್ಲಿಸತಕ್ಕದ್ದು ಬಹು ಆವಶ್ಯಕ

SCOTT'S EMULSION 33-32

(ಸ್ಕಾಟ್ಸ್ ಇಮಲ್ಷನ್)

ಎಂಬ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವುದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ವ್ಯಾಪಾರಿಗಳಲ್ಲೂ ದೊರೆಯುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯನಿರುವ ಔಷಧವನ್ನೇ ಕೊಂಡುಕೊಳ್ಳಿ

ನಿನಗೆ ಮೈ ಸ್ವಸ್ಥವಿಲ್ಲವೋ ?

ನನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ —ಎಂದರೆ, ನಿನಗೆ ಯಾವ ರೋಗ ಉಂಟಾಗಿರದೇ—" ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರಾಪ್ತಿಯಾಗುತ್ತಿದೆಯೇ ? " ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ನಿನಗೆ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನನಗೆ ಸ್ವಸ್ಥವಾಗುವುದು

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೇ—ಇದರ ಅರ್ಥವೇನೆಂದರೆ ಮಲಾಶಯದೊಳಗೆ ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟ ವಿಷಗಳು, ಶರೀರಮುಸುರುವುದು ಈ ವಿಷವೇ ಪ್ರಪಂಚದ ರೋಗಗಳೆಲ್ಲಕ್ಕೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇಳ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ ಪಿತ್ತ , ಪಿತ್ತಜ್ವರ , ಅಜೀರ್ಣ , ಅಗ್ನಿಮಾಂದ್ಯ , ಗಾಜರಿ , ಅಶಕ್ತಿ , ಎದೆಯು ಕಟ್ಟುವದು , ತಲೆತಿರುಗುವುದು , ತಲೆನೋವು , ಹೊಟ್ಟೆಯುಬ್ಬರ , ಹುಳಿಗಿನ ಹೊಟ್ಟೆಶೂಲೆ , ಹೆಂಗಸರ ವ್ಯಾಧಿಗಳು , ಇವೇ ನೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ನಿಮಮಾಡಲೆಂದರೆ ತಯಾರಾದವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಪರಿಣದಲ್ಲಿರುವ ಮಲವನ್ನೂ ಕ್ರಮವಾದ ವ ಯುವನ್ನೂ ಮಲಾಶಯದಿಂದ ಹೊರಕ್ಕೆ ಕಳೆ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚನ್ನಾಗಿ ಇಳಿಯುವಂತೆ ಮಾಡಿ, ಅಂಗದ ಕೈಲ್ಲಾ ಸುಖವಾಗಿಯೂ ಹಿತವಾಗಿಯೂ ಇಟ್ಟು , ತಪ್ಪದೆ ಬೇಗ ರೋಗವನ್ನು ತರಿಸಿ, ಆರೋಗ್ಯವನ್ನುಂಟುಮಾಡುವುವು [69-10]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬ ರಷ್ಟು ಗುಳಿಗೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುತ್ತವೆ ಇವುಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಹೋಲ್ & ಟಾಸ್ ೩೦, ಬೊಂಬಾಯಿ —ಇವರಲ್ಲಿ ದೊರೆಯುವುದು

ವೃತ್ತಾಂತ ಪತ್ರಿಕೆ.

.o.

೧೯೦೮ ನೇ ಇಸವಿ ನವೆಂಬರ್ ತಾ ೫ ನೇ ಗುರುವಾರ.

ಗತಿಸಿದ ಅರ್ಧ ಶತಮಾನವು.

ಘನವನ್ನೈದಿದ ಶ್ರೀ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರು ರಾಯಲ್ ಪ್ರೊಕ್ಲಮೇಷನ್ ಎಂಬ ಪ್ರಸಿದ್ಧ ಪತ್ರಿಕೆಯನ್ನು ದಯಪಾಲಿಸಿದ ಐವತ್ತನೇ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದ ವೃತ್ತಾಂತವನ್ನು ಇನ್ನೊಂದು ಭಾಗದಲ್ಲಿ ಪ್ರಕಟಿಸಿರುತ್ತೇವೆ. ಕಳೆದ ೧೮೫೭ನೇ ಇಸವಿಯ ಮೇ ತಿಂಗಳಲ್ಲಿ ಹಿಂದುಸ್ಥಾನದೊಳಗೆ ದೊಡ್ಡ ದಂಗೆಯುಂಟಾಗಿ, ೧೪ ತಿಂಗಳ ತನಕ ಯುದ್ಧಗಳು ನಡೆದು ಅಡಗಿಸಲ್ಪಟ್ಟಿತು. ಹಿಂದುಸ್ಥಾನದಲ್ಲಿ ನೆಮ್ಮದಿಯು ಸ್ಥಾಪಿತವಾಯಿತು. ಅದುವರೆಗೆ ಲಂಡನ್ ಪಟ್ಟಣದ ಒಂದು ಕಂಪನಿಯ ವರ್ತಕರು—ಇದಕ್ಕೆ ಈಸ್ಟ್ ಇಂಡಿಯಾ ಕಂಪನಿ ಎಂದು ಹೆಸರು—ಈ ರಾಷ್ಟ್ರದಲ್ಲಿ ಬಂದು ನೆಲಸಿ ಕ್ರಮೇಣ ಇಲ್ಲಿನ ಪ್ರಜಾಪಾಲನೆಯ ಕಾರ್ಯಭಾರವನ್ನು ವಹಿಸಿಕೊಂಡಿದ್ದರು. ಆ ದಂಗೆಯನ್ನು ಅಡಗಿಸಿದ ಮೇಲೆ ಆ ಕಂಪನಿಯವರಿಗೆ ಈ ರಾಷ್ಟ್ರದ ರಾಜ್ಯಭಾರ ಕಾರ್ಯವನ್ನು ಬಿಟ್ಟಿರುವುದಕ್ಕಿಂತಲೂ ಇಂಗ್ಲಿಷ್ ಗವರ್ನ್‌ಮೆಂಟಿನವರೇ ವಹಿಸಿಕೊಳ್ಳೋಣದರಿಂದ ಪ್ರಜಾಪಾಲನೆಯನ್ನು ವಿಶೇಷ ಹಿತಕರವಾಗಿಯೂ ತುಂಬಾ ಶ್ರೇಯಸ್ಕರವಾಗಿಯೂ ನಡಿಸಬಹುದೆಂದು ಕಂಡುಹಿಡಿದದ್ದರಿಂದ ಇಲ್ಲಿನ ಆಳ್ವಿಕೆಯನ್ನು ಕಂಪನಿಯವರ ಕೈ ತಪ್ಪಿಸಿ ಮಹಾರಾಜ್ಞಿಯವರೇ ವಹಿಸಿಕೊಂಡು, ೧೮೫೮ ನೇ ಇಸವಿ ನೊವೆಂಬರ್ ತಾ ೧ ರಲ್ಲಿ ಆ ಅರ್ಥಕ್ಕೆ ಒಂದು ಇಸ್ತಿಹಾರನಾಮೆಯನ್ನು ಪ್ರಕಟಪಡಿಸಿದರು. ಇದನ್ನು ಇನ್ನೊಂದು ಕಡೆ ಪ್ರಕಟಿಸುತ್ತೇವೆ. ಹೀಗೆ ಕಳೆದ ಐವತ್ತು ವರುಷಗಳಿಂದಲೂ ಹಿಂದುಸ್ಥಾನವು ಬ್ರಿಟಿಷ್ ಪ್ರಭುಗಳ ಪರಿಪಾಲನೆಯಲ್ಲಿ ಇದ್ದುಕೊಂಡು ಬಂದಿದೆ. ಕಳೆದ ೧೯೦೧ ನೇ ಇಸವಿಯ ತನಕ ವಿಕ್ಟೋರಿಯಾ ಮಹಾರಾಜ್ಞಿಯವರು ಆಳಿ, ಅವರು ಕಾಲವಾದಂದಿನಿಂದ ಅವರ ಸುಪುತ್ರರಾದ ಏಳನೇ ಎಡ್ವರ್ಡ್ ಪ್ರಭುಗಳ ಪರಿಪಾಲನೆಯಲ್ಲಿರುವುದು.

ಈ ಐವತ್ತು ವರುಷಗಳ ಪ್ರಭುತ್ವದಲ್ಲಿ ಯಾವ ಫಲಗಳುಂಟಾಗಿರುವವೋ ಚಕ್ರವರ್ತಿ ಸಾರ್ವಭೌಮರವರು ಈಗತಾನೇ ದಯಪಾಲಿಸಿರುವ ಪ್ರಸಿದ್ಧ ಪತ್ರಿಕೆಯಿಂದ ತಿಳಿದುಕೊಳ್ಳಬಹುದಾಗಿದೆ. ಆ ಫಲಪ್ರಯೋಜನಗಳು ಯಾವವೆಂದರೆ :—

(೧) ಈಗ ಹಿಂದುಸ್ಥಾನದಲ್ಲಿ ಪ್ರಜಾನೆಮ್ಮದಿಯು ಸಾರ್ವತ್ರಿಕವಾಗಿ ನೆಲೆಗೊಂಡಿರುತ್ತದೆ. ಈ ರಾಷ್ಟ್ರದ ಪೂರ್ವ ಚರಿತ್ರೆಯನ್ನೂ, ಮೊಗಲಾಯರ ದೌಲತ್ತನ್ನೂ, ಮರಾಠೆಯವರ ರಾಜ್ಯಭಾರವನ್ನೂ ಓದಿ ನೋಡಿದರೆ ಜಗಳ ಕಡಿದಾಟಗಳೂ ಘೋರ ಯುದ್ಧಗಳೂ ಸರ್ವದಾ ಇದ್ದೇ ಇದ್ದವೆಂದು ಗೊತ್ತಾಗುತ್ತದೆ. ಸಾವಿರಾರು ಜನರು ಮಡಿದು ಹೋಗುತ್ತಿದ್ದರು. ವ್ಯವಸಾಯ ಭೂಮಿಕಾಣಿಗಳು ಹಾಳು ಕೆಡಹಲ್ಪಡುತ್ತಿದ್ದವು. ಬ್ರಿಟಿಷ್ ರಾಜ್ಯಭಾರವು ನೆಲೆಗೊಳ್ಳುವ ತನಕ ಹಿಂದುಸ್ಥಾನದಲ್ಲಿ ಯಾವಾಗಲೂ ೫೦ ವರುಷಗಳ ಅವಿಚ್ಛಿನ್ನವಾದ ನೆಮ್ಮದಿಯು ನೆಲೆಗೊಂಡಿರಲಿಲ್ಲ.

(೨) ಪ್ರಜೆಗಳಲ್ಲಿ ವಿದ್ಯೆಯು ಹರಡುತ್ತಿದೆ. ೧೮೫೭ ನೇ ಇಸವಿಯಲ್ಲಿ ಮದರಾಸು, ಕಲ್ಕತ್ತಾ, ಬೊಂಬಾಯಿ ಪಟ್ಟಣಗಳಲ್ಲಿ ಯೂನಿವರ್ಸಿಟಿ ಎಂಬ ವಿದ್ಯಾಪ್ರೋತ್ಸಾಹಕ ಸಭೆಗಳು ಸ್ಥಾಪಿಸಲ್ಪಟ್ಟಿದ್ದನ್ನೂ, ಇಂಗ್ಲಿಷ್ ವಿದ್ಯೆಯನ್ನು ಈ ದೇಶೀಯರಿಗೆ ಕಲಿಸುವುದಕ್ಕೆ ಕಾಲೇಜುಗಳೂ, ಸಾಮಾನ್ಯ ಪ್ರಜಾಕೋಟಿಗಳಿಗೆ ದೇಶಭಾಷೆಗಳನ್ನು ಹೇಳಿಕೊಡುವುದಕ್ಕೆ ಪಾಠಶಾಲೆಗಳನ್ನು ಸ್ಥಾಪಿಸುವ ವಿಷಯ ಯೋಚಿಸಲ್ಪಟ್ಟಿದ್ದನ್ನೂ ಎಲ್ಲರೂ ಸ್ಮರಿಸಬೇಕಾಗಿದೆ. ಗ್ರಾಮಾಂತರಗಳಲ್ಲಿ ಸಾವಿರಾರು ಪಾಠಶಾಲೆಗಳು ಪ್ರಾರಂಭವಾದವು. ವರ್ಷವರ್ಷವೂ ಅವುಗಳ ಸಂಖ್ಯೆಯು ಅಪಾರವಾಗಿ ಹೆಚ್ಚುತ್ತಾ ಬಂದಿರುತ್ತದೆ. ಹಾಗಾದರೂ ಇನ್ನೂ ಕೋಟ್ಯಾಂತರ ಪ್ರಜೆಗಳು ಅನಕ್ಷರಸ್ಥರಾಗಿರುವರೆಂತಲೂ, ಗ್ರಾಮಾಂತರ ವಿದ್ಯಾಭ್ಯಾಸವು ಇನ್ನೂ ವಿಶೇಷವಾಗಿ ಹರಡಬೇಕಾಗಿದೆ ಎಂತಲೂ ಹೇಳುತ್ತೇವೆ. ಆದರೆ ಹಿಂದುಸ್ಥಾನದ ಪ್ರಜೆಗಳನ್ನು ವಿದ್ಯಾವಂತರಾಗಿ ಮಾಡಬೇಕೆಂದು ಇಂಗ್ಲಿಷ್ ಗವರ್ನ್‌ಮೆಂಟಿನವರೇ ಪ್ರಯತ್ನಪಟ್ಟವರೆಂತಲೂ ಹಿಂದೆ ಯಾವ ಹಿಂದೂ ಅಥವಾ ಮಹಮ್ಮದೀಯ ದೌಲತ್ತಿನಲ್ಲಿ ಇಂಥಾ ಪ್ರಯತ್ನವೇ ನಡೆಯಲಿಲ್ಲವೆಂತಲೂ ತಿಳಿಯತಕ್ಕದ್ದಾಗಿದೆ.

(೩) ಅನೇಕ ಪ್ರಜೋಪಕಾರಕ ಕಾರ್ಯಗಳೂ, ಭಾರೀ ನೀರಾವರಿ ಕಾಮಗಾರಿಗಳೂ ನಡೆದಿರುತ್ತವೆ. ಈ ರಾಷ್ಟ್ರದಲ್ಲಿ ತಂತೀ ಟಪ್ಪಾಲೂ, ರೈಲ್ ಗಾಡಿಗಳೂ, ಜಲ್ಲಿ ಕಲ್ಲುಗಳನ್ನು ಹಾಕಿ ಮಾಡಿದ ಗಟ್ಟಿಯಾದ ರಸ್ತೆಗಳೂ ಏನಾ ಬಂದದ್ದು ಬ್ರಿಟಿಷ್ ರಾಜ್ಯಭಾರ ಬಂದ ಮೇಲೆಯೇ ಎಂದು ನಾವು ಹೇಳಬೇಕಾಗಿಲ್ಲ. ಈಗ ಹಿಂದುಸ್ಥಾನದಲ್ಲಿ ೩೦.೦೦೦ ಮೈಲಿಗಳಿಗಿಂತಲೂ ಹೆಚ್ಚಾಗಿ ರೈಲ್ ರಸ್ತೆಗಳಾಗಿವೆ. ಎಲ್ಲೆಲ್ಲಿ ಒಳ್ಳೇ ರಸ್ತೆಗಳೂ ಸೇತುವೆಗಳೂ ಆಗಿರುವವು. ಇದಲ್ಲದೆ ಪಂಜಾಬ್, ಸಿಂಧು, ಗೋದಾವರಿ ಜಿಲ್ಲೆ, ಮದರಾಸ್ ಅಧಿಪತ್ಯ, ಈ ಮೊದಲಾದ ಕಡೆಗಳಲ್ಲಿ ಅದ್ಭುತವಾದ ಅನೇಕ ನೀರಾವರಿ ಕಾಮಗಾರಿಗಳನ್ನು ಮಾಡಿಸಿರುತ್ತಾರೆ. ಇವುಗಳ ದೆಸೆಯಿಂದ ಲಕ್ಷಾಂತರ ಎಕರೆಗಳ ಬಂಜರು ಭೂಮಿಯು ಫಲಭರಿತವಾಗಿ ಮಾಡಲ್ಪಟ್ಟು, ದೇಶದ ಐಶ್ವರ್ಯವನ್ನು ವೃದ್ಧಿಮಾಡಿರುತ್ತದೆ. ಪ್ರತಿ ಒಂದು ಕಡೆಯೂ ಒಳ್ಳೊಳ್ಳೇ ಗವರ್ನ್‌ಮೆಂಟ್ ಕಚೇರಿಗಳೂ, ಆಸ್ಪತ್ರೆಗಳೂ, ಸ್ಕೂಲುಗಳೂ ಕಟ್ಟಲ್ಪಟ್ಟಿರುವವು.

(೪) ನಿಷ್ಪಕ್ಷಪಾತವಾದ ನ್ಯಾಯತೀರ್ಮಾನವು ದೊರಕುವುದು. ಮಾನವ ಧರ್ಮಶಾಸ್ತ್ರವನ್ನು ನೋಡಿದರೆ ಜಾತಿ ಜಾತಿಗೇ ಬೇರೆ ಬೇರಾದ ನ್ಯಾಯಗಳು ವಿಧಿಸಲ್ಪಟ್ಟಿವೆ. ಬ್ರಾಹ್ಮಣರಿಗೆ ಅಲ್ಪ ಶಿಕ್ಷೆ, ಶೂದ್ರರಿಗೆ ಕಠಿಣ ಶಿಕ್ಷೆ. ಮಹಮ್ಮದೀಯರ ದೌಲತ್ತಿನಲ್ಲೂ ಮುಸಲ್ಮಾನರಿಗೆ ಸ್ವಲ್ಪ ಶಿಕ್ಷೆಯೂ, ಮಹಮ್ಮದೀಯರಲ್ಲದವರಿಗೆ ಘೋರ ಶಿಕ್ಷೆಯೂ ವಿಧಿಸಲ್ಪಡುತ್ತಿತ್ತು. ಇದಲ್ಲದೆ ಇವರು ತಲೆ ತೆರಿಗೆಯನ್ನೂ ಕೊಡಬೇಕಾಗಿತ್ತು. ಆದರೆ ಇಂಗ್ಲಿಷ್ ಗವರ್ನ್‌ಮೆಂಟಿನವರು ಜಾತಿಮತ ಕುಲಗೋತ್ರಗಳ ತಾರತಮ್ಯವಿಡದೆ ಸಕಲರಿಗೂ ಒಂದೇ ವಿಧವಾದ ನ್ಯಾಯವನ್ನು ಕಲ್ಪಿಸಿರುತ್ತಾರೆ. ಪೀನಲ್ ಕೋಡೂ ಸಿವಿಲ್ ಕೋಡೂ ಸುಮಾರು ೫೦ ವರುಷಗಳ ಹಿಂದೆ ಅಂದರೆ ೧೮೬೦—೬೧ ನೇ ಇಸವಿಗಳಲ್ಲಿ ಜಾರಿಗೆ ತರಲ್ಪಟ್ಟವು.

(೫) ಈಗ ಮತಾಚಾರ ವಿಷಯವಾದ ಸ್ವಾತಂತ್ರ್ಯವು ಪ್ರಜೆಗಳಿಗೆಲ್ಲಾ ದೊರೆತಿರುತ್ತದೆ. ಯಾವ ಅಧಿಕಾರಿಯೇ ಆಗಲಿ ಯಾರನ್ನೂ ಬಲಾತ್ಕಾರ ಮಾಡಿಯಾಗಲಿ, ಲಂಚಕೊಟ್ಟಾಗಲಿ ಮತಾಂತರ ಪಡಿಸಕೂಡದೆಂತಲೂ, ಯಾರ ಮತಾಚರಣೆಗಳಿಗೂ ನಿರ್ಬಂಧವನ್ನುಂಟು ಮಾಡಕೂಡದೆಂತಲೂ ವಿಕ್ಟೋರಿಯಾ ಮಹಾರಾಜ್ಞಿಯವರು ಆಜ್ಞೆಯನ್ನಿತ್ತರು. ಪ್ರತಿ ಒಬ್ಬನೂ ತನ್ನ ಇಷ್ಟಬಂದ ಮತವನ್ನು ಅವಲಂಬಿಸಿ ಮತಕೃತ್ಯಗಳನ್ನು ನಡಿಸಿಕೊಳ್ಳಬಹುದಾಗಿದೆ ಎಂಬದಾಗಿ ಬ್ರಿಟಿಷ್ ರಾಜ್ಯವು ಹೇಳಿ, ಸಕಲರಿಗೂ ಸ್ವಾತಂತ್ರ್ಯವನ್ನು ಕೊಟ್ಟಿರುತ್ತದೆ.

ಇದು ಕಲಿಯುಗವೆಂದು ನಾವು ನಂಬುವದಿಲ್ಲ. ಮುಂದೆ ಇನ್ನೂ ಅಭಿವೃದ್ಧಿಯೂ ಶ್ರೇಯಸ್ಸೂ ಉಂಟಾಗುವವೆಂದು ಸಂತೋಷದಿಂದ ನಿರೀಕ್ಷಿಸುತ್ತೇವೆ. ಕಳೆದ ಐವತ್ತು ವರುಷಗಳಲ್ಲಿ ಹಿಂದುಸ್ಥಾನದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದಿರುವಷ್ಟು, ಹಿಂದೆ ಯಾವಾಗಲೂ ಆಗಿರುವದಿಲ್ಲ. ಈಗ್ಗಿಂತಲೂ ಪೂರ್ವಕಾಲವೇ ಸುಭಿಕ್ಷಕಾಲವಾಗಿತ್ತೆಂತಲೂ, ಸುಖಸಂತೋಷಗಳು ಹೆಚ್ಚಾಗಿದ್ದವೆಂತಲೂ ಹೇಳತಕ್ಕವರು ಹಿಂದುಸ್ಥಾನದ ಪೂರ್ವ ಚರಿತ್ರೆಯನ್ನೂ ಆಗಿನ ಸ್ಥಿತಿಗತಿಗಳನ್ನೂ ಸರಿಯಾಗಿ ಪರಿಶೀಲನೆ ಮಾಡದವರಾಗಿದ್ದಾರೆ. ಪ್ರಜೆಗಳು ಸಾಹಸಪೂರ್ವಕವಾಗಿಯೂ ಉತ್ಸಾಹಶೀಲರಾಗಿಯೂ ಕಾರ್ಯಗಳನ್ನು ನಡಿಸುತ್ತಾ ಬರುವವರಾದರೆ ಮುಂದೆ ಅವರಿಗೆ ಪರಮ ಭಾಗ್ಯಕರವಾದ ಪದವಿಯು ಲಭಿಸದಿರುವದಕ್ಕೆ ಸಂಶಯವಿಲ್ಲ.

ಬ್ರಿಟಿಷ್ ರಾಜ್ಯಭಾರವು ಇಷ್ಟು ಮಟ್ಟಿಗೆ ಜಯಪಟ್ಟು ನೆಲಸಿರುವುದಕ್ಕೆ ಕಾರಣವೇನೆಂದು ಕೇಳಬಹುದು. ಹಿಂದುಸ್ಥಾನದಲ್ಲಿ ಇಂಗ್ಲಿಷ್ ಅಧಿಕಾರಿಗಳೂ ಶಿಪಾಯಿಗಳೂ ಬಹಳ ಕೊಂಚವಾಗಿಯೇ ಇದ್ದಾರೆ. ಆದಾಗ್ಯೂ ಅವರು ಅಶೋಕನಾಗಲಿ, ಅಕ್ಬರನಾಗಲಿ, ಔರಂಗಜೇಬನಾಗಲಿ ಮಾಡಲಾರದೆ ಹೋಗಿರುವಂಥಾ ಕಾರ್ಯಗಳನ್ನು ಸಾರ್ಥಕವಾಗಿ ನೆರವೇರಿಸುತ್ತಾರೆ. ಅವರು ಪಂಜಾಬಿನಿಂದ ತಂಜಾವೂರವರೆಗೂ, ಸಿಂಧುವಿನಿಂದ ಆಸ್ಸಾಂ ವರೆಗೂ ಇರುವ ಸಮಸ್ತ ಭಾಗಗಳನ್ನೂ ಸ್ವಾಧಿಪತ್ಯವನ್ನಾಗಿ ಮಾಡಿಕೊಂಡು, ಐವತ್ತು ವರುಷಗಳಿಂದಲೂ ನೆಮ್ಮದಿ ಸುಖಸಂತೋಷಗಳನ್ನು ನೆಲೆಗೊಳಿಸಿ ಕಾಪಾಡಿಕೊಂಡು ಬಂದಿರುವರು. ಇಂಥಾ ಸ್ಥಿತಿಗೆ ದೀರ್ಘವಾಗಿ ಆಲೋಚನೆ ಮಾಡಿದರೂ ಇದರ ರೀತಿಯ ಕಾರಣಗಳು ಗೊತ್ತಾಗದೆ ಇರುವವು. ನಮಗೆ ಕಂಡುಬಂದಿರುವ ಕಾರಣಗಳೇನೆಂದರೆ :—

(೧) ನಿರ್ಮಲವಾದ ರಾಜಭಕ್ತಿಯು.—ಇಂಗ್ಲಿಷರು ಮುನ್ನೂರು ವರುಷಗಳ ಹಿಂದೆ ಹಿಂದುಸ್ಥಾನವನ್ನು ಪ್ರವೇಶಮಾಡಿದರು. ಆ ಲಾಗಾಯತು ಅವರ ಚರಿತ್ರೆಯನ್ನೆಲ್ಲಾ ಹುಡುಕಿ ನೋಡಿದರೆ ಯಾವ ಗವರ್ನರಾದರೂ ಯಾವ ಸೈನ್ಯಾಧಿಪತಿಯಾದರೂ ಇಂಗ್ಲಿಷ್ ದೊರೆಯ ಮೇಲೆ ತಿರುಗಿಬಿದ್ದದ್ದಾಗಲಿ ಸ್ವಾಮಿದ್ರೋಹ ಮಾಡಿದ್ದಾಗಲಿ ಇಲ್ಲ. ಐಕ್ಯತೆಯನ್ನು ನೆರವೇರಿಸಬೇಕೆಂಬುವುದು ಇಂಗ್ಲಿಷರಿಗೆ ತಿಳಿದಿತ್ತು. ಸ್ವಾರ್ಥವೂ ದ್ರೋಹಚಿಂತನೆಯೂ ಇಲ್ಲದ ಆ ರಾಜಭಕ್ತಿಪೂರ್ವಕವಾದ ಐಕ್ಯಮತಿಯೇ ಇಂಗ್ಲಿಷರನ್ನು ಜಯಶೀಲರನ್ನಾಗಿ ಮಾಡಿ ಅಭಿವೃದ್ಧಿಗೆ ತಂದಿರುತ್ತದೆ.

(೨) ನಿಷ್ಪಕ್ಷಪಾತವಾದ ನ್ಯಾಯವಿಮರ್ಶೆಯು.—ಪೂರ್ವಕಾಲದಲ್ಲಿ ದ್ರವ್ಯಾಶೆಯುಳ್ಳ ದುಷ್ಟ ಇಂಗ್ಲಿಷ್ ಗವರ್ನರುಗಳೂ ನ್ಯಾಯಾಧಿಪತಿಗಳೂ ಕೆಲವರಿದ್ದರು. ಅವರು ಲಂಚ ತಿನ್ನುತ್ತಲೂ ಜನರನ್ನು ಹಿಂಸೆಪಡಿಸುತ್ತಲೂ ಇದ್ದರು. ಆದರೆ ಒಟ್ಟು ಸಾಮಾನ್ಯವಾಗಿ ಒಟ್ಟು ಮಂದಿ ಇಂಗ್ಲಿಷರು ಧರ್ಮಿಷ್ಠರೇ ಆಗಿದ್ದರು. ಅನ್ಯಾಯಗಾರರೆಂದು ಅಪವಾದ ಹೊತ್ತಂಥಾ ಇಂಗ್ಲಿಷರನ್ನು ಇಂಗ್ಲಿಷ್ ಪಾರ್ಲಿಮೆಂಟಿನವರು ದಯಾದಾಕ್ಷಿಣ್ಯ ಮಾಡದೆ ತಕ್ಕ ರೀತಿಯಲ್ಲಿ ಶಿಕ್ಷಿಸಿದರು. ಈಗಲಾದರೋ ಇಂಗ್ಲಿಷ್ ಜಡ್ಜಿಗಳೆಂದು ಹೇಳಿದ ಕೂಡಲೇ ಲಂಚದ ಹೆಸರೂ ಕಾಣುವದಿಲ್ಲ. ನ್ಯಾಯತೀರ್ಮಾನ ಮಾಡುವುದರಲ್ಲಿ ಜಡ್ಜಿಯು ತಪ್ಪುಮಾಡಬಹುದು. ಆದರೆ ಕಾನೂನಿಗೂ ಸತ್ಯಕ್ಕೂ ಅನುಸಾರವಾಗಿ ನ್ಯಾಯವನ್ನು ವಿಧಿಸಲು ಅವರು ಪ್ರಯತ್ನಪಡುತ್ತಾರಲ್ಲದೆ ಯಾರೇ ಆಗಲಿ ಅವರಿಗೆ ಲಂಚಕೊಡಲು ಪ್ರಯತ್ನಿಸುವುದು ಅಸಾಧ್ಯವಾಗಿರುತ್ತದೆ.

(೩) ಹಿಂದುಸ್ಥಾನಕ್ಕೆ ಹಿತವನ್ನುಂಟುಮಾಡಬೇಕೆಂಬ ಕುತೂಹಲವು.—ಇಂಗ್ಲಿಷ್ ಗವರ್ನ್‌ಮೆಂಟಿನ ಮೇಲೆ ಆಕ್ಷೇಪಣೆ ಮಾಡತಕ್ಕವರು ಕೆಲವು ಸಂದರ್ಭಗಳಲ್ಲಿ ಆ ಗವರ್ನ್‌ಮೆಂಟಿನವರು ಇಂಗ್ಲೆಂಡನ್ನು ಐಶ್ವರ್ಯಯುಕ್ತವಾದದ್ದನ್ನಾಗಿ ಮಾಡಿಕೊಳ್ಳಬೇಕೆಂತಲೂ, ಹಿಂದುಸ್ಥಾನವನ್ನು ಬಡಸ್ಥಿತಿಗೆ ತಂದುಬಿಡಬೇಕೆಂತಲೂ ಉದ್ದೇಶವನ್ನಿಟ್ಟುಕೊಂಡಿರುವರೆಂಬದಾಗಿ ಹೇಳುವುದುಂಟು. ಈ ಆಕ್ಷೇಪಣೆಯು ನಿರಾಧಾರವಾದದ್ದೆಂತಲೂ ಸಂಪೂರ್ಣವಾಗಿ ಸುಳ್ಳೆಂತಲೂ ನಾವು ನಂಬುತ್ತೇವೆ. ಇಂಡಿಯಾ ದೇಶಕ್ಕೆ ಬಂದು ಆಳಿಹೋದ ಲಾರ್ಡ್ ವಿಲ್ಲಿಯಂ ಬೆಂಟಿಂಕ್, ಲಾರ್ಡ್ ಡಾಲ್‌ಹೌಸಿ, ಲಾರ್ಡ್ ರಿಪ್ಪನ್, ಮದರಾಸಿನ ಸರ್ ಥಾಮಸ್ ಮನ್ರೋ, ಮೈಸೂರಿನ ಸರ್ ಮಾರ್ಕ್ ಕಬ್ಬನ್, ಕರ್ನಲ್ ಡಾಬ್ಸ್, ಈ ಮೊದಲಾದ ಇಂಗ್ಲಿಷ್ ಪ್ರಭುಗಳೂ ಮಹನೀಯರೂ ಈ ರಾಷ್ಟ್ರದ ಪ್ರಜೆಗಳಿಗೆ ಉಪಕಾರಮಾಡುವುದರಲ್ಲೂ, ಗವರ್ನ್‌ಮೆಂಟನ್ನು ಪ್ರಜಾರಂಜಕವಾಗಿ ಮಾಡುವುದರಲ್ಲೂ ತಮ್ಮ ತನುಮನಗಳನ್ನು ಒಪ್ಪಿಸಿರುತ್ತಾರೆ. ಹಿಂದುಸ್ಥಾನದ ಪ್ರಜಾಕೋಟಿಗಳಿಗೆ ಉಪಕಾರಮಾಡಿ ಶ್ರೇಯಸ್ಸನ್ನು ತರಬೇಕೆಂಬುವುದೊಂದೇ ಬ್ರಿಟಿಷ್ ಗವರ್ನ್‌ಮೆಂಟಿನ ಪ್ರಧಾನವಾದ ಅಭೀಷ್ಟವಾಗಿರುತ್ತದೆ. ವಿಲಾಯತಿಯೂ ಹಿಂದುಸ್ಥಾನವೂ ಐಕ್ಯತೆಯಿಂದಿರುವಂತೆ ಇದ್ದುಕೊಂಡು, ಎರಡೂ ಸರ್ವಶ್ರೇಷ್ಠವೂ ಶ್ರೇಯಸ್ಕರವೂ ಆದ ಪದವಿಯನ್ನು ಹೊಂದಬೇಕೆಂದು ಒಂದಕ್ಕೊಂದು ಬೆಂಬಲಕೊಟ್ಟು ಕಷ್ಟಪಟ್ಟುಕೊಂಡು ಹತ್ತಿಹೋಗುತ್ತಲಿವೆ. ಅವು ಪರಸ್ಪರ ಸಹಾಯಮಾಡುತ್ತಿರುವವು.

ಚಕ್ರವರ್ತಿ ಸಾರ್ವಭೌಮರವರನ್ನೂ, ಮೈಸೂರು ಸಂಸ್ಥಾನದ ಮಹಾರಾಜರವರನ್ನೂ, ಗವರ್ನ್‌ಮೆಂಟಿನ ಸಮಸ್ತ ಅಧಿಕಾರಿಗಳನ್ನೂ ದೇವರು ಆಶೀರ್ವದಿಸಿ, ಪ್ರಜಾಪಾಲನೆಗಾಗಿ ಸರಿಯಾದ ಮಾರ್ಗಗಳು ಅವರಿಗೆ ಸ್ಫುರಿಸುವಂತೆ ಸಮಯೋಚಿತ ವಿವೇಕಗಳನ್ನು ದಯಪಾಲಿಸಲೆಂದೂ, ಹಿಂದುಸ್ಥಾನವು ನಿತ್ಯವೂ ನೆಮ್ಮದಿ ಸುಖಸಂತೋಷಗಳಲ್ಲಿ ದಿನೇ ದಿನೇ ಅಭಿವೃದ್ಧಿ ಹೊಂದುವುದಕ್ಕೆ ಸಹಾಯವಾಗಲೆಂದೂ ಪ್ರಾರ್ಥನೆ ಮಾಡುವೋಣ.

ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗಾ ಮುನ್ಸಿಫ್ ಮಿ ಎನ್ ಹಿರಿಯಣ್ಣಯ್ಯನವರಿಗೆ ಅಕ್ಟೋಬರ್ ತಾ. ೧೪ ರಿಂದ ಅರ್ಧ ಸಂಬಳದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚೀಫ್ ಕೋರ್ಟ ಡೆಪ್ಯುಟಿ ಕ್ಲಾರ್ಕ ಡಿ. ಅಳಸಿಂಗ್ರಾಚಾರ್ಯರು ಕಡೆ ಮಕಾಮು ಮುನ್ಸಿಫರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮಿ ಹೆನ್ರಿ ಅಲಯರಿಗೆ ಅಕ್ಟೋಬರ್ ತಾ. ೧೯ ರಿಂದ ಒಂಬತ್ತು ದಿವಸ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕ್ಲೋಸ್‌ಪೇಟ್ ಸಬ್ ಡಿವಿಜನ್ ಆಫೀಸರ ಮಿ ಟಿ ಚೊಕ್ಕಣ್ಣನವರಿಗೆ ಕೊಟ್ಟಿದ್ದ ಹತ್ತು ದಿವಸಗಳ ಪ್ರಿವಿಲೆಜ್ ರಜವನ್ನು ರದ್ದುಮಾಡಿದೆ.

ಆಲೂರ್ ಸಬ್ ತಾಲ್ಲೂಕ್ ಆಕ್ಟಿಂಗ್ ಡಿಪ್ಟಿ ಅಮಲ್ದಾರ್ ಮಹಮದ್ ಸಯ್ಯದ್ ಷರೀಫ್ ಯವರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳಿಗೆ ಜಾಸ್ತಿಮಾಡಿದೆ. ಈಗ ಮಾಡಿರುವ ಬದಲಿ ಏರ್ಪಾಡು ಇನ್ನೂ ಜಾರಿಯಲ್ಲಿರತಕ್ಕದ್ದು.

ಅಮಲ್ದಾರ್ ಮಿ ಎಚ್. ರಾಮಸ್ವಾಮಯ್ಯಂಗಾರ್ರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳಿಗೆ ಜಾಸ್ತಿಮಾಡಿದೆ.

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿ ಜೆ ಬಿ ಗಬ್ಬಿಕಾರ್ ಯವರಿಗೆ ಒನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿವೆ.

ಈಗ ಖಾಲಿ ಇರುವ ಸ್ಥಾನಗಳಿಗೆ ಮುಂದೆ ಹೇಳುವ ಆಫೀಸರರನ್ನು ಸೀನಿಯರ್ ಅ ಕಮಿಷನರಾಗಿ ನೇಮಕಮಾಡಿದೆ :—

ಮಿ ಗಳಾದ ಎ. ಸುಬ್ರಹ್ಮಣ್ಯ ಅಯ್ಯರವರು, ಎಂ ಎ ನಾರಾಯಣ ಅಯ್ಯಂಗಾರ್ರು, ವಿ. ಎ. ರಾಮಸ್ವಾಮಿ [illegible] ಹಂಜಾ ಹುಸ್ಸೇನ್ ರವರು, ಕೆ ಕೃಷ್ಣ ಅಯ್ಯರವರು, ಸಿ [illegible] ರವರು, [illegible] ಎಸ್. ಬಾಲಸುಬ್ರಹ್ಮಣ್ಯ ಅಯ್ಯರವರು, ಕೆ. ಮತ್ತು [illegible]

ಮುಂದೆ ಹೇಳುವ ಅಮಲ್ದಾರರುಗಳ ವರ್ಗಾವಣೆ ಹುಕುಂ ಮಾಡಲಾಗಿದೆ —(೧) ರಜದ ಮೇಲಿರುವ ಮಿ ಎಚ್ ರಾಮಸ್ವಾಮಯ್ಯಂಗಾರ್ರನ್ನು ಕೊಪ್ಪದಿಂದ ಚನ್ನಗಿರಿ ತಾಲ್ಲೂಕಿಗೆ; (೨) ಮಿ ಎನ್ [illegible] ನಾರಾಯಣಯ್ಯಂಗಾರ್ರನ್ನು ಹೊನ್ನಾಳಿಯಿಂದ ಕೊಪ್ಪ ತಾಲ್ಲೂಕಿಗೆ.

ಮೂಡಿಗೆರೆ ತಾಲ್ಲೂಕಿನ ಆಕ್ಟಿಂಗ್ ಅಮಲ್ದಾರ್ ಮಿ ಕೆ ಕೆ. ವೆಂಕಟಸ್ವಾಮಿ ಅಯ್ಯರವರಿಗೆ ಬ್ರೀಚ್ ಆಫ್ ಕಾಂಟ್ರಾಕ್ಟ್ ಕಾನೂನಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ದರ್ಯಾಫ್ತಿ ಮಾಡುವ ಅಧಿಕಾರ ಕೊಡಲ್ಪಟ್ಟಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಟ್ರೆಷರಿ ಅ ಕಮಿಷನರ್ ಮಿ ಎ ವೆಂಕಟಸುಬ್ಬಯ್ಯನವರಿಗೆ ಬ್ರೀಚ್ ಆಫ್ ಕಾಂಟ್ರಾಕ್ಟ್ ಆಕ್ಟಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ದರ್ಯಾಫ್ತಿಮಾಡುವ ಅಧಿಕಾರ ಕೊಡಲ್ಪಟ್ಟಿದೆ.

ನಗರ್ ತಾಲ್ಲೂಕಿನ ಆಕ್ಟಿಂಗ್ ಅಮಲ್ದಾರ್ ಮಿ ಎಂ ರಾಮಚಂದ್ರರಾಯರಿಗೆ ಆಗಸ್ಟ್ ತಾ. ೧೫ ರಿಂದ ಆರು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಅವರ ಗೈರುಹಾಜರಿಯಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಬಾಕಿ ಕೆಲಸಗಳ ಭಾರವನ್ನು ವಹಿಸಿದ್ದರು.

ಮೈಸೂರು ಮಹಮದೀಯರ ಸಂಘವು.

ದಿವಾನರವರು ದಯಮಾಡಿದ್ದರು.

ರಾಜಧಾನಿಯ ಮುಸಲ್ಮಾನ ಪ್ರಜೆಗಳು ಮಜಲಿಸ-ರಿಫಾಹುಲ್-ಮುಸ್ಲಿಮಿನ್ ಎಂಬ ಸಂಘವನ್ನು ಮಾಡಿಕೊಂಡು, ಒಂದು ವಿಧವಾ ನಿಲಯವನ್ನೂ ಒಂದು ಬಾಲಿಕಾ ಪಾಠಶಾಲೆಯನ್ನೂ ಒಂದು ಅನಾಥ ಶಾಲೆಯನ್ನೂ ನಡೆಸುತ್ತಾ ಬಂದಿರುವುದೂ, ಮೊನ್ನೆ ೩ನೇ ಅವರು ಆ ಸಂಘದ ವಾರ್ಷಿಕೋತ್ಸವವನ್ನು ನೆರವೇರಿಸಿದ್ದೂ ವಾಚಕರಿಗೆ ತಿಳಿಸಿರುತ್ತೇವಷ್ಟೆ. ಕಳೆದ ಭಾನುವಾರ ಬೆಳಗ್ಗೆ ದಿವಾನರವರು ಡೆಪ್ಯುಟಿ ಕಮಿಷನರಾದ ಮ|| ಕಾಂತರಾಜೇ ಅರಸಿನವರ ಕೂಡ ಆ ಸಂಘದ ಕಟ್ಟಡಕ್ಕೆ ದಯಮಾಡಿದರು. ಸಂಘದ ಪ್ರೆಸಿಡೆಂಟರಾದ ಮ|| ಮಹಮದ್ ಜಾಫರ್‌ಯವರೂ, ಸೆಕ್ರೆಟರಿಗಳಾದ ಮ|| ರಹಮತ್ ಉಲ್ಲಾ ಅಹಮದ್ ಸೇಟ್‌ಯವರೂ, ಮ|| ಸೈಯದ್ ಮುಸ್ತಫಾಯವರೂ ಮಹಮದೀಯ ಬಹು ಜನ ದೊಡ್ಡ ಮನುಷ್ಯರ ಸಹಿತ ಕಾದಿದ್ದು ಅವರನ್ನು ಎದುರುಗೊಂಡು ಮಂದಿರದೊಳಕ್ಕೆ ಕರೆದುಕೊಂಡು ಹೋದರು. ವಿಧವಾ ನಿಲಯದಲ್ಲಿ ತಯಾರಾಗಿದ್ದ ಕಸೂತಿ ಕೆಲಸವೇ ಮೊದಲಾದ ಪದಾರ್ಥಗಳನ್ನು ನೋಡಿ ದಿವಾನರವರು ತುಂಬಾ ಸಂತೋಷಪಟ್ಟುಕೊಂಡು, ಗರ್ಲ್ಸ್ ಸ್ಕೂಲಿಗೆ ದಯಮಾಡಿ ಬಾಲಿಕೆಯರು ವಿದ್ಯಾಭ್ಯಾಸ ಮಾಡುತ್ತಿದ್ದದ್ದನ್ನು ಪರಾಂಬರಿಸಿದ್ದಲ್ಲದೆ ಸ್ವಲ್ಪ ಮಟ್ಟಿಗೆ ಮಕ್ಕಳನ್ನು ಪರೀಕ್ಷೆ ಮಾಡಿ, ಅವರು ಹೇಳಿದ ಉತ್ತರಗಳನ್ನು ಕೇಳಿ ಬಹಳ ಸಂತೋಷಯುಕ್ತರಾಗಿ, ಅಷ್ಟು ಸ್ವಲ್ಪ ಕಾಲದಲ್ಲೇ ಹೆಣ್ಣು ಮಕ್ಕಳು ಅಷ್ಟು ಮಟ್ಟಿಗೆ ವಿದ್ಯಾವತಿಯರಾಗಿಯೂ, ಕೈಕಸಬಿನಲ್ಲಿ ಚಟುವಟಿಕೆಯುಳ್ಳವರಾಗಿಯೂ ಆಗಿರುವುದು ತುಂಬಾ ಸ್ತೋತ್ರಾರ್ಹವಾಗಿರುತ್ತದೆಂದು ತಿಳಿಸಿದರು.

ತರುವಾಯ ದಿವಾನರೇ ಮುಂತಾದವರನ್ನು ಸಂಘದ ಸಭಾಮಂದಿರಕ್ಕೆ ಕರೆದುತಂದು ಶ್ರೇಷ್ಠಾಸನಗಳಲ್ಲಿ ಕೂಡಿಸಿದರು. ಅಲ್ಲಿ ಮೌಲ್ವಿಗಳೇ ಮೊದಲಾದ ಮಹಮದೀಯರು ಹೊಸ ಕವನಗಳನ್ನು ಓದಿ ಹೇಳಿದರು; ಉಪನ್ಯಾಸಗಳನ್ನು ಮಾಡಿದರು. ಮ|| ಗುಲಾಂ ಮೊಹದೀನ್ ಮೇಕರಿ ಯವರು ಇಂಗ್ಲಿಷಿನಲ್ಲಿ ಕೆಲವು ವಾಕ್ಯಗಳನ್ನು ಹೇಳಿ, ದಿವಾನರವರ ಪ್ರೀತಿಯನ್ನು ಕೊಂಡಾಡಿ ವಂದಿಸಿದರು. ದಿವಾನರವರು ಸಭಿಕರನ್ನು ಕುರಿತು—ಕಳೆದ ವರುಷ ತಾವು ಮಜಲೀಸಿಗೆ ಬರಲು ಅನಾನುಕೂಲವಾಯಿತೆಂದೂ, ಆ ದಿನ ತಮ್ಮ ವಾಗ್ದಾನವನ್ನು ನೆರವೇರಿಸುವುದಕ್ಕಾಗಿ ಬಂದಿರುವುದಾಗಿಯೂ, ಸಂಘದವರು ಬಡವಿಧವೆಯರ ಪೋಷಣೆಗಾಗಿಯೂ ಹೆಣ್ಣುಮಕ್ಕಳ ವಿದ್ಯಾಭಿವೃದ್ಧಿಗಾಗಿಯೂ ಮಾಡಿರುವ ಏರ್ಪಾಡುಗಳೆಲ್ಲಾ ಬಹಳ ತೃಪ್ತಿಕರವಾಗಿರುತ್ತವೆಂತಲೂ, ಇಂಥಾ ಸಂಘಗಳೂ ಏರ್ಪಾಡುಗಳೂ ಪ್ರಜೆಗಳೇ ಮುಂದರಿಸಿ ನಡಿಸಿಕೊಳ್ಳುತ್ತಾ ಬರುವುದು ದೇಶಾಭಿವೃದ್ಧಿಗೆ ಕಾರಣವೆಂತಲೂ, ಈ ಸಂಘದ ಫಂಡಿಗೆ ತಾವು ೧೦೦ ರೂಪಾಯಿ ಬಹುಮಾನ ಮಾಡುವುದಾಗಿಯೂ ಅಪ್ಪಣೆ ಕೊಡಿಸಿದರು.

ದಿವಾನರವರಿಗೂ, ಮ|| ಕಾಂತರಾಜೇ ಅರಸಿನವರಿಗೂ ಹಾರಗಳನ್ನು ಹಾಕಿ, ಪುಷ್ಪಗುಚ್ಛಗಳನ್ನೊಪ್ಪಿಸಿ, ಅವರ ಪಕ್ಕದಲ್ಲೇ ಮಹಮದೀಯ ಮುಖಂಡರು ಕುಳಿತು ಫೋಟೋ ತೆಗಿಸಿಕೊಂಡರು. ತರುವಾಯ ಸಂಘದವರು ಅವರನ್ನು ಸನ್ಮಾನಪೂರ್ವಕವಾಗಿ ಸಾಗಕಳುಹಿಸಿದರು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ರವಿವಾರ ಬೆಳಗ್ಗೆ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳು ಸಭೆ ಸೇರಿ ತಿಂಗಳುಗಟ್ಟಳೆಯ ಮ್ಯುನಿಸಿಪಲ್ ಮೀಟಿಂಗ್ ನಡಿಸಿದರು. ಸೆಪ್ಟಂಬರ್ ತಿಂಗಳ ಜಮಾಬಂದನ್ನು ಓದಿದ್ದರಲ್ಲಿ ಆಕ್ಟ್ರಾಯಿ ಬಾಬಿನಲ್ಲಿ ೮,೩೭೫ ರೂಪಾಯಿ ಉತ್ಪತ್ತಿ ಆಯಿತೆಂದೂ, ಒಟ್ಟು ಮ್ಯುನಿಸಿಪಲ್ ಹುಟ್ಟುವಳಿ ರೂ. ೧೯,೮೭೭—೫—೭ ಪೈ ಆಯಿತೆಂದೂ, ಒಟ್ಟು ಖರ್ಚು ರೂ. ೧೩,೦೬೨—೧೩—೧೦ ಪೈ ಆಯಿತೆಂದೂ; ಆ ತಿಂಗಳಲ್ಲಿ ಜನನ ೧೧೨, ಮರಣ ಪ್ಲೇಗ್ ೮, ಜ್ವರ ೧೯, ಇತರ ಕಾರಣಗಳು ೧೦೬, ಒಟ್ಟು ೧೩೩ ಎಂದೂ ಗೊತ್ತಾಯಿತು. ಆಡಿಟರುಗಳು ತಮ್ಮ ರಿಪೋರ್ಟಿನಲ್ಲಿ ಮಾಡಿದ್ದ ಕೆಲವು ಆಕ್ಷೇಪಣೆಗಳಿಗೆ ಸಮಾಧಾನ ಹೇಳಲಾಯಿತು; ಇನ್ನು ಕೆಲವು ಇಂಥಿಂಥವುಗಳೆಂದು ನಿರ್ದೇಶಿಸಲ್ಪಟ್ಟಿರಲಿಲ್ಲವಾಗಿ ಅವನ್ನು ಗೊತ್ತುಮಾಡಿ ನಮೂದಿಸುವಂತೆ ಸೂಚಿಸಲಾಯಿತು. ಮುಂದಿನ ಮೂರು ತಿಂಗಳ ಮ್ಯುನಿಸಿಪಲ್ ಲೆಕ್ಕಗಳನ್ನು ಆಡಿಟ್ ಮಾಡುವುದಕ್ಕೆ ಕೌನ್ಸಿಲರುಗಳಾದ ಮ|| ಅನಂತರಾಜೈಯವರನ್ನೂ ಮ|| ಹಸನ್ ಅಲ್ಲಿ ಬೇಗ್‌ಯವರನ್ನೂ ಆಡಿಟರಾಗಿ ಚುನಾಯಿಸಿದರು.

ಮೈಸೂರು ಕರ್ನಾಟಕ ಆಸ್ಪತ್ರೆಯ ಕಂಪೌಂಡರಿಗೆ ಇಜಾಫೆ ಕೊಡುವ ವಿಷಯ ಚರ್ಚೆಯಾಗಿ, ಸರ್ಕಾರದವರು ಇಷ್ಟರಲ್ಲೇ ಆಯುರ್ವೇದ ಪಾಠಶಾಲೆಯನ್ನು ಸ್ಥಾಪಿಸುವವರಾಗಿರೋಣವರಿಂದ ಅದರ ಏರ್ಪಾಡನ್ನು ನೋಡಿಕೊಂಡು ಈ ವಿಷಯವನ್ನು ಇತ್ಯರ್ಥಮಾಡೋಣವೆಂದು ತೆಗೆದಿಟ್ಟರು.

ಮಾರ್ಕೆಟ್ಟಿನಲ್ಲಿ ಸಕ್ಕರೆ ಕಾರ್ಖಾನೆಗೆ ನೀರು ಕೊಡುವುದಕ್ಕೆ ನಲ್ಲಿಯನ್ನು ಹೊರಪ್ರಾಕಾರದಲ್ಲಿ ಇಟ್ಟು ಪಬ್ಲಿಕ್ ಜನರೂ ಕಾರ್ಖಾನೆಯವರೂ ಉಪಯೋಗಿಸಿಕೊಳ್ಳುವಂತೆ ಅನುಕೂಲಮಾಡಿಕೊಡಬಹುದೆಂದು ತೀರ್ಮಾನ ಮಾಡಿದರು.

ಜನನಮರಣದ ಲೆಕ್ಕಗಳನ್ನು ಇಡುವ ವಿಷಯದಲ್ಲಿ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ಮಾಡಿ ಜಾರಿಯಲ್ಲಿ ಇಟ್ಟಿರುವ ಬೈಲಾಗಳನ್ನೇ ರಾಜಧಾನಿಗೂ ಜಾರಿಗೆ ತರಬೇಕೆಂದು ಕೌನ್ಸಿಲರುಗಳು ತೀರ್ಮಾನಮಾಡಿದರು. ಈ ಕಾನೂನು ಪ್ರಕಾರ ಮನೆಯ ಯಜಮಾನನು ತನ್ನ ಮನೆಯಲ್ಲಿ ಆಗುವ ಜನನವನ್ನು ಒಂದು ವಾರದೊಳಗೂ, ಮರಣವನ್ನು ೨೪ ಗಂಟೆಗಳೊಳಗೂ ತನ್ನ ಮನೆಗೆ ಸಮೀಪದಲ್ಲಿರುವಂಥಾ ಪೋಲೀಸ್ ಸ್ಟೇಷನ್‌ಗೆ ಅಗತ್ಯವಾಗಿ ತಿಳಿಸಬೇಕೆಂತಲೂ, ತಿಳಿಸದೆ ತಪ್ಪಿದರೆ ಜುಲ್ಮಾನೆ ಮೊದಲಾದ ಶಿಕ್ಷೆಗೆ ಗುರಿಮಾಡಲ್ಪಡುವನೆಂತಲೂ ವಿಧಾಯಕವಾಗಿದೆ.

ಚೀಫ್ ಸ್ಯಾನಿಟರಿ ಇನ್ಸ್‌ಪೆಕ್ಟರ ಕೆಲಸವನ್ನು ವಜಾಮಾಡಬೇಕೆಂತಲೂ, ಮೂಗು ಪ್ರಾಣಿಗಳಿಗೆ ಗಾಡಿಯವರೂ ಇತರರೂ ಮಾಡುವ ಹಿಂಸೆಯನ್ನು ನಿರ್ಬಂಧಪಡಿಸಿ ನಿಲ್ಲಿಸಬೇಕೆಂತಲೂ ಮ|| ವೆಂಕಟಕೃಷ್ಣಯ್ಯನವರೇ ಮೊದಲಾದ ಕೌನ್ಸಿಲರುಗಳು ಸೂಚಿಸಿದರು. ಮ್ಯುನಿಸಿಪಲ್ ಸ್ಯಾನಿಟರಿ ಬಾಬನ್ನು ಇಷ್ಟರಲ್ಲೇ ಸರಿಯಾಗಿ ಏರ್ಪಾಡುಮಾಡುವ ಸಂದರ್ಭದಲ್ಲಿ ಇನ್ಸ್‌ಪೆಕ್ಟರ್ ಕೆಲಸವನ್ನು ವಜಾಮಾಡುವ ಆಲೋಚನೆಮಾಡಲಾಗುವುದೆಂತಲೂ, ಮೂಗು ಪ್ರಾಣಿಗಳ ಹಿಂಸೆಯನ್ನು ತಪ್ಪಿಸುವುದಕ್ಕೆ ಏರ್ಪಟ್ಟ ಕಾನೂನು ಜಾರಿಯಲ್ಲಿದೆ ಎಂತಲೂ ಇತ್ಯರ್ಥಮಾಡಿದರು.

ಸರ್ಕಾರಿ ಯುನಾನಿ ಆಸ್ಪತ್ರೆಯ ಹಕೀಮರ ಸಂಬಳವನ್ನು ೩೫ ರಿಂದ ೪೦ ರೂಪಾಯಿಗೆ ಬಡ್ತಿಮಾಡಿದೆ ಎಂದೂ, ಅವರಿಗೆ ಅಲೋವನ್ಸು ೨೦ ರೂಪಾಯಿ ಕೊಡಲಾಗುವುದಿಲ್ಲವೆಂತಲೂ ಬಂದ ಗವರ್ನಮೆಂಟ್ ಹುಕುಮನ್ನು ಓದಿಸಿ, ರಿಕಾರ್ಡುಮಾಡಿಕೊಂಡರು.

ರಾಜಧಾನಿಗೆ ನೀರು ಒದಗಿಸುವ ಬಾಬನ್ನು ವಾಪಸು ಮ್ಯುನಿಸಿಪಾಲಿಟಿಗೇ ವಹಿಸಬೇಕೆಂದು ಕೌನ್ಸಿಲರುಗಳು ಹಿಂದೆ ಗವರ್ನಮೆಂಟಿಗೆ ಬರೆದುಕೊಂಡಿದ್ದರು. ಈ ವಿಷಯದಲ್ಲಿ ಚೀಫ್ ಇಂಜನಿಯರವರು ಗವರ್ನಮೆಂಟಿಗೆ ಬರೆದಿದ್ದ ಅಭಿಪ್ರಾಯಗಳನ್ನು ಗವರ್ನಮೆಂಟಿನವರು ಮ್ಯುನಿಸಿಪಾಲಿಟಿಗೆ ತಿಳಿಸಿದಾರೆ. ಚೀಫ್ ಇಂಜನಿಯರವರು ಹೇಳುವ ಅಭಿಪ್ರಾಯವೇನೆಂದರೆ—ರಾಜಧಾನಿಗೆ ೧೮೯೬ ರಲ್ಲಿ ನೀರು ಸರಬರಾಯಿಯ ಏರ್ಪಾಡಾಯಿತು. ಮ್ಯುನಿಸಿಪಾಲಿಟಿಯವರು ಬಳಗೋಳದಲ್ಲಿ ನೀರು ಎತ್ತುವ ಪಂಪುಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡಿರಲಿಲ್ಲ. ಅವುಗಳಿಂದ ಸಾಕಾದಷ್ಟು ನೀರೂ ಒದಗುತ್ತಿರಲಿಲ್ಲ. ನೀರನ್ನು ಒಂಟಿಕೊಪ್ಪಲಲ್ಲಿ ಕಟ್ಟಿರುವ ಕೊಳಗಳಿಗೆ ತಂದು ಬಿಟ್ಟುಕೊಳ್ಳುತ್ತಿದ್ದರು. ಆ ಕೊಳಗಳು ರಿಪೇರಿ ಇಲ್ಲದೆ ಬಹಳ ಕೆಟ್ಟುಹೋಗಿದ್ದವು. ನೀರು ಅವುಗಳಲ್ಲಿ ನಿಲ್ಲದೆ ಸೋರಿ ಬಿದ್ದು ವ್ಯರ್ಥವಾಗಿ ಹರಿದುಹೋಗುತ್ತಿತ್ತು. ಮ್ಯುನಿಸಿಪಾಲಿಟಿಯವರು ಬಹಳ ಅಜಾಗರೂಕತೆಯಿಂದಲೂ, ಅಲಕ್ಷ್ಯವಾಗಿಯೂ ಇದ್ದುಬಿಟ್ಟರು. ಪಟ್ಟಣದಲ್ಲಿ ಹಾಕಿರುವ ನಲ್ಲಿಗಳು ಅಲ್ಪ ಕ್ರಯದವುಗಳಾಗಿಯೂ ವಕ್ರಪಕ್ರವಾಗಿಯೂ ಇದ್ದವು. ಇವು ಆಗಾಗ್ಗೆ ಒಡೆಯುತ್ತಲೂ ಸೋರುತ್ತಲೂ ಇದ್ದವು. ಸರಿಯಾಗಿ ನೋಡಿಕೊಳ್ಳದೆ ಹೋದದ್ದರಿಂದ ನೀರು ಅನಾರೋಗ್ಯಕರವಾಗಿಯೂ ಪರಿಣಮಿಸಿತ್ತು. ಯಾವದೊಂದು ಕ್ರಮವಾಗಲಿ ಕಟ್ಟುಬಂದಿಯಾಗಲಿ ಇಲ್ಲದೆ, ಈ ನೀರಿನ ಏರ್ಪಾಡು ಅಪಮಾನಕರವಾದ ಸ್ಥಿತಿಯಲ್ಲಿತ್ತು. ಈಚೆಗೆ ಈ ನೀರಿನ ಬಾಬನ್ನು ಮ್ಯುನಿಸಿಪಾಲಿಟಿಯವರು ಇಂಜನಿಯರ್ ಇಲಾಖೆಗೆ ವಹಿಸಿಬಿಟ್ಟರು. ಅವರು ಹೊಸ ತರಹ ನೀರು ಎತ್ತುವ ಯಂತ್ರಗಳನ್ನು ತರಿಸಿ ಹೆಚ್ಚು ನೀರನ್ನು ಪಟ್ಟಣಕ್ಕೆ ಕಳುಹಿಸುತ್ತಿದ್ದಾರೆ. ಮೇಲ್ಗಡೆ ಕೊಳಗಳನ್ನು ಚೊಕ್ಕಟಮಾಡಿ, ಬಂದೋಬಸ್ತಾಗಿ ಕಾಮಗಾರಿ ಮಾಡಿಸಿ, ಕ್ರಮಪಡಿಸಿರುತ್ತಾರೆ. ಪಟ್ಟಣದಲ್ಲಿ ಅನೇಕ ಕಡೆ ಪಬ್ಲಿಕ್ ಕೊಳಾಯಿಗಳನ್ನು ಬದಲಾಯಿಸಿ ಹೊಸದಾಗಿ ಕಟ್ಟಿಸಿರುತ್ತಾರೆ. ಗಟ್ಟಿತರದ ಹೊಸ ನಲ್ಲಿಗಳನ್ನು ತರಿಸಿಹಾಕುತ್ತಾ ಬಂದಿದ್ದಾರೆ. ಮ್ಯುನಿಸಿಪಾಲಿಟಿಯವರು ಇಂಜನಿಯರ್ ಇಲಾಖೆಯವರಿಗೆ ಸಹಾಯಮಾಡುತ್ತಾ ಬಾರದೆ, ಅನೇಕ ಅಡಚಣೆಗಳನ್ನು ತಂದುಹಾಕುತ್ತಿರುವರು. ಅನಾವಶ್ಯಕವಾಗಿಯೂ ಕೋಪೋದ್ರೇಕವಾಗುವಂತೆಯೂ ಆಕ್ಷೇಪಣೆಮಾಡಿ ಕಾಗದಪತ್ರಗಳನ್ನು ಬೆಳೆಸುತ್ತಿದ್ದಾರೆ. ಈಗ ಈ ನೀರಿನ ಮೇಲ್ವಿಚಾರಣೆಯನ್ನೆಲ್ಲಾ ಮತ್ತೆ ತಮಗೇ ವಹಿಸಿಕೊಡಬೇಕೆಂದು ಕೇಳಿರುವುದು ಆಶ್ಚರ್ಯಕರವಾಗಿದೆ. ಈ ಯೋಚನೆಯನ್ನು ಅವರು ಬಿಟ್ಟುಬಿಡತಕ್ಕದ್ದಾಗಿದೆ. ಅವರು ಈ ಬಾಬನ್ನು ತೃಪ್ತಿಕರವಾಗಿ ನೋಡಿಕೊಳ್ಳಲಾರರೆಂಬುವುದು ಹಿಂದಿನ ನಡವಳಿಕೆಯಿಂದ ವ್ಯಕ್ತಪಡುವುದು. ಮುಂದಿನ ವರುಷದ ಮಾರ್ಚಿ ತಿಂಗಳೊಳಗಾಗಿ ಬಳಗೋಳದಲ್ಲಿ ವಿದ್ಯುಚ್ಛಕ್ತಿಯನ್ನು ಪ್ರಯೋಗಿಸಿ ರಾಜಧಾನಿಗೆ ನೀರು ಎತ್ತಿ ಕಳುಹಿಸುವಂತೆ ಏರ್ಪಾಡಾಗುತ್ತದೆ. ಈಗ ಮನೆಗಳಿಗೆ ನಲ್ಲಿ ಇಡಿಸಿಕೊಂಡಿರುವವರು ನೀರನ್ನು ಬಹಳ ವ್ಯರ್ಥವಾಗಿ ಉಪಯೋಗಿಸುತ್ತಾರೆ. ಅನೇಕರು ಆ ನೀರನ್ನು ಬಿಟ್ಟುಕೊಂಡು ಗಿಡ, ತೋಟ, ತರಕಾರಿಗಳನ್ನು ಬೆಳೆಯುವರು. ಆ ಮನೆಗಳ ನಲ್ಲಿಗಳಿಗೆಲ್ಲಾ ಮೀಟರ್ ಎಂಬ ನೀರನ್ನು ಅಳತೆಮಾಡಿ ತೋರಿಸುವ ಯಂತ್ರಗಳನ್ನು ಇಡಬೇಕಾಗಿದೆ ಎಂಬದೇ ರೀತಿಯಾಗಿ ಚೀಫ್ ಇಂಜನಿಯರವರು ಬರೆದಿದ್ದರು. ಈ ಕಾಗದವನ್ನು ಮ್ಯುನಿಸಿಪಲ್ ಕೌನ್ಸಿಲರುಗಳು ಓದಿಸಿ ಕೇಳಿ, ಮ|| ಗಳಾದ ಎಂ. ಪಿ. ರಂಗೈಯಂಗಾರರೂ, ಡಾ|| ಕೃಷ್ಣಸ್ವಾಮ್ಯಯ್ಯನವರೂ, ಎಂ. ವೆಂಕಟಕೃಷ್ಣಯ್ಯನವರೂ, ಕೆ. ಚಂದ್ರಶೇಖರಯ್ಯನವರೂ ವೈಸ್ ಪ್ರೆಸಿಡೆಂಟರ ಕೂಡ ಕಲೆತು, ಈ ಕಾಗದಕ್ಕೆ ತಕ್ಕ ಜವಾಬನ್ನು ಬರೆದು ಕೌನ್ಸಿಲ್ಲಿಗೆ ತರಬೇಕೆಂದು ತೀರ್ಮಾನಮಾಡಿದರು.

ಮ|| ಸಿದ್ದಲಿಂಗಪ್ಪನವರಿಂದ ಪ್ರಕಟಿಸಲ್ಪಟ್ಟಿರುವ ಚಿತ್ರ ಸಹಿತವಾದ ಕರ್ನಾಟಕ ವರ್ಣಮಾಲೆ ಎಂಬ ಪಟದ ೧೦೦ ಪ್ರತಿಗಳನ್ನು ಮ್ಯುನಿಸಿಪಲ್ ಹಣದಿಂದ ಕೊಂಡು, ರಾಜಧಾನಿಯಲ್ಲಿ ಮ್ಯುನಿಸಿಪಲ್ ಗ್ರ್ಯಾಂಟು ಪಡೆಯುವ ಪಳ್ಳಿಮಠಗಳಿಗೆಲ್ಲಾ ಹಂಚಿ ಕೊಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.

ಪ್ಲೇಗ್ ಆದ ಮನೆಗಳನ್ನು ಶುದ್ಧಿ ಮಾಡುವುದಕ್ಕೆ ಹತ್ತು ಜನ ಜವಾನರನ್ನು ಸಂಬಳಕ್ಕೆ ನೇಮಿಸಿಕೊಂಡಿದಾರೆ. ಇವರಲ್ಲಿ ಐದು ಮಂದಿಯನ್ನು ವಜಾಮಾಡಿ, ಇನ್ನೈದು ಜನರನ್ನು ಕನ್ಸರ್ವೆನ್ಸಿ ಶಿಬ್ಬಂದಿಗೆ ಖಾಲಿಯಾದ ಹಾಗೆಲ್ಲಾ ಸೇರಿಸಿಕೊಳ್ಳಬೇಕೆಂದೂ, ಇನ್ನು ಮುಂದೆ ಅವಶ್ಯಬಿದ್ದಾಗ ಇವರಿಂದಲೇ ಡಿಸಿನ್‌ಫೆಕ್ಷನ್ ಕೆಲಸವನ್ನೂ ಮಾಡಿಸತಕ್ಕದ್ದೆಂದೂ ಕೌನ್ಸಿಲರುಗಳು ತೀರ್ಮಾನಮಾಡಿದರು.

ಆಕ್ಟ್ರಾಯಿ ಬಾಬಿನಲ್ಲಿ ದಸ್ತಾನ್ ಇಡತಕ್ಕ ವಸೂಲಾಗುವ ಈಗಿನ ದರಗಳನ್ನೇ ಇನ್ನೂ ಕೆಲವು ಕಾಲ ಜಾರಿಯಲ್ಲಿಡಬೇಕೆಂದು ಮ್ಯಾನೇಜಿಂಗ್ ಕಮಿಟಿಯವರು ಸೂಚಿಸಿದ್ದದ್ದನ್ನು ಮೆಂಬರುಗಳು ಒಪ್ಪಿಕೊಂಡರು.

ರಾಜಧಾನಿಯಲ್ಲಿ ನವಂಬರ್ ತಾ. ೨ ರಲ್ಲಿ ನಡಿಸಬೇಕಾದ ವಾರ್ಷಿಕೋತ್ಸವಕ್ಕೆ ಮ್ಯುನಿಸಿಪಾಲಿಟಿಯಿಂದ ೫೦೦ ರೂಪಾಯಿ ವಿನಿಯೋಗಿಸಬಹುದೆಂದು ತೀರ್ಮಾನವಾಯಿತು.

ನಾಯಿಕಡಿದ ರೋಗವೂ, ಅದರ ಪರಿಹಾರವೂ.

ರೋಗದ ಪೂರ್ವೋತ್ತರವು.

ನಾಯಿಜಾತಿಗೆ ಸೇರಿದ ಪ್ರಾಣಿಗಳಲ್ಲಿ ಈ ಹುಚ್ಚು ಹಿಡಿಯುವ ರೋಗವು ಉತ್ಪತ್ತಿಯಾಗುವುದು. ಆದರೆ ಈ ರೋಗವು ಮನುಷ್ಯನಿಗೆ ವ್ಯಾಪಿಸುವುದು ಮುಖ್ಯವಿಷಯ. ಆ ನಾಯಿಜಾತಿಯ ಪ್ರಾಣಿಗಳಲ್ಲಿ ಇಂಥಾ ರೋಗ ಹುಟ್ಟುವುದಕ್ಕೆ ಕಾರಣವೇನೆಂಬುವುದು ಇನ್ನೂ ಗೊತ್ತಾಗಲಿಲ್ಲ. ಬಿಸಲಿನ ಬೇಗೆಯಿಂದ ಅದು ಉತ್ಪತ್ತಿಯಾಗುತ್ತದೆಂದು ಹೇಳುವುದನ್ನು ಪರಿಶೋಧನೆ ಮಾಡಿನೋಡಿ, ಅದು ನಿಜವಲ್ಲವೆಂದು ತೀರ್ಮಾನಮಾಡಿರುತ್ತಾರೆ. ಈ ರೋಗವು ದೇಹದ ನರಗಳನ್ನು ಹಿಡಿಯುವುದು. ಮಿದುಳು, ಬೆನ್ನುಮೂಳೆಯೊಳಗಿರುವ ನರಗಳ ಮೂಲಸ್ಥಾನ, ಕೆಲವು ಗಂಟುಗಳು, ಬಾಯಿಯಲ್ಲಿ ಒಸರುವಂಥಾ ಜೊಲ್ಲು, ಈ ಮೊದಲಾದ ಭಾಗಗಳಲ್ಲಿ ಆ ರೋಗವು ವ್ಯಾಪಿಸಿ ಕಾಣಿಸಿಕೊಳ್ಳುತ್ತದೆ. ಆದ್ದರಿಂದ ನಾಯಿಯು ತನ್ನ ಜೊಲ್ಲಿನಲ್ಲಿರುವಂಥಾ ಆ ರೋಗವನ್ನು ಮನುಷ್ಯನ ಶರೀರಕ್ಕೆ ತಂದುಬಿಡುವುದು. ಅದು ಮನುಷ್ಯನನ್ನು ತನ್ನ ಹಲ್ಲುಗಳಿಂದ ಕಡಿಯುವಾಗಲೇ ಅದರ ಜೊಲ್ಲು ಕಡಿದ ಸ್ಥಳದ ಮೂಲಕ ಮನುಷ್ಯನ ದೇಹದೊಳಕ್ಕೆ ಪ್ರವೇಶಿಸಿ, ಅವನಲ್ಲಿ ರೋಗವನ್ನು ಉಂಟುಮಾಡುತ್ತದೆ; ಅಥವಾ, ಮನುಷ್ಯನ ದೇಹದಲ್ಲಿರುವ ಗಾಯಕ್ಕೆ ಆ ಜೊಲ್ಲು ಬಿದ್ದರೂ ಮನುಷ್ಯನಿಗೆ ಆ ರೋಗ ಪ್ರಾಪ್ತವಾಗುವುದು. ಜೊಲ್ಲನ್ನು ಪರೀಕ್ಷೆಮಾಡಿ ನೋಡಿದ್ದರಲ್ಲಿ ಆ ರೋಗ ಲಕ್ಷಣವು ಅದರಲ್ಲುಂಟೆಂದು ಗೊತ್ತಾಗಿದೆ. ರೋಗವು ಹುಟ್ಟಿದ ತರುಣದಲ್ಲೇ ನಾಯಿ ಮನುಷ್ಯನನ್ನಾಗಲಿ ಇತರ ಪ್ರಾಣಿಯನ್ನಾಗಲಿ ಕಚ್ಚಿದರೆ ಅದರಿಂದ ಮರಣವಾಗುವುದೂ ಉಂಟು. ಆದಕಾರಣ ಕಚ್ಚಿದ ನಾಯಿಗೆ ಹುಚ್ಚು ಹಿಡಿಯಲಿಲ್ಲವೆಂದು ಗೊತ್ತಾದರೂ ಆ ಕೂಡಲೇ ಅದಕ್ಕೆ ಪ್ರತೀಕಾರವಾದ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬೇಕಾದದ್ದು ಅವಶ್ಯ. ಮತ್ತು ಕಚ್ಚಿದ ನಾಯಿಯನ್ನು ಆ ಕೂಡಲೇ ಕೊಂದುಬಿಡಬಾರದು; ಕೆಲವು ದಿನಗಳ ತನಕ ಅದನ್ನು ಕಟ್ಟಿಹಾಕಿ, ಅದರ ಲಕ್ಷಣವನ್ನು ನೋಡುತ್ತಿರಬೇಕು. ಕಚ್ಚಿದಂಥಾ ನಾಯಿ ಹತ್ತು ದಿನಗಳ ತನಕ ಹುಚ್ಚು ಹಿಡಿಯದೆ ಆರೋಗ್ಯವಾಗಿರುವ ಪಕ್ಷಕ್ಕೆ, ಕಚ್ಚಿಸಿಕೊಂಡ ಮನುಷ್ಯನಿಗೆ ಯಾವ ಚಿಕಿತ್ಸೆಯೂ ಅವಶ್ಯವಿರುವುದಿಲ್ಲ.

ರೋಗದ ಬೆಳವಣಿಗೆಯು.

ನಾಯಿಯ ಜೊಲ್ಲಿನಲ್ಲಿ ಆ ರೋಗಲಕ್ಷಣವಿರುವುದಷ್ಟೆ. ಆ ಜೊಲ್ಲು ಮನುಷ್ಯನ ದೇಹಕ್ಕೆ ಸೇರಿ, ನರಗಳ ಮೂಲಕ ನೆತ್ತಿಯಲ್ಲಿರುವ ಮಿದುಳನ್ನು ಹಿಡಿಯುವ ತನಕ ಹುಚ್ಚು ಕಾಣಿಸಿಕೊಳ್ಳುವುದಿಲ್ಲ. ಮುಖ, ತಲೆ, ಕತ್ತು ಮೊದಲಾದ ಕಡೆಗಳಲ್ಲೇ ಹುಚ್ಚುನಾಯಿ ಕಡಿದರೆ ಆ ರೋಗವು ಬೇಗನೆ ಮಿದುಳಿಗೆ ವ್ಯಾಪಿಸುವುದು; ಕೈಕಾಲು ಮೊದಲಾದ ಕಡೆಗಳಲ್ಲಿ ಕಡಿದರೆ ರೋಗ ಕಾಣಿಸಿಕೊಳ್ಳುವುದು ಸಾವಕಾಶವಾಗುತ್ತದೆ. ಬಟ್ಟೆಯ ಮೇಲೆ ಕಡಿದರೆ ಇನ್ನೂ ನಿಧಾನವಾಗುವುದು. ರೋಗವು ಬಹಳ ಬೇಗ ಕಾಣಿಸಿಕೊಳ್ಳುವುದಾದರೆ ಮೂರು ವಾರಗಳೂ, ಸಾವಕಾಶವಾದರೆ ಕೆಲವು ತಿಂಗಳೂ ಹಿಡಿಯುವವೆಂದೂ, ಸಾಮಾನ್ಯವಾಗಿ ಆರು ವಾರಗಳು ಹಿಡಿಯುವುವೆಂದೂ ಇಟ್ಟುಕೊಳ್ಳಬಹುದು. ಆದ್ದರಿಂದ ಕಡಿದಂಥಾ ಪ್ರಾಣಿಯನ್ನು ಕಡೇ ಪಕ್ಷ ಆರು ತಿಂಗಳ ತನಕ ಕಟ್ಟಿಹಾಕಿ ಪರೀಕ್ಷೆ ಮಾಡಬೇಕೆಂದು ಗೊತ್ತುಮಾಡಿದೆ.

ಕಡಿದ ಮೇಲೆ ಮಾಡಬೇಕಾದ ಕಾರ್ಯಗಳು.

ಹುಚ್ಚು ಹಿಡಿದ ನಾಯಿ ಮನುಷ್ಯನನ್ನು ಕಡಿದ ಮೇಲೆ ಆ ನಾಯಿಯನ್ನೂ ಮನುಷ್ಯನನ್ನೂ ಯಾವ ರೀತಿ ನೋಡಿಕೊಳ್ಳಬೇಕೆಂಬುದನ್ನು ಈಗ ವಿವರಿಸುತ್ತೇವೆ.

ಕಡಿದ ನಾಯಿಗೆ ಹುಚ್ಚು ಹಿಡಿದಿದೆ ಎಂದು ಖಂಡಿತವಾಗಿ ಗೊತ್ತಾದ ಪಕ್ಷದಲ್ಲಿ ಅದು ಬೇಗಬೇಗನೆ ಹೆಚ್ಚಿ ಸತ್ತುಹೋಗುತ್ತದೆ. ಸತ್ತ ಮೇಲೆ ಅದರ ನೆತ್ತಿಯನ್ನು ಒಡೆದು, ಅದರಲ್ಲಿರುವ ಮಿದುಳನ್ನು ಹೊರಕ್ಕೆ ತೆಗೆದುಕೊಂಡು, ಅಂಥಾ ರೋಗಿಗಳ ಚಿಕಿತ್ಸೆಗಾಗಿ ಇಟ್ಟಿರುವ ಆಸ್ಪತ್ರೆಗೆ ಕೂಡಲೇ ರವಾನೆ ಮಾಡಬೇಕು. ಒಂದು ವೇಳೆ ಅದಕ್ಕೆ ಹುಚ್ಚು ಹಿಡಿದಿದೆಯೋ ಇಲ್ಲವೋ ಎಂದು ಅನುಮಾನವಿದ್ದರೆ ಅಂಥಾ ನಾಯಿಯನ್ನು ಕೊಲ್ಲಕೂಡದು; ಅದನ್ನು ಕಟ್ಟಿಹಾಕಿ ಹತ್ತು ದಿನಗಳ ತನಕ ನೋಡಿಕೊಳ್ಳುತ್ತಿರಬೇಕು. ಹಾಗೆ ಅದು ಹುಚ್ಚು ಹಿಡಿದ ನಾಯಿಯಲ್ಲವೆಂದು ಗೊತ್ತಾದ ಪಕ್ಷದಲ್ಲಿ ಅದರಿಂದ ಕಡಿಸಿಕೊಂಡ ಮನುಷ್ಯನಿಗೆ ಯಾವ ಚಿಕಿತ್ಸೆಯೂ ಮಾಡಬೇಕಾದ ಅಗತ್ಯವಿಲ್ಲ.

ಹುಚ್ಚುನಾಯಿ ಕಚ್ಚಿದ ಕೂಡಲೇ ಆ ಹುಣ್ಣನ್ನು ಬಹಳ ಚೆನ್ನಾಗಿ ತೊಳೆದು, ಒಣಗಿದ ಮೇಲೆ ಆ ಸ್ಥಳಕ್ಕೆ ಸ್ವಲ್ಪ ಕಾರ್ಬಾಲಿಕ್ ದ್ರಾವಕವನ್ನು ಹಾಕಿ ಸುಡಬೇಕು. ಬಹಳ ಹೆಚ್ಚಾಗಿ ಸುಡದಂತೆ ನೋಡಿಕೊಳ್ಳತಕ್ಕದ್ದು. ಕಡಿದ ಭಾಗವು ನೆತ್ತಿ, ಮುಖ ಅಥವಾ ಕತ್ತು ಇಲ್ಲದಿದ್ದು, ಆ ನಾಯಿಯನ್ನು ಹತ್ತು ದಿನಗಳ ತನಕ ನೋಡುತ್ತಿದ್ದು ಅದಕ್ಕೆ ಹುಚ್ಚು ಹಿಡಿಯಲಿಲ್ಲವೆಂದು ತಿಳಿದು ಬಂದರೆ ಕಡಿಸಿಕೊಂಡವನು ಚಿಕಿತ್ಸೆ ಮಾಡಿಸಿಕೊಳ್ಳುವುದನ್ನು ಸಾವಕಾಶ ಮಾಡಬಹುದು. ಆದರೆ ಅದಕ್ಕೆ ಹುಚ್ಚು ಹಿಡಿದಿರುವುದು ಖಂಡಿತವೆಂದು ಗೊತ್ತಾದ ಕೂಡಲೇ ಕಡಿಸಿಕೊಂಡವನು ಸ್ವಲ್ಪವೂ ಸಾವಕಾಶ ಮಾಡದೆ ಪೇಸ್ಟೂರ್ ಎಂಬ ಚಿಕಿತ್ಸಾ ಆಸ್ಪತ್ರೆಗೆ ಹೋಗತಕ್ಕದ್ದು. ನೆತ್ತಿ, ಕತ್ತು, ತಲೆ, ಮುಖಗಳಲ್ಲೇನಾದರೂ ಕಡಿದಿದ್ದ ಪಕ್ಷದಲ್ಲಿ ಆ ಕ್ಷಣದಲ್ಲೇ ಆಸ್ಪತ್ರೆಗೆ ಹೋಗಿ ತಿಳಿಸಿ ಔಷಧ ಹಾಕಿಸಿಕೊಳ್ಳಬೇಕು. ಯಾಕೆಂದರೆ ಅಂಥಾ ಸಂದರ್ಭಗಳಲ್ಲಿ ಸಾವಕಾಶ ಮಾಡಿದರೆ ಚಿಕಿತ್ಸೆಯಿಂದಲೂ ಅಪ್ರಯೋಜನವಾಗುವುದಕ್ಕೆ ಕಾರಣವಾದೀತು. "ಆಲಸ್ಯಂ ಅಮೃತಂ ವಿಷಂ" ಎಂಬ ಮಾತು ಈ ಸಂದರ್ಭದಲ್ಲಿ ಬಹುಬೇಗ ಪ್ರತ್ಯಕ್ಷಕ್ಕೆ ಬರುತ್ತದೆ. ಕಡಿದ ಮೂರು ದಿನಗಳೊಳಗಾಗಿ ರೋಗಿಯು ಆಸ್ಪತ್ರೆಯೊಳಗಿರಬೇಕು. ಕಡಿದ ನಾಯಿಗೆ ಹುಚ್ಚಿದೆಯೇ ಇಲ್ಲವೇ ಎಂದು ಕಾಯಬೇಕಾದದ್ದಿಲ್ಲ. ಬಟ್ಟೆಯ ಮೇಲೆ ಕಡಿದ ಸಂದರ್ಭದಲ್ಲಿ ರೋಗಿಯು ೫—೬ ದಿನಗಳೊಳಗಾಗಿ ಆಸ್ಪತ್ರೆಗೆ ಹೋಗಬಹುದು.

ಚಿಕಿತ್ಸೆಯ ಕ್ರಮಗಳು.

ನಾಯಿ ನರಿ ಮುಂತಾದ ಪ್ರಾಣಿಗಳಿಂದ ಕಡಿಸಿಕೊಂಡ ರೋಗಿಗಳಿಗೆ ಚಿಕಿತ್ಸೆಮಾಡುವ ನಿಲಯಗಳಿಗೆ ಪೇಸ್ಟೂರ್ ಆಸ್ಪತ್ರೆಗಳೆಂದು ಹೆಸರು. ಹಿಂದೂಸ್ಥಾನದಲ್ಲಿ ಸದ್ಯ ಉತ್ತರದೇಶಕ್ಕೆ ಸೇರಿದ ಕಸೌಲಿ ಎಂಬ ಸ್ಥಳದಲ್ಲೂ, ದಕ್ಷಿಣದೇಶಕ್ಕೆ ಸೇರಿದ ಕೂನೂರಿನಲ್ಲೂ ಅಂಥಾ ಎರಡು ಆಸ್ಪತ್ರೆಗಳು ಮಾತ್ರ ಇರುವವು. ಬರ್ಮಾ ಆಧಿಪತ್ಯದಲ್ಲಿ ಒಂದನ್ನು ಇಟ್ಟು ನಡಿಸಬೇಕೆಂದು ಈಚೆಗೆ ಏರ್ಪಾಡಾಗಿರುತ್ತದೆ. ಸಿಡುಬು ಏಳದಂತೆಯೂ, ವಿಷಮಶೀತವೇ ಮೊದಲಾದ ಕೆಟ್ಟ ಜ್ವರಗಳು ಪ್ರಾಪ್ತವಾಗದಂತೆಯೂ, ಪ್ಲೇಗ್ ಉಪದ್ರವ ತಗಲದಂತೆಯೂ ಬೇರೆ ಬೇರೆ ತರದ ಔಷಧದ ಹಾಲುಗಳನ್ನು ಸೂಜಿಗಳ ಮೂಲಕ ಮನುಷ್ಯನ ತೋಳು ಮೊದಲಾದ ಭಾಗಗಳಿಗೆ ಚುಚ್ಚಿ ದೇಹದ ರಕ್ತದೊಳಕ್ಕೆ ಸೇರಿಸುವುದು ಹ್ಯಾಗೆ ಫಲಕಾರಿಯಾಗಿರುತ್ತದೋ ಅದೇ ರೀತಿ ಹುಚ್ಚುನಾಯಿ ಕಡಿದವರಿಗೂ ಒಂದು ವಿಧವಾದ ಹಾಲನ್ನು ಉಪಯೋಗಿಸಿ ಸಿಡುಬು ಹಾಕುತ್ತಾರೆ. ಮೇಲ್ಕಂಡ ರೋಗಗಳು ತಗಲುವುದಕ್ಕೆ ಮೊದಲೇ ಆಯಾ ಸಿಡುಬು ಹಾಕುವರಷ್ಟೆ. ಹುಚ್ಚುನಾಯಿ ಕಡಿದವರಿಗಾದರೋ ಅದರ ವಿಷವು ಮನುಷ್ಯನ ದೇಹದೊಳಕ್ಕೆ ಹೊಕ್ಕ ಮೇಲೆ ಅದನ್ನು ಪ್ರಬಲವಾಗದಂತೆ ತಡೆದು, ಅಣಗಿಸಿ ಬಿಡುವುದಕ್ಕೋಸ್ಕರ ಒಂದು ತರಹಾ ಹಾಲನ್ನು ಉಪಯೋಗಿಸಿ ಸಿಡುಬು ಚುಚ್ಚುವರು. ಈ ಚಿಕಿತ್ಸೆಯು ಆಯಾ ರೋಗಿಗೆ ತಕ್ಕಷ್ಟು ಮಟ್ಟಿಗೆ ಸಂದರ್ಭಾನುಸಾರ ೧೦ ರಿಂದ ೨೦ ದಿನಗಳ ವರೆಗೆ ನಡಿಯುವುದು.

ಚಿಕಿತ್ಸೆ ನಡಿಯುವ ಕಾಲದಲ್ಲಿ ರೋಗಿಗೆ ಯಾವ ವಿಧವಾದ ನಿರ್ಬಂಧವೂ ಇರುವುದಿಲ್ಲ. ಚಿಕಿತ್ಸೆಯಿಂದ ನೋವೂ ಬಾಧೆಯೂ ಆಗಲಾರದು. ಚುಚ್ಚಿದ ಸ್ಥಳದಲ್ಲಿ ಮಾತ್ರ ಸ್ವಲ್ಪ ಕೆರೆದಂತಾಗುತ್ತದೆ. ರೋಗಿಯು ಯಥಾಪ್ರಕಾರ ಆರೋಗ್ಯವಾಗಿಯೇ ಇರುವನು. ಜ್ವರಾದಿಗಳೇನೂ ಪ್ರಾಪ್ತವಾಗಲಾರದು. ಆ ಕಾಲದಲ್ಲಿ ಪಥ್ಯವೇನೂ ಇರಬೇಕಾಗಿಲ್ಲ. ರೋಗಿಯು ಮದ್ಯಪ್ರಾಶನವನ್ನು

...ಣವಾದ ಅಂಗಸಾಧನೆಯನ್ನು ಬಿಟ್ಟಿರಬೇಕು ಶೀತವಾಗದಂತೆ ಒಳ್ಳೇ ಬೆಚ್ಚಗಿರುವ ಬಟ್ಟೆಗಳನ್ನು ಹಾಕಿಕೊಂಡಿರತಕ್ಕದ್ದು.

ಚಿಕಿತ್ಸೆಯ ಫಲಗಳು

ಉತ್ತರದೇಶದಲ್ಲಿರುವ ಕಸೌಲಿ ಆಸ್ಪತ್ರೆಯೊಳಗೆ ಕಳೆದ ಆರು ವರುಷಗಳಲ್ಲಿ ೪,೦೪೭ ಜನ ರೋಗಿಗಳು ಚಿಕಿತ್ಸೆ ಮಾಡಿಸಿಕೊಂಡಿದಾರೆ. ಆ ಪೈಕಿ ೩೩ ಜನರು ಮಾತ್ರ ಸತ್ತುಹೋದರು. ರೋಗಿಗಳನ್ನು ಜನಾಂಗದ ರೀತಿಯಾಗಿ ವಿಂಗಡಿಸಿದರೆ ೧,೫೨೭ ಮಂದಿ ಯೂರೋಪಿಯನ್ನರು ಚಿಕಿತ್ಸೆ ಹೊಂದಿದವರ ಪೈಕಿ ಇಬ್ಬರಿಗೆ ಮಾತ್ರ ಪ್ರಯೋಜನವಾಗಲಿಲ್ಲವೆಂತಲೂ, ೨,೫೫೫ ಮಂದಿ ದೇಶೀಯ ರೋಗಿಗಳಿಗೆ ಚಿಕಿತ್ಸೆ ಮಾಡಿದ್ದರಲ್ಲಿ ೩೧ ಮಂದಿಗೆ ಪ್ರಯೋಜನವಾಗದೆ ಹೋಯಿತೆಂತಲೂ ಗೊತ್ತಾಗುತ್ತದೆ. ಹೀಗೆ ಯೂರೋಪಿಯನ್ನರಲ್ಲಿ ಇಬ್ಬರೇ ಸಾಯುವುದಕ್ಕೂ, ದೇಶೀಯ ಜನರಲ್ಲಿ ೩೧ ಮಂದಿ ತೀರಿಹೋದದ್ದಕ್ಕೂ ಕಾರಣಗಳೇನೆಂದರೆ—(೧) ದೇಶೀಯ ಜನರು ಮೈ ಬಿಟ್ಟುಕೊಂಡಿರೋಣದರಿಂದ ಹುಚ್ಚು ನಾಯಿಯು ಕಚ್ಚಾಗ ಅವರ ಚರ್ಮವನ್ನೇ ಹಿಡಿದು ಕಚ್ಚುವುದಕ್ಕೆ ಅವಕಾಶವಿದೆ, (೨) ದೇಶೀಯರಲ್ಲಿ ಬಹುಮಂದಿಯನ್ನು ಗುಳ್ಳೇನರಿಗಳೂ ತೋಳಗಳೂ ಕಚ್ಚುತ್ತವೆ, ಮತ್ತು (೩) ಕಡಿಸಿಕೊಂಡ ಕೂಡಲೇ ಯೂರೋಪಿಯನ್ನರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಮಾಡಿಸಿಕೊಳ್ಳುವರು, ದೇಶೀಯರಾದರೋ ಬಹಳ ತಡವಾಗಿ, ವಿಷವು ಮೈಯಲ್ಲಿ ಊರಿಕೊಳ್ಳುವತನಕ ಆಸ್ಪತ್ರೆಗೆ ಹೋಗುವುದಿಲ್ಲ.

ಆಸ್ಪತ್ರೆಯ ಸ್ಥಿತಿಗತಿಯು

ನೀಲಗಿರಿ ಬೆಟ್ಟದ ಮೇಲೆ ಇರುವ ಕೂನೂರಿನೊಳಗೆ ಒಂದು ಆಸ್ಪತ್ರೆ ಮುಂಟು. ಮದರಾಸ್ ರೈಲ್ ಗಾಡಿಗಳು ಕೂನೂರಿಗೆ ಹೋಗಿ ಇಳಿಯುವವು. ಆ ಆಸ್ಪತ್ರೆಯಲ್ಲಿ ರೋಗಿಗಳಿರುವುದಕ್ಕೆ ಅವಕಾಶವಿಲ್ಲ. ಚಿಕಿತ್ಸೆ ಹೊಂದುವವರು ಹೊರಗೆ ಊರಿನಲ್ಲಿ ತಮಗೆ ಇಷ್ಟಬಂದ ಮನೆಯಲ್ಲಿ ವಾಸಮಾಡಿಕೊಂಡಿದ್ದು, ಆಸ್ಪತ್ರೆಗೆ ಹೋಗಿ ವಿಷದ ಪಾಕಿಸಿಕೊಂಡು ಬರುವರು.

ಯೂರೋಪಿಯನ್ನರಿಗೂ ದೇಶೀಯ ದೊಡ್ಡಮನುಷ್ಯರಿಗೂ ಇರುವುದಕ್ಕೆ ಅನುಕೂಲವಾದ ಹೋಟೇಲುಗಳೂ ಬಂಗಲೆಗಳೂ ಇರುತ್ತವೆ. ಸಾಮಾನ್ಯ ಜನರಿಗೂ ಕೂಡ ಅಂಗಡಿಬೀದಿಯಲ್ಲಿ ಒಳ್ಳೆ ಸ್ಥಳಗಳು ಸಿಕ್ಕುವವು. ರೋಗಿಗಳು ಇರುವುದಕ್ಕೆ ಕೆಲವು ಪ್ರೈವೇಟ್ ಮನೆಗಳನ್ನೂ ಕಟ್ಟಿಸುತ್ತಾರೆ. ಅವಕ್ಕೆ ಬಾಡಿಗೆ ಮುಂತಾದ್ದೇನೂ ಕೊಡಬೇಕಾಗಿಲ್ಲ. ಇದಲ್ಲದೆ ರೋಗಿಗಳಿಗೆ ಒಳ್ಳೇ ಬೆಚ್ಚಗಿರುವ ಬಟ್ಟೆಬರೆಗಳನ್ನೂ ಕಂಬಳಿ ಮುಂತಾದದ್ದನ್ನೂ ಅಪೇಕ್ಷಿಸಿದರೆ ಕೊಡುವರು. ಬಡವರಾದ ಪಕ್ಷದಲ್ಲಿ ಅಲ್ಲಿ ಚಿಕಿತ್ಸೆಗೆ ಹೋದರೆ ಅವರ ಭೋಜನಕ್ಕೆ ದಿನ ೧ಕ್ಕೆ ೬ ಕಾಸಿನ ಮೇರೆಗೆ ವಿಚಾರಮಾಡುವುದರಲ್ಲಿ ಸಹಾಯ ಮಾಡಬಹುದು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಸೂಚಿಸಿದ ವಿಷಯಗಳೂ ದಿವಾನರವರ ಪ್ರತ್ಯುತ್ತರಗಳೂ

ಸಂಕ್ಷೇಪ ವರದಿ.

ಅರಿಕೆ —ಮುಜರಾಯಿ ಡಿಪಾರ್ಟ್ಮೆಂಟಿನ ಜಮಾನಾಗಳ ವಿಷಯದಲ್ಲಿ ಅಂತರಗೊಳ್ಳುತ್ತಿರುವ ಅನವಶ್ಯವಾದ ಲೆಕ್ಕಗಳನ್ನು ವಜಾ ಮಾಡಬೇಕೆಂತಲೂ, ಸ್ಥಾನಿಕರಿಗೆ ಸಾಧಿಲ್ವಾರ್ ಖರ್ಚಿಗೆ ಅಲೋಯನ್ಸ್ ಕೊಡಿಸಬೇಕೆಂತಲೂ ಕಳೆದ ವರುಷದ ಸಭೆಯಲ್ಲಿ ಕೇಳಿಕೊಂಡದ್ದಕ್ಕೆ ಆಲೋಚನೆ ಮಾಡುವುದಾಗಿ ಅಪ್ಪಣೆ ಆಗಿತ್ತು. ಈಗ ಬೇಗ ಅದನ್ನು ನಡೆಸಿಕೊಡಬೇಕು.

ಉತ್ತರ —ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರುಗಳ ಅಭಿಪ್ರಾಯ ಇನ್ನೂ ಬರಲಿಲ್ಲ. ಅದು ಬಂದಮೇಲೆ ಇತ್ಯರ್ಥ ಮಾಡಲಾದೀತು.

ಅರಿಕೆ —ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಮುಫತ್ತಾಗಿ ಒಳ್ಳೇ ಔಷಧಗಳನ್ನು ಕೊಡುವುದಿಲ್ಲ. ಬಡವರಿಗೆ ಸರಿಯಾದ ಚಿಕಿತ್ಸೆ ದೊರಕುವುದು ಕಷ್ಟ. ಆಸ್ಪತ್ರೆಯ ಔಷಧಗಳನ್ನು ಡಾಕ್ಟರುಗಳು ತಮ್ಮ ಸ್ವಂತ ರೋಗಿಗಳಿಗೆ ಉಪಯೋಗಿಸುತ್ತಾರೆ. ಅವರು ಆಸ್ಪತ್ರೆಗಳ ಹೊರತು ಕೆಲಸ ಮಾಡಬೇಕೆಂತಲೂ, ಸಾಧಾರಣವಾಗಿ ಮನೆಗಳಿಗೆ ಹೋಗಿ ರೋಗಿಗಳನ್ನು ನೋಡಿ ಚಿಕಿತ್ಸೆ ಮಾಡಕೂಡದೆಂತಲೂ ಸರ್ಕಾರದವರು ಕಟ್ಟುಮಾಡಬೇಕು. ಆಸ್ಪತ್ರೆ ಅಸಿಸ್ಟೆಂಟರನ್ನು ಸ್ಥಳದಿಂದ ಸ್ಥಳಕ್ಕೆ ವರ್ಗಮಾಡುವ ವಿಷಯದಲ್ಲಿ ಸ್ಥಳೀಯ ಪ್ರಜೆಗಳ ಪ್ರಾರ್ಥನೆಯನ್ನು ಗವರ್ನ್ಮೆಂಟಿನವರು ಪಾಲಿಸಬೇಕು.

ಉತ್ತರ —ಡಾಕ್ಟರುಗಳನ್ನು ಸ್ವಂತ ರೋಗಿಗಳಿಗೆ ಚಿಕಿತ್ಸೆ ಮಾಡಕೂಡದೆಂದು ಕಟ್ಟುಮಾಡಬೇಕಾದರೆ ಅವರಿಗೆ ಹೆಚ್ಚು ಅಲೋಯನ್ಸನ್ನು ಸರ್ಕಾರದವರು ಕೊಡಬೇಕಾಗುವುದು. ಆದ್ದರಿಂದ ಹಾಗೆ ಕಟ್ಟುಮಾಡುವುದು ಅಪೇಕ್ಷಣೀಯವಾದದ್ದಲ್ಲ. ಬಹುಮಂದಿ ಪ್ರತಿನಿಧಿಗಳು ಇದೇ ಅಭಿಪ್ರಾಯವುಳ್ಳವರಾಗಿದ್ದಾರೆ. ವರ್ಗಾವರ್ಗಿ ಮಾಡುವ ವಿಚಾರದಲ್ಲಿ ಸೀನಿಯರ್ ಸರ್ಜನ್ರವರಿಗೆ ಪ್ರತಿನಿಧಿಗಳು ಹೇಳಿಕೊಂಡರೆ ಸಂದರ್ಭಾನುಸಾರ ಅವರು ತೀರ್ಮಾನಮಾಡುತ್ತಾರೆ.

ಅರಿಕೆ —ಹಿಂದೂ ವೈದ್ಯ ಶಾಲೆಯಲ್ಲಿ ರೋಗಿಗಳನ್ನು ನೋಡುತಕ್ಕವರೆಲ್ಲಾ ಅಲ್ಲಿಗೆ ಹೋಗಿ ತಮ್ಮ ಹೆಸರು ಮತ್ತು ಗುರುತು ಬರೆಯಬೇಕೆಂಬ ವಿಧಿ ಇರುತ್ತದೆ. ಗೌರವಸ್ಥರಾದ ಸ್ತ್ರೀಪುರುಷರಿಗೆ ಇದು ಅನಾನುಕೂಲ. ಅದನ್ನು ತಪ್ಪಿಸಿದರೆ ಈ ವೈದ್ಯಶಾಲೆಗಳು ಇನ್ನೂ ಅಭಿವೃದ್ಧಿಗೆ ಬರುತ್ತವೆ. ಇಂಗ್ಲಿಷ್ ಔಷಧ ಕೊಡುವ ಆಸ್ಪತ್ರೆಗಳಲ್ಲಿ ಇಂಥಾ ನಿರ್ಬಂಧವನ್ನು ಇಟ್ಟಿಲ್ಲ.

ಉತ್ತರ —ಇದರಿಂದ ಜನರಿಗೆ ತುಂಬಾ ಅನಾನುಕೂಲವಾಗಿದೆ ಎಂದು ನಮಗೆ ತಿಳಿದರೆ ಕೈಫಿಯತ್ತನ್ನು ಬರೆಯಬೇಕೆಂಬ ಆರ್ಡರನ್ನು ವಜಾಮಾಡುವಂತೆ ಹುಕುಂ ಕೊಡಲಾಗುವುದು.

ಅರಿಕೆ —ಈ ಸಂಸ್ಥಾನದ ಕೆಲವು ಪಟ್ಟಣಗಳಲ್ಲಿ ಪ್ರಜೆಗಳು ತಮ್ಮ ಮಕ್ಕಳಿಗೆ ತಪ್ಪದೆ ಸಿಡುಬು ಹಾಕಿಸಲೇಬೇಕೆಂಬುದಾಗಿ ಸರ್ಕಾರದವರು ಕಾನೂನು ಮಾಡಿ ಜಾರಿಗೆ ತಂದಿದಾರೆ. ಇತರ ಕಡೆಗಳಿಗೂ ಆ ಕಾನೂನನ್ನು ಜಾರಿಗೆ ತಂದರೆ ಅನೇಕಾನೇಕ ಮಕ್ಕಳೂ ಚಿಕ್ಕವಯಸ್ಸಿನವರೂ ಅಕಾಲಮರಣಹೊಂದುವುದು ತಪ್ಪುತ್ತದೆ.

ಉತ್ತರ —ಒಳ್ಳೇದು ; ಜನರಿಗೆ ತಿಳುವಳಿಕೆ ಹೆಚ್ಚಿದಹಾಗೆಲ್ಲಾ ಇದನ್ನು ಮಾಡುತ್ತೇವೆ. ಇದು ಒಳ್ಳೇ ಸಲಹೆಯೇ ಹೌದು. ಮುಂದೆ ಮಾಡುವೆವು.

ಅರಿಕೆ —ಪ್ರತಿ ಒಂದು ಸ್ಥಳದಲ್ಲೂ ಪ್ಲೇಗ್ ಕಾಣಿಸಿಕೊಂಡಾಗ ಜನರು ಹೋಗಿ ಕ್ಯಾಂಪು ಕಟ್ಟಿಕೊಳ್ಳುವುದಕ್ಕೆ ಆಜೂಬಾಜೂದಲ್ಲೇ ಸರ್ಕಾರದವರು ಅನುಕೂಲವಾದ ಸ್ಥಳಗಳನ್ನು ಗೊತ್ತುಮಾಡಿಡಬೇಕು. ಜೋಪಡಿ ಕಟ್ಟುವಂಥಾ ಸಾಮಾನನ್ನು ಹೋಬಳಿಗಳಲ್ಲಿ ಇಡಿಸಿರಬೇಕು. ಇವೆರಡಕ್ಕೂ ಈಗ ಅವಕಾಶವಿಲ್ಲದೆ ಇರೋಣದರಿಂದ ಜನರು ಬಹಳ ಕಷ್ಟಕ್ಕೆ ಗುರಿಯಾಗುತ್ತಾರೆ.

ಉತ್ತರ —ಕ್ಯಾಂಪು ಕಟ್ಟಿಕೊಳ್ಳುವುದಕ್ಕೆ ಅನುಕೂಲವಾದ ಸ್ಥಳಗಳನ್ನು ಸ್ಥಳಾಧಿಕಾರಿಗಳು ಮೊದಲೇ ಗೊತ್ತುಮಾಡಿಡಬೇಕೆಂದು ಹುಕುಂ ಕೊಡಲಾಗುವುದು.

ಅರಿಕೆ —ಮಲೆನಾಡು ಪ್ರಾಂತ್ಯದಲ್ಲಿ ಕ್ರಮೇಣ ಪ್ರಜಾಸಂಖ್ಯೆಯು ಕ್ಷೀಣವಾಗುತ್ತಿರುವುದರಿಂದ ಸರ್ಕಾರದವರು ಕನಿಕರದಿಂದ ಪರಿಹಾರಗಳನ್ನು ಕಲ್ಪಿಸಿಕೊಡಬೇಕು.

ಉತ್ತರ —ಹೋದ ವರುಷದ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಾಗ್ಯೆ ಸೀನಿಯರ್ ಸರ್ಜನ್ರವರು ಆ ಪ್ರಾಂತ್ಯ ಸಕೀಟು ಹೋಗಿ ವಿದ್ಯಮಾನಗಳನ್ನು ಸ್ವತಃ ತಿಳಿದು, ಪರಿಹಾರಗಳನ್ನು ಸೂಚಿಸುವಂತೆ ಅವರಿಗೆ ಗವರ್ನ್ಮೆಂಟಿನವರು ಬರೆಯುವುದಾಗಿ ಉತ್ತರ ಕೊಟ್ಟಿದೆ. ಅದೇ ರೀತಿ ಅವರು ಈ ವಿಷಯವನ್ನು ಆಲೋಚನೆಯಲ್ಲಿಟ್ಟುಕೊಂಡಿದಾರೆ. ಇನ್ನೂ ಅವರಿಂದ ಗವರ್ನ್ಮೆಂಟಿಗೆ ರಿಪೋರ್ಟು ಬರಲಿಲ್ಲ.

ಅರಿಕೆ —ಇಂಗ್ಲಿಷ್ ಲೋವರ್ ಸೆಕೆಂಡರಿ ಪರೀಕ್ಷೆಗೆ ಓದುವಂಥಾ ಬಾಲಕರಿಗೆ ಚರಿತ್ರೆ ಭೂಗೋಳ ಮೊದಲಾದ ಟೆಕ್ಸ್ಟ್ ಬುಕ್ಕುಗಳನ್ನು ಇಂಗ್ಲಿಷಿನಲ್ಲೇ ಇಟ್ಟು ಓದಿಸುವಂತೆಯೂ, ಇಂಗ್ಲಿಷಿನಲ್ಲೇ ಪ್ರಶ್ನಪತ್ರಿಕೆಗಳನ್ನು ಕೊಡುವಂತೆಯೂ ಅಪ್ಪಣೆ ಆಗಬೇಕು. ಇದರಿಂದ ಬಾಲಕರಿಗೆ ಇಂಗ್ಲಿಷ್ ಭಾಷಾ ಪರಿಚಯವು ಹೆಚ್ಚಾಗುತ್ತದೆ.

ಉತ್ತರ —ಈ ವಿಚಾರವನ್ನು ಅಭಿಪ್ರಾಯ ತಿಳಿಯುವ ಬಗ್ಗೆ ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ್ ಜನರಲ್ರವರಿಗೆ ತಿಳಿಸುತ್ತೇವೆ.

ಅರಿಕೆ —ಅಮರವನ್ನು ಪಾಠಶಾಲೆಗಳಲ್ಲಿ ಮಕ್ಕಳಿಗೆ ಕಲಿಸಬೇಕೆಂದು ಸರ್ಕಾರದಿಂದ ಅಪ್ಪಣೆ ಆಗಿದೆ. ಹಾಗೆ ಕಲಿಸುವುದು ಸರಿಯಾಗಿದೆಯೋ ಇಲ್ಲವೋ ಎಂದು ಇನ್ಸ್ಪೆಕ್ಟರುಗಳಿಂದ ಪರೀಕ್ಷೆ ಮಾಡಿಸುವಂತೆ ಹುಕುಂ ಆಗಬೇಕು.

ಉತ್ತರ —ಇನ್ಸ್ಪೆಕ್ಟರ್ ಜನರಲ್ರವರು ಈ ವಿಷಯವಾಗಿ ಇನ್ಸ್ಪೆಕ್ಟರುಗಳಿಗೆಲ್ಲಾ ಆಗಲೇ ಹುಕುಂ ಕೊಟ್ಟಿದಾರೆಂದು ತಿಳಿದುಬಂದಿದೆ.

ಅರಿಕೆ —ಮಹಮ್ಮದೀಯ ಬಾಲಕರಿಗೋಸ್ಕರ ಇಟ್ಟಿರುವ ಸ್ಕೂಲುಗಳಲ್ಲಿ ಮಕ್ಕಳಿಗೆ ಕೊರಾನ್ ಎಂಬ ಅವರ ಮತಗ್ರಂಥವನ್ನು ಖಂಡಿತವಾಗಿ ಕಲಿಸುವಂತೆ ಅಪ್ಪಣೆ ಆಗಬೇಕು. ಮೈಸೂರಿನಲ್ಲಿರುವ ಮಹಮ್ಮದೀಯರ ಸ್ಕೂಲಿಗೆ ಇನ್ನೂ ಹೆಚ್ಚು ವಿದ್ಯಾವಂತರಾಗಿರುವಂಥಾ ಉಪಾಧ್ಯಾಯರನ್ನು ನೇಮಿಸಿ, ಹೆಚ್ಚು ತರಗತಿಗಳನ್ನು ಇಡಿಸಿಕೊಡಬೇಕು.

ಉತ್ತರ —ಒಳ್ಳೇದು. ಈ ವಿಷಯಗಳನ್ನು ಇನ್ಸ್ಪೆಕ್ಟರ್ ಜನರಲ್ರವರಿಗೆ ತಿಳಿಸುತ್ತೇವೆ. ಅವರು ಸರಿಯಾದ ಏರ್ಪಾಡು ಮಾಡುವರು.

ಅರಿಕೆ —ಬಾಲಿಕಾ ಪಾಠಶಾಲೆಗಳಲ್ಲಿ ಸ್ತ್ರೀಯರೇ ವಿದ್ಯೆ ಕಲಿಸುವಂತೆ ಏರ್ಪಾಡಾಗಬೇಕು. ಗ್ರಾಮಾಂತರಗಳಲ್ಲಿ ಬಾಲಕರಿಗೆ ಸ್ವಲ್ಪ ಮಾತ್ರ ಓದು ಬರಹ ಲೆಕ್ಕಾಚಾರಗಳನ್ನು ಕಲಿಸುವಂತೆಯೂ, ಹೆಚ್ಚಾಗಿ ವ್ಯವಸಾಯ ವಿಚಾರವನ್ನೂ ಕೈಗಾರಿಕೆಗಳನ್ನೂ ಕಲಿಸುವಂತೆಯೂ ಏರ್ಪಾಡಾಗಬೇಕು.

ಉತ್ತರ —ಈ ವಿಷಯಗಳನ್ನು ಇನ್ಸ್ಪೆಕ್ಟರ್ ಜನರಲ್ರವರಿಗೆ ತಿಳಿಸುತ್ತೇವೆ. ಅವರು ಇವನ್ನೆಲ್ಲಾ ಕ್ರಮಪಡಿಸುತ್ತಾರೆ.

ಅರಿಕೆ —ವಿದ್ಯಾಭಿವೃದ್ಧಿಗೆ ಗವರ್ನ್ಮೆಂಟಿನವರು ಬಹಳ ಹಣ ವ್ಯಯ ಮಾಡುತ್ತಾರೆ. ಅದರ ಫಲವು ಪ್ರಯೋಜನವಾಗಿಲ್ಲ. ಯಾಕೆಂದರೆ ಉಪಾಧ್ಯಾಯರ ಸಂಖ್ಯೆ ಕಡಮೆಯಾಗಿಯೂ ಕ್ಲಾಸುಗಳಲ್ಲಿ ಬಾಲಕರ ಸಂಖ್ಯೆ ಹೆಚ್ಚಾಗಿಯೂ ಇದೆ. ಸ್ವಲ್ಪ ಸಂಬಳದ ಉಪಾಧ್ಯಾಯರನ್ನು ಹೆಚ್ಚಾಗಿ ನೇಮಿಸಿ ಕ್ಲಾಸುಗಳಲ್ಲಿ ಇಷ್ಟೇ ಹುಡುಗರಿರಬೇಕೆಂದು ವಿಧಿಸಿದರೆ ತುಂಬಾ ಉಪಕಾರವಾಗುವುದು. ಇಷ್ಟಲ್ಲದೆ ಸಕಲ ಇನ್ಸ್ಪೆಕ್ಟರುಗಳನ್ನೇ ಡಿಪ್ಟಿ ಇನ್ಸ್ಪೆಕ್ಟರುಗಳನ್ನಾಗಿ ಕಡಮೆಮಾಡಿ ಸಬ್ ಡಿಪ್ಟಿ ಇನ್ಸ್ಪೆಕ್ಟರ ಸಂಖ್ಯೆಯನ್ನು ಹೆಚ್ಚಿಸಿದರೆ ಸಂಸ್ಥಾನದ ಸ್ಕೂಲುಗಳು ಕ್ರಮಪಡುವುದಕ್ಕೆ ಸಹಾಯವಾಗುವುದು.

ಉತ್ತರ —ಯಾವ ಇಲಾಖೆಯಲ್ಲಿ ಯಾವ ಬಾಬುಗಳನ್ನು ಕಡಮೆಮಾಡಬಹುದೋ ಅದನ್ನು ತನಿಖೆಯಿಂದ ಇತ್ಯರ್ಥ ಮಾಡುವುದಕ್ಕೆ ಒಂದು ಕಮಿಟಿ ಏರ್ಪಾಡಾಗಿದೆ. ಇವೆರಡು ವಿಷಯಗಳನ್ನೂ ಈ ಕಮಿಟಿಗೆ ಸೂಚಿಸಿ ಅವರ ಅಭಿಪ್ರಾಯವನ್ನು ತಿಳಿಯುತ್ತೇವೆ.

ಅರಿಕೆ —ಪ್ರತಿ ಒಂದು ಹೋಬಳಿಯಲ್ಲಾದರೂ ಒಂದೊಂದು ಸ್ಕೂಲ್ ಕಟ್ಟಡವನ್ನು ಸರ್ಕಾರದಿಂದ ಮಾಡಿಸಿಕೊಡಬೇಕು.

ಉತ್ತರ —ಸಾಮಾನ್ಯವಾಗಿ ಅಂಥಾ ಸ್ಕೂಲ್ ಕಟ್ಟಡಗಳಿಗಾಗಿ ಇದುವರೆಗೆ ವರುಷಕ್ಕೆ ೫,೦೦೦ ರೂಪಾಯಿ ಸರ್ಕಾರದಿಂದ ಕೊಡುತ್ತಿತ್ತು. ಹಾಲಿ ಸಾಲಿನಲ್ಲಿ ಈ ಬಾಬಿಗೆ ಗ್ರಾಮಫಂಡಿನಿಂದ ೩೬,೦೦೦ ರೂಪಾಯನ್ನೂ ರಾಜಾದಾಯದಿಂದ ೧೪,೦೦೦ ರೂಪಾಯನ್ನೂ ವಿನಿಯೋಗಿಸಬೇಕೆಂದು ಸ್ಯಾಂಕ್ಷನ್ ಮಾಡಿದೆ.

ಅರಿಕೆ —ಸರ್ಕಾರಿ ಇಂಡಸ್ಟ್ರಿಯಲ್ (ಕೈಗಾರಿಕೆ) ಸ್ಕೂಲುಗಳಲ್ಲಿ ಸಾಮಾನುಗಳನ್ನು ತಯಾರುಮಾಡಿ, ಕಸಬುದಾರರ ನೋಡಿ ಸ್ಪರ್ಧೆಯಾಗಿ ಮಾಡಿ ಬಿಕರಿಮಾಡುತ್ತಾರೆ. ಕಸಬುದಾರರ ಜೀವನಕ್ಕೆ ಇದರಿಂದ ಕುಂದಕವಾಗುತ್ತಿದೆ. ಅಂಥಾ ಸ್ಕೂಲುಗಳಲ್ಲಿ ಕಸಬುಗಳನ್ನು ಕಲಿಯುವುದೊಂದೇ ಆಗಿರುವಂತೆಯೂ, ಸಾಮಾನುಗಳನ್ನು ಮಾಡಿ ಬಿಕರಿಮಾಡದಂತೆಯೂ ಹುಕುಂ ಮಾಡಬೇಕು.

ಉತ್ತರ —ಇದು ಒಳ್ಳೇ ಸಲಹೆ. ಸರ್ಕಾರಿ ಇಂಡಸ್ಟ್ರಿಯಲ್ ಸ್ಕೂಲುಗಳವರು ಆ ರೀತಿ ಸ್ಪರ್ಧೆಗೆ ಬಂದದ್ದು ಸೂಚಿಸಿದಲ್ಲಿ ಹಾಗೆ ಮಾಡಕೂಡದೆಂದು ಖಂಡಿತವಾದ ಹುಕುಂ ಕೊಟ್ಟು ನಿಲ್ಲಿಸುತ್ತೇವೆ. ಕಸಬುಗಳನ್ನು ಕಲಿಸುವುದಕ್ಕೂ ಕಲಿಯುವುದಕ್ಕೂ ಆ ಪಾಠಶಾಲೆಗಳಿರುವವೇ ಹೊರತು ಸಾಮಾನುಗಳನ್ನು ತಯಾರುಮಾಡಿ, ನೈಜವಾದ ಕಸಬುದಾರರಿಗೆ ನಷ್ಟವಾಗುವಂತೆ ವ್ಯಾಪಾರಮಾಡುವುದು ಗವರ್ನ್ಮೆಂಟಿನವರ ಉದ್ದೇಶವಲ್ಲ.

ಅರಿಕೆ —ಮೈಸೂರಿನಲ್ಲಿ ಲಿಂಗಾಯತರ ಸಂಸ್ಕೃತ ಪಾಠಶಾಲೆಗೆ ಗವರ್ನ್ಮೆಂಟಿನವರು ಸಹಾಯಮಾಡಬೇಕು. ಆರು ವರುಷಗಳಿಂದ ಅದು ನಡೆಯುತ್ತಿದೆ. ಮೂವರು ಉಪಾಧ್ಯಾಯರೂ ೬೦ ಮಂದಿ ಹುಡುಗರೂ ಈಗ ಇದ್ದಾರೆ. ಪ್ರೋತ್ಸಾಹಕೊಟ್ಟಲ್ಲಿ ಅದು ಅಭಿವೃದ್ಧಿ ಹೊಂದುವುದಕ್ಕೆ ಸಹಾಯವಾಗುತ್ತದೆ.

ಉತ್ತರ —ಈ ಸ್ಕೂಲಿಗೆ ದ್ರವ್ಯಸಹಾಯ ಮಾಡುವ ವಿಚಾರವನ್ನು ಗವರ್ನ್ಮೆಂಟಿನವರು ಪರ್ಯಾಲೋಚಿಸಿ, ಅನುಕೂಲವಾಗುವಂತೆ ತೀರ್ಮಾನ ಮಾಡಬಹುದು.

ಅರಿಕೆ —ರೂಲಸು, ಕಾನೂನು ಮುಂತಾದ್ದನ್ನು ಜಾರಿಗೆ ತರುವುದಕ್ಕೆ ಮೊದಲು ಪ್ರತಿನಿಧಿ ಸಭೆಯಲ್ಲಿ ತಿಳಿಸಿ, ಸಭಿಕರ ಅಭಿಪ್ರಾಯವನ್ನು ಪಡೆದುಕೊಳ್ಳಬೇಕು.

ಉತ್ತರ —ಇದು ಸಾಧ್ಯವಲ್ಲ. ಮೆಂಬರುಗಳು ಕಾನೂನುಗಳ ವಿಷಯದಲ್ಲಿ ಗವರ್ನ್ಮೆಂಟಿಗೆ ತಮ್ಮ ಅಭಿಪ್ರಾಯಗಳನ್ನು ಧಾರಾಳವಾಗಿ ತಿಳಿಸಬಹುದು. ಲೆಜಿಸ್ಲೆಟಿವ್ ಕೌನ್ಸಿಲ್ನಲ್ಲಿ ಕಾನೂನುಗಳು ಚರ್ಚೆಯಾಗುವಾಗ್ಯೆ ಯಾರುಬೇಕಾದರೂ ಆ ವಿಷಯವಾಗಿ ಅಭಿಪ್ರಾಯ ಹೇಳಬಹುದಾಗಿದೆ. ಈ ಸಭೆಯಲ್ಲಿ ಆ ಕಾನೂನು ತಂದಿಟ್ಟು ಚರ್ಚಿಸುವುದು ಸಾಧ್ಯವಲ್ಲ.

ಅರಿಕೆ —ಸಂಸ್ಥಾನದ ಬಡ್ಜೆಟ್ಟನ್ನು (ಜಮಾಖರ್ಚಿನ ಅಂದಾಜಾ ಪಟ್ಟಿಗಳನ್ನು) ತಯಾರುಮಾಡುವುದಕ್ಕಿಂತ ಮುಂಚೆ ಗವರ್ನ್ಮೆಂಟಿನವರು ಅದನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ಸೂಚಿಸಿ, ಪ್ರತಿನಿಧಿಗಳು ಸೂಚಿಸುವಂತೆ ಖರ್ಚುಗಳನ್ನು ಬದಲಾವಣೆ ಮಾಡಬೇಕು.

ಉತ್ತರ —ಬಡ್ಜೆಟ್ ತಯಾರುಮಾಡುವುದು ಒಂದೆರಡು ದಿನಗಳ ಕೆಲಸವಲ್ಲ. ಬಹಳಕಾಲ ಯೋಚಿಸಿ ಮಾಡಬೇಕಾಗಿದೆ. ಸಭೆಯಲ್ಲಿ ಅದನ್ನು ಈ ಸಭೆಯ ಮುಂದೆ ತಂದು, ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಸಾಧ್ಯವಲ್ಲ.

ಅರಿಕೆ —ಬೆಂಗಳೂರಿನಲ್ಲಿರುವ ಕೆಲವು ದೊಡ್ಡ ಸರ್ಕಾರಿ ಇಲಾಖೆಗಳನ್ನು ಮೈಸೂರಿಗೆ ವರ್ಗಮಾಡಿಸಬೇಕು.

ಉತ್ತರ —ಸಾಧ್ಯವಾದಮಟ್ಟಿಗೆ ಪಬ್ಲಿಕ್ ಆಫೀಸುಗಳು ರಾಜಧಾನಿಯಲ್ಲಿ ಇರಬೇಕೆಂದು ಗವರ್ನ್ಮೆಂಟಿನವರು ಅಭಿಪ್ರಾಯಪಡುತ್ತಾರೆ.

ಅರಿಕೆ —ಶಾನುಭೋಗರು ಲೋಕಲ್ ಸರ್ವಿಸ್ ಪರೀಕ್ಷೆಗಳನ್ನು ಕೊಡುವುದಕ್ಕೆ ಅವಕಾಶವಾಗಬೇಕು. ಅವರನ್ನು ಲೋಯರ್ ಸೆಕೆಂಡರಿ ಸ್ಕೂಲಿಗೂ ಸೇರಿಸಿಕೊಳ್ಳಬೇಕು.

ಉತ್ತರ —ಶಾನುಭೋಗರಿಗೆ ಸರ್ವೆ ವಿಚಾರಗಳನ್ನು ಕಲಿಸಬೇಕೆಂಬುದಾಗಿ ಚರ್ಚೆಯಲ್ಲಿದೆ. ಆಲೋಚನೆಮಾಡುತ್ತೇವೆ.

ಅರಿಕೆ —ಪ್ರತಿ ಒಂದು ಡಿಸ್ಟ್ರಿಕ್ಟಿನಲ್ಲೂ ಆರು ತಿಂಗಳಿಗೊಂದಾವರ್ತಿ ಪ್ರತಿನಿಧಿಗಳನ್ನು ಕರೆಸಿ ಡೆಪ್ಯುಟಿ ಕಮಿಷನರು ಮೀಟಿಂಗ್ ನಡಿಸಬೇಕು.

ಉತ್ತರ —ಇದಕ್ಕೆ ಅವಶ್ಯಕಾಣುವದಿಲ್ಲ.

ಅರಿಕೆ —ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ ೩೦ ವರುಷ ವಯಸ್ಸಾಗಿದ್ದರೂ ಸರ್ಕಾರಿ ನೌಕರಿಯಲ್ಲಾಗಲಿ, ಲಾಯರಾಗಿ ಆಗಲಿ ಇರತಕ್ಕವರನ್ನು ಸೇರಿಸಿಕೊಳ್ಳಬೇಕು —ಈ ಸಿವಿಲ್ ಸರ್ವಿಸ್ ಪರೀಕ್ಷೆಯನ್ನೇ ವಜಾಮಾಡಬೇಕು, ಇದು ಸಾಧ್ಯವಿಲ್ಲವಾದರೆ ಮೈಸೂರು ಸಂಸ್ಥಾನದ ಪ್ರಜೆಗಳ ಮಕ್ಕಳನ್ನು ಮಾತ್ರ ಈ ಪರೀಕ್ಷೆಗೆ ಸೇರಿಸಿಕೊಳ್ಳಬೇಕು.

ಉತ್ತರ —ಸರ್ಕಾರಿ ನೌಕರಿಯಲ್ಲಿರತಕ್ಕವರಿಗೆ ಪರೀಕ್ಷೆ ಮಾಡದೇನೇ ಒಪ್ಪಿಕೊಳ್ಳುತ್ತೇವೆ. ಈ ಪರೀಕ್ಷೆಗೆ ಚಿಕ್ಕಪ್ರಾಯದ ಯೌವನಸ್ಥರಕೂಡ ಸರ್ವಿಸಿನಲ್ಲಿರತಕ್ಕವರಾಗಲಿ ಲಾಯರಾಗಿರತಕ್ಕವರಾಗಲಿ ಸ್ಪರ್ಧೆಗೆ ನಿಲ್ಲಲಾರರು. ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ವಜಾಮಾಡುವುದು ಸಾಧ್ಯವಲ್ಲ.

ಅರಿಕೆ —ಸರ್ಕಾರಿ ಧರ್ಮಛತ್ರಗಳಲ್ಲಿ ಪ್ರಯಾಣಿಕರಿಂದ ಬ್ರಾಹ್ಮಣರಿಗೂ ಗೋಸಾಯಿಗಳಿಗೂ ಮಾತ್ರವೇ ಅನ್ನ ಹಾಕುತ್ತಾರೆ. ಇಲ್ಲವೇ, ಅಕ್ಕಿ ಪಡಿಯನ್ನು ಕೊಡಿಸುತ್ತಾರೆ. ಇತರ ಜಾತಿಯವರಿಗೂ ಅದೇ ರೀತಿ ಕೊಡಿಸುವಂತೆ ಏರ್ಪಾಡಾಗಬೇಕು. ಇದು ಸಾಧ್ಯವಿಲ್ಲದಿದ್ದರೆ ಬೇರೇ ಸ್ಥಳಗಳನ್ನು ಹೊಸದಾಗಿ ಏರ್ಪಡಿಸಬೇಕು.

ಉತ್ತರ —ಒಳ್ಳೇದು, ಆಲೋಚನೆ ಮಾಡುತ್ತೇವೆ.

ರಾಜಭಕ್ತಿಪ್ರದರ್ಶನೋತ್ಸವವು.

ರಾಜಧಾನಿಯಲ್ಲಿ ನಡಿಸಲ್ಪಟ್ಟ ಸಂತೋಷ ಕಾರ್ಯಗಳು.

ಏರ್ಪಾಡುಗಳ ಪರ್ಯಾಲೋಚನೆಯು

ಘನವಂತರಾದ ಏಳನೇ ಎಡ್ವರ್ಡ್ ಮಹಾರಾಜ ಚಕ್ರವರ್ತಿಯವರು ದಯಾಪೂರ್ವಕವಾಗಿ ಈ ಸಂಸ್ಥಾನದ ರಾಜರುಗಳಿಗೂ ಪ್ರಜೆಗಳಿಗೂ ಕಳೆದ ೧೮೮೧ನೇ ಇಸವಿಯಲ್ಲಿ ಅನುಗ್ರಹಿಸಿದ ರಾಯಲ್ ಪ್ರಾಕ್ಲಮೇಷನ್ ಎಂಬ ಇಷ್ಟಾರ್ಥಪತ್ರದ ಇಪ್ಪತ್ತನೇ ವರುಷದ ಸಂತೋಷೋತ್ಸವವನ್ನು ಮೈಸೂರು ಪಟ್ಟಣದಲ್ಲಿ ನವೆಂಬರ್ ತಾ ೭ನೇ ಸೋಮವಾರದ ದಿನ ವಿಜೃಂಭಣೆಯಿಂದ ನೆರವೇರಿಸಲು ಅವಶ್ಯವಾದ ಏರ್ಪಾಡುಗಳನ್ನು ಮಾಡುವುದಕ್ಕೋಸ್ಕರ ರಾಜಧಾನಿಯ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾದ ಮ, ಶಾಂತರಾಜೇ ಅರಸಿನವರು ಕಳೆದ ಅಕ್ಟೋಬರ್ ತಾ ೨೦ನೇ ಶುಕ್ರವಾರ ಸಾಯಂಕಾಲ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಒಂದು ಪಬ್ಲಿಕ್ ಮೀಟಿಂಗ್ ನಡಿಸಿದರು. ಆ ಮೀಟಿಂಗಿನಲ್ಲಿ ಮ, ವಿ. ಪಿ. ಮಾಧವರಾಯರು ಅಗ್ರಾಸನವನ್ನು ವಹಿಸಿದರು. ಇವರೂ, ಮ, ಗಳಾದ ಎಂ. ಸಿ. ರಂಗೈಯಂಗಾರ್ರು, ವೆಸ್ಲಿ ಮಿಷನ್ ಪೀಟರ್ಸ್ ಮತ್ತು ಅಂಬಳೆ ಅಣ್ಣಯ್ಯ ಪಂಡಿತರೂ, ಎಂ. ವೆಂಕಟಕೃಷ್ಣಯ್ಯನವರೂ, ಹುಸೇನ್ ಅಲ್ಲಿ ಬೇಗ್ರವರೂ, ವಿ. ರಾಮಣ್ಣನವರೂ, ಪುರುಷೋತ್ತಮ ಕುಂದಗಿರಿ ಗೋಸಾಯಿಯವರೂ ಈ ಉತ್ಸವವನ್ನು ನಡಿಸುವುದಕ್ಕೆ ಕಾರ್ಯ ಮುಂತಾದವನ್ನು ಕುರಿತು ಉಪನ್ಯಾಸಗಳನ್ನು ಮಾಡಿದರು. ಈ ಉತ್ಸವಕ್ಕಾಗಿ ಗವರ್ನ್ಮೆಂಟಿನವರು ೧,೦೦೦ ರೂಪಾಯಿ ಕೊಟ್ಟಿರುವುದಾಗಿಯೂ, ಮ್ಯುನಿಸಿಪಾಲಿಟಿಯವರು ೫೦೦ ರೂಪಾಯಿ ಕೊಡಬಹುದೆಂತಲೂ, ಪುರಜನರು ದ್ರವ್ಯಸಹಾಯಮಾಡಬೇಕೆಂತಲೂ ಸೂಚಿಸಿದರು. ಆ ದಿನ ಸಭೆಯಲ್ಲಿ ಸೇರಿದ್ದ ಎಲ್ಲಾ ಕೋಮುಗಳ ಮುಖಂಡರೂ ಸುಮಾರು ೧,೦೦೦ ರೂಪಾಯಿವರೆಗೆ ಚಂದಾ ಕೊಡುವುದಾಗಿ ವಾಗ್ದಾನಮಾಡಿದರು. ಉತ್ಸವವನ್ನು ನಡಿಸುವುದಕ್ಕೆ ಒಂದು ದೊಡ್ಡ ಕಮಿಟಿಯೂ, ಬೇರೆ ಬೇರೆ ಭಾಗಗಳನ್ನು ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಸಣ್ಣ ಸಣ್ಣ ಕಮಿಟಿಗಳೂ ಏರ್ಪಾಡಾದವು. ಇದಲ್ಲದೆ ಈ ವಾರ್ಷಿಕೋತ್ಸವದ ಜ್ಞಾಪಕಾರ್ಥವಾಗಿ ಯಾವ ಯಾವ ಕಾರ್ಯಗಳನ್ನು ನಡಿಸಬೇಕೋ, ಯಾವಯಾವುದಕ್ಕೆ ಎಷ್ಟೆಷ್ಟು ಹಣವನ್ನು ವಿನಿಯೋಗಿಸಬೇಕೋ ಇದನ್ನೂ ನಿರ್ಧರಮಾಡಿಕೊಂಡರು.

ಉತ್ಸವಗಳು

ಕಳೆದ ೭ನೇ ತಾ ಸೋಮವಾರ ಎಲ್ಲಾ ಕೋರ್ಟು ಕಚೇರಿ ಸ್ಕೂಲುಗಳಿಗೂ ರಜಾ ಕೊಟ್ಟಿತ್ತು. ಮೊದಲೇ ಏರ್ಪಾಡಾಗಿದ್ದಂತೆ ಆ ದಿನ ಬೆಳಿಗ್ಗೆ ಹೊಸ ಕರೋನೇಷನ್ ಮೈದಾನದಲ್ಲೂ, ಬಾಡಿ ಗಾರ್ಡ್ ಲೈನ್ ಮೈದಾನದಲ್ಲೂ ಸುಮಾರು ೧೦,೦೦೦ ಬಡಬಗ್ಗರಿಗೆ ಅಕ್ಕಿಯನ್ನೂ ದುಡ್ಡನ್ನೂ ಬಡಿಸಲಾಯಿತು

ವಗಾಡಿದರು. ಅದೇ ಸಮಯದಲ್ಲಿ ಕುರುಡರು, ಕುಂಟರು ಮೊದಲಾದ ಅಂಗ ಹೀನರಿಗೂ, ವಿಧವೆಯರಿಗೂ, ಅನಾಥರಿಗೂ ಅಂದರೆ ಸುಮಾರು ೫೦೦ ಜನರಿಗೆ ಹೊಸಬಟ್ಟೆ, ಸೀರೆ ಮೊದಲಾದವುಗಳನ್ನು ಟೌನ್ ಹಾಲ್ ಬಾಗಲಿನಲ್ಲಿ ಕೊಡಿಸಿದರು. ಮಧ್ಯಾಹ್ನ ೧೨ ಗಂಟೆಗೆ ಎಲ್ಲಾ ಸ್ಕೂಲುಗಳಿಗೂ ಲಾಡುಗಳನ್ನು ಕಳುಹಿಸಿಕೊಟ್ಟು, ಮಕ್ಕಳಿಗೆಲ್ಲಾ ಅಂದರೆ ಸುಮಾರು ೫,೪೦೦ ಮಂದಿಗೆ ಹಂಚಿಸಿದರು.

ಜಂಖಾನಾ ಆಟಗಳು.

ಪಬ್ಲಿಕ್ ಆಫೀಸ್ ಮೈದಾನದಲ್ಲಿ ಸ್ಕೂಲ್ ಹುಡುಗರಿಂದ ಜಂಖಾನಾ ಆಟಗಳನ್ನು ಮಧ್ಯಾಹ್ನ ೩ ರಿಂದ ೫ ಗಂಟೆಯೊಳಗೆ ಆಡಿಸಿ ಜಯಶೀಲರಾದವರಿಗೆ ಬಹುಮಾನಗಳನ್ನು ಗೊತ್ತುಮಾಡಿದರು. ತರುವಾಯ ಆಟಗಳ ಕಡೆಯಲ್ಲಿ ಮೈದಾನದಲ್ಲಿ ಸೇರಿದ್ದ ಬಾಲಕರನ್ನೆಲ್ಲಾ ಜ್ಯೂಬಿಲಿ ಹಾಲ್ ಎಂಬ ಕಟ್ಟಡದ ಬಳಿಗೆ ಬರಮಾಡಿಕೊಂಡರು. ಆ ಕಟ್ಟಡದ ಮೇಲ್ಭಾಗದಲ್ಲಿ ಕಮಿಟಿ ಮೆಂಬರುಗಳೂ ಕೆಲವು ಮಂದಿ ಯೂರೋಪಿಯನ್ ಸರ್ದಾರರೂ ದೊರೆಸಾನಿಗಳೂ ಕುಳಿತುಕೊಂಡರು. ಕೆಳಗಡೆ ಮುಂಭಾಗದಲ್ಲಿ ಬಾಲಕರೆಲ್ಲಾ ಅರ್ಧಚಂದ್ರಾಕೃತಿಯಾಗಿ ಕುಳಿತುಕೊಂಡರು. ಆಗ ಮೈಸೂರು ಗವರ್ನಮೆಂಟ್ ಕೋಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರಾದ ಮಿ. ಎಂ. ಶಾಮರಾವ್, ಎಂ. ಎ. ಯವರು ವಿದ್ಯಾರ್ಥಿಗಳನ್ನು ಕುರಿತು ಅವರ ಕರ್ತವ್ಯಗಳೇನೆಂಬುದನ್ನು ಕುರಿತು ಸಂಕ್ಷೇಪವಾಗಿ ಇಂಗ್ಲಿಷಿನಲ್ಲಿ ವಿವರಿಸಿದರು. ಅವರು ತಿಳಿಸಿದ ಮುಖ್ಯಾಭಿಪ್ರಾಯಗಳೇನೆಂದರೆ :—

ಬಾಲಕರು ಬಾಲ್ಯದಲ್ಲಿ ಕಾಯಪುಷ್ಟಿಗಾಗಿಯೂ, ವಿದ್ಯಾರ್ಜನೆಗಾಗಿಯೂ ತಮ್ಮ ಸರ್ವಸ್ವವನ್ನೂ ವಿನಿಯೋಗಿಸಬೇಕಾದದ್ದು ಅವರ ಪ್ರಥಮ ಕರ್ತವ್ಯವಾಗಿರುತ್ತದೆ. ವಿದ್ಯಾಭ್ಯಾಸಂಗಮಾಡುವಾಗ್ಗೆ ರಾಜಕೀಯವೇ ಮೊದಲಾದ ವಿಷಯಗಳಲ್ಲಿ ಅವರು ತಮ್ಮ ಮನಸ್ಸನ್ನು ಬೇರೆಮಾಡುವುದು ಎಷ್ಟುಮಾತ್ರಕ್ಕೂ ತರವಲ್ಲ. ಬಾಲ್ಯದಲ್ಲಿ ಸನ್ಮಾರ್ಗಗಳನ್ನು ಅಭ್ಯಾಸಮಾಡುತ್ತಾ, ವಿದ್ಯೆ ಕಲಿಯುತ್ತಾ ಬಂದರೆ ದೊಡ್ಡವರಾದ ಮೇಲೆ ಅವರು ಸತ್ಪ್ರಜೆಗಳಾಗಿ ಮನೆಗೂ, ಊರಿಗೂ, ರಾಜ್ಯಕ್ಕೂ ಶ್ರೇಯಸ್ಸನ್ನು ತರಲು ಯೋಗ್ಯರಾಗುವರು. ಅವರು ದುರ್ಮಾರ್ಗಗಳನ್ನೂ ದುರಾಲೋಚನೆಗಳನ್ನೂ ದುಸ್ಸಹವಾಸಗಳನ್ನೂ ದೂರ ಮಾಡಬೇಕು. ಮಾತಾಪಿತೃಭಕ್ತಿ, ಸಹೋದರವಾತ್ಸಲ್ಯ, ರಾಜಭಕ್ತಿಗಳು ಅವರಲ್ಲಿ ಅವಿಚ್ಛಿನ್ನವಾಗಿ ಮೆರೆಯುತ್ತಿರಬೇಕು. ರಾಜಾಜ್ಞೆಗಳಿಗೆ ಅನುಸಾರವಾಗಿ ರುವಂಥಾ ಮಾರ್ಗಗಳಲ್ಲಿ ಎಷ್ಟುಮಟ್ಟಿಗೆ ಜಬ್ದಾಸಮಾಡಿ ಹೋದಾಗ್ಯೂ ಅಂತಹ ಪ್ರಜಾಪಾಲಕರು ವಿರೋಧವೆಣಿಸುವುದಿಲ್ಲ. ವಿದ್ಯಾಭ್ಯಾಸಮಾಡುವ ತನ್ನ ಮಗನು ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹೋಗಿ ನೋಡಬಾರದೆಂದು ಜಾಮೀನ್ ಕೊಟ್ಟು ಬರುವುದನ್ನು ಯಾವ ತಂದೆತಾಯಿಗಳು ತಾನೇ ಅಪೇಕ್ಷೆಪಟ್ಟಾರು? ಜಪಾನ್ ರಾಜ್ಯದಲ್ಲಿ ಬಾಲಕರಿಗೆ ಬಹು ಶ್ರೇಷ್ಠವಾದ ನೀತಿಮಾರ್ಗಗಳನ್ನು ಕಲಿಸುತ್ತಾರೆ. ಅನ್ಯದೇಶದವರನ್ನು ಸರ್ವಪ್ರಕಾರದಲ್ಲೂ ಪ್ರೀತಿಸಿ ಸತ್ಕರಿಸಿ ಗೌರವದಿಂದ ಕಾಣಬೇಕೆಂತಲೂ, ಮಾತಾಪಿತೃಗಳನ್ನೂ ಗುರುಹಿರಿಯರನ್ನೂ ರಾಜರನ್ನೂ ಭಯಭಕ್ತಿಪ್ರೀತಿಗಳಿಂದ ಸನ್ಮಾನಿಸಬೇಕೆಂತಲೂ ಹೇಳಿಕೊಟ್ಟು ಅಭ್ಯಾಸಮಾಡಿಸುತ್ತಾರೆ. ನಮ್ಮ ಸಂಸ್ಥಾನದ ಬಾಲಕರೂ ಅದರಂತೆಯೇ ನಡೆದುಕೊಳ್ಳುವುದು ಶ್ರೇಯಸ್ಕರವಾಗಿರುತ್ತದೆ ಎಂಬುದೇ.

ಅನಂತರ ಅಲ್ಲಿ ಸೇರಿದ್ದವರೆಲ್ಲಾ ಚಕ್ರವರ್ತಿಯವರಿಗೂ ಶ್ರೀಮನ್ಮಹಾರಾಜರವರಿಗೂ ಶ್ರೇಯಸ್ಸಾಗಲೆಂದು ಜಯಘೋಷಗಳನ್ನು ಮಾಡಿದರು.

ದರ್ಬಾರು ನಡೆದದ್ದು.

ಸಾಯಂಕಾಲ ೬ ಘಂಟೆಗೆ ಟೌನ್ ಹಾಲ್ ಬಾಗಲೆಯಲ್ಲಿ ಡೆಪ್ಯುಟಿ ಕಮಿಷನರವರು ದರ್ಬಾರನ್ನು ನಡೆಸಿದರು. ದರ್ಬಾರ್ ಮಂದಿರವೊಳಗೂ ಹೊರಪ್ರಾಕಾರಗಳಲ್ಲೂ ಕಣ್ಣುಗಳಿಗೆ ಆನಂದವಾಗುವಂತೆ ನಾನಾರೀತಿಯಾಗಿ ಅಲಂಕಾರ ಮಾಡಿದ್ದರು. ರಾಜಧಾನಿಯಲ್ಲಿರುವ ಸಮಸ್ತ ಜಾತಿಮತಗಳ ಮತ್ತು ಕೋಮುಗಳ ಪ್ರತಿನಿಧಿಗಳಿಗೆ ಆಹ್ವಾನಪತ್ರಿಕೆಗಳನ್ನು ಕೊಟ್ಟು ಕರೆಸಿಕೊಂಡರು. ಸಭಾಮಂದಿರವು ಈ ಮಹಾಜನರಿಂದ ತುಂಬಿ ತುಳುಕುತ್ತಿತ್ತು. ಪ್ಲಾಟ್‍ಫಾರಂ ಎಂಬ ಉಚ್ಚಸ್ಥಾನದಲ್ಲಿ ಡೆಪ್ಯುಟಿ ಕಮಿಷನರ್ ಮಿ. ಎಂ. ಕಾಂತರಾಜ್ ಅರಸಿನವರೂ, ಇವರ ಬಲಗಡೆ ಯೂರೋಪಿಯನ್ ಸರ್ದಾರರೂ, ಎಡಗಡೆ ರಾಜವರ್ಗದವರೂ, ಹಿಂಭಾಗದಲ್ಲಿ ಮುಖ್ಯರಾದ ಅಧಿಕಾರಿಗಳೂ, ಕೆಳಗಡೆ ಹಾಲ್‍ನಲ್ಲಿ ಯೂರೋಪಿಯನ್ ದೊರೆಸಾನಿಗಳೂ ಅವರ ಮಕ್ಕಳೂ ಇತರ ದೊಡ್ಡ ಮನುಷ್ಯರೂ ಸಾಲುಸಾಲಾಗಿ ಕುಳಿತಿದ್ದರು. ಪ್ಲಾಟ್‍ಫಾರಮಿನ ಮೇಲ್ಭಾಗದಲ್ಲಿ ಘನವಸ್ತೆಯಿದ್ದ ಶ್ರೀ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರ ಛಾಯಾಚಿತ್ರವು ದರ್ಬಾರನ್ನು ನೋಡುತ್ತಿರುವಂತೆ ಕಟ್ಟಲ್ಪಟ್ಟಿತ್ತು. ಬಾಗಿಲಿನ ಹೊರಗಡೆ ಬ್ಯಾಂಡ್ ವಾದ್ಯಗಳು ಮನೋಹರವಾದ ರಾಗಗಳನ್ನೆತ್ತಿ ಮೊಳಗುತ್ತಿದ್ದುವು.

ಸಭಿಕರು ಪ್ರಯುಕ್ತಸಿ ಮಾಡುತ್ತಿರುವಲ್ಲಿ ಮಿ ಕಾಂತರಾಜ್ ಅರಸಿನವರು ಎದ್ದು ನಿಂತು, ಇಂಗ್ಲೀಷರಿಗೂ ಹಿಂದೂಸ್ಥಾನಕ್ಕೂ ಉಂಟಾದ ಸಂಬಂಧಗಳನ್ನೂ, ಇಂಗ್ಲೀಷರು ಈ ರಾಷ್ಟ್ರದಲ್ಲಿ ನಿಂತು ಕ್ರಮಕ್ರಮವಾಗಿ ಅಳ್ವಿಕೆಯ ಭಾರವನ್ನು ವಹಿಸಿದ ರೀತಿಯನ್ನೂ, ಮೈಸೂರು ಸಂಸ್ಥಾನದ ಪೂರ್ವಚರಿತ್ರೆಯನ್ನೂ, ಇಂಗ್ಲೀಷರು ದಯಾಪರರಾಗಿ ಶ್ರೀಮನ್ಮಹಾರಾಜರವರಿಗೆ ಸಂಸ್ಥಾನವನ್ನು ವಹಿಸಿಕೊಟ್ಟದ್ದನ್ನೂ, ಈ ಸಂಸ್ಥಾನದಲ್ಲಿ ರಾಜಭಕ್ತಿಯು ಅವಿಚ್ಛಿನ್ನವಾಗಿ ನೆಲೆಗೊಂಡಿರುವುದನ್ನೂ, ಮುಂದೆಯೂ ಈ ರಾಜಭಕ್ತಿಗೆ ಯಾವ ಲೋಪವೂ ಉಂಟಾಗಲಾರದೆಂಬ ಭರವಸೆಯನ್ನೂ ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ, ತರುವಾಯ ಮುಂದೆ ಹೇಳುವ ರಾಯಲ್ ಪ್ರಾಕ್ಲಮೇಷನ್ ಎಂಬ ಇಸ್ತಿಹಾರನಾಮೆಯನ್ನು ಇಂಗ್ಲೀಷಿನಲ್ಲಿ ಸಭಿಕರಿಗೆ ಓದಿ ತಿಳಿಸಿದರು.

•

ಸಭಾಸನುಗ್ರಹಿತರಾದ ಶ್ರೀ ವಿಕ್ಟೋರಿಯಾ ಮಹಾರಾಜ್ಞಿಯವರು ಇಂಡಿಯಾ ದೇಶದ ರಾಜರುಗಳಿಗೂ ಸ್ವಾಮಿಗಳಿಗೂ ಪ್ರಜೆಗಳಿಗೂ ದಯಪಾಲಿಸಿದ ಪತ್ರಿಕೆ. ಸನ್ ೧೮೫೮ನೇ ಇಸವಿಯ ನವಂಬರ್ ೧ನೇ ತಾರೀಖು.

- ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ರಾಜ್ಯಗಳಿಗೂ ಮತ್ತು ಸಮಸ್ತ ರಾಜ್ಯದವರು ಯೂರೋಪ್, ಏಷ್ಯಾ, ಆಫ್ರಿಕಾ, ಅಮೆರಿಕಾ ಮತ್ತು ಆಸ್ಟ್ರೇಲಿಯಾ ಖಂಡಗಳಲ್ಲಿ ಸ್ಥಾಪಿಸಿರುವ ಸ್ವಾಸ್ಥ್ಯಗಳಿಗೂ ಅಧೀನ ರಾಜ್ಯಗಳಿಗೂ ಭಗವಂತನ ಅನುಗ್ರಹದಿಂದ ರಾಣಿಯವರಾಗಿಯೂ ಮತ್ತು ನಮ್ಮ ಮತಧರ್ಮವನ್ನು ಪಾಲಿಸತಕ್ಕವರಾಗಿಯೂ ಇರುವ ಶ್ರೀ ವಿಕ್ಟೋರಿಯಾ ಎಂಬ ನಾವು ತಿಳಿಸುವುದೇನೆಂದರೆ:—

- ನಾವು ಪಾರ್ಲಿಮೆಂಟು ಮಹಾ ಸಭೆಯಲ್ಲಿ ಸೇರಿದ ಲಾರ್ಡ್ಸ್ ಸ್ಪಿರಿಚ್ಯುಯಲ್, ಲಾರ್ಡ್ಸ್ ಟೆಂಪೊರಲ್ ಮತ್ತು ಕಾಮನ್ಸ್ ಮಹಾಶಯರ ಸಲಹೆಯನ್ನೂ ಅನುಮತಿಯನ್ನೂ ಪಡೆದು, ಇದುವರೆಗೂ ನಮ್ಮ ಪರವಾಗಿ ಘನವನ್ನು ಹೊಂದಿದ ಈಸ್ಟ್ ಇಂಡಿಯಾ ಕಂಪೆನಿಯವರು ನಡೆಸುತ್ತಿದ್ದ ಇಂಡಿಯಾ ದೇಶದ ರಾಜ್ಯಾಡಳಿತವನ್ನು ನಾವೇ ಸ್ವತಃ ವಹಿಸಬೇಕೆಂದು ಬಲವಾದ ಅನೇಕ ಕಾರಣಗಳಿಂದ ತೀರ್ಮಾನಿಸಿರುತ್ತೇವೆ.

- ಆದಕಾರಣ ನಾವು ಅದೇ ಮೇರೆಗೆ ಆ ರಾಜ್ಯಭಾರವನ್ನು ವಹಿಸಿಕೊಂಡಿರುತ್ತೇವೆಂದು ಈ ಮೂಲಕ ತಿಳಿಯಪಡಿಸುತ್ತೇವೆ; ಮತ್ತು ನಮ್ಮ ರಾಜ್ಯಭಾರಕ್ಕೆ ಒಳಪಟ್ಟ ಪ್ರದೇಶಗಳಲ್ಲಿರುವ ನಮ್ಮ ಪ್ರಜೆಗಳೆಲ್ಲರೂ ನಮಗೂ, ನಮ್ಮ ಅನಂತರ ಪಟ್ಟಾಭಿಷಿಕ್ತರಾಗುವ ನಮ್ಮ ರಾಜ್ಯದ ಹಕ್ಕುದಾರರಿಗೂ ರಾಜಭಕ್ತಿವಿಶ್ವಾಸಯುಕ್ತರಾಗಿರಬೇಕೆಂತಲೂ ಮತ್ತು ನಮ್ಮ ಹೆಸರಿನಲ್ಲಿಯೂ ನಮ್ಮ ಪರವಾಗಿಯೂ ಸದರಿ ಪ್ರದೇಶಗಳ ಆಡಳಿತಗಳನ್ನು ನೋಡಿಕೊಳ್ಳುವುದಕ್ಕೋಸ್ಕರ ನಾವು ನೇಮಕಮಾಡುವ ಅಧಿಕಾರಿಗಳಿಗೆ ವಿಧೇಯರಾಗಿ ನಡೆದುಕೊಳ್ಳಬೇಕೆಂತಲೂ ಇದರ ಮೂಲಕ ಆಜ್ಞಾಪಿಸುತ್ತೇವೆ.

- ಮತ್ತು ನಾವು ವಿಶೇಷವಾಗಿ ನಮ್ಮ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿರುವ ಚಾರ್ಲ್ಸ್ ಜಾನ್ ವೈಕೌಂಟ್ ಕ್ಯಾನಿಂಗ್‍ರವರ ರಾಜಭಕ್ತಿಯಲ್ಲಿಯೂ, ರಾಜ್ಯಭಾರನಿರ್ವಹಣಸಾಮರ್ಥ್ಯದಲ್ಲಿಯೂ, ವಿವೇಚನಾಶಕ್ತಿಯಲ್ಲಿಯೂ ಸಂಪೂರ್ಣ ನಂಬಿಕೆಯಿಂದ ಸದರಿ ವೈಕೌಂಟ್ ಕ್ಯಾನಿಂಗ್‍ರವರನ್ನು ಇಂಡಿಯಾ ದೇಶದಲ್ಲಿ ನಮ್ಮ ಪರವಾಗಿ ಪ್ರಥಮ ವೈಸ್‍ರಾಯ್ ಮತ್ತು ಗವರ್ನರ್ ಜನರಲ್ ಹುದ್ದೆಯಲ್ಲಿರುವಂತೆ ನೇಮಿಸುತ್ತೇವಲ್ಲದೆ ಸದರಿ ದೇಶದ ಆಡಳಿತವನ್ನು ನಮ್ಮ ಹೆಸರಿನಲ್ಲಿ ನಡೆಸುವುದಕ್ಕೂ, ಮತ್ತು ಆಗಿಂದಾಗ್ಯೆ ನಮ್ಮ ಮುಖ್ಯ ಸ್ಟೇಟ್ ಸೆಕ್ರೆಟರಿಗಳ ಪೈಕಿ ಒಬ್ಬರ ಮೂಲಕ ಅವರಿಗೆ ಸಾದರವಾಗುವ ಆಜ್ಞೆಗಳಿಗೂ ಕಾಯಿದೆಗಳಿಗೂ ಒಳಪಟ್ಟು ನಮ್ಮ ಹೆಸರಿನಲ್ಲಿ ಮತ್ತು ನಮ್ಮ ಪರವಾಗಿ ಸಾಮಾನ್ಯವಾಗಿ ಅಧಿಕಾರವನ್ನು ಚಲಾಯಿಸುವುದಕ್ಕೂ ಈ ಮೂಲಕ ನೇಮಕಮಾಡಿ ಇರುತ್ತೇವೆ.

- ಘನವನ್ನು ಹೊಂದಿದ ಈಸ್ಟ್ ಇಂಡಿಯಾ ಕಂಪೆನಿಯವರ ಕೈಕೆಳಗೆ ಸಾಲೀ ಕೆಲಸ ಮಾಡುತ್ತಿರುವ ಸಮಸ್ತ ಅಧಿಕಾರಿಗಳನ್ನೂ ಅವರವರ ಸಿವಿಲ್ ಯಾ ಮಿಲಿಟರಿ ಹುದ್ದೆಗಳಲ್ಲಿ ಈ ಮೂಲಕ ಖಾಯಂ ಪಡಿಸಿರುತ್ತೇವೆ. ಪರಂತು ಮುಂದೆ ನಮಗೆ ಇಷ್ಟಬಂದಾಗ ಇವನ್ನು ರದ್ದು ಮಾಡಬಹುದು; ಅಲ್ಲದೆ ಸದರಿ ನೌಕರರೆಲ್ಲರೂ ಇನ್ನು ಮುಂದೆ ಏರ್ಪಡಿಸಬಹುದಾದ ಕಾನೂನುಗಳಿಗೂ ರೆಗ್ಯುಲೇಷನುಗಳಿಗೂ ಒಳಪಟ್ಟವರಾಗಿರತಕ್ಕದ್ದು.

- ಘನವನ್ನು ಹೊಂದಿದ ಈಸ್ಟ್ ಇಂಡಿಯಾ ಕಂಪೆನಿಯವರಿಂದಲಾಗಲಿ ಅಥವಾ ಅವರ ಅಪ್ಪಣೆಯ ಮೇರೆಗಾಗಲಿ ಇಂಡಿಯಾ ದೇಶದ ರಾಜರುಗಳೊಡನೆ ಮಾಡಲ್ಪಟ್ಟಿರುವ ಸಮಸ್ತ ತಹನಾಮೆಗಳನ್ನೂ ಕರಾರುನಾಮೆಗಳನ್ನೂ ನಾವು ಅಂಗೀಕರಿಸುತ್ತೇವೆಯಲ್ಲದೆ ಅವುಗಳಿಗೆ ಲೇಶಮಾತ್ರವೂ ವಿರೋಧವು ಬಾರದ ಹಾಗೆ ನಡೆದುಕೊಳ್ಳುತ್ತೇವೆಂದು ಸದರಿ ರಾಜರುಗಳೆಲ್ಲರಿಗೂ ಈ ಮೂಲಕ ತಿಳಿಯಪಡಿಸುತ್ತೇವೆ. ಅವರುಗಳೂ ಸಹ ಅದೇ ರೀತಿಯೇ ನಡೆದುಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ.

- ಈಗ ನಮಗಿರುವ ರಾಜ್ಯವನ್ನು ಇನ್ನೂ ವಿಸ್ತರಿಸಿಕೊಳ್ಳಬೇಕೆಂಬ ಆಶೆಯು ನಮಗಿಲ್ಲ. ನಮ್ಮ ರಾಜ್ಯಗಳ ಮೇಲೆ ಅಥವಾ ನಮ್ಮ ಹಕ್ಕುಗಳ ಮೇಲೆ ಯಾವ ಅತಿಕ್ರಮಣಪ್ರಯತ್ನವಾದರೂ ನಡೆದರೆ ಅದನ್ನು ನಾವು ಶಿಕ್ಷಿಸದೆ ಬಿಡುವುದಿಲ್ಲ; ಪರರ ರಾಜ್ಯದ ಮೇಲೆ ಅತಿಕ್ರಮಿಸುವುದಕ್ಕೆ ನಾವು ಎಂದಿಗೂ ಅನುಮತಿಸುವುದಿಲ್ಲ.

- ದೇಶೀಯ ರಾಜರುಗಳ ಹಕ್ಕುಬಾಧ್ಯತೆಗಳನ್ನೂ, ಮಾನಮರ್ಯಾದೆಗಳನ್ನೂ ನಮ್ಮ ಹಕ್ಕು ಬಾಧ್ಯತೆ, ಮಾನಮರ್ಯಾದೆಗಳಂತೆಯೇ ಗೌರವಿಸುವೆವು. ಅಲ್ಲದೆ ನಮ್ಮ ಸ್ವಂತ ಪ್ರಜೆಗಳಂತೆಯೇ ಅವರೂ ಸಹ ತಮ್ಮ ತಮ್ಮ ರಾಜ್ಯಗಳಲ್ಲಿ ಪ್ರಜಾ ಸಮೃದ್ಧಿಯೂ ಒಳ್ಳೆಯ ರಾಜ್ಯಭಾರವೂ—ಇವುಗಳಿಂದ ಮಾತ್ರವೇ ಪ್ರಾಪ್ತವಾಗಬಹುದಾದ ಸುಖಸಂಪತ್ತುಗಳನ್ನು ಪಡೆದು ಸಂತೋಷಯುಕ್ತರಾಗಿರಬೇಕೆಂಬುವುದೇ ನಮ್ಮ ಅಭಿಮತವಾಗಿರುತ್ತದೆ.

- ನಾವು ನಮ್ಮ ಇತರ ಸ್ವಾಸ್ಥ್ಯಗಳ ಪ್ರಜೆಗಳಿಗೆ ಯಾವ ರೀತಿ ನಮ್ಮ ಕರ್ತವ್ಯವನ್ನು ನಡೆಸಿಕೊಡಲು ಬದ್ಧರಾಗಿರುವೆವೋ ಅದೇ ರೀತಿಯಲ್ಲಿಯೇ ನಮ್ಮ ಇಂಡಿಯಾ ದೇಶೀಯರಿಗೂ ನಡೆಸಿಕೊಡಲು ಬದ್ಧರಾಗಿರುತ್ತೇವೆ; ಅಲ್ಲದೆ ಸರ್ವಶಕ್ತನಾದ ಭಗವಂತನ ಆಶೀರ್ವಾದದಿಂದ ಆ ಕರ್ತವ್ಯಗಳನ್ನು ಪ್ರಾಮಾಣಿಕವಾಗಿಯೂ, ನಿಷ್ಕಪಟವಾಗಿಯೂ ನಾವು ಖಂಡಿತವಾಗಿ ನಡೆಸಿಕೊಡುತ್ತೇವೆ.

- ಕ್ರೈಸ್ತಮತದ ತತ್ವವನ್ನು ನಾವು ದೃಢವಾಗಿ ನಂಬಿ ಆ ಮತದಿಂದ ಚಿತ್ತಸ್ವಾಸ್ಥ್ಯವನ್ನು ಹೊಂದಿರುತ್ತೇವೆಯಾದರೂ ನಮ್ಮ ಮತದಂತೆಯೇ ನಮ್ಮ ಪ್ರಜೆಗಳೂ ನಡೆದುಕೊಳ್ಳಬೇಕೆಂದು ಬಲಾತ್ಕರಿಸುವ ಇಷ್ಟವು ನಮಗಿಲ್ಲ. ಆ ಹಕ್ಕನ್ನೂ ನಾವು ವಹಿಸುವುದಿಲ್ಲ. ಮತಸ್ವಾತಂತ್ರ್ಯದ ಅಥವಾ ಆಚಾರಪ್ರಯುಕ್ತವಾದ ಸಬೂಬಿನ ಮೇಲೆ ಒಬ್ಬರಿಗೆ ಅನುಕೂಲವನ್ನೂ ಮತ್ತೊಬ್ಬರಿಗೆ ಪ್ರತಿಕೂಲವನ್ನೂ ಸರ್ವಪ್ರಕಾರದಲ್ಲಿಯೂ ನಡೆಸದೆ ಇರಬೇಕೆಂಬುದೂ ಸಮಸ್ತ ಜನರೂ ಕಾನೂನಿನ ಏಕಪ್ರಕಾರವಾದ ಮತ್ತು ನಿಷ್ಪಕ್ಷಪಾತವಾದ ಸಂರಕ್ಷಣೆಯನ್ನು ಸಮವಾಗಿ ಅನುಭವಿಸಬೇಕೆಂಬುದೂ ನಮಗೆ ರಾಜಾಭಿಲಾಷ ಮತ್ತು ಉತ್ಸಾಹಕರವೆಂದು ನಾವು ತಿಳಿಸುತ್ತೇವೆ. ನಮ್ಮ ಕೈಕೆಳಗಿನ ಅಧಿಕಾರಿಗಳಲ್ಲಿ ಯಾರೂ ನಮ್ಮ ಪ್ರಜೆಗಳ ಮತವಿಚಾರವಾದ ನಂಬಿಕೆಗೆ ಅಥವಾ ಆರಾಧನಾಕ್ರಮಕ್ಕೆ ಆಟಂಕಪಡಿಸಕೂಡದೆಂದು ನಾವು ಖಂಡಿತವಾಗಿ ತಾಕೀತು ಮಾಡುತ್ತೇವೆ. ಇದಕ್ಕೆ ವ್ಯತಿರಿಕ್ತವಾಗಿ ನಡೆಯುವವರು ನಮ್ಮ ಆಗ್ರಹಕ್ಕೆ ಪಾತ್ರರಾಗುವರು.

- ಮತ್ತು ನಮ್ಮ ಪ್ರಜೆಗಳು ಯಾವ ಮತ ಅಥವಾ ಪಂಗಡಕ್ಕೆ ಸೇರಿದವರಾದರೂ ಸರಿಯೇ ಯಾವ ಭೇದವೂ ಇಲ್ಲದೆ ಯಾವ ಯಾವ ಉದ್ಯೋಗಗಳಿಗೆ ತಮ್ಮ ವಿದ್ಯೆಯಿಂದಲೂ ಪ್ರಾಮಾಣಿಕತೆಯಿಂದಲೂ ಯೋಗ್ಯತೆಯಿಂದಲೂ ನ್ಯಾಯವಾಗಿ ಅರ್ಹರಾಗಿದ್ದಾರೆಯೋ ಅಂತಾ ಉದ್ಯೋಗಗಳನ್ನು ಸಾಧ್ಯವಾಗುವಷ್ಟಾದರೂ ಅವರಿಗೆ ಸಕ್ತವಾಗುವಂತೆ ಕೊಡಿಸಬೇಕೆಂತ ನಮಗೆ ಅಭಿಲಾಷೆ ಇರುತ್ತದೆ.

- ಇಂಡಿಯಾ ದೇಶೀಯರು ತಮ್ಮ ಪಾಲಿಗೆ ಬಂದ ಪಿತ್ರಾರ್ಜಿತ ಭೂಸ್ಥಿತಿಗಳನ್ನು ಕೇವಲ ದೃಷ್ಟಿ, ಭಕ್ತಿ ಮತ್ತು ಮಮತೆಯಿಂದ ಕಾಣುವರೆಂಬ ವಿಷಯವು ನಮಗೆ ತಿಳಿದಿರುತ್ತದೆಯಲ್ಲದೆ ಇದನ್ನು ನಾವು ಗೌರವಿಸುತ್ತೇವೆ. ರಾಜ್ಯದಳಿತಕ್ಕೆ ನ್ಯಾಯವಾಗಿ ಬೇಕಾಗುವ ಸಂದರ್ಭಗಳಲ್ಲಿ ಹೊರತು ಸದರಿ ಜಮೀನುಗಳ ಮೇಲೆ ಅವರವರಿಗಿರುವ ಹಕ್ಕುಬಾಧ್ಯತೆಗಳನ್ನೆಲ್ಲಾ ಕಾಪಾಡಿಕೊಂಡು ಬರಲು ಇಚ್ಛೆಯುಳ್ಳವರಾಗಿದ್ದೇವೆ ಮತ್ತು ಸಾಧಾರಣವಾಗಿ ಜನರ ಪೂರ್ವದ ಹಕ್ಕುಬಾಧ್ಯತೆಗಳಿಗೂ, ಆಚಾರವ್ಯವಹಾರಗಳಿಗೂ, ಮಾಮೂಲಿಗೂ ಉಚಿತವಾಗಿ ನಿಗ ಕೊಟ್ಟು ಕಾನೂನನ್ನು ಮಾಡಿ ಅದರಂತೆ ಆಚರಿಸುತ್ತೇವೆ.

- ಕೆಲವು ದುರಾಶಾವಿಷ್ಟರಾದ ಇಂಡಿಯಾ ದೇಶೀಯರು ತಮ್ಮ ದೇಶದ ಜನರಿಗೆಲ್ಲಾ ಸುಳ್ಳು ವರ್ತಮಾನಗಳನ್ನು ಕೊಟ್ಟು ಅವರನ್ನು ಮೋಸಗೊಳಿಸಿ ದಂಗೆ ಎಬ್ಬಿಸಿ ಇಂಡಿಯಾ ದೇಶಕ್ಕೆ ಕೇಡುಕುಗಳನ್ನೂ ಅನರ್ಥಗಳನ್ನೂ ಉಂಟುಮಾಡಿರುವುದಕ್ಕೋಸ್ಕರ ನಾವು ತುಂಬಾ ವ್ಯಸನಪಡುತ್ತೇವೆ. ಆ ದಂಗೆಯನ್ನು ನಮ್ಮ ಸೈನ್ಯದ ಸಹಾಯದಿಂದ ಅಡಗಿಸಿ ನಮ್ಮ ಸಾಮರ್ಥ್ಯವನ್ನು ಪ್ರಕಟಪಡಿಸಿದೆವು. ಇತರರ ದುರ್ಬೋಧನೆಯಿಂದ ಅಪರಾಧವಾಡಿ ಪುನಃ ಧರ್ಮಮಾರ್ಗಕ್ಕೆ ಬಂದವರಿಗೆ ಕ್ಷಮಾಪಣೆ ಮಾಡಿ ನಮ್ಮ ದಯೆಯನ್ನು ತೋರಿಸಲು ಅಪೇಕ್ಷಿಸುತ್ತೇವೆ.

- ಈಗಾಗಲೇ ಇಂಡಿಯಾ ದೇಶದ ಒಂದು ಸಂಸ್ಥಾನದಲ್ಲಿ ಪ್ರಾಣಹಾನಿಯನ್ನು ತಪ್ಪಿಸುವ ಉದ್ದೇಶದಿಂದಲೂ, ಇಂಡಿಯಾ ದೇಶದಲ್ಲಿ ನಮಗೆ ಸೇರಿದ ಇತರ ಪ್ರಾಂತ್ಯಗಳಲ್ಲಿಯೂ ಸಮಾಧಾನಸ್ಥಿತಿಯನ್ನು ಜಾಗ್ರತೆಯಾಗಿ ನೆಲೆಗೊಳಿಸುವುದಕ್ಕಾಗಿಯೂ ನಮ್ಮ ವೈಸ್‍ರಾಯ್ ಮತ್ತು ಗವರ್ನರ್ ಜನರಲ್‍ರವರು ಈಚೆಗೆ ನಡೆದ ಶೋಚನೀಯವಾದ ದಂಗೆಯಲ್ಲಿ ನಮ್ಮ ಸರ್ಕಾರಕ್ಕೆ ಅಪರಾಧವನ್ನು ಮಾಡಿದವರಲ್ಲ ಕೆಲರಿಗೆ ಕೆಲವು ಷರತ್ತುಗಳ ಮೇಲೆ ಕ್ಷಮಾಪಣೆಯನ್ನು ಕೊಡುವುದಾಗಿ ಭರವಸೆ ಕೊಟ್ಟಿರುತ್ತಾರೆಯಲ್ಲದೆ ಕ್ಷಮಾಪಣೆಗೆ ಅರ್ಹರಲ್ಲದ ತಪ್ಪಿತಸ್ಥರಿಗೆ ಆಗತಕ್ಕ ಶಿಕ್ಷೆಯನ್ನೂ ಸಹ ತಿಳಿಸಿದಾರೆ. ನಮ್ಮ ವೈಸ್‍ರಾಯ್ ಮತ್ತು ಗವರ್ನರ್ ಜನರಲ್‍ರವರು ಈ ರೀತಿ ನಡಿಸಿದ ಅಮಲನ್ನು ನಾವು ಅನುಮೋದಿಸಿ ಮಂಜೂರ್ ಮಾಡಿರುವುದಲ್ಲದೆ ಸಮಸ್ತ ಜನರಿಗೂ ಪ್ರಸಿದ್ಧಪಡಿಸುವುದೇನೆಂದರೆ:—

- ಬ್ರಿಟಿಷ್ ಪ್ರಜೆಗಳನ್ನು ಖೂನಿ ಮಾಡುವುದರಲ್ಲಿ ಸಾಕ್ಷಾತ್ತಾಗಿ ಪ್ರವರ್ತಿಸಿದವರೆಂದು ಯಾರ್ಯಾರ ಮೇಲೆ ತಪ್ಪು ಸಾಬೀತಾಗಿದೆಯೋ ಅಥವಾ ಇನ್ನು ಮೇಲೆ ಸಾಬೀತಾಗುವುದೋ ಅಂಥಾವರು ಶಿವಾಯಿ ಬಾಕಿ ಎಲ್ಲಾ ತಪ್ಪಿತಸ್ಥರಿಗೂ ನಾವು ದಯೆಯನ್ನು ತೋರಿಸುವೆವು. ಅಂಥಾ ತಪ್ಪು ಸಾಬೀತಾದವರ ವಿಷಯದಲ್ಲಿ ದಯೆ ತೋರಿಸುವುದು ನ್ಯಾಯವಿರುದ್ಧವಾಗಿರುವುದು.

- ಖೂನಿ ಮಾಡಿದವರೆಂದು ತಿಳಿದೂ ಕೂಡ ಅಂಥ ಖೂನಿಗಾರರಿಗೆ ಮನಃಪೂರ್ವಕವಾಗಿ ಯಾರು ಆಶ್ರಯವನ್ನು ಕೊಟ್ಟಿದ್ದಾರೆಯೋ ಅಥವಾ ದಂಗೆಯಲ್ಲಿ ಯಾರ್ಯಾರು ಮುಖಂಡರಾಗಿ ನಿಂತಿದ್ದಾರೆಯೋ ಅಥವಾ ದಂಗೆ ಏಳುವಂತೆ ಪ್ರೋತ್ಸಾಹ ಮಾಡಿದ್ದಾರೆಯೋ ಅಂಥವರ ವಿಷಯದಲ್ಲಿ ಅವರ ಪ್ರಾಣಗಳನ್ನು ಮಾತ್ರ ಕಾಪಾಡಲಾಗುವುದು. ಪರಂತು ಅಂಥಾ ಮನುಷ್ಯರಿಗೆ ಆಗತಕ್ಕ ಶಿಕ್ಷೆಯನ್ನು ಮೊಕದ್ದಮೆ ಮಾಡುವ ವಿಷಯದಲ್ಲಿ ಅವರು ತಮ್ಮ ವಿಧೇಯತೆಯನ್ನು ಬಿಟ್ಟು ಬಿಡಲಿಕ್ಕೆ ಕಾರಣವಾದ ವಿದ್ಯಮಾನಗಳನ್ನು ಪೂರಾ ಆಲೋಚಿಸಲಾಗುತ್ತದೆ. ಕೃತ್ರಿಮಿಗಳು ಹುಟ್ಟಿಸಿದ ಸುಳ್ಳು ವರ್ತಮಾನಗಳನ್ನು ಸ್ವಲ್ಪವೂ ವಿವೇಚನೆಯಿಲ್ಲದೆ ನಿಜವೆಂತ ನಂಬಿ ತತ್ಕಾಲಕ್ಕೆ ಯಾರು ತಕ್ಷೀರು ನಡೆಸಿದರೆಂದು ತೋರಿಬರುತ್ತದೆಯೋ ಅಂಥವರ ವಿಷಯದಲ್ಲಿ ವಿಶೇಷ ದಯೆಯನ್ನು ತೋರಿಸಲಾಗುವುದು.

- ಸರ್ಕಾರದವರ ಮೇಲೆ ತಿರುಗಿಬಿದ್ದು ಕೈಮಾಡಿದ ಇತರ ಜನರೆಲ್ಲರೂ ಪುನಃ ತಮ್ಮ ತಮ್ಮ ಊರುಗಳಿಗೆ ಹೋಗಿ ನಿರ್ದುಷ್ಟವಾದ ತಮ್ಮ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಪ್ರಾರಂಭಿಸಿದರೆ ಅವರು ನಮಗೂ ನಮ್ಮ ಪ್ರಭುತ್ವಕ್ಕೂ ನಮ್ಮ ಗೌರವಕ್ಕೂ ವಿರೋಧವಾಗಿ ನಡೆಸಿದ ಅಪರಾಧಗಳನ್ನೆಲ್ಲಾ ಯಾವ ಷರತ್ತೂ ಇಲ್ಲದೇನೆ ಕ್ಷಮಿಸಿ ಮರೆತುಬಿಡುವುದಾಗಿ ಅವರಿಗೆಲ್ಲಾ ಈ ಮೂಲಕ ವಾಗ್ದಾನ ಮಾಡುತ್ತೇವೆ.

- ಬರುವ ಜನವರಿ ೧ನೇ ತಾರೀಖಿನ ಒಳಗಾಗಿ ಮೇಲ್ಕಂಡ ಷರತ್ತುಗಳ ಮೇರೆಗೆ ಯಾರ್ಯಾರು ನಡೆದುಕೊಳ್ಳುತ್ತಾರೆಯೋ ಅವರೆಲ್ಲರಿಗೂ ಮೇಲೆ ಹೇಳಿದಂತೆ ಕ್ಷಮಾಪಣೆಯನ್ನೂ ಕರುಣೆಯನ್ನೂ ದಯಪಾಲಿಸಬೇಕೆಂತ ನಮ್ಮ ಕೋರಿಕೆಯಾಗಿದೆ.

- ಭಗವಂತನ ಅನುಗ್ರಹದಿಂದ ದೇಶದೊಳಗೆಲ್ಲಾ ಸಮಾಧಾನಸ್ಥಿತಿಯು ನೆಲೆಗೊಂಡ ಒಳಕ ಇಂಡಿಯಾ ದೇಶದ ವ್ಯವಸಾಯ ಮೊದಲಾದ ಕೆಲಸಗಳು ನಿರಾತಂಕವಾಗಿ ನಡೆಯುವಂತೆ ಪ್ರೋತ್ಸಾಹ ಕೊಡಬೇಕೆಂತಲೂ, ಜನಸಾಮಾನ್ಯಕ್ಕೆ ಪ್ರಯೋಜನಕರವಾದ ಮತ್ತು ಅವರ ಏಳಿಗೆಗೆ ಆಕರವಾದ ಕಾರ್ಯಗಳನ್ನು ಅಭಿವೃದ್ಧಿಪಡಿಸಬೇಕೆಂತಲೂ, ಅಲ್ಲಿನ ನಮ್ಮ ಪ್ರಜೆಗಳಿಗೆಲ್ಲಾ ಪ್ರಯೋಜನವಾಗುವಂತೆ ರಾಜ್ಯಭಾರಮಾಡಬೇಕೆಂತಲೂ ನಮ್ಮ ಮನಃಪೂರ್ವಕವಾದ ಕೋರಿಕೆಯಾಗಿದೆ. ಅವರ ಏಳಿಗೆಯೇ ನಮಗೆ ಬಲ, ಅವರ ತೃಪ್ತಿಯೇ ನಮಗೆ ಕ್ಷೇಮ; ಅವರ ಕೃತಜ್ಞತೆಯೇ ನಮಗೆ ಅತ್ಯುತ್ತಮವಾದ ಬಹುಮಾನ. ಆದಕಾರಣ ಸರ್ವಶಕ್ತನಾದ ಭಗವಂತನು ಈ ನಮ್ಮ ಇಷ್ಟಾರ್ಥಗಳನ್ನು ನಮ್ಮ ಪ್ರಜೆಗಳ ಕ್ಷೇಮಾರ್ಥವಾಗಿ ನೆರವೇರಿಸುವುದಕ್ಕೆ ನಮಗೂ ನಮ್ಮ ಕೆಳಗಿನ ಅಧಿಕಾರಿಗಳಿಗೂ ಶಕ್ತಿಯನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.

ಈ ಇಸ್ತಿಹಾರನಾಮೆಯನ್ನು ಕನ್ನಡದಲ್ಲಿ ಮಿ ಎಂ. ರಾಮರಾಯರವರೂ, ಉರ್ದು ಭಾಷೆಯಲ್ಲಿ ಪೋಲೀಸ್ ಸೂಪರಿಂಟೆಂಡೆಂಟ್ ಮಿ ಜಹುಗೀರ್ ಮೆಕ್ಕೆಯವರೂ ಕೆಲಕೆಲವು ಪ್ರಾರಂಭ ವಾಕ್ಯಗಳೊಡನೆ ಓದಿ ಹೇಳಿದರು.

ತರುವಾಯ ಅಡ್ವೊಕೇಟ್ ಮಿ ಎಂ ಎ. ರಂಗೈಯಂಗಾರ್ರು ಇಂಗ್ಲೀಷಿನಲ್ಲೂ, ಮಿ ಅಂಬಳೆ ಅಣ್ಣಯ್ಯಪಂಡಿತರು ಕನ್ನಡದಲ್ಲೂ, ಮೌಲ್ವಿ ಮಹೀಷ್ ಹೀರ್‍ರವರು ಉರ್ದುಭಾಷೆಯಲ್ಲೂ ಬ್ರಿಟಿಷರ ಗುಣಾತಿಶಯಗಳನ್ನೂ, ಅವರ ವಿಷಯದಲ್ಲಿ ಈ ರಾಷ್ಟ್ರದ ಸಕಲ ಪ್ರಜೆಗಳಿಗೂ ಇರಬೇಕಾದ ಪ್ರೀತಿ ಭಕ್ತಿ ಸರಾಯಣತೆಯನ್ನೂ ಕುರಿತು ಮನೋಜ್ಞವೂ ಸಂತೋಷಪ್ರದವೂ ಆದ ಉಪನ್ಯಾಸಗಳನ್ನು ಮಾಡಿದರು. ಸಂದರ್ಭೋಚಿತ ಕವನಗಳನ್ನು ರಚಿಸಿದ್ದವರು ಘನವಸ್ತೆಯಿದ್ದ ಶ್ರೀ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರ, ಅವರ ಸುಪುತ್ರರಾದ ಏಳನೆಯ ಎಡ್ವರ್ಡ್ ಚಕ್ರವರ್ತಿ ಸಾರ್ವಭೌಮರವರ ಗುಣಕಥನವನ್ನು ಮಾಡಿ ರಚಿಸಿದ್ದ ಸಂಸ್ಕೃತ ಶ್ಲೋಕಗಳನ್ನು ಸಭೆಯಲ್ಲಿ ಓದಿಹೇಳಿದರು.

ಸರ್ದಾರರಿಗೂ, ರಾಜವರ್ಗದವರಿಗೂ, ಅಧಿಕಾರಿಗಳಿಗೂ, ಸಭಾಸದರಿಗೂ ಹೂವಿನ ಹಾರಗಳನ್ನು ಹಾಕಿದರು. ದೊರೆಸಾನಿಗಳಿಗೆ ಹೂವಿನ ತುರಾಯಿಗಳನ್ನು ಒಪ್ಪಿಸಿದರು. ತಾಂಬೂಲ ಕೊಡಲಾಯಿತು. ಯೂರೋಪಿಯನ್ ಸಭಾಸದರು ಡೆಪ್ಯುಟಿ ಕಮಿಷನರನ್ನು ಬೀಳ್ಕೊಂಡು ತೆರಳಿದರು.

ವಿನೋದಗಳು.

ತರುವಾಯ ಮದ್ರಾಸು ಹಿಂದೂಸ್ಥಾನಕ್ಕೆ ಸೇರಿದ ಪೆಂಡಾರ್ ಸಂಸ್ಥಾನದಿಂದ ಬಂದಿರುವ ಪ್ರೊಫೆಸರ್ ರಬಬ್ ಅಲ್ಲಿ ಖಾನ್ ಬೀನ್‍ಕಾರ್ ಗವಯಿ ಎಂಬ ಪ್ರಸಿದ್ಧ ಸಂಗೀತಗಾರರೂ, ಆಸ್ಥಾನ ಸಂಗೀತ ವಿದ್ವಾಂಸರಾದ ವಾಸುದೇವಾಚಾರ್ ಮತ್ತು ಬಿಡಾರದ ಕೃಷ್ಣಪ್ಪನವರೂ ಬಹು ಮನೋಹರವಾಗಿ ಸಂಗೀತವನ್ನು ಹಾಡಿದರು. ಒಬ್ಬ ಮಹಮ್ಮದೀಯ ಬಾಲಕನು ಉರ್ದು ಭಾಷೆಯಲ್ಲಿ ಕೆಲವು ಪದ್ಯಗಳನ್ನು ಹಾಡಿ ಸಭಿಕರನ್ನು ತುಂಬಾ ಸಂತೋಷಪಡಿಸಿದನು. ಇದಾದಮೇಲೆ ಇಬ್ಬರು ರತ್ನಾವಳಿ ನಾಟಕದ ಕೆಲವು ಭಾಗಗಳನ್ನು ಬಹು ಸ್ವಾರಸ್ಯವಾಗಿ ಅಭಿನಯಿಸಿ ಆಡಿದರು. ಶಾಕುಂತಳ ನಾಟಕದ ಎರಡು ಸೀನ್‍ಗಳಲ್ಲಿ ಒಬ್ಬ ಬಾಲಕನು ಶಬ್ದಾಲಂಕಾರವನ್ನೂ ಉತ್ಸಾಹಗಳನ್ನೂ ವರ್ಣಿಸಿ ಅಭಿ

ಯಿಸಿದ್ದು, ಒಬ್ಬ ಆಚಾರ್ರು ಸಮಾರಾಧನೆಯು ಭಕ್ಷ್ಯ ಭೋಜ್ಯಗಳನ್ನು ಕುರಿತು ಬಹಳ ಚೆನ್ನಾಗಿ ವಿವರಿಸಿದ್ದೂ, ಇನ್ನೊಬ್ಬ ಯುವಕನು ಕುಸಿಸಿಯವನ ವೇಷವನ್ನು ಧರಿಸಿ ಬಂದು, ತನಗ ದೊರೆತ ಬಹುಮಾನದ ರೂಪಾಯನ್ನು ತೋರಿಸಿ, ಅದರಿಂದ ಲೋಕದಲ್ಲಿ ಉಂಟಾಗುತ್ತಿರುವ ಫಲಪ್ರಯೋಜನಗಳನ್ನೂ ಕೆಟ್ಟ ದುಷ್ಕಾರ್ಯಗಳನ್ನೂ ವರ್ಣನೆ ಮಾಡಿದ್ದೂ ಸಭಿಕರಿಗೆ ಅತ್ಯಾನಂದವನ್ನುಂಟುಮಾಡಿದವು. ಕೆಲವು ಬಾಲಕರು ನಾಟ್ಯವಾಡಿದರು. ಕಡೆಯಲ್ಲಿ ಸಲಾಂ ದರಬಾರಿನ ಪದ್ಯಗಳು ಹಾಡಲ್ಪಟ್ಟಾಗ ಸಭಿಕರೆಲ್ಲಾ ಎದ್ದು ನಿಂತುಕೊಂಡರು.

ಮ|| ಎಂ. ಸಿ. ರಂಗೈಯಂಗಾರ್ರು ಸಭಿಕರನ್ನು ಕುರಿತು—ಶ್ರೀಮನ್ ಮಹಾರಾಜರವರ ಆಜ್ಞಾನುಸಾರವಾಗಿ ಡೆಪ್ಯುಟಿ ಕಮೀಷನರವರು ಆ ದಿನದ ಉತ್ಸವಗಳನ್ನು ಸ್ತೋತ್ರಾರ್ಹವಾಗಿಯೂ, ಸಾಂಗವಾಗಿಯೂ, ಸಂತೋಷದಾಯಕವಾಗಿಯೂ ನೆರವೇರಿಸಿರುವ ವೃತ್ತಾಂತವನ್ನು ಶ್ರೀಮನ್ ಮಹಾರಾಜರವರಿಗೆ ಅರಿಕೆಮಾಡಬೇಕೆಂದು ಸಭಿಕರ ಪರವಾಗಿ ಮ ಎಂ. ಕಾಂತರಾಜೇ ಅರಸಿನವರನ್ನು ಕೇಳಿಕೊಂಡದ್ದಲ್ಲದೆ, ಆ ಮಹೋತ್ಸವದ ಕಾರ್ಯಭಾರಗಳನ್ನು ನಿರ್ವಹಿಸಿದ್ದಕ್ಕಾಗಿ ಅವರಿಗೆ ಸಭಿಕರ ವಂದನೆಗಳನ್ನು ಸಮರ್ಪಿಸಿದರು. ಕಡೆಯಲ್ಲಿ ಮ|| ಸಿ. ಪಾಲಣ್ಣನವರು ಸೂಚಿಸಿದಂತೆ ಸಭಿಕರು ಏಕವಾಕ್ಯತೆಯಿಂದಲೂ ಆನಂದದಿಂದಲೂ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರಿಗೂ, ಶ್ರೀಮನ್ ಮಹಾರಾಜರವರಿಗೂ ಶ್ರೇಯಸ್ಸನ್ನು ಬಯಸಿ, ಮೂರು ಮೂರು ಸಲ ಜಯಘೋಷಗಳನ್ನು ಮಾಡಿ ಆ ದಿನದ ಸಂಭ್ರಮಯುಕ್ತಗಳಾದ ಉತ್ಸವಗಳನ್ನು ಮುಕ್ತಾಯಮಾಡುವಾಗ್ಗೆ ರಾತ್ರಿ ೯|| ಗಂಟೆಯಾಯಿತು.

ಇತರ ಕಡೆಗಳಲ್ಲಿ ನಡದ ಉತ್ಸವಗಳು.

ಫ್ರೆಂಚ್‌ರಾಕ್ಸ್.

ನೊವೆಂಬರ್ ೨ ನೇ ತಾರೀಖಿನ ದಿನ ಇಂಡಿಯಾ ದೇಶದ ಎಲ್ಲಾ ಕಡೆಯಲ್ಲೂ ೧೮೫೮ ನೇ ಇಸ್ವಿಯಲ್ಲಿ ಇಂಡಿಯಾ ರಾಜ್ಯವು ಈಸ್ಟ್ ಇಂಡಿಯಾ ಕಂಪೆನಿಯವರಿಂದ ಮಹಾರಾಣಿ ವಿಕ್ಟೋರಿಯಾ ಚಕ್ರವರ್ತಿನಿಯವರಿಗೆ ಒಪ್ಪಿಸಲ್ಪಟ್ಟ ವಿಶೇಷವಾದ ಕಾರ್ಯದ ಐವತ್ತನೇ ವರ್ಷದ ಜೂಬಿಲಿಯನ್ನು ಆಚರಿಸುವ ವರ್ತಮಾನಗಳು ಇಲ್ಲಿಯೂ ತಿಳಿದು ನಮ್ಮ ಡೆಪ್ಯುಟಿ ಅಮಲ್ದಾರರ ಮೂಲಕ ನಡೆಸಲ್ಪಟ್ಟವು. ದೇವಸ್ಥಾನಗಳಲ್ಲಿ ಉತ್ಸವವೂ ಬಡ ಜನಗಳಿಗೆ ಸುಭೋಜನವೂ ವಸ್ತ್ರದಾನವೂ, ಸ್ಕೂಲ್ ವಿದ್ಯಾರ್ಥಿಗಳಿಗೆ ಅಂಗಸಾಧನೆಯ ಆಟಗಳೂ, ಬಹುಮಾನ ಹಂಚೋಣವೂ ನಡೆದುವು. ಈ ಟಿಫಿನ್ ವಸ್ತುಗಳಿಗೂ ವಿದ್ಯಾರ್ಥಿಗಳಿಗೂ ಬಹಳ ಮಟ್ಟಿಗೂ ಆನಂದವನ್ನೂ ತೃಪ್ತಿಯನ್ನೂ ಉಂಟುಮಾಡಿದ್ದುವು. ಅದೇ ಸಾಯಂಕಾಲ ಮಿಡ್ಲ್ ಗರಲ್ಸ್ ಸ್ಕೂಲಿನಲ್ಲಿ ನಮ್ಮ ಡೆಪ್ಯುಟಿ ಅಮಲ್ದಾರರು ಕೂಟವನ್ನು ನಡಿಸಿದರು. ಅಲ್ಲಿ ಈ ಟೌನಿನ ಮುಖಸ್ಥರೂ, ಕೋರ್ಟು ಕಛೇರಿಗಳ ನೌಕರರೂ, ಪೋಲೀಸ್ ಸೂಪರಿಂಟೆಂಡೆಂಟ್ ಮ ಬಸವರಾಜೇ ಅರಸಿನವರೂ ಮುಂತಾದ ಮಹಾ ಜನಗಳೂ ಸ್ಕೂಲ್ ಬಾಲಕ ಬಾಲಿಕೆಯರುಗಳೂ ಹಾಜರಿದ್ದರು. ಚಕ್ರವರ್ತಿಯವರ ಮತ್ತು ಗತಿಸಿದ ವಿಕ್ಟೋರಿಯಾ ಮಹಾರಾಣಿ ಚಕ್ರವರ್ತಿನಿಯವರ ಗುಣಕಥನವನ್ನು ಮಾಡಿದ ನಂತರ ಮಹಾರಾಜರ ಮತ್ತು ಚಕ್ರವರ್ತಿಯವರ ಶ್ರೇಯಃ ಪ್ರಾರ್ಥನೆಗಳು ನಡೆಸಲ್ಪಟ್ಟವು. ಕಡೆಯಲ್ಲಿ ನೆರೆದ ಮನುಷ್ಯರಿಗೆಲ್ಲಾ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು.

ಬೆಂಗಳೂರು.

ಶತಸಾವಿರ ೫೦ ನೇ ವರ್ಷದ ಉತ್ಸವವು ಮೈಸೂರು ಸೀಮೆಯ ಎಲ್ಲಾ ಭಾಗಗಳಲ್ಲಿಯೂ ನವಂಬರ್ ೨ ನೇ ತಾರೀಖು ಸೋಮವಾರ ನಡೆಯಬೇಕೆಂದು ನಿಶ್ಚಯವಾಗಿ ಒಂದು ವಾರವೂ ಸಹಾ ಗತಿಸಿಲ್ಲ. ಆದರೂ ಸರ್ವ ಪ್ರಜೆಗಳೂ ಅತ್ಯಂತ ಉತ್ಸಾಹದೊಡನೆ ಉತ್ಸವಗಳನ್ನು ನಡೆಸುವುದರಲ್ಲಿ ನಿರತರಾಗಿರುವುದನ್ನು ನೋಡಿದರೆ ಮೈಸೂರು ಸಂಸ್ಥಾನದ ಪ್ರಜೆಗಳಿಗೆ ಸಾರ್ವಭೌಮ ಸರ್ಕಾರದಲ್ಲಿ ಎಷ್ಟುಮಟ್ಟಿನ ಭಕ್ತಿಗೌರವಗಳು ಇರುವುವೆಂಬುದು ವಿಶದವಾಗುವುದು. ಬೆಂಗಳೂರಿನಲ್ಲಿ ಮೊಳ್ಳಂದ ಈ ದಿವಸ ಸಮಸ್ತರಿಗೂ ಸಂತೋಷದ ದಿನವಾಗಿತ್ತು. ಯಾವ ರಸ್ತೆಯಲ್ಲಿ ನೋಡಿದರೂ ಅಲಂಕಾರಗಳು, ಎಲ್ಲಿ ನೋಡಿದರೂ ಸಮಾರಾಧನೆಗಳು, ಎಲ್ಲಿ ನೋಡಿದರೂ ಸಾರ್ವಭೌಮ ಸರ್ಕಾರದವರ ಶ್ರೇಯಃಪ್ರಾರ್ಥನೆಗಳು ನಡೆದವು. ಅಠಾರಾ ಕಚೇರಿಯ ಬಳಿ ಮಧ್ಯಾಹ್ನ ೧೨ ಗಂಟೆಗೆ ಸರಿಯಾಗಿ ಡೆಪ್ಯುಟಿ ಕಮೀಷನರವರು ದರ್ಬಾರನ್ನು ನಡೆಯಿಸಿ, ಶ್ರೀ ವಿಕ್ಟೋರಿಯಾ ಮಹಾರಾಜ್ಞಿಯವರ ಶತಸಾವಿರಯನ್ನು ಓದಿ ವಿವರಿಸಿದರು. ದರ್ಬಾರಿನಲ್ಲಿ ಸರ್ಕಾರೀ ಅಧಿಕಾರಿಗಳೂ ಪುರಪ್ರಮುಖರೂ ನೆರೆದಿದ್ದರು. ಸಾಯಂಕಾಲ ಸ್ಕೂಲ್ ವಿದ್ಯಾರ್ಥಿಗಳಿಗೆ ಆಟಪಾಟ ವಿನೋದಗಳೂ ರಾತ್ರಿಗೆ ದೀಪೋತ್ಸವ, ದೇವರ ಉತ್ಸವ, ಮದ್ದಿನ ಕವಾಯಿತುಗಳೂ ನಡೆಯುವವು. ಮಧ್ಯಾಹ್ನ ಪ್ರತಿಯೊಂದು ಜಾತಿಯವರಿಗೂ ಭೋಜನಗಳು ನಡೆದವು. ಬ್ರಾಹ್ಮಣರಿಗೆಲ್ಲಾ ಸರ್ಕಾರದಿಂದ ಮಂಜೂರಾಗಿದ್ದ ಹಣದಿಂದ ಸಂತರ್ಪಣೆಯು ನಡೆಯಿತು. ಬ್ರಾಹ್ಮಣೇತರರ ಪೈಕಿ ಪ್ರತಿಯೊಂದು ಜಾತಿಯ ಮುಖಂಡರು ಸ್ವಂತ ಖರ್ಚಿನಿಂದ ತಮ್ಮ ತಮ್ಮ ಜಾತಿಯವರಿಗೆಲ್ಲರಿಗೂ ಸಮಾರಾಧನೆಗಳನ್ನು ನಡಿಸಿದುದು ತುಂಬಾ ಸ್ತೋತ್ರಾರ್ಹವಾದ ವಿಷಯವಾಗಿದೆ. ಈ ಪೈಕಿ ಸಾವಿರಾರು ಜನ ದೇವಾಂಗದವರಿಗೆ ಮ ಜವಳಿ ಅಂಗಡಿ ಆದೆಪ್ಪನವರು ಸಮಾರಾಧನೆಯನ್ನು ನಡೆಸಲು ಮಾಡಿದ್ದ ಏರ್ಪಾಡನ್ನು ಕಂಡು ಡೆಪ್ಯುಟಿ ಕಮೀಷನರವರು ಪರಮಾನಂದಭರಿತರಾಗಿ, ಇವರ ಉದಾರ ಧರ್ಮ ಬುದ್ಧಿಯನ್ನು ತುಂಬಾ ಕೊಂಡಾಡಿದರು. ಮ ಡಿ. ಆದೆಪ್ಪನವರು ತಮ್ಮ ಮಂದಿರದ ಬಳಿ ಕದಳೀ ಸ್ತಂಭ ಮೊದಲಾದವುಗಳಿಂದ ಅಲಂಕೃತವಾದ ಚಪ್ಪರವನ್ನು ಹಾಕಿದ್ದುದಲ್ಲದೆ, "ಇಂಡಿಯಾದಲ್ಲಿ ಇಂಗ್ಲೀಷಿನವರ ಧರ್ಮ ಪ್ರಭುತ್ವವು ಶಾಶ್ವತವಾಗಿರಲಿ" ಎಂಬ ವಾಕ್ಯವನ್ನು ಕನ್ನಡದಲ್ಲಿಯೂ, "ದೇವರು ನಮ್ಮ ಶ್ರೀಮನ್ ಮಹಾರಾಜರವರನ್ನು ಆಶೀರ್ವದಿಸಲಿ" ಎಂಬ ಅರ್ಥವುಳ್ಳ ವಾಕ್ಯವನ್ನು ಇಂಗ್ಲೀಷಿನಲ್ಲಿಯೂ ಸ್ಫುಟವಾದ ಅಕ್ಷರಗಳಿಂದ ಚಿತ್ರಿಸಿದ್ದುದೂ ನೋಟಕರ ಕಣ್ಣುಗಳನ್ನು ಆಕರ್ಷಿಸುತ್ತಿತ್ತು. ಇಲ್ಲಿಯ ಉತ್ಸವದ ಕೋಲಾಹಲವನ್ನೂ ಇತರ ವಿವರಗಳನ್ನೂ ೫ ನೇ ತಾರೀಖಿನ ತಮ್ಮ ಪತ್ರಿಕೆಯಲ್ಲಿ ಪ್ರಕಟನೆಗೆ ಅರ್ಹವಾಗುವಂತೆ ಬರೆದು ತಿಳಿಸುವುದಕ್ಕೆ ಟಪಾಲ್ ಸಮಯವು ಮೀರುವುದರಲ್ಲಿರುವುದರಿಂದ ಸಾಧ್ಯವಾಗಲಿಲ್ಲ.

ತಾಲ್ಲೋಕು ವರ್ತಮಾನಗಳು.

ಮಾಗಡಿ.—ಈ ಊರು ಸ್ಥಾಪಿತವಾದಲಾಗಾಯ್ತು ಧಾರಣೆನಾಗಿಕ ಅಗ್ಗವಾಗಿತ್ತು. ಈಗ ನೋಡಿದರೆ ರೂ ೧ಕ್ಕೆ ೫|-೫||| ಸೇರು ಅಕ್ಕಿ, ರಾಗಿ ೧೧-೧೧ ಸೇರು, ಜೋಳ ೧೦||-೧೧ ಸೇರು ಇದೆ. ಬಡವರ ಗೋಳಂತೂ ಹೇಳಬೇಕಾದುದಿಲ್ಲ. ಕ್ಷಾಮ ಬಂತೆಂದು ಭಾವಿಸಬೇಕು. ಸುತ್ತ ಮುತ್ತ ಇರುವ ಊರುಗಳಲ್ಲಿ ನೀರಿಲ್ಲದೆ ದನಕರುಗಳು ತಹತಹ ಪಡುತ್ತಿವೆ. ಈ ಊರಲ್ಲಿ ನೀರು ವಿಶೇಷವಾಗಿರುವುದರಿಂದ ಎಲ್ಲೆಲ್ಲೂ ನೀರಿನ ಮಯವಾಗಿದೆ. ನಲ್ಲಿಗಳ ಸಮೀಪದಲ್ಲಿ ರೋಚ್ಚು ಹೇಳತೀರದು. ಸಂತೆಯಲ್ಲಿ ಕೆಲವು ಅಂಗಡಿಯವರು ಪಿಟ್ಟಿಸೇರು ಮೊದಲಾದವನ್ನು ಇಟ್ಟುಕೊಂಡಿದ್ದಾರೆ. ಈ ಪ್ರಾಂತ್ಯದ ಜಿಲ್ಲಾ ೨೨ ರೂ. ತೂಕದ ಬೊಟ್ಟುಗಳಿವೆ. ಸರ್ಕಾರದವರು ಕ್ರಮಪಡಿಸ್ಯಾರೆಂದು ಹಾರೈಸುತ್ತೇನೆ. ಜಮಾಬಂದಿಗೋಸ್ಕರ ಅಮಲ್ದಾರ್ ಮ. ರಾಮಚಂದ್ರರಾವ್ ಯವರು ಬಂದಿರುತ್ತಾರೆ. ಇವರು ಜನಗಳ ವಿಷಯದಲ್ಲಿ ಯಾವ ಭಾಗದಲ್ಲಿಯೂ ಕೊರತೆ ಇಲ್ಲದಂತೆ ನೋಡಿಕೊಳ್ಳುತ್ತಾರೆ.—ಸಂತೆಯಲ್ಲಿ ಪಿಟ್ಟಿಸೇರಿನ ಪಿಪಾಟಗಳು ಆಗುತ್ತಾ ಇತ್ತು. ಆಸಲ್ಲಿಯೇ ಅಮಲ್ದಾರರು ದಯಮಾಡಿ ಪತ್ತೆ ಮಾಡಿದರು.—೪-೫ ದಿನಗಳಿಂದ ಮಳೆ ಚೆನ್ನಾಗಿ ಆಗುತ್ತಾ ಇದೆ.

ಮಂಡ್ಯ.—ಕಳೆದವಾರ ಇಲ್ಲಿ ೩-4 ದಿನಗಳವರೆಗೂ ವಿಶೇಷವಾಗಿ ಮಳೆ ಬಂದದ್ದರಿಂದ ಒಣಗಿಹೋದ ಪೈರುಗಳು ಚಿಗುರಿ ರೈತರಿಗೆಲ್ಲಾ ಸಂತೋಷವಾಯಿತು. ತಗ್ಗಾಗಿದ್ದ ಧಾರಣೆವಾಸಿಗಳು ಸ್ವಲ್ಪ ಇಳಿತಕ್ಕೆ ಬಂತು.—ಕಳೆದ ಭಾನುವಾರದಿಂದ ಗುರುವಾರದವರೆಗೂ ಇಲ್ಲಿಗೆ ೧೨ ಮೈಲಿ ದೂರದಲ್ಲಿರುವ ಹೂಲಕೆರೆ, ಕೆಸಲಗೆರೆ, ಅಲವಟಿಕೊಪ್ಪಲು ಎಂಬ ಗ್ರಾಮಗಳಲ್ಲಿ ಮಹದೇಶ್ವರನ ಜಾತ್ರೆಯು ಬಹಳ ವಿಜೃಂಭಣೆಯಿಂದ ನೆರವೇರಿತು. ಸುತ್ತುಮುತ್ತಲಿರುವ ಹಳ್ಳಿಗಳಿಂದ ಅನೇಕ ಜನರು ತಂಡೋಪತಂಡವಾಗಿ ಸೇರಿದ್ದರು. ಈ ಜಾತ್ರೆಯಲ್ಲಿ ವಿಶೇಷವಾಗಿ ರೈತಾದಿಗಳು ತಮ್ಮ ದನ ಕರುಗಳಿಗೆ ಹಂಚುಕಡ್ಡಿಗಳನ್ನು ಕಟ್ಟಿಕೊಂಡು ಗುಡಿಯ ಸುತ್ತಲೂ ಪ್ರದಕ್ಷಿಣೆ ಮಾಡುತ್ತಾ ಹರಿಕೆಗಳನ್ನು ಸಲ್ಲಿಸಿದರು. ಜಾತ್ರೆ ನಡಿಯುವ ಸಮಯದಲ್ಲಿ ಮಹದೇಶ್ವರನ ಗುಡಿಯನ್ನು ಕಟ್ಟಿಸಿದಂಥಾ ನರಗೂರಯ್ಯನೆಂಬ ಪುರುಷನು ಗುಡಿಯ ಹತ್ತ್ರ ಒಂದು ಆಸನವನ್ನು ಹಾಕಿಕೊಂಡು ಕೂತಿರುವಾಗ ಹರಿಕೆಗಳನ್ನು ಸಲ್ಲಿಸುವದಕ್ಕೆ ಬಂದಂಥಾ ಜನರು ಗುಡಿಯನ್ನು ಪ್ರದಕ್ಷಿಣೆಮಾಡಿದಮೇಲೆ ತಾವು ತಂದಂಥಾ ಹರಿಕೆಗಳನ್ನು ಆ ಆಸನ ಪಾದದ ಮುಂದೆ ಇಟ್ಟು ಅವರಿಗೆ ನಮಸ್ಕಾರಮಾಡಿ ಹರಿಕೆಗಳನ್ನು ಅರ್ಪಿಸಿದರು. ಈ ಜಾತ್ರೆಗೆ ಬಂದಂಥಾ ವರ್ತಕ ಮುಂತಾದ ವ್ಯಾಪಾರಸ್ಥರು ಹಳ್ಳಿ ಹಳ್ಳಿ ಜನರಿಗೆ ಪಿಟ್ಟಿ ಸೇರುಗಳನ್ನು ಇಟ್ಟುಕೊಂಡು ಮೋಸಮಾಡುತ್ತಾ ಹೆಚ್ಚಾದ ಲಾಭ ಸಂಪಾದನೆ ಮಾಡಿಕೊಂಡರು

ಆನೇಕಲ್ ತಾ|| ದೊಮ್ಮಸಂದ್ರ.—ಈ ವರ್ಷ ಮಳೆಗಳಾಗದೆ ಬೆಳೆಗಳೆಲ್ಲಾ ಕೆಟ್ಟುಹೋಗುವುದೆಂದು ರೈತರೆಲ್ಲಾ ತುಂಬಾ ಭಯಪಡುತ್ತಿದ್ದರು. ಆದರೆ ದೇವಾನುಗ್ರಹದಿಂದ ತಕ್ಕಮಟ್ಟಿಗೆ ಮಳೆ ಬಿದ್ದು, ಹೊಲಗಳೆಲ್ಲಾ ಚೆನ್ನಾಗಿವೆ. ಧಾರಣೆವಾಸಿಗಳು ಎಂದಿನಂತೆ ಭಾರವಾಗಿವೆ. ಇಲ್ಲಿನ ಸಾಹುಕಾರರಾದ ಮ ಒಡೇ ಸಾಹೇಬರು ಮತ್ತು ಅವರ ಮಕ್ಕಳಾದ ಅಬ್ದುಲ್ ಖಾದರ್ ಸಾಹೇಬರೂ ರಂಜಾನ್ ಹಬ್ಬದ ೨೭ ನೇ ತಾರೀಖಿನ ದಿನ ಅನೇಕ ಬಡಬಗ್ಗರಾದ ಹಿಂದೂ, ಮುಸಲ್ಮಾನ್ ಇಬ್ಬರಿಗೆ ಅಕ್ಕಿ ಮತ್ತು ದುಡ್ಡನ್ನು ಹಂಚಿದರು. ಮತ್ತು ಮಿಥುನ ಹಬ್ಬದ ದಿನ ಇಲ್ಲಿನ ಗೌರ್ನಮೆಂಟ್ ಕನ್ನಡ, ಹಿಂದುಸ್ಥಾನಿ ಮತ್ತು ಮಿಷನ್ ಸ್ಕೂಲುಗಳ ಬಾಲಕ ಬಾಲಕಿಯರನ್ನು ಬರಮಾಡಿಕೊಂಡು ಮಿಷನ್ ಮತ್ತು ಗೌರ್ನಮೆಂಟ್ ಸ್ಕೂಲ್ ಬಾಲಕರ ಡ್ರಿಲ್ಲನ್ನು ಪರಾಂಬರಿಸಿದರು. ಆ ತರುವಾಯ ಹಿಂದುಸ್ಥಾನಿ ಸ್ಕೂಲ್ ಬಾಲಕರು ಕನ್ನಡ ಹಿಂದುಸ್ಥಾನಿ ಇಂಗ್ಲೀಷ್ ಪದ್ಯಗಳನ್ನು ಹೇಳಿ ಇಲ್ಲಿನ ಪಾದ್ರಿ ಸ್ಕೆಯರ್ ಕುತ್ಬುದ್ದೀನ್ ಸಾಹೇಬರ ಮೊಮ್ಮಗನ ಮೂಲಕ ಒಂದು ವಂದನಾಪತ್ರಿಕೆಯೂ, ಮಿಷನ್ ಸ್ಕೂಲ್ ಬಾಲಕಿಯರಿಂದ ಒಂದು ಅಡ್ರೆಸ್ಸೂ ಸದರಿ ಸಾಹುಕಾರರಿಗೆ ಒಪ್ಪಿಸಲ್ಪಟ್ಟಿತು. ಆ ತರುವಾಯ ಗೌರ್ನಮೆಂಟ್ ಸ್ಕೂಲ್ ಬಾಲಕಿಯರ ಇಂಪಾದ ಮಂಗಳ ಗಾನವಾಗುತ್ತಿರಲು ಸದರಿ ಸಾಹುಕಾರರಿಂದ ಬಾಲಕ ಬಾಲಕಿಯರಿಗೆ ಮಿಠಾಯಿ, ನೆರೆದಿದ್ದ ಜನರುಗಳಿಗೆ ಗಂಧ, ಪುಷ್ಪ, ತಾಂಬೂಲಾದಿಗಳು ಹಂಚಲ್ಪಟ್ಟವು. ಈ ರೀತಿ ಸ್ವದೇಶ ಬಾಂಧವರು ವಿಶೇಷವಾದ ದಿನಗಳಲ್ಲಿ ಬಾಲಕರ ವಿದ್ಯಾಭಿವೃದ್ಧಿಗೆ ಪ್ರೋತ್ಸಾಹ ಕೊಡುವುದು ಬಹಳ ಸಂತೋಷ. ಸದರಿ ಸಾಹುಕಾರರಿಂದ ಇಲ್ಲಿ ಬಹು ಕಾಲದಿಂದಲೂ ಶಿಥಿಲವಾಗಿದ್ದ ಈದ್ಗಾ ಎಂಬ ಪ್ರಾರ್ಥನಾ ಕಟ್ಟಡವು ಸುಂದರವಾಗಿ ಕಟ್ಟಿಸಲ್ಪಟ್ಟು ಈ ರಂಜಾನ್ ಹಬ್ಬದಲ್ಲಿ ಮುಗಿಯಿತಾದಕಾರಣ ರಂಜಾನ್ ಮಿದ್ದಾ ಪ್ರಾರ್ಥನೆಯು ಇಲ್ಲಿನ ಎಲ್ಲಾ ಮುಸಲ್ಮಾನರಿಂದ ಸದರಿ ಕಟ್ಟಡದ ಒಳ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು

ತೀರ್ಥಹಳ್ಳಿ.—ಈ ಊರಿನಲ್ಲಿ ಪ್ರಜಾವೃದ್ಧಿಗೆ ಅನುಕೂಲವಾದ ವಾಚನಶಾಲೆಯನ್ನು ಸಾರ್ವಜನಿಕವಾಗಿ ನಡೆಯುವಂತೆ ಸ್ಥಾಪಿಸಬೇಕೆಂಬ ಸಂಕಲ್ಪವು ಕಳೆದ ತಾ. ೨೮ ನೇ ಬುಧವಾರ ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಇದಕ್ಕಾಗಿ ಈ ನಗರದ ಮತ್ತು ತಾಲ್ಲೂಕಿನ ಮಹನೀಯರೆಲ್ಲಾ ಸಭೆ ಸೇರಿದ್ದರು. ಈ ಸಭೆಯ ಉದ್ದೇಶಗಳೆಲ್ಲಾ ನೆರವೇರುವುದಕ್ಕೆ ಬದ್ಧಾದರರಾಗಿಯೂ, ಮಾರ್ಗದರ್ಶಿಗಳಾಗಿಯೂ ಅಮಲ್ದಾರ್ ಮ ನರಸಿಂಹಶಾಸ್ತ್ರಿಗಳವರು ನಿಂತಿದ್ದರು. ಈ ಸಭೆಯ ಅಗ್ರಾಸನವನ್ನು ಆಗುಂಬೆ ಸಾಹುಕಾರ್ ಮ ವೆಂಕಟರಮಣೈಯನವರು ವಹಿಸಿ, ವಿಶೇಷ ಔದಾರ್ಯದಿಂದಲೂ ಕುತೂಹಲದಿಂದಲೂ ಕಾರ್ಯಭಾರವನ್ನು ನಡಿಸಿ ಸರ್ವರಿಗೂ ಸಂತೋಷವನ್ನುಂಟುಮಾಡಿದರು. ಈ ವಾಚಕಮಂದಿರದ ಅಭಿವೃದ್ಧಿಗಾಗಿ ಸುಮಾರು ೩೦೦-೪೦೦ ರೂಪಾಯಿ ಚಂದಾ ಒಟ್ಟುಗೂಡಿತು. ಸ್ಥಿರವಾದ ಈ ರೀಡಿಂಗ್‌ರೂಂ ಮೆಂಬರುಗಳಿಂದ ತಿಂಗಳಿಗೆ ೭-೮ ರೂಪಾಯಿ ರುಸುಂ ವಸೂಲಾಗುವ ನಿಯಾಮಕವಾಯಿತು. ಈ ಸಭೆಯು ಸೇರಿದ ಒಡನೆಯೇ ದೇವತಾಪ್ರಾರ್ಥನೆಯನ್ನು ನೆರವೇರಿಸಿ, ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನೆಯನ್ನು ಮಾಡಿದರು. ಈ ವಾಚಕಮಂದಿರವು ಈ ಪಟ್ಟಣದಲ್ಲಿ ಶಾಶ್ವತವಾಗಿ ನೆಲೆಗೊಂಡಿರಬೇಕೆಂಬ ಅಭಿಪ್ರಾಯದಿಂದ ಸಭೆಯವರು ಅದಕ್ಕೆ ಏಕಕಂಠವಾಗಿ ಅನುಮೋದಿಸಿ ಶ್ರೀ ಕೃಷ್ಣರಾಜ ವಾಚಕಮಂದಿರವೆಂಬ ಹೆಸರನ್ನು ಇಟ್ಟರು. ಇದಲ್ಲದೆ ಈ ದಿನ ಸಾಯಂಕಾಲ ಈ ಸಭೆಯವರು ಈ ಊರಿನ ಬಾಲಿಕಾಪಾಠಶಾಲೆಯ ಬಾಲಕಿಯರ ಇಂಪಾದ ಗಾನವನ್ನು ಶ್ರವಣಮಾಡಿ, ಅವರಿಗೆ ಓದುವದಿನ ಪುಸ್ತಕಗಳನ್ನೂ ಮಧುರ ಪದಾರ್ಥಗಳನ್ನೂ ಕೊಟ್ಟು ಸಂತೋಷಪಡಿಸಿದರು. ಅನಂತರ ದೇವಸ್ಥಾನದ ಉಪ್ಪರಿಗೆಯಲ್ಲಿ ಸಭೆ ಸೇರಿ ಗ್ರಾಮೋಫೋನ್ ಎಂಬ ಗಾಯನ ಯಂತ್ರದ ಶ್ಲಾಘ್ಯವಾದ ಗಾಯನ ವಿಶೇಷದಿಂದ ಆನಂದಭರಿತರಾಗಿ, ದೇವರ ಉತ್ಸವಾದಿಗಳನ್ನು ವಿಜೃಂಭಣೆಯಿಂದ ನೆರವೇರಿಸಿ, ಪ್ರಸಾದ ತಾಂಬೂಲಾದಿಗಳನ್ನು ಸ್ವೀಕರಿಸಿ, ಸರ್ವರೂ ಆನಂದಭರಿತರಾಗಿ ಮನೆಗಳಿಗೆ ಹೊರಟರು.

ಫ್ರೆಂಚ್‌ರಾಕ್ಸ್.—ಈ ಪ್ರಾಂತ್ಯ ಮಳೆ ಸುಮಾರಾಗಿ ಬಿದ್ದು ಕೆರೆ ಕಟ್ಟೆಗಳಿಗೆ ತಕ್ಕಮಟ್ಟಿಗೂ ನೀರು ಬಂದಿದೆ. ರಾಗಿ ಪೈರು ಸುಮಾರು ಅರ್ಧ ಫಸಲಾಗುವದಕ್ಕೆ ಯಾವ ಅಡ್ಡಿ ಇಲ್ಲವೆಂದು ಕಾಣುತ್ತದೆ. ಈ ಸುತ್ತಮುತ್ತ ಕೆಲವು ಗ್ರಾಮಗಳನ್ನು ಬಿಟ್ಟದ್ದಾಗ್ಯೂ ಸದ್ಯಕ್ಕೆ ಪ್ಲೇಗ್ ಗಲಾಟೆಯು ಅಷ್ಟು ಜೋರಾಗಿಲ್ಲ.—ಇಲ್ಲಿಗೂ ಮಂಡ್ಯಕ್ಕೂ ಮಧ್ಯೆ ಇರುವ ಹೂಲಕೆರೆ ಎಂಬ ಗ್ರಾಮದಲ್ಲಿ ಈ ವರ್ಷ ನಡೆದ ಮಹದೇಶ್ವರ ಜಾತ್ರೆಗೆ ಸುಮಾರು ಎರಡು ಮೂರು ಸಾವಿರ ಜನಗಳು ಬಂದಿದ್ದರು. ವಿಶೇಷವಾಗಿ ಅಂಗಡಿಗಳನ್ನು ತಂದಿದ್ದರು. ಅಂಗಡಿಯವರು ಕಮ್ಮಿ ಸೇರುಗಳಲ್ಲಿ ವ್ಯಾಪಾರ ಮಾಡಿದರೆಂದು ಮಂಡ್ಯ ಠಾಣೋತಿನ ಪೋಲೀಸಿನವರು ತುಂಬಾ ಮುತುವರ್ಜಿ ವಹಿಸಿ ಅಂಥಾ ಕಮ್ಮಿ ಸೇರುಗಳನ್ನು ಕಂಡು ಹಿಡಿದು ಯಾವ ಕಾರಣದಿಂದಲೋ ಅವರನ್ನು ಬಿಟ್ಟುಬಿಟ್ಟರೆಂದೂ ಕೇಳುತ್ತೇನೆ. ಈ ರೀತಿ ವ್ಯಾಪಾರಸ್ಥರು ಮತ್ತಷ್ಟು ಕೃತ್ರಿಮ ವ್ಯಾಪಾರ ಮಾಡುವದಕ್ಕೆ ಅವಕಾಶವಾಗದೆ?—ಕಳೆದ ಶುಕ್ರವಾರ ಶನಿವಾರ ಮಿಷನ್ ಅಧ್ಯಕ್ಷರಾದ ಘನ ಸಾಡೆದೊರೆಯವರು ಇಲ್ಲಿಗೆ ಬಂದು ಸದರಿ ಇಲಾಖೆಗೆ ಸೇರಿದ ಇಂಗ್ಲಿಷ್ ಸ್ಕೂಲ್ ಮತ್ತು ಬಾಲಕಿಯರ ಸ್ಕೂಲುಗಳನ್ನು ಪರೀಕ್ಷಿಸಿ, ದೇಶೀಯ ಕ್ರೈಸ್ತರಿಗಾಗಿ ಭಗವದಾರಾಧನೆಯನ್ನು ನಡಿಸಿದರು. ಮತ್ತು ಇಲ್ಲಿಗೆ ನಾಲ್ಕು ಮೈಲಿ ದೂರದಲ್ಲಿರುವ ಚರಿತ್ರಾರ್ಹವಾದ ತೊಣ್ಣೂರು ಬಳಿಯಲ್ಲಿರುವ ಆ ಪ್ರಸಿದ್ಧವಾದ ಮೋತಿತಲಾವು (ಮುತ್ತಿನ ಕೆರೆ ಎನ್ನಿಂಬುವ ಭಾರಿ ಕೆರೆಯನ್ನು ನೋಡಿಕೊಂಡು ಹೋದರು.—ಶನಿವಾರ ಸರ್ಕಲ್ ಇನ್‌ಸ್ಪೆಕ್ಟರವರು ಇಲ್ಲಿಗೆದಯಮಾಡಿಸಿ ಮಿಷನ್ ಇಂಗ್ಲಿಷ್ ಸ್ಕೂಲನ್ನು ಪರೀಕ್ಷಿಸಿ, ಬಾಕಿ ಸ್ಕೂಲುಗಳನ್ನು ನೋಡಿಕೊಂಡು ಬಂದರು. ಅದೇ ಸಾಯಂಕಾಲ ಮಿಷನ್ ಗರ್ಲ್ಸ್ ಸ್ಕೂಲಿನಲ್ಲಿ, ಘನ ಸಾಡೆ ದೊರೆಯವರ ಇಷ್ಟಾನುಸಾರ ಇಲ್ಲಿನ ಮಿಷನ್ ಮತ್ತು ಗೌರ್ನಮೆಂಟ್ ಸ್ಕೂಲುಗಳ ಪ್ರಯೋಜನಾರ್ಥವಾಗಿಯೂ, ಪ್ರೊಫೆಸರ್ ಕೃಷ್ಣಸ್ವಾಮಿಯ್ಯಂಗಾರ್ರು ಮ್ಯಾಜಿಕ್ ಲಾಂಟರ್ನ್ ಮೂಲಕ ವಿದ್ಯಾರ್ಥಿಗಳು ಓದುವ ಪುಸ್ತಕಗಳಲ್ಲಿರುವ ಕೆಲವು ಕಥೆಗಳನ್ನು ಚಿತ್ರರೂಪವಾಗಿ ತೋರಿಸಿ ವಿವರಿಸಿದರು. ಮುಖ್ಯವಾಗಿ ಈಗಿನ ಕಾಲದ ಭೂಗೋಳ ಶಾಸ್ತ್ರಜ್ಞರ ಅಭಿಪ್ರಾಯಗಳಿಗನುಸಾರವಾದ ಭೂಮಿ ತಿರುಗುವ ರೀತಿಯನ್ನೂ, ಹಗಲು ರಾತ್ರಿಯಾಗುವದನ್ನೂ, ಗ್ರಹಣಗಳಾಗುವ ಕಾರಣಗಳನ್ನೂ ಚಿತ್ರ ರೂಪವಾಗಿ ತೋರಿಸಿ ವಿವರಿಸಿದರು. ಅನಂತರ ಲಂಡನ್ ಪಟ್ಟಣದ ಕೆಲವು ಪಟಗಳನ್ನೂ, ಚಕ್ರವರ್ತಿಯವರ ಮತ್ತು ಮಹಾರಾಜರುಗಳ ಪಟಗಳನ್ನೂ ತೋರಿಸಿದರು. ತರುವಾಯ ಕರ್ಣಾನಂದವಾಗುವಂತೆ ಗ್ರಾಮೋಫೋನ್ ಮೂಲಕ ಹಲವು ಹಾಡುಗಳನ್ನು ನುಡಿಸಿ ಬಾಲಕ ಬಾಲಕಿಯರಿಗೂ, ಗ್ರಾಮಸ್ಥರಿಗೂ ವಿಶೇಷವಾದ ಪ್ರಯೋಜನವನ್ನೂ ಸಂತೋಷವನ್ನೂ ಉಂಟುಮಾಡಿದರು. ಅಗ್ಗೆ ಸರ್ಕಲ್ ಇನ್‌ಸ್ಪೆಕ್ಟರೂ, ಆ. ಅಸಿಸ್ಟೆಂಟ್ ಅನಂತಾಚಾರ್ರ್ಯರವರೂ ಸ್ಕೂಲ್ ಮಾಸ್ಟರುಗಳೂ ಹಾಜರಾಗಿದ್ದು ಸರ್ಕಲ್ ಇನ್‌ಸ್ಪೆಕ್ಟರ್ ಮ ಶ್ರೀನಿವಾಸರಾಯರನ್ನು ಬಹಳ ವಂದಿಸಿದರು.

ಶಿಕಾರಿಪುರ.—ಈ ವರುಷ ಮಳೆ ತಕ್ಕಷ್ಟಾದರೂ ಬೆಳೆ ಮಾತ್ರ ಕಡಮೆಯಾಗಿದೆ. ಮುಂಗಾರಿನ ಮಳೆ ಜಾಸ್ತಿಯಾಗಿ, ರಾಗಿ ಜೋಳದ ಬೆಳೆ ಸಂಪೂರ್ಣ ನಾಶವಾದವು. ಹಿಂಗಾರು ಮಳೆ ಇಲ್ಲದೆ ಭತ್ತದ ಪೈರು ಕಾಲುವಾಸಿ ಆಗುವದು ದುಸ್ತರವಾಗಿದೆ. ಇದೇ ಸಂತೆಯ ಧಾರಣೆಗಳಿಂದ ಅನೇಕರ ಗುಂಡಿಗೆಗಳು ಬಡಿಯುತ್ತಿವೆ.—ಇಲ್ಲಿ ಹರಿಯುತ್ತಿರುವ ಕುಮುದ್ವತಿ ನದಿಗೆ ಅಣೆಕಟ್ಟು ಹಾಕುವ ವಿಷಯದಲ್ಲಿ ಈ ವರ್ಷದ ದಸರಾ ಮೀಟಿಂಗಿನಲ್ಲಿ ಚರ್ಚೆ ನಡೆದು ಏನಾದರೂ ಇತ್ಯರ್ಥವಾಗಿ ಈ ಊರಿನ ಮತ್ತು ಅಕ್ಕಪಕ್ಕ ಗ್ರಾಮಗಳ ನಿವಾಸಿಗಳ ಕೋರಿಕೆ ಏನಾಯಿತೋ ಎಂದು ಜನಗಳೆಲ್ಲ ವರ್ತಮಾನ ಪತ್ರಿಕೆಗಳನ್ನೆಲ್ಲಾ ನೋಡಿ, ಏನೊಂದೂ ತಿಳಿಯದೆ ಕೇವಲ ಚಿಂತಾಕ್ರಾಂತರಾಗಿರುವರು. ಇದೊಲ್ಲದಿರುವುದು, ಮತ್ತು ಅನೇಕ ತರಿ ಜಮೀನುಗಳಿಗೂ ಅನುಕೂಲವಾಗಿಯೂ, ಇದರಿಂದ ಸರ್ಕಾರಕ್ಕೇನೇ ಕೇವಲ ಹಣವುತ್ಪತ್ತಿಯೂ, ಆಗುವ ಈ ಭಾಗದಲ್ಲಿ ಮೇಲಿನವರು ಅವಶ್ಯವಾಗಿ ಚಿಂತಿಸಿ, ಅನುಕೂಲಪಡಿಸುವದು ಮಾಡಬೇಕಾದ ಪ್ರಾಧಾನ್ಯಕಾರ್ಯವೇ ಆಗಿರುತ್ತದೆ.—ಇಲ್ಲಿ ಬೀದಿಯ ಎರಡು ಪಕ್ಕಗಳಲ್ಲೂ ಹಾಕಿರುವ ಜಗಲಿಗಳ ಮೇಲೆ ಕಚಡವಿರುವ ಕಸವನ್ನು ತೆಗೆಯದೇ ಇರುವದರಿಂದ ಮನೆಗಳ ಪಕ್ಕದಲ್ಲೇ ಕೊಳಕು ನಿಂತು ಇದೆ. ಪ್ರತಿನಿತ್ಯವೂ ಸರಿಯಾಗಿ ಸಾಗುವಂತೆ ಗಮನಿಸುವದು ಕೇವಲ ಅನುಕೂಲವೇ ಆಗಿದೆ. ಅಲ್ಲದೆ ಪೇಟೆಯ ಎರಡು ಪಕ್ಕಗಳಲ್ಲಿಯೂ ತುಂಬಿರುವ ಕೇರಿಗಳಿಂದ ಕಚರಾ ಸರಿಯಾದ ರಸ್ತೆಗಳಿಲ್ಲದಿರುವದರಿಂದ ಗುಡಿಸುವದಾಗಲೀ, ಹೊಲಸನ್ನು ಸಾಗಿಸುವದಾಗಲೀ ಅನಾನುಕೂಲವೆಂದು ಹೆಲ್ತ್ ಡೆ ಕ| ಮ ಎಂ. ಎಸ್. ನಾರಾಯಣರಾಯರು ಅದ್ಭುತವಾದ ಕೆಲವು ರಸ್ತೆಗಳನ್ನು ಮಾಡುವದರಲ್ಲಿ ಉದ್ಯುಕ್ತರಾಗಿದ್ದು, ತಕ್ಕಂಥಾ ಕೆಲವು ಏರ್ಪಾಡುಗಳನ್ನು ಎಸಗಿದ್ದರೆಂದು ಜನರೆಲ್ಲರೂ ತಿಳಿದಿದ್ದಾರೆ. ಅಲ್ಲದೆ ಅವರು ಇಲ್ಲಿಯ ಪೇಟೆಯ ಪುಟ್ಟಬಸಪ್ಪನ ಮನೆಯ ಒತ್ತಿನ ಸರ್ಕಾರಿ ಓಣಿಯನ್ನೇ ಅಡ್ಡರಸ್ತೆಯನ್ನಾಗಿ ಮಾಡಿದ್ದದ್ದು ಪ್ರಜಾ ಅನುಕೂಲಗಳಿಗೂ. ಸ್ಯಾನಿಟೇಷನ್ ರೂಲಿಗನುಗುಣವಾದ ಆರೋಗ್ಯ ಭಾಗ್ಯಕ್ಕೂ. ಅಲ್ಲದೆ ಸರ್ಕಾರದವರ ಬಗರ್ ಉಗಿಗೋಡಿಗೂ ಕೇವಲ ಅನುಕೂಲವೇ ಆಗಿರುತ್ತೆಂದು ಕಾರಣಾಂತರಗಳಿಂದ ಈ ಮೊದಲನೇ ಅತ್ಯುತ್ತಮವಾದ ಏರ್ಪಾಡು ನಿಂತು, ಈ ರಸ್ತೆಗೆ ಬದಲಾಗಿ ಬೇರೆ ಭಾಗದಲ್ಲಿ ರಸ್ತೆ ಮಾಡಿಸುವವರಾಗಿದ್ದಾರೆಂದು ಊರಿನವರೆಲ್ಲರೂ ಅತೃಪ್ತಿಪಟ್ಟಂತೆ ಕಾಣುತ್ತೆ.—ಕಳೆದ ತಾ. ೨೭ನೇ ಮಂಗಳವಾರ ಘನ ಟಾಂಲಿನ್‌ಸನ್ ದೊರೆಯವರು ಘನ ಜಾನ್ ಮಾರ್ಕ್ ಅಯ್ಯನವರೊಡನೆ ದಯಮಾಡಿಸಿ ಪೇಟೆ ಮತ್ತು ಹಳೆಯೂರಿನ ಬಾಲಕಿಯರಿಗೆ ಪೇಟೆಯ ಗರಲ್ಸ್ ಸ್ಕೂಲಿನಲ್ಲಿ ಘನ ಟಾಮ್ಲಿನ್‌ಸನ್ ದೊರೆಸಾನಿಯವರು ಇನಾಮುಗಳನ್ನು ಹಂಚಿದರು. ಅಗ್ಗೆ ಇಲ್ಲಿಯ ಅಮಲ್ದಾರರೂ ರೇಂಜರವರೂ ಪೋಲೀಸ್ ಇನ್‌ಸ್ಪೆಕ್ಟರವರೂ ಡಾಕ್ಟರವರೂ ಮೆಂಬರುಗಳೂ, ವರ್ತಕರೂ ಮೊದಲಾದ ಅನೇಕ ಮಹನೀಯರೂ ಸಭೆಯನ್ನಲಂಕರಿಸಿದ್ದರು. ಸ್ಕೂಲು ತೋರಣಗಳಿಂದಲೂ, ಬಾಳೆ ಕಟ್ಟು ನಾನಾ ಚಿತ್ರಪಟಗಳಿಂದಲೂ ಶೋಭಾಯಮಾನವಾಗಿತ್ತು. ಬಾಲಕಿಯರು ಪಿಟೀಲಿನ ಮೇಲೆ ಮನೋಹರವಾದ ಅನೇಕ ಸಂಗೀತ, ಇಂಪಾದ ಮಂಗಳಗೀತಗಳನ್ನೂ, ಸಂಭಾಷಣೆಯನ್ನೂ, ನೀತಿಬೋಧಕವಾದ ಪದಗಳನ್ನೂ ಗಾನಮಾಡಿದರು. ಸ್ಕೂಲ್ ರಿಪೋರ್ಟುಗಳೂ, ಮಿಷನ್ ಸ್ಕೂಲುಗಳಿಂದ ಅನುಭವವೇದ್ಯವಾದ ಫಲಗಳು ಸನ್ಮಾರ್ಗಪ್ರವರ್ತನಾ ಕಾರಣಗಳು, ಸ್ತ್ರೀ ವಿದ್ಯಾಭ್ಯಾಸದ ಫಲ, ಇತ್ಯಾದಿ ವಿಷಯಗಳಲ್ಲಿ ಪಂತೋಜಿಗಳಿಂದಲೂ, ಬಾಲಕಿಯರಿಂದಲೂ ಸಪ್ರೋತ್ಸಾಹವಾದ ಉಪನ್ಯಾಸಗಳು ನಡೆದವು. ಬಳಿಕ ಶಾಲಾ ಬಾಲಕಿಯರ ಪರವಾಗಿ ಸಣ್ಣಮ್ಮನಿಂದ ಭಾಷಣವು ಜರುಗಿಸಲ್ಪಟ್ಟಿತು. ನಮ್ಮ ಅಮಲ್ದಾರರು, ಘನ ದೊರೆಯವರು, ಮತ್ತೆ ಕೆಲವರ ಭಾಷಣಗಳು ಮುಗಿದ ಬಳಿಕ ಸಭೆಯವರಿಗೆ ತಾಂಬೂಲವೂ, ಮಕ್ಕಳೆಲ್ಲರಿಗೆ ಮಿಠಾಯಿ ಹಂಚೋಣವಾಗಿ ಸರ್ವ ಮಹನೀಯರೂ ಆನಂದಪರವಶರಾಗಿ ತೆರಳಿದರು.—ಇದೇ ತಾಲ್ಲೋಕಿಗೆ ಸೇರಿದ ಶಿರಾಳಕೊಪ್ಪದಿಂದ ವರ್ಗವಾಗಿ ಬಂದಿರುವ ಮೈ ೩ ಬಸಪ್ಪಶೆಟ್ಟರೆಂಬ ಡಾಕ್ಟರು ಕೆಲವು ತಿಂಗಳಲ್ಲೇ ಅನೇಕರ ಪ್ರೀತಿ ಗೌರವಗಳನ್ನು ಪಡೆದಿದ್ದಾರೆ.

ನರಗಳ ಅಪಾರವಾದ ದುರ್ಬಲವನ್ನು ಪೆರೂನಾವು ಅದ್ಭುತವಾದ ರೀತಿಯಾಗಿ ನಿವಾರಣೆ ಮಾಡಿರುತ್ತದೆ.

ಶರೀರಗತವಾದ ಶೈತ್ಯನಿವಾರಣೆಗೆ ಪೆರೂನಾ ಅವಶ್ಯವಾಗಿದೆ.

ನರಗಳ ದುರ್ಬಲವನ್ನು ನಾಶಮಾಡುವುದರಲ್ಲಿ ಇದು ವಿಶೇಷ ಪ್ರಖ್ಯಾತವಾಗಿದೆ.

ಹೆಚ್ಚಾದ ಕಷ್ಟಕೆಲಸದಿಂದಲೂ, ಮನಸ್ಸನ್ನು ವಿಶೇಷವಾಗಿ ಕಷ್ಟಪಡಿಸುವುದರಿಂದಲೂ, ಬೇಸಿಗೆಯ ಅಪಾರವಾದ ಉಷ್ಣದ ಧಸೆಯಿಂದಲೂ ಶರೀರದ ಧರ್ಮತೆ ನಿಶ್ಶಕ್ತಿಯಾಗಿದ್ದರೆ ಪೆರೂನಾವು ಇದನ್ನು ಸಂಪೂರ್ಣವಾಗಿ ನಿವಾರಣೆ ಮಾಡಿ, ಶಕ್ತಿಯನ್ನು ಕೊಟ್ಟು, ಪುಷ್ಟಿಯನ್ನುಂಟುಮಾಡುತ್ತದೆ

ಬೇಸಿಗೆಯು ದೀರ್ಘಕಾಲವಿರುವಂಥಾ ರಾಜ್ಯಗಳಲ್ಲಿ ಜನರು ಧಗೆಯ ತೀಕ್ಷ್ಣವನ್ನು ಸುಮಾರಾಗಿ ಸಹಿಸಿಕೊಳ್ಳುವವರಾಗಿದ್ದಾರೆಂದು ಹೇಳಬಹುದು. ಆದರೆ ಅಪಾರವಾದ ಧಗೆಯೂ ಸಹಿಸಲಶಕ್ಯವಾದ ಚಳಿಯೂ ಒಂದರ ಹಿಂದೊಂದು ಥಟ್ಟನೆ ಪ್ರಾಪ್ತವಾಗತಕ್ಕಂಥಾ ದೇಶಗಳಲ್ಲಿ ಅನೇಕರ ಶರೀರಧರ್ಮವು ಆ ಉಷ್ಣವನ್ನು ಸಹಿಸಿಕೊಳ್ಳಲು ಶಕ್ತಿಯುಳ್ಳದ್ದಾಗಿರುವುದಿಲ್ಲ. ಇದರಿಂದಲೇ ಬಹಳ ಕಾಯಿಲೆಗಳು ಉಂಟಾಗುತ್ತವೆ.

ಹೊಟ್ಟೆಗೆ ಶೀತ ಹಿಡಿಯುವುದು. ಅಜೀರ್ಣವಾಗುವುದು. ಆಹಾರ ಅರಗದೆ ಇರುವುದು ಇವೆಲ್ಲಾ ಉಷ್ಣಕಾಲದಲ್ಲಿ ಪ್ರಾಪ್ತವಾಗುವ ಅಲ್ಪರೋಗಗಳೆಂದು ತಿಳಿಯಬಾರದು

ಆಹಾರ ಅರಗುವುದರಲ್ಲಿ ವ್ಯತ್ಯಾಸವಾದರೆ ಆಹಾರದ ಮುಖ್ಯ ಭಾಗಗಳನ್ನು ಶರೀರವು ಹೀರಿಕೊಳ್ಳುವುದಿಲ್ಲ ಇದರಿಂದ ಶರೀರಕ್ಕೆ ಪುಷ್ಟಿ ಕಡಮೆಯಾಗುವುದು.

ಅಜೀರ್ಣದಿಂದ ದುರ್ಬಲವು.

ದುರ್ಬಲ, ಸೋಮಾರಿತನ, ಜಿಗುಪ್ಸೆ, ಬುದ್ಧಿ ಮಾಂದ್ಯ, ಮಾಂಸಖಂಡಗಳ ಬಲಹೀನತೆ, ನರಗಳ ದುರ್ಬಲ, ಇವೆಲ್ಲಾ ಕ್ರಮಕ್ರಮವಾಗಿ ಪ್ರಾಪ್ತವಾಗುವವು ಇಂಥಾ ಸಮಯದಲ್ಲಿ ಜೀರ್ಣಶಕ್ತಿಯನ್ನು ಪಟುವಾಗಿ ಮಾಡಿಕೊಳ್ಳುವುದಕ್ಕೆ ಪರಿಹಾರವನ್ನು ನೋಡಿ ಮಾಡಿಕೊಳ್ಳಬೇಕು. ಪೆರೂನಾ ಸೇವನೆಯು ಜೀರ್ಣಕೋಶಗಳನ್ನು ಕ್ರಮಪಡಿಸುತ್ತದೆಂದು ಪ್ರಖ್ಯಾತಿ ಪಡೆದಿರುತ್ತದೆ. ಇದಕ್ಕೆ ಅಂಥಾ ಶಕ್ತಿಯುಂಟೆಂದು ಸಾವಿರಾರು ಸಂದರ್ಭಗಳಲ್ಲಿ ದೃಷ್ಟಾಂತಕ್ಕೆ ಬಂದಿದೆ. ವಾಸಿಯಾಗುವುದೇ ಇಲ್ಲವೆಂಬ ನಿರಾಶೆಯುಂಟಾಗಿದ್ದಂಥಾ ಅನೇಕರಿಗೆ ಪೆರೂನಾವು ಅದ್ಭುತವಾಗಿ ಆರೋಗ್ಯವನ್ನು ಕೊಟ್ಟಿದೆ

ಆದರೆ ಪೆರೂನಾದಲ್ಲಿ ಈ ಗುಣವಿರುವುದೇನೂ ಆಶ್ಚರ್ಯವಲ್ಲ. ಶರೀರದೊಳಗಿರತಕ್ಕ ಅಂಗಗಳ ಸುತ್ತಲೂ ಆವರಿಸಿಕೊಂಡಿರುವಂಥಾ ನರಗಳ ಮೂಲಸ್ಥಾನಗಳನ್ನು ಶಕ್ತಿಪಡಿಸುವುದೇ ಇದರ ಕೆಲಸ. ಇದರಿಂದ ನರಗಳಲ್ಲಿ ಶಕ್ತಿಯು ಯಥಾಸ್ಥಿತಿ ಕೂಡಿಕೊಳ್ಳುತ್ತದೆ. ಜೀವಾಂಗಗಳೆಲ್ಲಾ ತಮ್ಮ ತಮ್ಮ ಕಾರ್ಯವನ್ನು ಕ್ರಮವಾಗಿ ನಡಸಿಕೊಳ್ಳುತ್ತಾ ಬರುವವು ಆದಕಾರಣ ನಿಮಗೆ ಶರೀರಧರ್ಮದಲ್ಲಿ ಸ್ವಲ್ಪವಾದರೂ ಕಾಯಿಲೆಗಳಿದ್ದರೆ ಇದರ ಒಂದು ಬಾಟ್ಲ ಪೆರೂನಾ ತೆಗೆದುಕೊಂಡು ಸೇವಿಸಿ ನೋಡಿರಿ ಒಂದು ಬಾಟ್ಲ ಸೇವಿಸುವುದರೊಳಗಾಗಿ ಅದರಿಂದ ನಿಮಗೆ ಫಲವಾಗುವುದೋ ಇಲ್ಲವೋ ಅನುಭವಕ್ಕೆ ಬರುತ್ತದೆ

ಪೆರೂನಾವಿನ ಉತ್ತಮೋತ್ತಮವಾದ ಗುಣ.

ಇದರಿಂದ ವಿಶೇಷ ಪ್ರಯೋಜನವಾಗಿದೆ ಎಂದು ಬಹುಜನರು ವಿವರಿಸಿ ನಮ್ಮಲ್ಲಿಗೆ ಕಾಗದಗಳನ್ನು ಬರೆದಿರುತ್ತಾರೆ. ಅವುಗಳನ್ನು ಓದಿದಾಗ ಬರೆದವರಿಗೆ ಈ ಔಷಧದಿಂದ ಎಷ್ಟು ಪ್ರಯೋಜನವೂ ಸಂತೋಷವೂ ಉಂಟಾಯಿತೋ ತಿಳಿಯುತ್ತದೆ. ಕಷ್ಟವನ್ನು ನಿವಾರಣೆ ಮಾಡುವುದಲ್ಲದೆ ಆರೋಗ್ಯವನ್ನು ಕೊಡುವುದರಲ್ಲೂ ಪೆರೂನಾ ಪ ಎಷ್ಟು ಚೆನ್ನಾಗಿ ಔಷಧ ಅಂಗಾಂಗಗಳನ್ನು ಪ್ರಾಪಿಸಿ ತನ್ನ ಕೆಲಸವನ್ನು ಸಾರ್ಥಕ ಮಾಡುವುದೋ ವಿವರಿಸಲಾರೆವು.

ಪೆ. ಪಿ. ಬ್ರೌನ್, ೨೨ ಮೂರನೆ ಬೀದಿ, ಲಿನ್ಸೆಲೂ, ಕ್ವಿಬೆಕ್.

"ನನ್ನ ಗುಮಾಸ್ತ ಕೆಲಸದಲ್ಲಿ ನನಗೆ ತುಂಬಾ ದಣುವುಂಟಾಗಿ ಒಂದು ವರುಷದ ಕೆಳಗೆ ಬಹಳ ನಿಶ್ಶಕ್ತಿಯಾಯಿತು ನನ್ನ ಊಟ ಸೇರದೆ ನನಗೆ ಬಹು ಕಠಿಣವಾಗಿ. ನನ್ನ ನರಗಳು ತುಂಬಾ ಬಲಹೀನವಾದವು [illegible] ಗಂಟೆ ಎಷ್ಟು ಬೇಗ ಮುಗಿದೀತೋ ಎಂದು ಎದುರು ನೋಡುವುದೇ ನನ್ನ ಕುತೂಹಲವಾಗಿದ್ದಿತು [34-32]

"ನಾನು ಕ್ರಮೇಣ ದುರ್ಬಲನಾಗುತ್ತಾ ಬಂದೆನು. ಕಪ್ಪು ಚುಕ್ಕೆಗಳು ನನ್ನ ಕಣ್ಣು ಮುಂದೆ ಹಾರಿ ಹೋಯಿತು ಕಡೆಯಾದ ನಾನು ಕೆಲಸವೇನೂ ಮಾಡಲಾರದೆ ಬಿಡಬೇಕಾಯಿತು. ಹಾಗೆ ಬಿಟ್ಟ ನಂತರವೂ ನನ್ನ ಏನೂ ಬದಲಾವಣೆಯು ಆಗಲಿಲ್ಲ.

"ಒಬ್ಬ ವೈದ್ಯನ ಕೈಲಿ ಕೆಲವು ವಾರಗಳ ತನಕ ಔಷಧ ತೆಗೆದುಕೊಂಡೆನು. ಆದರೂ ನನಗೆ ಒಂದೇ ಸಮನಾಗಿ ಆ ದಾಕ್ಷರು ಕೊಡುವ ಇನ್ನೇನೂ ಚಿಕಿತ್ಸೆ ಮಾಡಲಾರದೆ ಹೋದದ್ದನ್ನು ನೋಡಿ, ನಾನೇ ಸ್ವತಃ ಔಷಧವನ್ನು ಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟೆನು. ಪತ್ರಿಕೆಗಳಲ್ಲಿ ಪ್ರಕಟವಾದ ಬಲು ಕಾಯಿಲೆಗಳ ಔಷಧಗಳನ್ನು ಕೊಂಡು ಸೇವಿಸಿದಾಗ್ಯೂ ನನಗೆ ಪ್ರಯೋಜನವೇನೂ ಕಾಣಲಿಲ್ಲ

"ತರುವಾಯ ಪೆರೂನಾವನ್ನು ಸೇವಿಸ ತೊಡಗಿದೆನು ಪ್ರಾರಂಭಿಸಿದೆನು ಆದರೆ ಒಂದು ವಾರ ತೆಗೆದುಕೊಳ್ಳುವಷ್ಟರೊಳಗೆ ನನ್ನ ದೇಹದ ಸ್ಥಿತಿಯು ಚೆನ್ನಾಗುವಂತೆ ನನಗೆ ತೋರಿಬಂದಿತು. ಇನ್ನೂ ಕೆಲವು ವಾರಗಳು ಕಳೆದ ತರುವಾಯ ಈ ಔಷಧವನ್ನು ಸೇವಿಸುವುದರಲ್ಲಿ ಅನುಸರಿಸಬೇಕಾದ ಪಥ್ಯವನ್ನು ಸ್ವಲ್ಪವೂ ಬಿಡಲಿಲ್ಲ. ನನ್ನ ಕಟ್ಟು [illegible] ಕ್ರಮವಾಗಿ [illegible] ನನ್ನ ದೃಷ್ಟಿಯು ಚೆನ್ನಾಯಿತು. ನಾನು ನನ್ನ ಕೆಲಸಕ್ಕೆ ಪುನಃ ಹೋಗುವವನಾದೆನು

"ನಾನು [illegible] ನನಗೆ ಸಂಪೂರ್ಣ ಗುಣವಾಯಿತು ಮೂರು ವಾರಗಳ ಮೊದಲು ನಾನು [illegible] ಕೆಲಸದ ಮೇಲೆ ಹಾಜರಾದೆನು. ಪೆರೂನಾ ಖಂಡಿತವಾಗಿ ನನ್ನ ವಿಷಯದಲ್ಲಿ ಅದ್ಭುತವಾದ ಔಷಧವಾಗಿ ಪರಿಣಮಿಸಿತು ನನ್ನ ಹಾಗೆ ಅಪಾರ ಕೆಲಸದಿಂದ ಶಕ್ತಿಯನ್ನೆಲ್ಲಾ ಹಾಳುಮಾಡಿಕೊಂಡಿರುವಂಥವರು ಅದನ್ನು ಸೇವಿಸಿದರೆ ಖಂಡಿತವಾಗಿಯೂ ಅವರಿಗೆ ತುಂಬಾ ಶಕ್ತಿಪುಷ್ಟಿಗಳನ್ನು ಅದು ಕೊಡುತ್ತದೆ"

ಮೂತ್ರಕೋಶವೂ, ಪಿತ್ತಕೋಶವೂ.

ಮಿ ಜಾರ್ಜ್ ಇ. [illegible], ೩೬೩ ಸೂಡ ಸ್ಟ್ರೀಟ್, [illegible], ಈತ ಬರೆಯುತ್ತಾನೆ —

"ನನಗೆ ಪೆರೂನಾ ಸೇವನೆಯಿಂದುಂಟಾಗಿರುವ [illegible] ಪ್ರಯೋಜನಕ್ಕಾಗಿ ನಿಮ್ಮನ್ನು ಕೃತಜ್ಞತೆಯಿಂದ ವಂದಿಸುವುದು ನನ್ನ ಕರ್ತವ್ಯವಾಗಿರುತ್ತದೆ. ಎರಡು ವರುಷಗಳ ಹಿಂದೆ ನಾನು ರೋಗಿಯಾಗಿದ್ದೆನು. ನನ್ನ ದೇಹದಲ್ಲಿರುವ ಮೂತ್ರಕೋಶವೂ ಪಿತ್ತಕೋಶವೂ ಕ್ರಮ ತಪ್ಪಿದವು. ಬೆನ್ನಿನಲ್ಲಿ ತಲೆಯಲ್ಲಿ ಆಗಾಗ್ಗೆ ಬಹಳ ನೋವುಂಟಾಗುತ್ತಿತ್ತು ನನ್ನ ಕೆಲಸವನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟೆನು.

"ಆ ಸಮಯದಲ್ಲಿ ನನ್ನ ಒಬ್ಬ ಸ್ನೇಹಿತನು ಪೆರೂನಾ [illegible] ಅದನ್ನು ಸೇವಿಸು ಎಂದು ನನಗೆ ಹೇಳಿದನು ಪ್ರಾರಂಭದಿಂದಲೂ ಅದು ನನಗೆ ವಿಶೇಷ ಪ್ರಯೋಜನವನ್ನುಂಟುಮಾಡಿತು. ಸರಿಯಾದ ಔಷಧ ಸಿಕ್ಕಿತೆಂದು ನನಗೆ ಗೊತ್ತಾಯಿತು ಕೆಲವು ವಾರಗಳೊಳಗಾಗಿ ನಾನು ಸಂಪೂರ್ಣವಾಗಿ ಗುಣಹೊಂದಿದೆನು"

ಊಟಮಾಡಿದ ಮೇಲೆ ಬಾಧೆಯಾಗುವುದು.

ಮಿ ಜೆ. ದಬ್ಲ್ಯು. ಸ್ಟ್ರಿಚರ್ಡ್, [illegible], ಇಂಡಿಯಾನಾ, [illegible] ಈತ ಬರೆಯುತ್ತಾನೆ —

"ಪೆರೂನಾ ಸೇವನೆಯಿಂದ ನನಗಿದ್ದ ಹೊಟ್ಟೆಯೊಳಗಿನ ಸಂಕಟವೆಲ್ಲಾ ನಿವಾರಣೆಯಾದದ್ದರಿಂದ ಬಹು ಸಂತೋಷದಿಂದ ಹೇಳುತ್ತೇನೆ

"ನಾನು ಏನು ತಿಂದರೂ ಜೀರ್ಣವಾಗುತ್ತಿರಲಿಲ್ಲ ಅದರೊಡನೆ ಊಟವಾದುದರ ಕೊನೆಗಾಗಿ ನನ್ನ ಹೊಟ್ಟೆಯಲ್ಲಿ ಒಂದು ವಿಧವಾದ ವಾಯು ತುಂಬಿಕೊಂಡು, ಊಟವಾದ ಒಂದೆರಡು ಗಂಟೆಯ ಹೊತ್ತು ಬಹಳ ಹುಳಿತೇಗುಗಳನ್ನೂ ಸಂಕಟವನ್ನೂ ಉಂಟುಮಾಡುತ್ತಿತ್ತು

"ಆದರೆ ಒಂದು ಪೆರೂನಾವನ್ನು ಬಂದಿಸತಕ್ಕ [illegible], ಅದು ನನ್ನನ್ನು ಸಂಪೂರ್ಣವಾಗಿ ವಾಸಿಮಾಡಿತು ನನ್ನ ಸಂಕಟವೆಲ್ಲಾ ನಿವಾರಣೆಯಾಯಿತು. ಈಗ ಸುಖವಾಗಿ ಭೋಜನವಾದುತ್ತೇನೆ. ಇದೆಲ್ಲಾ ಡಾಕ್ಟರ್ ಹಾರ್ಟ್‌ಮನ್‌ರವರಿಂದಲೂ, ಅವರ ಅದ್ಭುತವಾದ ಔಷಧದಿಂದಲೂ ಆಯಿತು."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದ್ದು ಇವರಿಂದಲೇ ತಿಳಿಯಬಹುದು.

ವಿಳಾಸ:— ಹಿಂದುಸ್ಥಾನದಲ್ಲೆಲ್ಲಾ ಈ ಔಷದ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

16—10—1908 ರಿಂದ 23—10—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	2	0	0	0
ಮೈಸೂರು ,,	2	2	0	0
ಬೆಂಗಳೂರು ಡಿಸ್ಟ್ರಿಕ್ಟು	41	30	0	0
ಮೈಸೂರು ,,	91	58	0	0
ಕೋಲಾರ್ ,,	12	9	32	16
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	14	13	0	0
ಹಾಸನ ,,	20	13	0	0
ಚಿತ್ರದುರ್ಗ ,,	0	0	9	1
ಕಡೂರ್ ,,	40	33	0	0
ಶಿವಮೊಗ್ಗ ,,	*	*	0	0
* ಸಂಖ್ಯೆ ಕಾಣಿಸಿಲ್ಲ. ಜುಮ್ಲಾ	222	167	41	17

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಕಾರ್ತೀಕ ಶುದ್ಧ ದ್ವಾದಶಿ ಗುರುವಾರದಿಂದ ಕಾರ್ತೀಕ ಬಹುಳ ತದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೮ನೇ ನವಂಬರ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ಶೇಷಿ ತುಲಾ ಮಾಸ
5	ಗುರು *	ದ್ವಾದಶಿ	31-25	ಪೂ.ಭಾ	12-56	21
6	ಶುಕ್ರ §	ತ್ರಯೋದಶಿ	26-1	ಉ	39-36	22
7	ಶನಿವಾ ‡	ಚತುರ್ದಶಿ	20-28	ರೇ	36-50	23
8	ರವಿವಾ ‡	ಪೌರ್ಣಮಿ	17-30	ಅ	34-56	24
9	ಚಂದ್ರ †	ಪಾಡ್ಯಮಿ	11-31	ಭ	33-58	25
10	ಕುಜ	ಬಿದಿಗೆ	12-12	ಕೃ	34-4	26
11	ಬುಧ ∷	ತದಿಗೆ	12-12	ರೋ	35-32	27

* ಪ್ರದೋಷ, ಉತ್ಥಾನದ್ವಾದಶಿ, ತುಳಸೀ ಬೃಂದಾವನೋತ್ಸವ, ಮೇಲುಕೋಟೆಯಲ್ಲಿ ಅಷ್ಟತೀರ್ಥ ರಥ § ವೈಕುಂಠಚತುರ್ದಶಿ, ಅಮೃತಸಿದ್ಧಿಯೋಗ. ‡ ಶಿವಪ್ರಿಯಂ. ‡ ಪ್ರತಿಪತ್ತಿಥಿ, ವ್ಯಾಸಪೂರ್ಣಿಮಾ, ಧಾತ್ರೀಹವನ. † ಕಾರ್ತಿಕಸೋಮವಾರ ∷ ದಗ್ಧಯೋಗ, ಸಂಕಷ್ಟಚತುರ್ಥಿ.

ಪೇಟೇ ಧಾರಣೆ.

ವಿವರ		ಮೈಸೂರು	ಬೆಂಗಳೂರು
ಕಡಿ^ ಅಕ್ಕಿ ಪಲ್ಲಾ ೧ ಕ್ಕೆ	ರೂ.	೧೨-೮-೦	೧೪-೦-೦
ಕೆಂಬೂತಿ ಅಕ್ಕಿ ಅಸಲ್		೧೬-೫-೦	೧೮-೦-೦
,, ಮುಯಂ		೧೭-೦-೦	೧೭-೮-೦
ಜಾಪಾನ್ ಅಕ್ಕಿ		೧೬-೧೨-೦	೧೭-೦-೦
ಸಣ್ಣ ಶೆಟ್ಟಿ ಅವಲ್		೨೦-೦-೦	೨೨-೦-೦
,, ಮುಯಂ		೧೯-೦-೦	೨೦-೦-೦
ತೊಗರಿ ಬೇಳೆ ಪಲ್ಲಾ ೧ಕ್ಕೆ		೧೭-೦-೦	೧೮-೪-೦
,, ಮುಯಂ		೧೬-೫-೦	೧೮-೦-೦
ಹೈಕ್ರ ರಾಗಿ ಪಲ್ಲಾ ೧ಕ್ಕೆ		೮-೪-೦	೧೦-೦-೦
ಕಾರಗ್ರಿ		೮-೦-	೯-೦-೦
ಜೋಳ		೮-೦-೦	೯-೦-೦
ಹುರುಳಿ ಪಲ್ಲಾ ೧ಕ್ಕೆ		೧೧-೮-೦	೧೧-೧೨-೦
ಬಿಳಿ ಅವರೆ		೧೧-೮-೦	೧೦-೮-೦
ಹೆಸರು		೧೨-೦-೦	೧೪-೦-೦
ಉದ್ದು		೧೭-೦-೦	೧೪-೦-೦
ಕಡಲೆ		೧೫-೪-೦	೧೪-೦-೦
ಎಳ್ಳು ಸೇ ೧೨೦ ಕ್ಕೆ		೨೦-೯-೦	೧೮-೮-೦
ಹುರುಳಿ		೮-೪-೦	೮-೦-೦
ಪುರಳು ೧೨೦ ಸೇರಿಗೆ		೧೦-೦-೦	೧೦-೦-೦
ಈಗೆ ಕಾಯಿ ಮಣ ೧ಕ್ಕೆ		೧-೮-೦	೧-೨-೦
ಮೆಣಸಿನಕಾಯಿ		೫-೦-೦	೪-೮-೦
,, ಮುಯಂ		೫-೦-೦	೪-೪-೦
ಬೆಲ್ಲ ಮೊದ ಅಚ್ಚು		೫-೦-೦	ಮ ೭-೪-೦
ಒಳ್ಳೆ ಮೆಣ ೧ಕ್ಕೆ		೫-೮-೦	೬-೪-೦
ಹರಳೆಣ್ಣೆ ,,		೫-೦-೦	೪-೦-೦
ಕೊತ್ತಂಬರಿ ಪಲ್ಲಾ ೧ಕ್ಕೆ		೬-೪-೦	೬-೮-೦
ಉಪ್ಪು ,,		೫-೮-೦	೫-೪-೦
ಹುಣಿಸೇ ಹಣ್ಣು		೧-೫-೦	೧-೪-೦
,, ಹಳೇದು		೧-೬-೦	೧-೨-೦
ತುಪ್ಪ ಮಣ ೧ಕ್ಕೆ		೧೪-೦-೦	೧೫-೫-೦
ಸೀಮೆಹುಣ್ಣೆ ಪಟ್ಟ ೧ಕ್ಕೆ		೫-೦-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ		೪-೪-೦	೫-೦-೦
ಅಳಲೇಕಾಯಿ ಮಣ ೧ಕ್ಕೆ		೦-೧೦-೦	೦-೧೪-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೪-೦	೦-೧೪-೦
ಚೆನ್ನ (ಪೌಡ್) ಕೆಂಪು		೧೫-೭-೦	೧೫-೬-೦
,, ,, ಪಸಿಮೆ		೧೫-೧೪-೦	೧೬-೧೦-೦
,, ,, ಗಟ್ಟಿ ತೊಲ ೧ಕ್ಕೆ		೨೪-೦-೦	೨೪-೮-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭-೦-೦	೬೫-೧೨-೦

Printed and Published by the Rev E. W THOMPSON, M. A., Proprietor and Manager, Wesleyan Mission Press, Mysore. 5/11/1908.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೩೨ ಮೈಸೂರು—ಸನ್ ೧೯೦೭ ನೇ ಇಸವಿ ನವಂಬರ್ ತಾರೀಖು ೧೪ ನೇ ಗುರುವಾರ. ಸಂಚಿಕೆ ೪೮

ವೈದ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

14 31

೧. ಲೋಕೋಪಯೋಗ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ತವರದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆ ಬಾಳುವ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ, ಹೊಟ್ಟೆ ನೋವು, ಸಂದುಗಳ ನೋವು, [illegible] ಕೆಮ್ಮು ಕಫ, ವಾತ, [illegible] ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ತಲೆನೋವು, [illegible] ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಚಿತವಾಗಿ ಗುಣಪಡಿಸುತ್ತವೆ.



[illegible] ಉಪಯೋಗಿಸುತ್ತಿದ್ದರೆ ಬಹಳ ಹೊತ್ತು [illegible] [illegible] ಶರೀರಕ್ಕೆ ಪುಷ್ಟಿ [illegible] ಗುಣಪಡಿಸುತ್ತದೆ.

[illegible] ಪ್ರೈಸ್ ಲಿಸ್ಟು ಕಳುಹಿಸಲಾಗುತ್ತದೆ [illegible]

[illegible]

ವಿಳಾಸ.—ವಾಸ್ತವ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್.

ವೈದ್ಯಶಾಲೆ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಜ್ವರಹರಿ. 61 15



[illegible]

[illegible]

ಒಮ್ನಿಕಂ ಪ್ಲಾಸ್ಟರ

ಈ ಔಷಧವು ಅಜೀರ್ಣ, [illegible] ಹೊಟ್ಟೆನೋವು, [illegible] ಮುಂತಾದ ಕ್ರಿಮಿ [illegible] ಗುಣಪಡಿಸುತ್ತದೆ. [illegible] ಕಾಯಿಲೆಗಳಲ್ಲಿ ಉಪಯೋಗಿಸಬಹುದು.

[illegible] ಅಜೀರ್ಣ ರೋಗಿಗಳಿಗೆ [illegible] ಗುಣವಾಗುತ್ತಲಿದೆ [illegible] ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಔಷಧ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದಲ್ಲಿ ವಿಚಾರ —

ಹೆಬ್ಬನವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

AMRUTANJAN DEPOT, 16 OAK-LANE, BOMBAY. [17-38]

ಅಮೃತಾಂಜನ್ ಡಿಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯರು ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ಚಳುಗಂಟುನೋವು, ಎದೆನೋವು, ಛಾಯ, ಜಖಮು, ಮೂಲವ್ಯಾಧಿ, ಇವೇ ಮೊದಲಾದ ಯಾವ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತಿಳಿಯಲು ಯೋಗ್ಯವಾದ ಸಂಗತಿಯಾಗಿರುತ್ತದೆ. ಇದು ಚರ್ಮದ ಮೂಲಕ ಮಾಂಸವನ್ನು ಪ್ರವೇಶಿಸಿ, ಕ್ರೋಳಕು ಪದಾರ್ಥಗಳಿಂದ ಹುಟ್ಟಿದ ನಾನಾ ತರದ ವೇದನೆಗಳನ್ನು ನಾಶಪಡಿಸುತ್ತದೆ. ಬಾಟ್ಲು ಒಂದರ ಕಿಮ್ಮತ್ತು ೦—೮—೦ ಪೋಸ್ಟು ಖರ್ಚು ೦—೪—೦ ಆರು ಬಾಟ್ಲು ತರಿಸಿಕೊಂಡವರಿಗೆ ಒಂದು ಕಪ್ ಇನಾಮು. ನಾವು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ, ಕೆಮ್ಮುಗೂ, ಉಪಯೋಗಿಸಲ್ಪಟ್ಟು ಇದು ಅನುಭವವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇವೆ.

ಗಜಕರ್ಣದ ಮುಲಾಮು.

ಮೂರು ನಾಲ್ಕು ತಾಗಿಸುವದರೊಳಗೆ ಗಜಕರ್ಣ, ತುರಿ ಕಜ್ಜಿ ನಾಶವಾಗುವದು. ಇದರಿಂದ ಚರ್ಮಕ್ಕೆ ಕಷ್ಟವಾಗುವದಿಲ್ಲ ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦—೬—೦, ವಿ. ಪಿ. ಖರ್ಚು ೦—೩—೦

ದಂತಮಂಜನ- ಡಬ್ಬಿ ೨ ಆಣೆ. ಹಲ್ಲುಗಳಿಂದ ಬರುವ ರಕ್ತ [illegible] ನಾಶಮಾಡುತ್ತದೆ. [illegible] ಪೂರ್ಣವಾಗಿ ತೆಗೆಯುತ್ತದೆ. ಹಲ್ಲುಗಳು [illegible] ಹಲ್ಲುಗಳು ಬೆಳ್ಳಗಾಗುತ್ತವೆ.

ಕೆಮ್ಮು ಮುಲಾಮು [illegible] ೧ಕ್ಕೆ ಕಿಮ್ಮತ್ತು ೨ ಆಣೆ.

ಕೇಶವರ್ಧಿನಿ [illegible]

ಕೇಶವರ್ಧಿನಿ [illegible] ಕೇಶವರ್ಧಿನಿ

ಕೂದಲನ್ನು [illegible] ಬಾಟ್ಲು ಒಂದರ ಕಿಮ್ಮತ್ತು ರೂ ೧—೦—೦

ವೀರ್ಯಗುಟಿಕೆ—ಧಾತುಪುಷ್ಟಿ, ರಕ್ತವೃದ್ಧಿ	೧—೦—೦
ಕುಸುಮಾದಿಗುಟಿಕೆ —ಹೆಂಗಸರ ಹೊಟ್ಟೆ ನೋವಿಗೆ	೧—೦—೦
ಸುಂದರೀ ತೈಲ—ಕೇಶವೃದ್ಧಿ ಮುಖ ಕಾಂತಿಗೆ	೦—೮—೦
ತಾಂಬೂಲ ಗುಟಿಕೆ [illegible]	೦—೮—೦
ನೇತ್ರಾಂಜನ—ಕಣ್ಣಿನ ರೋಗಕ್ಕೆ	೦—೪—೦
ಟೂಥ್ ಪೌಡರ್ [illegible]	೦—೮—೦
ಜುಲಾಬು ಮಾತ್ರೆ—ಜುಲಾಬಿಗೆ	೦—೭—೦

[illegible]

ವಿಳಾಸ:—ವಿಲಿಯಂ ಮತ್ತು ಕಂಪೆನಿ, ೧೬ ಓಕ್‌ಲೇನು, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ." ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2 16

ಬಳ್ಳೆ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ನಿಂಚಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾರಿ ಬಿಕರಿಯಾಗುತ್ತಿರುವ ಟೋಪಿಗಳ ವಾರದ ಲಿಷ್ಟು [illegible] ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ. (೧) ನಮ್ಮಲ್ಲಿ ಮಾರಾಗುವ ಟೋಪಿಗಳ ವಾರ [illegible] (೨) ಟೋಪಿಗಳನ್ನು [illegible] ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ಪುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೇಕಿದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸಾದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ, ಕೆಂಪು, ಕಪ್ಪು, ಬಿಳಿ, [illegible] ಟೋಪಿಗಳು ೧ ರೂ ೮ ಆ, ೧ ರೂ. ೬ ಆ; ೧ ರೂ. ೪ ಆ

ರೇಷ್ಮೆ ಚಿತ್ರಯುಳ್ಳ ಟೋಪಿಗಳು ೧ ರೂ ೮ ಆ, ೨ ರೂ

ದಾರದ ಟೋಪಿಗಳು ೧ ರೂ ೧೨ ಆ; ೧ ರೂ. ೮ ಆ, ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ, ೧ ರೂ. ೬ ಆ;

ಕೂಸುಗಳ ಟೋಪಿ, ಸೂಫ಼ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಲಾ ಪ್ರಕಟನೆಗಳು

ವ್ಯವಹಾರನಿರ್ಣಯ.—[illegible] ಮುದ್ರಣವಾಯಿತು. [illegible] ಕ್ರಯ ವಿ. ಪಿ. ಸೇರಿ ೧ ರೂ ೧೨ ಆಣೆ [10-29]

ಕನ್ನಡ ಲಾ ರಿಪೋರ್ಟ್—[illegible] ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ [illegible] ಈ ಮಾಸ ಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. [illegible] ೧—೦—೦ ಮುಂಗಡ, ವಿ. ಪಿ. ಪಿ. ಖರ್ಚು [illegible]

ಇವುಗಳನ್ನಪೇಕ್ಷಿಸುವವರು—[illegible] ಮಲ್ಲಾರಾವ್, ಫಸ್ಟ್ ಗ್ರೇಡ್ ಪ್ಲೀಡರ್, (೯೦) ೨ ನೇ ರೋಡ್, ಚಾಮರಾಜಪೇಟೆ, ಬೆಂಗಳೂರು ಸಿಟಿ.—ಈ ವಿಳಾಸಕ್ಕೆ ಬರೆಯುವುದು.

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

53 20

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಆಕ್ಸ್ ಬಟ್ಟೆಗಳು ಸಾಮಾನು ಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಮಿಗಿಲಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಅಗ್ಗ ಈ ಬಟ್ಟೆಗಳ ಪ್ರಯೋಜನವು ನಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರೆಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

JUST RECEIVED! JUST RECEIVED!!

Stead's Books for the Bairns
(Illustrated) New Numbers

STEAD'S PENNY POPULAR TALES Sixty-four Pages in a coloured Picture Cover. Each number contains a story of thrilling interest. 24 numbers.

A VERY NICE SELECTION OF 93-1]

CHRISTMAS AND NEW YEAR CARDS AND CALENDARS FOR 1909.

Apply—The Manager, C.L.S. Book Depot, Mysore City.

ವಾತಹರಿ.

81-6

ಒಂದು ಡಬ್ಬಿ ತಿಮ್ಮಪ್ಪ ೧ ೩ ಆಣೆ—ವಿ. ಪಿ. ಖರ್ಚು ಬೇರೆ.

ಈ ತೈಲವು ತಲೆನೋವು, ಅರೆತಲೆ ನೋವು, ವಾಯುವಿನಿಂದ ಕೈಕಾಲು ನೋವು, ಬೀಳು ಕಟ್ಟಿದ್ದರೂ, ಪಿತ್ತವಾಯು ಎದೆನೋವು, ಪಿತ್ತಗಳಿಂದ

ಉಂಟಾದ ಘಾಯ, ಖಜ್ಜಿ, ತುರಿ, ಕರಪಾಣಿ, ಮೇಹಪಡೆ, ನರ ಹೊರಳಿದ್ದರೂ, ಕೀಲುವಾಯು, ಹಲ್ಲುನೋವು, ಮಡಮ, ಉಪ್ಪಳಿಕೆ ಚಂಕಿಯಿಂದ ಸುಡಲ್ಪಟ್ಟಿದ್ದರೂ, ಛಳಕು, ಇತ್ಯಾದಿ ಅನೇಕ ವ್ಯಾಧಿಗಳಿಗೆ - ಹರಿ, ಅಂದರೆ ಸಿಂಹದೋಪಾದಿ ಕ್ಷಣಮಾತ್ರದಲ್ಲಿ ನಾಶವಾಡುವದು.

ತಕ್ಷಣ ಪರಿಹಾರ

ನೂಲುವ್ಯಾಧಿಗೂ ಶಕ್ತವಾಗಿದೆ. ಈ ರೋಗಗಳಿಗೆಲ್ಲಾ ಈ ತೈಲವು ಎಷ್ಟರಮಟ್ಟಿಗೆ ಶಕ್ತವೋ ಅಷ್ಟು ಇನ್ನಾವ ಔಷಧವೂ ಇಲ್ಲ. ಇದನ್ನು ನೋಯುವ ಸ್ಥಳಕ್ಕೆ ಹಚ್ಚಿದ ಮಾತ್ರಕ್ಕೇ, ದುಃಖಕರವಾದ ರೋಗ ಮಾಯವಾಗಿ ಸುಖಸಂತೋಷಗಳುಂಟಾಗುತ್ತೆ. ಬಾಧೆಯನ್ನು ಅನುಭವಿಸುವವರು ತೂಡಲೇ ಬರೆದು ತರಿಸಿಕೊಳ್ಳಿ. ತರಿಸದವರೆಲ್ಲಾ ಎಂದು ಎಂದಿಗೂ ವ್ಯಸನಪಡುವಿಲ್ಲ. ೬ ಡಬ್ಬಿಗಳನ್ನು ಒಟ್ಟಿಗೆ ತರಿಸಿಕೊಳ್ಳುವವರಿಗೆ ಫ್ರೀಯಾಗಿ ಬಿಡುತ್ತೇವೆ. ಔಷಧಗಳ ಕ್ಯಾಟಲಾಗನ್ನಪೇಕ್ಷಿಸುವವರು ೬ ಪೈ ಟಿಕೆಟ್ಟು ಕಳುಹಿಸಿಕೊಳ್ಳತಕ್ಕದ್ದು.

ವಿಳಾಸ—ಎಂ. ಗೋವಿಂದಶೆಟ್ಟಿ,
ಮೆಡಿಕಲ್ ಪ್ರಾಕ್ಟೀಷನರ್, ದೇವನಹಳ್ಳಿ.

ಸ್ವಾತಂತ್ರ್ಯದ ಪ್ರಕಟನೆ.

92-1

ಏನ ಮೊಗನ ಸಬ್ ಡಿವಿಜನ್ ಆಫೀಸ್ ಹೆಡ್ ಮುನ್ಷಿ ವಿನಾರ್ ನಾರಾಯಣಸ್ವಾಮಿ ಇದರಿಂದ ಸಮಸ್ತ ಜನಗಳಿಗೂ ತಿಳಿಯತಕ್ಕದ್ದೇನೆಂದರೆ:— ಬೆಂಗಳೂರು ಚಿಕ್ಕಪೇಟೆಯಲ್ಲಿ ಇದ್ದು ಹಾಲಿ ಫೌತ ಆಗಿರುವ ನನ್ನ ತಂದೆ ಅಪ್ಪ ಸಾಹೇಬ್ ಫೌಡ್ ಚ ಇಲೆಕ್ಟರ್ ಪ್ಲಾನ್ ವಿನಾರ ದಾದೇರಾಯರ ಹಿರಿಯ ಹೆಂಡತಿಯಾದ ನನ್ನ ಅತ್ತಿಗೆ ಕಮಲಾಬಾಯಿಯವರು ಮತ್ತು ನನ್ನ ತಾಯಿ ಕಾವೇರಿಬಾಯಿಯವರು ಸಹಾ ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನಮ್ಮ ಪಿತ್ರಾರ್ಜಿತ ಮನೆಯಲ್ಲಿಯೂ ನನಗೆ ಮೋಸವಾದುವ ಅಭಿಪ್ರಾಯದಿಂದ ಪರಭಾರೆ ಮಾಡುವ ತಂದೋಪಿನಲ್ಲಿ ಇರುವುದಾಗಿ ತಿಳಿಯಬರುತ್ತೆ. ಈ ಮನೆಯನ್ನು ಇವರುಗಳು ಜೀವನಪರ್ಯಂತರ ಅನುಭವಿಸುವುದಕ್ಕೆ ಮಾತ್ರ ಇವರುಗಳು ಹಕ್ಕುಳ್ಳವರು ಹೊರತು ಇದನ್ನು ಯಾವ ವಿಧದಲ್ಲಿಯೂ ಪರಭಾರೆ ಮಾಡುವುದಕ್ಕೆ ಮೊದಲಿಂದ ನನ್ನ ಅತ್ತಿಗೆಯವರಿಗೆ ಆಗಲೀ, ನನ್ನ ತಾಯಿಯವರಿಗೆ ಆಗಲೀ ಯಾವ ವಿಧವಾದ ಹಕ್ಕು ಯಾ ಅಧಿಕಾರ ಇರುವುದಿಲ್ಲ; ಮತ್ತು ಕಾರಣವೂ ಇರುವುದಿಲ್ಲ. ಈ ಸ್ವತ್ತು ನನ್ನ ಪಿತ್ರಾರ್ಜಿತ. ಇದಕ್ಕೆ ನಾನು ಉತ್ತರಾಧಿಕಾರಿ. ಒಂದೂ ಅಲ್ಲದೆ ಕಾನೂನು ರಿವರ್ಷನರಿ ರೈಟ್ (Reversionary right) ಹಕ್ಕುಳ್ಳವನಾಗಿಯೂ ಇರುತ್ತೇನೆ. ಪಿ. ಬೈರಪ್ಪ ನಮ್ಮ ಅಜ್ಜ ಪತಿ ಪಾದೇರಾಯರು ಅವರ ಪಿತ್ರಾರ್ಜಿತದಿಂದ ಇವರ ಉತ್ತರ ಕ್ರಿಯಾದಿಗಳೆಲ್ಲಾ ನಾನೇ ಮಾಡಿ, ಇವರಿಗೆ ಸಾರ್ಥಕ ಹೊಂದಿರುತ್ತೇನೆ. ಹೀಗಿರುವಲ್ಲಿ ನನ್ನ ಅತ್ತಿಗೆ ಮತ್ತು ನನ್ನ ತಾಯಿ ಸಹಾ ದ್ರೋಹ ಚಿಂತನೆಮಾಡಿ, ನನ್ನ ತಿಳುವಳಿಕೆಯಿಲ್ಲದೇ ಮೊಲ್ಪಿಂದ ನನ್ನ ಪಿತ್ರಾರ್ಜಿತವಾದ ಮನೆಯನ್ನು ಬೆಂಗಳೂರಲ್ಲಿರುವ ಮೇ॥ ಬಿ. ಕೆ. ಗರುಡಾಚಾರಿಗೆ ಹಾಲಿ ಅನಾವಶ್ಯಕವಾಗಿ ಮೂರು ಸಾವಿರ ರೂಪಾಯಿಗೆ ಆಧಾರವಾಗಿ ಕೊಡಲು ಬಿಟ್ಟಿದ್ದಾರೆ ತಿಳಿಯಬರುತ್ತೆ. ಆದಕ್ಕಾಗಿ ಹಾಲಿ ನಾನು ಚರ್ಚಿಸಬೇಕಾಗಿ ಇದೇನೆ.

ಇದು ವಿನಾಃ ಕೋಲಾರ ತಾಲ್ಲೂಕು ದೊಡ್ಡ ಬೆಲೆ ರೈಲ್ವೆ ಸ್ಟೇಷನ್ ಸಮೀಪದಲ್ಲಿ ನಮ್ಮ ತಾಯಿ ಕಾವೇರಿಬಾಯಿಯವರ ಹೆಸರಿನಲ್ಲಿ ಪಟ್ಟಿ ಇರುವ ಮಾವು ವಗೈರೆ ಫಲವೃಕ್ಷಗಳುಳ್ಳ ನಮ್ಮ ಪಿತ್ರಾರ್ಜಿತವಾದ ಒಂದು ತೋಟ ಇರುತ್ತೆ. ಈ ತೋಟವೂ ಸಹಾ ನಮ್ಮ ತಾಯಿಯವರ ಜೀವಮಾನ ಪರಿಯಂತ್ರ ಅದರ ಉತ್ಪತ್ತಿಯಲ್ಲಿ ಅವರು ಜೀವನ ಮಾಡಬೇಕೆಂಬ ಉದ್ದೇಶದಿಂದ ನನ್ನ ತಂದೆಯಾದ ಪಿತ ಪಿನಾರ್ ದಾದೇರಾಯರು ಸೆಷನ್ಮಾತ್ರಕ್ಕೆ ಇವರ ಹೆಸರಿಗೆ ಪಟ್ಟಿ ಮಾಡಿಸಿರುವವರಿಂದ ಇದನ್ನು ಮೊಲ್ಪಿಂದ ನಮ್ಮ ತಾಯಿ ಸುಧರಿಗೆ ಬಿಟ್ಟು ಇರುತ್ತೆ. ಹೀಗಿರುವಲ್ಲಿ ಇದನ್ನು ಸಹ ನನಗೆ ವಕ್ಕಿಟ್ಟಾರದೆಂಬ ದುರಾಲೋಚನೆಯಿಂದ ನನ್ನ ತಾಯಿ ಮತ್ತು ನನ್ನ ಅತ್ತಿಗೆ ಸಹಾ ಪರಭಾರೆ ಮಾಡುವದಕ್ಕೆ ಪ್ರಯತ್ನಪಡುತ್ತಾ ಇರುವದಾಗಿ ತಿಳಿಯಬರುತ್ತೆ. ಈ ಸ್ವತ್ತಿಗೆ ಸಹಾ ನಾನು ಉತ್ತರಾಧಿಕಾರಿಯಾಗಿರುತ್ತೇನೆ. ಅವರುಗಳು ಯಾವ ವಿಧದಲ್ಲಿಯೂ ಪರಭಾರೆ ಮಾಡುವದಕ್ಕೆ ಕಾರಣವಿಲ್ಲ; ಪರಭಾರೆ ಮಾಡಲು ಅವರುಗಳಿಗೆ ಅಧಿಕಾರವೂ ಇಲ್ಲ.

ಈ ವಿಷಯಗಳೆಲ್ಲಾ ನನ್ನ ತಾಯಿಗೂ ಮತ್ತು ನನ್ನ ಅತ್ತಿಗೆಗೂ ಸಹಾ ನೋಟೀಸ್ ಮೂಲಕ ತಿಳಿಸಿ ಇದೇನೆ. ಈ ಸ್ವತ್ತುಗಳನ್ನು ಮತ್ತು ನಮ್ಮ ಪಿತ್ರಾರ್ಜಿತವಾದ ಇತರೆ ಚರ ಯಾ ಸ್ಥಿರ ಆಸ್ತಿಗಳನ್ನು ಯಾರೇ ಆಗಲಿ, ಯಾವ ವಿಧದಲ್ಲಿಯೇ ಆಗಲಿ ಮೊಲ್ಪಿಂದ ನನ್ನ ಅತ್ತಿಗೆ ಕಮಲಾಬಾಯಿ ಮತ್ತು ನನ್ನ ತಾಯಿ ಕಾವೇರಿಬಾಯಿ ಇವರುಗಳಿಂದ ಪಡೆಯುವ ಪಕ್ಷಕ್ಕೆ ಅವರಿಗೆ ನರು ಸ್ವತ್ತುಗಳ ಮೇಲೆ ಯಾವ ಬಾಧ್ಯತೆಯೂ ಇರಲಾರದೆಂದು ಇದರಿಂದ ಮೊದಲೇ ಸಮಸ್ತರಿಗೂ ತಿಳಿಯತಕ್ಕ ಬಗ್ಗೆ ಈ ಮೂಲಕ ಪ್ರಕಟಿಸಿರುತ್ತೇನೆ.

ಚಿತ್ರದುರ್ಗ, ವಿನಾರ್ ನಾರಾ ಕೃಷ್ಣರಾವ್,
೩ನೇ ನವಂಬರ್, ೦೮. ಸಬ್ ಡಿವಿಜನ್ ಹೆಡ್ ಮುನ್ಷಿ.

CHAMBERLAIN'S COUGH REMEDY.



ಚೇಂಬರ್ಲೈನ್ ಯವರು ಕಂಡುಹಿಡಿದ ಕೆಮ್ಮಿನ ಔಷಧವು.

1-46

ಶೀತದ ಕೆಮ್ಮು, ಗಂಟಲು ನಾರೆಸ್ತುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ಕರುವಾಯ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೈನ್ ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ತೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಬಲವನ್ನು ನಿಲ್ಲಿಸಿಬಿಡುತ್ತವೆ. ಎದೆ ಒಡಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೈನ್ ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೭ ರೂಪಾಯಿ

ಇಲ್ಲಿ ನೋಡಿ.

77-8

ತುಮಕೂರು ವಿಲಿಯಂ ಇಲಾಖೆಯಲ್ಲಿ ಯೂರೋಪಿಯನ್ ರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ. ಕ್ರಯ.—೧೭ ಆಣೆ ಮೊದಲ್ಗೊಂಡು ೧ ರೂ. ೧೭ ಆಣೆಯ ವರಿಗ. ೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು. ಈಗತಾನೇ ಇಂಗ್ಲಿಷ್ ಉಲ್ ದಾರವು ಬಂದಿದೆ. ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಬಲ್ಲೆವು. ವಿಳಾಸ.— ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ವಿಲಿಯಂ ಇಲಾಖೆ, ತುಮಕೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

48-25

ತಲೆನೋವು, ವಾಯುನೋವು, ಸೆಳತ, ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿ ಮಾಡಿದಂತೆ ನಿಂತಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ. ನೊಲ್ಪಿಂದ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅಮೃತವಾದದು. ಅನುಭವದಿಂದಲೇ ಅದನ್ನು ಅಪ್ಪ ಹುಟ್ಟಾಗಿಯೂ ವಿಶೇಷ ಪ್ರಸಿದ್ಧಿಯೂ ಎಲ್ಲರೂ ಉಪಯೋಗಿಸುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅಮೋಘವಾದ ತೈಲವು ನೋವಿನ ಮೂಲವನ್ನೇ ಹಿಡಿದು ಅದರ ಹುಟ್ಟನ್ನೆ ಹಾಳುಮಾಡುತ್ತದೆ.

ಕ್ರಯ ಶೀಸೆ ಒಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜ್ ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ. ಮುಖ್ಯ ಏಜೆಂಟರ ವಿಳಾಸ—

ಎಸ್. ಪೀಟರ್ಸ್,
೩೩, ಪೇದಮುಲಿಪಿಳ್ಳೆ ಬೀದಿ, ಪೇಟೆರಿ, ಮದರಾಸ್.

ಹಿಂದುಸ್ಥಾನದಲ್ಲಿ ಮಕ್ಕಳು.

ಬಹಳ ಉಷ್ಣಪ್ರಧಾನವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಗೊಂಡು ಬೆಳೆಯುವದಕ್ಕೆ ಅವರಿಗೆ ಚೇತನದಿಂದಲೇ ಬಲಕಾರಿಯಾದ ಜೀವನಾಧೌಷಧವನ್ನು ಕೊಡುವುದು ಅವಶ್ಯಕ.

SCOTT'S EMULSION 33-33

(ಸ್ಕಾಟ್ಸ್ ಇಮಲ್ಷನ್)

ಎಂಬ ಜೀವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಮಿನುಮೀನನ್ನು ಇರುವ ಈ ಔಷಧದ ಗುರುತು.

ಇದಕ್ಕೆ ಸಮಾನವಾದದ್ದು ಮತ್ತ್ಯಾವದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು.

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಗೂರಲ ರೋಗಕ್ಕೆ ಸೇದುವ ಔಷಧ.

94-1

ಕೆಮ್ಮು, ಗೂರಲೆ ಇತ್ಯಾದಿ ಶಮನ; ಶೀಘ್ರ ಪರಿಹಾರ. ಕ್ರಯ. ಪೆಟ್ಟಿಗೆ ೧೦ ಆಣೆ. ವಿ. ಪಿ. ೧೧ ಆಣೆ

ವಿಳಾಸ.—ಕೆ. ಲಕ್ಷ್ಮೀನಾರಾಯಣಗೌಡ, ಬಿ. ಎ., ಬಿ. ಎಲ್. ಬೆಂಗಳೂರು ಸಿಟಿ.

ಮೆಡಲಿಸ್ಟ್ ಶಾರದಾ ಸೋಪ್ ಸ್ವದೇಶಿ.

85-3

ಅರೆಂಜ್, ಗುಲಾಬ್, ಕ್ಯಾಂಫರ್ ಮೊದಲಾದ ಸೋಪುಗಳು ಬಿಕರಿಗೆ ಸಿದ್ಧವಾಗಿವೆ. ಸವುಗಳಲ್ಲಿ ಚೆರವೆಯು ದುಪ್ಪಾಗವಾಗಿ ಸೇರಿಲ್ಲ. ಉತ್ತಮವಾದದ್ದೆಂಬುದಕ್ಕೆ ಸರ್ಟಿಫಿಕೇಟುಗಳಿವೆ. ವ್ಯಾಪಾರಿಗಳಿಗೆ ಲಾಭದ ಕಮೀಷನ್, ವಾಚಕರೇ, ಸ್ವದೇಶೀಯವಾದ ಸೋಪನ್ನು ಕೊಳ್ಳಿರಿ.

ವಿಳಾಸ:—ಶಾರದಾಸೋಪ್ ಫ್ಯಾಕ್ಟರಿ, ಶೃಂಗೇರಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಪಿಂಡಗಳು ಮನುಷ್ಯನ ಶರೀರವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಪಿಂಡಗಳು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬೀಳುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ಕಲ್ಲಾಗುವುದು; ತಲೆನೋವು; ಗಾಬರಿ, ಕೆಮ್ಮು, ಬೊಜ್ಜು; ತಲೆ ತಿರುಗುವಿಕೆ; ಮೈಯೆಲ್ಲಾ ಕೀಲುನೋವು; ಮರವು, ನಿಶ್ಶಕ್ತಿ, ಇವೇ ಮೊದಲಾದವು. ಅಲಕ್ಷ್ಯಮಾಡಿದರೆ ಮೂತ್ರಪಿಂಡದ ವ್ಯಾಧಿ, ವಾಯು, ಮೈಬಾವು, ಉರಿಮೂತ್ರ, ಮೂತ್ರಕೋಶದ ಕಲ್ಲು ಉಂಟಾಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರಪಿಂಡಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರವು ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-11]

ಅನಾರೋಗ್ಯದ ಬೆನ್ನಾದರೆ ಮೂತ್ರಕೋಶವು ಆರೋಗ್ಯವಾಗಿರಲಾರದು. ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.

ರೂ. ೨ ೬೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦ ೮ ೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಪೋಸ್ಟ್ ಪಿ. ಒ. ಬಾಕ್ಸ್ ೨೦, ಬೊಂಬಾಯಿ.—ಇವರಲ್ಲಿ ದೊರೆಯುವುದು.

ವೃತ್ತಾಂತ ಪತ್ರಿಕೆ.

——:o:——

ಸನ್ ೧೯೦೮ ನೇ ಇಸವಿ ನವಂಬರ್ ತಾ ೧೨ ನೇ ಗುರುವಾರ.

ಉಪಾಧ್ಯಾಯರಿಗೆ ಬಹುಮಾನದ ಪೋಟಾಟವು.

ಮೈಸೂರು ಸಂಸ್ಥಾನದ ಕಾಲೇಜು, ಸ್ಕೂಲು, ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಭಕ್ತಿ ನೀತಿ ಮಾರ್ಗಗಳನ್ನು ಪಾಠಮಾಡಿಗಿಟ್ಟು ಕಲಿಸಬೇಕೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿರುವುದು ವಾಚಕರಿಗೆ ತಿಳಿದೇ ಇದೆ. ನೀತಿಮಾರ್ಗಗಳನ್ನು ವಿವರಿಸಿ ಜನರ ಆಕರ್ಷಣೆ ಅನ್ನು ಹುಡುಗರಿಗೆ ಸ್ವಾರಸ್ಯವುಂಟಾಗುವ ರೀತಿಯಲ್ಲಿ ಹೇಳಿಕೊಡುವುದು ಸುಲಭಸಾಧ್ಯವಲ್ಲವೆಂದು ಅನುಭವವುಳ್ಳ ಉಪಾಧ್ಯಾಯರಿಗೆ ಗೊತ್ತಾಗಿರುವುದು. ಆದಕಾರಣ ನೀತಿಮಾರ್ಗಗಳನ್ನು ಯಾವ ರೀತಿ ವಿವರಿಸಿ ಹೇಳಬೇಕೆಂಬ ಭಾಗದಲ್ಲಿ ನಾವು ಉಪಾಧ್ಯಾಯರಿಗೆ ಸಹಾಯಮಾಡಲು ಉತ್ಸಾಹವುಳ್ಳವರಾಗಿದೇವೆ. ಈ ಅರ್ಥಕ್ಕೆ ನಾವು ಈ ಪತ್ರಿಕೆಯಲ್ಲಿ ಸೂಚಿಸುವ ವಿಷಯವನ್ನು ಕುರಿತು ಉತ್ಕೃಷ್ಟವಾದ ಪಾಠಗಳನ್ನು ಬರೆದು ಕಳುಹಿಸುವ ಉಪಾಧ್ಯಾಯರಿಗೆ ಬಹುಮಾನ ಕೊಡುತ್ತೇವೆ. ಈ ಪೋಟಾಟದ ಕ್ರಮವೇನೆಂದರೆ:—

(೧) ಸರ್ಕಾರ ಅಥವಾ ಗ್ರಾಂಟು ಪಡೆಯುವ ಸ್ಕೂಲಿನ ಉಪಾಧ್ಯಾಯರಾಗಿರಬೇಕು. ಸಹಾಯೋಪಾಧ್ಯಾಯರು ಬರೆದಲ್ಲಿ ಅದಕ್ಕೆ ಅವರ ಹೆಡ್ ಮಾ

ಗ್ರಂಥವನ್ನು ಮಾಡಿಸಿ ಕಳುಹಿಸಬೇಕು. (೨) ಪ್ರತಿ ಒಂದು ಪಾಠವೂ ಈ ಪತ್ರಿಕೆಯಲ್ಲಿ ಎರಡು ಕಾಲಂಗಿಂತ ಮೀರಕೂಡದು. (೩) ಆ ಪಾಠದಲ್ಲಿ ನಿರೂಪಿಸುವ ಬೋಧನಾ ವಿಷಯಗಳು ಹಿಂದು, ಮಹಮ್ಮದೀಯ, ಕ್ರೈಸ್ತ ಮೊದಲಾದ ಎಲ್ಲಾ ಪಂಗಡಗಳ ಬಾಲಕರಿಗೂ ಹಿತಕರವಾಗಿರತಕ್ಕದ್ದು. (೪) ನೀತಿಯನ್ನು ಬೋಧಿಸುವಲ್ಲಿ ಆಯಾ ವಿಷಯಕ್ಕೆ ತಕ್ಕಂಥಾ ಸ್ವಾರಸ್ಯವಾದ ಉಪಕಥೆಗಳು ಇರಬೇಕು. (೫) ಬರವಣಿಗೆಯೆಲ್ಲಾ ಕಾಗದದ ಒಂದೇ ಪಕ್ಕದಲ್ಲಿ ಇರಬೇಕು.

ಉಪಾಧ್ಯಾಯರು ಮೇಲ್ಕಂಡ ಕ್ರಮಗಳನ್ನು ಅನುಸರಿಸಿ ಬರೆಯಬೇಕಾಗಿರುವ ನೀತಿ ವಿಷಯಗಳೂ, ಅವು ನಮಗೆ ತಲುಪಬೇಕಾಗಿರುವ ತಾರೀಖುಗಳೂ ಯಾವುವೆಂದರೆ :—

ವಿಷಯ.	ಕಳುಹಿಸಬೇಕಾದ ದಿನ.
ಸತ್ಯವನ್ನು ಹೇಳುವುದು	ನವೆಂಬರ್ ತಾ. ೨೦
ಪ್ರಾಮಾಣಿಕತೆಯುಳ್ಳ ಧೈರ್ಯವು (ಅಂದರೆ, ಎದುರು ವಾದಿಸುವವರಿದ್ದರೂ ತಾವು ಸರಿಯೆಂದು ತಿಳಿದದ್ದನ್ನೇ ಮಾಡುವುದು.)	ಡಿಸೆಂಬರ್ ತಾ. ೭.
ಅಸ್ವಾರ್ಥತೆಯು (ಅಂದರೆ, ಸ್ವಪ್ರಯೋಜನವನ್ನಲ್ಲ ; ಪರಹಿತವನ್ನೇ ಬಯಸಿ ಮಾಡುವುದು)	ಡಿಸೆಂಬರ್ ತಾ. ೧೪.

ಮೇಲ್ಕಂಡ ವಿಷಯಗಳನ್ನು ಕುರಿತು ಉಪಾಧ್ಯಾಯರಿಂದಲೇ ಬರೆಯಲ್ಪಟ್ಟು, ಆಯಾ ತಾರೀಖುಗಳೊಳಗಾಗಿ ನಮಗೆ ತಲುಪುವ ವಾಕ್ಪ್ರವಚನಗಳನ್ನು ನಾವು ಪರಿಶೋಧನೆಮಾಡಿ, ಸರ್ವೋತ್ತಮವಾಗಿರತಕ್ಕವುಗಳಿಗೆ ಐದು ರೂಪಾಯಿ ಬಹುಮಾನವನ್ನು ಕೊಟ್ಟು, ಅವುಗಳನ್ನು ಈ ಪತ್ರಿಕೆಯಲ್ಲಿ ಡಿಸೆಂಬರ್ ತಾ. ೧೦, ಡಿಸೆಂಬರ್ ತಾ. ೨೪ ಮತ್ತು ಜನವರಿ ತಾ. ೧ ರಲ್ಲಿ ಪ್ರಕಟಮಾಡುತ್ತೇವೆ.

ಒಬ್ಬ ಮಂತ್ರಿಯ ಪ್ರಾರ್ಥನೆ.

ಚೀನಾ ಸರ್ಕಾರದವರು ತಮ್ಮ ದೇಶದ ಸುಂಕದ ಬಾಬತ್ತನ್ನೆಲ್ಲಾ ನೋಡಿಕೊಳ್ಳುವುದಕ್ಕೆ ಸರ್ ರಾಬರ್ಟ್ ಹಾರ್ಟ್ ಎಂಬ ಪ್ರಸಿದ್ಧರಾದ ಇಂಗ್ಲೀಷ್ ಅಧಿಕಾರಿಯನ್ನು ನಿಯಮಿಸಿರುತ್ತಾರೆ. ಈ ಪ್ರಸಿದ್ಧ ಪುರುಷನು ಚೀನಾ ದೇಶದಲ್ಲಿ ಸುಮಾರು ನಾಲ್ವತ್ತು ವರುಷಗಳಿಂದ ಕೆಲಸಮಾಡುತ್ತಿರುತ್ತಾರೆ. ಚೀನಾ ದೇಶವು ಬಹು ದೊಡ್ಡದು. ಅದರಲ್ಲಿ ನಡೆಯುವ ವ್ಯಾಪಾರವು ಪುರಾತನವಾದದು. ಅದರ ತೀರಪಟ್ಟಣಗಳಿಗೆಲ್ಲಾ ಲೋಕದ ನಾನಾ ದೇಶಗಳವರು ಬಂದು ವ್ಯಾಪಾರಮಾಡುವರು. ಚೀನಾ ದೇಶದಿಂದ ಹೊರಗೆ ಸಾಗಿಸಲ್ಪಡುವ ಸರಕುಗಳ ಮೇಲೂ ಯೂರೋಪ್ ಮತ್ತು ಅಮೆರಿಕಾ ಖಂಡಗಳಿಂದ ಆ ದೇಶಕ್ಕೆ ರಫ್ತಾಗಿ ಬರುವ ಸರಕುಗಳ ಮೇಲೂ ಅಪಾರವಾದ ಸುಂಕವನ್ನು ವಸೂಲ್ಮಾಡುತ್ತಾರೆ. ಅದ್ದರಿಂದ ಸುಂಕ ವಸೂಲ್ಮಾಡುವ ಕೆಲಸವು ಬಹಳ ಜವಾಬ್ದಾರಿಕೆಯಾದದ್ದು. ಈ ಬಾಬತ್ತನ್ನು ಸರ್ ರಾಬರ್ಟ್ ಹಾರ್ಟ್ ಎಂಬವರು ನೋಡಿಕೊಳ್ಳುವರು. ಚೀನಾ ದೇಶದಲ್ಲಿ ಪುರಾತನ ಕಾಲದಿಂದ ಈಗಿನ ವರೆಗೂ ಅಧಿಕಾರಿಗಳು ಲಂಚಕೋರತನದಲ್ಲಿ ಮುಳುಗಿರುತ್ತಾರೆ. ಆಯಾ ಪ್ರಾಂತ್ಯಗಳ ಮುಖ್ಯಾಧಿಕಾರಿಗಳಾದ ಮಂಡರೀನರೆಂಬುವರು ತಮ್ಮ ಹತ್ತಿರಕ್ಕೆ ಬರತಕ್ಕ ಕೇಸುಗಳಲ್ಲಿ ಲಂಚವನ್ನು ತಿಂದು ನ್ಯಾಯವನ್ನು ಸರಿಯಾಗಿ ನಡಿಸುವುದಿಲ್ಲ. ತಾವು ವಸೂಲ್ಮಾಡುವ ಕಂದಾಯದಲ್ಲಿ ಹೆಚ್ಚು ಭಾಗದ ಹಣವನ್ನು ತಮ್ಮ ಸ್ವಂತ ಪ್ರಯೋಜನಕ್ಕೆ ಉಪಯೋಗಿಸಿಕೊಳ್ಳುವುದು ಅವರಲ್ಲಿ ವಾಡಿಕೆಯಾಗಿರುತ್ತದೆ. ಸೈನ್ಯದ ಮುಖ್ಯಾಧಿಕಾರಿಗಳು ಇಲ್ಲದ ಸಿಪಾಯಿಗಳ ಹೆಸರುಗಳನ್ನು ಸರಕಾರಕ್ಕೆ ತೋರಿಸಿ ಅವರ ಸಂಬಳಗಳನ್ನು ನುಂಗಿಬಿಡುತ್ತಿರುವರು. ಆದರೆ ಸುಂಕದ ಬಾಬಿನಲ್ಲಿ ಲಂಚಕೋರತನವು ನಡಿಯುತ್ತಾ ಇಲ್ಲವೆಂದು ಚೀನಾ ದೇಶದವರು ಮೊದಲುಗೊಂಡು ಎಲ್ಲರೂ ಒಪ್ಪಿಕೊಳ್ಳುವರು. ಇಂಥಾ ಸತ್ಯತೆಗೆ ಸರ್ ರಾಬರ್ಟ್ ಹಾರ್ಟರೇ ಕಾರಣಭೂತರಾಗಿರುತ್ತಾರೆ. ಇವರು ಪರದೇಶಸ್ಥರಾಗಿದ್ದರೂ ಇವರನ್ನು ಚೀನೀಯರು ಬಹಳ ಮರ್ಯಾದೆಯಿಂದ ಕಾಣುವರು. ಇವರು ತಮ್ಮ ನಡೆನುಡಿಗಳಲ್ಲಿ ಸತ್ಯವಂತರಾಗಿರುವುದು ಮಾತ್ರವಲ್ಲದೆ ಸೇರುಗಾರ್ಥ ದೊರೆಯೂ ಉಪಕಾರಿಗಳೂ ಆಗಿರುತ್ತಾರೆ. ಇವರು ತಮ್ಮ ಕೈಕೆಳಗಿರತಕ್ಕ ಉದ್ಯೋಗಸ್ಥರನ್ನು ತಮ್ಮಂತೆಯೇ ಇರುವಂತೆ ತರಪೇತುಮಾಡಿರುತ್ತಾರೆ. ಮೂರು ವಾರಗಳ ಹಿಂದೆ ಈ ದೊಡ್ಡ ಮನುಷ್ಯರು ವಿಲಾಯಿತಿಯಲ್ಲಿ ತಾವು ಬಾಲ್ಯದಲ್ಲಿ ವ್ಯಾಸಂಗಮಾಡಿದ ಪಾಠಶಾಲೆಗೆ ಹೋಗಿ ಅಲ್ಲಿನ ವಿದ್ಯಾರ್ಥಿಗಳಿಗೆ ಒಂದು ಉಪನ್ಯಾಸವನ್ನು ಮಾಡಿದರು. ಆಗ ಅವರು ತಿಳಿಸಿದ್ದೇನಂದರೆ—"ಬಾಲಕರೇ ನನ್ನ ಜೀವಮಾನದಲ್ಲಿ ಪ್ರತಿ ಪ್ರಾತಃಕಾಲದಲ್ಲಿಯೂ ನಾನು ಅರ್ಧ ಘಂಟೆಯ ಸಮಯವನ್ನು ಧ್ಯಾನಪ್ರಾರ್ಥನೆಗೋಸ್ಕರ ವಿನಿಯೋಗಿಸುತ್ತೇನೆ. ನಾನು ಪ್ರತಿ ದಿವಸವೂ ಏನುಮಾಡಬೇಕೋ ಅದನ್ನು ಭಗವಂತನು ತೋರಿಸಿಕೊಡುವಂತೆ ಆತನನ್ನು ಬೇಡಿಕೊಳ್ಳುತ್ತೇನೆ. ಆತನ ಚಿತ್ತಕ್ಕೂ ಕಟ್ಟಳೆಗಳಿಗೂ ವಿರೋಧವಾಗಿ ನಾನು ಏನಾದರೂ ಮಾಡಿದರೆ ನನ್ನ ಕೆಲಸವೆಲ್ಲಾ ನಷ್ಟವಾಗಲಿ ಎಂದು ಪ್ರಾರ್ಥಿಸುತ್ತೇನೆ" ಎಂಬುದೇ. ವಾಚಕರೇ, ಈ ಪ್ರಸಿದ್ಧ ಪುರುಷನ ಕೀರ್ತಿ ಭಾಗ್ಯಕ್ಕೆ ಅವನ ಪ್ರಾರ್ಥನೆಯೇ ಕಾರಣಭೂತವಾಗಿರುತ್ತದೆ. ಯಾವ ಅಧಿಕಾರಿಯು ದೇವರು ಪವಿತ್ರನಾಗಿರುತ್ತಾನೆಂದು ಪೂರ್ಣವಾಗಿ ತಿಳಿದು ಆತನಿಗೆ—ಪ್ರಾರ್ಥನೆಯ ಮೂಲಕ ತನ್ನನ್ನೂ ಪವಿತ್ರನನ್ನಾಗಿಯೂ ಯೋಗ್ಯನನ್ನಾಗಿಯೂ ಮಾಡಬೇಕೆಂದು ಬಿಜ್ಞಾಪಿಸಿಕೊಳ್ಳುತ್ತಾನೆಯೋ ಅಂಥಾ ಅಧಿಕಾರಿಯು ನಿಜವಾಗಿಯೂ ಸತ್ಯವಂತನಾಗಿರುವನು. ಮತ್ತು ಅವನ ಕೆಲಸಗಳೆಲ್ಲಾ ಜಯವಾಗುವುದು.

ಒಳದೇಶದ ವೃತ್ತಾಂತಗಳು.

ಹಿಂದುಸ್ಥಾನದ ವೈಸ್ರಾಯಿಯವರಾದ ಲಾರ್ಡ್ ಕಿಚ್ನರ್ ಎಂಬವರು ಡಿಸೆಂಬರ್ ತಾ. ೧೩ ರಲ್ಲಿ ಬೆಂಗಳೂರಿಗೆ ದಯಮಾಡಿ ಮೂರು ದಿನ ಇದ್ದು, ಮದರಾಸಿಗೆ ಪ್ರಯಾಣಮಾಡುವರು.

ಕಡೂರು ಪೋಲೀಸಿನವರು ೨೪ ಮಂದಿ ಉಳ್ಳ ಒಂದು ಗುಂಪಿನ ಕಳ್ಳರನ್ನು ಹಿಡಿದಿರುತ್ತಾರೆ. ಅವರ ಬಳಿ ೮—೧೦ ಸಾವಿರ ರೂಪಾಯಿನ ಕಳುವಿನ ಸಾಮಾನುಗಳು ದೊರಕಿರುತ್ತವೆ.

ಶ್ರೀಮನ್ ಮಹಾರಾಜರವರು ಕಳೆದ ಭಾನುವಾರ ತಲಕಾಡಿನ ಕಡೆ ದಯಮಾಡಬೇಕಾಗಿದ್ದದ್ದನ್ನು ನಿಲ್ಲಿಸಿ, ರಾಜಧಾನಿಯಲ್ಲೇ ಇರುತ್ತಾರೆ. ಇಷ್ಟರಲ್ಲೇ ಅವರು ಬೆಂಗಳೂರಿಗೆ ಚಿತ್ತೈಸುವರೆಂದು ಕೇಳುತ್ತೇವೆ.

ಪಾಲಘಾಟ ಕಡೆಯಿಂದ ಸಿಟೀಲು, ತಬಲಾ ವಿದ್ಯೆಗಳಲ್ಲಿ ಗಟ್ಟಿಗರಾದ ಭಾಗವತರೆಂಬ ಅಣ್ಣತಮ್ಮಂದಿರಿಬ್ಬರು ರಾಜಧಾನಿಗೆ ಬಂದು, ಕೆಲವು ದೊಡ್ಡ ಮನುಷ್ಯರ ಮನೆಗಳಲ್ಲಿ ಅವರ ವಿನಿಕೆ ನಡಿಯುತ್ತಿದೆ.

ಮೈಸೂರು ಮಹಾರಾಣೀಯವರ ಕಾಲೇಜಿನಲ್ಲಿ ಪ್ರಥಮ ತರಗತಿಗಳ ಬಾಲಕಿಯರಿಗೆ ಕಿಂಡರ್‌ಗಾರ್ಟನ್ ವಿದ್ಯೆ ಹೇಳಿಕೊಡುತ್ತಿದ್ದ ಮಿಸ್ ಹಾರ್ಟ್ ಎಂಬಾಕೆಯು ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೋದರು. ಆ ಕೆಲಸಕ್ಕೆ ಸರ್ಕಾರದವರು ಇನ್ನೊಬ್ಬರನ್ನು ತರಸುತ್ತಾರೆಂದು ಕೇಳುತ್ತೇವೆ.

ಮೊದಲನೇ ಮಹಾರಾಜ ಕುಮಾರಿಯವರಿಗೆ ಕಳೆದ ಶನಿವಾರ ಬೆಳಗ್ಗೆ ಸುಮುಹೂರ್ತವಾಗಿ, ಹೆಣ್ಣು ಕೂಸು ಜನಿಸಿತು. ಆ ದಿನ ಸಂತೋಷಸೂಚಕವಾದ ೨೧ ತೋಪುಗಳು ಹಾರಿಸಲ್ಪಟ್ಟವು. ಮೋತೀಖಾನೆಯಿಂದ ಸಕ್ಕರೆಯನ್ನು ಗಾಡಿಗಳ ಮೇಲೆ ಹೇರಿಸಿ ಪ್ರಜೆಗಳಿಗೆ ಹಂಚಿಸಿದರು. ನಾಳೆ ಅರಮನೆಯಲ್ಲಿ ಮಹೋತ್ಸವ ನಡಿಯುವುದಾಗಿದೆ.

ರಾಜಧಾನಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸಿರುವುದು ನೇತ್ರಾನಂದಕರವಾಗಿರುತ್ತದೆ. ಇಂಥಾ ಅನುಕೂಲವು ಅನೇಕ ಮಹಾ ಪಟ್ಟಣಗಳಲ್ಲೂ ಇರುವುದಿಲ್ಲ. ಗವರ್ನ್‌ಮೆಂಟಿನವರು ಇದರಲ್ಲಿ ಸ್ವಲ್ಪ ಗಮನವಿಟ್ಟು ಒಂದು ಏರ್ಪಾಟನ್ನು ಮಾಡಿಕೊಟ್ಟರೆ ತುಂಬಾ ಉಪಕಾರವಾದೀತು. ಅನೇಕ ಕಡೆಗಳಲ್ಲಿ ದೀಪಗಳು ಸಾಲವು. ಮತ್ತು ಪ್ರತಿ ಕಂಭಕ್ಕೂ ಒಂದೊಂದು ದೀಪವನ್ನು ಇಡದೆ, ಒಂದು ಬಿಟ್ಟು ಒಂದು ಕಂಬಕ್ಕೆ ಇಡಿಸಿರುವುದರಿಂದ ಕತ್ತಲಲ್ಲಿ ಆ ಕಪ್ಪು ಕಂಬವು ದೊಡ್ಡವರಿಗೂ ಚಿಕ್ಕವರಿಗೂ ಬಡಿದುಕೊಂಡು ಅಪಾಯ ಸಂಭವಿಸುತ್ತಿದೆ. ಉಪಕಾರಣ ಅಂಥಾ ದೀಪವಿಲ್ಲದ ಕಂಬಗಳಿಗೆ ೧೨-೧೩ ಅಡಿಗಳ ವರೆಗೆ ಬಿಳಿಯ ಬಣ್ಣವನ್ನು ಬಳಿಸಬೇಕು ; ಇಲ್ಲದೇ ಪ್ರತಿ ಕಂಬಕ್ಕೂ ದೀಪವನ್ನಿಡಿಸಬೇಕು. ಸರ್ಕಾರದವರು ಈ ವಿಷಯವನ್ನು ಸರಿಪಡಿಸುವರೆಂದು ಕೋರುತ್ತೇವೆ

ಇಂಡಿಯಾ ದೇಶದ ವೃತ್ತಾಂತಗಳು.

ಪೋಸ್ಟ್ ಇಲಾಖಾ ಸಬ್ ಆಫೀಸುಗಳಲ್ಲಿ ಗುಮಾಸ್ತೆ ಕೆಲಸಮಾಡುವ ನೌಕರರಿಗೆ ಬಡ್ತಿ ಕೊಡುವ ಉದ್ದೇಶ ಪ್ರತಿ ವರುಷವೂ ಸ್ಯಾಂಕ್ಷನ್ ಮಾಡುತ್ತಿರುವ ಹಣದ ಜೊತೆಗೆ ಈ ವರುಷ ೩೬,೦೦೦ ರೂಪಾಯಿ ಹೆಚ್ಚು ಕೊಡುತ್ತಾರೆ.

ಉತ್ತರ ದೇಶದಲ್ಲೆಲ್ಲಾ ಕ್ಷಾಮವು ನಿವಾರಣೆಯಾಯಿತೆಂದು ಹೇಳಬಹುದಾಗಿದೆ. ಬಂಗಾಳಾ ಆಧಿಪತ್ಯದಲ್ಲಿ ಮಾತ್ರ ಕೆಲವು ಕಡೆ ಇನ್ನೂ ರಿಲೀಫ್ ಕೆಲಸಗಳು ನಡಿಯುವುವು. ಎಲ್ಲಾ ಕಡೆಗಳಲ್ಲೂ ದಿನಸಿ ಧಾರಣೆಗಳು ಬಹಳ ಹೆಚ್ಚಾಗಿಯೇ ಇರುತ್ತವೆ. ಕೆಲವು ಕಡೆಗಳಲ್ಲಿ ಮಲೇರಿಯಾ ಜ್ವರವು ಪ್ರಬಲವಾಗಿದೆ.

ನಮ್ಮ ವೈಸ್‌ರಾಯಿ ಲಾರ್ಡ್ ಮಿಂಟೋರವರು ತಮ್ಮ ಪತ್ನೀಯವರ ದೇಹಸ್ಥಿತಿಗೆ ಹಿಂದುಸ್ಥಾನದ ಹವಾ ಅನುಕೂಲವಾಗಿಲ್ಲವೆಂದು ಹೇಳಿ, ಈ ವರುಷದ ಕೊನೆಯಲ್ಲಿ ರಾಜೀನಾಮೆ ಕೊಟ್ಟು ತಿರುಗಿ ವಾಪಸು ಹೋಗುವರೆಂಬುದಾಗಿ ವಿಲಾಯಿತಿಯಲ್ಲಿ ವರ್ತಮಾನವಿದೆ. ಇದು ನಿಜವಲ್ಲವೆಂದು ಉತ್ತರ ದೇಶದ ಪತ್ರಿಕೆಗಳು ಹೇಳುವವು.

ಕಳೆದ ವಾರ ನಡೆದ ದೀಪಾವಳಿ ಹಬ್ಬದ ದಿವಸ ಮೈಸೂರು ಉತ್ಸವದ ಜ್ಞಾಪಕಾರ್ಥವಾಗಿ ಪಿಠಾಪುರ ಪಟ್ಟಣದ ಮಹಾರಾಜ ಗಜಪತಿರಾವ್ ಯವರು ತಮ್ಮ ಉದಾರ ಸ್ವಭಾವವನ್ನು ಮತ್ತೊಂದು ಸಲ ಪ್ರಕಾಶಪಡಿಸಿ, ಜಮೀನ್‌ದಾರರಿಂದ ತಮಗೆ ಸಲ್ಲಬೇಕಾಗಿದ್ದ ಕಂದಾಯದ ಬಾಕಿಯಲ್ಲಿ ೫೦,೦೦೦ ರೂಪಾಯನ್ನು ರಿಮಿಷನ್ ಮಾಡಿರುತ್ತಾರೆ.

ಕಳೆದ ಗುರುವಾರ ರಾತ್ರಿ ಸಿಂಧ ಪಟ್ಟಣದಲ್ಲಿ ಟೌನ್ ಹಾಲ್ ಬಂಗಲೆಯ ಬಳಿ ಬೆಂಕಿ ಬಿದ್ದು ಲಕ್ಷ್ಮಣದಾಸ್ ಎಂಬ ಭಾರೀ ವರ್ತಕನಿಗೆ ಸೇರಿದ ಸುಮಾರು ೩೦ ಮನೆಗಳು ಸಾಮಾನುಸಹಿತ ಸುಟ್ಟುಹೋದವು. ಆತನಿಗೆ ಒಂದು ಲಕ್ಷ ರೂಪಾಯಿ ವರೆಗೆ ನಷ್ಟವಾಯಿತು. ಕೆಲವು ಬಡಬಗ್ಗರ ಮನೆಗಳೂ ಸುಟ್ಟುಹೋಗಿ ಕಷ್ಟಪಡುತ್ತಿದ್ದಾರೆ.

ಅನಂತಶಯನ (ತಿರುವಾಂಕೂರು) ದಲ್ಲಿ ಮೊನ್ನೆ ಸೋಮವಾರ ಜನರ ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಯಿತು. ಸರ್ಕಾರಿ ಅಧಿಕಾರಿಗಳೂ ರೆಸಿಡೆಂಟರೂ ಹಾಜರಾಗಿದ್ದರು. ದಿವಾನ್ ಬಹದ್ದೂರ್ ಪಿ. ರಾಜಗೋಪಾಲಾಚಾರ್ಯರು ಪ್ರತಿನಿಧಿಗಳಿಗೆ ಅದ್ರೆಸ್ಸನ್ನು ಓದಿದರು. ಕೆಲವು ದೇಶೀಯ ಸ್ತ್ರೀಯರೂ ದೊಡ್ಡ ಮನುಷ್ಯರೂ ಸಭೆಯಲ್ಲಿ ಹಾಜರಾಗಿದ್ದರು.

ಚಕ್ರವರ್ತಿಯವರು ಕಳೆದ ೯ ನೇ ತಾ ದಯಪಾಲಿಸಿದ ಪ್ರಸಿದ್ಧ ಪತ್ರಿಕೆಯನ್ನನುಸರಿಸಿ ಇಂಡಿಯಾ ಗವರ್ನ್‌ಮೆಂಟಿನವರು ಹಿಂದುಸ್ಥಾನದ ಬಂದೀಖಾನೆಗಳಲ್ಲಿರುವಂಥಾ ಅಪರಾಧಿಗಳಿಗೆ ಅವರವರ ಶಿಕ್ಷೆಯ ಮುದ್ದತಿನಲ್ಲಿ ಸ್ವಲ್ಪ ಮಟ್ಟಿಗೆ ಮಾಫ್ ಮಾಡಿರುತ್ತಾರೆ. ಇದರಂತೆ ಮಿ. ಬಾಲಗಂಗಾಧರ ತಿಲಕರವರಿಗೆ ಆರು ವರುಷದ ಸಜೆಯಲ್ಲಿ ಆರು ತಿಂಗಳನ್ನು ಮಾಫ್ ಮಾಡಲ್ಪಡುವುವು.

ಹಿಂದುಸ್ಥಾನದಲ್ಲಿ ಹಿಂದಿನ ವಾರ ೨೧,೧೪೦ ಜನರು ಪ್ಲೇಗ್ ಉಪದ್ರವದಲ್ಲಿ ಕಾಲವಾದರು. ಬೊಂಬಾಯಿ ಆಧಿಪತ್ಯ ೧,೧೪೩, ಪಂಜಾಬ್ ೨೫೬, ಮಧ್ಯ ಪ್ರಾಂತ್ಯಗಳು ಮತ್ತು ಬೀರಾರ್ ೨೫೬, ಮೈಸೂರು ಸಂಸ್ಥಾನ ೧೮೬, ಮದರಾಸ್ ಆಧಿಪತ್ಯ ೪೧, ಬಂಗಾಳಾ ೫೩, ಸಂಯುಕ್ತ ಆಧಿಪತ್ಯಗಳು ೯, ಬರ್ಮಾ ೬೭, ಹೈದರಾಬಾದ್ ಸಂಸ್ಥಾನ ೩೬ ಮಧ್ಯ ಇಂಡಿಯಾ ೭೩, ರಾಜಪುಟಾನ ೨೫.

ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ಶಾಂತಿನಾರಾಯಣನೆಂಬ ಎಡಿಟರು "ಸ್ವಾರಾಜ್ಯ" ವೆಂಬ ತನ್ನ ಪತ್ರಿಕೆಯಲ್ಲಿ ರಾಜದ್ರೋಹಕರವಾದ ವಾರ್ತೆಗಳನ್ನು ಬರೆದದ್ದರಿಂದ ಆತನಿಗೆ ಸಜಾ ಶಿಕ್ಷೆಯಾಯಿತು. ಈಚೆಗೆ ಬಾಬು ರಾಮಹರಿ ಎಂಬಾತನು ಆ ಪತ್ರಿಕೆಗೆ ಎಡಿಟರಾಗಿ ನಡಿಸುತ್ತಾ ಬಂದು, ರಾಜದ್ರೋಹಕರವಾದ ವಾರ್ತೆಯನ್ನು ಮತ್ತೆ ಪ್ರಕಟಿಸಿದ್ದರಿಂದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆತನನ್ನು ದಸ್ತಗಿರಿ ಮಾಡಬೇಕೆಂದು ವಾರಂಟು ಕೊಟ್ಟರು.

ಪ್ರೊಫೆಸರ್ ರಾಮಮೂರ್ತಿನಾಯುಡ್ಡು ಎಂಬ ಹಿಂದುಸ್ಥಾನದ ಸ್ಯಾಂಡೋ ಜಟ್ಟಿಯು ಕಳೆದ ವಾರ ಕಾನ್‌ಪುರದಲ್ಲಿ ಸೇರಿದ್ದ ವಿದ್ಯಾವಂತರ ಮಹಾ ಸಭೆಯ ಎದುರಿಗೆ ಕಬ್ಬಿಣದ ಸಂಪಳಿಯನ್ನು ಐದನೇ ಸಲ ತುಂಡುಮಾಡಿದನು. ಆ ಸರಪಣಿಯು ಒಂದು ಅಂಗುಲದಲ್ಲಿ ಎಂಟನೇ ಮೂರು ಭಾಗದಷ್ಟು ದಪ್ಪನಾಗಿತ್ತು. ಅದಕ್ಕಾಗಿ ಮೆ|| ಎ. ಎಂ. ಬಕ್ಷಿ ಎಂಬಾತನು ಬಾಜಿ ಕಟ್ಟಿದ್ದ ೧,೨೦೦ ರೂಪಾಯನ್ನು ಆ ಜಟ್ಟಿಗೆ ಸಭಿಕರ ಸಮಕ್ಷಮ ದಾನವಾಡಿದನು.

ನಾಗಪುರದಲ್ಲಿ ಪ್ರದರ್ಶನವು ಈ ದಿನ ಪ್ರಾರಂಭವಾಗುವುದು. ಅದಕ್ಕಾಗಿ ಬಹಳ ವಿಶೇಷವಾದ ಏರ್ಪಾಡುಗಳನ್ನು ಮಾಡಿದ್ದಾರೆ. ಇಂಥಾ ಪ್ರದರ್ಶನವು ಹಿಂದೆ ನಡೆಯಲಿಲ್ಲವೆನ್ನುವಷ್ಟು ಅಚ್ಚುಕಟ್ಟಾಗಿಯೂ ವಿಸ್ತಾರವಾಗಿಯೂ ತೃಪ್ತಿಕರವಾಗಿಯೂ ಮಾಡಿದ್ದಾರೆ. ಪ್ರತಿ ಬಾಬಿನಲ್ಲೂ ಪ್ರದರ್ಶನವಸ್ತುಗಳು ಹೇರಳವಾಗಿರುವವು. ನೋಟಕರಿಗೆ ಆನಂದಕರವಾದ ಆಟಪಾಟ ವಿನೋದಗಳನ್ನು ಕಲ್ಪಿಸಿರುವರು. ವ್ಯವಸಾಯ ವಿಷಯವಾದ ಪ್ರದರ್ಶನ ಭಾಗವು ಬಹು ವಿಶೇಷವಾಗಿರುತ್ತದೆ. ಭೋಜನ, ತಿಂಡಿಪದಾರ್ಥಾದಿಗಳಿಗೂ ಸುಖವಸತಿಗಳನ್ನು ಮಾಡಿಸಿದ್ದಾರೆ.

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಮಿಡ್ನಪುರದಲ್ಲಿ ರಾಜಾ ನರೇಂದ್ರಲಾಲಖಾನನವರ ಮೇಲೂ ಇನ್ನೂ ೨೫ ಜನರ ಮೇಲೂ ಪೋಲೀಸಿನವರು ಹಾಕಿದ ಮೊಕದ್ದಮೆಯನ್ನು ತಂದು ವಿಚಾರಣೆ ನಡಿಯುತ್ತಿದೆ. ಈ ಮೊಕದ್ದಮೆಯಲ್ಲಿ ಅಪ್ರೂವರಾಗಿದ್ದ ರಾಕಾಚಂದ್ರಲಾಸಾ ಎಂಬವನು ಮೊದಲು ಪೋಲೀಸಿನವರಿಗೆ ಹೇಳಿ ಬರೆಸಿದ್ದ ಸಂಗತಿಯಾವುದೂ ನಿಜವಲ್ಲವೆಂತಲೂ, ಪೋಲೀಸಿನವರು ಆತನನ್ನು ಹೆದರಿಸಿ ಹಿಂಸೆ ಮಾಡಿದ್ದರಿಂದ ಅವರು ಹೇಳಿದಂತೆ ವಾಙ್ಮೂಲಗಳಿಗೆ ರುಜು ಹಾಕಿದೆನೆಂತಲೂ ಕೋರ್ಟಿನಲ್ಲಿ ಹೇಳಿಬಿಟ್ಟನು. ಈ ಮೊಕದ್ದಮೆ ಮುಂದೆ ಯಾವರೀತಿ ನಡಿಯುವುದೋ ಎಂದು ಅನೇಕರು ಕುತೂಹಲದಿಂದ ಎದುರುನೋಡುತ್ತಿದ್ದಾರೆ.

ಕಳೆದ ಶನಿವಾರ ಸಾಯಂಕಾಲ ಜಿತೇಂದ್ರನಾಥ ಚೌಧ್ರಿ ಎಂಬ ಸುಮಾರು ೨೫ ವರುಷದ ಪ್ರಾಯಸ್ಥನು ಬಂಗಾಳಾ ಲೆಫ್ಟಿನೆಂಟ್ ಗವರ್ನರ್ ಸರ್ ಆಂಡ್ರು ಫ್ರೇಸರ್ ಯವರನ್ನು ಗುಂಡಿನಿಂದ ಹೊಡೆದು ಕೊಲ್ಲಬೇಕೆಂದು ಪ್ರಯತ್ನಪಟ್ಟನು. ಹ್ಯಾಗೆಂದರೆ—ಕಲ್ಕತ್ತಾ ಪಟ್ಟಣದ ಓವರ್ಟನ್ ಹಾಲ್ನಲ್ಲಿ ಪ್ರೊಫೆಸರ್ ವಿಟ್ ಬರ್ಟನ್ ಎಂಬಾತನು ಆ ದಿನ ಸಾಯಂಕಾಲ ೬ ಗಂಟೆಗೆ ಉಪನ್ಯಾಸವಾಡಬೇಕಾಗಿತ್ತು. ಸರ್ ಆಂಡ್ರು ಫ್ರೇಸರ್ ಯವರು ಆ ಸಭೆಯ ಅಗ್ರಾಸನವನ್ನು ವಹಿಸುವುದಕ್ಕೆಂದು ಹೋದರು. ಅವರ ಕೂಡ ಬರ್ದ್ವಾನ್ ಮಹಾರಾಜರವರೂ, ಪಡಿಕಾಂಗ್ ಕ್ಯಾಪ್ಟನ್ ಕ್ಯಾಂಬೆಲ್ ಯವರೂ, ವೈ. ಎಂ. ಸಿ. ಎ. ಜನರಲ್ ಸೆಕ್ರೆಟರಿ ಮಿ. ಬಿ. ಆರ್. ಬಾರ್ಬರ್ ಯವರೂ ಇದ್ದು, ಉಪನ್ಯಾಸಕರು ಇನ್ನೂ ಬಾರದಿರಲಿಲ್ಲವಾದ್ದರಿಂದ ಸಭೆಯ ಪ್ಲಾಟ್ಫಾರಮಿನ ಮೇಲೆ ಸ್ವಲ್ಪ ಹೊತ್ತು ಕುಳಿತುಕೊಂಡಿರೋಣವೆಂದು ಅವರೆಲ್ಲಾ ಒಂದಾಗಿ ಒಳಕ್ಕೆ ಹೋಗುವುದರಲ್ಲಿದ್ದರು. ಅಷ್ಟರೊಳಗೇ ಮೇಲ್ಕಂಡ ಚೌಧರಿ ಎಂಬವನು ಅವರ ಬಳಿಗೆ ನುಗ್ಗಿಹೋಗಿ, ತನ್ನ ಬುಗ್ಗೆಯಲ್ಲಿ ಹಿಡಿದಿದ್ದ ಆರು ತೋಟಾಗಳು ತುಂಬಿದ್ದ ಪಿಸ್ತೂಲನ್ನು ಎಡೆಬಿಡದೆ ಗುರಿಕಟ್ಟಿ ಸುಮಾರು ಒಂದೇ ಅಡಿಯಷ್ಟು ಹತ್ತಿರದಿಂದ ಲೆಫ್ಟಿನೆಂಟ್ ಗವರ್ನರನನ್ನು ಹೊಡೆದನು. ಆದರೆ ಅದೆರಡೂ ಹುಸಿಂಗಾದವು. ಅಷ್ಟರೊಳಗೇ ಮಿ. ಬಾರ್ಬರ್ ಯವರು ಆ ಕೊಲೆಗೇಡಿಯ ಮೇಲೆ ಬಿದ್ದು ಬಲವಾಗಿ ಅವನನ್ನು ಹಿಡಿದು ಬಿಡದೆ ಅವನ ಕೂಡ ಒದ್ದಾಡುತ್ತಿರುವಲ್ಲಿ ಬರ್ದ್ವಾನ್ ಮಹಾರಾಜರು ಲೆಫ್ಟಿನೆಂಟ್ ಗವರ್ನರನ್ನು ಎಳದು ಬಾಗಿಲ ಆಚೆಗೆ ನೂಕಿ, ಗಂಡಾಂತರದಿಂದ ಪಾರುಮಾಡಿದರು. ಅಲ್ಲಿದ್ದ ಯೂರೋಪಿಯನ್ನರೇ ಮೊದಲಾದವರು ನುಗ್ಗಿ ಆ ಕೊಲೆಗಾರನನ್ನು ಅಮುಕಿ ಹಿಡಿದುಕೊಂಡು, ಪೋಲೀಸಿಗೆ ಒಪ್ಪಿಸಿದರು. ಅವನ ಕೂಡ ಬಡಿದಾಡಿ ಪಿಸ್ತೂಲನ್ನು ಕಿತ್ತುಕೊಂಡ ಸಂದರ್ಭದಲ್ಲಿ ಮಿ. ಬಾರ್ಬರ್ ಯವರಿಗೆ ತಲೆಯಲ್ಲೂ, ಕೈಮೇಲೂ ಗಾಯಗಳಾಗಿ ರಕ್ತ ಸುರಿಯಿತು. ಇದಾದ ಸ್ವಲ್ಪ ಹೊತ್ತಿನ ಮೇಲೆ ಲೆಫ್ಟಿನೆಂಟ್ ಗವರ್ನರವರು ಸಮಾಧಾನ ಚಿತ್ತದಿಂದ ಸಭೆಯ ಅಗ್ರಾಸನವನ್ನು ವಹಿಸಿ, ಆ ದಿನದ ಉಪನ್ಯಾಸವನ್ನು ಶಾಂತವಾಗಿ ನಿರ್ವಹಿಸಿದರು. ಉಪನ್ಯಾಸ ಮುಗಿದ ತರುವಾಯ ಪ್ರಜೆಗಳು ಗುಂಪುಕಟ್ಟಿ, ಲೆಫ್ಟಿನೆಂಟ್ ಗವರ್ನರವರು ಹೊರಟಾಗ ಬಹು ಸಂತೋಷದಿಂದ ಗಟ್ಟಿಯಾಗಿ ಜಯಘೋಷಮಾಡಿದರು.

ವಿದೇಶ ವರ್ತಮಾನಗಳು.

ರಷ್ಯಾ ಚಕ್ರಾಧಿಪತ್ಯದವರು ಯುದ್ಧದ ಹಡಗುಗಳನ್ನು ಕಟ್ಟಿಸುವುದಕ್ಕೆ ಸ್ಯಾಂಕ್ಷನ್ ಮಾಡಿದ ಹಣದಲ್ಲಿ ಕೆಲವು ಭಾಗವನ್ನು ನಾವೆಯ ಅಧಿಪತಿಗಳು ತಿಂದುಹಾಕಿಬಿಟ್ಟರೆಂದು ತಿಳಿದುಬಂದದ್ದರಿಂದ ಗವರ್ನ್‌ಮೆಂಟಿನವರು ಹದಿನಾರು ಮಂದಿ ಅಧಿಪತಿಗಳನ್ನು ಕೆಲಸದಿಂದ ವಜಾಮಾಡಿದರೆಂದು ತಂತಿ ವರ್ತಮಾನ ಬಂದಿದೆ.

ಅಮೇರಿಕ ಖಂಡಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳ ಪ್ರಜೆಗಳು ಮೆ|| ಟಾಫ್ಟ್ ಎಂಬವರನ್ನು ಪ್ರೆಸಿಡೆಂಟ್ ಸ್ಥಾನಕ್ಕೆ ಚುನಾಯಿಸಿಕೊಂಡರು. ಇವರು ಈಗ ಪ್ರೆಸಿಡೆಂಟರಾಗಿರುವ ಮೆ|| ರೂಸ್‌ವೆಲ್ಟ್ ರವರಂತೆಯೇ ರಾಜ್ಯಭಾರ ವಿಷಯದಲ್ಲಿ ಅಭಿಪ್ರಾಯಪಡುವವರಾಗಿ, ಅವರ ಮಾರ್ಗವನ್ನೇ ಅನುಸರಿಸತಕ್ಕವರಾಗಿದ್ದಾರೆ. ಇವರಿಗೆ ಆ ಪದವಿಯು ದೊರಕಿದ ಭಾಗದಲ್ಲಿ ಅಮೇರಿಕದ ಬಹು ಜನರಿಗೂ ಪರರಾಜ್ಯಗಳವರಿಗೂ ಸಂತೋಷ ಸಮಾಧಾನಗಳುಂಟಾಗಿರುವವು.

ಕಳೆದ ವಾರ ಜೊಹಾನಸ್ ಬರ್ಗಿನಲ್ಲಿ ಸುಮಾರು ೩,೦೦೦ ಜನ ಹಿಂದುಸ್ಥಾನದವರು ಸೇರಿ ಒಂದು ಸಭೆಯನ್ನು ನಡಿಸಿ, ಟ್ರಾನ್ಸ್‌ವಾಲ್ ಗವರ್ನ್‌ಮೆಂಟಿನವರು ಜಾರಿಯಲ್ಲಿ ತಂದಿರುವಂಥಾ ಹಿಂದುಸ್ಥಾನದ ಪ್ರಜೆಗಳಿಗೆ ವಿರೋಧವಾದಂಥಾ ರೆಜಿಸ್ಟ್ರೇಷನ್ ಕಾನೂನನ್ನು ರದ್ದುಮಾಡುವ ವರೆಗೆ ರಾಜ್ಯ ಹೊರಡದಿರುವುದನ್ನು ಬಿಡಕೂಡದೆಂತಲೂ, ಪ್ರತಿ ವರುಷವೂ ಹಿಂದುಸ್ಥಾನದ ನಿವಾಸಿಗಳು ಆರುನೂರಿಯನ್ನು ದಕ್ಷಿಣ ಆಫ್ರಿಕಕ್ಕೆ ಬರುವಂತೆ ಅನುಕೂಲಮಾಡಿಕೊಡಬೇಕೆಂತಲೂ ರೆಜಲ್ಯೂಷನ್ ಪ್ಯಾಸ್ ಮಾಡಿದರು.

ಜಪ್ಪೆಲಿನ್ ಎಂಬ ಕಾರೀಗಾರನು ತಯಾರುಮಾಡಿದ್ದ ವಿಮಾನದಲ್ಲಿ (ಅಂತರಿಕ್ಷದಲ್ಲಿ ಸಂಚರಿಸುವ ಹಡಗಿನಲ್ಲಿ) ಜರ್ಮನಿಯ ಯುವರಾಜರವರು ಕಳೆದ ಶನಿವಾರ ಕುಳಿತುಕೊಂಡು ಹೋಗಿ, ಡಾನ್‌ಎಸ್ಚಿಂಜನ್ ಎಂಬ ರೈಲ್ ಸ್ಟೇಷನ್ನಲ್ಲಿ ತಮ್ಮ ತಂದೆಯಾದ ಚಕ್ರವರ್ತಿಯವರು ಗಾಡಿಯಲ್ಲಿ ಹಿಂತಿರುಗಿ ಬರುತ್ತಿದ್ದದ್ದನ್ನು ಕಂಡು, ಅವರಿಗೆ ಒಂದು ಕಾಗದವನ್ನು ಬರೆದು, ವಿಮಾನದಿಂದ ರೈಲ್ ಗಾಡಿಗೆ ಅವರ ಸಮೀಪಕ್ಕೆ ಎಸೆದರು. ಈ ವಿಮಾನವು ಒಳ್ಳಾದ ಗಾಳಿ ಇದ್ದದ್ದರಿಂದ ಗಂಟೆಗೆ ೪೦ ಮೈಲಿಯಂತೆ ನೆಗೆದಿರುವುದು ತೃಪ್ತಿಕರವಾಗಿಯೂ ಅಂತರಿಕ್ಷದಲ್ಲಿ ಸಂಚಾರವಮಾಡಿಕೊಂಡು ಹೋಗಿ, ಚಕ್ರವರ್ತಿಯವರು ಇದ್ದ ರೈಲ್ ಸ್ಟೇಷನ್ ಮೇಲ್ಗಡೆ ಅನೇಕ ಸಲ ಸುತ್ತುತ್ತಿದ್ದು ತರುವಾಯ ಹಿಂತಿರುಗಿ ಫ್ರೆಡ್ರಿಕ್‌ಷಾಫನ್ ಪಟ್ಟಣಕ್ಕೆ ಹೋಯಿತು

ಮೈಸೂರು ಮಹಾರಾಣಿಯವರ ಕಾಲೇಜು.

ಬಹುಮಾನ ಸಭೆಯು.

ಕಳೆದ ಶುಕ್ರವಾರ ಸಾಯಂಕಾಲ ರಾಜಧಾನಿಯಲ್ಲಿರುವ ಮಹಾರಾಣಿಯವರ ಕಾಲೇಜಿನಲ್ಲಿ ತೇರ್ಗಡೆಹೊಂದಿದ ಬಾಲಕಿಯರಿಗೆ ಬಹುಮಾನಗಳನ್ನು ಕೊಡಿಸಿದರು. ಇದಕ್ಕಾಗಿ ಕಾಲೇಜಿನ ಸಭಾಮಂದಿರವನ್ನು ನೇತ್ರಾನಂದಕರವಾಗಿ ಅಲಂಕರಿಸಿದ್ದರು. ಸಾಯಂಕಾಲ ೫ ಗಂಟೆಗೆ ಮಹಾಮಾತೃಶ್ರೀಯವರೂ ಶ್ರೀಮನ್ಮಹಾರಾಣಿಯವರೂ ಕಾಲೇಜಿಗೆ ದಯಮಾಡಿದರು. ಕಾಲೇಜಿನ ಲೇಡಿ ಸೂಪರಿಂಟೆಂಡೆಂಟರಾದ ಸೌಭಾಗ್ಯವತಿ ಕೆ. ಡಿ. ರುಕ್ಮಿಣಮ್ಮ, ಬಿ. ಎ. ಯವರೂ ಉಪಾಧ್ಯಾಯಿನಿಯರೂ ಅವರನ್ನು ಎದುರ್ಗೊಂಡು, ಸಭಾಮಂದಿರದೊಳಕ್ಕೆ ಕರೆದುಕೊಂಡು ಹೋಗಿ, ಶ್ರೇಷ್ಠಾಸನದಲ್ಲಿ ಬಿಜಮಾಡಿಸಿದರು. ಮಹಾರಾಜಾ ಕಾಲೇಜಿನ ಪ್ರಿನ್ಸಿಪಲ್‌ರವರ ಪತ್ನೀರವರು ಹಾಜರಾಗಿದ್ದರು. ರಾಜಧಾನಿಯಲ್ಲಿರುವ ದೊಡ್ಡ ಮನುಷ್ಯರ ಮತ್ತು ಅಧಿಕಾರಿಗಳ ಮನೇ ಸ್ತ್ರೀಯರು ಸಭೆಗೆ ಕರೆಸಲ್ಪಟ್ಟು ಹಾಜರಾಗಿದ್ದರು. ಕಾಲೇಜಿನ ಬಾಲಕಿಯರು ನೇತ್ರಾನಂದಕರವಾಗಿ ಒಡವೆವಸ್ತ್ರಗಳನ್ನು ಹಾಕಿಕೊಂಡು ಸಾಲುಕಟ್ಟಿ ಎದುರುಪಾರ್ಶ್ವದಲ್ಲಿ ಕುಳಿತಿದ್ದರು.

ರಿಪೋರ್ಟು.

ಮಹಾಮಾತೃಶ್ರೀಯವರ ಅಪ್ಪಣೆಯನ್ನು ಪಡೆದು ಬಾಲಕಿಯರು ಎರಡು ತಂಡವಾಗಿ ಮುಂದುಬಂದು ಮನೋಹರವಾಗಿ ಅಭಿನಂದನ ಪದ್ಯಗಳನ್ನು ಹಾಡಿದರು. ಇಬ್ಬರು ಬಾಲಕಿಯರು ಪದಾರ್ಥಗಳನ್ನು ಪಯೋಗಿಸಿ ಸೈನ್ಸ್ (ಶಾಸ್ತ್ರ) ಎಕ್ಸ್‌ಪೆರಿಮೆಂಟುಗಳನ್ನು ಬಹಳ ತೃಪ್ತಿಕರವಾಗಿ ಮಾಡಿ ತೋರಿಸಿದರು. ತರುವಾಯ ಮೂರು ತಂಡಗಳ ಬಾಲಕಿಯರು ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳಲ್ಲಿ ಕವನಗಳನ್ನು ವಾಗ್ಝರಿಯಿಂದ ಕಂಠಪಾಠವಾಗಿ ಹೇಳಿ, ಸಭಿಕರನ್ನು ಸಂತೋಷಪಡಿಸಿದರು. ಕರ್ಣಾನಂದವೂ ಆಹ್ಲಾದಕರವೂ ಆದ ವೀಣಾಗಾನವಾಯಿತು. ಅನಂತರ ಲೇಡಿ ಸೂಪರಿಂಟೆಂಡೆಂಟಾದ ಸೌ॥ ರುಕ್ಮಿಣಮ್ಮನವರು ಮುಂದೆ ಬಂದು ಮಹಾಮಾತೃಶ್ರೀಯವರನ್ನೂ ಮಹಾರಾಣಿಯವರನ್ನೂ ಸಭಿಕರನ್ನೂ ಕುರಿತು ಕಾಲೇಜಿನ ವಾರ್ಷಿಕ ರಿಪೋರ್ಟನ್ನು ಓದಿ ತಿಳಿಸಿದರು. ಅದರ ಮುಖ್ಯಾಭಿಪ್ರಾಯಗಳೇನೆಂದರೆ—

ಘನವನ್ನೈದಿದ ಮಹಾರಾಣಿಯವರೇ,—ಈ ಸ್ಕೂಲಿನ ಚರಿತ್ರೆಯಲ್ಲಿ ಈ ದಿನವನ್ನು ಸುದಿನವೆಂದು ನಾನು ಎಣಿಸುತ್ತೇನೆ. ತಾವು ಕೃಪೆಯಿಟ್ಟು ದಯಮಾಡಿದ್ದರಿಂದ ಈ ಸ್ಕೂಲಿಗೂ, ಉಪಾಧ್ಯಾಯಿನಿಯರಿಗೂ, ವಿದ್ಯಾರ್ಥಿನಿಯರಿಗೂ ತುಂಬಾ ಗೌರವನ್ನುಂಟುಮಾಡಿದಿರಿ. ಈದಿನ ತಾವು ಸ್ವತಃ ಈ ಸ್ಕೂಲಿನ ಬಹುಮಾನಗಳನ್ನು ದಯಪಾಲಿಸುವಂತೆ ಒಪ್ಪಿಕೊಂಡಿರುವುದಕ್ಕಾಗಿ ನಾವುಗಳೆಲ್ಲಾ ವಿಶೇಷವಾಗಿ ಆನಂದಪಟ್ಟು ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಣೆಮಾಡುತ್ತೇವೆ.

ಈ ಸ್ಕೂಲು ಬಹುಕಾಲದಿಂದಲೂ ತುಂಬಾ ಪ್ರಯೋಜನಕರವಾದ ಕಾರ್ಯವನ್ನು ನಡಿಸುತ್ತಾ ಬಂದಿದೆ. ತಮ್ಮ ಪ್ರಖ್ಯಾತ ಸ್ವಾಮಿಯವರಾದ ಲೇಟ್ ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದೂರ್ ಯವರು ಇಪ್ಪತ್ತೈದು ವರುಷಗಳ ಕೆಳಗೆ ಈ ಸ್ಕೂಲನ್ನು ಪ್ರಾರಂಭಿಸಿದರು. ದಕ್ಷಿಣ ದೇಶದಲ್ಲೆಲ್ಲಾ ಸ್ತ್ರೀವಿದ್ಯಾಭ್ಯಾಸಕ್ಕೆ ಇದೇ ಮೊದಲನೆಯ ಪಾಠಶಾಲೆಯಾಗಿ ಪರಿಣಮಿಸಿದೆ ಎಂದು ಹೇಳಬಹುದಾಗಿದೆ. ಈ ಪಾಠಶಾಲೆಯು ಪ್ರಾರಂಭವಾದಲಾಗಾಯಿತು ಇದುವರೆಗೆ ೭,೧೫೬ ಬಾಲಕಿಯರು ವಿದ್ಯಾಭ್ಯಾಸಮಾಡಿ, ಬೇರೆಬೇರೆ ತರಗತಿಗಳ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುತ್ತಾರೆ. ಈ ಪೈಕಿ ಇಬ್ಬರು ಬಿ. ಎ. ಪರೀಕ್ಷೆ ಕೊಟ್ಟವರು, ಈ ವರುಷ ಇನ್ನೊಬ್ಬ ವಿದ್ಯಾರ್ಥಿನಿಯು ತೇರ್ಗಡೆ ಹೊಂದಬಹುದು; ೫ ಮಂದಿ ಎಫ್. ಎ ಪರೀಕ್ಷೆಯಲ್ಲೂ, ೧೦ ಮಂದಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲೂ, ೯ ಮಂದಿ ಕನ್ನಡ ಅಪ್ಪರ್ ಸೆಕೆಂಡರಿಯಲ್ಲೂ, ೩೫ ಮಂದಿ ಇಂಗ್ಲೀಷ್ ಲೋವರ್ ಸೆಕೆಂಡರಿಯಲ್ಲೂ, ೭೯ ಮಂದಿ ಕನ್ನಡ ಲೋವರ್ ಸೆಕೆಂಡರಿಯಲ್ಲೂ ಪ್ಯಾಸಾಗಿರುತ್ತಾರೆ. ಅವರಲ್ಲಿ ೫೩ ಮಂದಿ ಉಪಾಧ್ಯಾಯಿನಿಯರಾಗುವುದಕ್ಕೂ, ೩ ಮಂದಿ ಸೂಲಗಿತ್ತಿಯರಾಗುವುದಕ್ಕೂ, ೩ ಮಂದಿ ನರ್ಸುಗಳಾಗಿಯೂ ತರಬೇತಾಗಿರುತ್ತಾರೆ. ಈ ಪಾಠಶಾಲೆಯಲ್ಲಿ ಸುಮಾರು ೭೫೦ ಮಂದಿ ವಿಧವೆಯರು ವಿದ್ಯೆಕಲಿತಿರುವರು.

ಈ ಪಾಠಶಾಲೆಗೆ ದೂರದೇಶಗಳಿಂದಲೂ ಅಂದರೆ ಬೊಂಬಾಯಿ, ಪೂನಾ, ಮದರಾಸ್, ಕೊಲ್ಹಾಪುರ, ಮೊದಲಾದ ಕಡೆಗಳಿಂದಲೂ ವಿದ್ಯಾರ್ಥಿನಿಯರು ಬಂದು ಸೇರಿರುತ್ತಾರೆ.

ವಿದ್ಯಾರ್ಥಿನಿಯರ ಒಟ್ಟು ಸಂಖ್ಯೆಯಲ್ಲಿ ಪ್ರೈಮರಿ (ಬಾಲಪಾಠದ) ತರಗತಿಗಳಲ್ಲೇ ಬಹಳ ಮಂದಿ ಇರುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಪ್ರೈಮರಿ ವಿದ್ಯಾಭ್ಯಾಸವೇ ವಿಶೇಷವಾಗಿ ಹರಡಬೇಕಾಗಿರೋಣದರಿಂದ ಈ ಪಾಠಶಾಲೆಯು ಆ ವಿದ್ಯೆಯನ್ನು ಕಲಿಸುವುದರಲ್ಲೇ ತುಂಬಾ ಸಾಹಸಪಡುತ್ತಿದೆ. ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಸಮಸ್ತ ವರ್ಗದ ಪ್ರಜೆಗಳೂ ಬಾಲಕಿಯರಿಗೆ ಪ್ರಥಮ ವಿದ್ಯೆಯನ್ನು ಹೇರಳವಾಗಿ ಕಲಿಸುತ್ತಾ ಬರುವುದಕ್ಕೆ ಗಮನಕೊಟ್ಟಾರೆಂದು ನಿರೀಕ್ಷಿಸಬೇಕಾಗಿದೆ. ಬಾಲಕಿಯರನ್ನು ೧೨—೧೩ ವರುಷ ತುಂಬುವ ತನಕ ಸ್ಕೂಲಿಗೆ ಕಳುಹಿಸುವದೂ, ತರುವಾಯ ನಿಲ್ಲಿಸಿಬಿಡುವುದೂ ಮೊದಲು ಬಹಳ ರೂಢಿಯಲ್ಲಿತ್ತು. ಈಗೀಗ ಅದು ತಪ್ಪಿ, ಬಾಲಕಿಯರು ದೊಡ್ಡವರಾದರೂ ಹೈಸ್ಕೂಲ್ ಮತ್ತು ಕಾಲೇಜ್ ತರಗತಿಗಳಲ್ಲಿ ಕೂಡ ಓದುವಂತೆ ಅವರನ್ನು ಕಳುಹಿಸುವುದು ಹೆಚ್ಚುತ್ತಾ ಬಂದಿದೆ. ಇದಕ್ಕಾಗಿ ಬಹಳ ಹಣ ವ್ಯಯವಾಗುತ್ತಿರುವುದೇನೋ ನಿಜವೇ. ಹಣವೇ ಅಲ್ಲ. ಸ್ಕೂಲಿನ ಪುರೋಭಿವೃದ್ಧಿಯಲ್ಲಿ ಆಸಕ್ತರಾಗಿರತಕ್ಕವರು ಅದಕ್ಕಾಗಿ ತುಂಬಾ ಪ್ರಯಾಸವನ್ನೂ ಪಡಬೇಕಾಗಿದೆ. ಆದರೆ ಈ ರೀತಿ ದ್ರವ್ಯವನ್ನು ವಿನಿಯೋಗಿಸುವುದೂ ದೇಹಶ್ರಮಪಡುವುದೂ ಪ್ರೀತಿಪೂರ್ವಕವಾದ ಕಾರ್ಯವಾಗಿರುತ್ತದೆ. ಇದೆಲ್ಲಾ ಎಂದಿಗೂ ನಿಷ್ಫಲವಾಗಲಾರದು. ಜನರಲ್ಲಿ ಹೊಸ ಅಭಿಪ್ರಾಯಗಳು ಹುಟ್ಟಿ ಇರುತ್ತವೆ. ಇನ್ನು ಮೇಲೆ ಬಾಲಕಿಯರನ್ನು ಮೌಢ್ಯದಲ್ಲಿ ಇಟ್ಟಿರಕೂಡದೆಂದು ಎಲ್ಲೆಲ್ಲೂ ಬೋಧೆಯಾಗುತ್ತಲಿದೆ. ಮೌಢ್ಯವನ್ನು ನಿವಾರಣೆ ಮಾಡುವುದರಲ್ಲಿ ಜಾತಿ ಮತ ಕುಲಗೋತ್ರಗಳನ್ನು ನೋಡಕೂಡದೆಂದೂ ಹುಡುಗನಿಗೆ ಹ್ಯಾಗೋ ಹುಡುಗಿಗೂ ಹಾಗೇ ವಿದ್ಯೆಕಲಿಸಿ ಬುದ್ಧಿಯನ್ನು ಚುರುಕು ಮಾಡಬೇಕಾದದ್ದು ಅವಶ್ಯವೆಂದೂ ಪ್ರಾಯಶಃ ಎಲ್ಲರಿಗೂ ತಿಳುವಳಿಕೆಯುಂಟಾಗಿದೆ. ಈ ಸ್ಕೂಲು ವಹಿಸಿಕೊಂಡಿರುವ ಕಾರ್ಯವು ಮಹಾ ಘನತರವಾದದ್ದು. ಅದರ ಬೆಲೆಯನ್ನು ರೂಪಾಯಿ, ಆಣೆ, ಕಾಸುಗಳಲ್ಲಿ ಲೆಕ್ಕಮಾಡತಕ್ಕದ್ದಾಗಿಲ್ಲ. ನಮ್ಮ ದೇಶದಲ್ಲಿ ವಿದ್ಯೆಕಲಿತವರ ಸಂಖ್ಯೆಯು ಬಹಳ ಕೊಂಚವಾಗಿರುವುದು. ಈಗಿನ ಕಾಲದ ಸ್ತ್ರೀಯರ ಸ್ಥಿತಿಗತಿಗಳಿಗೂ ಪ್ರಾಚೀನಕಾಲದಲ್ಲಿ ಸ್ತ್ರೀಯರ ಸ್ಥಿತಿಗತಿಗಳಿಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಹೀಗಿದ್ದಾಗ್ಯೂ ಸಾಮಾನ್ಯವಾಗಿ ಸ್ತ್ರೀಯರಿಗೆ ವಿದ್ಯಾಭ್ಯಾಸ ಮಾಡಿಸೋಣದರಿಂದ ನಡೆನುಡಿ ಆಚಾರ ವ್ಯವಹಾರಗಳು ಪರಿಷ್ಕಾರ ಹೊಂದುವುದಕ್ಕೂ, ಸಾಂಸಾರಿಕವಾದ ಸುಖಸಂತೋಷಗಳು ಬಹಳ ಮಟ್ಟಿಗೆ ಅಭಿವೃದ್ಧಿ ಹೊಂದುವುದಕ್ಕೂ, ಜನರ ತಾಯಿಂದಿರುಗಳ ಬುದ್ಧಿ ವಿವೇಕಗಳು ವಿಕಸಿತವಾಗುವುದಕ್ಕೂ ತುಂಬಾ ಪ್ರೋತ್ಸಾಹವಾಗುತ್ತದೆ.

ಧೈರ್ಯಮಾಡಿ ಪ್ರಾರಂಭಿಸಿದ ಈ ಸ್ತ್ರೀವಿದ್ಯಾಬೋಧನಾಕಾರ್ಯವು ಇಷ್ಟು ಫಲದಾಯಕವಾಗಿಯೂ, ಈ ಪಾಠಶಾಲೆಯ ಅಭಿವೃದ್ಧಿಯು ಇಷ್ಟು ತೃಪ್ತಿಕರವಾಗಿಯೂ ಆಗಿರುತ್ತದೆ. ಇದರ ಕೀರ್ತಿಯನ್ನು ಕೇಳಿ ಪೋರ್ಟರ್, ಗೋಪಾಲರಾವ್, ಡಾಕ್ಟರ್ ಲ್ಯಾಟಿಮರ್, ಡಾಕ್ಟರ್ ಕರ್ಕ್ ಎಂಬ ವಿದ್ಯಾವಂತರೂ; ಬೊಂಬಾಯಿ ಮತ್ತು ಮದರಾಸ್ ಗವರ್ನರುಗಳಾದ ಲಾರ್ಡ್ ಸ್ಯಾಂಡ್‌ಹರ್ಸ್ಟ್, ಲಾರ್ಡ್ ವೆನ್‌ಲಾಕ್, ಸರ್ ಆರ್ಥರ್ ಹ್ಯಾವಲಾಕ್ ಎಂಬ ಮಹನೀಯರೂ; ಲಾರ್ಡ್ ಡಫ್ರಿನ್, ಲಾರ್ಡ್ ಲ್ಯಾನ್ಸ್‌ಡೌನ್, ಲಾರ್ಡ್ ಎಲ್ಗಿನ್ ಎಂಬೀ ವೈಸ್‌ರಾಯಿಯವರೂ ಇವರ ಪತ್ನೀರುಗಳೂ; ಚಕ್ರವರ್ತಿ ಸಾರ್ವಭೌಮ ವಂಶೀಕರಾಗಿದ್ದ ಘನವನ್ನೈದಿದ ಡ್ಯೂಕ್ ಆಫ್ ಕ್ಲಾರೆನ್ಸ್‌ರವರೂ ಕಾಲಕ್ರಮದಲ್ಲಿ ದಯಮಾಡಿ, ಈ ಸ್ಕೂಲನ್ನು ಪರಾಂಬರಿಸಿ ಸಂತೋಷಪಟ್ಟು ಹೋಗಿರುತ್ತಾರೆ. ಡ್ಯೂಕ್ ಆಫ್ ಕ್ಲಾರೆನ್ಸ್‌ರವರು ಬಹು ಪ್ರೀತಿಯುಕ್ತವಾದ ಕಾಗದವನ್ನು ಬರೆದಿರುವರು. “ಈ ಸ್ಕೂಲನ್ನು ನೋಡಿ ನಮಗೆ ಬಹಳ ತೃಪ್ತಿಯುಂಟಾಗಿದೆ; ಇದರ ಅಭಿವೃದ್ಧಿ ವಿಚಾರವನ್ನು ಕುರಿತು ಮಹಾರಾಜ್ಞೀರವರಿಗೆ ಅರಿಕೆ ಮಾಡಬೇಕೆಂದಿದ್ದೇನೆ” ಎಂಬದಾಗಿ ಬರೆದಿದಾರೆ. ೧೯೦೬ ನೇ ಇಸವಿಯಲ್ಲಿ ಪ್ರಿನ್ಸ್ ಆಫ್‌ವೇಲ್ಸ್‌ರವರ ಪತ್ನೀರಾದ ಪ್ರಿನ್ಸೆಸ್ ಆಫ್‌ವೇಲ್ಸ್‌ರವರು ಮೈಸೂರಿಗೆ ದಯಮಾಡಿದ್ದಾಗ ಆಕೆಯವರು ಈ ಸ್ಕೂಲಿನ ಕೆಲವು ಉಪಾಧ್ಯಾಯಿನಿಯರನ್ನೂ ವಿದ್ಯಾರ್ಥಿಗಳಾಗಿದ್ದ ಕೆಲವು ವಿತಂತುಗಳನ್ನು ಕರೆಸಿಕೊಂಡು ಅವರಿಗೆ ಭೇಟಿಯಿತ್ತು, ಈ ಸ್ಕೂಲಿನ ಪೂರ್ವೋತ್ತರವನ್ನೂ ಅದರ ಅಭಿವೃದ್ಧಿಸ್ಥಿತಿಯನ್ನೂ ದಯವಿಟ್ಟು ಪ್ರಶ್ನೆಮಾಡಿ, ತಿಳಿದುಕೊಂಡು ತುಂಬಾ ಸಂತೋಷಪಟ್ಟಿರುತ್ತಾರೆ.

೧೯೦೭-೦೮ ನೇ ಸಾಲಿನ ಈ ಸ್ಕೂಲಿನ ರಿಪೋರ್ಟನ್ನು ಆಗಲೇ ಇನ್ಸ್‌ಪೆಕ್ಟರ್ ಜನರಲ್ ರವರಿಗೆ ಕಳುಹಿಸಿಕೊಟ್ಟಿರುತ್ತೇನಾದಕಾರಣ ಅದನ್ನು ಓದುವುದರಲ್ಲಿ ತಮ್ಮ ಶ್ರೇಷ್ಠವಾದ ಸಮಯವನ್ನು ವ್ಯರ್ಥಮಾಡುವುದಿಲ್ಲ. ಘನವನ್ನೈದಿದ ಲೇಟ್ ಮಹಾರಾಜರವರು ಈ ಸ್ಕೂಲನ್ನು ಸ್ಥಾಪಿಸುವಾಗ್ಗೆ ತಮ್ಮ ಪ್ರೀತಿಪಾತ್ರರಾಗಿದ್ದ ದಿವಾನ್ ಸರ್ ಕೆ. ಶೇಷಾದ್ರಿ ಐಯರವರ ಮುಖೇನ ಅಪ್ಪಣೆ ಕೊಡಿಸಿದ ತಮ್ಮ ಮುಖ್ಯಾಭಿಪ್ರಾಯವೇನೆಂದರೆ—ಈಶ್ವರ ಭಕ್ತಿಯುಳ್ಳ ಸ್ತ್ರೀಯರು ಚಿಕ್ಕ ವಯಸ್ಸಿನ ಹೆಣ್ಣು ಮಕ್ಕಳಿಗೆ ಲೌಕಿಕ ವಿದ್ಯೆಯನ್ನೂ ವೈದಿಕ ವಿದ್ಯೆಯನ್ನೂ ಕಲಿಸಿ ತರಪೇತುಮಾಡುವುದಕ್ಕೋಸ್ಕರ ಪ್ರಾಚೀನ ಕಾಲಗಳಲ್ಲಿದ್ದ ವಿದ್ಯಾನಿಲಯಗಳಂತೆ ಈ ಪಾಠಶಾಲೆಯನ್ನು ಮಾಡಬೇಕು. ಉಪಾಧ್ಯಾಯಿನಿಯರನ್ನು ಇಲ್ಲಿ ತರಪೇತುಮಾಡಿ ಸಂಸ್ಥಾನದ ಎಲ್ಲಾ ಭಾಗಗಳಿಗೂ ಕಳುಹಿಸಿಕೊಟ್ಟು ಹೆಣ್ಣು ಮಕ್ಕಳಿಗೆ ವಿದ್ಯೆ ಕಲಿಸುವಂತೆ ಮಾಡಬೇಕು. ಸಂಸಾರ ಸಾಂಗತ್ಯದ ಸುಖಸಂತೋಷಗಳನ್ನು ಕಳೆದುಕೊಂಡ ನಿರ್ಭಾಗ್ಯ ಸ್ತ್ರೀಯರು ಮಕ್ಕಳಿಗೆ ವಿದ್ಯೆಕಲಿಸುವುದೇ ಮೊದಲಾದ ಪರೋಪಕಾರಕ ಕಾರ್ಯಗಳಲ್ಲಿ ತಮ್ಮ ಜೀವಮಾನವನ್ನು ಕಳೆಯುವಂತೆ ಮಾಡಬೇಕು. ಈ ಮೊದಲಾದ ಉದ್ದೇಶಗಳಿಂದ ಈ ಪಾಠಶಾಲೆಯನ್ನು ಪ್ರಾರಂಭಮಾಡಲಾಗಿದೆ ಎಂದು ಅಪ್ಪಣೆಕೊಡಿಸಿರುತ್ತಾರೆ. ಇಷ್ಟೇ ಅಲ್ಲ. ಇದಕ್ಕೆ ಘನವಾದ ತಮ್ಮ ಹೆಸರನ್ನೇ ಇಟ್ಟಿರುವರು. ಆದಕಾರಣ ಇಲ್ಲಿ ಕೆಲಸಮಾಡತಕ್ಕಂಥಾ ನಾವುಗಳು ಮೇಲ್ಕಂಡ ಉದ್ದೇಶವು ನೆರವೇರುವುದಕ್ಕೋಸ್ಕರ ನಿದಾನವಾಗಿಯೂ ಹಿತಮನಸ್ಸಿನಿಂದಲೂ ಕಾರ್ಯಗಳನ್ನು ನಡಿಸುತ್ತಾ ಬಂದಿರುತ್ತೇವೆ. ಇಲ್ಲಿ ನಡಿಯುವ ವಿದ್ಯಾಬೋಧನೆಯಿಂದ ಸಂಸಾರದ ಸುಖ ಸಂತೋಷಗಳು ಹೆಚ್ಚಿ, ಬುದ್ಧಿ ವಿವೇಕ ಜ್ಞಾನಾದಿಗಳು ವಿಕಾಸವಾಗಬೇಕೆಂದು ಹಾರೈಸುತ್ತೇವೆ.

ತಾವು ಕರುಣೆಯಿಟ್ಟು ಈ ದಿನ ಇಲ್ಲಿಗೆ ದಯಮಾಡಿಸಿ ಇಲ್ಲಿ ನಡೆಯತಕ್ಕ ಕಾರ್ಯಗಳನ್ನು ಪ್ರೋತ್ಸಾಹ ಪಡಿಸಿದ್ದಕ್ಕಾಗಿ ಮತ್ತೊಂದಾವರ್ತಿ ನಮ್ಮ ರಾಜಭಕ್ತಿಪೂರ್ವಕವಾದ ವಂದನೆಗಳನ್ನು ಒಪ್ಪಿಸಿ, ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೂ ರಾಜವರ್ಗದವರಿಗೂ ಸರ್ವಶಕ್ತನಾದ ದೇವರು ಸರ್ವಶ್ರೇಷ್ಠವಾದ ವರಪ್ರಸಾದಗಳನ್ನು ದಯಪಾಲಿಸಲೆಂದು ಮನಃಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಮಹಾಮಾತೃಶ್ರೀಯವರ ಭಾಷಣವು.

ತರುವಾಯ ಮಹಾಮಾತೃಶ್ರೀಯವರು ತೇರ್ಗಡೆಹೊಂದಿದ ಬಾಲಕಿಯರಿಗೆಲ್ಲಾ ಸ್ವಹಸ್ತದಿಂದ ಬಹುಮಾನವಸ್ತುಗಳನ್ನೂ ಪುಸ್ತಕಗಳನ್ನೂ ದಯಪಾಲಿಸಿದರು. ಅನಂತರ ಮಹಾಮಾತೃಶ್ರೀಯವರ ಅಂತ್ಯೋಕ್ತಿಗಳನ್ನು ಅವರ ಪರವಾಗಿ ಮಿಸೆಸ್. ವಿಮರ್ ದೊರೆಸಾನಿಯವರು ಓದಿ ಹೇಳಿದರು. ಅದರ ಮುಖ್ಯಾಶಯವೇನೆಂದರೆ—

ಮಹಾರಾಣಿ ಕಾಲೇಜಿನ ಉಪಾಧ್ಯಾಯಿನಿಯರೇ, ವಿದ್ಯಾರ್ಥಿನಿಯರೇ.—ಈ ದಿನ ನೀವು ನಮಗೆ ಸುಸ್ವಾಗತವನ್ನು ಬಯಸಿದ್ದು ನಮ್ಮಲ್ಲಿ ಪರಮ ಸಂತೋಷವನ್ನುಂಟುಮಾಡಿದೆ. ನಾವು ಇಲ್ಲಿ ಹಾಜರಾಗಿ ಈ ದಿನ ಬಹುಮಾನಗಳನ್ನು ಕೊಡುವುದಕ್ಕೆ ಸಂತೋಷದಿಂದ ಒಪ್ಪಿಕೊಂಡೆವು. ನಿಮ್ಮ ಪ್ರಿನ್ಸಿಪಲ್ (ಅಧ್ಯಕ್ಷ ಉಪಾಧ್ಯಾಯಿನಿಯರು) ಯವರು ಈಗತಾನೇ ಓದಿದ ಅಡ್ರೆಸ್ಸನ್ನು ಕೇಳಿ ಸಂತೋಷಪಟ್ಟೆವು. ಅದರಿಂದ ಈ ಕಾಲೇಜಿನಲ್ಲಿ ಕೆಲಸಗಳು ಬಹಳ ಚೆನ್ನಾಗಿ ನಡೆದಿರುತ್ತವೆ ಎಂದೂ, ಈ ಕಾಲೇಜಿನ ಪ್ರಥಮ ಉದ್ದೇಶವನ್ನು ಜ್ಞಾಪಕದಲ್ಲಿಟ್ಟುಕೊಂಡು ಅದನ್ನು ನೆರವೇರಿಸುವುದಕ್ಕಾಗಿ ಪ್ರಿನ್ಸಿಪಲ್ ಯವರು ಸಾಹಸಪಡುತ್ತಿದಾರೆಂದೂ ಗೊತ್ತಾಗುತ್ತದೆ. ನಮಗೆ ಇನ್ನೊಂದು ವಿಷಯವು ವಿಶೇಷವಾದ ತೃಪ್ತಿಯನ್ನೂ ಆನಂದವನ್ನೂ ಉಂಟುಮಾಡಿದೆ. ಈ ಕಾಲೇಜಿನಲ್ಲಿ ಓದಿ ವಿದ್ಯಾಭ್ಯಾಸ ಮಾಡಿದಂಥಾ ಸ್ತ್ರೀ ಶಿರೋಮಣಿಯೇ ಈಗ ಈ ಕಾಲೇಜಿನ ಅಧ್ಯಕ್ಷಸ್ಥಾನವನ್ನು ಸಂಪಾದಿಸಿಕೊಂಡು, ತುಂಬಾ ತೃಪ್ತಿಕರವಾದ ರೀತಿಯಲ್ಲಿ ಕೆಲಸ ನಡಿಸುತ್ತಿದಾರೆ. ಅವರ ಯೋಗ್ಯತಾ ಸಾಮರ್ಥ್ಯವು ಸಂತೋಷವನ್ನೂ ತೃಪ್ತಿಯನ್ನೂ ಉಂಟುಮಾಡಿದೆ.

ಈ ಸ್ಕೂಲನ್ನು ಸ್ಥಾಪಿಸಿದ ಉದ್ದೇಶಗಳೂ, ಇದಕ್ಕೆ ನಮ್ಮ ಹೆಸರು ಇಟ್ಟಿರುವುದೂ ನಾವು ಇದರ ಪುರೋಭಿವೃದ್ಧಿಯಲ್ಲಿ ತುಂಬಾ ಕಾತುರಪಡುವುದಕ್ಕೆ ವಿಶೇಷ ಕಾರಣಗಳಾಗಿವೆ. ಈ ಸ್ಕೂಲಿನಲ್ಲಿ ನಡಿಸಲ್ಪಡುತ್ತಿರುವ ಕಾರ್ಯಗಳ ದೆಸೆಯಿಂದ ಬಹಳ ಪ್ರಯೋಜನವಾದೀತೆನ್ನುವುದಕ್ಕೆ ಸಂಶಯವಿಲ್ಲ. ಹೆಣ್ಣು ಮಕ್ಕಳನ್ನು ದೊಡ್ಡವರಾದ ಮೇಲೆ ಸ್ಕೂಲಿಗೆ ಕಳುಹಿಸಬಾರದೆಂಬ ದುರಭಿಪ್ರಾಯವು ಈಗ ಕಡಿಮೆಯಾಗುತ್ತಿರುವ ಭಾಗದಲ್ಲಿ ಆನಂದಪಡುತ್ತೇವೆ.

ಉಪಾಧ್ಯಾಯಿನಿಯರೇ, ಸ್ತ್ರೀ ವಿದ್ಯಾಭ್ಯಾಸಕ್ಕೆ ಇದು ಪ್ರಥಮತಃ ಪ್ರಾರಂಭಿಸಲ್ಪಟ್ಟ ಪಾಠಶಾಲೆಯಾಗಿದೆ. ಇಲ್ಲಿ ನೀವು ಬೋಧಕರಾಗಿರೋಣವು ನಿಮಗೆ ವಿಶೇಷ ಗೌರವವಾಗಿಯೂ, ಅಷ್ಟು ಅಷ್ಟು ಜವಾಬ್ದಾರಿಯುಳ್ಳದ್ದಾಗಿಯೂ ಇರುತ್ತದೆಂದು ತಿಳಿಯಿರಿ. ಮೈಸೂರು ಸಂಸ್ಥಾನದವರೇ ಅಲ್ಲ, ಸ್ತ್ರೀ ವಿದ್ಯಾಭಿವೃದ್ಧಿಯಲ್ಲಿ ನಿರತರಾಗಿ ಸಾಹಸಪಡುತ್ತಿರುವ ಹೊರಗಿನವರೂ ಕೂಡ ಇಲ್ಲಿ ನಡಿಯುವ ಕಾರ್ಯಗಳನ್ನು ಗಮನವಿಟ್ಟು ನೋಡುತ್ತಿದಾರೆ. ನೀವು ಮಾಡತಕ್ಕ ಒಳ್ಳೆಯ ಕೆಲಸದಿಂದ ಆ ಮಹಾ ಉದ್ದೇಶವು ಸಾರ್ಥಕಹೊಂದೀತೆಂತಲೂ, ನಿಮ್ಮ ಅಲ್ಪಮಾತ್ರವಾದ ನ್ಯೂನಾತಿರೇಕಗಳ ದೆಸೆಯಿಂದ ಆ ಕಾರ್ಯಕ್ಕೆ ಅಪಕೀರ್ತಿಯುಂಟಾಗುವುದೆಂತಲೂ ತಿಳಿಯಿರಿ. ನಿಮ್ಮ ಅಧ್ಯಕ್ಷ ಉಪಾಧ್ಯಾಯಿನಿಯರು ವಿವರಿಸಿದ ಈ ವಿದ್ಯಾಶಾಲೆಯ ಪ್ರಥಮ ಉದ್ದೇಶಗಳನ್ನು ನಿಮ್ಮ ಜ್ಞಾಪಕದಲ್ಲಿಟ್ಟುಕೊಂಡು, ಅದನ್ನು ನೆರವೇರಿಸುವುದಕ್ಕೆ ಸಾಹಸಪಡುತ್ತಾ ಹೋದ ಪಕ್ಷದಲ್ಲಿ ಖಂಡಿತವಾಗಿಯೂ ನಿಮ್ಮ ಶ್ರಮವು ನಿರರ್ಥಕವಾಗಲಾರದು.

ಹೆಣ್ಣು ಮಕ್ಕಳಿರಾ, ನಿಮ್ಮ ಮನೆಗಳಲ್ಲಿ ಸುಖ ಸಂತೋಷಾದಿಗಳು ವೃದ್ಧಿ ಹೊಂದುವ ಭಾರವೂ, ಮುಂದಿನ ಸ್ತ್ರೀವಿದ್ಯಾಭ್ಯಾಸ ಕ್ರಮಗಳ ರೀತಿಯೂ ಒಟ್ಟುತರವಾಗಿ ನಿಮ್ಮನ್ನೇ ಹೊತ್ತಿರುವವೆಂಬುವುದನ್ನು ಮರೆಯಬೇಡಿ. ಎಂದಿಗೆ ಮನೆಗಳನ್ನು ಸಂತೋಷಕರವಾಗಿ ಮಾಡಿಯೇವೆಂಬ ಕುತೂಹಲವು ನಿಮ್ಮಲ್ಲಿ ಅನೇಕರಿಗೆ ಉಂಟಾಗಿದ್ದೀತು. ಸಂಸಾರದ ಕಷ್ಟಸುಖಗಳನ್ನು ನಿರ್ವಹಿಸುವುದಕ್ಕೆ ನಿಮ್ಮ ವಿದ್ಯಾಸಾಮರ್ಥ್ಯವು ತುಂಬಾ ಸಹಾಯಕಾರಿಯಾಗಿರುವುದು. ವಿದ್ಯೆ ಎಂಬುವುದು ಪುಸ್ತಕದಿಂದಲೇ ಪ್ರಾರಂಭವಾಗಿ ಅದರಲ್ಲೇ ಅಂತ್ಯವಾಗುವುದಿಲ್ಲ. ಆದರೆ ಪುಸ್ತಕಗಳನ್ನು ಓದೋಣದರಿಂದ ನಿಮ್ಮಲ್ಲಿ ಒಳ್ಳೇದು ಮಾಡುವಂಥಾ ಸಾಮರ್ಥ್ಯವು ಸಂಪೂರ್ಣತೆಯನ್ನು ಹೊಂದುವುದು. ವಿದ್ಯೆ ಇಲ್ಲದೆ ಹೋದರೆ ನೀವು ನಿಮ್ಮ ಗಂಡಂದಿರ ಮತ್ತು ನಿಮ್ಮ ಮಕ್ಕಳ ಸುಖ ಸಂತೋಷಾದಿಗಳಲ್ಲೂ ಅವರ ಆಲೋಚನೆ ಅಂತರಂಗಗಳಲ್ಲೂ ಸಾರ್ಥಕವಾಗಿ ಸೇರಲಾರಿರಿ. ನಿಮ್ಮ ಜೀವಮಾನದಲ್ಲಿ ಒಳ್ಳೆಯ ಗುಣ ನಡತೆಗಳನ್ನು ಅಭ್ಯಾಸ ಮಾಡುತ್ತಾ ಬರಬೇಕು. ನಿಮ್ಮಿಂದ ನಿಮ್ಮ ಮನೆಯಲ್ಲೂ ಹೊರಗೂ ನಿಮ್ಮ ಕೂಡ ಬೆರೆಯುವಂಥಾ ಮಕ್ಕಳೇ ಮೊದಲಾದವರಿಗೆಲ್ಲಾ ಒಳ್ಳೇ ಗುಣ ನಡತೆಗಳು ಉಂಟಾಗುವಂತೆ ಆಗಬೇಕು. ಆಗಲೀಗ ಜನಾಂಗದ ಶೀಲಸ್ವಭಾವಗಳು ನೆಟ್ಟಗಾಗುವವು.

ಸಂಪೂರ್ಣವಾದ ಸಂಸಾರಸುಖವನ್ನು ಕಳೆದುಕೊಂಡಿರುವ ಸ್ತ್ರೀಯರೇ. ನೀವು ಪ್ರಾಚೀನಕಾಲದ ದೇವಭಕ್ತ ಸ್ತ್ರೀಯರಂತೆ ನಡೆದುಕೊಳ್ಳಿ. ಆಗ ನೀವು ಕಳೆದುಕೊಂಡಿರುವ ಮನಸ್ಸಿನ ಸುಖ ಸಂತೋಷ ಸಮಾಧಾನಗಳು ನಿಮಗೆ ದೊರಕುವವು. ನೀವು ಬಾಲಕಿಯರಿಗೆ ವಿದ್ಯೆ, ಬುದ್ಧಿ ಸನ್ಮಾರ್ಗಗಳನ್ನು ಹೇಳಿಕೊಡುವುದರಲ್ಲೋ, ಕಾಯಿಲೆಯವರನ್ನು ಉಪಚರಿಸುವುದರಲ್ಲೋ, ವೈದ್ಯರಾಗುವುದರಲ್ಲೋ ನಿಮ್ಮ ಗಮನವನ್ನೂ ಸಮಯವನ್ನೂ ವಿನಿಯೋಗಿಸಬೇಕು. ಇಲ್ಲವೇ ಸಜ್ಜನರೆನಿಸಿಕೊಂಡು ಭಕ್ತಿಮಾರ್ಗವಲಂಬಿಸಿಯರಾಗಿ. ಪರೋಪಕಾರದಲ್ಲಿ ನಿಮ್ಮ ಜೀವಮಾನವನ್ನು ಕಳೆಯುವವರಾಗಬೇಕು. ಈ ರೀತಿ ನೀವು ಮಾಡಿದಲ್ಲಿ ನಿಮ್ಮ ಜೀವಮಾನವು ವ್ಯರ್ಥವಾಗಲಾರದೆಂದು ನಿಮಗೇ ಗೊತ್ತಾಗುವುದು.

ಈ ಕಾಲೇಜು ಇನ್ನು ಮುಂದೆಯೂ ಒಳ್ಳೇ ಅಭಿವೃದ್ಧಿಗೆ ಬರಲೆಂಬದಾಗಿ ಕೋರುತ್ತೇವೆ. ಯಾವ ಸ್ತ್ರೀಯೇ ಆಗಲಿ ಈ ಕಾಲೇಜಿನಲ್ಲಿ ವಿದ್ಯಾಭ್ಯಾಸಮಾಡಿದವಳೆಂದ ಮಾತ್ರಕ್ಕೇ ಆಕೆಯ ಗುಣ ನಡೆ ನುಡಿಗಳು ಸರ್ವಶ್ರೇಷ್ಠವಾದವುಗಳೆಂಬ ಯೋಗ್ಯತಾ ಪಕ್ಷವು ಬರುವಂಥಾ ಕಾಲವನ್ನು ಬಹು ಕುತೂಹಲಪೂರ್ವಕವಾಗಿ ನಿರೀಕ್ಷಿಸುವೆವು.

ಕಡೆಯಲ್ಲಿ ಬಾಲಕಿಯರು ಮುಂದೆ ಬಂದು ಮಂಗಳ ಪದ್ಯಗಳನ್ನೂ ಸಲಾಂ ಬಾಜಾವನ್ನೂ ರಾಗವೆತ್ತಿ ಮನೋಹರವಾಗಿ ಹಾಡಿದರು. ಪುಷ್ಪ ತಾಂಬೂಲ ಫಲಾದಿಗಳನ್ನು ಹಂಚಿ, ಆ ದಿನದ ಸಭೆಯನ್ನು ಮುಕ್ತಾಯ ಮಾಡಿದರು. ಈ ಸಭೆಯ ಕಾರ್ಯಗಳು ಅತ್ಯಂತವಾಗಿ ಘೋಷಾಪದ್ಧತಿಗನುಸಾರವಾಗಿ ನಡಿಸಲ್ಪಟ್ಟವು.

ಚಕ್ರವರ್ತಿ ಸಾರ್ವಭೌಮರಾದ ಏಳನೆಯ ಎಡ್ವರ್ಡ್ ಪ್ರಭುಗಳವರ ಇಸ್ತಿಹಾರ್ನಾಮೆಯು.

ಇಂಗ್ಲೆಂಡ್ ದೊರೆಗಳೂ ಹಿಂದುಸ್ಥಾನದ ಮಹಾರಾಜಾ ಚಕ್ರವರ್ತಿಯವರೂ ಆದ ಏಳನೆಯ ಎಡ್ವರ್ಡ್ ಮಹಾ ಪ್ರಭುಗಳು, ಲೇಟ್ ಮಹಾರಾಜ್ಞಿ ವಿಕ್ಟೋರಿಯಾರವರಿಂದ ದಯಪಾಲಿಸಲ್ಪಟ್ಟ ರಾಯಲ್ ಪ್ರಾಕ್ಲಮೇಷನ್ ಎಂಬ ಇಸ್ತಿಹಾರ್ನಾಮೆಯ ೫೦ ನೇ ವಾರ್ಷಿಕೋತ್ಸವದ ದಿನ ಅಂದರೆ ಕಳೆದ ೨ ನೇ ತಾ. ನೋವಂಬರ್ ಹಿಂದುಸ್ಥಾನದ ರಾಜರುಗಳಿಗೂ ಪ್ರಜೆಗಳಿಗೂ ದಯಾಪೂರ್ವಕವಾಗಿ ಒಂದು ರಾಜಾಜ್ಞೆಯ ರೂಪವಾದ ಇಸ್ತಿಹಾರನ್ನು ಕಳುಹಿಸಿಕೊಟ್ಟು, ವೈಸ್‌ರಾಯಿಯವರ ಮೂಲಕ ಈ ರಾಷ್ಟ್ರದಲ್ಲೆಲ್ಲಾ ಪ್ರಸಿದ್ಧಪಡಿಸಿರುತ್ತಾರೆ. ಅದರ ಮುಖ್ಯ ತಾತ್ಪರ್ಯವನ್ನು ವಾಚಕರಿಗೆ ತಿಳಿಸಲಪೇಕ್ಷಿಸುತ್ತೇವೆ. ಏನೆಂದರೆ—

೧. ನಮ್ಮ ಮಹಾಮಾತೃಶ್ರೀಯವರಾದ ವಿಕ್ಟೋರಿಯಾ ಮಹಾರಾಜ್ಞೀರವರು ಐವತ್ತು ವರುಷಗಳ ಕೆಳಗೆ ಹಿಂದುಸ್ಥಾನದ ರಾಜ್ಯಭಾರವನ್ನು ಈಸ್ಟ್ ಇಂಡಿಯಾ ಕಂಪನಿಯವರಿಂದ ವಹಿಸಿಕೊಂಡು, ಈ ರಾಷ್ಟ್ರದ ರಾಜರಿಗೂ ಪ್ರಜೆಗಳಿಗೂ ಇಸ್ತಿಹಾರ್ನಾಮೆಯನ್ನು ದಯಾಪೂರ್ವಕವಾಗಿ ಪ್ರಕಟಪಡಿಸಿದರು. ಹಿಂದುಸ್ಥಾನದವರಾದ ನೀವು ಅದರ ಐವತ್ತನೇ ವರುಷದ ಉತ್ಸವವನ್ನು ಈ ದಿನ ನೆರವೇರಿಸುತ್ತಿರುವುದು ನಮ್ಮಲ್ಲಿ ತುಂಬಾ ಸಂತೋಷವನ್ನುಂಟುಮಾಡಿದೆ. ನಿಮ್ಮ ದೇಶದ ಚರಿತ್ರೆಯಲ್ಲಿ ೫೦ ವರುಷವೆಂಬುವುದು ಬಹಳ ಸ್ವಲ್ಪ ಕಾಲವಾಗಿರುತ್ತದೆ. ಆದರೂ ನಿಮ್ಮ ಪೂರ್ವ ಚರಿತ್ರೆಗಳಲ್ಲೆಲ್ಲಾ ಈ ೫೦ ವರುಷವು ಮಹಾ ಪ್ರಮುಖವಾದ ಮತ್ತು ವಿಶೇಷ ಪ್ರಕಾಶಮಾನವಾದ ಕಾಲವಾಗಿರುವುದು. ಆ ಇಸ್ತಿಹಾರ್ನಾಮೆಯ ದೆಸೆಯಿಂದ ಹಿಂದುಸ್ಥಾನವೆಲ್ಲಾ ಒಂದೇ ಗವರ್ನ್‌ಮೆಂಟಿಗೆ ಒಳಪಟ್ಟು ಬ್ರಿಟಿಷ್ ರಾಜ್ಯವಾಗಿ ಪರಿಣಮಿಸಿತು. ಈ ಕಾರ್ಯವು ಕಷ್ಟಸಾಧ್ಯವಾಯಿತು. ಅಭಿವೃದ್ಧಿಯ ಕಾರ್ಯಗಳು ಸ್ವಲ್ಪ ನಿದಾನವಾಗಿ ನಡೆದಿರಬಹುದು. ಆದರೆ ನಾನಾ ಬಗೆಯ ಜನಾಂಗಗಳಿಂದ ಕೂಡಿದ ೩೦ ಕೋಟಿ ಪ್ರಜೆಗಳನ್ನು ಬ್ರಿಟಿಷರು ತಹಬಂದಿಗೆ ತಂದುಕೊಳ್ಳುವ ಕಾರ್ಯವು ಜಿತವಾಗಿಯೂ ಅವಿಚ್ಛಿನ್ನವಾಗಿಯೂ ನಡಿಸಲಾಗಿದೆ. ಕಳೆದ ಶತಮಾನದಲ್ಲಿ ಜರುಗಿಸಲ್ಪಟ್ಟ ಸಾಹಸ ಕಾರ್ಯಗಳನ್ನು ಈಕ್ಷಿಸುವುದರಲ್ಲಿ, ನಮ್ಮ ದೃಷ್ಟಿಯೂ ಮನಸ್ಸಾಕ್ಷಿಯೂ ನಿರ್ಮಲವಾಗಿರುತ್ತವೆ.

೨. ಪ್ರತಿ ಒಂದು ಕಾಲದಲ್ಲೂ ಪ್ರತಿ ಒಂದು ದೇಶದಲ್ಲೂ ಪ್ರತಿ ಒಂದು ಜನಾಂಗಕ್ಕೂ ಸಂಭವಿಸುವಂಥಾ ಕಷ್ಟಗಳು ಇಲ್ಲೂ ಆಗಿಂದಾಗ್ಗೆ ಕಾಣಿಸಿ

ಬಂದಿವೆ. ಅವುಗಳನ್ನು ಪರಿಹಾರವಮಾಡುವುದರಲ್ಲಿ ಬ್ರಿಟಿಷ್ ಅಧಿಕಾರಿಗಳು ಕಾರ್ಯದಕ್ಷತೆಯಿಂದಲೂ, ಧೈರ್ಯವಾಗಿಯೂ, ದೀರ್ಘಾಲೋಚನೆಯಿಂದಲೂ, ಸ್ವಾರ್ಥರಹಿತ ಪೂರ್ವಕವಾಗಿಯೂ ತುಂಬಾ ಸಾಹಸಪಡುತ್ತಬಂದಿರುವರು. ಅಲ್ಲಲ್ಲಿ ತಪ್ಪುಗಳು ಸಂಭವಿಸಿದ್ದಾಗ್ಯೂ ನಮ್ಮ ಗವರ್ನ್‌ಮೆಂಟ್ ಅಧಿಪತಿಗಳು ಅವನ್ನು ತಿದ್ದುವುದಕ್ಕೆ ತಮ್ಮ ತನುಮನಗಳನ್ನು ವಿನಿಯೋಗಿಸಿ ಶ್ರಮಪಟ್ಟಿರುತ್ತಾರೆ. ಆಕಸ್ಮಿಕಗಳು ಒದಗಿವೆ ಎಂದು ಗೊತ್ತಾದ ಸಂದರ್ಭಗಳಲ್ಲಿ ಅಧಿಕಾರಿಗಳು ಪರಾಕ್ರಮದಿಂದ ಸಾಹಸಪಟ್ಟು ಪರಿಹಾರಗಳನ್ನು ಮಾಡಿರುತ್ತಾರೆ.

೪. ದುರ್ಭಿಕ್ಷವನ್ನೂ, ಪ್ಲೇಗ್ ಮೊದಲಾದ ಸಾಂಕ್ರಾಮಿಕ ರೋಗಗಳನ್ನೂ ಬಾರದಂತೆ ಯಾವ ರಾಜ್ಯಭಾರವೂ ತಪ್ಪಿಸಲಾರದು. ಆದರೆ ಅಂಥಾ ಪ್ರಕೃತಿಸಿದ್ಧವಾಗಿ ಸಂಭವಿಸುವ ಪೀಡೆಗಳನ್ನೂ, ಅವುಗಳ ದೆಸೆಯಿಂದುಂಟಾಗುವ ಕಷ್ಟನಷ್ಟಗಳನ್ನೂ ಕೂಡಿದ ಮಟ್ಟಿಗೂ ಕಡಮೆಮಾಡುವ ಭಾಗದಲ್ಲಿ ಅನುಭವಶಾಲಿಗಳಾದ ಅಧಿಕಾರಿಗಳು ತಮ್ಮ ಮನಸ್ಸನ್ನೂ, ಬುದ್ಧಿ ಕುಶಲತೆಯನ್ನೂ ವಿನಿಯೋಗಿಸುತ್ತಾರೆ. ನಮ್ಮ ಪೂರ್ವ ಚರಿತ್ರೆಯನ್ನೆಲ್ಲಾ ನೋಡಿದರೂ ಇಷ್ಟು ದೀರ್ಘಕಾಲ ನಿಮಗೆ ಯುದ್ಧದ ಕಷ್ಟಗಳೂ ಅನಾಹುತಗಳೂ ತಪ್ಪಿದ್ದ ಅವಧಿಯು ಇಲ್ಲವೇ ಇಲ್ಲ. ನಿಮ್ಮ ರಾಷ್ಟ್ರದ ಎಲ್ಲೆಕಟ್ಟುಗಳೊಳಗೆ ಅವಿಚ್ಛಿನ್ನವಾದ ನೆಮ್ಮದಿಯೂ ಸಮಾಧಾನವೂ ನೆಲೆಗೊಂಡಿರುತ್ತವೆ.

೫. ಮಹಾರಾಜ್ಞಿ ವಿಕ್ಟೋರಿಯಾರವರು ನಿಮಗೆ ದಯಪಾಲಿಸಿರುವ ೧೮೫೮ರ ಘೋಷಣಾಪತ್ರವು ಇಸ್ತಿಮಾನಾಮೆಯಲ್ಲಿ ಹಿಂದೂಸ್ಥಾನದೊಳಗೆ ಕಸಬುಗಳಿಗೆ ಉತ್ತೇಜನಕೊಡುವುದಾಗಿಯೂ, ಪ್ರಜಾಬಾಹುಳ್ಯದ ಪ್ರಯೋಜನಾರ್ಥವಾದ ಮತ್ತು ಅಭಿವೃದ್ಧಿಕರವಾದ ಕಾಮಗಾರಿ ಮೊದಲಾದುವುಗಳನ್ನು ಮಾಡಿಸುತ್ತಾ ಬರುವುದಾಗಿಯೂ, ಸರ್ವಪ್ರಜೆಗಳಿಗೂ ಪ್ರಯೋಜನವಾಗುವಂಥಾ ಗವರ್ನ್‌ಮೆಂಟನ್ನು ಪರಿಪಾಲನೆಮಾಡುವುದಾಗಿಯೂ ತಮ್ಮ ಕುತೂಹಲ ಯುಕ್ತವಾದ ಸಂಕಲ್ಪವನ್ನು ಸಮೂಹವಮಾಡಿರುತ್ತಾರೆ. ನಿಮ್ಮ ಪ್ರಾಪಂಚಿಕ ಸುಖಸಂಪತ್ತುಗಳನ್ನು ಹೆಚ್ಚಿಸುವುದಕ್ಕೂ, ನಿಮ್ಮ ಶ್ರೇಯೋಭಿವೃದ್ಧಿಗೂ ಬಹಳ ಚಟುವಟಿಕೆಯಾಗಿಯೂ, ಬುದ್ಧಿ ಕುಶಲತೆಯಿಂದಲೂ ಕಲ್ಪಿಸಿ ರೂಢಿಸಿರುವ ಏರ್ಪಾಡುಗಳು ಮಹಾ ಘನತರವಾದವುಗಳೆಂದೂ, ಅದ್ವಿತೀಯಗಳಾಗಿರುತ್ತವೆಂದೂ ಪ್ರಪಂಚಕ್ಕೆಲ್ಲಾ ಗೊತ್ತಾಗಿದೆ. ಈ ಕಾರ್ಯಗಳು ಮೇಲ್ಕಂಡ ಸಂಕಲ್ಪದಲ್ಲಿ ಕಂಡ ವಾಗ್ದಾನಗಳನ್ನು ಸಾರ್ಥಕವಾಗಿ ನೆರವೇರಿಸಿದ್ದಕ್ಕೆ ಸಾಕ್ಷಿಭೂತಗಳಾಗಿರುವವು.

೬. ದೇಶೀಯ ಸಾಮಂತರಾಜರುಗಳ ಹಕ್ಕುಬಾಧ್ಯತೆಗಳನ್ನೂ ಮಾನಮರ್ಯಾದೆಗಳನ್ನೂ ಕಾಪಾಡಿಕೊಂಡು ಬಂದಿರುತ್ತೇವೆ. ಅವರುಗಳಲ್ಲಿ ರಕ್ತ ರಾಜಭಕ್ತಿಯು ನಿಷ್ಕಪಟವಾದದ್ದಾಗಿದೆ. ನಮ್ಮ ಪ್ರಜಾವರ್ಗಕ್ಕೆ ಸೇರಿದ ಯಾವನೊಬ್ಬನಿಗಾದರೂ ಅವನ ಮತಭಕ್ತಿಯ ಅಥವಾ ಆಚಾರದ ವಿಷಯದಲ್ಲಿ ಯಾವ ವಿಧವಾದ ಕಷ್ಟನಷ್ಟಗಳನ್ನಾಗಲಿ, ಮನೋವ್ಯಥೆಯನ್ನಾಗಲಿ ಉಂಟುಮಾಡಿದ್ದಿಲ್ಲ. ಪಕ್ಷಪಾತವಿಲ್ಲದ ಕಾನೂನುಗಳು ನಿಷ್ಪಕ್ಷಪಾತತೆಯಿಂದ ಸಕಲ ಪ್ರಜೆಗಳನ್ನೂ ಅವರವರ ಅಪೇಕ್ಷಿತವಾದ ಪದ್ಧತಿ ಆಚಾರಗಳಿಗನುಸಾರವಾಗಿ ಕಾಪಾಡುತ್ತಾ ಬಂದಿವೆ. ಪ್ರಾಚೀನ ಕಾಲದ ಜನಾಂಗಗಳು ಏಕಾಸನವಾಗಿ ನವೀನವರ್ಗಗಳನ್ನು ಅನುಸರಿಸಿಕೊಳ್ಳುವಂತೆ ಅವಶ್ಯವಾದ ರೀತಿಯಲ್ಲಿ ಕಾನೂನುಗಳನ್ನು ಇಡಿಟ್ಟು, ತಕ್ಕ ಸವೀಕರಣಗಳನ್ನು ರೂಢಿಸುತ್ತಾ ಒದಗಿದೆ.

೭. ಈಗಿನ ಮತ್ತು ಮುಂದೆ ಬರುವ ಅಸಂಖ್ಯಾತವಾದ ಪ್ರಜಾಕೋಟಿಗಳನ್ನು ಪರಿಪಾಲನೆಮಾಡುವಂಥಾ ಕಾರ್ಯಭಾರವನ್ನು ನಮ್ಮ ಗವರ್ನ್‌ಮೆಂಟಿನವರು ವಹಿಸಿಕೊಂಡಿರುತ್ತಾರೆ. ಅದುದರಿಂದ ನ್ಯಾಯವಾದ ಕಾರಣವಾಗಲಿ, ಘನವಾದ ಉದ್ದೇಶವಾಗಲಿ ಇಲ್ಲದೆ, ಫಿತೂರಿಗಳನ್ನು ನಡಿಸಿ ದುಷ್ಕಾರ್ಯಗಳನ್ನು ಮಾಡತಕ್ಕವರನ್ನು ಕಠಿಣವಾಗಿ ಶಿಕ್ಷಿಸಿ ಅಡಗಿಸಬೇಕಾದದ್ದು ಪರಮಾವಶ್ಯಕವಾದ ಕರ್ತವ್ಯಾಂಶವಾಗಿರುತ್ತದೆ. ನಮ್ಮ ಹಿಂದೂಸ್ಥಾನದ ಪ್ರಜಾವರ್ಗಗಳಲ್ಲಿ ರಾಜಭಕ್ತಿ ವಿಶ್ವಾಸಗಳು ಉಂಟೆಂದೂ, ಅವರು ಈ ಫಿತೂರಿಗಳನ್ನು ಮನಃಪೂರ್ವಕವಾಗಿ ಹಗೆಮಾಡುತ್ತಾರೆಂದೂ ನಾವು ತಿಳಿದಿರುತ್ತೇವೆ. ಪ್ರಜೆಗಳಲ್ಲಿ ನೆಮ್ಮದಿಯೂ ವಿಧೇಯತೆಯೂ ಶಾಶ್ವತವಾಗಿರುವಂತೆ ಮಾಡಬೇಕಾದದ್ದೇ ನಮ್ಮ ಮುಖ್ಯ ಉದ್ದೇಶವಾಗಿರೋಣದರಿಂದ ಅಂಥಾ ಫಿತೂರಿಗಳನ್ನು ನಾವು ಅಡಗಿಸಬೇಕಾಗಿದೆ.

೮. ಇಂಥಾ ಚರಿತ್ರಾರ್ಹವಾದ ವಾರ್ಷಿಕೋತ್ಸವ ಕಾಲದಲ್ಲಿ ರಾಜಕ್ಷಮಾಪಣೆಯ ಶಾಸನವು ಇಲ್ಲದೆ ಹೋಗಬಾರದೆಂದು, ಹಿಂದೆ ೧೯೦೩ನೇ ಇಸವಿಯಲ್ಲಿ ನಡೆದ ಕಾರೊನೇಷನ್ ದರ್ಬಾರಿನ ಜ್ಞಾಪಕಾರ್ಥವಾಗಿ ಅಪ್ಪಣೆಕೊಟ್ಟಂತೆ ಕೆಲವು ಖೈದಿಗಳ ಸಜಾ ಅವಧಿಯನ್ನು ಕಮ್ಮಿಮಾಡುವಂತೆಯೂ, ಕೆಲವರ ಸಜೆಯನ್ನು ಕಡಮೆಮಾಡುವಂತೆಯೂ ಹುಕುಂ ಕೊಟ್ಟಿರುತ್ತೇವೆ. ಅವರುಗಳು ಮತ್ತೆ ಕ್ಷಮಾಪಣೆಯನ್ನು ಸ್ಮರಣೆಯಲ್ಲಿಟ್ಟುಕೊಂಡು, ಇನ್ನು ಮುಂದೆ ಅಪರಾಧಗಳನ್ನು ಮಾಡದೆ ಇದ್ದಾರೆಂದು ಅಪೇಕ್ಷಿಸುತ್ತೇವೆ.

೯. ದೊಡ್ಡ ದೊಡ್ಡ ಪಬ್ಲಿಕ್ ಅಧಿಕಾರಸ್ಥಾನಗಳಿಗೆ ಜನರನ್ನು ನೇಮಕ ಮಾಡುವಾಗ್ಗೆ ಜನಾಂಗದ ವ್ಯತ್ಯಾಸಗಳನ್ನು ತೊಡೆದುಬಿಡತಕ್ಕ ಭಾಗದಲ್ಲಿ ಬಹಳ ದಿವಸಗಳಿಂದ ಪ್ರಯತ್ನಗಳನ್ನು ಮಾಡುತ್ತಲೇ ಬಂದಿರುವೆವು. ಹಿಂದುಸ್ಥಾನದಲ್ಲಿ ವಿದ್ಯೆಯು ಹರಡುತ್ತಲೂ, ಅನುಭವ ಜ್ಞಾನವು ಪರಿಪಕ್ವವಾಗುತ್ತಲೂ, ಸಾಮರ್ಥ್ಯ ಬುದ್ಧಿಕುಶಲತೆಗಳ ಮೂಲಕ ಜವಾಬ್ದಾರಿಯ ಪಂಜ್ಞಾನವು ಕಲಿಯಲ್ಪಡುತ್ತಲೂ ಬಂದ ಹಾಗೆಲ್ಲಾ ಆ ಕಾರ್ಯವನ್ನು ಖಚಿತವಾಗಿ ಹಿಡಿದು ನೆರವೇರಿಸುತ್ತಾ ಬರಬೇಕೆಂಬುವುದು ನಮ್ಮ ಕೋರಿಕೆಯೂ ಸ್ಥಿರವಾದ ನಂಬಿಕೆಯೂ ಆಗಿರುತ್ತದೆ.

೧೦. ಪ್ರತಿನಿಧಿಗಳುಳ್ಳ ಸಭೆಮನೆಗಳನ್ನು ಕಲ್ಪಿಸಿ, ಪ್ರಜೆಗಳನ್ನು ಅವರ ಪ್ರಾಂತ ಸಭೆಗಳಿಗೆ ಸೇರಿಸಬೇಕೆಂಬುವುದೇ ಪ್ರಾರಂಭದಿಂದಲೂ ನಮ್ಮ ಉದ್ದೇಶವಾಗಿರುತ್ತದೆ. ಅಂಥಾ ಪ್ರತಿನಿಧಿಸ್ಥಾನಗಳನ್ನು ವಿವೇಕ ಪೂರ್ವಕವಾಗಿ ಹೆಚ್ಚಿಸಬಹುದಾದ ಸಮಯವು ಸನ್ನಿಹಿತವಾಗಿರುತ್ತದೆಂದು ನಮ್ಮ ವೈಸ್‌ರಾಯಿ ಗವರ್ನರ್ ಜನರಲ್ ರವರೂ, ತಮ್ಮ ಇತರ ಮಂತ್ರಾಲೋಚನಾ ಸಭಿಕರೂ ತೀರ್ಮಾನಮಾಡಿರುವರು. ಇಂಗ್ಲೀಷ್ ರಾಜ್ಯಭಾರದ ದೆಸೆಯಿಂದ ನಿಮ್ಮಲ್ಲಿ ಹುಟ್ಟಿ ಪ್ರೋತ್ಸಾಹಗೊಂಡಿರುವಂಥಾ ಅಭಿಪ್ರಾಯಗಳು ಹೆಚ್ಚುತ್ತಾ ಬಂದಿವೆ. ಹೆಚ್ಚು ಹೆಚ್ಚಾದ ಹಕ್ಕುಬಾಧ್ಯತೆಗಳನ್ನು ಸಂಪಾದಿಸಿಕೊಳ್ಳಬೇಕೆಂಬ ಅಭಿಲಾಷೆಯನ್ನು ನೀವು ಪಡೆದವರಾಗಿರುತ್ತೀರಿ. ಅಂಥಾ ಕುತೂಹಲವನ್ನು ತಕ್ಕ ಹಾಗೆ ನೆರವೇರಿಸಿಕೊಡೋಣದರಿಂದ ನಮ್ಮ ಗವರ್ನ್‌ಮೆಂಟಿನ ಅಧಿಕಾರವೂ ದರ್ಪವೂ ಬಲಪಡುವುವಲ್ಲದೆ ಎಷ್ಟು ಮಾತ್ರಕ್ಕೂ ಅವು ಬಲಗುಂದಲಾರವು. ರಾಜ್ಯಭಾರದ ಅಧಿಕಾರಿಗಳು ಪ್ರಜೆಗಳ ಕ್ರಮವಾಗಿ ಕಳೆಯುತ್ತಾ ಬರುವ ಹಾಗೂ, ಪ್ರಜೆಗಳ ಇಂಗಿತ ಅಭಿಪ್ರಾಯಗಳನ್ನು ತಿಳಿದು ಹೊರಪಡಿಸುವಂಥಾ ಪ್ರತಿನಿಧಿಗಳ ಕೂಡ ಬೆರೆಯುತ್ತಾ ಅವರ ಐಕ್ಯತೆಯು ರಂಜಿಸುತ್ತಾ ಬಂದೀತು. ಈ ಉದ್ದೇಶಗಳನ್ನಿಟ್ಟು ಕೊಂಡು ಹೊಸ ರೀತಿಯಾಯಿತಿಗಳೂ ವಿಚಾರಣೆಗಳೂ ಜಾರಿಯಲ್ಲಿರುತ್ತವೆ. ಅವುಗಳನ್ನು ನಾವು ಈಗಲೇ ಸೂಚಿಸುವುದಿಲ್ಲ. ಜಾಗ್ರತೆಯಾಗಿ ಅವು ನಿಮಗೆ ತಿಳಿಸಲ್ಪಡುವವು. ಅವುಗಳಿಂದ ನಿಮ್ಮ ಅಭಿವೃದ್ಧಿಯು ಸ್ಥಿರಪಡುವುದೆಂದು ನಾವು ನಂಬುತ್ತೇವೆ.

೧೧. ನಮ್ಮ ಹಿಂದುಸ್ಥಾನದ ಸೈನಿಕರ ರಾಜಭಕ್ತಿಯನ್ನೂ ಅವರ ಪರಾಕ್ರಮವನ್ನೂ ನೋಡಿ ನಾವು ಮೆಚ್ಚಿಕೊಂಡಿದ್ದೇವೆ. ನಮ್ಮ ವಿಷಯದಲ್ಲಿ ಅವರ ಪರಾಕ್ರಮಕ್ಕೂ, ವಿಧೇಯತೆಗೂ, ಭಕ್ತಿವಿಶ್ವಾಸಗಳಿಗೂ ಅವರಿಗೆಲ್ಲಾ ಸರಿಯಾದ ಪ್ರತಿಫಲವನ್ನು ಕೊಡಿಸಬೇಕೆಂದು ಆಜ್ಞೆಮಾಡಿರುತ್ತೇವೆ.

೧೨. ಮಹಾರಾಜ್ಞಿ ವಿಕ್ಟೋರಿಯಾರವರಿಗೆ ಹಿಂದುಸ್ಥಾನದ ಶ್ರೇಯೋಭಿವೃದ್ಧಿಯು ಪರಮ ಪ್ರೀತಿಪಾತ್ರವಾದ ವಿಷಯವಾಗಿತ್ತು. ನಾವು ೧೮೭೫ನೇ ಇಸವಿಯಲ್ಲಿ ಹಿಂದುಸ್ಥಾನದಲ್ಲಿ ಸಂಚಾರವಮಾಡಿಕೊಂಡು ಬಂದಾರಭ್ಯ ಹಿಂದುಸ್ಥಾನದ ವಿಷಯದಲ್ಲೂ, ರಾಜರುಗಳ ವಿಷಯದಲ್ಲೂ, ಪ್ರಜೆಗಳ ವಿಷಯದಲ್ಲೂ ಬಹಳ ಪ್ರೀತಿಪೂರ್ವಕವಾದ ಆಸಕ್ತಿಯಿಂದ ಕೂಡಿದವರಾಗಿದೇವೆ. ಈ ನಮ್ಮ ಪ್ರೀತಿಯು ಕಾಲಗತಿಸಿದರೂ ಲೇಶಮಾತ್ರವೂ ಕಂದಿಕುಂದಲಾರದು. ನಮ್ಮ ಪ್ರೀತಿಯುಕ್ತರಾದ ಕುಮಾರರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನೀಸಹಿತರಾಗಿ ನಿಮ್ಮ ದೇಶಕ್ಕೆ ಬಂದು, ನಿಮ್ಮ ದೇಶದ ಕ್ಷೇಮಾಭಿವೃದ್ಧಿ ಕೋರಿಕೆಯಿಂದಲೂ ತೃಪ್ತಿಪಟ್ಟವರಾಗಿಯೂ ಸುರಕ್ಷಿತರಾಗಿ ವಾಪಸು ಸ್ವದೇಶವನ್ನು ಸೇರಿದರು. ಇಂಡಿಯಾ ದೇಶದ ವಿಷಯದಲ್ಲಿ ನಮ್ಮ ರಾಜಕುಟುಂಬದವರಿಗೂ, ನಿಮ್ಮ ರಾಜವಂಶೀಕರಿಗೂ ಉಂಟಾಗಿರುವ ಸಹಸಂತಾಪವೂ ನಿರೀಕ್ಷೆಯೂ ಈ ರಾಜ್ಯದಲ್ಲಿರುವ ಪ್ರಜೆಗಳ ಯಥಾರ್ಥವೂ ಐಕಮತ್ಯವೂ ಉಳ್ಳ ಮನೋವೃತ್ತಿಯನ್ನೂ ಸಂಕಲ್ಪವನ್ನೂ ಪ್ರಕಾಶಪಡಿಸುತ್ತವೆ.

೧೩. ಸರ್ವರಕ್ಷಕನಾದ ದೇವರು ಪ್ರಜೆಗಳಿಗೂ ಪ್ರಜಾಪಾಲಕರಿಗೂ ರಾಜ್ಯಭಾರ ಕಾರ್ಯವನ್ನು ಕೀರ್ತಿಪ್ರದವಾದಂಥಾ ರೀತಿಯಲ್ಲಿ ನಡಿಸಿಕೊಂಡು ಬರಲು ಜ್ಞಾನವನ್ನೂ ಪರಸ್ಪರ ಪ್ರೀತಿಯನ್ನೂ ದಯಪಾಲಿಸಿ ಕಾಪಾಡಿಕೊಂಡು ಬರಲೆಂದು ಪ್ರಾರ್ಥಿಸುತ್ತೇವೆ.

ರಾಜಭಕ್ತಿ ಪ್ರದರ್ಶನೋತ್ಸವವು.

ಸಂಸ್ಥಾನದೊಳಗೆ ನಡಿಸಲ್ಪಟ್ಟ ಉತ್ಸವಗಳ ವಿವರವು.

ಚಳ್ಳಕೆರೆ.

೧೮೫೮ನೇ ಇಸವಿಯ ಪ್ರೊಕ್ಲಮೇಷನ್ ಉತ್ಸವವನ್ನು ನವಂಬರ್ ೨ನೇ ತಾ. ಎಲ್ಲಾ ಕಡೆಯಲ್ಲಿಯೂ ಬಹಳ ವಿಜೃಂಭಣೆಯಿಂದ ನಡೆಯಿಸಬೇಕಾದದ್ದು ಸರಿಯಷ್ಟೆ. ಈ ತಾಲ್ಲೂಕ್ ಅಮಲ್ದಾರ್ ಮಿ॥ ರಾಮಚಂದ್ರರಾಯರವರು ಆದೇ ಪ್ರಕಾರ ಈ ಉತ್ಸವವನ್ನು ವಿಜೃಂಭಣೆಯಿಂದ ನಡೆಯಿಸುವುದಕ್ಕೋಸ್ಕರ ಅಕ್ಟೋಬರ್ ೩೧ನೇ ತಾ. ಶನಿವಾರ ಸಾಯಂಕಾಲ ತಾಲ್ಲೂಕ್ ಕಚೇರಿಯಲ್ಲಿ ಒಂದು ಮೀಟಿಂಗ್ ನಡೆಯಿಸಿ, ಜನಗಳನ್ನು ಕರಸಿಕೊಂಡು, ೩೦ ರೂಪಾಯಿ ವರಿಗೂ ಚಂದಾ ವಸೂಲ್ಮಾಡಿದರು. ಮ್ಯುನಿಸಿಪಲ್ ಕಮಿಟಿಯವರು ೫೦ ರೂಪಾಯಿ ಈ ಉತ್ಸವವನ್ನು ನಡೆಯಿಸುವುದಕ್ಕೋಸ್ಕರ ಕೊಟ್ಟಿದ್ದರು. ಈ ನವಂಬರು ೨ನೇ ತಾ. ಸೋಮವಾರ ಈ ಅಮಲ್ದಾರ್ರು ಸಾಯಂಕಾಲ ೫ ಘಂಟೆಗೆ ಮುಂಚಿತವಾಗಿ ಎ. ವಿ. ಸ್ಕೂಲ್ ಬಳಿಗೆ ಬಂದು ಸ್ಪೋರ್ಟ್ಸ್ ವಗೈರೆ ಆಟಗಳನ್ನು ಬಹಳ ವಿಜೃಂಭಣೆಯಿಂದ ನಡೆಯಿಸಿ, ನಂತರ ತಾಲ್ಲೂಕ್ ಕಚೇರಿ ಮುಂದಿನ ಬೈಲು ಪ್ರದೇಶದಲ್ಲಿ ದರ್ಬಾರು ಮಾಡಿ, ವಿಕ್ಟೋರಿಯಾ ಮಹಾರಾಜ್ಞಿಯವರಿಂದ ದಯಪಾಲಿಸಲ್ಪಟ್ಟ ಪ್ರಸಿದ್ಧಪತ್ರಿಕೆಯನ್ನು ಓದಿದರು. ಇದು ಬಹಳ ಶ್ಲಾಘನೀಯವಾಗಿತ್ತು.

ಚಿತ್ರದುರ್ಗ.

ಕಳೆದ ೨ನೇ ತಾ ಸೋಮವಾರ ರಾಯಲ್ ಪ್ರೊಕ್ಲಮೇಷನ್ ಜ್ಞಾಪಕಾರ್ಥವಾದ ಮಹೋತ್ಸವಗಳು ಇಲ್ಲಿಯೂ ನಡಿಸಲ್ಪಟ್ಟವು. ಎಲ್ಲಾ ಕೋಮಿನ ಬಡಜನಗಳಿಗೆ ಸುಭೋಜನಗಳೂ, ಬಟ್ಟೆಬರೆಗಳೂ ದಯಪಾಲಿಸಲ್ಪಟ್ಟವು. ಬೆಳಿಗ್ಗೆ ಸಾಯಂಕಾಲಗಳಲ್ಲಿ ಸ್ಕೂಲ್ ವಿದ್ಯಾರ್ಥಿಗಳಿಗೆ ವಿನೋದವಾದ ಆಟಪಾಟಗಳೂ, ಗೆದ್ದವರಿಗೆ ಬಹುಮಾನಗಳೂ ಕೊಡೋಣಾಯಿತು. ಮತ್ತು ಅದೇ ದಿನ ಸಾಯಂಕಾಲ ಆರುವರೆ ಘಂಟೆಗೆ ಇಲ್ಲಿನ ಟೌನ್‌ಹಾಲಿನಲ್ಲಿ ಬಹು ಸಂಭ್ರಮಪೂರ್ವಕವಾದ ದರ್ಬಾರ್ ನಡಿಯಿತು. ಹಾಲನ್ನು ಬಹಳ ಮನೋಹರವಾಗಿ ಅಲಂಕರಿಸಿದ್ದರು. ಮತ್ತು ದೊಡ್ಡಮನುಷ್ಯರೆಲ್ಲರೂ ಬಿಜಮಾಡಿದನಂತರ ನಮ್ಮ ಡೆಪ್ಯುಟಿ ಕಮಿಷನರ್ ಮೇ॥ ಚೆಂಗೈಯ್ಯಸೆಟ್ಟಿಯವರು ಇಂಗ್ಲೀಷಿನಲ್ಲಿ ಪ್ರೊಕ್ಲಮೇಷನ್ ಮತ್ತು ಇಂಗ್ಲೀಷರ ಪ್ರಭುತ್ವದಿಂದ ದೇಶಕ್ಕೆ ಲಭಿಸಿರುವ ಮಹೋಪಕಾರಗಳನ್ನು ಓದಿ ಹೇಳಿದನಂತರ ಅದೇ ಅರ್ಥಕ್ಕೆ ಇಲ್ಲಿನ ಹೈಸ್ಕೂಲ್ ಹೆಡ್ ಮಾಸ್ಟರ್ ಮೆ॥ ಆರ್. ರಘುನಾಥರಾಯರು ಉಪನ್ಯಾಸ ಮಾಡಿದರು. ಅನಂತರ ಜಯಘೋಷದಿಂದ ಶ್ರೀಮನ್ ವಿಕ್ಟೋರಿಯಾ ಮಹಾರಾಜ್ಞಿಯವರ ದೊಡ್ಡ ತಸ್ವೀರನ್ನು ಪಾಲಕ್ಕಿಯಲ್ಲಿಟ್ಟು ಬಾಜಾಬಜಂತ್ರಿಗಳೊಡನೆ ಊರಲ್ಲಿ ಮೆರವಣಿಗೆ ಮಾಡಿಸಿದರು.

ಚಿಕ್ಕಮಗಳೂರು.

ಮೊದಲು ಏರ್ಪಾಡು ಮಾಡಿದ್ದಂತೆ ತಾ. ೨ನೇ ಸೋಮವಾರ ಬೆಳಿಗ್ಗೆ ೧೦ ಘಂಟೆವರಿಗೆ ಸ್ಕೂಲ್ ಬಾಲಕ ಬಾಲಕಿಯರಿಗೆ ಮಿಠಾಯಿ ಮುಂತಾದ ತಿಂಡಿ ಪದಾರ್ಥಗಳನ್ನು ಹಂಚಿದರು. ಎಲ್ಲಾ ಕೋಮಿನ ಬಡವರಿಗೆ ಊಟದ ಏರ್ಪಾಡುಮಾಡಿ, ಮತ್ತು ಬಡ ಜನರಿಗೆ ಬಟ್ಟೆಗಳನ್ನು ಕೊಟ್ಟರು. ಮಧ್ಯಾಹ್ನ ಹೈಸ್ಕೂಲ್ ಮೈದಾನದಲ್ಲಿ ವಿನೋದಗಳು ನಡೆದವು. ಬಹುಮಾನವನ್ನು ಹಂಚಿದರು. ಸಿಪಾಯಿಗಳ ಪರೇಡು ಮತ್ತು ಅಂಗಸಾಧನೆ ನಡಿಸಲ್ಪಟ್ಟಿತು. ಗೆದ್ದವರಿಗೆ ಡೆಪ್ಯುಟಿ ಕಮಿಷನರ್ ಸಾಹೇಬರೂ, ಅ॥ ಕಮಿಷನರ್ ಸಾಹೇಬರೂ ಬಹುಮಾನಗಳನ್ನು ಕೊಟ್ಟರು. ಹೈಸ್ಕೂಲ್ ಕಟ್ಟಡದಲ್ಲಿ ದರ್ಬಾರು ನಡಿಸಲ್ಪಟ್ಟಿತು. ಡೆಪ್ಯುಟಿ ಕಮಿಷನರ್ ಸಾಹೇಬರೇ ಅಗ್ರಾಸನವನ್ನು ವಹಿಸಿದರು. ದರ್ಬಾರಿನ ಮನೆ ನಾನಾ ರೀತಿಯಾಗಿ ಅಲಂಕರಿಸಲ್ಪಟ್ಟಿತು. ಎಲ್ಲಾ ಜಾತಿ ಮತಗಳ ಕೋಮುಗಳ ಪ್ರತಿನಿಧಿಗಳಿಗೆ ಆಹ್ವಾನ ಪತ್ರಿಕೆಗಳನ್ನು ಕೊಟ್ಟು ಕರಿಸಿಕೊಂಡಿದ್ದರು. ಈ ಸಭಾ ಮಂದಿರವು ದೊಡ್ಡ ಮನುಷ್ಯರಿಂದ ತುಂಬಿತುಳುಕುತ್ತಾ ಇತ್ತು. ಮಹಾರಾಜ್ಞಿಯವರ ಪ್ರೊಕ್ಲಮೇಷನ್ ಇಂಗ್ಲೀಷ್, ಹಿಂದುಸ್ಥಾನಿ, ಕನ್ನಡ ಭಾಷೆಗಳಲ್ಲಿ ಓದಲ್ಪಟ್ಟಿತು. ಹೊರಗೆ ಬ್ಯಾಂಡು ವಾದ್ಯವು ಬಹಳ ಇಂಪು ಕೊಡುತ್ತಿತ್ತು. ಅನಂತರ ಸಿಪಾಯಿಗಳ ಸೆಲ್ಯೂಟ್ ಆಯಿತು. ಚಕ್ರವರ್ತಿಗಳಿಗೂ ಶ್ರೀಮನ್ ಮಹಾರಾಜರಿಗೂ ಶ್ರೇಯಸ್ಸಾಗಲೆಂದು ಸಂತೋಷ ಪೂರ್ವಕವಾದ ಜಯಘೋಷವನ್ನು ಮಾಡಿದರು. ಸಮಸ್ತರೂ ಗಂಧ ಪುಷ್ಪ ತಾಂಬೂಲಾದಿಗಳನ್ನು ಸ್ವೀಕರಿಸಿ ಸಂತೋಷದಿಂದ ಸ್ವಗೃಹಗಳಿಗೆ ತೆರಳಿದರು.

ಮಳವಳ್ಳಿ.

ತಾ. ೨ನೇ ಸೋಮವಾರ - ರಾಯಲ್ ಪ್ರೊಕ್ಲಮೇಷನ್ ಡೇ - ಉತ್ಸವಗಳನ್ನು ಇಲ್ಲಿನ ಟ್ರಾವಲರ್ಸ್ ಕಂಪೌಂಡಿನಲ್ಲಿಯೂ ರೋಡಿನ ಆಜುಬಾಜುನಲ್ಲಿಯೂ ಸಾಂಗವಾಗಿ ನಡಿಸಿದರು. ನಮ್ಮ ಅಮಲ್ದಾರ್ ಮೆ॥ ಸುಬ್ರಾಯಲು ನಾಯ್ಡು ಯವರು ಇತರ ಸಹಾಯಕರೊಡನೆ ಎಲ್ಲಾ ಕಾರ್ಯಗಳನ್ನೂ ವಿಶೇಷ ಸಂಭ್ರಮವಾಗಿ ನಡಿಸಿದರು. ಮಧ್ಯಾಹ್ನ ಸುಮಾರು ೪ ಘಂಟೆಗೆ ಇಲ್ಲಿನ ಯೂರೋಪಿಯನ್ ಇಂಡಿಯನ್ ಮಿಷನೆರಿಗಳನ್ನೂ, ಇತರ ಅನೇಕ ದೊಡ್ಡ ಮನುಷ್ಯರನ್ನೂ, ಶೆಟ್ಟಿ ವರ್ತಕರು, ಮ್ಯುನಿಸಿಪಲ್ ಮೆಂಬರುಗಳೇ ಮೊದಲಾದ ಮಹನೀಯರನ್ನು ಟ್ರಾವಲರ್ಸ್ ಬಂಗಲೆಗೆ ಬರಮಾಡಿಕೊಂಡು, ಆ ದಿವಸದ ಉದ್ದೇಶವನ್ನು ಕೆಲವು ಮಾತುಗಳಲ್ಲಿ ವ್ಯಕ್ತಪಡಿಸಿದನಂತರ, ಸ್ಕೂಲ್ ಹೆಡ್ ಮಾಸ್ಟರು "ರಾಯಲ್ ಪ್ರೊಕ್ಲಮೇಷನ್"ನ್ನು ಇಂಗ್ಲೀಷಿನಲ್ಲಿಯೂ, ಹೆಡ್ ಮುನ್ಷಿಯವರು ಕನ್ನಡದಲ್ಲಿಯೂ ಸ್ಪಷ್ಟವಾಗಿ ಓದಿ ತಿಳಿಸಿದರು. ತರುವಾಯ ಕೆಲವು ಹೆಣ್ಣುಮಕ್ಕಳ ಹಾಡಿಕೆ ಆಯಿತು. ಇಪ್ಪತ್ತೈದ್ದೇ ಬಾರ್ ಸಿಪಾಯಿಗಳೂ, ಪೋಲೀಸಿನವರೂ ಕ್ರಮವಾಗಿ ಸುರುಟ್ ಮಾಡಿದರು. ಆ ಮೇಲೆ ಸಭಿಕರಿಗೆಲ್ಲಾ ಹೂವು, ಗಂಧ, ಪಾನ್ ಸುಪಾರಿ ಹಂಚುವದರಿಂದ ದರ್ಬಾರ್ ಬರಖಾಸ್ತಾಯಿತು. ಅಮಲ್ದಾರರೂ, ಸಬ್ ರೆಜಿಸ್ಟ್ರಾರೂ, ಪೋಲೀಸ್ ಇನ್ಸ್‌ಪೆಕ್ಟರೂ, ಮ್ಯುನಿಸಿಪಲ್ ಮೆಂಬರುಗಳೂ ಕೂಡಿ, ನೂರಾರು ಬಡ ಜನರಿಗೆ ಅಕ್ಕಿ ಕಾಸುಗಳನ್ನೂ, ಬಟ್ಟೆಬರೆಗಳನ್ನೂ ಸಂತೋಷವಾಗಿ ಹಂಚಿದ್ದಲ್ಲದೆ, ಎಲ್ಲಾ ಸ್ಕೂಲುಗಳ ಹುಡುಗರಿಗೆ ಲಾಡು ಮೊದಲಾದ ತಿಂಡಿ ಪದಾರ್ಥಗಳನ್ನು ಕೊಟ್ಟರು.

ಚನ್ನಪಟ್ಟಣ.

ಕಳೆದ ತಾ. ೨ ರಲ್ಲಿ ರಾಯಲ್ ಪ್ರೊಕ್ಲಮೇಷನ್ ಡೇ ಉತ್ಸವವು ನಮ್ಮ ಅಮಲ್ದಾರರ ಮೂಲಕ ಸಾಂಗವಾಗಿ ನಡಿಸಲ್ಪಟ್ಟಿತು. ಮಧ್ಯಾಹ್ನ ೧೨ ಘಂಟೆಗೆ ಇಲ್ಲಿನ ತಾಲ್ಲೂಕ್ ಕಚೇರಿಯಲ್ಲಿ ದರ್ಬಾರ್ ಸೇರಿತು. ಸಭೆಯು ಯೂರೋಪಿಯನ್ ಲೇಡಿಗಳು, ಸರ್ಕಾರಿ ಹುದ್ದೇದಾರರು, ವರ್ತಕ ಮಂಡಲಿಯವರು, ಸುತ್ತಮುತ್ತಲಿನ ಗ್ರಾಮ ಪಟೇಲ ಗೌಡರು ಮೊದಲಾದವರಿಂದ ಕಂಗೊಳಿಸುತ್ತಾ ಇತ್ತು. ಅಮಲ್ದಾರ್ರು ರಾಯಲ್ ಪ್ರೊಕ್ಲಮೇಷನ್ ಎಂಬ ಪತ್ರಿಕೆಯನ್ನು ಇಂಗ್ಲೀಷ್, ಕನ್ನಡ ಭಾಷೆಗಳಲ್ಲೂ, ಒಬ್ಬ ಮಹಮ್ಮದೀಯರು ಹಿಂದುಸ್ಥಾನಿಯಲ್ಲೂ ಓದಿದರು. ಮೆ॥ ವಿಸಾರ್ ಹಯಾತ್ ಸಾಬರು ಎಡ್ವರ್ಡ್ ಚಕ್ರವರ್ತಿಗಳ, ನಮ್ಮ ಶ್ರೀಮನ್ಮಹಾರಾಜರ ಮೇಲೆ ನೂತನ ಕವನವನ್ನು ಹಾಡಿದರು. ಅಧಿಕಾರಿಗಳು ಸಭೆಗೆಲ್ಲಾ ಪುಷ್ಪ, ಗಂಧ, ತಾಂಬೂಲಾದಿಗಳನ್ನು ಬಹು ಸಂಭ್ರಮದೊಡನೆ ಹಂಚಿದರು. ಸಾಯಂಕಾಲ ಇಲ್ಲಿನ ಪೂರ್ಣಯ್ಯನವರ ಸತ್ರದಲ್ಲಿ ಸುಮಾರು ೩,೦೦೦ ಬಡ ಜನರಿಗೆ ತೃಪ್ತಿಯಾಗಿ ಭೋಜನವೂ, ಸ್ಕೂಲ್ ಮೈದಾನದಲ್ಲಿ ಮಕ್ಕಳ ಆಟಪಾಟಗಳೂ ಬಹುಮಾನಗಳೂ ಆಗಿ, ಅನಂತರ ಊರಿನ ಎಲ್ಲಾ ದೇವಸ್ಥಾನಗಳಲ್ಲೂ ರಾಜವರ್ಗದವರ ಶ್ರೇಯಃಪ್ರಾರ್ಥನೆಗಳೂ ಬಾಣಬಿರುಸುಗಳೂ ವಿಜೃಂಭಣೆಯಾಗಿ ನಡಿಸಲ್ಪಟ್ಟವು. ಸುತ್ತಮುತ್ತಲಿನ ಸಾವಿರಾರು ಪ್ರಜೆಗಳು ಸೇರಿ ಪಟ್ಟದ ದೀಪೋತ್ಸವಗಳನ್ನು ನೋಡಿದರು. ಸಾಯಂಕಾಲ ಇಲ್ಲಿನ ಸಾ॥ ಮಸ್ತಾನ್ ಸಾಬರು ಮಸೀದಿಯಲ್ಲಿ ತಮ್ಮ ಸ್ವಂತ ಖರ್ಚಿನಿಂದ ೫೦೦ ಜನ ಬಡ ಮಹಮ್ಮದೀಯರಿಗೆ ಭೋಜನ ಮಾಡಿಸಿ, ಬಾಜಾ ಬಜಂತ್ರಿಗಳೊಡನೆ ಪ್ರಾರ್ಥನೆಯನ್ನು ನೆರವೇರಿಸಿದರು. ಮೆ॥ ಅಬ್ದುಲ್ ಖುದೂಸ್ ಸಾಬರು ಇಂಗ್ಲೀಷ್ ಸರ್ಕಾರದ ಉಪಕಾರಗಳನ್ನು ಸಭಿಕರಿಗೆ ವಿಜ್ಞಾಪಿಸಿ, ರಾಜವರ್ಗದವರಿಗೆ ಭಗವದಾಶೀರ್ವಾದಗಳನ್ನು ಬಯಸಿದರು.

ಚನ್ನರಾಯಪಟ್ಟಣ.

ಈ ಉತ್ಸವದ ದಿನ ಇಲ್ಲಿ ಎಲ್ಲಾ ಕೋಮಿನ ಬಡಬಗ್ಗರಿಗೂ ಸುಭೋಜನ ನಡಿಸಲಾಯಿತು. ಮಧ್ಯಾಹ್ನ ೩ ಘಂಟೆಗೆ ಈ ಊರಿನಲ್ಲಿರುವ ಟ್ರಾವೆಲರ್ಸ್ ಬಂಗ್ಲೆಯಲ್ಲಿ ಸ್ಕೂಲು ಹುಡುಗರಿಂದ ಜಂಪಾನದ ಆಟಗಳನ್ನಾಡಿಸಿ ಗೆದ್ದ ಹುಡುಗರಿಗೆಲ್ಲಾ ಯೋಗ್ಯವರಿತು ಆಟದ ಸಾಮಾನುಗಳನ್ನು ನಮ್ಮ ಅಮಲ್ದಾರ್ ಮೆ॥ ಶ್ರೀನಿವಾಸರಾಯರು ದಯಪಾಲಿಸಿದರು. ಆಗ ಸಿಪಾಯಿಗಳೂ ಪೋಲೀಸಿನವರೂ ಡ್ರಿಲ್ ವಗೈರೆ ನಾಡಿದರು. ಬಳಿಕ ಮುಸಲ್ಮಾನ್, ಹಿಂದೂ, ಕ್ರಿಶ್ಚಿಯನ್ ರೇ ಮುಂತಾಗಿ ಅನೇಕ ಜನಗಳಿಗೆ ಬಟ್ಟೆಯನ್ನು ಹಂಚಲಾಯಿತು. ಬಂಗ್ಲೆಯೊಳಗೆ ವಿಕ್ಟೋರಿಯಾ ಮಹಾರಾಣಿಯವರ, ಎಡ್ವರ್ಡ್ ಸಾರ್ವಭೌಮರ, ಶ್ರೀಮನ್ ಮಹಾರಾಜರ ಭಾವಚಿತ್ರಗಳನ್ನು ಎತ್ತರವಾದ ಸ್ಥಳದಲ್ಲಿಟ್ಟು ಅಲಂಕರಿಸಿ ಸರ್ವರೂ ಸೇರಿ ದರ್ಬಾರ್ ನಡಿಸಿದರು. ಬಾಲಕಿಯರು ಹಾಡುಗಳನ್ನು ಹೇಳಿದರು. ಬಾಲಕ ಬಾಲಕಿಯರಿಗೆ ಮಿಠಾಯಿಗಳನ್ನು ಹಂಚಲಾಯಿತು. ನರುವಾಯ ಸಂಗೀತವೂ ನಡಿಸಲ್ಪಟ್ಟಿತು. ಇದೆಲ್ಲಾ ನಡೆದ ಮೇಲೆ ನಮ್ಮ ಅಮಲ್ದಾರ್ ಮೆ॥ ಶ್ರೀನಿವಾಸರಾಯರು ಸಭೆಯವರಿಗೆ ವಿಕ್ಟೋರಿಯಾ ಮಹಾರಾಣಿಯವರ ಆಜ್ಞಾಪತ್ರಿಕೆಯನ್ನು ಓದಿ ಹೇಳಿದರು. ಸರ್ವರೂ ಎದ್ದು ನಿಂತು, ಆ ಮಹನೀಯರುಗಳನ್ನು ಕೊಂಡಾಡುತ್ತಾ, ಅವರ ಶ್ರೇಯಃಪ್ರಾರ್ಥನೆಮಾಡಿ ಜಯಘೋಷಗಳನ್ನು ಮೂರುಸಲ ನಡಿಸಿದರು. ಬಳಿಕ ಗಂಧ, ಹೂವು ತಾಂಬೂಲಾದಿಗಳು ಹಂಚಲ್ಪಟ್ಟು ಸಭೆ ಬರಖಾಸ್ತಾಯಿತು. ಅಷ್ಟು ಹೊತ್ತಿಗೆ ರಾತ್ರಿ ೮ ಘಂಟೆಯಾದ್ದರಿಂದ ನಮ್ಮ ಅಮಲ್ದಾರ್ರು ಕೆಲವುಜನ ದೊಡ್ಡ ಮನುಷ್ಯರೊಡನೆ ಕೋಟೆ ದೇವಸ್ಥಾನಗಳಿಗೆ ಹೋಗಿ ದೇವರ ಉತ್ಸವವನ್ನು ನೋಡಿಕೊಂಡು, ಪೇಟೆಗೆ ಬಂದು ಮುಸಲ್ಮಾನರ ಮಸೀದಿಗಳಿಗೆ ಹೋಗಿ ಅಲ್ಲಿ ನಡೆದ ದೀಪೋತ್ಸವಾದಿಗಳನ್ನು ನೋಡಿ ಶ್ರೇಯಃಪ್ರಾರ್ಥನೆ ವಗೈರೆ ಕೆಲಸಗಳನ್ನು ಜರುಗಿಸಿದರು.

ತಿಪ್ಟೂರು.

ಇದೇ ಮಾಹೆ ೨ನೇ ತಾ. ಸೋಮವಾರ ಸಾಯಂಕಾಲ ನಡಿಯಬೇಕಾದ ಕಾರ್ಯಕ್ಕಾಗಿ ಅಮಲ್ದಾರರು ೩೧ನೇ ಅಕ್ಟೋಬರ್ ಶನಿವಾರ ಬೆಳಿಗ್ಗೆ ಮೆ॥ ಸಾ ಉರುಫುಕುಂಟೆ ಮಲ್ಲೇಶಪ್ಪನವರ ಮಹಡಿಯ ಮೇಲೆ ಊರಿನ ವರ್ತಕರು ಸಾಹುಕಾರರು ಮುಂತಾದ ಪ್ರಮುಖರನ್ನು ಕರೆಸಿ, ಸರ್ಕಾರದಿಂದ ಬಂದ ಹುಕುಂ ವನ್ನು ಇಷ್ಟೆಂದು ತಿಳಿಸಿದರು. ಮತ್ತು ಮಾಡಬೇಕಾದ ಕಾರ್ಯಗಳನ್ನು ಎಲ್ಲಾ ಕೋಮಿನ ಮುಖಂಡರಿಗೂ ತಿಳಿಸಿದರು. ಎಲ್ಲಾ ಮತಸ್ಥರ ಮುಖಂಡರೂ ತಮ್ಮ ತಮ್ಮ ಕೋಟೆ ದೇವಸ್ಥಾನಗಳಲ್ಲಿ ಬಡವರಿಗೆ ಅನ್ನ ಹಾಕಿಸಿದರು. ದರ್ಬಾರು ಕಾಲದಲ್ಲಿ ಸೀರೆ, ಪಂಚೆ, ದಾವಣಿ, ಕುಪ್ಪಸ, ಚೀಟಿಗಳನ್ನು ಕೊಟ್ಟರು. ಸುಮಾರು ಇಲ್ಲಿ ಆ ದಿನ ಉಂಡ ಬಡವರು ೩,೦೦೦ ಕ್ಕಿಂತಲೂ ಜಾಸ್ತಿ. ಬಟ್ಟೆ ೩೦೦ ಜನಕ್ಕಿಂತಲೂ ಹೆಚ್ಚು ಸಿಕ್ಕಿಯದೆ. ಸೋಮವಾರ ಸಾಯಂಕಾಲ ತಾಲ್ಲೂಕ್ ಕಚೇರಿಯ ಮುಂದೆ ಹಾಕಿದ್ದ ದೊಡ್ಡ ಚಪ್ಪರದಲ್ಲಿ ಅಮಲ್ದಾರರೂ, ಸರ್ಕಾರಿ ಅಧಿಕಾರಿಗಳೂ, ಮೆಂಬರುಗಳೂ, ಸ್ಕೂಲ್ ಬಾಲಕ ಬಾಲಕಿಯರೂ, ವರ್ತಕರೂ, ಸಾಹುಕಾರರೂ, ಪ್ರಜೆಗಳಲ್ಲಿ ಅನೇಕರೂ ಒಟ್ಟಾಗಿ ಸೇರಿ

ಸಭೆಯನ್ನು ಅಲಂಕರಿಸಿದರು ದರ್ಬಾರಿನಲ್ಲಿ ಇಸ್ತಿಹಾರನಾಮೆಯನ್ನು ಓದಿದ ನಂತರ ಸ್ಕೂಲ್ ಬಾಲಕಿಯರು ಚಕ್ರವರ್ತಿಯವರ ಶ್ರೇಯೋಭಿವೃದ್ಧಿಯನ್ನು ಸೂಚಿಸುವ ಇಂಪಾದ ಮಂಗಳವನ್ನು ಹಾಡಿದರು ಸ್ಕೂಲಿನ ಬಡ ಬಾಲಕಿಯರಿಗೆ ಪುಸ್ತಕ, ಸ್ಲೇಟುಗಳು ಅಮಲ್ದಾರರ ಅಪ್ಪಣೆಯಂತೆ ಹಂಚಲ್ಪಟ್ಟವು ಬಾಲಕ ಬಾಲಕಿಯರಿಗೆ ಮಿಠಾಯಿ ಖರ್ಜೂರ ಹಂಚಲ್ಪಟ್ಟವು ಗಂಧ ಪುಷ್ಪ ತಾಂಬೂಲ ಹಂಚಿದ ತರುವಾಯ ಬಡವರಿಗೆ ಬಟ್ಟೆಗಳು ಹಂಚಲಾಯಿತು ಕೆತ್ತಲಾದದರಿಂದ ಮರುದಿನ ಮಿಕ್ಕ ಬಟ್ಟೆಗಳನ್ನು ಸುಮಾರು ೨೦೦ ಜನಗಳ ಮೇಲೆಯೇ ಹಂಚಿದರು ಸಾಯಂಕಾಲ ಸ್ಕೂಲ್ ಬಾಲಕರಿಗೆ ಆಟಪಾಟ ವಿನೋದಗಳನ್ನು ಕಲ್ಪಿಸಿದ್ದರು ಗೆದ್ದವರಿಗೆ ಇನಾಂ ಕೊಡಲಾಯಿತು ಅಮಲ್ದಾರರು ಮಾಡಿದ ಏರ್ಪಾಡುಗಳು ಬಹಳ ಸಮರ್ಪಕವಾಗಿದ್ದವು

ಸೋಸಲೆ

ಈ ಉತ್ಸವಕ್ಕಾಗಿ ಕಳೆದ ೨ನೇ ತಾ ಸೋಮವಾರ ಇಲ್ಲಿನ ಅಮಲ್ದಾರ್ ಮ್ಯ|| ಸಿ ಕೃಷ್ಣರಾಯರು ತಾಲ್ಲೂಕ್ ಕಛೇರಿಯಲ್ಲಿ ಒಂದು ದರ್ಬಾರ್ ನಡಿಸಿದರು ಈ ದರ್ಬಾರಿಗೆ ಅ|| ಇಂಜಿನಿಯರ್ ಯವರೂ, ಆಸ್ಪತ್ರೆ ಡಾಕ್ಟರವರೂ, ಪೊಲೀಸ್ ಇನ್ಸ್‌ಪೆಕ್ಟರವರೂ, ಸಬ್ ರಿಜಿಸ್ಟ್ರಾರವರೂ, ಮುನಿಸಿಪಲ್ ಮೆಂಬರುಗಳೂ, ವರ್ತಕರೂ, ಊರಿನ ದೊಡ್ಡ ಮನುಷ್ಯರೂ, ಇಲ್ಲಿನ ಎಲ್ಲಾ ಸ್ಕೂಲುಗಳ ಮಾಸ್ತರುಗಳೂ ದಯಮಾಡಿದ್ದರು ಆ ಕಾಲದಲ್ಲಿ ಅಮಲ್ದಾರ್‌ರವರು ೧೮೫೮ನೇ ಇಸವಿಯಲ್ಲಿ ಪ್ರಸಿದ್ಧಪಡಿಸಿದ ಆಜ್ಞಾಪತ್ರಿಕೆಯನ್ನು ಇಂಗ್ಲೀಷಿನಲ್ಲಿ, ತರುವಾಯ ಶಿರಸ್ತೇದಾರ್ ಮ್ಯ|| ಕುಪ್ಪುರಾಯರು ಕನ್ನಡದಲ್ಲೂ ಸಭಿಕರಿಗೆ ಓದಿ ಹೇಳಿದರು ವೇ| ಲಕ್ಷ್ಮೀನೃಸಿಂಹ ಶಾಸ್ತ್ರಿಗಳು ನವರತ್ನಮಾಲಿಕಾ ಶ್ಲೋಕಗಳನ್ನು ಹೇಳಿ ಆಶೀರ್ವದಿಸಿದರು ಆ ಮೇಲೆ ಮ|| ನಂಜುಂಡ ಶಾಸ್ತ್ರಿಗಳೂ, ಮ| ಸೈಯದ್ ಅಬ್ದುಲ್ ಸಮದ್ ಯವರೂ ಆಜ್ಞಾಪತ್ರಿಕೆಯ ವಿಷಯವಾಗಿ ಉಪನ್ಯಾಸ ಮಾಡಿದರು ಅನಂತರ ಬಾಲಕಿಯರು ಮಹಾರಾಜ್ಞಿಯವರ ಶ್ರೇಯಃಪ್ರಾರ್ಥನೆಯ ಹಾಡುಗಳನ್ನು ದರ್ಬಾರು ರಾಗದಲ್ಲಿ ಮಧುರ ಧ್ವನಿಗಳಿಂದ ಹೇಳಿದರು ಪೊಲೀಸ್ ಮತ್ತು ಬಾರ್ ಶಿಪಾಯಿಗಳ ಡ್ರಿಲ್ ಮತ್ತು ಕುರುಹು ನಡೆದವು ಎಲ್ಲರಿಗೂ ಪುಷ್ಪ ತಾಂಬೂಲವೂ, ಬಾಲಕ ಬಾಲಕಿಯರಿಗೆ ಸಕ್ಕರೆಯೂ ಹಂಚಲ್ಪಟ್ಟು, ಸಭೆಯು ಬರಖಾಸ್ತಾಯಿತು ಮಧ್ಯಾಹ್ನ ೪ ಘಂಟೆಗೆ ಸ್ಕೂಲ್ ಹುಡುಗರಿಗೆ ಆಟಪಾಟಗಳನ್ನು ಕಲ್ಪಿಸಿ, ಗೆದ್ದವರಿಗೆ ಅಮಲ್ದಾರರು ಯೋಗ್ಯ ಬಹುಮಾನಗಳನ್ನು ಕೊಟ್ಟದ್ದಲ್ಲದೆ, ಹಾಡುಗಳನ್ನು ಹೇಳಿದ ಸ್ಕೂಲ್ ಬಾಲಕಿಯರಿಗೂ ತಕ್ಕ ಬಹುಮಾನ ಕೊಟ್ಟರು ಸಾಯಂಕಾಲ ೬ ಗಂಟೆಯಿಂದ ಬಡಬಗ್ಗರಿಗೆ ಭೋಜನಾದಿಗಳೂ ಕುಂಟರು ಕುರುಡರು ಮುದುಕರುಗಳಿಗೆ ಪಂಚೆ, ಸೀರೆ, ವಸ್ತ್ರಗಳನ್ನೂ ಅಮಲ್ದಾರರು ಧರ್ಮಾರ್ಥವಾಗಿ ಕೊಡಿಸಿ, ಎಲ್ಲಾ ದೇವಾಲಯಗಳಲ್ಲೂ ಉತ್ಸವಗಳನ್ನು ನಡಿಸಿದರು

ಹೂಡಕೋಟೆ

ನವಂಬರ್ ತಾ ೨ನೇ ಸೋಮವಾರ ಘನವನ್ನು ಹೊಂದಿದ ಶ್ರೀಮನ್ ಮಹಾರಾಣಿ ವಿಕ್ಟೋರಿಯಾ ಚಕ್ರವರ್ತಿನಿಯವರು ದಯಾಪೂರ್ವಕದಿಂದ ಹಿಂದೂಸ್ಥಾನದ ರಾಜರುಗಳಿಗೂ ಪ್ರಜೆಗಳಿಗೂ ಅನುಗ್ರಹಿಸಿದ ರಾಯಲ್ ಪ್ರಾಕ್ಲಮೇಷನ್ ಎಂಬ ಇಸ್ತಿಹಾರನಾಮೆಯ ೫೦ನೇ ವರುಷದ ಜೂಬಿಲಿ ಮಹೋತ್ಸವವು ಇಲ್ಲಿನ ತಾಲ್ಲೂಕ್ ಕಛೇರಿಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಈ ರಾಜಭಕ್ತಿ ಪ್ರದರ್ಶನೋತ್ಸವ ಕಾಲದಲ್ಲಿ ಕಛೇರಿಯನ್ನು ಬಹಳವಾಗಿ ಶೃಂಗರಿಸಿ, ಶ್ರೀಮನ್ ಮಹಾರಾಣಿ ಚಕ್ರವರ್ತಿನಿಯವರ ಫೋಟೋವನ್ನೂ ಮೈಸೂರು ಮಹಾರಾಜಾ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಫೋಟೋವನ್ನೂ ಇರಿಸಿದ್ದರು ತರುವಾಯ ಸದರಿ ಫೋಟೋಗಳನ್ನು ಪಾಲಕಿಯಲ್ಲಿರಿಸಿ ಅಮಲ್ದಾರರೇ ಮೊದಲಾದ ಎಲ್ಲಾ ಅಧಿಕಾರಿಗಳೂ, ಪ್ರಜೆಗಳೂ ಸೇರಿ ಮೆರವಣಿಗೆ ಹೊರಡಿಸಿ, ಅವಿಮುಕ್ತೇಶ್ವರ ದೇವಾಲಯಕ್ಕೆ ಹೋಗಿ ಅಲ್ಲಿ ಆರಾಧನೆ ಮೊದಲಾದ ಸಕಲ ಕಾರ್ಯಗಳೂ ನಡೆದ ಮೇಲೆ, ಹಿಂತಿರುಗಿ ತಾಲ್ಲೂಕ್ ಕಛೇರಿಗೆ ಬಂದು ಸದರಿ ಫೋಟೋಗಳನ್ನು ಉಚಿತಸ್ಥಾನಗಳಲ್ಲಿಟ್ಟು ರಾಯಲ್ ಪ್ರಾಕ್ಲಮೇಷನ್ ಎಂಬ ಇಸ್ತಿಹಾರನಾಮೆಯನ್ನು ಇಂಗ್ಲೀಷಿನಲ್ಲಿ ಅಮಲ್ದಾರ್ ಮ| ಗುರುರಾಯರೂ, ಕನ್ನಡದಲ್ಲಿ ಶಿರಸ್ತೇದಾರ್ ಮ| ಅಣ್ಣಸ್ವಾಮಿರಾಯರವರೂ ಸಭಿಕರಿಗೆಲ್ಲ ತಿಳಿಯುವಂತೆ ವಿಶದವಾಗಿ ಓದಿದರು ಆ ಕಾಲದಲ್ಲಿ ಮಂಗಳಾರ್ಥವಾಗಿ ೫೧ ಗುಂಡುಗಳು ಹಾರಿಸಲ್ಪಟ್ಟವು ಕನ್ನಡ ಸ್ಕೂಲ್ ಹೆಡ್ ಮಾಸ್ತರೂ, ಹಿಂದೂಸ್ಥಾನ ಸ್ಕೂಲ್ ಹೆಡ್ ಮಾಸ್ತರೂ ಇಂಗ್ಲೀಷ್ ರಾಜ್ಯಭಾರವು ಪ್ರಾರಂಭವಾದ ನಂತರ ಈ ದೇಶದ ಪ್ರಜೆಗಳಿಗೆ ಲಭಿಸಿದ ಸುಖವನ್ನೂ, ಅವರ ಮಹಿಮಾತಿಶಯಗಳನ್ನೂ ಕುರಿತು ಆಯಾಯ ಭಾಷೆಗಳಲ್ಲಿ ಉಪನ್ಯಾಸಗಳನ್ನು ಮಾಡಿದರು ಅನಂತರ ಹುಡುಗರಿಂದಲೂ, ಹುಡುಗಿಯರಿಂದಲೂ ಮಂಗಳವೇ ಮೊದಲಾದ ಗಾನವು ನಡೆಯಿತು ಆಗ ಅಲ್ಲಿ ಸೇರಿದ್ದ ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳನ್ನು ಕೊಟ್ಟರು ತರುವಾಯ ದರ್ಬಾರನ್ನು ಬರಖಾಸ್ತು ಮಾಡಿ, ಅಮಲ್ದಾರರು ಎಲ್ಲರಿಂದೊಡಗೂಡಿ ಛತ್ರದ ಬಳಿ ಬಂದು ಬಡಬಗ್ಗರನ್ನು ಭೋಜನದಿಂದ ತೃಪ್ತಿಪಡಿಸಿದ್ದಲ್ಲದೆ, ಸ್ಕೂಲ್ ಹುಡುಗರಿಂದ ಆಟಪಾಟ ಮೊದಲಾದ ತಮಾಷೆಗಳನ್ನು ನಡಿಸಿ, ಅವರುಗಳಿಗೆ ಇನಾಮನ್ನು ದಯಪಾಲಿಸಿದ್ದಲ್ಲದೆ ಮಿಠಾಯಿಯನ್ನೂ ಹಂಚಿದರು

ಬಿಳ್ಳೂರು

ನವಂಬರ್ ೨ನೇ ತಾ ಇಲ್ಲಿಯೂ ರಾಯಲ್ ಪ್ರಾಕ್ಲಮೇಷನ್ ಜೂಬಿಲಿಯ ಸಂತೋಷೋತ್ಸವದ ಕಾರ್ಯಗಳು ನಮ್ಮ ಅಮಲ್ದಾರರ ಮೂಲಕ ಆಚರಿಸಲ್ಪಟ್ಟವು ಸರ್ಕಾರದಿಂದ ಬಂದ ಹಣದ ಜೊತೆಗೆ ಈ ಊರಿನ ಮೆಂಬರ್‌ಗಳೇ ಮುಂತಾದ ದೊಡ್ಡ ಮನುಷ್ಯರು ಸ್ವಲ್ಪ ಹಣವನ್ನು ಕೊಟ್ಟು ಈ ಊರಿನ ಬಡಬಗ್ಗರಿಗೂ ಬ್ರಾಹ್ಮಣರೇ ಮುಂತಾದವರಿಗೂ ಭೋಜನಾದಿಗಳು ಜರುಗುವಂತೆ ಮಾಡಿದ್ದಲ್ಲದೆ, ಎಡವರಿಗೆ ವಸ್ತ್ರದಾನಗಳನ್ನೂ ಮಾಡಿದರು ದೇವಸ್ಥಾನಗಳಲ್ಲಿ ಪೂಜೆಯೂ ಸಾರ್ವಭೌಮ ಸರ್ಕಾರದವರ ಶ್ರೇಯಃಪ್ರಾರ್ಥನೆಗಳೂ ನಡೆದವು ಸಾಯಂಕಾಲ ಹಿಂದೂ ಮುಸಲ್ಮಾನ್ ಸ್ಕೂಲುಗಳ ಹುಡುಗರಿಂದ ಆಗಸಾಧನೆಯ ಆಟಗಳು ನಡೆಸಲ್ಪಟ್ಟು ಇನಾಮುಗಳು ಕೊಡಲಾಯಿತು ಆಟಗಳಿಗಲ್ಲ ಎ ವಿ ಸ್ಕೂಲ್ ಹೆಡ್ ಮಾಸ್ತರೂ ಉಪಾಧ್ಯಾಯರುಗಳೂ ಸರ್ಕಾರಿ ಉದ್ಯೋಗಸ್ಥರೇ ಮುಂತಾದವರೂ ತುಂಬಾ ಪ್ರೋತ್ಸಾಹವನ್ನು ತೋರಿಸಿದರು ಎಲ್ಲಾ ಸ್ಕೂಲುಗಳ ಬಾಲಕ ಬಾಲಕಿಯರಿಗೆ ಫಲಾಹಾರಗಳು ಹಂಚಲ್ಪಟ್ಟವು ಇದಲ್ಲದೆ ಉರ್ದು ಮುನಿಸಿಪಲ್ ಸ್ಕೂಲಿನ ಬಡ ಹುಡುಗರಿಗೂ ನಮ್ಮ ಅಮಲ್ದಾರರು ಚಿತ್ತಶುದ್ಧಿಯಿಂದ ಅವರಿಗೆ ವಸ್ತ್ರಗಳನ್ನು ದಾನಮಾಡಿದ್ದಲ್ಲದೆ ಸಕ್ಕರೆ ಬಾಳೇ ಹಣ್ಣುಗಳನ್ನೂ ಹಂಚಿ ಎಲ್ಲರನ್ನೂ ಸಂತೋಷಪಡಿಸಿದರು ಮತ್ತು ಅವರಿಂದ ಸಾರ್ವಭೌಮರ ಮೇಲೆ ಕಲ್ಪಿಸಿದ್ದ ಗೀತವನ್ನು ಹಾಡಿಸಿದರು ಬಂದಿದ್ದ ಎ ವಿ ಸ್ಕೂಲ್ ಹೆಡ್ ಮಾಸ್ತರೂ ಸರ್ಕಾರದ ಉದ್ಯೋಗಸ್ಥರೂ ಮೆಂಬರುಗಳೂ, ಸಾಹುಕಾರರೂ, ದೊಡ್ಡ ಮನುಷ್ಯರೇ ಮುಂತಾದವರೆಲ್ಲಾ ಬಹಳ ಸಂತೋಷಪಟ್ಟು, ಹುಡುಗರನ್ನು ಪ್ರೋತ್ಸಾಹಪಡಿಸಿದರು ರಾತ್ರಿ ೮ ಘಂಟೆಯ ಮೇಲೆ ಕಛೇರಿಯಲ್ಲಿ ಅಮಲ್ದಾರರು ದರ್ಬಾರನ್ನು ನಡಿಸಿ ಘನವನ್ನು ಹೊಂದಿದ ವಿಕ್ಟೋರಿಯಾ ಮಹಾರಾಜ್ಞಿಯವರ ಪ್ರಸಿದ್ಧ ಪತ್ರಿಕೆಯನ್ನು ಓದಿ ವಿವರಿಸಿದರು ತರುವಾಯ ದರ್ಬಾರಿಗೆ ಬಂದಿದ್ದ ಮಹನೀಯರಿಗೆಲ್ಲಾ—ನಾವು ನಮ್ಮ ರಾಜಭಕ್ತಿಯನ್ನು ಮನಃಪೂರ್ವಕವಾಗಿ ತೋರಿಸಿ ಈ ಉತ್ಸವವನ್ನು ನೆರವೇರಿಸುವುದು ನಮ್ಮ ಕರ್ತವ್ಯವಾಗಿದೆ ಎಂದು ಹೇಳಿದ ಮೇಲೆ ಸಭಿಕರೆಲ್ಲಾ ಒಂದೇ ಸ್ವರದಿಂದಲೂ ಸಂತೋಷದಿಂದಲೂ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರಿಗೂ, ಶ್ರೀಮನ್ ಮಹಾರಾಜರವರಿಗೂ ಶ್ರೇಯಸ್ಸನ್ನು ಬಯಸಿ, ಜಯಘೋಷಗಳನ್ನು ಮಾಡಿದರು ಕಡೆಯಲ್ಲಿ ಸಭೆಯಲ್ಲಿ ಹಾಜರಾಗಿದ್ದ ದೊಡ್ಡ ಮನುಷ್ಯರಿಗೆಲ್ಲಾ ಪುಷ್ಪ ತಾಂಬೂಲಾದಿಗಳು ಕೊಡಲ್ಪಟ್ಟವು ಅದೇ ರಾತ್ರಿ ವಾದ್ಯಗಳೊಡನೆ ದೇವರ ಉತ್ಸವಗಳೂ ನಡಿಸಲ್ಪಟ್ಟವು ಈ ಜೂಬಿಲಿ ಉತ್ಸವವನ್ನು ಸಂತೋಷದಿಂದ ನೆರವೇರಿಸಿದ್ದಕ್ಕಾಗಿ ನಾವೆಲ್ಲರೂ ಅಮಲ್ದಾರರಿಗೆ ತುಂಬಾ ವಂದನೆಗಳನ್ನು ಸಲ್ಲಿಸುತ್ತೇವೆ

ಮಂಡ್ಯ

ಕಳೆದ ೨ನೇ ತಾ ಸೋಮವಾರ ರಾಯಲ್ ಪ್ರಾಕ್ಲಮೇಷನ್ ಡೇ ಉತ್ಸವವು ಇಲ್ಲಿಯೂ ನಡಿಸಲಾಯಿತು ಅಮಲ್ದಾರ್ ಮ್ಯ|| ಜಿ ನಾರಾಯಣರಾಯರು ಭಾನುವಾರ ಅಧಿಕಾರಿಗಳನ್ನೂ ಮ್ಯುನಿಸಿಪಲ್ ಮೆಂಬರುಗಳನ್ನೂ ಪ್ರಜೆಗಳನ್ನೂ ಕೋಮಿನ ಮುಖ್ಯಸ್ಥರನ್ನೂ ಕರೆಸಿಕೊಂಡು, ಉತ್ಸವವನ್ನು ವಿಜೃಂಭಣೆಯಿಂದ ನಡಿಸುವದಕ್ಕೆ ತಕ್ಕ ಏರ್ಪಾಡು ಮಾಡಿದರು ಮಾರನೇ ದಿನ ಬೆಳಿಗ್ಗೆ ಪಟ್ಟದ ತಾಲ್ಲೂಕ್ ಕಛೇರಿ, ಟ್ರಾವಲರ್ಸ್ ಬಂಗಲೆಗಳನ್ನು ಅಲಂಕರಿಸಿ ಎಲ್ಲಾ ಮೆಂಬರುಗಳನ್ನೂ ಕೋಮಿನ ಜನರನ್ನೂ ಅಧಿಕಾರಿಗಳನ್ನೂ ಬಂಗಲೆಗೆ ಕರೆಸಿ ಅವರುಗಳ ಎದುರಿಗೆ ಎಲ್ಲಾ ಕೋಮಿನ ಬಡಬಗ್ಗರಿಗೆ ದವಸ ಮತ್ತು ಪಂಚೆ ಸೀರೆಗಳನ್ನು ಹಂಚಿದರು ಮಧ್ಯಾಹ್ನ ಮಿಡ್ಲ್ ಗೌರ್ನಮೆಂಟ್, ಹಿಂದೂಸ್ಥಾನಿ, ಪಂಚಮರ ಸ್ಕೂಲುಗಳ ಬಾಲಕ ಬಾಲಕಿಯರುಗಳಿಗೆ ಆಟಪಾಟಗಳನ್ನು ನಡಿಸಿ ಬಹುಮಾನಗಳನ್ನು ದಯಪಾಲಿಸಿದ್ದಲ್ಲದೆ ಮಿಠಾಯಿ ಬಾಳೆಹಣ್ಣು ಸಕ್ಕರೆಗಳನ್ನು ಹಂಚಿದರು ಸರ್ಕಸ್, ಟಗರಿನ ಕಾಳಗ ಮುಂತಾದವುಗಳನ್ನು ನಡಿಸಿದರು ಸಾಯಂಕಾಲ ೫ ಘಂಟೆಗೆ ದರ್ಬಾರು ನಡಿಸಿ ಅಮಲ್ದಾರರು ಪ್ರಸಿದ್ಧ ಪತ್ರಿಕೆಯ ಒಂದೊಂದು ವಿಷಯವನ್ನು ಎಲ್ಲರಿಗೂ ವಿವರವಾಗಿ ತಿಳಿಸಿದರು ಅನಂತರ ಮಿಡ್ಲ್ ಸ್ಕೂಲ್ ಹೆಡ್ ಮಾಸ್ಟರ್ ಮ| ಎಸ್ ಎನ್ ಕೃಷ್ಣಯ್ಯನವರು ಇಂಡಿಯಾ ದೇಶದ ಪೂರ್ವಸ್ಥಿತಿ ಮತ್ತು ಈಗಿನ ಸ್ಥಿತಿಯನ್ನು ಕುರಿತು ಉಪನ್ಯಾಸ ಮಾಡಿದರು ಸಬ್ ರೆಜಿಸ್ಟ್ರಾರ್ ಮ| ಚಕ್ರಪಾಣಿರಾಯರು ಸಭಿಕರಿಂದ ಬ್ರಿಟಿಷ್ ಚಕ್ರವರ್ತಿ ಸಾರ್ವಭೌಮರಿಗೂ ನಮ್ಮನ್ನು ಆಳುವ ಶ್ರೀಮನ್ ಮಹಾರಾಜರವರಿಗೂ ಜಯಘೋಷವನ್ನು ಮಾಡಿಸಿದರು ವೇ| ಶ್ಯಾಮಾಚಾರ್ಯರು ಸಂಸ್ಕೃತ ಪದ್ಯಗಳನ್ನು ಹಾಡಿ ವಂದನಾಪತ್ರಿಕೆಗಳನ್ನೂ ಹಿಂದೂಸ್ಥಾನಿ ಬಾಲಕರು ಮಂಗಳಪದ್ಯವನ್ನು ಹಾಡಿ ವಂದನಾಪತ್ರಿಕೆಯನ್ನೂ ಸಮರ್ಪಿಸಿದರು ಬಾಲಕಿಯರು ಮಂಗಳಕರವಾದ ಹಾಡುಗಳನ್ನು ಹಾಡಿದರು ಮಿಡ್ಲ್ ಇಂಗ್ಲೀಷ್ ಸ್ಕೂಲಿನ ಇಬ್ಬರು ಬಾಲಕರು ಕರ್ಣಾನಂದವಾದ ಭಾಷಣಗಳನ್ನು ಮಾಡಿದರು ಸಂಗೀತ ವಾದ್ಯಗಳು ನಡಿಸಲ್ಪಟ್ಟವು ನಂತರ ಸಭಿಕರೆಲ್ಲಾ ಬ್ರಿಟಿಷ್ ಚಕ್ರವರ್ತಿ ಸಾರ್ವಭೌಮರಿಗೂ ಶ್ರೀಮನ್ ಮಹಾರಾಜರವರಿಗೂ ಆಯುರಾರೋಗ್ಯಗಳು ದಯಪಾಲಿಸಲಿ ಎಂದು ಪ್ರಾರ್ಥಿಸಿದರು ಸಭಿಕರಿಗೆಲ್ಲಾ ಪುಷ್ಪ ಗಂಧ ತಾಂಬೂಲಾದಿಗಳನ್ನು ಹಂಚಿದ ಮೇಲೆ ಸಭೆಯು ಬರಖಾಸ್ತಾಯಿತು ಅನಂತರ ನಮ್ಮ ಅಮಲ್ದಾರರೂ ಸಭಿಕರೂ ಸೇರಿ ವಾದ್ಯಗಳೊಂದಿಗೆ ಮೆರವಣಿಗೆ ಬಂದು ತಮ್ಮ ಕೈಗಳಲ್ಲಿ ಬ್ರಿಟಿಷ್ ಚಕ್ರವರ್ತಿಯವರ ಶ್ರೀಮನ್ ಮಹಾರಾಜರವರ ಫೋಟೋವನ್ನು ಎಲ್ಲಾ ಜನರಿಗೂ ತೋರಿಸಿದರು ದೇವಸ್ಥಾನಗಳಲ್ಲಿ ಪೂಜೆ ಮುಂತಾದವು ನಡೆದವು ಹೀಗೆ ಇಲ್ಲಿನ ಜನರೆಲ್ಲರೂ ತಮಗಿರುವ ರಾಜಭಕ್ತಿಯನ್ನು ತೋರ್ಪಡಿಸಿ ಆ ದಿನವನ್ನು ಮಹಾ ಸಂತೋಷದಿಂದ ಕಳೆದರು

ಯಳಂದೂರು

ಇಲ್ಲಿನ ಅಮಲ್ದಾರ್ ಮ| ಸುಬ್ರಹ್ಮಣ್ಯರ ಮುತುವರ್ಜಿಯಿಂದ ಸದರಿ ಉತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು ಈ ವಿಧವಾಗಿ ಉತ್ಸವ ನಡೆಸಬೇಕೆಂಬ ವಿಷಯವನ್ನು ಜನಗಳಿಗೆ ತಿಳಿಸುವುದಕ್ಕೋಸ್ಕರ ಅಮಲ್ದಾರರು ಊರಿನ ಪ್ರಮುಖರನ್ನೆಲ್ಲಾ ಕರೆಸಿ, ಅವರಿಗೆಲ್ಲಾ ತಿಳಿಸಿ ಆ ದಿನ ಕೂಪಕ್ಕೆ ಹೋಗಿ ಅಲ್ಲಿ ಸಹ ನಡಿಯುವಂತೆ ಏರ್ಪಾಡು ಮಾಡಿ, ವಾಪಸು ಬಂದರು ಮಾರನೇ ದಿನ ಅಂದರೆ ತಾ ೨ರಲ್ಲಿ ಬೆಳಿಗ್ಗೆ ತಾಲ್ಲೂಕು ಕಛೇರಿಯಲ್ಲಿ ಈ ಊರಿನ ದೊಡ್ಡ ಮನುಷ್ಯರನ್ನು ಬರಮಾಡಿಕೊಂಡು ಬಡಬಗ್ಗರಿಗೆಲ್ಲಾ ಬಟ್ಟೆ ವಗ್ಗರಣೆ ಹಂಚಿದರು ಕಳಶ ತೋರಣಗಳಿಂದ ಕೂಡಿದ ಎ ವಿ ಸ್ಕೂಲಿನಲ್ಲಿ ಮಧ್ಯಾಹ್ನ ೪ ಗಂಟೆಗೆ ಸಭೆ ಸೇರಿತು ಸಭೆಗೆ ಪೋಸ್ಟ್ ಸೂಪರಿಂಟೆಂಡರು ಸಬ್ ಅಸಿಸ್ಟೆಂಟ್ ಸರ್ಜನರೂ, ಊರಿನ ಪ್ರಮುಖರು, ಬಾಲಕ ಬಾಲಕಿಯರು, ಪೋಷಕರು ಸಹ ಸುಮಾರು ೪೦೦ ಜನಗಳ ಮೇಲೆ ಕೂಡಿದ್ದರು ಎತ್ತರವಾದ ಸ್ಥಳದಲ್ಲಿ ಟೇಬಲ್ ಮೇಲೆ ಮಧ್ಯೆ ಚಕ್ರವರ್ತಿ ಸಾರ್ವಭೌಮರ ಫೋಟೋವೂ, ಬಲಭಾಗದಲ್ಲಿ ಶ್ರೀಮತ್ ಚಕ್ರವರ್ತಿನಿಯವರ ಫೋಟೋವೂ ಎಡಗಡೆ ಪಕ್ಕದಲ್ಲಿ ನಮ್ಮ ಶ್ರೀಮನ್ ಮಹಾರಾಜಾ ಬಹದ್ದೂರವರ ಫೋಟೋವೂ, ಕುರ್ಚಿಗಳಾಗಿ ಇಡಲ್ಪಟ್ಟಿದ್ದವು ಅವಕ್ಕೆ ಹೂವಿನ ಹಾರಗಳನ್ನು ಹಾಕಿ ಅಲಂಕರಿಸಿದ್ದರು ಕೆಳಭಾಗದಲ್ಲಿ ಆಗ್ರಾಸನವನ್ನು ಅಮಲ್ದಾರ್ ಮ| ಸುಬ್ರಹ್ಮಣ್ಯರು ವಹಿಸಿದ್ದರು ಸಭೆಯು ಪ್ರಾರಂಭವಾದ ಕೂಡಲೆ ಸಭಾಪತಿಗಳು ಇಂಗ್ಲೀಷಿನಲ್ಲಿ ೧೮೫೮ನೇ ವರುಷದ ಪ್ರಸಿದ್ಧ ಪತ್ರಿಕೆಯನ್ನು ಓದಿ ಹೇಳಿದರು ಇದು ಮುಗಿದ ಕೂಡಲೆ ಅದನ್ನೇ ಸರಳ ಕನ್ನಡದಲ್ಲಿ ಸ್ಕೂಲ್ ಮಾಸ್ತರು ಮ|| ಮಲ್ಲಪ್ಪನವರಿಂದ ಓದಲ್ಪಟ್ಟಿತು ಅನಂತರ ಪ್ರಿನ್ಸ್ ಗ್ಯಾರಮೆಂಟವರು ಇಂಡಿಯಾ ದೇಶದ ಪ್ರಜೆಗಳಿಗೆ ಊಟ ಮಾಡಿರುವ ಉಪಕಾರದ ವಿಷಯವಾಗಿ ಪಟ್ಟಣ ಪತ್ರಿಕೆಗಳು ಕನ್ನಡದಲ್ಲಿ ವೇ| ಭವಾನಿ ಶಾಸ್ತ್ರಿಗಳಿಂದಲೂ, ಹಿಂದೂಸ್ಥಾನಿಯಲ್ಲಿ ಇಲ್ಲಿನ ಹಿಂದೂಸ್ಥಾನಿ ಸ್ಕೂಲ್ ಮಾಸ್ತರಿಂದಲೂ ಓದಲ್ಪಟ್ಟವು ಇವೆಲ್ಲಾ ನಡೆದ ನಂತರ ಚಕ್ರವರ್ತಿ ಸಾರ್ವಭೌಮರ ಮೇಲೂ, ಶ್ರೀಮನ್ ಮಹಾರಾಜಾ ಬಹದ್ದೂರವರ ಮೇಲೂ ಬಾಲಕಿಯರುಗಳಿಂದ ಪದಗಳು ಹೇಳಲ್ಪಟ್ಟವು ಇದು ಮುಗಿದ ಕೂಡಲೆ ಪೋಲೀಸಿನವರ ಸುಲಟು ನಡೆಯಿತು ಅನಂತರ ಸಭೆಯಲ್ಲಿ ಒಂದೇ ಸಮನಾಗಿ ಗಾಡ್ ಸೇವ್, ಹಿಪ್, ಹುರ್ರೇ ಎಂಬ ಶಬ್ದದಿಂದ ಕೂಡಿಹೋಗಿತ್ತು ಇದು ಪೂರೈಸಿದ ನಂತರ ಸಭಿಕರಿಗೆ ಗಂಧಪುಷ್ಪ ತಾಂಬೂಲವೂ, ಬಾಲಕ ಬಾಲಕಿಯರುಗಳಿಗೆ ಮಿಠಾಯಿ ಸಕ್ಕರೆ ತಿಂಡಿ ಸಾಮಾನೂ ಹಂಚಲ್ಪಟ್ಟವು ನಂತರ ಸಭೆ ಬರಖಾಸ್ತಾಯಿತು ಇದು ಮುಗಿದ ಮೇಲೆ ಸ್ಕೂಲ್ ಹಿಂದುಗಡೆ ಮೈದಾನದಲ್ಲಿ ಬಾಲಕರುಗಳ ಆಟಪಾಟಗಳು ನಡೆದವು ಇದು ಆಗುವ ಹೊತ್ತಿಗೆ ೬ ಗಂಟೆಯಾಯಿತು ಅನಂತರ ಎಲ್ಲರೂ ಜಯಘೋಷ ಮಾಡುತ್ತಾ ಹಗಲುಬತ್ತಿ ಬೆಳಕಿನೊಂದಿಗೆ ಈ ಊರಿನಲ್ಲಿರತಕ್ಕ ಆ ದೇವಸ್ಥಾನಗಳಲ್ಲಿಯೂ ದೀಪಾರಾಧನೆ, ಮಂಗಳಾರತಿ, ರಾಜಾಶೀರ್ವಾದಗಳನ್ನು ತೀರಿಸಿಕೊಂಡು, ಎಲ್ಲರೂ ರಾತ್ರಿ ೯ ಗಂಟೆಗೆ ಅವರವರ ಮನೆಗೆ ತೆರಳಿದರು ಇಲ್ಲಿ ಮ| ಶಾಂತಪ್ಪಶೆಟ್ಟರು ಮತ್ತು ಮಹಮ್ಮದೀಯರಿಗಳಿಂದ ೩೦೦—೪೦೦ ಜನರುಗಳಿಗೆ ಅನ್ನದಾನ ನಡಿಸಲ್ಪಟ್ಟಿತು

ಮಧುಗಿರಿ.

ಘನವನ್ನು ಹೊಂದಿದ ದಿವಂಗತ ಶ್ರೀ ವಿಕ್ಟೋರಿಯಾ ಮಹಾರಾಜ್ಞಿಯವರು ಹಿಂದೂಸ್ಥಾನದ ಮಹಾರಾಜರುಗಳಿಗೂ ಪ್ರಜೆಗಳಿಗೂ ಪ್ರಸಿದ್ಧಪತ್ರಿಕೆಯನ್ನು ದಯಪಾಲಿಸಿದ ಲಾಗಾಯತು ಐವತ್ತು ವರುಷಗಳು ಪೂರೈಸಿದುದರ ಜ್ಞಾಪಕಾರ್ಥವಾಗಿ ನಮ್ಮ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್ರವರ ಆಜ್ಞಾನುಸಾರವಾಗಿ ತಾ ೨ನೇ ದಿನ ಡೆ| ಅ|| ಕಮಿಷನರು ಆರ್ಯ ಬಾಲಿಕಾ ಪಾಠಶಾಲೆಯಲ್ಲಿ ಮೀಟಿಂಗ್ ನಡಿಸಿ ಈ ಮಹೋತ್ಸವದ ವಿಷಯವನ್ನು ಸಭೆಯವರಿಗೆ ತಿಳಿಸಿ, ಸರ್ಕಾರದವರು ಕೊಟ್ಟ ಮತ್ತು ಚಂದಾ ಎತ್ತಿದ ಹಣವನ್ನು ವಿನಿಯೋಗಿಸಲು ಮ| ಪ್ಲೀಡರ್ ರಾಮಸ್ವಾಮಯ್ಯರವರು, ಮ್ಯ|| ಶಿರಸ್ತೇದಾರ್ ಸೋಮಣ್ಣನವರು, ಮ|| ತಾ ಪುಟ್ಟಹರಿಯಪ್ಪನವರು, ಮ|| ತಾ ನಂಜುಂಡಶೆಟ್ಟರುಗಳನ್ನು ಬಡಬಗ್ಗರಿಗೆ ಅನ್ನವಸ್ತ್ರಗಳು ಸಹಾ ಕೊಡಲೂ, ಹೆ| ಮಾಸ್ತರೂ ಸ್ಕೂಲ್ ಮಾಸ್ತರುಗಳೂ ಸೇರಿ ಬಾಲಕ ಬಾಲಕಿಯರಿಗೆ ಆಟಪಾಟಗಳಿಂದ ವಿನೋದಪಡಿಸಲೂ ನಡಿಸಲ್ಪಟ್ಟಿತು ತಾ ೧ರಲ್ಲಿ ಜಮಾಯಿಸಲ್ಪಟ್ಟ ನೂರೈವತ್ತು ರೂಪಾಯಿ ಪೈಕಿ ಬಡಬಗ್ಗರ ಅನ್ನವಸ್ತ್ರ ದಾನಗಳಿಗೋಸ್ಕರ ೬೫ ರೂ , ದೇವರ ಅಭಿಷೇಕೋತ್ಸವಾದಿಗಳಿಗೋಸ್ಕರ ೩೦ ರೂ , ಸ್ಕೂಲುಗಳ ಬಾಲಕ ಬಾಲಕಿಯರ ತಿಂಡಿ ಮತ್ತು ಆಟಪಾಟಗಳ ಬಹುಮಾನಕ್ಕೋಸ್ಕರ ೫೦ ರೂ , ಈ ರೀತಿ ಅಮಲ್ದಾರರು ವಿಲೇಮಾಡಿದರು ತಾ ೨ನೇ ಸೋಮವಾರ ಬೆಳಿಗ್ಗೆ ೬ ಘಂಟೆ ಎ ವಿ ಸ್ಕೂಲ್ ಕಂಪೌಂಡಿನಲ್ಲಿ ಅ| ಕಮಿಷನರೂ, ಮುನ್ಸಿಫರೂ, ಅಮಲ್ದಾರರೂ, ಸಬ್ ರಿಜಿಸ್ಟ್ರಾರರೇ ಮೊದಲಾದ ಅಧಿಕಾರಿಗಳೂ ಸೇರಿ, ೧೦ ಘಂಟೆವರಿಗೂ ಸ್ಕೂಲ್ ಬಾಲಕರಿಂದ ಫುಟ್‌ಬಾಲ್ ಮತ್ತು ಕ್ರಿಕೆಟ್ ಮ್ಯಾಚ್ ಮುಂತಾದವನ್ನು ಆಡಿಸಿ, ಸಂಜು ದಿಟ್ಟದ ಛತ್ರಕ್ಕೆ ದಯಮಾಡಿ, ಅಲ್ಲಿ ಜಮಾಯಿಸಿದ್ದ ಬಡ ಜನರಿಗೂ, ಅಂಗಹೀನರಿಗೂ ವಸ್ತ್ರದಾನವನ್ನು ಮಾಡಿ, ಬಡ ಬ್ರಾಹ್ಮಣರಿಗೆ ಸ್ವಯಂಪಾಕವನ್ನು ಕೊಡಿಸಿದರು ಸುಮಾರು ೫೦೦ ಜನರನ್ನು ಭೋಜನಾದಿಗಳಿಂದ ತೃಪ್ತಿಪಡಿಸಿದರು ಮಧ್ಯಾಹ್ನ ಸುಮಾರು ೧ ಘಂಟೆಗೆ ಎ ವಿ ಸ್ಕೂಲ್ ಕಂಪೌಂಡಿನಲ್ಲಿ ಅಧಿಕಾರಿಗಳೂ, ನೌಕರರೂ, ಪ್ಲೀಡರುಗಳೂ ಮ್ಯುನಿಸಿಪಲ್ ಮೆಂಬರುಗಳೂ, ವರ್ತಕರೂ ಜಮೀನ್ದಾರರೇ ಮೊದಲಾದ ವಿಶಿಷ್ಟ ಜನರು ದಯಮಾಡಿಸಿದ ನಂತರ ಬಾಲಕ ಬಾಲಕಿಯರಿಂದ ಆಟಪಾಟಗಳನ್ನು ಮಾಡಿಸಿದರು ಬಾಲಕಿಯರಿಂದ ಕರ್ಣಾನಂದವಾದ ಹಾಡಿಕೆಗಳು ನಡಿಸಲ್ಪಟ್ಟವು ಘನವನ್ನು ಹೊಂದಿದ ದಿವಂಗತ ಶ್ರೀ ವಿಕ್ಟೋರಿಯಾ ಮಹಾರಾಜ್ಞಿಯವರು ೧೮೫೮ನೇ ಇಸವಿಯಲ್ಲಿ ಹಿಂದೂಸ್ಥಾನ ಮಹಾರಾಜರುಗಳಿಗೂ ಪ್ರಜೆಗಳಿಗೂ ದಯಪಾಲಿಸಿರುವ ಪ್ರಸಿದ್ಧ ಪತ್ರಿಕೆಯನ್ನು ಬಾಲಕ ಬಾಲಕಿಯರಿಗೆ ಸಭೆಯಲ್ಲಿ ತಿಳಿಯಪಡಿಸಿದರು ಅನಂತರ ಮಿಡ್ಲ್ ಸ್ಕೂಲಿನ ಬಾಲಕಿಯರು ವಿದ್ಯಾ ವಿಷಯದಲ್ಲಿ ಡೈಲಾಗ್ ನಡಿಸಿದರು ವಿಕ್ಟೋರಿಯಾ ಮಹಾರಾಜ್ಞಿಯವರನ್ನು ಸ್ತೋತ್ರಮಾಡಿ, ಎಡ್ವರ್ಡ್ ಚಕ್ರವರ್ತಿ ಸಾರ್ವಭೌಮರ ಮತ್ತು ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್ರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಮಂಗಳವನ್ನು ಹೇಳಿದರು ಅನಂತರ ಅ| ಕ| ಆಫೀಸ್ ನೌಕರರಿಂದ ರಾಜಮಂತ್ರವೂ ನಡೆಸಲ್ಪಟ್ಟವು ಒಳಕ ಬಾಲಕ ಬಾಲಕಿಯರಿಗೆ ಬಹುಮಾನಗಳನ್ನು ದಯಪಾಲಿಸಿದರು ಸುಮಾರು ೧ ೧/೨ ವರಿಗೂ ಲಡ್ಡು ಮತ್ತು ಮಿಠಾಯಿ ಹಂಚಲ್ಪಟ್ಟಿತು ಸಭಿಕರನ್ನು ಗಂಧಪುಷ್ಪ ತಾಂಬೂಲಾದಿಗಳಿಂದ ಮರ್ಯಾದೆಮಾಡಿ, ಸುಮಾರು ೫ ಘಂಟೆಗೆ ಸಭೆಯು ಬರಖಾಸ್ತಾಯಿತು ೯ ಘಂಟೆ ಸಹ ಗ್ರಾಮದಲ್ಲಿ ಎಲ್ಲಾ ಮನೆಗಳ ಮುಂದೆ ದೀಪೋತ್ಸವವೂ ದೇವರುಗಳ ಉತ್ಸವಾದಿಗಳೂ ಸುಮಾರು ೧ ಘಂಟೆಯ ವರಿಗೂ ನಡೆಯಿತು ದೇವಾಲಯಗಳಲ್ಲಿ ಮಂತ್ರಪುಷ್ಪ ಮತ್ತು ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿದರು ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲ ಸಕ್ಕರೆ ಮೊದಲಾದವನ್ನು ಹಂಚಿದ ಬಳಿಕ ಮೇಲೆ ಸಮಸ್ತರೂ ತೆರಳಿದರು

ಚಿಂತಾಮಣಿ.

ಇದೇ ನವಂಬರ್ ತಾ ೨ರಲ್ಲಿ ನಡೆದ ಮಹೋತ್ಸವಕ್ಕಾಗಿ ತಾಲ್ಲೂಕ್ ಅಮಲ್ದಾರರು ಕಳೆದ ತಾ ೨೧ನೇ ಶನಿವಾರ ಮೀಟಿಂಗ್ ನಡಿಸಿದರು ಪ್ರಜೆಗಳು ಅವರವರ ಧನ ಧಾನ್ಯ ವಸ್ತ್ರಗಳ ಮೂಲಕ ಸಹಾಯಮಾಡುವುದಾಗಿ ಸಂತೋಷದಿಂದ ಒಪ್ಪಿದರು ಇದಕ್ಕಾಗಿ ಮ| ಗೌಡ ನಾರಾಯಣಸ್ವಾಮಿ ಶೆಟ್ಟರು ಪ್ರೆಸಿಡೆಂಟರಾಗಿಯೂ, ಲಕ್ಷ್ಮೀನಾರಾಯಣನವರು ಸೆಕ್ರೆಟರಿಯಾಗಿಯೂ, ಕೆಂಪಣ್ಣನವರು, ಲಕ್ಷ್ಮೀನಾರಾಯಣಶೆಟ್ಟರು, ರಾಮಣ್ಣನವರು, ಸೈಯದ್ ಖಾನ್ ಸಾಹೇಬರು ವೆಂಕಟಪ್ಪನವರು ತಿಮ್ಮಪ್ಪನವರು ಕಮಿಟಿ ಮೆಂಬರುಗಳಾಗಿಯೂ ನೇಮಿಸಲ್ಪಟ್ಟರು ಅಮಲ್ದಾರರು ಭಾನುವಾರ ಸಂತೆಯಲ್ಲಿ ತಮಟೆಯಿಂದ ಸೋಮವಾರ ಎಲ್ಲಾ ಗ್ರಾಮಗಳಲ್ಲಿರುವ ಬಡವರೂ ಇಲ್ಲಿಗೆ ಊಟಕ್ಕೆ ಬರಬೇಕೆಂದು ಸಾರಿಸಿದರು ಸೋಮವಾರ ಎಲ್ಲರಿಗೂ ಪೇಟೆ ಬೀದಿಗಳಲ್ಲಿ ಉತ್ಸವ ನಡೆಯಿತು ಸ್ಕೂಲ್ ಹೆಡ್ ಮಾಸ್ತರು ಬಾಲಕರನ್ನು ಕೂಡಿ, ಇಂಗ್ಲೀಷ್ ಬ್ಯಾಂಡು ಮೈಸೂರು ವಾದ್ಯಗಳನ್ನು ಬಾರಿಸಿಕೊಂಡು, ಬಾಜಾ ಭಜಂತ್ರಿಗಳೊಡನೆ ಊರಿನಲ್ಲಿ ಮೆರವಣಿಗೆ ಹೊರಟು, ಶ್ರೀ ಕೃಷ್ಣರಾಜನಗರದಲ್ಲಿರುವ ಮೈದಾನಕ್ಕೆ ಹೋಗಿ ಅಲ್ಲಿ ಅಮಲ್ದಾರ್ ಮ| ರಾಘವಾಚಾರ್ಯರು ಇಂಡಿಯಾ ಚಕ್ರವರ್ತಿ ಮುಂತಾದ ಕೂಡಿದ್ದಾಗ ಇಸ್ತಿಹಾರನಾಮೆಯನ್ನು ಓದಿದರು ಬಾಲಕರು ಚಕ್ರವರ್ತಿಗಳ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಸ್ಕರ ಗೀತಗಳನ್ನು ಹಾಡಿದರು ವಿನೋದಕರವಾದ ಆಟಪಾಟಗಳಲ್ಲಿ ಅಮಲ್ದಾರರೂ ಒಬ್ಬರಂತೆ ಸೇರಿದರು ಗೆದ್ದವರಾದ ೮೫ ಮಂದಿಗೆ ಹೇರಳವಾಗಿ ಬಹುಮಾನಗಳು ಕೊಡಲ್ಪಟ್ಟವು ಸಾರ್ವಭೌಮರಿಗೂ ಶ್ರೀ ಕೃಷ್ಣರಾಜ ಒಡೆಯರವರಿಗೂ ಜಯಜಯ ಎಂದು ಜಯಘೋಷಮಾಡಿದರು ಬಾಜಾ ಬಜಂತ್ರಿಗಳೊಡನೆ ತೆರಳುವಾಗ ೭ ಘಂಟೆ ಹೊತ್ತಾದರೂ ಒಬ್ಬರಿಗೂ ಊಟದ ಮೇಲೆ ಮನಸ್ಸು ಓಡಲಿಲ್ಲ ಸ್ಕೂಲ್ ಬಾಲಕ ಬಾಲಕಿಯರಿಗೆ ಲಾಡುಗಳು ಹಂಚಲ್ಪಟ್ಟವು ಬಡಬಗ್ಗರಾದ ಸುಮಾರು ೬೦೦೦ ಜನಗಳಿಗೆ ಸುಭೋಜನವಾಯಿತು ಕುಂಟರು, ಕುರುಡರು, ಮುದುಕರು, ಮಕ್ಕಳಿಗೆ ೨೫೦ ಬಟ್ಟೆ ಅಂದರೆ ಸೀರೆ ಪಂಚೆ, ಕೋಟುಗಳು ಕೊಡಲ್ಪಟ್ಟವು ಹೀಗೆ ಇದರಂತೆ ಅನ್ನದಾನಕ್ಕೆ ಮುಂದೆ ಮಾಡಿದ ಅಮಲ್ದಾರರಿಗೂ ಅವರ ಸಹಾಯಕರಿಗೂ, ಪಾಠಶಾಲೆಯಲ್ಲಿ ಸ್ವಲ್ಪವೂ ಬೇಸರವಿಲ್ಲದೆ ಬಹು ವಿಶ್ವಾಸದಿಂದ ಕಾರ್ಯ ಸಾಗಿಸಿದ ಮ| ನಾರಾಯಣಪ್ಪನವರಿಗೂ, ಖಾಜಿ ಸಾಹೇಬರಿಗೂ, ಮ| ಚಂಗಪ್ಪನವರಿಗೂ ವಂದನೆಗಳನ್ನು ಒಪ್ಪಿಸುತ್ತೇವೆ ಅದೇ ಸಾಯಂಕಾಲ ಕಾರೊನೇಷನ್ ಹಾಲ್‌ನಲ್ಲಿ ಸಂಗೀತ ಸಭೆ ನಡೆಯಿತು ೧೦ ವರುಷದ ಬಾಲಕನು ಬಹು ಚಮತ್ಕಾರವಾಗಿ ಹಾಡಿ

ಲ್ಲದೆ, ಬಾಯಿನಲ್ಲೇ ಪಿಟೀಲಿಗೆ ಸರಿಯಾಗಿ ತಾಳ, ಲಯ, ಕಾಲ ತಪ್ಪದೆ ಮೃದಂಗ ಬಾರಿಸುವಂತೆಯೇ ಬಾರಿಸಿ, ಸಭೆಯವರಿಗೆ ಮಹದಾನಂದವನ್ನುಂಟುಮಾಡಿದನು ಮುಸಲ್ಮಾನರು ಅಮಲ್ದಾರರನ್ನೂ ಇತರ ದೊಡ್ಡ ಮನುಷ್ಯರನ್ನೂ ಬರಮಾಡಿಕೊಂಡು, ಹಾರಾ ತುರಾಯಿ ಒಪ್ಪಿಸಿ, ಒಂದು ಶ್ರೇಷ್ಠವಾದ ಅಡ್ರೆಸನ್ನು ಓದಿ ಒಪ್ಪಿಸಿದರು ಇದನ್ನೆಲ್ಲಾ ಇಲ್ಲಿ ಬರೆಯುವುದಕ್ಕಾಗುವುದಿಲ್ಲ ಮುಖ್ಯಾಂಶವೇನೆಂದರೆ—ನಾವು ಮಾಡುತ್ತಿರುವ ಪುಣ್ಯಕಾರ್ಯವು ನಮ್ಮ ಶ್ರೀಮನ್ಮಹಾರಾಜ ಸರ್ಕಾರಕ್ಕೂ, ಒಡೆಯರಿಗಳಿಗೆ ನಮಗೂ, ಈ ಕಾಲಸ್ಥಿತಿಗೂ ಕೀರ್ತಿಪ್ರದವಾಗಿರುತ್ತದೆ ಸರ್ವಶಕ್ತನಾದ ಭಗವಂತನು ನಮ್ಮನ್ನು ನಮ್ಮ ಮಧ್ಯ ಇರುವ ನಮ್ಮ ಪುಣ್ಯೋದಯವೇ ಈ ನಮ್ಮ ಸಂತೋಷವನ್ನು ಶ್ರೀಮನ್ಮಹಾರಾಜರವರಿಗೆ ಅರಿಕೆಮಾಡಬೇಕು ಇಂಗ್ಲೀಷ್ ಸರ್ಕಾರವೂ ಮೈಸೂರು ಗೌರ್ನಮೆಂಟೂ ನಿತ್ಯವಾಗಿ ನಿಲ್ಲಬೇಕೆಂದು ನಾವು ಭಗವಂತನನ್ನು ಪ್ರಾರ್ಥಿಸುತ್ತೇವೆ ಎಂಬುದೇ ನಂತರ ಜಯಘೋಷವಾಯಿತು ಅಮಲ್ದಾರರು ಅವರಿಗೆ ಪ್ರತ್ಯುತ್ತರವನ್ನಿತ್ತು ತೆರಳಿದರು

ಬೆಂಗಳೂರು ಶ್ರೀನಿವಾಸಮಂದಿರ.

ಸ್ತ್ರೀಯರ ಕೂಟವು

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಸಂಘದವರು ತಾ ೨ರಲ್ಲಿ ಉತ್ಸವವನ್ನು ನೆರವೇರಿಸಿದರು ಆ ದಿನ ಸುಮಾರು ೨೦೦ ಮಂದಿ ಸ್ತ್ರೀಯರು ಸೇರಿದ್ದರು ದೇವರ ಪೂಜೆ ಪ್ರಾರ್ಥನೆಗಳನ್ನು ನಡಿಸಿ, ಬಡಬಗ್ಗರಿಗೂ ಅನಾಥರಿಗೂ ಸುಭೋಜನವನ್ನು ಮಾಡಿಸಿದರು ಮಧ್ಯಾಹ್ನ ೪ ರಿಂದ ಸಾಯಂಕಾಲ ೭ ಗಂಟೆಯ ತನಕ ದೊಡ್ಡ ಮನುಷ್ಯರ ಮನೆಯ ಸ್ತ್ರೀಯರು ಸಭೆಸೇರಿ ಸಂಗೀತ ಮೊದಲಾದ್ದನ್ನು ಮಾಡಿ ಸಭಿಕರನ್ನು ಸಂತೋಷಪಡಿಸಿ, ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿದರು ಮಂದಿರದ ಸ್ತ್ರೀ ಸಂಘದ ಸೆಕ್ರೆಟರಿಯವರು ಸಭಿಕರನ್ನು ಕುರಿತು ಸಮಯೋಚಿತವಾದ ಒಂದು ಉಪನ್ಯಾಸವನ್ನು ಮಾಡಿದರು ಅದರ ಮುಖ್ಯಭಾಗಗಳೇನೆಂದರೆ —ಮನುಷ್ಯರಲ್ಲಿ [illegible] ಸಂಪತ್ತುಗಳಿಂದಲೆ ಪೂರ್ತಿ [illegible] ಮಾಡಿಕೊಳ್ಳುವುದುಂಟು ಹಾಗೆಯೇ ರಾಜತಂತ್ರಗಳಲ್ಲಿ ಬಹು ವಿಶೇಷವಾದ ಆರಾಧ್ಯದೇವತೆಗಳ ಮುಖ್ಯ ದಿನಗಳಲ್ಲಿ [illegible] ತನ್ನ ಸಂತೋಷಾತಿಶಯಗಳನ್ನು ಪ್ರಭುಗಳ ಚಿತ್ತಕ್ಕೆ ಬರುವಂತೆ ಉತ್ಸವಾದಿಗಳನ್ನು ಮಾಡುವ ಕ್ರಮವು ಸಹ ಉಂಟು ಅಂಥಾ ಕ್ರಮವನ್ನು ಅನುಸರಿಸಿ ಯೋಚಿಸುವ ಪಕ್ಷಕ್ಕೆ, ಈ ನಮ್ಮ ಹಿಂದೂ ರಾಜ್ಯದ ಪ್ರಭುತ್ವವನ್ನು ಬ್ರಿಟಿಷ್ ಸರ್ಕಾರದವರು [illegible] ವರುಷಗಳು ಆಗುವವು [illegible] ಚಕ್ರವರ್ತಿನಿಯವರು ಈ ಇಂಡಿಯಾ ರಾಜ್ಯವನ್ನು [illegible] ನವಂಬರ್ ೧ನೇ ತಾರೀಖಿನ [illegible] ಭಾರತ [illegible] ಪ್ರಕಟಪಡಿಸಿ [illegible] ಆಶೀರ್ವಾದ [illegible] ನಮ್ಮ ಮಹಾರಾಜರು [illegible] ನಮ್ಮ ಪ್ರಭುಗಳಿಗೆ ಕೊಟ್ಟ [illegible] ಒಂದು ದೊಡ್ಡ ಪ್ರಸಾದವಾಗಿರುತ್ತದೆ ಮತ್ತು [illegible] ವರುಷಗಳಿಗೆ ಮುಂಚೆ [illegible] ಕೇವಲ ಹೀನಸ್ಥಿತಿಯಲ್ಲಿತ್ತು ಈಗಿನ ಕಾಲಮಾನಗಳು, ಪಟ್ಟಣಗಳು ಹಳ್ಳಿಗಳು ವೃದ್ಧಿಯಿಂದ ಇವೆ ಎಂಬುದು ಯಾವ ಸ್ಥಿತಿಯಲ್ಲಿತ್ತೆಂಬುದನ್ನು ವಿವರಿಸಬೇಕಾಗಿಲ್ಲ ಆ ಕಾಲದ ಓದಿದವರ ಅಪೇಕ್ಷೆಯು ಬಹಳ ಕಮ್ಮಿ ಪಡೆಯಲ್ಲಿ [illegible] ಹಳೆ ರೀತಿ, ಸವರ್ ಅಥವ ಎಂಬ ಉದ್ಯೋಗಗಳಿಗೆ ಮೇಲ್ಪಟ್ಟ ಉದ್ಯೋಗಗಳನ್ನು ಹೊಂದುವ ಅಪೇಕ್ಷೆಯೇ ಇರಲಿಲ್ಲ ಈಗ ನಮ್ಮ [illegible] ಇಂಗ್ಲೀಷ್ ವಿದ್ಯಾವಂತರ ಸಮಾನರಾಗಿ [illegible] ಕೆಲಸಗಳು [illegible] ಕಮೀಷನರ್ ಕೆಲಸಗಳು ದಿವಾನ್ಗಿರಿ ಮೊದಲಾದ ದೊಡ್ಡ ಹುದ್ದೆಗಳನ್ನು ವಹಿಸುತ್ತಿದ್ದಾರೆ ಮತ್ತು ಅನೇಕ [illegible] ದೇವಾಲಯಗಳಿಗೂ, [illegible] ದೊಡ್ಡ ಜಮೀನುಗಳಿಗೂ ಇರುತ್ತಾರೆ [illegible] ವಿಧವಾದ ತೊಂದರೆಗಳ ಗುರಿಯಾಗದೆ [illegible] ಶಾಂತಿಯನ್ನು ಅನುಭವಿಸುತ್ತೇವೆ [illegible] ಅವಲಂಬನವನ್ನು ಹೊಂದಿದ್ದೇವೆ, ದೇಶದಲ್ಲಿ ಯಾವ ಅನ್ಯ ತರವೂ ಇರುವುದಿಲ್ಲ ನಮ್ಮ ಮತಪದ್ಧತಿಯಲ್ಲಿ ನಾವು ಸ್ವತಂತ್ರರಾಗಿದ್ದೇವೆ ಮತ್ತು ಗೌರ್ನರ್ [illegible] ನಮ್ಮ ಜನರು ನಮ್ಮ [illegible] ಅಧಿಕಾರವನ್ನು ಹೊಂದಿ [illegible] ಗೌರ್ನಮೆಂಟಿನವರಿಗೆ [illegible] ಈ ೫೦ ವರುಷಗಳಲ್ಲಿ ಬ್ರಿಟಿಷ್ ಗೌರ್ನಮೆಂಟಿನವರು ಈ ಭಾರತ ಭೂಮಿಗೆ ಮಾಡಿದ ಉಪಕಾರವನ್ನು [illegible] ವರ್ಣಿಸಬಹುದಾಗಿರುತ್ತದೆ [illegible] ರಾಮರಾಜ್ಯವೆಂದೇ ವರ್ಣಿಸಬಹುದಾಗಿದೆ [illegible] ಬಹು [illegible] ದೇಶದಲ್ಲಿ ಐಶ್ವರ್ಯವೂ [illegible] ಧರ್ಮಾದಿಗಳೂ ಈ ರಾಜ್ಯ ಶ್ರೀಯುತ ಚಕ್ರವರ್ತಿನಿಯವರು ಮೇಲೆ ಹೇಳಿದ ರೀತಿ ಪರಿಪಾಲಿಸಲ್ಪಡುತ್ತಲಿರುವುದು ಈ ಮಹತ್ತರವಾದ ಉಪಕಾರಗಳಿಗೆ ನಮ್ಮ ಕೃತಜ್ಞತೆಯನ್ನು ತೋರಿಸಲು ಈ ದಿವಸ ಸಮಯೋಚಿತ ದಿವಸವಾಗಿಯೂ, ಮುಖ್ಯ ದಿವಸವಾಗಿಯೂ ಇರುತ್ತೆ ಆದ್ದರಿಂದ ಆಚಂದ್ರಾರ್ಕವಾಗಿಯಾಯಿಯಾಗಿ ಬ್ರಿಟಿಷ್ ಗೌರ್ನಮೆಂಟಿನವರಿಗೆ ಮಂಗಳ ಉಂಟಾಗಲಿ ಈ ನಮ್ಮ ರಾಜ್ಯವನ್ನು ಅವರು ನಿರಂತರ ಮೇಲೆ ಸೂಚಿಸಿದ ವಿಮರ್ಶೆಗಳಿಂದಲೇ ಪರಿಪಾಲಿಸುವಂತೆ ಸರ್ವೇಶ್ವರನು ಅವರಿಗೆ ಬಲ ತೇಜಸ್ಸು ಸಂಪತ್ತುಗಳನ್ನು ದಯಪಾಲಿಸಲೆಂದು ಶ್ರೀ ಶ್ರೀನಿವಾಸನ ಸನ್ನಿಧಿಯಲ್ಲಿ ಹೃದಯಪೂರ್ವಕವಾಗಿ ಈ ಶುಭ ಸಮಯದಲ್ಲಿ ಪ್ರಾರ್ಥಿಸುವೆವು ಮತ್ತು ನಮ್ಮ ಶ್ರೀಮನ್ಮಹಾರಾಜರವರಿಗೆ ಆಯುರಾರೋಗ್ಯ ಭಾಗ್ಯಗಳನ್ನು ದೇವರು ಯಾವಾಗಲೂ ದಯಮಾಡಲೆಂದೂ ಬೇಡುವೆವು ಎಂಬುದೇ

ಚಾಮರಾಜನಗರ.

ತಾ ೧ನೇ ಭಾನುವಾರ ನಮ್ಮ ಅಮಲ್ದಾರರು ಇಲ್ಲಿಯ ಸ್ಥಳೀಕ ಪ್ರಮುಖ ಮನುಷ್ಯರನ್ನು ತಾಲ್ಲೂಕ್ ಕಛೇರಿಗೆ ಬರಮಾಡಿಸಿ, ಮೀಟಿಂಗ್ ನಡಿಸಿ, ಶ್ರೀಮನ್ ಮಹಾರಾಜಾ ಸಾಹೆಬ್ ಬಹದೂರ್ ರವರ ಮಹಾ ಸನ್ನಿಧಾನದಿಂದ ದಯಪಾಲಿಸಿದ ಇಸ್ತಿಹಾರ್ನಾಮೆಯನ್ನು ಸಕಲರ ತಿಳುವಳಿಕೆ ಬಗ್ಗೆ ವಿಶದವಾಗಿ ಓದಿ ಹೇಳಿ, ಮಾರನೇ ದಿನ ನಡಿಯಬೇಕೆಂದ ಶ್ರೀಮನ್ ವಿಕ್ಟೋರಿಯಾ ಮಹಾರಾಣಿಯವರು ದಯಪಾಲಿಸಿದ ಇಂಡಿಯಾ ದೇಶೀಯರಿಗೆ ಅನುಕೂಲವಾದ ಪ್ರಸಿದ್ಧ ಪತ್ರಿಕೆಯಿಂದ ಏತದ್ದೇಶೀಯರಿಗೆ ಇದುವರಿವಿಗೆ ಉಂಟಾದ ಶುಭಸಮಾಧಾನ ಕ್ಕಾಗಿ ಸಮಸ್ತರೂ ಏಕಮತ್ಯದಿಂದ ಉತ್ಸವಾದಿಗಳನ್ನು ನೆರವೇರಿಸಿ, ದೀನಾನಾಥರಿಗೆ ಅನ್ನ ಹಾಕಿ ಬಟ್ಟೆಕೊಟ್ಟು, ಅವರನ್ನೂ ಸಂತೋಷಪಡಿಸಬೇಕೆಂದು ಅಪ್ಪಣೆ ಕೊಡಲು, ಸರ್ವರೂ ಸಮ್ಮತಿಸಿದರು ಇದಕ್ಕಾಗಿ ಸಮಸ್ತ ಮತದ ದೊಡ್ಡ ಮನುಷ್ಯರೂ ಆಯಾ ಮತದ ಜನರನ್ನೆಲ್ಲಾ ಒಂದೊಂದು ಸ್ಥಳದಲ್ಲಿ ಸೇರಿಸಿ, ಭೋಜನಾದಿಗಳನ್ನು ಮಾಡಿ, ಸಂತೋಷಪಡಿಸುವಂತೆಯೂ ದೇವತಾ ಉತ್ಸವಾದಿಗಳನ್ನು ನಡಿಸುವಂತೆಯೂ ಒಪ್ಪಿ ನಿಶ್ಚಯಿಸಿಕೊಂಡರು ಮರುದಿನ ತಾ ೨ನೇ ಸೋಮವಾರ ಪ್ರಾತಃಕಾಲ ಯಾವ ಬೀದಿಯಲ್ಲಿ ನೋಡಿದರೂ ಜನರು ಶುಭ್ರವಾಗಿದ್ದು ಸಂತರ್ಪಣೆಯ ಕಾರ್ಯದಲ್ಲಿ ನಿರತರಾಗಿ ಸಂತೋಷಸೂಚಕವಾದ ತೇರು ತೋರಣಗಳಿಂದಲೂ ಕದಳೀಸ್ತಂಭಗಳಿಂದಲೂ ಬೀದಿಗಳನ್ನಲಂಕರಿಸಿದ್ದರು ಆಗ ನಮ್ಮ ತಾಲ್ಲೂಕ್ ಅಮಲ್ದಾರ್ ಮ್ಯ॥ ಎಸ್ ವೆಂಕಟರಮಣ ಶಾಸ್ತ್ರಿಯವರು ಸಕಲರ ಅಡಿಗೆ ಮಾಡುವ ಸ್ಥಳಗಳಿಗೂ ಕೆಲವು ಜನ ಸ್ನೇಹಿತರೊಡನೆ ದಯಮಾಡಿಸಿ, ಎಲ್ಲವನ್ನೂ ಪರಾಂಬರಿಸಿ ಜವಳೀ ಅಂಗಡಿಗಳ ಸಾಹುಕಾರರು ತಂದೊಪ್ಪಿಸಿದ ದೀನಾನಾಥರಿಗೆ ಕೊಡಬೇಕಾದ ಬಟ್ಟೆಗಳನ್ನು ದರ್ಬಾರ್ ಮಂಟಪಕ್ಕೆ ಕಳುಹಿಸಿಕೊಟ್ಟರು ದೇವಸ್ಥಾನಗಳಲ್ಲಿ ಪ್ರಭುಗಳಿಗೆ ಶುಭಕರವಾದ ಅಭಿಷೇಕಾದಿಗಳು ನಡೆದವು ಮಧ್ಯಾಹ್ನ ೨ ಗಂಟೆಗೆ ಸಮಸ್ತ ಇಲಾಖೆಗಳ ಮೊಹ್ತೇಸರರೂ ತಮ್ಮ ತಮ್ಮ ಸಿಬ್ಬಂದಿ ಸಮೇತ ತಾಲ್ಲೂಕ್ ಕಛೇರಿಯ ಬಳಿ ಸೇರಿದರು ಸ್ಕೂಲ್ ಬಾಲಕರೆಲ್ಲಾ ತಮ್ಮ ಉಪಾಧ್ಯಾಯರ ಸಹಿತ ಕಛೇರಿ ಬಳಿ ಸೇರಿದರು ಎಲ್ಲಾ ಮತದ ಜನರೂ ಭೋಜನಾದಿಗಳನ್ನು ತೀರಿಸಿಕೊಂಡು ಬಂದರು ಶ್ರೀಮನ್ ಚಕ್ರವರ್ತಿ, ಚಕ್ರವರ್ತಿನಿಯವರ ಭಾವಚಿತ್ರಗಳಿಗೆ ಅಲಂಕರಿಸಿ, ಸಕಲ ರಾಜಮರ್ಯಾದೆಗಳಿಂದ ಮೆರವಣಿಗೆ ಮಾಡಿಕೊಂಡು, ಅಂಗಡಿ ಬೀದಿ ಮಾರ್ಗವಾಗಿ ಶ್ರೀಮನ್ ಮಹಾರಾಜರವರ ಜನನಸ್ಥಳಕ್ಕೆ ಬಿಜಯಮಾಡಿಸಿದರು ಈ ಸ್ಥಳವು ಅನೇಕ ಚಿತ್ರವಿಚಿತ್ರ ತೋರಣಗಳಿಂದಲೂ ಕದಳೀಸ್ತಂಭಗಳಿಂದಲೂ ಪುಷ್ಪಗಳಿಂದಲೂ ಬಾವುಟಗಳಿಂದಲೂ ನೋಟಕರಿಗೆ ಮನೋಹರವಾಗಿತ್ತು ಅಲ್ಲಿ ಸ್ಕೂಲ್ ಬಾಲಕರಿಗೆ ಆಟಪಾಟಗಳನ್ನು ಮಾಡಿಸಿದನಂತರ ದರ್ಬಾರ್ ಮಂಟಪದಲ್ಲಿ ಸಮಸ್ತರೂ ಸೇರಿದರು ಅಮಲ್ದಾರರು ಶ್ರೀ ದಿವಂಗತ ವಿಕ್ಟೋರಿಯಾ ಮಹಾರಾಣಿಯವರ ಪ್ರಸಿದ್ಧ ಪತ್ರಿಕೆಯ ಸಾರಾಂಶವನ್ನು ಸಕಲರಿಗೂ ತಿಳಿಯುವಂತೆ ವಿವರಿಸಿ, ತನ್ಮೂಲಕ ಇದುವರೆವಿಗೂ ನಮ್ಮ ದೇಶೀಯರಲ್ಲಿ ಉಂಟಾಗಿರುವ ಸುಖಸಮಾಧಾನಗಳನ್ನೂ ಅನುಕೂಲಗಳನ್ನೂ ವಿವರಿಸಿ ಹೇಳಿ ಇವೆಲ್ಲಕ್ಕೂ ಮುಖ್ಯವಾಗಿ ಕ್ರೈಸ್ತಮತ ಶಕ್ತಿಗಳೇ ಕಾರಣವೆಂಬ ಸರ್ವಸಮ್ಮತ ವಾಕ್ಯವನ್ನು ನುಡಿದರು ಈ ದೇಶಕ್ಕೆ ಕ್ರೈಸ್ತಮತಾನುವರ್ತಿಗಳಾದ ಪ್ರಭುಗಳೂ ನ್ಯಾಯವಿಮರ್ಶಕರೂ ಬೋ ಥರೆವೂ ಬರುವುದಕ್ಕಿಂತ ಹಿಂದೆ ಇಲ್ಲಿ ಅನೇಕಾನೇಕ ಪಂಗಡಗಳು ಇದ್ದು ಒಬ್ಬರಿಂದೊಬ್ಬರಿಗೆ ಮತಭೇದವಾಗಿ ಕಲಹ ಪ್ರಾಪ್ತವಾಗುತ್ತಿದ್ದದ್ದೂ, ಬಲಿಷ್ಠರು ಅಬಲರ ಮೇಲೆ ಬಿದ್ದು ಅವರ ವಿತ್ತಾಪಹಾರ ಮಾಡುತ್ತಿದ್ದದ್ದೂ ಹಿಂದಿನ ಚರಿತ್ರೆಯನ್ನು ಓದಿದವರೆಲ್ಲರೂ ಮರೆತಿರಲಾರರು ಈಗ ಅಂದರೆ ಕ್ರೈಸ್ತಮತಾನುವರ್ತಿಗಳು ಸರ್ವಸಮ್ಮತರೂ, ಧರ್ಮಮಾರ್ಗಪ್ರವರ್ತಕರೂ ಆದ ಇಂಗ್ಲೀಷ್ ಪ್ರಭುಗಳ ಕಾಲದಲ್ಲಿ ಎಲ್ಲರೂ ಏಕಮತ್ಯದಿಂದ ಸರ್ವಕಾರ್ಯಗಳನ್ನೂ ನಿರ್ವಹಿಸುವಷ್ಟು ಸವನಾಗರಿಕರಾಗಿ ಸುಖಸಮಾಧಾನದಿಂದ ಬಾಳುತ್ತಿರುವರು ಪೂರ್ವಾಪರದವರು ಇದನ್ನು ಒಪ್ಪುವಂತೆ ಒಪ್ಪುವರು ಆದ್ದರಿಂದ ಇಂಥಾ ಧರ್ಮಾತ್ಮರುಗಳ ರಾಜ್ಯಭಾರವು ಚಿರಕಾಲ ನಿಲ್ಲುವಂತೆ ಸರ್ವಶಕ್ತನಾದ ಭಗವಂತನನ್ನು ಪ್ರಾರ್ಥಿಸಲು ಸಮಸ್ತರೂ ಕರಜೋಡಿಸಿದರು ಆಗ ಅತಿಗಂಭೀರವಾದ ಗ್ರಾವೆಪೂರ್ಣ ಸೂಚನೆಗಳ ಸಾಮು ಕಾರರಿಂದ ನುಡಿಸಲ್ಪಟ್ಟಿತು ಅಮಲ್ದಾರರು ಅಲ್ಲಿ ಸೇರಿದ್ದ ದೀನಾನಾಥರಿಗೆ ಬಟ್ಟೆಗಳನ್ನು ದಯಪಾಲಿಸಿದರು ಬಟ್ಟೆ ಪಡೆದವರು ತಮ್ಮ ಊಟದ ಸ್ಥಳದಲ್ಲಿ ಬಟ್ಟೆ ಧರಿಸಿ ಬಹಳ ಸಂತೋಷ ಪಟ್ಟರು ಇದಾದ ಮೇಲೆ ಸ್ಕೂಲ್ ಬಾಲಕರಿಗೆ ಬಹುಮಾನ ಕೊಡಲಾಯಿತು ಅಲ್ಲಿ ಸೇರಿದ್ದ ಸ್ಥಳೀಕರಿಗೆಲ್ಲಾ ಪಾನ್ ಸುಪಾರಿ ಹಂಚಲಾಯಿತು ಸಂತರ್ಪಣೆಗಳ ಬಾವುಟಗಳನ್ನು ರಾಜಮರ್ಯಾದೆಯೊಡನೆ ಹೊರಟು ಸ್ವಸ್ಥಳಕ್ಕೆ ಬಿಜಯಮಾಡಿಸಿ ಸಮಸ್ತರೂ ತಂತಮ್ಮ ಸ್ಥಳಗಳಿಗೆ ತೆರಳಿದರು ಮಾರನೇ ಮಂಗಳವಾರ ಎಲ್ಲಾ ದೀನಾನಾಥರಿಗೆ ಅನ್ನ ದಾನ ಮಾಡಿದರು ಬಟ್ಟೆಗಳನ್ನು ಅಮಲ್ದಾರರು ಕೊಡಿಸಿದರು ಮಧ್ಯಾಹ್ನ ಸ್ಕೂಲ್ ಬಾಲಕರಿಗೆ ಆಟ, ಬಹು ಹಣ್ಣುಗಳನ್ನು ಹಂಚಿದರು ಈ ದಿನ ೮ ರಲ್ಲಿ ಎಲ್ಲಿ ನೋಡಿದರೂ ಜನರು ಗುಂಪು ಸೇರಿ ೩ ದಿನ ದಿನ ನಡೆಸ ಅತಿ ವಿಜೃಂಭಣೆಯ ವಿನೋದದಲ್ಲಿ ನಮ್ಮ ಅಮಲ್ದಾರರು ಬಹಳ ಮುತುವರ್ಜಿ ವಹಿಸಿ [illegible] ರಿಂದ [illegible] ಈ ವರ್ಷ ಕಾಲದಲ್ಲಿಯೂ ಇದಕ್ಕೆ ಏಕಮತದಿಂದ ಇಷ್ಟು ಜನರು [illegible] ಸ ಶೋಭೆಯನ್ನು ನಡಿಸಿ ಪೆಂಡಾಲೂ ಇವ ಕೈಲಾಶ ರಾಜಭಕ್ತಿ [illegible] ಜನ [illegible] ಕಾರ್ಯನಿರ್ವಾಹಕರೂ ಆದ ಅಮಲ್ದಾರರಿಗೆ ಕೃತಜ್ಞತೆಯಿಂದ [illegible] ಮಾಡಿಕೊಳ್ಳುವುದು ಪೆ ಭಗವಂತನು ಶ್ರೀಮನ್ ಚಕ್ರವರ್ತಿ ಸಾರ್ವಭೌಮರಿಗೂ, ನಮ್ಮ ಶ್ರೀಮನ್ ಮಹಾರಾಜರಿಗೂ, ಅವರ ಪ್ರಜೆಗಳಿಗೂ, ನಮ್ಮ ಅಮಲ್ದಾರರಿಗೂ ಚಿರಕಾಲ ಆಯುರಾರೋಗ್ಯಗಳನ್ನು ದಯಪಾಲಿಸಲು ಪ್ರಾರ್ಥಿಸುತ್ತಿರುವೆವು

ಕೋಲಾರ್‌ಪೇಟೆ.

ಇಲ್ಲಿ ಬೀಗ್ಗೆ ಸ್ಕೂಲುಗಳಲ್ಲಿ ಹೆಡ್ ಮಾಸ್ಟರುಗಳೂ, ಗರ್ಲ್ಸ್ ಸ್ಕೂಲ್ ಹೆಡ್ ಮಿಸ್ಟ್ರೆಸ್‌ರವರೂ ಬಾಲಕ ಬಾಲಿಕೆಯರಿಗೆ ಈ ದಿವಸದ ಉತ್ಸವಕ್ಕೆ ಕಾರಣವನ್ನು ಉಪನ್ಯಾಸಮಾಡಿ ತಿಳಿಸಿದ್ದಲ್ಲದೆ ರಾಯಲ್ ಪ್ರಾಕ್ಲಮೇಷನ್ ಓದಿ ಅದರಿಂದ ನಮಗುಂಟಾಗಿರುವ ಅನುಕೂಲ ಸಂಪತ್ತುಗಳನ್ನು ಚೆನ್ನಾಗಿ ವಿವರಿಸಿ, ಮಧ್ಯಾಹ್ನ ಸರ್ ಡಿವಿಜನ್ ಆಫೀಸ್ ಮೈದಾನಕ್ಕೆ ಆಟವಾಡಲಿಕ್ಕೆ ಬರುವಂತೆ ಹೇಳಿ ಕಳುಹಿಸಿದರು ಮಧ್ಯಾಹ್ನ ೧೨ ಗಂಟೆಯ ಮೇಲೆ ತಾಲ್ಲೂಕ್ ಕಛೇರಿಯಲ್ಲಿ ಎಲ್ಲರೂ ಬಂದು ಸೇರುವಂತೆ ಊರಿನ ಮ್ಯುನಿಸಿಪಲ್ ಕಮೀಷನರುಗಳೂ ಸ್ಕೂಲ್ ಮಾಸ್ಟರುಗಳು ಮತ್ತು ಇತರ ದೊಡ್ಡ ಮನುಷ್ಯರುಗಳಿಗೆ ಅಮಲ್ದಾರರು ಕಳುಹಿಸಿದ ನೋಟೀಸು ಮೇರೆ ಎಲ್ಲರೂ ಬಂದು ಸೇರಿದರು ಆ ಕಮಿಷನರ್‌ರವರು ಉತ್ಸವದ ಕಾರಣವನ್ನು ತಿಳಿಸಿ, ಇಸ್ತಿಹಾರ್ನಾಮೆಯನ್ನು ಇಂಗ್ಲೀಷಿನಲ್ಲೂ, ಅಮಲ್ದಾರರು ಕನ್ನಡದಲ್ಲೂ ಓದಿದರು ಬಳಿಕ ಪ್ಲೀಡರ್ ಮ॥ ಸಂತಾನಂ ಐಯಂಗಾರ್‌ರವರು ಇಂಗ್ಲೀಷರು ಮೈಸೂರು ಸೀಮೆಗೂ ನಮಗೂ ಮತ್ತು ಇಂಡಿಯಾ ದೇಶಕ್ಕೂ ಮಾಡಿರುವ ಉಪಕಾರಗಳ ವಿಷಯವಾಗಿ ಇಂಗ್ಲೀಷ್‌ನಲ್ಲಿ ಉಪನ್ಯಾಸ ಮಾಡಿದರು ಅದರ ಮುಖ್ಯಾಭಿಪ್ರಾಯವೇನೆಂದರೆ —ಬ್ರಿಟಿಷ್ ಇಂಡಿಯಾದಲ್ಲಿ ಅನೇಕ ಕಡೆಗಳಲ್ಲಿ ನಡಿಯತಕ್ಕ ಈ ಸಂತೋಷ ಕಾರ್ಯದಲ್ಲಿ ಮೈಸೂರು ಸೀಮೆಯ ನಿವಾಸಿಗಳಾದ ನಾವು ಹಿಂದಾಗಿಲ್ಲ ಮೈಸೂರು ಸೀಮೆಗೆ ಮಾದರಿ ರಾಜ್ಯವೆಂಬ ಹೆಸರು ಬರುವುದಕ್ಕೆ ೧೮೩೧ರ ಲಾಗಾಯಿತು ೧೮೮೧ರ ವರಿಗಿನ ೫೦ ವರುಷಕಾಲದ ಬ್ರಿಟಿಷರ ಆಳ್ವಿಕೆಯೇ ಮುಖ್ಯ ಕಾರಣ ಈ ೫೦ ವರುಷಗಳ ಕಾಲದಲ್ಲಿ ರಾಜ್ಯಭಾರವೆಂಬ ಯಂತ್ರವೂ, ಅದನ್ನು ನಡಿಸತಕ್ಕ ಕ್ರಮವೂ ಕೂಡ ಬಹಳ ಹುಷಾರಾಗಿ ತರಪೇತು ಮಾಡಲ್ಪಟ್ಟವು ಬ್ರಿಟಿಷ್ ಪ್ರಭುಗಳು ಪರಮ ಕೃಪೆಯಿಂದ ದೊಡ್ಡ ಮನಸ್ಸು ಮಾಡಿ ಸ್ವರ್ಗಸ್ಥರಾದ ಮುಮ್ಮಡಿ ಕೃಷ್ಣರಾಜ ಒಡೆಯರವರು ಗೊತ್ತುಮಾಡಿದ ಚಾಮರಾಜ ಒಡೆಯರವರನ್ನು ದತ್ತು ತೆಗೆದುಕೊಂಡದ್ದನ್ನು ಅಂಗೀಕರಿಸಿ ಮೈಸೂರು ಸಿಂಹಾಸನಕ್ಕೆ ಹಕ್ಕುದಾರರನ್ನಾಗಿ ಮಾಡಿ, ತನ್ಮೂಲಕ ಮೈಸೂರು ಪ್ರಜೆಗಳನ್ನು ಕೇವಲ ಸುಖಿಸಂತೋಷಭರಿತರನ್ನಾಗಿ ಮಾಡಿದರು ಮೈಸೂರಿನ ಆಗಿನ ಸ್ಥಿತಿಯನ್ನು ತಿದ್ದಿ ಸ್ಥಿಮಿತಕ್ಕೆ ತಂದ ಸರ್ ಮಾರ್ಕ್ ಕಬ್ಬನ್, ಬೌರಿಂಗ್ ಮತ್ತು ಗಾರ್ಡನ್ ಸಾಹೇಬರ ಹೆಸರುಗಳು ಕೃತಜ್ಞರಾದ ಮೈಸೂರು ಜನರ ಹೃದಯದಲ್ಲಿ ಈಗಲೂ ನೆಲೆಗೊಂಡಿವೆ ಮೈಸೂರು ರಾಜ್ಯವನ್ನು ನಮ್ಮ ಆ ಮಹಾರಾಜರಿಗೆ ಒಪ್ಪಿಸುವಾಗ್ಗೆ ಕಪ್ಪದ ಮೊಬಲಗು ಅಂದರೆ ಒಂದೂವರೆ ಕೋಟಿ ರೂಪಾಯನ್ನು ಆಗಿನ ಕಷ್ಟದೆಸೆಯನ್ನು ನೋಡಿ, ಕೇವಲ ಕನಿಕರದಿಂದ ಬ್ರಿಟಿಷ್ ಸರ್ಕಾರದವರು ಮನ್ನಾ ಮಾಡಿದರು ಕರ್ನಲ್ ಮ್ಯಾಲಿಸನ್ ಸಾಹೇಬರೂ, ಪೋರ್ಟರ್ ಸಾಹೇಬರವರೂ ನಮ್ಮ ಲೇಟ್ ಮಹಾರಾಜರನ್ನು ಮೆಹನತ್ತು ವಹಿಸಿ ತರಪೇತು ಮಾಡಿದ್ದರಿಂದ ಅವರಿಗೆ “ಪರಮೋತ್ಕೃಷ್ಟ, ಸೂಕ್ಷ್ಮದರ್ಶಿ, ಆಪ್ತಾರೂಢ ಪ್ರವೀಣ, ಅತಿಥಿಸತ್ಕಾರ, ರಾಜಪುತ್ರ ಶಿಖಾಮಣಿ” ಎಂಬ ಹೆಸರನ್ನು ಪಡೆದರು ಮೈಸೂರು ಸೀಮೆಯ ರೆಸಿಡೆಂಟರಾಗಿದ್ದ ಸರ್ ಎ ಲಯಲ್, ಸರ್ ವಿಲ್ಲಿಯಂ ಲೀವಾರ್ನರ್ ಮತ್ತು ಹಾಲಿ ಇಂಡಿಯಾ ಮೆ॥ ಎಸ್ ಎಂ. ಫ್ರೇಸರ್—ಇವರಿಗೆ ಸರ್ ಎಂಬ ಬಿರುದು ಶೀಘ್ರದಲ್ಲಿಯೇ ಬರಬೇಕೆಂದು ಹಾರೈಸುತ್ತೇನೆ—ಇವರುಗಳ ವಿಷಯವಾಗಿ ಏನು ಹೇಳೋಣ? ಇವರುಗಳು ಮೈಸೂರು ರಾಜ್ಯಭಾರಕ್ಕೆ ಏಕರೀತಿಯಲ್ಲಿ ಕೊಡುತ್ತಾ ಬಂದ ಪ್ರೋತ್ಸಾಹ ಮತ್ತು ಒತ್ತಾಸೆ ಇಲ್ಲದಿದ್ದಲ್ಲಿ ಮೈಸೂರಿಗೆ “ಮಾದರಿ ರಾಜ್ಯವೆಂಬ ಹೆಸರು ಹ್ಯಾಗೆ ಸಾರ್ಥಕವಾಗುತ್ತಿತ್ತು? ಪ್ರಿನ್ಸ್ ಆಫ್ ವೇಲ್ಸ್‌ರವರು ಮೂರು ವರುಷಗಳ ಹಿಂದೆ ನಮ್ಮ ರಾಜಧಾನಿಗೆ ದಯಮಾಡಿದ್ದಾಗ್ಗೆ ನಮ್ಮ ಮಹಾರಾಜರವರ ವಿಷಯವಾಗಿ “ಆಳುವಿಕೆಯ ವಿಷಯದಲ್ಲಿ ಬ್ರಿಟಿಷ್ ಗೌರ್ನಮೆಂಟಿನವರು ನಮ್ಮ ತಂದೆಯವರಿಗೆ ರಾಜ್ಯವನ್ನು ವಹಿಸಿದ್ದು ಬುದ್ಧಿವಂತಿಕೆ ಎಂಬುದಕ್ಕೆ ಹಾಲಿ ನಿಮ್ಮ ಆಳ್ವಿಕೆಯಲ್ಲಿ ಮೈಸೂರು ಜನಗಳು ಪಡುವ ತೃಪ್ತಿ ಮತ್ತು ಅಭಿವೃದ್ಧಿಯೇ ದೃಢವಾದ ನಿದರ್ಶನವಾಗಿದೆ” ಎಂದು ಸ್ತೋತ್ರಮಾಡಿ ಒಡನೆಯೇ ನಮ್ಮ ಮಹಾರಾಜರಿಗೆ ಜಿ ಸಿ ಎಸ್ ಐ ಎಂಬ ಬಿರುದು ಮೂಲಕ ಅವರಿಗೂ ತನ್ಮೂಲಕ ನಮಗೂ ಸನ್ಮಾನ ಉಂಟಾಗುವ ಮಟ್ಟಿಗೂ ನಮ್ಮ ಶ್ರೀಮನ್ ಮಹಾರಾಜರವರು ಸಮರ್ಥರೆಂದೂನೂ ತಿಳುವಳಿಕೆಯುಳ್ಳವರೆಂದೂನೂ ಕೀರ್ತಿಪಡೆದಿರುವುದನ್ನು ನಾವು ಯಾವುದಕ್ಕೆ ಅನ್ವಯಿಸೋಣ? ಟ್ಯೂಟರ್ ಮತ್ತು ಗವರ್ನರ್ ಫ್ರೇಜರ್ ಸಾಹೇಬರು ನಮ್ಮ ಮಹಾರಾಜರಿಗೆ ಕಲಿಸಿಕೊಟ್ಟ ಸರ್ವೋತ್ಕೃಷ್ಟವಾದ ವಿದ್ಯೆಯಿಂದಲ್ಲವೇ? ಮೈಸೂರು ಸೀಮೆಗೆ ಬಂದಿರುವ ಪ್ಲೇಗು ಶಾಶ್ವತವಾಗಿ ನೆಲೆಯಾಗಿರುವಂತೆ ಮಾಡಲು ಪೋರ್ಟರ್ ಸಾಹೇಬರೂ ಮತ್ತು ಮೆಕಾನಕಿ ಸಾಹೇಬರೂ ನಮ್ಮ ಮಹಾರಾಜರುಗಳಿಗೆ ಪ್ರೈವೇಟ್ ಸೆಕ್ರೆಟರಿಗಳಾಗಿ ಕಾರ್ಯಗಳನ್ನು ನಿರ್ವಹಿಸಿ ತನ್ಮೂಲಕ ರಾಜ್ಯಕ್ಕೆ ಉಂಟುಮಾಡಿದ ಉಪಕಾರವನ್ನು ನೆನೆಯದಿರಲಾರೆವು ಒಳಕ ವೇ॥ ಗಣಪತಿ ಶಾಸ್ತ್ರಿಗಳು ಸಂಸ್ಕೃತದಲ್ಲಿ ಬಹಳ ಸ್ವಾರಸ್ಯವಾದ ಶ್ಲೋಕಗಳನ್ನು ಮಾಡಿ ಓದಿ ಕನ್ನಡದಲ್ಲಿ ಚೆನ್ನಾಗಿ ವಿವರಿಸಿದರು ಎಲ್ಲರಿಗೂ ಗಂಧಪುಷ್ಪಾದಿಗಳು ನಡೆದವು ೩೧ ತೋಪುಗಳು ಹಾರಿಸಲ್ಪಟ್ಟವು ಕಛೇರಿಯ ಬಳಿ ಅನೇಕ ಬಡವರಿಗೆ ವಸ್ತ್ರಗಳು ಕೊಡಲ್ಪಟ್ಟವು ಮುಸಲ್ಮಾನರ ಮಸೀದಿಯಲ್ಲಿ ಇನ್ನೂ ಇತರ ಕಡೆಗಳಲ್ಲಿ ಬಡವರಿಗೆ ತಿಂಡಿಯೂ ಬಂಗಿ ಬಳಿ ಆಟವೂ, ಅನಂತರ ಮೇಲೆ ಎಡ್ವರ್ಡ್ ಚಕ್ರವರ್ತಿಯವರ ತಸ್ವೀರನ್ನು ತೆಗೆಸಿಕೊಂಡು ಹೀಗೆ ಮುಂದೆ ಕುದುರೆ ಒಂಟೆ ಬ್ರಾಹ್ಮಣರ ವೇದಘೋಷವೂ ಆಶೀರ್ವಚನಗಳೂ ದೊಡ್ಡ ಮನುಷ್ಯರುಗಳು ಸಾಲುಸಾಲಾಗಿ ಹೋಗುತ್ತಿದ್ದುದೂ ಜನಗಳಿಗೆ ಬಹಳ ನೇತ್ರಾನಂದವನ್ನುಂಟುಮಾಡಿತು ದೇವಸ್ಥಾನಗಳಲ್ಲಿ ಅಭಿಷೇಕಾದಿಗಳೂ ಊರನ್ನೆಲ್ಲಾ ತೋರಣಾದಿಗಳೂ ಪ್ರತಿಗೃಹಗಳಲ್ಲಿಯೂ ವಿಧವಿಧವಾದ ಪತಾಕೆ ಧೂಪ್ಯಾದಿಗಳೂ ನಡೆದು ಬಹಳ ಸಂಭ್ರಮವಾಗಿ ನೆರವೇರಿದವು ಕೊನೆಗೆ ಚಕ್ರವರ್ತಿಯವರಿಗೂ ನಮ್ಮ ಮಹಾರಾಜರವರಿಗೂ ಆಶೀರ್ವಚನಗಳನ್ನು ಹೇಳಿ ಉತ್ಸವವು ಮುಗಿಯಿತು ರಾತ್ರಿ ನಾಟಕ ಶಾಲೆಯಲ್ಲಿ ಸ್ಕೂಲ್ ಮಾಸ್ಟರುಗಳು ಅತಿಥಿಗಳು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತು ದೊಡ್ಡ ಮನುಷ್ಯರು ಹೋಗಿ ನಾಟಕವನ್ನು ನೋಡಿದರು ಎಲ್ಲರೂ ಬಹಳ ಸಂತೃಪ್ತರಾಗಿ ಆ ದಿನವನ್ನು ಕಳೆದರು

ಸಿದ್ಧಲಘಟ್ಟಪುರ.

ಐವತ್ತನೆಯ ೧೮೫೮ ವರ್ಷದ ಉತ್ಸವಕ್ಕಾಗಿ ನಮ್ಮ ಅಮಲ್ದಾರ್ ಮ॥ ನಂ ಶಿವರಾಯರು ಮುಂಚಿತವಾಗಿ ಮೀಟಿಂಗ್ ಮಾಡಿ, ತಾ ೨ನೇ ಸೋಮವಾರ ದಿನ ಎಲ್ಲಾ ಕೋಮಿನ ಬಡಬಗ್ಗರಿಗೆ ಸುಮಾರು ೩ ಸಾವಿರ ಜನರಿಗೆ ರಾಗಿ ಹಂಚಿಸಿದರು ಮತ್ತು ಕೆಲವರಿಗೆ ಪಂಚೆ, ರವಿಕೆ (ಇಲ್ಲಿನ ಸ್ಕೂಲ್ ಹೆಣ್ಣು ಮಕ್ಕಳು ಹೊಲಿದವು) ಕೊಟ್ಟರು ಮುಕ್ತಿ ಫೌಜಿನ ಬಡ ಸೆಂಗನರಿಗೆ ರಾಗಿ ದವಸಗಳನ್ನು ಕಳುಹಿಸಿದರು ಮಧ್ಯಾಹ್ನ ೧೨ ಗಂಟೆಗೆ ತಾಲ್ಲೂಕ್ ಕಚೇರಿಯಲ್ಲಿ ನಡೆದ ದರ್ಬಾರಿನ ಕೋರ್ಟ್ ಕಚೇರಿ ಇಲಾಖೆಗಳ ಉದ್ಯೋಗಸ್ಥರೂ, ಪಟ್ಟಣದ ವರ್ತಕರೇ ಮೊದಲಾದ ಮಹಾಜನರೂ ಹಾಜರಾಗಿದ್ದರು ಅಮಲ್ದಾರರು ಪ್ರಕಟನೆಯನ್ನು ಓದಿದರು ಶಾಸ್ತ್ರಿಗಳು ರಾಜಭಕ್ತಿಯುತವಾದ ಸಂಸ್ಕೃತ ಕವನವನ್ನು ಓದಿದರು ಚಕ್ರವರ್ತಿಯವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನೆ ಮಾಡಿ, ಸಭಿಕರಿಗೆ ಗಂಧ, ಪುಷ್ಪ, ತಾಂಬೂಲಾದಿಗಳು ಕೊಡಲ್ಪಟ್ಟವು ಸಾಯಂಕಾಲ ಸ್ಕೂಲ್ ಬಾಲಕರಿಗೆ ಆಟಗಳನ್ನು ಕಲ್ಪಿಸಿ, ಗೆದ್ದವರಿಗೆ ಬಹುಮಾನಗಳನ್ನೂ, ಬಾಲಕ ಬಾಲಿಕೆಯರಿಗೆಲ್ಲಾ ತಿಂಡಿಗಳನ್ನೂ ಕೊಟ್ಟರು ರಾತ್ರಿ ವಾದ್ಯಸಹಿತ ಮೆರವಣಿಗೆ ಮಾಡಿ ದೇವಸ್ಥಾನಗಳಲ್ಲಿ ಪೂಜೆ ಮಂಗಳಾರತಿಗಳನ್ನು ನಡಿಸಿ ಆ ದಿನದ ಉತ್ಸವಗಳನ್ನು ಮುಕ್ತಾಯ ಮಾಡಿದರು

ತಿರುಮಕೂಡ್ಲು ನರಸೀಪುರ.

ತಾ ೨ನೇ ಸೋಮವಾರ ರಾಯಲ್ ಪ್ರೊಕ್ಲಮೇಷನ್ ೫೦ನೇ ವಾರ್ಷಿಕೋತ್ಸವದ ಪ್ರಯುಕ್ತ ಮಧ್ಯಾಹ್ನ ಇಲ್ಲಿನ ತಾಲ್ಲೂಕ್ ಕಚೇರಿ ಬಳಿ ಚಪ್ಪರದಲ್ಲಿ ಅಮಲ್ದಾರ್ ಮೆ॥ ಎನ್ ರಾಮರಾಯರು, ಮುನಸೀಫ್ ಮೊದಲಾದವರುಗಳು, ಸರ್ಕಾರದ ಉದ್ಯೋಗಸ್ಥರು, ವರ್ತಕರೇ ಆದಿಯಾಗಿ ಎಲ್ಲಾ ದೊಡ್ಡ ಮನುಷ್ಯರೂ ಸಭೆ ಸೇರಿದ್ದರು ಅಮಲ್ದಾರರು ಅಗ್ರಾಸನವನ್ನು ವಹಿಸಿ, ರಾಯಲ್ ಪ್ರೊಕ್ಲಮೇಷನ್ ವಿಷಯಗಳನ್ನು ಕುರಿತು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು ಇಲ್ಲಿನ ಕನ್ನಡ ಸ್ಕೂಲ್ ಹೆಡ್ ಮಾಸ್ಟರೂ ಮತ್ತು ಹಿಂದೂಸ್ತಾನಿ ಸ್ಕೂಲ್ ಮಾಸ್ಟರೂ ಪ್ರಜೆಗಳ ರಾಜಭಕ್ತಿಯನ್ನು ಯಥಾಯೋಗ್ಯವಾಗಿ ಉಪನ್ಯಾಸ ಮಾಡಿ ವಂದನೆಯನ್ನು ಮಾಡಿದರು ಸಭೆಯವರಿಗೆಲ್ಲಾ ತಾಂಬೂಲ, ಹಾರ, ಸಕ್ಕರೆಗಳನ್ನು ವಿನಿಯೋಗ ಮಾಡಿದರು ಸ್ಕೂಲ್ ವಿದ್ಯಾರ್ಥಿಗಳಿಂದ ಆಟಗಳನ್ನಾಡಿಸಿ ಅವರಿಗೆ ಅಮಲ್ದಾರರು ಇನಾಂ ದಯಪಾಲಿಸಿದರು ಮತ್ತು ಬಡಬಗ್ಗರಿಗೆ ಬಟ್ಟೆ ವಗೈರೆ ಕೊಟ್ಟರು ಅಮಲ್ದಾರ್ ಮೆ॥ ಎನ್ ರಾಮರಾಯರು ಈ ಸಭೆಯಲ್ಲಿ ಅಗ್ರಾಸನವನ್ನು ವಹಿಸಿದ್ದಕ್ಕಾಗಿ ಸಭಿಕರು ವಂದನೆ ಮಾಡಿದರು ಸಭಾ ಬರಖಾಸ್ತು ಆಯಿತು ಅನಂತರ ಸಭಿಕರೆಲ್ಲಾ ಶ್ರೀ ಗುಂಜಾನರಸಿಂಹಸ್ವಾಮಿ ದೇವಸ್ಥಾನಕ್ಕೆ ದಯಮಾಡಿ, ದೇವರ ಉತ್ಸವದ ಕೊಳೆಯಲ್ಲಿ ಹೋಗಿ ಬಂದರು ಚಿತ್ರವಿಚಿತ್ರವಾದ ಬಾಣಬಿರುಸುಗಳಿಂದಲೂ, ಬಾಜಾಬಜಂತ್ರಿ ವಿವಿಧವಾದ್ಯ ವಿಶೇಷಗಳಿಂದಲೂ ಉತ್ಸವ ನಡೆಯಿತು

ನರಗಳ ಅಪಾರವಾದ ದುರ್ಬಲವನ್ನು ಪೆರೂನಾವು ಅದ್ಭುತವಾದ ರೀತಿಯಲ್ಲಿ ನಿವಾರಣೆ ಮಾಡಿರುತ್ತದೆ.

ಶರೀರಗತವಾದ ಕ್ಲೈಬ್ಯನಿವಾರಣೆಗೆ ಪೆರೂನಾ ಅವಶ್ಯವಾಗಿದೆ.

ನರಗಳ ದುರ್ಬಲವನ್ನು ನಾಶಮಾಡುವುದರಲ್ಲಿ ಇದು ವಿಶೇಷ ಪ್ರಖ್ಯಾತಿಹೊಂದಿದೆ

ಹೆಚ್ಚಾದ ಕಷ್ಟಕೆಲಸದಿಂದಲೂ ಮನಸ್ಸನ್ನು ವಿಶೇಷವಾಗಿ ಕಷ್ಟಪಡಿಸುವುದರಿಂದಲೂ, ಬೇಗೆಯು ಅಪಾರವಾದ ಉಷ್ಣದ ಬೇಯಿಂದಲೂ ಶರೀರದ ಧರ್ಮವು ನಿಶ್ಶಕ್ತಿಯಾಗಿದ್ದರೆ ಪೆರೂನಾವು ಇದನ್ನು ಸಂಪೂರ್ಣವಾಗಿ ನಿವಾರಣೆ ಮಾಡಿ, ಶಕ್ತಿಯನ್ನು ಕೊಟ್ಟು ಪುಷ್ಟಿಯನ್ನುಂಟುಮಾಡುತ್ತದೆ

ಬೇಗೆಯು ಹೆಚ್ಚಾಗಿರುವಂಥಾ ರಾಜ್ಯಗಳಲ್ಲಿ ಜನರು ಧಗೆಯ ತೀಕ್ಷ್ಣವನ್ನು ಸುಮಾರಾಗಿ ಸಹಿಸಿಕೊಳ್ಳುವವರಾಗಿದ್ದಾರೆಂದು ಹೇಳಬಹುದು ಆದರೆ ಅಪಾರವಾದ ಧಗೆಯೂ ಸಹಿಸಲಶಕ್ಯವಾದ ಬೇಗೆಯೂ ಒಂದರ ಹಿಂದೊಂದು ಘಟ್ಟಿಸಿ ಪ್ರಾಪ್ತವಾಗತಕ್ಕಂಥಾ ದೇಶಗಳಲ್ಲಿ ಅನೇಕರ ದೇಹದಲ್ಲಿ ಆ ಉಷ್ಣವನ್ನು ಸಹಿಸಿಕೊಳ್ಳಲು ಶಕ್ತಿಯುಳ್ಳದ್ದಾಗಿರುವುದಿಲ್ಲ ಇದರಿಂದಲೇ ಬಹಳ ಕಾಯಿಲೆಗಳು ಉಂಟಾಗುತ್ತವೆ

ಹೊಟ್ಟೆಗೆ ಶೀತ ಹಿಡಿಯುವುದು [illegible]ವಾಗಿ ರುಚಿಯು ಆಹಾರ ಅರಗದೆ ಇರುವುದು ಇವೆಲ್ಲಾ ಉಷ್ಣಕಾಲದಲ್ಲಿ ಪ್ರಾಪ್ತವಾಗುವ ಅಲ್ಪ ರೋಗಗಳೆಂದು ಎಣಿಸಬಾರದು

ಆಹಾರ ಅರಗುವುದರಲ್ಲಿ ವ್ಯತ್ಯಾಸವಾದರೆ ಆಹಾರದ ಮುಖ್ಯ ಭಾಗಗಳನ್ನು ಶರೀರವು ಹೀರಿಕೊಳ್ಳುವುದಿಲ್ಲ ಇದರಿಂದ ಶರೀರಕ್ಕೆ ಪುಷ್ಟಿ ಕಡಮೆಯಾಗುವುದು ದುರ್ಬಲ ರೋಗವಾಗಿ ಜಗುಪ್ಸೆ ಬುದ್ಧಿ ಮಾಂದ್ಯ ನಿರುತ್ಸಾಹ ಬಳಲಿಕೆ, ನರಗಳ ದುರ್ಬಲ ಇವೆಲ್ಲಾ ಕ್ರಮಕ್ರಮವಾಗಿ ಪ್ರಾಪ್ತವಾಗುವವು ಇಂಥಾ ಸಮಯದಲ್ಲಿ ಜೀರ್ಣಶಕ್ತಿಯನ್ನು ಪಟುವಾಗಿ ಮಾಡಿಕೊಳ್ಳುವುದಕ್ಕೆ ಪರಿಹಾರವನ್ನು ನೋಡಿ ಮಾಡಿಕೊಳ್ಳಬೇಕು ಪೆರೂನಾ ಸೇವನೆಯು ಜೀರ್ಣಶಕ್ತಿಯನ್ನು ಕ್ರಮಪಡಿಸುತ್ತದೆಂದು ಪ್ರಖ್ಯಾತಿಪಡೆದಿರುತ್ತದೆ ಇದಕ್ಕೆ ಅಂಥಾ ಶಕ್ತಿಯುಂಟೆಂದು ಸಾವಿರಾರು ಸಂದರ್ಭಗಳಲ್ಲಿ ದೃಷ್ಟಾಂತಕ್ಕೆ ಬಂದಿದೆ [illegible] ಅನೇಕರಿಗೆ ಪೆರೂನಾವು ಅದ್ಭುತವಾಗಿ ಆರೋಗ್ಯವನ್ನು ಕೊಟ್ಟಿದೆ

ಅಜೀರ್ಣದಿಂದ ದುರ್ಬಲವು.

ಆದರೆ ಪೆರೂನಾದಲ್ಲಿ ಈಗ ಹೇಳುವುದೆ ಸೂಚ್ಯಯಾದಲ್ಲಿ ಶರೀರದೊಳಗಿರತಕ್ಕ ಅಂಗಗಳ ಸ್ವಸ್ಥ[illegible] ಆವರಿಸಿಕೊಂಡಿರುವ ಘಾನರಗಳ ಮೂಲಸ್ಥಾನಗಳನ್ನು ಶಕ್ತಿಪಡಿಸುವುದೇ ಇದರ ಕೆಲಸ ಇದರಿಂದ ನರಗಳಲ್ಲಿ ಶಕ್ತಿಯು ಯಥಾಪ್ರಕಾರ ಕೂಡಿಕೊಳ್ಳುತ್ತದೆ ಆ ಮೇಲೆ ಅಂಗಗಳೆಲ್ಲಾ ತಮ್ಮ ತಮ್ಮ ಕಾರ್ಯವನ್ನು ಕ್ರಮವಾಗಿ ಮಾಡಿಕೊಳ್ಳುತ್ತಾ ಬರುವವು ಆದಕಾರಣ ನಿಮಗೆ ಶರೀರದಲ್ಲಿ [illegible] ಕಾಯಿಲೆ ಇದ್ದರೂ ಇದರ ಒಂದು ಬಾಟ್ಲಿ ಪೆರೂನಾ ತೆಗೆದುಕೊಂಡು ಸೇವಿಸಿ ನೋಡಿರಿ ಒಂದು ಬಾಟ್ಲಿ [illegible] ನಿಮಗೆ [illegible] ಇಲ್ಲವೋ ಅನುಭವಕ್ಕೆ ಬರುತ್ತದೆ

ಪೆರೂನಾವಿನ ಉತ್ತಮೋತ್ತಮವಾದ ಗುಣ

ಅದರಿಂದ ವಿಶೇಷ ಪ್ರಯೋಜನವಾಗಿದೆ ಬಹುಜನರು ಪೆರೂನಾ [illegible] ಕಾಗದಗಳನ್ನು ಬರೆದಿರುತ್ತಾರೆ ಅವುಗಳನ್ನು ಓದುವಾಗ ಬರೆದವರಿಗೆ ಈ ಔಷಧದಿಂದ ಎಷ್ಟು ಪ್ರಯೋಜನವೂ ಸಂತೋಷವೂ ಉಂಟಾಯಿತೆಂದು ತಿಳಿಯುತ್ತದೆ ಕಷ್ಟವನ್ನು ನಿವಾರಣೆ ಮಾಡುವುದರಲ್ಲಿಯೂ ಆರೋಗ್ಯವನ್ನು ಕೊಡುವುದರಲ್ಲಿಯೂ ಪೆರೂನಾವು ಎಷ್ಟು ಚನ್ನಾಗಿ [illegible] ತನ್ನ ಕೆಲಸವನ್ನು ಸಫಲ[illegible]ವೋ ನಿವೇದಿಸಲಾರೆವು

ಮೆ॥ ಪಿ. ಬ್ರೆರ್ರೆ, ೨೦ [illegible] ಲಸ್ಸ್ರಲೋ, ಸ್ವಿಟ್ಜರ್[illegible]

[illegible] ಕಾಗದ [illegible] ನನಗೆ [illegible] ಒಂದು ವರುಷದ [illegible] ನನ್ನ ನರಗಳು [illegible] ಒಂದು ಗಂಟೆ [illegible] ಮುಗಿದ [illegible] ನೋಡುವುದೆ ನನ್ನ ಕುತೂಹಲವಾಗಿತ್ತು

[illegible]

ನಾನು [illegible] ಬಂದೆನು [illegible] ನನ್ನ [illegible] ಮಾಡಲು [illegible] ಬಿಡುತ್ತಾ [illegible]

[illegible] ತೆಗೆದುಕೊಂಡೆ [illegible] ನನಗೆ [illegible] ಪತ್ರಿಕೆಗಳಲ್ಲಿ ಪ್ರಕಟವಾದ [illegible] ನನಗೆ [illegible]

[illegible] ಆದರೆ ಒಂದು [illegible] ಚನ್ನಾಗಿ [illegible] ನನಗೆ [illegible] ಅನುಭೋಗಿಸಿ [illegible]

[illegible]

ಮೂತ್ರಕೋಶವೂ ಪಿತ್ತಕೋಶವೂ

[illegible] ನೊವ್ವೆಂಬರ್ ೧೧೧೦ [illegible] ಮಾಟಿರ್ [illegible] ಈತ ಬರೆಯುವದು —

ನನಗೆ ಪೆರೂನಾ [illegible] ಹೇಳುವದು [illegible] ನನ್ನ ದಮ್ಮುಕಾರಣ [illegible] ಪಿತ್ತಕೋಶ [illegible] ಬಹಳ ನೋವುಂಟಾಗುತ್ತಿತ್ತು [illegible] ಬಿಟ್ಟನು

[illegible] ಪ್ರಯೋಜನ [illegible] ನನಗೆ [illegible] ಪತ್ರಾಂಗ [illegible] ಗುಣಹೊಂದಿದೆನು —

ಊಟಮಾಡಿದ ಮೇಲೆ ಬಾಧೆ

ಯಮುನಾಬಾಯಿ

[illegible] ಈತ ಬರೆಯುವದು

ಪೆರೂನಾ [illegible] ಹೊಟ್ಟೆಯೊಳಗಿನ ಸಂಕಟ [illegible]

ನಾನು [illegible] ಊಟಮಾಡುವಾಗ [illegible] ನನ್ನ ಹೊಟ್ಟೆಯಲ್ಲಿ ಒಂದು [illegible] ತುಂಬಿಕೊಂಡು ಊಟವಾದ ಎರಡು ಗಂಟೆಯ [illegible] ಸಂಕಟ [illegible]

[illegible] ಸಂಕಟ [illegible] ಆರೋಗ್ಯ [illegible] ಆಯಿತು

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ ಇಂಗ್ಲೀಷು ತೆಲುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದ್ದು ಇವರಿಂದಲೇ ತಿಳಿಯಬಹುದು

ವಿಳಾಸ:— ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ —

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

21—10—1908 ರಿಂದ 10—10—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	•	•	•	•
ಮೈಸೂರು	1	1	0	0
ಬೆಂಗಳೂರು ಡಿಸ್ಟ್ರಿಕ್ಟು	30	26	0	0
ಮೈಸೂರು	64	46	0	0
ಕೋಲಾರ್	0	0	0	[illegible]
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	24	18	0	1
ಹಾಸನ	7	[illegible]	0	0
ಚಿತ್ರದುರ್ಗ	0	0	8	4
ಕಡೂರ್	13	13	0	0
ಶಿವಮೊಗ್ಗಾ	•	•	•	•
• ಸಂಖ್ಯೆ ಕಾಣಿಸಿಲ್ಲ ಜುಮ್ಲಾ	161	144	11	5

ಶಾಲಿವಾಹನ ಶಕ ವರುಷಂಗಳು ೧೮೩೦ನೇ ಕೀಲಕನಾಮ ಸಂವತ್ಸರದ ಕಾರ್ತೀಕ ಬಹುಳ ಚೌತಿ ಗುರುವಾರದಿಂದ ಕಾರ್ತೀಕ ಬಹುಳ ದಶಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ನವಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಷ ಪಳಾ ವಿ ಕೆ
12	ಗುರು	[illegible]	[illegible]	ಆರ್ದ್ರಾ	18 12	28
13	ಶುಕ್ರ	ಪಂಚಮಿ	11 12	ಪುನ	12 1	21
14	ಶನಿ	[illegible]	15 [illegible]	ಪುಷ್ಯ	10 1	30
15	ರವಿ	ಸಪ್ತಮಿ	[illegible] 10	ಶ್ಲೇಷ	[illegible] 10	1
16	ಚಂದ್ರ	ಅಷ್ಟಮಿ	[illegible]	ಮಘ	58 [illegible]	2
17	ಕುಜ	ನವಮಿ	16 14	ಪುಬ್ಬ	10 0	1
18	ಬುಧ	ದಶಮಿ	37 38	ಪುತ್ತ	[illegible]	1

ಊನ ತಿಥಿ

† ಮಹಾವ್ಯತೀಪಾತ [illegible] ಪುಣ್ಯಕಾಲ

‡ [illegible]

ಪೇಟೇ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲ ೧ಕ್ಕೆ	ರೂ	೧೮ ೦ ೦	೧೭ ೦ ೦
ಕೆಂಪು ಅಕ್ಕಿ ಅವಲ		೧೮ ೯ ೦	೧೮ ೨ ೦
ದು[illegible]		೧೬ ೦ ೦	೧೭ ೮ ೦
[illegible]		೧ ೬	೧೭ [illegible]
ಸಕ್ಕರೆ ಅವಲ		೨೨ ೦	೨೩ ೦ ೦
ದುಯಮ		೧೯ ೬ ೦	[illegible]
ತೊಗರಿ ಬೇಳೆ ಪಲ್ಲ ೧ಕ್ಕೆ		[illegible] ೦ ೦	೧೮ ೮ ೦
ದುಯಮ		[illegible]	೧೭ [illegible]
ಕಡಲೆ [illegible] ಪಲ್ಲ ೧ಕ್ಕೆ		೯ ೦	೧೦ ೦ ೦
[illegible]		[illegible]	[illegible]
[illegible]		[illegible]	೯ ೦ ೦
ಹೆಸರುಬೇಳೆ ಪಲ್ಲ ೧ಕ್ಕೆ		೧೨ ೦	೧೧ ೧೨ ೦
[illegible] ಅವರೆ		೧೧ ೯	೧೦ ೬ ೦
ಹೆಸರು		[illegible]	೧೩ ೦ ೦
ಉದ್ದು		೧೬ ೦	[illegible]
ಕಡಲೆ		೧[illegible]	೧೪ [illegible]
ಎಳ್ಳು [illegible] ೧ಕ್ಕೆ		[illegible]	೧೫ ೪ ೦
ಹುರುಳಿ		೮ ೬ ೦	೬ ೦ ೦
ಹರಳು ೧[illegible]		[illegible]	೧ ೦ ೦
[illegible]ಗೆ ಕಾಯಿ ಮಣ ೧ಕ್ಕೆ		೧ ೨ ೦	೧ ೭ [illegible]
ಮೆಣಸಿನಕಾಯಿ		೫ ೦ ೦	೯ ೮ ೦
ದು[illegible]		೯ ೦	೪ ೪೦
ಬೆಲ್ಲ ಹೊಸ ಅಚ್ಚು		೫ [illegible]	ಮ ೩ ೯ ೦
ಒಳ್ಳೆ [illegible] ಮಣ ೧ಕ್ಕೆ		೭ ೦ ೦	೬ ೪ ೦
ಹರಳೆಣ್ಣೆ		೫ ೪ ೦	೯ ೦ ೦
ಕೊತ್ತುಂಬರಿ ಪಲ್ಲ ೧ಕ್ಕೆ		೬ ೯ ೦	೬ ೮
ಉಪ್ಪು		೫ ೯ ೦	೭ ೯ ೦
ಹುಣಸೆ ಹಣ್ಣು		೧ ೬ ೦	೧ ೪೦
[illegible]		೧ ೯ ೨	೧ ೯ ೦
[illegible] ಮಣ ೧ಕ್ಕೆ		೧೯ ೦	೧೫ ೮ ೦
[illegible] ಪೆಟ್ಟಿ ೧ಕ್ಕೆ		೫ ೦	೪ ೦ ೦
ತೆಂಗಿನಕಾಯಿ ೧೦೦ಕ್ಕೆ		೪ ೨ ೦	೫ ೦
ಅಡಕೆ ಕಾಯಿ ಮಣ ೧ಕ್ಕೆ		೦ ೧೦ ೦	೦ ೧೪೦
[illegible] ಮಣ ೧ಕ್ಕೆ		೦ ೧ ೦	೦ ೧೪೦
ಚಿನ್ನ (ಪೌನ್) ಕೆಂಪು		೧೫ ೭ ೦	೧೫ ೬೦
[illegible]		೧೫ ೧೯ ೦	೧೬ ೧೦
[illegible] ಗಟ್ಟಿ ತೊಲ ೧ಕ್ಕೆ		೨೪ ೧೧ ೦	೨೪ ೮೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೬೭ ೦ ೦	೬೫ ೧೦

Printed and Published by the Rev F W Thomson M A Proprietor and Manager, Wesleyan Mission Press Mysore 12/11/1908

REGISTERED M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೨ — ಮೈಸೂರು- ೧೯೦೮ ನೇ ಇಸವಿ ನವಂಬರ್ ತಾರೀಖು ೧೯ ನೇ ಗುರುವಾರ. — ಸಂಚಿಕೆ ೨೫

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

೧ ಲೋಕಾನಂದಯುಕ್ತ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ...



ವಿಳಾಸ—ವೈದ್ಯ ವೆಂಕಟಾಚಲ ಪಂಡಿತ ಎಸ್ ಎಸ್ ಆರ್.

ಮೈಸೂರು



ಧನ್ವಂತರಿ

ಶ್ರೀಮನವರ ಗೀತಾ ... ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

AMRUTANJAN DEPOT, 16 OAK-LANE, BOMBAY. [17-39]

ಅಮೃತಾಂಜನ ಡಿಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯರ ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದೂಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ... ಈ ಅಮೃತಾಂಜನದ ಮರ್ದನದ ರೀತಿ ... ನಾವು ಅಮೃತಾಂಜನ ...

ಗಜಕರ್ಣದ ಮುಲಾಮು.

... ಡಬ್ಬಿ ೧ಕ್ಕೆ ೦—೬—೦ ವಿ. ಪಿ. ಖರ್ಚು ೦—...—೦

ದಂತಮಂಜನ—ಡಬ್ಬಿ ... ಹಲ್ಲುಗಳಿಂದ ಬರುವ ರಕ್ತ ... ಹಲ್ಲುಗಳು ಗಟ್ಟಿಯಾಗುತ್ತವೆ, ಹಲ್ಲುಗಳು ಬೆಳ್ಳಗಾಗುತ್ತವೆ	
ಕಣ್ಣಿನ ಮುಲಾಮು ಡಬ್ಬಿ ೧ಕ್ಕೆ ಕಿಮ್ಮತ್ತು ...	
ಕೇಶವರ್ಧನಿ—...	
ಕೇಶವರ್ಧನಿ ... ಕೂದಲನ್ನು ನಯಮಾಡುವದು ಬಾಟ್ಲಿ ಒಂದರ ಕಿಮ್ಮತ್ತು ರೂ ೧—೦—೦	
ವಜ್ರಗುಳಿಕೆ—ಧಾತುಪುಷ್ಟಿ, ರಕ್ತಶುದ್ಧಿ	೧—೦—೦
ಕುಸುಮಗುಳಿಕೆ—ಹೆಂಗಸರ ...	೧—೦—೦
ಸುಂದರೀ ತೈಲ—ಮೋರೆಯ ಮೇಲಣ ...	೦—೮—೦
ತಾಂಬೂಲ ಗುಳಿಕೆ ತಾಂಬೂಲ ...	೦—೪—೦
ನೇತ್ರಾಂಜನ—ಮಂದದೃಷ್ಟಿಗೆ	೦—೪—೦
...	೦—೮—೦
...	೦—೮—೦

ವಿಳಾಸ—ವಿಲಿಯಂ ಮತ್ತು ಕಂಪೆನಿ, ೧೬ ಓಕ್‌ಲೇನು, ಫೋರ್ಟು, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ" ಮುಂಬಯಿ

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ತರಿಸಿಕೊಂಡವು? ... ಹಾಸನದಿಂದಲೇ ಎಂದು ತಿಳಿಯಿರಿ ...

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಲಾ ಪ್ರಕಟನೆಗಳು

... [40-30]

ಕನ್ನಡ ಲಾ ರಿಪೋರ್ಟ್—ಪ್ರಿವಿ ಕೌನ್ಸಿಲ್, ಹೈ ಕೋರ್ಟ್, ಚೀಫ್ ಕೋರ್ಟ್ ತೀರ್ಪುಗಳು ಕನ್ನಡದಲ್ಲಿ ಸಂಗ್ರಹಿಸಲ್ಪಟ್ಟಿರುವ ಈ ಮಾಸ ಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ರೂ ೧—೦—೦ ...

ಇವುಗಳನ್ನಪೇಕ್ಷಿಸುವವರು—... ಮಲ್ಹಾರರಾವ್‌ರು, ಫಸ್ಟ್ ಗ್ರೇಡ್ ಪ್ಲೀಡರ್, ... ಚಾಮರಾಜ ಪೇಟೆ, ಬೆಂಗಳೂರು ಸಿಟಿ—ಈ ವಿಳಾಸಕ್ಕೆ ಬರೆಯುವುದು.

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

58 21

ನಮ್ಮಲ್ಲಿ ಈಗ ... ಬಟ್ಟೆಗಳು ...

ವಿಳಾಸ—ಮ್ಯಾನೇಜರ್,

ಸಿ. ಎಸ್. ಎಸ್. ... ಡಿಪೋ, ಮೈಸೂರು.

ಹರಾಜು ಇಸ್ತಿಹಾರ್.

96-1

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—ಅಮೃತಮಹಲ್ ಇಲಾಖೆಯ ಕೆಲವು ಗಂಡು ರಾಸುಗಳನ್ನು ಬಾಲ್ತಿ ಇಸವಿ ಡಿಸೆಂಬರು ೫ನೇ ತಾರೀಖು ಲಾಗಾಯಿತು ಹಾಸನದ ತಾಲ್ಲೋಕು "ದುದ್ದ"ದ ಮೊಕ್ಕಾಂನಲ್ಲೂ, ಸದರಿ ಮಾಹೆ ೧೩ನೇ ತಾರೀಖು ಲಾಗಾಯಿತು ಚಳ್ಳಕೆರೆ ತಾಲ್ಲೋಕು "ಹಿರಿಕೆರೆ ನಾಯ್ಕನಹಟ್ಟಿ" ಕಾವಲಿನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಛಡಸವಾಲ್ ಮಾಡಿ ರಾಸುಗಳನ್ನು ಪಡೆಯಬಹುದು.

ಕ್ಯಾಂಪ್-ಮೈಸೂರು, ತಾ. ೧೬, ೧೭-೧೧-೧೯೦೮.

ಎಚ್. ನಂಜುಂಡರಾಜೇ ಅರ್ಸ್, ಸೂಪರಿಂಟೆಂಡೆಂಟ್, ಅಮೃತಮಹಲ್ ಇಲಾಖಾ.

ತ್ರಾವಾಗಿ ಇಂಗ್ಲಿಷ್ ಕಲಿಯುವಿಕೆ.

95-1

ಇಂಗ್ಲಿಷ್ ಭಾಷೆಯನ್ನು ಬರೆಯುವುದಕ್ಕೂ, ಓದುವುದಕ್ಕೂ, ಮಾತಾಡುವದಕ್ಕೂ ಬೋಧಕರ ಸಹಾಯ ಇಲ್ಲದೆ ಒಂದೆರಡು ತಿಂಗಳಲ್ಲಿಯೇ ತಾನಾಗಿ ಕಲಿಸುವ ಪುಸ್ತಕ ಕ್ರಯ ರೂ. ೧—೪—೦.

ಪ್ರಶ್ನೋತ್ತರ ಲೇಖ್ಯಬೋಧಿನಿ.

ಸ್ವಲ್ಪ ಪ್ರತಿಗಳೇ ಉಳಿದಿವೆ. ೩೬೦ ಪುಟಗಳು. ಮತಪದ್ಧತಿಯನ್ನನುಸರಿಸಿ ಬರೆಯುವ ಒಕ್ಕಣೆಗಳು, ಸಿವಿಲ್, ಮೇಜಿಸ್ಟ್ರೇಟ್, ರೆವಿನ್ಯೂ, ಪೊಲೀಸ್, ಇಂಜನಿಯರ್, ಫಾರೆಸ್ಟ್, ಮುಜ್ರಾಯಿ, ವಿದ್ಯಾಭ್ಯಾಸ ಮತ್ತು ಇತರ ಇಲಾಖೆಗಳ ಸಂಗತಿಗಳೂ, ರೈತರಿಗೆ ರಿಯಾಯಿತಿ ದೊರೆಯುವ ಅರ್ಜಿಗಳೂ, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಹಿಂದೂ ಲಾ, ಮಹಮದೀಯ ಲಾ, ಕಂಪನೀಸ್ ಆಕ್ಟ್, ಲ್ಯಾಂಡ್ ಅಕ್ವಿಜಿಷನ್, ವೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳೂ, ಕೋರ್ಟುಗಳಿಗೂ ಪೊಲೀಸಿಗೂ ಇರುವ ಅಧಿಕಾರ, ವರ್ತಕರಿಗುಪಯೋಗವಾದ ಎಲ್ಲಾ ರೋಜು ವಗೈರೆ ಲೆಕ್ಕಗಳು, ರಾಸುಭಾಷಿಗೆ ಲೆಕ್ಕ ಬರೆಯುವ ರೀತಿ. ಇವುಗಳ ಸಾರಾಂಶವನ್ನೆಲ್ಲಾ ವಿವರಿಸಿದೆ. ಕ್ರಯ ರೂ. ೧—೪—೦. ವಿಳಾಸ.—ಮ್ಯಾನೇಜರ್, ಕರ್ಣಾಟಕ ಪುಸ್ತಕ ಶಾಲಾ, ಲಕ್ಷ್ಮೀಶ್ವರ್ ಪೋಸ್ಟ್, ತಾ ಮಾಲೂರು, ಕೋಲಾರ್ ಡಿಸ್ಟ್ರಿಕ್ಟ್.

ಶ್ರೀ ತ್ರಾಂಬೂಲ.

81.7

ಇದನ್ನು ಓದಿ! ಬಿಡಬೇಡಿ!! ಗುಣನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ

೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬಾಯಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು. ಈ ಪರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಜಾಸ್ತಿ. ೬ ಸೀಸೆ ವರೆಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ:—

"ವಾತಹರಿ" ನೋವು ಶಕ್ತಿಪರಿಹಾರ. ಡಬ್ಬಿ ೧ಕ್ಕೆ ೦—೧೨—೦.

ದೇವನಹಳ್ಳಿ ಟವುನ್, ಬೆಂಗಳೂರು ಡಿಸ್ಟ್ರಿಕ್ಟ್.

ಯಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟೀಷನರ್.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

48-20

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂಧುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಯಿಂದ ಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು. ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ.

ಕ್ರಯ ಶೀಸೆ ೧ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿಸುವಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೭, ವೇದಮುಲ್ಲ್ಯ ಬೀದಿ, ವೇಪೇರಿ, ಮದರಾಸ್.

CHAMBERLAIN'S PAIN BALM.

ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವು.

1-47

ಬೆನ್ನೆಲುಬಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಬಚ್ಚಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ.

ಗೌಡರ ಹೊಗೆ ಸೇದುವ ಔಷಧ.

94-2

ಕೆಮ್ಮು, ಗಸೆಗೆ ತಕ್ಷಣ ಶಮನ; ಶೀಘ್ರ ಪರಿಹಾರ. ಕ್ರಯ, ಪೆಟ್ಟಿಗೆ ೧ಕ್ಕೆ ೮ ಆಣೆ; ೩ಕ್ಕೆ ೧-೪-೦; ೬ಕ್ಕೆ ೨-೪-೦;

ವಿಳಾಸ—ಸಿ. ಲಕ್ಷ್ಮಣಗೌಡ, ಬಿ. ಎ., ಬಿ ಯಲ್., ಬೆಂಗಳೂರು ಸಿಟಿ.

ಮೈಸೂರಿನಲ್ಲಿ ಮನೆ ವಿಕರಿಗೆ ಸಿದ್ಧವಾಗಿದೆ.

82-5

ಮೈಸೂರು ಶಿವರಾಂಪೇಟೆ ಇರ್‍ವಿನ್ ರಸ್ತೆಯಲ್ಲಿ ೨೭×೭ ಅಂಕಣಗಳ ಅಂಚಿ ಗುರಿಕಾರ್ ಕೃಷ್ಣಪ್ಪನವರಿದ್ದ ದೊಡ್ಡ ಮನೆ. ಬೇಕಾದವರು—ಮೇಲ್ಕೋಟೆಯ ಫಾರೆಸ್ಟ್ ರೇಂಜರ್ ಮ. ಬಿ. ಶ್ರೀಕಂಠಯ್ಯನವರಿಗೆ ಬರೆದು ಕ್ರಯ ಮುಂತಾದದ್ದನ್ನು ತಿಳಿಯಬಹುದು.

JUST RECEIVED! JUST RECEIVED!!

Stead's Books for the Bairns

(Illustrated) New Numbers

STEAD'S PENNY POPULAR TALES Sixty-four Pages in a coloured Picture Cover Each number contains a story of thrilling interest 24 numbers

A VERY NICE SELECTION OF 93-2

CHRISTMAS AND NEW YEAR CARDS AND CALENDARS FOR 1909.

Apply The Manager, C.L.S. Book Depot, Mysore City.

ಇಲ್ಲಿ ನೋಡಿ.

77-9

ತುಮಕೂರು ಮಿಷನ್ ಇಲಾಖೆಯಲ್ಲಿ ಯೂರೋಪಿಯನ್ನರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ. ಕ್ರಯ:—೧೨ ಆಣೆ ಮೊದಲ್ಗೊಂಡು ೧ ರೂ. ೧೨ ಆಣೆಯ ವರೆಗೆ. ೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ರೂಪಾಯಿ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು. ಈಗತಾನೇ ಇಂಗ್ಲಿಷ್ ಉಲ್ ದಾರವು ಬಂದಿದೆ. ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಬಲ್ಲೆವು. ವಿಳಾಸ:—ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

ಸನ್ ೧೮೭೩ ರಿಂದ ೧೯೦೭ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 33-34

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರೀಕ್ಷೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ.

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ:—

ಶ್ವಾಸಕೋಶದ ಆಕ್ರಮಗಳು; ನಾನಾ ತರದ ಕೆಮ್ಮಲು;

ಸಕಲವಿಧ ಶೈತ್ಯಗಳು; ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ.

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ.

ಕೈಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವದು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ.



(೧೨ ಆಣೆ ಬುಡ್ಡಿ ಪರಿಮಾಣ.)

ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಳೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯುರಿಯುವುದು; ತಲೆತಿರುಗುವುದು; ತಲೆನೋವು, ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [69-12]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ, ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು. ಅಥವಾ, ಡೋನ್ಸ್, ಪಿ. ಒ. ಬಾಕ್ಸ್ ೩೦, ಬೊಂಬಾಯಿ — ಇವರಲ್ಲಿ ದೊರೆಯುವುದು

ವೃತ್ತಾಂತ ಪತ್ರಿಕೆ.

:o:—

ಸನ್ ೧೯೦೮ ನೇ ಇಸವಿ ನವೆಂಬರ್ ತಾ ೧೯ ನೇ ಗುರುವಾರ.

ಕ್ಷಾಮಪ್ರಾರ್ಥನೆ.

ಈಚೆಗೆ ಕೆಲವು ವಾರಗಳಿಂದ ನಾವು ಪ್ರಕಟಮಾಡುತ್ತಿರುವ ತಾಲ್ಲೂಕ್ ವರ್ತಮಾನಗಳನ್ನು ನೋಡಿದಲ್ಲಿ ಈ ಸಂಸ್ಥಾನದ ಹಲವು ಸ್ಥಳಗಳಲ್ಲಿ ಪ್ರಜೆಗಳು ಕ್ಷಾಮಬಾಧೆಗೆ ಸಿಕ್ಕಿ ಕಷ್ಟಪಡುತ್ತಿದ್ದಾರೆಂಬುವುದು ಗೊತ್ತಾಗುತ್ತದೆ. ಎಲ್ಲಾ ಕಡೆಗಳಲ್ಲೂ ಸಾಮಾನ್ಯವಾಗಿ ದಾರಣೆವಾಸಿಗಳು ಬಹಳ ಜಡಾವಾಗಿ, ಕೆಲವು ಕಡೆ ಆಹಾರ ಧಾನ್ಯಗಳು ದೊರಕುವುದೂ ಪ್ರಯಾಸವಾಗಿರುವಂತೆ ತಿಳಿಯುವುದು. ಕಳೆದ ಅಕ್ಟೋಬರ್ ತಿಂಗಳಲ್ಲಿ ಕೆಲವು ಕಡೆಗಳಲ್ಲಿ ತಕ್ಕಮಟ್ಟಿಗೆ ಮಳೆ ಆಗಿ ಪೈರುಗಳು ಚೆನ್ನಾಗಿದ್ದರೂ, ಅನೇಕಾನೇಕ ಸ್ಥಳಗಳಲ್ಲಿ ಮಳೆಯಿಲ್ಲದೆ ಇಟ್ಟ ಪೈರು ಸುಟ್ಟುಹೋಗಿ ಜನಕ್ಕೂ ಜಾನುವಾರುಗಳಿಗೂ ನೀರು ದೊರಕದಂತಾಗಿರುತ್ತದೆ. ಈ ಸಂದರ್ಭದಲ್ಲಿ ಈ ವಾರ ಪ್ರಕಟಿಸಿರುವ ಚಿಂತಾಮಣಿಯ ಬಾತ್ಮಿಯು ಬಹು ದುಃಖಕರವಾಗಿರುವುದು. ಆ ಬಾತ್ಮಿದಾರರು ಅಲ್ಲಿನ ಜನರು ತಿನ್ನುವುದಕ್ಕಾರಂಭಿಸಿರುವ ಕತ್ತಾಳೆ ಗೆಡ್ಡೆಗಳನ್ನು ಅವಲೋಕಿಸುವುದಕ್ಕಾಗಿ ನಮ್ಮಲ್ಲಿಗೆ ಕಳುಹಿಸಿರುವರು. ಇಂಥಾ ದುಃಸ್ಥಿತಿಯು ಅಲ್ಲಿನ ಪ್ರಜೆಗಳಿಗೆ ಪ್ರಾಪ್ತವಾದದ್ದಕ್ಕಾಗಿ ನಾವು ಬಹಳಾ ವಿಷಾದಪಡುತ್ತೇವೆ. ಸ್ಥಳಾಧಿಕಾರಿಗಳು ಇಂಥಾ ಕಷ್ಟದೆಸೆಯನ್ನು ಕಡಮೆ ಮಾಡುವುದಕ್ಕೆ ಸಾಧಿಸುತ್ತಿರುವುದನ್ನು ಕೇಳಿ ಸಂತೋಷಪಡುತ್ತೇವೆ. ಅವರು ಘನ ದಯೆ ಪಶ್ಚಾತ್ತಾಪಯುಕ್ತರಾಗಿ ತಮ್ಮ ವಿಶ್ವ ಅಧಿಕಾರ ಸಾಮರ್ಥ್ಯಾದಿಗಳನ್ನು ವಿನಿಯೋಗಿಸಿ ಕಾರ್ಯಗಳನ್ನು ನಡೆಸಿದಲ್ಲಿ ಪ್ರಜೆಗಳ ಕಷ್ಟವು ಬಹುಮಟ್ಟಿಗೆ ಕಡಮೆಯಾದೀತೆನ್ನುವುದಕ್ಕೆ ಸಂಶಯವಿಲ್ಲ. ಇದಲ್ಲದೆ ಆಯಾ ಸ್ಥಳಗಳಲ್ಲಿ ಮುಖಂಡರಾಗಿಯೂ ವಿಶ್ವಾಸ

ರಾಗಿಯೂ ಇರತಕ್ಕ ದೊಡ್ಡ ಮನುಷ್ಯರು ತಮ್ಮ ಸಹೋದರ ವರ್ಗಕ್ಕೆ ಸೇರಿ ಕಷ್ಟಪಡುತ್ತಿರುವ ಬಡ ಪ್ರಜೆಗಳ ವಿಚಾರದಲ್ಲಿ ಕನಿಕರವನ್ನು ತೋರಿಸಿ, ತಮ್ಮ ಕೈಲಾದಷ್ಟು ಧನಧಾನ್ಯಗಳ ಸಹಾಯ ಮಾಡಬೇಕಾಗಿರುವುದು. ವರ್ತಕರು ಬಡ ಜನ ಕಷ್ಟಕಾಲ ದಲ್ಲಿ ಕಳೆಯುವ ತನಕ ವಿಶೇಷ ಲಾಭದ ಮೇಲೆ ದೃಷ್ಟಿಯಿಡದೆ ಬಡಬಗ್ಗರಿಗೆ ಅಕೃತ್ರಿಮವಾದ ಪ್ರೀತಿ ವಾತ್ಸಲ್ಯಗಳನ್ನು ತೋರಿಸಬೇಕೆಂತಲೂ, ಯಾವ ವಿಧದಲ್ಲೂ ಅವರನ್ನು ಮೋಸಪಡಿಸದೆ ಕನಿಕರವುಳ್ಳವರಾಗಿ ಆಹಾರ ಧಾನ್ಯಗಳನ್ನು ವಿಕ್ರಯಮಾಡಬೇಕೆಂತಲೂ ಕೋರುತ್ತೇವೆ.

ಈ ದುರ್ಭಿಕ್ಷದ ಸ್ಥಿತಿಯನ್ನು ದಿವಾನರವರು ಕಳೆದ ವಾರ ಕೆಲವು ಕಡೆ ಹೋಗಿ ನೋಡಿಕೊಂಡು ಬಂದಿರು. ಅದೇ ಉದ್ದೇಶದಿಂದ ಅವರು ನಾಳೆ ರಾಜಧಾನಿಯಿಂದ ಹೊರಟು ನಾಗಮಂಗಲ, ಕುಣಿಗಲು ಮುಂತಾದ ಪ್ರಾಂತ್ಯಗಳಲ್ಲಿ ಸಂಚಾರಮಾಡುವವರಾಗಿದ್ದಾರೆಂದು ಕೇಳುತ್ತೇವೆ. ಕ್ಷಾಮನಿವಾರಣೆಗಾಗಿ ಗವರ್ನ್‌ಮೆಂಟಿನವರು ಅವಶ್ಯವಾದ ಕಡೆಗಳಲ್ಲಿ ಸುಭಿಕ್ಷಾರ್ಥವಾದ ಕಾಮಗಾರಿಗಳನ್ನು ಏರ್ಪಡಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ತಿಂಗಳಿಗೆ ೨೦ ರೂಪಾಯಿ ತನಕ ಸಂಬಳ ಪಡೆಯುವ ಸರ್ಕಾರಿ ನೌಕರರಿಗೆ ಬೆಂಗಳೂರು, ಕಡೂರು, ಕೋಲಾರ, ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಧಾನ್ಯದ ಅಲೋಯನ್ಸನ್ನು ಕೊಡಬೇಕೆಂದು ವಿಧಿಸಿದ್ದಾರೆ. ಉಳಿದ ಭಾಗಗಳಲ್ಲೂ ಅವಶ್ಯಕತೆಯು ಕಂಡುಬಂದ ಹಾಗೆ ಸ್ಯಾಂಕ್ಷನ್ ಮಾಡಿಯಾರೆಂದು ನಿರೀಕ್ಷಿಸುತ್ತೇವೆ.

ಶ್ರೀಮನ್ಮಹಾರಾಜರವರ ಸಂಚಾರವು

ನೆನ್ನೆ ಮಧ್ಯಾಹ್ನ ಶ್ರೀಮನ್‌ಮಹಾರಾಜರವರು ಹಾಸನ ಮತ್ತು ಶಿವಮೊಗ್ಗ ಪ್ರಾಂತ್ಯಗಳಲ್ಲಿ ಸಂಚಾರಮಾಡುವುದಕ್ಕಾಗಿ ರಾಜಧಾನಿಯಿಂದ ಪ್ರಯಾಣ ಮಾಡಿದರು. ಅವರ ಸಂಗಡ ಪ್ರೈವೇಟ್ ಸೆಕ್ರೆಟರಿ ಮ. ಇ. ವೆಂಕಟಕೃಷ್ಣಯ್ಯನವರೂ, ಅ. ಪ್ರೈವೇಟ್ ಸೆಕ್ರೆಟರಿ ಮ. ಸಿ. ರಾಘವೇಂದ್ರರಾಯರೂ, ಡಾಕ್ಟರ್ ಬಿ. ಎಲ್. ನಂಜಪ್ಪನವರೂ ಹೋಗಿರುವರು. ಈ ಸಂಚಾರದ ವಿವರವೇನೆಂದರೆ —

ನವಂಬರ್ ೧೮ ನೇ ಬುಧವಾರ — ಮಧ್ಯಾಹ್ನ ಮೈಸೂರನ್ನು ಬಿಟ್ಟು, ಸಾಯಂಕಾಲ ಹಾಸನವನ್ನು ಸೇರಿ, ಶ್ರವಣಬೆಳಗೊಳಕ್ಕೆ ಹೋಗಿ ವಾಪಸು ಬರುವುದು. ೧೯ ನೇ ಗುರುವಾರ — ಹಾಸನದಲ್ಲಿರುವರು. ೨೦ ನೇ ಶುಕ್ರವಾರ — ಬೆಳಿಗ್ಗೆ ಹಾಸನವನ್ನು ಬಿಟ್ಟು, ಬೇಲೂರು ಮತ್ತು ಹಳೇಬೀಡು ದೇವಸ್ಥಾನಗಳನ್ನು ನೋಡಿಕೊಂಡು, ಸಾಯಂಕಾಲ ಬಾಣಾವರವನ್ನು ಸೇರುವರು. ೨೧ ನೇ ಶನಿವಾರ — ಬೆಳಿಗ್ಗೆ ಬಾಣಾವರವನ್ನು ಬಿಟ್ಟು ಸಾಯಂಕಾಲಕ್ಕೆ ಜೋಗನ್ನು ಸೇರುವುದು. ೨೨ ನೇ ಭಾನುವಾರ ಮತ್ತು ೨೩ ನೇ ಸೋಮವಾರ — ಜೋಗ್‌ನಲ್ಲಿ ಇರುವುದು. ೨೪ ನೇ ಮಂಗಳವಾರ — ಮಧ್ಯಾಹ್ನ ಜೋಗನ್ನು ಬಿಟ್ಟು, ಸಾಯಂಕಾಲ ಬೀರೂರನ್ನು ತಲುಪಿ, ರಾತ್ರಿ ರೈಲು ಗಾಡಿಯಲ್ಲಿ ಹೊರಟು, ೨೫ ನೇ ತಾರೀಖು ಬುಧವಾರ ಬೆಳಿಗ್ಗೆ ಬೆಂಗಳೂರನ್ನು ತಲುಪುವರು.

ಒಳದೇಶದ ವೃತ್ತಾಂತಗಳು

ಶ್ರೀಮನ್ಮಹಾರಾಜರವರೂ ಶ್ರೀ ಯುವರಾಜರವರೂ ಮುಂದಿನ ತಿಂಗಳ ಅಂತ್ಯಭಾಗದಲ್ಲಿ ಜಪಾನ್ ರಾಜ್ಯಕ್ಕೆ ಹೋಗಿ ಬರುವವರಾಗಿದ್ದಾರೆಂದು ವರ್ತಮಾನವಿದೆ.

ತಲಕಾಡಿನಲ್ಲಿ ಮುಂದಿನ ಸೋಮವಾರ ನಡೆಯುವ ಪಂಚಲಿಂಗ ದರ್ಶನಕ್ಕೆ ಪ್ಲೇಗ್ ಇರುವ ಊರುಗಳಿಂದ ಆಗಂತುಕರನ್ನು ಬಿಡುವುದಿಲ್ಲವೆಂದು ಸರ್ಕಾರದವರು ವಿಧಿಸಿದ್ದಾರೆ.

ಮೊದಲು ರೆವಿನ್ಯೂ ಕಮಿಷನರ್ ಆಫೀಸಿನಲ್ಲಿ ಮುನ್ಷಿಯಾಗಿದ್ದ ಮ. ಎಸ್. ಎಂ. ಮಂಜುನಾಥಯ್ಯನವರನ್ನು ಸರ್ಕಾರದವರು ಗವರ್ನ್‌ಮೆಂಟ್ ಅ. ಸೆಕ್ರೆಟರಿ ಕೆಲಸಕ್ಕೆ ನೇಮಕಮಾಡಿ ಬೆಂಗಳೂರಿಗೆ ಕರೆಸಿಕೊಂಡರೆಂದು ಕೇಳುತ್ತೇವೆ.

ದಿವಾನ್‌ರವರು ಕಳೆದ ಭಾನುವಾರ ರಾಜಧಾನಿಗೆ ಹಿಂತಿರುಗಿದರು. ಅವರು ನಾಳೆ ವಿ. ಪಿ. ಮಾಧವರಾವ್ ಗಾಡಿ ಹತ್ತಿ ಕಾಲುವೆಗಳನ್ನು ನೋಡಿಕೊಂಡು ಬರುವುದಕ್ಕೆ ನಾಗಮಂಗಲ ಕುಣಿಗಲ್ ಮೊದಲಾದ ಪ್ರಾಂತ್ಯಗಳ ಕಡೆಗೆ ಹೊರಡುವವರಾಗಿದ್ದಾರೆ.

ಸಕಲೇಶಪುರದ ತಾಲ್ಲೂಕು ಒಬ್ಬ ಸಾಹೇಬ್ರ ತೋಟದಲ್ಲಿ ಇದ್ದ ಒಂದು ಕುದುರೆಯನ್ನು ಹುಲಿಯೊಂದು ಹಿಡಿದು ಕೊಂದು ಹೋದುದು. ಆ ಮೃಗವು ಅನಾಯಾಸವಾಗಿ ... ಕೊಂಡು ಹೋಗಿ ಕೆಡವಿ ಇಟ್ಟಿದ್ದನ್ನು ಬಳಿಕ ಕಂಡುಹಿಡಿಯಲಾಗಿತ್ತು.

ಹಿಂದೆ ಮೈಸೂರು ಸಂಸ್ಥಾನದಲ್ಲಿ ೧೧ ವರುಷ ಕಾಲ ಚೀಫ್ ಇಂಜಿನಿಯರಾಗಿದ್ದ ಕರ್ನಲ್ ಹೋಂ ರಿಚರ್ಡ್ ಸ್ಯಾಂಕಿಯವರು ಕಳೆದ ವಾರ ಕಾಲವಾದರೆಂದು ತಂತಿ ವರ್ತಮಾನ ಬಂದಿದೆ. ಈಗಲೂ ಬೆಂಗಳೂರಿನಲ್ಲಿ ಇವರ ಹೆಸರುಳ್ಳ ಒಂದು ಭಾರಿ ಕೆರೆಯು (ಸ್ಯಾಂಕಿ ಕೆರೆ) ಇರುವುದು.

ಹಿಂದಿನ ಮಂಗಳವಾರ ರಾತ್ರಿ ಬೆಂಗಳೂರು ದಂಡಿನಲ್ಲಿ ಈ ತುವಿನಾಯ್ಡು ಎಂಬವಳನ್ನು ಶಿಪಾಯಿ ಪರಶುರಾಮನನ್ನು ಕೊಂದುಹಾಕಿ ಪರಾರಿಯಾಗಿದ್ದ ... ಸಿಂಗಾರಂ ಎಂಬವನು ನೆನ್ನೆ ಸೋಮವಾರ ಸಾಯಂಕಾಲ ತಾನಾಗಿಯೇ ಮ್ಯಾಜಿಸ್ಟ್ರೇಟರ ಮುಂದೆ ಹೋಗಿ ಪೋಲೀಸಿನವರ ಸ್ವಾಧೀನಕ್ಕೆ ಸೇರಿದನು.

ಮೈಸೂರಿನಿಂದ ಕೂಡಿಗಿಗೂ ತಲಚೇರಿಗೂ ಪ್ರಯಾಣಿಕರನ್ನೂ ಸಾಮಾನನ್ನೂ ಸಾಗಿಸುವುದಕ್ಕೆ ರೋಡ್ ಟ್ರೈನ್ ಎಂಬ ಹೊಸ ತರಹಾ ಗಾಡಿಯನ್ನು ಇಡುವರೆಂತಲೂ, ಮುಂದಿನ ಜನವರಿ ತಿಂಗಳಲ್ಲಿ ಆ ಗಾಡಿಗಳನ್ನು ಪರೀಕ್ಷೆ ಮಾಡುವರೆಂತಲೂ ಕೊಡಗಿನ ಪ್ಲಾಂಟರುಗಳ ಸಂಘದ ಸೆಕ್ರೆಟರಿ ... ಯವರು ತಿಳಿಸುತ್ತಾರೆ.

ಕಳೆದ ಶುಕ್ರವಾರ ಅರಮನೆಯಲ್ಲಿ ಪೊಡಲಕ್ಕ ಮಹಾರಾಜ ಕುಮಾರಿಯವರ ಶಿಶುವಿಗೆ ಜಾತಕರ್ಮದ ಆಚರಣೆ ಜರುಗಿತು. ಶಿಶುವಿನ ಜಾತಕವನ್ನು ಪಾಲಕಿಯಲ್ಲಿ ಮಂಗಳವಾದ್ಯಗಳೊಡನೆ ಮೆರವಣಿಗೆ ಮಾಡಿದರು. ಪಟ್ಟಣದಲ್ಲಿ ಸಕ್ಕರೆಯನ್ನು ಹಂಚಿದರು. ಸ್ಕೂಲು ಮಕ್ಕಳಿಗೆ ಸಕ್ಕರೆ ಹಣ್ಣನ್ನು ಕೊಡಿಸಿದರು. ಮಗುವಿನ ಮಂಗಳಕರವಾದ ನಾಮಕರಣವಾಗಬೇಕಾಗಿತ್ತು. ಅದು ಮುಂದೆ ಸ್ವಲ್ಪ ದಿನದಲ್ಲಿ ನಡೆಯಬಹುದೆಂದು ಕಾಣುತ್ತದೆ.

ನಮ್ಮ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮ॥ ಇ. ವೆಂಕಟಕೃಷ್ಣಯ್ಯನವರು ಮುಂದಿನ ಮಾರ್ಚಿ ಆಖೈರ್ ವರೆಗೆ ಇದೇ ಕೆಲಸದಲ್ಲಿದ್ದು ಆ ತರುವಾಯ ಬೊಂಬಾಯಿಗೆ ಹೋಗುವರೆಂತಲೂ, ಮ॥ ಸಿಂ ಎಂಬ ಹೊಸಬರು ಪ್ರೈವೇಟ್ ಸೆಕ್ರೆಟರಿ ಕೆಲಸಕ್ಕೆ ಬರುವರೆಂತಲೂ ಕೇಳುತ್ತೇವೆ. ಇವರು ಹಿಂದೆ ಮದರಾಸ್ ಗವರ್ನರಾಗಿದ್ದ ಸರ್ ಆರ್ಥರ್ ಹಾವೆಲಾಕ್ ಯವರ ಪ್ರೈವೇಟ್ ಸೆಕ್ರೆಟರಿಯಾಗಿಯೂ, ತರುವಾಯ ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯ ಮೆಂಬರಾಗಿಯೂ ಇದ್ದು ಬಹಳ ಸಮರ್ಥರೆಂಬ ಹೆಸರು ಪಡೆದಿರುತ್ತಾರೆ.

ಕಳೆದ ಎರಡು ವಾರಗಳಿಂದಲೂ ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಸರ್ದಾರ್ ಗೋಪಾಲರಾಜೇ ಅರಸಿನವರು ಸೆಕ್ರೆಟರಿಯಾಗಿ ನಿಂತು ಜಟ್ಟಿ ಕಾಳಗ, ಕರ್ನಾಟಕ ಕುಸ್ತಿಗಳನ್ನು ಮಾಡಿಸುತ್ತಿದ್ದರು. ಈ ಕಾಳಗ ಕುಸ್ತಿಗಳಲ್ಲಿ ನಿಲುಗಡೆಯಾಗಿ ನಿಂತವರಿಗೆ ಪ್ರೋತ್ಸಾಹ ಮಾಡುವುದಕ್ಕಾಗಿ ಕಳೆದ ಭಾನುವಾರ ಶ್ರೀಮನ್‌ಮಹಾರಾಜರವರೇ ದಯಮಾಡಿ, ನಾಲ್ಕು ಜೋಡಿ ಕಾಳಗ ಕುಸ್ತಿಗಳನ್ನು ಪರಾಂಬರಿಸಿ, ಗೆದ್ದವರಿಗೆ ಬೆಳ್ಳಿ ಬಟ್ಟಲನ್ನೂ ಇನಾಮುಗಳನ್ನೂ ದಯಪಾಲಿಸಿದರು. ಅದನ್ನು ಪಡೆದವರು ಆ ದಿನ ಬೀದಿಗಳಲ್ಲಿ ಮೆರವಣಿಗೆ ಮಾಡಿಕೊಂಡು ಹೋದರು.

ಈಗ ಆಹಾರಧಾನ್ಯಗಳ ಧಾರಣೆಗಳು ಬಹಳ ಪ್ರಿಯವಾಗಿರುವುದನ್ನು ನೋಡಿ, ಸರ್ಕಾರದವರು ಬೆಂಗಳೂರು, ತುಮಕೂರು, ಕೋಲಾರ, ಕಡೂರು, ಈ ನಾಲ್ಕು ಡಿಸ್ಟ್ರಿಕ್ಟುಗಳೊಳಗೆ ೨೦ ರೂಪಾಯಿನೊಳಗೆ ಸಂಬಳ ಪಡೆಯುವ ಸಮಸ್ತ ನೌಕರರಿಗೂ ಕಳೆದ ಅಕ್ಟೋಬರ್ ಒಗಾಯಿತು ಸಹ ಮೂರು ತಿಂಗಳ ವರೆಗೆ ಅಲೋಯನ್ಸು ಕೊಡಬೇಕೆಂದು ಹುಕುಂ ಕೊಟ್ಟಿದ್ದಾರೆ. ರೂ. ೧೬ ರಿಂದ ೨೦ ರೂ. ವರಿಗಿನ ಸಂಬಳದಾರರಿಗೆ ತಿಂಗಳಿಗೆ ೨ ರೂಪಾಯಿನಂತೆಯೂ, ರೂ. ೫ ರ ಮೇಲೆ ೧೬ ರೂ ಒಳಗಿರುವ ನೌಕರರಿಗೆ ೧ ರೂಪಾಯಿನಂತೆಯೂ, ೫ ರೂಪಾಯಿಗಿಂತ ಕಡಮೆ ಸಂಬಳವಿರತಕ್ಕವರಿಗೆ ತಿಂಗಳಿಗೆ ೬ ರೂಪಾಯಿ ಸಳ್ಳುವಂತೆಯೂ ಕೊಡುವರು.

ಇಂಡಿಯಾ ದೇಶದ ವೃತ್ತಾಂತಗಳು.

ಇಂಡಿಯಾ ಗವರ್ನ್‌ಮೆಂಟಿನವರು ಆಫಘಾನ್ ಬಾಬತು ಸಿಕ್ಕಿಲ್ ನಾಣ್ಯಗಳನ್ನು ಛಾಪಾ ಹಾಕಿಸಿ ಚಲಾವಣೆಗೆ ತರಬೇಕೆಂದು ಯೋಚನೆಮಾಡುತ್ತಿದ್ದಾರೆ.

ಈ ಸಲ ಅಮೃತಸಾರ ನಗರದಲ್ಲಿ ನಡೆಯುವ ಮಹಮದೀಯ ವಿದ್ಯಾವರ್ಧಕ ಸಮಾಜಕ್ಕೆ ಐದು ಸಾವಿರ ಪ್ರತಿನಿಧಿಗಳು ಹೋಗಿ ಸೇರುವರೆಂದು ತಿಳಿದುಬಂದಿದೆ.

ಮಧುರೆ ಜಿಲ್ಲೆಗೆ ಸೇರಿದ ಕನ್ನನ್‌ದೇವಿ ಎಂಬ ಭೂಮಿ ಜಮೀನ್ದಾರಿಯನ್ನು ಕಲ್ಕತ್ತೆಯ ಅಂಡ್ರ್ಯೂ ಯೂಲ್ ಎಂಬ ಕಂಪೆನಿಯವರು ೧೨ ಲಕ್ಷ ರೂಪಾಯಿಗೆ ಕೊಂಡುಕೊಂಡರು.

ಬರೋಡಾ ಸಂಸ್ಥಾನದ ಮಹಾರಾಜರವರು ಮಹಾರಾಣಿಯವರ ಸಮೇತ ಸಂಯುಕ್ತ ಅಧಿಪತ್ಯಗಳಲ್ಲಿ ಮುಖ್ಯ ಸ್ಥಳಗಳನ್ನು ನೋಡಿಕೊಂಡು ಬರಬೇಕೆಂದು ಸಂಕಲ್ಪ ಮಾಡುತ್ತಿದ್ದಾರೆ.

ಉಟಕಮಂಡ್, ಕೂನೂರು, ಕೋಟಗಿರಿ ಎಂಬ ಬೆಟ್ಟದ ಪ್ರದೇಶಗಳಲ್ಲಿ ಐದು ವರುಷಗಳೊಳಗಾಗಿ ಸೆಟ್ಲ್‌ಮೆಂಟ್ ಕೆಲಸವನ್ನು ಮಾಡಬೇಕೆಂದು ಮದರಾಸ್ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದ್ದಾರೆ.

ಅರಬ್ಬೀ ದೇಶಕ್ಕೆ ಯಾತ್ರೆ ಹೋಗುವ ಮಹಮದೀಯರಿಗೆ ಸಂಚಾರದ ರಸ್ತೆಗಳು ಸುರಕ್ಷಿತಗಳಾಗಿಲ್ಲವೆಂದೂ ಇನ್ನು ಕೆಲವು ಕಾಲದ ವರೆಗೆ ಯಾರೂ ಪ್ರಯಾಣ ಮಾಡಬಾರದೆಂದೂ ಇಂಡಿಯಾ ಗವರ್ನ್‌ಮೆಂಟಿನವರು ಪ್ರಕಟಿಸುತ್ತಾರೆ.

ನಾಗಪುರದ ಪಬ್ಲಿಕ್ ಉದ್ಯಾನವನದಲ್ಲಿರುವ ಚಕ್ರವರ್ತಿನಿ ಮಹಾರಾಜ್ಞಿಯವರ ವಿಗ್ರಹ ಪ್ರತಿಮೆಯನ್ನು ಯಾರೋ ಭಗ್ನಮಾಡಿರುತ್ತಾರೆಂದು ತಂತಿ ವರ್ತಮಾನ ಬಂದಿದೆ. ಪ್ರತಿಮೆಯ ಮುಖಕ್ಕೆ ಟಾರನ್ನು ಬಳಿದು ರಾಜದಂಡ, ಮೂಗು, ಬೆರಳುಗಳನ್ನು ಮುರಿದಿರುವರು.

ಬಂಗಾಳದ ಲೆಫ್ಟಿನೆಂಟ್ ಗವರ್ನರಾದ ಸರ್ ಆಂಡ್ರ್ಯೂ ಫ್ರೇಸರ್ ಯವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಅವರ ಒಂದು ಚಿತ್ರ ಪ್ರತಿಮೆಯನ್ನು ಮಾಡಿಸಿಟ್ಟು, ಅದರಲ್ಲಿ ಪ್ರಜೆಗಳಿಗಿರುವ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಬೇಕೆಂದು ತೀರ್ಮಾನವಾಗಿದೆ. ಈ ಫಂಡಿಗೆ ಸುಮಾರು ೨೫ ೦೦೦ ರೂಪಾಯಿ ಸಹ ಚಂದಾ ವಸೂಲಾಗಿರುವುದು.

ಕಳೆದ ೯ ನೇ ತಾ ಸೋಮವಾರ ಚಕ್ರವರ್ತಿಯವರ ಜನ್ಮದಿನವಾದ್ದರಿಂದ ಆ ದಿನ ತಮ್ಮ ರಾಜಭಕ್ತಿಯನ್ನು ಪ್ರಕಾಶಪಡಿಸುವುದಕ್ಕಾಗಿ ಜಯಪುರ, ಕಾಸಿಂ ಕೋಟೆ, ಮದೆಗುಳ, ಬಿಠಂಕಠಾವು ಎಂಬ ಜಮೀನ್ದಾರರು ತಮ್ಮ ರೈತರಿಂದ ತಮಗೆ ಸಲ್ಲಬೇಕಾಗಿದ್ದ ಕಂದಾಯಗಳಲ್ಲಿ ೫೦ ಸಾವಿರ, ೩೦ ಸಾವಿರ, ೨೦ ಸಾವಿರ, ೨೯ ಸಾವಿರ, ರೂಪಾಯಿಗಳಂತೆ ಮಾಫ್ ಮಾಡಿರುತ್ತಾರೆ.

ಮದರಾಸಿನಲ್ಲಿ ಎಂ. ಶ್ರೀನಿವಾಸ ಐಯ್ಯಂಗಾರ್ ಎಂಬವರು - ಇಂಡಿಯಾ ಎಂಬ ತಮ್ಮ ತಮಿಳು ವರ್ತಮಾನ ಪತ್ರಿಕೆಯಲ್ಲಿ ರಾಜದ್ರೋಹಕರವಾದ ವಾರ್ತೆಗಳನ್ನು ಬರೆದರೆಂದು ಮೊಕದ್ದಮೆ ಆಯಿತು. ಹೈ ಕೋರ್ಟ್ ಕ್ರಿಮಿನಲ್ ಸೆಷನ್ಸ್ ಜಡ್ಜರಾದ ಮ. ಜಸ್ಟಿಸ್ ಮನ್ರೋ ಯವರು ಈ ಮೊಕದ್ದಮೆಯನ್ನು ವಿಚಾರಣೆಮಾಡಿ, ಅಪರಾಧಿಗೆ ಐದು ವರುಷಗಳ ಬಂದೀಖಾನೆ ಶಿಕ್ಷೆಯನ್ನು ಕಳೆದ ಶುಕ್ರವಾರ ವಿಧಿಸಿದರು.

ಟಿ. ವಿ. ಸುಲ್ತಾನ್ ಮಹಮ್ಮದ್ ಖಾನ್‌ರವರು ಈಗ ಸೀಮೆಗೆ ಯಾತ್ರೆ ಹೋಗಿರುತ್ತಾರೆ. ಇವರು ಅಫ್ಘಾನಿಸ್ಥಾನದ ಲೇಟ್ ಅಮೀರರ ಬಳಿ ಮೀರ್ ಮುನ್ಷಿಯಾಗಿದ್ದು, ಈಚೆಗೆ ಅವರ ಜೀವನಸಾರ ಚರಿತ್ರೆಯನ್ನು ಬರೆದು ಪ್ರಕಟಿಸಿದವರು. ಮತ್ತು ಇವರು ಸೀಮೆಯಲ್ಲಿ ವಿದ್ಯಾಭ್ಯಾಸಮಾಡಿ ಬ್ಯಾರಿಸ್ಟರ್ ಪರೀಕ್ಷೆ ಕೊಟ್ಟಿರುತ್ತಾರೆ. ಮಹಮದೀಯ ಬ್ಯಾರಿಸ್ಟರುಗಳಲ್ಲಿ ಇದುವರೆಗೆ ಯಾರೂ ಯಾತ್ರೆಹೋಗಿ ಬಂದದ್ದಿಲ್ಲ.

ಬರ್ಮಾ ಆಧಿಪತ್ಯಕ್ಕೆ ಸೇರಿದ ರಂಗೂನ್ ಪಟ್ಟಣದಲ್ಲಿ ಕಳೆದ ವಾರ ಹಿಂದೆ ಇಲ್ಲದಂತೆ ಮಳೆ ಸುರಿದು ನಾನಾ ಕಷ್ಟನಷ್ಟಗಳನ್ನುಂಟುಮಾಡಿತು. ರೈಲ್ ರಸ್ತೆಗಳೂ ಸಣ್ಣ ಸೇತುವೆಗಳೂ ಕಿತ್ತುಕೊಂಡು ಹೋದವು. ಭತ್ತದ ಪೈರು ಹುಲುಸಾಗಿ ಬೆಳೆದು ಕೊಯಿಲಿಗೆ ಸಿದ್ಧವಾಗಿದ್ದದ್ದು ಕೆಲವು ಕಡೆ ನಾಶಹೊಂದಿತು. ಕೆಲವು ಬಡಬಗ್ಗರ ಮನೆ ಜೋಪಡಿಗಳು ಬಿದ್ದುಹೋದವು. ಎರಡು ಮೂರು ದಿನಗಳ ತನಕ ಆಮದು ರಫ್ತು ಕೂಡ ನಿಲ್ಲಿಸಲ್ಪಟ್ಟಿದ್ದವು.

ಆಲಿಪುರದ ಜೈಲ್‌ಖಾನೆಯೊಳಗೆ ಅಪ್ರೂವರ್ ಗೋಸಾಯಿಯನ್ನು ಕೊಲೆಮಾಡಿದ ಕನ್ನೈಲಾಲ ದತ್ತನಿಗೂ, ಸತ್ಯೇಂದ್ರನಾಥ ಬೋಸನಿಗೂ ಮರಣ ದಂಡನೆಯನ್ನು ವಿಧಿಸಿದರು. ಮೊದಲನೆಯವನನ್ನು ಕಳೆದ ವಾರ ಗಲ್ಲಿಗೆ ಏತ್ತಿದರು. ಇವನ ಶವವನ್ನು ಬಂಗಾಳಿಗಳು ಉತ್ಸವ ಮಾಡಿಕೊಂಡು ಹೋಗಿ ಗಂಗಾನದಿಯ ಬಳಿ ಶ್ರೀಗಂಧ ಕಾಷ್ಠಗಳನ್ನು ಉಪಯೋಗಿಸಿ ದಹನಮಾಡಿದರು. ಎರಡನೇ ವ್ಯಕ್ತಿಯನ್ನು ನಾಳೆ ಶನಿವಾರ ಗಲ್ಲಿಗೆ ಹಾಕುವಂತೆ ಗೊತ್ತುಮಾಡಲ್ಪಟ್ಟಿದೆ.

ಮದರಾಸ್ ಗವರ್ನ್‌ಮೆಂಟಿನವರು ಆ ಆಧಿಪತ್ಯಕ್ಕೆ ಸೇರಿದ ಎಲ್ಲಾ ಜಿಲ್ಲೆಗಳಲ್ಲೂ ೩೦ ರೂಪಾಯಿನೊಳಗೆ ಸಂಬಳ ಪಡೆಯುವಂಥಾ ಸಮಸ್ತ ಸಿವಿಲ್ ಇಲಾಖೆಗಳ ನೌಕರಮಾನ್ಯರಿಗೂ ಕಳೆದ ಅಕ್ಟೋಬರ್ ತಿಂಗಳಿಂದ ಡಿಸೆಂಬರ್ ಆಖೈರುವರೆಗೆ ಮೂರು ತಿಂಗಳು ಕ್ಷಾಮದ ಭತ್ಯವನ್ನು ಕೊಡಬೇಕೆಂದೂ, ಆ ತರುವಾಯವೂ ಕೊಡಬೇಕಾದದ್ದು ಅವಶ್ಯವಾಗಿ ಕಂಡುಬರುವುದಾದರೆ ಜನವರಿ ತಿಂಗಳ ಆದಿಭಾಗದಲ್ಲೇ ರೆವಿನ್ಯೂ ಬೋರ್ಡಿನವರು ಗವರ್ನ್‌ಮೆಂಟಿಗೆ ತಿಳಿಸಬೇಕೆಂತಲೂ ಹುಕುಂ ಕೊಟ್ಟಿದ್ದಾರೆ.

ಬರ್ಮಾ ಆಧಿಪತ್ಯಕ್ಕೆ ಸೇರಿದ ಅಕ್ಯಾಬ್ ಪಟ್ಟಣದಲ್ಲಿ ಕಳೆದ ೧೧ನೇ ತಾ. ಬುಧವಾರ ಭಯಂಕರವಾದ ಸುಂಟರಗಾಳಿ ಬೀಸಿ ಆಸ್ತಿಪಾಸ್ತಿಗಳಿಗೂ ಮನೆಮಠಗಳಿಗೂ ಬಹಳ ನಷ್ಟಹೊಂದಿತು. ೧೧ ಜನರು ಮೃತಪಟ್ಟರು. ಬೀದಿಗಳಲ್ಲಿ ಸಂಚರಿಸುತ್ತಿದ್ದ ಮತ್ತು ನಿಲ್ಲಿಸಲ್ಪಟ್ಟಿದ್ದ ಅನೇಕ ಗಾಡಿಗಳು ಗಾಳಿಗೆ ಸಿಕ್ಕಿ ಬಿಡಿಯಲ್ಪಟ್ಟು ಒಡೆದುಹೋದವು. ಅಂಚೆ ಬಸ್ತುಗಳನ್ನು ಸಾಗಿಸಿಕೊಂಡು ಹೋಗುತ್ತಿದ್ದ ಒಂದು ದೋಣಿಯು ಮುಳುಗಿಹೋದದ್ದರಿಂದ ಅದರಲ್ಲಿದ್ದ ಒಂದು ಅಂಚೆ ಬಸ್ತು ಸಿಕ್ಕದಂತಾಯಿತು.

ಕಲ್ಕತ್ತಾ ಪಟ್ಟಣದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಿದ್ನಾಪುರದ ಸಿಡಿಮದ್ದಿನ ಗುಂಡುಗಳ ತಯಾರಿ ವಿಷಯವಾದ ಮೊಕದ್ದಮೆಯು ಕಳೆದ ವಾರ ದರ್ಯಾಪ್ತಿ ಆಗುತ್ತಿರುವಲ್ಲಿ ಸರ್ಕಾರಿ (ಫಿರ್ಯಾದಿ) ಪರವಿನ ಲಾಯರಾದ ಮ॥ ಮಾರ್ಟನ್‌ರವರು ತಮ್ಮ ಕೈಚೀಲವನ್ನು ಕೋರ್ಟಿನಲ್ಲಿ ಯಾರೋ ಕಳುವು ಮಾಡಿದರೆಂತಲೂ, ಅದರಲ್ಲಿ ಆ ಮೊಕದ್ದಮೆಗೆ ಸಂಬಂಧಪಟ್ಟ ಕಾಗದ ಪತ್ರಗಳೆಲ್ಲಾ ಇದ್ದವೆಂತಲೂ ಮ್ಯಾಜಿಸ್ಟ್ರೇಟರಿಗೆ ಹೇಳಿಕೊಂಡರು. ಪೋಲೀಸಿನವರು ಈ ಕಳ್ಳರನ್ನು ಪತ್ತೆ ಮಾಡಬೇಕೆಂದು ತರಪೂದು ನಡಿಸುತ್ತಿದ್ದಾರೆ.

ಟಿಪ್ಪು ಸಂಸ್ಥಾನದ ಸಿಂಹಾಸನದ ಮೇಲೆ ಪ್ರಿನ್ಸ್ ಫಾಕೂರ್ ಸಾಹೇಬರನ್ನು ಕೂರಿಸಿ ಇಂಡಿಯಾ ಗವರ್ನ್‌ಮೆಂಟಿನವರು ಕಳೆದ ಏಪ್ರಿಲ್ ತಿಂಗಳಲ್ಲಿ ಪಟ್ಟಾಭಿಷೇಕ ಮಾಡಿದರು. ... ತನಗೆ ಸಂಸ್ಥಾನದ ಆಳಿಕೆಯು ದೊರಕಬೇಕೆಂದು ಗವರ್ನ್‌ಮೆಂಟಿನಲ್ಲಿ ಅಪೀಲು ಮಾಡಿಕೊಂಡನು. ಗವರ್ನ್‌ಮೆಂಟಿನವರು ಆತನಿಗೆ ... ಮಾಡಿದರು. ಆತನು ಅದರ ಮೇಲೆ ವಿಲಾಯಿತಿಯಲ್ಲಿ ... ಸೆಕ್ರೆಟರಿ ಲಾರ್ಡ್ ಮಾರ್ಲೆ ಯವರಲ್ಲಿ ಅಪೀಲ್ ಮಾಡಿಕೊಂಡನು. ಅವರು ಕೂಡ ಆ ಅಪೀಲನ್ನು ನಿರಾಕರಿಸಿರುತ್ತಾರೆಂದು ಕಳೆದ ವಾರ ತಂತಿ ವರ್ತಮಾನ ಬಂದಿರುವುದು.

ಬೊಂಬಾಯಿ ಪಟ್ಟಣದ ಭೋಲೇಶ್ವರದಲ್ಲಿರುವ ಧನಿಕ ಜನರ ಗುರುಗಳಾದ ಮಹಾರಾಜಾ ಗೋಸ್ವಾಮಿ ನಾಗರಲಾಲ ಯವರ ಅರಮನೆಗೆ ಕಳೆದ ಆಗಸ್ಟು ತಿಂಗಳಲ್ಲಿ ಕಳ್ಳರು ಬಿದ್ದು ಸುಮಾರು ೪೦,೦೦೦ ರೂಪಾಯಿನ ಒಡವೆಗಳನ್ನು ಕಳುವುಮಾಡಿದರು. ಇದುವರೆಗೂ ಆ ಕಳ್ಳರ ಸುಳಿವು ಗೋಚರಕ್ಕೆ ಬಾರಲಿಲ್ಲ. ಪತ್ತೆ ಪೋಲೀಸ್ ಇಲಾಖೆಯವರು ಆ ಬಾಬಾಯಿತು ಸಾಹಸದಿಂದ ಉತ್ತಮರಾದ ಇನ್ಸ್‌ಪೆಕ್ಟರ್ ಸಲ್ದಾನ್ಹರವರು ಜಾಮನಗರಕ್ಕೆ ಹೋಗಿ ಅನುಮಾನದ ಮೇಲೆ ಒಬ್ಬನನ್ನು ಅಲ್ಲಿ ವಸ್ತಗಿರಿ ಮಾಡಿಕೊಂಡು ಬಂದು, ಪತ್ತೆ ತರಪೂದು ನಡಿಸಿದರು. ಅವನ ಮೂಲಕ ಈ ಕಳ್ಳತನ ನಡೆದದ್ದು ಪೋಲೀಸಿನವರಿಗೆಲ್ಲಾ ಗೊತ್ತಾಯಿತು. ... ತಿಳಿದುಬಂದಿದೆ.

ಹುಚ್ಚು ಹಿಡಿದಂಥಾ ನಾಯಿ ನರಿ ಮೊದಲಾದ ಪ್ರಾಣಿಗಳಿಂದ ಕಡಿಸಿಕೊಂಡ ರೋಗಿಗಳು ನೀಲಗಿರಿ ಬೆಟ್ಟದ ಮೇಲಿರುವ ಕೂನೂರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗುವುದಕ್ಕೆ ರೈಲ್ ಕಂಪೆನಿಗಳವರು ರೈಲು ಚಾರ್ಜಿ ದರಗಳನ್ನು ಕಡಮೆ ಮಾಡಿ ಏರ್ಪಾಡು ಮಾಡಿರುತ್ತಾರೆ. ಸೌತ್ ಇಂಡಿಯನ್ ರೈಲ್ವೆ ಕಂಪೆನಿಯವರು ಅಂಥಾ ರೋಗಿಗೂ ಅವರ ಕೂಡ ... ಹೋಗುವ ಸಂಬಂಧಿಗೂ ವಾಪ್ಸಿ ಟಿಕೆಟು ಕೊಡುವರು. ಮದರಾಸ್ ... ರೈಲ್ವೆ ಕಂಪೆನಿಯವರು ಕೂಡ ಅಂಥವರಿಗೆ ... ವಾಪ್ಸಿ ಟಿಕೆಟುಗಳನ್ನು ಕೊಡುತ್ತೇವೆಂದು ತಿಳಿಸಿದ್ದಾರೆ. ಈ ಉಪಕಾರಗಳಿಂದ ಅಂಥಾ ರೋಗಿಗಳು ಬೇಗನೆ ಆ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕೆ ತುಂಬಾ ಪ್ರೋತ್ಸಾಹವಾಯಿತು.

ಸಿದ್ಧಪುರದಲ್ಲಿ ಸಿಡಿಮದ್ದಿನ ಗುಂಡು ಹಾಕಿ ಇಬ್ಬರು ಸ್ತ್ರೀಯರನ್ನು ಕೊಂದು ಹಾಕಿದ ಮೊಕದ್ದಮೆಯಲ್ಲಿ ಇನ್ಸ್‌ಪೆಕ್ಟರ್ ನಂದಲಾಲ್ ಬ್ಯಾನರ್ಜಿಯು ಮೊಕದ್ದಮೆ ... ತಿರಸ್ಕಾರ ಮಾಡಿ ... ಆ ಪೋಲೀಸ್ ಇನ್ಸ್‌ಪೆಕ್ಟರು ಕಳೆದ ವಾರ ... ಕಲ್ಕತ್ತೆಯಲ್ಲಿ ಅವನನ್ನು ... ಗುಂಡು ಹೊಡೆದು ಕೊಂದುಬಿಟ್ಟರು. ಅವನು ನೆಲದ ಮೇಲೆ ಬಿದ್ದರೂ ಬಿಡದೆ ಮೂವರು ಬಂಗಾಳಿಗಳು ಅವನ ಮೇಲೆ ನುಗ್ಗಿ ಪಿಸ್ತೂಲುಗಳನ್ನು ಹಾರಿಸಿ ನಾಲ್ಕು ಗುಂಡುಗಳನ್ನು ಹೊಡೆದು ಕೊಂದು ಹಾಕಿ, ಎಲ್ಲಾ ಪರಾರಿಯಾಗಿ ಹೋದರು. ... ಒಂದು ಸಂದಿಯಲ್ಲಿ ಸಾಯಂಕಾಲ ಸುಮಾರು ೭ ಗಂಟೆ ಹೊತ್ತಿನಲ್ಲಿ ಇದು ನಡೆಯಿತು. ಕೊಲೆಗಾರರನ್ನು ಹಿಡಿದು ಕೊಟ್ಟವರಿಗೆ ೫,೦೦೦ ರೂಪಾಯಿ ಇನಾಮು ಸಿಕ್ಕುವುದೆಂದು ಪ್ರಕಟಿಸಿದ್ದಾರೆ. ಮೃತನ ಶವವನ್ನು ಪೋಲೀಸ್ ಇಲಾಖೆಯವರೆಲ್ಲಾ ಸೇರಿ ಬಹು ಆಡಂಬರದಿಂದ ಮೆರವಣಿಗೆ ಮಾಡಿಕೊಂಡು ಹೊತ್ತುಕೊಂಡು ಹೋಗಿ ದಹನಮಾಡಿಸಿದರು.

ದಳವಾಯಿಯರ ಎ. ವಿ. ಸ್ಕೂಲು, ಮೈಸೂರು.

ಇಂಡಿಯಾ ದೇಶದಲ್ಲಿ ಏರ್ಪಟ್ಟಿರತಕ್ಕ ರಾಯಲ್ ಬಯಾಸ್ಕೋಪ್ ಕಂಪನಿಯವರು ಈಗ ಕೆಲವು ದಿವಸಗಳಿಂದಲೂ ಮೈಸೂರಿನ ಜನಗಳಿಗೆ ತಮ್ಮ ವಿಚಿತ್ರವಾದ ಯಂತ್ರದ ಸಹಾಯದಿಂದ ಪಾಶ್ಚಿಮಾತ್ಯರ ಬುದ್ಧಿ ಕುಶಲತೆಯಿಂ ಮುಂತಾದ ಅನೇಕ ವಿಷಯಗಳನ್ನು ಪ್ರತ್ಯಕ್ಷವಾಗಿಯೇ ತೋರಿಸುತ್ತಾ ಆನಂದವನ್ನುಂಟುಮಾಡುತ್ತಿರುವುದು ಸರಿಯಷ್ಟೆ. ಈ ಕಂಪನಿಯವರು ನಮ್ಮ ಪ್ರಾರ್ಥನೆಯ ಪ್ರಕಾರ ಇದೇ ೧೯೦೮ ನೇ ಇಸವಿ ನವಂಬರು ೯ನೇ ತಾರೀಖಿನ ದಿವಸ ರಾಜಧಾನಿಯಲ್ಲಿ ಒಂದು ಬಹು ಶ್ಲಾಘ್ಯವಾದ ಪ್ರದರ್ಶನವನ್ನು ಮಾಡಿ ಉತ್ಪತ್ತಿಯಾದ ರೂ. ೨೨೪-೮-೦ ಪೈಕಿ ರೂ. ೫೮-೧೩-೦ ಖರ್ಚು ಜಾತಾ ಉಳಿದ ರೂ. ೧೬೫-೧೧-೦ ಆಣೆಗಳನ್ನು ನಮ್ಮ ಸ್ಕೂಲ್ ಕಟ್ಟಡದ ಖರ್ಚಿಗೋಸ್ಕರ ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ. ಇವರು ಧನಾರ್ಜನೆಗೋಸ್ಕರ ಅನೇಕ ಸಿಬ್ಬಂದಿಯನ್ನೇರ್ಪಡಿಸಿಕೊಂಡು ದೇಶಸಂಚಾರಮಾಡುತ್ತಿದ್ದಾಗ್ಯೂ ಸ್ವಾರ್ಥವೇ ಮುಖ್ಯ ಪ್ರಯೋಜನವಾಗಿಟ್ಟುಕೊಳ್ಳದೆ ಜನರ ತಿಳುವಳಿಕೆಗೂ ವಿದ್ಯಾಭಿವೃದ್ಧಿಗೂ ಪ್ರೋತ್ಸಾಹಕೊಡುವದು ಶ್ರೇಷ್ಠವಾದ ಕಾರ್ಯವೆಂದು ಯೋಚಿಸಿ, ಇದಕ್ಕಾಗಿ ತಾವೂ ಒಂದು ವಿಧದಿಂದ ಪ್ರವರ್ತಿಸುತ್ತಿರುವುದರ ಜೊತೆಗೆ ನಮಗೂ ಧಾರಾಳವಾಗಿ ಸಹಾಯವನ್ನಿತ್ತಿರುವದಕ್ಕಾಗಿ ಈ ಕಂಪನಿಯವರಿಗೂ, ಈ ಧರ್ಮಸಹಾಯಕ್ಕೋಸ್ಕರ ಕಂಪನಿಯವರಿಗೆ ತಕ್ಕ ಸಲಹೆಗಳನ್ನು ಕೊಟ್ಟು ಉಪಕಾರಮಾಡಿರತಕ್ಕ ಈ ಕಂಪನಿಯ ಪ್ರತಿನಿಧಿ ಮೆ॥ ಬಿ. ವಿ. ಅವರ್ಫಾರ್ ಯವರಿಗೂ, ಈ ಸಂದರ್ಭದಲ್ಲಿ ಟೌನ್‌ಹಾಲನ್ನು ಮಾಫಿಯಾಗಿ ಉಪಯೋಗಿಸಿಕೊಳ್ಳಲು ಅವಕಾಶಕೊಟ್ಟ ಮುನಿಸಿಪಲ್ ವೈಸ್ ಪ್ರೆಸಿಡೆಂಟ್ ಸಾಹೇಬರವರಿಗೂ, ಪ್ರಸಿದ್ಧ ಪತ್ರಿಕೆ ಮೊದಲಾದವುಗಳನ್ನು ಛಾರ್ಜಿಲ್ಲದೆ ಪ್ರಿಂಟುಮಾಡಿಕೊಟ್ಟ ಮೆ॥ ಕೆ. ನರಸಿಂಹಯ್ಯನವರಿಗೂ ನಾವು ಬಹಳ ಕೃತಜ್ಞರಾಗಿದ್ದೇವೆ.

ಇದಲ್ಲದೆ ಇದುವರೆಗೆ ಈ ಪಾಠಶಾಲೆಯ ಕಟ್ಟಡಕ್ಕಾಗಿ ಬೆಂಗಳೂರಿನಲ್ಲಿರುವ ರೆವಿನ್ಯೂ ಸರ್ವೆ ಆಫೀಸ್ ಅ ಕಮಿಷನರ್ ಮೆ॥ ಡಿ. ಕೆ. ದೊರೆಸ್ವಾಮಿ ಯವರು ೧೦ ರೂ., ಪಬ್ಲಿಕ್ ವರ್ಕ್ಸ್ ಮತ್ತು ರೈಲ್ವೆ ಡಿಪಾರ್ಟ್‌ಮೆಂಟ್ ಅಂಡರ್ ಸೆಕ್ರೆಟರಿ ಕ್ಯಾಪ್ಟನ್ ಎಸ್. ಬಿ. ಇ. ಡಾಸ್, ಆರ್. ಇ. ಯವರು ೫ ರೂ., ರೆವಿನ್ಯೂ ಸರ್ವೆ ಸಬ್ ಅ॥ ಸೂಪರಿಂಟೆಂಡೆಂಟ್ ಮೆ॥ ಶ್ರೀನಿವಾಸರಾಯರು ೫ ರೂ. ಕಳುಹಿಸಿಕೊಟ್ಟಿರುತ್ತಾರೆ. ಈ ಊರಿನಲ್ಲಿರತಕ್ಕ ಧರ್ಮಕಾರ್ಯಪ್ರವೃತ್ತರೆಂಬ ಬಿರುದನ್ನು ಪಡೆದಿರುವ ಮೆ॥ ಸಾಹುಕಾರ್ ಗುಂಜಾ ನರಸಿಂಹಯ್ಯನವರು ಈ ಕಟ್ಟಡಕ್ಕೆ ಬೇಕಾಗತಕ್ಕ ಮರವನ್ನೆಲ್ಲಾ ತಾವು ಧರ್ಮಾರ್ಥವಾಗಿ ಕೊಡಲು ವಾಗ್ದಾನ ಮಾಡಿರುತ್ತಾರೆ, ಟ್ರಸ್ಟ್ ಬೋರ್ಡು ಕಮಿಟಿಯವರು ಕಟ್ಟಡವನ್ನು ಕಟ್ಟುವುದಕ್ಕೆ ವಿಶಾಲವಾದ ಸ್ಥಳವನ್ನು ಗೊತ್ತುಮಾಡಿರುತ್ತಾರೆ. ಮತ್ತು ಸರ್ಕಾರದವರು ಮೂರನೇ ಒಂದು ಭಾಗದ ಖರ್ಚನ್ನು ಬಿ[illegible] ಗ್ರಾಂಟ್ ಕೊಡಲು ಅಪ್ಪಣೆ ಮಾಡಿರುತ್ತಾರಾಗಿ, ಈ ದೊಡ್ಡ ಮನುಷ್ಯರುಗಳ ವಿಷಯದಲ್ಲಿಯೂ ಮತ್ತು ಸರ್ಕಾರದವರ ವಿಷಯದಲ್ಲಿಯೂ ಸಹ ನಾವು ತುಂಬಾ ಕೃತಜ್ಞರಾಗಿದ್ದೇವೆ.

ಈ ಕಟ್ಟಡಕ್ಕೆ ಸುಮಾರು ೧೫,೦೦೦ ರೂಪಾಯಿ ಅಂದಾಜಾ ಆಗಿ, ಇನ್ನೂ ಬಹಳ ಸಹಾಯ ದೊರೆಯಬೇಕಾಗಿರುವುದರಿಂದ ಧರ್ಮದೃಷ್ಟಿಯುಳ್ಳ ಮಹನೀಯರುಗಳು ತಮ್ಮ ಕೈಯಲ್ಲಾಗುವಷ್ಟು ಪ್ರೋತ್ಸಾಹವನ್ನು ಕೊಟ್ಟು ಸ್ಕೂಲು ಶಾಶ್ವತವಾಗಿ ನಡೆಯಲು ಸಹಾಯಮಾಡಬೇಕಾಗಿ ಪ್ರಾರ್ಥನೆ.

ಎಸ್. ಕೃಷ್ಣರಾವ್, ಹೆಡ್ ಮಾಸ್ಟರ್.

ಚಕ್ರವರ್ತಿಗಳಾದ ಎಡ್ವರ್ಡ್ ಸಾರ್ವಭೌಮರವರು ವ್ಯವಸಾಯಗಾರರಾಗಿರುವದು

ನಮ್ಮ ಚಕ್ರವರ್ತಿಗಳಾದ ಎಡ್ವರ್ಡ್ ಸಾರ್ವಭೌಮರು ಸುಮಾರು ಐವತ್ತು ವರುಷಗಳಿಂದಲೂ ವ್ಯವಸಾಯದ ಕೆಲಸದಲ್ಲಿ ಆಸಕ್ತರಾಗಿರುತ್ತಾರೆಂದು ಕಂಡು ಬರುತ್ತದೆ. ಅವರು ಸಾಕತಕ್ಕ ದನ ಕುರಿ ಕುದುರೆಗಳು ಬ್ರಿಟಿಷ್ ರಾಜ್ಯದಲ್ಲೆಲ್ಲಾ ಪ್ರಖ್ಯಾತಿ ಹೊಂದಿವೆ. ಕೆಲವರು ಅವರು ಅರಸರಾಗಿರುವುದರಿಂದ ಅವರು ಸಾಕತಕ್ಕ ಮೃಗಗಳಿಗೆ ಪ್ರದರ್ಶನಗಳಲ್ಲಿ ಇನಾಮುಗಳು ದೊರಕುವುದು ಆಶ್ಚರ್ಯವಲ್ಲವೆಂದು ಹೇಳಬಹುದು. ಆದರೆ ಈ ರೀತಿಯಾಗಿ ಭಾವಿಸುವುದು ತಪ್ಪು. ಅವರ ಪದವಿಗೋಸ್ಕರ ಅವರಿಗೆ ಇನಾಮುಗಳು ದೊರಕುತ್ತಿದ್ದರೆ ರೈತರು ಖಂಡಿತವಾಗಿಯೂ ಅವರ ವಿಷಯದಲ್ಲಿ ಗೊಣಗುಟ್ಟಿಕೊಳ್ಳುತ್ತಿದ್ದರು. ಆದರೆ ಅವರು ಹಾಗೆ ಮಾತನಾಡಿಕೊಳ್ಳುವುದಿಲ್ಲ. ಚಕ್ರವರ್ತಿಗಳು ತಾವೇ ಕಷ್ಟಪಟ್ಟು ಸಾಕಿದ ಇರತಕ್ಕ ಯಾವ ಪ್ರಾಣಿಯನ್ನಾದರೂ ಪ್ರದರ್ಶನಕ್ಕೆ ತರುವುದೇ ಇಲ್ಲ. ಅವರ ಪ್ರಾಣಿಗಳಿಗೆ ಇನಾಮುಗಳು ದೊರಕಿದರೆ ಅವು ಎಲ್ಲಾ ವಿಷಯಗಳಲ್ಲಿ ಉತ್ಕೃಷ್ಟವಾಗಿರುತ್ತವೆನ್ನುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಈಚೆಗೆ ಚಕ್ರವರ್ತಿಗಳು ಪಟ್ಟಕ್ಕೆ ಬಂದ ಮೇಲೆ ಅವರಿಗೆ ವ್ಯವಸಾಯ ಕೆಲಸಗಳಿಗೆ ವಿನಿಯೋಗಿಸುವ ಸಮಯವು ದೊರಕುವುದಿಲ್ಲ. ಅವರಿಗೆ ರಾಜಕೀಯ ಕೆಲಸಗಳು ವಿಶೇಷವಾಗಿವೆ. ಅವರು ಯುವರಾಜರಾಗಿದ್ದಾಗ್ಗೆ ಸಾಂಡ್ರಿಂಗ್‌ಹಾಂ ಅರಮನೆಯಲ್ಲಿ ವಾಸವಾಗಿದ್ದು, ಆ ಅರಮನೆಗೆ ಸಂಬಂಧಪಟ್ಟ ಸುಮಾರು ಎರಡು ಸಾವಿರ ಎಕರೆ ಜಮೀನುಗಳನ್ನು ನೋಡಿಕೊಳ್ಳುತ್ತಿದ್ದರು. ಅವರು ತಮ್ಮ ಹತ್ತಿರಕ್ಕೆ ವ್ಯವಸಾಯಗಾರರನ್ನು ಕರೆಯಿಸಿಕೊಂಡು, ಅವರಿಗೆ ದನಗಳನ್ನು ಸಾಕುವ ರೀತಿಯನ್ನು ಬೋಧಿಸುತ್ತಿದ್ದರು. ಈಚೆಗೆ ಅವರು ಪಟ್ಟಕ್ಕೆ ಬಂದಮೇಲೂ ಸ್ವಲ್ಪ ಸಮಯವನ್ನು ದೊರಕಿಸಿಕೊಂಡು ಗೋಕಾಯಿಗಳನ್ನು ಬಹು ಚಮತ್ಕಾರವಾಗಿ ಸಾಕುತ್ತಿರುವರು. ಈಗಲೂ ಕೂಡ ಅವರು ಸಾಕುವ ಕುರಿ ದನಗಳು ಬಹು ಉತ್ಕೃಷ್ಟವಾಗಿವೆ. ಒಂದು ಕಾಲದಲ್ಲಿ ಸಾಂಡ್ರಿಂಗ್‌ಹಾಂ ಅರಮನೆಯ ಸುತ್ತುಮುತ್ತಲಿನ ಪ್ರದೇಶವೆಲ್ಲಾ ಬಂಜರು ಭೂಮಿಯಾಗಿದ್ದಿತು. ಒಬ್ಬಾನೊಬ್ಬ ಪ್ರಸಿದ್ಧನಾದ ವ್ಯವಸಾಯ ಶಾಸ್ತ್ರಜ್ಞನು ಆ ಪ್ರದೇಶವನ್ನು ನೋಡಿ ಅದರಲ್ಲಿ ವ್ಯವಸಾಯಕ್ಕೆ ಅನುಕೂಲವಾದ ಯಾವ ಕೆಲಸವೂ ನಡೆಯುವುದಿಲ್ಲವೆಂದು ದೊರೆಗಳಿಗೆ ಹೇಳಿದ್ದನು. ಆದರೆ ಸಾರ್ವಭೌಮರು ಅದೇ ಭೂಮಿಯನ್ನು ತಮ್ಮ ಪ್ರಯಾಸ ಕಷ್ಟಗಳಿಂದ ಫಲವತ್ತಾದ ಭೂಮಿಯನ್ನಾಗಿ ಮಾಡಿರುತ್ತಾರೆ. ಆ ವ್ಯವಸಾಯ ಶಾಸ್ತ್ರಜ್ಞನು ಈಗ ಬದುಕಿ ಬಂದು ಆ ಜಮೀನನ್ನು ನೋಡಿದರೆ ಆಶ್ಚರ್ಯಪಡದೇ ಇರಲಾರನು. ಸಾರ್ವಭೌಮರು ಮಾಡಿರತಕ್ಕ ಕೆಲಸಗಳನ್ನು ನೋಡಿ ಒಬ್ಬ ಶಾಸ್ತ್ರಜ್ಞನು ಈ ರೀತಿಯಾಗಿ ಬರೆದಿರುತ್ತಾನೆ.—ಅವರ ಹೊಲಗಳು ಪ್ರಸಿದ್ಧವಾಗಿವೆ. ಇಲ್ಲಿ ದನಗಳನ್ನು ಚಮತ್ಕಾರವಾಗಿ ಸಾಕುವಷ್ಟು ರಾಜ್ಯದ ಬೇರೆಯಾವ ಕಡೆಯಲ್ಲಿಯೂ ಸಾಕುವುದಿಲ್ಲ. ನಾನು ಇಂಗ್ಲಾಂಡ್ ದೇಶದ ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಸಂಚರಿಸುತ್ತೇನೆ. ಆದರೆ ಸಾರ್ವಭೌಮರು ಸಾಕತಕ್ಕಂಥ ಕುರಿ ದನಗಳನ್ನು ಎಲ್ಲಿಯೂ ನೋಡಿಲ್ಲ" ಎಂಬುದೇ. ಚಕ್ರವರ್ತಿಗಳು ಕುದುರೆಗಳನ್ನು ಸಾಕುವುದರಲ್ಲಿ ಹೆಚ್ಚಾದ ಆಸಕ್ತಿಯನ್ನು ತೋರಿಸುತ್ತಾರೆ. ಅವರು ಸಾಕತಕ್ಕ ಕುದುರೆಗಳಿಗೆ ಅನೇಕ ಸಾವಿರ ರೂಪಾಯಿಗಳ ಬೆಲೆ ಆಗುವುದು. ಒಂದಾವರ್ತಿ ಅವರು ಐವತ್ತು ನಾಲ್ಕು ಕುದುರೆಗಳನ್ನು ಕುಯುರಿಗೆ ಮೂವರುಸಾವಿರದ ನಾನೂರು ರೂಪಾಯಿಗಳ ಮೇರೆಗೆ ಮಾರಿದರು. ಅವರು ಸಾಕುವ ದನಗಳು ಸಹ ಲೋಕಪ್ರಸಿದ್ಧವಾದವುಗಳು. ಅವರು ಸಾಕಿದ ಒಂದು ಗೂಳಿಯನ್ನು ಏಳು ಸಾವಿರ ರೂಪಾಯಿಗಳಿಗೆ ಮಾರಿದರು. ಇದಕ್ಕಿಂತಲೂ ಶ್ರೇಷ್ಠವಾದ ಮತ್ತೊಂದು ಗೂಳಿಯನ್ನು ಸಾಕಿದ್ದರು. ಅದನ್ನು ಅರ್ಜೆಂಟೈನ್ ದೇಶದವನೊಬ್ಬನು ಸುಮಾರು ಹದಿನಾರು ಸಾವಿರದ ರೂಪಾಯಿಗಳಿಗೆ ಕೊಂಡುಕೊಂಡನು. ಸಾರ್ವಭೌಮರ ವ್ಯವಸಾಯಗಾರರಿಗೆ ತೋರಿಸಿರುವ ಮೇಲ್ಪಂಕ್ತಿಯು ಶ್ರೇಷ್ಠವಾದದ್ದು. ಅದರಿಂದ ಇಂಗ್ಲಾಂಡ್ ದೇಶದ ವ್ಯವಸಾಯವು ಬಹಳ ಮಟ್ಟಿಗೆ ಅಭಿವೃದ್ಧಿಯಾಯಿತು. ಅವರು ವ್ಯವಸಾಯ ಸಂಬಂಧವಾದ ಸಂಘಕ್ಕೆ ಆನರೇರಿ ಮುಖ್ಯಸ್ಥರಾಗಿದ್ದರು. ಸಾರ್ವಭೌಮರ ಮೇಲ್ಪಂಕ್ತಿಯನ್ನು ನಮ್ಮ ದೇಶದ ವ್ಯವಸಾಯಗಾರರು ಅನುಸರಿಸಬೇಕೆಂಬುದೇ ನಮ್ಮ ಪ್ರಾರ್ಥನೆಯಾಗಿರುತ್ತದೆ.

ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀಯರ ಕೂಟವು.

ಬೆಂಗಳೂರು ಸಿಟಿ ಶ್ರೀನಿವಾಸ ಮಂದಿರದ ಸ್ತ್ರೀಯರ ಕೂಟದಲ್ಲಿ ಕಳೆದ ವಾರ ಮಿಸೆಸ್ ಆರ್ ಪಿಲ್ಲಮ್ಮ ಗುಂಡೂರಾವ್ ಎಂಬಾಕೆಯು "ವಿವಾಹ"ವೆಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ಅದರ ಮುಖ್ಯಾಂಶಗಳನ್ನು ಕ್ರೋಢೀಕರಿಸಿ ಇಲ್ಲಿ ಪ್ರಕಟಿಸುತ್ತೇವೆ.

ಪ್ರಿಯ ಸಖಿಯರೇ,—ವಿವಾಹ ವಿಷಯವನ್ನು ಅನೇಕ ಭಾಗಗಳಾಗಿ ವಿಂಗಡಿಸಿಕೊಳ್ಳಬೇಕಾಗಿರುತ್ತದೆ. ಪ್ರಕೃತದಲ್ಲಿ ಗಂಡಸರು ಸಾಧಾರಣವಾಗಿ ಪ್ರಸಂಗಿಸುವರೆ ಬಾಲ್ಯ ವಿವಾಹ ಮತ್ತು ಬಾಲ್ಯವಿವಾಹದಲ್ಲಿನ ಗುಣಗಳನ್ನು ಮುಖ್ಯವಾಗಿ ಚರ್ಚಿಸುತ್ತಾರೆ. ಆ ಸಂಗತಿಗಳ ವಿಷಯದಲ್ಲಿ ಎಷ್ಟು ಬರೆದರೂ ಬರೆಯಬಹುದು. ಆ ವಿಷಯದಲ್ಲಿ ಎರಡು ಪಂಗಡಗಳಾಗಿ ಒಬ್ಬೊಬ್ಬರು ತಮ್ಮ ತಮ್ಮ ಅಭಿಪ್ರಾಯಾನುಸಾರ ದೊಡ್ಡ ದೊಡ್ಡ ಪುಸ್ತಕಗಳನ್ನೇ ಬರೆದಿರುತ್ತಾರೆ. ಅವುಗಳನ್ನು ಚರ್ಚಿಸಬೇಕಾದರೆ ಬಹಳ ವಿದ್ಯಾ ಬುದ್ಧಿ ಕೌಶಲಗಳು ಬೇಕಾಗಿರುತ್ತವೆ. ಆ ಚರ್ಚಾಸ್ಪದವಾದ ವಿಷಯಗಳನ್ನು ಬಿಟ್ಟು, ನಮ್ಮ ಜನಗಳಲ್ಲಿ ಹೆಂಡತಿಯಾದವಳು ಯಾವ ಸ್ಥಿತಿಯಲ್ಲಿ ಇರುತ್ತಾಳೆಂಬ ವಿಷಯವನ್ನೂ, ಹಿಂದೂ ಜನರ ವಿವಾಹ ಪದ್ಧತಿಗಳನ್ನೂ ಕುರಿತು ಹೇಳಬೇಕೆಂದು ಉದ್ದೇಶಿಸಿರುತ್ತೇನೆ. ಯೂರೋಪ್, ಅಮೇರಿಕಾ ಮುಂದಾದ ಸೀಮೆಗಳಲ್ಲಿ ಮದುವೆಯನ್ನು ಕರಾರಿನಂತೆ ಭಾವಿಸುತ್ತಾರೆ. ಗಂಡನು ತಪ್ಪು ಮಾರ್ಗಕ್ಕೆ ಹಿಡಿದರೆ ಅವನ ಮೇಲೆ ಹೆಂಡತಿಯೂ, ಹೆಂಡತಿ ತಪ್ಪು ಮಾರ್ಗಕ್ಕೆ ಬಿದ್ದರೆ ಅವಳ ಮೇಲೆ ಗಂಡನೂ ಕೋರ್ಟಿನಲ್ಲಿ ವ್ಯವಹಾರಗಳನ್ನು ನಡಿಸಿ, ಒಬ್ಬರನ್ನೊಬ್ಬರು ಬಿಟ್ಟುಬಿಡುವುದಕ್ಕೆ ಡೈವರ್ಸುಗಳನ್ನು ಹೊಂದುತ್ತಾರೆ. ಹಾಗೆ ನ್ಯಾಯಸ್ಥಾನಗಳಲ್ಲಿ ತೀರ್ಮಾನವಾದ ಕೂಡಲೇ ಗಂಡ ಹೆಂಡತಿಯರೆಂಬ ಸಂಬಂಧವು ತಪ್ಪಿಹೋಗುತ್ತದೆ. ನಮ್ಮ ಜನಗಳಲ್ಲಿ ಹಾಗಿರುವುದಿಲ್ಲ. ಮದುವೆಯು ನಮ್ಮಗಳಲ್ಲಿ ಗಂಡಹೆಂಡತಿಯರು ಮಾಡಿಕೊಂಡ ಕರಾರಲ್ಲ. ಮದುವೆ ಎಂಬುವುದು ಒಬ್ಬ ಬ್ರಾಹ್ಮಣನಿಗೆ ಹದಿನಾರು ಸಂಸ್ಕಾರಗಳಲ್ಲಿ ಒಂದು ಅಗತ್ಯವಾದ ಸಂಸ್ಕಾರವಾಗಿ ಶಾಸ್ತ್ರಗಳಲ್ಲಿ ನೇಮಿಸಲ್ಪಟ್ಟಿದೆ. ಈ ಸಂಸ್ಕಾರಗಳನ್ನು ಮಾಡುವುದರಿಂದ ಬೀಜ ಮತ್ತು ಗರ್ಭ ಇವುಗಳ ಸಂಬಂಧವಾದ ದೋಷವು ಹೋಗುತ್ತದೆಂತಲೂ, ಅಂಥಾ ಸಂಸ್ಕಾರಗಳನ್ನು ಮಾಡದಿದ್ದರೆ ಆ ದೋಷಗಳು ಹೋಗುವುದಿಲ್ಲವೆಂತಲೂ ಶಾಸ್ತ್ರಗಳಲ್ಲಿ ಹೇಳಿದೆ. ಮತ್ತು ಪುನ್ನಾಮ ನರಕದಿಂದ ತಪ್ಪಿಸಿಕೊಳ್ಳುವುದಕ್ಕೂ, ಪಿತೃಗಳ ಋಣವನ್ನು ತೀರಿಸುವುದಕ್ಕೂ ಒಬ್ಬ ಮಗನು ಇರಬೇಕೆಂತಲೂ ಶಾಸ್ತ್ರಗಳಿಂದ ತಿಳಿಯುತ್ತೇವೆ. ಮದುವೆ ಇಲ್ಲದೆ ಇರತಕ್ಕ ಮನುಷ್ಯನು ಕೆಲವು ಕರ್ಮಗಳನ್ನು ಮಾಡುವುದಕ್ಕೆ ಯೋಗ್ಯನಲ್ಲವೆಂತಲೂ ಶಾಸ್ತ್ರಗಳಲ್ಲಿ ಹೇಳಿದೆ. ಈ ಕಾರಣಗಳಿಂದ ಪ್ರತಿ ಒಬ್ಬನಿಗೂ ಹಿಂದೂ ಮತ ರೀತಿಯಾಗಿ ಮದುವೆ ಎಂಬುವುದು ಅವಶ್ಯಕರ್ಮವು. ಇತರ ಅನೇಕ ಮತಗಳಲ್ಲಿ ಪುರೋಹಿತರಾಗಿರುವವರು ಮದುವೆ ಮಾಡಿಕೊಳ್ಳಕೂಡದೆಂತಲೂ, ಅವರು ಯಾವಾಗಲೂ ಬ್ರಹ್ಮಚಾರಿಗಳಾಗಿಯೇ ಇರಬೇಕೆಂತಲೂ ನಿಯಮಿಸಲ್ಪಟ್ಟಿದೆ. ಆದರೆ ಸಾಧಾರಣವಾಗಿ ಮನುಷ್ಯನಿಗೆ ಸ್ವಭಾವ ಸಿದ್ಧವಾದ ಕಾಮಾದಿಗಳನ್ನು ಜಯಿಸಲು ಕಷ್ಟವಾಗಿರುವುದರಿಂದ ಕೆಲವು ವೇಳೆ ಅಂಥಾ ಪುರೋಹಿತರು ತಪ್ಪು ಮಾರ್ಗಕ್ಕೆ ಬಿದ್ದು ಅವಮಾನ ಹೊಂದಿದ್ದಾರೆ. ಹಿಂದುಗಳಲ್ಲಿ ಅಂಥಾದ್ದಕ್ಕೆ ಮಾರ್ಗವಿಲ್ಲದ ಹಾಗೆ ಮದುವೆ ಎಂಬುದನ್ನು ಮತಸಂಬಂಧವಾದ ಕರ್ತವ್ಯವಾಗಿ ಹೇಳಿಸಿರುತ್ತಾರೆ. ಹಿಂದೂಗಳಲ್ಲದ ಜನಗಳು ಸಾಧಾರಣವಾಗಿ ಹಿಂದೂ ಹೆಂಡತಿಯರ ವಿಷಯವಾಗಿ ಅವಳ ಅವಸ್ಥೆಯು ಬಹಳ ಕಷ್ಟಕರವಾದದ್ದೆಂತಲೂ, ಅವಳು ಮನೆಯಲ್ಲಿ ಗಂಡನ ಆಳಾಗಿರುತ್ತಾಳೆಂತಲೂ ನಂಬಿರುತ್ತಾರೆ. ಇದು ಶುದ್ಧ ತಪ್ಪು ಅಭಿಪ್ರಾಯ. ಯಾಕೆಂದರೆ ಶಾಸ್ತ್ರವತ್ತಾಗಿ ಮಾಡಿದ ಮನೆಯಲ್ಲಿ, ಹೆಂಡತಿಯೇ ಮನೆ. ಈ ಹೆಂಡತಿ ಜೊತೆ ಇಲ್ಲದೇ ಮನುಷ್ಯನು ಧರ್ಮಾದಿ ಸಮಸ್ತ ಪುರುಷಾರ್ಥಗಳನ್ನೂ ಅನುಭವಿಸಬೇಕಾಗಿರುತ್ತದೆ. ಅಂದರೆ, ಹೆಂಡತಿಯು ಜೊತೆಯಲ್ಲಿ ಇಲ್ಲದೆ ಮನುಷ್ಯನು ಧರ್ಮಾದಿ ಯಾವ ಪುರುಷಾರ್ಥವನ್ನೂ ಅನುಭವಿಸಕೂಡದು.

ಈ ರೀತಿಯಲ್ಲಿ ಹೆಂಡತಿಯು ಗಂಡನಿಗೆ ಸಮಸ್ತ ಕಾರ್ಯಗಳಲ್ಲಿಯೂ ಯೋಚನೆ ಹೇಳತಕ್ಕವಳಾಗಿಯೂ, ಸುಖದುಃಖಗಳಲ್ಲೆಲ್ಲಾ ಭಾಗಿನಿಯಾಗಿಯೂ ಇರುವುದಲ್ಲದೆ, ಗಂಡನು ಮಾಡತಕ್ಕ ಸಮಸ್ತ ಕಾರ್ಯಗಳಲ್ಲಿಯೂ ಸಹಕಾರಿಣಿಯಾಗಿರುವುದರಿಂದ ಆಕೆಯ ಸ್ಥಿತಿಯು ಕುಟುಂಬದಲ್ಲಿ ಬಹಳ ಶ್ರೇಷ್ಠವಾದುದಾಗಿಯೂ, ಮರ್ಯಾದೆಯುಳ್ಳದ್ದಾಗಿಯೂ ಇರುತ್ತೆಯೇ ಹೊರತು ಎಂದಿಗೂ ಕಷ್ಟವಾದುದಲ್ಲ. ಇಂತಹ ಗಂಡ ಹೆಂಡತಿಯರೆಂಬ ಸಂಬಂಧವು ಒಬ್ಬ ಮನುಷ್ಯನಿಗೂ ಒಬ್ಬ ಹೆಂಗಸಿಗೂ ಮದುವೆಯ ಕರ್ಮದ ಮೂಲಕ ಉಂಟಾಗುತ್ತದೆ. ಈ ಮದುವೆಯ ಕ್ರಮಗಳು ಒಂದೊಂದು ದೇಶದವರಲ್ಲಿ ಒಂದೊಂದು ರೀತಿಯಾಗಿ ಇರುವವು. ನಮ್ಮ ಹಿಂದೂ ಶಾಸ್ತ್ರರೀತಿಯಾಗಿ ಪೂರ್ವದಲ್ಲಿ ಎಂಟು ಕ್ರಮಗಳು ಇದ್ದಂತೆ ತಿಳಿಯಬರುತ್ತದೆ. ಅವು ಯಾವುವೆಂದರೆ, ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ, ರಾಕ್ಷಸ, ಪೈಶಾಚ, ಈ ಎಂಟು ವಿಧವಾಗಿ ನಡೆಯುತ್ತಿದ್ದವು.

ಈ ಎಂಟು ಕ್ರಮಗಳಲ್ಲಿ ಬ್ರಾಹ್ಮವೆಂಬ ಮದುವೆಯು ಶ್ರೇಷ್ಠ. ಹೊರತೂ ಕಡಮೆ ಏಳು ಕ್ರಮಗಳೂ ಕನಿಷ್ಠವಾದವುಗಳೆಂದು ಧರ್ಮಶಾಸ್ತ್ರದಲ್ಲಿ ಹೇಳಿದೆ. ಇದು ನೋಡಿದರೆ ಧರ್ಮಶಾಸ್ತ್ರಗಳು ಬರೆದ ಕಾಲದಲ್ಲಿ ಈ ಎಂಟು ಕ್ರಮಗಳೂ ರೂಢಿಯಲ್ಲಿದ್ದುವೆಂತಲೂ, ಮೇಲ್ಕಂಡ ಏಳು ವಿಧಾನಗಳು ಅಕ್ರಮವಾದುವೆಂತಲೂ ಅನಿಷ್ಟವೆಂತಲೂ ಗೊತ್ತಾಗುವುದು. ಹಿಂದೂ ಶಾಸ್ತ್ರರೀತ್ಯಾ ವರನಿಗೆ ಕನ್ನೆಯನ್ನು ಕೊಡುವುದೂ, ವರನು ಅಂಗೀಕರಿಸುವುದೂ ಮುಖ್ಯವಾದದ್ದು. ಮದುವೆಗಳಲ್ಲಿ ನಡಿಸತಕ್ಕ ಕ್ರಮಗಳನ್ನು ಸ್ವಲ್ಪಕಾಲದಲ್ಲಿ ವಿವರಿಸುವುದು ಸಾಧ್ಯವಲ್ಲ. ಆದರೆ ಆ ಕರ್ಮಗಳ ಪೈಕಿ ಸಪ್ತಪದಿಯು ಬಹಳ ಮುಖ್ಯವಾದದ್ದು. ಅದು ಆಗುವತನಕ ವರಕನ್ನೆಯರಿಗೆ ಗಂಡ, ಹೆಂಡತಿಯರ ಸಂಬಂಧವು ಉಂಟಾಗುವುದಿಲ್ಲವೆಂತಲೂ, ಅದಾದಕೂಡಲೆ ಆ ಸಂಬಂಧ ಬರುವುದೆಂತಲೂ ಹೇಳಿರುತ್ತದೆ.

ಹಿಂದೂ ಶಾಸ್ತ್ರ ಮತ್ತು ಹಿಂದೂ ಕ್ರಮಗಳನ್ನು ತಿಳಿಯದವರು ಹಿಂದೂಗಳಲ್ಲಿ ಒಬ್ಬ ಗಂಡಸು ಬೇಕಾದಷ್ಟು ಹೆಂಡತಿಯರನ್ನು ಮದುವೆ ಮಾಡಿಕೊಳ್ಳಬಹುದೆಂದು ಹೇಳುತ್ತಾರೆ. ಅದು ತಪ್ಪು. ನಮ್ಮ ಶಾಸ್ತ್ರರೀತಿಯಾಗಿ ಕೆಲವು ಸಂದರ್ಭಗಳಲ್ಲಿ ಮಾತ್ರ ಗಂಡನು ಒಬ್ಬ ಹೆಂಡತಿಯು ಜೀವಿತ ಕಾಲದಲ್ಲಿ ಎರಡನೆಯವಳನ್ನು ಮದುವೆ ಮಾಡಿಕೊಳ್ಳಬಹುದು. ಅದು ಎಂಥಾ ಸಂದರ್ಭದಲ್ಲಿ ಎಂದರೆ, ಹೆಂಡತಿಯು ಸುರಾಪಾನ ಮಾಡುವವಳಾಗಿದ್ದರೆ, ಅಥವಾ ಯಾವಾಗ್ಯೂ ಗುಣಕ್ಕೆ ಬಾರದೆ ಇರುವ ವ್ಯಾಧಿಯಿಂದ ಪೀಡಿತಳಾಗಿದ್ದರೆ, ಅಥವಾ ಬಂಜೆಯಾಗಿದ್ದರೆ, ಅಥವಾ ಗಂಡನಿಗೆ ದ್ವೇಷಿಯಾಗಿದ್ದರೆ ಇವೇ ಮೊದಲಾದ ಸಂದರ್ಭಗಳಲ್ಲಿ ಮಾತ್ರ ಗಂಡನು ಬೇರೆ ಮದುವೆ ಮಾಡಿಕೊಳ್ಳಬಹುದೇ ಹೊರತು ಗಂಡನು ತನ್ನ ಮನಸ್ಸು ಬಂದಹಾಗೆ ಮದುವೆ ಮಾಡಿಕೊಳ್ಳಬಹುದೆಂದು ಎಲ್ಲಿಯೂ ಹೇಳಿರುವುದಿಲ್ಲ.

ಮೈಸೂರು ಸರ್ಕಾರಿ ಹುಕುಮುಗಳು

ಸಾಕ್ಷಿ ಭತ್ಯವು.

ಸರ್ಕಾರಿ ನೌಕರರಲ್ಲದ ಡಾಕ್ಟರುಗಳಿಗೂ ವೈದ್ಯರುಗಳಿಗೂ ಕ್ರಿಮಿನಲ್ ಕೋರ್ಟಿನಲ್ಲಿ ಹಾಜರಾಗಿ ಸಾಕ್ಷಿ ಕೊಡಬೇಕೆಂದು ಸಮನ್ ಬಂದರೆ ಅವರಿಗೆ ಸರ್ಕಾರದಿಂದ ಸಾಕ್ಷಿ ಭತ್ಯವನ್ನು ಕೊಡಿಸಬೇಕೆಂದು ೧೯೦೭ ನೇ ಇಸವಿಯ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಸೂಚಿಸಿದರು. ಗವರ್ನಮೆಂಟಿನವರು ಅಂಥವರ ಸಾಕ್ಷಿ ಬೇಕಾಗಿದ್ದಲ್ಲಿ ಅವರಿಗೆ ಸಂದರ್ಭಾನುಸಾರ ೧೫ ರೂಪಾಯಿಗೆ ಮೀರದಂತೆ ಭತ್ಯವನ್ನು ಕೊಡಿಸಬಹುದೆಂತಲೂ, ಚೀಫ್ ಕೋರ್ಟಿನವರು ಈ ಭಾಗದಲ್ಲಿ ಸರ್ಕ್ಯುಲರ್ ಕೊಡತಕ್ಕದೆಂತಲೂ ಸ್ಯಾಂಕ್ಷನ್ ಮಾಡಿದಾರೆ.

ರೆವಿನ್ಯೂ ಮತ್ತು ವ್ಯವಸಾಯದ ಗೆಜೆಟು.

ಮೈಸೂರು ಸರ್ಕಾರದ ರೆವಿನ್ಯೂ ಮತ್ತು ವ್ಯವಸಾಯದ ಗೆಜೆಟ್ಟನ್ನು ಆರಂಭಿಸಿ ತರುವಾಯ ಎರಡು ವರುಷಗಳವರೆಗೆ ಪ್ರಕಟಿಸುವುದಕ್ಕೆ ಗವರ್ನಮೆಂಟಿನವರು ೧೯೦೬ನೇ ಅಕ್ಟೋಬರ್ ತಿಂಗಳಲ್ಲಿ ಸ್ಯಾಂಕ್ಷನ್ ಮಾಡಿದರು. ಈಗ ಎರಡು ವರುಷ ಮುಗಿಯಿತೆಂತಲೂ, ಇನ್ನೂ ಮೂರು ವರುಷ ಅದನ್ನು ಪ್ರಕಟಿಸುವುದಕ್ಕೆ ಸ್ಯಾಂಕ್ಷನ್ ಆಗಬೇಕೆಂತಲೂ ರೆವಿನ್ಯೂ ಕಮಿಷನರವರು ಬರೆದುಕೊಂಡರು. ಗವರ್ನಮೆಂಟಿನವರು ಅವರ ಶಿಫಾರಸಿನಂತೆ ಇನ್ನು ಮೂರು ವರುಷಗಳವರೆಗೆ ಆ ಗೆಜೆಟನ್ನು ಪ್ರಕಟಿಸಬಹುದೆಂತಲೂ, ಅದಕ್ಕಾಗಿ ಚಾಲ್ತಿ ಸಾಲಿನಲ್ಲಿ ೧,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದೆ ಎಂತಲೂ ಹುಕುಂ ಕೊಟ್ಟಿದಾರೆ.

ಗ್ರಂಥಕರ್ತರಿಗೆ ಪ್ರೋತ್ಸಾಹ ಕೊಡುವುದು.

ವಿದ್ಯಾಭಿವೃದ್ಧಿಗೆ ಸಂಬಂಧಪಡುವ ಮತ್ತು ದೇಶ ಭಾಷೆಯ ಪುಸ್ತಕಗಳನ್ನು ಬರೆಯುವ ಗ್ರಂಥಕರ್ತರಿಗೆ ಪ್ರೋತ್ಸಾಹ ಕೊಡುವುದಕ್ಕೋಸ್ಕರ ಗವರ್ನ್‌ಮೆಂಟಿನವರು ವರುಷಕ್ಕೆ ೪,೦೦೦ ರೂಪಾಯಿನಂತೆ ವಿನಿಯೋಗಿಸುತ್ತಾರೆ. ಈ ಹಣವನ್ನು ಅಂಥಾ ಗ್ರಂಥಕರ್ತರಿಗೆ ಹೇಗೆ ಹಂಚಿ ಕೊಡಬೇಕೆಂಬ ಬಗ್ಗೆ ಇನ್‌ಸ್ಪೆಕ್ಟರ್ ಜನರಲ್‌ರವರೇ ಕೊಡುವಂತೆ ಹುಕುಂ ಆಗಬೇಕೆಂದು ಅವರು ಸರ್ಕಾರಕ್ಕೆ ಬರೆದುಕೊಂಡರು. ಗವರ್ನ್‌ಮೆಂಟಿನವರು ಈ ವಿಷಯದಲ್ಲಿ ಹುಕುಂ ಮಾಡಿರುವುದೇನೆಂದರೆ, ಆ ಹಣವನ್ನು ವಿದ್ಯಾ ಸಂಬಂಧವಾದ ಪುಸ್ತಕಗಳ ಪ್ರೋತ್ಸಾಹಕ್ಕಾಗಿಯೇ ಗ್ರಂಥಕರ್ತರಿಗೆ ಕೊಡತಕ್ಕದ್ದು. ಅವಶ್ಯವಾಗಿರುವುದು ಇನ್‌ಸ್ಪೆಕ್ಟರ್ ಜನರಲ್‌ರವರು ಶಿಫಾರಸು ಮಾಡಿ ಗವರ್ನ್‌ಮೆಂಟಿನ [illegible] ಆಗುವ [illegible] ಹಣವನ್ನು ಕೊಡಬೇಕು. ಬೇರೆ ವಿಷಯಗಳಾದ ಗ್ರಂಥಗಳಿಗೆ ಈ ಹಣವನ್ನು ವಿನಿಯೋಗಿಸಕೂಡದು.

ಶ್ರೀ ರಾಮದೇವರ ದೇವಸ್ಥಾನವು.

ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಶ್ರೀ ರಾಮಚಂದ್ರ ದೇವರ ಸೇವೆ ಇನಾಮಿಗೆ ಕೊಳ್ಳೇಗಾಲ ತಾಲ್ಲೂಕು ಚಿಕ್ಕಲೂರು ಗ್ರಾಮದಲ್ಲಿ ೨೭ ರೂಪಾಯಿ ೧೩ ಆಣೆ ಆದಾಯವುಳ್ಳ ಜಮೀನುಗಳು ಬಿಟ್ಟಿರುತ್ತವೆ. ಈ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಸ್ವಾಮಿ ಪಾದ ಭಕ್ತರು ದೇವಸ್ಥಾನದ ಇನಾಮುತಿಗಳನ್ನು ಪೂರ್ವಕ್ಕೆ ಅನುಭವಿಸುವುದು [illegible] ಪರಂಪರಾಗತವಾಗಿ ಬಂದಿರುತ್ತದೆ. ಆ ಮಠದ ಪೂರ್ವ ಸ್ವಾಮಿಗಳು ಆ ಜಮೀನುಗಳನ್ನು ದಾನವಾಗಿ ಕೊಟ್ಟರೆಂದೂ, ಹಲವು ವರುಷಗಳಿಂದ ತಾವು ಅನುಭವಿಸುತ್ತಿದ್ದೇವೆಂದೂ ಅವರು ಹೇಳುತ್ತಾರೆ. ಇದಕ್ಕೆ ಆಧಾರವಾದ ಕಾಗದ ಪತ್ರಗಳೇನೂ ಇರುವುದಿಲ್ಲ. ಒಂದು ವೇಳೆ ದಾನಕೊಟ್ಟಿದ್ದು ನಿಜವಾದರೂ ಅದು ಊರ್ಜಿತವಾಗತಕ್ಕದ್ದಲ್ಲ. ಆದ್ದರಿಂದ ಆ ಜಮೀನುಗಳನ್ನು ಅವರ ಸ್ವಾಧೀನದಿಂದ ತೆಗೆದು ಮಠಕ್ಕೆ ವಹಿಸಿಕೊಡಬೇಕೆಂದು ಗವರ್ನ್‌ಮೆಂಟಿನವರು ಹುಕುಂ ಮಾಡಿ, ಡೆಪ್ಯುಟಿ ಕಮಿಷನರು ಗವರ್ನ್‌ಮೆಂಟಿಗೆ ರಿಪೋರ್ಟು ಕಳುಹಿಸಬೇಕೆಂದು ತಿಳಿಸಿರುವರು.

ಇಂಗ್ಲೀಷ್ ನರ್ಸ್ ಕಳುಹಿಸುವ ವಿನಿಯೋಗವು

ಇಂಗ್ಲೀಷ್ ನರ್ಸ್ ಒಂದು ವರುಷ ಇರುವ ಹಣವನ್ನು ಹೇಗೆ ವಿನಿಯೋಗಿಸುತ್ತಿರುವ ಕ್ರಮವು ತೃಪ್ತಿಕರವಾಗಿರುವಂತೆ ಕಾಣುವುದಿಲ್ಲ. ಆದ್ದರಿಂದ ಈ ಭಾಗದಲ್ಲಿ ಗವರ್ನ್‌ಮೆಂಟಿನವರು ಕೆಲವು ಹೊಸ ಏರ್ಪಾಡುಗಳನ್ನು ಮಾಡಿದ್ದಾರೆ. ಅವು ಯಾವುವೆಂದರೆ,—(೧) ತಾಲ್ಲೂಕ್ ಬೋರ್ಡಿನವರು ಪ್ರತಿ ವರುಷವೂ ಆಗಬೇಕಾಗಿರುವ ಸ್ಥಳೀಯ ಕಾಮಗಾರಿಗಳನ್ನು ತಪ್ಪದೆ ಡಿಸ್ಟ್ರಿಕ್ಟ್ ಬೋರ್ಡಿಗೆ ರವಾನಿಸಬೇಕು; (೨) ಅದನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಆದಾಯ

ಮಾಡಿ, ಡಿಸ್ಟ್ರಿಕ್ಟು ವಾರು ಪಟ್ಟಿ ಮಾಡಿ ರೆವಿನ್ಯೂ ಕಮಿಷನರಿಗೆ ಕಳುಹಿಸಿ ಕೊಡಬೇಕು. (೪) ರೆವಿನ್ಯೂ ಕಮಿಷನರವರು ಆ ಡಿಸ್ಟ್ರಿಕ್ಟು ವಾರ್ ಪಟ್ಟಿ ಗಳನ್ನೆಲ್ಲಾ ಮೊಲ್ಕಂಡ ಫಂಡಿನಲ್ಲಿ ಬೊರಕಬಹುದಾದ ಹಣದ ಮೊತ್ತವನ್ನೂ ಕಾಮಗಾರಿಗಳ ಅವಶ್ಯಕತೆಯನ್ನೂ ಪರಿಗಣಿಸಿ ಯೋಗ್ಯವೆಂದು ತೋರುವ ಮಾಡಿ ಚೀಫ್ ಇಂಜಿನಿ ಯರವರ ಸಲಹೆಯನ್ನು ಪಡೆದು, ಸಂಸ್ಥಾನವಾಮಳಿ ಬಡ್ಜೆಟ್ಟನ್ನು ತಯಾರಿ ಸಿ, ಗವರ್ನಮೆಂಟಿಗೆ ಕಳುಹಿಸಿಕೊಡಬೇಕು. ಅದರ ಮೇಲೆ ಗವರ್ನಮೆಂಟಿನ ವರು ಸೂಕ್ತ ತೋರಿದ ರೀತಿಯಲ್ಲಿ ಸ್ಯಾಂಕ್ಷನ್ ಮಾಡುವರು. ಇಂಜನಿಯರ್ ಇಲಾಖೆಯವರು ಕಾಮಗಾರಿಗಳನ್ನೆಲ್ಲಾ ನಡಿಸಿ, ರೆವಿನ್ಯೂ ಇಲಾಖೆಯವರ ವಶಕ್ಕೆ ಒಪ್ಪಿಸಿಬಿಟ್ಟರೆ, ರಾಜಿಸು ಪ್ರಕಾರ ಅವರು ಮಾಡಿಸುವರು.

ಸ್ತ್ರೀ ಅಪರಾಧಿಗಳ ಶಿಕ್ಷೆಯು.

ಮಕ್ಕಳನ್ನು ಕೊಲೆಮಾಡಿದರೆಂಬ ಅಪರಾಧಕ್ಕೆ ಗುರಿಯಾಗಿ ಶಿಕ್ಷೆ ಹೊಂದಿರುವ ಸ್ತ್ರೀ ಅಪರಾಧಿಗಳ ವಿಚಾರವನ್ನು ಇಂಡಿಯಾ ಗವರ್ನ್‌ಮೆಂಟಿನವರು ಸೆಷನ್ಸ್ ಕೋರ್ಟುಗಳ ಮೂಲಕ ತರಿಸಿಕೊಂಡು ನೋಡಿ ಸರಿಯಾದ ಕಾರಣಗಳು ಕಂಡುಬರುವ ಸಂದರ್ಭಗಳಲ್ಲಿ ಅಂಥಾ ಅಪರಾಧಿಗಳ ಶಿಕ್ಷೆಯನ್ನು ಮಾಫ್ ಮಾಡುತ್ತಿದ್ದರೂ ಕಡ ತೆಮಾಡುತ್ತಿದ್ದರೂ ಉಂಟು. ಈ ಪದ್ಧತಿಯನ್ನು ಮೈಸೂರು ಗವರ್ನಮೆಂಟಿನವ ರು ಜಾರಿಯಲ್ಲಿ ತಂದು, ಈಗ ಶಿಕ್ಷೆ ಅನುಭವಿಸುವ ಸ್ತ್ರೀ ಅಪರಾಧಿಗಳಿಗೆ ಸಹಾ ಯವಾಗಬಹುದಾಗಿದೆ ಎಂಬದಾಗಿ ಚೀಫ್ ಕೋರ್ಟ್ ರಿಜಿಸ್ಟ್ರಾರವರು ಗವರ್ನ್ ಮೆಂಟಿಗೆ ಸೂಚಿಸಿದರು. ಅದರ ಮೇಲೆ ಗವರ್ನ್‌ಮೆಂಟಿನವರು ಒಪ್ಪಿ ಹುಕುಂ ಕೊಟ್ಟಿರುತ್ತಾರೆಂದರೆ:—ಇನ್ನು ಮುಂದೆ ತಮ್ಮ ಎಳೇ ಮಕ್ಕಳನ್ನು ಕೊಂದ ರೆಂಬ ಅಪರಾಧದ ಮೇಲೆ ಶಿಕ್ಷೆ ಹೊಂದಿರುವ ಸ್ತ್ರೀಯರ ವಿಷಯದಲ್ಲಿ ಸೆಷನ್ಸ್ ಜಡ್ಜಿಗಳು ಅಭಿಪ್ರಾ ಯವನ್ನು ತರಿಸಿಕೊಂಡು, ಚೀಫ್ ಕೋರ್ಟಿನವರು ತಮ್ಮ ಅಭಿಪ್ರಾಯ ಸಮೇತ ಗವರ್ನ್‌ಮೆಂಟಿಗೆ ತಿಳಿಸತಕ್ಕದ್ದು. ಹಾಗೆ ಅಂಥಾ ಅಪರಾಧ ಮಾಡಿ ಶಿಕ್ಷೆ ಅನುಭವಿಸುತ್ತಿರುವ ಸ್ತ್ರೀಯರ ವಿಷಯವಾಗಿಯೂ ರಿಪೋರ್ಟು ಕಳುಹಿಸಿದರೆ ಅವರಿಗೂ ಶಿಕ್ಷೆಯನ್ನು ಕಡಮೆಮಾಡುವ ವಿಷಯದಲ್ಲಿ ಗವರ್ನ್‌ಮೆಂಟಿನವರು ಹುಕುಂ ಕೊಡಲು ಇಷ್ಟಪಟ್ಟವರಾಗಿದ್ದಾರೆ.

ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನವು.

ಕೋಲಾರದ ತಾಲ್ಲೂಕಿಗೆ ಸೇರಿದ ಸಿಟ್ಟನಾಯಕನಹಳ್ಳಿ ಗ್ರಾಮದಲ್ಲಿ ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನಕ್ಕೆ ಎರಡು ನಂಬರ್ ಇನಾಂತಿ ಜಮೀ ನುಗಳು ಸೇರಿದ್ದವು. ಕಳೆದ ೧೮೯೬ನೇ ಇಸವಿ ನಾಲಿನಲ್ಲಿ ಆದೇವಾ ಲಯವು ಬಿದ್ದು ಹೋಗಿ, ಸರ್ವೆ ನಂಬರಿನಲ್ಲಿ ಒಂದು ನಂಬರು ಮಿಕ್ಕಿ ಉಳಿದುದು ಒಂದು ನಂಬರು ದಾಯಾದಿಗೆ ಹೆಂಗಸಿಗೆ ಹೋಯಿತು. ಮಿಕ್ಕ ಜಮೀನು ದೇವಾಲಯ ವಾಪಸ್ ಆದದ್ದಲ್ಲ. ಈ ಜಮೀನನ್ನು ಪುನಃ ದೇವಸ್ಥಾನಕ್ಕೆ ಕೊಡಿಸಬೇಕು ಎಂದು ಕೇಳಿಕೊಂಡರು. ಆ ಆವಾಗ ಆ ಊರಿನ ಜನರು ಗ್ರಾಮದಲ್ಲಿ ಜೀರ್ಣ ವಾಗಿದ್ದ ಆ ದೇವಸ್ಥಾನವನ್ನು ದೇವಸ್ಥಾನಕ್ಕೆ ಬಿಟ್ಟು ಕೊಡುವುದಾಗಿ ಆತ ಹೇಳು ತ್ತಾನೆ. ಈಗ ನಾಲ್ಕು ವರುಷಗಳ ಕೆಳಗೆ ಆ ದೇವಸ್ಥಾನವನ್ನು ಜೀರ್ಣೋದ್ಧಾ ರಮಾಡಿ, ಪೂಜೆ ಮುಂತಾದ್ದು ನಡೆಯುವುದಕ್ಕೆ ಏರ್ಪಾಡು ಆಗಿರುತ್ತದೆಂದೂ, ಮೊಲ್ಕಂಡ ಜಮೀನು ಜಮೀನುಗಳನ್ನು ಆ ದೇವಸ್ಥಾನಕ್ಕೆ ಯಥಾ ಪ್ರಕಾರ ಕೊಡುವುದಾಗಿ ಕೇಳುತ್ತಾರೆ ಎಂದು ಡೆಪ್ಯುಟಿ ಕಮಿಷನರು ತಿಳಿಸುತ್ತಾರೆ. ಅರ್ಜಿದಾರರ ಪ್ರಾರ್ಥನೆ ಯನ್ನು ಮನ್ನಿಸಿ ಕೊಡಬಹುದೆಂದು ರೆವಿನ್ಯೂ ಕಮಿಷನರು ಶಿಫಾರಸು ಮಾಡಿದ್ದಾರೆ. ಆದಕಾರಣ ಮೊದಲಿನಂತೆ ಆ ಜಮೀನುಗಳನ್ನು ಆ ದೇವಾಲ ಯಕ್ಕೆ ಕಂದಾಯ ಕಟ್ಟಿ ದೇವಸ್ಥಾನಕ್ಕೆ ಕೊಡತಕ್ಕದ್ದೆಂದು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿ, ಮೊಲ್ಕಂಡ ಮುಜರಾಯಿಗೆ ಆತ ಕೇಳುವ ಜಮೀನನ್ನು ಬಿಟ್ಟು ಕೊಡಬೇಕೆಂದು ಹುಕುಂ ಕೊಟ್ಟಿದ್ದಾರೆ.

ಗಣಿಗಳ ಕಾನೂನು.

೧೯೦೬ನೇ ಇಸವಿಯಲ್ಲಿ ಸರ್ಕಾರದವರು ಜಾರಿಗೆ ತಂದಿರುವ ಗಣಿಗಳ ಕಾನೂನನ್ನು ಕಳೆದ ೧೯೦೭-೦೮ನೇ ಸಾಲಿನಲ್ಲಿ ನಡೆಸಿದ ಪಕ್ಕ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರೂ, ಕೋಲಾರದ ಜಿಲ್ಲೆ ಕಮಿಷನರವರೂ ಗವರ್ನ್ ಮೆಂಟಿಗೆ ರಿಪೋರ್ಟು ಮಾಡಿರುವುದನ್ನು ಪರಾಂಬರಿಸಿ ಸರ್ಕಾರದವರು ಅದರ ಮೇಲೆ ಬರೆದಿರುವ ಹುಕುಂ ಏನೆಂದರೆ:—ಈ ಸಾಲಿನಲ್ಲಿ ಈ ಕಾನೂನನ್ನು ಉಲ್ಲಂಘಿಸಿದ ಸೊಕದ ಮೊಕದ್ದಮೆಗಳು ೮೮ ರಿಪೋರ್ಟಾದವು. ಅವುಗಳಲ್ಲಿ ೬೬ ನಂಬರಿ ಶಿಕ್ಷೆಯಾದವು. ಆ ಸೈಕಿ ೩೩ ಮೊಕದ್ದಮೆಗಳು ಖುಲಾಸಾಗಿ, ೩೦ ಜನರಿಗೆ ಶಿಕ್ಷೆ ಯಾಯಿತು. ಅಪರಾಧಗಳು ಅಪರಾಧಿಗಳೂ ಕಳೆದ ಸಾಲಿಗಿಂತ ಹೆಚ್ಚಾಗಿದ್ದರೂ ಕಾನೂನನ್ನು ಸರಿಯಾಗಿ ನಡೆಸಿದ್ದೂ ಪೋಲೀಸಿನವರು ಬೆಳ್ಳು ಮುಂತಾದವುಗಳ ಮೂಲಕ ತರದೇವಾಗ ನಡೆಸಿದ್ದೂ ಕಾರಣವಾಗಿದೆ. ಕಾನೂನಿನಲ್ಲಿ ಕಂಡ ಪ್ರಕಾರ ೬೩ ಮಂದಿ ಚಿನ್ನ ಕದಿಸಿದವರೂ, ೫೬ ಜನ ಬೇಬಿಗಳ ಮೇಲೆ ಬಂದು ವ್ಯಾಪಾರ ನಡಿಸುವ ವರ್ತಕರೂ ರಿಜಿಸ್ಟರ್ ಮಾಡಿಸಿಕೊಂಡರು. ಅವರಿಂದ ಲೈಸೆನ್ಸಿಗಾಗಿ ೬೯೦ ಚಿಲ್ಲರೆ ರೂಪಾಯಿ ವಸೂಲಾಗಿದೆ. ಈ ಕಾನೂನಿನಿಂದ ಚಿನ್ನದ ಗಣಿಗಳ ಪ್ರಾಂತ್ಯದಲ್ಲಿ ನಡ್ಡಿರುವ ಸ್ಥಿತಿಗೆ ಯಾವ ಕಷ್ಟ ನಷ್ಟಗಳೂ ಉಂಟಾಗಿವೆ, ಚಿನ್ನ ಕದಿಯುವ ಉದ್ಯೋಗವನ್ನು ಚನ್ನಾಗಿ ತಪ್ಪಿಸಬಹುದೆಂದು ಈ ಗವರ್ನ್‌ಮೆಂಟಿನವರು ಸಂತೋಷಪಡುತ್ತಾರೆ. ಈ ಕಾನೂನನ್ನು ಕೋಲಾ ರ್ ಚಿನ್ನದ ಗಣಿಗಳ ಪ್ರಾಂತ್ಯದಲ್ಲಿರುವ ರೈಲ್ವೆ ಆವರಣಗಳಿಗೂ ಅನ್ವಯಿಸುವಂತೆ ವಿಸ್ತರಿಸಬೇಕೆಂಬ ಭಾಗವನ್ನು ಗವರ್ನ್‌ಮೆಂಟಿನವರು ಪರ್ಯಾಲೋಚಿಸಲಾಗು ತ್ತಿದೆ.

ದಾಮೋದರ ದಾಸರ ಫಂಡು.

ಮಿಸ್ಟರ್ ದಾಮೋದರ ದಾಸರ ಫಂಡಿನ ಉತ್ಪತ್ತಿಯಿಂದ ೧೯೦೯ನೇ ಇಸವಿಯಲ್ಲಿ ವೈದ್ಯ ವಿದ್ಯಾಭ್ಯಾಸಕ್ಕೆ ಇಬ್ಬರು ಬಾಲರು ನಾಲ್ಕು ವರುಷ ಓದುವಷ್ಟನ್ನು ವೇತನ ಕೊಟ್ಟು ಶಿಕ್ಷಣಕ್ಕೆ ಕಳುಹಿಸಬಹುದೆಂದು ಗವರ್ನ್‌ಮೆಂಟಿನವರು ಗೊತ್ತುಮಾಡಿ ಅಪೇಕ್ಷಿತರ ಮೊತ್ತದ ತರಗತಿಯನ್ನು ಕರೆ ಎಲ್ಲಿ ಕಂಡು ಕಳಿ ಮಂದಿ ಅರ್ಜಿ ಹಾಕಿಕೊಂಡಿದ್ದರು. ಇದಕ್ಕಾಗಿ ನೇಮಿಸಿದ ಕಮಿಟಿಯವರು ಆ ಅರ್ಜಿ ದಾರರ ಯೋಗ್ಯತಾಪತ್ರಗಳನ್ನು ಪರೀಕ್ಷಿಸಿ ಪಾಸ್ ಆದವರಿಗೆ ಇನ್ನು ಒಂದು ವರುಷ ದವನ್ನು ಕಲಿತು ಬರುವುದಕ್ಕೆ ಎರಡು ಕೋರ್ಸುಗಳನ್ನು, ಇದನ್ನು ತಿಳಿದು ಕೈ ಮುಂದೆ ದಸ್ಮ ಇಂಜಿನಿಯರ್ ವಿದ್ಯೆಯನ್ನು ಕಲಿಯುವುದಕ್ಕೆ ಒಂದು ವೇತನವನ್ನೂ, ವೈದ್ಯ ಮತ್ತು ಅದಿ ಸ್ತ್ರೀ ಭಾಗಗಳನ್ನು ಕಲಿಯುವುದಕ್ಕೆ ಒಂದನ್ನೂ ವಿಶೇಷ ರೀತಿಯಿಂದ ಶಿಫಾರಸು ಮಾಡಿದರು. ಗವರ್ನ್‌ಮೆಂಟಿನವರು ಈಗ ಕಂಡ ರೀತಿಯ ಮೇರೆಗೆ ಮೂರು ವೇತನಗಳನ್ನು ಸ್ಯಾಂಕ್ಷನ್ ಮಾಡಿ, ನಾಲ್ಕನೇ ವೇತ ನವ ನಿಷಯದಲ್ಲಿ ಆಲೋಚನೆ ಇತ್ಯರ್ಥ ಮಾಡುವುದಾಗಿ ತಿಳಿಸಿರುತ್ತಾರೆ. (೧) ಬೆಂಗಳೂರಿನಿಂದ ಬಂದಿರುವ ಪಟ್ಟಣದಲ್ಲಿ ಗಣಿ ಮತ್ತು ಲೋಹ ಶಾಸ್ತ್ರ ವನ್ನು ಕಲಿಯುತ್ತಿರುವ ಅಜಿತ ಮೋಹನ ಸೇನನೆಂಬ ವಿದ್ಯಾರ್ಥಿಗೆ ಒಂದು ವರು ಷದ ಮಟ್ಟಿಗೆ ೨೦೦ ಪೌಂಡು ವೇತನ ಕೊಡತಕ್ಕದ್ದು. (೨) ಮದರಾಸ್ ತಿರು ನಲ್ವೇಲಿಯಲ್ಲಿರುವ ಎನ್. ರಾಘವೇಂದ್ರರಾವ್‌ಗೆ ಅದೇ ವಿದ್ಯೆಯನ್ನು ಕಲಿ ತುಬರುವುದಕ್ಕೆ ಎರಡು ವರುಷ ೨೦೦ ಪೌಂಡಿನಂತೆ ವೇತನ ಕೊಡತಕ್ಕದ್ದು. (೪) ಮೈಸೂರು ಸಿವಿಲ್ ಸರ್ವೀಸ್ ಇಂಜನಿಯರ್ ಎನ್. ವೆಂಕಟಸುಬ್ಬಯ್ಯ ನಿಗೆ ವಿದ್ಯುಚ್ಛಕ್ತಿಯ ಇಂಜನಿಯರ್ ವಿದ್ಯೆ ಕಲಿತು ಬರುವುದಕ್ಕೆ ಎರಡು ವರು ಷ ೨೦೦ ಪೌಂಡಿನಂತೆ ವೇತನ ಕೊಡತಕ್ಕದ್ದು. ಮೊದಲನೇ ವಿದ್ಯಾರ್ಥಿಗೆ ೨೭ ವರುಷವೂ, ಎರಡನೆಯವರಿಗೆ ೨೮ ವರುಷವೂ ವಯಸ್ಸಾಗಿದೆ. ಈ ವರುಷ ಕ್ಕಿಂತ ಮೇಲ್ಪಟ್ಟವರಾಗಿದ್ದರೂ ಅವರು ವಿಶೇಷವಾದ ಸಾಮರ್ಥ್ಯವನ್ನು ಪಡೆದ ವರಾಗಿರೋಣವರಿಂದ ವಯಸ್ಸಿನ ನಿಬಂಧನೆಯನ್ನು ಅವರ ವಿಷಯದಲ್ಲಿ ಕಡಮೆ ಮಾಡಲಾಗಿದೆ. ಎನ್. ರಾಘವೇಂದ್ರರಾವ್‌ನನ್ನು ಸ್ಟೇಟ್ ಜಿಯಾಲಜಿಸ್ಟ್ ಡಾ|| ಸ್ಮೀತ್‌ರವರು ನೋಡಿ ಒಪ್ಪಬೇಕಾಗಿದೆ.

ಚಂದಾದಾರರಿಗೆ ನೋಟೀಸು.

ಬೇರೆ ವಿಷಯಗಳಲ್ಲದೆ ಬರತಕ್ಕ ಚಂದಾದಾರರಿಗೆ ಸಾವು ಗಡಕೊಡಲಾರೆವು. ಆದಕಾರಣ ಚಂದಾದಾರರು ನಮ್ಮ ಆಫೀಸಿನ ಕೆಲಸಕ್ಕೆ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ಕಳಿಸತಕ್ಕದ್ದು. ಮತ್ತು ಚಂದಾಯನ್ನು ಕಾಣದದ ಎರಡು ಪಕ್ಷಗಳಲ್ಲಿ ಬರೆಯುತಕ್ಕದ್ದು. ಇಂಥಪತ್ರಗಳಿಗೆ ನಾವು ಜವಾಬು ಕೊಡಲಾರೆವು.

ಚಂದಾದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್.

ಟಿಸ್ಟ್ರಾರವರ ಸತ್ತೀಗಟು.

ಅಯ್ಯಾ,

ಅರುಸೆರೆ ತಾಲ್ಲೂಕು ದೊಡ್ಡ ಮೇಗಳಹಳ್ಳಿ ಗ್ರಾಮಕ್ಕೆ ೩೯ ನೇ ಗುಂಪು ಸಾಸ ಪ್ರಾಕೃತಿಕಾಲ ಗ ಗುಂಪಿಗೆ ರಿಜಿಸ್ಟರ್ ಮಿಸ್ಟರ್ ಬಿಡದೂ ರಾವು ದೆವ್ಸಿ ಕಮಿಷನರ್ ಸಾಹೇಬರವರು ಎಗ್ಜಿಕ್ಯುಟಿವ್ ಇಂಜನಿಯರ್ ಮುಂತಾದ ಅಧಿಕಾ ರಿಗಳಿಗಿಂತ ರೈತರ ಗ್ರಾಮದಲ್ಲಿ ಕೆಲಸ ಆದಾಗ್ಯೂ, ಚಾಗಾರದ ಪೂರ್ವ ವಾಗಿ ಈ ಗ್ರಾಮಕ್ಕೆ ಹೋಗಿ ೧೧ ಚಿಕ್ಕ ಕೊಡಗೆ ಗಾಡಿಯಿಂದ ಇಳಿದು ನ್ಯಾಷನಲ್ ಹಾಳು ಮನಸ್ಸಿನವರು ಕೊಟ್ಟ ಸಾಮು ನುಡ್ಡಿ ಗುಡಿಸಲಲ್ಲಿರುವ ಕಲ್ಲು ಭೂಮಿಯ ಕೇರಿಯನ್ನು ಪರೀಕ್ಷಿಸಿ ಗ್ರಾಮಸ್ಥರೆಲ್ಲರ ಸಮಕ್ಷಮದಲ್ಲಿ ಗ್ರಾಮಸ್ಥ ರೊಡನೆ ಕೆರೆ ಮರ್ಮತಿಗೆ ಬೇಕಾದ ಹಣವು ಆಗಬೇಕೆಂದು ಪ್ರತಿಯೊಬ್ಬ ರೈತನನ್ನು ಕರೆದು ಆತನಾಶ್ ವಿಚಾರಿಸಿ ಅನಂತರದಲ್ಲಿ ಬೇಕಾದ ಸಹಾಯವನ್ನು ಮಾಡುವು ದಾಗಿ ನೋಟೆ ಮಾಡಿಕೊಂಡರು. ಅನಂತರ ನಾಗಾಭರಣ ಕೆರೆಯನ್ನು ನೋಡಿ ಕಟ್ಟೆ ಸಿರತಕ್ಕ ಸತ್ಯವನ್ನು ಅಜಮಾಯಿಸಿ ಮಾಡಿ ಗವರ್ನ್‌ಮೆಂಟ್ ಸ್ಕೂಲಿಗೆ ದಯಮಾಡಿ, ಅಲ್ಲಿರತಕ್ಕ ಬಾಲಕರುಗಳನ್ನು ಪರೀಕ್ಷೆ ಮಾಡಿ ಸಿಬ್ಬಂದಿಯ ಹಂಚುವದಕ್ಕೋಸ್ಕರ ಬಡರುವ ಮನಸ್ವರವನ್ನು ಕ್ಷೇಮನುಭಾಗದ ವಿಷಕ್ಕೆ ಕೊಡಿಸಿ ದರು. ತರುವಾಯ ಜನರು ನಿಂತು ಈ ಹರಿಯಲ್ಲಿನವರು ಕಟ್ಟೆ ಭೋಸ್ಟ್ ವೃಕ್ಷ ಬೆಳೆಸುವ ಮೂಲಕ ಬೆಳೆಸುವುದಾಗಿ ಮಾಡಿಸಿರುವ ವೃಕ್ಷಗಳನ್ನು ಸ್ಪೀಚ್ ರಿಸಿ, ಗ್ರಾಮದವರೆಲ್ಲರ ಪರಾಂಬರಿಸಿ ನೋಟ್‌ಬುಕ್ ಗಾಡಿಯಲ್ಲಿ ಕೂತು ಅರಸಿ ಕೆರೆಗೆ ಪ್ರಯಾಣಮಾಡಿದರು. ಈ ಕಾಲದಲ್ಲಿ ಜನಗಳಿಗೆ ಉಂಟಾಗಿರುವ ಕೊಂದ ರೆಗಳನ್ನು ಮನಸ್ಸು ನೋಡಿ ಅವರುಗಳ ಆಡಳಿತ ತಿಳಿದು ಸಹಾಯ ಮಾಡಬೇ ಕೆಂದು ಹೊರಡುವವರ ನಮ್ಮ ರಿಜಿಸ್ಟ್ರಾರ್ ಸಾಹೇಬ್ ಬಹದೂರ್‌ರವರಿಗೆ ದೇವರು ಆಯುರಾರೋಗ್ಯವನ್ನು ಕೊಟ್ಟು ಕಾಪಾಡಬೇಕಾಗಿ ಬೇಡುವ

ಪ್ರಜಾಹಿತೈಷಿ.

ಚಾಮರಾಜನಗರದಲ್ಲಿ ಪ್ಲೇಗ್ ರೋಗವುಗಳೂ.

ಅಯ್ಯಾ,

ಈ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಪ್ಲೇಗು ಹರಡಿದ್ದನ್ನು ತಿಳಿದು, ಆ ಗ್ರಾಮಗಳಿಂದ ಕಸಬಾಕ್ಕೆ ಬಂದು ನಾಸ್ತೇದುವುದಕ್ಕಾಗಿ ಅಡ್ಡಿ ಮಾಡುವ ಕಾರಣ ಕ್ಷೇಮ ಮುಂಸ್ಟಿಸಿಪಾಲಿಟಿಯವರು ಒಟ್ಟುಗೂಡಿ, ಅಂಥಾ ಪ್ಲೇಗು ಗ್ರಾಮದವರು ನಮ್ಮ ಕಸಬಾಕ್ಕೆ ಬಂದರೆ ಜನಸಮೂಹದಲ್ಲಿ ಆಗಬಹುದೆಂಬ ಭಯ. ಹಾಗೆ ಮಾಡಲಿ ಚ್ಛಿಸುವವರು ಯಾವುದೇ ೧೦ ದಿನಗಳು ಇದ್ದು ಊರೊಳಕ್ಕೆ ಬರಬೇಕೆಂದೂ, ಹಾಗೆ ಯಾವ ವಿಧವಾಗಿಯೂ ವಿಪರೀತ ಕಳ್ಳತನದಿಂದಲೂ, ಅತಿ ಕ್ರಮದಿಂದ ಊರಿಗೆ ಬಂದವರು ಕಾಣ್ಪಿಸಿ ಬಿಲ್ಲಾದಿಂದ ಹೊರಡಿಸಲ್ಪಡುವರೆಂದೂ ನಿರ್ಧ ರಿಸಿ, ಪ್ಲೇಗು ಗ್ರಾಮಗಳಿಂದ ಬಂದವರು ಇಳಿದುಕೊಳ್ಳಲು ಸ್ಥಳಗಳನ್ನೂ, ಒಂದೊ ಜನ ರನ್ನು ಗೊತ್ತುಮಾಡಿ ಅವರನ್ನು ಆ ಮನೆಯಲ್ಲಿಯೇ ಮುಖದಿಂದಿದೀಗ ತಿಳಿಯಬರಲು ಒಬ್ಬನನ್ನು ಹೊರತು ತರಲ್ಪಟ್ಟು ನಿಯಮಿಸಿದ್ದಾರೆ. ಕಡಿದ ಜನರು ಊರೊಳಕ್ಕೆ ಬರದೆ ಬಿಡುವ ಪ್ರಶಾಂತ ಭಾಗವೂ ತಡೆಯುವ ಇವುಗಳಲ್ಲಿನ ವ್ಯಾಪಾರಾದಿಗಳೂ, ಕ್ಯಾಂಪ್ ವಗೈರೆ ಪರಿಹಾರ ಕೆಲಸಗಳಿಗೆ ಬರುವವರಿಗೂ ತುಂಬ ಕಷ್ಟವಾಗುತ್ತಿದೆ. ಈ ವಿಷಯವನ್ನು ಬಿಡದೆ ಗಮನಿಸಿ ಸರಿಪಡಿಸಿಲ್ಲ. ವೃಥಾ ಜನಗಳಿಗೆ ಹಿಂಸೆ ಮಾಡುವುದು ಚನ್ನಾಗಿಲ್ಲ. ಹೀಗಾಗಿ ಹಳ್ಳಿಗಳ ರಸಿಕ ಹೊಟ್ಟೆ ಹೋಯಿಕೊ ಳ್ಳುವವರಿಗೂ, ಬೇರೆ ಬೆಳ್ಳಿ ತಂದು ವ್ಯಾಪಾರ ಜೀವನ ಮಾಡುವವರಿಗೂ ಈ ಕ್ರಮ ಸುಖಾವಹವಲ್ಲ. ಇಂಥಾ ಪ್ರತಿಬಂಧಗಳಿಂದ ಬದುಕುವುದು ಕಷ್ಟ. ಊರಿ ಗೆ ಕೈ ಬರಬಾರದೆಂದು ಮಾಡಿದ ಏರ್ಪಾಡು ಚನ್ನಾಗಿದ್ದರೂ ಇಂಥಾ ಹಿಂಸೆ ಯನ್ನು ಪಡಿಸುವುದು ಸರಿಯಲ್ಲ. ಈ ಜಾಗಕ್ಕೆ ಪ್ಲೇಗು ಬಂದ ಗ್ರಾಮಗಳಲ್ಲಿ ವಿಷಯ ಗೊತ್ತಾಗುವ ಬಗ್ಗೆ ಹೇಗೆ? ಆದುದರಿಂದ ಗ್ರಾಮದ ಪಟೇಲರು ಈ ಗ್ರಾಮ ನೆರೆದವರಿಗೆ ರಿಪೋರ್ಟು ಮಾಡಲು ವಿಧಾ ಯಕವಾಗಿದೆಯೋ? ಅಧಿಕಾರಿಗಳು ಈ ವಿಷಯಕ್ಕೆ ಗಮನಕೊಟ್ಟು ಸರಿಪಡಿ ಸಬೇಕಾಗಿದೆ.

ಚಂದಾದಾರ್.

ಟೋಲ್ ಗೇಟುಗಳಿಂದ ಬಗೆಯುವ ತೊಂದರೆಯು.

ಅಯ್ಯಾ,

ಹೊಸಪೇಟೆ ರಸ್ತೆಯಲ್ಲಿ ಶಿವಮೊಗ್ಗೆಯ ಸಮೀಪದಲ್ಲಿ ಗಾಡಿಗಳವರಿಂದ ಸುಂಕ ವಸೂಲು ಮಾಡುವ ಟೋಲ್ ಗೇಟೊಂದಿರುವುದು. ಈಗ್ಗೆ ಸುಮಾರು ೧-೨ ತಿಂ ಗಳುಗಳ ಕೆಳಗೆ ಆ ಮನೆಯನ್ನು ದಾಟಿದೆ, ಮುದ್ದಪ್ಪನವರ ಕೊಪ್ಪಲಿನ ಬಳಿ ಅಂದರೆ ಅದಕ್ಕೆ ಹಿಂಭಾಗವಾಗಿ ಯಾವ ಗಾಡಿಯನ್ನು ನಿಲ್ಲಿಸಿದರೂ ಅವರಿಂದ ಯಾವ ಸುಂಕವನ್ನಾದರೂ ವಸೂಲ್ಮಾಡದೆ, ಆ ಮನೆ ದಾಟಿಹೋಗುವವರಾಗಿದ್ದರೆ ಮಾತ್ರ ಸುಂಕ ವಸೂಲ್ಮಾಡುತ್ತಿದ್ದ ಈ ಪದ್ಧತಿಯು ಇದ್ದು, ಕ್ರಿಸ್ತ ಬದಲಾವಣೆ ಹೊಂದಿರುವುದು ಕೊಡುವೆಯೋ? ಸರಿ. ಈಗ ಆ ಮನೆಗೆ ಕೇವಲ ದೂರವಾಗಿ ಗಾಡಿ ಬಿಟ್ಟರೂ, ಅನರಿಂದ ಬಲವಂತವಾಗಿ ಸುಂಕ ವಸೂಲ್ಮಾಡುವದು ಯಾವ ನ್ಯಾಯವೋ ತಿಳಿಯದು. ಶುಂಠಿಯ ಕಡೆ ಹೋಗುವ ಬ್ರಿಟಿಷ್ ಕೈಕ್ಸೈಯ ಪ್ರಿಂ ಭಾಗಕ್ಕೇನೇ ಉಳಿಯೋಣವೆಂದರೆ ದನಗಳಿಗೂ, ಜನರಿಗೂ ನೀರಿನ ಅನುಕೂಲತೆ ಕ್ಕೆ. ಅದನ್ನು ದಾಟಿ ಇನ್ನು ಸ್ವಲ್ಪ ಮುಂದೆ ಹೋಗೋಣವೆಂದರೆ ಸಾಬರ ಬಲಾ ತ್ಕಾರವು ಬಹು ಜೋರಾಗಿರುತ್ತೆ. ಹಾಗಾದರೆ ಈಗ ಅಲ್ಲಿ ಪ್ಲೇಗಿರೋಣದರಿಂದ ಈ ರೋಗದ ಜನರು ಎಲ್ಲಿ ಇಳಿಯಬೇಕು? ಟೋಲ್ಗೇಟಿಗೆ ದೂರವಾಗಿ ಇಳಿದರೂ ಸುಂಕ ಕೊಡಬೇಕೆಂಬ ನ್ಯಾಯಕ್ಕೆ ಸರಿಯಾದ ಗುರುತಿನ ಕಲ್ಲಾದರೂ ನಿಲ್ಲಿಸದೆ ಇರುವದು ಯಾರ ತಪ್ಪು? ಗೌರ್ನಮೆಂಟಿನವರಾದರೂ ಟೋಲ್ಗೇಟು ದಾಟಿದ್ದರೆ ಸುಂಕ ಕೊಡಬೇಕೆಂಬ ಬಲಾತ್ಕಾರವು ಅವರ ಭಾವವಾಗಿರಬಹುದೇ? ಹಾಗಿನ ಅವರದೆಂದು ನೆನಸುತ್ತೇನೆ. ಅಲ್ಲದೆ ಟೋಲ್ ಕಂಟ್ರಾಕ್ಟರುದಾರರು ಸರಿಯಾಗಿ ತಮ್ಮ ಬಸ್ತಿ ಗೊತ್ತುಮಾಡದೆ ಇರುವದರಿಂದ ಅನೇಕ ಬಡ ಗಾಡಿಯವರಿಗೆ ಕೇವಲ ಅನಾನುಕೂಲತೇ ಆಗಿದೆ. ಅಲ್ಲದೆ ಟೋಲ್ಗೇಟಿಯ ಕಾವಲಿನವರ ಬಲಾ ತ್ಕಾರವೂ, ದೈವಮೇಲೆ ಬೀಳೋಣವೂ ಕೇವಲ ಅಸಹ್ಯಕರವಾಗಿರುತ್ತೆ. ಹಿಂ ದಿನ ಪದ್ಧತಿಯಂತೆ ಊರೊಳಕ್ಕೆ ಹೋಗದೆ ದೂರವಾಗಿದ್ದರೂ ಸುಂಕ ಕೊಡಕೇ ಬೇಕೆಂಬುದು ಕೇವಲ ಸರ್ಕಾರದವರ ಬುದ್ಧಿಯೋ? ಅಲ್ಲವೇ, ಕಂಟ್ರಾಕ್ಟರು ಮಾಡಿರುವ ರಿವಾಜೋ? ತಿಳಿಯದು. ಮೊದಲು ಇದ್ದ ಗಾಡಿಯವನನ್ನು ಕೇವಲ ಜುಲುಂ ನಡಿಸಿದರು. ಈ ವಿಷಯ ಮೇಲ್ಪಟ್ಟವರು ಬೇಗನೆ ಗಮನಕ್ಕೆ ತರುವ ದೂ, ಕಂಟ್ರಾಕ್ಟರೂ ಕೇವಲ ಎತ್ತರಕ್ಕೆ ಹೊಂದುವದೂ, ಕಾವಲಿನವರು ಜುಲುಂ ಮಾಡದಿರುವದೂ, ಗೊತ್ತಾದ ಸ್ಥಾನವನ್ನು ನೇಮಿಸಿ ತಿಳಿಯಪಡಿ ಸಿ ಸೂಚಿಸುವುದೂ ಪ್ರಾಮುಖ್ಯ ಕಾರ್ಯಗಳಾಗಿವೆ. ಇಲ್ಲವಾದರೆ ಉಭಯ ತ್ರರಿಗೂ ತೊಂದರೆಗಳಾಗುವ ಸಂಭವ ಉಂಟು.

ಪ್ರತ್ಯಕ್ಷದರ್ಶಿ.

ಮಂಡ್ಯ ತಾಲ್ಲೂಕು ಹಲ್ಲೆಗೆರೆಯ ವಿಚಾರಗಳು.

ಅಯ್ಯಾ,

ಈ ಸಂವತ್ಸರ ಮಳೆ ಜಾಸ್ತಿಯಾಗಿದೆಯೋ ಆಗಲಿ, ಕರಿ ಜಾಸ್ತಿಯಾಗಿದೆಯೋ ಆಗಲಿ ಒಂದು ಬಡಿ ದವಸ ಬರುವದಿಲ್ಲ. ರೂಪಾಯಿಗೆ ೮ ಸೇರು ಅಕ್ಕಿ ಸೇರು ಮತ್ತು ಮಣ್ಣು ಮಿಶ್ರವಾದ ರಾಗಿ ೯ ಸೇರು ಮಾರುತ್ತಾರೆ. ರಾಗಿ ಒಣಗಿಸಿ ಕಲ್ಲು ಮಣ್ಣು ತೆಗೆದರೆ ೭ ಸೇರು ನಿಲ್ಲುತ್ತೆ. ಪಿಟ್ಟೆ ಸೇರಿನಲ್ಲಿ ಅಳೆ ಯುತ್ತಾರೆ. ರಾಗಿಯ ಪೈರು ೪ ಅಂಗುಲ ಬಂದು ಸುಟ್ಟುಹೋಯಿತ್ತು. ಕುಡಿ ಯುವುದಕ್ಕೆ ನೀರಿಲ್ಲ. ಕ್ಷಾಮ ಬಾಧೆ ತುಂಬಾ ಬಂತು. ರೈತರು ಸಂಸಾರ ತಲ್ಲಣವೇ ಆಸಾಧ್ಯ. ಇಂಥಾದರಲ್ಲಿ ಕಂದಾಯ ಧ್ಯಾಸಗೆ ಕೇಳಾಸ? ತಿಂಗ ಳಿಗೆ ೧೦ ರೂಪಾಯಿ ಸಂಬಳ ಪಡೆಯತಕ್ಕ ಬಡವನ ಮನೆ ಸಂಸಾರದವರೂ ೩೦ ದಿನವಾದರೂ ಹೊಟ್ಟೆ ತುಂಬ ಅನ್ನ ತಿನ್ನತಕ್ಕ ಕಾಲ ಬರಲಿಲ್ಲ.

ಮೈಸೂರ್ ಶ್ರೀಮನ್ ಮಹಾರಾಜಾ ಸಾಹೇಬರದ ರವರ ಗವರ್ನ್‌ಮೆಂಟ್ ನವರು ಚಿತ್ತಕ್ಕೆ ತರಬೇಕಾದ ಕೆಲವು ಅಂಶಗಳನೆ ಏನೆಂದರೆ:—ನೂರು ರೂಪಾಯಿಗಳ ಮೇಲ್ಪಟ್ಟ ಕಲಬುರ್ಗಿ ನೌಕರರಿಗೆ ಮಹೇಯನಾ ಶೇಕಡಾ ೫ ರೂಪಾಯಿನಂತೆ ಕಲಬು ಕಾರಣ ಮಾಡಿ, ತಿಂಗಳಿಗೆ ೧೫ ರೂಪಾಯಿಗೆ ಕಮ್ಮಿ ಬರತಕ್ಕ ನೌಕರರಿಗೆ ಬತ್ತಿ ಕೊಡಿಸುತ್ತಾ, ಕ್ಷಾಮಕಾಲ ಕಳೆಯುವವರೆಗೂ ಈ ಏರ್ಪಾಟು ಇಡಿಸಿ, ಪಿಂಚಿನಿಯನ್ನು ಇಂಜಿಯನಾಡಿ ಬಡ ಪ್ರಜೆಗಳನ್ನು ಕಾಪಾ ಡಬೇಕು. ಬಡೆ ಪ್ರಸ್ತ ಕೊಯಿಸಿರುವ ರೀತಿ ರೈತರು ಉಳಿಯುವುದಿಲ್ಲ. ಇತರ ದೇಶಗಳಂತೆ ಅಕ್ಕಿ ಮತ್ತು ರಾಗಿ ಸಹ ಕರಿಸಿ, ತಾಲ್ಲೂಕುಗಳಿಂದರಂತೆ ಅಂಗಡಿ ಇಡಿಸಿ, ಚಿಲ್ಲರೆ ನೀಡಿರುವ ಬಡವರು ಬಲಿಷ್ಠರೆಂಬ ಪಕ್ಷಪಾತವಿಲ್ಲದೆ ನಗರು ಹಣಕ್ಕೆ ಮಾರಿಸುತ್ತಾ ಬರಬೇಕು. ಇದು ವರೆಗೆ ಮಳೆ ಸರಿಕ್ಕನೆ ಸಹಾಡುತ್ತಲೇ ಬಂದು, ಸ್ವಾತಿ ಮಳೆಯು ನನಗೆ ಪಾಪವೂ ಆಗಿಹೋಯ್ತು. ಇನ್ನು ಮಳೆ ಆಗುತ್ತೆಂಬ ಆಸೆ ನಿರಾಸೆಯಾಯ್ತು. ಘನವನ್ನೆ ವಿದ ಮಹಾರಾಜಾ ಸರ್ಕಾರವ ವರು ಗರೀಬರ ಮೇಲೆ ಕಟಾಕ್ಷವಿಟ್ಟು ಈ ರೀತಿ ನಡಿಸಬೇಕು.

ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ ಆಫೀಸಿನವರು ಈಗ ೭ ತಿಂಗಳಿಂದಲೂ ೬ ದರ್ಜೆ ಚಾಲೂಶೋಧೆ ಕೇಳಿದವರಿಗೆಲ್ಲಾ ಇಲ್ಲವೆಂದು ಹೇಳುತ್ತಾರೆ. ಕೆಲವು ಪ್ರಜೆಗಳು ಇದ್ದ ಕಾಗದ ಮೈಸೂರಿನಲ್ಲೇ ಅಚ್ಚಾಗಲಿ, ಬೇರೆ ಊರಿನಲ್ಲಿಯೋ ಆಗಲಿ ಯಾಕೆ ಪ್ರಿಂಟು ಮಾಡಿಸಿ ಬಿಡಬಾರದು ಎಂದು ಸಿದ್ಧ ಪಡಿಸಬಾರದು? ಇದರಿಂದ ವಿದ್ಯಾಭ್ಯಾಸಕ್ಕೆ ಎಷ್ಟು ಕೊರತೆಯಾಗಿದೆ? ಮೈಸೂರ್ ಡಿಸ್ಟ್ರಿಕ್ಟು ಸ್ಕೂಲುಗಳಲ್ಲಿ ಪುಸ್ತಕವಿಲ್ಲದಿದ್ದರೆ ಉಪಾಧ್ಯಾಯರು ಏನು ಮಾಡುವರು ಹೇಳಿ? ಅಥವಾ ಪ್ರೈವೇಟಾಗಿ ಬರುವ ಸರಿಯಾಂತರ ಮುದ್ರಿತ ಇದಾಕಿರು ಪುಸ್ತಕವಾದರೂ ಓದುತ್ತಾರೆ ಎಂದು ಯಾಕೆ ಹುಕುಂ ಕೊಡಬಾರದು? ಬಿ ಹರದ ಚಾಲೂಶೋಧೆಗೆ ಗು ಟೆಕ್ಸ್ಟರವನ್ನು ಹಾಕಿರಲಿಲ್ಲ. ಎಲ್ಲಾದರೂ ಸ್ಕೂಟಾ ಕ್ಷಣದಲ್ಲಿ ಪ್ರಿಂಟು ಮಾಡಿಸಿ, ಕೇಳಿದ ವೇಳೆ ಇಲ್ಲವೆನ್ನದಂತೆ ಕ್ರಯಕ್ಕೆ ಕೊಡಿ ಸಿದರೆ ಎಷ್ಟು ಉತ್ತಮವಾಗಿದೆ? ಪುಸ್ತಕವಿಲ್ಲದಿದ್ದರೆ ವಿದ್ಯಾಭ್ಯಾಸಕ್ಕೆ ಎಷ್ಟು ನಷ್ಟವಾಗುತ್ತೆ? ಇದಲ್ಲದೆ ಬಡ ನೌಕರರ ಕಲಬು ಕೊಡತಕ್ಕದ್ದು. ನೋಡಿದರೆ ಕಾಲ ೧೦ ವಾರಾಕನೇ ಇಲ್ಲ.

ಚಂದಾದಾರ.

ಪರದೇಶ ಸ್ಥಿರಿಗೆ ಮುಳ ಹಿಡಿಯುವುದು.

ಅಯ್ಯಾ,

ದಾವಣಗೆರೆ ತಾಲ್ಲೂಕು ಕರೂರು ಗ್ರಾಮದಲ್ಲಿ ಹರಳು ಹೊಟ್ಟೆ ಸ್ತ್ರೀ ವರ್ಗವೂ ಕೊಂಡಲು (ಕಂಬಳಿ) ಹುಳುಗಳು ಬಿದ್ದು ಪೈರುಗಳನ್ನು ನಾಶಪಡಿ ಸುತ್ತಾ ಸೆ ಕಾಟ ಜನಗಳಿಗೆ ಬಹಳ ನಷ್ಟವನ್ನುಂಟುಮಾಡುತ್ತದೆ. ಹೋದ ವರ್ಷ ಈ ಹುಳುಗಳ ನಾಶಕ್ಕೆ ಔಷಧಿಯು ಯಾವ ಕಂಪನಿಯಲ್ಲಾದರೂ ದೊರೆ ಯುವ ಹಾಗೆ ಇದ್ದರೆ ಆ ಕಂಪನಿಯ ಹೆಸರನ್ನು ತಿಳಿಸಿದಲ್ಲಿ ನಾವು ಔಷಧಿಯನ್ನು ತರಿಸಿಕೊಳ್ಳುತ್ತೇವೆ ಎಂಬದಾಗಿ ಪತ್ರಿಕೆಯಲ್ಲಿ ಪ್ರಕಟಿಸಿದ್ದೆವು. ಈ ವಿಷಯ ದಲ್ಲಿ ಯಾವುದೊಂದೂ ತಿಳಿಯಬರಲಿಲ್ಲ. ಅಷ್ಟರೊಳಗೆ ಗವರ್ನ್‌ಮೆಂಟು ನಾಶಹೊಂದಿ ಕ್ಕೆ ಸೂಚಿಸಿರುವ ಈ ಗ್ರಾಮಕ್ಕೆ ತೊಂದರೆ ಹುಳುಗಳಿಂದ ಸುಮಾರು ೫೦೦ ರೂಪಾಯಿ ನಷ್ಟವಾಗಿ ಹೋಯ್ತು. ಇಂಥಾ ಅಪಾಯವು ಪ್ರತಿ ವರ್ಷವೂ ತಪ್ಪದೇ ಬರುವುದರಿಂದ ರೈತ ಜನಗಳು ಹರಳು ಬೆಳೆಯುವುದನ್ನೇ ...

ಕೆಂದು ಈ ವರ್ಷವೇ ಬಹಳ ಕಡಿಮೆ ಮಾಡಿದಾರೆ ಈ ವರ್ಷ ಇಲ್ಲಿ ಪೇರಾವು ಮಾಡಿರುವ ಖಾಜಿ ಸ್ಯೆಯದ್ ಅಬ್ದುಲ್ ಖಾದರ್ ಸಾಹೇಬರ ಮತ್ತು ಯರಗುಂಟೆ ಬಿಡಿಯಾಳ್ ಚೆನ್ನಪ್ಪನವರ ಹೊಲಕ್ಕೆ ಈ ಮುಂಚೆ ಕೊಂಡಲು ಹುಳುಗಳು ಬಿದ್ದು ನಷ್ಟಪಡಿಸುವುದಕ್ಕೆ ಪ್ರಾರಂಭ ಮಾಡಿದ್ದವು ಆದರೆ ಖಾಜಿ ಸ್ಯೆಯದ್ ಅಬ್ದುಲ್ ಖಾದರ್ ಸಾಹೇಬರು ದಾವಣಗೆರೆ ತಾಲ್ಲೂಕಿನ ದಯಾಳುಗಳಾದ ಬಡವರಿಗೆ ವಿಶ್ವಾಸಪಾತ್ರವಾದ ಗುಣಗಳುಳ್ಳ ಅಮಲ್ದಾರ್ ಸಾಹೇಬರ ಸನ್ನಿಧಾನಕ್ಕೆ ಹುಳುಹಿಡಿದ ಒಂದು ಎಲೆಯನ್ನು ತೆಗೆದುಕೊಂಡು ಹೋಗಿ ಅರಿಕೆ ಮಾಡಿಕೊಂಡರು ಅಮಲ್ದಾರ್ರು ಕೃಪೆಯಿಟ್ಟು ಡಾಕ್ಟರ್ ಕೋಲ್ಮೆನ್ ಸಾಹೇಬರಿಗೆ ಈ ವಿಷಯವನ್ನು ತಿಳಿಸಿದರು ಡಾಕ್ಟರ್ ಕೋಲ್ಮೆನ್ ಸಾಹೇಬರ ಕಡೆಯ ಅಸಿಸ್ಟೆಂಟ್ ಮೆ॥ ಕಾಂತಪ್ಪನೆಂಬುವರು ಬಂದು ಪರೀಕ್ಷೆಯಾದ ಈಗ್ಗೆ ೩೦ ದಿನಗಳ ಕೆಳಗೆ ಕಾಲುಭಾಗ ಹೊಲಕ್ಕೆ ಔಷಧಿಯನ್ನು ಹಾಕಿ, ದಯಮಾಡಿಸಿದರು. ಆದರೆ ಹಾಕಿದ ದಿವಸವೇ ಮಳೆ ಬಂದು ಔಷಧವೆಲ್ಲಾ ಕೊಚ್ಚಿಹೋಯ್ತು ಅನಂತರ ೫—೬ ದಿನಗಳು ಹುಳುಗಳಿಲ್ಲದೆ ಗಿಡಗಳು ಬಹಳ ಕೋಮಲವಾಗಿ ಕಂಡವು ತರುವಾಯ ಹುಳುಗಳು ತಲೆದೋರಿದವು ಮೆ॥ ಕಾಂತಪ್ಪನವರು ಹೇಳಿಹೋದ ಪ್ರಕಾರ ಔಷಧಿಯನ್ನು ಹಾಕಿಸಿದ ಹೊಲದವರು ಮಾಡುವ ಅಜಾಗರೂಕತೆಯುಳ್ಳ ವರಾದ್ದರಿಂದ ಹುಳುಗಳು ಮತ್ತೆ ಜಾಸ್ತಿಯಾಗಿ ಹೊಲವನ್ನೆಲ್ಲಾ ಆವರಿಸಿದವು ಅದನಂತರ ಇವರು ಪುನಃ ಡಾಕ್ಟರ್ ಕೋಲ್ಮೆನ್‌ರವರಿಗೆ ತಿಳಿಸಿದರು ಅಲ್ಲಿಂದ ಪುನಹಾ ಮೆ॥ ಕಾಂತಪ್ಪನವರು ತಾವೇ ಔಷಧಿಯನ್ನು ಹೊತ್ತುಕೊಂಡು ಬಿಸಿಲಿನಲ್ಲಿ ಬಂದು, ಕಷ್ಟಪಟ್ಟು ರೈತರು ಸುಖಹೊಂದಲಿ ಎಂಬದಾಗಿ ಮೇಲೆ ನಮೂದಿಸಿದ ಇಬ್ಬರ ಹೊಲಕ್ಕೂ ಔಷಧಿಯನ್ನು ಹಾಕಿದರು. ಮತ್ತು ೨ನೇ ಪಕ್ಷಾ ಹುಳುಗಳು ಜಾಸ್ತಿಯಾದ್ದಕ್ಕೆ ಉದಾಹರಣೆ ಮೂಲಕ ನಮ್ಮದುರಿಗೇಸೇ ತೋರಿಸಿ ರೈತನ ಅಜಾಗರೂಕತೆ ಎಂಬುದನ್ನು ದೃಷ್ಟಾಂತರ ಪಡಿಸಿದರು. ಈಗ ಹುಳಗಳ ಸುಳುಹೇ ಇಲ್ಲದಂತಾಗಿ, ಗಿಡಗಳು ಚನ್ನಾಗಿವೆ ರೈತರೆಲ್ಲರೂ ಇವರು ಮಾಡಿದ ಸಹಾಯಕ್ಕೆ ಮೆಚ್ಚಿ ತಮ್ಮ ಹೊಲಗಳು ಚನ್ನಾಗಿರುವುದರಿಂದ ಸಂತೋಷಭರಿತರಾಗಿದಾರೆ

ಇಲ್ಲಿ ಮಳೆ ಇಲ್ಲದೆ ಪೈರುಗಳೆಲ್ಲಾ ಬಾಡುತ್ತವೆ ಇನ್ನೂ ಪೈರುಗಳು ತೆನೆ ಆಗುವುದರಲ್ಲಿವೆ ಈಗ ಮಳೆ ಬಂದರೆ ಉತ್ತಮವಾಗುತ್ತೆ ಇಲ್ಲವಾದರೆ ೮ ದಿನ ಹೋದರೆ ಪೈರುಗಳೆಲ್ಲಾ ನಾಶಹೊಂದಿ, ಬಡವರ ಗೋಳಾಟ ಅಪಾರವಾಗುತ್ತದೆ ಈಗಲೇ ಜನಗಳು ಬಹಳ ಭಾಬರಿ ಪಡುತ್ತಾರೆ ಇಲ್ಲಿನ ಬಡವರಿಗೆ ಪಟೇಲ್ ದ್ಯಾವಪ್ಪನವರು ದವಸವನ್ನು ಕೊಟ್ಟು ಆದರಿಸುತ್ತಾರೆ ಇವರ ಶ್ರೇಯಸ್ಸು ಇನ್ನೂ ಅಭಿವೃದ್ಧಿಹೊಂದಲಿ ಎಂಬದಾಗಿ ಎಲ್ಲರೂ ಸಂತೋಷಪಡುತ್ತಾರೆ

ವಾಚಕ

ಚಿಂತಾಮಣಿಯಲ್ಲಿ ಕ್ಷಾಮದ ಕಷ್ಟಗಳು

ಅಯ್ಯಾ,

ಈ ತಾಲ್ಲೂಕಿನಲ್ಲಿ ಮಳೆ ಇಲ್ಲ ಕೆಲವೆಡೆಗಳಲ್ಲಿ ಕುಡಿಯುವ ನೀರಿಲ್ಲವೆ ಜನಗಳಿಗೂ ದನಕರುಗಳಿಗೂ ತುಂಬಾ ಕಷ್ಟಕ್ಕೆ ಕಾರಣವಾಗಿದೆ ವಿಳೆಗಳಾದರೋ ಒಣಗಿಯೇ ಹೋಯಿತು ಧಾರಣೆಯಾಗಿಗಳಂತು ಹೇಳಬೇಕಾದ್ದಿಲ್ಲ. ಬಡಬಗ್ಗರ ಗೋಳಾದರೋ ಜಗದೀಶನಿಗೆ ಮುಟ್ಟಿದೆ ಈ ತಾಲ್ಲೂಕಿನ ಒಂದೊಂದು ಹೋಬಳಿಯಲ್ಲಿಯೂ ಕಡ್ಡಾಯ ತನ್ನತ್ತ ಬಾರದೆಂದು ಆಯಾ ಠೀಕದಾರರಿಂದ ತಿಳಿಯುತ್ತು ಬೆನ್ನಲ್ಲಿ ಈ ಕಡ್ಡಾಯ ಎಬ್ಬೀ ಮುಚ್ಚು ಮರೆಯಾಗಿ ತನ್ನತ್ತಿದ್ದರು ಈಗ ಲಾದರೆ ಅನುಕೂಲವ ಮಸೆಯ ಹಿಂಭಾಗಗಳಲ್ಲಿ ೫೦ ಗಜದಲ್ಲಿರುವ ಕಡ್ಡಾಯಿಯನ್ನು ಹೊಡೆದು ತಿನ್ನುತ್ತಿದಾರೆ ಅದೂ ಕೂಡ ಹೇರಳವಾಗಿಲ್ಲ ಧಾತು ಕಷ್ಟವೆ ವೀರಕ್ಷಾಮದಲ್ಲಿ ಅಳಿದುಹೋದದ್ದು ಇನ್ನೇಗಲ್ಲ ಬೇವರಿಸಿಕೊಳ್ಳಲಿಕ್ಕೆ ಮಾರ್ಗವಿಲ್ಲ ಆದಾಗ್ಯೂ ಹೇರಳವಾಗಿಲ್ಲ ಜನಗಳಿಗೂ ಜಾನುವಾರುಗಳಿಗೂ ಆಹಾರ ಸಾಕಾಗದೆ ಈ ಕಾಲದಲ್ಲಿ ಸ್ವಲ್ಪ ಸುಖವಾಗುತ್ತಿತ್ತು

ಈ ಮಹಾ ವ್ಯಸನಕರವಾದ ಸ್ಥಿತಿಯನ್ನು ರಿಪೋರ್ಟು ಮಾಡಿದರೇ ಎಂತ ರೆವಿನ್ಯೂ ಇನ್ಸ್‌ಪೆಕ್ಟರನ್ನು ಕೇಳಿದರೆ, ಅವರು—೧॥ ತಿಂಗಳಿನಿಂದಲೂ ನಾವು ತಾಲ್ಲೂಕಿಗೆ ಹಸ್ಸೆ ರಿಪೋರ್ಟು ಮಾಡುತ್ತೇವೆ ಅಮಲ್ದಾರರೇ ಬಂದು ನೋಡಿದಾರೆಂದು ಹೇಳುತ್ತಾರೆ ಈ ಕಡೆ ತಾಲ್ಲೂಕಿನಲ್ಲಿ—ನೀವು ನಿಮ್ಮ ತಾಲ್ಲೂಕಿನ ಕಾಲಸ್ಥಿತಿಯ ರಿಪೋರ್ಟು ಗವರ್ನ್‌ಮೆಂಟಿಗೆ ಕಳುಹಿಸುತ್ತೀರೋ ಎಂತ ಕೇಳಿದರೆ,—ಹೌದು, ಪ್ರತಿ ಪಕ್ಷದಲ್ಲಿಯೂ ನಾವು ವರಾಸಿಸಬೇಕೆಂದು ಮಾಡಿತವಾದ ಹುಕುಂ ಇದೆ ಅದರಂತೆ ನಾವು ಪ್ರತಿ ಪಕ್ಷದಲ್ಲಿಯೂ ರವಾನಿಸುತ್ತೇವೆಂದು ಹೇಳುತ್ತಾರೆ

ಗೆಜೆಟ್ಟಿನಲ್ಲಿ ಮಾತ್ರ ಚಿಂತಾಮಣಿಯ ಹೆಸರೇ ಇಲ್ಲ, ಕಾರಣವೇನೋ ಈ ತಾಲ್ಲೂಕಿನ ಕಾಲಸ್ಥಿತಿಯ ರಿಪೋರ್ಟು ತಾಲ್ಲೂಕಿನಲ್ಲಿ ಗ್ರಿಷಿತ ಬಿದ್ದಿರುತ್ತದೋ ಇಲ್ಲವೇ, ಫೋನ್ನು ಇಳಾಖೆಯವರು ಕಡ್ಡಾಯ ತನ್ನವರ ರಿಪೋರ್ಟು ಪಾಪವೆಂದು ಮನಸ್ಸಿಲ್ಲದೆ ಗ್ರಿಷಿತ ಮಾಡಿಯುಹುದೋ ಅಥವಾ, ಟಪ್ಪಾಲಿನ ದಾರಿಯಲ್ಲಿ ಹೋಗುತ್ತಿರುವಾಗ್ಗೆ ಇಲಿಗಳಾದರೂ ಇಳಿಬಿದ್ದು ಈ ರಿಪೋರ್ಟನ್ನು ನಾಶ್ತಾ ಮಾಡಿರುವುದೋ ತಿಳಿಯುವಂತೆ ಅವಧ್ಯವಾಗಿದೆ ಹಿಂದು ಬೇಳ ರೆವಿನ್ಯೂ ಕಮಿಷನರವರು—ಇದನ್ನು ಪ್ರಕಟಿಸಬಾರದೆಂದು ತಿಳಿದ ಜನರ ಧ್ಯೆರ್ಯಗುಣಮನವು ಇಲ್ಲವೇ, ಶ್ರೀಮನ್ಮಹಾರಾಜರವರಿಗೆ ವ್ಯಸನಕ್ಕೆ ಕಾರಣವಾಗಿ ಪರಿಣಮಿಸಬಹುದೆಂದು ಮನ್ನಾ ಮಾಡಿರುವರೇನೋ ಅಲ್ಲವೇ ಅದಕ್ಕಾದರೂ ಆಧಾರವಿಲ್ಲ. ಯಾಕೆಂದರೆ ಶ್ರೀಮನ್ಮಹಾರಾಜಾ ಸರ್ಕಾರದವರು ಈ ವಿಷಯವಾಗಿ ವಿಧಿತವಾದ ಹುಕುಂ ದಯಪಾಲಿಸಿರುವಾಗ ಹೀಗೆ ಯೋಚಿಸುವದಕ್ಕೂ ಅವಕಾಶವಿಲ್ಲವಲ್ಲ

ಮೈಸೂರು ಶ್ರೀಮನ್ಮಹಾರಾಜಾ ಸಾಹೇಬ್ ಬಹದೂರವರ ಸರ್ಕಾರದ ಹುಕುಮುಗಳು —ನಂ ರೆ, ೧೭೦೦೯—ಆಗ್ರಿ ೧೯೬—೦೬—೫ ತಾ. ೧೧ನೇ ಸೆಪ್ಟಂಬರ್ ೧೯೦೮.—ಪ್ರತ್ಯೇಕವಾಗಿ ಒಬ್ಬ ಫ್ಯಾಮಿನ್ ಕಮಿಷನರ್‌ನ್ನು ನೇಮಕ ದಾರು ಮಾಡದಿರುವ ಕಾಲದಲ್ಲಿ ಫ್ಯಾಮಿನ್ ಕೋಡನ್ನು ಅನುಸರಿಸಿ ಕ್ಷಾಮಬಾಧೆಯಂತೆ ಮುಂಚಾಗ್ರತೆಯ ಏರ್ಪಾಟು ಮಾಡುವದಕ್ಕೂ ಫ್ಯಾಮಿನ್ ಕಾಲದಲ್ಲಿ ತನ್ನಿವಾರಣೆಗಾಗಿ ಪ್ರಜೆಗಳಿಗೆ ಸಹಾಯಮಾಡಲು. ತಕ್ಕ ಏರ್ಪಾಟು ಮಾಡುವದಕ್ಕೂ ಸಹಾ ರೆವಿನ್ಯೂ ಕಮಿಷನರವರೇ ಜವಾಬ್ದಾರರೆಂದು ೧೯೦೬ನೇ ಸೆಪ್ಟಂಬರ್ ೧೧ನೇ ತಾ. ರೆ ೩೧೧೦೫—೩೧೦೫—೪೬—೯೭ ರೆ ೨೧೨—೦೬ ೧೮ನೇ ನವಂಬರ್ ಸರ್ಕಾರಿ ಹುಕುಮಿನಲ್ಲಿ ತಿಳಿಸಿರುತ್ತದೆ. ಇದೇ ರೀತಿಯಾಗಿ ಫ್ಯಾಮಿನ್ ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಫ್ಯಾಮಿನ್ ಕೋಡಿನ ಬಂಧನೆಗಳನ್ನು ಸರಿಯಾಗಿ ಆಚರಣೆಗೆ ತರುವುದರಲ್ಲಿ ಸರ್ಕಾರದವರಿಗೆ ರೆವಿನ್ಯೂ ಕಮಿಷನರವರೇ ಜವಾಬ್ದಾರರಾಗಿರಬೇಕೆಂದು ಸರ್ಕಾರದವರು ಹುಕುಂ ಮಾಡಿರುತ್ತಾರೆ

ನಂ ರೆವಿನ್ಯೂ ೫೦೪೨—೪೦—ಟ್ಯಾ, ರೆ ೧೮೯—೦೬—೭ ತಾ. ೧೫ನೇ ನವಂಬರ್ ೧೯೦೬.—ಯಾವ ಪ್ರದೇಶದಲ್ಲಾಗಲೀ ದುರ್ಭಿಕ್ಷದ ಸೂಚನೆಗಳು ತಲೆ ದೋರಿದರೆ ರೆವಿನ್ಯೂ ಕಮಿಷನರವರು ಸದರೀ ಸ್ಥಳಗಳಿಗೆ ಹೋಗಿ ಅಜಮಾಯಿಷಿ ಮಾಡಿ, ಅಲ್ಲಿನ ಕಷ್ಟದೆಸೆಯ ವಿಚಾರವಾಗಿ ಸರ್ಕಾರದವರಿಗೆ ತಿಳಿಸಬೇಕು. ಮತ್ತು ಡೆಪ್ಯುಟಿ ಕಮಿಷನರವರು ಕ್ಷಾಮಕಾಲದಲ್ಲಿ ಜನಗಳಿಗೆ ಸಹಾಯ ಮಾಡುವ ವಿಚಾರವಾಗಿ ಸಲಹೆಗಳನ್ನು ರೆವಿನ್ಯೂ ಕಮಿಷನರವರ ಮೂಲಕ ಗೌರ್ನಮೆಂಟಿಗೆ ತಿಳಿಸಬೇಕು.—ಇತ್ಯಾದಿ

ವಾಚಕರು ದಯಾಳು ಗೌರ್ನಮೆಂಟವರ ಮುಂಜಾಗ್ರತೆಯನ್ನು ಪರಾಂಬರಿಸಿದರಷ್ಟೆ ಇಂಥಾದ್ದರಲ್ಲಿ ಚಿಂತಾಮಣಿಯ ಕಾಲಸ್ಥಿತಿಯ ರಿಪೋರ್ಟು ಯಾರು ಕಾಣದೆ ಮರೆಮಾಚಬಹುದು? ಆದರೆ ಏನಾಯಿತೆಂಬ ಚಿಂತೆ ಮಾತ್ರ ಮನಸ್ಸನ್ನು ಬಾಧಿಸುತ್ತದೆ ಒಂದು ನಿಜ ಏನೆಂದರೆ—ಚಿಂತಾಮಣಿ ತಾಲ್ಲೂಕಿನ ಸ್ಥಿತಿ ರಿಪೋರ್ಟು ಮಾತ್ರ ಗೆಜೆಟ್ಟು ಬಿಟ್ಟಿದೆ ಕಾರಣವೇನೋ ತಿಳಿಯಲಸಾಧ್ಯ. ಅಯ್ಯಾ ಎಡಿಟರವರೇ, ತಮ್ಮ ಪರಾಂಬರಿಕೆ ಬಗ್ಗೆ ಬಡ ಜನಗಳ ಈಗಿನ ಕಾಲದ ಆಧಾರಕ್ಕಾಗಿರುವ ಕಡ್ಡಾಯಿ ಗಡ್ಡೆಯನ್ನು ಕಳುಹಿಸುತ್ತೇನೆ ದಯಮಾಡಿ ಸ್ವೀಕರಿಸಿ. ತಾವಾದರೂ ಬಡಜನಗಳ ಪರವಾಗಿ ದಯಾಳು ಗೌರ್ನಮೆಂಟಿಗೆ ಅರಿಕೆ ಮಾಡಬೇಕೆಂದು ಇಲ್ಲಿಯ ಅನೇಕ ದೊಡ್ಡ ಮನುಷ್ಯರು ಕೇಳಿಕೊಳ್ಳುತ್ತಾರೆ

ಈ ಕಡೆಗಾದರೆ ಪ್ರತಿ ಸಂತೆಯಲ್ಲಿಯೂ ೪೦ ಮಂದಿ ರಾಗಿಗೆ ಕಡಮೆ ಇಲ್ಲದ ಬಡವರಿಗೆ ಅಳೆಯಬೇಕಾಗಿರುವುದರಿಂದ ತಾಲ್ಲೂಕು ಅಮಲ್ದಾರರು ಪ್ರತಿಯೊಬ್ಬ ವರ್ತಕರಲ್ಲಿಯೂ ತಾವೇ ಹೋಗಿ ನಮ್ಮ ಅಸಲಿಗೆ ಎರಡು ಮೂಟೆ ರಾಗಿ ಕೊಡಿರಯ್ಯಾ ಎಂತ ಕೇಳುತ್ತಾರೆ. ಇಷ್ಟರಲ್ಲಿ ದೊಡ್ಡ ಗುಂಪು ಸಂತೆದ ಕಟ್ಟೆಯ ಬಳಿ ಕಾದಿರುವರು. ಮುದ್ದಿಸ್ಥವರೂ ಇಲ್ಲದವರೂ ಒಂದೇಯಾಗಿ ರಾಗಿ ಹೊಂದುತ್ತಾರೆ ಹಾಗೂ ಹೀಗೂ ಕೊಡಿಸುವದಲ್ಲದೆ ಪ್ರತಿ ನಿತ್ಯವೂ ಅಮಲ್ದಾರರ ಮನೆ ಮುಂದೆ ಬಡಬಗ್ಗರು ನೆರೆಯುತ್ತಿರುವದನ್ನು ಸ್ವೀಕರಿಸಲಾರದೆ ಅವರ ಸ್ವಂತ ಹಣದಿಂದ ದಿನ ೧ಕ್ಕೆ ೧ ರೂಪಾಯಿಗೆ ಕಡಮೆ ಇಲ್ಲದೆ ಕತ್ತರಿಸಿ ಹೋಗುತ್ತದೆ ಹೀಗೂ ಅವರ ಉದಾರ ಗುಣವನ್ನೂ ಸ್ವಾಮಿಭಕ್ತಿಯನ್ನೂ ಪ್ರಕಾಶಪಡಿಸುತ್ತಾರೆ

೧೧—೧೨ನೇ ತಾರೀಖುಗಳಲ್ಲಿ ಮೆ ಗಳಾದ ನಾರಾಯಣಸ್ವಾಮಿಚೆಟ್ಟಿಯವರು, ಚಿಕ್ಕ ಕೃಷ್ಣಯ್ಯ, ಜಿ ತಿಮ್ಮಯ್ಯ, ಪಾಳ್ಯನಾರಣಪ್ಪ, ಕೋಲಾರ ಮುನಿಯಪ್ಪ, ಇನ್ನೂ ಅನೇಕ ಜನಗಳಿಗೆ ಅಮಲ್ದಾರರು ಪ್ರೇರಣೆ ಮಾಡಿ ೭—೮ ಸಾವಿರ ಜನರಿಗೆ ಅನ್ನ ಹಾಕಿಸಿದರು ನಾರಾಯಣಸ್ವಾಮಿ ಚೆಟ್ಟಿಯವರೊಬ್ಬರೇ ಅನ್ನದಾನಕ್ಕಾಗಿ ೬೪ ರೂಪಾಯಿ ಕೊಟ್ಟರು ಈ ದುರ್ಭಿಕ್ಷ ಕಾಲದಲ್ಲಿ ಮಾಗಳ್ಳಿಂದ ಮಹನೀಯರು ಎರಡು ವೇಳೆಯೂ ಎರಡು ದಿನ ಅನ್ನ ಹಾಕಿಸಿದ್ದು ಸ್ತೋತ್ರಾರ್ಹವಾದದ್ದೇ ಸರಿ ನಾಳೆ ೧೬ನೇ ತಾರೀಖಿನಲ್ಲಿ ನಡೆಯುವ ಪ್ರಿನ್ಸ್ ರು ಬೋರ್ಡ್ ಸೆಕೆಂಡರಿ ಪರೀಕ್ಷೆಗೆ ಈ ಊರಿಗೆ ಬೇರೆಬೇರೆ ತಾಲ್ಲೂಕುಗಳಿಂದ ಬರುವ ಸುಮಾರು ೫೦ ಮಂದಿ ಬಾಲಕರಿಗೆ ಬೋಜನಕ್ಕೆ ಏರ್ಪಾಡು ಮಾಡಿ, ಇಲ್ಲಿ ಸಾಹುಕಾರರಲ್ಲಿ ಪ್ರೋತ್ಸಾಹ ಹುಟ್ಟಿಸಿ ಹಣ ಜಮಾಯಿಸಿ, ಸ್ಕೂಲ್ ಹೆಡ್ ಮಾಸ್ಟರವರ ವಶಕ್ಕೆ ಕೊಡಲ್ಪಟ್ಟಿತು ಈ ಎಲ್ಲಾ ಕಾರ್ಯಗಳಿಗೆ ಮೂಲಪುರುಷರಾದ ಮೆ ರಾಘವಾಚಾರ್ಯರನ್ನು ಭಗವಂತನು ಚಿರಾಯುವಾಗಿ ಆಳುವ ಬೇಕೆಂದು ಸಮಸ್ತರೂ ಕೋರುವವರಾಗಿರುತ್ತಾರೆ

ಚಿಂತಾಮಣಿ ಪ್ರಜಾ ಹಿತಚಿಂತಕ

ತಾಲ್ಲೋಕು ವರ್ತಮಾನಗಳು.

ಚನ್ನರಾಯಪಟ್ಟಣ.—ಈ ಊರಿನಲ್ಲಿ ಸುತರಾಂ ಮಳೆ ಇಲ್ಲದೆ ಹೊಲಗಳೂ, ಗೋಮಾಳಗಳೂ ಒಣಗಿರುವ ಕಾರಣ ದನಗಳು ಮೇಯಲು—ಸುತ್ತಮುತ್ತಲ ಅಕ್ಕಿ ರೂಪಾಯಿಗೆ ೫॥ ಸೇರು, ರಾಗಿ ೧೦ ಸೇರು ಸಿಕ್ಕುವುದೇ ಬಹು ಪ್ರಯಾಸವಾಗಿದೆ ಈ ವಾರದ ೬ನೇ ತಾರೀಖು ಶುಕ್ರವಾರ ಪ್ರಾತಃಕಾಲ ೮ ಘಂಟೆಗೆ ನಮ್ಮ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮಿ ವಿ ಸಿ ಮಾಧವರಾಯರವರ ಸವಾರಿಯು ಆದರಿಂದ ನಾಗರಿಕರೆಲ್ಲರೂ ಈ ಊರಿಗೆ ಸಮೀಪದಲ್ಲಿರುವ ದೇವರ ಸ್ಥಳದ ಬಳಿ ತಲಪಿ ಮಹಾ ಸಂತೋಷದಿಂದ ಎದುರುಗೊಂಡು ತಮ್ಮ ತಮ್ಮ ಅಹವಾಲುಗಳನ್ನು ಹೇಳಿಕೊಳ್ಳಬೇಕೆಂದು ನಿರೀಕ್ಷಿಸುತ್ತಿದ್ದರು ನಮ್ಮ ಅಮಲ್ದಾರರು ಸಹಾ ಟೌನುಮುನ್ಸಿಪಲ್ ಬಂಗ್ಲೆಯಲ್ಲಿ ಚನ್ನವನ್ನು ಹಾಕಿಸಿದ್ದರು ಚಪ್ಪರ ತೋರಣಗಳಿಂದ ಅಲಂಕರಿಸಿ ಸೊಬಗನ್ನು ಆಸಿಪಡಿಸಿ ತೋರಿಸುತ್ತಿದ್ದರು ಆದರೆ ಕಾರಣಾಂತರದಿಂದ ನಮ್ಮ ಡಿಸ್ಟ್ರಿಕ್ಟ್ ಬಹದೂರವರ ಸವಾರಿಯು ಇಲ್ಲಿಗೆ ಬರುವುದಿಲ್ಲವೆಂಬ ವಿಷಯ ತಿಳಿದುಬಂದದ್ದರಿಂದ ಪ್ರಜೆಗಳ ಆಶಾಭಂಗವೂ, ದೊಡ್ಡ ಮನುಷ್ಯರುಗಳು ಶ್ರಮಪಟ್ಟು ಮಾಡಿಸಿದ್ದ ಅಲಂಕಾರಗಳೂ ಸಹಾ ನಮ್ಮ ಡಿಸ್ಟ್ರಿಕ್ಟ್ ಬಹದೂರವರ ಗೋಚರಕ್ಕೆ ಬಾರದೆ ತಪ್ಪಿಹೋದದ್ದಾಗಿ ತುಂಬಾ ವ್ಯಾಕುಲವಾಗಿರುತ್ತದೆ ದಯಾಳು ಸರ್ಕಾರದವರು ಈ ಕ್ಷಾಮದ ವಿಚಾರವನ್ನು ನಮ್ಮ ಆನರೆಬಲ್ ದಿವಾನರ ಚಿತ್ತಕ್ಕೆ ತಂದುಕೊಂಡು ಬಡಬಗ್ಗರ ಕಷ್ಟ ನಿವಾರಣೆಮಾಡುವಂತ ತಕ್ಕ ಏರ್ಪಾಡುಮಾಡಿ, ಪ್ರಜೆಗಳ ಬದಿರಕ್ಷಣೆ ಕಡೆ ನಮ್ಮ ಸರಿಹಾರವಾಡಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ

ಹುಣಸೂರು ತಾ. ಬಿಳಿಕೆರೆ—ಈ ಗ್ರಾಮದ ಪ್ರದೇಶದಲ್ಲಿ ಮಳೆಯು ಬಾರದೆ, ಈ ಬಾರಿ ಪೈರು ಎಂಬ ರಬ್ಬಿ ಬೆಳೆ ನಿರಾಶೆಯಾಗಿ ಹೋಗಿದ ಇಂಥಾದ್ದರಲ್ಲಿ ಅಲ್ಲಿನವರು ೪ನೇ ನವಂಬರುನಲ್ಲಿ ಹೋಗಿ ತಿಳಿಸಿ. ಈ ವಾರದ ಸಂತೆಯಲ್ಲಿ ರಾಗಿ ರೂಪಾಯಿಗೆ ೮॥ ಸೇರು ಮೇಲೆಯೂ, ಅಕ್ಕಿ ೫॥ ಸೇರು ಮಾರಿದರೂ ಮಾರಾಟ ಮಾಡಲ್ಪಟ್ಟಿತು ಈ ಗ್ರಾಮದಲ್ಲಿ ಅನೇಕ ಜನರು ನೊಣ್ಣವನ್ನು ತಿಂದೂ, ಒಂದೆರಡು ಹೊತ್ತು ಉಪವಾಸವಿದ್ದೂ ಜೀವನ ಮಾಡುವರು ಲೋಕಾಚಾರ ಜೀವನ ನಡೆಯುವುದು ಹೇಳಲಸಾಧ್ಯವಾಗಿದೆ—೫೦ ವರ್ಷದ್ದಲ್ಲಿ ಸಂತೆಯಲ್ಲಾಗಲಿ, ಅಂಗಡಿಯಿನಲ್ಲಾಗಲಿ ವರ್ತಕರು ಪಿಟ್ಟಿ ಸೇರುಗಳನ್ನು ಇಟ್ಟುಕೊಂಡು ಅಳೆದು ಕೊಡುತ್ತಾರೆ ಈ ವಿಷಯದಲ್ಲಿ ಇಲ್ಲಿನ ಪೋಲೀಸ್ ನವರು ೧ಸಾಕೋಡದೆ ಇರಲು ಕಾರಣವೇನೋ ತಿಳಿಯಲಿಲ್ಲ—ಇದೇ ಊರಲ್ಲಿ ಗೋಪಾಲಭಟ್ಟರೆಂಬುವವರು ಮನೆಯನ್ನು ಕಟ್ಟಿಸುತ್ತೇವೆಂಬುದಾಗಿ ಈಶ್ವರ ದೇವರ ದೇವಸ್ಥಾನದಲ್ಲಿ ತಪ್ಪನ್ನಿಗೆ ಕೂತುಕೊಂಡಿದ್ದರು ತಕರಾರು ಏನೂ ಇದ್ದಿಲ್ಲವಾಗಲಿಲ್ಲ ಈ ಕಾಲದಲ್ಲಿ ಹಾಗೆ ತಪ್ಪನ್ನಿಗೆ ಕೂತು ಮನೆಯನ್ನು ಕಟ್ಟಿಸಿದವರನ್ನು ನಾವು ಎಂದೂ ಕಾಣಲಿಲ್ಲವು ಇದೇ ಸಮಯದಲ್ಲಿ ಈ ಊರಲ್ಲಿದ್ದ ಯೂನಿಯನ್ ಕಂಪೆನಿಯವನ್ನು ವಜಾಮಾಡದೇಂಬದಾಗಿ ವಾಸನೆಯನ್ನು ಜನರು ಕೇಳಿ ಸಂಕೋಚಪಡದುತ್ತಾ ಇದಾರೆ ಮತ್ತು ಹಿರೇ ಎಂಬುದರಲ್ಲಿ ನೀರಿಲ್ಲವಾದ್ದರಿಂದ ರೈತರು ಅಡ್ಡಿಯನ್ನು ಹಾಕಿಕೊಂಡು ತೆಗೆದುಕೊಳ್ಳಬಹುದೆಂಬದಾಗಿ ರೆವಿನ್ಯೂ ಕಮಿಷನರಿಂದ ಹುಕುಂ ಬಂದಿದೆ ಎಂಬದಾಗಿ ಕೇಳಿ ಜನರೆಲ್ಲಾ ಹರುಷಪಡುತ್ತಿದಾರೆ ನಮ್ಮ ಕೆಲವು ಕಾಲ ಬಾರದೆ ಇದ್ದರೆ ಈ ಪ್ರಾಂತ್ಯಕ್ಕೆ ಬರವು ತಲೆದೋರುವುದು ನಿಶ್ಚಯವೆಂದು ಹೊಡುವ ಇನ್ನುಮುಂದೆಯಾದರೂ ನಮ್ಮ ಸರ್ಕಾರದವರು ಇಲ್ಲಿನ ಪ್ರಜೆಗಳ ಜೀವನವಾಗಲು ಯಾವುದಾದರೊಂದು ಉಪಾಯವನ್ನು ಕಲ್ಪಿಸ್ಕಾರೆಂಬದಾಗಿ ನಂಬಿದೇನೆ

ಹೊಳೆ ನರಸೀಪುರ.—ಮಳೆಯಿಲ್ಲದೆ ಬಿಸಿಲು ಬೇಸಗೆಯನ್ನು ಬಯಸ್ತದೆ ಜಾನುವಾರುಗಳು ಮೇವಿಲ್ಲದೆ ಒಹು ಕೃಶವಾಗುತ್ತಾ ಬರುತ್ತಿ. ಧಾರಣೆಯಾಗಳಾದರೋ ಬಹು ತುಟ್ಟಿಯಾಗಿ ರಾಗಿ ರೂಪಾಯಿಗೆ ೧೦ ಸೇರು ಅಕ್ಕಿ ೬ ಸೇರು, ಬೇಳೆ ೫ ಸೇರು, ಈ ಪ್ರಕಾರವಾಗಿ ಕ್ಷಾಮವನ್ನು ಎದುರು ನೋಡುತ್ತಿವೆ ಬಡಬಗ್ಗರ ಕಷ್ಟ ಹೇಳಲಾರದು ಭಿಕ್ಷುಕರ ಸಂಖ್ಯೆಯು ಹೆಚ್ಚುತ್ತಾ ಇದೆ—ಊರು ಪಾಠಶಾಲಾ ವಿಷಯದಲ್ಲಿ ನಮ್ಮ ಊರಿನ ಅಕ್ಕಪಕ್ಕದ ಅಮಲ್ದಾರರು ಬಹು ಮುತುವರ್ಜಿಯಿಂದ ನೋಡುತ್ತಾರೆ. ಇಂದಿಗೆ ಟೌನಿನಲ್ಲಿ ಪಾಠಶಾಲೆಯೆಂದು ಮುನಿಸಿಪಾಲಿಟಿಯವರು ಟೌನ್‌ಹಾಲಿನಲ್ಲಿ ಪ್ರಸಿದ್ಧ ಪಡಿಸಿದರೂ ಈಚೆಗೆ ಹುಡಿಗರ ಸಂಖ್ಯೆಯು ಹೆಚ್ಚುತ್ತಾ ಹಿರುವದನ್ನು ನೋಡಿದರೆ ಮುನಿಸಿಪಾಲಿಟಿಯವರ ಧಾಂಧಿಗೆ ಜನಗಳಲ್ಲಿ ಎಷ್ಟರಮಟ್ಟಿಗೆ ಕ ಎಂಬುವದು ವೇದ್ಯವಾಗುವದು. ಇದರ ಪ್ರಯುಕ್ತ ಆರೋಗ್ಯಸ್ಥಿತಿ ಬಹು ಮಟ್ಟಿಗೆ ಕೆಟ್ಟು ಹೋಗುತ್ತದೆ—ಈಗ್ಗೆ ೧೫—೨೦ ದಿನಗಳ ಹಿಂದೆ ಚಿಕ್ಕ ಸಾತೇನಳ್ಳಿ ಗ್ರಾಮದ ಪಟೇಲನನ್ನು ಖೂನಿ ಮಾಡಿದ ಸಂಗತಿಯು ಪೋಲೀಸ್ ತಿಳಿದುಬಂದದ್ದರ ಮೇಲೆ ಗುಮಾಸ್ತಿಯ ಮೇಲೆ ಅಪರಾಧಿಯನ್ನು ಹಿಡಿದು ಲಾಕಪ್ಪಿನಲ್ಲಿ ಇಟ್ಟಿದಾರೆ. ವಿಚಾರಣೆಯಲ್ಲಿ ಸತ್ಯಸ್ಥಿತಿಯು ತಿಳಿಬರುವದು—ಇಲ್ಲಿ ತಾ ೨ನೇ ಸೋಮವಾರ ಪ್ರಾಕ್ಲಮೇಷನ್ ಜೂಬಿಲಿ ಉತ್ಸವವು ಬಹು ವಿಜೃಂಭಣೆಯಿಂದ ನಡೆಯಿತು ಎಲ್ಲಾ ಕೋಮಿನ ಬಡಬಗ್ಗರಿಗೆ ಬಟ್ಟೆ ಬರೆಗಳು ಕೊಡಲ್ಪಟ್ಟವು ಸ್ಕೂಲುಗಳ ಬಾಲಕ ಬಾಲಕಿಯರಿಗೂ ಉಪಾಧ್ಯಾಯರಿಗೂ ಮಿಠಾಯಿ ಹಣ್ಣು ವಗೈರೆ ಹಂಚಲ್ಪಟ್ಟವು ರಾತ್ರಿ ಎಲ್ಲಾ ಕೋಮಿನ ದೇವರುಗಳ ಉತ್ಸವಗಳ ಮೆರವಣಿಗೆಗಳು ಆದವು ಈ ವಿಷಯಗಳಿಗೆ ಸರ್ಕಾರಿ ಎಲ್ಲಾ ಇಲಾಖೆಯ ಚಿಕ್ಕ ದೊಡ್ಡ ಆಫೀಸರುಗಳೂ ಬಹು ಮುತುವರ್ಜಿ ಮಾಡಿದ್ದರು—ನಮ್ಮ ಶ್ರೀಮನ್ಮಹಾರಾಜರವರ ಸನ್ನಿಧಿಯು ಈ ಮಾರ್ಗವಾಗಿ ಚಿತ್ತೈಸುವರೆಂಬ ವದಂತಿ ಇದೆ

ತಿಪ್ಪಟೂರು.—ಇಲ್ಲಿ ಹವಾ ತಕ್ಕಮಟ್ಟಿಗೂ ಚನ್ನಾಗಿದೆ ಊರಿನ ಖಾಲಿ ಜಾಗವು ಅಷ್ಟು ಕೃಪಿಕರವಾಗಿಲ್ಲ ಅಲ್ಲಲ್ಲಿ ಹೊಸಕೆ, ಕಸ, ಕಡ್ಡಿಯು ತಾವಿ ಅಸಹ್ಯವಾಗಿ ಕಾಣಿಸುವವು ಇಲ್ಲ ಆಗಾಗ್ಗೆ ಅಲ್ಪ ಸ್ವಲ್ಪ ಮಳೆಗಳು ಆಗಿ, ರಾಗಿ ಬೆಳೆಗಳು ಸಾಧಾರಣವಾಗಿರುವವು ಕರೆ ಕುಂಟೆಗಳಿಗೆ ಮಾತ್ರ ನೀರು ಬರಲಿಲ್ಲ. ಇಪ್ಪತ್ತು ದಿನಗಳಿಂದ ಮಳೆಯು ಸುತರಾಂ ಬಾರದೆ ಇರುವದರಿಂದ ದವಸ ಧಾನ್ಯಗಳು ತುಂಬಾ ಪ್ರಿಯವಾಗಿ, ರಾಗಿ ರೂಪಾಯಿಗೆ ೧೪ ಸೇರು, ಅಕ್ಕಿ ೫ ಸೇರು ಮಾರಾಟವಾಗುತ್ತಿದೆ ಇದರಿಂದ ಬಡಬಗ್ಗರಿಗೆ ಜೀವನ ಮಾಡಲು ಬಹಳ ಕಷ್ಟಕರವಾಗಿರುತ್ತದೆ ಇದನ್ನು ನೋಡಿ ದಯಾಳುಗಳಾದ ನಮ್ಮ ಅಮಲ್ದಾರರು ರೂಪಾಯಿಗೆ ೧೬ ಸೇರು ರಾಗಿ ಮಾರುವುದಾಗಿ ವರ್ತಕರಿಗೆ ಹೇಳಿದರ ಮೇರೆ ಮ ಬಾಬಾಸಾಹೇಬ್ ಎಂಬುವರು ಒಂದು ಅಂಗಡಿ ಇಟ್ಟು ಬಡವರ ಕಷ್ಟಗಳನ್ನು ನಿವಾರಿಸಲು ತಾವು ಆರಿಂಭಿಸಿದ್ದಾರೆ ಇದರಿಂದ ಬಡವರಿಗೆ ಅತ್ಯಂತ ಉಪಕಾರವಾಗಿರುತ್ತದೆ ಈ ವರ್ಷ ೬—೮ ದಿನಗಳಿಂದ ಪುಷ್ಪವೃಷ್ಟಿ ಮಳೆಯಾಗುತ್ತಿರುವುದು—ಈ ವರ್ಷ ಟೌನಿನಲ್ಲಿ ಕಳ್ಳರ ಕಾಟವು ಜಾಸ್ತಿಯಾಗಿದೆ ಕಳೆದ ಅಕ್ಟೋಬರ್ ತಿಂಗಳಲ್ಲಿ ಬಸವಾಪಟ್ಟಣ ರಾಣಿ ಹಾಲಿನ ಕಟ್ಟೆಯ ಎದುರಿನ ಸ್ಟೇಷನ್ ಬಳಿ ಸುಮಾರು ೫೦೦ ಗಜಗಳ ದೂರದಲ್ಲಿ ಸುಮಾರು ಇನ್ಸ್ಪೆಕ್ಟರ್ ಸಿ ಎಂಬವರ ಮನೆಯ ಮುಂದೆ ಇರುವ ಮುನಿಸಿಪಲ್ ದೀಪವನ್ನು ನಂದಿಸಿ ಅವರ ಮನೆಯ ಬಾಗಿಲನ್ನು ಒಡೆದುಹಾಕಿ, ಸುಮಾರು ೨೫ ರೂಪಾಯಿ ಬೆಲೆಯ ವಸ್ತು ಕಳವು ಮಾಡಿಕೊಂಡು ಹೋಗಿರುವರು ಮತ್ತು ಅದೇ ರಾತ್ರಿ ಅಂಗಡಿಯ ಎದುರು ಬೀದಿಯಲ್ಲಿ ಎರಡು ಮನೆಗಳ ಬಾಗಿಲನ್ನು ಮುರಿದು ಕಳವು ನಡೆದಿರುವದು ಈ ರೀತಿಯಾಗಿ ಒಂದೇ ರಾತ್ರಿ ೩—೪ ಕಡೆಗಳಲ್ಲಿ ನಡೆದಿರುವುದು ಈ ಪ್ರಕರಣ ಪೋಲೀಸ್ ಇನ್ಸ್‌ಪೆಕ್ಟರ್ ಒಬ್ಬನನ್ನು ಹಿಡಿದು ಲಾಕಪ್ಪಿನಲ್ಲಿ ಹಾಕಿದ್ದಾರೆ ಇದರಿಂದ ಗ್ರಾಮದ ಜನರ ಆಪಾದನೆಯು ವಿಶ್ವಾಸಕ್ಕೆ ಇದೆ ಎಂದೂ ಉಸಿರು ಬಿಟ್ಟರು

ಸೋಮವಾರಪೇಟೆ ತಾ. ಗೋಣಿಕೊಪ್ಪಲು.—ಮಳೆ ಇಲ್ಲದೆ ಜನ ದನಗಳು ನಿರೀಕ್ಷಿಸುತ್ತಾರೆ ಕಾಡುಗಳಲ್ಲಿ ಜಾನುವಾರುಗಳಿಗೆ ಮೇವು ದೊರೆಯುವುದೇ ಕಷ್ಟವಾಗಿದೆ ದವಸದ ಧಾರಣೆಯು ವಿರಿಯಾಗಿ ರೂಪಾಯಿಗೆ ೬ ಸೇರು ಅಕ್ಕಿ, ೧೦ ಸೇರು ರಾಗಿ ಸಿಗದ ಬಿಸಿಯಾಗುತ್ತಿದೆ—ಈ ಗ್ರಾಮದ ಯೂನಿಯನ್ ಕೃಷಿಕರಾಗಿಲ್ಲ ರ್ಯಾದಿಯಾಗುಳ ಬಾವಿಯ ಮುಂಭಾಗ ರಸ್ತೆಯು ದಾಸ್ತ ೩ ೪ ದಿವಸಗಳಿಂದೀಚೆಗೆ ಗುಡಿಸುತ್ತಾರೆ ಇವರು ಮಧ್ಯಾಹ್ನ ೪ ಘಂಟೆ ಸಮಯದಲ್ಲಿ ಗುಡಿಸುವದರಿಂದ ಬೀದಿಯಲ್ಲಿನ ಧೂಳು ಮುಂತಾದ್ದು ಮನೆಯೊಳಗೆ ಹ್ಯಾಗೆ, ತುಂಬಾ ಅಸಹ್ಯವನ್ನುಂಟುಮಾಡುತ್ತದೆ ಸಂದುಗೊಂದುಗಳಲ್ಲಿ ಸುತರಾಂ ಗುಡಿಸದೆ ಇರುವುದರಿಂದ ಕಸರಾಶಿ ಮುಂತಾದ್ದು ತುಂಬಿಕೊಂಡು ಸಾಂಕ್ರಾಮಿಕ ವ್ಯಾಧಿಗಳ ಉತ್ಪತ್ತಿಗೆ ಕಾರಣವಾಗಿದೆ ಮತ್ತು ಇದರ ಮುತುವರ್ಜಿಯಿಂದ ಕೆಲಸಮಾಡುವವರಾಗಿ ಕಾಣಲಿಲ್ಲ. ಈ ಟೌನಿನಲ್ಲಿ ನಮ್ಮ ಅಮಲ್ದಾರರು ಗಸ್ತುಕೊಟ್ಟು ಕೆಲಸವನ್ನು ಸೂಚಿಸಿದ ಕ್ಷೇಮ—ಈ ಗ್ರಾಮದಲ್ಲಿ ಸ್ಕೂಲ್ ಮಾಸ್ತರು ಇದ್ದುದರಿಂದ ಬಹಳ ತೊಂದರೆಯಾಗಿದೆ ಇಲ್ಲಿನ ಹಳೆ ದೇವಸ್ಥಾನದಲ್ಲಿ ಸ್ಕೂಲು ಇಟ್ಟಿರುವುದರಿಂದ ಮಾಸ್ತರಿಗೂ ಬಾಲಕರಿಗೂ ತೊಂದರೆಯಾಗಿದೆ ಹಳೇ ಸ್ಕೂಲುಮನೆ ಶಿಥಿಲವಾಗಿ ಗೋಡೆ ಗೆದ್ದಲು ಹಿಡಿದಿರುತ್ತದೆ ಪ್ರತ್ಯೇಕವಾದ ಕಟ್ಟಡ ತಯಾರು ಮಾಡಿಸುವುದರಿಂದ ವಾಸದ ಹುಡುಗರಿಗೆ ಉತ್ತಮವಿರುವುದರಿಂದ ಕೆಲಸಮಾಡಲು ಇದೊಂದು ಸೇವೆಯಾಗಿದೆ ಈ ವಿಷಯವಾಗಿ ಮೈಸೂರಿನ ಕೌನ್ಸಿಲ್ ಮೆಂಬರುಗಳು ಮತ್ತು ವಿಭಾಗದ ಅಧ್ಯಕ್ಷರವರ ಕಾಲದಲ್ಲಿ ಸ್ಕೂಲಿನ ತೊಂದರೆಗಳನ್ನು ಕುರಿತು ಸಾರ್ವಜನಿಕರು ಹೇಳಿಕೊಂಡಿದ್ದಾರೆ, ೩ ೪ ಅರ್ಜಿ ಸಹ ಬರೆದುಕೊಂಡಿದ್ದಾರೆ ಇಷ್ಟೇ ಗ್ರಾಮಸ್ಥರು ೧೦೦ ರೂಪಾಯಿ ಕೊಡೋಣವಾದರೆ ಉಳಿದ ಹಣವನ್ನು ಸರ್ಕಾರದವರೇ ಹಾಕಿ ಕಟ್ಟಡ ತಯಾರುಮಾಡಿಸಬೇಕೆಂದು ವಾಗ್ದಾನ ಮಾಡಿ

ಕದು ಆದಂತೆ ಗ್ರಾಮಸ್ಥರು ಚಂದಾ ಹಣವನ್ನು ತಾಲ್ಲೂಕ್ ಟ್ರಿಜರಿಗೆ ಭರ್ತಿಮಾಡಿದರು. ಅಷ್ಟರಲ್ಲೇ ಅವರಿಗೆ ವರ್ಗವಾಯಿತು. ಈಗಿನ ಇನ್ಸ್‌ಪೆಕ್ಟರ ಕಾಲದಲ್ಲಿ ಗ್ರಾಮಸ್ಥರಿಂದ ಇನ್ನೂ ೫೦ ರೂಪಾಯಿ ಹೆಚ್ಚು ಒಟ್ಟು ೧೫೦ ರೂಪಾಯಿ ಚಂದಾವನ್ನು ಟ್ರಿಜರಿಯಲ್ಲಿ ಭರ್ತಿಮಾಡಿ, ೨-೩ ವರುಷಗಳಾಗುತಾ ಬಂತು. ಈಚೆಗೆ ಈ ವಿಷಯವಾಗಿ ಕಮಿಟಿ ಮೆಂಬರುಗಳು ೧-೨ ಅರ್ಜಿಗಳನ್ನು ಕೊಟ್ಟರೂ ಅದರ ಪ್ರಸಂಗವೇ ಇಲ್ಲ. ನಮ್ಮ ಗವರ್ನ್‌ಮೆಂಟಿನವರಿಗೆ ಹಳ್ಳಿಗಾಡು ಸ್ಕೂಲು ಅಭಿವೃದ್ಧಿ ವಿಷಯದಲ್ಲಿ ಇನ್ನೇತಕೆ ದಯಬರುವುದೋ ತಿಳಿಯದು. ಈಗಲಾದರೂ ಮೇಲ್ಪಟ್ಟ ಅಧಿಕಾರಿಗಳು ಶೀಘ್ರದಲ್ಲಿಯೇ ಗಮನವನ್ನು ಕೊಟ್ಟು ಗವರ್ನ್‌ಮೆಂಟಿನವರ ಮಾರ್ಫತ್ತು ಉಳಿದ ಹಣವನ್ನು ಸ್ಯಾಂಕ್ಷನ್ ಮಾಡಿಸಿ, ಇಂಥಾ ದುರ್ಭಿಕ್ಷ ಕಾಲದಲ್ಲಿ ಸ್ಕೂಲುಕಟ್ಟಡವನ್ನೂ ಮಾಸ್ತರ ವಾಸಕ್ಕೆ ಒಂದು ಚಿಕ್ಕ ಮನೆಯನ್ನೂ ಕಟ್ಟಿಸೋಣವಾದರೆ ಹೊಟ್ಟೆಗಿಲ್ಲದ ಬಡ ಜನರ ಜೀವನಕ್ಕೂ, ಹಳ್ಳಿಗಾಡುಗಳಲ್ಲಿರುವ ಬಾಲಕರ ವಿದ್ಯಾಭಿವೃದ್ಧಿಗೂ ತುಂಬಾ ಅನುಕೂಲವಾದೀತೆಂದು ಹಾರೈಸುತ್ತೇನೆ.

ಮದ್ದಗಿರಿ ತಾ. ಬಿಡಚೌಡನಹಳ್ಳಿ.—ಈಚೆಗೆ ಮೋಡಗಳಾಡುವುದು ಇದುವರೆಗೆ ಕಡಮೆಯಾಗಿದೆ. ಒಂದುವೇಳೆ ಕೊಂಚವಾಗಿ ಬರ್ಗೆಸಿದರೂ ಮಳೆಯ ಆಸೆ ಬೇರೆ ಯಾರಲ್ಲೂ ಇಲ್ಲ. ಮಾಗೀ ಕಾಲದ ಸೂಚನೆಗಳು ಪ್ರಾರಂಭವಾಗಿವೆ. ಖುಷ್ಕಿ ಬೆಳೆಯೆಲ್ಲಾ ಹೋಯಿತು. ಅದರ ಅಜಮಾಯಿಷಿಬಗ್ಗೆ ಮದ್ದಗಿರಿ ಅಸಿಸ್ಟೆಂಟ್ ಕಮಿಷನರೂ ಮತ್ತು ಅಮಲ್ದಾರರೂ ಈ ತಾಲ್ಲೂಕಿನ ಪ್ರತಿ ಗ್ರಾಮಗಳಿಗೂ ಹೋಗಿ, ಬೆಳೆಗಳನ್ನು ಪರಾಂಬರಿಸುವರೆಂದು ವದಂತಿ ಇದೆ. ಅವರುಗಳು ದಯಮಾಡಿಸಿ ಹೊಲಗಳಲ್ಲಿ ಸಂಚರಿಸಿದರೆ, ರೈತರಿಗೆ ಕಂದಾಯ ರಿಮಿಷನ್ ಆಗುವದಕ್ಕೂ, ಕೂಲಿಯವರ ಮಾದಿಗರ, ಮತ್ತು ಇತರರ ಬಡ ಜನರು ಗೋಚರವಾಗಿ ರಿಲೀಫ್ ಕಾಮಗಾರಿ ಪ್ರಾರಂಭವಾಗುವದಕ್ಕೂ ಕಾರಣವಾಗದಿರಲಾರದು.—ಯಾವ ಗ್ರಾಮಕ್ಕೆ ಹೋದರೂ ಧಾನ್ಯಗಳನ್ನು ತೋರಿಸುವವರೇ ಇಲ್ಲ. ಒಂದುವೇಳೆ ಕೆಲವರು ಕೊಟ್ಟರೂ, ಇರುವಾಗ ಇಲ್ಲವೆಂದು ಹೇಳುತ್ತಾರೆ ಅಥವ, ಕಪ್ಪು ಅಳತೆಗಳಲ್ಲಿ ಕೂಡುವರು ಅದರ ವಿಷಯ ಮಾತಾಡಿದರೆ ಅವು ಸಹ ಸಿಕ್ಕದೆ ಹೋಗುತ್ತವೆಂದು ಹೆದರಿ ಸಂಕಟದಿಂದಲೇ ತೆಗೆದುಕೊಳ್ಳುವರು. ವರ್ತಕರೇ, ಇದು ಧನಸಂಪಾದನೆಯ ಕಾಲವಲ್ಲ, ಧರ್ಮಸಂಪಾದನೆಯ ಕಾಲವೆಂದು ತಿಳಿದು ಮಾರುವವರು ಅಪರೂಪವಾಗಿರುವರು. ಇದೇ ತಿಂಗಳು ೪ನೇ ತಾ ಮದ್ದಗಿರಿ ಸಂತೆಗೆ ಹೋಗಿದ್ದೆನು. ಮೊದಲು ರಾಗಿಯನ್ನು ವಿಚಾರಿಸಿದಾಗ ಹಳೇ ರಾಗಿ ೯-೧೦ ಸೇರೆಂದೂ, ಹೊಸದು ೧೦-೧೧ ಸೇರೆಂದೂ, ಜೋಳ ೮½-೯ ಸೇರೆಂದೂ ಹೇಳುತ್ತಿದ್ದರು. ಸುಮಾರು ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ ಮದ್ದಗಿರಿ ಅಮಲ್ದಾರರು ದಯಮಾಡಿಸಿ, ಹಳೇ ರಾಗಿ ೧೧ ಸೇರಿನಂತೆಯೂ, ಹೊಸ ರಾಗಿ ೧೨ ಸೇರಿನಂತೆಯೂ, ಜೋಳ ೧೦ ಸೇರಿನಂತೆಯೂ ಮಾರಬೇಕೆಂದು ಹೇಳಿದಾಗ ಅಂಗಡಿಯವರಲ್ಲಿ ಒಬ್ಬರಾದರೂ ಒಪ್ಪಲಿಲ್ಲ. ಅಸಲೇ ನಷ್ಟವಾಗುತ್ತೆಂದು ವಾದಿಸಿದರು. ಕಡೆಯಲ್ಲಿ ಅಮಲ್ದಾರರು—ನೀವೇನಾದರೂ ಕೇಳದೆ ನಮ್ಮ ಧಾರಣೆಯಂತೆಯೇ ಕೊಡಿ. ಒಳ್ಳೇ ಬೆಳೆಯಾದಾಗ ನಿಮಗೆ ಒಳ್ಳೇ ಲಾಭ ಬರುವಂತೆ ಮಾರಿ. ನಮ್ಮ ಜನರಿಗೂ, ರೈತರಿಗೂ ಈಗ ನೀವು ತಕ್ಕಮಟ್ಟಿಗೆ ಲಾಭ ನೋಡಿ ಕೊಡುವದು ಧರ್ಮವಾಗಿದೆಯೆಂತಲೂ, ನೀವು ಧರ್ಮವ ಮಾಡಲು ಇದೇ ತಕ್ಕ ಕಾಲವೆಂದೂ, ಇದಕ್ಕಿಂತಲೂ ಬೇರೆ ಕಾಲವಿಲ್ಲವೆಂದೂ ಪ್ರೀತಿಯಿಂದ ವಿವರಿಸಿದ ಸಂಗತಿಯನ್ನು ಸಾಹುಕಾರರು ಕೇಳಿ, ಅರ್ಧ ಮನಸ್ಸಿನಿಂದ ಮಾರಿದರು. ಕೆಲವರು—ಆಗಲಿ ಸ್ವಾಮಿ ಎಂದು ಸಂತೋಷವಾಗಿ ಮಾರಿದರು. ಅಮಲ್ದಾರರೇ ರಾಗಿಯೆಲ್ಲಾ ಮುಗಿಯುವ ವರಿಗೂ ಇದ್ದು ಹೆಚ್ಚಿಗೆ ಯಾರಿಗೂ ಕೊಡಿಸದೆ ಕೊಂಚವಾಗಿ ಎಲ್ಲರಿಗೂ ಆಗುವಂತೆ ಹಂಚಿ ಕೊಡಿಸಿದರು. ಇವರು ಪ್ರೀತಿಯಿಂದ ಸಂತೆಯ ವರೆಗೂ ದಯಮಾಡಿಸಿದ್ದರಿಂದ ಬಡ ರೈತರಿಗೆ ಉಪಯೋಗವಾಯ್ತು. ಕಪ್ಪು ಅಳತೆಯ ಸೇರು ಪಾತ್ರೆಗಳಿಗೆ ಮೊಹರೂ ಬಂತೆಂದು ಹೇಳುವದರಲ್ಲಿ ಯಾವ ಅನುಮಾನವೂ ಇಲ್ಲ. ಹಿಂದಿನವರುಗಳಂತೆ ಅಧಿಕಾರಿಗಳು ಆಗಾಗ್ಗೆ ಅಲ್ಲದೆ ಪ್ರತಿ ಸಂತೆಗೂ ದಯಮಾಡಿಸಿದರೆ ಇನ್ನು ಇತರ ಕೊರತೆಗಳು ಸಹ ಮಾಯವಾಗುವವು. ಅಮಲ್ದಾರರು ದಯಮಾಡಿಸಿದ್ದರಿಂದ ರೈತರೆಲ್ಲಾ ಬಹಳವಾಗಿ ಕೊಂಡಾಡಿ ಸಂತೋಷಪಟ್ಟುಕೊಂಡರು.

ಅರಸೀಕೆರೆ.—ಕಾಲಸ್ಥಿತಿಯು ಮಳೆ ಬೆಳೆಗಳಿಲ್ಲದೆ ಪೈರು ಪಚ್ಚೆಗಳೆಲ್ಲಾ ಒಣಗಿ ದನಗಳಿಗೆ ಕುಡಿಯಲಿಕ್ಕೆ ನೀರೂ ಮೇವೂ ಇಲ್ಲದೆ ಕಷ್ಟ ಅತ್ಯಧಿಕವಾಗಿದೆ. ಈ ಕಾಲದಲ್ಲಿ ನಮ್ಮ ಡಿವಿಜನ್ ಸಾಹೇಬರು ೪-೫ ನೇ ತಾರೀಖು ಇಲ್ಲಿ ಬಂದು ಬಿಡಾರ ಮಾಡಿ ರೈತರ ಸ್ಥಿತಿಯನ್ನೂ ಅವರ ಪರಿವಾರಗಳನ್ನೂ ಡಿಸ್ಟ್ರಿಕ್ಟ್ ಆಫೀಸರುಗಳೊಡನೆ ಪರಾಂಬರಿಸಿದರು. ಮೋಟರ್ ಕಾರ್ ಗಾಡಿಯಲ್ಲಿ ಸುಮಾರು ಮೈಲು ವರಿಗೂ ಪರಾಂಬರಿಸಿದರು. ರೈತರೆಲ್ಲಾ ಅವರವರ ಕಷ್ಟವನ್ನು ಅರಿಕೆ ಮಾಡಿಕೊಂಡರು. ಫಲಿತಾಂಶ ಗೊತ್ತಾಗಬೇಕಾಗಿದೆ.—ಧಾನ್ಯಗಳು ಬಹು ಏರಿವೆ. ರಾಗಿ ೧೦ ಸೇರು, ಅಕ್ಕಿ ೫ ಸೇರು. ಜನಗಳ ಕಷ್ಟವೆಂತ ಹೇಳಲಾಗದು. ಬಡ ರೈತರಿಗೂ ಸಣ್ಣ ನೌಕರರಿಗೂ ಒಪ್ಪತ್ತು ಊಟವಾದರೂ ಅದೂ ಕ್ರಮವಾಗಿ ಸಿಕ್ಕುವದಿಲ್ಲ. ೧೮೭೬-೭೭ ನೇ ವರ್ಷದ ಘೋರ ಕ್ಷಾಮಕಾಲವೇ ಪ್ರಾಪ್ತಿಸಿದೆ. ಜನರ ಕಷ್ಟಕ್ಕೆ ಕೊಂಚಮಟ್ಟಿಗಾದರೂ ಸರ್ಕಾರದವರೂ ಧರ್ಮಿಷ್ಠರೂ ಸಹಾಯ ಮಾಡಬೇಕಾಗಿದೆ. ಬಡವರಿಗೆ ಅಲೋವೆನ್ಸ್ ಇನ್ನೂ ಸಿಕ್ಕಿಲ್ಲ. ಚಾತಕ ಪಕ್ಷಿಗಳಂತೆ ಕಾದಿದ್ದಾರೆ. ಪ್ರೊಕ್ಲಮೇಷನ್ ಜೂಬಿಲಿ ದಿವಸ ಸರ್ಕಾರದವರೂ ಅರಸೀಕೆರೆ ಮುನಿಸಿಪಲ್‌ದವರೂ ೩೦೦ ಮುನ್ನೂರು ಜನರಿಗೆ ಭೋಜನ ನಡಿಸಿ, ೮೦ ಮಂದಿಗೆ ಬಟ್ಟೆ ಕೊಟ್ಟರು ಮತ್ತು ಎಲ್ಲಾ ಸ್ಕೂಲ್ ವಿದ್ಯಾರ್ಥಿಗಳಿಗೆ ಆಟಗಳ ಬಹುಮಾನ ಮಿಠಾಯಿ ಮುಂತಾದ್ದು ಕೊಡಲ್ಪಟ್ಟಿತು. ಎಲ್ಲಾ ಜನರೂ ಶ್ರೀ ಎಂಪರರ್ ಚಕ್ರವರ್ತಿಯವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ ಮಾಡಿ, ಆನಂದ ಸಂಪತ್ತುಗಳನ್ನು ಪ್ರಕಟಿಸುವಂತೆ ಘಟ್ಟಿಯಾದ ಕೋಲಾಹಲದಿಂದ ಕರತಾಡನ ಮಾಡಿ ದರ್ಬಾರು ಮುಗಿಸಿದರು. ಮುಖ್ಯವಾಗಿ ಈ ಕಾರ್ಯಗಳಲ್ಲಾ ನಮ್ಮ ಅಮಲ್ದಾರ್ರು, ಸಬ್ ರಿಜಿಸ್ಟ್ರಾರು, ಡಾಕ್ಟರವರು, ಇಂಜನಿಯರ್ ಆಫೀಸರವರು, ಮೆ|| ಕೆಂ. ಚೌಡಯ್ಯನವರು, ಕೆಂಚರಾಯಶೆಟ್ಟರು, ಇತರ ಅಧಿಕಾರಿಗಳು ಮುಖ್ಯಸ್ಥರೂ ಬಹು ವಿಶ್ವತೆಯಿಂದ ನಡಿಸಿ, ತಮ್ಮಗಳ ರಾಜಭಕ್ತಿಯನ್ನು ಪ್ರಕಟಿಸಿದರು.—ಹೊಸ ಅಮಲ್ದಾರ್ ಮೆ ನಾರಾಯಣಸ್ವಾಮಿ ನಾಯಕರು ಬಂದು ಕೆಲಸದ ಛಾರ್ಜನ್ನು ಮೆ ನಾರಾಯಣರಾಯರಿಂದ ವಹಿಸಿದರು.—ಈ ಪ್ರಾಂತ್ಯ ಹುಲಿ ಅವಾಂತ್ರ ಅತ್ಯಧಿಕವಾಗಿದೆ. ಈ ಗ್ರಾಮದಲ್ಲಿ ಒಬ್ಬ ಕೊರಚರವನ ಒಳ್ಳೇ ಹಾಲು ಕೊಡುವ ಹಸುವನ್ನು ಅದು ತಿಂದುಬಿಟ್ಟಿತು. ಆಗಾಗ್ಗೆ ತಿರುಪತಿ ಗುಡ್ಡದಿಂದ ಚಿರತೆ, ಮಟ್ಟನಾಯಿಗಳು ಬಂದೇ ಬರುತ್ತವೆ. ಸಿಕಾರಿದಾರ್ರು ಬಂದು ಇವುಗಳನ್ನು ಕೊಂದರೆ ಉಪಕಾರವಾಗಿರುವದು.—ಇಲ್ಲಿನ ಕೆಲವು ವರ್ತಕರೂ ಸಂತೆ ವರ್ತಕರೂ ಬರೇ ಕಮ್ಮಿ ಮೋಸದ ಬಟ್ಟುಗಳನ್ನೂ ಸೇರುಗಳನ್ನೂ ಅತ್ಯಧಿಕವಾಗಿ ಉಪಯೋಗಿಸುತ್ತಾರೆ. ಮಂಡಿ ಸೇರಿನ ಅಳತೆ ಬಹು ದೊಡ್ಡದು. ಅಂದರೆ ಪಲ್ಲಕ್ಕೆ ೫ ಸೇರು ಜಾಸ್ತಿ ಬರುತ್ತೆ. ಇಂಥ ಸೇರುಗಳಿಂದ ಕೊಂಡುಕೊಂಡು, ಪಲ್ಲಕ್ಕೆ ೫ ಸೇರು ಕಮ್ಮಿಯಾಗುವ ಸೇರುಗಳಿಂದ ಮಾರುತ್ತಾರೆ. ಈ ದುರ್ಭಿಕ್ಷ ಕಾಲದಲ್ಲಿ ಪಾಪಪುಣ್ಯ ತಿಳಿಯದೆ ಇರುವ ಅವಿವೇಕಿಗಳಾದ ಅನೇಕ ಮೋಸಗಾರರಾದ ವಂಚಕರು ಬಡವರಿಗೆ ಅನೇಕ ರೀತಿ ನಷ್ಟಮಾಡುತ್ತಾರೆ. ಈ ಕಷ್ಟವನ್ನು ಸರ್ಕಾರದವರು ತಪ್ಪಿಸಲಾಗದೇ? ಮಾಂಸ ವಿಕ್ರಯ ಮಾಡುವಂತವರ ಮೋಸವನ್ನೂ ಕಪ್ಪು ತೂಕವನ್ನೂ, ಹೆಂಡದಂಗಡಿ ಬಳಿ ಅವಾಂತ್ರಗಳನ್ನೂ, ರಾತ್ರಿಕಾಲದ ಗಲಾಟೆಗಳನ್ನೂ ಕೇಳುವವರೇ ಇಲ್ಲ. ಅರಸೀಕೆರೆ ಹೆಂಡ ತುಂಬಾ ಅಮಲಾದದ್ದಂತೆ ಅನೇಕರು ಪಾನಮಾಡುತ್ತಾರೆ.

ದೊಡ್ಡಬಳ್ಳಾಪುರ.—ಇಲ್ಲಿ ಹಿಂದಿನ ಒಂದು ವಾರದಲ್ಲಿ ೫—೬ ಪ್ಲೇಗ್ ಮರಣಗಳಾದವು. ಇನ್ನು ಇಲ್ಲಿ ೩—೪ ಕಾಯಿಲೆಯವರು ಇದ್ದಾರೆ. ಮಳೆ ಇಲ್ಲ. ನೀರಿಗೆ ಕಷ್ಟವಾಗಿದೆ. ಕೆರೆಯು ಒಣಗುತ್ತಾ ಇದೆ. ಬಡವರಿಗೆ ಚಿಲ್ಲರೆಯಾಗಿ ರಾಗಿ ಸಿಕ್ಕುವದೇ ಕಷ್ಟವಾಗಿದೆ. ಅನ್ಯದೇಶದಲ್ಲಿ ಬೆಳೆಯುವ ಪದಾರ್ಥಗಳು ಇಲ್ಲಿ ಸಾಧಾರಣವಾಗಿ ಸಿಕ್ಕುತ್ತವೆ. ಆದರೆ ಸ್ವದೇಶದಲ್ಲಿ ಸ್ವಂತ ಊರಿನಲ್ಲಿ ಬೆಳೆಯುವ ರಾಗಿ ಸಿಕ್ಕುವದು ಕಷ್ಟವಾಗಿದೆ. ಆದ್ದರಿಂದ ಸ್ವದೇಶದ ಪದಾರ್ಥಗಳನ್ನೇ ನಂಬಿದ್ದರೆ ಸತ್ತು ಹೋಗುವದೇ ಸರಿ ಎಂದು ಜನರ ಭಾವನೆಯಾಗಿದೆ. ಹೆಚ್ಚಾಗಿ ರಾಗಿ ಇಟ್ಟಿರುವವರು ಈಗಲಾದರೂ ಮಾರಬಾರದೆ? ೧೦-೧೧ ಸೇರಿಗಿಂತ ಕಡಮೆಯಾಗಿ ಮಾರಬೇಕೆಂದು ಇರಬಹುದೇ? ೪—೫ ನೇ ತಾ. ನಲ್ಲಿ ಕಾಡನೂರಿನಲ್ಲಿ ಚನ್ನಿಗಸ್ವಾಮಿ ಉತ್ಸವವಾಯಿತು. ಗರುಡಬಾಣ ಮುಂತಾದ ಮದ್ದಿನ ಕೆಲಸಗಳನ್ನು ಮಾಡಿದ್ದರಂತೆ. ಈ ಗರುಡಬಾಣವು ಹಾರಿ ಇದರಿಂದ ಒಬ್ಬ ಕುರುಬರ ಹುಡುಗನು ಸತ್ತನು. ಒಬ್ಬ ಮುದಕಿಯು ಬದುಕುವ ಹಾಗಿಲ್ಲವಂತೆ. ಇನ್ನಿಬ್ಬರು ಹೆಂಗಸರನ್ನು ಆಸ್ಪತ್ರೆಗೆ ತಂದಿದ್ದರು. ಇವರಿಗೆ ಕಾಲಿನಲ್ಲಿ ಪೂರಾ ಘಾಯವಾಗಿದೆ. ಅಂತು ಇವರು ಬದುಕಬಹುದು, ಸಂದೇಹವಿಲ್ಲ.—ಬೇಗಟಿಕೆರೆ ಚೌಡಪ್ಪನವರ ಅತ್ತೆಯು ಸತ್ತು ಹೋದರು. ಇವರು ಒಳ್ಳೇ ಗುಣಸ್ಥರಾಗಿದ್ದರು. ಈ ಯಮ್ಮನ ಕರ್ಮಾಂತರದ ದಿನ ಅಕ್ಟೋಬರ್ ೩೧ನೇ ತಾ ನಲ್ಲಿ ದೇವಾಂಗದ ಮೆ|| ಚೌಡಪ್ಪನವರು ಬಹು ವಿಜೃಂಭಣೆಯಾಗಿ ನಡಿಸಿದರು. ಕುಲಸ್ಥರಾದ ಸುಮಾರು ೨೦೦ ಜನಕ್ಕೆ ಒಳ್ಳೇ ಭೋಜನವಾಯಿತು. ತರುವಾಯ ಊಟಮಾಡತಕ್ಕ ಎಲ್ಲಾ ಜನರಿಗೂ ಮುಖ್ಯ ಬಡವರಾದವರಿಗೆ ಸುಮಾರು ೧,೫೦೦ ಜನರಿಗೆ ಈ ಕಷ್ಟಕಾಲದಲ್ಲಿ ತೃಪ್ತಿಯಾದ ಊಟಮಾಡಿಸಿದರು. ಆ ದಿನ ಬಡಜನರು ಸಂತೋಷಪಟ್ಟುಕೊಂಡು, ಇವರ ಧರ್ಮ ಗುಣವನ್ನು ಕೊಂಡಾಡಿದರು.—ಕಳೆದ ವಾರವು ಪ್ಲೇಗಿನಿಂದ ೭-೮ ಜನರು ಸತ್ತರು. ಡೆಪ್ಯುಟಿ ಕಮಿಷನರ್ ಮೆ ಕುಮಾರಸ್ವಾಮಿ ನಾಯಕರವರು ದಯಮಾಡಿಸಿದ್ದರು. ಬಡ ಜನರು ತಮ್ಮ ಅಹವಾಲುಗಳನ್ನು ಹೇಳಿಕೊಂಡರು. ರಿಲೀಫ್ ಕಾಮಗಾರಿಯನ್ನು ಪ್ರಾರಂಭಿಸುವದಕ್ಕೆ ಏರ್ಪಾಡು ಮಾಡುತ್ತೇವೆಂದು ಅಪ್ಪಣೆ ಕೊಡಿಸಿದರಂತೆ. ಮುಂದೆ ನೋಡಬೇಕು.—ನಮ್ಮ ಅಮಲ್ದಾರರು ಬಡವರಾದವರಿಗೆ ಪ್ಲೇಗಿಗಾಗಿ ಮೋಪಿನ ಕಟ್ಟಿ ಕೊಳ್ಳುವುದಕ್ಕೆ ಕೆಲವು ಬೊಂಬು ಗಳಗಳನ್ನು ಉಚಿತವಾಗಿ ಕೊಡಿಸಿದರು. ಡಾಕ್ಟರ್ ಜಿ. ಎಸ್. ದೇವಿದ್‌ರವರು ಇಲ್ಲಿಗೆ ದಯಮಾಡಿಸಿ ೩-೪ ದಿವಸದಿಂದ ಪ್ಲೇಗ್ ಇನಾಕ್ಯುಲೇಷನ್ ಮಾಡುತ್ತಾ ಇದ್ದಾರೆ. ಜನರನ್ನು ಇನಾಕ್ಯುಲೇಷನ್ ಮಾಡಿಸಿಕೊಳ್ಳುವಂತೆ ಅಮಲ್ದಾರರು ಬಹಳವಾಗಿ ಪ್ರೇರೇಪಿಸುತ್ತಾರೆ. ಇದರಿಂದ ಮೊದಲು ಕೆಲವು ಸ್ಕೂಲ್ ಮಾಸ್ಟರುಗಳೂ ಕಚೇರಿಯ ಉದ್ಯೋಗಸ್ಥರೂ ಹಾಕಿಸಿಕೊಂಡು, ಜನರಿಗೆ ಮಾದರಿ ತೋರಿಸಿದರು. ನಾನೂ ಸಹ ಹಾಕಿಸಿಕೊಂಡೆನು. ಜ್ವರ ಬರುವದಿಲ್ಲ. ಒಂದು ದಿನ ಮಾತ್ರ ಮೈ ಬೆಳೆಯಾಗುವ ಹಾಗೆ ಇತ್ತು. ನೋವು ಸಹ ಕಮ್ಮಿ. ೨ ದಿವಸದೊಳಗೆ ಸಾಧಾರಣವಾಗಿ ಕೆಲಸ ಮಾಡುವ ಹಾಗೆ ಉಪಯೋಗಿಸಿದರೆ ಬಾಧಕವಿಲ್ಲ. ಈ ಸಾರಿ ಲೋವರ್ ಸೆಕೆಂಡರಿ ಪರೀಕ್ಷೆಯು ಇಲ್ಲಿಯೇ ನಡಿಯುವ ಹಾಗೆ ಏರ್ಪಾಡಾಗಿದೆ. ಪರಸ್ಥಳದಿಂದ ಬಹು ಮಂದಿ ವಿದ್ಯಾರ್ಥಿಗಳು ಬಂದಿದ್ದಾರೆ. ಇವರಿಗೆ ಮೆ ಕೊಂಗಾಡಿಯಪ್ಪನವರು ತಕ್ಕ ಏರ್ಪಾಡು ಮಾಡಿದ್ದಾರೆ. ವಿದ್ಯಾರ್ಥಿಗಳಿಗೆ ಲಾ ಸಾಹುಕಾರ್ ಮೆ, ಚಂದ್ರಶೇಖರಯ್ಯನವರು ಊಟಕ್ಕೆ ಅನುಕೂಲ ಮಾಡಿದ್ದಾರೆಂದು ತಿಳಿಯಬರುತ್ತೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಚೀಫ್ ಕೋರ್ಟಿನ ಜಡ್ಜ್ ಮೆ|| ಜಸ್ಟಿಸ್ ಎಚ್. ವಿ. ನಂಜುಂಡೈಯನವರು ಅಕ್ಟೋಬರ್ ತಾ. ೩೧ ರಲ್ಲಿ ರಜವನ್ನು ಉಪಯೋಗಿಸಿಕೊಂಡರು. ಆ ದಿನವೇ ಮೆ ಜಸ್ಟಿಸ್ ಎಸ್ ಎಸ್. ಸೇಟ್ಲೂರ್‌ಯವರು ಆಕ್ಟಿಂಗ್ ಜಡ್ಜಿ ಕೆಲಸದ ಛಾರ್ಜನ್ನು ವಹಿಸಿಕೊಂಡಿದ್ದಾರೆ

ಸಾಗರದ ಸಬ್ ಡಿವಿಜನ್ ಅ ಕಮಿಷನರ್ ಮೆ ನಗರ್ ಸುಬ್ಬರಾಯರಿಗೆ ಕೊಟ್ಟಿದ್ದ ಹದಿನೈದು ದಿನಗಳ ಪ್ರಿವಿಲೇಜ್ ರಜವನ್ನು ಅವರು ಉಪಯೋಗಿಸಿಕೊಳ್ಳದಿಲ್ಲವಾದ್ದರಿಂದ ಅದನ್ನು ರದ್ದು ಮಾಡಿದೆ.

ಆಕ್ಟಿಂಗ್ ಅಮಲ್ದಾರ್ ಮೆ. ಸಿ. ನಾರಾಯಣರಾಯರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೂ ಏಳು ದಿನಗಳಿಗೆ ಜಾಸ್ತಿ ಮಾಡಿದೆ

ಸಾಗರದ ಮುನ್‌ಸಿಫ್ ಮೆ ಪಿ. ಮಹದೇವಯ್ಯನವರಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿದೆ.

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗಾವರ್ಗಿ ಹುಕುಂ ಮಾಡಿದೆ — ಮೆ ಪೀರ್ ಅಬ್ದುಲ್ಲಾಯವರು ಶ್ರೀರಂಗಪಟ್ಟಣದಿಂದ ನಾಗಮಂಗಲಕ್ಕೆ; ಮೆ|| ಎಚ್. ಎಸ್. ವೆಂಕಟಾಚಾರ್ರು—ನಾಗಮಂಗಲದಿಂದ ಶ್ರೀರಂಗಪಟ್ಟಣಕ್ಕೆ.

ಮೆ ಎಚ್. ಎಸ್. ವೆಂಕಟಾಚಾರ್ರು ಬರುವ ತನಕ ಫ್ರೆಂಚ್‌ರಾಕ್ಸ್ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಸಿ. ಕಾಶೀನಾಥರಾಯರು ಶ್ರೀರಂಗಪಟ್ಟಣದ ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಅ ಕಮಿಷನರ್ ಮೆ ಎ. ಮೃತ್ಯುಂಜಯ ಐಯರವರಿಗೆ ಕ್ರಿಮಿನಲ್ ಮೊಕದ್ದಮೆಗಳನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸುವ ಅಧಿಕಾರ ಕೊಡಲ್ಪಟ್ಟಿದೆ.

ಟಿಂಪರು ಸಬ್ ಅ, ಸರ್ಜನ್ ಮೆ, ಎಚ್. ಎಸ್ ನಂಜುಂಡೈಯನವರನ್ನು ಆಗಸ್ಟ್ ತಾ. ೧೫ ರಿಂದ ಪ್ಲೇಗ್ ಇನಾಕ್ಯುಲೇಷನ್ ಡ್ಯೂಟಿಗೆ ಕಳುಹಿಸಲಾಗಿದೆ.

ಪ್ರೊ|| ಅ|| ಕಮಿಷನರ್ ಮೆ|| ಎಸ್. ರಾಮಣ್ಣನವರು ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಡೆಪ್ಯುಟಿ ಕಮಿಷನರ್ ಕೈಕೆಳಗೆ ಕೆಲಸ ಮಾಡತಕ್ಕದ್ದು.

ಡಿಸೆಂಬರ್ ತಾ. ೧೪ ನೇ ಸೋಮವಾರ ಮಧ್ಯಾಹ್ನ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯ ಮೀಟಿಂಗ್ ನಡೆಯುವುದು.

ಬೆಂಗಳೂರು ತಾಲ್ಲೂಕ್ ಅಮಲ್ದಾರ್ ಮೆ|| ಎ. ಹೇಸ್‌ಯವರಿಗೆ ನವೆಂಬರ್ ತಾ. ೬ ರಿಂದ ಹದಿನಾಲ್ಕು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ರೆವಿನ್ಯೂ ಪ್ರೊಬೇಷನರ್ ಟಿ. ಹನುಮಂತರಾಯರು ಬೆಂಗಳೂರು ತಾಲ್ಲೂಕಿನ ಅಮಲ್ದಾರಿ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮೆ|| ಬಿ. ರಾಮಣ್ಣನವರಿಗೆ ನವಂಬರ್ ತಾ. ೭ ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಕಡೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮೆ|| ಎ. ಕೆ., ಸೈಯದ್ ಶಾಹ್ ಪೀರಾಜ್ ಯವರನ್ನು ಕೋಲಾರಕ್ಕೆ ವರ್ಗಮಾಡಿದೆ.

ಮತ್ತೊಂದು ಹುಕುಂ ಕೊಡಲ್ಪಡುವತನಕ ಹಾಸನದ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮೆ|| ಎಂ. ರಂಗರಾಯರು ತಮ್ಮ ಕೆಲಸಗಳೊಂದಿಗೆ ಕಡೂರ್ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಕೆಲಸದ ಛಾರ್ಜನ್ನೂ ವಹಿಸತಕ್ಕದ್ದು.

ಬೆಂಗಳೂರು ಪೋಲೀಸ್ ಸೂಪರಿಂಟೆಂಡೆಂಟ್ ಮೆ|| ಎಲ್. ಕೃಷ್ಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೬ ವಾರಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮುಂದೆ ಹೇಳುವ ಅಮಲ್ದಾರ್ರುಗಳನ್ನು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿದೆ:—ದಾವಣಗೆರೆ ತಾಲ್ಲೂಕ್ ಅಮಲ್ದಾರ್ ಮೆ|| ಟಿ. ವೆಂಕಟರಾಮೈಯನವರು, ನಂಜನಗೂಡು ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ|| ಡಿ. ಧರ್ಮರಾಯರು, ಮಂಡ್ಯ ತಾಲ್ಲೂಕ್ ಅಮಲ್ದಾರ್ ಮೆ|| ಜಿ. ನಾರಾಯಣರಾಯರು.

ಮುಂದೆ ಹೇಳುವ ಅಮಲ್ದಾರ್ರ ವರ್ಗಾವರ್ಗೀ ಹುಕುಂ ಮಾಡಿದೆ:—(೧) ಮೆ|| ಮಹಮುದ್ ಅಬ್ದುಲ್ಲಾ ಷರೀಫ್‌ಯವರನ್ನು ತಿಪ್ಟೂರಿನಿಂದ ಹೊಸದುರ್ಗಕ್ಕೆ (ನವಂಬರ್ ತಾ. ೧೫ ರಿಂದ ಮೆ|| ಎಂ ಎಸ್ ಪುಟ್ಟಣ್ಣನವರು ಪೆನ್ಷನ್ ಪಡೆದು ಕೆಲಸಬಿಡುವರು); (೨) ಮೆ|| ಸಿ. ಮಾಚೈಯನವರು ರಜದಿಂದ ವಾಪಸು ಬಂದ ಮೇಲೆ ಚಿತ್ರದುರ್ಗದಿಂದ ತಿಪ್ಟೂರಿಗೆ.

ಚಿಕ್ಕಬಳ್ಳಾಪುರದ ಅ|| ಕಮಿಷನರ್ ಮೆ|| ಜಿ ಅರವಾಮುದು ಐಯ್ಯಂಗಾರ್ರಿಗೆ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ವಹಿಸಲ್ಪಟ್ಟಿವೆ.

ನಂಜನಗೂಡು ಸೀನಿಯರ್ ಅ|| ಕಮಿಷನರ್ ಮೆ|| ಎಸ್ ವೈದ್ಯನಾಥ ಐಯರವರಿಗೆ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಅಧಿಕಾರಗಳೂ, ೨ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರ ತೀರ್ಮಾನಗಳ ಮೇಲೆ ಬರುವ ಅಪೀಲುಗಳನ್ನು ಹಿಡಿದು ಇತ್ಯರ್ಥಮಾಡುವ ಅಧಿಕಾರವೂ ಕೊಡಲ್ಪಟ್ಟಿವೆ.

ಬೆಂಗಳೂರು ಸೀನಿಯರ್ ಅ|| ಕಮಿಷನರ್ ಮೆ|| ಸಿ ರಾಮರಾಯರಿಗೂ, ಸಾಗರದ ಅ|| ಕಮಿಷನರ್ ಮೆ|| ನಗರ್ ಸುಬ್ಬರಾಯರಿಗೂ ೨, ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರ ತೀರ್ಮಾನಗಳ ಮೇಲೆ ಬರುವ ಅಪೀಲುಗಳನ್ನು ಹಿಡಿದು ಇತ್ಯರ್ಥಮಾಡುವ ಅಧಿಕಾರ ಕೊಡಲ್ಪಟ್ಟಿದೆ.

ಸ್ಯಾನಿಟರಿ ಡಿವಿಜನ್ ಸಬ್ ಅ|| ಇಂಜನಿಯರ್ ಮೆ|| ಎಸ್. ಜಿ. ಕೃಷ್ಣಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಚೀನಾ ಚಕ್ರಾಧಿಪತ್ಯದ ಮಹಾಮಾತೃಶ್ರೀಯವರ ಮತ್ತು ಚಕ್ರವರ್ತಿಯವರ ಮರಣವು.

ತಂತೀ ವರ್ತಮಾನಗಳು.

ನವಂಬರ್ ತಾ. ೧೩ನೇ ಶುಕ್ರವಾರ.—ಚೀನಾ ಚಕ್ರಾಧಿಪತ್ಯದ ಮಹಾಮಾತೃಶ್ರೀಯವರು ಗುಣಹೊಂದುತ್ತಿದ್ದಾರೆ. ಆದರೆ ಬಹುಕಾಲದಿಂದ ಕಾಯಿಲೆ ಅನುಭವಿಸುತ್ತಿರುವ ಚಕ್ರವರ್ತಿಯವರ ದೇಹಸ್ಥಿತಿಯು ತುಂಬಾ ಗಾಬರಿಯನ್ನುಂಟು ಮಾಡುತ್ತಿರುವುದು.

ಹೊಸ ವರ್ತಮಾನ—ಚೀನಾ ಚಕ್ರವರ್ತಿಯವರಿಗೆ ಮರಣ ಸಂಕಟ ಪ್ರಾಪ್ತವಾಗಿದೆ. ಅವರನ್ನು ಮರಣದ ಕೊಠಡಿಗೆ ಸಾಗಿಸಿದ್ದಾರೆ. ಅವರು ಕಾಲವಾದರೆಂತಲೂ, ಪ್ರಿನ್ಸ್ ಚುನ್ ರವರಿಗೆ ರೀಜೆಂಟ್ ಪದವಿ ದೊರಕಿತೆಂದೂ, ಇವರ ಕುಮಾರರಾದ ಪೂಸಿಏ ಯುವರಿಗೆ ರಾಜ್ಯಪದವಿಯು ನೇಮಕವಾಯಿತೆಂದೂ ಇಸ್ತಿಹಾರು ಪ್ರಕಟವಾದಂತೆ ವರ್ತಮಾನ ಹುಟ್ಟಿದೆ.

ಗ್ರಾಂಡ್ ಕೌನ್ಸಿಲ್ ಎಂಬ ರಾಜ್ಯಭಾರದ ಮುಖ್ಯ ಸಭೆಯು ಅರಮನೆಯಲ್ಲಿ ಕೂಡಿತು. ಅಲ್ಲಿ ಹಾಜರಾಗಿದ್ದ ಮಹಾಮಾತೃಶ್ರೀಯವರು ಸ್ಮರಣೆತಪ್ಪಿ ಬಿದ್ದುಕೊಂಡರು.

ನವಂಬರ್ ತಾ. ೧೪ನೇ ಶನಿವಾರ.—ಚೀನಾ ಚಕ್ರವರ್ತಿಯವರು ಸತ್ತುಹೋದರೆಂತಲೂ, ಮಹಾಮಾತೃಶ್ರೀಯವರು ಮರಣ ಸಂಕಟಪಡುತ್ತಿದ್ದಾರೆಂತಲೂ ರಾಜಧಾನಿಯಾದ ಪೀಕಿಂಗ್ ನಗರದಿಂದ ತಂತೀ ವರ್ತಮಾನ ಬಂದಿದೆ.

ನವಂಬರ್ ತಾ. ೧೫ನೇ ಭಾನುವಾರ.—ಮಹಾಮಾತೃಶ್ರೀಯವರು ಕಾಲವಾದರೆಂದು ಪೀಕಿಂಗಿನ ಒಂದು ತಂತೀ ವರ್ತಮಾನವು ತಿಳಿಸುವುದು.

ನವಂಬರ್ ತಾ. ೧೬ನೇ ಸೋಮವಾರ.—ಪೀಕಿಂಗ್ ರಾಜಧಾನಿಯಿಂದ ತಿಳಿದುಬಂದಿರುವ ಸುದ್ದಿ ಏನೆಂದರೆ—ಪ್ರಿನ್ಸ್ ಚುನ್‌ರವರ ಎರಡು ವರುಷದ ಕುಮಾರನಿಗೆ ಚಕ್ರವರ್ತಿ ಪದವಿಯು ನೇಮಕವಾಯಿತು. ಪ್ರಿನ್ಸ್ ಚುನ್‌ರವರು ರೀಜಂಟರಾಗಿರುತ್ತಾರೆ. ಈ ಅರ್ಥಕ್ಕೆ ಇಸ್ತಿಹಾರ್‌ನಾಮೆಯು ಪ್ರಕಟಿಸಲ್ಪಟ್ಟಿದೆ. ರಾಜ್ಯಭಾರ ವಿಚಾರದಲ್ಲಿ ಯಾವ ವಿಧವಾದ ಗಲಭೆಯೂ ಹುಟ್ಟುವಂತೆ ಕಾಣುವುದಿಲ್ಲ. ಸಕಲರೂ ಮೂರು ವರುಷಗಳ ತನಕ ವ್ಯಸನಪಡತಕ್ಕದ್ದೆಂದು ಆಜ್ಞೆಯಾಗಿದೆ.

ಚಕ್ರವರ್ತಿಯವರೂ ಮಹಾಮಾತೃಶ್ರೀಯವರೂ ಕಾಲವಾದದರಿಂದ ಸುಮಾರು ೩,೦೦೦ ವರುಷಗಳಿಂದಲೂ ಆಚರಣೆಯಲ್ಲಿರುವಂಥಾ ಸಂಸ್ಕಾರ ಕಾರ್ಯಗಳು ಯಥಾವಿಧಿಯಾಗಿ ನಡಿಸಲ್ಪಟ್ಟವು. ಇಬ್ಬರೂ ಒಂಟೊಂಟಿಯಾಗಿ ಮೋಕ್ಷಪಟ್ಟರು. ಸೇವಾವೃತ್ತಿಗೆ ಯಾರೂ ಇರಲಿಲ್ಲ. ಅಂದರೆ, ಅನೇಕರು ಇದ್ದರೂ ಅವರೆಲ್ಲಾ ದೂರದಲ್ಲಿ ಸುತ್ತುಕಟ್ಟಿ ನಿಂತಿದ್ದರಲ್ಲದೆ ಯಾರೂ ಅವರ ಪವಿತ್ರವಾದ ಶರೀರಗಳನ್ನು ಮುಟ್ಟಕೂಡದಾಗಿತ್ತು.

ನರಗಳ ಅಪಾರವಾದ ದುರ್ಬಲವನ್ನು ಪೆರೂನಾವು ಅದ್ಭುತವಾದ ರೀತಿಯಲ್ಲಿ ನಿವಾರಿಸಿ [illegible]

ಶರೀರಗತವಾದ ಶೈತ್ಯನಿವಾರಣೆಗೆ [illegible] ಅವಶ್ಯವಾಗಿದೆ.

ನರಗಳ ದುರ್ಬಲವನ್ನು ನಿವಾರಿಸುವುದರಲ್ಲಿ ಇದು ವಿಶೇಷ ಪ್ರಖ್ಯಾತವಾಗಿದೆ

ಕಷ್ಟವಾದ ಕಷ್ಟ ಕೆಲಸದಿಂದಲೂ, ಮನಸ್ಸನ್ನು ವಿಶೇಷವಾಗಿ ಕಷ್ಟಪಡಿಸುವುದರಿಂದಲೂ, ಬೇಸಗೆಯ ಅಪಾರವಾದ ಉಷ್ಣದ ಸೆಳೆಯ ವಲಸೆ [illegible] ದ ಧರ್ಮವು ನಿಶ್ಶಕ್ತಿಯಾಗಿದ್ದರೆ ಪೆರೂನಾವು ಇದನ್ನು ಸಂಪೂರ್ಣವಾಗಿ ನಿವಾರಣೆ ಮಾಡಿ, ಶಕ್ತಿಯನ್ನು ಕೊಟ್ಟು, ಪುಷ್ಟಿಯನ್ನುಂಟುಮಾಡುತ್ತದೆ

ಬೇಸಗೆಯು ದೀರ್ಘಕಾಲವಿರುವಂಥಾ ರಾಜ್ಯಗಳಲ್ಲಿ ಜನರು ದಗೆಯು [illegible] ವನ್ನು ಸುಮಾರಾಗಿ ಸಹಿಸಿಕೊಳ್ಳುವವರಾಗಿದ್ದಾರೆಂದು ಹೇಳಬಹುದು ಆದರೆ ಅಪಾರವಾದ ಧಗೆಯೂ ಸಹಿಸಲಶಕ್ಯವಾದ ಚಳಿಯೂ ಒಂದರ ಹಿಂದೆ [illegible] ಪ್ರಾಪ್ತವಾಗತಕ್ಕಂಥಾ ದೇಶಗಳಲ್ಲಿ [illegible] ಉಷ್ಣವನ್ನು ಸಹಿಸಿಕೊಳ್ಳಲು [illegible] ಯುಕ್ತವಾಗಿರುವುದಿಲ್ಲ [illegible] ರಿಂದಲೇ [illegible] ಹೋಗುತ್ತಾರೆ

[illegible] ರುವುದು [illegible] ಉಷ್ಣಕಾಲದಲ್ಲಿ ಪ್ರಾಪ್ತವಾಗುವ ಅಲ್ಪರೋಗಗಳು [illegible]

[illegible] ವೃತ್ತಾಂತ [illegible] ರದ ಮುಖ್ಯ ಭಾಗಗಳನ್ನು [illegible]

ಅಜೀರ್ಣದಿಂದ ದುರ್ಬಲವು

[illegible] ಇದರಿಂದ [illegible] ಕಡಮೆಯಾಗುವುದು ದುರ್ಬಲ [illegible] ಮಾಂಸಖಂಡಗಳು ಬಲಹೀನತೆ ನರಗಳ ದುರ್ಬಲ ಇವೆಲ್ಲಾ ಕ್ರಮಕ್ರಮವಾಗಿ ಪ್ರಾಪ್ತವಾಗುವವು ಇಂಥಾ ಸಮಯದಲ್ಲಿ ಜೀರ್ಣಶಕ್ತಿಯನ್ನು ಪಟುವಾಗಿ ಮಾಡಿಕೊಳ್ಳುವುದಕ್ಕೆ ಪರಿಹಾರವನ್ನು ನೋಡಿ ಮಾಡಿಕೊಳ್ಳಬೇಕು ಪೆರೂನಾ ಸೇವನೆಯು [illegible] ಕೋಶಗಳನ್ನು ಕ್ರಮಪಡಿಸುತ್ತದೆ [illegible] ಇದಕ್ಕೆ ಅಂಥಾ ಶಕ್ತಿಯುಂಟೆಂದು ಸಾವಿರಾರು [illegible] ಗಳಲ್ಲಿ ದೃಷ್ಟಾಂತಕ್ಕೆ ಬಂದಿದೆ [illegible] ಪೆರೂನಾವು ಅದ್ಭುತವಾಗಿ ಆರೋಗ್ಯವನ್ನು ಕೊಟ್ಟಿದೆ

ಆದರೆ [illegible] ವಲ್ಲಿ [illegible] ಅಂಗಗಳ [illegible]

ಪೆರೂನಾವಿನ ಉತ್ತಮೋತ್ತಮವಾದ ಗುಣ

[illegible] ಅಂಗಗಳೆಲ್ಲಾ ತಮ ತಮ ಕಾರ್ಯವನ್ನು ಕ್ರಮವಾಗಿ ನಡೆಸಲು [illegible] ಪೆರೂನಾ [illegible] ಅನುಭವಕ್ಕೆ ಬರುತ್ತದೆ

[illegible] ವಿಶೇಷ ಪ್ರಯೋಜನವಾಗಿದೆ ಎಂದು [illegible] ಕಾಗದಗಳನ್ನು ಬರೆದಿರುತ್ತಾರೆ— ಅವುಗಳನ್ನು ಓದಿದಾಗ [illegible] ಔಷಧದಿಂದ ಎಷ್ಟು ಪ್ರಯೋಜನವೂ ಸಂತೋಷವೂ ಉಂಟಾಯಿತೆಂದು [illegible] ಆರೋಗ್ಯವನ್ನು ಕೊಡುವುದರಲ್ಲೂ ಪೆರೂನಾವು ಎಷ್ಟು ಚನ್ನಾಗಿ [illegible] ಅಂಗಾಂಗಗಳನ್ನು [illegible] ತನ್ನ ಕೆಲಸವನ್ನು [illegible] ದೋ [illegible]

ಮಿ॥ ಪಿ. ಬ್ರಾರ್ಕ್, [illegible] ಜೀಟಿ, ಲಿಸ್ವೆಲೊ, ಕ್ವಿಬೆಕ್

[illegible]

[illegible] ಕೆಲಸ ಮಾಡಲು [illegible]

[illegible]

ಮೂತ್ರಕೋಶವು ಪಿತ್ತಕೋಶವೂ	ಊಟಮಾಡಿದ ಮೇಲೆ ಬಾಧೆಯಾಗುವವರು
[illegible] ಪಿತ್ತಕೋಶ [illegible] ನನ್ನ ಕೆಲಸವನ್ನು [illegible] ಬಿಟ್ಟೆನು. ಆ [illegible] ಪೆರೂನಾ [illegible]	[illegible] ನಾನು [illegible] ಊಟವಾದ [illegible] ಸಂಕಟವನ್ನು [illegible]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

[illegible] ರಿಂದ 30—10—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	*	*	*	*
ಮೈಸೂರು	1	1	0	0
ಬೆಂಗಳೂರು ಡಿಸ್ಟ್ರಿಕ್ಟು	30	21	0	0
ಮೈಸೂರು "	56	46	0	0
ಕೋಲಾರ್ "	0	0	0	0
ಕೋಲಾರ್ ಚಿನ್ನದ ಗಣಿಗಳು	1	0	0	0
ತುಮಕೂರು ಡಿಸ್ಟ್ರಿಕ್ಟು	24	18	[illegible]	1
ಹಾಸನ	7	9	0	0
ಚಿತ್ರದುರ್ಗ "	0	0	8	4
ಕಡೂರ್ "	11	13	0	0
ಶಿವಮೊಗ್ಗ "	*	*	*	*
* ಸಂಖ್ಯೆ ಕಾಣೆನಿಲ್ಲ ಜುಮ್ಲಾ	[illegible]	[illegible]	13	5

[illegible] ಕೀಲಕನಾಮ ಸಂವತ್ಸರದ ಕಾರ್ತಿಕ ಬಹುಳ [illegible] ಗುರುವಾರದಿಂದ [illegible] ಬಿದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯ ರಿಂದ ನವಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಿಥಿ ವೃದ್ಧಿ ಕ್ಷಯ
19	ಗುರು	ಏಕಾದಶಿ	17 30	[illegible]	[illegible]	[illegible]
[illegible]	ಶುಕ್ರ	ದ್ವಾದಶಿ	[illegible]	[illegible]	17 16	[illegible]
[illegible]	ಶನಿ	ತ್ರಯೋದಶಿ	[illegible]	[illegible]	[illegible]	[illegible]
[illegible]	ರವಿ	ಚತುರ್ದಶಿ	[illegible]	[illegible]	[illegible] 12	8
[illegible]	ಚಂದ್ರ	ಅಮಾವಾಸ್ಯೆ	[illegible]	[illegible]	[illegible]	[illegible]
[illegible]	ಕುಜ	[illegible]	[illegible]	[illegible]	[illegible] 18	10
[illegible]	ಬುಧ	ಬಿದಿಗೆ	[illegible]	[illegible]	[illegible]	11

* [illegible]

ಪೇಟೆ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಕಡಿಮೆ ಅಕ್ಕಿ ಪಲ್ಲಾ ೧ಕ್ಕೆ	ರೂ	[illegible]	[illegible]
ಕಂಬಳಿ ಅಕ್ಕಿ ಆವಲ್		[illegible]	[illegible]
[illegible]		[illegible]	[illegible]
ಬಾಸ್ಮತಿ ಅಕ್ಕಿ		[illegible]	[illegible]
[illegible] ಆವಲ್		[illegible]	[illegible]
[illegible]		[illegible]	[illegible]
ತೊಗರಿ ಬೇಳೆ ಪಲ್ಲಾ ೧ಕ್ಕೆ		[illegible]	[illegible]
[illegible]		[illegible]	[illegible]
[illegible] ರಾಗಿ ಪಲ್ಲಾ ೧ಕ್ಕೆ		[illegible]	[illegible]
[illegible]		[illegible]	[illegible]
ಜೋಳ		[illegible]	[illegible]
ಹುಲಸಂದೆ ಪಲ್ಲಾ ೧ಕ್ಕೆ		[illegible]	[illegible]
ಬಿಳೀ ಅವರೆ		[illegible]	[illegible]
ಹೆಸರು		[illegible]	[illegible]
ಉದ್ದು		[illegible]	[illegible]
[illegible]		[illegible]	[illegible]
[illegible] ೧ಕ್ಕೆ		[illegible]	[illegible]
ಹುರುಳಿ		[illegible]	[illegible]
ಹರಳು [illegible]		[illegible]	[illegible]
[illegible] ಕಾಯಿ ಮಣ ೧ಕ್ಕೆ		[illegible]	[illegible]
ಮೆಣಸಿನಕಾಯಿ		[illegible]	[illegible]
[illegible]		[illegible]	[illegible]
ಬೆಲ್ಲ [illegible] ಅಚ್ಚು		[illegible]	[illegible]
ಒಳ್ಳೆಣ್ಣೆ ಮಣ ೧ಕ್ಕೆ		[illegible]	[illegible]
ಹರಳೆಣ್ಣೆ		[illegible]	[illegible]
ಕೊತ್ತುಂಬರಿ ಪಲ್ಲಾ ೧ಕ್ಕೆ		[illegible]	[illegible]
ಉಪ್ಪು		[illegible]	[illegible]
ಹುಣಸೇ ಹಣ್ಣು		[illegible]	[illegible]
[illegible]		[illegible]	[illegible]
ತುಪ್ಪ ಮಣ ೧ಕ್ಕೆ		[illegible]	[illegible]
[illegible] ೧ಕ್ಕೆ		[illegible]	[illegible]
ತೆಂಗಿನಕಾಯಿ ೧೦೦ ಕ್ಕೆ		[illegible]	[illegible]
[illegible] ಕಾಯಿ ಮಣ ೧ಕ್ಕೆ		[illegible]	[illegible]
[illegible] ಕಾಯಿ ಮಣ ೧ಕ್ಕೆ		[illegible]	[illegible]
[illegible]		[illegible]	[illegible]
[illegible]		[illegible]	[illegible]
[illegible] ೧ಕ್ಕೆ		[illegible]	[illegible]
[illegible] ೧೦೦ ಕ್ಕೆ		[illegible]	[illegible]

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯುತಕ್ಕವರು ಕನ್ನಡದಲ್ಲಿ ಬರೆದರೆ [illegible], ಇಂಗ್ಲೀಷು ದಮಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ [illegible]

ವಿಳಾಸ—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ [illegible] ಒಂದೇ ಒಂದು ಸ್ಥಳವ್ಯವಹಾರ —
ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOOK AND SONS, BANGALORE, SOUTH INDIA

Printed and Published by [illegible] Thomson [illegible] Proprietor and Manager Wesley Mission Press Mysore 19/11 1908

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೨ | ಮೈಸೂರು—ಸನ್ ೧೯೦೮ ನೇ ಇಸವಿ ನವಂಬರ್ ತಾರೀಖು ೨೬ ನೇ ಗುರುವಾರ. | ಸಂಚಿಕೆ ೨೬

ಪಾಳ್ಯದ ವೆಂಕಟಾಚಾಲ ಪಂಡಿತರ ಸಿದ್ಧೌಷಧಗಳು

18 41

೧ ಲೋಕಾಪಕಾರದ ಕಸ್ತೂರೀ ಮಾತ್ರೆ—ಈ ಮಾತ್ರೆಗಳನ್ನು ಚಿನ್ನದ ಭಸ್ಮ, ಬೆಳ್ಳಿಯ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆನೋವು, ಸಂದುಗಳ ನೋವು, ಮೈ ಕೈ ಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, [illegible] ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ನಿಃಸಂದೇಹವಾಗಿ ಗುಣಪಡಿಸುತ್ತದೆ

[illegible] ಅಥವಾ ಹೀಗೆ ಉಪಯೋಗಿಸುತ್ತ ಬಂದರೆ ಬಹು ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, [illegible] ಕೊಡದೆ, [illegible] ಬಲವನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಬುದ್ಧಿ ಶಕ್ತಿ ವೃದ್ಧಿಪಡಿಸು[illegible] ಮಕ್ಕಳ [illegible] ಹುಟ್ಟಿಸ್ವರ, ಕೃಶತ್ವಗಳನ್ನು ಎಷ್ಟು ಬೇಗನೆ ಗುಣಪಡಿಸುತ್ತದೆ

ಇವನ್ನು ಸೇವಿಸುತ್ತಿರುವವರು ನಿಃಶಂಕರಾಗಿಯೂ [illegible] ಗುಣವಾಗುವದಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನವೂ ವಿಧವೂ ಸಂಗಡಲೇ ಇರುತ್ತದೆ

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೩ ಆಣೆ

ವಿಳಾಸ—ಪಾಳ್ಯದ ವೆಂಕಟಾಚಾಲ ಪಂಡಿತ, ಎಸ್ ಎಸ್ ಆರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಜ್ವರಹರಿ 64 17

ಇದು ಸಾಧಾರಣ ಜ್ವರ, ಮಲೇರಿಯ ಜ್ವರ, [illegible] ಜ್ವರ, ಶೀತ ಜ್ವರ, ವಾತಜ್ವರ [illegible] ಎಲ್ಲ ಬಗೆಯ ಜ್ವರಗಳನ್ನೂ [illegible] ವಾಸಿಮಾಡುವದು

[illegible]

ಕ್ರಯ—[illegible] ವರೆ ಪೋಸ್ಟೇಜು ಮತ್ತು ಬಟವಾಡೆ ಖರ್ಚು ಬೇರೆ ಸೇರುವದು

[illegible]

[illegible]

ಈ ಔಷಧವು [illegible] ಕಾಯಿಲೆ, [illegible] ಮುಂತಾದ ವ್ಯಾಧಿಗಳನ್ನು ಬೇಗ ಗುಣಪಡಿಸುತ್ತದೆ. ಕ್ರಯದ ದರವು [illegible]

[illegible] ಆರೋಗ್ಯವನ್ನು [illegible] ಅಜೀರ್ಣ, [illegible] ರೋಗಿಗಳಿಗೆ ಕೊಟ್ಟರೆ ಅವರ ರೋಗವು ಗುಣವಾಗುತ್ತಲಿದೆ [illegible] ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, [illegible] ಸಾಹುಕಾರರಲ್ಲೂ, ವಿಧವಿಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ [illegible] ಕೆಳಗಿನ ವಿಳಾಸದಲ್ಲಿ [illegible] —

[illegible] ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

AMRUTANJAN DEPOT, 16 OAK-LANE, BOMBAY. [17-40]

ಅಮೃತಾಂಜನ ಡಿಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯ ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ಅಟಲುಗಟ್ಟುನೋವು, ಎದೆನೋವು, ಗಾಯ, ಜಬವು, ಮೂಲವ್ಯಾಧಿ, ಇವೇ ಮೊದಲಾದ ಯಾವ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತಿಳಿಯಲು ಯೋಗ್ಯವಾದ ಸಂಗತಿಯಾಗಿರುತ್ತದೆ. ಇದು ಚರ್ಮದ ಮೂಲಕ ಮಾರ್ಗವನ್ನು ಪ್ರವೇಶಿಸಿ, ಕೊಳಕು ಪದಾರ್ಥಗಳಿಂದ ಹುಟ್ಟಿದ ನಾನಾ ತರದ ವೇದನೆಗಳನ್ನು ನಾಶಪಡಿಸುತ್ತದೆ. ಬಾಟ್ಲಿ ಒಂದರ ಕಿಮ್ಮತ್ತು ೦—೮—೦ ಪೋಸ್ಟು ಖರ್ಚು ೦—೪—೦ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಕಪ್ ಇನಾಮು. ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ, ಕೆಮ್ಮಿಗೂ, ಉಪಯೋಗಿಸಿದಲ್ಲಿ ಇದು ಅನುಕೂಲವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ ಕಜ್ಜಿ ನಾಶವಾಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦—೬—೦ ವಿ ಪಿ ಖರ್ಚು ೦—೩—೦

ದಂತಮಂಜನ—ಡಬ್ಬಿ ೨ ಆಣೆ ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಬಾಯಿಯ ವಾಸನೆಯನ್ನು ಪೂರ್ಣವಾಗಿ ತೆಗೆಯುತ್ತದೆ, ಹಲ್ಲುಗಳು ಸ್ವಚ್ಛವಾಗುತ್ತವೆ, ಹಲ್ಲುಗಳು ಬಿಳ್ಳಗಾಗುತ್ತವೆ

ಕಜ್ಜಿ ಮುಲಾಮು ಡಬ್ಬಿ ೧ಕ್ಕೆ ಕಿಮ್ಮತ್ತು ೩ ಆಣೆ

ಕೇಶವರ್ಧನಿ—ಚಹೋ ಪರಿಮಳ ಉಳ್ಳದ್ದು

ಕೇಶವರ್ಧನಿ—ಮನಸ್ಸಿಗೆ ಆನಂದ ಕೊಡುವದು ಕೇಶವರ್ಧನಿ ಕೂದಲನ್ನು ನುಣುವಾಗಿ ಮಾಡುವದು ಬಾಟ್ಲಿ ಒಂದರ ಕಿಮ್ಮತ್ತು ರೂ ೧—೦—೦

ವಜ್ರಗುಟಿಕ—ಧಾತುಪುಷ್ಟಿ, ರಕ್ತಶುದ್ಧಿ	೧—೦—೦
ಕುಸುಮಾಂಗುಟಿಕ—ಹೆಂಗಸರ ಹೊಟ್ಟೆನೋವಿಗೆ	೧—೦—೦
ಸುಂದರೀ ತೈಲ—ಮೋರೆಯ ಮುದ ಡಾಗಿಗೆ	೦—೩—೦
ತಾಂಬೂಲ ಗುಟಿಕ ತಾಂಬೂಲ ಸೊಗಸು ವೃದ್ಧಿಸಲಿಕ್ಕೆ	೦—೮—೦
ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಚೇಳುಕಡಿತದ ಮದ್ದು ಚೇಳುಕಡಿತಕ್ಕೆ	೦—೮—೦
ಜುಲಾಬು ಮಾತ್ರೆ—ಜುಲಾಬಿಗೆ	೦—೮—೦

ಈ ಕಂಪನಿಯವರು ಬೇರೆ ಬೇರೆ ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕು

ವಿಳಾಸ—ವಿಲಿಯಂ ಮತ್ತು ಕಂಪನಿ ೧೬ ಓಕ್‌ಲೇನು, ಫೋರ್ಟು ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ," ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2 48

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿತೋ ಅದು? [illegible] ಹಾಸನವೆಂದು ತಿಳಿಯಿರಿ

ಈಗ [illegible] ಕಡೆಗಳಲ್ಲಿ ಮಾರಾಟವಾಗುತ್ತಿರುವ ಟೋಪಿಗಳ ದಾರವೆಲ್ಲಾ [illegible] ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ [illegible] ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ [illegible] ಟೋಪಿಗಳನ್ನು ಬಿಡ್ಡಾಗಿ ನಾವೇ [illegible] ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದ ಕೆಂಪು, ಕಪ್ಪು, ಬಿಳಿ [illegible] ಬಣ್ಣಗಳ ಟೋಪಿಗಳು ೧ ರೂ ೮ ಆ

೧ ರೂ ೬ ಆ ೧ ರೂ ೪ ಆ

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ ೬ ಆ , ೨ ರೂ

ಜರಿಯ ಟೋಪಿಗಳು ೧ ರೂ ೧೨ ಆ ೧ ರೂ ೮ ಆ , ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೬ ಆ , ೧ ರೂ ೬ ಆ ,

ಹುಡುಗರ ಟೋಪಿ, ಸೂರ್ಜ್ ಮೇಜೋಡು, ಅರ್ಧ ಮೇಜೋಡು ಕಚ್ಚಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಿಮ್ಮನ್ನು ಕೇಳುವ ಕ್ಷಣದಲ್ಲಿ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ—

ಮ್ಯಾನೇಜರ್, ಹಾಸನದ ಟೋಪಿ ಕಾರಖಾನೆ, ಹಾಸನ

ಲಾ ಪ್ರಕಟನೆಗಳು

ವ್ಯವಹಾರನಿರ್ಣಯ—[illegible] ಮೈಸೂರು ಮಹಾಸಭೆಯ ಲಾಗಳು, [illegible] ಶಾಸನಗಳು ಇವುಗಳ ಸಂಗ್ರಹವು, [illegible] ಇವುಗಳ ನಮೂನೆಗಳೂ [illegible] ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂ ೧೨ ಆಣೆ [10 31]

ಕನ್ನಡ ಲಾ ರಿಪೋರ್ಟ್—[illegible] ಕೋರ್ಟ್, [illegible] ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಭಾಷಾಂತರಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವಾರ್ಷಿಕ ಚಂದಾ ರೂ ೯—೦—೦ ಮುಂಗಡ, [illegible] ವಿ ಪಿ ಬಿಡಿಪತ್ರಿಕೆ ೧ಕ್ಕೆ ೧—೦

ಇವುಗಳನ್ನಪೇಕ್ಷಿಸುವವರು—ಎಂ ಮಲ್ಹಾರರಾವ್, ಫಸ್ಟ್ ಗ್ರೇಡ್ ಪ್ಲೀಡರ್, (೯೦) [illegible] ರೋಡ್ [illegible] ಬೆಂಗಳೂರು ಸಿಟಿ—ಈ ವಿಳಾಸಕ್ಕೆ ಬರೆಯಬಹುದು

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

೧೮ 22

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಬಿಳಿ ಬಟ್ಟೆಗಳು [illegible] ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತಹವುಗಳಾಗಿವೆ [illegible] ಹೋಗುವದಿಲ್ಲ ಮಿಲ್ಲಿನ ಬಹಳ ಕಡಮೆ ಈ ಬಟ್ಟೆಗಳು ಕೊಳೆಯಾದಲ್ಲಿ ತೊಳೆದವುಗಳು ಅದರಿಂದ ಸ್ವದೇಶೀ ಪ್ರಿಯರೇ ಈ ಬಟ್ಟೆಗಳನ್ನು ತರಿಸಿ [illegible] ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವದು [illegible] ಅಗಲವಿರುವ [illegible] ಆಣೆ ವರೆವಿಗೂ ಚಿಲ್ಲರೆಯಾಗಿ ಅಲ್ಲದೆ ಒಟ್ಟಾಗಿ ಅಗಲ ಮಾರಲ್ಪಡುತ್ತದೆ. ಸಾಮಾನ್ಯ ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಹುಡುಗರ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್. ಎಸ್ ಬುಕ್ ಡಿಪೋ, ಮೈಸೂರು

ಗೌಡರ ಹೊಗೆ ಸೇದುವ ಔಷಧ.

94-3

ಕೆಮ್ಮು, ಗೂರಲು, ಶ್ವಾಸ ಕಮನ; ಶೀಘ್ರ ಪರಿಹಾರ. ಕ್ರಯ, ಪೆಟ್ಟಿಗೆ ೧ಕ್ಕೆ ೮ ಆಣೆ ; ೩ಕ್ಕೆ ೧-೪-೦ ; ೬ಕ್ಕೆ ೨-೪-೦ ;

ವಿಳಾಸ—ಸಿ. ಲಕ್ಷ್ಮಣಗೌಡ, ಬಿ. ಎ., ಬಿ. ಯಲ್., ಬೆಂಗಳೂರು ಸಿಟಿ.

ಮೈಸೂರಿನಲ್ಲಿ ಮನೆ ವಿಕರಿಗೆ ಸಿದ್ಧವಾಗಿದೆ.

82-6

ಮೈಸೂರು ಶಿವರಾಂಪೇಟೆ ಇಲ್ವಾಲ್ ರಸ್ತೆಯಲ್ಲಿ ೭೭×೭ ಅಂಕಣಗಳ ಅಂಚಿ ಗುರಿಕಾರ್ ಕೃಷ್ಣಪ್ಪನವರಿದ್ದ ದೊಡ್ಡ ಮನೆ. ಬೇಕಾದವರು—ಮೇ ಟ್ರೋಟಿಯು ಫಾರೆಸ್ಟ್ ರೇಂಜರ್ ಮ|| ಬಿ. ಶ್ರೀಕಂಠಯ್ಯನವರಿಗೆ ಬರೆದು ಕ್ರಯ ಮುಂತಾದದ್ದನ್ನು ತಿಳಿಯಬಹುದು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

48-27

ಕಟಿನೋವು, ವಾಯುನೋವು, ಸೆಳತ, ಗಂಟ್ಲನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಣೆಮಾಡಿದಂತೆ ನಿಂದಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷಿಸಿನೋಡಿ, ನಿಂದಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು. ಆದದ್ದರಿಂದಲೇ ಅವನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ.

ಕ್ರಯ ಶೀಸೆ ೧ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿ ಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ. ವೈದ್ಯರೂ ವಿಕರಿಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ಪೇದಮುಲೆಪಿಳ್ಳೆ ಬೀದಿ, ಪೇಟೇರಿ, ಮದರಾಸ್.

ಇತ್ತಲಾಗಿ ಮುದ್ರಿಸಲ್ಪಟ್ಟಿರುವ ಬಾಸೆಲ್ ಮಿಶನ್ ಬುಕ್ ಎಂಡ್ ಟ್ರಾಕ್ಟ್ ಡಿಪೋಸಿಟರಿ · ಮಂಗಳೂರು ಪುಸ್ತಕಗಳು.

78-3

ಡಾಕ್ಟರ್ ಹಾಸನ ಪ್ರವರ್ತನೆ	ಕ್ರಯ	೦—೦—೩
ಸಾವಂತಿ ಪುಷ್ಪ	...	೦—೦—೬
ಸುವಾರಿ ಕೀರ್ತನೆ ..	...	೦—೨—೦
ಮಹಮದ ವ್ಯಕ್ತಿಯ ಚರಿತ್ರೆ	...	೦—೩—೧
ಸ್ವದೇಶಾಭಿಮಾನ	...	೦—೨—೦
ಯೋಹಾನ್ ಬುನ್ಯನ್ ಯಾತ್ರಿಕನ ಸಂಚಾರವು (ಮೊದಲನೆ ಭಾಗ) ...	...	೦—೪—೦
(ಎರಡನೆ ಭಾಗ ಮುದ್ರಣೆಯಲ್ಲಿದೆ)		
ಯೆಹೂದಿ ಪ್ರವಾದಿಗಳಲ್ಲಿ ಪ್ರಖ್ಯಾತನಾದ ಯೆರೆಮೀಯನು		೦—೪—೦
ಯೋಸೇಫನ ಚರಿತ್ರೆಯ ವಿಷಯವಾದ ಇಪ್ಪತ್ತು ಪ್ರಸಂಗಗಳು	...	೦—೫—೦
ವೇದಾಂತವಾದ ನಿರ್ಣಯ (ತತ್ತ್ವವಿವೇಕ)	...	೦—೫—೦
ಇಸೋಪನ ನೀತಿ ಕಥೆಗಳು (ಚಿತ್ರಸಹಿತ)	...	೦—೮—೦
ರಾಗಸಹಿತವಾದ ಅಭಿನಯ ಗೀತಗಳು ...	...	೦—೨—೬
ಬಾಲಕರ ಗೀತಗಳು	...	೦—೭—೦
ಮೂಲಶಾಲೆಗಳ ಶಿಕ್ಷಣಾ ಕ್ರಮಪದ್ಧತಿ ...	...	೦—೫—೦
ಕಿಂಡರ್ ಗಾರ್ಟನ್ ಕ್ರಮಿಡಿ, ಬಾಲಕ ಮತ್ತು ಮೊದಲನೆ ದರ್ಜೆಗಳಿಗೆ ಉಪಯುಕ್ತವಾದ ಕಥೆಗಳೂ ಹಾಡುಗಳೂ ...		೦—೨—೬
ಅದೇ ಎರಡನೆ ದರ್ಜೆಗೆ	...	೦—೨—೬
ಗೃಹೋಪಯೋಗದ ಹೋಮಿಯೋಪಥಿ ಎಂಬ ಸಮಾನ ಪ್ರವೃತ್ತಿಕ ಚಿಕಿತ್ಸಾ ಕ್ರಮದ ಕೈಪಿಡಿ	...	೧—೪—೦

ಸತ್ಯದೀಪಿಕೆ.

ಪ್ರತಿ ವಾರಕ್ಕೊಂದು ಪ್ರಕಟವಾಗುವ ಪತ್ರವಿದು. ಪ್ರತಿ ಸಂಚಿಕೆಯು ಚತುಷ್ಪತ್ರ ಪರಿಮಾಣದ ಎಂಟೆಂಟು ಪುಟಗಳುಳ್ಳದ್ದಾಗಿದೆ. ಲೋಕ ವಿಷಯದ ಸಂಗತಿಗಳೂ. ಮತವಿಷಯದ ಉಪನ್ಯಾಸಗಳೂ, ಮನೋರಂಜಕ ಕಥೆಗಳೂ, ವಿದ್ಯಾವಿಷಯಗಳೂ, ಲೋಕಸಮಾಚಾರ, ಸ್ವದೇಶಿಗಳ ವರ್ತಮಾನ, ತಂತಿ ವರ್ತಮಾನ, ವ್ಯವಸಾಯ ಮತ್ತು ವೃಕ್ಷಾದಿಗಳ ವರ್ಣನೆ, ಶಾಲೋಪಯೋಗದ ಪುಸ್ತಕಗಳ ಪ್ರಕಟನೆ, ಪಂಚಾಂಗ ಮುಂತಾದ ವಿಶಿಷ್ಟ ವಿಷಯಗಳು ಇದರಲ್ಲಿ ಅಡಗಿರುವವು.

ಚಂದಾ ನಿರ್ಣಯ.

೧ ಪ್ರತಿಗೆ (ಸ್ಥಳೀಕರಿಗೆ) ವರ್ಷ ೧ ಕ್ಕೆ	...	ರೂ.	೧—೨—೦
೧ ,, ,, ಅರ್ಧ ವರ್ಷಕ್ಕೆ	...		೦—೮—೦
೧ ,, (ಪರಸ್ಥಳೀಕರಿಗೆ) ವರ್ಷ ೧ಕ್ಕೆ ಹಾಸಲು ಕೂಡ			೧—೧೩—೦
೧ ,, ,, ಅರ್ಧ ವರ್ಷಕ್ಕೆ	...		೦—೧೫—೦

ಚಂದಾ ಹಣ ಮುಂಗಡವೇ ರವಾನಿಸಬೇಕು. ಸಮೂನೆ ಪ್ರತಿ ಕಳುಹಿಸಲ್ಪಡುವದು.

ಅಪೇಕ್ಷಕರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.—

ಬಾಸೆಲ್ ಮಿಶನ್ ಬುಕ್ ಟ್ರಾಕ್ಟ್ ಡಿಪೋಸಿಟರಿ, ಮಂಗಳೂರು.

CHAMBERLAIN'S COLIC CHOLERA AND DIARRHOEA REMEDY.

ಚೇಂಬರ್ಲೇನ್ ರವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

1-48

ಕಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನವನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ನಿಂದಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ಇಲ್ಲಿ ನೋಡಿ.

77-10

ತುಮಕೂರು ಮಿಶನ್ ಇಲಾಖೆಯಲ್ಲಿ ಯೂರೋಪಿಯನ್ನರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ. ಕ್ರಯ.—೧೨ ಆಣೆ ಮೊದಲ್ಗೊಂಡು ೧ ರೂ. ೧೨ ಆಣೆಯ ವರೆಗೆ. ೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು. ಈಗತಾನೇ ಇಂಗ್ಲಿಷ್ ಉಲ್ ದಾರವು ಬಂದಿದೆ. ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಬಲ್ಲೆವು. ವಿಳಾಸ.—ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿಶನ್ ಇಲಾಖೆ, ತುಮಕೂರು.

ನೋಡಿರಿ. "ಶ್ರೀ ಸ್ತ್ರೀತ್ಸಾಹಕಕೋಡಿರಿ" ತರಿಸಿರಿ.

98-1

ಈಗತಾನೇ ಶೀಮೆಯಿಂದ ಬಂದಿದೆ.

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ

೫,೦೦೦ ಯಾರ್ಡ್ ಟೋಪಿ ಹೊಲಿಯುವ ಸುಪೀರಿಯಲ್ ಉಲ್ ದಾರ.		
೧೦ ಟೋಪಿಯಾಗುವ ಉಲ್ ಬಂಡಲ್ ೧ ಕ್ಕೆ	ರೂ.	೩-೬-೦
೧ ಟೋಪಿಯಾಗುವ ಉಲ್ ದಾರಕ್ಕೆ		೦-೫-೦
ಹಾಸನ್ ಟೋಪಿ ಹಾಕುವ ಕೊಕ್ಕೆ ಸೂಜಿ ೧ಕ್ಕೆ	೦-೧-೬,	೦-೨-೦
೩೦ ಇಂಚಿನ ದೊಡ್ಡ ಸೈಜು ಟವಿಯಲ್ ೧ ಕ್ಕೆ		೦-೮-೦
ಪಾಲಿ ಪೋಸ್ಟು ಕಾರ್ಡು ಡಬ್ಬಲ್ ಕಲರ್ ೧,೦೦೦ ಕ್ಕೆ		೧-೮-೦
ಸುಗಂಧ ಸಂಜೀವಿನಿ ಭೃಂಗಾಮಲಕ ತೈಲ ಶೀಸೆ ೧ ಕ್ಕೆ		೦-೮-೦
ಮೆಂತ್ಯಾಲ್ ತಲೆ ನೋವಿಗೆ ಅನುಕೂಲವಾದ ಔಷಧ ಡಬ್ಬಿ ೧ ಕ್ಕೆ		೦-೩-೦
ಸೆನ್, ಸೆನ್ ಪರಿಮಳವಾದ ತಾಂಬೂಲ ಮಿಶ್ರನು ಪಾಕೆಟ್ ೧ ಕ್ಕೆ		೦-೨-೦
ಲೆಡ್ ಕೈವಸ್ತ್ರಗಳು (ಚಂದವಾದು) ೧ ಕ್ಕೆ		೦-೨-೦
ರಾಸ್‌ಕೋಪ್ ಸ್ಟಾಯಿಲ್ ವಾಚು ೧ ಕ್ಕೆ		೪-೦-೦
ಕಿಂಬಿನ ಬಾಚಣಿಗೆಗಳು ದೊಡ್ಡ ಸೈಜು ಡಜನ್ ೧ ಕ್ಕೆ		೧-೧೦-೦
ಗಜಕರ್ಣದ ಮುಲಾಮು ಡಬ್ಬಿ ೧ ಕ್ಕೆ		೦-೬-೦
೨೮೦ ಇಂಗ್ಲಿಷು ಅಕ್ಷರಗಳಡಗಿರುವ ಪೆಟ್ಟಿಗೆ ೧ ಕ್ಕೆ		೨-೮-೦

ಪರಸ್ಥಳದವರಿಗೆ ವಿ. ಪಿ. ಇಂದಲೂ ರವಾನಿಸುತ್ತೇವೆ.

ನಮ್ಮ ವಿಳಾಸ.—ದಿ ಉಲ್ ವಾರ್ಕ್, ಮಂಗಳೂರು, ದ. ಕ.

ಮಕ್ಕಳ ಹಿತಕಾರಿ

ಎಂದು

SCOTT'S EMULSION

33-35

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಾರೆ. ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯವಾದುವುದು ; ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು.



ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಕೈನೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್.

ಔಷದಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಹರಾಜು ಇಸ್ತಿಹಾರ್.

96-2

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :- ಅಮೃತಮಹಲ್ ಇಲಾಖೆಯ ಕೆಲವು ಗಂಡು ರಾಸುಗಳನ್ನು ಬಾಲ್ತಿ ಇಸವಿ ಡಿಸೆಂಬರು ೫ ನೇ ತಾರೀಖು ಲಾಗಾಯಿತು ಹಾಸನದ ತಾಲ್ಲೋಕು "ಮದ್ದ"ದ ಮೊಕ್ಕಾಂನಲ್ಲೂ, ಸದರಿ ಮಾಹೆ ೧೩ ನೇ ತಾರೀಖು ಲಾಗಾಯಿತು ಚಿಕ್ಕಕರೆ ತಾಲ್ಲೋಕು "ಹಿರಿಕೆರೆ ನಾಯ್ಕನಹಟ್ಟಿ" ಕಾವಲಿನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಥಡಸವಾಲ್ ಮಾಡಿ ರಾಸುಗಳನ್ನು ಪಡೆಯಬಹುದು.

ಕ್ಯಾಂಪ್-ಮೈಸೂರು, ತಾ. ೧೬-೧೭-೧೧-೧೯೦೮. } ಎಚ್. ನಂಜುಂಡರಾಜೇ ಅರಸ್, ಸೂಪರಿಂಟೆಂಡೆಂಟ್, ಅಮೃತಮಹಲ್ ಇಲಾಖಾ.

ಲೇಖನ ಪ್ರಕಾಶಿಕಾ

97-1

ನವಂಬರ್ ಆಖೈರಿನೊಳಗಾಗಿ ಬರೆದುಕೊಂಡವರಿಗೆ	ರೂ. ೧—೦—೦
ಅನಂತರ ಬರೆದುಕೊಂಡವರಿಗೆ	,, ೧—೮—೦
ಟಪ್ಪಾಲ್ ಖರ್ಚು	,, ೦-೨-೦

ಪ್ರತಿಯೊಬ್ಬ ಎಂಪ್ಲಾಯೀಗ್, ಪಟೇಲರಿಗೆ ಅವಶ್ಯ ಸಂಗ್ರಹಿಸಿ ಇಡಬೇಕಾದದ್ದು, ರೆಜಿಸ್ಟ್ರೇಷನ್ ನೌಕರರಿಂದ ತಯಾರಾದದ್ದಲ್ಪಟ್ಟ ಈ ಪುಸ್ತಕವನ್ನು ಬಿಟ್ಟಿರೆ ಲೇವಾದೇವಿ ಮಾಡುವವರಿಗೂ, ಪತ್ರಗಳನ್ನು ಬರೆಯುವವರಿಗೂ ಬಹು ಉಪಯುಕ್ತವಾದದ್ದು ಮತ್ತ್ಯಾವದಿದೆ ? ಇದರಲ್ಲಿ ಸ್ಟಾಂಪಾಕ್ಟು, ರೆಜಿಸ್ಟ್ರೇಷನ್ ಆಕ್ಟು, ರೆಜಿಸ್ಟ್ರೇಷನ್ ರೂಲ್ಸ್, ರೆಜಿಸ್ಟ್ರೇಷನ್ ಫೀಜು ವಿಷಯವಾದ ಸರ್ಕ್ಯುಲರ್‌ಗಳೂ, ಮತ್ತು ಪ್ರತಿಯೊಂದು ಪತ್ರಬರೆಯುವುದಕ್ಕೆ ಸಮೂನೆ, ಅದಕ್ಕೆ ಬೇಕಾದ ಸ್ಟಾಂಪು, ರೆಜಿಸ್ಟ್ರೇಷನ್ ಫೀಜು ವಗೈರೆಯಾದವುಗಳನ್ನು ಕಾನೂನುಸಹಿತ ಬಹಳ ಚನ್ನಾಗಿ ವಿವರಿಸಿ ಇದೆ. ಓದುಬರಹ ಮಾತ್ರ ಬಲ್ಲ ಪ್ರತಿಯೊಬ್ಬರೂ ೧ ರೂಪಾಯಿಯ ಖರ್ಚಿನಿಂದ ಅನೇಕ ವಿಧವಾದ ಕಷ್ಟನಷ್ಟಗಳನ್ನು ನಿಂದಿತವಾಗಿಯೂ ತಪ್ಪಿಸಿಕೊಳ್ಳಬಹುದು. ಹೆಚ್ಚು ಹೇಳುವುದೇಕೆ ? ಅನುಭವದಿಂದ ತಾನೇ ಗೊತ್ತಾಗ ವದು ನಮ್ಮ ಸ್ಟಾಕ್ ಇಲ್ಲದ ಪುಸ್ತಕಗಳನ್ನು ಮಾತ್ರ ಕೊಳ್ಳಬೇಡಿ.

ವಿಳಾಸ—ಎಂ. ಕೃಷ್ಣಮೂರ್ತಿರಾವ್, ರೆಜಿಸ್ಟ್ರೇಷನ್ ಕ್ಲಾರ್ಕ್,

ಹೊನ್ನಾಳಿ ತಾಲ್ಲೂಕು, ಶಿವಮೊಗ್ಗಾ ಡಿಸ್ಟ್ರಿಕ್ಟ್.

ಶ್ರೀ ತಾಂಬೂಲ.

81-8

ಇದನ್ನು ಓದಿ ! ಬಿಡಬೇಡಿ ! ಗುಣನೋಡಿ !!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದ್ದಾರೆ. ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ದುರ್ಗಂಧ ನಾಶವಾಗುತ್ತೆ, ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯ. ವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣವಾಗುವುದು. ಈ ರೀತಿ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಶೀಸೆಗೆ ೪ ಆಣೆ ಆರು ಸೀಸೆಗೆ ಒಂದು



ಜಾಸ್ತಿ ೬ ಸೀಸೆ ವರೆಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ:—

"ಸಾರತರ" ನೋವು ತಕ್ಷಣಪರಿಹಾರ. ಡಬ್ಬಿ ೧ ಕ್ಕೆ ೦—೧೨—೦

ದೇವನಹಳ್ಳಿ ಟವನ್, ಬೆಂಗಳೂರು ಡಿಸ್ಟ್ರಿಕ್ಟ್. ಯಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್.

ವೃತ್ತಾಂತ ಪತ್ರಿಕೆ.

——:o:——

೧೯೦೮ ನೇ ಇಸವಿ ನವಂಬರ್ ತಾ|| ೨೬ ನೇ ಗುರುವಾರ.

ಕ್ರೂರಕೃತ್ಯಗಳನ್ನು ಅಡಗಿಸುವುದು.

ಕೆಲವು ಕಾಲದಿಂದೀಚೆಗೆ ಬಂಗಾಳಾ ಅಧೀನ್ಯದಲ್ಲಿ ಪ್ರಜಾನೆಮ್ಮದಿಗೂ ಗವರ್ನ್‌ಮೆಂಟಿನ ಕೆಲಸಕಾರ್ಯಗಳಿಗೂ ಕುಂದಕವುಂಟಾಗುವಂಥಾ ಕ್ರೂರಕೃತ್ಯಗಳು ನಡೆಯುತಾರಂಭವಾಗಿರುತ್ತವೆ. ಪ್ರಜಾಪಾಲಕರನ್ನೇ ಕೊಲ್ಲುವುದಕ್ಕೆ ಪ್ರಯತ್ನಮಾಡುತ್ತಿರುವರು. ಅಪರಾಧಿಗಳನ್ನು ಪತ್ತೆಮಾಡಿ ಹಿಡಿದ ಪೊಲೀಸಿನವರನ್ನೂ, ಅಪರಾಧಿಗಳ ಮೇಲೆ ಸಾಕ್ಷಿ ಹೇಳಿದವರನ್ನೂ ಕೊಂದುಹಾಕಿದಾರೆ. ಮ್ಯಾಜಿಸ್ಟ್ರೇಟುಗಳ ಮತ್ತು ಜಡ್ಜಿಗಳ ಪ್ರಾಣವನ್ನು ತೆಗೆಯಬೇಕೆಂದೂ ಮಸಲತ್ತುಗಳು ನಡೆದಿರುತ್ತವೆ. ಕೊಲೆಪಾತಕರನ್ನು ಗವರ್ನ್‌ಮೆಂಟಿನವರು ದರ್ಯಾಪ್ತಿಮಾಡಿ ಗಲ್ಲಿಗೆ ಹಾಕಿಸಿದರೆ ಅವರ ಶವಗಳನ್ನು ಮೆರವಣಿಗೆ ಮಾಡಿ ಉತ್ತರಕ್ರಿಯೆಗಳನ್ನು ನಡಿಸುವುದೂ, ಅಂಥಾ ನೀಚರನ್ನು ದೇಶವತ್ಸಲರೆಂದು ಎಣಿಸುವುದೂ ರೂಢಿಗೆ ಬರುತ್ತಿದೆ. ಇಂಥಾ ಕೃತ್ಯಗಳನ್ನು ನಡಿಸುವುದರ ಮೂಲಕ ಗವರ್ನ್‌ಮೆಂಟಿನವರ ಪ್ರೀತಿವಿಶ್ವಾಸಗಳನ್ನು ಸಂಪಾದಿಸಿಕೊಳ್ಳುತ್ತೇವೆಂದಾಗಲಿ, ಹೆಚ್ಚಾದ ಸ್ವಾತಂತ್ರ್ಯಾದಿಗಳನ್ನು ಪಡೆಯುತ್ತೇವೆಂದಾಗಲಿ ಪ್ರಜೆಗಳು ಊಹಿಸಿ ಪ್ರಯತ್ನಪಡುವುದು ಎಷ್ಟುಮಾತ್ರಕ್ಕೂ ಸಾಧನಕವಾಗುವುದಿಲ್ಲ. ಇಂಥಾ ಕ್ರೂರಕೃತ್ಯಗಳು ಗವರ್ನ್‌ಮೆಂಟಿನವರ ಉದ್ದೇಶಗಳನ್ನೂ ಅವರ ದರ್ಪವನ್ನೂ ಲೇಶಮಾತ್ರವೂ ಕದಮೆಮಾಡಲಾರವು. ರಾಜ್ಯಭಾರವನ್ನು ಸಾರ್ಥಕವಾಗಿ ನಡಿಸುವುದರಲ್ಲಿ ಪ್ರಜಾನೆಮ್ಮದಿಯನ್ನು ಕಾಪಾಡಬೇಕಾದದ್ದು ಪ್ರಥಮ ಧರ್ಮವಾಗಿರುತ್ತದೆ. ಅಂಥಾ ನೆಮ್ಮದಿಗೆ ಭಂಗವುಂಟಾಗುವ ಕೃತ್ಯಗಳನ್ನೆಲ್ಲಾ ಪ್ರಜಾಪಾಲಕರು ಅತ್ಯಂತ ಕಠಿಣವಾದ ಏರ್ಪಾಡುಗಳನ್ನಾದರೂ ರೂಢಿಸಿ ಅಡಗಿಸಿ ಬಿಡಲೇಬೇಕು.

ಅಧಿಕಾರಿಗಳನ್ನೇ ಕೊಲ್ಲಬೇಕೆಂದು ಪ್ರಯತ್ನಪಡುವುದು ಇಲ್ಲಿನ ಜನರ ಶೀಲಸ್ವಭಾವಕ್ಕೆ ವಿರೋಧವಾಗಿರುತ್ತದೆ. ಇಂಥಾ ಹೊಸದಾದ ಮತ್ತು ದೇಶಾಭಿವೃದ್ಧಿಗೆ ಹಾನಿಕರವಾದ ದುಸ್ಸ್ವಭಾವವನ್ನು ಪ್ರಾರಂಭದಲ್ಲೇ ಅಗತ್ಯವಾಗಿ ತೊಡೆದುಬಿಡಬೇಕು. ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಅಂಥಾ ಕ್ರೂರಕೃತ್ಯಗಳನ್ನು ಅಡಗಿಸುವುದಕ್ಕೆ ಗವರ್ನ್‌ಮೆಂಟಿನವರು ಹಿಂಜರಿಯುವುದಿಲ್ಲವೆಂದು ಅಪ್ಪಣೆ ಕೊಡಿಸಿರುವರು. ಅವರು ಕಳೆದ ವಾರ ಲಕ್ನೋ ಪಟ್ಟಣದ ತಾಲೂಕ್ದಾರರ ವಿಜ್ಞಾಪನಾ ಪತ್ರಿಕೆಗೆ ಪ್ರತ್ಯುತ್ತರವನ್ನು ಹೇಳುವಾಗ್ಗೆ— "ಕ್ರೂರ ಕೃತ್ಯಗಳೂ ಪಿತೂರಿಗಳೂ ನಡೆದಾಗ್ಯೂ ಕಾಲಾನುಗುಣ್ಯವಾಗಿ ಪ್ರಜೆಗಳಿಗೆ ಹೆಚ್ಚು ಸ್ವಾತಂತ್ರ್ಯಗಳನ್ನು ಕೊಡುತ್ತಾ ಬರುತ್ತೇವೆ. ಆದರೂ ಅಧಿಕಾರಿಗಳ ಪ್ರಾಣಕ್ಕೂ ಪ್ರಜಾ ಬಾಹುಳ್ಯದ ನೆಮ್ಮದಿಗೂ ಅಪಾಯಕರವಾದ ಸ್ಥಿತಿಯು ಸದ್ಯದಲ್ಲಿ ಉಂಟಾಗಿರುವುದು. ಕಾನೂನುಗಳನ್ನು ಅಭಿವೃದ್ಧಿಪಡಿಸಿದಲ್ಲದೆ ಈ ರಾಷ್ಟ್ರದಲ್ಲಿ ಐಶ್ವರ್ಯ ಮತ್ತು ಸಂತೋಷಗಳು ಹೆಚ್ಚಲಾರವು. ಈ ಕ್ರೂರಕೃತ್ಯಗಳೂ ಪಿತೂರಿಗಳೂ ನಡೆಯುವ ತನಕ ಅಂಥಾ ಅಭಿವೃದ್ಧಿ ಕಾರ್ಯಗಳಿಗೆ ಎಷ್ಟು ಮಾತ್ರಕ್ಕೂ ಅವಕಾಶವಾಗುವುದಿಲ್ಲ. ಈ ರಾಷ್ಟ್ರದಲ್ಲಿ ಇದುವರೆಗೆ ಇಲ್ಲದಿದ್ದ ಈ ವಿಷವೃಕ್ಷವು ಈಗ ಮೊಳೆತಾಗಿದೆ. ಇಂಥಾ ನಾಶಕರವಾದ ಗಿಡವನ್ನು ಅಗೆದು ಬೇರುಸಹಿತ ಕಿತ್ತುಹಾಕಬೇಕು. ಬ್ರಿಟಿಷ್ ಗವರ್ನ್‌ಮೆಂಟಿನವರು ಈ ಭಾಗದಲ್ಲಿ ದೃಢಮನಸ್ಕರಾಗಿರುವರು. ಮತ್ತು ಅವರು ತಮ್ಮ ಪರಿಪಾಲನೆಗೆ ಸೇರಿದ ಈ ರಾಷ್ಟ್ರದ ಪ್ರಜಾಕೋಟಿಗಳ ಕ್ಷೇಮಾಭ್ಯುದಯಗಳನ್ನು ಕಾಪಾಡುವುದರಲ್ಲೂ ಬದ್ಧಕಂಕಣರಾಗಿರುತ್ತಾರೆ. ಆದಕಾರಣ ಈಗ ಕಾಣಿಸಿಕೊಂಡಿರುವಂಥಾ ಹೊಸ ಕಷ್ಟಗಳನ್ನು ಅಡಗಿಸುವುದಕ್ಕೆ ಗವರ್ನ್‌ಮೆಂಟಿನವರು ಹೊಸ ತರಹಾ ಕ್ರಮಗಳನ್ನು ಸೃಷ್ಟಿಸಿ ಮಾಡಲು ಸ್ವಲ್ಪವೂ ಹಿಂಜರಿಯುವವರಾಗಿಲ್ಲ" ಎಂಬ ರೀತಿಯಾಗಿ ತಿಳಿಸಿರುತ್ತಾರೆ.

ಮೇಲ್ಕಂಡ ಉದ್ದೇಶವನ್ನು ನೆರವೇರಿಸುವುದಕ್ಕೋಸ್ಕರ ವೈಸ್‌ರಾಯರವರು ತಮ್ಮ ಸರ್ಕೀಟನ್ನು ಎಂಟೆರಡು ದಿನಗಳ ಮಟ್ಟಿಗೆ ನಿಲ್ಲಿಸಿ, ನೆನ್ನೆ ಬೆಳಿಗ್ಗೆ ಪರಿವಾರ ಸಹಿತ ಕಲ್ಕತ್ತೆಗೆ ದಯಮಾಡಿದರು. ಈ ದಿನ ಕಲ್ಕತ್ತೆಯಲ್ಲಿ ಹಿಂದುಸ್ಥಾನದ ಮಂತ್ರಾಲೋಚನಾ ಸಭೆಯು ಸೇರುವುದು. ಈ ಸಭೆಯಲ್ಲಿ ಮೇಲ್ಕಂಡ ಕ್ರೂರ ಕೃತ್ಯಗಳನ್ನೂ ಪಿತೂರಿಯನ್ನೂ ಅಡಗಿಸುವುದಕ್ಕೆ ಸಹಕಾರಿಗಳಾದ ಕಾನೂನ್‌ಗಳನ್ನು ಮಾಡಿ ಜಾರಿಗೆ ತರುವವರಾಗಿದಾರೆ; ಈ ಕಾನೂನುಗಳು ಇಂಥವುಗಳೆಂದು ಇನ್ನೂ ಪ್ರಕಟವಾಗಿಲ್ಲ. ಬಂಗಾಳಾ ಲೆಫ್ಟಿನೆಂಟ್ ಗವರ್ನರ ಸರ್ ಫ್ರೇಸರಾಯರವರ ಮಂತ್ರಾಲೋಚನಾ ಸಭೆಯ ಕೆಲವು ಮೆಂಬರುಗಳೂ ಕಳೆದ ಶುಕ್ರವಾರ ಕಲ್ಕತ್ತೆಯಲ್ಲಿ ಸಭೆ ಸೇರಿ, ಈ ಹೊಸ ಕಾನೂನಿನ ವಿಚಾರವನ್ನು ಕುರಿತು ಮೊದಲೇ ಚರ್ಚೆ ಮಾಡಿದ್ದಾರೆ. ಪಿತೂರಿ ಮಾಡಿದವರನ್ನೂ ಕ್ರೂರ ಕೃತ್ಯಗಳನ್ನು ನಡಿಸಿದವರನ್ನೂ ಹಿಡಿದು ದರ್ಯಾಪ್ತಿ ಮಾಡಿ ಬೇಗ ಶಿಕ್ಷಿಸುವುದಕ್ಕೆ ಹೊಸ ಕೋರ್ಟುಗಳೂ ಜಡ್ಜಿಗಳೂ ನೇಮಕವಾಗಬೇಕೆಂದು ಕಲ್ಕತ್ತೆಯ ಕೆಲವು ಸಂಘಗಳ ಮೆಂಬರುಗಳೂ ಪ್ರಜಾಪ್ರತಿನಿಧಿಗಳೂ ಗವರ್ನ್‌ಮೆಂಟಿಗೆ ಅರಿಕೆಮಾಡಿಕೊಂಡಿದಾರೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಪಟ್ಟಣದಲ್ಲಿ ಪುರಾಭಿವೃದ್ಧಿ ಕಾರ್ಯಗಳನ್ನು ನಡಿಸುವುದಕ್ಕೆ ಗವರ್ನ್‌ಮೆಂಟಿನವರು ೭೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ಬೆಂಗಳೂರು ಪಟ್ಟಣದಲ್ಲಿ ಪೊಲೀಸಿನವರು ಒಂದು ಮನೆಯೊಳಗೆ ನುಗ್ಗಿ ಜೂಜಾಡುತ್ತಿದ್ದ ೧೯ ಜನರನ್ನು ಹಿಡಿದು, ಅವರ ಬಳಿ ಇದ್ದ ಹಣ ಮುಂತಾದದ್ದನ್ನು ಕಿತ್ತುಕೊಂಡು ಅವರ ಮೇಲೆ ಮೊಕದ್ದಮೆ ಮಾಡಿದಾರೆ.

ಜಪಾನ್ ರಾಜ್ಯದಲ್ಲಿ ೧೯೧೨ ನೇ ಇಸವಿಯಲ್ಲಿ ಬಹು ವಿಶೇಷವಾದ ಪ್ರದರ್ಶನವನ್ನು ನಡಿಸಬೇಕೆಂದು ಏರ್ಪಾಡಾಗಿತ್ತು. ಅದನ್ನು ಅವರು ೧೯೧೭ನೇ ಇಸವಿಯ ವರೆಗೆ ನಡಿಸುವವರಾಗಿಲ್ಲವೆಂದು ನಮ್ಮ ಸಹಕಾರರವರು ತಿಳಿಸಿದಾರೆ.

ಬ್ರಿಟಿಷ್ ರೆಸಿಡೆಂಟ್ ಮೆ|| ಎಸ್. ಎಂ. ಫ್ರೇಸರ್ ಯವರು ನಾಳೆ ಶನಿವಾರ ಸಾಯಂಕಾಲ ತಮ್ಮ ಬಂಗಲೆಯಲ್ಲಿ ಶ್ರೀಮನ್ ಮಹಾರಾಜರವರನ್ನು ಕರೆಸಿಕೊಂಡು, ಒಂದು ಗಾರ್ಡನ್ ಪಾರ್ಟಿ ಎಂಬ ಸಂತೋಷಕೂಟವನ್ನು ನಡಿಸುವವರಾಗಿದಾರೆ.

ಶ್ರೀಮನ್ ಮಹಾರಾಜರವರು ಸರ್ಕೀಟನ್ನು ತೀರಿಸಿಕೊಂಡು ನೆನ್ನೆ ಬೆಳಿಗ್ಗೆ ಸ್ಪೆಷಲ್ ರೈಲಿನಲ್ಲಿ ಬೆಂಗಳೂರಿಗೆ ದಯಮಾಡಿದರು. ಅವರು ಪರಿವಾರ ಸಹಿತ ಇನ್ನೂ ಸುಮಾರು ಮೂರು ವಾರಗಳ ವರೆಗೆ ಬೆಂಗಳೂರಿನಲ್ಲೇ ಇರುತ್ತಾರೆಂದು ವರ್ತಮಾನವಿದೆ.

ಬೆಂಗಳೂರು ದಂಡಿನಲ್ಲಿ ಒಬ್ಬ ಹಕೀಮನು ಹೆಚ್ಚಾಗಿ ವಿಷಪದಾರ್ಥವನ್ನು ಹಾಕಿದ ಔಷಧಿಯನ್ನು ಒಬ್ಬ ರೋಗಿಗೆ ಕೊಟ್ಟದ್ದರಿಂದ ರೋಗಿಯು ಕಾಲವಾದನು. ಇದಕ್ಕಾಗಿ ಆ ಹಕೀಮನನ್ನು ಮ್ಯಾಜಿಸ್ಟ್ರೇಟರು ದರ್ಯಾಪ್ತಿಮಾಡಿ, ಆತನಿಗೆ ೧೦೦ ರೂಪಾಯಿ ಜುಲ್ಮಾನೆ ವಿಧಿಸಿದರು.

ಈ ಸಲ ತಿರುಮಕೂಡ್ಲು ನರಸೀಪುರದ ತಾಲೂಕಿಗೆ ಸೇರಿದ ತಲಕಾಡಿನಲ್ಲಿ ಪಂಚಲಿಂಗದರ್ಶನವೆಂಬ ಜಾತ್ರೆಗೆ ಸುಮಾರು ೧೨,೦೦೦ ಪ್ರಜೆಗಳು ಸೇರಿದ್ದರೆಂತಲೂ, ಅನೇಕ ಮಂದಿ ಪುಣ್ಯವಂತರು ಸತ್ರಗಳನ್ನು ಹಾಕಿಸಿ ಜನರ ಊಟ ಉಪಚಾರಗಳಿಗೆ ಅನುಕೂಲ ಮಾಡಿ ಕೊಟ್ಟದ್ದರೆಂತಲೂ ತಿಳಿಯುವುದು. ಮೆ|| ದಳವಾಯಿ ದೇವರಾಜೇ ಅರಸಿನವರು, ಮೆ|| ಕಾಂತರಾಜೇ ಅರಸಿನವರು ಮೊದಲಾದ ಅಧಿಕಾರಿಗಳೂ ಅರಸುಗಳೂ ಅಲ್ಲಿಗೆ ಹೋಗಿದ್ದು ನೆನ್ನೆ ವಾಪಸು ಬಂದರು. ಮಹಾಮಾತೃಶ್ರೀಯವರು ಇಷ್ಟರಲ್ಲೇ ಅಲ್ಲಿಗೆ ದಯಮಾಡುವವರಾಗಿದಾರೆಂದು ಕೇಳುತ್ತೇವೆ.

ಧಾರಣೆವಾಸಿಗಳು ಬರಾವಾಗಿರುವುದರಿಂದ ಗವರ್ನ್‌ಮೆಂಟಿನವರು ನಾಲ್ಕು ಡಿಸ್ಟ್ರಿಕ್ಟುಗಳಲ್ಲಿ ಸರ್ಕಾರಿ ನೌಕರರಿಗೆ ಅಲೋವೆನ್ಸು ಕೊಡಬೇಕೆಂದು ಸ್ಯಾಂಕ್ಷನ್ ಮಾಡಿರುತ್ತಾರಷ್ಟೆ. ಈ ಬಾಬಿನ ತಿಂಗಳಿಗೆ ೧೩,೩೭೩ ರೂಪಾಯಿ ಖರ್ಚಾಗುವುದು. ಇದಲ್ಲದೆ ಈ ಕಷ್ಟಕಾಲದ ನಿಮಿತ್ತ ಗ್ರಾಮಾಂತರಗಳಲ್ಲಿ ಕೆಲಸಕಾರ್ಯಗಳನ್ನು ನಡಿಸುವುದಕ್ಕೂ, ಬಾವಿಗಳನ್ನು ತೋಡಿಸಿ ಕೆರೆಕಟ್ಟೆಗಳನ್ನು ದುರಸ್ತು ಮಾಡಿಸುವುದಕ್ಕೂ, ರೈತರಿಗೆ ತಕಾವಿ ಅಡ್ವಾನ್ಸಿಗೂ ಗವರ್ನ್‌ಮೆಂಟಿನವರು ಹೊಸದಾಗಿ ಒಂದು ಲಕ್ಷದ ಐವತ್ತು ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ಶ್ರೀಮನ್ ಮಹಾರಾಜರವರು ಕಳೆದ ವಾರ ಹಾಸನದಲ್ಲಿದ್ದಾಗ್ಗೆ ಅಲ್ಲಿನ ಮಿಷನ್ ಆಸ್ಪತ್ರೆಯನ್ನು ಪರಾಂಬರಿಸಿ, ಅಲ್ಲಿ ನಡೆಯುವ ಪರೋಪಕಾರ ಕೆಲಸಗಳನ್ನು ತಿಳಿದು ಬಹಳ ಸಂತೋಷಪಟ್ಟುಕೊಂಡರು. ಈ ಆಸ್ಪತ್ರೆಯನ್ನು ೪೦,೦೦೦ ರೂಪಾಯಿ ಖರ್ಚು ಮಾಡಿ ಕಟ್ಟಿಸಿದಾರೆ. ಅಲ್ಲಿನ ಉಪಕರಣಗಳಿಗೂ ಸಾಮಾನಿಗೂ ೫,೦೦೦ ರೂಪಾಯಿ ಖರ್ಚಾಗಿದೆ. ಪ್ರತಿ ತಿಂಗಳೂ ೫೦೦ ರೂಪಾಯಿ ವರೆಗೆ ಸಬ್ಬಂದಿ ಮೊದಲಾದ ಖರ್ಚುಂಟು. ಈ ಆಸ್ಪತ್ರೆಯನ್ನು ಇನ್ನೂ ಬಡಾವಣೆ ಮಾಡಬೇಕೆಂದು ಯೋಚಿಸಿರುವುದಾಗಿಯೂ, ಇದಕ್ಕೆ ೩೦,೦೦೦ ರೂಪಾಯಿ ಅಂದಾಜು ಆಗಿದೆ ಎಂತಲೂ ತಿಳಿದು ಬಂದಿದೆ.

ಮೈಸೂರು ಗೆಜೆಟಿನ ಸಂಗ್ರಹ.

ಮೈಸೂರು ಮಹಾರಾಣಿಯವರ ಕಾಲೇಜಿನ ಲೇಡಿ ಸೂಪರಿಂಟೆಂಡೆಂಟರಾದ ಮಿಸ್. ಪಿ. ಎಲ್. ವಾರೆಂಡಾಫ್‌ರವರಿಗೆ ಕೊಟ್ಟಿರುವ ರಜವನ್ನು ಡಿಸೆಂಬರ್ ಆಖೈರ್ ತನಕ ಜಾಸ್ತಿ ಮಾಡಿದೆ. ಈಗ ಮಾಡಿರುವ ಬದಲಿ ಏರ್ಪಾಡೇ ಜಾರಿಯಲ್ಲಿರತಕ್ಕದ್ದು.

ತುಮಕೂರು ಡಿಸ್ಟ್ರಿಕ್ಟು ಖಜಾನೆಯ ಛಾರ್ಜನ್ನು ವಹಿಸಿರುವ ಪ್ರೊ|| ಅ|| ಕಮಿಷನರ್ ಮೆ|| ಡಿ. ಶ್ರೀನಿವಾಸಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಎಕ್ಸೈಸ್ ಕಮಿಷನರವರ ಆಫೀಸ್ ಅಸಿಸ್ಟೆಂಟ್ ಮೆ|| ಸಿ. ವೆಂಕಟರಾಯರನ್ನು ರೆವಿನ್ಯೂ ಇಲಾಖೆಗೆ ವರ್ಗಮಾಡಿದೆ. ಇವರು ತುಮಕೂರು ಡಿಸ್ಟ್ರಿಕ್ಟು ಖಜಾನೆಯ ಛಾರ್ಜನ್ನು ವಹಿಸತಕ್ಕದ್ದು.

ಚನ್ನಪಟ್ಟಣದ ತಾಲೂಕ್ ಅಮಲ್ದಾರ್ ಮೆ|| ರಂಗನಾಥರಾವ್ ಸಾಹೇಬ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಜನರಲ್ ರೆವಿನ್ಯೂ ಸೆಕ್ರೆಟರಿ ಆಫೀಸಿನ ೧ ನೇ ಗ್ರೇಡ್ ಕ್ಲಾರ್ಕ್ ಎನ್. ಮೂರ್ತಿರಾಯರು ಚನ್ನಪಟ್ಟಣದ ಅಮಲ್ದಾರ್ ಮತ್ತು ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಈಗ ರಜದ ಮೇಲಿರುವ ಶಿವಮೊಗ್ಗಾ ಮುನ್ಸಿಫ್ ಮೆ|| ಎಸ್. ಹಿರಿಯಣ್ಣಯ್ಯನವರನ್ನು ೨ ನೇ ಕ್ಲಾಸ್ ಅ|| ಕಮಿಷನರಾಗಿ ಬಡ್ತಿಮಾಡಿ, ಗವರ್ನ್‌ಮೆಂಟಿನ ಜನರಲ್ ಮತ್ತು ರೆವಿನ್ಯೂ ಇಲಾಖೆಗಳಲ್ಲಿ ಅ|| ಸೆಕ್ರೆಟರಿಯಾಗಿ ನೇಮಿಸಿಕೊಳ್ಳಲ್ಪಟ್ಟಿದಾರೆ.

ಮೆ|| ಸಿ. ಆರ್. ರೆಡ್ಡಿಯವರನ್ನು ಮೈಸೂರು ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರ ಅಸಿಸ್ಟೆಂಟರಾಗಿ ನೇಮಕಮಾಡಿದೆ.

ಮೆ|| ಜಸ್ಟಿಸ್ ನಂಜುಂಡಯ್ಯನವರು ರಜದಿಂದ ಬಂದು ಕೆಲಸದ ಮೇಲೆ ಹಾಜರಾಗುವ ತಾರೀಖು ಲಾಗಾಯತು ಮೆ|| ಶ್ರೀನಿವಾಸಯ್ಯಂಗಾರ್ ಎಸ್. ಸೆಟ್ಲೂರ್ ಯವರನ್ನು ಒಂದು ವರುಷದ ವರೆಗೆ ಚೀಫ್ ಕೋರ್ಟಿನ ನಾಲ್ಕನೇ ಜಡ್ಜಿಯಾಗಿ ಕೆಲಸನೋಡುವಂತೆ ಶ್ರೀಮನ್ ಮಹಾರಾಜರವರು ನೇಮಕ ಮಾಡಿರುತ್ತಾರೆ.

ರೆವಿನ್ಯೂ ಪ್ರೊಬೇಷನರ್ ಟಿ. ಹನುಮಂತರಾಯರನ್ನು ಬೆಂಗಳೂರು ತಾಲೂಕಿನ ಅಮಲ್ದಾರರಾಗಿ ಬದಲಿ ನೋಡುವಂತೆ ನೇಮಕವಾಗಿದೆ.

ಆಕ್ಟಿಂಗ್ ಅಮಲ್ದಾರ್ ಮೆ|| ಎಸ್. ಅನಂತರಾಮಯ್ಯಂಗಾರ್ರನ್ನು ಹೊನ್ನಾಳಿಯಿಂದ ಕೊಪ್ಪ ತಾಲೂಕಿಗೆ ವರ್ಗಮಾಡಿದ್ದರಿಂದ ಮುಂದೆ ಹೇಳುವ ಬದಲಾವಣೆಗಳನ್ನು ಹುಕುಂಮಾಡಿದೆ :—

(೧) ಹರಿಹರದ ಡೆಪ್ಯುಟಿ ಅಮಲ್ದಾರ್ ಎಂ. ಎಸ್. ಹಯಗ್ರೀವರಾಯರು ಹೊನ್ನಾಳಿ ತಾಲೂಕಿನ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

(೨) ಶಿವಮೊಗ್ಗಾ ತಾಲೂಕ್ ಶಿರಸ್ತೆದಾರ್ ಬಿ. ಗರುಡಾಚಾರ್ರು ಹರಿಹರದ ಡೆಪ್ಯುಟಿ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಸಬ್ ಅ|| ಸರ್ಜನ್ ಮೆ|| ಟಿ. ಎಸ್. ಸಿದ್ದಪ್ಪನವರನ್ನು ತರೀಕೆರೆ ತಾಲೂಕಿನಲ್ಲಿ ಇನಾಕ್ಯುಲೇಷನ್ ಡ್ಯೂಟಿಗೆ ವರ್ಗಮಾಡಿದೆ.

ಪ್ರೊ|| ಅ|| ಕಮಿಷನರ್ ಮೆ|| ಎನ್. ಪಿ. ರಾಜಗೋಪಾಲಾಚಾರ್ರು ಕೋಲಾರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನಲ್ಲಿದ್ದುಕೊಂಡು, ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

ಕಳೆದ ಆಗಸ್ಟ್ ತಾ. ೧೫ ರ ಲಾಗಾಯತು ಮಾರಿಕಣಿವೆ ಡಿವಿಜನನ್ನು ಚಿತ್ರದುರ್ಗದ ಡಿವಿಜನ್‌ಗೆ ಸೇರಿಸಿದ್ದರಿಂದ ಮೆ|| ಪಿ. ಐಯಾಸ್ವಾಮಿ ಐಯರವರು ೪ ನೇ ಕ್ಲಾಸ್ ಅ|| ಎಕ್ಸಿಕ್ಯುಟಿವ್ ಇಂಜನಿಯರಾಗಿಯೂ, ಮೆ|| ಎಫ್. ಎ. ಸ್ಟೀಲ್‌ಯವರು ಹಂಗಾಮಿ ೧ ನೇ ಕ್ಲಾಸ್ ಅ|| ಇಂಜನಿಯರಾಗಿಯೂ, ಮೆ|| ಟಿ. ಜಿ. ಲಕ್ಷ್ಮಣರಾಯರು ೨ ನೇ ಕ್ಲಾಸ್ ಅ|| ಅ|| ಇಂಜನಿಯರಾಗಿಯೂ, ಮೆ|| ಸಿ. ವಿಜಯರಂಗಂ ನಾಯ್ಡು ಯವರು ೩ನೇ ಕ್ಲಾಸ್ ಅ|| ಅ|| ಇಂಜನಿಯರಾಗಿಯೂ ಕೆಲಸ ನೋಡತಕ್ಕದ್ದು.

ಹೊಸ ತಂತಿ ವರ್ತಮಾನಗಳು.

ವಿದೇಶ ವಿಷಯಗಳು.

ದಕ್ಷಿಣ ಆಫ್ರಿಕದ ವಜ್ರದ ಗಣಿಗಳಲ್ಲಿ ಸಿಕ್ಕಿದ ಭಾರೀ ವಜ್ರವನ್ನು ಅಲ್ಲಿನ ಕಂಪನಿಯವರು ಚಕ್ರವರ್ತಿ ಸಾರ್ವಭೌಮರವರಿಗೆ ಒಪ್ಪಿಸಬೇಕೆಂದು ಕಳುಹಿಸಿದ್ದರಷ್ಟೆ. ಇದನ್ನು ಕಾರೀಗಾರರಿಂದ ಎಳು ತುಂಡು ಮಾಡಿಸಿ ಸಾಣೆ ಹಿಡಿಸಿದರು. ಅದನ್ನು ದಿವ್ಯವಾದ ಕಂಠೀಹಾರವಾಗಿ ಕಟ್ಟಿ ಕಳೆದ ಭಾನುವಾರ ಚಕ್ರವರ್ತಿಯವರಿಗೆ ಒಪ್ಪಿಸಿದರು. ಮಹಾರಾಜ್ಞೀಯವರು ಅದನ್ನು ಸ್ವೀಕರಿಸಿ ಧರಿಸಿಕೊಂಡರು. ಚಕ್ರವರ್ತಿಯವರು ಅದನ್ನು ಪರಾಂಬರಿಸಿ "ಸುಂದರವಾಗಿದೆ, ಸುಂದರವಾಗಿದೆ" ಎಂದು ಅಪ್ಪಣೆ ಕೊಡಿಸಿದರು.

ಪರ್ಷಿಯಾ ರಾಜ್ಯದ ಷಾ ಸುಲ್ತಾನರು ಪ್ರಜೆಗಳ ಅಭಿಪ್ರಾಯವನ್ನು ಕೇಳಿದಹಾಗೂ, ಪಾರ್ಲಿಮೆಂಟ್ ಸಭೆಗಳು ತಮಗೆ ಅವಶ್ಯವಿಲ್ಲವೆಂದು ಪ್ರಜೆಗಳು ತಿಳಿಸಿದಹಾಗೂ ಅಪ್ಪಣೆಕೊಟ್ಟು, ಪಾರ್ಲಿಮೆಂಟನ್ನು ಆ ರಾಜ್ಯದಲ್ಲಿ ಸ್ಥಾಪಿಸುವುದಿಲ್ಲವೆಂದು ಹೇಳಿಬಿಟ್ಟರು. ಪಾರ್ಲಿಮೆಂಟನ್ನು ಏರ್ಪಾಡುಮಾಡುವುದು ಮಹಮ್ಮದೀಯರ ಶಾಸ್ತ್ರಕ್ಕೆ ವಿರೋಧವಾದದ್ದರಿಂದ ಆ ಶಾಸ್ತ್ರಕ್ಕೆ ಅನುಸಾರವಾಗಿ ನ್ಯಾಯತೀರ್ಮಾನಮಾಡುವಂಥಾ ಕೋರ್ಟು ಕಚೇರಿಗಳನ್ನು ಸ್ಥಾಪಿಸಿ ರಾಜ್ಯಭಾರ ನಡಿಸುತ್ತೇನೆಂದು ಇಸ್ತಿಹಾರು ಹಾಕಿದಾರೆ.

ಪ್ರಿಟೋರಿಯಾ ಸುಪ್ರೀಂ ಕೋರ್ಟಿನ ಜಡ್ಜಿಗಳು ತೀರ್ಮಾನಿಸಿ ಹೇಳಿದ ಪ್ರಕಾರ ವಾಲ್ಕರ್‌ಸ್ಟ್ರೂಮ್ ಸ್ಟೇಷನಿನಲ್ಲಿದ್ದ ಹಿಂದುಸ್ಥಾನದವರನ್ನೆಲ್ಲಾ ಖುಲಾಸ್ ಮಾಡಿದರು. ಅಲ್ಲಿನ ರೆಜಿಸ್ಟ್ರೇಷನ್ ಕಾನೂನು ಜಾರಿಗೆ ಬರುವುದಕ್ಕೆ ಮೊದಲಿನಿಂದಲೂ ಆ ಜನರು ಟ್ರಾನ್ಸ್‌ವಾಲಿನಲ್ಲಿ ಇದ್ದವರೆಂದು ಗೊತ್ತಾದದ್ದರಿಂದ ಜಡ್ಜಿಯವರು ಅವರನ್ನು ಬಿಡಿಸಿರುತ್ತಾರೆ.

ಹೈದರಾಬಾದಿನಲ್ಲಿ ಪ್ರವಾಹಕ್ಕೆ ಸಿಕ್ಕಿದವರ ಕಷ್ಟ ಪರಿಹಾರಕ್ಕಾಗಿ ಪ್ರಿನ್ಸ್ ಆಫ್ ವೇಲ್ಸ್‌ರವರು ೧,೫೦೦ ರೂಪಾಯಿ ಚಂದಾಕೊಟ್ಟಿದಾರೆ.

ಹಿಂದುಸ್ಥಾನದ ವಿಷಯಗಳು.

ಕೊಲೆಪಾತಕಿಯಾದ ಸತ್ಯೇಂದ್ರನಾಥ ಬೋಸನನ್ನು ಗಲ್ಲಿಗೆ ಹಾಕಿದರು. ಅವನ ಸಂಬಂಧಿಗಳಲ್ಲಿ ೧೦ ಮಂದಿಯನ್ನು ಮಾತ್ರ ಜೈಲಿನೊಳಕ್ಕೆ ಬಿಟ್ಟು, ಅಲ್ಲೇ ಒಂದು ಸ್ಥಳದಲ್ಲಿ ಶವವನ್ನು ಅವರಿಂದ ದಹನಮಾಡಿಸಿದರು. ಬೂದಿಯನ್ನು ಹೊರಕ್ಕೆ ಕೊಡಲಿಲ್ಲ. ಕಲ್ಕತ್ತಾ ಪಟ್ಟಣದಲ್ಲಿ ಕೆಲವು ವಿದ್ಯಾರ್ಥಿಗಳು ಸೇರಿ ಸತ್ಯೇಂದ್ರನಾಥನ ಪಟವನ್ನು ಗುಟ್ಟಾಗಿ ಮೆರವಣಿಗೆಮಾಡಿ ದಹನ ಮಾಡಿದರು. ಕಾನ್‌ಪುರದಲ್ಲಿ ಬಂಗಾಳಿ ವರ್ತಕರು ತಮ್ಮ ಅಂಗಡಿಗಳನ್ನು ಮುಚ್ಚಿದರು.

ಬರ್ದವಾನ್ ಪಟ್ಟಣದಲ್ಲಿ ಪೊಲೀಸಿನವರು ೧೫-೧೬ ವಯಸ್ಸಿನ ಮೂರು ಮಂದಿ ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿದಾರೆ. ಲೆಫ್ಟಿನೆಂಟ್ ಗವರ್ನರವರು ಅಲ್ಲಿಗೆ ಬಂದಾಗ್ಗೆ ಅವರನ್ನು ಕೊಲ್ಲಬೇಕೆಂದಿದ್ದೆವು ಎಂಬದಾಗಿ ಆ ಹುಡುಗರು ಹೇಳುತ್ತಾರೆ. ಅವರ ಬಳಿ ಪಿಸ್ತೂಲೂ, ಮದ್ದು ಗುಂಡೂ, ರಾಜದ್ರೋಹಕರವಾದ ಕೆಲವು ಕಾಗದಗಳೂ ಸಿಕ್ಕಿರುತ್ತವೆ.

ಕಲ್ಕತ್ತೆಯಲ್ಲಿ 'ವಂದೇ ಮಾತರಂ' ಎಂಬ ಪತ್ರಿಕೆ ಅಚ್ಚಾಗುತ್ತಿದ್ದ ಆಫೀಸಿಗೆ ಪೊಲೀಸಿನವರು ನುಗ್ಗಿ ಸರ್ಕಾರದ ಹುಕುಂ ಪ್ರಕಾರ ಅಲ್ಲಿದ್ದ ಯಂತ್ರ ಮೊದಲಾದ ಸಾಮಾನುಗಳನ್ನು ಸೆಂಟ್ರಲ್ ಪೊಲೀಸ್ ಸ್ಟೇಷನ್‌ಗೆ ಸಾಗಿಸಿಕೊಂಡು ಹೋದರು.

ಅರ್ಧಾಣೆ ಬಾಬತು ನಿಕ್ಕಲ್ ನಾಣ್ಯವನ್ನು ಗವರ್ನ್‌ಮೆಂಟಿನವರು ಕಲ್ಕತ್ತೆಯ ಟಂಕಸಾಲೆಯಲ್ಲಿ ಛಾಪಾ ಹಾಕಿಸಿ, ಮಾದರಿಗಾಗಿ ಅಲ್ಲಿನ ವರ್ತಕಮಂಡಲಿಗೆ ಕಳುಹಿಸಿಕೊಟ್ಟಿದಾರೆ. ಆ ನಾಣ್ಯವು ಒಂದಾಣೆಯ ನಾಣ್ಯದ ಹಾಗೇ ಇದೆ; ಅಗಲದಲ್ಲಿ ಮಾತ್ರ ಅದಕ್ಕಿಂತ ಚಿಕ್ಕದು.

ವೈಸ್‌ರಾಯಿ ಲಾರ್ಡ್ ಮಿಂಟೋರವರ ಪುತ್ರಿಯವರನ್ನು ಲಾರ್ಡ್ ಲ್ಯಾನ್ಸ್‌ಡೌನ್‌ರವರ ಕುಮಾರರಿಗೆ ಕೊಟ್ಟು ಜನವರಿ ತಾ|| ೧೫ರಲ್ಲಿ ವಿವಾಹ ನಡಿಯುವಂತೆ ನೇಮಕವಾಗಿದೆ. ಆಗ್ಗೆ ಲಾರ್ಡ್ ಲ್ಯಾನ್ಸ್‌ಡೌನ್‌ರವರ ಪತ್ನಿಯವರು ಸೀಮೆಯಿಂದ ದಯಮಾಡುವರು.

ಬಂಗಾಳಾ ಲೆಫ್ಟಿನೆಂಟ್ ಗವರ್ನರಾದ ಸರ್ ಆಂಡ್ರ್ಯೂ ಫ್ರೇಸರ್ ಯವರನ್ನು ಕೊಲ್ಲಬೇಕೆಂದು ಪ್ರಯತ್ನಪಟ್ಟ ಜಿತೇಂದ್ರನಾಥ ರಾಯ್ ಚೌಧ್ರಿ ಎಂಬ ಯೌವನಸ್ಥನನ್ನು ಕಲ್ಕತ್ತೆಯ ಹೈಕೋರ್ಟ್ ಸೆಷನ್ಸ್ ಜಡ್ಜರು ದರ್ಯಾಪ್ತಿ ಮಾಡುವರು. ಈ ಮೊಕದ್ದಮೆಗೆ ಪ್ರತ್ಯೇಕವಾದ ಜೂರಿ ಪಂಚಾಯತರನ್ನು ನೇಮಿಸಿದಾರೆ. ಅಪರಾಧಿಯು ತಾನು ಆ ಅಪರಾಧ ನಡಿಸಲು ಪ್ರಯತ್ನಪಟ್ಟದ್ದು ಉಂಟೆಂದು ಒಪ್ಪಿಕೊಳ್ಳುತ್ತಾನೆ ಎಂದು ಬ್ಯಾರಿಸ್ಟರ್ ಮೆ|| ಜೇಕಬ್ ಯವರು ಸೋಮವಾರ ಮಧ್ಯಾಹ್ನ ಜಡ್ಜಿಯವರ ಮುಂದೆ ಹೇಳಿದನು.

ರೈತರು ತಿಳಿಯಬೇಕಾದ ವಿಷಯಗಳು.

ಘಾಟಿ ಸುಬ್ರಹ್ಮಣ್ಯದಲ್ಲಿ ದನಗಳ ಪ್ರದರ್ಶನವು.

ದೊಡ್ಡಬಳ್ಳಾಪುರ ತಾಲ್ಲೂಕು ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ಹತ್ತಿರ ಅಲ್ಲಿ ನಡೆಯುವ ಜಾತ್ರೆ ಕಾಲದಲ್ಲಿ ಇದೇ ವರ್ಷ ಡಿಸೆಂಬರು ೨೨ನೇ ತಾರೀಖು ಲಾಗಾಯತು ಒಂದು ದನಗಳ ಪ್ರದರ್ಶನವು ಜರುಗುತ್ತದೆ. ಈ ಪ್ರದರ್ಶನದಲ್ಲಿ ಒಳ್ಳೇ ಜಾತಿಯ ಹೋರಿಗಳು, ಆಕಳುಗಳು, ಉಳುವ ಎತ್ತುಗಳು, ಕುರಿಗಳು, ಕುರಿ, ಮೇಕೆ, ಎಮ್ಮೆ, ಕೋಣ, ಇವುಗಳಿಗೆ ೧೦ ರೂಪಾಯಿ ಲಾಗಾಯತು ೫೦ ರೂಪಾಯಿವರಿವಿಗೆ ಒಟ್ಟು ೩೦೫ ರೂಪಾಯಿನ ೫೪ ನಗದು ಇನಾಮುಗಳು ದೊರೆಯುವವು. ಪ್ರದರ್ಶನಕ್ಕೆ ದಾಖಲಾಗುವ ಪ್ರತಿ ರಾಸಿನ ಮೇಲೂ ಒಂದಾಣೆ ರುಸುಂ ವಸೂಲ್ಮಾಡಲ್ಪಡುತ್ತೆ. ಬಹುಮಾನವನ್ನು ಪಡೆದ ರಾಸಿನ ಮಾಲೀಕರಿಗೆ ನಗದು ಇನಾಂ ಜೊತೆಗೆ ಬಹುಮಾನ ಪತ್ರಿಕೆಯೂ ಸಹ ಕೊಡಲಾದೀತು. ಹೋದ ವರ್ಷ ಬಹುಮಾನವನ್ನು ಪಡೆದ ರಾಸುಗಳಿಗೆ ಈ ವರ್ಷ ಇನಾಮು ದೊರೆಯಲಾರದು. ಪ್ರದರ್ಶನಕ್ಕೆ ಬರುವ ರಾಸುಗಳ ಮಾಲೀಕರು ಮೇವಿಗೆ ತಮ್ಮ ಸ್ವಂತ ಏರ್ಪಾಟು ಇಟ್ಟುಕೊಳ್ಳಬೇಕು. ಈ ಜಾತ್ರೆಗೆ ಅನೇಕ ಜನ ಸೇರುತ್ತಾರಾದ್ದರಿಂದ ರಾಸುಗಳು ಒಳ್ಳೆ ಬೆಲೆಗೆ ಬಿಕರಿಯಾಗಲು ಅವಕಾಶವಿರುತ್ತೆ. ಈ ಪ್ರದರ್ಶನ ವಿಷಯವಾಗಿ ಹೆಚ್ಚು ಸಂಗತಿಗಳನ್ನು ತಿಳಿಯಲಪೇಕ್ಷಿಸುವವರು ದೊಡ್ಡಬಳ್ಳಾಪುರದ ತಾಲ್ಲೂಕು ಅಮಲ್ದಾರ್ರವರಿಗೇ ಆಗಲಿ ಅಥವಾ ಅವರಿಂದ ನೇಮಿಸಲ್ಪಟ್ಟ ಇತರ ಆಫೀಸರಿಗೇ ಆಗಲಿ ಪ್ರದರ್ಶನವು ಶುರುವಾಗುವುದಕ್ಕೆ ಎರಡು ದಿನಗಳು ಮುಂಚಿತವಾಗಿ ಬರೆದು ತಿಳಿದುಕೊಳ್ಳಬಹುದು.

ಜಮೀನಿನ ಅಬಾದಿಗೆ ತಕಾವಿಯ ಸಾಲ.

ಮೈಸೂರು ಗವರ್ನ್ಮೆಂಟಿನವರು ಚಾಲ್ತಿ ಅಂದರೆ ೧೯೦೮—೦೯ ನೇ ಸಾಲಿನಲ್ಲಿ ಸಾಗುವಳಿ ಬಗ್ಗೆ ಭಾವಿಗಳನ್ನು ತೋಡಿಕೊಳ್ಳುವವರಿಗೆ ಸಾಲಕೊಡುವುದಕ್ಕೂ, ಜಮೀನನ್ನು ಉತ್ತಮಸ್ಥಿತಿಗೆ ತರುವ ಬಗ್ಗೆ ಸಾಲಕೊಡುವುದಕ್ಕೂ, ತಕಾವಿ ಅಡ್ವಾನ್ಸು ಕೊಡುವುದಕ್ಕೂ ಒಟ್ಟು ೯೦,೬೫೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ. ಈ ಹಣವನ್ನು ಡಿಸ್ಟ್ರಿಕ್ಟುವಾರು ಹಂಚಿಹಾಕಿರುವುದು ಹ್ಯಾಗಂದರೆ.—ಬೆಂಗಳೂರು ಡಿಸ್ಟ್ರಿಕ್ಟಿಗೆ ೩೦,೪೫೦ ರೂ., ಕೋಲಾರ ೩,೯೦೦ ರೂ., ತುಂಕೂರು ೨೧,೩೦೦ ರೂ., ಮೈಸೂರು ೧೨,೩೦೦ ರೂ., ಹಾಸನ ೧೯,೫೫೦ ರೂ., ಶಿವಮೊಗ್ಗ ೩,೩೦೦ ರೂ., ಕಡೂರು ೩,೫೦೦ ರೂ., ಚಿತ್ರದುರ್ಗ ೧೪,೦೫೦ ರೂ. ಈ ಮೊಬಲಗನ್ನು ಸಂದರ್ಭಾನುಸಾರ ಆಯಾ ಡಿಸ್ಟ್ರಿಕ್ಟುಗಳಿಗೆ ಪುನಹ ಹಂಚುವುದಕ್ಕೆ ರೆವಿನ್ಯೂ ಕಮಿಷನರವರು ಅಧಿಕಾರವುಳ್ಳವರಾಗಿರುತ್ತಾರೆ. ಗತಸಾಲಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಸಾಲ ಪಡೆಯಬೇಕೆಂದು ಬಂದ ಅರ್ಜಿಗಳ ವಿಚಾರದಲ್ಲಿ ಕೆಳ ಅಧಿಕಾರಿಗಳು ಬಹಳ ಪಡಪೋಶಿ ಮಾಡಿದ್ದರಿಂದ ಇದಕ್ಕಾಗಿ ಮುಂಜೂರಾಗಿದ್ದ ಹಣವೆಲ್ಲಾ ಸರ್ಕಾರದಲ್ಲೇ ಉಳಿದುಕೊಂಡಿತು. ಚಿತ್ರದುರ್ಗ ಡಿಸ್ಟ್ರಿಕ್ಟು ವಿನಾ ಉಳಿದ ಡಿಸ್ಟ್ರಿಕ್ಟುಗಳೊಳಗೂ ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಷ್ಟು ಹಣವನ್ನು ತಕ್ಕ ಹಾಗೆ ಸಾಲಕೊಟ್ಟು ಉಪಯೋಗಪಡಿಸಲಿಲ್ಲ. ಆದಕಾರಣ ರೆವಿನ್ಯೂ ಅಧಿಕಾರಿಗಳು ಮುತುವರ್ಜಿ ವಹಿಸಿ, ರೈತರು ತಮ್ಮ ಸಾಗುವಳಿಗೆ ಬೇಕಾಗುವಂಥಾ ಜಲಾಶಯಗಳನ್ನು ಅಭಿವೃದ್ಧಿಮಾಡಿಕೊಳ್ಳುವುದಕ್ಕೋಸ್ಕರ ಈ ಸೌಕರ್ಯಗಳನ್ನು ಸಕಾಲದಲ್ಲಿ ಒದಗಿಸಿಕೊಳ್ಳುವಂತೆ ಅವರಿಗೆ ತಿಳುವಳಿಕೆ ಕೊಟ್ಟು, ಅವರಿಂದ ಬರುವ ಸಾಲದ ದರಖಾಸ್ತುಗಳನ್ನು ಸುಸ್ತಿಮಾಡದೆ ತನಿಖೆಯಿಂದ ಸ್ಯಾಂಕ್ಷನ್ ಮಾಡಬೇಕೆಂತಲೂ, ಮೇಲೆ ಕಂಡ ಮುಂಜೂರಾದ ಮೊಬಲಗುಗಳನ್ನು ಪೂರ್ತಿಯಾಗಿ ಉಪಯೋಗಿಸುವುದಕ್ಕೆ ಸಾಹಸಪಡಬೇಕೆಂತಲೂ ರೆವಿನ್ಯೂ ಕಮಿಷನರವರು ಆಯಾ ಡೆಪ್ಯುಟಿ ಕಮಿಷನರುಗಳಿಗೆ ತಿಳಿಯಪಡಿಸಿರುತ್ತಾರೆ.

ವ್ಯವಸಾಯಕ್ಕೆ ಉಪ್ಪಿನಿಂದ ಆಗುವ ಪ್ರಯೋಜನಗಳು.

ಪ್ರಾಣಿವರ್ಗದಲ್ಲಿರುವ ರೀತಿ ಸಸ್ಯವರ್ಗದಲ್ಲಿಯೂ ಕೂಡ ಆರೋಗ್ಯಸ್ಥಿತಿಯಲ್ಲಿರುವುದಕ್ಕೆ ಉಪ್ಪು ಬಹಳ ಆವಶ್ಯಕವಾದದ್ದು. ಇದು ಒಳ್ಳೇ ಪುಷ್ಟಿಕರವಾದ ಗೊಬ್ಬರವೆಂದು ಸಾವಿರಾರು ಬೇಸಾಯಗಾರರ ಅನುಭವದಲ್ಲಿ ತಿಳಿದು ಬಂದಿರುತ್ತೆ. ಉಪ್ಪಿನ ಉಪಯೋಗದಿಂದ ಭೂಗುಣದಲ್ಲಿ ಯಾವ ರೀತಿ ವ್ಯತ್ಯಾಸಗಳುಂಟಾಗುತ್ತವೆ ಎಂಬ ವಿಚಾರದಲ್ಲಿ ಸಂಪೂರ್ಣವಾಗಿ ಇನ್ನೂ ತಿಳುವಳಿಕೆಗೆ ಬಂದಿರುವುದಿಲ್ಲ. ಅಜಮಾಯಿಷಿಗಳಿಂದ ಗೊತ್ತಾಗಿರುವುದೇನಂದರೆ, ಸಾಮಾನ್ಯವಾಗಿ ಮಳೇ ನೀರಿಗಿಂತಲೂ ಕರಗಿದ ಉಪ್ಪಿನ ಬಲದಿಂದ ಇಪ್ಪತ್ತರಷ್ಟು ಹೆಚ್ಚಾಗಿ ಭೂಮಿಯು ಸಡಲಿ, ಅದರಲ್ಲಿರತಕ್ಕ ಪದಾರ್ಥಗಳು ಸಸ್ಯಾಹಾರವಾಗಿ ಒದಗುತ್ತವೆ. ಉಪ್ಪಿನ ಉಪಯೋಗದಿಂದ ಜಮೀನನ್ನು ಹಸನು ಮಾಡುವುದು ಸುಲಭವಾಗುತ್ತದಲ್ಲದೆ ಶಿಶಿರಕಾಲದಲ್ಲಿಯೂ ಕೂಡ ಭೂಮಿಯು ಮೃದುವಾಗಿಯೇ ಇರುತ್ತದೆ. ಉಪ್ಪು ಅಂತರಿಕ್ಷದಲ್ಲಿರುವ ತನುವನ್ನು ಹೀರಿ, ಭೂಮಿಯಲ್ಲಿ ನಿಲ್ಲುವ ರೀತಿ ಮಾಡುತ್ತದೆ. ಇದರಿಂದ ಮಳೆ ಕಡಮೆಯಾದರೂ ತಡೆಯುತ್ತದೆ. ಭೂಮಿಯಲ್ಲಿ ತಕ್ಕಷ್ಟು ಉಪ್ಪಿದ್ದರೆ, ಇದು ಅಂತರಿಕ್ಷದಲ್ಲಿರುವ ಅಮೋನಿಯಾವನ್ನು ಹೀರುವುದರಿಂದ ಇದರಲ್ಲಿ ಸಸ್ಯಾಹಾರಭೂತವಾದ ನೈಟ್ರೋಜನ್ ಪದಾರ್ಥವು ವೃದ್ಧಿಯಾಗುವುದೆಂದು ತಿಳಿದುಬರುತ್ತೆ. ಜಮೀನಿಗೆ ಹೆಚ್ಚಾಗಿ ಉಪ್ಪನ್ನು ಕೊಡುವುದರಿಂದ ಕಳೆಗಳನ್ನು ಮತ್ತು ಹುಳಗಳನ್ನು ನಾಶಪಡಿಸಬಹುದು. ಸಾಮಾನ್ಯವಾಗಿ ಉಪ್ಪು ಉಪಯೋಗಿಸಿದ ಜಮೀನಿನಲ್ಲಿ ಕಾಳು ಉತ್ತಮವಾಗಿಯೂ, ಬಣ್ಣದಲ್ಲಿ ಒಂದೇ ಸಮನಾಗಿಯೂ, ದಪ್ಪನಾಗಿಯೂ ಇರುತ್ತದೆ. ಹುಲ್ಲೂ ಧಾನ್ಯವೂ ಸಹ ಸ್ವಲ್ಪ ಬಿಳಿತರವಾಗುತ್ತದೆ. ಸಾಮಾನ್ಯವಾಗಿ ಎಲ್ಲಾ ಪೈರಿಗೂ ಉಪ್ಪು ಪ್ರಯೋಜನಕಾರಿ ಎಂದು ಅನುಭವದಿಂದ ತಿಳಿದು ಬಂದಿರುತ್ತೆ. ಉಪ್ಪನ್ನು ಸುಮಾರಾಗಿ ಉಪಯೋಗಿಸುವುದರಿಂದ ಗೊಬ್ಬರದಲ್ಲಿರುವ ಕಸ ಕಡ್ಡಿಗಳು ಕೊಳೆಯುವುದಕ್ಕೆ ಅನುಕೂಲವಾಗಿರುತ್ತೆ. ಆದರೆ ಕಸ ಕಡ್ಡಿಗಳು ಅತಿ ಜಾಗ್ರತೆಯಾಗಿ ಕೊಳೆಯುವುದನ್ನು ಇದು ತಪ್ಪಿಸುತ್ತದಲ್ಲದೆ ಅಮೋನಿಯಾ ಪದಾರ್ಥವು ಹಾರಿಹೋಗದ ರೀತಿ ತಡೆಯುತ್ತದೆ. ಮತ್ತು ಇದರಿಂದ ಗೊಬ್ಬರದಲ್ಲಿ ವೃದ್ಧಿಯಾಗುವ ಅಸಂಖ್ಯಾತವಾದ ಹುಳಗಳು ನಾಶ ಹೊಂದುತ್ತವೆ. ಒಂದೇ ಸಲ ಉಪ್ಪನ್ನು ಹೆಚ್ಚಾಗಿ ಉಪಯೋಗಿಸುವುದಕ್ಕಿಂತಲೂ ಆಗಾಗ್ಗೆ ಸುಮಾರಾಗಿ ಉಪಯೋಗಿಸುವುದು ಒಳ್ಳೇದು. ಅನುಭವಸ್ಥರಾದ ಬೇಸಾಯಗಾರರು ಒಂದು ಎಕರೆಗೆ ಸುಮಾರು ೨೩ ಮಣದಂತೆ (ಇಲ್ಲಿನ) ಉಪ್ಪನ್ನು ವಸಂತ ಋತುವಿನಲ್ಲಿ ಒಂದು ಸಲವೂ, ಹಿಮಕಾಲದಲ್ಲಿ ಒಂದು ಸಲವೂ ಉಪಯೋಗಿಸುತ್ತಾರೆ. ನೆನೆದಿರುವ ಜೇಡಿ ಭೂಮಿಗೆ ಉತ್ತ ಮೇಲೆ ಬಿತ್ತನೆ ಜೊತೆಯಲ್ಲಿ ಉಪ್ಪನ್ನು ಹಾಕಬಾರದು. ಒಂದು ಗಜ ಚದರಕ್ಕೆ ಒಂದು ಹಿಡಿ ಉಪ್ಪು ಉಪಯೋಗಿಸಿದರೆ ಸಾಕು.

ಗತಿಸಿದ ಸರ್ ವಿ. ಭಾಷ್ಯಂ ಐಯಂಗಾರ್ರು.

ಮದರಾಸ್ ಪಟ್ಟಣದಲ್ಲಿ ಪ್ರಸಿದ್ಧ ವಕೀಲರಾಗಿದ್ದ ಸರ್ ವೆಂಬಾಕಂ ಭಾಷ್ಯಂ ಐಯಂಗಾರ್, ನೈಟ್, ಸಿ. ಐ. ಇ. ಯವರು ಕಳೆದ ೧೮ನೇ ತಾ. ಬುಧವಾರ ಸಾಯಂಕಾಲ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ತಾ. ೧೬ನೇ ಸೋಮವಾರ ಮಧ್ಯಾಹ್ನ ಹೈಕೋರ್ಟಿನಲ್ಲಿ ಒಂದು ಭಾರೀ ಮೊಕದ್ದಮೆಯನ್ನು ಹಿಡಿದು ಮೂರು ಗಂಟೆಗಳ ಕಾಲ ವಿಕಲ್ಪಕರವಾಗಿ ವಾದಿಸಿದರು. ಮಧ್ಯಾಹ್ನ ೩ ಗಂಟೆಯ ಹೊತ್ತಿಗೆ ಅವರಿಗೆ ಇದಕ್ಕಿದ್ದಹಾಗೇ ವಿಶೇಷ ನಿಶ್ಶಕ್ತಿಯುಂಟಾಯಿತು. ಜ್ಞಾನ ತಪ್ಪಿಹೋಯಿತು. ಕೋರ್ಟಿನಲ್ಲೇ ಅವರನ್ನು ಒಂದು ಕೊಠಡಿಯೊಳಗೆ ಮಲಗಿಸಿ ಡಾಕ್ಟರನ್ನು ಕರಸಿ ಚಿಕಿತ್ಸೆ ಮಾಡಿಸಿದರೂ ಅವರಿಗೆ ಪ್ರಜ್ಞೆ ಉಂಟಾಗಲಿಲ್ಲ. ತರುವಾಯ ಅಲ್ಲಿಂದ ಅವರನ್ನು ಮನೆಗೆ ಕರೆದುಕೊಂಡುಹೋಗಿಬಿಟ್ಟರು. ಮಂಗಳವಾರವೂ ಬುಧವಾರವೂ ಅವರಿಗೆ ಎಷ್ಟು ಚಿಕಿತ್ಸೆ ಮಾಡಿದಾಗ್ಯೂ ಬುದ್ಧಿ ಶಕ್ತಿಯು ಉಂಟಾಗದೆಹೋಗಿ, ಬುಧವಾರ ಸಾಯಂಕಾಲ ೭ ಗಂಟೆಗೆ ಕಾಲವಾದರು.

ಸರ್ ಭಾಷ್ಯಂ ಐಯಂಗಾರ್ರು ಚಂಗಲ್ಪಟ್ ಡಿಸ್ಟ್ರಿಕ್ಟಿಗೆ ಸೇರಿದ ವೆಂಬಾಕಂ ಗ್ರಾಮದಲ್ಲಿ ಮೆ|| ವಿ. ವರದಾಚಾರ್ರ ಎರಡನೇ ಕುಮಾರರಾಗಿ ಜನಿಸಿ, ೧೯ನೇ ವಯಸ್ಸಿನಲ್ಲಿ ೧೮೬೪ನೇ ಇಸವಿಯಲ್ಲಿ ಬಿ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ರೆಜಿಸ್ಟ್ರೇಷನ್ ಇಲಾಖೆಯಲ್ಲಿ ನೌಕರಿಗೆ ಸೇರಿ, ಕೆಲಸಮಾಡುತ್ತಲೂ ಲಾಯರ್ ಪರೀಕ್ಷೆಗೆ ಮನೆಯಲ್ಲೇ ಓದುತ್ತಲೂ ಬಂದು, ೧೮೬೭ ರಲ್ಲಿ ಮೊದಲನೇ ತರಗತಿಯಲ್ಲಿ ಮೊದಲನೆಯವರಾಗಿ ತೇರ್ಗಡೆ ಹೊಂದಿದರು. ಅನಂತರ ಅವರು ಸರ್ಕಾರಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಲಾಯರಾಗಿ ವಕಾಲತ್ತು ನಡಿಸಲಾರಂಭಿಸಿದರು. ಇವರ ವಿಶೇಷವಾದ ಶಕ್ತಿಸಾಮರ್ಥ್ಯಾದಿಗಳನ್ನು ಮದರಾಸ್ ಹೈಕೋರ್ಟಿನ ಅನೇಕ ಜಡ್ಜಿಗಳು ನೋಡಿ ಕೊಂಡಾಡಿರುತ್ತಾರೆ. ಇವರ ದೆಸೆಯಿಂದ ಸರ್ ಭಾಷ್ಯಂ ಐಯಂಗಾರ್ರ ಕೀರ್ತಿಯು ವಿಸ್ತಾರವಾಗಿ ಹರಡಿತು. ಭಾರೀ ಮೊಕದ್ದಮೆಗಳಲ್ಲೆಲ್ಲಾ ಇವರೇ ವಕಾಲತ್ತು ನಡಿಸುತ್ತಾ ಬಹಳ ಧನವನ್ನು ಸಂಪಾದನೆ ಮಾಡಿದರು. ಕಡೆಯ ತನಕ ಅವರ ಕೀರ್ತಿಗಾಗಲಿ, ವರಮಾನಕ್ಕಾಗಲಿ ಸ್ವಲ್ಪವೂ ಕುಂದಕವಾಗಲಿಲ್ಲ.

ಗವರ್ನ್ಮೆಂಟಿನವರೂ ಪ್ರಜೆಗಳೂ ಸರ್ ಭಾಷ್ಯಂ ಐಯಂಗಾರ್ರನ್ನು ತುಂಬಾ ಗೌರವವಾಗಿಯೂ ಪ್ರೀತಿಯಿಂದಲೂ ಕಾಣುತ್ತಾ ಬಂದರು. ೧೮೯೭ನೇ ಇಸವಿಯಲ್ಲಿ ಗವರ್ನರವರ ಮಂತ್ರಾಲೋಚನಾ ಸಭೆಯಲ್ಲಿ ಇವರಿಗೆ ಮೆಂಬರ ಕೆಲಸವಾಯಿತು. ಅಲ್ಲಿಂದೀಚೆಗೂ ಅವರು ಆ ಮೆಂಬರ ಸ್ಥಾನಕ್ಕೆ ಅನೇಕ ವರುಷಗಳ ತನಕ ನೇಮಿಸಲ್ಪಡುತ್ತಲೇ ಇದ್ದರು. ಆಗಾಗ್ಗೆ ಕಾನೂನುಗಳನ್ನು ಹಿಡಿದು ಚರ್ಚಿಸುವುದರಲ್ಲೂ ಉತ್ಕೃಷ್ಟವಾದ ಸಲಹೆಗಳನ್ನು ಕೊಡುವುದರಲ್ಲೂ ಅವರು ತುಂಬಾ ಸಮರ್ಥರಾಗಿದ್ದರೆಂಬುದನ್ನು ಗವರ್ನ್ಮೆಂಟಿನವರೂ ಪ್ರಜೆಗಳೂ ಒಪ್ಪಿಕೊಂಡಿದ್ದಾರೆ. ಆ ಸಂದರ್ಭದಲ್ಲಿ ಸರ್ ಭಾಷ್ಯಂ ಐಯಂಗಾರ್ರು ಒಂದು ಹೊಸ ಕಾನೂನಿನ ಮಸೂದೆಯನ್ನು ಮಾಡಿ, ಸ್ವೇಚ್ಛೆಯಿಂದ ಮಂತ್ರಾಲೋಚನಾ ಸಭೆಯಲ್ಲಿ ಚರ್ಚೆಗೆ ತಂದು, ಮೆಂಬರುಗಳನ್ನು ಒಪ್ಪಿಸಿ ಪ್ಯಾಸ್ಮಾಡಿಸಿದರು. ಆ ಕಾನೂನಿನ ಮುಖ್ಯಾಭಿಪ್ರಾಯವೇನೆಂದರೆ—ಹಿಂದೂ ಸಂಸಾರದಲ್ಲಿ ಪಿತ್ರಾರ್ಜಿತವಾದ ಆಸ್ತಿಯ ವಿನಿಯೋಗದಿಂದ ಮಗನು ವಿದ್ಯಾಸಂಪಾದನೆಯನ್ನು ಮಾಡಿ, ಸ್ವಸಾಮರ್ಥ್ಯದಿಂದ ಐಶ್ವರ್ಯವಂತನಾದರೆ ಅವನ ಐಶ್ವರ್ಯದಲ್ಲಿ ಆ ಸಂಸಾರಕ್ಕೆ ಸೇರಿದ ಇತರರ್ಯಾರಿಗೂ ಪಾಲುಕೊಡಬೇಕಾದದ್ದಿಲ್ಲ. ಸಂಪಾದಿಸಿದವನೊಬ್ಬನೇ ತನ್ನ ಹೆಂಡತಿ ಮಕ್ಕಳಿಗೆ ತನ್ನ ಆಸ್ತಿಯನ್ನು ಬಿಟ್ಟುಹೋಗುವುದಕ್ಕೂ, ಇವರಲ್ಲದೆ ಅನ್ಯಾನ್ಯ ದಾಯಾದಿಗಳೂ ಆ ಆಸ್ತಿಗೆ ಪಾಲುಗಾರರಾಗ ಕೂಡದೆನ್ನುವುದಕ್ಕೂ ಈ ಕಾನೂನಿನಲ್ಲಿ ಅವಕಾಶವೂ ನಿಬಂಧನೆಗಳೂ ಉಂಟು ಮಾಡಲ್ಪಟ್ಟವು. ಇಂಥಾ ಕಾನೂನು ಗವರ್ನರವರ ಮಂತ್ರಾಲೋಚನಾ ಸಭೆಯಲ್ಲಿ ಚರ್ಚೆಯಾಗುತ್ತಿದ್ದಾಗ ಪ್ರಜೆಗಳು ಆ ರೀತಿ ಕಾನೂನು ಆಗುವುದು ಹಿಂದೂ ಧರ್ಮಶಾಸ್ತ್ರ ವಿಧಿಗಳಿಗೂ, ಹಿಂದೂ ಸಂಸಾರಗಳ ಕಟ್ಟುಪಾಡಿಗೂ ದೊಡ್ಡ ವಿರೋಧವಾಗುತ್ತದೆಂದು ಅಭಿಪ್ರಾಯಪಟ್ಟರು. ಆದರೂ ಈ ಕಾನೂನು ಮಂತ್ರಾಲೋಚನಾ ಸಭೆಯಲ್ಲಿ ಪ್ಯಾಸಾಯಿತು. ಅದರ ಮೇಲೆ ಪ್ರಜೆಗಳಿಗೆ ಈ ಕಾನೂನು ಸಮ್ಮತವಾಗಿಲ್ಲವೆಂದು ಗವರ್ನರವರು ತಿಳಿದುಕೊಂಡು, ಆ ಕಾನೂನನ್ನು ಅವಶ್ಯವಿಲ್ಲವೆಂದು ವಜಾಮಾಡಿಬಿಟ್ಟರು. ಸರ್ ಭಾಷ್ಯಂ ಐಯಂಗಾರ್ರು ಲಾಯರಾಗಿಯೂ, ಮಂತ್ರಾಲೋಚನಾ ಸಭೆಯ ಮೆಂಬರಾಗಿಯೂ ತುಂಬಾ ಪ್ರಾಶಸ್ತ್ಯವನ್ನು ಸಂಪಾದಿಸುತ್ತಾ ಬಂದದ್ದನ್ನು ನೋಡಿ, ಗವರ್ನ್ಮೆಂಟಿನವರು ಅವರಿಗೆ ಘನತರವಾದ ಬಿರುದುಗಳನ್ನು ಮೇಲೆಮೇಲಾಗಿ ದಯಪಾಲಿಸಿದರು. ೧೮೮೭ ನೇ ಇಸವಿಯಲ್ಲಿ ರಾಯ ಬಹದೂರ್ ಎಂಬ ಬಿರುದೂ. ೧೮೯೮ ರಲ್ಲಿ ದಿವಾನ್ ಬಹದೂರ್ ಮತ್ತು ಸಿ. ಐ. ಇ ಎಂಬ ಬಿರುದುಗಳೂ ಕೊಡೋಣಾದವು. ಇಷ್ಟೇ ಅಲ್ಲ. ಐದು ವರುಷದ ಮೇಲೆ ೧೯೦೩ ನೇ ಇಸವಿಯಲ್ಲಿ ಡಿಲ್ಲಿ ಪಟ್ಟಣದಲ್ಲಿ ನಡೆದ ಕಾರೊನೇಷನ್ ದರ್ಬಾರ್ ಜ್ಞಾಪಕಾರ್ಥವಾಗಿ ಇಂಡಿಯಾ ಗವರ್ನ್ಮೆಂಟಿನವರು ಸರ್ ಭಾಷ್ಯಂ ಐಯಂಗಾರ್ರಿಗೆ ಮಹಾ ಗೌರವಯುಕ್ತವಾದ ನೈಟ್ ಎಂಬ ಬಿರುದನ್ನು ದಯಪಾಲಿಸಿ, ಅವರ ಜೀವಮಾನದ ತನಕ ಅವರಿಗೆ ಒಂದು ಜಹಗೀರಿಯನ್ನೂ ಅನುಭವಿಸುವಂತೆ ಕೊಟ್ಟರು. ಅನೇಕ ವೇಳೆ ಗವರ್ನ್ಮೆಂಟಿನವರು ಇವರನ್ನು ಪ್ರಜಾಪಕ್ಷದ ಮೆಂಬರಾಗಿ ಹಲವು ಕಮಿಟಿಗಳಿಗೆ ನೇಮಿಸಿಕೊಂಡು, ಇವರ ಅಭಿಪ್ರಾಯಗಳನ್ನು ಕೇಳಿ ಅಂಗೀಕರಿಸುತ್ತಿದ್ದರು. ಗವರ್ನ್ಮೆಂಟಿನವರು ಈಚೆಗೆ ಜಾರಿಗೆ ತಂದಿರುವ ಅನೇಕ ಕಾನೂನುಗಳಲ್ಲಿ ಸರ್ ಭಾಷ್ಯಂ ಐಯಂಗಾರ್ರು ಕೊಟ್ಟ ಸಲಹೆಗಳು ಅಡಕವಾಗಿರುವವೆನ್ನುವುದಕ್ಕೆ ಸಂದೇಹವಿಲ್ಲ. ಅವರು ಲಾಯರಾಗಿಯೇ ಕಡೇ ತನಕ ಇದ್ದರೆಂದು ತಿಳಿಯಬಾರದು. ಅವರು ಕೆಲವು ಕಾಲ ಅಡ್ವೊಕೇಟ್ ಜನರಲ್ರಾಗಿಯೂ ಇದ್ದರು. ಈ ನೌಕರಿಯು ಯಾವಾಗಲೂ ಯೂರೋಪಿಯನ್ ಬ್ಯಾರಿಸ್ಟರುಗಳಿಗೇ ದೊರಕುತ್ತಾ ಬಂದಿದೆಯಾದರೂ, ಸರ್ ಭಾಷ್ಯಂ ಐಯಂಗಾರ್ರ ಶಕ್ತಿ ಸಾಮರ್ಥ್ಯಾದಿಗಳನ್ನು ನೋಡಿ, ಆ ನೌಕರಿಯನ್ನು ಕೂಡ ಇವರಿಗೆ ವಹಿಸಿದ್ದರು. ಇವರ ಹಿಂದೆ ದೇಶೀಯ ವಕೀಲರ್ಯಾರೂ ಈ ನೌಕರಿಯನ್ನು ಸಂಪಾದಿಸಿಕೊಂಡಿರಲಿಲ್ಲ. ಈ ಕೆಲಸವನ್ನು ಅವರು ಬಹು ತೃಪ್ತಿಕರವಾಗಿಯೂ ಸ್ವತಂತ್ರವಾಗಿಯೂ ಮಾಡಿದ್ದನ್ನು ನೋಡಿ ಗವರ್ನ್ಮೆಂಟಿನವರು ಸಂತೋಷಪಟ್ಟು, ಅವರಿಗೆ ಮದರಾಸ್ ಹೈಕೋರ್ಟಿನಲ್ಲಿ ೧೯೦೧ನೇ ಇಸವಿಯಲ್ಲಿ ಜಡ್ಜಿಯ ಕೆಲಸವನ್ನು ದಯಪಾಲಿಸಿದರು. ಇವರು ವಯೋಧಿಕರಾಗಿದ್ದದ್ದರಿಂದ ಆ ಕೆಲಸವನ್ನು ಬಹುಕಾಲ ನಿರ್ವಹಿಸಲಾಗದೆ ಮೂರು ವರುಷದೊಳಗೆ ಆ ಕೆಲಸಕ್ಕೆ ರಾಜೀನಾಮೆ ಕೊಡಬೇಕಾಯಿತು. ಅಷ್ಟು ಸ್ವಲ್ಪವಾದ ಅವಧಿಯಲ್ಲೇ ಸರ್ ಭಾಷ್ಯಂ ಐಯಂಗಾರ್ರು ತಮ್ಮಲ್ಲಿದ್ದ ನ್ಯಾಯಶಾಸ್ತ್ರ ಪರಿಜ್ಞಾನವನ್ನೂ ತಮ್ಮ ವಿಶೇಷವಾದ ಸಾಮರ್ಥ್ಯಾದಿಗಳನ್ನೂ ಅವರು ತೀರ್ಮಾನ ಮಾಡಿರುವಂಥಾ ಅನೇಕ ಮೊಕದ್ದಮೆಗಳಲ್ಲಿ ಪ್ರಕಾಶಪಡಿಸಿರುತ್ತಾರೆ. ಈ ಜಡ್ಜಮೆಂಟುಗಳು ಇತರ ಅನೇಕಾನೇಕ ಜಡ್ಜಿಗಳಿಗೆ ಅನುಸರಣೀಯಗಳಾಗಿರುತ್ತವೆ. ಸರ್ ಭಾಷ್ಯಂ ಐಯಂಗಾರ್ರು ಹೈಕೋರ್ಟ್ ಜಡ್ಜಿಯ ಕೆಲಸಕ್ಕೆ ರಾಜೀನಾಮೆ ಕೊಟ್ಟ ಮೇಲೆ ಮತ್ತೆ ಲಾಯರಾಗಿ ಮೊಕದ್ದಮೆಗಳನ್ನು ಹಿಡಿದು ಅವಸಾನಕಾಲದ ತನಕ ವಾದಿಸುತ್ತಾ ಬಂದರು. ಇಂಥಾ ದೊಡ್ಡ ಮನುಷ್ಯರು ಕಾಲವಾದ ಮರುದಿನ ಮದರಾಸ್ ಪಟ್ಟಣದ ಕೋರ್ಟುಗಳಲ್ಲಿ ಜಡ್ಜಿಗಳೂ ಲಾಯರುಗಳೂ ಅವರ ಗುಣಕಥನವನ್ನು ಮಾಡಿ, ತುಂಬಾ ವಿಷಾದಪಟ್ಟು ಕೋರ್ಟುಗಳನ್ನು ಮುಚ್ಚಿಬಿಟ್ಟರು. ಈಚೆಗೆ ಇವರ ಮರಣದ ವೃತ್ತಾಂತವನ್ನು ಕೇಳಿ ದಕ್ಷಿಣ ದೇಶದ ಅನೇಕಾನೇಕರು ವ್ಯಸನಪಟ್ಟು ದುಃಖಸೂಚಕವಾದ ವರ್ತಮಾನಗಳನ್ನು ಅವರ ಪತ್ನೀ ಪುತ್ರಾದಿಗಳಿಗೆ ಕಳುಹಿಸುತ್ತಲಿದಾರೆ. ಸರ್ ಭಾಷ್ಯಂ ಐಯಂಗಾರ್ರ ಹೆಸರನ್ನು ಶಾಶ್ವತಪಡಿಸುವ ವಿಷಯದಲ್ಲಿ ಆಗಲೇ ಅನೇಕ ಜಮೀನ್ದಾರರೂ ದೊಡ್ಡ ಮನುಷ್ಯರೂ ಲಾಯರುಗಳೂ ಪ್ರಯತ್ನಪಡುತ್ತಿರುವರು.

ಸರ್ ಭಾಷ್ಯಂ ಐಯಂಗಾರ್ರಿಗೆ ವಯಸ್ಸಾದ ಪತ್ನಿಯೂ, ಮೂರು ಮಂದಿ ಗಂಡು ಮಕ್ಕಳೂ, ನಾಲ್ವರು ಹೆಣ್ಣು ಮಕ್ಕಳೂ ಇರುವರು. ಅವರ ಹಿರಿಯ ಮಗನಾದ ಮೆ|| ರಂಗಸ್ವಾಮಯ್ಯಂಗಾರ್ರು ಮೈಸೂರು ಗವರ್ನ್ಮೆಂಟಿನ ಇಂಜಿನಿಯರ್ ಇಲಾಖೆಯಲ್ಲಿ ಎಗ್ಜಿಕ್ಯುಟಿವ್ ಇಂಜನಿಯರಾಗಿರುತ್ತಾರೆ. ಎರಡನೇ ಕುಮಾರನಿಗೆ ಪೋಸ್ಟ್ ಆಫೀಸ್ ಇಲಾಖೆಯಲ್ಲಿ ಪ್ರೊಬೇಷನರಿ ಸೂಪರಿಂಡೆಂಟ ಕೆಲಸವಿದೆ. ಮೂರನೆಯ ಮಗನು ಇನ್ನೂ ವಿದ್ಯಾಭ್ಯಾಸಂಗ ಮಾಡುತ್ತಿದಾನೆ. ಹೆಣ್ಣು ಮಕ್ಕಳೆಲ್ಲರಿಗೆ ಮದುವೆಯಾಗಿದೆ. ಇವರ ಗಂಡಂದಿರು ಮದರಾಸಿನಲ್ಲಿ ಲಾಯರಾಗಿ ವಕಾಲತ್ತು ನಡಿಸುತ್ತಾರೆ. ಸರ್ ಭಾಷ್ಯಂ ಐಯಂಗಾರ್ರ ಅಣ್ಣನು ಮೆ|| ವಿ. ರಾಜಗೋಪಾಲಾಚಾರ್ರು ಗವರ್ನ್ಮೆಂಟ್ ಪೆನ್ಷನ್ದಾರರಾಗಿಯೂ, ತಮ್ಮನು ದಿವಾನ್ ಬಹದ್ದೂರ್ ವಿ. ರಾಘವಾಚಾರ್ರು ಗವರ್ನ್ಮೆಂಟಿನಲ್ಲಿ ತಮಿಳು ಭಾಷಾಂತರ ಮಾಡತಕ್ಕ ಅಧಿಕಾರಿಯಾಗಿಯೂ ಇರುವರು. ಅವರ ಸಹೋದರಿಯೇ ಮೈಸೂರು ಸಂಸ್ಥಾನದ ಮೊದಲನೇ ದಿವಾನ್ರಾಗಿದ್ದ ಲೇಟ್ ಮೆ|| ಸಿ. ರಂಗಾಚಾರ್ಲು, ಸಿ. ಐ. ಇ. ಯವರ ಪತ್ನೀಯವರು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಗಮನಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್.

ಚನ್ನರಾಯಪಟ್ಟಣ ತಾಲ್ಲೂಕು ಹಿರಿಸಾವೆಯ ಸ್ಕೂಲು.

ಅಯ್ಯಾ,

ಈ ಹಿರಿಸಾವೆ ಗ್ರಾಮದಲ್ಲಿ ಸರ್ಕಾರದವರು ದೇಣುಮಾಡಿ ೧,೩೦೦ ರೂಪಾಯಿ ವರೆಗೆ ಮುಟ್ಟಿಸಿ ತಯಾರುಮಾಡಿಸಿರುವ ಕನ್ನಡ ಸ್ಕೂಲ್ ಕಟ್ಟಡವು ಸುಮಾರು ೫೦ ಜನ ಬಾಲಕರು ಕೂರುವಷ್ಟು ಅನುಕೂಲವಾಗಿತ್ತು. ಈ ಸ್ಕೂಲಿನ ಹೆಡ್ ಮಾಸ್ಟರು ಮೆ|| ಹಾಸನದ ವೆಂಕಟರಾಮಯ್ಯನವರ ವಿದ್ಯಾಪ್ರೋತ್ಸಾಹದಿಂದ ೪ ವರುಷಗಳಿಂದ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿ ೧೫೦ ರ ವರೆಗೆ ಆಯಿತು. ಪ್ರತಿ ವರುಷವೂ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಕೆಲವು ಬಾಲಕರು ತೇರ್ಗಡೆ ಹೊಂದುತ್ತಿದಾರೆ. ೫೦ ಜನ ವಿದ್ಯಾರ್ಥಿಗಳು ಕೂರುವ ಸ್ಥಳದಲ್ಲೇ ೭ ಕ್ಲಾಸ್ ವಿದ್ಯಾರ್ಥಿಗಳಿಗೂ ಪಾಠ ನಡಿಯುತ್ತ, ಬಾಲಕರಿಗೆ ಬಹು ಅನಾನುಕೂಲವಾಗುತ್ತಿತ್ತು. ಇದನ್ನು ನೋಡಿ ಇಲ್ಲಿರುವ ಮೆ|| ಎಚ್. ರಾಮಯ್ಯನವರು ತಮ್ಮ ಖಾಸಗಿಯಿಂದ ೩೦೦ ರೂಪಾಯಿ ಮೇಲೆ ವೆಚ್ಚಮಾಡಿ, ಸುಮಾರು ೮೦ ಜನ ಕೂರುವಷ್ಟು ವಿಸ್ತಾರವುಳ್ಳ ಒಂದು ಕಟ್ಟಡವನ್ನು ಕಟ್ಟಿಸಿ, ಈ ಮಾಹೆ ೧೩ನೇ ತಾ. ಶುಕ್ರವಾರ ಈ ಕಟ್ಟಡಕ್ಕೆ ಅನೇಕ ಶೃಂಗಾರದಿಗಳಿಂದ ಗ್ರಾಮದ ಮುಖಂಡರುಗಳೂ ಸ್ಕೂಲ್ ಮೆಂಬರೇ ಮೊದಲಾದವರ ಸಮಕ್ಷಮ ಧರ್ಮಾರ್ಥವಾಗಿ ಸ್ಕೂಲ್ ಇರುವವರಿಗೂ ಉಪಯೋಗಿಸಿಕೊಳ್ಳಬಹುದೆಂದು ಇವರ ಬೀಗದ ಕೈಯನ್ನು ಹೆಡ್ ಮಾಸ್ಟರವರ ವಶಕ್ಕೆ ಒಪ್ಪಿಸಿ, ಸಭಿಕರನ್ನು ಪಾನ್ ಸುಪಾರಿ ಗಂಧ ಪುಷ್ಪಗಳಿಂದಲೂ ಬಾಲಕರನ್ನು ಅನೇಕ ತಿಂಡಿಗಳಿಂದಲೂ ತೃಪ್ತಿಗೊಳಿಸಿದರು. ಅನಂತರ ನಮ್ಮ ದೇಶಾಧಿಪರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರ ಪ್ರತಿಮೆಯನ್ನು ಅನೇಕ ಅಲಂಕಾರಗಳಿಂದ ಮಾಡಿಸಿ ವಾದ್ಯಘೋಷದೊಡನೆ ಸ್ಕೂಲ್ ಬಾಲಕರಿಂದ ಮಂಗಳವಂ ಹಾಡಿಸಿದರು. ಈ ಗ್ರಾಮದಲ್ಲಿ ಸ್ಕೂಲ್ ಬಾಲಕರಿಗೆ ಉಂಟಾಗಿದ್ದ ತೊಂದರೆಯನ್ನು ತಪ್ಪಿಸಿ ಅನುಕೂಲಮಾಡಿಕೊಟ್ಟ ಈ ಮಹನೀಯರಾದ ಮೆ|| ರಾಮಯ್ಯನವರನ್ನು ಎಲ್ಲರೂ ವಂದಿಸುವರು.

ಗ್ರಾಮಸ್ಥ.

ದೊಡ್ಡಬಳ್ಳಾಪುರದಲ್ಲಿ ನಡೆದ ಪರೀಕ್ಷೆಯು.

ಅಯ್ಯಾ,

ದಯಾಳುಗಳೂ ವಿದ್ಯಾನಿಧಿಗಳೂ ಆದ ಹಜರತ್ ಭಾಭಾ ಸಾಹೇಬರೂ, ಸರ್ಕಲ್ ಇನ್ಸ್ಪೆಕ್ಟರ್ ಮೆ|| ಸಿ. ಕೃಷ್ಣರಾಯರೂ ದೊಡ್ಡಬಳ್ಳಾಪುರದಲ್ಲಿಯೂ ಒಂದು ಪರೀಕ್ಷಾ ಸೆಂಟರನ್ನು ಈ ವರ್ಷವೇ ಹೊಸದಾಗಿ ನಿಯಮಿಸಿಕೊಟ್ಟರು. ಈ ಸೆಂಟರಿಗೆ ೭೩ ಜನರು ದರಖಾಸ್ತುಮಾಡಿದ್ದರು. ಇಲ್ಲಿ ಅಕ್ಟೋಬರ್ ೩೧ನ ಅವಧಿಯಿಂದಲೂ ಪ್ಲೇಗ್ ಪ್ರಾಪ್ತವಾಗಿ ಜನರೆಲ್ಲರೂ ಗುಡಿಸಲುಗಳಿಗೂ, ಅನುಕೂಲವಿದ್ದಂತೆ ಪರಸ್ಥಳಗಳಿಗೂ ಹೊರಟುಹೋದರು. ಇಂಥಾದ್ದರಲ್ಲಿ ಪರೀಕ್ಷಾ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ನಮ್ಮ ಅಮಲ್ದಾರ್ ಮೆ|| ಎಂ. ಸದಾಶಿವರಾಯರೂ, ಸ್ಟೇಷನ್ ಮಾಸ್ಟರ್ ಮೆ|| ಬಿ. ಗುರುಮೂರ್ತಯ್ಯನವರೂ ಪರಸ್ಥಳದ ವಿದ್ಯಾರ್ಥಿಗಳ ವ್ಯಾಸಂಗಕ್ಕೂ ವಾಸಕ್ಕೂ ಅನುಕೂಲವಾಗಿರುವಂತೆ ಸ್ಥಳಗಳನ್ನು ಒದಗಿಸಿಕೊಟ್ಟರು.

ಈ ಊರಿನ ಜವಳಿ ಅಂಗಡಿ ಸಾಹುಕಾರ್ ಮೆ|| ಚಂದ್ರಶೇಖರಪ್ಪನವರೂ, ಮೆ|| ಗುರುಶಂಭುಲಿಂಗಪ್ಪನವರೂ ವಿದ್ಯಾರ್ಥಿಗಳ ಅಭ್ಯುದಯದಲ್ಲಿ ಮನಸ್ಸಿಟ್ಟು ಆಯಾ ಜಾತಿಯ ವಿದ್ಯಾರ್ಥಿಗಳಿಗೆ ಭೋಜನಾದಿಗಳಿಗೆ ಅನುಕೂಲಪಡಿಸುವಕೆ

ವಾಸವಿಟ್ಟು ಅಂಗೀಕರಿಸಿದರು. ಪ್ರತಿ ದಿನವೂ ಪ್ರಾತಃಕಾಲ ೯ ಗಂಟೆಗೆ ಸ್ನಾನ ಮತ್ತು ಭೋಜನಗಳು, ಮಧ್ಯಾಹ್ನ ೧ ಗಂಟೆಗೆ ಫಲಾಹಾರ, ಸಾಯಂಕಾಲ ೭ ಗಂಟೆಗೆ ಭೋಜನ, ಈ ರೀತಿ ನಡೆಯುವುದಕ್ಕೆ ತಕ್ಕ ಸಲಿಕರಣಗಳನ್ನು ಮಾಡಿಕೊಟ್ಟರು. ಈ ತಿಂಗಳು ೧೧ನೇ ತಾ|| ಭಾನುವಾರದಿಂದ ೨೦ನೇ ತಾ|| ಶುಕ್ರವಾರದ ವರೆಗೆ ಪ್ರತಿ ದಿನವೂ ಮೇಲ್ಕಂಡಂತೆ ನಡಿಸಿ, ಯಾವ ಭಾಗದಲ್ಲೂ ಲೋಪವಿಲ್ಲದೆ ಸಾಂಗವಾಗಿ ನೆರವೇರಿಸಿದರು.

ಪರೀಕ್ಷೆಯಾದ ನಂತರ ವಿದ್ಯಾರ್ಥಿಗಳ ಶ್ರೇಯಸ್ಸಿಗಾಗಿ ಶ್ರೀಸತ್ಯದ ಆಂಜನೇಯಸ್ವಾಮಿಯ ದೇವಾಲಯದಲ್ಲಿ ಊರಿನ ಪ್ರಮುಖರಾದ ವೈದಿಕ ಮಹಜನರೂ, ಮೆ|| ಗುರುಮೂರ್ತಯ್ಯನವರೂ, ಡ|| ಇನ್ಸ್ಪೆಕ್ಟರ್ ಮೆ|| ಕೆ. ಎನ್. ವೆಂಕಟಾದ್ರಯ್ಯನವರೂ, ತಾಲ್ಲೂಕ್ ಕಚೇರಿ ಉದ್ಯೋಗಸ್ಥರೂ, ಸ್ಕೂಲ್ ಮಾಸ್ಟರುಗಳೂ, ವಿದ್ಯಾರ್ಥಿಗಳೂ ದಯಮಾಡಿಸಿದ್ದರು. ಈ ದೇವಸ್ಥಾನದಲ್ಲಿ ಪೂಜೆ, ರಾಜಾಶೀರ್ವಾದ, ಮಹಾಮಂಗಳಾರತಿಗಳು ಆದನಂತರ ಸರ್ವರಿಗೂ ಪ್ರಸಾದ ಹೂವು ಗಂಧ ತಾಂಬೂಲಾದಿಗಳನ್ನು ಕೊಡಿಸಿ, ಜಯಧ್ವನಿಗಳೊಂದಿಗೆ ಸರ್ವರೂ ಮನೆಗಳಿಗೆ ದಯಮಾಡಿಸಿದರು. ಈ ಊರಿನಲ್ಲಿ ಪರೀಕ್ಷೆ ನಡೆಯಲು ಉಪಕ್ರಮವಾದ ಈ ಸಾರಿಯೇ ಪ್ಲೇಗ್ ಮತ್ತು ಕ್ಷಾಮಗಳ ಭಯ ಇಂಥಾ ಕಷ್ಟಕಾಲದಲ್ಲಿ ಮೆ|| ಚಂದ್ರಶೇಖರಪ್ಪನವರೂ, ಮೆ|| ಗುರುಶಂಭುಲಿಂಗಪ್ಪನವರೂ ಮಾಡಿದ ಸಹಾಯವು ಬಹಳವಾಗಿ ಶ್ಲಾಘಿಸತಕ್ಕದ್ದಾಗಿರುತ್ತೆ.

ಬಿ ಕೆಂಗಾಡಿಯಪ್ಪ.

ತಿಪಟೂರು ಪ್ರಾಂತ್ಯದ ಕಷ್ಟಗಳು.

ಅಯ್ಯಾ,

ತಿಪಟೂರೆಂಬ ಗ್ರಾಮಕ್ಕೂ ಈ ಸುತ್ತುಮುತ್ತಲಿರುವ ಗ್ರಾಮಗಳಿಗೂ ಮಳೆ ಬೆಳೆ ಸುತರಾಂ ಇಲ್ಲದೆ ಕೆರೆ ಬಾವಿಗಳಲ್ಲಿ ನೀರಿಲ್ಲದೆ ಜನಗಳೂ ಹೆಂಗಸರೂ ಹಗಲು ರಾತ್ರಿ ನೀರಿಗಾಗಿ ಶ್ರಮಪಡುವುದನ್ನು ನೋಡಿದರೆ ಹಿಂದೆ ದಾತು ಈಶ್ವರವೆಂಬ ವಿರಕ್ಷಾಮದಲ್ಲಿ ಕೆಲವು ಬಾವಿಗಳಲ್ಲಿ ನೀರು ಇತ್ತು. ಈ ದುರ್ಭಿಕ್ಷಕಾಲದಲ್ಲಿ ಕೆರೆಯಂತು ಒಣಗಿಹೋಗಿದೆ. ಕೆಲವು ಬಾವಿಗಳಲ್ಲಿ ಜಲಗಳು ಇಂಗಿಹೋಗಿರುತ್ತೆ. ಕೆಲವು ಬಾವಿಗಳಲ್ಲಿ ಅಲ್ಪ ಸ್ವಲ್ಪ ನೀರು ಇರುತ್ತೆ. ಈಗಲೇ ಇಂಥಾ ಕಷ್ಟವು ಸಂಭವಿಸಿರುವದು ನೋಡಿದರೆ ಕ್ಷಾಮವು ತಲೆಹಾಕಿರುವುದಾಗಿ ಕಾಣುತ್ತದೆ.

ಸಂತೆಯಲ್ಲಿ ರೂಪಾಯಿಗೆ ೧೦ ಸೇರು ರಾಗಿ, ೫ ಸೇರು ಅಕ್ಕಿ ವರ್ತಕರ ಬೀದಿ ಮಾರಲ್ಪಡುತ್ತದೆ. ಮಿಕ್ಕ ದಿನಸಿ ದಾರಣೆಗಳೂ ಹೇಳಲು ಅಸಾಧ್ಯವಾಗಿದೆ. ಉಪ್ಪು ಮಾತ್ರ ರೂಪಾಯಿಗೆ ೨೬ ಸೇರು ಕೊಡುತ್ತಿದಾರೆ. ನೀರಿನಲ್ಲಿ ಹಾಕಿ ಕುದಿಸಿ ಕುಡಿಯಲು ಅನುಕೂಲವಾಗಿರುತ್ತೆ. ಸಾಹುಕಾರ್ ಮೆ|| ಶಿಂಗ್ರಿ ಸಂಜಪ್ಪನವರು ಎಲ್ಲಾ ಸ್ಥಳಗಳಿಂದಲೂ ರಾಗಿಯನ್ನು ತರಿಸಿ, ಬಡ ರೈತರಿಗೂ ಬಡ ಜನಗಳಿಗೂ ಅಲ್ಪ ನಫೆಯಿಂದ ಮಾರುತ್ತಲಿದಾರೆ. ವರ್ತಕರಿಗೆ ಮಾತ್ರ ಒಂದು ಮೂಟೆಯೂ ಮಾರಿಕೊಳ್ಳುವದಕ್ಕೆ ಕೊಡುವದಿಲ್ಲ. ಇನ್ನು ಕೆಲವು ವರ್ತಕ ಮಹಾಶಯರು ಇದೇ ಲಾಭ ಬರುವದಕ್ಕೆ ಸಮಯವೆಂದು ಯೋಚಿಸಿ, ತಮ್ಮ ಕಣಜಗಳಿಗೆ ಬಂದಿರತಕ್ಕ ರಾಗಿ, ಜೋಳ, ಅಕ್ಕಿ ದಿನಸಿಗಳನ್ನು ದಾವಣಗೆರೆ ಪೇಟೆಗಳಲ್ಲಿ ಮೂಟೆಗೆ ೯೫ ಸೇರು ಪ್ರಕಾರ ಅಳತೆ ಈ ತಿಪಟೂರಿಗೆ ಗ್ರಾಮಾಂತರಗಳ ಬರತಕ್ಕ ಬಡ ರೈತರಿಗೆ ಪಲ್ಲ ಎಂಬುದಾಗಿ ನಂಬಿಕೆ ಹೇಳಿ ಬಿಕರಿ ಮಾಡುತ್ತಲಿದಾರೆ. ಇಂಥಾ ದುರ್ಭಿಕ್ಷಕಾಲದಲ್ಲಿ ಸಾಹುಕಾರರೂ ವರ್ತಕ ಮಹಾಶಯರೂ ಇಂಥಾ ಕೆಲಸವನ್ನು ಮಾಡುವದು ನೋಡಿದರೆ ಬಹಳ ವಿಷಾದವಾಗುತ್ತದೆ. ತಿಪಟೂರು ವರ್ತಕ ಮಹಾಶಯರುಗಳೇ, ಇದು ಧನಸಂಪಾದನೆಯ ಕಾಲವಲ್ಲ ಧರ್ಮಸಂಪಾದನೆಯ ಕಾಲವೆಂದು ತಿಳಿಯಿರಿ. ಸಂತೆಯಲ್ಲಿ ಸರಾಸರಿ ೩,೦೦೦ ಮೂಟೆ ರಾಗಿ, ಜೋಳ, ೩೦ ಮೂಟೆ ಅಕ್ಕಿ ಖರ್ಚು ಆಗುತ್ತದೆ. ಸಾಹುಕಾರರೂ ಸಿಕ್ಕ ವರ್ತಕರೂ ಸಹಾ ಸೇರಿ ಒಂದು ಕಂಪನಿ ಏರ್ಪಡಿಸಿ ಒಟ್ಟಿಗೆ ಧಾನ್ಯವನ್ನು ತರಿಸಿ, ಮೂಟೆಗೆ ೨ ಆಣೆ ಮೇರೆ ಅಕ್ಕಿ ರಾಗಿ ಮಾರುವ ಹಾಗೆ ಮಾಡಿದರೆ ಲಾಭ ಸಂಭವಿಸುತ್ತದೆ.

ಪ್ರಜಾನುರಾಗಿಗಳಾದ ತಾಲ್ಲೂಕು ಅಮಲ್ದಾರ್ ಮೆ|| ಮಹಮ್ಮದ್ ಅಬ್ದುಲ್ಲಾ ಷರೀಫ್ ಸಾಹೇಬರು ಬಡವರು ಬಲ್ಲಿದರು ಎಂಬ ತಾರತಮ್ಯವಿಲ್ಲದೆ ಎಲ್ಲರನ್ನು ಒಂದೇ ವಿಧವಾಗಿ ಕಾಣುತ್ತಲಿದಾರೆ. ಸಂತೆಯಲ್ಲಿ ರೂಪಾಯಿಗೆ ೧೦ ಸೇರು ರಾಗಿಗಿಂತ ಕಡಿಮೆ ಮಾರಬೇಡಿ ಎಂಬುದಾಗಿ ಬುದ್ಧಿವಾದವನ್ನು ಹೇಳುತ್ತಲಿದಾರೆ.

ಪುರವಾಸಿ

ಸೊರಬ ತಾ|| ಚಂದ್ರಗುತ್ತಿಯಲ್ಲಿ ಆನೆಗಳ ಕಾಟವು.

ಅಯ್ಯಾ,

ಈಗ ೮ ತಿಂಗಳಿಂದಲೂ ಈ ಚಂದ್ರಗುತ್ತಿ ಪಟ್ಟದಲ್ಲಿ ಸುಮಾರು ೧೦—೧೨ ಆನೆಗಳ ಹಿಂಡು ಸೇರಿಕೊಂಡು, ಸುತ್ತುಮುತ್ತಿನ ಸುಮಾರು ೨೦ ಗ್ರಾಮಗಳ ಫಸಲನ್ನು ನಷ್ಟಪಡಿಸಿತು. ಈಗ ೨—೩ ತಿಂಗಳಿಂದ ಇವರ ಹಾವಳಿಯು ಹೆಚ್ಚಾಗಿ, ಸ್ವಲ್ಪ ಕಾಲದಲ್ಲಿ ಕಟಾವಿಗೆ ಬರುತ್ತಿದ್ದ ಭತ್ತಾ ಮತ್ತು ಕಬ್ಬು ಸಹಾ ಗುರುತು ಸಹಾ ಸಿಕ್ಕದಂತೆ ನಾಶಮಾಡಿತು. ಈ ಮಲೆನಾಡು ಪ್ರದೇಶದಲ್ಲಿ ಬೆಳೆಯುವದೇ ಕಬ್ಬು, ಭತ್ತಾ. ಇದನ್ನು ಕಳೆದುಕೊಂಡು ದುಃಖಪಡುವ ಬಡ ರೈತರ ಗೋಳು ವಿವರಿಸಲಶಕ್ಯವು. ದಿನಕ್ಕೆ ಒಂದು ವೇಳೆ ಮಾತ್ರ ಗಂಜಿಯನ್ನು ಕುಡಿದು ಪ್ರಾಣಧಾರಣೆ ಮಾಡಿಕೊಂಡಿರುವವರೂ ಮತ್ತು ಅಂಥಾ ಗಂಜಿಗೆ ಸಹಾ ಗತಿಯಿಲ್ಲದೆ ಸಂಕಟಪಡತಕ್ಕ ಬಡ ರೈತ ಕುಟುಂಬಗಳೂ ಎಷ್ಟೋ ಇವೆ. ಕೆಲವು ಗ್ರಾಮಗಳು ಬೆಟ್ಟಗುಡ್ಡಗಳಲ್ಲಿ ೨—೩ ಮನೆಗಳುಳ್ಳ ಗ್ರಾಮಗಳಾಗಿವೆ. ಇವರ ಕಷ್ಟವಂತೂ ಹೇಳತೀರದು. ಈ ಸಾಲಿಗೆ ಕಂದಾಯವನ್ನು ಕೊಡುವದಕ್ಕೆ ಗತಿಯಿಲ್ಲದ್ದರಿಂದಲೂ, ಉದರ ಭರಣವನ್ನು ಮಾಡಿಕೊಳ್ಳುವದಕ್ಕೂ ಸ್ಥಳದಲ್ಲಿ ಆಧಾರವಿಲ್ಲದ್ದರಿಂದಲೂ, ಈ ಬಡ ರೈತರುಗಳು ೪—೬ ಗ್ರಾಮಗಳನ್ನು ಬಿಟ್ಟು ಹೊರಡುವವರಾಗಿದ್ದಾರೆ. ಈ ಗ್ರಾಮಗಳು ಮುಂದೆ ಬೇಚರಾಕ್ ಗ್ರಾಮಗಳಾಗುವಂತಿವೆ. ಈ ಗ್ರಾಮಗಳೆಲ್ಲವೂ ಚಂದ್ರಗುತ್ತಿ ನಾಡಿಗ ಗಣೇಶರಾಯರಿಗೆ ಸೇರಿದ್ದು. ಇವರು ಸರ್ಕಾರಕ್ಕೆ ೨,೦೦೦ ರೂಪಾಯಿ ಕಂದಾಯಕೊಡತಕ್ಕ ದೊಡ್ಡ ಜಮೀನ್ದಾರರು. ಈ ಪ್ರಾಂತ್ಯದ ಫಸಲೆಲ್ಲಾ ಆನೆಗಳು ನಾಶಮಾಡಿದ್ದರಿಂದ ಜೀವನವನ್ನು ನಡಿಸಿಕೊಳ್ಳುವದೇ ಇವರಿಗೆ ಪರಮ ದುಸ್ತರವಾಗಿ ರೈತರಿಗೆ ಕೈಸಾಲ ಕೊಡಬೇಕಾಗಿ ಬಂತಲ್ಲಾ ಎಂದು ವ್ಯಸನಪಡುತ್ತಿದಾರೆ. ರೈತರುಗಳು ರಾತ್ರಿಯೆಲ್ಲಾ ಬೆಂಕಿ ಹಾಕಿಕೊಂಡು ಶಬ್ದಮಾಡುತ್ತಾ ಅಟ್ಟಿದಾಗ್ಯೂ, ಆನೆಗಳು ಕೆಲವು ಬೆಳಗಿನ ಹಾಗೂ ಫಸಲು ನಾಶಮಾಡಿ, ಹಗಲು ವೇಳೆ ಬೆಟ್ಟವನ್ನು ಸೇರುತ್ತಲಿವೆ. ಈ ಪಟ್ಟವು ವಿಸ್ತಾರವಾದ ಮತ್ತು ಆನೆಗಳಿರುವದಕ್ಕೆ ಅನುಕೂಲವಾದ ಜಲಾಶಯಗಳುಳ್ಳದ್ದಾಗಿದೆ. ಹಲವರು ಆನೆಗಳು ಅಟ್ಟುವ ಕಾಲದಲ್ಲಿ ಅವುಗಳಿಗೆ ಸಿಕ್ಕಿ ಗಾಯಪಟ್ಟಿರುತ್ತಾರೆ. ಕನ್ನಡಾ ಜಿಲ್ಲಾ ಒಬ್ಬ ಹೆಂಗಸನ್ನು ಕೆಲವು ದಿನಗಳ ಕೆಳಗೆ ಕೊಂದುಬಿಟ್ಟಿತು. ಸರ್ಕಾರದವರು ಜಾಗ್ರತೆಯಾಗಿ ಕೆಡ್ಡಾ ಶಯಾ ಮಾರ್ಗಟಿಸಿ, ಆನೆಗಳನ್ನು ಹಿಡಿಯುವದರ ಮೂಲಕ, ಅಥವಾ ಕೊಲ್ಲುವದರ ಮೂಲಕ ಸ್ಥಳ ತಪ್ಪಿಸದಿದ್ದರೆ ಇಲ್ಲಿನ ಪ್ರಜೆಗಳ ಪರಿಣಾಮವಿಲ್ಲ.

ಚಂದ್ರಗುತ್ತಿ ಎಂಬ ಗ್ರಾಮವು ಲಾಂಟೀನಾ ಯೆಂಬ ಕಾಡು ಬೇಗೆ ಹಬ್ಬಿ ಊರಲ್ಲಿ ಹುಲಿ ತಂಡಿಗಳು ಸೇರಿಕೊಂಡು, ಪ್ರತಿ ದಿನವೂ ಜಾನುವಾರುಗಳು ನಾಶವಾಗುತ್ತಿವೆ. ಈ ಗ್ರಾಮದಲ್ಲಿ ನಾಡಿಗ ಗಣೇಶರಾಯರೂ, ನಾಡಿಗ ಲಿಂಗಪ್ಪನವರೂ ಪ್ರಮುಖರು. ಇವರಿಬ್ಬರೂ ಏಕೀಭವಿಸದಿದ್ದರೆ ಈ ಪ್ರಾಂತ್ಯದ ರೈತರಿಗೆ ಸುಖವಿಲ್ಲ. ಜಾಗ್ರತೆಯಾಗಿ ಲಾಂಟೀನಾವನ್ನು ಕಡಿಸದಿದ್ದರೆ ದುಷ್ಟ ಮೃಗಗಳ ಬಾಧೆ ಹೆಚ್ಚಾಗುತ್ತದೆ. ಈ ವಿಷಯಕ್ಕೆ ತಾಲ್ಲೂಕ್ ಅಧಿಕಾರಿಗಳು ಜಾಗ್ರತೆ ಗಮನಕೊಡಬೇಕಾಗಿದೆ.

ಪ್ರಜಾ ಹಿತೈಷಿ

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಅಧಿಪತ್ಯದ ಗವರ್ನರವರ ಪತ್ನಿಯವರು ಮಹಾಬಲೇಶ್ವರದಲ್ಲಿ ತುಂಬಾ ಕಾಯಿಲೆಯಾಗಿದ್ದಾರೆಂದು ತಂತೀ ವರ್ತಮಾನ ಬಂದಿದೆ.

ಅಹಮದಾಬಾದಿನಲ್ಲಿ ಐಶ್ವರ್ಯವಂತನಾದ ಸೇಟ್ ವೀರಚಂದ್ ದೀಪಚಂದ್ ಎಂಬ ಜೈನ ಪ್ರಸಿದ್ಧ ವರ್ತಕನು ಹಿಂದಿನ ವಾರ ಕಾಲವಾದನು.

ಕೊಚ್ಚಿ ಸಂಸ್ಥಾನಕ್ಕೆ ಸೇರಿದ ಪೀರ್ಮೇಡ್ ಎಂಬ ಸ್ಥಳದಲ್ಲಿ ಮೆ|| ನೆಲ್ ಗ್ರಾಹಾಂ ಎಂಬವನ ಟೀ ತೋಟದ ಕಾರ್ಖಾನೆಗೆ ಬೆಂಕಿ ಬಿದ್ದು ಸುಟ್ಟು ಹೋಯಿತು. ಆ ಯಜಮಾನನಿಗೆ ೪೦,೦೦೦ ರೂಪಾಯಿ ನಷ್ಟವಾಯಿತು.

ಇಂಡಿಯಾ ಗವರ್ನಮೆಂಟಿನವರು ಕಲ್ಕತ್ತಾ ಪಟ್ಟಣದಲ್ಲಿ ವಿದ್ಯಾರ್ಥಿಗಳು ಇಂಜಿನಿಯರ್ ಪರೀಕ್ಷೆಗೆ ಓದಿ ತೇರ್ಗಡೆ ಹೊಂದುವುದಕ್ಕೋಸ್ಕರ ಒಂದು ಭಾರೀ ವಿದ್ಯಾಶಾಲೆಯನ್ನು ಸ್ಥಾಪಿಸಬೇಕೆಂದು ಸ್ಯಾಂಕ್ಷನ್ ಮಾಡಿದ್ದಾರೆ.

ಹಾಂಕಾಂಗ್ ಪಟ್ಟಣದಲ್ಲಿ ಪ್ರತಿ ಮನೆಯವರೂ ಒಂದು ಬೆಕ್ಕನ್ನು ಸಾಕಬೇಕೆಂದು ಅಲ್ಲಿನ ಆರೋಗ್ಯದ ಇಲಾಖೆಯವರು ಹುಕುಂ ಮಾಡಿದ್ದಾರೆ. ಇದರಿಂದ ಅಲ್ಲಿ ಪ್ಲೇಗ್ ಉಪದ್ರವನ್ನು ಅಡಗಿಸಬೇಕೆಂಬುದೇ ಅವರ ಉದ್ದೇಶವು.

ಚೀನಾ ರಾಜ್ಯದಲ್ಲಿ ಒಂದು ಮಗುವನ್ನು ಚಕ್ರವರ್ತಿಯ ಸ್ಥಾನಕ್ಕೆ ನೇಮಕ ಮಾಡಿದರೆಂದು ಬರ್ಮಾ ಅಧಿಪತ್ಯದಲ್ಲಿರುವ ಚೀಣೆಯವರು ಕೇಳಿ ಸಭೆಗಳನ್ನು ನಡಿಸಿ ಆ ಮಗುವು ಮ್ಯಾಂಚೂ ವಂಶಕ್ಕೆ ಸೇರಿದ್ದೆಂದು ಆಕ್ಷೇಪಣೆ ಮಾಡಿ, ಚೀನಾಕ್ಕೆ ತಂತೀ ವರ್ತಮಾನ ಕಳುಹಿಸಿದರು.

ಟ್ರಾನ್ಸ್ವಾಲಿನಲ್ಲಿ ಹಿಂದುಸ್ಥಾನದ ಜನರಿಗೆ ಉಂಟಾಗಿರುವ ತೊಂದರೆಗಳನ್ನು ತಪ್ಪಿಸುವುದಕ್ಕೆ ಕಲ್ಕತ್ತಾ ಪಟ್ಟಣದ ಪ್ರಜೆಗಳು ಒಂದು ಭಾರೀ ಮೀಟಿಂಗನ್ನು ಕಳೆದ ಸೋಮವಾರ ನಡಿಸಿ, ತಮ್ಮ ತೀರ್ಮಾನಗಳನ್ನು ಇಂಡಿಯಾ ಗವರ್ನಮೆಂಟಿಗೂ, ಸ್ಟೇಟ್ ಸೆಕ್ರೆಟರಿಯವರಿಗೂ ಅರಿಕೆ ಮಾಡಿರುತ್ತಾರೆ.

ಲೂದಿಯಾನಾ ಡಿಸ್ಟ್ರಿಕ್ಟಿನಲ್ಲಿ ಡೆಪ್ಯುಟಿ ಕಮಿಷನರಾಗಿದ್ದು ಪೆನ್ಷನ್ ಪಡೆಯುತ್ತಿರುವ ದಿವಾನ್ ಲೇಕಚಂದ್, ಐ ಸಿ ಎಸ್ ಯವರನ್ನು ಗಾಯಕವಾಡ ಮಹಾರಾಜರವರು ಬರೋಡಾ ಸಂಸ್ಥಾನದ ರೆವಿನ್ಯು ಮತ್ತು ಖಜಾನಾ ಇಲಾಖಾ ಅಧಿಕಾರಿಯಾಗಿ ಮೂರು ವರುಷ ಕೆಲಸಮಾಡುವಂತೆ ನೇಮಕಮಾಡಿಕೊಂಡಿದಾರೆ.

ಬರ್ಮಾ ಅಧಿಪತ್ಯದಲ್ಲಿ ಹೋದ ಸಾಲಿಗಿಂತ ಹೆಚ್ಚಾಗಿ ಈ ಸಾಲಿನಲ್ಲಿ ಮೂರು ಲಕ್ಷ ಎಕರೆ ಜಮೀನುಗಳಲ್ಲಿ ಭತ್ತದ ಪಸಲಾಗಿರುವುದು. ಪೈರು ಎಲ್ಲಾ ಕಡೆಗಳಲ್ಲೂ ತುಂಬಾ ಹುಲುಸಾಗಿರುತ್ತದೆಂತಲೂ, ಅರಕಾನ್ ಡಿವಿಜನ್ನಲ್ಲಿ ಮಾತ್ರ ಹೆಚ್ಚು ಮಳೆ ಸುರಿದು ಪೈರು ಸ್ವಲ್ಪ ಮಟ್ಟಿಗೆ ನಷ್ಟವಾಯಿತೆಂತಲೂ ತಿಳಿದು ಬಂದಿದೆ.

ರಂಗೂನ್ ಪಟ್ಟಣದ ಮ್ಯುನಿಸಿಪಾಲಿಟಿಯ ಸ್ಟ್ಯಾಂಡಿಂಗ್ ಕಮಿಟಿಯ ಮೆಂಬರುಗಳಿಗೆ ಬರುವ ಜನವರಿ ಲಾಗಾಯಿತು ತಿಂಗಳೊಂದಕ್ಕೆ ಒಂದು ಸವರಿನ್ ನಂತೆ ಫೀಜು ಕೊಡುವುದಾಗಿ ಗೊತ್ತುಮಾಡಿದಾರೆ. ಇದರಿಂದ ಮ್ಯುನಿಸಿಪಲ್ ಕಮಿಷನರುಗಳು ಪಟ್ಟಣದ ಕ್ಷೇಮಾಭಿವೃದ್ಧಿಗೆ ವಿಶೇಷವಾದ ಗಮನವನ್ನು ಕೊಡ್ತಾರೆಂದು ನಿರೀಕ್ಷಿಸಲ್ಪಟ್ಟಿದೆ.

ವಿಜಯನಗರದ ಮಹಾರಾಜ ಕುಮಾರಿಕಾ ಯವರು ಕಳೆದ ವಾರ ಮದರಾಸಿನಲ್ಲಿ ಗವರ್ನರವರ ಭೇಟಿಗೆ ಹೋಗಿದ್ದರು. ಆಗ್ಗೆ ಗವರ್ನರವರು ಆಕೆಯವರಿಗೆ ಕೈಸರ್—ಇ—ಹಿಂದ್ ಚಿನ್ನದ ಮೆಡಲನ್ನು ಒಪ್ಪಿಸಿದರು. ಆ ಸಮಯದಲ್ಲಿ ಗವರ್ನರವರು, ಇವರ ಪತ್ನಿಯವರು, ಇವರ ಪುತ್ರಿಯರು, ಸರ್ ಮೋರಿಸಾನ್ ಯವರು ಇಷ್ಟೇ ಜನರು ಸ್ಥಳದಲ್ಲಿದ್ದರು.

ಕಲ್ಕತ್ತೆಯ ಬಳಿ ಹೌರಾ ಪಟ್ಟಣದ ಒಬ್ಬ ಭಾರೀ ಜಮೀನ್ದಾರನ ಗ್ರಾಮದಲ್ಲಿ ಮಹಮ್ಮದೀಯರು ಒಂದು ಮಸೀದಿಯನ್ನು ಕಟ್ಟುತ್ತಿದ್ದರು. ಅದನ್ನು ಕಟ್ಟಕೂಡದೆಂದು ಜಮೀನ್ದಾರನು ತಡೆದದ್ದರಿಂದ ಶಿವಪುರದ ನಾರಿನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ೫೦೦ ಮಂದಿ ಮಹಮ್ಮದೀಯರು ಹಟಹಿಡಿದು ಕೆಲಸಕ್ಕೆ ಹೋಗದೆ ಮನೆಗಳಲ್ಲೇ ನಿಂತುಬಿಟ್ಟರು.

ಸರ್ ಲ್ಯಾನ್ಸ್ಲಾಟ್ ಹೇರ್ಯವರು ಕಳೆದ ವಾರ ಸೀಮೆಯಿಂದ ವಾಪಸು ಢಾಕಾ ನಗರಕ್ಕೆ ಹೋಗಿ ಪೂರ್ವಬಂಗಾಳಾ ಮತ್ತು ಅಸ್ಸಾಂ ಎಂಬ ಅಧಿಪತ್ಯದ ಲೆಫ್ಟಿನೆಂಟ್ ಗವರ್ನರವರ ಕೆಲಸದ ಚಾರ್ಜನ್ನು ವಹಿಸಿಕೊಂಡರು. ಇದುವರೆಗೆ ಆ ಕೆಲಸವನ್ನು ಬದಲಿ ನೋಡುತ್ತಿದ್ದ ಸರ್ ಚಾರ್ಲ್ಸ್ ಬೇಲಿಯವರು ಯಥಾಪ್ರಕಾರ ಹೈದರಾಬಾದ್ ಸಂಸ್ಥಾನದ ರೆಸಿಡೆಂಟರಾಗಿ ಬಂದುಬಿಟ್ಟರು.

ಹಿಂದಿನ ವಾರ ಈ ರಾಷ್ಟ್ರದಲ್ಲಿ ಒಟ್ಟು ೧,೯೪೩ ಜನರು ಪ್ಲೇಗ್ ತಗಲಿ ಕಾಲವಾದರು. ಆ ಪೈಕಿ ಬೊಂಬಾಯಿ ಅಧಿಪತ್ಯ ೮೪೧, ಪಂಜಾಬ್ ೩೨೩, ಮೈಸೂರು ಸಂಸ್ಥಾನ ೧೬೪, ಮಧ್ಯಪ್ರಾಂತ್ಯಗಳು ೧೯೨, ರಾಜಪುಟಾಣಾ ೧೨೩, ಬಂಗಾಳಾ ೯೪, ಮಧ್ಯ ಇಂಡಿಯಾ ೮೩, ಮದರಾಸ್ ಅಧಿಪತ್ಯ ೬೫, ಹೈದರಾಬಾದ್ ಸಂಸ್ಥಾನ ೨೬, ಬರ್ಮಾ ೨೨, ಸಂಯುಕ್ತ ಅಧಿಪತ್ಯಗಳು ೨೨.

ಅಫ್ಘಾನಿಸ್ಥಾನದ ರಾಜಧಾನಿಯಾದ ಕಾಬೂಲ್ ನಗರದಲ್ಲಿ ಪ್ರಜೆಗಳು ಬಹಳ ಒತ್ತಾಗಿ ವಾಸಮಾಡುತ್ತಾರೆ. ಸುಮಾರು ಎರಡು ಲಕ್ಷ ಪ್ರಜೆಗಳಿರಬಹುದೆಂದು ಅಂದಾಜು ಮಾಡಿದೆ. ಈ ಸಲ ವಾಂತಿಭೇದಿ ಉಪದ್ರ ಪ್ರಾಪ್ತವಾದರೂ, ಅಮೀರರು ಹಿಂದುಸ್ಥಾನದಿಂದ ಬಹು ಮಂದಿ ಡಾಕ್ಟರುಗಳನ್ನು ಕರೆಸಿಕೊಂಡಿರೋದರಿಂದ ಅವರ ಚಿಕಿತ್ಸೆಯಿಂದ ಅನೇಕ ರೋಗಿಗಳು ಬದುಕಿಕೊಂಡರು. ಅಮೀರರು ತಮ್ಮ ಜನರಿಗೆ ಈಗಿನ ವೈದ್ಯವನ್ನು ಕಲಿಸಲಾರಂಭಿಸಿರುವರು.

ಇನ್ನು ಮೇಲೆ ಬಂಗಾಳಾ ಅಧಿಪತ್ಯದಲ್ಲಿ ಖೈದಿಗಳನ್ನು ಗಲ್ಲಿಗೆ ಹಾಕಿದರೆ ಅಂಥವರ ಶವಗಳನ್ನು ರಕ್ತಸಂಬಂಧಿಗಳಿಗೆ ಒಪ್ಪಿಸುವ ಭಾಗದಲ್ಲಿ ಅಧಿಕಾರಿಗಳಿಗೆ ಏನಾದರೂ ಅನುಮಾನ ಕಂಡುಬಂದರೆ, ಶವಗಳನ್ನು ಒಪ್ಪಿಸಬೇಕಾದದ್ದಿಲ್ಲವೆಂತಲೂ, ಜೈಲ್ ಆವರಣದೊಳಗೇ ಅವರಿಂದ ದಫನ್ ಮಾಡಿಸಬೇಕೆಂತಲೂ ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆ. ಈಚೆಗೆ ಅಲ್ಲಿನ ಜನರು ಅಂಥಾ ಖೈದಿಗಳ ಶವಗಳನ್ನು ಮೆರವಣಿಗೆ ಮಾಡಿ ಗಲಭೆಯನ್ನುಂಟುಮಾಡುವುದು ರೂಢಿಗೆ ಬಂದದ್ದರಿಂದ ಸರ್ಕಾರದವರು ಅದನ್ನು ತಪ್ಪಿಸಬೇಕೆಂದು ಈ ರೀತಿ ಹುಕುಂ ಮಾಡಿರುವರು.

ಈ ವರುಷ ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ ಎಂಬ ರಾಷ್ಟ್ರೀಯ ಮಹಾ ಸಭೆಯು ಮದರಾಸ್ ಪಟ್ಟಣದಲ್ಲಿ ಡಿಸೆಂಬರ್ ಕಡೇ ವಾರದಲ್ಲಿ ನಡೆಯುವುದು. ಡಾ|| ರಾಸ್ ಬಿಹಾರಿ ಘೋಸ್ ಯವರು ಸಭೆಯ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟಿದಾರೆ. ಅದೇ ವಾರದಲ್ಲಿ ದೇಶೀಯ ಕೈಗಾರಿಕೆಗಳ ಪ್ರದರ್ಶನ ಶಾಲೆಯು ಪ್ರಾರಂಭವಾಗುತ್ತದೆ. ಇದು ಡಿಸೆಂಬರ್ ೨೬ ಮತ್ತು ೨೭ನೇ ತಾರೀಖುಗಳಲ್ಲಿ ನಡಿಯುವುದೆಂತಲೂ, ಇದನ್ನು ಸಾರ್ಥಕವಾಗಿ ನೆರವೇರಿಸುವುದಕ್ಕೆ ಎಲ್ಲರೂ ತಮ್ಮ ಕೈಲಾಗುವ ಸಹಾಯವನ್ನು ಮಾಡಬೇಕಾಗಿದೆ ಎಂತಲೂ ಪ್ರದರ್ಶನದ ಕಮಿಟಿಯವರು ಪ್ರಕಟಮಾಡಿದ್ದಾರೆ.

ಬರೋಡಾ ಸಂಸ್ಥಾನದ ಮಂತ್ರಿಗಳಾಗಿದ್ದು ಕೆಲಸದಿಂದ ನಿವೃತ್ತರಾಗಿರುವ ಖಾನ್ ಬಹದೂರ್ ಸರ್ದಾರ್ ಯಾರ್ ಮಹಮ್ಮದ್ ಖಾನ್, ಸಿ. ಎಸ್. ಐ. ಯವರು ಅಲೀಘಡದ ಮಹಮದೀಯ ವಿದ್ಯಾಶಾಲೆಗೆ ಟ್ರಸ್ಟಿಗಳಾಗಿರುತ್ತಾರೆ. ಕೆಲವು ಕಾಲಕ್ಕೆ ಮೊದಲು ಗವರ್ನಮೆಂಟಿನಿಂದ ತಮಗೆ ಸಲ್ಲುತ್ತಿದ್ದ ಪೆನ್ಷನ್ ಮೊಬಲಗನ್ನು ಆ ವಿದ್ಯಾಶಾಲೆಗೆ ಸಹಾಯಮಾಡಬೇಕೆಂದು ಹೇಳಿ ಕೊಡಿಸುತ್ತಿದಾರೆ. ಈಚೆಗೆ ಇವರು ೯೦,೦೦೦ ರೂಪಾಯಿಗಳನ್ನು ಅದೇ ವಿದ್ಯಾಶಾಲೆಯಲ್ಲಿ ವಿದ್ಯಾರ್ಥಿಗಳ ನಿಲಯಗಳನ್ನು ಕಟ್ಟಿಸಿಕೊಡುವುದಕ್ಕಾಗಿ ಒಪ್ಪಿಸಿರುತ್ತಾರೆ. ವೈಸ್ರಾಯಿಯವರು ಈ ಧರ್ಮಿಷ್ಠರ ಉದಾರ ಮನಸ್ಸನ್ನು ನೋಡಿ ಬಹಳ ಸಂತೋಷಪಟ್ಟು ಅವರನ್ನು ವಂದಿಸಿರುತ್ತಾರೆ.

ತಂತೀ ವರ್ತಮಾನಗಳ ಚಾರ್ಜನ್ನು ಬದಲಾಯಿಸಬೇಕೆಂದು ಗವರ್ನಮೆಂಟಿನವರು ಆಲೋಚನೆ ಮಾಡುತ್ತಿದಾರೆ. ಆತುರವಾದ ತಂತೀ ವರ್ತಮಾನಗಳು, ಸಾಮಾನ್ಯವಾದ ವರ್ತಮಾನಗಳು, ಸಾವಕಾಶವಾದ ವರ್ತಮಾನಗಳು ಎಂದು ಈಗ ಮೂರು ತರಗತಿಯ ತಂತೀ ವರ್ತಮಾನಗಳುಂಟು. ಇನ್ನು ಮುಂದೆ ಎರಡೇ ತರಗತಿಗಳನ್ನು ಮಾಡಿ, ಆತುರವಾದ ವರ್ತಮಾನಗಳಿಗೆ ಮೊದಲನೇ ೧೨ ಮಾತುಗಳಿಗೆ ಚಾರ್ಜು ಒಂದು ರೂಪಾಯಿಯಂತೆಯೂ, ಜಾಸ್ತಿಯಾದ ಪ್ರತಿ ಮಾತಿಗೂ ಎರಡಾಣೆಯಂತೆಯೂ; ಸಾಮಾನ್ಯವಾದ ಎರಡನೇ ತರಗತಿಯ ೧೨ ಮಾತುಗಳುಳ್ಳ ತಂತೀ ವರ್ತಮಾನಕ್ಕೆ ಆರು ಆಣೆಯಂತೆಯೂ, ಜಾಸ್ತಿಯಾದ ಪ್ರತಿ ಮಾತಿಗೂ ಅರ್ಧ ಆಣೆಯಂತೆಯೂ ತೆಗೆದುಕೊಳ್ಳುವಂತೆ ಬದಲಾಯಿಸಬೇಕೆಂದು ಚರ್ಚೆ ನಡಿಯುತ್ತಿದೆ. ಈಗಿನ ಸಾವಕಾಶ ತಂತೀ ವರ್ತಮಾನಗಳನ್ನು ವಜಾ ಮಾಡುವರು.

ಈಗ್ಗೆ ಸುಮಾರು ಎರಡು ತಿಂಗಳಲ್ಲಿ ಹೈದರಾಬಾದ್ ಪಟ್ಟಣದಲ್ಲಿ ಪ್ರವಾಹಗಳ ದೆಸೆಯಿಂದಾದ ಅನಾಹುತಗಳು ವಾಚಕರಿಗೆ ತಿಳಿದಿದೆಯಷ್ಟೆ. ಅದರಿಂದ ಉಂಟಾದ ಕಷ್ಟನಷ್ಟಗಳನ್ನು ಅಲ್ಲಿನ ದೊಡ್ಡ ಮನುಷ್ಯರೂ ಅಧಿಕಾರಿಗಳೂ [illegible] ತಿಳಿಸಿರುತ್ತಾರೆ. ೫೨ ಮೊಹಲ್ಲೆಗಳಲ್ಲಿ ಆ ಪ್ರವಾಹಗಳ ದೆಸೆಯಿಂದ ನಷ್ಟ ಪ್ರಾಪ್ತವಾಯಿತು. ೨೪,೦೦೦ ಮನೆಮಠಗಳು ನಾಶವಾದವು. ಒಂದೂವರೆ ಕೋಟಿ ರೂಪಾಯಿನ ಸ್ಥಿರಸ್ವತ್ತುಗಳೂ, ಒಂದು ಕೋಟಿ ರೂಪಾಯಿನ ಚರಸ್ವತ್ತುಗಳೂ ಹಾಳಾದವು. ೩,೦೦೦ ಪ್ರಜೆಗಳು ಲಯವಾದರು. ಕಷ್ಟನಿವಾರಣೆಗೆ ಇದುವರೆಗೆ ಮೇಲ್ವಿಚಾರಣಾ ಕಮಿಟಿಯವರು ೧,೫೬,೭೦೦ ಚಿಲ್ಲರೆ ರೂಪಾಯಿ ಚಂದಾ ಕೂಡಿಸಿ, ಆ ಪೈಕಿ ೧,೧೯,೦೦೦ ರೂಪಾಯಿ ವಿನಿಯೋಗಿಸಿದಾರೆ. ಕಳೆದ ವಾರ ಹೈದರಾಬಾದ್ ನೈಜಾಮರವರ ಆಜ್ಞಾನುಸಾರ ಇನ್ನೊಂದು ರಿಲೀಫ್ ಫಂಡನ್ನು ಏರ್ಪಾಡು ಮಾಡಿದರು. ಮಂತ್ರಿಗಳಾದ ಮಹಾರಾಜಾ ಸರ್ ಕೃಷ್ಣಪ್ರಸಾದ್ಯವರೇ ಈ ಫಂಡಿನ ಮುಖಂಡರಾಗಿ ನಿಂತಿದಾರೆ. ಇದು ಇನ್ನು ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಹಿಂದುಸ್ಥಾನದಲ್ಲಿ ಪ್ರಜೆಗಳು ಮಕ್ಕಳನ್ನು ಸಾಕಿ ಬೆಳಸುವ ಕ್ರಮವನ್ನು ಸರಿಯಾಗಿ ತಿಳಿದುಕೊಂಡಿಲ್ಲ. ವಿದ್ಯೆಯು ಅನೇಕಾನೇಕರಿಗೆ ಇಲ್ಲದಿರೋದರಿಂದಲೂ, ಅನಾರೋಗ್ಯಕರವಾದ ಮನೆಗಳಲ್ಲಿ ವಾಸಮಾಡುತ್ತಾ ಆಹಾರ ವಿಹಾರಗಳ ವಿಷಯದಲ್ಲಿ ಪರಿಜ್ಞಾನವಿಲ್ಲದಿರೋದರಿಂದಲೂ ಅನೇಕ ಮಕ್ಕಳು ಅಕಾಲ ಮರಣವನ್ನು ಹೊಂದುತ್ತಾರೆ. ಕಳೆದ ೧೯೦೭ನೇ ವರುಷದಲ್ಲಿ ಬಂಗಾಳಾ ಅಧಿಪತ್ಯದಲ್ಲಿ ಹುಟ್ಟಿದ ೧೯,೦೫,೦೦೦ ಮಕ್ಕಳ ಪೈಕಿ ನೂರಕ್ಕೆ ಇಪ್ಪತ್ತರಂತೆ ಒಂದು ವರುಷದೊಳಗೇ ತೀರಿಹೋದರು. ಕಲ್ಕತ್ತಾ ಪಟ್ಟಣದಲ್ಲಾದರೋ ೧೦೦ಕ್ಕೆ ೨೯ ಮಕ್ಕಳೂ, ಬೇರ್ಧಾಂ, ಬರ್ದ್ವಾನ್, ಬಾಲಸೋರ್ ಪಟ್ಟಣಗಳಲ್ಲಿ

ಕೇಕಡಾ ೨೫ ರಿಂದ ೨೭ರ ವರೆಗೆ ಮಕ್ಕಳೂ ಮೃತಪಟ್ಟಿರುತ್ತಾರೆ. ಆರೋಗ್ಯದ ಇಲಾಖೆಯವರು ಮಕ್ಕಳ ಸಾಕಾಣಿಕೆಯ ವಿಷಯದಲ್ಲಿ ಪತ್ರಿಕೆಗಳನ್ನು ಬರಿಸಿ ಪ್ರಜೆಗಳಿಗೆ ಹಂಚಿಕೊಟ್ಟರೂ ಪ್ರಯೋಜನವಾಗಲಿಲ್ಲ. ಜನರು ವಿದ್ಯಾವಂತರಾಗದಿರುವುದೂ, ಬಡಸ್ಥಿತಿಯಲ್ಲಿರುವುದೂ ಇದಕ್ಕೆ ಕಾರಣಗಳೆಂದು ತಿಳಿದು ಬಂದಿದೆ. ಸ್ಯಾನಿಟರಿ (ಆರೋಗ್ಯ) ಇಲಾಖೆಯವರು ಈ ರೀತಿ ತಿಳಿಸಿದಾರೆ

* * *

ನಾಗಪುರದಲ್ಲಿ ಈಗ ಬಹು ವಿಶೇಷವಾದ ಪ್ರದರ್ಶನೋತ್ಸವವು ನಡೆಯುತ್ತಿರುವುದೂ, ಅದನ್ನು ಅಧಿಕಾರಿಗಳು ಕಳೆದ ತಾ. ೧೨ ರಲ್ಲಿ ಪ್ರಾರಂಭಮಾಡಿರುವುದೂ ವಾಚಕರಿಗೆ ತಿಳಿದಿದೆಯಷ್ಟೆ. ಮತ್ತು ಅದೇ ದಿನ ದುಷ್ಕರ್ಮಿಗಳು ಅಲ್ಲಿನ ಕ್ವೀನ್ ಮಹಾರಾಜ್ಞಿ ಚಕ್ರವರ್ತಿನಿಯವರ ಭಾವಪ್ರತಿಮೆಯನ್ನು ಭಿನ್ನಮಾಡಿ, ಮುಖಕ್ಕೆ ಟಾರು ಮುಂತಾದ ಕಪ್ಪು ಬಣ್ಣವನ್ನು ಬಳಿದಿರುತ್ತಾರೆಂದು ಕಳೆದ ವಾರ ತಿಳಿಸಿದೆವಷ್ಟೆ. ಸರ್ಕಾರದವರು ಪತ್ತೆ ತರಹೂದು ನಡಿಸಿದ್ದರಲ್ಲಿ ಕೆಲವು ಜನ ವಿದ್ಯಾವಂತರೂ ಸೇರಿ ಈ ಅಕೃತ್ಯವನ್ನು ನಡಿಸಿದರೆಂದು ಗೊತ್ತಾಗಿ ಅವರನ್ನೆಲ್ಲಾ ದಸ್ತಗಿರಿ ಮಾಡಿಸಿರುತ್ತಾರೆ. ಗವರ್ನಮೆಂಟ್ ವ್ಯವಸಾಯದ ವಿದ್ಯಾಶಾಲೆಯ ಹೆಡ್ ಮಾಸ್ಟರ್ ಪಾರಂಜಪೇ, ವ್ಯವಸಾಯ ಖಾತೆಯ ಇಬ್ಬರು ಓವರ್ಸೀರ್‌ಗಳು, ಮೂರು ಮಂದಿ ವಿದ್ಯಾರ್ಥಿಗಳು, ಇವರೆಲ್ಲಾ ಸೇರಿ ಆ ಕೃತ್ಯವನ್ನು ನಡಿಸಿದಂತೆ ತಿಳಿಯುವುದು. ಪೋಲೀಸಿನವರು ಪಾರಂಜಪೆಯ ಮನೆಯನ್ನು ಶೋಧನೆಮಾಡಿದಾಗ ರಾಜದ್ರೋಹಕರವಾದ ಕೆಲವು ಕಾಗದಪತ್ರಗಳೂ, ಮೇಲ್ಕಂಡ ಲೋಹ ಪ್ರತಿಮೆಯ ಬಳಿ ಇದ್ದಂಥಾ ಬಣ್ಣದ ಸೀಸಾಯಿಗಳೂ, ಟಾರ್ ಬಣ್ಣದ ಗುರುತು ಇದ್ದ ಒಂದು ಬಟ್ಟೆಯೂ ಸಿಕ್ಕಿರುತ್ತವೆ. ವ್ಯವಸಾಯ ವಿದ್ಯಾಶಾಲೆಯ ನಾಲ್ಕರು ವಿದ್ಯಾರ್ಥಿಗಳನ್ನು ಕಳೆದ ವಾರ ಹಿಡಿದು ಅವರಿಂದ ಛೈಷಿಯತ್ತು ಬರೆಸಿಕೊಂಡು ಬಿಟ್ಟಿರುತ್ತಾರೆ. ಮುಂದಿನ ವಾರ ಈ ಮೊಕದ್ದಮೆಯು ವಿಚಾರಣೆ ಆಗುವುದು.

* * *

ಕಲ್ಕತ್ತಾ ಪಟ್ಟಣದ ಚೌಬಜಾರಿನಲ್ಲಿ ದೇಶೀಯ ದೊಡ್ಡ ಮನುಷ್ಯರು ಸೇರಿ ವೈದ್ಯವಿದ್ಯಾಶಾಲೆಯನ್ನು ಸ್ಥಾಪನೆಮಾಡಿ, ವಿದ್ಯಾರ್ಥಿಗಳನ್ನು ತರಬೇತು ಮಾಡುತ್ತಿದಾರೆ. ಈ ವಿದ್ಯಾಶಾಲೆಯ ವಾರ್ಷಿಕೋತ್ಸವವನ್ನು ಕಳೆದ ವಾರ ಬಹು ವಿತರಣೆಯಿಂದ ನೆರವೇರಿಸಿದರು. ರಾಜಾ ಪ್ಯಾರಿ ಮೋಹನ ಮುಖರ್ಜಿ, ಸಿ. ಎಸ್. ಐ. ಯವರೂ, ರಾಧಾಚರಣಪಾಲ್ ಯವರೂ, ಮಹಾರಾಜ ಕುಮಾರ ಕ್ಷಿತೀಂದ್ರ ಕೃಷ್ಣದೇವ ಬಹದೂರ್ ಯವರೂ, ಇನ್ನೂ ಬಹು ಮಂದಿ ಮಹನೀಯರೂ ಮುಂದಾಳುಗಳಾಗಿ ನಿಂತು ಉತ್ಸವವನ್ನು ನಡಿಸಿದರು. ಈ ವೈದ್ಯವಿದ್ಯಾಶಾಲೆಯು ಪ್ರಾರಂಭಿಸಲ್ಪಟ್ಟಾಗ ೩೦ ಮಂದಿ ಬಾಲಕರು ಸೇರಿ, ವೈದ್ಯವನ್ನು ಕಲಿಯಲಾರಂಭಿಸಿದರು. ಈಗಲಾದರೋ ೩೦೦ ಮಂದಿಗಿಂತಲೂ ಹೆಚ್ಚಾಗಿ ಓದುತ್ತಾರೆ. ಸರ್ಕಾರದವರು ನಡಿಸುವ ವೈದ್ಯವಿದ್ಯಾಶಾಲೆಗಳಲ್ಲಿ ಓದಿ ತೇರ್ಗಡೆ ಯೊಂದುವ ವೈದ್ಯರು ಸಾಲದೆ ತೊಂದರೆಯಿಂದ ಪ್ರಜೆಗಳೇ ಸೇರಿ ಈ ದೇಶೀಯ ವಿದ್ಯಾಶಾಲೆಯನ್ನು ಸ್ಥಾಪಿಸಬೇಕಾಯಿತು. ಬಂಗಾಳದಲ್ಲಿ ಈಗ ೧೧,೦೦೦ ಪ್ರಜೆಗಳಿಗೆ ಒಬ್ಬನಂತೆ ವೈದ್ಯರಿರುವರು. ಆದ್ದರಿಂದ ಈ ವೈದ್ಯರ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ತೀರ್ಮಾನಮಾಡಿದಾರೆ. ಈ ವಿದ್ಯಾಶಾಲೆಯನ್ನು ಇನ್ನೂ ಅಭಿವೃದ್ಧಿ ಮಾಡುವುದಕ್ಕೋಸ್ಕರ ಮೇಲ್ವಿಚಾರಣಾ ಸಂಘದವರು ಅದರ ಮೂಲಧನಕ್ಕೆ ಇನ್ನೂ ೧ ಲಕ್ಷದ ೩೦ ಸಾವಿರ ರೂಪಾಯಿ ಬೇಕಾಗಿದೆ ಎಂದೂ, ಪುಣ್ಯಾತ್ಮರಾದ ದೇಶವತ್ಸಲರು ದ್ರವ್ಯಸಹಾಯಮಾಡಬೇಕೆಂದೂ ಪ್ರಕಟಿಸಿದಾರೆ.

* * *

ಮಿ॥ ಬಿ. ಜಿ. ತಿಲಕರನ್ನು ದಯಾಕ್ಷಿಮಾಡಿ ಅವರಿಗೆ ಶಿಕ್ಷೆ ವಿಧಿಸಿದ ಮಿ॥ ಜಸ್ಟಿಸ್ ದಾವಾರ್‌ಯವರನ್ನು ಕೊಲ್ಹಾಪುರದ ಮಿ॥ ಜಗನ್ನಾಥ ಮಹೇಶ್ವರ ಸಮಂತ್ ಎಂಬೊಬ್ಬ ವಕೀಲರು ನಿಂದೆಮಾಡಿದ್ದಕ್ಕಾಗಿ ಆ ವಕೀಲರ ಮೇಲೆ ಸರ್ಕಾರದವರು ಮೊಕದ್ದಮೆ ಮಾಡಿದರು. ಬೊಂಬಾಯಿ ಹೈ ಕೋರ್ಟಿನಲ್ಲಿ ಇಬ್ಬರು ಜಡ್ಜಿಗಳು ಕೂತು ಕಳೆದ ವಾರ ಆ ವಕೀಲರನ್ನು ವಿಚಾರಣೆ ಮಾಡಿದರು. ವಕೀಲರು ತಾವು ಜಸ್ಟಿಸ್ ದಾವಾರ್‌ಯವರನ್ನು ನಿಂದನೆಮಾಡಿದ್ದು ಯೋಗ್ಯವಲ್ಲವೆಂತಲೂ, ಹಾಗೆ ಮಾಡಿದ್ದಕ್ಕಾಗಿ ತಾವು ತುಂಬಾ ವಿಷಾದಪಡುತ್ತೇವೆಂತಲೂ, ಈ ತಮ್ಮ ನಡತೆಯನ್ನು ಕ್ಷಮಿಸಬೇಕೆಂತಲೂ ಹೇಳಿ, ಜಡ್ಜಿಗಳ ಕ್ಷಮಾಪಣೆಯನ್ನು ಬೇಡಿಕೊಂಡರು. ಆಗ ಜಡ್ಜಿಗಳು ಆ ವಕೀಲರನ್ನು ಕುರಿತು—ನೀವು ವಿದ್ಯಾವಂತರಾಗಿ ಒಳ್ಳೇ ಪದವಿಯಲ್ಲಿದ್ದುಕೊಂಡು ಕೋರ್ಟುಗಳಲ್ಲಿ ಕಕ್ಷಿಗಾರರ ಪರವಾಗಿ ವಾದಿಸುವವರಾಗಿಯೂ, ದೊಡ್ಡಮನುಷ್ಯರೆಂಬ ಗೌರವವನ್ನು ಪ್ರಜೆಗಳಲ್ಲಿ ಪಡೆದಿರುತ್ತೀರಿ. ನಮ್ಮಂಥವರು ನಿಮ್ಮ ಸವಶಕ್ತಿಯನ್ನೂ ಪ್ರಜೆಗಳ ಹಿತಕ್ಕೂ ಅವರ ಅಭಿವೃದ್ಧಿಗೂ ವಿನಿಯೋಗಿಸುವುದಕ್ಕೆ ಪ್ರತಿಯಾಗಿ ಸರ್ಕಾರದವರನ್ನು ಪ್ರಜೆಗಳ ಮುಂದೆ ಅಲ್ಲಗಳೆದು ಹೀನವಾಗಿಯೂ ತುಚ್ಛವಾದ ರೀತಿಯಲ್ಲೂ ದೂಷಣೆ ಮಾಡುವುದು ಯೋಗ್ಯವಾದ ನಡವಳಿಕೆಯಲ್ಲ. ಇಂಥಾ ದುರ್ನಡತೆಯನ್ನು ಪ್ರಕಾಶಪಡಿಸಿ, ಆಕ್ಷೇಪಣೆ ಮಾಡಿದಾಗ ಕ್ಷಮಾಪಣೆಯನ್ನು ಬೇಡಿಬಿಟ್ಟ ಮಾತ್ರಕ್ಕೇ ಅಂಥಾ ನಡತೆಯನ್ನು ಮರೆತುಬಿಡುವುದು ತಕ್ಕದ್ದಲ್ಲ. ಆ ಕಾರಣ ನೀವು ಇನ್ನಾರು ತಿಂಗಳ ತನಕ ವಕಾಲತ್ತು ನಡಿಸಕೂಡದೆಂದು ಶಿಕ್ಷೆ ವಿಧಿಸುತ್ತೇವೆ ಎಂಬ ರೀತಿಯಾಗಿ ಜಡ್ಜ್‌ಮೆಂಟ್ ಹೇಳಿದರು.

ಬೆಂಗಳೂರು ವರ್ತಕರ ಔದಾರ್ಯವು

ಬಡಬಗ್ಗರಿಗೆ ಸಹಾಯ.

ಬೆಂಗಳೂರು ಸಿಟಿಯಲ್ಲಿರುವ ವರ್ತಕರು ಈಗ ಆಹಾರದಿನಸಿಗಳ ಧಾರಣೆ ವಾಸಿಗಳು ಬಹಳ ಪ್ರಿಯವಾಗಿರುವುದನ್ನೂ, ಅನೇಕಾನೇಕ ಬಡಬಗ್ಗರು ಜೀವನಕ್ಕಾಗಿ ತುಂಬಾ ಕಷ್ಟಪಡುತ್ತಿರುವುದನ್ನೂ ನೋಡಿ, ಭೂತದಯಾಪರ[illegible]ರಾಗಿ, ಯಾವುದಾದರೂ ಪರೋಪಕಾರವಾದ ಏರ್ಪಾಡನ್ನು ಮಾಡಬೇಕೆಂದು ಯೋ[illegible], ಕಳೆದ ಭಾನುವಾರ ಬೆಳಗ್ಗೆ ಮೇ॥ ಹರಿಯಣ್ಣನವರ ಮನೆಯಲ್ಲಿ ಒಂದು ಸಭೆಯನ್ನು ನಡಿಸಿದರು. ಇದಕ್ಕಾಗಿ ಮೊದಲೇ ಡೆ ಕಮಿಷನರ್ ಮಿ॥ ಬಿ. ಜಿ. ಕುಮಾರಸ್ವಾ[illegible] ನಾಯಕರೂ, ಮಿ॥ ತೋಟಿವಪ್ಪನವರೂ, ಮೇ॥ ಹರಿಯಣ್ಣನವರೂ ನೋ[illegible]ಗಳನ್ನು ಅಲ್ಲಿನ ಮುಖ್ಯಮುಖ್ಯರಾದ ವರ್ತಕರಿಗೆಲ್ಲಾ ಕಳುಹಿಸಿದರು. ವರ್ತಕರ[illegible] ಮಂಡಲಿಯ ಎಲ್ಲಾ ಕೋಮಿನ ದೊಡ್ಡ ಮನುಷ್ಯರೂ ಸಾಹುಕಾರರೂ ಮಾಟಿಂಗಿಗೆ [illegible] ದಯಮಾಡಿದ್ದರು. ಮಿ॥ ರಾಮಾನುಜಾಚಾರ್ಯರೂ, ಮೇ॥ ಉಸ್ಮಾನ್ ಖಾನ್‌ರವರೂ [illegible] ಇನ್ನು ಕೆಲವರೂ ಆ ದಿನದ ಮಾಟಿಂಗಿನ ಉದ್ದೇಶವನ್ನು ಸಭಿಕರಿಗೆ ವಿವರಿಸಿ ಹೇ[illegible]ಳಿ, ಧಾರಣೆಗಳು ಪ್ರಿಯವಾಗಿರೋಣದರಿಂದ ಬಡಬಗ್ಗರು ಜೀವನಕ್ಕೆ ತುಂಬಾ[illegible] ಕಷ್ಟಪಡುತ್ತಿದಾರೆಂತಲೂ, ವರ್ತಕಮಂಡಲಿಯವರು ಮೊದಲು ಅಲ್ಲಿನ ಪ್ರಜೆಗಳಿಗೆ ಸಾಕಾಗುವಷ್ಟು ಧಾನ್ಯಗಳನ್ನು ಇಟ್ಟು ವಿಕರಿಮಾಡಿ, ಹೆಚ್ಚಾದ ಭಾಗವನ್ನು ಮಾತ್ರ ಇತರ ಕಡೆಗಳಿಗೆ ರಫ್ತುಮಾಡಬೇಕೆಂತಲೂ, ರಿಯಾಯತಿಯಾದ ಧಾರಣೆಗೆ ಧಾನ್ಯವನ್ನು ವಿಕರಿಮಾಡುವಂಥಾ ಕೆಲವು ಅಂಗಡಿಗಳನ್ನು ಇಡಿಸಿ ಬಡಬಗ್ಗರಿಗೆ ವಿಕರಿಮಾಡಿಸಬೇಕೆಂತಲೂ ಬಹು ಸ್ವಾರಸ್ಯವಾಗಿಯೂ, ಸಭಿಕರಾಗಿದ್ದ ವರ್ತಕಮಹಾಜನಗಳ ಮನಸ್ಸು ಕರಗುವಂತೆಯೂ ಉಪನ್ಯಾಸಗಳನ್ನು ಮಾಡಿದರು. ತರುವಾಯ ಉದ್ದೇಶಪಟ್ಟ ಕಾರ್ಯವನ್ನು ನೆರವೇರಿಸುವುದಕ್ಕೆ ವರ್ತಕರಲ್ಲಿ ಒಂದು ಕಮಿಟಿಯನ್ನು ನೇಮಕಮಾಡಿ, ಈ ಕಮಿಟಿಗೆ ಮೆ॥ ಹರಿಯಣ್ಣನವರು ಪ್ರೆಸಿಡೆಂಟಾಗಿಯೂ, ಮೆ॥ ಪಾಪಣ್ಣನವರೂ ಮೆ॥ ರಾಜಪ್ಪನವರೂ ಸೆಕ್ರೆಟರಿಗಳಾಗಿಯೂ ನಿಂತು ಕೆಲಸ ಜರುಗಿಸತಕ್ಕದ್ದೆಂದು ತೀರ್ಮಾನಮಾಡಿದರು. ಕಡೆಯಲ್ಲಿ ಪುಣ್ಯವಂತರಿಂದ ಧನವನ್ನು ಚಂದಾ ಮೂಲಕ ಕೂಡಿಸಿ, ಅನುಕೂಲವಾದ ಸ್ಥಳದಲ್ಲಿ ಎರಡು ಧರ್ಮದ ಅಂಗಡಿಗಳನ್ನು ಇಡಿಸಿ, ಆಹಾರಧಾನ್ಯಗಳನ್ನು ರಿಯಾಯತಿಯಾದ ದರಗಳಿಗೆ ಬಿಟ್ಟು ಬಡಬಗ್ಗರಿಗೆ ವಿಕರಿಮಾಡಿಸಬೇಕೆಂದು ಏರ್ಪಾಡಾಯಿತು. ಈ ಫಂಡಿಗೆ ಕೆಳಗೆ ಹೇಳುವಂತೆ ಅಲ್ಲಿನ ವರ್ತಕರು ದ್ರವ್ಯಸಹಾಯಮಾಡುವುದಾಗಿ ವಾಗ್ದಾನಮಾಡಿದಾರೆ.

ಮೆ॥ ಹರಿಯಣ್ಣನವರು ೫೦೦; ಮೆ॥ ಗಳಾದ ಚಿನ್ನಸಾಮಿ ಶೆಟ್ಟರು, ಸಾ॥ ಪಾಪಣ್ಣನವರು, ವೆಂಕಟಮುನಿಯಪ್ಪನವರು, ಡಿ. ಅದೆಪ್ಪನವರು, ಸಜ್ಜನರಾಯರು ತಲಾ ೩೦೦; ಮೆ॥ ವೆಂಕಟಸುಬ್ಬಯ್ಯನವರು ೨೦೦, ಮೆ॥ ಗಳಾದ ಉಸ್ಮಾನ್ ಖಾನ್ ಸಾಬರು, ಸಿದ್ದಲಿಂಗಪ್ಪನವರು ತಲಾ ೧೫೦, ಮೆ॥ ಗಳಾದ ಸುಬ್ರಾಯಪ್ಪನವರು, ಮಿ॥ ಕೆಂಚಪ್ಪನವರು, ಬಿ. ಚಿನ್ನಪ್ಪನವರು, ಮುಹಂದಿ ಶರು ತಲಾ ೧೦೦, ಮೆ॥ ಸಿ. ಕೆ. ನರಸಿಂಹಯ್ಯನವರು ೭೫, ಮೆ॥ ಕೃಷ್ಣಪ್ಪನವರು ೬೦, ಮೆ॥ ಗಳಾದ ಟಿ. ರಾಮಯ್ಯನವರು, ಮುನಿ ಕಳ್ಳಪ್ಪನವರು, ತಮ್ಮಯ್ಯನವರು, ವೆಂಕಟರಾಮ ಶಾಸ್ತ್ರಿಗಳು ತಲಾ ೨೫; ಈ ರೀತಿ ಸುಮಾರು ೩,೨೫೦ ರೂಪಾಯಿಗಿಂತ ಹೆಚ್ಚಾಗಿ ಚಂದಾ ಕೊಡುವಂತೆ ವಾಗ್ದಾನಮಾಡಿದಾರೆ.

ದೇವಾಂಗದವರ ಮಹಾ ಸಭೆಯು.

ಪ್ರಾರಂಭವು.

ಕೊಯಮುತ್ತೂರು ಜಿಲ್ಲೆಯಲ್ಲಿ ದೇವಾಂಗದವರ ಮಹಾ ಸಭೆಯೊಂದು ಏರ್ಪಾಡಾಯಿತು. ಈ ಕೋಮಿನವರು ವಿಶೇಷವಾಗಿ ನೆಯ್ಗೆ ಕಸಬನ್ನೇ ಅವಲಂಬಿಸಿರುತ್ತಾರೆ. ಕೆಲವರು ವಿದ್ಯಾಭ್ಯಾಸ ಮಾಡಿ ಇತರ ಉದ್ಯೋಗಗಳಲ್ಲಿ ಪ್ರವರ್ತಿಸಿ ಅಭಿವೃದ್ಧಿಗೆ ಬಂದಿರುವುದೂ ಉಂಟು. ಇವರಲ್ಲಿ ಬಹುಮಂದಿ ಪ್ರಾಕ್ಟಿಕಲ್ ಮಾತ್ರ ವಿದ್ಯೆಗಳನ್ನು ಅಷ್ಟು ವಿಶೇಷವಾಗಿ ಕಲಿತಿರುವುದಿಲ್ಲ. ಆದಕಾರಣ ಈ ಜನರು ರಾಜಕೀಯ ವಿಚಾರಗಳಲ್ಲಿ ಕಾಣಿಸಿಕೊಂಡು ಹೋರಾಡಿದ್ದು ಅಪರೂಪವಾಗಿರುತ್ತದೆ. ಕೊಯಮುತ್ತೂರಿನೊಳಗೇ ಸುಮಾರು ೩,೦೦೦ ಮನೆಗಳವರು ದೇವಾಂಗದವರಾಗಿರುತ್ತಾರೆ. ಅವರು ೬,೦೦೦ ಮಗ್ಗಗಳನ್ನು ಇಟ್ಟಿರುವರು. ಈ ಪೈಕಿ ಪಶ್ಚಿಮ ದೇಶಗಳ ಹೊಸ ಮಗ್ಗಗಳೂ ಸುಮಾರು ೨೦೦ರ ವರೆಗೆ ಇರುವವು. ಬಹಳ ಹಸನಾದ ಮತ್ತು ಅತ್ಯಂತ ಶ್ರೇಷ್ಠವಾದ ನೂಲುಗಳನ್ನಿಟ್ಟು ಬೆಲೆಯುಳ್ಳ ಬಟ್ಟೆಬರೆಗಳನ್ನು ತಯಾರುಮಾಡುವರು. ಮನುಷ್ಯನ ಉಡಿಗೆಗೆ ಪದವಾದ ವಸ್ತ್ರವಾದಂಥಾ ಬಟ್ಟೆಗಳನ್ನು ನೆಯ್ದು ಒದಗಿಸುವುದನ್ನೇ ಉದ್ಯೋಗವಾಗಿಟ್ಟುಕೊಂಡಿರುವ ಈ ದೇವಾಂಗದ ಸ್ವಜನರು ಈಗತಾನೇ ತಮ್ಮ ಜನರ ಶ್ರೇಯೋಭಿವೃದ್ಧಿಗೋಸ್ಕರ ಒಂದು ಮಹಾ ಸಭೆಯನ್ನು ನಡಿಸಲಾರಂಭಿಸಿರುವರು. ಈ ಸಭೆಯ ಮುಖ್ಯ ಉದ್ದೇಶಗಳೇನೆಂದರೆ —

ಸಭೆಯ ಉದ್ದೇಶಗಳೂ ಅಧಿಕಾರಿಗಳೂ.

ದೇವಾಂಗದವರ ಮಕ್ಕಳಿಗೆ ವಿದ್ಯಾದಾನ ಮಾಡುವುದು, ಅವರ ಮುಖ್ಯ ಕಸಬುಗಳನ್ನು ಅಭಿವೃದ್ಧಿಗೆ ತರುವುದು, ಮತವಿಷಯದಲ್ಲೂ ಆಚಾರವ್ಯವಹಾರಗಳಲ್ಲೂ ಈಗಿನ ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಂಡು, ತಮ್ಮ ದೇವಸ್ಥಾನಗಳ ಆದಾಯಗಳನ್ನು ಕ್ರಮಪಡಿಸಿ, ಸರಿಯಾಗಿ ಮೇಲ್ವಿಚಾರಣೆ ನೋಡಿಕೊಳ್ಳುವುದು. ಜಾತಿ ಪ್ರಾಚ್ಯ ಕಲಹಗಳು ಹುಟ್ಟಿದರೆ ತಮ್ಮಲ್ಲೇ ಅಂಥವುಗಳನ್ನು ತನಿಖೆ ಮಾಡಿ ಫೈಸಲ್ ಮಾಡಿಕೊಳ್ಳುವುದಕ್ಕೆ ಒಂದು ಜಾತಿ ಪಂಚಾಯಿತಿಯನ್ನು ಏರ್ಪಡಿಸುವುದು. ಇಂಥಾ ಸಭೆಗೆ ಆ ಕುಲಕ್ಕೆ ಸೇರಿದವರೆಲ್ಲಾ ಮೆಂಬರಾಗಿ ಸೇರಬಹುದೆಂತಲೂ, ಶೀಘ್ರ ಕೊಡಬೇಕಾದ್ದಿಲ್ಲವೆಂತಲೂ, ಮೇಲ್ವಿಚಾರಣಾ ಕಮಿಟಿಯಲ್ಲಿ ೯೦ ಮೆಂಬರುಗಳು ಇರತಕ್ಕದ್ದೆಂತಲೂ ನಿರ್ಧಾರಕವಾಗಿದೆ. ಇದಲ್ಲದೆ ಮೇಲ್ಕಂಡ ಉದ್ದೇಶಗಳಿಗಾಗಿ ಬೇರೆ ಬೇರೆ ಉಪಸಭೆಗಳೂ ಏರ್ಪಾಡಾಗಿದೆ. ಮಿ॥ ನಂಜಪ್ಪಶೆಟ್ಟರು ಈ ಸಭೆಯ ಪ್ರೆಸಿಡೆಂಟರು, ಮಿ॥ ನಲ್ಲಿಗಿರಿಶೆಟ್ಟರು ವೈಸ್ ಪ್ರೆಸಿಡೆಂಟರು, ಮಿ॥ ಎನ್. ಗಿರಿಯಶೆಟ್ಟರೂ ಮಿ॥ ವೆಂಕಟಾದ್ರಿಶೆಟ್ಟರೂ ಸೆಕ್ರೆಟರಿಗಳು. ಮತ್ತು ಹಿಂದೊಕ್ಕಸಾಕಣಿಕೆ ಎಂಬ ಮಹಾಭಕ್ತರು ಈ ಸಭೆಯ ಫಂಡನ್ನು ಇಟ್ಟು ನಡಿಸುವರು.

ದೇವಸ್ಥಾನಗಳೂ ಧರ್ಮಗಳೂ.

ಈ ಜನರ ಮೂರು ದೇವಸ್ಥಾನಗಳೂ ಒಂದು ಚೌಲ್ಟ್ರಿ ಎಂಬ ಸತ್ರವೂ ಇರುತ್ತವೆ. ಇದುವರೆಗೆ ಇವುಗಳನ್ನು ಬೇರೆ ಬೇರೆ ಜನರು ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ನವರು ವಿಚಾರಣೆಮಾಡುವುದನ್ನಾಗಲಿ ಇವರ ಕಾರುಬಾರುಗಳನ್ನಾಗಲಿ ಯಾರೂ ಇದುವರೆಗೆ ತನಿಖೆ ಮಾಡುತ್ತಿರಲಿಲ್ಲ. ಈಗ ಇದಕ್ಕಾಗಿಯೇ ಮೇಲ್ಕಂಡ ಸಭೆಯವರು ಒಂದು ಕಮಿಟಿಯನ್ನು ನೇಮಿಸಿರುತ್ತಾರೆ. ಒಟ್ಟು ಸಭೆಯವರ ಅಭಿಪ್ರಾಯವನ್ನು ಆ ಕಮಿಟಿಯವರು ತಿಳಿದು ಆ ರೀತಿ ಧರ್ಮಕಾರ್ಯಗಳನ್ನು ನಡಿಸಬೇಕೆಂದು ನಿರ್ಧಾರಕವಾಗಿರುತ್ತದೆ.

ವಿದ್ಯಾಪ್ರೋತ್ಸಾಹವು.

ತಮ್ಮ ಹುಡುಗರು ವಿದ್ಯೆಯಿಲ್ಲದೆ ಕೆಡುತ್ತಿದಾರಲ್ಲಾ ಎಂದು ಮಹಾಸಭೆಯವರು ವ್ಯಸನಪಟ್ಟು, ಅವರಿಗೆ ಫೀಜು ಇಲ್ಲದೆ ಸ್ವಂತಖರ್ಚಿನಲ್ಲಿ ಕಲಿಸಬೇಕೆಂದು ಏರ್ಪಾಡುಮಾಡಿದಾರೆ. ಇದಕ್ಕಾಗಿ ದೇವಾಂಗಶಾಲಾ ಎಂಬ ಪಾಠಶಾಲೆಯನ್ನಿಡುವರು. ೬ ವರುಷದಿಂದ ಹಿಡಿದು ೧೨ ವರುಷದೊಳಗಿರುವ ಮಕ್ಕಳಿಗೆಲ್ಲಾ ಅಕ್ಷರ ಕಲಿಸುವರು. ಪ್ರತಿ ಒಬ್ಬ ಗಂಡು ಹುಡುಗನೂ ಸ್ವಭಾಷೆಯನ್ನೂ ಇಂಗ್ಲಿಷನ್ನೂ ಕಲಿಯಲೇಬೇಕು. ಹಣವು ತಕ್ಕಮಟ್ಟಿಗೆ ಒದಗಿದಲ್ಲಿ ಹೈಸ್ಕೂಲನ್ನೂ ಏರ್ಪಡಿಸುವರು. ಆಗ ಸಂಸ್ಕೃತವನ್ನೂ ತೆಲುಗನ್ನೂ ಕಲಿಸುವುದಕ್ಕೆ ಮಾರ್ಗವಾಗುವುದು. ಪ್ರಾರಂಭದಲ್ಲಿ ಹುಡುಗರಿಂದ ಸ್ವಲ್ಪ ಫೀಜನ್ನು ತೆಗೆದುಕೊಳ್ಳುತ್ತಾ ಬಂದು, ಕೆಲವು ಕಾಲದ ಮೇಲೆ ಅದನ್ನು ವಜಾಮಾಡಿಬಿಡುವರು. ಎಲ್ಲಾ ಮಕ್ಕಳೂ ವಿದ್ಯೆಯನ್ನು ಅಗತ್ಯವಾಗಿ ಕಲಿತೇ ತೀರಬೇಕೆಂದು ನಿರ್ಬಂಧಪಡಿಸುವರು. ಈ ಏರ್ಪಾಡನ್ನು ನೋಡಿಕೊಳ್ಳುವುದಕ್ಕೆ ಒಂದು ಕಮಿಟಿ ನೇಮಕವಾಗಿದೆ. ಇವರು ಸ್ಕೂಲ್ ಮನೆಯನ್ನು ಕಟ್ಟುವುದಕ್ಕೂ, ಸಾಮಾನುಗಳನ್ನು ಒದಗಿಸುವುದಕ್ಕೂ, ಉಪಾಧ್ಯಾಯರನ್ನು ನೇಮಿಸುವುದಕ್ಕೂ ಎಷ್ಟು ಹಣ ಬೇಕಾಗುವುದೆಂದು ಗೊತ್ತುಮಾಡಿ, ಮಹಾಸಭೆಗೆ ರಿಪೋರ್ಟುಮಾಡಬೇಕಾಗಿದೆ.

ಮತಾಚಾರಗಳ ವಿಚಾರವು.

ಈ ದೇವಾಂಗದವರಲ್ಲಿ ಪೂರ್ವದಲ್ಲಿದ್ದ ಪದ್ಧತಿ ಆಚಾರ ವ್ಯವಹಾರಗಳನ್ನು ರೂಢಿಗೆ ತರಬೇಕು. ಹೊಸ ವ್ಯವಹಾರಗಳಲ್ಲಿ ಬಿದ್ದಿರುವವರು ಕೆಟ್ಟುಹೋಗುತ್ತಿರುವುದು ವ್ಯಸನಕರವಾಗಿದೆ. ತಪ್ಪುಮಾರ್ಗದಲ್ಲಿ ಬಿದ್ದವರಿಗೆ ವಿವೇಕ ಹೇಳಿ ಅವರನ್ನು ಸರಿಯಾದ ನಡತೆವಂತರನ್ನಾಗಿ ಮಾಡುವುದಕ್ಕೋಸ್ಕರ ಒಂದು ಕಮಿಟಿಯು ನೇಮಕವಾಗಿದೆ. ಇವರ ಬುದ್ಧಿಮಾತಿಗೆ ಕಿವಿಗೊಡದೆ ಅವಿಧೇಯರಾಗತಕ್ಕವರಿಗೆ ಮಹಾಸಭೆಯವರು ಸೂಕ್ತ ತೋರುವಂಥಾ ಶಿಕ್ಷೆಯನ್ನು ವಿಧಿಸುವರು. ಕುಡಿಯುವುದು ಹೊಸದಾಗಿ ಈ ಜನರಲ್ಲಿ ಕಾಣಿಸಿಕೊಂಡಿದ್ದಾಗ್ಯೂ ಈ ದುರಭ್ಯಾಸವು ಕ್ರಮೇಣ ಕಡಮೆಯಾಗುತ್ತಿದೆ.

ಕುಲ ಪಂಚಾಯಿತಿಯು.

ಮಹಾ ಸಭೆಯವರು ಮುಖಂಡರಾದವರನ್ನು ಚುನಾಯಿಸಿ ಪಂಚಾಯಿತಿ ಮಾಡಿದಾರೆ. ಕ್ರಿಮಿನಲ್ ಅಪರಾಧವನ್ನಾಗಲಿ ರಾಜದ್ರೋಹವನ್ನಾಗಲಿ ಮಾಡಿದವರನ್ನು ಸರ್ಕಾರಿ ಕೋರ್ಟುಗಳ ವಿಚಾರಣೆಗೆ ಬಿಟ್ಟು ಬಿಟ್ಟು, ಇತರ ಎಲ್ಲಾ ತರದ ವ್ಯಾಜ್ಯಗಳನ್ನೂ ಈ ಪಂಚಾಯಿತಿಯವರು ತನಿಖೆಮಾಡಿ ತೀರ್ಮಾನ ಹೇಳಬೇಕೆಂತಲೂ, ಆ ತೀರ್ಮಾನದಂತೆ ನಡೆದುಕೊಳ್ಳದೆ ತಪ್ಪಿದವರಿಗೆ ದಂಡ ಮೊದಲಾದ ಶಿಕ್ಷೆಗಳನ್ನು ವಿಧಿಸಬೇಕೆಂತಲೂ ಗೊತ್ತುಮಾಡಿದಾರೆ. ಈ ತೀರ್ಮಾನವನ್ನು ಒಪ್ಪದೆ ಹೋದವರು ಮಹಾ ಸಭೆಯಲ್ಲಿ ಅಪೀಲ್ ಮಾಡಿಕೊಳ್ಳಬಹುದೆಂತಲೂ ನಿರ್ಣಯಿಸಿರುವರು.

ನೆಯ್ಗೆಯನ್ನು ಅಭಿವೃದ್ಧಿಮಾಡುವುದು.

ನೆಯ್ಗೆ ಕಸಬನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಕೆಲವು ವರ್ತಕರನ್ನೂ ಕೆಲವು ಸಮರ್ಥರಾದ ನೆಯ್ಗೆಯವರನ್ನೂ ಚುನಾಯಿಸಿ ಒಂದು ಕಮಿಟಿ ಮಾಡಿದಾರೆ. ಇವರು ಹೊಸ ತರಹಾ ಮಗ್ಗಗಳನ್ನು ಉಪಯೋಗಿಸಿ ನೆಯ್ಯುವ ದೊಡ್ಡ ಕಾರ್ಖಾನೆಯನ್ನು ಸ್ಥಾಪಿಸುವ ವಿಷಯದಲ್ಲಿ ತಮ್ಮ ಸಲಹೆಗಳನ್ನು ಕೊಡಬೇಕು. ನೂಲಿಗೆ ಬಣ್ಣ ಹಾಕುವುದು, ಪಟ್ಟೆಬಣ್ಣ, ರಾಟೆಗಳಲ್ಲಿ ನೂಲುವುದು, ಈ ಮೊದಲಾದ ಭಾಗಗಳನ್ನು ಅಭಿವೃದ್ಧಿ ಮಾಡುವುದಕ್ಕೂ ಒಂದು ಕಂಪನಿಯನ್ನು ಏರ್ಪಾಡು ಮಾಡುವ ಭಾವದಲ್ಲೂ ಸಲಹೆಗಳನ್ನು ಕೊಡಬೇಕಾಗಿದೆ. ಮನೆಗಳಲ್ಲಿ ಹೆಂಗಸರು ನೂಲುವುದು, ಬಣ್ಣ ಹಾಕುವುದೇ ಮುಂತಾದ ಕಸಬನ್ನು ನಡಿಸುವಂತೆಯೂ, ಕೂಲಿನಾಲಿಯನ್ನು ಹುಡುಕಿಕೊಂಡು ಅವರು ಮನೆ ಬಿಟ್ಟು ಹೊರಗೆ ಹೋಗದಂತೆಯೂ ಏರ್ಪಾಡು ಮಾಡುವವರಾಗಿದಾರೆ.

ಧನಸಹಾಯಾದಿಗಳು

ಇವೆಲ್ಲಾ ಘನತರವಾದ ಕಾರ್ಯಗಳು ಸಾರ್ಥಕವಾಗಿ ನೆರವೇರುವುದಕ್ಕೆ ದ್ರವ್ಯವು ಅವಶ್ಯವೆಂದು ಹೇಳಬೇಕಾದದ್ದಿಲ್ಲ. ಮಹಾಸಭೆಯವರು ಒಂದು ಫಂಡನ್ನು ಪ್ರಾರಂಭಿಸಿ, ಆ ಸಂಘದ ಎಲ್ಲಾ ಜನರಿಂದಲೂ ಚಂದಾ ವಸೂಲು ಮಾಡುವುದಕ್ಕೆ ಏರ್ಪಡಿಸುವರು. ವರ್ತಕರಾದವರು ತಮ್ಮ ಲಾಭದಲ್ಲಿ ಆದರೆ ಒಂದು ಭಾಗವನ್ನು ಕೊಡಬೇಕು. ಶುಭಮುಹೂರ್ತಗಳಲ್ಲಿ ಶೇಕಡಾ ಇಷ್ಟು ಹಣ ಕೊಡಬೇಕು. ಪ್ರತಿ ಕಾಲದ ಸಂಗ ತ ನಾಸ್ತಿಕರ ಸಭೆಗೆ ಸ್ವಲ್ಪ ಹಣವನ್ನು ಕೊಡಬೇಕು. ಮದುವೆಯಾದರೆ ಗಂಡು ಮತ್ತು ಹೆಣ್ಣಿನ ಕಡೆಯವರು ಸೇರಿ ೭ ರೂಪಾಯಿ ಕೊಡತಕ್ಕದ್ದು. ಸಿರಿವಂತರಾದವರಿಗೆ ಇದು ಮಾಫಿ ಮಾಡಲ್ಪಡುವುದು. ಈ [illegible] ಕ ಮದುವೆ ನಡೆಯುವ ತಪ್ಪಿದ ಸಭೆಯಲ್ಲಿ ಅಂಥವರಿಗೆ ಸಭೆಯವರು ದಂಡವನ್ನು ವಿಧಿಸುವರು.

ಈ ಸಭೆಯ ಮೂಲಧನಕ್ಕೆ ೬೦,೦೦೦ ರೂಪಾಯಿ ವಸೂಲಾಗಬೇಕೆಂದು ಮಹಾಸಭೆಯವರು ತೀರ್ಮಾನಿಸಿ, [illegible] ದರು. ಆಗಲೇ [illegible] ರೂಪಾಯಿ ವರೆಗೆ ವಸೂಲಾಗಿರುತ್ತದೆ. ಇಲ್ಲದೇ ಕೊಡುವಂತೆ ವಾಗ್ದಾನವಾಗಿರುತ್ತದೆ. ಕೆಲವು ಪೂರ್ವದ ಕರೆ [illegible] ಈ ಹಣವನ್ನು ಒದಗಿಸಿಕೊಡುವುದು ತೀರ್ಮಾನಿಸುವುದು ತುಂಬಾ ಸ್ತುತ್ಯರ್ಹವಾಗಿರುತ್ತದೆ.

ತಾಲ್ಲೋಕು ವರ್ತಮಾನಗಳು.

ಕೃಷ್ಣರಾಜಪೇಟೆ ತಾ॥ ಬಿದರಿ — ಇಲ್ಲಿ ಹೋದವಾರದಿಂದ ಹೊಸ ಮಳೆ ಇಲ್ಲವೇ ಇಲ್ಲ. ನಾಗಮಂಗಲದ ಬಿಸ್ಸಿಗೆ ಬಂದ ಮಳೆ ಇಲ್ಲಿ ಕೆರೆ ಬಾವಿಗಳಲ್ಲೂ, ನ್ಯಾಯವಾದ ಬಾವಿಗಳಲ್ಲೂ, ಇತರ ಸಣ್ಣ ದೊಡ್ಡ ಕೆರೆಗಳಲ್ಲಿಯೂ ಕುಡಿಯುವುದಕ್ಕೆ ನೀರು ಸಿಕ್ಕದೇ ಇಲ್ಲವೇ ಇಲ್ಲ. ಈ ಗ್ರಾಮ ಸುತ್ತುಮುತ್ತಲೂ ದೊಡ್ಡ ಜಲಾಶಯವೂ ಇಲ್ಲ. ಆದ್ದರಿಂದ ಕುಡಿಯುವ ನೀರು ಭಾಗಕರವಾಗಿದೆ. ಮುಸ್ಲಿ ಮತ್ತು ಇತರ ಪೈರುಗಳು ನಾಶವಾದವೆಂದು ಹೇಳಬೇಕು. ಇಲ್ಲಿ ರಾಗಿ ಚಿಲ್ಲರೆ ಸಿಕ್ಕುವುದೇ ಇಲ್ಲ. ಸಿಕ್ಕಿದರೂ ರೂಪಾಯಿಗೆ ೯—೧೦ ಸೇರು ರಾಗಿಯೂ, ೪—೫ ಸೇರು ಅಕ್ಕಿಯೂ, ೫ ಸೇರು ಬೇಳೆಯೂ ದೊರೆಯುತ್ತೆ. ಬಡವರ ಗತಿ ಇತರ ನೌಕರರ ಗೋಳು ಹೇಳಲು ಅಸಾಧ್ಯ. ಹೊಟ್ಟೆಗೆ ಒಂದು ಹೊತ್ತು ಉಣ್ಣುತ್ತಾರೆ. ಎರಡು ಹೊತ್ತು ಇಲ್ಲವೇ ಇಲ್ಲ. ದನಗಳ ಮೇವಿಗಂತೂ ಕ್ಷಾಮವಾಗಿದೆ. ಧಾತು, ಕಡೆಯ ಕ್ಷಾಮವು ತಲೆದೋರಿದೆ ಎಂದು ಖಂಡಿತವಾಗಿ ಹೇಳಬಹುದು. ಇದಲ್ಲದೆ ಊರಲ್ಲಿಯೂ ಇತರ ಸಣ್ಣ ಗ್ರಾಮಗಳಲ್ಲಿಯೂ ದೊಡ್ಡರೋಗವು ವ್ಯಾಪಿಸಿ ಇದೆ — ಈ ಊರಿನ ಸಮೀಪದಲ್ಲಿರುವ ಹೇಮಾವತಿಯ ಮಂಗಲದಲ್ಲಿ ಹಿಂದೆ ಭಾರೀ ಕೆರೆ ಕಟ್ಟಬೇಕೆಂದು ಸ್ಯಾಂಕ್ಷನ್ ಆಗಿ ೨ ೩ ವರ್ಷಗಳಾದಾಗ್ಯೂ ಕಟ್ಟಿಲ್ಲ. ಈಗಲಾದರೂ ನಮ್ಮ ದಯಾಳುಗಳಾದ ಮೈಸೂರ್ ಶ್ರೀಮನ್ಮಹಾರಾಜರವರ ಸರ್ಕಾರದವರು ಚಿತ್ತದಲ್ಲಿ ತಂದು, ಕೆರೆ ಕಟ್ಟಲು ಹುಕುಂ ಮಾಡಿ ಪಾಲಿಸಿದರೆ ಈ ಪ್ರಾಂತ್ಯದಲ್ಲಿರುವ ಬಡ ರೈತ ಪ್ರಜೆಗಳಿಗೆ ಕೊಂಚ ಕ್ಷೇಮ ಉಂಟಾದೀತು — ನಮ್ಮ ಊರಿನ ವರ್ತಕರು ಬೆಂಗಳೂರಿಗೆ ರಾಗಿಯನ್ನು ಕಳಿಸದೆ ಧರ್ಮದ ಮೇಲೆ ದೃಷ್ಟಿಯಿಟ್ಟು ಇಲ್ಲಿ ಕೊಂಚ ಕಮ್ಮಿ ಬೆಲೆಗೆ ಮಾರುವುದು ಉತ್ತಮ. ಈಗ ಧರ್ಮ ಸಂಪಾದನೆಗೆ ಒಳ್ಳೇ ಕಾಲವು.

ಚಿತ್ರದುರ್ಗ.— ಇಲ್ಲಿ ಗಿರಿನ ಕಷ್ಟವೂ ಧಾರಣೆವಾಸಿಗಳ ತುಟ್ಟಿಯು ಹೇಳಲಸಾಧ್ಯ. ರಾಗಿ ೯-೧೦ ಸೇರು ಮಾರಾಟವಾಗುತ್ತೆ. ಅದೂ ಎಲ್ಲರಿಗೆ ಸಿಕ್ಕುವುದು ಕಷ್ಟ. ಬೇರೆ ಬೇರೆ ಕಡೆಗಳಿಂದ ಗಾಡಿಯವರು ಬಂದು ಬೆಲೆ ಏರಿಸುವುದರಿಂದ ಚಿಲ್ಲರೆಯಾಗಿ ರೂಪಾಯಿ, ಅರ್ಧ ರೂಪಾಯಿಗೆ ಕೊಳ್ಳುವವರಿಗೆ ಸಿಕ್ಕುವುದೇ ದುರ್ಲಭವಾಗಿತ್ತು. ಇಂಥಾದ್ದರಲ್ಲಿ ಅಧಿಕಾರಿಗಳು ಬಂದು ಬೆಲೆ ಕೊಡುವುದನ್ನು ನಿಲ್ಲಿಸಿ, ಬಡಬಗ್ಗರಿಗೆ ಸಿಕ್ಕುವಂತೆ ಮಾಡಿರುವುದು ಉಪಕಾರ

ವೆ. ಬೇರೆ ಬೇರೆ ಡಿಸ್ಟ್ರಿಕ್ಟುಗಳಲ್ಲಿ ಕಮ್ಮಿ ತಲಬಿನ ನೌಕರರಿಗೆ ಫ್ಯಾಮಿನ್ ಅಲೋಯನ್ಸು ಕೊಡಲ್ಪಟ್ಟಿದ್ದರೂ ಇಲ್ಲಿ ಅದಕ್ಕಾದರೂ ಗತಿ ಇಲ್ಲವಲ್ಲಾ ಎಂದು ಅನೇಕರು ಹಂಬಲಿಸುತ್ತಿದ್ದಾರೆ. ದಯಾಳುಗಳಾದ ಸರಕಾರದವರು ಈ ವಿಷಯಕ್ಕೆ ಗಮನಕೊಟ್ಟು ಬಡವರಿಗೆ ಸಹಾಯ ಮಾಡ್ಯಾರೆಂದು ನಿರೀಕ್ಷೆ. ಇಡ ಬಡಬಗ್ಗರು ಒಪ್ಪತ್ತಿನ ಊಟವೂ, ಇನ್ನು ಕೆಲವರು ಅದೂ ಇಲ್ಲದ ಹಾಗೆಯೂ ಇರುತ್ತೆ. ಸರಕಾರದವರು ಈ ಕಾಲದಲ್ಲಿ ಯಾವದಾದರೂ ರಿಲೀಫ್ ಕೆಲಸ ಆರಂಭಮಾಡಿದರೆ ಬಡಬಗ್ಗರು ಹೊಟ್ಟೆಹೊರೆಕೊಂಡಾರು. ಕೆಲವು ಮಂದಿ ವರ್ತಕರು ಜಿಜುವಾದ ಮುಂತಾದ ಕಡೆಗಳಿಂದ ಅಕ್ಕಿ ತರಿದ್ದಾಗ್ಯೂ ೫ ಸೇರು ಅಥವಾ ೫½ ಸೇರಿಗೆ ಹೆಚ್ಚು ಮಾರುವದೇ ಇಲ್ಲ. ಈ ಕಾಲದಲ್ಲಿ ಎಷ್ಟೋ ಮಂದಿ ಪುಣ್ಯಾತ್ಮರಾದ ಧನಿಕರು ಧಾನ್ಯಗಳನ್ನು ತರಿಸಿ ಲಾಭವಿಲ್ಲದೆ ಅಸಲು ಬೆಲೆಗೆ ಮಾರುವದು ನೋಡಿಯೂ ಕೇಳಿಯೂ ಇದೇವೆ. ಇಲ್ಲಿಯೂ ಅಂಥಾ ಮಹನೀಯರ ಮೇಲ್ಪಂಕ್ತಿಯನ್ನು ಕೆಲವರು ಅನುಸರಿಸಿದರೆ ಉತ್ತಮ.—ಇಲ್ಲಿಗೆ ನಾಲ್ಕು ಮೈಲಿ ದೂರದಲ್ಲಿರುವ ಇಂಗಳದಾಳಿನ ಗುಡ್ಡದಲ್ಲಿ ಅಜಮಾಯಿಷಿ ಬಗ್ಗೆ ಒಂದು ಗಣಿ ಆರಂಭವಾಗಿ ಕೆಲಸ ನಡೆಯುತ್ತಿದ್ದು, ಈಗ ಆದಾಯವಿಲ್ಲವೆಂದು ಕಂಪನಿಯವರು ನಿಲ್ಲಿಸಿಬಿಟ್ಟಿರು.—ಇಲ್ಲಿ ಮಹಮದ್ ಯೂಸೂಫ್ ಯವರು ಚಿತ್ರದುರ್ಗ ಚಳ್ಳಕೆರೆ ಮೇಲ್ ಕಂಟ್ರಾಕ್ಟರಾಗಿ ನಡಿಸುತ್ತಿರುವದು ಸರಿಯಷ್ಟೆ. ಅವರು ಚಿತ್ರದುರ್ಗದಿಂದ ಹೊಳಲ್ಕೆರೆ ರೈಲ್ ಸ್ಟೇಷನ್‌ಗೂ ಪ್ರಯಾಣಿಕರಿಗಾಗಿ ನಿತ್ಯವೂ ಒಂದು ಜಟ್ಕಾ ಗಾಡಿ ನಡಿಸುತ್ತಿದ್ದಾರೆ. ಇದೂ ಅಲ್ಲದೆ ನಾಳೆ ೧೯೦೯ ನೇ ಜನವರಿ ಗುರ್ರೆಯಿಂದ ಹೊಳಲ್ಕೆರೆ ರೈಲ್ ಸ್ಟೇಷನ್‌ನಿಂದ ಚನ್ನಗಿರಿಗೆ ಮೇಲ್ ಕಂಟ್ರಾಕ್ಟ್ ಒಪ್ಪಿ ನಡಿಸುವದಕ್ಕೂ ಅವರು ಒಪ್ಪಂದ ಮಾಡಿಕೊಂಡಿದ್ದಾರೆ. ಪ್ರಯಾಣಿಕರಿಗೆ ಸಮಸ್ತವೂ ಅನುಕೂಲವಾಗಿ ನಡಿಸುವದರಿಂದ ಸಂತೋಷಕರವಾಗಿವೆ. ಈ ಪ್ರಾಂತ್ಯ ಪ್ರಯಾಣಮಾಡುವವರು ಈ ಅನುಕೂಲವನ್ನು ಗಮನಿಸಬೇಕು.

ಚಿತ್ರದುರ್ಗದ ತಾ|| ಕಡಬನಕಟ್ಟೆ.—ಚಿತ್ರದುರ್ಗದ ತಾಲ್ಲೂಕು ತು ರುವನೂರು ಸಮ್ಮತು ಕಡಬನಕಟ್ಟೆಯಲ್ಲಿ ಮೂರು ವರ್ಷಗಳಿಂದಲೂ ಮಳೆ, ಬೆಳೆ ಇಲ್ಲದೆ, ಧಾರಣೆಮಾನಗಳು ಹೆಚ್ಚಾಗುತ್ತಾ ಬಂದಿವೆ. ಬಡವರು ಜೀವಿಸುವು ದು ಬಹಳ ಕಷ್ಟವಾಗಿದೆ. ರಾಗಿ ೧೦ ಸೇರು, ಜೋಳ ೯ ಸೇರು ಈ ರೀತಿಯಾಗಿ ಮಾರುತ್ತವೆ. ಇಂಥಾ ಅನಾವೃಷ್ಟಿ ಕಾಲದಲ್ಲಿ ಈ ಊರಿನಲ್ಲಿರುವ ಧರ್ಮಾತ್ಮ ರು ಕೆಲವರು ಸೇರಿ ಸಮಾರಾಧನೆ ಮಾಡಬೇಕೆಂದು ಪ್ರಯತ್ನಪಟ್ಟು ೩೦೦ ರೂ ಪಾಯಿ ಹಾಕಿ, ಅಕ್ಕಿ ೧೦ ಪಲ್ಲ, ಬೇಳೆ ೩ ಪಲ್ಲ, ಬೆಲ್ಲ ೩೦ ಮಣ, ಈ ರೀತಿ ಇನ್ನೂ ಉಳಿದ ಪದಾರ್ಥಗಳನ್ನು ತಂದು ೧೩ ನೇ ತಾ. ಶುಕ್ರವಾರದ ದಿನ ದೊಡ್ಡ ಸಮಾರಾಧನೆಯನ್ನು ಮಾಡಿದರು. ಇದಕ್ಕೆ ಈ ಊರಿನ ಹತ್ತಿರವಿರುವ ಮುಷ್ಟೂರು, ಸಿದ್ದಹಳ್ಳಿ, ಕಸ್ತೂರಿರಂಗಪ್ಪನ, ತುರುವನೂರು, ಈ ಸ್ಥಳಗಳಿಂದ ಬಡವರು ೧,೦೦೦ ೧,೫೦೦ ಜನದವರೆಗೂ ಬಂದಿದ್ದರು. ಮತ್ತು ಬ್ರಾಹ್ಮಣ ರು ೩೦—೪೦ ಜನದ ವರೆಗೂ ಬಂದಿದ್ದರು. ಈ ಧರ್ಮಾತ್ಮರು ಮಾಡಿದ ಕೆಲ ಸಕ್ಕೆ ಬಂದಿದ್ದವರೆಲ್ಲರೂ ಬಹಳ ಸಂತೋಷ ಪಟ್ಟರು. ಇಂಥಾ ಅನಾವೃಷ್ಟಿ ಕಾಲದಲ್ಲಿ ಈ ರೀತಿಯಾಗಿ ಧರ್ಮ ಮಾಡುವುದು ಬಹಳ ಹೆಚ್ಚಾದದ್ದು.—ಇದಾ ದ ೨—೩ ದಿನಕ್ಕೆ ಕೆಲವರು ತಿನ್ನುವದಕ್ಕೆ ಅನ್ನವಿಲ್ಲದೆ, ದನಗಳಿಗೆ ಮೇವು ಇಲ್ಲದೆ, ಈ ಊರನ್ನು ಬಿಟ್ಟು ಕೂಲಿ ಮಾಡುವುದಕ್ಕೆ ಹೋದರು. ಆದರೆ ಮಳೆ ಯು ಯಾವಕಾಲಕ್ಕೆ ಬರುತ್ತದೆಯೋ ಎಂದು ಜನರು ನಿರೀಕ್ಷಿಸುತ್ತಾರೆ. ಕುಡಿ ಯುವದಕ್ಕೆ ನೀರಿಲ್ಲ ಪರಸ್ಥಳದಿಂದ ನೀರನ್ನು ಬಂಡಿಗಳ ಮೇಲೆ ಹೇರಿಕೊಂಡು ಬಂದು ಜೀವಿಸುತ್ತಾರೆ.—ಈ ಊರಿಗೆ ಒಂದು ಗೌರ್ನಮೆಂಟ್ ಹೋಬಳಿ ಸ್ಕೂಲು ಬಂದು ೧೫—೧೬ ವರ್ಷವಾಯಿತು ಆ ಲಾಗಾಯಿತು ೧೦—೧೧ ವರ್ಷದ ವರೆಗೂ ೧೩—೧೪ ಜನ ಮಾಸ್ತರುಗಳು ಬಂದು, ಇಲ್ಲಿನ ನೀರಿನ ತೊಂದರೆ ಯನ್ನು ಅನುಭವಿಸಲಾರದೆ ಪಲಾಯನಮಾಡಿದರು ಈಗಿರುವ ಮಾಸ್ತರಾದ ಜಿ. ನಾಗಪ್ಪನವರು ಬಂದ ಲಾಗಾಯ್ತು ಸ್ಕೂಲು ಅಭಿವೃದ್ಧಿಯಾಯ್ತು ೭೦-೮೦ ಜನಗಳ ವರೆಗೂ ಬಾಲಕರಿದ್ದಾರೆ ಇವರು ಬಂದ ನಂತರ ೩ ಜನ ಹುಡುಗರನ್ನು ಲೋವರ್ ಸೆಕಂಡರಿ ಕ್ಲಾಸಿನಲ್ಲಿ ತೇರ್ಗಡೆ ಮಾಡಿಸಿದರು. ಈಗ ೩ ಜನ ಲೋವರ್ ಸೆಕೆಂಡರಿಯಲ್ಲಿ ಓದುತ್ತಾರೆ ಇವರು ಬಂದ ಲಾಗಾಯ್ತು ಸ್ಕೂಲಿನ ಸ್ಥಿತಿ ಚನ್ನಾಗಿದೆ

ಫ್ರೇಜರ್‌ಪಾಟ್ನ.—ಕಳೆದ ೭ ನೇ ತಾ ಬಿನವಾರ ಮೈಸೂರು ಡೆಪ್ಯುಟಿ ಕಮಿಷನರಾದ ಸರ್ದಾರ್ ಎಂ. ಕಾಂತರಾಜ್ ಅರಸಿನವರ ಪತ್ನಿಯವರಾದ ಶ್ರೀಮತಿ ಮಹಾರಾಜಕುಮಾರೀಯವರಿಗೆ ಪುತ್ರ ಜನನೋತ್ಸವವಾದ ಪ್ರಯುಕ್ತ ನಮ್ಮ ಪೋಲೀಸ್ ಸೂಪರಿಂಟೆಂಡರಾದ ಮ. ಬಸವರಾಜೇ ಅರಸಿನವರು ಈ ೧೫, ೧೬, ೧೭ ನೇ ತಾ. ಗಳಲ್ಲಿ ಈ ಊರಿಗೆ ಪಶ್ಚಿಮ ಭಾಗದಲ್ಲಿರುವ ಬರ್ಫ್ಲೇರ್ ಮೈದಾನದಲ್ಲಿ ಚಪ್ಪರ, ತೋರಣಗಳನ್ನು ಹಾಕಿಸಿ, ಎಲ್ಲಾ ಸ್ಕೂಲ್ ವಿದ್ಯಾರ್ಥಿಗಳನ್ನೂ, ಊರಿನಲ್ಲಿ ಇರತಕ್ಕ ಎಲ್ಲಾ ಜನಗಳನ್ನೂ ಸದರಿ ಮೈದಾ ನಕ್ಕೆ ಬರಮಾಡಿಕೊಂಡು, ವಿನೋದಾರ್ಥವಾದ ಅನೇಕ ಆಟಪಾಟಗಳನ್ನು ಏರ್ಪ ಡಿಸಿ, ಎಲ್ಲರನ್ನೂ ಬಹಳ ಸಂತೋಷಪಡಿಸಿದರು ಆಟಗಳಲ್ಲಿ ಜಯವನ್ನು ಹೊಂದಿದವರಿಗೆಲ್ಲಾ ಪಂಚೆ, ಟೋಪಿ, ಒಡವೆ, ರಾಯದೌತಿ, ಲೇಖಿನಿ, ಕನ್ನಡಿ ಮೊದಲಾದವುಗಳನ್ನು ಬಹುಮಾನವಾಗಿ ಕೊಟ್ಟರು. ಇನ್ನೂ ಕೆಲವರಿಗೆ ಪದಾಯಿಗಳನ್ನು ಕೊಟ್ಟರು. ಮುಖ್ಯವಾಗಿ ಈ ಊರಿನಲ್ಲಿ ಅನೇಕ ಬಡ ಹುಡುಗರು ತಲೆಯ ಮೇಲೆ ಟೋಪಿಯೂ, ಮೈ ಮೇಲೆ ಬಟ್ಟೆಯೂ ಇಲ್ಲದೆ ಈ ಚಳಿಗಾಲದಲ್ಲಿ ಕಷ್ಟಪಡುತ್ತಿದ್ದರು. ಇಂಥಾ ಬಡವರಿಗೆ ಈ ವಿನೋದಗಳಿಂದ ಬಟ್ಟೆ ಸಿಕ್ಕಿದಂತಾಯಿತು. ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರಾದ ಮ. ಅಪ್ಪು ಅಯ್ಯಂಗಾರವರು ಸೆಕ್ರೆಟರಿಯಾಗಿ, ಬಹಳ ಸಹಾಯಕರಾಗಿ ತುಂಬಾ ಮುತುವರ್ಜಿ ಯಿಂದ ಸಕಲ ಕಾರ್ಯಗಳನ್ನೂ ನೆರವೇರಿಸಿದರು. ನಮ್ಮ ಸಬ್ ಡಿವಿಜನ್ ಸಾಹೇಬರವರು ಮೊದಲನೇ ದಿನ ಸಾಯಂಕಾಲ ಮೈದಾನಕ್ಕೆ ದಯಮಾಡಿಸಿ, ಸಂತೋಷಪಟ್ಟುಕೊಂಡು ಹೋದರು ೧೭ ನೇ ತಾ. ಮಧ್ಯಾಹ್ನ ೧೨ ಘಂಟೆ ಮೇಲೆ ಆಟಗಳಲ್ಲಿ ಜಯಶೀಲರಾದವರಿಗೆಲ್ಲಾ ನಮ್ಮ ಪೊ. ಸೂ| ಮೆ| ಬಸ ವರಾಜೇ ಅರಸಿನವರು ಸ್ವಹಸ್ತದಿಂದ ಬಹುಮಾನಗಳನ್ನು ದಯಪಾಲಿಸಿದರು. ಆ ಸಮಯದಲ್ಲಿ ಮ್ಯುನಿಸಿಪಲ್ ಮೆಂಬರುಗಳು, ಸ್ಕೂಲ್ ಉಪಾಧ್ಯಾಯರು, ಇತರ ಸರ್ಕಾರಿ ಅಧಿಕಾರಿಗಳು, ವರ್ತಕರು ಮೊದಲಾದ ದೊಡ್ಡ ಮನುಷ್ಯರೆಲ್ಲಾ ಹಾಜರಾಗಿದ್ದರು ಇಂಗ್ಲೀಷಿನಲ್ಲಿಯೂ, ಕನ್ನಡದಲ್ಲಿಯೂ, ಹಿಂದೂಸ್ತಾನಿ ಯಲ್ಲಿ ಅಡ್ರೆಸ್ಸುಗಳು ಒಪ್ಪಿಸಲ್ಪಟ್ಟವು ಮುಖ್ಯವಾಗಿ ನಮ್ಮ ಪೋಲೀಸ್ ಸೂ| ಸಾಹೇಬರು ಇಷ್ಟು ಪ್ರೋತ್ಸಾಹಕರವಾದ ಕಾರ್ಯವನ್ನು ಮಾಡಿದ್ದರಿಂದ ಊರಿನ ಜನರೆಲ್ಲರೂ ಬಹಳ ಸಂತೋಷಪಡುತ್ತಾರೆ. ಮತ್ತು ಆ ದಿನ ಈ ಊ ರಿನ ಸಮಸ್ತ ಜನಗಳಿಗೂ, ಸುತ್ತುಮುತ್ತಲಿನ ಹಳ್ಳಿಗಳ ಜನಗಳಿಗೂ ಮೈದಾ ನದಲ್ಲಿ ಸಕ್ಕರೆಯನ್ನು ಹಂಚಿದರು.—೨೧ ನೇ ತಾ. ಶನಿವಾರ ಫ್ರೇಜರ್‌ಪಾಟ್ನ ವಾಗಿನಾಗಿ ದಿವಾನ್ ಸಾಹೇಬರವರ ಸವಾರಿಯು ಮೋಟಾರ್ ಗಾಡಿಯಲ್ಲಿ ನಾಗಮಂಗಲ, ಕುಣಿಗಲ್ ಕಡೆ ದಯಮಾಡಿತು. ಊರಿನ ಮುಂದೆ ಅಲಂಕಾರ ವಾದ ಚಪ್ಪರವನ್ನು ಹಾಕಿದ್ದರು. ಸಬ್ ಡಿವಿಜನ್ ಸಾಹೇಬರೇ ಆದಿಯಾಗಿ ಎಲ್ಲಾ ದೊಡ್ಡ ಮನುಷ್ಯರೂ ದಿವಾನ್ ಸಾಹೇಬರವರನ್ನು ಎದುರುಗೊಳ್ಳುವದ ಕ್ಕೋಸ್ಕರ ಚಪ್ಪರದ ಬಳಿಯಲ್ಲಿ ಕಾದಿದ್ದರು. ಸವಾರಿಯು ಬೆಳಗ್ಗೆ ೯| ಗಂಟೆ ಗೆ ಸರಿಯಾಗಿ ಇಲ್ಲಿಗೆ ದಯಮಾಡಿತು. ನಮ್ಮ ದಿವಾನ್ ಸಾಹೇಬರವರು ಊರಿನ ಎಲ್ಲಾ ಸ್ಥಿತಿಗತಿಗಳ ವಿಷಯ ವಿಚಾರಮಾಡಿಕೊಂಡು ಮುಂದಕ್ಕೆ ಪ್ರಯಾಣ ಮಾಡಿದರು.

ಚನ್ನರಾಯಪಟ್ಟಣ.—ಈ ಊರಿಗೆ ಶ್ರೀಮನ್ ಮಹಾರಾಜರವರ ಸವಾ ರಿಯು ಹಾಸನದ ಮೋಕ್ಕಾಂನಿಂದ ಶ್ರವಣಬೆಳಗೊಳದಲ್ಲಿರುವ ಶ್ರೀ ಗೋಮಟೇಶ್ವ ರಸ್ವಾಮಿ ಶಿಲಾ ಪ್ರತಿಮೆಯನ್ನು ನೋಡುವ ಉದ್ದೇಶ ತಮ್ಮ ಪರಿವಾರದೊಡನೆ ಈ ನವಂಬರ್ ೧೯ ನೇ ತಾ. ಗುರುವಾರ ಮಧ್ಯಾಹ್ನ ೧೨ ಘಂಟೆಗೆ ಈ ಊರಿಗೆ ಬಿಜಮಾಡಿ, ಮುನಿಸಿಪಲ್ ಮೆಂಬರುಗಳೂ, ಸರ್ಕಾರಿ ನೌಕರಮಾನೇರೂ ಸಹಾ ಮೊದಲೇ ಏರ್ಪಾಡು ಮಾಡಿಕೊಂಡಿದ್ದ ಚಪ್ಪರದಲ್ಲಿ ಕೆಲವು ನಿಮಿಷಗಳು ಮಾತ್ರ ಮೋಟಾರ್ ಗಾಡಿಯನ್ನು ನಿಲ್ಲಿಸಿ, ಸರ್ಕಾರಿ ನೌಕರರ ಪರವ್ ತಾಲ್ಲೂಕು ಶಿರ ಸ್ತೇದಾರ್ ಮೆ|| ಗರುಡಾಚಾರ್ಯ, ಮೆ|| ಮೂ. ವೆಂಕಟರಾಮಯ್ಯನವರೂ, ಈ ಮೊದಲಾಗಿ ಸರ್ವರೂ ಸುಸ್ವಾಗತವನ್ನು ಬಯಸಿ ಹಾರ, ತುರಾಯಿ, ಫಲ, ಪುಷ್ಪಗಳನ್ನು ಸಮರ್ಪಿಸಿದರು. ಅನಂತರ ಇಲ್ಲಿನ ವೆಸ್ಲಿಯನ್ ಗರಲ್ಸ್ ಸ್ಕೂಲು ಬಾಲಕಿಯರು ಶ್ರೀಮನ್ ಮಹಾರಾಜರ ಮೇಲೆ ಮಾಡಿದಂಥ ಹಾಡುಗ ಳನ್ನು ಬಹಳ ಇಂಪಾಗಿ ಗಾನಮಾಡಿ, ಆರತಿ ವಗೈರೆ ಎತ್ತುತ್ತಿರುವಾಗ್ಗೆ ಬಾಲಕಿ ಯರಿಗೋಸ್ಕರ ಕೊಂಚ ನೊಬಲಗನ್ನು ದಯಪಾಲಿಸಿದರು. ಬಳಿಕ ಅಲ್ಲಿ ಸೇರಿ ದ್ದಂಥ ಮೆಂಬರುಗಳೂ, ತಾಲ್ಲೂಕು ನೌಕರಮಾನೇರೂ, ಜೋಯಿಸರುಗಳೂ, ಶೆಟ್ಟಿ, ವರ್ತಕರೇ ಮುಂತಾಗಿ ಸರ್ವರೂ ಕೃತಜ್ಞತಾಪೂರ್ವಕವಾದ ರಾಜಮ ರ್ಯಾದೆಗಳನ್ನು ಸಲ್ಲಿಸಿದರು. ತರುವಾಯ ಮೋಟಾರ್ ಗಾಡಿಯು ಮುಂದಕ್ಕೆ ಪ್ರಯಾಣ ಮಾಡಿ ಹೊರಟುಹೋದ ಕೊಂಚ ನಿಮಿಷಗಳೊಳಗಾಗಿಯೇ ಆಫೀಸರು ಗಳು ಕೂತಿದ್ದಂಥ ಇನ್ನು ಎರಡು ಮೋಟಾರ್ ಗಾಡಿಗಳು ಒಂದರ ಹಿಂದೆ ಒಂದು ಹಿಂಬಾಲಿಸಿ ಹೋದವು.—ಈ ಊರಲ್ಲೂ, ಜನಿವಾರವೆಂಬ ಗ್ರಾಮದಲ್ಲೂ ಸಹಾ ನೀರಿನ ಕ್ಷೋಭೆಯನ್ನು ಕುರಿತು ನಾಲಾ ತರಿಸಿ ಕೆರೆಗೆ ಬಿಡಿಸಿಕೊಟ್ಟು ಹಾಲಿ ನಮ್ಮಗಳಿಗೆ ಬಂದಿರುವ ನೀರಿನ ಕ್ಷೋಭೆ ಪರಿಹಾರ ಮಾಡಿಸಿ ಕೊಡಬೇಕೆಂದು ಕ್ರಮವಾದ ಸ್ಟ್ಯಾಂಪು ಹಚ್ಚಿಸಿ ಅರ್ಜಿಯನ್ನು ರೂಬರೂಬು ಕೊಟ್ಟಿರುತ್ತೆ. ದಯಾಳು ಪ್ರಭುಗಳು ಬಡ ರೈತರ ಅಹವಾಲ್ ಅರ್ಜಿಯನ್ನು ತಮ್ಮ ಅಮೋಘ ವಾದ ಚಿತ್ತಕ್ಕೆ ತಂದುಕೊಂಡು, ನೀರಿನ ಕಷ್ಟವನ್ನು ಪರಿಹಾರ ಮಾಡಿಸಿ ಕೊಡ ಬೇಕಾಗಿ ಪ್ರಾರ್ಥಿಸುತ್ತೇವೆ.—ಇದೇ ದಿವಸ ಒಬ್ಬ ಪೋಲೀಸಿನವನು ಒಬ್ಬ ವಿದ್ಯಾ ರ್ಥಿಯನ್ನು ಬೆನ್ನಿನ ಮೇಲೆ ತನ್ನ ಕೈಯಲ್ಲಿದ್ದ ಕೋಲಿನಿಂದ ಬಲವಾಗಿ ಹೊಡೆ ದು ಹಿಂದಕ್ಕೆ ಎಳೆದು ನೂಕಿದನು. ಅದನ್ನು ನೋಡಿದವರೂ ಅವನ ತಾಯಿ ತಂದೆಗಳೂ ಬಹು ವ್ಯಸನಪಟ್ಟುಕೊಂಡರು. ಮಹಾರಾಜರವರನ್ನು ನೋಡುವ ಉಪೇಕ್ಷೆ ಬಹಳ ಆಶೆಪಟ್ಟು ೮—೧೦ ಮೈಲಿ ಫಾಸಲೆಯಿಂದ ಬರುವ ಬಡ ಜನರನ್ನು ಅಲ್ಪ ನೌಕರರು ಇಂಥಾ ಸಂಕಟಕ್ಕೆ ಗುರಿಪಡಿಸುತ್ತಾರೆ. ಮೇಲ್ಪಟ್ಟ ಆಫೀಸರು ಇಂಥಾ ಕೃತ್ಯ ನಡೆಸದ ಹಾಗೆ ತಕ್ಕ ಬಂದೋಬಸ್ತು ಮಾಡಿಸಬೇಕಾಗಿ ಬೇಡುತ್ತೇವೆ.—ಮಾರನೇ ಶುಕ್ರವಾರ ವೆಸ್ಲಿಯನ್ ಮಿಷನ್ ಸ್ಕೂಲಿಗೆ ಕೊಟ್ಟಿ ದ್ದಂಥಾ ನೊಬಲಗಿಗೆ ಮಿಠಾಯಿ ವಗೈರೆ ತರಿಸಿ ಮಹಾರಾಜರ ಶ್ರೇಯಃ ಪ್ರಾ ರ್ಥನೆ ಮಾಡಿಸಿ ಆ ಸ್ಕೂಲಿನ ಸಮಸ್ತ ಬಾಲಕಿಯರಿಗೂ ಹಂಚಲ್ಪಟ್ಟಿತು.—ಈ ವಾರದ ೨೧ ನೇ ತಾ ಶನಿವಾರ ಈ ಊರಿನ ಸಂತೆಗೆ ನಮ್ಮ ತಾಲ್ಲೂಕು ಶಿರ ಸ್ತೇದಾರರು ಹೋಗಿ ಕೆಲವು ವರ್ತಕರನ್ನು ಕರಸಿಕೊಂಡು,—ಪ್ರಜೆಗಳು ಬಹಳ ಕಷ್ಟಪಡುತ್ತಾ ಇರುತ್ತಾರೆ. ದಿನಸಿ ಧಾರಣೆ ಹೆಚ್ಚಿಸಕೂಡದೆಂದು ಬುದ್ಧಿವಾದಗ ಳನ್ನೂ, ಧರ್ಮಮಾರ್ಗವನ್ನೂ ಹೇಳಿ ಮುದ್ದು ಸಣ್ಣ ಅಕ್ಕಿ ರೂಪಾಯಿಗೆ ೬—೭ ಸೇರೂ, ರಾಗಿ ೧೦ ಸೇರೂ ಮಾರುವಂತೆ ಏರ್ಪಾಡು ಮಾಡಿದ್ದನ್ನು ನೋಡಿ, ಮುಂದೂ ಹೀಗೆ ಮೇಲ್ಪಟ್ಟ ಆಫೀಸರುಗಳು ಮಧ್ಯೆ ಸಂತೆಗೆ ಹೋಗಿ ವ್ಯಾಪಾ ರಗಾರರಿಗೆಲ್ಲಾ ಹೇಳಿ ಪ್ರಜೆಗಳ ಕಷ್ಟವನ್ನು ಪರಿಹಾರ ಮಾಡಿ ಪ್ರಜೆಗಳ ಪ್ರೀತಿಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇವೆ. ಆದರೂ ವರ್ತಕರು ಕಮ್ಮಿ ಸೇರು, ಕಾಪಕಲ್ಲು ತಂದು ತೂಕಕ್ಕೆ ಹಾಕಿ ಸೇರು, ಅರ್ಧಸೇರು ಎಂದು ಜನಗಳನ್ನು ಮೋಸಪಡಿಸಿ ದೊಡ್ಡ ಒಕ್ಕಲಾಗುತ್ತಾ ಇರುತ್ತಾರೆ. ದಯಾಳು ಸರ್ಕಾರದವರು ಈ ವಿಷಯವನ್ನೆಲ್ಲಾ ಅವಗಾಹನೆಗೆ ತಂದುಕೊಂಡು ಸರ್ಕಾರದ ತೂಕದ ಬಟ್ಟು, ಸೇರು ಇವುಗಳಲ್ಲಿ ಅಳತೆ, ತೂಕ ಮಾಡತಕ್ಕದ್ದೆಂದು ನಿಧಾನಮಾಡಿ, ಬಡ ಜನಗಳ ಕಷ್ಟ, ನಷ್ಟಗಳನ್ನು ಪರಿಹಾರ ಮಾಡಿಸಿ ಕೊಡಲಿ ಎಂದು ಪ್ರಾರ್ಥಿಸು ತ್ತೇವೆ.

ಚನ್ನಪಟ್ಟಣ.—ಇಲ್ಲಿನ ಹವಾ ಮಾಸಿಹೋಗಿದೆ. ಬಹು ಜನರು ಛಳಿ, ಜ್ವರ, ನೆಗಡಿಗಳನ್ನು ಅನುಭವಿಸುತ್ತಲಿರುವರು. ಬೆಳಗ್ಗೆ ಸಾಯಂಕಾಲ ಛಳಿ ಬಹಳ. ಈ ಸಾಲಿನಲ್ಲಿ ರಾಗಿ ಪೈರು ಹಾಗೆ, ಅವರೀನ ಹಾಳೇ ಕೈ ಸೇರಿದ ಹಾಗಿದೆ. ರೈತರೆಲ್ಲ ಬದುಕಿ ಉಳಿದ ರಾಗಿ ಪೈರನ್ನು ಕಟಾವು ಮಾಡುತ್ತ ಬಿಸು ಸುಯ್ಯುತ್ತಿರುವರು.—ಈ ಪ್ರಾಂತ್ಯಕ್ಕೆಲ್ಲಾ ಜೀವಾಧಾರವಾಗಿದ್ದ ದೊಡ್ಡ ಕೆರೆಗ ಳೆಲ್ಲಾ ಸಂಪೂರ್ಣ ಒಣಗಿ ಹೋಗಿವೆ. ಬಹು ಕಡೆಯ ಭತ್ತದ ಪೈರು ಅರೆ ಪ್ರಾಯದಲ್ಲೂ, ಹಾಲುತನೆಯ ಸಮಯದಲ್ಲೂ ನೀರಿಲ್ಲದೆ ಒಣಗಿ ಬೆಂಡಾಗಿ ನಿಂತಿರುವದನ್ನು ಕಣ್ಣಿನಿಂದ ನೋಡುವದೇ ಮನಸ್ಸಂಕಟವಾಗಿದೆ. ಈ ಮಧ್ಯೆ ಬಡವರ, ದಿಕ್ಕಿಲ್ಲದವರ ಅಗಚಾಟ್ಲನ್ನು ಹೇಳತೀರದು. ಈ ಊರಿನಲ್ಲೇ ಎಷ್ಟೋ ಜನರ ಜೀವನವು ಪರಿತಾಪಕರವಾಗಿದೆ. ಪೇಟೆಯಲ್ಲಿ ಅಕ್ಕಿ ರೂಪಾಯಿಗೆ ೫ ಸೇರೂ, ರಾಗಿ ೯ ಸೇರೂ ಮಾರಾಟವಾದರೆ, ಜನರ ಹಾಹಾಕಾರವನ್ನು ಹೇಳತಕ್ಕ ದಾರಿಗೆಯೇ ತೋರದು. ಇಂಥಾ ದುರ್ಭಿಕ್ಷದಲ್ಲಿ ಕರ್ನಾಟಕ ನಾಟಕ ಕಂಪನಿಯ ವರು ಎರಡು ತಿಂಗಳಿಂದಲೂ ಒಬ್ಬರ ಹಿಂದೊಬ್ಬರು ಬಂದು ಬಡ ಜನರ ಕಣ್ಣು ಗಳನ್ನು ಕಣ್ಣೀರು ಸುಲುಕೊಳ್ಳುತ್ತಲಿರುವರು. ಮೂರು ದಿನಗಳಿಂದ ಸರ್ಕಸ್ ಕಂಪನಿಯವರು ಆಡುತ್ತಿರುವರು.—ಕಳೆದ ತಾ. ೧೮ ರಲ್ಲಿ ಡೆಪ್ಯುಟಿ ಕಮಿಷ ನರ್ ಮೆ|| ಕುಮಾರಸ್ವಾಮಿನಾಯಕರವರ, ಸಬ್ ಡಿವಿಜನ್ ಆಫೀಸರ್ ಮೆ| ಚೊಕ್ಕಣ್ಣನವರ ಸವಾರಿಗಳು ತಾಲ್ಲೋಕಿನಲ್ಲಿ ಕ್ಷಾಮಬಾಧೆಯು ಎಂತಹದೋ ಮನಗೊಳ್ಳಲೋಸುಗ ಇಲ್ಲಿಗೆ ಚಿತ್ತೈಸಿತ್ತು. ಪ್ರಜೆಗಳು ಅರ್ಜಿಗಳನ್ನೊಪ್ಪಿಸಿದರು. ಬಡ ರೈತ ಗೌಡಗಳು ತಂತಮ್ಮ ಬೆಂದು ಬೆಂಡಾದ ಭತ್ತದ ಪೈರುಗಳನ್ನೇ ಸಾವಂ ದರಿಗೆ ಪ್ರದರ್ಶನ ಮಾಡಿದರಂತೆ. ಪ್ರಜೆಗಳ ಅಹವಾಲುಗಳನ್ನು ಆಲಿಸಿದ ಮಹನೀ ಯರು ಈ ಪಟ್ಟಣದ ವರ್ತಕ ಸಾವಕಾರಮಂಡಲಿಯವರನ್ನು ಬರಮಾಡಿಕೊಂಡು, ನೀತಿವಾದಗಳಂ ಪೇಳಿ,—ಸದ್ಯ ಜನಗಳು ಒಂದು ತಿಂಗಳ ವರೆಗೆ ಇಲ್ಲಿನ ಬಡಮಾಯಿಗಳಿಗೆ ಧರ್ಮಭಿಕ್ಷ ನಡಿಸಿರಿ; ನಂತರ ನಾವು ಸರ್ಕಾರದಿಂದ ಸ್ಯಾಂಕ್ಷನ್ ಮಾಡಿ ಬಡವರ ಜೀವನ ನಡಿಸುತ್ತೇವಂತ ಅಪ್ಪಣೆ ಕೊಟ್ಟಂತೆ ತಿಳಿದುಬಂದಿದೆ.—ನೆನ್ನೆ ಮೊನ್ನೆ ಇಲ್ಲಿನ ದಾಯಿರೇ ಮುಸಲ್ಮಾನ್ ದೊಡ್ಡ ಮನುಷ್ಯರು ಸಭೆ ಸೇರಿ,—ನಾವು ಒಂದು ತಿಂಗಳು ಬಡವರಿಗೆ ಭಿಕ್ಷ ನಡಿಸುವದರಿಂದ ಏನಾದೀತು? ಮೊದಲು ಸರ್ಕಾರದವರು ಒಂದು ತಿಂಗಳ ನಂತರ ಖಂಡಿತವಾಗಿಯೂ ಸಹಾಯ ಮಾಗುತ್ತೇವೆಂಬ ಭರವಸೆಕೊಟ್ಟರೆ, ನಾವು ಒಂದು ತಿಂಗಳು ನಡಿಸಲು ಸಿದ್ಧರಾ ಗಿದ್ದೇವೆ ಎಂಬ ವಿಷಯಕ್ಕೆ ಡೆಪ್ಯುಟಿ ಕಮಿಷನರವರ ಜನಾಬಿಗೆ ಅರ್ಜಿ ಬರೆದು ಕೊಳ್ಳುವಂತೆ ತೀರ್ಮಾನಿಸಿದರು. ಬಡವರಾದವರಿಗೇನೋ ಒಂದು ದಾರಿ ಮಾಡಿದ್ದು ಉಪಕಾರವೇ ಸರಿ. ಇದೇ ಸಮಯದಲ್ಲಿ ಬಡವರೇ ಆಗಿರುವ ಅಲ್ಪ ಸಂಬಳಗಾರರಿಗೂ ಉಪಯೋಗವಾಗುವಂತೆ ನಮ್ಮ ಡೆಪ್ಯುಟಿ ಕಮಿಷನರವರು ವರ್ತಕ ಶಿಖಾಮಣಿಗಳನ್ನು ಕಂಡು ದವಸಗಳ ಧಾರಣೆ ಸ್ವಲ್ಪ ಕಡಮೆ ಮಾಡಿ, ಅತಿ ನಷ್ಟ ಬಾರದ ರೀತಿ ಕ್ಲುಪ್ತ ದರದಂತೆ ಮಾರಾಟ ಮಾಡುವಂತೆ ಮಾಡಿದ್ದರೆ ಎಷ್ಟೋ ಉಪಕಾರವಾಗುತ್ತಿತ್ತು. ದೊಡ್ಡ ಮನುಷ್ಯರ ಆಲೋಚನೆಯನ್ನು ನಮ್ಮ ವರ್ತಕ ಮಂಡಲಿಯವರು ಎಂದಿಗೂ ದಿಕ್ಕರಿಸುತ್ತಲೂ ಇರಲಿಲ್ಲವು. ಆದರೂ ಇಲ್ಲಿನ ನಮ್ಮ ವರ್ತಕ ಮಂಡಲಿಯವರು ಈ ಪುಣ್ಯಕಾರ್ಯದ ಫಲದ ಮೇಲೆ ದೃಷ್ಟಿ ಇಟ್ಟೇ ಇದಾರೆಯೋ ಹೊರತು, ಅನ್ಯಥಾ ಅಲಕ್ಷ್ಯ ಭಾವನೆಯುಳ್ಳವರಲ್ಲವೆಂಬದಾಗಿ ಹೇಳಲಾಪೆವು.—ನಮ್ಮೂರಿನವರಿಗೆಲ್ಲಾ ಬಳಿಕೆಯ ಜಲಾಧಾರವು ಕುನ್ನೀರಕಟ್ಟೇ ಕೆರೆಯೇ. ಜನರ ಅನಾರೋಗ್ಯಕ್ಕೂ ಬೇರೆಬೇರೆ ರೋಗೋತ್ಪತ್ತಿಗೂ ಈ ನೀರಿನ ಲ್ಲಿನ ದೋಷಗಳೇ ಕಾರಣವಾಗಿರುತ್ತೆ. ಹೀಗಿರುವಲ್ಲಿ ಇಲ್ಲಿನ ಜನರ ಪ್ರಾಣಾಧಾ ರವಾಗಿರುವ ಈ ಕೆರೆಯನ್ನು ನಮ್ಮ ಪ್ರಾಣದಂತೆಯೇ ಕಾಪಾಡಬೇಕಾಗಿದೆ. ಈ ವರುಷ ಮಳೆ ಇಲ್ಲವಾದರೂ ಈ ಕೆರೆಯಲ್ಲಿ ಆರೇಳು ತಿಂಗಳ ನೀರು ಇರುವದು ದೈವಾಶೀರ್ವಾದ. ಆದರೆ ಜನರು ಅದರಲ್ಲಿ ಹೊಲೆ, ಕೈ ಕಾಲು ಮುಖಗಳು ತೊಳೆಯೋಣವದರಿಂದಲೂ, ಮರಳು, ಹಾಗೂ ಹೀಗಿ ಬುತ್ತಿ ಖಂಡ ಪತ್ರಾವಳಿ ಗಳಿಂದಲೂ, ಮಲ ಮೂತ್ರಾದಿ ವಿಸರ್ಜನೆಗಳಿಂದಲೂ ನೀರು ಕೆಡುವ ಸಂಭವ ಕಾಣುತ್ತಿದೆ ಬೆಳಗ್ಗೆ ಸಾಯಂಕಾಲಗಳಲ್ಲಿ ಜನರು ತಂಡತಂಡವಾಗಿ ಹೋಗಿ ಗೋರಿಗಳಿರುವ ಕಡೆಯೂ ಸುಣ್ಣದ ಗೂಡುಗಳಿರುವ ಮೂಲೆಯಲ್ಲೂ ಜಲ ಮಲ ಗಳಂ ವಿಸರ್ಜಿಸುವದಲ್ಲದೆ, ನೀರು ಮುಟ್ಟ ಕೆರೆಯೇ ಗತಿ. ಈ ಕೊರತೆಗಳನ್ನು ಪರಿಹಾರ ಮಾಡುವದು ಅತ್ಯವಶ್ಯವಾಗಿದೆ. ಕೆರೆಯ ಉಸ್ತುವಾರಿಗೆ ನೇಮಕವಾದ ೭೦ ವರ್ಷದ ಬಡ ಮುದುಕ ಮೃತಪಟ್ಟನಂತೆ. ಆತನ ಸತಿ ಬಡ ಮುದುಕಿ ಯೊಬ್ಬಳಿದ್ದರೂ ಆಕೆಯನ್ನು ಯಾರೂ ಲಕ್ಷ್ಯಮಾಡರು. ನಮ್ಮ ಮ್ಯು|| ವೈಸ್ ಪ್ರೆಸಿಡೆಂಟರ ಮತ್ತು ಪೊ|| ಇನ್ಸ್‌ಪೆಕ್ಟರ ನಿಗಾ ಅತ್ತಕಡೆ ಬಿದ್ದಿದೆಯೋ ಇಲ್ಲವೋ ಗೊತ್ತಿಲ್ಲ. ಹಾಗೇನಾದರೂ ಅವರ ನಿಗಾ ಬಿದ್ದರೆ ಈ ನ್ಯೂನತೆಗಳೆಲ್ಲಾ ಒಂದೇ ವಾರದಲ್ಲಿ ನಿವೃತ್ತಿಯಾಗಿ ಕೆರೆಯ ನೀರು ಪರಿಶುದ್ಧವಾಗಲು ಅವಕಾಶ ವಾದೀತು.

JUST RECEIVED! JUST RECEIVED!!

Stead's Books for the Bairns

(illustrated) New Numbers

STEAD'S PENNY POPULAR TALES—Sixty-four Pages in a coloured Picture Cover. Each number contains a story of thrilling interest. 24 numbers.

A VERY NICE SELECTION OF [93-3]

CHRISTMAS AND NEW YEAR CARDS AND CALENDARS FOR 1909.

Apply **The Manager, C.L.S. Book Depot, Mysore City.**

ಮೈಸೂರು ಶಾರದಾ ಸೋಪ್ ಸ್ವದೇಶಿ.

85-4

ಆರೆಂಜ್, ಗುಲಾಬ್, ಕ್ಯಾಂಫರ್ ಮೊದಲಾದ ಸೋಪುಗಳು ಬಳಕೆಗೆ ಸಿದ್ಧವಾಗಿವೆ ಇವುಗಳಲ್ಲಿ ಚರಬಿಯು ಏದ್ದಾಂಗವಾಗಿ ಸೇರಿಲ್ಲ. ಉತ್ತಮವಾ ದದ್ದೆಂಬುವುದಕ್ಕೆ ಸರ್ಟಿಫಿಕೇಟುಗಳಿವೆ. ವ್ಯಾಪಾರಿಗಳಿಗೆ ಹೆಚ್ಚಾದ ಕಮಿಷನ್, ವಾಚಕರೇ, ಸ್ವದೇಶೋದ್ಯೋಗಕ್ಕೆ ಪ್ರೋತ್ಸಾಹಗೊಳಿಸಿ

ವಿಳಾಸ:—ಶಾರದಾಸೋಪ ಫ್ಯಾಕ್ಟರಿ, ಶೃಂಗೇರಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂ ದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವದು; ಮೂತ್ರವು ಸ್ವಲ್ಪವಾಗಿಯೋ ವಿಪರೀತ ವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು, ಗಾಬರಿ; ಕಣ್ಣು ಮೊಬ್ಬು; ಕಳೆ ತಿರುಗುವಿಕೆ; ಮೈನೋವು ಕೀಲುನೋವು; ಮರವು; ನಿತ್ರಾಣ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನು ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-13]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೨—೮—೦. ಔಷಧ ಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ.—ಇವರಲ್ಲಿ ದೊರೆಯುವುದು.

ನರಗಳ ಅಪಾರವಾದ ದುರ್ಬಲವನ್ನು ಪೆರೂನಾವು ಅದ್ಭುತವಾದ ರೀತಿಯಲ್ಲಿ ನಿವಾರಣೆ ಮಾಡಿರುತ್ತದೆ.

ಶರೀರಗತವಾದ ಶೈತ್ಯನಿವಾರಣೆಗೆ ಪೆರೂನಾ ಅವಶ್ಯವಾಗಿದೆ.

ನರಗಳ ದುರ್ಬಲವನ್ನು ನಾಶಮಾಡುವುದರಲ್ಲಿ ಇದು ವಿಶೇಷ ಪ್ರಖ್ಯಾತವಾಗಿದೆ

ಹೆಚ್ಚಾದ ಕಷ್ಟಕೆಲಸದಿಂದಲೂ, ಮನಸ್ಸನ್ನು ವಿಶೇಷವಾಗಿ ಕಷ್ಟಪಡಿಸುವುದರಿಂದಲೂ, ಬೇಸಿಗೆಯ ಅಪಾರವಾದ ಉಷ್ಣದ ಪೆಸೆಯಿಂದಲೂ ಶರೀರದ ಧರ್ಮವು ನಿಶ್ಶಕ್ತಿಯಾಗಿದ್ದರೆ ಪೆರೂನಾವು ಇದನ್ನು ಸಂಪೂರ್ಣವಾಗಿ ನಿವಾರಣೆ ಮಾಡಿ, ಶಕ್ತಿಯನ್ನು ಕೊಟ್ಟು, ತುಷ್ಟಿಯನ್ನುಂಟುಮಾಡುತ್ತದೆ.

ಬೇಸಿಗೆಯು ದೀರ್ಘಕಾಲವಿರುವಂಥಾ ರಾಜ್ಯಗಳಲ್ಲಿ ಜನರು ಧಗೆಯ ತೀಕ್ಷ್ಣವನ್ನು ಸುಮಾರಾಗಿ ಸಹಿಸಿಕೊಳ್ಳುವವರಾಗಿದಾರೆಂದು ಹೇಳಬಹುದು. ಆದರೆ ಅಪಾರವಾದ ಧಗೆಯೂ ಸಹಿಸಲಶಕ್ಯವಾದ ಬೇಗೆಯೂ ಒಂದರ ಹಿಂದೊಂದು ಫಕ್ಕನೆ ಪ್ರಾಪ್ತವಾಗತಕ್ಕಂಥಾ ದೇಶಗಳಲ್ಲಿ ಅನೇಕರ ಶರೀರಧರ್ಮವು ಈ ಉಷ್ಣವನ್ನು ಸಹಿಸಿಕೊಳ್ಳಲು ಶಕ್ತಿಯುಳ್ಳದ್ದಾಗಿರುವುದಿಲ್ಲ. ಇದರಿಂದಲೇ ಬಹಳ ಕಾಯಿಲೆಗಳು ಉಂಟಾಗುತ್ತವೆ

ಹೊಟ್ಟೆಗೆ ಶೀತ ಹಿಡಿಯುವುದು ಅಜೀರ್ಣವಾಗುವುದು, ಆಹಾರ ಅರಗದೆ ಇರುವುದು ಇವೆಲ್ಲಾ ಉಷ್ಣಕಾಲದಲ್ಲಿ ಪ್ರಾಪ್ತವಾಗುವ ಅಲ್ಪರೋಗಗಳೆಂದು ತಿಳಿಯಬಾರದು

ಆಹಾರ ಅರಗುವುದರಲ್ಲಿ ವ್ಯತ್ಯಾಸವಾದರೆ ಆಹಾರದ ಮುಖ್ಯ ಭಾಗಗಳನ್ನು ಶರೀರವು ಹೀರಿಕೊಳ್ಳುವುದಿಲ್ಲ ಇದರಿಂದ ಶರೀರಕ್ಕೆ ಪುಷ್ಟಿ ಕಡಮೆಯಾಗುವುದು

ಅಜೀರ್ಣದಿಂದ ದುರ್ಬಲವು.

ದುರ್ಬಲ, ಸೋಮಾರಿತನ, ಜಿಗುಪ್ಸೆ, ಬುದ್ಧಿ ಮಾಂದ್ಯ, ಮಾಂಸಖಂಡಗಳ ಬಲಹೀನತೆ, ನರಗಳ ದುರ್ಬಲ, ಇವೆಲ್ಲಾ ಕ್ರಮಕ್ರಮವಾಗಿ ಪ್ರಾಪ್ತವಾಗುವವು. ಇಂಥಾ ಸಮಯದಲ್ಲಿ ಜೀರ್ಣಶಕ್ತಿಯನ್ನು ಪಟುವಾಗಿ ಮಾಡಿಕೊಳ್ಳುವುದಕ್ಕೆ ಪರಿಹಾರವನ್ನು ನೋಡಿ ಮಾಡಿಕೊಳ್ಳಬೇಕು. ಪೆರೂನಾ ಸೇವನೆಯು ಜೀರ್ಣಕೋಶಗಳನ್ನು ಕ್ರಮಪಡಿಸುತ್ತದೆಂದು ಪ್ರಖ್ಯಾತಿ ಪಡೆದಿರುತ್ತದೆ. ಇದಕ್ಕೆ ಅಂಥಾ ಶಕ್ತಿಯುಂಟೆಂದು ಸಾವಿರಾರು ಸಂದರ್ಭಗಳಲ್ಲಿ ದೃಷ್ಟಾಂತಕ್ಕೆ ಬಂದಿದೆ. ನಾಶಿಯನಾಗುವುದೇ ಇಲ್ಲವೆಂಬ ನಿರಾಶೆಯುಂಟಾಗಿದ್ದಂಥಾ ಅನೇಕರಿಗೆ ಪೆರೂನಾವು ಆಶ್ಚರ್ಯತವಾಗಿ ಆರೋಗ್ಯವನ್ನು ಕೊಟ್ಟಿದೆ

ಪೆರೂನಾವಿನ ಉತ್ತಮೋತ್ತಮವಾದ ಗುಣ.

ಆದರೆ ಪೆರೂನಾದಲ್ಲಿ ಈ ಗುಣವಿರುವುದೇನೂ ಆಶ್ಚರ್ಯವಲ್ಲ. ಶರೀರದೊಳಗಿರತಕ್ಕ ಅಂಗಗಳ ಸೂಕ್ಷ್ಮವಾದ ನರಗಳ ಮೂಲಸ್ಥಾನಗಳನ್ನು ಶಕ್ತಿಪಡಿಸುವುದೇ ಇದರ ಕೆಲಸ. ಇದರಿಂದ ನರಗಳಲ್ಲಿ ಶಕ್ತಿಯು ಯಥಾಪ್ರಕಾರ ಕೂಡಿಕೊಳ್ಳುತ್ತದೆ. ಆ ಮೇಲೆ ಅಂಗಗಳೆಲ್ಲಾ ತಮ್ಮ ತಮ್ಮ ಕಾರ್ಯವನ್ನು ಕ್ರಮವಾಗಿ ಮಾಡಿಕೊಳ್ಳುತ್ತಾ ಬರುವವು. ಆದಕಾರಣ ನಿಮಗೆ ಶರೀರಧರ್ಮದಲ್ಲಿ ಮೇಲ್ಕಂಡಂಥಾ ಕಾಯಿಲೆಗಳಿದ್ದರೆ ಈ ಔಷಧಿಯ ಒಂದು ಬಾಟ್ಲಿ ಪೆರೂನಾ ತೆಗೆದುಕೊಂಡು ಸೇವಿಸಿ ನೋಡಿರಿ. ಒಂದು ಬಾಟ್ಲಿ ಸೇವಿಸುವುದರೊಳಗಾಗಿ ಅದರಿಂದ ನಿಮಗೆ ಫಲವಾಗುವದೋ ಇಲ್ಲವೋ ಅನುಭವಕ್ಕೆ ಬರುತ್ತದೆ

ಅದರಿಂದ ವಿಶೇಷ ಪ್ರಯೋಜನವಾಗಿದೆ ಎಂದು ಬಹುಜನರು ದಿನಾಲೂ ನಮ್ಮಲ್ಲಿಗೆ ಕಾಗದಗಳನ್ನು ಬರೆದಿರುತ್ತಾರೆ. ಅವುಗಳನ್ನು ಓದಿದಾಗ ಬರೆದವರಿಗೆ ಈ ಔಷಧದಿಂದ ಎಷ್ಟು ಪ್ರಯೋಜನವೂ ಸಂತೋಷವೂ ಉಂಟಾಯಿತೋ ತಿಳಿಯುತ್ತದೆ. ಕಷ್ಟವನ್ನು ನಿವಾರಣೆ ಮಾಡುವುದರಲ್ಲಿಯೂ ಆರೋಗ್ಯವನ್ನು ಕೊಡುವುದರಲ್ಲಿಯೂ ಪೆರೂನಾವು ಎಷ್ಟು ಚೆನ್ನಾಗಿ ಕೆಲಸ ಮಾಡಿ ಅಂಗಾಂಗಗಳನ್ನು ವ್ಯಾಪಿಸಿ ತನ್ನ ಕೆಲಸವನ್ನು ಸಾರ್ಥಕವಾದುವುದೋ ವಿವರಿಸಲಾರೆವು.

ಮಿ॥ ಪಿ. ಬ್ರಾದರ್, ೨೩ ಮಾರಿನ ಬೀದಿ, ಲಿವೈರೊ, ಕ್ವಿಬೆಕ್.

"ನನ್ನ ಗುಮಾಸ್ತೆ ಕೆಲಸದಲ್ಲಿ ನನಗೆ ತುಂಬಾ ದಣಿವುಂಟಾಗಿ ಒಂದು ವರುಷದ ಕೆಳಗೆ ಬಹಳ ನಿಶ್ಶಕ್ತನಾದೆನು. ನನ್ನ ಉದ್ಯೋಗವು ನನಗೆ ಬಹು ಕಠಿಣವಾಗಿ, ನನ್ನ ನರಗಳು ತುಂಬಾ ಬಲಹೀನವಾದವು. [illegible] ನನ್ನ ಕುತೂಹಲವಾಗಿತ್ತು. [illegible]

ನಾನು ಕ್ರಮೇಣ ದುರ್ಬಲನಾಗುತ್ತಾ ಬಂದೆನು. ಕೆಲವು ತಿಂಗಳ ಮೇಲೆ ನನ್ನ ಕಣ್ಣು ಮಂದವಾಗಿ ಹೋಯಿತು. [illegible]

[illegible]

[illegible]

ನಾನು [illegible] ನನಗೆ ಸಂಪೂರ್ಣ ಗುಣವಾಯಿತು. [illegible]"

[illegible] ಪಿತ್ತಕೋಶವೂ.

ಮಿ, [illegible]

"ನನಗೆ ಪೆರೂನಾ [illegible] ನನಗೆ ವಿಶೇಷ ಪ್ರಯೋಜನವನ್ನುಂಟುಮಾಡಿತು. [illegible] ನಾನು ಸಂಪೂರ್ಣವಾಗಿ ಗುಣಹೊಂದಿದೆನು."

ಊಟಮಾಡಿದ ಮೇಲೆ ಬಾದೆಯುಂಟಾಗುತ್ತಿದ್ದದು.

[illegible]

"ಪೆರೂನಾ [illegible]

[illegible] ಅದು ಆಶ್ಚರ್ಯಕರವಾದ ಔಷಧವೆಂದು [illegible] ಆಯಿತು."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯುತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು. ತೆಲುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದ್ದು ಅವರಿಂದಲೇ ತಿಳಿಯಬಹುದು.

ವಿಳಾಸು—ಹಿಂದುಸ್ಥಾನದಲ್ಲೆಲ್ಲಾ ಈ ಔಷಧಿ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

6—11—1908 ರಿಂದ 13—11—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	6	7	0	0
ಬೆಂಗಳೂರು ಡಿಸ್ಟ್ರಿಕ್ಟು	17	9	0	0
ಮೈಸೂರು ,,	80	66	0	0
ಕೋಲಾರ್ ,,	12	5	17	14
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	21	18	0	0
ಹಾಸನ ,,	24	14	0	0
ಚಿತ್ರದುರ್ಗ ,,	7	5	12	4
ಕಡೂರ್ ,,	18	21	0	0
ಶಿವಮೊಗ್ಗ ,,	15	11	0	0
• ಸಂಖ್ಯೆ ಕಾಣಿಸಿಲ್ಲ. ಜುಮ್ಲಾ	230	146	29	18

ಶಾಲಿವಾಹನ ಶಕ ವರುಷಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಮಾರ್ಗಶಿರ ಶುದ್ಧ ತದಿಗೆ ಗುರುವಾರದಿಂದ ಮಾರ್ಗಶಿರ ಶುದ್ಧ ನೌಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೮ನೇ ನವಂಬರ್ ಮತ್ತು ಡಿಸೆಂಬರ್.

ತಾ.	ವಾರ.	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ	ಶೇಷ ವೃಶ್ಚಿಕ ಮಾಸ
26	ಗುರು	ತದಿಗೆ	45-15	ಮೂಲ	27-25	12
27	ಶುಕ್ರ	ಚೌತಿ	41-12	ಪೂ ಷಾ	25 11	13
28	ಶನಿ	ಪಂಚಮಿ	36-23	ಉತ್ತರಾ	22-24	14
29	ರವಿ ‡	ಷಷ್ಠಿ	30-58	ಶ್ರ	19-50	15
30	ಚಂದ್ರ †	ಸಪ್ತಮಿ	25-22	ಧ	14-56	16
1	ಕುಜ §	ಅಷ್ಟಮಿ	19-24	ಶ	10-48	17
2	ಬುಧ	ನೌಮಿ	13-10	ಪೂಭಾ	6-46	18

‡ ಚಂಪಾಷಷ್ಠಿ, ಸುಬ್ರಹ್ಮಣ್ಯದಲ್ಲಿ ರಥೋತ್ಸವ

† ನಂದನಸಪ್ತಮಿ

§ ತಿಥಿದ್ವಯಂ, ಮೃತ್ಯುಯೋಗ

ಪೇಟೆ ಧಾರಣೆ.

ವಿವರ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲ ೧ಕ್ಕೆ	ರೂ	೧೮-೪-೦	೧೯-೦-೦
ಕೆಂಬೂತ ಅಕ್ಕಿ ಅವಲ್		೧೫-೮-೦	೧೮-೦-೦
,, ದುಯಂ		೧೮-೪-೦	೧೭-೮-೦
ಬಾಪ್ಸಾನೆ ಅಕ್ಕಿ		೧೭-೮-೦	೧೭-೮-೦
ಸಣ್ಣಕ್ಕಿ ಅವಲ್		೨೨-೦-೦	೨೧-೦-೦
,, ದುಯಂ		೧೯-೮-೦	೨೦-೦-೦
ತೊಗರೀ ಬೇಳೆ ಪಲ್ಲ ೧ಕ್ಕೆ		೧೭-೦-೦	೧೮-೮-೦
,, ದುಯಂ		೧೬-೮-೦	೧೫-೦-೦
ಹುರಳಿ ರಾಗಿ ಪಲ್ಲ ೧ಕ್ಕೆ		೧೦-೦-೦	೧೦-೦-೦
ಕಾರಾಗಿ		೯-೮-೦	೯-೦-೦
ಜೋಳ		೧೦-೮-೦	೯-೦-೦
ಹುಲಸಂದೆ ಪಲ್ಲ ೧ಕ್ಕೆ		೧೨-೮-೦	೧೧-೧೨-೦
ಬಿಳೀ ಅವರೆ		೧೨-೦-೦	೧೧-೦-೦
ಹೆಸರು		೧೨-೮-೦	೧೪-೦-೦
ಉದ್ದು		೧೪-೮-೦	೧೫-೦-೦
ಕಡಲೆ		೧೨-೦-೦	೧೪-೫-೦
ಎಳ್ಳು ಸೇ ೧೨೨ ಕ್ಕೆ		೨೧-೦-೦	೧೯-೦-೦
ಹುರುಳಿ		೧೦-೦-೦	೯-೦-೦
ಹರಳು ೧೨೨ ಸೇರಿಗೆ		೧೦-೦-೦	೧೦-೦-೦
ಸೀಗೇಕಾಯಿ ಮೂಟೆ ೧ಕ್ಕೆ		೧-೮-೦	೧-೬-೦
ಮೆಣಸಿನಕಾಯಿ		೪-೮-೦	೪-೮-೦
,, ದುಯಂ		೪-೪-೦	೪-೪-೦
ಬೆಲ್ಲ ದೊಡ್ಡ ಅಚ್ಚು		೬-೦-೦	೫ ೩-೬-೦
ಒಳ್ಳೆಣ್ಣೆ ಮೂಟೆ ೧ಕ್ಕೆ		೫-೧೨-೦	೬-೯-೦
ಹರಳೆಣ್ಣೆ ,,		೪-೨-೦	೪-೦-೦
ಕೊತ್ತುಂಬರಿ ಪಲ್ಲ ೧ಕ್ಕೆ		೭-೦-೦	೬-೮-೦
ಉಪ್ಪು ,,		೬-೦-೦	೫-೯-೦
ಮೆಣಸೇ ಹುಲ್ಲು		೧-೪-೦	೧-೪-೦
,, ಹಸೀದು		೧-೬-೦	೧-೪-೦
ತುಪ್ಪ ಮೂಟೆ ೧ಕ್ಕೆ		೧೪-೦-೦	೧೫-೦-೦
ಸೀಮೆ ಮಿಶ್ಶ ಪೆಟ್ಟಿ ೧ಕ್ಕೆ		೫-೦-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ		೪-೫-೦	೫-೮-೦
ಅಳಲೇಕಾಯಿ ಮೂಟೆ ೧ಕ್ಕೆ		೦-೧೦-೦	೦-೧೪-೦
ಅಂಟುವಾಳದ ಕಾಯಿ ಮೂಟೆ ೧ಕ್ಕೆ		೦-೧೪-೦	೦-೧೫-೦
ಚಿನ್ನ (ಪೌನ್) ಕೆಂಪು		೧೫-೭-೦	೧೫-೫-೦
,, ,, ಪಸಿಮೆ		೧೫-೧೪-೦	೧೬-೦-೦
,, ,, ಗಟ್ಟಿ ತೊಲ ೧ಕ್ಕೆ		೨೪-೧೦-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭-೦-೦	೬೬-೧-೦

Printed and Published by the Rev. E. W. Thompson, M. A., Proprietor and Manager, Wesleyan Mission Press, Mysore. 26/11/1908.

THE MADDAGIRI AFFAIR

Correspondence Between Government and "Vrittanta Patrike."

Many of our readers will remember that in April and May of last year we published some correspondence from the Maddagiri Taluk, in which complaint was made of the action of the then Amildar of the Taluk and other officials. It was alleged that the Amildar and the village officials, acting under his orders, had used their influence and authority in an improper manner to induce the people to make contributions to the Sri Jagadguru of the Sringeri Math, and that some supplies had been taken without due payment being made.

In August a letter over the signature of the Officiating Secretary to Government in the General and Revenue Departments was published in the *Mysore Star*, announcing that the Government had made full enquiries into the case and that the allegations of the *Vrittanta Patrike* were wholly false. Immediately upon the appearance of this letter we wrote to the Dewan, stating that it was our constant aim to publish nothing but what was true, and expressing our willingness to withdraw and to apologise for any unfounded charges to which we had given currency by inadvertence. We requested Government to be good enough to supply us with fuller information upon the matter, and to furnish us with a summary of the evidence on which the allegations made by our Correspondent were declared to be devoid of truth.

The Correspondence which ensued was not closed till the 5th of October last, when a letter was received from the Secretariat, conveying what we take to be the final reply of the Government to our representations. We now publish the principal items of that Correspondence, and ask our readers to consider them carefully and to form their own conclusions as to where the truth lies.

It is impossible for the Government to justify its letter of August 19th, sent to the *Mysore Star*. First a departmental enquiry, to which we are not summoned as one of the parties likely to furnish relevant evidence, is made into complaints published *by this newspaper, and then the results of that* enquiry are not communicated to us, but are announced to the public indirectly in another journal. It is scarcely necessary to say that a procedure such as this is wanting in the courtesy which every civilised Government owes to the meanest of its subjects; and that it violates the fundamental rule of justice requiring that no one shall be condemned without first being heard in his own behalf. It is plain, too, that the letter to the *Mysore Star*, as it now stands, is untrue, being contradicted by the admissions subsequently made by the Government itself.

We pass on, however, to the main issues raised by this Correspondence, which are the protection of the ryots from spoliation and the maintenance of discipline in the public service. The travel of distinguished persons, accompanied by large retinues, is attended by many difficulties in India, and would be impossible without the assistance of State officials in providing transport and supplies. It is, however, the anxious desire, both of the Government of British India and of Mysore, that in making the necessary arrangements for the traveller no injustice shall be done to the ryots. Neither the underlings of Government nor the servants of the traveller are to be permitted to use the occasion to enrich themselves or their masters at the expense of others. His Highness the Maharaja, by the Regulations and Instructions published for his own tours, has declared plainly his will that no supplies shall be taken without payment, immediate and in full. Our Correspondent alleged, and we see no reason to doubt his word, that supplies were taken for the Sringeri Math from unwilling villagers without payment; and we cannot but regret that the Government failed to use the opportunity to strike a blow at what is still, notoriously, a mischievous practice in rural districts.

The contributions of a Math, even the customary dues paid by its disciples, are of the nature of free-will offerings and cannot be enforced or recovered at law. They are the tributes of devotion, or of courtesy and respect. If, therefore, a Government officer feels it necessary or desirable to facilitate the collection of such gifts—and it is exceptional for him so to do—he must make it clear to the public in what capacity and with what intention he is acting. It is one thing for private persons to come to him and to say, "Please receive and forward what we have to offer": it is quite another thing for him to go to them and to say, "You must pay what I have fixed and now demand from you." The statement of the Mysore Government is that the Amildar of the Maddagiri Taluk and the officials, acting under his orders, did no more than receive and forward to the proper quarter the voluntary offerings of the people, and that there was no exaction of contributions by force.

In this context, it is not possible to provide an exact definition of what constitutes force, or to draw a hard and fast line and decide where the voluntary ends and the compulsory begins. The definition of force, however, cannot be limited to cases in which actual physical violence is used, though our Correspondent adduced one instance of the kind. We should say that, if a Government official takes upon himself to suggest or to dictate how much a village or an individual shall contribute, if he displays the authority of Government to overcome reluctance in the giver, he is guilty of using compulsion and is exceeding both his powers and his duty.

In the sense, which we have indicated above, we believe that there was a forced exaction of contributions in the Maddagiri Taluk, and that the authority of Government was improperly employed. In the present state of our information, we do not hesitate for a moment to declare our conviction that the account given by our Correspondent of the action of the Amildar is nearer to the truth than the version supplied by the Government in its Memorandum and letters.

It is necessary to consider also the principle which has been put forward by the Government in reply to all our representations, written or oral. The Dewan has blocked every attempt to open up this case with the plea that, the District officer having sent in his report, the Government must uphold his decision; and that to do otherwise would be prejudicial to the discipline of the service. We readily admit the excellence of the principle, within its proper limits; and the *Vrittanta Patrike* cannot be accused of having forgotten to show the respect which is due to the dignity and prestige of the Government and its officers. But the plea advanced by the Dewan is no more than half the truth. It is obviously the duty of the Executive Head of the Government, under His Highness the Maharaja, to revise the acts of his subordinates; and so far from such supervision and correction being prejudicial to discipline, the purity and efficiency of the service depend largely upon its being exercised with candour, impartiality, vigour, and promptitude. Nothing is so destructive of the prestige of a Government as a refusal, when due cause has been shown, to afford facilities for a fair, full, and open inquiry into the actions of its officers.

As things now are, we are virtually asked to repose a blind confidence in the report to Government of the Deputy Commissioner of Tumkur. That report has never been made public; and we have not even an assurance that it coincides with the findings of the Assistant-Commissioner who was appointed to conduct the enquiry. The Government could not have chosen a course, in dealing with this case, which was less calculated *to inspire the confidence of the people in its* administration and to maintain discipline in the public service. A mistake was made in the beginning, and every subsequent proceeding on the part of Government has magnified the initial error. Even should it be proved that every allegation made by our Correspondents was false, it would still be impossible, in our view, for Government to justify its procedure.

In conclusion, we wish to address a few words to our readers who are ryots. Let them understand clearly that it is the will of His Highness the Maharaja—and of the Imperial Government—that they shall be secure in the enjoyment of what is their own. Provided that they pay their taxes and keep the laws of the land, there is no man, official or non-official, who has the right to molest them. Let them also remember that the Government officer is appointed for their protection by His Highness the Maharaja, and that his duties are often difficult and unpleasant. Let them never fail to show him due respect and render him all necessary help. Above all, let them avoid malicious slander and false accusation.

If a Government officer exceeds his duty and is guilty of oppression, let the ryots speak the truth about him, without adding to it or taking from it. And having spoken the truth once, let them abide by their word fearlessly. Let them neither be bribed to commit perjury, nor frightened into silence.

The difficulty of every honest servant of the public in India—be he Government official or newspaper editor—is that he can rarely be sure that his witnesses are speaking the truth and are not lying out of malice or fear; or that, when they are challenged, they will abide by what they have said. There is only one way by which the evils rife in Indian Governments can be brought to an end. The people must learn what their rights are, and must combine respect for themselves with respect for the officer of the State. They must unite courage to truthfulness.

We desire to thank our Correspondents and witnesses for their unwavering testimony. We believe they have rendered a benefit to the people of this State; and we accept responsibility for the correspondence published in this newspaper. We must decline—regretfully but without hesitation—to accept the inherently improbable and vague assurances of the Mysore Government that no wrong was perpetrated, in face of the sustained and detailed statements of our Correspondents.

CORRESPONDENCE PUBLISHED IN THE "VRITTANTA PATRIKE."

April 11, 1907.

Several days ago the Maddagiri Amildar, having summoned the principal men of the various villages through the Patels and Shanbogs, informed them that the Sringeri Guru was coming. Having made an apportionment according to the condition, size &c. of each village, of 40, 50, or 70 rupees, he instructed them to collect and remit the money. If the disciples of the Guru were to give according to their devotion and ability, it would be well. This is the time for the ryots to pay their Kandāyam. One must affirm that they suffer inconvenience by this imposition. It would have been better if the principal persons of each village had been summoned, and they had collected all the people in their villages and taken whatever each one gave.

May 2, 1907.

It was written once in this newspaper that the Amildar made arrangements for certain fixed sums to be collected for His Holiness the Sringeri Swami from the ryots of each village. The method of this collection was as follows: in some villages they have collected according to the rank and condition of the people; in several villages at ten annas per plough; for those who have no ploughs from four annas to two annas (per head); in some other villages, like the Local Fund Cess, at six pies per rupee (of Kandāyam.)

If the authorities will make enquiries as to the number of ploughs, and of ryots (without ploughs), and the total assessment of the various villages, there will be no difficulty in deciding whether all the money raised has been paid in or not.

But besides this, many ryots, seeing that grass and other things are being taken without payment from each village for the supply of the Swami, complain:—"Besides giving money from our hand, must we throw in a gift of grass as well? This is a fine compulsion!" As an example of this kind of thing Ramegowda, Patel of the village of Siddanahalli, was collecting grass from ryots and came with the Toti and Talawār to the yard of Siddananjappa, a Lingāyat Mathada Ayya, of that village. He (the Patel) was getting some bundles of grass tied up, when the above-mentioned Lingāyat came in and said, "I have no grass. I have got a little by begging. One bundle is enough for you." *Because he objected thus, it is known that the Patel* got angry, seized his juttu, twisted it, flung him down and struck him a blow, and that he (Siddananjappa) died within a few hours; and that, this matter having been informed to the higher authorities, the Amildar, Police Inspector, and Hospital Assistant came and took evidence as to what had occurred, that the corpse was buried according to order after a post-mortem at Maddagiri, and that the Patel was placed in the lock-up. It is impossible to describe the grief of the mother of the dead man, and of his elder brother and relatives. Many feel regret that a young man of about twenty-five years of age should have died.

[*From another Correspondent.*]

We learn that the Amildar asked the Swami for permission to sell by auction the surplus grass and firewood which had come for supply and to give the money to him, and that the Swami gave instructions that it should be used on Sri Sankaracharya's worship day for feeding Brahmans. We learn that on the 28th the grass and firewood were sold by auction, and that, because the bidding stopped at about Rs. 110, the auction was closed at a round sum of Rs. 50. Though the Amildar does not belong to the same religion, the zeal displayed and all the arrangements made by him are most praiseworthy.

LETTER OF GOVT. TO "MYSORE STAR."

FROM C. S. BALASUNDRAM IYER, ESQ., B.A.,

Offg. Secretary to the Government of His Highness the Maharaja of Mysore, Genl. and Rev. Depts.

TO THE EDITOR, *MYSORE STAR.*

Bangalore, the 15th August, 1907,
General and Revenue Secretariat

SIR,

With reference to your letter No. 651, dated 17th July, 1907, on the subject of the alleged exaction of subscriptions by the Amildar of Maddagiri in connection with the tour of His Holiness the Sringeri Guru, I am directed to inform you that, on enquiries made, Government are satisfied that no contributions other than voluntary were collected during the Swami's visit and that there is no truth in the allegations made in the *Vrittanta Patrike* of the 2nd May, 1907.

I have the honour to be,
Sir,
Your most obedient servant,
C. S. BALASUNDARAM IYER,
Offg. Secretary to Govt.

MEMO OF GOVERNMENT SENT TO "VRITTANTA PATRIKE."

FROM C. S. BALASUNDARAM IYER, ESQ., B.A.,

Offg. Secretary to the Government of His Highness the Maharaja of Mysore, Genl. and Rev. Depts.

TO REV. E. W. THOMPSON, M.A.,

Editor, Vrittanta Patrike, Mysore.

Dated Bangalore, the 11th December, 1907.

SIR,—With reference to your letter, dated the 24th August, 1907, requesting that a summary of the evidence on which the allegations of your Correspondent regarding the alleged exactions during the visit of His Holiness the Jagadguru of the Sringeri Matt to Maddagiri were declared false, I am directed to forward herewith a Memo showing the facts of the case.

I have the honour to be,
Sir,
Your most obedient servant,
K. MYLAR RAO,
For Offg. Secretary to Government.

MEMO.

As soon as news reached Maddagiri of the intended visit of His Holiness the Sringeri Jagadguru to the place, the public seem to have convened a meeting and appointed a Reception Committee to collect donations and to generally supervise the arrangements connected with the reception of His Holiness.

About November, 1906, in accordance with instructions received from Government, the Amildar of Maddagiri ordered all Shekdars that supplies of grass, fuel, leaves, vegetables, etc., should be arranged for, on payment. In the course of his tours in the Taluk, the Amildar found that the ryots were desirous of voluntarily contributing small supplies in kind to His Holiness' camp free of any charge, considering it a religious duty to make such offerings. The Amildar then instructed the village officials concerned to keep regular accounts of such receipts, either in cash or kind, and deliver them to the Treasurer duly appointed by the Reception Committee and obtain vouchers from him. During the period of the visit of His Holiness, the Amildar and the Divisional Assistant-Commissioner were constantly moving about among the people, and not a single complaint was made to either of them about any exactions.

As to the homicide at Siddanhally—the Shekdar of the place had issued an order to the Patel for the purchase of a quantity of grass. The Patel was a violent-tempered man and appears to have had an altercation with the deceased about the quantity of grass, and in the course thereof gave him some blows. The latter had a diseased heart, an enlarged spleen, and a generally debilitated constitution and died six hours afterwards. The Patel was duly tried for this, convicted and sentenced to 10 months' rigorous imprisonment by the First-Class Magistrate of Maddagiri.

After His Holiness the Jagadguru left the Maddagiri Taluk, a stock of articles valued at Rs. 100 to Rs. 120 remained over. It was offered back to the contributors, but they refused to take back what they had once given as charity, especially to the Matt of His Holiness. It was therefore sold by public auction and a sum of Rs. 105 realized, as to the disposal of which instructions have been sought by the Amildar.

K. MYLAR RAO,
For Offg. Secretary to Government.

REPLY OF EDITOR, "VRITTANTA PATRIKE" TO GOVERNMENT MEMO.

TO V. P. MADHAVA RAO, ESQ., C.I.E.,

Dewan to H. H. the Maharaja of Mysore.

Mysore, 21st May, 1908.

SIR,—I have the honour to submit, as requested by you in a personal interview, a statement in writing with reference to the Correspondence published in the *Vrittanta Patrike*, wherein it was alleged *that certain irregularities took place* at the time of the visit of the Jagadguru of the Sringeri Math to the Maddagiri Taluk.

For your convenience I have attached to this letter a file of the chief documents, relating to this case. Documents marked A. and B. are literal translations of the Correspondence, which appeared in the *Patrike* on April 11th and May 2nd, 1907. Document C. is the letter that was published in the *Mysore Star* of August 19th over the signature of the General and Revenue Secretary to Government. Documents D. and E. are letters received by me as Editor of the *Vrittanta Patrike* in reply to two letters of mine, dated August 24th and Sept. 28th, asking whether Government would be pleased to make a further and fuller statement on the matter and furnish a summary of the evidence on which it had been declared that there was no truth in the allegations made by the Correspondent of the *Vrittanta Patrike*. The Government was pleased to furnish such a statement in its Memorandum of December 11, 1907.

I now have the honour of submitting in writing to your consideration the observations on the whole case, which I made in our personal interview.

(i) The first paragraph states that "the public seem to have convened a meeting and appointed a Reception Committee to generally supervise the arrangements connected with the reception of His Holiness." The use of the words "seem to have" implies a doubt as to whether such a meeting was actually convened or not; but it is unnecessary to ask for further information on this point. The Reception Committee might have been competent to supervise the arrangements in the town of Maddagiri; but it is incredible that it either did or could supervise such arrangements over the whole Taluk and in distant and sometimes inaccessible villages. It is difficult to imagine that this is suggested; and inasmuch as the Correspondent of the *Vrittanta Patrike* made no charges with reference to the arrangements in Maddagiri itself, the paragraph appears to be irrelevant.

(ii) The second paragraph consists of a statement, made apparently on the evidence of the Amildar, that he, the Amildar, gave orders to the village officials to collect the necessary supplies on payment, and to obtain vouchers for voluntary offerings in cash or in kind from the Treasurer of the Reception Committee, and that no complaints were addressed to him during the course of his tour through the Taluk at the time. I regret that I am unable to accept this statement as a correct or complete representation of the facts. It is not likely that the Amildar would be approached for the redress of grievances for which he himself was believed to be responsible. On the other hand, the Assistant-Commissioner, appointed subsequently by Government to conduct an enquiry, received several well-substantiated complaints of unlawful exaction; and I am informed on reliable evidence that the countryside at the time was rife with such complaints.

I will, however, cite one particular incident as illustrative of the methods initiated by the Amildar and followed by village officials under his orders. In April the Amildar convened a meeting of Shanbogs and Patels from the adjoining villages at the Kodagdal Police-station. The Amildar himself assessed the villages at certain amounts, and the attempt was made by the village officials to realise these sums by collecting, in some cases, from persons who protested against the imposition and were told that it was made by orders of the higher authorities. There is no trace in this proceeding of a spontaneous and voluntary action on the part of the public.

(iii) The third paragraph deals with the case of homicide at Siddanhalli. The account of this incident given in the Memorandum does not contradict that of the *Vrittanta Patrike*, but rather confirms it in all its main features. There is a difference only in the omission of some details and the inclusion of others. The statement of the *Vrittanta Patrike* is confirmed that the dispute arose between the Patel and the Lingayat over a bundle of grass, which the Patel was taking away; but the Memorandum is silent as to the relevant fact that this collection of supplies was being made for the suite of the Sringeri Math.

This one incident is sufficient to show that some grave irregularities did occur, and that the action of the Amildar and the minor officials was not limited to directing and co-operating with the voluntary action of the public.

It is impossible to regard the Memorandum as an explanation of the letter sent to the *Mysore Star*; for the Memorandum confirms in several important respects the allegations made by the Correspondent of the *Vrittanta Patrike*. The letter stated that Government were satisfied that "no contributions other than voluntary were collected during the Swami's visit," and that "there was no truth in the allegations made in the *Vrittanta Patrike*." It is obvious that there are here two universal propositions which it would be difficult or impossible for the Government to substantiate, even if they were true; and one particular instance to the contrary is sufficient to disprove either of them. The Siddanhalli case is such an instance; and I have further adduced the action of the Amildar in convening the meeting at the Kodagdal Police Station.

I have to recognise gratefully that, in conversation at the interview, you were good enough to admit that the wording of the letter was inept and unfortunate, and that there was some amount of truth in the allegations made by the *Vrittanta Patrike*. I respectfully submit that our Correspondent had full justification for what he wrote and that his allegations were substantially true.

It was admitted by you to have been an improper and unjudicial procedure for the Secretariat to issue a statement declaring a newspaper to have been guilty of publishing falsehoods without ever giving the newspaper the opportunity of explaining or substantiating its statements. The *Vrittanta Patrike* was condemned without being cited or heard. But I do not wish to press this aspect of the case. I am not concerned for the reputation of the *Vrittanta Patrike*. The main issue is the purity of the public service and the defence of the ryots from spoliation.

The charges, made in the *Vrittanta Patrike*, amount to this that the Amildar and certain village officials of the Maddagiri Taluk exceeded both their duty and their powers in the collection of contributions in money and supplies in kind for the establishment of the Sringeri Math. There is no one more anxious or more careful than His Highness the Maharaja himself that his tours shall not be made the occasion for exaction from his loyal subjects: and the mind of the Government has been declared in its published Regulations. The charge in the *Vrittanta Patrike* is that those Regulations have been violated both in letter and in spirit.

I would, therefore, respectfully request that you will call for the Report submitted by the Assistant-Commissioner appointed to conduct the enquiry and for all other papers connected with this case, and that you will consider the whole matter. Meanwhile I shall await the communication of your decision in the hope that the truth will be established.

I remain,
Your obedient servant,
E. W. THOMPSON,
Editor, "V. P."

FINAL REPLY OF GOVERNMENT.

Camp Mysore, 5th October, 1908.

TO THE REV. E. W. THOMPSON,
Editor, *Vrittanta Patrike.*

Dear Sir,—With reference to your letter dated 21st May, 1908, addressed to the Dewan regarding the alleged illegal exaction of donations on the occasion of the visit of the Sri Sringeri Swami to the Maddagiri Taluk in April, 1907, I am directed to say that the Government have again perused the papers on the subject and find that there is nothing to show that the Amildar or other authorities levied any forced contributions from any persons and that all that the Amildar did was to ensure that voluntary contributions made by villagers reached the Central Committee without any peculation. I am also to say that a full enquiry has been made by local officers, and Government do not think anything is to be gained by further pursuing the subject.

Yours faithfully,
C. S. BALASUNDARAM IYER,
For Secretary to Government, General and Revenue Depts.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೮ ನೇ ಇಸವಿ ಡಿಸೆಂಬರ್ ತಾರೀಖು ೩ ನೇ ಗುರುವಾರ. ಸಂಚಿಕೆ ೨೭

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-42

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ತವರದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ. ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸುತ್ತ ದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಸೂತಿಶೂಲೆ, ಮಕ್ಕಳ ಎಳವು, ಜ್ವರ, ಪಕ್ಕುಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೩೦ ಮಾತ್ರೆಯುಳ್ಳ ಕುಪ್ಪಿಗೆ ೮ ಆಣೆ. ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವ ರ ಹ ರಿ.

64-18

ಇದು ಸಾಧಾರಣ ಜ್ವರ, ಚಳೀಜ್ವರ, ಮೋರೀಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಜ್ವರಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಯಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ; ರೂ ೨—೧೨ ಆ., ೧೧ ರೂ: ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫ ಬಿಡಲಾಗುವದು.

ಓ ಮ ಂ ಕ ರ್ಪೂ ರ.

Omum-Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ಆಮಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾ ಸಫಲವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೊಗಸು ತಿಂಗಳ ಬಂದಾಗಲೇ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವುಗಳ ಕೆಳಗಿನ ವಿಳಾಸದಿಂದಲ್ಲಿ ವಿಶೇಷ:—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

BASEL MISSION WEAVING ESTABLISHMENT,

59-22

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಟ್ಟರ) ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ಮಿಶ್ರಿತ) ಟ್ವೀಡ್ ನಮೂನೆಯ ಕೋಟಿನ ಇಜಾರುಗಳ ಚೆಕ್ ಬಟ್ಟೆಗಳೂ, ಹಂಟಿಂಗ್ ಎಂಬ ಶಿಕಾರಿ ಬಟ್ಟೆಗಳೂ, ಶರ್ಟಿಂಗ್ ಎಂಬ ಕಮೀಜಿನ ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ, ಟೇಬಲ್ ಕ್ಲೋತ್ ಎಂಬ ಮೇಜುವಸ್ತ್ರಗಳೂ, ಟುವಾಲು ವಗೈರೆಗಳೂ ಸಾಜೂಕಾಗಿ ತಯಾರಿಸಲ್ಪಟ್ಟು ಯಾವಾಗಲೂ ಚಿಲ್ಲರೆಯಾಗಿಯಾಗಲೀ ರಖಂ ಆಗಿಯಾಗಲೀ ಮಾರಾಟಕ್ಕೆ ತಯಾರಿರುತ್ತವೆ

TRADE MARK

ಒಳ್ಳೇ ಕಮಿಶನ್:—ರೂಪಾಯಿ ೧೦೦ ರ ಮೇಲೆ ಮಾಲುಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾದೀತು. ಹೆಚ್ಚಿನ ವಿವರ ಖುದ್ದಾಗಿ ಯಾ ಕಾಗದ ಮೂಲಕ ತಿಳುಕೊಳ್ಳಬಹುದು.

ನಮೂನೆ ಯಾ ಮಾದರಿಗಳು :—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಕಳುಹಿಸಲ್ಪಡುವವು.

ವಿಶೇಷ ಲಕ್ಷಿಸತಕ್ಕದ್ದು :—ಈ ನಮ್ಮ ಮಾಲುಗಳಿಗೆ ಇಲ್ಲಿ ಕಾಣಿಸಿರುವ "ಟ್ರೇಡ್ ಮಾರ್ಕ್" ಎಂಬ ವ್ಯಾಪಾರಗುರ್ತು ಇರುವ ಲೇಬಲ್ ಎಂಬ ಚೀಟು ಹಚ್ಚಿರುತ್ತದೆ. ಈ ಗುರ್ತಿನ ಚೀಟುಗಳು ಇಲ್ಲದವುಗಳೆಲ್ಲಾ ಬಾಜಾ ಮಿಶ್ರಿತ ಮಾಲುಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತ :—ನಗದಾಗಿ ಇಲ್ಲವೆ ಮಾಲುಗಳು ವಿ. ಪಿ. ಟಪ್ಪಾಲ ಮೂಲಕ ಕಳುಹಿಸಲ್ಪಡಬೇಕಾಗಿದ್ದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು.

☞ ಈ "ಟ್ರೇಡ್ ಮಾರ್ಕ"ನ್ನಾಗಲೀ, ನಾವು "ಕೋಪಿರೈಟ್" ಪಡದಿರುವ ಲೇಬಿಲುಗಳನ್ನಾಗಲೀ, ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾವಾ ಕರು ಇತರ ಮಾಲುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು.

ವಿಳಾಸ:—BASEL MISSION WEAVING ESTABLISHMENT,
MANGALORE, S. CANARA.

AMRUTANJAN DEPOT, 16 OAK-LANE, BOMBAY.

[17-41]

ಅಮೃತಾಂಜನ ಡಿಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯ ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ಎಲುಗಂಟುನೋವು, ಎದೆಶೀತ, ಘಾಯ, ಇಸಿಬು, ಮೂಲವ್ಯಾಧಿ, ಇವೇ ಮೊದಲಾದ ಯಾವ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತಿಳಿಯಲು ಯೋಗ್ಯವಾದ ಸಂಗತಿಯಾಗಿರುತ್ತದೆ. ಇದು ಚರ್ಮದ ಮೂಲಕ ಮಾಂಸವನ್ನು ಪ್ರವೇಶಿಸಿ, ಕೊಳಕು ಪದಾರ್ಥಗಳಿಂದ ಹುಟ್ಟಿದ ನಾನಾ ತರದ ವೇದನೆಗಳನ್ನು ನಾಶಪಡಿಸುತ್ತದೆ ಬಾಟ್ಲಿ ಒಂದರ ಕಿಮ್ಮತು ೦—೮—೦ ಪೋಸ್ಟು ಖರ್ಚು ೦—೪—೦. ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಕಪ್ ಇನಾಮು. ಆರ್. ಆರ್. ಗಂಗೋಲಿ [ನೇ ಕ್ಲಾಸ್ ಸಬ್ ಜಡ್ಜ್ ಕಾರವಾರ,—ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ, ಕೆಮ್ಮಿಗೂ, ಉಪಯೋಗಿಸಿದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ.

ಅಮೃತಾಂಜನದ ಪ್ರಯೋಗದ ವಿಷಯ ಒಂದು ಹೊಸ ಪುಸ್ತಕವನ್ನು ತಯಾರಿಸಿರುತ್ತೇವೆ.

ಗಜಕರ್ಣದ ಮುಲಾಮು.

ಮೂರು ಸಾರಿ ಹಚ್ಚುವದರೊಳಗೆ ಗಜಕರ್ಣ, ತುರಿ ತಪ್ಪ ನಾಶವಾಗುವದು ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦—೨—೦; ವಿ. ಪಿ ಖರ್ಚು ೦—೪—೦

ದಂತಮಂಜನ—ಡಬ್ಬಿ ೨ ಆಣೆ. ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ, ಬಾಯಿಯ ವಾಸನೆಯನ್ನು ಪೂರ್ಣವಾಗಿ ತೆಗೆಯುತ್ತದೆ, ಹಲ್ಲುಗಳು ಘಟ್ಟಿಯಾಗುತ್ತವೆ, ಹಲ್ಲುಗಳು ಬೆಳ್ಳಗಾಗುತ್ತವೆ.

ಕಜ್ಜಿ ಮುಲಾಮು—ಡಬ್ಬಿ ೧ ಕ್ಕೆ ಕಿಮ್ಮತು ೩ ಆಣೆ.

ಕೇಶವರ್ಧಿನಿ—ಚಲೋ ಪರಿಮಳ ಉಳ್ಳದ್ದು.

ಕೇಶವರ್ಧಿನಿ—ಮನಶುದ್ಧಿ ಮಾಡುವದು.

ಕೇಶವರ್ಧಿನಿ—ಕೂದಲನ್ನು ನಯಮಾಡುವದು. ಬಾಟ್ಲಿ ಒಂದರ ಕಿಮ್ಮತು ರೂ. ೧—೦—೦.

ವಜ್ರಗುಟಿಕೆ—ಧಾತುಪುಷ್ಟಿ, ರಕ್ತಶುದ್ಧಿ	೧—೦—೦
ಕುಸುಮನಾರಿಗುಟಿಕೆ—ಹೆಂಗಸರ ಹೊಟ್ಟೆನೋವಿಗೆ	೧—೦—೦
ಸುಂದರೀ ತೈಲ—ಮೋರೆಯ ಮುದ್ದ ದಾಗಳಿಗೆ	೦—೮—೦
ತಾಂಬೂಲ ಗುಟಿಕೆ ತಾಂಬೂಲ ಸೊಗಸು ವೃದ್ಧಿಸಲಿಕ್ಕೆ	೦—೮—೦
ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಚೇಳುಕಡಿತದ ಮದ್ದು ಚೇಳುಕಡಿತಕ್ಕೆ	೦—೮—೦
ಜುಲಾಬು ಮಾತ್ರೆ—ಜುಲಾಬಿಗೆ	೦—೮—೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು, ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸ. ೧೯೦೮ ನೇ ಇಸವಿ ಡಿಸೆಂಬರ್ ತಾರೀಖು ೩ ನೇ ಗುರುವಾರ. ಸಂಚಿಕೆ ೨೭

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-42

೧. ಲಿಖಿತಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈ ಕಾಲು ಕೊಡತ (ಭಾರ), ಮೈ ನಡುಕ, ಶ್ವಾಸಾಶಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ... ಕಾಯಿಲೆಗೂ ದಾರಿ ಕೊಡದೆ, ನರು ನಾಗಳ ಬಲಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುವುದಲ್ಲದೆ ಸ್ತ್ರೀಯರ ಸುತಶೂಲೆ, ಮಕ್ಕಳ ಎಳವು, ಜ್ವರ, ಮಚ್ಚುಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ.

ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ. 64-18



ಇದು ಸಾಧಾರಣ ಜ್ವರ ಚಳಿಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿ... ಕಚೇರಿಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ... ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೫೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕೇಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೫೦ ಡೋಸಿನ ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುತ್ತಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ. ೧ ರೂ , ೧—೮ ರೂ ರೂ ... ೧೧ ರೂ ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಓಮಂಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ಸಾನಾತರದ ಹೊಟ್ಟೆನೋವುಗಳು—ಮುಂತಾದ ಕ್ಲೇಶಗಳಿಗೆ ಮಹಾ ಸ್ಪಷ್ಟವಾಗಿ ಪರೀಕ್ಷಿಸಿ ಕೊಡತಕ್ಕ ಗುಣಕೊಡುವದು ಇದು ಹಲ್ಲುಗಳು ತಿಂಗಳಿಗೆ ... ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ,, ಜ್ವರಹರಿ " ಎಂಬ ಔಷಧದ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಔಷಧ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಅಥವ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಹೆಸ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

BASEL MISSION WEAVING ESTABLISHMENT, 59-22

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಟ್ಟೆ)

ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ಮಿಶ್ರ) ಟ್ವಿಲ್ ನಮೂನೆಯ ಕೋಟಿನ ಬಟ್ಟೆಗಳ ಚೆಕ್ ಬಟ್ಟೆಗಳೂ, ಹಂಟಿಂಗ್ ಯಾನೆ ಶಿಕಾರಿ ಬಟ್ಟೆಗಳೂ, ಶರ್ಟಿಂಗ್ ಯಾನೆ ಕಮೀಸಿನ ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ, ಟೇಬಲ್ ಕ್ಲೋತ್ ಯಾನೆ ಮೇಜುವಸ್ತ್ರಗಳೂ, ಟುವಾಲು ವಗೈರೆಗಳೂ ಸಾಮೂಕಾಗಿ ತಯಾರಿಸಲ್ಪಟ್ಟು ಯಾವಾಗಲೂ ಚಿಲ್ಲರೆಯಾಗಿಯಾಗಲೀ ರಖಮ ಆಗಿಯಾಗಲೀ ಮಾರಾಟಕ್ಕೆ ತಯಾರಿರುತ್ತವೆ

ಒಳ್ಳೇ ಕಮಿಶನು:—ರೂಪಾಯಿ ೧೦೦ ರ ಮೇಲೆ ಮಾಲುಗಳನ್ನು ತೆಗದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾಗುವದು ಹೆಚ್ಚಿನ ವಿವರ ಖುದ್ದಾಗಿ ಯಾ ಕಾಗದ ಮೂಲಕ ತಿಳುಕೊಳ್ಳಬಹುದು

ನಮೂನೆ ಯಾ ಮಾದರಿಗಳು:—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಕಳುಹಿಸಲ್ಪಡುವವು

ವಿಶೇಷ ಲಕ್ಷ್ಯಸತಕ್ಕದ್ದು:—ಈ ನಮ್ಮ ಮಾಲುಗಳಿಗೆ ಇಲ್ಲಿ ಕಾಣಿಸುವ "ಟ್ರೇಡ್ ಮಾರ್ಕ್" ಎಂಬ ವ್ಯಾಪಾರಗುರುತು ಇರುವ ಲೇಬಲ್ ಯಾನೆ ಚೀಟು ಹಚ್ಚಿರುತ್ತದೆ ಈ ಗುರುತಿನ ಚೀಟುಗಳು ಇಲ್ಲದವುಗಳೆಲ್ಲಾ ಬಾಸೆಲ್ ಮಿಶ್ಯನ್ ಮಾಲುಗಳಲ್ಲವೆಂದು ತಿಳಿಯತಕ್ಕದ್ದು

ಶರ್ತ:—ನಗದಾಗಿ ಇಲ್ಲವೆ ಮಾಲುಗಳು ವಿ ಪಿ ಟಪ್ಪಾಲ ಮೂಲಕ ಕಳುಹಿಸಲ್ಪಡಬೇಕಾಗಿದ್ದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು.

☞ ಈ "ಟ್ರೇಡ್ ಮಾರ್ಕ"ನ್ನಾಗಲೀ, ನಾವು "ಕೋಪಿರೈಟ್" ಪಡದಿರುವ ಲೇಬಿಲುಗಳನ್ನಾಗಲೀ, ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾವಾತನು ಇತರ ಮಾಲುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು

ವಿಳಾಸ:—BASEL MISSION WEAVING ESTABLISHMENT,
MANGALORE S CANARA

AMRUTANJAN DEPOT, 16 OAK-LANE, BOMBAY. [17-41]

ಅಮೃತಾಂಜನ ಡಿಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯ ಜೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ಅಬಲುಗಂಟ್ಲುನೋವು, ಎದೆಶೀತ, ಘಾಯ, ಜಖಮು, ಮೂಲವ್ಯಾಧಿ, ಇವೇ ಮೊದಲಾದ ಬಹುವಿಧ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತಿಳಿಯಲು ಯೋಗ್ಯವಾದ ಸಂಗತಿಯಾಗಿರುತ್ತದೆ ಇದು ಚರ್ಮದ ಮೂಲಕ ಮಾಂಸವನ್ನು ಪ್ರವೇಶಿಸಿ, ಕೆಲಕುಪದಾರ್ಥಗಳಿಂದ ಹುಟ್ಟಿದ ನಾನಾ ತರದ ವೇದನೆಗಳನ್ನು ನಾಶಪಡಿಸುತ್ತದೆ ಬಾಟ್ಲಿ ಒಂದರ ಕಿಮ್ಮತು ೦—೮—೦ ಪೋಸ್ಟು ಖರ್ಚು ೦—೪—೦ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಕಪ್ ಇನಾಮು ಆರ್ ಆರ್ ಗಂಗೋಲಿ I ನೇ ಕ್ಲಾಸ್ ಸಬ್ ಜಡ್ಜ್ ಕಾರವಾರ,—ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ, ಕೆಮ್ಮಿಗೂ, ಉಪಯೋಗಿಸಿದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ಸಂಬುತ್ತೇನೆ

ಅಮೃತಾಂಜನದ ಪ್ರಯೋಗದ ವಿಷಯ ಒಂದು ಹೊಸ ಪುಸ್ತಕವನ್ನು ತಯಾರಿಸಿರುತ್ತೇವೆ.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣ, ತುರಿ ಕಜ್ಜಿ ನಾಶವಾಗುವದು ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ ಡಬ್ಬಿ ೧ಕ್ಕೆ ೦—೬—೦, ವಿ ಪಿ ಖರ್ಚು ೦—೪—೦

ದಂತಮಂಜನ—ಡಬ್ಬಿ ೩ ಆಣೆ. ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ, ಬಾಯಿಯ ವಾಸನೆಯನ್ನು ಪೂರ್ಣವಾಗಿ ತೆಗೆಯುತ್ತದೆ, ಹಲ್ಲುಗಳು ಘಟ್ಟಿಯಾಗುತ್ತವೆ, ಹಲ್ಲುಗಳು ಬೆಳ್ಳಗಾಗುತ್ತವೆ

ಕಜ್ಜಿ ಮುಲಾಮು—ಡಬ್ಬಿ ೧ ಕ್ಕೆ ಕಿಮ್ಮತು ೩ ಆಣೆ.

ಕೇಶವರ್ಧಿನಿ—ಚಲೋ ಪರಿಮಳ ಉಳ್ಳದ್ದು

ಕೇಶವರ್ಧಿನಿ—ಮನಶುದ್ಧಿ ಮಾಡುವದು

ಕೇಶವರ್ಧಿನಿ—ಕೂದಲನ್ನು ನಯಮಾಡುವದು ಬಾಟ್ಲಿ ಒಂದರ ಕಿಮ್ಮತು ರೂ ೧—೦—೦

ವಜ್ರಗುಟಿಕೆ—ಧಾತುಪುಷ್ಟಿ, ರಕ್ತಶುದ್ಧಿ	೧—೦—೦
ಕುಸುಮನಾರಿಗುಟಿಕೆ—ಹೆಂಗಸರ ಹೊಟ್ಟೆನೋವಿಗೆ	೧—೦—೦
ಸುಂದರೀ ತೈಲ—ಮೋರೆಯ ಮೂದ ಒಡೆಗೆ	೦—೮—೦
ತಾಂಬೂಲ ಗುಟಿಕೆ ತಾಂಬೂಲ ಸೊಗಸು ವೃದ್ಧಿಸಲಿಕ್ಕೆ	೦—೮—೦
ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಜೇಳುಕಡಿತದ ಮದ್ದು ಜೇಳುಕಡಿತಕ್ಕೆ	೦—೮—೦
ಜುಲಾಬು ಮಾತ್ರೆ—ಜುಲಾಬಿಗೆ	೦—೮—೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನ್, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್—"ಅಮೃತಾಂಜನ," ಮುಂಬಯಿ.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

58-20

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ,ಒಂದಕ್ಕೆ ೫ ಆಣೆಯಿಂದ ೭॥ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಲಾ ಪ್ರಕಟನೆಗಳು.

ವ್ಯವಹಾರನಿರ್ಣಯ—ಫಟಗಳು ೫೪೫. ಹಿಂದೂ ಮಹಮದೀಯ ಲಾಗಳು, ೨೫ ಶಾಸನಗಳು ಇವುಗಳ ಸಂಗ್ರಹವೂ, ೯೩ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ. ಪಿ. ಸೇರಿ ೧ ರೂ ೧೨ ಆಣೆ. [40-32]

ಕನ್ನಡ ಲಾ ರಿಪೋರ್ಟ್—ಪ್ರಿವಿ ಕೌನ್ಸಿಲ್, ಹೈ ಕೋರ್ಟ್, ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸ ಪತ್ರಿಕೆಯು ತಿಂಗಳಿಗೊನ್ನು ಹೊರಡುತ್ತದೆ. ವರ್ಷದ ಚಂದಾ ರೂ. ೧—೦—೦ ಮುಂಗಡ, ಮಾ, ವಿ. ಪಿ ಬಿಡಿಪತ್ರಿಕೆ ೧ ಕ್ಕೆ ೦—೩—೦

ಇವುಗಳನ್ನ ಪೇಕ್ಷಿಸುವವರು—,. ಎಂ. ಮಲ್ಲಾರಾಯ್ಯರು, ಫಸ್ಟ್ ಗ್ರೇಡ್ ಪ್ಲೀಡರ್, (೯೦) ೩ ನೇ ರೋಡ್, ಚಾಮರಾಜ ಪೇಟೆ, ಬೆಂಗಳೂರು ಸಿಟಿ — ಈ ವಿಳಾಸಕ್ಕೆ ಬರೆಯಬೇಕು.

ಮದ್ರಾಸ್ ಸಾಹುಕಾರ್ ಪೇಟೆ,

ಟಿ. ಎಂ. ರಾಮಯ್ಯ ಶೆಟ್ಟರ ಕಂಪೆನಿಯಲ್ಲಿ

99-1

ತಲೆ ರುಗುವ ಕಟಿ ಇದ ಪೆಟಿಗಳು ಅಥವಾ ದೈವರಗಳು ಈ ಕೆಳಗಿನ ವರದ ಮಾರಾಟಕ್ಕೆ ಸಿದ್ಧವಾಗಿವೆ ಬ್ರಾಂಚ್ ಆಫೀಸ್ ಬೆಂಗಳೂರು ನಗರ್ತರಪೇಟೆಯಲ್ಲೂ ಸಿಕ್ಕುವವು



ಬೇಕಾದವರು ತಮ್ಮ ಆರ್ಡರನ್ನು ತಿಳಿಸಿ ರೂ. 10 ಮುಂಗಡವಾಗಿ ಕಳುಹಿಸಿದರೆ ವಿ ಪಿ ಮೂಲಕ ರವಾನಿಸಲ್ಪಡುತ್ತೆ. ವಿಶೇಷ ಮಾಹಿತಿ ಬೇಕಾದವರು ಕಾಗದದ ಮುಖಾಂತರ ಮೇಲ್ಕಂಡ ವಿಳಾಸದಾರರಿಂದ ತಿಳಿದುಕೊಳ್ಳಬಹುದು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-49

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ನಿಶ್ಚಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯಿಸುತ್ತಿರುವ ಟೋಪಿಗಳ ದಾರವೆಲ್ಲಾ ಬೀಳುವದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ಯಾರಾಗುವ ಟೋಪಿಗಳ ದಾರವೆಲ್ಲಾ ಹಚ್ಚಗೆ ವಿಲಾಯಿತಿಯಿಂದಲೇ ಬರುವವು (೨) ಟೋಪಿಗಳನ್ನು ಮಿದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅನೇಕ್ತ್ರ ಕುಸವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೆದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ ಆಗ ಮಾವದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ. ೧ ರೂ. ೬ ಆ ; ೧ ರೂ. ೪ ಆ.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ ; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ , ೧ ರೂ. ೮ ಆ. ; ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ. , ೧ ರೂ. ೬ ಆ. ;

ಕೂಸುಗಳ ಟೋಪಿ, ಸೂಫಿನ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ.—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

CHAMBERLAIN'S COUGH REMEDY.

ಚೇಂಬರ್ಲೇನ್ಯವರು ಕಂಡುಹಿಡಿದ ಕೆಮ್ಮಿನ ಔಷಧವು.



1-49

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ವಿಧ ಶೀತ, ಗಂಟಲನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಳ ಉಪಯುಕ್ತವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಶೀಘ್ರವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಸಾಧ್ಯಕರವಾದ ಕೆಮ್ಮಿನ ದಬ್ಬವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ಶಮನಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ಸೀಘ ಸುಖವಾಗಿ ನಿದ್ದೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪ ಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕ್ರಯಿಸಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಹರಾಜು ಇಸ್ತಿಹಾರ್.

96-3

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ: ಅಮೃತಮಹಲ್ ಇಲಾಖೆಯ ಕೆಲವು ಗಂಡು ರಾಸುಗಳನ್ನು ಬಾಳ್ತಿ ಇಸವಿ ಡಿಸೆಂಬರು ೫ನೇ ತಾರೀಖು ಲಾಗಾಯಿತು ಹಾಸನದ ತಾಲ್ಲೋಕು ' ದುದ್ದ 'ದ ಹೋಬ್ಳಿ ... . ಸದರಿ ಮಾಹೆ ೧೩ ನೇ ತಾರೀಖು ಲಾಗಾಯಿತು ಚಳ್ಳಕೆರೆ ತಾಲ್ಲೋಕು "ಹಿರಿಕೆರೆ ಸಾಮ್ಪ್ರತ್ತೆ" ಕಾವಲಿನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಛಡಸವಾಲ್ ಮಾಡಿ ರಾಸುಗಳನ್ನು ಪಡೆಯಬಹುದು.

ಕ್ಯಾಂಪ್-ಮೈಸೂರು,	ಎಚ್ ಸಂಜೀವರಾವ್ ಅರ್ಸ್,
	ಸೂಪರಿಂಟೆಂಡೆಂಟ್,
ತಾ ೩೦-೧೧-೧೯೦೮	ಅಮೃತಮಹಲ್ ಇಲಾಖೆ

ಲೇಖನ ಪ್ರಕಾಶಿಕಾ

97-2

ಡಿಸೆಂಬರ್ ಒಳ್ಗೊಸ್ಕರ ಹಾಗಿ ಪಡೆದುಕೊಂಡವರಿಗೆ ರೂ ೧—೦—೦

ಅನಂತರ ಪಡೆದುಕೊಂಡವರಿಗೆ ,, ೧—೮—೦

ಟಪ್ಪಾಲ್ ಖರ್ಚು .. ೦ ೨-೦

ಪ್ರತಿಯೊಬ್ಬ ನಾಸ್ತಿಕನೂ ಪಟೇಲರೂ ಅವರ ಸಂಗ್ರಹಿಸಿ ಇಡಬೇಕಾದದ್ದು ರೆಜಿಸ್ಟ್ರೇಷನ್ ನೌಕರರಿಂದ ತಯಾರಾದ ಪಟ್ಟಿ ಈ ಪುಸ್ತಕವನ್ನು ಬಟ್ಟೆ ಬೇಕಾದವರೂ ಮಾಡುವವರಿಗೂ. ಪತ್ರಗಳನ್ನು ಬರೆಯುವವರಿಗೂ ಅತ್ಯುಪಯುಕ್ತವಾದದ್ದು ಮತ್ತಾವದಿದೆ. ಇದರಲ್ಲಿ ಸ್ಟಾಂಪಾಕ್ಟು ರೆಜಿಸ್ಟ್ರೇಷನ್ ಆಕ್ಟು, ರೆಜಿಸ್ಟ್ರೇಷನ್ ರೂಲ್ಸ್, ರೆಜಿಸ್ಟ್ರೇಷನ್ ಫೀಜು ವಿಷಯವಾದ ಸರ್ಕ್ಯುಲರ್ಗಳೂ, ಮತ್ತು ಪ್ರತಿಯೊಂದು ಪತ್ರ ಬರೆಯತಕ್ಕ ನಮೂನೆ. ಅದಕ್ಕೆ ಬೇಕಾದ ಸ್ಟಾಂಪು, ರೆಜಿಸ್ಟ್ರೇಷನ್ ಫೀಜು ವೊದಲಾದವುಗಳನ್ನು ಕಾರಣಸಹಿತ ಬಹಳ ಚನ್ನಾಗಿ ವಿವರಿಸಿ ಇದೆ ಓದುಬರಹ ಮಾತ್ರ ಬಲ್ಲ ಪ್ರತಿಯೊಬ್ಬರೂ ಈ ೧ ರೂಪಾಯಿಯ ಪುಸ್ತಕದಿಂದ ಅನೇಕ ವಿಧವಾದ ಕಷ್ಟನಷ್ಟಗಳನ್ನು ಹಿಂದಿತವಾಗಿಯೂ ತಪ್ಪಿಸಿಕೊಳ್ಳಬಹುದು ಹೆಚ್ಚು ಹೇಳಲೇಕೆ ಅನುಭವದಿಂದ ಚನ್ನಾಗಿ ಗೊತ್ತಾಗುವದು ನಮ್ಮ ಸ್ಟಾಕ್ ಇಲ್ಲದ ಪುಸ್ತಕಗಳನ್ನು ಮಾತ್ರ ಕೊಳ್ಳಬೇಡಿ ವಿಳಾಸ—ಎಂ ಕೃಷ್ಣಮೂರ್ತಿರಾವ್, ರೆಜಿಸ್ಟ್ರೇಷನ್ ಕ್ಲಾರ್ಕ್.

ಹೊನ್ನಾಳಿ ತಾಲ್ಲೂಕ್, ಶಿವಮೊಗ್ಗಾ ಡಿಸ್ಟ್ರಿಕ್ಟ್.

ಶ್ರೀ ತಾಂಬೂಲ.

81-9

ಇದನ್ನು ಓದಿ ! ಪಡಬೇಡಿ ! ಗುಣನೋಡಿ !!!

ಲೋಕದಲ್ಲಿ ಅನೇಕರು ನಾನಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದ್ದಾರೆ ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ. ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬೇವಿನ ದುಗ೯ಂಧ ನಾಶವಾಗುತ್ತೆ ರಕ್ತಶುದ್ಧಿ, ಜೀರ್ಣಶಕ್ತಿ ಮೇಧಾಶಕ್ತಿ ಉಂಟಾಗುತ್ತೆ ವಾತ ಪಿತ್ತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಮಾಡಿ ಅವರಿಗೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ ಭೇದಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೨ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು. ಈ ಗುಳಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ ಆರು ಸೀಸೆಗೆ ಒಂದು ಜಾಸ್ತಿ. ೬ ಸೀಸೆ ವರೆಗೆ ವಿ. ಪಿ. ಖರ್ಚು ೫ ಆಣೆ ನಮ್ಮ ವಿಳಾಸ —



ವಾತವ ... ಸೊಪ್ತ ತಾ ಇಸರಿಹಾರ. ದ ೧ ಕ್ಕೆ ೦—೧೨—೦

ದೇವನಹಳ್ಳಿ ಟವನ್,	ಯಂ ಗೋವಿಂದಶೆಟ್ಟಿ,
ಬೆಂಗಳೂರು ಡಿಸ್ಟ್ರಿಕ್ಟ್.	ಮೆಡಿಕಲ್ ಪ್ರಾಕ್ಟಿಷನರ್.

ಗೌಡರ ಹೊಗೆ ಸೇದುವ ಔಷಧ.

94-4

ಕೆಮ್ಮು, ಗೂರಿ ಇತ್ಯಾದಿ ಗಳಿಗೆ ಶೀಘ್ರ ಪರಿಹಾರ ಕ್ರಯ, ಪೆಟ್ಟಿಗೆ ೧ ಕ್ಕೆ ೮ ಆಣೆ. ೪ ಕ್ಕೆ ೧-೮-೦ ಏಜಂಟರಿಗೆ ಒಳ್ಳೆ ದಳ್ಳಾಳಿ ಕೊಡುತ್ತೇವೆ. ವಿಳಾಸ- ... ಕೃಷ್ಣೇಗೌಡ, ಬಿ ಎ, ಬಿ ಎಲ್, ಬೆಂಗಳೂರು ಸಿಟಿ.

ಮೈಸೂರಿನಲ್ಲಿ ಮನೆ ವಿಕರಿಗೆ ಸಿದ್ಧವಾಗಿದೆ.

86-7

ಮೈಸೂರು ಶಿವರಾಂಪೇಟೆ ಇಪ್ಪಾಲ್ ರಸ್ತೆಯಲ್ಲಿ ೬೭ × ೭ ಅಂಕಣಗಳ ಅಂಚೆ ಗುಂಡಾರ ಕೃಷ್ಣಪ್ಪನವರ ದೊಡ್ಡ ಮನೆ ಬೇಕಾದವರು—ಮೇಲ್ಕೋಟೆಯ ಫಾರೆಸ್ಟ್ ರೇಂಜರ್ ಮ, ಬಿ ಶ್ರೀಕಂಠಯ್ಯನವರಿಗೆ ಬರೆದು ಕ್ರಯ ಮುಂತಾದದ್ದನ್ನು ತಿಳಿಯಬಹುದು

ನೋಡಿರಿ. "ಸ್ವೋತ್ಪಾದಕಕೋಶ" ತರಿಸಿರಿ.

98-2

ಈಗಲಾದರೂ ತೀರುಮೆಯಿಂದ ಒಂದಿದೆ.

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ.

೫೦೦೦ ಹಾಸ್ಟ್ ಟೋಪಿ ಹೊಲಿಯುವ ಸುಪೀರಿಯಲ್ ಉಲ್ಲನ್ ದಾರ.		
೧೦ ಟೋಪಿಯಾಗುವ ಉಲ್ಲನ್ ಬಂಡಲ್ ೧ ಕ್ಕೆ		ರೂ ೩-೭-೦
೧ ಟೋಪಿಯಾಗುವ ಉಲ್ಲನ್ ದಾರಕ್ಕೆ		೦-೮-೦
ಹಾಸ್ಟ್ ಟೋಪಿ ಹಾಕುವ ಕೊಕ್ಕೆ ಸೂಜಿ ೧ ಕ್ಕೆ	೦-೧-೬.	೦-೩-೦
ಶ್ರೀ ... ದೊಡ್ಡ ಸೈಜು ಬನಿಯನ್ ೧ ಕ್ಕೆ		೨-೮-೦
ಬಾಲಿ ಫೋಸು ಕಾಪುರ ಡಬ್ಬಲ್ ಕಲರ್ ೧,೦೦೦ ಕ್ಕೆ		೧-೫-೦
ಸುಗಂಧ ಸಂಜೀವಿನಿ ಭೃಂಗಾಮಲಕ ತೈಲ ಶೀಸೆ ೧ ಕ್ಕೆ		೨-೮-೦
ಮೆಂತಾಲ್ ತಲೆ ನೋವಿಗೆ ಅನುಕೂಲವಾದ ಔಷದ ಡಬ್ಬಿ ೧ ಕ್ಕೆ		೦ ೨-೦
ಸೇ, ಫೇ ... ಮಾಡಿಸ್ ೧ ಕ್ಕೆ		೦-೩ ೦
ವಿಸ್ ಕೈವಸ್ತ್ರಗಳು (ಚಂದವಾದ್ದು) ೧ ಕ್ಕೆ		೭-೩-೦
ರಾಸ್ಕೋಪ್ ಸಾ ಯಿಲ್ ವಾಚು ೧ ಕ್ಕೆ		೪-೦-೦
ಕೋಟಿನ ಬಾಟಲ್ಗಳು ದೊಡ್ಡ ಸೈಜು ದರ್ಜ ೧ ಕ್ಕೆ		೧-೧೮-೦
ಗಜಕರ್ಣದ ಮುಲಾಮು ಡಬ್ಬಿ ೧ ಕ್ಕೆ		೦-೬-೦
೨೦೦ ಇಂಗ್ಲಿಷು ಅಕ್ಷರಗಳಿರುವ ಪೆಟ್ಟಿಗೆ ೧ ಕ್ಕೆ		೩-೮-೦

ಪದಸ್ಥ ಆದವರಿಗೆ ವಿ. ಪಿ. ಇಂದಲೂ ರವಾನಿಸುತ್ತೇವೆ

ನಮ್ಮ ವಿಳಾಸ ವಿ ಉಲ್ಲನ್ ಮಾರ್ಟ್, ಬೆಂಗಳೂರು. ದ ಕ

ಔಷಧಿ ತೆಗೆದುಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ.

SCOTT'S EMULSION. 33-36

(ಸ್ಕಾಟ್ಸ್ ಇಮಲ್ಷನ್)

ಛಳಿ ದೇಹದ ನೋವು ಕ್ರಮೇಣ ಶ್ಲೇಷ್ಮ, ಮಹಾಮಾರಿರೋಗ ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ ರೋಗಗಳು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ಹಿಡಿಯುತ್ತವೆ.



ಈ ಮಾನುಷನನ್ನು ಹಿಡಿದಿರುವ ಔಷಧ ಮನ್ನೇ ಕೊಂಡುಕೊಳ್ಳಿ

ಆಸ್ವಸ್ಥನನ್ನು ದೇಹ ಪೋಷಣೆಗಾಗಿ ೩೦೯ ದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿ ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್ ಇಂಗ್ಲೆಂಡ್.

ವೃತ್ತಾಂತ ಪತ್ರಿಕೆ.

—:o:—

ಶಕೆ ೧೯೦೮ನೇ ಇಸವಿ ಡಿಸೆಂಬರ್ ತಾ|| ೩ನೇ ಗುರುವಾರ

ಉಪಾಧ್ಯಾಯರಿಗೆ ಬಹುಮಾನದ ಮೇಲಾಟವು.

ಬಾಲಕ ಬಾಲಕಿಯರಿಗೆ ಭಕ್ತಿ ನೀತಿಮಾರ್ಗಗಳನ್ನು ಈ ಸಂಸ್ಥಾನದ ಪಾಠಶಾಲೆಗಳಲ್ಲಿ ಯಾವ ರೀತಿ ಹೇಳಿಕೊಡಬೇಕೆಂಬ ಭಾಗದಲ್ಲಿ ಉಪಾಧ್ಯಾಯರು ಬಹುಮಾನದ ಉಪನ್ಯಾಸಗಳನ್ನು ಬರೆದು ಕಳುಹಿಸಬೇಕೆಂದು ಕಳೆದ ತಿಂಗಳ ೧೮ನೇ ತಾ. ಪತ್ರಿಕೆಯಲ್ಲಿ ಪ್ರಕಟಿಸಿದ್ದೆವಷ್ಟೆ. ಅದರಲ್ಲಿ ಮೊದಲನೆಯದಾದ "ಸತ್ಯವನ್ನು ಹೇಳುವುದು" ಎಂಬೀ ವಿಷಯವನ್ನು ಕುರಿತ ಕೆಲವು ಪಾಠಗಳು ಬಂದಿರುತ್ತವೆ. ಇವನ್ನು ಪರೀಕ್ಷೆಮಾಡಿ ಮುಂದಿನ ವಾರದ ಪತ್ರಿಕೆಯಲ್ಲಿ ತಿಳಿಯಪಡಿಸುವೆವು. ನಾವು ಬಹುಮಾನ ಕೊಡುತ್ತೇವೆಂದು ಪ್ರಕಟಿಸಿದ್ದ ಇನ್ನೆರಡು ವಿಷಯಗಳ್ಯಾವವೆಂದರೆ—(೧) "ಪ್ರಾಮಾಣಿಕತೆಯುಳ್ಳ ಧೈರ್ಯವು; ಅಂದರೆ, ಎದುರು ವಾದಿಸುವವರಿದ್ದರೂ ನಾವು ಸರಿಯೆಂದು ತಿಳಿದದ್ದನ್ನೇ ಮಾಡುವುದು." ಈ ಉಪನ್ಯಾಸವನ್ನು ಈ ತಿಂಗಳ ೭ನೇ ತಾ. ಒಳಗೆ ನಮಗೆ ಕಳುಹಿಸಿರಬೇಕು. (೨) "ಅಸ್ವಾರ್ಥತೆಯು; ಅಂದರೆ, ಸ್ವಪ್ರಯೋಜನವಿಲ್ಲದೆ; ಪರಹಿತವನ್ನೇ ಬಯಸಿ ಮಾಡುವುದು." ಈ ಉಪನ್ಯಾಸವು ಈ ತಿಂಗಳ ೧೪ನೇ ತಾ. ಒಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕಾಗಿದೆ. ಇವೆರಡನ್ನೂ ನಾವು ಪರಿಶೋಧನೆಮಾಡಿ, ಉತ್ತಮವಾಗಿರುವವುಗಳಿಗೆ ಬಹುಮಾನಗಳನ್ನು ಕೊಟ್ಟು, ಮೊದಲನೆಯದನ್ನು ಈ ಪತ್ರಿಕೆಯ ಡಿಸೆಂಬರ್ ೨೪ನೇ ತಾರೀಖಿನ ಸಂಚಿಕೆಯಲ್ಲೂ, ಎರಡನೆಯದನ್ನು ೧೯೦೯ನೇ ಜನವರಿ ೭ನೇ ತಾರೀಖಿನ ಸಂಚಿಕೆಯಲ್ಲೂ ಪ್ರಕಟಿಸುವೆವು. ಈ ಮೇಲಾಟದ ಕ್ರಮಗಳೇನೆಂದರೆ:—

(೧) ಸರ್ಕಾರಿ ಅಥವಾ ಗ್ರಾಂಟು ಪಡೆಯುವ ಸ್ಕೂಲಿನ ಉಪಾಧ್ಯಾಯರಾಗಲಿ ಸಹಾಯೋಪಾಧ್ಯಾಯರು ಬರೆದಲ್ಲಿ ಅದಕ್ಕೆ ಅವರ ಹೆಡ್ ಮಾಸ್ಟರ ರುಜುವನ್ನು ಹಾಕಿಸಿ ಕಳುಹಿಸಬೇಕು. (೨) ಪ್ರತಿ ಒಂದು ಪಾಠವೂ ಈ ಪತ್ರಿಕೆಯಲ್ಲಿ ಎರಡು ಕಾಲಂಗಿಂತ ಮೀರಕೂಡದು. (೩) ಆ ಪಾಠದಲ್ಲಿ ವಿವರಿಸುವ ಬೋಧನಾ ವಿಷಯಗಳು ಹಿಂದು, ಮಹಮ್ಮದೀಯ, ಕ್ರಿಸ್ತ ಮೊದಲಾದ ಎಲ್ಲಾ ಮತಗಳ ಬಾಲಕರಿಗೂ ಹಿತಕರವಾಗಿರತಕ್ಕದ್ದು. (೪) ನೀತಿಯನ್ನು ಬೋಧಿಸುವಲ್ಲಿ ಆಯಾ ವಿಷಯಕ್ಕೆ ಸಂಬಂಧವಾದ ಸ್ವಾರಸ್ಯವಾದ ಉದಾಹರಣೆಗಳು ಇರಬೇಕು. (೫) ಬರವಣಿಗೆಯೆಲ್ಲಾ ಕಾಗದದ ಒಂದೇ ಪಕ್ಕದಲ್ಲಿ ಇರಬೇಕು.

ಬ್ರಹ್ಮಚರ್ಯವೆಂಬ ಒಂದು ಹೊಸ ಪುಸ್ತಕವು.

ಮೈಸೂರು ಸಿ. ಎಲ್. ಎಸ್. ಪುಸ್ತಕಶಾಲಾ ಸಂಘದವರು ಬ್ರಹ್ಮಚರ್ಯವೆಂಬ ನೂತನ ಪುಸ್ತಕವನ್ನು ಪ್ರಕಟಿಸಿ ನಮಗೊಂದು ಪ್ರತಿಯನ್ನು ಕಳುಹಿಸಿರುತ್ತಾರೆ. ಇದು ವೈದ್ಯಶಾಸ್ತ್ರಕ್ಕೆ ಸಂಬಂಧಪಟ್ಟ ಪುಸ್ತಕ. ಇದು ಬಾಲಕರು ಮುಖ್ಯವಾಗಿ ಯೌವನಸ್ಥರಿಗೂ ಅವಶ್ಯಕವಾಗಿ ಬೇಕಾಗಿರುವಂಥಾದ್ದು. ನಮ್ಮ ದೇಶದಲ್ಲಿ ಅನೇಕ ಹುಡುಗರು ಸಹವಾಸದೋಷದಿಂದ ಕೂಡಿದವರಾಗಿ ಹಸ್ತಪ್ರಯೋಗವೇ ಮೊದಲಾದ ಭಯಂಕರವಾದ ಕೃತ್ಯಗಳನ್ನು ನಡಿಸಿ ತಮ್ಮ ದೇಹಾರೋಗ್ಯವನ್ನು ಕೆಡಿಸಿಕೊಂಡು ಅಕಾಲ ಮರಣಕ್ಕೆ ತುತ್ತಾಗಿರುವುದು ಅನುಭವದ ಸಂಗತಿಯಲ್ಲವೆ. ಅನೇಕ ತಂದೆತಾಯಿಗಳು ತಮ್ಮ ಮಕ್ಕಳಿಗೆ ಬಾಲ್ಯದಲ್ಲಿಯೇ ಒಳ್ಳೇ ಗುಣನಡತೆಗಳನ್ನು ಕಲಿಸಿಕೊಡುವದಿಲ್ಲ. ಹುಡುಗರು ಅನೇಕ ಸಮಯಗಳಲ್ಲಿ ಒಬ್ಬರನ್ನೊಬ್ಬರು ಮನಸ್ಸಿಗೆ ಅಸಹ್ಯವನ್ನೂ ಉಂಟುಮಾಡತಕ್ಕ ಮಾತುಗಳನ್ನು ತಮ್ಮ ನಾಲಿಗೆಗಳಿಂದ ಉಚ್ಚರಿಸುವರು. ಸ್ತ್ರೀಯರಿಗೆ ಸಂಬಂಧಪಟ್ಟ ಗುಟ್ಟುಗಳನ್ನು ಈ ದೇಶದ ಸಣ್ಣ ಸಣ್ಣ ಹುಡುಗರೂ ಹುಡುಗಿಯರೂ ತಿಳಿದುಕೊಂಡು ಅವುಗಳ ವಿಷಯ ಬಹು ಲಘುವಾಗಿ ಪ್ರಸ್ತಾಪಿಸುವರು ಇಲ್ಲವೇ ಅಭಿನಯಗಳಿಂದ ತೋರಿಸುವರು. ಅನೇಕರು ತಮ್ಮ ಬೆಳವಣಿಗೆಯ ಕಾಲದಲ್ಲಿಯೇ ವ್ಯಭಿಚಾರ, ಮದ್ಯಪಾನ ಮೊದಲಾದ ಹೇಯವಾದ ಪಾಪಗಳನ್ನು ನಡಿಸಿ ಕೆಟ್ಟುಹೋಗಿರುತ್ತಾರೆ. ಅವರು ತಮ್ಮ ದೇಹಕ್ಕೆ ಸಂಬಂಧಪಟ್ಟ ಕೆಲವು ಮರ್ಮ ಚರಿತ್ರೆಗಳನ್ನು ತಿಳಿದುಕೊಂಡಿದ್ದವರಾಗಿದ್ದರೆ ಅವರೆಂದಿಗೂ ಅಂಥಾ ಕೃತ್ಯಗಳನ್ನು ನಡಿಸುತ್ತಿರಲಿಲ್ಲ. ಈ ಬ್ರಹ್ಮಚರ್ಯವೆಂಬ ವೈದ್ಯಶಾಸ್ತ್ರದಲ್ಲಿ ಹೇಳಿರುವ ಸಂಗತಿಗಳನ್ನು ಬಾಲಕರೂ ಯೌವನಸ್ಥರೂ ತಂದೆತಾಯಿಗಳೂ ಬಹು ಗಮನವಿಟ್ಟು ಓದತಕ್ಕದ್ದು. ಈ ಪುಸ್ತಕದಲ್ಲಿ ಅಡಗಿರುವ ಭಾಗಗಳನ್ನು ನಮ್ಮ ವಾಚಕರ ಅವಗಾಹನೆಗೆ ತರಲು ಇಲ್ಲಿ ಪ್ರಕಟಿಸಿರುವೆವು:— ಜನನೇಂದ್ರಿಯ ಪ್ರಾರಂಭವು. ಅದರ ಶಕ್ತಿಯು. ಸಸ್ಯಾದಿಗಳ ಜನ್ಮೋತ್ಪತ್ತಿ ವಿಷಯ; ಪ್ರಾಣಿಗಳಲ್ಲುಂಟಾಗುವ ಜನ್ಮೋತ್ಪತ್ತಿಯು; ಮಾನುಷ್ಯ ಸಂತಾನೋತ್ಪತ್ತಿಯಾಗುವ ರೀತಿಯು. ಹುಡುಗರ ದುಷ್ಟಚೇಷ್ಟೆಗಳಿಂದ ಅಂಗವು ಕೆಡುವ ರೀತಿ. ಹುಡುಗರ ದುಶ್ಚೇಷ್ಟೆಗಳಿಂದಾಗುವ ನಾನಾ ರೋಗಗಳು; ಯುವಕರು ತಮ್ಮ ದೇಹಗಳನ್ನು ಪರಿಶುದ್ಧತೆ, ಪುಷ್ಟಿ, ಬಲ, ತ್ರಾಣಗಳಲ್ಲಿ ಇಡುವುದಕ್ಕೆ ಸೂತ್ರಗಳು. ಹುಡುಗರು ನಾನಾ ದುರಭ್ಯಾಸಗಳಿಂದ ತಾವು ಕಳಕೊಂಡ ದೇಹಬಲಶಕ್ತಿಗಳನ್ನು ತಿರಿಗಿ ಸಂಪಾದಿಸುವ ವಿಧಾನವು. ಹುಡುಗಿಯು ಪ್ರಾಯಕ್ಕೆ ಬರುವ ಕಾಲ. ಈ ಕಾಲದಲ್ಲಿ ಗಮನಿಸತಕ್ಕ ವಿಷಯಗಳು. ಹುಡುಗರು ಪ್ರಾಯಕ್ಕೆ ಬರುವ ಕಾಲ. ಈ ಕಾಲದಲ್ಲಿ ಉಂಟಾಗುವ ಬದಲಾವಣೆಗಳು: ಈ ಪುಸ್ತಕದ ಬೆಲೆಯು ಮೂರಾಣೆ. ವೃತ್ತಾಂತ ಪತ್ರಿಕೆಯ ವಾಚಕರು ಈ ಪುಸ್ತಕವನ್ನು ತಮ್ಮ ಮನೆಗಳಲ್ಲಿಡುವುದು ಅತ್ಯಾವಶ್ಯಕವೆಂದು ನಾವು ಹೇಳುವೆವು. ಇದನ್ನು ಮೈಸೂರು ಸಿ. ಎಲ್. ಎಸ್. ಬುಕ್ ಡಿಪೊ ಮ್ಯಾನೇಜರವರಿಂದ ಪಡೆಯಬಹುದು.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಅರಮನೆಕಟ್ಟೆಯ ಛತ್ರದ ನೂತನದ ಸಮಾರಾಧನೆಯು ಬರುವ ೯ನೇ ತಾರೀಖು ಬುಧವಾರ ನಡೆಯುವುದಾಗಿದೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯು ಮುಂದಿನ ಈ ತಿಂಗಳಲ್ಲಿ ನಡೆಯುವುದಾಗಿದೆ ಎಂದು ತಿಳಿದುಬಂದಿದೆ.

ಮೊನ್ನೆ ಮಂಗಳವಾರ ಶ್ರೀಮದಿಂಡಿಯಾ ಚಕ್ರವರ್ತಿನಿಯವರ ಜನ್ಮದಿನವಾದದ್ದರಿಂದ ಆ ದಿನ ರಾಜಧಾನಿಯಲ್ಲಿ ಗೌರವಾರ್ಥವಾದ ೩೧ ತೋಪುಗಳನ್ನು ಹಾರಿಸಿದರು.

ಬೆಂಗಳೂರು ಸೆಂಟ್ರಲ್ ಪೊಲೀಸ ಮೆ|| ಆರ್. ಎಸ್. ನಾಗಣ್ಣಾರ್ಯರವರು ಪ್ರಸಿದ್ಧ ಕೊಲೆಗಳ ಮೊಕದ್ದಮೆಯನ್ನು ಸಾಹಸಪಟ್ಟು ಪತ್ತೆಮಾಡಿದ್ದಕ್ಕಾಗಿ ಗವರ್ನ್‌ಮೆಂಟಿನವರು ಅವರಿಗೆ ೨,೦೦೦ ರೂಪಾಯಿ ಇನಾಮು ಕೊಡತಕ್ಕದ್ದೆಂದು ಸ್ಯಾಂಕ್ಷನ್ ಮಾಡಿದ್ದಾರೆ.

ಈ ತಿಂಗಳ ಅಂತ್ಯಭಾಗದಲ್ಲಿ ಮದರಾಸ್ ಪಟ್ಟಣದಲ್ಲಿ ಭಾರತಮಹಿಳೆಯರ ಸಭೆಯು ಕೂಡುವುದು. ಈ ಸಮಾಜಕ್ಕೆ ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀಯರ ಕೂಟದಿಂದ ಇನ್ನೆರಡು ಮಂದಿ ಸ್ತ್ರೀ ಪ್ರತಿನಿಧಿಗಳನ್ನು ಕಳುಹಿಸಿಕೊಡಬೇಕೆಂದು ಕಳೆದ ಶನಿವಾರ ನಿಷ್ಕರ್ಷೆಯಾಯಿತು.

ಬಿಜಾಪುರದಲ್ಲಿ ರೆಡ್ಡಿಜನರ ಮಹಾಸಭೆಯು ಈ ತಿಂಗಳ ಅಂತ್ಯಭಾಗದಲ್ಲಿ ನಡೆಯುವುದೆಂತಲೂ, ನಮ್ಮ ಗವರ್ನ್‌ಮೆಂಟ್ ವಿದ್ಯಾಭ್ಯಾಸದ ಇಲಾಖೆಗೆ ಹೊಸದಾಗಿ ನೇಮಕವಾಗಿರುವ ಮೆ|| ಸಿ. ರಾಮಲಿಂಗರೆಡ್ಡಿಯವರು ಆ ಸಭೆಯ ಅಧ್ಯಕ್ಷರಾಗಿ ನಿಂತು ಸಭೆಯ ಕಾರ್ಯಗಳನ್ನು ನಡಿಸುವರೆಂತಲೂ ಕೇಳುತ್ತೇವೆ.

"ಜಗದ್ಗುರು" ಪತ್ರಿಕೆಯ ಎಡಿಟರ್ ಮೆ|| ಬಿ. ಸಿ. ಶ್ರೀನಿವಾಸಯ್ಯಂಗಾರ್ಯರು ಬೆಂಗಳೂರು ಚೀಫ್ ಕೋರ್ಟಿನಲ್ಲಿ ಅಪೀಲ್‌ಮಾಡಿ, ಕಳೆದ ತಾ. ೩೦ನೇ ಸೋಮವಾರ ತಾವೇ ಕೋರ್ಟಿನಲ್ಲಿ ನಿಂತು ತಮ್ಮ ಪಕ್ಷವನ್ನು ಹಿಡಿದು ವಾದಿಸಿದರು. ಇಬ್ಬರು ಜಡ್ಜಿಗಳು ಇವರ ಆರ್ಗ್ಯುಮೆಂಟನ್ನು ಲಾಲಿಸಿ, ಕಡೆಗೆ ಕೆಳಕೋರ್ಟಿನ ತೀರ್ಮಾನವನ್ನೇ ಖಾಯಂ ಮಾಡಿ, ಅಪೀಲನ್ನು ವಜಾ ಮಾಡಿದರು.

ಕಾಶೀ ನಗರದಲ್ಲಿರುವ ಜಂಗಮವಾಡಿ ಮಠಕ್ಕೆ ಮೈಸೂರು ಗವರ್ನ್‌ಮೆಂಟಿನವರು ಮುಜರಾಯಿ ಇಲಾಖೆಯಿಂದ ತಿಂಗಳಿಗೆ ೩೦ ರೂಪಾಯಿ ತಸ್ತೀಕು ಕೊಡುವರು. ಆ ಮಠದ ಗುರುಗಳಾಗಿದ್ದ ಶ್ರೀ ರಾಜೇಶ್ವರ ಸ್ವಾಮಿಗಳು ಕಳೆದ ಜುಲೈ ೪ರಲ್ಲಿ ಕಾಲವಾದರೆಂತಲೂ, ಆ ಪೀಠಕ್ಕೆ ಶ್ರೀ ಮಹಂತ ಶಿವಲಿಂಗ ಸ್ವಾಮಿಗಳು ಬಂದಿರೋಣದರಿಂದ ಅವರಿಗೆ ಆ ತಸ್ತೀಕನ್ನು ಪಾವತಿ ಮಾಡಬೇಕೆಂತಲೂ ಹುಕುಂ ಆಗಿದೆ.

ಬೆಳಗುಳದ ಪಂಪ್ ಸ್ಟೇಷನ್‌ನಿಂದ ರಾಜಧಾನಿಗೆ ನೀರು ಸರಬರಾಯಿ ಆಗುತ್ತಿದೆ. ಅಲ್ಲಿ ನೀರು ಎತ್ತುವ ಯಂತ್ರಗಳನ್ನು ವಿದ್ಯುಚ್ಛಕ್ತಿಯಿಂದ ನಡೆಸುವುದಕ್ಕೆ ತಕ್ಕ ಏರ್ಪಾಡಾಗಿರುವುದು. ಇದಕ್ಕಾಗಿ ಕೆಲವು ವಿಶೇಷ ಸಾಮಾನುಗಳು ಇನ್ನೂ ಸೀಮೆಯಿಂದ ಬಂದಿಲ್ಲವಾದ್ದರಿಂದ, ಎಲ್ಲಾ ಸಿದ್ಧವಾಗಿ ನೀರನ್ನು ಒದಗಿಸುವುದು ಮುಂದಿನ ವರುಷ ಸುಮಾರು ಜೂನ್ ತಿಂಗಳಲ್ಲಿ ಸಾಧ್ಯವಾದೀತೆಂದು ಕೇಳುತ್ತೇವೆ. ಅದುವರೆಗೆ ಈಗಿರುವ ಇಂಜನ್ನುಗಳೇ ನೀರು ಎತ್ತುತ್ತಿರುವವು.

ಶ್ರೀಮನ್ಮಹಾರಾಜರವರು ಈ ತಿಂಗಳು ಸುಮಾರು ೧೪ನೇ ತಾರೀಖಿಗೆ ರಾಜಧಾನಿಗೆ ದಯಮಾಡಿ, ತಾ ೨೧ರಲ್ಲಿ ಚೀಫ್ ಮಹಾರಾಣಿಯವರ ಮೂರ್ತಿ ಕಟ್ಟೆಯನ್ನು ತೆರೆಸಿಕೊಂಡು, ಈ ತಿಂಗಳ ಆಖೈರಿನಲ್ಲಿ ಜರ್ಮನ್ ರಾಜ್ಯಕ್ಕೆ ಪ್ರಯಾಣ ಬೆಳೆಸುವವರಾಗಿದ್ದಾರೆಂತಲೂ, ಶ್ರೀಮನ್ ಯುವರಾಜರವರ ಜೊತೆಯಲ್ಲಿರುವ ಮೆ|| ನಿಗ್ಲಾಚಾರ್ಯರು ಇನ್ನು ಕೆಲವು ಜರ್ಮನಿಯಲ್ಲಿ ಏರ್ಪಾಡುಗಳನ್ನು ಮಾಡುವುದಕ್ಕಾಗಿ ನಾಳೆ ಶನಿವಾರ ಮುಂದಾಗಿ ಹೊರಡುವರೆಂತಲೂ ಕೇಳುತ್ತೇವೆ.

ಆಹಾರ ದಿನಸುಗಳು ತುಟ್ಟಿಯಾಗಿರುವುದರಿಂದ ಬೆಂಗಳೂರು, ತುಮಕೂರು, ಕೋಲಾರ, ಕಡೂರು ಡಿಸ್ಟ್ರಿಕ್ಟುಗಳಲ್ಲಿ ೩೦ ರೂಪಾಯಿಯೊಳಗೆ ಸಂಬಳ ಪಡೆಯುವವರಿಗೆ ಅಲೋಯನ್ಸು ಕೊಡಬೇಕೆಂದು ಕೊಟ್ಟಿದ್ದ ಹುಕುಮನ್ನು ಸರ್ಕಾರದವರು ಶಿವಮೊಗ್ಗ ಡಿಸ್ಟ್ರಿಕ್ಟಿಗೂ ಅನ್ವಯಿಸತಕ್ಕದ್ದೆಂದು ಸ್ಯಾಂಕ್ಷನ್ ಮಾಡಿದ್ದಾರೆ. ಇದಲ್ಲದೆ ತಕಾವಿ ಸಾಲ ಕೊಡುವುದಕ್ಕೂ, ನಾಗುವಳಿ ಭಾವಿಗಳನ್ನು ತೋಡುವುದಕ್ಕೂ, ರಿಲೀಫ್ ಕಾಮಗಾರಿಗಳಿಗೂ ಗವರ್ನ್‌ಮೆಂಟಿನವರು ಒಟ್ಟು ನಾಲ್ಕೂಕಾಲು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

ಭೋಗ್ಯ, ಆಧಾರಪತ್ರಗಳನ್ನು ಅವುಗಳಲ್ಲಿ ಕಂಡ ಮೊಬಲಗಿಗೆ ೨—೩ ಭಾಗಗಳಾಗಿ ವಿಂಗಡಿಸಿ, ಸ್ಟಾಂಪು ಮತ್ತು ರಿಜಿಸ್ಟರ್ ಫೀಜುಗಳನ್ನು ಉಳಿಸಿಕೊಳ್ಳುವುದರಿಂದ ಸರ್ಕಾರಕ್ಕೆ ನಷ್ಟವಾಗುತ್ತದೆಂದು ಶಿವಮೊಗ್ಗ ಡೆಪ್ಟಿ ಕಮಿಷನರು ಗವರ್ನ್‌ಮೆಂಟಿಗೆ ರಿಪೋರ್ಟ್ ಮಾಡಿದರು. ಪ್ರತಿ ಒಂದು ಪತ್ರದಲ್ಲೂ ಕಂಡ ಹಣಕ್ಕೆ ತಕ್ಕಷ್ಟು ಬೆಲೆಯ ಛಾಪಾಕಾಗದವಿದ್ದು, ಅದಕ್ಕೆ ಸರಿಯಾದ ರಿಜಿಸ್ಟರ್ ಫೀಜು ಪಾವತಿ ಆಗಿದ್ದರೆ ಸಾಕೆಂತಲೂ, ಇದರಿಂದ ಸರ್ಕಾರಕ್ಕೆ ನಷ್ಟವಾದರೂ ಚಿಂತೆಯಿಲ್ಲವೆಂತಲೂ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದ್ದಾರೆ.

ಇದುವರೆಗೆ ಈ ಸಂಸ್ಥಾನದಲ್ಲಿ ೬೩ ಮಂದಿ ಅ. ಕಮಿಷನರು ಇದ್ದರು. ಈ ತಿಂಗಳಲ್ಲಿ ಸರ್ಕಾರದವರು ಇನ್ನಿಬ್ಬರನ್ನು ಆ ದರ್ಜೆಗೆ ಸೇರಿಸಿಕೊಂಡರು. ಒಬ್ಬ ಅ. ಕಮಿಷನರನ್ನು ದಿವಾನರವರ ಆಫೀಸಿಗೆ ನೇಮಕಮಾಡಿಕೊಂಡಿದ್ದಾರೆ. ಇನ್ನೊಬ್ಬರನ್ನು ಬೆಂಗಳೂರು ಡೆಪ್ಟಿ ಕಮಿಷನರವರ ಕೈಸಾತಿಗೆ ವಹಿಸಿ, ಆ ಪ್ರಾಂತ್ಯ ಸೈನ್ಯದ ಕವಾತು ಮುಂತಾದದ್ದು ನಡೆಯುವಾಗ್ಗೆ ಅದರ ಕೂಡ ಇದ್ದು, ಸೈನಿಕರಿಂದ ರೈತರ ಜಮೀನಿಗೂ ಫಸಲಿಗೂ ಉಂಟಾಗುವ ನಷ್ಟವನ್ನು ಗೊತ್ತುಮಾಡಿ ಪರಿಹಾರದ್ರವ್ಯವನ್ನು ಆ ಕೂಡಲೇ ಪಾವತಿಮಾಡಿಸುವ ಕೆಲಸವನ್ನು ನೋಡಿಕೊಳ್ಳಬೇಕೆಂದು ಹುಕುಂ ಕೊಟ್ಟಿದ್ದಾರೆ.

ತುಮಕೂರು ಡಿಸ್ಟ್ರಿಕ್ಟ್ ಮಧುಗಿರಿ ತಾಲ್ಲೂಕಿನಲ್ಲಿ ಕಳೆದ ವರುಷ ಸುಮಾರು ಏಪ್ರಿಲ್ ಮೇ ತಿಂಗಳಲ್ಲಿ ಅಮಲ್ದಾರರೂ ನೌಕರಮಾನ್ಯರೂ ಶ್ರೀಶೃಂಗೇರಿ ಸ್ವಾಮಿಗಳ ಕ್ಯಾಂಪಿನ ಸರಬರಾಯಿ ವಿಚಾರದಲ್ಲಿ ಕೆಲವು ಅಕ್ರಮ ಕಾರ್ಯಗಳನ್ನು ಜರುಗಿಸಿದ್ದರ ಮೇಲೆ ನಮಗೂ ಗವರ್ನ್‌ಮೆಂಟಿನವರಿಗೂ ನಡೆದ ಮುಖ್ಯ ಕಾಗದ ಪತ್ರಗಳನ್ನು, ಗವರ್ನ್‌ಮೆಂಟಿನವರ ತೀರ್ಮಾನದ ಮೇಲೆ ನಮ್ಮ ಅಭಿಪ್ರಾಯವನ್ನೂ ವಾಚಕರ ತಿಳಿವಳಿಕೆಗೋಸ್ಕರ ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಮತ್ತು ಈ ವಿಚಾರವನ್ನೇ ಕುರಿತು ಇಂಗ್ಲಿಷಿನಲ್ಲೂ ಛಾಪ್‌ಮಾಡಿ, ಅದನ್ನು ಸಪ್ಲಿಮೆಂಟಾಗಿ ಈ ಪತ್ರಿಕೆಯ ಮೂಲಕ ವಾಚಕರಿಗೆ ಕಳುಹಿಸಿರುವೆವು. ಈ ವಿಚಾರವನ್ನು ವಾಚಕರು ಸಾವಧಾನದಿಂದ ಓದಿಕೊಂಡಾರೆಂದು ನಿರೀಕ್ಷಿಸುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಚೀಫ್ ಕೋರ್ಟ್ ಜಡ್ಜ್ ಮೆ|| ಜಸ್ಟಿಸ್ ಎಚ್. ವಿ. ನಂಜುಂಡೈಯನವರಿಗೆ ಕೊಟ್ಟಿರುವ ಪೂರಾ ತಲಬುಳ್ಳ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನು ಎರಡು ವಾರ ಜಾಸ್ತಿ ಮಾಡಿದೆ.

ಮುಂದೆ ಹೇಳುವ ಅ|| ಕಮಿಷನರುಗಳ ವರ್ಗಾವರ್ಗಿ ಹುಕುಂ ಮಾಡಿದೆ:—ಮೆ|| ಎಂ. ಎ. ನಾರಾಯಣಯ್ಯಂಗಾರ್ಯರು ಗುಬ್ಬಿ ಸಬ್ ಡಿವಿಜನ್‌ಗೆ; ಮೆ|| ಟಿ. ತಂಬೂಚೆಟ್ಟಿಯವರು ಶಿವಮೊಗ್ಗ ಸಬ್ ಡಿವಿಜನ್‌ಗೆ, ಮೆ|| ಎಂ. ಶ್ರೀನಿವಾಸಮೂರ್ತಿಯವರು ಸಾಗರಕ್ಕೆ, ಮೆ|| ಷುಗರ್ ಸುಬ್ಬರಾಯರು ದಾವಣಗೆರೆಗೆ; ಮೆ|| ಮಹಮುದ್ ರಜಾ ಯವರು ಚಿತ್ರದುರ್ಗದ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ, ಮೆ|| ಮೃತ್ಯುಂಜಯ ಐಯರವರು ಶಿವಮೊಗ್ಗ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ, ಮೆ|| ಕೆ. ಶ್ರೀನಿವಾಸರಾಯರು ದೊಡ್ಡಬಳ್ಳಾಪುರದ ಸಬ್ ಡಿವಿಜನ್‌ಗೆ; ಮೆ|| ಸಿ. ವೆಂಕಟರಾಯರು ತುಂಕೂರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ.

ಎನ್. ಕಿನ್ಮಂಟ್ ಮತ್ತು ಟಿ. ಆರ್. ದಾಮೋದರಂ ಎಂಬುವರನ್ನು ೩ನೇ ಕ್ಲಾಸ್ ಆಸ್ಪತ್ರೆ ಅಸಿಸ್ಟೆಂಟರಾಗಿ ಖಾಯಂ ಮಾಡಿದೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಬುಧವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್‌ಹಾಲಿನಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗ್ ನಡಿಸಿದರು. ಕಳೆದ ನವಂಬರ್ ತಿಂಗಳ ಜಮಾಖರ್ಚು, ಜನನಮರಣಗಳ ಲೆಕ್ಕವನ್ನು ಓದಿದರು. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದ ಒಟ್ಟು ರೂ. ೧೩,೬೬೮—೫—೪ ಪೈ ಜಮಾ ಆಯಿತೆಂದೂ, ರೂ. ೧೦,೪೯೭—೭—೧೦ ಪೈ ಖರ್ಚಾಯಿತೆಂದೂ; ಜನನ ೧೦೭, ಮರಣ—ಪ್ಲೇಗ್ ೯, ಜ್ವರ ೧೪, ಇತರ ಕಾರಣಗಳು ೧೪೩, ಒಟ್ಟು ೧೬೬ ಎಂದೂ ತಿಳಿಯಲಾಯಿತು.

ಆ ತಿಂಗಳ ಲೆಕ್ಕಗಳನ್ನು ತನಿಖೆಮಾಡಿದ ಮ್ಯುನಿಸಿಪಲ್ ಕೌನ್ಸಿಲರುಗಳು—ಲೆಕ್ಕಪತ್ರಗಳೆಲ್ಲಾ ಸರಿಯಾಗಿವೆ. ಆಕ್ಟ್ರಾಯ್ ಬಾಬಿನ ಉತ್ಪತ್ತಿಯಲ್ಲಿ ಜವಳಿ, ತುಪ್ಪ, ಸಕ್ಕರೆ ಈ ಮೊದಲಾದ ಬಾಬುಗಳ ಹುಟ್ಟುವಳಿ ಕಡಮೆಯಾಗಿರೋಣದರಿಂದ ಸರಿಯಾದ ಮೇಲ್ವಿಚಾರಣೆ ಇರಬೇಕು. ಮೊಹತರ್ಫಾ ಕಂದಾಯದ ವಸೂಲಾತಿಯು ಕಡಮೆಯಾಗಿದ್ದರೂ ಅದರ ಸಿಬ್ಬಂದಿ ಖರ್ಚು ಜಾಸ್ತಿಯಾಗಿದೆ. ಇದನ್ನು ಕ್ರಮಪಡಿಸಿ, ಇನ್ನೂ ವಸೂಲಾಗದೆ ಬಾಕಿ ನಿಂತಿರುವ ಸುಮಾರು ೩೭,೦೦೦ ರೂಪಾಯಿ ಮೊಹತರ್ಫಾ ಕಂದಾಯವನ್ನು ಬೇಗ ವಸೂಲ್ಮಾಡಿಸುವಂತೆ ಮೇಲ್ವಿಚಾರಣೆ ನೋಡಿಕೊಳ್ಳಬೇಕು ಎಂಬೀ ಅರ್ಥಕ್ಕೆ ರಿಪೋರ್ಟನ್ನು ಬರೆದಿದ್ದರು. ಇದಕ್ಕೆ ಸಮಾಧಾನವಾಗಿ ವೈಸ್ ಪ್ರೆಸಿಡೆಂಟರು—ಈಗ ಕ್ಷಾಮಕಾಲವಾಗಿ ಕಷ್ಟವು ತುಂಬಾ ಹೆಚ್ಚಿರೋಣದರಿಂದ ವರ್ತಕರು ಹೊಸ ಜವಳಿ ಮುಂತಾದ ಸರಕನ್ನು ವಿಶೇಷ ತರಿಸಲು ಸಾಗದಿದ್ದದರಿಂದ ಆಕ್ಟ್ರಾಯಿ ಉತ್ಪತ್ತಿಯು ಕಡಮೆಯಾಗಿದೆ. ಸುಭಿಕ್ಷವು ಯಥಾಪ್ರಕಾರ ನೆಲೆಗೊಂಡಾಗ ಮ್ಯುನಿಸಿಪಲ್ ಉತ್ಪತ್ತಿಯೂ ಹೆಚ್ಚುವುದು. ಮೊಹತರ್ಫಾ ವಸೂಲಿಗೆ ಹಂಗಾಮಿಯಾದ ಸ್ವಲ್ಪ ಸಿಬ್ಬಂದಿಯನ್ನು ಇಟ್ಟಿರೋಣದರಿಂದ ಆ ಖರ್ಚು ಜಾಸ್ತಿಯಾಗಿದೆ. ಕಂದಾಯಗಳು ಇಂಥಾ ಕಷ್ಟಕಾಲದಲ್ಲಿ ವಸೂಲಾಗುವುದು ಬಹಳ ಕಷ್ಟ. ೮—೧೦ ಸಾವಿರ ರೂಪಾಯಿ ಕಂದಾಯ ರಿಮಿಷನ್ ಆಗಬೇಕೆಂದು ಮ್ಯುನಿಸಿಪಲ್ ಕೌನ್ಸಿಲರುಗಳು ಶಿಫಾರಸು ಮಾಡಿದ್ದಾರೆ. ಉಳಿದ ಕಂದಾಯವನ್ನು ವಸೂಲ್ಮಾಡುವ ಏರ್ಪಾಡು ಇಟ್ಟಿದೆ ಎಂಬೀ ರೀತಿ ಹೇಳಿದರು.

ಕೋಟೆಯೊಳಗೆ ಬಾಲಬೋಧಿನಿ ಸ್ಕೂಲಿನಲ್ಲಿ ಬಾಲಿಕಾ ಪಾಠಶಾಲೆಯನ್ನಿಟ್ಟಿರುವುದಕ್ಕೆ ತಿಂಗಳಿಗೆ ೧೫ ರೂಪಾಯಿ ಗ್ರಾಂಟು ಕೊಡತಕ್ಕದ್ದೆಂದು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದ್ದನ್ನು ಓದಿ ರೆಕಾರ್ಡು ಮಾಡಿಕೊಂಡರು.

ದೊಡ್ಡ ಹೊಲಗೇರಿಯಲ್ಲಿ ಮ್ಯುನಿಸಿಪಾಲಿಟಿಯಿಂದ ಭದ್ರವಾಗಿಯೂ ಅನುಕೂಲವಾಗಿಯೂ ಇರುವಂತೆ ಒಂದು ಮನೆಯನ್ನು ಕಟ್ಟಿಸುವುದಕ್ಕೆ ೧,೨೦೦ ರೂಪಾಯಿ ಖರ್ಚಾಗಿದೆ. ಆ ಕಟ್ಟಡವನ್ನು ರೆಂದಿ ಇಜಾರೆದಾರರಿಗೆ ಮಾಹೆಯಾನಾ ೧೦ ರೂಪಾಯಿ ಬಾಡಿಗೆ ಬರುವಂತೆ ಕೊಡಬೇಕೆಂದು ಕೌನ್ಸಿಲರುಗಳು ತೀರ್ಮಾನಮಾಡಿದರು.

ಪಟ್ಟಣದಲ್ಲಿ ಕುಡಿಯುವ ನೀರನ್ನು ಒದಗಿಸಿಕೊಟ್ಟಿರೋಣದರಿಂದ ನೀರಿನ ತೆರಿಗೆಯನ್ನು ಹಾಕಿ, ೧೯೦೮ನೇ ಜುಲೈ ಪ್ರಾರಂಭದಿಂದ ವಸೂಲ್ಮಾಡಬೇಕೆಂಬದಾಗಿ ಬಂದ ಗವರ್ನ್‌ಮೆಂಟ್ ಹುಕುಮನ್ನು ಓದಿಕೊಂಡು, ಕೌನ್ಸಿಲರುಗಳು—ಈಗ ನೀರಿನ ಸರಬರಾಯಿ ಸಾಲದು. ಆಗಾಗ್ಗೆ ನೀರು ಕೊಡದೆ ನಿಲ್ಲಿಸೋಣದರಿಂದ ಪ್ರಜೆಗಳಿಗೆ ಕಷ್ಟವೂ ಅನಾನುಕೂಲವೂ ಉಂಟಾಗುತ್ತಿದೆ. ಇಂಥಾದ್ದರಲ್ಲಿ ನೀರಿನ ತೆರಿಗೆಯನ್ನು ಹಾಕಿ ವಸೂಲ್ಮಾಡುವುದು ಉಚಿತವಲ್ಲವಾದಕಾರಣ ಯಾವಾಗಲೂ ತೃಪ್ತಿಕರವಾದಷ್ಟು ನೀರು ದೊರಕುವುದು ಸ್ಥಿರಪಟ್ಟಮೇಲೆ ಕಂದಾಯ ಹಾಕಬಹುದು ಎಂಬೀ ರೀತಿಯಾಗಿ ಅಭಿಪ್ರಾಯಪಟ್ಟರು.

ಪ್ಲೇಗ್ ಮೊದಲಾದ ಸಾಂಕ್ರಾಮಿಕ ರೋಗಗಳನ್ನು ಅಡಗಿಸುವುದಕ್ಕೆ ರಾಜಧಾನಿಯಲ್ಲಿ ರೋಗಿಗಳನ್ನು ಅಜಮಾಯಿಷಿಮಾಡಿ ಕ್ಯಾಂಪಿಗೆ ಕಳುಹಿಸುವುದೇ ಮೊದಲಾದ ಬಲಾತ್ಕಾರಪೂರ್ವಕವಾದ ಅಧಿಕಾರಗಳನ್ನು ಚಲಾಯಿಸಬೇಕಾಗಿದೆ ಎಂತಲೂ, ಆ ಅಧಿಕಾರಗಳನ್ನು ಮ್ಯುನಿಸಿಪಾಲಿಟಿಯವರು ವಹಿಸಿಕೊಂಡು ಹೆಲ್ತ್ ಆಫೀಸರ ಮೂಲಕ ಚಲಾಯಿಸಬೇಕೆಂತಲೂ ಹಿಂದೆ ಚರ್ಚೆಯಾಗಿತ್ತು. ಈಚೆಗೆ ಈ ವಿಚಾರವನ್ನು ಮ್ಯುನಿಸಿಪಲ್ ಮ್ಯಾನೇಜಿಂಗ್ ಕಮಿಟಿಯವರು ಪರ್ಯಾಲೋಚಿಸಿ, ಅಂಥಾ ಬಲಾತ್ಕಾರವುಳ್ಳ ಅಧಿಕಾರಗಳನ್ನು ಹೆಲ್ತ್ ಆಫೀಸರಿಗೆ ವಹಿಸುವುದರಿಂದ ಪ್ರಜೆಗಳು ಬಹಳ ಕಷ್ಟನಷ್ಟಗಳಿಗೆ ಗುರಿಯಾಗಬೇಕಾದೀತೆಂತಲೂ, ಅಂಥಾ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಬದಲಾಗಿ ರೋಗ ಪ್ರಾಪ್ತವಾದಾಗ ಆಯಾ ಮನೆಗಳಿಗೆ ಹೋಗಿ ವಿಶೇಷ ಹೇಳಿ, ವೈದ್ಯವನ್ನು ಕಳುಹಿಸಿ, ಅನುಕೂಲಗಳನ್ನು ಒದಗಿಸಿಕೊಡುವುದು ಎಷ್ಟೋ ಕ್ಷೇಮವಾಗಿದ್ದೀತೆಂದು ಅಭಿಪ್ರಾಯಪಟ್ಟರು. ಮ್ಯುನಿಸಿಪಲ್ ಕೌನ್ಸಿಲರುಗಳು ಈ ಅಭಿಪ್ರಾಯವನ್ನು ಒಪ್ಪಿಕೊಂಡು, ಆ ರೀತಿ ಮಾಡಬೇಕೆಂದು ತೀರ್ಮಾನಮಾಡಿದರು.

ಕೋಟೆಯೊಳಗಿರುವ ಕತ್ತಲೂ ಇಕ್ಕಟ್ಟೂ ಆದ ಮನೆಮಠಗಳನ್ನು ಒಡೆದು ಹಾಕುವುದಕ್ಕೆ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನಿಂದ ತಯಾರಾಗಿ ಹೋಗಿದ್ದ ಅಂದಾಜು ಪಟ್ಟಿಯನ್ನು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿ ಕಳುಹಿಸಿದರು. ಅಲ್ಲಿ ಒಟ್ಟು ೩೭೦ ಮನೆಮಠಗಳು ಒಡೆಯಲ್ಪಡುವುವೆಂತಲೂ, ಅದರ ಪ್ರತಿಫಲಕ್ಕಾಗಿ ೬,೧೩,೬೩೨ ರೂಪಾಯಿ ಸ್ಯಾಂಕ್ಷನ್ ಆಗಿದೆ ಎಂತಲೂ ತಿಳಿದಿದೆ. ಈ ಹುಕುಮನ್ನು ರಿಕಾರ್ಡು ಮಾಡಿಕೊಂಡರು.

ದಲ್ಲಿ ನಂದಿಸದಿರಲಾರೆವು. ಅವರ ಮೂಲಕ ಪ್ರಜಾಬಾಧೆಯುಳ್ಳಕ್ಕೆ ಬಹಳ ಪ್ರಯೋಜನವಾಯಿತೆಂದು ನಾವು ನಂಬುತ್ತೇವೆ. ಈ ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲಾ ಅಂಶಗಳ ಜವಾಬ್ದಾರಿಯನ್ನೂ ನಾವೇ ವಹಿಸಿಕೊಂಡಿರುವೆವು. ನಮ್ಮ ಬಾತ್ಮಿದಾರರುಗಳು ಆಧಾರಸಹಿತವಾಗಿಯೂ ವಿವರವಾಗಿಯೂ ಬರೆದು ತಿಳಿಸಿದ್ದಾಗ್ಯೂ ಮೈಸೂರು ಗವರ್ನಮೆಂಟಿನವರು ಯಾವ ಅನ್ಯಾಯವೂ ನಡೆಯಲೂ ಇಲ್ಲವೆಂದು ಕೊಟ್ಟಿರುವ ಜವಾಬನ್ನು ನಾವು ಅಂಗೀಕರಿಸುವುದು ಅಸಾಧ್ಯವೆಂಬುದಾಗಿ ವಿಷಾದದಿಂದ ತಿಳಿಸುತ್ತೇವೆ.

ಮದ್ದುಗಿರಿ ತಾಲ್ಲೂಕಿನ ಅಧಿಕಾರಿಗಳ ನಡವಳಿಕೆಯು.

ತಾ. ೧೧ನೇ ಏಪ್ರಿಲ್, ೧೯೦೭ ನೇ "ವೃತ್ತಾಂತ ಪತ್ರಿಕೆ" ಯಲ್ಲಿ ಪ್ರಕಟವಾದ ಮದ್ದುಗಿರಿ ವರ್ತಮಾನವು.

ಕೆಲವು ದಿನಗಳ ಕೆಳಗೆ ಮದ್ದುಗಿರಿ ತಾ। ಅಮಲ್ದಾರರು ಪಟೇಲ್, ಶ್ಯಾನುಭೋಗರ ಆಯಾ ಊರಿನ ಮುಖ್ಯಸ್ಥರನ್ನು ಕರೆಸಿಕೊಂಡು, ಶೃಂಗೇರಿ ಗುರುಗಳು ಬರುತ್ತಾರೆಂದು ತಿಳಿಸಿ ಆಯಾ ಗ್ರಾಮದ ಸ್ಥಿತಿಗನುಸಾರ ೪೦, ೩೦, ೨೦ ರೂಪಾಯಿಗಳ ಪ್ರಕಾರ ಪಟ್ಟಿಮಾಡಿ ಹಣ ವಸೂಲ್ಮಾಡಿ ಕಳುಹಿಸಬೇಕೆಂದು ಅಪ್ಪಣೆಕೊಡಿಸಿದರು. ಗುರುಗಳ ಶಿಷ್ಯರೇ ಅವರ ಭಕ್ತ್ಯನುಸಾರವೂ ಯೋಗ್ಯತಾನುಸಾರವೂ ವಸೂಲ್ ಮಾಡಿ ಕೊಟ್ಟಿದ್ದರೆ ಚನ್ನಾಗಿತ್ತು. ರೈತರಿಗೆ ಇದು ಕಂದಾಯದ ಕಾಲ. ಇದರಿಂದ ಅವರಿಗೆ ತೊಂದರೆಯೆಂದೇ ಹೇಳಬೇಕಾಗಿದೆ. ಇದಕ್ಕಿಂತಲೂ ಆಯಾ ಗ್ರಾಮದ ಮುಖ್ಯಸ್ಥರನ್ನು ಸೇರಿಸಿ, ಅವರವರು ಕೊಟ್ಟ ಮೊಬಲಗನ್ನು ತೆಗೆದುಕೊಂಡಿದ್ದರೆ ಸಹಜವಾಗಿತ್ತು.

ತಾ. ೨ ನೇ ಮೇ, ೧೯೦೭ ನೇ "ವೃತ್ತಾಂತ ಪತ್ರಿಕೆ" ಯಲ್ಲಿ ಪ್ರಕಟವಾದ ಮದ್ದುಗಿರಿ ವರ್ತಮಾನವು.

ಶ್ರೀ ಶೃಂಗೇರಿ ಸ್ವಾಮಿಯವರಿಗಾಗಿ ಪ್ರತಿಯೊಂದು ಗ್ರಾಮದ ರೈತರಿಂದಲೂ ಇಷ್ಟಿಷ್ಟು ಹಣ ಬರಬೇಕೆಂಬದಾಗಿ ಅಮಲ್ದಾರ್ರವರು ನಿರ್ಧಾರಕವಾಗಿ ಹರಿಯೂ ಬಂದುದಾಗಿ ಪತ್ರಿಕೆಯಲ್ಲಿ ಬರೆದು ಇತ್ತಷ್ಟೆ. ಈಗ ಅದರ ವಸೂಲಿ ಕ್ರಮ ಹೇಗೆಂದರೆ, ಕೆಲವು ಗ್ರಾಮಗಳಲ್ಲಿ ಜನರ ಸ್ಥಿತಿಗತಿಗೆ ತಕ್ಕಂತೆಯೂ ಇನ್ನು ಕೆಲವು ಗ್ರಾಮಗಳಲ್ಲಿ ಒಂದು ಮನೆಗೆ ಇಷ್ಟಾಣೆಯಂತೆಯೂ ಮನೆಯಿಲ್ಲದವರಲ್ಲಿ ೪ ಆಣೆಯಿಂದ ೨ ಆಣೆಯಂತೆಯೂ ಬೇರೆ ಕೆಲವು ಗ್ರಾಮಗಳಲ್ಲಿ ಲೋಕಲ್ ಫಂಡಿನ ವಸೂಲಿನಂತೆ ರೂಪಾಯಿಗೆ ೬ ಕಾಸಿನಂತೆಯೂ ವಸೂಲ್ ಮಾಡುವರು. ಮನೆಗಳ ಸಂಖ್ಯೆಯನ್ನೂ ಇತರ ರೈತರ ಸಂಖ್ಯೆಯನ್ನೂ ಆಯಾ ಗ್ರಾಮದ ಒಟ್ಟು ಜಮಾಬಂದಿಯನ್ನೂ ಅಧಿಕಾರಿಗಳು ವಿಚಾರಿಸಿದಲ್ಲಿ ಉತ್ತಮವಾದ ಮೊಬಲಗು ಪೂರ್ತಿಯಾಗಿ ಬಂದಿದೆಯೋ ಇಲ್ಲವೋ ಗೊತ್ತಾಗುವದರಲ್ಲಿ ಅನುಮಾನವಿಲ್ಲ. ಅದು ಮಾತ್ರವಲ್ಲದೆ ಪ್ರತಿಯೊಂದು ಗ್ರಾಮದಿಂದಲೂ ಬಿಟ್ಟಿ ಹುಲ್ಲು ಮುಂತಾದ್ದನ್ನೂ ಸ್ವಾಮಿಗಳ ಸರಬರಾಜಿಗೆ ಎತ್ತಲ್ಪಟ್ಟದ್ದನ್ನು ನೋಡಿ ರೈತರಲ್ಲಿ ನೇಕರು—ಕೈಯಿಂದ ದುಡ್ಡು ಕೊಟ್ಟದ್ದಲ್ಲದೆ, ಕೊನೆಗೆ ಹುಲ್ಲನ್ನು ಸಹ ಕೊಡಬೇಕೆ? ಇದು ಒಳ್ಳೇ ನಿರ್ಬಂಧವೆಂದು ಗುಣಗುಟ್ಟುತ್ತಿರುವರು. ಇದಕ್ಕೆ ಸರಿಯಾಗಿ ಸಿದ್ದನಹಳ್ಳಿ ಎಂಬ ಗ್ರಾಮದ ಪಟೇಲ್ ರಾಮೇಗೌಡರು ರೈತರಿಂದ ಹುಲ್ಲನ್ನು ವಸೂಲ್ ಮಾಡುತ್ತಾ ಅದೇ ಗ್ರಾಮದ ಲಿಂಗಾಯತಮತದ ವಾಟದ ಅಯ್ಯಗಳಾದ ಸಿದ್ದನಂಜಪ್ಪನ ಹಿತ್ತಲಿಗೆ ತೋಟಿ ತಳವಾರರೊಂದಿಗೆ ಹೋಗಿ ಹುಲ್ಲಿನ ಹೊರೆಗಳನ್ನು ಕಟ್ಟಿಸುತ್ತಿರುವಾಗ ವಸ್ತುವಿಂದವನು ಬಂದು—ನನ್ನ ಹುಲ್ಲು ಇಲ್ಲ, ಕಿರುಕು ಎತ್ತಿ ಕೊಂಡ ಮಡಗಿಕೊಂಡಿದ್ದೇನೆ ಒಂದೇ ಹೊರೆ ಸಾಕೆಂದು ತಡೆದ ಕಾರಣ ಪಟೇಲರಿಗೆ ಕೋಪ ಬಂದು, ಅವನ ಜುಟ್ಟನ್ನು ಹಿಡಿದು ತಿರಿಗಿಸಿ ಥಳಿಸಿ ತಳ್ಳಿ ಒಂದೇಟು ಹೊಡೆದಂತೆಯೂ, ಕೆಲವು ಘಂಟೆಗಳ ಕಾಲದಲ್ಲಿಯೇ ಅವನು ಮೃತಪಟ್ಟಂತೆಯೂ ಆ ಸಂಗತಿಯನ್ನು ಮೇಲಕ್ಕೆ ತಿಳಿಸಲು, ಅಮಲ್ದಾರರೂ ಪೋಲೀಸ್ ಇನ್ಸ್‌ಪೆಕ್ಟರೂ ಆಸ್ಪತ್ರೆ ಅಸಿಸ್ಟೆಂಟರೂ ಬಂದು ನಡೆದ ವಿದ್ಯಮಾನವನ್ನೆಲ್ಲಾ ಕೈಫಿಯತ್ತು ಮಾಡಿಕೊಂಡು ಹೋದರೆಂತಲೂ, ಮಧುಗಿರಿಯಲ್ಲಿ ಶವವನ್ನು ಪರೀಕ್ಷೆಮಾಡಿ ದಫನ್ ಮಾಡುವದಕ್ಕೆ ಅಪ್ಪಣೆ ಕೊಟ್ಟ ಪ್ರಕಾರ ಮಾಡಿದರೆಂತಲೂ, ಪಟೇಲನನ್ನು ಲಾಕಪ್ಪಿನಲ್ಲಿಟ್ಟಿದಾರೆಂತಲೂ ಗೊತ್ತಾಗುತ್ತದೆ. ಸತ್ತವನ ತಾಯಿಯು ಮತ್ತು ಅಣ್ಣನ ಬಂಧುಬಾಂಧವರ ದುಃಖವನ್ನು ಹೇಳತೀರದು. ಸುಮಾರು ೨೫ ವಯಸ್ಸಿನವನು ಹೋದನಲ್ಲಾ ಎಂದು ಅನೇಕರು ಮರುಗುತ್ತಿರುವರು (ಇನ್ನೊಬ್ಬ ಬಾತ್ಮಿದಾರರಿಂದ) ಸರಬರಾಯಿ ಬಗ್ಗೆ ಬಂದಿದ್ದ ಹುಲ್ಲು, ಸೌದೆ ಸಹ ಪಿರ್ಯಾದು ಜಾತ ಉಳಿದದ್ದು ಹರಾಜು ಮಾಡಿ ಮೊಬಲಗು ಕೊಡುವದಾಗಿ ಅಮಲ್ದಾರರವರು ಸ್ವಾಮಿಗಳನ್ನು ಕೇಳಿದಂತೆಯೂ, ಅದಕ್ಕೆ ಸ್ವಾಮಿಗಳು ಆ ಮೊಬಲಗನ್ನು ಶ್ರೀ ಶಂಕರಾಚಾರ್ಯರವರ ಆರಾಧನೆ ದಿವಸ ಸಂತರ್ಪಣೆ ಬಗ್ಗೆ ಉಪಯೋಗಿಸಬೇಕೆಂದು ಅಪ್ಪಣೆ ಕೊಡಿಸಿದಂತೆಯೂ ತಿಳಿಯಬರುತ್ತೆ. ೨೮ ನೇ ತಾ. ಹುಲ್ಲು ಸೌದೆ ಹರಾಜು ಮಾಡಿಸಿದಂತೆಯೂ, ಅದರಲ್ಲಿ ಸುಮಾರು ೧೧೦ ರೂಪಾಯಿಗೆ ಕಿಂತದ್ದರಿಂದ ೩೦ ಸಮವೆಂದು ಸಿಲ್ಲಿಸಿರುವಂತೆಯೂ ತಿಳಿಯಬಂದಿರುತ್ತೆ. ಮುಖ್ಯವಾಗಿ ಸ್ವಮತಸ್ಥರಲ್ಲದೆ ಇದ್ದಾಗ್ಯೂ ಮುತುವರ್ಜಿ ವಹಿಸಿ ಇವರು ಮಾಡಿದ ಏರ್ಪಾಡುಗಳೆಲ್ಲಾ ಶ್ಲೋಕ್ತಾರ್ಹವಾಗಿರುತ್ತವೆ

ತಾ. ೧೯ ನೇ ಆಗೋಸ್ಟ್, ೧೯೦೭ ನೇ "ಮೈಸೂರ್ ಸ್ಟಾರ್" ನಲ್ಲಿ ಪ್ರಕಟವಾದ ಸೆಕ್ರೆಟೇರಿ ಆಫೀಸಿನ ಕಾಗದವು.

ಸಿ. ಎಸ್. ಬಾಲಸುಂದರಂ ಅಯ್ಯರ್, ಎಸ್ಕ್ವೈರ್., ಬಿ.ಎ.,

ಶ್ರೀಮನ್ ಮಹಾರಾಜಾ ಸರ್ಕಾರದ ಜನರಲ್ ಮತ್ತು

ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯವರಿಂದ

"ಮೈಸೂರು ಸ್ಟಾರ್" ಎಡಿಟರಿಗೆ

೧೯೦೭ ನೇ ಇಸವಿ ಜುಲೈ ೧೭ ನೇ ತಾರೀಖಿನ ನಿಮ್ಮ ೨೫೦ ನೇ ನಂಬರು ಕಾಗದದಲ್ಲಿ ಶ್ರೀ ಶೃಂಗೇರಿ ಸ್ವಾಮಿಗಳು ಮದ್ದುಗಿರಿಗೆ ದಯಮಾಡಿಸಿದ್ದಾಗ ಮದ್ದುಗಿರಿ ಅಮಲ್ದಾರರು ಬಲಾತ್ಕಾರವಾಗಿ ಚಂದಾ ಹಣವನ್ನು ತೆಗೆದುಕೊಂಡರೆಂಬ ವಿಷಯದಲ್ಲಿ ವಿಚಾರ ಮಾಡಲಾಯಿತು. ಇಷ್ಟಪಟ್ಟು ತಾವಾಗಿ ಚಂದ ಕೊಟ್ಟುದನ್ನು ತೆಗೆದುಕೊಂಡಿತಲ್ಲದೆ ಬಲಾತ್ಕಾರದಿಂದ ತೆಗೆದುಕೊಳ್ಳಲಿಲ್ಲವೆಂತಲೂ, ೧೯೦೭ ನೇ ಇಸವಿ ಮೇ ತಾರೀಖಿನ "ವೃತ್ತಾಂತ ಪತ್ರಿಕೆ" ಯಲ್ಲಿ ಕಂಡ ವಿಷಯಗಳು ನಿಜವಾದುದಲ್ಲವೆಂದೂ ಸರ್ಕಾರದವರ ತಿಳುವಳಿಕೆಗೆ ಬಂದಿದೆ.

"ವೃತ್ತಾಂತ ಪತ್ರಿಕೆ"ಗೂ ಮೈಸೂರು ಗವರ್ನಮೆಂಟಿಗೂ ನಡೆದ ಮುಖ್ಯ ಕಾಗದ ಪತ್ರಗಳು.

"ವೃತ್ತಾಂತ ಪತ್ರಿಕೆ" ಗೆ ಕಳುಹಿಸಿಕೊಟ್ಟ ಗವರ್ನಮೆಂಟ್ ಮೆಮೋರಾಂಡಂ.

ಮೈಸೂರು ಶ್ರೀಮನ್ ಮಹಾರಾಜರವರ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಆ॥ ಸೆಕ್ರೆಟರಿ ಮೆ। ಸಿ. ಎಸ್ ಬಾಲಸುಂದರಂ ಅಯ್ಯರವರಿಂದ

ಮೈಸೂರು "ವೃತ್ತಾಂತ ಪತ್ರಿಕೆ" ಎಡಿಟರ್ ರೆವ್. ಇ. ಡಬ್ಲ್ಯು. ಥಾಂಸನ್ ಯವರಿಗೆ

ಅಯ್ಯಾ,—ಶ್ರೀ ಶೃಂಗೇರಿ ಮಠದ ಜಗದ್ಗುರು ಸ್ವಾಮಿಗಳು ಮದ್ದುಗಿರಿಗೆ ದಯಮಾಡಿದ್ದ ಸಂದರ್ಭದಲ್ಲಿ ಅವರ ಕ್ಯಾಂಪಿನ ಸರಬರಾಯಿಗಾಗಿ ರೈತರನ್ನು ಹಿಂಸೆ ಮಾಡಿದರೆಂದು ಮುಂತಾಗಿ ನಿಮ್ಮ ಬಾತ್ಮಿದಾರರು ಬರೆದಿರುವ ವಿಚಾರವು ಸುಳ್ಳೆಂದು ಪ್ರಕಟಮಾಡಿದ್ದರ ಮೇಲೆ ಹಾಗೆ ಪ್ರಕಟಮಾಡುವುದಕ್ಕೆ ಕಾರಣಗಳೇನೆಂದು ನೀವು ೧೯೦೭ ನೇ ಆಗಸ್ಟ್ ೨೪ ನೇ ಮಕ್ಕಾಮಿನ ಕಾಗದವನ್ನು ಬರೆದು ಕೇಳಿರುತ್ತೀರಿ. ಆ ಸಂಗತಿಯಲ್ಲಿ ನಡೆದ ವಿಷಯಗಳನ್ನು ಸಂಗ್ರಹಮಾಡಿ ಕೆಳಗೆ ವಿವರಿಸಿರುವ ಪ್ರಕಾರ ಮೆಮೋವನ್ನು ನಿಮಗೆ ತಿಳಿಸಬೇಕೆಂದು ನಾನು ಆಜ್ಞಾಪಿಸಲ್ಪಟ್ಟಿರುತ್ತೇನೆ

ನಿಮ್ಮ ವಿಧೇಯ

ಕೆ. ಮೈಲಾರ್ ರಾವ್.

ಫಾರ್ ಗವರ್ನಮೆಂಟ್ ಆಫೀಸ್ ಸೆಕ್ರೆಟರಿ.

ಮೆಮೋರಾಂಡಂ.

ಶ್ರೀ ಶೃಂಗೇರಿ ಸ್ವಾಮಿಗಳ ಸವಾರಿ ಚಿತ್ತೈಸುವುದೆಂಬ ಸುದ್ದಿಯು ಮದ್ದುಗಿರಿಗೆ ತಿಳಿದ ಒಡನೆಯೇ ಅಲ್ಲಿನ ಮಹಾಜನರು ಒಂದು ಪಬ್ಲಿಕ್ ಮೀಟಿಂಗ್ ನಡಿಸಿದ ಹಾಗೂ, ಸ್ವಾಮಿಗಳನ್ನು ಸತ್ಕರಿಸುವ ವಿಚಾರದಲ್ಲಿ ಚಂದಾ ಎತ್ತಿ ಎಲ್ಲಾ ಕಾರ್ಯಗಳನ್ನೂ ಸರಿಯಾಗಿ ಮೇಲ್ವಿಚಾರಣೆ ನೋಡಿಕೊಳ್ಳುವದಕ್ಕೆ ಒಂದು ರಿಸೆಪ್ಷನ್ ಕಮಿಟಿ ಏರ್ಪಡಾದ ಹಾಗೂ ಕಾಣುವುದು.

೧೯೦೬ ನೇ ನೊವೆಂಬರ್ ಮಧ್ಯಾನಿಸಲ್ಲಿ ಗವರ್ನಮೆಂಟಿನವರು ತಿಳುವಳಿಕೆ ಕೊಟ್ಟ ಪ್ರಕಾರ ಮದ್ದುಗಿರಿ ಅಮಲ್ದಾರು, ಹುಲ್ಲು, ಸೌದೆ, ಎಲೆ, ತರಕಾರಿ ಮುಂತಾದ ಪದಾರ್ಥಗಳನ್ನು ನಗದು ಹಣಕ್ಕೆ ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕೆಂಬದಾಗಿ ರೇಂಜ ವರಿಗೆಲ್ಲಾ ಹುಕುಂ ಕಳುಹಿಸಿದರು. ಸರ್ಕೀಟು ಮಾಡುವಾಗ್ಗೆ ರೈತಪ್ರಜೆಗಳು ಸ್ವಾಮಿಗಳಿಗೆ ಅವಶ್ಯವಾದಂಥ ಪದಾರ್ಥಗಳನ್ನೆಲ್ಲಾ ಬಿಟ್ಟಿಯಾಗಿ ಕೊಡಿಸಿ ಒಪ್ಪಿಸುವ ಅಭಿಪ್ರಾಯವುಳ್ಳವರಾಗಿದ್ದರೆಂಬುವುದು ಅಮಲ್ದಾರರಿಗೆ ತಿಳಿದು ಬಂದಿತು. ಆಗ ಅಮಲ್ದಾರ್ರು ಗ್ರಾಮಾಧಿಕಾರಿಗಳಿಗೆ ರೈತರು ಹಾಗೆ ತಂದುಕೊಡುವ ಹಣವನ್ನೂ ಪದಾರ್ಥಗಳನ್ನೂ ಕ್ರಮವಾಗಿ ಪಟ್ಟಿಮಾಡಿಸಿಟ್ಟು ರಿಸೆಪ್ಷನ್ ಕಮಿಟಿಯ ಟ್ರೆಜರರ ವಶಕ್ಕೆ ಒಪ್ಪಿಸಿ ಕ್ರಮವಾದ ರಶೀತಿಗಳನ್ನು ಪಡೆಯತಕ್ಕದ್ದೆಂದು ಅಪ್ಪಣೆಕೊಟ್ಟರು. ಸ್ವಾಮಿಗಳು ಆ ಪ್ರಾಂತ್ಯ ದಯಮಾಡಿದ್ದಾಗ್ಗೆ ಅಮಲ್ದಾರರೂ ಡಿವಿಜನ್ ಆಫೀಸರೂ ಹಾಜರಾಗಿದ್ದು ಅಲ್ಲೆಲ್ಲಾ ಪ್ರಜೆಗಳ ಮಧ್ಯೆ ಸಂಚಾರ ಮಾಡುತ್ತಲೇ ಬಂದರು. ಸರಬರಾಯಿ ವಿಷಯದಲ್ಲಿ ಬಲಾತ್ಕಾರ ನಡಿಯಿತೆಂಬ ದೂರಾಗಲಿ ಫಿರ್ಯಾದಾಗಲಿ ಅವರಿಬ್ಬರಿಗೂ ಯಾರೂ ತಿಳಿಸಲಿಲ್ಲ.

ಸಿದ್ದನಹಳ್ಳಿಯಲ್ಲಿ ಕೊಲೆ ನಡಿಯಿತೆಂಬ ವಿಚಾರವೇನೆಂದರೆ,—

ಅಲ್ಲಿನ ಶೇಕ್ದಾರರು ಆ ಗ್ರಾಮದ ಪಟೇಲನಿಗೆ ಹುಲ್ಲನ್ನು ಕ್ರಯಕೊಟ್ಟು ಕೊಡಿಸಬೇಕೆಂದು ಹುಕುಂ ಕೊಟ್ಟರು. ತುಂಬಾ ಮುದುಕಿಯೂ ಮುಂಗೋಪಿಯೂ ಆದ ಆ ಪಟೇಲನು ಮೃತಪಟ್ಟವನ ಕೂಡ ಹುಲ್ಲಿನ ವಿಚಾರವಾಗಿ ವ್ಯಾಜ್ಯವಾಡಿ, ಅವನನ್ನು ಹೊಡೆದನು. ಏಟುತಿಂದ ಮನುಷ್ಯನಿಗೆ ಕಾಯಿಲೆ ಇತ್ತು ಚನ್ನಾಗಿರಲಿಲ್ಲ. ಅವನ ಹೃದಯವು ರೋಗವುಳ್ಳದ್ದಾಗಿತ್ತು. ಅವನ ಹೊಟ್ಟೆಯ ಒಂದು ಭಾಗವು ರೋಗದಿಂದ ಊದಿತ್ತು. ಆದಕಾರಣ ಅವನು ಪೆಟ್ಟುತಿಂದ ಆರು ಗಂಟೆಗಳ ಮೇಲೆ ಮೃತಪಟ್ಟನು. ಆದರ ಮೇಲೆ ಮೊಕದ್ದಮೆ ಆಗಿ, ಆ ಪಟೇಲನನ್ನು ಮದ್ದುಗಿರಿ ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟರು ದಯಾದೃಷ್ಟಿ ಮಾಡಿ, ಅವನಿಗೆ ೧೦ ತಿಂಗಳ ಕಠಿಣಸಜಾ ವಿಧಿಸಿದರು.

ಸ್ವಾಮಿಗಳು ಮದ್ದುಗಿರಿ ತಾಲ್ಲೂಕಿನಿಂದ ಮುಂದಕ್ಕೆ ಚಿತ್ತೈಸಿದ ಮೇಲೆ ಸುಮಾರು ೧೮೦-೧೯೦ ರೂಪಾಯಿನ ಸರಬರಾಯಿ ಪದಾರ್ಥಗಳು ಉಳಿದದ್ದನ್ನು ತಿಳಿದು, ಅದನ್ನೆಲ್ಲಾ ಸರಬರಾಯಿ ಮಾಡಿದ್ದ ಪರಿಗೇನೇ ವಾಪಸು ಮಾಡಬೇಕೆಂದು ಪ್ರಯತ್ನಪಟ್ಟಾಗ ಧರ್ಮಕ್ಕೆ, ಅದರಲ್ಲೂ ಸ್ವಾಮಿಗಳ ಮಠಕ್ಕೆ ಕೊಟ್ಟಿದ್ದನ್ನು ವಾಪಸು ತೆಗೆದುಕೊಳ್ಳುವುದಿಲ್ಲವೆಂದು ಕೊಟ್ಟವರು ಹೇಳಿಬಿಟ್ಟರು. ತರುವಾಯ ಆ ಪದಾರ್ಥಗಳನ್ನೆಲ್ಲಾ ಪಬ್ಲಿಕ್ಕಾಗಿ ಹರಾಜು ಮೂಲಕ ವಿಕ್ರಯಮಾಡಿದ್ದರಲ್ಲಿ ೧೦೫ ರೂಪಾಯಿ ಉತ್ಪತ್ತಿಯಾಯಿತು. ಈ ಮೊಬಲಗನ್ನು ಹ್ಯಾಗೆ ವಿನಿಯೋಗ ಪಡಿಸಬೇಕೆಂದು ಅಮಲ್ದಾರ್ರು ಕೇಳಿರುತ್ತಾರೆ.

ಕೆ. ಮೈಲಾರ್ ರಾವ್,

ಫಾರ್ ಗವರ್ನಮೆಂಟ್ ಆಫೀ. ಸೆಕ್ರೆಟರಿ.

"ವೃತ್ತಾಂತ ಪತ್ರಿಕೆ" ಎಡಿಟರು ಗವರ್ನಮೆಂಟಿಗೆ ಬರೆದ ಕಾಗದವು.

ಮೈಸೂರು ಶ್ರೀಮನ್ ಮಹಾರಾಜರವರ ದಿವಾನ್‌ರಾದ ಮ॥ ವಿ. ಪಿ. ಮಾಧವರಾವ್, ಸಿ. ಐ. ಇ. ಯವರಿಗೆ

ಮೈಸೂರು, ತಾ. ೨೧ ನೇ ಮೇ. ೧೯೦೮.

ಅಯ್ಯಾ,—ಶ್ರೀ ಶೃಂಗೇರಿ ಜಗದ್ಗುರುಸ್ವಾಮಿಗಳ ಸವಾರಿಯು ಮದ್ದುಗಿರಿ ತಾಲ್ಲೂಕಿಗೆ ದಯಮಾಡಿದ ಕಾಲದಲ್ಲಿ ಕೆಲವು ಅಕ್ರಮಕಾರ್ಯಗಳು ನಡೆದವೆಂದು "ವೃತ್ತಾಂತ ಪತ್ರಿಕೆ" ಯಲ್ಲಿ ಪ್ರಕಟವಾದ ಬಾತ್ಮಿಯ ವಿಷಯದಲ್ಲಿ ನಾನು ತಮ್ಮ ಕೂಡ ಮೊಖ್ತಾ ಮಾತನಾಡಿದೆನಷ್ಟೆ. ಈ ವಿಚಾರವನ್ನು ತಮಗೆ ಬರಹ ಮೂಲಕ ತಿಳಿಸುವಂತೆ ತಾವು ಅಪೇಕ್ಷಿಸಿದ್ದರಿಂದ ಕೆಳಗೆ ಕಂಡ ಸಂಗತಿಯನ್ನು ಅರಿಕೆಮಾಡಿಕೊಳ್ಳುತ್ತೇನೆ.

ತಮ್ಮ ಪರಾಂಬರಿಕೆಗೋಸ್ಕರ ಈ ವಿಷಯಕ್ಕೆ ಸಂಬಂಧಪಟ್ಟ ಮುಖ್ಯವಾದ ಕಾಗದಗಳನ್ನು ಈ ಕಾಗದಕ್ಕೆ ಜಂಟಿಸಿರುತ್ತೇನೆ. ಅವು ಯಾವವೆಂದರೆ,—(೧) ೧೯೦೭ ನೇ ಇಸವಿ ಏಪ್ರಿಲ್ ತಾ ೧೧ ಮತ್ತು ಮೇ ತಾ. ೨ ನೇ "ವೃತ್ತಾಂತ ಪತ್ರಿಕೆ" ಯ ಸಂಚಿಕೆಗಳಲ್ಲಿ ಪ್ರಕಟವಾಗಿರುವ ಎರಡು ಬಾತ್ಮಿಗಳ ಇಂಗ್ಲಿಷ್ ಭಾಷಾಂತರಗಳು; (೨) ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರ ರುಜುವುಳ್ಳ ಆಗಸ್ಟ್ ೧೯ ನೇ ಮಕ್ಕಾಮಿನ "ಮೈಸೂರ್ ಸ್ಟಾರ್" ಸಂಚಿಕೆಯಲ್ಲಿ ಪ್ರಕಟವಾದ ಕಾಗದ, (೩) "ವೃತ್ತಾಂತ ಪತ್ರಿಕೆ" ಯಲ್ಲಿ ಪ್ರಕಟವಾದ ಬಾತ್ಮಿಯು ನಿಜವಲ್ಲವೆಂದು ಹೇಳುವುದಕ್ಕೆ ಕಾರಣಗಳೇನಾದರೂ ಇದ್ದರೆ ತಿಳಿಸಬೇಕೆಂದು ನಾನು ಬರೆದು ಕೇಳಿದ ಎರಡು ಕಾಗದಗಳಿಗೂ ನನಗೆ ಗವರ್ನಮೆಂಟಿನಿಂದ ಬಂದಿರುವ ಆಗಸ್ಟ್ ೨೪ ಮತ್ತು ಸೆಪ್ಟಂಬರ್ ೨೮ ನೇ ಮಕ್ಕಾಂ ಉಳ್ಳ ಜವಾಬುಗಳು. ಗವರ್ನಮೆಂಟಿನವರು ೧೯೦೭ ನೇ ಡಿಸೆಂಬರ್ ತಾ ೧೧ ರಲ್ಲಿ (ಮೇಲ್ಕಂಡ) ಮೆಮೋದಲ್ಲಿ ಕಂಡಂತೆ ವಿವರಣೆಯನ್ನು ಕೊಟ್ಟಿರುತ್ತಾರೆ.

ಮೇಲ್ಕಂಡ ವಿಷಯದಲ್ಲಿ ನಾನು ತಮ್ಮ ರೂಬರೂಬು ಹೇಳಿದ ಸಂಗತಿಗಳನ್ನೇ ಈಗ ಬರಹ ಮೂಲಕವಾಗಿ ತಮ್ಮ ಅವಗಾಹನೆಗೆ ತರುವವನಾಗಿದೇನೆ. ಏನೆಂದರೆ—

(೧) ಮೇಲ್ಕಂಡ ಗವರ್ನಮೆಂಟ್ ಮೆಮೋ ವಿವರಣೆಯ ಮೊದಲನೇ ಭಾಗದಲ್ಲಿ "ಅಲ್ಲಿನ ಮಹಾ ಜನಗಳು ಒಂದು ಪಬ್ಲಿಕ್ ಮೀಟಿಂಗ್ ನಡಿಸಿದ ಹಾಗೂ, ಸ್ವಾಮಿಗಳನ್ನು ಸತ್ಕರಿಸುವ ವಿಚಾರದಲ್ಲಿ ಚಂದಾ ಎತ್ತಿ ಎಲ್ಲಾ ಕಾರ್ಯಗಳನ್ನೂ ಸರಿಯಾಗಿ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಒಂದು ರಿಸೆಪ್ಷನ್ ಕಮಿಟಿ ಏರ್ಪಡಾದ ಹಾಗೂ ಕಾಣುವುದು" ಎಂದು ಹೇಳಿದೆ. "ಹಾಗೂ, ಹಾಗೂ ಕಾಣುವುದು" ಎಂಬೀ ಮಾತುಗಳನ್ನು ನೋಡಿದರೆ ಆ ಮೀಟಿಂಗು ನಡಿಯಿತೋ ಇಲ್ಲವೋ ಎಂಬುವುದೇ ಅನುಮಾನವಾಗಿದೆ. ಆದರೆ ಈ ಭಾಗವನ್ನು ಇನ್ನೂ ಚೆನ್ನಾಗಿ ತಿಳಿದುಕೊಳ್ಳಬೇಕಾದ ಅವಶ್ಯಕತೆಯೇನೂ ಇರುವುದಿಲ್ಲ, ಆ ರಿಸೆಪ್ಷನ್ ಕಮಿಟಿಯವರು ಮದ್ದುಗಿರಿ ಟೌನಿನಲ್ಲಿ ನಡಿಯತಕ್ಕ ಸತ್ಕಾರದ ಏರ್ಪಾಡುಗಳನ್ನು ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಅವರಿಗೆ ಸಾಮರ್ಥ್ಯವೂ ಅನುಕೂಲವೂ ಇದ್ದಿರಬಹುದು. ತಾಲ್ಲೂಕಿನೊಳಗೆ ದೂರದೂರ ಪ್ರದೇಶಗಳಲ್ಲಿರುವಂಥಾ ಹಳ್ಳಿಗಾಡುಗಳಲ್ಲಿ ನಡಿಯತಕ್ಕ ಸತ್ಕಾರದ ಏರ್ಪಾಡನ್ನು ಆ ಕಮಿಟಿಯವರು ಮೇಲ್ವಿಚಾರಣೆ ನೋಡಿಕೊಂಡರೆಂದಾಗಲಿ, ಅದಕ್ಕೆ ಅವರಿಗೆ ಅವಕಾಶವೂ ಸಾಮರ್ಥ್ಯವೂ ಇದ್ದವೆಂದಾಗಲಿ ಹೇಳಿದರೆ ನಂಬುವುದು ಕಷ್ಟ. ಮದ್ದುಗಿರಿ ಟೌನಿನಲ್ಲಿ ಮಾಡಿದ ಏರ್ಪಾಡುಗಳ ವಿಷಯವಾಗಿ "ವೃತ್ತಾಂತ ಪತ್ರಿಕೆ" ಯ ಬಾತ್ಮಿದಾರರು ಯಾವ ಆಕ್ಷೇಪಣೆಯನ್ನೂ ಮಾಡಿರುವುದಿಲ್ಲವಾದದ್ದರಿಂದ ಮೇಲ್ಕಂಡ ವಿಚಾರವು ಈಗಿನ ಚರ್ಚೆಗೆ ಸಂಬಂಧಪಡಲಾರದು.

(೨) ಮೇಲ್ಕಂಡ ಗವರ್ನಮೆಂಟ್ ಜವಾಬಿನಲ್ಲಿ ಕಂಡ ಎರಡನೇ ಪ್ಯಾರಾವು ಅಮಲ್ದಾರ್ರ ಹೇಳಿಕೆಯ ಆಧಾರದ ಮೇಲೆ ಬರೆದದ್ದಾಗಿ ಕಾಣುತ್ತದೆ. ಅವರು ಸರಬರಾಜಿನ ಸಾಮಗ್ರಿಗಳನ್ನು ಕ್ರಯಕೊಟ್ಟು ಒದಗಿಸಬೇಕೆಂತಲೂ, ಹಣವಾಗಲಿ ಸಾಮಗ್ರಿಯಾಗಲಿ ಬಿಟ್ಟಿ ಯಾರಾದರೂ ತಂದೊಪ್ಪಿಸಿದರೆ ಅಂಥವರಿಗೆ ರಿಸೆಪ್ಷನ್ ಕಮಿಟಿಯ ಟ್ರೆಜರರು ಕ್ರಮವಾದ ರಶೀತಿಕೊಡಬೇಕೆಂತಲೂ ಗ್ರಾಮಾಧಿಕಾರಿಗಳಿಗೆಲ್ಲಾ ಅಮಲ್ದಾರ್ರು ಹುಕುಂಕೊಟ್ಟ ಹಾಗೂ, ಅಮಲ್ದಾರ್ರು ತಾಲ್ಲೂಕಿನೊಳಗೆ ಸರ್ಕೀಟು ಹೋಗಿದ್ದಾಗ್ಗೆ ಅವರಿಗೆ ಯಾರೂ ಈ ವಿಷಯವಾಗಿ ಫಿರ್ಯಾದು ಹೇಳಿಕೊಳ್ಳಲಿಲ್ಲವೆಂತಲೂ ನಮೂದು ಮಾಡಲ್ಪಟ್ಟಿದೆ. ಇದು ಯಥಾರ್ಥವಾದ ಸಂಗತಿ ಎಂದು ನಾನು ಒಪ್ಪಲಾರೆನು. ಅಮಲ್ದಾರರೇ ಅದಕ್ಕೆ ಕಾರಣಭೂತರಾಗಿದಾರೆಂದು ಜನರು ತಿಳಿದುಕೊಂಡಿರುವಲ್ಲಿ ಅವರು ಅಮಲ್ದಾರರ ಬಳಿಗೆ ಹೋಗಿ ತಮ್ಮ ಕಷ್ಟನಷ್ಟಗಳನ್ನು ಹೇಳಿಕೊಂಡಾರೇ? ಈಚೆಗೆ ಗವರ್ನಮೆಂಟಿನವರು ರಜೆಮಾಡುವಂತ ೮ ಕಮೀಷನರನ್ನು ಅಲ್ಲಿಗೆ ಕಳುಹಿಸಿದರು. ಅಕ್ರಮವಾಗಿ ಬಿಟ್ಟಿ ಎತ್ತಿದರೆಂದು ಆಧಾರಸಹಿತವಾದ ಹಲವು ಫಿರ್ಯಾದುಗಳು ಆ॥ ಕಮೀಷನರ ತಿಳುವಳಿಕೆಗೆ ಬಂದಿರುತ್ತವೆ. ಇದಲ್ಲದೆ ಆ ಸಾಲದಲ್ಲಿ ಈ ವಿಚಾರವಾಗಿ ಗ್ರಾಮಾಂತರಗಳೊಳಗೆ ಅಂಥಾ ನೋವುಗಾಟಗಳು ವಿಶೇಷವಾಗಿದ್ದುವೆಂತೆ ನನಗೆ ತಿಳಿದು ಬಂದಿರುವುದು.

ಈ ಸಂದರ್ಭದಲ್ಲಿ ದೃಷ್ಟಾಂತಕ್ಕಾಗಿ ಅಮಲ್ದಾರ್ರು ಮಾಡಿದ್ದನ್ನೂ, ಅವರ ಹುಕುಮಿನಂತೆ ಗ್ರಾಮನೌಕರರು ನಡಿಸಿದ್ದನ್ನೂ ಸೂಚಿಸುವೆನು. ಏಪ್ರಿಲ್ ತಿಂಗಳಲ್ಲಿ ಅಮಲ್ದಾರ್ರು ಸುತ್ತುಮುತ್ತಿನ ಗ್ರಾಮಗಳ ಪಟೇಲ್ ಶ್ಯಾನುಭೋಗರುಗಳನ್ನು ಕರೆಸಿಕೊಂಡು ಕೊಡಗದಾಳು ಪೋಲೀಸ್ ಸ್ಟೇಷನ್‌ನಲ್ಲಿ ಒಂದು ಮೀಟಿಂಗ್ ನಡಿಸಿ ಗ್ರಾಮಕ್ಕೆ ಇಷ್ಟಿಷ್ಟು ಹಣ ವಸೂಲಾಗಬೇಕೆಂದು ಗೊತ್ತುಮಾಡಿದರು. ಗ್ರಾಮನೌಕರರು ಅದರಂತೆ ಪ್ರಜೆಗಳಿಂದ ವಸೂಲ್ಮಾಡುವುದಕ್ಕೆ ಹೋದಾಗ ಅವರು ಕೊಡದೆ ಪ್ರತಿಭಟಿಸಿದ್ದನ್ನು ಕಂಡು, ಮೇಲ್ಪಟ್ಟ ಅಧಿಕಾರಿಗಳಿಂದ ಆ ರೀತಿ ಹುಕುಂ ಬಂದಿದೆ ಎಂದು ಅವರಿಗೆ ಹೇಳಿದರು. ಇದರಲ್ಲಿ ಪ್ರಜೆಗಳು ತಾವಾಗಿಯೇ ತಮ್ಮ ಇಷ್ಟಾನುಸಾರ ಹಣವನ್ನಾಗಲಿ ಸಾಮಾನನ್ನಾಗಲಿ ತಂದು ಒಪ್ಪಿಸಿದರೆನ್ನುವುದಕ್ಕೆ ಯಾವ ಆಧಾರವೂ ಕಾಣುವುದಿಲ್ಲ.

(೩) ಗವರ್ನಮೆಂಟಿನಿಂದ ಸಾದರಾಗಿರುವ ಮೇಲ್ಕಂಡ ಹುಕುಮಿನ ಮೂರನೇ ಪ್ಯಾರಾದಲ್ಲಿ ಸಿದ್ದನಹಳ್ಳಿಯಲ್ಲಿ ನಡೆದ ಕೊಲೆಯ ವಿಚಾರವನ್ನು ಕುರಿತು ನಮೂದು ಮಾಡಲ್ಪಟ್ಟಿದೆ. ಈ ಪ್ಯಾರಾದಲ್ಲಿ ಕಂಡ ಸಂಗತಿಗಳು "ವೃತ್ತಾಂತ ಪತ್ರಿಕೆ" ಯಲ್ಲಿ ಪ್ರಾಯಶಃ ಆಗಿರುವ ವಿಷಯವನ್ನು ನಿಜವಲ್ಲವೆಂದು ಹೇಳುವುದಿಲ್ಲ. ಈ ವಿಷಯದಲ್ಲಿ ಪ್ರಕಟಿಸಲ್ಪಟ್ಟಿರುವ ಸಂಗತಿಗಳು ಬಹುಮಟ್ಟಿಗೆ ನಿಜವೆಂತಲೂ ಈ ಹುಕುಮು ಒಪ್ಪಿಕೊಳ್ಳುತ್ತದೆ. ವಿವರಣೆಗಳೇ ಮೊದಲಾದ ಕೆಲವು ವಿದ್ಯಮಾನಗಳು ಬಿಟ್ಟು ಹೋಗಿವೆ ಎಂದೂ, ಇನ್ನು ಕೆಲವು ಸೇರಿಕೊಂಡಿವೆ ಎಂದೂ ಹೇಳಿದೆ. "ವೃತ್ತಾಂತ ಪತ್ರಿಕೆ" ಯಲ್ಲಿ ಹೇಳಿರುವ ಪ್ರಕಾರ ಆ ಪಟೇಲನಿಗೂ ಆ ಲಿಂಗಾಯತನಿಗೂ ಒಂದು ಹುಲ್ಲಿನ ಹೊರೆಯ ವಿಷಯಕ್ಕೆ ಜಗಳವಾಯಿತು. ಅದನ್ನು ಪಟೇಲನು ಸಾಗಿಸಿಕೊಂಡು ಹೋಗುತ್ತಿದ್ದನು ಎಂಬುವುದನ್ನು ಮೇಲ್ಕಂಡ ಹುಕುಮು ಒಪ್ಪಿಕೊಳ್ಳುತ್ತದೆ. ಆದರೆ ಆ ಹೊರೆಯು ಶ್ರೀ ಶೃಂಗೇರಿ ಮಠಕ್ಕೋಸ್ಕರಲೇ ಎಂಬ ವಿಚಾರವನ್ನು ಮಾತ್ರ ನಮೂದು ಮಾಡುವುದಿಲ್ಲ.

ಈ ಮೇಲ್ಕಂಡ ಗವರ್ನಮೆಂಟಿನ ಹುಕುಮು "ಮೈಸೂರು ಸ್ಟಾರ್" ಪತ್ರಿಕೆಯಲ್ಲಿ ಪ್ರಕಟವಾದ ಕಾಗದವನ್ನು ಹೆಚ್ಚಾಗಿ ವಿವರಿಸಿ ಸಮಾಧಾನ ಹೇಳುವಂಥಾದ್ದೆಂದು ಎಣಿಸುವುದು ಸಾಧ್ಯವಲ್ಲ. ಯಾಕೆಂದರೆ "ವೃತ್ತಾಂತ ಪತ್ರಿಕೆ" ಯಲ್ಲಿ ಬಾತ್ಮಿದಾರರು ಬರೆದಿರುವ ಅಂಶಗಳನ್ನು ಬಹುಮಟ್ಟಿಗೆ ಈ ಹುಕುಮು ಒಪ್ಪಿಕೊಳ್ಳುವುದಾಗಿದೆ. "ಮೈಸೂರು ಸ್ಟಾರ್" ಪತ್ರಿಕೆಯಲ್ಲಿ ಪ್ರಕಟವಾದ ಸರ್ಕಾರದವರ ಕಾಗದವು—"ಸ್ವಾಮಿಗಳು ದಯಮಾಡಿದ್ದಾಗ ಜನರು ತಾವಾಗಿ ತಂದೊಪ್ಪಿಸಿದ್ದನ್ನು ಮಾತ್ರ ಅಂಗೀಕರಿಸಿದೆ. ಇನ್ಯಾವ ರೀತಿಯಲ್ಲೂ ಸರಬರಾಯನ್ನು ಕೂಡಿಸಿ ಒದಗಿಸಲಿಲ್ಲ. "ವೃತ್ತಾಂತ ಪತ್ರಿಕೆ" ಯಲ್ಲಿ ಪ್ರಕಟವಾದ ಅಂಶಗಳು ನಿಜವಾದವುಗಳಲ್ಲ" ಎಂಬೀ ರೀತಿಯಾಗಿ ಹೇಳಿತು. ಆದ್ದರಿಂದ ಈಗ ಗವರ್ನಮೆಂಟಿನವರು ಎರಡು ಸಂಗತಿಗಳನ್ನು ಹೇಳಿದಾರೆ. ಇವೆರಡೂ ನಿಜವೆಂದು ಹೇಳುವ ಪಕ್ಷಕ್ಕೆ ಗವರ್ನಮೆಂಟಿನವರು ಎರಡನ್ನೂ ನಿಜವೆಂದು ಸಿದ್ಧಾಂತಪಡಿಸಲಾರರು. ಸಿದ್ದನಹಳ್ಳಿಯಲ್ಲಿ ನಡೆದ ಅಂಶವನ್ನು ದೃಷ್ಟಾಂತವಾಗಿ ಹೇಳುತ್ತೇನೆ. ಮತ್ತು ಅಮಲ್ದಾರ್ರು ಕೊಡಗದಾಳು ಪೋಲೀಸ್ ಸ್ಟೇಷನ್‌ನಲ್ಲಿ ಒಂದು ಮೀಟಿಂಗ್ ನಡಿಸಿದರೆಂದು ಸೂಚಿಸಿರುತ್ತೇನೆ.

ನಾನು ತಮ್ಮೊಡನೆ ಈ ವಿಚಾರವಾಗಿ ಸಂಭಾಷಣೆ ಮಾಡುವಾಗ್ಗೆ ತಾವು ಆ ಕಾಗದದಲ್ಲಿ ಕಂಡ ಮಾತುಗಳು ಯುಕ್ತವಾದವುಗಳಲ್ಲವೆಂತಲೂ, ಆ ರೀತಿ

ತಪ್ಪು ಬರೆಯಬಾರದಾಗಿತ್ತೆಂತಲೂ, "ವೃತ್ತಾಂತ ಪತ್ರಿಕೆ" ಯಲ್ಲಿ ಕೆಲವು ಅಂಶಗಳು ಕೆಲವು ಮಟ್ಟಿಗೆ ನಿಜವಾಗಿವೆ ಎಂತಲೂ ಧಾರಾಳವಾಗಿ ಒಪ್ಪಿಕೊಂಡದ್ದನ್ನು ಕೃತಜ್ಞತಾ ಪೂರ್ವಕವಾಗಿ ಅನುಮೋದಿಸುತ್ತೇನೆ. ನಮ್ಮ ಬಾತ್ಮಿದಾರರು ಸರಿಯಾದ ನಿಜವಾತುಗಳನ್ನಿಟ್ಟುಕೊಂಡು ಬಾತ್ಮಿಯನ್ನು ಬರೆದಿದ್ದಾರೆಂತಲೂ, ಅವರು ವಿವರಿಸಿರುವ ಅಂಶಗಳು ಯಥಾರ್ಥವಾದವುಗಳೆಂತಲೂ ವಿನಯ ಪೂರ್ವಕವಾಗಿ ಅರಿಕೆಮಾಡುವೆನು

ಒಂದು ವರ್ತಮಾನ ಪತ್ರಿಕೆಯಲ್ಲಿ ಪ್ರಕಟವಾದ ಸಂಗತಿಯು ನಿಜವೇ ಸುಳ್ಳೇ ಎಂದು ಆ ಪತ್ರಿಕೆಗೆ ಬರೆದು ಸಮಾಧಾನವನ್ನು ತರಿಸಿಕೊಳ್ಳದೇನೇ ಸೆಕ್ರೆಟೇರಿಯಟ್ ಅಸಿಸ್ಟೆಂಟ್ ಏಕಾಏಕಿ ಆ ಸಂಗತಿ ಸುಳ್ಳೆಂದು ಬರೆದು ತಿಳಿಸುವುದು ನೀತಿವಿರುದ್ಧವಾದ ನಡವಳಿಕೆಯೇ? ಸರಿ ಎಂದು ತಾವು ನನ್ನೆದುರಿಗೆ ಒಪ್ಪಿಕೊಳ್ಳಬೇಕಾಯಿತು. "ವೃತ್ತಾಂತ ಪತ್ರಿಕೆ" ಯನ್ನು ಕೇಳದೇನೂ, ಅದರ ಸಮಾಧಾನವನ್ನು ತರಿಸಿಕೊಳ್ಳದೇನೂ ಅದರ ಮೇಲೆ ಅಪವಾದವನ್ನು ಹೊರಿಸಲಾಯಿತು ಈ ಭಾಗದಲ್ಲಿ ನಾನು ವಿಶೇಷವಾಗಿ ಒತ್ತಿಹೇಳಬೇಕೆಂದು ಕುತೂಹಲಪಡುವವನಾಗಿಲ್ಲ "ವೃತ್ತಾಂತ ಪತ್ರಿಕೆ" ಯ ಹೆಸರು ಕೆಡುವುದೆಂದಾಗಲಿ ನಾನು ಚಿಂತೆಪಡತಕ್ಕವನಲ್ಲ. ಮುಖ್ಯವಾಗಿ ಸರ್ಕಾರಿ ಅಧಿಕಾರಿಗಳಲ್ಲಿರಬೇಕಾದ ನಿರ್ದುಷ್ಟವಾದ ನಡವಳಿಕೆಗೆ ಕಳಂಕ ಬರುವುದಲ್ಲಾ ಎಂತಲೂ, ರೈತಪ್ರಜೆಗಳು ಅನ್ಯಾಯವಾಗಿ ಕಷ್ಟನಷ್ಟಗಳಿಗೆ ಗುರಿಯಾದರೆ ಅಂಥವರನ್ನು ಕಾಪಾಡುವುದಕ್ಕೆ ಯಾವ ಮಾರ್ಗವೂ ಇಲ್ಲದೆ ಹೋಗುವುದಲ್ಲಾ ಎಂತಲೂ ಚಿಂತೆಪಡಬೇಕಾಗಿದೆ.

"ವೃತ್ತಾಂತ ಪತ್ರಿಕೆ" ಯಲ್ಲಿ ಆಕ್ಷೇಪಣೆ ಮಾಡಿರುವ ವಿಷಯವೇನೆಂದರೆ—ಮದ್ದಗಿರಿ ತಾಲ್ಲೂಕಿನ ಅಮಲ್ದಾರರೂ ಕೆಲವು ಗ್ರಾಮಗಳ ನೌಕರರೂ ಶೃಂಗೇರಿ ಮಠದ ಸರಬರಾಯಿಗೋಸ್ಕರ ತಮ್ಮ ಕರ್ತವ್ಯಾಂಶವನ್ನೂ ತಮ್ಮ ಅಧಿಕಾರವನ್ನೂ ಮೀರಿ ಹಣವನ್ನೂ ಸಾಮಾನುಗಳನ್ನೂ ಕೂಡಿಸಿದರು. ಶ್ರೀಮನ್ ಮಹಾರಾಜರವರು ತಮ್ಮ ಸರ್ಕಾರಿನಲ್ಲಿ ರಾಜಭಕ್ತಿಯುತರಾದ ತಮ್ಮ ಪ್ರಜೆಗಳು ಕಷ್ಟನಷ್ಟಗಳಿಗೂ ಸುಲಿಗೆ ಸೇವೆಗೂ ಗುರಿಯಾಗಬಾರದೆಂದು ತುಂಬಾ ಕಾತುರಪಡುವವರಾಗಿದ್ದಾರೆ ಗವರ್ನ್‌ಮೆಂಟಿನವರು ತಮ್ಮ ಉದ್ದೇಶವನ್ನು ರೂಲುಸುಗಳನ್ನು ಮಾಡಿ ಪ್ರಕಟಿಸಿರುವರು. ಈ ರೂಲುಸುಗಳನ್ನು ಸರ್ಕಾರದ ನೌಕರಮಾಲೆಯುಗಳು ಉಲ್ಲಂಘಿಸಿ, ಅವುಗಳಿಗೆ ವ್ಯತಿರಿಕ್ತವಾಗಿ ಕೆಲಸಮಾಡಿರುತ್ತಾರೆಂಬುವುದೇ "ವೃತ್ತಾಂತ ಪತ್ರಿಕೆ" ಯು ಮಾಡುವ ಆಕ್ಷೇಪಣೆಯಾಗಿದೆ

ಆದಕಾರಣ ತನಿಖೆಮಾಡಬೇಕೆಂದು ಗೊತ್ತುಮಾಡಿ ಕಳುಹಿಸಿಕೊಟ್ಟ ಅಸಿಸ್ಟೆಂಟ್ ಕಮಿಷನರವರಿಂದ ರಿಪೋರ್ಟನ್ನೂ, ಈ ಮೊಕದ್ದಮೆಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನೂ ತರಿಸಿಕೊಂಡು ತಾವು ಅವನ್ನೆಲ್ಲಾ ಪರಿಶೀಲಿಸಬೇಕೆಂದು ನಾನು ತಮ್ಮನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ ಕಡೆಯಲ್ಲಿ ಸತ್ಯವೇ ಜಯವಾದೀತೆಂದು ನಂಬಿ, ತಮ್ಮ ತೀರ್ಮಾನವನ್ನು ಎದುರು ನೋಡುತ್ತೇನೆ

ನಿಮ್ಮ ವಿಧೇಯ

ಇ. ಡಬ್ಲ್ಯು. ಥಾಂಪ್ಸನ್,

ಎಡಿಟರ್, "ವೃ ಪ"

ಗವರ್ನ್‌ಮೆಂಟಿನವರು ನಮಗೆ ಕೊಟ್ಟ ಕೊನೆಯ ಜವಾಬು

ಕ್ಯಾಂಪ್.—ಮೈಸೂರು,

"ವೃತ್ತಾಂತ ಪತ್ರಿಕೆ" ಎಡಿಟರ್ ೨೯ನೇ ಅಕ್ಟೋಬರ್, ೧೯೦೮

ರೆವ್. ಇ. ಡಬ್ಲ್ಯು. ಥಾಂಪ್ಸನ್‌ರವರಿಗೆ

ಅಯ್ಯಾ, ಕಳೆದ ೧೯೦೭ನೇ ಏಪ್ರಿಲ್‌ನಲ್ಲಿ ಶ್ರೀ ಶೃಂಗೇರಿ ಸ್ವಾಮಿಗಳವರ ಸವಾರಿಯು ಮದ್ದಗಿರಿ ತಾಲ್ಲೂಕಿಗೆ ದಯಮಾಡಿದ್ದ ವೇಳೆಯಲ್ಲಿ ಅಕ್ರಮವಾಗಿಯೂ ಬಲಾತ್ಕಾರದಿಂದಲೂ ಕಾಣಿಕೆ (ಡೊನೇಷನ್) ಯನ್ನು ವಸೂಲುಮಾಡಿದರೆಂಬ ವಿಚಾರವಾಗಿ ನೀವು ೧೯೦೮ನೇ ಮೇ ತಾ ೨೦ರಲ್ಲಿ ದಿವಾನ್‌ರವರಿಗೆ ಬರೆದುಕೊಂಡ ಕಾಗದವು ಕೃತವಾಯಿತು

ಈ ವಿಚಾರವಾದ ಕಾಗದ ಪತ್ರಗಳನ್ನು ಗವರ್ನ್‌ಮೆಂಟಿನವರು ಪುನಃ ಪರಿಶೀಲನೆ ಮಾಡಿದರು. ಅವುಗಳಿಂದ ಅಮಲ್ದಾರರಾಗಲಿ ಇತರ ಅಧಿಕಾರಿಗಳಾಗಲಿ ಯಾವ ಜನರಿಂದಲೂ ಬಲಾತ್ಕಾರಪೂರ್ವಕವಾಗಿ ಉಚಿತ ಹಣವನ್ನಾಗಲಿ ಸಾಮಾನನ್ನಾಗಲಿ ವಸೂಲುಮಾಡಲಿಲ್ಲವೆಂತಲೂ, ಗ್ರಾಮಾಂತರಗಳ ರೈತರುಗಳಿಂದ ಉಚಿತವಾಗಿ ಕೊಡೋಣವಾದದ್ದು ದುರ್ವಿನಿಯೋಗವಾಗದೆ ಪೂರ್ತಿಯಾಗಿ ಸೆಂಟ್ರಲ್ ಕಮಿಟಿ (ಮುಖ್ಯ ಮೇಲ್ವಿಚಾರಣಾ ಸಂಘ) ಯವರಿಗೆ ತಲುಪಿತೆಂತ ಅಮಲ್ದಾರರು ಮುತುವರ್ಜಿಯಿಂದ ನೋಡಿಕೊಂಡದ್ದಲ್ಲದೇ ಅಷ್ಟೇ ಎಂತಲೂ ಆ ಕಾಗದ ಪತ್ರಗಳಿಂದ ಗೊತ್ತಾಗುತ್ತದೆ ಇದಲ್ಲದೆ ಸ್ಥಳಾಧಿಕಾರಿಗಳು ಸಂಪೂರ್ಣವಾಗಿ ತನಿಖೆ ಮಾಡಿರುತ್ತಾರಾದಕಾರಣ ಮುಂದೆ ಈ ವಿಷಯವನ್ನು ಬೆಳಸುವುದರಿಂದ ಪ್ರಯೋಜನವಿಲ್ಲವೆಂದು ಗವರ್ನ್‌ಮೆಂಟಿನವರು ಅಭಿಪ್ರಾಯಪಡುತ್ತಾರೆಂಬ ಅಂಶವನ್ನು ಜ್ಞಾಪಿಸಲಾಗಿದೆ

ನಿಮ್ಮ ವಿಧೇಯ

ಸಿ ಎಸ್ ಬಾಲಸುಂದರಂ ಐಯರ್,

ಫಾರ್ ಸೆಕ್ರೆಟರಿ,

ಗವರ್ನ್‌ಮೆಂಟ್ ಜ., ರೆ. ಇಲಾಖೆಗಳು

ಕ್ಷಾಮ ನಿವಾರಣೆಗಾಗಿ ಚಿಂತಾಮಣಿಯ ನಾರೀಮಣಿಗಳ ಸಾಹಸ ಕಾರ್ಯವು.

ಚಿಂತಾಮಣಿ ತಾಲ್ಲೂಕು ಅಮಲ್ದಾರರು ಬಡವಾಯಿಗಳಿಗೆ ನಾನಾ ಬಗೆಯಲ್ಲಿ ಸಹಾಯ ಮಾಡಿ, ಪ್ರಜೆಗಳ ಕಷ್ಟನಷ್ಟಗಳಲ್ಲಿ ಬೆರೆತಿರುವದನ್ನು ವಾಚಕರ ಅವಗಾಹನೆಗೆ ತಂದಿದೆಯಷ್ಟೆ ಈಚೆಗೆ ಮೆ ರಾಘವಾಚಾರ್ಯರ ಪತ್ನಿಯವರಾದ ಅಲಮೇಲಮ್ಮನವರು ಬಡವರಾದ ಹೆಂಗಸರು ಮಕ್ಕಳ ಕಷ್ಟನಿವಾರಣೆ ಮಾಡಬೇಕೆಂದು ಯೋಚಿಸಿ, ಕಳೆದ ಸೋಮವಾರ ಊರಿನ ನಾರೀಮಣಿಯರನ್ನು ಕರೆಸಿಕೊಂಡು ಒಂದು ಕೂಟ ನಡಿಸಿ ಅವರ ಮುಂದೆ ಹೀಗೆ ಉಪನ್ಯಾಸ ಮಾಡಿದರು:—

ಪ್ರಿಯ ಮಿತ್ರೆಯರುಗಳಿರಾ,—ತಮ್ಮಗಳೆಲ್ಲರ ಸಂದರ್ಶನವು ಈ ದಿನ ನನಗೆ ಲಭಿಸಿದ್ದು ಸುದಿನವೇ. ತಮ್ಮಗಳ ಪರಿಚಯ ಮಾಡಿಕೊಳ್ಳಬೇಕೆಂದು ಬಹು ದಿನಗಳಿಂದ ನಿರೀಕ್ಷಿಸುತ್ತಿದ್ದ ನಮಗೆ ಈ ಕೋರಿಕೆಯು ಈ ದಿನ ನೆರವೇರಿದ್ದಕ್ಕಾಗಿ ಶ್ರೀ ಭಗವಂತನನ್ನು ಅಭಿವಂದಿಸುತ್ತೇನೆ ತಮ್ಮಗಳ ದರ್ಶನವಾದದ್ದರಲ್ಲಿ ನನ್ನಲ್ಲಿದ್ದ ಒಂದು ಮುಖ್ಯ ಕುತೂಹಲವು ನೆರವೇರಿತಾದರೂ ಮತ್ತೊಂದು ಭಾಗವು ಅತಿಶಯವಾದದ್ದಾಗಿದೆ. ಅದೇನೆಂದರೆ—

ಪ್ರಾಚೀನ ಕಾಲದ ಹಿಂದೂ ಜನಗಳಲ್ಲಿ ಧರ್ಮರಾಯ, ದಶರಥ, ಜನಕ ಚಕ್ರವರ್ತಿ ಮುಂತಾದ ಮಹನೀಯರು ಅನೇಕ ಧರ್ಮ ಕಾರ್ಯಗಳನ್ನು ಮಾಡಿ, ಪ್ರಜೆಗಳನ್ನು ಪರಿಪಾಲಿಸಿರುತ್ತಾರೆ. ಅಲ್ಲದೆ ಅವರು ಜನಗಳಲ್ಲಿ ಕ್ಷಾಮಭಯುಂಟಾದಾಗ್ಗೆ ಮಹಾ ಪತಿವ್ರತಾ ಶಿರೋಮಣಿಯಾದ ಅನಸೂಯಾದೇವಿಯು ಅನ್ನ ಆಹಾರಾದಿಗಳನ್ನು ಕೂಡ ತ್ಯಜಿಸಿ ತಪಸ್ಸು ಮಾಡುತ್ತಾ, ಕಷ್ಟದೆಸೆಯಲ್ಲಿದ್ದ ಪ್ರಜೆಗಳನ್ನು ಕಾಪಾಡಿದರೆಂದು ಕೇಳಿ ಬಲ್ಲೆವು ಮಹಮ್ಮದೀಯರಲ್ಲಿ ಅಕ್ಬರ್, ಷೇರ್‌ಷಾ, ನೂರ್‌ಜಹಾನ್, ಇವರುಗಳೇ ಮುಂತಾದವರು ಪ್ರಜೆಗಳಿಗೆ ನಾನಾ ಬಗೆಯಲ್ಲಿ ಉಪಕಾರಾದಿಗಳನ್ನು ಮಾಡಿ, ಶಾಶ್ವತವಾದ ಕೀರ್ತಿಗೊಂಡಿರುತ್ತಾರೆ. ನಮ್ಮನ್ನಾಳುತ್ತಿರುವ ಇಂಗ್ಲಿಷ್ ರಾಜ್ಯದ ಕೋಟ್ಯಾನುಕೋಟಿ ಪುಣ್ಯವಂತರು ನಾನಾ ಬಗೆಯಲ್ಲಿ ಧರ್ಮವಮಾಡಿ ಕಷ್ಟದೆಸೆಯಲ್ಲಿರುವ ಜನಗಳನ್ನು ಉದ್ಧಾರ ಮಾಡಿಯೂ, ಮಾಡುತ್ತಲೂ ಇರುವರೆಂಬುದು ಪ್ರಸಿದ್ಧವಾಗಿದೆ ಗತಿಸಿದ ಚಕ್ರವರ್ತಿನಿಗಳಾದ ವಿಕ್ಟೋರಿಯಾ ಮಹಾರಾಣಿಯವರೂ, ಈಗಿನ ಮಹಾರಾಣೀಜೀಯವರೂ, ಲೇಡಿ ಡಫರಿನ್, ಮಿಸ್ ಮ್ಯಾನಿಂಗ್, ಮಿಸೆಸ್ ಅನಿ ಬೆಸೆಂಟ್ ಮುಂತಾದ ನಾರೀ ಶಿರೋಮಣಿಯರು ಅನೇಕವಾಗಿ ಧರ್ಮ ಕಾರ್ಯಗಳನ್ನು ಮಾಡಿ, ನಮ್ಮಗಳಿಗೆ ಮೇಲ್ಪಂಕ್ತಿಯನ್ನು ಹಾಕಿ ಕೊಟ್ಟಿರುವದರಿಂದ ನಾವು ಅವರನ್ನು ವಂದಿಸುತ್ತಾ, ಅವರ ಮಾದರಿಯನ್ನೇ ಅನುಸರಿಸಬೇಕಾಗಿದೆ. ನಾವು ಅಬಲೆಯರಾಗಿದ್ದರೂ ನಮ್ಮಗಳ ದಕ್ಷಕರ ಅನುಮತಿಯನ್ನು ಪಡೆದು, ಈ ಕಷ್ಟಕರವಾದ ಕ್ಷಾಮಕ್ಕೆ ಸಿಕ್ಕಿ ಸಂಕಟಪಡುತ್ತಿರುವ ಹೆಂಗಸರು ಮಕ್ಕಳಿಗೆ ನಮ್ಮಿಂದಾದಷ್ಟು ಮಟ್ಟಿಗೂ ಧನಧಾನ್ಯಗಳ ರೂಪವಾಗಿ ಸಹಾಯಮಾಡುವದು ನಮ್ಮ ಕರ್ತವ್ಯವಾಗಿದೆ. ನಮ್ಮಗಳ ಶಕ್ತ್ಯಾನುಸಾರ ನಮ್ಮ ಸಹೋದರಿಯರಿಗೆ ಸಹಾಯ ಮಾಡಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಈ ಕಾರ್ಯವು ನಮ್ಮೆಲ್ಲರ ಮೇಲೆ ಬಿದ್ದ ಭಾರವೂ ನಮ್ಮ ಹಂಗೂ ಆಗಿದೆ ಈ ವಿಚಾರವಾಗಿ ಮತ್ತೊಂದು ವೇಳೆ ಕೂಟ ನಡಿಸುವದು ನಿಮ್ಮೆಲ್ಲರಿಗೆ ಯುಕ್ತವಾಗಿ ತೋರಿದಲ್ಲಿ "ಮುಂದೊಂದು ಕೂಟ ನಡಿಸೋಣ ಎಂಬಿತ್ಯಾದಿ ರೀತಿಯಲ್ಲಿ ಉಪನ್ಯಾಸ ಮಾಡಿದರು

ಆ ಮೇಲೆ ಆಗಲೇ ಅನೇಕರು ಚಂದಾ ಹಣ ಕೊಟ್ಟರು ಮಾರನೇ ದಿನ ನೋಡಿದರೆ ವಸೂಲಾದದ್ದು ಸುಮಾರು ೫೦ ರೂಪಾಯಿಗೆ ಮೀರಿತ್ತು ಇನ್ನು ಬಹುಮಂದಿ ಕೊಡುವುದಾಗಿ ವಾಗ್ದಾನಮಾಡಿರುತ್ತಾರೆ. ಈ ವಿಚಾರವಾಗಿ ಸ್ತ್ರೀಯರೆಲ್ಲರೂ ಆಸಕ್ತಿ ತೋರಿಸಿ ಮುಂದೊಂದು ಕೂಟವನ್ನು ನಡಿಸಬೇಕೆಂದು ಕೇಳಿಕೊಂಡರು. ಸರ್ವಶಕ್ತನಾದ ಭಗವಂತನು ಈ ನಾರೀಮಣಿಯರಲ್ಲಿ ಹುಟ್ಟಿಸಿರುವ ಉದಾರಗುಣಕ್ಕಾಗಿ ಸರ್ವರೂ ಸಂತೋಷಪಡುವರು, ಭಗವಂತನು ಈ ಕೂಟಗಳನ್ನು ಆಶೀರ್ವದಿಸಿ, ಬಡವರಿಗೆ ಸಹಾಯಮಾಡಿಸಲೆಂಬುವದೇ ನಮ್ಮ ಕೋರಿಕೆಯಾಗಿದೆ ಈ ಕಾರ್ಯವು ದೇವರು ಮೆಚ್ಚುವ ಕಾರ್ಯವೆನ್ನುವದಕ್ಕೆ ಲೇಶವೂ ಸಂದೇಹವಿಲ್ಲ ಈ ಕಾರ್ಯದಲ್ಲಿ ಮುಂದಾಳುಗಳಾಗಿ ನಿಂತು ಈ ಪರೋಪಕಾರ್ಯಕ್ಕಾಗಿ ಶ್ರಮಪಡುತ್ತಿರುವ ಮಾತೃಶ್ರೀ ಅಲಮೇಲಮ್ಮನವರನ್ನೂ ಈ ಸಂಘಕ್ಕೆ ಸೇರಿ ಸಹಾಯಮಾಡುತ್ತಿರುವ ನಾರೀಮಣಿಯರನ್ನೂ ಪ್ರಜೆಗಳು ಕೊಂಡಾಡುತ್ತಿದ್ದಾರೆ

ಪ್ರಜಾ ಹಿತಚಿಂತಕ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಅಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್

ಕರೆಸ್ಪಾಂಡೆನ್ಸ್.

ಕಾಡಾನೆಗಳಿಂದ ರೈತರು ನಷ್ಟಪಟ್ಟದ್ದು.

ಅಯ್ಯಾ,

ನಗರ ಡಿವಿಷನ ತಾಲ್ಲೂಕು ಕೇಬಿನ ಜೊಸಕೋಟೆ ಹೋಬಳಿ ಹೊಸಹಳ್ಳಿ ಗ್ರಾಮದಲ್ಲಿ ಕಳೆದ ೨೭ನೇ ತಾರೀಖು ಭಾನುವಾರ ರಾತ್ರಿ ಏಳು ಆನೆಗಳು ಬಂದು ಭತ್ತದ ಗದ್ದೆಯಲ್ಲಿ ಬಿದ್ದು ಪೈರನ್ನು ತಿಂದು ತುಳಿದು ಕೂಗಾಡಿದವು ಆ ಕೂಗನ್ನು ಊರಿನ ಜನರು ತಿಳಿದು ಹೊಂತ ತಮಟೆ ಕಹಳೆ ಸಹಾ ತೆಗೆದುಕೊಂಡು ಎಲ್ಲಾ ಜನರೂ ಕೂಗಾಡಿಕೊಂಡು ಹೋದಾಗ ಆನೆಗಳು ಓಡಿಹೋದವು ಈ ಒಂದೇ ರಾತ್ರಿಯಲ್ಲಿ ಪಟೇಲ್ ಹನುಮೇಗೌಡನಿಗೆ ೫ ಖಂಡುಗ, ಅಂದರೆ ೨೦೦ ಸೇರು. ಬಿ ಅಪ್ಪಾಜಿಗೌಡರಿಗೆ ೫ ಸೇರು. ಬಳಗತ್ತಿ ಗೋವಿಂದೇಗೌಡರಿಗೆ ೪ ಸೇರು. ತೊಟ್ಟಿ ರಂಗೇಗೌಡರಿಗೆ ೩ ಸೇರು, ಪೋಲೀಸ್ ಪಟೇಲ್ ದೊಡ್ಡತಮ್ಮೇಗೌಡರಿಗೆ ೧ ಸೇರು, ವ್ಯಾಕರ ಸಿದ್ದಣ್ಣನಿಗೆ ೨ ಸೇರು, ಮಾರೇಗೌಡರಿಗೆ ೫ ಸೇರು, ವೆಂಕಟಾಚಾರಿಗೆ ೧ ಸೇರು. ಕುಳವಾಡಿ ಬಸವನಿಗೆ ೧ ಸೇರು. ಈ ರೀತಿ ನಷ್ಟಮಾಡಿರುತ್ತವೆ ಅವುಗಳನ್ನು ಗುಂಡಿನಿಂದ ಹೊಡೆಯುವುದಕ್ಕೆ ಅಪ್ಪಣೆ ಇಲ್ಲ ಈಗ್ಗೆ ೨ ವರುಷದಲ್ಲಿ ತಾಲ್ಲೋಕಿನಿಂದ ಇಸ್ತಿಹಾರು ಕೊಟ್ಟು ಇರುವದೇನೆಂದರೆ—ಆನೆಗಳನ್ನು ಕೊಲ್ಲಕೂಡದು ಬೆಳಕು ಕಹಳೆ ತಮಟೆಯಿಂದ ಗದ್ದಲಮಾಡಿ ಓಡಿಸಬೇಕೆಂದು ಕಾಗನೂರು, ಯೆಮ್ಮಿಗೆ, ಸುಳಗೋಡು, ಕಕ್ಕಳ್ಳಿ, ಹೊಸಳ್ಳಿಯ ರೈತರಿಂದ ಮುಚ್ಚಳಿಕೆಗೆ ರುಜುಮಾಡಿಸಿದ್ದಾರೆ ಹೀಗಾದರೆ ರೈತರು ಬದುಕುವದೂ, ಸರಕಾರದ ಕಂದಾಯ ಕೊಡುವದೂ ಹ್ಯಾಗೆ ಎಂದು ಬಡರೈತರು ಗೋಳಾಡುತ್ತಾರೆ ಹೆಚ್ಚು ಕಡಮೆ ಈಗಿನ ಧಾರಣೆಯ ಮೇಲೆ ೩೭೦ ರೂಪಾಯಿನ ಫಸಲನ್ನು ಆನೆಗಳು ಒಂದೇ ರಾತ್ರಿಯಲ್ಲಿ ನಷ್ಟಮಾಡಿವೆ

ಪಿ ಎ ಎನ್

ಚಿಂತಾಮಣಿಯಲ್ಲಿ ಕಾಲಸ್ಥಿತಿಯು.

ಅಯ್ಯಾ,

ಈ ಮಧ್ಯೆ ಪ್ರತಿನಿತ್ಯವೂ ಉದಯದಿಂದ ಸಂಜೆಯ ವರೆಗೂ ಮೋಡಗಳು ಕವಿದಿರುತ್ತ ರಾತ್ರಿಯಲ್ಲಿ ಆಕಾಶವೆಲ್ಲಾ ನಿರ್ಮಲವಾಗಿ ಜ್ಯೋತಿಗಳಿಂದ ಪ್ರಜ್ವಲಿಸುತ್ತಿರುವದು. ಬಡರೈತರು ಹೊಲದ ಪೈರನ್ನು ಬೇರೊಂದಿಗೆ ಕಿತ್ತು ದನಗಳಿಗೆ ಹಾಕಿ, ಉದರ ಪೋಷಣೆಗಾಗಿ ಮಾರಲಿಕ್ಕೂ ತರುತ್ತಿದ್ದಾರೆ. ಅವರನ್ನು ನೋಡಿದರೆ ಹೊಟ್ಟೆ ಬೆನ್ನಿಗೆ ಹತ್ತಿರುವದು, ಮುಖ ಬಾಡಿ ಕಪ್ಪಾಗಿರುವದು ; ಅವರ ಧೈರ್ಯ ಸಂಪೂರ್ಣ ಕುಂದಿರುವದು. ಯಾವ ಹಳ್ಳಿಯಲ್ಲಿ ನೋಡಿದರೂ ಬಡವರ ಗೋಳು ಕೇಳಿ ನೋಡಲಿಕ್ಕಾಗದು. ಕತ್ತಾಳೆ ತಿಂದು ಕೆಲವೆಡೆಗಳಲ್ಲಿ ರಕ್ತಭೇದಿಯಿಂದ ಸಾಯುತ್ತಿದ್ದಾರೆಂದು ಪುಕಾರಿದೆ. ಅನೇಕ ಸಂಸಾರಗಳು ನಾನಾ ಕಡೆಗಳಿಗೆ ಚದರಿಹೋಗುತ್ತಿದ್ದಾರಂತೆ. ಮುಸಲ್ಮಾನರ ಹೆಂಗಸರು ಘೋಷಾ ಬಿಟ್ಟು ಪೇಟೆಯಲ್ಲಿ ಮನೆಮನೆಗೆ ಅಲೆಯುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಸಬ್ ಡಿವಿಜನ್ ಆಫೀಸರಾದ ಮೆ॥ ಹಂಬಾಪುನಿಸ್ಸ್ ಸಾಹೇಬರವರು ಇಲ್ಲಿಗೆ ದಯಮಾಡಿ ತಾಲ್ಲೂಕಿನ ಸ್ಥಿತಿಯನ್ನು ಖುದ್ದು ಆಜಮಾಯಿಷಿಯಿಂದ ತಿಳಿದುಕೊಂಡು ಹೊರಟುಹೋದರು ಫಲಿತಾಂಶ ಮುಂದೆ ಗೊತ್ತಾಗಬೇಕಾಗಿದೆ. ಕಾಲ, ಸ್ಥಳ ಸ್ಥಿತಿಗಳನ್ನು ನೋಡಿದರೆ ಭಯಂಕರವಾಗಿದೆ. ದಯಾಳು ಗವರ್ನ್‌ಮೆಂಟಿನವರು ಮುಂಜಾಗ್ರತೆ ಮಾಡಿ, ಅವಶ್ಯವಾದ ಎಲ್ಲಾ ಸ್ಥಳಗಳಲ್ಲಿ ಮುಖ್ಯವಾಗಿ ಕೋಲಾರ ಡಿಸ್ಟ್ರಿಕ್ಟಿನ ಕೆಲಭಾಗಗಳಲ್ಲಿ ರಿಲೀಫ್ ಕಾಮಗಾರಿಗಳನ್ನು ಏರ್ಪಡಿಸಿ, ಜೀವನಕ್ಕೆ ಮಾರ್ಗ ಮಾಡದೇ ಹೋದರೆ ಪ್ರಜೆಗಳಲ್ಲಿ ಬಹು ಭಾಗದವರು ನಷ್ಟಕ್ಕೆ ಸಿಕ್ಕಿಬೀಳುವರು ; ಇಲ್ಲವೇ, ಕತ್ತಾಳೆ ತಿಂದು, ಹೊಂಡದ ನೀರು ಕುಡಿದು ಸ್ವಾಭಾವಿಕವಾದ ಎಳೆಬಿಸಲು ಕಾದುಕೊಂಡು ದೇಹದ ಆರೋಗ್ಯವನ್ನು ಕೆಡಿಸಿಕೊಳ್ಳುವರು. ನಾನಾ ರೋಗಗಳಲ್ಲಿ ಬೀಳುವರು ಅನಂತರ ಗೌರ್ನಮೆಂಟಿನವರು ರಿಲೀಫ್ ಕಾಮಗಾರಿ ಶುರುಮಾಡಿದರೆ ಕೆಲಸಮಾಡಲಿಕ್ಕೆ ಶಕ್ತಿಯಿಲ್ಲದ ನಾನಾ ರೋಗಿಗಳು ಬರುವರು ಆಗ್ಗೆ ವ್ಯವಸ್ಥೆ ಏರ್ಪಡಿಸಬೇಕಾಗುವದು ಅನ್ನಸತ್ರ ನಿರ್ಮಿಸಬೇಕಾಗುವದು. ಈ ಅನ್ನ ತಿಂದರೆ ಭೇದಿಗಳೂ, ರಕ್ತಭೇದಿಗಳೂ, ಜಲೋದರವೂ ಪ್ರಾಪ್ತಿಸಿ ಪ್ರಜಾ ಲಯಕ್ಕೆ ಕಾರಣವಾಗುವದು. ಹೀಗೆಯೇ ಹಿಂದಿನ ಕಷ್ಟರಗಳಲ್ಲಿ ಮುಂಜಾಗ್ರತೆಮಾಡದೆ ಸ್ವಲ್ಪ ಆಲಸ್ಯಮಾಡಿದ್ದರಿಂದ ನಮ್ಮ ಮೈಸೂರು ಪ್ರಜೆಗಳಲ್ಲಿ ಲಕ್ಷಾನುಲಕ್ಷ ಪ್ರಜೆಗಳು ಲಯವಾದದ್ದೂ, ಗಾಳಿ ಬೀಸಿದಾಗ್ಗೆ ಅತ್ತಿಹಣ್ಣುಗಳು ಉದುರುವಂತೆ ಎಲ್ಲಿ ನೋಡಿದರೂ ಹೆಣಮಯವಾಗಿದ್ದದ್ದೂ, ಒಂದೊಂದು ಹಳ್ಳದಲ್ಲಿ ೮—೧೦ ಹೆಣಗಳನ್ನು ಎಸೆಯುತ್ತಿದ್ದದ್ದೂ ಎಲ್ಲರಿಗೂ ಅನುಭವಸಿದ್ಧವಾಗಿದೆ ಹಾಗಿಲ್ಲದರೆ ಈ ಕ್ಷಾಮವು ಕಠಿಣತರವಾಗಲೇ ತಕ್ಕ ಮುಂಜಾಗ್ರತೆಯ ಕೆಲಸಗಳನ್ನು ಮಾಡದೆ ಆಲಸ್ಯಮಾಡಿದಲ್ಲಿ ಅಂಥಾ ಭಯಂಕರಸ್ಥಿತಿಗೆ ಪ್ರಜೆಗಳು ಸಿಕ್ಕಿಕೊಂಡು ಲಯವಾಗುವರಲ್ಲಾ ಎಂದು ಅನುಭವಿಗಳು ಭೀತಿಪಡುತ್ತಿದ್ದಾರೆ. ಆದರೆ ನಮ್ಮ ದಯಾಳುಗಳಾದ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರರವರು ಪ್ರಜಾನುರಾಗಿಗಳಾಗಿ ಮಕ್ಕಳಂತೆ ತಮ್ಮ ಪ್ರಜೆಗಳನ್ನು ಪಾಲನೆಮಾಡುತ್ತಿರುವದರಿಂದ ಈ ಕಷ್ಟಕಾಲದಲ್ಲಿ ಅವಶ್ಯವಾದ ಭಾಗಗಳಲ್ಲಿ ತಕ್ಕ ಏರ್ಪಾಟುಮಾಡಿ ಪ್ರಜೆಗಳನ್ನು ಕಾಪಾಡುವರೆಂದು ಹೇಳಬೇಕಾದದ್ದಿಲ್ಲ

ಪ್ರಜಾ ಹಿತಚಿಂತಕ.

ತಾಲ್ಲೋಕು ವರ್ತಮಾನಗಳು.

ಬೇಲೂರು ತಾ॥ ಬೇವಾಡಿ.—ಶ್ರೀಮನ್ ಮಹಾರಾಜಾ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದೂರವರ ದಿವ್ಯಸವಾರಿಯು ತಾ. ೨೦ನೇ ಮಧ್ಯಾಹ್ನ ೫ ಘಂಟೆಗೆ ಬೇಲೂರು ತಾಲ್ಲೂಕು ಹಳೇಬೀಡಿನಿಂದ ಬಾಣಾವರಕ್ಕೆ ಚಿತ್ತೈಸುವಲ್ಲಿ ಮಧ್ಯಮಾರ್ಗವಾದ ಶ್ರೀ ಶೃಂಗೇರಿ ಸರ್ವ ಇನಾಂ ಬೇವಾಡಿ ಮಾಗಣೆಗೆ ಸೇರಿದ ಕೋಡಿಗೇನಹಳ್ಳಿ ಗ್ರಾಮಕ್ಕೆ ಸಮೀಪದಲ್ಲಿರುವ ಉಕ್ಕಡದ ಹತ್ತಿರ ಬೇವಾಡಿ ಮಾಗಣೆ ಸ್ಥಳದ ಅಧಿಕಾರಿಗಳಿಂದ ಹಾಕಿಸಲ್ಪಟ್ಟಿದ್ದ ಶೋಭಾಯಮಾನವಾದ ಮಂಟಪದಲ್ಲಿ ಶ್ರೀಮನ್ ಮಹಾರಾಜರವರು ವೈದಿಕ ಮಹಾಜನಗಳಿಂದ ಒಪ್ಪಿಸಲ್ಪಟ್ಟ ಫಲಮಂತ್ರಾಕ್ಷತೆಯನ್ನೂ, ದೇವರುಗಳ ಪ್ರಸಾದವನ್ನೂ ಸ್ವೀಕರಿಸಿ, ನೌಕರರುಗಳಿಂದ ಒಪ್ಪಿಸಲ್ಪಟ್ಟ ನಜರುಗಳನ್ನೂ ಸ್ವೀಕರಿಸಿ, ಅಲ್ಲಿ ಸೇರಿದ್ದ ಎರಡು ಸಹಸ್ರ ಪ್ರಜೆಗಳಿಗೆ ಸಂದರ್ಶನವನ್ನು ಪ್ರಭುಗಳವರು ದಯಪಾಲಿಸಿ, ಮುಂದಕ್ಕೆ ಸವಾರಿ ಮೋಟಾರ್ ಗಾಡಿಯಲ್ಲಿ ಚಿತ್ತೈಸಿದರು ಈ ಮಂಟಪಕ್ಕೆ ಒಂದು ಪರ್ಲಾಂಗು ಹಿಂದೆ ಕೋಡಿಗೇನಹಳ್ಳಿ ಬೂದಿಹಾಳ್ ಜೋಡಿದಾರ ಪಟೇಲ್ ರಾಮಭಟ್ಟರು ಮತ್ತು ಶಾನುಭೋಗ ಕೃಷ್ಣಪ್ಪನವರು ಮುಂತಾದ ಜೋಡಿದಾರರುಗಳಿಂದ ಅಲಂಕರಿಸಲ್ಪಟ್ಟ ಚಪ್ಪರದಲ್ಲಿ ಚಿಕ್ಕಮಗಳೂರು ತಾಲ್ಲೋಕು ಅಮಲ್ದಾರ್ ಮೆ॥ ಚಕ್ರಪಾಣಿ ಐಯ್ಯಂಗಾರ್ರು, ಪೊ॥ ಇ॥ ಮೆ ವಾಸುದೇವರಾಯರು, ರಿಜರ್ವ್ ಪೋಲೀಸಿನವರು ಸಹ ಪ್ರಭುಗಳ ಸಂದರ್ಶನವನ್ನು ಆದಷ್ಟು ಸಿಂಗರಿಸಿ ಒಪ್ಪಿಸಿ ಮುಜರೆ ಮಾಡಿದರು

ಚಿಕ್ಕನಾಯಕನಗರ.—ಈ ಕಡೆ ಆನೆಗಳ ಹಾವಳಿ ಜೋರಾಗಿರಲು ಅವುಗಳನ್ನು ಹಿಡಿಯುವ ಉದ್ದೇಶ್ಯ ಸರ್ಕಾರದವರು ಭಾರಿ ಕೊಪ್ಪಗಳನ್ನು ತೋಡಿಸಿರುವರು ಕಳೆದ ವಾರ ಇಂಥ ಕೊಪ್ಪಕ್ಕೆ ೪ ಆನೆಗಳು ಬಿದ್ದವು ಆ ಆನೆಗಳನ್ನು ಈಚೆಗೆ ಇತರ ಆನೆಗಳ ಮೂಲಕ ಎಳೆಸಿ ಕಟ್ಟಿಹಾಕುವದಕ್ಕೆ ನಮ್ಮ ಫಾರೆಸ್ಟ್ ರೇಂಜರ್ ಮಹಮ್ಮದ್ ಪೀರ್ ಸಾಬರು ಹತ್ತಿರ ನಿಂತು ಸಲಹೆಗಳನ್ನು ಹೇಳಿಕೊಡುತ್ತಿದ್ದಾಗ ಒಂದು ಹೊಸ ಆನೆಯು ಇವರನ್ನು ತನ್ನ ಸೊಂಡಿಲಿನಿಂದ ಹಿಡಿದೆಳೆಯಿತು ದೈವವಶಾತ್ ರೇಂಜರ ಅಂಗಿಯು ಆನೆಯ ಸೊಂಡಿಲಿಗೆ ಸಿಕ್ಕಿ ಅದರ ಎಳೆತಕ್ಕೆ ಹರಿದು ಹೋಗಿ. ರೇಂಜರು ತಪ್ಪಿಸಿಕೊಳ್ಳುವುದರೊಳಗಾಗಿ ಕುಂಕಿ ಆನೆಗಳು ಬಂದು ಅವರನ್ನು ಬಿಡಿಸಿಕೊಂಡವು.—ಕಳೆದ ವಾರ ಒಬ್ಬ ಗಾಣಿಗರ ಹುಡುಗಿಯು ಚೇಳು ಕಡಿತದಿಂದ ಸತ್ತುಹೋದಳು. ಚೇಳು ಕಡಿದು ಸತ್ತದ್ದು ಈ ಊರಿಗೆ ಇದೇ ಮೊದಲು—ಕಳೆದ ವಾರ ಈ ಊರಿನ ಕೋಟೆಬಳ್ಳಿ ಗ್ರಾಮದಲ್ಲಿರುವ ತಿಪ್ಪಾಚಾರರ ಮಾದಯ್ಯನೆಂಬುವನ ಮನೆಗೆ ಕಳ್ಳರು ಬಿದ್ದು ಸುಮಾರು ೫೦೦—೬೦೦ ರೂಪಾಯಿನ ಮಾಲುಗಳನ್ನು ಕದ್ದುಕೊಂಡು ಪರಾರಿಯಾದರು ಪೊ॥ ಇನ್‌ಸ್ಪೆಕ್ಟರು ಅಲ್ಲಿ ಹೋಗಿ ತನಿಖೆಯಿಂದ ನಾಲ್ವರನ್ನು ಹಿಡಿದುಕೊಂಡು ಬಂದಿರುತ್ತಾರೆ.—ಈ ವಾರ ಎಲ್ಲಾ ದಿನಸಿಗಳೂ ಬಜಾರಿನಲ್ಲಿ ಬಹು ತಗ್ಗಾಗಿ ಮಾರಲ್ಪಡುತ್ತವೆ ಬಡವರು ಹೊಟ್ಟೆಗಿಲ್ಲದೆ ತುಂಬಾ ಪ್ರಯಾಸಪಡುತ್ತಿರುವರು. ಹಾಗಿ ರೂಪಾಯಿಗೆ ೧೦—೧೧ ಸೇರೂ ಜೋಳ ೮—೯ ಸೇರೂ, ಅಕ್ಕಿ ೫ ಸೇರೂ ಮಾರಲ್ಪಡುತ್ತಿರುವುದಲ್ಲದೆ, ಇತರ ಆಹಾರ ದಿನಸುಗಳೂ ಅತಿ ತಗ್ಗಾಗಿವೆ. ಇನ್ನಾದರೂ ಸ್ಥಳಾಧಿಕಾರಿಗಳು ಬಡವರ ವಿಚಾರದಲ್ಲಿ ಯಾವ ವಿಧವಾದ ಏರ್ಪಾಡನ್ನೂ ಇನ್ನೂ ಮಾಡದೆ ಇರುತ್ತಾರೆ.—ಈಗಿನ ಹೊಸ ಪೋಲೀಸ್ ಇನ್‌ಸ್ಪೆಕ್ಟರ್ ಮೆ॥ ಸೈಯದ್ ಮಾಸುಂರವರ ಏರ್ಪಾಡಿನಿಂದ ರಾತ್ರಿ ಗಸ್ತು ಗ್ರಾಮಗಸ್ತು ಚನ್ನಾಗಿ ನಡೆಯುತ್ತಿರುವುದು ಟೌನ್‌ನಲ್ಲಿ ಯಾವ ವಿಧವಾದ ಪುಕಾರಾಗಲಿ, ತೊಂದರೆಯಾಗಲಿ ಕಂಡುಬರುತ್ತಿಲ್ಲ. ರಾತ್ರಿ ಹೊತ್ತು ಇನ್‌ಸ್ಪೆಕ್ಟರೇ ಗಸ್ತುಹೊರಡುವುದರಿಂದ ಇತರರಿಗೆ ಭೀತಿಯೂ, ಶ್ರದ್ಧೆಯೂ ಹೆಚ್ಚಿ ತೃಪ್ತಿಕರವಾಗಿ ಕೆಲಸ ನಡೆಯುವುದು

ನಾಗಮಂಗಲದ ತಾ॥ ಬೆಳ್ಳೂರು.—ಈ ಪ್ರಾಂತ್ಯ ಮಳೆ ಬೆಳೆ ಇಲ್ಲದೆ ಕ್ಷಾಮವು ಸಂಪೂರ್ಣವಾಗಿ ಬೆಳೆದೋದಿದೆ. ಕೆರೆಗಳಿಗೆ ಸುತರಾಂ ನೀರು ಬರಲಿಲ್ಲವಾಗಿ, ತರಿ ಫಸಲೆಂಬುವದೇ ಅಪೂರ್ವವಾಯಿತು. ಖುಷ್ಕಿ ಬೆಳೆಯು ೪ ಅಂಗುಲ ಎತ್ತರದ ವರೆಗೆ ಮಾತ್ರ ತೋರಿಸಿ, ಅನಂತರ ಭೂಮಿಯು ಕಡೆಗೆ ಇಳಿಯುತ್ತಲಿದೆ. ದನಕರುಗಳಿಗೆ ಮೇವೂ ನೀರೂ ಕೂಡ ಸುತರಾಂ ಸಿಕ್ಕದೆ ಇರೋಣದರಿಂದ ಅರ್ಧಪಾಲು ದನಗಳು ವಗ್ಗೈರೆ ಸ್ಥಳಗಳಲ್ಲಿರುವ ಕಸಾಬರ ಅಂಗಡಿಗಳಿಗೂ ಮತ್ತೆ ಕೆಲವು ಹೆಗ್ಗಡದೇವನಕೋಟೆ ಮುಂತಾದ ಕಡೆಗಳಲ್ಲಿರುವ ಫಾರೆಸ್ಟು

ಈಗಲೂ ದಿವಸ್ವಶಿಯಲ್ಲಿಯೂ ೧-೨ ಸಾವಿರಗಳಿಗೆ ಕಡಮೆ ಇಲ್ಲದೆ ಸಾಗುತ್ತಿವೆ. ಬಡವರುಗಳ ಗೋಳಂತೂ ಹೇಳಲಿಕ್ಕಸಾಧ್ಯವಾಗಿದೆ. ಅಕ್ಕಿ ರೂಪಾಯಿಗೆ ೫ ಸೇರು, ರಾಗಿ ಜೋಳ ಸಹ ೮-೯ ಸೇರುಗಳ ಮೇರೆಗೆ ಮಾರುತ್ತಲಿವೆ.—ಕ್ಷಾಮವನ್ನು ಹೊಂದಿದ ಹಜರತ್ ದಿವಾನ್ ಸಾಹೇಬ್ ಬಹದ್ದೂರರವರು ಈ ಪ್ರಾಂತ್ಯ ಸಂಭವಿಸಿರುವ ಕ್ಷಾಮದ ಸ್ಥಿತಿಯನ್ನು ಪರಾಂಬರಿಸಬೇಕೆಂದು ಇಲ್ಲಿಗೆ ೩ ಮೈಲಿ ದೂರದಲ್ಲಿರುವ ನಲ್ಲೀಗೆರೆ ಮೊಕ್ಕಾಮಿಗೆ ನೆನ್ನೆ ದಿನ ೧೧ ಘಂಟೆಗೆ ದಯಮಾಡಿಸಿದರು. ಸಾಯಂಕಾಲ ಹಾಜರಾಗಿದ್ದ ರೈತರುಗಳ ಅಹವಾಲನ್ನು ಕೇಳಿ, ಅವರುಗಳಿಗೆ ಸಂಭವಿಸಿರುವ ಕಷ್ಟನಿವಾರಣೆಗೆ ಸಧ್ಯದಲ್ಲೇ ರಿಲೀಫ್ ಕಾಮಗಾರಿಗಳನ್ನು ಪ್ರಾರಂಭಿಸುತ್ತೇನೆಂತಲೂ, ದನಕರುಗಳನ್ನು ಸರ್ಕಾರದ ಅಪ್ಪಣೆಯನು ಅಲ್ಲಲ್ಲಿರುವ ಅಮ್ರುತಮಹಲ್ ಕಾವಲಿನಲ್ಲಿ ಮೇಯಿಸಬಹುದೆಂತಲೂ ಹುಕುಂ ದಯಪಾಲಿಸಿದರು. ಇಲ್ಲಿರುವ ಸಣ್ಣ ವ್ಯಾಪಾರಿಗಳಲ್ಲಿ ಕೆಲವರು ಗ್ರಾಮದಿಂದ ಜೀವಿಸುವುದಕ್ಕೆ ಆಗುವುದಿಲ್ಲವೆಂತಲೂ, ಇದಕ್ಕಾಗಿ ತಮಗೆ ಬೆಂಗಳೂರು, ಕೋಲಾರ, ತುಮಕೂರು, ಕಡೂರು ಡಿಸ್ಟ್ರಿಕ್ಟುಗಳಲ್ಲಿ ಕೊಟ್ಟಿರುವಂತೆ ಧಾನ್ಯದ ಲೈಸೆನ್ಸು ಕೊಡಿಸಬೇಕೆಂತಲೂ ಕೇಳಿಕೊಂಡರು. ಅದಕ್ಕೆ ದಿವಾನ್ ಸಾಹೇಬರವರು ಕೆಲವು ದಿನರು ಡಿಸ್ಟ್ರಿಕ್ಟುಗಳಲ್ಲಿ ಕೊಟ್ಟಿರುವಂತೆ ಈ ಡಿಸ್ಟ್ರಿಕ್ಟಿನಲ್ಲಿಯೂ ಕ್ಷಾಮದ ಅಲೋವನ್ಸು ಕೊಡಿಸುವ ಹಾಗೆ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಹುಕುಂ ದಯಪಾಲಿಸುವದಾಗಿ ಅಪ್ಪಣೆ ಕೊಡಿಸಿ, ಮಾರನೇ ದಿನ ಬೆಳಿಗ್ಗೆ ಕುಣಿಗಲು ಪ್ರಾಂತ್ಯ ದಯಮಾಡಿಸಿದರು.

ತಲಕಾಡು.—ಕಳೆದ ವಾರ ೨೩ನೇ ತಾ ಸೋಮವಾರ ಅಮಾವಾಸ್ಯೆ ದಿವಸ ಸಮಾರಣ್ಯಕ್ಷೇತ್ರವಾದ ಈ ತಲಕಾಡಿನಲ್ಲಿ ಪಂಚಲಿಂಗದರ್ಶನವೆಂಬ ಜಾತ್ರೆಯು ನೆರವೇರಿತು. ಈ ಜಾತ್ರೆಯು ಅತಿ ಅಪೂರ್ವವಾಗಿ ಇಪ್ಪತ್ತು ಸಂವತ್ಸರ ಅಥವಾ ೮ ಸುವರ್ಷಗಳಿಗೆ ಒಂದು ದಫಾ ಒದಗತಕ್ಕದ್ದಾಗಿದೆ. ಈ ವಿಶೇಷವಾದ ಮಹೋತ್ಸವಕ್ಕೆ ಈ ದಫಾ ಸುಮಾರು ಒಂದು ಲಕ್ಷ ಪ್ರಜೆಗಳ ವರಿಗೂ ಯಾತ್ರಿಕರುಗಳು ಸೇರಿದ್ದರು. ಈ ಕ್ಷೇತ್ರದಲ್ಲಿ ಇರತಕ್ಕ ಪ್ರಸಿದ್ಧವಾದ ಗೋಕರ್ಣವೆಂಬ ಪುಷ್ಕರಣಿಯಲ್ಲಿ ಈ ದಿವಸಕ್ಕೆ ಪೂರ್ವರಾತ್ರಿ ೯ ಘಂಟೆ ಲಾಗಾಯಿತು ಈ ದಿವಸ ಸಾಯಂಕಾಲದ ವರೆಗೆ ಬಂದಿರತಕ್ಕ ಯಾತ್ರಾರ್ಥಿಗಳು ಸ್ನಾನಮಾಡಿ, ಪಂಚಲಿಂಗ ಸ್ವರೂಪನೆ ಮಹತ್ವ ಪಲ್ಲಿ ಸೇರಿರುವ ಸ್ವರೂಪನಗೂ ಕರ್ಣೇಶ್ವರ, ಚಾಮುಂಡಿ ಅಮ್ಮನವರು, ಪಾತಾಳೇಶ್ವರ, ಮರುಳೇಶ್ವರ, ಅರ್ಕೇಶ್ವರ, ಶ್ರೀ ಭ್ರಮರಾಂಬ ಸಮೇತರಾದ ದೇವರ ದರ್ಶನಗಳನ್ನು ಮಾಡಿ, ಪ್ರಸಿದ್ಧ ವಿಷ್ಣುದೇವರಾದ ಶ್ರೀ ಕೀರ್ತಿನಾರಾಯಣಸ್ವಾಮಿಯ ದರ್ಶನ ಸಹ ಮಾಡಿದರು.—ಈ ಜಾತ್ರೆಯು ಈ ತಲಕಾಡಿನಲ್ಲಿ ಸ್ವಲ್ಪವೂ ಸ್ಥಳವಿಲ್ಲ. ಪತಿ ಮನೆಯವರೂ ಹೆಚ್ಚಾಗಿ ಛತ್ರಿಗೆ ಮನೆಗಳನ್ನು ಕೊಟ್ಟುಕೊಂಡಿರುತ್ತಾರೆ. ಅನೇಕ ಮಿಠಾಯಿ ಅಂಗಡಿಗಳೂ, ಜವಳಿ ಅಂಗಡಿಗಳೂ, ಪಾತ್ರೆ ಅಂಗಡಿಗಳು ಮುಂತಾಗಿ ಎಲ್ಲಾ ಅಂಗಡಿಗಳೂ ಬಂದು ವ್ಯಾಪಾರಗಳು ಚೆನ್ನಾಗಿ ನಡೆಯುತ್ತಲಿವೆ.—ಈ ಜಾತ್ರೆಗೆ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು, ನಮ್ಮ ಡೆಪ್ಯುಟಿ ಕಮಿಷನರ್‌ರವರು, ಅನೇಕ ಮುಖ್ಯ ಅಧಿಕಾರಿಗಳು, ಸಬ್ ಡಿವಿಜನ್ ಆಫೀಸರು, ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರು, ಅಮಲ್ದಾರರು ಸಹಾ ದಯಮಾಡಿದ್ದರು. ಗೋಕರ್ಣದಲ್ಲಿ ಸ್ನಾನ ಮಾಡುವಾಗ ಜನಗಳ ಗಲಾಟೆ ಹೆಚ್ಚಾಗಿದ್ದದ್ದರಿಂದ ಪೋಲೀಸ್ ಬಂದೋಬಸ್ತನ್ನು ಇಟ್ಟಿದ್ದರು. ಇದರಿಂದ ಯಾವ ಅಪಾಯಕ್ಕೂ ಅವಕಾಶ ಆಗದೆ, ಎಲ್ಲಾ ಸುಖವಾಗಿ ನಡೆಯುವುದಕ್ಕೆ ಅನುಕೂಲವಾಯಿತು. ಅಮಲ್ದಾರ್ ಮಿ॥ ಎಚ್. ರಾಮರಾಯರು ಸಾಂಕ್ರಾಮಿಕ ರೋಗಗಳು ಬರತಕ್ಕ ಸ್ಥಳದಿಂದ ಜನಗಳು ಬಾರದಂತೆ ತಕ್ಕ ಏರ್ಪಾಡು ಮಾಡಿದ್ದರಿಂದ ಈ ಜಾತ್ರೆಯಲ್ಲಿ ಶ್ರೀ ಭಗವಂತನ ಕೃಪೆಯಿಂದ ಇದುವರೆಗೂ ಕ್ಷೇಮವಾಗಿ ಇರುವುದಕ್ಕೆ ಆನಂದಿಸುತ್ತೇವೆ.—ಈ ಜಾತ್ರೆಗೆ ವಿಶೇಷ ಮೂಡುಕೊಡುವರು ಬಂದಿದ್ದರು. ಅವರೆ ಮೂಡಾಟಕ್ಕೆ ಅವಕಾಶಕೊಡದೆ ಅಮಲ್ದಾರ್ರು ತಕ್ಕ ಬಂದೋಬಸ್ತು ಮಾಡಿದ್ದರು. ಈ ತಲಕಾಡಿನಲ್ಲಿರತಕ್ಕ ಪಾತಾಳೇಶ್ವರ, ಶ್ರೀ ಕೀರ್ತಿನಾರಾಯಣಸ್ವಾಮಿ ದೇವಸ್ಥಾನಗಳು ಮರಳಿನಲ್ಲಿ ತುಂಬಾ ಮುಚ್ಚಿಕೊಂಡು ಈ ವರೆ ದರ್ಶನಕ್ಕೆ ಆಗಿಲ್ಲದಾ ಮುಚ್ಚಿಹೋಗಿದ್ದದ್ದರಿಂದ ಸದರಿ ದೇವಸ್ಥಾನಗಳಲ್ಲಿದ್ದ ಮರಳನ್ನೆಲ್ಲಾ ಅಮಲ್ದಾರ್ರು ವಿಶೇಷ ಶ್ರದ್ಧೆಯಿಂದ ಹೋಗಿ ಚನ್ನಾಗಿ ತೆಗಿಸಿರುತ್ತಾರೆ. ಇದರ ದಾನ್ಯಾರ್ಥಿಗಳಿಗೆ ದೇವರ ಸೇವೆಯು ಬಹಳ ಚನ್ನಾಗಿ ಆಯಿತಲ್ಲದೆ, ಸ್ನಾನಕ್ಕೆ ಬೇಕೂ ಘಾಟ ಸಹಾ ಚನ್ನಾಗಿ ಪ್ರಾರಂಭಿಸುವಂತಾಯಿತು.—ಈ ಜಾತ್ರೆಗೆ ಬೆಂಗಳೂರು, ಮೈಸೂರು, ಮಂಡ್ಯ, ಮಳವಳ್ಳಿ ಸ್ಥಳಗಳಿಂದ ನಾಟಕದ ಕಂಪನಿಗಳು ಬಂದು ಪ್ರತಿ ದಿನವಲ್ಲೂ ನಾಟಕಗಳನ್ನು ಆಡುತ್ತಲಿದ್ದಾರೆ.

ಗುಬ್ಬಿ ತಾ॥ ಕೆಹ.—ತುಮಕೂರು ಡಿಸ್ಟ್ರಿಕ್ಟು ಗುಬ್ಬಿ ತಾಲ್ಲೂಕು ಕಡಬಕೆರೆ ಗ್ರಾಮ ಮತ್ತು ಆಸ್‌ಪಾಸ್ ಗ್ರಾಮಗಳ ರೈತರಿಗೆ ಉಂಟಾಗಿರುವ ಕ್ಷಾಮನಿವಾರಣಾರ್ಥವಾಗಿ ಗವರ್ನಮೆಂಟಿನವರ ಅಪ್ಪಣೆ ಪ್ರಕಾರ ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರು ನವೆಂಬರ್ ತಾ ೧೫ನೇ ಕಡ್ಲಿಗೆ ದಯಮಾಡಿಸಿ, ಪ್ರಜೆಗಳಿಂದ ಅಲಂಕರಿಸಲ್ಪಟ್ಟಿದ್ದ ಗ್ರಾಮ ಸಮೀಪದ ಚಪ್ಪರದಲ್ಲಿ ಕುಳಿತು ಗ್ರಾಮಾಧಿಕಾರಿಗಳು, ಯೂನಿಯನ್ ಮೆಂಬರುಗಳು, ಪಟೇಲ್ ಶ್ಯಾನುಭೋಗರು, ಅಮಲ್ದಾರ್ರು, ಬಂದೊದಗಿದ್ದ ಕ್ಷಾಮಬಾಧೆಯನ್ನು ಕೇಳುತ್ತಿರುವಲ್ಲಿ ಈ ಕ್ಷಾಮಬಾಧೆಯನ್ನು ಸಹಿಸಲು ಅಸಾಧ್ಯವಾಗಿರುವ ಅನೇಕ ಜನರ ಆರ್ತಸ್ವರವನ್ನೂ ಅವರುಗಳ ಅಹವಾಲನ್ನೂ ಚನ್ನಾಗಿ ವಿಚಾರಿಸಿ, ಅದನ್ನು ನಿವಾರಿಸಲು ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು ಅತ್ಯಂತ ಕನಿಕರದಿಂದ ಸದರಿ ಜನಗಳಿಗೆಲ್ಲಾ ಸಮಾಧಾನದ ಮಾತುಗಳನ್ನಾಡಿ ತತ್ಕಾಲಕ್ಕೆ ಪ್ರಯೋಜನವಾಗುವ ಹಾಗೆ ಸರ್ಕಾರದ ಗೌರ್ನಮೆಂಟಿನವರು ಮಾಡಬಹುದಾದ ಸಹಾಯ ನೀಡಲಾಗುವ ನಿರ್ಣಯವನ್ನುಂಟುಮಾಡಿದರು. ಇದಲ್ಲದೆ ಈ ಪ್ರಾಂತ್ಯದಲ್ಲಿ ಅನುಕೂಲಿಸುವಂತೆ ಮಾಡಿಸುವದಾಗಿಯೂ, ನಂತರ ಕೆರೆಗಳ ಕಾಮಗಾರಿಗಳು ಅಲ್ಲಲ್ಲಿ ಏರ್ಪಡಿಸುವದಾಗಿಯೂ ಭರವಸವನ್ನು ಕೊಟ್ಟು, ಈ ವಿಷಯವನ್ನು ಈ ಸುತ್ತಮುತ್ತಲಿರುವ ಎಲ್ಲಾ ಪಟೇಲರಿಗೂ ಪ್ರಜೆಗಳಿಗೂ ತಿಳಿಸುವಂತೆ ಅಪ್ಪಣೆಕೊಡಿಸಿದರು. ಮಿ॥ ಕೆ. ರಾಮಾನುಜಯ್ಯಂಗಾರ್ರು ಉಪನ್ಯಾಸ ಮೂಲಕ ಎಲ್ಲರಿಗೂ ತಿಳಿಸಿ, ಬಡ ಸಾಬರಿಯನ್ನು ಸ್ವಲ್ಪ ಸಮಾಧಾನ ಪಡಿಸಿದರು. ಮಾರನೆ ದಿನ ತಳಬದ ಕೆರೆಗಳ ಅರಂಬಗಳ ಸ್ಥಿತಿಯನ್ನೂ ಯೂನಿಯನ್‌ನಲ್ಲಿ ಆಗಬೇಕಾದ ಕಾಮಗಾರಿಗಳನ್ನೂ ಪರಾಂಬರಿಸಿ, ಗೌರ್ನಮೆಂಟಿಗೆ ದಯಮಾಡಿಸಿ ನೋಡಿ ಕಡಬ ಮಿಡಲ್ ಸ್ಕೂಲ್ ಪರಾಂಬರಿಸಿ, ಪೇಟೆಗೆ ದಯಮಾಡಿ, ವರ್ತಕರನ್ನು ಕಂಡು—ಸ್ವಲ್ಪ ಈ ಕ್ಷಾಮಕಾಲದಲ್ಲಿ ಬಡವರಾದ ಪ್ರಜೆಗಳನ್ನು ಕಾಪಾಡಲು ಸ್ವಲ್ಪ ಲಾಭವನ್ನು ಹಾಕದೆ, ದಿನಸಿಗಳನ್ನು ಅಗ್ಗವಾಗಿರುವ ಕಡೆಗಳಿಂದ ತರಿಸಿ, ಸ್ವಲ್ಪ ಲಾಭವನ್ನು ತೆಗೆದುಕೊಂಡು ಗಿರಾಕಿ ಒದಗಿಸಕೊಟ್ಟು ಪ್ರಜೆಗಳನ್ನು ಕಾಪಾಡಿಕೊಂಡರೆ ಅದೇ ಪ್ರಜೆಗಳಿಂದ ಹೆಚ್ಚು ಲಾಭವನ್ನು ಮುಂದೆ ಸಂಪಾದಿಸಬಹುದೆಂದು ಬುದ್ಧಿವಾದವನ್ನು ಅಪ್ಪಣೆಕೊಡಿಸಿ, ಭೋಜನೋತ್ತರ ಪಟ್ಟಣಕ್ಕೆ ದಯಮಾಡಿಸಿದರು.—ಇದೇ ಕ್ಷಾಮನಿವಾರಣೆ ಬಗ್ಗೆ ತಾ. ೨೫ನೇ ಬುಧವಾರ ಬೆಳಿಗ್ಗೆ ೮ ಘಂಟೆಗೆ ಕನಕನಹಳ್ಳಿಗೆ ದಿವಾನ್ ಮ॥ ವಿ. ಪಿ. ಮಾಧವರಾಯರವರು ಸೆಕ್ರಿಟರಿಗಳೂ, ಮೆ॥ ರಾಮಲಿಂಗರೆಡ್ಡಿಯವರೂ, ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರೂ ಮೋಟಾರ್ ಗಾಡಿಯಲ್ಲಿ ಗ್ರಾಮದ ಸಮೀಪದಲ್ಲಿ ಸಿರಾ ಮೈಸೂರು ರಸ್ತೆ ಬಳಿ ಹಾಕಿದ್ದ ಚಪ್ಪರಕ್ಕೆ ದಯಮಾಡಿಸಿ ಪ್ರಜೆಗಳಿಗೆ ಭೇಟಿಕೊಟ್ಟರು. ಪ್ರಜೆಗಳ ಪರವಾಗಿ ಮೆ॥ ರಾಮಾನುಜಯ್ಯಂಗಾರ್ರು ಅಡ್ರೆಸ್ಸನ್ನು ಓದಿ ಒಪ್ಪಿಸಿದರು. ದಿವಾನ್‌ರವರು ಪ್ರಜೆಗಳ ಅಹವಾಲನ್ನು ವಿಚಾರಿಸಿ, ಊರಿನ ಸ್ಥಿತಿಗತಿ ಪ್ರಜಾಸಂಖ್ಯೆ ಮುಂತಾದದ್ದನ್ನು ತಿಳಿದುಕೊಂಡು, ಮೆ॥ ರಾಮಾನುಜಯ್ಯಂಗಾರ್ರು ಓದಿದ ಅಡ್ರೆಸ್ಸಿಗೆ ಸದುತ್ತರವನ್ನು ದಯಪಾಲಿಸುವ ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರು ಮಾಡಿರುವ ಏರ್ಪಾಡನ್ನು ಜಾರಿಗೆ ತರುವ ಭರವಸೆಯನ್ನು ದಯಪಾಲಿಸಿ, ಅದೇ ರೋಡಿನಲ್ಲಿ ನಾಯಕನಹಟ್ಟಿ ಮಾರ್ಗವಾಗಿ ಮುಂದಕ್ಕೆ ತೆರಳಿದರು.

ದಾವಣಗೆರೆ.—ಕಳೆದ ೨೫ನೇ ತಾ. ಸಾಯಂಕಾಲ ಮೈಸೂರ್ಕಿಯವರ ಮಠದಲ್ಲಿ ಇಲ್ಲಿನ ಮುನಿಸಿಪಲ್ ಮೆಂಬರು, ಸಾಹುಕಾರರು, ಲಾಯರುಗಳು, ಜಮೀನ್‌ದಾರರು ೩,೦೦೦ ಜನಗಳು ಸೇರಿ ಹೊಸದಾಗಿ ಜಾರಿಯಲ್ಲಿ ತರಬೇಕೆಂದಿರುವ ಮುನಿಸಿಪಲ್ ರೆಗ್ಯುಲೇಷನ್ ವಿಷಯದಲ್ಲಿ ಜನರಿಗೆ ಅನುಕೂಲವೋ ಅಥವಾ ಅನಾನುಕೂಲವೋ ಎಂಬುವದನ್ನು ಕುರಿತು ಮೆ॥ ಹೊಸೂರು ಸುಬ್ಬರಾಯರು ಎಲ್ಲಾ ಜನರು ತಿಳುಕೊಳ್ಳುವಂತೆ ಬಹು ಪರಿಸ್ಕಾರವಾಗಿಯೂ ನ್ಯಾಯವಾಗಿಯೂ ವಿವರಣೆ ಮಾಡಿದರು. ಈ ರೆಗ್ಯುಲೇಷನ್ ಬಂದು ಒಂದು ವರ್ಷವಾದಾಗ್ಯೂ ಇಷ್ಟು ನಾವು ಸುಮ್ಮನೇ ಇರುವದು ನಮ್ಮ ಬುದ್ಧಿಹೀನತೆಯೋ ಹೊತ್ತು ಬೇರೆ ಅಲ್ಲವೆಂತಲೂ, ಗೌರ್ನಮೆಂಟಿನವರು ಇದರ ವಿಷಯದಲ್ಲಿ ಪ್ರಜೆಗಳ ಅಭಿಪ್ರಾಯವೇನು ಎಂದು ಕೇಳಿದಾಗ್ಯೂ, ಇಲ್ಲಿನ ಮೆಂಬರುಗಳು ಅದರ ವಿಷಯದಲ್ಲಿ ಏನೊಂದೂ ಚಿಂತೆ ಇಲ್ಲದೆ ಇರುವದನ್ನು ನೋಡುವದಾದರೆ ತುಂಬಾ ಆಶ್ಚರ್ಯವಾಗಿದೆ ಎಂತಲೂ. ಈ ರೆಗ್ಯುಲೇಷನ್ ಈ ಊರಿಗೆ ಅನುಕೂಲವಿಲ್ಲವೆಂತಲೂ ತಕ್ಕ ದೃಷ್ಟಾಂತಗಳಿಂದ ತೋರಿಸಿದರು. ಅಂದರೆ, ಈ ಊರಿನಲ್ಲಿ ೩,೦೦೦ ಮನೆಗಳವೆ. ಅವುಗಳ ಪೈಕಿ ಸುಮಾರು ೫೦೦ ಮನೆಗಳು ವರ್ತಕರ ಮತ್ತು ನೌಕರರ ಮನೆಗಳು. ಬಾಕಿ ೧,೫೦೦ ಮನೆಗಳು ಬಡಾಯಿಸಿಂದಲೇ ಜೀವನಮಾಡತಕ್ಕವರು. ಮೇಲಿನ ರೆಗ್ಯುಲೇಷನ್ ಜಾರಿಗೆ ಬರುವದಾದರೆ ಬಡವರಿಗೂ ಮತ್ತು ಜಮೀನ್‌ದಾರರಿಗೂ ಎಷ್ಟೋ ತೊಂದರೆಯಾಗಿದೆ. ಆದ್ದರಿಂದ ಈಗಲಾದರೂ ನಾವು ಗೌರ್ನಮೆಂಟಿನವರಿಗೆ ನಮ್ಮ ತೊಂದರೆಗಳನ್ನು ಕುರಿತು ಅರಿಕೆಮಾಡಿಕೊಳ್ಳುವದು ಒಳ್ಳೇದೆಂದು ತಿಳಿಸಿದರು. ಆಗ ಅಲ್ಲಿದ್ದ ಎಲ್ಲಾ ಜನರೂ ಅದು ನ್ಯಾಯವಾಗಿದೆ ಎಂದು ಒಪ್ಪಿ, ಕೆಲವರನ್ನು ಚುನಾಯಿಸಬೇಕೆಂತಲೂ ಅವರು ಪ್ರಜೆಗಳ ಪರವಾಗಿ ನಮ್ಮ ಕಷ್ಟವನ್ನು ಗೌರ್ನಮೆಂಟಿನವರಿಗೆ ಅರಿಕೆಮಾಡಿಕೊಳ್ಳಬೇಕೆಂತಲೂ ತೀರ್ಮಾನವಾಡಿದರು. ಮಿ॥ ಸುಬ್ಬರಾಯರು ಜನಗಳಿಗೆ ನ್ಯಾಯವಾಗಿಯೂ ನಿರೋಧವಿಲ್ಲದಂತೆಯೂ ಉಪನ್ಯಾಸ ಮಾಡಿದ್ದಕ್ಕೋಸ್ಕರ ಪ್ರಜೆಗಳು ಅವರನ್ನು ಬಹಳವಾಗಿ ಕೊಂಡಾಡುತ್ತಿದ್ದಾರೆ.—ಕಳೆದ ವಾರದ ಪತ್ರಿಕೆಯಲ್ಲಿ ದಾವಣಗೆರೆಯ ಪಲ್ಲಾವು ಚಿಕ್ಕದೆಂದು ಅಂದರೆ ೧೦೦ ತೋಲಿಗೆ ಬದಲಾಗಿ ೯೫ ತೋಲು ಬರುತ್ತದೆಂದು ಒಬ್ಬ ಬಾತ್ಮೀದಾರರು ಬರೆದಿದ್ದಾರೆ. ಅದರೆ ಅಷ್ಟು ಕಮ್ಮಿ ಎಂದಿಗೂ ಬರುವದಿಲ್ಲ. ಬೇರೆ ಕಡೆಯ ವರ್ತಕರು ಈ ದಾವಣಗೆರೆಗೆ ಬಂದು ೧೦೦ ತೋಲಿಗೆ ಬದಲಾಗಿ ೯೫ ತೋಲನ್ನೇ ಚೀಲದಲ್ಲಿ ಹಾಕಿಸುತ್ತಾರೆಂದು ವರ್ತಮಾನ ಕೇಳಿದೆವು. ಆದ್ದರಿಂದ ಇನ್ನು ಮುಂದೆ ಕೊಳ್ಳತಕ್ಕವರು ತುಂಬಾ ಜಾಗ್ರತೆಯಿಂದ ತೆಗೆದುಕೊಳ್ಳಬೇಕು - ಧಾರಣೆಯು ಎಲ್ಲಾ ಕಡೆಯಲ್ಲಿಯೂ ಹೆಚ್ಚಾಗಿದೆಯೋ ಹಾಗೆಯೇ ಇಲ್ಲಿಯೂ ಇದ್ದರೂ ಗೌರ್ನಮೆಂಟ್ ನೌಕರರಿಗೆ ಎಲ್ಲಾ ಕಡೆಯಲ್ಲಿಯೂ ಅಲೋವನ್ಸ್ ಕೊಟ್ಟಿದ್ದಾಗ್ಯೂ ಈ ಡಿಸ್ಟ್ರಿಕ್ಟಿನವರಿಗೆ ಕೊಡದೆ ಇರುವದನ್ನು ನೋಡುವದಾದರೆ ತುಂಬಾ ಆಶ್ಚರ್ಯವಾಗಿದೆ. ನಮ್ಮ ಶ್ರೀಮನ್ ಮಹಾರಾಜರವರೂ ದಿವಾನ್ ಸಾಹೇಬರೂ ಇದರ ವಿಷಯದಲ್ಲಿಯೂ ದಯೆ ತೋರಿಸುವರೆಂದು ನಂಬುತ್ತೇವೆ. ಈ ಊರಿನಲ್ಲಿ ಅನೇಕ ಮಂದಿ ಐಶ್ವರ್ಯವಂತರು ಇದಾರೆ. ಅವರು ಸಹ ಬೆಂಗಳೂರಿನ ಮಹನೀಯರ ಮಾರ್ಗವನ್ನು ಅನುಸರಿಸಿ, ಈ ಕಾಲದಲ್ಲಿ ಬಡವರಿಗೆ ಉಪಕಾರಮಾಡಿ ಕೀರ್ತಿ ಪಡಕೊಳ್ಳುವರೆಂದು ನಂಬುತ್ತೇವೆ.

ಸಂತೆಬೆನ್ನೂರು.—ಇಲ್ಲಿ ಮಳೆ ಚನ್ನಾಗಿದೆ. ಜನಗಳಿಗೆ ಬಂದ ದೊಡ್ಡ ಚಾಡ್ಯ ಶಾಂತವಾಗಿರುತ್ತೆ. ಪೈರುಗಳೆಲ್ಲಾ ಅಂದರೆ ರಾಗಿ, ಜೋಳ, ಭತ್ತ, ಇವು ಅವರ್ಷದಕ್ಕಾಲುಪಾಲು ಕಟಾವು ಆಗಿರುತ್ತೆ. ಸಂತೆಯ ಪೈರು ಅಂದರೆ ತೊಗರಿ, ಅವರೆ, ಇವು ಸಾಧಾರಣ. ಅವರೆ ಈ ವರ್ಷ ಎಂದಿನಂತೆ ಫಸಲು ಆಗಬಹುದು. ಅನುಭವಸುಗ್ರಾಮಗಳಲ್ಲಿ ಶಾಲ್ಯಾಸಿ, ಎಳ್ಳು ಫಸಲು ಆಗಬಹುದು. ಆದರೆ ಪ್ರಜೆಗಳು ಬೀಜಗಳನ್ನು ಹಾಕಿ. ಕಡ್ಲೆ, ಗೋಧಿ, ಎಳ್ಳುಗಳು ಇವುಗಳನ್ನು ಬಿತ್ತಿದರೆ ಭೂಮಿಯಲ್ಲಿ ಹದವಿಲ್ಲದೆ ಇರುತ್ತೆ. ಆದ್ದರಿಂದ ಈ ವರ್ಷ ಕ್ಷಾಮ ತಲೆದೋರಿದಂತೆ ಕಾಣುತ್ತೆ. ಇಂಥ ಸುಗ್ಗಿ ಕಾಲದಲ್ಲಿ ಧಾರಣೆಗಳು ದಿನದಿನಕ್ಕೆ ಏರುವ ಸ್ಥಿತಿಯಲ್ಲಿರುತ್ತೆ. ಅಕ್ಕಿ ರೂಪಾಯಿಗೆ ೫॥-೬ ಸೇರು, ರಾಗಿ ೧೨ ಸೇರು, ಜೋಳ ೧೦-೧೧ ಸೇರು, ತೊಗರಿಬೇಳೆ ೫ ಸೇರು. ಈ ರೀತಿ ಇರುತ್ತೆ. ಇದರಿಂದ ಬಡಜನಗಳಿಗೆ ಜೀವನಮಾಡುವದು ಕಷ್ಟ. ಇದಲ್ಲದೆ ಸಂತೆ ಎಲ್ಲಿ ವರ್ತಕರು ಕಮ್ಮಿ ತೂಕದ ಕಾವುಗಳನ್ನು ಇಟ್ಟು ಮಾರುತ್ತಾರೆ. ಅದರೆ ಈಗ ಪ್ರೊಲೀಸಿನವರ ನಿಗಾ ಕಡಮೆ ಆಗಿ ಕಂಡೂ ಕಾಣದವರ ಹಾಗೆ ಇರುತ್ತಾರೆ. ಮೇಲಿನ ಆಫೀಸರ ದೃಷ್ಟಿಗೆ ಇನ್ನು ಬಿದ್ದಿಲ್ಲವಾಗಿ ತೋರುತ್ತೆ. ಅವರ ದೃಷ್ಟಿಗೆ ಬಿದ್ದರೆ ಇನ್ನು ಮೇಲೆ ಹೀಗೆ ಆಗಲಾರದೆಂದು ನಂಬಿದೇವೆ.—ಮುನಿಸಿಪಾಲಿಟಿ ಸ್ಥಿತಿ ಚನ್ನಾಗಿಲ್ಲ. ಊರಿನಲ್ಲಿರುವ ಕಚರಾ ಸರಿಯಾಗಿ ಹೋಗುವದಿಲ್ಲ. ಇದರಿಂದ ರೋಗವುಂಟಾಗುವದಕ್ಕೆ ಕಾರಣವಾಗಿರುತ್ತೆ. ಹೊಸದಾಗಿ ಬಂದಿರುವ ಮುತ್ಸದ್ದಿಯು ಸರಿಯಾಗಿ ನಿಗಾ ಕೊಡುವದಿಲ್ಲ. ಇನ್ನು ಮುಂದೆ ಹಾಗೆ ಮಾಡಲಾರರೆಂದು ನಂಬಿರುತ್ತೇವೆ.—ಇದೇ ನವೆಂಬರು ತಾ ೮ನೇ ಭಾನುವಾರ ೮ ಘಂಟೆಗೆ ಸಾಕಲು ಮಾರ್ಗವಾಗಿ ನಮ್ಮ ದಿವಾನ್ ಸಾಹೇಬರವರು ಮತ್ತು ಅವರ ಸೆಕ್ರೆಟರಿಯವರು, ಜನರಲ್ ಡಾಕ್ಟರವರು, ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು ಮೋಟಾರು ಬಂಡಿಯ ಮೇಲೆ ಈ ಸ್ಥಳಕ್ಕೆ ಬಂದು, ಮುಸಾಫರ್ ಬಂಗ್ಲೆ ಹತ್ತಿರ ಗ್ರಾಮಸ್ಥರು ಅಲಂಕರಿಸಿದ್ದ ಚಪ್ಪರಕ್ಕೆ ದಯಮಾಡಿಸಿದರು. ಆ ಮೇಲೆ ಅವರು ಊರಿಗೆ ಇರುವ ಪುರಾತನವಾದ ಸಾಳೆಗಾರರಿಂದ ನಿರ್ಮಿತವಾದಂಥ ಸರೋವರವನ್ನೂ, ಅಪ್ಪ ಸಮೀಪದಲ್ಲಿರುವ ಮತ್ತು ಮಧ್ಯೆ ಇರುವ ಗೋಪುರಗಳನ್ನೂ ನೋಡಿ ಬಹಳ ಸಂತೋಷಪಟ್ಟು, ಈ ಕಟ್ಟಡ ಬಹಳ ಅಪೂರ್ವವೆಂದು ಹೇಳಿ. ಇದು ಬಹಳ ಪುರಾತನವಾದದ್ದರಿಂದಲೂ ಕೆಲವು ಗೋಪುರಗಳು ಶಿಥಿಲವಾದ್ದರಿಂದಲೂ ಈ ವರ್ಷ ಕ್ಷಾಮ ಬಂದದ್ದರಿಂದಲೂ ಬಡಜನಗಳಿಗೆ ಜೀವನಕ್ಕೆ ಇಲ್ಲದೆ ಬಹಳ ತೊಂದರೆಪಡುವದನ್ನು ನೋಡಿ, ಅದನ್ನು ಕಾಮಗಾರಿ ಮಾಡಿಸಿ ಪೂರ್ವಸ್ಥಿತಿಗೆ ತರಬೇಕೆಂದು ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರ ಮುಂದೆ ಹೇಳಿ, ಅಲ್ಲಿಂದ ಹೊರಟು ಟವರ್ ನೋಡಿ, ಗ್ರಾಮದ ಶಾನುಭೋಗರು ಪಟೇಲ್ ಮತ್ತು ಇನ್ನು ಕೆಲವು ದೊಡ್ಡ ಮನುಷ್ಯರು ಕೊಟ್ಟ ತಾಂಬೂಲ, ಫಲ, ಹೂವಿನ ಹಾರಗಳನ್ನು ಸ್ವೀಕರಿಸಿ, ಸೂಳೆಕೆರೆ ಮಾರ್ಗವಾಗಿ ಚನ್ನಗಿರಿಗೆ ದಯಮಾಡಿಸಿದರು.—ನಮ್ಮ ಅಮಲ್ದಾರ್ರವರು ಬಹಳ ಒಳ್ಳೆಯವರು. ತಾಲ್ಲೂಕಿನಲ್ಲಿರುವ ಸರ್ವಪ್ರಜೆಗಳಲ್ಲೂ ತುಂಬ ಅಭಿಮಾನದಿಂದ ಕೆಲಸಮಾಡಿ ಒಳ್ಳೇ ಹೆಸರು ಪಡೆದು ಪೆನ್ಷನ್ ಆಗಿ ಹೊರಟುಹೋದರು. ಅವರ ಬದ್ಲಿಯಾಗಿ ಬಂದಿರುವವರೂ ಅದೇ ರೀತಿಯಾಗಿರಬೇಕೆಂದು ಪ್ರಾರ್ಥನೆಮಾಡುತ್ತೇವೆ.

JUST RECEIVED! JUST RECEIVED!!

Stead's Books for the Bairns

(Illustrated) New Numbers

STEAD'S PENNY POPULAR TALES—Sixty four Pages in a coloured Picture Cover. Each number contains a story of thrilling interest. 24 numbers

A VERY NICE SELECTION OF [93-4]

CHRISTMAS AND NEW YEAR CARDS AND CALENDARS FOR 1909.

Apply The Manager, C.L.S. Book Depot, Mysore City.

ಇಲ್ಲಿ ನೋಡಿ.

77-11

ತುಮಕೂರು ಮಿಷನ್ ಇಲಾಖೆಯಲ್ಲಿ ಯೂರೋಪಿಯನ್ನರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ. ಕ್ರಯ:—೧೨ ಆಣೆ ಮೊದಲ್ಗೊಂಡು ೧ ರೂ. ೧೨ ಆಣೆಯ ವರಿಗೆ. ೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು. ಈಗತಾನೇ ಇಂಗ್ಲಿಷ್ ಉಲ್‌ದಾರವು ಬಂದಿದೆ. ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಬಲ್ಲೆವು. ವಿಳಾಸ:—ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

48-28

ತಲೆನೋವು, ವಾಯುನೋವು, ಸೆಳತ ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು. ಹಲ್ಲು ನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಣವಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ನಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು. ಆದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ.

ಕ್ರಯ ಶೀಸೆ ೧ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕ್ರಯಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಕ್ಲೆಮೆಂಟರ್,

೩೩, ವೇದಮಲೆಪಿಳ್ಳೆ ಬೀದಿ, ವೇಪೇರಿ, ಮದರಾಸ್.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ರೋಗ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ.)

ಮಲಬಂಧವೆಂಬುವದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ಇದೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಳೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ—ಪಿತ್ತಕೋಶ ರೋಗ ; ಪಿತ್ತ ; ಪಿತ್ತಜ್ವರ ; ಅಜೀರ್ಣ ; ಅಗ್ನಿಮಾಂದ್ಯ ; ಗಾಬರಿ ; ಅಶಕ್ತಿ ; ಎದೆಯು ಕಲ್ಲಣಿಸುವುದು, ತಲೆತಿರುಗುವುದು ; ತಲೆನೋವು ; ಹೊಟ್ಟೆ ಉಬ್ಬರ ; ಮೂಲರೋಗ ; ಹೊಟ್ಟೆನೋವು ; ಹೆಂಗಸರ ವ್ಯಾಧಿಗಳು ; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕೆಟ್ಟದಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [69-14]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೪ ರಷ್ಟು ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ಸ್, ಪಿ. ಓ. ಬಾಕ್ಸ್ ೩೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಪ್ಯಾರಿಸ್ಸಿನ ವೈದ್ಯಮಂಡಲಿಯ

[34 56]

ಡಾ॥ ವ್ಯಸೆಂಟೆ ಸಾಂಟೋನಿಯವರು

ಈಗ ಪೋರ್ಟೋರೀಕೋವಿನ ಪಾರ್ಸ್ ಪಟ್ಟಣದಲ್ಲಿ ವೈದ್ಯಮಾಡುತ್ತಿದಾರೆ.

ಇವರು ಹೇಳಿರುವುದು

ಪೋರ್ಟೋರೀಕೋವಿನ ಪಾರ್ಸೆ ಪಟ್ಟಣದಲ್ಲಿ ವೈದ್ಯ ಮಾಡುತ್ತಿರುವ, ಪ್ಯಾರಿಸ್ಸಿನ ವೈದ್ಯಮಂಡಲಿಗೆ ಸೇರಿದ, ಈ ಕೆಳಗೆ ರುಜುಮಾಡಿರುವ ಡಾ। ವ್ಯಸೆಂಟೆ ಸಾಂಟೋನಿ ಎಂಬ ನಾನು ಸರ್ಟಿಫಿಕೇಟು ಕೊಡುವುದೇನೆಂದರೆ —

"ಪೆರೂನಾ ಎಂಬ ಹೆಸರುಳ್ಳ ತಯಾರಿ ಔಷಧವನ್ನು ನಾನು ಶ್ಲೈಷ್ಮರೋಗಗಳಿಗೆ ಕಲವು ಕಾಲದಿಂದ ಪ್ರಯೋಗ ಮಾಡುತ್ತಾ ಬಂದಿದ್ದೇನೆ ಸರ್ವದಾ ಅದರಿಂದ ಉತ್ಕೃಷ್ಟವಾದ ಫಲವುಂಟಾಗುತ್ತಿರುವುದು. ಅದು ಒಳ್ಳೇ ತಯಾರಿಸಿದ ಔಷಧವು. ಅದು ಬಗ್ಗಿದ ರೋಗಿಗಳಿಗೆಲ್ಲಾ ನಾನು ಯಾವಾಗಲೂ ಅದನ್ನೇ ಪ್ರಯೋಗ ಮಾಡುವೆನು."

ಡಾ। ವಿ. ಸಾಂಟೋನಿ,
ಪಾರ್ಸೆ, ಪಿ. ಆರ್.

ಪೆರೂನಾ ಕೊಡುತ್ತಾರೆ

ಮ್ಯಾಡ್ರಿಡ ಪಟ್ಟಣದ ಸರ್ವಕಲಾಶಾಲೆಯ ವೈದ ಮತ್ತು ಶಸ್ತ್ರ ಚಿಕಿತ್ಸೆಯ ಡಾಕ್ಟರಾಗಿಯೂ ಮಾರ್ಲೋಸಾ, ಕ್ಯಾಟಲೂನಾ ಸ್ಪೇನ್ ವೈದ್ಯಮಂಡಲಿಯ ಆನರರಿ ಮೆಂಬರಾಗಿಯೂ ಪ್ಯಾರಿಸ್ ಪಟ್ಟಣದ ಆಸ್ಪತ್ರೆಗಳಲ್ಲಿ ವೈದ್ಯವನ್ನು ನಡಿಸಿ ಪೋರ್ಟೋರೀಕೋವಿನ ವೈದ್ಯಮಂಡಲಿಗೆ ಸೇರಿಸಲ್ಪಟ್ಟವರಾಗಿಯೂ ಇರುವ ಪೋರ್ಟೋರೀಕೋವಿನ ಪಾರ್ಸೆ ಟೌನಿನ ಡಾ॥ ಎಸ್ಕೇರ್ ವಿಡಾಲಿಯಸ್‌ಯವರು ಸರ್ಟಿಫಿಕೇಟು ಕೊಟ್ಟಿರುವುದೇನೆಂದರೆ —

"ಯು ಎಸ್ ಎ, ಓಹಿಯೋ, ಕೊಲಂಬಸ್ ಪಟ್ಟಣದ ಪೆರೂನಾ ಔಷಧದ ಕಾರ್ಖಾನೆಯಲ್ಲಿ ಪೆರೂನಾವು ತಯಾರು ಮಾಡಲ್ಪಡುತ್ತದೆ ಇದು ಮನುಷ್ಯನ ಶ್ವಾಸಕೋಶದಲ್ಲಿ ಹುಟ್ಟುವ ರೋಗಗಳಿಗೆ ಪರಿಣಾಮಕವಾದ ಔಷಧವು ಇದನ್ನು ನಾನು ಆ ರೋಗಿಗಳಿಗೆ ಕೊಡುತ್ತೇನೆ ಅದರಲ್ಲಿ ಸೇರಿಸತಕ್ಕ ಪದಾರ್ಥಗಳನ್ನು ನೋಡಿ ಆಶ್ಚರ್ಯಪಡುವೆನು ಅದು ಎಂತಿತವಾದ ಪರಿಹಾರವನ್ನು ಸ್ವಲ್ಪದಲ್ಲಿ ಉಂಟುಮಾಡುವುದನ್ನು ನೋಡಿ ನನಗೆ ಆಶ್ಚರ್ಯವಾಗಿದೆ

ಇ ವಿಡಾಲಿರಿಯಾಸ್, ಪಾರ್ಸೆ ಪಿ ಆರ್

ಉಷ್ಣದೇಶಗಳೂ ಪೆರೂನಾ ಔಷಧವೂ

ಕೆಲವು ದೇಶಗಳಲ್ಲಿ ಬಲಕೊಡುವ ಉಪಕರಣಗಳು ಸ್ವಾಭಾವಿಕವಾಗಿ ಅಲ್ಲಿನ ಹವಾವಿಶೇಷದಿಂದ ಉಂಟು ಉಷ್ಣವು ಅಧಿಕವಾಗಿಲ್ಲದೆ ಸಮುದ್ರಮಟ್ಟದಿಂದ ಬಹಳ ಎತ್ತರವಾಗಿಲ್ಲದೆ ಆಮ್ಲಜನಕ (ಆಕ್ಸಿಜನ್) ಧಾತುವು ಹೇರಳವಾಗಿ ಉಳ್ಳ ವಾಯುಮಂಡಲವನ್ನು ಪಡೆದಿರುವಂಥ ಪ್ರದೇಶಗಳಲ್ಲಿ ಜನರು ಸ್ವಾಭಾವಿಕವಾಗಿಯೇ ಚಟುವಟಿಕೆ ಕಾಯಪುಷ್ಟಿಗಳನ್ನು ಪಡೆಯುವರು ಅಂಥಾ ಜನರ ಶರೀರದ ಅಂಗಾಂಗಗಳು ಬಲವಿಶಿಷ್ಟವುಳ್ಳವುಗಳಾಗಿರುತ್ತವೆ ಅವರು ಉತ್ಸಾಹಪೂರ್ವಕವಾಗಿಯೂ ಚುರುಕಿನಿಂದಲೂ ಕೆಲಸಗಳನ್ನು ಸ್ವಾಭಾವಿಕವಾಗಿ ಮಾಡುವರು

ಇತರ ದೇಶಗಳು ಅಷ್ಟು ಅನುಕೂಲವಾಗಿಲ್ಲ ಹವಾ ಬಹು ಉಷ್ಣವಾಗಿರುವುದು ದೇಶವು ತಗ್ಗಾಗಿರುವುದು ವಾಯುಮಂಡಲದಲ್ಲಿ ಆಮ್ಲಜನಕ ಧಾತುವು ಸ್ವಲ್ಪವೇ ಇರುವುದು ಇಂಥಾ ವಾಯುಮಂಡಲವನ್ನು ಪಡೆದಿರುವ ದೇಶಗಳು ಅಲ್ಲಿ ವಾಸಮಾಡುವ ಜನರನ್ನು ಕುಗ್ಗಿಸುತ್ತವೆ

ಆದ್ದರಿಂದ ಬಲಕಾರಿಯಾದ ಔಷಧಗಳ ಸೇವನೆಯು ಪರಮಾವಶ್ಯಕವಾಗುತ್ತದೆ ಶಾಸ್ತ್ರವಿತ್ತಾಗಿ ತಯಾರಿಸಲ್ಪಟ್ಟ ಅಂಥಾ ಬಲಕಾರಿಯಾದ ಔಷಧವು ವಾಯುಮಂಡಲದಿಂದುಂಟಾಗುವಂಥಾ ದುರ್ಗುಣಗಳನ್ನು ಎಷ್ಟೋ ಮಟ್ಟಿಗೆ ಕಡಮೆಮಾಡುತ್ತದೆ

ಅನೇಕ ವರುಷಗಳ ಹಿಂದೆ ಡಾ ಹಾರ್ಟ್‌ಮನ್‌ರವರು ಪೆರೂನಾವನ್ನು ಕಂಡುಹಿಡಿದು ತಯಾರುಮಾಡಿದರು ಅಂದಿನಿಂದಲೂ ಅವರು ಬಹಳ ಜಾಗರೂಕತೆಯಿಂದ ನೋಡಿಕೊಳ್ಳುತ್ತಾ ಈ ಔಷಧವನ್ನು ತಮ್ಮ ಕಾರ್ಖಾನೆಯಲ್ಲಿ ನಿರ್ಮಾಣಮಾಡಿಸುತ್ತಾ ಬಂದಿದ್ದಾರೆ

ನಂಬಿಕೆಯಾದ ಮತ್ತು ಆರೋಗ್ಯಕರವಾದ ಪುಷ್ಟಿಯನ್ನು ಕೊಡುವ ಮತ್ತು ಎಷ್ಟು ಕಾಲ ಸೇವಿಸಿದರೂ ಸ್ವಲ್ಪವೂ ಕೆಡಕು ಆಗದೆ ಇರುವಂಥಾ ಔಷಧವನ್ನು ಕಂಡುಹಿಡಿದು ತಯಾರುಮಾಡಿಕೊಡಬೇಕೆಂಬುವುದೇ ಡಾ ಹಾರ್ಟ್‌ಮನ್‌ರವರ ಕುತೂಹಲಪೂರ್ವಕವಾದ ಉದ್ದೇಶವಾಗಿರುತ್ತದೆ

ಈ ಪೆರೂನಾವು ಪ್ರಪಂಚದ ಎಲ್ಲಾ ಭಾಗಗಳಲ್ಲೂ ಪ್ರಖ್ಯಾತಿಯನ್ನು ಪಡೆದಿರೋಣವೇ ಅವರು ಆ ಧಾರ್ಮಿಕ ಶ್ರೇಷ್ಠವಾದ ಉದ್ದೇಶವನ್ನು ಸಾರ್ಥಕವಾಗಿ ನೆರವೇರಿಸುತ್ತಾರೆಂಬುವುದಕ್ಕೆ ಸಾಕ್ಷಿಭೂತವಾಗಿರುತ್ತದೆ

ಶರೀರಧರ್ಮವು ಕುಗ್ಗಿ ದುರ್ಬಲವಾಗಿರುವರೆಲ್ಲ ಪೆರೂನಾವನ್ನು ನಂಬಿಕೆಯಿಂದ ಪುಷ್ಟಿಕೊಡುವ ಔಷಧವೆಂದು ಭರವಸೆಯಿಟ್ಟು ಸೇವಿಸಬಹುದಾಗಿದೆ ಕಾಯಿಲೆ ಬಿದ್ದು ಚೇತರಿಸಿಕೊಳ್ಳುತ್ತಿರುವವರಾಗಲಿ ವಾಯುಮಂಡಲದ ದುರ್ಗುಣಗಳಿಗೆ ಒಳಪಟ್ಟು ಕುಗ್ಗಿಹೋದವರಾಗಲಿ ಪೆರೂನಾವನ್ನು ಸೇವಿಸಬಹುದು

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು ತೆನುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದ್ದೂ ಇವರಿಂದಲೇ ತಿಳಿಯಬಹುದು

ವಿಳಾಸ.—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್ ಕಾಲರಾ ಸ್ಥಿತಿ

6—11—1908 ರಿಂದ 13—11—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು	6	7	0	0
ಬೆಂಗಳೂರು ಡಿಸ್ಟ್ರಿಕ್ಟು	17	9	0	0
ಮೈಸೂರು	80	56	0	0
ಕೋಲಾರ್ ,	12	6	17	14
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	41	18	0	0
ಹಾಸನ	24	14	0	0
ಚಿತ್ರದುರ್ಗ ,	7	5	12	4
ಕಡೂರ್ ,	48	21	0	0
ಶಿವಮೊಗ್ಗಾ ,	15	11	0	0
* ಸಂಖ್ಯೆ ಕಾಣಿಸಲ್ಲ ಒಟ್ಟು	230	146	29	18

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಮಾರ್ಗಶಿರ ಶುದ್ಧ ದಶಮಿ ಗುರುವಾರದಿಂದ ಮಾರ್ಗಶಿರ ಬಹುಳ ಬಿದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಡಿಸೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಿರು ವೃಶ್ಚಿಕ ವಾಸ
3	ಗುರು	ದಶಮಿ	7 52	ಉತ್ತರಾಭಾ	2 38	19
4	ಶುಕ್ರ §	ಏಕಾದಶಿ	2 38	ರೇವತಿ	55 36	20
5	ಶನಿವಾ	ತ್ರಯೋದಶಿ	54 17	ಭ	54 15	21
6	ರವಿವಾ ‡	ಚತುರ್ದಶಿ	51 50	ಕೃ	53 4	22
7	ಚಂದ್ರ †	ಪೌರ್ಣಮಿ	50 5	ರೋ	2 58	23
8	ಕುಜ	ಪಾಡ್ಯಮಿ	49 28	ಮೃ	54 3	24
9	ಬುಧ	ಬಿದಿಗೆ	50 30	ಆರ್ದ್ರ	56 20	25

§ ಮಧ್ವ ರಾಮಾನುಜ ಭಾಗವತ ಏಕಾದಶಿ ಮತ ದ್ವಾದಶಿ ಪಾರಣ ಶನಿಪ್ರದೋಷ ಹನುಮಜ್ಜಯಂತಿ

‡ ಶಿವಶಕ್ತಿಕಾರ ದೀಪೋತ್ಸವ ಚಾಮರಾಜನಗರದಲ್ಲಿ ಚಿತ್ರಮಂಟಪ ದರ್ಶನ

† ದತ್ತಾತ್ರೇಯ ಜಯಂತಿ ವಿಷ್ಣುದೀಪೋತ್ಸವ

ಪೇಟೇ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೮ ೪ ೦	೧೯ ೮ ೦
ಕೆಂಬೂತಿ ಅಕ್ಕಿ ಆವಲ		೧೨ ೮ ೦	೧೮ ೦ ೦
ಮುಂ		೧೯ ೪ ೦	೧೭ ೮ ೦
ಜಾಪತ್ರಿ ಅಕ್ಕಿ		೧೭ ೮ ೦	೧೮ ೦ ೦
ಸಣ್ಣಕ್ಕಿ ಅವಲ್		೨೨ ೦	೨೧ ೦೦
ಮುಂ		೧೯ ೮ ೦	೨೦ ೦
ತೊಗರಿ ಬೇಳೆ ಪಲ್ಲಾ ೧ಕ್ಕೆ		೧೭ ೦	೧೪ ೮ ೦
ಮುಂ		೧೬ ೪ ೦	೧೫ ೦
ಹೈಕ್ ರಾಗಿ ಪಲ್ಲಾ ೧ಕ್ಕೆ		೧೦ ೪ ೦	೧೦ ೦ ೦
ನವಣೆ		೧ ೦ ೦	೯ ೦ ೦
ಜೋಳ		೧೦ ೮ ೦	೧೦ ೦ ೦
ಹುರುಳಿ ಪಲ್ಲಾ ೧ಕ್ಕೆ		೧೩ ೮ ೦	೧೩ ೦ ೦
ಬಿಳಿ ಅವರೆ		೧೩ ೦ ೦	೧೪ ೦ ೦
ಹೆಸರು		೧೫ ೧೩ ೦	೧೬ ೦ ೦
ಉದ್ದು		೧೪ ೫ ೦	೧೪ ೦ ೦
ಕಡಲೆ		೧೫ ೦ ೦	೧೪ ೮ ೦
ಎಳ್ಳು ಸೇ ೧೨೭ ಕ್ಕೆ		೨೧ ೦	೨೦ ೦
ಹುರುಳಿ		೧೦ ೧೩ ೦	೧೦ ೦
ಹರಳು ೧೨೭ ಸೇರಿಗೆ		೧೦ ೦	೧೦ ೦ ೦
ನೆಲಗಡಲೆಕಾಯಿ ಮಣ ೧ಕ್ಕೆ		೧ ೮ ೦	೧ ೬
ಮೆಣಸಿನಕಾಯಿ		೪ ೮ ೦	೩ ೮ ೦
, ಮುಂ		೪ ೪ ೦	೩ ೪ ೦
ಬೆಲ್ಲ ಮೊದ್ದ ಅಚ್ಚು		೬ ೦ ೦	ಮು ೭ ೬ ೦
ಒಳ್ಳೆಣ್ಣೆ ಮಣ ೧ಕ್ಕೆ		೫ ೧೩ ೦	೬ ೪
ಹರಳೆಣ್ಣೆ		೪ ೮ ೦	೪ ೦ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೭ ೦ ೦	೬ ೮ ೦
ಉಪ್ಪು		೬ ೦ ೦	೫ ೪ ೦
ಹುಣಸೇ ಹಣ್ಣು		೧ ೮ ೦	೧ ೪ ೦
ಹಳೇದು		೧ ೬ ೦	೧ ೪ ೦
ತುಪ್ಪ ಮಣ ೧ಕ್ಕೆ		೧೪ ೦ ೦	೧೫ ೮ ೦
ಎಮ್ಮೆ ಬೆಣ್ಣೆ ಪಟ್ಟಿ ೧ಕ್ಕೆ		೫ ೦ ೦	೪ ೦ ೦
ತೆಂಗಿನಕಾಯಿ ೧೦೦ ಕ್ಕೆ		೪ ೮ ೦	೬ ೮ ೦
ಅಡಿಕೆಕಾಯಿ ಮಣ ೧ಕ್ಕೆ		೦ ೧೦ ೦	೦ ೧೪ ೦
ಅಂಟುವಾಳದ ಕಾಯಿ ಮಣ ೧ಕ್ಕೆ		೦ ೧೪ ೦	೦ ೧೫ ೦
ಚಿಪ್ಪ (ಸೌಪ) ಕೆಂಪು		೧೫ ೭ ೦	೧೫ ೬ ೦
, ,, ಹಸಿರು		೧೫ ೧೪ ೦	೧೫ ೧೩ ೦
, , ಗಟ್ಟಿ ತೊಲ ೧ಕ್ಕೆ		೨೪ ೧೦ ೦	೨೪ ೬ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೦ ೦	೬೪ ೦ ೦

Printed and Published by the Rev E W THOMPSON M A Proprieto and Manager Wesleyan Mission Press Mysore 3/12/1908

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೮ ನೇ ಇಸವಿ ಡಿಸೆಂಬರ್ ತಾರೀಖು ೧೦ ನೇ ಗುರುವಾರ. ಸಂಚಿಕೆ ೨೮

ಶಾಸ್ತ್ರದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-43

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಸಬ್ಬು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊರತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ನಿಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತ ಪ್ರತಿ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ... ಕಾಯಿಲೆಗೂ ... ಕೊಡದೆ, ನೀವು ಮನಾಗಳ ಬಲಹೀನತೆಯನ್ನು ಪರಿಹರಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಬುದ್ಧಿಶಕ್ತಿ ವೃದ್ಧಿಪಡಿಸುತ್ತದೆ. ... ಮಕ್ಕಳ ಎಳಸು, ಜ್ವರ, ಮಲ್ಲಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ನಿಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ. ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಶಾಸ್ತ್ರದ ವೆಂಕಟಾಚಲ ಪಂಡಿತ, ಎಲ್. ಎಮ್. ಎಲ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ. 64-19

ಇದು ಸಾಧಾರಣ ಜ್ವರ, ಚಳಿಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ... ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿ... ... ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ವಿ. ವೆಂಕಟಪತಿ ಅಯ್ಯರವರು—ನೀವು ಕಳುಹಿಸಿದ ... ೨೦ ಔನ್ಸಿನ ಸೀಸೆಯು ತೀರಿಹೋಯಿತು ... ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ... ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ —ಸೀಸ ೧ ಕ್ಕೆ ೮ ಆಣೆ. ೧ ರೂ ; ೧—೮ ರೂ, ರೂ ೩—೧೨ ಆ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಸೂಲು ಬಿಡಲಾಗುವದು.

ದಿವ್ಯ ಕರ್ಪೂರ.

Divya Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ... ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾಶಕ್ತವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಿಯುದ ದರವು ,, ಜ್ವರಹರಿ " ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿರಾಯರು—ದಿವ್ಯ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಸ್ಥರಿಗೆ ಕೊಡುತ್ತೇನೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಅಲ್ಲದೆ ಕೆಳಗಿನ ವಿಳಾಸದಿಂದ್ರಲ್ಲಿ ವಿಶೇಷ:—

ದಿವ್ಯಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

AMRUTANJAN DEPOT, 16 OAK-LANE, BOMBAY. [17-42]

ಅಮೃತಾಂಜನ ಡಿಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯ ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ಅಬಲುಗಂಟ್ಲುನೋವು, ಎದೆಶೀತ, ಗಾಯ, ಜಖಮು, ಮೂಲವ್ಯಾಧಿ, ಇವೇ ಮೊದಲಾದ ಯಾವ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತಿಳಿಯಲು ಯೋಗ್ಯವಾದ ಸಂಗತಿಯಾಗಿರುತ್ತದೆ ಇದು ಚರ್ಮದ ಮೂಲಕ ಮಾಂಸವನ್ನು ಪ್ರವೇಶಿಸಿ, ಕೊಳಕು ಪದಾರ್ಥಗಳಿಂದ ಹುಟ್ಟಿದ ನಾನಾ ತರದ ವೇದನೆಗಳನ್ನು ನಾಶಪಡಿಸುತ್ತದೆ. ಬಾಟ್ಲಿ ಒಂದರ ಕಿಮ್ಮತ್ತು ೦—೮—೦ ಪೋಸ್ಟು ಖರ್ಚು ೦—೪—೦. ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಕಪ್ ಇನಾಮು. ಆರ್. ಆರ್. ಗಂಗೋಲಿ I ನೇ ಕ್ಲಾಸ್ ಸಬ್ ಜಡ್ಜ್ ಕಾರವಾರ,—ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ, ಕೆಮ್ಮಿಗೂ, ಉಪಯೋಗಿಸಿದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ.

ಅಮೃತಾಂಜನದ ಪ್ರಯೋಗದ ವಿಷಯ ಒಂದು ಹೊಸ ಪುಸ್ತಕವನ್ನು ತಯಾರಿಸಿರುತ್ತೇವೆ.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣ, ತುರಿ ಕಜ್ಜಿ ನಾಶವಾಗುವವು. ಇದರಿಂದ ಚರ್ಮಕ್ಕೆ ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦—೬—೦ ; ವಿ. ಪಿ ಖರ್ಚು ೦—೪—೦

ದಂತಮಂಜನ—ಡಬ್ಬಿ ೨ ಆಣೆ. ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಬಾಯಿಯ ವಾಸನೆಯನ್ನು ಪೂರ್ಣವಾಗಿ ತೆಗೆಯುತ್ತದೆ, ಹಲ್ಲುಗಳು ಘಟ್ಟಿಯಾಗುತ್ತವೆ, ಹಲ್ಲುಗಳು ಬೆಳ್ಳಗಾಗುತ್ತವೆ

ಕಜ್ಜಿ ಮುಲಾಮು-ಡಬ್ಬಿ ೧ ಕ್ಕೆ ಕಿಮ್ಮತ್ತು ೩ ಆಣೆ.

ಕೇಶವರ್ಧನಿ—ಚಹೋ ಪರಿಮಳ ಉಳ್ಳದ್ದು.

ಕೇಶವರ್ಧನಿ—ಮನಶುದ್ಧಿ ವ ...

ಕೇಶವರ್ಧನಿ—ಕೂದಲನ್ನು ನಯವಾಡುವದು. ಬಾಟ್ಲಿ ಒಂದರ ಕಿಮ್ಮತ್ತು ರೂ ೧—೦—೦

ವಜ್ರಗುಟಿಕೆ—ಧಾತುಪುಷ್ಟಿ, ರಕ್ತಶುದ್ಧಿ	೧—೦—೦
ಕುಸುಮಾರಿಗುಟಿಕೆ—ಹೆಂಗಸರ ಹೊಟ್ಟೆನೋವಿಗೆ	೧—೦—೦
ಸುಂದರೀ ತೈಲ—ಮೋರೆಯ ಮುದ್ದ ...	೦—೮—೦
ತಾಂಬೂಲ ಗುಟಿಕೆ ತಾಂಬೂಲ ಸೊಗಸು ವೃದ್ಧಿಸಲಿಕ್ಕೆ	೦—೮—೦
ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಚೇಳುಕಡಿತದ ಮದ್ದು ಚೇಳುಕಡಿತಕ್ಕೆ	೦—೮—೦
ಜುಲಾಬು ಮಾತ್ರೆ—ಜುಲಾಬಿಗೆ	೦—೮—೦

ಈ ಕಂಪನಿಯವರು ಹೆಚ್ಚು ಸಮೂಹಿಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಳಾಸ:—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು, ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ." ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯು ಬೋಳಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

3-50

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಹುಬ್ಬಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಸೀದಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚೆನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ; ೧ ರೂ. ೬ ಆ.; ೧ ರೂ. ೪ ಆ.

ರೇಶ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ. ; ೨ ರೂ.

ದಾರದ ಟೋಪಿಗಳು ೧ ರೂ. ೧೨ ಆ. ; ೧ ರೂ. ೮ ಆ. ; ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ ೮ ಆ. ; ೧ ರೂ. ೬ ಆ ;

ಕೂಸುಗಳ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಲಾ ಪ್ರಕಟನೆಗಳು.

ವ್ಯವಹಾರನಿರ್ಣಯ—ಫಟಗಳು ... ಹಿಂದೂ ಮಹಮ್ಮದೀಯರುಗಳು, ... ಶಾಸನಗಳು ಇವುಗಳ ಸಂಗ್ರಹವು, ... ದಸ್ತಾವೇಜು, ೪... ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ. ಪಿ. ಸೇರಿ ೧ ರೂ ೧೨ ಆಣೆ. [40-33]

ಕನ್ನಡ ಲಾ ರಿಪೋರ್ಟರ್—ಪ್ರಿವಿ ಕೌನ್ಸಿಲ್, ಹೈ ಕೋರ್ಟ್, ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ರೂ. ೧—೦—೦ ಮುಂಗಡ, ಯಾ, ವಿ. ಪಿ. ಬಿಡಿಪತ್ರಿಕೆ ೧ ಕ್ಕೆ ೦—೨—೦

ಇವುಗಳನ್ನಪೇಕ್ಷಿಸುವವರು—... ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, (೯೦) ೨ ನೇ ರೋಡ್, ಚಾಮರಾಜ ಪೇಟೆ, ಬೆಂಗಳೂರು ಸಿಟಿ.—ಈ ವಿಳಾಸಕ್ಕೆ ಬರೆಯುವುದು.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

55-24

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎನ್. ಬುಕ್ ಡಿಪೋ, ಮೈಸೂರು.

ಮೈಸೂರಿನಲ್ಲಿ ಮನೆ ಬಿಕರಿಗೆ ಸಿದ್ಧವಾಗಿದೆ.

83-8

ಮೈಸೂರು ಶಿವರಾಂಪೇಟೆ ಇಬ್ರಾಹಿಮ್ ಬೀದಿಯಲ್ಲಿ ೨೭×೩ ಅಂಕಣಗಳ ಅಂಚೆ ಗುಮಾಸ್ತರ ಕೃಷ್ಣಪ್ಪನವರಿದ್ದ ದೊಡ್ಡ ಮನೆ. ಬೇಕಾದವರು—ಮೇ ಟ್ರಿಕ್ಯುಲೇಟ್ ಫಾರೆಸ್ಟ್ ರೇಂಜರ್ ಮ|| ಬಿ. ಶ್ರೀಕಂಠಯ್ಯನವರಿಗೆ ಬರೆದು ಕ್ರಯ ಮುಂತಾದದ್ದನ್ನು ತಿಳಿಯಬಹುದು.

JUST RECEIVED! JUST RECEIVED!!

Stead's Books for the Bairns

(Illustrated) New Numbers

STEAD'S PENNY POPULAR TALES— Sixty-four Pages in a coloured Picture Cover. Each number contains a story of thrilling interest. 24 numbers

A VERY NICE SELECTION OF [93-5]

CHRISTMAS AND NEW YEAR CARDS AND CALENDARS FOR 1909.

Apply **The Manager, C.L.S. Book Depot, Mysore City.**

ಮದ್ರಾಸ್ ಪಾಹುಕಾರ್ ಪೇಟೆ,
ಟಿ. ಎಂ. ರಾಮಯ್ಯಶೆಟ್ಟರ ಕಂಪೆನಿಯಲ್ಲಿ

99-2

ಕಬ್ಬಿಣ ದಿಂದ ಮಾಡಿದ ಪೆಟ್ಟಿಗೆಗಳು ಅಥವಾ ಟ್ರಂಕುಗಳು ಈ ಕೆಳಗಿನ ದರದ ಪ್ರಕಾರ ಮಾರಾಟಕ್ಕೆ ಸಿದ್ಧವಾಗಿವೆ. ಬ್ರಾಂಚ್ ಆಫೀಸ್ ಬೆಂಗಳೂರು ನಗರ್ತರಪೇಟೆಯಲ್ಲೂ ಸಿಕ್ಕುವುವು.



ಬೇಕಾದವರು ತಮ್ಮ ಅಡ್ರಸ್ಸು ತಿಳಿಸಿ ರೂ. 10 ಮುಂಗಡವಾಗಿ ಕಳುಹಿಸಿದರೆ ವಿ. ಪಿ ಮೂಲಕ ರವಾನಿಸಲ್ಪಡುತ್ತೆ. ವಿಶೇಷ ಮಾಹಿತಿ ಬೇಕಾದವರು ಕಾಗದದ ಮುಖಾಂತರ ಮೇಲ್ಕಂಡ ವಿಳಾಸದವರಿಂದ ತಿಳಿದುಕೊಳ್ಳಬಹುದು.

ಲೇಖನ ಪ್ರಕಾಶಿಕಾ

97-3

ಡಿಸೆಂಬರು ಅಖೈರಿನೊಳಗಾಗಿ ಬರೆದುಕೊಂಡವರಿಗೆ ರೂ. ೧-೦-೦
ಅನಂತರ ಬರೆದುಕೊಂಡವರಿಗೆ „ ೧-೮-೦
ಟಪ್ಪಾಲ್ ಖರ್ಚು „ ೦-೨-೦

ಪ್ರತಿಯೊಬ್ಬ ವ್ಯವಹಾರಸ್ಥನಿಗೂ, ವಿದ್ಯಾರ್ಥಿಗೂ ಅವಶ್ಯ ಸಂಗ್ರಹಿಸಿ ಇಡಬೇಕಾದದ್ದು. ರೆಜಿಸ್ಟ್ರೇಷನ್ ನೋಟದಿಂದ ತಯಾರಾದದ್ದು. ಈ ಪುಸ್ತಕವನ್ನು ಬಿಟ್ಟರೆ ಲೇವಾದೇವಿ ಮಾಡುವವರಿಗೂ, ಪತ್ರಗಳನ್ನು ಬರಿಯುವವರಿಗೂ ಇಷ್ಟು ಉಪಯುಕ್ತವಾದದ್ದು ಮತ್ತಾವುದಿದೆ? ಇದರಲ್ಲಿ ಸ್ಟಾಂಪಾಕ್ಟು, ರೆಜಿಸ್ಟ್ರೇಷನ್ ಆಕ್ಟು, ರೆಜಿಸ್ಟ್ರೇಷನ್ ರೂಲ್ಸ್, ರೆಜಿಸ್ಟ್ರೇಷನ್ ಫೀಜು ವಿಷಯವಾದ ಸರ್ಕ್ಯುಲರುಗಳೂ, ಮತ್ತು ಪ್ರತಿಯೊಂದು ಪತ್ರ ಬರೆಯುವುದಕ್ಕೆ ನಮೂನೆ, ಅದಕ್ಕೆ ಬೇಕಾದ ಸ್ಟಾಂಪು, ರೆಜಿಸ್ಟ್ರೇಷನ್ ಫೀಜು ಮೊದಲಾದವುಗಳನ್ನು ಕಾರಣಸಹಿತ ಬಹಳ ಚೆನ್ನಾಗಿ ವಿವರಿಸಿ ಇದೆ. ಒದುವುದರ ಮಾತ್ರ ಬಲ್ಲ ಪ್ರತಿಯೊಬ್ಬರೂ ಈ ೧ ರೂಪಾಯಿಯ ಖರ್ಚಿನಿಂದ ಅನೇಕ ವಿಧವಾದ ಕಷ್ಟನಷ್ಟಗಳನ್ನು ಮುಂತಿಳಿವಳಿಕೆಯಿಂದ ತಪ್ಪಿಸಿಕೊಳ್ಳಬಹುದು. ಹೆಚ್ಚು ಹೇಳಲೇಕೆ? ಅನುಭವದಿಂದ ತಾನೇ ಗೊತ್ತಾಗುವದು. ನಮ್ಮ ಸೈನ್ ಇಲ್ಲದ ಪುಸ್ತಕಗಳನ್ನು ಮಾತ್ರ ಕೊಳ್ಳಬೇಡಿ. ವಿಳಾಸ:—ಎಂ. ಕೃಷ್ಣಮೂರ್ತಿರಾವ್, ರೆಜಿಸ್ಟ್ರೇಷನ್ ಕ್ಲಾರ್ಕ್,
ಹೊನ್ನಾಳಿ ತಾಲ್ಲೂಕ್, ಶಿವಮೊಗ್ಗಾ ಡಿಸ್ಟ್ರಿಕ್ಟ್.

ಶ್ರೀ ತಾಂಬೂಲ.

81-10

ಇದನ್ನು ಓದಿ! ಬಿಡಬೇಡಿ!! ಗುಣನೋಡಿ!!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಾರೆ. ಆದರೆ ಸ್ವಲ್ಪ ಪಂಕ್ತಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ಬಾಯಿನ ದುರ್ಗಂಧ ನಾಶವಾಗುತ್ತೆ. ರಕ್ತಶುದ್ಧಿ, ಜೀರ್ಣ ಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಬನವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ. ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು. ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ. ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ. ಆರು ಸೀಸೆಗೆ ಒಂದು ಬಾಟ್ಲಿ. ೬ ಸೀಸೆ ವರೆಗೆ ವಿ. ಪಿ. ಛಾರ್ಜು ೫ ಆಣೆ. ನಮ್ಮ ವಿಳಾಸ:—

• ವಾತಶೂಲೆ ನೋವು ತಕ್ಷಣಪರಿಹಾರ, ಡಬ್ಬಿ ೧ಕ್ಕೆ ೦—೧೨—೦.

ದೇವನಹಳ್ಳಿ ಟವುನ್, ಯಂ ಗೋವಿಂದಶೆಟ್ಟಿ,
ಬೆಂಗಳೂರು ಡಿಸ್ಟ್ರಿಕ್ಟ್. ಮೆಡಿಕಲ್ ಪ್ರಾಕ್ಟೀಷನರ್.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

1-50



ಚರ್ಮಲುಬಣ ನೋವು, ಪಕ್ಕಗಳಲ್ಲಿ ಆಗುವ ನೋವು, ಮಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಬೆನ್ನಿನ ಕಡೆಗೆ ನೋವು ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ತಲೆಯುವ ಬಾಧೆ, ಮಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇದೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ! ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ಗೌಡರ ಹೊಗೆ ಸೇದುವ ಔಷಧ.

94-5

ಕೆಮ್ಮು, ಗೂರಿಗೆ ತಕ್ಷಣ ಶಮನ; ಶೀಘ್ರ ಪರಿಹಾರ. ಕ್ರಯ, ಪೆಟ್ಟಿಗೆ ೧ಕ್ಕೆ ೮ ಆಣೆ; ೩ಕ್ಕೆ ೧-೪-೦. ಏಜಂಟರಿಗೆ ಒಳ್ಳೇ ದಳ್ಳಾಳಿ ಕೊಡುತ್ತೇವೆ ವಿಳಾಸ—ಸಿ. ಲಕ್ಷ್ಮಣಗೌಡ, ಬಿ. ಎ., ಬಿ. ಯಲ್., ಬೆಂಗಳೂರು ಸಿಟಿ.

ನೋಡಿರಿ. "ಪ್ರೋತ್ಸಾಹಕೊಡಿರಿ" ತರಿಸಿರಿ.

98-3

ಈಗತಾನೇ ಶೀಮೆಯಿಂದ ಬಂದಿದೆ.

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತಿದೇವೆ.

೫,೦೦೦ ಹಾಸ್ ಟೋಪಿ ಹೊಲಿಯುವ ಸುಪೀರಿಯರ್ ಉಲ್ಲನ್ ದಾರ.	
೧೦ ಟೋಪಿಯಾಗುವ ಉಲ್ಲನ್ ಬಂಡಲ್ ೧ಕ್ಕೆ	ರೂ ೩-೭-೦
೧ ಟೋಪಿಯಾಗುವ ಉಲ್ಲನ್ ದಾರಕ್ಕೆ	೦-೮-೦
ಹಾಸ್ ಟೋಪಿ ಹಾಕುವ ಕೊಕ್ಕೆ ಸೂಜಿ ೧ಕ್ಕೆ	೦-೧-೬, ೦-೨-೦
೩೦ ಇಂಚಿನ ದೊಡ್ಡ ಸ್ಪಾಂಜು ಟವಲ್ ೧ಕ್ಕೆ	೦-೮-೦
ಬಿಳಿ ಪೋಸ್ಟು ಕಾರ್ಡು ಡಬ್ಬಲ್ ಕಲರ್ ೧,೦೦೦ಕ್ಕೆ	೧-೮-೦
ಸುಗಂಧ ಸಂಜೀವಿನಿ ಭೃಂಗಾಮಲಕ ತೈಲ ಶೀಶೆ ೧ಕ್ಕೆ	೦-೮-೦
ಮೆಂಥಾಲ್ ತಲೆ ನೋವಿಗೆ ಅನುಕೂಲವಾದ ಔಷಧ ಡಬ್ಬಿ ೧ಕ್ಕೆ	೦-೩-೦
ಸ್ಟ, ಸ್ಟ ಪರಿಮಳವಾದ ತಾಂಬೂಲ ಮಿಶ್ರನ ಪಾಕೆಟ್ ೧ಕ್ಕೆ	೦-೨-೦
ಲಿನನ್ ಕೈವಸ್ತ್ರಗಳು (ಚಂದವಾದ್ದು) ೧ಕ್ಕೆ	೦-೨-೦
ರಾಸ್ಕೋಪ್ ಸ್ಟ್ಯಾಂಡರ್ಡ್ ವಾಚು ೧ಕ್ಕೆ	೪-೦-೦
ಕೊಂಬಿನ ಬಾಚಣಿಗೆಗಳು ದೊಡ್ಡ ಸೈಜು ಡಜನ್ ೧ಕ್ಕೆ	೧-೧೦-೦
ಗಜಕರ್ಣದ ಮುಲಾಮು ಡಬ್ಬಿ ೧ಕ್ಕೆ	೦-೬-೦
೨೮೦ ಇಂಗ್ಲೀಷು ಅಕ್ಷರಗಳಿದ್ದಗಿರುವ ಸೆಟ್ಟಿಗೆ ೧ಕ್ಕೆ	೨-೮-೦

ಪರಸ್ಥಳದವರಿಗೆ ವಿ. ಪಿ. ಇಂದಲೂ ರವಾನಿಸುತ್ತೇವೆ.

ನಮ್ಮ ವಿಳಾಸ.—ದಿ ಉಲ್ಲನ್ ಮಾರ್ಟ್, ಮಂಗಳೂರು, ದ. ಕ.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವುದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ.

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು

ಆಹಾರದಲ್ಲಿ ರುಚಿ ಕಡಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION. 33-37

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ, ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸತೋರುವದು.

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖಿಸುತ್ತ ತೋರಿಸುವದು.

ಕೈಯಿಂದ ಮುಟ್ಟದೆ ತಯಾರಿಸಿದ್ದಲ್ಲ.

ಎಲ್ಲಾ ಔಷಧವಾರಾಟಗಾರರಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮಾಮನುಸ್ಸು ಇರುವ ಔಷಧವನ್ನೇ ಕೊಂಡುಕೊಳ್ಳಿ.

ಇಲ್ಲಿ ನೋಡಿ.

77-12

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ ಯೂರೋಪಿಯನ್ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ಲನ್ ದಾರದಿಂದ ತಯಾರಾಗುತ್ತವೆ. ಕ್ರಯ - ೧೨ ಆಣೆ ಮೊದಲ್ಗೊಂಡು ೧ ರೂ. ೧೨ ಆಣೆಯ ವರೆಗೆ. ೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು. ಈಗತಾನೇ ಇಂಗ್ಲೀಷ್ ಉಲ್ಲನ್ ದಾರವು ಬಂದಿದೆ. ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಲ್ಪಡುವುವು. ವಿಳಾಸ:— ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

48-29

ತಲೆನೋವು, ವಾಯುನೋವು, ಸಂಧಿ ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ಚರ್ಮರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗನುಸಾರದಂತೆ ಮಂತ್ರಶಕ್ತಿಯಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಮಂತ್ರಶಕ್ತಿಯಾಗಿ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ತೈಲದ ಶಕ್ತಿಯು ಅಮಿತವಾದದ್ದು. ಆದದ್ದರಿಂದಲೇ ಇದನ್ನು ಅಷ್ಟು ಹೆಚ್ಚಾಗಿ ಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಕೊಳ್ಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ.

ಕ್ರಯ ಶೀಸೆ ಒಂದಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಛಾರ್ಜು ಮಾಫಿಯಾಗುವುದು. ವ್ಯಾಪಾರಿಗಳಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,
೩೩, ಪೆದ್ದಮಲಿಪಿಳ್ಳೆ ಬೀದಿ, ಪೇರಿ, ಮದರಾಸ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇರುವುದು; ಬಿಡದೆ ಬಾಯಾರಿಕೆ; ಛಳಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣು ಮೊಬ್ಬು; ಕಾಲೆ ತರುಗುವಿಕೆ; ಮೈನೋವು ಕೀಲುನೋವು; ಮರವು; ನಿಶ್ಶಾಣ; ಇವೇ ಮೊದಲಾದುವು. ಅಲ್ಲದೆ ಮುಂದೆ ಮೂತ್ರಪಿಂಡವ್ರಣ, ವಾಯು, ಮೈಬಾವು, ಉದುಮೂತ್ರ, ಮೂತ್ರಕೋಶದ ಕಲ್ಲು ಕ್ರಯಿಸುತ್ತಿರುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳು ಈ ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-15]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೧೦—೦; ಅಥವಾ ೬ ಬುಡ್ಡಿಗಳಿಗೆ ೧೩, ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಫೋಸ್ಟರ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ.—ಇವರಲ್ಲಿ ದೊರೆಯುವುವು.

ವೃತ್ತಾಂತ ಪತ್ರಿಕೆ.

ಸನ್ ೧೯೦೮ ನೇ ಇಸವಿ ಡಿಸೆಂಬರ್ ತಾ ೧೦ ನೇ ಗುರುವಾರ

ಸರ್ಕಾರದವರೂ ಧಾರಣೆವಾಸಿಗಳೂ.

ದಿನ ಕಳೆದ ಹಾಗೆ ಮೈಸೂರು ಸಂಸ್ಥಾನದಲ್ಲಿ ಕಾಠಿಣ್ಯವು ಹೆಚ್ಚುತ್ತಾ ಬಂದಿರುವುದು. ದಿನಸಿಗಳ ಧಾರಣೆಯು ಜಾಸ್ತಿಯಾಗಿ ಪ್ರಜೆಗಳ ಜೀವನ ಕಷ್ಟವಾಗುತ್ತಿದೆ. ಕ್ಷಾಮ ಪ್ರಾಪ್ತವಾಗಿರತಕ್ಕ ಭಾಗಗಳಲ್ಲಿ ಪ್ರಜೆಗಳ ಕಷ್ಟನಿವಾರಣೆಗೆ ಮಾಡಬೇಕಾದ ಏರ್ಪಾಡುಗಳನ್ನು ಕುರಿತು ಚರ್ಚಿಸಿ ಗೊತ್ತುಮಾಡುವುದಕ್ಕೋಸ್ಕರ ಕಳೆದ ವಾರ ಬೆಂಗಳೂರಿನಲ್ಲಿ ಡೆಪ್ಯುಟಿ ಕಮಿಷನರುಗಳೆಲ್ಲಾ ಸೇರಿದ್ದರೆಂದು ತಿಳಿದು ಸಂತೋಷಪಡುತ್ತೇವೆ. ಪ್ರಜೆಗಳು ಮಾತನಾಡುವಲ್ಲೂ ಪತ್ರಿಕೆಗಳನ್ನು ಓದುವಲ್ಲೂ ಒಂದು ವಿಷಯ ಹೊರಪಡುತ್ತದೆ. ಗವರ್ನ್‌ಮೆಂಟಿನವರು ಅಲ್ಲಲ್ಲಿ ಧಾನ್ಯದ ಅಂಗಡಿಗಳನ್ನಿಟ್ಟು, ದಿನಸಿಗಳನ್ನು ಅಗ್ಗವಾಗಿ ಮಾರಬೇಕೆನ್ನುತ್ತಾರೆ. ಅಥವಾ, ವರ್ತಕರಿಗೆ ಕಟ್ಟು ಮಾಡಿ ಧಾರಣೆಯನ್ನು ನಿರ್ಧರಿಸಿ, ಅದಕ್ಕಿಂತ ಹೆಗ್ಗಾಗಿ ಮಾರದಂತೆ ವಿಧಿಸಬೇಕೆನ್ನುತ್ತಾರೆ. ಪೂರ್ವಕಾಲದಲ್ಲಿ ಹೀಗೆ ಮಾಡುತ್ತಿದ್ದರಲ್ಲಾ, ಈಗ ಯಾತಕ್ಕೆ ಆ ರೀತಿ ಮಾಡಬಾರದು ಎಂದು ಕೇಳುತ್ತಾರೆ. ದೃಷ್ಟಾಂತಕ್ಕಾಗಿ, ಸುಮಾರು ಆರುನೂರು ವರುಷಗಳ ಹಿಂದೆ ದೆಹಲಿ ಚಕ್ರವರ್ತಿಯಾಗಿದ್ದ ಅಲ್ಲಾ ಉದ್ದೀನನು ತನ್ನ ರಾಜಧಾನಿಯಲ್ಲಿ ಧಾರಣೆವಾಸಿಗಳನ್ನು ಕ್ರಮಪಡಿಸುತ್ತಿದ್ದನು; ಅಂದರೆ, ದಿನಸಿಗಳನ್ನೂ ಇತರ ಸರಕುಗಳನ್ನೂ ಇಷ್ಟಿಷ್ಟೇ ಬೆಲೆಗೆ ವಿಕ್ರಯಮಾಡಬೇಕೆಂದು ವರ್ತಕರಿಗೆ ಆಜ್ಞೆಮಾಡುತ್ತಿದ್ದನು. ಅಂಗಡಿಗಳ ಜೌಕಕ್ಕೆ ದವಸಗಳನ್ನು ಸಾಗಿಸಿಕೊಂಡು ಬರುವುದಕ್ಕೆ ಅನೇಕ ಹೇರು ಎತ್ತುಗಳನ್ನು ಇಟ್ಟಿದ್ದನು. ಪ್ರತಿ ಒಬ್ಬ ವರ್ತಕನೂ ಸರ್ಕಾರದ ಪಟದಂತೆಯೇ ಬೆಲೆ ವಿಧಿಸಬೇಕು. ಇಲ್ಲವೇ, ಹೆಚ್ಚು ಮಾಡಿದ ವರ್ತಕರು ಶಿಕ್ಷೆಗೆ ಗುರಿಯಾಗಬೇಕು. ಈ ರೀತಿಯಾದ ಏರ್ಪಾಡು ಇದ್ದಿತು.

ಸ್ವಲ್ಪ ಆಲೋಚಿಸಿ ನೋಡಿದರೆ ಈ ರೀತಿಯಾದ ಏರ್ಪಾಡು ಒಳ್ಳೆಯದಲ್ಲವೆಂದು ಗೊತ್ತಾಗುವುದು. ಮೈಸೂರು ಗವರ್ನ್‌ಮೆಂಟಿನವರು ಇದಕ್ಕೆ ತಕ್ಕಂತೆ ಏರ್ಪಾಡು ಮಾಡಿಟ್ಟು ವರ್ತಕರಿಗೆ ಕಟ್ಟು ಮಾಡಿದ ಪಕ್ಷದಲ್ಲಿ ಬೆಂಗಳೂರಿನಲ್ಲಿರುವ ಪ್ರಜೆಗಳಿಗೂ ಮೈಸೂರಿನ [illegible] ದಿನಸುಗಳು ಅಗ್ಗವಾಗಿ ದೊರಕುವಂತೆ ಮಾಡಬಹುದು. ಆದರೆ ಈ ಸಂಸ್ಥಾನದ ಇತರ ಭಾಗಗಳ ಗತಿ ಏನು? ಅವರು ಹೊಟ್ಟೆಗಿಲ್ಲದೆ ಸಾಯಬೇಕೇ? ಈ ಅಲ್ಲಾಉದ್ದೀನನ ಏರ್ಪಾಡಿನಿಂದ ಅಪಾರವಾದ ಪ್ರಜೆಗಳಿಗೆ ಯಾವ ಉಪಕಾರ ಮಾಡಿದಂತಾಯಿತು?

ಈಗಿನ ಇಂಡಿಯಾ ಗವರ್ನ್‌ಮೆಂಟಿನವರು ಧಾನ್ಯಗಳ ಅಂಗಡಿ ಇಡದೆಯೂ, ವರ್ತಕರಿಗೆ ಕಟ್ಟು ಮಾಡದೆಯೂ ಇರುವುದಕ್ಕೆ ಎರಡು ಕಾರಣಗಳುಂಟು. ಮೊದಲನೆಯದಾಗಿ, ಗವರ್ನ್‌ಮೆಂಟಿನವರು ಕೊಂಡು ಮಾರುವ ಕೆಲಸದಲ್ಲಿ ಪ್ರವರ್ತಿಸಬಾರದು. ಅವರು ಆ ಕೆಲಸವನ್ನು ವರ್ತಕರಿಗೆ ಬಿಟ್ಟು, ಅನ್ಯ ಕೆಲಸಗಳಲ್ಲಿ ಇಷ್ಟನ್ನು ಮಾತ್ರ ತಾವು ವಹಿಸಿಕೊಳ್ಳುವುದೇ ಉತ್ತಮವೆಂದು ಅನುಭವಪೂರ್ವಕವಾಗಿ ಗೊತ್ತಾಗಿದೆ. ಎರಡನೆಯದಾಗಿ ಎಲ್ಲಾ ದಿನಸಿ ಧಾರಣೆವಾಸಿಯನ್ನೂ ಒಂದೇ ರೀತಿಯಾಗಿ ಮಾಡಿಡುವುದು ಗವರ್ನ್‌ಮೆಂಟಿಗೆ ಸಾಧ್ಯವಲ್ಲ. ಅರ್ಥಶಾಸ್ತ್ರ ರೀತಿಯಲ್ಲಿ ಧಾರಣೆವಾಸಿಯು ಪದಾರ್ಥದ ಆವಶ್ಯಕತೆ, ಅನಾವಶ್ಯಕತೆಯ ಮೇಲೂ, ಅದು ಸಿಗುವುದರ ಮೇಲೂ ನಿಗದಿಯಾಗುವುದು. ಹ್ಯಾಗೆಂದರೆ, ಪದಾರ್ಥವು ಹೇರಳವಾದ ಪಕ್ಷದಲ್ಲಿ ಧಾರಣೆ ಇಳಿಯುತ್ತದೆ, ಅದು ಸಿಗುವುದು ಕಡಿಮೆಯಾದರೆ ಧಾರಣೆ ಹೆಚ್ಚುತ್ತದೆ. ಕ್ಷಾಮ ಪ್ರಾಪ್ತವಾದಾಗ, ದಿನಸಿಗಳು ಬೆಳೆಯದೆ ಹೋಗಿರೋಣದರಿಂದಲೇ ಧಾರಣೆವಾಸಿಗಳು ಏರಿಹೋಗುವವು. ಗವರ್ನ್‌ಮೆಂಟಿನವರು ಅದನ್ನು ತಪ್ಪಿಸಲಾರರು.

ಈಗ ಹಿಂದೂಸ್ಥಾನದಲ್ಲಿ ರಸ್ತೆಗಳೂ ರೈಲು ಮಾರ್ಗಗಳೂ ಹೇರಳವಾಗಿರೋಣದರಿಂದ ಅವುದು ರಪ್ತಿಗೆ ತುಂಬಾ ಸಹಾಯವಾಗಿದೆ ಎಂತಲೂ, ಹೀಗಿರುವಲ್ಲಿ ಧಾರಣೆವಾಸಿಗಳು ಊರಿಂದೂರಿಗೆ ಒಂದೇ ರೀತಿ ಇರಬೇಕೆಂತಲೂ ಕೆಲವರು ಯೋಚಿಸಬಹುದು. ಮೊದಲಾ, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ದವಸಗಳು ಬಹಳ ಪುಷ್ಕಳವಾಗಿ ಬೆಳೆದಿವೆ ಎಂದೂ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ದುರ್ಭಿಕ್ಷ ಪ್ರಾಪ್ತವಾಗಿದೆ ಎಂದೂ ಇಟ್ಟುಕೊಳ್ಳೋಣ. ಮೊದಲು ಮೊದಲು ಬೆಂಗಳೂರಿಗೂ ಮೈಸೂರಿಗೂ ಧಾರಣೆಗಳು ಹೆಚ್ಚುಹೆಚ್ಚಾಗಿರಬಹುದು; ಅಂದರೆ, ಪ್ರಾರಂಭದಲ್ಲಿ ಮೈಸೂರಿಗಿಂತಲೂ ಬೆಂಗಳೂರಿನಲ್ಲಿ ದಿನಸಿ ಅಗ್ಗವಾಗಿದ್ದೀತು. ಆದರೆ ಸ್ವಲ್ಪ ಕಾಲದಲ್ಲೇ ಬೆಂಗಳೂರಿನಿಂದ ಧಾನ್ಯವು ಮೈಸೂರಿಗೆ ರಫ್ತಾಗುವುದು. ಬೆಂಗಳೂರಿನಲ್ಲಿ ಧಾನ್ಯ ಕಡಮೆಯಾಗಿ, ಮೈಸೂರಿನಲ್ಲಿ ಹೆಚ್ಚಾಗಿ, ಕಡೆಗೆ ಎರಡು ಕಡೆಗಳಲ್ಲೂ ಧಾರಣೆಗಳು ಸ್ವಲ್ಪ ಹೆಚ್ಚುಕಡಮೆ ಒಂದೇ ರೀತಿ ಆಗುತ್ತವೆ. ಹಿಂದೂಸ್ಥಾನದಲ್ಲಿ ಈಗ ರಫ್ತಿಗೆ ಅನುಕೂಲವಿರುವಂಥಾ ಎಲ್ಲಾ ಕಡೆಗಳಲ್ಲೂ ಧಾರಣೆಗಳು ಸಮ್ಮಸ್ಥಕ್ಕೆ ತಾನೇ ಬರುವವೆಂತಲೂ ಇಳಿಯುವವೆಂತಲೂ ತಿಳಿದುಕೊಳ್ಳಬಹುದು.

ಆದರೆ ಕೆಲವು ಕಡೆಗಳಲ್ಲಿ ವರ್ತಕರು ಧಾನ್ಯವನ್ನು ಕೂಡಿಸಿಟ್ಟುಕೊಂಡು ಧಾರಣೆಗಳನ್ನು ಹೆಚ್ಚಿಸಿ ತುಂಬಾ ಲಾಭ ಸಂಪಾದನೆಮಾಡುತ್ತಾರೆಂತಲೂ, ಬಡವರಿಗೆ ಬಹಳ ಕಷ್ಟವಾಗುವುದೆಂತಲೂ ಹೇಳುವರು. ಇದರಿಂದ "ವರ್ತಕರು ಹೀಗೆ ಮಾಡುವುದು ಸಾಧ್ಯವೇ?" ಎಂಬ ಪ್ರಶ್ನೆ ಹುಟ್ಟುವುದು. ದೊಡ್ಡ ಪಟ್ಟಣಗಳಲ್ಲಿ ಹೀಗೆ ಮಾಡುವುದು ಸಾಧ್ಯವಲ್ಲವೆಂದು ನಮಗೆ ತೋರುತ್ತಿದೆ. ಅಲ್ಲಿ ವರ್ತಕರು ಬಹು ಮಂದಿ ಇರುವರು; ಅವರವರಲ್ಲೇ ಪೋಟಾಪೋಟಿ ಹುಟ್ಟುವುದರಲ್ಲಿ ಸಂಶಯವಿಲ್ಲ. ಒಬ್ಬನೋ ಇಬ್ಬರೋ ಕೆಲವರೋ ಧಾರಣೆ ಹೆಚ್ಚಿಸಬೇಕೆಂದು ಪ್ರಯತ್ನಪಟ್ಟರೆ, ಇನ್ನೊಬ್ಬನೋ ಅಥವಾ ಇನ್ನು ಕೆಲವರೋ ಅದನ್ನು ತಗ್ಗಿಸಿ ಗಿರಾಕಿಯನ್ನೆಲ್ಲಾ ತಾವೇ ಇಟ್ಟುಕೊಂಡು ಲಾಭ ಸಂಪಾದಿಸುವುದಕ್ಕೆ ಪ್ರಯತ್ನಪಡುವರು. ಜನರಾದರೋ ಅಗ್ಗದ ಅಂಗಡಿ ಯಾವುದೆಂದೇ ಹುಡುಕಿಕೊಂಡು ಹೋಗುತ್ತಾರೆ. ಸಣ್ಣ ಕೆಲವು ಕಡೆ ವರ್ತಕರು ಕೆಲವರು ಮಾತ್ರ ಇರುವರು; ಎಲ್ಲಾ ಒಂದೇ ಜಾತಿಯವರಾಗಿಯೂ ಇರಬಹುದು. ಇವರೆಲ್ಲಾ ಒಗ್ಗಟ್ಟಾಗಿ ಧಾರಣೆಯನ್ನು ಹೆಚ್ಚಿಸಬೇಕೆಂದು ಒಪ್ಪಂದ ಮಾಡಿಕೊಂಡು, ಹೊರಗಿನಿಂದ ಧಾನ್ಯವನ್ನು ತರಿಸದೆ, ತಮ್ಮಲ್ಲಿ ಕೂಡಿಸಿಟ್ಟಿರುವುದನ್ನೇ ವಿಕ್ರಯಮಾಡಿ ಲಾಭಸಂಪಾದಿಸಬಹುದು. ಅಂಥಾ ಊರುಗಳಲ್ಲಿರತಕ್ಕ ಜನರೆಲ್ಲಾ ಮೂಢರೆಂದೂ, ಇತರ ಕಡೆಗಳಲ್ಲಿ ದವಸ ಅಗ್ಗವಾಗಿ ಸಿಕ್ಕುತ್ತಿರುವುದನ್ನು ಅರಿಯಲಾರದವರೆಂದೂ ಹೇಳಬಹುದೇ? ಒಂದು ವೇಳೆ ಅಗ್ಗವಾಗಿ ಸಿಕ್ಕುವ ಸ್ಥಳ ತಿಳಿದಿದ್ದರೂ ತರಿಸುವುದಕ್ಕೆ ಅವರ ಬಳಿ ಬಂಡವಾಳವಾಗಲಿ, ವ್ಯಾಪಾರದ ಅನುಭವವಾಗಲಿ, ಧೈರ್ಯಸಾಮರ್ಥ್ಯಾದಿಗಳಾಗಲಿ ಇಲ್ಲದಿರಬಹುದು. ಇಂಥಾ ಸಂದರ್ಭಗಳಲ್ಲಿ ಅಂದರೆ, ಕೆಲವು ಸ್ಥಳಗಳಲ್ಲಿ ಮಾತ್ರ ವರ್ತಕರು ಧಾರಣೆಯನ್ನು ಬೇಕೆಂದು ಹೆಚ್ಚಿಸುವುದು ಸಾಧ್ಯವೆಂದು ನಮಗೆ ಕಾಣುತ್ತದೆ.

ಈ ಸಂಸ್ಥಾನದಲ್ಲಿ ವರ್ತಕರು ಹೀಗೇನಾದರೂ ಮಾಡುತ್ತಿದ್ದಾರೆಂದು ಗವರ್ನ್‌ಮೆಂಟಿನವರಿಗೆ ತಿಳಿದುಬಂದ ಪಕ್ಷದಲ್ಲಿ ಅವರೇ ಧಾನ್ಯವನ್ನು ಅಗ್ಗವಾದ ಕಡೆಯಿಂದ ಕೊಂಡು ತರಿಸಿ ಅಂಗಡಿಗಳನ್ನಿಡಿಸಿ ಬಡವರಿಗೆ ವಿಕ್ರಯ ಮಾಡಿಸುವುದೇನೂ ಅನ್ಯಾಯವಲ್ಲವೆಂದು ಹೇಳುತ್ತೇವೆ. ಆದರೆ ಅವರು ಧಾನ್ಯವನ್ನು ನಷ್ಟಕ್ಕೆ ಮಾರಲೇ ಕೂಡದು. ಇದರಿಂದ ಸರ್ಕಾರಕ್ಕೆ ನಷ್ಟವಾಗುವುದೆಂದು ಗೊತ್ತಾದ ಪಕ್ಷದಲ್ಲಿ ವರ್ತಕರು ಬೇಕೆಂದು ಧಾರಣೆಯನ್ನು ಹೆಚ್ಚಿಸಿದಾರೆಂಬ ಮಾತು ಸಹಜವಾಗಲಾರದು.

ಈ ವಿಚಾರವಾಗಿ ಕೋಲಾರದ ಡೆಪ್ಯುಟಿ ಕಮಿಷನರವರು ಹೇಳಿದ್ದನ್ನು ಓದಿ ಸಂತೋಷಪಟ್ಟೆವು. ಅದನ್ನು ಇಲ್ಲಿ ಉದಾಹರಿಸಿ ಮುಗಿಸುವೆವು. ಅವರು ವರ್ತಕರಿಗೆ ತಿಳಿಸಿದ ಮುಖ್ಯಾಭಿಪ್ರಾಯವೇನೆಂದರೆ—ವರ್ತಕರಿರಾ, ಧಾನ್ಯವನ್ನು ನಿಮಗೆ ಸಾಧ್ಯವಾಗುವಮಟ್ಟಿಗೂ ಅಗ್ಗವಾಗಿ ವಿಕ್ರಯ ಮಾಡಿ. ಅನೇಕಾನೇಕ ವರ್ತಕರೂ ಸಾಹುಕಾರರೂ ಸತ್ರ ದೇವಸ್ಥಾನಗಳನ್ನೂ ಸೇತುವೆ ಕೆರೆಕಟ್ಟೆ ಧರ್ಮಶಾಲೆಗಳನ್ನೂ ಕಟ್ಟಿಸಿ ತಮ್ಮ ಧರ್ಮಬುದ್ಧಿಯನ್ನೂ ಪರೋಪಕಾರ ಚಿಂತನೆಯನ್ನೂ ಪ್ರಕಾಶಪಡಿಸಿರುತ್ತಾರೆ. ಈಗಿನ ಕಾಲದಲ್ಲಿ ವರ್ತಕರು ಸ್ವಲ್ಪ ಲಾಭಕ್ಕೆ ದವಸವನ್ನು ವಿಕ್ರಯ ಮಾಡುವುದರಲ್ಲೂ ಮತ್ತು ಕಷ್ಟಪಡುತ್ತಿರುವ ಬಡ ಪ್ರಜೆಗಳಿಗೆ ಲಾಭವಿಲ್ಲದೇನೇ ವಿಕ್ರಯ ಮಾಡುವುದರಲ್ಲೂ ಬಹಳ ಸಂಪಾದನೆಯಾಗುವುದರಲ್ಲಿ ಸಂಶಯವಿಲ್ಲ. ಇದರಲ್ಲಿ ವರ್ತಕರಿಗೆ ಉಂಟಾಗುವಷ್ಟು ಪುಣ್ಯವು ಮತ್ಯಾವ ಕಾರ್ಯದಲ್ಲೂ ದೊರಕಲಾರದು. ಸರ್ಕಾರದವರು ಪ್ರವರ್ತಿಸಿ ಏರ್ಪಡಿಸುವುದಕ್ಕಿಂತಲೂ ವರ್ತಕರು ತಾವಾಗಿಯೇ ಮುಂದಾಳುಗಳಾಗಿ ನಿಂತು ಈ ಕೆಲಸವನ್ನು ನೆರವೇರಿಸಬೇಕಾಗಿದೆ.

ಬಳಿಸೇರಿದ ವೃತ್ತಾಂತಗಳು.

ಚನ್ನಪಟ್ಟಣದ ಅಮಲ್ದಾರ್ ಮ॥ ರಂಗನಾಥರಾವ್ ಸಾಹೇಬ್‌ರವರನ್ನು [illegible] ಕಲೆಕ್ಟರಾಗಿ ನೇಮಕವಾಗಿರುತ್ತಾರೆ.

ಮೈಸೂರು ಡಿಸ್ಟ್ರಿಕ್ಟ್ ಕಾರ್ಯದರ್ಶಿ ಶಿರಸ್ತೇದಾರ್ ಮ॥ ಕೆ ಎಸ್. ನಾರಾಯಣನ್, ಗಾರ್ಡನ್ ಸುಪರಿಂಟೆಂಡ್ ಕೆಲಸಕ್ಕೆ ಬದಲಾವಣೆ [illegible] ವರ್ಗಮಾಡಿರುತ್ತಾರೆ.

ಚಾಮರಾಜನಗರದಲ್ಲಿ ಕಳೆದ ವಾರ ಒಬ್ಬ ಹೆಂಗಸು ಮನೆಯೊಳಗೆ ನೇಣು ಹಾಕಿಕೊಂಡು ಆತ್ಮಹತ್ಯ ಮಾಡಿಕೊಳ್ಳುತ್ತಿದ್ದ ವೇಳೆ ಮನೆಯವರಿಗೆ ಗೊತ್ತಾಗಿ ಅವಳನ್ನು ಕೆಳಕ್ಕೆ ಇಳಿಸಿಕೊಂಡರೆಂದೂ, ಪೋಲೀಸಿನವರು ತನಿಖೆಮಾಡುತ್ತಿದ್ದಾರೆಂದೂ ಪ್ರಕಟವಾಗಿದೆ.

ಈ ಸಲ ನಡೆದ ಸರ್ಕಾರಿ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಆರ್. ವಿ. ಅನಂತರಾಮಯ್ಯ ಮತ್ತು ಎ. ವಿ. ರಾಮನಾಥನ್ ಎಂಬ ಉಮೇದುವಾರರು ತೇರ್ಗಡೆ ಹೊಂದಿದ್ದರಿಂದ ಅವರನ್ನು ಗವರ್ನ್‌ಮೆಂಟಿನವರು ಪ್ರೊ. ಅಸಿಸ್ಟೆಂಟ್ ಕಮಿಷನರ ದರ್ಜೆಗೆ ನೇಮಕ ಮಾಡಿರುತ್ತಾರೆ.

ಕಳೆದ ಸೋಮವಾರ ಬೆಂಗಳೂರಿನಲ್ಲಿ ದಿವಾನರವರೂ, ಕೌನ್ಸಿಲ್ ಮೆಂಬರುಗಳೂ, ರೆವಿನ್ಯೂ ಕಮಿಷನರವರೂ, ಎಲ್ಲಾ ಡೆಪ್ಯುಟಿ ಕಮಿಷನರುಗಳೂ ಸೇರಿ ಈಗಿನ ಕ್ಷಾಮದ ವಿಚಾರವಾಗಿ ಒಂದು ಮೀಟಿಂಗ್ ನಡೆಸಿದರೆಂತಲೂ, ಅಲ್ಲಿ ನಡೆದದ್ದನ್ನು ಇನ್ನೂ ಬಹಿರಂಗ ಪಡಿಸಲಿಲ್ಲವೆಂತಲೂ ತಿಳಿದುಬಂದಿದೆ.

ಮಡಕೇರಿಗೆ ಸೇರಿದ ಮೂರ್ನಾಡಿನ ಬಳಿ ೬ ಮೈಲಿ ಗ್ರಾಮದಲ್ಲಿ ಒಬ್ಬ ಮನುಷ್ಯನು ತನ್ನ ಹೆಂಡತಿಯನ್ನು ಕೊಂದುಹಾಕಿ, ತರುವಾಯ ನೆರಮನೆಯೊಳಕ್ಕೆ ನುಗ್ಗಿ ತನ್ನ ಸ್ನೇಹಿತನ ಹೆಂಡತಿಯನ್ನು ಕಡಿದುಬಿಟ್ಟು, ಮಕ್ಕಳು ಮಲಗಿದ್ದ ಕೊಠಡಿಗೆ ಹೋಗಿ ಅಲ್ಲಿ ತಾನೂ ಆತ್ಮಹತ್ಯ ಮಾಡಿಕೊಂಡನು.

ರಾಜಧಾನಿಯಲ್ಲಿ ಕಳೆದ ಮಂಗಳವಾರ ಸಾಯಂಕಾಲ ಬಸ್ತೀ ಗುಡಿಯ ಬಳಿ ಎರಡು ಮನೆಗಳು ಬೆಂಕಿಬಿದ್ದು ಅರೆವಾಸಿ ಸುಡುವಷ್ಟರಲ್ಲಿ ಜನರು ಸೇರಿ ಉರಿಯನ್ನು ಆರಿಸಿದರು. ಬಿಲುಕುಂದವೆಂಬ ಗ್ರಾಮದಲ್ಲಿ ಒಂದು ವಾರದ ಹಿಂದೆ ಎರಡು ಸಾಲಿನ ಮನೆಗಳು ಸುಟ್ಟುಹೋದವೆಂದು ತಿಳಿದುಬಂದಿದೆ.

ಬೆಂಗಳೂರು ದಂಡಿಗೆ ಸೇರಿದ ಬ್ಲಾಕ್‌ಪಲ್ಲಿಯೊಳಗೆ ಒತ್ತಾದ ಮನೆಗಳನ್ನು ಒಡೆದು ಆರೋಗ್ಯಕರವಾದ ಏರ್ಪಾಡುಗಳನ್ನು ಮಾಡಿಸುವುದಕ್ಕೆ ಮ್ಯುನಿಸಿಪಾಲಿಟಿಯವರು ೧,೫೬,೧೪೯ ರೂಪಾಯಿನ ಅಂದಾಜು ಪಟ್ಟಿಯನ್ನು ಸ್ಯಾಂಕ್ಷನ್ ಮಾಡಿದರು. ಈ ವೈಕಿ ಸದ್ಯದಲ್ಲಿ ಒಂದು ಲಕ್ಷ ರೂಪಾಯನ್ನು ಮಾತ್ರ ಆ ಕೆಲಸಕ್ಕೆ ವಿನಿಯೋಗಮಾಡುವವರಾಗಿದ್ದಾರೆ.

ಮಹಾಮಾತೃಶ್ರೀಯವರು ಕಳೆದ ಭಾನುವಾರ ಮಧ್ಯಾಹ್ನ ಮೋಟಾರ್ ಗಾಡಿಯಲ್ಲಿ ಪರಿವಾರ ಸಹಿತ ನಂಜನಗೂಡಿಗೆ ದಯಮಾಡಿ ಒಂದು ದಿನ ಇದ್ದು, ಸೋಮವಾರ ಸಾಯಂಕಾಲ ರಾಜಧಾನಿಗೆ ವಾಪಸು ಬಂದರು. ಅವರು ನಾಳೆಯ ದಿನ ತಲಕಾಡು ಪುರುಷಕರೊಡನೆ ಪ್ರಾಂತ್ಯ ದಯಮಾಡಿ ದೇವರ ಸೇವೆಯನ್ನು ನೆರವೇರಿಸಿಕೊಂಡು, ಚಿಕ್ಕಗೌಡನ ಪುರದೊಂಬಲ್ಲಿ ಸ್ವಾಮಿಗಳ ಆತಿಥ್ಯವನ್ನು ಸ್ವೀಕರಿಸಿ ವಾಪಸು ಬರುವರೆಂತಲೂ, ಶ್ರೀಮನ್ಮಹಾರಾಜರವರೂ ಶ್ರೀಮನ್ ಯುವರಾಜರವರೂ ಆಗ ಬೆಂಗಳೂರಿನಿಂದ ನೆಟ್ಟಗೆ ಮೋಟಾರ್ ಗಾಡಿಯಲ್ಲಿ ಮದ್ದೂರಿನ ಮೂಲಕ ಅಲ್ಲಿಗೆ ಚಿತ್ತೈಸುವರೆಂತಲೂ ಕೇಳುತ್ತೇವೆ.

ಕಳೆದ ಗುರುವಾರ ರಾಜಧಾನಿಯಲ್ಲಿ ಪುರಜನರೂ ಅಧಿಕಾರಿಗಳೂ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ಆಹಾರ ದಿನಸುಗಳು ಪ್ರಿಯವಾಗಿರೋಣದರಿಂದ ಬಡವರ ಜೀವನಕ್ಕೆ ಸಹಾಯಮಾಡಬೇಕೆಂದು ಗೊತ್ತುಮಾಡಿ, ಅಗ್ಗವಾಗಿ ಧಾನ್ಯವನ್ನು ಅಂಗಡಿ ಇಟ್ಟು ವಿಕ್ರಯಮಾಡಿಸಬೇಕೆಂತಲೂ, ಇದಕ್ಕಾಗಿ ಪುಣ್ಯವಂತರಿಂದ ಧರ್ಮದ ಹಣವನ್ನು ಕೂಡಿಸಬೇಕೆಂತಲೂ ತೀರ್ಮಾನಮಾಡಿದರು. ಇದಕ್ಕಾಗಿ ಗೊತ್ತುಮಾಡಲ್ಪಟ್ಟ ಕಮಿಟಿಯವರು ಆ ಲಾಗಾಯತು ದಿನಾಲು ಮೀಟಿಂಗ್ ಮಾಡುತ್ತಿದಾರೆ. ಚಂದಾ ಹಣವನ್ನು ಎತ್ತುವುದಕ್ಕೆ ಏರ್ಪಾಡು ಮಾಡಿರುವರು. ರಾಗಿಯನ್ನು ಸಾಹುಕಾರ್ ಬನಮ್ಮಯನವರ ಮೂಲಕ ತರಿಸಿ, ಈ ತಿಂಗಳ ಸುಮಾರು ೧೫ ನೇ ತಾ ನಿಂದ ರೂಪಾಯಿಗೆ ೧೨ ಸೇರಿನಂತೆ ಬಡವರಿಗೆ ವಿಕ್ರಯ ಮಾಡಿಸುವಂತೆ ಗೊತ್ತುಮಾಡಿರುವರು.

ಮೈಸೂರು ಸರ್ಕಾರಿ ಆಯುರ್ವೇದ ವಿದ್ಯಾಶಾಲೆಯು ರಾಜಧಾನಿಯಲ್ಲಿ ಸ್ಥಾಪಿಸಲ್ಪಟ್ಟು ೧೯೦೯ ನೇ ಜನವರಿ ಪ್ರಾರಂಭದಿಂದ ಪಾಠಪ್ರವಚನಗಳು ನಡೆಯುವವು. ವಿದ್ಯಾರ್ಥಿಗಳು ಸಂಸ್ಕೃತದಲ್ಲಿ ಕಾವ್ಯವನ್ನು ಓದುವ ಮಟ್ಟಿಗೆ ಯೋಗ್ಯತೆಯನ್ನು ಸಂಪಾದಿಸಿಕೊಂಡಿರಬೇಕಲ್ಲದೆ ಇಂಗ್ಲಿಷಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು. ವಿದ್ಯಾರ್ಥಿಗಳಿಗೆಲ್ಲಾ ಮೈಸೂರು ವಿದ್ಯಾಶಾಲೆಯಲ್ಲಿ ಈ ತಿಂಗಳ ೧೯ ನೇ ತಾ ಶನಿವಾರ ಇಂಗ್ಲಿಷಿನಲ್ಲೂ ಸಂಸ್ಕೃತದಲ್ಲೂ ಎರಡು ಪ್ರಶ್ನಪತ್ರಿಕೆಗಳನ್ನು ಕೊಟ್ಟು ಪರೀಕ್ಷೆ ಮಾಡುವರು. ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರನ್ನು ನಾಲ್ಕು ವರುಷ ವೈದ್ಯ ವಿದ್ಯಾಶಾಲೆಯಲ್ಲಿ ವಿದ್ಯಾರ್ಥಿಗಳಾಗಿ ಸೇರಿಸಿಕೊಳ್ಳುವರು. ಹತ್ತು ಮಂದಿ ವಿದ್ಯಾರ್ಥಿಗಳಿಗೆ ಮೊದಲನೆ ವರುಷ ತಿಂಗಳಿಗೆ ತಲಾ ೮ ರೂಪಾಯಿನಂತೆಯೂ, ಎರಡನೇ ವರುಷ ೧೦ ರೂಪಾಯಿನಂತೆಯೂ ಕಡೆಯ ಎರಡು ವರುಷಗಳೂ ೧೨ ರೂಪಾಯಿನಂತೆಯೂ ವೇತನಗಳನ್ನು ಕೊಡುವಂತೆ ಗೊತ್ತುಮಾಡಿದಾರೆ.

ಮೈಸೂರು ಗೆಜೆಟ್ ಸಂಗ್ರಹ.

ಮ॥ ಎಚ್. ಎಫ್. ಮಾರ್ಷಲ್ ರವರು ಪ್ರಿವಿಲೇಜ್ ರಜಾ ಪಡೆದುಕೊಂಡಿರೋಣದರಿಂದ ಸ್ಯಾನಿಟರಿ ಡಿವಿಜನ್ ಸಬ್ ಆ ಇಂಜನಿಯರ್ ಮ॥ ಎನ್. ಸಿ. ಕೃಷ್ಣಯ್ಯಂಗಾರ್ರನ್ನು ಹಂಗಾಮಿಯಾಗಿ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಛೇರ್ಮನ್‌ರವರ ಅಧೀನಕ್ಕೆ ಕೊಟ್ಟಿದೆ.

ಸಬ್ ರೆಜಿಸ್ಟ್ರಾರ್ ಮ॥ [illegible] ರವರನ್ನು ಕೋಲಾರ್ ತಾಲ್ಲೂಕ್ ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ [illegible].

ಮೈಸೂರು ಮಹಾರಾಜಾ ಕಾಲೇಜಿನ ಹಿಂದೂಸ್ಥಾನಿ ಮುನ್ಷಿ ಮ॥ ಸುಲ್ತಾನ್ ಮಹಮದ್ ಖಾನ್ ರವರನ್ನು ಮೈಸೂರು ಟೆಕ್ಸ್ಟ್ ಬುಕ್ ಕಮಿಟಿಯ ಮೆಂಬರಾಗಿ ನೇಮಕಮಾಡಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮ॥ ಹಸನ್ ಅಲಿಯವರಿಗೆ ಕೊಟ್ಟಿರುವ ಒಂಬತ್ತು ದಿನಗಳ ಪ್ರಿವಿಲೇಜ್ ರಜವನ್ನು ಇನ್ನೊಂದು ದಿನ ಜಾಸ್ತಿ ಮಾಡಿದೆ.

ತುಮಕೂರು ಡಿಸ್ಟ್ರಿಕ್ಟ್ ಖಜಾನೆಯ ಚಾರ್ಜನ್ನು ವಹಿಸಿರುವ ಪ್ರೊ॥ ಅ॥ ಕಮಿಷನರ್ ಮ॥ ಡಿ. ಶ್ರೀನಿವಾಸಯ್ಯಂಗಾರ್ರಿಗೆ ಮೂರು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು.

ಸ್ಟೇಟ್ ಹುಜೂರ್ ಖಜಾನಾ ಇನ್‌ಛಾರ್ಜ್ ಆಫೀಸರ್ ಮ॥ ಕೆ ಕೃಷ್ಣಯ್ಯರವರಿಗೆ ಕ್ರಿಸ್‌ಮಸ್ ರಜಾದೊಂದಿಗೆ ನಾಲ್ವತ್ತೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಕೊಪ್ಪಾ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮ॥ ಎಸ್. ಅನಂತರಾಮಯ್ಯಂಗಾರ್ರಿಗೆ ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ವಹಿಸಲ್ಪಟ್ಟಿವೆ.

ಮುಂದೆ ಹೇಳುವ ಸಬ್ ರೆಜಿಸ್ಟ್ರಾರುಗಳ ವರ್ಗಾವರ್ಗಿ ಹುಕುಂ ಮಾಡಿದೆ:—(೧) ಎಂ. ಶ್ರೀನಿವಾಸ ಮೂರ್ತಿಯವರನ್ನು ತೀರ್ಥಹಳ್ಳಿಯಿಂದ ಕುಂಸಿಪೇಟೆಗೆ; (೨) ಎಂ. ನಾರಾಯಣರಾಯರನ್ನು ಕುಂಸಿಪೇಟೆಯಿಂದ ತೀರ್ಥಹಳ್ಳಿಗೆ.

ಅ॥ ಕಮಿಷನರ್ ಮ॥ ಬಿ. ರಾಮಣ್ಣನವರನ್ನು ಹಂಗಾಮಿಯಾಗಿ ಎಕ್ಸೈಸ್ ಕಮಿಷನರವರ ಆಫೀಸ್ ಅಸಿಸ್ಟೆಂಟ್ ಕೆಲಸಕ್ಕೆ ವರ್ಗಮಾಡಿದೆ. ಇವರು ನವಂಬರ್ ತಾ. ೨೫ ರಲ್ಲಿ ಕೆಲಸದ ಮೇಲೆ ಹಾಜರಾದರು. ಇವರಿಗೆ ಕೊಡಲ್ಪಟ್ಟಿದ್ದ ಪ್ರಿವಿಲೇಜ್ ರಜದ ವೈಕಿ ಇನ್ನುಳಿದ ದಿನಗಳ ರಜವನ್ನು ವಜಾ ಮಾಡಿದೆ.

ಡೆಪ್ಯುಟಿ ಕಮಿಷನರ್ ಮ॥ ಎಂ. ನಾರಾಯಣರಾಯರು ಆಕ್ಟಿಂಗ್ ಎಕ್ಸೈಸ್ ಕಮಿಷನರಾಗಿದ್ದ ವೇಳೆಯಲ್ಲಿ ಹಂಗಾಮಿಯಾಗಿ ಮುಂದೆ ಹೇಳುವ ಡೆಪ್ಯುಟಿ ಕಮಿಷನರುಗಳ ಬಡ್ತಿಗಳು ಹುಕುಂ ಮಾಡಲ್ಪಟ್ಟಿವೆ.—(೧) ಮ॥ ಪಿ. ಆರ್. ಡಬ್ಲ್ಯು. ವೆದರಾಲ್ ರವರನ್ನು ೨ ರಿಂದ ೧ ನೇ ಕ್ಲಾಸಿಗೆ; (೨) ಮ॥ ಎಂ. ಚೆಂಗೈಯ ಚೆಟ್ಟಿಯವರನ್ನು ೩ ರಿಂದ ೨ ನೇ ಕ್ಲಾಸಿಗೆ.

ಒಂದು ವರುಷವೂ ಮೂರು ತಿಂಗಳ ಫರ್ಲೋ ರಜ ಪಡೆದುಕೊಂಡಿದ್ದ ಎಗ್ಸಿಕ್ಯುಟಿವ್ ಇಂಜನಿಯರ್ ಮ॥ ಎಚ್. ಜೆ. ಮಲ್ಲಪ್ಪಯ್ಯನವರು ಕೆಲಸದ ಮೇಲೆ ಹಾಜರಾದದ್ದರಿಂದ ಅವರನ್ನು ಕಡೂರು ಡಿವಿಜನ್ ಛಾರ್ಜಿಗೆ ವರ್ಗ ಮಾಡಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಅಫ್ಘಾನಿಸ್ಥಾನದಲ್ಲಿ ಅಮೀರರು ಒಂದಾಣೆಗೆ ಒಂದರಂತೆ ಪೋಸ್ಟ್ ಕಾರ್ಡುಗಳನ್ನು ಜಾರಿಗೆ ತಂದಿದ್ದಾರೆ.

ಕಲ್ಕತ್ತೆಯ ಬಾರಾನಗರ್ ನಾರಿನ ಕಾರ್ಖಾನೆಗೆ ಬೆಂಕಿಬಿದ್ದು ಒಂದು ಲಕ್ಷ ರೂಪಾಯಿ ಮಾಲೀಕರಿಗೆ ನಷ್ಟವಾಗಿದೆ.

ಬಾರಿಸಾಲ್ ನಗರದಲ್ಲಿ ಕಳೆದ ಗುರುವಾರ ಪೋಲೀಸಿನವರು "ಆದರ್ಶ" ವೆಂಬ ಪತ್ರಿಕೆಯ ಪ್ರಿಂಟಿಂಗ್ ಆಫೀಸನ್ನು ಶೋಧನೆ ಮಾಡಿದರು.

ಕಾಂಗ್ರೆಸ್ ಎಂಬ ರಾಷ್ಟ್ರಕೂಟದ ಏರಪಕ್ಷದವರು ನಾಗಪುರದಲ್ಲಿ ಸಭೆ ಸೇರಿ, ರಾಜಕೀಯ ವಿಷಯಗಳನ್ನು ಚರ್ಚೆಮಾಡುವರೆಂದು ಪ್ರಕಟವಾಗಿದೆ.

ಕಲ್ಕತ್ತಾ ಪಟ್ಟಣದ ಸ್ಟ್ರಾಂಡ್ ಬ್ಯಾಂಕ್ ಪ್ರೆಸ್ ಎಂಬ ಅಚ್ಚಿನ ಕಾರ್ಖಾನೆಗೆ ಬೆಂಕಿಬಿದ್ದು ಮೂರು ಲಕ್ಷ ರೂಪಾಯಿನ ಮಾಲುಗಳು ಸುಟ್ಟು ಹೋದವು.

ಲಾಹೋರ್ ಪಟ್ಟಣದಲ್ಲಿ ಆರ್ಯಸಮಾಜದವರು ಕಳೆದ ವಾರ ತಮ್ಮ ಸಮಾಜದ ವಾರ್ಷಿಕೋತ್ಸವಗಳನ್ನು ನಡಿಸಿ, ೬೩,೦೦೦ ರೂಪಾಯಿ ಚಂದಾ ಕೂಡಿಸಿದರು.

ಬೊಂಬಾಯಿನ ಆಚೆ ಬಾಂದೋರಾ ಎಂಬಲ್ಲಿ ಇಬ್ಬರು ದೇಶೀಯ ಕ್ರೈಸ್ತರು ಪರ್ಷಿಯನ್ ಜನರಿಗೆ ಪಿಸ್ತೂಲುಗಳನ್ನೂ ಮದ್ದು ಗುಂಡನ್ನೂ ವಿಕರಿಯಮಾಡುತ್ತಿದ್ದು, ಪೋಲೀಸಿನವರಿಗೆ ಸಿಕ್ಕಿಬಿದ್ದರು.

ಕಳೆದ ಗುರುವಾರ ಬೆಳಗ್ಗೆ ೧೦ ಗಂಟೆ ಹೊತ್ತಿನಲ್ಲಿ ಕಲ್ಕತ್ತಾ ಪಟ್ಟಣದ ಬರ್ರಾ ಬಜಾರಿನ ಮಧ್ಯರಾಷ್ಟ್ರದಲ್ಲಿ ಬೆಂಕಿ ಬಿದ್ದು ಕೆಲವು ಅಂಗಡಿಗಳು ಸುಟ್ಟು, ಎರಡು ಲಕ್ಷ ರೂಪಾಯಿನ ಪದಾರ್ಥಗಳು ನಾಶವಾದವು.

ಕಳೆದ ವಾರ ಉತ್ತರ ದೇಶದಲ್ಲಿ ಆಗ್ರಾದಿಂದ ಮಥುರೆಗೆ ಹೋಗುತ್ತಿದ್ದ ರೈಲ್ ಬಂಡಿಗೆ ಕಾಸ್ಗಂಜ್ ಎಂಬ ಸ್ಟೇಷನ್ನಿನ ಹತ್ತಿರ ಅನಾಹುತ ಸಂಭವಿಸಿ ಎಂಟು ಜನ ಪ್ರಯಾಣಿಕರು ಮೃತಪಟ್ಟರು. ಆರು ಜನರಿಗೆ ಜಖಂ ಆಗಿದೆ.

ಉತ್ತರ ದೇಶಕ್ಕೆ ಸೇರಿದ ಕಾನ್ಪುರ, ಉನಾವೋ, ಅಲಹಬಾದ್ ಪಟ್ಟಣಗಳಲ್ಲಿ ಸ್ಥಾಪಿಸಲ್ಪಟ್ಟಿರುವಂಥಾ ಸಕ್ಕರೆ ಕಾರ್ಖಾನೆಯನ್ನ ಲಕ್ನೋ ಪಟ್ಟಣದಲ್ಲೂ ಇಟ್ಟು ನಡಿಸಬೇಕೆಂದು ಅಯೋಧ್ಯೆಯ ತಾಲ್ಲೂಕ್ದಾರರು ತರದೂದು ಮಾಡುತ್ತಿದ್ದಾರೆ.

ಕಲ್ಕತ್ತಾ ಪಟ್ಟಣದಲ್ಲಿ ದಿನವಹಿ ಪ್ರಕಟವಾಗುವ "ಅಮೃತ ಬಜಾರ್ ಪತ್ರಿಕಾ" ಎಂಬ ಪ್ರಸಿದ್ಧ ದೇಶೀಯ ಇಂಗ್ಲಿಷ್ ವರ್ತಮಾನ ಪತ್ರಿಕೆಯ ಎಡಿಟರಾದ ಬಾಬು ಮೋತಿಲಾಲ್ ಘೋಸ್ ರವರಿಗೆ ಕಾಯಿಲೆ ಪ್ರಾಪ್ತವಾಗಿದೆ ಎಂದು ತಿಳಿಯುವುದು.

ಕಲ್ಕತ್ತಾ ಪಟ್ಟಣದ ಬಾರಾಸೇಟ್ ಬಾಜಾರಿನಲ್ಲಿ ಕೆಲವು ದಿನಗಳ ಹಿಂದೆ ಒಂಗಾಳಿ ಧನವತಿಯೊಬ್ಬನನ್ನು ಕೊಂದು ಹಾಕಿದ್ದ ಸಾಹಸಿಗಳು ಸಿಕ್ಕಿರಲಿಲ್ಲ. ಈಗ ಒಬ್ಬ ಮಹಮದೀಯನೂ ಒಬ್ಬ ಹೆಂಗಸೂ ಆ ಕೃತ್ಯ ನಡಿಸಿದರೆಂದು ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಬೊಂಬಾಯಿ ಗವರ್ನರವರು ಮುಂದಿನ ವರುಷದ ಬಡ್ಜೆಟ್ಟನ್ನು (ಜಮಾ ಖರ್ಚಿನ ಅಂದಾಜು ಪಟ್ಟಿಗಳನ್ನು) ತಮ್ಮ ಮಂತ್ರಾಲೋಚನಾ ಸಭೆಯ ಪ್ರಜಾಪಕ್ಷದ ಮೆಂಬರುಗಳಿಗೆ ಕಳುಹಿಸಿ, ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುವಂತೆ ಅಪ್ಪಣೆ ಕೊಟ್ಟಿದ್ದಾರೆ.

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಲ್ಯಾಯಲ್ ಪುರದಲ್ಲಿ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಕ್ಯಾಸ್ಟೇಯರವರನ್ನೂ ಅವರ ಜವಾನನನ್ನೂ ಒಬ್ಬ ಮಹಮದೀಯ ಸೇವಕನು ಕೊಂದುಹಾಕಿದನು. ಅವನನ್ನು ಕೊಲ್ಲಿಯ ಸಮೇತ ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ.

ಕೊಯಮುತ್ತೂರು ಜಿಲ್ಲಾ ಪೊಲ್ಲಾಚಿ ಡಿಪ್ಟಿ ಮ್ಯಾಜಿಸ್ಟ್ರೇಟರು ಒಬ್ಬ ಮಹಮದೀಯನೂ ಒಬ್ಬ ಹಿಂದುವೂ ಸೇರಿ ಗ್ರಾಮಾಂತರದ ಮೇಲೆ ಹೋಗಿ ರೈತರಿಂದ ಕಂದಾಯಗಳನ್ನು ವಸೂಲ್ಮಾಡಿ ಮೋಸಪಡಿಸಿದ್ದರಿಂದ ಅವರಿಬ್ಬರಿಗೂ ತಲಾ ೧೮ ತಿಂಗಳು ಕಠಿಣ ಸಜಾ ವಿಧಿಸಿದರು.

ಕಳೆದ ಬುಧವಾರ ಬೆಳಗ್ಗೆ ೧೧| ಗಂಟೆ ಹೊತ್ತಿನಲ್ಲಿ ಬೊಂಬಾಯಿ ಪಟ್ಟಣದ ಇಸ್ಲಾಂ ಕಾರ್ಖಾನೆಗೆ ಬೆಂಕಿ ಬಿದ್ದು, ಮಾಲೀಕರಾದ ಹಾಜಿ ಕಾಸಿಂ ಜುಸಾಬ್ ಸನ್ಸ್ ಎಂಬ ಕಂಪನಿಯವರಿಗೆ ಎರಡು ಕೋಟಿ ರೂಪಾಯಿನ ಸರಕೂ ಯಂತ್ರಗಳೂ ಕಟ್ಟಡಗಳೂ ನಷ್ಟವಾದವು.

ಬಂಗಾಳಾ ಲೆಫ್ಟಿನೆಂಟ್ ಗವರ್ನರ್ ಸರ್ ಆಂಡ್ರ್ಯು ಫ್ರೇಸರ್ ರವರನ್ನು ಒಂದು ಉಪನ್ಯಾಸಮಂದಿರದಲ್ಲಿ ಕೊಲ್ಲಬೇಕೆಂದು ಪ್ರಯತ್ನಪಟ್ಟ ಜ್ಯೋತೀಂದ್ರನಾಥರಾಯಚೌಧ್ರಿ ಎಂಬ ಬಂಗಾಳಿಯನ್ನು ಜಡ್ಜಿಯವರು ದರ್ಯಾಪ್ತಿ ಮಾಡಿ, ಅವನಿಗೆ ಹತ್ತು ವರುಷಗಳ ಕಠಿಣ ಸಜಾ ವಿಧಿಸಿದರು.

ಸಿಲೋನ್ (ಲಂಕಾ) ದ್ವೀಪದಲ್ಲಿ ಅಧಿಕಾರಿಗಳಿಗೆ ಸರ್ಕೀಟು ಮಾಡುವುದಕ್ಕೆ ಉಪಯೋಗವಾಗುವಂತೆ ಗವರ್ನ್‌ಮೆಂಟಿನವರು ೯೦,೦೦೦ ರೂಪಾಯಿಗೆ ಹನ್ನೆರಡು ಮೋಟಾರ್ ಗಾಡಿಗಳನ್ನು ಕರಿಸಬೇಕೆಂತಲೂ, ಆ ಗಾಡಿಗಳ ಲಾಯಕ್ಕೆ ೩೪,೦೦೦ ರೂಪಾಯಿ ಖರ್ಚುಮಾಡಬೇಕೆಂತಲೂ ಸ್ಯಾಂಕ್ಷನ್ ಮಾಡಿದ್ದಾರೆ.

ಅಹಮದಾಬಾದಿನಲ್ಲಿ ಒಬ್ಬ ಜೈನ ವಿದ್ಯಾವಂತನು ಸೀಮೆಗೆ ಹೋಗಿ ಕಸಬನ್ನು ಕಲಿತು ಬಂದನು. ಅಲ್ಲಿನ ಜೈನ ಮಹಾ ಜನರು ಸಭೆಸೇರಿ ಆತನು ದೇಶೋನ್ನತಿಯ ಕಾರ್ಯಕ್ಕಾಗಿ ಸಮುದ್ರಯಾನ ಮಾಡಿಬಂದಿರುವ ಕಾರಣ ಆತನಿಗೆ ಬಹಿಷ್ಕಾರ ಹಾಕದೆ ಸವ್ಯವಹಾರದಲ್ಲಿಟ್ಟುಕೊಂಡಿರಬೇಕೆಂದು ತೀರ್ಮಾನ ಮಾಡಿದರು.

ಗುರ್ಗಾವನ್ ಡಿಸ್ಟ್ರಿಕ್ಟಿಗೆ ಸೇರಿದ ರೇವಾರಿ ಪಟ್ಟಣದಲ್ಲಿ ಸಂತಾನವಿಲ್ಲದೆ ಕಾಲವಾದ ಒಬ್ಬ ಹಿಂದೂ ವಕೀಲನು ತನ್ನ ಸ್ಥಿರಚರ ಆಸ್ತಿಯನ್ನೆಲ್ಲಾ ಅಂದರೆ ಸುಮಾರು ೬೦ ಸಾವಿರ ರೂಪಾಯನ್ನು ಲಾಹೋರ್ ಪಟ್ಟಣದ ದಯಾನಂದ ಉಭಯ ಭಾಷಾ ವಿದ್ಯಾಶಾಲೆಯ ಪುರೋಭಿವೃದ್ಧಿಗಾಗಿ ವಿನಿಯೋಗಿಸುವಂತೆ ಉಯಿಲು ಬರೆದಿಟ್ಟಿದ್ದಾನೆ.

ಸಾರಾ ಎಂಬ ಸ್ಥಳದಲ್ಲಿ ಗಂಗಾ ನದಿಗೆ ಒಂದು ಸೇತುವೆ ಕಟ್ಟುವಂತೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸ್ಯಾಂಕ್ಷನ್ ಮಾಡಿದರು. ಈಗ ಇಂಜನಿಯರುಗಳು ಆ ಸ್ಥಳದಲ್ಲಿ ಕಾಮಗಾರಿಯನ್ನು ಪ್ರಾರಂಭಮಾಡಿದ್ದಾರೆ. ಇದಕ್ಕೆ ಈ ವರುಷ ೭ ಲಕ್ಷ ರೂಪಾಯೂ, ಮುಂದಿನ ಸಾಲಿನಲ್ಲಿ ೨೫ ಲಕ್ಷ ರೂಪಾಯೂ ಸ್ಯಾಂಕ್ಷನ್ ಆಗಿರುವುದು.

ಮೈಸೂರ್ ರಾಯಿ ಯವರು ಕಲ್ಕತ್ತೆಗೆ ಬಂದು ಇಳಿದಾಗಲೂ, ಅವರ ಪತ್ನಿ ಪುತ್ರಿಯವರು ಆಗ್ರಾದಿಂದ ಬಂದಾಗಲೂ ನಾಲ್ಕಾರು ಬಂಗಾಳಾ ಜನರು ಸ್ಟೇಷನ್ನಲ್ಲಿ ಅಲೆಯುತ್ತಾ ಇದ್ದರು. ಇವರನ್ನು ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ. ಇವರಲ್ಲಿ ಒಬ್ಬನಿಗೆ ಇಂಗ್ಲಿಷ್ ಚನ್ನಾಗಿ ಗೊತ್ತಿದೆ. ಇವನು ಸನ್ಯಾಸಿಯಂತೆ ವೇಷಹಾಕಿಕೊಂಡಿದ್ದನು.

ಬಂಗಾಳಾ ಆಧಿಪತ್ಯದಲ್ಲಿ ಸರ್ಕಾರದಿಂದ ಬಿರುದು ಪಡೆದಿರುವ ಒಬ್ಬ ಬಂಗಾಳಿ ದೊಡ್ಡ ಮನುಷ್ಯನು ಪಿತೂರಿಕೋರರ ಗುಂಪಿಗೆ ಸೇರಿದ್ದಾನೆಂದು ಆತನನ್ನು ದಸ್ತಗಿರಿ ಮಾಡುವಂತೆ ವಾರಂಟು ಹುಟ್ಟಿದೆ. ಆತನು ತಲೆಮರೆಸಿಕೊಂಡು ಹಿಂದುಸ್ಥಾನದಲ್ಲೇ ಇರುತ್ತಾನೆಂದು ಕೆಲವರೂ, ಯೂರೋಪಿಗೆ ಪ್ರಯಾಣ ಮಾಡಿದನೆಂದು ಕೆಲವರೂ ಹೇಳುತ್ತಾರೆ.

ಲಾಹೋರ್ ಡಿಸ್ಟ್ರಿಕ್ಟಿಗೆ ಸೇರಿದ ಪಾಂಡೋಕ್ ಎಂಬ ಗ್ರಾಮದ ಜನರು ದುಷ್ಟತನವನ್ನು ಮಾಡಿ ಸರ್ಕಾರದ ಆಜ್ಞೆಗಳನ್ನು ಉಲ್ಲಂಘಿಸಿದ್ದರಿಂದ ಅವರ ಉಸ್ತುವಾರಿಗಾಗಿ ಗವರ್ನ್‌ಮೆಂಟಿನವರು ಶಿಕ್ಷಾರ್ಥವಾದ ಪೋಲೀಸನ್ನು ನೇಮಕ ಮಾಡಿ ಎರಡು ವರುಷಗಳ ಖರ್ಚು ಆ ಗ್ರಾಮಸ್ಥರಿಂದಲೇ ಅವರ ಸಂಬಳವನ್ನು ವಸೂಲ್ಮಾಡಬೇಕೆಂದು ವಿಧಿಸಿದ್ದಾರೆ.

ಅರವಿಂದ ಘೋಸ್ ರವರ ಮೇಲೆ ಬಂದಿರುವ ಪಿತೂರಿ ಮೊಕದ್ದಮೆಯನ್ನು ಅವರ ಪಕ್ಷವಾಗಿ ಲಾಯರನ್ನು ಇಟ್ಟು ನಡಿಸುವುದಕ್ಕೆ ಆ ಪ್ರಾಂತ್ಯದ ಪ್ರಜೆಗಳು ಒಂದು ಫಂಡನ್ನು ಕೂಡಿಸುತ್ತಿದ್ದಾರೆ. ಇದುವರೆಗೆ ೨೯,೦೦೦ ರೂಪಾಯಿ ವಸೂಲಾಗಿರುತ್ತದೆ. ಇನ್ನೂ ೩೦—೩೫ ಸಾವಿರ ರೂಪಾಯಿ ಬೇಕಾಗುವುದೆಂದು ಆ ಫಂಡಿನ ಮುಖ್ಯಸ್ಥರು ತಿಳಿಸಿದ್ದಾರೆ.

ಕಲ್ಕತ್ತಾ ಪಟ್ಟಣದಲ್ಲಿ ಕೆಲವು ದೇಶೀಯ ಹಣಗಾರರೂ ಭೂಮಿ ಜಮೀನ್ದಾರರೂ ಸೇರಿ ಎರಡು ಲಕ್ಷ ರೂಪಾಯಿ ಮೂಲಧನವನ್ನು ಷೇರುಗಳ ಮೂಲಕ ಕೂಡಿಸಿ, ಆ ಪಟ್ಟಣದಲ್ಲಿ ಹೆಣಿಗೆಯ ಟೋಪಿ, ಜುಬ್ಬಾ, ಬನಿಯನ್, ಕೈಕಾಲು ಚೀಲಗಳು ಮುಂತಾದವನ್ನು ತಯಾರುಮಾಡುವುದಕ್ಕೆ ಒಂದು ಸ್ವದೇಶೀ ಕಾರ್ಖಾನೆಯನ್ನು ಸ್ಥಾಪಿಸುವವರಾಗಿದ್ದಾರೆ.

ಹೈದರಾಬಾದ್ ಪಟ್ಟಣದಲ್ಲಿ ಪ್ರವಾಹಗಳ ದೆಸೆಯಿಂದ ಉಂಟಾದ ಮಹತ್ತರವಾದ ಕಷ್ಟ ದುಃಖ ನಷ್ಟಗಳನ್ನು ವಿಲಾಯತಿಯವರು ಕೇಳಿ ತುಂಬಾ ಪರಿತಾಪಪಟ್ಟು, ಲಂಡನ್ ಪಟ್ಟಣದ ಪುರಾಧ್ಯಕ್ಷರು ಒಂದು ದೊಡ್ಡ ಸಭೆಯನ್ನು ನಡಿಸಿ, ನೈಜಾಮರವರಿಗೆ ಸಂತಾಪಸೂಚಕವಾದ ತಂತಿ ವರ್ತಮಾನವನ್ನು ಕಳುಹಿಸಿಕೊಟ್ಟರು. ಕಷ್ಟನಿವಾರಣಾರ್ಥವಾದ ಒಂದು ಧರ್ಮ ಫಂಡನ್ನೂ ಕೂಡಿಸ ಲಾರಂಭಿಸಿದ್ದಾರೆ.

ಉತ್ತರ ದೇಶಕ್ಕೆ ಸೇರಿದ ಅಂಬಾಲಾ ಪಟ್ಟಣಕ್ಕೂ ಸಹರನ್ಪುರಕ್ಕೂ ನಡುವೆ ಮುಸ್ತಫಾಬಾದ್ ಸ್ಟೇಷನ್ನಿಂದ ಒಂದು ಮೈಲಿ ದೂರದಲ್ಲಿ ಕಳೆದ ಗುರುವಾರ ಬೆಳಗಿನ ಝಾಮದ ೫| ಗಂಟೆಯಲ್ಲಿ ಎರಡು ರೈಲ್ ಬಂಡಿಗಳು ಎದುರುಬದುರಾಗಿ ಬಂದು ಢಕ್ಕಾ ಹೊಡೆದು ಅನಾಹುತವಾಯಿತು. ಆರು ಗಾಡಿಗಳು ಮುರಿದು ಹಾಳಾದವು. ೨೧ ಜನರು ಮೃತಪಟ್ಟರೆಂತಲೂ, ಸುಮಾರು ೨೦ ಮಂದಿಗೆ ಗಾಯಗಳಾದವೆಂತಲೂ ರೈಲ್ವೆ ಮ್ಯಾನೇಜರವರು ತಿಳಿಸಿದ್ದಾರೆ.

ಕಳೆದ ಮಂಗಳವಾರ ರಾತ್ರಿ ಪೂನಾ ಪಟ್ಟಣದ ಜೈಲ್ ಖಾನೆಯೊಳಗೆ ಏಳು ಮಂದಿ ಬಂದೀವಾನರು ಸೋಪಾನಗಳನ್ನು ಮಾಡಿ ಹತ್ತಿ ತಮ್ಮ ಕೊಠಡಿಗಳಿಂದ ಹೊರಕ್ಕೆ ಬಂದು, ಕಾವಲುಗಾರರನ್ನು ಹೊಡೆದು ಕೆಡವಿ, ಜೈಲಿನಿಂದ ತಪ್ಪಿಸಿಕೊಂಡು ಓಡಿಹೋದರು. ಪೋಲೀಸಿನವರು ಅವರನ್ನು ಹಿಂದಟ್ಟಿ ಓಡಿಸಿಕೊಂಡು ಹೋಗುತ್ತಾ ಗುಂಡು ಹೊಡೆದು ಒಬ್ಬ ಬಂದೀವಾನನನ್ನು ಕೊಂದರು, ಮೂವರನ್ನು ಗಾಯಮಾಡಿದರು. ಉಳಿದ ಮೂರುಮಂದಿ ಸಿಕ್ಕದೆ ತಪ್ಪಿಸಿಕೊಂಡೇ ಹೋಗಿದ್ದಾರೆ.

ಪೂರ್ವ ಬಂಗಾಳಾಕ್ಕೆ ಸೇರಿದ ಮಾಣಿಕ್ಯಗಂಜ್ ಪಟ್ಟಣದಲ್ಲಿ ಸಬ್ ಡಿವಿಜನ್ ಆಫೀಸರಾಗಿದ್ದ ಮೌಲ್ವಿ ಅಫ್ಸರುದ್ದೀನ್ ಮಹಮ್ಮದ್ ಎಂಬಾತನು ಮೊಕದ್ದಮೆಗಳನ್ನು ಫೈಸಲ್ ಮಾಡುವಲ್ಲಿ ಕಕ್ಷಿಗಾರರಿಂದ ರುಷುವತ್ತು ತೆಗೆದುಕೊಳ್ಳುತ್ತಿದ್ದನೆಂದು ತಿಳಿದುಬಂದದ್ದರಿಂದ ಆತನನ್ನು ಕೆಲಸದಿಂದ ವಜಾಮಾಡಿ, ಢಕ್ಕಾ ಪಟ್ಟಣದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ದರ್ಯಾಪ್ತಿ ಮಾಡುತ್ತಿದ್ದಾರೆ. ಈಗ ಆತನ ಮೇಲೆ ೨,೦೦೦ ರೂಪಾಯಿ ಲಂಚ ತೆಗೆದುಕೊಂಡನೆಂಬ ಮೊಕದ್ದಮೆಯು ವಿಚಾರಣೆಯಾಗುತ್ತಿರುವುದು.

ಬಳ್ಳಾರಿ ಡಿಸ್ಟ್ರಿಕ್ಟಿಗೆ ಸೇರಿದ ಬಸಪ್ಪ, ಬಾಲಪ್ಪ, ಗಂಗಾಧರಸ್ವಾಮಿ ಎಂಬೀ ಹೆಸರುಗಳುಳ್ಳ ಮನುಷ್ಯನು ರೈಲ್ ಗಾಡಿಯಲ್ಲಿ ಹೈದರಾಬಾದಿಗೆ ಹೋಗುತ್ತಾ ಪ್ರಯಾಣಿಕರ ಕೂಡ ಮಾತನಾಡುವಾಗ್ಗೆ ಕೆಲವು ರಾಜದ್ರೋಹಿಗಳ ಚಿತ್ರಗಳನ್ನು ತೋರಿಸಿ, ರಾಜದ್ರೋಹಪರವಾದ ಮಾತುಗಳನ್ನಾಡಿದನೆಂದು ಅವನ ಮೇಲೆ ಮೊಕದ್ದಮೆ ಬಂದು, ಅವನನ್ನು ಹೈದರಾಬಾದಿನ ಒಂದನೇ ಅಸಿಸ್ಟೆಂಟರು ದರ್ಯಾಪ್ತಿ ಮಾಡಿ, ಅವನಿಗೆ ಕಳೆದ ವಾರ ಐದು ವರುಷ ಬಂದೋಲ್ ಶಿಕ್ಷೆಯನ್ನು ವಿಧಿಸಿದರು.

ಬಂಗಾಳಾ ವಿಭಜನೆ ಮಾಡಿದ್ದನ್ನು ಪ್ರತಿಭಟಿಸುವುದಕ್ಕಾಗಿ ಮಿ|| ಸುರೇಂದ್ರನಾಥಬಾನರ್ಜಿಯವರು ಕಲ್ಕತ್ತಾ ಪಟ್ಟಣದ ಟೌನ್ ಹಾಲ್ ಬಂಗಲೆಯಲ್ಲಿ ಕಳೆದ ಸೆಪ್ಟೆಂಬರ್ ತಾ. ೨೨ರಲ್ಲಿ ಒಂದು ಸಭೆಯನ್ನು ನಡಿಸಿದಾಗ್ಗೆ ಸಭೆಯಲ್ಲಿ ಸೇರಿದ್ದ ಜನರು ಜೊಂಬಿಮಾಡಿ ಒಂದು ತಸ್ತೀರನ್ನು ಹಾಳುಮಾಡಿದರು. ಇದಕ್ಕೂ ದೀಪ ಗ್ಯಾಸ್, ಪೋಲೀಸ್ ಉಸ್ತುವಾರಿಗೂ ೨೭೮|| ರೂಪಾಯಿ ಬರಬೇಕೆಂದು ಮ್ಯುನಿಸಿಪಾಲಿಟಿಯವರು ಅವರ ಮೇಲೆ ದಾವಾಮಾಡಿ, ಎಕ್ಸ್ ಪಾರ್ಟಿ ಡಿಕ್ರಿ ಪಡೆದುಕೊಂಡರು.

ದರ್ಭಾಂಗ್ ಸಂಸ್ಥಾನದ ಲೇಟ್ ಮಹಾರಾಜರವರು ಕಾಲವಾದಾಗ್ಗೆ ಈಗಿನ ಮಹಾರಾಜರು ಅವರ ಕೂಡ ಐಕ್ಯಕುಟುಂಬದಲ್ಲಿ ರಲಿಲ್ಲವೆಂತಲೂ, ಇವರು ಬಹಿಷ್ಕೃತರಾಗಿದ್ದರೆಂತಲೂ, ಆದಕಾರಣ ಇವರಿಗೆ ರಾಜ್ಯಪದವಿಯನ್ನು ಕೊಡಕೂಡದೆಂತಲೂ ಲಲಿತೇಶ್ವರ ಸಿಂಗರವರು ಕಲ್ಕತ್ತಾ ಹೈ ಕೋರ್ಟಿನಲ್ಲಿ ದಾವಾ ಮಾಡಿದ್ದರು. ಅವರ ದಾವಾ ವಜಾ ಆಯಿತು. ಅವರ ಮೇಲೆ ಈಗ ಅವರು ಮತ್ತೆ ಅಪೀಲ್ ಮಾಡಿದ್ದಾರೆ. ಹೈ ಕೋರ್ಟಿನ ಮೂವರು ಜಡ್ಜಿಗಳು ಅದನ್ನು ದರ್ಯಾಪ್ತಿ ಮಾಡುತ್ತಿದ್ದಾರೆ. ಈ ಮೊಕದ್ದಮೆಯು ಆ ಸಂಸ್ಥಾನದಲ್ಲಿ ತುಂಬಾ ಗಲಭೆಯನ್ನುಂಟುಮಾಡಿದೆ.

ಕೊಯಮುತ್ತೂರು ಜಿಲ್ಲಾ ಈರೋಡ್ ತಾಲ್ಲೂಕಿಗೆ ಸೇರಿದ ಒಂದು ಗ್ರಾಮದಲ್ಲಿ ಇಬ್ಬರು ಒಬ್ಬ ಮುದುಕಿಯ ಮನೆಗೆ ಹೋಗಿ ಅವಳ ಮನೆಯಲ್ಲಿ ನಿಧಿ ಇದೆ ಎಂದೂ, ಅದನ್ನು ಒಂದು ಕೆಟ್ಟ ಗ್ರಹ ಆವರಿಸಿಕೊಂಡಿದೆ ಎಂದೂ, ಕೆಲವು ಪೂಜೆಗಳನ್ನೂ ಹೋಮಗಳನ್ನೂ ಮಾಡಿ ಅದನ್ನು ಓಡಿಸಿದರೆ ಆ ನಿಧಿಯು ವಶವಾಗುವುದೆಂದೂ ಅವಳಿಗೆ ಹೇಳಿ ಆಶೆಯನ್ನು ಹುಟ್ಟಿಸಿ, ಅವಳಿಂದ ಪೂಜೆ ಮುಂತಾದದ್ದಕ್ಕೆ ೧೭೦ ರೂಪಾಯಿ ತೆಗೆದುಕೊಂಡು, ಪರಾರಿಯಾದರು. ಆ ಮುದುಕಿಯೂ ಅವಳ ಮಗನೂ ಪೋಲೀಸಿಗೆ ತಿಳಿಸಿದರು. ಪೋಲೀಸಿನವರು ಅವರಿಬ್ಬರನ್ನೂ ದಸ್ತಗಿರಿ ಮಾಡಿದರು. ಮ್ಯಾಜಿಸ್ಟ್ರೇಟರು ಅವರಿಬ್ಬರಿಗೂ ತಲಾ ೩ ತಿಂಗಳ ಕಠಿಣ ಸಜವನ್ನೂ ೫೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ.

ಕೊಲ್ಹಾಪುರ ಸಂಸ್ಥಾನದಲ್ಲಿ ರಾಜಧಾನಿಯಿಂದ ೨೦ ಮೈಲಿ ದೂರದಲ್ಲಿರುವ ರಾಧಾನಗರಿಯಲ್ಲಿ ಜಿನ್ನದೀ ಎಂಬ ಕೆರೆಗೆ ಶ್ರೀ ಲಕ್ಷ್ಮೀಬಾಯಿ ಮಹಾರಾಣಿ ಎಂಬ ಹೆಸರುಳ್ಳ ಅಣೆಕಟ್ಟೆಯನ್ನು ಹಾಕಿಸಬೇಕೆಂದು ಕೊಲ್ಹಾಪುರದ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿ, ಕಾಮಗಾರಿಯನ್ನು ಬೊಂಬಾಯಿನ ಕ್ರೌಡರ್ ಎಂಬ ಕಂಪನಿಯವರಿಗೆ ವಹಿಸಿದ್ದಾರೆ. ಇದಕ್ಕೆ ಸುಮಾರು ೧೩ ಲಕ್ಷ ರೂಪಾಯಿ ಖರ್ಚಾಗುವುದು. ಅಣೆಯನ್ನು ೩,೬೦೦ ಅಡಿ ಉದ್ದವಾಗಿಯೂ ೧೩೦ ಅಡಿ ಎತ್ತರವಾಗಿಯೂ ಕಟ್ಟುತ್ತಾರೆ. ಕಾಮಗಾರಿಯು ಪೂರೈಸುವುದಕ್ಕೆ ಸುಮಾರು ಮೂರು ವರುಷ ಹಿಡಿಯುವುದೆಂತಲೂ, ಅದರ ನಾಲೆಗಳ ಕೆಳಗೆ ೨೦ ಸಾವಿರ ಎಕರೆ ಜಮೀನಿನಲ್ಲಿ ತರೀಫಸಲು ಬೆಳೆಯುವುದಕ್ಕೆ ಅನುಕೂಲವಾಗುವುದೆಂತಲೂ. ಈ ಅಣೆಕಟ್ಟಿನ ದೆಸೆಯಿಂದ ಗವರ್ನ್‌ಮೆಂಟಿಗೆ ವರುಷಕ್ಕೆ ನಾಲ್ಕು ಲಕ್ಷ ರೂಪಾಯಿ ಕಂದಾಯ ಉತ್ಪತ್ತಿಯಾಗುವುದೆಂತಲೂ ಗೊತ್ತುಮಾಡಲ್ಪಟ್ಟಿದೆ.

ಬಂಗಾಳಾ ಲೆಫ್ಟಿನೆಂಟ್ ಗವರ್ನರ್ ಕೆಲಸವನ್ನು ನೋಡುತ್ತಿದ್ದ ಸರ್ ಆಂಡ್ರ್ಯು ಫ್ರೇಸರ್ ಯವರು ಕಳೆದ ವಾರ ಸರ್ ಎಡ್ವರ್ಡ್ ಬೇಕರ್ ಯವರಿಗೆ ಆ ಕೆಲಸದ ಛಾರ್ಜನ್ನು ವಹಿಸಿ, ಪೆನ್ಷನ್ ಮೇಲೆ ನಿವೃತ್ತರಾಗಿ ಸೀಮೆಗೆ ವಾಪಸು ಹೋಗುವುದಕ್ಕಾಗಿ ಸ್ಪೆಷಲ್ ರೈಲಿನಲ್ಲಿ ಕಲ್ಕತ್ತೆಯಿಂದ ಮದರಾಸಿಗೆ ಬಂದು, ನೇರಾ ರೈಲು ಹತ್ತಿ ಟ್ಯುಟಿಕಾರಿನ್ ಮಾರ್ಗವಾಗಿ ಸಿಲೋನ್ (ಲಂಕಾ) ದ್ವೀಪಕ್ಕೆ ಹೋಗಿ. ಅಲ್ಲಿ ಹಡಗು ಹತ್ತಿ ಪ್ರಯಾಣಮಾಡಿದರು. ಅವರನ್ನು ಕೊಲ್ಲಬೇಕೆಂದು ಮೂರು ಮಂದಿ ಬಂಗಾಳಿಗಳು ಕಲ್ಕತ್ತೆಯಿಂದ ಟ್ಯುಟಿಕಾರಿನ್ ಗೆ ಬಂದಿದ್ದರೆಂತಲೂ, ಪೋಲೀಸಿನವರು ಅದನ್ನರಿತು ಸರ್ ಆಂಡ್ರ್ಯು ಫ್ರೇಸರ್ ಯವರ ಜೊತೆಯಲ್ಲಿಯೇ ಸೇವಕರಾಗಿ ಬಂದಿದ್ದರಿಂದ ಆ ದುಷ್ಟರಿಗೆ ಅಕೃತ್ಯ ನಡಿಸಲು ಅವಕಾಶವಾಗದೆ ಕಡೆಗೆ ಸಿಕ್ಕಿಬಿದ್ದರೆಂತಲೂ ಪ್ರಕಟವಾಗಿದೆ. ಅತ್ತಲಾಗಿ, ಕಲ್ಕತ್ತೆಯಲ್ಲಿ ೪೦ ಮಂದಿ ಯೂರೋಪಿಯನ್ ಮತ್ತು ದೇಶೀಯ ಸ್ತ್ರೀಯರು ಸಭೆ ಸೇರಿ, ಸರ್ ಆಂಡ್ರ್ಯು ಫ್ರೇಸರ್ ಯವರ ಪತ್ನಿಯರವರಿಗೆ ತಮ್ಮ ಜ್ಞಾಪಕಾರ್ಥವಾಗಿ ಒಂದು ಬೆಲೆಯುಳ್ಳ ಆಭರಣವನ್ನು ಒಪ್ಪಿಸಿದರೆಂದು ತಿಳಿಯುವುದು.

ಈ ಸಲ ಕಳೆದ ನವಂಬರ್ ೩೦ನೇ ತಾ|| ನಿಂದ ನಡೆದ ಮದರಾಸ್ ಯೂನಿವರ್ಸಿಟಿ ವಿದ್ಯಾಸಂಘದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪ್ರಶ್ನಪತ್ರಿಕೆಗಳನ್ನು ಮದರಾಸ್ ಪಟ್ಟಣದ ಎಸ್. ಪಿ. ಸಿ. ಕೆ. ಪ್ರಿಂಟಿಂಗ್ ಆಫೀಸಿನಲ್ಲಿ ಪದ್ಧತಿಯ ಪ್ರಕಾರ ಅಚ್ಚುಹಾಕಿಸುವಲ್ಲಿ, ಪ್ರಿಂಟುಮಾಡುವ ಆ ಪ್ರೆಸ್ಸಿನ ರಾಜಗೋಪಾಲ ನಾಯುಡು ಎಂಬ ನೌಕರನು ಫಿಸಿಕ್ಸ್, ಜಾಮೆಟ್ರಿ ಎಂಬೀ ಪ್ರಶ್ನ ಪತ್ರಿಕೆಗಳನ್ನು ಕದ್ದು ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ೧೦–೧೨ ದಿನಗಳಿಗೆ ಮುಂಚೆಯೇ ವಿಕರಿ ಮಾಡಿದನು. ಇದಲ್ಲದೆ ಕಳೆದ ೭ನೇ ತಾ. ಸೋಮವಾರದಿಂದ ಪ್ರಾರಂಭವಾಗಬೇಕಾಗಿದ್ದ ಬಿ. ಎ. ಪರೀಕ್ಷೆಯ ಪ್ರಶ್ನ ಪತ್ರಿಕೆಗಳ ಪೈಕಿ ಇಂಗ್ಲಿಷ್ ಪ್ರೋಸ್, ಇಂಗ್ಲಿಷ್ ಪೊಯಟ್ರಿ ಎಂಬೀ ಪ್ರಶ್ನ ಪತ್ರಿಕೆಗಳನ್ನೂ ಅವನು ಮೊದಲೇ ಕಳವು ಮಾಡಿ, ವಿದ್ಯಾರ್ಥಿಗಳಿಗೆ ಕೊಟ್ಟಿದ್ದನು. ಈಗ ಅವನನ್ನು ದಸ್ತಗಿರಿ ಮಾಡಿ, ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದರ್ಯಾಪ್ತಿ ಮಾಡುತ್ತಿದ್ದಾರೆ. ಈ ರೀತಿ ಪ್ರಶ್ನೆ ಪತ್ರಿಕೆಗಳು ಪರೀಕ್ಷೆ ಪ್ರಾರಂಭವಾಗುವುದಕ್ಕೆ ಮೊದಲೇ ಪ್ರಕಟವಾದದ್ದರಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಆವೆರಡು ವಿಷಯಗಳಲ್ಲಿ ಮುಂದಿನ ಜನವರಿ ೯ನೇ ತಾರೀಖಿನಲ್ಲಿ ಮತ್ತೆ ಪರೀಕ್ಷೆಯಾದೀತೆಂದು ಕಾಣುತ್ತದೆ.

ಲಾಕೆಡೀವ್ ದ್ವೀಪಗಳು ಕನ್ನಾನೂರಿನ ಅರಕ್ಕಾಲ್ ರಾಜರಿಗೆ ಸೇರಿ ಆಸ್ತಿಯಾಗಿ ಬಹುಕಾಲದಿಂದ ಇಂಗ್ಲಿಷ್ ಗವರ್ನ್‌ಮೆಂಟಿನವರ ಆಳ್ವಿಕೆಯಲ್ಲಿದ್ದವೆ.

ಲ್ಲಿನ ಸುಲ್ತಾನರೂ ಬಹುಕಾಲದಿಂದ ಅಪಾರವಾಗಿ ಬಾಕಿ ಉಳಿದಿದ್ದುದನ್ನು ಗವರ್ನ್‌ಮೆಂಟಿನವರು ವಸೂಲ್ಮಾಡಿ, ರವಾನಿಸುತ್ತಾ ಬಂದು, ಈಚೆಗೆ ಆ ದ್ವೀಪಗಳನ್ನು ಸುಲ್ತಾನಿಗೆ ವಹಿಸಿ ಕೊಟ್ಟರು. ಆದರ ಮೇಲೆ ಆ ರಾಜರು ತಮ್ಮ ಆಸ್ತಿಯು ಅನ್ಯಾಕ್ರಾಂತವಾಯಿತೆಂದು ಗವರ್ನ್‌ಮೆಂಟಿನಲ್ಲಿ ಹೊಡೆದಾಡುತ್ತಾ ಬಂದರು. ಈಗ ಗವರ್ನ್‌ಮೆಂಟಿನವರು ಈ ವ್ಯಾಜ್ಯವನ್ನು ಇತ್ಯರ್ಥಪಡಿಸಿರುತ್ತಾರೆ. ಹ್ಯಾಗೆಂದರೆ, ಆ ಗವರ್ನ್‌ಮೆಂಟಿನವರು ಆ ದ್ವೀಪಗಳನ್ನು ಶಾಶ್ವತವಾಗಿ ಗುತ್ತಿಗೆ ಪಡೆಯಬೇಕೆಂತಲೂ, ಇದುವರೆಗೆ ಅಲ್ಲಿ ಬಾಕಿಯಾಗಿದ್ದ ಕಂದಾಯ ಬಾಕಿಗಳನ್ನು ೭೦,೦೦೦ ರೂಪಾಯಿಗಳನ್ನೂ ರಾಜರಿಗೆ ಕೊಡತಕ್ಕದ್ದೆಂತಲೂ, ಇನ್ನು ಮುಂದೆ ಪ್ರತಿ ವರುಷವೂ ಆ ರಾಜರ ವಂಶೀಕರಿಗೆ ೨೩,೦೦೦ ರೂಪಾಯಿ ಗುತ್ತಿಗೆ ಕೊಡಬೇಕೆಂತಲೂ, ಆ ರಾಜರ ಸ್ವಂತ ಜಮೀನುಗಳಿಗೆ ಸರ್ಕಾರದ ಕಂದಾಯಗಳನ್ನೆಲ್ಲಾ ಮಾಫಿ ಮಾಡತಕ್ಕದ್ದೆಂತಲೂ ತೀರ್ಮಾನವಾಗಿದೆ. ಬಹುಕಾಲದಿಂದ ಚರ್ಚೆಯಲ್ಲಿದ್ದ ಈ ಮೊಕದ್ದಮೆಯು ಈ ರೀತಿ ಇತ್ಯರ್ಥವಾದದ್ದಕ್ಕಾಗಿ ಆ ರಾಜರು ಸಂತೋಷಪಡುತ್ತಿದ್ದಾರೆ.

* * *

ನಾಗಪುರದಲ್ಲಿ ಲೇಟ್ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರ ಪ್ರತಿಮೆಯನ್ನು ಭಿನ್ನಪಡಿಸಿ ಬಹು ನೀಚಕೃತ್ಯವೆಂದು ಅಲ್ಲಿನ ಮಹಾಜನಗಳು ತೀರ್ಮಾನಮಾಡಿದರು. ಅಂಥಾ ಕೃತ್ಯವನ್ನು ನಡಿಸಿರತಕ್ಕ ಜನರನ್ನು ಹಿಡುಕೊಟ್ಟರೆ ೧,೦೦೦ ರೂಪಾಯಿ ಬಹುಮಾನ ಕೊಡುತ್ತೇವೆಂದು ಪೊಲೀಸ್ ಅಧಿಕಾರಿಗಳು ಇಸ್ತಿಹಾರು ಹಾಕಿಸಿದಾರೆ. ಅತ್ತಲಾಗಿ ಸಿಗುರ್ಜಾ ಸಂಸ್ಥಾನದ ರಾಜರು ಭಿನ್ನವಾಗಿರತಕ್ಕ ಪ್ರತಿಮೆಯನ್ನು ತಮ್ಮ ಕೈಯಿಂದ ಹಣ ಹಾಕಿ ದುರಸ್ತು ಮಾಡಿಸಿಕೊಡುವುದಾಗಿ ವಾಗ್ದಾನಮಾಡಿದಾರೆ. ಈ ಅಕೃತ್ಯವನ್ನು ಕುರಿತು ಚರ್ಚಿಸುವುದಕ್ಕೆ ಚೀಫ್ ಕಮಿಷನರವರು ಕಳೆದ ಸೋಮವಾರ ನಾಗಪುರದಲ್ಲಿ ಒಂದು ದರ್ಬಾರ್ ನಡಿಸಿ, ಪ್ರಜೆಗಳ ಮುಖಂಡರನ್ನು ಕರೆಸಿಕೊಂಡು, ಅವರಿಗೆ—ಭಿನ್ನವಾಗಿರುವುದನ್ನು ಸರಿಪಡಿಸುವುದಾಗಿಯೂ, ಇನ್ನು ಮುಂದೆ ಅದರ ಸಂರಕ್ಷಣೆಯನ್ನು ತಾವೇ ನೋಡಿಕೊಳ್ಳುವುದಾಗಿಯೂ ರಾಜರವರು ಒಪ್ಪಿಕೊಂಡಿರುವುದು ತುಂಬಾ ಸಂತೋಷವಾದದ್ದೇ. ಆದರೆ ಅದನ್ನು ಸಂರಕ್ಷಣೆಮಾಡುವ ಕಾರ್ಯವೂ ಕರ್ತವ್ಯವೂ ಪ್ರಜೆಗಳದಾಗಿರುತ್ತದೆ. ಅದರ ಮೇಲಿನ ಕಳಂಕವನ್ನು ತೊಡೆಯುವುದೇನೋ ಸುಲಭ. ಆದರೆ ಭಿನ್ನಮಾಡಿದ ದುಷ್ಟರನ್ನು ಹಿಡಿದುಕೊಡುವ ತನಕ ಪ್ರಜೆಗಳ ಮೇಲಿನ ಕೆಟ್ಟ ಹೆಸರು ನಿವಾರಣೆಯಾಗುವುದಿಲ್ಲ ಎಂದು ತಿಳಿಸಿದರು. ಈಚೆಗೆ ನಾಗಪುರದಲ್ಲಿ ಒಂದು ದೊಡ್ಡ ಸಭೆ ನಡೆದು, ಆ ಪ್ರತಿಮೆಗೆ ಬದಲಾಗಿ ಬೇರೊಂದು ಪ್ರತಿಮೆಯನ್ನು ಮಾಡಿಸಿ ತರಿಸಿ ಪ್ರತಿಷ್ಠೆ ಮಾಡಬೇಕೆಂದು ಗೊತ್ತು ಮಾಡಿ, ಚಂದಾ ವಸೂಲಿಸಲಾರಂಭಿಸಿದರು. ಮೊದಲನೇ ದಿನ ೬,೦೦೦ ರೂಪಾಯಿ ವಸೂಲಾಯಿತು.

ವಿದೇಶ ವರ್ತಮಾನಗಳು.

ಚೀನಾ ಸಮುದ್ರ ಪ್ರಾಂತ್ಯದಲ್ಲಿ ಜಪಾನ್ ನವರ ಎರಡು ಹಡಗುಗಳು ಒಡೆದುಹೋಗಿ, ಅವುಗಳಲ್ಲಿದ್ದ ೭೦೦ ಜನರು ಸಮುದ್ರದಲ್ಲಿ ಮುಳುಗಿ ಸತ್ತುಹೋದರು.

* * *

ಫ್ರೆಂಚ್‌ಕೊಚಿನ್ ಚೀನಾದ ಮುಖ್ಯಪಟ್ಟಣವಾದ ಸೈಗಾನ್ ನಲ್ಲಿ ಫ್ರೆಂಚ್ ಅಧಿಕಾರಿಗಳಿಗೆ ವಿರೋಧವಾಗಿ ಪಿತೂರಿ ನಡೆಸಿದ ಹತ್ತು ಜನರನ್ನು ಫ್ರೆಂಚ್ ಗವರ್ನ್‌ಮೆಂಟಿನವರು ದಸ್ತಗಿರಿಮಾಡಿ, ಅವರ ತಲೆಗಳನ್ನು ಕಡಿಸಿಹಾಕಿದರು.

* * *

ಇಟಲಿ ರಾಜ್ಯಕ್ಕೆ ಸೇರಿದ ವೆನಿಸಿಯಾ ಅಧಿಪತ್ಯದೊಳಗೆ ಪರ್ವತದ ಮೇಲಿನ ಅಪಾರವಾದ ಹಿಮಗಡ್ಡೆಗಳು ಉರುಳಿ ಒಂದು ಸಣ್ಣ ಎಂಬ ಗ್ರಾಮವನ್ನು ಮುಳುಗಿಸಿಬಿಟ್ಟಿತೆಂತಲೂ, ಈ ಅಪಘಾತದಲ್ಲಿ ೩೦ ಜನರು ಹತರಾದರೆಂತಲೂ ತಿಳಿಯುವುದು.

* * *

ಅಮೇರಿಕದಲ್ಲಿ ನ್ಯೂಯಾರ್ಕ್ ಪಟ್ಟಣದಿಂದ ಫಿಲಡೆಲ್ಫಿಯಾ ನಗರಕ್ಕೆ ಸುಮಾರು ೯೦ ಮೈಲಿ ದೂರವನ್ನು ರೈಲ್ ಗಾಡಿಯು ಎರಡು ಗಂಟೆ ಹೊತ್ತಿನಲ್ಲಿ ಹೋಗಿ ತಲಪುತ್ತಿದೆ. ಈಗ ವಿದ್ಯುಚ್ಛಕ್ತಿಯ ಸಹಾಯದಿಂದ ಒಂದೇ ಗಂಟೆಯಲ್ಲಿ ಆ ರೈಲು ಹೋಗಿ ತಲಪುವಂತೆ ಕಂಪನಿಯವರು ಏರ್ಪಾಡು ಮಾಡುತ್ತಿದಾರೆ.

* * *

ಜಪಾನ್ ನವರೂ ಚೀಣಿಯವರೂ ಸೈಬೀರಿಯಾ ರೈಲ್ವೆ ಏರ್ಪಾಡಿನ ವಿಷಯದಲ್ಲಿ ಕೆಲವು ಕರಾರುಗಳನ್ನು ಹೊಸದಾಗಿ ಮಾಡಿಕೊಂಡಿರೋಣದರಿಂದ ಲಂಡನ್ ಪಟ್ಟಣದಿಂದ ಚೀನಾ ರಾಜಧಾನಿಯಾದ ಪೀಕಿಂಗ್ ನಗರವನ್ನು ೧೪ ದಿನಗಳಲ್ಲಿ, ಷಾಂಘಾಯಿ ಪಟ್ಟಣವನ್ನು ೧೬ ದಿನಗಳಲ್ಲೂ ತಲಪುವುದಕ್ಕೆ ಅನುಕೂಲವಾಗಿದೆ.

* * *

ಅಮೇರಿಕಕ್ಕೆ ಸೇರಿದ ಪಿಟ್ಸ್‌ಬರ್ಗ್ ಡಿಸ್ಟ್ರಿಕ್ಟಿನೊಳಗೆ ಮರಿಯನ್ನಾ ಎಂಬ ಸ್ಥಳದಲ್ಲಿ ಕಲ್ಲಿದ್ದಲ ಗಣಿಯು ಆಕಸ್ಮಾತ್ತಾಗಿ ಹತ್ತಿಕೊಂಡು ಮಹಾ ಅಪ್ಪಹೊಗೆ ನಾರಿತು. ಆಗ ಅದರೊಳಗೆ ಕಲ್ಲಿದ್ದಲನ್ನು ತೋಡುತ್ತಿದ್ದ ೨೫೦ ಜನರು ಸಂಪೂರ್ಣವಾಗಿ ಸುಟ್ಟುಹೋದರು. ಶವಗಳನ್ನು ಈಗೀಗ ಹೊರಕ್ಕೆ ತೆಗೆಸಿ ತರುತ್ತಿದಾರೆ.

* * *

ಕಳೆದ ೨ನೇ ತಾ. ಬುಧವಾರ ಚೀನಾ ರಾಜಧಾನಿಯಾದ ಪೀಕಿಂಗ್ ನಗರದಲ್ಲಿ ಚಕ್ರವರ್ತಿಯವರ ಪಟ್ಟಾಭಿಷೇಕವಾಯಿತು. ಗವರ್ನ್‌ಮೆಂಟಿನ ಮುಖ್ಯಾಧಿಕಾರಿಗಳು ಸೇರಿಕೊಂಡು ದರ್ಬಾರ್ ಮಾಡಿ ಸಣ್ಣವಯಸ್ಸಿನ ಮಗುವನ್ನು ಸಿಂಹಾಸನದ ಮೇಲೆ ಕೂರಿಸಿ ಅರ್ಧಗಂಟೆ ಹೊತ್ತಿನೊಳಗಾಗಿ ಪಟ್ಟಾಭಿಷೇಕೋತ್ಸವಗಳನ್ನೆಲ್ಲಾ ನಡಿಸಿ ಪೂರೈಸಿದರು.

* * *

ಇಂಗ್ಲಿಷರಿಗೆ ಸೇರಿದ ಪೂರ್ವ ಆಫ್ರಿಕದ ಬಳಿ ಇರುವ ಲಾಡೋ ಎಂಬ ಪ್ರಾಂತ್ಯದಲ್ಲಿ ಯೂರೋಪಿನ ಸಿಕಾರಿದಾರರು ೮,೦೦೦ ಆನೆಗಳನ್ನು ಜಂಗಲುಗಳಲ್ಲಿ ಕೊಡಿಸಿ, ಗಂಡಾನೆಗಳನ್ನು ಕೊಂದು, ದಂತ ಕೊಂಬುಗಳನ್ನು ಕೂಡಿಸಲಾರಂಭಿಸಿದಾರೆಂದೂ, ಆ ಪ್ರಾಂತ್ಯ-ಶ್ರೀ ಬೇಬಂದಾಗಿರುವುದೇ ಇದಕ್ಕೆ ಕಾರಣವೆಂದೂ ಒಂದು ವರ್ತಮಾನ ಬಂದಿದೆ.

ವಿಲಾಯತಿಯ ಮಹಾರಾಜ್ಞಿ ಅಲೆಗ್ಸಾಂಡ್ರಾ ರಾಣಿಯವರು ತಮ್ಮ ರಾಜವರ್ಗದವರ ಮತ್ತು ರಾಜಭವನಗಳ ಚಿತ್ರಪಟಗಳನ್ನು (ಫೋಟೋ) ತೆಗಿಸಿ, ಮೂರೂವರೆ ಲಕ್ಷ ಪ್ರತಿಗಳನ್ನು ಮಾಡಿಸಿ, ಪ್ರಜೆಗಳಿಗೆ ವಿಕ್ರಯ ಮಾಡಿಸುತ್ತಿದಾರೆ. ಇವರ ಮಾರಾಟದಲ್ಲಿ ಉತ್ಪತ್ತಿಯಾಗುವ ಲಾಭವನ್ನೆಲ್ಲಾ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ನಿಶ್ಚಯಿಸಿರುತ್ತಾರೆ. ಈ ಪುಸ್ತಕದ ಮುಖಪತ್ರದಲ್ಲಿ ಮಹಾರಾಜ್ಞಿಯವರ ಫೋಟೋ ಬಹು ಸುಂದರವಾಗಿ ಅಚ್ಚಾಗಿರುತ್ತದೆ.

* * *

ಲಾರ್ಡ್ ಕರ್ಜನ್ನರವರು ಕೆಲವು ವಾರಗಳ ಹಿಂದೆ ವಿಲಾಯತಿಯಲ್ಲಿ ಮೋಟಾರ್ ಗಾಡಿಯಲ್ಲಿ ಸಂಚಾರಮಾಡುತ್ತಿದ್ದಾಗ ಅದು ಇನ್ನೊಂದು ಗಾಡಿಗೆ ಬಡಿದು, ಅವರಿಗೆ ಸ್ವಲ್ಪ ಅಪಾಯ ಸಂಭವಿಸಿತು. ಆ ಲಾಗಾಯತು ಅವರ ದೇಹಸ್ಥಿತಿಯು ಆರೋಗ್ಯವಾಗಿಲ್ಲ. ಆದಕಾರಣ ಅವರು ದೇಶಾಟನೆ ಮಾಡಿಕೊಂಡು ಬರುವುದಕ್ಕೋಸ್ಕರ ದಕ್ಷಿಣ ಆಫ್ರಿಕಕ್ಕೆ ಪ್ರಯಾಣಮಾಡಿದರು. ಈ ಸಂಚಾರದಿಂದ ಅವರ ಆರೋಗ್ಯಸ್ಥಿತಿಯು ಕ್ರಮಪಡಬಹುದೆಂದೆಂದು ವೈದ್ಯರು ಅಭಿಪ್ರಾಯಪಟ್ಟಿದಾರೆ.

* * *

ತುರ್ಕಿಯವರಿಗೂ ಆಸ್ಟ್ರಿಯಾದವರಿಗೂ ಮನಸ್ತಾಪಗಳುಂಟಾಗಿರೋಣದರಿಂದ ತುರ್ಕಿಯವರು ಆಸ್ಟ್ರಿಯಾದವರ ಸಾಮಾನುಗಳನ್ನು ಕೊಂಡುಕೊಳ್ಳದೆ ಬಹಿಷ್ಕಾರ ಹಾಕುತ್ತಾರೆ. ಈ ಸುದ್ದಿಯು ಬಂಗಾಳಾ ಆಧಿಪತ್ಯಕ್ಕೆ ಸೇರಿದ ಢಕ್ಕಾ ನಗರದ ಮಹಮದೀಯರಿಗೆ ತಿಳಿದು ಅವರೆಲ್ಲಾ ಆಸ್ಟ್ರಿಯಾ ದೇಶದ ಟೋಪಿಗಳನ್ನು ವಜಾಮಾಡಿ, ಎಲ್ಲರೂ ದೇಶೀಯ ರುಮಾಲುಗಳನ್ನು ಹಾಕಿಕೊಳ್ಳಲಾರಂಭಿಸಿದಾರೆ. ಅವರು ಈ ಸ್ವದೇಶೀ ಏರ್ಪಾಡಿಗೆ ಯಾವ ವಿಧವಾದ ಗಲಭೆಯನ್ನೂ ಮಾಡಲಿಲ್ಲ. ಸಭೆಗಳೂ, ಉಪನ್ಯಾಸಗಳೂ, ಕೂಗಾಟಗಳೂ ಯಾವವೂ ನಡಿಯಲಿಲ್ಲ. ಆ ಮಹಮದೀಯರನ್ನು ಎಲ್ಲರೂ ಹೊಗಳುತ್ತಿದಾರೆ.

* * *

ಮಾಲ್ಟಾದಿಂದ ಈಜಿಪ್ಟಿಗೆ ಹೊರಟ ಸಾರ್ಡೀನಿಯಾ ಎಂಬ ಹಡಗು ರೇವನ್ನು ಬಿಟ್ಟು ಒಂದು ಮೈಲಿ ದೂರ ಹೋಗುವಷ್ಟರಲ್ಲೇ ಬೆಂಕಿಬಿದ್ದು ಹತ್ತಿಕೊಂಡಿತು. ಅದರಲ್ಲಿ ೨೫೦ ಮಂದಿ ಪ್ರಯಾಣಮಾಡುತ್ತಿದ್ದರು. ಅವರೆಲ್ಲಾ ಗಾಬರಿಬಿದ್ದು ಹಡಗಿನಿಂದ ಹೊರಕ್ಕೆ ಬರಬೇಕೆಂದು ದೊಂಬಿ ಮಾಡಿದರು. ಅನೇಕರು ಸಮುದ್ರದ ಪಾಲಾದರು. ಇನ್ನು ಹಲವರು ಬೆಂಕಿಯಲ್ಲಿ ಸುಟ್ಟುಹೋದರು. ಕಡೆಯಲ್ಲಿ ೪೦ ಮಂದಿ ಯೂರೋಪಿಯನ್ನರೂ, ೪೦ ಜನ ಅರಬ್ಬಿಯವರೂ ಬದುಕಿಬಂದರು. ೨೩ ಜನ ಯೂರೋಪಿಯನ್ನರೂ, ೧೦೦ ಮಂದಿ ಯಾತ್ರಾರ್ಥಿಗಳಾದ ಅರಬ್ಬಿಯವರೂ ಮೃತಪಟ್ಟರು. ಹಡಗಿನ ಯಜಮಾನನೂ ಮುಳುಗಿ ಸತ್ತನು.

* * *

ವಿಲಾಯತಿ ರಾಜ್ಯದ ಮಂತ್ರಿಶ್ರೇಷ್ಠರಾದ ಮಿ॥ ಆಸ್ಕ್ವಿತ್‌ಯವರು ಲಂಡನ್ ಪಟ್ಟಣದ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಹಿಂದುಸ್ಥಾನದ ರಾಜಕೀಯ ವಿಚಾರಗಳನ್ನು ಕುರಿತು ಕಳೆದ ವಾರ ಮಾತನಾಡುತ್ತಿರುವಲ್ಲಿ—ಹಿಂದುಸ್ಥಾನದಲ್ಲಿ ಪ್ರಜೆಗಳಿಗೆ ಹೆಚ್ಚು ಸ್ವಾತಂತ್ರ್ಯಗಳನ್ನು ಕೊಡುವುದನ್ನೂ ಇತರ ರಾಜಕೀಯ ವಿಷಯಗಳನ್ನೂ ಈ ತಿಂಗಳ ೧೪ನೇ ತಾರೀಖಿನ ಏನ ಸ್ಟೇಟ್ ಸೆಕ್ರೆಟರಿ ಲಾರ್ಡ್ ಮಾರ್ಲೀಯವರು ತಿಳಿಸುತ್ತಾರೆಂತಲೂ, ಅದರ ವಿಷಯದಲ್ಲಿ ವಿಲಾಯತಿಯ ಪ್ರಜೆಗಳೂ ಹಿಂದುಸ್ಥಾನದವರೂ ತಮ್ಮ ಅಭಿಪ್ರಾಯಗಳನ್ನು ತಿಳಿಸಬಹುದಾಗಿದೆ ಎಂತಲೂ, ಅನಂತರ ಒಂದು ಕಾನೂನ್ ಮಾಡಿ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ತರುತ್ತೇವೆಂತಲೂ ಅಪ್ಪಣೆ ಕೊಡಿಸಿದಾರೆ.

* * *

ವಿಲಾಯತಿ ಮತ್ತು ರಷ್ಯಾ ಗವರ್ನ್‌ಮೆಂಟುಗಳವರು ಕೆಲವು ಕಾಲದ ಹಿಂದೆ ಪೂರ್ವದಿಗ್ಭಾಗಗಳ ವಿಚಾರವಾಗಿ ಒಂದು ಕರಾರು ಮಾಡಿಕೊಂಡರು. ಈ ಕರಾರಿನಲ್ಲಿ ಅಫ್ಘಾನಿಸ್ಥಾನದ ವಿಚಾರವಾದ ಕೆಲವು ಅಂಶಗಳಿರುತ್ತವೆ. ಈ ಭಾಗದಲ್ಲಿ ವಿಲಾಯತಿ ಸರ್ಕಾರದವರು ಈ ಕರಾರಿಗೆ ಅಮೀರರ ರುಜು ಮಾಡಿಸಬೇಕೆಂದು ಕೇಳಿ ಒಂದು ವರುಷಕ್ಕೆ ಬಂದಿದ್ದರೂ ಅವರು ಇದು ವರೆಗೆ ರುಜು ಹಾಕದೆ ತಾಮಸ ಮಾಡಿರುತ್ತಾರೆ. ಕರಾರು ನಡೆದಾಗ್ಗೆ ಆವೆರಡು ಗವರ್ನ್‌ಮೆಂಟಿನವರೂ ಅಮೀರರ ಅಭಿಪ್ರಾಯವನ್ನು ಕೇಳದೆ ಹೋದರಲ್ಲಾ ಎಂದು ಅಮೀರರು ರುಜುಹಾಕದೆ ಇರುತ್ತಾರೆಂದೂ. ಈ ವಿಷಾರದಲ್ಲಿ ವಿಲಾಯತಿ ಸರ್ಕಾರದವರು ಏನಾದರೂ ಏರ್ಪಾಡು ಮಾಡಿ, ಇಷ್ಟರಲ್ಲೇ ರುಜುಹಾಕಿಸಿಕೊಳ್ಳಬೇಕೆಂತಲೂ, ಇಲ್ಲವಾದರೆ ಮನಸ್ತಾಪ ಹುಟ್ಟಲು ಅವಕಾಶವಾಗುವುದೆಂತಲೂ ಉತ್ತರ ದೇಶದ ‘ಪಯೋನಿಯರ್’ ಎಂಬ ಪತ್ರಿಕೆಯು ಸೂಚಿಸಿರುತ್ತದೆ.

* * *

ಚೀನಾ ರಾಜ್ಯದಲ್ಲಿ ಮುಂದೆ ಎಂಟು ವರುಷಗಳೊಳಗೆ ರಾಜ್ಯಭಾರ ಕ್ರಮಗಳನ್ನು ಪ್ರಜೆಗಳ ಅಭಿಪ್ರಾಯಾನುಸಾರವಾಗಿ, ಅಂದರೆ ಪಾರ್ಲಿಮೆಂಟುಗಳನ್ನು ಸ್ಥಾಪನೆಮಾಡಿ ಪ್ರಜಾಪ್ರತಿನಿಧಿಗಳನ್ನು ಚುನಾಯಿಸಿ ಅವರ ಅಭಿಪ್ರಾಯದಂತೆ ನಡಿಸುವವರಾಗಿದೇವೆ ಎಂಬದಾಗಿ ಗವರ್ನ್‌ಮೆಂಟಿನವರು ಒಂದು ಇಸ್ತಿಹಾರ್ನಾಮೆಯನ್ನು ಪ್ರಕಟಮಾಡಿದಾರೆ. ಅತ್ತಲಾಗಿ ಜರ್ಮನಿ ರಾಜ್ಯದವರು ಕ್ಯೆಯಾಚ್ ಎಂಬ ಚೀನಾ ನಗರದಲ್ಲಿ ಚೀಣೆಯವರಿಗೋಸ್ಕರ ೪ ಲಕ್ಷ ರೂಪಾಯಿ ಮುಟ್ಟಿಸಿ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸಿ, ವರುಷಕ್ಕೆ ೧ ಲಕ್ಷ ರೂಪಾಯಿ ಶಿಬ್ಬಂದಿ ಖರ್ಚಿಟ್ಟು ವಿದ್ಯೆ ಕಲಿಸುವ ಏರ್ಪಾಡು ಮಾಡುವವರಾಗಿದಾರೆ. ಚೀನಾ ಗವರ್ನ್‌ಮೆಂಟಿನವರಾದರೋ ಈ ವಿದ್ಯಾಶಾಲೆಗೆ ಸರ್ಕಾರದಿಂದ ಸಹಾಯ ದ್ರವ್ಯವನ್ನು ಕೊಟ್ಟು, ವಿದ್ಯಾರ್ಥಿಗಳನ್ನು ಅಲ್ಲಿ ತರಪೇತು ಮಾಡಿಸಿ, ತೇರ್ಗಡೆ ಹೊಂದಿದವರಿಗೆ ಗವರ್ನ್‌ಮೆಂಟಿನಲ್ಲಿ ನೌಕರಿಗಳನ್ನು ಕೊಡುವುದಕ್ಕೆ ಒಪ್ಪಿಕೊಂಡಿದಾರೆ.

* * *

ಇಂಗ್ಲಿಷ್ ರಾಜ್ಯಭಾರಕ್ಕೆ ಸೇರಿದ ಎಲ್ಲಾ ಪ್ರದೇಶಗಳಿಂದಲೂ ವರ್ತಮಾನ ಪತ್ರಿಕೆಗಳನ್ನು ನಡಿಸುವಂಥಾ ಎಡಿಟರುಗಳನ್ನು ಲಂಡನ್ ಪಟ್ಟಣಕ್ಕೆ ಕರೆಸಿಕೊಂಡು, ಒಂದು ಸಮಾಜವನ್ನು ನಡಿಸಬೇಕೆಂದು ವಿಲಾಯತಿಯ ಪತ್ರಿಕಾ ಎಡಿಟರುಗಳು ಏರ್ಪಾಡು ಮಾಡಿದಾರೆ. ಈ ಸಮಾಜವು ಲಂಡನ್ ಪಟ್ಟಣದಲ್ಲಿ ಮುಂದಿನ ವರುಷದ ಮೇ ತಿಂಗಳಲ್ಲಿ ನಡಿಯುವುದಾಗಿದೆ. ಹಾಗೆ ಸೇರಿದ ಎಡಿಟರುಗಳನ್ನೆಲ್ಲಾ ಚಕ್ರವರ್ತಿ ಸಾರ್ವಭೌಮರವರು ಅರಮನೆಗೆ ಕರೆಸಿಕೊಂಡು ಅವರಿಗೆ ಭೇಟಿಕೊಡುವಂತೆಯೂ, ಅಲ್ಲಿನ ಎಡಿಟರುಗಳು ತಮ್ಮ ಅತಿಥಿಗಳಿಗೆ ಭಾರೀ ಔತಣ ಕೊಡುವಂತೆಯೂ ಗೊತ್ತಾಗಿದೆ. ಇಂಥಾ ಎಡಿಟರುಗಳ ಸಮಾಜಕ್ಕೆ ಹಿಂದೂಸ್ಥಾನದ ಯಾವ ಎಡಿಟರಿಗೂ ಆಹ್ವಾನಪತ್ರವು ಬಂದಿರುವುದಿಲ್ಲ.

ಆಸ್ಟ್ರೇಲಿಯದಿಂದ ವಿಲಾಯತಿಗೆ ಹೋಗುವ ೨೦ ಮಂದಿ ಎಡಿಟರುಗಳಿಗೆ ಹೋಗಬರ ಪ್ರಯಾಣದ ಖರ್ಚನ್ನೂ ಆ ಸಂಘದವರೇ ಕೊಡುವುದಕ್ಕೆ ಒಪ್ಪಿಕೊಂಡಿದಾರೆ.

* * *

ಅಮೇರಿಕಕ್ಕೆ ಸೇರಿದ ಫಿಲಡೆಲ್ಫಿಯಾ ಪಟ್ಟಣದಲ್ಲಿ ಒಬ್ಬ ದೊಡ್ಡ ಮನುಷ್ಯನಿಗೆ ೧೮೯೧ನೇ ಇಸವಿಯಲ್ಲಿ ಒಂದು ಮರದ ತುಂಡು ಅವನ ನೆತ್ತಿಗೆ ಬಡಿದು ಗಾಯವಾಯಿತು. ಅದುವರೆಗೆ ಬಹು ಸಭ್ಯನಾಗಿದ್ದ ಆ ಮನುಷ್ಯನು, ಆ ಪೆಟ್ಟಿನಿಂದ ಅವನ ಕಪಾಲದಲ್ಲಿದ್ದ ಮೆದುಳಿಗೆ ಏನೋ ಅಪಾಯವುಂಟಾಗಿ, ಅಕೃತ್ಯಗಳಿಗೆ ಬಿದ್ದನು. ಕುಡಿಯುವುದು, ಯಜಮಾನನ ದುಡ್ಡನ್ನು ಕದಿಯುವುದು, ದೊಡ್ಡ ಕಳುವು ಮಾಡುವುದು, ಈ ರೀತಿಯಾದ ಅಕೃತ್ಯಗಳನ್ನು ಮಾಡುತ್ತಾ ಬಂದನು. ಇಂಥಾ ಮನುಷ್ಯನನ್ನು ಅಲ್ಲಿನ ವೈದ್ಯ ವಿದ್ಯಾಶಾಲೆಯ ಡಾಕ್ಟರ್ ನಾರ್ಥ್ರಾಪ್ ಯವರು ಆಸ್ಪತ್ರೆಗೆ ಕರೆದು ತಂದಿಟ್ಟುಕೊಂಡು, ಕಪಾಳಕ್ಕೆ ಶಸ್ತ್ರಹಾಕಿ ಮೆದುಳಿನಲ್ಲಿ ಮೇಲ್ಗಡೆ ಪೆಟ್ಟಿನಿಂದುಂಟಾಗಿದ್ದ ಅಕ್ರಮವನ್ನು ಸರಿಪಡಿಸಿ, ಆರೈಕೆಮಾಡಿ ಕಳುಹಿಸಿಕೊಟ್ಟರು. ಈಗ ಆ ಮನುಷ್ಯನು ಆ ದುರಭ್ಯಾಸ ದುಷ್ಕಾರ್ಯಗಳಿಗೆ ದೂರನಾಗಿ ಬಹಳ ಚಟುವಟಿಕೆಯನಾಗಿಯೂ, ಮುತುವರ್ಜಿಯಿಂದಲೂ ಚೆನ್ನಾಗಿ ಕೆಲಸ ಮಾಡುತ್ತಾ, ಪೂರ್ವದಂತೆಯೇ ಒಳ್ಳೆ ಹೆಸರನ್ನು ಪಡೆದಿರುತ್ತಾನೆ.

ಮೈಸೂರು ಸರ್ಕಾರಿ ಹುಕುಮುಗಳು.

ನೆಯ್ಗೆಯವರಿಗೆ ಸಹಾಯ ಮಾಡುವದು.

ಈಗ ಧಾರಣೆವಾಸಿಗಳು ಚಡಾವಾಗಿರೋಣದರಿಂದಲೂ, ಕಸಬನ್ನು ನಡಿಸಲು ದ್ರವ್ಯಸಹಾಯವಿಲ್ಲದೆ ತುಂಬಾ ಕಷ್ಟವಾಗಿರೋಣದರಿಂದಲೂ ನೆಯ್ಗೆಯವರು ಕಲಿತವರಾಡುವ ಸನಗುಗಳನ್ನು ಕೊಂಡುಕೊಂಡು, ಅವರ ಕಸಬಿಗೂ ಜೀವನಕ್ಕೂ ಸಹಾಯ ಮಾಡಬೇಕಾಗಿದೆಯಾದ್ದರಿಂದ ಇದಕ್ಕಾಗಿ ಅಡ್ವಾನ್ಸು ೩,೦೦೦ ರೂಪಾಯಿ ಕೊಡಿಸಿಕೊಡಬೇಕೆಂದು ಬೆಂಗಳೂರು ಡೆಪ್ಟಿ ಕಮಿಷನರವರು ಸರ್ಕಾರದವರನ್ನು ಕೇಳಿದರು. ಅದಕ್ಕೆ ಗವರ್ನ್‌ಮೆಂಟಿನವರು ಅವರ ಶಿಫಾರಸಿನಂತೆ ವಿನಿಯೋಗಪಡಿಸುವುದಕ್ಕಾಗಿ ಅವರ ವಶಕ್ಕೆ ೩,೦೦೦ ರೂಪಾಯಿ ಕೊಡತಕ್ಕದ್ದೆಂದೂ, ನೆಯ್ಗೆಯವರಿಂದ ಕೊಂಡುಕೊಳ್ಳುವ ಸನಗುಗಳನ್ನು ರೂಲಸು ಪ್ರಕಾರ ಮುಂದೆ ವಿಕ್ರಯಮಾಡಿ ಜಮಾಮಾಡತಕ್ಕದ್ದೆಂತಲೂ ಸ್ಯಾಂಕ್ಷನ್ ಮಾಡಿ ಕಂಟ್ರೋಲರವರಿಗೆ ಹುಕುಂ ಕೊಟ್ಟಿದಾರೆ.

ಸ್ಕೂಲ್ ಮನೆ ಕಟ್ಟುವುದಕ್ಕೆ ರಿಯಾಯತಿ.

ಗ್ರಾಮಾಂತರಗಳಲ್ಲಿ ಸ್ಕೂಲ್ ಮನೆಗಳನ್ನು ಕಟ್ಟಲು ಇಷ್ಟಪಡುವಂಥಾ ರೈತರಿಗೆ ಅದಕ್ಕಾಗಿ ಬೇಕಾಗುವಷ್ಟು ದೊಂಬುಗಳ ಮರಮುಟ್ಟನ್ನು ಸರ್ಕಾರದಿಂದ ಅರ್ಧಕ್ರಯಕ್ಕೆ ಕೊಡಿಸಿಕೊಡಬೇಕೆಂದು ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರು ಗವರ್ನ್‌ಮೆಂಟಿಗೆ ಶಿಫಾರಸು ಮಾಡಿದರು. ಫಾರೆಸ್ಟ್ ಕನ್ಸರ್ವೇಟರಾದರೋ ಹಾಗೆ ಕೊಟ್ಟರೆ ಸರ್ಕಾರಕ್ಕೆ ನಷ್ಟವಾಗುತ್ತಾದಕಾರಣ ಕೊಡಕೂಡದೆಂದು ತಿಳಿಸಿದರು. ಇದರ ಮೇಲೆ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ.—ಸಾಮಾನ್ಯವಾಗಿ ಗ್ರಾಮಸ್ಕೂಲ್ ಫಂಡಿನಿಂದಲೇ ಸ್ಕೂಲ್ ಕಟ್ಟಡಗಳನ್ನು ಕಟ್ಟಲಾಗುತ್ತದೆ. ಈ ಫಂಡು ಗ್ರಾಮಾಂತರಗಳ ರೈತರಿಂದಲೇ ಒಹುಮಟ್ಟಿಗೆ ವಸೂಲಾಗಿರುವ ಹಣವಾಗಿದೆ. ಕೆಲವು ಸಂದರ್ಭಗಳಲ್ಲಿ ಮಾತ್ರ ಗ್ರಾಮಾಂತರ ಪ್ರಜೆಗಳೇ ಹಣ ಹಾಕಿ ಸ್ಕೂಲ್ ಮನೆಗಳನ್ನು ಕಟ್ಟಿಸಿ ವಿದ್ಯಾಭ್ಯಾಸದ ಇಲಾಖೆಗೆ ವಹಿಸುವರು. ಇಂಥಾ ಸಂದರ್ಭಗಳಲ್ಲಿ ರೈತಪ್ರಜೆಗಳಿಗೆ ಸರ್ಕಾರದವರು ಸಹಾಯಮಾಡಿ ಪ್ರೋತ್ಸಾಹಪಡಿಸುವುದು ಅವಶ್ಯವೆಂದು ಕಾಣುತ್ತದೆ. ಆದಕಾರಣ ರೈತರು ತಮ್ಮ ಸ್ವಂತ ಹಣ ಹಾಕಿ ಸ್ಕೂಲ್ ಮನೆ ಕಟ್ಟಿಕೊಡಬೇಕೆಂದು ಕುತೂಹಲಪಟ್ಟಲ್ಲಿ ಅಂಥವರಿಗೆ ಆ ಕೆಲಸಕ್ಕೆ ಆವಶ್ಯವಾಗುವಷ್ಟು ಮರಮುಟ್ಟುಗಳ ದೊಂಬು ಮುಂತಾದವನ್ನು ಅರ್ಧಕ್ರಯಕ್ಕೆ ಕೊಡತಕ್ಕದ್ದು. ಇದರಲ್ಲಿ ಮೋಸವೇನೂ ಬಾರದಂತೆ ನೋಡಿಕೊಳ್ಳಬೇಕಾಗಿದೆಯಾದದ್ದರಿಂದ ಅಂಥಾ ರೈತಪ್ರಜೆಗಳು ಮೊದಲು ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಅರ್ಜಿ ಬರೆದುಕೊಳ್ಳಬೇಕೆಂತಲೂ, ಆ ಇಲಾಖೆಯವರು ಅಂಥಾ ಗ್ರಾಮಗಳಿಗೆ ಹೋಗಿ ತನಿಖೆಯಿಂದ ಎಷ್ಟು ಸಾಮಾನು ಬೇಕಾಗುತ್ತೆಂಬದನ್ನು ಗೊತ್ತುಮಾಡಿ ತಿಳಿಸಬೇಕೆಂತಲೂ, ಆ ರೀತಿ ಸ್ಯಾಂಕ್ಷನ್ ಆಗಿ ಕೊಡೋಣಾದ ಮರಮುಟ್ಟು ಮುಂತಾದದ್ದೆಲ್ಲಾ ಸ್ಕೂಲ್ ಕಟ್ಟಡಗಳಿಗೇನೇ ಸಂಪೂರ್ಣವಾಗಿ ವಿನಿಯೋಗವಾಗುವಂತೆ ಮೇಲ್ವಿಚಾರಣೆ ನೋಡಿಕೊಳ್ಳಬೇಕೆಂತಲೂ ಹುಕುಂ ಮಾಡಿದಾರೆ. ಈ ರಿಯಾಯತಿಯುಳ್ಳ ಏರ್ಪಾಟಿನಿಂದ ಈ ಸಂಸ್ಥಾನದ ಗ್ರಾಮಾಂತರ ಪ್ರಜೆಗಳು ಪ್ರೋತ್ಸಾಹ ಹೊಂದಿ, ಸ್ಕೂಲ್ ಮನೆಗಳನ್ನು ಹೆಚ್ಚಾಗಿ ಕಟ್ಟಿಸ್ಯಾರೆಂದು ಗವರ್ನ್‌ಮೆಂಟಿನವರು ನಂಬಿ ನಿರೀಕ್ಷಿಸುತ್ತಾರೆ.

ಸಣ್ಣ ಕೆರೆಗಳನ್ನು ದುರಸ್ತು ಮಾಡುವುದು.

ನೆಲಮಂಗಲದ ತಾಲ್ಲೂಕ್ ವಡಕುಂಟೆ ಕೆರೆಯು ಶಿಕಸ್ತಾಗಿರೋಣದರಿಂದ ಅದರ ವಿಚಾರವಾಗಿ ಬೆಂಗಳೂರು ಡೆಪ್ಟಿ ಕಮಿಷನರು ಕಳುಹಿದ ರಿಪೋರ್ಟನ್ನು ಪರಾಂಬರಿಸಿ ಅದರ ಮೇಲೆ ಗವರ್ನ್‌ಮೆಂಟಿನವರು ಸಾವರ್ತ್ರಿಕವಾಗಿ ಹುಕುಂ ಕೊಟ್ಟಿರುವುದೇನೆಂದರೆ.—ಈ ಕೆರೆಯನ್ನು ಗವರ್ನ್‌ಮೆಂಟಿನವರು ೧೯೦೧-೦೨ನೇ ಸಾಲಿನಲ್ಲಿ ದುರಸ್ತು ಮಾಡಿಸಿದರು. ರೈತರು ಅದನ್ನು ಶಿಕಸ್ತಾಗದಂತೆ ಆಗಾಗ್ಗೆ ಮಾಡಬೇಕಾದ ಮಟ್ಟಿ ಗಾಮಗಾರಿ ಮುಂತಾದವನ್ನು ಮಾಡದೆ ಹೋದದ್ದರಿಂದ ಈಗ ಅದಕ್ಕೆ ೩೭೫ ರೂಪಾಯಿ ಮುಟ್ಟಿಸಿ ಕಾಮಗಾರಿ ಮಾಡಬೇಕಾಗಿ ಬಂದಿದೆ. ಸಣ್ಣ ಕೆರೆಗಳಗು ಬೇರೀಜಿಗೆ ತಕ್ಕಷ್ಟು ಹಣವನ್ನು ಆಯಾ ರೈತರು ಕೊಡಬೇಕಾಗಿ ರೂಲಸು ಹೇಳುತ್ತದೆ. ಅಮಲ್ದಾರರು ಉಸ್ತುವಾರಿ ಇಟ್ಟು ರೈತರಿಂದ ಈ ಕೆಲಸವನ್ನು ಮಾಡಿಸದೆ ತಪ್ಪಿದ್ದರಿಂದ ಸರ್ಕಾರದವರು ಈಗ ಹೆಚ್ಚು ಖರ್ಚನ್ನು ವಹಿಸುವಂತಾಯಿತು. ಇಂಥಾ ಹೆಚ್ಚು ಖರ್ಚನ್ನು ಆಯಾ ಅಮಲ್ದಾರ್ರುಗಳಿಂದ ವಸೂಲ್ಮಾಡಬೇಕಾಗಿದೆ. ಆದರೆ ನೆಲಮಂಗಲ ತಾಲ್ಲೂಕಿನಲ್ಲಿ ಅಮಲ್ದಾರ್ರ ವರ್ಗಾವರ್ಗಿ ಹೆಚ್ಚಾಗಿ ಮಾಡಲ್ಪಟ್ಟಿರೋಣದರಿಂದ ಈ ಕೆರೆಯು ಶಿಕಸ್ತಾಗುವಂತೆ ಬಿಟ್ಟ ತಪ್ಪನ್ನು ಯಾವ ಅಮಲ್ದಾರರ ಮೇಲೆ ಹೊರಿಸಬೇಕೆಂದು ಗೊತ್ತುಮಾಡುವುದು ಕಷ್ಟವಾಗಿದೆ ಎಂಬದಾಗಿ ಡೆಪ್ಟಿ ಕಮಿಷನರು ತಿಳಿಸುತ್ತಾರೆ. ಅನೇಕ ಅಮಲ್ದಾರ್ರುಗಳು ಸಣ್ಣ ಕೆರೆಗಳ ವಿಷಯದಲ್ಲಿ ಅಜಾಗರೂಕತೆಯವರಾಗಿರೋಣದರಿಂದ ಗವರ್ನ್‌ಮೆಂಟಿನವರು ಅಂಥಾ ಕೆರೆಗಳನ್ನು ದುರಸ್ತುಮಾಡಿಸಿ ಕೊಟ್ಟು, ಮುಂದಕ್ಕೆ ಅಮಲ್ದಾರ್ರುಗಳು ಅಲಕ್ಷ್ಯ

ಮಾಡಿದ ಪಕ್ಷದಲ್ಲಿ ಅವರಿಂದಲೇ ಆ ಹಣವನ್ನು ವಸೂಲ್ಮಾಡಬೇಕೆಂತಲೂ ಡೆಪ್ಯುಟಿ ಕಮೀಷನರು ಸೂಚಿಸುತ್ತಾರೆ. ಅಮಲ್ದಾರ್ರ ಜವಾಬ್ದಾರಿಯು ಹೊಸದಲ್ಲ. ಅವರಲ್ಲಿ ಅನೇಕರು ಈ ಭಾಗದಲ್ಲಿ ಅಜಾಗರೂಕರವಂತರಾಗಿ ಇದ್ದಾರೆಂಬುವುದರಿಂದ ಅವರ ಜವಾಬ್ದಾರಿ ತಪ್ಪಿಸಲಾಗದು. ಡೆಪ್ಯುಟಿ ಕಮೀಷನರವರು ಅಂಥಾ ಅಮಲ್ದಾರರಿಗೆಲ್ಲಾ ಎಚ್ಚರಿಕೆ ಕೊಟ್ಟು, ರೈತರು ಮಾಡಬೇಕಾಗಿರುವ ಕೆಲಸವನ್ನು ಅವರಿಂದ ಮಾಡಿಸುವಂತೆ ತಿಳಿಸಬೇಕು. ದುರಸ್ತಾಗಬೇಕಾಗಿರುವಂಥಾ ಸಣ್ಣ ಕೆರೆಗಳನ್ನೆಲ್ಲಾ ಒಂದು ಪಟ್ಟಿಮಾಡಿಸಬೇಕು. ತಕ್ಕ ವಾಯಿದೆಯೊಳಗಾಗಿ ಅಂಥಾ ಕೆರೆಗಳ ರಿಪೇರಿಯನ್ನು ರೈತರು ಮಾಡದೆ ಹೋದಲ್ಲಿ ಸರ್ಕಾರದಿಂದಲೇ ಮಾಡಿಸಿ ಖರ್ಚನ್ನು ಮೂಲಸು ಪ್ರಕಾರ ಹಂಚಿಹಾಕಿ ವಸೂಲ್ಮಾಡಬೇಕು. ವಡಕುಂಟೆ ಕೆರೆಯು ರೈತರ ಶ್ರಮದ ಸಮೀಪದಲ್ಲಿದ್ದು ಶಿಕಸ್ತಾಗಿರೋಣದರಿಂದ ಅದನ್ನು ಕೂಡಲೇ ಸರ್ಕಾರದ ಹಣದಿಂದ ದುರಸ್ತುಮಾಡಿಸಬೇಕು. ರೈತರಿಂದ ಅವರ ಪಾಲಿನ ಹಣವನ್ನು ವಸೂಲ್ಮಾಡತಕ್ಕದ್ದು.

ಮುಜರಾಯಿ.

ಅರಮನೆಯ ಮೇಲ್ವಿಚಾರಣೆಗೆ ಒಳಪಟ್ಟ ಮುಜರಾಯಿ ಸತ್ರ ದೇವಸ್ಥಾನಗಳ ವಿಷಯದಲ್ಲಿ ಅರಮನೆ ಇಲಾಖೆಯವರೂ ಮುಜರಾಯಿ ಇಲಾಖೆಯವರೂ ಅಧಿಕಾರಗಳನ್ನು ಚಲಾಯಿಸುತ್ತಾ ಬಂದಿರೋಣದರಿಂದ ಅವುಗಳ ಕೆಲಸ ಕಾರ್ಯಗಳು ಅಷ್ಟು ತೃಪ್ತಿಕರವಾಗಿ ನಡಿಯದಂತೆ ಅಡ್ಡಿಯಾಗಿದೆ. ಇಂಥಾ ಎರಡು ತರದ ಮೇಲ್ವಿಚಾರಣಾ ಅಧಿಕಾರಗಳನ್ನು ತಪ್ಪಿಸಿಬಿಡಬೇಕಾದದ್ದು ಅವಶ್ಯ. ಆದಕಾರಣ ಇನ್ನು ಮುಂದೆ ಕೆಳಗೆ ವಿವರಿಸುವಂತೆ ಏರ್ಪಾಡು ಮಾಡಲಾಗಿದೆ. ಅವುಗಳನ್ನು ನಡಿಸುವುದೂ ಮೇಲ್ವಿಚಾರಣೆ ನೋಡಿಕೊಳ್ಳುವುದೂ ಗವರ್ನ್‌ಮೆಂಟ್ ಮುಜರಾಯಿ ಇಲಾಖೆಯಿಂದ ತಪ್ಪಿಸಿ, ಅರಮನೆ ಇಲಾಖೆಗೆ ಸಂಪೂರ್ಣವಾಗಿ ವಹಿಸಲ್ಪಟ್ಟಿವೆ. ಅರಮನೆಯ ಇಲಾಖೆಗಳ ಇನ್‌ಛಾರ್ಜ್ ಆಫೀಸರವರು ಶ್ರೀಮನ್ ಮಹಾರಾಜರವರ ಹುಕುಂ ಪಡೆದು ಅವರ ಅಪ್ಪಣೆಯ ಪ್ರಕಾರ ಈ ಸತ್ರ ದೇವಸ್ಥಾನಗಳ ಸರ್ವಸ್ವಾತಂತ್ರ್ಯವನ್ನೂ ವಹಿಸಿಕೊಂಡು ನಡಿಸತಕ್ಕದ್ದು. ಶ್ರೀಮನ್ ಮಹಾರಾಜರವರ ಆಜ್ಞಾನುಸಾರ ಆಫೀಸರವರು ಅಧಿಕಾರಗಳನ್ನು ಚಲಾಯಿಸತಕ್ಕದ್ದು. ವಿಶೇಷವಾದ ಹುಕುಂ ಅಥವಾ ಹೊಸ ಏರ್ಪಾಡೇನಾದರೂ ನಡಿಸುವ ಪಕ್ಷದಲ್ಲಿ ಆಫೀಸರವರು ಆ ಸಂಗತಿಯನ್ನು ಗವರ್ನ್‌ಮೆಂಟ್ ಮುಜರಾಯಿ ಶಿಲಾಖೆಗೆ ತಿಳಿಯಪಡಿಸಬೇಕಾಗಿದೆ. ಅವುಗಳಿಗೆ ಸಂಬಂಧಪಟ್ಟ ಎಲ್ಲಾ ಲೆಕ್ಕಗಳನ್ನೂ ಅವರು ಸದಾ ಗವರ್ನ್‌ಮೆಂಟ್ ಕಂಟ್ರೋಲರವರಿಗೆ ಕಳುಹಿಸಬಹುದು. ಈ ಹುಕುಂ ಪ್ರಕಾರ ಅರಮನೆಯ ಆಫೀಸರವರ ಅಧಿಕಾರಕ್ಕೊಳಪಟ್ಟ ಸತ್ರ ದೇವಸ್ಥಾನಗಳೂ, ಅವುಗಳಿಗೆ ಸರ್ಕಾರದಿಂದ ಸಲ್ಲುತ್ತಿರುವ ಮುಜರಾಯಿ ಗ್ರಾಂಟೂ ಎಷ್ಟೆಂದರೆ:—

	ರೂ.	ಆ.	ಪೈ.
(೧) ಶ್ರೀಮನ್ಮಹಾರಾಜರವರ ಧರ್ಮಸತ್ರ ...	೧೬,೯೫೦	೦	೦
(೨) ಶ್ರೀಮನ್ಮಹಾರಾಜರವರ ಸಂಸ್ಕೃತ ಕಾಲೇಜ್	೧೬,೭೨೨	೧೫	೧೧
(೩) ಶ್ರೀಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನ ..	೧೩,೬೭೨	೪	೧
(೪) ಶ್ರೀವರಹಾಸ್ವಾಮಿ ದೇವಸ್ಥಾನ ..	೪,೩೭೯	೦	೦
(೫) ಶ್ರೀಲಕ್ಷ್ಮೀರಮಣಸ್ವಾಮಿ ದೇವಸ್ಥಾನ ..	೨,೨೦೯	೦	೦
(೬) ಶ್ರೀತ್ರಿನೇಶ್ವರಸ್ವಾಮಿ ದೇವಸ್ಥಾನ ..	೨,೦೭೧	೦	೦
(೭) ಶ್ರೀಚಾಮುಂಡೇಶ್ವರಿ ದೇವಸ್ಥಾನ	೧೧,೭೪೮	೦	೦
(೮) ಶ್ರೀಚಾಮರಾಜೇಶ್ವರ ದೇವಸ್ಥಾನ	೧೨೬೯	೧೨	೦
(೯) ಶ್ರೀಸಂಜೀವರಾಯ ಅರಸಿನವರ ದೇವಸ್ಥಾನ	[illegible]	೦	೦
(೧೦) ಪಟ್ಟದ ಪಾದಗುಡಿ	೬೦	೦	೦
(೧೧) ಜನನಕಟ್ಟೆ ಮಠ	೩೫	೦	೦
(೧೨) ಸಂಚಗಾವಿ ಮಠ	೬೨೬	೦	೦
ಜಮ್ಲಾ ರೂ.	೬೯,೩೨೭	[illegible]	[illegible]

ಅಮೃತಮಹಲ್ ಇಲಾಖೆಯು.

ಮೈಸೂರು ಅಮೃತಮಹಲ್ ಇಲಾಖೆಯ ೧೯೦೭-೦೮ನೇ ಸಾಲಿನ ವಾರ್ಷಿಕ ರಿಪೋರ್ಟನ್ನು ಪರಾಂಬರಿಸಿ, ಗವರ್ನ್‌ಮೆಂಟವರು ಅದರ ಮೇಲೆ ಬರೆದಿರುವ ಹುಕುಂ ಏನಂದರೆ:—ಹಿಂದಿನ ಸಾಲಿನಲ್ಲಿ ಈ ಇಲಾಖೆಯ ಪೋಷಣೆಯಲ್ಲಿ ೭,೦೫೬ ದನಗಳು ಇದ್ದುವು. ಈ ಸಾಲಿನ ಕಡೆಯಲ್ಲಿ ೭,೪೨೬ ರಾಸುಗಳಿದ್ದುವು. ಬೀಜದ ಹೋರಿಗಳನ್ನು ಬಹಳ ಚೆನ್ನಾಗಿ ಸಾಕಿದ್ದರಿಂದ ಈ ಸಾಲಿನಲ್ಲಿ ಹೆಚ್ಚಾಗಿ ಕರುಗಳು ಹುಟ್ಟಿರುತ್ತವೆ. ಕೆಲವು ಮಂದೆಗಳಲ್ಲಿ ಕಾಲುಬಾಯಿ ಜ್ವರ ಮೊದಲಾದ ರೋಗಗಳು ಕಾಣಿಸಿಕೊಂಡಾಗ್ಯೂ ರಾಸುಗಳು ವಿಶೇಷ ನಷ್ಟಪಡಲಿಲ್ಲ. ಅಮೃತಮಹಲ್ ದನಗಳಿಗೆ ಸಂತಾನದಲ್ಲಿ ೧೦೮ ಹೆಚ್ಚುತ್ತಿರುವುದನ್ನು ನೋಡಿ ಗವರ್ನ್‌ಮೆಂಟವರು ಸಂತೋಷಪಡುತ್ತಾರೆ. ಹುಣಸೂರಿನಲ್ಲಿ ಮಿಲ್ಟರಿ ಡಿಪೋವನ್ನು ತೆಗೆದುಹಾಕಿದ್ದರಿಂದ ಒಳ್ಳೇ ಗೂಳಿಗಳನ್ನು ಸರ್ಕಾರದವರು ಒದಗಿಸಿಕೊಡುವದು ಸರಾಗವಾಯಿತು. ಆ ಡಿಪೋ ಇದ್ದಾಗ ಒಳ್ಳೇ ರಾಸುಗಳನ್ನು ಮಿಲ್ಟರಿ ಇಲಾಖೆಯವರು ತೆಗೆದುಕೊಳ್ಳುತ್ತಿದ್ದರು. ಈ ಸಾಲಿನಲ್ಲಿ ಮಿಲ್ಟರಿ ಇಲಾಖೆಗೆ ೧೫೦ ಹೋರಿಗಳನ್ನು ಕೊಟ್ಟದ್ದಲ್ಲದೆ ಈ ಸಂಸ್ಥಾನದಲ್ಲಿ ೫೩೫ ರಾಸುಗಳನ್ನು ಬಿಕರಿ ಮಾಡಲಾಗಿದೆ. ಹಿಂದಿನ ಸಾಲಿನಲ್ಲಿ ೫೮೧ ರಾಸುಗಳು ಮಾತ್ರ ವಿಕ್ರಯವಾಗಿದ್ದುವು. ಹಿಂದಿನ ಸಾಲಿನಲ್ಲಿ ಈ ಇಲಾಖೆಯ ಹುಟ್ಟುವಳಿಯು ರೂ. ೫೩,೨೦೭-೧೨-೧ಕ್ಕೆ ಆಗಿದ್ದದ್ದು ಈ ಸಾಲಿನಲ್ಲಿ ರೂ. ೫೮,೦೯೭-೨-೧೧ಕ್ಕೆ ಆಯಿತು. ಕಷ್ಟಕಾಲದ ದೆಸೆಯಿಂದ ೩,೦೫೮ ಚಿಲ್ಲರೆ ರೂಪಾಯಿಗಳನ್ನು ಕಾವಲ್ ತೆರಿಗೆಯನ್ನು ರಿಮಿಷನ್ ಮಾಡಬೇಕಾಯಿತು ಮತ್ತು ಇತರ ಇಲಾಖೆಗಳಿಗೆ ೩,೦೦೦ ರೂಪಾಯಿ ಬೆಲೆ ಬಾಳುವ ೭೩ ರಾಸುಗಳನ್ನು ಕೊಡೋಣವಾಗಿದೆ. ಇವೆರಡು ಬಾಬುಗಳಿಂದ ಈ ಸಾಲಿನ ಉತ್ಪತ್ತಿಯು ಕಡಮೆಯಾದಂತೆ ಕಾಣುತ್ತದೆ. ಈ ಇಲಾಖೆಗಾಗಿ ಕಳೆದ ಸಾಲಿನಲ್ಲಿ ೪೯,೫೫೩ ರೂಪಾಯಿಯೂ ಈ ಸಾಲಿನಲ್ಲಿ ೩೦,೩೯೪ ರೂಪಾಯಿಯೂ ಖರ್ಚಾಗಿರುತ್ತವೆ. ಇಷ್ಟಲ್ಲದೆ ರೈತರು ತಮ್ಮ ಬಳಿ ಇರುವ ಹಸುಗಳ ಜಾತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕೆ ಸರ್ಕಾರಿ ಅಮೃತಮಹಲ್ ಇಲಾಖೆಯಿಂದ ಟಗರುಗಳನ್ನು ಉಪಯೋಗಿಸಿಕೊಳ್ಳುವುದರಲ್ಲಿ ವಿಶೇಷ ಕುತೂಹಲವುಳ್ಳವರಾಗಿದ್ದಾರೆಂದು ತಿಳಿದು ಸರ್ಕಾರದವರು ಸಂತೋಷಪಡುತ್ತಾರೆ. ಸೂಪರಿಂಟೆಂಡೆಂಟವರು ಗೋಶಾಲೆಗಳ ಸಾರಿಗೆ ಕಾವಲುಗಳಲ್ಲಿರುವ ಕೆರೆಕಟ್ಟೆಗಳನ್ನು ದುರಸ್ತು ಮಾಡಿಸುವುದಕ್ಕೂ ಹೊಸ ಬಾವಿಗಳನ್ನು ತೆಗೆಸುವುದರಲ್ಲೂ ವಿಶೇಷ ಶ್ರದ್ಧೆಯನ್ನು ವಹಿಸಬೇಕಾಗಿದೆ ಎಂದು ಸೂಚಿಸಲ್ಪಟ್ಟಿದೆ.

ಬಹುಮಾನ ಪಡೆದ ಬಾಲ್ತಿಯು.

"ಸತ್ಯವನ್ನು ಹೇಳುವುದು."

ಉಪಾಧ್ಯಾಯರಿಂದ ಬಹುಮಾನದ ಮೇಲಾಟಕ್ಕಾಗಿ ಬರೆದು ಬಂದ ಮೊದಲನೇ ಉಪನ್ಯಾಸವನ್ನು ಪ್ರಕಟಿಸಲು ಸಂತೋಷಪಡುತ್ತೇವೆ. ಇದಕ್ಕಾಗಿ ನಾವು ಗೊತ್ತುಮಾಡಿದ ಬಹುಮಾನವನ್ನು ಆನೇಕಲ್ ಗವರ್ನ್‌ಮೆಂಟ್ ಸ್ಕೂಲ್ ಹೆಡ್ ಮಾಸ್ಟರ್ ಮಿ ಎಚ್. ಸೂರ್ಯನಾರಾಯಣ ಶಾಸ್ತ್ರಿಗಳಿಗೆ ಕಳುಹಿಸಿ, ಅವರು ಬರೆದಂಥಾ ಉಪನ್ಯಾಸವನ್ನು ಇದರ ಕೆಳಗೆ ಪ್ರಕಟಮಾಡಿದೇವೆ. ಈ ವಿಷಯದಲ್ಲಿ ನಾವು ಕೆಲವು ಸಂಗತಿಗಳನ್ನು ಸೂಚಿಸಬೇಕಾಗಿರುತ್ತದೆ. (೧) ನಿಜ ಹೇಳುವುದನ್ನು ಕುರಿತು ಮಕ್ಕಳಿಗೆ ಪಾಠಹೇಳುವಾಗ್ಗೆ, ತಪ್ಪುಮಾಡಿದರೆ ಶಿಕ್ಷೆಯಾಗುವುದು ಎಂಬ ಹೆದರಿಕೆ, ಸಂತೋಷವುಂಟಾಗುವುದೆಂಬ ಅಭಿಲಾಷೆ ಈ ಮೊದಲಾದ ಮುಖ್ಯಕಾರಣಗಳನ್ನು ಮಕ್ಕಳಿಗೆ ತಿಳಿಯುವಂತೆ ವಿವರಿಸಿ ಹೇಳಬೇಕು. (೨) ಸುಳ್ಳನ್ನು ಅಥವಾ ನಿಜವಲ್ಲದ್ದನ್ನು ಹೇಳೋಣದರಿಂದ ಮನಸ್ಸಿಗೆ ನೆಮ್ಮದಿಯುಂಟಾಗುವುದಿಲ್ಲ; ಮನೆಯಲ್ಲಾಗಲಿ ಜನಾಂಗದಲ್ಲಾಗಲಿ ಪರಸ್ಪರ ಇರಬೇಕಾದ ನಂಬಿಕೆಯೂ ಪ್ರೀತಿಯೂ ಏಕಮತ್ಯವೂ ತಪ್ಪಿ, ಅಪನಂಬಿಕೆ ಭಿನ್ನಭೇದ ಅಪ್ರೀತಿಯೇ ಮೊದಲಾದವು ಉಂಟಾಗುತ್ತವೆ. ಈ ಭಾಗವನ್ನು ಚೆನ್ನಾಗಿ ಗ್ರಹಿಸಿ ಮಕ್ಕಳಿಗೆ ಕಲಿಸಬೇಕು. (೩) ದೃಷ್ಟಾಂತಪಡಿಸುವುದಕ್ಕಾಗಿ ಹೇಳತಕ್ಕ ಕಥೆಗಳು ಮಕ್ಕಳ ಅನುಭವಕ್ಕೆ ಬಂದಂಥವುಗಳಾಗಿಯೇ ಇರಬೇಕು; ಅಂದರೆ, ಅವರು ಮನೆಯಲ್ಲಾಗಲಿ ಆಟದಲ್ಲಾಗಲಿ ಪಾಠಶಾಲೆಯಲ್ಲಾಗಲಿ ಇರುವಂಥಾ ಸಮಯಗಳಲ್ಲಿ ಸಾಮಾನ್ಯವಾಗಿ ನಡೆಯತಕ್ಕ ಕಾರ್ಯಗಳನ್ನು ಉದಹರಿಸತಕ್ಕವುಗಳಾಗಿರಬೇಕು. ಈ ಸಂದರ್ಭದಲ್ಲಿ ಸತ್ಯವಂತರಾಗಿದ್ದ ಮಹನೀಯರ ಜೀವಚರಿತ್ರೆಗಳನ್ನೂ ಉದಹರಿಸಿ ಹೇಳುವುದು ಕೂಡ ಬಹಳ ಪ್ರಯೋಜನಕರವಾಗಿರುವುದು. (೪) ಇವೆಲ್ಲದಕ್ಕಿಂತಲೂ ಮಕ್ಕಳಿಗೆ ಸುಳ್ಳು ಹೇಳುವುದನ್ನು ಹಗೆಮಾಡಿ ಅಸಹ್ಯಿಸುವಂತೆ ಕಲಿಸಬೇಕು. ಯಾಕೆಂದರೆ ಸುಳ್ಳು ದೇವರಿಗೆ ಅಪ್ರಿಯಕರವಾದದ್ದಾಗಿಯೂ, ಮನುಷ್ಯನಿಗೆ ಅಯೋಗ್ಯವಾದದ್ದಾಗಿಯೂ ಇದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಇದೇ ವಿಷಯವಾಗಿ ನಮ್ಮಲ್ಲಿಗೆ ಬರೆದುಬಂದಿರುವ ಉಪನ್ಯಾಸಗಳನ್ನು ಕುರಿತು ಕೆಲವು ಮಾತುಗಳನ್ನು ಹೇಳಬೇಕಿರುತ್ತೇವೆ:—

(೧) ಸೀತಾರಾಮಾಚಾರ್ಯರು:—ನೀವು ಬರೆದಿರುವ ಪಾಠವು ಚೆನ್ನಾಗಿದೆ. ಅದಕ್ಕೆ ನಾವು ಎರಡನೇ ಸ್ಥಾನವನ್ನು ಕೊಟ್ಟಿದ್ದೇವೆ. ನೀವು ಹೆಚ್ಚಾಗಿ ಪಾತ್ರಗಳನ್ನು ಬರೆಯುವಿರೆಂದೂ, ಇನ್ನಾವ ವಿಷಯಕ್ಕಾದರೂ ನಿಮಗೆ ನಾವು ಬಹುಮಾನ ಕೊಡಲು ಕುತೂಹಲಪಡುತ್ತೇವೆಂದೂ ಸೂಚಿಸುತ್ತೇವೆ.

(೨) ಭೀಮರಾಜಯ್ಯನವರು:—ನಿಮ್ಮ ಬಾಲ್ತಿಯಲ್ಲಿ ವಿಶೇಷವಾಗಿ ಸಂಸ್ಕೃತ ಪದಗಳನ್ನು ಪ್ರಯೋಗಮಾಡಿರುವಿರಿ. ಇದು ಸ್ಕೂಲ್ ಮಕ್ಕಳಿಗೆ ಬೋಧಿಸುವುದಕ್ಕೆ ತಕ್ಕದ್ದಾಗಿಲ್ಲ. ಸುಮ್ಮನೆ ನಿಜ ಹೇಳುವುದನ್ನೇ ಕುರಿತು ಹೊಗಳುವುದರಲ್ಲಿ ಅಷ್ಟು ಫಲವಾಗುವಂತೆ ತೋರುವುದಿಲ್ಲ.

(೩) ಎಂ. ಟಿ. ವಲ್ಲಭ ಐಯಂಗಾರ್ರು:—ನೀವು ಬರೆದ ಪಾಠವನ್ನು ಓದಿ ಸಂತೋಷಪಟ್ಟೆವು. ಆದರೆ ಅದು ಬಹಳ ಸಂಕ್ಷೇಪವಾಗಿತ್ತು.

(೪) ಸಿ. ವಿ. ವೆಂಕಟರಾಮಯ್ಯನವರು:—ನೀವು ಚೆನ್ನಾಗಿ ಆಲೋಚನೆ ಮಾಡಿ ಜಾಗರೂಕತೆಯಿಂದ ಪಾಠವನ್ನು ಬರೆದಿರುತ್ತೀರಿ. ಅದು ಮಕ್ಕಳ ಸ್ಥಿತಿಗೆ ಮೀರಿದ್ದಾಗಿದೆ. ಮಕ್ಕಳಿಗೆ ಯಥಾರ್ಥವನ್ನು ಅಷ್ಟು ದೀರ್ಘವಾಗಿ ಚರ್ಚಿಸಿ ವಿವರಿಸಬೇಕಾದದ್ದಿಲ್ಲ. ಕಂಡದ್ದನ್ನು ಕಂಡಂತೆ ಹೇಳುವದೇ ನಿಜವೆಂದು ಮಕ್ಕಳಿಗೆಲ್ಲಾ ತಿಳಿದೇ ಇದೆ. ಸುಳ್ಳು ಹೇಳಿ ಕಳ್ಳತನ ಮಾಡಿ ಜೂಜಾಡುತ್ತಿದ್ದ ಹುಡುಗನು ನಿಮ್ಮ ದೀರ್ಘವಾದ ಕಥೆಯಲ್ಲಿ ವಿವರಿಸಿರುವಂತೆ ಯಥಾರ್ಥವನ್ನು ನುಡಿದನೆಂದು ನಾವು ಊಹಿಸಲಾರೆವು. ಅಂಥಾ ಹುಡುಗನ ಸ್ವಭಾವವೇ ಬದಲಾವಣೆ ಯಾದ ಹೊರತು ಅವನು ನಿಜವಂತನಾಗಲಾರನು. ಕೆಲವು ಸಂದರ್ಭಗಳಲ್ಲಿ ಹುಡುಗರು ನಿಜವನ್ನು ಹೇಳಬೇಕೆಂದು ಬೋಧಿಸುವುದು ಯೋಗ್ಯವಾದದ್ದಲ್ಲ. ಒಂದೇ ಮರದಲ್ಲಿ ಒಳ್ಳೆಯದಾದ ಮತ್ತು ಕಹಿಯಾದ ಹಣ್ಣು ಬಿಡುವುದುಂಟೆ?

ಬಹುಮಾನ ಪಡೆದ ಪಾಠವು.

"ಸತ್ಯವನ್ನು ಹೇಳುವುದು."

ಉಪಾಧ್ಯಾಯ:—ಬಾಲಕರೇ! ನೀವು ಯಾವಾಗಲೂ ಸತ್ಯವನ್ನೇ ನುಡಿಯಬೇಕು.

ಬಾಲಕರು:—ಸತ್ಯವೆಂದರೇನು?

ಉಪಾ:—ನಾವು ಮಾಡುವ ಎಲ್ಲಾ ಕೆಲಸಗಳಲ್ಲೂ, ಮೊದಲು ನಮ್ಮ ಮನಸ್ಸು ಪ್ರವರ್ತಿಸುವುದು. ಅನಂತರ ಮಾತು ಹೊರಡುವುದು. ಆ ಮೇಲೆ ಕೆಲಸ ನಡೆಯುವುದು. ಹೀಗೆ ಮನಸ್ಸು, ವಾಕ್ಕು, ಕಾಯ, ಇವುಗಳು ಪ್ರವರ್ತಿಸುವಾಗ ಒಂದಕ್ಕೊಂದು ವಿರೋಧವಿಲ್ಲದಂತೆ ಇರಬೇಕು. ಅಂದರೆ, ಮನಸ್ಸಿನಲ್ಲಿದ್ದಂತೆಯೇ ಮಾತಿನಲ್ಲೂ, ಮಾತನಾಡಿದಂತೆಯೇ ಕೆಲಸದಲ್ಲೂ ತೋರಿಸುತ್ತಾ, ಕಂಡುದುದನ್ನು ಕಂಡಂತೆಯೂ, ಕೇಳಿದುದನ್ನು ಕೇಳಿದಂತೆಯೂ, ಮಾಡಿದುದನ್ನು ಮಾಡಿದಂತೆಯೂ, ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ಹೇಳುವ ಮಾತಿಗೆ "ಸತ್ಯ, ನಿಜ, ಯಥಾರ್ಥ" ಮೊದಲಾದ ಹೆಸರುಗಳು ಬಂದಿವೆ. ಕೆಲವರು ಇದನ್ನು ಪ್ರಾಮಾಣಿಕತೆಯ ಭೇದವೆಂದು ಹೇಳುತ್ತಾರೆ. ಈ ಗುಣವುಳ್ಳವರು ಸತ್ಯಸಂಧರೆಂತಲೂ, ಯಥಾರ್ಥವಾದಿಗಳೆಂತಲೂ ಕರೆಯಲ್ಪಡುತ್ತಾರೆ. ಸತ್ಯವೆಂಬ ಚಿನ್ನದ ಸರಿಗೆಯಲ್ಲಿ ಸದ್ಗುಣಗಳೆಂಬ ರತ್ನಗಳನ್ನು ಪೋಣಿಸಿ ಯಾವಾಗಲೂ ನಾವು ಕೊರಳಿನಲ್ಲಿ ಧರಿಸಿಕೊಂಡಿರಬೇಕು. ಸರಿಗೆಯು ಕಿತ್ತುಹೋದರೆ ರತ್ನಗಳೆಲ್ಲಾ ಕೈಗೆ ಸಿಕ್ಕದೆ ಉದುರಿಹೋಗುವಂತೆ ಸತ್ಯವಿಲ್ಲದಿದ್ದರೆ ಇತರ ಗುಣಗಳಾವುವೂ ಪ್ರಯೋಜನಕ್ಕೆ ಬರಲಾರವು.

ಬಾಲಕರು.—ಇದಕ್ಕೆ ವಿರುದ್ಧವಾದ ಗುಣವಾವುದು?

ಉಪಾಧ್ಯಾಯ.—ಹಿಂದೆ ಹೇಳಿದಂತೆ ಮನಸ್ಸಿಗೂ ಮಾತಿಗೂ ಏಕಮತ್ಯವು ತಪ್ಪಿ ಆಡುವ ಮಾತು: ಅಂದರೆ, ಮನಸ್ಸಿನಲ್ಲಿರುವುದನ್ನು ಹೇಳದೆ, ಅದಕ್ಕೆ ವಿರುದ್ಧವಾದ ಮಾತಾಡುವುದೂ. ಕಂಡದ್ದನ್ನು ಕಾಣಲಿಲ್ಲವೆಂತಲೂ, ಕೇಳಿದ್ದನ್ನು ಕೇಳಲಿಲ್ಲವೆಂತಲೂ, ಮಾಡಿದುದನ್ನು ಮಾಡಲಿಲ್ಲವೆಂತಲೂ ಹೇಳುವುದು; ಈ ವಿಧವಾದ ಮಾತಿಗೆ "ಸುಳ್ಳು, ಸಟೆ" ಈ ಮೊದಲಾದ ಹೆಸರುಗಳಿವೆ. ಕಳವು, ಮೋಸ, ಕೊಲೆ ಮೊದಲಾದ ಕೆಟ್ಟ ಕೆಲಸಗಳನ್ನು ಮಾಡಿದಾಗ ಇಂತಹ ಸುಳ್ಳು ಮಾತುಗಳು ಹೊರಡುತ್ತವೆ.

ಬಾಲ:—ಅಸತ್ಯವನ್ನು ನುಡಿವುದರಲ್ಲಿ ಇನ್ನೇನಾದರೂ ತಾರತಮ್ಯವುಂಟೇ?

ಉಪಾ:—ಮರವಿನಿಂದಾಗಲಿ ಅಜ್ಞಾನದಿಂದಾಗಲಿ ಸುಳ್ಳುಹೇಳುವುದು, ಮನಃಪೂರ್ವಕವಾಗಿ ಸುಳ್ಳಾಡುವುದು, ಇವೆರಡರಲ್ಲಿ ಒಂದನೇ ಅಪರಾಧವು ಕೆಲವು ವೇಳೆ ಕ್ಷಮಿಸತಕ್ಕದ್ದಾಗಿದೆ. ಎರಡನೆಯದು ಬಹು ನಿಂದ್ಯವಾದುದು. ಆದುದರಿಂದಲೇ ನ್ಯಾಯಸ್ಥಾನಗಳಲ್ಲಿ ಸುಳ್ಳಿಗೆ ತಕ್ಕ ಶಿಕ್ಷೆಯನ್ನು ವಿಧಿಸುವುದು. ಮೂಢರು, ಅನುಭವವಿಲ್ಲದ ಬಾಲಕರು, ಮೂರ್ಖರು, ಅಶಿಕ್ಷಿತರು, ಇವರು ಮೇಲೆ ಹೇಳಿದಂತೆ ಸುಳ್ಳಾಡುವುದು ಬಹು ಸಾಧಾರಣವಾಗಿರುತ್ತದೆ.

(೧) ಒಬ್ಬ ಹುಡುಗನು ಮತ್ತೊಬ್ಬನಲ್ಲಿರುವ ಒಂದು ಪದಾರ್ಥವನ್ನು ಕದ್ದು ತನ್ನ ಜೇಬಿನಲ್ಲಿಟ್ಟುಕೊಂಡಿರುತ್ತಾನೆ. ಆಗ ಅವನನ್ನು ಕರೆಸಿ ಕೇಳಿದರೆ ನಾನು ತೆಗೆದುಕೊಳ್ಳಲಿಲ್ಲವೆಂದು ಸುಳ್ಳು ಹೇಳುತ್ತಾನೆ. ಇಲ್ಲಿ ಕಳ್ಳತನ ಮಾಡಿದುದಕ್ಕಾಗಿ ಸುಳ್ಳು ಹೇಳಿದನೆಂದು ಗೊತ್ತಾಗುತ್ತದೆ. (೨) ಒಬ್ಬ ಹುಡುಗನು ತನ್ನ ಜೇಬಿನಲ್ಲಿ ತಿಂಡಿಯ ಪದಾರ್ಥವನ್ನಿಟ್ಟುಕೊಂಡಿರುವುದನ್ನು ಮತ್ತೊಬ್ಬನು ಕಂಡು, ನನಗೆ ಸ್ವಲ್ಪ ಕೊಡೆಂದು ಕೇಳಿದಾಗ, ನನ್ನಲ್ಲಿಲ್ಲವೇ ಇಲ್ಲವೆಂದು ಹೇಳುತ್ತಾನೆ. ಇಲ್ಲಿ ಮೋಸಮಾಡುವುದಕ್ಕಾಗಿ ಸುಳ್ಳಾಡಿದನೆಂದು ತಿಳಿಯುತ್ತದೆ. (೩) ಒಬ್ಬ ಹುಡುಗನು ದಾರಿಯಲ್ಲಿ ಬರುತ್ತಿರುವಾಗ ಒಂದು ಕಲ್ಲಿಯನ್ನು ಹೊಡೆದು ಕೊಂದುಹಾಕುತ್ತಾನೆ. ಅದು ಅವನ ಉಪಾಧ್ಯಾಯನಿಗೆ ತಿಳಿದು ಅವನನ್ನು ಕರೆಸಿ ಕೇಳಿದಾಗ, ನಾನು ಕೊಲ್ಲಲಿಲ್ಲವೆಂದು ಹೇಳುತ್ತಾನೆ. ಇಲ್ಲಿ ಕೊಲೆಮಾಡಿದುದಕ್ಕಾಗಿ ಶಿಕ್ಷಿಸುವರೆಂಬ ಭಯದಿಂದ ಸುಳ್ಳಾಡಿದನು. ಹೀಗೆ ಯಾರೂ ಎಂದಿಗೂ ಸುಳ್ಳಾಡಬಾರದು. ಸತ್ಯವನ್ನೇ ಹೇಳಬೇಕು.

ಬಾಲಕ.—ಸತ್ಯವಾದಿಗಳಿಗೆ ಉಂಟಾಗುವ ಲಾಭವೇನು?

ಉಪಾ:—ಲೋಕದಲ್ಲಿ ಸತ್ಯವಂತರನ್ನು ಮರ್ಯಾದೆಯಿಂದ ಕಾಣುವಷ್ಟು ಮತ್ತಾರನ್ನೂ ಕಾಣುವುದಿಲ್ಲ. ಸತ್ಯ ಒಂದಿದ್ದರೆ ಧೈರ್ಯ, ಶೌರ್ಯ, ಕ್ಷಮೆ, ಪರೋಪಕಾರಬುದ್ಧಿ, ಮುಂತಾದ ಸುಗುಣಗಳೆಲ್ಲವೂ ಜೊತೆಯಲ್ಲಿಯೇ ಬರುತ್ತವೆ.

ದೇವರು ಸತ್ಯಸ್ವರೂಪನಾಗಿದ್ದಾನೆ. ಸತ್ಯವಂತರನ್ನು ಕಂಡರೆ ದೇವರಿಗೆ ಬಹು ಪ್ರೀತಿ. ಲೋಕದಲ್ಲಿರುವ ಸಕಲ ಧರ್ಮಗಳೂ ಒಂದು ತೂಕ. ಸತ್ಯ ಒಂದೇ ಒಂದು ತೂಕ. "ಸತ್ಯಮೇವ ಜಯತಿ ನಾನೃತಂ" ಎಂಬ ಉಪನಿಷದ್ವಾಕ್ಯವು ಸತ್ಯಕ್ಕೆ ಜಯವನ್ನೂ, ಸುಳ್ಳಿಗೆ ಅಪಜಯವನ್ನೂ ಸಿದ್ಧಾಂತಪಡಿಸುತ್ತದೆ. ಶ್ರೀ ಕೃಷ್ಣನು ಅರ್ಜುನನಿಗೆ "ಸತ್ಯಮೇವೋದ್ಧರಾಮ್ಯಹಂ" ಅಂದರೆ, ಸತ್ಯವನ್ನೇ ಉದ್ಧಾರ ಮಾಡುತ್ತೇನೆ ಎಂದು ಶಂಖೋಕ್ತವಾಗಿ ಹೇಳುತ್ತಾನೆ. "ಸತ್ಯವಿದ್ದರೆ ಎತ್ತಲೂ ಭಯವಿಲ್ಲ" ಎಂಬ ನಾಣ್ಣುಡಿಯಿಂದ ಇಹಪರ ಸೌಖ್ಯಗಳೆರಡೂ ಇದರಿಂದ ಕೈಗೂಡುತ್ತವೆ ಎಂದು. ಮಹಮದೀಯ, ಕ್ರೈಸ್ತ, ಬೌದ್ಧ ಮುಂತಾದ ಸಕಲ ಮತದವರೂ ಸತ್ಯಕ್ಕೇ ಪ್ರಾಧಾನ್ಯವನ್ನು ಕೊಟ್ಟಿರುತ್ತಾರೆ. ಮೊಗಲ್ ಚಕ್ರವರ್ತಿಯಾದ ಅಕ್ಬರ್ ಮಹಾರಾಜನು ಒಂದು ಸಾರಿ "ಋಜುಮಾರ್ಗದಲ್ಲಿ ನಡೆದು ಕೆಟ್ಟುಹೋದವನನ್ನು ನಾನು ಕಂಡೇ ಇಲ್ಲ" ಎಂದು ಬರೆಸಿರುತ್ತಾನೆ. ಸುಳ್ಳನ್ನು ನಾವು ಎಂದಿಗೂ ಆಡಬಾರದು. ದೇವರು ನಮಗೆ ನಾಲಿಗೆಯನ್ನು ಕೊಟ್ಟಿರುವುದು ಸತ್ಯವನ್ನು ಹೇಳುವುದಕ್ಕೋಸ್ಕರ, ಸುಳ್ಳಾಡುವುದಕ್ಕಲ್ಲ. ಸುಳ್ಳಾಡುವುದು ಒಂದು ದೊಡ್ಡ ಪಾಪವು. ಇದರಿಂದ ಮನುಷ್ಯ ಜಾತಿಗೇ ಅಪರಾಧ ಮಾಡಿದಂತಾಗುವುದು. ಯಾವ ಜನರಲ್ಲಿ ಸುಳ್ಳಿದೆಯೋ ಅವರಲ್ಲಿ ಪರಸ್ಪರ ಸ್ನೇಹಭಾವವಿರುವುದಿಲ್ಲ. ಸುಳ್ಳುಗಾರನು ಒಂದು ವೇಳೆ ದಿಟವನ್ನು ಹೇಳಿದಾಗ್ಯೂ ಅವನ ಮಾತನ್ನು ಯಾರೂ ನಂಬುವುದಿಲ್ಲ. ಈ ವಿಷಯದಲ್ಲಿ ಒಂದು ಕಥೆಯುಂಟು.

ಒಬ್ಬ ಕುರುಬ ಹುಡುಗನು ತನ್ನ ಕುರಿಗಳನ್ನು ಕಾಯುತ್ತಿದ್ದಾಗ ಇದ್ದಕ್ಕಿದ್ದ ಹಾಗೆ—"ಓ ಓ ಹುಲಿ ಬಂತು! ಹುಲಿ ಬಂತು!" ಎಂದು ಕೂಗಿಕೊಂಡನು. ಅದನ್ನು ಕೇಳಿ ನೆರೆಹೊರೆಯವರೆಲ್ಲಾ ಆಯುಧಗಳನ್ನೂ, ಬಡಿಗಳನ್ನೂ ತೆಗೆದುಕೊಂಡು ಓಡಿಬರುತ್ತಿದ್ದರು. ಅವರನ್ನು ನೋಡಿ ಆ ಹುಡುಗನು ನಗುವುದಕ್ಕಾರಂಭಿಸಿದನು. ಇವನು ಸುಳ್ಳುಗಾರನೆಂದು ತಿಳಿದುಕೊಂಡು, ಅವರೆಲ್ಲಾ ಹಿಂದಕ್ಕೆ ಹೊರಟು ಹೋದರು. ಇದಾದ ಕೆಲವು ದಿನಗಳಿಗೆ ನಿಜವಾಗಿ ಹುಲಿ ಬಂದೇ ಬಂದಿತು. ಆಗಲೂ ಆ ಹುಡುಗನು ಪೂರ್ವದಂತೆಯೇ ಕೂಗಿಕೊಂಡನು. ಇವನು ಮೊದಲಿನಂತೆಯೇ ಸುಳ್ಳು ಕೂಗುವನೆಂದು ತಿಳಿದುಕೊಂಡು, ನೆರೆಹೊರೆಯವರು ಯಾರೂ ಬರಲಿಲ್ಲ. ಆಗ ಹುಲಿಯು ಅವನನ್ನು ಕೊಂದುಹಾಕಿತು. ಆ ಹುಡುಗನು ಸುಳ್ಳು ಹೇಳಿದ್ದರಿಂದ ಪ್ರಾಣವನ್ನು ಕಳೆದುಕೊಂಡನು.

ನಿಜವನ್ನು ಸಾಧಿಸುವುದು ಸುಲಭ. ಆದರೆ ಸುಳ್ಳನ್ನು ಸಾಧಿಸುವುದು ಬಹು ಕಷ್ಟ. ಒಂದು ಸುಳ್ಳನ್ನು ಸಾಧಿಸುವುದಕ್ಕಾಗಿ ಅದರ ಜೊತೆಗೆ ಅನೇಕ ಸುಳ್ಳನ್ನು ಹೇಳಬೇಕಾಗುವುದು. ಅಸತ್ಯವನ್ನು ಸತ್ಯವೆಂದು ಸ್ಥಾಪಿಸುವುದಕ್ಕೆ ಬಹಳ ಚಾತುರ್ಯವೂ, ಯುಕ್ತಿಯೂ, ಜ್ಞಾಪಕಶಕ್ತಿಯೂ ಬೇಕು. ಮನಃಪೂರ್ವಕವಾಗಿ ಸುಳ್ಳಾಡುವವನಿಗೆ ತನ್ನ ಸುಳ್ಳು ಎಲ್ಲಿ ಬಯಲಾಗುವುದೋ ಎಂದು ಎದೆ ಢವಢವನೆ ಒಡೆದುಕೊಳ್ಳುವುದು. ಬಾಯಿ, ತುಟಿ, ನಾಲಗೆ ಒಣಗುವುದು. ಮುಖದ ಕಾಂತಿ ಕೆಟ್ಟುಹೋಗುವುದು. ಕೈ, ಕಾಲು ನಡುಗುವುದು. ಮೈಯೆಲ್ಲಾ ಬೆವರುವುದು. ಧ್ವನಿಯು ಬದಲಾಯಿಸುವುದು. ಹಲವೇನು? ಮೂರ್ಛಾರೋಗದವರಿಗೆ ಉಂಟಾಗುವ ಲಕ್ಷಣಗಳೆಲ್ಲಾ ಕಾಣಿಸಿಕೊಳ್ಳುವುವು. ಕೆಲವು ವೇಳೆ ನ್ಯಾಯಸ್ಥಾನಗಳಲ್ಲಿ ಅಸತ್ಯವನ್ನು ಆಡುತ್ತಿರುವವರಿಗೆ ಮೂರ್ಛೆಯೂ ಸಹ ಉಂಟಾಗಿರುವುದು ಅನುಭವಸಿದ್ಧವಾಗಿದೆ. ಸುಳ್ಳುಗಾರನಿಗೆ ಧೈರ್ಯವಿರುವುದಿಲ್ಲ. ಯಾವಾಗಲೂ ಮನಸ್ಸು ಕಳವಳಪಡುತ್ತಿರುವುದರಿಂದಲೂ, ಮನಸ್ಸಿಗೂ ದೇಹಕ್ಕೂ ಸಂಬಂಧವಿರುವುದರಿಂದಲೂ ಸುಳ್ಳುಗಾರನಿಗೆ ಆಯುಸ್ಸು ಕ್ಷೀಣವಾಗುವುದು. ನಿಜವನ್ನು ಹೇಳತಕ್ಕವನಿಗೆ ಆಯುಸ್ಸು ವೃದ್ಧಿಯಾಗುವುದು. ಒಂದು ವೇಳೆ "ಯಥಾರ್ಥವಾದಿ ಲೋಕವಿರೋಧಿ" ಎಂಬಂತೆ ಸತ್ಯವಾದಿಗಳಿಗೆ ಕೆಲವರು ವಿರೋಧಿಗಳು ಸಂಭವಿಸುವುದುಂಟು. ಕಳ್ಳನನ್ನು ಕಳ್ಳನೆಂದು ಹೇಳಿದರೆ ಅವನಿಗೂ ಅವನ ಕಡೆಯವರಿಗೂ ಕೋಪ ಬರುತ್ತದೆ. ಸುಳ್ಳು ಹೇಳಿದವನನ್ನು ನೀನು ಸುಳ್ಳು ಹೇಳಿದೆ ಎಂದು ಹೇಳಲು, ಅದು ಅವನಿಗೆ ವಿರೋಧವಾಗಿ ಪರಿಣಮಿಸುತ್ತದೆ. ಹೀಗೆ ಕೆಲವರಿಂದಾಗುವ ವಿರೋಧಕ್ಕೆ ನಾವು ಸತ್ಯವನ್ನು ಹೇಳುವುದಕ್ಕೆ ಎಂದಿಗೂ ಹಿಂತೆಗೆಯಬಾರದು. ಸತ್ಯಕ್ಕಾಗಿ ಪ್ರಾಣಗಳನ್ನು ಸಹ ಕೊಟ್ಟು ಅನೇಕ ಮಹನೀಯರು ಶಾಶ್ವತವಾದ ಯಶಸ್ಸನ್ನು ಪಡೆದಿರುವರು. ಈ ವಿಷಯದಲ್ಲಿ ಒಂದು ಪದ್ಯವನ್ನು ಹೇಳುತ್ತೇನೆ. ಕೇಳಿ.—

ಪದ್ಯ: "ಸತ್ಯವೆಂಬುದೆ ತಾಯಿತಂದೆ,
ಸತ್ಯವೆಂಬುದೆ ಸರ್ವಬಳಗವು |
ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಜಗದೀಶನು |"

ಬಾಲ:—ಈ ಪದ್ಯವನ್ನು ನಾವು ಕೇಳಿದ್ದೇವೆ. ಇದು ಗೋವಿನ ಕಥೆಯಲ್ಲಿ ಬರುತ್ತದೆ. ಇದು ಪುಣ್ಯಕೋಟಿ ಎಂಬ ಹಸುವು ಹುಲಿಯನ್ನು ಕುರಿತು ಹೇಳಿದ ಮಾತು.

ಲುವಾ.—ಈ ಕಥೆಯ ಸಾರಾಂಶವು ನಿಮಗೆ ಗೊತ್ತಿದೆಯಷ್ಟೆ. ಒಂದು ಹಸುವು ಮಹಾಘಾತಕ ಸ್ವಭಾವವುಳ್ಳ ಹುಲಿಗೆ ನಂಬಿಕೆಯನ್ನು ಹುಟ್ಟಿಸುವುದೇನು! ಅದರಂತೆ ಹುಲಿಯು ತನ್ನ ಕೈಗೆ ಸಿಕ್ಕಿದ ಹಸುವನ್ನು ಬಿಟ್ಟು ಬಿಟ್ಟಿತೆಂದರೇನು! ಇದಕ್ಕೆಲ್ಲಾ ಮೇಲೆ ಹೇಳಿದ ಪದ್ಯದಿಂದ ತೋರುವ ಸತ್ಯಪ್ರಮಾಣವಾದ ಮಾತಿನ ಮಹಿಮೆಯೇ ಕಾರಣವಲ್ಲವೇ? ಇಷ್ಟೇ ಅಲ್ಲ. ಆ ಹಸುವೆ ತಾನು ಬಾಯಿಯಲ್ಲಿ ಯಾವ ರೀತಿ ಹುಲಿಗೆ ಹೇಳಿತೋ ಅದೇ ರೀತಿ ನಡೆದಲ್ಲದೆ ಮಾತಿ ತನ್ನ ನಿಜತ್ವವನ್ನು ತೋರ್ಪಡಿಸಿಕೊಂಡಿತು. ಪಶುಜಾತಿಗಳಿಗೆ ತಮ್ಮ ಮಕ್ಕಳ ಮೇಲಿರುವ ವಾತ್ಸಲ್ಯವು ಮನುಷ್ಯರಲ್ಲಿರುವುದಕ್ಕಿಂತಲೂ ಅತ್ಯಧಿಕವಾಗಿರುವುದು. ಹೀಗಿದ್ದಾಗ್ಯೂ, ಅದು ತನ್ನ ಪ್ರಾಣದ ಮೇಲಿನ ಆಶೆಯನ್ನಾಗಲಿ, ತನ್ನ ಕರುವಿನ ಮೇಲಿನ ಮಮತೆಯನ್ನಾಗಲಿ ಇಟ್ಟುಕೊಂಡು ಮಾತಿಗೆ ತಪ್ಪದೆ, ತಾನು ಬರುತ್ತೇನೆಂದು ಹೇಳಿದ್ದ ಕಾಲಕ್ಕೆ ಸರಿಯಾಗಿ ಹುಲಿಯ ಮುಂದೆ ಹೋಗಿ ನಿಂತು ಹೇಳಿದ ಮಧುರವಾದ ಮಾತೇ ಹುಲಿಗೆ ವಾರಣಮಂತ್ರವಾಗಿ ಪರಿಣಮಿಸಿತು. ಕೊಂದು ತಿನ್ನುವೆನೆಂದು ನುಡಿದ ಹುಲಿಯು ಕರುಣೋಕ್ತಿಯೇ ಆ ಪಶುವಿಗೆ ಸಂಜೀವನವಾಯಿತು.

ಹೀಗಾದುದು ಯಾರಿಂದ? ಸತ್ಯದಿಂದಲ್ಲವೇ? ಬಾಲಕರೇ, ಸತ್ಯವಂತರಿಗೆ ಉಂಟಾಗುವ ಶ್ರೇಯೋಲಾಭವನ್ನು ನೋಡಿದಿರಾ? ಆ ಹಸುವು ತಾನು ತಿರ್ಯಗ್ಜಂತುವಾದರೂ ತನ್ನ ಸತ್ಯವಾದ ನಡತೆಯಿಂದ ತನಗೂ, ತನ್ನ ಕರುವಿಗೂ, ತನ್ನನ್ನು ಸಾಕಿದ ಗೊಲ್ಲನಿಗೂ ಪ್ರಾಪ್ತವಾಗಿದ್ದ ಅಪಾಯಗಳನ್ನೆಲ್ಲಾ ತಪ್ಪಿಸಿಕೊಂಡು, ಸೌಖ್ಯವನ್ನು ಪಡೆದುದಲ್ಲದೆ, ತನ್ನ ಪ್ರಾಣಕಂಟಕವಾಗಿ ಬಂದ ಹುಲಿಯ ಭಯವನ್ನೂ ನಿವಾರಣೆಮಾಡಿಕೊಂಡಿತು. ಸತ್ಯದಿಂದ ಇಷ್ಟಪ್ರಾಪ್ತಿ, ಅನಿಷ್ಟನಿವಾರಣೆ ಎಂಬ ಪುರುಷಾರ್ಥಗಳು ಲಭಿಸುವುವೆಂಬುದಕ್ಕೆ ಈ ಕಥೆಯು ಒಳ್ಳೆಯ ಉದಾಹರಣೆಯಾಗಿ ಇರುವುದಲ್ಲವೇ? ಇಷ್ಟೇ ಅಲ್ಲ. ಇನ್ನೂ ಕೇಳಿ,—

ಸತ್ಯಂ ಮಾತಾ ಪಿತಾ ಜ್ಞಾನಂ ಧರ್ಮೋ ಭ್ರಾತಾ ದಯಾಸಖಾ ।
ಶಾಂತಿಃ ಪತ್ನೀ ಕ್ಷಮಾಪುತ್ರಃ ಷಡೇತೇ ಮಮಬಾಂಧವಾಃ ॥

ಅಂದರೆ, ನನಗೆ ಸತ್ಯವೇ ತಾಯಿ, ಜ್ಞಾನವೇ ತಂದೆ, ಧರ್ಮವೇ ಒಡಹುಟ್ಟಿದವನು, ದಯೆಯೇ ಸ್ನೇಹಿತನು, ಶಾಂತಿಯೇ ಪತ್ನಿ, ಕ್ಷಮೆಯೇ ಪುತ್ರನು ಎಂದು ಭರತ ಖಂಡದಲ್ಲಿ ಪ್ರಖ್ಯಾತನಾದ ವಿಷ್ಣುಶರ್ಮನೆಂಬುವನು ತನ್ನ ನಿಜವಾದ ಮನೋಭಾವವನ್ನು ತಿಳಿಯಪಡಿಸುವಾಗ ಸತ್ಯವನ್ನು ತಾಯಿಗೆ ಹೋಲಿಸಿದ್ದಾನೆ. ಏಕೆಂದರೆ, ತಾಯಿಯು ಮಕ್ಕಳನ್ನು ಕಾಪಾಡುವಂತೆ, ಮನುಷ್ಯರನ್ನು ಸತ್ಯವೇ ಕಾಪಾಡುವುದೆಂತಲೂ, ಇತರ ಬಂಧುಗಳಿಗಿಂತಲೂ ತಾಯಿಯೇ ಶ್ರೇಷ್ಠಳಾದುದರಿಂದ, ಅಂತಹ ಶ್ರೇಷ್ಠಳಾದ ತಾಯಿಗೆ ಹೋಲಿಸಿದ ಸತ್ಯಗುಣವು ಅತ್ಯಂತ ಶ್ರೇಷ್ಠವಾದುದೆಂತಲೂ ವ್ಯಕ್ತವಾಗುತ್ತದೆ. ಮತ್ತು

(೧) ಸಕಲ ಜನರಿಗೂ ಪ್ರಸಿದ್ಧನಾದ ದಶರಥ ರಾಜನು ಸತ್ಯವನ್ನು ಬಿಡದೆ, ತನ್ನ ಪ್ರಾಣಕ್ಕಿಂತಲೂ ಪ್ರೀತಿಪಾತ್ರನಾದ "ರಾಮ"ನೆಂಬ ತನ್ನ ಮಗನನ್ನು ಕಾಡಿಗೆ ಕಳುಹಿಸಿದನೆಂದು ರಾಮಾಯಣವೆಂಬ ಗ್ರಂಥದಲ್ಲಿ ಹೇಳಿದೆ. (೨) ಶಿಬಿಚಕ್ರವರ್ತಿಯು ತನ್ನ ದೇಹವನ್ನು ಕಪೋತಪಕ್ಷಿಗಾಗಿ ಕೊಯ್ದು ಕೊಟ್ಟು ಗಿಡಗನನ್ನು ಸಂತೋಷಪಡಿಸಿ, ತನ್ನ ಸತ್ಯಸಂಧತೆಯನ್ನು ಕಾಪಾಡಿಕೊಳ್ಳಲಿಲ್ಲವೇ? (೩) ಮತ್ತು ಹರಿಶ್ಚಂದ್ರನೆಂಬ ರಾಜನು ಒಬ್ಬ ಬ್ರಾಹ್ಮಣನ ಮೂಲಕವಾಗಿ ತನ್ನ ಶರೀರವನ್ನು ಎರಡು ಬಾರಿ ಮಾರಿಸಿಕೊಂಡು, ಸತ್ಯಪ್ರತಿಜ್ಞನೆಂಬ ಹೆಸರನ್ನು ಪಡೆಯಲಿಲ್ಲವೇ? (೪) ಮಹನೀಯರು ಇಂಥಾ ಸತ್ಯವನ್ನು ಪ್ರಾಣಕ್ಕಿಂತಲೂ ಅಧಿಕವಾದ ಆಸ್ತಿಯಂತೆ ಕಾಪಾಡಿಕೊಂಡಿರುವರೆಂದು ಅನೇಕ ಚರಿತ್ರೆಗಳಿಂದ ಗೊತ್ತಾಗಿರುವುದು. (೫) ಸ್ಕಾಟ್ಲೆಂಡ್ ದೇಶದ ಸ್ಕಾಟ್ಲೆಂಡ್ ಎಂಬ ಸೀಮೆಯ ಲ್ಲಿ ಪ್ರಖ್ಯಾತನಾಗಿದ್ದ ಡಾಕ್ಟರ್ ಲಿವಿಂಗ್ಸ್ಟನ್ ಎಂಬ ಮಹಾ ಪುರುಷನ ಮನೆತನದವನು ತನ್ನ ಮರಣ ಕಾಲದಲ್ಲಿ ತನ್ನ ಮಕ್ಕಳನ್ನು ಸುತ್ತಲೂ ಕರೆಸಿಕೊಂಡು, "ಮಕ್ಕಳಿರಾ! ನಾನು ಜೀವಿಸಿರುವ ಕಾಲವನ್ನೆಲ್ಲಾ ವೆಚ್ಚ ಮಾಡಿ, ನಮ್ಮ ಪೂರ್ವಿಕರ ಚರಿತ್ರೆಯನ್ನೆಲ್ಲಾ ಚೆನ್ನಾಗಿ ಶೋಧಿಸಿದೆನು. ಅವರ ಲ್ಲಿ ಒಬ್ಬನಾದರೂ ಸತ್ಯವನ್ನು ತಪ್ಪಿ ನಡೆದವನಂತೆ ತಿಳಿಯಬರಲಿಲ್ಲ. ಹೀಗಿರುವಾಗ ನಿಮ್ಮಲ್ಲಿ ಯಾವನಾದರೂ ಸತ್ಯವನ್ನು ತಪ್ಪಿ ನಡೆದರೆ ಆ ತಪ್ಪು ನಮ್ಮ ವಂಶದಲ್ಲಿ ಅಸತ್ಯವು ನಮ್ಮ ವಂಶದಲ್ಲಿಲ್ಲ. ಆದಕಾರಣ ಸತ್ಯವಂತರಾಗಿರಿ. ಇದೇ ನಾನು ನಿಮಗೆ ಕೊಟ್ಟು ಹೋಗುವ ಬುದ್ಧಿವಾದವು" ಎಂದು ಹೇಳಿದನಂತೆ. ಆತನು ತನ್ನ ಮಕ್ಕಳಿಗೆ ಐಶ್ವರ್ಯವನ್ನು ಗಳಿಸಿಟ್ಟು ಹೋಗಲಿಲ್ಲ. ಸತ್ಯವಂತರ ಮಕ್ಕಳೆಂಬ ಹೆಸರನ್ನೇ ಆಸ್ತಿಯಾಗಿ ಬಿಟ್ಟು ಹೋದನು. (೬) ಘನವನ್ನು ಹೊಂದಿದ ದಿವಂಗತ ಶ್ರೀ ವಿಕ್ಟೋರಿಯಾ ಸಾರ್ವಭೌಮಿಯವರು ನಮ್ಮ ಭರತ ಖಂಡದಲ್ಲಿರುವ ಮಹಾರಾಜರುಗಳಿಗೂ, ಪ್ರಜೆಗಳಿಗೂ ಕೊಟ್ಟ ವಾಗ್ದಾನವು ಕೆಡದೆ, ಮುಂದೆಯೂ ಶಾಶ್ವತವಾಗಿ ನಡೆಯುತ್ತಿರುವಂತೆ ಶಾಸನವನ್ನು ಬರೆದಿಟ್ಟು ತಮ್ಮ ಅಸಾಧಾರಣವಾದ ಸತ್ಯಸಂಧತೆಯನ್ನು ಕಾಪಾಡಿಕೊಂಡಿಲ್ಲವೇ?

ಅವರಂತೆಯೇ ನಾವೂ ಸಹ "ಸತ್ಯಂ ವದ, ಧರ್ಮಂ ಚರ, ನಾನೃತಂ ಬ್ರೂಯಾತ್" ಇತ್ಯಾದಿ ಶಿಕ್ಷಾವಿಧಾನವನ್ನನುಸರಿಸಿ, ಯಾವಾಗಲೂ ಸತ್ಯವನ್ನೇ ಹೇಳುತ್ತಾ, ಸತ್ಯಸ್ವರೂಪನಾದ ಭಗವಂತನನ್ನು ಸ್ತೋತ್ರಮಾಡೋಣ.

ಈ ಪದ್ಯವನ್ನು ಎಲ್ಲರೂ ಹೇಳಿರಿ —

ಸತ್ಯವ್ರತಂ ಸತ್ಯಪರಂ ತ್ರಿಸತ್ಯಂ
ಸತ್ಯಸ್ಯಯೋನಿಂ ನಿಹಿತಂಚಸತ್ಯೇ ।
ಸತ್ಯಸ್ಯ ಸತ್ಯಮೃತಸತ್ಯನೇತ್ರಂ
ಸತ್ಯಾತ್ಮಕಂ ತ್ವಾಂ ಶರಣಂ ಪ್ರಪನ್ನಾಃ ॥ [ಭಾಗವತ.]

ಕಡೆಯ ಬಹುಮಾನದ ಪೋಟಾಟವು.

ಉಪಾಧ್ಯಾಯರುಗಳು ಬಾಲಕ ಬಾಲಿಕೆಯರಿಗೆ "ಅಸ್ವಾರ್ಥತೆಯು, ಅಂದರೆ, ಸ್ವಪ್ರಯೋಜನವನ್ನಲ್ಲ; ಪರಹಿತವನ್ನೇ ಬಯಸಿ ಮಾಡುವುದು" ಎಂಬೀ ಮೊದಲೇ ವಿಷಯವನ್ನು ಕುರಿತು ಒಂದು ಪಾಠವನ್ನು ಬರೆದು, ಈ ತಿಂಗಳ ೧೪ನೇ ತಾರೀಖಿನೊಳಗಾಗಿ ನಮಗೆ ತಲಪುವಂತೆ ಕಳುಹಿಸಿಕೊಡಬೇಕಾಗಿದೆ. ಈ ಪೋಟಾಟದ ಕ್ರಮಗಳೇನೆಂದರೆ.—

(೧) ಸರ್ಕಾರ ಅಥವಾ ಗ್ರಾಂಟು ಪಡೆಯುವ ಸ್ಕೂಲಿನ ಉಪಾಧ್ಯಾಯರಾಗಲೀ ಸಹಾಯೋಪಾಧ್ಯಾಯರು ಬರೆದಲ್ಲಿ ಅದಕ್ಕೆ ಅವರ ಹೆಡ್ ಮಾಸ್ಟರ ರುಜುವನ್ನು ಹಾಕಿಸಿ ಕಳುಹಿಸಬೇಕು. (೨) ಪ್ರತಿ ಒಂದು ಪಾಠವೂ ಈ ಪತ್ರಿಕೆಯಲ್ಲಿ ಎರಡು ಕಾಲಂಗಿಂತ ಮೀರಕೂಡದು. (೩) ಆ ಪಾಠದಲ್ಲಿ ವಿವರಿಸುವ ಬೋಧನಾ ವಿಷಯಗಳು ಹಿಂದು, ಮಹಮ್ಮದೀಯ, ಕ್ರೈಸ್ತ ಮೊದಲಾದ ಎಲ್ಲಾ ಪಂಗಡಗಳ ಬಾಲಕರಿಗೂ ಹಿತಕರವಾಗಿರತಕ್ಕದ್ದು. (೪) ನೀತಿಯನ್ನು ವಿವರಿಸುವಲ್ಲಿ ಆಯಾ ವಿಷಯಕ್ಕೆ ತಕ್ಕಂಥಾ ಸ್ವಾರಸ್ಯವಾದ ಉಪಕಥೆಗಳು ಇರಬೇಕು. (೫) ಬರವಣಿಗೆಯೆಲ್ಲಾ ಕಾಗದದ ಒಂದೇ ಪಕ್ಕದಲ್ಲಿ ಇರಬೇಕು.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂತವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್.

ಕೋಲಾರು ಗೋಲ್ಡ್ ಫೀಲ್ಡ್ಸ್ ರಾಬರ್ಟ್‌ಸನ್ ಪೇಟೆ ಮತ್ತು ಉರಿಗಪ್ರಾಂತ್ಯದ ಕ್ಷಾಮದ ಕಷ್ಟಗಳು.

ಅಯ್ಯಾ,

ಇದೇ ರಾಬರ್ಟ್‌ಸನ್‌ಪೇಟೆ ಮತ್ತು ಉರಿಗ ಇವುಗಳ ಸುತ್ತ ಮುತ್ತಲಿರುವ ಗ್ರಾಮಗಳಿಗೆ ಮಳೆ, ಬೆಳೆ ಸುತರಾಂ ಇಲ್ಲದೆ ಬಡರೈತರುಗಳಿಗೆ ಬಹಳ ವಿಷಾದವನ್ನುಂಟುಮಾಡಲು ಕಾರಣವಾಗಿದೆ. ಅಲ್ಲದೆ ಈ ರಾಬರ್ಟ್‌ಸನ್‌ಪೇಟೆಯಲ್ಲಿ ಎಂಥಾ ಸುಭಿಕ್ಷ ಕಾಲದಲ್ಲಿ ಮುಂಧಾರಣೆವಾಸಿಗಳು ಚಡಾವಾಗಿರುತ್ತದೆ ಎಂಬ ಸಂಗತಿ ಅನೇಕ ಜನಗಳಿಗೆ ತಿಳಿದುಬರುವದು. ಇದರಲ್ಲಿ ಈಗ ಇಂಥಾ ದುರ್ಭಿಕ್ಷಕಾಲದಲ್ಲಿ ಈ ಚಿನ್ನದ ಗಣಿಗಳ ಧಾರಣೆವಾಸಿಗಳು ಹ್ಯಾಗೆ ಇರಬಹುದೋ ಇವರಿಸಲಾಗದು. ಸಂತೆಯಲ್ಲಿ ರಾಗಿ ೯-೧೨ ಸೇರು, ೧೦ ಸೇರು, ಅಕ್ಕಿ ೫—೫॥ ಸೇರೂ ವರ್ತಕರಿಂದ ಮಾರಲ್ಪಡುತ್ತದೆ. ಈ ಕ್ಷಾಮಕಾಲದಲ್ಲಿ ಧಾರಣೆಗಳು ಈ ರೀತಿ ಇದ್ದರೆ ಬಡಜನರು ಹ್ಯಾಗೆ ಜೀವಿಸಬೇಕೋ ವಾಚಕರೇ ತಿಳಿದುಕೊಳ್ಳಿ. ಈ ಸಂಗತಿಯನ್ನು ಇಲ್ಲಿನ ಸಾಹುಕಾರ್ ಮೆ॥ ಓ. ಏ. ಡಂಗರ್ಲಾಯಪ್ಪನವರು ತಿಳಿದು ಅನೇಕ ಸ್ಥಳಗಳಿಂದ ರಾಗಿಯನ್ನು ತರಿಸಿ ಬಡರೈತರುಗಳಿಗೂ ಬಡಜನಗಳಿಗೂ ಅಲ್ಪ ನಫೆಯಿಂದ ಮಾರುತ್ತಲಿದ್ದಾರೆ. ಇದು ತುಂಬಾ ಪ್ರೋತ್ಸಾಹಕರವಾಗಿರುತ್ತದೆ.

ಈ ರಾಬರ್ಟ್‌ಸನ್ ಪೇಟೆಯಲ್ಲಿ ಕುಡಿಯುವದಕ್ಕೆ ನೀರು ಸಿಕ್ಕುವದು ಬಹಳ ಶ್ರಮ ಎಂದು ನಮ್ಮ ದಯಾಳು ಸರ್ಕಾರದವರು ಗತವರ್ಷದಲ್ಲಿ ಆಲೋಚಿಸಿ, ಈ ಟೌನಿಗೆ ಬೇತಮಂಗಲದಿಂದ ನಲ್ಲಿಗಳ ಮೂಲಕ ನೀರನ್ನು ಸರಬರಾಯಿ ಮಾಡಬೇಕೆಂದು ಅತಿ ಜಾಗ್ರತೆಯಾಗಿ ನಲ್ಲಿಗಳನ್ನು ೪—೫ ತಿಂಗಳಲ್ಲಿಯೇ ಹಾಕಿಸಿಬಿಟ್ಟರು. ಆದರೆ ಇದುವರೆವಿಗೂ ನೀರನ್ನು ಮಾತ್ರ ಬಿಡಲಿಲ್ಲ. ಪ್ರತಿಯೊಬ್ಬರೂ ನೀರನ್ನು ಬಿಡುವರೋ ಎಂಬವಾಗಿ ಎದುರುನೋಡುತ್ತಲಿದ್ದಾರೆ. ಆದಕಾರಣ ನಮ್ಮ ಸರ್ಕಾರದವರು ಅತಿಜಾಗ್ರತೆಯಾಗಿ ನೀರನ್ನು ಒದಗಿಸಿ ಜನಗಳ ಕಷ್ಟಗಳನ್ನು ನಿವಾರಣೆಮಾಡಬೇಕೆಂದು ಅತಿವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುವ

ಜಿ. ಕೃಷ್ಣಯ್ಯ.

ಕತ್ವಾಡಿಪುರದ ರೈತರ ಕಷ್ಟಗಳು.

ಅಯ್ಯಾ,

ಈಗ್ಗೆ ಸುಮಾರು ೩ ವರ್ಷದಲ್ಲಿ ನಂಜನಗೂಡು ತಾಲ್ಲೂಕು ಕಸಬಾ ಕತ್ವಾಡಿಪುರದ ರೈತರ ವಿಷಯವಾಗಿ ತಾವು ಪ್ರಕಟಿಸಿದ್ದರೂ ಇದುವರೆವಿಗೂ ತಹಸೀಲ್ದಾರರಿಗೂ ಇತ್ಯರ್ಥವಾಗದೆ ತೊಂದರೆಪಡುತ್ತಿರುವುದರಿಂದ ತಮ್ಮ ಘನವಾದ ಪತ್ರಿಕೆಯಲ್ಲಿ ಪುನಃ ಪ್ರಕಟಿಸಿ ಬಡ ರೈತರುಗಳನ್ನು ಉದ್ಧರಿಸುತ್ತೀರೆಂದು ನಂಬಿದೇನೆ.

ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ನಾಲೆಯಿಂದ ಕಲ್ಲಹಳ್ಳಿ ಬ್ರಾಂಚಿಂದು ಹೆಸರುಳ್ಳ ೫ ಮೈಲಿ ಉದ್ದವುಳ್ಳ ನಾಲೆಯು ಲೇಟ್ ದಿವಾನ್ ಸರ್ ಶೇಷಾದ್ರಿ ಅಯ್ಯರವರಿಂದ ಸ್ಥಾಪಿತವಾದ್ದರಿಂದ ಕಲ್ಲಹಳ್ಳಿ, ಕತ್ವಾಡಿಪುರ ವಗೈರೆ ೪-೫ ಗ್ರಾಮದ ಜಮೀನುಗಳು, ಅಂದರೆ ೪೦೦-೫೦೦ ಎಕರೆ ಜಮೀನು ತರಿ ಆಗಿ ರೈತರು ಸುಖವಾಗಿದ್ದರು. ಈಚೆಗೆ ಸುಮಾರು ೬-೭ ವರ್ಷದಿಂದ ಬ್ರಾಂಚು ನಾಲೆ ಕಾಮಗಾರಿಯನ್ನು ರೈತರೇ ಮಾಡಬೇಕೆಂದು ಗೊತ್ತಾಯಿತು. ಆ ಲಾಗಾಯ್ತು ನಾಲಾಬಾಬು ಕಾಮಗಾರಿಯು ಸುತರಾಂ ನಡೆಯದೆಹೋಗಿ, ಕತ್ವಾಡಿಪುರವು ಬೇಚರಾಖು ಆಗುವ ಹೊತ್ತು ಬಂದಿದೆ. ಯಾಕೆಂದರೆ ಈ ಗ್ರಾಮದಲ್ಲಿ ಸುಮಾರು ೧೦-೧೨ ಮನೆ ಜನಗಳು ರೈತರಾಗಿದ್ದಾರೆ. ಇವರಿಗೆ ೧೦೦ ಎಕರೆಗಿಂತಲೂ ಕಮ್ಮಿಯಾಗಿ ಜಮೀನು ಇದೆ. ಬಾಕಿ ಜಮೀನುಗಳು ಕಲ್ಲಹಳ್ಳಿ ವಗೈರೆ ಗ್ರಾಮಗಳಿಗೆ ಸೇರಿದೆ. ಈ ಬ್ರಾಂಚು ಇತರ ಬ್ರಾಂಚುಗಳಂತೆ ಇಲ್ಲದೆ, ಒಂದು ಕಡೆ ದೊಡ್ಡ ಗುಡ್ಡವೂ, ಒಂದು ಕಡೆ ಮಾತ್ರ ಜಮೀನೂ ಇರುವದರಿಂದ ಮಳೆಯಿಂದ ಪ್ರತಿ ವರ್ಷವೂ ನಾಲೆಗೆ ಗುಡ್ಡದ ಕಲ್ಲು ಗುಂಡುಗಳು ಭರ್ತಿಯಾಗಿವೆ. ಅಲ್ಲದೆ ಇದು ಹೊಸದಾಗಿ ಕಾಮಗಾರಿಯಾದಾಗಲೇ ಸಲೀಸು ದುರ್ಬೀನು ಲೆವಲ್ಲಿಗೆ ಕಾಮಗಾರಿ ನಡೆಸಲಿಲ್ಲವಾಗಿ, ೩ನೇ ಮೈಲಿಯಿಂದ ದಿಣ್ಣೆಯು ಇದೆ. ಅದನಾಯಿಸೀಗಾಗಿ ನೀರು ಬಂದುಮಾಡಿ ನೋಡಿದರೆ ೧-೨ನೇ ಮೈಲಿಯಲ್ಲಿ ೩-೪ ಅಡಿ ನೀರು ಕೆರೆಯ ಹಾಗೆ ನಿಂತಿರುತ್ತೆ. ಮುಂದಕ್ಕೆ ನೀರೇ ಬರುವದಿಲ್ಲವೆಂಬುವದು ವ್ಯಕ್ತವಾಗುತ್ತದೆ. ಅಲ್ಲದೆ ಕಲ್ಲಹಳ್ಳಿ ವಗೈರೆ ಸ್ಥಳಗಳಲ್ಲಿ ಪ್ರತಿ ವರ್ಷವೂ ತಪ್ಪದೆ, ೪-೫ ನಲ್ಲಿಗಳನ್ನು ಹೆಚ್ಚು ಹೆಚ್ಚಾಗಿ ಕೊಡುತ್ತಾ ಬಂದಿರುವುದರಿಂದ ಬರುವ ಅಲ್ಪ ನೀರು ಅಲ್ಲಿಯೇ ಹೋಗಿ ಅನ್ಯಾಯವಾಗಿ ಹೊಳೆಗೆ ಬೀಳುತ್ತಾ ಇದೆ. ಹೀಗಿರುವಲ್ಲಿ ೧೦-೧೨ ಮನೆಗಳುಳ್ಳ ಕತ್ವಾಡಿಪುರದ ರೈತರು ೫ ಮೈಲಿ ಬ್ರಾಂಚು ನಾಲೆ ಕಾಮಗಾರಿ ಮಾಡುವುದು ಹ್ಯಾಗೆ? ನೀರು ಸುತರಾಂ ಇಲ್ಲದೆ, ೫-೬ ವರ್ಷದಿಂದ ಪಾಳು ಕಂದಾಯವನ್ನು ಕಟ್ಟಿ, ಸಾಹುಕಾರರ ಮಕ್ಕಳಾಗಿದ್ದೇವೆ. ಈಗ್ಗೆ ಸುಮಾರು ೭ ತಿಂಗಳಲ್ಲಿ ಸೂಪರಿಂಟೆಂಡಿಂಗ್ ಇಂಜನೀಯರು ದಯಮಾಡಿಸಿದಾಗ ನಾವು ತಿಳಿಸಿಕೊಂಡದ್ದರ ಮೇಲೆ ಹಂಗಾಮಿಯಾಗಿ ಪುನಹ ೧೦ ಅಂಗುಲದ ನಲ್ಲಿಯನ್ನು ಒಂದು ಬೆಳೆ ಪೂರ್ತಾ ದಯಪಾಲಿಸಿದರು. ಅದನ್ನು ೮ ದಿನಕ್ಕೆ ೪ ದಿನ ಮುಚ್ಚಿಬಿಡುತ್ತಾ ಇದ್ದಾರೆ. ಈ ನಲ್ಲಿ ಬಂತೆಂಬ ಆಶೆಯಿಂದ ಬಡವರು ಹೊಟ್ಟೆಗಾಗಿ ಇಟ್ಟಿದ್ದ ಭತ್ತವನ್ನು ಭೂಮಿಗೆ ಹಾಕಿ ಅನ್ಯಾಯವಾಗಿ ಬೆಳೆಸು ಒಂದಾಣೆ ಭಾಗ ಸಹ ಇಲ್ಲದೆ ಪೇಚಾಡುತ್ತಾರೆ. ಇದೇ ವಿಷಯವಾಗಿ ನಮ್ಮ ನ್ಯಾಯವ ಶ್ರೀಮನ್ಮಹಾರಾಜರವರಲ್ಲಿ ಅರ್ಜಿ ಮೂಲಕ ಅರಿಕೆಮಾಡಿಕೊಂಡದ್ದಕ್ಕೆ ಗೌರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಲ್ಲಿ ಇತ್ಯರ್ಥಪಡಿಸಲು ಅರ್ಜಿಯನ್ನು ರವಾನಿಸಿರುತ್ತೆಂಬ ಇಂಡಾರ್ಸ್ಮೆಂಟ್ ಅಪ್ಪಣೆ ಆಯಿತು. ಅವರನ್ನು ಬೇಡಿಕೊಂಡದಕ್ಕೆ ಕೂಡ್ಲೆ ವ್ಯವಸ್ಥೆ ಮಾಡಲು ಚೀಫ್ ಇಂಜನಿಯರಲ್ಲಿ ಕಳುಹಿಸದೆ ಎಂಬದಾಗಿ ಹುಕುಂ ಹೊರಿಯಿತು. ಸದರಿ ಇಂಜನಿಯರ್ ಸಾಹೇಬರಿಗೂ, ರೆವಿನ್ಯೂ ಕಮಿಷನರ್‌ರಿಗೂ, ಡೆಪ್ಯುಟಿ ಕಮಿಷನರ್‌ರಿಗೂ ರೂಬರೂ ಮತ್ತು ಅರ್ಜಿ ಟೆಲಿಗ್ರಾಂ ಸಹಾ ಕೊಟ್ಟು ಅರಿಕೆ ಕೊಂಡಿದ್ದಕ್ಕೆ ತಹಸೀಲ್ದಾರರಿಗೂ ಜವಾಬೇ ಇಲ್ಲ. ಬ್ರಾಂಚು ನಾಲಾ ಕಾಮಗಾರಿ ಇಲ್ಲದೆ, ನೀರು ಸಪ್ಲೈ ಆಗದಿದ್ದರೆ ಇಂಜನಿಯರ್ ಸಾಹೇಬರು ಏನುಮಾಡ್ಯಾರು? ಇದೇ ವಿಷಯದಲ್ಲಿ ಹಿಂದೆ ಎಗ್ಜಿಕ್ಯೂಟಿವ್ ಇಂಜನಿಯರಾಗಿದ್ದ ಮೆ॥ ಅಯ್ಯಾಸ್ವಾಮಯ್ಯರವರೂ, ನಮ್ಮ ತಾಲ್ಲೂಕಿನ ಅಮಲ್ದಾರ್ರೂ ರೂಬರೂಬು ಈ ನಾಲೆಯನ್ನು ಪರಾಂಬರಿಸಿ, ಇದು ರೈತರಿಂದ ಕಾಮಗಾರಿ ಮಾಡಲು ಅಸಾಧ್ಯವೆಂತಲೂ, ಸರ್ಕಾರದಿಂದಲೇ ಕಾಮಗಾರಿ ನಡೆಯಬೇಕಾಗಿದೆ ಎಂತಲೂ ಅನೇಕ ಸಾರಿ ಗೌರ್ನಮೆಂಟಿಗೆ ತಿಳಿಸಿರುವದಾಗಿ ಹೇಳುತ್ತಾರೆ. ಹೀಗಿದ್ದಾಗ್ಯೂ ಅನೇಕ ರೈತರು ಸರ್ಕಾರದಿಂದಲೇ ಸಹಾಯ ಹೊಂದಿ ಧ್ವವ್ಯಸ್ಥರಾಗಿದ್ದಾಗ್ಯೂ ವರ್ಷಕ್ಕೆ ಸುಮಾರು ೨೦೦ ರೂಪಾಯಿ ಖರ್ಚಿನಿಂದ ನಾಲಾಬಾಬು ಕಾಮಗಾರಿ ಮಾಡಿಸದೆ, ಸರ್ಕಾರದವರು ನಮ್ಮನ್ನು ಹೊಟ್ಟೆಗಿಲ್ಲದಂತೆ ಮಾಡಿರುವದು ನ್ಯಾಯವೇ? ಮೇಲ್ಭಾಗದ ಕಲ್ಲಹಳ್ಳಿಯ ತನಕ ನೀರು ಸಲೀಸಾಗಿ ಒದ್ದುಕೊಂಡು ನಿಂತಿರುವದರಿಂದ ಅವರಿಗೆ ಈ ಭಾಗವೇ ಮರೆತು ಹೋಗಿದೆ. ಬಡವರಾದ ಈ ರೈತರು ಮಾತ್ರ ಹೊಟ್ಟೆಗಾಗಿ ಇಟ್ಟ ಭತ್ತವನ್ನೂ ಕಳೆದುಕೊಂಡು, ಕೂಲೀ ಮಾಡಿಕೊಂಡು ೫-೬ ವರ್ಷದಿಂದಲೂ ಪೇಚಾಡುತ್ತಿದ್ದಾರೆ. ಈ ವರ್ಷವೂ ಕಾಮಗಾರಿ ನಡೆಯದಿದ್ದಲ್ಲಿ ನಿರಾಶೆಯಾಗಿ ತಮ್ಮ ತಮ್ಮ ಜಮೀನುಗಳಿಗೆ ರಾಜೀನಾಮೆಯನ್ನು ಕೊಟ್ಟು ಕಾಫೀತೋಟಕ್ಕೆ ಹೋಗುವದು ನಿಜವಾದ್ದರಿಂದ ತಾವಾದರೂ ಪಿಂತಿತವಾಗಿ ದಯವಿಟ್ಟು ರೆವಿನ್ಯೂ ಕಮಿಷನರ್ ಸಾಹೇಬರಿಗೂ, ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ ಸಾಹೇಬರಿಗೂ ನಿದರ್ಶನದಿಂದ ನಮ್ಮ ಕಷ್ಟಗಳನ್ನೆಲ್ಲಾ ತಿಳಿಯಪಡಿಸಿ, ಮುಂಧಾದರೂ ಪ್ರತಿ ವರ್ಷವೂ ಗೌರ್ನಮೆಂಟಿನಿಂದಲೇ ಈ ಬ್ರಾಂಚು ನಾಲೆಯ ಕಾಮಗಾರಿ ಮಾಡಿಸುವಂತೆಯೂ, ಈ ವರ್ಷ ಸುತರಾಂ ಒಂದಾಣೆ ಭಾಗ ಕೂಡ ಬೆಳೆಯಿಲ್ಲದೆ ಇರುವದರಿಂದ ಕಂದಾಯವನ್ನು ಮಾಫ್‌ಮಾಡಿಸಿ ಕೊಡುವಂತೆಯೂ ಸಹಾಯಮಾಡಿ ಕ್ಷಾಮಕಾಲದಲ್ಲಿ ಹೊಟ್ಟೆಗಿಲ್ಲದೆ ಸಾಯುವ ರೈತರನ್ನು ಕಾಪಾಡುತ್ತೀರೆಂತ ನಂಬಿದೇನೆ.

ಪ್ರತ್ಯಕ್ಷದರ್ಶಿ ರೈತ

ತಾಲ್ಲೋಕು ವರ್ತಮಾನಗಳು.

ಹುಣಸೂರು.—ಚನ್ನರಾಯಪಟ್ಣ, ನಾಗಮಂಗಲ, ಕುಣಿಗಲು ಮುಂತಾದ ಪ್ರಾಂತ್ಯಗಳ ಕಡೆ ಸಕಾಲಕ್ಕೆ ಮಳೆ ಬಾರದೆ ಹೋದದ್ದರಿಂದ ಜನಗಳಿಗೂ ದನಕರಗಳಿಗೂ ಆಹಾರವಿಲ್ಲದೆ ಸಾವಿರಾರು ಜನರು ಕಾಫಿತೋಟದ ಕಡೆ ಹೋದರು. ಇನ್ನೂ ಅನೇಕರು ಸಾವಿರಾರು ದನಕರಗಳನ್ನು ಕಟ್ಟಿಕೊಂಡು ಹೆಗ್ಗಡದೇವನ ಕೋಟೆ ಕಡೆ ಹೋದದ್ದು ಮಾತ್ರವಲ್ಲದೆ ಇನ್ನೂ ಹೋಗುತ್ತಲೇ ಇರುತ್ತಾರೆ. ಈ ತಾಲ್ಲೂಕಿನಲ್ಲಿ ತಕ್ಕಮಟ್ಟಿಗೂ ಒಳ್ಳೇ ಮಳೆಯಾಗಿ ರಾಗಿ ಮತ್ತು ಭತ್ತದ ಫಸಲು ಕೈಗೆ ಬಂದಿದ್ದಾಗ್ಯೂ ಧಾರಣೆಗಳು ಇಳಿತರವಾಗಲಿಲ್ಲ. ರಾಗಿ ರೂಪಾಯಿಗೆ ೯—೧೦ ಸೇರು, ಅಕ್ಕಿ ೫—೫॥, ೬ ಸೇರು. ಗರೀಬರು ಜೀವಿಸುವದು ತುಂಬಾ ಕಷ್ಟವಾಗಿದೆ. ದಯಾಳುಗಳಾದ ನಮ್ಮ ಅಮಲ್ದಾರರು ವ್ಯಾಪಾರಸ್ಥರನ್ನೆಲ್ಲಾ ಕರೆಸಿ ತಕ್ಕ ಏರ್ಪಾಡುಮಾಡಿ ಬಡ ಪ್ರಜೆಗಳನ್ನು ಕಾಪಾಡುವರೆಂದು ನಂಬುತ್ತೇನೆ.—ಈ ಟವುನ್ನಲ್ಲಿ ನಾಯಿಗಳು ಹೆಚ್ಚಿ ಹೊಟ್ಟೆಗೆ ಅನ್ನವಿಲ್ಲದೆಯೋ ಅಥವ ಇನ್ಯಾವ ಕಾರಣದಿಂದಲೋ ಕೆಲವು ನಾಯಿಗಳಿಗೆ ಹುಚ್ಚು ಹಿಡಿದು ತಿರುಗಾಡುತ್ತವೆ. ಕೆಲವು ನಾಯಿಗಳು ಕೊಲ್ಲಲ್ಪಟ್ಟವು. ನಮ್ಮ ಅಮಲ್ದಾರರು ಈ ವಿಷಯ ತುಂಬಾ ನಿಗಾಕೊಟ್ಟು ಅಂಥಾ ನಾಯಿಗಳನ್ನು ನಿರ್ನಾಮ ಮಾಡಿಸುವರೆಂದು ನಂಬುತ್ತೇನೆ.—ಉಪ್ಪಾರ ಜಾತಿ ಲಕ್ಷ್ಮಣನೆಂಬುವನು ತನ್ನ ಸಂಸಾರದ ಕೂಡೆ ಪೆರಿಯಾಪಟ್ಣದಿಂದ ಹಾಸನಕ್ಕೆ ಹೋಗುವ ರಸ್ತೆಯಲ್ಲಿ ರಾಮನಾಥಪುರದ ಜಾತ್ರೆಗೆ ಹೋಗುತ್ತಿರುವಾಗ್ಗೆ ಕಳೆದ ತಿಂಗಳು ೨೮ ನೇ ತಾ. ರಾತ್ರಿ ಕಳ್ಳರು ಆ ಗಾಡಿಗೆ ಬಿದ್ದು, ಅವರನ್ನು ಹೊಡೆದು, ಅವರಲ್ಲಿದ್ದ ಕೆಲವು ಸಾಮಾನುಗಳನ್ನು ಅಪಹರಿಸಿಕೊಂಡು ಪರಾರಿಯಾದದ್ದು ಮಾರನೇ ದಿನ ಪೋಲೀಸಿಗೆ ತಿಳಿದುಬರಲಾಗಿ ಪೋಲೀಸಿನವರು ಹೋಗಿ, ಕಳ್ಳರ ಪೈಕಿ ಒಬ್ಬಾಸಾಮಿಯನ್ನು ಹಿಡಿದಿರುತ್ತಾರೆಂದೂ, ಕೆಲವು ಸಾಮಾನುಗಳು ಕೂಡಾ ಸಿಕ್ಕಿರುತ್ತವೆಂದೂ ವರ್ತಮಾನವಿದೆ. ಇದಕ್ಕಾಗಿ ಇದೇ ತಿಂಗಳು ೪ ನೇ ತಾ. ಪೋ॥ ಸೂಪರಿಂಟೆಂಡೆಂಟರವರು ಅಲ್ಲಿಗೆ ಹೋಗಿ, ಎಲ್ಲಾ ತನಿಖೆಮಾಡಿಕೊಂಡು ೫ ನೇ ತಾ ವಾಪಸು ಮೈಸೂರಿಗೆ ದಯಮಾಡಿದರು.

ಮಾರೀಕಣಿವೆ.—ಈ ಊರಲ್ಲಿ ೧-೨ ತಿಂಗಳಿಂದಲೂ ಮಳೆಯ ಸುದ್ದಿಯೇ ಇಲ್ಲ. ರೂಪಾಯಿಗೆ ೫-೬ ಸೇರು ಅಕ್ಕಿ, ೯ ಸೇರು ರಾಗಿ, ಜೋಳ, ಈ ರೀತಿಯಾಗಿದೆ. ಸುತ್ತುಮುತ್ತು ೫-೬ ಮೈಲಿ ದೂರ ಇರುವ ಗ್ರಾಮದಲ್ಲಿ ಹುಲ್ಲು ನೀರು ಮೊದಲಾದುವು ಸಿಕ್ಕದಿರುವುದು ಜಾನುವಾರುಗಳಿಗೆ ಕಷ್ಟ. ಮಳೆಯಿಲ್ಲದೆ ಬೆಂಗಾಡಾಗಿರುವ ಈ ಡಿಸ್ಟ್ರಿಕ್ಟಿಗೆ ಕ್ಷಾಮದ ಅಲೋಯನ್ಸನ್ನು ಸರ್ಕಾರದವರು ಕೊಡಲಿಲ್ಲ. ಡೆಪ್ಯುಟಿ ಕಮಿಷನರ್‌ರವರು ಬಡ ನೌಕರರ ವಿಷಯದಲ್ಲಿ ಶಿಫಾರಸು ಮಾಡುವರೆಂತ ನಂಬುವೆನು.—ಕಳೆದ ತಿಂಗಳು ೧೭ನೇ ತಾ. ರೆವಿನ್ಯೂ ಕಮಿಷನರ್ ಸಾಹೇಬರು ಹೊಸದುರ್ಗದಿಂದ ಬಂದು ಈ ಊರಲ್ಲಿ ಇದ್ದು ಪ್ರಜೆಗಳ ಅಹವಾಲನ್ನು ವಿಚಾರಿಸಿ ಮಾರನೇ ದಿನ ಹಿರಿಯೂರಿಗೆ ದಯಮಾಡಿಸಿದರು. ಈ ಊರಲ್ಲಿರುವ ಎಗ್ಜಿಕ್ಯೂಟಿವ್ ಇನ್‌ಜನಿಯರ್ ಆಫೀಸು ಜನವರಿ ತಿಂಗಳ ಮೊದಲಲ್ಲಿ ಚಿತ್ರದುರ್ಗಕ್ಕೆ ಹೊರಟುಹೋಗುವದೆಂಬ ವದಂತಿ ಇದೆ. ಈ ಆಫೀಸು ಇದ್ದದ್ದರಿಂದ ಅನೇಕರಿಗೆ ಜೀವನವಾಗುತ್ತಿತ್ತು. ಈಗ ಅದು ತಪ್ಪಿಹೋಗುವದಾಗಿದೆ.—ಕೆರೆಯ ಕಾಮಗಾರಿ ಪೂರೈಸಿತು. ಮಂಟಪದ ಕೆಲಸ ಸ್ವಲ್ಪ ಬಾಕಿಯಾಗಿದೆ. ಕೆರೆಯ ಸುತ್ತಳತೆ ೮೭ ಮೈಲುಗಳು. ೧೦೪॥ ಅಡಿ ಆಳ. ಎರಡು ಚಿಕ್ಕ ದ್ವೀಪಗಳಿವೆ. ಕೆರೆಯಲ್ಲಿ ಕುಳಿತು ಹೋಗುವುದಕ್ಕೋಸ್ಕರ ಸರ್ಕಾರದವರು ೧ ಸಣ್ಣ ಸ್ಟೀಂ ಲಾಂಚ್, ೧ ಮೋಟಾರ್ ಲಾಂಚ್, ೪ ಸಣ್ಣ ಬೋಟ್, ೧ ದೋಣಿಯನ್ನಿಟ್ಟಿದ್ದಾರೆ. ಕೆರೆಯಲ್ಲಿ ಹೋಗಬೇಕೆಂದು ನೋಡುವವರಿಗೆ ಎಲ್ಲಾ ಅನುಕೂಲಗಳಿವೆ. ಅಯ್ಯಾ ವಾಚಕರಿರಾ, ತಾವು ಬಂದು ಈ ಕೆರೆ ನೋಡಿಕೊಂಡು ಹೋಗಬೇಕೆಂದು ಕೋರುವೆನು.—ಈ ಊರಲ್ಲಿ ಮ್ಯುನಿಸಿಪಾಲಿಟಿ ಇದ್ದಾಗ್ಯೂ ವಾರಕ್ಕೆ ಒಂದು ಸಲ ಬಂದು ಗುಡಿಸಿ ಹೋಗುತ್ತಾರೆ. ಮೈ॥ ರಾಜುಮೊದಲಿಯಾರ್ರು ಊರಿನ ಕಡೆ ಹೆಚ್ಚು ಗಮನ ಇಡಬೇಕೆಂದು ಕೋರುತ್ತೇನೆ.—ಇಲ್ಲಿಗೆ ಹೊಸದುರ್ಗದಿಂದ ಡೆ॥ ಇನ್‌ಸ್ಪೆಕ್ಟರು ಸ್ಕೂಲ್ ಪರೀಕ್ಷಿಸುವುದಕ್ಕೆ ಬಂದಿದ್ದರು.—ಇಲ್ಲಿ ಚಳಿ ಬಹಳವಾಗಿದೆ. ಈ ವರ್ಷ ಲೋವರ್ ಸೆಕಂಡರಿ ಪರೀಕ್ಷೆಗೆ ಚಿತ್ರದುರ್ಗದಲ್ಲಿ ೭೯ ಜನ ಬಾಲಕರೂ, ೪ ಹೆಣ್ಣು ಹುಡುಗಿಯರೂ ಬಂದಿದ್ದರು. ಪರೀಕ್ಷೆಯಲ್ಲಿ ಅನೇಕರು ಲೆಕ್ಕದಲ್ಲಿ ಫೆಯಿಲಾಗುವ ಸಂಭವವಿದೆ ಎಂದು ವರ್ತಮಾನವಿದೆ.—ಇಲ್ಲಿನ ಸ್ಕೂಲಿನಲ್ಲಿ ಈಗ ೫೭ ಜನ ಹುಡುಗರಿದ್ದಾರೆ. ಈಗ ಯಾಚಕರ ಕಾಟ ೪-೫ ತಿಂಗಳಿಂದ ಬಲವಾಗಿದೆ.—ಒಂದು ಚಿರತೆಯು ಇಲ್ಲಿಗೆ ಸ್ವಲ್ಪ ದೂರವಾಗಿರುವ ಮಂಡಪಕೆರೆ ಎಂಬ ಗ್ರಾಮದಲ್ಲಿ ಒಬ್ಬ ಮನುಷ್ಯನನ್ನು ಕೊಂದುಹಾಕಿತು. ಕಾಡುಹಂದಿಗಳ ಕಾಟ ಬಹಳ. ಹಗಲುಹೊತ್ತೇ ಹೊಲಗಳಿಗೆ ನುಗ್ಗಿ ಪೈರನ್ನು ಹಾಳುಮಾಡುವವು.

ಪ್ಯಾರಿಸ್ಸಿನ ವೈದ್ಯಮಂಡಲಿಯ

[34-37]

ಡಾ|| ವೈಸೆಂಟೆ ಸಾಂಟೋನಿಯವರು

ಈಗ ಪೋರ್ಟೋರೀಕೋ ಬಿನ್ ಪಾರ್ಸ್ ಪಟ್ಟಣದಲ್ಲಿ ವೈದ್ಯಮಾಡುತ್ತಿದಾರೆ.

ಇವರು ಹೇಳಿರುವುದು :

ಪೋರ್ಟೋರೀಕೋವಿನ ಪೋರ್ಸೆ ಪಟ್ಟಣದಲ್ಲಿ ವೈದ್ಯ ಮಾಡುತ್ತಿರುವ, ಪ್ಯಾರಿಸ್ಸಿನ ವೈದ್ಯಮಂಡಲಿಗೆ ಸೇರಿದ, ಈ ಕೆಳಗೆ ರುಜುಮಾಡಿರುವ ಡಾ|| ವೈಸೆಂಟೆ ಸಾಂಟೋನಿ ಎಂಬ ನಾನು ಸರ್ಟಿಫಿಕೇಟು ಕೊಡು ವುದೇನೆಂದರೆ :—

“ ಪೆರೂನಾ ಎಂಬ ಹೆಸ ರುಳ್ಳ ತಯಾರಿ ಔಷಧವನ್ನು ನಾನು ಶೈತ್ಯರೋಗಗಳಿಗೆ ಕೆಲ ವು ಕಾಲದಿಂದ ಪ್ರಯೋಗ ಮಾಡುತ್ತಾ ಬಂದಿದೇನೆ ಸ ರ್ವದಾ ಇದರಿಂದ ಉತ್ಕೃಷ್ಟ ವಾದ ಫಲವುಂಟಾಗುತ್ತಿರುವು ದು. ಅದು ಒಳ್ಳೇ ತಯಾರಿ ಸಿದ ಔಷಧವು. ಅದು ಒಗ್ಗಿದ ರೋಗಿಗಳಿಗೆಲ್ಲಾ ನಾನು ಯಾ ವಾಗಲೂ ಅದನ್ನೇ ಪ್ರಯೋ ಗ ಮಾಡುವೆನು.”

ಡಾ| ವಿ. ಸಾಂಟೋನಿ,
ಪೋರ್ಸೆ, ಪಿ. ಆರ್.

ಉಷ್ಣದೇಶ ಳೂ ಪೆರೂನಾ ಔಷದವೂ.

ಕೆಲವು ದೇಶಗಳಲ್ಲಿ ಬೀಳುತ್ತಿರುವ ಉಷ್ಣತೆಯಿಂದ ಸ್ವಾಭಾವಿಕವಾಗಿ ಅಲ್ಲಿನ ಹವೆಯಲ್ಲಿ ಉಂಟು ಉಷ್ಣವು ಅಧಿಕವಾಗಿಲ್ಲದೆ, ಸಮುದ್ರದಿಂದ ಬಹಳ ಎತ್ತರವಾಗಿಲ್ಲದೆ, ಆಮ್ಲ ಜನಕ (ಆಕ್ಸಿಜನ್) ಧಾತುವು ಹೇರಳವಾಗಿ ಉಳ್ಳ ವಾಯುಮಂಡಲವನ್ನು ಪಡೆದಿರುವಂಥ ಪ್ರದೇಶಗಳಲ್ಲಿ ಜನರು ಸ್ವಾಭಾವಿಕವಾಗಿಯೇ ಚಟುವಟಿಕೆ ಆಯುಷ್ಯಗಳನ್ನು ಪಡೆಯುವರು. ಅಂಥಾ ಜನರ ಶರೀರದ ಅಂಗಾಂಗಗಳು ಬಲಿಷ್ಠವಾಗಿರುತ್ತವೆ. ಅವರು ಉತ್ಸಾಹ ಪೂರ್ವಕರಾಗಿಯೂ ಚಟುವಟಿಕೆಯಿಂದಲೂ ಕೆಲಸಗಳನ್ನು ಸ್ವಾಭಾವಿಕವಾಗಿ ಮಾಡುವರು.

ಇತರ ದೇಶಗಳು ಅಷ್ಟು ಅನುಕೂಲವಾಗಿಲ್ಲ. ಹವಾ ಬಹು ಉಷ್ಣವಾಗಿರುವುದು, ಹೇರಳ ತೇವಾಗಿರುವುದು, ವಾಯುಮಂಡಲದಲ್ಲಿ ಆಮ್ಲಜನಕ ಧಾತುವು ಸ್ವಲ್ಪವೇ ಇರುವುದು ; ಇಂಥಾ ವಾಯುಮಂಡಲವನ್ನು ಪಡೆದಿರುವ ದೇಶಗಳು ಅಲ್ಲಿ ವಾಸವಾದುವ ಜನರನ್ನು ಕುಗ್ಗಿ ಸುತ್ತವೆ.

ಆದಕಾರಣ ಬಲಕಾರಿಯಾದ ಔಷಧಗಳ ಸೇವನೆಯು ಪರಮಾವಶ್ಯಕವಾಗುತ್ತದೆ. ತಾತ್ಪರ್ಯವಾಗಿ ಹೇಳಬೇಕಾದರೆ ಒಳ್ಳೇ ಬಲಕಾರಿಯಾದ ಔಷಧವು ವಾಯುಮಂಡಲದಿಂದುಂಟಾಗುವಂಥಾ ದುರ್ಗುಣಗಳನ್ನು ಬಹಳ ಮಟ್ಟಿಗೆ ಕಡಮೆಮಾಡುತ್ತದೆ.

ಅನೇಕ ವರುಷಗಳ ಹಿಂದೆ ಡಾ|| ಹಾರ್ಟ್‌ಮನ್‌ರವರು ಪೆರೂನಾವನ್ನು ಶೋಧನೆ ಯಿಂದ ತಯಾರುಮಾಡಿದರು. ಅಂದಿನಿಂದಲೂ ಅವರು ಬಹಳ ಜಾಗರೂಕತೆಯಿಂದ ನೋಡಿ ಕೊಳ್ಳುತ್ತಾ ಈ ಔಷಧವನ್ನು ತಮ್ಮ ಕಾರ್ಖಾನೆಯಲ್ಲಿ ತಯಾರುಮಾಡಿಸುತ್ತಾ ಬಂದಿದಾರೆ.

ನಂಬಿಕೆಯಾದ ಮತ್ತು ಆರೋಗ್ಯಕರವಾದ ಪುಷ್ಟಿಯನ್ನು ಕೊಡುವಂಥಾ ಮತ್ತು ಎಷ್ಟು ಕಾಲ ಸೇವಿಸಿದರೂ ಸ್ವಲ್ಪವೂ ಕೆಡಕು ಆಗದೆ ಇರುವಂಥಾ ಔಷಧವನ್ನು ಕಂಡು ಹಿಡಿದು ತಯಾರುಮಾಡಿಕೊಡಬೇಕೆಂಬುವುದೇ ಡಾ|| ಹಾರ್ಟ್‌ಮನ್‌ರವರ ಕುತೂಹಲಪೂರ್ವಕವಾದ ಉದ್ದೇಶ ವಾಗಿರುತ್ತದೆ.

ಈ ಪೆರೂನಾವು ಪ್ರಪಂಚದ ಎಲ್ಲಾ ಭಾಗಗಳಲ್ಲೂ ಪ್ರಖ್ಯಾತಿಯನ್ನು ಪಡೆದಿರೋಣವೇ ಅವರು ಅಂಥಾ ತಮ್ಮ ಶ್ರೇಷ್ಠವಾದ ಉದ್ದೇಶವನ್ನು ಸಾರ್ಥಕವಾಗಿ ನೆರವೇರಿಸಿರುತ್ತಾರೆಂಬುವುದಕ್ಕೆ ಸಾಕ್ಷಿಭೂತವಾಗಿರುತ್ತದೆ.

ಶರೀರಧರ್ಮವು ಕುಗ್ಗಿ ದುರ್ಬಲವಾಗಿರುವರೆಲ್ಲಾ ಪೆರೂನಾವನ್ನು ನಂಬಿಕೆಯಿಂದ ಪುಷ್ಟಿ ಕೊಡುವ ಔಷಧವೆಂದು ಭರವಸೆಯಿಟ್ಟು ಸೇವಿಸಬಹುದಾಗಿದೆ. ಕಾಯಿಲೆ ಬಿದ್ದು ಚೇತರಿಸಿಕೊಳ್ಳು ತ್ತಿರುವವರಾಗಲಿ, ವಾಯುಮಂಡಲದ ದುರ್ಗುಣಗಳಿಗೆ ಒಳಪಟ್ಟು ಕುಗ್ಗಿಹೋದವರಾಗಲಿ ಪೆರೂನಾ ವನ್ನು ಸೇವಿಸಬಹುದು.

ಪೆರೂನಾ ಕೊಡುತ್ತಾರೆ.

ಮ್ಯಾಡ್ರಿಡ ಪಟ್ಟಣದ ಸರ್ವಕಲಾ ಶಾಲೆಯ ವೈದ್ಯ ಮತ್ತು “ಸ್ತ್ರೀ ಚಿಕಿತ್ಸೆಯ ಪಾಠಕರಾಗಿಯೂ ; ಬಾರ್ಸಿಲೋನಾ, ಕ್ಯಾಟಲೂನಾ, ಸ್ಪೈನ್ ವೈದ್ಯಮಂಡಲಿಯ ಸದಸ್ಯ ಮೆಂಬರರಾಗಿಯೂ, ಪ್ಯಾರಿಸ್ ಪಟ್ಟಣದ ಆಸ್ಪತ್ರೆಗಳಲ್ಲಿ ವೈದ್ಯವನ್ನು ನಡಿಸಿ ಪೋರ್ಟೋರೀಕೋವಿನ ವೈದ್ಯಮಂಡಲಿಗೆ ಸೇರಿಸಲ್ಪಟ್ಟವರಾಗಿಯೂ ಇರುವ ಪೋರ್ಟೋರೀಕೋವಿನ ಪಾರ್ಸೆ ಆಫೀಸ್ ಡಾ|| ಎಸ್ಟೇಬನ್ ವಿಡಾಲಿಯಾಸ್‌ರವರು ಸರ್ಟಿಫಿಕೇಟು ಕೊಟ್ಟಿರುವುದೇನೆಂದರೆ :—

“ ಯು. ಎಸ್. ಎ., ಓಹಿಯೋ, ಕೊಲಂಬಸ್ ಪಟ್ಟಣದ ಪೆರೂನಾ ಔಷಧದ ಕಾರ್ಖಾನೆಯಲ್ಲಿ ಪೆರೂನಾವು ತಯಾರುಮಾಡಲ್ಪಡುತ್ತದೆ. ಇದು ಮನುಷ್ಯನ ಶ್ವಾಸ ಕೋಶದಲ್ಲಿ ಹುಟ್ಟುವ ರೋಗಗಳಿಗೆ ಪರಿಹಾರಕವಾದ ಔಷಧವು. ಇದನ್ನು ನಾನು ಆ ರೋಗಿಗಳಿಗೆ ಕೊಡುತ್ತೇನೆ. ಅದರಲ್ಲಿ ಸೇರಿಸ ತಕ್ಕ ಪದಾರ್ಥಗಳನ್ನು ನೋಡಿ ಆಶ್ಚರ್ಯ ಪಡುವೆನು. ಅದು ಖಂಡಿತವಾದ ಪರಿಹಾರ ವನ್ನು ತ್ವರ್ಯದಲ್ಲಿ ಉಂಟುಮಾಡುವುದನ್ನು ನೋಡಿ ನನಗೆ ಆಶ್ಚರ್ಯವಾಗಿದೆ.

ಇ. ವಿಡಾಲಿಯಾಸ್, ಪಾರ್ಸೆ, ಪಿ. ಆರ್.

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದ್ದೂ ಇವರಿಂದಲೇ ತಿಳಿಯಬಹುದು.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ :—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

20—11—1908 ರಿಂದ 27—11—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	9	5	0	0
ಮೈಸೂರು ,,	5	2	1	1
ಬೆಂಗಳೂರು ಡಿಸ್ಟ್ರಿಕ್ಟು	21	13	0	0
ಮೈಸೂರು ,,	77	55	0	0
ಕೋಲಾರ್ ,,	7	3	3	2
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	1	1	0	0
ಹಾಸನ ,,	25	16	0	0
ಚಿತ್ರದುರ್ಗ ,,	0	0	23	10
ಕಡೂರ್ ,,	23	10	0	0
ಶಿವಮೊಗ್ಗಾ ,,	*	*	3	3
* ಸಂಖ್ಯೆ ಕಾಣಿಸಿಲ್ಲ. ಜುಮ್ಲಾ	168	111	30	16

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಮಾರ್ಗಶಿರ ಬಹುಳ ತದಿಗೆ ಗುರುವಾರದಿಂದ ಮಾರ್ಗಶಿರ ಬಹುಳ ಅಷ್ಟಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಡಿಸೆಂಬರ್

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ತೆಲಗು ಪ್ರತಿಕ ದಿನ
10	ಗುರು ..	ತದಿಗೆ	52-50	ಪು	60-0	26
11	ಶುಕ್ರ §	ಚೌತಿ	56-3	ಪು	0-20	27
12	ಶನಿವಾ	ಪಂಚಮಿ	60-0	ಪು	4-36	28
13	ರವಿವಾ	ಪಂಚಮಿ	0-12	ಶ್ಲೇ	10-10	29
14	ಚಂದ್ರ	ಷಷ್ಠಿ	5-25	ಮ	16-36	30
15	ಕುಜ ‡	ಸಪ್ತಮಿ	10-48	ಪು	32-2	1
16	ಬುಧ †	ಅಷ್ಟಮಿ	15-55	ಉ	29-32	2

‡. ಪರಶುರಾಮಜಯಂತಿ, ಮಾರ್ಗಶಿರಲಕ್ಷ್ಮೀವ್ರತ
§ ಸಂಗಾಭಾನ, ಉತ್ತಾ ತಯೋಗ, ಸಂಕಷ್ಟ ಚತುರ್ಥಿ
‡ ಷಡಶೀತಿಪುಣ್ಯಕಾಲ. ಧನುರ್ಮಾಸಪೂಜಾರಂಭ
† ನವಮಿತಿಥಿ, ಕಾಲಭೈರವಾಷ್ಟಮಿ.

ಪೇಟೇ ಧಾರಣೆ.

ದಿನಸಿ		ಮೈಸೂರು.	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ ಕ್ಕೆ	ರೂ.	೧೮-೪-೦	೧೯-೮-೦
ಕೆಂಬತ್ತಿ ಅಕ್ಕಿ ಅವಲ್	...	೧೪-೮-೦	೧೫-೪-೦
,, ದುಯ್ಯಂ	..	೧೫-೪-೦	೧೪-೦-೦
ಜಾಪ್ರಾಳೆ ಅಕ್ಕಿ	...	೧೬-೮-೦	೧೯-೦-೦
ಸಣ್ಣಕ್ಕಿ ಅವಲ್	..	೨೦-೦-೦	೨೧-೦-೦
,, ದುಯ್ಯಂ	..	೧೯-೮-೦	೧೯-೪-೦
ತೊಗರಿ ಬೇಳೆ ಪಲ್ಲಾ ೧ಕ್ಕೆ	...	೧೪-೦-೦	೧೫-೮-೦
,, ದುಯ್ಯಂ	...	೧೭-೮-೦	೧೪-೦-೦
ಹೈಕ್ ರಾಗಿ ಪಲ್ಲಾ ೧ಕ್ಕೆ	...	೧೦-೪-೦	೧೦-೦-೦
ಕಾರ್ರಾಗಿ	...	೧೦-೦-೦	೯-೮-೦
ಜೋಳ	...	೧೦-೮-೦	೧೧-೦-೦
ಹಲಸಂದೆ ಪಲ್ಲಾ ೧ಕ್ಕೆ	...	೧೩-೮-೦	೧೨-೦-೦
ಬೀನ್ ಅವರೆ	...	೧೨-೦-೦	೧೫-೦-೦
ಹೆಸರು	...	೧೨-೧೨-೦	೧೪-೦-೦
ಉದ್ದು	...	೧೪-೮-೦	೧೪-೦-೦
ಕಡಲೆ	...	೧೮-೦-೦	೧೪-೮-೦
ಎಳ್ಳು ಸೇ ೧೨೭ ಕ್ಕೆ	...	೨೧-೦-೦	೨೦-೦-೦
ಹುರುಳಿ	...	೧೦-೧೨-೦	೧೦-೦-೦
ಹರಳು ೧೨೭ ಸೇರಿಗೆ	...	೧೦-೦-೦	೧೧-೦-೦
ಸೀಗೇಕಾಯಿ ಮಣ ೧ಕ್ಕೆ	...	೧-೮-೦	೧-೬-೦
ಮೆಣಸಿನಕಾಯಿ	...	೪-೮-೦	೩-೮-೦
,, ದುಯ್ಯಂ	...	೪-೪-೦	೩-೪-೦
ಬೆಲ್ಲ ದೊಡ್ಡ ಅಚ್ಚು	...	೬-೦-೦	ಮ ೫-೪-೦
ಒಳ್ಳೆಣ್ಣೆ ಮಣ ೧ಕ್ಕೆ	...	೫-೧೨-೦	೬-೪-೦
ಹರಳೆಣ್ಣೆ ,,	...	೪-೮-೦	೪-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	...	೭-೦-೦	೬-೮-೦
ಉಪ್ಪು ,,	...	೬-೦-೦	೫-೪-೦
ಹುಣಸೇ ಹಣ್ಣು	...	೧-೮-೦	೧-೪-೦
,, ಹಳೇದು	...	೧-೬-೦	೧-೪-೦
ತುಪ್ಪ ಮಣ ೧ಕ್ಕೆ	...	೧೪-೦-೦	೧೫-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	...	೫-೦-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	...	೪-೮-೦	೪-೧೦-೦
ಅಡಕೇಕಾಯಿ ಮಣ ೧ಕ್ಕೆ	...	೦-೧೦-೦	೦-೧೪-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	...	೦-೧೪-೦	೦-೧೪-೬
ಚಿನ್ನ (ಸೌ) ಕೆಂಪು	...	೧೫-೭-೦	೧೫-೬-೦
,, ,, ಪಸಿಮೆ	...	೧೫-೧೪-೦	೧೫-೧೧-೦
,, ,, ಗಟ್ಟಿ ತೊಲ ೧ಕ್ಕೆ	...	೨೪-೧೦-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	...	೬೭-೦-೦	೬೦-೦-೦

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore. 10/12/1908.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೮ ನೇ ಇಸವಿ ಡಿಸೆಂಬರ್ ತಾರೀಖು ೧೭ ನೇ ಗುರುವಾರ. ಸಂಚಿಕೆ ೫೧

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-44

೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈ ಕಾಲು ಕೊಡತ ,ಭಾರ, ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ಬಿಕ್ಕಳಿಕೆ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ನಿಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸುತ್ತ ಬಂದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ನಾನಾ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಬುದ್ಧಿವಾಡಿ ವೃದ್ಧಿಪಡಿಸುವದೆ ... ಪಿತ್ತಶೂಲೆ, ಮಕ್ಕಳ ಏಳವು, ಜ್ವರ, ಚಳಿಜ್ವರ, ಕೃಮಿತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ.

ಇವನ್ನು ಸೇವಿಸುತ್ತಿರುವವರು ನಿಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಬಲ್ ವಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ.

64-20



ಇದು ಸಾಧಾರಣ ಜ್ವರ, ಪಾಳಿಜ್ವರ, ನೋರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಕೊಟ್ಟ ... ಶೀಸೆಯು ತಲಪಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕೇಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ... ಶೀಸೆ ಇನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ. ರೂ ೨—೧೨ ಆ., ೧೧ ೧೦ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಸೂಲಿ ಬಿಡಲಾಗುವದು.

ಅಮೃತಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ರಕ್ತಭೇದಿ, ನಾನಾತರದ ಹೊಟ್ಟೆ ನೋವುಗಳು —ಮುಂತಾದವುಗಳಲ್ಲಿ ಮಹಾ ಘನವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳ ಬಹಿಷ್ಠರಾದಾಗ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಯನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪಟ್ಟಿ ,, ಜ್ವರಹರಿ " ಎಂಬ ಔಷಧದ ಕೆಳಗಿನ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿರಾಯರು—ಜನ್ರಿಯ ಓಮು ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಕೆಲ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಟ್ಟು ನೋಡಿದ್ದೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೆ ಔಷಧವೆಂತ ಬರೆದಿದ್ದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ... ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಮುಖ್ಯವಾಗಿ ಕೆಳಗಿನ ವಿಳಾಸದಲ್ಲಿ ವಿಶೇಷ —

ಬ್ರಿಸುವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

AMRUTANJAN DEPOT, 16 OAK-LANE, BOMBAY. [17-43]

ಅಮೃತಾಂಜನ ಡಿಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯ ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ಅಬಲುಗಂಟ್ಲುನೋವು, ಎದೆಶೀತ, ಗಾಯ, ಚಳುಕು, ಮೂಲವ್ಯಾಧಿ, ಇವೇ ಮೊದಲಾದ ಯಾವ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತಿಳಿಯಲು ಯೋಗ್ಯವಾದ ಸಂಗತಿಯಾಗಿರುತ್ತದೆ. ಇದು ಚರ್ಮದ ಮೂಲಕ ಮಾಂಸವನ್ನು ಪ್ರವೇಶಿಸಿ, ಕೊಳಕು ಪದಾರ್ಥಗಳಿಂದ ಹುಟ್ಟಿದ ನಾನಾ ತರದ ವೇದನೆಗಳನ್ನು ನಾಶಪಡಿಸುತ್ತದೆ. ಬಾಟ್ಲಿ ಒಂದರ ಕಿಮ್ಮತ್ತು ೦—೮—೦ ಪೋಸ್ಟು ಖರ್ಚು ೦—೪—೦. ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಕಪ್ ಇನಾಮು. ಆರ್. ಆರ್. ಗಂಗೋಲಿ [ಸೀ ಕ್ಲಾಸ್ ಸಬ್ ಜಡ್ಜ್ ಕಾರವಾರ,—ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ, ಕೆಮ್ಮಿಗೂ, ಉಪಯೋಗಿಸಿದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ.

ಅಮೃತಾಂಜನದ ಪ್ರಯೋಗದ ವಿಷಯ ಒಂದು ಹೊಸ ಪುಸ್ತಕವನ್ನು ತಯಾರಿಸಿರುತ್ತೇವೆ.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣ, ತುರಿ ಕಜ್ಜಿ ನಾಶವಾಗುವವು. ಇದರಿಂದ ಚರ್ಮವು ಕಪ್ಪಾಗುವದಿಲ್ಲ. ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦—೬—೦ ; ವಿ. ಪಿ. ಖರ್ಚು ೦—೪—೦

ದಂತಮಂಜನ—ಡಬ್ಬಿ ೨ ಆಣೆ. ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಬಾಯಿಯ ವಾಸನೆಯನ್ನು ಪೂರ್ಣವಾಗಿ ತೆಗೆಯುತ್ತದೆ, ಹಲ್ಲುಗಳು ಘಟ್ಟಿಯಾಗುತ್ತವೆ. ಹಲ್ಲುಗಳು ಬೆಳ್ಳಗಾಗುತ್ತವೆ.

ಕಜಿ ಮುಲಾಮು—ಡಬ್ಬಿ ೧ ಕ್ಕೆ ಕಿಮ್ಮತ್ತು ೩ ಆಣೆ.

ಕೇಶವರ್ಧನಿ—ಬಲೋ ಪರಿಮಳ ಉಳ್ಳದ್ದು.

ಕೇಶವರ್ಧನಿ—ಮನಶುದ್ಧಿ ಮಾಡುವದು.

ಕೇಶವರ್ಧನಿ—ಕೂದಲನ್ನು ನಯಮಾಡುವದು. ಬಾಟ್ಲಿ ಒಂದರ ಕಿಮ್ಮತ್ತು ರೂ. ೧—೦—೦.

ವಜ್ರಗುಟಿಕ—ಧಾತುಪುಷ್ಟಿ, ರಕ್ತಶುದ್ಧಿ	೧—೦—೦
ಕುಸುಮಾರಿಗುಟಿಕ—ಹೆಂಗಸರ ಹೊಟ್ಟೆನೋವಿಗೆ	೧—೦—೦
ಸುಂದರೀ ತೈಲ—ಮೋರೆಯ ಮುದ್ದಣಗಳಿಗೆ	೦—೮—೦
ತಾಂಬೂಲ ಗುಟಿಕೆ ತಾಂಬೂಲ ಸೊಗಸು ವೃದ್ಧಿಸಲಿಕ್ಕೆ	೦—೮—೦
ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಚೇಳುಕಡಿತದ ಮದ್ದು ಚೇಳುಕಡಿತಕ್ಕೆ	೦—೨—೦
ಜುಲಾಬು ಮಾತ್ರೆ—ಜುಲಾಬಿಗೆ	೦—೨—೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:—ವಿಲಿಯಂ ಮತ್ತು ಕಂಪೆನಿ, ೧೬ ಓಕ್‌ಲೇನು, ಫ್ರೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು:—"ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

2-51

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ನಿಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಮಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚೆನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ. ; ೧ ರೂ. ೪ ಆ.

ರೇಶ್ಮೆ ಚುಕ್ಕಿಯುಳ್ಳ ಟೋಪಿಗಳು ೧ ರೂ. ೮ ಆ. ; ೨ ರೂ.

ಜರಿಯ ಟೋಪಿಗಳು ೧ ರೂ. ೧೨ ಆ. ; ೧ ರೂ. ೮ ಆ. , ೧ ರೂ. ೬ ಆ.

ಉಸುಕಿನ ಟೋಪಿಗಳು ೧ ರೂ. ೮ ಆ. , ೧ ರೂ. ೬ ಆ ;

ಕೂಸುಗಳ ಟೋಪಿ, ಸೂಧಿನ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂತವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಲಾ ಪ್ರಕಟನೆಗಳು.

ವ್ಯವಹಾರನಿರ್ಣಯ—ಪುಟಗಳು ೫೪೫. ಹಿಂದೂ ಮಹಮದೀಯ ಲಾಗಳು, ೨೯ ಖಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ. ಪಿ. ಸೇರಿ ೧ ರೂ. ೧೨ ಆಣೆ. [40-34]

ಕನ್ನಡ ಲಾ ರಿಪೋರ್ಟರ್—ಪ್ರಿವಿ ಕೌನ್ಸಿಲ್, ಹೈ ಕೋರ್ಟ್, ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ರೂ ೧—೦—೦ ಮುಂಗಡ, ಯಾ, ವಿ. ಪಿ. ಬಿಡಿಪತ್ರಿಕೆ ೧ ಕ್ಕೆ ೦—೩—೦

ಇವುಗಳನ್ನಪೇಕ್ಷಿಸುವವರು—ಬಿ. ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, (೯೦) ೨ ನೇ ರೋಡ್, ಚಾಮರಾಜ ಪೇಟೆ, ಬೆಂಗಳೂರು ಸಿಟಿ.— ಈ ವಿಳಾಸಕ್ಕೆ ಬರೆಯುವುದು.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

53 25

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೬ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು. ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ನೋಡಿರಿ. "ಪ್ರೋತ್ಸಾಹಕೋಡಿರಿ" ತರಿಸಿರಿ.
98-4

ಈಗತಾನೇ ಶೀಮೆಯಿಂದ ಬಂದಿದೆ.

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ.
೫,೦೦೦ ಹಾಸ್ಟ್ ಟೋಪಿ ಹೊಲಿಯುವ ಸುಪೀರಿಯಲ್ ಉಲ್ಲನ್ ದಾರ.

೧೦ ಟೋಪಿಹಾಗುವ ಉಲ್ಲನ್ ಬಂಡಲ್ ೧ ಕ್ಕೆ	ರೂ.	೩-೭-೦
೧ ಟೋಪಿಹಾಗುವ ಉಲ್ಲನ್ ದಾರಕ್ಕೆ		೦-೫-೦
ಹಾಸ್ಟ್ ಟೋಪಿ ಹಾಕುವ ಕೊಕ್ಕೆ ಸೂಜಿ ೧ ಕ್ಕೆ	೦-೧-೬,	೨-೨-೦
೩೦ ಇಂಚಿನ ದೊಡ್ಡ ಸ್ಪೈಮ ಜನರ್ಲ್ ೧ ಕ್ಕೆ		೦-೮-೦
ಬಾಲ ಫೋಸ್ಸು ಕಾರ್ಡು ಡಬ್ಬಲ್ ಕಲರ್ ೧,೦೦೦ ಕ್ಕೆ		೧-೮-೦
ಸುಗಂಧ ಸಂಜೀವಿನಿ ಭೃಂಗಾಮಲಕ ತೈಲ ಶೀಶೆ ೧ ಕ್ಕೆ		೦-೮-೦
ಮೆಂತ್ಯಾಲ್ ತಲೆ ನೋವಿಗೆ ಅನುಕೂಲವಾದ ಔಷಧ ಡಬ್ಬಿ ೧ ಕ್ಕೆ		೦-೩-೦
ಸ್ಟೆ, ಸ್ಟೆ ಹರಿಯುವಾದ ತಂಬೂಲ ಮತ್ತನು ಪಾಕೆಟ್ ೧ ಕ್ಕೆ		೦ ೩-೦
ಲಿನ್ನ ಕೈವಸ್ತ್ರಗಳು (ಚಂದನಾದ್ದು) ೧ ಕ್ಕೆ		೦-೨-೦
ರಾಸ್ಕೋಫ್ ಸಾ ಯಿಲ್ ವಾಚು ೧ ಕ್ಕೆ		೪-೦-೦
ಕೋಬಿನ ಬಾಚಣಿಗೆಗಳು ದೊಡ್ಡ ಸೈಜು ಡಜ್ ೧ ಕ್ಕೆ		೧-೧೦-೦
ಗಜಕರ್ಣದ ಮುಲಾಮು ಡಬ್ಬಿ ೧ ಕ್ಕೆ		೦-೭-೦
೩೮೦ ಇಂಗ್ಲಿಷು ಅಕ್ಷರಗಳುಳ್ಳಗಿರುವ ಪೆಟ್ಟಿಗೆ ೧ ಕ್ಕೆ		೩-೮-೦

ಪರಸ್ಥಳದವರಿಗೆ ವಿ. ಪಿ. ಇಂದಲೂ ರವಾನಿಸುತ್ತೇವೆ
ನಮ್ಮ ವಿಳಾಸ –ದಿ ಉಲ್ಲನ್ ವಾರ್ಕ್ಸ್, ಮಂಗಳೂರು, ದ. ಕ.

CHAMBERLAIN'S COLIC CHOLERA
AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

1-51



ಕಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು ಆಮಶಂಕೆ, ವಾಂತಿಭೇದಿ ಉಪದ್ರವ, ಕೀಲುಗಳ ನೋವು, ಹೊಟ್ಟೆಯು ನಾನಾ ತರದ ಶೂಲೆಗಳು— ಈ ರೋಗಗಳೆಲ್ಲಾ ಪಾಸಿವಾದುತ್ತವೆ. ಈ ಪಂಪೂರ್ಣ್ಯಯುಕ್ತವಾದ ಔಷಧವು ಜನರನ್ನು ಬಹು ಶಿಸಿರುವವನ್ನು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲಿ ಇನ್ನಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ಕಠ ನೋವನ್ನು ನಿಲ್ಲಿಸಿಬಿಡುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ವಿಕ್ರಯವಾಗುವುದು ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ – ರೂಪಾಯಿ

ಶ್ರೀ ತಾಂಬೂಲ.
81-11
ಇವನ್ನು ಓದಿ ಪರೀಕ್ಷಿಸಿ ಗುಣನೋಡಿ

ಬೇಕಾಕಿಟ್ಟ ಇಲ್ಲಿರುವ ಇದಾ ತಾಂಬೂಲದ ಪಾಕೆಟ್ಟುಗಳನ್ನು ಮಾಡಿ ಮಾರುತ್ತಿದ್ದಾರೆ ಅವರ ಸ್ವಲ್ಪ ಪರೀಕ್ಷಿಸಿ ನೋಡಿ. ತಾಂಬೂಲದೊಂದಿಗೆ ೧— ಮಾತ್ರ ಸೇವಿಸುತ್ತ ಬಂದರೆ ಮುಖದ ಚಿನ ದಿನ ದುರ್ಗಂಧ ನಾಶವಾಗುತ್ತ, ರಕ್ತಶುದ್ಧಿ, ಜೀರ್ಣ ಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ ವಾತ ಪಿತ್ತ ಸಂಬಂಧ ರೋಗಗಳು ನಿವಾರಣೆಯಾಗುತ್ತೆ ವಿದ್ಯಾರ್ಥಿಗಳಿಗೆ ಅಲಕ್ಷ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾ ಗುವಂತೆ ದ ಸಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತೆ ಛಳಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧— ಮಾತ್ರೆಗಳಂತೆ ಕೊಟ್ಟರೆ ಕ್ಷೇಮ ಉಂಟಾಗುವುದು ಈ ರೀತಿಗೆ ಸಾವಿರಾರು ಜನರಿಗೆ ಅನುಭವ-ಸಿದ್ಧವಾಗಿದೆ ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು. ೨೦೦ ಮಾ ತ್ರೆ ಉಳ್ಳ ಸೀಸೆಗೆ ೪ ಆಣೆ. ಅರ್ಧ ಸೀಸೆಗೆ ಒಂದು ಜಾಸ್ತಿ ... ಗೆ ವಿ. ಪಿ. ಛಾರ್ಜು ೫ ಆಣೆ ನಮ್ಮ ವಿಳಾಸ.—

ದಾವಾನಿ ನೋವು ತಕ್ಷಣ ಪರಿಹಾರ ಡಬ್ಬಿ ೧ ಕ್ಕೆ ೦—೧—೦

ವೇಣಸಪಲ್ಲಿ ಟೌನ್. ಯಂ ಗೋವಿಂದಶೆಟ್ಟಿ,
ಬೆಂಗಳೂರು ಡಿಸ್ಟ್ರಿಕ್ಟ್. ಮೆಡಿಕಲ್ ಪ್ರಾಕ್ಟಿಷನರ್.

ಇಲ್ಲಿ ನೋಡಿ.
77-13
ತುಮಕೂರು ಪಿಎಟ್ ಇಲಾಖೆಯಲ್ಲಿ ಯೂರೋಪಿಯನ್ನರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ. ಕ್ರಯ —೧೨ ಆಣೆ ಮೊದಲ್ಗೊಂಡು ೧ ರೂ. ೧೨ ಆಣೆಯ ವರೆಗೆ ೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವುದು ಈಗತಾನೆ ಇಂಗ್ಲಿಷ್ ಉಲ್‌ದಾರವು ಬಂದಿದೆ. ಬೇಕಾದ ತರಹ ಟೋಪಿಗಳನ್ನು ರಿಯಾಯಿತಿ ಕಳುಹಿಸಲ್ಪಡುವು. ವಿಳಾಸ – ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು

JUST RECEIVED! JUST RECEIVED!!

Stead's Books for the Bairns
Illustrated New Numbers

STEAD'S PENNY POPULAR TALES Sixty four Pages [illegible] Picture Cover [illegible] contains a story of thrilling interest 24 numbers

A VERY NICE SELECTION OF 93-6

CHRISTMAS AND NEW YEAR CARDS AND CALENDARS FOR 1909

Apply The Manager, C.L.S. Book Depot, Mysore City.

ಆಹಾರದ ಕುರುಹುಗಳು

ಸ್ವಾಭಾವಿಕವಾಗಿ ಅವರು ಬರಬಹುದಾದ ಕುರುಹುಗಳನ್ನು ಕಂಡು ಹಿಡಿಯಬಹುದು

ಕೆಮ್ಮು ಆಹಾರದ ಕುರುಹು

ಕ್ಷಯರೋಗವು ಬಲಹೀನತೆಯುಳ್ಳವರಿಂದ ಇವೆಂದ ತೋರಿಬರುತ್ತವೆ ಅವನ್ನು ಬೇಗನೆ ನಿವಾರಿಸತಕ್ಕದ್ದು ಬಹು ಅವಶ್ಯಕ

SCOTT'S EMULSION 33-38
(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ದೊರಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಮದರಾಸು ಸಾಹುಕಾರ ಪೇಟೆ.
ಟಿ. ಎಂ. ರಾಮಯ್ಯ ಶೆಟ್ಟಿ ರವರ ಕಂಪೆನಿಯಲ್ಲಿ
99 3

ತರತರವಾದ ಕಬ್ಬಿಣದ ಪೆಟ್ಟಿಗೆಗಳು ಅವರ ಅಂಗಡಿಯಲ್ಲಿ ಈ ಕಳಗಿನ ದರಕ್ಕೆ ಸಿದ್ಧವಾಗಿದೆ. ಬ್ರಾಂಚ್ ಆಫೀಸ್ ಬೆಂಗಳೂರು ನಗರದಲ್ಲಿಯೂ ಸಿಕ್ಕುವದು



ಬೇಕಾದವರು ತಮ್ಮ ಅಡ್ರೆಸ್ಸು ತಿಳಿಸಿ ರೂ. 10 ಮುಂಗಡವಾಗಿ ಕಳುಹಿಸಿದರೆ ವಿ. ಪಿ. ಮೂಲಕ ರವಾನಿಸಲ್ಪಡುತ್ತೆ. ವಿಶೇಷ ವಾಸ್ತವಿಕ ಬೇಕಾದವರು ಕಾಗದದ ಮುಖಾಂತರ ಮೇಲ್ಕಂಡ ವಿಳಾಸದಾರರಿಂದ ತಿಳಿದುಕೊಳ್ಳಬಹುದು.

ಲೌಬಿನ ಪುಸ್ತಕ
97-1
ಡಿಸೆಂಬರ್ ಅಖೈರಿಯೊಳಗಾಗಿ ಬರೆದುಕೊಂಡವರಿಗೆ ರೂ ೧—೦—೦
ಅನಂತರ ಬರೆದುಕೊಂಡವರಿಗೆ " ೧—೮—೦
ಟಪ್ಪಾಲ್ ಖರ್ಚು " ೦-೩-೦

ಪ್ರತಿಯೊಬ್ಬ ಶ್ಯಾನುಭೋಗ್, ಪಟೇಲರೂ ಅವಶ್ಯ ಸಂಗ್ರಹಿಸಿ ಇಡಬೇಕಾದದ್ದು. ರಿಜಿಸ್ಟ್ರೇಷನ್ ನೌಕರರಿಂದ ತಯಾರಾದದ್ದಲ್ಲದೆ ಈ ಪುಸ್ತಕವನ್ನು ಬಟ್ಟೆ ರಿಜಿಸ್ಟ್ರೇಷನ್ ಮಾಡುವವರಿಗೂ, ಪತ್ರಗಳನ್ನು ಬರೆಯುವವರಿಗೂ ಇದು ಉಪಯುಕ್ತವಾದದ್ದು ಮುಖ್ಯವಾದದ್ದು. ಇದರಲ್ಲಿ ಇಂಗ್ಲೀಷ್ ಕಾಯ್ದೆ, ರಿಜಿಸ್ಟ್ರೇಷನ್ ಆಕ್ಟು, ರಿಜಿಸ್ಟ್ರೇಷನ್ ರೂಲ್ಸ್, ರಿಜಿಸ್ಟ್ರೇಷನ್ ಫೀಜು ವಿಷಯವಾದ ಸರ್ಕ್ಯುಲರ್‌ಗಳು, ಮತ್ತು ಪ್ರತಿಯೊಂದು ಪತ್ರಬರೆಯತಕ್ಕ ನಮೂನೆ, ಅದಕ್ಕೆ ಬೇಕಾದ ಸ್ಟಾಂಪು, ರಿಜಿಸ್ಟ್ರೇಷನ್ ಫೀಜು ನೋದಲಾದವುಗಳನ್ನು ಕಾರಣಸಹಿತ ಬಹಳ ಚನ್ನಾಗಿ ವಿವರಿಸಿ ಇದೆ. ಒಮ್ಮೆ ಮಾತ್ರ ಬಲ್ಲ ಪ್ರತಿಯೊಬ್ಬರೂ ಈ ೧ ರೂಪಾಯಿಯ ಖರ್ಚಿನಿಂದ ಅನೇಕ ವಿಧವಾದ ಕಷ್ಟನಷ್ಟಗಳನ್ನು ಖಂಡಿತವಾಗಿಯೂ ತಪ್ಪಿಸಿಕೊಳ್ಳಬಹುದು. ಜಟ್ಟು ಹೇಳಲೇಕೆ ಅನುಭವದಿಂದ ಖಾನೀ ಗೊತ್ತಾಗುವದು ನಮ್ಮ ಸ್ಟಾಕ್ ಇಲ್ಲದ ಪುಸ್ತಕಗಳನ್ನು ಮಾತ್ರ ಕೊಳ್ಳಬೇಡಿ. ವಿಳಾಸ —ಎಂ. ಕೃಷ್ಣಮೂರ್ತಿರಾವ್, ರಿಜಿಸ್ಟ್ರೇಷನ್ ಕ್ಲಾರ್ಕ್,
ಹೊನ್ನಾಳಿ ತಾಲ್ಲೂಕ್, ಶಿವಮೊಗ್ಗ ಡಿಸ್ಟ್ರಿಕ್ಟ್.

ಸಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ರೋಗವೇ ಉಂಟಾಗಲಿ— " ನನಗೆ ದಿನಕ್ಕೆ ಒಂದು ಸಲವಾದರೂ ಶಾಲಪ್ರವೃತ್ತಿಯಾಗುತ್ತದೆಯೇ ? " ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಶಾಲ ಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುದ್ದಿ ಪರಿಮಾಣ.)

ಮಲಬದ್ಧತೆಯುಳ್ಳವರ ಅರ್ಥವೇನೆಂದರೆ ಮಲಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟ ವಿಷವಾಗಿ, ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳಿಗೆಲ್ಲ ಅರ್ಧದಷ್ಟಕ್ಕೆ ಮೂಲ ಕಾರಣವಾಗಿರುವುದು ಮಲಬದ್ಧದಿಂದ ರೋಗಗಳಿಗೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ, ಪಿತ್ತ ; ಪಿತ್ತಜ್ವರ ; ಅಜೀರ್ಣ ; ಅಗ್ನಿಮಾಂದ್ಯ ; ಗಚ್ಚರ ; ಅಶಕ್ತಿ ; ಎದೆಯು ಕಲ್ಲಿಸುವುದು, ತಲೆ ತಿರುಗುವುದು ; ತಲೆನೋವು ; ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು ; ಚೆಂಗಸರ ವ್ಯಾಧಿಗಳು ; ಇವೇ ಮೊದಲಾದವು. ಹೀಗೆಯೇ ಬಟ್ಟೆಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ದುಕ್ಕರಿಗಾಗಲಿ ಬಳಸದಲ್ಲಿರುವ ಮಲವನ್ನು ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗನ ಸ್ಥಿತಿಯ ಬಿಟ್ಟಿಯಾಗಿಯೂ ಹಿತವಾಗಿಯೂ ಇಟ್ಟು, ತನ್ನಡೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [69-16]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ, ೧೨ ಆಣೆ ಬುದ್ದಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುದ್ದಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು. ಔಷಧಿಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು. ಅಥವಾ, ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ —ಇವರಲ್ಲಿ ದೊರೆಯುವುವು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.
48-30
ತಲೆನೋವು, ವಾಯುನೋವು, ಸಳತ, ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿ ನೇನಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ತಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಅದರ ರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದ ಎಲ್ಲರೂ ಉಪಯೋಗಿಸುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಬುಡ್ಡನ್ನೇ ಹಾಳುಮಾಡುತ್ತದೆ.

ಕ್ರಯ ಶೀಸೆ ಒಂದಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿದರೆ ಪ್ಯಾಕಿಂಗ್ ಛಾರ್ಜು ವಜಾಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕ್ರಯಿಸುತ್ತಾರೆ. ಮುಖ್ಯ ಏಜಂಟರ ವಿಳಾಸ—
ಎಸ್. ಪೀಟರ್ಸ್,
೩೩, ವೇದಾಚಲ್ಲಿ ಬೀದಿ, ವೇಪೇರಿ, ಮದರಾಸ್.

ವೃತ್ತಾಂತ ಪತ್ರಿಕೆ.
:0:
ಸನ್ ೧೯೦೮ ನೇ ಇಸವಿ ಡಿಸೆಂಬರ್ ತಾ॥ ೧೭ನೇ ಗುರುವಾರ.

ರಾಜದ್ರೋಹವನ್ನು ಅಡಗಿಸುವ ಹೊಸ ಕಾನೂನು.

ಈ ರಾಷ್ಟ್ರದಲ್ಲಿ ದಂಗೆ, ಫಿತೂರಿ, ಘೋರಕೃತ್ಯಾದಿ ರಾಜದ್ರೋಹಾಪರಾಧಗಳನ್ನು ಅಡಗಿಸುವುದಕ್ಕೆ ಕಳೆದ ಶುಕ್ರವಾರದ ದಿನ ಕಲ್ಕತ್ತಾ ಪಟ್ಟಣದಲ್ಲಿ ವೈಸ್‌ರಾಯಿಯವರ ಮಂತ್ರಾಲೋಚನಾ ಸಭಿಕರು ಸೇರಿ, ಒಂದು ಹೊಸ ಕಾನೂನನ್ನು ಪ್ಯಾಸ್ ಮಾಡಿದರು ಈ ಸಭೆಯಲ್ಲಿ ನಡೆದ ಚರ್ಚೆ ಮುಂತಾದದ್ದನ್ನು ಇನ್ನೊಂದುಕಡೆ ಸಂಕ್ಷೇಪವಾಗಿ ವಿವರಿಸಿರುತ್ತೇವೆ ಇದುವರೆಗೆ ರಾಜದ್ರೋಹದ ಅಪರಾಧಗಳು ಪತ್ತೆ ಆಗಿ ದರ್ಯಾಫ್ತು ನಡೆಯುತ್ತಾ ಬಂದಿರುವ ಕ್ರಮವನ್ನು ನೋಡಿದರೆ ಈ ರೀತಿಯಾದ ಅಪರಾಧಗಳನ್ನು ಅಡಗಿಸುವುದಕ್ಕೆ ಈಗಿರುವ ಕಾನೂನು ಸಮಂಜಸವಾಗಿಲ್ಲವೆಂದು ಗೊತ್ತಾಗುತ್ತದೆ. ಮೊದಲು ಪೋಲೀಸ್ ತನಿಖೆ ನಡೆಯಬೇಕು; ಅನಂತರ ಮ್ಯಾಜಿಸ್ಟ್ರೇಟರು ದರ್ಯಾಫ್ತಿಯಿಂದ ಸೆಷನ್ ವಿಚಾರಣೆಗೆ ಕಳುಹಿಸಬೇಕು ; ತರುವಾಯ ಸೆಷನ್ಸ್ ಜಡ್ಜರು ವಿಚಾರಣೆ ಮಾಡಬೇಕು ; ಅವರೇನಾದರೂ ಶಿಕ್ಷೆ ವಿಧಿಸಿದರೆ ಹೈಕೋರ್ಟಿನಲ್ಲಿ ಅಪೀಲು ನಡೆಯಬೇಕು. ಇಷ್ಟೆಲ್ಲಾ ಕ್ರಮಗಳು ಒದಗುವುದರಲ್ಲಿ ಬಹು ದೀರ್ಘಕಾಲ ಕಳೆದುಹೋಗುತ್ತದೆ. ಅದಿದ್ದರಿಂದ ಮೇಲ್ಕಂಡ ನ್ಯಾಯಪರಿಪಾಲಕ ಸಭೆಯವರು ಹೊಸ ಕಾನೂನನ್ನು ಮಾಡಿ ಜಾರಿಗೆ ತರಬೇಕಾಯಿತು. ಈ ಕಾನೂನ್ ಪ್ರಕಾರ ದರ್ಯಾಫ್ತು ಯಾವುದೋ ನ್ಯಾಯಬದ್ಧವಾಗಿಯೂ ಸಾಂಗವಾಗಿಯೂ ನಡೆಯುತ್ತದೆಂಬುದರಲ್ಲಿ ಸ್ವಲ್ಪವೂ ಅನುಮಾನವಿಲ್ಲ. ಇದರ ರಾಜದ್ರೋಹ, ಅಧಿಕಾರಿಗಳನ್ನು ಕೊಲ್ಲುವ ಪ್ರಯತ್ನ, ಫಿತೂರಿ, ಈ ಮೊದಲಾದ ಘೋರತರವಾದ ಅಪರಾಧಗಳು ಕಂಡುಹಿಡಿದ ಕೂಡಲೇ ಬೇಗನೆ

ಕ್ಷಿಪ್ರವಾಗಬೇಕಾದದ್ದು ಪರಮಾವಶ್ಯಕವಾದದ್ದರಿಂದ ಅಪರಾಧಿಗಳಿಗೆ ಅನುಕೂಲವಾಗಲೆಂದು ಮಾಡಿದಂಥಾ ಕಾನೂನು ಅಪರಾಧಿಗಳಿಂದಲೂ ಅವರ ಪಕ್ಷದ ವಕೀಲರಿಂದಲೂ ದುರ್ವಿನಿಯೋಗವಾಗುತ್ತಿರುವುದನ್ನು ನೋಡಿ, ಗವರ್ನ್‌ಮೆಂಟಿನವರು ಈ ಹೊಸ ಕಾನೂನನ್ನು ಮಾಡಿ ಜಾರಿಗೆ ತರಬೇಕಾಯಿತು.

ಈ ಹೊಸ ಕಾನೂನ್ ಪ್ರಕಾರ ಅಪರಾಧಿಯನ್ನು ಎರಡು ನೂರು ಕೋರ್ಟುಗಳಲ್ಲಿ ದರ್ಯಾಪ್ತು ಮಾಡುವುದಿಲ್ಲ; ಒಂದೇ ಕೋರ್ಟಿನಲ್ಲಿ ಮೊಕದ್ದಮೆ ವಿಚಾರಣೆ ಆಗಿ ತೀರ್ಮಾನವಾಗುವುದು. ರಾಜದ್ರೋಹಾಪರಾಧ ಮಾಡಿದವನನ್ನು ಹಿಡಿದು ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ತನಿಖೆ ನಡೆಯುತ್ತದೆ. ಆಗ ಕ್ರಮದರ್ಯಾಪ್ತು ಆಗುವುದಿಲ್ಲ; ವಕೀಲರ ಘಾಟೀ ಸವಾಲುಗಳಿಗೂ ಆರ್ಗ್ಯುಮೆಂಟಿಗೂ ಅವಕಾಶ ಕೊಡುವುದಿಲ್ಲ. ಅಪರಾಧವು ರುಜುವಾತಾಗಿದೆ ಎಂದು ತಿಳಿದರೆ ಮ್ಯಾಜಿಸ್ಟ್ರೇಟರು ಆ ಮೊಕದ್ದಮೆಯನ್ನು ಹೈಕೋರ್ಟಿನ ವಿಚಾರಣೆಗೆ ಕಳುಹಿಸುವರು. ಹೈಕೋರ್ಟಿನಲ್ಲಿ ಮೂರು ಮಂದಿ ಜಡ್ಜಿಗಳು ಕುಳಿತುಕೊಂಡು ಅಂಥಾ ಮೊಕದ್ದಮೆಯನ್ನು ಸಾಂಗವಾಗಿ ದರ್ಯಾಪ್ತು ಮಾಡುತ್ತಾರೆ. ಇವರು ಮಾಡಿದ ತೀರ್ಮಾನವೇ ಅಖೈರಾಗಿರುವುದು; ಇದರ ಮೇಲೆ ಅಪೀಲು ಇಲ್ಲವೇ ಇಲ್ಲ. ಮೊಕದ್ದಮೆಯು ಈ ಹೊಸ ಕಾನೂನ್ ಪ್ರಕಾರ ದರ್ಯಾಪ್ತು ಆಗಬೇಕೆಂಬುವುದನ್ನು ಆಯಾ ಅಧಿಪತ್ಯದ ಗವರ್ನರುಗಳೇ ಮೊದಲು ಗೊತ್ತುಮಾಡಿ ಹುಕುಂ ಕೊಡಬೇಕೆಂದು ವಿಧಿಸಲ್ಪಟ್ಟಿದೆ.

ಈ ರೀತಿಯಾಗಿ ವಿಧಾಯಕವಾಗಿರುವ ಹೊಸ ಕಾನೂನು ಅವಶ್ಯವೂ ನ್ಯಾಯವೂ ಆಗಿರುತ್ತದೆಂದು ವಿವೇಕಿಯೂ ರಾಜಭಕ್ತಿಪರಾಯಣನೂ ಆದ ಪ್ರತಿ ಒಬ್ಬ ಪ್ರಜೆಯೂ ಒಪ್ಪಿಕೊಳ್ಳುವನೆಂದು ನಂಬುತ್ತೇನೆ. ಅನ್ಯಾಯ ನಡೆಯುವುದಕ್ಕೆ ಅವಕಾಶವೇನೂ ಇಲ್ಲ. ರಾಷ್ಟ್ರದ ಪ್ರಥಮ ನ್ಯಾಯಸ್ಥಾನಗಳಲ್ಲಿ ಉತ್ತಮೋತ್ತಮರಾದ ಮೂರು ಮಂದಿ ಜಡ್ಜಿಗಳೇ ಕುಳಿತು ಇಂಥಾ ಮೊಕದ್ದಮೆಗಳನ್ನು ದರ್ಯಾಪ್ತು ಮಾಡುವರು. ಈ ಕಾನೂನಿನಿಂದ ಎರಡು ವಿಷಯಗಳಲ್ಲಿ ಅನುಕೂಲವುಂಟು: (೧) ಸಾಮಾನ್ಯವಾಗಿ ಇತರ ಮೊಕದ್ದಮೆಗಳಂತೆ ದೀರ್ಘವಾದ ವಿಚಾರಣೆಗಳೂ, ಎರಡುಮೂರು ಸಲ ಒಂದೇ ಮೊಕದ್ದಮೆ ದರ್ಯಾಪ್ತುಯಾಗುವುದೂ ತಪ್ಪಿಹೋಗುತ್ತದೆ. (೨) ಇನ್ನೂ ಮೊಕದ್ದಮೆಗಳು ನಡೆಯುತ್ತಿರುವಾಗಲೇ ಅವುಗಳ ವಿಷಯದಲ್ಲಿ ವರ್ತಮಾನ ಪತ್ರಿಕೆಗಳು ಪ್ರಸ್ತಾಪಿಸುವುದೂ, ಖೂಮ ಅಭಿಪ್ರಾಯಾದಿಗಳನ್ನು ಹೇಳುವುದೂ, ಆಕ್ಷೇಪಣೆಗಳನ್ನು ಮಾಡುವುದೂ ಈಚೆಗೆ ಬಹಳ ರೂಢಿಗೆ ಬರುತ್ತಿದ್ದಿತು. ಈ ಕಾನೂನಿನಿಂದ ಇದಕ್ಕೆ ಅಡ್ಡಿಯುಂಟಾಗಿರುವುದು. ವಿಲಾಯತಿಯಲ್ಲಿ ಮೊಕದ್ದಮೆಯು ಇನ್ನೂ ದರ್ಯಾಪ್ತುವಾಗುತ್ತಿರುವಾಗ ಅದರ ವಿಷಯವನ್ನೆತ್ತಿ ಬರೆಯುವುದಕ್ಕೆ ಯಾವ ವರ್ತಮಾನ ಪತ್ರಿಕೆಗೂ ಅವಕಾಶವಿಲ್ಲ. ಹಾಗೇನಾದರೂ ಪತ್ರಿಕೆಯಲ್ಲಿ ಪ್ರಸ್ತಾಪಮಾಡಿ ಬರೆದರೆ ಅಂಥಾ ಪತ್ರಿಕಾಕರ್ತರನ್ನು ಹಿಡಿದು, ಅವರ ಮೇಲೆ ಕೋರ್ಟಿಗೆ ಅವಮಾನ ಮಾಡಿದರೆಂಬ ಅಪರಾಧ ಹೊರಿಸಿ ಶಿಕ್ಷೆ ವಿಧಿಸುವರು. ಕೋರ್ಟಿನಲ್ಲಿ ಜಡ್ಜಿಗಳು ನ್ಯಾಯವಿಮರ್ಶೆ ಮಾಡುತ್ತಿರುವಾಗ್ಗೆ ಅವರ ಮನಸ್ಸನ್ನು ಕೆಡಿಸುವಂತೆ ಆ ವಿಷಯವನ್ನು ಕುರಿತು ಪಬ್ಲಿಕ್ ಸಭೆಗಳಲ್ಲಿ ಮಾತನಾಡುವುದಾಗಲಿ, ಪತ್ರಿಕೆಗಳ ಮೂಲಕ ಚರ್ಚಿಸುವುದಾಗಲಿ ಬಹಳ ತಪ್ಪೆಂಬುದಾಗಿ ಇಂಗ್ಲೀಷ್ ಪ್ರಜೆಗಳೂ ಇಂಗ್ಲೀಷ್ ಗವರ್ನ್‌ಮೆಂಟಿನವರೂ ತಿಳಿದುಕೊಂಡಿರುವರು. ಇದರೆ ಹಿಂದೂಸ್ಥಾನದ ನ್ಯಾಯಸ್ಥಾನಗಳಲ್ಲಿ ಮೊಕದ್ದಮೆಗಳು ದರ್ಯಾಪ್ತುಯಾಗುತ್ತಿರುವಾಗ ಇಲ್ಲಿನ ಕೆಲವು ವರ್ತಮಾನ ಪತ್ರಿಕೆಗಳಲ್ಲಿ ಆ ವಿಷಯವನ್ನೆತ್ತಿ ಪ್ರಸ್ತಾಪಮಾಡುತ್ತಾ ಬಂದಿರುವರು. ಇಂಥಾ ಜನರನ್ನೂ ಪತ್ರಿಕೆಗಳನ್ನೂ ಆ ಕೂಡಲೇ ಹಿಡಿದು ದಂಡಿಸುವುದಕ್ಕೆ ಹೈಕೋರ್ಟುಗಳಿಗೆ ಅಧಿಕಾರವಿಲ್ಲದೆ ಇಲ್ಲ.

ಅರಾಜಕ ಕೃತ್ಯಗಳನ್ನು ಅಡಗಿಸುವುದಕ್ಕೆ ಇಂಥಾ ಕಠಿಣತರವಾದ ಕಾನೂನು ಮಾಡಿದ್ದು ಒಳ್ಳೆಯದೆಂದು ನಾವು ಒಪ್ಪಿಕೊಳ್ಳುತ್ತೇವೆ. ಯಾಕೆಂದರೆ ಅಂಥಾ ಕೃತ್ಯಗಳನ್ನು ನಡಿಸತಕ್ಕವರೂ ಅವರಿಗೆ ಸಹಾಯ ಮಾಡುವವರೂ ಹಿಂದೂಸ್ಥಾನದ ಹಿತಚಿಂತಕರಲ್ಲ; ಅವರು ಶತ್ರುಗಳೇ ಆಗಿರುತ್ತಾರೆ. ಕೊಲೆಗಳಿಂದಲೂ ಘಾತುಕ ಕೃತ್ಯಗಳಿಂದಲೂ ಈ ದೇಶದ ಪ್ರಜೆಗಳಿಗೆ ಎಳ್ಳಷ್ಟೂ ಪ್ರಯೋಜನವಾಗುವುದೇ ಇಲ್ಲ. ಈ ಕ್ಷುದ್ರಶತ್ರುಗಳು ಇಂಗ್ಲೀಷ್ ಅಧಿಕಾರಿಗಳನ್ನು ಮಾತ್ರ ಹಗೆಮಾಡತಕ್ಕವರಲ್ಲ. ಅವರು ಸ್ವದೇಶಿಗಳನ್ನೂ ಹಿಂಸೆಮಾಡುತ್ತಿರುವರು, ಅವರನ್ನು ಹೆದರಿಸುವರು, ಅವರ ಮನೆಗಳಿಗೆ ನುಗ್ಗಿ ದೋಚಿಕೊಂಡು ಹೋಗುವರು. ಇಂಥಾ ಕೊಲೆಗಳಿಂದಲೂ ಸುಲಿಗೆಗಳಿಂದಲೂ ಹಿಂದೂಸ್ಥಾನಕ್ಕೆ ಎಂಥಾ ಶ್ರೇಯಸ್ಸು ತಾನೇ ಉಂಟಾದೀತು? ಅರಾಜಕ ಕೃತ್ಯಗಳನ್ನು ನಡಿಸುವುದಕ್ಕೆ ಬಂಗಾಳದಲ್ಲಿ ಈಚೆಗೆ ಕೆಲವು ಸಮಿತಿಗಳು ಅಂದರೆ ಗೋಪ್ಯ ಸಂಘಗಳು ಏರ್ಪಟ್ಟಿರುತ್ತವೆ. ಈ ಸಂಘಗಳಲ್ಲಿ ಸ್ವದೇಶಿಗಳು ಸೇರಿಕೊಂಡಿದ್ದರೂ, ಅವರಿಗೆ ಇಂಗ್ಲೀಷರೇ ಸಹಾಯಮಾಡುತ್ತಿದ್ದರೂ ಇಂಥಾ ಸಂಘಗಳಿಂದ ಯಾವ ರಾಜ್ಯಭಾರಕ್ಕೂ ಕೆಡುಕಾಗುವುದೇ ವಿನಹಾ ಎಷ್ಟುಮಾತ್ರಕ್ಕೂ ಒಳ್ಳೆಯದಾಗಲಾರದು. ಇಂಗ್ಲೀಷರು ಒಂದು ವೇಳೆ ಬಂಗಾಳಾ ಅಧಿಪತ್ಯವನ್ನು ತ್ಯಜಿಸಿಬಿಟ್ಟರೆ ಬಂಗಾಳಿಗಳು ಒಬ್ಬರನ್ನೊಬ್ಬರು ಕೊಂದು ಹಾಕುತ್ತಾ ಘೋರವಾದ ಅನಾಯಕತ್ವವನ್ನು ತಂದಿಟ್ಟು ಹಾಳು ಮಾಡುವರೆನ್ನುವುದಕ್ಕೆ ಸಂಶಯವಿಲ್ಲ. ಇವರು ಮಾನುಷ ಸಂತಾನಕ್ಕೇ ಘೋರ ಶತ್ರುಗಳಾಗಿಯೂ, ಸಕಲ ಧರ್ಮಗಳನ್ನೂ ವಿನಾಶಮಾಡತಕ್ಕವರಾಗಿಯೂ ಇರುತ್ತಾರೆ. ಇಂಥಾ ಪಾತಕಿಗಳನ್ನು ಗವರ್ನ್‌ಮೆಂಟಿನವರು ಸಂಪೂರ್ಣವಾಗಿ ಅಡಗಿಸಿಬಿಡುತ್ತಾರೆಂದು ಸಂದೇಹವಿಲ್ಲದೆ ಹೇಳುತ್ತೇವೆ.

ಇತ್ತಲಾಗಿ ಇಂಥಾ ಅವಮಾನುಷಕೃತ್ಯಗಳೇನೂ ನಡೆಯದೆ ನೆಮ್ಮದಿಯಾಗಿರುವ ಈ ನಮ್ಮ ಮೈಸೂರು ಸಂಸ್ಥಾನದಲ್ಲಿ ನಾವೆಲ್ಲಾ ಪ್ರಧಾನವಾಗಿರುವಂಥಾ ಎರಡು ವಿಷಯಗಳನ್ನು ನಮ್ಮ ಸ್ಮರಣೆ ಆಚರಣೆಗಳಲ್ಲಿಟ್ಟುಕೊಂಡಿರೋಣ. ಮೊದಲನೆಯದಾಗಿ, ಸ್ವದೇಶ ವಾತ್ಸಲ್ಯವೆಂಬುವುದು ಪ್ರೀತಿಯೇ ಹೊರತು ಹಗೆತನವೂ ಅಲ್ಲ, ದ್ವೇಷವೂ ಅಲ್ಲ; ಎರಡನೆಯದಾಗಿ, ಸತ್ಕರ್ಮ ಧರ್ಮಾಚರಣೆ ಸನ್ಮಾರ್ಗಾವಲಂಬನೆಗಳ ಮೂಲಕವೇ ಯಾವ ಜನರಾಗಲೀ ಶ್ರೇಯೋಭಿವೃದ್ಧಿಯನ್ನು ಹೊಂದಬೇಕಲ್ಲದೆ ಅನ್ಯಥಾ ಸಾಧ್ಯವಿಲ್ಲ.

ಊರ್ದೇಶದ ವೃತ್ತಾಂತಗಳು.

ಕಳೆದ ವಾರ ಚಾಮರಾಜನಗರದ ಪ್ರಾಂತ್ಯದಲ್ಲಿ ಒಂದು ಕೊಲೆ ನಡೆಯಿತೆಂದು ಕೇಳುತ್ತೇವೆ.

∴

ಬೆಂಗಳೂರು ಸಿಟಿ ಎಚ್. ಎನ್. ರಾವ್ ಬ್ರದರ್ಸ್ ಕಂಪನಿಯವರು ಸುಂದರವಾಗಿ ಅಚ್ಚು ಹಾಕಿಸಿರುವ ಇಂಗ್ಲಿಷ್ ಕನ್ನಡ ಕ್ಯಾಲೆಂಡರನ್ನು ನಮ್ಮಲ್ಲಿಗೆ ಕಳುಹಿಸಿರುತ್ತಾರೆ.

∴

ಶ್ರೀಮನ್ ಮಹಾರಾಜರವರೂ ಯುವರಾಜರವರೂ ನೆನ್ನೆ ಬೆಳಿಗ್ಗೆ ೧೧ ಗಂಟೆಗೆ ಮೋಟಾರ್ ಗಾಡಿಯಲ್ಲಿ ಬೆಂಗಳೂರಿಂದ ರಾಜಧಾನಿಯನ್ನು ಸುಖವಾಗಿ ತಲುಪಿದರು. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು.

∴

ಶಿವಮೊಗ್ಗೆಯ ಆಸ್ಪತ್ರೆಯಿಂದ ವೈದ್ಯವಿದ್ಯಾಭ್ಯಾಸಕ್ಕಾಗಿ ಲಂಡನ್‌ಗೆ ಹೋಗಿದ್ದ ಮೆ: ಎಂ. ಜಿ. ಸಾಮುವೇಲಯ್ಯನವರು ಕಳೆದ ನವಂಬರಿನ ಪರೀಕ್ಷೆಯಲ್ಲಿ ಉತ್ತಮ ರೀತಿ ತೇರ್ಗಡೆ ಹೊಂದಿ, ಎಂ. ಡಿ. ಎಂಬ ಡಿಗ್ರಿಯನ್ನು ಹೊಂದಿದರೆಂದು ತಿಳಿಸಲು ಸಂತೋಷಕರವಾಗಿದೆ.

∴

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ಸಾಹುಕಾರ್ ಜವಳಿ ಅಂಗಡಿ ಮ. ಮಾದಪ್ಪನವರೇ ಮುಂತಾದವರು ಸೇರಿ ಕೆಲವು ಹಣವನ್ನು ಕೂಡಿಸಿ, ಕಳೆದ ಭಾನುವಾರದ ದಿನ ಇಲ್ಲಿನ ಬಡಬಗ್ಗರಿಗೆಲ್ಲಾ ಅಂದರೆ ಸುಮಾರು ಮೂರು ಸಾವಿರ ಪ್ರಜೆಗಳಿಗೆ ಸುಖಭೋಜನವನ್ನು ಮಾಡಿಸಿದರು.

∴

ಮಹಾ ಮನಿತ್ಯಶ್ರೀ ಯವರು ಕಳೆದ ಗುರುವಾರ ಮೋಟಾರ್ ಗಾಡಿಯಲ್ಲಿ ತಿರುಮಕೂಡ್ಲಿಗೆ ದಯಮಾಡಿ, ತಲಕಾಡು ಮುಡುಕತೊರೆ ಪ್ರಾಂತ್ಯದಲ್ಲಿ ದೇವರ ಸೇವೆಯನ್ನು ನಡಿಸಿಕೊಂಡು, ಚಿಕ್ಕ ಗೌಡ ಪುರದಲ್ಲಿ ಸ್ವಾಮಿಗಳು ಮಾಡಿಸಿದ ಔತನಾದಿಗಳನ್ನು ಸ್ವೀಕರಿಸಿ, ಕಳೆದ ಭಾನುವಾರ ಸಾಯಂಕಾಲ ವಾಪಸು ರಾಜಧಾನಿಗೆ ಚಿತ್ತೈಸಿದರು.

∴

ಅರಮನೆಯನ್ನು ಕಟ್ಟುತ್ತಿರುವ ಇಂಜನಿಯರ್ ಮ್ಯ. ಬಿ. ಪಿ. ರಾಘವಲು ನಾಯುಡು ಯವರು ಒಂದು ತಿಂಗಳ ರಜಾ ಪಡೆದುಕೊಂಡಿದಾರೆ ಇವರನ್ನು ಬೆಂಗಳೂರಿನಲ್ಲಿ ಚೀಫ್ ಇಂಜನಿಯರವರ ಆಫೀಸಿಗೆ ವರ್ಗಮಾಡುವರೆಂದೂ, ಇಂಜನಿಯರ್ ಮೆ| ಮಾದವರಾಯರೇ ಆ ಕಟ್ಟಡದ ಛಾರ್ಜನ್ನು ವಹಿಸಿರುವರೆಂದೂ ಕೇಳುತ್ತೇವೆ.

∴

ರಾಜಧಾನಿಯ ರೈಲ್ವೆ ಸ್ಟೇಷನ್ ಮಾಸ್ಟರಾಗಿದ್ದ ಮ್ಯ| ಗಣಪತಿರಾಯರಿಗೆ ಇಲ್ಲಿಂದ ವರ್ಗವಾದದ್ದರಿಂದ ಇವರನ್ನು ಮೊನ್ನೆ ಸೋಮವಾರ ಸಾಯಂಕಾಲ ಇಲ್ಲಿನ ಸದ್ವಿದ್ಯಾಶಾಲೆಗೆ ಕರೆಸಿಕೊಂಡು ಕೆಲವು ಪುರಜನರು ಸೇರಿ ಮರ್ಯಾದೆ ಮಾಡಿ ಸಂಗೀತಾದಿಗಳನ್ನು ನಡೆಸಿ, ಅವರಿಗೆ ಒಂದು ಬಂಗಾರದ ಮೆಡಲನ್ನು ಕೊಟ್ಟು ತಮ್ಮ ಪ್ರೀತಿಯನ್ನು ಪ್ರಕಾಶಪಡಿಸಿದ್ದರು.

∴

ಕಳೆದ ೯ ನೇ ತಾ. ಬುಧವಾರ ರಾತ್ರಿ ಮೈಸೂರು ತಾಲ್ಲೂಕ್ ಕೆಲಸ್ತವಾಡಿಯ ಬಳಿ ಒಂದು ಭತ್ತದ ಕಣದಲ್ಲಿ ಮಲಗಿದ್ದ ಮಂಚನನ್ನೂ ಅವನ ಜೀತಗಾರ ಸಿಂಗನೆಂಬ ಹುಡುಗನನ್ನೂ ತಲೆಯ ಮೇಲೆ ಕಲ್ಲು ಎತ್ತಿಹಾಕಿ ಕೊಂದುಬಿಟ್ಟರು. ತಾಲ್ಲೂಕ್ ಪೊಲೀಸಿನವರು ಪತ್ತೇ ತರಮೊದು ನಡಿಸಿ, ನಗುನಹಳ್ಳಿಯ ನಾಲ್ಕರು ಈ ಕೃತ್ಯವನ್ನು ನಡಿಸಿದರೆಂದು ತಿಳಿದು, ಆ ನಾಲ್ವರನ್ನೂ ಹಿಡಿಸುತಂದಿರುತ್ತಾರೆ.

∴

ರಾಜಧಾನಿಯ ಹಳೇ ಅಗ್ರಹಾರದಲ್ಲಿರುವ ಕೆಲವು ವರ್ತಕಮಹನೀಯರು ಬಡಬಗ್ಗರ ಕಷ್ಟವನ್ನು ನಿವಾರಣೆಮಾಡುವುದಕ್ಕೆ ತಮ್ಮ ತಮ್ಮಲ್ಲೇ ಕೆಲವು ಹಣ ಕೂಡಿಸಿಕೊಂಡು, ಒಂದು ಅಂಗಡಿಯನ್ನಿಟ್ಟು ಪ್ರತಿದಿನವೂ ೧೦ ಪಲ್ಲಾ ರಾಗಿಯನ್ನು ರೂಪಾಯಿಗೆ ೧೩ ಸೇರಿನಂತೆ ಕಳೆದ ಶನಿವಾರದಿಂದ ಬಿಕರಿಮಾಡುತ್ತಿದ್ದಾರೆ. ಅವರು ಕೂಡಿಸಿರುವ ಹಣವು ಮೂರು ತಿಂಗಳ ವರೆಗೆ ಸಾಕಾಗುವುದೆಂತಲೂ, ತರುವಾಯ ಅವಶ್ಯವಿದ್ದರೆ ಇನ್ನೂ ಹಣವನ್ನು ಕೂಡಿಸಿ ನಡಿಸುವರೆಂತಲೂ ಕೇಳುತ್ತೇವೆ.

∴

ರಾಜಧಾನಿಯ ಪುರನಿವಾಸಿಗಳು ಈ ತಿಂಗಳ ೩ ನೇ ತಾ. ಗುರುವಾರ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ, ಬಡಬಗ್ಗರ ಕಷ್ಟ ನಿವಾರಣೆಗಾಗಿ ಅಂಗಡಿಗಳನ್ನಿಡಿಸಿ ಅಕ್ಕಿಯನ್ನು ೮ ಸೇರಿನಂತೆಯೂ ರಾಗಿಯನ್ನು ೧೬ ಸೇರಿನಂತೆಯೂ ಬಿಕರಿ ಮಾಡಿಸಬೇಕೆಂತಲೂ, ಇದಕ್ಕಾಗಿ ಚಂದಾ ಕೂಡಿಸಬೇಕೆಂತಲೂ ತೀರ್ಮಾನ ಮಾಡಿ, ಅದಕ್ಕಾಗಿ ಒಂದು ಕಮಿಟಿಯನ್ನೂ ಗೊತ್ತುಮಾಡಿದರು. ಕಮಿಟಿಯವರು ಇನ್ನೂ ಚಂದಾ ಹಣವನ್ನು ಕೂಡಿಸುವುದರಲ್ಲೇ ಸಾಹಸಪಡುತ್ತಿದ್ದಾರೆ ೧೫ ನೇ ತಾ. ನಿಂದ ಅಂಗಡಿ ಇಡಿಸುತ್ತಾರೆಂದು ಕಳೆದ ವಾರ ತಿಳಿಸಿದ್ದೆವು. ಆದರೆ ಇದುವರೆಗೂ ಈ ಏರ್ಪಾಡು ನಡೆದಿರುವುದಿಲ್ಲ.

∴

ಮೊನ್ನೆ ಮಂಗಳವಾರ ಬೆಳಿಗ್ಗೆ ಹಿಂದೂಸ್ಥಾನದ ಸರ್ವ ಸೇನಾಪತಿಗಳಾದ ಲಾರ್ಡ್ ಕಿಚ್ನರ್ ಯವರು ರಾಜಧಾನಿಗೆ ಸ್ಪೆಷಲ್ ರೈಲಿನಲ್ಲಿ ದಯಮಾಡಿ, ಗವರ್ನ್‌ಮೆಂಟ್ ಹೌಸ್ ಎಂಬ ಬಂಗಲೆಯಲ್ಲಿ ತಂಗಿದ್ದು, ಸುಮಾರು ೧೦ ಗಂಟೆಗೆ ಕೋಟೆಗೆ ಹೋಗಿ, ಹೊಸ ಅರಮನೆ ಕಟ್ಟಡವನ್ನು ನೋಡಿಕೊಂಡು, ಮೋಟಾರ್ ಗಾಡಿಯಲ್ಲಿ ಶ್ರೀರಂಗಪಟ್ಟಣವನ್ನು ತಲುಪಿ, ಅಲ್ಲಿನ ಚರಿತ್ರಾರ್ಹವಾದ ಸ್ಥಳಗಳನ್ನು ಪರಾಂಬರಿಸಿ, ಅಲ್ಲಿಂದಲೇ ಸ್ಪೆಷಲ್ ರೈಲ್ ಹತ್ತಿ ಬೆಂಗಳೂರಿಗೆ ಪ್ರಯಾಣ ಮಾಡಿದರು. ಎರಡು ಸಲವೂ ಗೌರವಾರ್ಥವಾದ ೧೭ ತೋಪುಗಳು ಹಾರಿಸಲ್ಪಟ್ಟವು. ಅವರ ಕೂಡ ನಮ್ಮ ಬ್ರಿಟಿಷ್ ರೆಸಿಡೆಂಟರವರೂ, ಶ್ರೀಮನ್ ಮಹಾರಾಜರವರ ಪ್ರೈವೆಟ್ ಸೆಕ್ರಿಟರಿಯವರೂ ದಯಮಾಡಿದ್ದರು.

ಹೈದರಾಬಾದ್ ರಿಲೀಫ್ ಫಂಡು.

ತುಂಕೂರು ಡಿಸ್ಟ್ರಿಕ್ಟಿಗೆ ಸೇರಿದ ಮದ್ದಗಿರಿಯ ನಮ್ಮ ಏಜಂಟರು ಬರೆಯುವುದೇನೆಂದರೆ:—ನಿಮ್ಮ ಹೆಸರಿಗೆ ರೂ. ೪೫-೯-೦ ಯನ್ನು ಮನೆಯಾರ್ಡರ್ ಮೂಲಕ ರವಾನಿಸಿದೇನೆ. ಇದು ಹೈದರಾಬಾದಿನ ದೌರ್ಭಾಗ್ಯಸ್ಥರಿಗಾಗಿ ಚಂದಾ ಎತ್ತಿದ ಹಣ. ಚಂದಾ ಪಟ್ಟಿಯನ್ನು ಇದರ ಜೊತೆಯಲ್ಲಿ ಕಳುಹಿಸಿದೇನೆ. ಈ ಹಣವನ್ನು ತಾವು ಹೈದರಾಬಾದಿನ ನಿಜಾಮರಿಗಾಗಲಿ, ಅವರ ಮಂತ್ರಿಯವರಿಗಾಗಲಿ ಕಳುಹಿಸುವಂತೆ ಬೇಡುವೆನು. ಈ ಕಾರ್ಯದಲ್ಲಿ ಟಿ. ನಾರಾಯಣಸ್ವಾಮಿ ಪಿಳ್ಳೆಯವರು, ಕಂಟ್ರಾಕ್ಟರ್ ದೊರೆಸ್ವಾಮಿಪಿಳ್ಳೆಯವರು, ಶ್ಯಾನುಭೋಗ ಸಬ್ಬಣ್ಣನವರು, ದೊಡ್ಡ ದಾಸೇಗೌಡರು, ದೊಡ್ಡ ಮುರಾರಿಗೌಡರು ಯೋಚನೆ ಕೊಟ್ಟ ಕಾರಣ ನನ್ನ ಪ್ರಯತ್ನವು ಸಫಲವಾಗಿ ನಡೆಯಿತು. ಆ ಹೆಸರುಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದರೆ ಬೇರೆಯವರಿಗೆ ಪ್ರೋತ್ಸಾಹವಾಗಿದ್ದೀತು. ಪಟ್ಟಿಯಲ್ಲಿ ನಮೂದಾಗಿರುವ ಚಂದಾದಾರರು ಪಟ್ಟಿಯನ್ನು ಪರಾಂಬರಿಸಿ, ತಮಗಿರುವ ಕಷ್ಟದಲ್ಲಿ ಕೂಡ ಧಾರಾಳವಾಗಿ ಚಂದಾ ಕೊಟ್ಟು ಸಹಾಯಮಾಡಿದ್ದಕ್ಕಾಗಿ ನಾನು ಅವರನ್ನು ವಂದಿಸಬೇಕಾಗಿದೆ.

ಬಡಚೌಡನಹಳ್ಳಿ.

ಮ್ಯ| ರಾ|| ಗಳಾದ ದೊಡ್ಡ ದಾಸೇಗೌಡ, ನಂಜುಂಡಯ್ಯ, ಕಲಿವೀರಪ್ಪ, ಆಂಜನಪ್ಪ, ದಾಸೀರಡ್ಡಿ ಉಗ್ರಪ್ಪ, ಸಂಕಮ್ಮನ ಮಗ ನರಸಪ್ಪ, ನರಸಿಯ ಹೋಪ್ಪಳ್ಳಿ, ಕುರುಬರ ಮೂಡಿಗಿರಿಯಪ್ಪ, ಮೊಡ್ಡ ಮುರಾರಪ್ಪ, ಈರಗ್ಯಾತಪ್ಪ, ಕೆ. ಶಿವರತ್ನಯ್ಯ—ರೂ. ೧-೦-೦. ಆಕಸಾಲೆ ಮುನಿಯಪ್ಪ, ಕೆ. ವಿಲ್ಕಂ ಐಯ ಉಪಾಧ್ಯ, ಯಳವಪ್ಪ, ಎಳಿಚೌಡಪ್ಪ, ಚಿಕ್ಕನರಸಪ್ಪನ ಮಗ ಪುಟ್ಟಪ್ಪ, ಮಾರಣ್ಣನವರ ಪಾಮಣ್ಣ—ರೂ. ೦-೪-೦; ನಾಗಮ್ಮ—ರೂ. ೦-೬-೦; ಬಣಜಿಗನ ಸಿಂಗಣ್ಣ, ಆಸ್ಪತ್ರೆ ನರ್ಸಮ್ಮ, ವಿಲ್ಕಂ ಐಯ ರೈತ—ರೂ. ೦-೮-೦; ಕುರುಬರ ಬೀರಪ್ಪ—ರೂ. ೦-೩-೦: ಜುಮ್ಲಾ ರೂ. ೧೫-೪-೦.

ನಿಟ್ರಹಳ್ಳಿ.

ಮ|| ರಾ ಗಳಾದ ಟಿ ನಾರಾಯಣಸ್ವಾಮಿ ಪಿಳ್ಳೆಯವರು ಕಂಟ್ರಾಕ್ಟರ್, ರೂ. ೪-೦-೦; ಮರೆದ ನಂಜುಂಡಯ್ಯ, ಮರದ ಕುಬಸಪ್ಪ, ಗೋವಿಂದಗೌಡ, ಆಕಸಾಲೆ ಮುಷ್ಟಿಯ, ಶ್ಯಾ. ಸುಬ್ಬಣ್ಣನವರು, ಎನ್ ಸುಬ್ಬರಾಯರವರು ಈಡಿಗರ ತಿಮ್ಮಪ್ಪ, ಕಡಪದ ಕಂಚುಗಾರ ಸುಬ್ಬಣ್ಣ—ರೂ. ೧-೦-೦; ಚನ್ನವೀರೈಯ, ಶ್ಯಾ. ಕೃಷ್ಣಪ್ಪ, ಪುಟ್ಟಯ್ಯ, ಅಂಗಡಿ ಲಿಂಗಣ್ಣ—ರೂ. ೦-೮-೦; ರುದ್ರಪ್ಪ, ದೊಡ್ಡಬಸಪ್ಪ, ಮರದ ಚನ್ನವೀರಭೋವರು—ರೂ. ೦-೪-೦; ವೈಶ್ಯರ ರಾಮಣ್ಣ—ರೂ. ೦-೩-೦; ಜುಮ್ಲಾ ರೂ. ೧೫-೩-೦.

ಐಬ್ಯ್ಕೀ.

ಮ ರಾ ಗಳಾದ ಅಂಗಡಿ ಬೀಮಣ್ಣನವರು—ರೂ. ೧-೦-೦; ಜವಳಿ ಅಂಗಡಿ ನಾಗಪ್ಪ—ರೂ. ೦-೮-೦. ಬಾಲಪ್ಪ, ಶ್ಯಾ. ನಾರಪ್ಪ—ರೂ. ೦-೪-೦; ಜುಮ್ಲಾ ರೂ. ೩-೦-೦

ದೊಡ್ಡ ಹೊಸಳ್ಳಿ.

ಮ| ರಾ| ಅಕಸಾಲಿ ವೆಂಕಟರಮಣಪ್ಪ—ರೂ. ೦-೮-೦.

ಚಿಕ್ಕ ಹೊಸಳ್ಳಿ.

ಮ ರಾ ಗಳಾದ ಓಬರಡ್ಡಿಯವರು, ಪಕ್ಷಿ ನರಸಿಂಹ ಪಂಡಿತರು—ರೂ.—೧-೦-೦; ವೆಂಕಪ್ಪನವರು—ರೂ. ೦-೪-೦. ಜುಮ್ಲಾ ರೂ. ೩-೧೭-೦.

ಹಂದ್ರಾಳು.

ಮ|| ರಾ|| ಗಳಾದ ಪಟೇಲ್ ಹನುಮಂತಪ್ಪ, ಗೋಪಾಲಗೌಡರು—ರೂ. ೦-೪-೦; ಜುಮ್ಲಾ ರೂ. ೦-೮-೦.

ತಗ್ಗಿಹಳ್ಳಿ.

ಮ|| ರಾ| ಗೋವಿಂದಗೌಡರು—ರೂ. ೦-೪-೦

ಹನುಮಂತಪುರ.

ಮ ರಾ ಜೋಡಿದಾರ್ ವೆಂಕಣ್ಣನವರು— ರೂ. ೦-೮-೦

ನಂಜಾಪುರ.

ಮ|| ರಾ|| ಗಳಾದ ದೊಡ್ಡ ಹನುಮಣ್ಣ- ರೂ ೧-೦-೦; ಚಿಕ್ಕ ಹನುಮಣ್ಣ, ನಂಜಪ್ಪ, ನಾಗಪ್ಪ—ರೂ ೦-೮-೦. ಸೋಮಣ್ಣ—ರೂ ೦-೬-೦; ಜುಮ್ಲಾ ರೂ. ೩-೧೪-೦.

ಹೊಸ್ಹಳ್ಳಿ.

ಮ ರಾ| ಗಳಾದ ಸಿಂಗಪ್ಪನ ಮಗ್ಗದ ಸಿಂಗಣ್ಣ ರೂ ೧-೦-೦; ಈಡಿಗರ ಓಬಳಪ್ಪ—ರೂ. ೦-೮-೦; ಜುಮ್ಲಾ ರೂ ೧-೮-೦

ತಿಮ್ಮನಹಳ್ಳಿ.

ಮ|| ರಾ| ಗಳಾದ ಪಟೇಲ್ ಚಿಕ್ಕಣ್ಣಪ್ಪ—ರೂ ೧-೦-೦; ವೈಶ್ಯರ ವೆಂಕಟರಾಮಯ್ಯ—ರೂ. ೦-೮-೦; ಶಿವಲಿಂಗಯ್ಯ—ರೂ. ೦-೬-೦; ಮುದ್ದನುಮಯ್ಯ—ರೂ. ೦-೪-೦; ಜುಮ್ಲಾ ರೂ. ೨-೨-೦.

ಐ. ಗೆರೆ.

ಮ ರಾ| ಗಳಾದ ಪಟೇಲ್ ಮುಷ್ಟಿಗೌಡರು, ಜೂಲಸಪಾಳ್ಯದ ಕುರುಬರ ಮಲ್ಲಪ್ಪ—ರೂ. ೧-೦-೦; ಪಟೇಲ್ ಬಸವೇಗೌಡರು, ಮದ್ದಗಿರಿ ಪೋಸ್ಟ್ ಮಾಸ್ಟರ್ (ವಿಲೇಜ್) ಗೋವಿಂದಪ್ಪ—ರೂ ೦-೮-೦; ಪುಟ್ಟರಾಮಣ್ಣ—ರೂ. ೦-೪-೦; ಜುಮ್ಲಾ ರೂ. ೪-೪-೦.

ಒಟ್ಟು ವಸೂಲಾದ ಮೊಬಲಗು. ರೂ. ೪೬-೩-೦; ಪೈಕಿ ಮನಿಆರ್ಡರ್ ಮತ್ತು ಸ್ಟಾಂಪಿಗೆ ರೂ. ೦-೯-೦; ಜಾತಾ ರೂ. ೪೫-೯-೦. ಇದನ್ನು ತಮ್ಮಲ್ಲಿಗೆ ರವಾನಿಸಿದೆ.

[ಮೇಲ್ಕಂಡ ಚಂದಾ ಹಣವನ್ನು ನಾವು ಹೈದರಾಬಾದ್ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರಿಗೆ ಮನೆಯಾರ್ಡರ್ ಮೂಲಕ ಕಳುಹಿಸಿ, ಅದನ್ನು ರಿಲೀಫ್ ಕಮಿಟಿಯವರಿಗೆ ಪಾವತಿ ಮಾಡಿಸಬೇಕೆಂದು ಕೇಳಿಕೊಂಡಿದೇವೆ.—ಎಡಿಟರ್.]

ಉಪಾಧ್ಯಾಯರಿಗೆ ಬಹುಮಾನದ ಮೇಲಾಟವು.

ಬಾಲಕ ಬಾಲಕಿಯರಿಗೆ ಭಕ್ತಿ ನೀತಿಗುಣಗಳನ್ನು ಈ ಸಂಸ್ಥಾನದ ಪಾಠಶಾಲೆಗಳಲ್ಲಿ ಯಾವ ರೀತಿ ಹೇಳಿಕೊಡಬೇಕೆಂಬ ಭಾಗದಲ್ಲಿ ಉಪಾಧ್ಯಾಯರು ಬಹುಮಾನದ ಉಪನ್ಯಾಸವನ್ನು ಬರೆದು ಕಳುಹಿಸಬೇಕೆಂದು ಕಳೆದ ತಿಂಗಳ ೧೫ನೇ ತಾ. ಪತ್ರಿಕೆಯಲ್ಲಿ ಪ್ರಕಟಿಸಿದ್ದೆವಷ್ಟೆ. ಅದರಲ್ಲಿ ಮೊದಲನೆಯ ದಾದ "ಸತ್ಯವನ್ನು ಹೇಳುವುದು" ಎಂಬ ವಿಷಯವನ್ನು ಕುರಿತ ಕೆಲವು ಬಾತ್ಮಿಗಳು ಬಂದಿದ್ದವು. ಇವನ್ನು ಪರೀಕ್ಷೆ ಮಾಡಿ ಹಿಂದಿನ ವಾರದ ಪತ್ರಿಕೆಯಲ್ಲಿ ತಿಳಿಯಪಡಿಸಿದೆವು. ನಾವು ಬಹುಮಾನ ಕೊಡುತ್ತೇವೆಂದು ಪ್ರಕಟಿಸಿದ್ದ ಇನ್ನೆರಡು ವಿಷಯಗಳ್ಯಾವನೆಂದರೆ—(೧) "ಪ್ರಾಮಾಣಿಕತೆಯುಳ್ಳ ಧೈರ್ಯವು; ಅಂದರೆ, ಎದುರು ವಾದಿಸುವವರಿದ್ದರೂ ನಾವು ಸರಿಯೆಂದು ತಿಳಿದದ್ದನ್ನೇ ಮಾಡುವುದು." ಈ ಉಪನ್ಯಾಸವನ್ನು ಈ ತಿಂಗಳ ೭ನೇ ತಾ. ಒಳಗೆ ನಮಗೆ ಕಳುಹಿಸಬೇಕು. (೨) "ಅಸ್ವಾರ್ಥನೆಯು, ಅಂದರೆ, ಸ್ವಪ್ರಯೋಜನವನ್ನಲ್ಲ; ಪರಹಿತವನ್ನೇ ಬಯಸಿ ಮಾಡುವುದು." ಈ ಉಪನ್ಯಾಸವು ಈ ತಿಂಗಳ ೧೪ನೇ ತಾ. ಒಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕಾಗಿತ್ತು. ಇವೆರಡನ್ನೂ ನಾವು ಪರಿಶೋಧನೆ ಮಾಡಿ, ಉತ್ತಮವಾಗಿರುವವುಗಳಿಗೆ ಬಹುಮಾನಗಳನ್ನು ಕೊಟ್ಟು, ಮೊದಲನೆಯದನ್ನು ಈ ಪತ್ರಿಕೆಯ ಡಿಸೆಂಬರ್ ೨೪ನೇ ತಾರೀಖಿನ ಸಂಚಿಕೆಯಲ್ಲೂ, ಎರಡನೆಯದನ್ನು ೧೯೦೯ನೇ ಜನವರಿ ೧ನೇ ತಾರೀಖಿನ ಸಂಚಿಕೆಯಲ್ಲೂ ಪ್ರಕಟಿಸುವೆವು. ಈ ಮೇಲಾಟದ ಕ್ರಮಗಳೇನೆಂದರೆ,—

(೧) ಸರ್ಕಾರಿ ಅಥವಾ ಗ್ರ್ಯಾಂಟು ಪಡೆಯುವ ಸ್ಕೂಲಿನ ಉಪಾಧ್ಯಾಯರಾಗಿರಬೇಕು. ಸಹಾಯೋಪಾಧ್ಯರು ಬರೆದಲ್ಲಿ ಅದಕ್ಕೆ ಅವರ ಹೆಡ್ ಮಾಸ್ಟರ ರುಜುವನ್ನು ಹಾಕಿಸಿ ಕಳುಹಿಸಬೇಕು. (೨) ಪ್ರತಿ ಒಂದು ಪಾಠವೂ ಈ ಪತ್ರಿಕೆಯಲ್ಲಿ ಎರಡು ಕಾಲಂಗಿಂತ ಮೀರಕೂಡದು. (೩) ಆ ಪಾಠದಲ್ಲಿ ವಿವರಿಸಿದುವ ಬೋಧನಾ ವಿಷಯಗಳು ಹಿಂದು, ಮಹಮದಿಯ, ಕ್ರೈಸ್ತ ಮೊದಲಾದ ಎಲ್ಲಾ ಪಂಗಡಗಳ ಬಾಲಕರಿಗೂ ಹಿತಕರವಾಗಿರತಕ್ಕದ್ದು. (೪) ನೀತಿಯನ್ನು ವಿವರಿಸುವಲ್ಲಿ ಆಯಾ ವಿಷಯಕ್ಕೆ ತಕ್ಕಂಥಾ ಸ್ವಾರಸ್ಯವಾದ ಉಪಕಥೆಗಳು ಇರಬೇಕು, (೫) ಬರವಣಿಗೆಯೆಲ್ಲಾ ಕಾಗದದ ಒಂದೇ ಪಕ್ಕದಲ್ಲಿ ಇರಬೇಕು.

ನೂತನ ಪಾಠಶಾಲಾ ಗೃಹಪ್ರವೇಶವು.

ದೇವನಹಳ್ಳಿ ತಾಲ್ಲೂಕು ಗಂಗವಾರ ಗ್ರಾಮ.

ಈ ಗ್ರಾಮದಲ್ಲಿ ಬಹು ದಿವಸಗಳಿಂದಲೂ ಸ್ಕೂಲಿಗೆ ಬೇರೆ ಕಟ್ಟಡವಿಲ್ಲದೆ ವಿದ್ಯಾಭಿವೃದ್ಧಿಗೆ ಕುಂದಕವಾಗಿತ್ತು. ಈ ಕುಂದಕವು ಘನವನ್ನು ಹೊಂದಿದ ಶ್ರೀಮನ್ಮಹಾರಾಜಾ ಸರ್ಕಾರದವರ ಅಭಿಮಾನದಿಂದಲೂ, ಸ್ಕೂಲ್ ಕಮಿಟಿ ಮೆಂಬರುಗಳೇ ಮುಂತಾದ ಗ್ರಾಮಸ್ಥರ ದ್ರವ್ಯ ಸಹಾಯದಿಂದಲೂ ಇಂದಿಗೆ ನಿವಾರಣೆಯಾಯಿತು. ಗಂಗವಾರದ ಸ್ಕೂಲ್ ಮಾಸ್ಟರು ಮ॥ ಬಿ. ನರಸಪ್ಪನವರು ಬಹಳ ಮುತುವರ್ಜಿ ಮಾಡಿ ಕಳೆದ ನವಂಬರು ೩೦ನೇ ತಾರೀಖಿನಲ್ಲಿ ಸ್ಕೂಲ್ ಕಟ್ಟಡವನ್ನು ತೋರಣಾದಿಗಳಿಂದ ಅಲಂಕರಿಸಿ, ಶ್ರೀಮದಿಂಡಿಯಾ ಚಕ್ರವರ್ತಿಯವರಾದ ಎಡ್ವರ್ಡ್ ಸಾರ್ವಭೌಮರ ಮತ್ತು ಅಲೆಗ್ಸಾಂಡ್ರಾ ಮಹಾರಾಣಿಯವರ, ನಮ್ಮ ಶ್ರೀಮನ್ಮಹಾರಾಜರವರುಗಳ ತಸ್ವೀರುಗಳಿಂದಲೂ ಅಲಂಕರಿಸಿ, ಸ್ಕೂಲ್ ಕಮಿಟಿ ಮೆಂಬರುಗಳೇ ಮುಂತಾದ ಗ್ರಾಮಸ್ಥರನ್ನೂ ಬಾಡಿಗೆರೆ ಗ್ರಾಮಸ್ಥರನ್ನೂ ಇನ್ನೂ ಅಜುಬಾಜು ಕೆಲವು ಗ್ರಾಮದ ಮುಖ್ಯಸ್ಥರನ್ನೂ ಸಭೆ ಸೇರಿಸಿ, ಜಹಗೀರ್‌ದಾರ್ ಬಾಡಿಗೆರೆ ಗುಂಡೂರಾಯರನ್ನು ಸಭಾಧ್ಯಕ್ಷರನ್ನಾಗಿ ಮಾಡಿ, ಉತ್ಸವದ ಕಾರ್ಯಗಳನ್ನು ನೆರವೇರಿಸಿದರು. ಸಭಾಧ್ಯಕ್ಷರಾದ ಗುಂಡೂರಾಯರು ಶುಭಲಗ್ನದಲ್ಲಿ ವಾದ್ಯಘೋಷಗಳೊಡನೆ ತೆರೆ ಹಾಕಲ್ಪಟ್ಟ ಸ್ಕೂಲ್ ಬಾಗಲನ್ನು ತೆರೆದರು. ಅನಂತರ ಗ್ರಾಮಸ್ಥರೂ ಇತರ ದೊಡ್ಡ ಮನುಷ್ಯರೂ ಒಳಗೆ ಕುಳಿತುಕೊಂಡರು. ಮ॥ ನರಸಪ್ಪನವರು ಸ್ಕೂಲ್ ಕಟ್ಟಡವನ್ನು ಕಟ್ಟತಕ್ಕ ಬಗ್ಗೆ ಗ್ರಾಮಸ್ಥರನ್ನು ಪ್ರೋತ್ಸಾಹಪಡಿಸಿ ಅವರಿಂದ ಹೊಂದಿದ ದ್ರವ್ಯಸಹಾಯದ ಮೂಲಕ ಕಟ್ಟಡವು ಪೂರ್ತಿಯಾದ ರಿಪೋರ್ಟನ್ನು ಓದಿದರು. ಸಭಾಧ್ಯಕ್ಷರಾದ ಗುಂಡೂರಾಯರು ಸರ್ಕಾರದವರು ಗ್ರಾಮಸ್ಥರಿಗೆ ಮಾಡಿದ ಉಪಕಾರಕ್ಕಾಗಿ ಅವರಿಗೆ ಶ್ರೀಮನ್ಮಹಾರಾಜರವರಲ್ಲಿ ಇರುವ ರಾಜಭಕ್ತಿ ವಿಷಯವಾಗಿಯೂ, ಮ॥ ನರಸಪ್ಪನವರು ಇಲ್ಲಿಗೆ ಬಂದ ಎಂಟು ವರ್ಷದಿಂದಲೂ ಸ್ಕೂಲ್ ಕೆಲಸದಲ್ಲಿ ಬಹಳ ಮುತುವರ್ಜಿ ವಹಿಸಿ ಸ್ಕೂಲನ್ನು ತುಂಬಾ ಅಭಿವೃದ್ಧಿಗೆ ತಂದರೆಂಬ ವಿಷಯವಾಗಿಯೂ ಉಪನ್ಯಾಸಮಾಡಿ, ಈ ಪೂರ್ತಿಯಾದ ಕಟ್ಟಡವು ಪಾಠಶಾಲಾ ಉಪಯೋಗಕ್ಕೆ ನಿರ್ವಿಘ್ನವಾಗಿರಲೆಂದೂ ಅದರಲ್ಲಿ ಓದುವ ವಿದ್ಯಾರ್ಥಿಗಳಿಗೆ ಭಗವಂತನು ಆಯುರಾರೋಗ್ಯವನ್ನು ಹೆಚ್ಚಿಸಿ ವಿದ್ಯಾಭಿವೃದ್ಧಿಯು ಪ್ರಬಲಿಸಲೆಂದೂ ಹರಸಿದರು. ಅನಂತರ ಮ॥ ನರಸಪ್ಪನವರು ವಿದ್ಯಾಭಿವೃದ್ಧಿಯಿಂದ ಆಗುವ ಪ್ರಯೋಜನಗಳನ್ನು ಕುರಿತು ಉಪನ್ಯಾಸ ಮಾಡಿದರು. ಸರಸ್ವತೀ ಪೂಜೆಯೂ, ವಿನೋದಕರವಾದ ಸಕಲಿಯೂ ಭಜನೆಯೂ ನಡೆಯಿತು. ಸ್ಕೂಲ್ ಹುಡುಗರು ದೇವರ ಸ್ತೋತ್ರದ ಹಾಡು, ಶ್ರೀಮನ್ಮಹಾರಾಜರವರಿಗೆ ವಿಜಯ ಆಯುರಾರೋಗ್ಯವಾಗಲಿ ಎಂಬುವ ಹಾಡು, ಮೆ॥ ಘಾಭಾ ಸಾಹೇಬರವರ ಶ್ರೇಯೋಭಿವೃದ್ಧಿ ಹಾಡುಗಳೂ ಸಹ ಹಾಡಿದರು. ಅನಂತರ ವಾದ್ಯಘೋಷಗಳೊಡನೆ ಶಾರದಾ ಪೂಜಾ ಮಂಗಳಾರತಿ ಆಶೀರ್ವಾದಗಳಿಂದ ಮಂಗಳವಾಯಿತು. ಮ॥ ನರಸಪ್ಪನವರು ಸಭೆಯವರಿಗೂ ಸಭಾಧ್ಯಕ್ಷರಿಗೂ ವಂದನೆಗಳನ್ನು ಸಮರ್ಪಿಸಿದರು. ಅನಂತರ ಗಂಧ ಪುಷ್ಪ ತಾಂಬೂಲಗಳೂ ಸಕ್ಕರೆ ಪೊಟ್ಟಣಗಳೂ ಸಹ ಸರ್ವರಿಗೂ ಹಂಚಿದ ಕೂಡಲೆ ಸಭೆಯು ಬರಖಾಸ್ತಾಯಿತು.

ಹೈದರಾಬಾದಿನಲ್ಲಿ ಕಷ್ಟನಿವಾರಣಾ ಕಾರ್ಯಗಳು.

ಸ್ತೋತ್ರಾರ್ಹವಾದ ಏರ್ಪಾಡುಗಳು.

ಹೈದರಾಬಾದಿನಲ್ಲಿ ಪ್ರವಾಹಗಳ ಮೂಲಕುಂಟಾದ ಅಪಾಯದಲ್ಲಿ ಬಡಬಗ್ಗರಿಗೆ ಧರ್ಮಾರ್ಥವಾಗಿ ಹಂಚಿಕೊಡುವುದಕ್ಕೆ ಅಲ್ಲಿನ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾದ ಮ॥ ಟರ್ಕಿರವರು ಕಾಶ್ಮೀರದ ಮಹಾರಾಜರಿಂದ ೫,೦೦೦ ರೂಪಾಯಿನ ಕಂಬಳಿಗಳನ್ನು ತರಿಸಿ ಕೊಟ್ಟರು. ಅಲ್ಲಿನ ಧರ್ಮ ಫಂಡಿಗೆ ಇದುವರೆಗೆ ೧ ಲಕ್ಷವೂ ೮೦ ಸಾವಿರ ರೂಪಾಯಿ ತನಕ ಚಂದಾ ವಸೂಲಾಗಿರುತ್ತದೆ. ಈಚೆಗೆ ಅದಮಾಯಿಷಿ ಮಾಡಿಸಿದ್ದರಲ್ಲಿ ಈ ಅಪಾಯದಿಂದ ಹೈದರಾಬಾದಿನಲ್ಲಿ ೨೪,೦೦೦ ಮನೆಗಳು ಬಿದ್ದುಹೋದವೆಂತಲೂ, ೧೦,೦೦೦ ಪ್ರಜೆಗಳಿಗಿಂತಲೂ ಹೆಚ್ಚಾಗಿಯೇ ಮನೆಮಠಗಳನ್ನೂ ಸರ್ವಸ್ವವನ್ನೂ ಕಳೆದುಕೊಂಡು ಬಹಳ ಕಷ್ಟಪಡುತ್ತಿದ್ದಾರೆಂತಲೂ ತಿಳಿದು ಬಂದಿದೆ. ಮಂತ್ರಿಶ್ರೇಷ್ಠರಾದ ಮಹಾರಾಜಾ ಸರ್ ಕೃಷ್ಣಪ್ರಸಾದ್ ಬಹದೂರ್ ರವರು ಆ ಜನರನ್ನು ಐದು ತರಗತಿಗಳಾಗಿ ವಿಂಗಡಿಸಿ, ಪ್ರತಿ ಒಂದು ತರಗತಿಯ ಜನರಿಗೂ ಆ ಧರ್ಮ ಫಂಡಿನಿಂದಲೂ ಸರ್ಕಾರಿ ಹಣದಿಂದಲೂ ಸಹಾಯ ಮಾಡಬೇಕೆಂದು ವಿಧಿಸಿರುತ್ತಾರೆ. ಈ ಸಹಾಯದ ಕ್ರಮವೇನೆಂದರೆ—ಮುದಿ ವಿಧವೆಯರೂ, ವಯಸ್ಸು ಕಳೆದವರೂ, ಅನಾಥರಾದ ಮಕ್ಕಳೂ ಮೊದಲನೇ ತರಗತಿಗೆ ಸೇರಿಸಲ್ಪಟ್ಟು, ಇವರನ್ನು ಸಾಕಿ ಸಂರಕ್ಷಣೆ ಮಾಡುವುದಕ್ಕೆ ದೊಡ್ಡ ದೊಡ್ಡ ಧರ್ಮಸತ್ರಗಳನ್ನು ಏರ್ಪಾಡು ಮಾಡಿ, ಅವರಿಂದ ಸಾಧ್ಯವಾದಷ್ಟು ಕಷ್ಟ ಕೆಲಸವನ್ನು ಮಾಡಿಸಿಕೊಳ್ಳುವರು. ಅವರಿಗೆ ಸಾಯುವತನಕ ಪೆನ್‌ಷನ್ ಕೊಡುತ್ತಾರೆ. ಮಕ್ಕಳನ್ನು ಸಾಕಿ ಸಲಹಿ ವಿದ್ಯೆ ಬುದ್ಧಿಗಳನ್ನು ಕಲಿಸುತ್ತಾರೆ. ಈ ಕೆಲಸಕ್ಕೆ ತಿಂಗಳಿಗೆ ೧,೨೦೦ ರೂಪಾಯಿ ಬೇಕಾಗುವುದು. ಇದಕ್ಕಾಗಿ ಹೊಸ ಸ್ಥಳದಲ್ಲಿ ೩-೪ ಲಕ್ಷ ರೂಪಾಯಿ ಮುಟ್ಟಿಸಿ ಅಂಗಡಿಗಳನ್ನೂ ಕಟ್ಟಡಗಳನ್ನೂ ಕಟ್ಟಿಸಿ ಬಾಡಿಗೆಗೆ ಕೊಡುವರು. ಅವುಗಳಲ್ಲಿ ಹುಟ್ಟುವಳಿ ಆಗುವಂಥಾ ಬಾಡಿಗೆ ಹಣವನ್ನು ಮೇಲ್ಕಂಡ ಅನ್ನಸತ್ರಗಳಿಗೂ ಅನಾಥರ ಪೋಷಣೆಗೂ ವಿನಿಯೋಗಿಸುತ್ತಾರೆ. ಎರಡನೇ ತರಗತಿಗೆ ಸರ್ವಸ್ವವನ್ನೂ ಕಳೆದುಕೊಂಡಂಥಾ ವರ್ತಕರನ್ನೂ ಕೈಗಾರಿಕೆ ಕೆಲಸಗಾರರನ್ನೂ ಸೇರಿಸಿರುವರು. ಇವರಿಗೆಲ್ಲಾ ಕಸಬುಗಳನ್ನು ನಡಿಸುವುದಕ್ಕೆ ಅನುಕೂಲವಾಗುವಂತೆ ತಲಾ ೫೦ ರಿಂದ ೧೦೦ ರೂಪಾಯಿ ವರೆಗೆ ಬಂಡವಾಳ ಕೊಟ್ಟು ಮೇಲ್ವಿಚಾರಣೆ ನೋಡಿಕೊಳ್ಳುವರು. ಮೂರನೆಯ ತರಗತಿಗೆ ಪುಸ್ತಕ ಮೊದಲಾದ ವಿದ್ಯಾ ಸಾಧನಗಳನ್ನೂ ಮಾತಾಪಿತೃಗಳ ಪೋಷಣೆಯನ್ನೂ ಕಳೆದುಕೊಂಡಿರುವಂಥಾ ವಿದ್ಯಾರ್ಥಿಗಳನ್ನು ಸೇರಿಸಿ, ಇವರಿಗೆಲ್ಲಾ ಪುಸ್ತಕ ಮುಂತಾದ್ದನ್ನು ಕೊಡಿಸುವುದಲ್ಲದೆ ಪ್ರತಿ ಒಬ್ಬನಿಗೂ ಆರು ವರುಷಗಳ ತನಕ ವೇತನಗಳನ್ನು ನಡಿಸುತ್ತಾ ಬರುತ್ತಾರೆ. ತಂದೆತಾಯಿಗಳು ನಿರ್ಗತಿಕರಾಗಿರೋಣದರಿಂದ ಹೆಣ್ಣು ಮಕ್ಕಳಿಗೆ ಮದುವೆ ಮಾಡಲು ಅವಕಾಶವಿಲ್ಲದೆ ಕಷ್ಟಪಡುವಂಥವರನ್ನು ನಾಲ್ಕನೇ ತರಗತಿಗೆ ಸೇರಿಸಿ, ವಿವಾಹ ಮಾಡಲು ದ್ರವ್ಯಸಹಾಯ ಕೊಡುವುದಕ್ಕೋಸ್ಕರ ೭-೮ ಸಾವಿರ ರೂಪಾಯಿ ವಿನಿಯೋಗಿಸುವರು. ನಿರ್ಗತಿಕರಾಗಿಯೂ, ಮನೆಮಠಗಳನ್ನು ಕಳೆದುಕೊಂಡೂ ಜೀವನಕ್ಕೆ ದಾರಿ ಇಲ್ಲದೆ ಅಲೆಯುತ್ತಿರುವ ಬಡಬಗ್ಗರನ್ನೆಲ್ಲಾ ಕಡೆಯ ತರಗತಿಗೆ ಸೇರಿಸಿದಾರೆ. ಕಷ್ಟಕ್ಕೆ ಗುರಿಯಾದ ಪ್ರಜಾಸಂಖ್ಯೆಯಲ್ಲಿ ಈ ಕಡೆಯ ತರಗತಿಯವರೇ ಹೆಚ್ಚಾಗಿರುವರು. ಇವರಿಗೆ ಸಹಾಯ ಮಾಡಬೇಕಾದರೆ ಅಪಾರ ಹಣ ಬೇಕಾಗುವುದು. ಇಂಥವರ ಸ್ಥಿತಿ ಗತಿ ಗುಣ ನಡತೆ ಯೋಗ್ಯತಾಪಕ್ಷಗಳನ್ನು ಬಹು ಜಾಗರೂಕತೆಯಿಂದ ಕಣಿಪೆ ಮಾಡಬೇಕೆಂದು ಒಂದು ಕಮಿಟಿಯನ್ನು ನೇಮಕ ಮಾಡಿರುತ್ತಾರೆ.

ಸ್ಕೂಲುಗಳಲ್ಲಿ ಮತಬೋಧನೆಯ ಆವಶ್ಯಕತೆ.

ನಾವು ಈಗಿನ ಕಾಲದ ನಡಾವಳಿಯನ್ನು ಚೆನ್ನಾಗಿ ಪರಿಶೀಲನೆ ಮಾಡಿದರೆ ಬಡ ಜನರು ಕೂಡ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂಬ ಅಭಿಲಾಷೆಯನ್ನು ಹೆಚ್ಚಾಗಿ ತೋರಿಸುವರು. ಅವರು ತಮ್ಮ ಹಿರಿಯರಿಗೆ—ಇಷ್ಟುಕಾಲ ನಾವು ಮೌಢ್ಯದಲ್ಲಿದ್ದದ್ದು ಸಾಕು. ಈ ನವನಾಗರಿಕತೆಯ ಕಾಲದಲ್ಲಾದರೂ ನಮ್ಮ ಮಕ್ಕಳಿಗೆ ವಿದ್ಯೆಯನ್ನು ಕಲಿಸೋಣ ಎಂದು ಮಾತನಾಡಿಕೊಳ್ಳುವುದು ಹೊಸ ಸಂಗತಿಯಲ್ಲ. ಇಂಥಾ ಅಭಿಲಾಷೆಯು ಶ್ಲಾಘನೀಯವಾದುದೇ ಸರಿ. ಅನೇಕ ಮಂದಿ ರೈತರು ವಿದ್ಯೆಯಿಲ್ಲದೆ ತಮ್ಮ ಜೀವಮಾನವನ್ನು ಮೃಗಗಳೋಪಾದಿಯಲ್ಲಿ ಕಳೆದಿರುವರು. ಅವರು ಹೊತ್ತಾರೆಯಿಂದ ಸಾಯಂಕಾಲದವರೆವಿಗು ಬೇಸಾಯ ಮಾಡುವುದೂ ಸುಭಿಕ್ಷದಲ್ಲಿ ತಿಂದು ತೇಗುವುದೂ ದುರ್ಭಿಕ್ಷ ಕಾಲಗಳಲ್ಲಿ ಹೊಟ್ಟೆಗಿಲ್ಲದೆ ಸಾಯುವುದೂ ಅವರ ಪಾಲಾಗಿರುತ್ತದೆ. ಲೋಕದ ನಾನಾ ಉಪಯುಕ್ತವಾದ ಕಾರ್ಯಗಳನ್ನು ಅವರು ಓದಿ ಅರ್ಥಮಾಡಿಕೊಂಡು ತಿಳಿಯುವರೇ? ಇಲ್ಲವಲ್ಲಾ! ಅವರು ಮದುವೆಯಾಗುವರು, ಮಕ್ಕಳನ್ನು ಪಡೆಯುವರು, ಆದರೆ ವಿದ್ಯಾಭ್ಯಾಸದ ರುಚಿಯನ್ನರಿಯರು. ತಮ್ಮ ಸ್ವಂತ ಕಸಬಾದ ವ್ಯವಸಾಯದ ಗುಟ್ಟುಗಳನ್ನು ಅವರು ಚೆನ್ನಾಗಿ ಅರಿತವರಲ್ಲ. ವನಸ್ಪತಿ ಶಾಸ್ತ್ರದ ಹೆಸರೇ ಅವರಿಗೆ ಗೊತ್ತಿರುವುದಿಲ್ಲ. ಅವರು ತಮ್ಮ ಸ್ವಂತ ದೇಹಗಳ ರಚನೆಯನ್ನು ತಿಳಿದುಕೊಂಡಿರುವರೆ? ಎಂದಿಗೂ ಇಲ್ಲ. ಖಗೋಳಶಾಸ್ತ್ರವು ಅವರಿಗೆ ಒಂದೇ ಆಕಾಶಪುರಾಣವಾಗಿರುವುದು. ಅವರು ತಮ್ಮ ವಿರಾಮಕಾಲವನ್ನು ಎಲೆ ಅಡಿಕೆಯನ್ನು ಜಗಿಯುತ್ತಾ ತಮ್ಮ ನೆರೆಹೊರೆಯವರ ಕುಂದು ಕೊರತೆಗಳನ್ನು ಕುರಿತು ಏನಾದರೂ ಮಾತಾಡುವುದರಲ್ಲೇ ಕಳೆಯುವರು. ವರ್ತಮಾನ ಪತ್ರಿಕೆಗಳು ತಿಳಿಸತಕ್ಕಂಥಾ ಲೋಕದ ನಾನಾ ಸಂಗತಿಗಳು ಅವರ ತಿಳುವಳಿಕೆಗೆ ಮರೆಯಾಗಿಯೇ ಹೋಗಿರುವುದರಿಂದ ಅವರು ವಿದ್ಯಾಭ್ಯಾಸ ಮಾಡುವುದು ಅತ್ಯಾವಶ್ಯಕವೆಂದು ವಾಚಕರು ತಿಳಿದುಕೊಳ್ಳಬಹುದು. ವಯಸ್ಸಾದ ವ್ಯವಸಾಯಗಾರರೂ ಕೂಡ ಕಷ್ಟಪಟ್ಟು ಓದು ಬರಹ ಕಲಿತುಕೊಂಡರೆ ಸಾಕು. ಇವರು ಭೂಗೋಳಶಾಸ್ತ್ರ, ರಸಾಯನಶಾಸ್ತ್ರ, ಆರೋಗ್ಯಶಾಸ್ತ್ರ, ವ್ಯವಸಾಯಶಾಸ್ತ್ರ, ಈ ಮೊದಲಾದ ಶಾಸ್ತ್ರಗಳಲ್ಲಿ ಕೊಂಚಭಾಗವನ್ನಾದರೂ ತಿಳಿದುಕೊಂಡಿದ್ದರೆ ಇವರ ಸ್ಥಿತಿಯು ಮೇಲಾಗಿರುವುದು. ಅನೇಕರು ತಮ್ಮ ಸ್ವಂತ ದೇಶದ ಚರಿತ್ರೆಯನ್ನಾದರೂ ತಮ್ಮ ಸ್ವಂತ ಹಳ್ಳಿಯ ಚರಿತ್ರೆಯನ್ನಾದರೂ ತಿಳಿದುಕೊಳ್ಳದೆ ಮೌಢ್ಯದಲ್ಲಿರುತ್ತಾರೆ. ಇಂಥವರಿಗೆ ವಿದ್ಯೆಯು ಇದ್ದದ್ದೇ ಆಗಿದ್ದರೆ ಇವರು ಸುಖಿಗಳಾಗಿರುತ್ತಿದ್ದರು. ಅನೇಕ ಮಹಾತ್ಮರ ಜೀವಮಾನ ಚರಿತ್ರೆಗಳನ್ನು ಓದುವುದರಿಂದ ಬಹಳ ಪ್ರಯೋಜನ ಉಂಟೆಂದು ಎಲ್ಲರಿಗೂ ಗೊತ್ತಿದೆಯಷ್ಟೆ? ಆದರೆ ಓದುಬರಹ ಬಾರದಿದ್ದರೆ ಇಷ್ಟೆಲ್ಲಾ ಚರಿತ್ರೆಗಳು ಎದುರಿಗಿದ್ದರೂ ಪ್ರಯೋಜನವೇನು? ಆದ್ದರಿಂದ ಎಲ್ಲರೂ ವಿದ್ಯೆಯನ್ನು ಸಂಪಾದಿಸಿಕೊಳ್ಳಬೇಕಾಗಿರುತ್ತದೆ.

ಅನೇಕರು ವಿದ್ಯೆಯನ್ನು ಸಂಪಾದಿಸುವ ಪ್ರಯತ್ನದಲ್ಲಿ ತಮ್ಮ ಆತ್ಮೀಯ ಅಭಿವೃದ್ಧಿಯನ್ನು ಮರೆತು ಬಿಡುತ್ತಾರೆ. ಲೌಕಿಕ ವಿದ್ಯೆಯು ಆವಶ್ಯಕವೇ ಸರಿ. ಆದರೆ ಅದರಿಂದ ಮಾತ್ರ ಮನುಷ್ಯನು ಸಿದ್ಧಿಗೆ ಬರಲಾರನು. ಲೌಕಿಕ ವಿದ್ಯಾಭ್ಯಾಸದ ಸಂಗಡ ಮತಬೋಧನೆಯೂ ಬೇಕಾಗಿರುತ್ತದೆ. ಮೌಢ್ಯವು ಮನುಷ್ಯರನ್ನು ಕೆಡಿಸುವುದಕ್ಕಿಂತ ಅಸತ್ಯವೂ ಅಧರ್ಮವೂ ಶೀಘ್ರದಲ್ಲಿಯೇ ಅವರನ್ನು ಕೆಡಿಸುವವು. ಅಬದ್ಧನುಡಿ, ಅಪಾಸ್ಪದವಾದ ಸಂಭಾಷಣೆ, ವ್ಯಭಿಚಾರ, ಕುಡಿತನ, ಹೊಟ್ಟೆಕಿಚ್ಚು, ಮೋಸ, ದುರಾಸೆ, ಕಳ್ಳತನ ಈ ಮೊದಲಾದ ಪಾಪಗಳು ಮನುಷ್ಯರನ್ನು ಕೆಡಿಸಿ ಅವರನ್ನು ಪಾತಾಳಕ್ಕೆ ನೂಕುವವು. ಮಾನವ ಪಂಗಡಗಳು ಉತ್ತಮ ಸ್ಥಿತಿಗೆ ಬರಬೇಕೆಂದು ಅಪೇಕ್ಷಿಸಿದರೆ ಅದು ಮೊದಲು ಪಾಪದ ಮಾರ್ಗವನ್ನು ತ್ಯಜಿಸಲಿ. ಬರೀ ಲೌಕಿಕ ವಿದ್ಯೆಯು ಮನುಷ್ಯರ ಅಂತರ್ಯ ಸ್ವಭಾವವನ್ನು ಬದಲಾಯಿಸಲಾರದು. ಕೆಲವು ದಿನಗಳ ಹಿಂದೆ ನನ್ನ ಸಂಗಡ ಒಬ್ಬ ಬ್ರಾಹ್ಮಣ ದೊಡ್ಡ ಮನುಷ್ಯರು ಮಾತನಾಡುತ್ತಿದ್ದರು. ಅವರು ನನ್ನ ಕಾಲದ ಹುಡುಗರಿಗಿಂತ ಈಗಿನ ಕಾಲದ ಹುಡುಗರು ಹೆಚ್ಚಾಗಿಯೇ ಕೆಟ್ಟುಹೋಗಿರುತ್ತಾರೆ. ಈಗಿನ ಕಾಲದ ಹುಡುಗರಲ್ಲಿ ಅವಿಧೇಯತೆ, ಗರ್ವ, ಅಸತ್ಯ ಈ ಮೊದಲಾದ ದುರ್ಗುಣಗಳು ಹೆಚ್ಚುತ್ತಲಿರುವುವು. ಪಾಠಶಾಲೆಗಳಲ್ಲಿ ಮತಸಂಬಂಧವಾದ ಬೋಧನೆಯು ಇಲ್ಲದಿರುವುದೇ ಇದಕ್ಕೆ ಕಾರಣವಾಗಿದೆಯೆಂದು ತಿಳಿಸಿದರು. ಆದರೆ ಪಾಠಶಾಲೆಗಳ ಉಪಾಧ್ಯರ ಮೇಲೆ ಮಕ್ಕಳನ್ನು ತಿದ್ದುವ ಜವಾಬ್ದಾರಿಕೆಯನ್ನೆಲ್ಲಾ ಹಾಕುವುದು ಒಳ್ಳೆಯದಲ್ಲ. ತಂದೆತಾಯಿಗಳಾದವರು ತಮ್ಮ ಮಕ್ಕಳಿಗೆ ದೇವರ ವಿಷಯವಾಗಿ ಬೋಧಿಸುವುದು ಈ ದೇಶದಲ್ಲಿ ಅಪರೂಪವಾದ ಸಂಗತಿಯಾಗಿರುತ್ತದೆ. ದೇವರು ಕೊಟ್ಟಿರುವ ಕಟ್ಟಳೆಗಳನ್ನು ಮಕ್ಕಳು ತಂದೆತಾಯಿಗಳಿಂದ ತಿಳಿದುಕೊಳ್ಳುವುದು ಅತ್ಯಾವಶ್ಯಕ. ಮಕ್ಕಳು ದೇವರಿಗೆ ಪ್ರಾರ್ಥನೆ ಅರ್ಪಿಸುವುದನ್ನು ಮನೆಯಲ್ಲೇ ಕಲಿತುಕೊಳ್ಳಬೇಕು.

ಪಾಠಶಾಲೆಗಳಲ್ಲಿ ಮತಬೋಧನೆಯು ಅತ್ಯಾವಶ್ಯಕವೆಂದು ನಾವು ತಿಳಿದರೂ ಅದು ಮತಬೋಧನೆಯು ಯೋಗ್ಯವಾದ ರೀತಿಯಲ್ಲಿರಬೇಕೆಂದು ಖಂಡಿತವಾಗಿಯೂ ಅಭಿಪ್ರಾಯಪಡುವೆವು. ಕೆಲವು ಮತಬೋಧಕರಿರುತ್ತಾರೆ. ಅವುಗಳನ್ನು ಮಕ್ಕಳಿಗೆ ಹೇಳಿ ಕೊಡದಿದ್ದರೆ ಸಾಕು. ಅವುಗಳು ಕೇವಲ ಅಸಾಧ್ಯವಾದ ಕಥೆಗಳನ್ನು ತಿಳಿಸುವುವೇ ಹೊರತು ಮತ್ತಾವ ಸತ್ಯಬೋಧನೆಯನ್ನೂ ಹೇಳಿ ಕೊಡಲಾರವು. ಕೆಲವು ಸಮಯಗಳಲ್ಲಿ ಅವು ಸುಳ್ಳನ್ನು ಹೇಳುವಂತೆ ಕೂಡ ಕಲಿಸುವವು. ಅವುಗಳು ನವೀನ ನಾಗರಿಕತೆಗೆ ಸಂಬಂಧಪಟ್ಟ ಶಾಸ್ತ್ರಗಳ ವಿಷಯಗಳಲ್ಲಿಯೂ ಕೂಡ ಅನೇಕ ಸಂದರ್ಭಗಳಲ್ಲಿ ತಪ್ಪಾದ ಅಭಿಪ್ರಾಯವನ್ನು ಹುಟ್ಟಿಸುವವು. ಅವುಗಳು ಕಲಿಸುವ ಭೂಗೋಳಶಾಸ್ತ್ರವನ್ನು ಯಾರು ತಾನೆ ಒಪ್ಪುವರು. ಖಗೋಳ ಶಾಸ್ತ್ರಕ್ಕೂ ಪುರಾಣಕರ ಜ್ಯೋತಿಷಕ್ಕೂ ಸಂಬಂಧವಿಲ್ಲ ಏನು? ಲೋಕವು ಬರೀ ಮಾಯೆಯೆಂತಲೂ ಅದರ ನಡವಳಿಕೆಗಳೆಲ್ಲಾ ಬ್ರಹ್ಮನ ಲೀಲೆಯೆಂತಲೂ ಮಕ್ಕಳಿಗೆ ಬೋಧಿಸುವುದರಿಂದ ಪ್ರಯೋಜನವೇನು? ಅಥವಾ ಬ್ರಹ್ಮನು ನ್ಯಾಯಾನ್ಯಾಯಗಳನ್ನು ಅರಿತವನಲ್ಲವೆಂದು ತಿಳಿಸಿದರೆ ಹುಡುಗರು ಅಭಿವೃದ್ಧಿಯಾಗುವರೇ? ಈ ಮೇಲ್ಕಂಡ ಪ್ರಶ್ನೆಗಳಿಗೆಲ್ಲಾ ವಾಚಕರೇ ಉತ್ತರವನ್ನು ಕೊಡಬೇಕಾಗಿರುತ್ತದೆ.

ಈಗ ಹಿಂದೂ ದೇಶಕ್ಕೆ ಬೇಕಾಗಿರುವ ಸತ್ಯಬೋಧನೆಯು ಯಾವುದೆಂದರೆ—ದೇವರು ಪವಿತ್ರನಾಗಿರುವನೆಂಬುವುದೇ. ಇಂಥಾ ದಿವ್ಯವಾದ ಅಭಿಪ್ರಾಯವೇ ಮಕ್ಕಳ ಮನಸ್ಸಿಗೆ ಚೆನ್ನಾಗಿ ಹಿಡಿದು ಅವರನ್ನು ಉತ್ತಮರನ್ನಾಗಿ ಮಾಡುವುದು. ಪ್ರತಿಯೊಬ್ಬನೂ ಪ್ರತಿಯೊಬ್ಬಳೂ ಸೃಷ್ಟಿಕರ್ತನಾದ ದೇವರ ಕಟ್ಟಳೆಗಳನ್ನು ಕೈಕೊಳ್ಳುವುದು ತನ್ನ ಕರ್ತವ್ಯವೆಂದು ಭಾವಿಸಬೇಕು. ಯಾವನು ಆತನ ಕಟ್ಟಳೆಗಳನ್ನು ತಿರಸ್ಕರಿಸಿ ಕೈಕೊಳ್ಳದೆ ಇರುವನು. ಆ ಸೃಷ್ಟಿಗೆ ಪಾತ್ರರಾಗಿರುತ್ತಾರೋ ಅಂಥವರಿಗೆ ಅವನು ತನ್ನ ದರ್ಶನವನ್ನು ಕೊಡುವುದಿಲ್ಲದೆ ಅವರಿಗೆ ಬೇಕಾದ ಸಹಾಯಗಳನ್ನು ಮಾಡುವುದಕ್ಕೆ ಸಿದ್ಧನಾಗಿರುತ್ತಾನೆ. ಪವಿತ್ರನಾದ ದೇವರಿಗೆ ಆತ್ಮೀಯವಾದ ಆರಾಧನೆಯನ್ನು ಸಲ್ಲಿಸುವವರೆಲ್ಲರೂ ಪಾಪಕೃತ್ಯಗಳನ್ನು ನಡಸದೆ ಪವಿತ್ರರಾಗಿಯೇ ಇರುವರು. ಸತ್ಯಮತವು ಪಾಪಕ್ಕೆ ವಿರೋಧವಾದದ್ದು. ವಿದ್ಯಾಭ್ಯಾಸದ ಸಂಗಡ ಸತ್ಯಮತ ಬೋಧನೆಯು ಇಲ್ಲದೆ ಹೋದರೆ ಅಂಥಾ ವಿದ್ಯಾಭ್ಯಾಸದಿಂದ ಮೇಲಾಗುವುದಕ್ಕೆ ಬದಲಾಗಿ ಕೇಡೇ ಆಗುವುದು. ಇದು ಲೋಕಾನುಭವವಾಗಿದೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ಕಳುಹಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್‌ಪಾಂಡೆನ್ಸ್.

ಕುಣಿಗಲ್ ತಾಲ್ಲೂಕಿನಲ್ಲಿ ಕಾಲಸ್ಥಿತಿಯು.

ಅಯ್ಯಾ,

ಕುಣಿಗಲ್ ತಾಲ್ಲೂಕು ಗುಬ್ಬಿಗೆರೆ ಪ್ರಾಂತ್ಯ ಮಳೆ ಬೆಳೆ ಇಲ್ಲದೆ ಕ್ಷಾಮವು ಸಂಪೂರ್ಣವಾಗಿ ತಲೆದೋರಿದೆ. ಕೆರೆಗಳಿಗೆ ನೀರು ಸುತರಾಂ ಬರಲಿಲ್ಲವಾದ್ದರಿಂದ ತರಿ ಫಸಲು ಆಗಲಿಲ್ಲ. ಖುಷ್ಕಿ ಬೆಳೆಯು ೬ ಅಂಗುಲ ಎತ್ತರದ ವರೆಗೆ ತಲೆದೋರಿ ನಂತರ ಭೂಮಿಗೆ ಇಳಿದು ಹೋಯಿತು. ದನ ಕರುಗಳಿಗೆ ಮೇವು ನೀರೂ ಕೂಡ ಸುತರಾಂ ಸಿಕ್ಕದೆ ಇರೋಣದರಿಂದ ಅನೇಕ ರಾಸುಗಳು ಕಸಾಯಿ ಅಂಗಡಿಗಳಿಗೂ, ಮತ್ತೆ ಕೆಲವು ಮೇವು ಸಲುವಾಗಿ ಶಿವಗಂಗೆ ಮುಂತಾದ ಕಡೆಗೂ ವಿನಂಪತ್ತಿಯಲ್ಲಿಯೂ ಸಾಗುತ್ತಿವೆ. ಈ ಪ್ರಾಂತ್ಯ ಬಡ ಜನರ ಸಾಧನೆ ತಾ ಬೇಳಲಿಕ್ಕಸಾಧ್ಯವಾಗಿದೆ. ಒಕ್ಕ ರೂಪಾಯಿಗೆ ೫ ಸೇರು, ರಾಗಿ ಜೋಳ ಸಹ ೮, ೯ ಸೇರು ಮಾರುತ್ತಲಿವೆ. ಘನವನ್ನು ಹೊಂದಿದ ಹಜರತ್ ದಿವಾನ್ ಸಾಹೇಬ್ ಬಹದ್ದೂರವರು ಈ ಪ್ರಾಂತ್ಯ ಸಂಭವಿಸಿರುವ ಕ್ಷಾಮದ ಸ್ಥಿತಿಯನ್ನು ಪರಾಂಬರಿಸಲೋಸುಗ ಇಲ್ಲಿಗೆ ೫ ಮೈಲಿ ದೂರದಲ್ಲಿರುವ ಕುಣಿಗಲ್ ಮೊಕ್ಕಾಂಗೆ ದಯಮಾಡಿಸಿ, ಆ ದಿನ ಹಾಜರಾಗಿದ್ದ ರೈತರುಗಳ ಅಹವಾಲನ್ನು ಕೇಳಿ, ಅವರುಗಳಿಗೆ ಸಂಭವಿಸಿರುವ ಕಷ್ಟನಿವಾರಣೆಗೆ ಸಧ್ಯದಲ್ಲಿ ರಿಲೀಫ್ ಕಾಮಗಾರಿಗಳನ್ನು ಶುರು ಮಾಡಿಸುತ್ತೇವೆಂತಲೂ, ದನ ಕರುಗಳಿಗೆ ಸರ್ಕಾರಿ ಅಮೃತ್‌ಮಹಲ್ ಕಾವಲುಗಳಲ್ಲಿ ಮೇಯಿಸಿಕೊಳ್ಳಲು ಅನುಕೂಲಪಡಿಸಿಕೊಡುತ್ತೇವೆಂತಲೂ ಅಪ್ಪಣೆ ದಯಪಾಲಿಸಿದರು. ಈ ಪ್ರಾಂತ್ಯ ಎಲ್ಲಾ ಗ್ರಾಮದವರೂ ಜೀವನಕ್ಕೆ ಯಾವ ಆಧಾರವೂ ಇಲ್ಲದೆ ಅದರಾಳು ಜನಗಳು ದೇಶಾಂತರವಾಗಿ ಹೊರಟು ಹೋದರು. ಯಾವ ಗ್ರಾಮಗಳಲ್ಲಿ ನೋಡಿದರೂ ಜನ ಇಲ್ಲದೆ ಹಾಳು ಗ್ರಾಮಗಳಂತೆ ಇರುತ್ತವೆ. ಬಾಕಿ ಇರುವ ಅಲ್ಪ ಸ್ವಲ್ಪ ಜನಗಳು ಕೆರೆಯ ಹತ್ತಿರ ಗೆಡ್ಡೆಗಳನ್ನು ತಿಂದು ಕೊಂಡು ಎಳೆ ಬಿಸಿಲನ್ನು ಕಾದು, ದೇಹದ ಆರೋಗ್ಯವನ್ನು ಕೆಡಿಸಿಕೊಳ್ಳುತ್ತಿರುವರು. ಆದಕಾರಣ ಗವರ್ನ್‌ಮೆಂಟಿನವರು ರಿಲೀಫ್ ಕಾಮಗಾರಿ ಶುರು ಮಾಡಿಸಿದರೆ, ಈ ರೋಗಿಗಳು ಕೆಲಸಮಾಡಲಿಕ್ಕೆ ಅಶಕ್ತರಾಗುತ್ತಾರೆ. ಹೀಗೆಯೇ ಮುಂದುವರಿಸಿದ ಘಾತು ಈಶ್ವರ ಸಂವತ್ಸರಗಳಲ್ಲಿ ದುರ್ಭಿಕ್ಷದಂತೆ ಮುಂದೆ ಆಲಸ್ಯ ಮಾಡಿದ್ದರಿಂದ, ನಮ್ಮ ಮೈಸೂರು ದೇಶದ ಪ್ರಜೆಗಳಲ್ಲಿ "ಕ್ಷಾಮಲಕ್ಷಣ" ಎಂಬುದನ್ನು ಎಲ್ಲರಿಗೂ ಅನುಭವಸಿದ್ಧವಾಗಿದೆ. ನಮ್ಮ ದಯಾಳು ಗವರ್ನ್‌ಮೆಂಟಿನವರು ಪ್ರಜಾಪರರಾಗಿ ಮಕ್ಕಳಂತೆ ಪ್ರಜೆಗಳನ್ನು ಪಾಲನೆ ಮಾಡುತ್ತಿರುವುದರಿಂದ ಈ

ಕಾಲದಲ್ಲಿ ಅವಶ್ಯವಾದ ಭಾಗಗಳಲ್ಲಿ ತಕ್ಕ ಏರ್ಪಾಡು ಮಾಡಿ ಪ್ರಜೆಗಳನ್ನು ಕಾಪಾಡಬೇಕಾಗಿರುತ್ತೆ. ಈ ಊರಿಗೆ ಪಶ್ಚಿಮವಾಗಿ ಅಂದರೆ, ೩ ಫರ್ಲಾಂಗ್ ಫಾಸಲೆಯಲ್ಲಿ ಒಂದು ಹಳೇ ಕೆರೆ ಇರುತ್ತೆ. ಇದು ರಿಪೇರಿ ಆಗತಕ್ಕ ವಿಷಯದಲ್ಲಿ ಈಗ ಸುಮಾರು ೫—೬ ವರುಷಗಳಿಂದ ಬರೆವಣಿಗೆ ನಡೆಯುತ್ತಾ ಇದೆ. ದಯಾಳುವಾದ ಗವರ್ನ್‌ಮೆಂಟಿನವರು ಈ ಕ್ಷಾಮಕಾಲದಲ್ಲಿ ಸದರೀ ಕೆರೆಯನ್ನು ಕಟ್ಟಿಸಿ, ಜೀರ್ಣೋದ್ಧಾರ ಮಾಡಿಸಿದ ಭಾಗದಲ್ಲಿ ಮುಂದೆ ಸರಕಾರಕ್ಕೆ ಅನುಕೂಲವಾಗುವುದಲ್ಲದೆ ಈ ಪ್ರಾಂತ್ಯ ಅಜುಬಾಜು ೧೦ ೧೨ ಗ್ರಾಮಗಳ ರೈತರುಗಳ ಜೀವನಕ್ಕೆ ಅನುಕೂಲವಾಗಿರುತ್ತೆ. ದಯಾಳುವಾದ ಗವರ್ನ್‌ಮೆಂಟಿನವರು ಈ ಕಷ್ಟಕಾಲದಲ್ಲಿ ಕೆರೆ ಕಾಮಗಾರಿ ಶುರು ಮಾಡಿಸಿ, ಬಡ ಜನಗಳ ಗೋಳಾಟವನ್ನು ತಪ್ಪಿಸಿ ಕಾಪಾಡಿಸಿಯಾರೆಂದು ನಂಬಿಕೆ.

ಪುರವಾಸಿ

ಚಿಂತಾಮಣಿಯ ವರ್ತಮಾನಗಳು.

ಅಯ್ಯಾ,

ಈಚೆಗೆ ಡೆಪ್ಯುಟಿ ಕಮಿಷನರ್ ಸಾಹೇಬರವರು ದಯಮಾಡಿಸಿದ್ದು ರೈತರನ್ನು ಬರಮಾಡಿಕೊಳ್ಳಿಸಿ, ತಕಾವಿ ಸಾಲ ಕೊಡುವುದಾಗಿ ಅಪ್ಪಣೆಕೊಟ್ಟರು. ಈ ಹಣ ದಾನ ಆಗುವದು ಯಾವಾಗಲೋ, ಭಾವಿ ತೋಡುವದೂ, ಬೆಳೆ ಮಾಡುವದೂ, ತಿನ್ನುವದೂ ಯಾವ ಕಾಲಕ್ಕೋ ತಿಳಿಯದು. ಭೂಮಿಕಾಣಿ ಇರುವ ರೈತನಿಗೆ ಅನುಕೂಲವಾಯಿತು. ಕತ್ತಾಳೆ ತಿನ್ನುವ ಕುಂಟೆ, ಕುರುಡರ ಗತಿ ಏನಾಗಬೇಕೋ ತಿಳಿಯದು. ಭೂಮಿಯಿಲ್ಲದವರು ಸೇರದ ೧೬ ಕ್ಕೆ ಕಮ್ಮಿಯಿಲ್ಲ. ಹಾಗಾದರೆ ಇವರಿಗೆ ಏನು ಗತಿಯಾಗುವುದೋ ಜಗದೀಶನೇ ಬಲ್ಲ. ಸಬ್ ಡಿವಿಜನ್ ಆಫೀಸರ್ ಮೆ|| ...ನ್ ಸಾಹೇಬರವರು ದಯಮಾಡಿಸಿ ಹೋಬಳಿವಾರ್ ಮೊಕ್ಕಾಂ ಮಾಡುತ್ತಿರುವಾಗ ದೊಡ್ಡ ಚಿಲ್ಲರೆ ವರ್ತಕರನ್ನು ಕರೆಸಿ ಒಂದು ಮೀಟಿಂಗ್ ಸೇರಿಸಿ,—ಬಡವರಾದ ನೇಯಿಗೆಕಾರರ ಜೀವನಕ್ಕೆ ತಕ್ಕ ಮಾರ್ಗವಿಲ್ಲದೆ ಇರುವುದರಿಂದ ಸರ್ಕಾರದಿಂದ ನಿಮ್ಮ ವಶಕ್ಕೆ ಹಣ ಕೊಡುತ್ತೇವೆ, ಅದರಿಂದ ಅವರು ಮಾಡಿದ ಸಾಮಾನುಗಳನ್ನು ...ದ ಕ್ರಯಕ್ಕೆ ತೆಗೆದು ಮಾರಿ ಅವರಿಗೆ ಜೀವನ ಮಾಡುತ್ತಾ ಬನ್ನಿರಿ, ಸರ್ಕಾರದ ಹಣಕ್ಕೆ ಬಡ್ಡಿ ಇಲ್ಲ ಸಾಹುಕಾರರಿಗೆ ಆದಾಯವಿಲ್ಲ ಎಂದು ಹುಕುಂ ಮಾಡಿದರಂತೆ. ಇದು ಶ್ಲಾಘನೀಯವಾದ ಏರ್ಪಾಡೇ. ಆದರೆ ನಮ್ಮ ಸಬ್ ಡಿವಿಜನ್ ಸಾಹೇಬರವರು ಸಕಾಲಕರಾದ ಬಡವರಿಗೂ ಅನುಕೂಲಕ್ಕೆ ಏರ್ಪಾಡು ಮಾಡಿ ಕೀರ್ತಿಪಡೆಯುವರೆಂದು ನಂಬಿಕೆ ಇದೆ.

ಕಳೆದ ವಾರ ಈ ಪ್ರಾಂತ್ಯ ಭೂಕಂಪವಾಯಿತು. ರಾತ್ರಿ ಹನ್ನೆರಡು ಘಂಟೆಯಲ್ಲಿ ಅದು ಸ್ವಲ್ಪದ್ದರಿಂದ ಅನೇಕರಿಗೆ ಗೊತ್ತೇ ಆಗಲಿಲ್ಲ. ... ಮಲಗಿದ್ದವರು ... ಗಾಬರಿಯಿಂದ ಎದ್ದು ಓಡಿದರಂತೆ. ಮನೆಗಳೂ ಬಾವಿಗಳೂ ಕಿರ್‌ಕಿರೆಂತಲೂ, ... ರತ್ನ ಪರೀಕ್ಷೆ ಮಾಡಿ ಮನೆಗಳಿಂದ ಮುನ್ನಿನ ಕಟ್ಟಿಗಳು ಉದುರಿದವು. ತಳ್ಳಿ ಜನರು ಬಹುವಾಗಿ ಹೆದರಿಹೋಗಿರುತ್ತಾರೆ. ದೇವಾನುಗ್ರಹದಿಂದ ... ಆಗಲಿಲ್ಲ.

ಇದೇ ತಾಲ್ಲೂಕು ಕೈವಾರ ಹೋಬಳಿ ಗುಟ್ಟಹಳ್ಳಿಯಲ್ಲಿ ಭಾರೀ ರೈತನ ಮನೆಗೆ ಕಳ್ಳರು ಬಿದ್ದು ಕನ್ನಹಾಕುತ್ತಿರಲು ಸದರಿ ರೈತನು ತನ್ನ ಆಳನ್ನು ಹೊರಗೆ ಕಳುಹಿಸಲಾಗಿ ಕಲ್ಲುಗಳು ಬಲವಾಗಿ ಬೀಳತೊಡಗಿದವೆಂತಲೂ, ಹೀಗೂ ಸುಗ್ಗಿ ಕಳ್ಳರಲ್ಲಿ ಒಬ್ಬನನ್ನು ಮುಟ್ಟಿ ಹಿಡಿದ ಕೂಡಲೇ ದೊಣ್ಣೆಯಿಂದ, ಮತ್ತೊಬ್ಬ ಕಳ್ಳನು ಹಿಂದಿನಿಂದ ತಲೆಗೂ ಹೊಡೆದು ಹಿಡಿದಿದ್ದ ತೋಳಿಗೂ ಬಲವಾಗಿ ರಕ್ತ ಸುರಿಯುವಂತೆ ಹೊಡೆದನೆಂತಲೂ, ಮನೆ ಯಜಮಾನನು ಸಹಾ ಮತ್ತೊಬ್ಬ ಕಳ್ಳನನ್ನು ಹಿಡಿದುಕೊಂಡು ಗಟ್ಟಿಯಾಗಿ ಅರಚಿಕೊಳ್ಳಲು ಗ್ರಾಮಸ್ಥರು ಸಹಾಯಕ್ಕೆ ಬರಲು ಸಿಕ್ಕ ಕಳ್ಳನ ಸಲುವಾಗಿ ಮಾಡಿದರೆಂತಲೂ, ಆ ಇಬ್ಬರು ಕಳ್ಳರು ಪೋಲೀಸ್ ಲಾಕಪ್ಪಿನಲ್ಲಿರುತ್ತಾರೆಂತಲೂ ತಿಳಿಯಲಾಯಿತು. ಈ ಮೇರಿಗೆ ... ಯಕ್ಕೆ ಹೆದರದೆ ಪೆಟ್ಟು ತಿಂದು ಹಿಡಿದುಕೊಟ್ಟ ಬಡವ ರೈತನನ್ನು ಪತ್ತೆ ಮಾಡಿದ ಮೇಲೆ ಕೊಂದರೆ ಪೋಲೀಸಿಗೆ ತಪ್ಪಿಸಿದ ಈ ಧೀರನಿಗೆ ನಮ್ಮ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ಬಹುಮಾನ ಕೊಡಿಸಿ ಪ್ರೋತ್ಸಾಹ ಮಾಡುವರೆಂದು ನಂಬಿಕೆ ಇದೆ.

ಕೋಲಾರ್ ತಾಲ್ಲೂಕು ಶ್ರೀನಿವಾಸಪುರ ತಾಲ್ಲೂಕಿನಲ್ಲೂ ಸುತ್ತುಮುತ್ತು ಗ್ರಾಮಗಳಲ್ಲಿಯೂ ಪ್ಲೇಗ್ ಉಪದ್ರವ ತುಂಬಾ ಹಾವಳಿ ಮಾಡುತ್ತಿರುವುದರಿಂದ ಅಲ್ಲಿನ ಜನರು ಅನೇಕರು ಈ ಗ್ರಾಮಕ್ಕೆ ಬಂದು ಸೇರಿಕೊಳ್ಳಲು ಪ್ರಯತ್ನಪಟ್ಟರು. ಇವರ ಸುಳುವನ್ನು ... ಅಮಲ್ದಾರವರೂ ಡಾಕ್ಟರವರೂ ತಿಳಿದು, ಅಂಥವರನ್ನು ತಡೆದು ೧ ಮೈಲಿ ದೂರದಲ್ಲಿ ಷೆಡ್ಡುಗಳು ಹಾಕಿಕೊಂಡು ವಾಸಮಾಡುವಂತೆ ಏರ್ಪಾಡು ಮಾಡುತ್ತಾರೆ. ಇವರಲ್ಲಿ ಇಬ್ಬರಿಗೆ ಪ್ಲೇಗ್ ಗಡ್ಡೆಗಳು ಕಾಣಿಸಿಕೊಂಡು ಒಬ್ಬನು ತೀರಿಹೋದನು. ಮತ್ತೊಬ್ಬನು ಬದುಕುವದು ಕಷ್ಟವಾಗಿರುವಂತೆ ತೋರುತ್ತೆ. ಡಾಕ್ಟರವರೂ ಅಮಲ್ದಾರರೂ ಚಿಂತಾಮಣಿಯ ಪ್ರಜೆಗಳ ಕ್ಷೇಮವನ್ನು ಕಾಪಾಡುವುದಕ್ಕೆ ಏರ್ಪಾಡು ಮಾಡಿದ್ದಕ್ಕಾಗಿ ಅವರಿಗೆ ಪ್ರಜೆಗಳೆಲ್ಲರೂ ತಮ್ಮ ಕೃತಜ್ಞತೆಯನ್ನು ತೋರ್ಪಡಿಸದಿರಲಾರರು.

ನಾಯಕರಾಣಿಗಳ ಮನೆಗಳಲ್ಲಿ ಅನೇಕರು ಸೇರಿಕೊಂಡು, ನಮ್ಮ ನೈಜವಾದ ಕೆಲಸಕಾರ್ಯಗಳನ್ನು ಬಿಡದೆ ಇಲಾಖೆಯ ಉದ್ದೇಶವನ್ನು ಭಂಗಪಡಿಸಿ ಪರೀಕ್ಷಾ ಆದುತ್ತಾರೆಂತಲೂ ಕೈಯಲ್ಲಿರುವ ಹಣ ಮುಗಿದುದು ಬಹಳವಾಗಿ ಕಳೆದುಕೊಳ್ಳುತ್ತಾರೆಂತಲೂ ಜಗಳವಾಡಿಕೊಳ್ಳುತ್ತಾರೆ. ಇವರಿಗೆ ಕೈಯಲ್ಲಿರುವ ಹಣ ಮುಗಿದು ಹೊಸ ಪರಿ ಕನ್ನ ಕಳುವು ಮಾಡುವುದಕ್ಕಾದರೂ ಹಿಂದೆಗೆಯಾರೇ? ಈ ವಿಚಾರವು ನಮ್ಮ ಪೋಲೀಸ್ ಇನ್‌ಸ್ಪೆಕ್ಟರವರ ನೋಟೀಸಿಗೆ ಬಂದಿವೆಯೋ ಇಲ್ಲವೋ ಆಶ್ಚರ್ಯವಾಗಿದೆ. ಇನ್‌ಸ್ಪೆಕ್ಟರವರು ಸಾಹಸವಾದಿ ಇಂಥಾ ಅಯೋಗ್ಯರನ್ನು ತಕ್ಕ ಬಂದೋಬಸ್ತು ಮಾಡುವುದಾದರೆ ಪ್ರಜಾ ಕೋಟಿಗಳಿಗೆ ಮೇಲಾಗುವದು. ಮುಖ್ಯವಾಗಿ ಈ ಬಗೆಯಾದ ಕೇಡುಗಳಿಗೆ ಮೂಲ ದೇವತೆಗಳಾಗಿದ್ದು ಇಂಥ ಅನ್ಯಾಯದ ಕರ್ಮ ನಡೆಸುವದಕ್ಕೆ ಅವಕಾಶವನ್ನುಂಟುಮಾಡುತ್ತಿರುವ ನಾಯಕಸಾನಿಗಳಿಗೆ ತಕ್ಕ ಬಂದೋಬಸ್ತು ಮಾಡಿ, ಸಾಧ್ಯವಾದರೆ ಈ ದುಷ್ಟರನ್ನು ಊರಿನಿಂದಾಚೆ ಓಡಿಸಿಬಿಟ್ಟರೆ ಈ ಕೀರ್ತಿಯು ಇನ್‌ಸ್ಪೆಕ್ಟರವರಿಗೆ ತಪ್ಪಲಾರದು. ಮತ್ತು ಸಂತೆಯು ನಡೆಯುವಲ್ಲಿ ಮುಖ್ಯವಾಗಿ ತರಕಾರಿ ಬಾ ಮೆಣಸಿನಕಾಯಿ ಮಾರುವ ಕಡೆಗೆ ಸ್ವಲ್ಪ ನಿಗಾ ಕೊಟ್ಟರೆ ತುಂಬಾ ಉಪಕಾರವಾಗಿರುವುದು.

ಪ್ರಜಾ ಹಿತಚಿಂತಕ.

ತಾಲ್ಲೋಕು ವರ್ತಮಾನಗಳು.

ಚಿತ್ರದುರ್ಗ.—ಇಲ್ಲಿ ನೀರಿನ ಕ್ಷಾಮವನ್ನು ಪರಿಹರಿಸಬೇಕೆಂದು ಸರಕಾರದವರು ಏನು ಪ್ರಯತ್ನಪಟ್ಟಾಗ್ಯೂ ಎಲ್ಲಾ ವ್ಯರ್ಥವಾಗಿ ಹೋಗುವ ಸಂಗತಿಯಾಗಿದೆ. ಸಂತೆಹೊಂಡ ಬಹಳ ದೊಡ್ಡದು ಮತ್ತು ಒಳ್ಳೇ ಜಲ ಉಂಟೆಂದು ತಿಳಿದರೂ ಅದರ ನೀರನ್ನು ಸಂಪೂರ್ಣವಾಗಿ ಎತ್ತಿ ಕಲ್ಮಷವನ್ನು ತೆಗೆದು ಶುದ್ಧಿ ಮಾಡುವುದಕ್ಕೆ ಬಹಳ ದ್ರವ್ಯ ಬೇಕಾದ್ದರಿಂದ ಅದನ್ನು ಶುಚಿ ಮಾಡುವ ಪ್ರಯತ್ನ ನಿಲ್ಲಿಸಬೇಕಾಯಿತು. ಇದರಲ್ಲಿರುವ ಕಶ್ಮಲ ಬಹಳ ಪುರಾತನ ಕಾಲದಿಂದ ಶೇಖರವಾಗುತ್ತ ಬಂದದ್ದು. ಈ ಊರಲ್ಲಿನ ಭಾವಿಗಳು ಆಗಲೇ ಪಾತಾಳಕ್ಕೆ ಹೋಗಿವೆ. ಅವುಗಳಲ್ಲಿ ಕೆಲವನ್ನು ಶುಚಿಮಾಡಿದರೂ ಬಹು ದಿನ ಸರಬರಾಯಿ ಅವುಗಳಿಂದ ಆಗುವಂತಿಲ್ಲ. ಒಡ್ಡಿನಲ್ಲಿರುವ ನೀರನ್ನೇ ಕೂಲಿಗಳ ಮುಖಾಂತರ ಯಂತ್ರದಿಂದ ಎತ್ತಿಸಿ ಆಯಾ ಕೇರಿಗಳಿಗೆ ಸರದಿ ಮೇಲೆ ಬಿಡುತ್ತಿದ್ದಾರೆ. ಇದರ ಒಳ್ಳೆ ನೀರು ಕಳೆದ ವರೆಗೂ ಬತ್ತಿಹೋಗಿದೆ. ಹೀಗೆಯೇ ಎತ್ತಿದರೆ ಒಂದೆರಡು ತಿಂಗಳು ಬಂದೀತು. ಎಂಥ ಕೆಲಸಗಳಾದರೂ ಇದೇ ಗತಿ.—ಈ ಸಲ ಬಿಜಾಪುರದ ಬಾಗಲಕೋಟೆಯಲ್ಲಿ ನಡೆಯುವ ಶ್ರೀಮದ್ವೀರಶೈವ ಮಹಾ ಸಭೆಗೆ ಹೋಗಬೇಕಾದ ಮೆಂಬರುಗಳನ್ನು ಚುನಾಯಿಸುವದಕ್ಕೆ ಅಲ್ಲಲ್ಲಿ ಕಮಿಟಿಗಳು ನಡೆದವೆ. ಇಲ್ಲಿಯೂ ಜಗದ್ಗುರು ಮುರಿಗೆ ಸ್ವಾಮಿಗಳ ಮಠದಲ್ಲಿ ಕಮಿಟಿ ನಡೆದು ಸುಮಾರು ಹತ್ತು ಹನ್ನೆರಡು ಮಂದಿ ಪ್ರಮುಖರು ಹೋಗಬೇಕೆಂದು ನಿರ್ಣಯವಾಗಿದೆ. ಆ ಸ್ಥಳಕ್ಕೆ ಸಮೀಪವಾಗಿ ಬೇರೆ ಗ್ರಾಮದಲ್ಲಿ ನಡೆಯುವ ರೆಡ್ಡಿ ಜನಗಳ ಮಹಾ ಸಭೆಗೆ ಮೆ|| ರಾಮಲಿಂಗರೆಡ್ಡಿಯವರು ಪ್ರೆಸಿಡೆಂಟರಾಗಿರುವರಷ್ಟೆ. ಇದಕ್ಕೂ ಇಲ್ಲಿನ ರೆಡ್ಡಿ ಜನಗಳ ಆರ್ಯನ್ ಸ್ಟುಡೆಂಟ್ಸ್ ಹೋಂನ ಮ್ಯಾನೇಜರು ತಮ್ಮ ವಿದ್ಯಾರ್ಥಿಗಳನ್ನೂ ಕೆಲವು ಧರ್ಮದರ್ಶಿಗಳನ್ನೂ ಕರೆದುಕೊಂಡು ಹೋಗುವವರಾಗಿದ್ದಾರೆ. ಈ ಎರಡು ಸಭೆಗಳೂ ಈ ತಿಂಗಳ ೨೬ ರಿಂದ ೩೦ ರ ವರೆಗೂ ನಡೆಯುವವು. ಇವರ ಕೆಲಸಗಳು ಸಾರ್ಥಕವಾಗಲಿ ಎಂದು ಎಲ್ಲರೂ ಹಾರೈಸುವರು.—ಸೆಷನ್ ಜಡ್ಜರಾದ ಮೆ|| ಪ್ಲಮರ್ ಧೊರೆಗಳು ಸುಮಾರು ಒಂದು ತಿಂಗಳ ಕಾಲ ಇಲ್ಲಿದ್ದು ಮೊಕದ್ದಮೆಗಳನ್ನು ಪೂರೈಸಿಕೊಂಡು, ಶಿವಮೊಗ್ಗಕ್ಕೆ ಹೋದರು.

ಫ್ರೆಂಚ್‌ರಾಕ್ಸ್.—ವಾಗೀ ಬಳಿಯು ಜೋರಾಗಿ, ಜನರು ಆಗಲೇ ನೆಗಡಿ ಕೆಮ್ಮಲು ಚಳಿ ಜ್ವರಗಳಿಂದ ನರಳುತ್ತಿದ್ದಾರೆ. ಪ್ಲೇಗ್ ಗಲಾಟೆ ಏನೂ ಇಲ್ಲವೇ ಇಲ್ಲ. ಹಾಗಿದ್ದಾಗ್ಯೂ ಸಮೀಪವಾಗಿರುವ ಶ್ರೀರಂಗಪಟ್ಟಣದಲ್ಲಿ ಗಲಾಟೆಯು ಜೋರಾಗುತ್ತಾ ಬರುತ್ತಿರುವದನ್ನು ನೋಡಿ ಇದು ಇಲ್ಲಿಗೂ ಎಲ್ಲಿ ತಗಲುತ್ತದೋ ಎಂದು ಜನರು ಭಯಪಡುತ್ತಿದ್ದಾರೆ. ಈಗ ಗದ್ದೆ ಕೊಯ್ಯಲು ಆಗಿ ಸುಗ್ಗಿ ಕಾಲವಾಗಿದ್ದರೂ ಭತ್ತದ ಧಾರಣೆ ಇಳಿಯದೆ ಯಥಾಪ್ರಕಾರವಾಗಿ ಏರುತ್ತಿರುವದಾಗಿ ಕೇಳುತ್ತೇವೆ. ಇಲ್ಲಿಂದಲೂ ಜನರು ಕಾಸಿಕೋಟೆಗಳ ಕಡೆ ಪ್ರಯಾಣ ಮಾಡಲು ಉತ್ಸುಕರಾಗಿರುವಂತೆ ತಿಳಿಯುವುದು. ಸರ್ಕಾರದವರು ಕಂದಾಯದ ದರದ ಪ್ರಕಾರ ರೂಪಾಯಿಗೆ ಹತ್ತು ರೂಪಾಯಿ ಸಾಲ ಕೊಟ್ಟು ಗೈರ ಭೂಮಿಯನ್ನು ಆಧಾರವಾಗಿ ಬರಿಸಿಕೊಳ್ಳುತ್ತಾರೆಂಬ ವದಂತಿಯುಂಟು. ಜಾಂಶವು ಇನ್ನೂ ಗೊತ್ತಾಗಲಿಲ್ಲ. ದಿನಂಪ್ರತಿಯೂ ನಾಗಮಂಗಲ ಮೈಸೂರು ಮಾರ್ಗವಾಗಿ ನೀಲಗಿರಿ ಮುಂತಾದ ಕಡೆಗೆ ವಲಸೆ ಹೋಗುವ ಬಡ ದನಕರುಗಳ ಸಮೂಹವನ್ನು ನೋಡುವಾಗ್ಯೆ ತುಂಬಾ ಪರಿತಾಪತರವಾಗುತ್ತದೆ. ಹೀಗೆ ಹೋಗುವ ಜನರೂ ಗೋಕುಲಗಳೂ ಎಷ್ಟು ನಾಟಿಗೆ ಸುಖಪಟ್ಟು ಹಿಂತಿರುಗುವವೋ ಎಂದು ಜನರು ಯೋಚಿಸುತ್ತಿದ್ದಾರೆ.—ಈ ಊರಿಗೆ ಆಶ್ರಯವಾಗಿರುವ ಕೆರೆ ನೀರನ್ನು ಇನ್ನು ಮುಂದೆ ಸಾಗುವಳಿ ಮಾಡುವ ಜಮೀನುಗಳಿಗೆ ಬಿಡದೆ ಇಡಿಯುವದು ತುಂಬಾ ಅವಶ್ಯಕವಾಗಿದೆ. ಹೀಗೆ ಮಾಡದೇಹೋದರೆ ಒಂದೆರಡು ತಿಂಗಳುಗಳಲ್ಲಿ ನೀರೆಲ್ಲಾ ಬತ್ತಿಹೋಗಿ ಕುಡಿಯುವ ನೀರಿಗೆ ತುಂಬಾ ಪಾಡುಪಡಬೇಕಾಗುವದು.—ಇಲ್ಲಿನ ಸಬ್ ಡಿವಿಜನ್ ಕಚೇರಿಯನ್ನು ಶ್ರೀರಂಗಪಟ್ಟಣಕ್ಕೆ ವರ್ಗಾಯಿಸಬೇಕೆಂದು ಯೋಚನೆಯಲ್ಲಿದ್ದಾರೆಂದು ಕೇಳುತ್ತೇವೆ. ಹೀಗೆ ಪ್ರತಿಯೊಂದು ಆಫೀಸನ್ನೂ ಇಲ್ಲಿಂದ ತೆಗೆದುಬಿಟ್ಟು ಈ ಗ್ರಾಮವನ್ನು ಹಾಳುಮಾಡುವದು ಇಲ್ಲಿನ ಪ್ರಜೆಗಳಿಗೆ ತುಂಬಾ ಸಂಕಟ. ಶ್ರೀರಂಗಪಟ್ಟಣವು ಅನಾರೋಗ್ಯವಾದ ಸ್ಥಳ. ಆದ್ದರಿಂದ ಫ್ರೆಂಚ್‌ರಾಕ್ಸ್ ರೈಲ್ ಸ್ಟೇಷನ್ ಬಳಿಯಲ್ಲಾದರೂ ಕೋರ್ಟ್ ಮಾಡಿಸಿ ವಾಡಿಕೆಯ ವಕೀಲರು ಮುಂತಾದವರಿಗೆಲ್ಲ ಅನುಕೂಲವಾಗುವದೆಂದು ಅವರಲ್ಲಿ ಕೆಲವರ ಅಭಿಪ್ರಾಯವಾಗಿರುವಂತೆ ಕಾಣುತ್ತದೆ.—ಕಳೆದ ತಾ|| ೧೧ನೇ ಶುಕ್ರವಾರ ಸಾಯಂಕಾಲದಲ್ಲಿ ಸೀನಿಯರ್ ಸರ್ಜನ್‌ರಾದ ಡಾ|| ...ತ್ ಸಾಹೇಬರ ಸವಾರಿಯು ಬೈಸಿಕಲ್ ಮೇಲೆ ದಯಮಾಡಿಸಿತು. ಆಸ್ಪತ್ರೆ ಪೋಲೀಸ್ ಲಾಕಪ್ ಮುಂತಾದವುಗಳನ್ನು ತನಿಖೆ ಮಾಡಲುದ್ದೇಶವಾಗಿತ್ತು. ಸಾಹೇಬರು ಆಸ್ಪತ್ರೆಗೆ ಹೋಗಿ ನೋಡುವಲ್ಲಿ ಆಸ್ಪತ್ರೆ ಅಸಿಸ್ಟೆಂಟರಾಗಲಿ ಕಾಂಪೌಂಡರಾಗಲಿ ಹಾಜರಿಲ್ಲದ್ದರಿಂದ ಸುಮಾರು ಒಂದು ಘಂಟೆಯ ವರೆಗೂ ಕಾದು ಬೇಸತ್ತು ಹೊರಟರೆಂತಲೂ ಸೂಲಗಿತ್ತಿ ಮಾತ್ರ ಹಾಜರ್ ಇದ್ದಳೆಂತಲೂ, ಆಸ್ಪತ್ರೆ ಅಸಿಸ್ಟೆಂಟರು ಮೈಸೂರಿಗೆ ಕಾರ್ಯಾರ್ಥವಾಗಿ ಹೋಗಿದ್ದಂತೆಯೂ ಕಾಂಪೌಂಡರು ಐದು ದಿನಗಳ ರಜಾ ಪಡೆದು ಹೋಗಿರುವಂತೆಯೂ ತಿಳಿಯಲಾಯಿತು. ಅನಂತರ ಸರ್ಜನ್ ಸಾಹೇಬರು ಅಮಲ್ದಾರ್ ಇನ್‌ಸ್ಪೆಕ್ಟರುಗಳ ಕೂಡ ಮಿಸ್ ಗರ್ಲ್ ಸ್ಕೂಲಿಗೆ ಹೋದರು. ಅಲ್ಲಿ ಬಾಲಕಿಯರು ಹಾಡುತ್ತಿದ್ದ ಅಭಿನಯ ಸಂಗೀತವನ್ನು ಕೇಳಿ ಸಂತೋಷಪಟ್ಟುಕೊಂಡು ಹೋದರು. ಲಾಕಪ್ ತನಿಖೆ ತೀರಿಸಿ ವಾಪಸ್ ಮೈಸೂರಿಗೆ ತೆರಳಿದರೆಂತಲೂ ಕೇಳುತ್ತೇವೆ.—ಕಳೆದ ಗುರುವಾರ ಇಲ್ಲಿಗೆ ಸುಮಾರು ಐದು ಮೈಲಿ ದೂರದಲ್ಲಿರುವ ದೊಡ್ಡೇಗೌಡನ ಕೊಪ್ಪಲಿನಲ್ಲಿ ಸುಮಾರು ಐದಾರು ಜನರು ಸೇರಿಕೊಂಡು ಅದೇ ಗ್ರಾಮದ ಬಲಗೈ ಜಾತಿ ಬೊಮ್ಮಯನೆಂಬವನ ಮೇಕೆಯನ್ನು ಕಳವು ಮಾಡಿ ರಾತ್ರಿ ಕಾಲದಲ್ಲಿ ಕೊಯ್ದು ಪಾಲುಮಾಡಿಕೊಂಡು ಬರುತ್ತಿದ್ದದ್ದನ್ನು ಸ್ವಂತ ಗಾರನು ಕಾದಿದ್ದು ಹಿಡಿದು ಪೋಲೀಸಿಗೆ ತೆಗೆದುಕೊಂಡು ಹೋಗಬೇಕೆಂದಿರಲು ಸದರಿಯವರು ಹತ್ತು ರೂಪಾಯಿ ಕೊಟ್ಟು ಮನ್ನಣೆ ಪಡೆಕೊಂಡರೆಂದು ಸಮಾಚಾರ ಕೇಳುತ್ತೇವೆ.

ಅರಸೀಕೆರೆ ತಾಲ್ಲೂಕ್ ಕಣಕಟ್ಟೆ.—ಕಳೆದ ಕ್ರೋಧಿ ವಿರೋಧಿ ನಾಲುಗಳಲ್ಲಿ ಈ ಪ್ರಾಂತ್ಯ ಸುತರಾಂ ಮಳೆ ಇಲ್ಲದೆ ಬರೀ ಬುಸ್ಸಿ ಯಾವ ಪೈರೂ ಆಗದೆ ಜನಗಳು ಬಹಳ ಕಷ್ಟವನ್ನು ಅನುಭವಿಸಿದರು. ಪರಾಭವ ನಾಲಿನಲ್ಲಿ ಮಾತ್ರ ಎಲ್ಲಿಯೋ ಹೊರೆಯ ಮೇಲೆ ಮಳೆ ಸುರಿದು ಕೆರೆ ತುಂಬಿ ಸಾಧಾರಣವಾದ ಒಂದು ತರಿ ಫಸಲು ಬಂದಿತು. ಆ ಹಿಂದಿನ ಕ್ಷಾಮ ಕಾಲದಲ್ಲಿ ಎಲ್ಲಾ ಪ್ರಾಂತ್ಯಗಳಲ್ಲಿಯೂ ಕ್ಷಾಮಕ್ಕೊಳಗಾದ ಜನಗಳಿಗೆ ಸರ್ಕಾರದಿಂದ ಅನೇಕ ಅನುಕೂಲಗಳು ಮಾಡಲ್ಪಟ್ಟವು. ಈ ಊರಿಗೆ ಯಾವ ಸಹಾಯವೂ ಆಗದೇ ಹೋಯಿತು. ಆ ಕಾಲದಲ್ಲಿ ಕಂದಾಯಕ್ಕೆ ನಾಲ್ಕು ತಿಂಗಳು ಮುಯಿದೆ ಕೊಟ್ಟದ್ದರ ಮೇಲೆ ಪರಾಭವನಾಲಿನಲ್ಲಿ ಆದ ತರಿ ಫಸಲನ್ನೆಲ್ಲಾ ವಿಕ್ರಯಿಸಿ ಎರಡು ನಾಲುಗಳ ಕಂದಾಯ ಮುಂತಾದ್ದನ್ನು ಕೊಟ್ಟು ಪೂರ್ವದ ಸ್ಥಿತಿಗೆ ಬಂದರು. ಹೋದ ಪ್ಲವಂಗ ಸಂವತ್ಸರದಲ್ಲಿ ಮಳೆ ಬಹಳ ಕಮ್ಮಿ ಆಗಿ ಕೆರೆಗೆ ನೀರು ಬರದೆ ತರೀ ಫಸಲಿಗೆ ಅವಕಾಶವಾಗಲಿಲ್ಲ. ಮುಂಗಾರು ಪೈರು ಸಹಾ ಕಾಲುಪಾಲಿಗಿಂತಲೂ ಕಡಿಮೆಯಾದ್ದರಿಂದ ಜನಗಳು ತೊಂದರೆ ಪಡುತ್ತಾ ಇದ್ದರು. ಈ ಕೀಲಕ ಸಂವತ್ಸರ ಹುಟ್ಟುತ್ತಲೇ ಸ್ವಲ್ಪ ಮಳೆ ಬಂತು. ಪ್ರಾರಂಭದಲ್ಲಿ ಸಂತೋಷ ಹುಟ್ಟಿ ಜನಗಳು ಹಾಕಿದ ಮುಂಗಾರು ಪೈರೆಲ್ಲಾ ಆ ಮೇಲೆ ಮಳೆ ಬರದೆ ಇದ್ದದ್ದರಿಂದ ಒಣಗಿಹೋಯಿತು. ರಾಗೀ ಪೈರೆಲ್ಲಾ ಮಳೆ ಇಲ್ಲದ್ದರಿಂದ ಒಣಗಿ ಕಸ್ತ್ರಗೆ ಆದದ್ದನ್ನು ದನಗಳನ್ನು ಬಿಟ್ಟು ಮೇಯಿಸಿದರು. ಪೈರಿನ ಸ್ಥಿತಿ ಹೀಗಾಯಿತು. ಮಳೆ ವಿಷಯ ಹೇಳೋಣವೆಂದರೆ ಈ ಸಂವತ್ಸರಕ್ಕೆಲ್ಲಾ ನಾಲ್ಕು ಇಂಚು ಮಳೆ ಆಗಿದೆ ಎಂದು ಈ ಊರಿನಲ್ಲಿರುವ ರೈನ್‌ಗೇಜಿನಿಂದ ತಿಳಿಯಬಂತು. ಆದರೂ ಭೂಮಿಗೆ ಹದವಾಗಲಿಲ್ಲ. ಕೆರೆಯ ಹಿನೀರಿನ ಭಾವಿಗೆ ಮನೆಮಂದಿಯೆಲ್ಲರೂ ಹೊತ್ತುಗೊತ್ತು ನೋಡದೆ ಹೋಗಿ ಅಲ್ಪಸ್ವಲ್ಪ ನೀರು ತರುತ್ತಾರೆ. ನೀರು ಸಿಕ್ಕದೆ ಬರುವವರು ಅನೇಕರುಂಟು. ಜಾನುವಾರುಗಳಾದರೋ ತಿನ್ನುವದಕ್ಕೆ ಹುಲ್ಲಿಲ್ಲದೆ ಕುಡಿಯುವುದಕ್ಕೆ ನೀರಿಲ್ಲದೆ ದಿನಂಪ್ರತಿ ಎರಡು ಮೂರು ರಾಸು ಪ್ರಾಣಬಿಡುತ್ತವೆ.—ಈ ಊರಿನ ಸಂತೆಯಲ್ಲಿ ರೂಪಾಯಿಗೆ ೫|—೬ ಸೇರು ಅಕ್ಕಿ ೯—೧೦ ಸೇರು ರಾಗಿ ಮಾರುತ್ತಾರೆ. ಇಲ್ಲಿ ಜೀವನಕ್ಕಿಲ್ಲದವರು ಕೊಳ್ಳುವದಕ್ಕೆ ದುಡ್ಡಿಲ್ಲದೆ ಕೂಲೀ ಮಾಡಿಸುವವರೂ ಇಲ್ಲದೆ ಇದ್ದದ್ದರಿಂದ ತೊಂದರೆ ಅನುಭವಿಸುವ ಕಾಲದಲ್ಲಿ ವರ್ಗಾಪಟ್ಟ ಅಮಲ್ದಾರ್ ಮೆ|| ನೀಲಾಯಿ ಅರಾಯರು ಬಂದು ಊರಿನ ಸ್ಥಿತಿಯನ್ನು ಮನೆ ಮನೆಗೂ ಹೋಗಿ ವಿಚಾರಿಸಿ ಅವರು ಎರಡು ಹೊತ್ತಿಗೆ, ಮೂರು ಹೊತ್ತಿಗೆ ಒಂದು ಊಟಮಾಡುವವನ್ನು ಕೇಳಿ ತುಂಬಾ ಕನಿಕರಪಟ್ಟು ಮೇಲಕ್ಕೆ ಶಿಫಾರಸು ಮಾಡುವುದಾಗಿ ಹೇಳಿ ಹೋಗಿ, ತತ್‌ಕ್ಷಣವೇ ಕೂಲಿ ಸಿಕ್ಕುವ ಹಾಗೆ ಏರ್ಪಾಡು ಮಾಡಲು ಸ್ಯಾನಿಟರಿ ಇನ್‌ಸ್ಪೆಕ್ಟರನ್ನು ಈ ಊರಿನ ಪಾಪಾಸುಕಳ್ಳಿಯನ್ನು ಕಡಿಸುವದಕ್ಕೆ ಕಳುಹಿಸಿ ಆ ಬಗ್ಗೆ ಸ್ವಲ್ಪ ಹಣವನ್ನು ಸ್ಯಾಂಕ್ಷನ್ ಮಾಡಿದ್ದರು. ಆ ಕೆಲಸ ಒಂದು ವಾರ ನಡೆದು ನಂತರ ನಿಂತುಹೋದ್ದರಿಂದ ಜನಗಳಿಗೆ ಕೂಲಿ ಇಲ್ಲ. ಸ್ವಾಡಿ ಕೆರೆ ಅಂಗಳಗಳಲ್ಲಿಯೂ, ಇನ್ನು ಬೊರಪ್ರದೇಶದಲ್ಲೂ ತಿರಿಗಿ ಕೀಪಿ ಗೆಡ್ಡೆಯನ್ನು ಅಗೆದು ತಂದು ಬೇಯಿಸಿ ತಿನ್ನುತ್ತಾರೆ. ಇದು ಕೂಡ ವಿಶೇಷವಾಗಿ ಸಿಕ್ಕುವದಿಲ್ಲವೆಂದು ಹೇಳುತ್ತಾರೆ. ಈ ಜನಗಳು ಕೀಪಿ ಗೆಡ್ಡೆಗೋಸ್ಕರ ಅಗೆದ ಸ್ಥಳಗಳಿಗೆ ಕೂಲೀ ಕೊಟ್ಟದ್ದರೆ ನೂರಾರು ರೂಪಾಯಿ ಆದರೂ ಸಾಲದು. ಇಂಥಾ ಪ್ರಾಪ್ತಿಯಾಗಿದೆ. ಈಚೆಗೆ ಡಿವಿಜನ್ ಸಾಹೇಬರವರು, ಡೆಪ್ಯುಟಿ ಕಮಿಷನರ್‌ರೇ ಮುಂತಾದವರು ಮೋಟಾರ್ ಗಾಡಿಯಲ್ಲಿ ಈ ಊರು ಮುಂದೆ ಬರಲು ಇವರುಗಳನ್ನು ಕಾಣಲು ಇಲ್ಲಿನ ಎಲ್ಲಾ ಕೋಮುಗಳ ಜನಗಳು ಈ ಊರಿಗೆ ಅರ್ಧ ಮೈಲಿ ದೂರದ ರಸ್ತೆ ಪಕ್ಕದಲ್ಲಿ ಕಾದಿದ್ದರು. ಜನಗಳ ಸಮೂಹವನ್ನು ನೋಡಿ ಆ ಗಾಡಿಗಳನ್ನು ನಿಲ್ಲಿಸಿ ಬ್ರಾಹ್ಮಣರುಗಳಿಂದ ಫಲಮಂತ್ರಾಕ್ಷತೆಗಳನ್ನು ತಗೆದುಕೊಂಡು ಪ್ರಜೆಗಳ ಅಹವಾಲುಗಳನ್ನು ಕೇಳಿ ಪೈರೆಲ್ಲಾ ಒಣಗಿ ಹೋದದ್ದನ್ನೂ, ಹುಲ್ಲು ಸಹಾ ಆಗುವ ಹಾಗೆ ಇಲ್ಲದ್ದನ್ನೂ ನೋಡಿ ಬಹಳ ಕರುಣದಿಂದ ಬಡ ಜನಗಳಿಗೆ ಕೂಲಿ ಸಿಕ್ಕುವ ಹಾಗೆ ಒಡೆದುಹೋದ ಆ ಕಟ್ಟೆಯನ್ನು ಕಟ್ಟಿಸುವದಕ್ಕೆ ಏರ್ಪಾಡು ಮಾಡುವದಾಗಿ ವಾಗ್ದಾನ ಮಾಡಿ, ಕೆರೆ ಏರಿಯ ಮೇಲೆ ಹೋಗಿರುವ ರಸ್ತೆಯಲ್ಲಿ ಹೋಗುವಾಗ, ನೀರಿಲ್ಲದೆ ಒಣಗಿ ಹೋಗಿದ್ದ ಕೆರೆಯನ್ನು ನೋಡಿಕೊಂಡು ಹುಳಿಯಾರು ಮಾರ್ಗವಾಗಿ ಅರಸೀಕೆರೆಗೆ ದಯಮಾಡಿದರು. ಆ ಕಟ್ಟೆ ಕಾಮಗಾರಿಯು ಇನ್ನು ಬಂದಿಲ್ಲ.—ಇಂಥಾದ್ದರಲ್ಲಿ ಊರಿನ ಸುತ್ತಮುತ್ತಲೂ ಮತ್ತು ಕೆರೆ ಹಿಂಭಾಗದಲ್ಲೂ ಅಪಾರವಾಗಿ ಬೆಳೆದಿರುವ ಪಾಪಾಸುಕಳ್ಳಿಯು ಊರನ್ನೇ ಬಿಡುವ ಹಾಗೆ ಮಾಡಿದೆ. ಕೆರೆ ಏರಿ ಹಿಂಭಾಗದಲ್ಲಿರುವ ಕಳ್ಳಿಯನ್ನು ಗ್ರಾಮಸ್ಥರೇ ತೆಗೆಯಬೇಕೆಂದು ತಗಾದೆ ಮಾಡುತ್ತಾ ಇದ್ದಾರೆ. ಇಂಥಾ ಕ್ಷಾಮಕಾಲದಲ್ಲಿ ಜೀವನ ಮಾಡುವದೇ ಕಷ್ಟವಾಗಿರುವಾಗ ಕಳ್ಳಿಯನ್ನು ತೆಗೆಯುವದು ಅಸಾಧ್ಯ. ಕೆರೆಯೇರೀ ಮೇಲೆ ಸರ್ಕಾರೀ ರಸ್ತೆ ಹೋಗಿದೆ. ಕೆರೇ ಅಂಗಳವೆಲ್ಲಾ ಅಮ್ರುತಮಹಲ್ ಕಾವಲಾಗಿದೆ. ಈಗ ೨೦ ೩೦ ವರುಷದಿಂದ ಬೆಳೆದಿರುವ ಕಳ್ಳಿಯನ್ನು ಮಾತ್ರ ಗ್ರಾಮಸ್ಥರು ತೆಗೆಯಬೇಕೆನ್ನುವದು ನ್ಯಾಯವಾಗಿ ಕಾಣಿಸುವುದಿಲ್ಲ. ಈ ದುರ್ಭಿಕ್ಷ ಕಾಲದಲ್ಲಿ ಸರ್ಕಾರದವರು ಊರಿನ ಸುತ್ತಲೂ ಮತ್ತು ಏರಿ ಹಿಂಭಾಗದಲ್ಲಿಯೂ ಇರತಕ್ಕ ಕಳ್ಳಿಯನ್ನು ತೆಗೆಸಿದರೆ ಗ್ರಾಮಸ್ಥರು ಮುಂದೆ ಬೆಳೆಯದಂತೆ ಕಾಪಾಡಿಕೊಂಡಾರು. ಈ ಊರಿನ ಅಲ್ಪಸ್ವಲ್ಪ ಬಾಗಾಯ್ತು ಜಮೀನುಗಳಲ್ಲಿರತಕ್ಕ ತೆಂಗಿನ ಮರಗಳಲ್ಲಿ ಎಟ್ಟೆಯಿಂದ ಹೂವು ಉದುರಿ ಫಲವಿಲ್ಲದೆ ಹೋಗಿರುವ ಮತ್ತು ಹೋಗುವ ವಿಷಯ ಹಾಗಿದ್ದರೂ ಸುಳಿ ಬೀಳದೆ ಮರಗಳು ಉಳಿಯುವದೇ ಕಷ್ಟವಾಗಿದೆ. ಈ ಕಾರ್ತೀಕ, ಮಾರ್ಗಶಿರ ಮಾಸಗಳಲ್ಲಿಯೇ ಹೀಗಿರುವಾಗ್ಗೆ ಇನ್ನೂ ಇರತಕ್ಕ ಆರು ತಿಂಗಳು ಪ್ರಚಂಡ ಬೇಸಿಗೆಯನ್ನು ಇಲ್ಲಿನ ಜನಗಳು ಮತ್ತು ಜಾನುವಾರುಗಳು ಕಳೆದುಕೊಳ್ಳುವದು ಕಷ್ಟ.—ಕಂದಾಯದ ಕಾಲವು ಸಮೀಪಿಸುತ್ತಾ ಬಂತು. ಪೈರಿಲ್ಲದ ಮೇಲೆ ಕಂದಾಯವನ್ನು ಯಾವ ರೀತಿ ಕೊಟ್ಟಾರು? ಜಮೀನುಗಳು ವಿಕ್ರಯಿಸುವುದಕ್ಕೆ ತೆಗೆದುಕೊಳ್ಳುವವರೇ ಇಲ್ಲ. ಸಾಲ ಕೊಡುವವರೂ ಇಲ್ಲ. ಈ ಸಂದರ್ಭದಲ್ಲಿ ಘನವನ್ನು ಹೊಂದಿರುವ ಗೌರ್ನ್‌ಮೆಂಟ್ ಮಹಾರಾಜಾ ಸರ್ಕಾರದವರು ಕೃಪೆಯಿಟ್ಟು ಇಲ್ಲಿನ ಜನಗಳ ಕಷ್ಟನಿವಾರಣೆ ಮಾಡುವವರಾಗಿ ನಂಬಿರುತ್ತೇವೆ.

ಬೌರಿಂಗ್‌ಪೇಟೆ.—ಕೆಲವು ವಾರಗಳ ಹಿಂದೆ ತಮ್ಮ ಪತ್ರಿಕೆಯ ಮೂಲಕ "ಗ್ರಾಮಾಂತರ ಸ್ಕೂಲ್ ಮಾಸ್ಟರುಗಳ ಕೊರತೆಗಳು" ಎಂಬ ಲೇಖನವು ಒಬ್ಬ ಪ್ರೇಕ್ಷಕರಿಂದ ಬರೆಯಲ್ಪಟ್ಟಿತು. ಕಾಲದ ಕೈ ಶಾಲೆಯ ಅಯ್ಯನವರೊಬ್ಬರೋ ಎಂಬಂತೆ ಅವರ ಲೇಖನದಲ್ಲಿ ತೋಟ, ತಳವಾರ, ನೀರಗಂಟಿ ಇವರುಗಳನ್ನು ಮರಕ್ಕೆ ಬಾಲಕರನ್ನು ಎರಡು ವೇಳೆ ಕರೆಯಲಿಕ್ಕೂ, ಡ್ರ್ಯಾಂಟ್ ಆಫೀಸಿನಿಂದ ಪುಸ್ತಕಗಳನ್ನು ತರಿಸಲಿಕ್ಕೂ, ಟಪ್ಪಾಲ್ ತಕ್ಕೊಂಡು ಹೋಗಲಿಕ್ಕೂ, ಮಾಸ್ತರುಗಳ ಸಲುವು ತರಿಸಲಿಕ್ಕೂ, ಕುಮ್ಮಕ್ಕಿಗೆ ಅವರ ದಾಗಬೇಕೆಂತಲೂ, ಸದರೀ ನೌಕರರು ಕೆಲಸವಿಲ್ಲದೆ ಸರ್ಕಾರಿ ಇನಾಂತಿ ಅನುಭವಿಸುತ್ತಿದ್ದಾರೆಂತಲೂ ಬರೆದಿರುತ್ತಾನೆ. ಸದರಿ ಲೇಖನದವರು ಈ ಅಲ್ಪ ನೌಕರರ ಸನ್ನಿವೇಶವನ್ನು ಅರಿಯದವರೆಂಬದಾಗಿ ಹೇಳಬಹುದಾಗಿದೆ. ಈ ಮೇಲ್ಪಟ್ಟ ಬಡ ನೌಕರರ ಕಷ್ಟವನ್ನು ನಿಜವಾಗಿ ಅರಿತ ಯಾರೊಬ್ಬರಾದರೂ ಆ ಲೇಖನವನ್ನು ಒಪ್ಪಲಾರರು. ಸದರೀ ನೌಕರರಿಗೆ (೧) ಊರು ಚಾಕರಿ, (೨) ಪಟೇಲರ ಚಾಕರಿ, (೩) ಶಾನುಭೋಗರ ಚಾಕರಿ, (೪) ಶೇಕದಾರರ ಚಾಕರಿ, (೫) ಪೋಲೀಸ್ ದಫೇದಾರರ ಚಾಕರಿ, (೬) ಜಮೇದಾರರ ಚಾಕರಿ, (೭) ತಾಲ್ಲೂಕ್ ಅಮಲ್ದಾರರು ಗ್ರಾಮಗಳ ಮೇಲೆ ಹೊರಟಾಗ ಹಾಜರಿ, (೮) ಹುಜೂರ್ ಆಫೀಸರುಗಳು ಬಂದಾಗ ಹಾಜರಿ, (೯) ರಾತ್ರಿಹೊತ್ತು ಒಬ್ಬರಿಯಲ್ಲಿ ಸರ್ವೀ, (೧೦) ಶೇಕದಾರರಿಂದ ತಾಲ್ಲೂಕಿಗೂ, ತಾಲ್ಲೂಕಿನಿಂದ ಶೇಕದಾರರಿಗೂ ಸರ್ಕಾರಿ ಮೊರೆಗೆ ಟಪ್ಪಾಲ್ ಚಾಕರಿ, (೧೧) ನೀರಗಂಟಿಗೆ ಕಾಲೆಂ ಕಾರ್ತೀಕ ವೈಶಾಖ ಸಾಗುವಳಿಯಾದರೆ ವರುಷವೆಲ್ಲಾ ಕಾಲೆಂ ಚಾಕರಿ, ಹೀಗೆಲ್ಲಾ ಇರುವಾಗ್ಯೆ ಅವರಿಗೆ ಕೆಲಸವಿಲ್ಲವೆಂಬದು ಯಾವ ನ್ಯಾಯ? ಅಲ್ಲದೆ ಸಂಬಳಕ್ಕೆ ಬರಬೇಕೆಂದು ಮೊಬ್ಬಾಗ ಹುಕುಂ ಕೊಟ್ಟು, ತಲುಬು ಕೊಡದೆ ಸತಾಯಿಸಿದರೆಂದು ಲೇಖನದಾರರು ಬರೆಯುತ್ತಾನೆ. ಸಂಧಿಸಿ, ನಿಂದಿಸಿ, ಮಾತಾಡಲು ಶಕ್ತರಾದ ನಾಗಿಯ ಆ ನ್ಯಾಯವರ

ವಾಹೇ ಹೀಗಾದರೆ ಅಂಚೆಯಿ ನೋಡುವ ಅಲ್ಪ ನೌಕರರ ಗತಿಯೇನಾಗಬೇಕೋ ಊಹಿಸಿಕೊಳ್ಳಬಹುದು. ಈ ಬಡ ನೌಕರರ ಇನಾಂತಿಗಳು ಇವರಿಗೆ ಸಾಗುವಳಿಗೆ ಫಲವತ್ತು ಇಲ್ಲದೆ ಬಂಜರು ಬಿದ್ದಿರುವವನ್ನು ನೋಡಬಹುದಾಗಿದೆ. ಉದಾಹರಣೆಗಾಗಿ ನುಳಿ ಬಿದ್ದ ಬೇಗ್ಗೆ ಇವನ ಇನಾಂತಿ ಜಮೀನಿಗೆ ನೇಗಲು ಕಟ್ಟಬೇಕೋ, ಬಾಂದುಗಳು ದುರಸ್ತು ಮಾಡಿಸಬೇಕೋ ; ಇಂಥಾ ವರ್ಕ್ಗಳು ಈ ಅಲ್ಪ ನೌಕರರಿಗೆ ಅನೇಕವಾಗಿರುತ್ತವೆ. ಸಾಲದ್ದಕ್ಕೆ ಶಾಲೆಯ ಅಯ್ಯನವರ ಚಾಕರಿ ಇವರ ಮೇಲೆ ಹೊರಿಸುವದು ಹ್ಯಾಗೆ ? ಈ ಸಾರಿ ದಸರ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಶಾನುಭೋಗ ಮುಂತಾದವರ ಪೋಟುಕೆಯನ್ನು ಹೆಚ್ಚಿಸುವ ವಿಷಯ ಚರ್ಚೆಯಾಯಿತು. ಈ ಬಡ ನೌಕರರ ವಿಷಯ ಏನೂ ನಡೆಯಲಿಲ್ಲವೆಂತ ಕಾಣುತ್ತೆ. ಇವರ ಜಮೀನು ಸಾಗುವಳಿಯಂತೂ ಹಾಗಾಯಿತು ಇವರ ಎರಡನೇ ವರಂಬಡಿಯಾದ ಮೇರೆ ಜುಲಾಸೆಯನ್ನು ನೋಡಿದರೆ ರೈತನು ಬತ್ತದ ಹೊಲಗಳ ಪೈರನ್ನೇ ಕೊಯುವೋ ಬರದೋ ಹುಲ್ಲುವಾಮೆಗೆ ಸೇರಿಸುವ ಗತಿಯಾಗಿದೆ. ರೈತನ ಕಣದಲ್ಲಿ ರಾಶಿಯೂ ಇಲ್ಲ, ತಳವಾರ, ತೋಟಿ, ನೀರುಗಂಟಿಗಳ ಮಿರಾಸೆಯೂ ಇಲ್ಲ. ಹೀಗಿರುವಲ್ಲಿ ಅವರ ಗತಿಯೇನು ? ದಯಾಪರರಾದ ಸರ್ಕಾರದವರು ಅವರ ಸಹಾಯಕ್ಕಾಗಿ ಯಾವದಾದರೂ ಒಂದು ಸಾಧನೆಯನ್ನು ಏರ್ಪಡಿಸ್ಯಾರೆಂತಲೂ, ಶಾಲೆಯ ಚಾಕರಿ ಇವರ ಮೇಲೆ ಹಾಕಲಾರರೆಂತಲೂ ನಂಬುತ್ತೇನೆ.—ಈ ಊರಿಗೆ ಹಾಲಿ ಇರುವ ಅಮಲ್ದಾರರು ಬಂದಲಾಗಾಯತಿನಿಂದ ಬಹಳ ಅಭಿವೃದ್ಧಿಗಳೂ, ಜನರ ಉಪಯೋಗವಾದ ಕಾರ್ಯಗಳೂ ನಡೆಸಲ್ಪಟ್ಟಿರುತ್ತವೆ. ಊರಿನಲ್ಲಿ ಅನೇಕ ದೊಡ್ಡ, ಸಣ್ಣ ರಸ್ತೆಗಳನ್ನು ಏರ್ಪಾಡು ಮಾಡಿ, ಒತ್ತಾದ ಮನೆಗಳು ಜನರಿಗೆ ಬಹಳ ಪ್ರಯೋಜನಕರವಾದ ಗಾಳಿ ಮತ್ತು ಬೆಳಕುಗಳನ್ನು ಹೊಂದುವಂತೆಯೂ, ಜನರ ಸಂಚಾರಕ್ಕೆ ಅನುಕೂಲವಾಗಿಯೂ, ಹಾವು ಚೇಳುಗಳಿಗೆ ರಾತ್ರಿಯ ವೇಳೆಯಲ್ಲಿ ಕಳ್ಳಕಾಕರರಿಗೂ ಆಶ್ರಯವಾಗಿದ್ದ ಹಳೇ ಗೋಡೆಗಳನ್ನು ನೆಲಸಮ ಮಾಡಿಸಿ, ಗಲೀಜಾಗಿದ್ದ ಹಾಳು ಸ್ಥಳಗಳನ್ನು ಸ್ವಚ್ಛವಾಗಿಯೂ, ರಾತ್ರಿಯ ವೇಳೆಯಲ್ಲಿ ಜನರಿಗೆ ಬೆಳಕು ಕೊಡುವಂತೆ ಮುನಿಸಿಪಲ್ ಲಾಂದ್ರಗಳನ್ನು ಅವಶ್ಯವಾದ ಸ್ಥಳಗಳಲ್ಲಿ ಹೆಚ್ಚಿಸಿ, ರಸ್ತೆಗಳನ್ನು ಶೋಭಾಯಮಾನ ಮಾಡಿಸಿರುತ್ತಾರೆ. ಇವರು ಬಂದ ಲಾಗಾಯ್ತು ಊರಿನ ಆಜೂ ಬಾಜೂ ಮತ್ತು ರಸ್ತೆಗಳ ಪಕ್ಕದಲ್ಲಿದ್ದ ನಾಗದಾಳಿಗೆ ತಲೆಸೋಪು ಬಂತೆಂದು ಹೇಳಬಹುದಾಗಿದೆ. ಅಲ್ಲದೆ ಈ ಊರಿನಲ್ಲಿರುವ ಎಡ್ವರ್ಡ್ ಹಾಲ್ ಕಾಂಪೌಂಡನ್ನು ಹೊರಗಿನ ಗಿಡಗಳಿಂದಲೂ ಒಂದು ವಾಟರ್ ಫೌಂಟೆನ್ನೂ ಗಾರೆಯ ಸೀಮು ತೊಟ್ಟಿಯನ್ನೂ ಏರ್ಪಡಿಸಿ ಉತ್ತಮ ಗೇಟು ಭಾಗಗಳನ್ನಿಡಿಸಿ ಬಹಳ ಅಲಂಕಾರ ಮತ್ತು ಅಭಿವೃದ್ಧಿಗಳನ್ನು ಮಾಡಿಸಿರುತ್ತಾರೆ. ಅಲ್ಲದೆ ಸದರೀ ಕಾಂಪೌಂಡಿನ ಮತ್ತು ವಾರಂಪ್ರತಿವಾರದಲ್ಲಿಯೂ ಸಂತೆಗೆ ಕೂಡಿ ಬರತಕ್ಕ ಸಹಸ್ರಾರು ಜನಗಳ ಕುಡಿಯುವ ನೀರಿನ ಸರಬರಾಯಿಗೋಸ್ಕರವೂ ಒಂದು ಭಾವಿಯನ್ನು ಈ ಅವರಣದ ಒಂದು ಮೂಲೆಯಲ್ಲಿ ಪ್ರಾರಂಭಿಸುವದು ಸ್ತೋತ್ರಾರ್ಹವಾಗಿರುತ್ತೆ. ಜನಗಳ ಪ್ರಯೋಜನಾರ್ಥ ಇವರು ಪ್ರಾರಂಭಿಸಿರುವ ಇಂಥಾ ಕಾರ್ಯಕ್ಕಾಗಿ ಈ ಭಾವಿಯನ್ನು ಪೂರೈಸಲು ಅನುಕೂಲವಾದ ನೆಲ, ಜಲ ದೊರಕಬೇಕಾಗಿದೆ. ಇವರು ಮಾಡುತ್ತಿರುವ ಉತ್ತಮ ಕಾರ್ಯಗಳು ಪೂರ್ಣ ಚಂದ್ರಾಕಾರಕ್ಕೆ ಬರಬೇಕಾಗಿದ್ದರೆ ಮಾಡಬೇಕಾದ ಇನ್ನೂ ಹಲವು ಕಾರ್ಯಗಳು ಇರುತ್ತವೆ. ಯಾವೆಂದರೆ, ಸಂತೆ ಕೂಡುವ ಸ್ಥಳದಲ್ಲಿ ಜನರಿಗೆ ನೆರಳಾಗುವಂತೆ ಅಲ್ಲಲ್ಲಿ ಬೆಳೆಯತಕ್ಕ ಬಸರಿ ಮತ್ತು ಹೂವರಸಿ ಕೊಂಬೆಗಳನ್ನು ನಿಡಿಸಿ ಅಭಿವೃದ್ಧಿಗೆ ತರಬೇಕಾಗಿದೆ. ಅಲ್ಲದೆ ಸದರೀ ಸಂತೆಯ ಜನಗಳ ಉಪಯೋಗಕ್ಕಾಗಿ ಒಂದು ಕಕ್ಕಸನ್ನು ಕಟ್ಟಿಸಿ ಆಜೂ ಬಾಜೂ ಜನಗಳ ಆರೋಗ್ಯಕ್ಕೆ ಕುಂದಕ ಪಡಿಸುತ್ತಿರತಕ್ಕ ಗಲೀಜನ್ನು ತಪ್ಪಿಸುವದು ಅತಿ ಅವಶ್ಯಕವಾಗಿರುತ್ತೆ. ಬೋರ್ಡ್ ಆಫ್ ಫಂಡ್ ಆಸ್ಪತ್ರೆಗೂ ಸಿಪಾಯಿಗಳ ಮತ್ತು ಪೋಲೀಸ್ ಲೈನುಗಳ ಪಕ್ಕದಲ್ಲಿ ಊರಿನ ಮಧ್ಯದಲ್ಲಿ ಸಿಪಾಯಿಯೋಪಾಧಿಯಲ್ಲಿರುವ ನಾಗದಾಳಿಯನ್ನು ಸಹ ಪಡಿಸತಕ್ಕದ್ದಾಗಿದೆ. ಆ ಭೂಮಿಯು ಪಾಠಶಾಲಾ ಪ್ರವೇಶದವರೂ ಕಾಲು ಪ್ರಕಾರದಿಂದಲಾದರೂ ತೆಗೆಸುವದು ಅವಶ್ಯಕವಾಗಿದೆ. ತಮ್ಮ ಪತ್ರಿಕೆಯಲ್ಲಿ ಕ್ರಮವನ್ನು ಕುರಿತು ಆಗಲೇ ಅನೇಕರು ಬರೆದಿರುವದರಿಂದ ಲೇಖನವು ಕ್ಷಿಪ್ತವಾಗುವಂತೆ ಸದರೀ ಸಂಗತಿಯನ್ನು ಬರೆಯುವದು ಆವಶ್ಯಕವಿಲ್ಲವೆಂತ ಕಾಣುತ್ತೆ.

ಶಿಕಾರಿಪುರ.—ತಾವು ಕಳೆದ ವಾರ ವೃತ್ತಾಂತ ಪತ್ರಿಕೆಯ ಸಪ್ಲಿಮೆಂಟಾಗಿ ಕಳುಹಿಸಿದ ಪತ್ರಪತ್ರ ಓದಿರುವ ಸರ್ವ ಮಹಾಶಯರಿಗೂ ಖೇದವನ್ನುಂಟು ಮಾಡಿರುವುದರಲ್ಲಿ ಸಂಶಯವಿಲ್ಲ. ಇದರಿಂದ 'ಚೇಲಿಯೇ' ಎಂದು ಸೂಲನೀಯರು ಎಂಬ ಪಾಮರಿಗೆ ಸುಲಭವಾಗಿ ಭಗವಂತನು ಅನುಗ್ರಹಿಸಿರುವ ಬುದ್ಧಿ ಮತ್ತು ಸ್ವಾತಂತ್ರ್ಯಗಳೇ ಇಲ್ಲದಂತಾಗಿ, ಅನನ್ಯ ಹೆಚ್ಚು ಹಿಡಿಸುವಿಕೆ ಮತ್ತು ಕಷ್ಟಗಳಿಗೆ ಆಸ್ಪದವಾಗಿದೆ ಎಂಬುವವರಲ್ಲಿ ಸಂದೇಹವೇನು ? ಬಡವರ ಬಾಳೇ ಈ ಕಷ್ಟಕಾಲದಲ್ಲಿ ಮತ್ತೂ ಸಂಕಷ್ಟಸ್ಥಿತಿಗೆ ಬಂತು.—ಈ ಊರಲ್ಲಿರುವ ಕಟುಕರು ಉತ್ತಮ ಮತ್ತು ಕೆಟ್ಟ ತರದ ಮಾಂಸ ಸೇರಿಗೆ ಒಂದೇ ದರವನ್ನೇ ನೇಮಿಸಿದ್ದಾರೆಂದೂ, ಈ ಅನ್ಯಾಯ ವಿಚಾರಿಸುವದಕ್ಕೆ, ಕಾಸಿಗೆ ತಕ್ಕ ಕೂಳ ಎನ್ನುವುದೂ ಹೆಚ್ಚು ಕಮ್ಮಿ ಬಟ್ಟಗಳು ವಸ್ತುಲ್ಲಿದೆಯೆಂದು ಹೇಳುತ್ತಾರೆಂದೂ, ಮುಖನೋಡಿ ಮಣೆ ಹಾಕು ಎಂಬುದಕ್ಕೆ ಅನುಗುಣವಾಗಿ ಅವರವರ ದೊಡ್ಡಸ್ತಿಕೆಗೆ ಸರಿಯಾಗಿ ಪಕ ಪಾರಗಳು ನಡೆಯುತ್ತಿವೆಯೆಂದೂ ಬಿಬಿನದ ವರ್ತಮಾನ ಉಂಟಾಗಿದೆ. ಈ ವಿಷಯ ತಾಲ್ಲೋಕು ಅಮಲ್ದಾರರು ಗಮನಿಸುವದೂ, ಡಾಕ್ಟರವರೇ ಕೊಯಿಸಿದನ್ನು ಪರೀಕ್ಷಿಸಿ ಅದರ ಯೋಗ್ಯತಾನುಸಾರ ದರಗಳನ್ನು ನೇಮಿಸುವದೂ ಆದರೆ ಅನೇಕ ಬಡವರಿಗೆ ಸಹಾಯ ಕೊಟ್ಟಂತಾಗುತ್ತೆ.—ಇಲ್ಲಿರುವ ರೇಂಜರ್ ಮ್ಯಾ. ಪಿ. ಉತ್ತಮಯ್ಯನವರು ಅವರ ವಿವಾಹಿತ ಕೆಲಸ ಕಾರ್ಯಗಳಲ್ಲಿ ನಿಜವಾದ ಮನಸ್ಸನ್ನೂ ಆಸಕ್ತಿಯನ್ನೂ ತೋರಿಸುವವರೂ ಆಗಿದ್ದಾರೆ. ಇವರನ್ನು ಊರಿನಲ್ಲಿ ಕಾಣುವದೇ ಅಪೂರ್ವ. ಇಷ್ಟು ಮಾತ್ರವಲ್ಲದೆ ಇವರು ವರ್ಷಸಿದ್ಧರೂ, ಇವರ ಹಿಂದೆ ಬಂದವರೆಲ್ಲಾ ಇವರು ಜ್ಞಾನಿ ಬಿದ್ದಿರುವದು ಕೇವಲ ತೋರಿಕೆಯದೇ ಸರಿ. ಇವರು ಕೂಡಿಸಿದ ಗಂಧದ ಮರಗಳಿಂದ ಸರಕಾರಕ್ಕೆ ಲಾಭ ಉತ್ಪತ್ತಿಯುಂಟಾಗಿದೆ.—ಕಳೆದ ತಾ ಭಾನುವಾರ ಮಂಗಳವಾರದ ಪೇಟೆಯ ಲಿಂಗಾಯತ ಮಹನೀಯರಿಗೆಲ್ಲಾ ರತ್ನಪ್ರಾಯರಾಗಿಯೂ, ಮುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳ ಮೆಂಬರರಾಗಿಯೂ ಇದ್ದ ಮೆ॥ ಹಲಕಟ್ಟಿ ವೀರಬಸಪ್ಪನವರು ಸ್ವರ್ಗಸ್ಥರಾದರೆಂದು ತಿಳಿಸಲು ಕೇವಲ ವ್ಯಸನಪಡುತ್ತೇನೆ. ಇವರು ಭಾರಿ ಕಂದಾಯದಾರರಾಗಿಯೂ, ಪ್ರಜಾಪ್ರತಿನಿಧಿ ಸಭೆಗೆ ಒಂದೆರಡು ಸಾರಿ ಹೋಗಿಬಂದವರಾಗಿಯೂ, ಜನವಾಗಳ ಪ್ರಜೆಗಳ ಕ್ಷೇಮವನ್ನೇ ಹಾರೈಸುವವರಾಗಿಯೂ, ಸಮ್ಯಾಗ ಸಂಪನ್ನರಾಗಿಯೂ ಇದ್ದರು. ಭಗವಂತನು ಇವರ ಪತ್ನಿಯರಿಗೂ, ಸಣ್ಣ ಮಕ್ಕಳಿಗೂ ಉಂಟಾಗಿರುವ ಸಂಕಟವನ್ನು ಪರಿಹರಿಸಿ, ಇವರ ಅನುಜರಿಗೆ ಸುಬುದ್ಧಿ ದಯಪಾಲಿಸಿ, ಈ ಮನೆಯ ಆಡಳಿತವನ್ನೆಲ್ಲಾ ಕ್ಷೇಮಕರವಾಗಿ ನಡೆಸುವವರಾಗಬೇಕೆಂಬುವದೇ ನನ್ನರ ಪ್ರಾರ್ಥನೆಯಾಗಿದೆ.—ಇಲ್ಲಿಗೆ ಹೊಸ್ದಾಗಿ ವರ್ಗವಾಗಿ ಬಂದಿರುವ ಪೋಸ್ಟ್ ಮಾಸ್ಟರ್ ಮ್ಯಾ॥ ಕೆ. ರಂಗೈಯನವರು ಕೇವಲ ಸಾಧುಗಳಾಗಿಯೂ, ಸಜ್ಜನ ಪ್ರಿಯರಾಗಿಯೂ, ಕೆಲಸವನ್ನು ಮುತುವರ್ಜಿಯಿಂದ ನಡೆಸುವವರಾಗಿಯೂ ಇದ್ದಾರೆ.—ಕಳೆದ ವಾರ ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಿವಿಲ್ ಸರ್ಜನ್ ಮೆ॥ ಉಸ್ಮಾನ್ ಸಾಹೇಬರು ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ರಾಜೋಜಿರಾಯರೊಂದಿಗೆ ದಯಮಾಡಿ ಟೌನ್ ನೋಡಿಕೊಂಡು ತಿರುಗಿ ರೋಡು ಮತ್ತು ಹಿಂದಿನ ಸ್ಥಾನದಂತೆ ಪುಟ್ಟಬಸಪ್ಪನ ಮನೆಯ ಮಗ್ಗುಲಿನ ಸರಕಾರಿ ಓಣಿಯನ್ನೇ ರಸ್ತೆಯನ್ನಾಗಿ ಮಾಡುವ ವಿಷಯದಲ್ಲಿ ಸಮುಕ್ತತನವನ್ನು ದಯಪಾಲಿಸಿ ತೆರಳಿದರೆಂದು ವರ್ತಮಾನ.—ನಾನಾ ರೀತಿಯಾಗಿ ಈ ಕಡೆಗಳಿಂದ ಸಾಗಿ ಹೋಗುತ್ತಿರುವ ಭತ್ತವನ್ನು ತಡೆಯುವದಾದರೆ, ಈ ಶಿವಮೊಗ್ಗಾ ಡಿಸ್ಟ್ರಿಕ್ಟಿಗೇನೇ ಅರ್ಧ ಕ್ಷಾಮವನ್ನು ಹೋಗಲಾಡಿಸಿದಂತಾಗುತ್ತೆ.

ರಾಜದ್ರೋಹವನ್ನು ಅಡಗಿಸುವ ಕಾನೂನು.

ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯು.

ಕಳೆದ ತಾ. ೧೧ನೇ ಶುಕ್ರವಾರ ಮಧ್ಯಾಹ್ನ ಕಲ್ಕತ್ತಾ ಪಟ್ಟಣದಲ್ಲಿ ವೈಸ್‌ರಾಯಿ ಯವರ ಮಂತ್ರಾಲೋಚನಾ ಸಭೆಯು ಜರುಗಿತು. ವೈಸ್‌ರಾಯಿ ಲಾರ್ಡ್ ಮಿಂಟೋ ಯವರು ಸಭಾನಾಯಕರಾಗಿದ್ದರು. ಸರ್ಕಾರಿ ಮೆಂಬರುಗಳೂ ಬಂಗಾಳಾ ಲೆಫ್ಟಿನೆಂಟ್ ಗವರ್ನರವರೂ ಹಾಜರಾಗಿದ್ದರು. ಪ್ರಜಾಪಕ್ಷದ ಮೆಂಬರುಗಳ ಪೈಕಿ ಡಾ॥ ರಾಸ್ ಬಿಹಾರಿ ಘೋಸ್, ಮೆ ಎ. ಎ. ಅಬ್ಬಾರ್, ಢಕ್ಕಾ ನವಾಬರು, ಮೌಂಗ್ ಬಾ ಟೂ, ಮೆ. ಮಾರ್ಶಲ್, ದರ್ಭಾಂಗ ಮಹಾರಾಜರವರು, ಮಹಮದಾಬಾದಿನ ರಾಜರು, ಮೆ ಗೋಖಲೆ ಮೆಕ್ಡೊನಾಲ್ಡ್, ಅಂಡ್ರ್ಯೂ, ದಾದಾಭಾಯಿ, ಸಾಕ್ಷಿ ಯವರು ಹಾಜರಾಗಿದ್ದರು. ನೋಟಕರಾಗಿ ಕೆಲವು ದೇಶದ ಮನುಷ್ಯರೂ ಹೋಗಿದ್ದರು.

ಬಂಗಾಳಾದಲ್ಲೂ ಪೂರ್ವ ಬಂಗಾಳಾ ಮತ್ತು ಅಸ್ಸಾಂನಲ್ಲೂ ರಾಜದ್ರೋಹ ಕೃತ್ಯಗಳನ್ನು ತಡೆದು ಅಡಗಿಸುವದಕ್ಕಾಗಿ ಸರ್ ಹಾರ್ವೆ ಆಡಮ್ಸನ್ ಎಂಬ ಸರ್ಕಾರಿ ಮೆಂಬರು ಒಂದು ಮಸೂದೆ ಕಾನೂನನ್ನು ಮೆಂಬರುಗಳಿಗೆ ತಿಳಿಸಿ, ಅದು ಅದೇ ದಿವಸ ಸಭೆಯಲ್ಲಿ ಕಾನೂನ್ ಆಗಬೇಕೆಂದು ಸೂಚಿಸಿದರು. ಆಗ ಈ ಕಾನೂನಿನ ಉದ್ದೇಶವನ್ನೂ ಅದು ಆಗಬೇಕೆನ್ನುವುದಕ್ಕೆ ಕಾರಣಗಳನ್ನೂ ಬಿಚ್ಚಿ ಅವರು ಮಂತ್ರಾಲೋಚನಾ ಸಭಿಕರಿಗೆ ಹೇಳಿದ ಮುಖ್ಯಾಂಶವೇನೆಂದರೆ :—

ರಾಜದ್ರೋಹಾಪರಾಧಗಳನ್ನು ಬೇಗ ಬೇಗನೆ ವಿಚಾರಣೆ ಮಾಡಿ ಶಿಕ್ಷೆ ಮಾಡುವುದಕ್ಕೆ ಕಾನೂನ್ ಆಗಬೇಕಾದದ್ದು ಈಚೆಗೆ ಪದೇ ಪದೇ ಕೃತ್ಯಗಳಿಂದ ಅವಶ್ಯವೆಂದು ಗೊತ್ತಾಗಿದೆ. ಇಲ್ಲವಾದರೆ ರಾಜದ್ರೋಹವನ್ನು ಅಡಗಿಸುವುದು ಸಾಧ್ಯವಿಲ್ಲ. ಈ ಹೊಸ ಕಾನೂನಿನ ಪ್ರಕಾರ ಕೆಲವು ಅಪರಾಧಗಳನ್ನು ವಿಚಾರಣೆ ಮಾಡುವುದಕ್ಕೆ ಹೈಕೋರ್ಟಿನ ಮೂರು ಮಂದಿ ಜಡ್ಜಿಗಳು ನೇಮಕವಾಗುವರು. ಪ್ರಾರಂಭದಲ್ಲಿ ಅಪರಾಧಿಗಳನ್ನು ಮ್ಯಾಜಿಸ್ಟ್ರೇಟರು ತನಿಖೆ ಮಾಡುವುದು ಹಾಗಲಿ, ಸೆಷನ್ಸ್ ಜಡ್ಜರು ವಿಚಾರಣೆ ಮಾಡುವುದಾಗಲಿ, ಅಪರಾಧಿಯು ಕೈಸಿಯತ್ತು ತೆಗೆದುಕೊಳ್ಳುವುದಾಗಲಿ ಇಲ್ಲ. ಸೂಕ್ತವೆಂದು ಬಂದ ಕೂಡಲೇ ಮ್ಯಾಜಿಸ್ಟ್ರೇಟರು ಫಿರ್ಯಾದಿ ಏನೆಂಬದನ್ನು ತನಿಖೆ ಮಾಡಿ, ಮೇಲ್ಕಂಡ ಮೂರು ಜಡ್ಜಿಗಳ ಬಳಿಗೆ ವಿಚಾರಣೆ ಬಗ್ಗೆ ಸೂಕ್ತವೆಂಬುದನ್ನು ಕಳುಹಿಸುವರು. ಈ ಜಡ್ಜಿಗಳ ಫೈಸಲ್ ಮೇಲೆ ಅಪೀಲ್ ಇರುವುದಿಲ್ಲ. ಮತ್ತು ಈ ಕಾನೂನಿನಲ್ಲಿ ಇನ್ನೊಂದು ಹಿರಿದಾದ ವಿಶೇಷವುಂಟು. ಅಪರಾಧಿಯ ಮೇಲೆ ಜರುಗಿಸಲ್ಪಟ್ಟ ಮೊಕದ್ದಮೆಯಲ್ಲಿ ಹೊಸ ಸಾಕ್ಷಿಗಳೂ ರುಜುವಾತೂ ದೊರಕುವದಾಗಿದ್ದ ಪಕ್ಷದಲ್ಲಿ ಆ ಅಪರಾಧಿಯನ್ನು ಹಾಜರ್ ಮಾಡಿಸುವ ಆವಶ್ಯಕತೆಯಿಲ್ಲ. ತನಿಖೆ ನಡೆಯುವಾಗ್ಗೆ ಸಾಕ್ಷಿಗಳು ಮ್ಯಾಜಿಸ್ಟ್ರೇಟರ ಮುಂದೆ ಒಂದಾವರ್ತಿ ಹಾಜರಾಗಿ ಬರೆದಿದರೆ, ಅಂಥಾ ಸಾಕ್ಷಿಗಳು ಸತ್ತುಹೋದಾಗ್ಗೂ ಅವರಾ ಆನವನ್ನು ಮತ್ತೆ ಹಾಜರ್ ಮಾಡಲಿಕ್ಕಾಗದ ಹೋದಾಗ್ಗೂ ಅವರು ಮ್ಯಾಜಿಸ್ಟ್ರೇಟರ ಮುಂದೆ ಬರೆಸಿದ ಸಾಕ್ಷಿಯನ್ನು ಹೈಕೋರ್ಟಿನವರು ಸಾಕ್ಷ್ಯವಾಗಿ ಅಂಗೀಕರಿಸುವರು.

ಈ ಕಾನೂನಿನ ಎರಡನೇ ಭಾಗವೇನೆಂದರೆ—ಅಕ್ರಮ ಕೂಟಗಳನ್ನು ಅಡಗಿಸುವುದು. ಯಾವ ಸಂಘದಲ್ಲಿ ಮೆಂಬರುಗಳು ಕ್ರೂರಕೃತ್ಯಗಳನ್ನು ನಡೆಸುವುದಕ್ಕೆ ಪ್ರೋತ್ಸಾಹ ಸಹಾಯ ಸಹಾಯಾದಿಗಳನ್ನು ಕೊಡುವರೋ, ಅಂಥಾ ಸಂಘಕ್ಕೆ ತಿಳಿದಾಗಲಿ ತಿಳಿಯದೆ ಆಗಲಿ ಯಾವ ವಿಧವಾಗಿಯಾದರೂ ಸಹಾಯ ಮಾಡುವರೋ ಅಂಥವರಿಕ್ಕೆಲ್ಲಾ ಬಹಳ ಕಠಿಣವಾಗಿ ಶಿಕ್ಷೆ ಕೊಡುವುದಕ್ಕೆ ಈ ಕಾನೂನ್‌ನಿಂದ ಅಧಿಕಾರ ಉಂಟಾಗುವುದು.

ಇಂಡಿಯಾ ಸಂಘಗಳು ಅಕ್ರಮವಾದವುಗಳೆಂದು ನಿರ್ಧರಿಸುವುದಕ್ಕೂ, ಮೊದಲು ಬಂಗಾಳಾ, ಪೂರ್ವಬಂಗಾಳಾ ಮತ್ತು ಅಸ್ಸಾಂ ಪ್ರಾಂತ್ಯಗಳಲ್ಲಿ ಈ ಕಾನೂನನ್ನು ಪ್ರಥಮತಃ ಜಾರಿಯಲ್ಲಿ ತರುವುದಕ್ಕೂ, ಅವಶ್ಯಕತೆ ಕಂಡ ಕಡೆಗಳಲ್ಲೆಲ್ಲಾ ಇನ್ನು ಮುಂದೆ ಜಾರಿಗೆ ತರುವುದಕ್ಕೂ ಈ ಕಾನೂನು ಸಭಾ ಸಮೇತ ರಾಜ ಗವರ್ನರ್ ಜನರಲ್‌ರವರಿಗೆ ಸಂಪೂರ್ಣಾಧಿಕಾರವನ್ನು ಕೊಡುವುದು.

ಸರ್ ಹಾರ್ವೆ ಆಡಮ್ಸನ್‌ರವರು ಈ ಕಾನೂನನ್ನು ವಿವರಿಸಿ, ಹಿಂದೂಸ್ಥಾನದಲ್ಲಿ ಒಂದು ವರುಷದಿಂದ ನಡೆಯುತ್ತಾ ಬಂದಿರುವ ಕ್ರೂರ ಕೃತ್ಯಗಳನ್ನು ಒಂದೊಂದಾಗಿ ಹೇಳಿದರು. ಗವರ್ನರುಗಳನ್ನು ಕೊಲ್ಲಬೇಕೆಂದೂ, ಮ್ಯಾಜಿಸ್ಟ್ರೇಟರೇ ಮೊದಲಾದ ಅಧಿಕಾರಿಗಳನ್ನು ಕೆಡಿಸುವದಕ್ಕೆಂದೂ ಕ್ರೂರಕೃತ್ಯಗಳು ಮಾಡಿದ ಪ್ರಯತ್ನಗಳೂ, ರೈಲ್ ಗಾಡಿಗಳೂ ಮನೆಗಳೊಳಕ್ಕೂ ಅಧಿಕಾರಿಗಳ ಬಂಗಲೆಗಳಿಗೆ ಬಾಂಬ್ ಎಂಬ ಸಿಡಿ ಮದ್ದಿನ ಗುಂಡುಗಳನ್ನು ಹಾಕಿದ್ದೂ, ಮ್ಯಾಜಿಸ್ಟ್ರೇಟರನ್ನು ಕೊಲ್ಲಬೇಕೆಂದು ಎಸೆದ ಗುಂಡು ತಪ್ಪಿ ಕಾಯಿಯಕ್ಕೂ ಬ್ಬರು ಮೃತಪಟ್ಟದ್ದೂ, ಫಿತೂರಿ ಗುಂಪು ಸಿಕ್ಕಿಬಿದ್ದದ್ದೂ, ಮ್ಯಾಜಿಸ್ಟ್ರೇಟರ ಬಳಿಗೆ ಅಂಚೆಯ ಮೂಲಕ ಗುಂಡನ್ನು ಭಾಂಗಿನವಾಗಿ ಕಳುಹಿಸಿಕೊಟ್ಟದ್ದೂ, ಲೆಫ್ಟಿನೆಂಟ್ ಗವರ್ನರವರನ್ನು ಕೊಲ್ಲಬೇಕೆಂದು ನಾಲ್ಕಾವರ್ತಿ ಪ್ರಯತ್ನಪಟ್ಟದ್ದೂ, ಸಾಕ್ಷಿಗಳನ್ನೂ ಪೋಲೀಸ್ ಅಧಿಕಾರಿಗಳನ್ನೂ ಕೊಂದುಹಾಕಿದ್ದೂ, ಇವು ಗಳನ್ನೆಲ್ಲಾ ವಿವರಿಸಿ ಹೇಳಿದರು. ಇವುಗಳನ್ನೆಲ್ಲಾ ನೋಡಿದರೆ ಫಿತೂರಿಯು ವಿಸ್ತಾರವಾದದ್ದು ಹಬ್ಬಿ ಹರಡುತ್ತಿರುವುದಾದ್ದರಿಂದ ಅದನ್ನು ಮೊಳಕೆಯಲ್ಲೇ ಕಿತ್ತು ಹಾಕಬೇಕೆಂತಲೂ, ಇದಕ್ಕಾಗಿ ಈ ಕಾನೂನ್ ಆಗಬೇಕಾಗಿದೆ ಎಂತಲೂ ತಿಳಿಸಿದರು. ವಿದ್ಯಾವಂತರು ಸಹ ಅದರಿಂದ ವಿದ್ಯಾರ್ಥಿಗಳಿಗೆ ನಾನಾ ತರದ ದುರ್ಬೋಧನೆಗಳನ್ನು ಮಾಡಿ ಅದರಿಂದ ಈ ಅಕೃತ್ಯಗಳನ್ನು ಮಾಡಿಸುತ್ತಿದ್ದಾರೆ. ಆ ಹುಡುಗರ ತಂದೆ ತಾಯಿಗಳು ಈ ರೀತಿ ತಮ್ಮ ಮಕ್ಕಳು ಕೆಟ್ಟು ಹೋಗುತ್ತಿದ್ದಾರೆಂದು, ದುಷ್ಟರನ್ನು ಓದಿಸಿ ಅವರ ಘಾತುಕ ಕೃತ್ಯಗಳನ್ನು ಅಡಗಿಸಿ ಅವರ ಕೈಗೆ ದುಡುಗಾಯ ದೊರಕದಂತೆ ಮಾಡಬೇಕೆಂದೂ ಕೇಳಿ ಕೊಳ್ಳುತ್ತಿದ್ದಾರೆ. ಈ ದುಷ್ಟರ ವರಕ್ಕೆ ಸಿಕ್ಕಿ ಅನೇಕಕಾಲ ಮನಸ್ಸುಳ್ಳ ಸಭ್ಯ ಪ್ರಜೆಗಳು ದುಷ್ಟಾಯುಕ್ತ ಪ್ರವರ್ತಕರಾಗುತ್ತಿರುವರು. ಮೇಲ್ಕಂಡ ಕ್ರೂರ ಕೃತ್ಯಗಳನ್ನು ನಡಿಸಿದವರೂ, ಪ್ರಯತ್ನಪಟ್ಟವರೂ ಎಲ್ಲಾ ಸ್ಕೂಲುಗಳಲ್ಲಿ ಓದುತ್ತಿರುವಂಥಾ ಚಿಕ್ಕ ವಯಸ್ಸಿನ ಹುಡುಗರಾಗಿರುತ್ತಾರೆ.

ಗವರ್ನ್‌ಮೆಂಟಿನವರು ರಾಜದ್ರೋಹಕರವಾದ ವಿನಾಟಂಗಗಳನ್ನು ನಿಲ್ಲಿಸುವುದಕ್ಕೆ ಕಾನೂನ್ ಮಾಡಿ ಜಾರಿಗೆ ತಂದರು. ಇದರಿಂದ ದುಷ್ಟರು ಊರಿಂದೂರಿಗೆ ಹೋಗಿ ವಿನಾಟಂಗಗಳನ್ನು ನಡಿಸುವುದೂ, ಚಿಕ್ಕ ವಯಸ್ಸಿನ ವಿದ್ಯಾರ್ಥಿಗಳಿಗೆ ದುರ್ಬೋಧನೆಗಳನ್ನು ಮಾಡಿ ಕೆಡಿಸುವುದೂ, ರಾಜದ್ರೋಹಕರವಾದ ಉಪನ್ಯಾಸಗಳನ್ನು ಮಾಡುವುದೂ ನಿಂತುಹೋಯಿತು. ಎರಡನೆಯದಾಗಿ ಗವರ್ನ್‌ಮೆಂಟಿನವರು ಕ್ರೂರ ಕೃತ್ಯಗಳ ಪ್ರೋತ್ಸಾಹಕರಿಗೆ ಶಿಕ್ಷೆ ವಿಧಿಸುವಹಾಗೆ ಕಾನೂನ್ ಮಾಡಿಟ್ಟರು. ಇದರಿಂದ ವರ್ತಮಾನಪತ್ರಿಕೆಗಳಲ್ಲೂ ನೋಟೀಸುಗಳ ಮೂಲಕವೂ ಉಪನ್ಯಾಸಗಳ ಮೂಲಕವೂ ಕ್ರೂರ ಕೃತ್ಯಗಳನ್ನು ನಡಿಸಬಹುದೆಂದು ಹೇಳಿ ಬಿತರಾಯಿಸಿ ಪ್ರೋತ್ಸಾಹಪಡಿಸುತ್ತಿದ್ದದ್ದು ನಿಂತು ಹೋಯಿತು. ಈಗ ಹಿಂದೂಸ್ಥಾನದಲ್ಲಿ ವರ್ತಮಾನಪತ್ರಿಕೆಗಳ ಬರವಣಿಗೆಗಳು ಎಷ್ಟೋ ಉತ್ತಮವಾಗಿರುತ್ತವೆ. ಕಲ್ಕತ್ತಾ ಮೊದಲಾದ ಕಡೆಗಳಲ್ಲಿ ಹುಡುಗರೇ ಸಮಿತಿಗಳನ್ನು ಅಂದರೆ ಸಂಘಗಳನ್ನು ಮಾಡಿಕೊಂಡು ಕ್ರೂರ ಕೃತ್ಯಗಳನ್ನು ಡಿಸುವುದು, ಡಕಾಯಿತಿ ಮಾಡುವುದು, ಯೂರೋಪಿಯನ್ನರನ್ನು ಹಗೆಮಾಡುವುದು, ವರ್ತಕರನ್ನು ಭಯಪಡಿಸುವುದು, ಈ ಮೊದಲಾದ ಕಾರ್ಯಗಳನ್ನು ಮಾಡುತ್ತಿದ್ದಾರೆ. ಈ ಸಂಘಗಳಲ್ಲಿ ಸುಮಾರು ೧೦-೧೫ ಸಾವಿರ ಹುಡುಗರು ಸೇರಿಕೊಂಡು ಕೆಟ್ಟುಹೋಗುತ್ತಾರೆ. ಇದನ್ನು ನಿಲ್ಲಿಸಬೇಕಾದದ್ದು ಪರಮಾವಶ್ಯಕವಾಗಿರುತ್ತದೆ.

ಈಗಿರುವ ಕಾನೂನುಗಳ ದೆಸೆಯಿಂದ ಇಂಥಾ ಮೊಕದ್ದಮೆಗಳನ್ನು ಬೇಗ ಬೇಗನೆ ತೀರ್ಮಾನ ಮಾಡುವುದಕ್ಕಾಗದೆ ಇದೆ. ರಾಜದ್ರೋಹಾಪರಾಧಿಗಳು ಹೊರಬಿದ್ದು ದರ್ಯಾಪ್ತು ಪ್ರಾರಂಭವಾಗಿ ಒಂದು ವರುಷವೇ ಆಗಿದ್ದರೂ ಅದು ಇನ್ನೂ ಮುಕ್ತಾಯವಾಗಲಿಲ್ಲ. ಹೀಗೆ ದೀರ್ಘವಾಗೋಣದರಲ್ಲಿ ಬಹಳ ಕೆಡುಕುಂಟು. ಮೊದಲು ಪೋಲೀಸ್ ತನಿಖೆಯಾಗಬೇಕು ; ತರುವಾಯ ಮ್ಯಾಜಿಸ್ಟ್ರೇಟರ ಮುಂದೆ ಮೊಕದ್ದಮೆ ನಡೆಯಬೇಕು. ಅನಂತರ ಸೆಷನ್ಸ್ ಜಡ್ಜರು ದರ್ಯಾಪ್ತು ಮಾಡಬೇಕು. ಕಡೆಯಲ್ಲಿ ಹೈಕೋರ್ಟ್ ಜಡ್ಜಿಗಳು ಅಪೀಲ್ ವಿಚಾರಣೆಮಾಡಿ ತೀರ್ಪು ಕೊಡಬೇಕು. ಇಷ್ಟೆಲ್ಲಾ ಆಗುವುದಕ್ಕೆ ಬಹಳ ಕಾಲ ಹಿಡಿಯುತ್ತದೆ. ಇದನ್ನು ತಪ್ಪಿಸುವುದಕ್ಕಾಗಿ ಹೊಸ ಕಾನೂನ್ ಮಾಡಬೇಕೆಂದು ದೇಶೀಯ ದೊಡ್ಡ ಮನುಷ್ಯರೂ ಕೆಲವು ವರ್ತಕ ಮಂಡಳಿಯವರೂ ಗವರ್ನ್‌ಮೆಂಟಿನವರನ್ನು ಪ್ರಾರ್ಥಿಸಿಕೊಂಡಿರುತ್ತಾರೆ. ಈ ಸಂಬಂಧ ಕೇವಲ ಉಂಟಾಗಿರುವ ಕಾಲದಲ್ಲಿ ಈ ತರದ ಹೊಸ ಕಾನೂನು ಅವಶ್ಯವಾಗಿ ಜಾರಿಗೆ ತರಬೇಕಾಗಿರುವುದು ಎಂದು ರೀತಿಯಾಗಿ ಸರ್ ಹಾರ್ವೆ ಆಡಮ್ಸನ್‌ರವರು ತಿಳಿಸಿದರು.

ಪ್ರಜಾಪಕ್ಷದ ಮೆಂಬರುಗಳಲ್ಲೂ ಡಾ॥ ರಾಸ್ ಬಿಹಾರಿ ಘೋಸ್‌ರವರ ವಿನಾ ಉಳಿದವರೂ, ಸರ್ಕಾರಿ ಮೆಂಬರುಗಳೂ ಈ ಕಾನೂನ್ ಅವಶ್ಯವಾಗಿದೆ ಎಂದು ಹೇಳಿ ಆ ಅಭಿಪ್ರಾಯಕ್ಕೆ ಉಪನ್ಯಾಸಗಳನ್ನು ಕೂಡಾ ಮಾಡಿದರು. ಡಾ॥ ರಾಸ್ ಬಿಹಾರಿ ಘೋಸ್‌ರವರು ಕೂಡ ಈ ಕಾನೂನ್ ಆಗಬೇಕೆಂಬದನ್ನು ಒಪ್ಪಿಕೊಂಡರೂ ಅದರ ಕೆಲವು ಭಾಗವನ್ನು ಸ್ವಲ್ಪ ಬದಲಾಯಿಸಬೇಕೆಂದು ಸೂಚಿಸಿದರು. ಇತರ ಮೆಂಬರುಗಳು ಇದಕ್ಕೆ ಒಪ್ಪಲಿಲ್ಲ. ಕಡೆಯಲ್ಲಿ ವೈಸ್‌ರಾಯಿಯವರು ಕೆಲವು ಮಾತುಗಳನ್ನು ಆಡಿದ ಕೂಡಲೇ, ಕಾನೂನು ಪಾಸ್ ಮಾಡಿದರು. ಅವರು ತಿಳಿಸಿದ ಮುಖ್ಯಾಂಶವೇನೆಂದರೆ :—

ಈ ಕಾನೂನು ಪಾಸ್ ಮಾಡುವುದಕ್ಕೆ ಇಂಥಾ ಸಮಯ ಈಗ ಪ್ರಾಪ್ತವಾಗಬಲ್ಲದೆಂದು ಹಿಂದೆ ನಾನು ನಂಬಲಿಲ್ಲ. ಇದುವರೆಗೆ ಹಿಂದೂಸ್ಥಾನದಲ್ಲಿ ನಡೆದಿರುವ ಕ್ರೂರ ಕೃತ್ಯಗಳನ್ನು ನೋಡಿದರೆ ಈ ರಾಜ್ಯದಿಂದ ಇಂಗ್ಲಿಷರನ್ನು ಓಡಿಸಬೇಕೆಂಬ ಉದ್ದೇಶವು ಸ್ವಾರಾಜ್ಯವನ್ನು ಸ್ಥಾಪಿಸಿಕೊಳ್ಳಬೇಕು ಕುತೂಹಲವು ಉಂಟಾಗಿ. ಪ್ರಜಾವನ್ನು ಇದಿಗೂ ದೇಶದ ಎಲ್ಲೆಗಳೂ ಮಹಾ ಕಂಟಕನನ್ನು ತಂದಿದೆ ಎಂದು ಗೊತ್ತಾಗುತ್ತದೆ. ಈಗ ಕಾನೂನ್ ವಿಚಾರದಲ್ಲಿ ಚರ್ಚೆ ಮಾಡುವ ಸಮಯವಲ್ಲ. ಮತ್ತು ಅದಕ್ಕೆ ತಕ್ಕ ಕಾರಣವೂ ಕಾಣುವುದಿಲ್ಲ. ಇದು ಬೇಗನೆ ಕಾನೂನ್ ಆಗಬೇಕೆನ್ನುವುದಕ್ಕೆ ತುಂಬಾ ಅವಶ್ಯಕತೆಯುಂಟು. ರಾಜನೀತಿ ವಿಷಯದಲ್ಲಿ ನಾನು ತಿಳಿದ ಮೇಲೆ ಇಂಥಾ ಕಾನೂನ್ ಮಾಡುವುದಕ್ಕಿಂತ ದೇವರೇ ಮಾಡುವುದು ಉತ್ತಮವೆಂದು ನನಗೆ ತೋರುವುದು. ಪ್ರತಿ ಜನಾಂಗದವರೂ ಪ್ರತಿ ಜಾತಿ ಕುಲ ಗೋತ್ರದವರೂ ಎಲ್ಲಾ ಮತದವರೂ ಪ್ರಜಾ ನಮ್ಮ ಇದಿಗೂ ಎಲ್ಲರೂ ಕಂಟಕಪ್ರಾಯವಾಗಿ ಅಂತರಂಗದಲ್ಲೇ ಹುಟ್ಟಿ ಹಬ್ಬುತ್ತಿರುವ ಈ ಮಹತ್ತರವಾದ ಕೇಡನ್ನು ಅಡಗಿಸುವುದಕ್ಕೆ ಗವರ್ನ್‌ಮೆಂಟಿನವರಿಗೆ ಅವಶ್ಯವಾದ ಸಹಾಯ ಸಂಪತ್ತುಗಳನ್ನು ಒದಗಿಸಿಕೊಡುತ್ತಾರೆಂದು ನಾನು ಬಹಳವಾಗಿ ಎದುರುನೋಡುತ್ತೇನೆ ಎಂಬುವೆ.

ಕಡೆಯಲ್ಲಿ ಕಾನೂನು ಪಾಸಾಗಿ ಸಭೆಯು ಬರಖಾಸ್ತಾಯಿತು.

ಇಂಡಿಯಾ ದೇಶದ ವೃತ್ತಾಂತಗಳು

ಕಲ್ಕತ್ತಾ ಹೈಕೋರ್ಟಿನ ಮೆ ಜಸ್ಟಿಸ್ ಬ್ರೆಟ್‌ರವರು ಕಳೆದ ವಾರ ಕುದುರೆಯಿಂದ ಬಿದ್ದು ಕೈಯನ್ನು ಮುರಿದುಕೊಂಡು ಬಾಧೆಪಡುತ್ತಿದ್ದಾರೆ.

ಹೈದರಾಬಾದಿನ ರಿಲೀಫ್ ಫಂಡಿಗೆ ಬೊಂಬಾಯಿ ಅಧಿಪತ್ಯದಲ್ಲಿ ೯೫,೦೦೦ ರೂಪಾಯಿಯೂ, ಮದರಾಸ್ ಆಧಿಪತ್ಯದಲ್ಲಿ ೬೦,೦೦೦ ರೂಪಾಯಿಯೂ ಚಂದಾ ವಸೂಲಾಗಿರುತ್ತದೆ.

ಹಿಂದೂಸ್ಥಾನದ ವ್ಯವಸಾಯ ಕ್ರಮಗಳನ್ನೂ ಅದರ ಸ್ಥಿತಿಯನ್ನೂ ನೋಡಿಕೊಂಡು ಹೋಗುವುದಕ್ಕೆ ಇಟಲಿ ರಾಜ್ಯದ ವ್ಯಾಪಾರ ಸಂಘದ ಒಬ್ಬ ದೊಡ್ಡ ಮನುಷ್ಯನು ಉತ್ತರ ದೇಶಕ್ಕೆ ಬಂದಿರುತ್ತಾನೆ.

ಉತ್ತರ ದೇಶಕ್ಕೆ ಸೇರಿದ ಕಾಂಗ್ರಾ ಕಣವೆಯಲ್ಲಿ ಕಳೆದ ಗುರುವಾರ ಬೆಳಗಿನ ಝಾವದಲ್ಲಿ ಭೂಕಂಪವಾಯಿತು. ಪ್ರಜೆಗಳು ಗಾಬರಿ ಬಿದ್ದು ಕೂಗಿಕೊಂಡು ಮನೆಮಠಗಳನ್ನು ಬಿಟ್ಟು ಬೈಲಿಗೆ ಓಡಿಹೋದರು. ನಾಯಿ ಕಾಗೆ ಕೋಳಿ ಮೊದಲಾದ ಪ್ರಾಣಿಗಳು ಅರಚಿಕೊಂಡವು. ಪ್ರಾಣ ಹಾನಿ ಏನೂ ಆಗಲಿಲ್ಲ.

ಮ್ರಿ ಬಿ ಎಲ್. ಗುಪ್ತ ಎಂಬ ಬ್ಯಾರಿಸ್ಟರ್‌ರವರ ಪುತ್ರರಾದ ಮಿ॥ ಅನಿಲ್ ಕುಮಾರರವರಿಗೆ ಬಂಗಾಳಾ ಅಡ್ವೊಕೇಟ್ ಜನರಲ್‌ರವರಾದ ಮ್ರಿ. ಎಸ್. ಪಿ. ಸಿನ್ಹಾಯವರ ಹಿರಿಯ ಮಗಳನ್ನು ಕೊಟ್ಟು ವಿವಾಹ ನಡೆಯುವುದಾಗಿದೆ.

ದಕ್ಷಿಣ ದೇಶಕ್ಕೆ ಸೇರಿದ ಟುಟಿಕೊರಿನ್ ಪಟ್ಟಣದಲ್ಲಿ ಪೋಲೀಸಿನವರು ೨೫ ಮಂದಿ ಬಂಗಾಳಾ ಯುವಕರನ್ನು ದಸ್ತಗಿರಿ ಮಾಡಿ, ಕಳೆದ ವಾರ ಮದರಾಸಿಗೆ ಕರೆದು ತಂದು, ಅಲ್ಲಿಂದ ಪಹರೆ ಇಟ್ಟು ಕಲ್ಕತ್ತಾ ಪಟ್ಟಣಕ್ಕೆ ಕಳುಹಿಸಿದರು.

ಮದರಾಸ್ ಯೂನಿವರ್ಸಿಟಿ ಸಿದ್ಧಾಂತ ಸಂಘದವರು ನಡೆಸಿದ ಮೆಟ್ರಿಕ್ಯುಲೇಷನ್ ಮತ್ತು ಬಿ. ಎ. ಪರೀಕ್ಷೆಗಳ ಪ್ರಶ್ನ ಪತ್ರಿಕೆಗಳನ್ನು ಕಳುವು ಮಾಡಿದ ರಾಮಗೋಪಾಲನಿಗೆ ಮ್ಯಾಜಿಸ್ಟ್ರೇಟರು ಕಳೆದ ವಾರ ಹದಿನೆಂಟು ತಿಂಗಳ ಕಠಿಣ ಸಜಾ ವಿಧಿಸಿದರು.

ಸುರೇಂದ್ರನಾಥ ಬಾನರ್ಜಿ ಎಂಬೊಬ್ಬ ವಿದ್ಯಾರ್ಥಿಯು ಕಲ್ಕತ್ತೆಯ ಬೀಡನ್ ಸ್ಕ್ವೇರ್ ಎಂಬ ಚೌಕದಲ್ಲಿ ಸೀತು ರಾಜದ್ರೋಹಕರವಾದ ಉಪನ್ಯಾಸವನ್ನು ಮಾಡಿದನೆಂದು ಮೊಕದ್ದಮೆ ಒಂದು ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಅವನಿಗೆ ಒಂದು ವರುಷದ ಕಠಿಣ ಸಜಾ ವಿಧಿಸಿದರು.

ಮೊನ್ನೆ ೫ನೇ ತಾರೀಖು ಸೋಮವಾರ ಸಾಯಂಕಾಲ ಮದರಾಸ್ ಗವರ್ನರರು ರೈಲಿನಲ್ಲಿ ಹೊರಟು ಕಡಪ, ಕರ್ನೂಲ್, ಬಳ್ಳಾರಿ ಜಿಲ್ಲೆಗಳ ಸಂಚಾರವನ್ನು ಮಾಡುತ್ತಿದ್ದಾರೆ. ಅವರು ಸಂಚಾರವನ್ನು ತೀರಿಸಿಕೊಂಡು ೨೫. ತಾರೀಖು ಮಂಗಳವಾರ ೧೦ ಗಂಟೆಗೆ ಹಿಂತಿರುಗಿ ಮದರಾಸನ್ನು ಸೇರುವರೆಂದು ತಿಳಿದಿದೆ.

ಚಿತ್ತಗಾಂಗದಲ್ಲಿ ಹದಿಮೂರು ಜನರು ಒಬ್ಬ ಆಸಾಮಿಯನ್ನು ಬೀದಿಯ ಸರಕಾರಕ್ಕೆ ಮೋಸ ಮಾಡಿದನೆಂದು ಹಾಗೆ ಕೊಂದು ಎಂದು ಸಿಕ್ಕಿಬಿದ್ದರು. ಸರಕಾರದವರು ಅವರನ್ನೆಲ್ಲಾ ದಸ್ತಗಿರಿ ಮಾಡಿ ಮೇಲೆ ಮೊಕದ್ದಮೆ ನಡೆಸಿದರು. ಅದರಲ್ಲಿ ಮುಖ್ಯನಾದ ರಾಜಕಾಲ್ ಎಂಬವನಿಗೆ ೫೦೦೦ ರೂಪಾಯಿ ಜುಲ್ಮಾನೆ ಹಾಕಿದೆ.

ಢಾಕಾ ಜಿಲ್ಲೆಯ ಒಂದು ಗ್ರಾಮದಲ್ಲಿ ಒಬ್ಬ ಕಳ್ಳನು ಸಿಕ್ಕಿ ಬಿದ್ದು ಸ್ಟೇಷನ್ ಮಾಸ್ಟರನಿಂದ ಕಳುಹಿಸಲ್ಪಟ್ಟ ಪೋಲೀಸಿನವರಿಗೆ ಒಪ್ಪಿಸಲ್ಪಟ್ಟನು. ಅವನ ಕಡೆಯಿಂದ ಪೋಲೀಸ್ ಇನ್ಸ್‌ಪೆಕ್ಟರ್ ಎಂಬವನನ್ನು ಆ ಕಳ್ಳನು ಕಡಿದುಬಿಟ್ಟನು. ಮ್ಯಾಜಿಸ್ಟ್ರೇಟರು ಆ ಕಳ್ಳನಿಗೆ ಆರು ತಿಂಗಳ ಕಠಿಣ ಸಜಾ ವಿಧಿಸಿದರು.

ಮದರಾಸ್ ಗವರ್ನಮೆಂಟ್ ಆಯುಧಗಳ ಕಾರ್ಖಾನೆಯಲ್ಲಿ ಕಳೆದ ವಾರ ಅನಾಹುತವಾಗಿ ಮದ್ದು ಗುಂಡು ಹತ್ತಿಕೊಂಡು ಮಹಾ ದೊಡ್ಡ ಕಾರ್ಖಾನೆಯ ಕೆಲವು ಭಾಗಗಳನ್ನು ಕೆಡವಿಬಿಟ್ಟಿತು. ಆಗ ಅಲ್ಲಿ ಕೆಲಸಮಾಡುತ್ತಿದ್ದ ಜನಗಳ ಪೈಕಿ ಕೆಲವರು ಸತ್ತರು. ಈ ಪೈಕಿ ಸುಮಾರು ೯ ಜನರು ಸತ್ತುಹೋದರು.

ಬೊಂಬಾಯಿನಲ್ಲಿ ಬೇಗಾ ಜಾಡ್ಯವು ಬಿರುಸು ಆಗಿದೆ. ಆಸಾಧ್ಯವಾಗಿ ಉಲ್ಬಣಿಸಿಕೊಂಡಿರುವ ವರ್ತಕರಿಗೆ ನಷ್ಟವಾಗುತ್ತದೆ ಎಂತಲೂ, ಆದಕಾರಣ ಸರಕಾರದವರು ಅನ್ನಗಳ ಮೇಲೆ ಆದಾಯ ತೆರಿಗೆಯನ್ನು ಮಾಫ್ ಮಾಡಿ ಕೊಡಬೇಕೆಂತಲೂ ಬೊಂಬಾಯಿನ ದೇಶೀಯ ವರ್ತಕರು ಸೇರಿ ವೈಸ್‌ರಾಯಿ ಪ್ರಭುಗಳಿಗೆ ವಿಜ್ಞಾಪನಾ ಪತ್ರಿಕೆಯನ್ನು ಬರೆದುಕೊಂಡಿರುತ್ತಾರೆ.

ಪೂರ್ವ ಬಂಗಾಳಾ ಮತ್ತು ಅಸ್ಸಾಂ ಎಂಬ ಹೊಸ ಆಧಿಪತ್ಯದ ಮುಖ್ಯ ಪಟ್ಟಣವಾದ ಢಾಕಾ ನಗರಕ್ಕೆ ಗವರ್ನಮೆಂಟಿನವರು ಬಾರಕ್‌ಪುರದಿಂದ ನಾಲ್ಕು ಕಂಪನಿಗಳ ಸಿಖ್ ಸೈನಿಕರನ್ನು ಕಳುಹಿಸಿದರು. ಢಾಕಾದಲ್ಲಿ ರಾಜದ್ರೋಹ ಕೃತ್ಯಗಳನ್ನೂ ಪಿತೂರಿಗಳನ್ನೂ ನಿರ್ಬಂಧವಾಗಿ ಅಡಗಿಸುವುದಕ್ಕೆ ಈ ಸೈನ್ಯವನ್ನು ಕಳುಹಿಸಿರುತ್ತಾರೆಂಬದಾಗಿ ಅಲ್ಲಿನ ಪ್ರಜೆಗಳು ಹೇಳುತ್ತಾರೆ.

ಬೊಂಬಾಯಿ ಪಟ್ಟಣದಲ್ಲಿ ಕಾಲವಾದ ಸರ್ ಹರಿ ಕೃಷ್ಣದಾಸ್ ನರೋತ್ತಮದಾಸ್‌ಯವರು ತಮ್ಮ ಮೂರು ಲಕ್ಷ ರೂಪಾಯಿನ ಬಂಗಲೆಯನ್ನು ಹಿಂದೂ ಜನರ ಆಸ್ಪತ್ರೆಗೆ ಮುಸಿಯಿದಬೇಕೆಂದೂ, ಪ್ಲೇಗ್ ಅಥವಾ ಪ್ರವಾಹಗಳ ದೆಸೆಯಿಂದ ನಿರ್ಗತಿಕರಾದಂಥಾ ಬಡಬಗ್ಗರಿಗೆ ತಮ್ಮ ಆಸ್ತಿಯಿಂದ ಒಂದು ಲಕ್ಷ ರೂಪಾಯಿ ಕೊಟ್ಟು ಅವರ ಕಷ್ಟವನ್ನು ಪರಿಹರಿಸಬೇಕೆಂದೂ ಉಯಿಲು ಬರೆದಿದ್ದಾರೆ.

ಕಳೆದ ವಾರ ಬೊಂಬಾಯಿ ಪಟ್ಟಣದ ಜೇಡ ಜನರು ವಾಸಮಾಡುವ ಭಾಗದಲ್ಲಿ ಒಂದು ದೊಡ್ಡ ಕಟ್ಟಡದೊಳಗೆ ಅಪಾರವಾಗಿ ಸಕ್ಕರೆಯನ್ನು ತುಂಬಿಟ್ಟಿದ್ದರು. ಅದಕ್ಕೆ ಬೆಂಕಿ ಬಿದ್ದು ಎಲ್ಲಾ ಸುಟ್ಟುಹೋಯಿತು. ಸರಕಾರದವರ ಪ್ರಜೆಗಳೂ ಉರಿಯನ್ನು ಇತರ ಮನೆಗಳಿಗೆ ವ್ಯಾಪಿಸದಂತೆ ತಡೆದು ಆರಿಸಿದರು. ಅದಾಗ್ಯೂ ಈ ಅನಾಹುತದಿಂದ ಸುಮಾರು ೫-೬ ಲಕ್ಷ ರೂಪಾಯಿ ನಷ್ಟವಾಗಿದೆ.

ಹಿಂದೂಸ್ಥಾನದ ಕ್ರಿಮಿನಲ್ ಇನ್ವೆಸ್ಟಿಗೇಷನ್ ಇಲಾಖೆಯ (ಪತ್ತೇ ಪೋಲೀಸಿನ) ಅಧಿಕಾರಿಯಾಗಿ ಬಹಳ ಹೆಸರು ಪಡೆದಿರುವ ರಾಯ್ ರಾಮಾನುಜದಾಯ ಬಹದ್ದೂರ್‌ಯವರು ಫ್ರಾನ್ಸಿಗೆ ಹೋಗಿ, ಅಲ್ಲಿ ಹಿಂದೂಸ್ಥಾನದಿಂದ ಹೋಗಿ ನೆಲಸಿರುವ ವಿಥಾ ಪಿತೂರಿಗಾರರ ಗುಂಪನ್ನು ಪತ್ತೆ ಮಾಡುವರಾಗಿದಾರೆಂತಲೂ, ಅವರ ಕೂಡ ಬಹಳ ಅನುಭವಶಾಲಿಗಳಾದ ಹದಿಮೂರು ಮಂದಿ ಪತ್ತೆ ಪೋಲೀಸಿನವರು ಹೋಗುವರೆಂತಲೂ, ಅವರೆಲ್ಲಾ ಫ್ರಾನ್ಸಿನಿಂದ ವಿಲಾಯಿತಿಗೂ ಅಮೇರಿಕಕ್ಕೂ ಹೋಗಿ ಬರುವರೆಂತಲೂ "ಸಂಜೀವನಿ" ಎಂಬ ಕಲ್ಕತ್ತಾ ಪತ್ರಿಕೆಯು ಹೇಳುತ್ತದೆ.

ಶೈವ ಸಿದ್ಧಾಂತ ಸಭೆಯು ಈ ವರುಷ ನಾಗೂರು ನಾಗಪಟ್ಟಣದಲ್ಲಿ ಈ ತಿಂಗಳ ತಾ. ೨೫, ೨೬, ೨೭ ರಲ್ಲಿ ನಡೆಯುವುದು. ರಾಜಮಹೇಂದ್ರಿಯ ಡಿಸ್ಟ್ರಿಕ್ಟ್ ಮುನ್ಸಿಫರಾದ ಮಿ ಜೆ. ಎಂ. ನಲ್ಲಸಾಮಿ ಪಿಳ್ಳೆಯವರು ಸಭೆಯ ಅಗ್ರಾಸನವನ್ನು ವಹಿಸುವರು. ಮೊದಲನೆಯ ದಿನ ಸಂಘದ ವಾರ್ಷಿಕ ರಿಪೋರ್ಟು ಓದಿ, ಆ ದಿನವೂ ಉಳಿದ ಎರಡು ದಿನಗಳೂ ಇಂಗ್ಲಿಷ್ ಮತ್ತು ತಮಿಳಿನಲ್ಲಿ ಉಪನ್ಯಾಸಗಳು ನಡೆಯುವವು.

ಬಂಗಾಳಾ ಆಧಿಪತ್ಯದ ಲೆಫ್ಟಿನೆಂಟ್ ಗವರ್ನರಾಗಿದ್ದು ಪೆನ್ಶನ್ ಪಡೆದು ಕಳೆದ ವಾರ ಮದರಾಸ್ ಪಟ್ಟಣದ ಮೂಲಕ ಸಿಲೋನ್ ದ್ವೀಪಕ್ಕೆ ಹೋದ ಸರ್ ಆಂಡ್ರೂ ಫ್ರೇಸರ್ ಯವರು ಪತ್ನಿ ಸಹಿತ ಕಳೆದ ಗುರುವಾರ ಬೆಳಗ್ಗೆ ಮಾರಿಟೇನಿಯಾ ಎಂಬ ಜಹಜು ಹತ್ತಿ ಸೀಮೆಗೆ ತೆರಳಿದರು. ಬಂಗಾಳಾದಲ್ಲಿ ಅವರ ಹೆಸರನ್ನು ಶಾಶ್ವತಪಡಿಸಬೇಕೆಂಬ ಉದ್ದೇಶವುಳ್ಳ ಫಂಡಿಗೆ ಆಗಲೇ ೩೦,೦೦೦ ರೂಪಾಯಿ ಚಂದಾ ವಸೂಲಾಗಿದೆ.

ಕಲ್ಲಿಕೋಟೆಯ ಸಬ್ ಜೈಲ್‌ಖಾನೆಯಲ್ಲಿದ್ದ ಖೈದಿಗಳ ಪೈಕಿ ನಾಲ್ಕು ಮಂದಿ ಇತರ ಖೈದಿಗಳಿದ್ದರೂ ಒಂತೆಗೆಯದೆ ತಮ್ಮ ಕೊಠಡಿಯ ಕಿಟಿಕಿಗೆ ಹಾಕಿದ್ದ ಕಬ್ಬಿಣದ ಸಲಾಕಿಯನ್ನು ಮುರಿದು ಹಾಕಿ ಬೆಳಗಿನ ಝಾವದ ಹೊತ್ತಿನಲ್ಲಿ ತಪ್ಪಿಸಿಕೊಂಡು ಹೋದರು. ಇವರಿಗೆ ಇನ್ನೂ ತಕ್ಕ ವಿಧಿಸಲ್ಪಟ್ಟಿರಲಿಲ್ಲ. ಅವರ ಮೇಲೆ ಒಂದಿರುವ ಮೊಕದ್ದಮೆಗಳು ವಿಚಾರಣೆಯಾಗುತ್ತಿದ್ದವು. ಅವರನ್ನು ಪತ್ತೆ ಮಾಡಬೇಕೆಂದು ಪೋಲೀಸಿನವರು ಸಾಹಸಪಡುತ್ತಿದ್ದಾರೆ.

ಮಿ ಎ ಕೆ ಘೋಷ್‌ಯವರು ಮಿಡ್ನಪುರದಲ್ಲಿ ಲಾಯರಾಗಿ ತುಂಬಾ ಹೆಸರು ಪಡೆದಿದ್ದರು. ಕೆಲವು ರಾಜದ್ರೋಹದ ಮೊಕದ್ದಮೆಗಳನ್ನು ನಡಿಸುವುದಕ್ಕೆ ಸರಕಾರದವರು ಅವರನ್ನು ತಮ್ಮ ಕಡೆ ಲಾಯರಾಗಿ ನೇಮಕ ಮಾಡಿಕೊಂಡರು. ಈಚೆಗೆ ಅಲ್ಲಿನ ಪ್ರಜೆಗಳು ಅವರನ್ನು ದ್ರೋಹಿ ಎಂದು ಹೆಸರಿಟ್ಟು, ಬಹಿಷ್ಕಾರ ಮಾಡಿದರು. ಅವರ ಮೊಕದ್ದಮೆಗಳನ್ನು ಕೊಡದಂತೆ ಕಟ್ಟು ವಿಧಿಸಿದರು. ಈಗ ಮಿ ಘೋಷ್‌ಯವರು ಮಿಡ್ನಪುರದಿಂದ ಸಂಸಾರ ಸಹಿತ ಕಲ್ಕತ್ತೆಗೆ ಬಂದು ಅಲ್ಲಿ ವಕೀಲ್ ಕೆಲಸ ನಡೆಸುತ್ತಾರೆ.

ಮುಂಬಾಯಿ ಆಧಿಪತ್ಯಕ್ಕೆ ಸೇರಿದ ಸಾತಾರೆಯಲ್ಲಿ ಮಿ. ಬಳವಂತರಾವ್ ಎಂಬೊಬ್ಬ ವಕೀಲನ ಮನೆಗೆ ಕಳ್ಳಗಾರನಂತೆ ವೇಷಹಾಕಿಕೊಂಡು ಹೋದನು. ಮನುಷ್ಯನು ಕೋಟು ಆತನ ಕಡೆ ನೋಡಿಕೊಂಡಿದ್ದು ಒಂದು ಗಂಟೆಯ ಬಳಿಕ ಬಟ್ಟೆಯ ಬೀರುವಿನ ಹತ್ತಿರ ಸಿಕ್ಕಿ ನೋಡುವಲ್ಲಿ ಅದು ಸಿಡಿಮದ್ದಿನ ಗುಂಡಿನಂತೆ ಕಂಡಿತು. ಪೋಲೀಸ್‌ಗೆ ವರ್ತಮಾನವಾಯಿತು. ಪೋಲೀಸ್ ಅಧಿಕಾರಿಗಳು ಕೂಡಲೇ ಬಂದು ಅದನ್ನು ಹೊತ್ತುಕೊಂಡು ಹೋಗಿ, ಆ ಮನುಷ್ಯನನ್ನು ಹಿಡಿಯುವುದಕ್ಕೆ ಪ್ರಯತ್ನಪಡುತ್ತಿದ್ದಾರೆ.

ದಕ್ಷಿಣ ದೇಶದಲ್ಲಿ ರಾಮೇಶ್ವರದಿಂದ ಧನುಷ್ಕೋಟಿಯ ವರೆಗೆ ರೈಲ್‌ರಸ್ತೆ ಹಾಕುತ್ತಿದ್ದದ್ದು ಪೂರೈಸಿ, ಕಳೆದ ಗುರುವಾರದಿಂದ ರೈಲ್ ಗಾಡಿಗಳನ್ನು ಬಿಡುತ್ತಾರೆ. ಪ್ರಯಾಣಿಕರು ಜನರೂ ಅದರಿಂದ ಲಾಭ ಪಡೆಯುತ್ತಿದ್ದಾರೆ. ಅಲ್ಲಿಂದ ಮುಂದಕ್ಕೆ ಸಿಲೋನ್ (ಲಂಕಾ) ದ್ವೀಪಕ್ಕೆ ರೈಲು ಹಾಕಬೇಕೋ ಸೇತುವೆ ಕಟ್ಟಿ ಅದರ ಮೇಲೆ ರೈಲು ಬಿಡಬೇಕೋ ಎಂಬುವನ್ನು ಇತ್ಯರ್ಥ ಮಾಡುವುದಕ್ಕೆ ಎರಡು ವಾರಗಳ ಹಿಂದೆ ಮದರಾಸಿನ ಮತ್ತು ಸಿಲೋನಿನ ಗವರ್ನರರುಗಳೂ ರೈಲ್ ಕಂಪೆನಿಯವರೂ ಕೂಡಿ ಆಲೋಚನೆ ಮಾಡಿದರು. ಇದು ಕೂಡ ಇಷ್ಟರಲ್ಲಿ ಗೊತ್ತಾಗುವುದಾಗಿ ಕಾಣುತ್ತದೆ.

ಹಿಂದೂಸ್ಥಾನದ ನ್ಯಾಷನಲ್ ಕಾಂಗ್ರೆಸ್ ಎಂಬ ರಾಷ್ಟ್ರೀಯ ಮಹಾಸಭೆಯು ಈ ತಿಂಗಳ ಅಂತ್ಯ ಭಾಗದಲ್ಲಿ ಮದರಾಸ್ ಪಟ್ಟಣದಲ್ಲಿ ನಡೆಯುವದಾಗಿದೆ. ಈ ಸಭೆಯ ವಿರೋಧ ಪಕ್ಷದವರು ನಾಗಪುರದಲ್ಲಿ ಪ್ರತ್ಯೇಕವಾಗಿ ಸಭೆ ನಡಿಸಬೇಕೆಂದು ಏರ್ಪಾಡಾಗಿತ್ತು. ಅದರ ಮುಖಂಡರ ಪೈಕಿ ರಕ್ಷಣೆಗಾಗಿ ಪೋಲೀಸಿನವರ ಸಹಾಯವನ್ನು ಕೊಡಬೇಕೆಂದು ನಾಗಪುರದ ಡೆಪ್ಯುಟಿ ಕಮಿಷನರನ್ನು ಕೇಳಿದ್ದರು. ಅವರು ಈ ಸಭೆಯು ಅಲ್ಲಿ ನಡೆಯುವುದು ತಮ್ಮ ಅಭಿಮತವಲ್ಲವೆಂದು ಹೇಳಿ ಪೋಲೀಸಿನವರ ಸಹಾಯ ಕೊಡುವುದಿಲ್ಲವೆಂದು ಜವಾಬು ಕೊಟ್ಟಿದ್ದಾರೆ. ಆದಕಾರಣ ಈ ಸಭೆಯು ನಡೆಯದಂತೆ ಅಡಚಣೆಯುಂಟಾಯಿತು.

ಸಿಕಂದರಾಬಾದಿನಲ್ಲಿ ಐದು ಮಂದಿ ಪೋಲೀಸಿನವರು ಗುಮಾನಿಯ ಮೇಲೆ ಹಿಡಿದು ಲಾಕಪ್ಪಿನಲ್ಲಿ ಹಾಕಿಕೊಂಡಿದ್ದ ಒಬ್ಬ ಮುಸಲ್ಮಾನನನ್ನು ಬಹಳವಾಗಿ ಹಿಂಸಿಸಿ ಅವನಿಂದ ಕಳುವಿನ ಒಪ್ಪಿಗೆಯನ್ನು ಪಡೆಯಬೇಕೆಂದು ಪ್ರಯತ್ನಪಟ್ಟರು. ಈ ಪೋಲೀಸ್ ಹಿಂಸೆಯು ಪ್ರಕಟವಾಗಿ, ಆ ಐದು ಮಂದಿ ಪೋಲೀಸಿನವರನ್ನು ಸರ್ವೀಸ್ ಇದ್ದರು ಬರ್ತರಫ್ ಮಾಡಿ, ಇಬ್ಬರು ಮಂದಿಯನ್ನು ಬಿಟ್ಟುಬಿಟ್ಟು, ಮೊದಲನೇ ಅಪರಾಧಿಗೆ ಆರು ತಿಂಗಳ ಕಠಿಣ ಸಜಾ, ೧೦೦ ರೂಪಾಯಿ ಜುಲ್ಮಾನೆ. ಜುಲ್ಮಾನೆ ವಸೂಲಾದರೆ ಅದನ್ನು ಫಿರ್ಯಾದಿಗೆ ಕೊಡತಕ್ಕದ್ದು ಎಂತಲೂ, ಎರಡನೇ ಅಪರಾಧಿಗೆ ಮೂರು ತಿಂಗಳ ಕಠಿಣ ಸಜಾವನ್ನು ವಿಧಿಸಿ ಎಂತಲೂ ತೀರ್ಮಾನ ಮಾಡಿದರು.

ಮೈಸೂರು ಸಂಸ್ಥಾನದ ಹೈದರಲಿ ಟಿಪ್ಪೂ ಸುಲ್ತಾನರವರ ವಂಶೀಕರು ಕಲ್ಕತ್ತೆಯಲ್ಲಿ ಇರುತ್ತಾರೆ. ಇವರು ಒಗ್ಗಟ್ಟಾಗಿ ಬಂಗಾಳಾಕ್ಕೆ ಹೊಸದಾಗಿ ನೇಮಕವಾಗಿ ಬಂದ ಲೆಫ್ಟಿನೆಂಟ್ ಗವರ್ನರ್ ಸರ್ ಎಡ್ವರ್ಡ್ ಬೇಕರ್ ಯವರ ಬಳಿಗೆ ಹೋಗಿ ಅವರಿಗೆ ಒಂದು ಅಡ್ರೆಸ್ಸನ್ನು ಓದಿ ಒಂದು ಸುಂದರವಾದ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಆ ವಂಶಿಕರು ಬಹಳ ಸಂಗತಿಕರಾಗಿರುತ್ತೇವೆಂತಲೂ, ಹಿಂದೆ ತಮ್ಮ ಹಿರಿಯರು ರಾಜ್ಯಪದವಿಯನ್ನು ಅನುಭೋಗಿಸಿದವರೆಂತಲೂ, ಗವರ್ನಮೆಂಟಿನವರು ಅವರನ್ನು ಬಡತನದಿಂದ ಬಿಡುಗಡೆ ಮಾಡಿ ಸಂರಕ್ಷಣೆ ಮಾಡಬೇಕೆಂತಲೂ ಬೇಡಿಕೊಂಡರು. ಅವರಿಗೆ ಲೆಫ್ಟಿನೆಂಟ್ ಗವರ್ನರರು ಹೇಳಿದ ಜವಾಬಿನ ಮುಖ್ಯಾಭಿಪ್ರಾಯವೇನೆಂದರೆ—ನೀವು ಬಡವಾಗಲೂ ನಿಮ್ಮ ಹಿರಿಯರ ದೊಡ್ಡಸ್ತಿಕೆಯನ್ನು ಕುರಿತು ಯೋಚನೆಮಾಡುತ್ತಿರುವುದನ್ನು ಬಿಟ್ಟು, ಈಗಿನ ಕಾಲಕ್ಕೆ ಅನುಗುಣವಾದ ಕೆಲಸ ಕಾರ್ಯಗಳಲ್ಲಿ ಪ್ರವರ್ತಿಸದೆ ಎಷ್ಟೋ ಉತ್ತಮ. ನಿಮ್ಮ ಪೈಕಿ ಇಬ್ಬರು ವಿದ್ಯಾದಿ ಸಾಮರ್ಥ್ಯಗಳನ್ನು ಸಂಪಾದಿಸಿಕೊಂಡು ಡೆಪ್ಯುಟಿ ಕಲೆಕ್ಟರ್ ಕೆಲಸವನ್ನು ಪಡೆದಿರುವುದು ಸಂತೋಷಕರವಾಗಿದೆ. ಇದೇ ರೀತಿ ನಿಮ್ಮ ಪೂರ್ವ ಸ್ಥಿತಿಯ ಯೋಚನೆಯನ್ನು ಬಿಟ್ಟು ತಕ್ಕ ಯೋಗ್ಯತೆಯನ್ನು ಪಡೆದಲ್ಲಿ ಗವರ್ನಮೆಂಟಿನವರು ಪ್ರೋತ್ಸಾಹವನ್ನು ಕೊಡುತ್ತಾರೆನ್ನುವುದರಲ್ಲಿ ಸಂದೇಹವಿಲ್ಲ ಎಂಬುದೇ.

ಕಳೆದ ಬುಧವಾರ ಸಾಯಂಕಾಲ ೭ ಗಂಟೆಗೆ ಮಹಾಬಲೇಶ್ವರದಲ್ಲಿ ಸಮೀಪ ಕಾಯಿಲೆಯಾಗಿದ್ದ ಬೊಂಬಾಯಿ ಗವರ್ನರರವರ ಪತ್ನಿಯಾದ ಲೇಡಿ ಕ್ಲಾರ್ಕ್‌ಯವರು ಕಾಲವಾದರು. ಇವರು ಪತಿಯ ಕೂಡ ಬೊಂಬಾಯಿಗೆ ಬಂದು ಸ್ವಲ್ಪ ಕಾಲವೇ ಆಗಿದ್ದಿತು. ಸುಮಾರು ೧೬-೧೭ ದಿನಗಳಿಂದಲೂ ಅವರು ಕಾಯಿಲೆಯಾಗಿ, ಡಾಕ್ಟರುಗಳಿಂದ ಚಿಕಿತ್ಸೆ ಹೊಂದಿದರೂ ಗುಣವಾಗದೆ ತೀರಿಹೋದರು. ದುಃಖಸೂಚನೆಗಾಗಿ ಬೊಂಬಾಯಿ, ಪೂನಾ ಪಟ್ಟಣಗಳಲ್ಲಿ ಸ್ಕೂಲು ಕಾಲೇಜು ಕೋರ್ಟು ಕಚೇರಿಗಳೂ ಅಂಗಡಿಮುಂಗಟ್ಟುಗಳೂ ಮುಚ್ಚಲ್ಪಟ್ಟವು. ಗವರ್ನರವರಿಗೆ ಅನೇಕ ಕಡೆಗಳಿಂದ ವ್ಯಸನಸೂಚಕವಾದ ತಂತೀವರ್ತಮಾನಗಳು ಸಲಿಸಿರುತ್ತವೆ. ಮರುದಿನ ಪದ್ಧತಿಯ ಪ್ರಕಾರ ಶವವನ್ನು ಗೌರವಯುಕ್ತವಾಗಿ ಸಾಗಿಸಿ ದಫನ್ ಮಾಡಿದರು. ಅಗ್ಗ ಎಲ್ಲಾ ಕೋಮುಗಳ ಮುಖಂಡರೂ ಹೋಗಿದ್ದರು.

ವಿದೇಶ ವರ್ತಮಾನಗಳು.

ಕ್ಯಾನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಕಳೆದ ವಾರ ಒಂದು ದೊಡ್ಡ ಸಭೆ ನಡೆದು, ಇನ್ನುಮೇಲೆ ಏಷ್ಯಾಖಂಡದ ಯಾವ ಜನರನ್ನೂ ಕ್ಯಾನಡಾಕ್ಕೆ ಬರಗೊಡಿಸದಂತೆ ತಡೆದುಬಿಡಬೇಕೆಂದು ತೀರ್ಮಾನ ಮಾಡಿಕೊಂಡರು.

ರಷ್ಯಾ ರಾಜ್ಯದ ಮಹಾ ಪಟ್ಟಣವೆನಿಸಿಕೊಂಡಿರುವ ಮಾಸ್ಕೋವಿನಲ್ಲಿ ಕ್ರಾಂತಿಗಾರರ ಸಂಘ ಒಂದಿತ್ತು. ಈ ಸಂಘದವರು ಸೇರಿ ಗುಟ್ಟಾಗಿ ಮಸಲತ್ತು ಮಾಡುತ್ತಿದ್ದಾಗ ಪೋಲೀಸಿನವರು ಆ ಕಟ್ಟಡವನ್ನು ಘೇರಾಯಿಸಿಕೊಂಡು, ಆ ಗುಂಪನ್ನೆಲ್ಲಾ ದಸ್ತಗಿರಿ ಮಾಡಿರುತ್ತಾರೆ.

ಚೀನಾ ರಾಜ್ಯಕ್ಕೆ ಸೇರಿದ ಹಾಂಕಾಂಗ್ ಪಟ್ಟಣದಲ್ಲಿ ಚೀನೆಯವರು ನಾಟಕವನ್ನು ನೋಡುವುದಕ್ಕೆ ಸೇರಿದ್ದರು. ಆ ನಾಟಕಶಾಲೆಗೆ ಸಮರಾತ್ರಿಯಲ್ಲಿ ಬೆಂಕಿ ಬಿದ್ದು ಬಹಳ ಅನಾಹುತವಾಗಿ ೬೦ ಜನರಿಗೆ ಪೂರಾ ಗಾಯವಾಯಿತು. ೫೦ ಜನರು ಬೆಂಕಿಯಲ್ಲಿ ಸುಟ್ಟುಹೋದರು.

ಆಫ್ರಿಕಕ್ಕೆ ಸೇರಿದ ಸೊಮಾಲಿ ಲ್ಯಾಂಡಿನಲ್ಲಿ ಇಟಲಿ ಸೈನಿಕರಿಗೂ ದರ್ವೀಷರೆಂಬ ಸ್ವದೇಶಿಗಳಿಗೂ ಬುಲ್ಹಾರೊ ಎಂಬ ಸ್ಥಳದಲ್ಲಿ ದೊಡ್ಡ ಯುದ್ಧವಾಯಿತು. ದರ್ವೀಷರು ೩,೦೦ ಮಂದಿ ಅದ್ದಳ ಯುದ್ಧ ಭೂಮಿಯಲ್ಲಿ ಅಳಿದರು. ಸಿಕ್ಕಿದವು. ಇಟಲಿ ಸೈನಿಕರಲ್ಲಿ ಯಾರೂ ಮೃತಪಡಲಿಲ್ಲ.

ಹಿಂದಿನ ವಾರ ವಿಲಾಯಿತಿಯ ಚಕ್ರವರ್ತಿ ಸಾರ್ವಭೌಮರವರಿಗೆ ಸ್ವಲ್ಪ ದೇಹಾಲಸ್ಯವುಂಟಾಗಿ ಒಂದೆರಡು ದಿನ ಅವರು ಅರಮನೆಯಲ್ಲಿದ್ದು ಆರೋಗ್ಯ ಹೊಂದಿದರು. ಈಗ ಅವರು ಸಂಪೂರ್ಣವಾಗಿ ಆರೋಗ್ಯ ಹೊಂದಿರುತ್ತಾರೆಂದೂ, ಸ್ವಲ್ಪವೂ ಅನುಮಾನಕ್ಕೆ ಆಸ್ಪದವಿಲ್ಲವೆಂತಲೂ ತಂತೀ ವರ್ತಮಾನ ಬಂದಿದೆ.

ಫ್ರಾನ್ಸ್ ಪ್ರಭುತ್ವದಲ್ಲಿ ಕೊಲೆಪಾತಕಿಗಳನ್ನು ಗಲ್ಲಿಗೆ ಹಾಕಕೂಡದೆಂದು ಅಲ್ಲಿನ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆದು, ಕಡೆಗೆ ಮೆಂಬರುಗಳು ಸಮ್ಮತಿಯನ್ನು ತೆಗೆದುಕೊಂಡರು. ಗಲ್ಲಿಗೆ ಹಾಕಬೇಕೆಂದು ೩೩೦ ಮೆಂಬರುಗಳೂ, ಹಾಕಕೂಡದೆಂದು ೨೦೧ ಮೆಂಬರುಗಳೂ ಅಭಿಪ್ರಾಯಪಟ್ಟರು. ಆದ ಕಾರಣ ಮರಣ ದಂಡನೆಯನ್ನು ವಜಾಮಾಡಕೂಡದೆಂದು ನಿಷ್ಕರ್ಷೆಯಾಯಿತು.

ಪನಾಮಾ ಭೂಕಂಠವನ್ನು ಒಡೆದು ಸಮುದ್ರಗಳನ್ನು ಕೂಡಿಸಿ ಜಲಮಾರ್ಗವನ್ನು ಕಲ್ಪಿಸಬೇಕೆಂದು ಕೆಲವು ಕಾಲದಿಂದ ಅಗಾಧವಾದ ಕಾಮಗಾರಿಗಳು ನಡೆಯುತ್ತಿವೆ. ಅಲ್ಲಿ ಬಂಡೆಗಳನ್ನು ಒಡೆಯುವುದಕ್ಕೆ ಕೂಡಿಸಿಟ್ಟಿದ್ದ ೨೭ ಟನ್ನಿನ ಡೈನಮೈಟ್ ಎಂಬ ಸಿಡಿಮದ್ದು ಕಳೆದ ಭಾನುವಾರ ಅನಾಮತ್ತು ಹತ್ತಿಕೊಂಡು ಅನಾಹುತವಾಯಿತು. ೧೧ ಮಂದಿ ಮೃತಪಟ್ಟರು. ೫೦ ಜನರಿಗೆ ಜಖಂ ಆಗಿದೆ.

ಪರ್ಷಿಯಾ ರಾಜ್ಯದಲ್ಲಿ ಷಾ ಸುಲ್ತಾನರವರು ಪಾರ್ಲಿಮೆಂಟ್ ಸಭೆಗಳನ್ನು ವಜಾಮಾಡಿ ಅದಕ್ಕೆ ಪ್ರತಿಯಾಗಿ ಒಂದು ಕೌನ್ಸಿಲನ್ನು ಏರ್ಪಡಿಸುವವರಾಗಿದ್ದಾರೆ. ಅದಕ್ಕೆ ರಾಜ್ಯದಲ್ಲಿ ಮುಖಂಡರಾಗಿರುವಂಥಾ ಹದಿನೆಂಟು ಮಂದಿ ವರ್ತಕರನ್ನೂ ಮೂವತ್ತೆರಡುಮಂದಿ ದೊಡ್ಡ ಮನುಷ್ಯರನ್ನೂ ನೇಮಕಮಾಡಿಕೊಳ್ಳುವನು. ಈ ಐವತ್ತು ಮಂದಿಯೂ ಎರಡು ವರುಷಗಳ ತನಕ ಸಭೆಯಲ್ಲಿ ಮೆಂಬರಾಗಿರತಕ್ಕದ್ದೆಂದೂ, ಅವರನ್ನೆಲ್ಲಾ ಸುಲ್ತಾನರವರೇ ಚುನಾಯಿಸತಕ್ಕದ್ದೆಂದೂ ಗೊತ್ತುಮಾಡಿದ್ದಾರೆ.

ತುರ್ಕಿಸ್ತಾನದಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳು ಪ್ರಜೆಗಳನ್ನು ಬಹಳವಾಗಿ ಹಿಂಸೆ ಮಾಡಿ ಅವರಿಂದ ಲಂಚವನ್ನು ತೆಗೆದುಕೊಳ್ಳುತ್ತಿದ್ದಾರೆಂದು ತಿಳಿದು ಬಂದದ್ದರಿಂದ ಅಧಿಕಾರಿಗಳ ನಡವಳಿಕೆಯನ್ನು ತನಿಖೆ ಮಾಡುವುದಕ್ಕೆ ಕೆಲವು ಮಂದಿ ಕಮಿಷನ್ ಜಡ್ಜಿಗಳು ನೇಮಕವಾದರು. ಆ ದುಷ್ಟಾಧಿಕಾರಿಗಳು ಪ್ರಜೆಗಳನ್ನು ಕರೆಸಿಕೊಂಡು ಲಂಚ ಹಿಂಸೆ ಮುಂತಾದ್ದನ್ನೇನಾದರೂ ಕುರಿತು ಆ ಜಡ್ಜಿಗಳಿಗೆ ತಿಳಿಸಿದ ಪಕ್ಷದಲ್ಲಿ ಅಂಥವರ ಚರ್ಮಗಳನ್ನು ಸುಲಿಸುತ್ತೇವೆಂದು ಗಾಬರಿ ಹುಟ್ಟಿಸುತ್ತಿದ್ದಾರೆಂಬದಾಗಿ ತಂತೀ ವರ್ತಮಾನ ಬಂದಿದೆ.

ಚೀನಾ ರಾಜ್ಯದ ಉತ್ತರ ಭಾಗದಲ್ಲಿ ಒಂದು ಹೊಸ ರೋಗವು ಕಾಣಿಸಿಕೊಂಡು ಅನೇಕ ಪ್ರಜೆಗಳನ್ನು ಕೊಲ್ಲುತ್ತಲಿದೆ. ರೋಗಿಗೆ ಜ್ವರವು ಸಹ ಹುಟ್ಟಿ, ಮೈಯೆಲ್ಲಾ ಬಿಳಿ ದದ್ದು ಬಿದ್ದು, ನಾಲಿಗೆ ಬಾಯಿ ಕಡೆಗೆ ಮೈಯೆಲ್ಲಾ ಕಪ್ಪಾಗುವವು. ಹಲ್ಲುಗಳು ಕೂಡ ಕಪ್ಪಾಗುತ್ತವೆ. ತರುವಾಯ ಪ್ರಾಣ ಹೋಗುವುದು. ಯೂರೋಪಿಯನ್ ಡಾಕ್ಟರರಾಗಲಿ ಚೀನಾ ವೈದ್ಯರಾಗಲಿ ಇದುವರೆಗೆ ಈ ರೋಗಕ್ಕೆ ಚಿಕಿತ್ಸೆಯನ್ನು ಕಂಡು ಹಿಡಿಯಲು ಸಾಧ್ಯವಾಗಲಿಲ್ಲ. ಈ ರೋಗವು ಊರಿಂದೂರಿಗೆ ಹಬ್ಬುತ್ತಾ ಇದೆ ಎಂತಲೂ, ಈ ಛಾಯಾ ರೋಗವೇ ಸುಮಾರು ೬೦೦ ವರುಷಗಳ ಹಿಂದೆ ಉತ್ತರ ಏಷ್ಯಾ, ರಷ್ಯಾ ದೇಶಗಳಲ್ಲಿ ಪ್ರಸ್ತವಾಗಿ ಅಸಂಖ್ಯಾತ ಪ್ರಜೆಗಳು ಲಯವಾದರೆಂತಲೂ ಹೇಳುವರು.

ಪ್ಯಾರಿಸ್ಸಿನ ವೈದ್ಯಮಂಡಲಿಯ

[34-38]

ಡಾ॥ ವೈಸೆಂಟೆ ಸಾಂಟೋನಿಯವರು

ಈಗ ಪೋರ್ಟೋರೀಕೋವಿನ ಪಾರ್ಸ್ ಪಟ್ಟಣದಲ್ಲಿ ವೈದ್ಯಮಾಡುತ್ತಿದಾರೆ.

ಇವರು ಹೇಳಿರುವುದು :

ಪೋರ್ಟೋರೀಕೋವಿನ ಪಾರ್ಸೆ ಪಟ್ಟಣದಲ್ಲಿ ವೈದ್ಯ ಮಾಡುತ್ತಿರುವ, ಪ್ಯಾರಿಸ್ಸಿನ ವೈದ್ಯಮಂಡಲಿಗೆ ಸೇರಿದ, ಈ ಕೆಳಗೆ ರುಜುಮಾಡಿರುವ ಡಾ॥ ವೈಸೆಂಟೆ ಸಾಂಟೋನಿ ಎಂಬ ನಾನು ಸರ್ಟಿಫಿಕೇಟು ಕೊಡುವುದೇನೆಂದರೆ :—

"ಪೆರೂನಾ ಎಂಬ ಹೆಸರುಳ್ಳ ತಯಾರಿ ಔಷಧವನ್ನು ನಾನು ಶ್ವಾಸರೋಗಗಳಿಗೆ ಕೆಲವು ಕಾಲದಿಂದ ಪ್ರಯೋಗ ಮಾಡುತ್ತಾ ಬಂದಿದ್ದೇನೆ. ಸರ್ವದಾ ಅದರಿಂದ ಉತ್ಕೃಷ್ಟವಾದ ಫಲವುಂಟಾಗುತ್ತಿರುವುದು. ಅದು ಒಳ್ಳೇ ತಯಾರಿಸಿದ ಔಷಧವು. ಅದು ಒಗ್ಗಿದ ರೋಗಿಗಳಿಗೆಲ್ಲಾ ನಾನು ಯಾವಾಗಲೂ ಅದನ್ನೇ ಪ್ರಯೋಗ ಮಾಡುವೆನು."

ಡಾ॥ ವಿ. ಸಾಂಟೋನಿ,
ಪಾರ್ಸೆ, ಪಿ. ಆರ್.

ಪೆರೂನಾ ಕೊಡುತ್ತಾರೆ.

ಮ್ಯಾಡ್ರಿಡ್ ಪಟ್ಟಣದ ಸರ್ವಕಲಾ ಶಾಲೆಯ ವೈದ್ಯ ಮತ್ತು ಶಸ್ತ್ರ ಚಿಕಿತ್ಸೆಯ ಡಾಕ್ಟರಾಗಿಯೂ; ಬಾರ್ಸಿಲೋನಾ, ಕ್ಯಾಟಲೂನಾ, ಸ್ಪೈನ್ ವೈದ್ಯಮಂಡಲಿಯ ಆನರರಿ ಮೆಂಬರಾಗಿಯೂ, ಪ್ಯಾರಿಸ್ ಪಟ್ಟಣದ ಆಸ್ಪತ್ರೆಗಳಲ್ಲಿ ವೈದ್ಯವನ್ನು ನಡಿಸಿ ಪೋರ್ಟೋರೀಕೋವಿನ ವೈದ್ಯಮಂಡಲಿಗೆ ಸೇರಿಸಲ್ಪಟ್ಟವರಾಗಿಯೂ ಇರುವ ಪೋರ್ಟೋರೀಕೋವಿನ ಪಾರ್ಸೆ ಆಫೀಸ್ ಡಾ॥ ಎಸ್ಟೇಬನ್ ವಿಡಾಲಿಯಸ್ ಯವರು ಸರ್ಟಿಫಿಕೇಟು ಕೊಟ್ಟಿರುವುದೇನೆಂದರೆ :—

"ಯು. ಎಸ್. ಎ, ಓಹಿಯೋ, ಕೊಲಂಬಸ್ ಪಟ್ಟಣದ ಪೆರೂನಾ ಔಷಧದ ಕಾರ್ಖಾನೆಯಲ್ಲಿ ಪೆರೂನಾವು ತಯಾರುಮಾಡಲ್ಪಡುತ್ತದೆ. ಇದು ಮನುಷ್ಯನ ಶ್ವಾಸಕೋಶದಲ್ಲಿ ಹುಟ್ಟುವ ರೋಗಗಳಿಗೆ ಪರಿಹಾರಕವಾದ ಔಷಧವು. ಇದನ್ನು ನಾನು ಆ ರೋಗಿಗಳಿಗೆ ಕೊಡುತ್ತೇನೆ. ಅದರಲ್ಲಿ ಸೇರಿಸತಕ್ಕ ಪದಾರ್ಥಗಳನ್ನು ನೋಡಿ ಆಶ್ಚರ್ಯಪಡುವೆನು. ಅದು ಖಂಡಿತವಾದ ಪರಿಹಾರವನ್ನು ಶ್ವಾಸದಲ್ಲಿ ಉಂಟುಮಾಡುವುದನ್ನು ನೋಡಿ ನನಗೆ ಆಶ್ಚರ್ಯವಾಗಿದೆ.

ಇ. ವಿಡಾಲಿರಿಯಸ್, ಪಾರ್ಸೆ, ಪಿ. ಆರ್.

ಉಷ್ಣದೇಶಗಳೂ ಪೆರೂನಾ ಔಷಧವೂ.

ಕೆಲವು ದೇಶಗಳಲ್ಲಿ ಬಲಕೊಡುವ ಉಪಕರಣಗಳು ಸ್ವಾಭಾವಿಕವಾಗಿ ಅಲ್ಲಿನ ಜನಾವಳಿಗೆ ಉಂಟು. ಉಷ್ಣವು ಅಧಿಕವಾಗಿಲ್ಲದೆ, ಸಮುದ್ರಮಟ್ಟದಿಂದ ಬಹಳ ಎತ್ತರವಾಗಿಲ್ಲದೆ, ಆಮ್ಲಜನಕ (ಆಕ್ಸಿಜನ್) ಧಾತುವು ಹೇರಳವಾಗಿ ಉಳ್ಳ ವಾಯುಮಂಡಲವನ್ನು ಪಡೆದಿರುವಂಥಾ ಪ್ರದೇಶಗಳಲ್ಲಿ ಜನರು ಸ್ವಾಭಾವಿಕವಾಗಿಯೇ ಚಟುವಟಿಕೆ ಕಾಯಪುಷ್ಟಿಗಳನ್ನು ಪಡೆಯುವರು. ಅಂಥಾ ಜನರ ಶರೀರದ ಅಂಗಾಂಗಗಳು ಲವಲವಿಕೆಯುಳ್ಳವುಗಳಾಗಿರುತ್ತವೆ. ಅವರು ಉತ್ಸಾಹಪೂರ್ವಕವಾಗಿಯೂ ಚಟುವಟಿಕೆಯಿಂದಲೂ ಕೆಲಸಗಳನ್ನು ಸ್ವಾಭಾವಿಕವಾಗಿ ಮಾಡುವರು.

ಇತರ ದೇಶಗಳು ಅಷ್ಟು ಅನುಕೂಲವಾಗಿಲ್ಲ. ಹವಾ ಬಹು ಉಷ್ಣವಾಗಿರುವುದು, ದೇಶವು ತಗ್ಗಾಗಿರುವುದು, ವಾಯುಮಂಡಲದಲ್ಲಿ ಆಮ್ಲಜನಕ ಧಾತುವು ಸ್ವಲ್ಪವೇ ಇರುವುದು; ಇಂಥಾ ವಾಯುಮಂಡಲವನ್ನು ಪಡೆದಿರುವ ದೇಶಗಳು ಅಲ್ಲಿ ವಾಸಮಾಡುವ ಜನರನ್ನು ಕುಗ್ಗಿಸುತ್ತವೆ.

ಆದಕಾರಣ ಬಲಕಾರಿಯಾದ ಔಷಧಗಳ ಸೇವನೆಯು ಅವಶ್ಯಕವಾಗುತ್ತದೆ. ಶಾಸ್ತ್ರವತ್ತಾಗಿ ತಯಾರಿಸಲ್ಪಟ್ಟಂಥಾ ಬಲಕಾರಿಯಾದ ಔಷಧವು ವಾಯುಮಂಡಲದಿಂದುಂಟಾಗುವಂಥಾ ದುರ್ಗುಣಗಳನ್ನು ಬಹಳ ಮಟ್ಟಿಗೆ ಕಡಮೆಮಾಡುತ್ತವೆ.

ಅನೇಕ ವರುಷಗಳ ಹಿಂದೆ ಡಾ॥ ಹಾರ್ಟ್‌ಮನ್‌ರವರು ಪೆರೂನಾವನ್ನು ಶೋಧನೆಯಿಂದ ತಯಾರುಮಾಡಿದರು. ಅಂದಿನಿಂದಲೂ ಅವರು ಬಹಳ ಜಾಗರೂಕತೆಯಿಂದ ನೋಡಿಕೊಳ್ಳುತ್ತಾ ಈ ಔಷಧವನ್ನು ತಮ್ಮ ಕಾರ್ಖಾನೆಯಲ್ಲಿ ತಯಾರುಮಾಡಿಸುತ್ತಾ ಬಂದಿದಾರೆ.

ನಂಬಿಕೆಯಾದ ಮತ್ತು ಆರೋಗ್ಯಕರವಾದ ಪುಷ್ಟಿಯನ್ನು ಕೊಡುವಂಥಾ ಮತ್ತು ಎಷ್ಟು ಕಾಲ ಸೇವಿಸಿದರೂ ಸ್ವಲ್ಪವೂ ಕೆಡಕು ಆಗದೆ ಇರುವಂಥಾ ಔಷಧವನ್ನು ಕಂಡು ಹಿಡಿದು ತಯಾರುಮಾಡಿಕೊಡಬೇಕೆಂಬುವುದೇ ಡಾ॥ ಹಾರ್ಟ್‌ಮನ್‌ರವರ ಕುತೂಹಲಪೂರ್ವಕವಾದ ಉದ್ದೇಶವಾಗಿರುತ್ತದೆ.

ಈ ಪೆರೂನಾವು ಪ್ರಪಂಚದ ಎಲ್ಲಾ ಭಾಗಗಳಲ್ಲೂ ಪ್ರಖ್ಯಾತಿಯನ್ನು ಪಡೆದಿರೋಣವೇ ಅವರು ಅಂಥಾ ತಮ್ಮ ಶ್ರೇಷ್ಠವಾದ ಉದ್ದೇಶವನ್ನು ಸಾಫಲ್ಯಕವಾಗಿ ನೆರವೇರಿಸಿರುತ್ತಾರೆಂಬುವುದಕ್ಕೆ ಸಾಕ್ಷಿಭೂತವಾಗಿರುತ್ತದೆ.

ಶರೀರಧರ್ಮವು ಕುಗ್ಗಿ ದುರ್ಬಲವಾಗಿರುವರೆಲ್ಲಾ ಪೆರೂನಾವನ್ನು ನಂಬಿಕೆಯಿಂದ ಪುಷ್ಟಿಕೊಡುವ ಔಷಧವೆಂದು ಭರವಸೆಯಿಟ್ಟು ಸೇವಿಸಬಹುದಾಗಿದೆ. ಕಾಯಿಲೆ ಬಿದ್ದು ಚೇತರಿಸಿಕೊಳ್ಳುತ್ತಿರುವವರಾಗಲಿ, ವಾಯುಮಂಡಲದ ದುರ್ಗುಣಗಳಿಗೆ ಒಳಪಟ್ಟು ಕುಗ್ಗಿಹೋದವರಾಗಲಿ ಪೆರೂನಾವನ್ನು ಸೇವಿಸಬಹುದು.

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದ್ದೂ ಇವರಿಂದಲೇ ತಿಳಿಯಬಹುದು.

ನೋಟಿಸು.—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ :—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

27—11—1908 ರಿಂದ 4—12—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	6	5	0	0
ಮೈಸೂರು ,,	*	*	0	0
ಬೆಂಗಳೂರು ಡಿಸ್ಟ್ರಿಕ್ಟು	20	15	0	0
ಮೈಸೂರು ,,	52	43	0	0
ಕೋಲಾರ್ ,,	8	6	5	1
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	2	1	0	0
ಹಾಸನ ,,	13	7	0	0
ಚಿತ್ರದುರ್ಗ ,,	1	0	13	10
ಕಡೂರ್ ,,	20	23	0	0
ಶಿವಮೊಗ್ಗಾ ,,	0	0	0	0
* ಸಂಖ್ಯೆ ಕಾಣಿಸಲ್ಲ. ಜುಮ್ಲಾ	131	100	18	11

ಕಾಲಿವಾಹನ ಶಕ ವರುಷಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಮಾರ್ಗಶಿರ ಬಹುಳ ನವಮಿ ಗುರುವಾರದಿಂದ ಮಾರ್ಗಶಿರ ಬಹುಳ ಅಮಾವಾಸ್ಯ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೮ನೇ ಡಿಸೆಂಬರ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ತೇದಿ ಧನು ಮಾಸ
17	ಗುರು ::	ನವಮಿ	20-52	ಹ	35-5	3
18	ಶುಕ್ರ	ದಶಮಿ	21-38	ಚಿ	39-54	4
19	ಶನಿವಾ	ಏಕಾದಶಿ	27-27	ಸ್ವಾ	43-38	5
20	ರವಿವಾ §	ದ್ವಾದಶಿ	29-2	ವಿ	46-50	6
21	ಚಂದ್ರ ::	ತ್ರಯೋದಶಿ	29-26	ಅ	47-46	7
22	ಕುಜ ‡	ಚತುರ್ದಶಿ	28-28	ಜ್ಯೇ	47-57	8
23	ಬುಧ †	ಅಮಾವಾಸ್ಯ	26-20	ಮೂ	46-56	9

:: ಶೂನ್ಯತಿಥಿ.
§ ದಗ್ಧಯೋಗ.
:: ಸೋಮಪ್ರದೋಷ.
‡ ಮಾಸಶಿವರಾತ್ರಿ.
† ಸರ್ವತ್ರ ಅಮಾವಾಸ್ಯ, ಧನುಸಿಂಹಾತುರ್ಗ್ರಹ ಯೋಗ, ರ ಚಂ ಬು ಕೆ.

ಪೇಟೇ ಧಾರಣೆ.

ವಿವರ.		ಮೈಸೂರು.	ಬೆಂಗಳೂರು.
ಕಡ್ಡೀ ಅಕ್ಕಿ ಪಲ್ಲ ೧ ಕ್ಕೆ	ರೂ.	೧೮-೪-೦	೧೯-೮-೦
ಕೈಕುಟ್ಟು ಅಕ್ಕಿ ಕನಲ್	...	೧೮-೮-೨	೧೮-೮-೦
,, ದುಯಂ	...	೧೮-೪-೨	೧೮-೨-೦
ಜಾಪತ್ರೆ ಅಕ್ಕಿ	...	೧೭-೮-೦	೧೯-೦-೦
ಸಣ್ಣಕ್ಕಿ ಅವಲ್	...	೨೦-೦-೨	೨೧-೦-೦
,, ದುಯಂ	...	೧೯-೮-೦	೧೯-೮-೦
ತೊಗರಿ ಬೇಳೆ ಪಲ್ಲ ೧ಕ್ಕೆ	...	೧೮-೦-೦	೧೮-೮-೦
,, ದುಯಂ	...	೧೭-೮-೦	೧೮-೦-೦
ಹೈಕ್ ರಾಗಿ ಪಲ್ಲ ೧ಕ್ಕೆ	...	೧೦-೪-೦	೧೦-೦-೦
ಕಪರ್ವಾಗಿ	...	೧೦-೦-೦	೯-೮-೦
ಜೋಳ	...	೧೦-೮-೦	೧೦-೦-೦
ಹಲಸಂದೆ ಪಲ್ಲ ೧ಕ್ಕೆ	...	೧೪-೮-೦	೧೩-೦-೦
ಬಿಳೀ ಅವರೆ	...	೧೩-೦-೦	೧೫-೦-೦
ಹೆಸರು	...	೧೩-೧೩-೦	೧೪-೦-೦
ಉದ್ದು	...	೧೪-೮-೦	೧೪-೦-೦
ಕಡಲೆ	...	೧೮-೦-೦	೧೯-೮-೦
ಎಳ್ಳು ಸೇ. ೧೨೭ ಕ್ಕೆ	...	೨೧-೮-೦	೨೦-೦-೦
ಹುರುಳೀ	...	೧೦-೧೩-೦	೧೦-೦-೦
ಹರಳು ೧೨೭ ಸೇರಿಗೆ	...	೧೦-೦-೦	೧೦-೦-೦
ಸೀಗೇಕಾಯಿ ಮಣ ೧ಕ್ಕೆ	...	೧-೫-೦	೧-೬-೦
ಮೆಣಸಿನಕಾಯಿ	...	೪-೮-೦	೩-೮-೦
,, ದುಯಂ	...	೪-೪-೦	೩-೪-೦
ಬೆಲ್ಲ ದೊಡ್ಡ ಅಚ್ಚು	...	೬-೦-೦	ಮ ೩-೪-೦
ಒಳ್ಳೆಣ್ಣೆ ಮಣ ೧ಕ್ಕೆ	...	೫-೧೩-೦	೬-೪-೦
ಹರಳೆಣ್ಣೆ ,,	...	೪-೮-೦	೪-೦-೦
ಕೊತ್ತುಂಬರಿ ಪಲ್ಲ ೧ಕ್ಕೆ	...	೭-೦-೦	೬-೮-೦
ಉಪ್ಪು ,,	...	೬-೦-೦	೫-೪-೦
ಹುಣಸೇ ಹಣ್ಣು	...	೧-೮-೦	೧-೪-೦
,, ಹಳೇದು	...	೧-೬-೦	೧-೪-೦
ತುಪ್ಪ ಮಣ ೧ಕ್ಕೆ	...	೧೪-೦-೦	೧೫-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	...	೫-೦-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	...	೪-೫-೦	೪-೧೦-೦
ಅಳಲೇಕಾಯಿ ಮಣ ೧ಕ್ಕೆ	...	೦-೧೦-೦	೦-೧೪-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	...	೦-೧೪-೦	೦-೧೪-೬
ಚಿನ್ನ (ಪವನ್) ಕೆಂಪು	...	೧೫-೭-೦	೧೫-೬-೦
,, ,, ಪಸಿಮೆ	...	೧೫-೧೪-೦	೧೫-೧೧-೦
,, ,, ಗಟ್ಟಿ ತೊಲ ೧ಕ್ಕೆ	...	೨೪-೧೧-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	...	೬೭-೦-೦	೬೦-೦-೦

Printed and Published by the Rev. E. W. Thompson, M. A., Proprietor and Manager, Wesleyan Mission Press, Mysore. 17/12/1908

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—೧೯೧೪ ನೇ ಇಸವಿ ಡಿಸೆಂಬರ್ ತಾರೀಖು ೨೪ ನೇ ಗುರುವಾರ. ಸಂಚಿಕೆ ೩೦

ವೈದ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16 45

೧ ಲೋಕಾಮಯಹರ ಕಸ್ತೂರೀ ಮಾತ್ರೆ — ಈ ಮಾತ್ರೆಗಳನ್ನು ... ಚಂದದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ... ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ... ಜ್ವರ, ... ಹೊಟ್ಟೆಶೂಲೆ, ... ಕೈಕಾಲು ... ವಾತ ... ಅಗ್ನಿಮಾಂದ್ಯ, ... ಅರೋಚಕ ... ಅನೇಕ ರೋಗಗಳಿಗೆ ಕೊಟ್ಟರೆ ನಿಂದಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸುತ್ತಿದ್ದರೆ ... ಸುವಾಸನೆಯಾಗಿರುತ್ತಾ ... ಯಾವ ಕಾಯಿಲೆಯೂ ... ನೀರು ... ಸರಿಪಡಿಸಿ, ... ಬುದ್ಧಿ ... ವೃದ್ಧಿಪಡಿಸು ... ಗುಣಪಡಿಸುತ್ತದೆ

... ಉಪಯೋಗಿಸುತ್ತಿರುವವರು ನಿಂದಿತವಾಗಿಯೂ ... ಶಕ್ತಿವರ್ಧಕವಾಗಿದೆ

... ಉಪಯೋಗಿಸುವ ಸಂಗತಿಯ ಇರುತ್ತದೆ

... ಮಾತ್ರೆ ... ಕುಪ್ಪಿಗೆ ... ಆಣೆ ... ಕುಪ್ಪಿ ... ಕುಪ್ಪಿ ವರೆಗೆ ಪೋಸ್ಟೇಜು ... ಆಣೆ

ವಿಳಾಸ — ... ವೆಂಕಟಾಚಲ ಪಂಡಿತ, ಎಸ್ ಎಸ್ ಆರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

AMRUTANJAN DEPOT, 16 OAK-LANE, BOMBAY. [17-44]

ಅಮೃತಾಂಜನ್ ಡಿಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯ ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ ತಲೆನೋವು, ಶಿರೋಭಾರ ... ವಾತ, ಸಂಧಿವಾತ, ... ಅಬಲುಗಂಟ್ಲುನೋವು, ... ಮೂಲವ್ಯಾಧಿ, ಇವೇ ಮೊದಲಾದ ಯಾವ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತಿಳಿಯಲು ಯೋಗ್ಯವಾದ ಸಂಗತಿಯಾಗಿರುತ್ತದೆ ಇದು ಚರ್ಮದ ಮೂಲಕ ಮಾಂಸವನ್ನು ಪ್ರವೇಶಿಸಿ, ... ಪದಾರ್ಥಗಳಿಂದ ಹುಟ್ಟಿದ ನಾನಾ ತರದ ವೇದನೆಗಳನ್ನು ನಾಶಪಡಿಸುತ್ತದೆ ಬಾಟ್ಲಿ ಒಂದರ ಕಿಮ್ಮತು ೦—೮—೦ ಪೋಸ್ಟು ಖರ್ಚು ೦—೪—೦ ಆರು ಬಾಟ್ಲಿ ಕರಿಸಿಕೊಂಡವರಿಗೆ ಒಂದು ಕಪ್ ಇನಾಮು ಆರ್ ಆರ್ ಗಂಗೋಲಿ ... —ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ, ಕೆಮ್ಮಿಗೂ, ಉಪಯೋಗಿಸಿದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ

ಅಮೃತಾಂಜನದ ಪ್ರಯೋಗದ ವಿಷಯ ಒಂದು ಹೊಸ ಪುಸ್ತಕವನ್ನು ತಯಾರಿಸಿರುತ್ತೇವೆ

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣ, ತುರಿ ಕಜ್ಜಿ ನಾಶವಾಗುವದು ಇದರಿಂದ ಚರ್ಮಕ್ಕೆ ... ಗುವದಿಲ್ಲ ಮತ್ತು ಉರಿಯುವದಿಲ್ಲ ಡಬ್ಬಿ ೧ಕ್ಕೆ ೦—೬—೦ ವಿ ಪಿ ಖರ್ಚು ೦—೪—೦

ದಂತಮಂಜನ—ಡಬ್ಬಿ ೨ ಆಣೆ ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ, ಬಾಯಿಯ ವಾಸನೆಯನ್ನು ಪೂರ್ಣವಾಗಿ ತೆಗೆಯುತ್ತದೆ ಹಲ್ಲುಗಳು ಪಟ್ಟಿಯಾಗುತ್ತವೆ ಹಲ್ಲುಗಳು ಬೆಳ್ಳಗಾಗುತ್ತವೆ

ಕಜ್ಜಿ ಮುಲಾಮು ಡಬ್ಬಿ ೧ಕ್ಕೆ ಕಿಮ್ಮತ್ತು ೦ ೬ ಆಣೆ

ಕೇಶವರ್ಧಿನಿ—ಚೂರ್ಣ ಪರಿಮಳ ಉಳ್ಳದ್ದು

ಕೇಶವರ್ಧಿನಿ—ಮನಶುದ್ಧಿ ಮಾಡುವದು

ಕೇಶವರ್ಧಿನಿ—ಕೂದಲನ್ನು ನಯಮಾಡುವದು ಬಾಟ್ಲಿ ಒಂದರ ಕಿಮ್ಮತ್ತು ರೂ ೧—೦—೦

ವಜ್ರಗುಟಿಕೆ—ಧಾತುಪುಷ್ಟಿ ರಕ್ತಶುದ್ಧಿ	೧—೦—೦
ಕುಸುಮಾಂಗುಟಿಕೆ—ಹೆಂಗಸರ ಹೊಟ್ಟೆನೋವಿಗೆ	೧—೦—೦
ಸುಂದರೀ ತೈಲ—ಮೋರೆಯ ಮೇಲಿನ ಜಿಗಳಿಗೆ	೦—೧೦—೦
ತಾಂಬೂಲ ಗುಟಿಕೆ ತಾಂಬೂಲ ಸೊಗಸು ವೃದ್ಧಿಸಲಿಕ್ಕೆ	೦—೮—೦
ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಬೇಳುಕಡಿತದ ಮದ್ದು ಬೇಳುಕಡಿತಕ್ಕೆ	೦—೮—೦
ಜುಲಾಬು ಮಾತ್ರೆ—ಜುಲಾಬಿಗೆ	೦—೮—೦

ಈ ಕಂಪನಿಯವರು ತಯಾರಿಸುವ ... ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಳಾಸ —ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು, ಫ್ರೋರ್ಟು, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ

ಜ್ವರಹರಿ 61 21

... ಜ್ವರ ... ಪಿತ್ತಜ್ವರ ಶೀತಜ್ವರ, ವಾತಜ್ವರ ... ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

... ದಿವಸಗಳ ... ಔಷಧದಿಂದ ಅನೇಕ ಮಂದಿ ... ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ... ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ ... ರೂ ... ಸೀಸೆ ತರಿಸಿಕೊಂಡರೆ ಪೋಸ್ಟೇಜು ... ಬಿಡಲಾಗುವದು

ಓಮುಂಕರ್ಪೂರ

Imum-Carpoor

ಈ ಔಷಧವು ಅಜೀರ್ಣ, ... ನೋವು ... ನಾನಾತರದ ಹೊಟ್ಟೆ ನೋವುಗಳು ಮುಂತಾದ ... ಗುಣಕೊಡುವದು ಇದು ... ಹೊಟ್ಟೆ ನೋವು ಮುಂತಾದ ವ್ಯಾಧಿಗಳಿಗೆ ... ಎಂಬ ಔಷಧ ...

... ಸರ್ಜನ್ ... ಮ್ಯೂನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ... ರೋಗಿಗಳಿಗೆ ... ಕೊಟ್ಟು ... ಅವರ ರೋಗವು ಗುಣವಾಗುತ್ತಲಿದೆ ... ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಗಳಲ್ಲೂ, ಔಷಧ ... ಕ್ರಯಕ್ಕೆ ಸಿಕ್ಕುತ್ತವೆ ಇಲ್ಲದೆ ಕೆಳಗಿನ ವಿಳಾಸದ ... —

ಡಿಸ್ಪೆನ್ಸರಿ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ, ಸೆಕೆಂಡ್ ಬೀಚ್ ಲೈನ್, ಮದರಾಸ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ನಿಂದಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾರಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ... ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಮುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ ... ಬಹಳ ಚೆನ್ನಾಗಿರತಕ್ಕವುಗಳನ್ನೇ ... ಕಳುಹಿಸುತ್ತೇವೆ

ಒಳ್ಳೇದಾದ, ಚೆನ್ನಾಗಿ ಹೆಣೆದ ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ... ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚೆನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದ, ಕೆಂಪು, ಕಪ್ಪು, ... ಕಾಸಿ ಬಣ್ಣಗಳ ಟೋಪಿಗಳು ೧ ರೂ ... ಆ, ೧ ರೂ ೬ ಆ ೧ ರೂ ... ಆ

... ಚುಕ್ಕಿಯುಳ್ಳ ಟೋಪಿಗಳು ೧ ರೂ ... ಆ ... ರೂ

... ಟೋಪಿಗಳು ೧ ರೂ ... ಆ ೧ ರೂ ... ಆ ೧ ರೂ ೬ ಆ

... ಟೋಪಿಗಳು ೧ ರೂ ... ಆ ೧ ರೂ ೬ ಆ

ಕೂಸುಗಳ ಟೋಪಿ, ... ಕಟ್ಟಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಲಾ ಪ್ರಕಟನೆಗಳು

ವ್ಯವಹಾರನಿರ್ಣಯ —ಫಿರ್ಯಾದುಗಳು ... ಮತ್ತು ... ಗಳು, ... ಇವುಗಳ ಸಂಗ್ರಹವು, ... ದಸ್ತಾವೇಜು, ... ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂ ೧೨ ಆಣೆ [10 35]

ಕನ್ನಡ ಲಾ ರಿಪೋರ್ಟರ್—ಪ್ರಿವಿ ಕೌನ್ಸಿಲ್, ಹೈ ಕೋರ್ಟ್, ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸ ಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ ವರ್ಷದ ಚಂದಾ ರೂ ೧—೦—೦ ಮುಂಗಡ, ... ವಿ ಪಿ ಬಿಡಿಪ್ರತಿಕೆ ೧ಕ್ಕೆ —೨—

ಇವುಗಳನ್ನಪೇಕ್ಷಿಸುವವರು— ... ಎಂ ... ಫಸ್ಟ್ ಗ್ರೇಡ್ ಪ್ಲೀಡರ್, (೯೦) ... ರೋಡ್ ... ಪೇಟೆ ಬೆಂಗಳೂರು ಸಿಟಿ — ಈ ವಿಳಾಸಕ್ಕೆ ಬರೆಯುವುದು

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!

೨೦ 26

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಡಿಗಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ... ಬಹಳ ಕಡಮೆ ಈ ಬಟ್ಟೆಗಳು ... ದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ಕರಿಸಿ ... ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವದು ... ಆಣೆಯಿಂದ ... ಆಗಲೇ ಮಾರಲ್ಪಡುತ್ತವೆ ... ಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,
ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು.

ಇಲ್ಲಿ ನೋಡಿ.

77 11

ತುಮಕೂರು ಮಿಷನ್ ಇಲಾಖೆಯಲ್ಲಿ ಯೂರೋಪಿಯನ್ನರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ಲನ್ ದಾರದಿಂದ ತಯಾರಾಗುತ್ತವೆ. ಕ್ರಯ:—೧೨ ಆಣೆ ಮೊದಲ್ಗೊಂಡು ೧ ರೂ. ೧೨ ಆಣೆಯ ವರೆಗೆ. ೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು. ಈಗತಾನೇ ಇಂಗ್ಲಿಷ್ ಉಲ್ಲನ್ ದಾರವು ಬಂದಿದೆ. ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಬಲ್ಲೆವು. ವಿಳಾಸ.—ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು.

ಲೇಖನ ಪ್ರಕಾಶಿಕಾ

97 5

ಡಿಸೆಂಬರ್ ಆಖೈರಿನೊಳಗಾಗಿ ಬರೆದುಕೊಂಡವರಿಗೆ ರೂ	೧—೦—೦
ಅನಂತರ ಬರೆದುಕೊಂಡವರಿಗೆ ,,	೧—೮—೦
ಟಪ್ಪಾಲು ಖರ್ಚು ,,	೦-೨-೦

ಪ್ರತಿಯೊಬ್ಬ ರ್ಯಾನುಭೋಗ್, ಪಟೇಲರೂ ಅವಶ್ಯ ಸಂಗ್ರಹಿಸಿ ಇಡಬೇಕಾದದ್ದು. ರಿಜಿಸ್ಟ್ರೇಷನ್ ನೌಕರರಿಂದ ತಯಾರಾಗಲ್ಪಟ್ಟ ಈ ಪುಸ್ತಕವನ್ನು ಬಟ್ಟರೆ ಲೇವಾದೇವಿ ಮಾಡುವವರಿಗೂ, ಪತ್ರಗಳನ್ನು ಬರಿಯುವವರಿಗೂ ಇಷ್ಟು ಉಪಯುಕ್ತವಾದದ್ದು ಮತ್ತಾವದಿದೆ? ಇದರಲ್ಲಿ ಸ್ಟ್ಯಾಂಪಾಕ್ಟು, ರಿಜಿಸ್ಟ್ರೇಷನ್ ಆಕ್ಟು, ರಿಜಿಸ್ಟ್ರೇಷನ್ ರೂಲ್ಸು, ರಿಜಿಸ್ಟ್ರೇಷನ್ ಫೀಜು ವಿಷಯವಾದ ಸರ್ಕ್ಯುಲರ್‌ಗಳೂ, ಮತ್ತು ಪ್ರತಿಯೊಂದು ಪತ್ರಬರೆಯತಕ್ಕ ನಮೂನೆ, ಅದಕ್ಕೆ ಬೇಕಾದ ಸ್ಟ್ಯಾಂಪು, ರಿಜಿಸ್ಟ್ರೇಷನ್ ಫೀಜು ಮೊದಲಾದವುಗಳನ್ನು ಕಾರಣಸಹಿತ [illegible] ಚನ್ನಾಗಿ ವಿವರಿಸಿ ಇವೆ. ಓದುಬರಹ ಮಾತ್ರ ಬಲ್ಲ ಪ್ರತಿಯೊಬ್ಬರೂ ಈ [illegible] ರೂಪಾಯಿಯ ಖರ್ಚಿನಿಂದ ಅನೇಕ ವಿಧವಾದ ಕಷ್ಟನಷ್ಟಗಳನ್ನು ಖಂಡಿತವಾಗಿಯೂ ತಪ್ಪಿಸಿಕೊಳ್ಳಬಹುದು. ಹೆಚ್ಚು ಹೇಳಬೇಕೆ? ಅನುಭವದಿಂದ ತಾನೇ ಗೊತ್ತಾಗ ಬೇಕು. ನಮ್ಮ ಸೈನ್ ಇಲ್ಲದ ಪುಸ್ತಕಗಳನ್ನು ಮಾತ್ರ ಕೊಳ್ಳಬೇಡಿ. ವಿಳಾಸ—ಎಂ. ಕೃಷ್ಣಮೂರ್ತಿರಾವ್, ರಿಜಿಸ್ಟ್ರೇಷನ್ ಕ್ಲಾರ್ಕ್, ಹೊನ್ನಾಳಿ ತಾಲ್ಲೂಕ್, ಶಿವಮೊಗ್ಗ ಡಿಸ್ಟ್ರಿಕ್ಟ್.

ಕೋಟಿ. "ಪ್ರೋತ್ಸಾಹಕೋದಿರಿ" ತುಪಿಟ.

98 5

ಅಗತ್ಯಾನೇ ಶೀಘ್ರದಿಂದ ಓದಿರಿ

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತಿದೇವೆ. ೫,೦೦೦ [illegible] ಟೋಪಿ ಹೊಲಿಯುವ ಸುಪೀರಿಯಲ್ ಉಲ್ಲನ್ ದಾರ.

೧೦ ಟೋಪಿ ಹೊಲಿಯುವ ಉಲ್ಲನ್ ಬಂಡಲ್ ೧ ಕ್ಕೆ ರೂ.	೩-೭-೦
೧ ಟೋಪಿ ಆಗುವ ಉಲ್ಲನ್ ದಾರಕ್ಕೆ	೦-೮-೦
ಹಾರ್ಸ್ ಟೋಪಿ ಹಾಕುವ ಕೊಕ್ಕೆ ಸೂಜಿ ೧ ಕ್ಕೆ ೦-೧-೬,	೦-೨-೦
೩॥ ಇಂಚಿನ ದೊಡ್ಡ ಸೈಜು ಬನಿಯನ್ ೧ ಕ್ಕೆ	೦-೮-೦
ಬಾಲಿ ಪೋಸ್ಟು ಕಾರ್ಡು ಡಬ್ಬಲ್ ಕಲರ್ ೧,೦೦೦ ಕ್ಕೆ	೧-೮-೦
ಸುಗಂಧ ಸಂಪಿಗೆ ಭೃಂಗಾಮಲಕ ತೈಲ ಶೀಸೆ ೧ ಕ್ಕೆ	೦-೮-೦
ಮಂತ್ಯಾಲ್ ತಲೆ ನೋವಿಗೆ ಅನುಕೂಲವಾದ ಔಷಧ ಡಬ್ಬಿ ೧ ಕ್ಕೆ	೦-೩-೦
ಸ್ಟಿ, ಜೀ ಪರಿಮಳವಾದ ತಾಂಬೂಲ ಬಿತ ಸು ಪಾಕೆಟ್ ೧ ಕ್ಕೆ	೦-೨-೦
ಲಿನನ್ ಕೈವಸ್ತ್ರಗಳು (ಚಂದವಾದು) ೧ ಕ್ಕೆ	೦-೨-೦
ರಾಸ್‌ಕೋಪ್ ವಾಚ್ ೧ ಕ್ಕೆ	೬-೦-೦
ಕೊಂಬಿನ ಬಾಚಣಿಗೆಗಳು ದೊಡ್ಡ ಸೈಜು ಡಜನ್ ೧ ಕ್ಕೆ	೧-೧೦-೦
ಗವಕರ್ಣದ ಮುಲಾಮು ಡಬ್ಬಿ ೧ ಕ್ಕೆ	೦-೬-೦
೬೦ ಇಂಗ್ಲಿಷು ಅಕ್ಷರಗಳಿರುವ ಪೆಟ್ಟಿಗೆ ೧ ಕ್ಕೆ	೨-೮-೦

ವರಸ್ಥರವರಿಗೆ ವಿ. ಪಿ. ಯಿಂದಲೂ ರವಾನಿಸುತ್ತೇವೆ.

ನಮ್ಮ ವಿಳಾಸ. ದಿ ಉಲ್ಲನ್ ಬಜಾರ್. ಮಂಗಳೂರು, ದ. ಕ.

ಕಚ್ಚೇರಿಯ ಹರಾಜು ಇಸ್ತಿಹಾರು.

100 1

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನ 1903-04 ನೇ ಇಸವಿ ಎಕ್ಸಿಕ್ಯೂಷನ್ 111 ನೇ ನಂಬರಿನಲ್ಲಿ ಕೋರ್ಟಿನಿಂದ ನೇಮಕರಾದ ರಿಸೀವರು ರುಜು ಮಾಡಿರುವ ರಿಸೀವರು ಅರ್ಜಿದಾರನ ಬಾಬತ್ತು ಕೆಳಗೆ ಷೆಡ್ಯೂಲಿನಲ್ಲಿ ವಿವರಿಸುವ ಕಟ್ಟಡವನ್ನು ಇದುವರೆಗೆ ಅದರಮೇಲೆ ಇರಬಹುದಾದ ಎಲ್ಲಾ ಜವಾಬ್ದಾರಿಗಳನ್ನೂ ವಿನಾಯಿಸಿ (Free of encumbrance) 1909 ನೇ ಇಸವಿ ಜನವರಿ 10 ನೇ ಭಾನುವಾರ ಪ್ರಾತಃಕಾಲ 11 ರಿಂದ 5 ಗಂಟೆ ವರೆಗೂ ಮೈಸೂರಿನಲ್ಲಿ ಕಟ್ಟಡದ ಬಳಿ ಬಹಿರಂಗವಾಗಿ ಹರಾಜು ಮಾಡಿಸುತ್ತಾರೆ. ಅಜ್ಜೈರು ಬಿಡ್ಡುದಾರ್ರು ಮೇಲಂಗೆ ಸ್ವತ್ತು ಬಿಡಲ್ಪಡುತ್ತೆ. ಹರಾಜಿನಲ್ಲಿ ಕೂಗುವವರು ಬಿಡು ಬೈದಾದ ಕೂಡಲೆ ಬೊಬ್ಬೆಗಿನ ಸೈಕೆ ಶೇಕಡ 25 ರೂಪಾಯಿನಂತೆ ಪಾವತಿಮಾಡಬೇಕಲ್ಲದೆ ಪೂರಾ ಮೊಬಲಗನ್ನು 15 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. (ಸೈ) ಎಂ. ಜಿ. ಲಕ್ಷ್ಮೀನರಸಿಂಹಯ್ಯಂಗಾರ್, ರಿಸೀವರ್.

ಷೆಡ್ಯೂಲ್.

ಮೈಸೂರು ನಗರ ಮೊಹಲ್ಲಾ ಜನರಲ್ ಆಸ್ಪತ್ರೆ ಎದುರಾಗಿ ಇರುವ ಮೈಸೂರು [illegible] ಕಟ್ಟಡಕ್ಕೆ ಚೆಕ್ಕುಬಂದಿ ಪೂರ್ವಕ್ಕೆ ಗಲ್ಲಿ, ಪಶ್ಚಿಮಕ್ಕೆ [illegible] ದಕ್ಷಿಣಕ್ಕೆ [illegible] ನಿಂದ ಬರತಕ್ಕ [illegible], ಉತ್ತರಕ್ಕೆ ಗಲ್ಲಿ, ಪಡೆಯಾರ್ ಹನುಮಂತಯ್ಯ [illegible] ಕಂಬದಾಗಿ [illegible] ಮಧ್ಯ [illegible] ಇರುವ ಗಾರೆ [illegible] ಕಟ್ಟಡ [illegible] ಅದರ ಹಿಂಭಾಗದಲ್ಲಿ [illegible]

(ಸೈ) ಎಂ. ಜಿ. ಲಕ್ಷ್ಮೀನರಸಿಂಹಯ್ಯಂಗಾರ್, ರಿಸೀವರ್.

ತಾ. ಕ. ಕಟ್ಟಡವನ್ನು ಹರಾಜು ಗುರ್ರಿ ತಾರೀಖು ಲಾಗಾಯಿತು ಬೇಕಾದವರು ಹೋಗಿ ನೋಡಬಹುದು.

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

1-59



ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ನೋವು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಳ ಪ್ರಯೋಜನವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯ ಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಅಗಲಿನಲ್ಲಿ ರಕ್ತ ಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಬಿಡಿಸಿ ಸಹಜಾಗಿ ನಿವಾರಣೆಮಾಡುತ್ತದೆ. ಉಸಿರು ಬಿಡುವುದು ಕಷ್ಟವಾಗಿದ್ದರೆ ಅದನ್ನು ಕೂಡಲೆ ಪರಿಹರಿಸುತ್ತದೆ. ಆಯಾಸಕರವಾದ ಕೆಮ್ಮಿನ ರಭಸವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಳಗಿನ ಅಂಗ ಕಟ್ಟಿ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲುದು. ಕೆಮ್ಮನ್ನು ಶಮನಮಾಡಿ ನಿದ್ರೆ ಸುಖವಾಗಿ ಬರುವಂತೆ ಮಾಡುವಂತೆ ಮನಸ್ಸಿಗೆ ಉಲ್ಲಾಸ ಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ.

ಈ ಔಷಧವು ಮಕ್ಕಳಿಗೆ ಅಪಾಯವಿಲ್ಲ.

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೩ ರೂಪಾಯಿ

೧೯೦೯ ನೇ ಬೋನಾರ್ ಸೆಕೆಂಡು ಕ್ಲಾಸ್ ಟೆಕ್ಸ್ಟ್ ನೋಟ್ಸ್.

101 1

ಜನವರಿ ೧೧ ರ ಒಳಗಾಗಿ ಬರುತ್ತೆ. ಕ್ರಯ ೩ ಆಣೆ.

ನಮ್ಮ ನೋಟ್ಸು ಬೇಕಾಗಿದ್ದರೆ ನಮಗೇ ಬರೆಯುವದು ಉತ್ತಮ. ಇತರರಿಗೋಸ್ಕರ ಬರೆಯುವ ಪತ್ರದಲ್ಲಿ ನಮ್ಮ ಹೆಸರನ್ನು ಕಾಣಿಸಿ ಬರೆಯಿರಿ. ಯಾತಕ್ಕೆಂದರೆ ಇತರರ ನೋಟ್ಸನ್ನು ಕಳುಹಿಸಿಬಿಟ್ಟಾರು. ಮ॥ ಸಿ. ಪುಟ್ಟಯ್ಯನವರ ಮಹಾಪತ್ರಿಕೆಯ ಬಹುಮಾನಕ್ಕೆ ಈ ಸಲ ನಮ್ಮ ನೋಟ್ಸನ್ನು ಕೊಡುವದಿಲ್ಲ.

ವಿಳಾಸ ಯಮ್. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧ ಗ್ರಂಥಾಲಯ, ಮೈಸೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

18 11

ತಲೆನೋವು, ನಾಯುನೋವು, ಸೆಳತ, ಗಂಟಿನೋವು, ಪಾರ್ಶ್ವವಾಯು. ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲು ನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿ ಜೀವನಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು. ಆದ್ದರಿಂದಲೇ ಇದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಕೇಳುವರು. ಈ ಆಶ್ಚರ್ಯವಾದ ತೈಲವು ನೋವಿನ ಮೂಲವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ.

ಕ್ರಯ ಶೀಸೆ ೧ ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಅದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ವಜಾ ಆಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—ಎಸ್. ಕ್ಲೆಮೆಂಟ್ಸ್, ೨೭, ವೇದಮಲೆಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಹಿಂದೂಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸರಿಯಾದ ಔಷಧವನ್ನು ಕೊಡುವುದು ಅವಶ್ಯಕ.

SCOTT'S EMULSION

33-39

(ಸ್ಕಾಟ್ಸ್ ಇಮಲ್ಷನ್)

ಎಂಬೀ ಜೀವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಮೀನುಹುಳ್ಳವನು ಇರುವ ಈ ಔಷಧದ ಗುರುತು.

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವಿಸಿ ವಾಸಿಮಾಡುತ್ತಾ [illegible] ಅದರ ಗುಣಗಳು [illegible] ಇರುವವು.

ಕ್ರಯದಿಂದ ಮುಟ್ಟದೇ ತಯಾರಾಗಿದ್ದು.

ಎಲ್ಲಾ ಔಷಧ ವ್ಯಾಪಾರಗಳಲ್ಲೂ ವಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

JUST RECEIVED!! JUST RECEIVED!!

Stead's Books for the Bairns

Illustrated New Numbers

STEAD'S PENNY POPULAR TALES Sixty four pages in [illegible] Picture Cover. Each number contains [illegible] 24 number

A VERY NICE SELECTION OF 917

CHRISTMAS AND NEW YEAR CARDS AND CALENDARS FOR 1909.

Apply The Manager, C. L. S. Book Depot, Mysore City.

ಶ್ರೀ ತಾಂಬೂಲ.

81 12

ಇದನ್ನು [illegible] ಗುಣಸೂಚನೆ

ತಾಂಬೂಲದ [illegible] ಮಾತ್ರೆಗಳನ್ನು ಉಪಯೋಗಿಸುತ್ತ ಬಂದರೆ ಮುಖದ ಬಣ್ಣ ಶುದ್ಧವಾಗಿ ರಕ್ತವೃದ್ಧಿ ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ. ನಾನಾ ಕೀಟ ಸಂಬಂಧ ದೋಷಗಳು ನಿವಾರಣೆಯಾಗುತ್ತೆ. ವಿದ್ಯಾರ್ಥಿಗಳಿಗೆ ಅಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಈ ತಾಂಬೂಲ ಉತ್ಸಾಹ ಉಲ್ಲಾಸ ವೃದ್ಧಿಯನ್ನುಂಟುಮಾಡುತ್ತೆ. ಭಳಿ, ಪ್ರಿಯ ಸಂಗಡ, ಕೆಮ್ಮು ಮುಂತಾದ್ದಕ್ಕೆ ೧ ೪ ಮಾತ್ರೆಗಳಂತೆ ಕೊಟ್ಟರೆ ಶೀಘ್ರ ಗುಣಕಾಣುವುದು. ಈ [illegible] ಜನರಿಗೆ ಅನುಭವದ [illegible] ಮಕ್ಕಳವರ ಮನೆಗಳಲ್ಲಿ ಅವರ ಇದನ್ನು ಇಡಬೇಕು [illegible] [illegible] ಆಣೆ [illegible] ನಮ್ಮ ವಿಳಾಸ [illegible]

ದೇವನಹಳ್ಳಿ ಟೌನ್, ಬೆಂಗಳೂರು ಡಿಸ್ಟ್ರಿಕ್ಟ್. ಎಂ. ಗೋವಿಂದಶೆಟ್ಟಿ, ಮೆಡಿಕಲ್ ಹಾಲ್ ಕೀಪರ್.

ಸ್ವಸ್ಥವಾಗುವದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಗಿದ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಗುವುದು, ತಲೆನೋವು, ಗಾಬರಿ; ಕಣ್ಣು ಮೊಬ್ಬು; ತಲೆ ತಿರುಗುವಿಕೆ; ಮೈನೋವು ಕೀಲುನೋವು, ನರವು; ಸಿತ್ರಾಣ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉದುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-17]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೩ [illegible] ; ಅಥವಾ ೬ ಬುಡ್ಡಿಗಳಿಗೆ ರೂ. ೧೮ [illegible] ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ೨೦, ಸಿ. ಒ. ಬಾಕ್ಸ್ ಬೊಂಬಾಯಿ.—ಇವರಲ್ಲಿ ದೊರೆಯುವುವು.

ವೃತ್ತಾಂತ ಪತ್ರಿಕೆ.

೫೮ ೧೯೦೮ನೇ ಇಸವಿ ಡಿಸೆಂಬರ್ ತಾ ೨೪ನೇ ಗುರುವಾರ

ಹಿಂದುಸ್ಥಾನದಲ್ಲಿ ರಾಜ್ಯಭಾರದ ಹೊಸ ಕಿಸ್ತುಗಳು.

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಮಾರ್ಲಿಯವರು ಕಳೆದ ಶುಕ್ರವಾರದ ದಿನ ವಿಲಾಯತಿಯಲ್ಲಿ ಲಂಡನ್ ಪಟ್ಟಣದ ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಹಿಂದುಸ್ಥಾನದ ರಾಜ್ಯಭಾರ ಕ್ರಮದಲ್ಲಿ ಮಾಡಲ್ಪಡುವ ಬದಲಾವಣೆಗಳನ್ನು ಕುರಿತು ತಿಳಿಸಿದರು. ಈ ವಿಚಾರವಾಗಿ ಕಳೆದ ಎರಡು ವರುಷಗಳಿಂದಲೂ ಒಂದು ಕಡೆ ಇಂಡಿಯಾ ಗವರ್ನ್‌ಮೆಂಟಿನವರಿಗೂ ವಿಲಾಯತಿಯಲ್ಲಿರುವ ಸ್ಟೇಟ್ ಸೆಕ್ರೆಟರಿಯವರಿಗೂ, ಇನ್ನೊಂದು ಕಡೆ ಇಂಡಿಯಾ ಗವರ್ನ್‌ಮೆಂಟಿಗೂ ಒಳದೇಶದ ಬೇರೆ ಬೇರೆ ಅಧಿಪತ್ಯಗಳ ಗವರ್ನ್‌ಮೆಂಟುಗಳಿಗೂ ಕಾಗದ ಪತ್ರಗಳು ನಡೆಯುತ್ತಾ ಇದ್ದವು. ಈ ಕಾಗದ ಪತ್ರಗಳನ್ನೆಲ್ಲಾ ಎರಡಾಗಿ ವಿಂಗಡಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿದಾರೆ. ಒಳದೇಶದಲ್ಲಿ ಬೇರೆ ಬೇರೆ ಅಧಿಪತ್ಯಗಳಿಗೂ ಇಂಡಿಯಾ ಗವರ್ನ್‌ಮೆಂಟಿಗೂ ನಡೆದ ಕಾಗದ ಪತ್ರಗಳು ೧,೦೦೦ ಪುಟಗಳುಳ್ಳದ್ದಾಗಿದೆ. ಇದಕಾರಣ ಈಗಿಂದಾಗ್ಗೆ ಚರ್ಚೆಯಾಗುತ್ತಿದ್ದ ಈ ವಿಚಾರಗಳನ್ನೆಲ್ಲಾ ಕ್ರೋಢೀಕರಿಸಿ ತಿಳಿಸುವುದು ಬಹಳ ಕಷ್ಟಕರವಾಗಿರುವುದು. ಆದರೂ ಆ ಸಂಗತಿಗಳನ್ನು ಸುಲಭವಾಗಿ ತಿಳಿಸಬೇಕೆಂದು ಪ್ರಯತ್ನ ಪಡುವೆವು.

ಮೊದಲನೆಯದಾಗಿ, ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಮೆಂಬರುಗಳ ಸಂಖ್ಯೆಯನ್ನು ೬೦ಕ್ಕೆ ಹೆಚ್ಚಿಸುವರು. ಈ ಪೈಕಿ ೩೧ ಮಂದಿ ಬೇರೋಜುಗಾರ ಮೆಂಬರುಗಳಾಗಿರಬಹುದು. ಈ ಬೇರೋಜುಗಾರ ಮೆಂಬರುಗಳಲ್ಲಿ ೫ ಮಂದಿಯನ್ನು ಗವರ್ನ್‌ಮೆಂಟಿನವರು ನೇಮಕಮಾಡುತ್ತಾರೆ, ಉಳಿದ ೨೬ ಮಂದಿಯನ್ನು ಪ್ರಜೆಗಳು ಚುನಾಯಿಸುವಂತಾಗುವುದು. ಹ್ಯಾಗೆಂದರೆ, ಬೇರೆ ಬೇರೆ ಅಧಿಪತ್ಯಗಳ ಮಂತ್ರಾಲೋಚನಾ ಸಭೆಗಳಿಂದ ೧೩ ಮಂದಿಯೂ, ಜಮೀನ್ದಾರರುಗಳಿಂದ ೬ ಮಂದಿಯೂ, ಮುಸಲ್ಮಾನರಿಂದ ೫ ಮಂದಿಯೂ, ಯೂರೋಪಿಯನ್ ಮತ್ತು ದೇಶೀಯ ವರ್ತಕ ಮಂಡಲಿಗಳಿಂದ ೪ ಮಂದಿಯೂ ಚುನಾಯಿಸಲ್ಪಡುತ್ತಾರೆ. ಈ ಏರ್ಪಾಡಿನಿಂದ ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಈಗಿರುವ ಮೆಂಬರುಗಳ ಸಂಖ್ಯೆಯನ್ನು ದ್ವಿಗುಣಮಾಡಿದಂತಾಗುವುದು.

ಗವರ್ನ್‌ಮೆಂಟಿನವರು ವರ್ಷದಲ್ಲಿ ಸಾಧಿಸತಕ್ಕ ಕಾರ್ಯಕರ್ತವ್ಯಗಳ ಲೆಕ್ಕಾಚಾರಪಟ್ಟಿಯನ್ನು (ಜಮಾಖರ್ಚಿನ ಅಂದಾಜು ಪಟ್ಟಿಗಳನ್ನು) ತಯಾರುಮಾಡುವುದೇ ಪ್ರಧಾನವಾಗಿರುತ್ತದೆ. ಇಂಥಾ ಅಂದಾಜು ಪಟ್ಟಿಗಳನ್ನು ತಯಾರುಮಾಡಿ ಮೇಲ್ಕಂಡ ಕೌನ್ಸಿಲ್ಲಿಗೆ ಒಪ್ಪಿಸುವರು. ಕೌನ್ಸಿಲ್ ಮೆಂಬರುಗಳಲ್ಲಿ ಒಂದು ಕಮಿಟಿಯನ್ನು ನೇಮಕಮಾಡಿ, ಈ ಕಮಿಟಿಯವರು ಜಮಾಖರ್ಚಿನ ಬಾಬುಗಳನ್ನು ಪರಿಶೋಧನೆ ಮಾಡುವುದಕ್ಕೂ ಪ್ರಶ್ನೆಗಳನ್ನೂ ಹೊಸ ಅಭಿಪ್ರಾಯಗಳನ್ನೂ ಸೂಚಿಸುವುದಕ್ಕೂ ಒಂದು ತಿಂಗಳ ಸಾವಕಾಶಕೊಡುತ್ತಾರೆ. ಅವರ ಚರ್ಚೆಗಳೆಲ್ಲಾ ಪೂರೈಸಿದ ತರುವಾಯ ಬದಲಾವಣೆ ಮಾಡಲ್ಪಟ್ಟ ಪಟ್ಟಿಯನ್ನು ಹೊಸ ಸಭೆಗೆ ತರುವರು. ಇದಲ್ಲದೆ ರಾಜ್ಯಭಾರಕ್ಕೆ ಸಂಬಂಧಪಟ್ಟ ಎಲ್ಲಾ ವಿಚಾರಗಳನ್ನೂ ಕುರಿತು ಈ ಕೌನ್ಸಿಲ್ ಮೆಂಬರುಗಳು ಗವರ್ನ್‌ಮೆಂಟಿನವರನ್ನು ಪ್ರಶ್ನೆಮಾಡಿ ಅವರಿಂದ ಸಮಾಧಾನಗಳನ್ನು ಪಡೆಯುವ ಅಧಿಕಾರವನ್ನೂ ಕೊಡಲ್ಪಡುವುದು.

ಒಳದೇಶದಲ್ಲಿ ಬೇರೆ ಬೇರೆ ಅಧಿಪತ್ಯಗಳಾಗಿರುವ ಮದರಾಸ್, ಬೊಂಬಾಯಿ, ಬಂಗಾಳಾ, ಸಂಯುಕ್ತ ಸಂಸ್ಥಾನಗಳು, ಈ ನಾಲ್ಕು ವಿಭಾಗಗಳಲ್ಲೂ ಕೊಟ್ಟಿರುವ ಪ್ರತಿ ಒಂದು ಮಂತ್ರಾಲೋಚನಾ ಸಭೆಯ ಮೆಂಬರುಗಳ ಸಂಖ್ಯೆಯನ್ನೂ ೫೦ಕ್ಕೆ ಹೆಚ್ಚಿಸುತ್ತಾರೆ. ಇದಲ್ಲದೆ ಪೂರ್ವಬಂಗಾಳಾ ಮತ್ತು ಅಸ್ಸಾಂ ಎಂಬ ವಿಭಾಗದ ಕೌನ್ಸಿಲಿನಲ್ಲಿ ೪೭ ಮೆಂಬರುಗಳೂ, ಪಂಜಾಬ್ ಕೌನ್ಸಿಲಿನಲ್ಲಿ ೩೦ ಮೆಂಬರುಗಳೂ, ಬರ್ಮಾ ಪ್ರಾಂತದ ಕೌನ್ಸಿಲಿನಲ್ಲಿ ೧೬ ಮೆಂಬರುಗಳೂ ಇರುವಂತೆ ಮೆಂಬರುಗಳ ಸಂಖ್ಯೆಯನ್ನು ಹೆಚ್ಚು ಮಾಡುವರು. ಈ ಎಲ್ಲಾ ಕೌನ್ಸಿಲುಗಳಲ್ಲೂ ಬೇರೋಜುಗಾರ ಮೆಂಬರುಗಳ ಸಂಖ್ಯೆಯೇ ಹೆಚ್ಚಾಗಿರುವಂತೆ ಏರ್ಪಡುವುದು. ಯಾವ ಯಾವ ಕೌನ್ಸಿಲಿನಲ್ಲಿ ಯಾವ ಯಾವ ಕೋಮಿನ ಮೆಂಬರುಗಳು ಎಷ್ಟೆಷ್ಟು ಮಂದಿ ಆರಿಸಲ್ಪಡುವುದು ಆಯಾ ಅಧಿಪತ್ಯದಲ್ಲಿರುವ ಬೇರೆ ಬೇರೆ ಕೋಮುಗಳ ಸ್ಥಿತಿ ಸಂಖ್ಯೆ ಮುಂತಾದ್ದನ್ನು ಅನುಸರಿಸಿ ಗೊತ್ತುಮಾಡಲ್ಪಡುತ್ತದೆ. ಬಂಗಾಳಾ, ಉತ್ತರದ ದೇಶದಲ್ಲಿ ಮುಸಲ್ಮಾನರು ಹೆಚ್ಚಾಗಿರುವುದರಿಂದ ಅವರ ಕೋಮಿನ ಮೆಂಬರುಗಳು ಮದರಾಸ್ ಕೌನ್ಸಿಲಿನಲ್ಲಿರುವುದಕ್ಕಿಂತಲೂ ಅಲ್ಲಿ ಹೆಚ್ಚಾಗಿರುತ್ತಾರೆ. ಪ್ರತಿ ಒಂದು ಅಧಿಪತ್ಯದ ಕೌನ್ಸಿಲ್ ರಚನೆಯನ್ನೂ ವಿವರಿಸುವುದಕ್ಕೆ ಸ್ಥಳಸಂಕೋಚವಾಗುವುದರಿಂದ ಮದರಾಸ್ ಅಧಿಪತ್ಯದ ಕೌನ್ಸಿಲ್ ವಿಚಾರವನ್ನು ಮಾತ್ರ ಇಲ್ಲಿ ಸೂಚಿಸುವೆವು.

ಮದರಾಸ್ ಅಧಿಪತ್ಯದ ಗವರ್ನರವರ ಹೊಸ ಮಂತ್ರಾಲೋಚನಾ ಸಭೆಯಲ್ಲಿ ಗವರ್ನರವರೂ ಸೇರಿ ೪೭ ಮೆಂಬರುಗಳಾಗುತ್ತಾರೆ. ಈ ಪೈಕಿ ಸರಕಾರಿ ಮೆಂಬರುಗಳು ೨೪ಕ್ಕಿಂತ ಹೆಚ್ಚಿಲ್ಲ, ಬೇರೋಜುಗಾರ ಮೆಂಬರುಗಳು ೨೪ಕ್ಕಿಂತ ಹೆಚ್ಚಾಗಬಹುದು. ಈ ೨೪ ಮಂದಿಯ ಪೈಕಿ ಸರಕಾರದವರೇ ನಾಲ್ವರನ್ನು ನೇಮಿಸುವರು; ಉಳಿದ ೨೦ ಮಂದಿಯನ್ನು ಪ್ರಜೆಗಳು ಚುನಾಯಿಸುವ ಕ್ರಮ ಹ್ಯಾಗೆಂದರೆ, ಮದರಾಸ್ ಮ್ಯುನಿಸಿಪಾಲಿಟಿಯವರು ಒಬ್ಬ ಮೆಂಬರನ್ನೂ, ಯೂನಿವರ್ಸಿಟಿ ಎಂಬ ವಿದ್ಯಾ ಸಂಘದವರು ಒಬ್ಬ ಮೆಂಬರನ್ನೂ, ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಫಂಡ್ ಬೋರ್ಡುಗಳವರು ೮ ಮಂದಿಯನ್ನೂ, ಭಾರೀ ಜಮೀನ್ದಾರರು ೪ ಮಂದಿಯನ್ನೂ, ಮಹಮ್ಮದೀಯರು ಒಬ್ಬರನ್ನೂ, ದೇಶಸ್ಥರಗಳ ವರ್ತಕ ಮಂಡಲಿಗಳು ಒಬ್ಬರನ್ನೂ ತಮ್ಮ ತಮ್ಮಲ್ಲೇ ಚುನಾಯಿಸಿ ಕಳುಹಿಸುವರು. ಈ ರೀತಿ ಏರ್ಪಡುವಂಥಾ ಹೊಸ ಕೌನ್ಸಿಲ್ ಸಭೆಯ ಮೆಂಬರುಗಳಿಗೆ ವಿಷಯಗಳನ್ನು ಕುರಿತು ಚರ್ಚಿಸಿ ತಮ್ಮ ಅಭಿಮತವನ್ನು ತಿಳಿಸುವುದಕ್ಕೂ, ಕಾರುಬಾರುಗಳ ವಿಚಾರವಾಗಿ ಸರಕಾರದವರನ್ನು ಪ್ರಶ್ನೆ ಮಾಡಿ ಅವರಿಂದ ಸಮಾಧಾನ ಪಡೆಯುವುದಕ್ಕೂ ಅಧಿಕಾರವುಂಟಾಗುತ್ತದೆ. ಇಂಥಾ ಅಧಿಕಾರಗಳು ಈಗಿರುವ ಕೌನ್ಸಿಲ್ ಮೆಂಬರುಗಳು ಪಡೆದಿರುವುದಿಲ್ಲ.

ಹೊಸದಾಗಿ ಏರ್ಪಡಿಸಲ್ಪಡುವಂಥಾ ರಾಜಕೀಯ ಬದಲಾವಣೆಗಳು ಇಷ್ಟು ಮಾತ್ರವೇ ಅಲ್ಲ. ಡಿಸ್ಟ್ರಿಕ್ಟ್ ಮತ್ತು ಮ್ಯುನಿಸಿಪಲ್ ಬೋರ್ಡುಗಳಲ್ಲಿ ಈಗಿರುವಂಥಾ ಸರಕಾರಿ ಅಧಿಕಾರಿಗಳ ಸಂಖ್ಯೆಯು ಕಡಮೆಯಾಗಿ, ಇವರು ಆ ಬೋರ್ಡುಗಳ ಕಾರುಬಾರುಗಳಲ್ಲಿ ಪ್ರವರ್ತಿಸದಂತೆಯೂ, ಬೋರ್ಡುಗಳಿಗೆ ಹೆಚ್ಚು ಸ್ವಾತಂತ್ರ್ಯಗಳು ದೊರಕುವಂತೆಯೂ ಆದೀತು. ಇನ್ನೂ ಏನೆಂದರೆ, ಗ್ರಾಮಾಂತರಗಳಲ್ಲಿ ಸಣ್ಣ ಪುಟ್ಟ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವುದಕ್ಕೆ ಕೋರ್ಟುಗಳೂ ಗ್ರಾಮಗಳ ಆರೋಗ್ಯಾಚಾರವೇ ಮೊದಲಾದವುಗಳನ್ನು ನೋಡಿಕೊಳ್ಳುವುದಕ್ಕೆ ಬೋರ್ಡುಗಳೂ ಏರ್ಪಾಡಾಗುತ್ತವೆ. ಈ ಕೋರ್ಟು ಮತ್ತು ಬೋರ್ಡುಗಳಲ್ಲಿ ವಿಶೇಷವಾಗಿ ಬೇರೋಜುಗಾರರನ್ನೇ ಮೆಂಬರುಗಳಾಗಿ ನೇಮಿಸಿ, ಅವರಿಗೆ ಸರಿಯಾದ ತಿಳುವಳಿಕೆ ಮುಂತಾದ್ದನ್ನುಂಟುಮಾಡುವುದಕ್ಕೆ ಮೇಲ್ವಿಚಾರಕರನ್ನು ಗೊತ್ತುಮಾಡುವರು. ಈ ಭಾಗವನ್ನು ಸರಿಯಾಗಿ ಮೇಲ್ವಿಚಾರಣೆ ನೋಡಿಕೊಂಡು ತಕ್ಕ ಏರ್ಪಾಡುಗಳನ್ನು ಮಾಡುವುದಕ್ಕೆ ಗವರ್ನ್‌ಮೆಂಟಿನವರು ವಿಲಾಯತಿಯಲ್ಲಿರುವಂತೆ ಲೋಕಲ್ ಗವರ್ನ್‌ಮೆಂಟ್ ಬೋರ್ಡ್ ಎಂಬ ಪ್ರತ್ಯೇಕವಾದ ಹೊಸ ಇಲಾಖೆಯೊಂದನ್ನು ಕಲ್ಪಿಸುತ್ತಾರೆ.

ಇನ್ನೊಂದು ದೊಡ್ಡ ಬದಲಾವಣೆ ಏನೆಂದರೆ, ಈ ವೈಸ್‌ರಾಯಿಯವರ ಎಗ್ಜಿಕ್ಯುಟಿವ್ ಕೌನ್ಸಿಲ್ ಸಭೆಯಲ್ಲಿ ೮ ಮಂದಿ ಮೆಂಬರುಗಳಿರುತ್ತಾರಷ್ಟೆ. ಈ ಪೈಕಿ ಒಬ್ಬ ಮೆಂಬರ ಸ್ಥಾನಕ್ಕೆ ದೇಶೀಯ ದೊಡ್ಡ ಮನುಷ್ಯರನ್ನು ನೇಮಕಮಾಡುತ್ತಾರೆ. ಹೀಗೆಯೇ ಬೊಂಬಾಯಿ ಮತ್ತು ಮದರಾಸ್ ಗವರ್ನರುಗಳ ಎಗ್ಜಿಕ್ಯುಟಿವ್ ಕೌನ್ಸಿಲ್ ಮೆಂಬರುಗಳ ಸಂಖ್ಯೆಯನ್ನು ೨ ರಿಂದ ೪ ಕ್ಕೆ ಹೆಚ್ಚಿಸಿ, ಒಬ್ಬೊಬ್ಬ ದೇಶೀಯನನ್ನು ಮೆಂಬರಾಗಿ ನೇಮಿಸುವರು.

ಈ ರೀತಿ ರಾಜ್ಯಭಾರದ ಕ್ರಮಗಳನ್ನು ಬದಲಾವಣೆ ಮಾಡುವುದರಲ್ಲಿ ಗವರ್ನ್‌ಮೆಂಟಿನವರ ಅಭಿಪ್ರಾಯ ಉದ್ದೇಶಗಳು ಏನೆಂಬುದನ್ನು ಕುರಿತು ನಾವು ಸದ್ಯದಲ್ಲಿ ಪ್ರಸ್ತಾಪ ಮಾಡುವವರಾಗಿಲ್ಲ. ಮತ್ತು ನಾವು ಈ ಬದಲಾವಣೆಗಳ ದೆಸೆಯಿಂದ ಈ ರಾಷ್ಟ್ರದ ಪ್ರಜೆಗಳಿಗೆ ಉಂಟಾಗುವ ಸ್ವಾತಂತ್ರ್ಯಗಳನ್ನಾಗಲಿ ಅವರ ಜವಾಬ್ದಾರಿಯನ್ನಾಗಲಿ ವಾಚಕರಿಗೆ ತಿಳಿಸಲು ಪ್ರಯತ್ನಪಡುವುದಿಲ್ಲ. ಗವರ್ನ್‌ಮೆಂಟಿನವರು ಕೊಟ್ಟಿರುವಂಥಾ ವಾಗ್ದಾನಗಳನ್ನು ಅವರು ನೆರವೇರಿಸಿರುತ್ತಾರೆ. ಲಾರ್ಡ್ ಮಾರ್ಲೆಯವರೂ ಲಾರ್ಡ್ ಮಿಂಟೋಯವರೂ ಕೆಲವು ತಿಂಗಳುಗಳ ಹಿಂದೆ—ಕೆಲವರು ನಡೆಸುವಂಥಾ ಕ್ರೂರಕೃತ್ಯಗಳನ್ನು ನೋಡಿ, ನಾವು ನಡೆಸಬೇಕಾಗಿರುವ ಅಭಿವೃದ್ಧಿ ಕಾರ್ಯಗಳನ್ನು ಮುಂದರಿಸಿ ನಡೆಸಲಿಕ್ಕೆ ಎಷ್ಟು ಮಾತ್ರಕ್ಕೂ ಹಿಮ್ಮೆಟ್ಟಲಾರೆವು ಎಂದು ಹೇಳಿರುವರು.

ಒಂಬತ್ತು ಮಂದಿಯನ್ನು ಹಿಡಿದು ಗಡೀಪಾರು ಮಾಡಿದ್ದೂ, ಇತರ ಕಠಿಣತರವಾದ ಕಾರ್ಯಗಳನ್ನು ನಡೆಸಿದ್ದೂ ಬಂಗಾಳಾ ಮತ್ತು ಪೂರ್ವಬಂಗಾಳಾ ಅಧಿಪತ್ಯಗಳ ಗವರ್ನರುಗಳ ಕೆಲಸವಾಗಿರುತ್ತದೆ. ಇದನ್ನು ನೋಡಲಾಗಿ ಇಂಡಿಯಾ ಗವರ್ನ್‌ಮೆಂಟಿನವರು, ರಾಜದ್ರೋಹಾಪರಾಧವನ್ನೂ ಕ್ರೂರಕೃತ್ಯಗಳನ್ನೂ ಖಂಡಿತವಾಗಿ ಅಡಗಿಸಬೇಕೆಂದು ಸಂಕಲ್ಪಮಾಡಿಕೊಂಡಿರುವುದು ವ್ಯಕ್ತಪಡುತ್ತದೆ. ಅವರು ಈ ಅಕೃತ್ಯಗಳನ್ನು ಸಮಾಧಾನದಿಂದ ತಾಳಿ ತಾಳಿ ಸಾಕಾಗಿರುತ್ತಾರೆ. ಆದರೇನು? ದೇಶಭಕ್ತರ ನ್ಯಾಯವಾದ ಮತ್ತು ಸಹಜವಾದ ಪ್ರಾರ್ಥನೆಗಳನ್ನು ಗವರ್ನ್‌ಮೆಂಟಿನವರು ಆಲೈಸಿ ಅವರಿಗೆ ಸಲ್ಲತಕ್ಕ ಸ್ವತಂತ್ರಾಧಿಕಾರಗಳನ್ನು ಮನಃಪೂರ್ವಕವಾಗಿಯೂ ಸಂತೋಷದಿಂದಲೂ ವಹಿಸುತ್ತಲೂ ಬಂದಿರುವರು.

ಒಳದೇಶದ ವೃತ್ತಾಂತಗಳು.

[illegible] ಕರೋಟಿಗೆ ರೈಲ್ ರಸ್ತೆ ಹಾಕುವ ವಿಚಾರದಲ್ಲಿ ಸರ್ವೇ ಮತ್ತು ತಖ್ತೆ ನಡಿಸುವುದಕ್ಕೆ ಸರಕಾರದವರು ಏರ್ಪಾಡು ಮಾಡಿರುತ್ತಾರೆ.

* * *

೬ನೇ ತಾರೀಖು ಶ್ರೀ ಮನ್ಮಹಾರಾಜರವರು ಪರಿವಾರ ಸಹಿತ ೮ ಜನವರಿಯಿಂದ ಮೈಸೂರಿಗೆ ಪ್ರಯಾಣಮಾಡಿ, ಅಲ್ಲಿ ಕೆಲವು ಕಾಲ ಇದ್ದು ಬರುವರೆಂದು ಕೇಳುತ್ತೇವೆ.

* * *

ಕೋಟೆಯಲ್ಲಿ ಬಡವಿಯ ಬಳಿ ಇರುವ ಮೂಗೂರು ಅರಸಿನವರ ಮನೆಯಲ್ಲಿ ಕಳೆದ ವಾರ ಕಳುವಾಗಿ ಆಸಾಮಿಯು ಸಿಕ್ಕಿಬಿದ್ದನು. ಕಳುವಾದ ಸಾಮಾನುಗಳು ಪತ್ತೆ ಆಗಿರುತ್ತವೆ.

* * *

ನಾಳೆಯ ದಿನ ಶ್ರೀ ಯುವರಾಜರವರು ಪರಿವಾರ ಸಹಿತ [illegible] ಬೆಂಗಳೂರನ್ನು ಬಿಟ್ಟು, ಅಲ್ಲಿಂದ [illegible] ಪ್ರಯಾಣ ಮಾಡುವರು.

* * *

ಬೆಂಗಳೂರು ಕೋಟೆಯಲ್ಲಿರುವ ಎ. ವಿ. ಸ್ಕೂಲ್ ಬಾಲಕರಿಗೆ ಮೊನ್ನೆ ಮಂಗಳವಾರ ಬೆಳಿಗ್ಗೆ ಮೆ|| ಜಸ್ಟಿಸ್ ಎಚ್. ವಿ. ನಂಜುಂಡಯ್ಯನವರು ಸಭೆಯ ಅಗ್ರಾಸನವನ್ನು ವಹಿಸಿ ಬಹುಮಾನಗಳನ್ನು ಕೊಟ್ಟು, ಬಹು ವಿಶೇಷಪೂರ್ವಕ ನೀತಿ ಬುದ್ಧಿವಾದಗಳನ್ನು ತಿಳಿಸಿದರು.

* * *

ಮುಂಬರುವ ಜನವರಿ ಒಂದನೇ ತಾರೀಖಿನಿಂದ ತಂತಿ ವರ್ತಮಾನಗಳ ಛಾರ್ಜು ಬದಲಾಯಿಸಲ್ಪಡುವುದು. ವರ್ತಮಾನಗಳು ಎರಡು ತರಹಗಳಾಗುತ್ತವೆ. ಮೊದಲನೇ ತರಗತಿಯ ವರ್ತಮಾನವು ೧೨ ಮಾತಿಗೆ ೧ ರೂಪಾಯಿ, ಪ್ರತಿ ಒಂದು ಜಾಸ್ತಿ ಮಾತಿಗೂ ೨ ಆಣೆ ಹೆಚ್ಚು ಕೊಡಬೇಕು. ಎರಡನೇ ತರಗತಿಯ ವರ್ತಮಾನವು ೧೨ ಮಾತಿಗೆ ೬ ಆಣೆ, ಪ್ರತಿ ಒಂದು ಜಾಸ್ತಿ ಮಾತಿಗೂ ಅರ್ಧ ಆಣೆ ಹೆಚ್ಚು ಕೊಡಬೇಕು. ಈ ರೀತಿ ಏರ್ಪಾಡಾಗಿರುತ್ತದೆ.

* * *

ಪುರವಾಸಿಗಳು ಬಡಬಗ್ಗರ ಸಹಾಯಾರ್ಥವಾಗಿ ಧರ್ಮದ ಫಂಡು ಕೂಡಿಸಿ ಇಲ್ಲಿನ [illegible] ಬಜಾರಿನಲ್ಲಿ ಮಂಡಿಯನ್ನಿಟ್ಟು ಎರಡು ಅಂಗಡಿಗಳನ್ನಿಡಿಸಿ ರಾಗಿಯನ್ನು ಹಾವಲಿಗೆ ಮೂರು ಸೇರಿನಂತೆ ಕಳೆದ ಗುರುವಾರದಿಂದ ವಿಕ್ರಯ ಮಾಡುತ್ತಿದ್ದಾರೆ. ಮೆ|| ಶಾಂತರಾಜ ಅರಸಿನವರೇ ಮುಂತಾದ ಕಮಿಟಿ ಮೆಂಬರುಗಳು ಒಂದು ಅಂಗಡಿಗೆ ಸ್ವತಃ ಹೋಗಿ ರಾಗಿಯನ್ನು ಅಜಮಾಯಿಷಿ ಮಾಡಿ, ಒಳ್ಳೆಯದನ್ನು ವಿಕ್ರಯ ಮಾಡುವಂತೆ ಏರ್ಪಾಡು ಮಾಡಿದರು. ಇದಲ್ಲದೆ ಸಾಹುಕಾರ್ ಮೆ|| ಬಚ್ಚಣ್ಣನವರು ತಮ್ಮ ಸ್ವಂತದಿಂದಲೇ ಅಕ್ಕಿಯನ್ನು ರೂಪಾಯಿಗೆ ೭ ಸೇರಿನಂತೆ ತಮ್ಮ ಅಂಗಡಿಯಲ್ಲಿ ವಿಕ್ರಯ ಮಾಡುವವರಾಗಿದ್ದಾರೆಂದು ಕೇಳಿ ಸಂತೋಷಿಸುವೆವು.

ಉಪಾಧ್ಯಾಯರಿಗೆ ಬಹುಮಾನದ ಮೇಲಾಟವು.

ಪ್ರಾಮಾಣಿಕತೆಯುಳ್ಳ ಧೈರ್ಯವು; ಅಂದರೆ, ಎದುರು ವಾದಿಸುವವರಿದ್ದರೂ ನಾವು ಸರಿಯೆಂದು ತಿಳಿದದ್ದನ್ನೇ ಮಾಡುವುದು.

ಈ ಮೇಲಾಟಕ್ಕೆ ನಮಗಾಗಲೇ ಕೆಲವು ಬರವಣಿಗೆಗಳು ಬಂದಿರುತ್ತವೆ. ಆದರೆ ಅವುಗಳಲ್ಲಿ ಒಂದಾದರೂ ಬಹುಮಾನಕ್ಕೆ ಯೋಗ್ಯವಾಗಿಲ್ಲವೆಂದು ನಾವು ಅಭಿಪ್ರಾಯಪಡುವೆವು. ಆಯಾ ಬರವಣಿಗೆಯವರು ನಮ್ಮ ಅಭಿಪ್ರಾಯವನ್ನು ಚೆನ್ನಾಗಿ ಗ್ರಹಿಸಲಿಲ್ಲವೆಂದು ಕಂಡುಬರುತ್ತದೆ. ಕೆಲವರು ಸತ್ಯವೆನ್ನುವುದನ್ನು ಕುರಿತು ಬರೆದಿರುವರೇ ವಿನಾ ಸತ್ಯವಾದುದನ್ನು ಮಾಡುವುದಕ್ಕೆ ಬೇಕಾಗುವ ಧೈರ್ಯದ ವಿಷಯ ಬರೆದಿಲ್ಲವು. ನಮ್ಮ ಅಭಿಪ್ರಾಯವನ್ನು ಕೆಲವು ಉದಾಹರಣೆಗಳ ಮೂಲಕ ಇಲ್ಲಿ ತಿಳಿಸುತ್ತೇವೆ.

(೧) ಒಬ್ಬ ಹುಡುಗನು ಸ್ಕೂಲಿನಲ್ಲಿ ಓದುತ್ತಾನೆ. ಅವನಿಗೆ ಅನೇಕ ಸ್ನೇಹಿತರು ಇರುತ್ತಾರೆ. ಒಂದಾನೊಂದು ದಿವಸ ಆ ಹುಡುಗನು ಪಾಠವನ್ನು ಬಿಟ್ಟು ಆಟ ಆಡುವುದಕ್ಕೆ ಹೊರಟಾಗ, ಅವನ ಸಂಗಾತಿಗಳು ಅವನ ಹತ್ತಿರಕ್ಕೆ ಬಂದು ಅವನ ಜೇಬಿನಲ್ಲಿ ಬೀಡಿ ಸೇದುವುದಕ್ಕೆ ಕೊಡಹೋದರು ಮತ್ತು ಅವನನ್ನು ಸಹ ಬೀಡಿ ಸೇದುವುದಕ್ಕೆ ಪ್ರೇರಿಸಿದರು. ಆಗ ಆ ಹುಡುಗನು ಮಾಡತಕ್ಕದ್ದೇನು? ತಾನು ಬೀಡಿ ಸೇದಿದ ಸಂಗತಿಯು ತನ್ನ ತಂದೆಗೆ ಗೊತ್ತಾದರೆ ಅವನಿಗೆ ಅಪಾರವಾದ ದುಃಖವು ಪ್ರಾಪ್ತವಾಗುವುದು. ಏನಾಕೆಂದರೆ ತಂದೆಯು ಮಗನಿಗೆ ಬೀಡಿ ಸೇದಕೂಡದೆಂಬ ಆಜ್ಞೆಯನ್ನು ಕೊಟ್ಟಿದ್ದನು. ಇನ್ನೂ ಅಲ್ಲದೆ ಸಣ್ಣ ಹುಡುಗರು ಬೀಡಿ ಸೇದುವುದರಿಂದ ಅವರ ಆರೋಗ್ಯಕ್ಕೆ ಹಾನಿಯುಂಟಾಗುವುದೆಂದು ಆ ಹುಡುಗನು ಚೆನ್ನಾಗಿ ತಿಳಿದಿದ್ದನು. ಇದೆಲ್ಲಾ ಅವನಿಗೆ ಗೊತ್ತಿದ್ದರೂ, ಅವನು ತನ್ನ ಸ್ನೇಹಿತರು ಎಲ್ಲಿ ತನ್ನನ್ನು ಜರಿಯುವರೋ ಎಂಬ ಭೀತಿಯನ್ನು ಮನಸ್ಸಿನಲ್ಲಿ ಹೊಂದುತ್ತಾನೆ. ಕಡೆಯಲ್ಲಿ ಆ ಹುಡುಗನು ಮನಸ್ಸನ್ನು ದೃಢಮಾಡಿಕೊಂಡು, ತನ್ನ ತಂದೆಯ ಆಜ್ಞೆಯನ್ನು ಕೈಕೊಳ್ಳುವುದೇ ಉತ್ತಮವೆಂತಲೂ ಬೀಡಿ ಸೇದುವ ಅಭ್ಯಾಸವು ಹಾನಿಕರವಾದುದೆಂತಲೂ ತಿಳಿದು, ತನ್ನ ಸಹಪಾಠಿಗಳ ಜರಿಯುವಿಕೆಗೆ ಲಕ್ಷ್ಯವಿಡದೆ ಬೀಡಿ ಸೇದುವುದಿಲ್ಲವು. ಈ ಹುಡುಗನು ತೋರಿಸಿದ ಧೈರ್ಯವೇ ಉತ್ತಮವಾದ ಧೈರ್ಯವೆಂದು ತಿಳಿಯುವೆವು.

(೨) ಒಂದು ಬಟ್ಟೆ ಮಾರುವ ಅಂಗಡಿಯಲ್ಲಿ ಒಬ್ಬ ಬಡ ಹುಡುಗನು ಕೆಲಸದಲ್ಲಿರುತ್ತಾನೆ. ಒಂದಾನೊಂದು ದಿನ ಆ ಅಂಗಡಿಗೆ ಸೀರೆಯನ್ನು ಕೊಳ್ಳಲು ಒಬ್ಬ ಹೆಂಗಸು ಬರುತ್ತಾಳೆ. ಆ ಹುಡುಗನು ಆಕೆಗೆ ಒಂದು ಸೀರೆಯನ್ನು ತೋರಿಸಿ ಅದರ ಕ್ರಯವನ್ನು ತಿಳಿಸಿದ. ಆಕೆಯು ಅದನ್ನು ಕೊಂಡುಕೊಳ್ಳುವ ಸಮಯದಲ್ಲಿ ಆ ಹುಡುಗನು ಆ ಸೀರೆಯಲ್ಲಿದ್ದ ಒಂದು ಕುಂದಕವನ್ನು ಆಕೆಯ ಮನಸ್ಸಿಗೆ ತಂದನು. ಅದರಲ್ಲಿದ್ದ ಕೆಲವು ಎಳೆಗಳು ಬಿಟ್ಟುಹೋಗಿದ್ದವು. ಆಗ ಆ ಹೆಂಗಸು ಬೇರೊಂದು ಸೀರೆಯನ್ನು ಕೊಂಡುಕೊಂಡಳು. ಹೆಂಗಸು ಹೊರಟುಹೋದ ಮೇಲೆ ಅಂಗಡಿಯ ಯಜಮಾನನು ನಡೆದ ಸಂಗತಿಗಳನ್ನೆಲ್ಲಾ ತಿಳಿದುಕೊಂಡು ಹುಡುಗನ ಮೇಲೆ ಬಹಳವಾಗಿ ಕೋಪ ಮಾಡಿದನು. "ನೀನು ಯಾತಕ್ಕೆ ಆ ಹಳೇ ಸೀರೆಯನ್ನು ಮಾರಿಬಿಡಲಿಲ್ಲ? ನನ್ನ ಅಂಗಡಿಯಲ್ಲಿ ಅದು ಬಹಳ ದಿವಸಗಳಿಂದಿರುತ್ತದೆ. ಅದನ್ನು ಮಾರಿಬಿಡುವುದಕ್ಕೆ ಒಳ್ಳೇ ಸಮಯವು ಬಂದಿತ್ತು. ಆದರೆ ನಿನ್ನ ತಿಳಿಗೇಡಿತನದಿಂದ ಅದು [illegible] ತಪ್ಪಿತು. ಭವಿಷ್ಯ ಇನ್ನು ಮೇಲೆ ಎಚ್ಚರಿಕೆಯಾಗಿರು" ಎಂದು ಗದರಿಸಿದನು. ಆಗ ಹುಡುಗನು ತನ್ನ ಯಜಮಾನನಿಗೆ "ಅಯ್ಯಾ, ಆ ಕೆಟ್ಟುಹೋದ ಪದಾರ್ಥವನ್ನು ಒಳ್ಳೇ ಪದಾರ್ಥವೆಂದು ಹೇಳಿ ಕೊಟ್ಟು ಮೋಸಪಡಿಸುವುದು ಯೋಗ್ಯವಲ್ಲ. ಅದರಲ್ಲಿರುವ ಕುಂದಕವನ್ನು ಆಕೆಗೆ ತೋರಿಸುವುದೇ ಒಳ್ಳೆಯದು" ಎಂದು ಹೇಳಿದನು. "ನಾನೆಂತು ಈ ವಿಧವಾಗಿ ವಂಚಿಸಲಾರೆನು. ಅಂಥಾ ಅಕೃತ್ಯವನ್ನು ಮಾಡಲು ನನ್ನ ಮನಸ್ಸು ಒಪ್ಪಲಾರದು" ಅಂದನು. ಆಗ ಯಜಮಾನನು ಆ ಹುಡುಗನಿಗೆ—"ನೀನು ನಾನು ಹೇಳಿದ ಪ್ರಕಾರ ಕೇಳಬೇಕು, ಇಲ್ಲವಾದರೆ ನನ್ನ ಕೆಲಸವನ್ನು ಬಿಡಬೇಕು" ಎಂಬದಾಗಿ ಹೇಳಲು, ಹುಡುಗನು ಅಕೃತ್ಯವನ್ನು ಮಾಡುವುದಕ್ಕೆ ಬದಲಾಗಿ ಜೀವನೋಪಾಯದ ಕೆಲಸವನ್ನು ಬಿಡುವುದೇ ಶ್ರೇಯಸ್ಕರವೆಂದು ಭಾವಿಸಿ ಕೆಲಸವನ್ನು ಬಿಟ್ಟುಬಿಟ್ಟನು. ಇದೇ [illegible] ಧೈರ್ಯವೆಂದು ತಿಳಿಯುವೆವು.

ಉಪಾಧ್ಯಾಯರು ತಮ್ಮ ಹತ್ತಿರ [illegible] ಬಾಲಕರ ಸತ್ಯವಿಷಯದ ನಡವಳಿಯಿಂದಲೇ ಉದಾಹರಣೆಗಳನ್ನು ಆರಿಸಿ ಬರೆಯಬೇಕಾಗಿರುತ್ತದೆ. ವಿದ್ಯಾರ್ಥಿಗಳು ಎಲ್ಲಿ ಯಾವಾಗ [illegible] ನಡವಳಿಕೆಯಲ್ಲಿರುವ ಕಾರ್ಯಗಳನ್ನು ಕುರಿತು ಬರೆಯುವುದು ಉತ್ತಮವು. ವಿದ್ಯಾರ್ಥಿಗಳು ತಮ್ಮ ಪ್ರಯತ್ನಗಳಲ್ಲೆಲ್ಲಾ ಭಗವಂತನ ಸಹಾಯವನ್ನು ಬೇಡಿಕೊಳ್ಳಬೇಕೆಂದು ಉಪಾಧ್ಯಾಯರು ತಿಳಿಸಲಿ. ಎಲ್ಲಾ ಪವಿತ್ರ [illegible] ಮೂಲಸ್ಥಾನನಾಗಿರುವ ದೇವರು ತನ್ನನ್ನು ಭಕ್ತಿಭಾವದಿಂದ ಬೇಡಿಕೊಳ್ಳುವ ವಿದ್ಯಾರ್ಥಿಯ ಮನಸ್ಸನ್ನು ದೃಢಮಾಡಿ ಅವನಿಗೆ ಉತ್ಸಾಹದ ಧೈರ್ಯವನ್ನು ಕೊಡುವನು. ಪೂರ್ವಕಾಲದ ಒಬ್ಬ ಮಹಾತ್ಮನು "ದೇವರು ನನ್ನ ಸಂಗಡ ಇರುತ್ತಾನೆ, ಆದಕಾರಣ ಮನುಷ್ಯರು ಮಾಡುವ ತೊಂದರೆಗಳಿಗೆ ನಾನು ಹೆದರೆನು" ಎಂಬದಾಗಿ ಹೇಳಿದನು. ಯಥಾರ್ಥವಾದ ನ್ಯಾಯಸಭೆಯ [illegible] ಯೋಗ್ಯವಾದ ಶಿಕ್ಷೆಯನ್ನು ಹಿಂಸೆಪಡಿಸುವವರಿಗೆ ಕೊಡುತ್ತಾನೆ. ಆದ್ದರಿಂದ ನಾವು ಮನುಷ್ಯರಿಗೆ [illegible] ದೇವರಿಗೆ ವಿಧೇಯರಾಗಿರಬೇಕೆಂದು ತಿಳಿಸಿದನು.

ಇನ್ನು ಮುಂದೆ ಉಪಾಧ್ಯಾಯರು ನಮ್ಮ ಸೂಚನೆಯ ಅರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡು ನಮಗೆ ಉಪನ್ಯಾಸಗಳನ್ನು ಬರೆದು ಕಳುಹಿಸುವರೆಂದು ನಂಬಿರುತ್ತೇವೆ.

ವೀರಪಕ್ಷದ ಕಾಂಗ್ರೆಸ್ ಮಹಾ ಸಭೆಯು.

ನಾಗಪುರದಲ್ಲಿ ನಡಿಯದಂತೆ ತಡೆಯಲಾಯಿತು.

ತಂತೀ ವರ್ತಮಾನಗಳು.

ಡಿಸೆಂಬರ್ ತಾ. ೧೨ನೇ ಶನಿವಾರ.—ವೀರಪಕ್ಷದ ಕಾಂಗ್ರೆಸ್ ಮಹಾ ಸಭೆಯು ಈ ತಿಂಗಳ ತಾ. ೨೮, ೨೯, ೩೦ ನೇ ಸೋಮ, ಮಂಗಳ, ಬುಧವಾರಗಳಲ್ಲಿ ನಡಿಯಬೇಕೆಂದು ನಿಷ್ಕರ್ಷೆಯಾಗಿದೆ.

ಡಿಸೆಂಬರ್ ತಾ. ೧೬ ನೇ ಬುಧವಾರ.—ವೀರಪಕ್ಷದ ಕಾಂಗ್ರೆಸ್ ಸಭೆಯು ನಾಗಪುರದಲ್ಲಿ ನಡಿಯಕೂಡದೆಂತಲೂ, ಅದಕ್ಕಾಗಿ ನಡಿಯುವ ಸಭಾಮಂಟಪದ ಕಾಮಗಾರಿ ಮುಂತಾದದ್ದನ್ನು ಮುಂದರಿಸದೆ ನಿಲ್ಲಿಸಬೇಕೆಂತಲೂ ಇಸ್ತಿಹಾರು ಪ್ರಕಟಿಸಲ್ಪಟ್ಟಿದೆ. ಈ ಹುಕುಮನ್ನು ಕುರಿತು ಬೊಂಬಾಯಿನ “ಟೈಂಸ್” ಎಂಬ ಪತ್ರಿಕೆಯು ಬರೆದಿರುವುದೇನೆಂದರೆ—ಮಧ್ಯಪ್ರಾಂತ್ಯಗಳ ಸರ್ಕಾರದವರು ಈ ವೀರಪಕ್ಷದ ಸಭೆಯನ್ನು ನಡಿಯದಂತೆ ಅಡ್ಡಿಮಾಡಿದ್ದು ಬಹಳ ಒಳ್ಳೇ ಕೆಲಸವಾಯಿತು. ನಾಗಪುರದಲ್ಲಿ ಜನರ ಮನಸ್ಸು ಕಳವಳಿಸುವ ಸಂಗತಿಗಳು ಬಹಳ ವಾಗುಂಟು. ಪ್ರಜಾಸೌಖ್ಯದಿಯನ್ನು ಕಾಪಾಡುವ ಭಾರವನ್ನು ವಹಿಸಿರುವಂಥಾ ಗವರ್ನ್ಮೆಂಟಿನವರು ಅಂಥಾ ನೆಮ್ಮದಿಗೆ ಭಂಗತರುವ ಯಾವ ಕಾರ್ಯಕ್ಕೂ ಆಸ್ಪದಕೊಡುವುದು ಉಚಿತವಲ್ಲ ಎಂಬುದೇ.

ನಾಗಪುರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವೀರಪಕ್ಷದ ಕಾಂಗ್ರೆಸ್ ಸಭೆಯ ಮುಖಂಡರ ಕೂಡ ಮಾತನಾಡಿ, ಅವರು ಹೇಳಿದ ಅಭಿಪ್ರಾಯಗಳನ್ನೆಲ್ಲಾ ಕೇಳಿ, ಕಡೆಗೆ ಈ ಸಲ ಈ ಕಾಂಗ್ರೆಸ್ ಸಭೆಯನ್ನು ನಾಗಪುರದಲ್ಲಿ ನಡಿಸಕೂಡದೆಂದು ಸೆಂಟ್ರಲ್ ಮ್ಯಾಜಿಸ್ಟ್ರೇಟರು ಕೊಟ್ಟಿದ್ದ ಹುಕುಮನ್ನು ಖಾಯಂಮಾಡಿದರು. ಆದಕಾರಣ ನಾಗಪುರದಲ್ಲಿ ಈ ವರುಷ ಈ ಸಭೆಯು ಖಂಡಿತವಾಗಿ ನಡಿಯದಂತೆ ಅಡ್ಡಿಯಾಗಿದೆ.

ನಮ್ಮ ಪುಸ್ತಕ ಭಂಡಾರವು.

“ವಸಂತಮಿತ್ರವಿಜಯನಾಟಕ”—ಈ ಗ್ರಂಥವು ನೂತನ ಕಲ್ಪಿತ ಕಥೆಯುಳ್ಳದ್ದಾಗಿಯೂ ಲೋಕವ್ಯಾಪಾರಗಳಿಗಾಶ್ರಯವಾಗಿಯೂ ಇದೆ. ಇದರಿಂದ ಎಂಥಾ ಕಷ್ಟಬಂದರೂ ಸೈರಿಸಿಕೊಂಡು ಮಿತ್ರರನ್ನು ಕಾಪಾಡುವುದು ಮಿತ್ರರ ಲಕ್ಷಣವೆಂಬುವುದು ತೋರ್ಪಡುತ್ತದೆ. ಈ ಕಾಲಕ್ಕೆ ಅನುಗುಣವಾದ ಸ್ವಭಾವವನ್ನೇ ಅನುಸರಿಸಿ ಬರೆದಿರುವುದಲ್ಲದೆ, ನಾಟಕಾಭಿನಯಕ್ಕೂ ಅನುಕೂಲಿಸುವಂತೆ ನೂತನ ಮಟ್ಟುಗಳಿಂದ ಕೂಡಿದೆ. “ಆಂಗ್ಲ ಮಹಾಕವಿಯಾದ ವಿಲಿಯಂ ಷೇಕ್ಸ್ಪಿಯರನ ಚರಿತ್ರೆ”—ಈತನು ಪಾಶ್ಚಾತ್ಯ ಕವಿಗಳಲ್ಲೆಲ್ಲಾ ಶಿರೋರತ್ನಪ್ರಾಯನಾದ ಮಹಾ ಕವಿ. ಈತನನ್ನು ಕಾಳಿದಾಸ ಮಹಾಕವಿಗೆ ಸರಿಸಮಾನಸ್ಕಂದನೆಂದು ಹೋಲಿಸುವುದುಂಟು. ಈತನ ಜನನ ಕವಿತೆ ಪಾಂಡಿತ್ಯ ಇವೇ ಮೊದಲಾದವುಗಳೂ, ಈ ಕವಿಯು ರಚಿಸಿರುವ ನಾಟಕಾದಿಗಳು ಕೆಲಕೆಲವು ಶ್ಲೋಕಗಳಿಂದ ಈತನ ಪ್ರತಿಭಾವಿಶೇಷವೂ ಕನ್ನಡಿಸಲ್ಪಟ್ಟಿದೆ. ಅಲ್ಲದೆ ಇದರಲ್ಲಿ ಆಂಗ್ಲದೇಶದ ಆಗಣಕಾಲದ ಸ್ಥಿತಿಯನ್ನೂ, ಪೂರ್ವಕಾಲದ ಪಾಠಶಾಲಾಕ್ರಮವು, ಪೂರ್ವಕಾಲದ ನಾಟಕಮಂದಿರಗಳ ಸ್ಥಿತಿಯನ್ನೂ ವರ್ಣಿಸಲ್ಪಟ್ಟು ಸರ್ವರೂ ಓದುವುದಕ್ಕೆ ಯೋಗ್ಯವಾಗಿರುವಂತೆ ಅಚ್ಚ ಕನ್ನಡ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ.—“ಗೀತಮಂದಾರ” ಇದು ಬಾಲಕ ಬಾಲಕಿಯರಿಗೆ ಉಪಯುಕ್ತವಾಗಿರಲು ಮದುವೆ ಮೊದಲಾದ ಮಂಗಳಕಾಲಗಳಲ್ಲಿ ಹೇಳುವದಕ್ಕೆ ನೂತನಮಟ್ಟುಗಳಿಂದ ದೇವತಾಪ್ರಾರ್ಥನೆಗಳೂ, ಬುದ್ಧಿವಾದ ಪದಗಳೂ ಇವೆ. “ಕಬೀರದಾಸನ ಚರಿತ್ರೆ”—ಭಗವದ್ಭಕ್ತನಾಗಿದ್ದ ಕಬೀರನ ಜನನ ಮೊದಲುಗೊಂಡು ಮರಣಾಂತ್ಯದ ವರೆಗೂ ಇರುವ ವಿಷಯಗಳನ್ನು ಕ್ರೋಢೀಕರಿಸಿ ಕನ್ನಡದಲ್ಲಿ ಲಲಿತವಾಗಿಯೂ, ಗ್ರಾಹ್ಯವಾಗಿಯೂ ಇರುವಂತೆ ಬರೆಯಲ್ಪಟ್ಟಿದೆ.—“ಜಾರ್ಜ್ ವಾಷಿಂಗ್ಟನ ಚರಿತ್ರೆ” ಇದು ಅಮೇರಿಕ ದೇಶದ ಸ್ವಾತಂತ್ರ್ಯಸಂಪಾದಕನಾಗಿ ರಣಧೀರನೆನಿಸಿ, ಕೊನೆಗೆ ಪ್ರೆಸಿಡೆಂಟೆಂಬ ಪದವಿಯನ್ನು ಪಡೆದು ಜಗದ್ವಿಖ್ಯಾತನಾದ ಈತನ ಜನನ ಮೊದಲುಗೊಂಡು ಮರಣಾಂತ್ಯದ ವರೆಗೂ ನಡೆಸಿದ ಈತನ ಸಾಹಸ ಶೌರ್ಯ ಗಾಂಭೀರ್ಯಾದಿ ಗುಣಗಳು ವಿಸ್ತಾರವಾಗಿ ಅಚ್ಚ ಕನ್ನಡದಲ್ಲಿ ಲಲಿತವಾದ ಸುಲಭಶೈಲಿಯಲ್ಲಿ ಬರೆದಿದೆ.—“ಹೈದರಲ್ಲಿಯ ಚರಿತ್ರೆ” ಇದು ಸಣ್ಣ ನೌಕರನಾಗಿದ್ದು ಕೊನೆಗೆ ಶ್ರೀರಂಗಪಟ್ಟಣಕ್ಕೆ ನವಾಬನಾಗಲು ಮೊದಲಿಂದಲೂ ನಡಿಸಿದ ಈತನ ಅಸಾಧಾರಣವಾದ ಸಾಹಸಕಾರ್ಯಗಳೂ, ರಾಜ್ಯಸಂಪಾದನಾಕ್ರಮಗಳೂ, ರಾಜ್ಯಕಾರ್ಯ ವೈಲಕ್ಷಣ್ಯಗಳೂ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ. “ನೆಪೋಲಿಯನ್ ಮತ್ತು ಸಾಕ್ರೆಟೀಸ್ ಇವರುಗಳ ಚರಿತ್ರೆ”, “ಅಮೇರಿಕ ದೇಶವನ್ನು ಕಂಡುಹಿಡಿದ ಕೊಲಂಬಸನ ಚರಿತ್ರೆ”, “ಸಾಹಸಕೇಸರಿ” ಎಂಬ ಕಥೆ:—ಈ ಹೊಸ ಗ್ರಂಥಗಳೆಲ್ಲಾ ಮೈಸೂರು ಹಳೇ ಅಗ್ರಹಾರದಲ್ಲಿರುವ ಮೆ|| ಆನವಟ್ಟಿ ರಾಮರಾಯರಿಂದ ರಚಿಸಲ್ಪಟ್ಟಿರುತ್ತವೆ.

ಇದಲ್ಲದೆ ಮುಂದೆ ಹೇಳುವ ಹೊಸ ಗ್ರಂಥಗಳೂ ನಮ್ಮಲ್ಲಿಗೆ ಬಂದಿರುತ್ತವೆ:—ಮೆ|| ಭಾರತಿ ಸಂಪಂಗಿ ರಾಮಯ್ಯನವರ “ಕಥಾಸರಿತ್ಸಾಗರ,” ಮೆ|| ಎಸ್. ವಿ. ವೆಂಕಟರಾಮಯ್ಯನವರ “ಮುಕ್ತಿ ಸೋಪಾನ ಸಪ್ತಕ,” ಮೆ|| ಎ. ಸ್ವಾಮಿರಾಯರ “ಬಾಲಮನೋರಮಾ,” ಮೆ|| ಆರ್. ವಾಸುದೇವಮೂರ್ತಿಯವರ “ಸನಾತನ ಧರ್ಮಸಂಗ್ರಹ,” ಮೆ|| ಭಾರತಿ ಸಂಪಂಗಿ ರಾಮಯ್ಯನವರ “ಕನ್ನಡ ವಚನ ಗೀತಾಮೃತ ಮಹೋದಧಿ.”

ಬಂಗಾಳದಲ್ಲಿ ಅರಾಜಕ ಕೃತ್ಯಗಳು.

ದಸ್ತಗಿರಿಗಳೂ, ಗಡೀಪಾರುಗಳೂ.

ಒಂದು ವಾರದ ತಂತೀ ವರ್ತಮಾನಗಳ ಸಾರವು.

ಇಂಡಿಯಾ ಗವರ್ನ್ಮೆಂಟಿನವರು ಅರಾಜಕ ಮತ್ತು ರಾಜದ್ರೋಹಾಪರಾಧಗಳನ್ನು ಅಡಗಿಸುವುದಕ್ಕೆ ಪ್ಯಾಸ್ ಮಾಡಿ, ಪ್ರಥಮತಃ ಬಂಗಾಳಾ ಅಧಿಪತ್ಯದಲ್ಲೂ ಪೂರ್ವಬಂಗಾಳಾ ಮತ್ತು ಅಸ್ಸಾಂ ಎಂಬ ಹೊಸ ಅಧಿಪತ್ಯದಲ್ಲೂ ಜಾರಿಗೆ ತಂದಿರುವ ಹೊಸ ಕಾನೂನಿನ ನಿಬಂಧನೆಗಳನ್ನು ಕಳೆದ ವಾರ ತಿಳಿಸಿರುತ್ತೇವಷ್ಟೆ. ಈ ಕಾನೂನು ಜಾರೀಗೆ ಬಂದ ಲಾಗಾಯಿತು ಆ ಪ್ರಾಂತ್ಯಗಳಲ್ಲಿ ಸರ್ಕಾರದವರು ನಡಿಸಿರುವ ಕಾರುಬಾರುಗಳನ್ನು ಆಯಾ ದಿನ ಪ್ರಕಟವಾದ ತಂತೀ ವರ್ತಮಾನಗಳ ಮೂಲಕ ವಾಚಕರಿಗೆ ತಿಳಿಯಪಡಿಸಲು ಅಪೇಕ್ಷಿಸುತ್ತೇವೆ.

ಡಿಸೆಂಬರ್ ತಾ. ೧೨ ನೇ ಶನಿವಾರ.

ಪೋಲೀಸಿನವರು ಢಕ್ಕಾ, ಕೋಮಿಲ್ಲಾ, ಫರೀದಪುರ, ಮೈಮನ್ಸಿಂಗ್, ಸಿರಾಜ್ ಗಂಜ್ ಎಂಬೀ ಸ್ಥಳಗಳಲ್ಲಿ ಹಲವು ಮನೆಮಠಾದಿಗಳನ್ನು ಅಕಸ್ಮಾತ್ತಾಗಿ ಪ್ರವೇಶಿಸಿ ಜಪ್ತಿಮಾಡಿದರು.—ಪೋಲೀಸಿನವರು “ಸಂಧ್ಯಾ” ಪತ್ರಿಕೆಯ ಆಫೀಸನ್ನು ನುಗ್ಗಿ ಅಚ್ಚಿನ ಯಂತ್ರಾದಿಗಳನ್ನು ಕಾನೂನ್ ಪ್ರಕಾರ ಜಪ್ತಿಮಾಡಿಕೊಂಡು ಹೋದರು.—ಕಲ್ಕತ್ತೆಯ ನಾನಾ ಭಾಗಗಳಲ್ಲಿರುವ ಮನೆಮಠಗಳನ್ನು ಜಪ್ತಿಮಾಡಿದಾರೆ.—ಬೋಗ್ರಾದಿನ ಕಿರಣಚಂದ್ರಮುಖರ್ಜೀ, ಹೃದಯನಾಥ ಮಜುಂದಾರ್, ಸುಕುಮಾರಮಿತ್ರ, ಶಾಮಸುಂದರ, ಚಕ್ರವರ್ತಿ, ಇವರನ್ನು ದಸ್ತಗಿರಿಮಾಡಿದಾರೆ.—ಫರೀದ್ ಪುರ, ಸಿರಾಜಗಂಜ್, ಬಾರಿಸಾಲ್, ಈ ಸ್ಥಳಗಳಲ್ಲಿ ಪೋಲೀಸಿನವರು ಹಲವು ಮನೆಮಠಗಳನ್ನು ಶೋಧನೆಮಾಡಿದರು.—“ಸಂಧ್ಯಾ” ಪತ್ರಿಕೆಯ ಅಚ್ಚಿನ ಯಂತ್ರ ಮುಂತಾದದ್ದನ್ನು ಪೋಲೀಸಿನವರು ಸ್ವಾಧೀನಪಡಿಸಿಕೊಂಡ ಮೊಕದ್ದಮೆಯು ಮಂಗಳವಾರ ಮ್ಯಾಜಿಸ್ಟ್ರೇಟರಿಂದ ವಿಚಾರಣೆಯಾಗುವುದು.

ಈ ದಿನ ಕಲ್ಕತ್ತೆಯಲ್ಲಿ ಇಪ್ಪತ್ತು ದೇಶೀಯ ಸಮಿತಿ (ಸಂಘ) ಗಳನ್ನೂ ಮನೆಗಳನ್ನೂ ಪೋಲೀಸಿನವರು ಪ್ರವೇಶಿಸಿ ಜಪ್ತಿಮಾಡಿ, ಕೆಲವು ಕಾಗದಪತ್ರಗಳನ್ನು ಸ್ವಾಧೀನಪಡಿಸಿಕೊಂಡರು. ಉತ್ತರಪಾರಾ, ಬಾರಕ್ ಪುರ, ಸಿರಾಂಪುರ, ಎಂಬೀ ಭಾಗಗಳಲ್ಲೂ ಪೋಲೀಸಿನವರು ಹಲವು ಮನೆಮಠಗಳನ್ನು ಶೋಧನೆ ಮಾಡಿದರು.—ಬಘಾತಿಯಲ್ಲಿ ನಡೆದ ಡಕಾಯಿತಿ ಕಳುವಿಗೆ ಸಂಬಂಧಪಟ್ಟಿರುವಂತೆ “ಸಂಜೀವಿನಿ” ಪತ್ರಿಕಾ ಎಡಿಟರಾದ ಬಾಬು ಕುಮಾರ ಮಿತ್ರ ಎಂಬಾತನನ್ನು ದಸ್ತಗಿರಿಮಾಡಿ, ಜಾಮೀನ್ ಮೇಲೆ ಬಿಡುವುದಿಲ್ಲವೆಂದು ಹೇಳಿದಾರೆ. ಈಗ ದಸ್ತಗಿರಿ ಆಗಿರುವವರಲ್ಲಿ “ವಂದೇ ಮಾತರಂ” ಪತ್ರಿಕೆಯ ಬಾಬು ಶಾಮಸುಂದರ, ಬಾಬು ಚಕ್ರವರ್ತಿ, ಬಾಬು ಕೃಷ್ಣಕುಮಾರಮಿತ್ರ, ಬಾಬು ಬಿಹಾರಿಲಾಲ್ ಚಕ್ರವರ್ತಿ, “ಸಂಧ್ಯಾ” ಪತ್ರಿಕೆಯ ಬಾಬು ಪಂಚಗೌರಿ ಬ್ಯಾನರ್ಜಿ, ಇವರು ಕೆಲವರಾಗಿರುತ್ತಾರೆ.

ಡಿಸೆಂಬರ್ ತಾ|| ೧೩ನೇ ಭಾನುವಾರ.

ಢಕ್ಕಾನಗರದ ದೇಶಸೇವಕ ಸೈನ್ಯದ ಕ್ಯಾಪ್ಟನ್ ಆದ ಪುಲೀನ ದಾಸನನ್ನೂ, ಭೂಪೇಶ ಚಂದ್ರನಾಗನೆಂಬ ಜಮೀನ್ದಾರನನ್ನೂ ಪೋಲೀಸಿನವರು ಹೊಸ ಕಾನೂನಿನ ಪ್ರಕಾರ ಹಿಡಿದು ಜಹಜಿನ ಮೇಲೆ ಕಳುಹಿಸಿದರು.

ಡಿಸೆಂಬರ್ ತಾ|| ೧೪ನೇ ಸೋಮವಾರ.

ಪೂರ್ವ ಬಂಗಾಳಾದಲ್ಲಿ ವೀರಪಕ್ಷದ ಮುಖಂಡರಾದ ಬಾಬು ಅಶ್ವಿನೀ ಕುಮಾರ ದತ್ತರನ್ನೂ, ಬ್ರಜಮೋಹನ ವಿದ್ಯಾಶಾಲೆಯ ಪ್ರೊಫೆಸರ್ ಮತ್ತು ಸ್ವದೇಶ ಬಾಂಧವ ಸಮಿತಿಯ ಸೆಕ್ರೆಟರಿಯಾದ ಬಾಬು ಸತೀಶಚಂದ್ರ ಛತ್ತರ್ಜಿಯನ್ನೂ ನೆನ್ನೆ ಪೋಲೀಸಿನವರು ಬಾರಿಸಾಲ್ ನಲ್ಲಿ ದಸ್ತಗಿರಿ ಮಾಡಿ, ಜಹಜಿನ ಮೇಲೆ ರವಾನೆ ಮಾಡಿದರು. ಬಾಬು ಸುಬೋಧಚಂದ್ರ ಮಲ್ಲಿಕರನ್ನು ಕಾಶೀಪಟ್ಟಣದಲ್ಲಿ ದಸ್ತಗಿರಿ ಮಾಡಿ ಬಂಧನದಲ್ಲಿಟ್ಟಿದಾರೆ. ವೀರಪಕ್ಷದ ಮೆಂಬರುಗಳಾದ ಸಚೀಂದ್ರ ಪ್ರಸಾದ ಘೋಸ್ ಮತ್ತು ಮನೋರಂಜನ ಗುಹಾ ಎಂಬವರನ್ನು ನೆನ್ನೆ ಕಲ್ಕತ್ತೆಯಲ್ಲಿ ಹಿಡಿದು ಸೆರೆಯಲ್ಲಿಟ್ಟಿದಾರೆ.

ಬಾಬು ಅಶ್ವಿನೀ ಕುಮಾರ ದತ್ತರವರು ಪೂರ್ವ ಬಂಗಾಳಾದಲ್ಲೆಲ್ಲಾ ಪ್ರಮುಖರಾಗಿದ್ದರು. ಬಾರಿಸಾಲಿನಲ್ಲಿ ಅವರು ನೆನ್ನೆ ಬೆಳಿಗ್ಗೆ ಮನೆಯಲ್ಲಿರುವಾಗ ಆಯುಧಪಾಣಿಗಳಾದ ಪೋಲೀಸಿನವರ ಸಹಿತ ಡಿವಿಜನ್ ಕಮಿಷನರೂ, ಅಡಿಷನಲ್ ಮ್ಯಾಜಿಸ್ಟ್ರೇಟರೂ, ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರೂ ಹೋಗಿ, ಅವರಿಗೆ ಅರ್ಧಗಂಟೆ ಹೊತ್ತು ಫುರಸತ್ತು ಕೊಟ್ಟು, ಅಷ್ಟರೊಳಗೆ ಅವರ ಕೆಲಸವೆಲ್ಲಾ ಮಾಡಿಕೊಳ್ಳುವಂತೆ ಹೇಳಿ, ತರುವಾಯ ಅವರನ್ನು ದಸ್ತಗಿರಿ ಮಾಡಿದರು. ಹೊರಗಡೆ ಜನರು ಗುಂಪು ಸೇರಿ ದೊಂಬಿಮಾಡಿ, ಅವರನ್ನು ಸಾಗಿಸಿಕೊಂಡು ಹೋಗುವಾಗ್ಗೆ “ವಂದೇ ಮಾತರಂ” ಎಂದು ಕೂಗಿಕೊಂಡರು. ಅವರಿಬ್ಬರನ್ನೂ ಹಡಗು ಕೂರಿಸಿಕೊಂಡು ಹೋಗಿ ಜಹಜಿನಲ್ಲಿ ಬಿಟ್ಟು, ಆರು ಗಂಟೆಗೊಳಗಾಗಿ ವಾಪಸು ಬಂದಿತು.

ಗಡೀಪಾರು ಮಾಡಲ್ಪಟ್ಟವರು.

ನೆನ್ನೆ ದಸ್ತಗಿರಿ ಮಾಡಲ್ಪಟ್ಟ ವೀರಪಕ್ಷದವರಿಬ್ಬರನ್ನು ಆಗ್ರಾ ಪಟ್ಟಣಕ್ಕೆ ಗಡೀಪಾರು ಮಾಡಿಬಿಟ್ಟರು. ಗಡೀಪಾರು ಮಾಡಲ್ಪಟ್ಟ ಒಂಬತ್ತು ಮಂದಿಯ ಪೈಕಿ ಸುಬೋಧಚಂದ್ರ ಮಲ್ಲಿಕರು ಐಶ್ವರ್ಯವಂತರಾದ ಜಮೀನ್ದಾರರು, ಮನೋರಂಜನ ಗುಹಾಯವರು ಜಮೀನ್ದಾರರು, ಇವರ ಜಮೀನಲ್ಲಿ ಅಭ್ರಕದ ಗಣಿ ಸಿಕ್ಕಿದೆ; ಕೃಷ್ಣ ಕುಮಾರ ಮಿತ್ರರು “ಸಂಜೀವಿನಿ” ಪತ್ರಿಕೆಯ ಎಡಿಟರಾಗಿದ್ದರು; ಶಾಮಸುಂದರ ಚಕ್ರವರ್ತಿಯವರು ಮೊದಲು “ಸಂಧ್ಯಾ” ಪತ್ರಿಕೆಗೂ ಈಚೆಗೆ “ವಂದೇ ಮಾತರಂ” ಪತ್ರಿಕೆಗೂ ಸಬ್ ಎಡಿಟರಾಗಿದ್ದರು; ಪುಲೀನ ಬಿಹಾರಿ ದಾಸ್ ಯವರು ಢಕ್ಕಾನಗರದ ಅನುಶೀಲನ ಸಮಿತಿಯ ಮುಖಂಡರಾಗಿದ್ದರು, ಭೂಪೇಶ ಚಂದ್ರ ನಾಗರವರು ಜಮೀನ್ದಾರರಾಗಿದಾರೆ, ಅಶ್ವಿನೀ ಕುಮಾರ ದತ್ತರವರು ದೊಡ್ಡ ಜಮೀನ್ದಾರರು, ಬಾರಿಸಾಲ್ ಬ್ರಜಮೋಹನ ಸಮಾಜದ ಪ್ರೊಪ್ರೈಟರಾಗಿಯೂ ಇದ್ದರು; ಸತೀಶಚಂದ್ರ ಛತ್ತರ್ಜಿಯವರು ಈ ಸಮಾಜದ ಪಂಡಿತರಾಗಿದ್ದರು. ಇವರನ್ನೆಲ್ಲಾ ೧೮೧೮ನೇ ಇಸವಿಯ ಕಾನೂನ್ ಪ್ರಕಾರ ದಸ್ತಗಿರಿಮಾಡಿ ಗಡೀಪಾರು ಮಾಡಿದ ವಿಚಾರವು ಕಲ್ಕತ್ತೆಯಲ್ಲೆಲ್ಲಾ ತುಂಬಾ ಗಲಭೆಯನ್ನುಂಟುಮಾಡಿದೆ.

ಗಡೀಪಾರಿನ ಸ್ಥಳಗಳು.

ಬಾಬುಸಚೀಂದ್ರಪ್ರಸಾದಘೋಸ್ ಯವರನ್ನು ಭಾನುವಾರದ ದಿನ ಮೇಯಿಲ್ ಗಾಡಿಯಲ್ಲಿ ಕೂರಿಸಿ ರಾವಲ್ ಪಿಂಡಿಗೆ ಕರೆದುಕೊಂಡು ಹೋದರು. ಅಲ್ಲಿ ಅವರನ್ನು ಸೆಂಟ್ರಲ್ ಜೈಲ್ ಖಾನೆಯೊಳಗೆ ಇಡುತ್ತಾರೆ. ಅವರ ಜೊತೆಯಲಿಗೆ ಯೂರೋಪ್ಯಿಯನ್ ಪೋಲೀಸ್ ಇನ್ಸ್ಪೆಕ್ಟರ್ ಮುಲ್ಲಾಹಿಯವರೂ ಕೆಲವು ಯೂರೋಪ್ಯಿಯನ್ ಕಾನ್ಸ್ಟೆಬಲ್ ಗಳೂ ಹೋಗಿರುತ್ತಾರೆ. ಪೋಲೀಸ್ ಕಮಿಷನರವರು ಬಾಬುಕೃಷ್ಣಕುಮಾರಮಿತ್ರರನ್ನು ಎದುರಿಗೆ ಕರಿಸಿಕೊಂಡು—ನೀವು ಇನ್ನು ಮೇಲೆ ರಾಜಕೀಯ ಹೋರಾಟಗಳಲ್ಲಿ ಸೇರುವುದಿಲ್ಲವೆಂದು ಮುಚ್ಚಳಿಕೆ ಬರೆದು ಕೊಟ್ಟರೆ ನಿಮ್ಮನ್ನು ಬಿಟ್ಟುಬಿಡುತ್ತೇವೆಂದು ಕೇಳಿದರು. ಅದಕ್ಕೆ ಅವರು ಒಪ್ಪದೆ ಹೋದ ಕಾರಣ ಅವರನ್ನು ದಸ್ತಗಿರಿ ಮಾಡಿ ಆಗ್ರಾ ಕೋಟೆಯೊಳಗೆ ಬಂಧನದಲ್ಲಿಟ್ಟಿರಬೇಕೆಂದು ಕಳುಹಿಸಿದರು. ಬಾಬು ಶಾಮಸುಂದರ ಚಕ್ರವರ್ತಿಯವರನ್ನೂ ಬಾಬು ಕೃಷ್ಣಕುಮಾರಮಿತ್ರರನ್ನೂ ಬರ್ಮಾನ್ ಪಟ್ಟಣದ ಸೆಂಟ್ರಲ್ ಜೈಲಿಗೆ ಕಳುಹಿಸಿದಾರೆ. ಬಾಬು ಕೃಷ್ಣಕುಮಾರಮಿತ್ರರು ನಡಿಸುತ್ತಿದ್ದ “ಸಂಜೀವಿನಿ” ಪತ್ರಿಕೆಯನ್ನು ಅವರ ಗೈರ್ಹಾಜರಿಯಲ್ಲಿ ಅವರ ಕುಮಾರನು ನಡಿಸುವವನಾಗಿದಾನೆ.

ಡಿಸೆಂಬರ್ ತಾ. ೧೫ ನೇ ಮಂಗಳವಾರ.

ಗಡೀಪಾರು ಮಾಡಲ್ಪಟ್ಟವರ ಸಂಸಾರಗಳ ಜೀವನವನ್ನು ಗವರ್ನ್ಮೆಂಟಿನವರು ನಡಿಸುವರೆಂದು ಕಲ್ಕತ್ತೆಯ ಪತ್ರಿಕೆಗಳು ತಿಳಿಸುತ್ತವೆ.

ಬಹಳ ಕಾಲದಿಂದಲೂ ನಡಿಯುತ್ತಾ ಇದ್ದ ಒಂದು ಫಿತೂರಿ ಗುಂಪು ಪತ್ತೆಯಾಗಿದೆ. ಬಂಗಾಳಾ ಪ್ರಾಂತ್ಯವನ್ನು ವಿಭಜನೆ (ವಿಭಾಗ) ಮಾಡಿದ್ದಕ್ಕಿಂತಲೂ ಪೂರ್ವದಲ್ಲೇ ಈ ಫಿತೂರಿ ಪ್ರಾರಂಭವಾಯಿತೆಂತಲೂ, ಅವರು ಮಿಲ್ಟೇರಿ, ಹಣ, ಪ್ರಚಾರ, ಈ ಏರ್ಪಾಟುಗಳನ್ನೆಲ್ಲಾ ಇಟ್ಟುಕೊಂಡಿದ್ದರೆಂತಲೂ “ಇಂಗ್ಲಿಷ್ ಮನ್” ಎಂಬ ಪತ್ರಿಕೆಯು ಹೇಳುವದು.

ಕಲ್ಕತ್ತೆಯಲ್ಲಿರುವ ಕ್ಲಾಸಿಕ್ ಪ್ರೆಸ್ ಎಂಬ ಅಚ್ಚಿನ ಕಾರ್ಖಾನೆಯವರು ಕನ್ಯಾಲಾಲದತ್ತನ ವಿಷಯವಾಗಿ ಒಂದು ಪುಸ್ತಕವನ್ನು ಅಚ್ಚುಹಾಕಿದ್ದರಿಂದ ಆ ಕಾರ್ಖಾನೆಯನ್ನು ಸರ್ಕಾರದ ಸ್ವಾಧೀನ ಮಾಡಿಕೊಳ್ಳಬೇಕೆಂದು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಹುಕುಂ ಕೊಟ್ಟಿದಾರೆ.

“ವಂದೇ ಮಾತರಂ” ಎಂಬ ಪತ್ರಿಕೆಯ ಪ್ರಿಂಟಿಂಗ್ ಆಫೀಸನ್ನು ಸರ್ಕಾರದವರು ಸ್ವಾಧೀನ ಪಡಿಸಿಕೊಂಡಿರುವುದನ್ನು ವಾಪಸು ಕೊಡಬೇಕಾದದ್ದಿಲ್ಲವೆಂದು ಕಲ್ಕತ್ತಾ ಹೈ ಕೋರ್ಟಿನ ಇಬ್ಬರು ಜಡ್ಜಿಗಳು ತೀರ್ಮಾನಮಾಡಿದಾರೆ.

ಕೆಳಗೆ ಕಂಡ ಸ್ಥಳಗಳಲ್ಲಿ ಪೋಲೀಸಿನವರು ಜನರ ಮನೆಮಠಗಳನ್ನು ಜಪ್ತಿಮಾಡಿರುತ್ತಾರೆ—ಚಿಟ್ಟಗಾಂಗ್, ಮೈಮನ್ ಸಿಂಗ್, ಸಿರಾಜಗಂಜ್, ಬಾರಿಸಾಲ್, ಕುಷ್ಟಿಯ, ಚಾಂದ್ ಪುರ, ಢಕ್ಕಾ, ಜಸ್ಸೋರ್, ಬ್ರಹ್ಮನ್ ಬೇರಿಯ, ಟಿಪ್ಪೇರಿಯ, ಗೋಲಂಡೋ, ಉತ್ತರಪಾರಾ, ಢಕ್ಕಾ, ಚಾಂಡರ್, ಮತ್ತು ಕಲ್ಕತ್ತೆಯ ಕಾಲೇಜ್ ಸ್ಕ್ವೇರ್ ನಲ್ಲೂ ಮದನಮಿತ್ರ ಗಲ್ಲಿಯಲ್ಲೂ ಮನೆಗಳನ್ನು ಶೋಧನೆ ಮಾಡಿದಾರೆ.

ಬಂಗಾಳಾ ಲೆಫ್ಟಿನೆಂಟ್ ಗವರ್ನರಾದ ಸರ್ ಎಡ್ವರ್ಡ್ ಬೇಕರ್ ಯವರು ನೆನ್ನೇ ದಿನ ಕಲ್ಕತ್ತೆಯಲ್ಲಿ ಆಲಿಪುರದ ಜೈಲ್ ಖಾನೆಯನ್ನು ಅಜಮಾಯಿಷಿ ಮಾಡುವುದಕ್ಕೆ ಹೋಗಿ, ಫಿತೂರಿ ಮಾಡಿದವರೆಂದು ಅಪರಾಧ ಹೊರಿಸಲ್ಪಟ್ಟು ಆ ಜೈಲಿನಲ್ಲಿಟ್ಟಿರುವ ಬಾಬು ಅರವಿಂದಘೋಸ್, ಬಾಬು ಬಾರೀಂದ್ರ ಘೋಸ್, ಬಾಬು ಹೇಮಚಂದ್ರದಾಸ್ ಎಂಬೀ ಖೈದಿಗಳನ್ನು ಕರೆಯಿಸಿಕೊಂಡು ಅವರ ಕೂಡ ಸ್ವಲ್ಪ ಹೊತ್ತು ಏಕಾಂತವಾಗಿ ಮಾತನಾಡಿದರು.

ಮಾಲ್ಡಾ ಪಟ್ಟಣದ ಸ್ವದೇಶೀ ಸ್ಕೂಲಿನ ಹೆಡ್ ಮಾಸ್ತರಾದ ವೀರೇಶ್ವರ ವಾರ್ ಯವರು ಡಕಾಯಿತಿ ಕಳುವು ನಡಿಸಿದರೆಂದು ದಸ್ತಗಿರಿಮಾಡಿ ಮೊಕದ್ದಮೆ ನಡಿಯುತ್ತಿದೆ. ಅವರನ್ನು ಜಾಮೀನಿನ ಮೇಲೆ ಬಿಡಲಿಲ್ಲ.

ದುಷ್ಟವೂ ರಾಜದ್ರೋಹಕರವೂ ಆದ ಬರವಣಿಗೆಗಳನ್ನೂ ಕಥೆಗಳನ್ನೂ ಉಳ್ಳ ಪುಸ್ತಕಗಳನ್ನು ಯಾರೂ ವಿಕರಿಮಾಡಲೂ, ಕೊಂಡು ಓದಲೂ ಕೂಡದೆಂದು ಸರ್ಕಾರದವರು ತಡೆಮಾಡುವವರಾಗಿದಾರೆ—ಸಂಯುಕ್ತ ಅಧಿಪತ್ಯಗಳಿಂದ ಒಂಬತ್ತು ಮಂದಿ ಪೋಲೀಸ್ ಅಧಿಕಾರಿಗಳನ್ನು ಹಂಗಾಮಿಯಾಗಿ ಕಲ್ಕತ್ತೆಗೆ ಕರೆಸಿಕೊಂಡಿದಾರೆ. ಕಲ್ಕತ್ತೆಯಲ್ಲಿ ಮನೆಗಳನ್ನು ಇನ್ನೂ ಶೋಧನೆಮಾಡುತ್ತಿರುವರು. ಹೌರಾದಲ್ಲಿ ಭೂಪೇಂದ್ರನಾಥಮುಖರ್ಜಿ ಎಂಬೊಬ್ಬ ಯುವಕನನ್ನು ದಸ್ತಗಿರಿಮಾಡಿದರು. ಟುಟಿಕಾರಿನ್ ಪಟ್ಟಣದಲ್ಲಿ ದಸ್ತಗಿರಿ ಮಾಡಿದ ಮೂರು ಮಂದಿ ಬಂಗಾಳಿಗಳನ್ನು ಕಲ್ಕತ್ತೆಗೆ ಕರೆದುತಂದು, ಲಾಕಪ್ಪಿನಲ್ಲಿ ಇಟ್ಟಿದಾರೆ.—ಸಿಟಿ ಕಾಲೇಜಿನ ವಿದ್ಯಾರ್ಥಿಯಾದ ಪ್ರೇಮತೋಷದೇವ ಮಲ್ಲಿಕ್ ಎಂಬವನು ಬಾಜಿತ್ ಪುರದ ಡಕಾಯಿತಿ ಮೊಕದ್ದಮೆಗೆ ಸೇರಿದವನೆಂದು ವಾರಂಟು ಬಂದದ್ದರಿಂದ ಅವನನ್ನು ದಯಾಳಪ್ಪಿ ಬಗ್ಗೆ ಹಿಡಿದು ಮೈಮನ್ ಸಿಂಗಿಗೆ ರವಾನೆ ಮಾಡಿದರು.

ಡಿಸೆಂಬರ್ ತಾ. ೧೬ ನೇ ಬುಧವಾರ.

ಕುಷ್ಟಿಯಾ ಎಂಬೂರಿನಲ್ಲಿದ್ದ “ಸೇವಕ ಸಮಿತಿ” ಎಂಬ ಸಂಘದ ಮೆಂಬರುಗಳು ಸಭೆ ಸೇರಿ ಆ ಸಂಘವನ್ನು ವಜಾಮಾಡಿಬಿಟ್ಟರು. ಆಗ ಅದಕ್ಕೆ ಅವರು ಕಾರಣವಾಗಿ ಹೇಳಿದ್ದೇನೆಂದರೆ—ಈ ಸಮಿತಿಯು ರಾಜಭಕ್ತಿಪೂರಿತವಾದದ್ದೇ ಹೌದು. ಆದರೆ ಈಗಿನ ಕಾಲವು ಕ್ಷೇಮಕರವಾಗಿಲ್ಲದ್ದರಿಂದ ಈ ಸಮಿತಿಯ ಅಭಿಪ್ರಾಯಗಳು ಅಪಾರ್ಥಕ್ಕೆ ಗುರಿಯಾಗಬಹುದೆಂಬ ಭೀತಿಯುಂಟಾಗಿದೆ. ಇದರಿಂದ ಮೆಂಬರುಗಳಿಗೆ ಕಷ್ಟನಷ್ಟಗಳು ಪ್ರಾಪ್ತವಾದರೂ ಆಗಬಹುದಾದ್ದರಿಂದ ಈ ಸಮಿತಿಯನ್ನು ವಜಾಮಾಡಿದೆ ಎಂಬುದೇ. ಸುಬೋಧಚಂದ್ರ ಮಲ್ಲಿಕರನ್ನು ಕಾಶಿಯಿಂದ ಲಕ್ನೋಗೆ ರವಾನೆಮಾಡಿದಾರೆ. ಶಾಮಸುಂದರ ಚಕ್ರವರ್ತಿಯವರನ್ನು ಬರ್ಮಾ ಜೈಲಿನಲ್ಲೂ, ಕೃಷ್ಣಕುಮಾರಮಿತ್ರರನ್ನು ರಾವಲ್ ಪಿಂಡಿ ಸೈನಿಕರ ಬಂಗಲೆಯಲ್ಲೂ ಸೆರೆಯಲ್ಲಿಟ್ಟಿರುವರು.—ಅಶ್ವಿನೀಕುಮಾರದತ್ತರನ್ನೂ ಸತೀಶಚಂದ್ರ ಚಕ್ರವರ್ತಿಯವರನ್ನೂ ಪಾಟಿಯಾಲಾ ಎಂಬ ಜಹಜಿನಲ್ಲಿ ಕೂರಿಸಿ ರಂಗೂನ್ ಪಟ್ಟಣಕ್ಕೆ ರವಾನೆಮಾಡಿದರು.

ಡಿಸೆಂಬರ್ ತಾ. ೧೭ ನೇ ಗುರುವಾರ.

ಬಾರಿಸಾಲ್ ಪಟ್ಟಣದಲ್ಲಿ ನೆನ್ನೆ ಒಂದು ದೊಡ್ಡ ಸಭೆ ನಡಿಯಿತು. ಬಾಬು ದೀನಬಂಧು ಸೇನ್ ಯವರು ಅಗ್ರಾಸನವನ್ನು ವಹಿಸಿದ್ದರು. ಗವರ್ನ್ಮೆಂಟಿನವರು ಅಶ್ವಿನೀ ಕುಮಾರ ದತ್ತರನ್ನೂ ಸತೀಶಚಂದ್ರ ಚಕ್ರವರ್ತಿಯವರನ್ನೂ ಗಡೀಪಾರುಮಾಡಿದ ವಿಷಯದಲ್ಲಿ ವ್ಯಸನವನ್ನು ಪ್ರಕಾಶಪಡಿಸಿದ್ದಲ್ಲದೆ ಗವರ್ನ್ಮೆಂಟಿನವರು ಆ ರೀತಿ ಮಾಡಿದ್ದು ತರವಾದದ್ದಲ್ಲವೆಂದು ಪ್ರತಿಭಟಿಸಿ ಉಪನ್ಯಾಸಗಳನ್ನು ಮಾಡಿದರು.—ಕಲ್ಕತ್ತಾ ಪಟ್ಟಣದಲ್ಲಿ ದೇಶೀಯ ದೊಡ್ಡಮನುಷ್ಯರು ಮುಂದಾಳುಗಳಾಗಿ ಬಂದು, ರಾಜದ್ರೋಹಿಗಳನ್ನು ಹಿಡಿದುಕೊಡುವುದರಲ್ಲಿ ಗವರ್ನ್ಮೆಂಟಿಗೆ ಸಹಾಯಮಾಡಲಾರಂಭಿಸಿದಾರೆ. ಹೊಸ ಕಾನೂನ್ ಪ್ರಕಾರ ಸ್ಪೆಷಲ್ ಕೋರ್ಟಿನ ಮೂವರು ಜಡ್ಜಿಗಳು ನೇಮಕವಾದ ಕೂಡಲೆ ಈ ಕೋರ್ಟಿನಲ್ಲಿ ವಿಚಾರಕ್ಕೆ ಆಗತಕ್ಕ ಮೊಕದ್ದಮೆಗಳನ್ನು ಪೋಲೀಸಿನವರು ಆಗಲೇ ಸಿದ್ಧಮಾಡಿ ಸಿದ್ಧಪಡಿಸಿಕೊಂಡಿದಾರೆ.

ವಕೀಲರ ಮೇಲೆ ರಾಜದ್ರೋಹಾಪವಾದವು

ಮೈಮನ್ ಸಿಂಗ್ ಪಟ್ಟಣದಲ್ಲಿ ಕಳೆದ ಸೆಪ್ಟಂಬರ್ ತಿಂಗಳ ತಾ. ೨೯ ರಲ್ಲಿ ಸ್ವದೇಶೀ ಪಾಠಶಾಲೆಯ ವಾರ್ಷಿಕೋತ್ಸವವನ್ನು ನಡಿಸಿದ ಸಂದರ್ಭದಲ್ಲಿ ಬಾಬು ಅನಾಥಬಂಧು ಗುಹಾ ಮತ್ತು ಬಾಬು ಮಹಿಮಚಂದ್ರ ರಾಯ ಎಂಬೀ ಇಬ್ಬರು ವಕೀಲರು ರಾಜದ್ರೋಹಕರವಾದ ಉಪನ್ಯಾಸಗಳನ್ನು ಮಾಡಿದರೆಂದು ಅವರ ಮೇಲೆ ಮೊಕದ್ದಮೆ ತರಲಾಗಿದೆ.—ಕಲ್ಕತ್ತೆಯಲ್ಲಿ ಒಂದು ಬಂದೂಕಿಗೆ ಮಾತ್ರ ಲೈಸೆನ್ಸನ್ನು ಪಡೆದುಕೊಂಡು, ಮೂರು ಬಂದೂಕುಗಳನ್ನು ಇಟ್ಟುಕೊಂಡಿದ್ದರೆಂಬದಾಗಿ ಪೋಲೀಸಿನವರು ಬಾಬು ಭಟ್ಟ ಕೃಷ್ಣದತ್ತರವರನ್ನು ದಸ್ತಗಿರಿ ಮಾಡಿದಾರೆ.—ಕುಷ್ಟಿಯಾ ಪಟ್ಟಣದಲ್ಲಿದ್ದ ಸಮಿತಿಯ ಮೆಂಬರುಗಳು ಹ್ಯಾಗೆ ಆ ಸಂಘವನ್ನು ವಜಾ ಮಾಡಿಬಿಟ್ಟರೋ ಹಾಗೆಯೇ ಅನುಶೀಲನ ಸಮಿತಿ ಎಂಬ ಸಂಘದವರೂ ತಮ್ಮ ಸಂಘವನ್ನು ವಜಾ ಮಾಡಿಬಿಟ್ಟರು.—ಲಾಹೋರ್ ಪಟ್ಟಣದಲ್ಲಿ “ಇಂಡಿಯಾ” ಎಂಬ ಉರ್ದು ಭಾಷೆಯ ವರ್ತಮಾನ ಪತ್ರಿಕೆಯ ಪ್ರಿಂಟಿಂಗ್ ಆಫೀಸು ಮುಂತಾದದ್ದನ್ನು ಪಂಜಾಬ್ ಗವರ್ನ್ಮೆಂಟ್ ಹುಕುಂ ಪ್ರಕಾರ ಪೋಲೀಸಿನವರು ಜಪ್ತಿ ಮಾಡಿ, ತಮ್ಮ ಸ್ವಾಧೀನಪಡಿಸಿಕೊಂಡಿ

ಆರೆ.—ಬಂಬಾರ್ಡ್‌ನಲ್ಲಿ ನಡೆದ ದಂಗೇ ವೊಕದ್ದಮೆಯಲ್ಲಿ ಹದಿನಾಲ್ಕು ಮಂದಿ ಅಪರಾಧಿಗಳು ತಮ್ಮ ಅಪರಾಧವನ್ನು ಒಪ್ಪಿಕೊಂಡದ್ದರಿಂದ ಮ್ಯಾಜಿಸ್ಟ್ರೇಟನು ಅವರಿಗೆ ಎಲಾ ೬ ತಿಂಗಳ ಅಥವಾ ಒಂದು ತಿಂಗಳ ವರೆಗೆ ಕಠಿಣ ಶಿಕ್ಷೆಯನ್ನು ವಿಧಿಸಿದರು.—ಢಕ್ಕಾ ಪಟ್ಟಣದಲ್ಲಿರುವ ಬಂಗಾಳೀ ದೊಡ್ಡ ಮನುಷ್ಯರು ಅರಾಜಕ ಕೃತ್ಯಗಳನ್ನು ಅಡಗಿಸುವುದಕ್ಕೂ ಅಪರಾಧಿಗಳನ್ನು ಹಿಡಿದು ಕೊಡುವುದಕ್ಕೂ ಮುಂದಾಳಾಗಿ ಬಂದು ಕಮಿಷನರವರಿಗೆ ಸಹಾಯ ಮಾಡುವದಾಗಿ ಒಪ್ಪಿಕೊಂಡಿದಾರೆ.—ಕಲ್ಕತ್ತೆಯಲ್ಲಿ ಗವರ್ನ್ಮೆಂಟಿನವರು ಮುಖಂಡರನ್ನು ಹಿಡಿದು ಗಡೀಪಾರು ಮಾಡಿದ್ದನ್ನು ಕೇಳಿ ಪ್ರಜೆಗಳು ಚಿಂತಾಕ್ರಾಂತರಾಗಿಯೂ ಭಯಗ್ರಸ್ತರಾಗಿಯೂ ಇದಾರೆ.—ಇನ್ನೊಬ್ಬ ಬಂಗಾಳಿ ಮುಖಂಡನನ್ನು ಸರ್ಕಾರದವರು ಹಿಡಿದು ಗಡೀಪಾರು ಮಾಡುವವರಾಗಿರುವಂತೆ "ಇಂಗ್ಲಿಷ್‌ಮನ್" ಎಂಬ ಪತ್ರಿಕೆಯು ಸೂಚಿಸುವುದು.

ಡಿಸೆಂಬರ್ ತಾ. ೧೮ ನೇ ಶುಕ್ರವಾರ.

ಲಾಹೋರ್ ಪಟ್ಟಣದಲ್ಲಿ ಪೊಲೀಸಿನವರು "ಕರ್ಮ" ಎಂಬ ಪತ್ರಿಕೆಯು ಅಚ್ಚಾಗಿ ಪ್ರಕಟವಾಗುತ್ತಿದ್ದ ಪ್ರಿಂಟಿಂಗ್ ಆಫೀಸು ಮುಂತಾದದ್ದನ್ನು ಜಪ್ತಿ ಮಾಡಿ ಸ್ವಾಧೀನಪಡಿಸಿಕೊಂಡಿದಾರೆ.—ಸಾಲೀಯಸಾಲಾ ಎಂಬ ಹಡಗು ಕಲ್ಕತ್ತೆಯಿಂದ ರಂಗೂನ್ ಪಟ್ಟಣವನ್ನು ತಲಪಿತು. ಗಡೀಪಾರು ಹೊಂದಿದ ಅಶ್ವಿನೀಕುಮಾರ ದತ್ತರನ್ನು ಇನ್‌ಸೇನ್ ಪಟ್ಟಣದ ಜೈಲಿಗೂ, ಎಸ್. ಸಿ. ಚಕ್ರವರ್ತಿಯವರನ್ನು ಥಯಟ್ಮ್ಯೋ ಪಟ್ಟಣದ ಜೈಲಿಗೂ ರವಾನಿಸಲಾಯಿತು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಅಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವುದಿಲ್ಲ ವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

[ಚೆ]ಂಗಳೂರು ತಾಲ್ಲೂಕು ದೊಡ್ಡಆವಲ ಅಗರ ಗ್ರಾಮದ ಒಂದು ಸಣ್ಣ ಹುಡುಗಿಯನ್ನು ವಯಸ್ಸಾದ ಒಬ್ಬ ಗಂಡಸಿಗೆ ಕೊಟ್ಟು ಬೇಗಕರೆಯಲ್ಲಿ ಮದುವೆಮಾಡುವರೆಂತಲೂ. ಇದು ಬಾಲ್ಯವಿವಾಹದ ಕಾನೂನಿಗೆ ವಿರೋಧವಾದ ದ್ದೆಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ. ಇದರ ನಿಜಸ್ಥಿತಿ ಮುಂತಾದದ್ದನ್ನು ಸರ್ಕಾರದವರು ವಿಚಾರಿಸದೆ ಇರಲಾರರೆಂದು ನಿರೀಕ್ಷಿಸುತ್ತೇವೆ.—ಎಡಿಟರ್.

ಕರೆಸ್‌ಪಾಂಡೆನ್ಸ್.

ದೊಡ್ಡಬಳ್ಳಾಪುರದ ಪ್ಲೇಗ್ ವಿಚಾರ.

ಅಯ್ಯಾ,

ಊರಿನಲ್ಲಿ ಪ್ಲೇಗ್ ವ್ಯಾಪಿಸಿ ಸುಮಾರು ೧-೨ ತಿಂಗಳಾಗುತ್ತಾ ಬಂತು. ಆದರೂ ಕೂಡ ಊರು ಸುತರಾಂ ಬಿಡಲಿಲ್ಲ. ಮುಕ್ಕಾಲುಪಾಲು ಊರುಬಿಟ್ಟಿದೆ. ಹಾಗಪಾಲು ಊರುಬಿಡಲಿಲ್ಲ. ಜುಮ್ಲಾ ೫೦-೬೦ ಕೇಸುಗಳು ನಡೆದು ಹಾಲಿ ಊರಿನಲ್ಲಿ ೫ ೬ ಕಾಯಿಲೆಗಳು ಇವೆ. ಇದ್ದರೂ ಕೂಡ ಭಯವಿಲ್ಲವೆಂದು ಹೇಳುತ್ತಾರೆ. ಈ ತಿಂಗಳು ೧೫ ನೇ ತಾರೀಖಿನಲ್ಲಿ ಬೆಂಗಳೂರಿಂದ ಡಾಕ್ಟರು ಬಂದು, ೪-೫ ದಿನಗಳಿಂದಲೂ ನೂರಾರು ಜನಗಳಿಗೆ ಇನಾಕ್ಯುಲೇಷನ್ ಮಾಡಿದಲ್ಲದೆ, ನಮ್ಮ ಅಮಲ್ದಾರರು ದೊಡ್ಡವರಿಗೆ ೪ ಆಣೆ, ಹೆಂಗಸರಿಗೆ ೨ ಆಣೆ, ಹುಡುಗರಿಗೆ ೧ ಆಣೆಯಂತೆ ಇನಾಂ ಕೊಟ್ಟರು. ೧೫ ನೇ ತಾರೀಖಿನಲ್ಲಿ ನಾನು ಸಹ ಇನಾಕ್ಯುಲೇಷನ್ ಮಾಡಿಸಿಕೊಂಡೆನು ಜ್ವರ ಬರಲಿಲ್ಲ. ನೋವು ಸಹ ಕಮ್ಮಿ ಆಗಿದೆ.—ಈಗ ೬-೭ ದಿವಸಗಳ ಕೆಳಗೆ ವೆಂಕಟಮ್ಮ ಎಂಬುವಳಿಗೆ ಊರ ನಡುವಿನ ಮನೆ ಕಾಯಿಲೆಬಿತ್ತು ನಾಯಿಸಾಕಿದ ವ್ಯಾಕ್ಸಿನ ಮೋಚಿ ಖಿಲ್ನ ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದು ಮಾಡಿರುತ್ತಾಳೆ.

ಪ್ಲೇಗಿನ ದೆಸೆಯಿಂದ ರಾಗಿ ವಗೈರೆ ಊರಿಗೆ ಬಾರದೆ ಜನಗಳು ತುಂಬಾ ತೊಂದರೆಪಡುತ್ತಾರೆ. ಇಲ್ಲಿನ ತಾಲ್ಲೋಕ್ ಕಚೇರಿಯಲ್ಲಿ ನ್ಯಾತೀಕಾಲ ೭ ರಿಂದ ೮ ರವರೆಗೆ ಒಂದು ವ್ಯಕ್ತಿಯವರಿಗೆ ೮ ಆಣೆ, ೪ ಆಣೆ ರಾಗಿಯಂತೆ ಕೊಡುತ್ತಿದ್ದರು. ಅದು ಸಹ ಈಗ ನಿಕ್ಕಿದಂತೆ ಆಗಿದೆ. ಬಡಜನಗಳ ಗೋಳಾಟ ಹೇಳತೀರದು. ದಯಾಳುಗಳಾದ ನಮ್ಮ ಅಮಲ್ದಾರರು ಬೇಗನೆ ಸ್ಟಾಕ್ ರಾಗಿ ಇಡಿಸಿ ಜನರಿಗೆ ಸಿದ್ಧಪಡಿಸುವರೆಂದು ನಂಬಿರುತ್ತೇನೆ.

ಚೆಂಡಾಡಾರ

ಅರಸೀಕೆರೆ ತಾಲ್ಲೋಕು ಹೊಸ್ತ ಬಾಣಾವಾರದ ವಿಷಯಗಳು.

ಅಯ್ಯಾ,

ಮಳೆಯು ವಿಸ್ತಾರವಾದ ಕಾರಣ ಬೆಳೆಯು ೮ ಆಣೆಯಷ್ಟಾಯಿತು. ಜನರ ಗೋಳಾಟ ವಿವರಿಸಲಾರವಲ್ಲ. ೧೦-೧೫ ರೂಪಾಯಿ ಸಂಬಳದವರ ಕಷ್ಟ ಹೇಳತೀರದು. ಇತರ ಡಿಸ್ಟ್ರಿಕ್ಟುಗಳಿಗೆ ಕೊಟ್ಟಂತೆ ಇಲ್ಲೂ ಬಡನೌಕರರಿಗೆ ಕ್ಷಾಮದ ಅಲೋಯನ್ಸು ಏಕೆ ಕೊಡಲಿಲ್ಲವೋ ತಿಳಿಯದು. ಕಷ್ಟಗಿಷ್ಟಗೆ ಸ್ಥಿರ ಸ್ಟಾಂಡಾರ್ಡಿಗೆ ಬೆಳೆಯಾಯಿತೆಂದು ಭಾವಿಸಿದರೆ ಆಯಿತೇ? ವರ್ತಕರುಗಳಲ್ಲಿ ಅಕ್ಕಿ ೫-೫ ಸೇರು, ರಾಗಿ ೯ ಸೇರು ಕೊಡುತ್ತಾರೆ. ಸೇರು ದಿನಸುಗಳ ಅಳತೆ ಲೆಕ್ಕಾಚಾರ ಹಾಗಿರಲಿ. ಮುಷ್ಟಿ ಗೋಕಾಯಿಗಳ ಕಷ್ಟವು ಹೇಳಲಾಗದು. ಈ ರೀತಿ ಕಷ್ಟವಾಗಿದ್ದರೂ ಜನರು ನಾಟಕಗಳಿಗೆ ಮರುಳಾಗಿ ಹೋಗಿ ಕೊಟ್ಟು, ಕೈಬರಿದುಮಾಡಿಕೊಳ್ಳುತ್ತಿರುವರು.

ಈ ಊರಿನ ದೊಡ್ಡಕೆರೆ ಏರೀ ಮೇಲೆ ಬೆಳೆದಿದ್ದ ಗಿಡಗಳನ್ನು ಕಳೆದ ವರ್ಷ ಡೆಪ್ಯುಟಿ ಕಮಿಷನರ್ ಸಾಹೇಬರವರು ದಯಮಾಡಿಸಿದಾಗ ಕಡಿಸಿ ಸಾಫಿಜು ಮಾಡಿಸಿದ್ದರು. ಈಗ ಪೂರ್ವದಂತೆ ಲತಾ ನಿಬಿಡವಿಂದ ಮೊಸ್ಕ್ವಿಟೋಗಳ ವಾಸಕ್ಕೆ ಅನುಕೂಲವಾಗುವಂತೆ ಕಾಣುತ್ತಿದೆ. ಇಲ್ಲಿನ ಸ್ಕೂಲು ಅಭಿವೃದ್ಧಿ ಹೊಂದುತ್ತಿದೆ ಆಗಾಗ ಉದ್ಯೋಗಸ್ಥರು ಇದನ್ನು ನೋಡಿ ಸಂತೋಷಾಭಿಪ್ರಾಯಗಳನ್ನು ಸಹ ಬರೆಯುತ್ತಾರೆ. ಈಸಲ ೮ ಮಂದಿ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿದಾರೆ. ಫಲಿತಾಂಶ ನಿರೀಕ್ಷಿಸಬೇಕಾಗಿದೆ.

ಈ ಡಿಸ್ಟ್ರಿಕ್ಟಿಗೂ ಅಲೋಯನ್ಸು ಕೊಟ್ಟರೆ ಬಡನೌಕರರನ್ನು ಬದುಕಿಸಿದಂತಾಗುತ್ತದೆ. ನವಂಬರ್ ತಿಂಗಳಲ್ಲಿ ನಮ್ಮ ಪ್ರಭುಗಳವರಾದ ಶ್ರೀಮನ್ ಮಹಾರಾಜರವರ ಸವಾರಿಯು ಚಿತ್ತೈಸಿ, ಪ್ರಜೆಗಳ ಕಷ್ಟಗಳನ್ನು ಪ್ರತ್ಯಕ್ಷವಾಗಿ ನೋಡಿ ದಯಮಾಡಿಕೊಳ್ಳಲಾಯಿತು.

ಹಿತಚಿಂತಕ.

ನಾಲೇ ನೀರಿನ ತೊಂದರೆಯು.

ಅಯ್ಯಾ,

ಹೊಳೇನರಸೀಪುರದ ದಕ್ಷಿಣನಾಲಾ ಸಮ್ಮತು ರಾಮನಾಥದ ಕಾಲುವೆ ಎಂಬುವದು ಒಂದು ನಾಲೆ. ಇದರಿಂದ ಸುಮಾರು ೫೦೦—೬೦೦ ಎಕರೆ ಜಮೀನಿಗೆ ನೀರು ಒದಗಬೇಕು. ಇಷ್ಟು ಜಮೀನಿಗೆ ಸುಮಾರು ೭ ಅಂಗುಲದ ನಲ್ಲಿ ನೀರು ಸಾಲದೆಂಬುವದು ನಾಲಾ ನೌಕರರಿಗೆ ತಿಳಿಯದ ಸಂಗತಿಯಲ್ಲ. ಅಲ್ಲದೆ ಈ ನಲ್ಲಿಯಿಂದ ನೀರು ಸರಾಗವಾಗಿ ಹೊರಡುವದಿಲ್ಲ. ನಾಲಾದಲ್ಲಿ ಭರ್ತಿಯಾಗಿ ನೀರು ಹಿಡುತ್ತಿದ್ದರೆ ಈ ಕಾಲುವೆಯಲ್ಲು ಸುಮಾರಾಗಿ ಹರಿಯುವದು, ಇಲ್ಲವಾದರೆ ಬಹು ಕಡಿಮೆಯಾಗಿ ಹರಿಯುವದು. ಹೀಗೆ ಹರಿದು ಬರುವ ನೀರಿಗೆ ಗದ್ದೆಗೆ ಒಂದೊಂದರ ಮೇರೆಗೆ ಮಡುವಾಯಿ (ಕಾಲುವೆಯಿಂದ ಗದ್ದೆಗೆ ಹೋಗುವ ಬದಂಡಿ) ಗಳು ಉಂಟು. ಇದರಿಂದ ರೈತರು ತಮ್ಮ ಇಷ್ಟದ ಮೇರೆ ಬೇಕಾದಷ್ಟು ನೀರು ಬಿಟ್ಟುಕೊಳ್ಳುವರು. ಇದರಲ್ಲೂ ನಾಲಾ ಪಕ್ಕದಲ್ಲಿರುವ ಗದ್ದೆಯವರು ದೊಡ್ಡ ಬಾಯಿಯುಳ್ಳವರಾದಕಾರಣ ನಾಲಾ ಮಣೇಗಾರರು ಮಾತನಾಡಿಸುವದಿಲ್ಲ. ಕಾಲುವೆ ಕೊನೆಯಲ್ಲಿರುವ ರೈತರು ತಮ್ಮ ಗದ್ದೆಗೆ ನೀರು ಸಂಪೂರ್ಣವಾಗಿ ಬರುವದಿಲ್ಲವೆಂದೂ, ನೀರು ಸರಾಗವಾಗಿ ಬರುವಹಾಗೆ ಮಾಡಿಕೊಡಬೇಕೆಂದೂ ನಾಲಾ ಸಾಹೇಬರಿಗೂ, ಅಮಲ್ದಾರರಿಗೂ ಅರ್ಜಿಗಳನ್ನು ಬರೆದುಕೊಂಡರೂ ಏನೂ ಸಾರ್ಥಕವಾಗಲಿಲ್ಲ. ಹಾಗೂ ಅಮಲ್ದಾರರು ಕಳೆದ ಮೇ ತಿಂಗಳಲ್ಲಿ ಒಂದಾವರ್ತಿ ಈ ಕಾಲುವೆಯ ಮೇಲೆ ಪ್ರಯಾಣಬೆಳಸಿದ್ದರೂ ಎಳ್ಳಷ್ಟು ಪ್ರಯೋಜನವಾಗಲಿಲ್ಲ. ಈ ಗದ್ದೆಗಳ ರೈತರ ಪೈಕಿ ಮುಕ್ಕಾಲು ಭಾಗದ ರೈತರೆಲ್ಲಾ ಗುತ್ತಿಗೆಯಿಂದ ಜೀವಿಸುವರು. ಸುಗ್ಗೀಕಾಲದಲ್ಲಿ ತನ್ನ ಕಷ್ಟವನ್ನು ಗುತ್ತಿಗೆದಾರನಲ್ಲಿ ಹೇಳಿದರೆ ಗದ್ದೇ ಸಾಗುವಳಿಯನ್ನು ಬಿಟ್ಟುಬಿಡು ಎಂದು ಹೇಳುವನು ಬಿಟ್ಟರೆ ಹೊಟ್ಟೆಯೇ ಚಿಕ್ಕದಾಗುವದು. ಆದ್ದರಿಂದ ನಮ್ಮ ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರ್ ಸಾಹೇಬರು ತಮ್ಮ ದಿವ್ಯ ಚಿತ್ತಕ್ಕೆ ತಂದುಕೊಂಡು ಈ ನಲ್ಲಿಯನ್ನು ತೆಗೆದು ಇನ್ನೂ ದೊಡ್ಡ ನಲ್ಲಿಯನ್ನು ನೀರು ಸರಾಗವಾಗಿ ಬರುವ ರೀತಿ ಹಾಕಿಸಿ ಅಲ್ಲಲ್ಲಿ ಗದ್ದೆಗಳಿಗೆ ಹೋಗುವ ನೀರನ್ನು ತಪ್ಪಿಸಿ, ಕ್ಲಿಪ್ತವಾದ ಸ್ಥಳಗಳಲ್ಲಿ ಚಿಕ್ಕ ಚಿಕ್ಕ ನಲ್ಲಿಗಳನ್ನು ಹಾಕಿಸಿ ಕೊಟ್ಟರೆ ಬಡರೈತರ ಕಷ್ಟವನ್ನು ಎಷ್ಟೋಮಟ್ಟಿಗೆ ಪಾರುಮಾಡಿದಂತಾಗುವದು. ಈ ವಿಷಯವನ್ನು ನಮ್ಮ ಅಮಲ್ದಾರರು ತಮ್ಮ ಕಾಲದಲ್ಲಿ ಮನಸ್ಸಿಗೆ ತಂದುಕೊಂಡು ಡೆಪ್ಟಿ ಕಮಿಷನರ್ ಸಾಹೇಬರಿಗೆ ರಿಪೋರ್ಟುಮಾಡಿ ಕ್ಷಿಪ್ರದಲ್ಲಿಯೇ ಹುಕುಮು ತರಿಸುವರೆಂದು ನೆನಸುತ್ತೇನೆ. ಸರಕಾರದವರಿಗಾಗಿ ಮೇಲ್ಕಂಡ ರೈತರು ತಮ್ಮಿಂದಾದಮಟ್ಟಿಗೂ ಕುಮ್ಮಕ್ಕು ಮಾಡುವವದಲ್ಲಿ ಸಂದೇಹವಿಲ್ಲ.

ಒಬ್ಬ ಪ್ರಜೆಯ ಪ್ರಾರ್ಥನೆ.

ದಾವಣಗೆರೆಯ ವಿಚಾರಗಳು.

ಅಯ್ಯಾ,

ಈ ಊರಿನಲ್ಲಿ ಶ್ರೀಮದ್ರಂಭಾಪುರಿ ವೀರಸಿಂಹಾಸನದ ಶಾಖೆ ಶ್ರೀ ವೇ ಮೈಸೂರು ಮಠದ ಮಹಾದೇವಯ್ಯನವರು ಈ ತಿಂಗಳು ತಾ ೧೭ ರಲ್ಲಿ ತಮ್ಮ ಪುತ್ರರು ಮತ್ತು ಪುತ್ರಿಯರುಗಳಿಗೆ ವಿವಾಹ ಮಾಡಿಸುವ ಕಾಲದಲ್ಲಿ ಹಿಂದೆ ತಮ್ಮ ಪೂರ್ವೀಕರು ಮೈಸೂರು ಮಹಾ ಸಂಸ್ಥಾನದ ಮಹಾರಾಜರುಗಳಿಂದ ಪಡೆದಿರುವ ತಮ್ಮ ಮಠವನ್ನು ಕದಳೀ ಸ್ತಂಭಗಳಿಂದಲೂ ತೋರಣಗಳಿಂದಲೂ ಶ್ರೀಮನ್ ಮಹಾರಾಜರವರ ತಸ್ವೀರುಗಳಿಂದಲೂ ವೇದಾಂತದ ತಸ್ವೀರುಗಳಿಂದಲೂ ಮುಂದುಗಡೆ ವಿವಾಹ ಮಂಟಪದಿಂದಲೂ ಗುಳೂವು ಮುಂತಾದ ಚಿತ್ರದ ಸಾಮಾನುಗಳಿಂದಲೂ ಅಲಂಕರಿಸಿದ್ದರು. ಆವಾಗ್ಗೆ ಈ ಊರಿನ ಮಠಸ್ಥರೂ ಯಜಮಾನರೇ ಮುಂತಾದ ಸಾಹುಕಾರರು ವರ್ತಕರು ಸಹ ಈ ವಿವಾಹ ಮಂಟಪಕ್ಕೆ ದಯಮಾಡಿಸಿ ಸಭೆಯನ್ನಲಂಕರಿಸಿದ್ದರು ಆ ಕಾಲದಲ್ಲಿ ಸಂಗೀತವನ್ನು ಹಾಡುವ ಫೋನೋಗ್ರಾಫ್ ಯಂತ್ರದಿಂದಲೇ ಸಭಿಕರ ಮನಸ್ಸನ್ನು ಸಂತೋಷಪಡಿಸಿ, ಹೂ ಗಂಧ ತಾಂಬೂಲಾದಿಗಳನ್ನು ಹಂಚಿದರು ಹೊರ್ತು ವೇಶ್ಯೆಯರಿಂದ ನಡೆಯುವ ನಾಟ್ಯ, ಗೀತ ಮತ್ತು ಬಿರುಸು ಪಟಾಕಿ ಮುಂತಾದ ದುಂದುವೆಚ್ಚಗಳನ್ನು ವರ್ಜಮಾಡಿ, ಆ ದಿವಸವು ಮತ್ತು ಮರುದಿವಸವೂ ಇಲ್ಲಿನ ವೀರಶೈವಮಂಡಲಿಯವರಿಗೆ ಸುಮಾರು ೪,೦೦೦ ಜನಗಳಿಗೆ ಸುಭೋಜನವನ್ನು ಮಾಡಿಸಿದರು. ಇನ್ನು ಮುಂದೆ ನಡೆಯುವ ವಿವಾಹಕಾರ್ಯಗಳಲ್ಲಿ ಇಲ್ಲಿನ ವೀರಶೈವ ಸಾಹುಕಾರರುಗಳು ಪ್ರಯೋಜನವಿಲ್ಲದ ದುಂದುವೆಚ್ಚಗಳನ್ನು ವರ್ಜಮಾಡಿ ಬಡವರೇ ಮುಂತಾದವರಿಗೆ ಅನ್ನದಾನಮಾಡುತ್ತಾ ಬಂದು ಕೀರ್ತಿವಂತರೂ ಪುಣ್ಯಭಾಗಿಗಳೂ ಆಗುತ್ತಾ ಬರಬೇಕು.

ಮತ್ತು ಇಲ್ಲಿನ ವರ್ತಕರು ವ್ಯಾಪಾರದಿಂದ ತೆಗೆಯುವ ಧರ್ಮದ ಹಣವು ಅಭಿವೃದ್ಧಿಯಲ್ಲಿದೆಯಷ್ಟೆ. ಈ ಹಣದಿಂದ ೯—೧೦ ಜನ ಇಂಗ್ಲೀಷು ಕಲಿಯುವ ವಿದ್ಯಾರ್ಥಿಗಳಿಗೆ ಮಾತ್ರ ಸ್ಕೂಲ್ ಫೀಜು ಸಲ್ಲುತ್ತಾ ಇದೆ. ಇಷ್ಟು ಕೊಂಚ ಹಣವನ್ನು ವಿದ್ಯಾಭ್ಯಾಸಕ್ಕೆ ಉಪಯೋಗಿಸುತ್ತಾ ಬಂದರೆ ವೀರಶೈವರಲ್ಲಿ ಶೀಘ್ರವಾಗಿ ವಿದ್ಯಾಭಿವೃದ್ಧಿ ಹ್ಯಾಗೆ ಹೆಚ್ಚೀತು? ಈ ಊರಿನಲ್ಲಿ ವೀರಶೈವ ಬಾಲಕರು ಸುಮಾರು ೪೦೦ ಜನರು ಕನ್ನಡ ವಿದ್ಯಾರ್ಥಿಗಳಿದಾರೆ. ಇವರಲ್ಲಿ ಮೇಧಸ್ಸುಳ್ಳವರು ೫೦ ಜನರಾದರೂ ಸಿಕ್ಕಬಹುದು ಇವರುಗಳನ್ನು ತೆಗೆದುಕೊಂಡು, ಸ್ಕೂಲ್ ಟೈಂ ಕಳೆದಮೇಲೆ ಟೈಂಗಳಲ್ಲಿ ಶ್ರೀಮನ್ ನಿರಂಜನ ಜಗದ್ಗುರು ಹೊನ್ನಸಿಂಹಾಸನದ ಶಾಖೆ ವಿರಕ್ತಮಠದಲ್ಲಿ ಮಿಡಲ್ ಅಥವಾ ಮೆಟ್ರಿಕ್ ಪಾಸಾಗಿರುವ ಒಬ್ಬ ಉಪಾಧ್ಯಾಯನನ್ನು ಇಟ್ಟು ಹಗಲು ಮತ್ತು ರಾತ್ರಿಯ ಸ್ಕೂಲನ್ನು ನಡಿಸುತ್ತಾ ಬಂದರೆ ೧-೨-೩ ವರ್ಷಗಳಲ್ಲಿಯೇ ರಾಜವಿದ್ಯೆಯಾದ ಇಂಗ್ಲೀಷು ಭಾಷೆಯು ವೀರಶೈವರಲ್ಲಿ ಎಷ್ಟು ಜಾಗ್ರತೆಯಾಗಿ ಹೆಚ್ಚುತ್ತಾ ಬರುತ್ತದೆ ನೋಡಿರಿ ಮೇಲ್ಕಂಡ ವಿಷಯಗಳಿಗೆ ಹಣಕ್ಕೆ ಪ್ರಮುಖರಾದವರು ದಯಮಾಡಿ ಗಮನಕೊಟ್ಟು, ಬಡವೀರಶೈವರ ಮಕ್ಕಳಿಗೆ ವಿದ್ಯಾಭ್ಯಾಸಮಾಡಿಸಿ ಮುಂದಾಳುಗಳನ್ನಾಗಮಾಡಿ ಕೀರ್ತಿವಂತರೂ ಪುಣ್ಯಭಾಗಿಗಳೂ ಆಗುತ್ತಾರೆಂದು ನಂಬಿದೇನೆ

ಎಚ್, ಎಂ. ಮುರಿಗೆಯ್ಯ

ಮೂಡಿಗೆರೆಯ ಕಷ್ಟವಿಚಾರಗಳು.

ಅಯ್ಯಾ,

ಇದು ಮಲೆನಾಡಾಗಿಯೂ ಮೈಲ್ ತರಫಿನಲ್ಲಿ ಆಗುವ ಮಳೆಗಿಂತಲೂ ಹೆಚ್ಚಾಗಿ ಈ ಪ್ರಾಂತ್ಯ ಮಳೆ ಹುಯ್ಯಬೇಕಾದದ್ದು ಸ್ವಭಾವಸಿದ್ಧವಾದದ್ದೇ? ಸರಿ ಆದಾಗ್ಯೂ ಕೂಡ ಈ ಸಾಲಿನಲ್ಲಿ ಮೈಲುಶೀಮೆಯಂತೆಯೇ ಇಲ್ಲಿಯೂ ಸಕಾಲಕ್ಕೆ ಸರಿಯಾಗಿ ಮಳೆ ಬಾರದೆ ಕಾಫಿ ಮುಂತಾದ ಫಸಲು ತುಂಬಾ ಹೀನಸ್ಥಿತಿಯಾಗಿದೆ. ಜನರಿಗೂ ಜಾನುವಾರುಗಳಿಗೂ ಆಹಾರಕ್ಕೂ ಮತ್ತು ಅನೇಕ ಕಡೆ ನೀರಿಗೂ ಕೊರತೆಯು ಉಂಟಾಗಿರುವದನ್ನು ನೋಡಲು ಕ್ಷಾಮವು ಈಗಾಗಲೇ ತಲದೋರಿತೆಂದೇ ಹೇಳಬೇಕಾಗಿದೆ. ಈ ಪ್ರಾಂತ್ಯದ ಜನರಿಗೆ ಮುಖ್ಯ ಆಹಾರವಾದ ಭತ್ತದ ಬೆಳೆಯೂ ಕೂಡ ಅನೇಕ ಕಡೆ ಅರ್ಧಪಾಲು ಬೆಳೆಯಾಗಿ ಕಷ್ಟವಾಗುತ್ತಾ ಇದೆ. ಧಾರಣೆವಾಸಿಯಾದರೋ ಹೇಳತೀರದು. ಅಕ್ಕಿ ರೂಪಾಯಿಗೆ ೬ ಸೇರು, ರಾಗಿ ೯ ಸೇರು ಮಾರಲ್ಪಡುತ್ತೆ. ಈ ತಾಲ್ಲೋಕಿನಲ್ಲಿ ಮುಕ್ಕಾಲುಪಾಲು ಜನರು ಕೂಲಿಮಾಡಿಕೊಂಡು ತಿನ್ನುವರಾದ್ದರಿಂದ ಸಂತೆಗಳಲ್ಲಿ ಮೇಲ್ಕಂಡ ಧಾರಣೆಗೂ ಕೂಡ ದವಸ ಸಿಕ್ಕದೆ, ಇವಕ್ಕೆ ಅಲೆಯುವದನ್ನು ಹೇಳತೀರದು. ಅನೇಕ ಸಂತೆಗಳಲ್ಲಿ ಜನರಿಗೆ ದವಸ ಸಾಲದೆ ಹೊಡೆದಾಟಗಳಾಗಿ ಬಲಾಢ್ಯರಿಗೆ ಸಿಕ್ಕಿಯೂ ಬಲಹೀನರಿಗೆ ಸಿಕ್ಕದೆಯೂ ಪಡುವ ತೊಂದರೆಯು ಅಪಾರವಾಗಿದೆ ಈ ಸಮಯದಲ್ಲಿ ತಾಲ್ಲೂಕ್ ಅಧಿಕಾರಿಗಳು ಅಲ್ಲಲ್ಲಿ ನಡಿಯುವ ಸಂತೆಗಳಿಗೆ ಹೋಗಿ ಈ ರೀತಿಯಾದ ಗಲಾಟೆಗೆ ಅಸ್ಪದವಾಗದಂತೆಯೂ ಈ ಕ್ಷಾಮಕಾಲದಲ್ಲಿ ದವಸಗಳನ್ನು ಹೆಚ್ಚು ಲಾಭಕ್ಕೆ ಮಾರದೆ ಸ್ವಲ್ಪ ಲಾಭದಿಂದ ಮಾರುವಂತೆ ವರ್ತಕರಿಗೆ ಹೇಳಿಯೂ, ಅಲ್ಲದೆ ಈ ಊರು ಮತ್ತು ಇನ್ನು ಅನುಕೂಲವಾದ ಸ್ಥಳಗಳಲ್ಲಿ ಸರ್ಕಾರದಿಂದ ಅಂಗಡಿಗಳನ್ನಿರಿಸಿ, ಬಡವರಿಗೆ ಕಾಲಕಾಲಕ್ಕೆ ದವಸ ಸಿಕ್ಕುವಂತೆ ಮಾಡುವದು ಉತ್ತಮವಾಗಿದೆ. ಈ ವಿಷಯದಲ್ಲಿ ನಮ್ಮ ಅಮಲ್ದಾರರು ಸರಿಪಡಿಸುವರೆಂದು ನಂಬಿದೇನೆ.

ಅಲ್ಲದೆ ಇಲ್ಲಿನ ನಮ್ಮ ಅಮಲ್ದಾರರು ಈಗೀಗ ಕೆಲವು ಸ್ಥಳಗಳಿಗೆ ಹೊರಟು ಶ್ರೀಮಂತರಾದ ಕಾಫಿ ಪ್ಲಾಂಟರುಗಳಿಂದಲೂ, ಅನುಕೂಲಸ್ಥರಿಂದಲೂ ಕ್ಷಾಮದ ಫಂಡಿಗಾಗಿ ಧನವನ್ನು ಶೇಖರಿಸುತ್ತಾ ಇರುವದು ತುಂಬಾ ಸ್ತೋತ್ರಾರ್ಹವೇ ಸರಿ. ಈ ಕಾಲದಲ್ಲಿ ಇಲ್ಲಿನ ಅನುಕೂಲಸ್ಥರಾದ ಜನರು ದಯಾಳುಗಳಾದ ನಮ್ಮ ಅಮಲ್ದಾರರು ಕೈಕೊಂಡಿರುವ ಧರ್ಮ ಕಾರ್ಯಕ್ಕೆ ರಕ್ತಾಂಶು ಸಾರ ಸಹಾಯ ಮಾಡಿ, ಕೀರ್ತಿ ಸಂಪಾದಿಸುವರೆಂದು ನೆನಸುತ್ತೇನೆ.

ಮೈಲ್ ತರಫಿನಲ್ಲಿ ಕ್ಷಾಮ ಪ್ರಾಪ್ತವಾದ ಕಡೆಗಳಿಂದ ದಿನೇ ದಿನೇ ತಂಡೋಪತಂಡವಾಗಿ ಜನರು ಇಲ್ಲಿನ ಕಾಫಿ ತೋಟಗಳಿಗೆ ಬರುತ್ತಾ ಇದಾರೆ. ಅನೇಕ ಸಂಸಾರಗಳು ಈ ರೀತಿಯಾಗಿ ಬಂದು ತೋಟಗಳಲ್ಲಿ ಕೆಲಸ ಮಾಡುತ್ತಾ ಇದಾರೆ. ಇವರು ಹೊಟ್ಟೆಗಿಲ್ಲದೆ ತುಂಬಾ ಅಶಕ್ತರಾಗಿರುವದರಿಂದ ಕೆಲಸ ಮಾಡಲು ಆಗದೆ ತೋಟಗಳಲ್ಲಿ ಮರಗಳ ಬಳಿಯಲ್ಲಿ ಬಳಲಿ ಸಂಕಟಪಡುತ್ತಿರುವದನ್ನು ನೋಡಿದರೆ ಎಂಥಾ ಕಲ್ಲೆದೆಯವರಿಗೂ ಮನ ಕರಗುವಂತಾಗುತ್ತೆ. ಈ ಕಾಲದಲ್ಲಿ ಕಾಫಿ ಪ್ಲಾಂಟರುಗಳು ಕನಿಕರಿಸಿ, ಬೈಲು ಶೀಮೆಯಿಂದ ಬಂದ ಜನರಿಗೆ ಕೂಡಲೆ ಕೆಲಸ ಕೊಡದೆ. ಕೆಲವು ದಿನಗಳ ವರೆಗೆ ಹೊಟ್ಟೆಗೆ ಕೊಟ್ಟು, ಸ್ವಲ್ಪ ಚೈತನ್ಯರಾದ ನಂತರ ಕೆಲಸಕ್ಕೆ ಬಿಡುವುದು ಒಳ್ಳೆಯದು.

ಈ ತಾಲ್ಲೋಕಿಗೆ ಸೇರಿದ ಮಾಕೋನಹಳ್ಳಿಯ ಮೆ॥ ಕಾಫಿಪ್ಲಾಂಟರ್ ಸಿದ್ದೇಗೌಡರು ಮತ್ತು ನಂದೀಪುರದ ಕಾಫಿಪ್ಲಾಂಟರ್ ಮೆ॥ ಕಟ್ಲಿಗೌಡರು ಸಹಾ ಆ ಪ್ರಾಂತ್ಯದ ಬಡ ಜನರಿಗೂ ಕ್ಷಾಮಪೀಡಿತರಾಗಿ ಬಯಲಸೀಮೆಯಿಂದ ಬಂದ ಜನರಿಗೂ ಕ್ಷಾಮದ ರಿಯಾಯಿತಿ ತೋರಿಸಿ, ಅನುಕೂಲವಾದ ಏರ್ಪಾಡುಗಳನ್ನು ಮಾಡುತ್ತಾ ಇದಾರೆ. ಇವರಂತೆ ಉಳಿದ ನಮ್ಮ ಶ್ರೀಮಂತರೂ ಈ ರೀತಿಯಾದ ಕಾರ್ಯದಲ್ಲಿ ಪ್ರವೇಶಿಸಿದರೆ ಹೊಟ್ಟೆಗಿಲ್ಲದೆ ಸಾಯುವ ಅನೇಕ ಸಂಸಾರಗಳು ಉಳಿಯುವವದರಲ್ಲಿ ಯಾವ ಸಂಶಯವೂ ಇಲ್ಲ.

ಈ ಊರಿನ ಆಸ್ಪತ್ರೆಯು ಭಾಗ್ಯವಂತರು ಬಡವರು ಎಂಬ ತಾರತಮ್ಯವುಳ್ಳದ್ದಾಗಿದೆ. ಅನೇಕ ಬಡ ಜನರಿಗೆ ತಕ್ಕ ಸಮಯಕ್ಕೆ ಔಷಧಗಳು ಸಿಕ್ಕದೆ ಪೇಚಾಡುವದು ಬಹಳವಾಗಿದೆ. ದೃಷ್ಟಾಂತವಾಗಿ ಈಗ್ಗೆ ೫-೬ ದಿನಗಳಲ್ಲಿ ಇದೇ ತಾಲ್ಲೂಕಿಗೆ ಸೇರಿದ ಒಂದು ಕಾಫಿ ತೋಟದಿಂದ ನಿರ್ಗತಿಕರಾದ ಇಬ್ಬರು ಘಟ್ಟದ ಆಳುಗಳು ತುಂಬಾ ಬಾಯಿಬೇದಿಯುಳ್ಳವರಾಗಿ, ತಮ್ಮ ಕಡೆಯ ರೈಟರೊಡನೆ ಇಲ್ಲಿನ ಆಸ್ಪತ್ರೆಗೆ ಬರಲು ಇಲ್ಲಿನ ಅಧಿಕಾರಿಗಳು ಒಬ್ಬನಿಗೆ ಈಗ ಆಗಲಾರದು, ಇನ್ನು ೫-೬ ದಿನ ಬಿಟ್ಟು ಬಾ ಎಂಬ ಉಪಚಾರವನ್ನೂ, ಮಗದೊಬ್ಬನಿಗೆ ಊದಾಶೀನಕ್ಕೆ ಉಪೇಕ್ಷೆಯೇ ಮದ್ದು ಎಂಬುವನ್ನೂ ಪ್ರಯೋಗಿಸಿದ್ದರಿಂದ ಅಲ್ಲಿಂದ ತನ್ನ ಸ್ಥಳಕ್ಕೆ ಬಂದ ಸ್ವಲ್ಪ ಹೊತ್ತಿನಲ್ಲೇ ಮೃತ್ಯುವಿನ ಬಳಿಗೆ ಔಷಧಿ ತರಲು ಹೋದರೆಂದು ತಿಳಿಸಲು ತುಂಬಾ ವ್ಯಸನಪಡುತ್ತೇನೆ ಸರ್ಕಾರದವರು ಮುಖ್ಯವಾಗಿ ಬಡವರಿಗೂ ಭಾಗ್ಯವಂತರಿಗೂ ಒಂದೇ ರೀತಿಯಾದ ಉಪಚಾರ ಸಿಕ್ಕಲೆಂಬ ಉದ್ದೇಶದಿಂದ ಅಲ್ಲಲ್ಲಿ ಆಸ್ಪತ್ರೆಗಳನ್ನು ಏರ್ಪಡಿಸಿದಾರೆಯೇ ಹೊರ್ತು ತಾರತಮ್ಯವರಿತು ಉಪಚಾರ ಸಿಕ್ಕಲೆಂದಲ್ಲ. ಈ ವಿಷಯವನ್ನು ಈ ಇಲಾಖಾ ಮೇಲ್ಪಟ್ಟ ಅಧಿಕಾರಿಗಳು ಕ್ರಮಪಡಿಸ್ಯಾರೆಂದು ನಂಬಿದೇನೆ.

ಪ್ರಜಾ ಹಿತಚಿಂತಕ.

ವಿದೇಶ ವರ್ತಮಾನಗಳು.

ಹಾಂಡ್ಸ್ಯಾರಾಸ್ ಎಂಬ ಇಂಗ್ಲೀಷ್ ಸ್ವಾಸ್ಥ್ಯಕ್ಕೆ ಹೋಗಿ ನೆಲಸಿರುವಂಥಾ ಹಿಂದುಸ್ಥಾನದ ಪ್ರಜೆಗಳು ನಿರ್ಗತಿಕರಾಗಿಲ್ಲವೆಂತಲೂ, ಅವರೆಲ್ಲಾ ಪುಣ್ಯವಂತರಾಗಿಯೂ ಗೌರವಸ್ಥರಾಗಿಯೂ ಇರುತ್ತಾರಾದ್ದರಿಂದ ಅವರನ್ನು ಅಲ್ಲಿಂದ ಹೊರಡಿಸಲಾರೆವೆಂತಲೂ ಅಲ್ಲಿನ ಗವರ್ನರವರು ತಿಳಿಸಿದಾರೆ.

ಅಮೇರಿಕಕ್ಕೆ ಸೇರಿದ ಆರ್ಕನ್‌ಸಾಸ್ ಡಿಸ್ಟ್ರಿಕ್ಟಿನಲ್ಲಿ ಒಂದೇ ದಿನ ಎರಡಾವರ್ತಿ ಪ್ರವಾಹಗಳು ಬಂದು ಕೆಲವು ಪಟ್ಟಣ ಊರು ಗ್ರಾಮಗಳನ್ನು ಕೊಚ್ಚಿ ಬಿಟ್ಟವೆಂದೂ, ಅಪಾರವಾದ ಆಸ್ತಿಪಾಸ್ತಿಗಳೂ ಮನೆ ಮಠಗಳೂ ನಾಶವಾದದ್ದಲ್ಲದೆ ೩೦ ಜನರು ಮೃತಪಟ್ಟರೆಂದೂ, ಅನೇಕ ಪ್ರಜೆಗಳು ಏನಾದರೆಂಬುದು ಗೊತ್ತಾಗಲಿಲ್ಲವೆಂದೂ ತಂತೀವರ್ತಮಾನ ಬಂದಿದೆ.

ಅಮೇರಿಕಕ್ಕೆ ಸೇರಿದ ಕ್ಲೀವ್‌ಲೆಂಡ್ ಪಟ್ಟಣದ ಕೋಟ್ಯಾಧೀಶ್ವರನಾಗಿದ್ದ ಮಿ॥ ಟಾಂ ಎಲ್. ಜಾನ್‌ಸನ್ ಎಂಬಾತನು ಪಟ್ಟಣದಲ್ಲಿ ಪ್ರಜೆಗಳ ಆರೋಗ್ಯ ವಿಚಾರಕಗಳಾದ ಮ್ಯುನಿಸಿಪಲ್ ಕಾರ್ಯಗಳಿಗೆ ತನ್ನ ಆಸ್ತಿಯನ್ನೆಲ್ಲಾ ವಿಚ್ಛೇದ ಮಾಡುತ್ತಾ ಬಂದು ಈಗ ನಿರ್ಗತಿಕನಾಗಿರುತ್ತೇನೆಂಬದಾಗಿ ತಿಳಿಸುತ್ತಾನೆ. ಈತನಲ್ಲಿರುವ ಸಹೋದರ ವಾತ್ಸಲ್ಯವನ್ನೂ ಧರ್ಮಬುದ್ಧಿಯನ್ನೂ ಎಲ್ಲರೂ ಕೊಂಡಾಡುತ್ತಿರುವರು.

ಅಮೇರಿಕದಲ್ಲಿ ಲೋಕಪ್ರಖ್ಯಾತವಾದ ನಯಾಗರಾ ಎಂಬ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ, ೨೯೩ ಮೈಲಿ ದೂರ ತಂತಿಗಳ ಮೇಲೆ ಪಶ್ಚಿಮ ಓಂಟೇರಿಯೊ ಶೀಮೆಯಲ್ಲಿ ಪಟ್ಟಣಗಳಿಗೆ ಸಾಗಿಸಿಕೊಂಡು ಹೋಗಿ, ದೀಪಹಚ್ಚುವದು, ಯಂತ್ರಗಳನ್ನು ನಡಿಸುವದು, ಕಾರ್ಖಾನೆಗಳನ್ನು ಏರ್ಪಡಿ

ಸುವುದು, ಕೈಗಾರಿಕೆಗಳನ್ನು ಹೆಚ್ಚಿಸುವುದು, ಈ ಮೊದಲಾದ ಕಾರ್ಯಗಳಿಗೆ ವಿನಿಯೋಗಿಸಿಕೊಳ್ಳುವವರಾಗಿದಾರೆ ಈ ರೀತಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ ಸಾಗಿಸಿಕೊಂಡು ಹೋಗುವುದಕ್ಕೆ ೫೦ ಲಕ್ಷ ರೂಪಾಯಿ ಖರ್ಚಾದೀತೆಂದು ಅಂದಾಜಾಗಿದೆ.

ಜರ್ಮನಿ ರಾಜ್ಯದವರು ಮುಂದಿನ ವರುಷ ತಮ್ಮ ಹಡಗಿನ ಸೈನ್ಯವನ್ನು ಅಭಿವೃದ್ಧಿಗೆ ತರುವುದಕ್ಕೆ ೨೦ ಕೋಟಿ ರೂಪಾಯಿ ವಿನಿಯೋಗಿಸುವವರಾಗಿದಾರೆ, ಅಂದರೆ, ಹೋದ ವರುಷ ಇದಕ್ಕೆ ಖರ್ಚುಮಾಡಿದ್ದಕ್ಕಿಂತ ನಾಲ್ಕೂವರೆ ಕೋಟಿ ರೂಪಾಯಿ ಹೆಚ್ಚಾಗಿ ವಿನಿಯೋಗಿಸುವರೆಂದು ತಿಳಿದು ಬಂದಿದೆ

ತುರ್ಕಿ ರಾಜ್ಯದ ರಾಜಧಾನಿಯಲ್ಲಿ ಸ್ತ್ರೀಯರಿಗೆ ಒಂದು ವಿದ್ಯಾಶಾಲೆ ಇದೆ. ನೂರಾರುಮಂದಿ ಮುಸಲ್ಮಾನ್ ಸ್ತ್ರೀಯರು ಇಲ್ಲಿ ಓದಿ ವಿದ್ಯಾವತಿಯರಾಗುತ್ತಿದಾರೆ ಈಚೆಗೆ ಅವರಲ್ಲಿ ಜನಾನಾ ಎಂಬ ಪದ್ಧತಿಯು ತಪ್ಪಿ ಹೋಗುತ್ತಲೂ, ಸ್ತ್ರೀ ಸಂಘಗಳು ಏರ್ಪಡುತ್ತಲೂ, ವಿದ್ಯಾವತಿಯರು ಬಹಿರಂಗದಲ್ಲಿ ಉಪನ್ಯಾಸಗಳನ್ನು ಮಾಡುತ್ತಲೂ ಬಂದಿದಾರೆಂದು ಪ್ರಕಟವಾಗಿದೆ.

ಕಳೆದ ಗುರುವಾರ ತುರ್ಕಿ ಸುಲ್ತಾನರವರಾದ ಅಬ್ದುಲ್ ಹಾಮಿದ್ ಪಾದಷಾ ಯವರು ತಮ್ಮ ರಾಜಧಾನಿಯಲ್ಲಿ ಪಾರ್ಲಿಮೆಂಟ್ ಸಭೆಮನೆಗಳನ್ನು ಪ್ರಾರಂಭಮಾಡಿದರು ಪ್ರಜಾಸಮ್ಮತವಾಗಿ ರಾಜ್ಯಭಾರವನ್ನು ನಡಿಸುತ್ತೇವೆಂದು ಅವರು ಒಪ್ಪಿ ಆ ರೀತಿ ಏರ್ಪಾಡು ಮಾಡಿದ್ದನ್ನು ನೋಡಿ ಪ್ರಪಂಚದ ಎಲ್ಲಾ ರಾಜ್ಯಗಳ ಅಧಿಪತಿಗಳೂ ಆ ದಿನ ಸುಲ್ತಾನರವರಿಗೆ ಸಂತೋಷಸೂಚಕವಾದ ತಂತೀ ವರ್ತಮಾನಗಳನ್ನು ಕಳುಹಿಸಿರುತ್ತಾರೆ. ವಿಲಾಯತಿ ಪಾರ್ಲಿಮೆಂಟಿನ ನೂರಾರು ಮಂದಿ ಮೆಂಬರುಗಳು ತಮ್ಮ ಸಂತೋಷವನ್ನು ಒಂದು ಪತ್ರಿಕೆಯಲ್ಲಿ ಬರೆದು, ಎಲ್ಲರೂ ರುಜುಮಾಡಿ ಸುಲ್ತಾನರವರಿಗೆ ರವಾನೆ ಮಾಡಿದರು. ತುರ್ಕಿ ರಾಜ್ಯದಲ್ಲಿ ಹೀಗೆ ರಾಜ್ಯಭಾರ ಕ್ರಮವು ಬದಲಾವಣೆಯಾದದ್ದಕ್ಕೆ ಪ್ರಜೆಗಳು ಆನಂದಭರಿತರಾಗಿ ಆ ದಿನ ಸುಲ್ತಾನರವರ ಹೆಸರೆತ್ತಿ ಜಯಘೋಷ ಮಾಡಿಕೊಂಡಾಡಿದರು

ಬ್ರಿಟಿಷ್ ಕೊಲಂಬಿಯಾ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೆ ಸೇರಿದ ವಾಂಕೂವರ್ ಪಟ್ಟಣದಲ್ಲಿ ಹಿಂದುಸ್ಥಾನದ ಪ್ರಜೆಗಳು ಕೆಲವರು ಹೋಗಿ ನೆಲಸಿರುತ್ತಾರೆ ಇವರಲ್ಲಿ ಪ್ರೊಫೆಸರ್ ತೇಜಸಿಂಗ್ ಎಂಬಾತನು ಹಿಂದಿನ ಸೋಮವಾರ ಒಂದು ಸಭೆಯನ್ನು ನಡಿಸಿ ಅವರಿಗೆ ಒಂದು ಉಪನ್ಯಾಸಮಾಡುತ್ತಾ— ಇಂಡಿಯಾ ದೇಶದಲ್ಲಿ ಇಂಗ್ಲಿಷ್ ಗವರ್ನ್‌ಮೆಂಟಿನವರು ಪ್ರಜೆಗಳಿಗೆ ಧರ್ಮಶಾಸ್ತ್ರ ಹಕ್ಕು ಬಾಧ್ಯತೆಗಳನ್ನು ಕೊಡದೆ ಹೋದರೆ ಅವರ ಮಧ್ಯೆ ಒಬ್ಬ ಮುಖಂಡನು ಎದ್ದು ಯುದ್ಧ ಕಾರ್ಯಗಳನ್ನು ನಡಿಸುವನು. ಹಿಂದುಸ್ಥಾನದಲ್ಲಿ ಈಚೆಗೆ ಬೀಳು ಅಧಿಕಾರಿಗಳು ಪ್ರಜೆಗಳ ಇಂಗಿತಗಳನ್ನು ತಿಳಿಯಲಾರದವರಾಗಿದಾರೆ. ಇವರ ಸ್ವೇಚ್ಛಾಕೃತ್ಯಗಳು ಸಹಿಸಕೂಡದಂತಾಗಿವೆ. ಸಿಕ್ ಸೈನಿಕರು ಈ ಸಂಗತಿಯನ್ನು ಈಗೀಗ ತಿಳಿಯುತ್ತಿರುವರು. ಹಿಂದುಸ್ಥಾನದವರೆಲ್ಲಾ ತಮಗೆ ಸ್ವಾಯುದೊರಕಬೇಕೆಂದು ಕೇಳುತ್ತಿದಾರೆ ಎಂಬ ರೀತಿಯಾಗಿ ಹೇಳಿದರು

ಚೀನಾ ರಾಜ್ಯದಲ್ಲಿ ಚಕ್ರವರ್ತಿಯವರೂ ಮಹಾ ಮಾತೃಶ್ರೀಯವರೂ ಏಕಕಾಲದಲ್ಲಿ ಕಾಲವಾದರಷ್ಟೆ. ಆ ಚಕ್ರಾಧಿಪತ್ಯವು ೪೦ ಕೋಟಿ ಪ್ರಜಾಸಂಖ್ಯೆಯನ್ನುಳ್ಳದ್ದು ಅಲ್ಲಿ ಪೂರ್ವಕಾಲದ ಪದ್ಧತಿಗಳೂ ಆಚಾರ ವ್ಯವಹಾರಗಳೂ ಬಹು ಕಠಿಣತರವಾಗಿ ಆಚರಣೆಯಲ್ಲಿದ್ದರೂ ಈಗಿನ ಗವರ್ನ್‌ಮೆಂಟಿನವರೂ ಪ್ರಜೆಗಳೂ ಈಗಿನ ಕಾಲಕ್ಕೆ ತಕ್ಕಂತೆ ಎಲ್ಲಾ ಭಾಗಗಳಲ್ಲೂ ಅಭಿವೃದ್ಧಿಗೆ ಬರಬೇಕೆಂಬ ಅಭಿಪ್ರಾಯವುಳ್ಳವರಾಗಿರುತ್ತಾರೆ. ಪಶ್ಚಿಮ ರಾಜ್ಯಗಳಲ್ಲಿರುವಂಥಾ ರಾಜ್ಯಭಾರದ ಏರ್ಪಾಡುಗಳನ್ನು ಚೀನದಲ್ಲೂ ಸ್ಥಾಪಿಸಬೇಕೆಂದು ಸಾಹಸಪಡಲಾರಂಭಿಸಿದಾರೆ ಇನ್ನು ೮ ವರುಷಗಳೊಳಗೆ ಅಲ್ಲಿಯೂ ಪಾರ್ಲಿಮೆಂಟ್ ಸಭೆಮನೆಗಳನ್ನು ಏರ್ಪಡಿಸಿ ಪ್ರಜಾಸಮ್ಮತವಾಗಿ ರಾಜ್ಯಭಾರವನ್ನು ನಡಿಸಬೇಕೆಂದೂ ಅಷ್ಟರೊಳಗೆ ಅದಕ್ಕೆ ಬೇಕಾದ ಈಗಿನಿಂದಲೂ ಅನುಕೂಲದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದು ಕೃತಸಂಕಲ್ಪರಾಗಿರುವರು. ಈಗ ಪಟ್ಟಾಭಿಷಿಕ್ತರಾಗಿರುವ ಪ್ಯೂ ವಾಂಟಂಗ್ ಎಂಬ ಚಕ್ರವರ್ತಿಯವರಿಗೆ ವಯಸ್ಸು ಬಹಳ ಸ್ವಲ್ಪ ೬ ವರ್ಷ, ಅವರು ೧೮ನೇ ವಯಸ್ಸಿನವರಾಗುವ ತನಕ ಅವರ ತಂದೆ ಪ್ರಿನ್ಸ್ ಚುನ್ ಎಂಬುವವರು ರೀಜೆಂಟರಾಗಿ ರಾಜ್ಯಭಾರವನ್ನು ನಡಿಸತಕ್ಕವರೆಂದು ಗೊತ್ತಾಗಿರುವುದು ಈ ರೀಜೆಂಟರಾದವರೂ ಪರರಾಜ್ಯಗಳ ರಾಜ್ಯಭಾರಕ್ರಮಗಳನ್ನು ತಿಳಿದವರಾಗಿಯೂ, ರಾಯಭಾರಿಗಳ ಕೂಡ ಕಲೆತು ಅವರ ಅಭಿಪ್ರಾಯಗಳನ್ನು ಗ್ರಹಿಸತಕ್ಕವರಾಗಿಯೂ, ಚೀನಾ ರಾಜ್ಯವನ್ನು ಕಾಲಾನುಗುಣ್ಯವಾಗಿ ಅಭಿವೃದ್ಧಿಗೆ ತರಬೇಕೆಂಬ ಉತ್ಸಾಹವುಳ್ಳವರಾಗಿಯೂ ಇರುತ್ತಾರೆ ಚಕ್ರವರ್ತಿಯವರಿಗೆ ಪಟ್ಟಾಭಿಷೇಕವೂ ಪ್ರಿನ್ಸ್ ಚುನ್ ಯವರಿಗೆ ರೀಜೆಂಟ್ ಪದವಿಯ ನೇಮಕವೂ ನಡೆದ ಉತ್ಸವಕಾಲದಲ್ಲಿ ಇವರು ಪರರಾಜ್ಯಗಳ ರಾಯಭಾರಿಗಳನ್ನು ದರ್ಬಾರಿಗೆ ಕರೆಸಿಕೊಂಡು ಅವುಗಳಲ್ಲಾ ಮೇಲ್ಕಂಡ ತಮ್ಮ ಅಭಿಪ್ರಾಯ ಉದ್ದೇಶಗಳನ್ನು ತಿಳಿಸಿದಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಮುಂದಿನ ಸೋಮವಾರ ಮದರಾಸಿನಲ್ಲಿ ಪ್ರಾರಂಭವಾಗುವ ರಾಷ್ಟ್ರೀಯ ಸಭೆಗೆ ಬಂಗಾಳದಿಂದ ನೂರು ಜನ ಪ್ರತಿನಿಧಿಗಳು ಬರುವವರಾಗಿದಾರೆ.

ಬ್ರಿಟಿಷ್ ಅಧಿಪತ್ಯಕ್ಕೆ ಸೇರಿದ ಬಾರಕ್‌ಪುರದಲ್ಲಿ ಮಹಾರಾಜಾ ಪ್ರದ್ಯೋತ ಕುಮಾರ ಟಾಗೂರ್‌ಯವರ ದೇವಸ್ಥಾನಕ್ಕೆ ಕಳ್ಳರು ಬಿದ್ದು ಅನೇಕ ನಗಗಳನ್ನು ಅಪಹರಿಸಿಕೊಂಡು ಹೋದರು.

ಅಫ್ಘಾನಿಸ್ಥಾನದಲ್ಲಿ ಅಮೀರರು ಊರಿಂದೂರಿಗೆ ಸಮಾಚಾರಗಳು ಬೇಗ ತಿಳಿಯುವಂತೆ ಟೆಲಿಫೋನ್ ತಂತಿಗಳನ್ನು ಹಾಕಿಸುತ್ತಿದಾರೆ ಜಲಾಲಾಬಾದಿನಿಂದ ಹೀರತ್ತಿಗೆ ತಂತಿ ಹಾಕಿದ್ದಾಯಿತು

ನಾಗಪುರದ ಸೆಷನ್ಸ್ ಜಡ್ಜಿಯು ಅಚ್ಯುತ ಕೊಲ್ಹಟ್ಕರ್ ಎಂಬ ವಕೀಲನನ್ನು ರಾಜದ್ರೋಹವಾಡಿದನೆಂಬ ಅಪರಾಧಕ್ಕೆ ಗುರಿಮಾಡಿ, ಆತನಿಗೆ ಎರಡೂವರೆ ವರುಷ ಕಠಿಣಸಜಾ ವಿಧಿಸಿದರು

ಬೀಹಾರ್ ಪ್ರಾಂತ್ಯದಲ್ಲಿ ಪ್ರಜೆಗಳು ಈಗ ಕಷ್ಟಪಡುತ್ತಿದಾರೆಂತಲೂ, ಪೈರು ಬಹುಮಟ್ಟಿಗೆ ಕೆಟ್ಟುಹೋಗಿರೋಣದರಿಂದ ಮುಂದೆ ಅಲ್ಲಿ ಕ್ಷಾಮಬಾಧೆಯುಂಟಾಗಬಹುದೆಂತಲೂ ತಿಳಿದು ಬಂದಿದೆ.

ಹೆಜ್ಜಾಸ್ ರೈಲ್ವೆ ಫಂಡಿಗೆ ಹಿಂದುಸ್ಥಾನದ ಮಹಮ್ಮದೀಯ ಪ್ರಜೆಗಳಿಂದಲೂ ನವಾಬರುಗಳಿಂದಲೂ ಲಾಹೋರಿನ - ವತನ್ - ಎಂಬ ಪತ್ರಿಕೆಯ ಎಡಿಟರು ೮೭,೦೦೦ ರೂಪಾಯಿ ಚಂದಾ ಕೂಡಿಸಿ ಕಳುಹಿಸಿರುತ್ತಾರೆ

ಕಲ್ಕತ್ತೆಯಲ್ಲಿ ಒಬ್ಬ ಕಾಬೂಲಿ ಮುಸಲ್ಮಾನರವನು ಒಬ್ಬನಿಗೆ ಸಾಲವನ್ನು ಕೊಟ್ಟಿದ್ದ ಹಾಗೂ, ಅದನ್ನು ವಸೂಲ್ಮಾಡುವುದಕ್ಕೆ ಬಲಾತ್ಕಾರಪಡಿಸಿದ ಹಾಗೂ, ಜನರ ಮಧ್ಯೆ ಎರಡು ಕಕ್ಷಿಗಳಾಗಿ ಹೊಡೆದಾಟವಾದ ಹಾಗೂ ಪೋಲೀಸಿಗೆ ತಿಳಿಯಿತು. ಅವರು ೧೨ ಮಂದಿ ಕಾಬೂಲಿನವರನ್ನು ದಸ್ತಗಿರಿಮಾಡಿದಾರೆ.

ವಾಯುವ್ಯ ಪ್ರಾಂತ್ಯದ ಎಬ್ಬೆಟಬ್ಬಿನ ಬಳಿ ಮತ್ತೆ ಕೆಲವು ಕಳ್ಳತನ, ದರೋಡೆ, ಕೊಲೆ, ಇತ್ಯಾದಿ ಅಕೃತ್ಯಗಳು ನಡಿಯಲಾರಂಭವಾಗಿರುತ್ತವೆ ಆ ಪ್ರಾಂತ್ಯದಲ್ಲಿರುವ ಮಹಮ್ಮದೀಯ ವಂಶೀಕರು ಈ ಗಲಭೆಗೆ ಕಾರಣರಾಗಿರುತ್ತಾರೆಂದು ತಿಳಿದು ಬಂದದ್ದರಿಂದ ಸರ್ಕಾರದವರು ಅವರ ಹಾವಳಿಯನ್ನು ಅಡಗಿಸುವುದಕ್ಕೆ ಸನ್ನಾಹ ಮಾಡುತ್ತಿದಾರೆ.

ಮದರಾಸ್ ಪಟ್ಟಣದಲ್ಲಿ ದಿವಾಳಿಯಾದ ಆರ್ಬತ್ನಾಟ್ ಕಂಪನಿಯ ಮುಖಂಡರಾಗಿದ್ದ ಸರ್ ಜಾರ್ಜ್ ಆರ್ಬತ್ನಾಟ್‌ಯವರಿಗೆ ಅವರು ಬ್ಯಾಂಕಿನ ಹಣವನ್ನು ದುರುಪಯೋಗಪಡಿಸಿದರೆಂದು ಸಜಾ ಶಿಕ್ಷೆಯಾಗಿ ಅಲ್ಲಿನ ಜೈಲಿನಲ್ಲಿದ್ದರಷ್ಟೆ ಶಿಕ್ಷೆಯು ನಾಯಿದೆ ಕಳೆದದ್ದರಿಂದ ಅವರನ್ನು ಕಳೆದ ಸೋಮವಾರ ಬೆಳಗ್ಗೆ ಜೈಲಿನಿಂದ ಬಿಡುಗಡೆಮಾಡಿದರು.

ಬೊಂಬಾಯಿ ಪಟ್ಟಣದಲ್ಲಿ ಕಳೆದ ವಾರ ಒಂದು ಮಹಾಸಭೆ ನಡಿಯಿತು ಎಲ್ಲಾ ಕೋಮುಗಳ ಮುಖಂಡರೂ ಹಾಜರಾಗಿ ಗವರ್ನರವರ ಪತ್ನೀಯವರು ಕಾಲವಾದದ್ದಕ್ಕೆ ತುಂಬಾ ವಿಷಾದಪಟ್ಟು. ಆಕೆಯವರ ಹೆಸರನ್ನು ಶಾಶ್ವತಪಡಿಸಬೇಕೆಂದು ತೀರ್ಮಾನಮಾಡಿ, ಚಂದಾ ಕೂಡಿಸಲಾರಂಭಿಸಿದರು ಇದುವರೆಗೆ ಈ ಫಂಡಿಗೆ ೩೦ ಸಾವಿರ ರೂಪಾಯಿ ಕೂಡಿದೆ.

ಟುಟಿಕೊರಿನ್ ಪಟ್ಟಣದಲ್ಲಿ ದಸ್ತಗಿರಿ ಮಾಡಲ್ಪಟ್ಟು ಕಲ್ಕತ್ತೆಗೆ ಕರೆದುಕೊಂಡು ಹೋಗಿ ಬಂದೀಖಾನೆಯಲ್ಲಿಟ್ಟುಕೊಂಡಿದ್ದ ಹೂಡವರು ಬಂಗಾಳಿಗಳನ್ನು ಅವರ ಮೇಲೆ ಯಾವ ಅಪರಾಧವೂ ಹೊರುವುದಿಲ್ಲವೆಂದು ಗೊತ್ತಾದಕಾರಣ ವಾಪಸು ಕಲ್ಕತ್ತೆಯಿಂದ ಪೋಲೀಸಿನವರು ಮದರಾಸ್ ಮೂಲಕ ಟುಟಿಕೊರಿನ್ ಪಟ್ಟಣಕ್ಕೆ ಕರೆದುಕೊಂಡು ಬಂದು ಅಲ್ಲಿ ಸ್ವಾಸ್ಥ್ಯ ಬಿಡುಗಡೆ ಮಾಡಿದರೆಂದು ತಂತೀ ವರ್ತಮಾನ ಬಂದಿದೆ

ಜೈನ ಯೌವನಸ್ಥರ ಹತ್ತನೇ ಮಹಾ ಸಭೆಯು ಈ ವರುಷ ಸೂರತ್ ನಗರದಲ್ಲಿ ಈ ತಿಂಗಳು ೨೬, ೨೭, ೨೮ನೇ ತಾರೀಖುಗಳಲ್ಲಿ ನಡಿಯುವುದು ಜೈನರಲ್ಲಿರುವ ಮೂರು ಪಂಗಡಗಳನ್ನೂ ಒಂದಾಗಿ ಮಾಡಿ, ಜೈನಮತ ತತ್ವಗಳನ್ನು ಜನರಿಗೆ ಸಾರುವುದಕ್ಕೂ ಆ ಜನರಲ್ಲಿರುವ ಭಿನ್ನಭೇದಗಳನ್ನೆಲ್ಲಾ ನಿರ್ಮೂಲ ಮಾಡುವುದಕ್ಕೂ ಈ ಸಭೆಯು ಏರ್ಪಾಡಾಗಿ, ಹತ್ತು ವರುಷಗಳಿಂದ ಕಾರ್ಯಗಳನ್ನು ನಡಿಸುತ್ತಾ ಬಂದಿರುತ್ತದೆ

ಕಲ್ಕತ್ತಾ ಪಟ್ಟಣದ ಪ್ರತಿ ಒಂದು ಪ್ರೆಸ್ಸುಗಳ ಆಫೀಸಲ್ಲೂ ಅಚ್ಚುಹಾಕಲ್ಪಡುವ ಸಮಸ್ತವಿಧವಾದ ಪುಸ್ತಕ, ನೋಟೀಸುಗಳ ಮೇಲೂ ಆ ಪ್ರೆಸ್ಸಿನ ಹೆಸರುಗಳನ್ನು ಹಾಕಬೇಕೆಂತಲೂ, ಇಲ್ಲದಿದ್ದರೆ ೫೦೦ ರೂಪಾಯಿ ಜುಲ್ಮಾನೆಯಾಗುವುದೆಂತಲೂ ಹಾಗೆ ಪ್ರಕಟಿಸಿ ಆ ಪತ್ರಗಳನ್ನೆಲ್ಲಾ ಸರ್ಕಾರದವರಿಗೆ [illegible]ರ್ ಮಾಡಬೇಕೆಂತಲೂ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಇಸ್ತಿಹಾರು ಹಾಕಿರುತ್ತಾರೆ

ಫ್ರಾಂಜ ಸೆಪ್ಟೆಂಬರ ಥೂಂಗರಾ ಎಂಬ ದೊಡ್ಡ ಕಂಪನಿಯು ಬಹು ಕಾಲದಿಂದ ಬೊಂಬಾಯಿನಲ್ಲೂ ಮದರಾಸಿನಲ್ಲೂ ಶಾಪುಗಳನ್ನಿಟ್ಟು, ನಾನಾ ಪದಾರ್ಥಗಳನ್ನಿಟ್ಟು ವಿಕರಿ ಮಾಡುತ್ತಿತ್ತು ಈ ಕಂಪನಿಯು ಕಳೆದ ವಾರ ಬೊಂಬಾಯಿನಲ್ಲಿ ದಿವಾಳಿಯಾಯಿತು ಮದರಾಸಿನಲ್ಲಿದ್ದ ಅದರ ಶಾಪಿಯನ್ನೂ ಮುಚ್ಚಿ ಬಿಟ್ಟರು. ಸರ್ಕಾರದವರು ಆ ಅಂಗಡಿಗಳನ್ನು ತಮ್ಮ ಅಧಿಕಾರಕ್ಕೊಳಪಡಿಸಿಕೊಂಡು, ಲೆಕ್ಕಪತ್ರಗಳನ್ನು ತನಿಖೆ ಮಾಡುತ್ತಿದಾರೆ

ಲಕ್ನೋ ಪಟ್ಟಣದಲ್ಲಿ ಕೆಲವು ಕಾಲದಿಂದ ಮಹಮ್ಮದೀಯರಲ್ಲಿ ಷಿಯಾ, ಸುನ್ನಿ ಪಂಗಡಗಳಿಗೆ ಪರಸ್ಪರ ಮನಸ್ತಾಪ ಜಗಳ ಕದನಗಳುಂಟಾಗಿ ಪ್ರಜಾಶಾಂತಿಗೂ ಭಂಗ ಬರುವಂತಿತ್ತು ಇದನ್ನು ನೋಡಿ ಲೆಫ್ಟಿನೆಂಟ್ ಗವರ್ನರಾದ ಸರ್ ಜಾನ್ ಹೂಯೆಟ್‌ಯವರು ಎರಡು ಪಂಗಡಗಳ ಮುಖಂಡರನ್ನೂ ಕರೆಸಿಕೊಂಡು, ಅವರ ವೈಷಮ್ಯಕ್ಕೆ ಕಾರಣಗಳನ್ನು ವಿಚಾರಿಸುತ್ತಿದಾರೆ ಇವರ ಮಧ್ಯಸ್ಥಿಕೆಯಿಂದ ಈ ವೈರ ವಿರೋಧಗಳು ಕಳೆದು ಹೋಗುವವೆಂದು ನಂಬಿಕೆ ಹುಟ್ಟಿದೆ

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಭಿಂಗಾ ಸಂಸ್ಥಾನದ ರಾಜಾ ಉದಯಪ್ರತಾಪಸಿಂಹರವರು ಮಸ್ನೊಂದು ಲಕ್ಷ ರೂಪಾಯಿಯನ್ನು ಧರ್ಮಾರ್ಥವಾಗಿ ಸರ್ಕಾರದವರಿಗೆ ಕೊಟ್ಟು, ಈ ಹಣದಿಂದ ಕಾಶೀ ಪಟ್ಟಣದಲ್ಲಿ ಕ್ಷತ್ರಿಯರಿಗೆ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸಿ ನಡಿಸಬೇಕೆಂತಲೂ, ಅದರಲ್ಲಿ ವಿದ್ಯಾರ್ಥಿಗಳಿಗೆ ರಾಜಭಕ್ತಿ ಲಕ್ಷಣಗಳನ್ನೂ ಒಂದು ಪಾಠವಾಗಿಟ್ಟು ಅದರಲ್ಲೂ ಚನ್ನಾಗಿ ತರಪೇತು ಮಾಡಬೇಕೆಂತಲೂ ತಿಳಿಸಿರುತ್ತಾರೆ. ಇವರ ದರ್ಮ ಬುದ್ಧಿಯು ಸ್ತೋತ್ರಾರ್ಹವಾದದ್ದು

ರಂಗೂನ್ ಪಟ್ಟಣದ ಜೈಲಿನಲ್ಲಿ ಇಬ್ಬರು ಅಧಿಕಾರಿಗಳು ಖೈದಿಗಳನ್ನು ಪರೀಕ್ಷೆಮಾಡುತ್ತಿದ್ದಾಗ ಒಬ್ಬ ಖೈದಿಯು ಕೈಯಲ್ಲಿ ಇಟ್ಟಿದ್ದ ಸಲಾಕಿ ಇದುದನ್ನು ನೋಡಿ ಅದೇಕೆಂದು ಪ್ರಶ್ನೆಮಾಡಿದರು. ಆ ಖೈದಿಯು ಒಂದು ಚೂರಿಯಿಂದ ಒಬ್ಬ ಅಧಿಕಾರಿಯನ್ನು ತಿವಿದು ಗಾಯ ಮಾಡಿದನು, ಜೈಲಿನ ಅಧಿಕಾರಿಯ ಕೋಪವನ್ನು ಕತ್ತರಿಸಿದನು ಮೊದಲನೇ ಅಧಿಕಾರಿಯ ಗಾಯಗಳು ಬಹಳ ಕಠಿಣವಾಗಿರುತ್ತವೆಂದೂ, ಆ ಖೈದಿಯನ್ನು ಹಿಡಿದು ಲಾಕಪ್ಪಿನಲ್ಲಿ ಹಾಕಿರುತ್ತಾರೆಂದೂ ತಿಳಿದುಬಂದಿದೆ

ಕೆಲವು ಮಹಮ್ಮದೀಯ ಪತ್ರಿಕೆಗಳಲ್ಲಿ ಹಿಂದುಗಳ ಮೇಲೆ ದ್ವೇಷಾಸೂಯೆಗಳನ್ನು ಹೊರಪಡಿಸಿ ವ್ಯಾಕುಲವನ್ನುಂಟುಮಾಡುವಂಥಾ ವಾರ್ತೆಗಳನ್ನು ಬರೆಯುತ್ತಾರೆಂತಲೂ, ಅಂಥಾ ಪತ್ರಿಕೆಗಳ ಮೇಲೆ ಸರ್ಕಾರದವರು ಮೊಕದ್ದಮೆ ತಂದು ಎಡಿಟರುಗಳನ್ನು ಶಿಕ್ಷಿಸಬೇಕೆಂತಲೂ ಹಿಂದುಗಳು ಬೊಂಬಾಯಿ ಗವರ್ನ್‌ಮೆಂಟಿಗೆ ಅರ್ಜಿಗಳನ್ನು ಬರೆದು ಒಪ್ಪಿಸಿದರು. ಗವರ್ನ್‌ಮೆಂಟಿನವರು ಅಂಥಾ ಪತ್ರಿಕೆಯವರಿಗೆಲ್ಲಾ ಎಚ್ಚರಿಕೆ ಕೊಟ್ಟು, ಇನ್ನು ಮುಂದೆ ಯಾರೇ ಆದರೂ ದ್ವೇಷ ಹುಟ್ಟಿಸುವ ವಾರ್ತೆಗಳನ್ನು ಪ್ರಕಟಿಸಿದಲ್ಲಿ ಮೊಕದ್ದಮೆ ಮಾಡುತ್ತೇವೆಂದು ಹುಕುಂ ಕೊಟ್ಟಿದಾರೆ.

ಹಿಂದುಸ್ಥಾನದ ವೈಸ್‌ರಾಯರಾಗಿದ್ದ ಲಾರ್ಡ್ ಲ್ಯಾನ್ಸ್‌ಡೌನ್‌ರವರ ಕುಮಾರರಿಗೆ ನಮ್ಮ ವೈಸ್‌ರಾಯಿ ಲಾರ್ಡ್ ಮಿಂಟೋರವರು ತಮ್ಮ ಪುತ್ರಿಯಾದ ಲೇಡಿ ವೈಯೊಲೆಟ್ ಎಲಿಯಟ್ ಯವರನ್ನು ಕೊಟ್ಟು, ಕಲ್ಕತ್ತೆಯ ದೇವಾಲಯದಲ್ಲಿ ಕಳೆದ ತಾ ೩ನೇ ಭಾನುವಾರ ವಿವಾಹವನ್ನು ನೆರವೇರಿಸಿದರು. ಇದಕ್ಕಾಗಿ ವಿಲಾಯತಿಯಿಂದ ಲಾರ್ಡ್ ಲ್ಯಾನ್ಸ್‌ಡೌನ್‌ರವರ ಪತ್ನೀಯವರು ದಯಮಾಡಿದ್ದರು ಕಲ್ಕತ್ತಾ ಪಟ್ಟಣದ ಎಲ್ಲಾ ಕೋಮುಗಳ ಪ್ರತಿನಿಧಿಗಳೂ ಯೂರೋಪ್ಯರ್ ಅಧಿಕಾರಿಗಳೂ ಆ ದಿನ ದೇವಾಲಯದಲ್ಲಿ ಸೇರಿ, ನೂತನ ದಂಪತಿಗಳನ್ನು ಹರಸಿದ್ದಲ್ಲದೆ, ಅವರಿಗೆ ನಾನಾ ಬಗೆಯ ಉಡುಗೊರೆ ಬಹುಮಾನವನ್ನು ಮೊದಲಾದವುಗಳನ್ನು ಕೊಟ್ಟರು

ಮದರಾಸ್ ಪಟ್ಟಣಕ್ಕೆ ವಿದ್ಯುಚ್ಛಕ್ತಿಯ ದೀಪಗಳನ್ನು ಇಡುವುದಕ್ಕೋಸ್ಕರ ಒಂದು ವಿದ್ಯುಚ್ಛಕ್ತಿಯ ಕಾರ್ಖಾನೆಯು ತಯಾರಾಗುತ್ತಿದೆ. ಯಂತ್ರ ಮೊದಲಾದವುಗಳು ಬಹುಮಟ್ಟಿಗೆ ಸಿದ್ಧವಾಗಿರುವವು ೫,೦೦೦ ಕುದುರೆಬಲದಷ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುತ್ತಾರೆ ಪಟ್ಟಣದಲ್ಲೆಲ್ಲಾ ತಂತಿಗಳನ್ನು ಹಾಕಿದ್ದಾಯಿತು ಮುಂದಿನ ಫೆಬ್ರವರಿ ತಿಂಗಳಿನಲ್ಲಿ ಎಗ್ಮೋರ್, ಚಾಡ್‌ಬರ್ನ್, ಮೌಂಟ್‌ರೋಡ್ ಎಂಬ ಭಾಗಗಳಲ್ಲಿರುವ ಬೀದಿ. ಪಬ್ಲಿಕ್ ಆಫೀಸು, ಅಂಗಡಿ ಮುಂತಾದವುಗಳಿಗೆ ಬಳಕೆ ಕೊಡುತ್ತಾರೆಂತಲೂ, ಬಳಿಕ ತಿಂಗಳ ಅವಧಿಯೊಳಗಾಗಿ ಉಳಿದ ಭಾಗಗಳಿಗೆ ಅಂದರೆ ರಾಯಪೇಟೆ, ಮೈಲಾಪುರ ಮೊದಲಾದ ಕಡೆಗಳಿಗೆಲ್ಲಾ ದೀಪಗಳನ್ನು ಹಚ್ಚುತ್ತಾರೆಂತಲೂ ಗೊತ್ತಾಗಿದೆ.

ಅಫ್ಘಾನಿಸ್ಥಾನದಲ್ಲಿ ಜಲಾಲಾಬಾದಿನಿಂದ ಲಾಘಮನ್ ಎಂಬ ಊರಿಗೆ ಹೋಗುವಾಗ್ಗೆ ಕಾಬೂಲ್ ನದಿಯನ್ನು ದಾಟುವುದಕ್ಕೆ ಕಷ್ಟವಾದ್ದರಿಂದ ಜನರು ರಸ್ತೆಗೂ ನಾನಾಬಗೆಯ ಅಭಿವೃದ್ಧಿಗೂ ತುಂಬಾ ಕೊರತೆಯುಂಟಾಗಿತ್ತು. ಅಮೀರರವರು ಈ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ ಒಂದು ಸೇತುವೆಯನ್ನು ಕಬ್ಬಿಣ ಸಾಮಾನ ಹಾಕಿ ಕಟ್ಟಿಸಬೇಕೆಂದು ಗೊತ್ತುಮಾಡಿದರು ಅದರ ಸೋಡಿಸ್ತರಲ್ಲಿ ಅದು ತುಂಬಾ ದುಬಾರಿಯಾಗುವುದೆಂದು ತಿಳಿದು, ಅದಕ್ಕೆ ಬದಲಾಗಿ ಮರದಲ್ಲೇ ಸೇತುವೆ ಕಟ್ಟಿಸಬೇಕೆಂದು ಹುಕುಂ ಕೊಟ್ಟಿದಾರೆ, ಕಾಮಗಾರಿ ಪ್ರಾರಂಭವಾಗಿರುವುದು ಇದರಿಂದ ಹಿಂದುಸ್ಥಾನಕ್ಕೂ ಅಫ್ಘಾನಿಸ್ಥಾನಕ್ಕೂ ಜನರೂ ಸರಕುಗಳೂ ಅನಾಯಾಸವಾಗಿ ಹೋಗುವುದಕ್ಕೆ ತುಂಬಾ ಸಹಾಯವಾಗುತ್ತದೆ ಒಳದೇಶದ ವ್ಯಾಪಾರವೂ ಹೆಚ್ಚುವುದು

ಹಿಂದುಸ್ಥಾನದಿಂದ ವಿದ್ಯಾಸಂಪಾದನೆಗೋಸ್ಕರ ವಿಲಾಯತಿಗೆ ಹೋಗುವ ಕೆಲವು ವಿದ್ಯಾರ್ಥಿಗಳು ಅಲ್ಲಿ ಇದ್ದ ಕಲಿಯುವುದರಲ್ಲಿ ಆಸಕ್ತಿಯನ್ನಿಟ್ಟವರಾಗಿಲ್ಲವೆಂತಲೂ ಸಂಘಗಳನ್ನು ಮಾಡಿಕೊಂಡು ಇಂಗ್ಲಿಷ್ ಗವರ್ನ್‌ಮೆಂಟಿಗೆ ವಿರೋಧವಾದ ಕಾರ್ಯಗಳನ್ನು ನಡಿಸುವುದರಲ್ಲಿ ಉತ್ಸಾಹಪಡುತ್ತಿದಾರೆಂತಲೂ, ಇದನ್ನು ಅಲ್ಲಿನ ಸ್ಕೂಲುಗಳವರೂ ಇಂಗ್ಲಿಷ್ ವಿದ್ಯಾರ್ಥಿಗಳೂ ನೋಡಿ ಈ ಹಿಂದುಸ್ಥಾನದವರನ್ನು ದೂರಮಾಡಬೇಕೆಂದು ಆಲೋಚಿಸಲಾರಂಭವಾಗಿದೆ ಎಂತಲೂ, ಇನ್ನು ಮುಂದೆ ತಂದೆತಾಯಿಗಳೂ ಪೋಷಕರೂ ಹಿಂದುಸ್ಥಾನದಿಂದ ವಿದ್ಯಾರ್ಥಿಗಳನ್ನು ಅಲ್ಲಿಗೆ ಕಳುಹಿಸುವಾಗ ಅವರನ್ನು ಅಂಥಾ ಸಹವಾಸಕ್ಕೆ ಬೀಳದಂತೆ ಎಚ್ಚರಿಸುವುದಲ್ಲದೆ ವಿಲಾಯತಿಯಲ್ಲಿ ಗೌರವಸ್ಥರಾದ ಇಂಗ್ಲಿಷ್ ದೊಡ್ಡ ಮನುಷ್ಯರ ಮನೆಗಳಲ್ಲಿ ಇರಿಸಿಕೊಂಡು ಜಾಗ್ರತೆಯಲ್ಲಿ ಅವರು ಅಲ್ಲಿನ ವಿದ್ಯಾಶಾಲೆಗೆ ಹೋಗುವ ಹಾಗೆ ಮಾಡುವುದು ಒಳ್ಳೆಯದೆಂತಲೂ ವಿಲಾಯತಿಯ ಒಬ್ಬ ದೊಡ್ಡ ಮನುಷ್ಯನು ಬರೆದಿರುತ್ತಾನೆ

ಒಕ್ಕಲಿಗರ ಸಂಘದ ಅಚ್ಚಿನ ಕಾರ್ಖಾನೆಯು.

ಕೃತಜ್ಞತಾ ಪ್ರದರ್ಶನೋತ್ಸವ.

ಕಳೆದ ಭಾನುವಾರ ಮಧ್ಯಾಹ್ನ ಬೆಂಗಳೂರು ಪಟ್ಟಣದಲ್ಲಿ ಒಕ್ಕಲಿಗರ ಸಂಘದ ಮುಖಂಡರು ತಮ್ಮ ಅಚ್ಚಿನ ಕಾರ್ಖಾನೆಯಲ್ಲಿ ಒಂದು ಸಂತೋಷ ಸಭೆಯನ್ನು ನಡಿಸಿದರು ಈ ಸಭೆಯಲ್ಲಿ ದಿವಾನ್‌ರವರೇ ಅಗ್ರಾಸನವನ್ನು ವಹಿಸಿದ್ದರು ಬೆಂಗಳೂರಿನಲ್ಲಿರುವ ಸರ್ಕಾರಿ ಮುದ್ರಣಾಲಯದ ಎಲ್ಲಾ ಕೋಮುಗಳ ಮುಖಂಡರೂ ಹಾಜರಾಗಿದ್ದರು ಒಕ್ಕಲಿಗರ ಸಂಘದ ಪ್ರೆಸಿಡೆಂಟರಾದ ಮಿ ವೈಯಣ್ಣನವರೂ ಇತರರೂ ಬಾಗಿಲಲ್ಲಿ ಕಾದಿದ್ದು ದಿವಾನ್‌ರವರೇ ಮೊದಲಾದ ಅತಿಥಿಗಳನ್ನು ಎದುರುಗೊಂಡರು. ಒಕ್ಕಲಿಗರ ಸಂಘದ ಪ್ರೆಸ್ ಮ್ಯಾನೇಜರಾದ ಮಿ ಬಿ. ಪುಟ್ಟಯ್ಯನವರು ಗವರ್ನ್‌ಮೆಂಟ್ ಪ್ರೆಸ್ ಸೂಪರಿಂಟೆಂಡೆಂಟರಾದ ಮಿ ಸಿ ಎಚ್. ಯೇಟ್ಸ್ ಯವರಿಗೆ ಒಂದು ಅಡ್ರೆಸ್ಸನ್ನು ಓದಿ, ಕೆಲವು ಬಹುಮಾನ ಪದಾರ್ಥಗಳೊಡನೆ ಒಪ್ಪಿಸಿದರು ಈ ಅಡ್ರೆಸ್ಸಿನಲ್ಲಿ ಮಿ ಯೇಟ್ಸ್‌ಯವರು ಒಕ್ಕಲಿಗರ ಸಂಘದ ಪ್ರೆಸ್ಸನ್ನು ಕ್ರಮಕ್ಕೆ ತಂದಿಟ್ಟದ್ದೂ, ಅದಕ್ಕೆ ಬೇಕಾದ ಯಂತ್ರ ಮೊದಲಾದ ಸಾಧನಗಳನ್ನು ಒದಗಿಸಿಕೊಟ್ಟದ್ದೂ, ಅದರಲ್ಲಿ ಕೆಲಸ ಮಾಡತಕ್ಕ ವಿಧಾನಗಳನ್ನು ಕಲಿಸಿಕೊಟ್ಟದ್ದೂ, ಅಚ್ಚಿನ ಕಾರ್ಖಾನೆಯನ್ನು ನಡಿಸುವುದಕ್ಕೆ ಒಬ್ಬ ಕೆಲಸಗಾರರನ್ನು ತರಪೇತು ಮಾಡಿದ್ದೂ, ಇನ್ನೂ ಆ ಕಾರ್ಖಾನೆಯನ್ನು ಅಭಿವೃದ್ಧಿಗೆ ತರುವ ಭಾಗದಲ್ಲಿ ಅವರಿಗೆ ಸಲಹೆ ಪ್ರೋತ್ಸಾಹಾದಿಗಳನ್ನು ಆಗಿಂದಾಗ್ಗೆ ಕೊಡುತ್ತಾ ಬಂದದ್ದೂ. ಇವನ್ನೆಲ್ಲಾ ವಿವರಿಸಿ ಒಕ್ಕಲಿಗರ ಸಂಘದ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಒಪ್ಪಿಸಿದರು.

ಮ|| ಯೇಟ್ಸ್ ಯವರು ಬಹು ಸಂತೋಷಪೂರ್ವಕದಿಂದಲೂ ವಂದನಾಪೂರ್ವಕವಾಗಿಯೂ ಅಡ್ರೆಸ್ಸನ್ನೂ ಇತರ ಬಹುಮಾನ ಪದಾರ್ಥಗಳನ್ನೂ ಅಂಗೀಕರಿಸಿ ಸಮಾಜದ ಕೆಲವು ವಿಷಯಗಳನ್ನು ಪ್ರಸ್ತುತವಾಗಿ ತಿಳಿಸಿದರು. ಒಕ್ಕಲಿಗರ ಅಭ್ಯುದಯದ ವಿಷಯದಲ್ಲಿ ಉಪಯುಕ್ತವಾದ ವಿಷಯಗಳನ್ನು ವರ್ತಮಾನ ಪತ್ರಿಕೆ ಮೊದಲಾದವು ಬಹಳ ಪ್ರೋತ್ಸಾಹಕರವಾಗಿ ಅಭ್ಯಾಸಗೊಳ್ಳುತ್ತಿರುವುದನ್ನು ನೋಡಿ ತುಂಬಾ ಸಂತೋಷವಾಗುತ್ತದೆಂದು ಹೇಳಿದರು. ಈ ಉದ್ಯೋಗವು ಅನೇಕವಾದವುಗಳಲ್ಲವೆಂತಲೂ ಚಿಕ್ಕವರನ್ನು ಈ ವಿಧದಲ್ಲಿ ತರಬೇತು ಮಾಡುವುದು ವಿದ್ಯಾಶಾಲೆಗಳ ಪ್ರಾಧ್ಯಾಪಕರ ಕರ್ತವ್ಯವಾಗಿರುತ್ತದೆಂತಲೂ, ಇಂಥಾ ಪಾಠಶಾಲೆಗಳಲ್ಲಿ ಕೆಲಸಗಳನ್ನು ಇಲ್ಲಿನ ಜನರು ಬಹು ತೃಪ್ತಿಕರವಾಗಿ ಮಾಡಿಕೊಂಡು ಬರುವುದು ಪ್ರೋತ್ಸಾಹಕರವಾದ ಸಹಕಾರಿಯಾದದ್ದೆಂತಲೂ ಮ|| ಯೇಟ್ಸ್ ಯವರು ತಿಳಿಸಿದರು.

ಕರುಣಾಮಯ ದಿವಾನ್ ಮ|| ವಿ. ಪಿ. ಮಾಧವರಾಯರು ಅಗ್ರಾಸನದಿಂದ ಕೆಲವು ಮಾತುಗಳನ್ನು ಆಡಿದರು. ಅವರ ಭಾಷಣದ ಮುಖ್ಯಾಭಿಪ್ರಾಯವೇನೆಂದರೆ—ಈ ಸಂಘವು ಬಹಳ ಉಪಯುಕ್ತವಾದದ್ದು. ಈ ವರ್ಗದವರನ್ನು ಉತ್ತಮ ಸ್ಥಿತಿಗೆ ತರಲು ಸಾಹಸಪಡುತ್ತಿರುವುದು ತುಂಬಾ ಸಂತೋಷಪ್ರದವಾಗಿರುತ್ತದೆ. ಜನರಲ್ ಸೆಕ್ರೆಟರಿ ಮ|| ರಾಮಯ್ಯನವರ ಸಾಹಸವೂ ಉತ್ಸಾಹವೂ ಬಹು ಶ್ಲಾಘನೀಯವಾದದ್ದು. ಅವರ ಸಾಹಸದಿಂದ ಈ ಸಂಘವು ಸ್ಥಾಪಿತವಾಯಿತು. ಈ ಸಂಘದವರು ಈ ಅಬ್ಬನ ಶಾಲೆಯನ್ನು ಸ್ಥಾಪಿಸಿಕೊಂಡದ್ದು ತುಂಬಾ ಸಂತೋಷಪ್ರದವಾಗಿರುತ್ತದೆ. ವಾರ್ತಾಪತ್ರಿಕೆಯನ್ನು ಈ ಸಂಘದವರು ಪ್ರಾರಂಭಿಸುವರು. ಈ ಪತ್ರಿಕೆಯು ಪ್ರಚಾರಕ್ಕೆ ಬಂದು ಬಹಳ ಉಪಯುಕ್ತವಾಗಿರುವುದು. ಈ ದಿನ ಸಂಘದವರು ಮ|| ಯೇಟ್ಸ್ ಯವರಿಗೆ ಪ್ರೀತಿಪೂರ್ವಕವಾಗಿ ಈ ಅಡ್ರೆಸ್ಸನ್ನು ಒಪ್ಪಿಸಿದುದನ್ನು ನೋಡಿ ನಾನು ತುಂಬಾ ಸಂತೋಷಪಡುತ್ತೇನೆ. ಅವರ ಸಹಾಯದಿಂದ ಈ ಕಾರ್ಯಗಳು ಇಷ್ಟು ಒಳ್ಳೆ ಸ್ಥಿತಿಗೆ ಬಂದಿರುವುದು ... ಜನಾಂಗಕ್ಕೆ ... ತುಂಬಾ ಕುತೂಹಲಪಟ್ಟು ... ಸಂತೋಷಕರವಾಗಿರುತ್ತದೆ. ಈ ಸಂಘದ ... ಅವರಿಗೆ ಒಂದು ... ಸ್ಥಳವನ್ನು ... ಕೆಲವು ಮಾರ್ಗಗಳಿಗಾಗಿ ಗವರ್ನ್‌ಮೆಂಟಿನವರು ಗೊತ್ತು ಮಾಡಿ ಕೊಡುವರೆಂದು ನಂಬುತ್ತೇನೆ ...

ಕರುಣಾಮಯ ಸಭಿಕರಿಗೂ ... ತುರಾಯಿಗಳನ್ನು ಒಪ್ಪಿಸಿದರು. ... ಮಹಾರಾಜರವರಿಗೂ, ಬ್ರಿಟಿಷ್ ರವರಿಗೂ, ಒಕ್ಕಲಿಗರ ... ಜಯಕಾರದೊಡನೆ ... ಸಭೆ ... ಮುಗಿಯಿತು.

ತಾಲ್ಲೂಕು ವರ್ತಮಾನಗಳು.

ಹೊಳೆನರಸೀಪುರ.—ಇಲ್ಲಿ ಛಳಿಯೂ ಬಹು ಕಟ್ಟಾಗಿಯೂ ಮಧ್ಯಾಹ್ನದ ಬಿಸಿಲು ಅಧಿಕವಾಗಿಯೂ ಇದೆ. ಊರು ತಕ್ಕಷ್ಟು ಆರೋಗ್ಯವಾಗಿದೆ. ... ಈಗ ಹೊಸದಾಗಿ ಬಂದಿರುವ ಅಮಲ್ದಾರರು ... ತೊಡಗುವರೆಂದು ನಂಬಿದ್ದೇವೆ ... ಸಂತೆಗೆ ... ಆದಾಯವನ್ನು ... ಲಾಭವನ್ನು ... ಜನಗಳಿಗೆ ಒಳ್ಳೆಯದನ್ನು ಮಾಡಿ ... ಬಹಳ ... ಈಗ ಹೊಸದಾಗಿ ಬಂದಿರುವ ... ಕೆಲಸ ಮಾಡುವ ... ಇವರು ಪ್ರಜೆಗಳಿಗೂ ಸರಕಾರಿ ನೌಕರರಿಗೂ ವರ್ತಕರುಗಳಿಗೂ ಒಳ್ಳೆಯವರೆನ್ನಿಸಿಕೊಂಡಿದ್ದಾರೆ.

ಶಿಕಾರಿಪುರ.—ಇಲ್ಲಿ ಈ ವರ್ಷ ಮಳೆ ಇಲ್ಲದೆ ಸುತ್ತಲಿನ ಎಲ್ಲಾ ಕೆರೆಗಳು ... ಇಲ್ಲಿ ನೀರಿಗಾಗಿ ಜನರು ಪಡುವ ಪ್ರಯಾಸವನ್ನು ವರ್ಣಿಸಲು ಅಸಾಧ್ಯ. ಮ|| ... ಮಾಧವರಾಯರವರ ಸಹಾಯದಿಂದ ಇಲ್ಲಿಗೆ ... ಹೊಸ ಕೆರೆ ... ಕರೆದ ... ಜನರಿಗೆ ಇದರಿಂದ ... ಮಕ್ಕಳಿಗೆ ... ಅಮಲ್ದಾರ್ ಮ|| ... ಇಲ್ಲಿಗೆ ಬಂದು ... ತಿಂಗಳಾಯಿತು, ... ಅನೇಕರು ... ಇವರು ಇಲ್ಲಿ ... ಜನಗಳು ... ಗ್ರಾಮಗಳಿಗೆ ಹೋಗಿ ... ರೋಗ ... ಮತ್ತು ... ಇವರು ... ಮಾಡುತ್ತಾರೆಂದು ಗೊತ್ತಾಗಿದೆ ...

ಯಲ್ಲಿರುವಾಗಲೇ ಇವರಿಗೆ ವರ್ಗವಾದದ್ದಕ್ಕಾಗಿ ಅನೇಕ ಬಡವರು ಸಹ ವ್ಯಸನಪಡುತ್ತಾರೆ.—ಇಲ್ಲಿ ಕೆಲವು ದಿನಗಳ ಹಿಂದೆ ತಾ|| ಕಚೇರಿ ಮುಂದೆ ಮ್ಯುನಿಸಿಪಾಲಿಟಿ ಕಟ್ಟಡದಲ್ಲಿ (ಸುಂಕದಕಟ್ಟೆ) ಬೀಗವನ್ನು ರಾತ್ರಿವೇಳೆ ತೆಗೆದು ಜವಳಿ ಮೂಟೆಯಲ್ಲಿ ಕೆಲವು ಮಾಲನ್ನು ಯಾರೋ ಕಳುವುಮಾಡಿಕೊಂಡು ಹೋದರು. ಕಳ್ಳರು ಸಿಕ್ಕಲಿಲ್ಲ. ಅಮಲ್ದಾರರು ಅಲ್ಲಿನ ಸರ್ಕಾರಿ ಉದ್ಯೋಗದಲ್ಲಿದ್ದ ಒಬ್ಬ ಮುಸಲ್ಮಾನರವನನ್ನು ಸಸ್ಪೆಂಡ್ ಮಾಡಿದರು. ತಕ್ಷಣವೇ ಆತನೂ ಆತನ ತಮ್ಮನೂ ಗ್ರಾಮಗಳನ್ನು ತಿರುಗಿ ಮಾಲನ್ನು ಪತ್ತೆಮಾಡಿದಾರೆ. ಈಗ ಇವರಿಗೆ ಕೆಲಸ ತಿರಗಿ ಸಿಕ್ಕಿದೆ. ಮಾಲನ್ನು ತಕ್ಕೊಂಡವರೂ ಸಿಕ್ಕಿದಾರೆ. ಈ ಜವಳಿಯನ್ನು ಕದ್ದವರು ಇಂಥವರೇ ಎಂಬುವದು ಇನ್ನೂ ಸರಿಯಾಗಿ ಗೊತ್ತಿಲ್ಲ. ಇವರು ಅವರ ಉತ್ತರವನ್ನು ಸರಿಯಾಗಿ ಹೇಳುವದಿಲ್ಲ. ಆದರೆ ತಾ|| ಕಚೇರಿ ಮುಂದೆ ಹೈರೋಡ್ ಪಕ್ಕದಲ್ಲಿ ಬೀಗ ಮುರಿಯದೆ ಕಳುವು ಆದದ್ದು ಆಶ್ಚರ್ಯ.—ಇಲ್ಲಿ ಕೆಲವು ದಿನಗಳ ಮುಂದೆ ಸಬ್ ರಿಜಿಸ್ಟ್ರಾರಾಗಿದ್ದ ಮ|| ಲಕ್ಷ್ಮೀಕಾಂತಯ್ಯಂಗಾರ್ರವರ ಮೊಹನತ್ತಿನಿಂದ ಬ್ರಾಹ್ಮಣರಿಂದ ಚಂದಾ ಎತ್ತಿ ಒಂದು ಕಟ್ಟಡವನ್ನು ಕಟ್ಟಿ ಭಜನೆ ಮನೆಯನ್ನು ಸ್ಥಾಪನೆ ಮಾಡಿಸಿ ಅದಕ್ಕೆ ರಾಮಮಂದಿರವೆಂದು ಹೆಸರಿಟ್ಟಿದಾರೆ. ಇದಕ್ಕಾಗಿ ಖರ್ಚು ಸುಮಾರು ೫೦೦-೬೦೦ ರೂಪಾಯಿಗಳಾಗಿರಬಹುದು. ಇದರ ಪ್ರತಿಷ್ಠೆಯ ದಿನ ಬ್ರಾಹ್ಮಣರಿಗೆ ಊಟ ವಗೈರೆ ನಡಿಸಿದರು. ಸಾ|| ಪುಟ್ಟಸ್ವಾಮಿ ಶೆಟ್ಟರು ಇದಕ್ಕಾಗಿ ಜಮೀನು ಕೊಟ್ಟಿದಾರೆ.

ಮದ್ದಗಿರಿ.—ಈ ಗ್ರಾಮದಲ್ಲಿ ನೀರಿನ ಕ್ಷಾಮ ಬಹಳವಾಗಿದೆ. ಈಚೆಗೆ ಅ|| ಕಮಿಷನರ್ ಸಾಹೇಬರು ಪ್ರಜೆಗಳ ಕಷ್ಟವನ್ನು ನೋಡಿ, ೩-೪ ಬಾವಿಗಳನ್ನು ತೆಗೆಸಲು ಏರ್ಪಾಟು ಮಾಡಿಸಿದ್ದರಿಂದಲೂ, ಅಲ್ಲಾಯಿದಾ ಮ್ಯಾದರ ಬೀದಿಯಲ್ಲಿ ಹೊಸದಾಗಿ ಸರ್ಕಾರಿಂದಾಗಿ ಬಾವಿ ತೆಗೆಸಿದ್ದರಿಂದಲೂ ಪ್ರಜೆಗಳಿಗುಂಟಾಗಿದ್ದ ನೀರಿನ ಹೊಡೆದಾಟವು ಸ್ವಲ್ಪ ಕಡಮೆಯಾಗಿರುತ್ತಲ್ಲದೆ, ಇದರ ಮೇಲೆ ಸಂತೆ ಬೀದಿಯಲ್ಲಿ ಪೋಲೀಸ್ ಇನ್‌ಸ್ಪೆಕ್ಟರ್ ಮ|| ವೆಂಕಟ್ರಮಣಯ್ಯನವರು ಧರ್ಮಾರ್ಥವಾಗಿ ಒಂದು ದೇವಸ್ಥಾನವೂ, ಬಾವಿಯೂ ಸ್ವಂತ ಉದ್ಯೋಗದಿಂದ ತಯಾರು ಮಾಡಿಸುತ್ತಾ ಇದಾರೆ. ಈ ಬಾವಿಯಿಂದಲೂ ಕೆಲವರು ನೀರು ಸೇದಿಕೊಂಡು ಹೋಗುವುದರಿಂದ ನೀರಿನ ಕ್ಷಾಮವು ಸ್ವಲ್ಪ ಕಡಮೆಯಾಗಿರುತ್ತದೆ. ಬಡವರುಗಳಿಗೆ ಉಂಟಾಗಿದ್ದ ಎರಡು ಕೊರತೆಗಳಲ್ಲಿ ಗೌರ್ನಮೆಂಟಿನವರು ನೀರಿನ ಕೊರತೆಯನ್ನು ಹೋಗಲಾಡಿಸಿದರು. ಹೊಟ್ಟೆಗಿಲ್ಲದೆ ದುಃಖಪಡುತ್ತಿರುವ ವಿಷಯದಲ್ಲಿ ತಕ್ಕ ಮಟ್ಟಿಗೆ ಏರ್ಪಾಟು ಮಾಡುವರೆಂದು ತಿಳಿಯಬರುತ್ತೆ. ಧಾರಣೆ ಧಾನ್ಯಗಳು ಯಾವತ್ತೂ ದುಬಾರಿಯಾಗಿದೆ. ಈ ಸಾಲಿನಲ್ಲಿ ಕೆಲವು ಹೊಲಗಳಲ್ಲಿ ಪೈರು ... ಒಣಗಿಹೋಗಿರುತ್ತದೆ. ಬಾಗಾಯ್ತು ಜಮೀನುಗಳಿಗೆ ಜಲಾಧಾರವಿಲ್ಲದೆ ... ಒಣಗುವಂತಾಗಿದೆ. ತಾಲ್ಲೂಕ್ ಅಮಲ್ದಾರ್, ಅ|| ಕಮಿಷನರ್ ಸಾಹೇಬರು ಗ್ರಾಮಗಳಿಗೆ ದಯಮಾಡಿ ಪ್ರಜೆಗಳ ಅಹವಾಲುಗಳನ್ನು ವಿಚಾರಿಸಿ ಅವರುಗಳ ಕಷ್ಟವನ್ನು ಹೋಗಲಾಡಿಸಲು ತಕ್ಕ ಏರ್ಪಾಡು ಮಾಡುತ್ತಾ ಇದಾರೆ. ಈ ಪ್ರಾಂತ್ಯ ದಿವಾನ್ ಬಹದ್ದೂರವರ ಸವಾರಿ ದಯಮಾಡಿದ್ದ ಕಾಲದಲ್ಲಿ ಆ ಕಮಿಷನರವರು ಎಲ್ಲಾ ವಿಷಯಗಳನ್ನು ತಿಳಿಸಿದ್ದೇ ಅಲ್ಲದೆ, ಫಸಲಿಲ್ಲದೆ ಒಣಗಿಹೋಗಿರತಕ್ಕ ಜಮೀನುಗಳ ಸ್ಥಿತಿಯನ್ನು ತಿಳಿಸಿರುವದಾಗಿಯೂ ತಿಳಿಯಬರುತ್ತೆ. ಈ ಕಾರಣಗಳಿಂದ ದಿವಾನ್ ಸಾಹೇಬರು ... ರಿಮಿಷನ್ ಮಾಡುವರೆಂತ ಪ್ರಜೆಗಳು ... ಇದಾರೆ.—ಇಲ್ಲಿನ ... ಗರಲ್ಸ್ ಸ್ಕೂಲಿನಲ್ಲಿ ಬಾಲಕಿಯರಿಗೆ ಬಹುಮಾನ ಕೊಡುವ ಆದಿಯ ವರ್ಷದ ವಾರ್ಷಿಕ ಮಹೋತ್ಸವ ... ಈ ಕಟ್ಟಡದಲ್ಲಿ ಡಿಸೆಂಬರ್ ... ತಾ|| ... ಮುನ್‌ಸಿಫ್ ಮ|| ... ಅಗ್ರಾಸನವನ್ನು ವಹಿಸಿದರು. ... ಪ್ರಾರ್ಥನೆ ಮಾಡಿದರು. ಬಾಲಕಿಯರು ... ಹೇಳಿದರು. ಹೆಡ್ ಮಾಸ್ತರು ಸ್ಕೂಲಿನ ಅಭಿವೃದ್ಧಿ ಸ್ಥಿತಿಯನ್ನೂ, ಜಮಾಖರ್ಚು ವಿವರವನ್ನೂ ತಿಳಿಸಿದ್ದಲ್ಲದೆ, ಮೈಸೂರು ಗೌರ್ನಮೆಂಟಿನವರು ಸ್ಕೂಲ್ ... ರೂಪಾಯಿಗೆ ಕಡಮೆ ಇಲ್ಲದಂತೆ ಬಿಟ್ಟಿ ಮಾಡಿರುವುದಲ್ಲದೆ, ... ಸ್ಕೂಲುಗಳ ... ಚಿತ್ರಕ್ಕೆ ... ಕಾರಾದು ... ಬಾಲಕಿಯರು ... ವಿದ್ಯಾ ವಿಚಾರವಾಗಿ ನಾಟಕದ ರೀತಿಯ ಪ್ರಸಂಗ ಮಾಡಿದ್ದಲ್ಲದೆ ಹಾಡುಗಳ ಮೂಲಕ ಕರ್ನಾಟಕದ ... ಅಗ್ರಾಸನಾಧಿಪತಿಗಳಾದ ಮುನ್‌ಸಿಫರು ಎಲ್ಲಾ ಮಕ್ಕಳಿಗೂ ... ಕನ್ನಡಿ, ... ಮಕ್ಕಳಿಗೆ ... ಮೊದಲಾದ ಸಾಮಾನುಗಳನ್ನು ಇನಾಮು ಕೊಡಿಸಿದರು. ... ಮಕ್ಕಳಿಗೆ ಬಹುಮಾನ ಕೊಡಲು ... ರೂಪಾಯಿ ... ಬಾಲಕಿಯರಿಗೆ ಬಹುಮಾನವಾಗಿ ಕೊಡಲ್ಪಟ್ಟವು. ಮುನ್‌ಸಿಫರು ಮಕ್ಕಳಿಗೆ ನೀತಿ ಮಾರ್ಗವನ್ನು ... ವಿದ್ಯಾವಂತರಾದವರು ಮುಂದೆ ಇದಕ್ಕಿಂತಲೂ ಹೆಚ್ಚಾದ ಬಹುಮಾನಗಳನ್ನು ಹೊಂದುವರೆಂಬದಾಗಿ ಹೇಳಿದರು. ಹೆಡ್ ಮಾಸ್ತರ್ ಮ|| ... ಇಂಡಿಯಾ ದೇಶದಲ್ಲಿ ಇಂಗ್ಲೀಷ್ ... ಸ್ಕೂಲ್ ಮಾಸ್ತರು ... ಬಾಲಕಿಯರಿಗೆ ... ಉಪಕಾರ ಮಾಡಿದರು. ... ರಾಜರವರ ಮೇಲೂ, ... ಮಹಾರಾಜರ ಮೇಲೂ ... ಹಾಡಿದರು. ... ಬಾಲಕಿಯರಿಗೆ ... ಹಂಚಿದರು. ... ಸಭೆಯು ... ವಿಸರ್ಜಿಸಲ್ಪಟ್ಟಿತು.

ಮೈಸೂರು ಗೆಜೆಟ್ ಸಂಗ್ರಹ.

ಜನರಲ್ ರೆವಿನ್ಯೂ ಸೆಕ್ರೆಟರಿ ಆಫೀಸಿನ ರೆಜಿಸ್ಟ್ರಾರ್ ಮ|| ಸಿ. ವೆಂಕಟರಾಯರಿಗೆ ಕ್ರಿಸ್‌ಮಸ್ ರಜಾದೊಂದಿಗೆ ಎರಡು ವಾರಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಅಮಲ್ದಾರ್ ಮ|| ಸಿ. ವೆಂಕಟಯ್ಯನವರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೊಂದು ವಾರ ಜಾಸ್ತಿ ಮಾಡಿದೆ.

ಬೆಂಗಳೂರ್ ಡಿಸ್ಟ್ರಿಕ್ಟ್ ಫ್ರಾ|| ಅ|| ಕಮಿಷನರ್ ಮ|| ಎನ್. ಮಾಧವರಾಯರಿಗೆ ಕ್ರಿಸ್ಮಸ್ ರಜಾದೊಂದಿಗೆ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಫ್ರಾ|| ಅ. ಕಮಿಷನರ್ ಮ|| ಡಿ. ಶ್ರೀನಿವಾಸ ಐಯಂಗಾರ್ರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೊಂದು ವಾರ ಜಾಸ್ತಿ ಮಾಡಿದೆ.

ಅ|| ಕಮಿಷನರ್ ಮ|| ಬಿ. ವೆಂಕೋಬರಾಯರಿಗೆ ಕ್ರಿಸ್‌ಮಸ್ ರಜಾದೊಂದಿಗೆ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಫ್ರಾ|| ಅ. ಕಮಿಷನರ್ ಮ|| ಸಿ. ರಂಗನಾಥರಾವ್ ಸಾಹೇಬ್ ಯವರು ಕಡೂರ್ ಸಬ್ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು; ಇವರಿಗೆ ಹಂಗಾಮಿಯಾಗಿ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಲ್ಪಟ್ಟಿದೆ.

(ಮೈಸೂರು ತಾಲ್ಲೂಕಿಗೆ ವರ್ಗವಾಗಿರುವ) ಶಿವಮೊಗ್ಗಾ ತಾಲ್ಲೂಕ್ ಅಮಲ್ದಾರ್ ಮ|| ಜಿ. ನಾರಾಯಣರಾಯರಿಗೆ ಡಿಸೆಂಬರ್ ತಾ. ೩ ರಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗಾವರ್ಗಿ ಹುಕುಂ ಆಗಿದೆ.—ಮ|| ಟಿ. ರಾಮಚಂದ್ರರಾಯರು ಚಳ್ಳಕೆರೆಯಿಂದ ಶಿವಮೊಗ್ಗೆಗೆ, ಮ|| ಎಂ. ಎಸ್. ರಾಮಚಂದ್ರರಾಯರು ಹಿರಿಯೂರಿನಿಂದ ಚಳ್ಳಕೆರೆಗೆ, ಚಿತ್ರದುರ್ಗದ ಜುಡಿಷಲ್ ಹೆಡ್ ಮುನ್‌ಷಿ ಮ|| ಕೆ. ನರಸಿಂಹಯ್ಯಂಗಾರ್ರು, ಹಿರಿಯೂರು ತಾಲ್ಲೂಕಿನ ಅಮಲ್ದಾರ್ ಮತ್ತು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು, ಮ|| ಜಿ. ನಾರಾಯಣರಾಯರು ಶಿವಮೊಗ್ಗೆಯಿಂದ ಮೈಸೂರಿಗೆ (ರಜಾ ಪೂರೈಸಿದ ಮೇಲೆ), ಮ|| ಸೈಯದ್ ಯಾಕೂಬ್ ಯವರು ಮೈಸೂರಿನಿಂದ ಟಿ. ನರಸೀಪುರಕ್ಕೆ; ಮ|| ಆ. ಸಿ. ಸದಾಶಿವಂ ಪಿಳ್ಳೆಯವರು ಜಗಳೂರಿನಿಂದ ಹೊಸದುರ್ಗಕ್ಕೆ, ಮ|| ಮಹಮದ್ ಅಬ್ದುಲ್ಲಾ ಷರೀಫ್ ಯವರು ಹೊಸದುರ್ಗದಿಂದ ಜಗಲೂರಿಗೆ, ಜನರಲ್ ರೆವಿನ್ಯೂ ಸೆಕ್ರೆಟರಿ ಆಫೀಸಿನ ಅ|| ಸೂಪರಿನ್‌ಟೆಂಡೆಂಟ್ ಮ|| ಎಚ್. ವೆಂಕಟನರಸೈಯನವರು ಚನ್ನಪಟ್ಟಣದ ಅಮಲ್ದಾರ್ ಮತ್ತು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಮ|| ಜಸ್ಟಿಸ್ ಎಚ್. ವಿ. ನಂಜುಂಡೈಯನವರು ರಜದಿಂದ ಬಂದು ಕೋರ್ಟಿನ ಕೆಲಸದ ಮೇಲೆ ಹಾಜರಾದರು, ಮ|| ಜಸ್ಟಿಸ್ ಶ್ರೀನಿವಾಸೈಯಂಗಾರ್ ಎಸ್. ಸೆಟ್ಲೂರ್ ಯವರು ಡಿಸೆಂಬರ್ ತಾ. ೫ ರಿಂದ ಚೀಫ್ ಕೋರ್ಟಿನ ನಾಲ್ಕನೆಯ ಜಡ್ಜ್ ಕೆಲಸದ ಛಾರ್ಜನ್ನು ವಹಿಸಿಕೊಂಡಿದಾರೆ.

ಅ. ಕಮಿಷನರ್ ಮ|| ಪಿ. ಶ್ರೀನಿವಾಸರಾಯರನ್ನು ಕೆಳದ ... ಯಿಂದ ೧ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಎಗ್ಸಿಕ್ಯುಟಿವ್ ಇಂಜನಿಯರ್ ಮ|| ಪಿ. ರಂಗಸ್ವಾಮಿ ಐಯಂಗಾರ್ರಿಗೆ ಕಳೆದ ತಿಂಗಳ ತಾ. ೧೩ ರಿಂದ ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮ|| ಕೆ. ಶ್ರೀನಿವಾಸ ಐಯಂಗಾರು ಅ|| ಎಗ್ಸಿಕ್ಯುಟಿವ್ ಇಂಜನಿಯರಾಗಿ ಮ|| ಪಿ. ರಂಗಸ್ವಾಮಿ ಐಯಂಗಾರ್ರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮ|| ಕೆ. ವಿ. ಅನಂತರಾಮನ್ ಯವರನ್ನೂ ಮ|| ಎ. ವಿ. ರಾಮನಾಥನ್ ಯವರನ್ನೂ ಫ್ರಾ|| ಅ|| ಕಮಿಷನರಾಗಿ ನೇಮಕ ಮಾಡಿದೆ.

ಮುಂದೆ ಹೇಳುವವರನ್ನು ಅ|| ಕಮಿಷನರಾಗಿ ಖಾಯಂ ಮಾಡಿದೆ.—ಮ|| ಜಿ. ಹನುಮಂತರಾಯರು, ಮ|| ಎಂ. ಜಿ. ಕೃಷ್ಣಸ್ವಾಮಿರಾಯರು.

ಮ|| ಟಿ. ಧರ್ಮರಾಜ ಚಟ್ಟಿಯವರನ್ನು ಅ. ಕಮಿಷನರಾಗಿಯೂ, ಮ|| ಸಿ. ರಂಗನಾಥರಾವ್ ಸಾಹೇಬ್ ಯವರನ್ನು ಫ್ರೊಬೇಷನರಿ ಅ. ಕಮಿಷನರಾಗಿಯೂ ನೇಮಿಸಿದೆ.

ಮೈಸೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟಿನ ಶಿರಸ್ತೆದಾರ್ ಮ|| ಕೆ. ಎನ್. ನಾರಾಯಣ ಐಯಂಗಾರ್ರನ್ನು ಮುನ್‌ಸಿಫರಾಗಿ ನೇಮಿಸಿ ಶಿವಮೊಗ್ಗಕ್ಕೆ ವರ್ಗಮಾಡಿದೆ.

ಮ|| ಜಿ. ಬಾಲ್‌ಯವರನ್ನು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ ನೇಮಕ ಮಾಡಿದೆ. ಎಕ್ಸೈಸ್ ಆಫೀಸರಾದ ಮ|| ಕೃಷ್ಣಮಾಚಾರ್ಯರವರನ್ನು ತುಂಕೂರಿನಿಂದ ಚಿತ್ರದುರ್ಗಕ್ಕೂ, ಮ|| ಹರ್ಸ್ ಆಲಿಯವರನ್ನು ಚಿತ್ರದುರ್ಗದಿಂದ ಕಡೂರಿಗೂ, ಮ|| ಜಿ. ಬಾಲ್‌ಯವರನ್ನು ತುಂಕೂರಿಗೂ ವರ್ಗಮಾಡಿದೆ.

ಅಮಲ್ದಾರ್ ಮ|| ಸಿಮನ್ ರೂಬಿನ್ ಯವರನ್ನು ಪಾವಗಡದಿಂದ ತುಂಕೂರಿಗೂ ಮ|| ಎನ್. ರಾಮರಾಯರನ್ನು ಟಿ. ನರಸೀಪುರದಿಂದ ಪಾವಗಡಕ್ಕೂ ವರ್ಗಮಾಡಿದೆ.

ಮ|| ಎಡ್ವರ್ಡ್ ಹಾರ್ ಮೆಟ್‌ಕಾಫ್ ಯವರನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನ ರಾಸಾಯನ ಬೋಧಕರಾಗಿ ನೇಮಕ ಮಾಡಿದೆ.

ಭೂಗರ್ಭ ಶಾಸ್ತ್ರಶೋಧನಾ ಇಲಾಖೆಯ ಕ್ಯುರೇಟರ್ ಮ|| ಸಿ. ಎಸ್. ಸಾಂಬಶಿವ ಐಯರವರನ್ನು ಡಿಸೆಂಬರ್ ತಾ. ೧೯ ರಿಂದ ಐದು ತಿಂಗಳ ವರೆಗೆ ಬರೋಡಾ ಸಂಸ್ಥಾನದಲ್ಲಿ ಕೆಲಸಕ್ಕೆ ಕಳುಹಿಸಲಾಗಿದೆ.

ಮದ್ರಾಸ್ ಸಾಹುಕಾರ್ ಪೇಟೆ,
ಟಿ. ಎಂ. ರಾಮಯ್ಯ ಶೆಟ್ಟರ ಕಂಪನಿಯವರಿಂದ

೯೯-೩

ತಯಾರಾಗುವ ಕಬ್ಬಿಣದ ಪೆಟ್ಟಿಗೆಗಳು ಅಥವಾ ಕ್ರಿಜಂಗಳು ಈ ಕರ್ನಾಟಕ ದೇಶದ ವ್ಯಾಪಾರಕ್ಕೆ ಸಿದ್ಧವಾಗಿವೆ. ಬ್ರಾಂಚ್ ಆಫೀಸ್ ಬೆಂಗಳೂರು ನಗರ್ತರಪೇಟೆಯಲ್ಲೂ ಸಿಕ್ಕುವುವು.



ಬೇಕಾದವರು ತಮ್ಮ ಅಡ್ರೆಸ್ಸು ತಿಳಿಸಿ ರೂ. 10 ಮುಂಗಡವಾಗಿ ಕಳುಹಿಸಿದರೆ ವಿ. ಪಿ. ಮೂಲಕ ರವಾನಿಸಲ್ಪಡುತ್ತೆ. ವಿಶೇಷ ಮಾಹಿತಿ ಬೇಕಾದವರು ...

ಪ್ಯಾರಿಸ್ಸಿನ ವೈದ್ಯಮಂಡಲಿಯ [31-39]

ಡಾ॥ ವೈಸೆಂಟೆ ಸಾಂಟೋನಿಯವರು



ಈಗ ಪ್ರೋಟೋರೀಕೋ ವಿನ ಪೋನ್ಸ್ ಪಟ್ಟಣದಲ್ಲಿ ವೈದ್ಯಮಾಡುತ್ತಿದಾರೆ.

ಇವರು ಹೇಳಿರುವುದು

ಪೋರ್ಟೋರೀಕೋವಿನ ಪೋನ್ಸೆ ಪಟ್ಟಣದಲ್ಲಿ ವೈದ್ಯ ಮಾಡುತ್ತಿರುವ, ಪ್ಯಾರಿಸ್ಸಿನ ವೈದ್ಯಮಂಡಲಿಗೆ ಸೇರಿದ, ಈ ಕೆಳಗೆ ರುಜುವಮಾಡಿರುವ ಡಾ॥ ವೈಸಂಟೆ ಸೊಂಟೋನಿ ಎಂಬ ನಾವು ಸರ್ಟಿಫಿಕೇಟು ಕೊಡು ವುದೇನೆಂದರೆ —

"ಪೆರೂನಾ ಎಂಬ ಹೆಸರುಳ್ಳ ತಯಾರಿ ಔಷಧವನ್ನು ನಾನು ಶೈತ್ಯರೋಗಗಳಿಗೆ ಕೆಲವು ಕಾಲದಿಂದ ಪ್ರಯೋಗ ಮಾಡುತ್ತಾ ಬಂದಿದ್ದೇನೆ ಸರ್ವದಾ ಅದರಿಂದ ಉತ್ಕೃಷ್ಟವಾದ ಫಲವುಂಟಾಗುತ್ತಿರುವುದು. ಅದು ಒಳ್ಳೇ ತಯಾರಿಸಿದ ಔಷಧವು. ಅದು ಒಗ್ಗಿದ ರೋಗಿಗಳಿಗೆಲ್ಲಾ ನಾನು ಯಾವಾಗಲೂ ಅದನ್ನೇ ಪ್ರಯೋಗ ಮಾಡುವೆನು."

ಡಾ ವಿ. ಸೊಂಟೋನಿ,
ಪೋನ್ಸೆ, ಪಿ. ಆರ್.

ಪೆರೂನಾ ಕೊಡುತ್ತಾರೆ

ಮ್ಯಾಡ್ರಿಡ್ ಪಟ್ಟಣದ ಸರ್ವಕಲಾಶಾಲೆಯ ವೈದ್ಯ ಮತ್ತು ಶಸ್ತ್ರ ಚಿಕಿತ್ಸೆಯ ಡಾಕ್ಟರಾಗಿಯೂ ಬಾರ್ಸಿಲೋನಾ, ಕ್ಯಾಟಲೂನಾ, ಸ್ಪೈನ್ ವೈದ್ಯಮಂಡಲಿಯ ಸಭ್ಯರ ಮೊದಲಾಗಿಯೂ ಪ್ಯಾರಿಸ್ ಪಟ್ಟಣದ ಆಸ್ಪತ್ರೆಗಳಲ್ಲಿ ವೈದ್ಯನ ಸಹಿ ಪೋರ್ಟೋರೀಕೋವಿನ ವೈದ್ಯಮಂಡಲಿಗೆ ಸೇರಿಸಲ್ಪಟ್ಟವರಾಗಿಯೂ ಇರುವ ಪೋರ್ಟೋರೀಕೋವಿನ ಪೋನ್ಸೆ ಆಫೀಸ್ ಡಾ॥ ಎನ್ರೀಕ್ ವಿಡಾಲಿಯಾ ಯವರು ಸರ್ಟಿಫಿಕೇಟು ಕೂಟ್ಟಿರುವುದೇನೆಂದರೆ —

"ಯು ಎಸ್ ಎ, ಒಹಿಯೋ ಕೊಲಂಬಸ್ ಪಟ್ಟಣದ ಪೆರೂನಾ ಔಷಧದ ಕಾರಖಾನೆಯಲ್ಲಿ ಪೆರೂನಾವು ತಯಾರ್ ಮಾಡಲ್ಪಡುತ್ತದೆ ಇದು ಮನುಷ್ಯನ ಶ್ವಾಸಕೋಶದಲ್ಲಿ ಹುಟ್ಟುವ ರೋಗಗಳಿಗೆ ಪ್ರಯೋಜಕವಾದ ಔಷಧವು ಇದನ್ನು ನಾನು ರೋಗಿಗಳಿಗೆ ಕೊಡುತ್ತೇನೆ ಅದರಲ್ಲಿ ಸೇರಿಸತಕ್ಕ ಪದಾರ್ಥಗಳನ್ನು ನೋಡಿ ಆಶ್ಚರ್ಯ ಪಡುತ್ತೇನೆ ಅದು ನಿಶ್ಚಿತವಾದ ಪರಿಹಾರವನ್ನು ತ್ವರಿತವಾಗಿ ಉಂಟುಮಾಡುವುದನ್ನು ನೋಡಿ ನಾನು ಆಶ್ಚರ್ಯವಾಗಿದೆ

ಇ ವಿಡಾಲಿಯಾಸ್, ಪೋನ್ಸೆ, ಪಿ ಆರ್

ಉಷ್ಣದೇಶ ...ಳೂ ಪೆರೂನಾ ಔಷಧವು

[illegible]

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆನುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದ್ದೂ ಇವರಿಂದಲೇ ತಿಳಿಯಬಹುದು.

ವಿಳಾಸ—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ —
ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

1—12—1908 ರಿಂದ 11—12—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	6	7	0	0
ಮೈಸೂರು ,,	1	3	0	0
ಬೆಂಗಳೂರು ಡಿಸ್ಟ್ರಿಕ್ಟು	12	9	0	0
ಮೈಸೂರು ,,	92	60	0	0
ಕೋಲಾರ್ ,,	6	3	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	9	8	0	0
ಹಾಸನ ,,	20	10	0	[illegible]
ಚಿತ್ರದುರ್ಗ ,,	1	1	0	1
ಕಡೂರ್ ,,	13	9	0	[illegible]
ಶಿವಮೊಗ್ಗ ,,	0	0	0	0
* ಸಂಖ್ಯೆ ಕಾಣಿಸಲ್ಲ ಜುಮ್ಲಾ	163	110	0	1

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಪುಷ್ಯ ಶುದ್ಧ ಪಾಡ್ಯಮಿ ಗುರುವಾರದಿಂದ ಪುಷ್ಯ ಶುದ್ಧ ಅಷ್ಟಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೮ನೇ ಡಿಸೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕೀಲಕ ಪುಷ್ಯ ಮಾಸ
24	ಗುರು	ಪಾಡ್ಯಮಿ	23 2	ಪೂರ್ವ	41 58	10
25	ಶುಕ್ರ	ಬಿದಿಗೆ	19 12	ಉತ್ತರ	12 12	11
26	ಶನಿ	ತದಿಗೆ	13 16	ಶ್ರ	38 18	12
27	ರವಿ	ಚೌತಿ	8 50	[illegible]	34 50	13
28	ಚಂದ್ರ	ಪಂಚಮಿ	3 12	[illegible]	[illegible] 11	14
29	ಕುಜ	ಸಪ್ತಮಿ	51 30	ಉತ್ತ	26 16	15
30	ಬುಧ	ಅಷ್ಟಮಿ	10-2	[illegible]	22 16	16

ಶೂನ್ಯವಾರ ... ಚಂದ್ರೋದಯ ... ೨ ತಿಥಿ ... ವಾಲಿಸ್ ಚಂದು ೧, ಕ್ರಿಸ್ಮಸ್ ಹಬ್ಬ ... ಚತುರ್ಥಿ ... ತಿಥಿ ... ವ್ರತ

ಕೋಟೆ ಧಾರಣೆ

ಧಾನ್ಯ	ಈ ವಾರ	ಹಿಂದಣ
ಕಡಿ [illegible] ಸಲ್ಲಾ ೧ಕ್ಕೆ	[illegible]	[illegible]
ಕೆ ... ಅಕ್ಕಿ ಅವಲ್	[illegible]	[illegible]
,, ದು ...	[illegible]	[illegible]
ಜಾವಾ ... ಅಕ್ಕಿ	[illegible]	[illegible]
ಸಣ್ಣಕ್ಕಿ ಅವಲ್	[illegible]	[illegible]
,, ದು ...	[illegible]	[illegible]
ತೊಗರಿ ... ಸಲ್ಲಾ ೧ಕ್ಕೆ	[illegible]	[illegible]
,, ದುಬು	[illegible]	[illegible]
ಹೆಸರು ಬೇಳೆ ಸಲ್ಲಾ ೧ಕ್ಕೆ	[illegible]	[illegible]
ಕಡಲೆ ಗಿ	[illegible]	[illegible]
ಜೋಳ		[illegible]
ಹುರುಳಿ ಸಲ್ಲಾ ೧ಕ್ಕೆ	[illegible]	[illegible]
ಬೇಳೆ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಕಡಲೆ	[illegible]	[illegible]
ಎಳ್ಳು ... ೧ಕ್ಕೆ	[illegible]	[illegible]
ಹುರುಳಿ	[illegible]	[illegible]
ಹರಳು ...	[illegible]	[illegible]
... ೧ಕ್ಕೆ	[illegible]	[illegible]
ಮೆಣಸಿನಕಾಯಿ	[illegible]	[illegible]
,, ದುಂಡು	[illegible]	[illegible]
ಬೆಲ್ಲ ಮೊದ ಅಚ್ಚು	[illegible]	[illegible]
ಒಳ್ಳೆ ... ೧ಕ್ಕೆ	[illegible]	[illegible]
ಹರಳೆಣ್ಣೆ	[illegible]	[illegible]
ಕೊತ್ತುಂಬರಿ ಸಲ್ಲಾ ೧ಕ್ಕೆ	[illegible]	[illegible]
ಉಪ್ಪು	[illegible]	[illegible]
ಹುಣಿಸೇ ಹಣ್ಣು	[illegible]	[illegible]
,, ಹಳೆಯದು	[illegible]	[illegible]
ತುಪ್ಪ ... ೧ಕ್ಕೆ	[illegible]	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	[illegible]	[illegible]
ತೆಂಗಿನಕಾಯಿ ೧೦೦ಕ್ಕೆ	[illegible]	[illegible]
ಅಡಿಕೆಕಾಯಿ ಮಣ ೧ಕ್ಕೆ	[illegible]	[illegible]
ಅಂಬ್ಯಾಳದ ಕಾಯಿ ಮಣ ೧ಕ್ಕೆ	[illegible]	[illegible]
ಚಿನ್ನ (ಪೌನ್) ಕೆಂಪು	[illegible]	[illegible]
,, ,, ಪವನು	[illegible]	[illegible]
,, ,, ಗಟ್ಟಿ ತೊಲ ೧ಕ್ಕೆ	[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	[illegible]	[illegible]

Printed and Published by the Rev E. Thomson, M A Proprietor and Manager, Wesleyan Mission Press, Mysore 24/12/1908

REGISTERED
M 30

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು.

ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೮ ನೇ ಇಸವಿ ಡಿಸೆಂಬರ್ ತಾರೀಖು ೩೧ ನೇ ಗುರುವಾರ. ಸಂಚಿಕೆ ೫೧

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16 41

೧. ಲೂಕಾಪುಯಸದ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಬಂಗಾರದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ

... ಕಾಲು ಕೊಡತ (ಬಾತು), ಮೈ ನಡುಕ, ಶೀತವಾತ ಗಳ ವಾಫೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ ... ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ವಿಶೇಷವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಲಿನೊಡನೆ ಉಪಯೋಗಿಸುತ್ತಿ ... ಆಹಾರವನ್ನು ... ದುರ್ಬಲತೆಯನ್ನು ನಿವಾರಿಸಿ ... ವಾತ, ಮಕ್ಕಳ ಎಕ್ಕ, ಜ್ವರ, ಮತ್ತು ... ಕೆಮ್ಮು ... ಪಡಿಸುತ್ತದೆ

ಇವುಗಳು ... ಹೆಂಗಸರಿಗೆ ಗುಣವಾಗುವುದಲ್ಲದೆ ರಕ್ತವರ್ಧಕವಾಗಿದೆ

ಅನುಪಾನ ಪತ್ರಿಕೆ ... ಕೊಡಲಾಗುತ್ತದೆ

೨೦ ಮಾತ್ರೆಗಳು ... ೧ ರೂ ...

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ ಎಸ್. ಎಸ್. ... ವೈದ್ಯಶಾಲೆ, ... "ವಿಲಾಸ ರೋಡ್", ಮೈಸೂರು

ಹರ ಹರಿ. 64 22



ಇದು ಸಾಧಾರಣ ... ಜ್ವರ, ... ಹಳೆ ಜ್ವರ ... ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗ ವಾಸಿಮಾಡುವುದು

ಚಿತ್ರದುರ್ಗದ ... ಕೆಳಗಿನಂತೆ ಬರೆಯುತ್ತಾರೆ ... ಹರಹರಿ ... ಕೊಟ್ಟು ... ಈ ಔಷಧಿಯು ... ಜ್ವರಗಳು ... ವಿಶೇಷವಾದ ... ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —೫ ರ ... ೨ ಆಣೆ ೧ ರೂ , ೧—೮ ರೂ, ರೂ ... ಅಂಚೆ ... ಖರ್ಚು ಬೇರೆ

ಶಿ ಮು ಂ ಕ ಪೂ ರ ರ

Amrita Karpoor

ಈ ಔಷಧಿಯು ಅಜೀರ್ಣ, ಶೀತಭೇದಿ, ... ಹೊಟ್ಟೆ ಕಳೆಯುವದು, ... ನಾನಾತರದ ರೋಗಗಳು—ಮುಂತಾದ ಕೈಗಳಿಗೆ ಮಹಾ ಕ್ಷಿಪ್ರವಾಗಿ ... ಗುಣಕೊಡುವುದು ... ಕ್ರಿಯವಿನ ... ಎಂಬ ವಿಷಧ ... ಹೊರಕಾಮದು

ಕೆಳಕಂಡ ... ಸರ್ಜನ್ ... ಈ ಔಷಧವನ್ನು ... ಅಜೀರ್ಣ ... ಗುಣವಾಗುತ್ತಲಿದೆ ... ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ... ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ... ಕೆಳಗಿನ ವಿಳಾಸದಲ್ಲಿ ವಿಶೇಷ —

ಹಿಂದೂ ... ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

AMRUTANJAN DEPOT, 16 OAK-LANE, BOMBAY. [17-45]

ಅಮೃತಾಂಜನ ಡಿಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯ ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ಅಬಲುಸುಟ್ಟ ನೋವು, ಎದೆನೋವು, ಗಾಯ, ಜಖಮು, ಮೂಲವ್ಯಾಧಿ, ಇವೇ ಮೊದಲಾದ ಯಾವ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತಿಳಿಯಲು ಯೋಗ್ಯವಾದ ಸಂಗತಿಯಾಗಿರುತ್ತದೆ ಇದು ಚರ್ಮದ ಮೂಲಕ ಮಾಂಸವನ್ನು ಪ್ರವೇಶಿಸಿ, ಕೊಳಕು ಪದಾರ್ಥಗಳಿಂದ ಹುಟ್ಟಿದ ನಾನಾ ತರದ ನೋವುಗಳನ್ನು ನಾಶಪಡಿಸುತ್ತದೆ ಬಾಟ್ಲಿ ಒಂದರ ಕಿಮ್ಮತ್ತು ೦—೮—೦ ಪೋಸ್ಟು ಖರ್ಚು ೦—೪—೦ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಕೆಸ ಇನಾಮು ಆರ್ ಆರ್ ಗಂಗೋಳಿ ... ಸಬ್ ಜಡ್ಜ್ ಕಾರವಾರ,—ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ, ಕೆಮ್ಮಿಗೂ, ಉಪಯೋಗಿಸಿದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುವದೆಂದು ನಂಬುತ್ತೇನೆ

ಅಮೃತಾಂಜನದ ಪ್ರಯೋಗದ ವಿಷಯ ಒಂದು ಹೊಸ ಪುಸ್ತಕವನ್ನು ತಯಾರಿಸಿರುತ್ತೇವೆ

ಗಜಕರ್ಣದ ಮುಲಾಮು.

ಮೂರು ನಾಲ್ಕು ಹಚ್ಚುವದರೊಳಗೆ ಗಜಕರ್ಣ, ತುರಿ ಕಜ್ಜಿ ನಾಶವಾಗುವದು ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ ಡಬ್ಬಿಗೆ ೦—೬—೦ , ವಿ ಪಿ ಖರ್ಚು ೦—೬—೦

ದಂತಮಂಜನ—ಡಬ್ಬಿ ೨ ಆಣೆ ಹಲ್ಲುಗಳಿಂದ ಬರುವ ರಕ್ತ, ... ನಾತವನ್ನು ಪೂರ್ಣವಾಗಿ ತೆಗೆಯುತ್ತದೆ, ಹಲ್ಲುಗಳು ... ಬೆಳ್ಳಗಾಗುತ್ತವೆ

ಕಣ್ಣಿನ ಮುಲಾಮು—ಡಬ್ಬಿ ೧ ಕ್ಕೆ ಕಿಮ್ಮತ್ತು ೩ ಆಣೆ

ಕೇಶವರ್ಧಿನಿ—ತಲೆ ಕೂದಲು ಉದ್ದ

ಕೇಶವರ್ಧಿನಿ—ಮಿದುಳು ತಂಪು

ಕೇಶವರ್ಧಿನಿ—ಕೂದಲನ್ನು ನಯಮಾಡುವದು ಬಾಟ್ಲಿ ಒಂದರ ಕಿಮ್ಮತ್ತು ರೂ ೧—೦—೦

ವಜ್ರಗುಟಿಕ—ಧಾತುಪುಷ್ಟಿ, ರಕ್ತಶುದ್ಧಿ	೧—೦—೦
ಕುಸುಮನಾರಿಗುಟಿಕ—ಹೆಂಗಸರ ಹೊಟ್ಟೆನೋವಿಗೆ	೧—೦—೦
ಸುಂದರೀ ತೈಲ—ಮೋರೆಯ ಮುಖದ ಕಲೆಗೆ	೦—೮—೦
ತಾಂಬೂಲ ಗುಟಿಕೆ ತಾಂಬೂಲ ಸೊಗಸು ಪ್ರದ ಸಲಿಕೆ	೦—೮—೦
ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಬೆಳುಕಡಿಕದ ಮದ್ದು ಬೆಳುಕಡಿಕಕ್ಕೆ	೦—೮—೦
ಜುಲಾಬು ಮಾತ್ರೆ—ಜುಲಾಬಿಗೆ	೦—೮—೦

ಈ ಕಂಪೆನಿಯವರು ಎಷ್ಟು ಮೂರೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಳಾಸ —ವಿಲಿಯಂ ಮತ್ತು ಕಂಪೆನಿ, ೧೬ ಓಕ್‌ಲೇನು, ಫ್ಲೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ." ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರ ಬೇಗ ಬರೆದು ತರಿಸಿಕೊಳ್ಳಿ.

2 53

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆ ಹರಡಿಕೊಂಡವು ? ಹಿಂದಿನಿಂದಲೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾರಿ ಬಿಕರಿಯಾಗುತ್ತಿರುವ ಟೋಪಿಗಳ ದಾರದ ... ಬೀಳುವದು ಆದ್ದರಿಂದ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಅದರ ಅಲ್ಲ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರ ... ಬಣ್ಣ ... (೨) ಟೋಪಿಗಳನ್ನು ... ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೊಳೆವ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಡವಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದ, ಕೆಂಪು, ಕಪ್ಪು, ಬಿಳಿಕ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ , ೧ ರೂ ೬ ಆ , ೧ ರೂ ೪ ಆ

ಕೆಂಪು ಚುಕ್ಕಿಯುಳ್ಳ ಟೋಪಿಗಳು ೧ ರೂ ೮ ಆ ... ರೂ

ದಾರದ ಟೋಪಿಗಳು ೧ ರೂ ... ಆ , ೧ ರೂ ೮ ಆ , ೧ ರೂ ೬ ಆ

ಉಣುಕಿನ ಟೋಪಿಗಳು ೧ ರೂ ೫ ಆ , ೧ ರೂ ೩ ಆ ,

ಕೂಸುಗಳ ಟೋಪಿ, ಸೂಜಿನ ಮೇಜೋಡು, ಅರ್ಧ ಮೇಜೋಡು, ಕೈಚೀಲ, ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವ ಧನಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಲಾ ಪ್ರಕಟನೆಗಳು

ವ್ಯವಹಾರನಿರ್ಣಯ—ಭಾಗಗಳು ೫-೫ ಹಿಂದೂ ಮಹಮದೀಯ ಲಾಗಳು, ೫ ಬಾಬುಗಳು ಇವುಗಳ ಸಂಗ್ರಹವು, ... ದಸ್ತಾವೇಜು, ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂ ೧೨ ಆಣೆ

[40-36]

ಕನ್ನಡ ಲಾ ರಿಪೋರ್ಟ್—ಪ್ರಿವಿ ಕೌನ್ಸಿಲ್, ಹೈ ಕೋರ್ಟ್, ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸ ಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ ವರ್ಷದ ಚಂದಾ ರೂ ೧—೦—೦ ಮುಂಗಡ, ಯಾ, ವಿ ಪಿ ಬಿಡಿಪತ್ರಿಕೆ ೧ ಕ್ಕೆ ೦—೨—೦

ಇವುಗಳನ್ನಪೇಕ್ಷಿಸುವವರು—೧ ಎಂ ಮಲ್ಲಾರಾವ್ಪರು, ಫಸ್ಟ್ ಗ್ರೇಡ್ ಪ್ಲೀಡರ್, (೯೦) ೨ ನೇ ರೋಡ್, ಚಾಮರಾಜಪೇಟೆ, ಬೆಂಗಳೂರು ಸಿಟಿ — ಈ ವಿಳಾಸಕ್ಕೆ ಬರೆಯುವುದು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

53 27

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಳ್ಳೇ ಬಟ್ಟೆಗಳು ಸಹಾ ಕಾರಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಕಿರಿದಿ ಬಹಳ ಕಡಿಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರು, ಈ ಬಟ್ಟೆಗಳನ್ನು ತರಿಸಿ ನೋಡಿ ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವದು ಗಜ ಒಂದಕ್ಕೆ ... ಆಣೆಯಿಂದ ... ಆಣೆ ವರೆವಿಗೂ ಬೆಲೆಯಾಗಿ ... ಅಗಲ ... ದುಪ್ಪಟ, ಶಾಲುಗಳು, ಹಾಸನದ ಟೋಪಿಗಳು, ಮಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸ ಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್. ಎಸ್ ಬುಕ್ ಡಿಪೋ, ಮೈಸೂರು.

ಇಲ್ಲಿ ನೋಡಿ.

77 15

ತುಮಕೂರು ಮಿಷನ್ ಇಲಾಖೆಯಲ್ಲಿ ಯೂರೋಪಿಯನ್ನರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ದಾರದಿಂದ ತಯಾರಾಗುತ್ತವೆ ಕ್ರಯ —೧೨ ಆಣೆ ಮೊದಲ್ಗೊಂಡು ೧ ರೂ. ೧೨ ಆಣೆಯ ವರೆಗೆ ೧ ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು ಈಗತಾನೇ ಇಂಗ್ಲಿಷ್ ಉಲ್ದಾರವು ಬಂದಿದೆ ಬೇಕಾದ ತರಹ ಟೋಪಿಗಳನ್ನ ತಯಾರಿಸಿ ಕಳುಹಿಸಬಲ್ಲೆವು ವಿಳಾಸ — ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು

ಕಟ್ಟಡದ ಹರಾಜು ಇಸ್ತಿಹಾರು.

100 2

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟು 1903—04 ನೇ ಇಸವಿ ಇನ್ಸಾಲ್ವೆನ್ಸಿ 111 ನೇ ನಂಬರಿನಲ್ಲಿ ಕೋರ್ಟಿನಿಂದ ನೇಮಕರಾಗಿರುವ ಇವರಡಿ ರುಜೂ ಮಾಡಿರುವ ರಿಸೀವರು ಅರ್ಜಿದಾರನ ಬಾಬತು ಕೆಳಗೆ ಷೆಡ್ಯೂಲಿನಲ್ಲಿ ವಿವರಿಸುವ ಕಟ್ಟಡವನ್ನು ಇದುವರಿಗೆ ಅದರಮೇಲೆ ಇರಬಹುದಾದ ಎಲ್ಲಾ ಜವಾಬ್ದಾರಿಗಳನ್ನೂ ವಿನಾಯಿಸಿ (Free of encumbrance) 1909 ನೇ ಇಸವಿ ಜನವರಿ 10 ನೇ ಭಾನುವಾರ ಪ್ರಾತಃಕಾಲ 11 ರಿಂದ 5 ಗಂಟೆ ವರೆಗೂ ಮೈಸೂರಿನಲ್ಲಿ ಕಟ್ಟಡದ ಬಳಿ ಬಹಿರಂಗವಾಗಿ ಹರಾಜು ಮಾಡಿಸುತ್ತಾರೆ ಆಸ್ತಿಯು ಬಿಟ್ಟುದಾರರ ಹೆಸರಿಗೆ ಸ್ವತ್ತು ಬಿಡಲ್ಪಡುತ್ತೆ ಹರಾಜಿನಲ್ಲಿ ಪಡೆದವರು ಬಿಟ್ಟು ಕೈದಾದ ಕೂಡಲೆ ಮೊಬಲಗಿನ ಪೈಕಿ ಸೇಕಡ 25 ರೂಪಾಯಿನಂತೆ ಪಾವತಿಮಾಡಬೇಕಲ್ಲದೆ ಪೂರಾ ಮೊಬಲಗನ್ನು 15 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು

(ಸ್ವ) ಎ ಜಿ ಲಕ್ಷ್ಮೀನರಸಿಂಹಯ್ಯಂಗಾರ್ ರಿಸೀವರ್

ಷೆಡ್ಯೂಲ್

ಮೈಸೂರು ಮಂಡಿ ಮೊಹಲ್ಲಾ ಜನರಲ್ ಆಸ್ಪತ್ರೆ ಎದುರಾಗಿ ಇರುವ ಮೈಸೂರು ಆರ್ಫನೇಜ್ ವ್ಯಾಸುಫಾನ್ ೦ ಎಂಬ ಕಟ್ಟಡಕ್ಕೆ ಚೆಕ್ಕುಬಂದಿ — ಪೂರ್ವಕ್ಕೆ ಗಲ್ಲಿ, ಪಶ್ಚಿಮಕ್ಕೆ ... ರಸ್ತೆ ದಕ್ಷಿಣಕ್ಕೆ ... ಕಾಟನವರಿಂದ ಬರತಕ್ಕ ರೋಡು, ಉತ್ತರಕ್ಕೆ ಗಲ್ಲಿ, ಇಫೋರ್ ಹನುಮಂತಯ್ಯ ಕಂಟ್ರಾಕ್ಟರ್ ... ಮುದ್ದಪ್ಪ ವಗೈರೆ ರವರ ಮನೆ ಈ ಸಾಧ್ಯೆ ಇರುವ ಗಾರೆ ... ತಟ್ಟುವ ಕಾರ್ಖಾನೆ ಮುಂಜಲಿ ಕಾರ್ಖಾನೆ, ಇದರ ಹಿಂಭಾಗದಲ್ಲಿ ಇರುವ ಕಟ್ಟಡದ ... ಸಹಾ

(ಸ್ವ) ಎ ಜಿ ಲಕ್ಷ್ಮೀನರಸಿಂಹಯ್ಯಂಗಾರ್ ರಿಸೀವರ್

ಈ ಕ ಕಟ್ಟಡವನ್ನು ಜನವರಿ ಗುರುವಾರ ತಾರೀಖು ... ಬೇಕಾದವರು ಹೋಗಿ ನೋಡಬಹುದು

೧೯೦೯ ನೆಯ ವರುಷದ ಲೋವರ್ ಸೆಕಂಡರಿ

ಕನ್ನಡ ಟೆಕ್ಸ್ಟ್ ನೋಟ್ಸ್

ನಮ್ಮ ಪ್ರೆಸ್ಸಿನಲ್ಲೇ ಪ್ರಿಂಟಾಗುತ್ತಲಿದೆ. ಸುಮಾರು ೧೬೦ ಪೇಜು ಕ್ರಯ ೪ ಆಣೆಗಳು.

ಕಳೆದ ವರುಷಗಳಂತೆ "ಎಗ್ಸಾಮಿನರ್" ಮಾಸಪುಸ್ತಕಕ್ಕೆ ಚಂದಾದಾರರಾಗತಕ್ಕವರಿಗೆ ಕ್ರಯವಿಲ್ಲದೆ ಕೊಡಲಾಗುತ್ತೆ. ಇತರರ ನೋಟ್ಸು ಬರುವುದಕ್ಕಿಂತಲೂ ಮೊದಲೇ ಕಳುಹಿಸುವುದರಲ್ಲಿ ಸಂದೇಹವಿಲ್ಲ ಆದರೆ ಮೆ|| ಬಿ ಆರ್. ವೆಂಕಟಸುಬ್ಬಾಚಾರ್ಯರವರ ನೋಟ್ಸನ್ನು ನಾವು ಅಂಗೀಕರಿಸಿಲ್ಲ ಶ್ರೀಮನ್ಮಹಾರಾಜರವರ ಕಾಲೇಜು ಕರ್ಣಾಟಕ ಪಂಡಿತರು ಮೆ|| ಪಿ ಆರ್ ಕರಿಬಸವಶಾಸ್ತ್ರಿಗಳವರಿಂದ ಪರಿಷ್ಕೃತವಾದ ಪ್ರತಿಯನ್ನು ಬಹುಮಾನವಾಗಿ ಇಟ್ಟಿರುತ್ತೆ ನಮ್ಮ ಆಫೀಸಿನಿಂದ ಪ್ರಕಟವಾಗಿರುವ "ಎಗ್ಸಾಮಿನರ್" ಮಾಸಪುಸ್ತಕದಲ್ಲಿ ಹಿಂದೆಯೇ ಸೂಚಿಸಿರುವಂತೆ ವಿದ್ಯಾರ್ಥಿಗಳಿಗೆ ಸಹಾಯಮಾಡಬೇಕೆಂಬ ನಿಜವಾದ ಉದ್ದೇಶದಿಂದ ಈ ನೋಟ್ಸಿಗೆ ನಾಲ್ಕು ಆಣೆಗಳನ್ನು ಮಾತ್ರವೇ ಕ್ರಯ ಇಟ್ಟಿರುತ್ತೆ ನಮ್ಮ ನೋಟ್ಸೇ ಶ್ರೇಷ್ಠವೆಂದು ನಾವೇ ಹೊಗಳಿಕೊಳ್ಳಬಾರದು ಅಪೇಕ್ಷೆಯುಳ್ಳವರು ತರಿಸಿನೋಡಿರಿ ಅನಾವಶ್ಯವೆಂದು ತೋರಿದಲ್ಲಿ ... ನಮ್ಮ ಮೊಬಲಗು ಕೊಟ್ಟು ತೆಗೆದುಕೊಳ್ಳಲು ಸಿದ್ಧನಾಗಿರುತ್ತೇನೆ ಮಾಸಪುಸ್ತಕದ ವಿಷಯವನ್ನೂ, ಮತ್ತು ಇನ್ನೂ ಇತರ ಹೆಚ್ಚು ವಿಷಯಗಳನ್ನೂ ತಿಳಿಯಬೇಕಾಗಿದ್ದಲ್ಲಿ ... ಪತ್ರಿಕೆಯನ್ನು ತರಿಸಿಕೊಂಡು ನೋಡಿರಿ

ಕನ್ನಡ ಎರಡನೆಯ ರೀಡರಿನ ನೋಟ್ಸ್—ಎರಡನೆಯ ತರಗತಿಗೆ ಉಪಯುಕ್ತವಾದುದು ಪದ್ಯಗಳಿಗೂ, ಗದ್ಯಕ್ಕೂ ಸವಿಸ್ತಾರವಾಗಿ ನೋಟ್ಸು ಬರೆಯಲ್ಪಟ್ಟು, ಕಾಪಿಯಿಂದ ಪರಿಷ್ಕೃತವಾಗಿರುತ್ತದೆ ಕ್ರಯ ಪ್ರತಿ ೧ ಕ್ಕೆ ... ಪ್ರತಿಗಳಿಗೆ ಒಂದು ಪ್ರತಿ ಮುಫ್ತ

ವಿಳಾಸ —ಸಿ ಕೃಷ್ಣಯ್ಯ ಮ್ಯಾನೇಜರ್

ವೆಂಕಟರಮಣ ಪ್ರೆಸ್, ಮೈಸೂರು

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು



163

ಬೆನ್ನಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು ಸಂದುಗಳಲ್ಲಿ ಹುಟ್ಟುವ ನೋವು, ತಲೆನೋವು, ಚಳಿ ಇವು ದಕ್ಕುಗಳ ನೋವು ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು ಕಠಿಣವಾಗಿ ಕಳೆಯುವ ಬಾಧೆ, ಸಂದುಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ಸದ್ದೆ ಹತ್ತದೆ ಇರುವುದು—ಇವೇ ಇದಲ್ಲಾ ನಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲು ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಬಹುದು ಅಲ್ಲ

ಇದು ಎಲ್ಲೆಲ್ಲೂ ವಿಕರಿಸಲಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ

JUST RECEIVED! JUST RECEIVED!!

Stead's Books for the Bairns

(Illustrated) New Numbers

STEAD'S PENNY POPULAR TALES ... Pages ... Coloured Picture Cover ... number ... Stories of thrilling interest 24 numbers

A VERY NICE SELECTION ... Rs ...

CHRISTMAS AND NEW YEAR CARDS AND CALENDARS FOR 1909.

Apply The Manager, C L S Book Depot, Mysore City

ರೆಜಿಸ್ಟರ್ಡ್ ಲಾಯರು ಬೇಕೇ ?

105 1

ಹಾಗಾದರೆ ರೆಜಿಸ್ಟರ್ಡ್ ನೌಕರಿಗೆ ತಯಾರಾದ ಲಾಯರ ಪ್ರಕಾಶಿಕಾ ಎಂಬ ಪುಸ್ತಕವನ್ನು ಕೊಂಡುಕೊಳ್ಳಿ ... ಯವರು ನಿಮ್ಮ ... ಆಗುವುದು ಕಾಲದಿಂದ ... ಬೆಲೆ ... ರೂ ೧—೪—೦, ನೇರ ... ವಿಳಾಸ—ಯಂ ಕೃಷ್ಣಮೂರ್ತಿರಾವ್ ರೆಜಿಸ್ಟರ್ಡ್ ... ಕ್ಲಾರ್ಕ್ ... ತಾಲ್ಲೂಕ್ ... ಡಿಸ್ಟ್ರಿಕ್ಟ್

ಶ್ರೀ ತಾಂಬೂಲ

81 13

ಇದನ್ನು ಓದಿ | ಬರೆಯಿರಿ | ಗುಣನೋಡಿ

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆ ಗಳನ್ನು ಮಾಡಿ ಮಾರುತ್ತಿದ್ದಾರೆ ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ, ತಾಂಬೂಲದೊಂದಿಗೆ ೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ದಿನದಿನ ದುರ್ಗಂಧ ನಾಶವಾಗುತ್ತ ರಕ್ತಶುದ್ಧಿ, ಜೀರ್ಣ ಶಕ್ತಿ, ಮೇಧಾಶಕ್ತಿ ಉಂಟಾಗುತ್ತ ವಾತ ಶೀತ ಸಂಬಂಧ ರೋಗಗಳು ನಿವಾರಣವಾಗುತ್ತೆ ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಧೈರ್ಯವನ್ನುಂಟುಮಾಡುತ್ತ ... ಕೆಮ್ಮು ತಾದ್ಯಕ್ಕೆ ೧ ... ಮಾತ್ರೆಗಳಂತೆ ಕೊಟ್ಟರೆ ತಾಬ್ಬೆ ಗುಣಕಾಣುವುದು ಈ ವರೆಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ ಮಾತ್ರೆಗಳಿರುವ ಪುಟ್ಟಿ ಗಳಲ್ಲಿ ಅಷ್ಟು ಇದನ್ನು ಇಡುವೇಕು ... ವಾತ್ರೆ ಉಳ್ಳ ಸೀಸೆಗೆ ೪ ಆಣೆ ಆರು ಸೀಸೆಗೆ ಒಂದು ಜಾಸ್ತಿ ... ವರೆಗೆ ವಿ ಪಿ ಛಾರ್ಜ್ ೫ ಆಣೆ ನಮ್ಮ ವಿಳಾಸ —

ಮಾರಕರು ಸೋಪ್ತ ತಕ್ಕ ... ಡಬ ೧ ಕ್ಕೆ ೦—೧೨—

ದೇವನಹಳ್ಳಿ ಟವನ್, | ಯಂ ಗೋವಿಂದಶೆಟಿ

ಬೆಂಗಳೂರು ಡಿಸ್ಟ್ರಿಕ್ಟ್ | ಮೆಡಿಕಲ್ ಪ್ರಾಕ್ಟೀಷನರ್

ಮದ್ರಾಸ್ ಸಾಹುಕಾರ್ ಪೇಟೆ,

ಟಿ. ಯಂ. ರಾಮಯ್ಯಶೆಟ್ಟರ ಕಂಪೆನಿಯಲ್ಲಿ

99 5

ತಯಾರಾಗುವ ಕಪಿ ... ಪೆಟ್ಟಿಗೆಗಳು ... ಈ ಕೆಳಗಿನ ದರಕ್ಕೆ ... ಆರ್ಡರ್ ... ಬರೆದು ... ಕಳುಹಿಸುವರು



... ಬೇಕಾದವರು ತಮ್ಮ ಅಡ್ರೆಸ್ಸು ತಿಳಿಸಿ ರೂ 10 ಮುಂಗಡವಾಗಿ ಕಳುಹಿಸಿದರೆ ವಿ ಪಿ ಮೂಲಕ ರವಾನಿಸಲ್ಪಡುತ್ತೆ ವಿಶೇಷ ಮಾಹಿತಿ ಬೇಕಾದವರು ಕಾಗದದ ಮುಖಾಂತರ ಮೇಲ್ಕಂಡ ವಿಳಾಸದಿಂದ ತಿಳಿದುಕೊಳ್ಳಬಹುದು

ನೋಟೀಸು

101 1

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ— ಅಪುತ್ರವಂತನಾಗಿ ಈಗ್ಗೆ ೨ ೩ ವರ್ಷಗಳಲ್ಲಿ ಮೃತಪಟ್ಟ, ನನ್ನ ಸಹೋದರ ಪುಟ್ಟೀರಯ್ಯ ನೆನ್ನುವನ ಹೆಂಡತಿ ಪುಟ್ಟೀರಮ್ಮ ನೆನ್ನುವಳು ಮದ್ದಗಿರಿ ಮುನ್ಸೀಫ್ ಕೋರ್ಟು ೧೯೦೭ ... ನೇ ಇಸವಿ ... ನೇ ನಂಬರು ವ್ಯಾಜ್ಯದ ವಿದ್ಧಿ ನಂಬಲೂ ಮತ್ತು ನನಗೆ ಆಗದ ಕೆಲವರ ದುರೋಧನೆಯಿಂದಲೂ ಸಹಾ ತನ್ನ ಸ್ವಾಧೀನದಲ್ಲಿರುವ ೫೦೦—೬೦೦ ರೂಪಾಯಿಗಳು ಬೆಲೆಬಾಳುವ ಮನೆ ಹೊಲ, ಗದ್ದೆ ತೋಟ ಬರಾಗ್ತಗಳನ್ನು ಸಹಾ—ನನಗೆ ಸೇರಗೊಡಿಸದಾದವೆಂಬ ದುರುದ್ದೇಶದಿಂದ ಪರಭಾರೆ ಮಾಡುವ ತಜವೀಜ್ ನಡೆಸುತ್ತಿದ್ದಾಳೆ ಈಕೆಗೆ ನಮ್ಮ ಕುಟುಂಬದಲ್ಲಿನ ೩೦೦—೪೦೦ ರೂಪಾಯಿಗಳ ಸಾಲವೆ ಆಗಲಿ ಅಥವ ತನ್ನ ಗಂಡನಿಂದ ಇಲ್ಲವ ಗಂಡನ ಮರಣಾನಂತರ, ಪ್ರಯೋಜನವಿಲ್ಲದೆ ತಾನು ಮಾಡಬೇಕಾಗಿದ್ದ ವಾಡಿರುವದೆ ಆಗಲಿ ಈ ಎಷ್ಟಾಗಿ ಯಾವದೊಂದು ಸಾಲವು ಉಂಟಾಗಿರುವದಿಲ್ಲಾ ಮತ್ತು ತನ್ನ ಜೀವನಕ್ಕು ಸೊತ್ತುಗಳ ಸಂಪಾದನೆಗೂ ಸಹ ತಕ್ಕಷ್ಟು ... ಜಾಗ್ರತೆಯಾದವರ ನಿಷ್ಠ ... ಸೊತ್ತುಗಳಿಂದ ಉಂಟಾಗುತ್ತದೆ ಇದರ ಮೇಲೂ ಸೊತ್ತುಗಳು ಪಿತರಾರ್ಜಿತವಾದವುಗಳಾಗಿಯೂ, ಮಾರುವದಕ್ಕೆ ಹಕ್ಕಿಲ್ಲದವಳಾಗಿಯೂ ವಾರಸುದಾರಕ್ಕೆ ಸರಿಹೋಗದೆಯು ಅನಾಯಾಸದಿಂದ ... ಇರುತ್ತೆ ... ಮತ್ತು ಸಂಬಂಧಿಕನಾದ ನನ್ನ ಅನುಮತಿ ... ಇಲ್ಲದೆ ಕ್ರಯ, ಭೋಗ್ಯ, ದಾನ ... ಮುಂತಾದವುಗಳ ... ಕೊಳ್ಳಬಾರದು ... ಕೆ ... ಬಾರದು ... ಅಂಥವರಿಗೆ ... ಹಕ್ಕು ... ಕೊಟ್ಟ ಮೊಬಲಗು ಪಡದು ಕೊಂಡಿರುವ ಪಕ್ಷದಲ್ಲಿ ಸಹಾ ನಿರರ್ಥಕವಾಗಿ ಆ ಸೊತ್ತು ಸಹಾ ... ರಿಗೆ ಸಲ್ಲತಕ್ಕದ್ದಾಗಿ ಈ ಮೂಲಕ ಪ್ರಕಟಿಸಿರುತ್ತೆ

ತಾ ೧೧ ೧೨ ೦೮ | ... ರುಜುವು

... ಮದ್ದಗಿರಿ ... | ... ಕೃಷ್ಣ ...

| ... ತಾಲ್ಲೂಕು ... ಗ್ರಾಮವಾಸಿ

ನ ೧೯೦೭ ರಿಂದ ೧೯೦೮ ವರೆಗೆ

ಕಾಲದ ಪರೀಕ್ಷೆ

ಮೂವತ್ತೈದು ವರ್ಷಗಳಿಗೆ ... ವಾಗಿ

SCOTT'S EMULSION

33 40

(ಸ್ಕಾಟ್ಸ್ ಇ ಮ ಲ್ ಷ ನ್)

ಎಂಬ ಜೀವನಾ ಔಷಧಿ ಎಲ್ಲಾ ಜನ ಪರೀಕ್ಷಿಸಿದ್ದಾರೆ ಅನೇಕ ವೇಳೆ ಪರೀಕ್ಷೆ ಮಾಡಿ ಸಮಾಧಾನವಾದವೆಂದು ... ಪ್ರಮಾಣಿತ

ಅದರಿಂದ ಮುಂದೆ ಹೋಗುವ ವರ್ಷಗಳಲ್ಲೂ ... ಈಗ ಔಷಧವು ಸರ್ವ ಶ್ರೇಷ್ಠ ... ಪರಿಣಮಿಸುವುದು —

ನ್ಯಾಸಕೋಶ ದ ಉತ್ಸವುಗಳು ನಾನಾ ತರದ ಕೆಮ್ಮು

ನರ ... ತಿ ... ಗಳು ... ಸಂಬಂಧಗಳ ... ಕೆ

ಆದಾರದಲ್ಲಿ ... ಇದ್ದಲ್ಲದೆ ತಂದೆಗೂ ಮಕ್ಕಳಿಗೂ ಬಾಲಕಾರ ... ಯಾದ ಮತ್ತು ... ಜೀವನಾ ಔಷಧವೂ ಇದೇ

ಕೈನೋಕಥ ತಯಾರಾದದ್ದು

ವಿನಿ ... ಎಲ್ಲಾ ಸ ... ಗಳಲ್ಲಿ ವಿಕರಿಸುವುದು

ಸ್ಕಾಟ್ ಅ ... ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್ ಇಂಗ್ಲೆಂಡ್

ಈ ಪಟದ ಮನುಷ್ಯನು ಇರುವ ಔಷಧವನ್ನೇ ತೆಗೆದುಕೊಳ್ಳಿ

ವೃತ್ತಾಂತ ಪತ್ರಿಕೆ.

———:೦.———

ಸನ್ ೧೯೦೮ ನೇ ಇಸವಿ ಡಿಸೆಂಬರ್ ತಾ|| ೩೧ ನೇ ಗುರುವಾರ

ಹಿಂದುಸ್ಥಾನದ ಮುಂದಿನ ಸ್ಥಿತಿಗತಿಯು.

ಹಿಂದುಸ್ಥಾನದ ರಾಜ್ಯಭಾರತಂತ್ರದಲ್ಲಿ ಆಗುವ ಹೊಸ ಶಿಸ್ತುಗಳನ್ನು ಕಳೆದ ವಾರ ಗೋಷ್ವಾರೆಮಾಡಿ ತಿಳಿಸಿರುವ ಲಾರ್ಡ್ ಮಾರ್ಲೀಯವರು—“ಈ ಶಿಸ್ತುಗಳು ಹಿಂದುಸ್ಥಾನದ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಮಾಡುವವು” ಎಂಬದಾಗಿ ಹೇಳಿರುವ ಮಾತು ಯಥಾರ್ಥವಾದದ್ದೇ ಸರಿ. ಈ ರಾಷ್ಟ್ರದ ಚರಿತ್ರೆಯು ಬಹು ದೀರ್ಘವಾದದ್ದು. ಚರಿತ್ರೆಯನ್ನು ಬಿಚ್ಚಿ ಓದುವುದಕ್ಕಾರಂಭಿಸಿದರೆ ಇಲ್ಲಿನ ರಾಜರು ಒಬ್ಬರಮೇಲೊಬ್ಬರು ನುಗ್ಗಿ ಕಾದಾಡುತ್ತಿದ್ದರು; ಅವರ ಆಸ್ಥಾನಗಳಲ್ಲಿ ಪಿತೂರಿಗಳೂ ಮಸಲತ್ತುಗಳೂ, ಬಹು ನೀಚಕೃತ್ಯಗಳಿಂದ ಒಬ್ಬರನ್ನೊಬ್ಬರು ಓಡಿಸುವುದೂ ನಡೆಯುತ್ತಿದ್ದವು; ಪ್ರಜಾಪಾಲಕರೂ ಅಧಿಕಾರಿಗಳೂ ಜನರನ್ನು ಹಿಂಸೆ ಕಷ್ಟನಷ್ಟಗಳಿಗೆ ಗುರಿಮಾಡುತ್ತಿದ್ದರು; ಸೈನ್ಯಗಳು ನುಗ್ಗಿ ರೈತರ ಕಷ್ಟಾರ್ಜಿತವಾದ ದವಸಧಾನ್ಯಾದಿಗಳನ್ನು ಲೂಟಿಮಾಡಿ, ಜಮೀನುಗಳನ್ನು ಹಾಳುಕೆಡವುತ್ತಿದ್ದವು. ಹಿಂದೂರಾಜರ ಕಾಲದಲ್ಲಾಗಲಿ ಮುಸಲ್ಮಾನರ ದೌಲತ್ತಿನಲ್ಲಾಗಲಿ ಹಿಂದುಸ್ಥಾನವು ಯಾವಾಗಲೂ ಒಬ್ಬರೊಯ ಕೈಯಲ್ಲಿರಲಿಲ್ಲ, ನೆಮ್ಮದಿ ಸುಖಸಂತೋಷಗಳನ್ನು ಯಾವ ಅರಸನೂ ನೆಲೆಗೊಳಿಸಿ ಕಾಪಾಡಲಿಲ್ಲ; ಮತ್ತು ಪ್ರಜೆಗಳು ತಮ್ಮ ಪ್ರತಿನಿಧಿಗಳ ಮೂಲಕ ಕಾರುಬಾರು ನಡೆಸಿದ್ದನ್ನು ನಾವು ಓದಿದ್ದಿಲ್ಲ. ಸನ್ ೧೭೭೪ ರಿಂದ ೧೭೮೫ ರ ವರೆಗೆ ಗವರ್ನರ್ ಜನರಲ್ ಪದವಿಯಲ್ಲಿದ್ದ ಮಾರ್ಕ್ವಿಸ್ ಆಫ್ ಹೇಸ್ಟಿಂಗ್ಸ್ ಎಂಬುವರು ಒಂದಾನೊಂದು ಸಂದರ್ಭದಲ್ಲಿ—“ಇಂಗ್ಲಿಷರು ಹಿಂದುಸ್ಥಾನವನ್ನು ಬಿಟ್ಟು ಹೋಗುವಂಥಾ ಕಾಲವು ಮುಂದೆ ಪ್ರಾಪ್ತವಾಗುತ್ತದೆ. ಆಗ್ಗೆ ಹಿಂದುಸ್ಥಾನದ ಪ್ರಜೆಗಳಿಗೆ ರಾಜಕೀಯ ವಿಚಾರಗಳನ್ನೆಲ್ಲಾ ಕಲಿಸಿ ಅವರನ್ನು ತಲೆಯೆತ್ತುವಂತೆ ಮಾಡಿ, ಪರಸಹಾಯವನ್ನಪೇಕ್ಷಿಸದೆ ತಮ್ಮನ್ನು ತಾವೇ ತಮ್ಮ ಪ್ರತಿನಿಧಿಗಳ ಮೂಲಕ ಆಳಿಕೊಳ್ಳುವುದಕ್ಕೆ ಯೋಗ್ಯತೆ ಬುದ್ಧಿಕುಶಲತೆ ಸಾಮರ್ಥ್ಯಾದಿಗಳನ್ನು ಅವರಿಗೆ ಕಲಿಸಿಕೊಟ್ಟೆವಲ್ಲಾ ಎಂದು ಇಂಗ್ಲಿಷರು ಸಂತೋಷಪಟ್ಟುಕೊಂಡಾರು” ಎಂದು ಹೇಳಿದರು. ಅವರು ಈ ಮಾತು ಹೇಳಿ ಇಲ್ಲಿಗೆ ಹೊಂಬತ್ತು ವರುಷಗಳಿಗಿಂತಲೂ ಹೆಚ್ಚಾದವು. ಆ ಲಾಗಾಯಿತು ರಾಜ್ಯಭಾರಪ್ರವೀಣರಾದ ಇಂಗ್ಲಿಷ್ ಮುತ್ಸದ್ದಿಯರು ಹಿಂದುಸ್ಥಾನದ ಜನಗಳಿಗೆ ತಮ್ಮನ್ನು ತಾವೇ ನೀತಿಯುಕ್ತವಾಗಿ ಆಳಿಕೊಳ್ಳುವಂತಾಗಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು, ಅದಕ್ಕಾಗಿ ಶ್ರಮಪಡುತ್ತಾ ಬಂದಿದ್ದಾರೆ. ಒಂದೆರಡು ಶತಮಾನಗಳಲ್ಲಿ ಈ ಉದ್ದೇಶವು ನೆರವೇರತಕ್ಕದ್ದಲ್ಲವು; ಆದರೆ ಜಾಗರೂಕತೆಯಿಂದಲೂ ವಿವೇಕಪೂರ್ವಕವಾಗಿಯೂ ಅದು ನೆರವೇರುವಂತೆ ಕಾರ್ಯಭಾರಗಳನ್ನು ನಿಧಾನವಾಗಿ ನಡೆಸುತ್ತಾ ಬಂದಿದ್ದಾರೆ. ಈಗ ಮಾಡಿರುವ ಹೊಸ ಶಿಸ್ತುಗಳನ್ನು ನೋಡಿ ನಾವು ಆನಂದಪಡುತ್ತೇವೆ, ಯಾಕೆಂದರೆ ಆ ಉದ್ದೇಶವು ನೆರವೇರುವುದಕ್ಕೆ ಇವು ತುಂಬಾ ಸಹಕಾರಿಗಳಾಗಿರುವುವು. ಹಿಂದುಸ್ಥಾನದಲ್ಲಿ ವಿದ್ಯಾವಂತರಾಗಿರುವವರೆಲ್ಲಾ ಈ ಏರ್ಪಾಡುಗಳನ್ನು ಮೆಚ್ಚಿಕೊಂಡು, ಹೆಚ್ಚು ಸ್ವಾತಂತ್ರ್ಯಗಳು ದೊರಕಿದವಲ್ಲಾ ಎಂದು ಕೃತಜ್ಞತೆಯಿಂದ ಸಂತೋಷಪಡುತ್ತಿರುವುದನ್ನು ನೋಡಿ ನಾವು ಹರ್ಷಗೊಳ್ಳುವೆವು. ಕಳೆದ ಸೋಮವಾರ ಮದರಾಸ್ ಪಟ್ಟಣದಲ್ಲಿ ಪ್ರಾರಂಭವಾದ ನ್ಯಾಷನಲ್ ಕಾಂಗ್ರೆಸ್ ಎಂಬ ಹಿಂದುಸ್ಥಾನದ ಸಾರ್ವಜನಿಕ ಸಮಾಜದಲ್ಲಿ ಸಭಾಧ್ಯಕ್ಷರಾದ ಡಾ|| ರಾಷ್ ಬಿಹಾರಿ ಘೋಷ್ ಎಂಬುವರು ಪ್ರಥಮ ಉಪನ್ಯಾಸವನ್ನು ಮಾಡಿದರು. ಅವರು ಹಿಂದುಸ್ಥಾನದಲ್ಲಿ ಆಗಬೇಕಾಗಿರುವ ಏರ್ಪಾಡುಗಳನ್ನು ಕುರಿತು ಬಹು ಗಂಭೀರವಾದ ಮತ್ತು ವಿವೇಕಪೂರ್ವಕವಾದ ಸಂಗತಿಗಳನ್ನು ಹೇಳಿರುತ್ತಾರೆ. ಅವರು ಹೇಳಿರುವುದು ನಿಜವಾಗಿದೆ ಎಂದು ನಾವು ಒಪ್ಪಿಕೊಳ್ಳುವೆವು.

ಸದ್ಯದಲ್ಲಿ ಹಿಂದುಸ್ಥಾನದ ಪ್ರಜೆಗಳಿಂದ ಆಗಬೇಕಾಗಿರುವುದೇನು ಎಂಬುದನ್ನು ಕುರಿತು ಪ್ರಸ್ತಾಪಿಸುತ್ತೇವೆ. ವಾಚಕರು ಈ ಭಾಗವನ್ನು ಸಾವಧಾನವಾಗಿ ಪರ್ಯಾಲೋಚಿಸಬೇಕಾಗಿದೆ. ಗವರ್ನ್‌ಮೆಂಟಿನವರು ಮಾಡಿರುವ ಹೊಸ ಶಿಸ್ತುಗಳಿಂದ ಪ್ರಜೆಗಳಿಗೆ ನೂತನ ಕರ್ತವ್ಯಾಂಶಗಳೂ ಹೊಸ ಜವಾಬ್ದಾರಿಗಳೂ ವಹಿಸಲ್ಪಡುತ್ತವೆ. ಪ್ರಜೆಗಳು ತಮ್ಮ ಜೀರ್ಣತೆಯಿಂದಲೂ ವಿದ್ಯಾಸಾಮರ್ಥ್ಯದಿಂದಲೂ ಅವಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಳ್ಳದಿದ್ದರೆ ಈ ಶಿಸ್ತುಗಳಿಂದ ಅವರಿಗೆ ಕೇಡುಂಟಾದೀತೇ ವಿನಾ ಎಷ್ಟುಮಾತ್ರಕ್ಕೂ ಪ್ರಯೋಜನವಾಗಲಾರದು. ಹಿಂದುಸ್ಥಾನದ ಪ್ರಜೆಗಳು ತಮ್ಮನ್ನು ತಾವೇ ಆಳಿಕೊಳ್ಳುವಂತೆ ಸಮರ್ಥರಾಗಬೇಕಾದರೆ ಅವರಲ್ಲಿ ಮೂರು ಗುಣಗಳು ಇರಬೇಕಾದದ್ದು ಪರಮಾವಶ್ಯಕ.

(೧) ಪ್ರಜೆಗಳು ಎಂಥಾ ಸಂದರ್ಭದಲ್ಲಾಗಲಿ ಯಥಾರ್ಥವಾದದ್ದನ್ನೆ ನುಡಿಯುತ್ತೇವೆಂತಲೂ, ನೀತಿಮಾರ್ಗದಲ್ಲೇ ನಡೆಯುತ್ತೇವೆಂತಲೂ ಸಂಕಲ್ಪಮಾಡಿಕೊಳ್ಳಬೇಕು. ಯಾಕೆಂದರೆ ಸುಳ್ಳೂ ಅನ್ಯಾಯವೂ ಎದುವರೆಗೆ ನೆಲೆಗೊಂಡಿರುವುದೋ ಅದುವರೆಗೂ ಯಾವ ರಾಜ್ಯವೇ ಆಗಲಿ ಯಾವ ಜನರೇ ಆಗಲಿ ನೆಮ್ಮದಿ ಸಂಪತ್ತು ಅಭಿವೃದ್ಧಿಗಳನ್ನು ಹೊಂದಲಾರರೆಂಬುವುದು ನಿಶ್ಚಿತ. ನ್ಯಾಯಸ್ಥಾನದಲ್ಲಿ ಅಪಸಾಕ್ಷಿ ನುಡಿಯುವವನೂ, ಲಂಚ ತಿನ್ನುವ ಅಧಿಕಾರಿಯೂ, ಅನ್ಯಾಯವಾಗಿದೆ ಎಂದು ತಿಳಿದಿದ್ದರೂ ಪ್ರತಿಭಟಿಸಿ ಅದನ್ನು ಎತ್ತಿಸಾಕದ ಹೇಡಿಗೆಯುಳ್ಳ ಪ್ರಜೆಯೂ—ಇವರೇ ಹಿಂದುಸ್ಥಾನಕ್ಕೆ ಮಹಾ ಶತ್ರುಗಳಾಗಿರುತ್ತಾರೆ; ಈ ರಾಷ್ಟ್ರದ ಏಳಿಗೆ ಕುಂದುವುದಕ್ಕೆ ಇವರೇ ಮೂಲಕಾರಣರು. (೨) ಪ್ರಜೆಗಳು ಸ್ವಪ್ರಯೋಜನವ್ಯಾವುದು, ಪ್ರಜಾಬಾಹುಳ್ಯಕ್ಕೆ ಹಿತಕರವಾದದ್ದು ಯಾವುದು ಎಂಬುವುದನ್ನು ವಿವೇಕಿಸಿ ತಿಳಿಯುವಂತಾಗಬೇಕು. ಜನರು ಸ್ವಪ್ರಯೋಜನಾಂಶವನ್ನು ದೂರಮಾಡಿ ಜಾತಿ ಕುಲಗೋತ್ರಗಳ ತಾರತಮ್ಯವಿಡದೆ ಎಲ್ಲರಿಗೂ ಉಪಯುಕ್ತವಾದದ್ದನ್ನೇ ಮಾಡುವವರಾಗಬೇಕು. ಕೋರ್ಟು ಕಚೇರಿಗಳಲ್ಲಿ ತನ್ನ ಬಂಧುಮಿತ್ರಾದಿಗಳನ್ನು ತಂದು ತುಂಬುವಂಥಾ, ಇಲ್ಲವೇ ತನ್ನ ಅಧಿಕಾರಬಲದಿಂದಲೋ ಸಂಸ್ಥಾನದ ದ್ರವ್ಯದಿಂದಲೋ ತನ್ನ ಜನರಿಗಾಗಲಿ ತನ್ನ ಜಾತಿಯವರಿಗಾಗಲಿ ಪ್ರಯೋಜನವನ್ನು ಮಾಡಿಕೊಳ್ಳುವಂಥಾ ಅಧಿಕಾರಿಯು ಹಿಂದುಸ್ಥಾನದ ಶತ್ರುವಾಗಿರುತ್ತಾನೆ. ರಾಜ್ಯವಿರುವುದು ಸಕಲ ಪ್ರಜೆಗಳ ಕ್ಷೇಮಚಿಂತನೆಗಾಗಿಯೇ ವಿನಾ ಪಕ್ಷ ಪಂಗಡಗಳ ಹಿತಕ್ಕಲ್ಲ. ನಿಷ್ಪಕ್ಷಪಾತವಾಗಿ ನಡೆದುಕೊಳ್ಳುವುದರಲ್ಲಿ ಸಂಸ್ಥಾನದ ಬಲವು ಪ್ರಬಲವಾಗುವುದೆಂದು ತಿಳಿಯಬೇಕು. (೩) ಪ್ರಜೆಗಳು ತಪ್ಪುಗಳನ್ನು ಕಂಡರೆ ಮನ್ನಿಸುವ ಲಕ್ಷಣಶೀಲರಾಗಬೇಕು. ಈ ರಾಷ್ಟ್ರದ ಚರಿತ್ರೆಯನ್ನು ಓದಿದರೆ ಮಾತ್ಸರ್ಯಶೀಲರಾದ ದುಷ್ಟಜನರಿಂದಲೇ ಅನೇಕ ಸಂಸ್ಥಾನಗಳು ನಿರ್ನಾಮವಾಗಿರುತ್ತವೆ. ಒಬ್ಬನು ಮಾಡಿದ ಕೆಲಸವನ್ನು ನೋಡಿ ಇನ್ನೊಬ್ಬನಿಗೆ ಹೊಟ್ಟೆಕಿಚ್ಚುಂಟಾಗಿ, ಅದನ್ನು ತೀರಿಸಿಕೊಳ್ಳುವುದಕ್ಕೆ ಪರಿಣಾಮದ ಮೇಲೆ ದೃಷ್ಟಿಯಿಡದೆ ಅಕೃತ್ಯಗಳನ್ನು ನಡೆಸಿರುವುದನ್ನು ಓದುತ್ತೇವೆ. ಈಗಲೂ ಹಿಂದುಸ್ಥಾನದಲ್ಲಿ ತಮ್ಮಂತೆ ಅಭಿಪ್ರಾಯಪಡದವರನ್ನು ಹಗೆಮಾಡುವಂಥಾ ಸ್ವಭಾವವುಳ್ಳ ಜನರಿರುತ್ತಾರೆ. ಪ್ರಜೆಗಳು ತಮ್ಮನ್ನು ತಾವೇ ಆಳಿಕೊಳ್ಳುವಂತಾಗಬೇಕಾದರೆ, ಅವರಲ್ಲಿ ವಿರೋಧಪಕ್ಷದವರು ಹೇಳುವ ಅಭಿಪ್ರಾಯವನ್ನು ಸಾವಧಾನದಿಂದ ಲಾಲಿಸುವಂಥಾ ರಾಜತಂತ್ರಜ್ಞರು ಹುಟ್ಟಿ ಹೇರಳವಾಗಬೇಕಾಗಿದೆ. ಹಿಂದುಸ್ಥಾನದಲ್ಲಿರುವ ಕೆಲವು ಇಂಗ್ಲಿಷ್ ಅಧಿಕಾರಿಗಳು ತಮ್ಮ ಮೇಲ್ಪಟ್ಟವರ ಅಭಿಮತಕ್ಕೆ ವಿರೋಧವಾದ ಅಭಿಪ್ರಾಯವನ್ನು ಸಭ್ಯತೆಯಿಂದಲೂ ಧೈರ್ಯವಾಗಿಯೂ ಹೇಳಿದ್ದಾಗ್ಯೂ ಆ ಮೇಲ್ಪಟ್ಟ ಅಧಿಕಾರಿಯು ಅಂಥವರನ್ನು ಹಗೆಮಾಡುವುದಕ್ಕೆ ಪ್ರತಿಯಾಗಿ ಒಪ್ಪಿಯುಲ್ಲಿ ತಂದಿರುವುದನ್ನು ನಾವು ಬಲ್ಲೆವು. ಮ್ಯಾಕ್ಸ್ ಮೂಲರ್ ಎಂಬ ಪಂಡಿತನು ವೈದಿಕ ವ್ಯಾಕರಣದಲ್ಲಿ ಒಂದು ವಿಷಯವನ್ನು ಕುರಿತು ಒಬ್ಬ ಸಂಸ್ಕೃತ ಪಂಡಿತನ ಕೂಡ ಬಹಳ ಕಠಿಣವಾಗಿ ವಾಗ್ವಾದಮಾಡುತ್ತಾ,—“ವಿಷಯವನ್ನು ಹೇಳಿದವನು ಯಾವನಾದರೇನು? ಅವನು ಮುಖ್ಯನಲ್ಲ. ಅವನು ಹೇಳಿರುವುದೇನೋ ಅದೇ ಮುಖ್ಯವಾದದ್ದು” ಎಂದು ತಿಳಿಸಿದನು.

ವಾಚಕರೇ, ಇದು ಇನ್ನೇನು ಮುಗಿದು ಹೋಗುವ ೧೯೦೮ನೇ ವರುಷದ ಕಡೇ ಸಂಚಿಕೆಯಾಗಿದೆ. ಹಿಂದುಸ್ಥಾನವು ನೂತನ ಸಂವತ್ಸರವನ್ನು ನೋಡುವುದು. ಅದರ ಮುಂದಿನ ಸ್ಥಿತಿಗತಿಯು ಹಿಂದಿಗಿಂತಲೂ ಮಹಿಮಾಯುಕ್ತವಾಗಿದ್ದೀತೆಂದು ನಂಬುತ್ತೇವೆ. ಸದ್ಯ ನಮ್ಮ ವಾಚಕರಲ್ಲಿ ಚಿಕ್ಕವನೂ ದೊಡ್ಡವರೂ ನಾವು ಇಲ್ಲಿ ಸೂಚಿಸುವ ಮೂರು ವಿವೇಕ ವಾಕ್ಯಗಳನ್ನು ಲಾಲಿಸಬೇಕೆಂದು ಹಾರೈಸುತ್ತೇವೆ:—(೧) ಯಥಾರ್ಥವಾದಿಗಳೂ ನೀತಿವಂತರೂ ಆಗಿರಿ; (೨) ನಿಮ್ಮ ನೆರೆಯವರ ಹಿತವನ್ನು ಬಯಸಿ ಮಾಡುವುದನ್ನು ಕಲಿಯಿರಿ; ಮತ್ತು (೩) ನಿಮ್ಮ ವಿರೋಧಿಗಳನ್ನು ಸಹನದಿಂದ ಕಂಡು, ಸತ್ಯವೆಲ್ಲಿ ದೊರೆತರೂ ಅಂಗೀಕರಿಸಿ ಅನುವರ್ತಿಸುತ್ತಾ ಬನ್ನಿ.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಕ್ಯಾವಲ್ರಿ ರೋಡಿನಲ್ಲಿರುವ ಯೂನಿಯನ್ ಪ್ರೆಸ್ಸಿನವರು ಮುಂದಿನ ವರುಷದ ಕ್ಯಾಲೆಂಡರನ್ನು ಚನ್ನಾಗಿ ಅಚ್ಚುಹಾಕಿ ಒಂದು ಪ್ರತಿಯನ್ನು ನಮಗೆ ಕಳುಹಿಸಿದ್ದಾರೆ.

ಆಹಾರ ಧಾನ್ಯಗಳು ಪ್ರಿಯವಾಗಿರೋಣದರಿಂದ ಗವರನ್‌ಮೆಂಟಿನವರು ಈ ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಸರ್ಕಾರಿ ಸಣ್ಣ ನೌಕರರಿಗೆ ಅಲೋವೆನ್ಸು ಕೊಡಬೇಕೆಂದು ಸ್ಯಾಂಕ್ಷನ್ ಮಾಡಿದ್ದಾರೆ.

ಚಾಮರಾಜನಗರದಲ್ಲಿ ಅಮಲ್ದಾರರು ವರ್ತಕರ ಮುಂತಾದವರಿಂದ ಚಂದಾ ಎತ್ತಿ, ಅಲ್ಲಿನ ಬಡಬಗ್ಗರಿಗೆ ರೂಪಾಯಿಗೆ ೧೬ ಸೇರಿನಂತೆ ರಾಗಿಯನ್ನು ಬಿಕರಿಮಾಡಿಸುತ್ತಿದ್ದಾರೆಂದು ಕೇಳಿ ಸಂತೋಷಪಡುತ್ತೇವೆ.

ಬೆಂಗಳೂರು ಲಾಲ್‌ಬಾಗ್ ಎಂಬ ಉದ್ಯಾನವನವನ್ನು ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರದವರು ೧೫,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ಈ ಸಲ ಅಲ್ಲಿನ ಪಾರ್ಕಿನಲ್ಲಿ ಫಲಪುಷ್ಪಾದಿಗಳ ಪ್ರದರ್ಶನವನ್ನು ಕಷ್ಟಕಾಲದ ನಿಮಿತ್ತ ನಿಲ್ಲಿಸಿಬಿಟ್ಟರು.

ಬ್ರಿಟಿಷ್ ರೆಸಿಡೆಂಟರೂ ಅವರ ಅಸಿಸ್ಟೆಂಟರೂ ಕಳೆದ ವಾರ ಬೆಂಗಳೂರಿಂದ ತರೀಕೆರೆಗೆ ಪ್ರಯಾಣಮಾಡಿ, ಹೊಸಹಳ್ಳಿಯ ಚಿಕ್ಕದಾಗಿಯನ್ನು ನೋಡಿಕೊಂಡು, ಹುಂಚಿಕೆರೆ ಫಾರೆಸ್ಟಿನಲ್ಲಿ ಶಿಕಾರಿಮಾಡುತ್ತಿದ್ದಾರೆ. ಇವರು ನಾಡಿದ್ದು ವಾಪಸು ಬೆಂಗಳೂರನ್ನು ತಲುಪುವವರಾಗಿದ್ದಾರೆ.

ಶೀಮೆಯಿಂದ ಬಂದು ಮೈಸೂರು ಬೆಂಗಳೂರು ಸ್ಕೂಲುಗಳಲ್ಲಿ ಮಕ್ಕಳಿಗೆ ಕಿಂಡರ್‌ಗಾರ್ಟನ್ ವಿದ್ಯೆಯನ್ನು ಕಲಿಸುತ್ತಿದ್ದು ಕಾಲವಾದ ಮಿಸ್ ಲ್ಯಾಟರ್ ಎಂಬಾಕೆಯ ಹೆಸರನ್ನು ಬೆಂಗಳೂರಿನಲ್ಲಿ ಚಿರಸ್ಥಾಯಿಗೊಳಿಸುವುದಕ್ಕೆ ಏರ್ಪಾಡು ಮಾಡಬಹುದೆಂದು ಗವರನ್‌ಮೆಂಟಿನವರು ಸಮ್ಮತಿಪಟ್ಟಿದ್ದಾರೆ.

ರಾಜಧಾನಿಯಲ್ಲಿ ಹೊಸ ಅರಮನೆಯ ಮುಂಭಾಗದಲ್ಲಿ ದರ್ಬಾರ್ ಮಂದಿರಕ್ಕೆ ಬಿಸಿಲಾಗಲಿ ಮಳೆಯಾಗಲಿ ಬಡಿಯದಂತೆ ಉಕ್ಕಿನಿಂದ ಒಂದು ಪರಿಸೆಯ ಮಂಟಪವನ್ನು ಕಟ್ಟಬೇಕೆಂದು ಏರ್ಪಾಡಾಗಿದೆ ಎಂತಲೂ, ಇದಕ್ಕೆ ೮೦ ಸಾವಿರ ರೂಪಾಯಿ ಖರ್ಚಾಗುತ್ತದೆಂತಲೂ ಕೇಳುತ್ತೇವೆ.

ಮೈಸೂರು ಗವರನ್‌ಮೆಂಟಿನಲ್ಲಿ ಹತ್ತು ವರುಷ ವ್ಯವಸಾಯ ಪರಿಶೋಧನಾ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದು, ಕೆಲವು ತಿಂಗಳ ಕೆಳಗೆ ಕೆಲಸ ಬಿಟ್ಟು ಹೋದ ಡಾಕ್ಟರ್ ಎ ಲೆಹ್‌ಮನ್ ಎಂಬುವರಿಗೆ ಅಮೇರಿಕಕ್ಕೆ ಸೇರಿದ ಓಹಿಯೋ ಪಟ್ಟಣದಲ್ಲಿ ಪ್ರೊಫೆಸರ್ ಪರೀಕ್ಷಾನಿಲಯದಲ್ಲಿ ಒಳ್ಳೆ ಉದ್ಯೋಗ ದೊರೆತಿತೆಂದು ತಿಳಿದು ಬಂದಿದೆ.

ರಾಜಧಾನಿಯಲ್ಲಿರುವ ಸಾಹುಕಾರ್ ಮೆ|| ಬಸಪ್ಪನವರು ಗುಂಟೂರು ಪ್ರಾಂತ್ಯದಿಂದ ಅಕ್ಕಿಯನ್ನು ತರಿಸಿ ಬಡಬಗ್ಗರಿಗೆ ೭ ಸೇರಿನಂತೆ ಬಿಕರಿಮಾಡಿಸುತ್ತಿದ್ದಾರೆ. ಇದಕ್ಕಾಗಿ ಪ್ರಜೆಗಳು ಅವರಿಗೆ ತುಂಬಾ ಕೃತಜ್ಞರಾಗಿ ಅವರನ್ನು ವಂದಿಸುವರು. ಇವರು ಈ ರೀತಿ ಬಿಕರಿಮಾಡಿಸುತ್ತಿರುವುದರಿಂದ ಇಲ್ಲಿನ ಛತ್ರದ ಧಾರಣೆಯು ಮುಂಚೆ ಒಂದಕ್ಕೆ ೧೪ ರೂಪಾಯಿ ಇದ್ದದ್ದು ೧೩—೧೧ ರೂಪಾಯಿಗೆ ಇಳಿಯಿತು.

ಶ್ರೀಮನ್ ಯುವರಾಜರವರು ಕಳೆದ ಶನಿವಾರ ಬೆಳಿಗ್ಗೆ ಮೆಯಿಲ್ ಗಾಡಿಯಲ್ಲಿ ಪರಿವಾರ ಸಹಿತ ರಾಜಧಾನಿಯಿಂದ ಜಪಾನ್ ರಾಜ್ಯವನ್ನು ಕುರಿತು ಪ್ರಯಾಣ ಮಾಡಿದರು. ಅವರ ಸಂಗಡ ಡಾಕ್ಟರ್ ಬ್ರಾಕ್ಮನ್‌ರವರು, ಡಾಕ್ಟರ್ ರಂಗಣ್ಣನವರು, ಮೆ|| ಆಗಾ ಮಿರ್ಜಾ ಇಸ್ಪಹಾನ್ ಯವರು, ಮೆ|| ಶಿಂಗರಾಚಾರ್ಯ, ಸರ್ದಾರರಾದ ಎಂ. ಲಕ್ಷ್ಮೀಕಾಂತರಾಜೇ ಅರಸಿನವರು, ಎಂ ಗೋಪಾಲರಾಜೇ ಅರಸಿನವರು, ಎಚ್, ಲಿಂಗರಾಜೇ ಅರಸಿನವರು ಮೊದಲಾದವರೆಲ್ಲಾ ಸುಮಾರು ೬೦ ಮಂದಿ ಪರಿವಾರದವರೊಡನೆ ಹೋಗಿರುತ್ತಾರೆ.

ರಾಜಧಾನಿಯ ಕರ್ಸನ್ ಪಾರ್ಕಿನಲ್ಲಿ ನಿಲ್ಲಿಸಿದ್ದ ಶ್ರೀ ಚಾಮರಾಜರವರ ಲೋಹಪ್ರತಿಮೆಯನ್ನು ಅದರ ಪೀಠದ ಸಮೇತ ತೆಗೆದು ಬೆಂಗಳೂರಿಗೆ ಕಳುಹಿಸಿ, ಅಲ್ಲಿ ಅನುಕೂಲವಾದ ಸ್ಥಳದಲ್ಲಿ ಇಡಿಸುತ್ತಾರೆ. ಇಲ್ಲಿಗೆ ಬೇರೊಂದು ಪ್ರತಿಮೆಯು ಶೀಮೆಯಲ್ಲಿ ತಯಾರಾಗಿ ಜಹಜಿನ ಮೇಲೆ ಬರುತ್ತಿರುವುದು. ಅದು ಶ್ರೀ ಮಹಾರಾಜರವರು ಬಿಳುಪಿನ ಉಡುಪನ್ನು ಧರಿಸಿ ನಿಂತಿರುವಂತೆ ತಯಾರಾಗಿರುತ್ತದೆ. ಅದನ್ನು ಶ್ರೇಷ್ಠವಾದ ಶಿಲೆಯಲ್ಲಿ ಕೆತ್ತಿದ ಮಂಟಪದೊಳಗೆ ನಿಲ್ಲಿಸುತ್ತಾರೆಂದೂ, ಅದರ ಮೇಲ್ಗಡೆ ಸುವರ್ಣಕಲಶಗಳು ಇಡಲ್ಪಡುವವೆಂದೂ ಕೇಳುತ್ತೇವೆ.

ಮುಂದಿನ ವಾರದ ಅಂತ್ಯಭಾಗದಲ್ಲಿ ಶ್ರೀಮನ್ ಮಹಾರಾಜರವರೂ, ಮಹಾ ಮಾತೃಶ್ರೀಯವರೂ ರಾಜವರ್ಗದವರೂ ರಾಜಧಾನಿಯಿಂದ ಮದರಾಸಿಗೆ ದಯಮಾಡಿ, ಅಲ್ಲಿನ ಟಾಕರ್ ಗಾರ್ಡನ್ ಎಂಬ ಬಂಗಲೆಯಲ್ಲಿ ನಾಲ್ಕಾರು ವಾರಗಳ ತನಕ ಇದ್ದು ವಾಪಸು ಬರುವವರಾಗಿದ್ದಾರೆ. ಸ್ಥಳ ಮುಂತಾದ್ದರ ಏರ್ಪಾಡು ಮಾಡುವುದಕ್ಕೆ ಮೋತಿಖಾನೆಯ ಮೆ|| ರಾಮರಾಯರನ್ನು ಕಳುಹಿಸಿರುವರು. ಶ್ರೀಮನ್ ಯುವರಾಜರವರನ್ನು ಕೊಲಂಬೋದಲ್ಲಿ ಜಹಜು ಹತ್ತಿಸಿ ವಾಪಸು ಬರುವಾಗ್ಗೆ ಮೆ|| ರಾಘವೇಂದ್ರರಾಯರೂ ಮದರಾಸಿನಲ್ಲಿ ೨-೩ ದಿನ ಇದ್ದು, ಶ್ರೀಮನ್ ಮಹಾರಾಜರವರ ಸೌಕರ್ಯಕ್ಕೆ ತಕ್ಕ ಏರ್ಪಾಡು ಮಾಡಿಕೊಂಡು ಬರುವರು.

ಕಳೆದ ೧೬ ನೇ ತಾ ಬುಧವಾರ ಸಾಯಂಕಾಲ ಬೆಂಗಳೂರು ಚಿಕ್ಕಪ್ಪಶೆಟ್ಟಿರ ಸತ್ರದಲ್ಲಿ ವೈಶ್ಯಮಂಡಲಿಯವರು ಸಭೆ ಸೇರಿ, ವಿಲಾಯಿತಿಗೆ ಗವರ್ನ್‌ಮೆಂಟ್ ವೇತನವನ್ನು ಪಡೆದು ವಿದ್ಯುಚ್ಛಕ್ತಿ ಯಂತ್ರಶಾಸ್ತ್ರವನ್ನು ಕಲಿತು ಬರುವುದಕ್ಕೆ ಪ್ರಯಾಣಮಾಡುವಂಥಾ ಮೆ ಎಸ್. ವೆಂಕಟಸುಬ್ಬಯ್ಯ ಶೆಟ್ಟರನ್ನು ಕರೆಸಿಕೊಂಡು ಅವರಿಗೆ ತಮ್ಮ ಸಂತೋಷವನ್ನು ತಿಳಿಸಿ ಕೆಲವು ಬುದ್ಧಿವಾದಗಳನ್ನು ಹೇಳಿದರು. ಏನೆಂದರೆ—ಶ್ರೀಮನ್ ಮಹಾರಾಜರವರ ದಯೆಯನ್ನು ಸಂಪಾದಿಸಿಕೊಂಡಿರುವ ನೀವು ವಿಲಾಯಿತಿಯಲ್ಲಿ ಬಹಳ ಬುದ್ಧಿವಂತರಾಗಿ ನಡೆಯುತ್ತಾ, ಇತರ ವ್ಯಾಸಂಗಕ್ಕೆ ಹೋಗದೆ, ನಿಮ್ಮ ಬುದ್ಧಿಕೌಶಲ್ಯವನ್ನು ತೋರಿಸಿ ಪಂಕ್ತಿಗಳಲ್ಲಿ ತೇರ್ಗಡೆಹೊಂದಿ, ನಮ್ಮ ಕುಲಾಚಾರಪದ್ಧತಿಗಳನ್ನು ಬಿಡದೆ, ಆರ್ಯವಂಶೀಯರಾದ ನೀವು ನಮ್ಮ ಮಹಾರಾಜರವರಿಗೂ, ನಮ್ಮ ಜಾತಿಯವರಿಗೂ, ನಿಮ್ಮ ಗೋತ್ರದವರಿಗೂ, ನಿಮ್ಮ ತಂದೆತಾಯಿಗಳಿಗೂ, ನಮ್ಮ ದೇಶಕ್ಕೂ ಕೀರ್ತಿಯನ್ನು ತರುವವರಾಗಬೇಕೆಂದು ನಾವೆಲ್ಲಾ ಕೋರುತ್ತೇವೆ” ಎಂಬುದೇ.

ಮೈಸೂರು ಗೆಜೆಟ್ ಸಂಗ್ರಹ.

ಮೆ|| ಆಚಾರ್ಯ ಪಣಿಯಪ್ಪನವರೂ ಮೆ ಬ್ರಹ್ಮಯ್ಯನವರೂ ಹೊಸದುರ್ಗದ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಲ್ಪಟ್ಟಿದ್ದಾರೆ.

ಮುಂದೆ ಹೇಳುವವರು ಮೈಸೂರು ಮಹಾರಾಣಿಯವರ ಕಾಲೇಜಿನ ವಿಜಿಟರ್ಸ್ ಬೋರ್ಡಿನ ಮೆಂಬರುಗಳಾಗಿರತಕ್ಕದ್ದು. ಮೆ|| ಗಳಾದ ಎಂ. ಕಾಂತರಾಜೇ ಅರಸಿನವರು, ಎ ಮಹದೇವಶಾಸ್ತ್ರಿಗಳು, ರಾಯಬಹದೂರ್ ಎ. ನರಸಿಂಹಯ್ಯಂಗಾರ್ಯ, ಅಡ್ವೊಕೇಟ್ ಎಂ ಸಿ ರಂಗಯ್ಯಂಗಾರ್ಯ, ಪಂಡಿತ ಎಲ್. ಶ್ರೀನಿವಾಸಾಚಾರ್ಯ, ಪಂಡಿತ ಚಾಮರಾಜನಗರದ ರಾಮಶಾಸ್ತ್ರಿಗಳು.

ಸಿವಿಲ್ ಸರ್ಜನ್ ಮತ್ತು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ ಛಾರ್ಜಿನಲ್ಲಿರುವ ಮೆಡಿಕಲ್ ಆಫೀಸರ್ ಮ ಟಿ ವಿ ಆರುಮುಗಂ ಮೊದಲಿಯಾರ್‌ರಿಗೆ ನವಂಬರ್ ತಾ ೨೫ ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಇವರ ಗೈರ್ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅ|| ಸರ್ಜನ್ ಮತ್ತು ರೆಸಿಡೆಂಟ್ ಮೆಡಿಕಲ್ ಆಫೀಸರಾದ ಮೆ|| ಸಿ. ಎ ನಂಜಪ್ಪನವರು ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿ ಬದಲಿ ನೋಡತಕ್ಕದ್ದು.

ಡೆಪ್ಯುಟಿ ಕಮಿಷನರ್ ಮೆ ಎಂ. ನಾರಾಯಣರಾಯರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ೧೩ ದಿನಗಳಿಗೆ ಜಾಸ್ತಿ ಮಾಡಿದೆ.

ಅಮಲ್ದಾರ್ ಮೆ ಸಿರಾಜ್‌ದೀನ್‌ಯವರನ್ನು ಪಾವಗಡದಿಂದ ತುಂಕೂರಿಗೂ ಮೆ ಎನ್. ರಾಮರಾಯರನ್ನು ಟಿ ನರಸೀಪುರದಿಂದ ಪಾವಗಡಕ್ಕೂ ವರ್ಗ ಮಾಡಿರುವ ಹುಕುಮನ್ನು ರದ್ದು ಮಾಡಿದೆ.

ಪ್ರೊ ಅ ಕಮಿಷನರ್ ಮೆ ಡಿ. ಶ್ರೀನಿವಾಸಯ್ಯಂಗಾರ್ಯನ್ನು ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಡೆಪ್ಯುಟಿ ಕಮಿಷನರ ಕೈಕೆಳಗೆ ಕೆಲಸದ ಮೇಲೆ ವರ್ಗಮಾಡಿದೆ. ರಜದಿಂದ ಬಂದ ಮೇಲೆ ಚಿತ್ರದುರ್ಗಕ್ಕೆ ಹೋಗತಕ್ಕದ್ದು.

ಮೈಸೂರು ರೆವಿನ್ಯೂ ಸರ್ವೆ ಸಬ್ ಅ ಸೂಪರಿಂಟೆಂಡೆಂಟ್ ಮೆ ಡಿ. ಶ್ರೀನಿವಾಸರಾಯರು ರಜದಿಂದ ಬಂದು ನವಂಬರ್ ತಾ. ೨೬ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದಿರುವ ರಜವನ್ನು ರದ್ದು ಮಾಡಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಈ ದಿನವೂ ನಾಳೆಯೂ ನಾಡಿದ್ದು ಲಕ್ನೋ ಪಟ್ಟಣದಲ್ಲಿ ಹಿಂದುಸ್ಥಾನದ ಶಿಯಾ ಮಹಮದೀಯರ ಮಹಾ ಸಭೆಯು ನಡೆಯುವುದು.

ಕಲ್ಕತ್ತಾ ಪಟ್ಟಣದಲ್ಲಿ "ಬಸುಮತಿ" ಎಂಬ ಹೊಸ ವರ್ತಮಾನ ಪತ್ರಿಕೆಯು ಪ್ರತಿ ದಿನವೂ ಪ್ರಕಟವಾಗುತ್ತದೆ. ಇದನ್ನು ಮೂರು ಕಾಸಿಗೆ ಒಂದರಂತೆ ಬಿಕರಿ ಮಾಡುವರು.

ಮುನ್ಷಿ ಶಾಂತಸಿಂಹ ಎಂಬವರನ್ನು ಬಾಲ್ಲಿಯಾ ಸಂಸ್ಥಾನದ ರೀಜೆನ್ಸಿ ಕೌನ್ಸಿಲ್ ಪ್ರೆಸಿಡೆಂಟರಾಗಿ ನೇಮಕ ಮಾಡಿದಾರೆ. ಅಲ್ಲಿನ ರಾಜರು ಇನ್ನೂ ಬಾಲ್ಯವಯಸ್ಸಿನವರಾಗಿ ವಿದ್ಯೆ ಕಲಿಯುತ್ತಿರುವರು.

ಇಂಡಿಯಾ ಗವರ್ನ್‌ಮೆಂಟಿನವರು ವಿಲಾಯತಿಗೆ ಸೇರಿದ ಲಾಂಕೆಷೀರ್ ಕೈಟ್ಲಿ ಕಾರ್ಖಾನೆಯವರಿಗೆ ೫೧ ರೈಲ್ ಇಂಜಿನ್ ಗಾಡಿಗಳನ್ನು ಮಾಡಿಸಿ ಕಳುಹಿಸಬೇಕೆಂದು ಕಂಟ್ರಾಕ್ಟು ಕೊಟ್ಟಿರುತ್ತಾರೆ.

ಕಲ್ಕತ್ತಾ ಪಟ್ಟಣದ ಪೋಸ್ಟ್ ಆಫೀಸುಗಳಲ್ಲಿ ಗುಮಾಸ್ತೆಯರಾಗಿರುವ ೬೬೩ ಮಂದಿ ತಮ್ಮ ಸಂಬಳಗಳನ್ನು ಬಡ್ತಿ ಮಾಡಿಸಿ ಕೊಡಬೇಕೆಂದು ಇಲಾಖೆಯ ಮೂಲಕ ವೈಸ್‌ರಾಯಿಯವರಿಗೆ ಅರ್ಜಿ ಬರೆದುಕೊಂಡಿದಾರೆ.

ನಾಗಪುರದಲ್ಲಿ ವಿಕ್ಟೋರಿಯಾ ಮಹಾರಾಣಿಯವರ ಭಾವಪ್ರತಿಮೆಯನ್ನು ವಿಕಾರಮಾಡಿದರೆಂಬ ಮೊಕದ್ದಮೆಯನ್ನು ಸ್ಪೆಷಲ್ ಮ್ಯಾಜಿಸ್ಟ್ರೇಟರು ದರ್ಯಾಪ್ತಿ ಮಾಡುತ್ತಿದಾರೆ. ಈ ಮೊಕದ್ದಮೆಯಲ್ಲಿ ನಾಲ್ವರು ಅಪರಾಧಿಗಳು ಸಿಕ್ಕಿರುವರು.

ವೈಸ್‌ರಾಯಿಯವರ ಏಡಿಕಾಂಗರಾಗಿದ್ದ ಲಾರ್ಡ್ ವಿಂಡ್ಸರ್‌ಯವರು ಕಳೆದ ವಾರ ಆಗ್ರಾ ಪಟ್ಟಣದಲ್ಲಿ ಕಾಲವಾದರು. ಶವವನ್ನು ಸೀಮೆಯಲ್ಲಿ ದಫನ್ ಮಾಡುವುದಕ್ಕೆ ಸುಗಂಧ ಸಹಿತವಾಗಿ ಪೆಟ್ಟಿಗೆಯಲ್ಲಿಟ್ಟು ರವಾನೆಮಾಡುವ ಏರ್ಪಾಡು ನಡೆಯುತ್ತಿದೆ.

ಕಲ್ಕತ್ತಾ ಪಟ್ಟಣದಲ್ಲಿ ಶರತ್‌ಚಂದ್ರ ಮುಖರ್ಜಿ ಎಂಬಾತನು ಲೈಸೆನ್ಸು ಇಲ್ಲದೆ ತನ್ನ ಬಳಿ ಪಿಸ್ತೂಲಿನ ತೋಟಾಗಳನ್ನು ಇಟ್ಟುಕೊಂಡಿದ್ದದ್ದರಿಂದ ಆತನಿಗೆ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ೧೬ ತಿಂಗಳ ಕಠಿಣಸಜೆಯನ್ನೂ ೫೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದಾರೆ.

ಪಂಜಾಬ್ ಆಧಿಪತ್ಯದಲ್ಲಿರುವ ಮಾಲೇರ್ ಕೋಟ್ಲಾ ಸಂಸ್ಥಾನದಲ್ಲಿ ಲೆಫ್ಟಿನೆಂಟ್ ಗವರ್ನರ್ ಸರ್ ಲೂಯಿ ಡೇನ್‌ಯವರು ಜನವರಿ ತಾ ೫ನೇ ಮಂಗಳವಾರದ ದಿನ ನವಾಬ್ ಅಲ್ಲಿ ಖಾನ್ ಬಹದೂರ್ ಯವರಿಗೆ ರಾಜ್ಯಾಭಿಷೇಕವನ್ನು ಮಾಡುವವರಾಗಿದಾರೆ.

ಈ ಸಲ ಇಂಗ್ಲಿಷಿನಲ್ಲೂ ದೇಶಭಾಷೆಯಲ್ಲೂ ತೇರ್ಗಡೆ ಹೊಂದುವಂಥಾ ಮೆಟ್ರಿಕ್ಯುಲೇಷನ್ ವಿದ್ಯಾರ್ಥಿಗಳಿಗೆ ಮುಂದಿನ ಫೆಬ್ರವರಿ ತಾ ೧ನೇ ಸೋಮವಾರದಿಂದ ನಾಲ್ಕು ದಿನ ಪರೀಕ್ಷೆ ನಡೆಯುವುದೆಂದು ಮದರಾಸ್ ಯೂನಿವರ್ಸಿಟಿ ವಿದ್ಯಾಸಂಘದವರು ಪ್ರಕಟಿಸಿದಾರೆ.

ಕಳೆದ ಶನಿವಾರ ಸಾಯಂಕಾಲ ೫|| ಗಂಟೆ ಹೊತ್ತಿನಲ್ಲಿ ಸಿಂಲಾ ಪಟ್ಟಣದಲ್ಲಿಟ್ಟಿರುವ ಭೂಕಂಪ ಸೂಚಕ ಯಂತ್ರದಿಂದ ಸುಮಾರು ೧,೧೦೦ ಮೈಲಿ ದೂರದಲ್ಲಿ ಭೂಕಂಪವಾಗಿರುವಂತೆ ತಿಳಿದು ಬಂದಿತು. ಇದು ಮಧ್ಯ ಏಷ್ಯಾದಲ್ಲಿ ಯಾವ ಭಾಗದಲ್ಲೋ ಸಂಭವಿಸಿರಬೇಕೆಂದು ಹೇಳುತ್ತಾರೆ.

ಕಲ್ಕತ್ತೆಯ ಓವರ್ಟನ್ ಹಾಲ್ ಎಂಬ ಮಂದಿರದಲ್ಲಿ ಮಾಜಿ ಲೆಫ್ಟಿನೆಂಟ್ ಗವರ್ನರ್ ಸರ್ ಆಂಡ್ರು ಫ್ರೇಸರ್ ಯವರನ್ನು ಕೊಲ್ಲಬೇಕೆಂದು ಮಾಡಿದ ಪ್ರಯತ್ನವು ತಪ್ಪಿಹೋದದ್ದರ ಜ್ಞಾಪಕಾರ್ಥವಾಗಿ ಒಬ್ಬ ದೊಡ್ಡ ಮನುಷ್ಯನು ಕಲ್ಕತ್ತೆಯ ದೇವಾಲಯದ ಧರ್ಮ ಖರ್ಚಿಗೆ ೫೦೦ ರೂಪಾಯಿ ಕಾಣಿಕೆ ಕೊಟ್ಟಿರುತ್ತಾನೆ.

ಕಲ್ಕತ್ತಾ ಪಟ್ಟಣದ "ವಂದೇ ಮಾತರಂ" ಪತ್ರಿಕೆಯಲ್ಲಿ ರಾಜದ್ರೋಹಕರವಾದ ಚಾತ್ಮಿಯನ್ನು ಅಚ್ಚು ಹಾಕಿ ಕೊಟ್ಟದ್ದಕ್ಕಾಗಿ ವಿಷ್ಣುಪದ ಸೇನನೆಂಬವನ ಮೇಲೆ ಮೊಕದ್ದಮೆ ಬಂದು, ಅವನು ಕಾಯಿಲೆ ಇದ್ದದ್ದರಿಂದ ವಿಚಾರಣೆ ಆಗದೆ ಇದ್ದಿತು. ಈಗ ಆತನಿಗೆ ವಾಸಿಯಾಯಿತೆಂದು ಮೊಕದ್ದಮೆಯನ್ನು ಪ್ರಾರಂಭಿಸಿ ನಡೆಸುತ್ತಿದಾರೆ.

ಮರಾಟಿ ವಿದ್ಯಾಪ್ರೋತ್ಸಾಹಕ ಸಭೆಯ ವಿಚಾರವಾಗಿ ಏರ್ಪಾಡು ಮಾಡುವುದಕ್ಕೋಸ್ಕರ ನಾಸಿಕ್ ಪಟ್ಟಣಕ್ಕೆ ಬಂದಿದ್ದ ಮೆ|| ಎಲ್ ಭೋಜೇಯವರು ವಾಂತಿಭೇದಿ ಉಪದ್ರವ ತಗಲಿ ಅಲ್ಲೇ ಕಾಲವಾದರು. ಇವರು "ದೀನಬಂಧು" ಎಂಬ ಮರಾಟಿ ವಾರ ಪತ್ರಿಕೆಯ ಎಡಿಟರಾಗಿದ್ದು, ಬಹು ಜನರ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು.

ಕಲ್ಕತ್ತಾ ಪಟ್ಟಣದಲ್ಲಿರುವ ದೇಶೀಯ ಧರ್ಮೋಪಕಾರಶಾಲೆಗಳನ್ನು ರಾಂಚಿ ಎಂಬ ಭಾಗದಲ್ಲಿಟ್ಟು ನಡೆಸಬೇಕೆಂದು ಗವರ್ನ್‌ಮೆಂಟಿನವರು ಅಪೇಕ್ಷಿಸಿ, ಅವುಗಳ ಪೋಷಕರನ್ನು ಕೇಳಿದ್ದಕ್ಕೆ ಅವರು ಅದರಂತೆ ಒಪ್ಪಿಕೊಂಡು, ಅದಕ್ಕಾಗಿ ಸ್ಥಳವನ್ನು ಕೊಂಡುಕೊಳ್ಳುವುದಕ್ಕೋಸ್ಕರ ೬೬,೦೦೦ ರೂಪಾಯನ್ನು ಸರ್ಕಾರದವರಿಗೆ ಕೊಡುತ್ತೇವೆಂದು ಒಪ್ಪಿಕೊಂಡಿದಾರೆ.

ಪೂರ್ವಬಂಗಾಳಾ ಮತ್ತು ಅಸ್ಸಾಂ ಪ್ರಾಂತ್ಯದಲ್ಲಿ ರೈಲ್ ಮಾರ್ಗಗಳಲ್ಲಿ ದುಷ್ಟಜನರು ಅವೇಳೆ ಹೊತ್ತಿನಲ್ಲಿ ನಿಂತು ರೈಲ್‌ಗಾಡಿಗಳಿಗೆ ಕಲ್ಲು ಗುಂಡುಗಳನ್ನೂ ಸಿಡಿಮದ್ದಿನ ಗುಂಡುಗಳನ್ನೂ ಎಸೆಯುತ್ತಾರೆಂದು ತಿಳಿದು ಬಂದದ್ದರಿಂದ ಸರ್ಕಾರದವರು ಆ ಮಾರ್ಗದ ಉದ್ದಕ್ಕೂ ಇರುವ ಗ್ರಾಮಾಂತರಗಳಿಗೆ ಶಿಕ್ಷಾರ್ಥವಾದ ಪೋಲೀಸ್ ಸಿಬ್ಬಂದಿಯನ್ನು ನೇಮಕಮಾಡಿದಾರೆ.

ಭಾರತ ಮಹಿಳೆಯರ ಪರಿಷತ್ತು ಈ ತಿಂಗಳ ತಾ ೩೦ನೇ ಬುಧವಾರ ಮಧ್ಯಾಹ್ನ ಮದರಾಸ್ ಪಟ್ಟಣದ ವಿಕ್ಟೋರಿಯಾ ಪಬ್ಲಿಕ್ ಹಾಲ್ ಎಂಬ ಕಟ್ಟಡದಲ್ಲಿ ಜರುಗುವುದು. ಸ್ತ್ರೀಯರನ್ನು ಬಿಟ್ಟಿಲ್ಲದೆ ಈ ಸಮಾಜಕ್ಕೆ ಬರುವರು. ಯಾವನೊಬ್ಬ ಗಂಡಸನ್ನೂ ಸಭೆಗೆ ಸೇರಿಸುವುದಿಲ್ಲ. ಸ್ತ್ರೀ ಮೆಂಬರುಗಳು ಇಂಗ್ಲಿಷ್, ತಮಿಳು, ತೆಲುಗು, ಮಲೆಯಾಳಿ, ಕನ್ನಡ, ಮರಾಟಿ ಭಾಷೆಗಳಲ್ಲಿ ಉಪನ್ಯಾಸಗಳನ್ನು ಮಾಡುವರು.

ಸಾರ್ಜಂಟ್ ಆರ್ಸ್‌ಡೇಲ್ ಎಂಬೊಬ್ಬ ಇಂಗ್ಲಿಷ್ ಸಿಪಾಯಿಯು ಬೈಸಿಕಲ್ ಮೇಲೆ ಸವಾರಿ ಮಾಡಿಕೊಂಡೇ ಸಿಕಂದರಾಬಾದಿನಿಂದ ಶನಿವಾರ ಬೆಳಿಗ್ಗೆ ಹೊರಟು ಸೋಮವಾರ ಸಾಯಂಕಾಲ ಮದರಾಸನ್ನು ತಲಪಿರುತ್ತಾನೆ. ದಾರಿಯಲ್ಲಿ ಸಿಕ್ಕಿದ ಒಂಬತ್ತು ನದಿಗಳನ್ನು ಆತನು ದಾಟಬೇಕಾಯಿತು. ಈತನು ಕೆಲವು ದಿನಗಳ ಹಿಂದೆ ಸಿಕಂದರಾಬಾದಿನಿಂದ ಬೈಸಿಕಲ್ ಸವಾರಿ ಮಾಡಿಕೊಂಡು ಬೆಂಗಳೂರಿಗೆ ಬಂದನೆಂದು ತಿಳಿದು ಬರುತ್ತದೆ.

ಪೂರ್ವಬಂಗಾಳಾ ಮತ್ತು ಅಸ್ಸಾಂ ಆಧಿಪತ್ಯಕ್ಕೆ ಸೇರಿದ ಕುಮಾರಾ ಗ್ರಾಮದ ಪಂಚಾಯತಿ ಕೋರ್ಟಿನ ಪ್ರೆಸಿಡೆಂಟಾಗಿದ್ದ ಉಪೇಂದ್ರನಾಥಘೋಷ್, ಡಾ|| ಬಾಬೂನಾಥಘೋಷ್, ಅಘೋರನಾಥಮುಖರ್ಜಿ ಎಂಬೀ ಮೂರು ಮಂದಿಯೂ ಆ ಗ್ರಾಮದಲ್ಲಿ ವಿಲಾಯತಿ ಸರಕನ್ನು ಬಿಕರಿ ಮಾಡಿದಂಥಾ ವರ್ತಕರಿಗೆ ಜುಲ್ಮಾನೆ ಹಾಕಿದರೆಂದು ಮೊಕದ್ದಮೆ ಆಗಿದೆ. ಜಿಲ್ಲಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅವರನ್ನು ದರ್ಯಾಪ್ತಿ ಮಾಡುತ್ತಿದಾರೆ.

ಸತ್ರ ಮಠ ದೇವಸ್ಥಾನಗಳ ಜಮಾಖರ್ಚು ಮುಂತಾದದ್ದನ್ನು ಕ್ರಮಪಡಿಸಿ ಮೇಲ್ವಿಚಾರಣೆ ನೋಡಿಕೊಳ್ಳುವ ವಿಷಯದಲ್ಲಿ ಡಾಕ್ಟರ್ ರಾಷ್ ಬಿಹಾರಿ ಘೋಷ್ ಯವರು ವೈಸ್‌ರಾಯಿ ಯವರ ಮಂತ್ರಾಲೋಚನಾ ಸಭೆಯಲ್ಲಿ ಒಂದು ಮಸೂದೆ ಕಾನೂನನ್ನು ತಂದಿಟ್ಟು ಚರ್ಚೆಯಾಗಬೇಕೆಂದು ಸೂಚಿಸಿರುತ್ತಾರೆ. ಇಂಥಾ ಮತವಿಷಯದಲ್ಲಿ ಸರ್ಕಾರದವರು ಪ್ರವರ್ತಿಸಕೂಡದೆಂತಲೂ, ಈ ಕಾನೂನು ಅವಶ್ಯವಿಲ್ಲವೆಂತಲೂ ಧಾರಾಗಂಜಿನ ಪ್ರಜೆಗಳು ಸಭೆಯಲ್ಲಿ ತೀರ್ಮಾನ ಮಾಡಿ ತಮ್ಮ ಅಭಿಮತವನ್ನು ವೈಸ್‌ರಾಯಿ ಯವರಿಗೆ ತಿಳಿಯಪಡಿಸಿರುತ್ತಾರೆ.

ಪಂಡಿತ ಮೆ ಆರ್ ಪಿಷಲ್ ಎಂಬೊಬ್ಬ ೫೯ ವರುಷದ ಜರ್ಮನಿ ವಿದ್ವಾಂಸನು ಮದರಾಸ್ ಪಟ್ಟಣದಲ್ಲಿ ಕಾಯಿಲೆ ಬಿದ್ದು ಕಳೆದ ವಾರ ಆಸ್ಪತ್ರೆಯಲ್ಲಿ ಕಾಲವಾದನು. ಈತನು ಸಂಸ್ಕೃತದಲ್ಲಿ ತುಂಬಾ ಗಟ್ಟಿಗನಾಗಿದ್ದನು. ಕಲ್ಕತ್ತಾ ಯೂನಿವರ್ಸಿಟಿ ವಿದ್ಯಾಸಂಘದವರ ಅಪೇಕ್ಷೆಯಂತೆ ಆತನು ಹಿಂದುಸ್ಥಾನಕ್ಕೆ ಬಂದು ಇಲ್ಲಿನ ಹಲವು ವಿದ್ಯಾಸಂಘಗಳಲ್ಲಿ ಪ್ರಾಕೃತ ವ್ಯಾಕರಣದ ವಿಷಯವಾಗಿ ಉಪನ್ಯಾಸಗಳನ್ನು ಮಾಡುವವನಾಗಿದ್ದನು. ಈತನ ಉದ್ದೇಶವು ನೆರವೇರುವುದಕ್ಕೆ ಮೊದಲೇ ಈ ರೀತಿ ಕಾಯಿಲೆ ಬಿದ್ದು ಕಾಲವಾದನೆಂದು ತುಂಬಾ ವಿಷಾದಿಸಬೇಕಾಗಿದೆ.

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಕಾಲಿಂಪಾಂಗಿನಲ್ಲೂ ಫ್ರೇಸರ್ ಗಂಜಿನಲ್ಲೂ ಗವರ್ನ್‌ಮೆಂಟಿನವರು ಎರಡು ದೊಡ್ಡ ವ್ಯವಸಾಯದ ಫಾರಂಗಳನ್ನು ಸ್ಥಾಪಿಸಿದರು. ಮೊದಲನೇ ಸ್ಥಳದಲ್ಲಿ ಎಪ್ಪತ್ತು ಎಕರೆಗಳೂ, ಎರಡನೇ ಸ್ಥಳದಲ್ಲಿ ಐವತ್ತು ಎಕರೆಗಳೂ ಅದಕ್ಕಾಗಿ ಬಿಡಲ್ಪಟ್ಟು, ಪೈರುಗಳನ್ನು ಪರೀಕ್ಷೆಮಾಡಿ ಹೊಸರೀತಿಯಿಂದ ನಿದರ್ಶನಮಾಡಿ ಬೆಳೆಸುವುದಕ್ಕೆ ಏರ್ಪಾಡಾಗಿದೆ. ಇವೆರಡರ ಪೈಕಿ ಒಂದನ್ನು ಗವರ್ನ್‌ಮೆಂಟಿನವರೇ ರಕ್ಷಿಸುವರು. ಇನ್ನೊಂದನ್ನು ಸೆಂಟ್ ಆಂಡ್ರ್ಯು ಎಂಬ ಸಂಘಕ್ಕೆ ವಹಿಸಿ, ಆ ಸಂಘಕ್ಕೆ ೫,೦೦೦ ರೂಪಾಯಿ ವರುಷಾಶನವನ್ನು ಕೊಡುತ್ತಾರೆ.

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಮಿರ್ಜಾಪುರದಲ್ಲಿ "ಕೇಸರಿ ಸಮಾಚಾರ" ಎಂಬ ಪತ್ರಿಕೆಯ ಎಡಿಟರು ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮೇಲೂ ಪೋಲೀಸ್ ಸೂಪರಿಂಟೆಂಡರ ಮೇಲೂ, ಕೊತ್ವಾಲನ ಮೇಲೂ, ಸಬ್ ಇನ್ಸ್‌ಪೆಕ್ಟರ ಮೇಲೂ, ಒಬ್ಬ ಹರಕಾರನ ಮೇಲೂ ಇವರು ತನ್ನನ್ನು ಅಕ್ರಮವಾಗಿ ದಸ್ತಗಿರಿ ಮಾಡಿ ಲಾಕಪ್ಪಿನಲ್ಲಿ ಹಾಕಿದರೆಂದೂ, ತನಗೆ ಅವರಿಂದ ೩,೦೦೦ ರೂಪಾಯಿ ಮಾನನಷ್ಟ ಕೊಡಿಸಬೇಕೆಂದೂ ಮೊಕದ್ದಮೆ ಮಾಡಿದ್ದನು. ಅಲಹಾಬಾದಿನ ಸಬ್ ಜಡ್ಜರು ಈ ಮೊಕದ್ದಮೆಯನ್ನು ದರ್ಯಾಪ್ತಿ ಮಾಡಿ, ಎಡಿಟರು ತಂದ ದಾವಾವನ್ನು ವಜಾ ಮಾಡಿರುತ್ತಾರೆ.

ವೈಸ್‌ರಾಯಿ ಲಾರ್ಡ್ ಮಿಂಟೋರವರ ಕುಮಾರ್ತೆಯವರಾದ ಲೇಡಿ ವಯೊಲೆಟ್ ಎಲಿಯಟ್ ಯವರ ವಿವಾಹವು ಕಳೆದ ೨೦ನೇ ಭಾನುವಾರ ನಡೆಯಲಿಲ್ಲ. ಜನವರಿ ತಾ ೨೦ನೇ ಬುಧವಾರದ ದಿನ ಕಲ್ಕತ್ತೆಯಲ್ಲಿ ವಿವಾಹವು ಜರುಗುವುದಾಗಿದೆ. ಬರ್ಮಾ ಆಧಿಪತ್ಯಕ್ಕೆ ಸೇರಿದ ರಂಗೂನ್ ಮ್ಯುನಿಸಿಪಾಲಿಟಿಯವರು ಈ ವಿವಾಹ ಕಾಲದಲ್ಲಿ ದಂಪತಿಗಳಿಗೆ ಬಹುಮಾನವಸ್ತುಗಳನ್ನು ಕೊಡುವ ಉದ್ದಿಶ್ಯ ೧,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ. ಕಲ್ಕತ್ತೆಯಲ್ಲಿ ವಿವಾಹದ ದಿನ ಸಾವಿರಾರು ಬಡಬಗ್ಗರಿಗೆ ಸುಭೋಜನ ಮಾಡಿಸಬೇಕೆಂದು ಏರ್ಪಾಡು ಮಾಡುತ್ತಿದಾರೆ.

ಮದರಾಸ್ ಪಟ್ಟಣದಲ್ಲಿ ಹಿಂದೂ ಸಂಘಪರಿಷ್ಕರಣ ಸಮಾಜದವರು ತಾ ೩೦ನೇ ಬುಧವಾರ ರಾತ್ರಿ ವಿಕ್ಟೋರಿಯಾ ಪಬ್ಲಿಕ್ ಹಾಲ್ ಎಂಬ ಬಂಗಲೆಯಲ್ಲಿ ಒಂದು ಸಮಾರಾಧನೆ ನಡೆಯುವಂತೆ ಏರ್ಪಾಡು ಮಾಡಿದಾರೆ. ಈ ಸಮಾರಾಧನೆಗೆ ಹೋಗತಕ್ಕವರು ತಲಾ ೧ ರೂಪಾಯಿ ಫೀಜು ಕೊಡಬೇಕು. ಬ್ರಾಹ್ಮಣರೇ ಅಡಿಗೆ ಮಾಡುತ್ತಾರೆ. ಈ ಭೋಜನಶಾಲೆಯಲ್ಲಿ ಎರಡು ಪಂಗಡಗಳನ್ನು ಮಾಡಿದಾರೆ. ಮೊದಲನೇ ಪಂಗಡದಲ್ಲಿ ಎಲ್ಲಾ ಜಾತಿಯ ಹಿಂದುಗಳೂ ಏಕವಾಗಿ ಕುಳಿತು ಸಹಪಙ್ಕ್ತಿ ಭೋಜನ ಮಾಡುವರು. ಎರಡನೇ ಪಂಗಡದಲ್ಲಿ ನಾಲ್ಕು ಪಂಕ್ತಿ ಎಲೆ ಹಾಕಿ, ಒಂದೊಂದು ಪಙ್ಕ್ತಿಯಲ್ಲಿ ಒಂದೊಂದು ಜಾತಿಯವರು ಕುಳಿತು ಒಂದೇ ಕೊಟ್ಟಿಯಲ್ಲಿ ಭೋಜನ ಮಾಡುವರು.

ಸಂಯುಕ್ತ ಆಧಿಪತ್ಯಗಳ ಗವರ್ನ್‌ಮೆಂಟಿನವರು ಸಕ್ಕರೆ ಕೈಯಾಪರ್ಯದ ಕಸಬನ್ನು ಅಭಿವೃದ್ಧಿಗೆ ತರಬೇಕೆಂದು ತುಂಬಾ ಸಾಹಸಪಡುತ್ತಲೂ, ಜಮೀನ್ದಾರರೇ ಮುಂತಾದವರಿಗೆ ಪ್ರೋತ್ಸಾಹಾದಿಗಳನ್ನು ಒದಗಿಸಿ ಕೊಡುತ್ತಲೂ ಬಂದು, ಎರಡೋ ಮೂರು ನಾಲ್ಕು ಸ್ಥಳಗಳಲ್ಲಿ ಹಲವು ಯಂತ್ರಗಳ ಮೂಲಕ ಕಬ್ಬಿನ ಗಾಣವನ್ನು ನಡೆಸುವಂತೆ ಏರ್ಪಾಡು ಮಾಡಿದಾರೆ. ಸರ್ಕಾರಿ ವ್ಯವಸಾಯದ ಇಲಾಖೆಯ ಅ|| ಡೈರೆಕ್ಟರಾದ ಮೆ|| ನಾವಿ ಎಂಬ ಮಹನೀಯ ಅಧಿಕಾರಿಯು ಹಲವು ಸ್ಥಳಗಳಲ್ಲಿ ಕಬ್ಬನ್ನು ಅಳೆಮಾಡುವುದು, ಹಾಲನ್ನು ಕಾಯಿಸುವುದು, ಇವುಗಳಿಗೆ ಅನುಕೂಲವಾದ ಮತ್ತು ಸುಲಭಸಾಧ್ಯವಾದ ಯಂತ್ರಸಾಧನಗಳನ್ನು ಒದಗಿಸುವುದು, ಈ ಮೊದಲಾದ ಕೆಲಸಗಳನ್ನು ಮಾಡುತ್ತಾ ಕಾರ್ಖಾನೆಯವರಿಗೂ ವ್ಯವಸಾಯಗಾರರಿಗೂ ವಿಶೇಷ ಹೇಳಿಕೊಡುತ್ತಿದಾರೆ.

ಅಫ್ಘಾನಿಸ್ಥಾನದ ಈಗಿನ ಅಮೀರರ ತಂದೆಯವರ ಕಾಲದಲ್ಲಿ ಆ ಸಂಸ್ಥಾನದ ನಿವಾಸಿಗಳಾದ ಹಿಂದುಗಳಿಗೆ ತಲೆತೆರಿಗೆಯನ್ನು ಹಾಕಿ ವಸೂಲ್ಮಾಡುತ್ತಿದ್ದರು. ಕೆಲವು ಭಾಗಗಳಲ್ಲಿ ಈಗಲೂ ಆ ತೆರಿಗೆ ವಸೂಲಾಗುತ್ತಲೇ ಇದೆ. ಇಚೆಗೆ ಒಬ್ಬ ಅಧಿಕಾರಿಯು ಜಲಾಲಾಬಾದಿಗೆ ಹೋಗಿ ಅಲ್ಲಿರುವ ಹಿಂದುಗಳನ್ನು ಕಂಡು, ನಿಮ್ಮ ತಲೆತೆರಿಗೆ ಕೊಟ್ಟದ್ದಕ್ಕೆ ರಶೀತಿಗಳನ್ನು ತೋರಿಸಿ ಎಂದು ಕೇಳಿ ಬಹಳ ಹಿಂಸೆಮಾಡಲಾರಂಭಿಸಿದನು. ಹಿಂದುಗಳೆಲ್ಲಾ ಸೇರಿ ಅಮೀರರಿಗೆ ಒಂದು ಅರ್ಜಿಯನ್ನು ಹಾಕಿದರು. ಅಮೀರರು ಆ ಅಧಿಕಾರಿಯನ್ನು ಹಿಡಿಸಿ ಲಾಕಪ್ಪಿನಲ್ಲಿ ಇಡಿಸಿದಾರೆ. ಈ ಹಿಂದುಗಳು ಅಫ್ಘಾನಿಸ್ಥಾನದಲ್ಲಿ ವ್ಯಾಪಾರಿಗಳಾಗಿಯೂ, ಗುಮಾಸ್ತೆಯರಾಗಿಯೂ ತುಂಬಾ ಒಳ್ಳೇ ಹೆಸರು ಪಡೆದಿದಾರೆ. ಇಂಥವರನ್ನು ಅಲ್ಲಿಂದ ಓಡಿಸುವುದಕ್ಕಾಗಲಿ, ಕಷ್ಟನಷ್ಟಗಳಿಗೆ ಗುರಿಮಾಡುವುದಕ್ಕಾಗಲಿ ಅಮೀರರಿಗೆ ಇಷ್ಟವಿಲ್ಲ.

ಪೂನಾ ಪಟ್ಟಣದ ಕಡೆಯಿಂದ ಮದರಾಸಿಗೆ ಬಂದು ಅಲ್ಲಿ ಮೆಟ್ರಿಕ್ಯುಲೇಷನ್ ಮತ್ತು ಎಫ್ ಎ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ, ತರುವಾಯ ಅಲ್ಲಿನ ವೈದ್ಯವಿದ್ಯಾಶಾಲೆಯಲ್ಲಿ ಡಾಕ್ಟರ್ ಪರೀಕ್ಷೆ ಕೊಟ್ಟು, ಮದರಾಸ್ ಗವರ್ನ್‌ಮೆಂಟಿನವರ ಮತ್ತು ಪಿಠಾಪುರದ ರಾಜರ ವೇತನಗಳನ್ನು ಪಡೆದು, ಸೀಮೆಗೆ ಹೋಗಿ ವೈದ್ಯಶಾಸ್ತ್ರವನ್ನೂ ಶಸ್ತ್ರವೈದ್ಯವನ್ನೂ ಓದಿ ಅಭ್ಯಾಸಮಾಡಿ ತೇರ್ಗಡೆಹೊಂದಿ ಕಳೆದ ತಿಂಗಳು ವಾಪಸು ಮದರಾಸಿಗೆ ಬಂದ [illegible] ಕಮಲಾಕರ ಎಂಬ ಹಿಂದೂ ಸ್ತ್ರೀಯನ್ನು ಮದರಾಸಿನ ಸಂಘಪರಿಷ್ಕಾರಕ ಸಮಾಜದ ಮೆಂಬರುಗಳು ಕರೆಸಿಕೊಂಡು ಕಳೆದ ವಾರ ಆಕೆಗೆ ಬಹುಮಾನವನ್ನು ಕೊಟ್ಟು, ಆಕೆಯ ಚಿತ್ತಮನಸ್ಸನ್ನೂ ಸಾಮರ್ಥ್ಯ ಯೋಗ್ಯತೆ ಸದ್ಗುಣಗಳನ್ನೂ ಕುರಿತು ಕೊಂಡಾಡಿದರು. ಮದರಾಸಿನಲ್ಲಿರುವ [illegible] ದೊಡ್ಡ ಮನುಷ್ಯರೂ, ಹಿಂದೂ [illegible]ಯರೂ ಆ ದಿನ ಸಭೆಯಲ್ಲಿ [illegible] ಆಕೆಯಲ್ಲಿ ತಮಗುಂಟಾಗಿರುವ ಪ್ರೀತಿ ಗೌರವಗಳನ್ನು ಪ್ರಕಾಶಪಡಿಸಿದರು.

ಹಿಂದುಸ್ಥಾನದ ರಾಜ್ಯಭಾರ ಕ್ರಮದಲ್ಲಿ ಬದಲಾವಣೆಗಳನ್ನು ಕಲ್ಪಿಸಿಕೊಟ್ಟು ದೇಶೀಯರಿಗೆ ಹೆಚ್ಚು ಸ್ವಾತಂತ್ರ್ಯಗಳನ್ನು ದಯಪಾಲಿಸಿದ್ದಕ್ಕಾಗಿ ಕಲ್ಕತ್ತಾ ಪ್ರಾಂತ್ಯದಲ್ಲಿರುವ ೯೧ ಜನ ಮಹನೀಯರೂ ಪ್ರಮುಖರೂ ಸೇರಿ ವೈಸ್‌ರಾಯಿ ಪ್ರಭುಗಳ ಬಳಿಗೆ ಹೋಗಿ ಕಳೆದ ಗುರುವಾರ ಮಧ್ಯಾಹ್ನ ಪ್ರಜೆಗಳ ವಂದನೆಗಳನ್ನು ಸಮರ್ಪಿಸಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು. ವೈಸ್‌ರಾಯಿಯವರು ಬಹು ಆದರಪೂರ್ವಕವಾಗಿ ಅವರನ್ನು ಸನ್ಮಾನಿಸಿ ಅವರು ಒಪ್ಪಿಸಿದ ಅಡ್ರೆಸ್ಸನ್ನು ಸಂತೋಷದಿಂದ ಅಂಗೀಕರಿಸಿ ಅವರಿಗೆ ಪ್ರತ್ಯುತ್ತರವಾಗಿ— ಗವರ್ನ್‌ಮೆಂಟಿನವರು ಸತ್ಯಕ್ಕೆ ಅವಶ್ಯವೆಂದು ಕಂಡುಬಂದ ರಿಫಾರ್ಮುಗಳನ್ನು ಪ್ರಜೆಗಳಿಗೆ ತೋರಿಸಿರುತ್ತಾರೆ. ಅದನ್ನು ಸಾರ್ಥಕಪಡಿಸಿ ದೇಶೋನ್ನತಿಯ ಮಹಾ ಕಾರ್ಯದಲ್ಲಿ ಅವರು ತಮ್ಮ ಬುದ್ಧಿ ಶಕ್ತಿಗಳನ್ನು ವಿನಿಯೋಗಿಸಬೇಕಾಗಿದೆ. ಅವರು ಸರ್ಕಾರದವರಿಗೆ ಅವಶ್ಯವಾದ ಸಹಾಯಗಳನ್ನೆಲ್ಲಾ ಮಾಡುತ್ತಾ ಬರಬೇಕಾಗಿದೆ ಎಂಬೀ ಅಭಿಪ್ರಾಯವನ್ನು ತಿಳಿಸಿದರು. ಆ ದಿನ ದಯಮಾಡಿದ್ದ ಮಹನೀಯರ ಪೈಕಿ ದರ್ಭಾಂಗದ ಮಹಾರಾಜರವರೇ ಅಗ್ರಗಣ್ಯರಾಗಿದ್ದರು. ಮತ್ತು ಬರ್ಡ್‌ವಾನ್ ಮಹಾರಾಜರವರು, ಸರ್ ಪ್ರದ್ಯೋತ ಟಾಗೋರ್‌ಯವರು, ಕಾಸಿಂಬಜಾರ್ ಮಹಾರಾಜರವರು, ರಾಜಾ ಪ್ಯಾರಿ ಮೋಹನ ಮುಖರ್ಜಿಯವರು, ಮೆ|| ಸುರೇಂದ್ರನಾಥ ಬ್ಯಾನರ್ಜಿಯವರು ಮೆ|| ಭೂಪೇಂದ್ರ ನಾಥ ಬೋಸ್‌ಯವರು, ಮೆ ಎ ಚೌಧರಿಯವರು ಮೆ|| ಮೋತಿಲಾಲ್ ಘೋಷ್‌ಯವರು ಡಾ ರಾಷ್ ಬಿಹಾರಿ ಘೋಷ್ ಯವರು, ಮೆ ರಾಧಾಚರಣ ಪಾಲ್ ಯವರು, ಮೆ ಸೀತಾನಾಥರಾಯ ಚೌಧರಿಯವರು ಮುಂತಾದ ಪ್ರಮುಖ ಮುಖಂಡರೆಲ್ಲಾ ಹೋಗಿದ್ದರು.

ಈ ದಿನ ಹಿಂದುಸ್ಥಾನದ ಸಂಘಪರಿಷ್ಕರಣ ಸಮಾಜವು ಮದರಾಸ್ ಪಟ್ಟಣದಲ್ಲಿ ನಡೆಯುವುದು. ಮೆ ಜಸ್ಟಿಸ್ ಶಂಕರನ್ ನಾಯರ್ ಯವರು ಸಭಾನಾಯಕರಾಗಿರುತ್ತಾರೆ. ಈ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸತಕ್ಕ ವಿಷಯಗಳೇನೆಂದರೆ (೧) ಸ್ತ್ರೀವಿದ್ಯಾಭ್ಯಾಸವನ್ನು ಅಭಿವೃದ್ಧಿ ಮಾಡುವುದು, (೨) ಸಮುದ್ರಯಾನಕ್ಕೂ ಅನ್ಯದೇಶ ಸಂಚಾರಕ್ಕೂ ಅನುಕೂಲಗಳನ್ನು ಕಲ್ಪಿಸಿ ಪ್ರೋತ್ಸಾಹಪಡಿಸುವುದು, (೩) ವಯಸ್ಸು ಹೆಚ್ಚಿದ ಮೇಲೆ ಗಂಡು ಹೆಣ್ಣಿಗೆ ವಿವಾಹಮಾಡುವುದು, ಒಳಜಾತಿಗಳಲ್ಲಿ ಹೆಣ್ಣುಕೊಟ್ಟು ತರುವುದು, ಬಹು ಪತ್ನೀ ವಿವಾಹವನ್ನು ನಿರ್ಮೂಲಮಾಡುವುದು, (೪) ವಿಧವಾ ವಿವಾಹದಿಂದಲೂ, ವಿಧವೆಯರಿಗೆ ವಿದ್ಯೆ ಕಲಿಸುವುದರಿಂದಲೂ, ಗಂಡ ಸತ್ತರೆ ಹೆಂಡತಿಗೆ ತಲೇ ಕೂದಲು ತೆಗೆಸದೆ ಬಿಡೋಣದರಿಂದಲೂ ವಿಧವೆಯರ ಸ್ಥಿತಿಯನ್ನು ಸಂತೋಷಪ್ರದವಾಗಿ ಮಾಡುವುದು, (೫) ಚಿಕ್ಕ ವಯಸ್ಸಿನ ಅನಾಥ ಹೆಣ್ಣು ಮಕ್ಕಳು ದುಷ್ಟರ ವಶಕ್ಕೆ ಸಿಕ್ಕದಂತೆ ಅವರನ್ನು ಕಾಪಾಡುವುದು, (೬) ಮದ್ಯಪಾನವನ್ನು ತಡೆಯುವುದು, ಜನರ ಸಚ್ಚರಿತ್ರೆಯನ್ನು ಕಾಪಾಡುವುದು, (೭) ಇತರ ಮತವನ್ನು ಅವಲಂಬಿಸಿ ವಾಪಸು ಹಿಂದೂಮತಕ್ಕೆ ಬರಬೇಕೆಂದು ಅಪೇಕ್ಷಿಸತಕ್ಕವರನ್ನು ಸೇರಿಸಿಕೊಳ್ಳುವುದಕ್ಕೆ ಅನುಕೂಲಗಳನ್ನು ಕಲ್ಪಿಸುವುದು, (೮) ಹೊಲೆಯರೇ ಮೊದಲಾದ ಕೀಳು ಜಾತಿಯವರನ್ನು ಎಲ್ಲಾ ಭಾಗಗಳಲ್ಲೂ ಮುಂದಕ್ಕೆ ತರುವುದು, (೯) ಸತ್ರ ದೇವಸ್ಥಾನಗಳೇ ಮೊದಲಾದವುಗಳಲ್ಲಿ ಧರ್ಮಕಾರ್ಯಗಳನ್ನು ತೃಪ್ತಿಕರವಾಗಿ ನಡೆಸುವುದಕ್ಕೆ ಏರ್ಪಾಡು ಮಾಡುವುದು, (೧೦) ಹೆಣ್ಣು ಮಕ್ಕಳನ್ನು ದೇವದಾಸಿಯರಾಗಿ ಬಿಡದಂತೆ ತಡೆಮಾಡುವುದು, (೧೧) ಜಾತಿಯ ಕಟ್ಟುಪಾಡುಗಳನ್ನು ಸಡಿಲಮಾಡಿ, ಎಲ್ಲರೂ ಸೇರಿ ಭೋಜನ ಪ್ರತಿಭೋಜನಗಳನ್ನು ಮಾಡುವಂತೆಯೂ ಈ ಮೂಲಕ ಪರಸ್ಪರ ಪ್ರೀತಿವಿಶ್ವಾಸಾದಿಗಳನ್ನು ಹೆಚ್ಚಿಸುವಂತೆಯೂ ಮಾಡುವುದು ಇವೇ.

ವಿದೇಶ ವರ್ತಮಾನಗಳು.

ಜರ್ಮನಿ ರಾಜ್ಯದ ನಾವೆಯ ಇಲಾಖೆಗೆ ನಾಲ್ಕು ವಿಮಾನ ಯಂತ್ರಗಳನ್ನು ಮಾಡಿಕೊಡಬೇಕೆಂದು ಜೆಪ್ಪೆಲಿನ್ ಎಂಬ ಪ್ರಸಿದ್ಧ ಕಾರೀಗಾರರಿಗೆ ತಿಳಿಸಿ ಮಾಡಿ ಬಿಟ್ಟಿದಾರೆ.

ಲಿವರ್ಪೂಲ್ ಎಂಬ ಇಂಗ್ಲಿಷ್ ಪಟ್ಟಣಕ್ಕೆ ಹೋಗುತ್ತಿದ್ದ ಐದಾವಾ ಎಂಬ ಹಡಗು ಕಳೆದ ವಾರ ದಾರಿಯಲ್ಲಿ ಬಂಡೆಗೆ ಬಡಿದು ಒಡೆದು ಹೋಯಿತು. ಅದರಲ್ಲಿದ್ದ ಆರು ಜನರು ಮೃತಪಟ್ಟರು. ಹತ್ತಿಯ ೪೧,೦೫೦ ಗಟ್ಟಾಗಳು ಸಮುದ್ರದ ಪಾಲಾದವು.

ಜರ್ಮನಿಗೆ ಸೇರಿದ ಡಮಾಸ್ಕಸ್ ಪಟ್ಟಣದಲ್ಲಿ ಸುಮಾರು ೩,೦೦೦ ವರುಷಗಳ ಹಿಂದಿನ ಪುಸ್ತಕವು ಸಿಕ್ಕಿರುತ್ತದೆಂತಲೂ, ಇದರಿಂದ ಯೇಸು ಕ್ರಿಸ್ತನ ಜೀವಿತಕಾಲದ ಅನೇಕ ವಿದ್ಯಮಾನಗಳು ತಿಳಿಯಲು ಅನುಕೂಲವಾಗಬಹುದೆಂತಲೂ ಮಾಸ್ಕೋ ಪಟ್ಟಣದ ಪತ್ರಿಕೆಗಳು ಪ್ರಕಟಪಡಿಸಿರುತ್ತವೆ.

ಫ್ರಾನ್ಸ್ ರಾಜ್ಯಕ್ಕೆ ಸೇರಿದ ಲಿಮೋಗೀಸ್ ಎಂಬ ಊರಿನ ಬಳಿ ಒಂದು ಕ್ರಿಕೆಟ್ ಸಾವಿರಾರು ಜನರು ಇದ್ದ ಇನ್ನೊಂದು ರೈಲ್ ಗಾಡಿಗೆ ಬಡಿದು ಅನಾಹುತವಾಗಿ ನಾಲ್ಕೈದು ಗಾಡಿಗಳು ಹತ್ತಿ ಉರಿದುಹೋದವು. ೧೩ ಜನರು ಮೃತಪಟ್ಟರೆಂತಲೂ, ೩೦ ಮಂದಿ ಗಾಯಪಟ್ಟರೆಂತಲೂ ತಂತೀ ವರ್ತಮಾನ ಬಂದಿದೆ.

ಪರ್ಷಿಯಾ ರಾಜ್ಯದಲ್ಲಿ ಟೇಬ್ರಿಜ್ ಪಟ್ಟಣದೊಳಗೆ ಸರ್ಕಾರಿ ಸೈನಿಕರಿಗೂ ಪ್ರಜಾಪಕ್ಷದವರಿಗೂ ಭಯಂಕರವಾದ ಯುದ್ಧವಾಯಿತು. ೨,೦೦೦ ಜನರಿಗೆ ಸಾಮಗಣದಷ್ಟು ಯುದ್ಧ ಭೂಮಿಯಲ್ಲಿ ೬೭ ಹೆಣಗಳು ಬಿದ್ದಿದ್ದವು. ಇವರ ಲ್ಲಾ ಹೆಂಗಸರು, ಗಂಡಸರಂತೆ ದುಸ್ತು ಹಾಕಿಕೊಂಡು ಯುದ್ಧ ಮಾಡಿ ಮಡಿದು ಹೋದರು.

ಫ್ರಾನ್ಸ್ ಪ್ರಭುತ್ವದ ಪ್ರೆಸಿಡೆಂಟರಾದ ಎಂ. ಫಾಲಿಯರೀಸ್ ಯವರು ತವಾಕ್ಕೋಸ್ಕರ ಸಂಚರಿಸುತ್ತಿರುವಾಗ್ಗೆ ಮಟ್ಟಿಸ್ ಎಂಬೊಬ್ಬ ಸೇವಕನು ಅವರ ಮೇಲೆ ಹಾರಿ ಅವರ ಕತ್ತನ್ನು ಹಿಡಿದು ಕೆಡಹಿದನು. ಅವರಿಗೂ ಅವನಿಗೂ ಸ್ವಲ್ಪ ಹೊತ್ತು ಕಡಿದಾಟವಾಯಿತು. ಅವನನ್ನು ಹಿಡಿದು ಸೆರೆಯಲ್ಲಿ ಹಾಕಿದರು. ಪ್ರೆಸಿಡೆಂಟರಿಗೆ ಗಾಯಗಳೇನೂ ಆಗಲಿಲ್ಲ.

ಅಮೇರಿಕದ ಮುಖ್ಯಪಟ್ಟಣವಾದ ನ್ಯೂಯಾರ್ಕ್ ನಗರದಿಂದ ಲಾಂಗ್ ಐಲೆಂಡ್ ಎಂಬಲ್ಲಿಗೆ ಹೋಗುವಾಗ್ಗೆ ದಾರಿಯಲ್ಲಿ ಮೂರು ಮೈಲಿ ಉದ್ದವಾದ ಒಂದು ರೈಲ್ವೆ ಸೇತುವೆಯನ್ನು ಕಟ್ಟಿಸಬೇಕೆಂದು ಕಂಪನಿಯವರು ಯೋಚಿಸುತ್ತಿದಾರೆ. ಈ ಸೇತುವೆಗೆ ಒಂದೂವರೆ ಕೋಟಿ ರೂಪಾಯಿ ಖರ್ಚಾಗುವುದು. ಅಷ್ಟು ಭಾರೀ ಸೇತುವೆಯು ಪ್ರಪಂಚದ ಇನ್ಯಾವ ಭಾಗದಲ್ಲೂ ಇರಲಾರದು.

ವಿಲಾಯಿತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಕೂಚ್‌ಬೇಹಾರ್ ಮಹಾರಾಜರವರ ಕುಮಾರನು ಲಂಡನ್ ಪಟ್ಟಣದಲ್ಲಿ ಮೋಟಾರ್ ಗಾಡಿಯಲ್ಲಿ ಕುಳಿತು ಹೋಗುತ್ತಿದ್ದಾಗ ಒಬ್ಬ ಮುದುಕ ಮನುಷ್ಯನಿಗೆ ಗಾಡಿಯಿಂದ ಜಖಂ ಆಯಿತು. ಆ ರಾಜಕುಮಾರನು ಅದು ತನ್ನ ತಪ್ಪೆಂದು ಹೇಳಿ ಮ್ಯಾಜಿಸ್ಟ್ರೇಟರ ಮುಂದೆ ಹೋಗಿ ಒಪ್ಪಿಕೊಂಡನು. ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ವಿಚಾರಣೆ ಮಾಡಲು ತನಗೆ ಅಧಿಕಾರವಿಲ್ಲವೆಂದು ಹೇಳಿ, ರಾಜಕುಮಾರನನ್ನು ಬಿಟ್ಟುಬಿಟ್ಟರು.

ಅಮೇರಿಕಕ್ಕೆ ಸೇರಿದ ಪಿಟ್ಸ್‌ಬರ್ಗ್ ನಗರದಲ್ಲಿ ೬೦ ಮಂದಿ ಮ್ಯುನಿಸಿಪಲ್ ಕೌನ್ಸಿಲರುಗಳು ಯಾವುದೋ ಒಂದು ವಿಷಯದಲ್ಲಿ ಒಂದೂವರೆ ಲಕ್ಷ ರೂಪಾಯಿ ಲಂಚ ತೆಗೆದುಕೊಂಡರೆಂದು ಗೊತ್ತಾದ್ದರಿಂದ ಅವರನ್ನು ದರ್ಯಾಪ್ತು ಮಾಡುತ್ತಿದಾರೆ. ಆರುಮಂದಿ ಕೌನ್ಸಿಲರುಗಳು ಮಾತ್ರ ಲಂಚ ತೆಗೆದುಕೊಳ್ಳಲು ಒಪ್ಪದೆ ಹೋದರು. ಈ ರೀತಿ ಪ್ರಜಾಪ್ರತಿನಿಧಿಗಳು ಜನರಿಂದ ಲಂಚ ರುಷುವತ್ತನ್ನು ತೆಗೆದುಕೊಂಡರೆಂಬುವುದು ಆ ಸ್ವಾತಂತ್ರ್ಯದಲ್ಲಿ ತುಂಬಾ ವ್ಯಾಕುಲವನ್ನುಂಟುಮಾಡಿದೆ.

ಚೀನಾ ಗವರ್ನಮೆಂಟಿನವರ ಅಪೇಕ್ಷೆಯ ಪ್ರಕಾರ ಜಪಾನ್ ಸರ್ಕಾರದವರು ಪ್ರತಿ ವರುಷವೂ ೧೫೦ ಚೀನಾ ವಿದ್ಯಾರ್ಥಿಗಳನ್ನು ಜಪಾನ್ ಸ್ಕೂಲುಗಳಿಗೆ ಸೇರಿಸಿಕೊಂಡು ಅವರಿಗೆ ವಿದ್ಯೆ ಕಲಿಸುವುದಾಗಿ ಮಾತು ಕೊಟ್ಟಿದಾರೆ. ಇದಕ್ಕಾಗಿ ಚೀನಾ ಸರ್ಕಾರದವರು ಜಪಾನ್ ಗವರ್ನಮೆಂಟಿಗೆ ವರುಷಕ್ಕೆ ೧೦,೦೦೦ ಪೌನ್ನನ್ನು ಕೊಡುತ್ತಾ ಬರುವರು. ಈಗ ಜಪಾನ್ ರಾಜಧಾನಿಯಾದ ಟೋಕಿಯೋ ಪಟ್ಟಣದ ವಿದ್ಯಾಶಾಲೆಗಳಲ್ಲಿ ೩,೦೦೦ ಚೀನಾ ವಿದ್ಯಾರ್ಥಿಗಳು ಓದುತ್ತಿದಾರೆಂದು ಪ್ರಕಟವಾಗಿದೆ.

ಟರ್ಕೀ ರಾಜ್ಯದಲ್ಲಿ ಸೈನ್ಯಕ್ಕೆ ಡ್ರಿಲ್ ಹೇಳಿಕೊಡತಕ್ಕ ಕೆಲವು ಶಿಕ್ಷಕರು ಆಫ್ಘಾನಿಸ್ಥಾನಕ್ಕೆ ಬಂದು, ಕೆಲವು ಕಾಲದಿಂದ ಅಮೀರರ ಅಪ್ಪಣೆಯ ಪ್ರಕಾರ ಕಾಬೂಲ್ ನಗರದಲ್ಲಿರುವ ಅಫ್ಘಾನ್ ಸೈನಿಕರನ್ನು ತರಬೇತು ಮಾಡುತ್ತಿದಾರೆ. ಮುಂದೆ ತರಬೇತಾದ ಸೈನಿಕರೂ ಹುಟ್ಟಿದಾಗಲೂ ಅಫ್ಘಾನಿಸ್ಥಾನದ ಎಲ್ಲಾ ಜಿಲ್ಲೆಗಳಿಗೂ ಹೋಗಿ ಅಲ್ಲಲ್ಲಿರುವ ಅಫ್ಘಾನ್ ಸೈನ್ಯವನ್ನು ತರಬೇತು ಮಾಡುತ್ತಿರುವರು. ಇದಲ್ಲದೆ ತುರ್ಕೀ ಜನರು ಈಗ ಅಫ್ಘಾನಿಸ್ಥಾನದಲ್ಲಿ ಮೊದಲಿಗಿಂತಲೂ ಹೆಚ್ಚಾಗಿರುತ್ತಾರೆಂದು ತಿಳಿಯುವುದು.

ಜರ್ಮನಿಯವರಿಗೆ ಸೇರಿದ ಪೂರ್ವ ಆಫ್ರಿಕಾದಲ್ಲಿ ಪ್ರೊಫೆಸರ್ ಫ್ರಾಸ್ ಎಂಬುವರು ಶೋಧನೆ ಮಾಡುತ್ತಿರುವಲ್ಲಿ ಪ್ರಾಚೀನ ಕಾಲದ ಒಂದು ಮೃಗದ ಒಂದು ಮೂಳೆಯು ದೊರಕಿರುತ್ತದೆ. ಅದು ೧೧ ಅಡಿ ಉದ್ದವಾಗಿದೆ. ಆ ಮೃಗದ ಚಿಪ್ಪೆಲುಬು ಬಹಳ ಉದ್ದವಾಗಿದೆ ಎಂತಲೂ, ಇಷ್ಟು ದೊಡ್ಡ ಮೃಗವು ಈಗ ಲೋಕದಲ್ಲಿ ಸಿಕ್ಕುವುದಿಲ್ಲವೆಂತಲೂ ಆ ಪಂಡಿತನು ಹೇಳುತ್ತಾನೆ. ಜರ್ಮನಿ ಸರ್ಕಾರದವರು ಆತನಿಂದ ಇನ್ನೂ ಶೋಧನೆ ಮಾಡಿಸು...

ಅಮೇರಿಕಕ್ಕೆ ಸೇರಿದ ಬ್ರೂಕ್ಲಿನ್ ಪಟ್ಟಣದಲ್ಲಿ ಗ್ಯಾಸ್ ಎಂಬ ದೀಪದ ಹೊಗೆಯು ಇದ್ದ ದೊಡ್ಡ ಕೊಳಾಯಿಯು ಒಡೆದು ಹತ್ತಿಕೊಂಡಿತು. ಅಲ್ಲಿ ಕೆಲಸ ಮಾಡುತ್ತಿದ್ದ ಜನರ ಪೈಕಿ ೧೭ ಮಂದಿಯು ಮೇಲೆ ಕಲ್ಲು ಮಣ್ಣು ಅಪಾರವಾಗಿ ಬಿದ್ದು ಹತರಾದರು. ಒಂದು ಬೀದಿಯು ಒಡೆದು ಹಳ್ಳಕ್ಕೆ ಮಗುಚಿಕೊಂಡಿತು. ಬೆಂಕಿಯ ಜ್ವಾಲೆಗಳು ಅಪಾರವಾಗಿ ಎದ್ದು ಸುತ್ತಲೂ ಇರುವ ಮನೆ ಮಠಗಳನ್ನು ಸುಟ್ಟುಹಾಕುತ್ತಿದ್ದವು. ಅಷ್ಟರಲ್ಲೇ ಮ್ಯುನಿಸಿಪಾಲಿಟಿಯವರು ತುಂಬಾ ಸಾಹಸಪಟ್ಟು ಬೆಂಕಿಯನ್ನು ಆರಿಸಿ ಮನೆಗಳನ್ನು ಉಳಿಸಿದರು.

ಚಿಕಾಗೋ ಯೂನಿವರ್ಸಿಟಿ ವಿದ್ಯಾ ಸಂಘದ ಪಂಡಿತನಾದ ಆರ್. ಎಲ್. ಗಾರ್ನರ್ ಎಂಬಾತನು ಫ್ರೆಂಚ್ ಕಾಂಗೋದಲ್ಲಿ ಹೋಗಿ ಸಿಂಹ ಕೋತಿಗಳ ಸಂಭಾಷಣೆಗಳನ್ನು ಪರೀಕ್ಷೆ ಮಾಡುತ್ತಿದಾನೆ. ಆತ ಹೇಳುವುದೇನೆಂದರೆ— ಕೀಚುಕೀಚೆಂದು ಶಬ್ದಮಾಡುವುದು ಒಂದು ತರದ ಮಾತಾಗಿರುತ್ತದೆ. ಈ ಭಾಷೆಯನ್ನು ನಾನು ಸಹ ಸ್ವಲ್ಪ ಕಲಿತು ನನ್ನ ಬಳಿ ಇರುವ ಕೋತಿಯ ಸಂಗಡ ಮಾತನಾಡುತ್ತೇನೆ ಎಂಬುದೇ. ಹೀಗೆ ಆತನು ಕೋತಿಯ ಕೂಡ ಕೀಚು ಕೀಚೆಂದು ಮಾತನಾಡುವುದನ್ನು ಅಲ್ಲಿನ ಜನರು ನೋಡಿ ಬಹಳ ಆಶ್ಚರ್ಯಪಡುತ್ತಿದಾರೆ.

ಫ್ರಾನ್ಸ್ ರಾಜ್ಯದ ರಾಜಧಾನಿಯಾದ ಪ್ಯಾರಿಸ್ ಪಟ್ಟಣದಲ್ಲಿ ಕೆಲವು ಜನರು ಸೇರಿ ಫಿತೂರಿಮಾಡುತ್ತಿದಾರೆಂದೂ, ಹಿಂದುಸ್ಥಾನದ ಫಿತೂರಿಕೋರರು ಸೇರಿಕೊಂಡಿದಾರೆಂದೂ, ಒಬ್ಬ ಹಿಂದುವಿನ ಹೆಂಡತಿಯಾದ ಜರ್ಮನ್ ಸ್ತ್ರೀಯು ಈ ಫಿತೂರೀ ಗುಂಪಿನ ಮುಖಂಡಳಾಗಿ, ಎಲ್ಲರೂ ಬಾಂಬ್ ಎಂಬ ಸಿಡಿಮದ್ದಿನ ಗುಂಡುಗಳ ತಯಾರಿಯಲ್ಲಿ ಉದ್ಯುಕ್ತರಾಗಿದಾರೆಂದೂ, ರಷ್ಯಾ ರಾಜ್ಯದ ಅರಾಜಕ ಗುಂಪಿನವರು ಈ ಫಿತೂರಿಕೋರರಿಗೆ ಸಹಾಯಕರಾಗಿದಾರೆಂದೂ, ಪ್ಯಾರಿಸ್ಸಿಗೆ ಹೋಗುವಂಥಾ ಇಂಗ್ಲಿಷ್ ದೊಡ್ಡ ಮನುಷ್ಯರನ್ನು ಕೊಲ್ಲಬೇಕೆಂಬುವುದೇ ಅವರ ಉದ್ದೇಶವೆಂದೂ ಪ್ರಕಟವಾಗಿದೆ.

ಫ್ರಾನ್ಸ್ ಪ್ರಭುತ್ವದ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರದಲ್ಲಿ ವೈದ್ಯ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಬದಲಾವಣೆ ಮಾಡಿದರು. ವಿದ್ಯಾರ್ಥಿಗಳು ಪರೀಕ್ಷಾ ಮಂದಿರದಲ್ಲಿ ಗಲಭೆ ಮಾಡಿದರು. ಪೋಲೀಸಿನವರಿಗೂ ಅವರಿಗೂ ಜಗಳವಾಯಿತು. ೫೦ ಮಂದಿ ಪೋಲೀಸಿನವರಿಗೂ ಸಿಪಾಯಿಗಳಿಗೂ ಗಾಯಗಳಾದವು, ದಂಗೆ ಮಾಡಿದವರಲ್ಲಿ ೫೬ ಮಂದಿಯನ್ನು ದಸ್ತಗಿರಿ ಮಾಡಿದಾರೆ. ಈ ಸಂಗತಿಯನ್ನು ಕೇಳಿ ಸರ್ಕಾರದವರು ಪರೀಕ್ಷೆಯಲ್ಲಿ ಮಾಡಿದ್ದ ಬದಲಾವಣೆಯನ್ನು ವಜಾ ಮಾಡಿದರು. ಪೋಲೀಸ್ ಅಧಿಪತಿಯು ಪೋಲೀಸ್ ಇಲಾಖೆಯವರು ಪರೀಕ್ಷೆಯ ಮನೆಗೆ ನುಗ್ಗಿ ಗಲಭೆಯನ್ನು ಉಂಟುಮಾಡಿದ್ದಕ್ಕೆ ಅವರನ್ನು ಅಕ್ರಮಗಾರರೆಂದು ದಂಡಿಸಿರುತ್ತಾನೆ.

ವಿಲಾಯಿತಿಗೆ ಸೇರಿದ ಪ್ರೆಸ್ಟನ್ ಪಟ್ಟಣದ ಒಂದು ಕೈಗಾರಿಕೆ ಕಾರ್ಖಾನೆಯವರು ಬಹು ಸಾಮಾನ್ಯವಾದ ಉಪಾಯವನ್ನು ಕಂಡುಹಿಡಿದಿರುತ್ತಾರೆ. ಈ ಉಪಾಯದಿಂದ ರೈಲ್ ಗಾಡಿಗಳನ್ನು ಎಷ್ಟು ವೇಗದಿಂದ ಹೋಗುತ್ತಿದ್ದಾಗ್ಯೂ ನಿಮಿಷಮಾತ್ರದಲ್ಲಿ ನಿಲ್ಲಿಸಿಬಿಡಬಹುದು. ಲಾಂಕೆಷೀರಿನಿಂದ ಯಾರ್ಕ್‌ಷೈರಿಗೆ ಹೋಗತಕ್ಕ ರೈಲ್ ಗಾಡಿಗಳಿಗೆ ಈ ಉಪಾಯವನ್ನು ಪ್ರಯೋಗಿಸಿ ಪರೀಕ್ಷೆ ಮಾಡಿದರು. ಅದರಿಂದ ಗಾಡಿಯ ಗಾರ್ಡ್ ತನಗೆ ಅವಶ್ಯಕ ಕಂಡುಬಂದಕ್ಷಣ ಮುಂದಿನ ಎಂಜಿನ್ ಗಾಡಿಯವನ ಅಭಿಪ್ರಾಯವನ್ನೂ ಸಹಾಯವನ್ನೂ ಅಪೇಕ್ಷಿಸದೇನೇ ಗಾಡಿಗಳನ್ನು ಚಟಕ್ಕನೆ ನಿಲ್ಲಿಸಿಕೊಳ್ಳಬಹುದೆಂಬುದು ನಿರ್ಧಾರವಾಗಿ ಗೊತ್ತಾಯಿತು. ಈ ಉಪಾಯದಿಂದ ರೈಲ್ ಗಾಡಿಗಳಿಗೆ ಅಪಾಯ ಸಂಭವಿಸದಂತೆಯೂ ಪ್ರಾಣಹಾನಿಯಾಗದಂತೆಯೂ ತುಂಬಾ ಸಹಾಯವಾಗುವುದೆಂದು ಆ ರೈಲ್ ಕಂಪನಿಯವರು ಹೇಳಿದಾರೆ.

ಫ್ರಾನ್ಸ್ ಪ್ರಜಾ ಪ್ರಭುತ್ವವೇ ಬಹಳ ಐಶ್ವರ್ಯಯುಕ್ತವಾದ ರಾಜ್ಯವೆಂದು ಹೇಳಬಹುದಾಗಿದೆ. ಯಾಕಂದರೆ ಫ್ರೆಂಚ್ ಪ್ರಜೆಗಳು ಸಾಮಾನ್ಯವಾಗಿ ಪ್ರಪಂಚದ ಎಲ್ಲಾ ಗವರ್ನಮೆಂಟುಗಳ ಸರ್ಕಾರೀ ಸಾಲದ ಪತ್ರಗಳಲ್ಲೂ ಹಣ ಹಾಕಿರುತ್ತಾರೆ. ರಷ್ಯಾ, ಚೀನಾ, ತುರ್ಕಿ, ಇಟಲಿ, ಸ್ಪೈನ್, ಗ್ರೀಸ್, ಸರ್ವಿಯಾ, ಬಲ್ಗೇರಿಯಾ, ಪೋರ್ಚುಗಲ್, ರೊಮೇನಿಯಾ, ಬ್ರೆಜಿಲ್, ಅರ್ಜಂಟೈನ್, ಮೆಕ್ಸಿಕೋ, ಬೆಲ್ಜಿಯಂ, ಹಾಲೆಂಡ್, ಈ ಮೊದಲಾದ ರಾಜ್ಯಗಳ ಸರ್ಕಾರಿ ಸಾಲದ ಪತ್ರಗಳ ಮೇಲೆ ಹಣ ಹಾಕಿರುವರು. ಕಳೆದ ೧೯೦೭ ನೇ ಡಿಸೆಂಬರ್ ಆಖೈರಿನಲ್ಲಿ ಫ್ರೆಂಚ್ ಬ್ಯಾಂಕುಗಳಲ್ಲಿರುವ ಹಣವೂ, ಪ್ರಜೆಗಳು ಕೊಂಡು ಇಟ್ಟುಕೊಂಡಿರುವ ಪತ್ರಗಳ ಹಣವೂ ಒಟ್ಟು ೩೯೪ ಕೋಟಿಯೂ ೨೮ ಲಕ್ಷದ ೪೦ ಸಾವಿರ ಪೌಂಡುಗಳಾಗುತ್ತವೆ. ಇದಲ್ಲದೆ ಫ್ರೆಂಚ್ ಗವರ್ನಮೆಂಟಿನ ೧೨೭ ಕೋಟಿಯೂ, ೩೮ ಲಕ್ಷ ಪೌಂಡ್ ಸಾಲವನ್ನೂ ಫ್ರೆಂಚ್ ಜನರೇ ಕೊಟ್ಟು, ಪತ್ರಗಳನ್ನು ಪಡೆದಿರುತ್ತಾರೆ. ಆದಕಾರಣ ಪರರಾಜ್ಯಗಳಿಂದ ಬಡ್ಡೀ ಹಣವನ್ನು ತರಿಸಿಕೊಳ್ಳುವುದಲ್ಲದೆ ಫ್ರೆಂಚ್ ಪ್ರಜೆಗಳು ತಮ್ಮ ಸರ್ಕಾರದವರು ಮಾಡಿರುವ ಸಾಲದ ಬಡ್ಡಿಯನ್ನೂ ತಾವೇ ಪಾವತಿ ತೆಗೆದುಕೊಳ್ಳುವರು. ಬಡ್ಡಿಯ ರೂಪದಲ್ಲಿ ಫ್ರೆಂಚರು ಪರದೇಶೀಯರಿಗೆ ಹಣ ಕಾಸನ್ನು ಕೊಡುವವರಾಗಿಲ್ಲ.

ಕಳೆದ ೨೧ ನೇ ತಾ ಸೋಮವಾರ ಮಹಾಪ್ರಭು ಚಕ್ರವರ್ತಿ ಸಾರ್ವಭೌಮರವರು ಪಾರ್ಲಿಮೆಂಟ್ ಸಭೆಯನ್ನು ಬರಖಾಸ್ತು ಮಾಡುವುದಕ್ಕಿಂತ ಮೊದಲು ಮೆಂಬರುಗಳನ್ನು ಕುರಿತು ಹಿಂದುಸ್ಥಾನದ ಸ್ಥಿತಿಗತಿಯ ವಿಷಯವಾಗಿ ಅಪ್ಪಣೆ ಕೊಡಿಸಿದ್ದೇನೆಂದರೆ—ಹಿಂದುಸ್ಥಾನದ ವಾಯವ್ಯ ಸರಹದ್ದಿನಲ್ಲಿ ಎಲ್ಲೆ ಕಟ್ಟಿನ ಆಚೆ ಇರುವ ವಂಶೀಕರು ನಮ್ಮ ಪ್ರಾಂತ್ಯಕ್ಕೆ ನುಗ್ಗಿ ಬಂದು ದಾಂಧಲೆ ಮಾಡುತ್ತಿದ್ದದ್ದನ್ನು ನಮ್ಮ ಸೈನಿಕರು ಪರಾಕ್ರಮದಿಂದ ಅಡಗಿಸಿ ಎಲ್ಲಾ ಶಮನಮಾಡಿರುತ್ತಾರೆ. ಕ್ಷಾಮನಿವಾರಣೆಗೆ ನಮ್ಮ ಅಧಿಕಾರಿಗಳು ಬಹಳ ಸಾಹಸಪಟ್ಟು ಪ್ರಜೆಗಳ ಕಷ್ಟವನ್ನು ಕಡಮೆಮಾಡಿ, ದೇಶದ ಶ್ರೇಯಸ್ಸಿಗೆ ಸಹಾಯಕಾರಿಯಾದ ಕಾರ್ಯಗಳನ್ನು ಮುಖವರ್ಜಿಯಿಂದ ನಡೆಸಿರುತ್ತಾರೆ.—ನಮ್ಮ ಅಧಿಕಾರಿಗಳ ಪ್ರಾಣವನ್ನು ತೆಗೆಯಬೇಕೆಂತಲೂ, ಬ್ರಿಟಿಷ್ ರಾಜ್ಯಭಾರಕ್ಕೆ ಹಿಂದುಸ್ಥಾನದಲ್ಲಿ ಚ್ಯುತಿಯನ್ನುಂಟುಮಾಡಬೇಕೆಂತಲೂ ಅಲ್ಲಿನ ಕೆಲವು ದುಷ್ಟಸ್ವಭಾವವುಳ್ಳ ಜನರು ಚಳವಳಿಗಳನ್ನು ಮಾಡಿ, ಪ್ರಜಾಸೌಖ್ಯದ ಭಂಗವನ್ನುಂಟುಮಾಡಿದ್ದು ತುಂಬಾ ದುಃಖಕರವಾಗಿರುತ್ತದೆ. ಆದರೆ ಈ ಕೃತ್ಯಗಳು ಪ್ರಜಾಬಾಹುಳ್ಯದ ರಾಜಭಕ್ತಿಯನ್ನು ವಿಶೇಷವಾಗಿ ತೋರಪಡಿಸಿರುವುದು. ಅಂಥಾ ಕೃತ್ಯಗಳನ್ನು ಅಡಗಿಸುವುದಕ್ಕೆ ನಮ್ಮ ಗವರ್ನಮೆಂಟಿನವರು ಕಠಿಣತರವಾದ ಕಾನೂನುಗಳನ್ನು ... ಹಿಂದುಸ್ಥಾನದ ಪ್ರಜೆಗಳಿಗೂ ಕೆಲವು ಸ್ವಾತಂತ್ರ್ಯಗಳನ್ನು ವಹಿಸುವುದು ಅವಶ್ಯವೆಂದು ಕಂಡುಬಂದಿರುತ್ತದೆ. ಈ ಹೊಸ ಏರ್ಪಾಟುಗಳಿಂದ ಪರಸ್ಪರವಾದ ನಂಬಿಕೆಯೂ ಪ್ರೀತಿಯೂ ಹೆಚ್ಚಿ ದೇಶೋನ್ನತಿಯು ಸ್ಥಿರಪಡುವುದೆಂದು ನಂಬಿ ನಿರೀಕ್ಷಿಸುತ್ತೇವೆ ಎಂಬುದೇ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲ್ ಮೆಂಬರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳುಕಟ್ಟಿಯ ಮೀಟಿಂಗ್ ನಡೆಸಿದರು. ಪ್ರೆಸಿಡೆಂಟ್ ಮಿ॥ ಕಾಂತರಾಜೇ ಅರಸಿನವರು ಬರಲಿಲ್ಲವಾದ್ದರಿಂದ ವೈಸ್ ಪ್ರೆಸಿಡೆಂಟ್ ಮಿ॥ ಎಂ. ಜಿ. ಕೃಷ್ಣಸ್ವಾಮಿರಾಯರು ಅಗ್ರಾಸನವನ್ನು ವಹಿಸಿದ್ದರು. ಕಳೆದ ನೊವೆಂಬರ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ೧೩,೬೨೭ ಚಿಲ್ಲರೆ ರೂಪಾಯಿ ಜಮಾ, ೧೦,೩೧೯ ಚಿಲ್ಲರೆ ರೂಪಾಯಿ ಖರ್ಚು ಆಯಿತು. ಆ ತಿಂಗಳಲ್ಲಿ ಜನನ ೧೦೬; ಮರಣ—ಪ್ಲೇಗ್ ೧೭, ವಾಂತಿಭೇದಿ ೧, ಸಿಡುಬು ೩, ಜ್ವರ ೧೪, ಇತರ ಕಾರಣಗಳು ೧೫೩, ಒಟ್ಟು ೧೮೮. ಆಡಿಟರುಗಳು ಆ ತಿಂಗಳ ಜಮಾಖರ್ಚು ಮುಂತಾದ ಲೆಕ್ಕಗಳನ್ನು ತನಿಖೆ ಮಾಡಲಿಲ್ಲವೆಂದು ಗೊತ್ತಾಯಿತು. ಡಿಸೆಂಬರ್ ತಿಂಗಳಲ್ಲಿ ಮ್ಯಾನೇಜಿಂಗ್ ಕಮಿಟಿಯವರು ಸೇರಲಿಲ್ಲ.

ಪ್ಲೇಗ್ ಆದ ಮನೆಗಳನ್ನು ಶುದ್ಧಿ ಮಾಡುವುದಕ್ಕೆ ಹತ್ತು ಹತ್ತು ಜನರುಳ್ಳ ಎರಡು ಗ್ಯಾಂಗುಗಳಿದ್ದವು. ಈ ಪೈಕಿ ಒಂದನ್ನು ಹಿಂದೆಯೇ ವಜಾ ಮಾಡಿದ್ದಾಯಿತು. ಇನ್ನೊಂದು ಗ್ಯಾಂಗನ್ನೂ ವಜಾ ಮಾಡಿ ಆ ಸಿಬ್ಬಂದಿಯನ್ನು ಕನ್ಸರ್ವೆನ್ಸಿ ಸಿಬ್ಬಂದಿಗೆ ಸೇರಿಸಿಕೊಳ್ಳಬೇಕೆಂತಲೂ, ಇದರಿಂದ ಅವಶ್ಯಬಿದ್ದಾಗ ಡಿಸಿನ್‌ಫೆಕ್ಷನ್ ನಡಿಸಬೇಕೆಂತಲೂ ಗವರ್ನಮೆಂಟಿನಿಂದ ಹುಕುಂ ಬಂದಿತ್ತು. ಹೆಲ್ತ್ ಆಫೀಸರವರು ಹಾಗೆ ವಜಾ ಮಾಡುವುದು ಈಗಿನ ಕಾಲಸ್ಥಿತಿಗೆ ಕ್ಷೇಮಕರವಲ್ಲವೆಂತಲೂ ಈ ಗ್ಯಾಂಗನ್ನು ಕನ್ಸರ್ವೆನ್ಸಿ ಸಿಬ್ಬಂದಿಗೆ ಸೇರಿಸಿದರೆ ಆ ಕೆಲಸವಾಗಲಿ, ಡಿಸಿನ್‌ಫೆಕ್ಷನ್ ಕೆಲಸವಾಗಲಿ ತೃಪ್ತಿಕರವಾಗಿ ನಡಿಯಲಾರದೆಂತಲೂ ಜವಾಬು ಕೊಟ್ಟರು. ಮೀಟಿಂಗಿನಲ್ಲಿ ಹೆಲ್ತ್ ಆಫೀಸರವರು ಹಾಜರಾಗಿಲ್ಲವಾದ್ದರಿಂದ ಅವರ ಅಭಿಪ್ರಾಯವನ್ನು ಮೊಖ್ತಾ ಕೇಳಿ ತಿಳಿದು ವ್ಯವಸ್ಥೆ ಮಾಡಲು ಅವಕಾಶವಿಲ್ಲವೆಂತಲೂ, ಇನ್ನು ಮುಂದೆ ಅವರು ತಪ್ಪದೆ ಮ್ಯುನಿಸಿಪಲ್ ಮೀಟಿಂಗಿಗೂ, ಮ್ಯಾನೇಜಿಂಗ್ ಕಮಿಟಿ ಮೀಟಿಂಗಿಗೂ ಹಾಜರಾಗುವಂತೆ ಪ್ರೆಸಿಡೆಂಟರನ್ನು ಕೇಳಿಕೊಳ್ಳಬೇಕೆಂತಲೂ ಕೌನ್ಸಿಲರುಗಳು ತೀರ್ಮಾನ ಮಾಡಿದರು.

ಮೈಸೂರು ಮಜಲಿಸೆ ರಿಫಾಹುಲ್ ಮುಸ್ಲಮೀನ್ ಎಂಬ ಮಹಮದೀಯ ಸಂಘದವರು ಮುಸಲ್ಮಾನ್ ಬಾಲಿಕಾ ಪಾಠಶಾಲೆಯನ್ನಿಟ್ಟು ನಡಿಸುತ್ತಾರೆಂತಲೂ, ಅದಕ್ಕೆ ಮ್ಯುನಿಸಿಪಾಲಿಟಿಯಿಂದ ದ್ರವ್ಯಸಹಾಯ ಮಾಡಿಕೊಡಬೇಕೆಂತಲೂ ಅರ್ಜಿ ಬರೆದುಕೊಂಡಿದ್ದರು. ಈ ವಿಷಯವನ್ನು ತನಿಖೆ ಮಾಡಿ ರಿಪೋರ್ಟು ಮಾಡಬೇಕೆಂದು ಕೌನ್ಸಿಲರುಗಳು ಸ್ಕೂಲ್ ಸ್ಟ್ಯಾಂಡಿಂಗ್ ಕಮಿಟಿಗೆ ತಿಳಿಸಿರುತ್ತಾರೆ.

ಈ ಸಲ ನಡೆದ ದಸರಾ ಪ್ರದರ್ಶನ ಕಾಲದಲ್ಲಿ ಕಚರಾ ಗುಡಿಸುವವರನ್ನು ಹೆಚ್ಚಾಗಿ ನೇಮಿಸಿ ಕೊಂಡಿದ್ದಕ್ಕೆ ರೂ. ೮೩-೪-೧ ಪೈ ಯನ್ನೂ, ಡಿಸಿನ್‌ಫೆಕ್ಷನ್ ಸಿಬ್ಬಂದಿಯನ್ನು ಹೆಚ್ಚಾಗಿ ನೌಕರರು ಮಾಡಿದ್ದಕ್ಕೆ ರೂ. ೪೭-೭-೭ ಪೈಯನ್ನೂ ಮ್ಯುನಿಸಿಪಾಲಿಟಿಯಿಂದ ಕೊಡಿಸಬೇಕೆಂದು ಹೆಲ್ತ್ ಆಫೀಸರವರು ಕೇಳಿದ್ದನ್ನು ಕೌನ್ಸಿಲರುಗಳು ಒಪ್ಪಿ ಸ್ಯಾಂಕ್ಷನ್ ಮಾಡಿದರು.

ಕಾವೇರಿ ನದಿಯಲ್ಲೇ ವಿದ್ಯುಚ್ಛಕ್ತಿಯ ಯಂತ್ರಗಳನ್ನಿಟ್ಟು ನೀರು ಎತ್ತಿ ಮೈಸೂರು ಪಟ್ಟಣಕ್ಕೆ ಒದಗಿಸುವಂತೆ ಮಾಡುವುದು ಸಾಧ್ಯವಲ್ಲವೆಂದು ಚೀಫ್ ಇಂಜನೀಯರವರು ಬರೆದಿದ್ದ ಜವಾಬನ್ನು ಕೌನ್ಸಿಲರುಗಳು ರಿಕಾರ್ಡು ಮಾಡಿಕೊಂಡರು.

ದೇವರಾಜ ಮಾರ್ಕೆಟ್ಟಿನ ಡೇಲಿ ಫೀಜು ಕಂಟ್ರಾಕ್ಟರ್ ಗಂಗೈಯನವರು ಮಾಹೆಯಾನಾ ೧೧೭ ರೂಪಾಯಿನಂತೆ ಮ್ಯುನಿಸಿಪಾಲಿಟಿಗೆ ಪಾವತಿಮಾಡಬೇಕಾಗಿದೆ ಎಂತಲೂ, ಈಗ ದುಸ್ಕಾಲದ ನಿಮಿತ್ತ ಸರಕು ಮಾರ್ಕೆಟ್ಟಿಗೆ ಎಂದಿನಂತೆ ಬಾರದೆ ಇರೋಣದರಿಂದ ತಮಗೆ ಫೀಜು ವಸೂಲಾಗದೆ ತುಂಬಾ ನಷ್ಟವಾಗುತ್ತಿದೆ ಎಂತಲೂ, ಆದಕಾರಣ ಕಂಟ್ರಾಕ್ಟಿನ ಮೊಕ್ತವನ್ನು ಕಡಮೆಮಾಡಿಕೊಡಬೇಕೆಂತಲೂ ಅರ್ಜಿ ಬರೆದುಕೊಂಡಿದ್ದರು. ಮೆಂಬರುಗಳು ಈ ವಿಷಯವನ್ನು ಸ್ವಲ್ಪ ಹೊತ್ತು ಚರ್ಚೆಮಾಡಿ, ಕಡೆಗೆ ಕಂಟ್ರಾಕ್ಟಿನ ದರವನ್ನು ಕಡಮೆಮಾಡಲಾಗುವುದಿಲ್ಲವೆಂದು ತೀರ್ಮಾನಮಾಡಿದರು.

ಮ್ಯುನಿಸಿಪಲ್ ಇಂಜನಿಯರವರು ತನಗೆ ಪಾವತಿ ಆಗುವ ಅಲೋವೆನ್ಸಿನಲ್ಲಿ ಅಂದರೆ ೨೦ ರೂಪಾಯಿನಲ್ಲಿ ಒಂದು ಕುದುರೆಯನ್ನು ಸಾಕುವುದು ಬಹಳ ಕಷ್ಟವೆಂತಲೂ, ಅದನ್ನು ೩೦ ರೂಪಾಯಿಗೆ ಬತ್ತಿಮಾಡಿಕೊಡಬೇಕೆಂತಲೂ ಅರ್ಜಿ ಬರೆದುಕೊಂಡಿದ್ದರು. ಕೌನ್ಸಿಲರುಗಳು ಅದು ಸಹಜವೆಂದು ಒಪ್ಪಿ ಅವರ ಅಲೋವೆನ್ಸನ್ನು ಮಾಹೆಯಾನಾ ೨೦ ರಿಂದ ೩೦ ರೂಪಾಯಿಗೆ ಬತ್ತಿಮಾಡಬೇಕೆಂದು ತೀರ್ಮಾನಮಾಡಿರುತ್ತಾರೆ.

ಚಿಟ್ಟಿಹಳ್ಳಿ ಬಡಾವಣೆಯ ಬಳಿ ಇರುವ ಮುಸಲ್ಮಾನರ ಖಬರಸ್ಥಾನವನ್ನು ಇನ್ನೂ ದೂರಕ್ಕೆ ಹಾಕಬೇಕೆಂದು ಟ್ರಸ್ಟ್ ಬೋರ್ಡಿನವರು ಸೂಚಿಸಿದ್ದರು. ಕೌನ್ಸಿಲರುಗಳಾದ ಮ॥ ಹುಸನಲ್ಲಿ ಬೇಗ್, ಮೊಹದೀನ್ ಸಾಬ್, ರಹಮತುಲ್ಲಾ ಸೇಟ್, ಹಾಲ್ಲೂಕ್ ಅಸುಲ್ಲಾಖಾ, ಈ ನಾಲ್ಕು ಮಂದಿಯೂ ಸೇರಿ ಸ್ಥಳವನ್ನು ಅಜಮಾಯಿಷಿಯಿಂದ ಚುನಾಯಿಸಿ, ಮ್ಯುನಿಸಿಪಲ್ ಕೌನ್ಸಿಲಿಗೆ ರಿಪೋರ್ಟು ಮಾಡಬೇಕೆಂದು ನಿಶ್ಚಯವಾಯಿತು.

ಉಪಾಧ್ಯಾಯರಿಗೆ ಬಹುಮಾನದ ಮೇಲಾಟವು.

"ಅಸ್ವಾರ್ಥತೆ. ಅಂದರೆ, ಸ್ವಪ್ರಯೋಜನವನ್ನಲ್ಲ, ಪರಹಿತವನ್ನೇ ಬಯಸಿ ಮಾಡುವುದು."

ಪ್ರತಿ ಮನುಷ್ಯನೂ ತಾನೇ ಸುಖವನ್ನನುಭವಿಸಲು ಹುಟ್ಟಿದವನಲ್ಲ. ತನ್ನ ಕೈಲಾದ ಮಟ್ಟಿಗೂ ಬಗೆಬಗೆಯಿಂದ ಎರಡನೆಯವರಿಗೆ ಉಪಕಾರವನ್ನು ಮಾಡುವುದಕ್ಕಾಗಿಯೇ ಹುಟ್ಟಿರುವನು. ಇಂತಹ ಸಂದರ್ಭದಲ್ಲಿ ಅನೇಕ ಕಷ್ಟಗಳು ಒದಗಬಹುದು. ಎಲ್ಲಾ ಕಷ್ಟಗಳಿಗೂ ಧೈರ್ಯದಿಂದ ಎದೆಗೊಟ್ಟು ಪರರಿಗೆ ಹಿತವಾಗುವ ಕಾರ್ಯದಲ್ಲಿ ಪ್ರವರ್ತಿಸುವುದೇ ಪರೋಪಕಾರವೆನಿಸುವುದು. ಇದ...

ನಮ್ಮ ಹಿಂದಿನವರು ಇಂತಹ ಅಸ್ವಾರ್ಥತೆಯಿಂದ ಅನೇಕ ಉಪಕಾರಗಳನ್ನು ನಮಗೋಸುಗವೇ ಮಾಡಿ ನಮಗೆ ಮಾರ್ಗದರ್ಶಿಗಳಾಗಿರುವರು. ಇದರಂತೆಯೇ ಮುಂದಿನವರಿಗೂ ಅನುಕೂಲಿಸುವ ಸತ್ಕಾರ್ಯಗಳಲ್ಲಿ ನಾವು ಪ್ರವರ್ತಿಸಬೇಕಾದುದು ವಿಹಿತವಾಗಿದೆ. ಬಹು ಕಾಲದಿಂದಿರುವ ಒಂದು ಕೊಳವನ್ನು ಉದಾಹರಣೆಗಾಗಿ ತೆಗೆದುಕೊಳ್ಳೋಣ. ಕಟ್ಟಿಸಿದವನು ಸತ್ತುಹೋಗಿ ಎಷ್ಟೋ ದಿನಗಳಾದುವು. ಆ ಕೊಳದ ನೀರನ್ನೆಲ್ಲವನ್ನೂ ಕಟ್ಟಿಸಿದವನು ಕುಡಿಯಲಿಲ್ಲ. ಇತರರ ಉಪಯೋಗಕ್ಕೇ ಎಂಬುದು ನಾವೂ ಮತ್ತು ಪಶುಪಕ್ಷಿ ಮೃಗಾದಿಗಳೆಲ್ಲವೂ ಈಗ ಕುಡಿಯುತ್ತಿರುವುದರಿಂದಲೇ ವ್ಯಕ್ತವಾಗುತ್ತಿರುವುದು. ಅನೇಕ ರೋಗಪರಿಹಾರಕ ಔಷಧಗಳನ್ನು ಕಂಡುಹಿಡಿದು ನಮಗೆ ಸಿದ್ಧಪಡಿಸಿರುವವರು ಪರೋಪಕಾರಿಗಳೇ. ಬಗೆಬಗೆಯ ಗ್ರಂಥಗಳನ್ನು ಬರೆದು ನಮಗೆ ಜ್ಞಾನಭಂಡಾರವನ್ನು ಸಿದ್ಧಪಡಿಸಿಕೊಟ್ಟಿರುವ ಮಹನೀಯರು ಸ್ವಾರ್ಥಪರರಲ್ಲ. ಏಕೆಂದರೆ, ಈಗ ನಾವು ಓದುತ್ತಿರುವ ಪ್ರತಿ ಒಂದು ಗ್ರಂಥವೂ ಪರರಿಂದ ನಮಗೆ ಉಪಕರಿಸಲ್ಪಟ್ಟವುಗಳಾಗಿವೆ. ಅವರಿಗೆ ನಾವು ಯಾವ ಪ್ರಯೋಜನವನ್ನೂ ಮಾಡಿಲ್ಲವೆಂಬುದು ನಮಗೆ ಅನುಭವದಲ್ಲಿಯೇ ಇದೆಯಷ್ಟೆ. ಇದರಿಂದ ಪ್ರತಿಯೊಬ್ಬನೂ ಪರಹಿತಕ್ಕೋಸ್ಕರವೇ ತಾನು ಬದುಕುವುದು ನ್ಯಾಯವಾಗಿದೆ. ತನ್ನ ಹೊಟ್ಟೆಯನ್ನು ಮಾತ್ರ ತುಂಬಿಸಿಕೊಳ್ಳುವ ಮನುಷ್ಯನು ಪಶ್ವಾದಿಗಳಿಗಿಂತಲೂ ಕಡೆಯವನು. ತೃಣವನ್ನು ತಿಂದು ಹಾಲನ್ನು ಕೊಡುವ ಹಸುವನ್ನು ಸ್ಮರಣೆಗೆ ತನ್ನಿರಿ. ಎಂಜಲನ್ನು ತಿಂದು ಯಜಮಾನನ ಪ್ರಾಣ ಮಾನ ಧನಗಳನ್ನು ಕಾದು ಅವನಿಗೋಸುಗ ತನ್ನ ಪ್ರಾಣವನ್ನೇ ಕೊಡುವ ನಾಯಿಯನ್ನು ಜ್ಞಾಪಿಸಿಕೊಳ್ಳಿರಿ. ಅಲ್ಲದೆ ಸ್ವಾರ್ಥಪರನಾದ ಮನುಷ್ಯನು ಒಂದು ಸಮಯದಲ್ಲಿ ಅಚೇತನ ಪದಾರ್ಥಗಳಿಗಿಂತಲೂ ಕಡೆಯವನೆಂದು ನಾವು ಊಹಿಸಬಹುದು. ದೊಡ್ಡ ದೊಡ್ಡ ಮಾರ್ಗಗಳು ಸೇರುವ ಕಡೆ ಕೈ ಕಂಬವನ್ನು ನೆಟ್ಟಿರುವರಷ್ಟೆ. ಆ ಅಚೇತನ ವಸ್ತುವು ಎಷ್ಟು ಜನರಿಗೆ ಮಾರ್ಗದರ್ಶಿಯಾಗಿ ಉಪಕಾರವನ್ನಾದಲು ಸಿದ್ಧವಾಗಿರುವುದೆಂಬುದನ್ನು ಮನಸ್ಸಿನಲ್ಲಿ ಆಲೋಚಿಸಬೇಕಲ್ಲವೇ? ಸಿಕ್ಕಿದ ನೀರನ್ನು ಕುಡಿದು ದುರ್ವಾಸನೆಯ ಗೊಬ್ಬರಗೋಡನ್ನು ತಿಂದು ರುಚಿರುಚಿಯಾದ ಫಲಗಳನ್ನೂ ಧಾನ್ಯಾದಿಗಳನ್ನೂ ಕೊಡುತ್ತಿರುವ ಮರ, ಸಸಿ ಮುಂತಾದುವನ್ನು ನೋಡಿದರೂ ನದಿಗಳು ತಾವಾಗಿ ಹರಿದು ಜನರಿಗೆ ಉಪಕರಿಸುತ್ತಿರುವುದನ್ನು ಚಿಂತಿಸಿದರೂ, ಉಪ್ಪು ನೀರನ್ನು ಹೀರಿ ಸಿಹಿನೀರನ್ನು ಸುರಿಸುವ ಮೋಡಗಳನ್ನು ಊಹಿಸಿದರೂ, ಬುದ್ಧಿಯುಳ್ಳ ನಾವು ಸ್ವಾರ್ಥಪರರಾಗದೆ ಹೇಗಾದರೂ ಪರಾರ್ಥವಾಗಿಯೇ ನಮ್ಮ ಪ್ರಾಣವನ್ನರ್ಪಿಸಬೇಕೆಂಬುದು ವ್ಯಕ್ತವಾಗುವುದಲ್ಲವೆ? ನಮ್ಮ ಪೂರ್ವಿಕರಲ್ಲಿ ಹಲವು ಮಹನೀಯರು ಪರಾರ್ಥವಾಗಿ ನಾನಾ ಹಿಂಸೆಗಳನ್ನು ಅನುಭವಿಸಿಯೂ ಪ್ರಾಣವನ್ನು ಬಲಿಯಾಗಿ ಅರ್ಪಿಸಿಯೂ ಇರುವರು. ಅಂತಹ ವಿಶೇಷವು ನಮ್ಮಲ್ಲಿ ಈಗೇ ಜನಿಸಿಲ್ಲ. ಕ್ರಮಕ್ರಮವಾಗಿ ನಾವು ಸ್ವಾರ್ಥಕ್ಕಿಂತಲೂ ಪರಾರ್ಥವೇ ಶ್ರೇಷ್ಠವೆಂದು ನಡವಳಿಕೆಯಲ್ಲಿ ಅಭ್ಯಾಸಿಸಿದರೆ ಕೊನೆಗೆ ಅವರೊಳಗೆ ನಾವೂ ಉತ್ತಮರೆನಿಸುವೆವು.

ಯೂರೋಪಿನಲ್ಲಿ ಹಾಲೆಂಡ್ ಎಂಬ ದೇಶವಿದೆ. ಅದು ಸಮುದ್ರಕ್ಕಿಂತಲೂ ತಗ್ಗಾದ ಪ್ರದೇಶದಲ್ಲಿರುವುದರಿಂದ ಊರಿರುವ ಕಡೆಗಳಲ್ಲೆಲ್ಲಾ ಆ ನೀರು ನುಗ್ಗದಂತೆ ಡೈಕ್ ಎಂಬ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಹಾಕಿರುವರು. ಕೆಲವು ವೇಳೆ ಅಲೆಗಳ ಹೊಡೆತದಿಂದ ಆ ಗೋಡೆಗಳು ಕೊರೆದು ಆ ಕಿಂಡಿಯಿಂದ ಊರಭಾಗಕ್ಕೆ ನೀರು ನುಗ್ಗುವುದೂ ಉಂಟು. ಹೀಗೆ ನುಗ್ಗಿದಾಗ ಊರಿಗೆ ಊರೇ ಕೊಚ್ಚಿ ಹೋದುದುಂಟು. ಹೀಗಿರುವಾಗ ಒಂದು ದಿನ ಒಬ್ಬ ಚಿಕ್ಕ ಹುಡುಗನು ಆ ಮಾರ್ಗವಾಗಿ ಒಬ್ಬನೇ ಮನೆಗೆ ಬರುತ್ತಿದ್ದನು. ಹೀಗೆ ಬರುತ್ತಿರುವಾಗ ಒಂದು ಅಣೆಕಟ್ಟಿನಲ್ಲಿ ಸಣ್ಣ ತೂತು ಬಿದ್ದು ನೀರು ಜಾಯುತ್ತಿರುವುದನ್ನು ನೋಡಿದನು. ತನ್ನ ತಂದೆಯು ಈ ರಂಧ್ರದಿಂದಾದ ಅನಾಹುತಗಳನ್ನು ಕುರಿತು ವಿವರಿಸಿದ್ದ ವಿಷಯವೆಲ್ಲಾ ಆಗ ಅವನಿಗೆ ಜ್ಞಾಪಕಕ್ಕೆ ಬಂದಿತು. ಮನೆಗೆ ಓಡಿಹೋಗಿ ತಂದೆಗೆ ತಿಳಿಸಬೇಕೆಂದು ಆಲೋಚಿಸಿದನು. ಆದರೆ ತಂದೆಯು ಬರುವಷ್ಟರಲ್ಲಿಯೇ ಕತ್ತಲಾಗಿ ರಂಧ್ರವು ಕಾಣದೇ ಹೋಗಬಹುದಲ್ಲವೇ ಎಂದು ಪುನಃ ಶಂಕಿಸಿದನು. ಕಡೆಗೆ ಏನೂ ತೋರದೆ ಈಗ ಸುಮ್ಮನಿದ್ದರೆ ರಂಧ್ರವು ದೊಡ್ಡದಾಗಿ ಅಪಾಯಕರವಾಗಬಹುದೇನೋ ತನ್ನ ಕೈಯಲ್ಲಾದ ಪ್ರಯತ್ನವನ್ನು ಮಾಡದೇ ಇರುವುದು ಅನುಚಿತವೆಂದೂ ಆ ಹುಡುಗನು ಯೋಚಿಸಿ ಧೈರ್ಯದಿಂದ ಆ ರಂಧ್ರದಲ್ಲಿ ತನ್ನ ಕೈಯನ್ನಿಟ್ಟು ರಾತ್ರಿಯೆಲ್ಲಾ ನಿಂತೇ ಇದ್ದನು. ಆಗ ಕಗ್ಗತ್ತಲ ಹಿಮಂತ ಋತುವೇ ಆಗಿದ್ದಿತು. ಚಳಿಯು ಬಹಳ ಬಲವಾದ ಕತ್ತಲೆ. ಏಕಾಕಿಯಾದ ಚಿಕ್ಕ ಹುಡುಗ. ಎಂತಹ ಧೈರ್ಯಶಾಲಿಯೂ ಹೆದರತಕ್ಕ ಆ ಸಮಯದಲ್ಲಿ ಆ ಹುಡುಗನು ಮುಂದಾಗುವ ಅನಾಹುತವನ್ನು ತಪ್ಪಿಸಬೇಕೆಂದು "ನನ್ನ ಪ್ರಾಣಹೋದರೂ ಸರಿಯೇ, ತನ್ನ ಕೈಯನ್ನು ಈ ರಂಧ್ರದಿಂದ ತೆಗೆಯಲಾರೆನು" ಎಂದು ಸ್ಥಿರಪ್ರತಿಜ್ಞೆ ಮಾಡಿಕೊಂಡನು. ಬೆಳಗಾಗುವ ವೇಳೆಗೆ ಚಳಿಯಿಂದ ಅವನ ಮೈಯೆಲ್ಲಾ ಸೆಟೆದುಹೋಗಿ ಕೈ ಎರಕ ಹೊಯ್ದಂತೆ ಆ ರಂಧ್ರದಲ್ಲಿ ತಗುಲಿಕೊಂಡಿದ್ದಿತು. ಬೆಳಗಾದ ವೇಳೆ ಯಾರೋ ದಾರಿಗಾರನು ಬಂದು ಅವನನ್ನು ನೋಡಿ "ಅಲ್ಲಿ ಏನು ಮಾಡಿದೆ" ಎಂದು ಕೇಳಿದನು. ಉತ್ತರ ಹೇಳುವುದಕ್ಕೂ ಚೈತನ್ಯವಿಲ್ಲದೆ ಆ ಹುಡುಗನು ಸುಮ್ಮನಿದ್ದನು. ಆಗ ಮಾರ್ಗಸ್ಥನು ಹತ್ತಿರಕ್ಕೆ ಬಂದು ಅವನ ಸ್ಥಿತಿಯನ್ನು ನೋಡಿ ಪರಮಾಶ್ಚರ್ಯಪಟ್ಟು ದೇವರೇ ಈ ರೂಪವಾಗಿ ನಿಂತಿರುವನೆಂದು ಭಾವಿಸಿ ತತ್ಕ್ಷಣವೆ ಊರಿಗೆಹೋಗಿ ಜನರನ್ನು ಕರೆದು ತಂದು ಆ ರಂಧ್ರವನ್ನು ಮುಚ್ಚಿಸಿ ಆ ಹುಡುಗನಿಗೆ ಬಿಡುಗಡೆ ಮಾಡಿಸಿದನು. ಆ ಹುಡುಗನ ತಂದೆಗೆ ಆ ಗ್ರಾಮಸ್ಥರು ಅನೇಕ ಬಹುಮಾನಗಳನ್ನು ಮಾಡಲು ಅದೊಂದನ್ನೂ ಸ್ವೀಕರಿಸದಂತೆ ತನ್ನ ತಂದೆಯನ್ನು ಪ್ರಾರ್ಥಿಸಿದನು. ಅವನು ತನ್ನ ಚಿಕ್ಕ ವಯಸ್ಸಿನಲ್ಲಿ ಇಂತಹ ಅನಾಹುತವನ್ನು ತಪ್ಪಿಸಿದುದಕ್ಕೋಸ್ಕರ ಈಗಲೂ ಆ ಹುಡುಗನು ಒಬ್ಬ ಮಹಾಪುರುಷನಂತೆ ಆ ದೇಶದಲ್ಲಿ ಭಾವಿಸಲ್ಪಟ್ಟಿರುವನು. ಆ ಹುಡುಗನು ಸ್ವಲ್ಪ ಉದಾಸೀನ ಮಾಡಿದ್ದರೆ ಆ ರಾತ್ರಿಗೆ ಆ ಊರೆಲ್ಲವೂ ಸಮುದ್ರದ ಪಾಲಾಗಿ ಗುರುತೇ ಇಲ್ಲದಂತಾಗುತ್ತಿದ್ದಿತು. ಆಹಾ! ಎಂತಹ ಧೈರ್ಯಶಾಲಿ! ಎಂತಹ ಅಸ್ವಾರ್ಥತೆ! ಈ ಹುಡುಗನಲ್ಲವೇ ಮಹನೀಯನು! ಹೃದಯದಲ್ಲಿ ಕೆತ್ತಲ್ಪಡತಕ್ಕವನು. ಇಂತಹನ ಸಚ್ಚರಿತ್ರೆಯು ನಮ್ಮ ಹೃದಯದಲ್ಲಿ ಎಂದೆಂದಿಗೂ ಅಚ್ಚಳಿಯದಿರಲಿ. ಪಾಠಕರೇ! ಪರರ ಪ್ರೀಯಸ್ಸಿಗೇ ಕರುಬುವ ನಮಗೂ, ಪರರಿಗೋಸುಗವೇ ಸಹಿಸಲಾರದ ಕಷ್ಟವನ್ನನುಭವಿಸಿದ ಹಾಲೆಂಡ್ ದೇಶದ ಚಿಕ್ಕ ಹುಡುಗನಿಗೂ ಯಾವ ಹೋಲಿಕೆಯನ್ನು ಹೇಳೋಣ!

ಇದು ದೇಶಾಂತರದ ಮಹನೀಯನ ಚರಿತ್ರೆಯಾದರೂ ಈ ದೇಶದವರಿಗೆ ಒಂದು ಮಾದರಿಯ ಪಾಠವಾಗಿದೆ. ಅಲ್ಲದೆ ದೆಹಲಿ ಸಿಂಹಾಸನಾಧಿಪತಿಯಾ ಮಹಾರಾಜನಾಗಿದ್ದರೂ ತನ್ನ ಕೈಯಿಂದ ಬರೆದ ಗ್ರಂಥಗಳನ್ನು ಮಾರಿ ತಾನು ಜೀವಿಸಿ ಪ್ರಜೆಗಳಿಂದ ಬರುತ್ತಿದ್ದ ಎಲ್ಲಾ ದ್ರವ್ಯವನ್ನೂ ಪ್ರಜೆಗಳಿಗೆ ಉಪಯೋಗಿಸುತ್ತಿದ್ದನು. ಪರರಿಗೆ ತನಗೋಸ್ಕರ ಕಷ್ಟವಾಗಬಾರದೆಂದು ಅವನ ಹೆಂಡತಿಯು ಮನೆಯ ಕೆಲಸವನ್ನೆಲ್ಲಾ ತಾನೇ ಮಾಡುತ್ತಿದ್ದಳು. ಇದೂ ಒಂದು ವಿಧವಾದ ಪರಾರ್ಥವಲ್ಲವೇ! ಸಕಲ ಸಂಪತ್ತಿದ್ದರೂ ಅನ್ಯರಿಗಿರಲೆಂದು ರಾಜಾಧಿರಾಜನು ಸ್ವಯಂ ಜೀವಿಸುವುದೂ ಒಂದು ಮಹತ್ತಾದ ಪರಾರ್ಥವೇ ಸರಿ.

ಸ್ಟ್ಯಾನ್ಲೀ ಎಂಬ ಒಬ್ಬ ಮಹನೀಯನು ಆಫ್ರಿಕಾ ಖಂಡದ ಮರುಭೂಮಿಯನ್ನು ಶೋಧಿಸಲು ಎಷ್ಟು ಕಷ್ಟವನ್ನು ಸಹಿಸಿದನೋ ಅದನ್ನು ಮಾತಿನಿಂದ ಹೇಳಲಾಗುವುದಿಲ್ಲ. ಅವನು ಆ ಕಷ್ಟವನ್ನು ಪ್ರಪಂಚದ ಜನಗಳಿಗೋಸುಗವೇ ಹೊರತು ತನಗೋಸ್ಕರವಾಗಿಯಲ್ಲ. ಅವನಿಂದ ಅನೇಕ ಭಾಗಗಳು ಕಂಡುಹಿಡಿಯಲ್ಪಟ್ಟು ಸಾವಿರಾರು ಸಂಸಾರಗಳು ವಾಸಮಾಡುವುದಕ್ಕೆ ಅನುಕೂಲಿಸಲ್ಪಟ್ಟವೆ.

ಈಗಲೂ ಉತ್ತರ ಧ್ರುವವನ್ನು ಶೋಧಿಸಲು ಅನೇಕ ಮಹನೀಯರು ಯತ್ನಿಸಿ ನಾನಾ ಕಷ್ಟಗಳಿಗೀಡಾಗಿ ಲೋಕೋಪಕಾರಕ್ಕೋಸ್ಕರ ತಮ್ಮ ಪ್ರಾಣಗಳನ್ನು ಕೊಡುತ್ತಿರುವರು.

ಪರೋಪಕಾರವನ್ನು ಮಾಡಬೇಕಾದರೆ ಧನವೇ ಬೇಕಾಗಿಲ್ಲ. ಅವರವರ ಯೋಗ್ಯತೆಗೆ ತಕ್ಕಂತೆ ಉಪಕರಿಸಬಹುದು. ಧನಿಕನು ಅನಾಥರನ್ನು ಕಾಪಾಡಬಹುದು. ವಿದ್ಯಾಶಾಲೆಗಳನ್ನೇರ್ಪಡಿಸಬಹುದು. ವೈದ್ಯವನ್ನು ಸ್ಥಾಪಿಸಬಹುದು. ಅವನು ತನ್ನ ಧನದಿಂದಾಗುವ ಉಪಕಾರವನ್ನೆಲ್ಲಾ ಮಾಡಬಹುದು. ಅಮೇರಿಕಾದ ಆಂಡ್ರೂ ಕಾರ್ನೆಗೀ ಎಂಬಾತನು ಇಂತಹ ಧರ್ಮಕ್ಕೆ ಪ್ರಸಿದ್ಧಿಯಾಗಿರುವನು. ನಮ್ಮ ದೇಶದಲ್ಲಿ ಮೆ| ತಾತಾ ಎಂಬುವರೂ ಮೆ ಬೊಮ್ಮನ್ನನವರೂ ಮೆ| ತೋಟದಪ್ಪನವರೂ ಇನ್ನೂ ಅನೇಕರು ಇಂತಹ ಧರ್ಮಪ್ರವರ್ತಕರಾಗಿರುವರು.

ಅನೇಕರು ತಮ್ಮ ದೇಹಕಷ್ಟದಿಂದ ಉಪಕಾರವನ್ನು ಮಾಡಬಹುದಾಗಿದೆ. ರೋಗಿಗಳನ್ನು ಉಪಚರಿಸುವುದೂ, ಪ್ರಾಣಿಗಳನ್ನು ನೀರು ಬೆಂಕಿ ಮುಂತಾದ ಅಪಾಯಗಳಿಂದ ತಪ್ಪಿಸುವುದೂ ಇವೇ ಮುಂತಾದುವು ಧನವಿಲ್ಲದವರಿಗೂ ಸಾಧ್ಯವಾದ ವಿಷಯವಷ್ಟೆ. ಇದಲ್ಲದೆ ವಾಗ್ದಾನ ರೂಪವಾದ ಪದಾರ್ಥತೆಯೂ ಉಂಟು. ಇದಕ್ಕೆ ತಕ್ಕವನು ಅದರಿಂದಲೂ ಉಪಕಾರವನ್ನಾಡಬಹುದಾಗಿದೆ. ಆದರೆ ಉಪಕಾರವು ಯಾವಾಗಲೂ ಪ್ರತ್ಯುಪಕಾರವನ್ನಪೇಕ್ಷಿಸಬಾರದು. ಹಾಗೆ ಅಪೇಕ್ಷಿಸಿದರೆ ಅದರಲ್ಲಿ ಸಾರವೂ ಇಲ್ಲ, ಸೊಬಗೂ ಇಲ್ಲ. ದೇವರು ಯಾವಾಗಲೂ ಪ್ರತಿಯನ್ನಪೇಕ್ಷಿಸದ ಉಪಕಾರವನ್ನೇ ಬಯಸಿ ಸಂತೋಷಪಡತಕ್ಕವನಾಗಿರುವನು. ಆದುದರಿಂದ ನಾವೂ ತಮ್ಮ ತಮ್ಮ ಶಕ್ತಿಯಲ್ಲಾದ ಮಟ್ಟಿಗೆ ಸ್ವಾರ್ಥವನ್ನು ತ್ಯಜಿಸಿ ಉಪಕಾರಮಾಡುವುದು ಒಳ್ಳೆಯದು. ಒಬ್ಬೊಬ್ಬನ ಸಣ್ಣ ಸಣ್ಣ ಉಪಕಾರವೇ ಲೋಕಕ್ಕೆ ಮಹತ್ಪ್ರಯೋಜನವಾಗಿ ಪರಿಣಮಿಸುವುದು. ಒಂದು ಸಣ್ಣ ಬೀಜವು ದೊಡ್ಡ ಮರವನ್ನು ಮಾಡುವುದು. ನೀರಿನ ಸಣ್ಣ ಸಣ್ಣ ಹನಿಗಳು ಒಂದು ಕೊಳವನ್ನು ಮಾಡುವುದು. ಸ್ವಲ್ಪ ಸ್ವಲ್ಪ ನಿಮಿಷಗಳೇ ಒಂದು ಗಂಟೆಯೆಂದು ಪರಿಣಮಿಸುವುದಿಲ್ಲವೇ? ಹಾಗೆಯೇ ಸಣ್ಣ ಸಣ್ಣ ಉಪಕಾರವಾದರೂ ಸ್ವಾರ್ಥತೆಯಿಂದ ಕೂಡದೇ ಇದ್ದರೆ ಅದು ಬಹು ಪ್ರಯೋಜನವಾಗಿರುವುದು. ಹೀಗೆ ಪ್ರತಿಯೊಬ್ಬನೂ ನಡೆದರೆ ಆಗ ಈ ಭೂಮಿಯಲ್ಲಿ ಸೌಖ್ಯವು ಚಿರಸ್ಥಾಯಿಯಾಗಿರುವುದಲ್ಲವೆ? ನಮ್ಮ ಕಣ್ಣಿಂದ ನೋಡದ ಸ್ವರ್ಗವನ್ನು ಕಿವಿಯಿಂದ ಕೇಳಿದ ಮಾತ್ರದಿಂದಲೇ ಹಿಗ್ಗಿ ಹಿಗ್ಗಿ ಸಂತೋಷಪಡುವ ನಾವು ಅಂತಹ ಸ್ವರ್ಗವು ಇಲ್ಲಿಯೇ ಇದೆಯೆಂದು ತಿಳಿದು ಅದನ್ನು ಇಲ್ಲೇ ಅನುಭವಿಸಬಹುದಲ್ಲವೇ?

"ಅಸ್ವಾರ್ಥತೆಯು" — ಈ ವಿಚಾರವಾಗಿ ನಮ್ಮಲ್ಲಿಗೆ ಬರೆದು ಬಂದ ಬಾತ್ಮಿಗಳನ್ನು ಪರಿಶೋಧನೆ ಮಾಡಿ, ಮ ಶ್ರೀನಿವಾಸರಾಯರಿಗೆ ಬಹುಮಾನವನ್ನು ಕಳುಹಿಸಿ, ಅವರು ಬರೆದಿರುವುದನ್ನು ಮೇಲ್ಭಾಗದಲ್ಲಿ ಪ್ರಕಟಿಸಿದೇವೆ. ಅವರು ಬರೆದಿರುವುದನ್ನೂ ಮ ಸೂರ್ಯನಾರಾಯಣರಾಯರು ಬರೆದಿರುವುದನ್ನೂ ಹೋಲಿಸಿ ನೋಡಿ ಉತ್ತಮವಾದದ್ದನ್ನು ಕಂಡುಹಿಡಿಯುವುದು ಕಷ್ಟವಾಯಿತು. ಇವರದೂ ಬಹಳ ದೀರ್ಘವಾಗಿ ಬರೆಯಲ್ಪಟ್ಟಿದೆ ಎಂಬುದೊಂದೇ ಕೊರತೆ.

ನಮ್ಮಲ್ಲಿಗೆ ಬಂದಿರುವ ಇತರ ಉಪನ್ಯಾಸಗಳನ್ನು ಕುರಿತು ಸ್ವಲ್ಪ ಪ್ರಸ್ತಾಪ ಮಾಡಲಪೇಕ್ಷಿಸುತ್ತೇವೆ. ಮ ಸೀತಾರಾಮಯ್ಯನವರ ಉಪನ್ಯಾಸ — ಇದು ಬಹಳ ಲಲಿತವಾಗಿಯೂ ಸುಟವಾಗಿಯೂ ಇದೆ. ಆದರೆ ನೀವು ಉದಾಹರಿಸಿರುವ ಕಥೆಗಳನ್ನು ನಾವು ಅಷ್ಟೇನೂ ಮೆಚ್ಚಲಾರೆವು. ಮ ವಲ್ಲಭ ಐಯ್ಯಂಗಾರ್ರು — ನೀವು ಕೂಡ ಸೀತಾರಾಮಯ್ಯನವರು ಬರೆದ ಕಥೆಯನ್ನೇ ಉದಾಹರಿಸಿರುತ್ತೀರಿ. ಹುಲಿ ಮೊದಲಾದ ಮೃಗಗಳಿಂದ ಹಿಂದಟ್ಟಲ್ಪಟ್ಟುಕೊಂಡು ಬಂದ ಪಕ್ಷಿ ಮುಂತಾದ ಪಶುಪ್ರಾಣಿಗಳನ್ನು ಸಂರಕ್ಷಿಸುವುದಕ್ಕೋಸ್ಕರ ದೊರೆಗಳು ಸ್ವಶರೀರ ಮಾಂಸವನ್ನೂ ಮೂಳೆಗಳನ್ನೂ ಕೊಟ್ಟರೆಂಬ ಪುರಾಣದ ಕಥೆಗಳಿಂದ ಅಸ್ವಾರ್ಥತೆಯನ್ನು ದೃಷ್ಟಾಂತಪಡಿಸುವುದು ಅಷ್ಟೇನೂ ಉಪಯುಕ್ತವಾದದ್ದಲ್ಲ. ಬಾಲಬಾಲಕಿಯರ ದಿನಚರ್ಯೆಯಲ್ಲಿ ನಡೆಯತಕ್ಕ ವಿದ್ಯಮಾನಗಳನ್ನು ಎತ್ತಿ ಉದಾಹರಿಸಿ ಅಸ್ವಾರ್ಥತೆಯನ್ನು ಬೋಧಿಸುವುದು ಸರ್ವೋತ್ತಮವಾದ ಮಾರ್ಗವೆಂದು ಮತ್ತೆ ಸೂಚಿಸುತ್ತೇವೆ.

ಸ್ವಾರ್ಥತೆಯಿಂದ ಹುಡುಗರೂ ಹುಡುಗಿಯರೂ ನಡೆದುಕೊಳ್ಳತಕ್ಕ ಸಂದರ್ಭಗಳು ಯಾವುವೆಂದಾಗಲಿ, ಅವರು ಯಾವ ರೀತಿ ಪರಾರ್ಥಿಗಳಾಗಿ ನಡೆದುಕೊಳ್ಳತಕ್ಕದ್ದು ಎಂಬುದನ್ನಾಗಲಿ ಯಾವ ಉಪನ್ಯಾಸಕರೂ ಆಲೋಚನೆಮಾಡಿದಂತೆ ಕಾಣುವುದಿಲ್ಲ. ಈಗ ಒಂದೆರಡು ಉದಾಹರಣೆಗಳನ್ನು ಕುರಿತು ಯೋಚಿಸೋಣ. (೧) ಒಬ್ಬ ಹುಡುಗನು ಇನ್ನು ಕೆಲವರ ಕೂಡ ಆಟಕ್ಕೆ ಸೇರುತ್ತಾನೆ. ಅವನು ಯಾವುದೋ ಒಂದು ಆಟವನ್ನು ಆಡೋಣವೆಂದು ಸೂಚಿಸುವನು. ಉಳಿದವರು ಇನ್ನೊಂದು ಆಟವನ್ನು ಆಡಲಪೇಕ್ಷಿಸುತ್ತಾರೆ. ಆಗ ಅವನು ಅವರನ್ನು ಕುರಿತು "ನಾನು ಹೇಳಿದ ಆಟವನ್ನಾಡದಿದ್ದರೆ ನಾನು ಆಟಕ್ಕೆ ಬರುವುದಿಲ್ಲ" ಎನ್ನುವನು. ಇದೇ ಸ್ವಾರ್ಥತೆಯಾಗುವುದು. ನನ್ನ ಅಪೇಕ್ಷೆಯನ್ನೇ ಮುಂದಾಗಿಟ್ಟುಕೊಂಡು ಇತರರ ಅಭಿಲಾಷೆಯನ್ನು ಲಕ್ಷ್ಯಮಾಡದೆ ಇರುವುದು ಸ್ವಾರ್ಥತೆ ಎನಿಸುತ್ತದೆ. ಅಸ್ವಾರ್ಥತೆಯುಳ್ಳ ಹುಡುಗನೂ ಹುಡುಗಿಯೂ ತನ್ನ ಆಸೆಯನ್ನು ಮುಂದಿಟ್ಟುಕೊಳ್ಳದೆ ಪರರ ಅಪೇಕ್ಷೆಯನ್ನು ಕೇಳಿ ಅವರಂತೆ ಸಂತೋಷದಿಂದ ನಡೆದುಕೊಳ್ಳುವನು. (೨) ಪಾಠಶಾಲೆಯಲ್ಲಿ ಮಕ್ಕಳಿಗೆ ಕಿತ್ತಳೆ ಹಣ್ಣು ಹಂಚುವರು. ಮೊದಲನೇ ಹುಡುಗನು ಬಂದು ತಟ್ಟೆಯಲ್ಲಿರುವ ಹಣ್ಣುಗಳನ್ನೆಲ್ಲಾ ನಿಧಾನವಾಗಿ ನೋಡಿ ದೊಡ್ಡದಾಗಿರುವುದನ್ನೇ ಎತ್ತಿ ಒಂದು ಹಣ್ಣನ್ನು ತೆಗೆದುಕೊಳ್ಳುತ್ತಾನೆ. ಇವನಲ್ಲಿ ಹೊರಗೆ ಎರಡು ಸ್ವಾರ್ಥಪರನು. ಅವನು ತನ್ನ ಆಸೆಯನ್ನೇ ಮುಂದಿಟ್ಟುಕೊಂಡಿದ್ದಾನೆ. ದಾಕ್ಷಿಣ್ಯಗಳನ್ನು ಪಡೆಯುವಾಗಲೂ ಪರರ ಕುಶಲವನ್ನೇ ಮುಂದಾಗಿ ಯೋಚಿಸಬೇಕೆಂದು ಮಕ್ಕಳಿಗೆ ಹೇಳಿ ಕಲಿಸಬೇಕಾಗಿದೆ. (೩) ಮರದಿಂದ ಹುಡುಗಿಯು ಮನೆಗೆ ಬಂದು ಸಂಗಾತಿಗಳ ಕೂಡ ಆಟಕ್ಕೆ ಹೋಗಬೇಕೆಂದು ಅಪೇಕ್ಷಿಸುತ್ತಾಳೆ. ಆಗ ಮನೆಯಲ್ಲಿ ಅವಳ ತಾಯಿಗೆ ಮೈಸ್ವಸ್ಥವಿಲ್ಲದ್ದರಿಂದ ಕಸಮುಸುರೆ ನೀರು ತೋಡುವುದೇ ಮುಂತಾದ ಕೆಲಸದಲ್ಲಿ ಮಗಳ ಸಹಾಯವನ್ನು ಪಡೆಯಬೇಕೆಂದು ಅಪೇಕ್ಷಿಸಿ ಆಟಕ್ಕೆ ಹೋಗಬೇಡವೆಂದು ಹೇಳುವಳು. ಮಗಳು ಸಂತೋಷದಿಂದ ಆಟದ ಮೇಲಣ ಆಶೆಯನ್ನು ಬಿಟ್ಟು, ತನ್ನ ತಾಯಿಗೆ ಸಹಾಯಮಾಡುವುದಕ್ಕೆ ಹೋಗದೆ "ಮನೇ ಕೆಲಸ ನಾನು ಮಾಡಲಾರೆ, ನಾನು ಆಟವಾಡಬೇಕು" ಎಂದು ಹೇಳಿದರೆ ಅವಳು ಕೇವಲ ಸ್ವಾರ್ಥಪರಳಾಗುವಳು. ಇನ್ನೊಬ್ಬ ಹುಡುಗಿ ಅವಳ ತಂದೆಯು ಕೈಗೆ ಚಿನ್ನದ ಬಳೆ ಮಾಡಿಸಿಕೊಡುತ್ತೇನೆಂದು ವಾಗ್ದಾನ ಮಾಡಿರುತ್ತಾನೆ. ಊರಲ್ಲೆಲ್ಲಾ ಕ್ಷಾಮ ಪ್ರಾಪ್ತವಾಗಿ ಬಡವರು ಜೀವನಕ್ಕಿಲ್ಲದೆ ಕಷ್ಟಪಡುತ್ತಿರುವುದನ್ನು ಕಂಡು ಆ ಹುಡುಗಿಯು ತಂದೆಯ ಬಳಿಗೆ ಹೋಗಿ "ಅಪ್ಪಾ, ನನಗೆ ಚಿನ್ನದ ಬಳೆ ಬೇಡ. ಆ ಹಣವನ್ನು ಬಡಬಗ್ಗರ ಸಹಾಯಕ್ಕಾಗಿ ಕೊಟ್ಟುಬಿಡು" ಎನ್ನುವಳು. ಇದೀಗ ಅಸ್ವಾರ್ಥತೆ ಎನಿಸುವುದು.

ಪರರು ಅಸ್ವಾರ್ಥತೆಯುಳ್ಳವರಾಗಿರೋಣದರಿಂದ ನಮಗೆಲ್ಲಾ ಎಷ್ಟು ಮಟ್ಟಿಗೆ ಪ್ರಯೋಜನವಾಗುತ್ತಿದೆಯೋ ಅದನ್ನು ಮಕ್ಕಳಿಗೆ ತೋರಿಸಬೇಕು. ನಮ್ಮ ಹಿರಿಯರು ಹಾಕಿದ ಗಿಡಗಳ ಫಲವನ್ನು ನಾವು ಅನುಭವಿಸುತ್ತೇವೆ. ಅವರು ತೋಡಿದ ಭಾವಿ ಕೊಳಗಳಿಂದ ನೀರು ಉಪಯೋಗಿಸಿಕೊಳ್ಳುತ್ತೇವೆ. ಅವರು ಹಾಕಿದ ರಸ್ತೆಗಳಲ್ಲಿ ಸಂಚರಿಸುವೆವು, ಅವರು ಕಟ್ಟಿರುವ ಸತ್ರಗಳಲ್ಲಿ ಇಳಿದುಕೊಳ್ಳುತ್ತೇವೆ. ನಮ್ಮ ತಂದೆತಾಯಿಗಳು ಒಳ್ಳೆ ಒಟ್ಟೆ ಬಟ್ಟೆ ತಿಂಡಿ ಮುಂತಾದವುಗಳ ಮೇಲಿನ ಆಶೆಯನ್ನು ತೊರೆದು ಮಕ್ಕಳಾದ ನಮಗೆ ಕೊಟ್ಟು ನಮ್ಮನ್ನು ಅಭಿವೃದ್ಧಿಗೆ ತರಬೇಕೆಂದು ಬಹಳ ಪರಿಶ್ರಮ ಪಡುವರು, ಬಹಳ ಹಣ ವೆಚ್ಚಮಾಡುವರು. ನಮ್ಮನ್ನು ನಾನಾ ವಿಧದಲ್ಲಿ ಸಂತೋಷಪಡಿಸುವವರು. ಆದಕಾರಣ ನಾವು ಕೂಡ ಸ್ವಾರ್ಥವನ್ನು ಬಿಟ್ಟು ಅಸ್ವಾರ್ಥತೆಯುಳ್ಳವರಾಗಬೇಕು. "ಅನ್ಯರ ಹೊರೆಯನ್ನು ತಾಳ್ಮೆಯಿಂದ ಹೊರುವವನಾಗಿ" "ಮನುಷ್ಯನು ತನ್ನಷ್ಟಕ್ಕೆ ಮಾತ್ರವೇ ಬದುಕುವವನಾಗಿಲ್ಲ".

ಕಳೆದ ವರುಷದ ಪ್ರತಿನಿಧಿ ಸಭೆಯ ರಿಪೋರ್ಟು.

ಈ ಸಲ ನವರಾತ್ರಿ ಉತ್ಸವಗಳ ಅಂತ್ಯದಲ್ಲಿ ರಾಜಧಾನಿಯಲ್ಲಿ ನಡೆದ *ಪ್ರಜಾಪ್ರತಿನಿಧಿ ಸಭೆಯ ರಿಪೋರ್ಟನ್ನು ಸರ್ಕಾರದವರು ಪ್ರಿಂಟುಮಾಡಿಸಿ* ಒಂದು ಪ್ರತಿಯನ್ನು ಈ ವಾರ ನಮ್ಮಲ್ಲಿಗೆ ಕಳುಹಿಸಿಕೊಟ್ಟಿರುತ್ತಾರೆ. ಈ ಸಲ ಸಭೆಯಲ್ಲಿ ಮೆಂಬರುಗಳು ಚರ್ಚೆಗೆ ತಂದ ಸಮಸ್ತ ವಿಷಯಗಳನ್ನೂ ಅವುಗಳಿಗೆ ದಿವಾನ್‌ರವರು ದಯಪಾಲಿಸಿದ ಉತ್ತರಗಳನ್ನೂ ವಿಸ್ತಾರವಾಗಿ ತಿಳಿಸಲ್ಪಟ್ಟಿದೆ. ಇದಲ್ಲದೆ ಬೇರೆ ಬೇರೆ ಪ್ರತಿನಿಧಿಗಳೂ ಸಂಘಗಳವರೂ ದಿವಾನ್‌ರವರಿಗೆ ಸಭೆಯಲ್ಲಿ ಓದಿ ಒಪ್ಪಿಸಿದ ಅಡ್ರೆಸ್ಸುಗಳನ್ನೂ ಅವುಗಳಿಗೆ ದಿವಾನ್‌ರವರು ಅಪ್ಪಣೆ ಕೊಡಿಸಿದ ಉತ್ತರಗಳನ್ನೂ ಪ್ರಕಟಮಾಡಿದಾರೆ. ಇಷ್ಟೇ ಅಲ್ಲ, ವರ್ತಮಾನ ಪತ್ರಿಕೆಗಳ ವಿಚಾರವಾಗಿ ಸರ್ಕಾರದವರು ಹೊಸ ಕಾನೂನ್ ಮಾಡಿರುತ್ತಾರಷ್ಟೆ. ಈ ಕಾನೂನ್ ವಿಷಯದಲ್ಲಿ ಪ್ರತಿನಿಧಿಗಳು ಚರ್ಚೆ ನಡೆದ ಅಂಶಗಳನ್ನೂ ದಿವಾನ್‌ರವರು ತಿಳಿಸಿದ ಸಮಾಧಾನಗಳನ್ನೂ ಅಚ್ಚುಹಾಕಿ ಪ್ರತ್ಯೇಕವಾದ ಒಂದು ಪುಸ್ತಕವನ್ನು ಮಾಡಿ ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿರುವರು. ಈ ಸಭೆಯಲ್ಲಿ ಚರ್ಚೆಯಾದ ಮುಖ್ಯ ವಿಚಾರಗಳನ್ನೆಲ್ಲಾ ದಿವಾನ್‌ರವರ ಉತ್ತರ ಸಹಿತವಾಗಿ ನಾವು ಹಿಂದೆಯೇ ವಾಚಕರಿಗೆ ತಿಳಿಸಿರುತ್ತೇವಾದ್ದರಿಂದ ಚರ್ಚಿಸಲ್ಪಟ್ಟ ವಿಷಯಗಳನ್ನು ಕುರಿತು ನಾವು ಮತ್ತೆ ಪ್ರಸ್ತಾಪಮಾಡಬೇಕಾದ ಅಗತ್ಯ ಕಾಣಬರುವುದಿಲ್ಲ.

ಈ ಸಲ ಸಂಸ್ಥಾನದಲ್ಲಿ ೨೭೧ ಪ್ರಜಾಪ್ರತಿನಿಧಿಗಳು ಚುನಾಯಿಸಲ್ಪಟ್ಟರು. ಈ ಪೈಕಿ ಯೂರೋಪಿಯನ್ನರು ೫ ಮಂದಿ, ಮಹಮದೀಯರು ೧೯ ಮಂದಿ, ಹಿಂದುಗಳು ೨೪೭ ಮಂದಿ. ಕಸಬುವಾರು ಮೆಂಬರುಗಳನ್ನು ಪರೀಕ್ಷಿಸಿದರೆ ಈ ೨೭೧ ಮಂದಿಯ ಪೈಕಿ ವರ್ತಕರು ೩೮, ಸಾಹುಕಾರ್ ಅಥವಾ ಲೇವಾದೇವಿ ಮಾಡತಕ್ಕವರು ೧೧, ಗ್ರಾಮಾಧಿಕಾರಿಗಳು ಅಥವಾ ಪಟೇಲ್ ಶ್ಯಾನುಭೋಗರು ೬೯, ಜಮೀನ್‌ದಾರರು ೧೦೧, ಲಾಯರುಗಳು ೧೯, ಸ್ಕೂಲ್ ಮಾಸ್ಟರುಗಳು ೩, ಇತರ ಕಸಬಿನವರು ೨೧ ಈ ರೀತಿಯಾಗಿದ್ದರು. ಈ ಒಟ್ಟು ಮೆಂಬರುಗಳಲ್ಲಿ ಈ ಸಲ ಮೊದಲನೇ ದಿನ ಸಭೆಯಲ್ಲಿ ೨೨೬ ಜನರು ಹಾಜರಾಗಿದ್ದರು. ಕಳೆದ ೧೯೦೭ನೇ ವರುಷದ ಸಭೆಯಿಂದೀಚೆಗೆ ಇಷ್ಟು ಹೆಚ್ಚು ಮಂದಿ ಸಭೆಗೆ ಬಂದಿದ್ದಿಲ್ಲ.

ಸಬ್ಬತ್ತಿನ ಪಾಠಶಾಲೆಯ ಮಕ್ಕಳಿಗೆ ಇನಾಮು

ಬೆಂಗಳೂರು ಬಸವನ ಗುಡಿಯಲ್ಲಿ ಮೆ ಹೊನ್ನಯ್ಯ, ಬಿ ಎ ಯವರು ಕಟ್ಟಿರುವಂಥ ಕ್ರೈಸ್ತ ದೇವಾಲಯದಲ್ಲಿ ಇದೇ ಬಸವನ ಗುಡಿಯಲ್ಲಿರುವ ಹಲವು ಕ್ರೈಸ್ತರ ಗಂಡು ಮತ್ತು ಹೆಣ್ಣು ಮಕ್ಕಳಿಗಾಗಿ ನವರಿ ದೇವಾಲಯದಲ್ಲಿ ಮಕ್ಕಳ ಭಕ್ತಿ ವೃದ್ಧಿಗಾಗಿ ಒಂದು ಸಬ್ಬತ್ತಿನ ಶಾಲೆಯನ್ನು ಏರ್ಪಡಿಸಿ, ತಾವೇ ಆ ಮಕ್ಕಳಿಗೆಲ್ಲಾ ಸತ್ಯವೇದವನ್ನು ಅವರವರ ಶಕ್ತಿಗನುಸಾರವಾಗಿ ವಿವರಿಸುತ್ತಾ ಬಾಲಕ ಬಾಲಕಿಯರನ್ನೆಲ್ಲಾ ಜ್ಞಾನಾಭಿವೃದ್ಧಿಗಾಗಿ ಶಾಲೆಗೆ ಗೊಳಿಸುತ್ತಾ, ಬಹು ಆಸಕ್ತಿಯಿಂದಲೂ ಭಕ್ತಿಯಿಂದಲೂ ನಡಿಸುತ್ತಾ ಬಂದಿರುತ್ತಾರೆ. ಅವರ ಅಮೋಘವಾದ ಮಮತೆಗೂ ಅವರ ಭಕ್ತಿಗೂ ಅವರನ್ನು ಭಗವಂತನ ವಾಕ್ಯ ಹೊಗಳಿ ಅವರ ಮೌಲ್ಯವನ್ನು ಅನುಸರಿಸಬೇಕಾಗಿದೆ. ಮುಂದಿನ ಹೊಸ ವರ್ಷದಲ್ಲಿಯೂ ಸ್ವಾಮಿಯು ಅವರಿಗೆ ಹೆಚ್ಚಾದ ಶಕ್ತಿಯನ್ನೂ ದೀರ್ಘಾಯುಸ್ಸನ್ನೂ ದಯಪಾಲಿಸಬೇಕೆಂಬುದೇ ಮಕ್ಕಳ, ಅವರ ತಂದೆತಾಯಿಗಳ ಮತ್ತು ನನ್ನ ಮುಖ್ಯವಾದ ಪ್ರಾರ್ಥನೆಯಾಗಿದೆ. ಈ ಸಬ್ಬತ್ತಿನ ಶಾಲೆಯ ಬಾಲಕ ಬಾಲಕಿಯರು ಮ| ಹೊನ್ನಯ್ಯನವರಿಂದ ಕೂಡಿಕೊಂಡಿರುವ ಸರ್ಟಿಫಿಕೇಟ್‌ಗಳನ್ನು ಗವರ್ನಮೆಂಟ್ ಅಂಡರ್ ಸೆಕ್ರೆಟರಿಗಳಾದ ಮೆ| ಕೆ ನಾರಾಯಣ ರಾವ್ ಬಿಎನರೂ ಅವರ ಪ್ರಿನ್ಸು ಪತ್ನಿಯವರೂ ಪರಾಂಬರಿಸಿ, ಬಾಲಕ ಬಾಲಕಿಯರ ಸದುತ್ತರಗಳನ್ನು ಕೇಳಿ ಬಹು ಆನಂದಪರವಶರಾಗಿ ಈ ಬಾಲಕ ಬಾಲಕಿಯರ

ದೊಡ್ಡ ಗಿಡವನ್ನು ಏರ್ಪಡಿಸಿ, ಆ ಗಿಡದ ಮೇಲೆ ತಂಗೋಳಿಸುತ್ತಿದ್ದ ನಾನಾ ತರದ ವಸ್ತುಗಳನ್ನೂ ಬೆಲೆಯುಳ್ಳ ಸತ್ಯವೇದಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನೂ ಕಟ್ಟಿ ತೂಗಾಡುವಂತೆ ಮಾಡಿ, ಸದರಿ ಬಾಲಕ ಬಾಲಕಿಯರನ್ನೆಲ್ಲಾ ೨೭ನೇ ತಾ. ಭಾನುವಾರ ಮಧ್ಯಾಹ್ನ ೩ ಘಂಟೆಗೆ ತಮ್ಮ ಮನೆಗೆ ಕರಸಿಕೊಂಡು ಮಕ್ಕಳಿಗೆಲ್ಲಾ ಸಂತೋಷವಾಗುವಂತೆ ಗ್ರೋಮೊಫೋನಿನಿಂದ ಹಾಡಿಸಿ, ತದನಂತರ ನಾನಾ ತರದ ತಿಂಡಿಯು ಪದಾರ್ಥಗಳನ್ನು ಮಕ್ಕಳಿಗೆಲ್ಲಾ ಕ್ರಮವಾಗಿ ಹಂಚಿಸಿದರು ಅವರ ಚಿಕ್ಕ ಮಗನು ಬಹು ಪ್ರೀತಿಯಿಂದ ಈ ಮಕ್ಕಳಿಗೆಲ್ಲಾ ಭೂತಕನ್ನಡಿಯ ಪರಗಳನ್ನು ತೋರಿಸಿ, ಮಕ್ಕಳೊಂದಿಗೆ ಆನಂದಪಟ್ಟನು ಅನಂತರ ಮೆ॥ ಕೆ ಮಾರ್ಕ ಸಾಹೇಬರವರ ಪತ್ನಿಯವರು ಬಹು ಪ್ರೀತಿಪೂರ್ವಕವಾಗಿ ಪ್ರತಿಯೊಬ್ಬ ಮಗುವಿಗೂ ಅದರದರ ಯೋಗ್ಯತಾನುಸಾರ ಕ್ರಿಸ್‌ಮಸ್ ಗಿಡದ ಮೇಲಿದ್ದ ಬಹುಮಾನಗಳನ್ನೆಲ್ಲಾ ಹಂಚಿಕೊಟ್ಟು ಮಕ್ಕಳನ್ನೆಲ್ಲಾ ಸಂತೋಷಪಡಿಸಿದರು

ಎ. ಡಿ

ತಾಲ್ಲೋಕು ವರ್ತಮಾನಗಳು

ಹುಣಸೂರು.—ಇದೇ ತಿಂಗಳು ೭ ನೇ ತಾ ಬ್ರಾಂಹ್ಮಣರ ಬೀದಿಯಲ್ಲಿ ರಾಮರಾಯರಿಗೆ ಸೇರಿದ ಭಾವಿಯಲ್ಲಿ ಗುಮಾಸ್ತೆ ಸೀತಾರಾಮಯ್ಯನವರ ಹೆಂಡತಿಯು ಬಿದ್ದು ಪ್ರಾಣಕಳಕೊಂಡರು ಇನ್ನೂ ಚಿಕ್ಕ ವಯಸ್ಸು ಅವರಿಗೆ ಇಬ್ಬರು ಚಿಕ್ಕ ಮಕ್ಕಳಿರುತ್ತಾರೆ ಅಕಾಲಮರಣವಾದದ್ದಕ್ಕಾಗಿ ಸರ್ವರೂ ಸಂತಾಪಪಡುತ್ತಾರೆ ಶಿಥಿಲವಾಗಿರುವ ಬಾವಿಗಳನ್ನು ಸರಿಮಾಡಿಸುವ ವಿಷಯದಲ್ಲಿ ನಮ್ಮ ಅಮಲ್ದಾರರು ತುಂಬಾ ಸಗಾಕೊಡುವರೆಂದು ನಂಬುತ್ತೇವೆ —ಇದೇ ತಿಂಗಳು ೩ನೇ ತಾ ಕೊಡಗು ಫಾರೆಸ್ಟಿನಿಂದ ಮೆ ಹನುಮಂತಶೆಟ್ಟಿಯವರ ತೋಟ ನೋಡುವವರು ತೊಪ್ಪೆಗಳನ್ನು ತುಂಬಿಕೊಂಡು ಬಂದರು ಭರ್ತಿಯಾಗಿದ್ದ ತೊಪ್ಪೆಗಳ ಪೈಕಿ ಒಂದು ಗಾಡಿಗೆ ೯೩ ಅಡಿ ಇದ್ದ ತೊಪ್ಪೆ ಭರ್ತಿಮಾಡಿದ್ದರು ಆ ಗಾಡಿ ಊರು ಸಮೀಪಕ್ಕೆ ಬರಲು ಸಾಧ್ಯವೊಡನೆ ಊರೊಳಕ್ಕೆ ಕರೆದುಕೊಂಡು ಮುಂದೆ ಸಾಗಿಸಿದರು ಒಂದೇ ಜೊತೆ ಎತ್ತುಗಳು ಅಂಥಾ ಭಾರಿ ತೊಪ್ಪೆಯನ್ನು ಸಾಗಿಸಿಕೊಂಡು ಬಂದದ್ದಕ್ಕಾಗಿ ಎಲ್ಲರೂ ಆಶ್ಚರ್ಯಪಡುತ್ತಾರೆ—ಅದೇ ದಿನ ಪಶ್ಚಿಮವಾಹಿನಿಯಿಂದ ಹುಣಸೂರಿಗೆ ಬರುತ್ತಿದ್ದ ಮೆ॥ ಕೆ ಸಹ ಒ ೧ ೩ಗೆ ಶೀಕರೆ ಹತ್ತಿರ ಕಳ್ಳರು ಹಿಡಿದು ಕೆಲವು ಸಾಮಾನುಗಳನ್ನು ಅಪಹರಿಸಿಕೊಂಡು ಪರಾರಿಯಾದರೆಂದು ಕೇಳಿ, ಆಸಾಮಿಗಳನ್ನು ಪತ್ತೆ ಮಾಡಲು ಪೋಲೀಸ್ ಇನ್ಸ್‌ಪೆಕ್ಟರು ಆ ಸ್ಥಳಕ್ಕೆ ಹೋಗಿರುತ್ತಾರೆ

ಕೋಲಾರ‍ಲಕ್ಷ್ಮೀಪುರ ಬಿಸಲಿನ ಝಳವು ದಿನಕ್ರಮೇಣ ಹೆಚ್ಚುತ್ತಾ ಬರುತ್ತೆ ಗ್ರಾಮವಾಸಿಗಳು ಈ ಸುಗ್ಗಿ ಕಾಲದಲ್ಲಿಯೂ ಕ್ಷಾಮವನ್ನು ಎದುರು ನೋಡುತ್ತಾ ಇವೆ ರಾಗಿ ರೂಪಾಯಿಗೆ ೧೧ ಸೇರು ಅಕ್ಕಿ ೬॥-೭ ಸೇರು ಈ ಪ್ರಕಾರವೆ ಅವರೆ ಬೆಲೆಯು ಕಳೆದ ಮೂರು ವರುಷಗಳಿಗಿಂತ ಈ ಸಾರಿ ಬಹು ಚನ್ನಾಗಿದೆ —ಮುನಿಸಿಪಾಲಿಟಿಯವರು ಲಾಂದ್ರಗಳನ್ನು ಪ್ರತಿ ದಿನವೂ ಚನ್ನಾಗಿ ಸಿಂಗರಿಸುತ್ತಾ ಇರುವರಿಂದ ಮೊದಲು ಬಿಂಬ ಗ್ರಹಣದಂತಿದ್ದ ಲಾಂದ್ರಗಳು ಕೆಲವು ಚನ್ನಾಗಿ ಪ್ರಕಾಶಿಸುತ್ತವೆ —ಪೋಲೀಸ್ ಬೀಟು ಈಗ ಬಹು ಚನ್ನಾಗಿರುತ್ತೆ ಇದರ ಪ್ರಯುಕ್ತ ಕಳ್ಳಕಾಕರಿಗೆ ಅವಕಾಶವಿಲ್ಲದೆ ಇವೆ. —ಛತ್ರದ ಕಟ್ಟಡವು ತೀರಿತು ಆಗಲೇ ಜನಗಳು ಭರ್ತಿ ಬಿಡುತ್ತಾ ಇವಾರೆ ಹೊಸ ಅಕ್ಕಿ ರಾಗಿಗಳನ್ನು ಸಂತೆಯಲ್ಲಿ ಬಿಕರಿ ಮಾಡುತ್ತಾರೆ —ಸಂತೆಯಲ್ಲಿ ಈಗ ಆರೋಗ್ಯದ ವಿಷಯದಲ್ಲಿ ಮುನಿಸಿಪಾಲಿಟಿಯವರು ಯಾವ ಗುರಾಣಿ ಇಲ್ಲದೆ ನಿಗಾ ನೋಡುತ್ತಾ ಇರುತ್ತಾರೆ ಇದರ ಒಂದು ಮಾಸಿಕದಾಯಿ ಮಾರುವ ವಸ್ತು ಅನೇಕರು ಕಡಮೆ ತೂಕದಿಂದ ಜನಗಳಿಗೆ ಬಹು ಮೋಸ ಮಾಡುತ್ತಾರೆ ಸೌಸ ಮೊಟು ಗಾ ಶಿಕ್ಷೆ ಹಾಕಿ ಜನಗಳಿಗೆ ಉಂಟಾದ ಈ ರೀತಿಯಾಗಿ ಮೋಸ ಹೋಗುವರು ಪೋಲೀ ನವರು ಈ ವಿಷಯದಲ್ಲಿ ನಿಗಾ ಕೊಡುವುದು ಅವಶ್ಯವಾಗಿದೆ —ಕಳೆದ ವಾರದ ಕರ್ನಾಟಕದ ೭ ನಿಷ್ಕರ್ಷೆಯನ್ನು ೫೦೦-೬೦೦ ಎಕರೆ ಎಂಬುವುದಕ್ಕೆ ಬದಲಾಗಿ ೫೦ ಎಕರೆ ಎಂದ, ೭ ಅಂಗುಲದ ನಲ್ಲಿ ಎಂಬುವುದಕ್ಕೆ ಬದಲಾಗಿ ೯ ಅಂಗುಲದ ನಲ್ಲಿ ಎಂದೂ ತಿದ್ದಿ ಕೊಳ್ಳುವುದು

ಚಿಕ್ಕಮಗಳೂರು.—ಕ್ಷಾಮದ ದೆಸೆಯಿಂದ ಉಂಟಾದ ಪ್ರಜೆಗಳ ಕಷ್ಟ ನಿವಾರಣೆಗೋಸ್ಕರವಾಗಿ ನಮ್ಮ ಡೆಪ್ಯುಟಿ ಕಮೀಷನರ್ ಸಾಹೇಬರವರೂ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರೂ ಸೇರಿ ಇಲ್ಲಿನ ಕೆಲವು ಮುಖ್ಯಸ್ಥರನ್ನು ಕರೆಸಿ ಮೀಟಿಂಗ್ ನಡಿಸಿ, ಈ ಮೀಟಿಂಗಿನಲ್ಲಿ ರೂಪಾಯಿಗ ೧೨ ಸೇರು ರಾಗಿಯಂತೆಯೂ, ೭ ಸೇರು ಅಕ್ಕಿಯಂತೆಯೂ ಧರ ಕೊಡಬೇಕೆಂದು ತೀರ್ಮಾನಿಸಿದರು. ಅದರಂತೆ ನಡೆಯುತ್ತಿಲ್ಲ ಆದ್ದರಿಂದ ಈಗ ಸರ್ಕಾರದವರು ಬಡಬಗ್ಗರ ಉಪಕಾರಾರ್ಥವಾಗಿ ಸರ್ಕಾರದಿಂದಲೇ ಮಂಡಿಯನ್ನು ಇಟ್ಟು ತಮ್ಮ ತೀರ್ಮಾನದ ಪ್ರಕಾರ ಮಾರಿಸುವುದಾದರೆ ಅನೇಕ ಬಡಬಗ್ಗರಿಗೆ ಜೀವನಕ್ಕೆ ಅನುಕೂಲವಾಗುತ್ತೆ ಸ್ವಲ್ಪಕ್ಕೆ ಈ ಟವುನ್ನಲ್ಲಿ ಪ್ಲೇಗ್ ರೋಗದ ಸೂಚನೆಗಳೇನೂ ಇಲ್ಲ ಆದರೆ ಇಲಿಗಳು ಮಾತ್ರ ಹೆಚ್ಚಿರುವುದರಿಂದ ಮ್ಯುನಿಸಿಪಾಲಿಟಿಯವರು ಒಂದೊಂದು ಮನೆಗೆ ಒಂದು ಎರಡು ಇಲಿಯ ಬೋನುಗಳನ್ನು ಕೊಟ್ಟು ಇಲಿಗಳನ್ನು ಹಿಡಿಸುತ್ತಿದಾರೆ —ತಾ ೨೬ನೇ ಶುಕ್ರವಾರ ಇಲ್ಲಿನ ಮಿಷನ್ ಬಾಲಿಕಾ ಪಾಠಶಾಲೆಯ ಬಾಲಕಿಯರಿಗೆ ಬಹುಮಾನವನ್ನು ಕೊಡುವ ಉದ್ದೇಶ ಪಾಠಶಾಲೆಯನ್ನು ತೋರಣ ಬಾವುಟಗಳಿಂದಲೂ ಮತ್ತು ಅನೇಕ ಚಿತ್ರಗಳಿಂದಲೂ ಅಲಂಕರಿಸಿದ್ದರು ಮಧ್ಯಾಹ್ನ ೪ ಘಂಟೆಗೆ ಸಭೆ ಸೇರಿತು ಮಿಸೆಸ್ ಮೆ ಟ ಕ್ಯಾಪ್ಟನ್ ರವರು ಅಗ್ರಾಸನವನ್ನು ವಹಿಸಿದರು ರೆವ್ ಜ ರೆಡ್ಮಂಡ್ ನಾರೆಯವರು ಕ್ರಿಸ್ತಸ್ ದಬ್ಬದ ವಿಚಾರವಾಗಿ ಉಪನ್ಯಾಸ ಮಾಡಿದರು ಮುಕ್ತಾಯವರು ಸ್ತ್ರೀ ವಿದ್ಯಾಭ್ಯಾಸದ ವಿಚಾರದಲ್ಲಿ ತಿಳಿಯುವಂತೆ ಮತ್ತು ಮಿಷನ್ ಸಂಘದವರು ವಿದ್ಯೆ ವಿಷಯವಾಗಿ ಮಾಡುತ್ತಿರುವ ಸಹಾಯವನ್ನೂ ಕುರಿತು ಮನೋಲ್ಲಾಸ ಉಂಟಾಗುವಂತೆ ಉಪನ್ಯಾಸ ಮಾಡಿದರು ಪಡ್ ನಾಕರ್ ಮೆ ೦ ಪಿ ಕೃಷ್ಣೈಯನವರು ಸ್ತ್ರೀ ವಿದ್ಯಾಭ್ಯಾಸದ ವಿಚಾರವಾಗಿ ತಿಳಿಸಿದರು ಕೆಲವು ಬಾಲಕಿಯರ ಇಂಗ್ಲಿಷ್ ಪದ ಪ್ರಮೀ ಭಾಷೆಯ ವಿಚಾರವಾದ ಪದ್ಯಗಳನ್ನು ಬಹಳ ಚನ್ನಾಗಿ ಹಾಡಿದರು ಅಗ್ರಾಸನ ವಹಿಸಿದ್ದ ಮಿಸೆಸ್ ರವರು ಬಾಲಕಿಯರಿಗೆ ಬೊಂಬೆ ಪದಗಳನ್ನೂ ಕೆಲವು ಬಾಲಕರಿಗೆ ಪುಸ್ತಕ, ಧರಿಸಬೇಕಾದ ವಸ್ತ್ರಗಳನ್ನೂ ಹಂಚಿ ಕಳುಹಿಸಿದರು. ಕಳೆದ ಶುಕ್ರವಾರದಲ್ಲಿ ಕ್ರೈಸ್ತ ಚಕ್ರವರ್ತಿಗಳ ಜನ್ಮದಿನದ ಮಹಾ ರಾಜರವರ ಜನ್ಮದಿನದ ಬಹು ವೈಭವವಾಗಿ ಶ್ರೀಯವರ ಪ್ರಾರ್ಥನೆಯನ್ನು ಮಾಡಿ, ಮಹೋತ್ಸವವಾಗಿ ಮಂಗಳವಾದ್ಯಗಳನ್ನು ಹೊಡಿದರು ನೌಕರರುಗಳು ಪ್ರತ್ಯೇಕವಾಗಿ ಉಪನ್ಯಾಸಗಳು ಮಾಡಿದ್ದಲ್ಲದೆ ಶ್ರೀ ಸಭೆಯು ೨ ಘಂಟೆಗೆ ಬರಖಾಸ್ತಾಯಿತು ಅನಂತರ ನಿಷನ್ ಕಾಂ

ಪೌಂಡಿನಲ್ಲಿ ಎಲ್ಲಾ ಬಾಲಕ ಬಾಲಕಿಯರಿಗೆ ಮಿಠಾಯಿ ಮೊದಲಾದ ತಿಂಡಿಯನ್ನು ಹಂಚಿದ್ದಲ್ಲದೆ ಕೆಲವು ಬಾಲಕರಿಂದ ಆಟಪಾಟಗಳನ್ನು ಆಡಿಸಿ, ಜಯಶೀಲರಾದವರಿಗೆ ಬಹುಮಾನಗಳನ್ನು ಕೊಟ್ಟರು. ಕೊನೆಗೆ ಎಲ್ಲಾ ಮಾಸ್ತರುಗಳೂ ಬಾಲಕ ಬಾಲಕಿಯರೂ ರೆವ್. ಜೆ. ರೆಡ್ಮಂಡ್ ಧೊರೆಯವರ ಶ್ರೇಯಃಪ್ರಾರ್ಥನೆಯನ್ನೂ ಜಯಘೋಷವನ್ನೂ ಮಾಡಿ ಸಂತೋಷದಿಂದ ಸ್ವಗೃಹಗಳಿಗೆ ತೆರಳಿದರು.

ತಿಪ್ಟೂರು.—ಕಳೆದ ತಾ. ೧೫ ನೇ ಮಂಗಳವಾರ ಇಲ್ಲಿನ ಮಿಷನ್ ಬಾಲಿಕಾ ಪಾಠಶಾಲೆಯ ಬಾಲಕಿಯರಿಗೆ ಘನ ಟ್ರವೆಲ್ಲಾ ಸಾಹೇಬರವರೂ ಅವರ ಧೊರೆಸಾನಿಯವರೂ ಘನ ಪ್ರೇಮಕೆಯ್ಯನವರೂ ಇಲ್ಲಿಗೆ ದಯಮಾಡಿಸಿ ಬಹುಮಾನಗಳನ್ನು ಕೊಟ್ಟರು. ಆ ಕಾಲದಲ್ಲಿ ಇಲ್ಲಿನ ಅಮಲ್ದಾರ್ ಮೆ॥ ಮಹಮ್ಮದ್ ಅಬ್ದುಲ್ಲಾ ಷರೀಫ್ ಸಾಹೇಬರು ಅಗ್ರಾಸನವನ್ನು ವಹಿಸಿದ್ದರು ಪೋಲೀಸ್ ಇನ್ಸ್‌ಪೆಕ್ಟರೂ ಸಾವಕಾರರೂ ವರ್ತಕರೂ ಮಕ್ಕಳ ತಂದೆಗಳೂ ಹಾಜರಾಗಿದ್ದರು ಇಬ್ಬರು ಬಾಲಕಿಯರು ಸ್ತ್ರೀ ವಿದ್ಯಾಭ್ಯಾಸದಿಂದ ಆಗುವ ಪ್ರಯೋಜನವನ್ನೂ ಇಂಗ್ಲೀಷ್ ಜನರಿಂದ ಇಂಡ್ಯಕ್ಕೆ ಬಂದಿರುವ ಮೇಲುಗಳನ್ನೂ ಕುರಿತು ಉಪನ್ಯಾಸ ಓದಿದರು. ಅಗ್ರಾಸನದಿಂದ ಮೆ॥ ಮಹಮ್ಮದ್ ಷರೀಫ್‌ಯವರು ಮಿಷನ್ ಸ್ಕೂಲಿನಿಂದ ಬಾಲಕಿಯರಿಗೆ ಉಂಟಾಗುವ ವಿದ್ಯಾಭಿವೃದ್ಧಿಯನ್ನು ಕುರಿತು ಮಾತಾಡಿದರು ಕಡೆಯಲ್ಲಿ ಘನ ಟ್ರವೆಲ್ಲಾ ಸಾಹೇಬರವರು ತಮ್ಮ ಧೊರೆಸಾನಿಯವರಿಂದ ಗೊಂಬೆ ಮುಂತಾದ ಬಹುಮಾನಗಳನ್ನು ಕೊಡಿಸಿದರು. ಬಾಲಕಿಯರಿಗೆ ಮಿಠಾಯಿ ತಿಂಡಿ ಹಂಚಲ್ಪಟ್ಟವು. ಸಭಿಕರಿಗೆಲ್ಲಾ ಹೂವು ಗಂಧ ತಾಂಬೂಲ ಕೊಟ್ಟು ಮುಕ್ತಾಯವಾಡಿದರು —ತಾ. ೨೦ ನೇ ಭಾನುವಾರ ಇಲ್ಲಿಗೆ ಹೊಸ ಅಮಲ್ದಾರ್ ಮೆ॥ ವಾಚಯ್ಯನವರು ಬಂದರು. ಇಲ್ಲಿನ ಸರ್ಕಾರಿ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಸ್ಟೇಷನ್‌ಗೆ ಹೋಗಿ ಅವರನ್ನು ಕಂಡು ಮರ್ಯಾದೆಯೊಡನೆ ಊರಿಗೆ ಕರಕೊಂಡು ಬಂದರು —ತಾ ೨೩ ರಲ್ಲಿ ವರ್ಗಪಟ್ಟ ಅಮಲ್ದಾರ್ ಮೆ॥ ಮಹಮ್ಮದ್ ಅಬ್ದುಲ್ಲಾ ಷರೀಫ್ ಸಾಹೇಬರವರನ್ನು ಕರೆಸಿಕೊಂಡು ಇಲ್ಲಿನ ದಿವಾನ್ ನರಸಿಂಹಯ್ಯಂಗಾರ್ರ ಛತ್ರದಲ್ಲಿ ಎಲ್ಲಾ ಸರ್ಕಾರಿ ನೌಕರರೂ ಸೇರಿ ಮರ್ಯಾದೆಮಾಡಿದರು ಆಗ ಇಲ್ಲಿನ ವರ್ತಕ ಮಂಡಲಿಯವರನ್ನೂ ಕರೆಸಿದ್ದರು ಮರುದಿನ ಸಾಯಂಕಾಲ ಸಾವಕಾರ್ ಮೆ॥ ಮಲ್ಲೇಶಪ್ಪನವರ ಮಹಡಿ ಮೇಲೆ ಇಲ್ಲಿನ ಎಲ್ಲಾ ವರ್ತಕರೂ ಸೇರಿ ಅಮಲ್ದಾರ್ರನ್ನು ಕರಸಿ ಸಂಗೀತ ಗಾನ ಮಾಡಿಸಿ ಸನ್ಮಾನಮಾಡಿದರು —ಮತ್ತು ಇಲ್ಲಿನ ಅ೦ ಇಂಜನಿಯರಾದ ಮೆ॥ ಪೋಪತ್ ಭಾಯಿಯವರು ಸ್ಕೂಲ್ ಬಾಲಕಿಯರಿಗೆ ಬಹುಮಾನಾರ್ಥವಾಗಿ ವರ್ಗವಾದ ಅಮಲ್ದಾರ್ರಿಂದ ಪುಸ್ತಕ ಸ್ಲೇಟುಗಳನ್ನು ಕೊಡಿಸಿ ಮಿಠಾಯಿ ಮುಂತಾದ್ದನ್ನು ಹಂಚಿಸಿದರು ಮತ್ತು ಮು, ದಸ್ತಗಿರಿ ಸಾಹೇಬರೂ, ಮೆ ಅಬ್ದುಲ್ಲಾ ಸಾಹೇಬರೂ ಹಿಂದುಸ್ತಾನಿ ಸ್ಕೂಲಿನ ಬಾಲಕರಿಗೆ ಪುಸ್ತಕ ಸ್ಲೇಟು ಕೊಡಿಸಿದ್ದಲ್ಲದೆ ಸುಮಾರು ೧೦೦ ಬಡ ಜನರಿಗೆ ಅನ್ನ ಹಾಕಿಸಿದರು ವರ್ಗಪಟ್ಟ ಅಮಲ್ದಾರ್ರು ಬಡವರ ಮೇಲೆ ಪ್ರೀತಿವಂತರಾಗಿದ್ದದೇ ಇದಕ್ಕೆ ಕಾರಣವಾಗಿದೆ —ಅಮಲ್ದಾರ್ರು ಇನ್ನೊಂದು ವಿಶೇಷವಾದ ಮಾಟಿಂಗನ್ನು ೬ ದಿನ ನಡಿಸಿದರು ಮೆ॥ ಮಲ್ಲೇಶಪ್ಪನವರ ಮಹಡಿ ಮೇಲೆ ಹೊಸ ಅಮಲ್ದಾರ್ರ ಜೊತೆಯಲ್ಲಿ ಎಲ್ಲಾ ವರ್ತಕರನ್ನೂ ಕರಿಸಿ, ಕ್ಷಾಮ ನಿವಾರಣೆಗೋಸ್ಕರ ಬಡ ಜನರಿಗೂ ಅನಾಥರಿಗೂ ಬಡ ದನಕರುಗಳಿಗೂ ಆಹಾರ ಮೇವುಗಳಿಗಾಗಿ ತಕ್ಕ ಏರ್ಪಾಡನ್ನು ಮಾಡಿದರು ಈ ಊರಿಗೆ ಪರಸ್ಥಳದಿಂದ ರೈಲ್ ಮೂಲಕ ಬರತಕ್ಕ ಮತ್ತು ಹೋಗತಕ್ಕ ಪ್ರತಿ ಒಂದು ಪದಾರ್ಥ ಮೂಟೆಗೂ ೩ ಕಾಸಿನಂತೆ ರುಸುಂ ವಸೂಲು ಮಾಡುವಂತೆ ವರ್ತಕರ ಪೈಕಿ ೧೨ ಜನ ನಾಯಕರನ್ನು ನೇಮಿಸಿ ವಸೂಲಾದ ಹಣವು ಮತ್ತು ಅದೇ ಮಾಟಿಂಗಿನಲ್ಲಿ ವರ್ತಕರಿಂದ ವಸೂಲಾದ ಸುಮಾರು ೨೦೦ ರೂಪಾಯಿ ಸಹ ಸೇರಿ ಇದರಿಂದ ಪ್ರತಿ ವಾರವೂ ಒಂದು ಸಾರಿ ಬಡ ಜನಗಳಿಗೆ ಜೋಳ ರಾಗಿ ದರ್ಮಕೊಡುವಂತೆಯೂ ದನಗಳಿಗೆ ಅದೇ ರೀತಿ ಹುಲ್ಲು ಹಾಕಿ ಸಾಕುವಂತೆಯೂ ಗೊತ್ತುಮಾಡಿದರು ಇದು ತಿಂಗಳದಲ್ಲೇ ಜಾರಿಯಲ್ಲಿ ಬರುತ್ತದೆಂದು ನಂಬಬೇಕಾಗಿದೆ ಯಾಕಂದರೆ ಇಲ್ಲಿನ ಎಲ್ಲಾ ವರ್ತಕರೂ ದೊಡ್ಡ ಮನುಷ್ಯರೂ ಮುಂದರ್ಜೆಯಿಂದ ನಡಿಸುವದಕ್ಕೆ ಒಪ್ಪಿ ತಕ್ಕ ಏರ್ಪಾಡುಗಳನ್ನು ಮಾಡಿದಾರೆ ಮೈಸೂರು ಸೀಮೆಯಲ್ಲಿ ಇಂಥಾ ಏರ್ಪಾಡು ಹೊಸದೆಂದು ಕಾಣುತ್ತದೆ —ಒಬ್ಬ ಬಾತ್ಮಿದಾರರಿಂದ. ಇಲ್ಲಿ ನೀರಿನ ಅಭಾವವು ಇಷ್ಟೆಂದು ವಿವರಿಸಲು ಅಸಾಧ್ಯ ಕೆರೆಯಲ್ಲಿ ೪—೫ ಆಳುದ್ದ ಬಾವಿಗಳನ್ನು ತೆಗದರೂ ನೀರು ಬರುವುದಿಲ್ಲ. ಊರಿನಲ್ಲಿರತಕ್ಕ ೧೦೦ ಬಾವಿಗಳ ಪೈಕಿ ೪—೫ ರಲ್ಲಿ ಮಾತ್ರ ನೀರಿದೆ ಜನಗಳು ರಾತ್ರಿ ಕಾಲದಲ್ಲಿ ನಿದ್ರೆಮಾಡದೆ ನೀರಿನ ಹಂಬಲದಲ್ಲಿರುತ್ತಾರೆ ಈ ಕೆರೆಯು ೪—೫ ವರ್ಷಗಳಿಗೊಂದಾವರ್ತಿ ತುಂಬುತ್ತದೆ ೧೫೦೦ ಮನೆಗಳಂತಕ್ಕ ಈ ಟವುನ್‌ಗೆ ಈ ಚಿಕ್ಕ ಕೆರೆಯು ಜನರು ಬಟ್ಟೆ ಒಗೆಯುವುದಕ್ಕೂ, ಮುಸರೆಗಳನ್ನು ತೊಳೆಯುವುದಕ್ಕೂ ದನಕ್ಕೂ ಸಹ ಆಧಾರವಾಗಿದೆ ಇಂಥಾ ದುರ್ಭಿಕ್ಷ ಕಾಲದಲ್ಲಿ ಕೆರೆಯಲ್ಲಿರತಕ್ಕ ಮಣ್ಣನ್ನು ಸಾಗಿಸುವುದಕ್ಕಾಗಿ ರಿಲೀಫ್ ಕಾಮಗಾರಿ ಮಾಡಿಸಿದರೆ ಅನೇಕ ಬಡಬಗ್ಗರು ಜೀವನೋಪಾಯವನ್ನು ಮಾಡಿಕೊಳ್ಳುತ್ತಾರೆ ಕೆರೆಗೆ ನೀರು ಬಂದರೆ ಇದರಿಂದ ಒಂದು ವರ್ಷ ಮಳೆ ಇಲ್ಲದಿದ್ದರೂ ಇನ್ನು ಒಂದು ವರ್ಷಕ್ಕಾದರೂ ನೀರಿರುತ್ತದೆ ಇದಲ್ಲದೆ ಇಲ್ಲಿಗೆ ಸುಮಾರು ಒಂದು ಮೈಲಿ ಫಾಸಲೆಯುಳ್ಳ ಹಾಲೇನಹಳ್ಳಿ ಎಂಬ ಗ್ರಾಮದಲ್ಲಿಯೂ ನೀರಿನ ಅಭಾವವು ಬಹಳವಾಗಿದೆ ಸದಕ್ಕೆ ಅಲ್ಲಿ ಒಂದು ಬಾವಿಯನ್ನು ತೆಗೆಸಿದರೆ ಅನೇಕ ಪ್ರಜೆಗಳು ಬದುಕಿಕೊಂಡಾರು —ಸಂತೆಯಲ್ಲಿ ಪಸಿಗೆ ಎತ್ತುವ ಫಕೀರರ ಕಾಟ ವಿಶೇಷವಾಗಿದೆ ಇಂಥಾ ಕ್ಷಾಮಕಾಲದಲ್ಲಿಯೂ ಕೂಡ ಇವರು ಅಂಗಡಿಗೆ ೩ ಕಾಸು ಪ್ರಕಾರ ಕೊಡಬೇಕೆಂದು ತಂಟೆಮಾಡುತ್ತಾ, ಒಂದು ಕಾಸು ಕೊಟ್ಟರೆ ಒಪ್ಪದೆ ಚಾಕಿನಿಂದಲೂ ಬರ್ಜಿಯಿಂದಲೂ ಗಾಯಗಳನ್ನು ಮಾಡಿಕೊಳ್ಳುತ್ತಾ, ವರ್ತಕರಿಗೆ ತುಂಬಾ ತೊಂದರೆಪಡಿಸುತ್ತಾರೆ ಈ ಫಕೀರರ ಸಂಖ್ಯೆ ಸುಮಾರು ೨೦೦ ೨೫೦ ವರೆವಿಗೂ ಇರುತ್ತೆ ಇವರು ಈ ರೀತಿ ಗಾಯಗಳನ್ನು ಮಾಡಿಕೊಳ್ಳದೆ ವರ್ತಕರು ಕೊಟ್ಟಷ್ಟು ತೆಗದುಕೊಂಡು ಹೋಗುವಂತೆ ಸರ್ಕಾರದವರು ಮಾಡುವರೆಂದು ನಂಬಿದೇವೆ

ಸಹಿನ ಮತ್ತು ಅಗ್ಗದ ಗಡಿಯಾರಗಳು

1011

ಆನಾಯಿದರಾದಲ್ಲಿ ದಯಾರಾದ ಗ್ಯಾರಂಟಿ ವಾಚು ೧ಕ್ಕೆ ಕ್ರಯ ಸರಪಣಿ ಸಹಿತ ರೂ ೧-೦-೦ ಬಂಗಾರು ಗಿಲ್ಟು ಆಗಿರುವ ಹಂಟಿಂಗ್ ವಾಚು ೧ಕ್ಕೆ ಕ್ರಯ ರೂ ೧-೮-೦ ಬೇಗ ಬರೆದು ತರಿಸಿಕೊಳ್ಳಿರಿ ಸ್ವಲ್ಪವೇ ಉಳಿದಿವೆ ವಿಳಾಸ — ಕೃಷ್ಣನ್ ಕಂಪನಿ, ಲಕ್ನೋರು ಪೋಸ್ಟು, ಕೊಯಂಬತ್ತೂರ್ ಡಿಸ್ಟ್ರಿಕ್ಟು

ನೋಡಿರಿ. "ಪ್ರೋತ್ಸಾಹಕೊಡಿರಿ" ತರಿಸಿರಿ.

98 6

ಈಗತಾನೇ ಶೀಮೆಯಿಂದ ಬಂದಿದೆ.

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ.

೫,೦೦೦ ಹಾಸನ್ ಟೋಪಿ ಹೊಲಿಯುವ ಸುಪೀರಿಯಲ್ ಉಲನ್ ದಾರ.

೧೨ ಟೋಪಿಯಾಗುವ ಉಲನ್ ಬಂಡಲ್ ೧ ಕ್ಕೆ	ರೂ	೩-೭-೦
೧ ಟೋಪಿಯಾಗುವ ಉಲನ್ ದಾರಕ್ಕೆ		೦-೮-೦
ಹಾಸನ್ ಟೋಪಿ ಹಾಕುವ ಕೊಕ್ಕೆ ಸೂಜಿ ೧ ಕ್ಕೆ	೦-೧-೬,	೦-೨-೦
೩೦ ಇಂಚಿನ ದೊಡ್ಡ ಸೈಜು ಬನಿಯನ್ ೧ ಕ್ಕೆ		೦-೮-೦
ಪಿಕ್ಚರ್ ಪೋಸ್ಟು ಕಾರ್ಡು ಡಬ್ಬಲ್ ಕಲರ್ ೧,೦೦೦ ಕ್ಕೆ		೧-೮-೦
ಸುಗಂಧ ಸಂಜೀವಿನಿ ಭೃಂಗಾಮಲಕ ತೈಲ ಶೀಶೆ ೧ ಕ್ಕೆ		೦-೮-೦
ಮೆಂಥ್ಯಾಲ್ ತಲೆ ನೋವಿಗೆ ಅನುಕೂಲವಾದ ಔಷಧ ಡಬ್ಬಿ ೧ ಕ್ಕೆ		೦-೩-೦
ನೇ', ನೇ ಪರಿಮಳವಾದ ತಾಂಬೂಲ ಮಿತ್ರನು ಪಾಕೆಟ್ ೧ ಕ್ಕೆ		೦-೨-೦
ಲಿನನ್ ಕೈವಸ್ತ್ರಗಳು (ಡಂಜನದ್ದು) ೧ ಕ್ಕೆ		೦-೨-೦
ರಾಸ್‌ಕೋಪ್ ಸ್ಟ್ಯಾಂಡರ್ಡ್ ವಾಚು ೧ ಕ್ಕೆ		೪ ೦ ೦
ಕೋಂಬಿನ ಬಾಚಣಿಗೆಗಳು ದೊಡ್ಡ ಸೈಜು ಡಜನ್ ೧ ಕ್ಕೆ		೧-೧೦-೦
ಗಜಕರ್ಣದ ಮುಲಾಮು ಡಬ್ಬಿ ೧ ಕ್ಕೆ		೦-೬-೦
೨೮೦ ಇಂಗ್ಲಿಷು ಅಕ್ಷರಗಳಡಗಿರುವ ಪೆಟ್ಟಿಗೆ ೧ ಕ್ಕೆ		೨-೮-೦

ಪರಸ್ಥಳದವರಿಗೆ ವಿ. ಪಿ. ಇಂದಲೂ ರವಾನಿಸುತ್ತೇವೆ.

ನಮ್ಮ ವಿಳಾಸ.—ದಿ ಉಲನ್ ಮಾರ್ಟ್. ಮಂಗಳೂರು, ದ. ಕ

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

48-32

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಣೆಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಕುಟ್ಟನ್ನೇ ಹಾಳುಮಾಡುತ್ತದೆ.

ಕ್ರಯ ಶೀಸೆ ೧ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ನ್ಯಾಯಾಧಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ವೇದಮಲೆಪಿಳ್ಳೆ ಬೀದಿ, ವೇಪೇರಿ, ಮದರಾಸ್.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—" ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ ? " ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟ ವಿಷವಾಗಿ ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ ; ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯು ತಲ್ಲಣಿಸುವದು, ತಲೆತಿರುಗುವುದು, ತಲೆನೋವು ; ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು, ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವೆಲ್ಲಾ ದುಃಖರಹಿತವಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [69-13]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ದಶ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ಸ್ ಪಿ. ಒ. ಬಾಕ್ಸ್ ೨೦, ಬೊಂಬಾಯಿ —ಇವರಲ್ಲಿ ದೊರೆಯುವುವು.

ಪ್ಯಾರಿಸ್ಸಿನ ವೈದ್ಯಮಂಡಲಿಯ

[34-(0]

ಡಾ॥ ವೈಸೆಂಟೆ ಸಾಂಟೋನಿಯವರು

ಈಗ ಪೋರ್ಟೋರೀಕೋ ವಿನ ಪಾರ್ಸೆ ಪಟ್ಟಣದಲ್ಲಿ ವೈದ್ಯಮಾಡುತ್ತಿದ್ದಾರ್.

ಇವರು ಹೇಳಿರುವುದು

ಪೋರ್ಟೋರೀಕೋವಿನ ಪಾರ್ಸೆ ಪಟ್ಟಣದಲ್ಲಿ ವೈದ್ಯ ಮಾಡುತ್ತಿರುವ, ಪ್ಯಾರಿಸ್ಸಿನ ವೈದ್ಯಮಂಡಲಿಗೆ ಸೇರಿದ, ಈ ಕೆಳಗೆ ರುಜುವಾಡಿರುವ ಡಾ॥ ವೈಸೆಂಟೆ ಸಾಂಟೋನಿ ಎಂಬ ನಾನು ಸರ್ಟಿಫಿಕೇಟು ಕೊಡು ವುದೇನೆಂದರೆ :—

"ಪೆರೂನಾ ಎಂಬ ಹೆಸ ರುಳ್ಳ [illegible] ಔಷಧವನ್ನು ನಾನು ಸ್ತ್ರೀರೋಗಗಳಿಗೆ ಕೆಲ ವು ಕಾಲದಿಂದ ಪ್ರಯೋಗ ಮಾಡುತ್ತಾ ಬಂದಿದ್ದೇನೆ [illegible] ಆಶ್ಚರ್ಯ ವಾದ ಫಲವುಂಟಾಗುತ್ತಿರುವು ದು. ಇದು ಒಳ್ಳೇ [illegible] ಔಷಧ. ಇದು ಬಗ್ಗೆ [illegible] ರೋಗಿಗಳಿಗೆಲ್ಲಾ ನಾನು ಯಾ ವಾಗಲೂ ಇದನ್ನೇ ಪ್ರಯೋ ಗ ಮಾಡುವೆನು."

ಡಾ ವಿ. ಸಾಂಟೋನಿ,
ಪಾರ್ಸೆ, ಪಿ. ಆರ್.

ಪೆರೂನಾ ಕೊಡುತ್ತಾರೆ.

[illegible] ಪಟ್ಟಣದ [illegible] ಕಾಲೇಜು [illegible] ಮತ್ತು ಶಸ್ತ್ರ ಚಿಕಿತ್ಸೆಯ ಡಾಕ್ಟರಾಗಿಯೂ, ಬಾರ್ಸಿಲೋನಾ, ಕಾ ಟಲೋನಾ, ಸ್ಪೇನ್ ವೈದ್ಯಮಂಡಲಿಯ ಆನರರಿ ಮೆಂಬರಾಗಿಯೂ, ಪ್ಯಾರಿಸ್ ಪಟ್ಟ ಣದ ಆಸ್ಪತ್ರೆಗಳಲ್ಲಿ ವೈದ್ಯವನ್ನು ನಡೆಸಿ ಪೋರ್ಟೋರೀಕೋವಿನ ವೈದ್ಯಮಂಡಲಿಗೆ ಸೇ ರಿಸಲ್ಪಟ್ಟವರಾಗಿಯೂ ಇರುವ ಪೋರ್ಟೋ ರೀಕೋವಿನ ಪಾರ್ಸೆ ಆಫೀಸ್ ಡಾ॥ ಎಸ್ಟೀ ಒನ್ ವಿಡಾಲಿಯಾಸ್ ಯವರು ಸರ್ಟಿಫಿಕೇಟು ಕೊಟ್ಟಿರುವುದೇನೆಂದರೆ :—

"ಯು. ಎಸ್, ಎ, ಓಹಿಯೋ, ಕೊಲಂಬಸ್ ಪಟ್ಟಣದ ಪೆರೂನಾ ಔಷಧದ ಕಾರ್ಖಾನೆಯಲ್ಲಿ ಪೆರೂನಾವು ತಯಾರ್ ಮಾ ಡಲ್ಪಡುತ್ತದೆ. ಇದು ಮನುಷ್ಯನ ಶ್ವಾಸ ಕೋಶದಲ್ಲಿ ಹುಟ್ಟುವ ರೋಗಗಳಿಗೆ ಪರಿಹಾ ರಕವಾದ ಔಷಧವು. ಇದನ್ನು ನಾನು [illegible] ರೋಗಿಗಳಿಗೆ ಕೊಡುತ್ತೇನೆ. ಇದರಲ್ಲಿ ಸೇರಿಸ ತಕ್ಕ ಪದಾರ್ಥಗಳನ್ನು ನೋಡಿ ಆಶ್ಚರ್ಯ ಪಡುವೆನು. ಇದು ಖಂಡಿತವಾದ ಪರಿಹಾರ ವನ್ನು ತ್ವರೆಯಿಂದಲೇ ಉಂಟುಮಾಡುವುದನ್ನು ನೋಡಿ ನನಗೆ ಆಶ್ಚರ್ಯವಾಗಿದೆ.

ಇ. ವಿಡಾಲಿಯಾಸ್, ಪಾರ್ಸೆ, ಪಿ. ಆರ್.

ಉಷ್ಣದೇಶ [illegible] ರೋಗಗಳ ಔಷಧವು.

[illegible] ಉಷ್ಣ ಅಧಿಕವಾಗಿಲ್ಲದೆ ಸಮವಾದ [illegible] ಬಹಳ ಎತ್ತರವಾಗಿಲ್ಲದೆ, ಆಮ್ಲ ಜನಕ [illegible] ಧಾತುವು [illegible] ವಾಯುಮಂಡಲವನ್ನು ಪಡೆದಿರುವಂಥಾ ಪ್ರದೇಶಗಳಲ್ಲಿ ಜನರು ಸ್ವಾಭಾವಿಕವಾಗಿಯೇ ಚಟುವಟಿಕೆ [illegible] ಪಡೆಯುವರು. ಅಂಥಾ ಜನರ ಶರೀರದ ಅಂಗಾಂಗಗಳು [illegible] ಆಗಿರುತ್ತವೆ. ಅವರು ಉತ್ಸಾಹ ಪೂರ್ವಕವಾಗಿಯೂ ಚಟುವಟಿಕೆಯಿಂದಲೂ ಕೆಲಸಗಳನ್ನು ಸ್ವಾಭಾವಿಕವಾಗಿ ನಡಿಸುವರು.

ಇತರ ದೇಶಗಳು ಅಷ್ಟು ಅನುಕೂಲವಾಗಿಲ್ಲ. [illegible] ಬಹು [illegible] ದೇಶವು ತಗ್ಗಾಗಿರುವುದು. ವಾಯುಮಂಡಲದಲ್ಲಿ ಆಮ್ಲಜನಕ ಧಾತುವು ಸ್ವಲ್ಪವೇ ಇರುವುದು. ಇಂಥಾ ವಾಯುಮಂಡಲವನ್ನು ಪಡೆದಿರುವ ದೇಶಗಳು ಅಲ್ಲಿ ವಾಸವಾಗಿರುವ ಜನರನ್ನು ಕುಗ್ಗಿ ಸುತ್ತವೆ.

ಆದಕಾರಣ ಬಲಕಾರಿಯಾದ ಔಷಧಗಳ ಸೇವನೆಯು ಅವಶ್ಯವಾಗುತ್ತದೆ. [illegible] ವಿಶೇಷವಾಗಿ [illegible] ಬಲಕಾರಿಯಾದ ಔಷಧವು ವಾಯುಮಂಡಲದಿಂದುಂಟಾಗುವಂಥಾ ದುರ್ಗುಣಗಳನ್ನು ಬಹಳ ಮಟ್ಟಿಗೆ ಕಡಮೆಮಾಡುತ್ತದೆ.

ಅನೇಕ ವರುಷಗಳ ಹಿಂದೆ ಡಾ ಹಾರ್ಟ್‌ಮೇನ್ ರವರು ಪೆರೂನಾವನ್ನು [illegible] ಯಿಂದ [illegible]. ಆದಿಯಿಂದಲೂ ಅವರು ಬಹಳ ಜಾಗರೂಕತೆಯಿಂದ ನೋಡಿ ಕೊಳ್ಳುತ್ತಾ ಈ ಔಷಧವನ್ನು ತಮ್ಮ ಕಾರ್ಖಾನೆಯಲ್ಲಿ [illegible] ಬಂದಿದ್ದಾರೆ.

[illegible] ಮತ್ತು ಆರೋಗ್ಯಕರವಾದ ಪುಷ್ಟಿಯನ್ನು ಕೊಡುವಂಥಾ ಮತ್ತು ಎಷ್ಟು ಕಾಲ [illegible] ಸ್ವಲ್ಪವೂ ಕೆಡಕು ಆಗದೆ ಇರುವಂಥಾ ಔಷಧವನ್ನು [illegible] ತಯಾರ್ ಮಾಡಿಕೊಡಬೇಕೆಂಬುದೇ ಡಾ ಹಾರ್ಟ್‌ಮೇನ್ ರವರ ಕುತೂಹಲಪೂರ್ವಕವಾದ ಉದ್ದೇಶ ವಾಗಿರುತ್ತದೆ.

ಈ ಪೆರೂನಾವು ಪ್ರಪಂಚದ ಎಲ್ಲಾ ಭಾಗಗಳಲ್ಲೂ ಪ್ರಖ್ಯಾತಿಯನ್ನು ಪಡೆದಿರೋದೇ ಅವರು ಅಂಥಾ [illegible] ಉದ್ದೇಶವನ್ನು ಸಾರ್ಥಕವಾಗಿ [illegible] ಸಾಕ್ಷಿಭೂತವಾಗಿರುತ್ತದೆ.

ಶರೀರಧರ್ಮವು ಕುಗ್ಗಿ ದುರ್ಬಲವಾಗಿರುವರೆಲ್ಲಾ ಪೆರೂನಾವನ್ನು ನಂಬಿಕೆಯಿಂದ ಪುಷ್ಟಿ ಕೊಡುವ ಔಷಧವೆಂದು ಭರವಸೆಯಿಟ್ಟು ಸೇವಿಸಬಹುದಾಗಿದೆ. [illegible] ಬಿದ್ದು [illegible] ತ್ತಿರುವವರಾಗಲಿ, [illegible] ವಾಯುಮಂಡಲದ ದುರ್ಗುಣಗಳಿಗೆ ಒಳಪಟ್ಟು ಕುಗ್ಗಿಹೋದವರಾಗಲಿ ಪೆರೂನಾ ವನ್ನು ಸೇವಿಸಬಹುದು.

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದ್ದು ಇವರುಗಳ್ ತಿಳಿಯಬಹುದು.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ :—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

4—12—1908 ರಿಂದ 11—12—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	6	7	0	0
ಮೈಸೂರು ,,	4	3	0	0
ಬೆಂಗಳೂರು ಡಿಸ್ಟ್ರಿಕ್ಟು	12	9	0	0
ಮೈಸೂರು ,,	92	60	0	0
ಕೋಲಾರ್ ,,	6	3	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	9	8	0	0
ಹಾಸನ ,,	20	10	0	0
ಚಿತ್ರದುರ್ಗ ,,	1	1	0	1
ಕಡೂರ್ ,,	13	9	0	0
ಶಿವಮೊಗ್ಗಾ ,,	0	0	0	0
* ಸಂಖ್ಯೆ ಕಾಣೆಸಿಲ್ಲ. ಜುಮ್ಲಾ	163	110	0	1

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಪುಷ್ಯ ಬಹುಳ ನವಮಿ ಗುರುವಾರದಿಂದ ಪುಷ್ಯ ಶುದ್ಧ ಪೌರ್ಣಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೮ನೇ ಡಿಸೆಂಬರ್ ಮತ್ತು ೧೯೦೯ನೇ ಜನವರಿ

ತಾ	ವಾರ	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ಶೇಖಿ ದಿನ ವಾರಕ
31	ಗುರು	ನವಮಿ	11-10	[illegible]	19-12	17
1	ಶುಕ್ರ	ದಶಮಿ	36-22	[illegible]	16-2	18
2	ಶನಿ	ಏಕಾದಶಿ	32-38	[illegible]	13-12	19
3	ಭಾನು	ದ್ವಾದಶಿ	30-3	[illegible]	12-22	20
4	ಚಂದ್ರ	[illegible]	[illegible]	[illegible]	12-3	21
5	ಭೌಮ	[illegible]	[illegible]	[illegible]	[illegible]	22
6	ಬುಧ	[illegible]	29-22	[illegible]	15-9	23

[illegible] ಮುಕ್ಕೋಟಿ ಏಕಾದಶಿ. [illegible] ಉತ್ತರಾಯಣ [illegible] ಅಂಗಾರಕ [illegible] ಆಧ್ಯಾತ್ಮ [illegible], ಮೈಸೂರು [illegible] ಉತ್ಸವ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು.
ಕಟ್ಟಿ ಅಕ್ಕಿ ಪಲ್ಲ ೧ ಕ್ಕೆ	ರೂ	೧೩-[illegible]	೧೯-೮-೦
ಕೆಂಪು ಅಕ್ಕಿ ಅವಲ್	.	೧೭ ೧೨-೦	೧೮-೪-೦
,, ದುಂಡು	...	೧೭-೮-೦	೧೮-೦-೦
ಜಾಸ್ತಿ ಅಕ್ಕಿ	.	೧[illegible]	೧೯-೮-೦
ಸಣ್ಣಕ್ಕಿ ಅವಲ್	..	೧೯-೦-೦	೨೦-೮-೦
,, ದುಂಡು	.	೧೮-೮-೦	೧೯-೦-೦
ಕೊಗರು ಬೇಳೆ ಪಲ್ಲ ೧ ಕ್ಕೆ	.	೧೯-೮-೦	೧೯-೪-೦
,, ದುಂಡು	..	೧೯-೦-೦	೧೪-೦-೦
ಹೆಚ್ಚು ರಾಗಿ ಪಲ್ಲ ೧ ಕ್ಕೆ	..	೯-೧೨-೦	೧೦-೦-೦
ಕಾರಾಗಿ	..	೯-೮-೦	೯-೦-೦
ಜೋಳ	..	೯-೦-೦	೧೦-೦-೦
ಹುರುಳಿ ಪಲ್ಲ ೧ ಕ್ಕೆ	..	೧೪-೦-೦	೧೨-೮-೦
ಬಿಳೀ ಅವರೆ	...	೧೨-೪-೦	೧೪-೮-೦
ಹೆಸರು	...	೧೨-[illegible]-೦	೧೪-೦-೦
ಉದ್ದು	.	೧೪-೪-೦	೧೪-೦-೦
ಕಡಲೆ	..	೧೮-೦-೦	೧೪-೮-೦
ಎಳ್ಳು ಸೇ ೧೨ ಕ್ಕೆ	.	೨೧-೯-೦	೨೦-೦-೦
ಹುಣಿಸೆ	..	೧೦-೧೨-೦	೧೦-೪-೦
ಹರಳು ೧೨ ಸೇರಿಗೆ	..	೧೦-೦-೦	೧೦-೦-೦
ಸಾಗೀಕಾಯಿ ಮಣ ೧ ಕ್ಕೆ	.	೧-೮-೦	೧-೬-೦
ಮೆಣಸಿನಕಾಯಿ	...	೬-೧-೦	೩-೮-೦
,, ದುಂಡು	...	೫-೮-೦	೩-೪-೦
ಬೆಲ್ಲ ದೊಡ್ಡ ಅಚ್ಚು	...	೬-೧-೦	ಮು ೭-೦-೦
ಒಳ್ಳೆ ಮಣ ೧ ಕ್ಕೆ	...	೫-೧೨-೦	೬-೦-೦
ಹರಳೆಣ್ಣೆ ,,	..	೪-೨-೦	೪-೦-೦
ಕೊತ್ತುಂಬರಿ ಪಲ್ಲ ೧ ಕ್ಕೆ	.	೭-೦-೦	೬-೪-೦
ಉಪ್ಪು	..	೬-೦-೦	೫-೪-೦
ಹುಣಿಸೇ ಹಣ್ಣು	...	೧-೮-೦	೧-೪-೦
,, ಹಳೇದು	...	೧-೬-೦	೧-೪-೦
ತುಪ್ಪ ಮಣ ೧ ಕ್ಕೆ	..	೧೪-೮-೦	೧೫-೮-೦
ಸಾಮೆಯೆಣ್ಣೆ ಪೆಟ್ಟಿ ೧ ಕ್ಕೆ	...	೫-೦-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	...	೪-೮-೦	೪-೮-೦
ಅಡಕೆಕಾಯಿ ಮಣ ೧ ಕ್ಕೆ	...	೦-೧೦-೦	೦-೧೨-೦
ಅಂಟ್ವಾಳದ ಕಾಯಿ ಮಣ ೧ ಕ್ಕೆ	..	೦-೧೪-೦	೦-೧೪-೦
ಜಪ್ಪ (ಹೊಗೆ) ಸೊಪ್ಪು	...	೧೫-೭-೦	೧೫-೫-೦
,, ,, ಪಸಿಮೆ	...	೧೫-೧೪-೦	೧೫-೭-೦
,, ,, ಗಟ್ಟಿ ತೊಲ ೧ ಕ್ಕೆ	...	೨೪-೧೦-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	...	೬೭-೦-೦	೬೧-೦-೦

Printed and Published by the Rev. E. W. THOMPSON, M. A., Proprietor and Manager, Wesleyan Mission Press, Mysore. 31/12/1908